ಮಹಾಕವಿ ಷಡಕ್ಷರಿದೇವ ವಿರಚಿತ

ಬಸವರಾಜ ವಿಜಯಂ

(ಭಾಗ-೧)

ಗದ್ಯಾನುವಾದ

ಪಂಡಿತಚನ್ನಪ್ಪ ಎರೇಸೀಮೆ

ಕನ್ನಡ ಸಾಹಿತ್ಯ ಪರಿಷತ್ತು
1977
ವಜ್ರ ಮಹೋತ್ಸವ

ಈ ಮಾಲೆಯಲ್ಲಿ ಪ್ರಕಟವಾಗುವ ಕಾವ್ಯಗಳು

ಪಂಪಭಾರತ ● ಆದಿಪುರಾಣ ● ಗದಾಯುದ್ಧ

ನೇಮಿನಾಥ ಪುರಾಣ (ಕರ್ಣಪಾರ್ಯ)

ನೇಮಿನಾಥ ಪುರಾಣ (ನೇಮಿಚಂದ್ರ)

ಯಶೋಧರ ಚರಿತೆ ● ಅನಂತನಾಥ

ಪುರಾಣ ● ಧರ್ಮಾಮೃತ

ಕರ್ನಾಟಕ ಕಾದಂಬರಿ

ಪಂಚತಂತ್ರ ● ನಳಚಂಪು

ಗಿರಿಜಾಕಲ್ಯಾಣ ಮಹಾಪ್ರಬಂಧ

ಜಗನ್ನಾಥ ವಿಜಯ ● ಕಬ್ಬಿಗರ ಕಾವ

ಶಬರಶಂಕರ ವಿಲಾಸ ● ಹರಿಹರನ ರಗಳೆಗಳು

(ಮುಂದುವರಿಸಿದೆ)

ಬೆಲೆ : ಇಪ್ಪತ್ತೈದು ರೂಪಾಯಿಗಳು

ವಜ್ರಮಹೋತ್ಸವ ವರ್ಷ

ಪಂಚವಾರ್ಷಿಕ ಯೋಜನೆಯ ಪುಸ್ತಕಮಾಲೆ

ಮಹಾಕವಿ ಷಡಕ್ಷರಿದೇವ ವಿರಚಿತ

ಬಸವರಾಜವಿಜಯಂ

(ಭಾಗ-೧)

ಗದ್ಯಾನುವಾದ

ಪಂಡಿತ ಚನ್ನಪ್ಪ ಎರೇಸೀಮೆ

ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ : : ಬೆಂಗಳೂರು-೧೮
೧೯೮೨

ಈ ಮಾಲೆಯಲ್ಲಿ ಪ್ರಕಟವಾಗುವ ಕಾವ್ಯಗಳು

ಪಂಪಭಾರತ ● ಆದಿಪುರಾಣ ● ಗದಾಯುದ್ಧ
ನೇಮಿನಾಥ ಪುರಾಣ (ಕರ್ಣಪಾರ್ಯ)
ನೇಮಿನಾಥ ಪುರಾಣ (ನೇಮಿಚಂದ್ರ)
ಯಶೋಧರ ಚರಿತೆ ● ಅನಂತನಾಥ
ಪುರಾಣ ● ಧರ್ಮಾಮೃತ
ಕರ್ಣಾಟಕ ಕಾದಂಬರಿ
ಪಂಚತಂತ್ರ ● ನಳಚಂಪು
ಗಿರಿಜಾಕಲ್ಯಾಣ ಮಹಾಪ್ರಬಂಧ
ಜಗನ್ನಾಥ ವಿಜಯ ● ಕಬ್ಬಿಗರ ಕಾವ
ಶಬರಶಂಕರ ವಿಲಾಸ ● ಹರಿಹರನ ರಗಳೆಗಳು
(ಮುಂದುವರಿಸಿದೆ)

ಬೆಲೆ . ಇಪ್ಪತ್ತೈದು ರೂಪಾಯಿಗಳು

ವಜ್ರಮಹೋತ್ಸವ ವರ್ಷ

ಪಂಚವಾರ್ಷಿಕ ಯೋಜನೆಯ ಪುಸ್ತಕಮಾಲೆ

ಮಹಾಕವಿ ಷಡಕ್ಷರಿದೇವ ವಿರಚಿತ

ಬಸವರಾಜವಿಜಯಂ

(ಭಾಗ-೧)

ಗದ್ಯಾನುವಾದ

ಪಂಡಿತ ಚನ್ನಪ್ಪ ಎರೇಸೀಮೆ

ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ : : ಬೆಂಗಳೂರು-೧೮
೧೯೮೩

Mahakavi Shadaksharadeva Virachita BASAVARAJA VIJAYAM Part-I Original with Prose rendering by Sri Pandita Channappa Eresime First Published in 1982 by Kannada Sahitya Parishat, Bangalore-560018 in Commemoration of its Diamond Jubilee, Demy Octavo Pages xxiv+680 Rs. 25-00

ಮೊದಲನೆಯ ಮುದ್ರಣ : ೧೯೮೨

ಬೆಲೆ : ಇಪ್ಪತ್ತೈದು ರೂಪಾಯಿಗಳು

ಪ್ರಕಾಶಕರು : ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು-೫೬೦ ೦೧೮

ಮುದ್ರಣ : ಶ್ರೀ ವಿ ಜೀರಾ ಪ್ರಿಂಟರ್ಸ್, ಶಿವರಾಂಪೇಟೆ, ಮೈಸೂರು-೫೭೦ ೦೦೧

ಮುನ್ನುಡಿ

ಷಡಕ್ಷರ ಕವಿಯು ಹಳಗನ್ನಡ ಶೈಲಿಯಲ್ಲಿ ಬರೆದಿರುವ 'ಬಸವರಾಜ ವಿಜಯ' ಕಾವ್ಯ ಕೃತಿಯ ಹೊಸಗನ್ನಡ ಗದ್ಯಾನುವಾದವನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ. ಷಡಕ್ಷರಿಯು ಸಾಹಿತ್ಯ ಗಾತ್ರ ಹಾಗೂ ಸತ್ವದಲ್ಲಿ ಮಹತ್ವ ಪಡೆದಿದೆ. ಷಡಕ್ಷರಿಯು ಕಥನ ಕೌಶಲವನ್ನು ಪರಿಶೀಲಿಸುವಾಗ ಅವನ ದೋಷ ದೌರ್ಬಲ್ಯಗಳಿಗೆ ಕುರುಹಾಗುವ ಕಾರಣ ವಿಲ್ಲ. ಬಹುಶಃ ಈ ಕವಿ ಚಂಪೂ ಪ್ರಕಾರಕ್ಕೆ ತೆಕ್ಕೆ ಬೀಳದೆ ಷಟ್ಪದಿ ಸಾಂಗತ್ಯಗಳಿಗೆ ಮೊರೆ ಹಾಕಿದ್ದರೆ ಕಾವ್ಯ ಹಾಗೂ ಕಥೆಗಾರಿಕೆಗೆ ಇನ್ನೂ ಹೆಚ್ಚಿನ ಹಾಸು ಬೀಸು ಬರುವ ಸಾಧ್ಯತೆಯಿತ್ತು. ಷಡಕ್ಷರಿ ಕವಿಯ ಕಥನ ಕೌಶಲ ಅಖಂಡವಾದ ಪರಿಭಾವನೆಗೆ ಮ್ಲಾನವಾಗಿ ಕಂಡರೂ ಬಿಡಿಬಿಡಿಯಾದ ಪರಿಶೀಲನೆಗೆ ಕೆಲವು ಕಡೆ ಅತ್ಯುನ್ನತ ಮಟ್ಟ ದಲ್ಲಿ ಮೈದೋರಿರುವುದನ್ನು ಮನಗಾಣಬಹುದು.

ಷಡಕ್ಷರಿಯು ಸಾಹಿತ್ಯ ಗಾತ್ರ ಹಾಗೂ ಸತ್ವದಲ್ಲಿ ಮಹತ್ವ ಪಡೆದಿದೆ. ಈತನ ಮೂರು ಪ್ರಮುಖ ಕಾವ್ಯಗಳಲ್ಲಿ ಒಂದಾದ ರಾಜಶೇಖರ ವಿಳಾಸದ ಕಥೆ ಹಳೆಯದು. ಅದು ಸತ್ಯೇಂದ್ರ ಚೋಳನನ್ನು ಕುರಿತದ್ದು. ಇದನ್ನು ಈಗ ತಿಳಿದಿರುವಂತೆ ಪಿಳ್ಳೈ ನಾಯನಾರರು (ತಿರುಜ್ಞಾನ ಸಂಬಂಧರು) ತಮಿಳಿನಲ್ಲಿ ಹೇಳಿದುದನ್ನು ಕನ್ನಡಿಸಿದವನು ಗುಬ್ಬಿಯ ಮಲ್ಲಣಾರ್ಯ (ಸುಮಾರು 1513). ತಮಿಳು ಕಾವ್ಯ ಹೇಗಿದೆಯೊ ತಿಳಿ ಯದು, ಮಲ್ಲಣಾರ್ಯನ ಕಾವ್ಯ ಮಾತ್ರ ತೀರ ಸಾಮಾನ್ಯ. ಆದರೆ ಷಡಕ್ಷರಿಯ ಕಾವ್ಯ ಶಕ್ತಿಯ, ಕಥನ ಕಲೆಯ ಮಡುವಿನಲ್ಲಿ ಮಿಂಬೆದ್ದ ಕಾವ್ಯವಸ್ತು ಮಲ್ಲಣಾರ್ಯಾದಿಗಳ ಪ್ರತಿಕೃತಿ ಎನಿಸದೆ ಮರುಹುಟ್ಟು ಪಡೆದಿದೆ. ಸತ್ಯೇಂದ್ರ ಚೋಳನ ಕಥೆ ಕನ್ನಡಿಗರಿಗೆ ಅರುಚಿಯಾಗಿತ್ತು, ಮಲ್ಲಣಾರ್ಯನ ಅಕಾವ್ಯ ರಚನೆಯಿಂದ. ಆದರೆ ಅದನ್ನು ಸರ್ವ ಜನ ಅಸ್ವಾದ್ಯವನ್ನಾಗಿಸಿ ಪುನರ್ಜನ್ಮವಿತ್ತು ರಸಸಿಂಚನೆ ಮಾಡಿದವನು ಷಡಕ್ಷರದೇವ.

ಆ ಹಳೆಯ ಕಥೆಯ ಹೊನಲನ್ನು ಷಟ್ಪದಿಯ ಪ್ರಣಾಲಿಯಿಂದ ಚಂಪೂಕಾಲುವೆಗೆ ಹರಿಸಿ ಹೊರಮೈ ಬದಲಾಯಿಸಿದ್ದೇ ಅಲ್ಲದೆ ಅದರ ಅಂತರಂಗಕ್ಕೂ ಕಾವ್ಯದ ಜೀವ ತುಂಬಿ ಪುಷ್ಟಿಯ ಪ್ರಾಣಪ್ರತಿಷ್ಠಾಪನೆ ಮಾಡಿದ್ದಾನೆ. ಈತನ ಕುಶಲ ಕಥೆ ಗಾರಿಕೆಯ ಕಂಬಚ್ಚಿನಲ್ಲಿ ನುಸುಳಿಬರುವಾಗ ಆ ಪುರಾತನ ಕಥೆ ಚರ್ವಣ ಇಲ್ಲವೇ ಬಡ ಕಲು ಎಂದನ್ನಿಸದು. ಅದಕ್ಕೊಂದು ಹೊಸ ಹೊಳಪು, ಮೊನಚು, ಒಪ್ಪ ಓರಣ ಲಭಿ ಸಿರುವುದು ಎದ್ದು ಕಾಣುತ್ತದೆ.

ಪಾತ್ರಗಳಿಗೆ ಪ್ರಭೆ, ವಸ್ತುವಿಗೆ ಪರಿಷ್ಕಾರ—ಇವೆರಡೂ ಕಥೆಗಾರ ಷಡಕ್ಷರಿಯ ದೇಣಿಗೆ. ಸತ್ಯೇಂದ್ರಚೋಳ (ರಾಜ), ಅಮೃತಮತಿ (ರಾಣಿ), ಪತಿದ್ರೋಹಿ (ಮಂತ್ರಿ), ಮಿತವಚನ (ಸಚಿವಪುತ್ರ), ರಾಜಶೇಖರ (ರಾಜಪುತ್ರ), ತಿರುಕೊಳವಿನಾಚಿ (ಭಕ್ತೆ),

ಕುಮಾರ ಶಂಕರ (ಭಕ್ತಿಯ ಮಗ)— ಇವರೆಲ್ಲ ಶಿವಪುರಾಣದ ಹಾಜರಿ ಪುಸ್ತಕದಲ್ಲಿ ಬರುವ ಸಪ್ಪೆ ಹೆಸರುಗಳಾಗಿ ಭಾವಚಿಂತಾರತ್ನದಲ್ಲಿ ಓದುಗರಿಂದ ದೂರ ಉಳಿಯುತ್ತಾರೆ. ಇಲ್ಲಿ ಅವರು ಮತ್ತೆ ಸಹೃದಯರಿಗೆ ಆತ್ಮೀಯರಾಗುತ್ತಾರೆ. ಇದು ಇವನ ಕಥನ ಕೌಶಲದ ಸ್ಪರ್ಶಜನ್ಯ ಮಾರ್ಪು. ಅವರ ನೋವು ನಲಿವುಗಳು ನಮ್ಮವೇ ಆಗುತ್ತವೆ. ಕಡೆಗೆ ಪವನಗಮನ, ಹರಿಣಗತಿ ಎಂಬ ಆ ಜಾತ್ಯಶ್ವಗಳು ಕೂಡ (ಕಾವ್ಯದ) ಕಥಾನಕದ ಸಕ್ರಿಯ ಸಜೀವ ಪಾತ್ರಗಳಾಗಿಬಿಡುತ್ತವೆ. ಇಂದ್ರನ ಮಗ ಜಯಂತನ ಜೊತೆಯಲ್ಲಿ ಕುಬೇರನ ಮಗ ನಳಕೂಬರ ವೈಹಾಳಿ ಹೊರಟಂತೆ ರಾಜಶೇಖರ ಮಿತವಚನರು ವೈಹಾಳಿಗೆ ಹೊರಟಾಗ ನೋಡಬೇಕು ಕಥೆಯಲ್ಲಿನ ಹಯಗತಿಯನ್ನು.

ಕಂತುಕದಂತ ಪುಷ್ಕರತಳಕ್ಕೊಗೆದೂರ್ವಿಕೆಯಂತೆ ಪಾಯ್ದು ಮೀ
ನಂತಿರೆ ಮೀರಿ ಲಂಘಿಸಿ ಲಸನ್ಮೃಗದಂತಿರೆ ದಾಂಟಿ ಮಿಂಚಿ ದೆಂ
ಬಂತೆ ಸಭಾಂತದೊಳ್ ಪೊಳೆದು ಸುಟ್ಟುರೆಯಂತಿರೆ ಸುತ್ತಿಪತ್ತಿ ನಾ
ಗಾಂತಕನಂತೆ ಪಾರಿದುದು ತುಂಗ ತುರಂಗಮಿಳಾಧಿನಾಥನಾ ॥

ಪರಿಯಿಪ ನೆಟ್ಟುವುಟ್ಟುವಿದಿರೇರಿಪ ಪಾರಿಪ ಕಿಳ್ತು ಪಾಂಟಿಪ
ಬ್ಬರಿಯೊಳೆ ಸುತ್ತಿಪಾಯತಿಕೆಯಿಂ ಮಿಗೆ ನರ್ತಿಪ ದಿಂಡುವಾಯಲು
ಪ್ಪರಿಪ ಬೆಡಂಗಿನಿಂ ನಡೆಯಿಪಂಗಮಲುಗಂದೆ ಪಂಚಧಾರೆಯೊಳ್
ಪರಿಣತಿದೋರ್ಪ ವಾಹಳಿತನಂ ಬಗೆಗೊಂಡುದು ಮಂತ್ರಿ ಪುತ್ರನಾ ॥

ಸುಳಿ ಸುಳಿದೊತ್ತಿ ಪತ್ತಿ ತವೆ ಸುತ್ತಿ ಕಡಂಗಿ ಬೆಂಡಗುವೆತ್ತು ಸಂ
ಚಳಿಸಿ ನಭಕ್ಕೆ ಮೀರಿ ಮಿಗೆ ಪಾರಿ ಚಮತ್ಕೃತಿವೀರಿ ತೋರಿ ತ
ನ್ನಳವನಿಳಾತಳಕ್ಕೆ ಕಿಳಿದುರ್ಪ್ಪಳಿಸುತ್ತುರೆ ಮೀಂಟಿದಾಂಟಿ ಕಂ
ಟಳಿಸಿ ಪೊದಳ್ದು ಪಾಯ್ದು ಪರಿಯಿಟ್ಟುದು ವಾಯುರಯಂ ಹಯವ್ರಯಂ ॥

ಕಥೆಗಾರನ ಬಂಡವಾಳ ಮಾತುಗಾರಿಕೆ, ಶಬ್ದಗಳ ಸರಕನ್ನು ಥಾಳಾಗಿ ಪ್ರದರ್ಶಿಸಬೇಕು. ಇಲ್ಲಿನ ಶಬ್ದರಚನೆ, ಛಂದಸ್ಸು ಕುದುರೆಯ ಖುರಪುಟದಂತೆ ತಾಳಕುಟ್ಟುವ ಗತಿಯಲ್ಲಿದೆ. ಇದನ್ನು ಗಟ್ಟಿಯಾಗಿ ಓದಿಯೇ ಮೆಲಕು ಹಾಕಬೇಕು. ಅದರಲ್ಲಿಯೂ ಮೊದಲನೆಯ ಪದ್ಯದಲ್ಲಿ ದಂತ್ಯಧ್ವನಿ ತಕಾರದ ಪುನರಾವೃತ್ತಿಯನ್ನು ಪರಿಭಾವಿಸಬೇಕು. ಅದು ಬಿಡಿಯಾಗಿ ಬರದೆ ಅನುನಾಸಿಕದ ಜೊತೆಯಲ್ಲೇ ಬರುತ್ತದೆ ; ಅಂತೆ, ಅಂತಿರೆ—ಎಂಬಂತೆ ಎರಡನೆಯ ವೃತ್ತದಲ್ಲೆ—ಇಪ ಪ್ರತ್ಯಯಾಂತ ರೂಪಗಳ ಲಾಲಿತ್ಯಕ್ಕೆ ಕಿವಿಗೊಡಬೇಕು. ಮೂರನೆಯ ಪದ್ಯದಲ್ಲಿ ಇವೆರಡರ ಜೊತೆ ರೇಫದ ಕುಪ್ಪಳಿಸುವಿಕೆಯನ್ನು ಗಮನಿಸಬೇಕು. ಅಲ್ಲದೆ ಇಲ್ಲಿನ ಇನ್ನೊಂದು ವಿಶೇಷವೆಂದರೆ ಜೋಡಿಗುದುರೆಗಳ ಜತೆಗತಿಯೂ ಸೇರಿದೆ. ಸಂಭ್ರಮದ ಸ್ಪಂದನವೇ ಇಲ್ಲಿಯ ನ್ಯಾಯ. ಭಾವನೆಯನ್ನು ಭಾಷೆಯಲ್ಲಿ ಬಿಂಬಿಸುವುದು ಕಥೆಯ ಕೌಶಲವಂತ ಕಲೆಗಾರನ ಕೆಲಸ. ಅದರ ಕುಸುರಿಗೆಲಸ ಇಂಥ

ಕಡೆಗಳಲ್ಲಿ ಪ್ರೈದೊರೆಯುತ್ತದೆ. ಇವೆಲ್ಲದರ ಪರಿಣಾಮವಾಗಿ ಇದು ಅಶ್ವವಿಹಾರ ವಾಗಷ್ಟೇ ಪರ್ಯವಸಾನವಾಗುವುದಿಲ್ಲ. ಅದನ್ನು ದಾಟಿ ಕಾವ್ಯವಿಹಾರವೂ ಆಗಿ ಸುಖ ಕೊಡುತ್ತದೆ.

ಗೆಳೆಯರಿಬ್ಬರು ವೈಹಾಳಿಗೆ ಹೊರಡುವಲ್ಲಿಂದ ಹಿಡಿದು ಶಂಕರ ಕುಮಾರ (ಹೆಸರು ಗಳೂ ಪ್ರತಿಮೆಗಳೇ) ಅವರ ಕುದುರೆ ಕಾಲಿಗೆ ಸಿಕ್ಕಿ ಸಾಯುವತನಕ ಒಟ್ಟು ಪ್ರಸಂಗ ವನ್ನು ತನಿಯಾಗಿ ತೆಗೆದು ಓದಿ ಓದಿ ತಲೆದೂಗಬಹುದು. ಆದರೆ, ಅಶ್ವರ ಗುಣ ಗಳನ್ನೇ ಗಣಿಸಿ ಪ್ರಾಯೋಗಿಕ ವಿಮರ್ಶೆಕೂಡ ಮಾಡಿ ನೋಡಿ ಆನಂದಿಸಬಹುದು. ಕಾರಣ, ಈ ಪ್ರಸಂಗವನ್ನು ಲವಲವಿಕೆಯೊಂದು ತುಂಬಿಕೊಂಡಿದೆ. ಉತ್ಸಾಹವೇ ನೆಲೆ ಯಾಗಿ ಉದ್ದಕ್ಕೂ ಉಲ್ಲಾಸ ಉಕ್ಕುತ್ತದೆ. ಕುದುರೆಯ ಲಯಗತಿ ಸವಾರರ ಮನೋ ಗತ ಭಾವವನ್ನು ಬಹಿರಂಗದಲ್ಲೆ ಬಿಂಬಿಸಿದಂತೆ ಭಾಸವಾಗುತ್ತದೆ. ವಸ್ತುವಿನ ಮೇಲಿನ ಇಲ್ಲಿನ ಹಿಡಿತ, ಒಬ್ಬ ಪಳಗಿದ ಕಥೆಗಾರನಿಗೆ ಮಾತ್ರ ಸಾಧ್ಯ ಎನ್ನುವ ಮಟ್ಟದಲ್ಲಿದೆ. ಕಾವ್ಯದುದ್ದಕ್ಕೂ ಇದೇ ತೂಕದ ಎಚ್ಚರದ ಸಂಗ್ರಹದ ನಿರೂಪಣೆ ಇರಬಾರದಿತ್ತೆ ಎಂಬ ಸಂಚಾರಿ ಭಾವ ಹಾಯುತ್ತದೆ. ಏಕೆಂದರೆ ಇಲ್ಲಿ ಮಾತ್ರ, ಅಶ್ವಾರೋಹಿಯ ಹಿಡಿತ ತಪ್ಪಿದರೂ, ಕವಿಯ ಹಿಡಿತ ಕಥೆಯ ನಿಯಂತ್ರಣದಿಂದ ಎಡವಿಲ್ಲ.

ಕಾವ್ಯದ ಆರಂಭದ ಒಂಬತ್ತು ಆಶ್ವಾಸಗಳು ಕೇವಲ ಒಂದು ಆಶ್ವಾಸಕ್ಕಷ್ಟೇ ಸೀಮಿತವಾಗುವ ಮಿತವಸ್ತುವೆನ್ನಿಸಿ, ಈ ಭಾಗದ ಮತ್ತು ಇದರ ಅನಂತರದ ಕಥೆ ಮಾತ್ರ ಕಣ್ಮುಂದೆ ನಡೆದುಹೋಗುತ್ತದೆ. ಆಧುನಿಕ ಪರಿಸರದ ಉಪಮೆ ತೆಗೆದು ಹೇಳುವದಾದರೆ, ಚಲನಚಿತ್ರದಲ್ಲಿ ಕುಳಿತು ರಜತ ಪರದೆಯ ಮೇಲೆ ಅಭಿನಯವಾಗುವ ದೃಶ್ಯಾದಿಗಳನ್ನು ನೋಡಿದ ಜೀವಂತ ಅನುಭವ ಆಗುತ್ತದೆ. ಅದೇ ಮಟ್ಟದ ತಾದಾತ್ಮ್ಯ ದಕ್ಕುತ್ತದೆ. ಅವನ ಮೂರೂ ಕನ್ನಡ ಚಂಪೂಕಾವ್ಯಗಳಿಂದ ಹಲವು ಇಂಥ ತನಿ ಚಿತ್ರಗಳನ್ನು ತೆಗೆದು ಕಥಾಪ್ರಿಯರು ದೃಶ್ಯಾತ್ಮಕ ಅನುಭವವನ್ನು ಶ್ರವ್ಯಾತ್ಮಕ ಕಾವ್ಯದಲ್ಲೂ ಆಸ್ವಾದಿಸಬಹುದು. ಶಿವ ಲೀಲಾವಿನೋದಕ್ಕಾಗಿ ಶಬರನಾಗಿ ಕಾಣಿಸಿ ಕೊಂಡ ಚಿತ್ರವನ್ನು ಕೇಳುಗರ ಕಣ್ಮುಂದೆ ಕಡೆದಿಟ್ಟಿದ್ದಾರೆ :

> ಜಡೆಗಳ ಬಂಬಲೇ ತಲೆದಳಿರ್ ಫಣಿ ಸುತ್ತಿದ್ದ ಬಳ್ಳಿ ತಾಳ್ದ ಬಾನ್
> ಗಡಲದು ಪುಷ್ಪಮಾಲೆ ಗಱಿವೂ ಗಜಿ ತೆಳ್ವಱಿಬಗ್ಗ ಸಮ್ಮದೊ
> ಳ್ಪುಡೆ ಪೊಸಚಲ್ಲಣಂ ಕರಿಯ ಕುಪ್ಪಸಮಾನೆಯ ಕೃತ್ತಿಯಂಗದೊಳ್
> ತೊಡೆದ ವಿಭೂತಿಯುದ್ಗಮಪರಾಗ ವಿಲೇಪನ ಮಗ್ನಿಲೋಚನಂ ॥

ಅದರ ಜೊತೆಗೇ ವಾಗರ್ಥದಂತೆ ಸಂಪೃಕ್ತರಾಗಿ ಬಂದ ಪಾರ್ವತಿ ಶಬರಿತಿಯಾಗಿ ಕಾಣಿಸಿ ಕೊಂಡ ಚಿತ್ರ ಕೊಡುತ್ತಾನೆ :

> ತಳಿರುಡೆ ಸಂಜೆಗೆಂಪು ಪೂಸಮುತ್ತಿನ ಹಾರಮೆ ತಾರಕಾಳಿ ತ
> ಳ್ತಳಿರುಚಿ ಕಾಯಕಾಂತಿ ಕಡುಗಲೆಲೆ ಮೂಗುತಿ ಮುತ್ತು ಶುಕ್ರಮಂ ।

ದಳಮುಮುರ್ಪೊಪ್ಪೆ ಭಿಲ್ಲಿಯ ವಿಳಾಸಮುನಾಳ್ದಿಸೆದಂದು ಸರ್ವಮಂ
ಗಳೆ ನಿಜಕಾಳರಾತ್ರಿ ಪೆಸರಂ ಮಿಗೆ ಸಾರ್ಥಕಮಂ ತಿಗಟ್ಚಿದಳ್ ॥

ಇದೇ ಸಂದರ್ಭದಲ್ಲಿ ರಾಜಶೇಖರವಿಲಾಸದಲ್ಲಿ (5-24) ಬರುವ ಬೇಡನೆ ವರ್ಣನೆಯೊಡನೆ ಇವನ್ನೂ ತೂಗಿ ನೋಡಿ ಅಲ್ಲಿನ ಸ್ವಭಾವೋಕ್ತಿಯ ಸೊಗಸನ್ನೂ ಚಪ್ಪರಿಸಬಹುದು.

ಮಾನವ ಸ್ವಭಾವದ ಸೂಕ್ಷ್ಮಗಳನ್ನೂ ಸಂವೇದನೆಗಳನ್ನೂ ಸಂಕೀರ್ಣತೆಗಳ ಸುಳಿಗಳನ್ನೂ ಕವಿ ಆಳವಾಗಿ ಅರಿತು ಕಾವ್ಯದಲ್ಲಿ ಅಳವಡಿಸಿದ್ದಾನೆ. ಕಥೆ ಪೇಲವ ಇಲ್ಲವೇ ಸಪ್ಪೆ ವರದಿಯಾಗಿ ಸಾಗದೆ ಈತನ ಕಥೆಯು ತಂತ್ರದಲ್ಲಿ ರಕ್ತಮಾಂಸ ಮಜ್ಜೆಗಳಿಂದ ಉಸಿರಾಡುವ ಪಾತ್ರಗಳ ಕುಟುಂಬ ಚಿತ್ರಣವಾಗಿ ಬರುತ್ತದೆ. ತಂದೆ-ತಾಯಿ, ಭಕ್ತ-ಭಗವಂತ, ರಾಜ-ಮಂತ್ರಿ, ತಂದೆ-ಮಗ, ತಾಯಿ-ಮಗ, ರಾಜ-ಪ್ರಜೆ, ಗೆಳೆಯರ ಗೆಳೆತನ ಹೀಗೆ ಹಲವು ಭಾವಗಳ, ಸಂಬಂಧಗಳ ಸಂಗಮದಿಂದ ರಾಜಶೇಖರವಿಳಾಸ ವರ್ತುಲವಾಗಿ ಸಾಗುತ್ತದೆ. ಈ ಬಗೆಯ ಭಾವಾವಳಿಯ ಪ್ರಭಾವಳಿಯಲ್ಲಿ ಪಾತ್ರಗಳು ಸ್ಫುಟವಾಗಿ ಕಾಣುತ್ತಾರೆ. ಪುತ್ರವಾತ್ಸಲ್ಯ, ಪ್ರಜಾವಾತ್ಸಲ್ಯಗಳ ತಕ್ಕಡಿಯ ತೂಗಾಟ ನವೀನ ಕಲ್ಪನೆಯಲ್ಲ. ಇಲ್ಲಿ ಶಿವಭಕ್ತಿಯ ಕೇಂದ್ರದ ಸುತ್ತ ಸ್ವಾಮಿಭಕ್ತಿ ಗುರುಭಕ್ತಿ ಪತಿಭಕ್ತಿಗಳು ಗೂಡು ಕಟ್ಟಿವೆ. ಈ ನಿರೂಪಣೆಯನ್ನು ಸುತ್ತಿಕೊಂಡ ಆತ್ಮೀಯ ಪರಿವೇಶ ಈ ಕವಿಯ ಸ್ವೋಪಜ್ಞ ಸ್ಪರ್ಶ. ಇಂಥ ಸ್ವಂತಿಕೆಯ ಆಕರ್ಷಕ ರಸಮಯ ಸನ್ನಿವೇಶಗಳು ಒಳ್ಳೆಯ ಕಥೆಗಾರನ ಕಾಣ್ಕೆಗೆ ಸಾಧ್ಯವಾಗುವಂತಹವು. ಸ್ವಪ್ರತಿಭೆಯಲ್ಲಿ ಅದ್ದಿ ತೆಗೆದ ಕಥಾಕುಂಚದ ಬೀಸಿನಿಂದ ಕಾವ್ಯಗಳು ಕಲಾಕೃತಿಗಳಾಗಿವೆ.

ಕಥೆ ರಂಜಕವಾಗಲು, ಯಶಸ್ವಿಯಾಗಲು, ಹೃದ್ಯವಾಗಲು ಅಗತ್ಯವಾದ (ಕಾವ್ಯಪಾಕ) ಪರಿಕರಗಳೇನೆಂಬುದು ಕಥೆಗಾರ ಷಡಕ್ಷರಿಗೆ ಕರತಲಾಮಲಕ. ಆತ ಕಥಾತ್ಮಕ ನಿರೂಪಣೆಗೆ ಒಲಿದುದರಿಂದ ಶೈಲಿ ವರ್ಣನಾತ್ಮಕವಾಗಿದೆ. ಇದರಿಂದ ಕಾವ್ಯ ಒಂದು ಸಲಿಲವಾಗಿ, ಕಥಾವಾಹಿನಿಯಾಗಿ ಪ್ರವಹಿಸುತ್ತದೆ. ವೃತ್ತ ಕಂದಗಳ ಮಿತಿಯಲ್ಲೇ ಆತ ತನ್ನ ಸಮಕಾಲೀನ ಛಂದಸ್ಸಾದ ಷಟ್ಪದಿ ಸಾಂಗತ್ಯಗಳ ಗತಿಯನ್ನು ತರುತ್ತಾನೆ. ಆಗ ಕಾವ್ಯಲಯ ಲಲಿತವಾಗಿ ಕದಳೀಪಾಕವಾಗುತ್ತದೆ.

ಕಥೆ ಗೆಲ್ಲಲು, ಮತ್ತು ಜನಮನವನ್ನು ಮುಟ್ಟಲು ಬೇಕಾದ ಸಾಮಗ್ರಿಯನ್ನು ಕವಿ ಆಶ್ರಯಿಸುತ್ತಾನೆ. ಭಗವಂತ ಭಕ್ತಿ ಸಂಧಾನಕ್ಕೆ ಸುಲಭ ಸಾಧ್ಯನೆಂಬ ಸತ್ಯಾಂಶವ ಸ್ಪಷ್ಟತೆಗಾಗಿ ಹುಟ್ಟಿಕೊಂಡ ಪದ್ಯವಿದು :

ಪೂಜಿಮೆಯ್ಯುಮೇಷದಿರವೇ
ತೆಜಿನಾದೊಡಮೇನೋ ಮಾನಸಾಬ್ಜಾಂತರದೊಳ್ ।
ಕಜಿ ಗೊರಲನಂಘ್ರಿದಳೆದ
ಟ್ಕಜಿಯೊಳಾಂ ಜಾನಿಸಿ ಮಹೇಶನಂ ಮೆಚ್ಚಿಸುವೆಂ ॥

ಶಬರಶಂಕರವಿಳಾಸದ ಈ ಪದ್ಯ ಮನುಷ್ಯನ ಆತ್ಮ ಪ್ರತ್ಯಯವನ್ನೂ ಮನೋದೃಢತೆ ಯನ್ನೂ ಕನ್ನಡಿಸುತ್ತದೆ. ಕಥೆಗಾರ ಇಂಥ ಕಡೆಗಳಲ್ಲಿ ತನ್ನ ಉದ್ದೇಶವನ್ನು ಸಹೃದಯ ರೊಡನೆ ಹೇಗೆ ಸಂವಹನಗೊಳಿಸಿದ್ದಾನೆಂಬುದನ್ನು ಪರಿಶೀಲಿಸಬಹುದು. ಸ್ತೋತ ಜೀವ ದಲ್ಲಿ ವಿಶ್ವಾಸದ ತರಂಗಗಳನ್ನು ಬಡಿದೆಬ್ಬಿಸುವ ಪ್ರಸಂಗವಿದು. ಕಾವ್ಯಧರ್ಮ—ಜಿನ ಧರ್ಮ ಮೇಳೈಸಿಕೊಂಡ ಜೈನ ಚಂಪೂಪುರಾಣಗಳಂತೆ ಇಲ್ಲಿ ಕಾವ್ಯಧರ್ಮದ ಕವಚ ತೊಟ್ಟ ಶಿವ ಧರ್ಮ ಇದೆ. ತಾನು ಸೆಣಸಿದ ಶಬರನೇ ಶಿವನೆಂಬ ಸತ್ಯಾಂಶ ಪ್ರಕಟ ವಾದಾಗ ಅರ್ಜುನನ ಚಿತ್ತಸ್ಥಿತಿಯನ್ನು ಸ್ಫುಟವಾಗಿ ಬಿಂಬಿಸುವ ಪದ್ಯ :

ಪಡಿದೆಱಿದಂತೆ ಪಾಱಿತೆರ್ದೆ ಪವ್ವನೆ ಜುಮ್ಮನೆ ಮೆಯ್ಯನಿರ್ ಪೊದ
ಟ್ದುಡಿವಿಱಿದತ್ತು ಘರ್ಮಜಲಮುಣ್ಮಿದುದಂಗದೊಳಾಗ್ರಹ ಗ್ರಹಂ ।
ಕಡೆದೊಲಗಿತ್ತು ಕೌತುಕರಸಂ ಬಗೆಗುರ್ವಿದುದುಸ್ತ್ರವಂ ಮಡ
ಲ್ತಡರ್ದುದು ಭೀತಿ ಬೇರ್ವರಿದುದೇಟ್ಗಿಯನಾಳ್ದುದು ರಾಗ ಸಂಪದಂ ॥

ಭಾವಕ್ಕೆ ಅನುಗುಣವಾಗಿ ಕುಣಿಯುವ, ತಾಳ ಹಾಕುವ ಭಾಷೆಯ ಛಾಯೆ ಇಲ್ಲಿದೆ. ಶಬರಶಂಕರವಿಳಾಸದಲ್ಲಿ ಪಾತ್ರಗಳು ಕಡಿಮೆ. ಕಾರಣ ಅದು ಪಾತ್ರ ಪ್ರಧಾನ ಕಾವ್ಯ ಅಲ್ಲ. ಅದು ಘಟನಾ ಪ್ರಧಾನ ಕಾವ್ಯ. ಆದ್ದರಿಂದ ಕಥೆಯ ಕ್ರಿಯೆಯೆಲ್ಲ ಇರುವುದು ಶಬರಾರ್ಜುನರ ಕಲಹದಲ್ಲಿ ಅಲ್ಲಿ ಮಿಂಚಿನ ಕ್ರಿಯೆ ನಿರೀಕ್ಷಿತ ಪ್ರಮಾಣದಲ್ಲಿ ಇಲ್ಲ: ನಾಟಕೀಯ ಪ್ರತಿಭೆ ತಕ್ಕಮಟ್ಟಿಗಿದೆ. ಕಥಾಂಶಕ್ಕೆ ಮಾತ್ರ ಕೊರತೆಯಿಲ್ಲ.

ವೀರ, ಕರುಣ, ಶೃಂಗಾರ ಇವು ಮೂರು ಬಹುಬೇಗ ಜನಸಾಮಾನ್ಯರ ಹೃದಯ ಮಿಡಿಯುವ ರಸಗಳು. ಈ ಕವಿ ಈ ಮೂರೂ ರಸಗಳನ್ನು ಸರಿಯಾಗಿ ಉಪಯೋಗಿಸಿ ಕೊಂಡು ಕಥೆ ಹೆಣೆಯುತ್ತಾನೆ. ನೇಮಿಚಂದ್ರನೊಡನೆ ಹುರುಡಿಸುವ ಭರದಲ್ಲೆ ಶೃಂಗಾರದ ಕಟ್ಟಲೆಯೂ ಆಗಿಬಿಡುತ್ತದೆ. ಶಬರಶಂಕರ ವಿಲಾಸದಲ್ಲಂತೂ ಶೃಂಗಾರದ ದಾಸನಾಗಿ ಮುಗ್ಗರಿಸಿ ಆಭಾಸ ಮಾಡುತ್ತಾನೆ. ಅರ್ಜುನನ ತಪಃಪ್ರಭಾವದಿಂದ ನಿಸ್ತೇಜರಾದ ಯತಿತಂಡ ಶಿವನಲ್ಲಿ ಮೊರೆಯಿಡುತ್ತಾ, ಇಂದ್ರಕೀಲ ನಗರದ ಬಣ್ಣನೆಯಲ್ಲಿ ಖಚರ ದಂಪತಿಗಳ ಪ್ರಣಯ ವಿಲಾಸ ನಿರೂಪಣೆಯಲ್ಲಿ ಆಸಕ್ತರಾಗುತ್ತಾರೆ. ಸ್ಮರಶಸ್ತ್ರ ಸದನ ಸದೃಶಕಾಸಾರ, ಕಾಮುಕನಂತಿರೆ ಸುಳಿವ ಮಂದಮಾರುತ, ಮಲಯಜವಿಲಿಪ್ತ ಕುಚ ಕುಂಭದಂತೆ ಆನೆಯ ಕುಂಭಸ್ಥಳ—ಇನ್ನೂ ಮುಂತಾಗಿ ಋಷಿವಾಣಿ ಮೊಳಗುತ್ತದೆ. ಋಷಿ ನಡೆಗೆ ಈ ರಸಿಕನುಡಿ ಸಂಗಮಿಸುವುದಿಲ್ಲ. ಒಳ್ಳೆಯ ಕಥೆಗಾರನೂ ಔಚಿತ್ಯ ತಪ್ಪಿದಾಗ, ಒಮ್ಮೊಮ್ಮೆ ಹೇಗೆ ಸೋಲುತ್ತಾನೆಂಬುದಕ್ಕೆ ಇದು ಲೇಸಾದ ದೃಷ್ಟಾಂತ. ಶಬರಶಂಕರ ವಿಲಾಸದಲ್ಲಿ ಶೃಂಗಾರದಲ್ಲಿ ಸೋತರೂ ರಾಜಶೇಖರ ವಿಲಾಸದಲ್ಲಿ ಸಾವರಿಸಿ ಕೊಳ್ಳುತ್ತಾನೆ. ವಾಸ್ತವವಾಗಿ ಶಬರವೇಷಿಯಾದ, ಶಿವನ ಮಹಾತ್ಮೆಯ ಕಿರುಕಾವ್ಯ ದಲ್ಲೂ ಶೃಂಗಾರವನ್ನು ತರುವ ಚಪಲದಿಂದ ಸೋತಿದ್ದಾನೆ. ರಾಜಶೇಖರವಿಳಾಸದಲ್ಲಿ ಶೃಂಗಾರಕ್ಕೆ ಮೊದಲೆ ಅವಕಾಶ ಮಾಡಿಕೊಂಡಿದ್ದಾನೆ. ಸತ್ಯೇಂದ್ರಚೋಳನರ್ಧಾಂಗಿ

ಅಮೃತಮತಿಯ ಚೆಲುವನ್ನು ಕಂಡರಿಸುವಾಗ ಅವನ ಕಣ್ಣು ಅದರಾಚೆಗಿನ ಆರು ಆಶ್ವಾಸಗಳವರೆಗೆ ಚಾಚಿಕೊಂಡಿದೆ.

ಪಂಪ, ಅರ್ಜುನನನ್ನು ದ್ವಾರಕೆಯಲ್ಲಿ ಕೃಷ್ಣ ಸ್ವಾಗತಿಸಿದಾಗ ಊರ ಚೆಲುವೆಲ್ಲ ವೈಗಣ್ಣಾಗಿ ಕಂಡ ಪರಿಯನ್ನು ವರ್ಣಿಸಿರುವ ಸೊಗಸಾದ (ಚತುರ್ಥಾಶ್ವಾಸದ) ಭಾಗ ದಿಂದ ಸಹಜವಾಗಿ ಸ್ಫೂರ್ತಿಗೊಂಡು ಷಡಕ್ಷರದೇವ, ರಾಜಶೇಖರನನ್ನು ಸಿಂಹಳೇಂದ್ರ ರಾಜವೀಥಿಯೊಳೋಜೆಮಿಗೆ ನಡೆದಿದಿರ್ಗೊಂಡುದನ್ನು ವರ್ಣಿಸಿದ್ದಾನೆ. ಆದರೆ ನೆಲೆ ಮಾಡಂಗಳ ನೆಲೆನೆಲೆಯೊಳಗೆ ನೆರೆನೆರೆದು ನಿಂತ ನೀರೆಯರು ರಾಜಶೇಖರನನ್ನು ನೋಡುವ ಹಾಗೂ ಸರ್ವಮಂಗಳೆಯನ್ನು ವರ್ಣಿಸುವ ಪ್ರಸಂಗದಲ್ಲೂ ಪಂಪನನ್ನೇ ಆಶ್ರಯಿಸಿ ಅನುಸರಿಸದೆ, ನೇಮಿಚಂದ್ರನ ಮಾದರಿಯನ್ನು ಅವಲಂಬಿಸುತ್ತಾನೆ. ಕವಿ ಸಮಯಗಳಿಗೆ ಜೋತುಬೀಳುತ್ತಾನೆ. ಕಾವ್ಯದ ದೃಷ್ಟಿಯಿಂದ ಇಂಥ ಹತ್ತು ಕುಂದು ಗಳನ್ನು ಪೋಣಿಸಬಹುದು. ಕಥೆಯ ದೃಷ್ಟಿಯಿಂದ ಕುಂದೆ ? ಎಂದು ಪ್ರಶ್ನಿಸಿದಾಗ ಉತ್ತರ ನಿಷೇಧಾರ್ಥಕವಾಗಿರದು. ಕಥೆಯನ್ನು ರಂಜಕವನ್ನಾಗಿಸಲು ನೂರು ದಾರಿ ಗಳಿವೆ. ಹೇಳುವ ವಿಷಯವನ್ನು ನೂರ್ಮಡಿಸಿ ಉತ್ಪ್ರೇಕ್ಷಿಸಿ ಹೇಳಿದರೆ ಕೇಳುಗರಲ್ಲಿ ನಿರೀಕ್ಷಿತ ಪರಿಣಾಮ ಸ್ಥಾಪಿತವಾಗುತ್ತದೆಂಬುದೇ ಒಟ್ಟು ಆಶಯ.

> ಇದು ಕುಸುಮಾಸ್ತ್ರನಸ್ತ್ರಮಿದು ದರ್ಪಕನಾರ್ಪು ಮನೋಜನೋಜೆ ನೋ
> ಡಿದು ನನೆವಿಲ್ಲ ಬಲ್ಲಹನ ಚೆಲ್ವಿದು ಕಾಮನ ಜೀವರತ್ನಮಿಂ
> ತಿದು ರತಿಕಾಂತನಾಂತ ಪೊಸಕೂರಸಿ ತಾನಿದು ಮಾರವೀರನ
> ಗ್ಗದ ಸದಳಂಕೃತಿಧ್ವಜಮಿದೆಂದೆನಿಸಿರ್ದುದು ರೂಪು ನೀರೆಯಾ ॥

ಎಂಬ ಒಂದಂ ಪದ್ಯ ಸಾಕೆಂದೆನಿಸಬಹುದು ಹಿತಮಿತ ಪ್ರಿಯ ಪಂಡಿತ ಮಂಡಳಿಗೆ. ಸರ್ವಮಂಗಳೆಯ ಸೌಂದರ್ಯವನ್ನು ಕಾವ್ಯಶಿಲ್ಪದಲ್ಲಿ ಕಡೆಯ ಹೊರಟ ಕಥೆಗಾರನಿಗೆ ಇದಿಷ್ಟೇ ಸಾಲದು. ಉತ್ಪ್ರೇಕ್ಷಾಲಂಕಾರಗಳ ಮೊರೆ ಹೊಕ್ಕಾಗಲೇ ಅವನಿಗೆ ತೃಪ್ತಿ. ಅದಕ್ಕಾಗಿ ಆತ ಹನ್ನೆರಡು ಪದ್ಯಗಳಲ್ಲಿ ಚೆಲುವಿನ ಪರಿಗಳನ್ನು ವಿವಿಧ ಕೋನದಿಂದ ನಿರೂಪಿಸುತ್ತಾನೆ. ಎರಡು ಉದಾಹರಣೆ :

> ಅಂದುಗೆಯ ಕಳನಿನಾದದೊ
> ಳೊಂದಿದ ಸುಂದರಿಯ ಮಂದಗತಿಯತಿಶಯಮಂ ।
> ಕುಂದದೆ ಮಾಡೆಂದಜನಂ
> ಬಂದೀಗಳ್ ಪೊತ್ತು ಸೇವಿಪುದು ಕಳಹಂಸಂ ॥
> ತರಳೆಯ ತ್ರಿವಳಿಯ ಪೋಲ್ವೆಯ
> ತರಂಗಮಂ ಪಡೆವೆನೆಂದು ಸುರನದಿ ಪುಲವುಂ ।
> ತೆರೆಗಳನೆ ಪದೆದು ಪಡೆಯದೆ
> ಸರಿದೆರೆಯಂ ಮಾಂಜಿ ಮಗುಳ್ದು ಪಡೆದಪುದಿನ್ನುಂ ॥

ಈ ಮೊದಲಾದ ಹನ್ನೆರಡೂ ಪದ್ಯಗಳು ವಾಙ್ಮಯ ವಿಹಾರಿಗಳಿಗೆ ಹೊಸವಲ್ಲ. ಆದರೆ ಸಾಮಾನ್ಯ ಓದುಗರನ್ನು ಗಮನಿಸಿದಾಗ ಅವರನ್ನೆಲ್ಲ ಒಂದೇ ತಕ್ಕಡಿಯಲ್ಲಿ ತೂಗುವಂತಿಲ್ಲ. ಅವರಿಗಾಗಿ ಕಥೆಗಾರ ಮತ್ತೆ ಮತ್ತೆ ವಿಸ್ತರಿಸಿ ಹೇಳಬೇಕಾಗುತ್ತದೆ. ಷಡಕ್ಷರದೇವ ಅಂಥವರನ್ನು ಗುರುತಿಸಿ ಇವನ್ನು ಬರೆದಿರಬಹುದು. ಎರಡನೆಯದಾಗಿ ಚಂಪೂ ಕಾವ್ಯಗಳು ತಮ್ಮ ಪ್ರಚಾರವನ್ನು ಕುಗ್ಗಿಸಿಕೊಂಡಿದ್ದುವು. ಅವುಗಳನ್ನು ಪುನರ್ ನವೀಕರಣಗೊಳಿಸುವ ಕಾರ್ಯಕ್ಕೆ ತೊಡಗಿದ ಕವಿ ಈ ಮಾಮೂಲಿನ ವರ್ಣನೆಗಳನ್ನೂ ಕೊಟ್ಟಿದ್ದಾನೆ. ವೀರರಸವನ್ನು ಶಬರಶಂಕರ ವಿಲಾಸದಲ್ಲೂ, ತಕ್ಕಮಟ್ಟಿಗೆ ರಾಜಶೇಖರ ವಿಳಾಸದಲ್ಲೂ ಅಲ್ಲಲ್ಲೆ ವೃಷಭೇಂದ್ರ ವಿಜಯದಲ್ಲೂ ತಂದಿದ್ದಾನೆ. ಕರುಣರಸವನ್ನೂ ಸಾಕಷ್ಟು ಬಳಸಿಕೊಂಡಿದ್ದಾನೆ. ತಿರುಕೊಳವಿನಾಚಿಯ ಪ್ರಲಾಪ ರಾಜಶೇಖರವಿಳಾಸದ ಹೃದಯ. ಈ ಹೃದಯ ಸ್ಪರ್ಶಿಯಾದ ಕೇಂದ್ರದ ಸುತ್ತ ಕಾವ್ಯದ, ಕಥೆಯ ಕಮಾನು ಕಟ್ಟಿದ್ದಾನೆ. ಇಲ್ಲಿ ಕರುಣರಸ ಓದುಗರ ಕರುಳು ತಟ್ಟಿ ಹೃದಯ ಮುಟ್ಟಿ ರಸಸಿದ್ಧಿ ಪಡೆದಿದೆ. ಕುದುರೆ ತುಳಿತಕ್ಕೆ ಸಿಕ್ಕಿ ಕೂಸು ಶಂಕರ ಹರಣಹೋಗಿ ಹೊಸೆದ ಹೂವಾಗಿದ್ದಾನೆ. ಹಡೆದಬ್ಬೆ ಪಡೆದ ಕಂದನಿಗಾಗಿ ಹಲುಬುವ ಪ್ರಸಂಗ. ಕಂದನ್ನ ನೆನೆನೆನೆದು ತಾಯ್ಗರುಳು ಹಾಗೂ ಮನದಳಲು ಕಟ್ಟು ಹರಿದ ಪಂಜಾಗುತ್ತದೆ. ಇಂಥ ಹೃದಯ ವಿದ್ರಾವಕ ಪ್ರಸಂಗ ಕನ್ನಡ ಸಾಹಿತ್ಯದಲ್ಲಿ ಹೊಸದಲ್ಲ. ಹರಿಶ್ಚಂದ್ರ ಕಾವ್ಯದಲ್ಲಿ ಚಂದ್ರಮತಿಯ ಪ್ರಲಾಪ, ಮಹಾಭಾರತದಲ್ಲಿ ಅಭಿಮನ್ಯು ಸತ್ತಾಗಿನ ಪ್ರಲಾಪ ಇತ್ಯಾದಿ. ಆದರೆ ಈ ಕವಿಯ ಕಥನಶಕ್ತಿಯ ಪರಮಾವಧಿ ಇಲ್ಲಿ ಮಡುಗಟ್ಟಿದೆ. ಈ ಭಾಗವನ್ನು ಸಾಮಾನ್ಯವಾಗಿ ಎಲ್ಲ ವಿಮರ್ಶಕರೂ ಉದಾಹರಿಸುತ್ತಾರೆ, ಆದರಿಂದ ಇಲ್ಲಿ ಇದನ್ನು ವಿಸ್ತರಿಸುವುದಿಲ್ಲ.

ಮಲ್ಲಣಾರ್ಯನಲ್ಲಿ ಪಾತ್ರ–ಪ್ರಸಂಗಗಳು ಕಳಾಹೀನ ಎಲುಬಿನ ಹಂದರಗಳಾಗಿವೆ, ಷಡಕ್ಷರದೇವ ಅದಕ್ಕೆ ಕಥೆಯ ಜೀವ ತುಂಬಿದ್ದಾನೆ—ಎಂಬರ್ಥದ ಹೇಳಿಕೆಗೆ ಪುಷ್ಟಿ ಕೊಡಲು ಈ ಸನ್ನಿವೇಶ ಒದಗಿ ನಿಲ್ಲುತ್ತದೆ. ಷಡಕ್ಷರ ದೇವನಲ್ಲೇ ಅನ್ಯತ್ರ ವರ್ಣನೆಗಳು ಅತಿಯಾಗುತ್ತವೆ. ಆದರೆ ಇಲ್ಲಿ ಎಲ್ಲ ಸಾರ್ಥಕವಾಗಿ ಸಾವಯವ ಸಮಗ್ರೀಕರಣದ ಸಾಫಲ್ಯವಿದೆ. ಅಯ್ದುವರ್ಷದ ಮಗುವಿನ ತಲೆ ತುರಂಗಗೊರಸಿಂದ ಕತ್ತರಿಸಿ ಬಿದ್ದಿದೆ. ನೆರೆದ ಪುರಜನ ರುಂಡ—ಮುಂಡಗಳನ್ನು ಕಂಡು ಅಕಟಕಟಾ ಎಂದು ನೊಂದು ನೋಡುತ್ತಿದ್ದರೆಂಬಲ್ಲಿಂದ ಕಾವೇರಿದ ಕಾವ್ಯ ಕಾವೇರಿ ಕಾವ್ಯಾಂತದವರೆಗೆ ಉಸಿರಾಡಲವ ಕಾಶವಾಗದಂತೆ ಘಟನಾವಳಿಗಳಿಗೆಡೆಗೊಡುತ್ತದೆ. ಕಥೆಗಾರ ಷಡಕ್ಷರಿ ಇಲ್ಲಿ ದಿಗ್ವಿಜಯವನ್ನೇ ಪಡೆದಿದ್ದಾನೆ. ಪಂಪಾದಿ ಚಂಪೂ ಕವಿಗಳ ಸಾರ ಮೈಗೂಡಿಸಿಕೊಂಡ ಬೆಡಗು ಇಲ್ಲಿ ಬಯಲಾಗುತ್ತದೆ.

ಎಲೆ ಸುಕುಮಾರಶಂಕರ ಕುಮಾರಕ ಬಾರ ಮದೀಯ ಲೋಚನೋತ್ಪಳರಜನೀಶ......ಎಂದು ಆರಂಭವಾಗುವ ವೃತ್ತದಲ್ಲಿ ತಾಯಿ ಮಗನನ್ನು ಕೂಗುವ

ಕರೆಯೋ ಅನುರಣಿತವಾಗುತ್ತದೆ: ಸುಕುಮಾರ ಕುಮಾರಬಾರ—ಎಂಬುದಂತೂ ಪ್ರತಿಭೆಯ ಕುಡಿ.

ಕರಿಗಳ ಕಾಲ್ಗೊಳಗಾದನೊ
ವರೂಥ ಚಕ್ರಕ್ಕೆ ಸಿಲ್ಕಿದನೊ ಹಯ ಚಂಚತ್
ಖುರಹತಿಯಿಂದಳಿದನೊ ಶಂ
ಕರನಕಟಕಟೆಂದು ಬಗೆದು ಬಾಯ್ವಿಡುತಿರ್ದಳ್ ॥

ಕಣ್ಣಾರಿ ಯದೊಡಂ ಕರುಳರಿಯದೆ ಎಂಬ ಗಾದೆ ಮಾತಿಗೆ ಇದು ನಿದರ್ಶನ. ಬಾಹ್ಯ ಘಟನೆಗಳನ್ನು ಕಣ್ಣಾರೆ ನೋಡಿರದಿದ್ದರೂ ಅಂತರಂಗ ಒಮ್ಮೊಮ್ಮೆ ಪರೋಕ್ಷ ಘಟನೆಗಳನ್ನು ಗುರುತಿಸಿಕೊಳ್ಳುತ್ತದೆ. ಕುದುರೆಯ ಗೊರಸಿನೇಟಿನಿಂದ ಅಳಿದನೊ ಎಂಬ ಇಲ್ಲಿನ ಮಾತು 'ಸಾಫೋಕ್ಲಿಸ್‌ಜರನಿ'ಯ ಮಾದರಿಯದು. ನಡೆದ ದುರಂತ ಈಗಾಗಲೇ ತಿಳಿದಿರುವ ಓದುಗರಿಗೆ ತಿರುಕೊಳವಿನಾಚಿಯ ಬಾಯಿಂದ ಬಂದ ಈ ಅನಿರೀಕ್ಷಿತ ನುಡಿ ವಿಲಕ್ಷಣ ಪ್ರಭಾವವನ್ನುಂಟುಮಾಡುತ್ತದೆ.

ತನುಭವನೆಲ್ಲಿದ ನೆಲ್ಲಿದ
ನಿನಿಪಾತಿನ ನೀರನೆಲ್ಲಿದಂ ಮೆಲ್ಲಗೆಯಿಂ
ಪಿಸ ಸೊಬಗನೆಲ್ಲಿದಂ ಚೆ
ಲ್ವಿನ ಕಣಿಯೆಲ್ಲಿದನೊ ಮನ್ಮನೋಂಬುಜಹಂಸಂ ॥

ಎಂಬಲ್ಲಿನ ಪರಿಣಾಮವೂ ಅಷ್ಟೆ: ಮಾತೃ ಹೃದಯದಲ್ಲಿ ಮನೆ ಮಾಡಿದ ಪುತ್ರವಾತ್ಸಲ್ಯ ಕೆನೆಗಟ್ಟಿದೆ. ಮಾಂಸದ ಮುದ್ದೆಯಾಗಿಬಿದ್ದ ಮುದ್ದು ಮಗುವನ್ನು ಕಂಡಾದಮೇಲೆ ಬರುವ—

ಎಳಗಿಳಿಯಂ ಕೊರಲ್ ಮುರಿದು ಪೋದಿದರಾರ್ ಮರಿಯಂಚೆಯಂ ಭಯಂ
ಗೊಳಿಸುತೆರಂಕೆಯಂ ಪರಿದು ಪೊಯ್ದುವರಾರ್ ಮೃಗಶಾಬಮಂ ಕರಂ
ಮುಳಿದು ಶಿರೋಧಿಯಂ ಕೆಡೆಯಲೆಚ್ಚವರಾರ್ ಬಿಸನಾಳಕಾಂಡಕೋ
ಮಳತರ ಕಂಠಮಂ ಕಡಿದುರುಳ್ಚಿದರಾರ್ ಸುಕುಮಾರ ಶೇಖರಾ ॥

—ಇಲ್ಲಿನ ಉಪಮಾನ ಉಪಮೇಯಗಳ ಪುದುವಾಳ್ತನ ಮೆಚ್ಚುಗೆ ಗಳಿಸುತ್ತದೆ. ಮುಂದಿನ ಭಾಗವೂ ಇದೇ ಮಟ್ಟದಲ್ಲಿ ಮುಂದುವರಿಯುತ್ತದೆ. ಕಥೆಯೋ ಭಾವಪರವಶಗೊಳಿಸುವಂತಹದು. ಅದರ ಜೊತೆಗೆ ಕಥೆಯನ್ನು ನಡೆಸಿಕೊಂಡು ಹೋಗುವ ಕೌಶಲ್ಯವೂ ಉನ್ನತವಾಗಿದೆ. ಪಂಪರನ್ನರ ಪದ್ಯಗಳನ್ನು ಸಮಯೋಚಿತವಾಗಿ ಇಲ್ಲಿ ಅನುವಾದಿಸಿಕೊಂಡು ಕಥೆಗೆ ವ್ಯಥೆಯ ಚಿತ್ರಗಳನ್ನು ಬಿಡಿಸುತ್ತಾನೆ. ಹಾ ಮಗನೆ ಹಾ ಮನೋಜ್ಞನೆ, ಎಲ್ಲಿಯ ಹಯಮೆಲ್ಲಿಯನೃಪ..., ಸರಿವರೆಯದ ಮಕ್ಕಳ್ ಶಂಕರನೆಲ್ಲಿದ ..., ದುಃಖಮನಾರಂಟೆನಗಕಟ..., —ಎಂಬ ಕಂದಗಳು ದುಃಖಾರ್ತರ ಕಂದಲ್ಗಳಂತೆ ಬೇರು ಬಿಡುತ್ತವೆ.ಮಗನ ಗುಣಾವಳಿಯನ್ನು ಪೋಣಿಸಿ ಕಟ್ಟಿದ—

ಮಗನೆ ನೀನಿಂತಳಿಯೆ ಸೈರಿಪೆನೆಂತೋ ಪೇಳೈಶಂಕರಾ
ಸುಗುಣನಿಧಿ ನೀನೆನ್ನ ಮೊರೆಗಳನೊರ್ಮೆ ಕೇಳೈಶಂಕರಾ

....

ಎಂತು ಮರೆವೆನೋ ಸವಿಯನಾಲಿಡುವಮರ್ದು ನಗೆಯುಂ ಶಂಕರಾ
ಕಾಂತಿ ಶೋಭಿಸಿ ಮುದ್ದುವೀರುವ ಮೊಗದ ಬಗೆಯುಂ ಶಂಕರಾ
ಝಣಝಣೆಸಿ ಕಿರುಗೆಜ್ಜೆ ಕರತಳ ತಾಳರವಕೆ ಶಂಕರಾ
ಕುಣಿವ ನಿನ್ನಯ ಬಿಸದವೊಪ್ಪುಗುಮೆನ್ನ ಮನಕೆ ಶಂಕರಾ

—ಮುಂತಾಗಿ ಸಾಗುವ ರಗಳೆ ಶೋಕರಗಳೆಯಾಗಿ ಅಳಲನ್ನು ಜಿನುಗಿಸುತ್ತಾ ಸಾಗುತ್ತದೆ. ಓದುಗರ ಮೇಲೆ ಇದು ಎಂಥ ಪರಿಣಾಮ ಬೀರುತ್ತದೆಂಬುದನ್ನು ಮತ್ತೆ ಒತ್ತಿ ಹೇಳುವ ಅಗತ್ಯವಿಲ್ಲ.

ವೃಷಭೇಂದ್ರ ವಿಜಯವೂ ಷಡಕ್ಷರಿ ಉತ್ತಮ ಕತೆಗಾರನೆಂದು ಸಾರುತ್ತದೆ. ವೃಷಭೇಂದ್ರವಿಜಯ ಮಂಗಳ ಜೀವನವನ್ನು ಆಳಿದವರ, ಬಾಳಿದವರ ಅಂಗಳ. ಅದು ಜೈನಪುರಾಣಗಳಲ್ಲಿ ಬರುವ ಹಲವು ಕಥೆಗಳ ಗೊಂಚಲಿನಂತೆ. ಜೈನಪುರಾಣಗಳಂತೆ ಇದೂ ಒಂದು ವೀರಶೈವಪುರಾಣವೇ. ಆದರೂ ಇಲ್ಲಿ ಜೈನಪುರಾಣಗಳ ಭವಾವಳಿಗಳ ಜೈನಾಪೆಟ್ಟಿಗೆ ಇಲ್ಲ. ಅಲ್ಲಿ ಕೆಲವು ಭವಾವಳಿಗಳಲ್ಲಾದರೂ ತೋರುವ ಸಿಕ್ಕುಗೋಜಲುಗಳು ಇಲ್ಲ. ಅನೇಕ ಶಿವಶರಣರ ಕಥೆಗಳು ತನಿತನಿಯಾಗಿ ಬರುತ್ತದೆ. ಈ ಎಲ್ಲ ಕಥಾ ಪುಷ್ಪಗಳೂ ಕೇವಲ ಶಿವಾರ್ಪಣೆಗೆಂದು ಕೋದಮಾಲೆ, ಶಿವಮಾಲೆ ; ಈ ಮಾಲೆಯ ಬಡಿಸೊಗಸು ಕಥಾಗಾರಿಕೆಯಲ್ಲಿ ಕಂಡುಬರುತ್ತದೆ.

ಹತ್ತಿರ ಹತ್ತಿರ ಎಂಬತ್ತು ಜನ ಶಿವಶರಣರ ಕಥೆಗಳು ಇಲ್ಲಿವೆ. ಭಕ್ತಿಯ ನವ ದೃಷ್ಟಿಯಿಂದ ಅವರೆಲ್ಲ ಶಿವಭಕ್ತಿ ಸಾಣ್ಯದ ಮುಖಗಳು. ವ್ಯಕ್ತಿ ಸ್ವಭಾವದ ವ್ಯಷ್ಟಿದೃಷ್ಟಿಯಿಂದ ಅವರು ಬೇರೆ ಬೇರೆ. ಇದರಿಂದ ಕಥೆಗೆ ವಿಸ್ತಾರ ವೈವಿಧ್ಯ ಉಂಟಾಗಿದೆ. ಬೇಡರಕಣ್ಣಪ್ಪ, ಕೋಳೂರು ಕೊಡಗೂಸಿನಂಥ ಮುಗ್ಧರ ಕಥೆಗಳಿವೆ ; ಓಹಿಲಾರ್ಯ, ಸುರಗಿ ಚೌಡಯ್ಯ, ದೀಪದ ಕಲಿಯಾರರಂಥ ಉಗ್ರ ನಿಷ್ಠಾವಂತ ಶರಣರ ಕಥೆಗಳಿವೆ ; ಎಲೇಶ್ವರ ಕೇತಯ್ಯ ; ಮಲ್ಲಶೆಟ್ಟಿ ಮುಂತಾದ ಲಿಂಗನಿಷ್ಠರ ಕಥೆಗಳಿವೆ ; ಸಿದ್ಧರಾಮ, ಮೋಳಿಗೆ ಮಾರಯ್ಯ, ಮೇದಾರ ಕೇತಯ್ಯಾದಿಕಾಯಕ ಯೋಗಿಗಳ ಕಥೆಗಳಿವೆ.

ಇಲ್ಲಿನ ಸಣ್ಣಪುಟ್ಟ ಕಥೆಗಳನ್ನು ಲೆಕ್ಕಿಸಿದಾಗ ಬ್ರಹ್ಮಾಂಡದ ವಿಹಂಗಮ ನೋಟವೇ ಆಗುತ್ತದೆ : ವೀರ ಮಹೇಶ್ವರರು, ಕ್ರಾಂತಿಪುರುಷರು, ಭೂಲೋಕವನ್ನು ಕೈಲಾಸ ಕ್ಕೊಯ್ದು ಭೂಕೈಲಾಸವೆಸಗಿದವರು, ಕಾಮ (ಸ್ಮರ) ತತ್ವದ ಮೂಲಕ (ಶಿವ) ಪರತತ್ವದ ತುದಿಮುಟ್ಟಿದವರು, ಅರ್ಪಿತರು, ಸಂಗವರ್ಜಿತರು ಹೀಗೆ ನಾನಾ ಶೀಲ ಸ್ವಭಾವದೆರಕದ

ಪಾತ್ರಗಳು ಕವಿಯ ಕಥೆಯಲ್ಲಿ ಮೆರವಣಿಗೆ ಬರುತ್ತಾರೆ. ಇವರಲ್ಲಿ ಹಲವರು ಸಜೀವ ಪುತ್ಥಳಿಗಳು. ಮಹತ್ತರವಾದ ಆದರ್ಶವನ್ನು ಬಾಳಿಗೆ ಅಳವಡಿಸಿಕೊಂಡ, ವ್ಯಕ್ತಿಜೀವನದ ಉದಾತ್ತತೆಯ ತರತಮ ಭಾವಲಹರಿ ಇಲ್ಲಿದೆ. ಶಿವಭಕ್ತರ ಜೀವನ ಪರಿಶುದ್ಧಿ ಕಥಾರೂಪಪಾಗಿ ಇಲ್ಲಿ ಪ್ರಕಾಶಪಾಗಿದೆ.

ಷಡಕ್ಷರಿಯ ಕಥನ ಕೌಶಲವನ್ನು ಪರಿಶೀಲಿಸುವಾಗ ಅವನ ದೋಷ ದೌರ್ಬಲ್ಯಗಳಿಗೆ ಕುರುಡಾಗುವ ಕಾರಣವಿಲ್ಲ. ಬಹುಶಃ ಈ ಕವಿಯು ಚಂಪೂ ಪ್ರಕಾರಕ್ಕೆ ತೆಕ್ಕೆ ಬೀಳದೆ ಷಟ್ಪದಿ ಸಾಂಗತ್ಯಗಳಿಗೆ ಮೊರೆಹೊಕ್ಕಿದ್ದರೆ ಕಾವ್ಯ ಹಾಗೂ ಕಥೆಗಾರಿಕೆಗೆ ಇನ್ನೂ ಹೆಚ್ಚಿನ ಹಾಸುಬೀಸು ಬರುವ ಸಾಧ್ಯತೆಯಿತ್ತು. ಚಂಪೂವಿನ ಬಿಗಿಯಾದ ಇಕ್ಕಟ್ಟಿನಲ್ಲಿ ಈತನ ಕಥೆಗಾರಿಕೆಗೆ ಸ್ವಾತಂತ್ರ್ಯಹರಣವಾಗಿರುವಂತೆ ಅನೇಕ ಕಡೆ ಕಂಡಿದೆ. ಪಾತ್ರಗಳು ಅಸ್ಪಷ್ಟವಾಗಿ, ವಿವರಣೆ ಅಸ್ಫುಟವಾಗಿ ಕಾವ್ಯ-ಕಲೆ ಸೋತಿರುವುದಕ್ಕೆ ಇದೂ ಒಂದು ಕಾರಣ. ಮತ್ತು ಕಥೆಯ ಗತಿಯಲ್ಲಿ ಚುರುಕು ಸಾಲದು. ಹಲವು ಸಲ ಔಚಿತ್ಯ ಹಿಂದೇಟು ಹಾಕುತ್ತದೆ. ಉತ್ಪ್ರೇಕ್ಷೆಗೆ ಲಂಗುಲಗಾಮು ಇರುವುದಿಲ್ಲ. ನಾಲಿಗೆ ಉದ್ದ, ಬಾಯಿ ಜೋರು, ಸಂಗ್ರಹ ಗುಣದಲ್ಲೆ ಶೈಥಿಲ್ಯವಿದೆ—ಹೀಗೆ ಈ ಪಟ್ಟಿ ಲಂಬ ವಾಗುವುದಕ್ಕವಕಾಶವಿದೆ.

ಹಾಗೆಂದು ಷಡಕ್ಷರದೇವನ ಕಥನ ಕೌಶಲವನ್ನು ಕಡೆಗಣಿಸುವಂತಿಲ್ಲ. ಅದು ಅಖಂಡವಾದ ಪರಿಭಾವನೆಗೆ ಮ್ಲಾನವಾಗಿ ಕಂಡರೂ, ಬಿಡಿಬಿಡಿಯಾದ ಪರಿಶೀಲನೆಗೆ ಕೆಲವು ಕಡೆ ಅತ್ಯುನ್ನತ ಮಟ್ಟದಲ್ಲಿ ಮೈದೋರಿರುವುದನ್ನು ಮನಗಾಣಬಹುದು.

ಕನ್ನಡ ಸಾಹಿತ್ಯ ಪರಿಷತ್ತು ಹಮ್ಮಿಕೊಂಡಿರುವ ಹಳಗನ್ನಡ ಕಾವ್ಯಗಳ ಹೊಸಗನ್ನಡ ಮಾಲೆಯಲ್ಲಿ ಈ ಪುಸ್ತಕವನ್ನು ಪ್ರಕಟಿಸಲಾಗುತ್ತಿದೆ. ಇದನ್ನು ಆಸಕ್ತಿ ಯಿಂದ ಸಕಾಲದಲ್ಲಿ ಸಿದ್ಧಪಡಿಸಿಕೊಟ್ಟ ಶ್ರೀ ಚನ್ನಪ್ಪ ಎರೇಸೀಮೆ ಅವರಿಗೆ ಕೃತಜ್ಞತೆ ಗಳನ್ನು ತಿಳಿಸುತ್ತಿದ್ದೇನೆ.

ಹಂಪ. ನಾಗರಾಜಯ್ಯ
ಪ್ರಧಾನ ಸಂಪಾದಕ

ಅನುವಾದದ ಯೋಜನೆ

ಕನ್ನಡದ ಪ್ರಾಚೀನ ಕಾವ್ಯಸಂಪತ್ತು ಅಮೂಲ್ಯವಾಗಿದೆ. ಈ ಸಂಪತ್ತನ್ನು ಈಗಿನ ಕನ್ನಡ ಜನತೆ ಓದಿ ತಿಳಿದುಕೊಳ್ಳುವುದು ಅತ್ಯಾವಶ್ಯಕವಾಗಿದೆ. ಆದರೆ ಈ ಕಾವ್ಯಗಳು ಜನಸಾಮಾನ್ಯರಿಗೆ ಕಠಿಣವಾಗಿ ತೋರುವುದರಿಂದ ಇವುಗಳ ವ್ಯಾಸಂಗದಲ್ಲಿ ಉತ್ಸಾಹಪೂರ್ಣವಾದ ಪ್ರವೃತ್ತಿ ಕಂಡುಬರುತ್ತಿಲ್ಲ. ಅನೇಕ ಸಂದರ್ಭಗಳಲ್ಲಿ ಮೂಲ ಗ್ರಂಥಗಳೂ ದೊರೆಯುವುದಿಲ್ಲ. ಎಷ್ಟೋ ವೇಳೆ ವಿಶ್ವವಿದ್ಯಾನಿಲಯದವರು ಪ್ರಾಚೀನ ಕಾವ್ಯಗಳನ್ನು ಕನ್ನಡ ಬಿ.ಎ. ಎಂ.ಎ. ಪದವಿ ಪರೀಕ್ಷೆಗಳಿಗೆ ಪಠ್ಯಪುಸ್ತಕಗಳಾಗಿ ಇಟ್ಟಾಗ ಲಂತೂ ಮೂಲ ಗ್ರಂಥಗಳ ಅಭಾವ ವಿಶೇಷವಾಗಿ ಕಂಡುಬರುತ್ತದೆ.

ಆದ್ದರಿಂದ ಈ ಕೊರತೆಯನ್ನು ನಿವಾರಣೆ ಮಾಡಲು ಕನ್ನಡ ಸಾಹಿತ್ಯ ಪರಿಷತ್ತು ತನ್ನ ಪಂಚವಾರ್ಷಿಕ ಯೋಜನೆಯಲ್ಲಿ ಹಳಗನ್ನಡ ಕಾವ್ಯಗಳ ಪುನರ್ಮುದ್ರಣಕ್ಕೆ ವಿಶೇಷ ಗಮನ ಹರಿಸಿ ಅದಕ್ಕಾಗಿ ಪ್ರತ್ಯೇಕ ಯೋಜನೆಯನ್ನು ಹಾಕಿಕೊಂಡಿತು. ಆರಿಸಿದ ಹಳಗನ್ನಡ ಹಾಗೂ ನಡುಗನ್ನಡ ಕಾವ್ಯಗಳನ್ನು ಹೊಸಗನ್ನಡ ಗದ್ಯದಲ್ಲಿ ಅನುವಾದಿಸಿ ಆ ಅನುವಾದದೊಡನೆ ಮೂಲಪಾಠವನ್ನು ಪ್ರಕಟಿಸಿ ಪುಸ್ತಕ ರೂಪದಲ್ಲಿ ಹೊರ ತರುವುದು ಮತ್ತು ಸರ್ಕಾರದ ಸಹಾಯಪಡೆದು ಆ ಪುಸ್ತಕಗಳು ಸಾಧ್ಯವಾದ ಮಟ್ಟಿಗೆ ಸುಲಭ ಬೆಲೆಯಲ್ಲಿ ದೊರೆಯುವಂತೆ ಮಾಡುವುದು. ಇವು ಆ ಯೋಜನೆಯ ಮುಖ್ಯ ಅಂಶಗಳು. ಅಲ್ಲದೆ,

1. ಭಾರತೀಯ ಜ್ಞಾನಪೀಠದವರು, ವಿಶ್ವವಿದ್ಯಾನಿಲಯದವರು, ಖಾಸಗಿ ಪ್ರಕಾಶಕರು ಪರಿಷತ್ತಿನ ಉದ್ದೇಶದಿಂದ ಈಗಾಗಲೇ ಕನ್ನಡ ಕಾವ್ಯಗಳನ್ನು ಅನುವಾದ ಮಾಡಲು ಕಾರ್ಯ ಕೈಗೊಂಡಿದ್ದರೆ ಅಂಥ ಕಾವ್ಯಗಳನ್ನು ಪರಿಷತ್ತು ಅನುವಾದಕ್ಕೆ ತೆಗೆದುಕೊಳ್ಳಬೇಕಾಗಿಲ್ಲ.

2. ಅಗತ್ಯಕಂಡರೆ ಮೂಲವನ್ನು ಪರಿಷ್ಕರಿಸಿ ಅನುವಾದವನ್ನು ಕೈಗೊಳ್ಳ ತಕ್ಕದ್ದು.

3. ಈ ಕೆಳಗೆ ಕಾಣಿಸಿದ ಹಳಗನ್ನಡ ಮತ್ತು ನಡುಗನ್ನಡ ಕಾವ್ಯಗಳನ್ನು ಸದ್ಯದಲ್ಲಿ ಅನುವಾದಕ್ಕೆ ಆರಿಸಿಕೊಳ್ಳತಕ್ಕದ್ದು.

ಹಳಗನ್ನಡ : ವಿಕ್ರಮಾರ್ಜುನ ವಿಜಯ, ಆದಿಪುರಾಣ, ಗದಾಯುದ್ಧ, ನೇಮಿನಾಥ ಪುರಾಣ (1. ಕರ್ಣಪಾರ್ಯ 2. ನೇಮಿಚಂದ್ರ), ಯಶೋಧರ ಚರಿತ್ರೆ, ಅನಂತನಾಥ ಪುರಾಣ, ಧರ್ಮಾಮೃತ, ಕಾದಂಬರಿ, ಪಂಚತಂತ್ರ, ನಳಚಂಪು, ವಡ್ಡಾರಾಧನೆ, ಗಿರಿಜಾ ಕಲ್ಯಾಣ, ಜಗನ್ನಾಥ ವಿಜಯ, ಕಬ್ಬಿಗರ ಕಾವ, ಶಬರಶಂಕರವಿಳಾಸ, ಹರಿಹರನ

ರಗಳೆಗಳು, ಕೆಳದಿನೃಪ ವಿಜಯ, ದಮಯಂತೀ ಸ್ವಯಂವರ, ಶಾಂತಿಪುರಾಣ, ಚಂದ್ರ ಪ್ರಭ ಪುರಾಣಂ, ಉದ್ಭಟಕಾವ್ಯಂ, ಕುಸುಮಾವಳಿ ಕಾವ್ಯ, ಅಭಿನವ ದಶಕುಮಾರ ಚರಿತೆ, ಮಲ್ಲಿನಾಥ ಪುರಾಣ, ರಾಜಶೇಖರ ವಿಳಾಸ, ಚಿಕ್ಕದೇವರಾಜ ವಂಶಾವಳಿ, ದಿವ್ಯ ಸೂರಿಚರಿತೆ.

ನಡುಗನ್ನಡ: ಸಿದ್ಧರಾಮ ಚರಿತ್ರ, ಬಸವಪುರಾಣ, ಪ್ರಭುಲಿಂಗಲೀಲೆ, ತೊರವೆ ರಾಮಾಯಣ, ರಾಮನಾಥ ಚರಿತೆ, ಭರತೇಶ ವೈಭವ, ಅನುಭವಾಮೃತ, ಗೀತ ಗೋಪಾಲ, ಹದಿಬದೆಯ ಧರ್ಮ, ನಳಚರಿತ್ರೆ, ಅದ್ಭುತ ರಾಮಾಯಣ, ಚೆನ್ನಬಸವ ಪುರಾಣ, ಭಾಗವತ, ಹರಿಕಥಾಮೃತಸಾರ, ಭಿಕ್ಷಾಟನ ಚರಿತ, ಮೋಹನ ತರಂಗಿಣಿ.

(ಅ) ಒಬ್ಬೊಬ್ಬ ಅನುವಾದಕನಿಗೆ ಒಂದೊಂದು ಕಾವ್ಯವನ್ನು ಪೂರ್ತಿಯಾಗಿ ಅನುವಾದಿಸುವ ಕಾರ್ಯವನ್ನು ವಹಿಸಿಕೊಡಬೇಕು. ವಿಶೇಷ ಸಂದರ್ಭದಲ್ಲಿ ಒಂದು ಪುಸ್ತಕವನ್ನು ಇಬ್ಬರು, ಮೂವರು ಅನುವಾದಕರಿಗೆ ವಹಿಸಿಕೊಡಬಹುದು.

(ಆ) ಅನುವಾದದಲ್ಲಿ ಏಕರೂಪತೆ ಇರಬೇಕು, ಮಧ್ಯದಲ್ಲಿ ವಿಚ್ಛಿನ್ನತೆ ಕಾಣ ಬಾರದು. ಕಥೆಯಂತೆ ಓದಿಸಿಕೊಂಡು ಹೋಗಬೇಕು.

(ಇ) ಅನುವಾದವು ಆಧುನಿಕರಿಗೆ ಪ್ರಿಯವಾಗುವ ಹೊಸಗನ್ನಡ ಗದ್ಯದಲ್ಲಿ ಇರಬೇಕು.

(ಈ) ಭಾಷೆಯು ಸರಳವಾಗಿಯೂ ಶುದ್ಧವಾಗಿಯೂ ಇರಬೇಕು. ಅನುವಾದವು ಮೂಲದಿಂದ ದೂರ ಹೋಗಬಾರದು ಮತ್ತು ಮೂಲವನ್ನು ಬಿಡಲೂಬಾರದು.

(ಉ) ಇದು ಪ್ರಾಚೀನ ಕಾವ್ಯಗಳ ಅನುವಾದವಾದ್ದರಿಂದ ವಿಷಯದ ಗಂಭೀರತೆ ಪವಿತ್ರತೆಗಳಿಗೆ ಅನುಗುಣವಾಗಿ ಭಾಷೆಯು ಲಲಿತ ಗಂಭೀರವಾಗಿ ಇರಬೇಕು.

(ಊ) ಪ್ರತಿಯೊಬ್ಬ ಅನುವಾದಕನೂ ತಾನು ಅನುವಾದಿಸಿದ ಗ್ರಂಥಕ್ಕೆ ಒಂದು ಉಪೋದ್ಘಾತ, ಶಬ್ದಾರ್ಥಕೋಶ ಅನುಬಂಧಗಳನ್ನು ತಯಾರಿಸಿ ಕೊಡಬೇಕು. ಉಪೋದ್ಘಾತದಲ್ಲಿ ಪ್ರಸ್ತುತ ಕವಿಯ ದೇಶ ಕಾಲಾದಿ ಪರಿಚಯ, ಪ್ರಸ್ತುತ ಕಾವ್ಯದ ವಿಮರ್ಶೆ ಮುಂತಾದುವು ಸಂಕ್ಷೇಪವಾಗಿ ಇರಬೇಕು. ಕಾವ್ಯದಲ್ಲಿ ಬಂದಿರುವ ನ್ಯಾಯಗಳು, ಗಾದೆಗಳು, ಪೂರ್ವಕತೆಗಳು ಮುಂತಾದುವುಗಳ ವಿವರಣೆ ಅನುಬಂಧದಲ್ಲಿ ಇರಬೇಕು. ವಿವರಣೆ ಸಂಕ್ಷಿಪ್ತವಾಗಿದ್ದರೆ ಆಯಾ ಪುಟದ ಅಡಿಟಿಪ್ಪಣಿಯಲ್ಲಿ ಬರಬಹುದು.

(ಋ) ಅನುವಾದಕನು ಮೂಲ ಪರಿಷ್ಕೃತ ಪಾಠವನ್ನೂ ಅದರ ಕೆಳಗಡೆ ಅನುವಾದವನ್ನೂ ಕೊಡಬೇಕು.

(ಖೂ) ಉಪೋದ್ಘಾತದಲ್ಲಿ ಅನುವಾದಕನು ತನ್ನ ಸ್ವಂತ ವಿಷಯವೇನನ್ನೂ ಪ್ರಸ್ತಾಪಿಸಕೂಡದು.

(ಎ) ಯಾವೊಬ್ಬ ಅನುವಾದಕನ ಅನುವಾದಕಾರ್ಯ ಮಂಡಳಿಗೆ ತೃಪ್ತಿಕರವಾಗಿ ಕಂಡುಬಾರದಿದ್ದಲ್ಲಿ ಅಥವಾ ಅನುವಾದಕನು ತಾನಾಗಿ ಒಪ್ಪಿಸಿದ ಕಾರ್ಯ ಮಾಡಲು ತನ್ನಿಂದ ಸಾಧ್ಯವಿಲ್ಲವೆಂದು ತಿಳಿಸಿದ ಸಂದರ್ಭದಲ್ಲಿ ಆ ಅನುವಾದಕ ಮಂಡಳಿ ಅಧ್ಯಕ್ಷ ಪರಿಷತ್ತಿನ ಅಧ್ಯಕ್ಷರಿಗೆ ಆ ವಿಷಯವನ್ನು ತಿಳಿಸಿ ಆ ಕಾರ್ಯಕ್ಕೆ ಬೇರೊಬ್ಬ ವಿದ್ವಾಂಸರನ್ನು ಗೊತ್ತು ಮಾಡಬಹುದು. ಹಾಗೆಯೇ ಅನುವಾದಕ ಮತ್ತು ಅನುವಾದಕ ಮಂಡಳಿ ಅಧ್ಯಕ್ಷರ ಮಧ್ಯೆ ಉದ್ಭವಿಸಬಹುದಾದ ಸಮಸ್ಯೆಗಳನ್ನು ಪರಿಷತ್ತಿನ ಅಧ್ಯಕ್ಷರು ಪರಿಹರಿಸತಕ್ಕದ್ದು.

(ಏ) ನಿಯಮದಂತೆ ಗ್ರಂಥದ ಅನುವಾದ ಕಾರ್ಯ ಮುಗಿದ ಕೂಡಲೆ ಮಂಡಳಿಯ ಅಧ್ಯಕ್ಷರು ಅದನ್ನು ಅನುವಾದಕರಿಂದ ಪಡೆದು ತಮ್ಮ ಸಲಹೆಯೊಡನೆ ಅದನ್ನು ಪರಿಷತ್ತಿನ ಅಧ್ಯಕ್ಷರಿಗೆ ಕಳುಹಿಸಿಕೊಡತಕ್ಕದ್ದು.

4. ಹೀಗೆ ಅನುವಾದ ಕಾರ್ಯವನ್ನು ವಿದ್ವಾಂಸರಿಂದ ಮಾಡಿಸಿದಾಗ ಅವರಿಗೆ ಯುಕ್ತ ಸಂಭಾವನೆಯನ್ನು ಕೊಡುವ ಬಗ್ಗೆ ಸಭೆ ತೀರ್ಮಾನ ಕೈಗೊಂಡು, ಸಂಭಾವನೆ ಗ್ರಂಥದ ಪರಿಮಾಣದ ಆಧಾರದ ಮೇಲೆ ಸಲ್ಲಬೇಕೆಂಬುದು ನಿರ್ಣಯಿಸಿ, ಗ್ರಂಥದ 400 ಅಕ್ಷರಗಳಿಗೆ ಒಂದು ಘಟಕವೆಂದೂ ಒಂದು ಘಟಕಕ್ಕೆ 2 ರೂ. ನಂತೆ ಸಂಭಾವನೆ ನೀಡಬೇಕೆಂದೂ ನಿಶ್ಚಯಿಸಲಾಯಿತು. ಮತ್ತು ಅನುವಾದಕ ಮಂಡಳಿಯ ಅಧ್ಯಕ್ಷರಿಗೆ ಅನುವಾದಕರಿಗೆ ಸಲ್ಲುವ ಸಂಭಾವನೆಯ ಶೇಕಡ 15 ರಷ್ಟನ್ನು ಸಂಭಾವನೆಯಾಗಿ ಕೊಡತಕ್ಕದ್ದೆಂದೂ ಸಭೆ ನಿರ್ಣಯಿಸಿತು. ಮತ್ತು ಅದರ ಮೂಲಪಾಠ ಪರಿಷ್ಕಾರ, ಮುನ್ನುಡಿ, ಉಪೋದ್ಘಾತ, ಶೋಧನೆ ಮೇಲ್ವಿಚಾರಣೆ ಇತ್ಯಾದಿ ಕಾರ್ಯಗಳನ್ನು ಗಮನದಲ್ಲಿಟ್ಟುಕೊಂಡು ಹಸ್ತಪ್ರತಿಯನ್ನು ಸಿದ್ಧಪಡಿಸಿ ಪರಿಷತ್ತಿಗೆ ಒಪ್ಪಿಸತಕ್ಕದ್ದೆಂದೂ ತೀರ್ಮಾನಿಸಲಾಯಿತು.

5. ಅನುವಾದಕರಿಗೆ ಅನುವಾದ ಕಾರ್ಯಕ್ಕಾಗಿ ಹಣ ಸಂದಾಯವಾದ ಮೇಲೆ ಆ ಗ್ರಂಥದ ಪೂರ್ಣ ಹಕ್ಕು ಪರಿಷತ್ತಿಗೆ ಸೇರುತ್ತದೆ. ಪುಸ್ತಕ ಪ್ರಕಟಣೆಯಾದ ಮೇಲೆ ಅನುವಾದಕರಿಗೆ ಈ ಗ್ರಂಥದ ಇಪ್ಪತ್ತೈದು ಪ್ರತಿಗಳನ್ನು, ಅನುವಾದಕ ಮಂಡಲಿ ಅಧ್ಯಕ್ಷರಿಗೆ ಎರಡು ಪ್ರತಿಗಳನ್ನು ಉಚಿತವಾಗಿ ನೀಡತಕ್ಕದ್ದು.

ಮೇಲ್ಕಂಡ ತೀರ್ಮಾನದಂತೆ ಅನುವಾದಕಾರ್ಯ ಕೈಗೊಳ್ಳಲು ಪರಿಷತ್ತು ಮೈಸೂರಿನಲ್ಲಿ ಮತ್ತು ಬೆಂಗಳೂರಿನಲ್ಲಿ ಅನುವಾದಕ ಮಂಡಲಿಗಳನ್ನು ರಚಿಸಿ ಅವಕ್ಕೆ ಬೇಕಾದ ಸಲಕರಣೆಗಳನ್ನು ಒದಗಿಸಿಕೊಟ್ಟಿದೆ. ಯೋಜನೆಯ ಪ್ರಕಾರ ಅನುವಾದ

ಕಾರ್ಯ ಎರಡು ಕಡೆಯೂ ನಡೆಯುತ್ತಿದೆ. ಈಚೆಗೆ ಧಾರವಾಡದಲ್ಲೂ ಅನುವಾದ ಕಾರ್ಯ ನಡೆಯುತ್ತಿದೆ. ವಿದ್ವಾಂಸರು ಅನುವಾದ ಮಂಡಲಿ ಅಧ್ಯಕ್ಷರೊಡನೆ ಸಹಕರಿಸುತ್ತಿದ್ದಾರೆ. ಅನುವಾದಕ ಮಂಡಳಿ ಅಧ್ಯಕ್ಷರು ವಿಶೇಷ ಆಸಕ್ತಿ ವಹಿಸಿ ಅನುವಾದ ಕಾರ್ಯ ಅಚ್ಚುಕಟ್ಟಾಗಿ ನಡೆಯುವಂತೆ ಶ್ರಮಿಸುತ್ತಿದ್ದಾರೆ.

ಈ ಅನುವಾದ ಗ್ರಂಥಗಳು ಕನ್ನಡ ಜನತೆಗೆ ಸುಲಭ ಬೆಲೆಯಲ್ಲಿ ದೊರೆಯಬೇಕೆಂಬ ಆಶೆಯು ಸರ್ಕಾರದ ನೆರವಿನಿಂದ ಕೈಗೂಡಿದೆ ಎಂದು ತಿಳಿಸಲು ಸಂತೋಷಿಸುತ್ತೇನೆ.

ಹಂಪ. ನಾಗರಾಜಯ್ಯ
ಅಧ್ಯಕ್ಷ
ಕನ್ನಡ ಸಾಹಿತ್ಯ ಪರಿಷತ್ತು

ಪ್ರಸ್ತಾವನೆ

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಚಟುವಟಿಕೆಗಳಲ್ಲಿ ಗ್ರಂಥ ಪ್ರಕಟಣೆ ಒಂದು ಪ್ರಮುಖವಾದ ಚಟುವಟಿಕೆ. ಪ್ರಾರಂಭದಲ್ಲಿ ಪರಿಷತ್ತು ತನ್ನ ಆರ್ಥಿಕ ಸ್ಥಿತಿಯನ್ನು ಅವಲಂಬಿಸಿ ಕೆಲವೇ ಪುಸ್ತಕಗಳನ್ನು ಪ್ರಕಟಿಸಿತು. ಆದರೆ ಆ ಪುಸ್ತಕಗಳು ಅತ್ಯಂತ ಅಮೂಲ್ಯದವೂ ಅಪೂರ್ವದವೂ ಅತ್ಯುಪಯುಕ್ತದವೂ ಆಗಿವೆ. 1969 ರಿಂದ ಈಚೆಗೆ ಪರಿಷತ್ತು ತನ್ನ ಚಟುವಟಿಕೆಗಳನ್ನು ಯೋಜನಾ ಬದ್ಧವಾಗಿ ರೂಪಿಸಿಕೊಂಡು ತ್ರೈವಾರ್ಷಿಕ ಯೋಜನೆಯಲ್ಲಿ 100 ಪುಸ್ತಕಗಳನ್ನೂ ಪಂಚವಾರ್ಷಿಕ ಯೋಜನೆಯಲ್ಲಿ 150 ಪುಸ್ತಕಗಳನ್ನೂ ಹೊರತರಲು ಆಲೋಚಿಸಿತು. ಅದರಂತೆ ತ್ರೈವಾರ್ಷಿಕ ಯೋಜನೆಯಲ್ಲಿನ 100 ಪುಸ್ತಕಗಳೂ ಪಂಚವಾರ್ಷಿಕ ಯೋಜನೆಯ 141 ಪುಸ್ತಕಗಳೂ ಈಗಾಗಲೇ ಪ್ರಕಟವಾಗಿವೆ. ಉಳಿದವು ಪ್ರಕಟಣೆಯ ಬೇರೆ ಬೇರೆ ಹಂತದಲ್ಲಿವೆ.

ಪರಿಷತ್ತು ಈಗ ಎರಡನೆಯ ಪಂಚವಾರ್ಷಿಕ ಯೋಜನೆಯ ಕಾರ್ಯಕ್ರಮಗಳನ್ನು ಆರಂಭಿಸಿದೆ. ಈ ಯೋಜನೆಯಲ್ಲೂ ಪುಸ್ತಕ ಪ್ರಕಟಣೆಯ ಚಟುವಟಿಕೆಯನ್ನೇ ಪ್ರಧಾನ ಕಾರ್ಯವನ್ನಾಗಿ ರೂಪಿಸಿಕೊಂಡಿದೆ. ಆದರೆ ಕಾಲವನ್ನು ಅನುಸರಿಸಿ ಆಯಾ ಕಾಲದ ಕನ್ನಡ ಸಾಹಿತ್ಯದ ಎಲ್ಲಾ ಆಯಾಮಗಳನ್ನೂ ಸಾಹಿತ್ಯ ಧೋರಣೆಯನ್ನೂ ಗಮನದಲ್ಲಿಟ್ಟುಕೊಂಡು ಪ್ರಕಟಣೆಗೆ ಪುಸ್ತಕಗಳನ್ನು ಆಯ್ದುಕೊಳ್ಳುತ್ತಿದೆ. ಅದೆಂದರೆ ಪರಿಷತ್ತು ಪ್ರಕಟಿಸುವ ಗ್ರಂಥಗಳನ್ನು ಒಂದು ಗ್ರಂಥ ಪ್ರಕಟಣಾ ಸಲಹಾ ಸಮಿತಿ ಪರಿಶೀಲಿಸಿ ನಿರ್ಧರಿಸುತ್ತದೆ. ಹಾಗೆ ನಿರ್ಧರಿಸುವಾಗ ಪುಸ್ತಕಗಳ ವಿಷಯವನ್ನು ಕುರಿತು ಕೆಲವೊಮ್ಮೆ ಆಯಾ ವಿಷಯದಲ್ಲಿ ತಜ್ಞರಾದವರ ಅಭಿಪ್ರಾಯವನ್ನು ಪಡೆಯುತ್ತದೆ.

24–7–78 ರಿಂದ ಹೊಸ ಪದಾಧಿಕಾರಿಗಳು ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಹೊಸ ದೃಷ್ಟಿಯಿಂದ ಗ್ರಂಥ ಪ್ರಕಟಣ ಸಲಹಾ ಸಮಿತಿಯನ್ನು ರಚಿಸಿದೆ. ಈ ಸಮಿತಿಯ ಸಲಹೆ ಸಹಕಾರಗಳಿಂದ ಇಂದಿನ ಪುಸ್ತಕಗಳು ಹೊರಬರುತ್ತಿವೆ. ಈ ಪುಸ್ತಕಗಳಲ್ಲಿ ಅಚ್ಚಾಗದ ಪ್ರಾಚೀನ ಗ್ರಂಥಗಳು, ಭಾಷಾಂತರದ ಕೃತಿಗಳು, ಜನಸಾಮಾನ್ಯರಿಗೆ ಶಾಸ್ತ್ರ, ಸಾಹಿತ್ಯ, ಕಲೆ, ವಿಜ್ಞಾನ, ಜನಪದ ಸಾಹಿತ್ಯ, ನಿಘಂಟುಗಳು ಇರುತ್ತವೆ.

ಕನ್ನಡ ಜನತೆಗೆ ಒಳ್ಳೆಯ ಸಾಹಿತ್ಯವನ್ನು ಸುಲಭ ಬೆಲೆಗೆ ಒದಗಿಸಬೇಕು, ಕಾಲಕಾಲಕ್ಕೆ ಜನತೆಯ ಆಶೋತ್ತರಗಳನ್ನು ಪೂರೈಸುವಂತೆ ವೈಚಾರಿಕ ಸಾಹಿತ್ಯವನ್ನು ನೀಡಬೇಕು. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಶ್ರೇಷ್ಠ ಕೊಡುಗೆಗಳನ್ನು ಪರಿಷತ್ತು ಜನತೆಗೆ

ನೀಡಬೇಕು ಎಂಬ ಪರಿಷತ್ತಿನ ಧ್ಯೇಯ ಧೋರಣೆಗಳನ್ನು ಗಮನಿಸಿ ಕರ್ನಾಟಕ ರಾಜ್ಯ ಸರ್ಕಾರದವರು ಉದಾರ ಸಹಾಯ ನೀಡಿದ್ದಾರೆ ಮತ್ತು ನೀಡುತ್ತಿದ್ದಾರೆ.

ಪರಿಷತ್ತು ಈಗ ತನ್ನ ಎರಡನೆಯ ಪಂಚವಾರ್ಷಿಕ ಯೋಜನೆಯ ಕಾರ್ಯಗಳನ್ನು ಆರಂಭಿಸಿದೆ. ಆ ಅವಧಿಯಲ್ಲಿ ಮೇಲೆ ತಿಳಿಸಿದಂತೆ ಅನೇಕ ಹೊಸ ಪುಸ್ತಕಗಳನ್ನು ಹೊಸದಾಗಿ ಹಾಕಿಕೊಂಡ ಧ್ಯೇಯ ಧೋರಣೆಗಳಿಗನುಸಾರವಾಗಿ ಹೊರತರಲು ಯತ್ನಿಸುತ್ತಿದೆ ಎಂಬ ನಂಬಿಕೆ ನನಗಿದೆ. ಈ ಕಾರ್ಯದಲ್ಲಿ ಗ್ರಂಥ ಪ್ರಕಟಣ ಸಲಹಾ ಸಮಿತಿ ಸದಸ್ಯರು, ಲೇಖಕರು, ಸಾಹಿತ್ಯ ವಿದ್ವಾಂಸರು ಮತ್ತು ರಾಜ್ಯ ಸರಕಾರ—ಸಹಕಾರ ನೀಡುತ್ತಿದ್ದಾರೆ. ಅವರಿಗೆ ಪರಿಷತ್ತು ತನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ಪರಿಷತ್ತಿನ ಪ್ರಕಟಣೆಗಳು ಕನ್ನಡಿಗರಿಗೆ ಲಾಭದಾಯಕವಾಗುವುದರಲ್ಲಿ ಸಂದೇಹವಿಲ್ಲ. ಆ ಲಾಭವನ್ನು ಅವರು ಪಡೆದು ನಾಡುನುಡಿಯ ಸೇವೆಯಲ್ಲಿ ಪಾಲುದಾರರಾಗಬೇಕೆಂದು ಪ್ರಾರ್ಥಿಸುತ್ತೇನೆ. ಈ ಮಾಲೆಯಲ್ಲಿ ಚನ್ನಪ್ಪ ಎರೇಸೀಮೆ ಅವರು ಷಡಕ್ಷರದೇವ ಕವಿಯ ಬಸವರಾಜ ವಿಜಯ ಕಾವ್ಯವನ್ನು ಅನುವಾದ ಮಾಡಿಕೊಟ್ಟಿದ್ದಾರೆ. ಅವರಿಗೆ ಪರಿಷತ್ತಿನ ಕೃತಜ್ಞತೆಗಳು ಸಲ್ಲುತ್ತವೆ.

ಹಂಪ. ನಾಗರಾಜಯ್ಯ
ಅಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು

ಬಿನ್ನಹ

ಹಳಗನ್ನಡ ಕಾವ್ಯಗಳ ಅನುವಾದ ಮಾಲೆಯಲ್ಲಿ ಪ್ರಕಟವಾಗುತ್ತಿರುವ "ಬಸವ ರಾಜ ವಿಜಯ" ವು ಓದುಗರಿಗೆ ಕನ್ನಡ ಸಾಹಿತ್ಯ ಪರಿಷತ್ತು ಒದಗಿಸುವ ಇನ್ನೊಂದು ಬೆಲೆಯುಳ್ಳ ಕೊಡುಗೆಯಾಗಿದೆ. ಷಡಕ್ಷರ ಕವಿಯ ಕೃತಿಗಳನ್ನು ಟೀಕಾಗ್ರಂಥಗಳ ಸಹಾಯವಿಲ್ಲದೆ ಅರ್ಥ ಮಾಡಿಕೊಳ್ಳುವುದು ಇಂದಿನವರಿಗೆ ಕಷ್ಟವಾಗುತ್ತದೆ. ಅನುವಾದಕ್ಕೆ ಅದರದೇ ಆದ ಇತಿಮಿತಿಯಿದ್ದರೂ, ಓದುಗರ ಸೌಕರ್ಯ ದೃಷ್ಟಿಯಿಂದ ಅಲ್ಲಲ್ಲಿ ವಿಶೇಷ ವಿವರಗಳನ್ನು ಒದಗಿಸುವುದು ನಮ್ಮ ಅನುವಾದ ಮಾಲೆಯ ನೀತಿ. ಶ್ರೀ ಎರೇಸೀಮೆ ಚನ್ನಪ್ಪನವರು ಈಗಾಗಲೆ ಷಡಕ್ಷರ ಕವಿಯ ರಾಜಶೇಖರ ವಿಲಾಸವನ್ನು ಅನುವಾದ ಮಾಡಿಕೊಟ್ಟಿದ್ದಾರೆ. ಅದೇ ಕ್ರಮವನ್ನು ಪ್ರಕೃತ ಗ್ರಂಥದ ಅನುವಾದದಲ್ಲಿಯೂ ಅನುಸರಿಸಿ, ವಾಚಕರಿಗೆ ಸೌಲಭ್ಯವೊದಗಿಸಿರುವರು. ಕಾವ್ಯಾಭ್ಯಾಸಿಗಳು ಇದರ ಪ್ರಯೋಜನವನ್ನು ಪಡೆದು ಕೊಳ್ಳುವರೆಂದು ಹಾರೈಸುತ್ತೇನೆ.

ಅನುವಾದ ಮಾಡಿಕೊಟ್ಟ ಶ್ರೀ ಚನ್ನಪ್ಪನವರಿಗೂ, ಅನುವಾದ ಮಾಲೆಯನ್ನು ಪೋಷಿಸಿಕೊಂಡು ಬರುತ್ತಿರುವ ಪರಿಷತ್ತಿನ ಅಧ್ಯಕ್ಷ ಶ್ರೀ ಹಂಪ. ನಾಗರಾಜಯ್ಯನವರಿಗೂ ಅಭಿನಂದನೆಗಳು.

ಬೆಂಗಳೂರು 18
17-8-1982

ರಾ. ನೆಂ. ಕುಲಕುರಣಿ
ಅಧ್ಯಕ್ಷ
ಬೆಂಗಳೂರು ಅನುವಾದ ಮಂಡಲಿ
ಕನ್ನಡ ಸಾಹಿತ್ಯ ಪರಿಷತ್ತು

ಗದ್ಯಾನುವಾದಕನ ನುಡಿ

ರಾಜಶೇಖರ ವಿಳಾಸವನ್ನು ಸಾಹಿತ್ಯಪರಿಷತ್ತಿಗೆ ಪರಿಷದಧ್ಯಕ್ಷ ಸನ್ಮಾನ್ಯ ಶ್ರೀ ಜಿ. ನಾರಾಯಣರವರ ಅನುಜ್ಞೆಯ ಮೇರೆ ಮಾಡಿಕೊಟ್ಟುದು ನನ್ನ ಪುಣ್ಯವಿಶೇಷ. ಆ ಕವಿಯ ಇನ್ನೊಂದು ಶ್ರೇಷ್ಠವೂ ಕ್ಲಿಷ್ಟವೂ ಆದ ಬಸವರಾಜ ವಿಜಯ ಅಥವಾ ವೃಷಭೇಂದ್ರ ವಿಜಯವನ್ನು ಗದ್ಯಾನುವಾದಕ್ಕಾಗಿ ಶ್ರೀ ಜಿ. ನಾರಾಯಣರವರು ನನ್ನನ್ನೇ ಆರಿಸಿದಾಗ ಮೈನಡುಗಿತು. ಷಡಕ್ಷರ ದೇವನ ಕಾವ್ಯಗಳನ್ನು ಜೀರ್ಣಿಸಿಕೊಂಡು ತಕ್ಕ ಹಾಗೆ ಗದ್ಯಾನುವಾದ ಮಾಡುವ ಕಾರ್ಯಸುಲಭಸಾಧ್ಯವೇನೂ ಅಲ್ಲ. ಆದರೆ ಧೈರ್ಯದಿಂದ ದೇವರಮೇಲೆ ಭಾರಹಾಕಿ ಒಪ್ಪಿಕೊಂಡು ಸತತ ಪ್ರಯತ್ನಮಾಡಿ ತಿಳಿಯದಿದ್ದಾಗ ಗದ್ಯಾನುವಾದ ಮಂಡಳಿಯ ಅಧ್ಯಕ್ಷರಾದ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನ ನಿವೃತ್ತ ಮಹಾಮಹೋಪಾಧ್ಯಾಯ ಶ್ರೀ ರಂಗನಾಥಶರ್ಮಾಜಿ ಅವರೊಡನೆ ಇನ್ನಿತರ ವಿದ್ವಾಂಸ ಕೊಡನೆ ಚರ್ಚಿಸಿ ಈ ಕಾರ್ಯವನ್ನು ಮುಗಿಸಿದುದು ಭಗವತ್ಕೃಪೆಯಿಲ್ಲದೆ ನನ್ನಲ್ಲಿ ಅಂಥಶಕ್ತಿ ಯಿದೆಯೆಂದೇನೂ ಅಲ್ಲ. ಪರಿಷದಧ್ಯಕ್ಷ ಶ್ರೀ ಜಿ. ನಾರಾಯಣರವರು ಹಳಗನ್ನಡ ಕಾವ್ಯಗಳ ಅರ್ಥಸಾಮಾನ್ಯರಿಗೂ ಆಗಬೇಕೆಂದೆತ್ತಿಕೊಂಡಿರುವ ಈ ಕಾರ್ಯ ಅತ್ಯಂತ ಸ್ತುತ್ಯವಾದುದು. ಇಂಥ ಕಾರ್ಯಕ್ರಮವನ್ನು ಹಾಕಿಕೊಳ್ಳುವವರಿಗೆ ಅದ್ಭುತಧೈರ್ಯಬೇಕು. ಇವೇನು ಚಿಕ್ಕಕಾರ್ಯಗಳೇ ! ಲಕ್ಷಲಕ್ಷಧನವನ್ನು ಆರ್ಜಿಸಿತಂದು ಸುರಿದು ಅವನ್ನು ಸುಲಭ ಬೆಲೆಗೆ ಒದಗಿಸಬೇಕು. ಈ ಮಹಾಸಾಹಸಕ್ಕೆ ಕೈ ಹಾಕಿ ಈಗಾಗಲೇ ಅನೇಕ ಮಹತ್ವದ ಕೃತಿಗಳನ್ನು ಅವರು ಹೊರತಂದು ಕನ್ನಡಿಗರಿಗೆ ಮಹೋಪಕಾರ ಮಾಡಿದ್ದಾರೆ. ಅವರ ಶಾಶ್ವತ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಪರಿಷತ್ತು ಇಂಥ ಅಧ್ಯಕ್ಷ ಶ್ರೇಷ್ಠರನ್ನು ಎಂದೋ ಒಮ್ಮೊಮ್ಮೆ ಪಡೆಯುತ್ತದೆ. ಆಗ ಇಂಥ ಅದ್ಭುತ ಪವಾಡಗಳು ನಡೆದು ಹೋಗುತ್ತವೆ. ಶ್ರೇಷ್ಠಮಟ್ಟದ ಸಂಘಟನಾಚತುರರೂ, ಧೈರ್ಯಸ್ಥೈರ್ಯ ವಿಶಿಷ್ಟರೂ, ಸದ್ದುಗದ್ದಲವಿಲ್ಲದೆ ಕಾರ್ಯವನ್ನು ಮಾಡಿ ಮುಗಿಸುವ ಶಾಂತಗಂಭೀರರೂ ಆದ ಅವರ ಈ ಸ್ತುತ್ಯವಾದ ಮಹಾಕಾರ್ಯ ಯಶಸ್ವಿಯಾಗಿ ನಡೆದು ಕನ್ನಡ ಸಾಹಿತ್ಯದ ಹಳಗನ್ನಡ ಶ್ರೇಷ್ಠ ಕೃತಿಗಳೆಲ್ಲ ಕನ್ನಡಿಗರ ಹಸ್ತಭೂಷಣಗಳಾಗಲೆಂದು ಈಶ್ವರನಲ್ಲಿ ಪ್ರಾರ್ಥಿಸುತ್ತೇನೆ.

ಬೆಂಗಳೂರು
೪–೭–೭೮

ಚನ್ನಪ್ಪ ಎರೇಸೀಮೆ
597, 4ನೇ ಮೈನ್, 2ನೇ ಕ್ರಾಸ್
ವಿಜಯನಗರ, ಬೆಂಗಳೂರು–40

ವಿಷಯಾನುಕ್ರಮಣಿಕೆ

ಪ್ರಸ್ತಾವನೆ

ಷಡಕ್ಷರ ದೇವ ಕವಿ ಕಾವ್ಯವಿಚಾರ

ಬಸವರಾಜವಿಜಯವನ್ನು ಬರೆದ ಮಹಾಕವಿ ಷಡಕ್ಷರ ದೇವ.[1] ಈತನು ತನ್ನ ಸುಪ್ರಸಿದ್ಧ ಕೃತಿಯಾದ ರಾಜಶೇಖರ ವಿಳಾಸವನ್ನು ಬರೆದ ಸುಮಾರು ೨೩–೨೪ ವರ್ಷಗಳ ತರುವಾಯ ಈ ಕೃತಿಯನ್ನು ರಚಿಸಿರಬಹುದೆಂದು ತರ್ಕಿಸಲಾಗಿದೆ. ಷಡಕ್ಷರ ದೇವನು ಜನ್ಮತಾಳಿದ ದಿನವಾಗಲಿ ಲಿಂಗೈಕ್ಯವಾದ ದಿನವಾಗಲಿ ಗೊತ್ತಾಗಿಲ್ಲ. ರಾಜಶೇಖರವಿಳಾಸವನ್ನು ಶಾ. ಶ. ೧೫೭೫ ರಲ್ಲೂ ಬಸವರಾಜವಿಜಯವನ್ನು ಶಾ. ಶ. ೧೫೯೩ ರಲ್ಲೂ ಮುಗಿಸಿದಂತೆ ಆಯಾಯ ಗ್ರಂಥಾಂತ್ಯಗಳಲ್ಲಿ ಹೇಳಿಕೊಂಡಿರುವುದರಿಂದ.[2] ರಾಜಶೇಖರವಿಳಾಸ ಬರೆದುಮುಗಿದ ನಂತರ ಈ ಕೃತಿ ನಿರ್ಮಾಣವಾಗಿದೆ. ರಾಜಶೇಖರವಿಳಾಸವೆಂಬ ಕವಿಯ ಚೊಚ್ಚಲು ಕೃತಿಯನ್ನು ಬರೆಯುವ ಸಮಯದಲ್ಲಿ ಕವಿಗೆ ಕನಿಷ್ಠಪಕ್ಷ ೨೫ ವರ್ಷಗಳಾದರೂ ಆಗಿರಬೇಕೆಂಬ ಊಹೆಯ ಮೇರೆಗೆ ಕ್ರಿ. ಶ. ಸುಮಾರು ೧೬೨೮–೧೬೨೯ ನೆಯ ಇಸ್ವಿಯ ಆಸುಪಾಸಿನಲ್ಲಿ ಕವಿಯ ಜನನವಾಗಿರಬೇಕೆಂದೂ. ಸುಮಾರು ೭೦–೭೫ ವರ್ಷಗಳವರೆಗಾದರೂ ಕವಿ ಬದುಕಿರಲು ಸಾಧ್ಯವೆಂದೂ[3] ಕ್ರಿ. ಶ. ೧೭೦೦ ನೆಯ ಇಸ್ವಿಯನಂತರ ಕವಿ ಲಿಂಗೈಕ್ಯನಾಗಿರಬೇಕೆಂದೂ ಊಹಿಸಲಾಗಿದೆ. ಇದಮಿತ್ಥಮೆಂದು ನಿರ್ಣಯವಾಗುವವರೆಗೆ ಈ ಲೆಕ್ಕಾಚಾರವನ್ನು ಸತ್ಯಕ್ಕೆ ಸಮೀಪವಾದ ಊಹಾರೇಖೆಯೆಂದೇ ಭಾವಿಸಬೇಕು.

ಕವಿಯ ಹುಟ್ಟೂರು ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನಲ್ಲಿರುವ ದನಗೂರು : ಅಲ್ಲಿನ ಬೃಹನ್ಮಠದ ಪಟ್ಟಾಧ್ಯಕ್ಷ. ತನ್ನ ತಂದೆ ತಾಯಿಗಳ ಬಗೆಗಾಗಲಿ

---

1. ಈ ಬಸವರಾಜೇಂದ್ರವಿಜಯಕ್ಕೆ 'ವೃಷಭೇಂದ್ರವಿಜಯ', 'ವೃಷಭರಾಜೇಂದ್ರವಿಜಯ' ಇತ್ಯಾದಿ ನಾಮಾಂತರಗಳೂ ಉಂಟು. ಶ್ರೀ ಆರ್. ಸಿ. ಹಿರೇಮಠರವರು ಸಂಪಾದಿಸಿದ ಗ್ರಂಥ (೧೯೬೮) ದಲ್ಲಿ ಬಸವರಾಜವಿಜಯವೆಂದೇ ಪ್ರತಿ ಆಶ್ವಾಸಾಂತ ಗದ್ಯದಲ್ಲಿದೆ. ಅನ್ಯತ್ರ ವೃಷಭರಾಜೇಂದ್ರವಿಜಯ ಎಂದೂ ಉಂಟು.

2. ರಾ. ಶೇ. ವಿ. ೧೯–೧೮೪ ; ಬ. ರಾ. ವಿ. ೪೨–೧೧೨.

3. ಗೋವಿಂದ ಪೈ : 'ಷಡಕ್ಷರದೇವನ ಕಾಲನಿರ್ಣಯ' ಶರಣಸಾಹಿತ್ಯ ೮–೭ ಈ ಕವಿಯ ದೇಶಕಾಲಗಳ ಬಗೆಗೆ ನಾನು ಬರೆದ 'ಷಡಕ್ಷರದೇವನ ರಾಜಶೇಖರವಿಳಾಸಂ' ಗದ್ಯಾನುವಾದ ಕೃತಿ (ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟನೆ ೧೯೭೭) ಯಲ್ಲಿ ದೀರ್ಘವಾಗಿ ಚರ್ಚಿಸಿದ್ದೇನೆ. ಆದ್ದರಿಂದ ಪ್ರಕೃತ ಇಲ್ಲಿ ಸಂಕ್ಷೇಪತಃ ಕವಿಯ ದೇಶ ಕಾಲದ ವಿಚಾರವನ್ನು ವಿವರಿಸುತ್ತೇನೆ.

ಹುಟ್ಟಿದ ಮನೆಯ ಸಹೋದರಾದಿಗಳ ವಿಚಾರವಾಗಲಿ ಹೇಳಿಲ್ಲ. ಗುರುಕರೋದ್ಭವ ನೆನಿಸಿದ ಮಠದ ಪಟ್ಟದ ಸ್ವಾಮಿಯಾದುದರಿಂದ ರೇಣುಕಾಚಾರ್ಯರಿಂದ ಮೊದಲ್ಗೊಂಡು ಬಂದ ಗುರುಪರಂಪರೆಯಲ್ಲಿನ ಚಿಕ್ಕವೀರ ದೇಶಿಕನ ಕರಕಂಜಸಂಜಾತನೆಂದು ಹೇಳಿ ಕೊಳ್ಳುತ್ತಾನೆ.[4] ಅನಂತರ ಬಾಲೇಂದು ಪುರವರಾಧೀಶ್ವರನಾದ ಮುದ್ದು ಭೂಪಾಲನ ಕುಲಗುರುವಾದ ಎಳಂದೂರಿನ ಮಠಕ್ಕೂ ಸ್ವಾಮಿಯಾಗಿ ಅಲ್ಲಿ ಇರತೊಡಗಿದನು.[5] ಈ ಬಾಲೇಂದುಪುರವೆಂದರೆ ಈಗಿನ ಎಳಂದೂರು. ಇದು ಮೈಸೂರು ಜಿಲೆಯ ಚಾಮ ರಾಜನಗರ ತಾಲೂಕಿನಲ್ಲಿದೆ. ಎಳಂದೂರಿನ ಈ ರಾಜಮನೆತನದ ಪುತ್ರಿಯೇ ದೊಡ್ಡ ದೇವರಾಜ ಒಡೆಯರ ಪತ್ನಿಯಾದ ಅಮೃತಾಂಬಿಕೆ. ಈ ಅಮೃತಾಂಬಿಕೆಯೇ ಮೈಸೂರಿನ ಪ್ರಸಿದ್ಧ ದೊರೆಯಾದ ಚಿಕ್ಕದೇವರಾಜ ಒಡೆಯರ ತಾಯಿ. ಅಮೃ ತಾಂಬೆಯು ತವರು ಮನೆಯ ಕುಲಗುರುವಾದ ಷಡಕ್ಷರದೇವನನ್ನು ಎಳಂದೂರಿಗೆ ಬಾಲ್ಯ ದಲ್ಲಿಯೇ ಬರಮಾಡಿಕೊಂಡು ಅಲ್ಲಿಯೇ ಚಿಕ್ಕದೇವರಾಯರೊಡನೆ ವಿದ್ಯಾಭ್ಯಾಸ ಮಾಡಿಸಿದರೆಂದು ತಿಳಿದುಬರುತ್ತದೆ.[6] ಷಡಕ್ಷರದೇವನ ಸಮಾಧಿಯಿರುವುದೂ ಎಳಂದೂರಿನಲ್ಲಿಯೇ.

ಕಾವ್ಯಗಳು : ಷಡಕ್ಷರಮಹಾಕವಿ ಕನ್ನಡದಲ್ಲಿ 'ರಾಜಶೇಖರವಿಳಾಸ', 'ಶಬರ ಶಂಕರವಿಳಾಸ', 'ಬಸವರಾಜವಿಜಯ' (ವೃಷಭೇಂದ್ರವಿಜಯ) ಗಳೆಂಬ ಕಾವ್ಯಗಳನ್ನೂ, ಸಂಸ್ಕೃತದಲ್ಲಿ 'ಕವಿಕರ್ಣರಸಾಯನ' ವೆಂಬ ಗ್ರಂಥವನ್ನೂ ಬರೆದಿದ್ದಾನೆ. ಅಷ್ಟಕ, ದಂಡಕ, ಉದಾಹರಣಗದ್ಯ, ಸ್ತೋತ್ರ, ಸ್ತವನ ಇತ್ಯಾದಿ ಚಿಕ್ಕ ಚಿಕ್ಕ ಹದಿನೆಂಟು ಸ್ತೋತ್ರ ಸಾಹಿತ್ಯದ ಲಘು ಕೃತಿಗಳನ್ನೂ ರಚಿಸಿದ್ದಾನೆ. ಇವೆಲ್ಲ ಸಂಸ್ಕೃತದಲ್ಲಿವೆ.[7]

---

4. ಧನುಃ ಪುರೋದ್ದಾನ ಯತೀಂದ್ರ ವಂಶ್ಯಃ । ಶ್ರೀ ಚಿಕ್ಕವೀರೇಶ್ವರ ಪಾಣಿಜಾತಃ । ಷಡಕ್ಷರೀಶಾಖ್ಯತಯಾ ಪ್ರಸಿದ್ಧಃ । ಕಲಾವಿದಾಸ್ತೇ ಕವಿತಾಪ್ರಗಲ್ಭಃ ॥

(ಕವಿಕರ್ಣರಸಾಯನ ೧-೫೪)

5. ಷಡಕ್ಷರ ದೇವನು ಬರೆದ ಶಿವಾಧಿಕ್ಯರತ್ನಾವಳಿಯ ಕೊನೆಯ ಗದ್ಯದಲ್ಲಿ –"ಗೀರ್ವಾಣ ಕರ್ನಾಟಕ ಭಾಷಾಮಯ ಸರಸಪ್ರಬಂಧ ಚಾತುರೀ ಧುರೀಣ ಶ್ರೀ ಬಾಲೇಂದು ಪುರವರಾಧೀಶ ಮುದ್ದು ಭೂಮಿಪ ಕುಲಗುರು ಶ್ರೀ ಷಡಕ್ಷರ ಸ್ವಾಮಿ ವಿರಚಿತಾ ಶಿವಾಧಿಕ್ಯರತ್ನಾವಳಿಃ ಸಂಪೂರ್ಣಾ" ಎಂದು ಹೇಳಿಕೊಂಡಿದ್ದಾನೆ.

6. ಚಾಮರಾಜನಗರ ತಾಲೂಕಿನ ಮಲೆಯೂರು ಗ್ರಾಮದ ಕರಣಿಕಾಗ್ರಣಿ ದೇವಚಂದ್ರನ (ಕ್ರಿ. ಶ. ೧೭೭೦) ರಾಜಾವಳಿ ಕಥೆಯ ೧೨ ನೆಯ ಅಧಿಕಾರದಲ್ಲಿ ಈ ಸಂಬಂಧದ ಕಥೆ ಬರುತ್ತದೆ.

7. ಚನ್ನಪ್ಪ ಎರೇಸೀಮೆ : ಷಡಕ್ಷರದೇವನ ಸ್ತೋತ್ರಸಾಹಿತ್ಯಲೇಖನ ; ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ; ಸಂಪುಟ ೬೧ ಸಂಚಿಕೆ ೧ ಮತ್ತು ೨ ನೋಡಿ (೧೯೭೬ ನೆಯ ಜೂನ್ ಮತ್ತು ಡಿಸೆಂಬರ್).

ಆದರೆ ಈ ಲಘುಕೃತಿಗಳಲ್ಲಿ ಅಪವಾದವೋ ಎಂಬಂತೆ 'ಷಡಕ್ಷರ ಮಂತ್ರ ಸ್ತೋತ್ರ'ವೆಂಬ ಚಿಕ್ಕಕೃತಿ ಕನ್ನಡದಲ್ಲಿದೆ. ಅದು ರಗಳೆಯ ರೂಪದಲ್ಲಿದ್ದು 'ಓಂ ನಮಃ ಶಿವಾಯ' ಎಂಬ ಷಡಕ್ಷರ ಮಂತ್ರವನ್ನು ಸ್ತೋತ್ರ ಮಾಡಿದಂತಿದೆ.[8] ಹೀಗೆ ಷಡಕ್ಷರದೇವನ ಚಿಕ್ಕ ದೊಡ್ಡ ಕೃತಿಗಳ ಸಂಖ್ಯೆ ಒಟ್ಟು ಇಪ್ಪತ್ತೆರಡು. ದೊಡ್ಡ ಕೃತಿಗಳಲ್ಲಿ ಶಬರಶಂಕರ ವಿಳಾಸ ಮಾತ್ರ ಐದು ಅಧ್ಯಾಯಗಳ ಚಿಕ್ಕಕೃತಿಯಾದರೆ ಉಳಿದ ಮೂರು ಕೃತಿಗಳು ಮಹಾಕಾವ್ಯಗಳು. ತನ್ನ ಈ ಎಲ್ಲ ಕೃತಿಗಳ ರಚನೆಯಿಂದ ಷಡಕ್ಷರದೇವನು ೧೭ ನೆಯ ಶತಮಾನದ ಉದ್ದಗಲಕ್ಕೂ ಬೆಳೆದು ನಿಂತ ಮಹಾವೃಕ್ಷವೆನಿಸಿದ್ದಾನೆ. ಸಮಕಾಲೀನ ಕವಿಕಾವ್ಯಗಳ ಮೇಲೆಲ್ಲ ಅಧಿಕಾರ ಮಾಡಿದ್ದಾನೆನ್ನಬಹುದು.

ಬಸವರಾಜವಿಜಯ ಮಹಾಪುರಾಣ

ಷಡಕ್ಷರದೇವನ ಬಸವರಾಜವಿಜಯ ಮಹಾಪುರಾಣವು ಅದರ ಹೆಸರೇ ಸೂಚಿಸುವಂತೆ ಬಸವಣ್ಣನವರ ಮಹಿಮಾ ವಿಶೇಷಗಳನ್ನು ವರ್ಣಿಸುವ ೪೨ ಅಧ್ಯಾಯಗಳುಳ್ಳ ಮಹಾಕಾವ್ಯ. ಗದ್ಯಭಾಗವನ್ನುಬಿಟ್ಟು ಕಂದವೃತ್ತಾದಿ ಪದ್ಯಗಳ ಸಂಖ್ಯೆಯೇ ೩೫೦೩ ಎಂದು ೪೨ನೆಯ ಆಶ್ವಾಸಾಂತ್ಯದಿಂದ ತಿಳಿದುಬರುವುದು.[9]

ಷಡಕ್ಷರದೇವನ ಬಸವರಾಜವಿಜಯದ ಸಮಗ್ರವಸ್ತು ಸ್ವಂತದ್ದೇನೂ ಅಲ್ಲ. ವಸ್ತು ಪೂರ್ಣವಾಗಿ ಪಾಲ್ಕುರಿಕೆ ಸೋಮನಾಥರು ದ್ವಿಪದಿ ಛಂದಸ್ಸಿನಲ್ಲಿ ಬರೆದ ಬಸವ ಪುರಾಣದ್ದು. ಇದೇ ವಸ್ತುವನ್ನು ಕನ್ನಡದಲ್ಲಿ ವಾರ್ಧಕಷಟ್ಪದಿಯಿಂದ ಭೀಮ ಕವಿ ಬಸವ ಪುರಾಣವನ್ನಾಗಿಸಿದನು. ಅದನ್ನು ಉದ್ಭಟ್ ಯುಕ್ತಿಯಿಂದ ಸಂಸ್ಕೃತೋಕ್ತಿಯಲ್ಲಿ ಶಂಕರಾರ್ಯೋತ್ತಮನು ಹೇಳಿದನು. ಈ ಮೂವರು ಮಹನೀಯರು ವೃಷಭೇಶ್ವರನ ಮೂರು ಪಾದಗಳಿಗೆ ಮೂರು ಕಾವ್ಯಸಮರ್ಪಣೆ ಮಾಡಿದರು. ಅದೇ ವಸ್ತುವನ್ನೇ ತಾನು ಉಳಿದ ನಾಲ್ಕನೆಯ ಪಾದಕ್ಕೆ ಈ ನನ್ನ ಬಸವರಾಜವಿಜಯವೆಂಬ ಕಾವ್ಯವನ್ನು

---

8 ಷಡಕ್ಷರ ಮಂತ್ರಸ್ತೋತ್ರವೂ ಕೂಡ ಸಂಸ್ಕೃತ ಬಭೂಯಿಷ್ಠವಾಗಿದ್ದರೂ ಕನ್ನಡದ ಕೃತಿಯೇ. ಆದರೆ ಉಳಿದ ಸ್ತೋತ್ರಸಾಹಿತ್ಯವೆಲ್ಲ ಪೂರ್ಣ ಸಂಸ್ಕೃತವೇ ಆಗಿದೆ. ಈ ಲಘು ಕೃತಿಗಳಲ್ಲೆಲ್ಲ ವೀರಭದ್ರೋದಾಹರಣ ಗದ್ಯ, ಶಿವಾಧಿಕ್ಯರತ್ನಾವಳಿ, ಭಕ್ತಾಧಿಕ್ಯ ರತ್ನಾವಳಿ, ಶಿವಸ್ತವ ಮಂಜರಿ, ತತ್ವತ್ರಯಸ್ತೋತ್ರ–ಕೃತಿಗಳು ವಿಷಯ ಮತ್ತು ವಿದ್ವದ್ದೃಷ್ಟಿಯಿಂದ ಮಹತ್ವ ಪೂರ್ಣ ಕೃತಿಗಳಾಗಿವೆ.

9 ಗ್ರಂಥಾಂತರಗಳಲ್ಲಿ ಈ ಸಂಖ್ಯೆ ಅಲ್ಪಸ್ವಲ್ಪ ವ್ಯತ್ಯಾಸದಿಂದ ಕೂಡಿದೆ. ಪ್ರಕೃತ ನಾವು ಪ್ರೊ. ಆರ್. ಸಿ. ಹಿರೇಮಠರವರು ಸಂಪಾದಿಸಿ ಪ್ರಕಟಿಸಿರುವ (೧೯೬೮) ಗ್ರಂಥವನ್ನನುಸರಿಸಿ ಈ ಸಂಖ್ಯೆಯನ್ನು ಕೊಟ್ಟಿದ್ದೇವೆ.

ಮಹಾಭಕ್ತಿಯಿಂದ ಸಮರ್ಪಣೆ ಮಾಡುತ್ತಿದ್ದೇನೆನ್ನುವನು.[10] ತೆಲುಗಿನ ಪಾಲ್ಕುರಿಕೆ ಸೋಮನಾಥರ ಶ್ರೇಷ್ಠ ಬಸವಪುರಾಣ ಮತ್ತು ಭೀಮಕವಿಯ ಕನ್ನಡ ಬಸವಪುರಾಣ ವಿರುವಾಗ ಇನ್ನೊಂದು ಬಸವಪುರಾಣದ ಆವಶ್ಯಕತೆಯೇನು ? ಎಂದು ಯಾರಾದರೂ ಪ್ರಶ್ನಿಸಿದರೆ ಕವಿಯೊಂದು ಉತ್ತರವನ್ನು ಸಿದ್ಧಗೊಳಿಸಿಕೊಂಡೇ ಈ ಕಾವ್ಯವನ್ನು ರಚನೆ ಮಾಡಿದಂತಿದೆ.[11] ಶಿವ ಹೃದಯಾಬ್ಜ ಪೀಠವನ್ನೇ ಮನೆಯನ್ನಾಗಿ ಮಾಡಿಕೊಂಡ ವನೂ, ಶಿವಕೀರ್ತಿ ಚಂದ್ರಿಕಾ ಕುವಲಯ ಬಂಧುವೂ, ಶಿವಸದ್ಗುಣರತ್ನಮಾಲಿಕೆಯ ಪರಿಮಳ ಸೂತ್ರರೂಪನೂ, ಶಿವನ ದಿವ್ಯವೂ ಮಹತ್ವಪೂರ್ಣವೂ ಆದ ಸುವರ್ಣ ಮಂದಿರದ ರತ್ನಕಲಶಪ್ರಾಯನೂ, (೧–೨೯) ಆದ ಬಸವಣ್ಣನು ಆರ್ಯರೆಲ್ಲ ಹೇಳುವಂತೆ ತಾನೇ ಪರಬ್ರಹ್ಮಸ್ವರೂಪನು (೧–೩೩). ಅಂಥ ಬಸವಣ್ಣನ ಧ್ಯಾನವು ಈ ಕಾವ್ಯ ನಿರ್ಮಿತಿಯ ಮೂಲಕ ನನಗೆ ಉಂಟಾಗುವುದಿಲ್ಲವೇ ? ಅದೇ ನನ್ನ ಪುಣ್ಯವಿಶೇಷವೆಂದು ಕವಿಯ ಉತ್ತರ. ಬಸವಣ್ಣನ ಬಗೆಗೆ ಕವಿಗಿರುವ ಭಕ್ತಿಯಂತೂ ಅಪಾರವಾದದ್ದು.[12] ಆತನ ದಿವ್ಯ ಚರಿತ್ರೆಯನ್ನು ವರ್ಣಿಸುವುದು ಶಕ್ಯವಿಲ್ಲ. ಆದರೂ ಚಿಕ್ಕಮಕ್ಕಳ ಮಾತು ಗಳು ಮಾತಾಪಿತೃಗಳನ್ನು ತಣಿಸುವುದಿಲ್ಲವೆ ! ಹಾಗೆ ಬಸವ ತಂದೆಗೆ ನನ್ನ ಅಲ್ಪನುತಿ

---

10. (i) ಮೊದಲೊಳ್ ಸೋಮಗುರೂತ್ತಮಂ ಸರಸ ವಾಕ್ಚಾತುರ್ಯದಿಂದಾಂಧ್ರ ದೇ ।
ಶದಭಾಷಾಕ್ರಮದಿಂ ವೃಷೇಂದ್ರಕೃತಿಯಂ ತಾಂ ಮಾಡಿದಂ ಭಕ್ತಿಯಿಂ ।
ದದನಾಭೀಮಕವೀಶ್ವರಂ ನೆಗಳ್ದನಾದಂ ವರ್ಣಕ ಪ್ರೌಢಿಯಿಂ ।
ದದನುದ್ಯತ್ ರುಚಿ ಸಂಸ್ಕೃತೋಕ್ತಿಯೊಳೆಪೇಳ್ದಂ ಶಂಕರಾರೋತ್ತಮಂ ॥
(ಬ.ರಾ.ವಿ. ೧–೨೮)

(ii) ಬಸವಾಂಘ್ರಿತ್ರಯಕೊಳ್ವಿನಿಂ ಸಮೆದಮೂಜಿಂ ಕಬ್ಬಮಂ ಮಾಣದ ।
ರ್ಚಿಸಿದರ್ಸೋಮ ಕವೀಂದ್ರ ಭೀಮಕವಿಗಳ್ ಶ್ರೀಶಂಕರಾರಾಧ್ಯರಿಂ ।
ಪೆಸೆವನ್ನಂ ನೆಗಳ್ದೊಂದು ಕಬ್ಬಮನಿದಂ ಮಿಕ್ಕಂಘ್ರಿಗಾದಂ ಸಮ ।
ರ್ಚಿಸಿದಂ ಸತ್ಕೃಪೆಯಿಂ ಷಡಕ್ಷರಿಶಿವಾಚಾರ್ಯಂ ಮಹಾಭಕ್ತಿಯಿಂ ॥
(ಬ.ರಾ.ವಿ. ೪೨-೮೬)

11. ಪದಪಿಂದಾದ್ಯರ್ಕಳ್ ಇಂತತುಳ ಸರಸ ಶಬ್ದಾರ್ಥಸಂದರ್ಭದಿಂ ಕೋ ।
ವಿದರೆಲ್ಲರ್ ಮೆಚ್ಚೆಬರ್ದಿಂ ನೆಗಳ್ದಬಸವಪೌರಾಣಮಂ ಬೇಱೆಮೇಣ್ ಪೇಳ್ವುದು ।
ಳ್ವುದು ಹಾಸ್ಯಕ್ಕಾಸ್ಪದಂ, ಬೆಳ್ತನಂ, ಅನುಚಿತಂ ಅಂತಾದೊಡಂ ತದ್ಗುಣಸ್ತೋ ।
ಮದಜಾನಂ ಸಾರ್ವುದೀ ವ್ಯಾಜದಿನೆನುತಿದನಾಂ ಪೇಳಲುದ್ಯುಕ್ತನಾದಂ ॥

12. ಬ. ರಾ. ವಿಜಯದ ೧ ನೆಯ ಆಶ್ವಾಸದ ಪದ್ಯ ೩೦ ರಿಂದ ೩೭ರ ವರೆಗೆ ಬಸವಣ್ಣನ ಮಹತ್ವವನ್ನು ವಿವರಿಸಿರುವುದನ್ನು ಗಮನಿಸಿ. ಬಸವಣ್ಣ ಕವಿಯ ದೃಷ್ಟಿಯಲ್ಲಿ ದ್ವಿತೀಯ ಶಂಭುವೆನಿಸಿದ್ದಾನೆ.

ಕಾಣಿಕೆಯನ್ನು ಪ್ರೀತಿಯಿಂದ ಅರ್ಪಿಸಿ ಕೃತಾರ್ಥನಾಗುತ್ತೇನೆನ್ನುವ ಕವಿಯ ಶ್ರದ್ಧೆ ಯನ್ನು ಗಮನಿಸಬೇಕು.[13] ವಸ್ತುವಿನ ವಿಚಾರವಾಗಿ ಇಷ್ಟೊಂದು ಗೌರವಭಾವ ಕಳೆದು ಭಯಭಕ್ತಿಯಿಂದ ಯಾವ ವಿಶೇಷ ಸ್ವಾತಂತ್ರ್ಯವನ್ನೂ ರಾಜಶೇಖರ ವಿಳಾಸದಂತೆ ಅತಿಯಾಗಿ ತಳೆಯದೆ ಪಾಲ್ಕುರಿಕೆ ಸೋಮನಾಥರ ಬಸವಪುರಾಣ ಭೀಮಕವಿಯ ಭಾಮಿನಿಷಟ್ಪದಿರೂಪದ ಕನ್ನಡ ಬಸವಪುರಾಣವಾದ ಕೃತಿಯೇ ಚಂಪೂರೂಪದಲ್ಲಿ ಬಸವರಾಜವಿಜಯವೆಂಬ ಹೆಸರಿನಿಂದ ಷಡಕ್ಷರದೇವ ನಿರ್ಮಿತವಾಗಿದೆ. ೧೭ನೆಯ ಶತಮಾನದಲ್ಲಿ ಮೂಡಿಬಂದ ಅನೇಕ ಕಥೆಗಳ ಗುಚ್ಛದ ಒಂದು ಮಹಾಪುರಾಣವಾಗಿ ಕನ್ನಡ ಸಾರಸ್ವತ ಪ್ರಪಂಚಕ್ಕೊಂದು ಅಮೂಲ್ಯ ಕಾಣಿಕೆಯಾಗಿದೆ. ಇಷ್ಟಾದರೂ ಬಸವ ರಾಜವಿಜಯ ಭೀಮಕವಿಯ ಬಸವಪುರಾಣದ ಯಥಾವತ್ ಭಾಷಾಂತರವೆಂದು ಭಾವಿಸ ಬಾರದು. ಮೇಲೆ ಹೇಳಿದ ಮೂರು ಕೃತಿಗಳಿಂದ[14] ವಿಷಯವನ್ನು ಸಂಗ್ರಹಿಸಿ ತನ್ನ ದೈವದತ್ತ ವಸ್ತುಕಶ್ಶೈಲಿಯ ಪ್ರಬಲ ವಾಗ್ವೈಭವ ವಿಸ್ತಾರದಿಂದ ಕಥೆಯನ್ನು ಹಿಗ್ಗಿಸಿ, ತಗ್ಗಿಸಿ, ಬೇಡವಾದುದನ್ನು ಬಿಟ್ಟು, ಬೇಕಾದುದನ್ನು ಹೊಸದಾಗಿ ಸೇರಿಸುವ ಅಲ್ಪಸ್ವಲ್ಪ ಸ್ವಾತಂತ್ರ್ಯವನ್ನು ವಹಿಸಿದ ಕವಿಯ ಸತ್ವಪೂರ್ಣ ಲೆಕ್ಕಣಿಕೆಯಿಂದ ಬಸವರಾಜವಿಜಯ ಮೂಡಿ ಬಂದಿದೆ. ಆದರೆ ಭಾವ ಚಿಂತಾರತ್ನ ರಾಜಶೇಖರವಿಳಾಸವಾಗಿ ಮೂಡಿ ಬಂದಂತಲ್ಲ. ಪಾಲ್ಕುರಿಕೆ ಸೋಮನಾಥರ ಬಸವಪುರಾಣದ ಕಥೆಯ ರೂಪರೇಖೆಗಳು ಹೆಚ್ಚು ವಿಕಾರಗೊಳ್ಳುವಂತೆ ಮಹತ್ವದ ಬದಲಾವಣೆಗಳನ್ನು ಭೀಮಕವಿಯೂ ಮಾಡಿಲ್ಲ. ಷಡಕ್ಷರದೇವನೂ ಮಾಡಿಲ್ಲ. ಕಾರಣ : ಪಾಲ್ಕುರಿಕೆ ಸೋಮನಾಥ ಇವರಿಬ್ಬರ ದೃಷ್ಟಿ ಯಲ್ಲೂ ಅತ್ಯಂತ ಪೂಜ್ಯವ್ಯಕ್ತಿ. ಆದರೆ ಪುರಾಣದ ಸೌಂದರ್ಯ ಇನ್ನೂ ಅಧಿಕ ಗೊಳ್ಳುವುದಕ್ಕೋಸುಗ ತೆಲುಗು ಬಸವಪುರಾಣದಲ್ಲಿಲ್ಲದ ಹತ್ತೊಂಬತ್ತು ಕಥೆಗಳು ಕನ್ನಡ ಬಸವಪುರಾಣ ಮತ್ತು ಬಸವರಾಜವಿಜಯಗಳಲ್ಲಿ ಕಂಡುಬರುತ್ತವೆ. ಹಾಗೆಯೇ ಸಂಸ್ಕೃತ ಬಸವಪುರಾಣದಲ್ಲಿಲ್ಲದ ಕೆಲವು ಕಥೆಗಳನ್ನು ಬಸವರಾಜವಿಜಯದಲ್ಲಿ ಕಾಣು

---

13. ಆ ದೇವನ ಘನ ಮಹಿಮೆಯು । ನಾ ದೇವಾಚಾರ್ಯ ಫಣಿಪ ವಾಕ್ಪಸಹಸ್ರಕ್ಕಾ ದೊಡಮೇಂ ಬಣ್ಣಿಸಲಳವಾದಪ್ಪುದೆ ? ಪೊಗಳ್ವೆನೆಂದು ನೆನೆವವನೆಗ್ಗಂ ॥ ಎಂದರಿದುಂ ಪೊಗಳ್ದೆ ನದೇ । ಕಂದೊಡೆ ಶಿಶುವಾಗಿ ಪೆತ್ತರುಂ ಮೆಚ್ಚಿಪವೋ । ಲ್ತಂದೆ ಬಸವಂಗಜೀಯದೇ । ನೆಂದೊಡ ಮದು ಲಾಲ್ಯಮೆನ್ನ ನುಡಿಯಪ್ಪುದಜೀಂ ॥ ನುತಪೂರ್ಣ ಗುಣಾಂಬರ ಸಂ । ವೃತ ರಾಜಂಗಂಬರಾ ಚಲದ ಗುಣವಿಭವಂ । ತತಿರತಿಯುಂ ಶ್ರುತಿನುತಘನ । ಮತಿ ಬಸವಂಗಲ್ಪನುತಿಯನೊಲ್ದ ರ್ಪಿಸುವಂ ॥ (ಬ. ರಾ. ವಿ. ೧–೩೭, ೩೮, ೩೯.)

14. ಪಾಲ್ಕುರಿಕೆ ಸೋಮನಾಥರ ತೆಲಗು ಬಸವಪುರಾಣ, ಕಂಚಿ ಶಂಕರಾರಾಧ್ಯರ ಸಂಸ್ಕೃತ ಬಸವಪುರಾಣ, ಭೀಮಕವಿಯ ಕನ್ನಡ ಪಟ್ಪದಿರೂಪದ ಬಸವಪುರಾಣ.

ತ್ತೇವೆ.[15] ಇಂಥ ಸ್ವಾತಂತ್ರ್ಯ ಬಸವರಾಜವಿಜಯದಲ್ಲಿ ಕಂಡುಬರುತ್ತದೆ. ಅಲ್ಲದೆ ಭೀಮಕವಿಯು ಬಸವಪುರಾಣದಲ್ಲಿ ಮಿತಿಮೀರಿ ಬೆಳೆದ ಅಂಶವು ಬಸವರಾಜವಿಜಯದಲ್ಲಿ ಬೇರೊಂದು ರೀತಿಯಲ್ಲಿ ತರ್ಕಬದ್ಧವಾಗಿ ಸಂಗ್ರಹವಾಗಿ ಹೇಳಲ್ಪಟ್ಟಿದೆ.[16] ಇಂಥ ಅನೇಕ ಚಿಕ್ಕಪುಟ್ಟ ಸ್ವಾತಂತ್ರ್ಯವನ್ನು ಕವಿತನ ಬ. ರಾ. ವಿ. ದಲ್ಲಿ ಅನುಸರಿಸಿದ್ದರೂ ಭೀಮಕವಿಯ ಬಸವಪುರಾಣವನ್ನು ಷಡಕ್ಷರದೇವ ತನ್ನ ಕೃತಿಗೆ ಮೂಲವಾಗಿಟ್ಟುಕೊಂಡು ಮುಂದುವರಿದಿರುವುದಂತೂ ಸತ್ಯವಿಷಯ. ಎಷ್ಟೋ ಕಡೆಗಳಲ್ಲಿ ಭೀಮಕವಿಯ ಬಸವಪುರಾಣದ ಶಬ್ದಗಳು. ವಾಕ್ಯಗಳು ಇಡಿ ಇಡಿಯಾಗಿ ಬ. ರಾ. ವಿ. ಕ್ಕೆ ಹಾರಿಬಂದಿವೆ. ಆದರೆ ಬಸವಪುರಾಣದ ಮಾತುಗಳಿಗಿಂತ ಬಸವರಾಜವಿಜಯದ ಮಾತುಗಳು ಸುಂದರ ಮತ್ತು ಸುಲಭ.

ವೃಷಭೇಂದ್ರ ವಿಜಯದಲ್ಲಿ ಷಡಕ್ಷರದೇವ ತನ್ನ ಕಥನಕಲೆಗೆ ವಿಶೇಷ ಗಮನವಿತ್ತಿದ್ದರೂ ಮಹಾಕಾವ್ಯಲಕ್ಷಣಗಳನ್ನು ಈ ಕಾವ್ಯದಲ್ಲೂ ತರುವ ಹಂಬಲದಿಂದ ದೂರನಾಗಿಲ್ಲ. ಅಧ್ಯಾಯ ೪ ರಲ್ಲಿ ಬರುವ ಉಪವನದ ವರ್ಣನೆ, ಜಲಕ್ರೀಡಾ ಪ್ರಸಂಗಗಳೇ ಮೊದಲಾದವು ಪ್ರಕೃತ ಕಥಾಭಾಗಕ್ಕೆ ಬೇಕಾಗಿದ್ದರೂ ಎಳೆದು ತಂದು ಹದಿನೆಂಟು ಅಂಗಗಳನ್ನು ಜೋಡಿಸಿ ಅಲ್ಲಲ್ಲಿ ವರ್ಣಿಸಿಯೇ ಬಿಟ್ಟಿದ್ದಾನೆ. ಆದರೆ ರಾಜಶೇಖರ ವಿಳಾಸದಂತೆ ಮಿತಿಮೀರಿಲ್ಲವೆಂಬುದನ್ನು ಒಪ್ಪಬೇಕು.

ಬಸವರಾಜ ವಿಜಯದ ಮುಖ್ಯ ವಿಷಯ ಬಸವಣ್ಣನವರ ಜೀವನಕ್ಕೆ ಸಂಬಂಧಿಸಿದ ಕಥೆಯಾದರೂ ನೇರವಾಗಿ ಬಸವಣ್ಣನವರ ಕಥೆ ಬರುವುದು ತೀರಾ ಸ್ವಲ್ಪವೇ. ತಮಿಳುನಾಡಿನ ಅರುವತ್ತುಮೂವರು ಪುರಾತನರು ಕನ್ನಡನಾಡಿನ ಶಿವಶರಣರು. ಇತರ ಶೈವ ಭಕ್ತರ ನೂರಾರು ಕಥೆಗಳು ಗ್ರಂಥಾಂತರಾಳದಲ್ಲಿ ಹುದುಗಿ ಹೋಗಿವೆ. ಬಸವಣ್ಣನವರ ಜೀವನಕ್ಕೆ ಸಂಬಂಧಿಸಿದುದರಲ್ಲಿ ಬಸವಣ್ಣನವರ ಅವತಾರದ ಉದ್ದೇಶ. ಹಿನ್ನೆಲೆ. ಜನನ. ವಿದ್ಯಾಭ್ಯಾಸ. ಉಪನಯನ ತಿರಸ್ಕಾರ. ವಿವಾಹ. ಮಂತ್ರಿಪಟ್ಟ, ಬಸವಭಾಷೆ

---

15. ಡಾ. ಆರ್. ಸಿ. ಹಿರೇಮಠ : ಸಂಪಾದಿತ ಬ. ರಾ. ವಿ. ಪ್ರಸ್ತಾವನೆ, ಪು xcix ರಿಂದ ciii ರವರೆಗೆ ನೋಡಿ.

16. ಬ. ರಾ. ವಿ. ದ ೩೫ ನೆಯ ಆಶ್ವಾಸದಲ್ಲಿನ ಜಯಸಿಂಹ ದುಗ್ಗಳೆಯರ ಪ್ರಸಂಗದಲ್ಲಿ ಜೈನರೊಡನೆ ದಾಸಿಮಾರ್ಯರು ವಾದ ಮಾಡುವಾಗ ತನ್ನವೇ ಆದ ಅನೇಕ ತರ್ಕಬದ್ಧವಾದ ಸಿದ್ಧಾಂತ ಸಮ್ಮತವಾದ ಮಾತುಗಳಿಂದ ವಿಷಯವನ್ನು ಸಂಗ್ರಹಗೊಳಿಸಿದ್ದಾನೆ. ಈ ವಿಷಯವನ್ನು ಬ. ಪು. ದ ಕಾಂಡ ೫, ಸಂ ೫೦ ರಲ್ಲಿ ಬಂದಿರುವ ವಿಷಯದೊಡನೆ ಹೋಲಿಸಿರಿ. ಬ. ಪು. ಕಾ. ೪, ಸಂ ೨೬ ರಲ್ಲಿ ೧ ರಿಂದ ೬ ಭಾ.ಷ. ಗಳಲ್ಲಿ ಬರುವ ಕಥಾಭಾಗ ಬ.ರಾ. ವಿ. ೧೬ ನೆಯ ಅಧ್ಯಾಯದ ೩೪, ೩೫,೩೬ ಮೂರು ಪದ್ಯಗಳಲ್ಲಿ (ಎರಡು ವೃತ್ತ ಒಂದು ಕಂದದಲ್ಲಿ) ಅಡಕಗೊಂಡಿವೆ. ಇಂಥ ಉದಾಹರಣೆಗಳು ಬೇಕಾದಷ್ಟಿವೆ.

ಗಳು. ಭಕ್ತಿಜೀವನ. ಪ್ರಭುವಿನ ಆಗಮನ. ಅವನ ಆರೋಗಣೆ. ಶರಣ ಸಂಘಟನೆ. ಜಂಗಮ ಪ್ರಾಣತ್ವ. ಕಾರ್ಯನಿರ್ವಾಹ. ಬಸವಪವಾಡ. ಕಲ್ಯಾಣಕ್ರಾಂತಿ. ಕಪ್ಪಡಿ ಸಂಗಮಕ್ಕೆ ಆಗಮನ, ಲಿಂಗೈಕ್ಯಸ್ಥಿತಿಗಳು ಮೊದಲ ಐದು ಅಧ್ಯಾಯ ಮತ್ತು ಕೊನೆಯ ೪೨ನೆಯ ಅಧ್ಯಾಯದಲ್ಲಿ ಮಾತ್ರ ಬಂದಿವೆ. ಉಳಿದ ಮೂವತ್ತಾರು ಅಧ್ಯಾಯಗಳಲ್ಲಿ ನೂರಾರು ವಿವಿಧ ಶಿವಭಕ್ತರ ವೈವಿಧ್ಯಮಯ ಶಿವಭಕ್ತಿಯ ಕಥೆಗಳ ಪೋಣಿಕೆಯಾಗಿ ಹೋಗಿದೆ. ಈ ಸಂವಿಧಾನ ಮಸಿದ್ದರೂ ಪಾಲ್ಕುರಿಕೆ ಸೋಮನಾಥರದೇ. ಅವರ ಮಾರ್ಗವನ್ನು ಅನುಸರಿಸಿಯೇ ಭೀಮಕವಿಯ ಬಸವಪುರಾಣ ಮತ್ತು ಬಸವರಾಜ ವಿಜಯಗಳೂ ರೂಪಗೊಂಡಿವೆ. ಸೋಮನಾಥರ ಸಂವಿಧಾನವನ್ನು ವ್ಯತ್ಯಾಸಗೊಳಿಸುವ ಧೈರ್ಯವನ್ನು ಯಾರೂ ಮಾಡಿಲ್ಲ. ಒಂದು ದೃಷ್ಟಿಯಿಂದ ವೀರಶೈವ ಪುರಾಣಗಳ ಪರಂಪರೆಯೇ ಪಾಲ್ಕುರಿಕೆ ಸೋಮನಾಥರನ್ನನುಸರಿಸಿದೆ ಎಂದರೂ ತಪ್ಪಲ್ಲ. ಚೆನ್ನ ಬಸವಪುರಾಣ. ವೀರಶೈವಾಮೃತ ಮಹಾಪುರಾಣ. ಶಿವತತ್ತ್ವ ಚಿಂತಾಮಣಿ—ಮುಂತಾದ ವೀರಶೈವ ಪುರಾಣಗಳ ಸಂವಿಧಾನ ಸೋಮನಾಥರ ಸಂವಿಧಾನವನ್ನನುಸರಿಸಿದವುಗಳೇ ಆಗಿವೆ. ಜನತೆಯಲ್ಲಿ ಭಕ್ತಿಭಾವವನ್ನು ಅಧಿಕಗೊಳಿಸಲು, ಸಾಮಾಯಿಕ ಶ್ರದ್ಧಾಸಕ್ತಿಗಳನ್ನುಂಟು ಮಾಡಲು ಅನೇಕ ಶಿವಭಕ್ತರ ಭಕ್ತಿಜೀವನದ ಪವಾಡದ ಕಥೆಗಳು ಬಸವರಾಜ ವಿಜಯದಲ್ಲಿ ಕಿಕ್ಕಿರಿದು ತುಂಬಿವೆ. ಒಂದಿಲ್ಲೊಂದು ದೃಷ್ಟಿಯಿಂದ ಆ ಕಥೆಗಳೆಲ್ಲ ಬಸವಣ್ಣನೊಡನೆ ಸಂಬಂಧಗೊಳಿಸಿದವುಗಳಾಗಿವೆ. ಬಸವಣ್ಣ ಚನ್ನಬಸವಣ್ಣನಿಗೆ ಹೇಳಿದಂತೆ ರುದ್ರಪಶುಪತಿ. ನಕ್ಕನೈನಾರು, ಕೋಳೂರು ಕೊಡಗೂಸು. ಅಮ್ಮವ್ವೆ. ದೀಪದ ಕಲಿಯನಾರು. ನಾಟ್ಯಮಿತ್ತಂಡಿ. ಕಣ್ಣಪ್ಪ. ಕಲಿಯಂಬ ಮೊದಲಾದ ಕಥೆಗಳು ಹೆಣೆಯಲ್ಪಟ್ಟಿವೆ. ಬಿಜ್ಜಳನಿಗೆ ವೀರಭಕ್ತರ ಮಹಿಮಾತಿಶಯವನ್ನು ಬಸವಣ್ಣನು ವಿವರಿಸಿದ ಹಾಗೆ ಇರಿಭಕ್ತ. ಬಾಹೂರ ಬೊಮ್ಮಯ್ಯಗಳ ಕಥೆಗಳ ಅಳವಡಿಕೆಯಿದೆ. ಬಸವಣ್ಣನ 'ಬೇಡುವವರಿಲ್ಲದೆ ಬಡವಾದೆನೆಂಬ' ಹೇಳಿಕೆಯ ಮದವನ್ನು ದೂರಮಾಡಲು ಮಡಿವಳ ಮಾಚಿದೇವನು ಹೇಳಿದಹಾಗೆ ಶಂಕರದಾಸಯ್ಯ. ಸಿರಿಯಾಳ. ನಿಂಬ್ಯಕ್ಕ (ನಿಂಬಿಯಕ್ಕ) ಹಲಾಯುಧ. ಮರೆಮಿಂಡದೇವ. ನಂಬಿಯಣ್ಣ. ಅರುವತ್ತುಮೂವರು ಪುರಾತನರ ಕಥೆಗಳ ಜೋಡಣೆಯಿದೆ. ಬಿಜ್ಜಳನಿಗೆ ಜಿನ ಸಮಯವನ್ನು ಅಲ್ಲಗಳೆದು ಶಿವ ಸಮಯವನ್ನು ಪ್ರತಿಷ್ಠಾಪನೆ ಮಾಡುವ ಅವಸರದಲ್ಲಿ ಏಕಾಂತ ರಾಮಯ್ಯನು ವಾಗೀಶ (ತಿರುನಾಕರೀಶ). ಇರಿವತೊಂಡಾರಿ. ಚಿಕ್ಕೈನೈನಾರು. ನಿಡುಮಾರ. ನಮಿನಂದಿ ಮೊದಲಾದ ಶಿವಭಕ್ತರ ಕಥೆಗಳನ್ನು ಹೇಳಿದಂತೆ ಹಣೆಯಲಾಗಿದೆ. ಬಸವಣ್ಣನು ಬಿಜ್ಜಳ ಭೂಪಾಲನಿಗೆ ಶಿವಭಕ್ತರ ಮಹಿಮಾತಿಶಯವನ್ನು ವಿವರಿಸುವ ಸಂದರ್ಭದಲ್ಲಿ ಹಾವಿನಹಾಳುಕಲ್ಲಯ್ಯ. ಮಾದರ ಮಾಡಯ್ಯ. ಶ್ವಪಚಯ್ಯ. ಕಕ್ಕಯ್ಯ. ವರದಾನಿಗುಡ್ಡವ್ವೆ. ಬಿಬ್ಬಬಾಚರಸ. ಭೀಮಯ್ಯ. ಉದ್ಭಟ. ಕೆಂಬಾವಿಭೋಗಣ್ಣನೇ ಮೊದಲಾದವರ ಕಥೆಗಳನ್ನು ಹೇಳಿದಹಾಗೆ ವಿವರಣೆಯಿದೆ. ಹೀಗೆ ಅನೇಕ ಉಪಕಥೆ

ಗಳ ಮೂಲಕ ಬಸವಣ್ಣನ ಸಂಬಂಧ ಗ್ರಂಥಮುದ್ದಕ್ಕೂ ಇದ್ದರೂ ಇವರಲ್ಲಿ ನೇರವಾಗಿ ಬಸವಣ್ಣನ ಕಥೆಯಿಲ್ಲ. ಶಿವಸಮಯ. ಶಿವಭಕ್ತರ ಮಹತ್ವಗಳು ಗ್ರಂಥಮುದ್ದಕ್ಕೂ ಬೀಗಿ ನಿಂತಿವೆ. ಸ್ವಮತೋತ್ಕರ್ಷಕ್ಕಾಗಿ ಪರಸಮಯವನ್ನಲ್ಲಗಳೆಯುವ ಪ್ರಾಚೀನ ವಿಧಾನಕ್ಕೇನೂ ಈ ಗ್ರಂಥವಲ್ಲಿ ಕೊರತೆಯಿಲ್ಲ. ಇಂದಿನ ಯುಗಧರ್ಮಕ್ಕೆ ಇಂಥ ವಿಚಾರಗಳು ಸರಿಹೊಂದಿಲ್ಲವೆಂದರೂ ೧೨–೧೩ನೆಯ ಶತಮಾನದಷ್ಟು ಹಿಂದಕ್ಕೆ ಸರಿದು ನಾವೂ ಅಂದಿನ ಜನಜೀವನ. ಸಾಹಿತ್ಯ ಮೌಲ್ಯ. ಪರಿಸರ ಪ್ರಭಾವಗಳನ್ನು ಅರ್ಥ ಮಾಡಿಕೊಂಡು ಇಂದಿಗೆ ಹೊಂದಿಕೆಯಾಗುವುದನ್ನು ಮಾತ್ರ ಸ್ವೀಕರಿಸಬೇಕಷ್ಟೆ. ಸ್ವಧರ್ಮೋತ್ಕರ್ಷಕ್ಕಾಗಿ ಪರಧರ್ಮವನ್ನು ಖಂಡಿಸುವ ಕಾರ್ಯ ಎಲ್ಲ ಧರ್ಮದವರಿಂದಲೂ ನಡೆದಿವೆ. ಭಾಷ್ಯಾದಿಗಳು ಮಾಡಿದ್ದೂ ಇದೇ ಕಾರ್ಯವನ್ನೇ !

ವರ್ಣನಾ ಕೌಶಲ್ಯ

ಷಡಕ್ಷರದೇವನ ವ್ಯಕ್ತಿ ಚಿತ್ರಣದ ಕಲೆಗಾರಿಕೆಗೆ ವೃಷಭೇಂದ್ರ ವಿಜಯವನ್ನು ನೋಡಬೇಕು. ಇಲ್ಲಿ ಬಂದಿರುವ ನೂರಾರು ಮುಖದ ಭಕ್ತಜನ ಸಂದೋಹದ ವಿವಿಧ ಸುಂದರ ಚಿತ್ರಗಳನ್ನು ಕಾಣುತ್ತೇವೆ. ಭಕ್ತಿಯೆಂಬುದು ಒಂದೇ ಆಗಿರಬಹುದು. ಅದನ್ನಾಚರಿಸುವ ವ್ಯಕ್ತಿಯ ಗುಣಸ್ವಭಾವಕ್ಕನುಸರಿಸಿ ತರತಮ ಭಾವ ಅಲ್ಲೂ ಕಾಣುತ್ತದೆ. ಈ ಗ್ರಂಥದಲ್ಲಿ ಬಂದಿರುವ ಭಕ್ತರಲ್ಲಿ ಅನೇಕರು ಮುಗ್ಧಭಕ್ತರು. ಕೆಲವರು ಉಗ್ರಭಕ್ತರು. ಕೆಲವರು ಫಲೇಚ್ಛಾಭಕ್ತಿಮಾರ್ಗಗಾಮಿಗಳು, ಕೆಲವರು ಲಿಂಗನಿಷ್ಠಾಗರಿಷ್ಠರು. ಇನ್ನಿತರರು ವಿವಿಧ ಕಾಯಕದಲ್ಲಿ ಅಚಲನಿಷ್ಠೆಯುಳ್ಳವರು, ಹಲವರು ಸರ್ವಾರ್ಪಣಾ ಭಾವವುಳ್ಳವರು, ಕೆಲವರು ಕಾಮದಿಂದ ಅಕಾಮಕ್ಕೇರಿದವರು, ಕೆಲವರು ಆತ್ಯಂತಿಕ ಅಹಿಂಸಾವಾದಿಗಳು. ಕೆಲವರು ಧರ್ಮ ರಕ್ಷಣಾಕಾರ್ಯ ಬದ್ಧ ಕಂಕಣರು. ಇಂಥ ಅನೇಕ ಮುಖದ ಜನರ ಸಾಮಯಿಕ ಶ್ರದ್ಧಾಭಕ್ತಿ ವಿಶ್ವಾಸಗಳ ಚಿತ್ರಣ ಆಯಾಯ ಜನರ ಮನೋಭಾವದಾಳಕ್ಕೆ ಇಳಿದು ಯೋಚಿಸಿದ್ದಾಗಿ ವಿವಿಧ ಬಣ್ಣಬರೆಗೊಂಡು ಷಡಕ್ಷರ ದೇವನ ಪ್ರಬುದ್ಧ ಲೆಕ್ಕಣಿಕೆಯಿಂದ ಸೊಗಸಾಗಿ ಚಿತ್ರಿತವಾಗಿದೆ. ಭಕ್ತಿಜೀವನ ಮಹಾಮೇರುವಾದ ಬಸವಣ್ಣನೆಂಬ ದಾರ ಈ ಎಲ್ಲರೀತಿಯ ಭಕ್ತರತ್ನಗಳ ಮಧ್ಯರಂಧ್ರದಲ್ಲಿ ಪೋಣಿಸಲ್ಪಟ್ಟು ಶಿವನ ಕೊರಳ ಹಾರವಾಗಿದೆ. ಶಿವನೆಂಬ ಹಂದರಕ್ಕೆ ಹಬ್ಬನಿಂತ ಬಸವಣ್ಣನವರ ಭಕ್ತಿಜೀವನವೆಂಬ ಬಳ್ಳಿಗೆ ಬಿಟ್ಟ ಹೂವುಗಳ ಹಾಗೆ ಉಳಿದ ಶಿವಭಕ್ತರ ಕಥಾ ಸಮೂಹ ಕಂಗೊಳಿಸುತ್ತಿದೆ. ಕೋಳೂರು ಕೊಡಗೂಸಿನ ಬಾಲ್ಯ ಸಹಜ ಮುಗ್ಧ ಭಕ್ತಿ, ಕಾಯಕಸದ್ಭಾವ ವಿಶಿಷ್ಟ. ಮೋಳಿಗೆ ಮಾರಯ್ಯನ ಭಕ್ತಿ. ದಸರಯ್ಯನ ಅತಿ ಶ್ರೇಷ್ಠ ಮಟ್ಟದ ಅಹಿಂಸಾಜೀವನದ ಶಿವಭಕ್ತಿ. ಜೀವದಯಾಪರನಾದ ಕಿನ್ನರಯ್ಯನ ಭಕ್ತಿ, ಅಮ್ಮವ್ವೆಯ ಮಾತೃ ಸಹಜ ಶಿವಭಕ್ತಿ ಚಿಕ್ಕಮಾಣ್ಣನ ಪ್ರಾಣ ದಾನದ ಕಥೆ ಒಂದೊಂದೂ ತಮ್ಮವೇ ಆದ ಜೀವಂತ ಚಿತ್ರಗಳಾಗಿ ಕಂಗೊಳಿಸುತ್ತವೆ. ಮರೆಮಿಂಡ

ದೇವನು ಶಿವನಿಗೂ. ನಂಬಿಯಣ್ಣನಿಗೂ ಬಹಿಷ್ಕಾರ ಹಾಕಿದಾಗ ಗಾಬರಿಗೊಂಡ ಶಿವನ ನಿಲುವಿನ ಚಿತ್ರಣ[17] ಸನ್ನಿವೇಶದ ಸಹಜತೆಯು ಭವ್ಯಸುಂದರ ಪ್ರತಿಮೆಗೆ ಜೀವಂತ ನಿದರ್ಶನವಾಗಿದೆ. ಹೀಗೆ ಪುರಾಣದುದ್ದಗಲಕ್ಕೂ ಕಥನಕಲೆಯು ಗತ್ತುಗಾರಿಕೆ ಕವಿಯ ಅಪಾರ ಜೀವನಾನುಭವದ ಭಾವಕ್ಕೆ ತಕ್ಕಂತೆ ಒಲಿದು ಬಂದ ವಾಕ್‌ಶಕ್ತಿಯ ಫಲವಾಗಿ ಜೀವಂತಗೊಂಡು ಕಳಕಳಿಸುತ್ತಿದೆ. ರಾಜಶೇಖರವಿಳಾಸದ ಕಾಠಿಣ್ಯವಾಗಲಿ, ಮೇರೆ ಮೀರಿದ ವರ್ಣನೆಯ ಅತಿರೇಕವಾಗಲಿ. ಪ್ರೌಢ ಪಾಂಡಿತ್ಯಪ್ರದರ್ಶನವಾಗಲಿ ವೃಷಭೇಂದ್ರ ವಿಜಯದಲ್ಲಿ ಇಲ್ಲದಿರುವುದು ಓದುಗರ ಪುಣ್ಯ ವಿಶೇಷವೇ ಎನ್ನಬೇಕು. ಮಹಾಕಾವ್ಯದ ಹದಿನೆಂಟಂಗಗಳನ್ನು ಕಥೆಯ ಸನ್ನಿವೇಶಕ್ಕೆ ಹೊಂದಿಸಿಕೊಂಡು ತಂದುದರಿಂದ ಅವೆಲ್ಲ ಸಹಜತೆಯಿಂದ ಕೂಡಿ ಪುರಾಣಕ್ಕೆ ಹೊರೆಯಾಗಿಲ್ಲ ಮತ್ತು ಅತಿಯೆನಿಸಿಲ್ಲ.

ಪ್ರಕೃತಿ ಚಿತ್ರಣದಲ್ಲಿ ಸಿದ್ಧಹಸ್ತನಾದ ಷಡಕ್ಷರದೇವ ಬಹು ತಾಳ್ಮೆಯಿಂದ ಔಚಿತ್ಯ ಮೀರದಂತೆ ಅನೇಕ ಸುಂದರ ಪ್ರತಿಮೆಗಳನ್ನು ಕಡೆದು ನಿಲ್ಲಿಸಿರುವುದು ವೃಷಭೇಂದ್ರ ವಿಜಯದಲ್ಲಿ ಕಂಡುಬರುವುದು. ಉತ್ಪ್ರೇಕ್ಷಾಮೂಲವಾದ ಇಂಥ ನೂರಾರು ಸುಂದರ ಪ್ರತಿಮೆಗಳು ಸಹೃದಯರ ಮನಃಪಟಲದಲ್ಲಿ ನೂತನ ಸೃಷ್ಟಿಯ ವಿಚಿತ್ರ ದೃಶ್ಯಗಳನ್ನು ಪಡಿಮೂಡಿಸಿ ಆಶ್ಚರ್ಯಗೊಳ್ಳುವಂತೆ ಮಾಡುತ್ತಾನೆ. ಬತ್ತದ ಗದ್ದೆಗಳು ಶ್ರೇಷ್ಠವಾದ ಹೊಳೆಯ ಪಾದವನ್ನು (ಕಾಲುವೆಯನ್ನು) ಬಹುಕಾಲದಿಂದ ಸೇವೆ ಮಾಡಿದುದರಿಂದ ಸ್ವರ್ಗಕ್ಕೆ ಹೋಗುವಹಾಗೆ ಆಕಾಶಕ್ಕೆ ಹಾರಿಹೋಗುವ ಗಿಳಿಗಳ ಸಮೂಹ ಒಪ್ಪಿತ್ತು (೪–೧೭). ಹೀಗೆ ಹಾರಿದ ಗಿಳಿಗಳ ಬಗೆಗೆ ಕವಿಯ ಉತ್ಪ್ರೇಕ್ಷೆ ಹೀಗೆ : 'ಮನ್ಮಥನು ತನ್ನ ತಾಯಿಯಾದ ಲಕ್ಷ್ಮಿಯ ಶ್ರೇಷ್ಠ ಮನೆಯನ್ನು (ಅಂದರೆ ಕಮಲವನ್ನು) ಸೂರ್ಯನು ಸೊಂಪೇರಿಸುತ್ತಾನೆ. ಆತನ ತೇರಿಗೆ ಏಳೇಕುದುರೆಗಳಿವೆ. ಇನ್ನೊಂದು ಕುದುರೆಯಿಲ್ಲದಿದ್ದರೆ ಆಗುವುದಿಲ್ಲ. ಆ ಸೂರ್ಯನು ತನಗೆ ಪ್ರೀತಿಯಾದುದನ್ನು ಆರಿಸಿಕೊಳ್ಳಲಿ, ಎಂದುಕೊಂಡು ತನ್ನ ವಾಹನಗಳ ಸಮೂಹವನ್ನು ಪ್ರೀತಿಯಿಂದ ಆಕಾಶಕ್ಕೆ ಹಾರಿಸಿದ ಹಾಗೆ ಆ ಗಿಳಿಗಳು ಆಕಾಶದಲ್ಲಿ ಮನೋಹರವಾಗಿದ್ದವು[18]. ಇದೊಂದು ಉತ್ತಮವಾದ ಪ್ರತಿಮೆ.

---

17 ಆ ೧೬. ೧೩೮ರ ಮುಂದಿನ ಗದ್ಯ.

18 ಮದನಂ ತನ್ನಯತಾಯ ಸಾರಗೃಹಮಂ ಸೊಂಪೇರಿಪಂ ಸೂರ್ಯನೆಂ ।
ಬುದರಿಂದಾತನ ತೇರ್ಗೆ ವಾಜಿಯೊಳವೇಳಿನ್ನೊಂದರಿಂದಲ್ಲದಾ ।
ಗದು ತಾನೊಲ್ದುದನಾಯ್ದುಕೊಳ್ಗೆನುತಮಾತ್ಮೀಯಾಶ್ವಸಂದೋಹಮಂ ।
ಪದಪೀವಟ್ಟಿದ ನೇಜವೊಲ್ ಶುಕಚಯಂ ಚೆಲ್ವಾದುದಾಕಾಶದೊಳ್ ॥ (೪-೧೮)

ಲೋಕಾಲೋಕದಂತೆ ಕಲ್ಯಾಣನಗರದ ಕೋಟೆಯು ಬಹು ದೊಡ್ಡದಾಗಿತ್ತು. ಅದರ ಪರಿಖೆಯಲ್ಲಿ (ಅಗಳಿನಲ್ಲಿ) ನೀರು ತುಂಬಿತ್ತು. ಆ ನೀರಿನಲ್ಲಿ ಎದ್ದು ಪಾತಾಳ ಸರ್ಪರಾಜನಾದ ಆದಿಶೇಷನು ತೆರೆಯನ್ನನುಸರಿಸಿ ಈಸಾಡಿ ಸಲ್ಲೀಲೆಯಿಂದ ಕೋಟೆಯ ಗೋಡೆಯನ್ನು ಏರಿ, ಮೇಲ್ಭಾಗದಲ್ಲಿ ಪ್ರಕಾಶಿಸುವ ಚಂದ್ರ (ಪೀಯೂಷಾಂಶು)ನನ್ನು ರಾತ್ರಿಯಲ್ಲಿ ಜಾಗ್ರತೆಯಾಗಿ ಕಂಡು. ಅವನನ್ನು ತುಡುಕುವುದಕ್ಕೆ ಆತುರಪಡುವಷ್ಟರಲ್ಲಿ ಆ ಚಂದ್ರಮಧ್ಯದಲ್ಲಿರುವ ಸಾರಂಗವನ್ನು ಕಂಡು ಅದರ ಹೆದರಿಕೆಯಿಂದ ತನ್ನ ದೇಹ ವನ್ನು ಹಾಗೆ ಹಿಂದಕ್ಕೆಳೆದುಕೊಂಡನಂತೆ[19] ಕೋಟೆಯ ಗೋಡೆಯ ಎತ್ತರವನ್ನು ಅಪ್ರತ್ಯಕ್ಷವಾಗಿ ಈ ತಂತ್ರವೊಂದನ್ನಳವಡಿಸುವುದರ ಮೂಲಕ ಹೇಳುವ ಕವಿಯ ಆಕಾಶ ದೆತ್ತರದ ಭಾವನಾಲೋಕದಲ್ಲಿ ನಾವೂ ವಿರುತ್ತೇವೆ. ಕವಿಯ ಅದ್ಭುತ ಕಲ್ಪನೆಯ ಇನ್ನೊಂದು ಚಿತ್ರವನ್ನು ಗಮನಿಸಿ :

ಕಲ್ಯಾಣನಗರದ ಪೇಟೆಬೀದಿಯಲ್ಲಿ ಒಂದು ಕಡೆ ಒಂದು ಅಂಗಡಿಯಮುಂದೆ ಪಚ್ಚಕರ್ಪೂರ, ಕುಂಕುಮಕೇಸರಿ, ಕಸ್ತೂರಿಯ ರಾಶಿಗಳನ್ನು ವ್ಯಾಪಾರಿಗಳು ಒಟ್ಟಿದ್ದರು. ಇವನ್ನು ಕಂಡ ಕವಿಯ ಕಲ್ಪನಾವಿಲಾಸ ಎಷ್ಟೆತ್ತರಕ್ಕೇರಿದೆಯೆಂದರೆ, ಅದೊಂದು ಅದ್ಭುತ ದೃಶ್ಯವೇ ಸರಿ : 'ಬಿಳಿಯ ನೈದಿಲೆಯ ಪರಿಮಳವನ್ನಪ್ಪಿದ ಚಂದ್ರನ ಕಾಂತಿ, ಕಮಲಗಳ ಸೌರಭ್ಯದ ಸಂಬಂಧವನ್ನು ಹೊಂದಿದ ಎಳೆಯ ಸೂರ್ಯನ ಕಿರಣಗಳ ಕಾಂತಿ, ಮಲ್ಲಿಗೆ, ಜಾಜಿ, ಮೊಲ್ಲೆಹೂವುಗಳ ಸಮೂಹದ ಪರಿಮಳವನ್ನು ಹೊಂದಿದ ಗಾಢಾಂಧಕಾರ– ಇವು ಮೂರೂ ಒಂದರೊಡನೊಂದು ಯುದ್ಧಕ್ಕೆ ದೊಡ್ಡ ದೊಡ್ಡ ಗುಡ್ಡೆಗಳಾಗಿ ನಿಂತಿರುವುವೋ ಎಂಬಂತೆ ಕಾಣುತ್ತಿದ್ದುವಂತೆ[20]

ಶೈತ್ಯಸೌರಭ್ಯ ಮಾಂದ್ಯಮಾರುತವನ್ನು ವರ್ಣಿಸುವುದೊಂದು ಕವಿಗಳ ಹುಚ್ಚು. ಅದನ್ನು ಸದಸದಖ್ಯಾತಿ ಕವಿಸಮಯಗಳನ್ನು ಬಳಸಿಕೊಂಡು ವರ್ಣಿಸುವುದಕ್ಕೆ ಎಲ್ಲಿಲ್ಲದ ಉತ್ಸಾಹ ತೋರಿಸುತ್ತಾರೆ. ಕಲ್ಯಾಣನಗರದ ಉದ್ಯಾನದಲ್ಲಿ ಬೀಸಿದ ಅಂಥ ಗಾಳಿಯ ಒಂದು ಪ್ರತಿಮೆಯನ್ನು ನೋಡಿ :

---

19 ಪರಿಖಾವಾರಿಯೊಳೊಯ್ಯನೇಳ್ದು ತೆರೆಗೊಂಡೀಸಾಡಿ ಸಲ್ಲೀಲೆಯಿಂ ।
ಪರಿದಾಸಾಲಮನೇಱಿ ಮೇಲೆಸೆವಪೀಯೂಷಾಂಶುವಂ ರಾತ್ರಿಯೊ ।
ಳ್ಭರದಿಂ ಕಂಡು ತುಡುಕಲಪ್ಪಳಿಸಿಪಾಗಳ್ ಮಧ್ಯಸಾರಂಗ ಮೊಂ ।
ದಿರೆ ತದ್ಭೀತಿಯಿನ್ನೈದೆಪ್ಮೈದೆಗೆವುದಾ ಪಾತಾಳವಾಕಾಶನಂ ॥ (೪-೭೨)

20 ಕುಮುದಾಮೋದಮನಪ್ಪಿದಿಂದುಕಿರಣಂ ಪಂಕೇಜ ಸೌರಭ್ಯ ಸಂ–।
ಕ್ರಮಣಂಬೊಂದಿದ ಬಾಲಭಾನುರುಚಿ ಮಲ್ಲೀಜಾತಿಕುಂದಾಳಿಗಂ–।
ಧಮನಾಳ್ದಂಧತಮಂ ಪೊಣರ್ಚೆಗುರು ರಾಶಿಭೂತವಾಗಿರ್ಪವೋಲ್ ।
ಹಿಮದೊಟ್ಟಿಲ್ ಘಸೃಣೋತ್ಕರಂ ಮೃಗಮದೋದ್ಯರ್ ರಾಶಿಕಣ್ಗೊಪ್ಪುಗುಂ ॥ (೪-೮೩)

'ಮಂದಮಾರುತವು ತಿಳಿಗೊಳದಲ್ಲಿ ಸಂಚರಿಸಿ, ಕಮಲ ಪರಾಗದ ಸಮೂಹವನ್ನು ಮೈಗೆ ಪೂಸಿಕೊಂಡು ಮುಂದುವರಿದುದನ್ನು ಕಂಡು ತಮ್ಮ ಆಹಾರವನ್ನು ಕೊಂಡೊಯ್ಯುವ ಆ ಗಾಳಿಯನ್ನು ಬಾಲಭ್ರಮರ ಸಮೂಹವು ಅಟ್ಟಿಸಿಕೊಂಡು ಬಂದವು. ಆಗ ಆ ಗಾಳಿಯು ಹಂಸಪಕ್ಷಿಯ ಮಯ್ಯ ತುಪ್ಪುಳವನ್ನು ತುಳಿಯುತ್ತ' ಚಕ್ರವಾಕ ಪಕ್ಷಿಗಳ ಸುರತದ ಸಮಯದಲ್ಲಿ ಜಾರಿಬಿದ್ದ ಅವುಗಳ ನುಣುಪಾದ ತುಪ್ಪುಳಗಳಲ್ಲಿ ತೊಡಕುಗೊಂಡು ಜಾರಿ ಮುಂದುವರಿದು, ನುಣ್ಣಗಿರುವ ಮಳಲಿನ ಗುಡ್ಡೆಗಳಲ್ಲಿ ಎಡವುತ್ತ ಮೆಲ್ಲನೆ ಬೀಸಿ ಬರುತ್ತಿತ್ತಂತೆ.[21] ಈ ಪದ್ಯದಲ್ಲಿ ಒಳಹೊಕ್ಕು ಹುಡುಕಿದಷ್ಟೂ ಅರ್ಥ ಸಿಗುತ್ತದೆ ಯೋಚಿಸುವವನಿಗೆ. ಇನ್ನೊಂದು ಸುಂದರ ಉತ್ಪ್ರೇಕ್ಷಾ ಮೂಲವಾದ ಪ್ರತಿಮೆಯನ್ನು ನೋಡಿ. ನೇರಳೆಮರದ ಹಣ್ಣು ಕಪ್ಪಾಗಿ ಗಿಡದ ತುಂಬ ವ್ಯಾಪಿಸಿರುತ್ತದಷ್ಟೆ. ಅದನ್ನು ಕಂಡ ಕವಿ–ಅಳಿಸಮೂಹವು ಮಕರಂದ ಪಾನಮಾಡಿ ಸಂತೋಷಗೊಂಡ ಸೊಕ್ಕಿನಿಂದ ಹೂವುಗಳ ಸಮೂಹವನ್ನು ಪದೇ ಪದೇ ಪೀಡಿಸತೊಡಗಲು ವಸಂತನು ಹೀಗೆ ಹೂವುಗಳನ್ನು ಸಂಕಟಗೊಳಿಸುತ್ತಿರುವ ದುಂಬಿಗಳನ್ನೆಲ್ಲ ಹಿಡಿದು ಕಟ್ಟಿಹಾಕಿರುವನೋ ಎಂಬ ಹಾಗೆ ನೇರಳೆಮರ ಹಣ್ಣುಗಳಿಂದ ತುಂಬಿತ್ತಂತೆ.[22]

ಹೀನ ಜಾತಿಯಲ್ಲಿ ಹುಟ್ಟಿದವನೂ ಒಮ್ಮೊಮ್ಮೆ ದೈವಬಲದಿಂದ ರಾಜಹಂಸನೆನಿಸುವುದುಂಟು. ಅವನು ಕರಧೃತದಂಡದಿಂದ ಪ್ರಜಾಪೀಡನೆ ಮಾಡಿ ತನ್ನ ಆಳ್ವಿಕೆಮುಂದುವರಿಸುತ್ತಾನೆಂದು ಕವಿ ತನ್ನ ಸಮಕಾಲೀನ ರಾಜನೊಬ್ಬನನ್ನು ಕುರಿತು ಶ್ಲೇಷೆ ಹೂಡಿ ಹೇಳುವುದರ ಸೊಗಸನ್ನು ಗಮನಿಸಬೇಕು :

---

21 ತಿಳಿಗೊಳದಲ್ಲಿ ಸುತ್ತಿ ಸುಳಿದೆತ್ತಿ ಸರೋಜ ಪರಾಗಪೂಗಮಂ ।
ತಳಿದೆಳೆದುಂಬಿ ಬೆಂಬಳಿಯೊಳಟ್ಟೆ ಮರಾಳದಮೆಯ್ಯ ತುಪ್ಪುಳಂ ।
ತುಳಿದೆಣೆವಕ್ಕಿಕೂಟದೊಳರಲ್ಚಿದನುಣ್ಗಱಿಯೊಳ್ತೊಡಂಕಿನು ।
ಣ್ಬುಳಿಲಮರ್ದೊಟ್ಟಿಲಲ್ಲೆಡಪಿ ಮೆಲ್ಲನೆ ಪಾಯ್ವುದು ಮಂದಮಾರುತಂ ॥ (೪–೫೩)

22 ನಲಿದು ಮಧುವೀಂಟಿ ಸೊರ್ಕಿಂ ।
ದಲೆದೊಡೆ ಸುಮನ ಪ್ರತಾನಮಂ ಮಧುವಳಿಸಂ ।
ಕುಲಮಂ ಕಟ್ಟಿಟ್ಟವೊಲಿರೆ ।
ಫಲವೃಂದಂ ಪಣ್ತನೇಱಿಲೆಸೆದುದು ಬನದೊಳ್ ॥

(ಇಲ್ಲಿ ದುರ್ಜನ ಸಮೂಹವು ಪಾನಮತ್ತರಾಗಿ ವಿದ್ವಾಂಸರನ್ನು ಪೀಡಿಸುತ್ತಿದ್ದರೆಂಬುದೂ ಧ್ವನಿತವಾಗುವ ಇನ್ನೊಂದು ಅರ್ಥದ ಕಡೆಗೆ ಗಮನವೀಯಬೇಕು : ಅವರನ್ನು ಕಟ್ಟಿಹಾಕಿದಾಗಲೇ ಉಪಟಳನಾಶ).

ಕರದಂಡಾತಿಪ್ರಿಯನೀ
ಮರಾಳನಕಟೀ ವಿಜಾತಿಜಂಗಾದುದು ಭಾ ।
ಸುರರಾಜ ಹಂಸನಾಮಂ
ಪರಿಕಿಸೆ ವಿಧಿಬಲದಿನಾವುದೊ ಜಗದೊಳ್ ॥ (೪-೬೭)

ಕಮಲದ ಒರಟಾದ ದಂಟಿನಲ್ಲಿ ಅತಿಪ್ರೀತಿಯುಳ್ಳ ಈ ಹಂಸಪಕ್ಷಿಯು ಪಕ್ಷಿ ಜಾತಿಯಲ್ಲಿ ಹುಟ್ಟಿದರೂ ರಾಜಹಂಸನೆಂಬ ಉತ್ತಮ ಹೆಸರು ಪಡೆಯಿತು. ಅಯ್ಯೋ ! ವಿಚಾರಿಸಿ ನೋಡಿದರೆ ಲೋಕದಲ್ಲಿ ವಿಧಿಬಲದಿಂದ ಯಾವುದು ತಾನೇ ಆಗುವುದಿಲ್ಲ. ಜಾತಿವಿಹೀನ (ವಿಜಾತಿ–ವಿಗತವಾದಜಾತಿ ; ವಿ ಅಂದರೆ ಪಕ್ಷಿಜಾತಿ) ನಾದವನೂ ಒಮ್ಮೊಮ್ಮೆ ಧರಿಸಿದ ದಂಡದಲ್ಲಿ ಅತಿಪ್ರಿಯನಾಗಿ ದುಷ್ಟತನ (ಮರಾಳ) ದಿಂದ ಪ್ರಜಾವರ್ಗವನ್ನು ಹಿಂಸಿಸುತ್ತ ರಾಜಶ್ರೇಷ್ಠನೆನಿಸುವುದುಂಟು. ಇದು ವಿಧಿಯ ಬಲ–ಎಂಬುದು ಕವಿಯ ತೀರ್ಮಾನ. ಈ ಮಾತು ಸಮಕಾಲೀನ ದುಷ್ಟ ಅರಸನನ್ನು ಲಕ್ಷ್ಯದಲ್ಲಿಟ್ಟು ಹೇಳಿದುದಲ್ಲದೆ ಬೇರಿಲ್ಲ.

ಹೀಗೆ ಷಡಕ್ಷರ ದೇವನ ಬಸವರಾಜ ವಿಜಯದಲ್ಲಿ ವರ್ಣನಾವೈಖರಿಗೆ, ಅದ್ಭುತ ಪ್ರತಿಭಾಪ್ರದರ್ಶನಕ್ಕೆ ಕೊರತೆಯೇನಿಲ್ಲ. ಎಲ್ಲವನ್ನೂ ವಿವರಿಸುವುದು ನಮ್ಮ ಕರ್ತವ್ಯವೂ ಅಲ್ಲ ; ಸ್ಥಳವೂ ಇಲ್ಲ. ದಿಙ್ಮಾತ್ರ ಕೆಲವಂಶಗಳನ್ನು ಓದುಗರ ಮುಂದಿರಿಸಿದೆ ಅಷ್ಟೆ. ಕವಿಯ ಶಕ್ತಿ, ನೈಪುಣ್ಯ, ಲೋಕದಲ್ಲಿನ ಅನೇಕ ಕಾವ್ಯ, ಶಾಸ್ತ್ರಜ್ಞಾನ, ಸೂರಿಜನಜನ್ಯ ಶಿಕ್ಷಣಾದಿಗಳ ಪ್ರಬಲಬಲದಿಂದ ಮೇಲಾಗಿ ಮಾರಾರಿಯ ಕೃಪೆ ಇವೆಲ್ಲವುಗಳ ಬಲದಿಂದ ಊಷರವನ್ನು ಉರ್ವರೆಯನ್ನಾಗಿಸುವ ಶ್ರೇಷ್ಠಮಟ್ಟದ ಬರವಣಿಗೆ ಷಡಕ್ಷರದೇವನ ಕಾವ್ಯಗಳಲ್ಲಿ ಎದ್ದುಕಾಣುವ ಗುಣ. ಬಸವರಾಜವಿಜಯ ಅವನ ಶ್ರದ್ಧೆ ಭಕ್ತಿ ವಿಶ್ವಾಸದ ಶ್ರೇಷ್ಠಮಟ್ಟದ ಪುರಾಣ. ಅದನ್ನು ಬರೆದ ಕವಿ, ಪಡೆದ ನಾಡು ಧನ್ಯ.

ಚನ್ನಪ್ಪ ಎರೇಸೀಮೆ

ಬಸವರಾಜ ವಿಜಯಂ

ಬಸವರಾಜ ವಿಜಯಂ

ಪ್ರಥಮಾಶ್ವಾಸಂ

ನಂದೀಶ್ವರನ ಅವತಾರ

ಶ್ರೀಮತ್ಕಲ್ಯಾಣಭೂಭೃನ್ನುತಸುಕರಪದಂ ದಿವ್ಯಗಂಗಾಂಬಿಕಾಸ
ತ್ಪ್ರೇಮಾವಾಸಂ ಗಣೇಂದ್ರಾನ್ವಿತನುರುಮಹಿಮಾಧಾರನಶ್ರಾಂತಸತ್ವಾ
ರಾಮಂ ಭೂತಿಪ್ರಯುಕ್ತಂ ಪ್ರಣವರುಚಿ ಪರಾನಂದಧರ್ಮಂ ಸ್ವಲೀಲೋ
ದ್ದಾಮಂ ರಕ್ಷಿಪ್ಪುದೆಮ್ಮಂ ಬಿಡದನವರತಂ ನಂದಿಕೇಶಂ ಮಹೇಶಂ ೧

೧ (ಕವಿ-ಪ್ರಥಮತಃ ಪರಶಿವನನ್ನೂ ತನ್ನ ಪುರಾಣ ನಾಯಕನಾದ ಬಸವೇಶ್ವರನನ್ನೂ ಕುರಿತು ಶ್ಲೇಷೆಯಿಂದ ಗ್ರಂಥ ಪರಿಸಮಾಪ್ತ್ಯರ್ಥವಾಗಿ ಆದಿಮಂಗಳ ಮಾಡುತ್ತಾನೆ.) **ಶಿವಪರಾರ್ಥ** : (i) ಕಾಂತಿ ಸಂಪನ್ನವಾದ ಮೇರು ಪರ್ವತವನ್ನು ಶ್ಲಾಘ್ಯವಾದ ಮತ್ತು ಸಮೀಚೀನವಾದ ಸ್ಥಾನವಾಗಿ ಉಳ್ಳವನೂ, ಶ್ರೇಷ್ಠರಾದ ದೇವ ಗಂಗಾ ಮತ್ತು ಅಂಬಿಕಾ (ಪಾರ್ವತಿ) ಇವರುಗಳ ಪವಿತ್ರವಾದ ಪ್ರೇಮಕ್ಕೆ ಆಸ್ಪದನೂ, ಗಣಶ್ರೇಷ್ಠನಾದ ವಿಘ್ನೇಶ್ವರನಿಂದ ಕೂಡಿದವನೂ, ಮಹಿಮಾನ್ವಿತನೂ, ಸಮಸ್ತ ಜೀವ ಕೋಟಿಗೆ ಆಧಾರನೂ, ಅಣಿಮಾದ್ಯಷ್ಟೈಶ್ವರ್ಯಗಳನ್ನುಳ್ಳವನೂ. ಓಂಕಾರ ಪ್ರಕಾಶರೂಪನೂ, ಲೋಕೋತ್ತರ ಆನಂದ ಧರ್ಮನೂ, ತನ್ನ ಇಪ್ಪತ್ತೈದು ಲೀಲೆಗಳಿಂದ ಉದ್ದಾಮನೆನಿಸಿದವನೂ ಆದ ಮಹೇಶ್ವರನು ಸದಾ ನಮ್ಮನ್ನು ತಪ್ಪದೆ ರಕ್ಷಿಸಲಿ. **ಬಸವೇಶ್ವರ ಪರಾರ್ಥ** : (ii) ಸಂಪದ್ಭರಿತವಾದ ಕಲ್ಯಾಣ ಪಟ್ಟಣಕ್ಕೆ ಅರಸನಾದ ಬಿಜ್ಜಳನಿಂದ ಸ್ತುತಿಸಲ್ಪಡುವ ಸಮೀಚೀನವಾದ ಪಾದಗಳುಳ್ಳವನೂ. ಶ್ರೇಷ್ಠಳಾ ಗಂಗಾಂಬಿಕೆಯ ಪ್ರೇಮಕ್ಕೆ ಆಸ್ಪದನೂ. ಶಿವಗಣ ಶ್ರೇಷ್ಠರುಗಳಿಂದ ಕೂಡಿರುವವನೂ. ಶ್ರೇಷ್ಠ ಮಹಿಮೆಗಳಿಗೆ ಆಧಾರನೂ. ಸಂತತವೂ ಸತ್ವಗುಣದಲ್ಲಿ ಕ್ರೀಡಿಸುವವನೂ, ಭಸ್ಮೋದ್ಧೂಳಿತ ಶರೀರಿಯೂ. ಓಂಕಾರ ಪ್ರಣವ ಧ್ಯಾನಾಸಕ್ತನೂ. ಲಿಂಗಾನಂದ ಧರ್ಮಸ್ವರೂಪನೂ, ತನ್ನ ಲೀಲೆಗಳಿಂದ ಉತ್ಕೃಷ್ಟನೆನಿಸಿದವನೂ ಆದ ನಂದೀಶ್ವರನ ಅವತಾರಿಯಾದ ಬಸವೇಶ್ವರನು ನಮ್ಮನ್ನು ಕೈಬಿಡದೆ ಸತತವೂ ರಕ್ಷಿಸಲಿ. [ಭೂಭೃತ್– ಅರಸು, ಮೇರುಪರ್ವತ: ಗಂಗಾಂಬಿಕಾ—ಈ ಹೆಸರಿನ ಬಸವಣ್ಣನ ಪತ್ನಿ. ಗಂಗೆ, ಮತ್ತು ಪಾರ್ವತಿ: ಪ್ರಣವ ರುಚಿ–'ಶಿವೋವಾ ಪ್ರಣವಪ್ರೋಕ್ತಃ ಪ್ರಣವೋಮಾಶಿವಸ್ಮೃತಃ ವಾಚ್ಯವಾಚಕಯೋರ್ಭೇದೋ ನಾತ್ಯಂತಮಿಹ ವಿದ್ಯತೇ ॥ ಎಂಬ ಪ್ರಮಾಣಕ್ಕನುಸಾರ

ಗಂಗಾರಂಗತ್ತರಂಗಪ್ರಭವಕಣಗಣಸ್ಫಾರತಾರಾಪರೀತ
ಸ್ವಾಂಗಾರ್ಧೇಂದುದ್ಯುತಿಪ್ರೋನ್ಮಿಳಿತ ನಿಜಜಟಾಜೂಟವಿಭ್ರಾಜಮಾನಂ
ಶೃಂಗಾರಾಸಾರಗೌರೀಕಬಳಿತಕಲಿತಾರ್ಧಾಂಗನುದ್ಯದ್ದಯಾದ್ರಾ
ಪಾಂಗಂ ಮಾಂಗಲ್ಯಸಾಕಲ್ಯಮನೆಮಗೊಲವಿಂ ಮಾಳ್ಕೆ ನಿಚ್ಚಂ ತ್ರಿನೇತ್ರಂ ೨

ವ್ಯಾನಮ್ರಾಮರ ಕಾಮಿನೀಜನಗಳದ್ಧಮ್ಮಿಲ್ಲಪುಷ್ಪಾಸವಂ
ತಾನೊ[1]ಕ್ಕೊಪ್ಪಿರೆ ಪಾದಪೀಠದೊಳದಂ ತಳ್ತುಂಬ ಭೃಂಗಾಳಿ ಬೆ
ಳ್ಪಾನುತ್ತುಂ ನಖರೋಚಿಯಿಂ ತೊಳಪವೋಲ್ಗೈದಾನತವ್ರಾತದೋ
ಷಾನೀಕಾಪನಯಪ್ರದರ್ಶಿನಿಯೆನಿಪ್ಪೀಶಾನಿಗಾಂ ವಂದಿಪೆಂ ೩

ವಾಗಿ ಶಿವನು ಓಂಕಾರ ಪ್ರಕಾಶಕನು. ಅದನ್ನೇ ಲಕ್ಷ್ಯದಲ್ಲಿಟ್ಟು ಪ್ರಣವರುಚಿ ಎಂದಿದ್ದಾನೆ; ಭೂತಿ–ವಿಭೂತಿ ಐಶ್ವರ್ಯ ನಂದಿಕೇಶ್ವರನೇ ಬಸವೇಶ್ವರಾವತಾರಿ ಎಂಬ ಕಾರಣದಿಂದ ಇಬ್ಬರಲ್ಲೂ ಅಭೇದ] (೨) ದೇವಗಂಗಾನದಿಯ ಚಲಿಸುತ್ತಿರುವ ತೆರೆಗಳಿಂದ ಹುಟ್ಟಿದ ಜಲಕಣಗಳೆಂಬ ಬಹಳ ನಕ್ಷತ್ರಗಳ ಸಮೂಹದಿಂದ ಸುತ್ತುವರಿಯಲ್ಪಟ್ಟ ಅಂಗವುಳ್ಳವನೂ, ಅರ್ಧಚಂದ್ರನ ಕಾಂತಿಯಿಂದ ಪ್ರಕರ್ಷವಾಗಿ ಮಿಳಿತಗೊಂಡ ನಿಜ ಜಟಾಪಟಲದಿಂದ ವಿಭ್ರಾಜಮಾನನಾಗಿರುವವನೂ. ಶೃಂಗಾರರಸಧಾರಾ ಸ್ವರೂಪಳಾದ ಪಾರ್ವತೀ ದೇವಿಯಿಂದ ಅರ್ಧಶರೀರವು ಆಕ್ರಮಿಸಲ್ಪಟ್ಟು. ಅಭಿನ್ನನಾಗಿರುವವನೂ, ಹುಟ್ಟುತ್ತಿರುವ ಕರುಣಾರಸದಿಂದ ಆರ್ದ್ರಗೊಂಡಿರುವ ಕಟಾಕ್ಷಗಳುಳ್ಳವನೂ ಮೂರು ನೇತ್ರಗಳಿಂದ ಕೂಡಿರುವವನೂ ಆದ ಶಿವನು ಸಕಲ ಮಂಗಲಗಳನ್ನು ಸತತವೂ ಪ್ರೀತಿಯಿಂದ ನಮಗೆ ಉಂಟುಮಾಡಲಿ. [ರಂಗತ್ + ತರಂಗ–ಕುಣಿಯುತ್ತಿರುವ ಅಂದರೆ ಚಲಿಸುತ್ತಿರುವ ಅಲೆ. ಪ್ರಕರ್ಷದಿಂದ ಮಿಳಿತ–ಪ್ರೋನ್ಮಿಳಿತ–ಚೆನ್ನಾಗಿ ಮಿಳಿತಗೊಂಡ. ಉದ್ಯತ್ + ದಯಾ + ಆರ್ದ್ರ + ಅಪಾಂಗ = ಉದಯಗೊಂಡ ದಯಾರಸದಿಂದ ಆರ್ದ್ರಗೊಂಡ ಕಣ್ಣಿನ ಕೊನೆ. ಸಕಲದ ಭಾವ–ಸಾಕಲ್ಯ] ೩. ನಮಸ್ಕರಿಸುತ್ತಿರುವ ದೇವತಾಸ್ತ್ರೀಯರುಗಳ ಜಾರಿಹೋದ ತುರುಬುಗಳಲ್ಲಿರುವ ಪುಷ್ಪಸಮೂಹಗಳ ಮಕರಂದ ರಸವು ಪಾದಗಳನ್ನಿಡುವ ಪೀಠದ ಮೇಲೆ ಸುರಿದು ಶೋಭಮಾನವಾಗಿದೆ. ಆ ಮಕರಂದವನ್ನು ಪಾನಮಾಡಲು ಆಶಿಸಿ ಬಂದು ಮುಕ್ತಿ ಪಾನ ಮಾಡುತ್ತಿರುವ ದುಂಬಿಗಳ ಸಾಲು ಪಾದನಖಗಳ ಕಾಂತಿಯಿಂದ ಬಿಳಿಯ ಬಣ್ಣವನ್ನು ಹೊಂದಿ ಪ್ರಕಾಶಿಸುವಹಾಗೆ ಮಾಡಿದೆ. (ಅದು) ನಮಸ್ಕರಿಸುತ್ತಿರುವ (ಸಮಸ್ತ) ಭಕ್ತಿಯರ ಸಮೂಹದ ಪಾಪರಾಶಿಯನ್ನು ಹೋಗಲಾಡಿಸುತ್ತಿರುವಳೋ ಎಂಬ ಹಾಗಿದೆ; ಇಂತಹ ಈಶಾನ ಮೂರ್ತಿಯ

---

1 ನ (ಮ)

ಶುಂಭನಿಶುಂಭದರ್ಪಹರೆ ಶಂಬರವೈರಿವಧೂಮನೋಗದ
ಸ್ತಂಭಿನಿ ಕುಂಭಿನೀಧರಕುಮಾರಿ ಕುಮಾರಗಜಾಸ್ಯಮಾತೆ ನಿ
ರ್ದಂಭತಪಃಪ್ರಲಬ್ಧಪಶುಪಾರ್ಧಕಳೇವರೆ ಲೋಕಧಾತ್ರಿ ವಿ
ಶ್ವಂಭರಜಂಭಭಿತ್ಪ್ರಣತೆ ಪಾರ್ವತಿ ಪಾಲಿಪುದೆನ್ನನಂಬಿಕೆ ೪

ಶಿವನಡಿಗಳ್ಗೆ ಮುಂಬರಿದು ಕುಂಬಿಡುವಬ್ಜಭವಾದಿ ದೇವರೊ
ಪ್ಪುವ ಕನಕಸ್ಫುರನ್ಮಕುಟಘಟ್ಟನದಿಂ ಸುರಿದೊಟ್ಟಿಲಾದ ರೇ
ಣುವನಿರದೊಟ್ಟಿಕೊಂಡು ಕನಕಾಚಳದಂತತಿರಮ್ಯಮಾದ ದಾ
ನವಿಸರನಿರ್ಝರಂ ಗಜಮುಖಂ ಮಿಗೆ ಮಾಳ್ಕೆಮಗಿಷ್ಟಸಿದ್ಧಿಯಂ ೫

ಹರತೇಜಃಪುಂಜಪುಂಜೀಕೃತತನು ಶತಮುಸ್ತಾರಕಾರಾತಿ ಧಾತ್ರೀ
ಧರಪುತ್ರೀಪುತ್ರನತ್ರಿಪ್ರಭವರುಚಿಯಶಸ್ತಾರಿ ವಿಸ್ತಾರಶಕ್ತಿ

ಸತಿಯಾದ ಪಾರ್ವತೀ ದೇವಿಗೆ ನಾನು ನಮಸ್ಕರಿಸುತ್ತೇನೆ. (೪) ಶುಂಭನಿಶುಂಭರೆಂಬ ರಾಕ್ಷಸರ ದರ್ಪವನ್ನು ಹರಣಮಾಡಿದವಳೂ, ಶಂಬರನ ವೈರಿಯಾದ ಮನ್ಮಥನ ಹೆಂಡತಿ ರತಿದೇವಿಯ ಮನೋದುಃಖವನ್ನು ನಿವಾರಣೆ ಮಾಡಿದವಳೂ, ಭೂಮಿಯನ್ನು ಧಾರಣ ಮಾಡಿದ ಹಿಮವಂತನ ಮಗಳಾದವಳೂ, ಷಣ್ಮುಖಸ್ವಾಮಿ ಮತ್ತು ಗಣಪತಿಯರುಗಳಿಗೆ ತಾಯಿಯೆನಿಸಿರುವವಳೂ, ನಿಷ್ಕಾಪಟ್ಯದಿಂದ ಕೂಡಿದ ತಪಸ್ಸನ್ನಾಚರಿಸಿ ಪಶುಪತಿಯ ಅರ್ಧದೇಹವನ್ನು ಪಡೆದಂಥವಳೂ. ಸಮಸ್ತ ಜಗತ್ತಿನ ಮಾತೆಯೆನಿಸಿದವಳೂ, ಶ್ರೀವಿಷ್ಣು, ದೇವೇಂದ್ರಾದಿಗಳಿಂದ ನಮಸ್ಕರಿಸಿಕೊಳ್ಳುವವಳೂ ತಾಯಿಯೂ ಆದ ಪಾರ್ವತೀದೇವಿಯೇ ನಮ್ಮನ್ನು ರಕ್ಷಿಸು. [ಶಂಬರವೈರಿ–ಶಂಬರನೆಂಬ ರಾಕ್ಷಸವೈರಿ–ಮನ್ಮಥ. ಕುಂಭಿನೀಧರ–ಕುಂಭಿನಿ–ಭೂಮಿ, ಧರ–ಧಾರಣಮಾಡಿದುದು–ಹಿಮಾಲಯ. ಪಶುಪ–ಪಶು–ಜೀವರುಗಳನ್ನು, ಪ–ಪಾಲಿಸುವವನು–ಶಿವ ; ವಿಶ್ವಂಭರ–ವಿಶ್ವವನ್ನು ಪಾಲಿಸುವುದರಲ್ಲಿ ನಿಯುಕ್ತ–ವಿಷ್ಣು : ಜಂಭಭಿತ್–ಜಂಭಾಸುರನ್ನು ಭೇದಿಸಿದವನು–ದೇವೇಂದ್ರ. ೫. ಪರಮೇಶ್ವರನ ಪಾದಗಳಿಗೆ ನಾಮುಂದು ತಾಮುಂದೆಂದು ನಮಸ್ಕಾರ ಮಾಡುವಂತಹ ಬ್ರಹ್ಮನೇ ಮೊದಲಾದ ದೇವತೆಗಳ ಪ್ರಕಾಶಮಾನವಾಗಿ ಹೊಳೆಯುವ ಬಂಗಾರದ ಕಿರೀಟಗಳ ಪರಸ್ಪರ ತಾಡನದಿಂದ ಸುರಿದು ರಾಶಿಗೊಂಡ (ಅಬಂಗಾರದ)ಹುಡಿಯನ್ನು ಮೈಮೇಲೆ ಎರಚಿಕೊಂಡು ಮದೋದಕ ಸಮೂಹವೆಂಬ ಗಿರಿನಿರ್ಝರಗಳುಳ್ಳವನಾದ ಕಾರಣದಿಂದ ಮೇರುಪರ್ವತದ ಹಾಗೆ ಮನೋಹರವಾಗಿ ಪ್ರಕಾಶಿಸುವಂತಹ ಗಣಪತಿಯು ನಮ್ಮ ಮನೋರಥಗಳನ್ನು ಈಡೇರಿಸುವವನಾಗಲಿ, [ಅಬ್ಜಭವ–ಬ್ರಹ್ಮ.] ೬. ಹರನ ತೇಜೋರಾಶಿಯು ಒಟ್ಟಾಗಿ ಸೇರಿ ಆದ ಶರೀರವುಳ್ಳವನೂ, ತಮೋಗುಣದಿಂದ ಕೂಡಿದ ತಾರಕಾಸುರನೆಂಬ ದೈತ್ಯನಿಗೆ ವೈರಿಯಾದವನೂ, ಭೂಮಿಯನ್ನು ಧಾರಣ ಮಾಡಿದ ಹಿಮವಂತನ ಮಗಳಾದ ಪಾರ್ವತಿಯ ಪುತ್ರನೂ. ಅತ್ರಿಮಹರ್ಷಿಯ ಪುತ್ರನಾದ ಚಂದ್ರನ ಪ್ರಕಾಶಕ್ಕೆ ಸಮಾನವಾದ ಪ್ರಕಾಶವೆಂಬ

ಸ್ಫುರಿತಂ ಕ್ರೌಂಚಾಚಲಚ್ಛೇದಕನಖಿಲ ಕಲಾಶಾಲಿ ಲೀಲಾಲಸತ್ಕೇ
ಕಿರಥಂ ಮತ್ಕಾವ್ಯಕೊಳ್ಪಂ ಕರುಣಿಸುಗೆ ಮಹೋದಾರಸಾರಂ ಕುಮಾರಂ ೬

ರುದ್ರೋನ್ನಿದ್ರಾಳಿಕಾಕ್ಷಿಪ್ರಭವಶಿಖಿಶಿಖಾವಿರ್ಭವಜ್ಜಂಭಭಿದ್ರ
ತ್ನೋದ್ಯದ್ರಶ್ಮಿಸ್ಫೂರ್ಜದುದ್ದೀಪಣತಟಿದುರುದಂಷ್ಟ್ರಾಕರಾಳಾಸ್ಯಕಾಯಂ
ರೌದ್ರೋದ್ರೇಕಪ್ರತಾಪಪ್ರಶಮಿತಪಟುದಕ್ಷೇಷ್ಟಿಗಾಮರ್ತ್ಯದರ್ಪಂ
ಭದ್ರಶ್ರೀದಾನಿ ತಾನಕ್ಕೆಮಗೆ ದುರಿತವಿದ್ರಾವಣಂ ವೀರಭದ್ರಂ ೭

ಶರಣಾನಂದಸುಧಾಬ್ಧಿಶೀತಕಿರಣಂ ಬ್ರಹ್ಮಾಚ್ಯುತೇಂದ್ರಾರ್ಚಿತಸ
ಚ್ಚರಣಂ ಭಾವಭವಪ್ರಭಾವಹರಣಂ ನಿರ್ವಾಣಲಕ್ಷ್ಮೀಸುಖಾ
ವರಣಂ ನಿಶ್ಚಲಚಿತ್ಸುಖಾದಿಕರಣಂ ಕಲ್ಯಾಣಭಾಸ್ವದ್ಗುಣಾ
ಭರಣಂ ಶ್ರೀಬಸವೇಶನೊಲ್ದು ಕರುಣಂಬೆತ್ತೀಗೆ ಸದ್ಭಕ್ತಿಯಂ ೮

ಯಶಸ್ಸಿನಲ್ಲಿ ತೇಲಾಡುತ್ತಿರುವವನೂ, ಅಪರಿಮಿತ ಶಕ್ತಿಯಿಂದ ಕೂಡಿದ ಶಕ್ತ್ಯಾಯುಧದಿಂದ ಪ್ರಕಾಶಿಸುವವನೂ, ಕ್ರೌಂಚಪರ್ವತವನ್ನು ಇಬ್ಭಾಗಮಾಡಿದವನೂ, ಸಮಸ್ತ ಕಲೆಗಳಿಂದ ತುಂಬಿದವನೂ, ಲೀಲೆಯಿಂದ ಶೋಭಿಸುವ ನವಿಲನ್ನು ವಾಹನವಾಗಿ ಉಳ್ಳವನೂ, ಮಹಾಉದಾರದ ಸಾರನೂ ಆದ ಷಣ್ಮುಖ ಸ್ವಾಮಿಯು ನನ್ನ ಈ ಕಾವ್ಯಕ್ಕೆ ಒಳ್ಳೆಯದನ್ನು ಕರುಣಿಸಲಿ. ೭. ಶಿವನ ತೆರೆಯಲ್ಪಟ್ಟ ಹಣೆಗಣ್ಣಿನಿಂದ ಜನಿಸಿದ ಅಗ್ನಿಜ್ವಾಲೆಯಿಂದ ಅವತರಿಸಿದವನೂ, ಇಂದ್ರನೀಲಮಣಿಯಂತೆ ಹೊಳೆಯುವ ಕಾಯವುಳ್ಳವನೂ, ಅತಿಭಯಂಕರವಾದ ಮಿಂಚಿನಂತೆ ಉದ್ದವಾದ ಕೋರೆದಾಡೆಯ ಹಲ್ಲುಗಳಿಂದ ಕ್ರೂರವಾಗಿ ಕಾಣುವ ಮುಖವುಳ್ಳವನೂ, ರೌದ್ರದ ಉದ್ರೇಕವುಳ್ಳ ಪರಾಕ್ರಮದಿಂದ ದಕ್ಷನಯಜ್ಞವನ್ನೂ, ದೇವತೆಗಳ ದರ್ಪವನ್ನೂ ಅಡಗಿಸಿದವನೂ ಪಾಪಪರಿಹಾರಕನೂ ಆದ ವೀರಭದ್ರೇಶ್ವರನು ನಮಗೆ ಸಮೃದ್ಧವಾದ ಶುಭವನ್ನುಂಟುಮಾಡುವವನಾಗಲಿ. [ರುದ್ರ + ಉನ್ನಿದ್ರ + ಅಳಿಕ + ಅಕ್ಷಿ + ಪ್ರಭವ = ರುದ್ರನಿಂದ ತೆರೆಯಲ್ಪಟ್ಟ ಹಣೆಯ ಕಣ್ಣಿನಿಂದ ಹುಟ್ಟಿದವ–ವೀರಭದ್ರ ; ಜಂಭ + ಭಿತ್ + ರತ್ನ–ಜಂಭಾಸುರನನ್ನು ಕೊಂದವನಾದ ಇಂದ್ರನ ಹೆಸರಿನ 'ಇಂದ್ರನೀಲಮಣಿ' ಎಂದು ಯೋಗರೂಢಿಯ ಅರ್ಥವನ್ನಿಲ್ಲಿ ತಿಳಿಯಬೇಕು.] ೮. ಶರಣ ಜನರ ಸಂತೋಷವೆಂಬ ಕ್ಷೀರ ಸಮುದ್ರಕ್ಕೆ ಚಂದ್ರನೋಪಾದಿಯಲ್ಲಿರುವವನು, ಬ್ರಹ್ಮವಿಷ್ಣು ದೇವೇಂದ್ರಾದಿಗಳಿಂದ ಅರ್ಚಿಸಿಕೊಳ್ಳಲ್ಪಡುವ ಶ್ರೇಷ್ಠವಾದ ಪಾದಗಳುಳ್ಳವನೂ, ಮನ್ಮಥನ ಪ್ರಭಾವವನ್ನು ಹರಣಮಾಡಿದವನೂ, ಮೋಕ್ಷವೆಂಬ ಲಕ್ಷ್ಮಿಯ ಸುಖದಿಂದ ತುಂಬಿದವನೂ, ಸುಸ್ಥಿರವಾದ ಜ್ಞಾನವೆಂಬ ಆನಂದಕ್ಕೆ ಆಶ್ರಯದಾತನೂ, ಮಂಗಳಕಾರಕಗಳಾದ ಸದ್ಗುಣಗಳೇ ಭೂಷಣವಾಗಿ ಉಳ್ಳವನೂ ಆದ ಶ್ರೀಬಸವೇಶ್ವರನು (ನನ್ನನ್ನು) ಮೆಚ್ಚಿ ಕಾರುಣ್ಯದಿಂದ ಸದ್ಭಕ್ತಿಯನ್ನು ಉಂಟುಮಾಡುವವನಾಗಲಿ. [ಭಾವ + ಭವ + ಪ್ರಭಾವ + ಹರಣಂ = ಭಾವದಲ್ಲಿ ಹುಟ್ಟುವವನಾದ ಮನ್ಮಥನ ಪ್ರಭಾವವನ್ನು ಹರಣ

ಮೋಹಧ್ವಾಂತದಿವಾಕರಂ ಪ್ರಬಳಮಾಯಾಭೀಕರಂ ಭವ್ಯಸಂ
ದೋಹಸ್ತುತ್ಯಗುಣಾಕರಂ ಘನಕೃಪಾರತ್ನಾಕರಂ ದುರ್ಮತ
ವ್ಯೂಹಾಂಭೋಜಸುಧಾಕರಂ ಪ್ರಣತವೃಂದಶ್ರೀಕರಂ ಮಾಳ್ಕೆ ವೀ
ತಾಹಂಕಾರಸುಬೋಧಚನ್ನಬಸವಂ ಸುಜ್ಞಾನಸಂಪತ್ತಿಯಂ ೯

ಜಿತಮಾಯಂ ನಿರಪಾಯನನ್ವಿತಚಿದಂಗಂ ಸದ್ದಯಾಪಾಂಗನೂ
ರ್ಜಿತಶೀಲಂ ಶ್ರುತಿಮೂಲನಾತ್ತಶಿವಮಂತ್ರಂ ಪ್ರೋಕ್ತತಂತ್ರಂ ಕುಸಂ
ಸೃತಿದೂರಂ ಗಣಸಾರನನ್ಯಸಮಯಾಹಂಕಾರಶಂಕಾಹರಂ
ಸತತಂ ಮಾಳ್ಕೆಮಗಲ್ಲಮಪ್ರಭುವರಂ ವೈರಾಗ್ಯಸೌಭಾಗ್ಯಮಂ ೧೦

ಮಾಡಿದವನು — ಬಸವಣ್ಣ (ಇಲ್ಲಿ ಬಸವೇಶ್ವರನು ಮನ್ಮಥ ಪ್ರಭಾವಕ್ಕೆ ಒಳಗಾಗಿದ್ದಿಲ್ಲವೆಂದು ಭಾವ.] ೯. ಅಜ್ಞಾನವೆಂಬ ಕತ್ತಲೆಗೆ ಸೂರ್ಯನೋಪಾದಿಯಲ್ಲಿರುವವನೂ ; ಪ್ರಬಲವಾದ ಮಾಯೆಗೆ ಅಂದರೆ ಅಜ್ಞಾನಕ್ಕೆ ಭಯಂಕರನೆನಿಸಿದವನೂ ; ಪೂಜ್ಯರೆನಿಸಿದ ಜನರುಗಳ ಸಮೂಹದಿಂದ ಕೊಂಡಾಡಿಸಿಕೊಳ್ಳುವುದಕ್ಕೆ ಯೋಗ್ಯವಾದ ಸದ್ಗುಣಗಳಿಗೆ ಜನ್ಮಭೂಮಿಯಾಗಿರುವವನೂ ; ಶ್ರೇಷ್ಠವಾದ ಕೃಪೆ ಎಂಬ ರಸಕ್ಕೆ ಸಮುದ್ರದೋಪಾದಿಯಲ್ಲಿರುವವನೂ ; ದುಷ್ಟವಾದ ಮತಗಳ ಸಮೂಹವೆಂಬ ಕಮಲಗಳಿಗೆ ಚಂದ್ರನೋಪಾದಿಯಲ್ಲಿರುವವನೂ, ನಮಸ್ಕಾರಮಾಡುವ ಭಕ್ತರುಗಳ ಸಮೂಹಕ್ಕೆ ಸಂಪತ್ತನ್ನುಂಟುಮಾಡುವವನೂ. ಅಹಂಕಾರವನ್ನು ಹೋಗಲಾಡಿಸಿದವನೂ, ಶ್ರೇಷ್ಠಜ್ಞಾನಿಯೂ ಆದ ಚೆನ್ನಬಸವೇಶ್ವರನು ನಮಗೆ ಸಮೀಚೀನವಾದ ಸಂಪತ್ತನ್ನುಂಟುಮಾಡಲಿ. ಮೋಹ + ಧ್ವಾಂತ + ದಿವಾಕರ—ಮೋಹವೆಂಬ ಕತ್ತಲೆಗೆ ಸೂರ್ಯ—ಚೆನ್ನಬಸವಣ್ಣ ; ಭವ್ಯ + ಸಂದೋಹ + ಸುತ್ಯ + ಗುಣಾಕರಂ—ಪೂಜ್ಯರಾದವರ ಸಮೂಹದಿಂದ ಸುತ್ತಿಸಲ್ಪಡುವ ಗುಣಗಳಿಗೆ ಜನ್ಮಭೂಮಿಯಾದವನು ಚೆನ್ನಬಸವಣ್ಣ. ೧೦. ಮಾಯೆಯನ್ನು ಗೆದ್ದವನೂ, ನಾಶರಹಿತನೂ. ಪ್ರಕಾಶರೂಪವಾದ ಜ್ಞಾನಮಯವಾದ ಶರೀರದಿಂದ ಕೂಡಿದವನೂ (ಅಂಗಗುಣಗಳೆಲ್ಲ ನಾಶವಾಗಿ ಲಿಂಗಗುಣಗಳಿಂದ ವಿಶಿಷ್ಟನಾದವನೆಂಬ ಭಾವ) ದಯೆಯೆಂಬ ರಸದಿಂದ ತುಂಬಿದ ಕಡೆಗಣ್ಣುಗಳ ಕಾಂತಿಯಿಂದ ಕೂಡಿದವನೂ, ಅತ್ಯಧಿಕವಾದ ಶೀಲಸಂಪತ್ತಿನಿಂದ ಕೂಡಿದವನೂ, ವೇದಗಳಿಗೆ ಮೂಲಕಾರಣನೂ. ಶಿವಪಂಚಾಕ್ಷರೀಮಂತ್ರವನ್ನು ಹೊಂದಿರುವವನೂ, ಶೈವಾಗಮಗಳನ್ನು ಸುರಿದವನೂ. ದುಷ್ಟವಾದ ಸಂಸಾರ ಸಂಬಂಧದಿಂದ ದೂರನಾದವನೂ, ಶಿವಗಣಗಳಲ್ಲೆಲ್ಲ ಶ್ರೇಷ್ಠನೆನಿಸಿದವನೂ. ಅನ್ಯಮತಗಳ ಗರ್ವದಿಂದುಂಟಾದ ಸಂಶಯವನ್ನು ಹೋಗಲಾಡಿಸಿದವನೂ ಆದ ಶ್ರೇಷ್ಠ ಅಲ್ಲಮ ಪ್ರಭುವು ನಮಗೆ ಸದಾ ವೈರಾಗ್ಯಸೌಭಾಗ್ಯವನ್ನುಂಟುಮಾಡಲಿ. [ಚಿತ್ + ಅಂಗ ಪ್ರಕಾಶಮಾನವಾದ ಶರೀರ ಮಂತ್ರ ಶರೀರಿ. ಅಂಗಗುಣಗಳೆಲ್ಲ ನಾಶವಾಗಿ ಲಿಂಗಪ್ರಕಾಶವಲ್ಲಿ ಅವು ಪ್ರಕಾಶಿಸುವಿಕೆಯೆಂದು ತಾತ್ಪರ್ಯ. ಈಶ್ವರನ ವಿಶೇಷಣಗಳನ್ನೆಲ್ಲ ಇಲ್ಲಿ ಪ್ರಭುದೇವರಿಗೆ ಕವಿ

ಸದ್ಗುರುವಾದಿಗಾದಿ ಗುರುಜಂಗಮಕೋಟಿಗೆ ಮುಖ್ಯನಾದ ಭಾ
ಸ್ವದ್ಗುರುವಾಗಮಂಗಳಡಿಗಾಣದೆ ಬೊಬ್ಬಿಡೆ ಪಾಟಿಗೆಯ್ದುದು
ದ್ಯದ್ಗುರು ಭಕ್ತದೇಹಿಕಲಸದ್ಗುರು ಷಟ್ಸ್ಥಲ ಚಿತ್ಕ್ರಿಯಾಸ್ಪದಂ
ಮದ್ಗುರು ರೇಣುಕೇಶ್ವರಮಹಾಗುರು ಮಾಳ್ಕೆಮಗಿಷ್ಟಸಿದ್ಧಿಯಂ ೧೧

ನತನಾನಾನರನಾಥಮೌಳಿಘಟಿತಸ್ವಾರಾಣ್ಮಣೀಂದಿಂದಿರ
ಪ್ರತತಿ ಪ್ರಸ್ಫುರಿತಂಗಳಿಷ್ಟವರ ಸೌಗಂಧಾಸ್ಪದಂಗಳ್ಮಹಾ
ವ್ರತಭೃತ್ತಾಪಸಮಾನಸಾಮಳ ಸರೋವಾಸಾಶ್ರಿತಶ್ರೀಗಳಾ[1]
ಚ[1]ತುರಾಚಾರ್ಯಪದಾಂಬುಜಂಗಳೆಮಗೀಗಾಮೋದಸಂದೋಹಮಂ ೧೨

ಆರೋಪಿಸಿದ್ದಾನೆ. ಕಾರಣ: ಲಿಂಗಮುಖವೇಜಂಗಮವೆಂಬ ತತ್ತ್ವವನ್ನನುಸರಿಸಿ.] ೧೧. ಶ್ರೇಷ್ಠಗುರುವೂ. ಅನಾದಿಗುರುವೂ, ಜಂಗಮ ಸಮೂಹದಲ್ಲಿ ಅಗ್ರೇಸರನೂ, ಪ್ರಕಾಶಮಾನನಾದ ಗುರುವೂ. ಆಗಮಗಳ ಸಮೂಹವು (ಆತನ) ಪಾದಗಳನ್ನು ಕಾಣದೆ ಕೂಗುತ್ತಿರಲು ಅನುಪಮನಾದಂತಹನೆನಿಸಿದ ಶ್ರೇಷ್ಠ ಗುರುವೂ, ಭಕ್ತನೇ ದೇಹವಾಗಿ ಉಳ್ಳ ತೇಜೋಮಯನಾದ ಗುರುವೂ, ಭಕ್ತ. ಮಹೇಶ. ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಇತ್ಯಾದಿ ಷಟಸ್ಥಳಗಳಿಂದುಂಟಾದ ಜ್ಞಾನಕ್ಕೂ-ಜ್ಞಾನಕ್ರಿಯೆಗೂ ಆಸ್ಪದ ನಾದವನೂ ಆದ ನನ್ನ ಗುರು ರೇಣುಕೇಶ್ವರ ಗುರುವು ನನಗೆ ಇಷ್ಟ ಸಿದ್ಧಿಯನ್ನುಂಟು ಮಾಡಲಿ. [ಚಿತ್‌ಕ್ರಿಯಾ-ವೀರಶೈವ ಸಿದ್ಧಾಂತವು ಜ್ಞಾನ ಮತ್ತು ಕ್ರಿಯಾ ಸಮನ್ವಯ ಸಿದ್ಧಾಂತವಾದ ಕಾರಣ ಗುರುವಿಗೆ 'ಚಿತ್‌ಕ್ರಿಯಾಸ್ಪರ' ನೆಂಬ ವಿಶೇಷಣವು ಕೊಡಲ್ಪಟ್ಟಿದೆ. ಭಕ್ತದೇಹಿಕಲಸದ್ಗುರು—ಗುರುವಾದರೂ ಭಕ್ತಿಸ್ಥಲವೆಂಬುದು ಷಟ್‌ಸ್ಥಲ ಸಿದ್ಧಾಂತದ ಪ್ರಧಾನ ಲಕ್ಷಣವಾದ್ದರಿಂದ ಭಕ್ತನ ಲಕ್ಷಣಗಳುಳ್ಳ ದೇಹ ಧರಿಸಿದ ಶ್ರೇಷ್ಠ ಗುರು ಎಂದು ರೇಣುಕಾಚಾರ್ಯರಿಗೆ ವಿಶೇಷಣ ಕೊಡಲ್ಪಟ್ಟಿದೆ.] ೧೨. ನಮಸ್ಕರಿಸುತ್ತಿರುವ ಅನೇಕ ರಾಜರುಗಳ ಕಿರೀಟದಲ್ಲಿ ಕೆತ್ತಲ್ಪಟ್ಟ (ಕೆಚ್ಚಲಾಗಿರುವ) ಇಂದ್ರನೀಲ ಮಣಿಗಳೆಂಬ ದುಂಬಿಗಳ ಸಮೂಹದಿಂದ ಪ್ರಕಾಶಿಸುತ್ತಿರುವವುಗಳಾದ, (ಭಕ್ತ ಜನರುಗಳ) ಅಭೀಷ್ಟವಾದ ವರಗಳೆಂಬ ಸುಗಂಧಕ್ಕೆ ಆಶ್ರಯಸ್ಥಾನಗಳೆನಿಸಿದ, ಶ್ರೇಷ್ಠವಾದ ವ್ರತಾಚರಣೆಗಳನ್ನು ಹೊಂದಿರುವ ತಪಸ್ವಿಗಳಾದ ಜನರುಗಳ ಮನಸ್ಸೆಂಬ ನಿರ್ಮಲ ಸರೋವರಗಳಲ್ಲಿ ವಾಸಗೊಂಡಿರುವ (ಆಶ್ರಯಗೊಂಡಿರುವ), ಪ್ರಸಿದ್ಧರಾದ ರೇಣುಕ ದಾರುಕಾದಿ ನಾಲ್ವರು ಆಚಾರ್ಯರ ಪಾದಕಮಲಗಳು ನನಗೆ ಸಂತೋಷವೆಂಬ ಸುಗಂಧದ ಸಂದೋಹವನ್ನು ಉಂಟುಮಾಡಲಿ. [ವ್ರತ + ಭೃತ್ + ತಾಪಸ—ವ್ರತಶೀಲರಾದ ತಪಸ್ವಿಗಳು ; ಸರಃ + ವಾಸ + ಆಶ್ರಿತ + ಶ್ರೀಗಳ್-ಸರೋವರದಲ್ಲಿ ವಾಸಿಸಿ ಆಶ್ರಯ ಸ್ಥಾನ ಹೊಂದಿರುವ ಸಂಪದ್ಯುಕ್ತವಾದವು ಅಥವಾ ಮಂಗಳಕರವಾದವುಗಳು (ಚತುರಾ

---

1 ಳಚ್ಚ (ದ)

ಖಂಡಿತದೃಪ್ತದುರ್ಮತವಿವಾದವಿಚಕ್ಷಣವಾದಕೋವಿದ
ರ್ದಂಡಿತಮಾನಸಾದಿಕರಣಾಂಗಮಹಾಶಿವಭಕ್ತಪಾಲಕ
ರ್ಮಂಡಿತವೀರಶೈವಮತದಿವ್ಯಮಹತ್ವನಿದರ್ಶನಕ್ಷಮ
ರ್ಪಂಡಿತರೀವರಕ್ಕೆಮಗೆ ಮೂವರತೀವಮತಿಪ್ರಕಾಶಮಂ ೧೩

ಕಾಮಾರಾತಿನಿಕಾಮಕೋಮಲಪದಧ್ಯಾನಾಮೃತಾಸ್ವಾದನ
ಪ್ರೇಮಂ ಸೋಮಕರಾಮಳಪ್ರಭಯಶಃಶ್ರೀಮಂಡಿತಾಶೋತ್ಕರಂ
ವ್ಯಾಮೋಹಾಮಯವೈದ್ಯನಾದ್ಯನನಘಂ ಕ್ಷೇಮಂಕರಂ ನಾಗಮ
ರ್ತ್ಯಾಮರ್ತ್ಯಸ್ತುತ ಸಿದ್ಧರಾಮನೆಮಗೀಗತ್ಯೂರ್ಜಿತಶ್ರೇಯಮಂ ೧೪

ಭೂವಳಯಪ್ರಸಿದ್ಧಸುಖಭೋಗಮನೊಕ್ಕು ವಿರಾಗಭಾವಮೇ
ಭಾವದೊಳಾಗೆ ಭಾವಭವನಂ ಸಲೆ ಭಂಗಿಸಿ ಲಿಂಗವಂಗದೊ

ಚಾರ್ಯರ ಪಾದಕಮಲಗಳಿಗೆ ವಿಶೇಷಣ]. ೧೩. ಕುತ್ಸಿತವಾದ ಮತಗಳ ಸಂಬಂಧದಿಂದ ಗರ್ವಿಷ್ಠರಾದವರುಗಳನ್ನು ವಾದದಲ್ಲಿ ಖಂಡಿಸುವ ವಿಷಯದಲ್ಲಿ ಕೋವಿದರಾದವರು, ಮನಸ್ಸು ಮತ್ತು ಇಂದ್ರಿಯ ಶರೀರಾದಿಗಳನ್ನು ನಿಗ್ರಹಿಸಿದವರೂ (ಮನ, ಇಂದ್ರಿಯ ದೇಹಗುಣಗಳೆಲ್ಲ ಲಿಂಗಗುಣಗಳನ್ನಾಗಿಸಿಕೊಂಡವರೆಂದು ಭಾವ), ಪೂಜ್ಯವಾದ ವೀರಶೈವ ಮತತತ್ತ್ವಗಳನ್ನು ಮಹಿಮೆಯನ್ನು ಎತ್ತಿತೋರಿಸುವುದರಲ್ಲಿ ಸಮರ್ಥರೂ ಆದ ಶ್ರೀಪತಿಪಂಡಿತ, ಮಂಚಣಪಂಡಿತ, ಮಲ್ಲಿಕಾರ್ಜುನ ಪಂಡಿತರೆಂಬ ಮೂರು ಜನ ಪಂಡಿತರು ನನ್ನ ಮತಿಗೆ ಅಧಿಕವಾದ ಪ್ರಕಾಶವನ್ನು ಉಂಟುಮಾಡಲಿ. ೧೪. ಮನ್ಮಥ ವೈರಿಯಾದ ಪರಮೇಶ್ವರನ ಅತ್ಯಂತ ಕೋಮಲವಾದ ಪಾದಕಮಲಧ್ಯಾನವೆಂಬ ಅಮೃತಪಾನ ಮಾಡುವುದರಲ್ಲಿ ಪ್ರೇಮವುಳ್ಳವನೂ, ಚಂದ್ರಕಿರಣಗಳೋಪಾದಿಯಲ್ಲಿ ನಿರ್ಮಲ ಕಾಂತಿಯುಳ್ಳ ಕೀರ್ತಿಯ ಸಂಪತ್ತಿನಿಂದ ದಶದಿಕ್ಕುಗಳನ್ನು ಅಲಂಕಾರಗೊಳಿಸಿದವನೂ, ಅಜ್ಞಾನವೆಂಬ ರೋಗಕ್ಕೆ ವೈದ್ಯನೂ, ಪುರಾತನರಲ್ಲಿ ಶ್ರೇಷ್ಠನೂ (ಆದ್ಯಂ), ಪಾಪರಹಿತನೂ ಕ್ಷೇಮಕರನೂ, ನಾಗಲೋಕ, ಮರ್ತ್ಯಲೋಕ, ದೇವಲೋಕದ ಜನರಿಂದ ಸ್ತುತಿಸಲ್ಪಡುವವನೂ ಆದ (ಸೊನ್ನಲಿಗೆಯ) ಸಿದ್ಧರಾಮೇಶ್ವರನು ಅತ್ಯಧಿಕವಾದ ಶ್ರೇಯಸ್ಸನ್ನು ನಮಗೆ ಉಂಟುಮಾಡಲಿ. [ಕೋಮಲ + ಪದ + ಧ್ಯಾನ + ಅಮೃತ + ಆಸ್ವಾದನ + ಪ್ರೇಮಂ—ಕೋಮಲವಾದ ಪಾದಧ್ಯಾನವೆಂಬ, ಅಮೃತವನ್ನು ಆಸ್ವಾದಿಸುವಲ್ಲಿ ಪ್ರೇಮವುಳ್ಳವನು. ಸೋಮ + ಕರ + ಅಮಳ + ಪ್ರಭ + ಯಶಃ ಶ್ರೀ—ಚಂದ್ರನ ಕಿರಣಗಳಂತೆ ನಿರ್ಮಲವಾದ ಕಾಂತಿಯುಳ್ಳ ಕೀರ್ತಿಯೆಂಬ ಸಂಪತ್ತು.] ೧೫. ಭೂಮಿಯಲ್ಲಿನ ಪ್ರಸಿದ್ಧವಾದ ಸುಖೋಪಭೋಗಗಳನ್ನೆಲ್ಲ ತಿರಸ್ಕಾರ ಮಾಡಿ, ವೈರಾಗ್ಯಭಾವವೇ (ತನ್ನ) ನಿಜ ಸ್ವರೂಪವಾಗಿರಲು, ಭಾವೋದ್ಭವನಾದ ಮನ್ಮಥನ ಸಂಬಂಧದ ವಿಕಾರಗಳನ್ನೆಲ್ಲ ಜಯಿಸಿ, ಇಷ್ಟ, ಪ್ರಾಣ, ಭಾವ ಲಿಂಗೋಪಾಸನೆಯನ್ನು ಸ್ಥೂಲ, ಸೂಕ್ಷ್ಮ, ಕಾರಣ ದೇಹತ್ರಯಗಳಿಗೆ ತುಂಬಿಕೊಂಡು

ಳ್ತೀವೆ ನಿಜೇಚ್ಛೆಯಿಂ ಕದಳಿವೊಕ್ಕು ಶಿವೈಕ್ಯತೆಯಾಂತು ನಿಂದ ಮಾ
ದೇವಿಯ ಪಾದಪಂಕರುಹಕಾಳಿಡಿಯಾಗಿಪೆನೆನ್ನ ಚಿತ್ತಮಂ ೧೫

ಶಿವಪಕ್ಷೈಕತೆಯಾಂತು ಮೂಱು ಪದಮಂ ಕೈಕೊಂಡು ಮಾಲಿನ್ಯಮಂ
ತವೆ ಬಿಟ್ಟಂಗಮನಾಳ್ದಶೇಷಸುಮನಃಸಂಸೇವ್ಯನಾಗುತ್ತೆ ಭ
ಕ್ತವನೇಜಾಕರಭೃಂಗ ಶಂಭುಸತಿ ತಾನೆಂಬಳ್ಕಱಿಂ ಭೃಂಗಿ ನಾ
ಮವಿಶೇಷಂಬಸೆದಿರ್ದ ಚಿತ್ರಚರಿತಂ ನಿಲ್ಕೆನ್ನ ಚಿತ್ತಾಬ್ಜದೊಳ್ ೧೬

ಶ್ರೀಕರವೀರ ಸಾಧುಸಹಕಾರನುದಂಚಿತಮುಕ್ತಕಂ ಸುಪ
ದ್ಮಾಕರನುದ್ಗಮಪ್ರರುಚಿಮಂಜುಲತಾನ್ವಿತನೂರ್ಜಿತಾಗಮಾ

ಶ್ರೀಪರ್ವತದ (ಶ್ರೀಶೈಲದ) ಕದಳಿಯ ಬನವನ್ನು ಹೊಕ್ಕು, ಶಿವನಲ್ಲಿ ಐಕ್ಯಳಾದ ಮಹಾದೇವಿಯಕ್ಕನ ಪಾದಕಮಲಗಳಿಗೆ ನನ್ನ ಮನಸ್ಸನ್ನು ದುಂಬಿಯನ್ನಾಗಿ ಮಾಡುವೆನು. ೧೬. ಶಿವನೊಬ್ಬನ ಪಕ್ಷವನ್ನೇ ಹಿಡಿದು (ಶಿವಶಕ್ತ್ಯಾತ್ಮಕವಾದ ಪರಮಾತ್ಮನಲ್ಲಿ ಶಿವನೊಬ್ಬನ ಪಕ್ಷವನ್ನೇ ಹಿಡಿದು), ಮೂರು ಕಾಲುಗಳನ್ನು ಹೊಂದಿ (ತನ್ನ ಪಕ್ಷವನ್ನು ಬಿಟ್ಟ ಕಾರಣ ಶಕ್ತಿಯು ಭೃಂಗಿಯಲ್ಲಿರುವ ತನ್ನ ವಾಮ ಭಾಗದ ಶಕ್ತಿಯನ್ನು ಸೆಳೆಯಲು ನೆಲಕ್ಕೆ ಬೀಳುವುದರಲ್ಲಿದ್ದ ಭೃಂಗಿಗೆ ಇನ್ನೊಂದು ಕಾಲು ಕೊಟ್ಟದ್ದರಿಂದ ಒಟ್ಟು ಮೂರು ಕಾಲುಗಳನ್ನು ಪಡೆದು), ಮಾಯಾಸಂಬಂಧವಾದ ಮಾಲಿನ್ಯದ ಅಂಶವನ್ನು ಬಿಟ್ಟುಕೊಟ್ಟ ದೇಹವನ್ನು ಹೊಂದಿದವನಾಗಿ, ಸಕಲ ದೇವತೆಗಳ ಸೇವೆಗೆ ಅರ್ಹನಾಗುತ್ತ, (ದೇವಸಭೆಯಲ್ಲಿ ನೃತ್ಯಮಾಡುವವನಾಗಿ ಅವರ ಸೇವೆಮಾಡಿ ಅವರ ಮನಸ್ಸಿಗೆ ಆನಂದಗೊಳಿಸುವ ಸೇವೆಮಾಡುತ್ತ), ಭಕ್ತರೆಂಬ ಕಮಲಗಳ ಸರೋವರದಲ್ಲಿನ ಭೃಂಗವಾದ ಶಿವನಿಗೆ ತಾನು ಸತಿ ಎಂಬ ಭಾವನೆಯನ್ನು ಹೊಂದಿದವನು (ಶರಣಸತಿ ಲಿಂಗಪತಿ ಎಂಬ ಭಾವವನ್ನು ಹೊಂದಿದವನು) ತಾನು ಎಂಬ ಪ್ರೀತಿಯಿಂದ 'ಭೃಂಗಿ' ಎಂಬ ನಾಮ ವಿಶೇಷವನ್ನು ಹೊಂದಿದಂಥ, ಆಶ್ಚರ್ಯಕರ ಚರಿತ್ರೆಯನ್ನು ಪಡೆದ ಭೃಂಗೀಶ್ವರನು ನನ್ನ ಚಿತ್ತವೆಂಬ ಕಮಲದಲ್ಲಿ ಸದಾ ನಿಲ್ಲಲಿ. [ಭೃಂಗೀಶ್ವರನು ತಾನು ಗಂಡಸಾದರೂ ಹೆಣ್ಣು ದುಂಬಿಯಾದುದು ವಿಚಿತ್ರವೆಂದು ಕವಿ ಹೇಳಿದ್ದಾನೆ. ಹೆಣ್ಣು ದುಂಬಿಗೆ ಎರಡು ರೆಕ್ಕೆಗಳಿದ್ದರೂ ಈ ಭೃಂಗಿಗೆ ಒಂದೇ ರೆಕ್ಕೆಯಿರುವುದು ವಿಚಿತ್ರ ; ದುಂಬಿಯು ಆರು ಪಾದಗಳುಳ್ಳದ್ದಾದರೂ ಮೂರು ಪಾದಗಳುಳ್ಳದ್ದೊಂದು ವಿಚಿತ್ರ; ತಾನು ಕಪ್ಪು ಬಣ್ಣದ್ದಾದರೂ ಕಪ್ಪುಬಣ್ಣವನ್ನು ಬಿಟ್ಟ ದೇಹವಾದುದು ವಿಚಿತ್ರ; ಸಕಲ ಸುಮನಸ್ಸು (ಹೂವು) ಗಳ ರಸವನ್ನು ಸೇವಿಸುವುದಕ್ಕೆ ಯೋಗ್ಯವಾದ ದುಂಬಿಯು, ಹೂವುಗಳಿಂದಲೇ ಸೇವಿಸುವುದಕ್ಕೆ ಯೋಗ್ಯವಾದುದು ವಿಚಿತ್ರ; ಭೃಂಗೀಶ್ವರನು ತಾನು ಗಂಡಸಾದರೂ ಹೆಣ್ದುಂಬಿಯಾದ 'ಭೃಂಗಿ' ಎನಿಸಿದುದು ವಿಚಿತ್ರ. ಈ ಕಾರಣದಿಂದ ಭೃಂಗೀಶ್ವರನ ಬಗೆಗೆ 'ಚಿತ್ರ ಚರಿತ್ರ' ಎಂದು ಕವಿ ಹೇಳಿದ್ದಾನೆ.] ೧೭. [ಈ ಪದ್ಯ ತೋಂಟದ ಸಿದ್ಧಲಿಂಗೇಶ್ವರ ಯತಿಗಳ ಮತ್ತು ತೋಟದ ಪರವಾಗಿ ಎರಡು ಅರ್ಥಗಳಿಂದ

ನೀಕನುತಂ ಮಹಾವಿರತಿಸಂಯುತನಾದುದಱಿಂದೆ ಸಾರ್ಥನಾ
ಮಾಕರನಾದ ತೋಂಟದ ಗುರೂತ್ತಮನೊರ್ವನೆ ಸತ್ಫಳಪ್ರದಂ ೧೭

ಅಕಳಂಕಾಗಮಯುಕ್ತನುಗ್ರರುಚಿಸನ್ಮಿತ್ರೋದಯಾಹ್ಲಾದಶಾ
ಲಿಕಲಾಪೂರ್ಣನಜಸ್ರಮನ್ವಿತಜಡತ್ವಾಭಾವನಾತ್ಮೀಯಪಾ

ಕೂಡಿದೆ.] (i) **ಸಿದ್ಧಲಿಂಗಯತೀಶ್ವರ ಪರವಾದ ಅರ್ಥ :** ಸಂಪತ್ತನ್ನುಂಟುಮಾಡುವ ಅಥವಾ ಮಂಗಳವನ್ನುಂಟುಮಾಡುವ ವೇದಾಂತ ವಿದ್ಯೆಯಲ್ಲಿ ವಿನೋದಿಸುತ್ತ, ವೀರ ಶೈವ ತತ್ತ್ವಜ್ಞಾನಿಯಾಗಿ ಸತ್ಪುರುಷರಿಗೆ ಸಹಾಯವನ್ನುಂಟುಮಾಡುವ ಪೂಜ್ಯನೂ. ಜೀವನ್ಮುಕ್ತನೂ, ಮೋಕ್ಷ ಲಕ್ಷ್ಮಿಗೆ ಆಸ್ಪದನೂ ಆದ ಶಿವ ಸಂಬಂಧವಾದ ತೇಜಸ್ಸಿನಿಂದ ಮನೋಹರವಾಗಿ ಕೂಡಿದ, ಶ್ರೇಷ್ಠವಾದ ಶೈವಾಗಮ ಸಮೂಹದಿಂದ ಸ್ತೋತ್ರ ಮಾಡಿಸಿಕೊಳ್ಳುವವನಾದ 'ಸಿದ್ಧಲಿಂಗ' ಎಂಬ ಸಾರ್ಥಕವಾದ ಅಂದರೆ ಅರ್ಥಪೂರ್ಣ ವಾದ ನಾಮವನ್ನು ಹೊಂದಿರುವ ಆ ತೋಂಟದ ಗುರೂತ್ತಮನೊಬ್ಬನೇ ಸಾಧುಗಳಿಗೆ ಶ್ರೇಷ್ಠ ಫಲವೆನಿಸಿರುವ ಮೋಕ್ಷವನ್ನು ಕೊಡುವವನಾಗಿದ್ದಾನೆ. [ವೀರ–ವೇದಾಂತ ಜನ್ಯಂ ಯದಜ್ಞಾನಂ ವಿದ್ಯೇತಿ ಪರಿಕೀರ್ತ್ಯತೇ । ವಿದ್ಯಾಯಾಂ ರಮತೇತಸ್ಯಾಂ 'ವೀರ' ಇತ್ಯಭಿಧೀಯತೇ–ಎಂಬ ಪ್ರಮಾಣಕ್ಕನುಸರಿಸಿ ವೀರ ಶಬ್ದಕ್ಕೆ ಇಲ್ಲಿ–'ವೇದಾಂತ ವಿದ್ಯೆ ಯಲ್ಲಿ ವಿನೋದಿಸುತ್ತ ವೀರಶೈವತತ್ತ್ವಜ್ಞಾನಿಯಾಗಿ' ಎಂದು ಅರ್ಥಮಾಡಲಾಗಿದೆ. ಸಾರ್ಥ–ಅರ್ಥೇನ ಸಹವರ್ತತ ಸತಿ ಸಾರ್ಥಃ–ಅರ್ಥಪೂರ್ಣವಾದ ಎಂದರ್ಥ.] (ii) **ತೋಟದ ಪರವಾದ ಅರ್ಥ :** ಬಿಲ್ವವೃಕ್ಷ (ಶ್ರೀ), ಕರವೀರ (ಕಣಗಿಲು) ಮಧುರ ಸಿಹಿ ಮಾವುಗಳನ್ನುಳ್ಳ, ಉನ್ನತ ಮುತ್ತುಗದ ಮರಗಳನ್ನುಳ್ಳ, ಮನೋಹರ ಕೊಳಗಳ ನ್ನುಳ್ಳ. ಪುಷ್ಪಗಳ ಶ್ರೇಷ್ಠಕಾಂತಿಯಿಂದ ಕೂಡಿದ, ಮನೋಹರ ಲತೆಗಳಿಂದ ತುಂಬಿದ, ಶ್ರೇಷ್ಠವಾದ ಇನ್ನಿತರ ವೃಕ್ಷ (ಅಗಮ)ಗಳ ಗುಂಪುಗಳಿಂದ.ಶ್ಲಾಘ್ಯವೆನಿಸಿದ (ಮತ್ತು) ವಿಶೇಷವಾದ ಪಕ್ಷಿ (ವಿ)ಗಳ ಸಮೂಹದ ಪ್ರೀತಿಗೆ ಕಾರಣವಾದ ಸತ್ಫಲಗಳನ್ನು ಕೊಡುವ ತೋಟ.[ಉದ್ಗಮ ಪ್ರರುಚಿ (i) ಉತ್ಪನ್ನವಾದ ಪ್ರಕೃಷ್ಟ ಶೈವತೇಜಸ್ಸು (ii) ಕುಸುಮ ಗಳ ಒಳ್ಳೆಯ ಕಾಂತಿ. ಆಗಮಾನೀಕ (i) ಆಗಮಗಳ ಸಮೂಹ, (ii) ಅಗಮಾನೀಕ ಗಿಡಗಳ ಸಮೂಹ. ಪದ್ಮ – (i) ಕಮಲ ii) ಐಶ್ವರ್ಯ. ಮಂಜುಲತಾ + ಅನ್ವಿತ (i) ಮಂಜುಳತೆಯಿಂದ ಕೂಡಿದ (ii) ಮನೋಹರ ಬಳ್ಳಿಗಳಿಂದ ಕೂಡಿದ.] ೧೮. ಕಲಂಕ ರಹಿತವಾದ ಆಗಮಗಳ ಜ್ಞಾನದಿಂದ ಕೂಡಿದವನೂ. ಉಗ್ರ (ಶಿವ)ನಲ್ಲಿ ವಿಶ್ವಾಸವುಳ್ಳ ವನೂ. ಉತ್ತಮ ಮಿತ್ರವರ್ಗದಿಂದ ಉಂಟಾಗುವ ಆನಂದದಿಂದ ಕೂಡಿರುವವನೂ, ಸತತವೂ ಜ್ಞಾನದಿಂದ ಪರಿಪೂರ್ಣವೆನಿಸಿದವನೂ, ಅಜ್ಞಾನದ ಅಭಾವದಿಂದ ಸಮನ್ವಿತ ನಾದವನೂ. ತನ್ನ ಪಾದವನ್ನು ಆಶ್ರಯಿಸಿದವರಿಗೆ ಸುಖವನ್ನುಂಟುಮಾಡುವವನೂ ಎನಿಸಿ ಪ್ರಕಾಶಿಸುವ (ಪಾಲ್ಕುರಿಕೆ) ಸೋಮನಾಥ ಗುರುಶ್ರೇಷ್ಠನು ನನಗೆ ಅಧಿಕವಾದ

ದಕೃತೋಪಾಶ್ರಿತಸಾಧುಚಕ್ರಸುಖನಾಗಿರ್ದುಂ ಲಸತ್ಸೋಮನಾ
ಮಕನಾದಾ ಗುರು ಸೋಮನಾಥನೆಮಗೀಗುದ್ಯತ್ ಸುಧಾವಾಣಿಯುಂ ೧೮

ಕವಿತೆಯನೊಲ್ದು ಡರ್ಚುವ ಕವೀಂದ್ರರ ರಕ್ಷಿಪ ದುಷ್ಕವಿತ್ವಮಂ
ತವಿಪ ಗುಣಂಗಳಿಂದೆ ಕವಿತಾಚತುರಾನನನೆಳ್ಗೆವೆತ್ತ ಸ
ತ್ಕವಿಕುಲಚಕ್ರವರ್ತಿ ಕವಿರಾಜಶಿರೋಮಣಿಯೆಂಬ ಪೆಂಪು ಸಂ
ಭವಿಸಿದ ಸತ್ಕವೀಶ್ವರ ಹರೀಶ್ವರನೀಗೆಮಗೀಪ್ಸಿತಾರ್ಥಮಂ ೧೯

ಅವಿಚಲಿತಖಲಮದಾಚಲ
ಪವಿಯಂ ಪ್ರಣುತಪ್ರಬಂಧಪಂಕಜವಿಳಸ
ದ್ರವಿಯಂ ಚಲದಂಕಮಹಾ
ಕವಿಯಂ ಘನರಾಘವಾಂಕನಂ ನುತಿಗೈವೆಂ ೨೦

ಅಮೃತವಾಣಿಯನ್ನು ದಯಪಾಲಿಸಲಿ. [ಸೋಮ–ಸೋಮನಾಥ ಮತ್ತು ಚಂದ್ರ–ಇಲ್ಲಿ 'ಸೋಮ' ಶಬ್ದ ಚಮತ್ಕಾರದಿಂದ ವ್ಯತಿರೇಕ ತೋರಿಸುತ್ತಾನೆ. ಸೋಮನು ಕಳಂಕದಿಂದ ಕೂಡಿದವನು, ಪಾಲ್ಕುರಿಕೆ ಸೋಮನು ಕಳಂಕರಹಿತನು. ಸೋಮನು ಸೌಮ್ಯಕಿರಣ(ರುಚಿ) ದಿಂದ ಕೂಡಿದವನು, ಪಾಲ್ಕುರಿಕೆ ಸೋಮನು ಉಗ್ರ(ಶಿವ) ರುಚಿಯುಳ್ಳವನು; ಸೂರ್ಯನ ಉದಯದಿಂದ ಚಂದ್ರನು ಆಹ್ಲಾದಶಾಲಿಯಾದ ಪ್ರಕಾಶರಹಿತನು, ಪಾಲ್ಕುರಿಕೆ ಸೋಮನು ಮಿತ್ರನ ಪ್ರಕಾಶದಿಂದ ಆಹ್ಲಾದಶಾಲಿಕಲಾ ಪೂರ್ಣನು. ಚಂದ್ರನು ಜಡತ್ವ ಎಂದರೆ ಶೈತ್ಯಸಹಿತನು, ಪಾ. ಸೋಮನು ಜಡತ್ವ ಎಂದರೆ ಅಜ್ಞಾನರಹಿತನು; ಚಂದ್ರನು ತನ್ನ ಕಿರಣಗಳಿಂದ ಚಕ್ರವಾಕ ಪಕ್ಷಿಗಳಿಗೆ ಸುಖವನ್ನುಂಟುಮಾಡದವನು, ಪಾ. ಸೋಮನು ತನ್ನ ಪಾದಗಳನ್ನು ಆಶ್ರಯಿಸಿದ ಸಾಧು ಚಕ್ರ (ಸಮೂಹ)ಕ್ಕೆ ಸುಖ ವನ್ನುಂಟುಮಾಡುವವನು–ಹೀಗೆ ಪಾಲ್ಕುರಿಕೆ ಸೋಮನಲ್ಲಿ, ಸೋಮನ (ಚಂದ್ರನ) ಗುಣಗಳಿಲ್ಲದಿದ್ದರೂ ಸೋಮನಾಗಿದ್ದನು.] ೧೯. ಕವಿತೆಯನ್ನು ಪ್ರೀತಿಸಿ ರಚಿಸುವ, ಕವೀಶ್ವರರಿಗೆ ರಕ್ಷಣೆಯನ್ನುಂಟುಮಾಡುವ ದುಷ್ಟಕವಿತ್ವವನ್ನು ನಾಶಗೊಳಿಸುವುದೇ ಮೊದಲಾದ ಗುಣಗಳಿಂದ ಕವಿತೆಯಲ್ಲಿ ಬ್ರಹ್ಮನೆಂಬ ಪ್ರಸಿದ್ಧಿಯನ್ನು ಪಡೆದ ಶ್ರೇಷ್ಠಕವಿ, ಕವಿಕುಲದ ಚಕ್ರವರ್ತಿ, ಕವಿರಾಜರಲ್ಲೆಲ್ಲ ಶಿರೋಮಣಿಯೆಂಬ ಹಿರಿಮೆಯನ್ನು ಹೊಂದಿದ (ಹಂಪೆಯ) ಹರೀಶ್ವರ ನನ್ನ ಇಷ್ಟಾರ್ಥಗಳನ್ನು ಕೊಡಲಿ. [ಕವಿತಾ 'ಚತುರಾನನ–ಕವಿತೆಯಲ್ಲಿ ಬ್ರಹ್ಮ 'ಅಪಾರೇ ಕಾವ್ಯ ಸಂಸಾರೇ ಕವಿದೇವ ಪ್ರಜಾ ಪತಿಃ...' ಎಂಬ ಮಾತನ್ನಿಲ್ಲಿ ಜ್ಞಾಪಕಮಾಡಿಕೊಳ್ಳಬಹುದು. ಅಂತೆಯೇ ಚತುರಾನನ' ವಿಶೇಷಣ. ನಾಲ್ಕು ವೇದಗಳು ಬ್ರಹ್ಮನ ಬಾಯಿಂದ ನಿರರ್ಗಳ ವಾಗಿ ಹೊರ ಬಂದಹಾಗೆ ಹರೀಶ್ವರನ ಬಾಯಿಂದ ಬಂದುದೇ ಕವಿತೆ– ಎಂಬುದು ಕವಿಯ ಆಶಯ] ೨೦. ಅಚಲನಾದವನೂ (ಸ್ಥಿರಮನಸ್ಕನೂ), ದುಷ್ಟರ ಗರ್ವವೆಂಬ ಪರ್ವತಕ್ಕೆ ವಜ್ರಾಯುಧಪ್ರಾಯನೂ ಆದ ಶ್ರೇಷ್ಠಕಾವ್ಯ ಪ್ರಬಂಧ

ವರ ಮಲಯಕ್ಷ್ಮಾಭೃತ್ಸಂ
ಚರಣಂ ಸಂಸರ್ಗಮುದಿತಸುಮನೋಬಾಣಂ
ಹರಿದೇವಸಖಂ ಭೃತ ಪ
ದ್ಮರಸಂ ಸುಕವಿತ್ವಪವನನಾದೃತ[1] ಭೀಮಂ ೨೧

ಭೂರಜಮಂ ಸುವರ್ಣರಜಮಾಗಿಸಿ ನುಣ್ಮಣಿಗೈದು ಸಾರವಾ
ರ್ಧಾರೆಯ ತುಂತುಱುಂ ಶಿಖಿಯನಂಬರದೊಳ್ಮಿಗೆ ಕಟ್ಟಿ ಮಾರುತಾ

ಗಳೆಂಬ ಕಮಲಗಳಿಗೆ ಸೂರ್ಯನೋಪಾದಿಯಲ್ಲಿರುವ ಛಲದಂಕನೆಂಬ ಬಿರುದಿನಿಂದ ಕೂಡಿರುವ ಮಹಾಕವಿ ರಾಘವಾಂಕನನ್ನು ಸ್ತೋತ್ರ ಮಾಡುತ್ತೇನೆ. ೨೧. ತನ್ನ ಈ ಸತ್ಕವಿತೆಯೆಂಬ ತಂಗಾಳಿಯು ಮಲಯಪರ್ವತದಲ್ಲಿ ಸಂಚರಣವುಳ್ಳುದೂ, (ತನ್ನ) ಸಂಸರ್ಗದಿಂದ ಮನ್ಮಥನಿಗೆ ಮೋದವನ್ನುಂಟುಮಾಡುವಂತಹುದೂ, ಅಗ್ನಿದೇವ (ಹರಿದೇವ)ನ ಮಿತ್ರನಾಗಿ ಉಳ್ಳುದೂ, ಕಮಲರಸವಾದ ಸುಗಂಧವನ್ನು ಧರಿಸಿರುವಂತಹುದೂ, ಭೀಮಸೇನನನ್ನು (ಮಗನನ್ನಾಗಿ) ಧರಿಸಿರುವಂತಹುದೂ ಆಗಿದೆ. ಕವಿ ಇಲ್ಲಿ ತನ್ನ ಕವಿತೆ ಮಲಯಮಾರುತದಂತೆ ಮನೋಹರವಾದುದೆಂದು ಹೇಳುತ್ತ ಶ್ಲೇಷೆಯಿಂದ ಮಲಯರಾಜ, ಬಾಣ, ಹರಿದೇವ, ಪದ್ಮರಸ ಭೀಮಕವಿ ಮೊದಲಾದ ಶೈವ ವೀರಶೈವರಿಂದ ಶ್ಲಾಘಿಸಲ್ಪಡುವಂತಹುದೆಂದು ವಿವರಿಸುತ್ತಾನೆ. ಮುಖ್ಯವಾಗಿ ಕವಿಯ ಆಶಯ ಮಲಯರಾಜ, ಬಾಣ, ಹರಿಹರ (ಹರಿದೇವ) ಪದ್ಮರಸ ಭೀಮಕವಿಗಳನ್ನು ಹೊಗಳುವುದೇ ಆಗಿದೆ. ಅದಕ್ಕೆ ಶ್ಲೇಷೆಯುನ್ನು ಹೂಡಿ ಮಲಯಮಾರುತದಂತೆ ಆಹ್ಲಾದಕಾರಕವಾದುದೆಂದು ಎರಡನೆಯ ಉದ್ದೇಶ ಸಾಧಿಸುತ್ತಾನೆ. ಮಲಯಮಾರುತ ಮನ್ಮಥನ ಸಂಪರ್ಕದಿಂದ ಅವನಿಗೆ ಮುದವನ್ನುಂಟುಮಾಡುತ್ತದೆ. ಅದು ಅಗ್ನಿಗೆ ಮಿತ್ರ, ಕಮಲದಸುಗಂಧ ಧರಿಸುವಂತಹುದು, ಭೀಮನ ತಂದೆ ಎನಿಸಿದೆ. ಮಲಯಕ್ಷ್ಮಾಭೃತ್– (i) ಮಲಯ ಭೂಮಿಯಲ್ಲಿ ಹುಟ್ಟಿರುವಂತಹುದು– ಚಂದನ ದ್ರುಮ. (ii) 'ಮಲಯ'ನೆಂಬ ಹೆಸರಿನ ಅರಸು (ಕ್ಷ್ಮಾಭೃತ್). ಸುಮನೋಬಾಣಂ– (i) ಹೂವುಗಳನ್ನು ಬಾಣವಾಗಿ ಉಳ್ಳವ ಮನ್ಮಥ, (ii) ಒಳ್ಳೆಯ ಮನಸ್ಸಿನ ಬಾಣಕವಿ. ಹರಿದೇವ (i) ಅಗ್ನಿದೇವ (ii) ಹರೀಶ್ವರ, ಪದ್ಮರಸ. (i) ಕಮಲದರಸ. (ii) ಪದ್ಮರಸನೆಂಬ ಹೊಯ್ಸಳ ಚಕ್ರವರ್ತಿಗಳಲ್ಲಿದ್ದ ಹರಿಹರನ ಪೂಜ್ಯಕವಿ. ಭೀಮ (i) ಭೀಮಸೇನ (ii) ಬಸವಪುರಾಣ ಬರೆದ ಭೀಮನೆಂಬ ಕವಿ. ೨೨. ಭೂಮಿಯ ಧೂಳನ್ನು ಸುವರ್ಣಮಯವನ್ನಾಗಿಸಿದ, ಶ್ರೇಷ್ಠಜಲಧಾರೆಯ ತುಂತುರು ಹನಿಗಳನ್ನು ನುಣ್ಣನೆಯ ರತ್ನಗಳನ್ನಾಗಿಸಿದ, ಬೆಂಕಿಯುನ್ನು ಬಟ್ಟೆಯಲ್ಲಿ ಕಟ್ಟಿದ, ವಾಯುವಿನ ಆಶ್ರಯದಿಂದ ಸ್ವರ್ಗಕ್ಕೆ ಹೋದಂತಹ, ಆಕಾಶವನ್ನೇ ಮಾತನಾ

1 ದತಿ (ಅ)

ಧಾರದೆ ಸಗ್ಗಕ್ಕೈದಿ ನಭವಂ ನುಡಿಸುತ್ತೆ ಧರಾದಿಭೂತದೊ
ಳ್ಚಾರು ಮಹತ್ವಮಂ ಮೆಱೆದರೀಗೆಮಗಾರ್ಯರತಿಪ್ರಭಾವಮಂ ೨೨

ಶಿವನೇ ದೈವಮೆನುತ್ತೆ ತೋಱಿ ನಿಜಮಂ ದೂದಟ್ಟಿ ಸಂಪ್ರೀತಿಯಿಂ
ಶಿವನಂ ಮೇಣ್ ಶಿವನಿಂ ವರಂಬಡೆದು ಮೈಯಿತ್ತಾ ಶಿವಂಗದ್ಭುತಾ
ಯುವನಾದಂ ಶಿವನತ್ತಣಿಂ ಪಡೆದು ಯೋಷಿದ್ಭಾವದಿಂದೊಂದುತಂ
ಶಿವನಂ ಕೂರ್ತೊಡ[1]ನುಂಡು[1] ನಾಡೆ ಶಿವನೊಳ್ ಸಂದಾದ್ಯರೇಂ ಹೃದ್ಯರೋ ೨೩

ಧನವನಿತಾತನೂಭವಮನಸ್ತನುಮುಖ್ಯಮನೀಶಭಕ್ತಿಭಾ
ವನೆಯೊಡಗೂಡಿ ಕೊಟ್ಟು ತಣಿವೈದದೆ ಜಂಗಮಲಿಂಗಮೂರ್ತಿಗ
ಳ್ಗನುನಯದಿಂದೆ ಶಂಭುಕೃಪೆಯಂ ಪಡೆದೀಶ್ವರಲೋಕಕ್ಕೈದಿದ
ತ್ಯನುಪಮಭಾವರಂ ಭಜಿಪೆನಳ್ಕಱೊಳಾನಱುವತ್ತಮೂವರಂ ೨೪

ನಡೆದುದೆ ಸತ್ಪಥಂ ನುಡಿದುದೇ ಶಿವಮಂತ್ರಮೊಲಿಲ್ದು ದರ್ಶನಂ
ಬಡೆದನೆ ಮುಕ್ತನಿರ್ದ ನೆಲೆಯೇ ಘನಕಾಶಿಯೊಡರ್ಚಿದುಜ್ಜುಗಂ

ಡಿಸಿದ—ಹೀಗೆ ಪೃಥ್ವಿ, ಅಪ್, ತೇಜ, ವಾಯು, ಆಕಾಶಗಳೆಂಬ ಪಂಚಮಹಾಭೂತಗಳೊಡನೆ ಮನೋಹರವಾದ ಮಾಹಾತ್ಮ್ಯಗಳನ್ನು ತೋರಿಸಿದ ಪೂಜ್ಯರಾದವರೆಲ್ಲ (ಈ ವೃಷಭೇಂದ್ರ ವಿಜಯವನ್ನು ಬರೆಯಲು ಪಕ್ರಮಿಸಿದ ನನಗೆ) ಅತಿಪ್ರಭಾವವನ್ನುಂಟುಮಾಡಲಿ. ೨೩. ಶಿವನೇ ಪರದೈವವೆಂದೆನ್ನುವ ನಿಜಸಂಗತಿಯನ್ನು ತೋರಿಸಿಕೊಟ್ಟು, ಸಮೀಚೀನ ಪ್ರೀತಿಯಿಂದ ಆ ಪರಮೇಶ್ವರನಿಂದ ವರವನ್ನು ಪಡೆದು ಶಿವನನ್ನು ಸೇವೆಗಾಗಿ ಕಳುಹಿಸಿ, ಆ ಪರಮೇಶ್ವರನಿಗೆ ದೇಹವನ್ನೇ ಸಮರ್ಪಿಸಿ, ಪರಶಿವನಿಂದ ಅದ್ಭುತವಾದ ಆಯುಷ್ಯವನ್ನು ವಿಶೇಷವಾಗಿ ಪಡೆದುಕೊಂಡು, ಸ್ತ್ರೀ-ರೂಪದಿಂದ ಶಿವನನ್ನು ಸೇರುತ್ತ, ಪ್ರೀತಿಯಿಂದ ಅವನೊಡನೆ ಆಟವಾಡಿ, (ಕೊನೆಗೆ) ಅವನಲ್ಲಿ ಸೇರಿದ (ಐಕ್ಯಗೊಂಡ) ಪುರಾತನರುಗಳು ಏನು ಮನೋಹರರಾದರೋ ! ೨೪. ಐಶ್ವರ್ಯ, ಧರ್ಮಪತ್ನಿ, ಮಗ, ಮನಸ್ಸು, ದೇಹ —ಇವೇ ಮುಂತಾದವುಗಳನ್ನು (ಅರ್ಥ ಪ್ರಾಣ ಮಾನಾದಿಗಳನ್ನು) ಜಂಗಮಲಿಂಗರೆನಿಸಿದ ಮೂರ್ತಿಗಳಿಗೆ ಪ್ರೀತಿಯಿಂದ ಸಮರ್ಪಿಸಿ, ತಣಿಯದೆ ಶಂಭು ಕೃಪೆಯನ್ನು ಪಡೆದು, ಕೈಲಾಸಕ್ಕೆ ತೆರಳಿದ ಅಸದೃಶ ನಡೆವಳಿಕೆಯ ಅರವತ್ತುಮೂವರು ಪುರಾತನರುಗಳನ್ನು ನಾನು ಪ್ರೀತಿಯಿಂದ ಧ್ಯಾನ ಮಾಡುತ್ತೇನೆ. ೨೫. ನಡೆದದ್ದೇ ಸನ್ಮಾರ್ಗ ; ಮಾತನಾಡಿದ್ದೇ (ಶಿವಪಂಚಾಕ್ಷರೀ) ಮಂತ್ರ ; ಪ್ರೀತಿಸಿ ದರ್ಶನವನ್ನು ಪಡೆದವನೇ ಸಂಸಾರಮುಕ್ತನು ; (ಇಂಥವರು) ಇದ್ದನೆಲೆಯೇ ಶ್ರೇಷ್ಠ ಕಾಶೀಕ್ಷೇತ್ರವು ; ಮಾಡುವ ಉದ್ಯೋಗವೇ ಈಶ್ವರನ ಸೇವೆ ;

---

1 ನಾಡಿ (ಅ)

ಮೃಡಪದಸೇವೆ ಪೊಕ್ಕ ಮುಡುವಗ್ಗದ ತೀರ್ಥಮೆನಿಪ್ಪ ಪೆರ್ಮೆ ಸಂ
ಗಡಿಸಿದ ಸತ್ಪುರಾತನರ ಮೆಲ್ಲಡಿ ನಿಲ್ಕೆ ಮದಂತರಂಗದೊಳ್ ೨೫

ಶಿವಕೃತಿಯಲ್ಲದನ್ಯಕೃತಿಯಂ ಸಲೆ ಕೇಳದ ಕೂರ್ಮೆಯುಳ್ಳಿಯಿಂ
ಶಿವನುತಿಯಲ್ಲದನ್ಯನುತಿಯಂ ಮಿಗೆ ಮಾಡದ ಪೆರ್ಮೆಯೊಚ್ಚತಂ
ಶಿವಪಥಮಲ್ಲದನ್ಯಪಥದೊಳ್ ಪದವಿಕ್ಕದ ನಲ್ಮೆ ನೈಜಮಾ
ದವಿಕಲವೀರಶೈವಗಣದೊಲ್ಮೆಯನಾಂಪನದೇಂ ಕೃತಾರ್ಥನೋ ೨೬

ಪರಮಾಮ್ನಾಯಶಿರೋರಹಸ್ಯಗದಿತಂ ಶೈವಾಗಮಾಂತೋದಿತಂ
ಗುರುಮಾರ್ಗಾಗತಮುತ್ತಮೋತ್ತಮತರಂ ಕೈವಲ್ಯಕಲ್ಪದ್ರುಮಂ
ದುರಿತಾರಣ್ಯದವಾನಲಂ ಶಿವಕೃಪಾಂಭಃಪೂರಧಾರಾಧರಂ
ಹರನಿಷ್ಠಾನಿಧಿ ವೀರಶೈವಸಮಯಂ ಬೆರ್ಚಿರ್ಕೆ ಮಚ್ಚಿತ್ತದೊಳ್ ೨೭

ಮೊದಲೊಳ್ಸೋಮಗುರೂತ್ತಮಂ ಸರಸವಾಕ್ಚಾತುರ್ಯದಿಂದಾಂಧ್ರದೇ
ಶದ ಭಾಷಾಕ್ರಮದಿಂ ವೃಷೇಂದ್ರಕೃತಿಯಂ ತಾಂ ಮಾಡಿದಂ ಭಕ್ತಿಯಿಂ

ಹೊಕ್ಕಮಡುವೇ ಶ್ರೇಷ್ಠವಾದ ತೀರ್ಥ—ಎನಿಸುವ ಹಿರಿಮೆಯನ್ನು ತೋರಿಸಿಕೊಟ್ಟ ಶ್ರೇಷ್ಠಪುರಾತನರ ಮೃದುಪಾದಗಳು ನನ್ನ ಅಂತರಂಗದಲ್ಲಿ ನಿಲ್ಲಲಿ. ೨೬. ಶಿವನನ್ನು ಕುರಿತು ಹೇಳಿದ ಕೃತಿಯನ್ನಲ್ಲದೆ ಅನ್ಯಕೃತಿಗಳನ್ನು (ಕಿವಿಯಿಂದ) ಕೇಳದೆ ಇರುವ, (ಶೈವಕಾವ್ಯಗಳ ಮೇಲಿರುವ) ಪ್ರೀತಿ. ಪ್ರೀತಿಯಿಂದ ಶಿವಸ್ತೋತ್ರವನ್ನಲ್ಲದೆ ಅನ್ಯ ದೈವ ಸಂಬಂಧದ ಸ್ತೋತ್ರಗಳನ್ನು ಮಾಡದೆ ಇರುವ ಹಿರಿಮೆ. ಚೆನ್ನಾಗಿ ಶಿವಸಂಬಂಧದ ಮಾರ್ಗವಲ್ಲದೆ ಬೇರೊಂದು ಮಾರ್ಗದಲ್ಲಿ ಪಾದವನ್ನು ಇಡದ ಪ್ರೀತಿ, (ಇಂಥ) ನೈಜ ವಾದ ಪರಿಪೂರ್ಣ ವೀರಶೈವ ಧರ್ಮಮಾರ್ಗದಲ್ಲಿ ಚರಿಸಿದ (ವೀರಶೈವ) ಗಣದ ಒಲುಮೆಯನ್ನು ಹೊಂದುವವನು ಅದೇನು ಕೃತಾರ್ಥನೋ ! ೨೭. ಶ್ರೇಷ್ಠವೇದಾಂತ ಗಳಾದ ಉಪನಿಷತ್ತುಗಳಲ್ಲಿ ರಹಸ್ಯವಾಗಿ ಹೇಳಿರುವ ಶಿವಾಗಮಗಳ ಅಂತ್ಯದಲ್ಲಿ ಪ್ರತಿ ಪಾದಿತವಾಗಿರುವ ಗುರುಪರಂಪರೆಯ ಉಪದೇಶಕ್ರಮದಿಂದ ಬಂದ, ಸರ್ವೋತ್ಕೃಷ್ಟ ವಾದ ಮೋಕ್ಷಕ್ಕೆ ಕಲ್ಪದ್ರುಮ ಸದೃಶವಾದ. ಪಾಪವೆಂಬ ಕಾಡಿಗೆ ದಾವಾನಲವಾದ. ಶಿವನ ಕೃಪೆಯೆಂಬ ಜಲಪ್ರವಾಹಕ್ಕೆ ಮೇಘಸ್ವರೂಪವಾದ. ಶಿವಭಕ್ತಿಗೆ ನಿಧಿಯೆನಿಸಿರುವ ವೀರಶೈವ ಸಮಯವು ನನ್ನ ಹೃದಯದಲ್ಲಿ ಬೆಸುಗೆಗೊಂಡಿರಲಿ. [ಅಮ್ನಾಯಶಿರಃ —ವೇದಗಳ ಶಿರಸ್ಸು : ವೇದಗಳ ಶಿರಸ್ಸು ಅಥವಾ ವೇದಾಂತ ಇತ್ಯಾದಿ ಹೆಸರುಗಳಿಂದ ಉಪನಿಷತ್ತುಗಳನ್ನು ಕರೆಯಲಾಗುತ್ತದೆ.] ೨೮. ಏತತ್ಪೂರ್ವದಲ್ಲಿ ಪಾಲ್ಕುರಿಕೆಯ ಸೋಮನಾಥನೆಂಬ ಗುರುವು ರಸಭರಿತವಾದ. (ಶೃಂಗಾರಾದಿರಸ ವಿಶಿಷ್ಟವಾದ)ಚಾತುರ್ಯ ದಿಂದ ಕೂಡಿದ ಪ್ರೌಢ ವಾಙ್ಮಯದಿಂದ ಆಂಧ್ರಭಾಷೆ (ತೆಲಗುಭಾಷೆ) ಯಲ್ಲಿ ಭಕ್ತಿ ಯಿಂದ ವೃಷಭೇಂದ್ರನಿಗೆ ಸಂಬಂಧಿಸಿದ (ಈ) ಕೃತಿಯನ್ನು ನಿರ್ಮಿಸಿದನು. ಅದೇ

ದದನಾ ಭೀಮಕವೀಶ್ವರಂ ನೆಗಳ್ದನಾದಂ ವರ್ಣಕಪ್ರೌಢಿಯಿಂ
ದದನುದ್ಯದ್ರುಚಿ ಸಂಸ್ಕೃತೋಕ್ತಿಯೊಳೆ ಪೇಳ್ದಂ ಶಂಕರಾರ್ಯೋತ್ತಮಂ ೨೮

ಪದಪಿಂದಾದ್ಯರ್ಕಳಿಂತಿಂತುಳ ಸರಸ ಶಬ್ದಾರ್ಥಸಂದರ್ಭದಿಂ ಕೋ
ವಿದರೆಲ್ಲರ್ಮೆಚ್ಚೆ ಬರ್ದಿಂ ನೆಗಳ್ದ ಬಸವಪೌರಾಣಮಂ ಬೇಱೆ ಮೇಣ್ಪೇ
ಳ್ವುದು ಹಾಸ್ಯಕ್ಕಾಸ್ಪದಂ ಬೆಳ್ತನಮನುಚಿತಮಂತಾದೊಡಂ ತದ್ಗಣಸ್ತೋ
ಮದ ಜಾನಂ ಸಾರ್ವುದೀ ವ್ಯಾಜದಿನೆನುತಿದನಾಂ ಪೇಳಲುದ್ಯುಕ್ತನಾದೆಂ ೨೯

ಶಿವಹೃದಯಾಬ್ಜಪೀಠನಿಲಯಂ ಬಸವಂ ಶಿವಕೀರ್ತಿಚಂದ್ರಿಕಾ
ಕುವಲಯಬಂಧುವಲ್ತೆ ಬಸವಂ ಶಿವಸದ್ಗುಣರತ್ನಮಾಲಿಕಾ
ಪ್ರವಿಮಳಸೂತ್ರಸುದ್ಧ ಬಸವಂ ಶಿವದಿವ್ಯಮಹತ್ವಭರ್ಮಹ
ರ್ಮ್ಯವಿದಿತ ನೂತ್ನ ರತ್ನಕಲಶಂ ಬಸವಂ ಶಿವವಕ್ತ್ರದರ್ಪಣಂ ೩೦

ಬಸವನನಾದಿಮೂರ್ತಿಯೆನಿಪಂ ಬಸವಂ ಜಗದಾದಿಕಾರಣಂ
ಬಸವನನಂತಕೀರ್ತಿ ಬಸವಂ ಭವಮೇಘಮಹಾಸಮೀರಣಂ

ಕೃತಿಯನ್ನು ಭೀಮಕವಿಯು ವರ್ಣಕಪ್ರೌಢಿಯಿಂದ ಅಂದರೆ (ಅಂದರೆ ಭಾಮಿನಿಷಟ್ಪದಿ ಛಂದಸ್ಸಿನಿಂದ) ಕನ್ನಡ ಭಾಷೆಯಲ್ಲಿ ಚೆನ್ನಾಗಿ ಬರೆದನು. (ಕಂಚಿಯ) ಶಂಕರಾರ್ಯನೆಂಬ ಕವಿಯು ಅದೇ ಕೃತಿಯನ್ನೇ ಅಧಿಕ ರುಚಿಯಾಗಿ ಸಂಸ್ಕೃತ ಭಾಷೆಯಕ್ರಮದಲ್ಲಿ ರಚಿಸಿದನು. ೨೯. ಪೂರ್ವದವರು ಈ ರೀತಿಯಲ್ಲಿ ಪ್ರೀತಿಯಿಂದಲೂ, ಶ್ರೇಷ್ಠರಸಭರಿತ ಶಬ್ದಾರ್ಥ ಸಂಬಂಧದಿಂದಲೂ, ಎಲ್ಲ ವಿದ್ವಾಂಸರ ಮೆಚ್ಚುಗೆಗೆ ಪಾತ್ರವಾಗುವಂತೆ ಜಾಣ್ಮೆ (ಬರ್ದಿಂ) ಯಿಂದ ಬಸವೇಶ್ವರ ಸಂಬಂಧದ ಈ ಪುರಾಣವನ್ನು ಮಾಡಿರುವಾಗ ಪುನಃ ಬೇರೆ ಹೇಳುವುದು ಹಾಸ್ಯಾಸ್ಪದವಾದುದು ; ಬೆಪ್ಪುತನ ; ಅನುಚಿತ. ಆದರೂ ಕೂಡ ಆ ಮಹಾಶಿವಶರಣರುಗಳ ಧ್ಯಾನವು ನನಗೂ ಪ್ರಾಪ್ತವಾಗುತ್ತದೆ ಎಂಬೊಂದು ವ್ಯಾಜ (ಕಾರಣ) ದಿಂದ ನಾನು ಅದೇ ಕಾವ್ಯವನ್ನು ಹೇಳುವುದಕ್ಕೆ ಮೊದಲು ಮಾಡಿದ್ದೇನೆ. ೩೦ ಬಸವೇಶ್ವರನು ಪರಮೇಶ್ವರನ ಹೃದಯಕಮಲವೆಂಬ ಪೀಠವನ್ನೇ ನಿಲಯವಾಗಿ ಉಳ್ಳವನು ; ಈಶ್ವರನ ಕೀರ್ತಿಯೆಂಬ ಬೆಳದಿಂಗಳಿಗೆ ಚಂದ್ರನಂತಿರುವವನು ; ಶಿವನ ಕಾರುಣ್ಯವೇ ಮೊದಲಾದ ಸಮಸ್ತ ಸದ್ಗುಣಗಳೆಂಬ ರತ್ನಹಾರಕ್ಕೆ ಪರಿಶುದ್ಧ ದಾರವಾದವನು. ಶ್ರೇಷ್ಠನಾದ ಆ ಬಸವಣ್ಣನು ಈಶ್ವರನ ದಿವ್ಯವಾದ ಮಹತ್ವಗಳಿಗೆಲ್ಲ ಸುವರ್ಣಭವನದಂತಿರುವವನು. ಪ್ರಸಿದ್ಧವೂ ಮತ್ತು ನೂತನವೂ ಆಗಿರುವ (ಆ ಶಿವಭವನದ) ರತ್ನಕಲಶಸ್ವರೂಪನು. ಶಿವನು (ತನ್ನ) ಮುಖವನ್ನು ನೋಡಿಕೊಳ್ಳುವುದಕ್ಕೆ ಕನ್ನಡಿಯಂತಿರುವವನು, ಅಲ್ಲವೆ ! ೩೧. ಬಸವನು ಆದಿಮೂರ್ತಿಯೆನಿಸಿದ್ದಾನೆ : ಜಗದ ಆದಿಗೆ ಕಾರಣನೆನಿಸಿದ್ದಾನೆ ; ಅಪರಿಮಿತ ಯಶಸ್ಸನ್ನು ಹೊಂದಿರುವವನು ; ಜನನ ಮರಣಗಳೆಂಬ ಮೋಡಗಳಿಗೆ ಬಿರುಗಾಳಿ (ಘನಸಮೀರಣ)ಯಂತಿದ್ದಾನೆ. ಸಮಸ್ತ (ಮಾನವಕುಲಕ್ಕೇ) ಬಂಧುವೆನಿಸಿದ್ದಾನೆ.

ಬಸವನಶೇಷಬಂಧು ಬಸವಂ ಶಿವಭಕ್ತಮುಖಾಂಬುಜಾರುಣಂ
ಬಸವನಖರ್ವಗರ್ವಪರವಾದಿಜನಾಂಬುಜಮತ್ತವಾರಣಂ ೩೧

ಬಸವನ ನಾಮಮಂ ನೆನೆವುತಂ ಬಸವೇಶನ ಕೀರ್ತನಂಗಳಂ
ಪಸರಿಸಿ ಪಾಡುತಂ ಬಸವನುಜ್ವಳಮೂರ್ತಿಯನೊಲ್ದು ಜಾನಿಸು
ತ್ತೆಸೆವ ನರಂಗೆ ಜನ್ಮತತಿಯುಂಟೆ ಜಡಸ್ಥಿತಿಯುಂಟೆ ಪಾತಕ
ಪ್ರಸರಮದುಂಟೆ ಮೃತ್ಯುಭಯಮುಂಟೆ ಮದಾಂಧತೆಯುಂಟೆ ಧಾತ್ರಿಯೊಳ್ ೩೨

ವಪುರುದ್ಯತ್ಪ್ರಭೆಯಿಂದೆ ಬಿಂದು ವಿಳಸನ್ನಾದಂ ಠಣತ್ಕಾರದಿಂ
ಲಪನಪ್ರದ್ಯುತಿಸಾರದಿಂ ಕಳೆ ಚಳನ್ನೇತ್ರತ್ರಿಭಾಗಂಗಳಿಂ
ದುಪಮಾತೀತಗುಣತ್ರಯಂ ಬಸವನಿಂದಂದಾದವೆಂದೆಯ್ದೆ ಪೇ
ಳ್ದಪರಾರ್ಯರ್ಪೆಜಿತೇನೊ ತಾನೆ ಪರಬೊಮ್ಮಂ ದಲ್ ವೃಷಾಧೀಶ್ವರಂ ೩೩

ಪ್ರಮಥಪ್ರಥಮಾಚಾರ್ಯಂ
ಕುಮತತಮಸ್ಸೂರ್ಯನಾರ್ಯನತುಳಿತಕಾರ್ಯಂ

ಶಿವನಭಕ್ತರಾದವರುಗಳ ಮುಖವೆಂಬ ಕಮಲಗಳಿಗೆ ಸೂರ್ಯನೋಪಾದಿಯಲ್ಲಿರುವವ ನೆನಿಸಿದ್ದಾನೆ. ವಿಶೇಷಗರ್ವದಿಂದ ಕೂಡಿದ ವಿರೋಧಿಗಳಾದ ವಾದಿಜನಗಳೆಂಬ ಕಮಲಗಳಿಗೆ ಮದಗಜದೋಪಾದಿಯಲ್ಲಿರುವವನೆನಿಸಿದ್ದಾನೆ. ೩೨. ಈ ಭೂಮಿಯಲ್ಲಿ (ಇಂಥಮಹಿಮಾಶಾಲಿಯಾದ) ಬಸವನ ನಾಮೋಚ್ಚಾರಣೆಮಾಡುತ್ತ, ಅವನ ಸ್ತೋತ್ರ ಗಳನ್ನು ವಿಸ್ತರಿಸಿ ಹಾಡುತ್ತ, ಆ ಪ್ರಕಾಶಯುಕ್ತವಾದ ಅವನ ಆಕಾರವನ್ನು ಪ್ರೀತಿಯಿಂದ ಧ್ಯಾನಮಾಡುತ್ತ ಶೋಭಿಸುವ ಮನುಷ್ಯನಿಗೆ ಭವಸಂತತಿಯು ಉಂಟಾದೀತೇ ? ಅಜ್ಞಾನವೆಂಬುದು ಉಳಿದೀತೇ ? ಪಾಪಸಮೂಹ ನಿಂತೀತೇ ? ದುರ್ಮರಣದ ಅಂಜಿಕೆಯು ಉಂಟಾದೀತೇ ? ಮದಾಂಧತೆಯು ಉಳಿದೀತೇ ? (ಉಳಿಯಲಾರದೆಂದು ತಾತ್ಪರ್ಯ) ೩೩. ಹಿಂದೆ ಸೃಷ್ಟಿಯ ಕಾಲದಲ್ಲಿ ಆ ಬಸವೇಶ್ವರನ ಶರೀರದ ಅಧಿಕವಾದ ಪ್ರಭೆಯಿಂದ ಬಿಂದು ತಾವೂ ಠಣತ್ಕಾರಮಾಡಕ್ಕ ಕಂಠಧ್ವನಿಯಿಂದ ಪ್ರಕಾಶಮಾನ ವಾದನಾದವೂ, ಮುಖದ (ಲಪನದ) ಅಧಿಕವಾದ ಕಾಂತಿಯ ಸಾರದಿಂದ ಕಲೆಯೂ, ಚಂಚಲವಾದ ನೇತ್ರದ ಮೂರುಭಾಗಗಳಿಂದ (ಅಂದರೆ ಕರಿಗುಡ್ಡೆ, ಬಿಳಿಗುಡ್ಡೆ, ಅಕ್ಕಪಕ್ಕಗಳ ಕೆಂಪುರೇಖೆಗಳೆಂಬ ಮೂರುಭಾಗಗಳಿಂದ) ಅಸದೃಶ ಗುಣತ್ರಯಗಳಾದ ಸತ್ವ, ರಜಸ್ಸು, ತಮಸ್ಸುಗಳಾದವು, ಎಂದು ಹಿಂದಿನ ಶ್ರೇಷ್ಠರವರುಗಳು ಚೆನ್ನಾಗಿ ಹೇಳಿದ್ದಾರೆ. ಇನ್ನು (ನಾನು) ಬೇರೆ ಹೇಳುವುದಾದರೂ ಏನಿದೆ ? ಇಂಥ ಬಸವೇಶ್ವರನು ನಿಶ್ಚಯವಾಗಿ ಪರಬ್ರಹ್ಮಸ್ವರೂಪನು. ೩೪. ಬಸವರಾಜನು ಸಮಸ್ತ ಪ್ರಮಥರಿಗೆಲ್ಲ ಪ್ರಮುಖ ಆಚಾರ್ಯಪುರುಷನು. ದುರ್ಮತಗಳೆಂಬ ಅಂಧಕಾರಕ್ಕೆ ಸೂರ್ಯನೋ

ನಮದಮರವರ್ಯಗಣಭವಾ
ಗಮಧೂರ್ಯಂ ಬಸವರಾಜನನುಪಮಶೌರ್ಯಂ ೩೪

ತಾರಾಗಕ್ಷೀರವಾರಾಕರ ಮಳಯಜ ಮಂದಾರ ಡಿಂಡೀರಹಾರ
ಸ್ಮೇರೇಂದ್ರೇಭೇಂದ್ರಹೀರಾಮಳಕಮಳಮರಾಳೋರು ನೀರಾಂಕನಾಕಾ
ಗಾರಾಹಾರಾರವಿಂದೋದ್ಭವಯುವತಿಶರದ್ವಾರಿಧಾರಾಧರಾಂಭೋ
ಜಾರಾತಿಸ್ಫಾರಗೌರಪ್ರಭ ಸುಭಗಯಶಃಕಾಂತಿರುಂದ್ರಂ ವೃಷೇಂದ್ರಂ ೩೫

ಶರಣರ ಕೈಯ ಕೈಪಿಡಿಯನಾದಿಯ ಜಂಗಮಭಕ್ತನೀಶಭ
ಕ್ತರ ಸುರಧೇನು ಶಂಕರನ ನಚ್ಚಿನ ವಾಹನಮನ್ಯವಾದವಾ
ರ್ದರಚಯಚಂಡಮಾರುತನಿಳಾತಳಪಾವನ ರುದ್ರಮೂರ್ತಿ ವಿ
ಸ್ಫುರಿತ ಕಳಾಪ್ರಪೂರ್ತಿ ಬಸವಂ ಭವಸಾಗರಕುಂಭಸಂಭವಂ ೩೬

ಪಾದಿಯಲ್ಲಿರುವವನು, ಪರಮಪೂಜ್ಯನು, ಅನುಪಮವಾದ ಕಾರ್ಯಗಳನ್ನುಳ್ಳವನು, ದೇವಾದಿದೇವತೆಗಳಿಂದ ನಮಸ್ಕರಿಸಿಕೊಳ್ಳಲ್ಪಡುವವನು. ಶೈವಾಗಮಜ್ಞಾನದಲ್ಲಿ ಸಮರ್ಥನು, ಅತ್ಯಧಿಕ ಶೌರ್ಯಗುಣವುಳ್ಳವನು. ೩೫. ವೃಷಭೇಂದ್ರ (ಬಸವೇಶ್ವರ)ನು ಬೆಳ್ಳಿಯ ಬೆಟ್ಟ, ಹಾಲಿನಸಮುದ್ರ. ಶ್ರೀಗಂಧ, ಕಲ್ಪವೃಕ್ಷ. ನೊರೆ, ಮುತ್ತಿನಹಾರ, ಮುಗುಳುನಗೆ, ಇಂದ್ರನ ಆನೆಯಾದ ಐರಾವತ, ವಜ್ರಮಣಿ, ಬಿಳಿಯಕಮಲ, ಹಂಸಪಕ್ಷಿ, ಶ್ರೇಷ್ಠಬಲರಾಮ, ದೇವತೆಗಳ ಆಹಾರವಾದ ಅಮೃತ, ಬ್ರಹ್ಮನ ಸತಿಯಾದ ಸರಸ್ವತಿ, ಶರತ್ಕಾಲದ ಮೇಘ, ಚಂದ್ರ—ಇವುಗಳ ಹಾಗೆ ವಿಶೇಷವಾದ ಬಿಳುಪಾದ ಕಾಂತಿಯಿಂದ ಮನೋಹರವಾದ ಯಶಸ್ಸೆಂಬ ಕಾಂತಿಯಿಂದ ಆಧಿಕ್ಯಗೊಂಡವನಾಗಿದ್ದಾನೆ. ಅಂದರೆ, ಪರಿಶುದ್ಧಕೀರ್ತಿಯುಳ್ಳವನಾಗಿದ್ದಾನೆ. [ತಾರಗ—ತಾರಎಂದರೆ ಬೆಳ್ಳಿಯ, ಅಗ—ಬೆಟ್ಟ—ಕೈಲಾಸಪರ್ವತ; ಸೀರಾಂಕ—ಸೀರ ನೇಗಿಲು—ಆ ನೇಗಿಲನ್ನೇ ಅಂಕ ಎಂದರೆ ಗುರುತಾಗಿ ಉಳ್ಳವ—ಬಲರಾಮ ; ನಾಕಾಗಾರಾಹಾರ—ನಾಕ+ಅಗಾರ+ಆಹಾರ—ಎಂದರೆ ದೇವತೆಗಳ ಆಗಾರದ ಆಹಾರ—ಎಂದರೆ ಅಮೃತ ; ಅರವಿಂದೋದ್ಭವಸತಿ—ಅರವಿಂದ ಅಂದರೆ ಕಮಲದಿಂದ ಉದ್ಭವನಾದ ಬ್ರಹ್ಮನ ಸತಿ—ಸರಸ್ವತಿ ; ಶರದ್ವಾರಿಧಾರಾ ಧರ ಶರತ್ಕಾಲದ ವಿಶೇಷವಾದ ಧಾರಾ ಅಂದರೆ ನೀರನ್ನು. 'ಧರ' ಎಂದರೆ ಧರಿಸಿರುವುದು, ಧಾರಧರ ಎಂದರೇ ಮೋಡ—ಆದ್ದರಿಂದ ಇಲ್ಲಿ 'ಶರತ್ಕಾಲೀನ ಮೋಡ' ಎಂದು ಅರ್ಥ:] ೩೬. ಬಸವೇಶ್ವರನು ಶಿವಶರಣರ ಕೈಯ ಕನ್ನಡಿಯೆನಿಸಿದ್ದಾನೆ. ಅನಾದಿ ಜಂಗಮತತ್ತ್ವಮೂರ್ತಿಗಳಾದ ಜಂಗಮರುಗಳ ಭಕ್ತನೆನಿಸಿದ್ದಾನೆ, ಶಿವಭಕ್ತರುಗಳ ಕಾಮಧೇನುವೆನಿಸಿದ್ದಾನೆ. ಪರಮೇಶ್ವರನ ಪ್ರೀತಿಯ ವಾಹನನೆನಿಸಿದ್ದಾನೆ. ಅನ್ಯ ಸಮಯದ ವಾದಗಳೆಂಬ ಮೇಘಗಳಿಗೆ ಬಿರುಗಾಳಿಯೆನಿಸಿದ್ದಾನೆ. ಭೂಮಂಡಲದ ಪರಿಶುದ್ಧ ರುದ್ರಸ್ವರೂಪನೆನಿಸಿದ್ದಾನೆ. ಪ್ರಕಾಶಮಾನವಾದ ಸಂಪೂರ್ಣಜ್ಞಾನ ಮೂರ್ತಿಯೆನಿಸಿದ್ದಾನೆ, ಜನನ ಮರಣಗಳೆಂಬ ಸಮುದ್ರಕ್ಕೆ ಕುಂಭಸಂಭವ (ಅಗಸ್ತ್ಯ)

ಆ ದೇವನ ಘನ ಮಹಿಮೆಯ
ನಾ ದೇವಾಚಾರ್ಯ ಫಣಿಪ ವಾಕ್ಪಸಹಸ್ರ
ಕ್ಕಾದೊಡಮೇಂ ಬಣ್ಣಿಸಲಳ
ವಾದಪ್ಪುದೆ ಪೊಗಳ್ವೆನೆಂದು ನೆನೆವವನೆಗ್ಗಂ ೩೭

ಎಂದಱಿದುಂ ಪೊಗಳ್ದಿನದೇ
ಕೆಂದೊಡೆ ಶಿಶುವಾಣಿ ಪೆತ್ತರಂ ಮಚ್ಚಿಪವೋ
ಲ್ತಂದೆ [1]ಬಸವಂಗಱಿಯದೇ[1]
ನೆಂದೊಡಮದು ಲಾಲ್ಯಮೆನ್ನ ನುಡಿಯಪ್ಪುದಱಿಂ ೩೮

ನುತಪೂರ್ಣಗುಣಾಂಬರಸಂ
ವೃತರಾಜಂಗಂಬರಾಂಚಲದ ಗು[2]ಣಮೀವಂ
ತತಿರತಿಯಿಂ ಶ್ರುತಿನುತಘನ
ಮತಿ ಬಸವಂಗಲ್ಪನುತಿಯನೊಲ್ದರ್ಪಿಸುವೆಂ ೩೯

ನೆನಿಸಿದ್ದಾನೆ. [ಬಸವೇಶ್ವರನು ನಂದಿಯ ಅವತಾರವೆಂದು ಗ್ರಹಿಕೆಯಿರುವುದರಿಂದ ಶಿವನ ವಾಹನವಾದ ನಂದಿಗೂ, ಇವನಿಗೂ ಅಭೇದವಾಗಿಯೇ 'ಶಂಕರ ನಚ್ಚಿನವಾಹನ' ಇತ್ಯಾದಿಯಾದ ಮಾತುಗಳಿಂದ ವರ್ಣಿಸುವುದು ಕವಿಗಳ ವಾಡಿಕೆ.] ೩೭. (ಇಂಥ ಘನಮಹಿಮಾ ಶಾಲಿಯಾದ) ಬಸವೇಶ್ವರನ ಮಾಹಾತ್ಮ್ಯೆಯನ್ನು ಆ ದೇವತೆಗಳ ಆಚಾರ್ಯನಾದ ಬೃಹಸ್ಪತಿ, ಸಹಸ್ರನಾಲಿಗೆಗಳುಳ್ಳ ಆದಿಶೇಷ, ವಾಕ್ಪತಿಯಾದ ಬ್ರಹ್ಮರುಗಳು ಸಹಸ್ರ ಸಹಸ್ರ ಸಂಖ್ಯೆಯಿಂದ ವರ್ಣಿಸುವುದಕ್ಕೆ ಶಕ್ತರಾದಾರೆಯೆ ? (ಹೀಗಿರುವಾಗ ಅವನನ್ನು) ಸ್ತೋತ್ರಮಾಡುತ್ತೇನೆಂದು ಯೋಚಿಸುವವನು ಎಗ್ಗನೇಸರಿ. ೩೮. ಹೀಗೆ ನಾನು ತಿಳಿದುಕೊಂಡು ಕೂಡ, ಏತಕ್ಕೋಸುಗ (ನಾನು ಆ ಬಸವೇಶ್ವರನನ್ನು) ಹೊಗಳುತ್ತೇನೆಂದರೆ–ಚಿಕ್ಕಮಕ್ಕಳ (ತೊದಲು) ಮಾತುಗಳು ಹೆತ್ತ ತಂದೆ ತಾಯಿಯರುಗಳನ್ನು ಮೆಚ್ಚಿಸುವ ಹಾಗೆ (ನನಗೆ) ತಂದೆತಾಯಿಯರೋಪಾದಿಯಲ್ಲಿರುವ ಬಸವೇಶ್ವರನಿಗೆ ತಿಳಿಯದೆ ಇರುವುದೇ ? (ನಾನು) ಏನೇ ವರ್ಣನೆ ಮಾಡಿದರೂ, ಆ ಮಾತು ಶ್ಲಾಘ್ಯವಾದುದೇ ಆಗುವುದರಿಂದ. (ನನ್ನತೊದಲು ಮಾತುಗಳಿಂದ ವರ್ಣಿಸುತ್ತೇನೆಂದು ಭಾವ.) ೩೯. ಶ್ಲಾಘ್ಯವಾದ ಸಂಪೂರ್ಣವಾದ ನೂಲಿನ ಬಟ್ಟೆಗಳ ಸಮೂಹದಿಂದ ಆಚ್ಛಾದಿತವಾದ ದೊರೆಗೆ (ಅಂದರೆ ಶ್ರೇಷ್ಠವಸ್ತ್ರಗಳಿಂದ ಅಲಂಕೃತನಾದ ಅರಸನಿಗೆ) (ಅವನ)ವಸ್ತ್ರದ ಕೊನೆಯ ಒಂದು ದಾರದ ಎಳೆಗೆ ಸಮಾನವಾದ ಒಂದುದಾರದ ಎಳೆಯನ್ನು ಪ್ರೀತಿಯಿಂದ ಕೊಡುವಹಾಗೆ, ವೇದಾದಿಗಳಿಂದ ಸ್ತುತಿಸಲ್ಪಡುವ ಶ್ರೇಷ್ಠ ಮತಿವಂತನಾದ ಬಸವಣ್ಣನಿಗೆ ನನ್ನ ಸ್ತೋತ್ರರೂಪವಾದ ಅಲ್ಪಕಾಣಿಕೆಯನ್ನು ಪ್ರೀತಿಯಿಂದ ಸಮರ್ಪಣೆ ಮಾಡುತ್ತಿದ್ದೇನೆ. [ಪೂರ್ಣಬಟ್ಟೆ

---

1 ಬಸವಣ್ಣಗಱಿಯದೆ(ದ) 2 ರು(ಚ)

ಮತಿ ನುತಿ ಕಿಱಿದಾದೊಡವೇಂ[1]
ಕೃತಿಪತಿ[3]ಕಿಱಿಯನೆ[2] ವೃಷೇಂದ್ರನಾತನ ಬಲದಿಂ
ಕ್ಷಿತಿಗತಿಶಯಮಾದಪುದಿದು
ರತಿಪತಿ ಕೈಗೊಂಡ ಕುಸುಮಬಾಣದ ತೆಱದಿಂ ೪೦

ಧರ್ಮಸ್ವರೂಪನಾನತ
ಶರ್ಮಪ್ರದನೆನಿಪ ಬಸವರಾಜನ ಕೃತಿಯಂ
ಕೂರ್ಮೆಯಿನುಸುರ್ದೊಡೆ ಕೇಳದ
ರಾರ್ ಮಚ್ಚದರಾರ್ ಮಹೋತ್ಸವಂಬಡೆಯದರಾರ್ ೪೧

ವಿಳಸತ್ಕರ್ಪೂರಸಾರಾಂಬುವನೆಱೆವುದೆ ಬಬ್ಬೂರ್[3]ರವೃಕ್ಷಕ್ಕೆ ಚಂದ್ರೋ
ಪ[4]ಳಭಾಸ್ವದ್ದರ್ಪಣಂದೋರ್ಪುದೆ ವನಚರವಕ್ತ್ರಕ್ಕೆ ಮತ್ತೇಭಕುಂಭ
ಸ್ಥಳಮುಕ್ತಾದಾಮಮಂ ಕಟ್ಟುವುದೆ ಕರಭಕಂಠಕ್ಕೆ ಪೇಳೀವುದೇ ಮಂ
ಜುಳವಾಗ್ವಿಸ್ತಾರ ಸಾರಸ್ವತಮನಳಿವ ದೈವಕ್ಕೆ ಧಾತ್ರೀವಿದಗ್ಧರ್ ೪೨

ಬರೆಗಳಿಂದ ಶೋಭಿತನಾದ ಅರಸನೊಬ್ಬನಿಗೆ ಒಂದುದಾರದ ಎಳೆಯನ್ನು ಕಾಣಿಕೆಯಾಗಿ ಕೊಟ್ಟಹಾಗೆ ನುತಿಗೆ ಅಶಕ್ಯನಾದ ಬಸವಣ್ಣನಿಗೆ ನನ್ನ ಅಲ್ಪನುತಿಯ ನುಡಿಕಾಣಿಕೆಯನ್ನು ಅರ್ಪಿಸುತ್ತಿದ್ದೇನೆಂದು ಭಾವ]. ೪೦. ನನ್ನ ಬುದ್ಧಿಶಕ್ತಿ ಮತ್ತು ಸ್ತೋತ್ರಗಳು ಚಿಕ್ಕವಾಗಿರಬಹುದು. ಆದರೇನು ? ಈ ನನ್ನ (ವೃಷಭೇಂದ್ರ ವಿಜಯವೆಂಬ) ಕೃತಿಯ ಪತಿಯಾದ ವೃಷಭನು ಕಿರಿಯನಲ್ಲ. ಅವನ ಬಲದಿಂದ ಈ (ನನ್ನ) ಕಾವ್ಯವು ಮನ್ಮಥನು ಹಿಡಿದಿರುವ (ಐದು) ಪುಷ್ಪಬಾಣಗಳ ರೀತಿಯಲ್ಲಿ ಈ ಭೂಮಂಡಲಕ್ಕೆ ಅತಿಶಯವಾದುದಾಗಿ ಆಗುವುದು. ೪೧. ಧರ್ಮಸ್ವರೂಪನೂ, ಶರಣಾಗತರಿಗೆ ರಕ್ಷಣೆ ನೀಡುವವನೂ ಎಂದು ಹೇಳಿಸಿಕೊಳ್ಳಲ್ಪಡುತ್ತಿರುವ ಬಸವೇಶ್ವರನ ಸಂಬಂಧದ ಈ ಕಾವ್ಯವನ್ನು ಪ್ರೀತಿಯಿಂದ (ನಾನು) ಹೇಳುತ್ತಿರುವಾಗ ಯಾರುತಾನೆ ಕೇಳಲಿಕ್ಕಿಲ್ಲ ? ಯಾರುತಾನೆ ಶ್ಲಾಘನೆ ಮಾಡಲಿಕ್ಕಿಲ್ಲ ? ಯಾರುತಾನೆ ವಿಶೇಷವಾಗಿ ಸಂತೋಷ ಪಡಲಿಕ್ಕಿಲ್ಲ ? ೪೨. ಜಾಲಿಯಮರಕ್ಕೆ ಶ್ರೇಷ್ಠವಾದ ಪಚ್ಚಕರ್ಪೂರ ಸಾರವತ್ತಾದ ನೀರನ್ನು ಎರೆಯುವುದೇ ? ಕೋತಿಯ ಮುಖಕ್ಕೆ ಚಂದ್ರಕಾಂತಶಿಲೆಯ ಪ್ರಕಾಶಮಾನ ವಾದ ಕನ್ನಡಿಯನ್ನು ತೋರಿಸುವುದೋ ? ಮದೋನ್ಮತ್ತವಾದ ಆನೆಯ ಕುಂಭಸ್ಥಳದ ಮುತ್ತುಗಳ ಸರವನ್ನು ಒಂಟೆಯ ಕುತ್ತಿಗೆಗೆ ಕಟ್ಟುವುದೇ ? ನಾಶಹೊಂದುವ ದೈವಕ್ಕೆ ಮನೋಹರವಾದ ಶಬ್ದಗಳಿಂದ ವಿಸ್ತಾರವಾಗಿ ವಿರಚಿಸಲ್ಪಟ್ಟ ಕವಿತ್ವವನ್ನು ಅರ್ಪಿಸುವುದೇ ಹೇಳು ? [ರಾಜಶೇಖರ ವಿಳಾಸದಲ್ಲಿ ಇದೇ ಕವಿ ಹೇಳುವ "ಧರೆಯೊಳ್ ಮೋಣ್

1 ದೇಂ(ಗ) 2 ಕೀರ್ಯನೆ (ದ) 3 ಬಬ್ಬೆ(ದ) 4 ಜ್ವ(ಮ)

ಪರಮ ಸುಧಾಸಮುದ್ರಮಿರೆ ಪಲ್ವಲಮಂ ಸುರರಾಜರತ್ನಮೊಂ
ದಿರೆ ತೆಗಳ್ವಂತ ಗಾಜುಮಣಿಯುಂ ಶರಭೇಂದ್ರನಿರಲ್ ಶೃಗಾಲನಂ
ಪರಿನುತಿಪಂದಮಲ್ತೆನುತೆ ದೇವ ನರಸ್ತುತಿಯಂ ಬಿಸುಟ್ಟು ಶಂ
ಕರನಡಿಗಳ್ಗೆ ಸರ್ವರಱಿವುತ್ತಿರೆ ಜಿಹ್ವೆಯನೊಲ್ದು ಮಾಱಿದೆಂ ೪೩

ಇಳೆಯೊಳ್ಮೇಣ್ಪುಟ್ಟಿ ಪುಟ್ಟುತ್ತಳಿವ ನರರ ಮೇಲುರ್ಬಿ ಕಬ್ಬಂಗಳಂ ಬಿ
ಚ್ಚಳಿಸುತ್ತುಂ ತಮ್ಮ ದಗ್ಧೋದರವ ಪೊರೆಯಲೆಂದಕ್ಕಟಾ ಕೆಟ್ಟರನ್ಯ
ರ್ಕಳಿವಂತಪ್ಪಲ್ಪಧೀಮಂತರನಸಮ ವೃಷಾಧೀಶನಂ ನಿತ್ಯನಂ ನಿ
ರ್ಮಳನಂ ಕೊಂಡಾಡಿ ಪೇಳ್ವೆಂ ಕೃತಿಯನೊಸಗೆಯಿಂ ಕೇಳ್ವುದೊಲ್ದೀಶಭಕ್ತರ್ ೪೪

ಸರಸತರ ಕಾವ್ಯಮಾನಸ
ಸರಸಿಯೊಳಾಡುವ ವಿದಗ್ಧವಿಮಳಮರಾಳಂ
ಪರಿತಂದು ಸೇವಿಪುದೆ ಪಾ
ಮರ ಬಕನಿಕರಾತ್ತಕುಕವಿಕೃತಿಪಲ್ವಲಮಂ ೪೫

ಪುಟ್ಟಿಪುಟ್ಟುತ್ತಿರುಳ್ವ''....ಈ ಪದ್ಯವನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು]. ೪೩. ಶ್ರೇಷ್ಠವಾದ ಹಾಲಿನ ಸಮುದ್ರವೇ ಇರುವಾಗ ಅಲ್ಪಹೊಂಡವನ್ನು. ಸುರರಾಜನಾದ ದೇವೇಂದ್ರನ ಚಿಂತಾರತ್ನವೇ ಒದಗಿರುವಾಗ ನಿಂದಿತವಾದ ಗಾಜಿನ ಗುಂಡನ್ನು. ಶ್ರೇಷ್ಠ ಶರಭಮೃಗವೇ ಇರುವಾಗ ನರಿಯನ್ನು ಹೊಗಳುವುದು ತರವಲ್ಲ ಎಂದು (ಅನ್ಯ) ದೈವಗಳ, ಮನುಷ್ಯರ, ಸ್ತುತಿಯನ್ನು ಬಿಟ್ಟು. ಎಲ್ಲರಿಗೂ ತಿಳಿದಿರುವ ಹಾಗೆ ಶಿವನ ಪಾದಗಳಿಗೆ ನನ್ನ ನಾಲಗೆಯನ್ನು ಪ್ರೀತಿಯಿಂದ ಮಾರಿದ್ದೇನೆ. ೪೪. ಭೂಮಿಯಲ್ಲಿ ಹುಟ್ಟಿಸಾಯುತ್ತಿರುವ ಮನುಷ್ಯರಮೇಲೆ ತಮ್ಮ ಬೆಂದ ಹೊಟ್ಟೆಯನ್ನು ಹೊರೆಯಲು. ಉತ್ಸಾಹದಿಂದ ಕಾವ್ಯಗಳನ್ನು ವಿಸ್ತರಿಸಿ ಹೇಳುತ್ತ ಅಯ್ಯೋ ! ಕೆಲವರು (ಕವಿಗಳು) ಕೆಟ್ಟು ಹೋದರು. ಆ ಪ್ರಕಾರವಾದ ಅಲ್ಪ ಬುದ್ಧಿಯ ಕವಿಗಳನ್ನು ನಿರಾಕರಣೆಮಾಡಿ. ನಿತ್ಯನೂ. ಪರಿಶುದ್ಧನೂ ಆದ ವೃಷಾಧಿನಾಥನನ್ನು ಕೊಂಡಾಡಿ. (ಈ ನನ್ನ) ಕಾವ್ಯವನ್ನು ಹೇಳುತ್ತಿದ್ದೇನೆ. (ಇಂಥ ಕಾವ್ಯವನ್ನು) ಈಶ್ವರನ ಭಕ್ತರಾದವರು ಪ್ರೀತಿಸಿ ಉತ್ಸಾಹದಿಂದ ಕೇಳುವುದು. [ರಾಜಶೇಖರವಿಳಾಸದ (i) ''ಧರೆಯೊಳ್ ಮೇಣ್ ಪುಟ್ಟಿಪುಟ್ಟುತ್ತಿರುಳ್ವ ..'' ಮತ್ತು (ii) ಅದರಿಂದ ಮಹಿತ ಮಹಿಮಾಸ್ಪದನಂ...'' ಈ ಎರಡು ಪದ್ಯಗಳನ್ನು ಜ್ಞಾಪಿಸಿಕೊಳ್ಳಿ] (೪೫) ಅತ್ಯಂತ (ನವ) ರಸಭರಿತ ಕಾವ್ಯವೆಂಬ ಸರೋವರದಲ್ಲಿ ಕ್ರೀಡಿಸುತ್ತಿರುವ ವಿದ್ವಾಂಸನೆಂಬ ಪರಿಶುದ್ಧ ಹಂಸಪಕ್ಷಿಯು ನಡೆದುಬಂದು. ಮೂರ್ಖರೆಂಬ ಬಕಪಕ್ಷಿಗಳ ಗುಂಪಿನಿಂದ ಪಡೆಯಲ್ಪಟ್ಟ ಅಲ್ಪರಾದ ಕವಿಗಳ ಕಾವ್ಯವೆಂಬ ಚಿಕ್ಕ ಹೊಂಡವನ್ನು ಆಶ್ರಯಿಸುವುದೇ ? (ಸೇವಿಸುವುದೇ?)

ರಸಭಾವಂ ಪಿಂಗೆ ಶೈಥಿಲ್ಯಮುದವಯವದೊಳ್ತೀವೆ ಸದ್ರೀತಿ ವೃತ್ತಿ
ಪ್ರಸರಂ ಗೆಂಟಾಗೆ ಧಾತುಸ್ಥಿತಿ ಜಗುಳೆ ಪದಂ[1]ಗೆಟ್ಟು[1] ದೋಷಾಳಿಯಿಂದೊಳ್ಮೇ
ಳಿಸಿ ಮೇಣ್ದೂರೀಕೃತೇಷ್ಟಧ್ವನಿಯೆನಿಸಿ ವಲಂ ಶಯ್ಯೆಗಿಂಬಾಗಿ ರಾರಾ
ಜಿಸದಾದಂ ಬರ್ದೆಯಂ ಪೋಲ್ತಧಮಕೃತಿ ರಸಜ್ಞರ್ಗನಾದೇಯಮಲ್ತೇ ೪೬

ಬೆಱೆಯದಿರೋವೊ ಬಿಂಕನಿನಿತೇಕೆ ಪರೋದಿತ ಕಾವ್ಯವೃಂದದೊಳ್
ಸೆಱೆವಿಡಿದರ್ಥಶಬ್ದತತಿಯಂ ಸಮೆದೊಂದಳಿಗಬ್ಬಮುಂ ಕಡಂ

೪೬ [ಅಧಮಕವಿ ಮತ್ತು ವೃದ್ಧಾಂಗನಾ ಅನುರಾಗಗಳ ಪರವಾಗಿ ಎರಡು ಅರ್ಥ ಈ ಪದ್ಯದಿಂದ ವ್ಯಕ್ತವಾಗುವುದು] (i) **ಅಧಮ ಕೃತಿ :** ಶೃಂಗಾರ ವೀರ ಕರುಣಾದ್ಭುತಾದಿ ನವರಸಗಳು. ಭಾವಾದಿಗಳು ಹಿಂಗಿರುವಂತಹುದು, ಶಿಥಿಲತೆ ಅಂದರೆ ಪ್ರಕೃತಕ್ಕೆ ಹೊಂದಿಕೆಯಾಗದ ಅರ್ಥ ವಿಶೇಷ. ಕಾವ್ಯದ ಅಂಗಗಳಲ್ಲಿ ತುಂಬಿರುವಂತಹುದು, ವೈದರ್ಭೀ ಮೊದಲಾದ ರೀತಿಗಳು, ಕೈಶಿಕಿಯೇ ಮೊದಲಾದ ವೃತ್ತಿ—ಇವುಗಳ ಸಮೂಹದಿಂದ ದೂರವಾಗಿರುವಂತಹುದು, ಧಾತು (ಕ್ರಿಯಾರ್ಥ)ಗಳ ಜೋಡಿಕೆಯು ಜಾರಿರುವಂತಹುದು, ಪದಗಳು ಕೆಟ್ಟು (ಅಂದರೆ ಸಮುಚಿತ ಪದಪ್ರಯೋಗಗಳು ಕೆಟ್ಟು) ಅನೇಕ (ರೀತಿಯ) ಕಾವ್ಯದೋಷಗಳಿಂದ ಮೇಳಗೊಂಡಿರುವಂತಹುದು, ಮತ್ತು (ಕಾವ್ಯ ಜೀವಾತುಭೂತವಾದ) ಧ್ವನಿ ವಿಶೇಷದಿಂದ ದೂರವಾಗಿರುವಂತಹುದು. ಚೆನ್ನಾಗಿರುವ ಪರಶಯ್ಯೆಗೆ ಆಸ್ಪದಗೊಂಡು ಪ್ರಕಾಶಿಸದಂತಹುದು ಎನಿಸಿ ವೃದ್ಧಸ್ತ್ರೀಯಂತಿರುವ ಅಧಮ ಕಾವ್ಯವು ರಸಜ್ಞರ ಅಂಗೀಕಾರಕ್ಕೆ ಯೋಗ್ಯವಾಗಿ ಆಗುವುದಿಲ್ಲವಲ್ಲವೆ ? (ii) **ವೃದ್ಧಾಂಗನೆಯು ಪರವಾಗಿ :** (ಕಾಮೋತ್ತೇಜಕಗಳಾದ) ಅನುರಾಗಾದಿಚೇಷ್ಟೆಗಳು ಹಿಂಗಿರುವಂತಹ, ದೇಹದಲ್ಲಿ ಶಿಥಿಲತೆ ತುಂಬಿರುವಂತಹ, ಮನೋಹರವಾದ ಸಂಗೀತಾದಿ ವರ್ತನೆಗಳ ಸಮೂಹದಿಂದ ದೂರವಾಗಿರುವಂತಹ. ಸಪ್ತಧಾತು (ರಸ) ಗಳ ಇರುವಿಕೆಯಿಂದ ಜಾರಿರುವಂತಹ, ರತಿಗೆ ಸಂಬಂಧಿಸಿದ ಸ್ಥಿತಿಯಿಂದ ಕೆಟ್ಟು, ಅನೇಕ ದೈಹಿಕ ದೋಷಗಳಿಂದ ತುಂಬಿರುವಂತಹ ಪ್ರಿಯವಾಗಿ ಮಾತನಾಡುವ ಧ್ವನಿ ವಿಶೇಷದಿಂದ ದೂರವಾಗಿರುವವಳು ಎನಿಸಿಕೊಂಡು ಶಯನಕ್ಕೆ ಯೋಗ್ಯಳಾಗಿ ವಿರಾಜಿಸದಂತಹ ವೃದ್ಧಸ್ತ್ರೀ ಅನುರಾಗಿಗಳ ಅಂಗೀಕಾರಕ್ಕೆ ಅಯೋಗ್ಯಗಳಲ್ಲವೆ ? ೪೭. ಓಹೋ ! ಎಲೆಲೆ ದುಷ್ಕವಿಯೇ ನಿನಗೆ ಇಷ್ಟೊಂದು ಬಿಂಕವೇಕೆ ? (ಮಹಾಕವಿ ಮಾಲಿಕೆಯಲ್ಲಿ ನೀನು) ಬೆರೆಯಬೇಡ. ಕಡಜದ ಹುಳುವು ಬೇರೆಕೀಟಗಳ ಮರಿಗಳನ್ನು ತಂದು, ತನ್ನ ಮರಿಯನ್ನಾಗಿ ಮಾಡುವ ರೀತಿಯಲ್ಲಿ, ಪರರು ವಿರಚಿಸಿದ ಕಾವ್ಯ ಸಮೂಹದಲ್ಲಿರುವ ಅರ್ಥ ಮತ್ತು ಶಬ್ದ ಸಮೂಹವನ್ನು ಎತ್ತಿತಂದು, ಅದನ್ನು ನೀನು ಓದಿ, (ಸತ್ಕಾವ್ಯದ

---

1 ಗೆಂಟು(ದ)

ಋಜು ಮಱೆಗೆಯ್ವ ಮಾಳ್ಕೆಯೊಳೆ ದುಷ್ಕವಿ ನೀನದನೋದಿ ಮೆಚ್ಚಿಸು
ತ್ತುಱಿಕೆಯು ಗಾಂಪರುಂ ಬಱಿದೆ ಬಿಜ್ಜನೆ ಬೀಗುವೆ ಬಲ್ಲರೊಲ್ವರೇ ೪೭

ಸಸ್ಮಿತಚಂಪಕಮುಳಿಯುನ
ಪಸ್ಮಾರಿಯನತುಳ ವಾದ್ಯರುತಿಯುಳಲಿಪುದೇಂ
ವಿಸ್ಮಯಮೆ ಚಂದ್ರರುಚಿ ಘೋ
ರಸ್ಮರಪೀಡಿತನನಮಳ ಕವಿಕೃತಿ ಖಳನಂ ೪೮

ಕೃತಿಯಂ ನಿಂದಿಪ ಖಳನಾ
ಕೃತಿಯಂತಿರೆ ನೆಗಳಲಾರ್ಪನೇ ಕುಸುಮಸಮು
ನ್ನತಮಾಲೆಗೀಳ್ವ ಕಪಿ ಸ
ನ್ನುತಮಾಲೆಯನಂತೆ ನೆಗಳಲೇನಾರ್ತಪುದೇ ೪೯

ಕೃತಿವನಿತಾವಿರ[1]ತರ್ಸಂ
ತತ ಕೋಪಕೃಶಾನುತಪ್ತರಪವಾದ ಜಪ
ಸ್ಥಿತಿಚತುರರ್ ಖಲತಾಪಸ
ರತನಾಮದರ್ ಗುಣವಿಮುಕ್ತಿಭಾಜನರಲ್ತೇ ೫೦

ಬಗೆಗೆ) ಏನೂತಿಳಿಯದವರನ್ನು ಮೆಚ್ಚಿಸುತ್ತ ಸುಮ್ಮ ಸುಮ್ಮನೆ ಬಿಮ್ಮನೆ ಬಿಗಿದು ಕೊಂಡು ಉಬ್ಬಬೇಡ. ತಿಳಿದವರು ನಿನ್ನನ್ನು ಪ್ರೀತಿಸಲಾರರು. [ರಾಜಶೇಖರ ವಿಳಾಸವೆಂಬ ಇದೇ ಕವಿಯ—"ಬರೆಬರೆದಂತವಂ ತೊಡೆದು ನೆಟ್ಟನೆ ನಿಟ್ಟಿಸಿ..."ಎಂಬ ಪದ್ಯವನ್ನು ಇದರೊಡನೆ ಹೋಲಿಸಿ ನೋಡಿ"] ೪೮. ಚೆನ್ನಾಗಿ ಅರಳಿದ ಸಂಪಗೆಯ ಹೂವು ದುಂಬಿಯನ್ನು, ಅನುಪಮ ವಾದ್ಯ ಧ್ವನಿಯು ಮೂರ್ಛೆರೋಗವುಳ್ಳವನನ್ನು, ಚಂದ್ರನಕಿರಣಗಳು ಕ್ರೂರವಾದ ಮನ್ಮಥನ ಬಾಧೆಯಿಂದ ಬಂಧಿಸಲ್ಪಟ್ಟವನನ್ನು, ಶ್ರೇಷ್ಠಕವಿಯ ಕಾವ್ಯವು ದುರ್ಜನನನ್ನು ದುಃಖಪಡಿಸುವುದರಲ್ಲಿ ಆಶ್ಚರ್ಯವೇನು ? ೪೯. ಕಾವ್ಯವನ್ನು ದೂಷಿಸುವ ದುಷ್ಟನು. ಅಂತಹ ಕಾವ್ಯದಂತೆ (ತಾನು) ರಚಿಸಲು ಸಮರ್ಥನಾಗುವನೇ ? ಹೂವುಗಳ ಶ್ರೇಷ್ಠವಾದ ಮಾಲಿಕೆಯನ್ನು ಕೀಳುವ ಕಪಿಯು ಅದರಂತಹ ಶ್ರೇಷ್ಠವಾದ ಮಾಲಿಕೆಯನ್ನು ಕಟ್ಟುವುದಕ್ಕೆ ಸಮರ್ಥವಾಗುತ್ತದೆಯೆ ? ೫೦. ಕಾವ್ಯವೆಂಬ ಸ್ತ್ರೀಯಲ್ಲಿ ವಿರತಿ ಭಾವವನ್ನು ಹೊಂದಿ, ಸಂತತವೂ ಕೋಪವೆಂಬ ಬೆಂಕಿಯಿಂದ ದಹಿಸಲ್ಪಟ್ಟವರು. ಪರದೂಷಣೆಯೆಂಬ ಜಪದಲ್ಲಿ ನಿಪುಣರಾದ, ವಿಶೇಷ ವಾದ ಮದವುಳ್ಳ ದುರ್ಜನರೆಂಬ ತಪಸ್ವಿಗಳು. (ತಪಸ್ವಿಗಳ ಪರವಾಗಿ ಮದರು ಎಂದರೆ ಮನ್ಮಥನ ವಿಷಯದಲ್ಲಿ ಮದವುಳ್ಳವರು ಎಂದು ಅರ್ಥ) ಸದ್ಗುಣಗಳ ಮುಕ್ತಿಗೆ (ಬಿಡುಗಡೆಗೆ) ಪಾತ್ರರಾಗುವುದಿಲ್ಲವೆ ? [ಹೇಗೆಂದರೆ ಸ್ತ್ರೀವಿಷಯಕ ಆಸೆಯಿಲ್ಲದವರೂ, ಪಂಚಾಗ್ನಿಗಳಿಂದ ತಪಿಸಲ್ಪಟ್ಟವರೂ, ಮಂತ್ರಜಪದಲ್ಲಿ ನಿಪುಣರೂ ಆಗಿರುವ ತಪಸ್ವಿಗಳ

---

1 ಗ(ದ)

ತುಳಿದೊಡೆ ಮುಳಿದಗಿವುದು ಫಣಿ
ತುಳಿಯದೊಡಂ ಜವ[1]ದಿನಗಿವನಿವನೆಂದು ಭಯಾ
ಕುಳಮಾಗಿದಪುದಿಳೆ ಕಂಡಾ
ಗಳೆ ಖಳನಂ ಕ್ರೋಧವಿಜಿತದಾವಾನಳನಂ ೫೧

ಬಳವದ್ವಿಧುವಂ ನೊಣೆದಾ
ಗಳೆ ಮಗುಳ್ದುಗುಳ್ದಪುದು ರಾಹು ಬಳರಹಿತನುಮಂ
ಖಳರಾಹು ನುಂಗಿ ಮಗುಳ್ದಂ
ತುಳುಪದು ಗಡ ರಾಹುವಿಂದಿದೇನಗ್ಗಳವೋ ೫೨

ಒತ್ತರದಂತಿರೊತ್ತಿ ಗರದಂತಿರೆ ಪೀಡಿಸಿ ಬಗ್ಗದಂತೆ ಬೆಂ
ಬತ್ತಿ ಕರಂ ಭಯಂಬಡಿಸಿ ಜತ್ತುಕವ[2]ಂತೆ ಕಡಂಗಿ ಕಾಡಿ ಬ
ಲ್ಗುತ್ತದ ಮಾಳ್ಕೆಯಿಂ ಬಡತನಕ್ಕೊಡಲಾಗಿಸಿ ಲೋಕಮೆಲ್ಲಮಂ
ತುತ್ತಲೊಡರ್ಚೆ ನಿಂದ ಖಲನಂ ಜವದಿಂ ಜವನೇಕೆ ನುಂಗನೋ ೫೩

ಸುಜನಜನವದನವನಜಂ
ಕುಜನವಚಸ್ತುಹಿನಹತಿಗೆ ಕೊಜಗಿರೆ ವಿಬುಧ

ಧರ್ಮಗಳು ದುರ್ಜನರಲ್ಲೂ ಕಂಡುಬರುವುದರಿಂದ ದುರ್ಜನರೂ ಒಂದು ರೀತಿಯ ತಪಸ್ವಿಗಳೇ ಎಂದು ತಾತ್ಪರ್ಯ]. ೫೧. ಹಾವನ್ನು ತುಳಿದರೆ ಅದು ಕೋಪದಿಂದ ಕಚ್ಚುವುದು. ಲೋಕದ ಜನ ದಾವಾನಳನ ಕೋಪವನ್ನು ಗೆದ್ದಂತಹ ದುರ್ಜನನನ್ನು ಕಂಡಕೂಡಲೇ ಇವನು ತುಳಿಯದೆ ಇದ್ದರೂ, ತನ್ನನ್ನು ಕಚ್ಚಿಬಿಡುವನೆಂದು ಭಯದಿಂದ ಆಕುಲಗೊಂಡು ಹೆದರುವುದು. ೫೨. ರಾಹುವು ಬಲಿಷ್ಠನಾದ ಚಂದ್ರನನ್ನು ನುಂಗಿ ಪುನಃ ಆ ಕೂಡಲೆ ಉಗುಳಿಬಿಡುವುದು. ದುರ್ಜನನೆಂಬ ರಾಹುವಾದರೋ ಬಲ ಹೀನನನ್ನು ಕೂಡ ನುಂಗಿ ಆ ಚಂದ್ರನ ರೀತಿಯಲ್ಲಿ ಉಳಿಸುವುದಿಲ್ಲವಲ್ಲಾ ! ಈ ದುರ್ಜನ ನೆಂಬ ರಾಹುವು ಆ (ಚಂದ್ರನನ್ನು ನುಂಗಿದ) ರಾಹುವಿಗಿಂತಲೂ ಏನು ದೊಡ್ಡದೋ ! ೫೩. ಇಕ್ಕುಳದಹಾಗೆ ಒತ್ತಿ, (ದುಷ್ಟ) ಗ್ರಹದ ಹಾಗೆ ಪೀಡೆಯನ್ನು ಕೊಟ್ಟು, ಹುಲಿಯ ಹಾಗೆ ಬೆನ್ನಟ್ಟಿ ವಿಶೇಷವಾಗಿ ಭಯಪಡಿಸಿ, ಕರಡಿಯ ಹಾಗೆ ಕೋಪದಿಂದ ತೊಂದರೆ ಗೊಳಗುಮಾಡಿ, ಬಲವಾದ ರೋಗದ ಹಾಗೆ ಶರೀರವನ್ನು 'ಬಡತನಕ್ಕೆ (ಕೃಶತ್ವಕ್ಕೆ) ಗುರಿಪಡಿಸಿ ಲೋಕವನ್ನೆಲ್ಲ ನುಂಗುವುದಕ್ಕೆ (ಹಾಳು ಮಾಡುವುದಕ್ಕೆ) ಸಿದ್ಧವಾಗಿನಿಂತ ದುರ್ಜನನನ್ನು ಯಮನು ತೀವ್ರವಾಗಿ ಏಕೆ ನುಂಗುವುದಿಲ್ಲವೊ ! ೫೪. ಸತ್ಪುರುಷ ರಾದವರ ಮುಖವೆಂಬ ಕಮಲವು ನೀಚರಾದವರ ಮಾತುಗಳೆಂಬ ಹಿಮದ ಹೊಡೆತಕ್ಕೆ

1 ಗ(ದ) 2 ರ(ದ,ಮ)

ವ್ರಜಹಿತನ. ಶಿರವಿರುಚಿ ಪಾ
ಯ್ದು ಜಗನ್ನುತಮೆನಿಸಿ ಸೊಂಪಿನದನೆಯ್ದಿಸುಗುಂ ೫೪

ಬೇವಿಂಗೆಱಗುವ ಕಾಕಂ
ಮಾವಿಂಗೆಱಗುಗುಮೆ ಗಿಳಿಯಂಪೋಲ್ ದುಷ್ಕೃತಿಯಂ
ಸೇವಿಪ ಗಾವಿಲನತುಳ ಕ
ಳಾವಿತ್ಕೃತಿಯನನುಭವಕ್ಕೆ ಬಗೆದುಂದಪನೇ ೫೫

ಕೃತಿ ಬಸವಪುರಾಣಂ ಕೃತಿ
ಪತಿ ಬಸವಂ ಕೃತಿಯನುಸಿರ್ದವಂ ಶಿವಕವಿ ಸಾ
ರತರ ಷಡಕ್ಷರಿದೇವಂ
ಕೃತಿಪಾಲಕರಭವಭಕ್ತರೆನೆ ಮೆಚ್ಚದರಾರ್ ೫೬

ಬ[1]ರ್ದೆಸೆಯೆ ರಸವಿಸರಮಂ
ಪೊರ್ದಿದ ಕೊಂಕಾಂತ ನುಡಿಯನನುಮತದತ್ತಂ
ತಿರ್ದುಗೆ ವಿಬುಧರ್ ನಂದನ
ವಿರ್ದಲ್ಲಿಗೆ ತಿರ್ದುವಂತೆ ತಟನೀಜಳಮಂ ೫೭

ಬಾಡಿರಲಾಗಿ ವಿದ್ವಾಂಸರಾದವರ ಹಿತವಾದ ಸ್ತೋತ್ರವೆಂಬ ಸೂರ್ಯನಕಿರಣವು ಹರಡಿ, ಆ ಮುಖಕಮಲವನ್ನು (ಮುಸುಕಿರುವ ಹಿಮವನ್ನು ಓಡಿಸಿ) ಜಗತ್ತಿನಲ್ಲೇ ಶ್ಲಾಘ್ಯ ವಾದುದೆಂದು ಹೇಳುವುದರ ಮೂಲಕ ಕಾಂತಿಯನ್ನುಂಟುಮಾಡುವುದು. ೫೫. ಬೇವಿನ ಮರಕ್ಕೆ (ಅದರ ಹಣ್ಣಿನ ರುಚಿಗಾಗಿ) ಎರಗುವ ಕಾಗೆಯು ಗಿಳಿಯಹಾಗೆ ಮಾವಿನಮರಕ್ಕೆ (ಅದರಲ್ಲಿನ ಸಿಹಿಹಣ್ಣಿಗಾಗಿ ಎಳಸಿ) ಎರಗುವುದೇ ? ದುಷ್ಟಕವಿತ್ವವನ್ನು ಓದಿ ಕೇಳುವ ಮೂಢನು ಅನುಪಮನಾದ ಸಕಲ ವಿದ್ಯೆಗಳನ್ನು ಬಲ್ಲವನು (ಮಹಾಕವಿಯ) ಕಾವ್ಯದ ಅನುಭವಕ್ಕೆ ಮನಸ್ಸನ್ನು ಕೊಡುವನೇನು ? ಕೊಡುವುದಿಲ್ಲ ! ೫೬. (ನನ್ನ ಈ) ಕೃತಿಯು ಬಸವ ಪುರಾಣ; ಈ ಕೃತಿಗೆ ಪತಿ ಬಸವಣ್ಣ, ಕಾವ್ಯವನ್ನು ಹೇಳಿದವನು ಶಿವಕವಿ ಗಳಲ್ಲಿ ಶ್ರೇಷ್ಠನೆನಿಸಿದ ಷಡಕ್ಷರದೇವನು. (ಈ) ಕಾವ್ಯವನ್ನು ಸೇವಿಸುವವರು ಶಿವಭಕ್ತರು. ಎನ್ನುವಾಗ ಮೆಚ್ಚದೆ ಇರುವವರು ಯಾರು ? (ಎಲ್ಲರೂ ಮೆಚ್ಚೇ ಮೆಚ್ಚುತ್ತಾರೆ, ಎಂದು ಭಾವ) ೫೭. ಉದ್ಯಾನವನವಿರುವ ಕಡೆ ಹೊಳೆಯನೀರನ್ನು (ಕಾಲುವೆಗಳ ಮೂಲಕ) ತಿರುಗಿಸುವ ಹಾಗೆಯೇ ಚಮತ್ಕಾರವು ಪ್ರಕಾಶಗೊಳ್ಳಲು, ಶೃಂಗಾರಾದಿ ನವರಸಗಳ ಸಮುದಾಯವನ್ನು ಹೊಂದಿದ, ವಕ್ರವಾದಮಾತು (ವಕ್ರೋಕ್ತಿ) ಗಳನ್ನು ವಿದ್ವಾಂಸರು ತಮ್ಮ ಅಭಿಪ್ರಾಯಾನುಸಾರವಾಗಿ ತಿದ್ದಲಿ. [ಕಾವ್ಯದಲ್ಲಿ ಬರುವ ವಕ್ರೋಕ್ತಿಯೇ ಮೊದಲಾದವುಗಳಬಗೆಗೆ ವಿದ್ವಾಂಸರು ತಮ್ಮ ಅಭಿಪ್ರಾಯಾನುಸಾರ ಅರ್ಥಮಾಡುವಲ್ಲಿ ನನ್ನ ಆಕ್ಷೇಪಣೆಯೇನೂ ಇಲ್ಲವೆಂದು ಕವಿಯ ಆಶಯವಾಗಿರಬಹುದೆಂದು ತೋರುತ್ತದೆ.

1 ಪೊ(ಮ)

ಗುರುಕರ್ಣಶ್ರಾವ್ಯಮುಚ್ಛೃಂಖಲಖಲಜನಭೀಷ್ಮಂ ಲಸದ್ಭೀಮಧರ್ಮ
ಸ್ಫುರಿತಂ ಪಾಷಂಡಹೃಚ್ಛಲ್ಯಗುಣಗಣಯುತಂ ಚಂದ್ರಿಕಾಪಾಂಡುಕೀರ್ತ್ಯಾ
ಕರಮುದ್ಯದ್ವಾದಿವಾದಪ್ರಜಯ[1]ವಿಜಯಕ ಸೋಮವಂಶಾನುಗ ಶ್ರೀ
ಚರಿತಂ ನಾನಾಸುಪರ್ವಾಶ್ರಿತಮಿದು ಪದಶೋಭಾಧುರೀಣಂ ಪುರಾಣಂ ೫೮

—ಇಲ್ಲಿ ಅರ್ಥ ಸ್ಪಷ್ಟ : ಭಾವ ಅಸ್ಪಷ್ಟ ; ಚಿಂತನೀಯ.] ೫೮. [ಈ ಪದ್ಯ ವೃಷಭೇಂದ್ರವಿಜಯ ಮತ್ತು ಮಹಾಭಾರತಗ್ರಂಥಗಳ ಪರವಾಗಿ ಎರಡರ್ಥಗಳಿಂದ ಕೂಡಿದೆ] (i) **ವೃಷಭೇಂದ್ರವಿಜಯದ ಪರವಾಗಿ :—** ಈ ವೃಷಭೇಂದ್ರವಿಜಯ ವೆಂಬ ಪುರಾಣವು ಪೂಜ್ಯರಾದವರ ಕರ್ಣಗಳಿಂದ ಶ್ರವಣ ಮಾಡುವುದಕ್ಕೆ ಯೋಗ್ಯ ವಾದುದು ; ಉಚ್ಛೃಂಖಲರಾದ ದುಷ್ಟಜನರಿಗೆ ಭಯವನ್ನುಂಟುಮಾಡುವಂತಹುದು (ಅಂದರೆ ಯಾವ ಕಾವ್ಯಶಾಸ್ತ್ರಾದಿ ಜ್ಞಾನಾನುಭವವಿಲ್ಲದ ದುಷ್ಕವಿಗಳಿಗೆ ಭಯಗೊಳಿಸು ವಂತಹುದೆಂದು ಭಾವ.) ; ಪ್ರಕಾಶಮಾನವಾದ ಭೀಮಧರ್ಮ (ವೀರಶೈವಧರ್ಮ) ದಿಂದ ಪ್ರಕಾಶಮಾನವಾದುದು : ಪಾಷಂಡಿಗಳ ಹೃದಯಕ್ಕೆ ಭರ್ಜಿಯಂತೆ ಇರುವ ಶಿವೈಕ ಧ್ಯೇಯಾದಿ ಸದ್ಗುಣಸಮೂಹದಿಂದ (ರಾಜಿಸುವ ವೀರಶೈವ ಧರ್ಮತತ್ವಗಳಿಂದ) ಕೂಡಿದುದು ; ಬೆಳದಿಂಗಳಿನಂತೆ ಶುಭ್ರವಾದ ಯಶಸ್ಸಿಗೆ ಆಹಾರವಾದುದು; ವಿಶೇಷವಾದ (ಅಧಿಕವಾದ) ಅನ್ಯಮತವಾದಿಗಳ ವಾದಸಮೂಹವನ್ನು ಜಯಿಸುವಂತಹುದು (ಅಂದರೆ ಪರಮತವಾದವನ್ನು ಜಯಿಸುವ ಅಂಶಗಳು ಈ ಪುರಾಣದಲ್ಲಿ ಸಂಗತಗೊಂಡಿವೆ ಎಂದು ಭಾವ) ; ಶಿವಕುಲದಲ್ಲಿ ಹುಟ್ಟಿದ ಭಕ್ತರ ಮಂಗಲಕರವಾದ ಚರಿತ್ರೆಗಳನ್ನುಳ್ಳದ್ದು : ಅನೇಕದೇವತೆಗಳಿಂದ ಇಚ್ಛಿಸಲ್ಪಡುವ ಸಾಲೋಕ್ಯಾದಿ ಸ್ಥಾನಗಳ ಪ್ರಕಾಶವನ್ನು ವಹಿಸಿರುವಂತಹುದು (ಆಗಿದೆ). (ii) **ಮಹಾಭಾರತದ ಪರವಾಗಿ :** ಮಹಾಭಾರತವೆಂಬ ಪುರಾಣವು ಶ್ರವಣಯೋಗ್ಯರಾದ ಕರ್ಣದ್ರೋಣಾದಿಗಳಿಂದ ಕೂಡಿದುದು ; ಅಪ್ರತಿಹತ ದುರ್ಜನರಾದ ದುರ್ಯೋಧನ ಶಕುನಿಯೇ ಮೊದಲಾದವರಿಂದಲೂ ಮತ್ತು ಭೀಷ್ಮ ರಿಂದಲೂ ಕೂಡಿದ್ದು ; ಪ್ರಕಾಶಮಾನರಾದ ಭೀಮಸೇನ ಮತ್ತು ಧರ್ಮರಾಯಾದಿ ಗಳಿಂದಲೂ ಶೋಭಿಸತಕ್ಕದ್ದು. (ಮದ್ರದೇಶಾಧಿಪತಿಯಾದ) ಶಲ್ಯನ ಗುಣಸಮೂಹ ದಿಂದ ಕೂಡಿದುದು ; ಬೆಳದಿಂಗಳಿನೋಪಾದಿಯಲ್ಲಿರುವ ಪಾಂಡುಮಹಾರಾಜನ ಕೀರ್ತಿಗೆ ಆಗರವಾದುದು ; ಅತ್ಯಧಿಕವಾದುದೆಂದು ಹೇಳುವ ಅರ್ಜುನನ (ವಿಜಯಕನ) ವೀರ ವಾದ ಸಮೂಹದಿಂದ ಕೂಡಿದುದು ; ಚಂದ್ರಕುಲದಲ್ಲಿ ಹುಟ್ಟಿದ ಅರಸುಗಳ ಶ್ರೇಷ್ಠ ಚರಿತ್ರೆಯನ್ನು ಹೊಂದಿರುವಂತಹುದು ; ಅನೇಕ ವಿಧವಾದ (ಹದಿನೆಂಟು ವಿಧವಾಗಿ ವಿಂಗಡಿಸಲ್ಪಟ್ಟ) ಒಳ್ಳೆಯ ಪರ್ವಗಳಿಂದ ಕೂಡಿದುದು : (ಉತ್ತಮ) ಪದ

1 ಬಿ(ದ)

ವಿರಸತೆ ತಾರಕಾವಳಿಯೊಳನ್ವಿತದೋಷತೆ ಚಂದ್ರನೊಳ್ ಗುಣೋ
ತ್ಕರರಹಿತಸ್ವಭಾವಮದು ದುರ್ಜನನೊಳ್ ಗತಭಾವಜಾತಿಭಾ
ಸುರತೆ ಜರಾವಿಕೀರ್ಣಜನದೊಳ್ ಜಡವೃತ್ತಿ ಸರೋಜರಾಜಿಯೊಳ್
ಪರಿಗತಮಾದುದಲ್ಲದೆ ಮದೀಯ ಮಹಾಕೃತಿಯಲ್ಲಿ ತೋರ್ಕುಮೇ ೫೯

ಸರಸತರಂ ಪ್ರಸನ್ನವದನಂ ಬುಧಸನ್ನುತಸಾರವೃತ್ತಿ ವಿ
ಸ್ಫುರಿತಮುದಾತ್ತಸಾರಗುಣಮನ್ವಿತಲಕ್ಷಣಲಕ್ಷಿತಂ ಸುಭಾ

(ವಾಕ್ಯ) ಗಳ ವೈಶಿಷ್ಟ್ಯದಿಂದ ಕೂಡಿದುದು ಆಗಿದೆ. ೫೯. ವಿರಸತೆಯೆಂಬುದು ನಕ್ಷತ್ರಸಮೂಹದಲ್ಲಿ ಉಂಟಲ್ಲದೆ ಈ ವೃಷಭೇಂದ್ರವಿಜಯದಲ್ಲಿ ನವರಸವಿಹೀನತೆ ತೋರೀತೇ ? ರಾತ್ರಿಯೊಡನೆ ಕೂಡಿಕೊಂಡಿರುವಿಕೆಯೆಂಬುದು (ಅನ್ವಿತ ದೋಷತೆ) ಚಂದ್ರನಲ್ಲುಂಟಲ್ಲದೆ ಅನ್ವಯದೋಷವೆಂಬುದು ಕಾವ್ಯದಲ್ಲಿ ತೋರೀತೆ ? ಸದ್ಗುಣ ಸಮುದಾಯಗಳಿಂದ ರಹಿತವಾಗಿರುವ ಸ್ವಭಾವವೆಂಬುದು ದುರ್ಜನದಲ್ಲಲ್ಲದೆ ಸೌಕುಮಾರ್ಯಾದಿ ಕಾವ್ಯದಲ್ಲಿರಬೇಕಾದ ಗುಣರಾಹಿತ್ಯವು ಈ ಕೃತಿಯಲ್ಲಿ ತೋರೀತೇ ? (ಕಾವ್ಯವು ಸೌಕುಮಾರ್ಯಾದಿ ಶ್ರೇಷ್ಠ ಕಾವ್ಯಗುಣಗಳಿಂದ ಕೂಡಿದೆಯೆಂಬ ಭಾವ) : ಗತಿಸಿ ಹೋದ ಕಾಮಸಂಬಂಧದ ಅತ್ಯಂತ ಮನೋಹರತ್ವವು (ಗತ + ಭಾವಜ + ಅತಿ + ಭಾಸುರತೆ) ಮುಪ್ಪಿನಿಂದ ಕೂಡಿದ ಜನಗಳಲ್ಲಲ್ಲದೆ ಭಾವಾರ್ಥ ಕವಿತಾ ಜಾತಿಗಳಿಂದುಂಟಾಗುವ ಮನೋಹರತ್ವದ ಅಭಾವವು ಈ ಕಾವ್ಯದಲ್ಲಿ ತೋರೀತೇ ? ನೀರಿನಲ್ಲಿರುವ ವೃತ್ತಿ (ಜಡವೃತ್ತಿ) ಎಂಬುದು ಕಮಲದ ಗುಂಪಿನಲ್ಲಿ ಹೊಂದಿಕೆಯಾಗಿರುವುದಲ್ಲದೆ, ಪ್ರೌಢಿಮೆಯಿಂದ ರಹಿತವಾದ ಕೈಶಿಕೀ. ಆರಭಟೀ ಇತ್ಯಾದಿ ವೃತ್ತಿಗಳು ಈ ನನ್ನ ಕಾವ್ಯದಲ್ಲಿ ತೋರೀತೇ ? ೬೦. ಈ ನೂತನವಾದ ವೃಷಭೇಂದ್ರ ವಿಜಯವೆಂಬ ಕಾವ್ಯವು. ಈ ಭೂಮಂಡಲದಲ್ಲಿ ಮನೋಹರನಾದ ಬಸವಣ್ಣನ ಹಾಗೆಯೇ ಪ್ರಕಾಶಮಾನವಾಗಿರುವುದು. ಹೇಗೆಂದರೆ-(ಇಲ್ಲಿ ಕಾವ್ಯದ ಪರವಾಗಿ ಮತ್ತು ಬಸವೇಶ್ವರನ ಪರವಾಗಿ ಎರಡರ್ಥಮಾಡಬೇಕು.) ಕಾವ್ಯವು ಅಧಿಕವಾದ ನವರಸಭರಿತವಾರುವುದಾಗಿ ಪ್ರಾಸಾದಿಕ ಕವಿತ್ವವೆಂಬ ಕಾವ್ಯಗುಣದಿಂದ ಕೂಡಿರುವ ಆರಂಭ (ವದನ)ವುಳ್ಳದು : ಬಸವಣ್ಣನು ಅತ್ಯಂತ ಮನೋಹರವಾದ (ಸದಾ) ಪ್ರಸನ್ನತೆಗೊಂಡ ಮುಖದಿಂದ ಕೂಡಿರುವವನು. ಕಾವ್ಯವು ವಿದ್ವಾಂಸರಿಂದ ಶ್ಲಾಘಿಸಲ್ಪಟ್ಟ, ಸಾರತರವಾದ ಕೈಶಿಕ್ಯಾದಿ ವೃತ್ತಿಗಳಿಂದ ಪ್ರಕಾಶಿಸಲ್ಪಡುವಂತಹುದು : ಬಸವಣ್ಣನು ದೇವತೆಗಳಿಂದ ಕೊಂಡಾಡಲ್ಪಟ್ಟ ಸಾರತರವಾದ ವರ್ತನದಿಂದ ಪ್ರಕಾಶಮಾನನಾದವನು. ಕಾವ್ಯವು ಉದಾತ್ತವಾದ ಅಲಂಕಾರಗಳು ಮತ್ತು ಸಾರವತ್ತಾದ ಮಾಧುರ್ಯಾದಿ ಗುಣಗಳಿಂದ ಕೂಡಿದುದು; ಬಸವಣ್ಣನು ಅತ್ಯಂತ ಶ್ರೇಷ್ಠವಾದ ಉದಾತ್ತಗುಣಗಳಿಂದ

ಮರುಚಿ ನಿರಸ್ತದೋಷನಿವಹಂ ಶಿವತಾಯುತಮರ್ಥದಾಯಿ ಬಂ
ಧುರ ಬಸವೇಶನಂತೆಸೆವುದೀ ನವಕಾವ್ಯಮಿಳಾತಳಾಗ್ರದೊಳ್ ೬೦

ಶ್ರೀಲಸದ್ಗುಣಬದ್ಧವಾಕ್ಸುಮನಃಪ್ರತಾನಮನೋಹರಂ
ಲಾಲಿತೋತ್ಪಲಮಾಲೆ ಚಂಪಕಮಾಲೆ ಮಂಜುಳಮಲ್ಲಿಕಾ
ಮಾಲೆ ಕಾಂಚನಮಾಲೆ ಪೃಥ್ವಿವಿರಾಜಿತಂ ಲಲಿತಂ ತಟಿ
ನ್ಮಾಲೆಯಾ ಮಣಿಮಾಲೆಯಂತಿರೆ ಮತ್ಕೃತಿಪ್ರಮದಾದ್ಯ[1]ತಂ ೬೧

ವಿಶಿಷ್ಟನಾದವನು. ಕಾವ್ಯವು ಹೊಂದಿಕೆಯಾದ (ಕಾವ್ಯ) ಲಕ್ಷಣಗಳು ಮತ್ತು ವ್ಯಾಕರಣ ಛಂದೋಲಕ್ಷಣಗಳಿಂದ ಕೂಡಿಕೊಂಡಿರುವಂತಹುದು: ಬಸವಣ್ಣನು ವೀರಶೈವ ಲಾಂಛನ (ಲಕ್ಷಣ)ಗಳಿಂದ ಅನ್ವಿತನಾಗಿರುವನು. ಕಾವ್ಯವು ಉತ್ಕೃಷ್ಟವಾದ ಭಾವಗಳ ಕಾಂತಿಯಿಂದ ಕೂಡಿದುದು: ಬಸವಣ್ಣನು ಸದ್ಭಾವ ವಿಶಿಷ್ಟರಾದ ಶರಣರಲ್ಲಿ ಪ್ರೀತಿಯುಳ್ಳವನು. ಕಾವ್ಯವು (ಉತ್ಕೃಷ್ಟ) ಕಾವ್ಯದಲ್ಲಿರಬೇಕಾದ ದೋಷಗಳಿಂದ ವಿರಹಿತವಾದುದು: ಬಸವಣ್ಣನು ಸರ್ವದೋಷಗಳನ್ನು ಹೋಗಲಾಡಿಸಿಕೊಂಡವನು. ಕಾವ್ಯವು ಮಂಗಳಗಳೊಡನೆ ಕೂಡಿ (ಶಿವತಾಯುತ), ಶ್ರೇಷ್ಠವಾದ ಶಬ್ದಾರ್ಥಜ್ಞಾನವನ್ನು ಕೊಡುವಂತಹುದು ; ಬಸವಣ್ಣನು, ಶಿವಸಂಬಂಧವಾದಧರ್ಮದಿಂದ ಕೂಡಿ, ಇಷ್ಟಾರ್ಥಗಳನ್ನು ಕೊಡುವನು. ೬೧. ಮಂಗಳಕರಗಳಾದ, (ಸ್ಪಷ್ಟಾರ್ಥ) ಪ್ರಕಾಶಮಾನವಾದ ಮಾಧುರ್ಯಾದಿ ಗುಣಗಳೆಂಬ ದಾರದಿಂದ ಕಟ್ಟಲ್ಪಟ್ಟ ಶಬ್ದಗಳೆಂಬ ಹೂವುಗಳ ಈ ರಮ್ಯವಾದ ವೃಷಭೇಂದ್ರ ವಿಜಯವೆಂಬ ಕಾವ್ಯಮಾಲಿಕೆಯು ಅಲಂಕಾರಗೊಂಡ ಯೌವನವತಿಯಾದ ಯುವತಿಯು ಹಾಗಿದೆ. (ಇಲ್ಲಿ ಕಾವ್ಯ ಮತ್ತು ಯೌವನವತಿಯಾದ ಪ್ರೌಢಸುಂದರಸ್ತ್ರೀಯುಪರವಾಗಿ ಎರಡರ್ಥಮಾಡಬೇಕು) ಕಾವ್ಯವು ಶ್ಲಾಘನೀಯವಾದ (ಲಲಿತ), ಉತ್ಪಲಮಾಲಾವೃತ್ತ, ಚಂಪಕಮಾಲಾವೃತ್ತ, ಮನೋಹರ ಮಲ್ಲಿಕಾಮಾಲಾ ವೃತ್ತ, ಕಾಂಚನಮಾಲಾವೃತ್ತ (?), ಪೃಥ್ವೀವೃತ್ತ, ಪ್ರಕಾಶಿಸುವ ಲಲಿತಪದವೃತ್ತ, ತಟಿನ್ಮಾಲಿಯೆಂಬ ವೃತ್ತ (?)ಗಳೆಂಬ ಛಂದೋಲಕ್ಷಣ ಬದ್ಧವಾದ ವೃತ್ತ ಸಮೂಹದಿಂದ ರತ್ನಮಾಲಿಕೆಗಳಿಂದ ಶೋಭಾಯಮಾನವಾದುದು; ಪ್ರೌಢಯುವತಿಯು ಶ್ಲಾಘ್ಯವಾದ ನೈದಿಲೆ ಪುಷ್ಪಮಾಲೆ (ಉತ್ಪಲಮಾಲೆ), ಸಂಪಿಗೆ ಹೂಮಾಲಿಕೆ (ಚಂಪಕಮಾಲೆ) ಮಲ್ಲಿಗೆಯ ಹೂವಿನದಂಡೆ, ಸುರಹೊನ್ನೆಯ ಹೂಮಾಲಿಕೆಗಳಿಂದ ಜಗತ್ಪ್ರಸಿದ್ಧವಾಗಿ ಪ್ರಕಾಶಮಾನವಾದ (ಪೃಥ್ವಿವಿರಾಜಿತ)ವಾದವಳೂ, ಮನೋಹರ (ಲಲಿತ) ವಾದ ಮಿಂಚಿನಬಳ್ಳಿಯಂತೆ ಶೋಭಿಸುವವಳೂ ಆಗಿದ್ದಾಳೆ. [ಹೀಗೆ ಕವಿ ತನ್ನ ಕಾವ್ಯವನ್ನು ಅಲಂಕಾರಗೊಂಡು ಶೋಭಿಸುವ ಪ್ರೌಢಯುವತಿಯಂತೆ ಅತ್ಯಂತ ಮನೋಹರವಾದು

1 ವೃ(ದ)

ಬಸವಕುಮಾರ ಲಿಂಗಸುಖಸಾರ ಭವತ್ಕೃತಿಗೊಳ್ಪು ಸದ್ರಸ
ಪ್ರಸರ ಮೃದೂಕ್ತಿ ಚೆಲ್ವೆನಿಸಿ ಸಂತಸಮುಣ್ಮೆ ನಿರಂತರಾಯದಿಂ
ದೆಸಗಿ ಮದೀಯ ಹೃತ್ಕಮಳದೊಳ್ನೆಲೆಗೊಂಡಿದನೊಲ್ದು ಪೂರ್ಣಮಾ
ಗಿಸು ಕರುಣಾರ್ದ್ರವೀಕ್ಷಣದಿನೆನ್ನ ನಿರೀಕ್ಷಿಸಿ ರಕ್ಷಿಸಳ್ತಿಯಿಂ ೬೨

ಈ ಹಿತಫಲಪ್ರದರನತಿ
ಮೋಹ ಮಹಾತಿಮಿರಮಿಹಿರನಿಭರಂ ಮದ್ಭ
ಕ್ತ್ಯೋಹ ಮಮಮಾಧಿಕಮೆಂಬುದ
ನೂಹಿಸಿ ನುತಿಗೈವೆನಭವನಿಂದಗ್ಗಳರಂ ೬೩

[1]ತ್ವಂಗತ್ತುಂಗತ್ತ[1]ರಂಗಪ್ರತಿಫಲಿತತಟಿತ್ವತ್ತಟಿತ್ಸ್ವರ್ಣಭೂಷಾ
[2]ಸಂಗಾಂಗಾಂಭಃಕಣೋದ್ಯನ್ಮಣಿಗಣತರಳೀಭೂತ ಕೂರ್ಮೇಂದ್ರರತ್ನಂ

ದಾಗಿದೆ. ಎಂದು ಹೇಳಿಕೊಳ್ಳುತ್ತಿದ್ದಾನೆ]. ೬೨. ಶಿವಲಿಂಗ ಸಂಬಂಧದ ಸಾರ ಸ್ವರೂಪನಾದ ಹೇ ಬಸವೇಶ ನಾಮಕನಾದ ಶಿವಪುತ್ರನೇ, ನಿನ್ನ (ಸಂಬಂಧದ ಈ ವೃಷಭೇಂದ್ರವಿಜಯವೆಂಬ) ಕಾವ್ಯಕ್ಕೆ ಶುಭವುಂಟಾಗಲಿ. ಉತ್ತಮ ಶೃಂಗಾರಾದಿ ನವರಸ ಸಮೂಹದಿಂದಲೂ. ಮೃದು ಪದಬಂಧಗಳಿಂದಲೂ ಮನೋಹರಕಾವ್ಯವೆಂದು (ಲೋಕದಲ್ಲಿ) ಅನ್ನಿಸಿಕೊಳ್ಳುವಂತೆ. (ಓದಿದವರೆಲ್ಲ) ಸಂತೋಷವುಂಟಾಗುವಂತೆ ಮಾಡು ನಿರ್ವಿಘ್ನವಾಗಿ ಕಾವ್ಯವು ಮುಗಿಯುವುದಕ್ಕೋಸುಗ ನನ್ನ ಹೃತ್ಕಮಲದಲ್ಲಿ ವಾಸ ಮಾಡು, ಪ್ರೀತಿದೋರಿ ಸಂಪೂರ್ಣಗೊಳ್ಳುವಂತೆ ಮಾಡು. ನನ್ನನ್ನು ದಯಾರ್ದ್ರದೃಷ್ಟಿ ಯಿಂದ ನೋಡಿ ಪ್ರೀತಿಯಿಂದ ರಕ್ಷಣೆ ಮಾಡು. [ಇಲ್ಲಿ 'ಬಸವಕುಮಾರ' ಎಂದು ಕವಿ ಸಂಬೋಧಿಸಿದ್ದಾನೆ. ಸಾಮಾನ್ಯವಾಗಿ 'ಬಸವಕುಮಾರ' ಎಂದು ಚೆನ್ನಬಸವಣ್ಣ ನವರನ್ನು ಕುರಿತು ಸಂಬೋಧಿಸುವುದುಂಟು. ''ಬಸವಕುಮಾರ ಭಾಕ್ತಿಕಪುರಸ್ಸರ ಷಟ್ ಸ್ಥಲಧೀರ...'' ಎಂದು ಮೊಗ್ಗೆಯಮಾಯಿದೇವರು ಚೆನ್ನಬಸವಣ್ಣನವರನ್ನು ಕುರಿತು ಹೇಳಿದ್ದಾರೆ. (ಶಿ. ಶತಕ–೩) ಆದರೆ 'ಬಸವಕುಮಾರ' ಎಂಬ ಈ ಸಮಸ್ತ ಪದದಲ್ಲಿ ರುವ 'ಕುಮಾರ' ಎಂಬ ಪದವನ್ನು ಬಸವಣ್ಣನವರಿಗೆ ಉತ್ತರವಿಶೇಷಣವಾಗಿ ಪರಿ ಗ್ರಹಿಸಿ, ಅದಕ್ಕೆ 'ಶಿವಪುತ್ರ' ಎಂದು ಅರ್ಥಮಾಡಿ 'ಶಿವಪುತ್ರನಾದ ಬಸವಣ್ಣನೇ' ಎಂದು ಪ್ರಕೃತ ನಾವು ತಿಳಿದುಕೊಳ್ಳಬೇಕೆಂಬುದೇ ಕವಿಯ ಆಶಯವಾಗಿರಬಹುದು] ೬೪. (ಕವಿ ಇಲ್ಲಿಂದ ತನ್ನ 'ವೃಷಭೇಂದ್ರ ವಿಜಯ' ಅಥವಾ 'ಬಸವರಾಜ ವಿಜಯ' ವೆಂಬ ಹೆಸರಿನ ಪುರಾಣಕಾವ್ಯದ ಪ್ರಾರಂಭಗೊಳಿಸುತ್ತಾನೆ. ಪ್ರಥಮತಃ ಸಮುದ್ರ ವರ್ಣನೆ ಮಾಡುತ್ತ ನದಿಗಳೆಂಬ ನಾರಿಯರನ್ನು ತನ್ನ ಸೌಂದರ್ಯಾತಿಶಯದಿಂದ ಪತಿಯಾದ ಸಮುದ್ರನಾಥನು ಮೋಹಪಡಿಸುವನೆಂಬ ತಾತ್ಪರ್ಯದ ಪದ್ಯವನ್ನು ಹೇಳು ವನು.) ಉನ್ನತವಾದ ಚಾಂಚಲ್ಯದಿಂದ ಕೂಡಿದ ತೆರೆತೆರೆಗಳಲ್ಲಿ ಪ್ರತಿಬಿಂಬಿಸಿರುವಂತಹ

---

1 ತುಂಗತ್ವಂಗ(ಅ) 2 ಸಾ(ಜ)

ಪಿಂಗಾಬ್ಜಸ್ಫಾರರೇಣುಸ್ಫುಟ ಕನಕಪಟಪ್ರಾವೃತಂ ಮತ್ಸ್ಯಲೀಲಾ
ಪಾಂಗಂ ಭೂಭೃತ್ಕಿರೀಟಂ ಪ್ರಕಟಿತತಟಿನೀಮೋಹಮುದ್ರಂ ಸಮುದ್ರಂ ೬೪

ವಿಳಸತ್ಕಲ್ಲೋಲಲೋಲಾಚಲಚಲದುರುನಾಗಾಳಿ ನಾಗಾಳಿರತ್ನೋ
ಜ್ವಳಭೋಗಾಭೋಗಭಾಸ್ವಜ್ಜ್ವಲಜಲಚರಚಕ್ರಾಂಕಚಕ್ರಾಂಕಯುಕ್ತಂ
ಕಳಹಂಸಾರಾಜಿರಾಜತ್ಕಮಳಕಮಳಸಂಜಾತಸಂಜಾತಗಂಧಾ
ಕುಳಸಿಂಧುಸ್ಫಾರಪಾರಂ ಪ್ರಬಳಘುಳುಘುಳುಧ್ವಾನರೌದ್ರಂ ಸಮುದ್ರಂ ೬೫

ಮೇಘಗಳಲ್ಲಿರುವ ಮಿಂಚುಗಳೆಂಬ ಸುವರ್ಣದ ಆಭರಣಗಳ ಸಂಗವುಳ್ಳ ಅಮಿಯುವ ವುಳ್ಳವನೂ. ನೀರಿನ ಕಣಗಳೆಂಬ ಶ್ರೇಷ್ಠವಾದ ರತ್ನಗಳ ಸಮೂಹಕ್ಕೆ ಮಧ್ಯನಾಯಕ ಮಣಿಯಂತಿರುವ ಶ್ರೇಷ್ಠವಾದ ಆಮೆಯೆಂಬ ಇಂದ್ರನೀಲಮಣಿಯುಳ್ಳವನೂ, ಹೊಂಬಣ್ಣದಿಂದ ಕೂಡಿದ ಕಮಲಪುಷ್ಪಗಳ ವಿಸ್ತಾರವಾಗಿ ಹರಡಿರುವ ರೇಣುಗಳೆಂಬ ಸ್ಫುಟವಾದ ಪೀತಾಂಬರವನ್ನು ಉಟ್ಟುಕೊಂಡಿರುವವನೂ, ಮೀನುಗಳೆಂಬ ವಿಲಾಸದಿಂದ ಕೂಡಿಕೊಂಡಿರುವ ಕಡೆಗಣ್ಣುಗಳ ಕಾಂತಿಯುಳ್ಳವನೂ, ಪರ್ವತಗಳೆಂಬ ಕಿರೀಟಗಳನ್ನುಳ್ಳ ವನೂ ಆಗಿ, ನದಿಗಳೆಂಬ ಸ್ತ್ರೀಯರುಗಳನ್ನು ಮೋಹಗೊಳಿಸುವ ಚಿಹ್ನೆಗಳನ್ನು ಸ್ಪಷ್ಟ ವಾಗಿ ಪ್ರಕಟಿಸುತ್ತಿರುವ ಸಮುದ್ರರಾಜನು ಒಪ್ಪುತ್ತಿದ್ದಾನೆ. [ಸಮುದ್ರದಲ್ಲಿ ಮೋಡ ಗಳಿವೆ. ಅವುಗಳ ಮಿಂಚುಗಳು ತೆರೆತೆರೆಗಳಲ್ಲಿ ಪ್ರತಿಬಿಂಬಿತವಾಗಿವೆ; ಅದೇ ಸಮುದ್ರ ರಾಜನ ಸುವರ್ಣಾಭರಣ ಜಲಬಿಂದುಗಳೇ ರತ್ನಗಳು; ಆರತ್ನಗಳಲ್ಲಿ ಮಧ್ಯನಾಯಕಮಣಿ ಆದಿಕೂರ್ಮ, ಅಲ್ಲಿ ಅರಳಿರುವ ಕಮಲಗಳ ಹರಡಿರುವ ಧೂಳು ಹೊಂಬಣ್ಣದ ಪೀತಾಂಬರ. ಮತ್ಸ್ಯಗಳ ಚಂಚಲವಾದ ಹಾರಾಟವೇ ಚಂಚಲವಾದ ಕಟಾಕ್ಷವೀಕ್ಷಣ. ಸಮುದ್ರದಲ್ಲಿರುವ ಪರ್ವತಗಳೇ ಅವನ ಕಿರೀಟಗಳು. (ತ್ವಂಗತ್–ತುಂಗ–ತರಂಗ–ಚಂಚಲವಾದ, ಎತ್ತರವಾಗಿರುವ, ತೆರೆಗಳು ; ತಟಿತ್ವತ್–ತಟಿತ್–ಮೇಘದಲ್ಲಿರುವ ಮಿಂಚು; ಪಿಂಗ–ಅಬ್ಜ–ಹೊಂಬಣ್ಣದ ಕಮಲ; ಅಂಭಃಕಣ–ಉದ್ಯತ್–ಮಣಿಗಣ–ತರಳೀಭೂತ –ನೀರಿನಕಣ–ಶ್ರೇಷ್ಠ ಮಣಿಗಳ ಸಮೂಹ–ನಾಯಕಪ್ರಾಯ.)](೬೫) ಆ ಸಮುದ್ರವು ಶೋಭಿಸುವ ದೊಡ್ಡದೊಡ್ಡ ತೆರೆಗಳಿಂದಲೂ, ಚಲಿಸತಕ್ಕ ಪರ್ವತ ಗಳೋ ಎಂಬಂತೆ ಚಲಿಸುತ್ತಿರುವ ಉನ್ನತಗಳಾದ ಆನೆಗಳಿಂದಲೂ, ಸರ್ಪಸಮೂಹಗಳ ರತ್ನಗಳಿಂದ ಉಜ್ವಲವಾದ ಹೆಡೆಗಳ ಆಧಿಕ್ಯದಿಂದಲೂ (ಆಭೋಗ), ಪ್ರಕಾಶಮಾನವಾಗಿ ಹೊಳೆಯುತ್ತಿರುವ ನೀರಿನಿಂದಲೂ. ಆ ನೀರಿನಲ್ಲಿ ಚಲಿಸುವ ಜಲಚರ ಪ್ರಾಣಿಗಳಿಂದಲೂ. ಚಕ್ರವಾಕಪಕ್ಷಿಗಳಿಂದಲೂ, ಚಕ್ರವನ್ನು ಗುರುತನ್ನಾಗಿ ಉಳ್ಳ ವಿಷ್ಣುವಿನಿಂದಲೂ ಕೂಡಿದುದಾಗಿತ್ತು. ಮತ್ತು ರಾಜಹಂಸಗಳಾದ ಹೆಣ್ಣುಹಂಸಗಳ ಸಾಲುಗಳಿಂದಲೂ, ರಾರಾಜಿಸುವ ಲಕ್ಷ್ಮೀದೇವಿಯನ್ನುಳ್ಳ ಕಮಲಗಳ ಸಮೂಹದಿಂದ ಉಂಟಾದ ಸುಗಂಧ ದಿಂದಲೂ ತುಂಬಿತ್ತು. ನದಿಗಳ ವಿಸ್ತಾರವಾದ ತೀರಪ್ರದೇಶವುಳ್ಳದ್ದಾಗಿ ಅತ್ಯಧಿಕವಾದ ಗುಳು ಗುಳು ಧ್ವಾನಮಾಡುತ್ತಿರುವ ಸಮುದ್ರವು ಭಯಂಕರವಾಗಿತ್ತು. [ವಿಲಸತ್–

ಹರಿಶಯ್ಯಾಗೃಹಮರ್ಕಮಜ್ಜನಸರಂ ಗೋತ್ರಾರಿಭೀತಾಚಲೋ
ತ್ಕರಪಜ್ಞಾತನಿವಾಸಮಿಂದಿರೆಯ ಜನ್ಮಸ್ಥಾನಮುದ್ರತ್ನದಾ
ಕರಮೌರ್ವಾಗ್ನಿಯ ಪಾನಕಂ ಪರಿಖೆ ರಕ್ಷೋದುರ್ಗಕಾ ನೀಲಪು
ಷ್ಕರಲಕ್ಷ್ಮೀಮುಕುರಂ ದಲೊಪ್ಪುಗುಮಿಳಾಶ್ರೀಗಾಗರಂ ಸಾಗರಂ ೬೬

ಪೂಸಿದ ಬೂದಿ ಬೆಳ್ನೊರೆ ಜಟಾವಳಿ ವಿದ್ರುಮಮಂಬುಜಂ ಮುಖಂ
ಭಾಸುರ ಕಕ್ಷಪಾಲಿಕೆ ಪತಂಗಳಿಮಾಲೆ ಜಪಾಕ್ಷಮಾಲೆಯು
ದ್ಭಾಸಿಪ ಜೋಗವಟ್ಟಿಗೆ ತಟೀವನಲೇಖೆಯುದಾಗೆ ಜೋಗಿಯಂ
ತಾ ಸರಿದೀಶನಾತ್ತತಟಿದಬ್ದಮೃಗಾಹಿತಚರ್ಮನೊಪ್ಪಿದಂ ೬೭

ಕುಡಿದಂ ಕುಂಭಜನೆನ್ನಂ
ಕಡೆದಂ ಗಡ ಚಕ್ರಿ ಕಟ್ಟಿ ತಡೆದಂ ರಘುಜಂ
ಪಡೆದೆಂ ಭಂಗಮನೆಂದಾ
ಕಡಲಳ್ವಂತೂರ್ಮಿಘುಳುಘುಳುಧ್ವನಿಯೆಸೆಗುಂ ೬೮

ಕಲ್ಲೋಲ–ಲೋಲ–ಅಚಲ-ಶೋಭಾಯಮಾನವಾದ ತೆರೆ-ಚಲಿಸುವ ಪರ್ವತ. ನಾಗಾಳಿ –ರತ್ನೋಜ್ವಲ –ಭೋಗ–ಆಭೋಗ–ಹಾವುಗಳ ಮಣಿಗಳಿಂದ ಪ್ರಕಾಶಮಾನವಾದ ಹೆಡೆಗಳ–ಆಧಿಕ್ಯ] ೬೬. (ಅ) ಸಾಗರವು ವಿಷ್ಣುವಿನ ಶಯನಗೃಹ. ಸೂರ್ಯನ ಸ್ನಾನದ ಸರೋವರ. ಇಂದ್ರನಿಂದ ಭಯಗೊಂಡ ಪರ್ವತಗಳ ಸಮೂಹಕ್ಕೆ ಅಡಗಿ ಕೊಳ್ಳುವ ಮನೆ. ಲಕ್ಷ್ಮಿಯ ಜನನಸ್ಥಾನ. ಶ್ರೇಷ್ಠವಾದ ರತ್ನಗಳ ಗಣಿ. ಬಡಬಾಗ್ನಿಯ ಕುಡಿತಕ್ಕೆ ಪಾನೀಯ (ಪಾನಕ) ರಾಕ್ಷಸರಕೋಟೆಯ ಅಗಳು. ಎಲ್ಲಕಡೆಗೂ ಕಪ್ಪುವರ್ಣ ದಿಂದಿರುವ (ಅನೀಲ) ಆಕಾಶವೆಂಬ ಲಕ್ಷ್ಮಿಯ (ಮುಖ ನೋಡಿಕೊಳ್ಳುವ) ಕನ್ನಡಿ. ಆದ್ದರಿಂದ ಇದು ಭೂಮಿಯ ಐಶ್ವರ್ಯಕ್ಕೆ ಮನೆಯಾಗಿ ಶೋಭಿಸುವುದು ನಿಶ್ಚಯವಲ್ಲವೆ ! ೬೭. ಆ ಸರಿತ್ಪತಿಯಾದ ಸಮುದ್ರನಾಥನು ಬಿಳಿನೊರೆಯೇ ಧರಿಸಿಕೊಂಡಿರುವ ಭಸ್ಮವಾಗಿಯೂ. ಹವಳಗಳೇ ಜಡೆಗಳಾಗಿಯೂ. ಕಮಲವೇ ಮುಖವಾಗಿಯೂ. ಹಡಗುಗಳೇ ಪ್ರಕಾಶಮಾನವಾದ ಬಗಲಜೋಳಿಗೆಯಾಗಿಯೂ. ಆಳಿಗಳ ಸಮೂಹವೇ ಜಪಮಣಿಸರವಾಗಿಯೂ. ತೀರದಲ್ಲಿರುವ ಮರಗಳ ಸಾಲುಗಳೇ ವಿಶೇಷವಾಗಿ ಶೋಭಿ ಸುವ ಯೋಗಪಟ್ಟಿಗೆಯಾಗಿಯೂ. ಮಿಂಚುಗಳಿಂದ ಕೂಡಿದ ಮೇಘವೇ ಹುಲಿಯ ಚರ್ಮವಾಗಿಯೂ. ಹೊಂದಿಕೊಂಡಿರುವ ಕಾರಣದಿಂದ ಯೋಗಿಯಂತೆ ಪ್ರಕಾಶಿಸುತ್ತಿ ದ್ದನು. [ಮೃಗಾಹಿತ–ಮೃಗಗಳಿಗೆ ವೈರಿಯಾದುದು–ಹುಲಿ ಎಂದು ಅರ್ಥಮಾಡಬೇಕು. ಏಕೆಂದರೆ–ತಾನುಧರಿಸಿರುವ ಚರ್ಮ ಹುಲಿಯಚರ್ಮವೇ ಆಗಿರುವ ಕಾರಣ ಮೃಗಗಳಿಗೆ ಅಹಿತವಾದುದು ಇನ್ನಾವ ಹಿಂಸ್ರಪಶುವೇ ಆಗಿರಬಹುದು. ಪ್ರಕೃತ ಇಲ್ಲಿ ಹುಲಿ ಯೆಂಬುದೇ ಅರ್ಥವಾಗಿದೆ] ೬೮. ಕುಂಭೋದ್ಭವನಾದ ಅಗಸ್ತ್ಯನು ನನ್ನನ್ನು ಕುಡಿದನು. ವಿಷ್ಣುವು ಮಥನಮಾಡಿದನು. ಶ್ರೀರಾಮಚಂದ್ರನು ಸೇತುವೆಕಟ್ಟಿ ತಡೆದನು. (ಆದ್ದರಿಂದ ನಾನು) ಭಂಗಗೊಂಡೆನು. ಹೀಗೆಂಬುದಾಗಿ ಆ ಕಡಲು ಅಳುತ್ತಿರುವುದೇ

ತರಣಿಗತಿಪ್ರಯುಕ್ತಮುಡುಪಾಂಚಿತಮಂಬರದಂತೆ ಚಕ್ರಬಂ
ಧುರಮನುಕೂಲ ಹೃದ್ಯಕಮಳಂ ಕಮಳೇಕ್ಷಣನಂತೆ ಸದ್ರಸಾ
ಕರ ವಿಬುಧೇಪ್ಸಿತಾರ್ಥದನುದಾತ್ತಗುಣಂ ಘನಕಾವ್ಯದಂತೆ ಪು
ಷ್ಕರಯುತಮುದ್ಘಭದ್ರಮಿಭದಂತೆ ವಿರಾಜಿತಮಾಯ್ತು ಸಾಗರಂ ೬೯

ಎನ್ನುವಂತೆ ತೆರೆಗಳ ಗುಳು ಗುಳು ಎಂಬ ಶಬ್ದವು ಶೋಭಿಸುತ್ತಿತ್ತು. ['ಭಂಗಮಂ ಪಡೆದ' ನೆಂಬ ಶಬ್ದಕ್ಕೆ ತೆರೆಯನ್ನು ಪಡೆದನು ಎಂದು ಸಾಮಾನ್ಯಾರ್ಥ.) ೬೯. ಆ ಸಾಗರವು ೧. ಆಕಾಶದ ಹಾಗೆ-ತರಣಿಗತಿ ಎಂದರೆ ಹಡಗುಗಳ ಓಡಾಟದಿಂದ ಕೂಡಿತ್ತು ೨. ಆಕಾಶವು ತರಣಿಗತಿ ಎಂದರೆ ಸೂರ್ಯನ ಸುತ್ತುವಿಕೆಯಿಂದ ಕೂಡಿದೆ. (ಮತ್ತು) ೧. ಉಡುಪಾಂಚಿತವಾಗಿತ್ತು ಅಂದರೆ ತೆಪ್ಪಗಳಿಂದ ಕೂಡಿತ್ತು. ೨. ಆಕಾಶವು ಉಡು ಪಾಂಚಿತ ಎಂದರೆ ಉಡುಪತಿಯಾದ ಚಂದ್ರನಿಂದ ಕೂಡಿದೆ. ೧. ಕಮಲೇಕ್ಷಣನಾದ ವಿಷ್ಣುವಿನಂತೆ ಚಕ್ರವಾಕಪಕ್ಷಿಗಳಿಂದ ಕೂಡಿತ್ತು. ೨. ಕಮಲೇಕ್ಷಣನು ಅಂದರೆ ಕಮಲ ದಂತೆ ಕಣ್ಣುಳ್ಳ ವಿಷ್ಣುವು ಚಕ್ರಾಯುಧದಿಂದ ಕೂಡಿದವನು. ೧. ಸಮುದ್ರವು ಕೂಲ ಪ್ರದೇಶವನ್ನು ಅಂದರೆ ದಂಡೆಯ ಪ್ರದೇಶದುದ್ದಕ್ಕೂ ಬೆಳೆದ ಕಮಲಗಳಿಂದ ಕೂಡಿತ್ತು ೨. ವಿಷ್ಣುವು ಅನುಕೂಲಳೂ, ಸುಂದರಿಯೂ ಆದ ಲಕ್ಷ್ಮೀ ದೇವಿಯಿಂದ ಕೂಡಿದವ ನಾಗಿದ್ದಾನೆ. ಸಮುದ್ರವು ೧. ಶ್ರೇಷ್ಠವಾದ ಕಾವ್ಯದ ಹಾಗೆ ಶ್ರೇಷ್ಠ ಜಲಗುಣದಿಂದಅಂದರೆ ನೀರಿಗೆ ಆಶ್ರಯವಾಗಿದೆ. ದೇವತೆಗಳಿಗೆ ಇಷ್ಟಾರ್ಥಪ್ರದವಾದುದಾಗಿದೆ. (ಸಮುದ್ರ ಮಥನಕಾಲದಲ್ಲಿ ಅದು ದೇವತೆಗಳಿಗೆ ಇಷ್ಟಾರ್ಥ ಪ್ರದಾನಮಾಡಿದೆ.) ೨. ಕಾವ್ಯವು ಶ್ರೇಷ್ಠವಾದ ಶೃಂಗಾರಾದಿ ನವರಸಗಳಿಗೆ ಆಸ್ಪದವಾಗಿದೆ. ವಿದ್ವಾಂಸರಿಗೆ (ವಿಬುಧರಿಗೆ) ಇಚ್ಛಿತಾರ್ಥವನ್ನು ಕೊಡುವುದಾಗಿದೆ. ಸಮುದ್ರವು ೧. ಅಧಿಕವಾಗಿ ರತ್ನಗಳ ಆಗರವಾಗಿರುವ ಗುಣದಿಂದ ಕೂಡಿದೆ. ೨. ಕಾವ್ಯವು ಉತ್ಕೃಷ್ಟವಾದ ಕಾಂತಿಯೇ ಮೊದಲಾದ ಗುಣಗಳಿಂದ ಕೂಡಿದೆ. ಸಮುದ್ರವು ೧. ಇಭದಹಾಗೆ ಅಂದರೆ ಆನೆಯ ಹಾಗೆ ಪುಷ್ಕರ ಎಂದರೆ ನೀರಿನಿಂದ ಕೂಡಿ, ಉತ್ಕೃಷ್ಟ ರತ್ನ, ಕಾಮಧೇನು, ಕಲ್ಪವೃಕ್ಷಾದಿ ಮಂಗಳಕರ ವಸ್ತುಗಳಿಂದ ಕೂಡಿದುದಾಗಿದೆ. ೨. ಇಭವೂ (ಆನೆಯು) ಸುಂಡಿಲಿನ (ಪುಷ್ಕರದ) ತುದಿಯಿಂದ ಕೂಡಿ ಶ್ರೇಷ್ಠ (ಉದ್ಘ)ವಾದ ಮಂಗಳಗುಣಗಳುಳ್ಳದ್ದಾಗಿದೆ. (ಈ ರೀತಿಯಲ್ಲಿ ಆ ಸಮುದ್ರವೂ) ಶೋಭಿಸುತ್ತಿತ್ತು. [ಇಲ್ಲಿ ಸಮುದ್ರವನ್ನು ಆಕಾಶ, ವಿಷ್ಣು, ಕಾವ್ಯ, ಆನೆಗಳೊಡನೆ ಶ್ಲೇಷೆಯಿಂದ ವರ್ಣಿಸಿದ್ದಾನೆ. ತರಣಿ–ಸೂರ್ಯ. ಹಡಗು; ಉಡುಪ–ಚಂದ್ರ. ತೆಪ್ಪ; ಚಕ್ರ–ಚಕ್ರವಾಕ. ವಿಷ್ಣುವಿನ ಚಕ್ರಾಯುಧ : ಕಮಲ–ಕಮಲ ಪುಷ್ಪ, ಲಕ್ಷ್ಮಿ (ಕಮಲಾ) ; ರಸ–ಶೃಂಗಾರಾದಿ ನವರಸ. ನೀರು: ವಿಬುಧ–ದೇವತೆ, ವಿದ್ವಾಂಸ ; ಅನುಕೂಲ–ಕೂಲವನ್ನು ಅನುಸರಿಸಿದುದು, ಅನುಕೂಲಪತ್ನಿ

ಸುಳಿ ನೊರೆ ಬುದ್ಬುದಂ ಸಿಡಿವ ಸೀರ್ಪನಿ ಪೆರ್ದೆರೆ ಗುಣ್ಪು ಪೆಂಪು ಶೈ
ವಳಮುಳಿ ಪಂಕಜಂ ಪವಳಮಾನೆ ನೆಗಳ್ ಗಿರಿಯಾಮೆ ಪಾವು ಮೀನ್
ಜಳಧರವೀಥಿ ಕಂಬುತತಿ ಮುತ್ತು ಖಗಾಳಿ ವಹಿತ್ರವೌರ್ವನ
ಗ್ಗಳಿಸಿರೆ ತನ್ನೊಳೊಪ್ಪಿದುದು ಸಿಂಧು ಸಸಿಂಧು ಸುಬಂಧು ಚಕ್ರಿಯಾ ೨೦

ವ॥ ಮತ್ತಮಿಂತನಂತ ಶೋಭಾಕರಮಾದ ರತ್ನಾಕರಮಧ್ಯದಲ್ಲಿ —

ಇದು ಹಿಮದಿಂ ಮುಸುಂಕಿದ ಹಿಮಾಚಲಮಲ್ತಿದು ದುಗ್ಧವಾರ್ಧಿಪೂ
ರದೊಳೆ ಮುಳುಂಗಿ ಮುನ್ನ ಬೆಳರ್ವಣ್ಣದೊಳೊಂದಿದ ಮಂದರಾದ್ರಿಯು
ಲ್ತಿದು ಶಶಿಕಾಂತಿಪಾರದವಿಲಿಪ್ತಸುವರ್ಣಮಹೀಧರೇಂದ್ರಮು
ಲ್ತಿದು ಬೆಳಗಾಂತ ರೌಪ್ಯನಗಮೆಂದೆನಿಸಿರ್ದುದು ತಾರಭೂಧರಂ ೨೧

ಸಸಿಗದಿರಂ ಬಳಲ್ಚಿ ಶಶಿಕಾಂತದ ಕಾಂತಿಯನೀಳ್ದುಕೊಂಡು ಬೆ
ಳ್ಪಸದಳಮಾದ ಶಾರದೆಯ ಮೈವೆಳಗಂ ತೆಗೆದಿಂಗಡಲ್ಗೆ ರಂ
ಜಿಸುವ ಸಿತದ್ಯುತಿಪ್ರಸರಮಂ ಕವರ್ದೊಂದನೆ ಮಾಡಿ ಬೊಮ್ಮನೊ
ಲ್ದಿಸಗಿದ ಶೈಲಮೋಯೆನಿಸಿ ಪಜ್ಜಳಿಸಿರ್ದುದು ತಾರಭೂಧರಂ ೨೨

(ಅನುಕೂಲಾ): ಪುಷ್ಕರ–ನೀರು, ಆನೆಯ ಸೊಂಡಿಲಿನತುದಿ.] ೨೦. ಆ ಸಮುದ್ರವೂ ಸುಳಿಗಳು, ತೆರೆಗಳು, ನೊರೆಗುಳ್ಳೆಗಳು, ಹಾರುವ ಜಲಕಣಗಳು ದೊಡ್ಡದಾದ ಕರೆ (ದಡ)ಯಪ್ರದೇಶ, ಆಳದ ಆಧಿಕ್ಯ, ಪಾಚಿ, ದುಂಬಿ, ಕಮಲ, ಹವಳ, ಆನೆ, ಮೊಸಳೆ, ಪರ್ವತ, ಆಮೆ, ಹಾವು, ಮೀನು, ಮೋಡಗಳಸಾಲು, ಶಂಖಗಳ ಸಮೂಹ, ಮುತ್ತುಗಳು, ಪಕ್ಷಿಗಳಸಾಲು, ಹಡಗು, ಬಡಬಾಗ್ನಿ ಇವುಗಳಿಂದ ತುಂಬಿಕೊಂಡಿರಲು, ನದಿಗಳಿಂದ ಕೂಡಿ ವಿಷ್ಣುವಿನ ಒಳ್ಳೆಯಸಂಬಂಧ (ನಂಟು)ದಿಂದ ಪ್ರಕಾಶಿಸುತ್ತಿತ್ತು. ॥ವಚನ॥ ಮತ್ತು ಈ ಪ್ರಕಾರದಿಂದ ವಿಶೇಷ ಶೋಭಾಯಮಾನವಾಗಿರುವ ಆ ಸಮುದ್ರ ಮಧ್ಯದಲ್ಲಿ (ಇರುವ) ೨೧. ಈ ತಾರಾಚಲವು (ಕೈಲಾಸಪರ್ವತವೂ) ಹಿಮದಿಂದ ಮುಚ್ಚಿದ ಹಿಮಾಲಯಪರ್ವತವಲ್ಲ: ಪೂರ್ವದಲ್ಲಿ ಕ್ಷೀರ ಸಮುದ್ರದಲ್ಲಿ ಮುಳುಗಿ ಬಿಳಿಯ ಬಣ್ಣದಿಂದ ಕೂಡಿದ ಮಂದರ ಪರ್ವತವಲ್ಲ: ಬೆಳದಿಂಗಳೆಂಬ ಪಾದರಸದಿಂದ ಬಳಿಯಲ್ಪಟ್ಟ ಮೇರುಪರ್ವತವಲ್ಲ, ಕಾಂತಿಯಿಂದ ಕೂಡಿದ ಬೆಳ್ಳಿಯ ಬೆಟ್ಟವೆನಿಸಿಕೊಂಡಿರುವುದು. ೨೨. ಬ್ರಹ್ಮನು ಚಂದ್ರಕಿರಣಗಳನ್ನು ಬಳಿದುಕೊಂಡು ಚಂದ್ರಕಾಂತಶಿಲೆಯ ಕಾಂತಿಯನ್ನು ಎಳೆದುಕೊಂಡು, ಶಾರದೆಯ ಹೆಚ್ಚಾದ ಬಿಳಿಯ ಕಾಂತಿಯುಳ್ಳ ಮೈಯ ಬೆಳಗನ್ನು ಬಳಿದುಕೊಂಡು ಕ್ಷೀರ ಸಮುದ್ರದ ಪ್ರಕಾಶಮಾನ ವಾದ ಬಿಳಿಯಕಾಂತಿ ಸಮೂಹವನ್ನೆಲ್ಲ ಬಾಚಿಕೊಂಡು ಒಟ್ಟುಗೂಡಿಸಿ, ಪ್ರೀತಿಯಿಂದ

ಸುರತರುವಲ್ಲದನ್ಯತರು ವಾಸುಕಿಯಲ್ಲದ ಪಾವು ತಳ್ತ ಸಿ
ದ್ಧರಸಮದಲ್ಲದಿರ್ಪ ಸಲಿಲಂ ಸುಮನೋಮಣಿಯಲ್ಲದಿರ್ಪ ಕಲ್
ಸುರಪಶುವಲ್ಲದನ್ಯಪಶು ನಿರ್ಜರವಲ್ಲರಿಯಲ್ಲದಿರ್ಪ ವ
ಲ್ಲರಿ ಮುನಿವೃಂದಮಲ್ಲದ ಮೃಗಪ್ರಜವಿಲ್ಲ ತದದ್ರಿಯಗ್ರದೊಳ್ ೭೩

ಮಲ್ಲಿಗೆಗೆತ್ತು ತಾರಗೆಯನಾಗಳೆ ಕೊಯ್ಯಲೊಡರ್ಚುವರ್ಸಮು
ತ್ಫುಲ್ಲಸಿತಾಬ್ಜಮೆಂದು ಶಶಿಯಂ ತಿಱಿಯಲ್ಬಗೆದಂದು ನೋಡುವರ್
ಸಲ್ಲಲಿತಾರುಣಾರುಣಕರೋತ್ಕರಮಂ ತಳಿರ್ಗೆತ್ತು ಪಾಣಿಯಂ
ಮೆಲ್ಲನೆ ನೀಡುವರ್ಗಿರಿಯ ತಪ್ಪಲೊಳೊಪ್ಪುವ ಸಿದ್ಧಮುಗ್ಧೆಯರ್ ೭೪

ನಗದವದಾತ[1] ಕಾಂತಿ ಮಿಗೆ ತೀವೆ ಬೆಳರ್ತ ನಭಃಪ್ರದೇಶದೊ
ಳ್ನಗೆತರಂತಬ್ಜಬಿಂಬಮೆನಿಸಿರ್ದ ನಭೋಮಣಿ ದೇವಗಂಗೆಯ

ಮೂಡಿದ ಪರ್ವತವೋ ಎಂದೆನಿಸಿಕೊಂಡು ಪ್ರಕಾಶಮಾನವಾಗಿರುವುದು. ೭೩. ಆ ಕೈಲಾಸ ಪರ್ವತದ ಮೇಲ್ಭಾಗದಲ್ಲಿ ಕಲ್ಪವೃಕ್ಷವಲ್ಲದೆ ಬೇಕಾದ ಮರಗಳೂ ಇಲ್ಲ; ಆದಿಶೇಷನಲ್ಲದೆ ಬೇರೆ ಯಾವ ಹಾವೂ ಇಲ್ಲ: ತುಂಬಿದ ಸಿದ್ಧರಸದ ಮಡುಗಳಲ್ಲದೆ ಬೇರೆ ನೀರಿನ ಮಡುಗಳೇ ಇಲ್ಲ: ಚಿಂತಾಮಣಿ (ಸುಮನೋಮಣಿ)ಯಲ್ಲದೆ ಬೇರೆ ಕಲ್ಲುಗಳೇ ಇಲ್ಲ ; ಕಾಮಧೇನುವಲ್ಲದೆ ಬೇರೆ ಪಶುಗಳೇ ಇಲ್ಲ : ಕಲ್ಪಲತೆಯಲ್ಲದೆ (ನಿರ್ಜರವಲ್ಲರಿಯಲ್ಲದೆ) ಬೇರೆ ಬಳ್ಳಿಗಳೇ ಇಲ್ಲ. ಮುನಿಗಳಲ್ಲದೆ ಬೇರೆ ಜಿಂಕೆಗಳ ಗುಂಪೇ ಇಲ್ಲ. ೭೪. ಆ ಪರ್ವತದ ತಪ್ಪಲಿನಲ್ಲಿ ಸಿದ್ಧರುಗಳ ಮುಗ್ಧ ಸ್ತ್ರೀಯರುಗಳು ನಕ್ಷತ್ರಗಳನ್ನು ಮಲ್ಲಿಗೆಯ ಹೂವೆಂದು ಭಾವಿಸಿ, ಆ ಕೂಡಲೆ ಅವನ್ನು ಕೊಯ್ಯುವುದಕ್ಕೆ ತೊಡಗುವರು. ಚಂದ್ರನನ್ನು ಚೆನ್ನಾಗಿ ಅರಳಿದ ಬಿಳಿಯ ಕಮಲವೆಂದು ತಿಳಿದು ತಿರಿದು ತರುವುದಕ್ಕೆ ಮನಸ್ಸು ಮಾಡಿ ನೋಡುವರು. ಮನೋಹರವಾದ ಆರುಣ್ಯವರ್ಣದ ಸೂರ್ಯಕಿರಣಗಳ ಸಮೂಹವನ್ನು ಚಿಗುರುಗಳೆಂದು ಭಾವಿಸಿ, (ತಮ್ಮ) ಕೈಗಳನ್ನು ಮೆಲ್ಲಗೆ ಮುಂದಕ್ಕೆ ನೀಡುವರು, ೭೫. ಆ ಕೈಲಾಸ ಪರ್ವತದ ಶುಭ್ರವರ್ಣದ ಕಾಂತಿಯು ಹೆಚ್ಚಾಗಿ ತುಂಬಿಕೊಂಡಿರಲು, ಬೆಳ್ಳಗೆ ಕಾಣುವ ಆಕಾಶಮಂಡಲದಲ್ಲಿ, ನೆಗೆದು ಹುಟ್ಟಿ ಬರುವ ಸೂರ್ಯನು ಚಂದ್ರಮಂಡಲವೋ ಎನಿಸಿ. ಆಕಾಶಗಂಗಾ ನದಿಯಲ್ಲಿ ಹುಟ್ಟಿರುವ ಕಮಲಗಳ ಸಮೂಹದ ಅರಳುವಿಕೆಗೆ ಅಭಾವವನ್ನುಂಟುಮಾಡುತ್ತಿದ್ದನು. (ಅಂದರೆ ಕಮಲಗಳು ಬೆಳ್ಳಗಾಗಿ ಹುಟ್ಟಿಬರುತ್ತಿರುವ ಸೂರ್ಯನನ್ನು ಚಂದ್ರನೆಂದೇ ತಿಳಿದು ಅರಳುತ್ತಿದ್ದಿಲ್ಲ ಎಂದು ಭಾವ). ಆ ದೇವ ಗಂಗೆಯಲ್ಲಿರುವ ಕನ್ನೈದಿಲೆಗಳಿಗೆ ನಗೆಯನ್ನು (ಅರಳುವಿಕೆಯನ್ನು) ಅರಳುವಿಕೆಯನ್ನುಂಟುಮಾಡುತ್ತಿದ್ದನು. (ಆ ಸೂರ್ಯನ ಈ ರೀತಿಯು) ತನ್ನ ವಿಕಾರವು ಶತ್ರುವಿನ ಅಪಹಾಸ್ಯಕ್ಕೆ ಕಾರಣವಾಗುತ್ತಿತ್ತು. [ಸೂರ್ಯನು

---

1 ತ್ರ(ಜ, ಗ)

ಲ್ಲೊಗೆದ ಸರೋಜರಾಜಿಗವಿಕಾಸತೆಯಂ ಪಡೆದಲ್ಲಿ ನೈದಿಲೊ
ಳ್ನಗೆಯನೊಡರ್ಚುವಂ ನಿಜವಿಕಾರಮರಾತ್ಯಪಹಾಸ್ಯಕಾರಣಂ ೭೫

ತಿಳಿಗೊಳದಲ್ಲಿ ಮಿಂದು ತಳೆದುಜ್ವಳರತ್ನವಿಭೂಷಣಂಗಳಂ
ತೊಳಗುವ ಚಿತ್ರಚೀನವಸನಂಗಳನುಟ್ಟು ತುಱುಂಬಿ ಪುಷ್ಪಸಂ
ಕುಳಮನನೂನ ರಾಗರಸದಿಂ ಹರಿಚಂದನದಣ್ಪನಾಂತು ಸಂ
ಚಳಿಸುವರಲ್ಲಿ ಸಿದ್ಧಸುರಕಿನ್ನರದಂಪತಿಗಳ್ವಿಳಾಸದಿಂ ೭೬

ನೆರೆದಲ್ಲಲ್ಲಿ ಸುರೋರ್ವಿಜಾತದಡಿಯೊಳ್ ಚಂದ್ರಾಶ್ಮಪೀಠಂಗಳೊಳ್
ತರದಿಂ ಮಂಡಿಸಿ ನೋಡುವಾಡುವ ಕಳೋಪನ್ಯಾಸಮಂ ಮಾಡುವಾ
ದರದಿಂ ಪಾಡುವ ಕಾಡುವಳ್ಕಿಯೊದವಿಂ ಕೊಂಡಾಡುವಾನಂದನಿ
ರ್ಭರಲೀಲಾಪರತಂತ್ರರಿರ್ಪರದಱೊಳ್ ಗಂಧರ್ವ ಯಕ್ಷಾದಿಗಳ್ ೭೭

ನದಿಯಿಂ ನಂದನದಿಂ ಲತಾಭವನದಿಂ ನಾನಾಮೃಗವ್ರಾತದಿಂ
ಸೊದೆಯಿಂ ಸಿದ್ಧರಸಂಗಳಿಂ ಸುರಭಿಯಿಂ ಕಾಂತಾರಸಂತಾನದಿಂ
ಮುದದಿಂದೊಪ್ಪುವ ಸಿದ್ಧರಿಂ ದಿವಿಜರಿಂ ಗಂಧರ್ವರಿಂ ಯಕ್ಷರಿಂ
ಪದಪಂ ತಾಳ್ದ ಗಣೇಂದ್ರರಿಂ ಮುನಿಗಳಿಂ ಚೆಲ್ವಾಯ್ತು ತಾರಾಚಳಂ ೭೮

ತನ್ನ ನಿಜಸ್ವರೂಪವನ್ನು ತೋರದೆ ವಿಕಾರಗೊಂಡು ಚಂದ್ರನಂತೆ ಕಾಣುತ್ತಿದ್ದುದರಿಂದ ಕಮಲಗಳು ಮುಕುಳಿತವಾಗಿಯೇ ಇರುವುದಕ್ಕೂ, ನೈದಿಲೆಗಳು ಅರಳುತ್ತಿರುವುದಕ್ಕೂ ಕಾರಣವಾಗುತ್ತಿತ್ತೆಂದು ಭಾವ. (ಅರಾತಿ + ಅಪಹಾಸ್ಯ—ವೈರಿಯ ಅಪಹಾಸ್ಯ)]. ೭೬. ಆ ಪರ್ವತದಲ್ಲಿರುವ ತಿಳಿಗೊಳಗಳಲ್ಲಿ ಸಿದ್ಧರುಗಳ, ಸುರರ, ಕಿನ್ನರರ ದಂಪತಿಗಳು ಸ್ನಾನಮಾಡಿ, ಪ್ರಕಾಶಮಾನವಾದ ರತ್ನಾಭರಣಗಳನ್ನು ಧರಿಸಿ, ಶುಭ್ರವಾದ ನಾನಾ ವರ್ಣದ ರೇಷ್ಮೆಯ ವಸ್ತ್ರಗಳನ್ನು ಉಟ್ಟುಕೊಂಡು, ಹೂವುಗಳ ಸಮೂಹವನ್ನು ತುರುಬಿನಲ್ಲಿ ಮುಡಿದುಕೊಂಡು, ಅತ್ಯಧಿಕವಾದ ಅನುರಾಗ ರಸದಿಂದ ಶ್ರೀಗಂಧದ ಅನುಲೇಪನ ಮಾಡಿಕೊಂಡು ಲೀಲೆಯಿಂದ ಸಂಚರಿಸುತ್ತಿದ್ದರು. ೭೭. ಆ ಪರ್ವತದಲ್ಲಿ ಯಕ್ಷ ಗಂಧರ್ವಾದಿ ದೇವತೆಗಳು ಆಯಾಯ ಸ್ಥಳಗಳಲ್ಲಿರುವ ಕಲ್ಪವೃಕ್ಷಗಳ ತಳಭಾಗದಲ್ಲಿರುವ ಚಂದ್ರಕಾಂತಶಿಲೆಯ ಕಟ್ಟೆಯಲ್ಲಿ ಸಾಲುಸಾಲಾಗಿ ಕುಳಿತುಕೊಂಡು ನೋಡುವ, ಆಟವಾಡುವ, ಕಲಾಪೂರ್ಣವಾದ ಮಾತನಾಡುವ, ಆದರದಿಂದ ಹಾಡುವ, ಪ್ರೀತಿಯ ಆಧಿಕ್ಯದಿಂದ (ಪರಸ್ಪರ) ಪೀಡಿಸುವ, ಹೊಗಳುವ, ಸಂತೋಷಾತಿಶಯದಿಂದ ಉಂಟಾಗುತ್ತಿದ್ದ ಲೀಲಾ ವಿಲಾಸದಿಂದ ಮೈಮರೆತು ಇರುತ್ತಿದ್ದರು. ೭೮. (ಆ) ತಾರಕಾಚಲವು ಹೊಳೆಯಿಂದಲೂ ಉದ್ಯಾನವನದಿಂದಲೂ, ಬಳ್ಳಿಯ ಮನೆಗಳಿಂದಲೂ, ಅನೇಕ ಬಗೆಯ ಮೃಗಸಮೂಹದಿಂದಲೂ, ಅಮೃತದಿಂದಲೂ, ಸಿದ್ಧರಸದಿಂದಲೂ, ಕಾಮಧೇನುವಿನಿಂದಲೂ, ಅರಣ್ಯ ರಾಜಿಯಿಂದಲೂ, ಸಂತೋಷದಿಂದ ಕೂಡಿ ಪ್ರಕಾಶಿಸುತ್ತಿದ್ದ ಸಿದ್ಧರು, ದೇವತೆಗಳು, ಗಂಧರ್ವರು, ಯಕ್ಷರುಗಳಿಂದಲೂ, ಸದಾ ಪ್ರೀತಿ

ಆ ಗಿರಿಯೆಂಬ ರೌಪ್ಯಮಯ ಲಿಂಗಕೆ ಕಾಲನೆನಿಪ್ಪ ಪೂಜಕಂ
ರಾಗದೆ ಕಾಮಧೇನುವಿನ ಪಾಲ್ಸರಿಯಿಂದಭಿಷೇಕಿಸುತ್ತ ನೀ
ಡಾಗದೆ ಚಂದ್ರಿಕಾಧವಳ ವಸ್ತ್ರಮನರ್ಪಿಸಿ ಪೂಜೆಗೈದು ತಾ
ರಾಗಣಪುಷ್ಪದಿಂ ಬೆಳಗುವಂ ಶಶಿಮಂಡಳವೆಂಬ ದೀಪಮಂ ೭೯

ಮಿಸುಪ ಗೃಹಸ್ಥನಂತೆ ನವನಂದನಶಾಲಿ ಸದಾರವಿಭ್ರಮಂ
ಕುಸುಮಪತಾಕನಂತೆ ಸುಮನೋರತಿಶೋಭಿ ಶುಕಾದಿಸೇವಿತಂ
ವಸುಧೆಯಧೀಶನಂತೆ ಭೃತವಾಹಿನಿ ಹೃದ್ಯಸುರಾಗಮಂಡಿತಂ
ಬಿಸಜಜನಂತೆ ಹಂಸಯುತಮನ್ವಿತಸತ್ಪಥಮಲ್ತೆ ತನ್ನಗಂ ೮೦

ಯನ್ನು ಹೊಂದಿರುವಂತಹ ಮುನಿಜನರುಗಳಿಂದಲೂ ಚೆಲುವುಗೊಂಡಿತ್ತು. ೭೯. ಆ
ಪರ್ವತವೆಂಬ ಬೆಳ್ಳಿಯಿಂದ ಮಾಡಿದ ಲಿಂಗಕ್ಕೆ ಕಾಲನೆಂಬ ಪೂಜಾರಿಯು ಪ್ರೀತಿಯಿಂದ
ಕಾಮಧೇನುವಿನ ಹಾಲಿನಿಂದಭಿಷೇಕ ಮಾಡುತ್ತ, ಬೆಳದಿಂಗಳೆಂಬ ಧವಳವರ್ಣದ
ವಸ್ತ್ರಗಳನ್ನುಡಿಸಿ, ನಕ್ಷತ್ರಸಮೂಹಗಳೆಂಬ ಹೂವುಗಳಿಂದ ಅರ್ಚನೆಮಾಡಿ. ಚಂದ್ರಬಿಂಬ
ವೆಂಬ ಮಂಗಳಾರತಿಯನ್ನೆತ್ತುತ್ತಿದ್ದನು. ೮೦. ಆ ತಾರಾಚಲಪರ್ವತವು ೧) ಗೃಹಸ್ಥ
ನಂತೆ-ನೂತನ ನಂದನವನಗಳಿಂದ ಪ್ರಕಾಶಿಸುತ್ತಿತ್ತು. ೨) ಗೃಹಸ್ಥನು ನೂತನರಾದ
ನಂದನರುಗಳಿಂದ ಅಂದರೆ ಮಕ್ಕಳುಗಳಿಂದ ಪ್ರಕಾಶಿಸುವನು. ಪತ್ನಿಯೊಡನೆ (ಸದಾರ)
ಕೂಡಿದ ವಿಲಾಸವುಳ್ಳವನು. ೧) ಮನ್ಮಥನಂತೆ–ದೇವತೆಗಳ ಇಚ್ಛಾನುಸಾರ ಶೋಭಾ
ವಹವಾದುದು ; ಶುಕಮುನಿಯೇ ಮೊದಲಾದ ಋಷಿ ಜನಗಳಿಂದ ಸೇವಿಸಲ್ಪಡು
ವಂತಹುದು. ೨) ಮನ್ಮಥನು–ಒಳ್ಳೆಯ ಮನಸ್ಸಿನಿಂದ ಕೂಡಿದ ರತಿದೇವಿಯೊಡನೆ
ಕೂಡಿ ಶೋಭಿಸುವಂತಹವನು ; ಗಿಳಿಗಳೇ ಮೊದಲಾದ ಪಕ್ಷಿಗಳಿಂದ ಕೂಡಿ ಶೋಭಿಸು
ವಂತಹವನು. (ಗಿಳಿಯೇ ಮನ್ಮಥನ ವಾಹನವೆಂಬುದು ಕವಿಸಮಯ). ೧) ವಸುಧೇಶ
ನಂತೆ (ರಾಜನಂತೆ)–ನದಿಗಳನ್ನು ಧರಿಸಿರುವಂತಹದು (ನದಿಗಳ ಜನ್ಮಕ್ಕೆ ಕಾರಣವಾದು
ದೆಂಬ ತಾತ್ಪರ್ಯ) : ಮನೋಹರವಾದ ಕಲ್ಪವೃಕ್ಷಗಳಿಂದ (ಸುರಾಗದಿಂದ) ಅಲಂಕಾರ
ಗೊಂಡಂತಹುದು. ೨) ರಾಜನು–ತನ್ನಿಂದ ಪೋಷಣೆಗೊಂಡ ಸೈನ್ಯ (ವಾಹಿನಿ) ವುಳ್ಳ
ವನು. ಮನೋಹರವಾದ ಒಳ್ಳೆಯ ಅನುರಾಗಗಳಿಂದ ಕೂಡಿದವನು. ೧)
ಬಿಸಜಜ ಅಂದರೆ ಬ್ರಹ್ಮನ ಹಾಗೆ–ಪರಮಹಂಸರುಗಳಿಂದ ಕೂಡಿದುದು : ಆಕಾಶಪಥ
ದಿಂದ ಕೂಡಿಕೊಂಡಿರುವಂತಹುದು. ೨) ಬ್ರಹ್ಮನು–(ತನ್ನ ವಾಹನವಾದ) ಹಂಸಪಕ್ಷಿ
ಯಿಂದ ಕೂಡಿದವನು ; ಸನ್ಮಾರ್ಗಕ್ಕೆ ಹೊಂದಿಕೊಂಡಿರುವಂತಹವನು. [ಹಂಸಯುತಂ
ಎನ್ನುವುದಕ್ಕೆ ಪರ್ವತದ ಪರವಾಗಿ ಸೂರ್ಯನಿಂದ ಅನ್ವಿತವಾದುದು ಎಂದೂ ಅರ್ಥ
ಮಾಡಬಹುದು. ನಂದನ–ಮಗ, ಉದ್ಯಾನ : ಸದಾರವಿಭ್ರಮ–ಸ, ದಾರ–ದಾರಾ
ಸಮೇತ ಅಂದರೆ ಹೆಂಡತಿ ಸಮೇತನಾಗಿ ವಿಭ್ರಮ ಅಂದರೆ ವಿಲಾಸವುಳ್ಳ. ಸದಾ+
ರವಿ+ಭ್ರಮ–ಅಂದರೆ ಸದಾ ರವಿಯ ಅಂದರೆ ಸೂರ್ಯನ ಸುತ್ತುವಿಕೆಯಿಂದ ಕೂಡಿದ,

ವ॥ ಎಂಬ ನೆಗಳ್ತೆಗಡೆಯಾಗಿ ಸಾರತರಮಾದ ತಾರಾಚಲದಗ್ರದೇಶಭಾಸುರಮೆನಿಸಿ—

ತೊಳಗಿದುದಭ್ರಮಂಡಳಮನಳ್ಳಿಱಿವಟ್ಟಳೆ[1] ಕೇತುವೀಥಿ ಮಂ
ಡಳಿಸಿದ ಚಂದ್ರಕಾಂತಮಣಿಸಾಲಮುದಗ್ರಸುವರ್ಣಹರ್ಮ್ಯಮು
ಜ್ವಳಿಸುವ ರಾಜವೀಥಿ ರಮಣೀಯಗೃಹಾವಳಿ ರಮ್ಯರತ್ನಮಂ
ಜುಳರುಚಿಗೋಪುರಂ ಮಿಸುಗೆ ತನ್ನೊಳಗೀಶಪುರಂ ಮನೋಹರಂ ೮೧

ಅದನಾರ್ಬಣ್ಣಿಪರರ್ಕಕೋಟಿರುಚಿಯಂ ಕೈಕೊಂಡು ಸಂಪೂರ್ಣ ಸಂ
ಪದಮಂ ತಾಳ್ದು ಮಹಾ ಮಹತ್ವದೆ ವಿಳಾಸಂಬೆತ್ತು ಸರ್ವೋರ್ವಿಗ
ಗ್ಗದ ಶೃಂಗಾರಮನಾಳ್ದು ಬಣ್ಣಿಪೊಡತರ್ಕ್ಯಂ ತಾನಿದೆಂದೆಂಬ ಸೌ
ಖ್ಯದೆ ಕಣ್ಗೊಪ್ಪುವ ಕಾಲಕಾಲಪುರಮಂ ಕಲ್ಯಾಣವಿಸ್ತಾರಮಂ ೮೨

ಮಿಸುಗುವ ತತ್ಪುರೀಪ್ರಮದೆಯಾನನದಂತೆ ನಿತಾಂತಕಾಂತಿವೆ
ತ್ತೆಸೆವ ಬೆಡಂಗಿನಂತವುರದಗ್ರದ ಚಾರು ಸಭಾನಿವಾಸದೊ

ಸುಮನ–ದೇವತೆ, ಒಳ್ಳೆಯ ಮನಸ್ಸು ; ಶುಕ–ಗಿಳಿ, ಶುಕಮುನಿ ; ರತಿ–ರತಿದೇವಿ, ಇಚ್ಛೆ ; ವಾಹಿನಿ–ಸೈನ್ಯ, ನದಿ ; ಸುರಾಗ–ಕಲ್ಪವೃಕ್ಷ, ಒಳ್ಳೆಯ ಅನುರಾಗ ; ಹಂಸ–ಸೂರ್ಯ, ಹಂಸಪಕ್ಷಿ ; ಸತ್ಪಥ–ಆಕಾಶ, ಒಳ್ಳೆಯ ಮಾರ್ಗ]. ವ॥ ಹೀಗೆನಿಸುವ ಪ್ರಸಿದ್ಧಿಗೆ ಆಸ್ಪದವಾಗಿ ಅತ್ಯಂತ ಶ್ರೇಷ್ಠವಾದ ಆ ಕೈಲಾಸ ಪರ್ವತದ ಮೇಲ್ಭಾಗದಲ್ಲಿ ಪ್ರಕಾಶಮಾನವಾದದ್ದೆನಿಸಿಕೊಂಡಂತಹ ೮೧. ಶಿವನ ಪಟ್ಟಣವು ಆಕಾಶಮಂಡಳವನ್ನು ಪೀಡಿಸುವ ಅಟ್ಟಣೆ, ಧ್ವಜಗಳ ಸಾಲಿನ ಬೀದಿ. ಮಂಡಲಾಕಾರವಾಗಿರುವ ಚಂದ್ರಕಾಂತ ಶಿಲೆಯ ಪ್ರಾಕಾರ, ಉನ್ನತವಾದ ಚಿನ್ನದ ಉಪ್ಪರಿಗೆ, ಮನೋಹರವಾದ ಮನೆಗಳ ಸಾಲು, ರಮ್ಯವಾದ ರತ್ನಗಳ ಅಂದವಾದ ಕಾಂತಿಯನ್ನು ಹೊಂದಿದ ಗೋಪುರಗಳು. (ಇವೆಲ್ಲ) ತನ್ನಲ್ಲಿ ಪ್ರಕಾಶಿಸುತ್ತಿರಲು ಸುಂದರವಾಗಿ ಹೊಳೆಯುತ್ತಿತ್ತು. ೮೨. ಕೋಟ್ಯಂತರ ಸೂರ್ಯರುಗಳ ಕಾಂತಿಯನ್ನೊಳಗೊಂಡು ಪರಿಪೂರ್ಣವಾದ ಐಶ್ವರ್ಯವನ್ನು ಹೊಂದಿ, ಮಹಿಮಾತಿಶಯದಿಂದ ಸೊಬಗನ್ನು ಪಡೆದು, ಸಮಸ್ತಲೋಕಕ್ಕೆ ಶ್ರೇಷ್ಠವಾದುದೆನಿಸಿ ಶೃಂಗಾರಗೊಂಡು ವರ್ಣಿಸುವುದಕ್ಕೆ ಸಾಧ್ಯವಿಲ್ಲದುದೆನಿಸಿ, ಸೌಖ್ಯದ ಬೀಡಾಗಿ, ಕಣ್ಣಿಗೆ ಶೋಭಿಸುವಂತಹ ಮಂಗಳಮಯವಾದುದಾಗಿ, ಕಾಲನಿಗೆ ಕಾಲಪುರುಷನೆನಿಸಿದ ಶಿವನ ಆ ಪಟ್ಟಣದ ವಿಸ್ತಾರವನ್ನು ವರ್ಣಿಸುವವರಾರಿದ್ದಾರೆ ? ೮೩. ಹೀಗೆ ಪ್ರಕಾಶಿಸುವ ಆ ಶಿವನ ಪಟ್ಟಣದಲ್ಲಿ ಪೌರಸ್ತ್ರೀಯರುಗಳ ಆನನದಿಂದ ಕೂಡಿದ ಅತ್ಯಧಿಕ ಕಾಂತಿಯನ್ನು ಧರಿಸಿ ಶೋಭಿಸುವ ಸೌಂದರ್ಯದ ಅಂತಃಪುರವಿತ್ತು, ಅದರ ಅಗ್ರ ಭಾಗದಲ್ಲಿ ಮನೋಹರವಾದ ಸಭಾಭವನವಿತ್ತು. ಅಲ್ಲಿ ಪರಮೇಶ್ವರನು ಕಮಲಭವನಾದ ಬ್ರಹ್ಮನೇ ಮೊದಲಾದ ದೇವತೆಗಳು ಸ್ತೋತ್ರ ಮಾಡುತ್ತಿರಲು,

1 ಳ್ತ (ದ)

ಳ್ಕುಸುಮಶರಾರಿ ಮಂಜುಮಣಿಮಂಡಿತ ದಿವ್ಯ ಮೃಗೇಂದ್ರಪೀಠದೊಳ್
ಬಿಸಜಭವಾದಿಗಳ್ಪೊಗಳೆ ರಂಜಿಸುತಿರ್ದನುದಾತ್ತಲೀಲೆಯಿಂ ೮೩

ನೆರೆದೇಳ್ತಂದಿರ್ದುದಾಸ್ಥಾನದೊಳರರೆ ವಸುವ್ರಾತಮಿಂದ್ರಾದಿ ದಿಕ್ಪಾ
ಲರ ಮೊತ್ತಂ ಚಾರಣೌಘಂ ತುರಗಮುಖಚಯಂ ಸಿದ್ಧವೃಂದಂ ಸುಸಾಧ್ಯೋ
ತ್ಕರಮುದ್ಯದ್ಯಕ್ಷಸಂಘಂ ಮುನಿವಿತತಿ ಮನುಶ್ರೇಣಿ ರುದ್ರಾಳಿಯುಬ್ಜೋ
ದರವಾರಂ ಪದ್ಮಜಾತಪ್ರತತಿ ಗಣಕುಲಂ ವೇದವಿದ್ಯಾಪ್ರತಾನಂ ೮೪

ಜಡೆಮುಡಿ ಚಂದ್ರಲೇಖೆ ಪಣೆಗಣ್ ಕೊರಲೊಳ್ಗಜಿ ಸರ್ಪಕುಂಡಲಂ
ಪಿಡಿದ ಮೃಗಂ ತ್ರಿಶೂಲಮಭಯಂ ವರಪೊಪ್ಪುವ ಪಾಣಿ ನಾಗರೊ
ಳ್ತೊಡವೆಸೆವದ್ರಿಜಾತೆ ಪೊದೆದುಟ್ಟಜಿನಾಂಬರಮಿಂದುಕೋಟಿಯುಂ
ಜಡಿವ ನಿಜಾಂಗಕಾಂತಿಯಡಿಗಣ್ಸೊಬಗೊಂದಿರೆ ಶೂಲಿಯೊಪ್ಪಿದಂ ೮೫

ಪರಮಾನಂದಮಯಂ ಪ್ರಸನ್ನವದನಂ ಪಾಟೀರ ಡಿಂಡೀರ ಪಾಂ
ಡುರವರ್ಣಂ ಫಣಿಭೂಷಣಂ ಪ್ರಬಳ ಮಾಯಾಭೀಷಣಂ ಭಕ್ತಸಾ

ಮನೋಹರವಾದ ರತ್ನಾದಿಗಳಿಂದ ಅಲಂಕರಿಸಲ್ಪಟ್ಟ ಸಿಂಹಾಸನದಲ್ಲಿ ಉದಾತ್ತಲೀಲೆಯಿಂದ ಪ್ರಕಾಶಿಸುತ್ತಿದ್ದನು. [ಕುಸುಮ ಶರಾರಿ–ಕುಸುಮಶರ ಅಂದರೆ ಮನ್ಮಥನಿಗೆ ಅರಿ ಅಂದರೆ ಶತ್ರು–ಶಿವ] ೮೪. ಈ ರೀತಿಯ ಶಿವನ ಸಭಾಭವನದಲ್ಲಿ ಆಶ್ಚರ್ಯಕರವಾಗಿ ಅಷ್ಟವಸುಗಳ ಸಮೂಹ, ಇಂದ್ರನೇ ಮೊದಲಾದ ಅಷ್ಟದಿಕ್ಪಾಲಕರುಗಳ ಸಮೂಹ, ಸ್ತುತಿಪಾಠಕರ ಸಮೂಹ, ಕಿನ್ನರರ ಸಮೂಹ, ಸಾಧ್ಯರುಗಳ ಬಳಗ, ಶ್ರೇಷ್ಠರಾದ ಯಕ್ಷರುಗಳ ಸಂಘ, ಮುನಿಗಳ ಸಮೂಹ, ಮನುಗಳ ಶ್ರೇಣಿ, ಏಕಾದಶ ರುದ್ರರುಗಳ ಸಮೂಹ, ವಿಷ್ಣುವಿನ ಬಳಗ, ಬ್ರಹ್ಮನ ಸಮೂಹ, ಪ್ರಮಥಗಣಗಳ ಬಳಗ, ವೇದವಿದ್ಯೆಗಳ ಸಮೂಹ ಇವೆಲ್ಲ ಬಂದು ಕೂಡಿದ್ದುವು. ೮೫. (ಇಂಥ ಸಭಾಭವನ ಮಧ್ಯದಲ್ಲಿ) ಜಡೆಮುಡಿ, ಚಂದ್ರಕಳೆ ಹಣೆಗಣ್ಣು, ಮನೋಹರ ಕಪ್ಪು ಗೊರಲು. ಸರ್ಪಗಳ ಕರ್ಣಾಭರಣ, ಕೈಯಲ್ಲಿ ಹಿಡಿದಿರುವ ಜಿಂಕೆ ಮತ್ತು ತ್ರಿಶೂಲ, ಅಭಯಪ್ರದಾನ ಮಾಡುವ ಹಸ್ತಮುದ್ರೆ. ಹಾವುಗಳ ಒಳ್ಳೆಯ ಆಭರಣ. (ಎಡಗಡೆ) ಶೋಭಿಸುವ ಪಾರ್ವತಿ, ಹೊದ್ದುಕೊಂಡಿರುವ ಮತ್ತು ಉಟ್ಟುಕೊಂಡಿರುವ ಚರ್ಮಗಳ ಬಟ್ಟೆ, ಕೋಟ್ಯನುಕೋಟಿ ಚಂದ್ರರುಗಳನ್ನು ಕೀಳ್ಮಾಡುವ ತನ್ನ ದೇಹ ಕಾಂತಿ, ಪಾದದಲ್ಲಿರುವ (ವಿಷ್ಣುವಿನ) ನೇತ್ರ ಇವು ಸೊಬಗುಗೊಂಡಿರಲು ಪರಮೇಶ್ವರನು ಶೋಭಿಸುತ್ತಿದ್ದನು. ೮೬. ಪರಮಾನಂದ ಸ್ವರೂಪನೂ. ಪ್ರಸನ್ನವಾದ ಮುಖಮುದ್ರೆಯುಳ್ಳವನೂ. ಶ್ರೀಗಂಧದಂತೆ, ನೊರೆಯಂತೆ ಶುಭ್ರವಾದ ಮೈಯಕಾಂತಿಯುಳ್ಳವನೂ, ಸರ್ಪಗಳ ಆಭರಣನೂ, ಅಧಿಕ ಬಲದ ಮಾಯೆಗೆ ಭಯಂಕರ ಸ್ವರೂಪನೂ, ಭಕ್ತಜನವೆಂಬ ಸಮುದ್ರಕ್ಕೆ ಪೂರ್ಣ ಚಂದ್ರನಂತಿರುವವನೂ ಶ್ರೇಷ್ಠ

ಗರ ಸಂಪೂರ್ಣಸುಧಾಕರಂ ಘನಕೃಪಾರತ್ನಾಕರಂ ಚಂದ್ರಶೇ
ಖರನಾಸ್ಥಾನದೊಳೊಪ್ಪಿದಂ ಪ್ರಣ[1]ತಸಾರಶ್ರೀಕರಂ ಶಂಕರಂ ೮೬

ತೆಗೆದುತ್ಸಂಗದೊಳಿಟ್ಟು ಮೈದಡವುತಂ ಕ್ರೌಂಚಾರಿಯಂ ಭೃಂಗಿಯಂ
ನಗೆ ಪೊಣ್ಮುತ್ತಿರೆ ನೋಡುತುಂ ಶಿವೆಯ ವೀಣಾಲಾಪಮಂ ಕೇಳುತುಂ
ಬಿಗಿಯಪ್ಪುತ್ತೆ ಗಜಾಸ್ಯನಂ ನಲವಿನಿಂ [2]ಮುದ್ದಿತ್ತು[2] ಮುಂಡಾಡುತುಂ
ಮೃಗಭೃನ್ಮೌಲಿಗಣಂಗಳುತ್ಸವಕಡರ್ಪಾಗಿರ್ದನಾಸ್ಥಾನದೊಳ್ ೮೭

ಪೆಱಸಾರ್ಕೆರ್ೂಣಪ ನೂಂಕದಿರ್ಸುರಪ ಲಕ್ಷ್ಮೀನಾಥ ನೀಂ ಕಾಣ್ಕೆಯಂ
ನೆಱ[3] ನೀಡಂತಕ ಸಂತವಿರ್ಗಳಪದಿರ್ವಾಣೀಶ ಬಂದೀಗಳೊ
ಲ್ದೆಱಗೈ ವಿತ್ತಪ ಮೆಲ್ಲನೈದು ಪವನಾ ಪದ್ಮಾಪ್ತ ಚಂದ್ರಂಗೆ ನೀಂ
ತೆಱಪಂ ಮಾಡೆನುತಲ್ಲಿ ಕೂಡೆ ಜಡಿದಂ ಮಾಕಾಳನಾ ಕಾಲದೊಳ್ ೮೮

ಪಸರಿಸಿದುದಿಂದ್ರಚಾಪದ
ಪೊಸ ಪರಿಯಂ ವಿನಮದಮರಮಣಿಮುಕುಟದ ಸೊಂ

ಕೃಪಾರಸಕ್ಕೆ ಸಮುದ್ರದೋಪಾದಿಯಲ್ಲಿರುವವನೂ, ಚಂದ್ರಕಳೆಯನ್ನು ಶಿರದಲ್ಲಿ ಧರಿಸಿರುವವನೂ, ನಮಸ್ಕರಿಸುವ (ಭಕ್ತರಿಗೆ) ಮೋಕ್ಷಲಕ್ಷ್ಮಿಯ ಸಂಪತ್ತನ್ನುಂಟು ಮಾಡುವವನೂ, ಆದ ಪರಮೇಶ್ವರನು ಆ ಸಭಾಸ್ಥಾನದಲ್ಲಿ ಶೋಭಿಸುತ್ತಿದ್ದನು. ೮೭. (ಈ ರೀತಿಯಲ್ಲಿ ಶೋಭಿಸುವ) ಪರಮೇಶ್ವರನು ಆಸ್ಥಾನದಲ್ಲಿ ಕುಮಾರನಾದ ಷಣ್ಮುಖ ಸ್ವಾಮಿಯನ್ನು ಎತ್ತಿತೊಡೆಯ ಮೇಲೆ ಕುಳ್ಳಿರಿಸಿಕೊಂಡು (ಅವನ)ಮೈಮೇಲೆ ಕೈಯಾಡಿಸುತ್ತ, ಭೃಂಗಿಯನ್ನು ನೋಡುತ್ತ (ಅವನ ನಾಟ್ಯದ ಸೊಬಗಿಗೆ) ನಗೆಯನ್ನು ಹೊರಸೂಸುತ್ತಿರುವ ಮುಖವುಳ್ಳವನಾಗಿ, ಪಾರ್ವತಿಯು ನುಡಿಸುತ್ತಿರುವ ವೀಣಾ ಧ್ವನಿಯನ್ನು ಕೇಳುವಂಥವನಾಗಿ, ಗಣಪತಿಯನ್ನು ಪುತ್ರವಾತ್ಸಲ್ಯದಿಂದ ಗಾಢವಾಗಿ ಆಲಿಂಗನ ಮಾಡುತ್ತ, ಪ್ರೀತಿಯಿಂದ ಮುದ್ದಿಕ್ಕಿ ಮೈಮೇಲೆ ಕೈಯಾಡುತ್ತ, ಪ್ರಮಥ ಗಣಗಳ ಸಂತೋಷಕ್ಕೆ ಕಾರಣನಾಗಿದ್ದನು. [ಮೃಗ+ಭೃತ್ + ಮೌಳಿ–ಮೃಗಾಂಕನಾದ ಚಂದ್ರನನ್ನು ಮೌಳಿಯಲ್ಲಿ ಧರಿಸಿರುವವನು–ಶಿವ: ಕ್ರೌಂಚಾರಿ ಕ್ರೌಂಚಪರ್ವತಕ್ಕೆ ಅರಿಯಾದ ಷಣ್ಮುಖ]. ೮೮. ಆ ಸಮಯದಲ್ಲಿ ಮಹಾಕಾಳನೆಂಬುವನು ಆ ಸಭಾ ಸ್ಥಾನದಲ್ಲಿ–ಎಲೈನಿರುತಿಯೇ, ಹಿಂದಕ್ಕೆಸರಿ ; ದೇವೇಂದ್ರನೇ ನೂಕಬೇಡ ; ವಿಷ್ಣುವೇ, ನೀನು ಚೆನ್ನಾಗಿ ನೀಡು; ಯಮನೇ ನೀನು ಸುಮ್ಮನಿರು ; ಬ್ರಹ್ಮನೇ, ಕೂಗಾಡಬೇಡ ; ಕುಬೇರನೇ, ಈಗ ನೀನು ಬಂದು ಪ್ರೀತಿಯಿಂದ ನಮಸ್ಕರಿಸು ; ವಾಯುವೇ, ಮೆಲ್ಲಗೆ ಸಂಚರಿಸು ; ಸೂರ್ಯನೇ ನೀನು ಚಂದ್ರನಿಗೆ ಅವಕಾಶ ಕಲ್ಪಿಸಿಕೊಡು ಎಂದು ಬೆದರಿಸುತ್ತಿದ್ದನು. [ಕಮಲಾಪ್ತ–ಕಮಲಗಳ ಆಪ್ತ–ಸೂರ್ಯ] ೮೯. ಶಿವನು ತನ್ನ ಪಾದಗಳನ್ನಿಟ್ಟ ನೀಲ ರತ್ನನಿರ್ಮಿತವಾದ ಪಾದಪೀಠವೆಂಬ ಮೇಘದಲ್ಲಿ, ನಮಸ್ಕರಿ

1 ಣು(ಜ, ಮ) 2 ಮುಂದಿಟ್ಟು(ಅ)

ಪೆಸೆವ ಪಸು[1]ರ್ವರಲ ಕಿಸುವರ
ಲ ಸದೃಶರುಚಿ ನೀಲಪಾದಪೀತಾಂಬುದದೊಳ್ ೮೯

ವ॥ ಇಂತನಂತಾನಂತಸಂತಾನಕಮಾದೊಡಂ ಪೊಗಳಲಸದಳಮಾದ ದಿವ್ಯ ಸಭೆಯೊಳ್ ದೇವ ದೇವಂ ನಿರತಿಶಯ ಪರಮವೈಭವಂ ಮಿಗೆ ಕಂಗೆ ಮಂಗಳಮಾಗಿ ಮನಕ್ಕೆ ಮನೋಹರಮೆನಿಸಿ ರಂಜಿಸಿರ್ದ ನಿತಜ್ಜೊಳೋಲಗಮಂ ಪರಿಯಿಸಿ ನಿಜಾಂತಃಪುರಕ್ಕೇಳ್ತಂದೊಳವಳಯದ ಚಿಂತಾಮಣಿಗೆಲಸದ ಕಱುಮಾಡದೊಳ್ ಗಣನಿವಹಂ ಬೆರಸು ನಿಜಾರ್ಧಾಂಗಿಯೊಡನೆ ಭದ್ರಾಸನಮನಲಂಕರಿಸಿ ಮೂರ್ತಿಗೊಂಡು ಪರಿಮಿತಾಸ್ಥಾನನಾಗಿರ್ಪಾಗಳ್–

ಪೊಳೆವ ಮುಖೇಂದುಚಂದ್ರಿಕೆಯಿದೆಂಬಿನಮುಣ್ಮಿರೆ ಮಂದಹಾಸಮುಂ
ಜ್ವಳಿತ ನಿಜಾಂಗಕಾಂತಿ ಬಲಿದಂತೆ ವಿರಾಜಿಸೆ ಭಸ್ಮಲೇಪನಂ
ಮಿಳಿರ್ವ ಜಟಾಳಿ ದೇಹತರು ಬೀಳಿಲಬಿಟ್ಟವೊಲೊಪ್ಪೆ ಶೈವನಿ
ಶ್ಚಳಮತಿ ನಾರದಂ ಸಭೆಗೆ ಬಂದನಪಾರಕಳಾವಿಶಾರದಂ ೯೦

ಸುತ್ತಿರುವ ದೇವತೆಗಳ ರತ್ನಖಚಿತವಾದ ಕಿರೀಟಗಳಲ್ಲಿರುವ ಹಸಿರು ಹರಳು (ಪಚ್ಚೆ), ಕೆಂಪು ಹರಳು (ಮಾಣಿಕ್ಯ)ಗಳ ಅತ್ಯಧಿಕ ಕಾಂತಿಯಿಂದ ಕಾಮನ ಬಿಲ್ಲಿನ (ಇಂದ್ರಚಾಪದ) ನೂತನ ರೀತಿಯನ್ನು ಉಂಟುಮಾಡುತ್ತಿತ್ತು. ವ॥ ಈ ರೀತಿಯಲ್ಲಿ ಅನಂತ ಆದಿಶೇಷರುಗಳ ಹೊಗಳಿಕೆಗೂ ಅಸಾಧ್ಯವಾಗಿ ಶೋಭಿಸುವ ಶಿವನ ಆ ದಿವ್ಯ ಸಭೆಯಲ್ಲಿ ಅತ್ಯಧಿಕನೂ, ಉತ್ಕೃಷ್ಟ ಸಂಪದ್ಭರಿತನೂ ಆದ ಪರಮೇಶ್ವರನು ಅಧಿಕ ಮಂಗಳಕರನೆನಿಸಿ, ಮನಕ್ಕೆ ಮನೋಹರನೆನಿಸಿ ಶೋಭಿಸುತ್ತಿದ್ದನು. ಅಷ್ಟರಲ್ಲಿ ಓಲಗವನ್ನು ಸಮಾಪ್ತಿಗೊಳಿಸಿ, ತನ್ನ ಅಂತಃಪುರಕ್ಕೆ ಬಂದು, ಒಳಭಾಗದಲ್ಲಿರುವ ಚಿಂತಾಮಣಿಯಿಂದ ಮಾಡಿದ ಉಪ್ಪರಿಗೆಯಲ್ಲಿ ಪ್ರಮಥಗಣಂಗಳೊಡನೆ ಕೂಡಿ, ತನ್ನ ಅರ್ಧಾಂಗಿಯಾದ ಪಾರ್ವತಿಯೊಡನೆ ಪೀಠದ ಮೇಲೆ ಕುಳಿತು ಪರಿಮಿತ ಸಂಖ್ಯೆಯ ಆಸ್ಥಾನ ಜನರಿಂದ ಕೂಡಿ ಇರುವ ಸಮಯದಲ್ಲಿ ೯೦. ಮುಗುಳುನಗೆಯಿಂದ ಹೊಳೆಯುವ ಮುಖವೆಂಬ ಚಂದ್ರನಿಂದ ಹೊರಟ ಬೆಳದಿಂಗಳಿನ ಹಾಗೆ ಶೋಭಿಸುವವನಾಗಿ, ಹಚ್ಚಿಕೊಂಡ ವಿಭೂತಿಯು ಉಜ್ವಲವಾಗಿ ಹೊಳೆಯುವ ತನ್ನ ದೇಹಕಾಂತಿಯೇ ಬಲಿತಿದೆಯೋ ಎಂಬಂತೆ ಪ್ರಕಾಶಮಾನವಾಗಿ, ಅಲ್ಲಾಡುತ್ತಿರುವ ಜಡೆಗಳು ಶರೀರವೆಂಬ ಮರವೇ ಬಿಳಿಲು ಬಿಟ್ಟಿರುವ ಹಾಗೆ ಒಪ್ಪುವವನಾಗಿ ಶಿವನ ಸಂಬಂಧವಾದ ಮತದಲ್ಲಿ ಸ್ಥಿರವಾದ ಬುದ್ಧಿಯುಳ್ಳವನಾಗಿ, ಅಪಾರ ವಿದ್ಯಾವಿಶಾರದನಾದ ನಾರದನು ಸಭೆಗೆ ಬಂದನು. [ಶೈವನಿಶ್ಚಲಮತಿ–ಶಿವನ ಸಂಬಂಧದ ಮತದಲ್ಲಿ ಅಚಲವಾದ ಬುದ್ಧಿಯುಳ್ಳವನು]

1 ಉ(ದ)

ವ॥ ಅಂತೇಳ್ತಂದು ಸಿಂಧುಬಂಧುರ ಜಟಾಜೂಟನಂಘ್ರಿಪೀಠಂ ನಿಜನಿಟಿಲತಟಮಂಸೋಂಕೆ ಸಾತ್ವಿಕಭಕ್ತಿವೆರಸು ದಂಡಪ್ರಣಾಮಂಗೆಯ್ದೇಳ್ದುನಿಂದು ಮುನ್ನಮೆ [1]ಶ್ರುತಿಗೆಯ್ದಿರ್ದ ತನ್ನ ಬೃಹತಿಯೆಂಬ ಬೃಹದ್ವೀಣೆಯುಂ ತೆಗೆದು ಸರಸ ರವಮುಂಕುರಿಸೆ ತಾನಮಾನಂದೋಳ್ ರಾಗದಿಂ ರಾಗಮಂ ಬಾಜಿಸಿ—

ಜಯು ಮಂಗಳಮಯು ನಿಷ್ಕಳ । ಜಯು ಕುಂಜರಮದಭಂಜನ
ಜಯು ಬಂಧುರ ವಿಷಕಂಧರ । ಜಯು ನೂತನ ವೃಷಕೇತನ
ಜಯು ಭೀಷಣ ಫಣಿಭೂಷಣ । ಜಯು ರಾಜಿತ ಸುರಪೂಜಿತ
ಜಯು ದಾರುಣಖಲವಾರಣ । ಜಯು ಕಿಂಕರಚ[2]ಯುಶಂಕರ
ಜಯು ದೇವ ಶಿವ ನಮಸ್ತೇ ನಮೋ ನಮಃ ॥

ವ॥ ಎಂದು ಸನ್ನುತಿಗೈದು ಕೈಮುಗಿದು ನಿಂದ ಮುನಿವರನಂ ಮನೋಜಹರಂ ನೋಡಿ ಕಾರುಣ್ಯಮಂ ನೀಡಿ ಮತ್ತಮವನಿಂ ಮರ್ತ್ಯಲೋಕದ ವೃತ್ತಾಂತಮಂ ಕೇಳಲುತ್ಸವಿಸಿ ನಿಜ

ವ॥ ಈ ರೀತಿಯಲ್ಲಿ ಬಂದ ನಾರದನು ದೇವಗಂಗಾ ನದಿಯಿಂದ ಬಂಧುರಗೊಂಡ ಜಟಾಮುಕುಟವುಳ್ಳ ಶಿವನ ಪಾದಪೀಠಕ್ಕೆ ತನ್ನ ಹಣೆಯನ್ನು ಹಚ್ಚಿ ಸಾತ್ವಿಕ ಭಾವವನ್ನು ಹೊರಸೂಸುವ ಭಕ್ತಿವಿಶೇಷದಿಂದ ಕೂಡಿ (ನೆಲದ ಮೇಲೆ ಬಿದ್ದು) ದಂಡವತ್ ಪ್ರಣಾಮ ಮಾಡಿ. ಎದ್ದುನಿಂತುಕೊಂಡು ಈ ಮೊದಲೇ ಶ್ರುತಿಮಾಡಿಕೊಂಡಿದ್ದ ತನ್ನ 'ಬೃಹತೀ' ಎಂಬ ಹೆಸರಿನ ದೊಡ್ಡ ವೀಣೆಯನ್ನು ಕೈಗೆತ್ತಿಕೊಂಡು ಮಧುರಸ್ವರವು ಹೊರಹೊಮ್ಮುವಂತೆ ತಾನಮಾನಗಳನ್ನು ಅನುಸರಿಸಿ ರಾಗವಾಗಿ (ಅನೇಕವಿಧ) ರಾಗಗಳನ್ನು ನುಡಿಸುತ್ತ—ಜಯು ಜಯುಮಂಗಳ ಸ್ವರೂಪನೇ, ನಿಷ್ಕಳನೇ ; ಗಜಾಸುರನ ಗರ್ವವನ್ನು ಪರಿಹರಿಸಿದವನೇ ಜಯು, ಬಂಧುರವಾದ ವಿಷಕಂಠನೇ ಜಯು ; ನೂತನ ವೃಷಭಧ್ವಜನೇ ಜಯು : ಭಯಂಕರ ಫಣಿಗಳೇ ಆಭರಣಗಳಾಗಿ ಉಳ್ಳವನೇ ಜಯು : ಪ್ರಕಾಶಮಾನವಾದ ದೇವತೆಗಳಿಂದ ಪೂಜಿಸಿಕೊಳ್ಳುವವನೇ ಜಯು ; (ಲೋಕಕ್ಕೆ) ದಾರುಣವೆನಿಸಿದ ದುಷ್ಟ ಜನರನ್ನು ಸಂಹರಿಸುವವನೇ ಜಯು ; ಸೇವಕಜನ ಸಮೂಹಕ್ಕೆ ಸುಖದಾಯಕನಾಗಿರುವವನೇ ಜಯು ; ದೇವನೇ, ಶಿವನೇ, ನಿನಗೆ ನಮಸ್ಕಾರ–ನಮಸ್ಕಾರ–ನಮಸ್ಕಾರ. ವ॥ ಹೀಗೆಂದು ಸ್ತೋತ್ರಮಾಡಿ, ಕೈಮುಗಿದು ನಿಂತುಕೊಂಡ ಮುನೀಶ್ವರನನ್ನು ಮನ್ಮಥಾರಿಯಾದ ಶಿವನು ನೋಡಿ, (ಅವನ ಮೇಲೆ) ಕಾರುಣ್ಯವನ್ನೆರೆದು, ಮತ್ತೆ ಅವನಿಂದ ಭೂಲೋಕದ ವಾರ್ತೆಯನ್ನು ಕೇಳುವುದ ಕ್ಕೋಸ್ಕರ ಉತ್ಸಾಹಭರಿತನಾಗಿ ಪ್ರಾಣಕಾಂತೆಯಾದ ಪಾರ್ವತೀ ದೇವಿಯ ನಗು ಮುಖವನ್ನು ನೋಡಲಾಗಿ, ಆ ಕೂಡಲೆ ಪಾರ್ವತಿಯು ತನ್ನ ಮನೋರಮಣನಾದ

1 ಸು(ಅ, ಚ, ಮು, ಗ) ಸ್ತು(ಮು, ಜ) 2 ಜ(ಚ)

ಮನೋಹರಿಯ ನಗೆಮೊಗಮಂ ನೋಡಲೊಡನಂಬಿಕೆ ಮನೋರಮಣನಿಂಗಿತಮನಱಿದು ನಾರದನ ಮೊಗದಾವರೆಯಂ ನೋಡಿ—

ಆವಾವ ದೇಶವಮಂ ಪರಿ
ಭಾವಿಸಿ ನೀಂ ಬಂದೆ ಮುನಿಪ ಮನುಜಾವನಿಯೊಳ್
ಪಾವನಶಿವಭಕ್ತಿಲಸ
ದ್ಭಾವಾನ್ವಿತರೊಳರೆ ಪೇಳ್ವುದೆಂದುಮೆ ಕೇಳ್ದಳ್ ೯೧

ವ॥ ಎಂದು ಕೇಳಲೊಡಂ ಮುನ್ನಮಾಂ ಬಿನ್ನವಿಸಲೆಂದಿರ್ದ ಕಜ್ಜದುಜ್ಜವಣೆಗೆ ಮೃಡಾನಿಯ ನುಡಿ ಸಹಾಯಮಾದುದು ಸಮಯಂಬಡೆದೆನೆಂದು ಸಡಗರಿಸಿ ನಾರದಂ ಸಾರೆವಂದು ಮಾರಹರಂಗಂಬಿಕೆಗಂ ಮಗುಳ್ದೆಱಗಿ ರಯ್ಯಮೆನೆ ಕೈಯಂ ಮುಗಿದು ನಿಂದು—

ಅವಧರಿಪು[1]ದು ಬಿನ್ನಪಮಂ[1]
ಕುವಲಯಸಖಮೌಳಿ ದೇವಿಯರ್ಕೇಳ್ದಿರವಂ
ವಿವರಿಪೆನೆಲ್ಲಾ ಭುವನದೆ
ಶಿವಭಕ್ತಿ ವಿಶೇಷಮಾಗಿ ವರ್ತಿಪುದೀಗಳ್ ೯೨

ನರಲೋಕವೊಂದಱೊಳ್ಪುರ
ಹರಭಕ್ತಿಯತೀವ ಗುಪ್ತಮಾಗಿರ್ದಪುದು
ರ್ವರೆಯೊಳ್ತೋರ್ಪ ಶಿವೈಕ್ಯರ್
ಪರಿರಂಜಿಸಿದಪರಜಸ್ರಮಪ್ರಕಟತೆಯಿಂ ೯೩

ಪರಮೇಶ್ವರನ ಮನಸ್ಸಿನ ಅಭಿಪ್ರಾಯ ತಿಳಿದು, ನಾರದ ಮುನಿಯ ಮುಖವನ್ನು ನೋಡಿ ೯೧. 'ಎಲೈ ನಾರದಮುನಿಯೇ, ನೀನು ಯಾವ ದೇಶಗಳನ್ನು ಸಂಚಾರಮಾಡಿ ಬಂದಿದ್ದೀಯೆ ? ನರಲೋಕದಲ್ಲಿ ಪರಿಶುದ್ಧವಾದ ಶಿವಭಕ್ತಿಯ ಪ್ರಕಾಶಮಾನವಾದ ಭಾವದಿಂದ ಕೂಡಿದವರು ಯಾರು ಇದ್ದಾರೆ ? ಹೇಳು ಎಂದು ಕೇಳಿದಳು. ವಚನ॥ ಹೀಗೆಂದು ನಾರದನನ್ನು (ಪಾರ್ವತೀದೇವಿಯು) ಕೇಳಿದಕೂಡಲೆ ನಾರದನು ಈ ಮೊದಲೇ ತಾನು ವಿಜ್ಞಾಪಿಸಿಕೊಳ್ಳಲೆಂದಿದ್ದ ಕಾರ್ಯಾರಂಭಕ್ಕೆ ಪಾರ್ವತೀದೇವಿಯ ಮಾತು ಸಹಾಯವಾಯಿತೆಂದು (ನನ್ನ ಅಭಿಪ್ರಾಯ ವಿಸ್ತರಣೆಗೆ ಯೋಗ್ಯ) ಸಮಯವನ್ನು ಪಡೆದಂತಾಯಿತೆಂದು ಸಂಭ್ರಮಗೊಂಡು ಆ ಕೂಡಲೆ ಪುನಃ ಪರಮೇಶ್ವರನಿಗೂ, ಪಾರ್ವತೀದೇವಿಗೂ ನಮಸ್ಕಾರಮಾಡಿ, ಮನೋಹರವಾಗಿ ಕೈಮುಗಿದು ನಿಂತುಕೊಂಡವನಾಗಿ ೯೨. ಚಂದ್ರಮೌಳಿಯಾದ ಶಿವನೇ, ನನ್ನ ಬಿನ್ನಹಗಳನ್ನು ಕೇಳಬೇಕು. ದೇವಿಯುವರು ಕೇಳಿದ ರೀತಿಯನ್ನು ವಿವರವಾಗಿಹೇಳುತ್ತೇನೆ. ಎಲ್ಲಾ ಲೋಕದಲ್ಲೂ ಶಿವಭಕ್ತಿಯು ವಿಶೇಷವಾಗಿದೆ. ೯೩. (ಆದರೆ) ನರಲೋಕವೊಂದರಲ್ಲಿ (ಮಾತ್ರ) ಶಿವಭಕ್ತಿಯು ಅತ್ಯಂತ ಗುಪ್ತವಾಗಿ ಇದೆ. (ಆ) ಭೂಲೋಕದಲ್ಲಿ ಪ್ರಕಾಶಮಾನವಾದ

1 ದೆನ್ನ ನುಡಿಯಂ(ದ)

ಪರಶಿವನಿಷ್ಠ[1]ರಲ್ಲಿ ಪೆಱರೊಳ್ನುಡಿಯಾಡದೆ ಗೂಢಭಾವದಿಂ
ದರೆಬರುದಾತ್ತವೃತ್ತರಿರುತಿರ್ಪರಲ್ಲಿ ಕೆಲಂಬರನ್ಯರಿ
ಪಿರಿವನನುಮರ್ಚಿ ತಮ್ಮ ಬಗೆಗಾಣಿಸದಂತವರಂತೆ ರಂಜಿಪರ್
ಪರವಶಭಾವದಿಂ ಪೆಱರಿಳಾಸ್ಥಿತಿಯುಂ ಮಱೆದೊಲ್ಲರನ್ಯಮಂ[2] ೯೪

ವ॥ ಅಂತೆಸೆದಿರ್ದುಮವರ್ ದೃಷ್ಟಪ್ರತ್ಯಯಮಂ ತೋಱದಿರ್ಪುದಱಿಂ ಜಡಬುದ್ಧಿ ಜನನಿವಹಂ ನಂಬುಗೆ ಸಂಭವಿಸದಜ್ಞತೆಗಡರ್ಪಾಗಿರ್ದಪುದಂತಱಿಂ ಭಕ್ತಿಭಾವಮುಂ ಗುರುಚರಹರಪ್ರಭಾವಮುಂ ಸುಜ್ಞಾನಾನುಭಾವಮುಮಂತವಿರಳಮುಮಸ್ಪಷ್ಟಮುಮಾಗಿರ್ದಪುದಿವಂ ಪ್ರತಿಷ್ಠೆಗೈದಾ ಗುಪ್ತ ಭಕ್ತರಂ ಕೃತಾರ್ಥರಂ ಮಾಡಿ ಕರುಣಿಸಲ್ಕೆ—

ಪುರಹರ ಕೃಪೆಯಿಂ ನೀವವ
ತರಿಸಿ ಧರಾಂಗನೆಯನಂಘ್ರಿಸಂಸ್ಪರ್ಶನದಿಂ
ಪರಿಶುದ್ಧಿಗೊಳಿಸಿ ಪಸರಿಪು
ದುರುಭಕ್ತಿಜ್ಞಾನಮತಮಹತ್ವಸ್ಥಿತಿಯಂ ೯೫

ಶಿವೈಕ್ಯರು ಸದಾ ಇನ್ನೊಬ್ಬರಿಗೆ ಗೊತ್ತಾಗದ ಹಾಗೆ ಪ್ರಕಾಶಿಸುತ್ತಿದ್ದಾರೆ. ೯೪, ಆ ಮರ್ತ್ಯ ಲೋಕದಲ್ಲಿ ಶಿವಭಕ್ತಿನಿಷ್ಠರಾದ ಉದಾತ್ತ ನಡೆವಳಿಕೆಗಳುಳ್ಳ ಕೆಲವರು ಮತ್ತೊಬ್ಬರೊಡನೆ ಮಾತನಾಡದೆ ಗುಪ್ತವಾಗಿ (ಆ ಶಿವಭಕ್ತಿಯನ್ನಾಚರಿಸುತ್ತ) ಇದ್ದಾರೆ. ಕೆಲವರು ಮತ್ತೊಬ್ಬರು ಇರುವ ರೀತಿಯನ್ನು ಅನುಸರಿಸುತ್ತ ತಮ್ಮ ರೀತಿಯು ಇನ್ನೊಬ್ಬರಿಗೆ ಗೊತ್ತಾಗದ ಹಾಗೆ ಅವರ ಹಾಗೆಯೇ ಪ್ರಕಾಶಿಸುತ್ತಿದ್ದಾರೆ, ಮತ್ತೆ ಕೆಲವರು ಆನಂದ ಪರವಶರಾಗಿ ಭೂಲೋಕದ ಸ್ಥಿತಿಯನ್ನೇ ಮರೆತು, ಬೇರೆ ಯಾವುದನ್ನೂ ಅಪೇಕ್ಷಿಸದಂತೆ ಇದ್ದಾರೆ. (ಕೆಲವರು ಆತ್ಮಕಲ್ಯಾಣವನ್ನೇ ಅಪೇಕ್ಷಿಸುವವರು ಎಂದು ಭಾವ) ವಚನ॥ ಈ ರೀತಿಯಲ್ಲಿ (ಭೂಲೋಕದ) ಆ ಜನರು ಪ್ರಕಾಶಿಸುತ್ತ ಇದ್ದರೂ ಕೂಡ ಪ್ರತ್ಯಕ್ಷ ಪ್ರಮಾಣವನ್ನು ತೋರಿಸದೆ ಇರುವ ಕಾರಣದಿಂದ ಮೂಢ ಬುದ್ಧಿಯಿಂದ ಕೂಡಿದ ಜನಸಮೂಹವು ನಂಬಿಕೆಯೇ ಹುಟ್ಟದಿರುವ ಮೌಢ್ಯಧರ್ಮಕ್ಕೆ ಆಶ್ರಯವಾಗಿ ಇದೆ. ಆದಕಾರಣ ಭಕ್ತಿಭಾವವೂ. ಗುರುಲಿಂಗ ಜಂಗಮ ಮಹತ್ವವೂ, ಸುಜ್ಞಾನಾನುಭವವೂ ಆ ರೀತಿ ಅಲ್ಪವಾಗಿಯೂ, ಅಸ್ಪಷ್ಟವಾಗಿಯೂ ಇದೆ. (ಆದ್ದರಿಂದ) ಇವನ್ನು (ಅಂದರೆ ಗುರುಲಿಂಗಜಂಗಮ ಮಹತ್ವ ಮತ್ತು ಸುಜ್ಞಾನಾನುಭವವನ್ನು ಪ್ರಚಾರಗೊಳಿಸಿ, ಆ ಗುಪ್ತ ಭಕ್ತರುಗಳನ್ನು ಕೃತಾರ್ಥರನ್ನಾಗಿ ಮಾಡಿ. ಕರುಣಿಸುವುದಕ್ಕೋಸ್ಕರ ೯೫. ಹೇ ಪರಮೇಶ್ವರನೇ ಕೃಪೆಮಾಡಿ ನೀನೇ ಅವತಾರಮಾಡಿ, ಭೂದೇವಿಯನ್ನು ನಿಮ್ಮ ಪಾದಸ್ಪರ್ಶದಿಂದ ಪರಿಶುದ್ಧಳನ್ನಾಗಿ ಮಾಡಿ ಅತ್ಯಧಿಕವಾದ

1 ಪ್ಪ(ಜ, ದ, ಚ, ಮು, ಮ:) 2 ರಂ(ದ)

ಎಂದಾ ಮುನಿ ಬಿನ್ನವಿಸಿದೊ
ಡಿಂದುಧರಂ ಪರಮಹರ್ಷಮಂ ತಳೆದೆನಗಂ
ನಂದೀಶಂಗಂ ಭೇದಮ
ದೊಂದದು ಮದ್ರೂಪನೀತನಂ ಕಳುಪಿದಪೆಂ ೯೬

ಈ ನಂದಿನಾಥನಿಂದೆ[1] ಸ
ದಾನಂದಂ ಬಡೆವುದಲ್ತೆ ಜಗಮಪರಶಿವಂ
ತಾನೆನಿಪೀತಂ ಭಕ್ತಿ
ಜ್ಞಾನ ಶಿವಾಚಾರಮಂ ಪ್ರತಿಷ್ಠಿಪನಿಳೆಯೊಳ್ ೯೭

ಎಂದೊಡೆ ಶಿವನಾಗಳ್ಗಿರಿ
ನಂದನೆ ಮನ್ನಾಥ ಭಕ್ತದೇಹಿಕನಾನೆಂ
ಬಂದವೊ ನೋಳ್ಪೊಡಭೇದಂ
ಸಂದುದೊ ನಂದಿಯೊಳೆ ನನ್ನಿವೇಳೆನಗೆಂದಳ್ ೯೮

ವ॥ ಎಂದು ದೇವಿಯುಳ್ಕಜಿಂ ಬೆಸಗೊಳಲೊಡಂ—

ಬಗೆವೊಡ ಭಕ್ತದೇಹಿಕನೆನಿಪ್ಪೆನೆನಿಪ್ಪೆನಿದಕ್ಕೆ ದೇವಿ ಸಂ
ದೆಗಮೆ ಸಮಸ್ತ ದೇವತತಿ ಬಲ್ಲುದಿದಂ ನಿಜ ಭಕ್ತರಾತ್ಮನಾ

ಶಿವಭಕ್ತಿ ಸುಜ್ಞಾನ, ಶಿವಮತಮಹಿಮಾತಿಶಯಗಳನ್ನು ವಿಸ್ತಾರಗೊಳಿಸಬೇಕು. ೯೬. ಹೀಗೆಂದು ಆ ನಾರದ ಮುನಿಯು ವಿಜ್ಞಾಪಿಸಲಾಗಿ, ಪರಮೇಶ್ವರನು ಅತ್ಯಂತ ಹರ್ಷವನ್ನು ಹೊಂದಿ, ನನಗೂ ನಂದೀಶ್ವರನಿಗೂ ಯಾವ ಭೇದವೂ ಇರುವುದಿಲ್ಲ. ನನ್ನ ಸ್ವರೂಪನೇ ಆದ ಈ ನಂದೀಶ್ವರನನ್ನು (ಭೂಲೋಕಕ್ಕೆ) ಕಳುಹಿಸುತ್ತೇನೆ. ೯೭. ಈ ನಂದೀಶ್ವರನಿಂದ ಭೂಲೋಕವು ಸದಾ ಆನಂದವನ್ನು ಹೊಂದುವುದಲ್ಲವೆ ? ಆ ದ್ವಿತೀಯ ಶಂಭು (ಅಪರಶಿವಂ) ವಾದ ನಂದೀಶ್ವರನು ಭೂಲೋಕದಲ್ಲಿ ಭಕ್ತಿ ಜ್ಞಾನ ಶಿವಾಚಾರ ಮುಂತಾದವುಗಳನ್ನು ಪ್ರತಿಷ್ಠೆಗೊಳಿಸುವನು. ೯೮. ಹೀಗೆಂದು ಪರಮೇಶ್ವರನು ಅನ್ನಲು ಆಗ ಪಾರ್ವತೀದೇವಿಯು—''ಪತಿಯಾದ ಪರಮೇಶ್ವರನೇ, 'ನಾನು ಭಕ್ತ ದೇಹಿಕ ದೇಹವಾಗಿ ಉಳ್ಳವನು, ಹೀಗೆಂದೆನ್ನುವ (ನಿನ್ನ ನುಡಿಯ) ರೀತಿಯೋ (ಅಥವಾ) ವಿಚಾರಿಸಿ ನೋಡಿದರೆ (ನಿನಗೂ ಅವನಿಗೂ) ಅಭೇದ ಸಂದಿರುವುದೋ ನನಗೆ ಇದರ ನಿಶ್ಚಿತಾರ್ಥವನ್ನುಹೇಳು'' ಎಂದಳು. ವಚನ॥ ಹೀಗೆಂದು ಪಾರ್ವತಿಯು ಕೇಳಿಕೊಳ್ಳಲು ಆ ಕ್ಷಣವೇ ೯೯. ಪರಮೇಶ್ವರನು 'ವಿಚಾರಮಾಡಿ ನೋಡಿದರೆ, (ನಾನು) ಭಕ್ತದೇಹಿಕ ದೇಹವಾಗಿ ಉಳ್ಳವನು ಎನಿಸಿದ್ದೇನೆ ! ದೇವಿ, ಇದಕ್ಕೆ ಸಂದೇಹವೇನಿದೆ ? ಇದನ್ನು ಸಮಸ್ತ ದೇವತೆಗಳ ಸಮೂಹವೇ ಬಲ್ಲುದು. ನಾನೇ ನಿಜವಾದ ಭಕ್ತರುಗಳ ಆತ್ಮನಲ್ಲವೆ ? ಪಾರ್ವತಿ, ಬಳಿಕ ಇಂತಿರುವ

1 ನೆಯ್ದೆ (ಜ, ದ, ಗ, ಮ, ಮು, ಚ)

ನೆ ಗಡ ಬಳಿಕ್ಕಮಿಂತಿದಱೊಳೊಂದು ವಿಶೇಷಮನೊಲ್ದು ಪೇಳ್ದಪೆಂ
ನಗಸುತೆ ಕೇಳ್ವುದೆಂತೆನೆ ಶಿಲಾದನೆನಿಪ್ಪ ಮುನೀಂದ್ರನಾದಿಯೊಳ್ ೯೯

ಪರಮ ಶ್ರೀಗಿರಿಯಲ್ಲಿ ದಾನವವರಾಶಾಭಾಗದೊಳ್ನಿಂದು ಮ
ಚ್ಚರಣಧ್ಯಾನದೆ ಕಂದಮೂಲಫಲಪರ್ಣಾಂಭೋಮರುತ್ಸೋಮಬಾ
ಸ್ಕರತೇಜಂಗಳನೊಲ್ದು ಸೇವಿಸಿ ತಪಸ್ತಪ್ತಾಂಗನಾಗಿರ್ದು ವ
ತ್ಸರಕೋಟಿತ್ರಯಮಂ ಕರಂ ಕಳಿಪಿದಂ ಯೋಗಪ್ರಭಾವಾನ್ವಿತಂ ೧೦೦

ಮುನಿಪತಿ ಮತ್ತಂ ಸರ್ಷಪ
ದನಿತೆನಿಸುವ ಶಿಲೆಯನೊಲ್ದು ಸೇವಿಸಿ ತಪಮಂ
ಘನಮೆನೆ ನೆಗಳುತೆ ಕಳೆದಂ
ಬಿನದದೆ ಶತಕೋಟಿವತ್ಸರಂಗಳನಾಗಳ್ ೧೦೧

ಆ ಮುನಿಯುದ್ದಾಮತಪೋ
ದ್ದಾಮಂ ಪಿಡಿದೆಳೆಯೆ ಬಂದು ಕರುಣಿಸಿ ನಿಜಮಂ
ಪ್ರೇಮದೊಳೆ ತೋಱ ನಿನ್ನಯ
ಕಾಮಿತ ವರಮಾವುದೀಗಳದನೊ[1]ರೆಯೆಂದೆಂ ೧೦೨

ರೀತಿಯಲ್ಲಿ ಒಂದು ವೈಶಿಷ್ಟ್ಯವನ್ನು (ನಿನಗೆ) ಪ್ರೀತಿಯಿಂದ ಹೇಳುತ್ತೇನೆ, ನೀನು ಕೇಳು. ಹೇಗೆಂದರೆ ಪೂರ್ವಕಾಲದಲ್ಲಿ 'ಶಿಲಾದ' ನೆಂಬ ನಾಮಧೇಯವುಳ್ಳ ಮುನಿಶ್ರೇಷ್ಠನು ೧೦೦. 'ಪರಮಪವಿತ್ರವಾದ ಶ್ರೀಶೈಲಗಿರಿಯ ನೈಋತ್ಯದಿಕ್ ಭಾಗದಲ್ಲಿ ನನ್ನ ಪಾದ ಧ್ಯಾನದಲ್ಲಿ ನಿಂತುಕೊಂಡು ಗೆಡ್ಡೆಗೆಣಸು ಹಣ್ಣು ಎಲೆ ನೀರು ಗಾಳಿ ಬಿಸಿಲು ಬೆಳದಿಂಗಳು ಇವುಗಳನ್ನು ಆಹಾರವಾಗಿ ಸೇವಿಸುತ್ತ ತಪಸ್ಸಿನಿಂದ ದೇಹವನ್ನು ತಪ್ತಗೊಳಿಸಿ, ಯೋಗಮಹತ್ವದಿಂದ ಕೂಡಿ ಮೂರುಕೋಟಿ ವರ್ಷಗಳನ್ನು ಚೆನ್ನಾಗಿ ಕಳೆದನು. [ದಾನವ–ವರ ಆಶಾ–ಭಾಗ ದಾನವರಲ್ಲಿ ಶ್ರೇಷ್ಠನಾದ ನಿರುತಿಯ ಹೆಸರಿನ ದಿಗ್ಭಾಗ ಅಂದರೆ ನೈರುತ್ಯ ದಿಕ್ಕು] ೧೦೧. ಆ ಮೇಲೆ ಆ ಶಿಲಾದನೆಂಬ ಋಷಿಯು ಸಾಸಿವೆ ಕಾಳಿನ ಪ್ರಮಾಣದಷ್ಟೇ ಎನಿಸುವ ಕಲ್ಲನ್ನು ಪ್ರೀತಿಯಿಂದ ತಿಂದು ತಪಸ್ಸನ್ನು ಘನವಾದುದೆನ್ನುವಂತೆ ಮಾಡುತ್ತ ವಿನೋದದಿಂದ ಆ ಕಾಲದಲ್ಲಿ ನೂರು ಕೋಟಿ ವರ್ಷಾವಧಿಯ ವರೆಗೆ ಕಳೆದನು. ೧೦೨. '(ಈ ರೀತಿಯ) ಆ ಶಿಲಾದ ಮುನಿಯ ಶ್ರೇಷ್ಠವಾದ ತಪಸ್ಸೆಂಬ ಹಗ್ಗವು (ನನ್ನನ್ನು) ಹಿಡಿದು ಎಳೆಯಲಾಗಿ, (ನಾನು) ಬಂದು ಕರುಣವನ್ನು ತೋರಿಸಿ, ನನ್ನ ನಿಜವಾದ ರೂಪವನ್ನು (ಅವನಿಗೆ) ಪ್ರೀತಿಯಿಂದ ತೋರಿಸಿ.

---

1 ನೆ(ದ, ಜ, ಮು, ಮ, ಗ)

ವ॥ ಎನಲೊಡನಾ ಶಿಲಾದನಾದರದಿಂ ಪಾದಕಮಲದೊಳ್ ಸೈಗೆಡೆದು ಭಕ್ತಿಪರವಶಂ ಪರಮ ಹರ್ಷದಿಂ ಸನ್ನುತಿಗೆಯ್ದೆೞ್ದು ನಿಟಿಲತಟಘಟಿತಕರಪುಟನಾಗಿ ದೇವದೇವಾ ನಿರತಿಶಯ ಭವದ್ಭಕ್ತಿ ಸುಧಾರಸಪಾತ್ರನಂ ಶಿವಸಮಯವನಜವನಮಿತ್ರನಂ ನಿನ್ನನ್ನನಪ್ಪ ಪುತ್ರನಂ ಬಗೆದು ಬಯಸಿ ತಪಂಗೆಯ್ದೆನೀಗಳಭವ ಭವಾದೃಶತನಯನಂ ಕೂರ್ತು ಕರುಣಿಪುದೆನಗೆಂದು ಬೇಡಿ ಮತ್ತಮಿಂತೆಂದಂ —

ಅನುಪಮಗುಣಗಣಸಂಯುತ
ನೆನಿಸಿದೊಡಂ ನಿಮ್ಮ ಭಕ್ತಿಯೊಂದಿಲ್ಲದೊಡಾ
ತನಯನೆ ರಿಪುವೆನಗವನಂ
ಕನಲ್ಕೆಯಿಂ ತಱಿದು ಬಿಸುಡುವೆಂ ಪುರಮಥನಾ ೧೦೩

ಅದಱಿಂ ತ್ವದೀಯ ಮಂಜುಳ
ಪದಪದ್ಮಪರಾಗಭೃಂಗನೆನಿಸುವ ಸುತನಂ
ಪದೆದೀವುದಲ್ಲದೊಡೆ ಮಿ
ಕ್ಕುದನೊಲ್ಲೆಂ ವರವನದ್ರಿಜಾತಾರಮಣಾ ೧೦೪

ನಿನ್ನ ಕಾಮಿತವಾವುದು ? ಈಗ ಅದನ್ನು ನನಗೆ ತಿಳಿಸು ಎಂದೆನು' ವಚನ॥ ಹೀಗೆಂದು ನಾನು ಕೇಳಲಾಗಿ ಆ ಕೂಡಲೇ ಆ ಶಿಲಾದನು ಪ್ರೀತಿಯಿಂದ (ನನ್ನ) ಪಾದ ಕಮಲ ಗಳಲ್ಲಿ ನಮಸ್ಕಾರಮಾಡಿ, ಭಕ್ತಿ ಪರವಶತೆಯಿಂದ ಕೂಡಿ ಅತ್ಯಂತ ಸಂತೋಷದಿಂದ (ನನ್ನನ್ನು) ಸ್ತೋತ್ರಮಾಡಿ ಎದ್ದುನಿಂತು, ಹಣೆಯ ಮೇಲೆ ಎತ್ತಿ ಮುಗಿದ ಕರಸಂಪುಟ ವುಳ್ಳವನಾಗಿ, ದೇವದೇವನಾದ ಪರಮೇಶ್ವರನೇ, ಅತ್ಯಂತ ಅಧಿಕವಾದ ನಿನ್ನ ಭಕ್ತಿಯೆಂಬ ಅಮೃತರಸಕ್ಕೆ ಪಾತ್ರನಾಗುತಿರುವವನೂ, (ಅಂದರೆ ಶಿವಭಕ್ತಿಗೆ ಆಶ್ರಯ ಸ್ಥಾನನಾದವನೆಂಬ ಭಾವ) ಶಿವಸಮಯವೆಂಬ ಕಮಲವನಕ್ಕೆ ಸೂರ್ಯನೋಪಾದಿ ಯಲ್ಲಿರುವವನೂ ಆದ ನಿನ್ನಂತಹ ಮಗನನ್ನು ಭಾವಿಸಿ, ಬಯಸಿ, ಈಗ ಈ ತಪಸ್ಸನ್ನು ಮಾಡಿದೆನು. ಹೇ ಅಭವನೇ, (ನನ್ನ ಮೇಲೆ) ಪ್ರೀತಿತೋರಿ, ನಿನ್ನಂತಹ ಪುತ್ರನನ್ನು ನನಗೆ ಪಾಲಿಸಬೇಕೆಂದು ಬೇಡಿ, ಪುನಃ ಪುನಃ ಈ ರೀತಿಯಾಗಿ ಹೇಳಿದನು. ೧೦೩. ತ್ರಿಪುರಮಥನನಾದ ಹೇ ಪರಮೇಶ್ವರನೇ, ಅಸದೃಶ ಸದ್ಗುಣಗಳ ಸಮೂಹ ದಿಂದ ಕೂಡಿದವನು ಎನಿಸಿದರೂ ಕೂಡ ನಿಮ್ಮ ಸಂಬಂಧವ ಭಕ್ತಿಯೊಂದಿಲ್ಲದಿದ್ದರೆ, ಅಂಥ ಪುತ್ರನೇ ನನಗೆ ವೈರಿ. ಅಂಥ ಮಗನನ್ನು ಕೋಪದಿಂದ ತರಿದು ಹಾಕಿಬಿಡುತ್ತೇನೆ. ೧೦೪. ಆದ ಕಾರಣದಿಂದ, ಹೇ ಪಾರ್ವತೀ ಪತಿಯಾದ ಪರಮೇಶ್ವರನೇ, ನಿನ್ನ ಸಂಬಂಧವಾದ ಮನೋಹರಗಳಾದ ಪಾದಕಮಲಗಳ ಮಕರಂದರಸಕ್ಕೆ ಭೃಂಗರೂಪ ನೆಂದೆನಿಸುವಂಥ ಮಗನನ್ನು ಕರುಣಿಂದೋರಿ ಕೊಡಬೇಕು. ಹಾಗಲ್ಲದೆ ಇರುವ

ವ|| ಎಂದ ಶಿಲಾದನ ಭಕ್ತಿಭಾವಕ್ಕೆ ಮೆಚ್ಚಿ ಮನಂದಂದು—

ಪರಿಕಿಪೊಡಾದಿಕಾರಣಮಹಾದಿಸದಾದಿಯೆನಿಪ್ಪ ಮತ್ಕಳಾ
ಭರಿತನನೆನ್ನ ಚಿತ್ಪ್ರಮಥಮೂರ್ತಿಜಾಂಗನನಾ ಚತುರ್ಯುಗ
ಸ್ಫುರಿತಸುಧರ್ಮಪಾದನನಪಾರಕೃಪಾಕರನು ದ್ವಿತೀಯ ಶಂ
ಕರನನಂತಸದ್ಗುಣನನೆನ್ನಯ ವಾಹನರೂಪನಾದನಂ ೧೦೫

ಕರೆದೆಂದೆಂ ವೃಷಭೇಂದ್ರನಂ ಪ್ರಮಥರೊಳ್ ನೀನಲ್ತೆ ಮುಖ್ಯಂ ಚರಾ
ಚರರಕ್ಷಾಕರನಪ್ರಮೇಯಮಹಿಮಂ ಮತ್ಪ್ರಾಣರೂಪಂ ಜಗ
ದ್ಗುರು ಸತ್ಯಂ ನಿನಗಿತ್ತೆನೆನ್ನ ದೃಢಭಕ್ತಿಶ್ರೀಯನಾನಾದಿಯೊಳ್
ನಿರುತಂ ನೀನೆ ಶಿಲಾದಸೂನುವೆನಿಸೈ ಶ್ರೀನಂದಿನಾಥಾಖ್ಯೆಯಿಂ ೧೦೬

ಎನೆ ಕೈಕೊಂಡು ಮಹಾಪ್ರಸಾದಮೆನುತಂ ಮತ್ಪಾದಪದ್ಮಕ್ಕೆ ವಂ
ದನೆಗೈದೆನ್ನ ನಿರೂಪದಿಂ ಮುನಿ ಶಿಲಾದಾಖ್ಯಂಗಯೋನಿಪ್ರಭೂ
ತನೆನಿಪ್ಪೇಳ್ಗೆಯನಾಳ್ದು ನಂದಿವೆಸರಿಂದಂ ಪುತ್ರನಾದಂ ಪುರಾ
ತನಸಂತಾನಮನೋವನೇರುಹದಿನಾಧೀಶಂ ವೃಷಾಧೀಶ್ವರಂ ೧೦೭

ಮಿಕ್ಕ ಯಾವ ವರವನ್ನೂ ನಾನು ಒಲ್ಲೆನು. ವ|| ಹೀಗೆಂದು (ಕೇಳಿದ) ಶಿಲಾದ ಮುನಿಯ ಭಕ್ತಿಭಾವಕ್ಕೆ ಒಲಿದು ಮನಸ್ಸು ಮಾಡಿ—೧೦೫. ಪರೀಕ್ಷಿಸಿ ನೋಡಿದರೆ ಜಗತ್ತಿನ ಆದಿಗೆ ಮೂಲಕಾರಣನೂ, ಸತ್ ಚಿತ್ ಆನಂದಗಳಿಗೆ ಮೂಲಭೂತನೂ, ನನ್ನ ಕಳೆಯಿಂದ ತುಂಬಿರುವವನೂ ನನ್ನ ಪ್ರಕಾಶರೂಪವಾದ ಜ್ಞಾನದ ಉತ್ಕೃಷ್ಟ ಸ್ವಭಾವವೇ ತನ್ನ ಶರೀರವಾಗಿ ಉಳ್ಳವನೂ, ಆ ನಾಲ್ಕು ಯುಗಗಳಲ್ಲಿ ಸದ್ಧರ್ಮವೇ ನಾಲ್ಕು ಪಾದಗಳುಳ್ಳವನೂ ಆಗಿ ಪ್ರಕಾಶಿಸುತ್ತ (ನನ್ನ) ಅಪಾರ ಕಾರುಣ್ಯಕ್ಕೆ ಆಸ್ಪದನಾದನಾಗಿ, ಅಪರಿಮಿತ ಸದ್ಗುಣಗಳಿಂದ ಕೂಡಿದವನಾಗಿ ನನ್ನ ವಾಹನ ವಾದಂತಹ ೧೦೬. ವೃಷಭೇಂದ್ರನನ್ನು ಕರೆದು 'ನೀನು ಪ್ರಮಥಗಣಂಗಳಲ್ಲಿ ಪ್ರಮುಖನಾದವನಲ್ಲವೇ ?' ಸ್ಥಾವರಜಂಗಮಾತ್ಮಕವಾದ ಚರಾಚರ ಜಗತ್ತನ್ನು ರಕ್ಷಿಸುವವನೂ, ಅಧಿಕವಾದ ಮಹಿಮೆಗಳುಳ್ಳವನೂ, ನನ್ನ ಪ್ರಾಣ ಸ್ವರೂಪನೂ, ಜಗತ್ತಿಗೆ ಗುರುವೂ (ಎಂಬುದು) ಸತ್ಯವಾದುದು. ನಾನು ನಿನಗೆ ದೃಢ ಭಕ್ತಿ ಸಂಪತ್ತನ್ನು ಕೊಟ್ಟಿದ್ದೇನೆ. ಇದು ನಿಶ್ಚಯ. ನೀನೇ 'ನಂದೀಶ್ವರ' ಎಂಬ ಹೆಸರಿನಿಂದ ಶಿಲಾದ ಋಷಿಯ ಮಗನೆಂದೆನಿಸಯ್ಯ. ೧೦೭. ಹೀಗೆಂದು (ನಾನು) ಹೇಳಲು ಪುರಾತನರ ಸಮೂಹದ ಮನಸ್ಸುಗಳೆಂಬ ಕಮಲಗಳಿಗೆ ಸೂರ್ಯನೋಪಾದಿಯಲ್ಲಿರುವ ವೃಷಭೇಶ್ವರನು 'ಮಹಾನುಗ್ರಹ' ಎಂದು (ನನ್ನ ಆಜ್ಞೆಯನ್ನು) ಕೈಕೊಂಡು ನನ್ನ ಪಾದ ಕಮಲಗಳಿಗೆ ನಮಸ್ಕರಿಸಿ, ನನ್ನ ಅಜ್ಞಾನುಸಾರವಾಗಿ ಅಯೋನಿಜವಾಗಿ ಏಳ್ಗೆಹೊಂದಿ ಶಿಲಾದ ಮುನಿಗೆ ನಂದೀಶ್ವರನೆಂಬ ಹೆಸರಿನ ಮಗನೆನಿಸಿದನು.

ಶ್ರೀಕರ ಗುಣಾಂಬುಧಿ ಸುಧಾಕರ ಕಳಾಧರ ಕೃ
ಪಾಕಲಿತಲೋಚನದಿವಾಕರಸಹಸ್ರಾ
ಲೋಕರುಚಿವಿಗ್ರಹ ಪಿನಾಕಧರದರ್ಶನಕ
ಳಾಕರ ಸುಪುಣ್ಯಪರಿಪಾಕಯುತ ಸೇವ್ಯಾ
ಭೀಕರ ಯಮಪ್ರಹರ ನಾಕಸದನಾರ್ಚ್ಯಪದ
ಕೋಕನದ ನಿರ್ಜಿತವರಾಕ ಪರವಾದಾ
ನೀಕ ವಿನತಾಸುತಪತಾಕನುತ ಪಾಲಿಸು ಗ
ಣೈಕಪತಿ ಪಾಲಿತಸುಲೋಕ ಬಸವೇಶಾ ೧೦೮

ಕರಿರಾಣ್ಮುಖ ಷಣ್ಮುಖಮಾತೆ ಮನೋ
ಹರಮಂದರಮಂದಿರೆ ಶೌರಿನತೇ

೧೦೮. ಮಂಗಳಕರಗಳಾದ ಸಂಪತ್ತನ್ನುಂಟುಮಾಡುವವನೂ, ಸದ್ಗುಣಗಳೆಂಬ ಸಮುದ್ರಕ್ಕೆ ಚಂದ್ರನೂ, ಚಂದ್ರನೋಪಾದಿಯಿಲ್ಲಿರುವ ದಯಾರಸ ಪೂರ್ಣವಾದ ಲೋಚನಗಳುಳ್ಳವನೂ, ಸಹಸ್ರ ಸೂರ್ಯರ ಕಾಂತಿಯೋಪಾದಿಯಲ್ಲಿರುವ ತೇಜಸ್ಸಿನಿಂದ (ಹೊಳೆಯುವ) ಶರೀರವುಳ್ಳವನೂ, ಶಿವನ ದರ್ಶನದಿಂದುಂಟಾದ ಜ್ಞಾನಕ್ಕೆ ಗಣಿಯಾದವನೂ· ಸುಕೃತದ ಪರಿಪಾಕದಿಂದ ಜನ್ಮವೆತ್ತಿ ಬಂದ ಸಜ್ಜನ ಸಮೂಹದಿಂದ ಸೇವಿಸಲ್ಪಡುವವನೂ, ಭಯಂಕರನಾದ ಯಮಧರ್ಮನನ್ನು ಸಂಹರಿಸಿದವನೂ (ಯಮಭಯಸಂಹಾರಕನೆಂದು ತಾತ್ಪರ್ಯ), ದೇವತೆಗಳಿಂದ ಪೂಜಿಸಲ್ಪಟ್ಟ ಕೆಂದಾವರೆ ಯಂತಹ ಪಾದಗಳುಳ್ಳವನು, ತುಚ್ಛರಾದ ಪರವಾದಿಗಳ ವಾದಸಮೂಹವನ್ನು ಗೆದ್ದ ವನೂ, ವಿನತೆಯ ಕುಮಾರನಾದ ಗರುಡನನ್ನು ಧ್ವಜದಲ್ಲಿ ಉಳ್ಳ ವಿಷ್ಣುವಿನಿಂದ ಕೊಂಡಾಡಿಸಿಕೊಂಡವನೂ, ಪ್ರಮಥರಿಗೆ ಪ್ರಥಮ ಪತಿಯೆನಿಸಿದವನೂ, ಲೋಕಗಳನ್ನು ರಕ್ಷಿಸಿದವನೂ ಆದ ಬಸವೇಶ್ವರ, ರಕ್ಷಿಸು. [ಬಸವೇಶ್ವರನು ನಂದಿಯ ಅವತಾರವೆಂದು ಗ್ರಹಿಕೆಯಿರುವುದರಿಂದ ಕೈಲಾಸದ ನಂದಿಗೆ ಸಂಬಂಧಿಸಿದ ಅಂಶಗಳನ್ನೆಲ್ಲ ಬಸವೇಶ್ವರ ನಿಗೂ ಆರೋಪಿಸಿ ಬಶವೇಶ್ವರ ನಂದೀಶ್ವರರಲ್ಲಿ ಅಭೇದ ರೂಪವಾದ ವರ್ಣನೆಯ ಅನೇಕ ಅಂಶಗಳು ಬರುತ್ತವೆ. ಉದಾಹರಣೆಗೆ, ವಿನತಾಸುತಪತಾಕನುತ...ಮುಂತಾದವು ಗಳನ್ನು ಈ ರೀತಿಯಲ್ಲಿ ಭಾವಿಸಬೇಕು] ೧೦೯. ಗಣಪತಿ ಷಣ್ಮುಖರುಗಳಿಗೆ ತಾಯಿ ಯಾದವಳೇ, ಮನೋಹರ ಮಂದರ ಪರ್ವತವನ್ನೇ ಮನೆಯಾಗಿ ಉಳ್ಳ ಶ್ರೀ ವಿಷ್ಣು ವಿನಿಂದ ನಮಸ್ಕರಿಸಿಕೊಳ್ಳಲ್ಪಡುವವಳೇ, ಬಾಲಸೂರ್ಯನ ಪ್ರಕಾಶಮಾನವಾದ (ಆರುಣ್ಯ ವರ್ಣ) ಕಾಂತಿಯೋಪಾದಿಯಲ್ಲಿರುವ ಕಾಂತಿಯಿಂದ ಕೂಡಿದವಳೇ, ಗಿರಿರಾಜಸುತೆಯೇ, ತಾಯೇ ನನ್ನನ್ನು ರಕ್ಷಿಸು. ನಮಸ್ಕಾರ ಮಾಡುತ್ತಿರುವ ಸಕಲ

ತರುಣಾರುಣ ಭಾಸುರ ಕಾಂತಿಯುತೇ
ಶರಣಾಗೆನಗಂಬಿಕೆ ಶೈಲಸುತೇ ೧೧೯

ಇದು ವಿನಮದಖಿಳ ಸುರಾಸುರೇಂದ್ರಮುಕುಟತಟಘಟಿತ ಮಣಿಗಣಾಗಣಿತ ರುಚಿನಿಚಯ ತರುಣಾರುಣಾತಪಪರಿಲಸಿತ ಪರಮ ಶಿವಲಿಂಗ ಪಾದಾರವಿಂದಪರಾಗಭಸಿತ ಭಾಸುರಲಲಾಟಪಟ್ಟಸರಸಜನಮಾನಿತೋಭಯಕವಿತಾವಿಶಾರದ ಶ್ರೀಷಡಕ್ಷರಿದೇವಭಕ್ತಿವಿರಚಿತ

ಶ್ರೀಮದ್ ಬಸವರಾಜವಿಜಯಮಹಾಪುರಾಣದೊಳ್ ನಂದೀಶ್ವರಾವತರಣಕಥನಂ ಪ್ರಥಮಾಶ್ವಾಸಂ ಸಮಾಪ್ತಂ

ಅಂತು ಆಶ್ವಾಸ ೧ಕ್ಕೆ ಪದಗಣನೆ ೧೧೯ಕ್ಕಂ ಮಂಗಳಮಹಾ ಶ್ರೀ ॥

ದೇವತಾ ಶ್ರೇಷ್ಠರ, ರಾಕ್ಷಸ ಶ್ರೇಷ್ಠರ ಕಿರೀಟಗಳ ಕೊನೆಯಲ್ಲಿ ಕೆತ್ತಲ್ಪಟ್ಟ ರತ್ನ ಸಮುದಾಯದ ಅಪರಿಮಿತ ಕಾಂತಿಗಳ ಸಮೂಹವೆಂಬ ಬಾಲಸೂರ್ಯನ ಆರುಣ್ಯವರ್ಣದ ಬಿಸಿಲಿನಿಂದ ಹೊಳೆಯುತ್ತಿರುವ ಪರಶಿವನ ಚರಣ ಕಮಲಗಳ ಪರಾಗರೇಣುವೆಂಬ ಭಸ್ಮದಿಂದ ಪ್ರಕಾಶಮಾನವಾದ ಹಣೆಯುಳ್ಳವನಾಗಿಯೂ, ರಸಜ್ಞರಾದವರಿಂದ ಪೂಜ್ಯನಾದವನಾಗಿಯೂ, ಕರ್ನಾಟಕ ಸಂಸ್ಕೃತಗಳೆಂಬ ಉಭಯ ಭಾಷಾಕವಿತ್ವದಲ್ಲಿ ನೈಪುಣ್ಯ ಪಡೆದವನಾಗಿಯೂ ಇರುವ ಶ್ರೀ ಷಡಕ್ಷರ ದೇವನಿಂದ ಭಕ್ತಿಪೂರ್ವಕವಾಗಿ ರಚಿಸಲ್ಪಟ್ಟ ಶ್ರೀಮತ್ ಬಸವರಾಜ ವಿಜಯವೆಂಬ ಮಹಾಪುರಾಣದಲ್ಲಿ ನಂದೀಶ್ವರನ ಅವತಾರದ ಕಥೆಯಿಂದ ಕೂಡಿದ ಒಂದನೆಯ ಆಶ್ವಾಸವು ಸಮಾಪ್ತವಾಯಿತು.

ದ್ವಿತೀಯಾಶ್ವಾಸಂ

ಶ್ರೀವಾಙ್ನುತ ಗಿರಿತನಯಾ
ಲಾವಣ್ಯರಸಾಂಬುರಾಶಿಹಂಸಂ ಜಗದು
ದ್ಭಾ[1]ವನಕರ ವೃಷಭಧ್ವಜ
ನಾವಗಮೆಮಗೀಗೆ ಸೌಖ್ಯಮಂ ಶಿವಲಿಂಗಂ ೧

ವಿಳಸನ್ಮಾತೆ ಮಹಾಷಡಕ್ಷರಿ ಮಹೇಶಂ ತಂದೆ ಸದ್ಭಕ್ತಿ ಬೆ
ನ್ನೊಳೆ ಬಂದಳ್ ನವನೀತಮೀಶಚರಣಧ್ಯಾನಂ ಶಿವಜ್ಞಾನಮು
ಜ್ವಳಪೀಯೂಷರಸಂ ತೊದಳ್ ಶ್ರುತಿಶಿರೋವಾಕ್ಯಂ ಶಿವಚಾರಮಿಂ
ಪೆಳಸಿರ್ದರ್ಭಕಲೀಲೆಯಾಗೆ ಬಳೆದಂ ನಂದೀಶಸಾನಂದದಿಂ ೨

ಸುತನ ಶಿವಭಕ್ತಿಭಾವದಿ
ನತುಳಿತ ಮುದಯುಕ್ತನಾದನೈದೆ ಶಿಲಾದಂ
ಸತತ ಗಣಾನಂದಿತನಂ
ದಿ ತಪೋಭರಮಾನಲೆಂದು ಬಗೆದಂದಿರ್ದಂ ೩

ಬಸವೇಶ್ವರನಾಗಿ ಅವತಾರ

೧. ಲಕ್ಷ್ಮಿ ಮತ್ತು ಸರಸ್ವತಿಯರಿಂದ ಸ್ತೋತ್ರ ಮಾಡಿಸಿಕೊಳ್ಳಲ್ಪಡುವ ಗಿರಿರಾಜತನಯೆಯಾದ ಪಾರ್ವತಿಯ ಲಾವಣ್ಯವೆಂಬ ಸರೋವರಕ್ಕೆ ಹಂಸಪಕ್ಷಿಯಾದವನೂ, ಜಗತ್ತನ್ನು ಉತ್ಪತ್ತಿ ಮಾಡಿದವನೂ, ವೃಷಭಧ್ವಜನೂ ಆದ ಶಿವಲಿಂಗನು ನಮಗೆ ಸದಾ ಸೌಖ್ಯವನ್ನುಂಟುಮಾಡಲಿ. ೨. ಮಹಾ ಷಡಕ್ಷರ ಮಂತ್ರವೇ ಪ್ರಕಾಶಮಾನಳಾದ ತಾಯಿ ; ಪರಮೇಶ್ವರನೇ ತಂದೆ ; ಸದ್ಭಕ್ತಿಯೇ ಬೆನ್ನ ಬಳಿವಿಡಿದುಬಂದ ತಂಗಿ ; ಶಿವ ಪದಧ್ಯಾನವೇ ಬೆಣ್ಣೆ ; ಶಿವ ಸಂಬಂಧವಾದ ಜ್ಞಾನವೇ ಶ್ರೇಷ್ಠ ಅಮೃತರಸ ; ಉಪನಿಷತ್ತುಗಳ ಮಾತುಗಳೇ ತೊದಲು ನುಡಿ ; ಶಿವಾಚಾರವೇ ಇಂಪುಗೂಡಿದ ಬಾಲ ಲೀಲೆಯಾಗಲು ನಂದೀಶ್ವರನು ಸಂತೋಷದಿಂದ ಬೆಳೆದನು. ೩. ಶಿಲಾದ ಮುನಿಯು ಮಗನ ಭಕ್ತಿಯ ಭಾವವನ್ನು (ಕಂಡು) ಅತ್ಯಂತ ಸಂತೋಷಭರಿತನಾದನು. ಆ ಕಾಲದಲ್ಲಿ ನಂದೀಶ್ವರನು ನಿರಂತರವೂ ಪ್ರಮಥರುಗಳಂತೆ ಸಂತೋಷಗೊಂಡವನಾಗಿರುತ್ತ ಅಧಿಕ

---

1 ದ್ಯಾ(ಮ)

ನಂದೀಶಂ ಸನ್ಮುದದೊಡ
ನಂದೀಶನನೆನ್ನನಪ್ಪಿ ಬಗೆಯೊಳೆ ತಪದೊ
ಳ್ನಿಂದಂ ತಪಸ್ವಿ ಪರನಿವ
ನಿಂದಂ ಪರನಾವನೆಂಬಿನಂ ಭುವನಜನಂ ೪

ಬೆಳೆದಾಲಂ ಮಳೆಗಾಲದೊಳ್ಪೊಳೆಯ ತೀರಂ ತೀರದಾ ಮಾಗಿಯೊಳ್
ಬಳವದ್ಗ್ರೀಷ್ಮಮಹೋಷ್ಮಕಾಲದೆ ವಿಳತ್ಪಂಚಾಗ್ನಿಮಧ್ಯಂ ಸಮು
ಜ್ವಳವಾಸಂ ತನಗಾಗೆ ನಿಂದು ಮುನಿವೃಂದಂ ಕಂಡು ಕೊಂಡಾಡೆ ನಿ
ಶ್ಚಳಚಿತ್ತಂ ಘನಸತ್ವನುಗ್ರತಪಮಂ ನಂದೀಶ್ವರಂ ಮಾಡಿದಂ ೫

ಧರೆಯಲ್ಲಾಡೆ ಕುಲಾಚಲಂ ಕುಸಿಯ ಕೂರ್ಮಂ ಕುರ್ಗೆ ನಾಗೇಂದ್ರಕಂ
ಧರವೊಪ್ಪಂಗೆಡೆ ದಿಗ್ವರರ್ ಬೆದಱೆ ಚಂದ್ರಾದಿತ್ಯರಾತ್ಮಾಂಶುಗುಂ
ದಿರೆ ಧಾತ್ರಂ ಬಗೆಗೆಟ್ಟು ಬಾಯ್ವಿಡೆ ಮುಕುಂದಂ ಕಂದೆ ಕಣ್ಗೆಟ್ಟು ನಿ
ರ್ಜರರಳ್ಕುತ್ತಿರೆ ತತ್ತಪೋದ್ಯುತಿಯದೇಂ ಪರ್ಬಿತ್ತೊ ಮೂಲೋಕಮಂ ೬

ವಾದ ತಪಸ್ಸನ್ನು ಆಚರಿಸಬೇಕೆಂದು ಯೋಚಿಸಿದನು. ೪. (ಹೀಗೆಂದು ಯೋಚಿಸಿ) ನಂದೀಶನು ಅಧಿಕವಾದ ಪ್ರೀತಿಯಿಂದ ಈಶನಾದ ನನ್ನನ್ನು ಮನಸ್ಸಿನಲ್ಲಿ ಅಪ್ಪಿಕೊಂಡವನಾಗಿ, ಭೂಲೋಕದಲ್ಲಿನ ಜನರು ಇವನಿಗಿಂತಲೂ ಉತ್ಕೃಷ್ಟವಾದ ತಪಸ್ವಿ ಮತ್ತೊಬ್ಬನಾವನಿದ್ದಾನೆ ? ಎನ್ನುವಂತೆ ತಪಸ್ಸಿನಲ್ಲಿ ನಿಂತನು. ೫. ಮಳೆಗಾಲದಲ್ಲಿ ದೊಡ್ಡದಾದ ಆಲದಮರವನ್ನಾಶ್ರಯಿಸಿ, ಅಧಿಕವಾದ ಚಳಿಯ ಕಾಲದಲ್ಲಿ ಹೊಳೆಯ ದಡವನ್ನಾಶ್ರಯಿಸಿ, ಪ್ರಖರವಾದ ಬೇಸಿಗೆಯ ಅತ್ಯುಷ್ಣಕಾಲದಲ್ಲಿ ಪಂಚಾಗ್ನಿಗಳ ಮಧ್ಯದಲ್ಲಿ–ಹೀಗೆ ಉಜ್ವಲವಾದ ವಾಸದಿಂದ ಕೂಡಿದ ಆ ನಂದೀಶ್ವರನು ನಿಂತುಕೊಂಡು ಮುನಿಸಮೂಹವೆಲ್ಲ ನೋಡಿ ಹೊಗಳುತ್ತಿರಲು ಅಚಲ ಮನಸ್ಸಿನವನೂ ಅತ್ಯಧಿಕ ಸತ್ವಭರಿತನೂ ಆದ ನಂದೀಶ್ವರನು ಭಯಂಕರವಾದ ತಪಸ್ಸನ್ನು ಮಾಡಿದನು. [ಪಂಚಾಗ್ನಿ–ಎಂದರೆ–ನಾಲ್ಕು ಕಡೆ ಬೆಂಕಿಯನ್ನು ಹಾಕಿಕೊಂಡು ಅವರ ಮಧ್ಯದಲ್ಲಿ ಸೂರ್ಯನ ಬಿಸಿಲಲ್ಲಿ ನಿಂತು ತಪಸ್ಸುಮಾಡುವುದು]. ೬. (ಅವನ ಆ ಉಗ್ರ ತಪಸ್ಸಿಗೆ) ಭೂಮಿಯು ಅಲ್ಲಾಡಿತು ; ಕುಲಾಚಲ ಪರ್ವತಗಳು ಕುಸಿದವು ; ಆದಿಕೂರ್ಮನು ಕುಗ್ಗಿದನು ; ಆದಿಶೇಷನ ಗೋಣು ಕುಸಿಯಿತು ; ಅಷ್ಟದಿಕ್ಪಾಲಕರು ಭಯಗೊಂಡರು ; ಸೂರ್ಯ ಚಂದ್ರರ ಪ್ರಕಾಶಗಳು ಕುಂದಿದವು ; ಬ್ರಹ್ಮನು ಬುದ್ಧಿಕೆಟ್ಟು ಕೂಗಿಕೊಂಡನು ; ವಿಷ್ಣುವು ಕೊರಗಿದನು ; ದೇವತೆಗಳು ದಿಕ್ಕುಗೆಟ್ಟು ಚೆದರಿದರು–ಹೀಗೆ ಆ ನಂದೀಶ್ವರನ

ವ॥ ಆಗಳಾ ನಿರವಧಿಕ [1]ಮಹೋಗ್ರ[1] ತಪಃಪ್ರಭಾವಂಗಂಡು ಮುಕುಂದ ಶತಾನಂದ ಸಂಕ್ರಂದನಾದಿಗಳ್ ಸ್ವಪದಭಂಗಶಂಕಾತಂಕಮನಸ್ಕರೊಳಗೊಳಗದವಳಲ್ ಮಸಗಲೊಡನತಿ ಪ್ರಯತ್ನ ದಿಂದಾನಿರ್ದೆಡೆಗೆ ಪರಿತಂದು ಕಟ್ಟಿದಿರೊಳ್ದಾಸಭಾವದಿಂ ದಂಡಪ್ರಣಾಮಂಗೈದು—

ಮಂಗಳಗುಣಾಕರ ಕುರಂಗಧರಶೇಖರ ಭುಜಂಗಪತಿಭೂಷಣ ಶುಭಾಂಗನಿಜಲೀಲಾ
ಪಾಂಗಭೃತಲೋಕರವಿಜಾಂಗಭವಭೀಕರ ಪತಂಗ ಶತಕೋಟಿರುಚಿಸಂಗತಸುದುರ್ಗಾ
ಲಿಂಗನ ಕಲೇವರ ಮತಂಗಜ ಮಹಾಸುರವಿಭಂಗ ನಿಟಿಲಾಕ್ಷಹೃದಯಂಗಮಚರಿತ್ರೋ
ತ್ತುಂಗ ಮುನಿಪೂಜಿತ [2]ತರಂಗತತಿರಾಜಿತ[2]ಸುಗಾಂಗಜಲಜೂಟ ಶಿವಲಿಂಗ ಜಯದೇವಾ ॥ ೭

ವ॥ ಎಂದು ಸನ್ನುತಿಗೈದು ಸಾಲ್ವಿಡಿದು ನಿಂದ ನಿಳಿಂಪರ ಪರಿಮ್ಲಾನವದನಮಂ ನೀಡುಂ ನೋಡುತ್ತಮಿವರ ಕಾರ್ಪಣ್ಯೋಕ್ತಿ ಕಿವಿದಾಗದ ಮುನ್ನಂ ಕರುಣಿಪೆನೆಂದಿಂತೆಂದಂ—

ತಪೋಜ್ವಾಲೆ ಮೂರು ಲೋಕಗಳಲ್ಲಿ ಅದೇನು ಹಬ್ಬಿತೋ ! ವ॥ ಆಗ ವಿಷ್ಣು ಬ್ರಹ್ಮ ಇಂದ್ರಾದಿ ದೇವತೆಗಳು (ನಂದೀಶ್ವರನ) ಆ ನಿರವಧಿಕವಾದ ತಪಸ್ಸಿನ ಮಹಿಮೆ ಯನ್ನು ತಿಳಿದವರಾಗಿ, ತಮ್ಮ ಪದವಿಗಳಿಗೆ ಎಲ್ಲಿ ಭಂಗ ಬರುವುದೋ ಎಂಬ ಊಹೆ ಯಿಂದ ಭಯಗೊಂಡ ಮನಸ್ಸುಳ್ಳವರಾಗಿ ಒಳಗೊಳಗೇ ಸಂತಾಪವುಳ್ಳವರಾದರು. ಆ ಕೂಡಲೇ ಅತ್ಯಂತ ಪ್ರಯತ್ನದಿಂದ ನಾನಿದ್ದಲ್ಲಿಗೆ ಬಂದು, ನನ್ನೆದುರಿಗೆ ದಾಸಭಾವ ದಿಂದ ದೀರ್ಘದಂಡ ಪ್ರಣಾಮ ಮಾಡಿ—೭. ಮಂಗಳಕರ ಗುಣಗಳಿಗೆ ಆಶ್ರಯನೂ ಕುರಂಗಧರನಾದ ಚಂದ್ರನನ್ನು ಶಿರದಲ್ಲಿ ಧರಿಸಿರುವವನೂ. ಆದಿಶೇಷನನ್ನೇ ಆಭರಣ ವಾಗಿ ಉಳ್ಳವನೂ, ಮಂಗಳಕರ ಶರೀರಿಯೂ, ನಿನ್ನ ಲೀಲಾವಿಲಾಸದಿಂದ ಕೂಡಿದ ಕಡೆಗಣ್ಣಿನಿಂದಲೇ ಲೋಕಗಳನ್ನು ರಕ್ಷಿಸುವವನೂ, ಯಮ ಮತ್ತು ಮನ್ಮಥರುಗಳಿಗೆ ಭಯಂಕರನಾದವನೂ, ನೂರು ಕೋಟಿ ಸೂರ್ಯರುಗಳ ಕಾಂತಿಯಂತಿರುವ ಕಾಂತಿಯಿಂದ ಕೂಡಿದವನೂ, ಸಮೀಚೀನಳಾದ ದುರ್ಗೆ (ಪಾರ್ವತಿ) ಯ ಆಲಿಂಗನದೊಡನೆ ಕೂಡಿದ ಶರೀರವುಳ್ಳವನೂ, ಗಜಾಸುರನೆಂಬ ಮಹಾರಾಕ್ಷಸನನ್ನು ನಾಶಗೊಳಿಸಿದವನೂ, ಹಣೆಯಲ್ಲಿ ಅಗ್ನಿನೇತ್ರವುಳ್ಳವನೂ, ಮನೋಹರ ಚರಿತ್ರೆಯುಳ್ಳವನೂ, ಶ್ರೇಷ್ಠರಾದ ಮುನಿಜನರಿಂದ ಪೂಜೆಗೊಳ್ಳುವವನೂ, ಶ್ರೀ ವಿಷ್ಣುವಿನಿಂದ ಸೇವೆ ಮಾಡಿಸಿಕೊಳ್ಳು ವವನೂ, ಸಮೀಚೀನಳಾದ ಗಂಗೆಯನ್ನು ಜಟಾಮಕುಟದಲ್ಲಿ ಧರಿಸಿದವನೂ, ಆದ ಹೇ ದೇವನೇ, ಶಿವಲಿಂಗನೇ ನಿನಗೆ ಜಯವಾಗಲಿ [ರವಿಜ + ಅಂಗಜ—ಸೂರ್ಯಪುತ್ರನಾದ ಯಮ ಮತ್ತು ಮನ್ಮಥ] ವ॥ ಹೀಗೆಂದು ಸ್ತೋತ್ರಮಾಡಿ, ಸಾಲುಸಾಲಾಗಿ ನಿಂತ ದೇವತೆಗಳ ಬಾಡಿಹೋದ ಮುಖವನ್ನು ದಿಟ್ಟಿಸಿನೋಡಿ, ಇವರ ದೈನ್ಯದಿಂದ ಕೂಡಿದ ಮಾತುಗಳು ಕಿವಿಗೆ ತಾಗದ ಮೊದಲೇ ಕರುಣಿಸುತ್ತೇನೆಂದು ಹೀಗೆ ಹೇಳಿದನು.

1....(ಅ) 2 ರಥಾಂಗಧರಸೇವಿತ(ಅ)

ಪರತರ ನಂದಿನಾಥನ ತಪಸ್ಥಿತಿಯತ್ತಣಿನಿಂತು ಭೀತರ
ಪ್ಪರೆ ಬಿಡಿಮಾತನಿಂದೊಗೆದ ಭೀತಿಯನಾ ಮುನಿ ನಿಮ್ಮ ಭಾಗ್ಯಮಂ
ಪರಿಕಿಸಿ[1] ಚಿತ್ತದೊಳ್ನೆನೆವನೇ ಘನಮಾತನ ಮೈಮೆಯೆನ್ನ[2] ಸು
ಸ್ಥಿರತರಮಾದ ಭಾಗ್ಯದಿರವಿಂಗಮುವಂ ಮನಮಿಕ್ಕನೊಚ್ಚತಂ ೮

ಎನ್ನಯ ಸುಭಕ್ತಿಯುತನವ
ನೆನ್ನಾತ್ಮಂ ಬಗೆವನಲ್ತು ನಿಮ್ಮಯ ಪದಮಂ
ಖಿನ್ನತೆಯನುಳಿದು ನಿರ್ಜರ
ರಿನ್ನಿರಿರೆಂದಾಗಳಭಯಹಸ್ತಮನಿತ್ತೆಂ ೯

ವ॥ ಅಂತಾದೊಡಮವರ್ಗೆ ಸಂಶಯಂ ಪಱಿಪಡದಿರಲೊಡಮವರ್ಗೂಡಿ ನಂದೀಶ್ವರಂ ತಪಂಗೈವ ತಾಣಕ್ಕಾನೇಳ್ತಂದು ಸನ್ನಿಧಿಯೊಳ್ ಪ್ರಸನ್ನತೆವೆತ್ತು ನಿಂದಿರ್ದಾಗಳ್—

ಸುರರ ಗಭೀರ ಭೇರಿಯ ರವಂ ಸುರಭೂಜದ ಪುಷ್ಪವೃಷ್ಟಿ ಭಾ
ಸುರರವಮೈದೆ ಜಕ್ಕುಲಿಸೆ ಕರ್ಣಮನೊಯ್ಯನೆ ನಂದಿ ನೇತ್ರಪಂ
ಕರುಹದ ಸಂಪುಟಂದೆಱೆದಭೀಕ್ಷಿಸಿ ಜಾನಿಪ ಮೂರ್ತಿಯಂತಿರಾ
ನಿರೆ ತನು ಸಾತ್ವಿಕಂ ನಿಮಿರೆ ಸಾರ್ದು ಧರಿತ್ರಿಗೆ ಮೆಯ್ಯನಿಕ್ಕಿದಂ ೧೦

೮. ಶ್ರೇಷ್ಠನಾದ ನಂದೀಶ್ವರನ ತಪಸ್ಸಿನ ಸ್ಥಿತಿಯಿಂದ ಈ ರೀತಿಯಲ್ಲಿ ಭಯಗೊಂಡವರಾಗಬಹುದೇ ? ಆ ನಂದೀಶ್ವರನಿಂದ ಉಂಟಾದ ಭೀತಿಯನ್ನು ಬಿಡಿರಿ. ವಿಚಾರಮಾಡಿ ನೋಡಿದರೆ ನಂದೀಶ್ವರ ಮುನಿಯು ಮನಸ್ಸಿನಲ್ಲಿ ನಿಮ್ಮ ಭಾಗ್ಯವನ್ನು ನೆನೆಯತಕ್ಕಂಥವನೇ. ಅತನ ಮಹಿಮೆ ದೊಡ್ಡದು. ನಿಶ್ಚಯವಾಗಿ ಅವನು ನನ್ನ ಸಂಬಂಧದ ಅತ್ಯಂತ ಸ್ಥಿರವಾದ ಭಾಗ್ಯದ ಇರುವಿಕೆಗೂ ಕೂಡ ಮನಸ್ಸು ಮಾಡುವವನಲ್ಲ. ೯. ನನ್ನಲ್ಲಿ ಸದ್ಭಕ್ತಿಯಿಂದ ಕೂಡಿದ ನನ್ನ ಪ್ರಾಣಸ್ವರೂಪನೇ ಆದ ಆತನು ನಿಮ್ಮ ಪದವಿಯನ್ನು ಯೋಚಿಸುವವನಲ್ಲ. ದೇವತೆಗಳೇ, ಇನ್ನು ಮೇಲೆ ನೀವು ಖಿನ್ನ ಭಾವವನ್ನು ಬಿಟ್ಟು, ಇರುವವರಾಗಿರಿ ಎಂದು ಆ ದೇವತೆಗಳಿಗೆ ನಾನು ಅಭಯ ಪ್ರದಾನ ಮಾಡಿದೆನು. ವ॥ ಹೀಗೆ ಹೇಳಿದರೂ ದೇವತೆಗಳಿಗೆ ಸಂಶಯವು ಪರಿಹಾರವಾಗದೆಯಿರಲು, ಅವರೊಡನೆ ಕೂಡಿಕೊಂಡು ಕೂಡಲೇ ನಂದೀಶ್ವರನು ತಪಸ್ಸು ಮಾಡುತ್ತಿರುವ ಸ್ಥಾನಕ್ಕೆ ಬಂದು, ಸಮೀಪದಲ್ಲಿ ಪ್ರಸನ್ನನಾಗಿ ನಿಂತಿದ್ದ ಕಾಲದಲ್ಲಿ ೧೦. ದೇವತೆಗಳ ಗಂಭೀರವಾದ ನಗಾರಿಗಳ ಧ್ವನಿಯೂ ಕಲ್ಪವೃಕ್ಷದ ಪುಷ್ಪವೃಷ್ಟಿಯೂ (ಆಗಲು ಅವುಗಳ) ಪ್ರಕಾಶಮಾನವಾದ ಶಬ್ದವು ಚೆನ್ನಾಗಿ (ನಂದೀಶ್ವರನ) ಕಿವಿಯನ್ನು ಮೆಲ್ಲಗೆ ಪ್ರವೇಶಿಸಿ ಚಕ್ಕಳಿಗುಳಿಸುತಾಗಲು, ನೇತ್ರಕಮಲಗಳ ರೆಪ್ಪೆಯನ್ನು ತೆರೆದು ನೋಡಿದನು. ಆಗ ನಾನು ಧ್ಯಾನಮಗ್ನ ಮೂರ್ತಿಯಾಗಿರಲು ರೋಮಾಂಚ, ಗದ್ಗದಿತ ಕಂಠಾದಿ ಭಕ್ತಿಯ ಸಾತ್ವಿಕ ಭಾವಗಳಿಂದ ಕೂಡಿದ (ಆ ನಂದೀಶ್ವರನು ನನ್ನ) ಸಮೀಪಕ್ಕೆ ಬಂದು, ಭೂಮಿಗೆ

1 ಸೆ(ಅ) 2 ಮ್ಮ (ದ, ಜ)

5

ವ॥ ಅಂತು[1] ಭಕ್ತಿಭರದಿನೆಱಗುವಂತೆಱಗಿ ಕರಕಂಜಮಂ ಮುಗಿದು ನಿಂದು—

ಅಂಬುಜಾಂಬಕಾಂಬಕಾಂಬುಜಾಂಕ ಪಾದಪದ್ಮರೋ
ಲಂಬ ನೀಲಕಂಧರಾಂಧಕಾಂಧಕಾರಸೂರ ಹೇ
ರಂಬ ತಾತ ಶುಂಭದಂಬರಾಂಬರಾಂಗಮಂಗಳಾ
ಲಂಬ ಸಾಂಬ ಕುಂಭಿಶೈಲ ಶಂಬ ಪಾಹಿ ಶಂಕರಾ ೧೧

ವ॥ ಎಂದು ಪೊಗಳ್ದು ಪರಮಾನಂದ ಪಯೋರಾಶಿಯೊಳವಗಾಹಮಿರ್ದ ನಂದಿಯನಾನಂದದಿನವಲೋಕನಂಗೆಯ್ದು—

ಎನ್ನಣುಗ ನಂದಿಕೇಶ್ವರ
ನಿನ್ನಗ್ಗದ ತಪಕೆ ಮೆಚ್ಚಿದೆಂ ಮನದೊಲವಿಂ
ನಿನ್ನಿಷ್ಟವಾವುದದನೆರೆ
ಯಾನ್ನಿನಗಿರದೀವೆನೀಗಳೆಂದಾನುಸುರ್ದೆಂ[2] ೧೨

ವ॥ ಎನೆ ಪರಮವೈರಾಗ್ಯನಿಧಿ ನಂದೀಶ್ವರಂ ಮುಕುಂದಾದಿಗಳ್ ವಿಸ್ಮಯಂಬಡುತ್ತುಮಿರೆ ದರಸ್ಮಿತಮುಖಾಂಬುಜನಾಗುತ್ತಿಂತೆಂದಂ—

ಮೈಯಿಕ್ಕಿ ನಮಸ್ಕರಿಸಿದನು. ವ॥ ಈ ರೀತಿ ಭಕ್ತಿಭಾವದಿಂದ ಬಾಗುವ ಹಾಗೆ ನಮಸ್ಕರಿಸಿ, ಕರಕಮಲವನ್ನು ಮುಗಿದು ನಿಂತುಕೊಂಡು—೧೧. ಕಮಲನೇತ್ರನಾದ ವಿಷ್ಣುವಿನ ನೇತ್ರವೆಂಬ ಕಮಲವೇ ಗುರುತಾಗುಳ್ಳ ಚರಣವುಳ್ಳವನೇ, ತುಂಬಿಯೋಪಾದಿಯಲ್ಲಿ ನೀಲವರ್ಣದಿಂದ ಕೂಡಿದ ಕಂಠವುಳ್ಳವನೇ, ಅಂಧಕಾಸುರನೆಂಬ ಕತ್ತಲೆಗೆ ಸೂರ್ಯನೋಪಾದಿಯಲ್ಲಿರುವವನೇ, ವಿಘ್ನೇಶ್ವರ ಪಿತನೇ, ಪ್ರಕಾಶಮಾನವಾದ ಆಕಾಶವನ್ನೇ ವಸ್ತ್ರವನ್ನಾಗಿ ಅಂಗಕ್ಕಳವಡಿಸಿಕೊಂಡವನೇ, ಮಂಗಳಗಳಿಗೆ ಆಶ್ರಯನಾದವನೇ, ಪಾರ್ವತೀ ಸಮೇತನೇ, ಗಜಾಸುರನೆಂಬ ಪರ್ವತಕ್ಕೆ ವಜ್ರಪ್ರಾಯನಾದವನೇ, ಶಂಕರನೇ ರಕ್ಷಿಸು. [ಅಂಬುಜ + ಅಂಬಕ + ಅಂಬಕ + ಅಂಬುಜಾಂಕ–ವಿಷ್ಣುವಿನ ನೇತ್ರವೇ ಕಮಲಪುಷ್ಪವಾಗಿ ಪಾದದಲ್ಲಿ ಗುರುತುಳ್ಳವ–ಶಿವ. ಶುಂಭತ್ + ಅಂಬರ + ಅಂಬರಾಂಗ–ಪ್ರಕಾಶಮಾನವಾದ ಆಕಾಶವೇ ಬಟ್ಟೆಯಾಗುಳ್ಳ ಶರೀರ. ಸಾಂಬ–ಸ + ಅಂಬಾ–ಅಂಬಾಸಮೇತನಾದವ–ಶಿವ.] ವ॥ ಹೀಗೆಂದು ಹೊಗಳಿ ಪರಮಾನಂದವೆಂಬ ಸಮುದ್ರದಲ್ಲಿ ಮುಳುಗಿಹೋದ ನಂದಿಯನ್ನು ಆನಂದದಿಂದ (ನಾನು) ಅವಲೋಕನಮಾಡಿ– ೧೨. ನನ್ನ ಮಗನಾದ ನಂದೀಶ್ವರನೇ, ನಿನ್ನ ಶ್ರೇಷ್ಠವಾದ ತಪಸ್ಸಿಗೆ ಮೆಚ್ಚಿದೆನು, ನಿನ್ನ ಇಷ್ಟಾರ್ಥವಾವುದು ? ಮನಸ್ಸಂತೋಷದಿಂದ ಬೇಡು. ನಿನಗೆ ತಪ್ಪದೆ ನಾನು ಕೊಡುವೆನು ಎಂದೆನು. ವ॥ ಹೀಗೆಂದು ನಾನು ಹೇಳಲು ಪರಮವೈರಾಗ್ಯರಾಶಿಯಾದ ನಂದೀಶ್ವರನು ವಿಷ್ಣುವೇ ಮೊದಲಾದ ದೇವತೆಗಳು

1 ಜಯಭಕ್ತಿ(ದ) 2 ಚೆನ್ನಾಗಿರದೀವೆನೀಗಳೆಂದಾಂ ಪೇಳ್ದೆಂ(ದ)

ನೆಗಳ್ದ ಸುಧಾಬ್ಧಿಯೊಳ್ ರಮಿಯಿಪಂಚೆಗೆ ಪಲ್ವಲದಾಸೆಯುಂಟೆ ಪೆಂ
ಪೊಗೆದಮೃತಾನ್ನದಿಂ ತಣಿದವಂಗಳಿಯಂಬಿಲದಿಚ್ಛೆಯುಂಟೆ ಕೂ
ರ್ಪಗಲದೆ ಯುಷ್ಮದಂಘ್ರಿಭಜನೋನ್ನತಭಾಗ್ಯದೆ ಬಾಳ್ವವಂಗೆ ದಲ್
ಬಗೆವಡೆ ಬೇಱೆ ಬೇಳ್ಪ ವರದೀಪ್ಸೆಯು ದಂದುಗವುಂಟೆ ಶಂಕರಾ ೧೩

ಪರಮ ಕೃಪಾಕರ ನಿನ್ನಯ
ಚರಣಾಬ್ಜದ ಭಕ್ತಿಭಾಗ್ಯಭೋಗವುದೆಂದುಂ
ಸ್ಥಿರಮಕ್ಕೆ ಮಿಕ್ಕ ವಿಪದಾ
ಕರಫಲಪದಭೋಗವೆನಗಜಸ್ರಮನಿಷ್ಟಂ ೧೪

ವ॥ ಎಂದು ನಿಜಪದಾನತರಾದ ಹರಿವಿರಿಂಚ್ಯಾದಿಗಳ ಸಂದೆಗಂ ಪಱಿಯೆ ಮನ್ನಣೆಯಿಂ ಬಿನ್ನವಿಸಲೊಡನಾ ನಂದಿಯನಾನಂದಂ ಮಿಗೆ ಬಿಗಿಯಪ್ಪಿ ಮುದ್ದಿಸಿ ಸುರೇಂದ್ರರೋಲೈಸಲೊಡಂ ಪ್ರಮೋದದಿಂ ಪ್ರಮಥೇಂದ್ರಪಟ್ಟಮುಂ ಕಟ್ಟಿ ಕಟ್ಟಳ್ಕಱಿಂ ಸರ್ವಜ್ಞತೆಯುಮಂ ನಿಶ್ಚಲಭಕ್ತಿಯುಮನಿತ್ತು ಮನ್ನಿಸಿ—

ಆಶ್ಚರ್ಯಗೊಳ್ಳುವ ಹಾಗೆ, ಮುಗುಳುನಗೆಯಿಂದ ಕೂಡಿದ ಮುಖವುಳ್ಳವನಾಗಿ ಹೀಗೆ ಅಂದನು. ೧೩. ಶಂಕರನೇ, ಪ್ರಸಿದ್ಧವಾದ ಕ್ಷೀರ ಸಮುದ್ರದಲ್ಲಿ ವಿಹಾರ ಮಾಡುವ ಹಂಸಪಕ್ಷಿಗೆ ಹೊಂಡ (ಕುಂಟೆ) ದ ಆಸೆಯಾದೀತೇ ? ಶ್ರೇಷ್ಠವಾದ ಅಮೃತದಲ್ಲಿ ಮಾಡಿದ ಅನ್ನದಿಂದ ತೃಪ್ತಿಗೊಂಡವನಿಗೆ (ಅಥವಾ ಅಮೃತದ ಅನ್ನವನ್ನು ಉಂಡು ತೃಪ್ತಿಗೊಂಡವನಿಗೆ) ಹೀನವಾದ ಅಂಬಲಿಯ ಬಯಕೆ ಯಾದೀತೇ ? ವಿಚಾರಿಸಿ ನೋಡಿದರೆ, ಬೇರೆ (ಏನನ್ನೊ) ಬೇಡುವ ಬಯಕೆಯು ದಂದುಗವಾದರೂ ನನಗೆ ಉಂಟೆ ? ಇಲ್ಲ. ಎಂದೆಂದೂ ಅಗಲದ ಪ್ರೀತಿಯಿಂದ ನಿಮ್ಮ ಪಾದಸೇವೆಯ ಶ್ರೇಷ್ಠ ಭಾಗ್ಯದಿಂದ ಬದುಕ ಬೇಕೆಂಬ ಇಚ್ಛೆಯುಳ್ಳವನಾಗಿದ್ದೇನೆ. ೧೪. ಪರಮಕೃಪಾಕರನಾದ ಈಶ್ವರನೇ, ನಿನ್ನ ಪಾದಕಮಲ ಭಕ್ತಿಯ ಐಶ್ವರ್ಯದ ಸುಖವು ಯಾವಾಗಲೂ ನನಗೆ ಸ್ಥಿರವಾಗಿ ಇರುವಂತೆ ಆಗಲಿ. ಉಳಿದ ವಿಪತ್ತುಗಳಿಗೆ ಕಾರಣವಾಗುವ ಫಲವುಳ್ಳ ಯಾವ ಪದವಿಯ ಭೋಗವೂ ನನಗೆ ಸದಾ ಅನಿಷ್ಟವಾದುದು. ವ॥ ಹೀಗೆಂದು ನನ್ನ ಪಾದಗಳಲ್ಲಿ ನಮಸ್ಕಾರ ಮಾಡಿದವರಾದ ವಿಷ್ಣು ಬ್ರಹ್ಮಾದಿ ದೇವತೆಗಳ ಸಂದೇಹವು ನಾಶವಾಗುವ ಹಾಗೆ ಆ ನಂದೀಶ್ವರನು ಬಿನ್ನವಿಸಿಕೊಳ್ಳಲು, (ಆಗ) ನಂದಿಯನ್ನು ಬಿಗಿಯಾಗಿ ಅಪ್ಪಿಕೊಂಡು ಮುದ್ದಾಡಿದೆನು. ದೇವತಾ ಶ್ರೇಷ್ಠರೆಲ್ಲ ಸಭೆಸೇರಿದರು. (ಆ ಸಭೆಯಲ್ಲಿ) ಕೂಡಲೇ ಸಂತೋಷದಿಂದ ನಂದೀಶ್ವರನಿಗೆ ಪ್ರಮಥ ಶ್ರೇಷ್ಠ ಪಟ್ಟವನ್ನು ಕಟ್ಟಿದೆನು. (ಹಾಗೆ ಪಟ್ಟಗಟ್ಟಿ ಅವನಿಗೆ) ಅತಿ ಪ್ರೀತಿಯಿಂದ ಸರ್ವಜ್ಞ

ಘನ ಸತ್ವವಿಮಲಗುಣ ಪಾ
ವನ ವಿಗ್ರಹ ಮಾಣದೆನ್ನ ಬಗೆಗೊಪ್ಪುವ ವಾ
ಹನವಾಗಿರೆಂದು ಬೆಸಸು
ತ್ತನಿಬರುಮೊಡನೈದೆ ರಜತಗಿರಿಗೇಳ್ತಂದೆಂ ೧೫

ಅಂದಿಂದಂ ಶ್ರೀಗಿರಿಯೊಳ್
ನಂದಿ ತಪಂಗೈದ ತಾಣಮದು ಪೆಸರ್ವಡೆದಾ
ನಂದನಿಧಿ ನಂದಿಮಂಡಲ
ಮೆಂದೆನಿಸುಗುಮಾಶ್ರಿತರ್ಗೆ ಮುಕ್ತಿಕ್ಷೇತ್ರಂ ೧೬

ವ॥ ಎಂದುದಂ ನಾರದನಾಕರ್ಣಿಸಿ ನಲವೇಱಿ ಪೊಗಳುತ್ತಿರೆ ಶಿವಂ ನಿರೂಪಿಸೆ ಕೌತುಕಾಂಬುಧಿಯೊಳಾಳ್ದು ನಗಜಾತೆ ಕೇಳ್ದು ಪತಿಪದ[1]ಪ್ಲವ[1]ಮಂ ಪಿಡಿದೇಳ್ದು ಸಂದಣಿಪಾನಂದದಿಂ ಮುಂದೆ ನಿಂದಿರ್ದಾ ನಂದಿಯುಂ ನೋಡಿ—

ಮೃಗಭೃತ್ಖಂಡಕಪರ್ದ ನಿನ್ನೊಳವಿಭಿನ್ನಂ ನಂದಿ ತಾನಕ್ಕುಮೆಂ
ಬ ಗಭೀರೋಕ್ತಿಯೆ ಸತ್ಯಮಲ್ಲದೊಡಿವಂಗೀ ರೂಪಮೀ ಭಕ್ತಿಯು
ಜ್ಜುಗಮೀ ವೈಭವಮೀ ಪವಿತ್ರತನುವೀ ಸೌಂದರ್ಯಮೀ ಶಾಂತಿಯೀ
ಸುಗುಣಾಲಂಕೃತಿಯೀ ಮಹತ್ವದೊದವೀ ನೈಪುಣ್ಯಮೇಂ ಸಾರ್ಗುಮೇ ೧೭

ತ್ವವನ್ನೂ, ನಿಶ್ಚಲ ಭಕ್ತಿಭಾವವನ್ನೂ ಕೊಟ್ಟು ಮನ್ನಣೆ ಮಾಡಿ ೧೫. ಎಲೈ ನಂದೀಶ್ವರನೇ, (ನೀನು) ಶ್ರೇಷ್ಠವಾದ ಸತ್ವ, ನಿರ್ಮಲವಾದ ಗುಣ, ಪರಿಶುದ್ಧವಾದ ಶರೀರಗಳನ್ನು ಹೊಂದಿ, ತಪ್ಪದೆ ನನ್ನ ಮನಸ್ಸಿಗೊಪ್ಪುವ ವಾಹನವಾಗಿ ಇರು ಎಂದು ಆಜ್ಞಾಪಿಸಿ, ಆ ಎಲ್ಲ ಜನರು ಸಮೇತವಾಗಿ ಕೈಲಾಸಕ್ಕೆ ಬಂದೆನು. ೧೬. ಅಂದಿನಿಂದಲೂ ಶ್ರೀ ಶೈಲದಲ್ಲಿ ನಂದಿಯು ತಪಸ್ಸು ಮಾಡಿದ ಆ ಸ್ಥಳವು ಪ್ರಸಿದ್ಧಿಯನ್ನು ಹೊಂದಿ, ಆನಂದ ನಿಧಿಯಾದ ನಂದೀಶ್ವರನ ಮಂಡಲ (ನಂದಿಮಂಡಲ)ವೆಂದೂ, ಆಶ್ರಿತರಾದವರಿಗೆ ಮುಕ್ತಿಯನ್ನುಂಟುಮಾಡುವ ಕ್ಷೇತ್ರವೆಂದೂ ಎನಿಸಿದೆ. ವ॥ ಹೀಗೆಂದು ಪರಮೇಶ್ವರನು ಹೇಳಿದ ಮಾತನ್ನು ನಾರದನು ಕೇಳಿ ಸಂತೋಷಗೊಂಡು ಹೊಗಳುತ್ತಿದ್ದನು. ಶಿವನು ನಿರೂಪಿಸಿದ ಈ ಮಾತನ್ನು ಪಾರ್ವತಿಯು ಕೇಳಿ, ಆಶ್ಚರ್ಯ ಸಮುದ್ರದಲ್ಲಿ ಮುಳುಗಿದವಳಾದಳು. ಆಗ ಪ್ರಭುವಾದ ಪರಮೇಶ್ವರನ ಚರಣಗಳೆಂಬ ತೆಪ್ಪವನ್ನು ಹಿಡಿದು ಎದ್ದು ಒಟ್ಟೊಟ್ಟಾಗಿ ಸೇರಿದ ಸಂತೋಷದಿಂದ ಕೂಡಿದವಳಾಗಿ ಮುಂದೆ ನಿಂತುಕೊಂಡಿದ್ದ ನಂದೀಶ್ವರನನ್ನು ನೋಡಿ—೧೭. ಚಂದ್ರಕಳಾಧರನಾದ ಪರಮೇಶ್ವರನೇ ಈ ನಂದೀಶ್ವರನು ನಿನ್ನಲ್ಲಿ ಅಭೇದ ಭಾವವುಳ್ಳವನಾಗಿದ್ದಾನೆಂಬ ಮಾತು ಸತ್ಯವಾದುದಾಯಿತು. ಹಾಗಲ್ಲದಿದ್ದರೆ ಈ ನಂದೀಶ್ವರನಿಗೆ ಈ ರೂಪ, ಈ ಭಕ್ತಿಯ ಕ್ರಿಯೆ, ಈ ವೈಭವ, ಈ ಪರಿಶುದ್ಧ ಶರೀರ, ಈ ಸೌಂದರ್ಯ, ಶಾಂತಿ,

---

1 ಪಲ್ಲವ(ದ)

ವ॥ ಎಂದಿನಿ[1]ಯಳ್ಳಗೆದಂತೆ ನುಡಿದ ಕರ್ಣಾಮೃತಪ್ರಾಯಮಾದ ಮೆಲ್ನುಡಿಗೆ ಮುದಂ ದಳೆದು ಶಿವಂ ತಾನಿಂತು ನಿರವಿಸಿದ ನಿಜ ಕಥಾಕೌತುಕಮನಾಲಿಸಿ ಭಯಭಕ್ತಿಯಿಂದಂತಂತೆ ಕಂಪಿಸಿ ಸಾತ್ವಿಕಂ ನಿಮಿರೆ ಸಾಷ್ಟಾಂಗಮೆಱಗಿ ಕರಾರವಿಂದಮಂ ಮುಗಿದು ಸರಸೋಕ್ತಿಯಿಂ ನುತಿಯಿಪ ನಂದಿಕೇಶ್ವರನಂ ಕೃಪಾವಲೋಕನದಿನವಲೋಕಿಸಿ ಬಿಗಿಯಪ್ಪಿ ನಿಜಪ್ರಸಾದಮನಿತ್ತು ಮನ್ನಿಸುತ್ತುಂ ಭೂಭುವನಪಾವನನಿಮಿತ್ತಮಾಗಿಯುಂ ಭಕ್ತಿಹಿತಾರ್ಥಮಾಗಿಯುಂ ಮನುಜಲೋಕದೊಳ್ ಬಸವ ನಾಮದಿನುದ್ಭವಿಸಿ ಸದ್ಭಕ್ತಿ ಸುಜ್ಞಾನ ಸದ್ಧರ್ಮಮಂ ಪ್ರಕಾಶಿಸಿ ಭವದೀಯ ಮಹಿಮೆ ಸರ್ವೋರ್ವಿಗರಿದೆನಿಸೆ ಮದೀಯಮತಮಹತ್ವಮಂ ಮೆಱೆವುದೆಂದು ನಿರೂಪಿಸೆ ತದಾಜ್ಞೆಯಂ ಮಹಾ ಪ್ರಸಾದವೆಂದು ಶಿರಃಶೇಖರಂಗೆಯ್ದು ಶೈಲಾದಿಯಾಗಳಿಂತೆಂದಂ—

ಎಲ್ಲಾ ಲೋಕಕ್ಕೆ ನೀನೊರ್ವನೆ ಪತಿ ಪರಿಪೂರ್ಣಂ ಮದೀಯಾಂತರಾತ್ಮಂ
ಸಲ್ಲೀಲಾಶಾಲಿಯಂತಪ್ಪುದಱಿನೆನಗಿದೇ ಲೋಕಮಾಲೋಕಮೆಂಬೀ

ಸದ್ಗುಣಾಲಂಕಾರ, ಮಹತ್ವಗಳ ಪ್ರಾಪ್ತಿ, ನೈಪುಣ್ಯಾದಿಗಳು ಉಂಟಾಗುತ್ತಿದ್ದವೇನು ? [ಮೃಗಭೃತ್ + ಖಂಡ + ಕಪರ್ದ–ಚಂದ್ರನ ಕಳೆಯನ್ನು ಜಡೆಯಲ್ಲಿ ಉಳ್ಳವ–ಶಿವ.]

ವ॥ ಈ ಪ್ರಕಾರವಾಗಿ ಪಾರ್ವತಿಯು ಯೋಚಿಸಿ ಮಾತನಾಡಿದ ಕರ್ಣಾಮೃತ ಪ್ರಾಯವಾದ ಮೃದುನುಡಿಗಳಿಗೆ ನಂದೀಶ್ವರನು ಸಂತೋಷಗೊಂಡನು. ಶಿವನು ತಾನು ಈ ಪ್ರಕಾರ ಹೇಳಿದ ತನ್ನ ಸಂಬಂಧದ ಕುತೂಹಲಕಾರಕ ಕಥೆಯನ್ನು ಕೇಳಿದ ನಂದೀಶ್ವರನು ಭಯದಿಂದ ಕೂಡಿದ ಭಕ್ತಿಯಿಂದ ಇದ್ದಕ್ಕಿದ್ದಂತೆ ಕಂಪನಗೊಳ್ಳುತ್ತ (ರೋಮಾಂಚನಾದಿ) ಸಾತ್ವಿಕ ಭಾವಗಳು ದೇಹದಲ್ಲಿ ನಿಮಿರುತ್ತಿರಲು, ಸಾಷ್ಟಾಂಗ ನಮಸ್ಕಾರ ಮಾಡಿದನು. ತನ್ನ ಎರಡೂ ಕೈಗಳನ್ನು ಜೋಡಿಸಿ ಮುಗಿದು, ಮಧುರ ವಾದ ಮಾತುಗಳಿಂದ ಸ್ತೋತ್ರವನ್ನು ಮಾಡತೊಡಗಿದನು. (ಹೀಗೆ ಸ್ತೋತ್ರ ಮಾಡುತ್ತಿರುವ) ನಂದೀಶ್ವರನನ್ನು ಕೃಪಾ ಪೂರ್ಣದೃಷ್ಟಿಯಿಂದ ನೋಡಿ, ಗಾಢವಾಗಿ ಆಲಿಂಗಿಸಿಕೊಂಡು, ಅನುಗ್ರಹವನ್ನುಂಟುಮಾಡಿ, ಮನ್ನಿಸಿ– ಭೂಲೋಕವನ್ನು ಪರಿಶುದ್ಧ ಗೊಳಿಸುವುದಕ್ಕೋಸ್ಕರವಾಗಿಯೂ, ಭಕ್ತರುಗಳಿಗೆ ಹಿತವನ್ನುಂಟುಮಾಡು ವುದಕ್ಕೋಸ್ಕರವಾಗಿಯೂ, ಮರ್ತ್ಯಲೋಕದಲ್ಲಿ ಬಸವನಾಮದಿಂದ ಅವತಾರ ಮಾಡಿ, ಸದ್ಭಕ್ತಿ, ಸುಜ್ಞಾನ, ಸದ್ಧರ್ಮಗಳನ್ನು ಪ್ರಕಾಶಗೊಳಿಸು. ನಿನ್ನ ಮಹಿಮೆ ಸಮಸ್ತ ಭೂಲೋ ಕಕ್ಕೆ ಅಸಾಧ್ಯವಾದುದೆನಿಸುವಂತೆ ಶಿವಮತದ ಮಹಿಮೆಯನ್ನು ಪ್ರಚುರ ಪಡಿಸು–ಎಂದು ನಿರೂಪಕೊಟ್ಟನು. ಆಗ ಶಿಲಾದ ಪುತ್ರನಾದ ನಂದಿಯು ಪರ ಶಿವನ ಅಪ್ಪಣೆಯನ್ನು ಮಹಾಪ್ರಸಾದವೆಂದು ತಲೆಯಲ್ಲಿ ಧರಿಸಿ, ಆಗ ಹೀಗೆ ಹೇಳಿದನು—

೧೮. ಪರಮೇಶ್ವರನೇ, ಸಮಸ್ತ ಲೋಕಗಳಿಗೆ ನೀನೊರ್ವನೇ ಪತಿ ; ಸರ್ವವ್ಯಾಪಕ : ನನ್ನ ಪ್ರಾಣಸ್ವರೂಪನು ; ಶ್ರೇಷ್ಠವಾದ ಇಪ್ಪತ್ತೈದು ಲೀಲೆಗಳಿಂದ ಪ್ರಕಾಶಿ

1 ನೆ(ದ, ಗ, ಜ, ಮ)

ಸಲ್ಲಾಪಕ್ಕಿಂಬು ತಾನೆತ್ತಣದಭವ ಭವತ್ಪಾದಸದ್ಭಕ್ತಿಭಾವಂ
ಮಲ್ಲಾಭಂ ಮರ್ತ್ಯದೊಳ್ಕುಂದದವೊಲಿಸಪ್ಪುದೊಂದುಜ್ಜುಗಂ ನಿನ್ನದಲ್ತೇ ೧೮

ವ॥ ಎಂದು ಬಿನ್ನವಿಸಿದ ನಂದಿಯ ನಯೋಕ್ತಿಗೇಳ್ದಿಂದುಧರನಿಂತೆಂದಂ—

ಘನ ಗುರುವಾಗಿ ಚಿತ್ಸುಖಮನೀವೆನನಾಮಯ ಲಿಂಗವಾಗಿ ಪಾ
ವನ ವಪುರಿಂದ್ರಿಯಾದಿ[1] ಮುಖದೊಳ್ನೆಲೆಗೊಂಡೊಡನಿರ್ದು ಭೋಗಿಪೆಂ
ವಿನುತ ಚರಾಂಗನಾಗಿ ನಿನಗಿತ್ತಪೆನೊಪ್ಪುವ ಸುಪ್ರಸಾದಮಂ
ನಿನಗೆ ಗಣಂಗಳಂ ಕಳುಪುವೆಂ ಧರೆಗೆನ್ನಸುವನ್ನರಾದರಂ ೧೯

ಅದಱಿಂದೆನ್ನಯ ಕೂರ್ಪೆಯ
ಪದಪದು ನಿನಗಱಿಯಲಕ್ಕುಮವನಿಯೊಳೆನೆ ತ
ನ್ಮದನಹರನಂಘ್ರಿಗೆಱಗುತೆ
ಮುದದಿಂ ಬೀಳ್ಕೊಂಡು ನಂದಿ ಶಿವಗಣಸಹಿತಂ ೨೦

ಶಿವಪಾದಾಂಭೋಜಮಂ ಭಾಸುರ ನಿಜಹೃದಯಾವಾಸದೊಳ್ಧ್ಯಾನಿಸುತ್ತುಂ
ಸುವಿವೇಕಂಬೆತ್ತು ತತ್ಸೂಕ್ತಿಗಳ ಪುರುಳನಂತಂತೆ ತಾಂ ಭಾವಿಸುತ್ತುಂ

ಸುವವನು. ನನಗೆ ಈ ಲೋಕ ಆ ಲೋಕ ಎಂಬ ಮಾತಿಗಾದರೂ ಇಂಬು ಎಲ್ಲುಂಟು? ನಿನ್ನ ಪಾದದ ಶ್ರೇಷ್ಠ ಭಕ್ತಿಭಾವವು ನನಗೆ ಲಾಭದಾಯಕವಾದುದು. ಭೂಲೋಕದಲ್ಲಿ (ನಿನ್ನ ಭಕ್ತಿಯು) ನಾಶವಾಗದ ಹಾಗೆ ಮಾಡುವ ಒಂದು ಕಾರ್ಯಗೌರವವು ನಿನ್ನದೇ ಅಲ್ಲವೇ ? ವ॥ ಹೀಗೆಂದು ವಿಜ್ಞಾಪಿಸಿಕೊಂಡ ನಂದೀಶ್ವರನ ನಯಪೂರ್ಣವಾದ ಮಾತುಗಳನ್ನು ಕೇಳಿ, ಚಂದ್ರಧರನು ಹೀಗೆಂದು ಹೇಳಿದನು. ೧೯. 'ನಂದೀಶ್ವರ ನಿನಗೆ (ನಾನೇ) ಶ್ರೇಷ್ಠ ಗುರುವಾಗಿ ಸುಜ್ಞಾನ ಸುಖವನ್ನು ಕೊಡುತ್ತೇನೆ. ಭವರೋಗ ರಹಿತ ಲಿಂಗರೂಪವಾಗಿ ಪರಿಶುದ್ಧವಾದ ನಿನ್ನ ಶರೀರೇಂದ್ರಿಯಾದಿ ಮುಖದಿಂದ ನಿನ್ನಲ್ಲಿ ವಾಸವಾಗಿ, ನಿನ್ನೊಡನೆಯೇ ಇದ್ದು, ಸುಖಿಸುವೆನು. ಶ್ರೇಷ್ಠನಾದ ಜಂಗಮ ರೂಪನಾಗಿ ನಿನಗೆ ಒಪ್ಪುವ ಪ್ರಸಾದವನ್ನು ಕೊಡುತ್ತೇನೆ. ನನ್ನ ಪ್ರಾಣಸ್ವರೂಪರಾದ ಶಿವಗಣಗಳನ್ನು ಭೂಲೋಕಕ್ಕೆ ಕಳುಹಿಸಿಕೊಡುತ್ತೇನೆ.' ೨೦. 'ಅದರಿಂದ ನನ್ನ ಅನುರಾಗ ಪೂರ್ಣವಾದ ಆ ಪ್ರೀತಿಯು ನಿನಗೆ ಭೂಲೋಕದಲ್ಲಿ ಗೊತ್ತಾಗುತ್ತದೆ' ಹೀಗೆಂದು ಶಿವನು ಹೇಳಲು, ನಂದೀಶ್ವರನು ಪರಶಿವನ ಪಾದಗಳಿಗೆ ನಮಸ್ಕಾರ ಮಾಡುತ್ತ ಸಂತೋಷದಿಂದ ಅವನನ್ನು ಬೀಳ್ಕೊಂಡು ಶಿವಗಣಂಗಳೊಡನೆ—೨೧. ಸಂತೋಷ ಪೂರಿತನಾದ ಆ ವೃಷಭೇಶ್ವರನು ಶಿವನ ಪಾದ ಕಮಲಗಳನ್ನು ಪ್ರಕಾಶ ಮಾನವಾದ ತನ್ನ ಹೃದಯಸ್ಥಾನದಲ್ಲಿ ಧ್ಯಾನ ಮಾಡುತ್ತ ಸದ್ವಿವೇಕ ಪೂರ್ಣವಾಗಿ ಆ ಪರಮೇಶ್ವರನ ವಚನಗಳ ಸಾರವನ್ನು ಅವನು ಹೇಳಿದ ರೀತಿಯಲ್ಲೇ ಭಾವಿಸುತ್ತ,

1 ಸು(ದ, ಗ, ಚ, ಜ, ಮ)

ದಿವಿಜೇಂದ್ರ ಪರ್ಗಿದೊಳ್ಮಾಳ್ಪತುಳ ಯಜನಮಂ ಪ್ರೀತಿಯಿಂ ಕೈಕೊಳುತ್ತುಂ
ಅವನೀಭಾಗಕ್ಕೆ ಬರ್ಪುಜ್ಜುಗದೊಳೆಸೆದನಾನಂದಸಾಂದ್ರಂ ವೃಷೇಂದ್ರಂ ೨೧

ವ॥ ಅಂತೇಳ್ತರುತ್ತುಮಿರ್ಪನ್ನೆಗಮಿತ್ತಲತಿ ಮನೋಹರಮಾದ ಜಂಬೂದ್ವೀಪದಲ್ಲಿ —

ಕಟಕವಿಪಿನಹಸ್ತೀಂದ್ರಾಜಿನಂ ಚಂದ್ರಗಂಗಾ
ಘಟಿತಶಿಖರಶೀರ್ಷಂ ವ್ಯೋಮಕೇಶಾಭಿರಾಮಂ
ಪಟುಮತಿ ವಿಬುಧೇಂದ್ರಸ್ತುತ್ಯಪಾದಪ್ರಸಿದ್ಧಂ
ನಿಟಿಲನಯನನಂತೊಪ್ಪಿರ್ದುದಾ ಶ್ರೀಗಿರೀಂದ್ರಂ ೨೨

ಶ್ರೀಯಂ ಚಕ್ರಿಗೆ ಸುವಚ
ಶ್ರೀಯಂ ವಿಧಿಗತುಳ ಕಾಮ್ಯಫಲಪದಮೋಕ್ಷ
ಶ್ರೀಯಂ ಮನುಮುನಿಗಳ್ಗೊ
ಲ್ದೀಯಲೊಡಂ ಶ್ರೀಗಿರೀಂದ್ರಮಾದುದು ಪೆಸರಿಂ ೨೩

ದೇವೇಂದ್ರನು ದಾರಿಯಲ್ಲಿ ಮಾಡುವ ಅಸದೃಶವಾದ ಪೂಜಾದಿಗಳನ್ನು ಸಂತೋಷ ದಿಂದ ಸ್ವೀಕಾರ ಮಾಡುತ್ತ ಆಗ ಭೂಲೋಕಕ್ಕೆ ಬರುವ ಉದ್ಯೋಗದಲ್ಲಿ ಪ್ರಕಾಶಿಸುವವನಾದನು. ವ॥ ಈ ರೀತಿಯಲ್ಲಿ (ಭೂಲೋಕಕ್ಕೆ) ಬರುತ್ತಿರುವಷ್ಟರಲ್ಲಿ ಇತ್ತಕಡೆ ಭೂಲೋಕದಲ್ಲಿ ಅತ್ಯಂತ ಮನೋಹರವಾದ ಜಂಬೂದ್ವೀಪದಲ್ಲಿ— ೨೨. ಶ್ರೀಶೈಲಗಿರಿಶ್ರೇಷ್ಠವು ಹಣೆಗಣ್ಣನಾದ ಪರಶಿವನ ಹಾಗೆ ಮನೋಹರವಾಗಿ ಶೋಭಿಸುತ್ತಿತ್ತು–(ಇಲ್ಲಿ ಈ ಪದಕ್ಕೆ ಶ್ರೀಶೈಲ ಮತ್ತು ಪರಶಿವನ ಪರವಾಗಿ ಎರಡು ಅರ್ಥ ಮಾಡಬೇಕು) ಶ್ರೀಶೈಲವು :– ತಪ್ಪಲುಪ್ರದೇಶದಲ್ಲಿರುವ ಅರಣ್ಯವೆಂಬ ಗಜಚರ್ಮವುಳ್ಳದ್ದಾಗಿತ್ತು ; ಚಂದ್ರ ಮತ್ತು ದೇವಗಂಗಾ ಇವುಗಳಿಂದ ಸೇವಿಸಲ್ಪಡುವ ಕೋಡುಗಲ್ಲೆಂಬ ಶಿರವುಳ್ಳದ್ದಾಗಿತ್ತು ; ಚಂದ್ರ ಮತ್ತು ಗಂಗೆಯರನ್ನು ಧರಿಸಿದ ಶಿರಸ್ಸುಳ್ಳದ್ದಾಗಿತ್ತು, ಆಕಾಶವೆಂಬ ಕೇಶವುಳ್ಳದ್ದಾಗಿತ್ತು. ಸಮರ್ಥವಾದ ಬುದ್ಧಿಶಕ್ತಿಯುಳ್ಳ, ವಿದ್ವಾಂಸರಿಂದ ಹೊಗಳಿಸಿಕೊಳ್ಳಲ್ಪಡುವುದಕ್ಕೆ ಯೋಗ್ಯವಾದ ಪ್ರತ್ಯಂತ ಪರ್ವತಗಳಿಂದ ಮತ್ತು ಪಾದಗಳಿಂದ ಪ್ರಸಿದ್ಧವಾಗಿತ್ತು. ೨೩. ವಿಷ್ಣುವಿಗೆ ಲಕ್ಷ್ಮಿಯನ್ನೂ, ಬ್ರಹ್ಮನಿಗೆ ಶ್ರೇಷ್ಠಳಾದ ವಾಕ್ಕೆಂಬ ಲಕ್ಷ್ಮಿಯನ್ನೂ. ಮನುಮುನಿಗಳಿಗೆ ಅನುಪಮವಾದ. ಅವರ ಇಚ್ಛೆಗೆ ಯೋಗ್ಯ ಫಲವಾದ ಮೋಕ್ಷಲಕ್ಷ್ಮೀಪದವಿಯನ್ನೂ ಪ್ರೀತಿಸಿಕೊಡಲು. ಆ ಕೂಡಲೇ ಹೆಸರಿನಿಂದ ಆ ಗಿರಿಯು 'ಶ್ರೀಶೈಲ' ಎಂದಾಯಿತು. (ಆ ಪರ್ವತವು ವಿಷ್ಣು ಬ್ರಹ್ಮ ಮತ್ತು ಮುನೀಶ್ವರರುಗಳಿಗೆ ಒಂದೊಂದು ವಿಧವಾದ ಸಂಪತ್ತನ್ನು ಕೊಟ್ಟ ಕಾರಣದಿಂದ 'ಶ್ರೀಗಿರಿ' ಎಂಬ ಹೆಸರಿನಿಂದ ಕೂಡಿತೆಂದು ತಾತ್ಪರ್ಯ)

ವ॥ ಆ ಶ್ರೀಗಿರಿಯ ಪಶ್ಚಿಮದಿಶಾಭಾಗದಲ್ಲಿ—

ಪೊಳೆಯಿಂದಂ ಪರಿಕಾಲ್ಗಳಿಂದೆ ಕಳಮಕ್ಷೇತ್ರಂಗಳಿಂ ನಂದನಾ
ವಳಿಯಿಂದೈಕ್ಷವ ವಾಟಿಯಿಂ ಪ್ರವಿಳಸತ್ಪಾನೀಯಶಾಲಾಳಿಯಿಂ
ಬೆಳೆಯಿಂ ತಳ್ತ ಪೊಲಂಗಳಿಂ ಕಮಳಕಲ್ಹಾರಾಂಕಕಾಸಾರದಿಂ
ವಿಳಸದ್ಗ್ರಾಮ ಶಿವಾಲಯಪ್ರಕರದಿಂ ಚೆಲ್ವಾಯ್ತು ಕರ್ನಾಟಕಂ[1] ೨೪

ವ॥ ಆ ಕರ್ನಾ[1]ಟಶ್ರೀಯ ಸೌಭಾಗ್ಯಸಾರಕೋಶಾಗಾರಮೆನಿಸಿ—

ತುಂಗ ಶಾಲ ವಿಶಾಲ ವೀಥಿ ಸನಾಥಮುನ್ನತಕೇತನಾ
ಲಿಂಗಿತೋಜ್ವಳ ಹರ್ಮ್ಯಮಂಬರಚುಂಬಿಗೋಪುರಮಂಡಿತಂ
ಮಂಗಳಾಕರ ಲಿಂಗಮಂದಿರ ಮಂಜುಳಂ ಕರಮೊಪ್ಪಿದ
ತ್ತಿಂಗಳೇಶ್ವರ ಬಾಗವಾಡಿಯೆನಿಪ್ಪುದೊಂದು ಮಹಾಪುರಂ ೨೫

ಪರಮ ಪವಿತ್ರವಂಶನಭವಾಂಘ್ರಿಸರೋರುಹಸಾರಭೃಂಗನೀ
ಶ್ವರಭಜಕಪ್ರಮೋದಕರನುಜ್ವಳಕೀರ್ತಿಯುತಂ ತ್ರಯೀವಿದಾಂ

ವಚನ॥ ಆ ಶ್ರೀಗಿರಿಯ ಪಶ್ಚಿಮ ದಿಗ್ಭಾಗದಲ್ಲಿ— ೨೪. ಹೊಳೆಗಳಿಂದ ಹರಿಯುವ ಕಾಲುವೆಗಳಿಂದ, ಬತ್ತದ ಗದ್ದೆಗಳಿಂದ, ಉದ್ಯಾನವನಗಳ ಸಾಲುಗಳಿಂದ, ಕಬ್ಬಿನ ಗದ್ದೆಗಳಿಂದ, ಅತ್ಯಂತ ಶೋಭಾಯಮಾನವಾದ ಅರವಟ್ಟಿಗೆಗಳ ಸಮೂಹದಿಂದ, ಬೆಳೆಗಳಿಂದ ತುಂಬಿದ ಹೊಲಗಳಿಂದ, ಕಮಲ ಕಲ್ಹಾರ (ಸುಗಂಧ ವಿಶಿಷ್ಟವಾದ ಕಮಲ)ಗಳೇ ಗುರುತಾಗಿ ಉಳ್ಳ ಸರೋವರಗಳಿಂದ, ಪ್ರಕಾಶಿಸುವ ಗ್ರಾಮಗಳು, ಶಿವಾಲಯಗಳು ಇವುಗಳ ಸಮೂಹದಿಂದ ಕರ್ನಾಟಕವೆಂಬ ದೇಶವು ಮನೋಹರವಾಗಿತ್ತು. ವ॥ –(ಇಂಥ) ಕರ್ನಾಟಕದೇಶವೆಂಬುದು ಲಕ್ಷ್ಮೀದೇವಿಯ ಶ್ರೇಷ್ಠವಾದ ಬೊಕ್ಕಸದ ಮನೆ ಎನ್ನಿಸಿತ್ತು. ೨೫. (ಅಲ್ಲಿ) ಇಂಗಳೇಶ್ವರ ಬಾಗವಾಡಿ ಎಂಬುದೊಂದು ದೊಡ್ಡ ಪಟ್ಟಣವು ಚೆನ್ನಾಗಿ ಶೋಭಿಸುತ್ತಿತ್ತು. (ಆ ಪಟ್ಟಣವು) ಎತ್ತರವಾದ ಕೋಟೆಯ ಗೋಡೆಗಳುಳ್ಳದಾಗಿ ವಿಸ್ತಾರವಾದ ಬೀದಿಗಳಿಂದ ಕೂಡಿತ್ತು. ಎತ್ತರವಾದ ಧ್ವಜಗಳಿಂದ ಆಲಂಗಿಸಲ್ಪಟ್ಟ ಶೋಭಾಯಮಾನವಾದ ಮೇಲುಪ್ಪರಿಗೆ ಮನೆಗಳಿಂದ ಕೂಡಿದುದಾಗಿತ್ತು. ಮುಗಿಲನ್ನು ಮುಟ್ಟುವಂತಹ ಉನ್ನತವಾದ ಗೋಪುರಗಳಿಂದ ಅಲಂಕರಿಸಲ್ಪಟ್ಟುದಾಗಿತ್ತು. (ಅನೇಕ) ಶುಭಗಳಿಗೆ ಆಗರವಾದ ಶಿವಾಲಯಗಳಿಂದ ಮಂಜುಳವಾಗಿತ್ತು. ೨೬. ಇಂಥ ಬಾಗವಾಡಿ ಎಂಬ ಪಟ್ಟಣದಲ್ಲಿ ಮಂಡಗೆಯ ಮಾದರಸನೆಂಬ ಶೈವ ಬ್ರಾಹ್ಮಣನು ಪರಮಪವಿತ್ರವಾದ ವಂಶವನ್ನುಳ್ಳವನಾಗಿ, ಪರಮೇಶ್ವರನ ಪಾದಕಮಲಗಳ ಶ್ರೇಷ್ಠ ಭೃಂಗದಂತೆ ಇದ್ದನು. (ಅವನು) ಈಶ್ವರ

---

1 ಮೂಲವಾದ ಓಲೆಗರಿ ಪ್ರತಿಯಲ್ಲಿ ಹೀಗೆಯೇ ಇದೆಯೆ ಅಥವಾ 'ಕರ್ಣಾಟಕ' 'ಕರ್ಣಾಟ' ಎಂದಿದೆಯೆ—ಎಂಬುದು ವಿಚಾರಣೀಯ (ರಂ)

ವರನೆನಿಸಿರ್ದನಾ ಪುರದೊಳಾಗಮವೇದಿ ನಯಾನ್ವಿತಂ ಗುಣಾ
ಕರನೆನಿಸಿರ್ದ ಮಂಡಗೆಯ ಮಾದರಸಂ ಗುರು ಶೈವಭೂಸುರಂ 16

ಆತನ ಧರ್ಮಪತ್ನಿ ಪತಿಭಕ್ತಿವಿರಾಜಿತೆ ಪಾವನಾಂಗಿ ಸು
ಶ್ರಾತಶಿವಾಂಘ್ರಿಪದ್ಮಭಜನಪ್ರಿಯೆ ಸೌಮ್ಯಗುಣಾಭಿರಾಮೆ ವಿ
ಖ್ಯಾತೆ ಮೃದುಸ್ಮಿತದ್ಯುತಿಸುಧಾರ್ದ್ರವಚೋನ್ವಿತೆ ಮಾದಲಾಂಬೆಯೆಂ
ಬಾ ತರಳಾಕ್ಷಿ ರಂಜಿಪಳಲಂಪಿನ ರೂಪವಿಳಾಸದೇಳ್ಗೆಯಿಂ 17

ಹರಪೂಜೆಗೈವುತಂ ಶಂ
ಕರಶರಣರನಳ್ತಿಯಿಂ ಸಮರ್ಚಿಸುತಗಜಾ
ವರಚರಿತಂಗಳನತ್ಯಾ
ದರದಿಂದಾಕರ್ಣಿಸುತ್ತಮವರೊಪ್ಪಿರ್ದರ್ 18

ವ॥ ಅಂತಿರುತ್ತಮಿರ್ದೊಂದು ದಿವಸಂ ಮಾದಲಾಂಬಿಕೆ ಮೃಕಂಡು[1] ಶಿಲಾದಾದಿ ಚರಿತ್ರಂಗಳನಾಕರ್ಣಿಸುತ್ತುಂ ತನಗೆ ತನಯನಿಲ್ಲಪ್ಪುದಱಿಂ ಮಱುಗಿ ಮನಂಗುಂದಿ ಬಿಸುಸುಯ್ದು ಮನೋರಮಣನೊಡನಿಂತೆಂದಳ್...

ಸೇವಕರುಗಳಿಗೆ ಸಂತೋಷವನ್ನುಂಟುಮಾಡುವವನಾಗಿದ್ದನು. ಉಜ್ವಲವಾದ ಯಶಸ್ಸಿನಿಂದ ಕೂಡಿದವನಾಗಿದ್ದನು. ಋಗ್ಯಜುಸ್ಸಾಮಾದಿ ಮೂರು ವೇದಗಳನ್ನು ತಿಳಿದವರಲ್ಲಿ ಶ್ರೇಷ್ಠನೆನಿಸಿದ್ದನು. ಶಿವಾಗಮ ಜ್ಞಾನಿಯೂ, ನೀತಿವಿದನೂ ಎನಿಸಿದ್ದನು. ಸದ್ಗುಣಗಳಿಗೆ ಆಶ್ರಯಭೂತನೆನಿಸಿದ್ದನು. 17. ಆತನ ಧರ್ಮಪತ್ನಿ ಪತಿಭಕ್ತಿಯಿಂದ ಪ್ರಕಾಶಿಸುವ ಪರಿಶುದ್ಧ ದೇಹವುಳ್ಳವಳಾಗಿದ್ದಳು. ಶ್ಲಾಘನೀಯವಾದ ಪರಶಿವನ ಪಾದಕಮಲ ಧ್ಯಾನದಲ್ಲಿ ಆಸಕ್ತಿಯುಳ್ಳವಳಾಗಿದ್ದಳು. ಸೌಮ್ಯಗುಣಗಳಿಂದ ಮನೋಹರಳೆನಿಸಿ, ಪ್ರಸಿದ್ಧಳಾಗಿದ್ದಳು. ಮುಗುಳುನಗೆಯೆಂಬ ಕಾಂತಿಯೆಂಬ ಅಮೃತದಿಂದ ಆರ್ದ್ರವಾದ ಮಾತುಗಳಿಂದ ಕೂಡಿದ 'ಮಾದಾಂಬೆ' ಎಂಬ ಹೆಸರಿನ ಆ ಚಂಚಲಾಕ್ಷಿಯು ರೂಪವಿಲಾಸಗಳ ಆಧಿಕ್ಯದಿಂದ ರಂಜಿಸುತ್ತಿದ್ದಳು. 18. (ಇಂಥ ಈ) ದಂಪತಿಗಳು ಶಿವಪೂಜೆಯನ್ನು ಮಾಡುತ್ತ ಶಂಕರನ ಶರಣ ಗಣವನ್ನು ಪ್ರೀತಿಯಿಂದ ಅರ್ಚಿಸುತ್ತ ಶಿವಕಥೆಗಳನ್ನು ಅತ್ಯಾದರದಿಂದ ಕೇಳುತ್ತ ಶೋಭಿಸುತ್ತಿದ್ದಳು. ವ॥ ಹೀಗೆ ಇರುತ್ತಿರಲಾಗಿ ಒಂದು ದಿವಸ ಮಾದಲಾಂಬಿಕೆಯು ಮೃಕಂಡುಮುನಿ, ಶಿಲಾದಾದಿಗಳ ಚರಿತ್ರೆಗಳನ್ನು ಕೇಳಿ ತನಗೆ ಮಕ್ಕಳಿಲ್ಲದಿರುವುದರಿಂದ ಮರುಗಿ ಮನಸ್ಸುಕುಂದಿ, ನಿಟ್ಟುಸಿರು

1 ಮಾರ್ಕಂಡೇಯ (ದ)

ನಳಿನಂ ಬೆಳೆಯದ ಪೊಳೆಯೆಳೆ
ಗಿಳಿ ಬಳೆಯದ ಚೂತಲತಿಕೆ ಬಾಲಮರಾಳಂ
ಬಳೆಯದ ಸರಸಿ ಸುಗರ್ಭಂ
ಬಳೆಯದ ಬಾಲಕಿಯು ಪೊಡೆ ನಿರರ್ಥಕಮಲ್ತೇ ೨೯

ಮಣಿಯಿಲ್ಲದ ಮೇಖಲೆ ದಿನ
ಮಣಿಯಿಲ್ಲದ ಗಗನಮಂಚೆಯಿಲ್ಲದ ಪುಳಿನಂ
ಗುಣವಿಲ್ಲದ ಸಿರಿಯೊಲವಿಂ
ಕುಣಿವರ್ಭಕನಿಲ್ಲದಂಗಣಂ ಮಂಜುಳಮೇ ೩೧

ಸರಸಿಜದಲ್ಲಿ ಸಿಲ್ಕಿದಳಿಯಂತೆ ಜಿನುಂಗಿ ಸರೋಜಕೋರಕಂ
ಬಿರಿವವೊಲೊರ್ಮೆ ಮೆಲ್ನಗೆಯನೊಯ್ಯನೆ ಸೂಸಿ ಮರಾಳಶಾಬದಂ
ತಿರೆ ಸೊಬಗಾಂತು ದಟ್ಟಡಿಯನಿಟ್ಟೆಳೆಗನ್ನಡವಕ್ಕಿಯಂತೆ ನು
ಣ್ಚುರದೆ ತೊದಳ್ ತೊಡಂಕೆ ನುಡಿದಾಡುವ ಕಂದನನೆಂದು ಕಾಣ್ಬೆನೋ ೩೧

ಪಲವಾಳಾಪದೊಳೇನೊ ಚೆಲ್ವಣುಗನಂ ಕಟ್ಟಳ್ಕರಿಂದೆತ್ತಿ ಪೆಂ
ಪಲರ್ವನ್ನಂ ಬಿಗಿದಪ್ಪದಿರ್ದ ನಳಿತೋಳಾಂ ಬಂಜೆದೋಳ್ನೋಡದಿ

ಬಿಟ್ಟು ಪ್ರಾಣಪ್ರಿಯನಾದ ಮಾದರಸನೊಡನೆ ಹೀಗೆ ಹೇಳಿದಳು : ೨೯. "ಕಮಲದ ಹೂ ಬೆಳೆಯದ ನದಿ, ಎಳೆಗಿಳಿ ಬೆಳೆಯದ ಮಾಮರ (ಮಾವಿನಕೊಂಬೆ), ಬಾಲಹಂಸ ಪಕ್ಷಿಯಮರಿ ಬೆಳೆಯದ ಸರೋವರ, ಶ್ರೇಷ್ಠವಾದ ಗರ್ಭವು ಬೆಳೆಯದ ಹೆಣ್ಣಿನಹೊಟ್ಟೆ–ಇವು ನಿಷ್ಪ್ರಯೋಜಕವಾದವುಗಳಲ್ಲವೆ ?" ೩೦. "ರತ್ನವಿಲ್ಲದ ಕಾಂಚಿ (ಡಾಬು), ಸೂರ್ಯನಿಲ್ಲದ ಆಕಾಶ, ಹಂಸಪಕ್ಷಿಯಿಲ್ಲದ ಮಳಲದಿಣ್ಣೆ, ಸದ್ಗುಣವಿಲ್ಲದ ಐಶ್ವರ್ಯ, ಪ್ರೀತಿಯಿಂದ ಕುಣಿದಾಡುವ ಬಾಲಕನಿಲ್ಲದ ಮನೆಯ ಅಂಗಳ ಮನೋಹರವಾದಾವೇ ?" ೩೧. "ಕಮಲಪುಷ್ಪದಲ್ಲಿಸಿಕ್ಕ ದುಂಬಿಯಂತೆ ಗುಯ್‌ಗುಟ್ಟಿ (ಜಿನುಂಗಿ), ಕಮಲಪುಷ್ಪದ ಮೊಗ್ಗು ಅರಳುವಂತೆ ಒಂದೊಂದುಸಲ ಮಂದಹಾಸವನ್ನು ಮೆಲ್ಲಮೆಲ್ಲನೆ ಹೊರಸೂಸುತ್ತ, ಹಂಸಪಕ್ಷಿಯ ಮರಿಯ ಹಾಗೆ ಸೊಗಸನ್ನು ಹೊಂದಿ ತಪ್ಪುತಪ್ಪು ಹೆಜ್ಜೆಗಳನ್ನಿಡುತ್ತ ಎಳೆಯ ಗಿಳಿಯ ಹಾಗೆ ಮನೋಹರವಾದ ತೊದಲಿನಿಂದ ತೊಡಕಿನಿಂದ ಮಾತನಾಡುತ್ತ ಆಟವಾಡುವ ಮಗನನ್ನು ಯಾವಾಗ ಕಾಣುವೆನೋ" ೩೨. "ಅನೇಕ ಮಾತುಗಳಿಂದೇನು ಪ್ರಯೋಜನ ? ಸುಂದರಾಕಾರನಾದ ಮಗನನ್ನು ಅತಿಪ್ರೀತಿಯಿಂದ ಅಪ್ಪಿಕೊಂಡು ಅಧಿಕವಾದ ಹೆಮ್ಮೆಯಿಂದ ಬಿಗಿದಪ್ಪಿಕೊಳ್ಳದಿರುವ ಕೋಮಲವಾದ ಈ ತೋಳುಗಳು ಬಂಜೆ ತೋಳುಗಳು ; (ಅಂಥ ಮಗನನ್ನು) ನೋಡದಿರುವ ಈ ಪುಷ್ಪ ಸದೃಶ ಕಣ್ಣುಗಳು ಜಾಳಿ ಕಣ್ಣುಗಳು (ಬಲೆಯಂತಿರುವ ಕಣ್ಣುಗಳು),

ರ್ಜಲರ್ಗಣ್ಬಾಂ ಬಲೆಗೆಣ್ ಸುರಾಗರಸದೊಳ್ಪಂ ಬೀಱುತಂ ಜೋಗುಳಂ
ನಲವಿಂ ಪಾಡಿದ ಪೆಣ್ಣು ಬಾಯ್ಬಿಲದ ಬಾಯ್ತಾನೆಂದೊಡಂ ಸಾಲದೇ ೩೨

ವ॥ ಎಂದು ತನೂಭವಲಾಭಲೋಭದಿಂ ನುಡಿದ ನಿಜರಮಣಿಯ ದೀನಾನನಮಂ ಕಂಡು ಮಾದರಸಂ ಮ್ಲಾನಮುಖನಾಗುತ್ತಿಂತೆಂದಂ—

ಪಡೆಯದೆ ಬರ್ಕುಮೇ ಸುತನ ವಕ್ತ್ರಮನೀಕ್ಷಿಪ ಲಲ್ಲೆಗೈವ ನ
ಣ್ಪಿಡಿದನುರಾಗದಿಂ ನಗಿಸುವಳ್ಕಱೊಳಪ್ಪುವ ನೆತ್ತಿಯೊಡ್ಡಿ ಚೈ
ಗುಡುವ ವಿಳಾಸದಿಂ ಚುಬುಕಮಂ ಪಿಡಿದೆತ್ತಿ ಕಡಂಗಿ ಮುದ್ದಿಸು
ತ್ತಡಿಗಡಿಗಂ ತೊದಳ್ನುಡಿಯನಾಲಿಪ ಸೈಪು ಸರೋರುಹೇಕ್ಷಣೇ ೩೩

ಈ ಸಿರಿಯೀ ನಱುಜವ್ವನ
ಮೀ ಸುಭಗತೆಯೀ ವಿಳಾಸಮೀ ಸಕಳಕಳಾ
ಭ್ಯಾಸಂ ಸುತನಂ ಪಡೆಯದ
ದೂಸಱಿನಿನಿತುಂ ನಿರರ್ಥಮಲ್ತೆ ಮೃಗಾಕ್ಷಿ ೩೪

ವ॥ ಎಂದು ನಿರ್ವೇದಂಬಟ್ಟಿರ್ವರುಮಾಳೋಚಿಸಿ ಕತಿಪಯ ಪುತ್ರಕಾಮವ್ರತಂಗಳಂ ತಳೆದುಂ ಕೆಲವು ನೋಂಪಿಯನಲಂಪಿನಿಂ ಮಾಡಿಯುಂ ಮನೋರಥಂ ದೊರೆಯದಿರೆ ದೊರೆವೆತ್ತ

ಮನೋಹರವಾದ ಸಂತೋಷ ರಸದ ಧಾರೆಯನ್ನು ಬೀರುತ್ತ ಜೋಗುಳವನ್ನು ನಲವಿಂದ ಹಾಡದೆಯಿರುವ ಹೆಣ್ಣು ಮಗಳ ಬಾಯಿ ಬಿಲದಬಾಯಿ ಇದ್ದಂತೆ ಎಂದರೆ ಸಾಲದೆ ?'' ವ॥ ಹೀಗೆಂದು ಮಗನನ್ನು ಪಡೆಯಬೇಕೆಂಬ ಆಸೆಯಿಂದ ಹೇಳಿದ, ತನ್ನ ಪತ್ನಿಯ ದೈನ್ಯದಿಂದೊಡಗೂಡಿದ ಮುಖವನ್ನು ಕಂಡು ಮಾದರಸನು ಬಾಡಿದ ಮುಖವುಳ್ಳವನಾಗಿ ಹೀಗೆ ಹೇಳಿದನು ; ೩೩. ``ಹೇ ಕಮಲನೇತ್ರೆಯೇ, ಮಗನ ಮುಖವನ್ನು ನೋಡುವ ಮುದ್ದಾಡುವ. ಮಧುರವಾಗಿ ಪ್ರೀತಿಯಿಂದ ನಗಿಸುವ, ಮುದದಿಂದ ಆಲಿಂಗಿಸುವ, ನೆತ್ತಿಯನ್ನು ಚಾಚಿ ಜೈ ಜೈ ಎಂದೆನ್ನುವ, ಲೀಲೆಯಿಂದ ಗದ್ದವನ್ನು ಹಿಡಿದು ಎತ್ತಿಕೊಂಡು ಕುತೂಹಲದಿಂದ ಮುದ್ದಿಡುತ್ತ ಬಾರಿಬಾರಿಗೂ ತೊದಲು ನುಡಿಗಳನ್ನು ಕೇಳುವ ಪುಣ್ಯವು (ಪೂರ್ವಜನ್ಮದಲ್ಲಿ) ಪಡೆದುಕೊಂಡು ಬರದೆ (ಸುಮ್ಮನೆ) ಬರುವುದೇ ?'' ೩೪. ಜಿಂಕೆಯಂತಹ ಚಂಚಲ ನೇತ್ರವುಳ್ಳವಳೇ, ಈ ಐಶ್ವರ್ಯ ಈ ನೂತನ ಯೌವನ. ಈ ಸುಗುಣತೆ. ಈ ಸೌಂದರ್ಯ, ಈ ವಿಲಾಸ, ಈ ಸಮಸ್ತಕಲೆಗಳ ಅಭ್ಯಾಸ ಇಷ್ಟೂ ಕೂಡ ಮಗನನ್ನು ಪಡೆಯದಿರುವ ಕಾರಣದಿಂದ ವ್ಯರ್ಥವಾದವುಗಳಾಗುವುದಿಲ್ಲವೆ ? ವ॥ ಹೀಗೆಂದು ದುಃಖಗೊಂಡು ಇಬ್ಬರೂ ಆಲೋಚಿಸಿದವರಾಗಿ ಹಲಕೆಲವು ಪುತ್ರಲಾಭದಾಯಕಗಳಾದ ವ್ರತಗಳನ್ನು ಅತಿಶಯ ವೆನಿಸುವಂತೆ ಮಾಡಿಯೂ ಕೂಡ, ಮನೋರಥವೀಡೇರದಿರಲು, ಪ್ರಸಿದ್ಧ ಶಾಸ್ತ್ರ

ಶಾಸ್ತ್ರವಯೋವೃದ್ಧರಿಂ ಪ್ರಾರ್ಥನೆಯಂ ನೋಡಿಸುತ್ತುಂ ನಂದೀಶ್ವರನ ನೋಂಪಿಯಿಂ ನಂದನೋದಯಂ ಸಮನಿಪ್ಪುದೆಂಬುದಂ ನಿರ್ಧರಿಸಿ ನಂಬಿ ನಲವೇಱಿ ನಿಜಪುರಪುರೋಭಾಗಭಾಸುರಶಿವಾಲಯಕ್ಕೆ ಸಂಭ್ರಮದಿನೇಳ್ತಂದು ನಂದೀಶ್ವರನಂ ಕಂಡು ಕೊಂಡಾಡಿ ದಂಡಪ್ರಣಾಮಂಗೈದಖಂಡಿತೋತ್ಸವಂ ಮಿಗೆ ಸೋಮ[1]ವಾರಾ[1]ದಿಯಾಗಿ ನವದಿವಸಂ ನೋಂಪಿಗೈದು ಮಱುದಿವಸದುದಯಸಮಯದೊಳಾ ವೃಷೇಂದ್ರಂಗೆ ಮಡದಿವೆರಸಿ ಸಡಗರಿಸಿ—

ದಧಿಮಧುಸುಧಾಸರ್ಪಿರೈಕ್ಷವರಸಂಗಳಿಂ
ವಿಧುವಿಮಳ ಮಲಯಜ ಹಿಮಾಂಬುಪೂರಂಗಳಿಂ
ಸಾರ ಕಾಶ್ಮೀರಘನಸಾರ ಗಂಧಂಗಳಿಂ
ಸಾರ ಸಾರಾತಿಸಿತ ಧವಳಾಕ್ಷತಂಗಳಿಂ
ಭೂರಿ ಕಲ್ಹಾರಕರವೀರ ಕುಸುಮಂಗಳಿಂ
ಚಾರುರಚಿಖಚಿತ ನವಮೃದುಳವಸ್ತ್ರಂಗಳಿಂ
ಕಮಳ ಬಕ ವಕುಳ ಚಂಪಕ ಕುಸುಮದಾಮದಿಂ

ನಿಮಿತ್ತಗಳನ್ನು ನೋಡಿಸಿದವರಾಗಿ, ಸಂದೀಶ್ವರ ವ್ರತದಿಂದ ಪುತ್ರಲಾಭವಾಗುದೆಂಬುದನ್ನು ನಿರ್ಧರಿಸಿಕೊಂಡವರಾಗಿ, ಸಂತೋಷದಿಂದ (ಆ ವ್ರತವನ್ನು) ನಂಬಿ, ತಮ್ಮ ಪಟ್ಟಣದ ಮುಂಭಾಗದಲ್ಲಿ, ಪ್ರಕಾಶಮಾನವಾಗಿ (ಶೋಭಿಸುತ್ತಿದ್ದ) ಶಿವಾಲಯಕ್ಕೆ ಸಡಗರದಿಂದ ಬಂದು, (ಅಲ್ಲಿರುವ) ನಂದೀಶ್ವರನನ್ನು ಕಂಡು ಪ್ರಾರ್ಥಿಸಿ ಒಂಬತ್ತು ದಿವಸ ಪರ್ಯಂತವಾಗಿ ನೋಂಪಿಯನ್ನು ಮಾಡಿದರು. ಮರುದಿವಸ ಪ್ರಾತಃಕಾಲ ಸಮಯದಲ್ಲಿ (ಮಾದರಸನು) ಪತ್ನಿಯೊಡನೆ ಕೂಡಿಕೊಂಡು ಸಂಭ್ರಮದಿಂದ ಆ ವೃಷಭೇಶ್ವರನಿಗೆ- **ರಗಳೆ** :– ಮೊಸರು, ಜೇನುತುಪ್ಪ, ಹಾಲು, ಕಬ್ಬಿನ ರಸಗಳಿಂದಲೂ, ಪಚ್ಚ ಕರ್ಪೂರ (ವಿಧು), ನಿರ್ಮಲ ಶ್ರೀಗಂಧದಿಂದ ಕೂಡಿದ ಶೀತೋದಕದಿಂದಲೂ, ಕಮಲಕ್ಕೆ ಶತ್ರುವಾದ ಚಂದ್ರನಂತೆ ಬಿಳುಪಾದ ಧವಳವರ್ಣದ ಅಕ್ಷತೆಗಳಿಂದಲೂ, ಅನೇಕ ಕಲ್ಹಾರ (ಸುಗಂಧ ವಿಶಿಷ್ಟ ಕಮಲ) ಕಣಗಿಲೆಹೂಗಳಿಂದಲೂ, ಮನೋಹರವಾದ ಕಾಂತಿಯಿಂದ ಮಿನುಗುತ್ತಿರುವ ನೂತನವೂ ಕೋಮಲವೂ ಆದ ವಸ್ತ್ರಗಳಿಂದಲೂ, ಕಮಲ, ಬಕ (ಗೋಳಿಹೂ ?), ಬಕುಳ, ಸಂಪಿಗೆಹೂಗಳ ಮಾಲಿಕೆಗಳಿಂದಲೂ, ದವನ, ಮರುಗ, ಬಿಲ್ವಪತ್ರೆಗಳ ಚಿಗುರಿನ ಸ್ತೋಮದಿಂದಲೂ, ಅತ್ಯಂತ ಮನೋಹರವಾದ ಸುಗಂಧ ವಿಶಿಷ್ಟ ದಶಾಂಗ ಧೂಪಗಳಿಂದಲೂ, ಕಾಂತಿಸಮೂಹದಿಂದ ವ್ಯಾಪಕವಾದ ಪಚ್ಚಕರ್ಪೂರ ದೀಪಗಳಿಂದಲೂ, ಪರಿಶುದ್ಧವಾದುದೂ, ರುಚಿಯುಳ್ಳದ್ದೂ ಸಪಾಸನಾಯುಕ್ತವೂ ಆದ ಹಾಲು ತುಪ್ಪದಿಂದ ಕೂಡಿದ ಭೋಜ್ಯ ಪದಾರ್ಥ ಸಮೂಹದಿಂದಲೂ, ಪ್ರಸಿದ್ಧವಾದ ಹಲಸು, ಮಾವು, ಬಾಳೆಗಳೇ ಮೊದಲಾದ

---

1 ಪಾದಾ(ದ, ಮು, ಜ, ಮ, ಗ, ಚ)

ದಮನ ಮರುವಕ ಬಿಲ್ವ ಪಲ್ಲವಸ್ತೋಮದಿಂ
ರುಚಿರತರಸೌರಭ ದಶಾಂಗಧೂಪಂಗಳಿಂ
ರುಚಿನಿಚಯನಿಚಿತ ಘನಸಾರದೀಪಂಗಳಿಂ
ಶುಚಿರುಚಿಸುಗಂಧಮಯ ಸಾಜ್ಯಭೋಜ್ಯಾಳಿಯಿಂ
ಪ್ರಚುರ ಪನಸಾಮ್ರ ಕದಳಾದಿಫಳಪಾಳಿಯಿಂ
ವಿಮಳ ಹಿಮವಿಳದಧಿಕ ಮಧುರ ತಾಂಬೂಲದಿಂ
ಕಮನೀಯ ತಪನೀಯ ಮಣಿಭರಣಜಾಲದಿಂ
ತತವಿತತ ಘನ ಸುಷಿರ ಮೃದುಮಧುರನಾದದಿಂ
ವಿತತನುತ ನರ್ತಕೀನರ್ತನವಿನೋದದಿಂ
ವಿವಿಧೋಪಚಾರದಿಂ ವಿಪುಳನುತಿಸಾರದಿಂ
ನವವಿಧ ಸುಭಕ್ತಿಯಿಂ ನವ್ಯತರ ಯುಕ್ತಿಯಿಂ
ಶಿವಧರ್ಮರೂಪನಂ ಶಿಷ್ಟಹೃದ್ದೀಪನಂ
ಪ್ರವಿಮಳಕಲಾಪನಂ ಪ್ರಥಿತನಿರ್ಲೇಪನಂ
ಜಗದವನಶೀಲನಂ ಜಂಗಮವಿಲೋಲನಂ
ನಿಗಮಾಂತವೇದ್ಯನಂ ನಿತ್ಯನಿರವದ್ಯನಂ

ಫಲಗಳ ಸಮೂಹದಿಂದಲೂ, ನಿರ್ಮಲ ಪಚ್ಚಕರ್ಪೂರ ಕೂಡಿದ ಅಧಿಕಮಾಧುರ್ಯಯುಕ್ತ ತಾಂಬೂಲದಿಂದಲೂ, ಮನೋಹರವಾದ ಸುವರ್ಣ ಮತ್ತು ರತ್ನಾಭರಣಗಳ ಸಮೂಹದಿಂದಲೂ, ತತ, ವಿತತ, ಘನ, ಸುಷಿರ (ತಂತ್ರೀವಾದ್ಯ, ಚರ್ಮವಾದ್ಯ, ಕಂಚಿನತಾಳ, ಕೊಳಲುವಾದ್ಯ) ಮೊದಲಾದ ಬಿರುದಿನವಾದ್ಯಗಳ ಮೃದುವಾಗಿಯೂ ಮಧುರವಾಗಿಯೂ ಇರುವ ಧ್ವನಿವಿಶೇಷದಿಂದಲೂ, ಪ್ರಸಿದ್ಧವಾದ ನರ್ತಕಿಯರ ನಾಟ್ಯವಿನೋದದಿಂದಲೂ,—ಹೀಗೆ ನಾನಾ ವಿಧವಾದ ಉಪಚಾರಗಳಿಂದ, ವಿಶೇಷವಾದ ಅನೇಕ ಸ್ತೋತ್ರಗಳಿಂದ, ಶ್ರವಣ, ಕೀರ್ತನ, ·ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ, ಆತ್ಮನಿವೇದನಾದಿ ನವವಿಧ ಭಕ್ತಿಗಳಿಂದ, ಅತ್ಯಂತ ವಿನೂತನವಾದ ಯುಕ್ತಿಗಳಿಂದ, ಶಿವಧರ್ಮಸ್ವರೂಪನೂ, ಸತ್ಪುರುಷರ ಹೃದಯವನ್ನು ಬೆಳಗುತ್ತಿರುವವನೂ, ನಿರ್ಮಲಾಭರಣನೂ, ಪ್ರಬಲವಾದ ಮಾಯೆಯಿಂದ ನಿರ್ಲೇಪನೂ, ಜಗತ್ತನ್ನು ರಕ್ಷಿಸುವ ಸ್ವಭಾವವುಳ್ಳವನೂ, ಜಂಗಮದಲ್ಲಿ ಆಸಕ್ತನೂ, ಉಪನಿಷದ್ವಾಕ್ಯಗಳಿಂದ ಮಾತ್ರ ತಿಳಿಯಲ್ಪಡುವವನೂ, ನಿತ್ಯನೂ, ಶಾಶ್ವತನೂ, ದೋಷರಹಿತನೂ ಆದ ಪರಮೇಶ್ವರನ ವಾಹನವಾಗಿ ಸಂಚಾರ ಮಾಡುವುದರಿಂದ ಅತನನ್ನು ಸಂತೋಷಪಡಿಸುವವನೂ ಆದ ಶ್ರೇಷ್ಠ ನಂದೀಶ್ವರನನ್ನು ಆ ವಿನಯ ಗುಣದಿಂದ ಪ್ರಕಾಶಿಸುವ ಅರಿತು ಆಚರಿಸುವ ವಿಧಿವಿಧಾನದಲ್ಲಿ ಬ್ರಾಹ್ಮಣನಾದ ಮಾದರಸನು ಪತ್ನೀಸಮೇತನಾಗಿ

ಘನನಂದಿಕೇಶನಂ ಗಮಿಸಮುದಿತೇಶನಂ
ವಿನಯಗುಣಭಾಸುರಂ ವಿದಿತವಿಧಿಭೂಸುರಂ
ರಾಜಿಪವಧೂಯುತಂ ರಮ್ಯಮತಿಸಂಯುತಂ
ಪೂಜಿಸಿದನೊಲ್ಮೆಯಿಂ ಪುತ್ರಾರ್ಥಿ ನಲ್ಮೆಯಿಂ

ವ॥ ಅಂತು ಪೂಜಿಸುತ್ತುಮವನವನಿನಿಹಿತೋತ್ತಮಾಂಗನಾಗಿ ಪೊಡಮಟ್ಟು ಕರಾರವಿಂದಮಂ ಮುಗಿದು ನಿಂದು—

ಪರಮ ದಯಾಸಮುದ್ರ ಪವಮಾನಸಖಾಂಬಕರೂಪ ಪಾಪಸಂ
ಹರ ಹರವಾಹ ಪಾಲಿತಜಗತ್ರಯ ಘೋರಭವಾಂಧಕಾರಭಾ
ಸ್ಕರ ಭಜಕಪ್ರತಾನಸುರಭೂರುಹ ಪೂರ್ಣಗುಣಾಭಿರಾಮ ಮಂ
ದರಧರ ವಂದನೀಯ ಗಣನಾಯಕನಂದಿತ ನಂದಿಕೇಶ್ವರಾ ೩೫

ನಿನ್ನನ್ನನಪ್ಪ ಸುತನಂ
ಮನ್ನಾಥ ವೃಷೇಂದ್ರ ಕೂರ್ತು ಕರುಣಿಪುದೆನಗಾಂ
ನಿನ್ನಯ ಪೆಸರಿಟ್ಟಪೆನೆನು
ತಂ ನಲವಿಂ ಬೇಡಿಕೊಂಡನಾ ಮಾದರಸಂ ೩೬

ರಮ್ಯವಾದ ಮನಸ್ಸಿನಿಂದ ಕೂಡಿದವನಾಗಿ ಪ್ರೀತಿ ನಲುಮೆಗಳೊಡನೆ ಪುತ್ರಾಪೇಕ್ಷೆಯಿಂದ (ಆ ನಂದೀಶ್ವರನನ್ನು) ಪೂಜೆಮಾಡಿದನು. ವ॥ ಆ ರೀತಿ ಪೂಜೆಮಾಡುತ್ತ ಅವನು ನೆಲಕ್ಕೆ ಹಣೆಹಚ್ಚಿ ನಮಸ್ಕರಿಸಿ ಕರಕಮಲವನ್ನು ಮುಗಿದು ನಿಂತು ಕೊಂಡನು. ೩೫. ಶ್ರೇಷ್ಠವಾದ ದಯೆಗೆ ಸಮುದ್ರದೋಪಾದಿಯಲ್ಲಿರುವವನೇ, ವಾಯುಸಖನಾದ ಅಗ್ನಿಯೇ ನೇತ್ರವಾಗಿ ಉಳ್ಳ ಈಶ್ವರ ಸ್ವರೂಪನೇ, ಪಾಪನಾಶಕನೇ, ಪರಮೇಶ್ವರ ವಾಹನನೇ, ಮೂರುಲೋಕಗಳನ್ನು ರಕ್ಷಿಸುವವನೇ, ಘೋರವಾದ ಹುಟ್ಟುಸಾವುಗಳೆಂಬ ಭವದ ಕತ್ತಲೆಗೆ ಸೂರ್ಯನೋಪಾದಿಯಲ್ಲಿರುವವನೇ, ಧ್ಯಾನಮಾಡುವ ಜನ ಸಮೂಹಕ್ಕೆ ಕಲ್ಪವೃಕ್ಷ ಪ್ರಾಯನೇ, ಸಮಗ್ರ ಸದ್ಗುಣಗಳಿಂದ ಮನೋಹರವಾಗಿರುವವನೇ, ಮಂದರ ಪರ್ವತ ಧಾರಿಯಾದ ವಿಷ್ಣುವಿನಿಂದ ನಮಸ್ಕರಿಸಿಕೊಳ್ಳಲು ಯೋಗ್ಯನಾದವನೇ, ಶಿವಗಣಗಳಿಂದ ಸಂತೋಷಪಡಿಸಲ್ಪಡುವ ನಂದಿಕೇಶ್ವರನೇ [ಪವಮಾನಸಖಾಂಬಕರೂಪ–ಗಾಳಿಯ ಸಖನಾದ ಅಗ್ನಿಯೇ ನೇತ್ರವಾಗಿ ಉಳ್ಳ ಶಿವನ ಸ್ವರೂಪ–ನಂದಿ] ೩೬. ನನ್ನ ಸ್ವಾಮಿಯಾದ ವೃಷಭೇಶ್ವರನೇ, ನೀನು ನಿನ್ನ ಹಾಗೆಯೇ ಇರುವ ಮಗನನ್ನು ಪ್ರೀತಿಯಿಂದ ನನಗೆ ಕರುಣಿಸುವುದು. ನಾನು ನಿನ್ನ ಹೆಸರನ್ನೇ ಅವನಿಗಿಡುವೆನು ಎನ್ನುತ್ತ ಆ ಮಾದರಸನು ಸಂತೋಷದಿಂದ ಪ್ರಾರ್ಥಿಸಿದನು.

ವ॥ ಆಗಳ್—

ನೆರೆದ ಜನವೊಲ್ದು ನೋಡು
ತ್ತಿರೆ ದಕ್ಷಿಣಶೃಂಗದಿಂದೆ[1]ಯುರಲಂ ವೃಷಭಂ
ಕರುಣಿಸಿದನದಂ ದ್ವಿಜಪತಿ
ತರುಣಿಗೆ ಕುಡೆ ಮಣಿದು ಕಬರಿಯೊಳ್ತಳೆದಳದಂ ೩೭

ವ॥ ಅನಂತರಂ ಜಾಯಾಪತಿಗಳಿರ್ವರುಂ ಲಬ್ಧವರಪ್ರಸನ್ನಾನನರ್ ಪರಮಾನಂದದಿಂ ನಂದೀಶ್ವರಂಗೆ ಬಲವಂದೆಱಗಿ ಬೀಳ್ಕೊಂಡು ನಿಜಮಂದಿರಕ್ಕೆಳ್ತಂದು ಶಿವಗಣಾರಾಧನಂಗೈದು ಶಿವಪುರಾಣಂಗಳನಾಕರ್ಣಿಸುತ್ತುಂ ನಂದಿಕೇಶ್ವರನಂ ಜಾನಿಸುತ್ತುಂ ಸುಖಮಿರುತ್ತಿರೆಯಿರೆ—

ನಿಜಪಾದಾಂಭೋಜ ಸಂಸ್ಪರ್ಶನದೆ ಧರಣಿಯುಂ ಪಾವನಂಗೆಯ್ಯಲುಂ ಭ
ಕ್ತಜನವ್ರಾತಾವನಾರ್ಥಂ ಶಿವನೊರೆದ ಮಹಾಕಾರ್ಯಮಂ ಮಾಡಲುಂ ತ
ದ್ದ್ವಿಜನಕ್ಕೊಲ್ದಿತ್ತ ಪುತ್ರತ್ವಪಹನವರಮಂ ಕಾಯಲುಂ ಬಂದು ಪೊಕ್ಕಂ
ದ್ವಿಜರಾಜಸ್ತ್ರೀಯ ಪುಣ್ಯೋದರಮನವನಿಳಾಭಾಮಿನೀ ಭಾಗಧೇಯಂ ೩೮

ವ॥ ಆಗ. ೩೭. ನೆರೆದ ಜನಗಳು ಪ್ರೀತಿಯಿಂದ ನೋಡುತ್ತಿದ್ದಂತೆಯೇ ವೃಷಭೇಶ್ವರನು ಬಲಗಡೆಯ ಕೊಂಬಿನಿಂದ ಒಂದು ಹೂವನ್ನು ಕರುಣಿಸಿದನು. ಅದನ್ನು ಆ ಬ್ರಾಹ್ಮಣ ಶ್ರೇಷ್ಠನಾದ ಮಾದರಸನು ತನ್ನ ಹೆಂಡತಿಗೆ ಕೊಡಲಾಗಿ ಆ ಮಾದಲಾಂಬಿಕೆಯು ನಮಸ್ಕರಿಸಿ ತನ್ನ ಮುಡಿಯಲ್ಲಿ ಮುಡಿದುಕೊಂಡಳು. ವ॥ ಅನಂತರ ದಂಪತಿಗಳಿಬ್ಬರೂ (ನಂದಿಕೇಶ್ವರನಿಂದ)ವರ ಪ್ರಸಾದವನ್ನು ಪಡೆದುದರಿಂದ ಪ್ರಸನ್ನಗೊಂಡ ಮುಖಮುದ್ರೆಯುಳ್ಳವರಾಗಿ, ಪರಮಾನಂದವನ್ನು ಹೊಂದಿ, ನಂದಿಕೇಶ್ವರನಿಗೆ ಪ್ರದಕ್ಷಿಣೆ ಬಂದು ನಮಸ್ಕಾರ ಮಾಡಿ, ಅಪ್ಪಣೆ ಪಡೆದುಕೊಂಡು, ತಮ್ಮ ಮನೆಗೆ ಬಂದು ಶಿವಗಣಂಗಳ ಪೂಜೆಯನ್ನು ಮಾಡಿ, ಶಿವಪುರಾಣಗಳನ್ನು ಕೇಳುವವರಾಗಿ, (ಆ) ನಂದಿಕೇಶ್ವರನನ್ನೇ ಧ್ಯಾನಮಾಡುತ್ತ ಸುಖದಿಂದ ಇರುತ್ತಿರಲಾಗಿ—೩೮. ಭೂಕಾಂತೆಯ ಭಾಗ್ಯ ಸ್ವರೂಪನಾದ ಆ ನಂದಿಕೇಶ್ವರನು ತನ್ನ ಚರಣ ಕಮಲದ ಸೋಂಕಿನಿಂದ ಭೂಲೋಕವನ್ನು ಪರಿಶುದ್ಧಗೊಳಿಸುವುದಕ್ಕೂ, ಭಕ್ತ ಜನ ಸಮುದಾಯವನ್ನು ಪಾಲನೆ ಮಾಡುವುದಕ್ಕೂ, ಶ್ರೀಪರಮೇಶ್ವರನು ಅಪ್ಪಣೆ ಕೊಡಿಸಿದ ಮಹಾ ಕಾರ್ಯವನ್ನು (ಭೂಲೋಕದಲ್ಲಿ) ನೆರವೇರಿಸುವುದಕ್ಕೂ ಆ ದಂಪತಿಗಳಾದ ಮಾದರಸ ಮಾದಲಾಂಬಿಕೆಯರು ಮಾಡಿದ ಸೇವೆಗೆ ಒಲಿದು ಪ್ರೀತಿಸಿಕೊಟ್ಟ ಅವರ ಪುತ್ರನಾಗಿ ಹುಟ್ಟಿ ಅಭಯವನ್ನು ಕಾಪಾಡುವುದಕ್ಕೋಸ್ಕರ ಆದ್ವಿಜವರನ (ಪುಣ್ಯ) ಸ್ತ್ರೀಯಾದ ಮಾದಲಾಂಬಿಕೆಯ ಪರಿಶುದ್ಧ ಗರ್ಭ ಪ್ರವೇಶ ಮಾಡಿದನು. [ಇಳಾಕಾಮಿನೀ

1 ದೆ(ಅ, ಚ)

ಶಂಕರಕುಮಾರಕ ವಿಶಂಕಟವಿಹಾರಕ ಕ
ಲಂಕಮತದೂರಹರಸಂಕಥನಕರ್ಣಾ
ಲಂಕರ ಶೈವಮತ ಪಂಕರುಹ ಭಾಸ್ಕರ ಭ
ಯಂಕರ ಯಮಾಪಹ ನಿಶಂಕುಶಚರಿತ್ರಾ
ಸಂಕಲಿತಕಾಯ ಮಕರಾಂಕಮದಮರ್ದನ ಮೃ
ಗಾಂಕಧರ ಸೇವಕ ಸುಖಂಕರ ಕಟಾಕ್ಷಾ
ಹಂಕರಣ ದೂರ ಶಿವಕಿಂಕರಚಯಾನ್ವಿತ ಮೃ
ಡಾಂಕನ ಗಣಾಧಿಪ ವಿಶಂಕ ಬಸವೇಶಾ ೩೯

ಪರಮಾನಂದಪಯಸ್ತರಂಗಿಣಿ ಲಸತ್ಕಲ್ಯಾಣಿ ವಾಣೀಮೃದು
ಸ್ವರವೀಣಾರಣಿತಪ್ರಣೀತಭಣಿತೀಪ್ರಸ್ತಾವದತ್ತಾವಧಾ

ಭಾಗಧೇಯಂ–ಇಳೆಯೆಂಬ ಸ್ತ್ರೀಯ ಭಾಗ್ಯ ಸ್ವರೂಪ] ೩೯. ಶಿವಪುತ್ರನಾದವನೂ, ವಿಸ್ತಾರವಾಗಿ ಪ್ರಸಾರಗೊಂಡಿರುವ ದೇಶವಿಶಿಷ್ಟ ಮತಗಳಿಂದ ದೂರನಾದವನೂ, ಹರಸಂಬಂಧವಾದ ಕಥೆಗಳನ್ನು ಕೇಳುವುದೇ ಕರ್ಣಗಳಿಗೆ ಅಲಂಕಾರವಾಗಿ ಉಳ್ಳವನೂ, ಶೈವ (ವೀರಶೈವ) ಮತವೆಂಬ ಕಮಲಕ್ಕೆ ಸೂರ್ಯಪ್ರಾಯನೂ, ಭಯಂಕರ ಯಮಧರ್ಮನನ್ನು ನಾಶಮಾಡುವವನೂ, ನಿರ್ದುಷ್ಟ ಚರಿತ್ರೆಯಿಂದ ಕೂಡಿದ ಶರೀರಿಯೂ, ಮನ್ಮಥನ ಗರ್ವವನ್ನು ನಾಶ ಮಾಡಿದವನೂ, ಚಂದ್ರಶೇಖರನ ಭಕ್ತರಿಗೆ ಸುಖವನ್ನುಂಟು ಮಾಡುವ ಕಡೆಗಣ್ಣುಗಳ ನೋಟವುಳ್ಳವನೂ, ಅಹಂಕಾರ ದೂರನಾದ, ಶಿವಕಿಂಕರರುಗಳಿಂದ ಕೂಡಿದ, ಪರಮೇಶ್ವರನ ಚಿಹ್ನೆಯನ್ನುಳ್ಳ (ಶಿವ ವಾಹನವಾದ್ದರಿಂದ ಪರಮೇಶ್ವರ ಚಿಹ್ನಾಂಕಿತನೆಂಬ ಭಾವ) ಗಣಶ್ರೇಷ್ಠನಾದ, ಭಯರಹಿತನಾದ, ಬಸವೇಶನೇ (ರಕ್ಷಿಸು ಎಂಬ ಭಾವ). ೪೦. ಪರಮಾನಂದವೆಂಬ ಜಲದ ನದಿಯಂತಿರುವವಳೂ, ಪ್ರಕಾಶಮಾನವಾದ ಮಂಗಳಸ್ವರೂಪಿಣಿಯೆನಿಸಿದವಳೂ, ಸರಸ್ವತಿಯ ಮಧುರ ಧ್ವನಿಯ ವೀಣೆಯಿಂದ ಉತ್ಪನ್ನವಾದ (ಯಾವ) ಯಾವ ಮಧುರವಾಣಿಗಳುಂಟೋ ಅವುಗಳ ಪ್ರಸ್ತಾಪದಲ್ಲಿ ಕೊಡಲ್ಪಟ್ಟ ಚಿತ್ತೈಕಾಗ್ರತೆಯುಳ್ಳವಳೂ, ಲಕ್ಷ್ಮೀದೇವಿಯ ಕರಕಮಲದಿಂದ ಕೊಡಲ್ಪಟ್ಟ ತಾಂಬೂಲವನ್ನುಳ್ಳವಳೂ, (ಫಣಿವಲ್ಲೀಪತ್ರ ನಾಗವಲ್ಲೀಪತ್ರ–ಎಂದರೆ ವೀಳೆಯದೆಲೆಯೆಂದರ್ಥ–ತಾಂಬೂಲದಲ್ಲಿ ಈ ಮಾತು ಪರ್ಯವಸಾನ.) ಶಿವನಪತ್ನಿಯಾಗಿರುವವಳೂ, ಬ್ರಹ್ಮ ವಿಷ್ಣುಗಳಿಂದ ವಂದಿಸಿಕೊಳ್ಳಲ್ಪಡುವವಳೂ ಪರ್ವತ ಪುತ್ರಿಯೂ ಆದ ದೇವಿಯೇ ನನ್ನನ್ನು ರಕ್ಷಿಸು. [ವಾಣಿ + ಮೃದು + ಸ್ವರ + ವೀಣಾ + ರಹಿತ + ಪ್ರಣೀತ + ಭಣಿತೀ + ಪ್ರಸ್ತಾವ + ದತ್ತ + ಅವಧಾನೆ–ವಾಣಿಯ ಮಧುರ

ನೆ ರಮಾಪಾಣಿಪಯೋಜದತ್ತ ಫಣಿವಲ್ಲೀಪತ್ರೆ ಶರ್ವಾಣಿ ಗೀ
ರ್ವರ ಪದ್ಮೇಕ್ಷಣವಂದ್ಯೆ ದೇವಿ ಪೊರೆಯೆನ್ನಂ ಭೂಧರೇಂದ್ರಾತ್ಮಜೆ

ಇದು ವಿನಮದಖಿಳ ಸುರಾಸುರೇಂದ್ರಮಕುಟತಟಘಟಿತ ಮಣಿಗಣಾಗಣಿತ ರುಚಿನಿಚಯ
ತರುಣಾರುಣಾತಪ ಪರಿಲಸಿತ ಪರಮ ಶಿವಲಿಂಗ ಪಾದಾರವಿಂದ ಪರಾಗಭಸಿತ
ಭಾಸುರಲಲಾಟಪಟ್ಟ ಸರಸಜನಮಾನಿತೋಭಯಕವಿತಾವಿಶಾರದ
ಶ್ರೀಷಡಕ್ಷರಿದೇವಭಕ್ತಿವಿರಚಿತ

ಶ್ರೀಮದ್ ಬಸವರಾಜವಿಜಯ ಮಹಾಪುರಾಣದೊಳ್ ಬಸವಾವತಾರವರ್ಣನಂ
ದ್ವಿತೀಯಾಶ್ವಾಸಂ ಸಮಾಪ್ತಂ

ಅಂತು ಆಶ್ವಾಸ ೨ಕ್ಕೆ ಪದ್ಯಗಣನೆ ೧೫೦ಕ್ಕಂ ಮಂಗಳಮಹಾ ಶ್ರೀ॥

ಶಬ್ದವುಳ್ಳ ವೀಣೆಯೆಂಬುದೇನುಂಟೋ ಆ ವೀಣೆಯ ಶಬ್ದದಿಂದ ಉತ್ಪನ್ನವಾದ ಮಾತುಗಳ ಪ್ರಸ್ತಾಪದಲ್ಲಿ ಅವಧಾನವನ್ನು ಕೊಡುವಂಥವಳು. ರಮಾ + ಪಾಣಿ + ಪಯೋಜ + ದತ್ತಫಣೀವಲ್ಲೀಪತ್ರೆ–ಲಕ್ಷ್ಮಿದೇವಿಯ ಕೈಯೆಂಬ ಕಮಲದಿಂದ ಕೊಡಲ್ಪಟ್ಟ ನಾಗಪತ್ರ (ವೀಳ್ಯದೆಲೆ) ವುಳ್ಳವಳು. (ಲಕ್ಷ್ಮಿಯು ಪಾರ್ವತಿಗೆ ತಾಂಬೂಲ ಕೊಡುವ ಸೇವಿಕೆ ಎಂಬ ಭಾವ.)

ತೃತೀಯಾಶ್ವಾಸಂ

ಶ್ರೀಕರ ಗಿರಿಜಾಹೃದಯಾ
ಬ್ಜಾಕರಕೇಳೀಮರಾಳನಖಿಳಕಳಾಶೋ
ಭಾಕರನಭಿನವಗುಣರ
ತ್ನಾಕರನೆಮಗೀಗೆ ಸೌಖ್ಯಮಂ ಶಿವಲಿಂಗಂ ೧

ಬಳೆದುದು ತೆಳ್ವಸಿರ್ಕ್ರಮದಳಿದ್ಯುತಿಯಂ ತಳೆದತ್ತು ಬಾಸೆ ಬೆ
ಳ್ವೆಳಗು ಪಗಿಲ್ತುದಂಗದೆ ಕರಂಗಿದುದುತ್ಕುಚಚೂಚುಕಂ ಸಮು
ಜ್ವಳವದನಂ ಬೆಳರ್ತುದು ವಳಿತ್ರಯಮಿಲ್ಲೆನಿಸಿತ್ತು ಚಂದ್ರಮಂ
ಡಳಮಧುರಾಸ್ಯೆಗಾ ಬಸಿಱೊಳಾಳ್ದುದು ಮೆಲ್ನಡೆ ಮಂದಭಾವಮಂ ೨

ಒಳಗೆಸೆವ ವೃಷಭನಂಗದ
ಬೆಳರ್ವಣ್ಣಂ ಪೊಱಗೆ ತೀವಿತೆಗೆ ಪೊಸವೆಳ್ಪು
ಜ್ವಳಿಸಿದುದು ತನುವಿನೊಳ್ಕೋ
ಮಳೆಗೆ ಶಶಾಂಕಾಂಶು ಮುಗಿಲನಾವರಿಸುವವೋಲ್ ೩

ಬಸವಾಭ್ಯುದಯ

೧. ಮಂಗಳವನ್ನುಂಟುಮಾಡುವ ಪಾರ್ವತೀದೇವಿಯ ಹೃದಯವೆಂಬ ಸರೋವರದಲ್ಲಿ ಕ್ರೀಡಿಸುವ ಹಂಸಪಕ್ಷಿಯೋಪಾದಿಯಲ್ಲಿರುವವನೂ, ಸಮಸ್ತ ವಿದ್ಯೆಗಳ ಶೋಭೆಗೆ ಆಗರವಾಗಿರುವವನೂ, ಅಭಿನವ ಗುಣಸಮೂಹಗಳಿಗೆ ಸಮುದ್ರದೋಪಾದಿಯಲ್ಲಿರುವನೂ ಆದ ಶಿವಲಿಂಗನು ನಮಗೆ ಸೌಖ್ಯವೀಯಲಿ. ೨. ಚಂದ್ರಮಂಡಲದೋಪಾದಿಯಲ್ಲಿ ಮನೋಹರವಾದ ಮುಖವುಳ್ಳ ಮಾದಲಾಂಬಿಕೆಗೆ ಗರ್ಭಧಾರಣೆಯಾದಾಗ ತೆಳುವಾದ ಹೊಟ್ಟೆಯು ದಿನೇ ದಿನೇ ವೃದ್ಧಿಯಾಗತೊಡಗಿತು. ಹೊಟ್ಟೆಯ ಮೇಲಿನ ರೋಮರಾಜಿಯು ದುಂಬಿಯ ಕಾಂತಿಯನ್ನು ಹೊಂದಿತು. ದೇಹದಲ್ಲಿ ಬಿಳುಪಾದ ಕಾಂತಿಯು ಹಬ್ಬಿತು. ಉನ್ನತವಾದ ಸ್ತನಗಳ ತೊಟ್ಟು ಕಪ್ಪಾಯಿತು. ಪ್ರಕಾಶಮಾನವಾದ ಮುಖವು ಬೆಳ್ಳಗಾಯಿತು. ಹೊಟ್ಟೆಯ ಮೇಲಿನ ಮೂರು ಮಡಿಕೆಗಳು (ತ್ರಿವಳಿಗಳು) ಇಲ್ಲದಂತಾದವು. ಮಂದಗಮನವು ಇನ್ನೂ ಹೆಚ್ಚಿನ ಮಂದತ್ವವನ್ನು ಹೊಂದಿತು. ೩. ಚಂದ್ರನ ಕಿರಣಗಳು ಮೇಘಮಂಡಲವನ್ನು ವ್ಯಾಪಿಸುವ ಹಾಗೆ ಗರ್ಭದಲ್ಲಿ ಪ್ರಕಾಶಿಸುವ ವೃಷಭೇಶ್ವರನ ದೇಹದ ಧವಳವರ್ಣವು ಹೊರಗೆ ತುಂಬಿತೋ ಎನ್ನುವ ಹಾಗೆ ಆ ಕೋಮಲ ಶರೀರಿಯಾದ ಮಾದಲಾಂಬಿಕೆಗೆ ದೇಹದಲ್ಲಿ ನೂತನವಾದ ಶುಭ್ರ

ಘನವೇಣೀರಾಹುಗಂಜುತ್ತವಳ ವದನಚಂದ್ರಂ ಸುಧಾಸಾರಮಂ ತೀ
ವಿ ನಿತಾಂತಂ ಲಾಕ್ಷೆಯಿಂ ಮುದ್ರಿಸುತಿರಿಸಿದ ಗಾಂಗೇಯಕುಂಭಂಗಳೋ ಮ
ರ್ಬಿನದಂ ಪೀರ್ದಳ್ಕಿಸಲ್ಕಾಱದೆ ಕರಮುಗುಳುತ್ತಿರ್ಪ ಚಕ್ರಂಗಳೋ ಪೇ
ಳೆನೆ ಕಣ್ಗಿಂಬಾದುವಿಂದಿಂದಿರವುಳಿನಲಸಚ್ಚೂಚುಕಂಗಳ್ಕುಚಂಗಳ್ ೪

ವ॥ ಮತ್ತಂ—

ಹರಯೋಗವಾಂತ ವೃಷಭನ
ಕರಿಯಾಲಿಯ ಕಾಂತಿಯೊಳಗಣಿಂ ಕುಚಮುಖದೊಳ್
ಪರಕಲಿಸಿ ಪೊಣ್ಮಿದತ್ತೆನೆ
ಗುರುಕುಚಚೂಚುಕದ ಮೇಚಕದ್ಯುತಿ ಮೆಱೆಗುಂ ೫

ಮಂದಗತಿಯುಮರೆಯುಂ ನಡು
ಗೆಂದುಂ ಕುಂದದ ದರಿದ್ರಭಾವಂ ಪರಿದ
ತ್ತೆಂದೆನೆ ಶಿವಧರ್ಮಾಶ್ರಯ
ದಿಂದಂ ಪರಿವಡದ ದೋಷಮಾವುದೊ ಧರೆಯೊಳ್ ೬

ಕಾಂತಿಯು ಪ್ರಕಾಶಮಾನವಾಗಿ ಬೆಳಗತೊಡಗಿತು. ೪. ಆ ಮಾದಲಾಂಬಿಕೆಯ ಮುಖವೆಂಬ ಚಂದ್ರನು ಉದ್ದವಾದ ಜಡೆಯೆಂಬ ರಾಹುವಿಗೆ, ಅಂಜಿಕೊಳ್ಳುತ್ತ, ಅಮೃತರಸಧಾರೆಯನ್ನು ತುಂಬಿ, ಚೆನ್ನಾಗಿ ಅರಗಿನ ಮುದ್ರೆಯನ್ನು ಹಾಕಿ, ಇಟ್ಟ ಚಿನ್ನದ ಕಲಶಗಳೋ (ಅಥವಾ) ಆ ಕತ್ತಲೆಯನ್ನು (ರಾಹು ಸಂಬಂಧವಾದ ಕತ್ತಲೆಯನ್ನು) ಕುಡಿದು ಜೀರ್ಣಿಸಿಕೊಳ್ಳಲಾರದೆ ಚೆನ್ನಾಗಿ ಉಗುಳುತ್ತಿರುವ ಚಕ್ರವಾಕ ಪಕ್ಷಿಗಳೋ ಹೇಳು ಎನ್ನುವಂತೆ ಭ್ರಮರಗಳೋಪಾದಿಯಲ್ಲಿರುವ ತೊಟ್ಟುಗಳಿಂದ ಕೂಡಿರುವ ಮೊಲೆಗಳು ನೋಡುವುದಕ್ಕೆ ಮನೋಹರವಾಗಿ ಕಾಣುತ್ತಿದ್ದವು. ವ॥ ಮತ್ತು ೫. ಶಿವನ ಸಂಬಂಧವಾದ ಯೋಗವನ್ನು ಹೊಂದಿದ ವೃಷಭೇಶ್ವರನ ಕಣ್ಣಿನ ಕರಿಯ ಗುಡ್ಡೆಯ ಕಾಂತಿ ಒಳಗಿನಿಂದ ಕುಚಗಳ ಮಾರ್ಗವಾಗಿ ವ್ಯಾಪಿಸಿ ಹೊರಹೊರಟಿರುವುದೋ ಎನ್ನುವ ಹಾಗೆ ದಪ್ಪನಾದ ಮೊಲೆಗಳ ತೊಟ್ಟಿನ ಕಪ್ಪಾದ ಕಾಂತಿಯು ಪ್ರಕಾಶಿಸುತ್ತಿತ್ತು. ೬. ಮಂದಗತಿಯು ಉಂಟಾಗುವ ಹಾಗೆ ಪೂರ್ವದಲ್ಲಿ ನಡುವಿಗೆ ಎಂದೂ ನಾಶವಾಗದೆ ಇರತಕ್ಕ ದಾರಿದ್ರ್ಯವು ನಾಶವಾಯಿತು ಎಂದೆನ್ನುವ ಹಾಗೆ, ಶಿವನ ಧರ್ಮಸ್ವರೂಪನಾದ ವೃಷಭೇಶ್ವರನ ವಾಸಮಾಡುವಿಕೆಯಿಂದ (ಅವಳ ಗರ್ಭದಲ್ಲಿ ವೃಷಭನು ವಾಸಮಾಡಿರುವ ಕಾರಣದಿಂದ) ಭೂಮಿಯಲ್ಲಿ ನಾಶವಾಗದ ದೋಷವು ಯಾವುದುಂಟು ?

ಗುರುಕುಚಮಾ ಗುರುಜಠರಂ
ಗುರುಜಘನಂ ಮಿಸುಗೆ ಬಾಲೆ ಗುರುವೆನಿಸಿರ್ದಳ್
ವರಹಂಸಸುಗತಿಗೆ ಜಗ
ದ್ಗುರು ತನ್ನೊಳ್ನೆಲಸಿ ನಿಂದ ಕಾರಣದಿಂದಂ ೭

ಶಿವಚರಿತಮುನಾಕರ್ಣಿಪ
ಶಿವನಡಿಯಂ ಪೂಜೆಗೆಯ್ವ ಬಯಕೆ ಕರಂ ಸಂ
ಭವಿಸಿದುದು ಸತಿಗೆ ನೆಲಸಿರೆ
ಶಿವಭಕ್ತಂ ಬಸಿಱೊಳುಳಿದ ಬಯಕೆಗಳೊಳವೇ ೮

ಓಗಡಿಕೆಯಂಗವೇದನೆ
ಯಾಗುಳಿಪತಿ ಜಡತೆ ನಸುಬಳಲ್ಕೆಯ ನೋಟಂ
ಬಾಗುಳದ ಬಗೆ ನಿತಂಬಿನಿ
ಗಾಗವೆ ಬಸಿಱೊಳ್ ವೃಷೇಂದ್ರನಿರೆ ಘನಮಹಿಮಂ ೯

ಪರಮ ಶಿವಯೋಗಿ ವೃಷಭೇ
ಶ್ವರನಾ ಮಾದಾಂಬೆಯಮಳಗರ್ಭಾಶ್ರಯದೊಳ್
ಹರಚರಣಧ್ಯಾನಮುನಾಂ
ತಿರುತಿರ್ದಂ ಮುಗಿದ ಕೈಗಳಿರೆ ಪೆಱೆನೊಸಲೊಳ್ ೧೦

೭. ಜಗತ್ತಿಗೇ ಗುರುವಾದ ವೃಷಭೇಶ್ವರನು ತನ್ನಲ್ಲಿ ಸ್ಥಿರವಾಗಿ ನಿಂತ ಕಾರಣದಿಂದ ಆ ಮಾದಲಾಂಬಿಕೆಯು ದಪ್ಪನಾದ ಕುಚದಿಂದಲೂ, ದೊಡ್ಡದಾದ ಹೊಟ್ಟೆಯಿಂದಲೂ, ತೋರವಾದ ಕಟಿಪಶ್ಚಾದ್ಭಾಗ (ಕುಂಡೆಗಳ ಭಾಗ) ದಿಂದಲೂ ಪ್ರಕಾಶಿಸುತ್ತಿರಲು ಶ್ರೇಷ್ಠವಾದ ಹಂಸಪಕ್ಷಿಯ ನಡಿಗೆಗೆ ಇವಳೇ ಗುರು ಎಂದು ಎನಿಸಿದ್ದಳು. ೮. ಶಿವ ಭಕ್ತನಾದ ವೃಷಭೇಶ್ವರನು (ಆ ಮಾದಲಾಂಬಿಕೆಯು) ಹೊಟ್ಟೆಯಲ್ಲಿ ನೆಲಸಿರಲಾಗಿ, ಅವಳಿಗೆ ಶಿವಸಂಬಂಧವಾದ ಚರಿತ್ರೆಯನ್ನು ಕೇಳಬೇಕೆನ್ನುವ, ಶಿವನ ಪಾದಗಳನ್ನು ಪೂಜೆ ಮಾಡಬೇಕೆನ್ನುವ ಬಯಕೆಯು ಉಂಟಾಯಿತು. ಮಿಕ್ಕ ಬಯಕೆಗಳು ಉಂಟಾಗಲು ಶಕ್ಯವೇ ? ೯. ಅತ್ಯಂತ ಮಹಿಮಶಾಲಿಯಾದ ವೃಷಭೇಶ್ವರನು ಗರ್ಭದಲ್ಲಿ ಇರುತ್ತಿರಲಾಗಿ, ಆ ಮಾದಲಾಂಬಿಕೆಗೆ ಓಕರಿಕೆ (ವಾಂತಿಯಾಗುವಂತೆ ಆಗುವುದು), ಮೈಯ ನೋವು, ವಿಶೇಷವಾದ ಆಲಸ್ಯಭಾವ, ಸ್ವಲ್ಪ ಬಳಲಿಕೆಯಿಂದ ಕೂಡಿದ ಕಣ್ಣುಗಳ ನೋಟ, ವ್ಯಾಕುಲದಿಂದ ಕೂಡಿದ ಮನಸ್ಸು ಇವು ಆಗದೆ ಇರುತ್ತವೆಯೆ ? ೧೦. ಉತ್ಕೃಷ್ಟ ಶಿವಯೋಗೀಶ್ವರನಾದ ವೃಷಭೇಶ್ವರನು ಆ ಮಾದಲಾಂಬಿಕೆಯ ನಿರ್ಮಲವಾದ ಗರ್ಭ ಆಶ್ರಯದಲ್ಲಿ, ಚಂದ್ರನೋಪಾದಿಯಲ್ಲಿರುವ ಹಣೆಯಲ್ಲಿ ಮುಗಿದ

ವಿಮಳ ಶರದಭ್ರದೊಳ್ ಶೀ
ತಮಯೂಖಂ ರಾಜಹಂಸಶಿಶು ಧವಳಲಸ
ತ್ಕಮಳದೊಳವಳಯುದರೊಳ್ಮಿಸು
ಪ ಮಾಳ್ಕೆಯಿಂ ಬಸವರಾಜನೆಸೆದಂ ಬೞೆಕ್ಕೊಳ್ ೧೧

ಲಸದಾಜ್ಞಾಚಕ್ರದುದ್ಯದ್ದ್ವಿದಳಸಲಿಲರುಟ್ಕರ್ಣಿಕಾಮಧ್ಯದೊಳ್ಶ್ರೋ
ಷ್ಠ ಸಹಸ್ರಾರ್ಕಪ್ರಭಾಭಾಸುರ ವಿಮಳಸದೋಂಕಾರಪೀಠಸ್ಥ ಚಿದ್ರೂ
ಪ ಸಮುದ್ಯಲ್ಲಿಂಗಮಂ ಜಾನಿಸುತೆ ನಿಜ ಮನಃಪ್ರಾಣಮೊಂದಾಗೆ ಸೌಖ್ಯ
ಪ್ರಸರಂಬೆತ್ತೊಪ್ಪುತಿರ್ದಂ ಸಮಧಿಗತ ಶಿವಾದ್ವೈತವಿದ್ಯಾಬ್ಧಿಚಂದ್ರಂ ೧೨

ಸುದತಿಯ ಸುಗರ್ಭಧವಳಾಂ
ಗದ ಸೊಂಪಂ ನೋಡಿ ನಲಿದನಾ ಮಾದರಸಂ

ಕೈಗಳಿಂದ ಕೂಡಿ, ಶಿವನ ಪಾದಧ್ಯಾನವನ್ನು ಮಾಡುತ್ತಿದ್ದನು. ೧೧. ನಿರ್ಮಲವಾದ ಶರತ್ಕಾಲೀನ ಮೇಘದಲ್ಲಿ ಶೀತ ಕಿರಣನಾದ ಚಂದ್ರನೂ, ಬಿಳುಪಾದ ತಾವರೆ ಹೂವಿನ ಒಳಭಾಗದಲ್ಲಿರುವ ರಾಜಹಂಸಪಕ್ಷಿಯ ಮರಿಯೂ, ಶೋಭಿಸುವ ರೀತಿಯಲ್ಲಿ (ಆ ಮಾದಲಾಂಬಿಕೆಯ) ಗರ್ಭದಲ್ಲಿ ಬಸವರಾಜನು ಶೋಭಿಸುತ್ತಿದ್ದನು. ೧೨. ಶಿವಾದ್ವೈತ ವಿದ್ಯೆಯನ್ನು ಹೊಂದಿ ಆ ವಿದ್ಯೆಯೆಂಬ ಸಮುದ್ರಕ್ಕೆ ಚಂದ್ರನಂತಿರುವ ವೃಷಭೇಶ್ವರನು, ಪ್ರಕಾಶಮಾನವಾದ ಆಜ್ಞಾ ಚಕ್ರದಲ್ಲಿರುವ ಶ್ರೇಷ್ಠವಾದ ಎರಡು ದಳಗಳುಳ್ಳ ಕಮಲದ ಕರ್ಣಿಕೆ (ಕಮಲ ಮಧ್ಯದಲ್ಲಿ ಬೀಜಗಳಿರುವ ಸ್ಥಳ) ಯ ಮಧ್ಯದಲ್ಲಿ ಪ್ರಕಾಶಿಸುವ, ಸಹಸ್ರ ಸೂರ್ಯನ ಕಾಂತಿಗೆ ಸಮಾನವಾದ ಕಾಂತಿಯಲ್ಲಿರುವ ಪ್ರಕಾಶ ಯುಕ್ತವೂ, ನಿರ್ಮಲವೂ, ಸಮೀಚೀನವೂ ಆದ ಓಂಕಾರಪೀಠಸ್ಥವಾದ ಜ್ಞಾನಸ್ವರೂಪದ ಶ್ರೇಷ್ಠಲಿಂಗ ದೇವನನ್ನು ಧ್ಯಾನ ಮಾಡುತ್ತ, ತನ್ನ ಮನ ಮತ್ತು ಪ್ರಾಣಗಳು ಒಂದಾಗಿ ಸೇರುವೆಗೊಂಡಂಥವನಾಗಿ, ಅತ್ಯಂತ ಸೌಖ್ಯವನ್ನು ಹೊಂದಿ ಲಿಂಗಧ್ಯಾನ ರೂಪವಾದ ಸೌಖ್ಯವನ್ನು ಹೊಂದಿ, ಪ್ರಕಾಶಿಸುತ್ತಿದ್ದನು. [ಸಮಧಿಗತ + ಶಿವಾದ್ವೈತ + ವಿದ್ಯಾ + ಅಬ್ಧಿ + ಚಂದ್ರಂ—ಹೊಂದಿಕೊಂಡ ಶಿವಾದ್ವೈತ (ವೀರಶೈವ) ವೆಂಬ ವಿದ್ಯೆಯ ಸಮುದ್ರಕ್ಕೆ ಚಂದ್ರನೋಪಾದಿಯಲ್ಲಿರುವ : ಉದ್ಯತ್ + ದ್ವಿದಳ + ಸಲಿಲರುಟ್ + ಕರ್ಣಿಕಾ—ಅಧಿಕವಾದ (ಶ್ರೇಷ್ಠವಾದ) ಎರಡು ದಳಗಳಿಂದ ಕೂಡಿದ ಕಮಲದ ಕರ್ಣಿಕೆ.] ೧೩. ಆ ಮಾದರಸನು ಸುದತಿಯಾದ ಆ ಮಾದಲಾಂಬಿಕೆಯ ಸಮೀಚೀನವಾದ ಗರ್ಭದ ದೆಸೆಯಿಂದ ಧವಳವರ್ಣಗೊಂಡ ಆ ಶರೀರವನ್ನು ನೋಡಿ, ಚಂದ್ರನನ್ನು ಒಳಗಿಟ್ಟುಕೊಂಡು ಬೆಳ್ಳಗೆ ಕಾಣುವ (ಪೂರ್ವ) ದಿಕ್ಕನ್ನು ಕಂಡು ಸಂತೋಷ

ಬಿದುವನೊಳಗಿಟ್ಟು ಬೆಳ್ಪೇ
ಱಿದ ದೆಸೆಗಂಡಾ ಚಕೋರನುತ್ಸವಿಸುವವೋಲ್ ೧೩

ವ॥ ಆಗಳವಂ ನಂದಿಕೇಶ್ವರನಿತ್ತಮೋಘ ವರಮಂ ನೆನೆದುತ್ಸಾಹಮನಸ್ಕನಾಗಿರೆ—

ಬಾಂಗೆಱೆಯ ಮೀಂಗಳಂ ಮುಂ
ನುಂಗಿ ಕರಂ ಪಸಿವಡಂಗದಬ್ಧಿಯ ಮೀನಂ
ನುಂಗಲೆಱಗಿದುದು ನಾಡೆ ಪ
ತಂಗಂ ತಾನೆನಿಸಿ ಮುಳುಗಿದುದು ಪಡುಗಡಲೊಳ್ ೧೪

ಮಿಸುಗುವ ಸಂಜೆಗೆಂಪು ತಳಿರಂತಿರೆ ತಾರಗೆ ಪುಷ್ಪದಂತೆ ರಂ
ಜಿಸೆ ಪೊಸ ಮರ್ಬುದರ್ಕೆಱಗಿದಾಱಡಿಯಂತಿರೆ ತಾರಕಾಧ್ವಮೆಂ
ಬಸದೃಶ ವೃಕ್ಷದೊಳ್ಪವಳವಣ್ಣಮಸಾಳ್ದಿನಿವಣ್ಣದೆಂಬ ಪೆಂ
ಪಸದಳಮಾಗೆ ತಾಂ ಕ್ರಮದೆ ಕಾಣಿಸುತಿರ್ದುದು ಚಂದ್ರಮಂಡಲಂ ೧೫

ಪಡುವ ಚಕೋರಪಕ್ಷಿಯು ಸಂತೋಷಗೊಳ್ಳುವ ಹಾಗೆ ಸಂತೋಷಗೊಂಡನು. (ಚಂದ್ರೋದಯದ ದಾರಿಯನ್ನೇ ಕಾಯುತ್ತಿದ್ದ ಚಕೋರಪಕ್ಷಿಯು ಚಂದ್ರೋದಯ ಸಂಬಂಧವಾದ ಬಿಳುಪು ಅವನು ಮೂಡುವ ಮೊದಲೇ ಕಾಣುತ್ತಿರಲು ಅದನ್ನು ಕಂಡು ಸಂತೋಷಪಡುವ ಹಾಗೆ ಎಂದು ಭಾವ). ವ॥ ಆಗ ಆ ಮಾದರಸನು ನಂದಿಕೇಶ್ವರನು ಕೊಟ್ಟ ಅಮೋಘವಾದ ವರವನ್ನು ಸ್ಮರಿಸಿಕೊಂಡು ಉತ್ಸಾಹದಿಂದ ಕೂಡಿದ ಮನಸ್ಸುಳ್ಳವನಾಗಿ—೧೪. ಸೂರ್ಯನು ಆಕಾಶವೆಂಬ ಕೆರೆಯ ಮೀನುಗಳನ್ನು ಮೊದಲು ನುಂಗಿ ಹಸಿವು ಚೆನ್ನಾಗಿ ಅಡಗದೆ ಸಮುದ್ರದಲ್ಲಿರುವ ಮೀನನ್ನು ನುಂಗುವುದಕ್ಕೆ ಬೀಳುವಂಥವನಾದನು ಎನ್ನುವಂತೆ ಪಶ್ಚಿಮ ಸಮುದ್ರದಲ್ಲಿ ಮುಳುಗಿದನು. [ಇಲ್ಲಿ ಪತಂಗ ಶಬ್ದಾರ್ಥ ಚಮತ್ಕಾರದಿಂದ ಮೀನ್ ಶಬ್ದಾರ್ಥ ಚಮತ್ಕಾರದಿಂದ ಈ ಪದ್ಯಾರ್ಥವನ್ನು–'ಪಕ್ಷಿಯು ಮೊದಲು ಆಕಾಶವೆಂಬ ಕೆರೆಯ ಮೀನುಗಳನ್ನು ಮೊದಲು ನುಂಗಿ ಆ ಮೇಲೆ ಸಮುದ್ರದ ಮೀನುಗಳನ್ನು ನುಂಗುವುದಕ್ಕೆ ಹೋಗಿ ಕಾಣದಾಯಿತು.' ಎಂದು ಪಕ್ಷಿಯ ಪರವಾಗಿ ಅರ್ಥಮಾಡಬೇಕು. ಸೂರ್ಯನು ಇರುವಾಗ ನಕ್ಷತ್ರಗಳು (ಮೀನ್) ಆಕಾಶದಲ್ಲಿ ಕಾಣದಿರುವುದು ಪ್ರಸಿದ್ಧಾಂಶ. ಮೀನ್–ನಕ್ಷತ್ರ, ಮೀನು ; ಪತಂಗ–ಪಕ್ಷಿ, ಸೂರ್ಯ:] ೧೫. ಪ್ರಕಾಶಿಸುವ ಸಂಜೆಗೆಂಪು ಚಿಗುರಿನ ಹಾಗೂ, ನಕ್ಷತ್ರಗಳು ಹೂಗಳ ಹಾಗೂ ಶೋಭಿಸುತ್ತಿರಲು ನೂತನವಾದ ಆ ಕತ್ತಲೆಯು ಅವುಗಳ ಮೇಲೆ ಎರಗಿದ ದುಂಬಿಗಳ ಹಾಗೂ ಶೋಭಿಸುತ್ತಿತ್ತು. ಆಕಾಶವೆಂಬ (ತಾರಕಾಧ್ವವೆಂಬ) ಅಸದೃಶ ಗಿಡದಲ್ಲಿ ಹವಳದ ಬಣ್ಣವನ್ನು ಹೊಂದಿರುವ ಇದು ಮಧುರವಾದ ಹಣ್ಣೋ ಎಂದೆಂಬ ಹಿರಿಮೆ, ಅಧಿಕವಾಗುವಂತೆ ಚಂದ್ರ ಮಂಡಲವು ತಾನು ಕ್ರಮವಾಗಿ ಕಾಣಿಸ ತೊಡಗಿತು.

ಆ ರಾತ್ರಿಯೊಳಭವಾಂಘ್ರಿಯು
ನಾರಾಧಿಸಿ ತತ್ಪ್ರಸಾದಮಂ ಸವಿದೊಲವಿಂ
ನಾರೀಮಣಿ ಕೆಳದಿಯರೊಡ
ನೋರಂತಿರೆ ಪವಡಿಸಿರ್ದಳಿರ್ಪನ್ನೆವರಂ ೧೬

ಕುಶಲಮತಿ ವೃಷಭರಾಜಂ
ಶಶಿವದನೆಯ ಮಗ್ಗುಲಲ್ಲಿ ಮನದೊಲವಿಂದಂ
ಶಿಶುಭಾವಮಾಂತು ಮೆಱೆದಂ
ಪಶುಪತಿಯ ಪದಾಂಬುಜಾತಮಂ ಚಾನಿಸುತಂ ೧೭

ಬಲಗಣ್ಕೆತ್ತಿದುದೀಶಭಕ್ತರ ಧರಾಶ್ರೀಗಾದುದುತ್ಸಾಹಮು
ಜ್ವಲಮಾದತ್ತಿನ ಬಿಂಬವೆಣ್ದೆಸೆ ವಿಕಾಸಂಬೆತ್ತುದೋರಂತೆ ತೆಂ
ಬೆಲರೂದಿತ್ತು ಪಳಚ್ಚಮಾದುವು ಸರೋನದ್ಯಂಬುಗಳ್ ನಂದನಾ
ವಲಿ ಸೊಂಪೇಱಿದುದಂಕುರೋದ್ಗಮಫಲಪ್ರಚ್ಛನ್ನಶಾಖಾಳಿಯಿಂ ೧೮

ವ|| ಆಗಳ್ ಕಪ್ಪಡಿಯೊಳೊಪ್ಪಿರ್ಪ ಸಂಗಮೇಶ್ವರನುಮಾಸಮನ್ವಿತನಾಗಿ, ತನ್ನ ನಚ್ಚಿನ ಗಣಂಗಳ್ವೆರಸಿ ಬಿನದದಿಂ ಬಿಜಯಂಗೆಯ್ದು ನಿಜಕುಮಾರನಪ್ಪ ಬಸವನಂ ನಿಡು ನೇಹದಿಂ ನಿರೀಕ್ಷಿಸಿ ಮುದಂದಳೆದು ಗಿರಿಸುತೆಗೆ ತೋಱಿ ಗಣಂಗಳೊಡನೆ ತನ್ಮಹಿಮೆಯಂ ಬಿತ್ತರಿಸುತ್ತಮಿರ್ದು—

೧೬. ಆ ರಾತ್ರಿಯಲ್ಲಿ ಶ್ರೇಷ್ಠ ಸ್ತ್ರೀಯಾದ ಆ ಮಾದಲಾಂಬಿಕೆಯು ಶಿವನ ಪಾದಗಳನ್ನು ಆರಾಧಿಸಿ, ಶಿವಪ್ರಸಾದವನ್ನು ಸ್ವೀಕಾರ ಮಾಡಿ, ಪ್ರೀತಿಯಿಂದ ಕೆಳದಿಯರ ಸಂಗಡ ಸ್ವಸ್ಥವಾಗಿ ಮಲಗಿದಳು. ಹೀಗೆ ಮಲಗಿರುವಷ್ಟರಲ್ಲಿ—೧೭. ಕುಶಲ ಮತಿಯಾದ ವೃಷಭೇಶ್ವರನು ಶಿಶು ಭಾವವನ್ನು ಧರಿಸಿ ಪ್ರೀತಿಯಿಂದ ಕೂಡಿದ ಮನಸ್ಸಿನಿಂದ ಪರಶಿವನ ಪಾದಕಮಲವನ್ನು ಧ್ಯಾನ ಮಾಡುತ್ತ ಆ ಚಂದ್ರಮುಖಿಯಾದ ಮಾದಲಾಂಬಿಕೆಯ ಮಗ್ಗುಲಲ್ಲಿ ಪ್ರಕಾಶಿಸುತ್ತಿದ್ದನು. ೧೮. ಶಿವಭಕ್ತರ ಬಲಗಣ್ಣು ಅದುರಿತು. ಭೂಮಿಯೆಂಬ ಲಕ್ಷ್ಮಿಗೆ ಉತ್ಸಾಹವಾಯಿತು. ಸೂರ್ಯಮಂಡಲವು ಉಜ್ವಲ ಗೊಂಡಿತು. ಎಂಟೂ ದಿಕ್ಕುಗಳು ವಿಕಾಸಗೊಂಡವು. (ಶುಭ್ರವಾದವು) ತಂಗಾಳಿಯು ನಿಧಾನವಾಗಿ ಬೀಸತೊಡಗಿತು. ಸರೋವರ (ಮತ್ತು) ನದಿಗಳಲ್ಲಿನ ನೀರು ನಿರ್ಮಲ ವಾದವು. ನಂದನ ವನಗಳ ಸಾಲು ಮೊಳಕೆಗಳ ಹುಟ್ಟುವಿಕೆಯಿಂದಲೂ, ಹೂವು, ಹಣ್ಣುಗಳಿಂದಲೂ ವ್ಯಾಪ್ತವಾಗಿ ಕೊಂಬೆಗಳ ಸಮೂಹ ಸೊಗಸು ಗೊಂಡವು. ವ|| ಆಗ ಕಪ್ಪಡಿ ಸಂಗಮದಲ್ಲಿ ಪ್ರಕಾಶಿಸುತ್ತಿದ್ದ ಸಂಗಮೇಶ್ವರನು ಪಾರ್ವತೀ ಸಮೇತನಾಗಿ ತನ್ನ ನಚ್ಚಿನ ಗಣವರರೊಡನೆಕೂಡಿ, ವಿನೋದದಿಂದ ಬಿಜಯಮಾಡಿ, ತನ್ನ ಕುಮಾರನಾದ ಬಸವೇಶ್ವರನನ್ನು ಅಧಿಕ ಸ್ನೇಹದಿಂದ ನಿರೀಕ್ಷಿಸಿ, ಸಂತೋಷ ಗೊಂಡವನಾಗಿ ಪಾರ್ವತಿಗೆ ಆ ಶಿಶುವನ್ನು ತೋರಿಸುತ್ತ, ಒಡನಿದ್ದ ಗಣವರರುಗಳಿಗೆ

ಪರಮ ಕೃಪಾರಸಾರ್ದ್ರನಯನಾಂಚಲದಿಂ ನಡೆನೋಡಿ ಪಾಣಿಪಂ
ಕರುಹಮನಿಟ್ಟು ಮಸ್ತಕದೊಳುದ್ಧವಿಭೂತಿಯನೊಲ್ದು ಫಾಲದೊಳ್
ಧರಿಯಿಸಿ ಲಿಂಗಸಂಗತ ನಿಜಾಂಗನನಾಗಿಸಿ ಮೂಲಮಂತ್ರಮಂ
ತರುಣನ ಕರ್ಣದೊಳ್ತಿಳುಪಿ ದೀಕ್ಷೆಯನಿತ್ತನವಂ ಸದಾಶಿವಂ ೧೯

ವ॥ ಆಗಳಿಂತು ಶಿವಂ ಶಿವದೀಕ್ಷೆಯನೊಡರ್ಚಿ ಬಸವನಂ ಮುಂಡಾಡಿ ಮುದ್ದಿಸಿ ಮೂರ್ಧ್ನಾಘ್ರಾಣಂಗೆಯ್ದುಮಾನಂದದಿಂ ಪರಸಿ ಗಿರಿಸುತೆವೆರಸಿ ಕಪ್ಪಡಿಗೆ ಬಿಜಯಂ ಗೆಯ್ದನನ್ನೆವರಮಿತ್ತಲ್—

ಸುರನದಿಯ ತಡಿಯ ಪುಳಿನಾಂ
ತರದೊಳ್ ಮಱಿಯಂಚೆ ಮಿಸುಪವೋಲ್ಕಂಗೆಸೆದಂ
ತರುಣಂ ಜನನಿಯ ಪಕ್ಕದ
ಸರಸಿಜದಳಧವಳ ಮೃದುಳಶಯ್ಯಾತಳದೊಳ್ ೨೦

ತರುಣನ ಕಾಯದ್ಯುತಿಯೆಂ
ಬರುಣಾತಪಮುಳುರೆ ಕಮಳಮಲರ್ವಂತಿರೆ ತ
ತ್ತರುಣಿ ನಿಜನಯನ ಸಂಪುಟ
ಮಲರುತ್ತಿರೆ ಕಂಡಳಾಗಳಾ ಬಾಲಕನಂ ೨೧

ಆ ಬಸವೇಶ್ವರನ ಮಹಿಮೆಯನ್ನು ವಿಶದವಾಗಿ ಹೇಳುತ್ತಿದ್ದನು. ೧೯. (ಆಗ) ಆ ಸದಾಶಿವನು ಶ್ರೇಷ್ಠವಾದ ತನ್ನ ದಯಾರಸದಿಂದ ತೊಯ್ದುಹೋದ ಕಡೆಗಣ್ಣುಗಳ ಕಾಂತಿಯಿಂದ ಚೆನ್ನಾಗಿ (ಆ ಶಿಶುವನ್ನು) ನೋಡಿ, ತಲೆಯ ಮೇಲೆ ಹಸ್ತ ಕಮಲವನ್ನಿಟ್ಟು, ಪ್ರೀತಿಯಿಂದ ಹಣೆಯಲ್ಲಿ ಶ್ರೇಷ್ಠ ವಿಭೂತಿಯನ್ನು ಧರಿಸಿ, ಶಿವಲಿಂಗದಿಂದ ಸಂಗತವಾದ ತನ್ನ ಶರೀರವುಳ್ಳವನನ್ನಾಗಿ ಮಾಡಿ(ಅಂದರೆ ಶಿವಲಿಂಗವನ್ನು ಆ ಶಿಶುವಾದ ಬಸವೇಶ್ವರನ ಅಂಗಕ್ಕೆ ಅಳವಡಿಸಿ) ಕಿವಿಯಲ್ಲಿ 'ಓಂ ನಮಃ ಶಿವಾಯ' ಎಂಬ ಷಡಕ್ಷರ ಮಂತ್ರವನ್ನು ಉಪದೇಶ ಮಾಡಿ, (ಲಿಂಗ) ದೀಕ್ಷೆಯನ್ನು ಮಾಡಿದನು. ವ॥ ಈ ರೀತಿ ಲಿಂಗದೀಕ್ಷೆಯನ್ನು ಮಾಡಿ, ಆ ಬಸವೇಶ್ವರನನ್ನು ಮುಂಡಾಡಿ, ತಬ್ಬಿಕೊಂಡು, ಮುದ್ದಿಟ್ಟು, ನೆತ್ತಿಯನ್ನು ಮೂಸಿನೋಡಿ, ಅತ್ಯಂತ ಸಂತೋಷದಿಂದ ಆಶೀರ್ವಾದ ಮಾಡಿ, ಪಾರ್ವತೀ ಸಮೇತವಾಗಿ ಕಪ್ಪಡಿ ಸಂಗಮಕ್ಕೆ ಹೊರಟು ಹೋದನು. ಅಷ್ಟರಲ್ಲಿ ಈ ಕಡೆಯಲ್ಲಿ— ೨೦. ದೇವಗಂಗಾ ನದಿಯ ದಂಡೆಯಲ್ಲಿರುವ ಮಳಲುದಿಬ್ಬದ ಪ್ರದೇಶದಲ್ಲಿ ಹಂಸ ಪಕ್ಷಿಯ ಮರಿಯು ಶೋಭಿಸುವಹಾಗೆ ಆ ಬಾಲಕನಾದ ಬಸವೇಶ್ವರನು ತಾಯಿಯಾದ ಮಾದಲಾಂಬಿಕೆಯ ಪಕ್ಕದಲ್ಲಿರುವ ಕಮಲ ಪುಷ್ಪದ ಎಸಳಿನೋಪಾದಿಯಲ್ಲಿ ಶುಭ್ರವೂ ಮೃದುವೂ ಆದ ಹಾಸಿಗೆಯಲ್ಲಿ ಕಣ್ಣಿಗೆ ಮನೋಹರನಾಗಿ ಕಾಣುತ್ತಿದ್ದನು. ೨೧. ಆ ಬಾಲಕನಾದ ಬಸವೇಶ್ವರನ ಶರೀರ ಕಾಂತಿಯೆಂಬ ಸೂರ್ಯ ಕಿರಣಗಳು ಅಧಿಕಗೊಳ್ಳುತ್ತ ಹೋದಂತೆ, ತಾವರೆಯ ಹೂವು (ಕ್ರಮವಾಗಿ) ಅರಳುವ ಹಾಗೆ ಆ ಮಾದಲಾಂಬಿಕೆಯ ನೇತ್ರ ಸಂಪುಟವು ಅರಳುತ್ತ ಹೋಗಲು ಆ ತರುಣಿಯು ತನ್ನ ಬಾಲಕನನ್ನು ಕಂಡಳು.

ವ॥ ಅಂತು ಕಂಡೆರ್ದೆ ಪೌವ್ವನೆ ಪಾಱಿದಂತಾಗೆ ವಿಸ್ಮಯ[1]ಮುತ್ತು ಕೆಲದೊಳೊಱಗಿರ್ದ ಕೆಳದಿಯರನೆಬ್ಬಱಿಸುತ್ತೆಬ್ಬಿಸಿ ಕೆಲವಲದ ಕುಲವೃದ್ಧೆಯರಂ ಕರೆದು ನಿಜವಲ್ಲಭನಂ ಬರಿಸಿ ಬಳಸಿ ಕೆದರ್ದ ಮಂದಾರದರಲ್ಗಳೆಂಬ ನಕ್ಷತ್ರಂಗಳ ನಡುವೆ ಮಿಸುಪ ಬಾಲೇಂದುವಂತೆಸೆವ ಭಸಿತಲಸಿತ ಲಲಾಟನಂ ರುದ್ರಾಕ್ಷಮಾಲಾಲಂಕೃತನಿಜಗ್ರೀವನಂ ಶಿವಲಿಂಗ ಸಂಗತೋರಃಸ್ಥಳನಂ ಮಂದಸ್ಮಿತಮುಖಾಂಬುಜನಂ ನಳಿನದಳನೇತ್ರನಂ ಚಿತ್ರಚರಿತ್ರನಂ ಪವಿತ್ರಗಾತ್ರನಂ ಪುತ್ರನಂ ತೋಱಿಸುತ್ತಂ ಸಂಗಮೇಶ್ವರಂ ಬಂದೆಸಗಿ ಪೋದುದಂ ಸ್ವಪ್ನದೊಳ್ ಕಂಡುದನೆಲ್ಲಮನೆಲ್ಲರ್ಕೇಳ್ವಚ್ಚರಿವಡೆ ಸವಿಸ್ತರಂ ಮಾದಾಂಬಿಕೆ ನಿಜಪತಿಯೊಡನೆ ಬಿತ್ತರಿಸೆ ಕೇಳ್ದತ್ಯಂತ ಕೌತುಕಂಬಟ್ಟು ಮಾದಿರಾಜಂ ಮನದೊಸಗೆ ಮಿಗೆ [2]ಶಿಶುಮಹಿಮೆಗೆ[2] ತಲೆದೂಗಿ ನಂದೀಶ್ವರಂಗೆ ಬಾಯಿನಂಗಳುಪಿ ಶಿವಾರಾಧನಂಗೆಯ್ದು ಯಥೋಚಿತಕ್ರಿಯೆಯುಂ ಮೆಱೆದು ಬಸವನ ನೇಮದಿಂದೊಗೆದನಪ್ಪುದಱಿಂ ಬಸವನೆಂದು ನಾಮಕರಣಂಗೆಯ್ದು ಜಾತ್ಯಂಧಕಂ ಕಣ್ಬಡೆದಂತೆ, ದರಿದ್ರಂ ಸುರರತ್ನಮಂ ಕಂಡಂತೆ, ಸರುಜಂ ಸಂಜೀವನಮಂ ಸವಿದಂತೆ ಪರಮಾನಂದರಸಪರಿಪ್ಲುತಮನಸ್ಕನಾಗಿರ್ದನಾಗಳ್—

ವ॥ ಆ ರೀತಿಯಲ್ಲಿ ನೋಡಿ ಹೃದಯವು ಹವ್ವನೆ ಹಾರಿದ ಹಾಗೆ ಆಗಿ ಆಶ್ಚರ್ಯಗೊಂಡು, ಪಕ್ಕದಲ್ಲಿ ಮಲಗಿದ ಸಖೀಜನಗಳನ್ನು ಅಬ್ಬರಿಸುತ್ತ ಎಬ್ಬಿಸಿ, ಅಕ್ಕ ಪಕ್ಕದ ಮನೆಯ ವೃದ್ಧೆಯರಾದ ಪತಿವ್ರತಾ ಸ್ತ್ರೀಯರನ್ನು ಕರೆಯ ಕಳುಹಿಸಿ, ತನ್ನ ಪ್ರಾಣ ಪ್ರಿಯನಾದ ಮಾದರಸನನ್ನು ಬರಮಾಡಿಕೊಂಡು, ಸುತ್ತು ಮುತ್ತೆಲ್ಲ ಹರಡಿದ್ದ ಕಲ್ಪವೃಕ್ಷದ ಹೂವುಗಳೆಂಬ ನಕ್ಷತ್ರ ಮಧ್ಯದಲ್ಲಿ ಪ್ರಕಾಶಿಸುತ್ತಿರುವ ಬಾಲಚಂದ್ರನಂತೆ ಶೋಭಿಸುತ್ತಿರುವ–ಭಸ್ಮದಿಂದ ಶೋಭಿಸುವ ಹಣೆಯುಳ್ಳವನೂ, ರುದ್ರಾಕ್ಷ ಮಾಲೆಗಳಿಂದಲಂಕಾರಗೊಂಡ ಕಂಠವುಳ್ಳವನೂ, ಶಿವಲಿಂಗ ಧಾರಣೆಯಿಂದ ಕೂಡಿದ ಶೋಭಿಸುವ ಎದೆಯುಳ್ಳವನೂ, ಮುಗುಳು ನಗೆಯಿಂದ ಕೂಡಿದ ಮುಖ ಕಮಲವುಳ್ಳವನೂ, ಕಮಲದ ಎಸಳುಗಳೋಪಾದಿಯಲ್ಲಿರುವ ಕಣ್ಣುಗಳುಳ್ಳವನೂ, ಆಶ್ಚರ್ಯಕರ ಚರಿತ್ರೆಯುಳ್ಳವನೂ, ಪರಿಶುದ್ಧ ಶರೀರವುಳ್ಳವನೂ ಆದ ಬಾಲಕನನ್ನು ತೋರಿಸುತ್ತ ಸಂಗಮೇಶ್ವರ ದೇವರು ಬಂದು ಮಾಡಿ ಹೋದುದೆಲ್ಲವನ್ನೂ ಸ್ವಪ್ನದಲ್ಲಿ ಕಂಡವಳಂತಾಗಿ, ಅದೆಲ್ಲವನ್ನು (ನೆರೆದ) ಸರ್ವರೂ ಕೇಳಿ ಆಶ್ಚರ್ಯಪಡುತ್ತಿರುವಂತೆ ತನ್ನ ಪತಿಯಾದ ಮಾದರಸನೊಡನೆ ಹೇಳುತ್ತಿದ್ದಳು. ಮಾದರಸನು (ಅದೆಲ್ಲವನ್ನೂ) ಕೇಳಿ ಅತ್ಯಂತಾಶ್ಚರ್ಯವನ್ನು ಹೊಂದಿ, ಮನೋಲ್ಲಾಸವು ಅಧಿಕಗೊಳ್ಳುತ್ತಿರಲು, ಬಾಲಕನ ಮಹತ್ತಿಗೆ ತಲೆದೂಗಿದವನಾಗಿ, ನಂದೀಶ್ವರನಿಗೆ ಬಾಗಿನವನ್ನು ಕಳುಹಿಸಿ, ಶಿವಾರಾಧನೆಯನ್ನು ಮಾಡಿ, ಯಥಾಯೋಗ್ಯವಾದ ಕ್ರಿಯೆಗಳಿಂದ ಮೆರೆದವನಾದನು. ಬಸವನ ನೋಂಪಿಯನ್ನು ಮಾಡಿ ಅವನ ಅನುಗ್ರಹಬಲದಿಂದ ಹುಟ್ಟಿದವನಾದುದರಿಂದ 'ಬಸವ' ಎಂದು ನಾಮಕರಣವನ್ನು

1 ಬೆ(ಅ) 2 ಶಿಶುವಂ ನೋಡಿ ಮಿಗೆ(ಜ)

ಶಿವಧರ್ಮಂ ಶಿಶುರೂಪನಾಳ್ದುದೊ ಶಿವಾಚಾರಂ ಧರಾಭಾಗದೊಳ್
ಕುವರಂ ತಾನೆನಿಸಿತ್ತೊ ಸಾರ ಶಿವತೇಜಂ ಮೂರ್ತಿಗೊಂಡಿರ್ದುದೋ
ಶಿವನಾನಂದದಲಂಪು ತಾನೆ ಬಲಿದೊಪ್ಪಂಬೆತ್ತುದೋ ಪೇಳಿಮೆಂ
ಬ ವಿಚಾರಕ್ಕೆಡೆಯಾಗೆ ರಂಜಿಸಿದನಾ ನಂದೀಶನಾ ಬಾಲ್ಯದೊಳ್ ೨೨

ಜಗದೊಳಗಣ ಶಿಶುಗಳ ಬಗೆ
ಪೊಗದ ಮಹಾಮಹಿಮ ಶಿಶುವಿದೆಂದಳ್ಕಱೊಳಾ
ಮೃಗನಯನೆ ನೋಡಿ ಸಂತಸ
ಮೊಗೆತರೆ ಪೊಗಳ್ದಪ್ಪುತ್ತೈದೆ ಮುದ್ದಿಸುತಿರ್ದಳ್ ೨೩

ವ॥ ಅಂತು ಮುದ್ದಿಸಿ ಮುಂಡಾಡಿ ಪನ್ನೆರಡನೆಯ ದಿನದೊಳ್ ಸನ್ನುತೋತ್ಸವಂ ಮಿಗೆ ರನ್ನದೊಟ್ಟಿಲನಿಟ್ಟು ಕಟ್ಟಳ್ಕಱಿಂ ನಲಿದು–

ಸುಲಲಿತರೂಪ ಜೋ ಸುಗುಣಮಂದಿರ ಜೋ ಸುಕೃತಾತ್ಮ ಜೋ ಸಮು
ಜ್ವಲ ಶಿವಧರ್ಮ ಜೋ ಸರಸವಾಙ್ಮಯ ಜೋ ಸಕಳೇಶ ಜೋ ನಿರಾ

ಮಾಡಿ, ಹುಟ್ಟುಗುರುಡನು ಕಣ್ಣನ್ನು ಪಡೆದಹಾಗೆ, ದರಿದ್ರನು ಚಿಂತಾರತ್ನವನ್ನು ಕಂಡಹಾಗೆ, ರೋಗಿಯು ಸಂಜೀವನವೆಂಬ ಗಿಡಮೂಲಿಕೆಯನ್ನು ತಿಂದಹಾಗೆ ಪರಮಾನಂದ ರಸದಿಂದ ವ್ಯಾಪ್ತಗೊಂಡ ಮನಸ್ಸುಳ್ಳವನಾಗಿ ಇದ್ದನು. ೨೨. ಶಿವಧರ್ಮವೇ ಈ (ಬಸವನೆಂಬ) ಮಗುವಿನ ರೂಪವನ್ನು ಹೊಂದಿರುವುದೋ, ಶಿವಾಚಾರವೇ ಭೂಭಾಗದಲ್ಲಿ ಈ ಕುವರನೆನಿಸಿಕೊಂಡಿರುವುದೋ, ಶ್ರೇಷ್ಠತರವಾದ ಪರಮೇಶ್ವರನ ತೇಜಸ್ಸು ಮೂರ್ತಿಗೊಂಡಿರುವುದೋ, ಶಿವನ ಆನಂದದ ಆಧಿಕ್ಯವೇ ತಾನು ಬಲಿತು ಮನೋಹರಾಕಾರ ಪಡೆಯಿತೋ ಹೇಳಿರಿ ಎಂಬ ಯೋಚನೆಗೆ ಆಸ್ಪದವಾಗಿ ಆ ವೃಷಭೇಶ್ವರನು (ತನ್ನ) ಆ ಶೈಶವಾವಸ್ಥೆಯಲ್ಲಿ ಪ್ರಕಾಶಿಸಿದನು. ೨೩. ಚಂಚಲನೇತ್ರೆಯಾದ ಆ ಮಾದಲಾಂಬಿಕೆಯು ಜಗತ್ತಿನೊಳಗಿರುವ (ಇನ್ನಿತರ) ಮಕ್ಕಳುಗಳ ರೀತಿಯನ್ನು ಪಡೆಯದ ಅತ್ಯಂತ ಮಹತ್ವವುಳ್ಳ ಶಿಶುವು ! ಎಂದು ಪ್ರೀತಿಯಿಂದ ನೋಡಿ ಸಂತೋಷಗೊಂಡು ಹೊಗಳಿ, ಆಲಿಂಗಿಸುತ್ತ ಚೆನ್ನಾಗಿ ಮುದ್ದಾಡುತ್ತ ಇದ್ದಳು. ವ॥ ಈ ರೀತಿಯಲ್ಲಿ ಮುದ್ದಿಸಿ, ಮುಂಡಾಡಿ, ಆಲಿಂಗಿಸಿ, ಹನ್ನೆರಡನೆಯ ದಿನದಲ್ಲಿ ಸ್ತೋತ್ರಾರ್ಹವಾದ ವಿಶೇಷೋತ್ಸಾಹದಿಂದ ರತ್ನಖಚಿತ ತೊಟ್ಟಿಲಲ್ಲಿಹಾಕಿ ಅತಿಪ್ರೀತಿಯಿಂದ ನಲಿದಾಡಿ—೨೪. ಮನೋಹರಾಕಾರನೇ ಜೋ, ಸದ್ಗುಣಗಳಿಗಾಶ್ರಯನೇ ಜೋ, ಪುಣ್ಯಸ್ವರೂಪನೇ ಜೋ, ಪ್ರಕಾಶಮಾನವಾದ ಶಿವಧರ್ಮಸ್ವರೂಪನೇ ಜೋ, ಮನೋಹರವಾಕ್ಸ್ವರೂಪನೇ ಜೋ, ಸಮಸ್ತಕ್ಕೆ ಸ್ವಾಮಿ

ಕುಲಮತಿಯುಕ್ತ ಜೋ ನಿಗಮಸನ್ನುತ ಜೋ ನಿರವದ್ಯಮೂರ್ತಿ ಜೋ
ಬಲರಿಪುವಂದ್ಯ ಜೋ ಬಸವ ಜೋ ವಿಭು ಜೋಯೆನುತೆರ್ೊಪ್ಪೆ ತೂಗಿದಳ್ ೨೪

ಮಂಗಳಾನ್ವಿತ ಜೋ ಮಹೀನುತ ಜೋ ಮಹಾವ್ರತಜೋ ಸುರೋ
ತ್ತುಂಗ ಸೇವಿತ ಜೋ ಶುಚಿಸ್ಮಿತ ಜೋ ಸುಖಾಶ್ರಿತ ಜೋ ಸದಾ
ಜಂಗಮಪ್ರಿಯ ಜೋ ಜಗನ್ಮಯ ಜೋ ಜಿತಸ್ಮರ ಜೋಯೆನು
ತ್ತಂಗನಾಮಣಿ ಜೋಗುಳಂ ನಲವಾಡಿ ತೂಗಿದಳಳ್ಕಱಿಂ ೨೫

ಶಿವನಂ ಧ್ಯಾನಿಸುವಂತೆ ಕಣ್ಮುಗಿವನಂದೋರೊರ್ಮೆ ಮಾಯಾ ಪ್ರಪಂ
ಚವಿದೆಲ್ಲಂ ಜಡನೆಂದು ನೋಡಿ ನಗುವಂತೋರೊರ್ಮೆ ಮಂದಸ್ಮಿತೋ
ತ್ಸವಮಂ ಬೀಱುವನೊತ್ತಿ ಬಿಲ್ವಿಡಿವವೋಲ್ ಸದ್ಭಕ್ತಿಯಂ ಮುಟ್ಟಿ ಮಾ
ಡುವನೋರೊರ್ಮೆ ಕರಂಗಳಂ ತಳೆಯೆ ತನ್ಮಾದಾಂಬೆಯಾನಂದಮಂ ೨೬

ಮುನಿಜನಮಾನಸಾಬ್ಜದೊಳೆ ತಾನೆಸೆವಂದಮನಿಲ್ಲಿ ತೋರ್ಪನೆಂ
ದೆನಿಸುತೆ ಕುಳ್ಳಿರುತ್ತೆಸೆವನುರ್ವಿಗೆ ರಾಗಮನಿತ್ತು ಮೆಲ್ಲನೆ

ಯಾದವನೇ ಜೋ, ಚಂಚಲರಹಿತ ಮತಿಯುಳ್ಳವನೇ ಜೋ, ವೇದಗಳಿಂದ ಹೊಗಳಿಸಿಲ್ಪಡುವವನೇ ಜೋ, ನಿರ್ದುಷ್ಟವಾದ ಶರೀರನೋ ಜೋ, ದೇವೇಂದ್ರನಿಂದ ವಂದಿಸಿಕೊಳ್ಳಲ್ಪಡುವವನೇ ಜೋ, ಬಸವಣ್ಣನೇ ಜೋ, ಪ್ರಭುವೇ ಜೋ, ಎನ್ನುತ್ತ ಶೋಭಾಯಮಾನವಾಗುವ ಹಾಗೆ ತೂಗಿದಳು. ೨೫. (ಪುನಃ) ಆ ಸ್ತ್ರೀ ಶ್ರೇಷ್ಠಳಾದ ಮಾದಲಾಂಬಿಕೆಯು ಪ್ರೀತಿಯಿಂದ ಮಂಗಳದಿಂದ ಕೂಡಿದವನೇ ಜೋ, ಭೂಲೋಕದ ಜನದಿಂದ ಕೊಂಡಾಡಲ್ಪಡುವವನೇ ಜೋ, ಅಧಿಕವಾದ ನಿಯಮಗಳನ್ನುಳ್ಳವನೇ ಜೋ, ದೇವತಾಶ್ರೇಷ್ಠರಿಂದ ಸೇವಿಸಲ್ಪಡುವವನೇ ಜೋ, ಶುಭ್ರವಾದ ಮುಗುಳುನಗೆಯುಳ್ಳವನೇ ಜೋ, ಸುಖಕ್ಕೆ ಆಶ್ರಯನಾದವನೇ ಜೋ. ಸತತವೂ ಜಂಗಮದಲ್ಲಿ ಪ್ರೀತಿಯುಳ್ಳವನೇ ಜೋ, ಜಗತ್ಸ್ವರೂಪನಾದವನೇ ಜೋ; ಮನ್ಮಥನನ್ನು ಜಯಿಸಿದವನೇ ಜೋ, ಎನ್ನುತ್ತ ಜೋಗುಳಗಳನ್ನು ಪ್ರೀತಿಯಿಂದ ಹಾಡಿ ತೂಗಿದಳು. ೨೬. (ಈ ರೀತಿಯಲ್ಲಿ) ಆ ಮಾದಾಂಬೆ ಸಂತೋಷಗೊಳ್ಳುವ ಹಾಗೆಯೇ (ಆ ಬಸವನೂ ಕೂಡ) ಶಿವನನ್ನು ಧ್ಯಾನ ಮಾಡುವವನಂತೆ ಒಮ್ಮೊಮ್ಮೆ ಕಣ್ಣುಮುಚ್ಚುವನು. ಮಾಯೆಯಿಂದ ಕೂಡಿದ ಈ ಪ್ರಪಂಚವೆಲ್ಲವೂ ಜಡತ್ವರೂಪವದ್ದೆಂದು ನೋಡಿನಗುವಂತೆ ಒಮ್ಮೊಮ್ಮೆ ಮುಗುಳುನಗೆಯನ್ನು ಬೀರುವನು. ಸದ್ಭಕ್ತಿಯನ್ನು ಒತ್ತಿ ಬಿಗಿಯಾಗಿ ಹಿಡಿದಿರುವನೋ ಎನ್ನುವಂತೆ ಒಮ್ಮೊಮ್ಮೆ ಕೈಗಳನ್ನು ಮುಷ್ಟಿಮಾಡಿ ಹಿಡಿದಿರುವನು. ೨೭. ಆ ಬಸವೇಶ್ವರನು ಮುನಿಜನರುಗಳ ಮನಸ್ಸೆಂಬ ಕಮಲದಲ್ಲಿ ಪ್ರಕಾಶಿಸುವ ರೀತಿಯನ್ನು ಇಲ್ಲಿ ತೋರಿಸುತ್ತಿದ್ದಾನೆಂದೆನ್ನುವ ಹಾಗೆ ಕುಳಿತುಕೊಳ್ಳುತ್ತ ಶೋಭಿಸ

ಲ್ಲನೆ ನಡೆವಂತೆ ದಟ್ಟಡಿಯನೊಲ್ದಿಡುವಂ ಶಿವತಂತ್ರ[1]ವಾಕ್ಯವೊಂ
ದೆ ನಿಜಮದಲ್ಲದೆಲ್ಲ ತೊದಳೆಂಬವೊಲುಣ್ಮೆ ತೊದಳ್ವಿನೋದಿಪಂ ೨೭

ಉಮ್ಮಳಿಪುದು ಪೊಡೆಮಗುಳ್ವುದು
ಕೆಮ್ಮುವುದಳ್ವುದು ಜಿನುಂಗುವುದು ಸುಯ್ವುದು ಜಾ
ಡ್ಯಂ ಮೊಳೆವುದೆಂಬ ಬಗೆಗಳ್
ಸುಮ್ಮನಿಸವು[2] ಬಸವನಲ್ಲಿ ಶೈಶವದೆಸೆಯೊಳ್ ೨೮

ಎನ್ನಯ ತಂದೆ ಬಾರ ಮಿಸುಪೆನ್ನ ಸುಧಾನಿಧಿ ಮುದ್ದನೀವುದೆಂ
ದೆನ್ನರಸಂಚೆ ನೀಂ ನಡೆವುದೆನ್ನಯ ಕಣ್ಮಲರಚ್ಚಸೈಪೆ ನೋ
ಡೆನ್ನಯ ರಾಜಕೀರ ನುಡಿಯೆನ್ನ ಸುರತ್ನಮೆ ಕುಳ್ಳಿರೆಂದು ಚಿ
ತ್ತಂ ನಲವೇಱೆ[3] ಮಾತೆ ಬಿಗಿಯಪ್ಪುತೆ ಮುದ್ದಿಪಳಾ ಕುಮಾರನಂ ೨೯

ಅರಳೆಲೆ ಭಾಳದೊಳ್ಕುಣಿಯೆ ಕರ್ಣದೊಳಾಡೆ ಸುವರ್ಣಕುಂಡಲಂ
ಚರಣದ ಗುಜ್ಜುಗೆಜ್ಜೆ ಝಣರೆಂದೆನೆ [3]ನೇವುರ[3]ದಿಂಚರಂ ಪಳಂ

ತ್ತಿದ್ದನು. ಭೂಲೋಕಕ್ಕೆ ಪ್ರೀತಿಯನ್ನು ಕೊಟ್ಟು ಮೆಲ್ಲಮೆಲ್ಲನೆ ನಡೆಯುವಹಾಗೆ ಒಲುಮೆಯಿಂದ ತಪ್ಪುಹೆಜ್ಜೆಯನ್ನಿಡುತ್ತಿದ್ದನು. ಶಿವನಾಮಗಳಲ್ಲಿ ಹೇಳಲ್ಪಟ್ಟ ವಾಕ್ಯವೊಂದೇ ಸತ್ಯ ; ಅದಲ್ಲದೆ ಎಲ್ಲವೂ ತೊದಳು ಎಂದರೆ ಸುಳ್ಳು ಎಂಬ ಹಾಗೆ ತೊದಲುತೊದಲಾಗಿ ಮಾತನಾಡಿ ವಿನೋದಗೊಳಿಸುವನು. ೨೮. ಬಸವಣ್ಣನಿಗೆ ಆ ಶೈಶವಾವಸ್ಥೆಯಲ್ಲಿ ಹೊಟ್ಟೆಯುಬ್ಬುವಿಕೆ, ಇಳಿಯುವಿಕೆ (ಮತ್ತು) ಕೆಮ್ಮುವುದು, ಅಳುವುದು, ಜೀಗುಟ್ಟುವುದು, ನಿಟ್ಟುಸಿರುಬಿಡುವುದು, ರೋಗ ಮೊಳೆದೋರುವುದು ಎಂಬ ರೀತಿಗಳು ಉಂಟಾಗುತ್ತಿರಲಿಲ್ಲ. ೨೯. ತಾಯಿಯಾದ ಮಾದಲಾಂಬಿಕೆಯು ಆ ಸುಕುಮಾರನಾದ ಬಸವಣ್ಣನನ್ನು ಎನ್ನ ತಂದೆಯೇ ಬಾರ. ಪ್ರಕಾಶಿಸುವ ಎನ್ನ ಕ್ಷೀರ ಸಾಗರವೇ ಬಾರ(ನನಗೆ)ಮುದ್ದನ್ನು ಕೊಡುಬಾರ (ಎನ್ನುವಳು). ನನ್ನ ರಾಜ ಹಂಸವೇ, ನೀನು ನಡೆದಾಡುವುದು ನನ್ನ ಪುಷ್ಪ ಸದೃಶ ಕಣ್ಣುಗಳ ನಿರ್ಮಲ ಪುಣ್ಯವೇ, ಎನ್ನ ರಾಜಹಂಸವೇ ನೋಡು, ಎನ್ನ ಅರಗಿಣಿಯೇ ಮಾತನಾಡು, ನನ್ನ ಶ್ರೇಷ್ಠರತ್ನವೇ ಕುಳಿತುಕೋ—ಎಂದೆನ್ನುತ್ತ ಮನಸ್ಸು ಸಂತೋಷಗೊಳ್ಳುವಹಾಗೆ ಬಿಗಿಯಾಗಿ ಆಲಿಂಗಿಸುತ್ತ ಮುದ್ದಾಡುತ್ತಿದ್ದಳು. ೩೦. ಅರಳೆಲೆಯ ಆಭರಣ ವಿಶೇಷವು ಹಣೆಯಲ್ಲಿ ಕುಣಿದಾಡುತ್ತಿತ್ತು. ಚಿನ್ನದ ಕರ್ಣಾಭರಣಗಳು ಕಿವಿಯಲ್ಲಿ ಅಲ್ಲಾಡುತ್ತಿದ್ದವು. ಕಾಲಿನಲ್ಲಿ ಗೆಜ್ಜೆಯ ಅಂದುಗೆಗಳು ಝಣರ್ ಎಂದು ಶಬ್ದಮಾಡುತ್ತಿದ್ದವು.

1 ಮಂತ್ರ(ದ) 2 ವೆ(ದ, ಗ, ಚ, ಮ) 3 ನೂಪುರ (ಅ)

ಚಿರೆ ಮೊಳೆವಲ್ಕರಂ ಮಿಸುಗೆ ಚೆಲ್ವ ಮುಗುಳ್ನಗೆ ಮುದ್ದುಮೀಱೆ ಕ
ಣ್ಬುರಿಗೆಡೆಯಾಗಿ ಮಾತೆಯ ಕರಾಂಬುಜತಾಳಕೆ ನರ್ತಿಪಂ ಸುತಂ ೩೦

ಮಳಯೋರ್ವೀಭೃತ್ಪಟೀರಪ್ರಬಳವನದೊಳುದ್ಯದ್ದ್ವಿಪೇಂದ್ರಾರ್ಭಕಂ ಪ್ರೋ
ಜ್ವಳ ಪೂರ್ವಾದ್ರೀಂದ್ರದೊಳ್ಭಾಸುರ ತರುಣದಿನಾಧೀಶಬಿಂಬಂ ಸುಧಾಬ್ಧಿ
ಸ್ಥಳದೊಳ್ಬಾಲಂ ಮರಾಳಂ ಬಳೆವವೊಲವನೀನಿರ್ಜರಾಗಾರದೊಳ್ತಾಂ
ಬಳೆದಂ ಭದ್ರಂ ಪ್ರಕಾಶಂ ಶುಚಿತೆ ಬಳೆವಿನಂ ಕೂಡೆ ನಂದೀಶದೇವಂ ೩೧

ವ॥ ಅಂತು ಬಳೆವ ಬಸವರಸಂಗೆ ಗರ್ಭಾಷ್ಟವಾಬ್ದಂ ಸಂಪ್ರಾಪ್ತಮಾಗೆ ಮಾದಿರಾಜಂ ಮೌಹೂರ್ತಿಕರಂ ಬರಿಸಿ ತರುಣಂಗುಪನಯನೋಚಿತವಾಸರಮಂ ವಿಚಾರಿಸುತ್ತಮಿರ್ಪಾಗಳದನಱಿದವನ ಬೆಳ್ಪನಕ್ಕೆ ಬೆಕ್ಕಸಂಬಟ್ಟು—

ಘನಸಂಭ್ರಮಮೇನಿದು ಪೇ
ಳ್ಜನಕ ನಿಜಸ್ಥಿತಿಯನೆಂದು ಬೆಸಗೊಳೆ ಬಸವಂ

ಕಾಲುಕಡಗಗಳ ಮಧುರಸ್ವರವೂ ಇದರೊಡನೆ ಕೂಡಿಕೊಂಡಿತ್ತು. ಮೊಳೆದೋರಿ ಹೊರಬರುತ್ತಿರುವ ಹಲ್ಲುಗಳು ಚೆನ್ನಾಗಿ ಪ್ರಕಾಶಿಸುತ್ತಿದ್ದವು. ಮನೋಹರವಾದ ಮುಗುಳುನಗೆಯಿಂದ (ನೋಡುವವರೆಲ್ಲರಿಗೂ) ಪ್ರೀತಿಯುಂಟಾಗುವಂತೆ ಮಾಡುತ್ತಿದ್ದನು. ಕಣ್ಸನ್ನೆ (ಕಣ್ಬುರಿ ?)ಗೆ ಇಂಬಾಗಿ ತಾಯಿ ಹಾಕತಕ್ಕ ಕಮಲಸದೃಶವಾದ ಕೈಗಳ ತಾಳಕ್ಕೆ (ಹೊಂದಿಕೆಯಾಗಿ) ಆ ಮಗನು ಕುಣಿದಾಡುತ್ತಿದ್ದನು. ೩೧. ಮಲಯ ಪರ್ವತದ ಶ್ರೀಗಂಧದ ದೊಡ್ಡ ಕಾಡಿನಲ್ಲಿ ಶ್ರೇಷ್ಠವಾದ ಆನೆಯ ಮರಿಯು ಬೆಳೆಯುವ ಹಾಗೂ, ಅತ್ಯಂತ ಉಜ್ವಲವಾದ ಪೂರ್ವದಿಕ್ಕಿನ ಪರ್ವತದಲ್ಲಿ ಪ್ರಕಾಶಮಾನವಾದ ಬಾಲಸೂರ್ಯನ ಮಂಡಲವು ಬೆಳೆಯುವ ಹಾಗೂ, ಕ್ಷೀರಸಮುದ್ರದ ಸ್ಥಳದಲ್ಲಿ ಹಂಸಪಕ್ಷಿಯ ಮರಿಯು ಬೆಳೆಯುವ ಹಾಗೂ, (ಆ) ಭೂಸುರೋತ್ತಮನಾದ ಮಾದರಸನ ಮನೆಯಲ್ಲಿ ಆ ಬಸವೇಶ್ವರನು (ಅನುಕ್ರಮವಾಗಿ) ಮಂಗಳವೂ, ತೇಜಸ್ಸೂ, ಪಾರಿಶುದ್ಧ್ಯವೂ, ಸೇರಿಕೊಂಡು ಬೆಳೆಯುತ್ತಿದೆಯೋ ಎಂಬಂತೆ ವೃದ್ಧಿಗೊಳ್ಳುತ್ತಿದ್ದನು. [ಮಲಯ + ಉರ್ವೀಭೃತ್ + ಪಟೀರ + ಪ್ರಬಳ + ವನ–ಮಲಯಪರ್ವತದಲ್ಲಿನ ಶ್ರೀಗಂಧದ ದೊಡ್ಡವನ. ಉದ್ಯತ್ + ದ್ವಿಪೇಂದ್ರ + ಅರ್ಭಕ–ಶ್ರೇಷ್ಠವಾದ ಆನೆಯ ಮರಿ]. ವ॥ ಹೀಗೆ ಬೆಳೆಯುತ್ತಿರುವ ಬಸವರಾಜನಿಗೆ ಎಂಟು ವರ್ಷಗಳ ವಯಸ್ಸು ಪ್ರಾಪ್ತವಾಗಲಾಗಿ, ಮಾದಿರಾಜನು ಜ್ಯೋತಿಷ್ಕರನ್ನು ಬರಮಾಡಿಕೊಂಡು, ಮಗನಿಗೆ ಉಪನಯನದ ಊರ್ಜಿತವಾದ ಕರ್ಮವನ್ನು ಮಾಡಲು ಉತ್ತಮ ಮುಹೂರ್ತದ ದಿನವನ್ನು ವಿಚಾರಿಸುತ್ತಿರುವಾಗ (ತಂದೆಯ ಈ ಕಾರ್ಯಾರಂಭವನ್ನು) ಬಸವಣ್ಣನು ತಿಳಿದು ತಂದೆಯಾದ ಮಾದರಸನ ಮರುಳುತನಕ್ಕೆ ಆಶ್ಚರ್ಯಪಟ್ಟವನಾಗಿ— ೩೨. 'ತಂದೆಯೇ, ಈ ಸಂಭ್ರಮವೇನು ? ನಿಜ ಸ್ಥಿತಿಯನ್ನು ಹೇಳು ಎಂದು ಬಸವಣ್ಣನು ಕೇಳಲಾಗಿ, ಮಾದರಸನು ಮಗನೇ, ನಿನಗೆ ಉಪನಯನವನ್ನು

ತನುಭವ ನಿನಗುಪನಯನದ
ದಿನಮಾದುದು ಮಾಳ್ಪೆನೆಂದನಾ ಮಾದರಸಂ ೩೨

ವ॥ ಎನೆ ಬಸವರಾಜಂ ಮುಗುಳ್ನಗೆ ನಕ್ಕು—

ಒಡಲುಪವಾಸದ ಪೆರ್ಚಿಂ
ದಡರ್ದುದೊ ಘನ ಪೈತ್ಯಮಕಟ ನಿನ್ನಯ ಶಿರಮಂ
ಮೃಡನೆನಗೆಸಗಿದ ದೀಕ್ಷೆಯ
ನೆಡೆಯೊಳ್ಮಱೆದೀಗಳೇನನಾಳೋಚಿಸಿದೈ ೩೩

ಹರದೀಕ್ಷೆಯಾಂತ ಮಹಿಮಂ
ಪರದೀಕ್ಷೆಯನಾಶೆಗೈವನೇ ಬಿಡು ಧರಣೀ
ಶ್ವರ ಪಟ್ಟಂಬಡೆದೊಪ್ಪುವ
ನರಪತಿಯಾ ಮಿಕ್ಕ ಪದಕೆ ಬಗೆದಂದಪನೇ ೩೪

ವಿಮಳ ಶಿವಭಕ್ತಿವಡೆದು
ತ್ತಮನಿಡುವನೆ ಮನಮನನ್ಯಭಕ್ತಿಗೆ ಸುಮನೋ
ದ್ರುಮದ ನೆಳಲೊಂದಿದವನ
ಲ್ಪಮಹೀಜದ ಬಳಿಯ ನೆಳಲನೇಂ ಸಾರ್ದಪನೇ ೩೫

ಶಿವಮತಮನೊಲ್ದು ಸೇವಿಪ
ಶಿವಭಕ್ತಂ ಭವಿಮತಕ್ಕೆ ಬಗೆದಾರಂ ಕೇ
ಳ್ವವಿಮಳ ಸಂಜೀವನಮಂ
ಸವಿದಾತಂ ಕ್ಷುದ್ರರಸಮನೇನೊಲ್ದಪನೇ ೩೬

ಮಾಡುವುದಕ್ಕೆ ಯೋಗ್ಯದಿನವು ಪ್ರಾಪ್ತವಾಗಿದೆ. (ಅದ್ದರಿಂದ) ಅದನ್ನು ಮಾಡುತ್ತೇನೆ' ಎಂದನು. ವ॥ ಹೀಗೆನ್ನಲು ಬಸವಣ್ಣನು ಮುಗುಳ್ನಗೆ ನಕ್ಕು—೩೩. ''ಹೊಟ್ಟೆಯ ಉಪವಾಸದ ಹೆಚ್ಚುವಿಕೆಯಿಂದ ಹೆಚ್ಚಾದ ಪಿತ್ತವೇನಾದರೂ ನಿನ್ನ ತಲೆಯನ್ನು ಅಡರಿದೆಯೋ ! ಅಯ್ಯೋ !! ಪರಮೇಶ್ವರನೇ ಈ ಸ್ಥಳದಲ್ಲಿ ನನಗೆ ಮಾಡಿದ ಶಿವದೀಕ್ಷೆಯನ್ನು ಮರೆತು ಇದೇನನ್ನು ಯೋಚಿಸುತ್ತಿರುವೆಯಪ್ಪಾ ! ೩೪. ಶಿವ ದೀಕ್ಷೆಯನ್ನು ಪಡೆದ ಮಹಿಮನು ಅನ್ಯದೀಕ್ಷೆಗೆ ಆಶಿಸುತ್ತಾನೆಯೇ ? (ನಿನ್ನ ಕಾರ್ಯಾರಂಭವನ್ನು) ಬಿಡು. ರಾಜ ಪಟ್ಟವನ್ನು ಹೊಂದಿ ಶೋಭಿಸುವ ರಾಜನು ಇನ್ನಿತರ ಪದವಿಗಳಿಗೆ ಮನಸ್ಸು ಮಾಡುವನೇ ? ೩೫. ನಿರ್ಮಲ ಶಿವ ಭಕ್ತಿಯನ್ನು ಆಚರಿಸುವ ಉತ್ತಮ (ಭಕ್ತ)ನು ಇತರ ದೇವತಾ ಭಕ್ತಿಗೆ ಮನಸ್ಸು ಮಾಡುತ್ತಾನೆಯೋ ? ಕಲ್ಪವೃಕ್ಷದ ಛಾಯೆಯನ್ನು ಆಶ್ರಯಿಸಿದವನು ಸಾಧಾರಣವಾದ ಇನ್ನಿತರ ಮರದ ಸಮೀಪದ ನೆಳಲನ್ನು ಆಶ್ರಯಿಸುವನೇ ? ೩೬. ಶಿವಸಂಬಂಧವಾದ (ವೀರಶೈವ) ಮತವನ್ನು ಪ್ರೀತಿಸಿ ಸೇವಿಸುವ ಶಿವಭಕ್ತನಾದವನು ಭವಿಮತಕ್ಕೆ (ಅಲಿಂಗಿ ಮತಕ್ಕೆ) ತನ್ನ ಮನಸ್ಸನ್ನು ಕೊಡುವುದಿಲ್ಲ. ಕೇಳು: ನಿರ್ಮಲವಾದ ಸಂಜೀವನವನ್ನು ಸೇವಿಸಿದವನು

ಹರಸೇವೆಗೈವ ಸುಕೃತಿಗೆ
ಸುರಸೇವೆಯನೊಲ್ದು ಮಾಳ್ಪವಂ ಸಮನೆ ಮಹಾ
ಗಿರಿಯಂ ಸೇವಿಪ ಸಿಂಹಕೆ
ಮೊರಡಿಯು ಸೇವಿಪ ಮೊಲಂ ವಲಂ ಪಾಸಟಿಯೇ ೩೭

ರುದ್ರಮುದ್ರೆವಡೆದಾತನಂಗದೊಳ್
ಕ್ಷುದ್ರಮುದ್ರೆಗೆಳಸಂ ಧರಿತ್ರಿಯೊಳ್
ಭದ್ರಮಾದ ನೃಪಚಿಹ್ನಮಾಂತವಂ
ಶೂದ್ರಚಿಹ್ನಧರನಾಗಲೊಲ್ವನೇ ೩೮

ವ॥ ಎಂದು ನುಡಿದ ಬಸವರಾಜನ ಭಕ್ತಿರಸವಿಸರವಿಲುಳಿತಾಲಾಪಮಂ ಕೇಳ್ದು ತದಾಶಯಮನನುಸರಿಸುತಾದರಂ ಮಿಗೆ ಮಾದರಸನಿಂತೆಂದಂ—

ದ್ವಿಜಮುದ್ರೆಯೆಂಬುದಭವನ
ನಿಜಮುದ್ರೆ ದಲನ್ಯಮುದ್ರೆಯಲ್ತಿದಜೀರವಂ
ಸುಜನಜನವನಧಿರಾಕಾ
ತ್ರಿಜ ಪೇಳ್ವೆಂ ಕೇಳ್ವುದಾಗ್ರಹಮನುಳಿದೀಗಳ್ ೩೯

ಮುರಭಿತ್ಕೇಶಂಗಳಿಂ ಮಾಡಿದ ಪುರಿಯುಪವೀತಂ ತದಂಗಾಸ್ಥಿ ದಂಡಂ
ಕರದಾಷಾಡಂ ನೃಸಿಂಹಾಜಿನಮದು ಪದಪಿಂ ತಾಳ್ದ ಕೃಷ್ಣಾಜಿನಂ ಭಾ

ಕ್ಷುದ್ರ ಮೂಲಿಕೆಯ ರಸವನ್ನು ಕುಡಿಯುವನೇ ? ೩೭. ಶಿವನ ಸೇವೆಯನ್ನಾಚರಿಸುವ ಪುಣ್ಯಶಾಲಿಗೆ ಇತರ ದೇವತೆಗಳ ಸೇವೆಯನ್ನು ಪ್ರೀತಿಸಿ ಆಚರಿಸುವವನು ಸಮಾನವಾದಾನೆಯೆ ? ದೊಡ್ಡ ಪರ್ವತವನ್ನು ಆಶ್ರಯಿಸಿಕೊಂಡಿದ್ದ ಸಿಂಹಕ್ಕೆ ಮೊರಡಿಯನ್ನು ಆಶ್ರಯಿಸಿಕೊಂಡಿರುವ ಮೊಲವು ಸಮಾನವಾದೀತೇ ? ೩೮. ಶಿವ ಮುದ್ರೆಯನ್ನು ಅಂಗದಲ್ಲಿ ಪಡೆದುಕೊಂಡಿರುವವನು (ಇತರ) ಕ್ಷುದ್ರವಾದ ಮುದ್ರೆಗಳಿಗೆ ಇಚ್ಛಿಸುವುದಿಲ್ಲ. ಈ ಭೂಮಿಯಲ್ಲಿ ಮಂಗಳಕರಗಳಾದ ರಾಜಮುದ್ರೆಯನ್ನು ಹೊಂದಿದವನು ಶೂದ್ರ ಚಿಹ್ನೆಗಳನ್ನು ಧರಿಸಲು ಒಪ್ಪುವನೇ ? ವ॥ ಹೀಗೆಂದು ಮಾತನಾಡತಕ್ಕ ಬಸವಣ್ಣನ ಭಕ್ತಿ ರಸ ರಾಶಿಯಲ್ಲಿ ವ್ಯಾಪ್ತಗೊಂಡು ಮಾತನಾಡುವ ಮಾತನ್ನು ತಂದೆಯಾದ ಮಾದರಸನು ಕೇಳಿ, ಅವನ ಮನೋಭಿಪ್ರಾಯವನ್ನನುಸರಿಸಿ, ವಿಶೇಷಾದರದಿಂದ ಹೀಗೆ ಹೇಳಿದನು : ೩೯. ಸತ್ಪುರುಷರೆಂಬ ಸಮುದ್ರಕ್ಕೆ ಪೌರ್ಣಿಮಿಯ ಚಂದ್ರನಂತಿರುವ ಬಸವೇಶ್ವರನೇ, ದ್ವಿಜ ಸಂಬಂಧವಾದ ಚಿಹ್ನೆಯೆಂಬುದು ಪರಮೇಶ್ವರನ ನಿಜವಾದ ಮುದ್ರೆಯೇ ಅಲ್ಲವೇ ! ಅದು ಇತರ ದೇವತಾ ಚಿಹ್ನೆ ನಿಶ್ಚಯವಾಗೂ ಅಲ್ಲ. ಇದರ ರೀತಿಯನ್ನು ಹೇಳುತ್ತೇನೆ. ಕೋಪವನ್ನು ಬಿಟ್ಟು ಕೇಳು : ೪೦. ಎಲೈ ಮಗನೇ, ವಿಷ್ಣುವಿನ ಕೂದಲುಗಳಿಂದ ಮಾಡಿದ ಹುರಿಯೇ ಯಜ್ಞೋಪವೀತ ; ಆ ವಿಷ್ಣುವಿನ

ಸುರ ಭಿಕ್ಷಾಪಾತ್ರ ಪದ್ಮೋದ್ಭವನ ಪೃಥುಕಪಾಲಂ ವಲಂ ತಾನಿದಾ ಶಾಂ
ಕರ ಚಿಹ್ನಂ ಪುತ್ರ ಗಾಯತ್ರಿಗೆ ಹರನಧಿದೈವಂ ದ್ವಿಜಂ ಭರ್ಗನಂಶಂ ೪೦

ಪವನಸಖಂ ರುದ್ರಾಂಗಂ
ಕುವರ ಮಖಾನಲಸಮರ್ಚನೀಶನಿದೆಲ್ಲಂ
ಪ್ರವಿದಿತಮಾಮ್ನಾಯದೊಳಿದ
ನವಧರಿಸಿ ಕುಮಾರ ಮಾಳ್ಪುದೆನ್ನಭಿಮತಮಂ ೪೧

ಇದನಱಿದೊಡೆ ಪಳಿಯದಿರ
ಸದಮಳಗುಣವಿಪ್ರರದಱಿನೆನ್ನಯ ನುಡಿಯಂ
ಪದೆದಪ್ಪುಕೈವುದೆಂದೆನೆ
ಮೃದುಹಸನಂ ಮಿಸುಗೆ ಬಸವರಾಜಂ ನುಡಿದಂ ೪೨

ಎಲೆ ತಾತ ಮೂಢಜನದೊಡ
ನಲಸದೆ ನೀನಾಡಿ ಮೂಢತೆಗೆ ಪಕ್ಕಾದೈ
ನೆಲೆಯಱಿಯದ ನಿನ್ನ ಮನೋ
ಮಲಿನಂ ಪರಿವಂತಿರೊರೆವೆನಾಲಿಸು ನಿಜಮಂ ೪೩

ಶರೀರದಲ್ಲಿನ ದಂಡದಂತಿರುವ ಮೂಳೆಯೇ ಕೈಯಲ್ಲಿ ಧರಿಸುವ ಮುತ್ತುಗದ ದಂಡ; ಆ ನರಸಿಂಹನ ಚರ್ಮವೇ ಪ್ರೀತಿಯಿಂದ ಧರಿಸಿದ ಮೃಗಾಜಿನ; ಬ್ರಹ್ಮನ ವಿಶಾಲವಾದ ತಲೆಯ ಬುರುಡೆಯೇ ಕೈಯಲ್ಲಿ ಹಿಡಿಯುವ ಶ್ರೇಷ್ಠ ಭಿಕ್ಷಾ ಪಾತ್ರೆ; ಇದು ನಿಶ್ಚಯವಾಗಿ ಶಂಕರನ ಸಂಬಂಧವಾದ ಚಿಹ್ನೆಯೇ ಆಗಿದೆ. 'ಓಂ ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ ಧಿಯೋಯೋನಃ. ಪ್ರಚೋದಯಾತ್' ಎಂಬ ಇಪ್ಪತ್ತುನಾಲ್ಕಕ್ಷರಗಳ ಗಾಯತ್ರೀ ಮಂತ್ರಕ್ಕೆ ಪರಮೇಶ್ವರನೇ ಅಧಿದೇವತೆ, ಬ್ರಾಹ್ಮಣನು ಪರಶಿವನ ಅದಿಶೋದ್ಭವನೇ ಆಗಿದ್ದಾನೆ. ೪೧. ಕುಮಾರನೇ, ಅಗ್ನಿಯು ರುದ್ರನ (ಅಷ್ಟ ಶರೀರಗಳಲ್ಲಿ) ಒಂದು ಶರೀರ. ಪರಮೇಶ್ವರನು ಯಜ್ಞಾಗ್ನಿ ಮುಖದಿಂದಲೇ ಪೂಜಿಸಲ್ಪಡುವವನಾಗಿದ್ದಾನೆ. ಈ ವಿಷಯವೆಲ್ಲವೂ ವೇದದಲ್ಲಿ ಪ್ರಸಿದ್ಧವಾಗಿರುವ ಅಂಶ. ಇದನ್ನು ಮನಸ್ಸಿಗೆ ತಂದು ಕೊಂಡು ನನ್ನ ಮನೋಬಯಕೆಯನ್ನು ನೆರವೇರಿಸು. ೪೨. ಈ ರೀತಿಯ ನಿನ್ನ (ದ್ವಿಜಕರ್ಮ ತಿರಸ್ಕಾರದ) ವಿಷಯವನ್ನು ಸದ್ಗುಣ ಭರಿತರಾದ ಬ್ರಾಹ್ಮಣರುಗಳು ತಿಳಿದರೆ ದೂಷಿಸದಿರುವರೇ ? ಆದುದರಿಂದ ನಾನು ಹೇಳುವ ಮಾತನ್ನು ಪ್ರೀತಿಯಿಂದ ಅಂಗೀಕರಿಸು'' ಎಂದು ಆ ಮಾದರಸನು ಹೇಳಲು ಬಸವರಾಜನು ಮುಗುಳುನಗೆ ಮುಖದಲ್ಲಿ ಪ್ರಕಾಶಿಸುತ್ತಿರಲು ಹೀಗೆ ಹೇಳಿದನು. ೪೩. ''ಎಲೈ ತಂದೆಯೇ, ನೀನು ಮೂಢಜನರ ಅಭಿಪ್ರಾಯಗಳನ್ನು ಆಲಸ್ಯ ಪಡದೆ ಮಾತನಾಡಿ ಮೌಢ್ಯತೆಗೆ ಗುರಿಯಾದೆ. ನಿಜಾಂಶವನ್ನು ತಿಳಿಯದ ನಿನ್ನ ಮನಸ್ಸಿನ ಮಲಿನತೆಯು ನಾಶವಾಗುವ ಹಾಗೆ ಹೇಳು

ಶ್ರೀ ಲೀಲಾಕರಕೃಷ್ಟಕೇಶವಲಸತ್ಕೇಶಕ್ಕೆ ರಂಡಾಂಗನಾ
ವ್ಯಾಲೋಲತ್ಕರಕೃಷ್ಟತಂತು ಹರನಿರ್ಭಗ್ನತ್ರಿಪದ್ವಿಷ್ಣುಕಂ
ಕಾಲಕ್ಕಲ್ಪನೃಭಗ್ನಮನ್ಯತರುಕಾಷ್ಠಂ ವೀರ ವಿಧ್ವಸ್ತಗ
ರ್ವಾಲಂಕಾರನೃಸಿಂಹಚರ್ಮಕೆ ಪುಳಿಂದಧ್ವಸ್ತಕೃಷ್ಣಾಜಿನಂ ೪೪

ವಿತತಾಮ್ನಾಯ ಸರೋಜಸಂಭವ ಶಿರಃಪಾತ್ರಕ್ಕೆ ತಾರ್ಣಪ್ರಕ
ಲ್ಪಿತ ಪರ್ಣಸ್ಫುಟಿಕಾಖ್ಯ ಪಾತ್ರೆ ಸಮಮೆಂಬೈ ತಾತ ನಿನ್ನಜ್ಞತಾ
ಸ್ಥಿತಿಗಾಂ ವಿಸ್ಮಿತನಾದಪೆಂ ಮಗುಳೆ ತದ್ಗಾಯತ್ರಿಗಂಗಾಧಿದೇ
ವತೆಗಳ್ ಬೇಱಿನೆ ಪಂಚವರ್ಣಶಿವಸನ್ಮಂತ್ರಕ್ಕದೇಂ ಸಾಟಿಯೇ ೪೫

ಶಿವನಾತ್ಮಪ್ರಭುವಾಗೆ ಲೆಕ್ಕಿಸದೆ ಕಂಜಾಕ್ಷಾಜಶಕ್ರಾದ್ಯರಂ
ತವೆ ಬಾಳ್ವಂ ದ್ವಿಜನೀಶನಂಶಮುಳಿದಾತು ಪ್ರಾಕೃತು ಪಾವಕಂ

ತ್ತೇನೆ. ನಿಶ್ಚಯವನ್ನು ಕೇಳು'' (ಎಂದನು). ೪೪. ಲಕ್ಷ್ಮಿಯ ಲೀಲೆಯಿಂದ ಕೂಡಿದ ಕೈಯಿಂದ ಸೆಳೆಯಲ್ಪಟ್ಟ ವಿಷ್ಣುವಿನ ಪ್ರಕಾಶಮಾನವಾದ ಕೇಶಕ್ಕೆ ವಿಧವಾಸ್ತ್ರೀಯರ ಚಂಚಲವಾದ ಹಸ್ತದಿಂದ ಹೊಸೆಯಲ್ಪಟ್ಟ ದಾರವು ಸದೃಶವೇ ? ಪರಶಿವನಿಂದ ಮುರಿಯಲ್ಪಟ್ಟ ತ್ರಿಪಾದವುಳ್ಳ ವಿಷ್ಣುವಿನ ಕಂಕಾಳವೆಂಬ ಮೂಳೆಗೆ ಅಲ್ಪನಾದ ಮನುಷ್ಯನಿಂದ ಮುರಿಯಲ್ಪಟ್ಟ ಕಾಡು ಮರವಾದ ಮುತ್ತುಗದ ಕಟ್ಟಿಗೆಯು ಸಮಾನವೇ ? ವೀರಭದ್ರೇಶ್ವರನಿಂದ ನಾಶಗೊಳಿಸಲ್ಪಟ್ಟ ಗರ್ವವನ್ನೇ ಅಲಂಕಾರಗೊಳಿಸಿಕೊಂಡಿದ್ದ ನಾರಸಿಂಹನ ಚರ್ಮಕ್ಕೆ ಬೇಡರಿಂದ ಧ್ವಂಸಗೊಳಿಸಲ್ಪಟ್ಟ ಜಿಂಕೆಯ ಚರ್ಮವು ಸದೃಶವೇ ? ೪೫. ವಿಸ್ತಾರವಾದ ವೇದಗಳನ್ನುಸುರಿದ ವೇದಪುರುಷನಾದ ಬ್ರಹ್ಮನ ಕಪಾಲಕ್ಕೆ ತೃಣ ಸಂಬಂಧದಿಂದ ಕೂಡಿದ ಎಲೆಯ ದೊನ್ನೆ ಸಮಾನವೆನ್ನುವೆಯಾ ? ಅಪ್ಪಾ, ಈ ನಿನ್ನ ಅಜ್ಞಾನ ಸ್ಥಿತಿಗೆ ನಾನು ವಿಸ್ಮಿತನಾಗಿದ್ದೇನೆ. ಮತ್ತು ನೀನು ಹೇಳಿದ ಆ ಗಾಯತ್ರೀ ಮಂತ್ರಕ್ಕೆ ಆವಯವವಾದ ಬೇರೆ ದೇವತೆಗಳು ಇರುವಾಗ ಪಂಚವರ್ಣದ 'ನಮಃ ಶಿವಾಯ' ಎಂಬ ಶ್ರೇಷ್ಠ ಮಂತ್ರಕ್ಕೆ ಆ ಗಾಯಿತ್ರೀ ಮಂತ್ರವು ಹೇಗೆ ಸಮನಾದೀತು ? [ಪಂಚಾಕ್ಷರೀ ಮಂತ್ರವು ಶಿವಾಂಶವುಳ್ಳದ್ದಾಗಿಯೂ. ಗಾಯತ್ರೀ ಮಂತ್ರವು ಶಕ್ತ್ಯಂಶವುಳ್ಳದ್ದಾಗಿಯೂ ಇರುವುದೆಂದು ತಾತ್ಪರ್ಯ. ಗಾಯತ್ರಿಯು ಶಿವನ ಅಂಗವಲ್ಲವೆಂದು ತಂದೆಯ ಮಾತನ್ನು ಖಂಡಿಸುತ್ತಾನೆ] ೪೬. ಪರಮೇಶ್ವರನು ಸ್ವಾಮಿಯಾಗಿರುವಾಗ ವಿಷ್ಣು, ಬ್ರಹ್ಮ ಇಂದ್ರಾದಿಗಳೇ ಮೊದಲಾದವರುಗಳನ್ನು ಲಕ್ಷ್ಯಕ್ಕೆ ತಾರದೆ ಚೆನ್ನಾಗಿ ಬದುಕುವವನು ಈಶ್ವರಾಂಶದಿಂದ ಕೂಡಿದ ದ್ವಿಜನೆನಿಸುವನು. ಉಳಿದವನು ಪ್ರಾಕೃತ ದ್ವಿಜನೆನಿಸುವನು, ಬೆಂಕಿಯೂ ಕೂಡ ಶಿವನ ಒಂದು ಅಂಗವೇ ಅಹುದು ! (ಅವನು) ವೀರಭದ್ರೇಶ್ವರನಿಂದ ಸಂಹಾರಗೊಳಿಸಲ್ಪಟ್ಟ ನಾಲಿಗೆಯುಳ್ಳವನು

ಶಿವನಂಗಂ ಗಡ ವೀರಭದ್ರಪ್ರಹೃತಜಿಹ್ವಂ ಪೇಳದೆಂತಾದನ
ಜ್ಞವಿಮೋಹಾಸ್ಪದನಾದ ನಿನ್ನ ನುಡಿಗೊಲ್ದಾನೆಂತು ಮುಯ್ಯಾಂತಪೆಂ ೪೬

ಪರಮ ಶಿವತತ್ತ್ವಚಿದ್ರಸ
ಭರಿತನನೇಗೆಯ್ವುದಜ್ಞಜನದುರ್ವಚನಂ
ಸುರುಚಿರರುಚಿಭಾಸುರಭಾ
ಸ್ಕರನಂ ಕೌಶಿಕವಿರಾವಮೇಗೈದಪುದೋ ೪೭

ತಾಪಸ ದಧೀಚಿ ಗೌತಮ
ಶಾಪಾನಲದಗ್ಧರೊಗೆದು ಕಲಿಯುಗದೊಳಸ
ದ್ವ್ಯಾಪಾರರತರ್ನಿಂದಿಪ
ರೇಪೊಳ್ತುಂ ಗಿರಿಶಭಕ್ತರಂ ಭೂತಳದೊಳ್ ೪೮

ಮುನಿಪ ದಧೀಚಿ ಗೌತಮಮುಖರ್ಶಿವಭಕ್ತರಜಸ್ರಮೀ ದ್ವಿಜಾಂ
ಕನಮನವಜ್ಞೆಗೈಯದೊಡಲೊಳ್ತಳೆದಿರ್ದಪರೆಂಬೆಯಪ್ಪೊಡಂ
ವಿನಿಯುತಮಾದುದಾದಿಯೊಳೆ ಕೇಳವರ್ಗಾ ದ್ವಿಜಮುದ್ರೆ ಮತ್ತೆ ಪಾ
ವನ ಶಿವಮುದ್ರೆ ಯುಕ್ತಮದು ಮುನ್ನಭವಾಂಕಮನೊಲ್ದು ತಾಳ್ದಮಂ ೪೯

ಹೇಗಾದನು ಹೇಳು ? ಮೂಢ ಜನರ ಅಜ್ಞಾನಕ್ಕೆ ಕಾರಣನಾಗಿರುವ ನಿನ್ನ ನುಡಿಗೆ ಒಲಿದು ನಾನು ಯಾವ ರೀತಿಯಲ್ಲಿ ಪುರಸ್ಕಾರ ಕೊಡಲಿ. [ವೀರಭದ್ರನು ದಕ್ಷಯಾಗದಲ್ಲಿ ಅಗ್ನಿಯ ನಾಲಿಗೆಯನ್ನು ಕತ್ತರಿಸಿದನೆಂಬ ಕಥೆಯು ಇಲ್ಲಿ ಗ್ರಹಿಸಲ್ಪಟ್ಟ ಕಥೆ] ೪೭. 'ಶ್ರೇಷ್ಠವಾದ ಶಿವತತ್ತ್ವವೆಂಬ ಜ್ಞಾನರಸದಿಂದ ತುಂಬಿರುವಂಥವನನ್ನು ಮೂಢ ಜನರ ದುರ್ವಚನಗಳು ಏನು ಮಾಡುತ್ತವೆ ? ಅತ್ಯಂತ ಮನೋಹರ ಕಿರಣಗಳಿಂದ ಪ್ರಕಾಶಮಾನನಾದ ಸೂರ್ಯನನ್ನು ಗೂಬೆಯು ಕೆಟ್ಟ ಕೂಗು ಏನು ಮಾಡುವುದು. [ಗೂಬೆಯು ತನ್ನ ಕಣ್ಣು ಹಗಲು ಹೊತ್ತು ಕಾಣದಿರುವುದಕ್ಕೆ ಸೂರ್ಯನ ಪ್ರಖರಕಿರಣಗಳೇ ಕಾರಣವಾದ್ದರಿಂದ ಅದು ಸೂರ್ಯನನ್ನು ಶಪಿಸುತ್ತದೆಂಬ ಗ್ರಹಿಕೆಯುಂಟು.] ೪೮. ತಾಪಸರಾದ ದಧೀಚಿ, ಗೌತಮರುಗಳ ಶಾಪಾಗ್ನಿಯಿಂದ ಸುಡಲ್ಪಟ್ಟವರು ಕಲಿಯುಗದಲ್ಲಿ ಹುಟ್ಟಿ ಅಪ್ಯವಹಾರದಲ್ಲಿ ಆಸಕ್ತರಾಗಿ ಭೂತಳದಲ್ಲಿ ಯಾವಾಗಲೂ ಶಿವನ ಭಕ್ತರನ್ನು ದೂಷಿಸುತ್ತಾರೆ. ೪೯. ನಿರಂತರವೂ ಶಿವಭಕ್ತರಾದ ದಧೀಚಿಗೌತಮ ಮೊದಲಾದ ಮಹರ್ಷಿಗಳು ಈ ಬ್ರಾಹ್ಮಣ ಚಿಹ್ನೆಯನ್ನು ತಿರಸ್ಕರಿಸದೆ ದೇಹದಲ್ಲಿ ಧರಿಸಿ ಇದ್ದರು. ಹೀಗೆನ್ನುವುದಾದರೂ (ತಂದೆಯೇ)ಕೇಳು: ಆ ಗೌತಮಾದಿ ಋಷಿಗಳಿಗೆ ಆ ಪ್ರಾಕೃತ ಬ್ರಾಹ್ಮಣ ಚಿಹ್ನೆಯು ಮೊದಲಲ್ಲಿ ಪ್ರಾಪ್ತವಾಯಿತು. ಪುನಃ ಶಿವ ಚಿಹ್ನೆಯು ಪ್ರಾಪ್ತವಾಯಿತು. ಅದು ಉಚಿತವೇ ಆಗಿದೆ. ಪೂರ್ವದಲ್ಲಿ ಶೈವ ಚಿಹ್ನೆಯನ್ನು ಪ್ರೀತಿಸಿ

ತಳೆಯಲ್ಸಲ್ಲದು ವಿಪ್ರಮುದ್ರೆಯನದುಂ ಮೇಣ್ ರಾಜಚಿಹ್ನಾಂಕಿತಂ
ತಳೆಯಲ್ಕಕ್ಕನೆ ಶೂದ್ರವೇಷಮನಣಂ ತಚ್ಛೂದ್ರಚಿಹ್ನಾಂಕಿತಂ
ತಳೆಯಲ್ಕಕ್ಕನಿಳೇಶವೇಷದಿರವಂ ಕೇಳಂತೆ ತತ್ತಾಪಸರ್
ತಳೆದರ್ಶೈವಮುನೀಶದೀಕ್ಷೆವಡೆದಾನೀ ಮೌಂಜಿಯಂ ತಾಳ್ವೆನೇ ೫೦

ಪರಮ ಶಿವಭಕ್ತಿಯೆನಿಸುವ
ಸುರಗಂಗೆಯನುಳಿದು ಭವದೆ ಬರ್ಪಿತರ ಸುರೋ
ತ್ಕರದ ಮತಭಕ್ತಿಯೆನಿಸುವ
ಮರೀಚಿಯಂ ಮಾಣದೀಂಟಲಾನೆಳಸುವೆನೇ ೫೧

ಘನ ರುದ್ರಾಕ್ಷೆಯನಾಂಪ ಕಂಠದೆ ಸಮೌಂಜೀತಂತುಮಂ ಲಿಂಗ ಭ
ಕ್ತ ನಮಸ್ಕೃತ್ಯುಪಯೋಗಫಾಲದೆ ಧ[1]ರಾಮರ್ತ್ಯಪ್ರಣಾಮಂಗಳಂ
ಮನುಕೋಟಿಪ್ರಭು ಪಂಚವರ್ಣಮನುಜಾಪ್ಯಂಗೈವ ಸದ್ವಾಣಿಯಿಂ
ದನಲಾಜಾಚ್ಯುತಮಂತ್ರಮಂ ತಳೆಯಲಾನಲ್ಮಾಡಲಾನಾರ್ಪೆನೇ ೫೨

ಅದನ್ನು ಹೊಂದಿದವನು— ೫೦. ಪುನಃ ಆ ವಿಪ್ರಮುದ್ರೆಯನ್ನು ಧರಿಸುವುದಕ್ಕೆ ಆಗದು. ಅರಸನ ಚಿಹ್ನೆಯಿಂದ ಕೂಡಿದವನು ಸ್ವಲ್ಪವಾಗಿಯಾದರೂ, ಶೂದ್ರನ ಅಲಂಕಾರವನ್ನು ಹೊಂದಲಿಕ್ಕೆ ಯೋಗ್ಯನೇನು ? ಆ ಶೂದ್ರ ಚಿಹ್ನಾಂಕಿತನಾದವನು ರಾಜನ ಅಲಂಕಾರ ರೀತಿಯನ್ನು ಧರಿಸುವುದಕ್ಕೆ ಯೋಗ್ಯನಾಗುವನು. ಅಂತೆಯೇ ಗೌತಮಾದಿ ಋಷಿಗಳು ಶೈವಚಿಹ್ನೆಯನ್ನು ಹೊಂದಿದರು. ನಾನು ಶಿವದೀಕ್ಷಾಬದ್ಧನಾಗಿ (ಈಗ) ಮೌಂಜಿಯನ್ನು ತಾಳುವೆನೇ ? ಇಲ್ಲ. ೫೧. ನಾನು ಉತ್ಕೃಷ್ಟವಾದ ಶಿವ ಭಕ್ತಿಯೆಂದೆನಿಸುವ ದೇವಗಂಗಾ ನದಿಯ ಜಲವನ್ನುಳಿದು ಸಂಸಾರದಲ್ಲಿರುವ ಇತರ ದೇವತಾ ಸಮೂಹದ ಮತದ ಭಕ್ತಿಯೆಂದೆನಿಸುವ ಮರೀಚಿಕಾ (ಬಿಸಿಲುಗುದುರೆ) ಜಲವನ್ನು ಕುಡಿಯಲು ತಪ್ಪದೆ ಬಯಸುವವನೇ ? (ಅಲ್ಲಿ ಎಂದು ಭಾವ) ೫೨. ನಾನು ಶ್ರೇಷ್ಠ ರುದ್ರಾಕ್ಷಮಾಲೆಯನ್ನು ಧರಿಸುವ ಕೊರಳಲ್ಲಿ ಮೌಂಜಿಯದಾರವನ್ನು ಧರಿಸುವುದಕ್ಕೆ ಸಮರ್ಥನಾಗುವೆನೆ ? ಶಿವಭಕ್ತರನ್ನು ನಮಸ್ಕರಿಸುವುದಕ್ಕೆ ಯೋಗ್ಯವಾದ ಹಣೆಯಲ್ಲಿ ಭೂಮಿಯಲ್ಲಿನ ಮರ್ತ್ಯಜನರಿಗೆ ನಮಸ್ಕಾರಗಳನ್ನು ಮಾಡುವುದಕ್ಕೆ ಸಮರ್ಥನಾಗುವೆನೆ ? ಕೋಟಿ ಕೋಟಿ ಮಂತ್ರಗಳಿಗೆ ಪ್ರಭುವಾದ ಪಂಚವರ್ಣದ 'ನಮಃ ಶಿವಾಯ' ಎಂಬ ಪಂಚಾಕ್ಷರೀ ಮಂತ್ರವನ್ನು ಜಪಿಸುವ ಸದ್ವಾಣಿಯಿಂದ ಅಗ್ನಿ, ಬ್ರಹ್ಮ, ಅಚ್ಯುತಾದಿ ದೇವತಾ ವಿಷಯಕ ಮಂತ್ರವನ್ನು ಜಪಿಸುವುದಕ್ಕೆ ಸಮರ್ಥನಾಗುವೆನೇ ? ಇಲ್ಲ. [ನಮಸ್ಕೃತಿ + ಉಪಯೋಗ + ಫಾಲ—ನಮಸ್ಕಾರಕ್ಕೆ ಉಪಯೋಗ

1 ಪ(ದ, ಮು, ಜ, ಮ, ಗ, ಚ)

ವ॥ ಎಂದುಃಸಿರ್ದ ಬಸವರಾಜನಂ ಮಾದಿರಾಜಂ ನೋಡಿ ಮನಂ ನೊಂದು ಮಗನೇ, ಪಿರಿಯರೆಲ್ಲರ್ನಡೆದ ನಡೆವಳಿಯನೊಲ್ಲೆನೆಂಬುದು ಬಲ್ಲತನಮಲ್ತು ವರ್ಣಾಶ್ರಮ ಕ್ರಮದಿನಿರ್ದು ವೈದಿಕ ಶೈವಭಕ್ತಿಯನೇಕಂಗೆಯ್ದಾಚರಿಸಿ ಶಿವಕೃಪೆಪಡೆಯಲಕ್ಕುಮಿದನವಜ್ಞೆಗೈಯದಂಗೀಕರಿಪುದೆನೆ ಕೇಳ್ದು ಬಸವರಾಜಂ ಪ್ರಹಸನಂ ಗೆಯ್ದು—

ನರೆಯುಂ ತೆರೆಯುಂ ತನುವೊಳ್
ಧರಿಯಿಸಿದ ಜಡರ್ಕಳೆಲ್ಲ ಪಿರಿಯರೆ ಪಿರಿಯರ್
ಪರಮ ಶಿವಭಕ್ತಿನಿಷ್ಠಾ
ಚರಣ ಶಿವಜ್ಞಾನ ಶಿವಮತವ್ರತನಿರತರ್ ೫೩

ಶಿವಪಂಚವರ್ಣಮಿರೆ ಬೇ
ಱೆ ವರ್ಣಮೇಕೆಮಗೆ ಶಂಭುಪಾದಾಶ್ರಯಮೊಂ
ದವಿರತಮಿರೆ ಮಿಕ್ಕಾಶ್ರಮ
ನಿವಹಂ ತಾನೇಕೆ ಲಿಂಗಪೂಜಾಯಜ್ಞಂ ೫೪

ಸೊಗಯಿಸೆ ಮತ್ತೆ ಯಜ್ಞದೊಲವೇಕೆ ಪೊದಳ್ದಿರೆ ಲಿಂಗಸೂತ್ರಮು
ಜ್ಜುಗಿಸುವ ಯಜ್ಞಸೂತ್ರದಿರವೇಕೆ ಮರಲ್ದಿರೆ ಭಸ್ಮಲೇಪಮು

ಮಾಗುವ ಹಣೆ, ಅನಲ+ಅಜ+ಅಚ್ಯುತ–ಬೆಂಕಿ, ಬ್ರಹ್ಮ, ವಿಷ್ಣು] ವ॥ ಹೀಗೆಂದು ಹೇಳಿದ ಬಸವರಾಜನನ್ನು ಮಾದಿರಾಜನು ನೋಡಿ ನೊಂದ ಮನಸ್ಸಿನಿಂದ 'ಮಗನೇ ಹಿರಿಯರೆನಿಸಿದವರೆಲ್ಲರೂ ನಡೆದ ನಡೆವಳಿಕೆಯನ್ನು ಒಲ್ಲೆನೆನ್ನುವುದು ಬಲ್ಲವರ ನಡೆವಳಿಕೆಯಲ್ಲ. ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸಂನ್ಯಾಸಾದಿ ವರ್ಣಾಶ್ರಮ ಕ್ರಮದಿಂದ ಇದ್ದು ವೈದಿಕ ಶೈವಭಕ್ತಿಯನ್ನು ಏಕೀಭವಿಸಿಕೊಂಡು ಆಚರಿಸಿ, ಶಿವನ ಕೃಪೆಯನ್ನು ಪಡೆಯಲಾಗುವುದು. (ನನ್ನ ಮಾತನ್ನು) ತಿರಸ್ಕಾರಮಾಡದೆ ಅಂಗೀಕಾರ ಮಾಡು' ಎನ್ನಲು ಆ ಮಾತನ್ನು ಕೇಳಿ ಬಸವರಾಜನು ನಗುತ್ತ— ೫೩. ಶರೀರದಲ್ಲಿ ನರೆಕೂದಲನ್ನೂ, ಚರ್ಮದ ಸುಕ್ಕನ್ನೂ ಧರಿಸಿದ ಅಜ್ಞಾನಿಗಳೆಲ್ಲ ದೊಡ್ಡವರೇನು ? ಉತ್ಕೃಷ್ಟ ಶಿವಭಕ್ತಿಯಲ್ಲಿ ನಂಬಿಕೆಯಿಟ್ಟು ಆಚರಿಸುವ ಈಶ್ವರಜ್ಞಾನ, ಶಿವಮತ, (ಮತ್ತು ತತ್ಸಂಬಂಧದ) ವ್ರತಗಳಲ್ಲಿ ನಿರತರಾದವರೇ ದೊಡ್ಡವರು. ೫೪. ನನಗೆ ಶಿವ ಪಂಚಾಕ್ಷರೀ ಮಂತ್ರವಿರಲಾಗಿ ಬೇರೆ ಅಕ್ಷರಗಳೇಕೆ ? ಶಂಭುವಿನ ಚರಣಗಳೆಂಬ ಆಶ್ರಮವು ನಿರಂತರವೂ ಇರುವಾಗ ಇನ್ನುಳಿದ ವರ್ಣಾಶ್ರಮಗಳು ಏಕೆ ? ಲಿಂಗಪೂಜೆ ಯೆಂಬ ಯಜ್ಞವು— ೫೫. ಸೊಗಸಾಗಿ ಇರುವಾಗ ಮತ್ತೆ ಬೇರೆ ಯಜ್ಞಗಳ ಪ್ರೀತಿ ಯಾವದರೂ ಏಕೆ ? ಶಿವಲಿಂಗವೆಂಬ ಯಜ್ಞೋಪವೀತವು ಪ್ರಕಾಶಮಾನವಾಗಿರಲು ಉಜ್ಜುಗಿಸುವ (ಹೊಸದು ಮಾಡಿದ?) ಯಜ್ಞೋಪವೀತದ ಇರುವಿಕೆಯಾವರೂ ಏಕೆ ? ಭಸ್ಮಲೇಪನವು (ಸರ್ವಾಂಗಕ್ಕೂ) ಏಶವವಾಗಿರಲು ಸಮುದ್ರವನ್ನು ಸೇರುವ ಹೊಳೆಯು

ಬ್ಧಿಗತ ನದೀಜಳಸ್ನಪನಮೇಕೆ ಜಟಾವಳಿ ಮಸ್ತಕಾಗ್ರದೊಳ್
ಸೆಗಳ್ದಿರೆ ಬೇಱೆ ತಳ್ತ ಶಿಖೆಯೇಕೆ ವಿಮುಕ್ತಿಗಿವಲ್ತೆ ಕಾರಣಂ ೫೫

ಗುರುಮಾರ್ಗಸ್ಥಿತಿ ಬೇಱೆ ದೀಕ್ಷೆಯ ವಿಧಾನಂ ಬೇಱೆ ನಿತ್ಯವ್ರತಾ
ಚರಣಂ ಬೇಱೆ ಕಳೇವರಾನುಗತಚಿಹ್ನಂ ಬೇಱೆ ಪೂಜಾಕ್ರಮ
ಸ್ಫುರಣಂ ಬೇಱೆ ನಿಜೇಷ್ಟಮಂತ್ರಜಪದೈವಂ ಬೇಱೆ ಕೇಳ್ವೀರಶೈ
ವರ ಸಾಮರ್ಥ್ಯಮತಂಗಳೊಳ್ ಬಳಿಕಿವರ್ಕೇಕತ್ವಮೆಂತಪ್ಪುದೋ ೫೬

ಬಹುದೈವ ಭಜನ ತತ್ಪರ
ಮಹೀಸುರಕ್ರಿಯೆ ಪಣ್ಯಾಂಗನಾಪ್ರತಿನಿಧಿ ಕೇ
ಳಹಿಕಂಕಣೈಕನಿಷ್ಠಾ
ವಹ ಶರಣಕ್ರಿಯೆಯೆ ಸಾಧ್ವಿಗೆಣೆಯೆನಿಸಿರ್ಕುಂ ೫೭

ಉಪನಯನಂಬಡೆದನೆ ಶುಕ
ನುಪಲಬ್ಧಹರಪ್ರಸಾದ ಚಂಡೇಶಂ ನಿ
ನ್ನುಪನಯನಂ ಬಡೆದವರವ
ರ್ಗುಪಮಾನರೆ ಪೇಳ್ಮಹತ್ವಸತ್ವಸ್ಥಿತಿಯೊಳ್ ೫೮

ನೀರಿನ ಸ್ನಾನವಾದರೂ ಏಕೆ ? ಜಡೆಗಳ ಪಙ್ಕ್ತಿಯು ಶಿರಸ್ಸಿನ ಮೇಲುಗಡೆಯಲ್ಲಿ ಉಂಟಾಗಿರುವಾಗ ಬೇರೆ ಬಿಡುವ ಶಿಖಿ·(ಚಂಡಿಕೆ) ಇವೆಲ್ಲ (ನಾನು ಹೇಳಿದ ಪಂಚಾಕ್ಷರೀ ಜಪ, ಲಿಂಗಪೂಜೆ, ·ಭಸ್ಮಲೇಪನಾದಿ ಯಜ್ಞಗಳೆಲ್ಲ) ಮೋಕ್ಷಕ್ಕೆ ಕಾರಣಗಳಾಗುವುದಿಲ್ಲವೇ ? (ಆಗುತ್ತವೆ ಎಂದು ಭಾವ). ೫೬. ವೀರಶೈವ ಭೂದೇವತೆಗಳಲ್ಲಿರುವ ಗುರುತತ್ತ್ವದ ಇರುವಿಕೆಯೇ ಬೇರೆ ; ಶಿವದೀಕ್ಷೆಯ ವಿಧಾನವೇ ಬೇರೆ ; ಅವರ ವೈಯಕ್ತಿಕ (ಸ್ವಕೀಯ) ಪಂಚಾಕ್ಷರೀಮಂತ್ರ ಜಪಕ್ಕೆ ಅಧಿದೇವತೆಯೇ ಬೇರೆ–ಹೀಗಿರುವಾಗ ಇನ್ನು (ವೀರಶೈವ ಬ್ರಾಹ್ಮಣ್ಯಕ್ಕೂ ಇತರ ಬ್ರಾಹ್ಮಣ್ಯಕ್ಕೂ) ಏಕತ್ವಭಾವವು ಹೇಗಾದೀತು ? ೫೭. ಅನೇಕ ದೈವಗಳ ಭಜನೆಯಲ್ಲಿ ಆಸಕ್ತರಾದ ಬ್ರಾಹ್ಮಣರ ಕ್ರಿಯೆಯು ಪಣ್ಯಾಂಗನಾ ಸದೃಶವಾದುದು ; (ತಂದೆಯೇ) ಕೇಳು : ಪರಶಿವನೊಬ್ಬನಲ್ಲಿಯೇ ನಂಬಿಕೆಯನ್ನು ಹೊಂದಿರುವ ಶಿವಶರಣರ ಕ್ರಿಯೆಯು ಪತಿವ್ರತಾ ಸ್ತ್ರೀಗೆ ಸಮಾನವಾದುದು ಎನಿಸಿದೆ. ೫೮. ಶುಕಮಹರ್ಷಿಯು ಉಪನಯನವನ್ನು ಹೊಂದಿದನೇ ? ಪರಮೇಶ್ವರನ ಅನುಗ್ರಹ ಪ್ರಸಾರ ಪಡೆದ ಚಂಡೇಶನು ಉಪನಯನ ಹೊಂದಿದ್ದನೇ ? ಆ ಶುಕ ಮತ್ತು ಚಂಡೇಶರುಗಳ ಮಹಿಮೆ ಮತ್ತು ಸತ್ವಸ್ಥಿತಿಗೆ

ನೀಂ ಬುದ್ಧಿವಂತನಾದೊಡೆ
ಪಂಬಲಿಸದೆ ಪಲವನಂಬಿಕಾರಮಣನ ಪಾ
ದಾಂಬುಜಮಂ ಸಲೆ ಭಜಿಸುತೆ
ನಂಬಿರೆ ನಿನ್ನಿಷ್ಟಸಿದ್ಧಿಯಪ್ಪುದಮೋಘಂ ೫೯

ನೆರೆದ ಬಹುಕೋಟಿ ಜನ್ಮಾಂ
ತರಾರ್ಜಿತಂ ಸುಕೃತರಾಶಿ ಫಲಿಸುವ ಪದದೊ
ಳ್ದೊರೆಕೊಳ್ವುದಲ್ತೆ ಘನ ಶಾಂ
ಕರಭಕ್ತಿ ಸಮೀಹಿತಾರ್ಥ ಚಿಂತಾರತ್ನಂ ೬೦

ಭವಮರಣಮಳಿಯದಮರರ
ಭವನಂತಿರೆ ಭವವಿಮುಕ್ತಿಗೊಡಲಾರ್ಪರೆ ಮಾ
ರವಕೂಪಜಲಂಗಳ್ಜಾ
ಹ್ನವಿಯಂಬುವಿನಂತೆ ತೃಷೆಯನೇಂ ಕಳೆದಪ್ಪುವೇ ೬೧

ಎನಗೆ ಪಿತಂ ಮಹೇಶನಗಜಾತೆಯೆ ಮಾತೆ ಶಿವೈಕ್ಯಭಕ್ತಿಸಂ
ಜನಿತ ಮಹಾಸುಖಾನುಭವರೆನ್ನಯ ಬಾಂಧವರಿಂದುಮೌಲಿಲಾಂ
ಛನಧರರೆನ್ನನಾಳ್ವೆಸಕೆ ನೇಮಿಸುವಾಣ್ಮರುಮೇಶ್ವರಾಂಘ್ರಿಸೇ
ವನಮುಸಮಾನ ಭಾಗ್ಯಮಮರ್ದೀಶ್ವರಭಕ್ತಿಯೆ ಮುಕ್ತಿಸಂಪದಂ ೬೨

ಸದೃಶರಾರು ? ೫೯. ನೀನು ಬುದ್ಧಿವಂತನಾದರೆ, ಅನೇಕವನ್ನು ಹಂಬಲಿಸದೆ, ಪರಮೇಶ್ವರನ ಚರಣ ಕಮಲವನ್ನು ಚೆನ್ನಾಗಿ ಭಜಿಸುತ್ತ ನಂಬಿ ಇದ್ದರೆ, ನಿನ್ನ ಇಷ್ಟಾರ್ಥಸಿದ್ಧಿಯು ಅಮೋಘವಾಗಿ ಆಗುವುದು. (ವ್ಯರ್ಥವಾಗದ ಹಾಗೆ ಆಗುವುದು). ೬೦. (ಹಿಂದೆ) ಪ್ರಾಪ್ತವಾಗಿದ್ದ ಅನೇಕ ಕೋಟಿ ಜನ್ಮಗಳಿಂದ ಕೂಡುಹಾಕಲ್ಪಟ್ಟ, ಪುಣ್ಯ ಸಮೂಹವು ಫಲಕ್ಕೆ ಬಂದಾಗ, ಶ್ರೇಷ್ಠವಾದ ಶಂಕರನ ಸಂಬಂಧದ ಇಷ್ಟಾರ್ಥ ಗಳನ್ನುಂಟುಮಾಡುವ ಚಿಂತಾರತ್ನವೆಂಬ ಮಣಿಯು ಲಭ್ಯವಾಗುವುದಲ್ಲವೆ ? [ಈಶ್ವರ ಭಕ್ತಿಯು ಅನೇಕ ಜನ್ಮಗಳ ಸುಕೃತದ ಫಲವೆಂಬ ಭಾವ] ೬೧. ಹುಟ್ಟುಸಾವುಗಳ ಕಟ್ಟಿಗೊಳಗಾಗಿರುವ ದೇವತೆಗಳು ಭವರಹಿತನಾದ ಶಿವನ ಹಾಗೆ ಈ ಸಂಸಾರದಿಂದ ಮುಕ್ತಿಯನ್ನು ಕೊಡುವುದಕ್ಕೆ ಸಮರ್ಥರಾಗುವರೇ ? ಚೌಳುಮಣ್ಣಿನ ಪ್ರದೇಶದಲ್ಲಿರುವ ಬಾವಿಯ ನೀರು ಗಂಗಾನದಿಯ ನೀರಿನಂತೆ ನೀರಡಿಕೆಯನ್ನು ಕಳೆಯುವುದೇನು ? ೬೨. ನನಗೆ ಪರಮೇಶ್ವರನೇ ತಂದೆ : ಪಾರ್ವತಿಯೇ ತಾಯಿ ; ಶಿವನಲ್ಲಿ ಐಕ್ಯಗೊಂಡ ಭಕ್ತಿಯಿಂದುತ್ಪನ್ನವಾದ ಮಹಾ ಸೌಖ್ಯಾನುಭವಿಗಳಾದವರೆಲ್ಲ ನನ್ನ ಬಂಧುಗಳು ; ಶಿವಲಾಂಛನ ಧಾರಿಗಳಾದವರು ನನ್ನನ್ನು ಸೇವಕ ಕಾರ್ಯಕ್ಕೆ ನೇಮಿಸಿಕೊಳ್ಳುವ ಒಡೆಯರು ; ಉಮಾಪತಿಯಾದ ಈಶ್ವರನ ಚರಣಗಳ ಭಜನೆಯೇ (ನನಗೆ) ಅನುಪ ಮೈಶ್ವರ್ಯ ; ಈಶ್ವರ ಭಕ್ತಿಯ ಪ್ರಾಪ್ತಿಯೇ ಮೋಕ್ಷ ಸಂಪತ್ತು. (ಆಗಿದೆ)

ವ॥ ಎಂದುಳ್ಳುದನುಪಚಾರಮಿಲ್ಲದುಸಿರ್ದ ಬಸವರಾಜನ ಭಕ್ತಿಭಾವಕ್ಕೆ ವಿಸ್ಮಯಂ ಬಟ್ಟು ತನ್ಮುಖಸುಧಾಕರನಿಂದೊಗೆತಂದ ಸೂಕ್ತಿಚಂದ್ರಿಕೆಯಿನಜ್ಞಾನತಮಂ ಪರೆಯೆ ಮನಃಕುಮುದಮಲರೆ ಸುಜ್ಞಾನಪರಿಮಳಂ ಪಸರಿಸೆ ಸಮಾನಧರ್ಮಿಣಿಯೆನಿಪ ವಿವೇಕನಿಧಿಯಾದ ಮಾದಾಂಬಿಕೆಗೆ ಮುದಮೊದರ್ಚಲಿಂತೆಂದಂ—

ತರುಣಿ ಹಿತೋಪದೇಶಮಿದು ಪುತ್ರನಿವಂ ಶಿವನಂಶಮೀತನೆ
ಮ್ಮುರುತರ ಭಾಗ್ಯದಿಂ ಕುವರನೆಂದೆನಿಸಿರ್ದನಿನಿತ್ತೆ ಸಾಲ್ಗುಮೀ
ಧರಣಿ ಪುನೀತಮಾದುದಿವನುದ್ಭವಮಾತ್ರದೆ ಧನ್ಯರಾದೆವಾ
ಮಿರದೆ ಮದೀಯ ವಂಶಮಲರ್ದತ್ತು ಪಿತೃವ್ರಜಕಾದುದುತ್ಸವಂ ೬೩

ವ॥ ಎಂದು ಕೃತಾರ್ಥಭಾವಮನಪ್ಪುಕೈದಾತ್ಮನಿರೋಧದೊಳಶಕ್ತರಾದಾ ಮಾದಾಂಬಿಕಾಮಾದಿರಾಜರಂ ಸಮುಚಿತೋಕ್ತಿಯಿಂ ಸಂತಮಿರಿಸಿ ಬೀಳ್ಕೊಂಡು ನಿಜಸಹೋದರಿಯಪ್ಪ ದಿವ್ಯಜ್ಞಾನಿನಾಗಲಾಂಬೆಯನೊಡಗೊಂಡು ದುಷ್ಕರ್ಮಕಾನನದಾವಾನಲಂ ಕರುಣಾರಸಸಮುದ್ರಂ ಶಿವಭಕ್ತಿ

ವ॥ ಹೀಗೆಂದು (ತನ್ನ) ಮನಸ್ಸಿನ ಅಭಿಪ್ರಾಯವನ್ನೆಲ್ಲ (ಯಾವ) ಉಪಚಾರೋಕ್ತಿಯಿಲ್ಲದೆ ಹೇಳಿದ ಬಸವರಾಜನ (ಈಶ್ವರ) ಭಕ್ತಿಭಾವಕ್ಕೆ ಆಶ್ಚರ್ಯಗೊಂಡ (ತಂದೆಯಾದ ಮಾದರಸನು) ಆ ಬಸವನ ಮುಖವೆಂಬ ಚಂದ್ರನಿಂದ ಪ್ರಸರಿಸಿದ ಸಮಾಚೀನವಾದ ಮಾತುಗಳೆಂಬ ಬೆಳದಿಂಗಳಿಂದ (ಆತನ) ಅಜ್ಞಾನವೆಂಬ ಕತ್ತಲೆಯು ನಾಶವಾಯಿತು. ಮನಸ್ಸೆಂಬ ಕನ್ನೈದಿಲೆಯು ಅರಳಿತು. ಸುಜ್ಞಾನವೆಂಬ ಸುಗಂಧವು (ಸುತ್ತಲೂ) ಪ್ರಸರಿಸಿತು. (ಆಗ) ತನ್ನ ಸಹಧರ್ಮಿಣಿಯೂ, ವಿವೇಕ ನಿಧಿಯೂ ಆದ ಮಾದಲಾಂಬಿಕೆಗೆ ಸಂತೋಷವನ್ನುಂಟುಮಾಡುವುದಕ್ಕೋಸುಗ ಹೀಗೆ ಹೇಳಿದನು : ೬೩. ಎಲೈ ಪತ್ನಿಯೇ, (ಕುಮಾರನಾದ ಬಸವಣ್ಣನಿಂದ ಹೇಳಲ್ಪಟ್ಟ) ಈ ವಚನವು ಹಿತವಾದ ಬೋಧೆಯಾಗಿದೆ. ಈ ಮಗನು ಶಿವಾಂಶಸಂಭೂತನಾಗಿದ್ದಾನೆ. ಇವನು ನಮ್ಮ ಅತ್ಯಧಿಕ ಪುಣ್ಯವಿಶೇಷದಿಂದ ಮಗನೆಂದು ಹೇಳಿಸಿಕೊಳ್ಳುವವನಾಗಿದ್ದಾನೆ. ನಮಗೆ ಇಷ್ಟೇ ಸಾಕು. ಇವನ ಹುಟ್ಟುವಿಕೆ ಮಾತ್ರದಿಂದ ಭೂಭಾಗವು ಪುನೀತವಾದುದಾಗಿದೆ. ನಾವು ನಿಜವಾಗಿ ಕೃತಾರ್ಥರಾದೆವು. ನಮ್ಮ ಸಂತತಿಯು ಅರಳಿತು. ಪಿತೃಗಳಿಗೆ ಸಂತೋಷವಾಯಿತು. ವ॥ ಹೀಗೆಂದು ಧನ್ಯತೆಯನ್ನು ಹೊಂದಿ, ತನ್ನನ್ನು ತಡೆಯುವುದರಲ್ಲಿ ಅಶಕ್ತರಾದ ಮಾದಾಂಬಿಕೆ ಮಾದಿರಾಜರುಗಳನ್ನು. ದುಷ್ಟಕರ್ಮಗಳೆಂಬ ಅರಣ್ಯಕ್ಕೆ ದಾವಾನಳ ಸ್ವರೂಪನೂ, ದಯಾರಸಕ್ಕೆ ಸಮುದ್ರದೋಪಾದಿಯಲ್ಲಿರುವವನೂ, ಶಿವಭಕ್ತಿಯೆಂಬ ಸಾಮ್ರಾಜ್ಯದ ಕಾರ್ಯಭಾರ ನಿರ್ವಾಹಕನೂ, ಆದ ಬಸವರಾಜನು ಸಮಯೋಚಿತವಾದ ಮಾತುಗಳಿಂದ ಸಮಾಧಾನಗೊಳಿಸಿ, ಅವರಿಂದ ಬೀಳ್ಕೊಂಡು, ತನ್ನ ಸಹೋದರಿಯಾದ ದಿವ್ಯಜ್ಞಾನದಿಂದಕೂಡಿದ ನಾಗಲಾಂಬಿಕೆಯನ್ನು ಸಂಗಡ ಕರೆದುಕೊಂಡು ಬಾಗವಾಡಿ ಪಟ್ಟಣದ ರಾಜಬೀದಿಯಲ್ಲಿ ಬರುತ್ತ. ಅಲ್ಲಿದ್ದ

ಸಾಮ್ರಾಜ್ಯಧುರಂಧರಂ ಬಸವರಾಜಂ ಬಾಗವಾಡಿಯ ರಾಜವೀಥಿಯೊಳ್ ಬರುತ್ತಮಲ್ಲಿ ಶಿವಭಕ್ತ ಪ್ರತಿಹಾರಕನೊರ್ವನ ವೃಷಭಧ್ವಜಾಲಂಕೃತಮಪ್ಪ ಗೃಹದ್ವಾರಮಂ ಕಂಡಿದು ಭಕ್ತಮಂದಿರ ಮಕ್ಕುಮೆಂದೊಳಗಣ್ಗೈತಂದವಂ ಮಾಳ್ಪ ಜಂಗಮಾರ್ಚನೆಗೆ ಸಾತ್ವಿಕಂ ನಿಮಿರೆ ಸಂತಸಂಬಟ್ಟು ಪರಸ್ಪರ ಪ್ರಣಯ ಪ್ರಣಾಮಾನಂತರಮಲ್ಲಿ ನೆರೆದ ಶರಣಗಣದೊಡನವಂ ಮಾಳ್ಪ ಸತ್ಕಾರಮಂ ಕೈಕೊಳುತ್ತುಂ ಶಿವಾನುಭವಗೋಷ್ಠಿಯೊಳ್ ಸುಖಮಿರುತ್ತುಂ ನಿಜಗುರುನಾಥನಪ್ಪ ಸಂಗಮೇಶ್ವರನಂ ನೆನೆದು ತದ್ದರ್ಶನಂಗೆಯ್ಯಲೆಳಸಿ ನಿಜಸಹೋದರಿವೆರಸಿ ಸರ್ವಸಂಭ್ರಮಂ ಮಿಗೆ ಕಪ್ಪಡಿಗೇಳ್ತ ರಲುದ್ಯುಕ್ತನಾಗಿ—

ದೆಸೆಯಂ ದೃಕ್ಪ್ರಸರತ್ಪ್ರಭಾಪ್ರಸರದಿಂ ಪಾದಾಬ್ಜವಿನ್ಯಾಸದಿಂ
ರಸೆಯಂ ಮಾರುತನಂ ಕಲೇವರದ ಸೋಂಕಿಂ ಪಾವನಂಗೈವುತಂ
ಜಸಮಂ ಬೀಱುತೆ ಜಂಗಮಾಳಿಯೊಡನತ್ಯಾನಂದದಿಂದೈದೆ ಸಂ
ತಸದಿಂದೇಳ್ತರುತಿರ್ದನಲ್ಲಿ ಬಸವಂ ತದ್ದರ್ಶನೋತ್ಕಂಠೆಯಿಂ ೬೪

ವ॥ ಅಂತೇಳ್ತರುತ್ತಮಿರೆಯಿರೆ ಸಂಗಮೇಶ್ವರಗೃಹಬಹಿರ್ದ್ವಾರಸಮುನ್ನತ ಕನತ್ಕನಕ ಕಲಶ ಕಲಿತಗೋಪುರಂ ಗೋಚರಿಸೆ ಜಯ ಜಯ ಪ್ರಣಾಮಂಗೈದು ಕರಾಂಬುಜಮನಡಿನಡಿಗೆ ಮುಗಿವುತ್ತುಂ

ಒಬ್ಬ ಶಿವಭಕ್ತನಾದ ದ್ವಾರಪಾಲಕನಿಂದ ಕೂಡಿದ, ವೃಷಭ ಧ್ವಜದಿಂದ ಅಲಂಕರಿಸಲ್ಪಟ್ಟ ಮನೆಯಬಾಗಿಲನ್ನು ಕಂಡು, ಇದು ಶಿವಭಕ್ತರ ಮನೆಯೇ ಆದೀತು ! ಎಂದು ಮನೆಯೊಳಗೆಹೊಕ್ಕು ಆ ಭಕ್ತನು ಮಾಡಿದ ಜಂಗಮ ಪೂಜೆಗೆ ರೋಮಾಂಚಾದಿ ಸಾತ್ವಿಕಭಾವಗಳು (ಬಸವಣ್ಣನಿಗೆ) ಉಂಟಾಗುತ್ತಿರಲು, ಸಂತೋಷಗೊಂಡವನಾಗಿ, ಒಬ್ಬರಿಗೊಬ್ಬರು ವಿಶ್ವಾಸದಿಂದ ನಮಸ್ಕಾರಮಾಡಿದನಂತರ ಅಲ್ಲಿ ನೆರೆದ ಶರಣ ಸಮೂಹದೊಡನೆ ಆ ಭಕ್ತನು ಮಾಡುವ ಸೇವಾಕೈಂಕರ್ಯವನ್ನು ಕೈಕೊಂಡು, ಶಿವಾನುಭಾವ ಸಂಬಂಧದ ಗೋಷ್ಠಿಯಲ್ಲಿ ಸುಖವಾಗಿ ಇರುವವನಾಗಿ, ತನ್ನ ಶ್ರೇಷ್ಠ ಗುರುವಾದ ಸಂಗಮೇಶ್ವರನನ್ನು ಧ್ಯಾನಮಾಡುತ್ತ ಅವನ ದರ್ಶನವನ್ನು ಪಡೆಯುವುದ ಕ್ಕೋಸ್ಕರ ಅಪೇಕ್ಷೆಪಟ್ಟು, ತನ್ನ ಸಹೋದರಿಯೊಡನೆ ಕೂಡಿ ಸಮಗ್ರಸಂಭ್ರಮದಿಂದ ಕಪ್ಪಡಿ ಸಂಗಮಕ್ಕೆ ಹೊರಟುಬರಲು ಉದ್ಯುಕ್ತನಾದವನಾಗಿ – ೬೪. ಬಸವಣ್ಣನು ಸಂತೋಷದಿಂದ ಕೂಡಿದ ನೇತ್ರಗಳಿಂದ ಪ್ರಸಾರಗೊಳ್ಳುತ್ತಿರುವ ಕಾಂತಿಯ ಸಮೂಹ ದಿಂದ ದಿಕ್ಕುಗಳನ್ನು ಪವಿತ್ರಗೊಳಿಸುತ್ತ, ಚರಣಕಮಲಗಳನ್ನಿಡುವುದರ ಮೂಲಕ ಭೂಮಿಯನ್ನು ಪಾವನಗೊಳಿಸುವವನಾಗಿ, ಶರೀರಸ್ಪರ್ಶದಿಂದ ವಾಯುವನ್ನು ಪಾವನ ಗೊಳಿಸುವವನಾಗಿ, ಜಂಗಮ ಸಮೂಹವು (ಇವನ) ಕೀರ್ತಿಯನ್ನು ಬೀರುತ್ತ ಒಡನೊಡನೆಯೇ ಬರುತ್ತಿರಲು, ಆ ಸಂಗಮೇಶ್ವರನ ದರ್ಶನದಲ್ಲಿ ಕುತೂಹಲ ವುಳ್ಳವನಾಗಿ ಬರುತ್ತಿದ್ದನು. ವ॥ ಈ ರೀತಿಯಲ್ಲಿ ಹೊರಟು ಬರುತ್ತಿರುವಾಗ (ದೂರದಲ್ಲಿ) ಸಂಗಮೇಶ್ವರ ದೇವಸ್ಥಾನದ ಎತ್ತರವಾದುದೂ, ಹೊಳೆಯುತ್ತಿರು

ಸಾತ್ವಿಕಭಕ್ತಿಸಂಪತ್ತಿವೆತ್ತು ಸಡಗರಿಸಿ ತದ್ಧ್ಯಾನಪರಾಯಣಂ ತತ್‌ಕ್ಷೇತ್ರಮಂ ಪುಗುತರ್ಪಾಗಳಾಪುರದ ಭಕ್ತಜನಂ ಗುಡಿಗಟ್ಟಿ ಪರಮ ಸಂಭ್ರಮದಿನಿದಿರ್ಗೊಳುತ್ತಮಿರೆ ಶಿವಗಣಸಮೇತಂ ಸಮುದಿತಾನಂದದಿಂ ಬಂದು ತನ್ಮಂದಿರ ಬಂಧುರ ದ್ವಿತೀಯದ್ವಾರದೇಶದೊಳ್ನಿಂದು ನಿರೀಕ್ಷಿಪಾಗಳ್—

ಮಿಳಿರ್ವ ವೃಷಧ್ವಜಂ ಕನಕಗೋಪುರಮಿಂದುಶಿಲಾವಿಶಾಲಮಂ
ಜುಳರುಚಿಸಾಲಮುನ್ಮಣಿ ಕನತ್ಕಳಶಂ ನವನೀಲಕುಟ್ಟಿಮಂ
ತೊಳಗುವ ರತ್ನದೀಪಮುರುಧೂಪಮುದಂಚಿತ ಪುಷ್ಪಮಾಲೆ ಮಂ
ಗಳಕರ ತೂರ್ಯನಾದಮುಮದೊಪ್ಪಿರೆ ತೋಱಿದುದಾ ಶಿವಾಲಯಂ ೬೫

ವ॥ ಅದನಭೀಕ್ಷಿಸುತ್ತಮಾ ವೃಷಭರಾಜಂ ಮುಂದಣ್ಗೆ ಬರೆವರೆ ಪನ್ನಗಧರನೆನ್ನಣುಗ ಬಂದನೆಂದುನ್ನತೋತ್ಸವಂ ನಿಮಿರೆ—

ತೊಳಗುತ್ತಿರ್ಪ ಲಸತ್ಪ್ರಸನ್ನವದನಂ ಭಸ್ಮತ್ರಿಪುಂಡ್ರಂ ಸಮು
ಜ್ವಳರುದ್ರಾಕ್ಷವಿಭೂಷಣಂ ಭಸಿತ ಲಿಪ್ತಾಂಗಂ ಜಟಾಮಂಡಲಂ

ವಂತಹುದೂ ಆದ ಸುವರ್ಣಕಲಶಗಳಿಂದ ಕೂಡಿದ ಮಹಾದ್ವಾರದ ಗೋಪುರವು ಕಾಣಲು ಬಸವೇಶ್ವರನು ಜಯ ಜಯ ಎಂಬ ಶಬ್ದವನ್ನು ಮಾಡುತ್ತ, ಕರಕಮಲಗಳನ್ನು ಹೆಜ್ಜೆಹೆಜ್ಜೆಗೂ ಮುಗಿಯುತ್ತ, ರೋಮಾಂಚಾದಿಗಳಿಂದ ಸೂಚಿತವಾಗುತ್ತಿರುವ ಸಾತ್ವಿಕ ಭಕ್ತಿ ಭಾವದ ಆಧಿಕ್ಯದಿಂದ ಸಂಭ್ರಮಗೊಂಡವನಾಗಿ, ಆ ಸಂಗಮೇಶ್ವರ ಧ್ಯಾನ ಪಾರಾಯಣನಾಗಿ, ಆ ದೇವಸ್ಥಾನದ ಪ್ರಥಮ ಮಹಾದ್ವಾರದ ಪುಣ್ಯಸ್ಥಲ ಪ್ರವೇಶ ಮಾಡಿದನು. (ಹೀಗೆ ಪ್ರವೇಶಿಸುವ ಕಾಲದಲ್ಲಿ) ಆ ಪಟ್ಟಣದ ಭಕ್ತಜನಗಳು ಗುಂಪುಗೂಡಿ ಸಂಭ್ರಮದಿಂದ ಇದಿರ್ಗೊಂಡರು. ಹೀಗೆ ಶಿವಗಣ ಸಮೇತನಾಗಿ ಸಮುದಿತವಾದ ಆನಂದದಿಂದ ಬಂದು ಆ ದೇವಾಲಯದ ಎರಡನೆಯ ಬಾಗಿಲಲ್ಲಿ ನಿಂತುಕೊಂಡು ನೋಡುತ್ತಿದ್ದ ಕಾಲದಲ್ಲಿ—೬೫. ಅಲ್ಲಾಡುತ್ತಿರುವ (ಹಾರಾಡುತ್ತಿರುವ) ವೃಷಭಧ್ವಜ, ಚಿನ್ನದ ಗೋಪುರ, ಚಂದ್ರಕಾಂತಶಿಲೆಯಿಂದ ಮಾಡಿದ ವಿಶಾಲವೂ ಮನೋಹರವೂ ಆದ ಕಾಂತಿಯಿಂದ ಕೂಡಿದ ಪ್ರಾಕಾರ, ಉತ್ಕೃಷ್ಟವಾದ ರತ್ನವಿಶೇಷಗಳಿಂದ ಕೆತ್ತಲ್ಪಟ್ಟ ಹೊಳೆಯುತ್ತಿರುವ ಕಳಶ, ನೂತನ ಇಂದ್ರನೀಲಮಣಿಯ ಹಾಸುಗೆಯ ನೆಲ, ಪ್ರಕಾಶಿಸುವ ರತ್ನದೀಪ, ಉತ್ಕೃಷ್ಟವಾದ ಧೂಪದ ವಾಸನೆ, ಶ್ರೇಷ್ಠವಾದ ಪುಷ್ಪಮಾಲಿಕೆ, ಮಂಗಳಕರವಾದ ವಾಧ್ಯಧ್ವನಿ—ಇವೆಲ್ಲ ಸೇರಿ ಪ್ರಕಾಶಿಸುತ್ತಿರುವ ಆ ಶಿವಾಲಯವು ಕಣ್ಣಿಗೆ ಕಂಡಿತು. ವ॥ ಆ ವೃಷಭರಾಜನು ಇದೆಲ್ಲವನ್ನೂ ನೋಡುತ್ತ ಮುಂದಕ್ಕೆ ಬರುತ್ತಿರಲಾಗಿ. 'ನನ್ನ ಮಗನು ಬಂದನು' ಎಂದು ಪರಮೇಶ್ವರನಿಗೆ ಅಧಿಕೋತ್ಸಾಹವುಂಟಾಗಲು—೬೬. ಹೊಳೆಯುತ್ತಿರುವ ಪ್ರಸನ್ನವಾದ ಪವಿತ್ರ ಮುಖಮುದ್ರೆ, ಭಸ್ಮತ್ರಿಪುಂಡ್ರ, ರುದ್ರಾಕ್ಷಿಗಳ ಆಭರಣ, ಭಸ್ಮದಿಂದ ಉದ್ಧೂಳಿತವಾದ ಶರೀರ, ಜಡೆಗಳ ಸಮೂಹ,

ಗಳರಾಜದ್ಘನಲಿಂಗಸಜ್ಜಿಕೆ ವಿಳ[1]ತ್ಕಾಶಾಂಬರಂ ಕಣ್ಗೆ[1] ಮಂ
ಜುಳವಾಗೊಪ್ಪಿರೆ ಮುನ್ನಿನಂತೆ ಗುರುರೂಪಂ ತಾಳ್ದು ಮೆಯ್ದೋಱಿದಂ ೬೬

ವ॥ ಆ ತಾಪಸವೇಷದೀಶನಂ ಕಟ್ಟಿದಿರೊಳ್ಕಂಡು—

ಕರಣಂಗಳ್ಕಳೆಯೇಱಿ ಕೌತುಕರಸಂ ಪೆಂಪೇಱಿ ರೋಮಾಂಚನಂ
ಕರಕಂಪಂ ಸುಖಬಾಷ್ಪಮುಣ್ಮೆ ಮಣಿದಾನಂದಾಬ್ಧಿ ಮೆಯ್ವೆರ್ಚೆ ಶಂ
ಕರ ಸರ್ವೇಶ್ವರ ಸಂಗಮೇಶ್ವರ ಮದೀಯಾತ್ಮೇಶ ನಿನ್ನಂಘ್ರಿಪಂ
ಕರುಹಂಗಂಡು ಕೃತಾರ್ಥನಾದೆನೆನುತಂ ಕೊಂಡಾಡಿದಂ ಭಕ್ತಿಯಿಂ ೬೭

ವ॥ ಅಂತು ಕೂರ್ಮೆವೆರಸಿ ಕೊಂಡಾಡುವ ಬಸವರಾಜನನಸಮನಯನಂ ಕೃಪಾರಸ ತರಂಗಿತ ಕಟಾಕ್ಷದಿನವಲೋಕನಂಗೆಯ್ದು ತೆಗೆದು ಬಿಗಿಯಪ್ಪಿ ಚೋಳೈಸಿ ಭಸಿತಮಂ ಧರಿಸಿ ಪರಸುತೇಕಾಂತಮನಿತ್ತು ಕೆಲದೊಳ್ಕುಳ್ಳಿರಿಸಿಕೊಂಡು—

ಮಗನೆ ಮನೋರಥಂ ನಿನಗದಾವುದು ಪೇಳೆನೆ ಬೇಱೆ ಬೇಳ್ಪುದೇಂ
ಜಗದಧಿನಾಥ ನಿನ್ನ ಪದಭಕ್ತಿಯೆ ಮನ್ಮನದಿಷ್ಟವಂತದಂ

ಕಂಠದಲ್ಲಿ ಪ್ರಕಾಶಿಸುತ್ತಿರುವ ಶ್ರೇಷ್ಠವಾದ ಲಿಂಗದ ಕರಡಿಗೆ (ಕರಂಡಕ), ಹೊಂದಿಕೆಯಾದ (ಒಪ್ಪುವ), ಕಾವಿಯಬಟ್ಟೆ—ಇವು ಅತ್ಯಂತ ಮನೋಹರವಾಗಿ ಒಪ್ಪಿರಲು ಜನನಕಾಲದಲ್ಲಿ ಬಂದಿದ್ದ ಹಾಗೆಯೇ ಗುರುರೂಪವನ್ನು ಧರಿಸಿ (ಪರಮೇಶ್ವರನು) ಪ್ರತ್ಯಕ್ಷನಾದನು. ವ॥ (ಆಗ ಬಸವರಸನು) ಆ ತಾಪಸವೇಷದ ಈಶ್ವರನನ್ನು ನೇರವಾಗಿ ಮುಂಭಾಗದಲ್ಲಿಯೇ ಕಂಡು,—೬೭. ಇಂದ್ರಿಯಗಳೆಲ್ಲ ಕಳೆಯೇರಿದುವು. ಪ್ರೀತಿರಸವು ಅಧಿಕಗೊಂಡಿತು. ರೋಮಾಂಚನ, ಕೈಯನಡುಗುವಿಕೆಯುಂಟಾಯಿತು. (ಕೂಡಲೇ) ನಮಸ್ಕರಿಸಿದನು. ಸಂತೋಷಾಬ್ಧಿಯು ಅಧಿಕವಾಯಿತು. 'ಶಂಕರನೇ, ಸಕಲಕ್ಕೂ ಸ್ವಾಮಿಯೇ, ಸಂಗಮೇಶ್ವರ, ನನ್ನ ಪ್ರಾಣೇಶ್ವರ, ನಿನ್ನ ಚರಣಕಮಲದ ಕುರುಹನ್ನು ಕಂಡು ಕೃತಾರ್ಥನಾದೆ'ನೆಂದು ಭಕ್ತಿಯಿಂದ ಕೊಂಡಾಡಿದನು. ವ॥ ಹೀಗೆ ಪ್ರೀತಿಯಿಂದ ಕೂಡಿದವನಾಗಿ ಹೊಗಳುತ್ತಿರುವ ಬಸವರಾಜನನ್ನು ಅಸಮಾಕ್ಷನಾದ ಪರಮೇಶ್ವರನು ಕರುಣಾರಸದ ತೆರೆಗಳಿಂದ ಕೂಡಿದ ಕಡೆಗಣ್ಣುಗಳ ಕಾಂತಿಯಿಂದ ಅವಲೋಕನ ಮಾಡಿದವನಾಗಿ, ಬರಸೆಳೆದು ಬಿಗಿಯಾಗಿ ಅಪ್ಪಿಕೊಂಡು, ತಲೆಯನ್ನು ಸವರಿ ಭಸ್ಮವನ್ನು ಧರಿಸಿ, ಆಶೀರ್ವದಿಸುತ್ತ ರಹಸ್ಯಸ್ಥಳಕ್ಕೆ ಕರೆದುಕೊಂಡು ಹೋಗಿ, ಪಕ್ಕದಲ್ಲಿ ಕುಳ್ಳಿರಿಸಿಕೊಂಡು—೬೮. ಮಗನೇ, ನಿನ್ನ ಮನೋರಥವಾವುದು ? ಹೇಳು ಎನ್ನಲು—'ಜಗದಧಿಪತಿಯಾದ ಶಿವನೇ, ಬೇರೆ ಹೇಳುವುದೇನಿದೆ ? ನಿನ್ನ ಪಾದಭಕ್ತಿಯೇ ನನ್ನ ಮನೋಭಿಲಾಷೆ. ಆ ರೀತಿ ಭಕ್ತಿಯನ್ನು ಮಾಡುವ ರೀತಿ ಯಾವುದು ? ಸತ್ಕೃಪೆಯಿಂದ ತಿಳಿಸಿ

1 ತ್ಕಾಷಾಯ ಚೇಲಂ ಸು (ಮ)

ನೆಗಳ್ವಿರವೆಂತು ಬೋಧಿಪುದು ಸತ್ಕೃಪೆಯಿಂದೆನೆ ಮೆಚ್ಚಿ ಜೊನ್ನಮಂ
ಮೊಗಸಸಿ ತುಳ್ಕಿದಂತಿರೆ ರದದ್ಯುತಿ ಕೂರ್ತೊರೆದಂ ಮಹೇಶ್ವರಂ ೬೮

ಎಲೆ ಬಸವ ಹಗಿಮುಖಾಮರ
ಕುಲಕ್ಕಲಭ್ಯಂ ಮದೀಯಪದಭಕ್ತಿ ಸಮು
ಜ್ವಲಸಕಲ ಫಲಪದಂಗಳ
ನೆಲೆವನೆ ಪರಮುಕ್ತಿಹರ್ಮ್ಯಕಿದು ಸೋಪಾನಂ ೬೯

ಶ್ರವಣ ಸ್ತವನ ಸ್ಮರಣಾಂ
ಘ್ರಿವನಜಸೇವಾಭಿನಮನ ಪೂಜಾ ಸುಖಭಾ
ವ ವಿದಿತದಾಸ್ಯಾತ್ಮಾರ್ಪಣ
ನವವಿಧಮಿದು ಭಕ್ತಿಲಕ್ಷಣಂ ಬಸವೇಶಾ ೭೦

ಆವೆಡೆಯೊಳಾವ ವಸ್ತುವೊ
ಳಾವಗ ಮೆಡೆವಿಡದೆ[1]ನಿರ[1]ಧಿಕಪ್ರೇಮಮದುಂ
ಟಾ ವಿಪುಳ ಪ್ರೇಮರಸಂ
ತೀವಿ ಮದಂಘ್ರಿಯೊಳೆ ನಿಲೆ ಸುಭಕ್ತಿಯೆನಿಕ್ಕುಂ ೭೧

ಶರನಿಧಿ ಜಾನುದಘ್ನಮುರಿವಗ್ನಿ ಹಿಮಂ ಘನ ಮೃತ್ಯು ತೊಳ್ತು ಭೀ
ಕರತರಮೋಘವಹ್ನಿ ಕುಸುಮಂ ಗರಳಂ ಸುಧೆ ಕರ್ಮಪಾಶಮಂ

ಕೊಡು' ಎನ್ನಲು ಪರಮೇಶ್ವರನು ಮೆಚ್ಚಿ ಶ್ಲಾಘನೆ ಮಾಡಿ, ಮುಖವೆಂಬ ಚಂದ್ರನು ಬೆಳದಿಂಗಳನ್ನು ಚಲ್ಲಿದನೋ ಎಂಬಂತೆ ಹಲ್ಲುಗಳ ಕಾಂತಿಯು ಇರಲಾಗಿ ಪ್ರೀತಿಯಿಂದ (ಹೀಗೆ) ಹೇಳಿದನು : ೬೯. ಎಲೆ ಬಸವೇಶ್ವರ, ನನ್ನ ಚರಣಭಕ್ತಿಯು ವಿಷ್ಣುವೇ ಮೊದಲಾದ ದೇವತೆಗಳ ಸಮೂಹದಿಂದಲೂ ಪಡೆಯುವುದಕ್ಕೆ ಅಸಾಧ್ಯವಾದುದು. ಪ್ರಕಾಶಮಾನವಾದ ಸಕಲಪುರುಷಾರ್ಥಗಳ ಆವಾಸಗೃಹವು. ಈ (ನನ್ನ ಸಂಬಂಧದ) ಭಕ್ತಿಯು ಶ್ರೇಷ್ಠ ಮೋಕ್ಷವೆಂಬ ಉಪ್ಪರಿಗೆಗೆ ಮೆಟ್ಟಲು. ೭೦. ಬಸವೇಶ್ವರ, ಶ್ರವಣ, ಸ್ತೋತ್ರ ಮಾಡುವಿಕೆ, ಸ್ಮರಿಸುವಿಕೆ, ಪದಕಮಲವನ್ನು ಸೇವಿಸುವಿಕೆ, ನಮಸ್ಕರಿಸುವಿಕೆ, ಅರ್ಚಿಸುವಿಕೆ, ಭೃತ್ಯತ್ವವನ್ನು ವಹಿಸುವಿಕೆ, ಆತ್ಮಸಮರ್ಪಣ ಮಾಡುವಿಕೆ ಎಂಬ ಒಂಬತ್ತು ವಿಧವಾದುದು ಈ ಭಕ್ತಿಯ ಲಕ್ಷಣವಾಗಿದೆ. ೭೧. ಯಾವ ಸ್ಥಳದಲ್ಲಿ, ಯಾವ ವಸ್ತುವಿನಲ್ಲಿ ಎಡಬಿಡದೆ ಅಪಾರವಾದ ಪ್ರೀತಿಯೆಂಬುದಾವುದುಂಟೋ ಆ ವಿಪುಲವಾದ ಪ್ರೇಮರಸವೇ ನನ್ನ ಪದ (ಧ್ಯಾನ) ದಲ್ಲಿ ನಿಂತುಕೊಂಡರೆ (ಅದೇ) ಸದ್ಭಕ್ತಿಯೆನಿಸುವುದು. ೭೨. ಭಕ್ತಿಯಲ್ಲಿ ಆಸಕ್ತಿಯುಳ್ಳವನಿಗೆ ಲೋಕದಲ್ಲಿ ಸಮುದ್ರವೂ ಕೂಡ ಮೊಳಕಾಲುದ್ದವಾಗಿದ್ದು, ದಾಟಲು ಶಕ್ಯವಾದುದಾಗುವುದು ; ಉರಿವ

1 ಸಮು(ಅ)

ಬಃರುಹಗುಣಂ ಸರೋಜಭವದುರ್ಲಿಪಿ ವಾರ್ಲಿಪಿ ಕಾಯಜಂ ತೃಣಾಂ
ಕುರಮಣಿಮಾದಿ ಸಿದ್ಧಿಯಣುವಪ್ಪುದು ಭಕ್ತಿರತಂಗೆ ಲೋಕದೊಳ್ ೭೨

ಪರನಿಂದಾ ಪರವಸ್ತುಜಾತ ಪರಕಾಂತಾಕಾಂಕ್ಷೆಯಂ ಮಾಣ್ದು ಸಾ
ದರಮೆಂದುಂ ಪರದೈವಮಂ ನೆನೆಯದಾಶಾಪಾಶಮಂ ಕೀಳ್ತು ಸ
ದ್ಗುರುವಿಂಗಂಗಮನಿತ್ತು ಲಿಂಗಕೆ ಮನಂದೆತ್ತೊಲ್ಮೆಯಿಂ ಜಂಗಮೋ
ತ್ಕರಕರ್ಥಾರ್ಪಣಮಂ ನಿಮಿರ್ಚೆ ಮೆಱೆವಾತಂ ತಾನೆ ಭಕ್ತೋತ್ತಮಂ ೭೩

ಕುಲಮುಂ ಕೂರ್ಮೆಯುನಂದಮುಂ ಸುಗುಣಮುಂ ಸದ್ವಿದ್ಯೆಯುಂ ಸತ್ಯಮುಂ
ಸಲೆ ತಾಂ ನೋಡದೆ ಬಂದ ಜಂಗಮಕೆ ಸಾಕ್ಷಾದಿಂದುಭೃದ್ಬುದ್ಧಿಯುಂ
ಬಲಿದಾರೋಗಿಸಲಿತ್ತು ಶೇಷಮನದಂ ಕೈಕೊಂಡು ತತ್ಪ್ರೀತಿಯುಂ
ಸಲಿಸುತ್ತಿರ್ಪುದೆ ಭಕ್ತಿಲಕ್ಷಣಗುಣಂ ಭಕ್ತಚೂಡಾಮಣಿ ೭೪

ಇದು ಭಕ್ತಿಮಾರ್ಗಮಿದಱೊ
ಳ್ಪದುಳಂ ನಡೆ ಶೈವಮತಮನುದ್ಧರಿಸು ತೊಡಂ
ಕಿದ ಪರಸಮಯಮನೊರಸ
ಗ್ಗದ ಮೈಮೆಯನಿಳೆಯೊಳೈದೆ ಪಸರಿಸು ಬಸವಾ ೭೫

ಅಗ್ನಿಯು ಹಿಮಸದೃಶವಾಗುವುದು ; ಘನವಾದ ಮೃತ್ಯುವೂ ಕೂಡ ತೊತ್ತಿನಂತಾಗುವುದು ; ಅತಿ ಭಯಂಕರ ಸಿಡಿಲಿನ ಬೆಂಕಿಯು ಕೂಡ ಕುಸುಮ ಸದೃಶವಾಗುವುದು ; ವಿಷವು ಅಮೃತವಾಗುವುದು ; ಸಂಸಾರ ಕರ್ಮವೆಂಬ ಹಗ್ಗವು ತಾವರೆಯ ನೂಲಿಗೆ ಸಮಾನವಾಗುವುದು ; ಬ್ರಹ್ಮನ ಕೆಟ್ಟ ಹಣೆಬರಹವೂಕೂಡ ನೀರಿನಲ್ಲಿ ಬರೆದ ಬರವಣಿಗೆಯಾಗುವುದು ; ಮನ್ಮಥನು ಹುಲ್ಲಿನ ಮೊಳಕೆಗೆ ಸಮನಾಗುವನು ; ಅಣಿಮಾಮಹಿಮಾ ಮೊದಲಾದ ಅಷ್ಟಸಿದ್ಧಿಗಳು ಅಣು ಸದೃಶಗಳಾಗುವುವು. ೭೩. ಅನ್ಯದೂಷಣೆ, ಅನ್ಯ ಪದಾರ್ಥಸಮೂಹ, ಅನ್ಯಕಾಂತೆ ಇವುಗಳಲ್ಲಿನ ಕಾಂಕ್ಷೆಯು ಇಲ್ಲದಂತಾಗಿ ಪ್ರೀತಿಯಿಂದ ಕೂಡಿ, ಯಾವಾಗಲೂ ಪರಶೈವವನ್ನು ಧ್ಯಾನಿಸದೆ, ಆಸೆಯೆಂಬ ಹಗ್ಗವನ್ನುಹರಿದು, ಗುರುಶ್ರೇಷ್ಠನಿಗೆ ಅಂಗವನ್ನಿತ್ತು, ಲಿಂಗಕ್ಕೆ ಮಾನವನ್ನಿತ್ತು, ಪ್ರೀತಿಯಿಂದ ಜಂಗಮ ಸಮೂಹಕ್ಕೆ ಧನ ಸಮರ್ಪಣೆಯನ್ನುಮಾಡಿ ಪ್ರಕಾಶಿಸುವವನು ಭಕ್ತಶ್ರೇಷ್ಠನೆನಿಸುವನು. ೭೪. ಭಕ್ತಚೂಡಾಮಣಿಯೇ ಕೇಳು : ಬಂದ ಜಂಗಮದ ಕುಲವನ್ನೂ, ಪ್ರೀತಿಯನ್ನೂ, ಸೌಂದರ್ಯ (ರೂಪ) ವನ್ನೂ, ಸದ್ಗುಣವನ್ನೂ, ಸದ್ವಿದ್ಯೆಯನ್ನೂ, ಸತ್ಯವನ್ನೂ, ನೋಡದೆ ಅವರನ್ನು ಇಂದು ಧರ್ಮಸ್ವರೂಪನೆಂದೇ ಭಾವಿಸಿ, ಪ್ರಸಾದವನ್ನಿತ್ತು, ಶೇಷಪ್ರಸಾದವನ್ನು ಸ್ವೀಕಾರಮಾಡಿ ಅವರಲ್ಲಿ ಪ್ರೀತಿಯನ್ನು ಸಲ್ಲಿಸುತ್ತ ಇರುವುದೇ ಭಕ್ತಿಸ್ವಭಾವವಾಗಿದೆ. ೭೫. ಬಸವಣ್ಣ ಇದು ಭಕ್ತಿಮಾರ್ಗ, ಈ ಮಾರ್ಗದಲ್ಲಿ ಸಂತೋಷದಿಂದ ನಡೆದುಕೋ. ಶಿವಮತವನ್ನು ಉದ್ಧರಿಸು, ಪ್ರತಿರೋಧಿಸಿದ ಪರಸಮಯವನ್ನು ನಾಶಮಾಡು ; ಭೂಮಿಯಲ್ಲಿ ಚೆನ್ನಾಗಿ ಶ್ರೇಷ್ಠವಾದ ಮಹತ್ವನ್ನು

ಚರಲಿಂಗಮೇನನೆರೆದೊಡೆ
ಭರದಿಂ ಕೊಡು ಜಡಿದು ಬಡಿದು ಬಾಧಿಸಿದೊಡಮಾ
ಚರಲಿಂಗದಡಿಯನೆಡೆಬಿಡ
ದಿರು ಸುಪಥಂ ನಿನಗಿದಲ್ತೆ ಬಸವಕುಮಾರಾ ೭೬

ಧರಿಸೊಳ್ಪಿಂ ಭೂತಿ ರುದ್ರಾಕ್ಷೆಗಳನನುದಿನಂ ದೇಶಿಕೇಂದ್ರಾಂಘ್ರಿಯಂ ಸಂ
ಸ್ಮರಿಸುದ್ಯಲ್ಲಿಂಗಮಂ ಪೂಜಿಸು ಚರಪರಿಷತ್ಸೇವೆಗೆಯ್ ತತ್ಪ್ರಸಾದ
ಸ್ಫುರಿತ ಶ್ರೀಪಾದತೀರ್ಥಂಗಳೆ ಜಪಿಸು ಸದೋಂಕಾರಸಂಯುಕ್ತ ಪಂಚಾ
ಕ್ಷರಮಂ ಶಿಷ್ಟೋಪದೇಶಾರ್ಥಮಿದೆನೆ ಧರೆಯೊಳ್ವೀರಶೈವಾಬ್ಧಿಚಂದ್ರಾ ೭೭

ವ॥ ಎಂದೊರೆದು ಕಾರುಣ್ಯಂಗೈದು ಚರವೇಷದೀಶ್ವರಂ ಶಿವಾಲಯದೊಳಗಣ್ಗೆ ಪೊಕ್ಕು ಲಿಂಗದೊಳಡಂಗೆ ಕಂಡು ಕೆಲವಲದ ಮಾಹೇಶ್ವರರ್ಕೌತುಕಂಬಟ್ಟು ಬಸವನತಿಶಯ ಪ್ರಭಾವಮಂ ಮಗುಳ್ದು ಮಗುಳ್ದು ಕೊಂಡಾಡುತ್ತಮಿರೆ—

ಗುರುರೂಪಂ ಸಂಗಮೇಶಂ ತನಗೊರೆದುಪದೇಶೋಕ್ತಿವಾರ್ಬಿಂದು ಮುತ್ತಾ
ಗಿರೆ ಚೇತಃಶುಕ್ತಿಯೊಳ್ಕೌತುಕರಸಭರಿತಂ ಭಕ್ತರೊಡ್ಡೋಲಗಂ ತ

ವಿಸ್ತರಿಸು. ೭೬. ಪುತ್ರನಾದ ಬಸವಣ್ಣ, ಜಂಗಮಲಿಂಗವು ಯಾವುದನ್ನು ಬೇಡಿದರೂ ಜಾಗರೂಕತೆಯಿಂದ ಕಂಡು, ಕೊಡು ; ಜಡಿದು, ಬಡಿದು, ಬಾಧಿಸಿದರೂ ಆ ಚರಲಿಂಗದ ಪಾದವನ್ನು ಬಿಡದೆ ಇರು. ಇದು ನಿನಗೆ ಸನ್ಮಾರ್ಗವೇ ಅಲ್ಲವೆ ? ೭೭. ವೀರಶೈವ ಮತವೆಂಬ ಸಮುದ್ರಕ್ಕೆ ಚಂದ್ರನೋಪಾದಿಯಲ್ಲಿರುವ ಬಸವಣ್ಣ, ಭೂಮಿಯಲ್ಲಿ ಇದು ಶಿಷ್ಟರಾದ ಜನರುಗಳ ತಿಳುವಳಿಕೆಗೋಸ್ಕರ ಎನ್ನುವಂತೆ, ಪ್ರತಿದಿನದಲ್ಲೂ ಒಳ್ಳಿತ್ತಾಗಿ ವಿಭೂತಿ ರುದ್ರಾಕ್ಷಿಗಳನ್ನು ಧರಿಸು ; ಗುರುಶ್ರೇಷ್ಠರನ್ನು ಧ್ಯಾನಿಸು ; ಶ್ರೇಷ್ಠ ಶಿವಲಿಂಗ ವನ್ನು ಪೂಜಿಸು ; ಚರಜಂಗಮದ ಸೇವೆ ಮಾಡು ; ಅವರ ಪ್ರಸಾದ (ಮತ್ತು) ಪಾದ ತೀರ್ಥಗಳನ್ನು ಧರಿಸು ; ಓಂಕಾರ ಸಹಿತವಾದ ಪಂಚಾಕ್ಷರೀ ಮಂತ್ರವನ್ನು ಜಪಿಸು. ವ॥ –ಹೀಗೆಂದು ಕಾರುಣ್ಯದಿಂದ ಆ ಚರವೇಷಧಾರಿಯಾದ ಶಿವನು ಹೇಳಿ ಶಿವಾಲಯದ ಒಳಹೊಕ್ಕು ಆ ದೇವಾಲಯದಲ್ಲಿರುವ ಸಂಗಮೇಶ್ವರ ಲಿಂಗದಲ್ಲಿ ಅಡಗಲು ಅಕ್ಕಪಕ್ಕದಲ್ಲಿದ್ದ ಮಾಹೇಶ್ವರರುಗಳು ಕಂಡು, ಆಶ್ಚರ್ಯಪಟ್ಟು, ಬಸವೇಶ್ವರನ ಅತಿಯಾದ ಪ್ರಭಾವವನ್ನು ಕಂಡು, ಪದೇ ಪದೇ ಕೊಂಡಾಡುತ್ತ ಇದ್ದರು. ೭೮. ಸಂಗಮೇಶ್ವರನು ಗುರುರೂಪದಿಂದ ಬಂದು, ತನಗೆ ತಿಳಿಸಿ ಉಪದೇಶಿಸಿದ ಉಪದೇಶವೆಂಬ ನೀರಿನ ಹನಿಯು ಬಸವಣ್ಣನ ಮನಸ್ಸೆಂಬ ಮುತ್ತಿನಚಿಪ್ಪಿನಲ್ಲಿ ಮುತ್ತಿನಂತಾಯಿತು. ಉತ್ಸಾಹರಸಭರಿತನಾದ ಬಸವಣ್ಣನು ಶಿವನ ಪಾದಗಳನ್ನು

ಳ್ತಿರೆ ತಾನೊಪ್ಪಿರ್ದನಭ್ಯರ್ಚಿತಹರಚರಣಂ ಶಂಭುಲೀಲಾಕಥಾಬಂ
ಧುರ ಸಿಂಧೂದ್ಯತ್ಸಮುದ್ರಂ ಶರಣಗಣಪದಾಂಭೋಜಪೂಜಾವಿತಂದ್ರಂ ೭೮

ಆಖುಪತಿವಾಹನ ವಿಶಾಖನುತನೀತ ಮೃಡ
ಲೇಖನಲಿಪಿಜ್ಞ ಜಿತಭೂಖಿಲ ಫಣಾಭೃ
ನ್ಮೇಖಲ ಸುಧಾಕರಮಯೂಖ ನಿಶಿತಾಂಘ್ರಿಸುಮ
ಹಾಖುರಕೃತಾರಿಹೃದಯಾಖನನಕೃತ್ಯಾ
ಲೇಖಪತಿ ಪದ್ಮಜ ಮಹಾಖಗರಥಾರ್ಚ್ಯ ಶುಭ
ರೇಖಪದಸೂರಿಸುರಶಾಖಿಯಮಿಜಿಹ್ವಾ
ಲೇಖಲಿಖಿತಾಭಿದ ದಿಶಾಖಚಿತಕೀರ್ತಿ ಪೊರೆ
ಶೇಖರಿತ ಶೀತಕರರೇಖ ಬಸವೇಶಾ ೭೯

ನಮದಮರವಧೂಟೀಕುಂತಳ ಸ್ನಿಗ್ಧಕಾಂತಿ
ದ್ಯುಮಣಿ ತನುಭವಾಂಭಶ್ಶ್ಯೋಭಮಾನಾಂಘ್ರಿಪದ್ಮೇ

ಪೂಜಿಸುತ್ತ ; ಶಿವನ ಸಂಬಂಧದ ಪಂಚವಿಂಶತಿ (ಇಪ್ಪತ್ತೈದು) ಲೀಲೆಯ ಕಥೆಗಳೆಂಬ ನದಿಗಳಿಗೆ ದೊಡ್ಡಸಮುದ್ರದೋಪಾದಿಯಲ್ಲಿ ಆದನು. ಶರಣ ಸಮೂಹದ ಪಾದ ಕಮಲಗಳ ಪೂಜೆಯಲ್ಲಿ ಆಸಕ್ತನಾಗಿ (ಸಮಸ್ತ) ಭಕ್ತರ ಒಡ್ಡೋಲಗದಲ್ಲಿ ಶೋಭಾಯ ಮಾನವಾಗಿದ್ದನು. ೭೯. ಇಲಿಯನ್ನು ವಾಹನವನ್ನಾಗಿ ಉಳ್ಳ ಗಣಪತಿ (ಮತ್ತು) ಷಣ್ಮುಖರುಗಳಿಂದ ಹೊಗಳಲ್ಪಟ್ಟವನೂ, ಯೋಗ್ಯವಾದ ಶಿವನಿಂದ ಪ್ರೇರಿತಗೊಂಡ ಲಿಖಿತದ ಅರ್ಥವನ್ನು ತಿಳಿದವನೂ, ಭೂಮಿಯಲ್ಲಿರುವ ದುರ್ಜನರನ್ನು ಜಯಿಸಿದವನೂ, ಸರ್ಪದ ಉಡಿದಾರವನ್ನು ಉಳ್ಳವನೂ. ಚಂದ್ರನ ಕಾಂತಿಯಂತಿರುವ ಕಾಂತಿಯಿಂದ ಕೂಡಿದವನೂ, ತೀಕ್ಷ್ಣವಾದ ಪಾದದ ದೊಡ್ಡ ಗೊರಸುಗಳಿಂದ ವೈರಿಗಳ ಹೃದಯ ವನ್ನು ಎಲ್ಲ ಕಡೆಗೂ ಅಗೆಯುವಕಾರ್ಯ ಮಾಡಿದವನೂ, ದೇವಪತಿಯಾದ ಇಂದ್ರ, ಬ್ರಹ್ಮ, ಮಹಾ ಪಕ್ಷಿಯಾದ ಗರುಡನನ್ನು ವಾಹನವಾಗಿ ಉಳ್ಳ ವಿಷ್ಣು ಇವರುಗಳಿಂದ ಪೂಜೆಗೊಳ್ಳಲು ಯೋಗ್ಯನಾದವನೂ, ಮಂಗಳಕರವಾದ ರೇಖೆಗಳಿಂದ ಕೂಡಿದ ಚರಣ ವುಳ್ಳವನೂ, ವಿದ್ವಾಂಸರಿಗೆ ಕಲ್ಪವೃಕ್ಷಸಮಾನನೂ, ಋಷಿಗಳ ಜಿಹ್ವೆಯೆಂಬ ಪತ್ರದಲ್ಲಿ ಬರೆಯಲ್ಪಟ್ಟ ನಾಮಧೇಯವುಳ್ಳವನೂ, ದಿಕ್ಕುಗಳಲ್ಲೆಲ್ಲ ವ್ಯಾಪಕಗೊಂಡ ಕೀರ್ತಿ ವಿಶೇಷವುಳ್ಳವನೂ, ಚಂದ್ರಕಲೆಯನ್ನು ಧರಿಸಿರುವ ಪರಮೇಶ್ವರನ ಶಿರೋಭೂಷಣನೂ (ಆದ) ಬಸವೇಶಾ (ರಕ್ಷಿಸು). [ಫಣಾ + ಭೃತ್ + ಮೇಖಲ–ಹಾವನ್ನು ಉಡುದಾರ ವಾಗಿ ಉಳ್ಳವನು ; ಸೂರಿ + ಸುರ + ಶಾಖಿ—ಸೂರಿ ಜನರಿಗೆ ದೇವ ವೃಕ್ಷವಾದವನು ; ಶೇಖರಿತ + ಶೀತ + ಕರ + ಲೇಖ–ಶೀತಕರನಾದ ಚಂದ್ರನ ಕಲೆಯನ್ನು ಜಡೆಯಲ್ಲಿ ಧರಿಸಿರುವ ಶಿವನಂದ ಶಿಖರದಲ್ಲಿ ಧರಿಸಲು ಯೋಗ್ಯನಾದವನು] ೮೦. ನಮಸ್ಕಾರ ಮಾಡುತ್ತಿರುವ ದೇವತಾ ಸ್ತ್ರೀಯರ ಕೇಶಗಳ ಮನೋಹರವಾದ ಕಾಂತಿಯೆಂಬ

ಸಮುದಿತಗುಣವಾಣೀ ಪಾಣಿವೀಣಾನಿನಾದ
ಪ್ರಮುದಿತೆ ದಯೆಯಿಂದಂ ಗೌರಿ ರಕ್ಷಿಪ್ಪುದೆನ್ನಂ ೮೦

ಇದು ವಿನಮದಖಿಳ ಸುರಾಸುರೇಂದ್ರಮಕುಟತಟಘಟಿತಮಣಿಗಣಾಗಣಿತ ರುಚಿನಿಚಯ
ತರುಣಾರುಣಾತಪಪರಿಲಸಿತ ಪರಮ ಶಿವಲಿಂಗಪಾದಾರವಿಂದಪರಾಗಭಸಿತ
ಭಾಸುರಲಲಾಟಪಟ್ಟ ಸರಸಜನಮಾನಿತೋಭಯಕವಿತಾವಿಶಾರದ
ಶ್ರೀ ಷಡಕ್ಷರಿದೇವಭಕ್ತಿವಿರಚಿತಮಪ್ಪ

ಶ್ರೀಮದ್ಬಸವರಾಜವಿಜಯಮಹಾಪುರಾಣದೊಳ್ ಶ್ರೀಮದ್ಬಸವಾಭ್ಯುದಯವರ್ಣನಂ
ತೃತೀಯಾಶ್ವಾಸಂ ಸಮಾಪ್ತಂ

ಅಂತು ಆಶ್ವಾಸ ೩ಕ್ಕೆ ಪದಗಣನೆ ೨೩೧ಕ್ಕೆ ಮಂಗಳಮಹಾಶ್ರೀ ॥

ಸೂರ್ಯಕುಮಾರಿಯಾದ ಯಮುನಾ ನದಿಯ ಜಲದಲ್ಲಿ ಶೋಭಾಯಮಾನಳಾಗಿ ಪ್ರಕಾಶಿಸುವ ಪಾದಕಮಲವುಳ್ಳವಳೂ, ಶ್ರೇಷ್ಠವಾದ ತಂತಿಗಳಿಂದ ಕೂಡಿದ ಸರಸ್ವತಿಯ ಹಸ್ತದಲ್ಲಿರುವ ವೀಣೆಯ ಮಧುರನಾದದಿಂದ ಸಂತೋಷಗೊಳಿಸಲ್ಪಡುವವಳೂ ಆದ ಗೌರೀ ದೇವಿಯು ನನ್ನನ್ನು ರಕ್ಷಿಸಲಿ.

ತೃತೀಯಾಶ್ವಾಸವು ಸಮಾಪ್ತವಾಯಿತು

ಚತುರ್ಥಾಶ್ವಾಸಂ

ಶ್ರೀ ತುಹಿನಗಿರಿಸುತಾಮುಖ
ಶೀತಾಂಶುಮಯೂಖಮುದಿತ ಚತುರ ಚಕೋರಂ
ಗೌತಮಶುಕಮುಖಮುನಿಪ
ವ್ರಾತಸ್ತುತನೀಗೆ ಸೌಖ್ಯಮಂ ಶಿವಲಿಂಗಂ ೧

ಭಾರ್ಗವ ಶುಕಾದಿ ಮುನಿವರ್ಗನುತ ಶಾಂಭವಸು
ಮಾರ್ಗಗಚರಿತ್ರ ಹೃತದುರ್ಗತಿಸಮಸ್ತಾ
ಸ್ವರ್ಗಭವನಾರ್ಚಿತ ನಿಸರ್ಗಗುಣರಂಜಿತ ಯ
ಜುರ್ಗತಮಹಾನುವರ್ಗುಣವಿದೂರಾ
ನರ್ಗಳ ಚಿದಾತ್ಮವಿಧುಮಾರ್ಗಣಹೃತೇಂದ್ರಪರ
ದುರ್ಗ ಯಮದರ್ಪಹರ ಭರ್ಗ ಹೃದಯಾಬ್ಜಾಂ
ತರ್ಗತ ಲಸನ್ನಿಗಮಸರ್ಗಕರ ಮಾಳ್ಪುದಪ
ವರ್ಗಸುಖಮಂ ನತ ಬುಧರ್ಗೆ ಬಸವೇಶಾ ೨

ದೇಶಾದಿಗಳ ವರ್ಣನೆ

೧. ಸಂಪತ್ಸ್ವರೂಪಳಾದ ಪಾರ್ವತೀದೇವಿಯ ಮುಖವೆಂಬ ಚಂದ್ರನ ಕಿರಣಗಳಿಂದ ಸಂತೋಷಗೊಳಿಸಲ್ಪಟ್ಟ ಚತುರ ಚಕೋರ ಪಕ್ಷಿಯಂತಿರುವವನೂ, ಗೌತಮಾದಿ ಮುನಿಶ್ರೇಷ್ಠರುಗಳ ಸಮೂಹದಿಂದ ಸ್ತೋತ್ರ ಮಾಡಲ್ಪಡುವವನೂ ಆದ ಶಿವಲಿಂಗನು ಸೌಖ್ಯವನ್ನು ಕೊಡಲಿ. ೨. ಭಾರ್ಗವ ಶುಕ ಮೊದಲಾದ ಋಷಿಗಳ ಸಮೂಹದಿಂದ ಕೊಂಡಾಡಲ್ಪಡುವವನೂ, ಸ್ತುತ್ಯಾರ್ಹವಾದ ಶಿವನ ಸಂಬಂಧವ ಸನ್ಮಾರ್ಗದಲ್ಲಿ ನಡೆಯುತ್ತಿರುವ ಚರಿತ್ರೆಯುಳ್ಳವನೂ, ದುರ್ಗುಣಗಳನ್ನು ನಾಶ ಪಡಿಸಿದವನೂ, ಸಮಸ್ತ ದೇವತೆಗಳಿಂದ ಸೂಜಿಸಲ್ಪಡುವವನೂ, ಸ್ವಭಾವಸಿದ್ಧವಾದ ಸದ್ಗುಣಗಳಿಂದ ಪ್ರಕಾಶಿಸುವವನೂ, ಯಜುರ್ವೇದದಲ್ಲಿ ಉಕ್ತವಾದ ಶ್ರೇಷ್ಠ ಮಂತ್ರ ಸ್ವರೂಪನೂ, ದೇಹಗುಣಗಳಿಂದ ದೂರನಾದವನೂ, ತಡೆಯಿಲ್ಲದ (ಅನರ್ಗಳ) ಜ್ಞಾನಸ್ವರೂಪನಾದವನೂ, ವಿಷ್ಣು (ವಿಧು)ವನ್ನೇ ಬಾಣವಾಗಿ ಉಳ್ಳವನೂ, ಸಂಹರಿಸಲ್ಪಟ್ಟ ಇಂದ್ರನ ವೈರಿಗಳನ್ನುಳ್ಳವನೂ, ಕಷ್ಟ ಸಾಧ್ಯವಾದ ಯಮನ ಗರ್ವವನ್ನು ನಾಶ ಮಾಡಿದವನೂ, ಈಶ್ವರನ ಮನಸ್ಸೆಂಬ ಕಮಲದ ಮಧ್ಯ (ಕರ್ಣಿಕಾರ)ವನ್ನು ಹೊಂದಿರುವವನೂ, ಪ್ರಕಾಶಿಸುವ ವೇದಗಳ ಸೃಷ್ಟಿಯನ್ನು ಮಾಡಿದವನೂ ಆದ ಬಸವೇಶನೇ ಸ್ತೋತ್ರಪರರಾದ ಮೋಕ್ಷ ·ಸೌಖ್ಯವನ್ನು ವಿದ್ವಾಂಸರಿಗೆ

ಸ್ವರ್ಣಗಿರಿ ದಕ್ಷಿಣಾಸೆಯೊ
ಳರ್ಣವ ವಸನಾವೃತ ಕ್ಷಮಾವನಿತಾ ಸಂ
ಪೂರ್ಣರುಚಿಶೇಖರಮಿದೆನೆ
ಕರ್ಣಾಟಕದೇಶಂ ಮೆಱೆದುದತಿ ರುಚಿರತರಂ ೩

ಬೆಳೆ ತೀವಿರ್ದ ಪೊಲಂ ಮರಾಳನಿವಹಂ ತೀವಿರ್ದ ನದ್ಯಾಳಿ ಮಂ
ಜುಳ ಪುಷ್ಪಾಳಿ ಫಲಾಳಿ ತೀವಿದ ಬನಂ ಪದ್ಮಾಳಿ ತೀವಿರ್ದ ತಂ
ಗೊಳವೆಂದುಂ ಕುಮುದಾಳಿ ತೀವಿದ ತಟಾಕಂ ದಂತಿಕಂಠೀರವಾ
ವಳಿ ತೀವಿರ್ದ ನಗೋಪಕಂಠವಿಪಿನಂ ತೀವಿರ್ಪುದಾ ದೇಶದೊಳ್ ೪

ಪರಿಕಾಲಲ್ಲಲ್ಲಿ ಪಣ್ತೊಪ್ಪುವ ಪೊಸ ಬನಮಲ್ಲಲ್ಲಿ ಮಲ್ಲೀಲತಾಮಂ
ದಿರಮಂತಲ್ಲಲ್ಲಿ ತೂಗುಂದೆನೆಯ ಕಳಮಮಲ್ಲಲ್ಲಿ ಕಾಸಾರಮಲ್ಲ
ಲ್ಲಿ ರಸಾಸಾರೇಕ್ಷುವಾಟೀಕುಳವಿಳಸನಮಲ್ಲಲ್ಲಿ ಪಾನೀಯ ಶಾಲೋ
ತ್ಕರದೊಳ್ಪಲ್ಲಲ್ಲಿ ನಿಚ್ಚಂ ಮೆಱೆವುದೆನ ಸುಖಾವಾಸಮಾ ದೇಶಮಲ್ತೇ ೫

ವ॥ ಮತ್ತಮಾ ಜನಪದಂ ಸುರಲೋಕದಂತನಿಮಿಷನಿಷೇವ್ಯಭುವನದಿವ್ಯಸಿಂಧು ಸಮೇತಮುಂ ಸುರುಚಿರಶಾಲಿ ಸಂತಾನನಂದನಾಶ್ರಿತಮುಂ ಕಮಳದಂತೆ ಸದಾರಮಾನವ ವಿಭವಾಳಿಯುಕ್ತ

ಉಂಟುಮಾಡುವುದು. ೩. ಮೇರು ಪರ್ವತದ ದಕ್ಷಿಣ ದಿಗ್ಭಾಗದಲ್ಲಿ ಅತ್ಯಂತ ಮನೋಹರವಾದ ಕರ್ಣಾಟಕ ದೇಶವಿದೆ. ಈ ದೇಶವು ಸಮುದ್ರವೆಂಬ ವಸ್ತ್ರದಿಂದ ಆವರಿಸಲ್ಪಟ್ಟಿದ್ದು ಭೂಕಾಂತೆಯ ಸಂಪೂರ್ಣವಾದ ಕಾಂತಿಯಿಂದ ಕೂಡಿದ ಶಿರೋಭೂಷಣವೋ ಎಂಬಂತೆ ಪ್ರಕಾಶಿಸುತ್ತಿರುವುದು. ೪. ಆ ಕರ್ಣಾಟಕ ದೇಶದಲ್ಲಿ ಬೆಳೆದು ನಿಂತಿರುವ ಪೈರುಗಳಿಂದ ತುಂಬಿರುವ ಹೊಲಗದ್ದೆಗಳಿಂದಲೂ, ಹಂಸಪಕ್ಷಿಗಳಿಂದ ತುಂಬಿಕೊಂಡಿರುವ ಹೊಳೆಗಳ ಪಙ್ತ್ತಿಗಳಿಂದಲೂ, ಮನೋಹರವಾದ ಹೂಗಳ (ಮತ್ತು) ಹಣ್ಣುಗಳ ಸಮೂಹದಿಂದಲೂ ಕೂಡಿದ ಅರಣ್ಯಗಳಿಂದ ಕೂಡಿದೆ. ಕಮಲ ಪುಷ್ಪ ಸಮೂಹಗಳಿಂದ ತುಂಬಿದ ತಂಪಾದ ಸರೋವರಗಳು, ಯಾವಾಗಲೂ ನೈದಿಲೆಗಳಿಂದ ತುಂಬಿರುವ ಕೆರೆಗಳು, ಆನೆ ಮತ್ತು ಸಿಂಹಗಳಿಂದ ತುಂಬಿದ ಪರ್ವತಗಳ ಪಕ್ಕದಲ್ಲಿ ಹರಡಿರುವ ಅರಣ್ಯಗಳು (ಇವುಗಳಿಂದ) ತುಂಬಿರುವುದು. ೫. ಅಲ್ಲಲ್ಲಿ ಹರಿಯುತ್ತಿರುವ ಕಾಲುವೆಗಳು, ಅಲ್ಲಲ್ಲಿ ಹಣ್ಣನ್ನು ಬಿಟ್ಟು ಒಪ್ಪುವ ನೂತನವಾದ ತೋಟಗಳು, ಅಲ್ಲಲ್ಲಿ ಮಲ್ಲಿಗೆಯ ಬಳ್ಳಿಗಳಿಂದ ಮಾಡಿದ ಬಳ್ಳಿಮನೆಗಳು, ಹಾಗೆಯೇ ಎಲ್ಲ ಕಾಲದಲ್ಲೂ ತೂಗಾಡುತ್ತಿರುವ ತೆನೆಗಳಿಂದ ಕೂಡಿದ ಬತ್ತದ ಗದ್ದೆಗಳು, ಅಲ್ಲಲ್ಲಿ ಸರೋವರಗಳು, ಅಲ್ಲಲ್ಲಿ ರಸಧಾತುಗಳುಳ್ಳ ಪ್ರಕಾಶಿಸುವ ಕಬ್ಬಿನ ಗದ್ದೆಗಳು, ಸಮೀಚೀನವಾದ ಅರವಟ್ಟಿಗೆಗಳ ಸಮೂಹಗಳು ಇವು ನಿರಂತರವೂ ಆ ಕರ್ಣಾಟಕ ದೇಶದಲ್ಲಿ ಮೆರೆಯುತ್ತ ಸುಖಾವಾಸಕ್ಕೆ ಆ ದೇಶವು ಆಶ್ರಯವಾದುದಲ್ಲವೆ ? ವ॥ ಮತ್ತು ಆ ದೇಶವು ೧. ಸುರಲೋಕದಂತೆ—ಅನಿಮಿಷ (ಮೀನು)ಗಳಿಂದ ಸೇವಿಸಲ್ಪಡುವುದಕ್ಕೆ ಯೋಗ್ಯವಾದ

ಮುಂ ಕಮಲಾಭಿರಾಮಮುಂ ನಭೋವಲಯದಂತೆ ಖಗರಾಜ ಸೌಮ್ಯಗುರು ಕುಜಾನ್ವಿತಮುಂ [1]ಸುರಾಗ[1] ಸುಮನಃಸುರಭೀಗೋಪಲೋಕಾಂತಮುಂ ಸುರನದೀ ತಟದಂತೆ ದಿವ್ಯಾನೇಕಪಾಮರೀಜನಕಲಿತಮುಂ ಕಮಲಾಧಿವಾಸರಾಜಹಂಸರಮಣೀಯಮುಂ ರಸಾತಳದಂತೆ ಸದಾಶೇಷಭೋಗೀಭೋಗ

ನೀರಿನಿಂದ ಕೂಡಿದ ಶ್ರೇಷ್ಠ ನದಿಗಳಿಂದ ಕೂಡಿದುದಾಗಿತ್ತು. ಮನೋಹರವಾದ ಬತ್ತದ ಗದ್ದೆಗಳ ಸಮೂಹದಿಂದ, ಉಪವನಗಳಿಂದ ಕೂಡಿತ್ತು. ೨. ಸುರಲೋಕವು— ಅನಿಮಿಷ (ದೇವತೆ) ರುಗಳಿಂದ ಸೇವಿಸುವುದಕ್ಕೆ ಯೋಗ್ಯವಾದ ಜಲವುಳ್ಳ ಶ್ರೇಷ್ಠ ಗಂಗಾ ನದಿಯಿಂದ ಕೂಡಿರುವುದು. ಮನೋಹರವಾಗಿ ಒಪ್ಪುವ (ಶಾಲಿ) ಕಲ್ಪವೃಕ್ಷ ಗಳುಳ್ಳ ದೇವೇಂದ್ರನ ನಂದನ ವನದಿಂದ ಕೂಡಿರುವುದು. ೧. (ಆ ದೇಶವು) ಕಮಲದಂತೆ—ಪತ್ನೀ ಸಮೇತರಾದ ಮನುಷ್ಯರ ವೈಭವ ಸಮುದಾಯದಿಂದ ಕೂಡಿರುವುದು ; ಸಂಪತ್ತಿನಿಂದ ಕೂಡಿ ಮನೋಹರವಾಗಿತ್ತು. ೨. ಕಮಲವು ಯಾವಾಗಲೂ ಲಕ್ಷ್ಮಿಯ ನೂತನ ವೈಭವದಿಂದಲೂ. ಭ್ರಮರಗಳಿಂದಲೂ ಯುಕ್ತವಾಗಿ ಮನೋಹರವಾಗಿರುವುದು. ೧. (ಆ ದೇಶವು) ಅಂತರಿಕ್ಷ ಮಂಡಲದ ಹಾಗೆ— ಶ್ರೇಷ್ಠವಾದ ಪಕ್ಷಿಗಳಿಂದ, ಸುಂದರವಾದ ದೊಡ್ಡ ಮರಗಳಿಂದ ಕೂಡಿದುದಾಗಿತ್ತು. ಸಮೀಚೀನ ಪ್ರೀತಿಯಿಂದ ಕೂಡಿದ ವಿದ್ವಾಂಸರಿಂದ, ಗೋಪಾಲಕರುಗಳ ಸಮೂಹ ದಿಂದ ಮನೋಹರವಾಗಿತ್ತು. ೨. ಅಂತರಿಕ್ಷ ಮಂಡಲವು—ಸೂರ್ಯ. ಚಂದ್ರ. ಬುಧ, ಬೃಹಸ್ಪತಿ, ಅಂಗಾರಕರೇ ಮೊದಲಾದವರಿಂದ ಕೂಡಿದುದು ; ಕಲ್ಪವೃಕ್ಷ ಕಾಮಧೇನು ಗಳಿಂದ, ಸ್ವರ್ಗಲೋಕದಿಂದ ಮನೋಹರವಾಗಿರುವುದು. ೧. (ಆ ದೇಶವು ಸುರನದೀತಟದಂತೆ—ಶ್ರೇಷ್ಠವಾದ ಗದ್ದೆಗಳನ್ನು ಕಾಯುವ ಸ್ತ್ರೀಯರಿಂದ ಕೂಡಿತ್ತು. ಐಶ್ವರ್ಯಕ್ಕೆ ಆಶ್ರಯರಾದ ರಾಜ ಶ್ರೇಷ್ಠರುಗಳಿಂದ ರಮಣೀಯವಾಗಿತ್ತು. ೨, ಸುರನದೀತಟವು—ಐರಾವತ (ದಿವ್ಯ+ಅನೇಕ+ಪ) ಮತ್ತು ದೇವತಾ ಸ್ತ್ರೀಯರು ಇವರುಗಳಿಂದ ಕೂಡಿರುವಂತಹುದು. ಕಮಲವೇ ಆಶ್ರಯವಾಗಿ ಉಳ್ಳ ರಾಜ ಹಂಸಪಕ್ಷಿಗಳಿಂದ ಮನೋಹರವಾಗಿರುವುದು. ೧. (ಆ ದೇಶವು) ರಸಾತಳದಂತೆ— ವಿಪುಲವಾದ (ಅಶೇಷವಾದ) ಸ್ರಕ್ ಚಂದನ ವನಿತಾದಿ ಭೋಗ ಸುಖವುಳ್ಳ ಜನರುಗಳ ಭೋಗ ಜೀವನದಿಂದ ಮನೋಹರವಾಗಿರುವುದು ; ಸಮೀಚೀನವಾಗಿ ಪರರಾಜರಿಂದ ಕೊಡಲ್ಪಡುವ ಕಪ್ಪ ಕಾಣಿಕೆಗಳನ್ನು ಪಡೆಯುವ ಸಾರ್ವಭೌಮರಿಂದ ಕೂಡಿತ್ತು. ೨. ರಸಾತಳವು (ಪಾತಾಳಲೋಕವು)—ಸದಾಕಾಲವೂ ಸರ್ಪಗಳ ಹೆಡೆಗಳಿಂದ ಮನೋಹರವಾದುದು ; ಈಶಾನ್ಯ ದಿಕ್ಕಿನಲ್ಲಿರುವ ಸುಪ್ರತೀಕವೆಂಬ ಹೆಸರಿನ ದಿಗ್ಗಜ ಮತ್ತು ಉತ್ತಮವಾದವುಗಳಿಂದ ಕೂಡಿದ ಬಲಿಚಕ್ರವರ್ತಿ, ಕುಬೇರ ದಿಕ್ಕಿನಲ್ಲಿರುವ

1 ಸುರರಾಗ(ಮ, ಚ, ಜ)

ಮನೋಜ್ಞಮುಂ ಸುಪ್ರತೀಕಬಲಿಸಾರ್ವಭೌಮರಂಜಿತಮುಂ ವೈದ್ಯಮಂತ್ರದಂತೆ ಸರೋಗತಾಪಚಲನ ಮರುದಾಡಂಬರಮುಂ ಬೀಜನ್ಯಾಸ ದಿಗ್ಬಂಧ ಬಲಿರಕ್ಷಾ ಕ್ರಿಯಾಕರ ಮಹಾಫಲಕರಣಮುಂ ಸಮುದ್ರ ದಂತೆ ವಿಬುಧೇಷ್ಟಪ್ರದಮುಮನಂತಾತಿಶಯೋದಂಚಿತಮುಮೆನಿಸಿರ್ದುದಾತುಮಲ್ಲದೆಯುಂ —

ಘನ ಕರದಂಡಕಂಟಕ ಜಡಸ್ಥಿತಿ ಪಂಕಜಷಂಡದೊಳ್ಕಟು
ಸ್ವನಮಲಿನತ್ವಚಾಪಲತೆ ವಾರಿದದೊಳ್ ಜನತಾಪಕೃತ್ಪ್ರವ

ಸಾರ್ವಭೌಮ ಎಂಬ ಹೆಸರಿನ ದಿಗ್ಗಜಗಳಿಂದ ರಂಜಿತವಾದುದು. ೧. (ಆ ದೇಶವು) ವೈದ್ಯ ಮಂತ್ರದಂತೆ—ಸರೋವರವನ್ನು ಹೊಂದಿದ ಚಲನಸಹಿತವಾದ ವಾಯುವಿನ ಆಡಂಬರವುಳ್ಳುದು ; ಬೀಜಗಳನ್ನು ಬಿತ್ತುವಿಕೆ, ಬೇಲಿಗಳನ್ನು ಕಟ್ಟುವಿಕೆ, ಭೂತಗಳಿಗೆ ಹಾಕುವ ಬಲಿ ಇವೇ ಮೊದಲಾದ ರಕ್ಷಣಾ ಕಾರ್ಯಗಳಿಗೆ ಆಸ್ಪದವಾಗಿ ಅಧಿಕವಾದ ಫಲದ ಉಪಯೋಗಗಳನ್ನುಳ್ಳುದು. ೨. ವೈದ್ಯ ಮಂತ್ರವು—ರೋಗದಿಂದ ಕೂಡಿದ ಸಂತಾಪ, ಕಂಪನ, ವಾಯುರೋಗ ಇವುಗಳ ಆರ್ಭಟವುಳ್ಳದ್ದು : ಬೀಜ ಮಂತ್ರಗಳನ್ನು ಹೇಳುವುದು, ರೋಗಗಳನ್ನು ತಡೆಗಟ್ಟುವುದು, ಯಂತ್ರಗಳನ್ನು ಬರೆದು ಕಟ್ಟುವಕ್ರಿಯೆ ಇವುಗಳಿಗೆ ಆಕರವಾಗಿ, ಅಧಿಕ ಫಲನಿರೀಕ್ಷೆಯ ಕಾರ್ಯವುಳ್ಳುದು. ೧. (ಆ ದೇಶವು) ಸಮುದ್ರದಂತೆ—ವಿದ್ವಾಂಸರ ಇಷ್ಟಾರ್ಥಗಳನ್ನು ಕೊಡುವಂತಹುದು : ಅನಂತವಾದ ಉತ್ಕರ್ಷಗಳಿಂದ ಕೂಡಿದುದು ಎನಿಸಿತ್ತು. ೨. ಸಮುದ್ರವು–ದೇವತೆಗಳ ಇಷ್ಟಾರ್ಥ ಗಳನ್ನು ಕೊಡುವಂತಹುದು ; ಮಹಾ ವಿಷ್ಣುವಿನ ಶಯನದಿಂದ ಕೂಡಿದುದು— ಹೀಗೆನಿಸಿ (ಆ ಕರ್ನಾಟಕ ದೇಶವು) ಶೋಭಿಸುತ್ತಿತ್ತು. [ಈ ಪದ್ಯದಲ್ಲಿ ಅನೇಕ ಅಭಂಗ ಶ್ಲೇಷೆ, ಸಭಂಗ ಶ್ಲೇಷೆಗಳು ತುಂಬಿವೆ. ಈ ಕೆಳಗೆ ಅಭಂಗಶ್ಲೇಷಾರ್ಥ ಗಳನ್ನು ಮಾತ್ರ ಕೊಟ್ಟಿದೆ ; ಅನಿಮಿಷ–ದೇವತೆ, ಮೀನು. ಭುವನ–ನೀರು, ದೇಶ (ಭೂಮಿ). ಸಂತಾನ–ಕಲ್ಪವೃಕ್ಷ, ಸಮೂಹ. ಖಗ–ಪಕ್ಷಿ, ಸೂರ್ಯ. ರಾಜ–ಅರಸು, ಚಂದ್ರ, ಗುರು–ದೊಡ್ಡ, ಬೃಹಸ್ಪತಿ. ಗೋಪಲೋಕ–ಗೋಪಾಲಕರ ಸಮೂಹ, ಸ್ವರ್ಗಲೋಕ, ಸುರಭಿ–ಸುಗಂಧ. ಕಾಮಧೇನು, ರಾಜಹಂಸ–ಅರಸಂಚೆ, ರಾಜಶ್ರೇಷ್ಠ. ಭೋಗಿ–ಭೋಗಜೀವಿ, ಸರ್ಪ. ಬಲಿ–ಬಲಿ, ಚಕ್ರವರ್ತಿ. ಬಲಿ ಕೊಡುವಿಕೆ. ವಿಬುಧ– ದೇವತೆ, ವಿದ್ವಾಂಸ. ರಕ್ಷಾ–ರಕ್ಷಾಯಂತ್ರ. ರಕ್ಷಣೆ. ಸುಪ್ರತೀಕ–ಒಂದು ದಿಗ್ಗಜ, ಒಳ್ಳೆಯ ಅವಯವ. ಸಾರ್ವಭೌಮ–ಒಂದು ದಿಗ್ಗಜ, ಚಕ್ರವರ್ತಿ–ಇತ್ಯಾದಿ]

೬. ಘನತರವಾದ ದೇಟ (ದಂಟು), ಕಂಟಕ (ಮುಳ್ಳು), ನೀರಿನಲ್ಲಿರುವಿಕೆ ಮುಂತಾದವು ಕಮಲಸಮೂಹದಲ್ಲಿ ಇತ್ತಲ್ಲದೆ ; ವಿಚಾರಿಸಿ ನೋಡಿದರೆ–ಕರದಲ್ಲಿ ದಂಡವನ್ನು ಹಿಡಿದ ಯಮನಿಂದ ಉಂಟಾದ ಕಂಟಕ ಮೂಢರ ಇರುವಿಕೆ ಇವು ಆ ದೇಶದಲ್ಲಿ ಇರಲಿಲ್ಲ ; ಕಠಿಣವಾದ ಶಬ್ದ, ಕಪ್ಪು, ಲತೆಯಂತಿರುವ ಇಂದ್ರ ಧನುಸ್ಸು ಮೋಡದಲ್ಲಿತ್ತಲ್ಲದೆ. ಆ ದೇಶದಲ್ಲಿ ಕಠಿಣವಾಗಿ ಮಾತನಾಡುವಿಕೆ, ಪಾಪ, ಚಿತ್ತಚಾಂಚಲ್ಯ ಮೊದಲಾದುವು

ರ್ತನವಕುಲೀನವೃತ್ತಿಯಹಿಮಾಂಶುವಿನೊಳ್ ಪೃಥುಕೋಪರಾಗಮೋ
ಹನಕರಣಂ ಗೃಹಸ್ಥನೊಳೆ ತೋಱ್ಪುದು ನೋೞ್ಪೊಡದಲ್ಲಿ ತೋರ್ಕುಮೇ ೬

ಅಡಿಮುಡಿವಿಡಿವುದು ಮುಳಿಸಿನ
ಮಡದಿಯನೊಲಿಸುವರೊಳಣ್ಮೆ ತಡೆಯೊಡೆಯೆಂಬಾ
ನುಡಿ ಗಾರುಡರೊಳ್ಬಸುಱಿೞೊ
ಳ್ಕಡಿ ಪೊಡೆವಾತೆಸೆವುದಲ್ಲದಿಲ್ಲಾ ನಾಡೊಳ್ ೭

ವ॥ ಮತ್ತಮಾ ಮನೋಜ್ಞದೇಶಾಂತರಾಳದಲ್ಲಿ—

ಅಳಿಮಾಲಾ ಹರಿನೀಲಮಾಲಿಕೆ ಬೆಡಂಗಂ ಬೀಱಿ ಡಿಂಡೀರ ಮಂ
ಜುಳ ಪಾಟೀರವಿಲೇಪನಂ ಮಿಸುಗೆ ಚಂಚತ್ಕಾಂಚನಾಬ್ಜಾಸ್ಯಮಂ

ಇರಲಿಲ್ಲ ; ಜನರಿಗೆ ಅನುತಾಪವನ್ನುಂಟುಮಾಡುವ ವೃತ್ತಿ, ಭೂಮಿಯಲ್ಲಿ ಲೀನವಾಗದೆ ಇರುವಿಕೆ (ಅ + ಕು + ಲೀನ)--ಇದು ಸೂರ್ಯನಲ್ಲಿತ್ತಲ್ಲದೆ, (ವಿಚಾರಿಸಿ ನೋಡಿದರೆ) ಆ ದೇಶದಲ್ಲಿ ಜನತೆಗೆ ಅಪಕಾರವನ್ನುಂಟುಮಾಡುವ ಪ್ರವರ್ತನೆ, ದುಷ್ಟಕುಲದಲ್ಲಿ ಹುಟ್ಟಿದವರ ದುಷ್ಟನಡವಳಿಕೆ ಇರಲಿಲ್ಲ ; ಬಾಲಕರಲ್ಲಿ ಪ್ರೀತಿ (ಪೃಥುಕ + ಉಪರಾಗ), (ಅವರಲ್ಲಿ) ಮೋಹಗೊಳ್ಳುವ ಇಂದ್ರಿಯಗಳು ಗೃಹಸ್ಥರಲ್ಲಿ ತೋರುತ್ತಿದ್ದವಲ್ಲದೆ, (ವಿಚಾರಿಸಿ ನೋಡಿದರೆ—ಆ ದೇಶದಲ್ಲಿ) ವಿಶೇಷವಾದ ಕೋಪ (ಪೃಥು + ಕೋಪ) ದಲ್ಲಿ ಪ್ರೀತಿಯಿರುವಿಕೆ, ವಿಷಯೇಚ್ಛೆ (ರಾಗ) ಯಿಂದ ಮೋಹಗೊಳ್ಳುವಿಕೆಯೇ ಮೊದಲಾದ ನಡೆವಳಿಕೆಯು ಕಾಣುವುದೇ ? ೭. ಕಾಲು ಮತ್ತು ತಲೆಗೂದಲನ್ನು ಹಿಡಿಯುವುದು ಕೋಪಗೊಂಡ ಹೆಂಡತಿಯನ್ನು ಸಮಾಧಾನಪಡಿಸುವಿಕೆಯಲ್ಲಿತ್ತಲ್ಲದೆ, ಆ ದೇಶದಲ್ಲಿ ಬಡತನದಿಂದ ಇನ್ನೊಬ್ಬರ ಕಾಲು ಹಿಡಿಯುವಿಕೆ, ಇನ್ನೊಬ್ಬರ ಕೂದಲನ್ನು (ಜಗಳದಲ್ಲಿ) ಹಿಡಿದು ಜಗ್ಗುವುದು ಆ ದೇಶದಲ್ಲಿ ಇರಲಿಲ್ಲ. ಅದುಮಿ (ಅಣ್ಮೆ) ತಡೆ, ಒಡೆ, ಎಂಬ ಈ ಮಾತು ಗಾರುಡ ಮಂತ್ರದಲ್ಲಿತ್ತಲ್ಲದೆ, ಆ ದೇಶದಲ್ಲಿ ಜನರ ಪರಾಕ್ರಮಕ್ಕೆ ತಡೆಯೆಂಬುದಾಗಲಿ, ಒಡೆಯುವಿಕೆಯೆಂಬುದಾಗಲಿ ಇರಲಿಲ್ಲ. ಸುಕ್ಕು (ಕಡಿ) ಇರುವಿಕೆ, ಹೊಟ್ಟೆ (ಪೊಡೆ) ಯ ವಿಷಯದ ಮಾತಾಗಿತ್ತಲ್ಲದೆ (ಸುಕ್ಕು ಹೊಟ್ಟೆಯ ಮೇಲೆ ಕಾಣುತ್ತಿತ್ತಲ್ಲದೆ), ಕತ್ತರಿಸು, ಹೊಡೆ--ಎಂಬ ಮಾತುಗಳೇ ಆ ದೇಶದಲ್ಲಿ ಇರಲಿಲ್ಲ. ವ॥ ಮತ್ತು ಆ ಮನೋಹರವಾದ ಕರ್ನಾಟಕ ದೇಶದ ಮಧ್ಯದಲ್ಲಿ—೮. ಚಕ್ರವಾಕಪಕ್ಷಿಗಳೆಂಬ ಮೊಲೆಗಳನ್ನುಳ್ಳ (ರಥಾಂಗ + ಉರೋಜೆ) ನದಿಯೆಂಬ ಸ್ತ್ರೀಯು, ದುಂಬಿಗಳ ಮಾಲೆಯೆಂಬ ಇಂದ್ರನೀಲಮಣಿಗಳ ಮಾಲಿಕೆಯ ಬೆಡಗಿನಿಂದ ಕೂಡಿದ್ದಳು. ನೊರೆಯೆಂಬ ಮನೋಹರವಾದ ಶ್ರೀ ಗಂಧಲೇಪನದಿಂದ ಪ್ರಕಾಶಮಾನಳಾಗಿದ್ದಳು. ಹೊಳೆಯುತ್ತಿರುವ ಬಂಗಾರಪರ್ವತದ ಕಮಲಗಳೆಂಬ ಮುಖಮಂಡಲದಿಂದ ಸುಂದರವಾಗಿ ಕಾಣುತ್ತಿದ್ದಳು. ಬಾಳೆಮೀನೆಂಬ ಕಣ್ಣುಗಳಿಂದ ಹೊಳೆಯುತ್ತಿದ್ದಳು. ಕಮಲಪುಷ್ಪಗಳ ಧೂಳಿನ ಸಮೂಹ

ಡಳವಿುಂಬಾಗಿರೆ ಬಾಳೆಗಣ್ಪೊಳೆಯೆ ತಾಳ್ದಂಭೋಜಸದ್ರೇಣು ಸಂ
ಕುಳ ಪೀತಾಂಬರಮುಂ ಸರಿದ್ವಧು ರಥಾಂಗೋರೋಜೆ ಕಣ್ಗೊಪ್ಪಿದಳ್ ೮

ವ॥ ಮತ್ತಂ —

ಪರೆದಳಕಾಳಿ ಮೇಗಣಳಿಮಾಲೆ ಮರಂದಕಣಾಂಕಪಂಕಜಂ
ಸುರಚಿರಘರ್ಮವಾಃಕಣಮುಖಂ ಶಿಥಿಲತ್ವಮನಾಳ್ದ ನೀವಿ ಸಾ
ಲ್ದೆರೆ ನಜುಸುಯ್ಯೆಲರ್ಸುಳಿವೆಲರ್ಸನಖಾಂಕ ನಿತಂಬಮುದ್ವಯು
ಶ್ಚರಣಪದಂ ಪುಳಿಲ್ ಮಿಸುಗೆ ತಾನೆಸೆದತ್ತು ರತಾಂತಕಾಂತೆವೋಲ್ ೯

ಜಳನಿಧಿ ಪಡೆದೊಡೆ ಮುತ್ತಂ
ಸುಳಳಿತ ಶುಕ್ತಿಯೊಳೆ ಪುರುಡಿನಿಂ ಪಸೆದಪುದೀ
ಪೊಳೆ ನಳಿನಶುಕ್ತಿಯೊಳ್ಮಂ
ಜುಳ ನೀಲಮನೆನಿಸಿ ನಿಂದವಾಜಡಿಯುದಜದೊಳ್ ೧೦

ವೆಂಬ ಪೀತಾಂಬರವನ್ನುಟ್ಟು ಕಣ್ಣಿಗೆ ಮನೋಹರವಾಗಿ ಕಾಣುತ್ತಿದ್ದಳು. [ರಥ + ಅಂಗ + ಉರೋಜ—ರಥದ ಅಂಗ ಚಕ್ರ, ಚಕ್ರವೆಂಬ ಹೆಸರಿನ ಪಕ್ಷಿ ಚಕ್ರವಾಕ, ಈ ಪಕ್ಷಿಗಳೇ ಆ ನದಿಯೆಂಬ ಸ್ತ್ರೀಯ ಮೊಲೆಗಳು. ಚಂಚತ್ + ಕಾಂಚನ + ಅಬ್ಜ + ಆಸ್ಯೆ—ಹೊಳೆಯುತ್ತಿರುವ ಬಂಗಾರದ ಕಮಲದಂತಿರುವ ಮುಖವುಳ್ಳವಳು. ಅಂಭೋಜ + ಸತ್ + ರೇಣು + ಸಂಕುಳ + ಪೀತಾಂಬರ—ಕಮಲದ ಪಿಳ್ಳೆಯ (ಶ್ರೇಷ್ಠ) ಧೂಳಿನ ಸಮೂಹವೆಂಬ ಪೀತಾಂಬರ] ವ॥ ಮತ್ತು ೯. (ಆ ನದಿಯ ಮೇಲ್ಭಾಗದಲ್ಲಿ ಹಾರಾಡುತ್ತಿರುವ) ದುಂಬಿಗಳ ಸಾಲೇ (ಆ ನದಿಯೆಂಬ ಸ್ತ್ರೀಯ) ಮುಂಗುರುಳುಗಳ ಸಾಲು ; ಮಕರಂದದ ಹನಿಗಳೇ ಗುರುತಾಗಿ ಉಳ್ಳ ತಾವರೆಯೇ ಬೆವರಿನ ಹನಿಗಳಿಂದ ಕೂಡಿರುವ ಮನೋಹರ ಮುಖ ; ಸಾಲುಸಾಲಾಗಿರುವ ತರಂಗ (ತೆರೆ) ಗಳೇ ಶಿಥಿಲತೆಯಿಂದ ಕೂಡಿರುವ ನೀರಿಗೆ ತಂಗಾಳಿಯೇ ಉಸಿರಾಟ. ಅಧಿಕವಾದ ಪಕ್ಷಿಗಳ ಕಾಲು ಹೆಜ್ಜೆಗಳ ಗುರುತುಳ್ಳ ಮಳಲಿನ ರಾಶಿಯೇ ಉಗುರಿನ ಚುಚ್ಚುವಿಕೆ (ನಖಕ್ಷತ) ಯಿಂದ ಕೂಡಿದ ನಿತಂಬಗಳ ಭಾಗ–ಹೀಗೆ (ಆ ನದಿಯೆಂಬ ಸ್ತ್ರೀಯು) ರತಿಕ್ರೀಡೆಯನ್ನು ಮುಗಿಸಿದ ಸ್ತ್ರೀಯಂತೆ ಶೋಭಿಸುತ್ತಿತ್ತು. [ಉದ್ವಯಃ[1] + ಚರಣ + ಪದ—ವಿಶೇಷವಾದ ಪಕ್ಷಿಗಳ (ಉದ್ವಯಃ) ಕಾಲಿನ ಗುರುತು. ಸ + ನಖ + ಅಂಕ + ನಿತಂಬ—ನಖಗಳ ಗುರುತಿನಿಂದ ಕೂಡಿದ ನಿತಂಬ] ೧೦. ಸಮುದ್ರವು ಮನೋಹರವಾದ ಶುಕ್ತಿಯಲ್ಲಿ ಮುತ್ತನ್ನು ಪಡೆಯಲಾಗಿ, ಈ ನದಿಯು (ಆ ಸಮುದ್ರದೊಡನಿರುವ) ಸ್ಪರ್ಧೆಯಿಂದ ತಾವರೆಯೆಂಬ ಮುತ್ತಿನ ಚಿಪ್ಪಿನಲ್ಲಿ ಮನೋಹರವಾದ ಇಂದ್ರನೀಲಮಣಿಯನ್ನು ಪಡೆಯುತ್ತಿರುವುದೋ ಎಂದೆನಿಸಿ ಭ್ರಮರಗಳು ಆ ಹೊಳೆಯಲ್ಲಿರುವ ಕಮಲಗಳಲ್ಲಿ

1 ವಯಃ = ಪಕ್ಷಿ (ರಂ)

ಪಡೆದಬುಜಕೆ ರಾಜಂ ಧಾ
ಳಿಡುವಂ ಗಡ ರಾತ್ರಿಗೆಂದಜಂ ಜವದಿಂದಾ
ಯೆಡೆಗೆಯ್ದಲಂಚೆಯಿಟ್ಟವೊ
ಲೆಡೆಗೆಡೆಗರಸಂಚೆ ಪೊಳೆಯ ತೀರದೊಳೆಸೆಗುಂ ೧೧

ಪೊಳೆದೆರೆಯ ಕೋಳ್ಗೆ ತೊಲಗಿದ
ನಳಿನಮನೆ ತುಡುಂಕಲಾತುರಿಸುವಳಿ ಪೋಲ್ಗುಂ
ಮುಳಿದು ಕೆಲಕೊಲೆದಿನಿಯಳು
ಜ್ವಳವದನಮನಮರ್ದು ಚುಂಬಿಸಲ್ತವಕಿಪನಂ ೧೨

ಎಲೆ ಪಚ್ಚೆಯ ಪಲ್ಲಣಮು
ಳ್ಳಲರ್ದಬ್ಜಂ ಛತ್ರಮಡರ್ದ ನೊರೆ ಜಲ್ಲಿ ತಡಂ
ಗಲಿಸೆಸೆಯೆ ರಾಜಹಂಸಂ
ನಲವಿಂ ತೆರೆಗುದುರೆಯೇಱಿ ಕುಣಿಯಿಪನದಱೊಳ್ ೧೩

ಕಮಲಾಸನನೆನ್ನಯ ಪತಿ
ಕಮಲಜನೆಂದಾತನಂತೆ ತಾನುಂ ಹಂಸಂ
ಕಮಲಾಸನನಾದುದು ವಿಭು
ಸಮನೆನಿಸುವೆನೆಂಬ ಬಗೆ ವಿಜಾತಿಗೆ ನೈಜಂ ೧೪

ಪಾಸಿಸಿದವು. ೧೧. ಬ್ರಹ್ಮನು ತನ್ನ ಹುಟ್ಟಿಗೆ ಕಾರಣವಾದ ಕಮಲಕ್ಕೆ ಚಂದ್ರನು ರಾತ್ರಿಯಲ್ಲಿ ದಾಳಿಯಿಡುತ್ತಾನಲ್ಲವೆ ! ಎಂದುಕೊಂಡು ತೀವ್ರವಾಗಿ ಆ ಕಮಲವಿರುವ ಕಡೆಗೆ ಹೋಗುವುದಕ್ಕೋಸುಗ ಹಂಸಪಕ್ಷಿಯನ್ನು ಸಿದ್ಧಗೊಳಿಸಿ ಇಟ್ಟಿರುವ ಹಾಗೆ ಹೊಳೆಯ ತೀರದಲ್ಲಿ ರಾಜಹಂಸಪಕ್ಷಿಗಳು ಅಲ್ಲಲ್ಲಿ ಶೋಭಿಸುತ್ತಿದ್ದುವು. ೧೨. ನದಿಯಲ್ಲಿರುವ ತೆರೆಗಳ ಬಾಧೆಯಿಂದ ಒಂದು ಪಕ್ಕಕ್ಕೆ ತೊಲಗಿದ ಕಮಲವನ್ನು ತುಡುಕುವುದಕ್ಕೋಸುಗ ಆತುರಗೊಳ್ಳುತ್ತಿರುವ ಭ್ರಮರವು ಕೋಪಗೊಂಡು ಒಂದು ಕಡೆಗೆ ತಿರುಗಿಕೊಂಡಿರುವ ಪ್ರಿಯೆಯಾದವಳ ಮನೋಹರ ಮುಖವನ್ನು ಸೇರಿ ಚುಂಬಿಸಲು ತವಕಪಡುವಂತಹ ಪುರುಷನನ್ನು ಹೋಲುತ್ತಿತ್ತು. ೧೩. ಕಮಲದ ಎಲೆಯೇ ಹಸಿರು ಬಣ್ಣದ ಜೀನು, ಅರಳಿರುವ ಕಮಲವೇ ಛತ್ರಿ, ವ್ಯಾಪಿಸಿ ಹರಡಿರುವ ನೊರೆಯೇ ಮೇಲ್ಕಟ್ಟು (ಜಾಲರಿ),–(ಹೀಗೆ) ದಂಡೆಯವರೆಗೆ ಕೂಡಿ ಪ್ರಕಾಶಿಸುತ್ತಿರಲು ರಾಜಹಂಸ ಪಕ್ಷಿಯೆಂಬ ರಾಜಶ್ರೇಷ್ಠನು ಸಂತೋಷದಿಂದ ತೆರೆಯೆಂಬ ಕುದುರೆಯನ್ನೇರಿ, ಆ ನದಿಯಲ್ಲಿ ಕುಣಿದಾಡಿಸುತ್ತಿದ್ದನು. ೧೪. ಹಂಸಪಕ್ಷಿಯು ತನ್ನ ಒಡೆಯನಾದ ಬ್ರಹ್ಮನು ಕಮಲವನ್ನೇ ಪೀಠವಾಗಿ ಉಳ್ಳವನು ಎಂದುಕೊಂಡು, ಆತನ ಹಾಗೆ ತಾನೂ ಕೂಡ ಕಮಲವನ್ನೇ ಆಸನವನ್ನಾಗಿ ಮಾಡಿಕೊಂಡಿತ್ತು. ಪ್ರಭುವಿಗೆ ಸಮಾನನೆಂದೆನಿಸಿಕೊಳ್ಳುವ ಯೋಚನೆ ಜಾತಿಹೀನನಿಗೆ ಸ್ವಭಾವ ಸಿದ್ಧವಾದುದು. [ವಿಜಾತಿ–ಪಕ್ಷಿಗಳ ಸಮೂಹ,

ವ॥ ಇಂತನವಧಿಕ ಸೌಂದರ್ಯಮನಾಳ್ದ ತರಂಗಿಣಿಯ ತಟನಿಕಟಪ್ರದೇಶದಲ್ಲಿ—

ವರ ರತ್ನಗರ್ಭೆ ತನ್ನಯ
ಸಿರಿಯಂ ಧರೆಗಱಿಪಲೆಂದು ಪಸುರ್ವ ತಲ ಕರೋ
ತ್ಕರಮಂ ಕೆದರ್ದವೊಲತಿ ಭಾ
ಸುರಮಾಯ್ತು ಪಸುರ್ಪುವೆತ್ತ ಕಳಮಕ್ಷೇತ್ರಂ ೧೫

ಮಡಿಯುದಕದಿ ಮಾರ್ಪೊಳೆದಿರೆ
ಬಿಡದೇಳ್ದ ಶುಕಾಳಿ ಕೆಳಗಿವೆತ್ತಣವೆನುತಂ
ನಡೆ ನೋಡಿ ಕೌತುಕದೆ ತಲೆ
ಗೊಡಹುವುದೆನೆ ಬಾಗಿ ತೂಪ ಕಳಮೆಗಳೆಸೆಗುಂ ೧೬

ವರ ಪುಣ್ಯನದಿಯ ಕಾಲಂ
ಚಿರಕಾಲಂ ಸೇವೆಗೈದ ಪುಣದ್ಯೆ ಪೋಪಂ
ತಿರೆ ಸಗ್ಗಕೆ ಗರ್ದೆಗಳಂ
ಬರಕೊಗೆದಾಡುವ ಶುಕಾಳಿಯೇನೊಪ್ಪಿದುದೋ ೧೭

ಮದನಂ ತನ್ನಯ ತಾಯ ಸಾರಗೃಹಮಂ ಸೋಂಪೇಱೆ ಸೂರ್ಯನೆಂ
ಬಾದಱಿಂದಾತನ ತೇರ್ಗೆ ವಾಜಿಯೊಳವೇಳಿನ್ನೊಂದಱಿಂದಲ್ಲದಾ

ವಿಗತವಾದ ಜಾತಿ (ಹೀನ ಜಾತಿ)] ವ॥ ಹೀಗೆ ಅನಂತ ಸೌಂದರ್ಯವನ್ನು ಹೊಂದಿದ ಹೊಳೆಯ ದಡೆಯ ಪ್ರದೇಶದಲ್ಲಿ—೧೫. ಶ್ರೇಷ್ಠರತ್ನಗರ್ಭೆಯಾದ ಭೂದೇವಿಯು ತನ್ನಲ್ಲಿರುವ ಸಂಪತ್ತನ್ನು ಭೂಲೋಕದ ಜನರಿಗೆ ತಿಳಿಸಲೆಂದು ಪಚ್ಚೆರತ್ನದ ಕಾಂತಿಯ ಸಮೂಹವನ್ನು ಕೆದರಿರುವಳೋ ಎಂಬಂತೆ ಹಸುರಾದ ಬತ್ತದ ಗದ್ದೆಗಳು ಪ್ರಕಾಶಿಸುತ್ತಿದ್ದುವು. ೧೬. ಹಾರಾಡುತ್ತಿರುವ ಗಿಳಿಗಳ ಸಾಲು ಗದ್ದೆಯ ಹಾಳೆಗಳಲ್ಲಿರುವ ನೀರಿನಲ್ಲಿ ಪ್ರತಿಬಿಂಬಿಸಿರಲು, (ಕಾಳಿನ ಭಾರದಿಂದ) ಬಾಗಿ ತೂಗಾಡುತ್ತಿರುವ ಬತ್ತದ ಪೈರುಗಳು, ಈ ಕೆಳಭಾಗದಲ್ಲಿ (ಕಾಣುವ) ಈ ಗಿಳಿಗಳು ಎಲ್ಲಿಯುವು ? ಎನ್ನುತ್ತ ಚೆನ್ನಾಗಿ ನೋಡಿ, ಕೌತುಕದಿಂದ ತಲೆಯನ್ನಲ್ಲಾಡಿಸುತ್ತಿರುವುವೋ ಎಂಬಂತೆ (ಅಲುಗಾಡುತ್ತ) ಶೋಭಿಸುತ್ತಿದ್ದುವು. ೧೭. ಬತ್ತದ ಗದ್ದೆಗಳು ಶ್ರೇಷ್ಠವಾಗಿಯೂ, ಪರಿಶುದ್ಧವಾಗಿಯೂ ಇರುವ ಹೊಳೆಯ ಕಾಲನ್ನು (ಕಾಲುವೆಯನ್ನು) ಬಹುಕಾಲದಿಂದ ಸೇವಿಸಿದುದರಿಂದುಂಟಾದ ಪುಣ್ಯದಿಂದ ಸ್ವರ್ಗಕ್ಕೇರುತ್ತಿರುವುವೋ ಎಂಬ ಹಾಗೆ ಆಕಾಶಕ್ಕೆ ನೆಗೆದು ಹಾರುತ್ತಿರುವ ಗಿಳಿಗಳ ಸಮೂಹವು ಏನು ಮನೋಹರವಾಗಿತ್ತೋ ! ೧೮. ಮನ್ಮಥನು ತನ್ನ ತಾಯಿಯಾದ ಲಕ್ಷ್ಮೀದೇವಿಯ ಶ್ರೇಷ್ಠಮನೆಯಾದ ಕಮಲವನ್ನು ಸೂರ್ಯನು ಚೆಲುವುಗೊಳಿಸಿದನು. ಆ ಸೂರ್ಯನತೇರಿಗೆ ಏಳೇ ಕುದುರೆಗಳು ಇರುವುವು. ಮತ್ತೊಂದು ಕುದುರೆಯಿಲ್ಲದೆ ಆಗುವುದಿಲ್ಲ. ಆ ಸೂರ್ಯನು (ತನಗೆ) ಪ್ರೀತಿಯಾದುದನ್ನು ಅರಿಸಿ

ಗದು ತಾನೊಲ್ದುದನಾಯ್ದು ಕೊಳ್ಗೆನುತವಾತ್ಮೀಯಾಶ್ವಸಂದೋಹಮಂ
ಪದಪಿಂದಟ್ಟಿದನೆಂಬವೋಲ್ ಶುಕಚಯಂ ಚೆಲ್ವಾದುದಾಕಾಶದೊಳ್ ೧೮

ನಡು ನಸು ಬಳ್ಕೆ ಬಟ್ಟ ಮೊಲೆ ಮೇಲುದನೆತ್ತೆ ನಿತಂಬಮಂಡಳಂ
ಪೊಡರೆ ಕಟಾಕ್ಷರೋಚಿ ಕವಿದೊತ್ತೆ ಕುರುಳ್ಕುಣಿದಾಡೆ ತೋರ ಸೋ
ರ್ಮುಡಿ ಕಡು ಜಾಱೆ ನುಣ್ದೊಡೆ ಕದಕ್ಕದಿಸುತ್ತಿರೆ ಬಂದು ನಿಂದು ಪೆ
ಣ್ಗಡಣಮದಲ್ಲಿ ಪಾಱಿಪುದು ಕೈರವದಿಂದಿಡುತಂ ಶುಕಾಳಿಯಂ ೧೯

ತಾವರೆಯ ನೂಲ ನುಲಿಯುಮು
ದ್ದಾವ ವನರುಹದಳದ ಪಟ್ಟಿಗವಣೆಯೊಳಧಟಿಂ
ತೀವುತೆ ನೈದಿಲ್ಮೊಗ್ಗೆಯ
ನಾ ವನಿತಾತತಿ ಶುಕಾಳಿಯಂ ಬಿಡದಿಡುಗುಂ ೨೦

ಮೇಲಾಂತು ಸೋಗೆಯಂ ಪೊಸ
ಪಾಲಂತು ಸುಪರ್ವಮಾಂತು ಗಿರಿಯುಂ ಪಶುವಂ
ಲೀಲಾವಹ ಭಾರತಮಂ
ಪೋಲುತ್ತುಂ ಮೆಱೆದುದಲ್ಲಿ ಪುಂಡ್ರೇಕ್ಷುವನಂ ೨೧

ಕೊಳ್ಳಲಿ ಎಂಬ ಕಾರಣದಿಂದ ತನ್ನ ವಾಹನಗಳ ಸಮೂಹವನ್ನು ಪ್ರೀತಿಯಿಂದ ಕಳುಹಿಸಿರುವನೋ ಎಂಬಂತೆ ಗಿಳಿಗಳ ಸಮೂಹವು ಆಕಾಶದಲ್ಲಿ ಚೆಲುವಾಗಿ ಕಾಣುತ್ತಿತ್ತು. ೧೯. ನಡುವು ಸ್ವಲ್ಪ ಬಳುಕುತ್ತಿತ್ತು ; ಗುಂಡಾದ ಮೊಲೆಗಳು ಮೇಲುಸೆರಗನ್ನು ನೂಕುತ್ತಿದ್ದವು ; ಕಟಿಪಶ್ಚಾತ್ ಭಾಗವು ಉಬ್ಬಿತ್ತು ; ಕಡೆಗಣ್ಣುಗಳ ಕಾಂತಿಯು ನೋಟವು ವ್ಯಾಪಿಸಿಕೊಂಡು ಮುನ್ನುಗ್ಗುತ್ತಿತ್ತು ; ಮುಂಗುರುಳುಗಳು ಕುಣಿದಾಡುತ್ತಿದ್ದವು ; ದಪ್ಪವೂ ಉದ್ದವೂ ಆದ ಜಡೆಯು ಶಿಥಿಲವಾಗಿತ್ತು ; ನುಣುಪಾದ ತೊಡೆಯು ಕದಕದ ಎಂದು ನಡುಗುತ್ತಿತ್ತು. (ಇಂಥ) ಹೆಣ್ಣುಗಳ ಸಮೂಹವು ಬಂದು ನಿಂತು, (ಆ ಬತ್ತದ) ಗದ್ದೆಗಳಲ್ಲಿ (ಹಾರಿಬಂದು ಕುಳಿತ) ಗಿಳಿಗಳ ಸಮೂಹವನ್ನು ಬಿಳಿಯ ನೈದಿಲೆ ಹೊಡೆದು ಹಾರಿಸುತ್ತಿತ್ತು. ೨೦. ಕಮಲದೇಟಿನ ನಾರಿನಿಂದ ಮಾಡಿದ ಕಮಲದೆಸಳಿನ ಪಟ್ಟಿಗವಣೆಯಲ್ಲಿ ನೈದಿಲೆಯ ಮೊಗ್ಗುಗಳನ್ನು ಇಟ್ಟು, ಪರಾಕ್ರಮದಿಂದ ಆ ಸ್ತ್ರೀಯರ ಸಮೂಹವು ಗಿಳಿಗಳ ಸಮೂಹವನ್ನು ತಪ್ಪದೆ ಹೊಡೆಯುತ್ತಿತ್ತು. (ಹೊಡೆದು ಹಾರಿಸುತ್ತಿತ್ತೆಂದು ಭಾವ.) ೨೧. ಅಲ್ಲಿನ ಕಬ್ಬಿನ ಗದ್ದೆಗಳು ಮೇಲ್ಭಾಗದಲ್ಲಿ ಸೋಗೆಯನ್ನು ಧರಿಸಿತ್ತು ; ಹೊಸ (ಕಬ್ಬಿನ) ಹಾಲನ್ನು ಹೊಂದಿತ್ತು ; ಒಳ್ಳೆಯ ಗಿಣ್ಣುಗಳನ್ನು ಹೊಂದಿತ್ತು. (ಹೀಗೆ ಕೂಡಿ) ಸೋಗೆಯನ್ನು (ನವಿಲನ್ನು) ಧರಿಸಿ ಪರ್ವತವನ್ನೂ, ಹಾಲನ್ನೂ ಹೊಂದಿ ಹಸು (ಆಕಳು) ವನ್ನೂ, ಪರ್ವಗಳನ್ನೂ (ಹದಿನೆಂಟು ಪರ್ವಗಳನ್ನು) ಧರಿಸಿ ವಿಲಾಸವನ್ನುಂಟುಮಾಡುವ ಮಹಾ

ಮೂಜಗಮುಂ ಗೆಲಲೆಸಪ ಮ
ನೋಜಂಗೆ ಶರಾಸನಂಗಳಂ ಪಲವನಿಳಾ
ಶ್ರೀ ಜತನದೆ ಪಡೆದಿಟ್ಟಪೊ
ಲೋಜೆಯಿನೆಸೆದಿರ್ದುದಿಕ್ಷುಕಾಂಡಕದಂಬಂ ೨೨

ಅನಿಲಹತಿಗೆಲೆಗಳೊರಸಿದೊ
ಡೆ ನಿತಾಂತಂ ಸೀಳ್ದ ಕರ್ಬಿನಿಂ ಪಾಯ್ದುಗುತಿ
ರ್ಪಿನಿರಸದ ಪೊನಲನಾ ನೆ
ಲ್ದೆನೆದಿಂದರಗಿಳಿಗಳೀಂಟಿ ತಣಿವವಜಸ್ರಂ ೨೩

ಚಪಲ ಕಪಿ ಕೆಡಪೆ ತೆಂಗಿನ
ವಿಪುಳ ಫಳಂ ಬೀಳ್ದು ಸೀಳ್ದು ಸುರಿಪೆಳೆನೀರಾ
ವುಪವನದ ಕಾಲ್ಗಳೊಳ್ತೀ
ವಿ ಪರಿಯೆ ನೀರುಂಬುದಲ್ಲಿ ಹಸ್ತಿಕದಂಬಂ ೨೪

ವ॥ ಇಂತು ಸಕಲಜನಮನೋನಯನ ಮನೋಜ್ಞಲೀಲಾಭವನಪೂದಿಕ್ಷುವನದ ಸೀಮಾಸಮೀಪ ಭಾಸುರ ಭೂಭಾಮಿನೀ ಸೀಮಂತೋಪಮಾನಮಾದ ಮಾರ್ಗದಿರ್ಕೆಲದೊಳ್—

ಭಾರತ.ಗ್ರಂಥವನ್ನೂ ಹೋಲುತ್ತಿತ್ತು. ೨೨. ಮೂರುಲೋಕಗಳನ್ನೂ ಜಯಿಸುವುದಕ್ಕೆ ಉದ್ಯೋಗಿಸುವ ಮನ್ಮಥನಿಗೆ ಭೂಮಿಯೆಂಬ ಲಕ್ಷ್ಮಿಯು ಅನೇಕ ಧನುಸ್ಸುಗಳನ್ನು ಜಾಗರೂಕತೆಯಿಂದ ಪಡೆದು ಇಟ್ಟುಕೊಂಡಿರುವಳೋ ಎಂಬಂತೆ ಕಬ್ಬಿನ ಕೋಲುಗಳ ಸಮೂಹವು ಸಾಲುಗೊಂಡು ಶೋಭಿಸುತ್ತಿತ್ತು. [ಕಬ್ಬು ಮನ್ಮಥನ ಧನುಸ್ಸೆಂಬ ಕವಿಸಮಯ ಸುಪ್ರಸಿದ್ಧ]. ೨೩. ಗಾಳಿಯು ಹೊಡೆತಕ್ಕೆ (ಆ ಕಬ್ಬಿನ) ಗರಿಗಳು ತಿಕ್ಕಾಡುತ್ತಿರಲು. (ಆ ತಿಕ್ಕಾಟದ ಫಲವಾಗಿ) ಅಧಿಕವಾಗಿ ಸೀಳುಬಿಟ್ಟ ಕಬ್ಬಿನ ಕೋಲಿನಿಂದ ಹೊರಹೊಮ್ಮಿ ಚಿಮ್ಮುತ್ತಿರುವ ಮಧುರವಾದ ಹಾಲಿನ (ರಸದ) ಪ್ರವಾಹವನ್ನು, ಒತ್ತುದ ತೆನೆಗಳನ್ನು ತಿಂದುಬಂದ ಗಿಳಿಗಳು ಕುಡಿದು ಸದಾ ತೃಪ್ತಿಪಡುತ್ತಿದ್ದವು. ೨೪. ಚಂಚಲಸ್ವಭಾವದ ಕಪಿಗಳು ಕೆಡವಿದ ತೆಂಗಿನ ದೊಡ್ಡ ದೊಡ್ಡ ಕಾಯಿಗಳು (ನೆಲಕ್ಕೆ) ಬಿದ್ದು ಒಡೆದು. ಜಿನುಗುತ್ತಿದ್ದ ಎಳನೀರು, ಆ ಉದ್ಯಾನವನದ ಕಾಲುವೆಗಳಲ್ಲಿ ತುಂಬಿಹರಿಯುತ್ತಿರಲು, ಆ ಕಾಲುವೆಗಳಲ್ಲಿ ಆನೆಗಳ ಸಮೂಹವು ಬಂದು ನೀರು ಕುಡಿಯುತ್ತಿತ್ತು. ವ॥ ಹೀಗೆ ಸಕಲಜನಗಳ ಕಣ್ಣಿಗೂ, ಮನಸ್ಸಿಗೂ. ಮನೋಹರ ಕ್ರೀಡಾಗೃಹವೆನಿಸಿದ ಕಬ್ಬಿನಗದ್ದೆಯ ಸೀಮೆಯ ಸಮೀಪದಲ್ಲಿ ಪ್ರಕಾಶಮಾನವಾದ ಭೂಮಿಯೆಂಬ ಸ್ತ್ರೀಯ ಬೈತಲೆಗೆ ಸಮಾನವಾದ ಮಾರ್ಗದ ಎರಡೂಕಡೆಗಳಲ್ಲಿ—

ಕದಳೀಸ್ತಂಭದ ಕಂಭದಿಂ ಕುಸುಮಮಾಲಾಬಂಧದಿಂ ಚಂದನಾ
ಮ್ರದಳಾಬದ್ಧವಿತಾನದಿಂದೆ ಕೊಳವೇರ್ಕೆರ್ಗಟ್ಟನಿಂ ಕೈತಕಾ
ಚ್ಛದಳಾಚ್ಛಾದನದಿಂ ಕನತ್ಕಮಳ ಘಂಟಾಪಙ್ಕ್ತಿಯಿಂ ಪುಷ್ಪಗು
ಚ್ಛದ ಪೊಂಬಾಳೆಯ ಚಾಮರಪ್ರಕರದಿಂ ರಮ್ಯಂ[1] ಪ್ರಪಾಮಂಟಪಂ ೨೫

ವ|| ಆ ಮಂಟಪದೊಳ್—

ತಳಿರ್ಜೊಂಪದೋವರಿಯ ತ
ಣ್ಪುಳಿಲೆಡೆಯೊಳ್ಮಿಸುಪ ಚಂದ್ರಕಾಂತದ ಘಟದೊ
ಳ್ತುಳಿರ್ವಾಲಿನೀರನಬಳಾ
ವಳಿ ತಣ್ಗರಗದೊಳೆ ತೀವಿ ಪಥಿಕರ್ಗೆಱೆಗುಂ ೨೬

ತರಳನದೊರ್ವನಾತ್ಮಕರತೋಯದೊಳಾಕೆಯ ವಕ್ತ್ರಲೋಚನಾ
ಧರ ದರಹಾಸ ನಾಸಿಕೆಗಳಂದದ ಮಾರ್ಪೊಳಪೇಕ್ಷಿಸುತ್ತೆ ತತ್
ಪರಿಮಳಕಿಟ್ಟ ನೀರರುಹ ಕೈರವ ಪಾಟಲ ಕುಂದ ಚಂಪಕ
ಸ್ಫುರಿತ ಸುವಾಳಿಗೆತ್ತು ನಡೆನೋಡಿದನೀಂಟದೆ ಪಾಣಿವಾರಿಯಂ ೨೭

ವ|| ಪೆಱತೊಂದಱವಟಿಗೆಯೊಳೊರ್ವನೊರ್ವಳ್ನೀರೆಱೆವಾಗಳವಳಂ ಕಂಡು—

೨೫. ಬಾಳೆಯಗಿಡಗಳಿಂದ ಮಾಡಿದ ಕಂಬಗಳಿಂದಲೂ, ಹೂವಿನಮಾಲೆಗಳ ಕಟ್ಟುವಿಕೆಯಿಂದಲೂ, ಶ್ರೀಗಂಧ, ಮಾವು ಮೊದಲಾದ ಎಲೆಗಳಿಂದ ಕಟ್ಟಿದ ಮೇಲುಕಟ್ಟುಗಳಿಂದಲೂ, ಲಾಮಂಚದಿಂದ ಮಾಡಿದ ಗೋಡೆಗಳಿಂದಲೂ, ಕೇದಗೆಯಬಿಳಿಯ ಎಸಳುಗಳಿಂದ ಮಾಡಿದ ಮೇಲುಹೊದಿಕೆಯಿಂದಲೂ, ಹೊಳೆಯುವ ತಾವರೆಹೂಗಳ ಗಂಟೆಗಳ ಸಾಲಿನಿಂದಲೂ, ಹೂಗೊಂಚಲು, ಹೊಂಬಾಳೆಗಳ ಚಾಮರಗಳ ಸಮೂಹದಿಂದಲೂ, ಅರವಟ್ಟಿಗೆಗಳು ರಮ್ಯವಾಗಿದ್ದುವು. ವ|| ಆ ಅರವಟ್ಟಿಗೆಗಳಲ್ಲಿ— ೨೬. ತಳಿರಿನ ಗುಚ್ಛವನ್ನು ಸುತ್ತಮುತ್ತ ಇಟ್ಟು, ಮಳಲು ಗುಡ್ಡೆಯ ಸ್ಥಳದಲ್ಲಿ ಶೋಭಿಸುವ ಚಂದ್ರಕಾಂತ ಶಿಲೆಯಿಂದ ಮಾಡಿದ ಹರವಿಯಲ್ಲಿ ಸಂಗ್ರಹಿಸಿರುವ ತಣ್ಣೀರನ್ನು ಸ್ತ್ರೀಯರುಗಳು ತಂಪಾದ ಪಾನ ಪಾತ್ರೆಯಲ್ಲಿ (ತಂಬಿಗೆಯಲ್ಲಿ) ತುಂಬಿ, ದಾರಿಹೋಕರಿಗೆ ಕುಡಿಯಲು ಹೊಯ್ಯುತ್ತಿದ್ದರು. ೨೭. ಒಬ್ಬಾನೊಬ್ಬ ಹುಡುಗನು ತನ್ನ ಕೈಯಲ್ಲಿರುವ ನೀರಿನಲ್ಲಿ ನೀರೆರೆಯುವ ಸ್ತ್ರೀಯ ಮುಖ ಕಣ್ಣು, ತುಟಿ, ಹಲ್ಲು, ಮೂಗು—ಇವುಗಳ ಅಂದವಾದ ಪ್ರತಿಬಿಂಬವನ್ನು ನೋಡುತ್ತ, ಆ ನೀರಿನಲ್ಲಿ ಪರಿಮಳಕ್ಕೆಂದು ಇಟ್ಟಿದ್ದ ಕಮಲ, ಬಿಳಿಯ ಕಮಲ, ಪಾದರಿ, ಮಲ್ಲಿಗೆ, ಸಂಪಿಗೆ-ಮೊದಲಾದ ಹೂಗಳಿಂದು ತಿಳಿದು ಬೊಗಸೆಯಲ್ಲಿ ತುಂಬಿರುವ ನೀರನ್ನು ಕುಡಿಯದೆ. ಚೆನ್ನಾಗಿ ನೋಡಿದನು. ವ|| ಮತ್ತೊಂದು ಅರವಟ್ಟಿಗೆಯಲ್ಲಿ ಒಬ್ಬಳು ನೀರೆರೆಯುವ

[1] ಮ್ಯಂ(ಅ, ಚ)

ಕರಗದ ಜಲಮಿದು ಮುಖಹಿಮ
ಕರಗದಮಂ ಪೂಣಿಸಲ್ಕೆ ಸಾಲ್ವುದು ಪೋಣೇ
ಕರಗದ ಕಾಮನ ಪಶಿಯಿಂ
ಕರಗದವೋಲ್ಮಾಳ್ಪುದೆನ್ನನೆಲೆ ಮೃಗನಯನೇ ೨೮

ವ॥ ಎಂದು ಮನೋರಥಂ ಬಡೆದಿರ್ದನಲ್ಲಿ ಮತ್ತೊರ್ವಳ್ಧೂರ್ತದೂತಿ—

ಎಲೆಗೇ ಬಾಯಾರೆ ಬಂದು ಪಥಿಕನಿವನಪೂರ್ವಂ ಗಡೀತಂಗೆ ಹೇವೋ
ಜ್ವಲರಂಭಾಸ್ತಂಭ ಭಾಸ್ವದ್ವಿಪುಳಪುಳಿನಮಂ ಕುಳ್ಳಿರಲ್ಕಿತ್ತು ಕಂಠ
ಸ್ಥಲದೊಳ್ ಚಂಚನ್ಮೃಣಾಳಂಗಳನಿಳಿಪಿ ಸರೋಜಾರಿಬಿಂಬೋಜ್ವಳನ್ಮಂ
ಜುಲ ಪೀಯೂಷಾಂಬುವಂ ನೀಂ ಕುಡಿಯಲೆಱೆವುದೆಂದೊಳ್ಪನಾಡುತ್ತುಮಿರ್ದಳ್ ೨೯

ಎಳನೀರ್ಗಳ ತನಿಗರ್ಬಿನ
ತಿಳಿರಸದ ರಸಾಲಪಕ್ವಫಳಸಾರದ ನ
ಲ್ಗಳಲ ಬಹುವಿಧದ ಪಾನಂ
ಗಳನಲ್ಲಲ್ಲೆಱೆವರಾ ಪ್ರಪಾಪಾಲಿಕೆಯರ್ ೩೦

ಕಾಲದಲ್ಲಿ ಒಬ್ಬ (ಪಥಿಕನು) ಅವಳನ್ನು ಕಂಡು—೨೮. ಎಲೈ ಜಿಂಕೆಯಂತೆ ಚಂಚಲ ವಾದ ಕಣ್ಣುಳ್ಳವಳೇ, ಈ ಪಾನ ಪಾತ್ರೆಯಲ್ಲಿರುವ ನೀರು ಮುಖ ಚಂದ್ರಮನ ರೋಗವನ್ನು ಕಳೆಯುವುದಕ್ಕೆ ಸಮರ್ಥವಾಗುವುದು. ಮತ್ತು ಈ ಕಡಿಮೆ ಮಾಗದಿರುವ ಮನ್ಮಥನಿಂದುಂಟಾದ ಬಾಧೆಯಿಂದ ನನ್ನನ್ನು ಕೃಶನಾಗದ ಹಾಗೆ ಮಾಡಬೇಕು. ವ॥ ಹೀಗೆಂದು ಇಷ್ಟಾರ್ಥವನ್ನು ಹೊಂದಿ ಇದ್ದನು. ಅಲ್ಲಿ ಮತ್ತೊರ್ವ ವಂಚಕಳಾದ ದೂತಿಯು—೨೯. ಎಲೈ ಹೆಂಗಸೇ (ಅಗೋ) ದಾರಿ ಹೋಕನೊಬ್ಬನು ನೀರಡಿಕೆಯುಳ್ಳ ವನಾಗಿ ಬಂದನು. ಈತನು ಪೂರ್ವದಲ್ಲಿ ಬಂದವನಲ್ಲವಲ್ಲವೆ? ಈತನಿಗೆ ನೀನು ಸುವರ್ಣದಂತೆ ಪ್ರಕಾಶಿಸುವ ವಿಶಾಲವಾದ ಮಳಲದಿಣ್ಣೆಗಳನ್ನು ಕುಳಿತುಕೊಳ್ಳುವುದಕ್ಕೆ ಕೊಟ್ಟು ಕುತ್ತಿಗೆಯಲ್ಲಿ ಮನೋಹರವಾದ ತಾವರೆಯ ದಂಟುಗಳನ್ನು ಇಟ್ಟು ಚಂದ್ರ ಮಂಡಲದ ಶ್ರೇಷ್ಠವಾದ ಮನೋಹರ ಅಮೃತದಂತಿರುವ ನೀರನ್ನು ಪಾನ ಮಾಡುವುದಕ್ಕೆ ಕೊಡುವುದು ಎಂದು ಚಮತ್ಕಾರದ ಮಾತನ್ನಾಡುತ್ತಿದ್ದಳು.[1] ೩೦. ಅಲ್ಲಿಗಲ್ಲಿಗೆ ಆ ಅರವಟ್ಟಿಗೆಗಳಲ್ಲಿ ನೀರನ್ನೆರೆಯುವ ಸ್ತ್ರೀಯರುಗಳು ಎಳನೀರು, ತನಿಗಬ್ಬಿನ ನಿರ್ಮಲವಾದ ರಸ, ಪಕ್ವವಾದ ಮಾವಿನ ಹಣ್ಣಿನ ರಸ, ಒಳ್ಳೆಯ ಮಜ್ಜಿಗೆ

1. ತೊಡೆಯನ್ನೊಪ್ಪಿಸು, ಜಘನವನ್ನು ನೀಡು, ಆಲಂಗಿಸು, ಚುಂಬಿಸು—ಎಂದು ಸೂಚ್ಯಾರ್ಥ (ರಂ)

ವ॥ ಇಂತಗಣಿತ ಶೋಭಾವರೇಣ್ಯಮಾದ ತದ್ದೇಶಶ್ರೀಯ ಸೌಭಾಗ್ಯಭವನಮೆನಿಸಿ—

ಕ್ಷೋಣಿತಳಕ್ಕೆ ಪೇಪೆಸೆಯೆ ಕಂಗೊಳಿಸಿರ್ದುದು ನೈಜಕಾಂತಿ ಸಂ
ಪ್ರೀಣಿತ ಲೋಕಲೋಚನ ಮಹಾಮಣಿಪರ್ಯ್ಯಕದಂಬಗೋಪುರ
ಶ್ರೇಣಿ ಮನೋಜ್ಞವೀಥಿ ಪರಮೋತ್ಸವ ಮಂಜುಳ ಮಂದಿರಾಳಿ ಕ
ಲ್ಯಾಣಪುರಂ ಸಮಗ್ರ ವಿಭವಾನ್ವಿತಮೂರ್ಜಿತ ಮಂಗಳಾಕರಂ ೩೧

ಹತಬಲಪಾಸಮಾದುದಮರಾವತಿಯೈಲಬಿಲಪ್ರಭಾವಸಂ
ಗತಿಗೆಡೆಯಾಯ್ತು ನೋಳ್ಪೊಡಳಕಾವತಿ ಜಿಹ್ವಗತಿದ್ವಿಜಿಹ್ವಸಂ
ತತಿಗಮರ್ದಿರ್ಕೆ ಭೋಗವತಿಯೆಂದೆನಿಸಿರ್ದುದೆನುತ್ತೆ ಸದ್ಬಲ
ಸ್ಥಿತಿ ನುತಗೇಹ ಸಾಧುಯುತಮಾಪುರಮೇಳಿಪುದಾ ಪುರಂಗಳಂ ೩೨

ಮುಂತಾದ ಅನೇಕ ವಿಧದ ಪಾನೀಯಗಳನ್ನು ಎರೆಯುತ್ತಿದ್ದರು. ವ॥ ಹೀಗೆ ಅಗಣಿತವಾದ ಶೋಭೆಯಿಂದ ಶ್ರೇಷ್ಠವಾದ ಆ ಕರ್ನಾಟಕ ದೇಶವೆಂಬ ಲಕ್ಷ್ಮಿಯ ಸೌಭಾಗ್ಯ ಗೃಹವೆನಿಸಿ—೩೧. ಕಲ್ಯಾಣವೆಂಬ ಪಟ್ಟಣವು ಸಂಪೂರ್ಣ ವೈಭವದಿಂದ ಕೂಡಿ, ಅಧಿಕವಾದ ಮಂಗಳಗಳಿಗೆ ಆಶ್ರಯವಾಗಿ, ತನ್ನ ನೈಜಕಾಂತಿಯಿಂದ ಲೋಕದ ಜನರನೇತ್ರಗಳನ್ನು ಸಂತೋಷಪಡಿಸುವ ದೊಡ್ಡವಾದ ರತ್ನನಿರ್ಮಿತ ಉಪ್ಪರಿಗೆಗಳ ಸಮೂಹ, ಗೋಪುರಗಳ ಪಙ್ತಿ ಇವುಗಳಿಂದ ಶೋಭಿಸುತ್ತಿತ್ತು. ಬೀದಿಗಳು ಪರಮೋತ್ಸವದಿಂದ ಕೂಡಿದ ಮನೋಹರವಾದ ಮನೆಗಳ ಸಾಲುಳ್ಳವಾಗಿದ್ದವು. ಈ ರೀತಿ ಆ ಪಟ್ಟಣವು ಭೂಲೋಕಕ್ಕೆ ಅತಿಶಯವೆಂದೆನಿಸಿ ಶೋಭಿಸುತ್ತ ಮನೋಹರವಾಗಿತ್ತು. ೩೨. ಅಮರಾವತಿ ಪಟ್ಟಣವು ಸಂಹಾರಮಾಡಲ್ಪಟ್ಟ ಸೈನ್ಯದ ವಾಸಕ್ಕೆ ಆಶ್ರಯವಾದದ್ದಾಯಿತು (ಬಲಾಸುರನನ್ನು ಸಂಹರಿಸಿದ ದೇವೇಂದ್ರವಾಸಕ್ಕೆ ಆಶ್ರಯವಾಯಿತು ; ಅಳಕಾವತಿ ನಗರವು ಐಲಬಿಲ ಪ್ರಭಾವತತಿಗೆ ಎಂದರೆ ಭೂ ಸಂಬಂಧವಾದ ಬಿಲ (ಡೋರು)ಗಳ ಪ್ರಭಾವಗಳ ಸಮೂಹಕ್ಕೆ ಆಸ್ಪದವಾಯಿತು (ಇಲೆಬಿಲೆ ಎಂಬುವಳ ಮಗನಾದ ಕುಬೇರನ ಪ್ರಭಾವ ಪರಾಕ್ರಮಗಳ ಸಂಗತಿಗಳಿಗೆ ಆಸ್ಪದವಾಯಿತು) ; ಭೋಗವತೀನಗರವು ವಕ್ರಮಾರ್ಗದಲ್ಲಿ ನಿರತರಾದವರು ಎಂದರೆ ಧರ್ಮಶಾಸ್ತ್ರ ವಿರುದ್ಧವಾದ ವಕ್ರಮಾರ್ಗದಲ್ಲಿ ಹೋಗುವ ಹರು ಮತ್ತು ಎರಡು ನಾಲಿಗೆಗಳುಳ್ಳವರು—ಇವರ ಸಮೂಹಕ್ಕೆ ಹೊಂದಿಕೊಂಡ ಆಶ್ರಯಸ್ಥಾನವಾಗಿತ್ತು (ಜಿಹ್ಮಗತಿಯೆಂದರೆ ಡೊಂಕಾದ ಗಮನವುಳ್ಳ, ಎರಡು ನಾಲಿಗೆಗಳುಳ್ಳ ಸರ್ಪಗಳ ಸಂತತಿಗೆ ಹೊಂದಿಕೊಂಡ ಆಶ್ರಯಸ್ಥಾನವಾದುದಾಗಿತ್ತು)—ಎನ್ನುತ್ತ ಆ ಕಲ್ಯಾಣ ನಗರವು ಉತ್ತಮವಾದ ಸೈನ್ಯದ ಇರುವಿಕೆಯಿಂದಲೂ, ಶ್ಲಾಘ್ಯ ಮನೆಗಳು, ಸತ್ಪುರುಷರು—ಇವರಿಂದ ಕೂಡಿಕೊಂಡು ಅಮರಾವತಿ, ಅಳಕಾವತಿ, ಭೋಗವತಿ—ಇತ್ಯಾದಿ ನಗರಗಳನ್ನು ತಿರಸ್ಕರಿ

ವ॥ ಆ ಪುರದನತಿದೂರದ ಬಹಿಃಪ್ರದೇಶಮಂ ಬಳಸಿ—

ನಂದನನಿಭಮಾಶ್ರಿತಮಾ
ನಂದನಮಧಿಗತ ಸಮಸ್ತ ದಂಪತಿನಿವಹಾ
ನಂದನಮಾ ಪೊಳಲ ಬಹಿ
ರ್ನಂದನಮೆಸೆದುದು ನವೀನ ವೈಭವದಿಂದಂ ೩೩

ಕೆಂದಳಿರಾಂತಶೋಕೆ ಮಣಿಮಂಟಪಮಾಜಿಡಿ ತಳ್ತ ಮಾಮರಂ
ಕುಂದದ ನೀಲಹರ್ಮ್ಯಮೆಳೆಮೊಗ್ಗೆಗಳೊಪ್ಪುವ ಮಲ್ಲಿಕಾಲತಾ
ವೃಂದಮೆ ಮುತ್ತು ತೆತ್ತಿಸಿದ ಬಲ್ಮನೆ ಕೇತಕಿ ಸುತ್ತುವೇಲಿ ಕ
ಕ್ಕುಂದರಿಯಾಂತ ಕೋಟಿ ಮದನಂಗೆನೆ ಕಂಗೊಳಿಸಿರ್ದುದಾ ವನಂ ೩೪

ಅಲರ್ಗುಡಿ ಚಾಮರಂ ನೆಗೆವ ಪೂವುಡಿ ಸೀಗುರಿ ತುಂಬಿಯಿಂಚರಂ
ಸುಲಲಿತಗಾನಮುಗ್ಗಡಣೆ ಕೋಕಿಲ ನಿಸ್ವನಮಿಂಬುವೆತ್ತೆರ
ಲ್ದೊಲೆವ ಲತಾಳಿ ನರ್ತಕಿಯರೊಳ್ದಳಿರಾಂತ ರಸಾಲಭೂಜಮು
ಜ್ವಲಮಣಿಪೀಠಮಾಗೆ ಬನವೋಲಗಶಾಲೆವೊಲಾಯ್ತು ಕಾವನಾ ೩೫

ಸುತ್ತಿತ್ತು. ವ॥ ಆ ಪುರದ ಸಮೀಪದ ಹೊರಭಾಗವನ್ನು ಬಳಸಿ—೩೩. ಆ (ಕಲ್ಯಾಣ) ಪಟ್ಟಣದ ಹೊರಭಾಗದಲ್ಲಿ ಬಳಸಿರುವ ಬಹಿರುದ್ಯಾನವನವು, ಇಂದ್ರನ ನಂದನವನಕ್ಕೆ ಸದೃಶವಾಗಿ ನೂತನ ವಿಭವದಿಂದ ಶೋಭಿಸುತ್ತಿತ್ತು. (ಅದು) ಮನ್ಮಥ ಸಮಾನರಾದ ಚೆಲುವು ಜನರಿಂದ ಶೋಭಿಸುತ್ತಿತ್ತು. ತನ್ನನ್ನು ಆಶ್ರಯಿಸಿದ್ದ ಸಮಸ್ತ ದಂಪತಿಗಳ ಸಮೂಹಕ್ಕೆ ಸಂತೋಷವನ್ನುಂಟುಮಾಡುತ್ತಿತ್ತು, [ಮಾ+ನಂದನ–ಲಕ್ಷ್ಮಿಯ ಪುತ್ರ–ಮನ್ಮಥ ಅಥವಾ ಶ್ರೀಮಂತ] ೩೪. (ಆ ಉದ್ಯಾನವು) ಕೆಂಪು ಚಿಗುರನ್ನು ಹೊಂದಿರುವ ಅಶೋಕ ವೃಕ್ಷಗಳು, ರತ್ನ ಮಂಟಪಗಳು, ಭ್ರಮರಗಳಿಂದ ಸುತ್ತು ವರಿಯಲ್ಪಟ್ಟ ಮಾವಿನ ಮರಗಳು, ಕುಂದಿಲ್ಲದ ಇಂದ್ರನೀಲ ರತ್ನದ ಉಪ್ಪರಿಗೆಗಳು, ಎಳೆಯ ಮೊಗ್ಗುಗಳಿಂದ ಒಪ್ಪುವ ಮಲ್ಲಿಗೆ ಬಳ್ಳಿಗಳ ಸಮೂಹದಿಂದ. ಮುತ್ತುಗಳನ್ನು ತೆತ್ತಿಸಿದೆಯೊ ಎಂಬಂತಿರುವ ಬಲವಾದ ಬಳ್ಳಿಮನೆಗಳು, ಕೇದಗೆಯ ಗಿಡಗಳ ಸಮೂಹದ ಸುತ್ತುವರಿದ ಬೇಲಿ–ಇವೇ ಮೊದಲಾದವುಗಳಿಂದ ಇಕ್ಕಟ್ಟಾದ ಮನ್ಮಥನ ಕೋಟೆಯೋ ಎಂಬಂತೆ ಮನೋಹರವಾಗಿತ್ತು. ೩೫. (ಆ ಬಹಿರುದ್ಯಾನ ವನದಲ್ಲಿ) ಹೂಗಳ ಗೊಂಚಲುಗಳೇ ಚಾಮರ ; ಹಾರುವ ಪುಷ್ಪಧೂಳಿಯೇ ಸೀಗುರಿ. ದುಂಬಿಗಳ ಝೇಂಕಾರವೇ ಸಂಗೀತ, ಕೋಗಿಲೆಗಳ ಕೂಗೇ (ಬಿರುದನ್ನು ಹೊಗಳುವ ಮಂದಿ ಮಾಗಧರ) ಹೊಗಳಿಕೆ, ಬಳುಕುವ ಬಳ್ಳಿಗಳ ಸಾಲೇ ನರ್ತಕಿಯರು. ಬಳ್ಳಿಯ ಚಿಗುರಿನಿಂದ ಕೂಡಿದ ಸೀಮಾವಿನ ಮರವೇ ಮನೋಹರ ರತ್ನಮಯವಾದ ಆಸನ–ಹೀಗೆ ಶೋಭಿಸುವ ಆ ಬಹಿರುದ್ಯಾನ ವನವು ಮನ್ಮಥನ ಸಭಾಸ್ಥಾನದ ಹಾಗೆ ಕಾಣುತ್ತಿತ್ತು.

ಅಳಿಕುಲಮಿಂದ್ರನೀಲಮಣಿ ರಾಜಿ ಪಸುರ್ವೆಡಿ ಪಚ್ಚೆ ಪಲ್ಲವಾ
ವಳಿ ಪವಳಂಗಳೊಬ್ಬುಳಿ ಮಡಲ್ತೆಳಮಲ್ಲಿಗೆಯುಚ್ಚಮೊಗ್ಗೆ ಪಂ
ಜ್ಜಳಿಸುವ ಮುತ್ತು ಕೆಂಬೊಗರನಾಳ್ದ ಫಳಂ ಪೊಸ ರನ್ನಮಾಗೆ ಮಂ
ಜುಳತರ ಪಂಚರತ್ನಗೃಹಮಾದುದು ಕಾಮನೃಪಂಗೆ ಮಾಮರಂ ೩೬

ಸತ್ತಿಯ ಜುಂಜು ಮೇಗಣಳಿಮಾಲೆ ಕರಾಸಿಯೆ ನೀಳ್ದ ಕೊಂಬು ಮೈ
ವೊತ್ತಿದ ಪುಷ್ಪರೇಣು ಪೊಸರಕ್ಕೆ ಶುಕಂ ಗಿಳಿದಾಳಿ ಗೆಣ್ಕೊನರ್
ಮತ್ತಪಿಕಸ್ವನಂ ಕಳಕಳಂ ಪೊಸ ಪೂಗುಡಿ ಜಲ್ಲಿ ಚೆಂದಳಿರ್
ಸುತ್ತಿದ ಕಾಸೆಯಾಗೆ ಗೆಲೆವಂದುದು ಬೀ[1]ರನನಂದು ಮಾಮರಂ ೩೭

ವಿರಹಿವಿರೋಧಿಯಂ ತವಿಸಲೆಯ್ದುವ ಚೈತ್ರಚಮೂವರಂಗೆ ಸಾ
ದರಮತಿ ದರ್ಪಕಪ್ರಭು ಕುಡಲ್ವಿಡಿಸಿರ್ದ ನವೇಂದ್ರಗೋಪಮುಂ
ಪರಿಮಣಿಮಾಲೆಯುಂ ಗಿಳಿಯ ತಾಲಿಯನಾಂತವೊಲಾಮ್ರಮೊಪ್ಪುಗುಂ
ಕರಮೆಸೆ ಶಾಖೆ ತಳ್ತ ತಳಿರಿಂದಳಿಯಿಂ ಗಿಳಿಯಿಂ ನಿರಾಕುಳಂ ೩೮

೩೬. ಅಳಿಗಳ ಸಮೂಹವೇ ಇಂದ್ರ ನೀಲಮಣಿಗಳ ಸಮೂಹ ; ಹಸಿರು ಹೀಚುಗಳೇ ಪಚ್ಚೆ ಹರಳುಗಳು ; ಚಿಗುರುಗಳ ಸಮೂಹವೇ ಹವಳಗಳ ಗುಂಪು, ಹಬ್ಬಿದ ಎಳೆಯ ಮಲ್ಲಿಗೆಯ ಹೊಸ ಮೊಗ್ಗುಗಳೇ ಪ್ರಕಾಶಮಾನವಾದ ಮುತ್ತು ; ಕೆಂಪು ಕಾಂತಿಯನ್ನು ಹೊಂದಿದ ಹಣ್ಣುಗಳೇ ನೂತನ ರತ್ನಗಳಾಗಿರಲಾಗಿ—ಅಲ್ಲಿರುವ ಒಂದು ಮಾವಿನ ಮರವು ಮನ್ಮಥನ ಪಂಚರತ್ನ ಖಚಿತವಾದ ಮನೋಹರ ಗೃಹವಾಗಿತ್ತು. ೩೭ ಮೇಲೆ ಇರುವ ದುಂಬಿಗಳು ಸಾಲೇ ತಲೆಯಲ್ಲಿರುವ ಕೆದರಿದ ಕೂದಲು, ಉದ್ದವಾದ ಕೊಂಬೆಯೇ ಕೈಯಲ್ಲಿರುವ ಖಡ್ಗ, ದೇಹದಲ್ಲಿ ವ್ಯಾಪಿಸಿರುವ ಹೂವಿನ ಧೂಳಿಯೇ ನೂತನವಾದ ರಕ್ಷಾರ್ಥವಾಗಿ ಹಚ್ಚುವ ಧೂಳಿತ, ಗಿಳಿಗಳೇ ಕೊರಳಿನ ವೀರದಾಳಿಗಳು, ಚಿಕ್ಕ ಕೊಂಬೆಗಳೇ (ಚಿಕ್ಕಕಠಾರಿಗಳು, ಮದೋನ್ಮತ್ತ ಕೋಗಿಲೆಗಳ ಧ್ವನಿಯೋ ಕೋಲಾಹಲ ಶಬ್ದ, ನೂತನವಾದ ಹೂಗೊಂಚಲುಗಳೇ ಜಾಲರಿ, ಕೆಂಪಾದ ಚಿಗುರೇ ಸುತ್ತಿದ ಕಾಸೆಯಾಗಲಾಗಿ (ಆ ಉದ್ಯಾನವನದಲ್ಲಿನ) ಒಂದು ಮಾವಿನ ಮರವು ಪರಾಕ್ರಮ ಶಾಲಿಯನ್ನು ತಿರಸ್ಕರಿಸಿತು. ೩೮. ಮನೋಹರವಾಗುವ ಹಾಗೆ ಕೊಂಬೆಯಲ್ಲಿ ತುಂಬಿರುವ ಚಿಗುರಿನಿಂದಲೂ, ತುಂಬಿಗಳಿಂದಲೂ, ಗಿಳಿಗಳಿಂದಲೂ ನಿಬಿಡಗೊಂಡು ತುಂಬಿರುವ ಮಾವಿನ ಮರವು ವಿಯೋಗಿಗಳೆಂಬ ಶತ್ರುಗಳನ್ನು ನಾಶಪಡಿಸುವುದ ಕ್ಕೋಸ್ಕರ ಹೋಗುವ ವಸಂತನೆಂಬ ಸೇನಾಪತಿಗೆ ಆದರ ಪೂರ್ವಕವಾದ ಪ್ರೀತಿಯಿಂದ ಕೂಡಿದ ಬುದ್ಧಿಯಿಂದ ಮನ್ಮಥನೆಂಬ ರಾಜನು ಕೊಡುವುದಕ್ಕೋಸ್ಕರ ಹಿಡಿಸಿರುವ ನೂತನ ಕೆಂಪು ರತ್ನ, ಇಂದ್ರ ನೀಲಮಣಿಗಳ ಮಾಲೆ, ಗಿಳಿಯ ತಾಳಿಗಳನ್ನು ಧರಿಸಿದ

1 ವೀ(ದ)

ಶಾಮಳಾಂಗಮಾಗಿ ತೀವಿ ತಳ್ತ ಭೃಂಗಬೃಂದದಿಂ
ಕೋಮಳಪ್ರವಾಳ ಶಾಖೆಯೆಂಬ ದೀರ್ಘಶುಂಡದಿಂ
ವಾಮಮಾಗಿ ತಾಳ್ದ ಮಾಕರಂದದಾನವಾರಿಯಿಂ
ಕಾಮಸಾಮಜೋಪಮಾನಮಾದುದೊಂದು ಮಾಮರಂ ೩೯

ಬಂದಿಂದಿಂದಿರಬೃಂದಂ
ನಿಂದೊಂದಿ ಮುಸುಂಕಿ ನೀಲಪಟದಂತಿರೆ ಮಾ
ಕಂದಂ ಮಧುಮತ್ತಂ ಬಲ
ನಂದದೆ ರಂಜಿಸಿದುದುದ್ಗಮವ್ರಜಧವಳಂ ೪೦

ಚೆಂದಳಿರ್ಗೆಂಪು ಮೇಲೆ ಪೊಸ ಸಿಂಧುರದಂತಿರೆ ತಳ್ತ ಕೊಂಬು ಕೈ
ಯಂದಮನಾನೆ ಕೋರಕರದಂ ತನಗೊಪ್ಪಿರೆ ನಾಗಬಂಧದಂ
ತೊಂದಿರೆ ಸುತ್ತಿ ಮಲ್ಲಿಗೆ ಮದಂ ಮಕರಂದಮದಾಗೆ ಕರ್ಣಮಿಂ
ದಿಂದಿರಬೃಂದಮೆಂದೆನಿಸಿ ದಂತಿಮುಖಂಗೆಣೆಯಾಯ್ತು ಮಾಮರಂ ೪೧

ಹಾಗೆ ಒಪ್ಪುತ್ತಿತ್ತು. ೩೯. ಒಂದು ಮಾವಿನ ಮರವು ತುಂಬಾ ವ್ಯಾಪಿಸಿರುವ ದುಂಬಿಗಳ ಸಮೂಹದಿಂದ ಶಾಮಲ ವರ್ಣದ ದೇಹವುಳ್ಳದ್ದಾಗಿ, ಮೃದುವಾದ ಚಿಗುರುಗಳ ಕೊಂಬೆಯೆಂಬ ಉದ್ದವಾದ ಸೊಂಡಿಲಿನಿಂದ ಕೂಡಿ, ಮನೋಹರವಾಗಿ (ಕಾಣುವಂತೆ) ಧರಿಸಿರುವ ಮಕರಂದವೆಂಬ ಮದೋದಕದಿಂದ ಕೂಡಿ, ಮನ್ಮಥನ ಆನೆಗೆ ಸಮಾನವಾಗಿ ಕಾಣುತ್ತಿತ್ತು. ೪೦. ಹೂಗಳ ಸಮೂಹದಿಂದ ಶುಭ್ರವಾದ (ಮತ್ತು) ಮಕರಂದ ಭರಿತವಾದ ಸೀಮಾವಿನ ಮರವನ್ನು ಭ್ರಮರಗಳ ಸಮೂಹವು ಬಂದು ಚೆನ್ನಾಗಿ ಮುತ್ತಿತು. (ಈ ಕಾರಣದಿಂದ) ಕಪ್ಪು ಬಟ್ಟೆಯನ್ನು ಧರಿಸಿದ ಹಾಗೆ ಇತ್ತು. ಹೂಗಳ ಗುಂಪಿನಂತೆ ಶುಭ್ರವರ್ಣದವನೂ, ಮದ್ಯಪಾನದಿಂದ ಮದಗೊಂಡವನೂ, ಕಪ್ಪು ಬಟ್ಟೆಯನ್ನು ಧರಿಸಿದವನೂ ಆದ ಬಲರಾಮನಂತೆ ಅದು (ಆ ಮಾವಿನ ಮರವು) ಕಾಣುತ್ತಿತ್ತು. [ನೀಲಾಂಬರೋ ರೌಹಿಣೇಯಃ —ಎಂಬಂತೆ ಬಲರಾಮನು ನೀಲವರ್ಣದ ಬಟ್ಟೆಯನ್ನು ಧರಿಸಿದವನೆಂದೂ, ಮದ್ಯಪಾನಾಸಕ್ತನೆಂದೂ ಪ್ರಖ್ಯಾತಿಯುಂಟು] ೪೧. ಕೆಂಪಾಗಿ ಕಾಣುವ ಚಿಗುರಿನ ಕೆಂಪು ಬಣ್ಣವು ಮೇಲ್ಭಾಗದ ನೂತನವಾದ ಚಂದನದ ಹುಡಿಯಂತಿತ್ತು, ಚಿಗುರಿದ ಕೊಂಬೆಯು ಸುಂಡಿಲಿನಂತಹ ಚೆಲುವನ್ನು ಹೊಂದಿತ್ತು. ಮೊಗ್ಗುಗಳು ಹಲ್ಲುಗಳಾಗಿದ್ದವು. ಸುತ್ತಿದ ಮಲ್ಲಿಗೆಯ ಬಳ್ಳಿಯು ಹೊಟ್ಟೆಗೆ ಸುತ್ತಿದ ಹಾವಾಗಿತ್ತು. ಮಕರಂದವು ಮದೋದಕವಾಗಿತ್ತು. ಭ್ರಮರಗಳ ಸಮೂಹವೇ ಕಿವಿಯಾಗಿತ್ತು. ಹೀಗೆ ಒಪ್ಪುತ್ತಿರುವ ಮಾಮರವೊಂದು

ನಲಿದು ಮಧುವೀಂಟಿ ಸೊರ್ಕಿಂ
ದಲೆದೊಡೆ ಸುಮನಃಪ್ರತಾನವುಂ ಮಧುವಳಿಸಂ
ಕುಲಮುಂ ಕಟ್ಟಿಟ್ಟವೊಲಿರೆ
ಫಲವೃಂದಂ ಪಣ್ತು ನೇಱಿಲೆಸೆದುದು ಬನದೊಳ್ ೪೨

ಸಸಿ ತನ್ನ ಪೆಸರವಿಲ್ಲಿಯ
ಸಸಿಗಳೆನುತ್ತವಕೆ ಪಚ್ಚೆಗಳಸದೊಳ್ ಸುಧಾ
ರಸಮುಂ ತೀವಿತ್ತೊಡದಂ
ಪೊಸತೆನೆ ಪೊತ್ತಂತೆ ಕಾತ ತೆಂಗೆಸೆದಿರ್ಕುಂ ೪೩.

ಮೇಲ್ಮೈದುವ ಖೇಚರಿಯರ
ಕಾಲಲತಿಗೆ ತಾಂಗೆ ಕೆಂಕಮಾಳ್ದವೊ ಪೇಳೆಂ
ಬಾಲಾಪಂ ಮಿಗೆ ಮಿಸುಗಿದು
ವಾಲೋಕಕೆ ಕೆಂಪನಾಳ್ದ ಪೂಗಫಳಂಗಳ್ ೪೪

ಬಿರಯಿಗಳ ಸುಯ್ಯ ಬಿಸುಪಿಂ
ಬಿರಿದಂಗಜರಾಜ ಮಣಿಕರಂಡಕಮೆಂಬಂ
ತಿರೆ ಬಿರಿದ ದಾಡಿಮುಂ ಕೆಂ
ಬರಲುಗುವಂತುಗುವುದದಱ ಬೀಜಸಮಾಜಂ ೪೫

ಗಣಪತಿಗೆ ಸಮಾನವಾಗಿ ಕಾಣುತ್ತಿತ್ತು. ೪೨. ಮದ್ಯಪಾನದಿಂದ ಸಂತೋಷಗೊಂಡು ಸೊಕ್ಕಿನಿಂದ ವಿದ್ವಾಂಸರ ಸಮೂಹವನ್ನು ಪೀಡಿಸುತ್ತಿರಲಾಗಿ ವಸಂತನು (ವಿದ್ವಾಂಸರಿಗೆ ಹೀಗೆ ಪೀಡೆಯನ್ನುಂಟು ಮಾಡುವ) ಮಧುಪಾನಾಸಕ್ತರ ಸಮೂಹವನ್ನು ಕಟ್ಟಿಹಾಕಿರುವನೋ ಎಂಬ ಹಾಗೆ, ಅಥವಾ–ಮಕರಂದ ಪಾನದಿಂದ ಸಂತೋಷಗೊಂಡು ಸೊಕ್ಕಿನಿಂದ ಹೂಗಳ ಸಮೂಹವನ್ನು ಅಲೆದಲೆದು ಪೀಡಿಸುತ್ತಿರುವ ದುಂಬಿಗಳ ಸಮೂಹವನ್ನು ವಸಂತನು ಕಟ್ಟಿಹಾಕಿರುವನೋ ಎಂಬಹಾಗೆ ಹಣ್ಣುಗಳ ಗೊಂಚಲಿನಿಂದ ಕೂಡಿದ ನೇರಿಳೆ ಮರವು (ಆ ಉದ್ಯಾನವನದಲ್ಲಿ) ಶೋಭಿಸುತ್ತಿತ್ತು. ೪೩. ಚಂದ್ರನು ಈ ಉದ್ಯಾನವನದಲ್ಲಿರುವ ಸಸಿಗಳು ತನ್ನ ಹೆಸರಿನವು ಎಂದು, ಆ ಸಸಿಗಳಿಗೆ ಪಚ್ಚೆರತ್ನದಿಂದ ಮಾಡಿದ ಕುಂಭದಲ್ಲಿ ಅಮೃತವನ್ನು ತುಂಬಿಕೊಡಲಾಗಿ, ಆ (ಅಮೃತದ) ಕುಂಭವನ್ನು ಹೊಸದಾಗಿ ಹೊತ್ತುನಿಂತಿರುವ ಹಾಗೆ ಕಾಯಿಬಿಟ್ಟ ತೆಂಗಿನಮರಗಳು ಶೋಭಿಸುತ್ತಿದ್ದವು. ೪೪. ಮೇಲ್ಭಾಗದಲ್ಲಿ ಸಂಚರಿಸುತ್ತಿರುವ ದೇವತಾಸ್ತ್ರೀಯರು ಕಾಲಿನಲ್ಲಿ ಹಚ್ಚಿಕೊಂಡಿರುವ ಅರಗಿನ ರಸವು) ತಾಕಲಾಗಿ, ಕೆಂಪಾಗಿರುವವೋ ಹೇಳು ? ಎಂಬ ಮಾತು ಸತ್ಯವಾದದ್ದು ಎಂಬಂತೆ ಕೆಂಪುಬಣ್ಣಕ್ಕೆ ತಿರುಗಿದ ಅಡಕೆಯ ಕಾಲುಗಳು ನೋಡುವವರ ನೋಟಕ್ಕೆ ಪ್ರಕಾಶಮಾನವಾಗಿ ಕಾಣುತ್ತಿದ್ದವು. ೪೫. ವಿರಹಿಗಳಾದ ಜನರುಗಳ ನಿಟ್ಟುಸಿರಿನ ಉಷ್ಣತೆಯಿಂದ ಬಿರಿತ ಮನ್ಮಥನೆಂಬ ರಾಜನ ರತ್ನದ ಭರಣಿಯೋ ಎಂಬ ಹಾಗೆ ಬಿರಿತು ನಿಂತ ದಾಳಿಂಬೆಯ ಹಣ್ಣು ಇರಲು, ಕೆಂಪುರತ್ನಗಳು ಸುರಿಯುವ ಹಾಗೆ ಆ ಹಣ್ಣಿನಿಂದ

ಅಳಿ ಮದನಂಗೆ ಬಿಲ್ಲ ತಿರುವಾಗಿ ಬಳಲ್ದುವೆಂದು ಚೈತ್ರನು
ಮ್ಮಳಿಸುತವರ್ಕೆ ಸಾರಮಧುದೀವಿ ತರಂಗೊಳಿಸಿಟ್ಟ ಬೆಳ್ಳಿಯೊ
ಳ್ಪಳುಕಿನ ಪೊನ್ನಬಟ್ಟಲ ಸುಪಾತ್ರೆಯಮತ್ರದ ಚೆಲ್ವನಾಳ್ದು ಕಂ
ಗೊಳಿಸಿದುದುಳ್ಳಲರ್ವಿಸುಪ ಯೂಥಿಯ ಮಲ್ಲಿಯ ಕರ್ಣಿಕಾರದಾ ೪೬

ಬನಗಳ್ತ್ತಲೆಯೊಳ್ತೊಳಗುವ
ಕನಕಪ್ರಭಚಂಪಕಪ್ರದೀಪಕದಂಬ
ಕ್ಕನಿಶಂ ಸುಗಿದೋಡುವ ಭೃಂ
ಗ[1]ನಿಕಾಯಂ[1] ತಿಮಿರದುರುಳಿಯಾಗಲೆವೇಳ್ಕುಂ ೪೭

ತೊಳಗುವ ಸಂಜೆಗೆಂಪೆನಿಸೆ ಚೆಂದಳಿರ್ಗೆಂಪು ಮಡಲ್ತ ಮಲ್ಲಿಯ
ರ್ಗಳ ನವ ಕುಟ್ಮಳಾಳಿಯುಡುರಾಜಿವೊಲೊಪ್ಪೆ ಮದಾಳಿ ಬೃಂದಮು
ಲ್ಲಿಳಿವೆಳೆಮರ್ಬಿನಂತಿರೆ ವನಾಭ್ರದೊಳೇಳ್ದ ಪರಾಗಲೇಖೆಯು
ಜ್ವಳಿಪುದು ಧೂಮಕೇತುವೆನೆ ಕಣ್ಗೆ ವಿಯೋಗಿಜನಪ್ರತಾನದಾ ೪೮

ಬೀಜಗಳ ಸಮೂಹವು ಉದುರುತ್ತಿತ್ತು. ೪೬. ಈ ಭ್ರಮರಗಳು ಮನ್ಮಥನ ಬಿಲ್ಲಿಗೆ ಸಿಂಜಿನಿಯಾಗಿ ಬಳಲಿದವು ಎಂದುಕೊಂಡು ವಸಂತನು ಚಿಂತೆಗೊಳಗಾಗಿ ಆ ತುಂಬಿಗಳಿಗೆ ಶ್ರೇಷ್ಠವಾದ ಮಕರಂದವನ್ನು ತುಂಬಿ ಬೆಳ್ಳಿಯ, ಒಳ್ಳೆಯ ಸ್ಫಟಿಕದ, ಮತ್ತು ಬಂಗಾರದ ಬಟ್ಟಲುಗಳ ಪಾತ್ರೆಗಳನ್ನು ಸಾಲುಸಾಲಾಗಿ ಇಟ್ಟಿರುವನೋ ಎಂಬಹಾಗೆ ಯೂಥಿಕೆ (ಮಲ್ಲಿಗೆಯಲ್ಲಿ ಒಂದು ಜಾತಿ), ಮಲ್ಲಿಗೆ, ಬೆಟ್ಟದಾವರೆ ಹೂಗಳ ಚೆಲುವು ಕಂಗೊಳಿಸು ತ್ತಿತ್ತು. ೪೭. ಆ ಉದ್ಯಾನವನವೆಂಬ ಕತ್ತಲೆಯಲ್ಲಿ ಪ್ರಕಾಶಿಸುವ ಸುವರ್ಣಕಾಂತಿ ಯಂತೆ, ಕಾಂತಿಗೊಂಡಿರುವ ಸಂಪಿಗೆಯ ಹೂಗಳೆಂಬ ದೀಪಗಳ ಸಮೂಹಕ್ಕೆ ನಿರಂತರ ದಲ್ಲೂ ಭಯಗೊಂಡು ಓಡಿ ಹೋಗುವ ಭೃಂಗಗಳ ಸಮೂಹವೂ ಕೂಡ ಕತ್ತಲೆಯ ಸಮೂಹವೇ ಆಗಿರಬಹುದು. [ಇಲ್ಲಿ ದುಂಬಿಗಳ ಸಮೂಹವನ್ನು ಕತ್ತಲೆ ಎಂದೂ ಸಂಪಿಗೆಯ ಹೂಗಳ ಸಮೂಹವನ್ನು ದೀಪದಸಾಲೆಂದೂ ಉತ್ಪ್ರೇಕ್ಷಿಸಿ, ದೀಪ ಮುಡಿಸಿ ದಾಗ ಕತ್ತಲೆ ಓಡಿಹೋಗುವಂತೆ, ಸಂಪಿಗೆಯ ಹೂವನ್ನು ಕಂಡು ದುಂಬಿಗಳು ಓಡಿಹೋಗುತ್ತಿದ್ದುವೆಂದು ಭಾವ] ೪೮. ಚಿಗುರುಗಳ ಕೆಂಪು ಪ್ರಕಾಶಿಸುವ ಸಂಜೆಗೆಂಪು ಎನಿಸಿತ್ತು. ಹಬ್ಬಿದ ಮಲ್ಲಿಗೆಯ ಬಳ್ಳಿಯಲ್ಲಿ ಬಿಟ್ಟಿರುವ ಮಲ್ಲಿಗೆಯ ಹೊಸಮೊಗ್ಗುಗಳ ಸಮೂಹವು ನಕ್ಷತ್ರಗಳ ಸಮೂಹದಂತೆ ಒಪ್ಪಿತ್ತು. ಮದ ದಿಂದ ಕೂಡಿದ ದುಂಬಿಗಳ ಗುಂಪು ಅಲ್ಲಿ ಇಳಿಯುತ್ತಿರುವ ಕತ್ತಲೆಯಂತೆ ಇತ್ತು. (ಹೀಗಿರುವ) ಆ ಉದ್ಯಾನವನವೆಂಬ ಆಕಾಶದಲ್ಲಿ ಹಾರಿದ ಪುಷ್ಪಧೂಳಿಯ ಗೆರೆಯು ಧೂಮಕೇತುವೋ ಎಂಬಂತಾಗಿ ವಿರಹಿಗಳ ಕಣ್ಣಿಗೆ ಗೋಚರಿಸಿತು. [ಧೂಮಕೇತುವು

1 ನಿಚಯಂ (ಅ)

ಬನದೆಡೆವಂದ ತತ್ಪುರದ ಮುಗ್ಧವಧೂನಿವಹಕ್ಕೆ ಮಾರಭೂ
ಪನ ಬೆಸದಿಂದೆ ಮಂದಗತಿಯಂ ಕಳಹಂಸೆ ಮದಾಳಿ ಮಂಜುಳ
ಸ್ವನಮನುದಾರ ತಾರರವಮಂ ಕಳಕಂಠನನೂನ ವಾಣಿಯಂ
ಘನ ಶುಕಮಿಂಗೊರಲ್ದನಿಯನೊಲ್ದುಪದೇಶಿಪುದಲ್ಲಿ ಪಾರಿವಂ ೪೯

ಗಿಳಿ ನೀನೋದೆಲೆ ತುಂಬಿ ಪಾಡು ನಱುಗಂಪಂ ಕಾಣ್ಕೆಗೈ ಬಂದು ಮಂ
ಜುಳ ಮಂದಾನಿಲ ಕೇಕಿ ನರ್ತಿಸು ಲಸನ್ಮಾಕಂದಮೇ ಬಾಣ ಸಂ
ಕುಳಮಂ ನೀಡು ವಸಂತರಾಜ ಮಣಿಯೆಂದಾರ್ದಾರ್ದು ಮತ್ತಲ್ಲಿ ಕೋ
ಕಿಳ ಚಂಚತ್ಪ್ರತಿಹಾರಕಂ ಜಡಿಗುಮುದ್ಯಾನಸ್ಮರಾಸ್ಥಾನದೊಳ್ ೫೦

ರತಿ ಮದನರ್ಕಳಂ ಪದೆದು ಪೂಜಿಸಲೆಂದು ವಸಂತರಾಜನು
ನ್ನತಮೆನೆ ತಾನೆ ನಿರ್ಮಿಸಿದ ಪೂವಿನ ಕಾವಣದಂತೆ ರಂಜಿಸಿ
ತ್ತತುಳಿತಮಾಗಿ ಪೂತ ಪೊಸ ಮೊಲ್ಲೆಯ ಮಾಧವಿಯುದ್ಧಯೂಥಿಕಾ
ಲತಿಕೆಯ ಮಾಲತೀಲತೆಯ ಮಲ್ಲಿಗೆವಳ್ಳಿಯ ಚೆಲ್ವ ಚಪ್ಪರಂ ೫೧

ಅನಿಷ್ಟ ಸೂಚಕವೆಂಬ ಭಾವನೆ ಲೋಕಪ್ರಸಿದ್ಧ; ವಿರಹಿಗಳ ಇಷ್ಟಾರ್ಥ ಈ ಧೂಮಕೇತು ದರ್ಶನದಿಂದ ಭಗ್ನಗೊಳ್ಳುವುದೆಂಬ ಅನಿಷ್ಟಭವಿಷ್ಯದ ಧ್ವನಿ ಇಲ್ಲಿದೆ.] ೪೯. ಆ ಬನಕ್ಕೆ ಬಂದ ಕಲ್ಯಾಣ ಪಟ್ಟಣದ ಸುಂದರಿಯರಾದ ಸ್ತ್ರೀಸಮೂಹಕ್ಕೆ ಮನ್ಮಥರಾಜನ ಅಪ್ಪಣೆಯಿಂದ ಆ ವನದಲ್ಲಿರುವ ಅವ್ಯಕ್ತ ಮಧುರಧ್ವನಿಯ ಹಂಸಪಕ್ಷಿಯು ಮಂದ ಗಮನವನ್ನೂ, ಮದಿಸಿದ ಭ್ರಮರಗಳು ಮನೋಹರವಾದ (ಝೇಂಕಾರ) ಶಬ್ದವನ್ನೂ, ಕೋಗಿಲೆಯು ಉತ್ಕೃಷ್ಟವಾದ ಪಂಚಮಸ್ವರವನ್ನೂ, ಶ್ರೇಷ್ಠವಾದ ಗಿಳಿಯು ಕುಂದಿಲ್ಲದ ಮಾತುಗಳನ್ನೂ ಪಾರಿವಾಳವು ಮಧುರವಾದ ಕಂಠದ ಶಬ್ದವನ್ನೂ ಪ್ರೀತಿಯಿಂದ ಬೋಧಿಸುತ್ತಿದ್ದವು. ೫೦. ಆ ಉದ್ಯಾನವನವೆಂಬ ಮನ್ಮಥನ ಆಸ್ಥಾನದಲ್ಲಿ ಚಪಲ ಕೋಗಿಲೆಯೆಂಬ ದ್ವಾರಪಾಲಕನು—'ಎಲೈ ಗಿಳಿಯೇ ನೀನು ಓದು; ತುಂಬಿಯೇ ನೀನು ಹಾಡು; ಮಂದಾನಿಲನೇ, ನೀನು ಬಂದು ಕಾಣಿಕೆಯನ್ನು ಕೊಡು; ನವಿಲೇ ನೀನು ನರ್ತನ ಮಾಡು; ಶೋಭಿಸುವ ಸೀಮಾವಿನ ಮರವೇ, ನೀನು ಬಾಣಗಳ ಸಮೂಹವನ್ನು ನೀಡು; ವಸಂತರಾಜನೇ, ನಮಸ್ಕರಿಸು'–ಎಂದು ಗಟ್ಟಿಯಾಗಿ ಕೂಗಿ ಬೆದರಿಸುತ್ತಿದ್ದನು. ೫೧. (ಆ ಉದ್ಯಾನವನವು) ಅನುಪಮವಾಗಿ ಹೂಬಿಟ್ಟ ಹೊಸಮೊಲ್ಲೆಯು, ಮಾಧವಿಯು, ಶ್ರೇಷ್ಠ ಕಾಡುಮಲ್ಲಿಗೆಯು, ಜಾಜಿಯು, ಮಲ್ಲಿಗೆಯ ಬಳ್ಳಿಗಳ ಚೆಲುವಾದ ಚಪ್ಪರವು ವಸಂತನೆಂಬ ರಾಜನು ರತಿದೇವಿ ಮನ್ಮಥರುಗಳನ್ನು ಪ್ರೀತಿಯಿಂದ ಪೂಜಿಸುವುದಕ್ಕೋಸುಗ ದೊಡ್ಡ

ಎರಲಿರದೂದೆ ಜಲ್ಲಸೊಗುತಿರ್ಪಲರೊಳ್ಮಳೆ ಪುಷ್ಪಬೃಂದದಿಂ
ಸುರಿವ ಮರಂದಸೀಕರಮೆ ಮಂಜು ವಿಯೋಗಿಯ ಕಾಯಕಾಯಜಾ
ಗ್ನಿರುಚಿಯ ಕಾಯ್ಪು ಬೇಸಗೆಯದಾಗಿರೆ ಕುಂದದು ಕೇಕಿಯಾಟಮುಂ
ಸರಸಿಯ ಕೈರವಾವಳಿಯ ಸಮ್ಮದಮುಂ ಮುದಮುಂ ಸರೋಜದಾ ೫೨

ತಿಳಿಗೊಳದಲ್ಲಿ ಸುತ್ತಿ ಸುಳಿದೆತ್ತಿ ಸರೋಜಪರಾಗಪೂಗಮಂ
ತಳೆದೆಳೆದುಂಬಿ ಬೆಂಬಳಿಯೊಳಟ್ಟೆ ಮರಾಳದ ಮೆಯ್ಯ ತುಪ್ಪುಳಂ
ತುಳಿದೆಣೆವಕ್ಕಿಕೂಟದೊಳಗಲ್ಚಿದ ನುಣ್ಗಿಱಿಯೊಳ್ತೊಡಂಕಿ ನು
ಣ್ಬುಳಿಲಮಡೊರ್ಟ್ಟಿಲಲ್ಲೆಡಪಿ ಮೆಲ್ಲನೆ ಪಾಯ್ವುದು ಮಂದಮಾರುತಂ ೫೩

ವಿದಳಿತ ಕಂಜ ಪುಂಜ ಪರಿಪಿಂಜರ ರೇಣುಗಣಾಂಗರಾಗಪ
ಟ್ಪದಪಟಲೀ ಸುವರ್ಣಮಣಿ ಕಿಂಕಿಣಿ ಕಾಳಿಯುನಂಬುಜಾಕರಾ
ಭ್ಯುದಿತ ತರಂಗವಾರಿಕಣ ಮೌಕ್ತಿಕಮಾಲೆಯುನಾ ವಸಂತನಿ[1]
ತ್ತುದನುಜ[3] ತಾಳ್ದು ತತ್ಸುತಸವೋಲ್ಸುಳಿಗುಂ ವನಮಂದಮಾರುತಂ ೫೪

ದಾಗಿ ತಾನೇ ರಚಿಸಿದ ಹೂವಿನ (ಬಳ್ಳಿಗಳ) ಚಪ್ಪರದ ಹಾಗೆ ಶೋಭಿಸುತ್ತಿತ್ತು. ೫೧. (ಆ ಉದ್ಯಾನವನದಲ್ಲಿ) ಗಾಳಿಯು ತಪ್ಪದೆ ಬೀಸುತ್ತಿರಲು, ಝುಲ್‌ಝುಲ್ ಎಂದು ಸುರಿಯುತ್ತಿರುವ ಹೂಗಳೇ ಒಳ್ಳೆಯ ಮಳೆಯಾಗಿರಲು, ನವಿಲಿನ ನೃತ್ಯವು ಕಡಿಮೆಯಾಗುತ್ತಿರಲಿಲ್ಲ. ಹೂಗಳ ಸಮೂಹದಿಂದ ಸುರಿಯುತ್ತಿರುವ ಮಕರಂದದ ಹನಿಗಳೇ ಹಿಮವಾಗಿರಲು, ಸರೋವರದಲ್ಲಿರುವ ಬಿಳಿಯ ನೈದಿಲೆಗಳ ಸಂತೋಷವು ಕಡಿಮೆಯಾಗುತ್ತಿರಲಿಲ್ಲ; ವಿರಹಿಗಳ ಶರೀರದಲ್ಲಿ ಉಂಟಾದ ಮನ್ಮಥ ಸಂಬಂಧದ ಅಗ್ನಿಜ್ವಾಲೆಯ ಉಷ್ಣತೆಯೇ ಅದು ಬೇಸಗೆಯಾಗಿರಲು, ಕಮಲದ ಸಂತೋಷವೂ ಕಡಿಮೆಯಾಗುತ್ತಿರಲಿಲ್ಲ. [ಮಳೆಗಾಲ–ಚಳಿಗಾಲ–ಬೇಸಗೆ ಕಾಲಗಳು ಏಕಾಕಾಲದಲ್ಲಿ ಆ ಉದ್ಯಾನವನದಲ್ಲಿ ಉಂಟಾಗಿದ್ದುವೆಂದು ಧ್ವನಿ] ೫೨. (ಆ ಉದ್ಯಾನವನದಲ್ಲಿ) ಮಂದ ಮಾರುತವು ತಿಳಿಗೊಳದಲ್ಲಿ ಸುತ್ತಿ ಸುಳಿದಾಡುತ್ತ ಕಮಲ ಪುಷ್ಪದ ಧೂಳಿನ ಸಮೂಹವನ್ನು ಎತ್ತಿ ಧರಿಸಿಕೊಂಡು (ಸಾಗುತ್ತಿರುವಾಗ) ಮರಿದುಂಬಿಗಳು ಹಿಂದಿನಿಂದ ಅಟ್ಟಿಸಿಕೊಂಡು ಬರುತ್ತಿರಲು (ಅದು) ಹಂಸಪಕ್ಷಿಯ ದೇಹದ ತುಪ್ಪಳವನ್ನು ತುಳಿಯುತ್ತ, ಚಕ್ರವಾಕ ಪಕ್ಷಿಗಳ ಸಂಭೋಗ ಸಮಯದಲ್ಲಿ ಉದುರಿಬಿದ್ದ ನುಣುಪಾದ ಗರಿಗಳಲ್ಲಿ ತೊಡರುಹಾಕಿಕೊಂಡು, ನುಣ್ಣನೆಯ ಮಳಲು ಗುಡ್ಡೆಯಲ್ಲಿ ಎಡವುತ್ತ ಮೆಲ್ಲಮೆಲ್ಲನೆ ಬೀಸುತ್ತಿತ್ತು. ೫೩. ವಸಂತರಾಜನು ಕೊಟ್ಟಿರುವ ಅರಳಿದ ಕಮಲಗಳ ಹೊಂಬಣ್ಣದ ಧೂಳಿಯ ಸಮೂಹದ ಅನುಲೇಪನ ಮಾಡಿಕೊಂಡಂತಹ ದುಂಬಿಗಳ ಗುಂಪೆಂಬ ರತ್ನ ಖಚಿತವಾದ ಚಿನ್ನದ ಗೆಜ್ಜೆಗಳ ಸಮೂಹವನ್ನು ಧರಿಸಿ, ಸರೋವರದಲ್ಲಿ ತೆರೆಗಳಿಂದುತ್ಪನ್ನವಾದ ನೀರಿನ ಹನಿಗಳೆಂಬ ಮುತ್ತಿನ ಮಾಲೆಯನ್ನು ತೊಟ್ಟು ಮಂದ

1 ಗ (ದ)

ಮದನನ [1]ಜೇನ[1]ಶಾಲೆ ಮಧುಪಂಗಳ ಭೋಜನಶಾಲೆ ಮಲ್ಲಿಕಾ
ಸುದತಿಯ ಲಾಸ್ಯಶಾಲೆ ಮದಕೋಕಿಳವೃಂದದ ಗೀತಶಾಲೆ ಪೆಂ
ಪೊದವಿದ ತಾಮ್ರತುಂಡಕುಳದಗ್ಗದ ಪಾಠದ ಪಟ್ಟಶಾಲೆ ಪಿಂ
ಗದ ರತಿಚಿತ್ರಶಾಲೆ ಮಧುಭೂಭುಜನೋಲಗಶಾಲೆ ಮಾಮರಂ ೫೫

ಸುಮನೋಧರ್ಮಯುತಂ ಸದಾಳಿಗುಣಯುಕ್ತಂ ಕಾವನೇಂ ಕಾಯ್ವುದಂ
ದಮೆ ಬೆಂಗೊಟ್ಟ ವಿಯೋಗಿವೃಂದಕೆ ಮಹೇಶದ್ವೇಷಿ ತಾನಾಗಲ
ಕ್ಕುಮೆ ಪೇಳೆಂದಿನಿಯಳ್ಗೆ ಪೇಳ್ವುದು ಶುಕಂ ಮಾಕಂದಶಾಖಾಗ್ರದೊಳ್
ರಮಣೀರತ್ನಮೆ ಕೇಳ್ಗುಣಾಳಿ ಮಧುಸಾಂಗತ್ಯಾನ್ವಿತಂಗಿರ್ಕುಮೆ ೫೬

ಅಳಿರುತಿ ಕಿಂಕಿಣೀಕ್ವಣಿತಮಾಗೆ ಲತಾಂತಮರಂದಲಾಳೆ ಕಂ
ಗೊಳಿಸೆ ತಮಾಲಪಲ್ಲವ ಶಿಖಂಡಕಮೊಪ್ಪಿರೆ ಕೀರವಾಣಿ ಸಂ
ಗಳಿಸಿದ ಮುಗ್ಧ ಜಲ್ಪಿತಮದಾಗಿರೆ ತೂಪೆಳೆಗಾಯ್ಗುಳೆಂಬ ಕುಂ
ಡಳಮುಮದಾಡೆ ನಂದನಮೆ ನಂದನಮಾದುದು ಚೈತ್ರರಾಜನಾ ೫೭

ಮಾರುತವು ಅವನ (ಆ ವಸಂತ ರಾಜನ) ಮಗನ ಹಾಗೆ ಸಂಚರಿಸುತ್ತಿತ್ತು. ೫೫. ಮಾವಿನ ಮರವು ಮನ್ಮಥನ ಬಾಣಗಳನ್ನಿಡುವ ಮನೆ; ತುಂಬಿಗಳ ಭೋಜನಶಾಲೆ; ಮಲ್ಲಿಗೆಯ ಬಳ್ಳಿಯೆಂಬ ಸ್ತ್ರೀಯ ನರ್ತನ ಗೃಹ; ಮದದಿಂದ ಕೂಡಿದ ಕೋಗಿಲೆಗಳ ಗುಂಪಿನ ಸಂಗೀತಶಾಲೆ; ತಾಮ್ರದಂತೆ ಕೆಂಪಾದ ಮುಖವುಳ್ಳ ಗಿಳಿಗಳ ಗುಂಪಿನ ಪಾಠದ ವೇದಿಕೆ. ತಪ್ಪದೆ ರತಿದೇವಿಯ ಚಿತ್ರಶಾಲೆ. ವಸಂತ ರಾಜನ ಸಭಾಸ್ಥಲ. ೫೬. ಗಂಡು ಗಿಳಿಯು ಸೀಮಾವಿನ ಮರದ ಕೊಂಬೆಯ ಮೇಲೆ (ಕುಳಿತು ತನ್ನ) ಪ್ರಿಯೆಯನ್ನು ಕುರಿತು–'ಎಲೈ ಸ್ತ್ರೀರತ್ನವೇ ಕೇಳು ಪುಷ್ಪಧನುಸ್ಸಿನಿಂದ ಕೂಡಿರುವವನೂ ನಿರಂತರ ಭ್ರಮರ ಸಿಂಜಿನಿಯಿಂದ ಕೂಡಿದವನೂ ಆದ ಕಾಮನು ವಿಮುಖರಾದ ವಿರಹಿಗಳ ಸಮೂಹಕ್ಕೆ ಕೋಪಿಸಿಕೊಳ್ಳುವುದು ಚಂದವೇ. ತಾನು ಪರಮೇಶ್ವರನಲ್ಲಿ ವೈರವುಳ್ಳವ ನಾಗುವುದಕ್ಕಾದೀತೇ ? ವಸಂತನ ಸಹವಾಸದಿಂದ ಕೂಡಿದವನಿಗೆ ಸದ್ಗುಣ ಸಮೂಹವು ಇದ್ದೀತೇ ? [ಅಥವಾ ಈ ಪದ್ಯಕ್ಕೆ ಇನ್ನೊಂದರ್ಥ ಹೀಗೆ : 'ಎಲೈ ಸ್ತ್ರೀರತ್ನವೇ ಕೇಳು : ವಿದ್ವದ್ಧರ್ಮದಿಂದ ಕೂಡಿದವನು, ಸತ್ಪುರುಷರ ಸಮೂಹದ ಗುಣಗಳಿಂದ ಕೂಡಿದವನೂ ಆದ ಕಾಮನು ವಿಮುಖರಾದ ವಿರಹಿಗಳ ಸಮೂಹಕ್ಕೆ ಕೋಪಿಸಿ ಕೊಳ್ಳುವುದು ಚಂದವಲ್ಲ; ತಾನು ಪರಮೇಶ್ವರನಲ್ಲಿ ವೈರವುಳ್ಳವನಾಗುವುದಕ್ಕೆ ಆದೀತೆ ? ಮದ್ಯದ ಸಹವಾಸದಿಂದ ಕೂಡಿದವನಿಗೆ ಸದ್ಗುಣ ಸಮೂಹವು ಇದ್ದೀತೆ ?]' ೫೭. ಭ್ರಮರಗಳ ಝೇಂಕಾರವೇ ಸಣ್ಣ ಗೆಜ್ಜೆಗಳ ಶಬ್ದವಾಗಿರಲು, ಹೂಗಳ ಮಕರಂದ ವೆಂಬ ಜೊಲ್ಲು ಕಣ್ಣಿಗೆ ಶೋಭಿಸುತ್ತಿರಲು, ಹೊಂಗೆಯ ಚಿಗುರೆಂಬ ಕೇಶಗಳು ಒಪ್ಪಿರಲು ಗಿಳಿಗಳ ಮಾತುಗಳೇ ಕೂಡಿಕೊಂಡ ತೊದಲಿನ ಮುದ್ದು ಮಾತಾಗಿರಲು, ತೂಗಾಡುವ

1 ಜಾನ(ಮು), ಜೇಣ(ಗ, ಮು, ಚ), ಬಾಣ(ಅ)

ಅತನುತನೂದರಿಯ ಸಮು
ನ್ನತ ಕುಚಘಟಘರ್ಷಣಕ್ರಿಯಾಚ್ಯುತ ಘುಸೃಣಾಂ
ಚಿತ ರೇಣು ಪರೆದುದೆನೆ ಶೋ
ಭಿತಮಾದುದು ಸುರಿದ ಸುರಯಿಯುರಲ ಪರಾಗಂ ೫೮

ವ॥ ಆ ವನದ ಮಧ್ಯಪ್ರದೇಶದಲ್ಲಿ—

ವರ ಚಕ್ರ ಚಕ್ರರಂಗ
ತ್ತರಂಗ ಕಳ ಕಳ ವಿರಾಜಿರಾಜಿತಮಂಭ
ಶ್ಚರ [1]ಚರ[1]ದಳಿದಳಿತದಳೋ
ತ್ಕರಮಧುಮಧುರಾಂಬುಜಾಂಬುಮಂಬುಜಷಂಡಂ ೫೯

ಸರದಚ್ಛವಿಯುತಮಬ್ಜಾ
ಭಿರಾಮಮುಂಭಶ್ಚರೇಕ್ಷಣದ್ಯುತಿ ಸುರಸಾ
ಕರಮುದ್ಭ್ರಮರಕಮಾನವ
ಸರಸಿ ವನಶ್ರೀಯ ವದನಮೆನೆ ಸೊಗಯಿಸುಗುಂ ೬೦

ಎಳೆಯ ಕಾಲುಗಳೆಂಬ ಕರ್ಣಾಭರಣಗಳು ಜೋತಾಡುತ್ತಿರಲು ಆ ತೋಟವೇ ಚೈತ್ರ ರಾಜನ ಪುತ್ರನಂತಿರುವುದು. ೫೮. (ಆ ನಂದನವನದಲ್ಲಿ) ಸುರಿಯುತ್ತಿರುವ ಸುರಗೀ ಹೂವಿನ ಪರಾಗವೆಂಬ ಧೂಳು, ಮನ್ಮಥನ ಹೆಂಡತಿಯಾದ ರತಿದೇವಿಯ ದಪ್ಪನೆಯ ಮೊಲೆಗಳ ತಿಕ್ಕುವಿಕೆಯಿಂದ ಉದುರಿದ ಕುಂಕುಮಕೇಸರಿಯ ಶ್ರೇಷ್ಠವಾದ ಧೂಳು ಕವಿಯಿತೋ ಎನ್ನುವಂತೆ ಶೋಭಾಯಮಾನವಾಗಿ ಆಯಿತು. ವ॥ ಆ ನಂದನವನದ ಮಧ್ಯಪ್ರದೇಶದಲ್ಲಿ—೫೯. (ಇರುವ ಒಂದು) ಸರೋವರವು ಶ್ರೇಷ್ಠವಾದ ಚಕ್ರವಾಕ ಪಕ್ಷಿಗಳ ಸಮೂಹಗಳಿಂದ, ಚಂಚಲವಾದ ತೆರೆಗಳಿಂದ, ಕಲಕಲ ಧ್ವನಿಮಾಡುವ ಪಕ್ಷಿಗಳ ಸಮೂಹದಿಂದ ಶೋಭಿಸುತ್ತಿತ್ತು. ಮೀನುಗಳು, ಸಂಚರಿಸುತ್ತಿರುವ ಅಳಿಗಳಿಂದ, ಸ್ವಲ್ಪ ಸ್ವಲ್ಪ ಅರಳಿದ ಎಸಳುಗಳ ಸಮೂಹವುಳ್ಳ ಮಕರಂದದಿಂದ ಮನೋಹರವಾದ ಕಮಲಗಳುಳ್ಳ ನೀರಾಗಿತ್ತು. [ವಿರಾಜಿ–ಪಕ್ಷಿಗಳ ಸಮೂಹ, ಮಧುಮಧುರಾಂಬುಜ–ಮಕರಂದದಿಂದ ಮಧುರವಾದ ಕಮಲ] ೬೦. ಸಂಚರಿಸುತ್ತಿರುವ ಹಂಸಪಕ್ಷಿಗಳಿಂದ ಕೂಡಿದ, ಕಮಲಗಳಿಂದ ಮನೋಹರವಾಗಿರುವ, ಮೀನುಗಳ ನೇತ್ರಕಾಂತಿಯುಳ್ಳ, ಸಮೀಚೀನವಾದ ನೀರಿಗೆ ಆಶ್ರಯವಾದ, ಉತ್ಕೃಷ್ಟವಾದ ಭ್ರಮರಗಳುಳ್ಳ, ಆ ನೂತನವಾದ ಸರೋವರವು ವನಲಕ್ಷ್ಮಿಯ ವದನವೋ ಎಂಬಂತೆ ಮನೋಹರವಾಗಿತ್ತು. [ವನಲಕ್ಷ್ಮಿಯ ಪರವಾಗಿ ; ಸಂಚರಿಸುವ ಹಂಸಪಕ್ಷಿಗಳೇ ದಂತಕಾಂತಿ, ಕಮಲಗಳೇ ಮುಖ, ಮೀನುಗಳೇ ನೇತ್ರಕಾಂತಿ. ನೀರೇ ಲಾವಣ್ಯರಸ, ಭ್ರಮರಗಳೇ ಮುಂಗುರುಳುಗಳು—ಹೀಗೆ ಆ ಸರೋವರ ಆ ನಂದನವನವೆಂಬ ಸ್ತ್ರೀಯ ಮುಖದಂತಿತ್ತು. (ಸರದಚ್ಛ

2 ದಳಿ(ದ, ಜ, ಮ, ಮ, ಗ)

ಕೆಲಬಲದಲ್ಲಿ ತೋರ್ಪರುಣ ಪಂಕಜಪಾಣಿಗಳಲ್ಲಿ ಚಕ್ರ ಚ
ಕ್ರಲಸಿತಹಂಸ ಶಂಖಯುಗವೊಂದಿರೆ ಪೀತಪಟಂಬೊಲಂಬುಜೋ
ಜ್ವಲರಜವೊಂದಿದಂಬು ಸೊಗಸಾಂತಿರೆ ನೀಲಸರೋಜರಾಜಿ ಮಂ
ಜುಲ ತನುಕಾಂತಿಯಾಗೆ ವನಮಾಲಿವೊಲೊಪ್ಪಿದುದಲ್ಲಿ ಪೂಗೊಳಂ ೬೧

ವಿತತ ವಿಪಕ್ಷಸಂಚಲಿತ ಜೀವನವುನ್ವಿತ ಜಾಡ್ಯಕಂಟಕ
ಸ್ಥಿತಿಕಲಿತಂ ಸಭಂಗಮಳಿಯಾಸೆಯೊಳೊಂದಿದ ಪಂಕಜಾಕರ
ಕ್ಷಿತಿಪತಿ ನಿರ್ಯದಂಬುಕಣಬಾಷ್ಪಕಣಂಗಳನಲ್ಲಿ ಸೂಸಿದಂ
ತತಗುಣ ಮಿತ್ರಜಾಯೆಯೊಡಗೂಡಿದ ದೋಷಿಗಿದೊಂದು ಚೋದ್ಯಮೇ ೬೨

ವಿಯುತಂ–ಸಂಚರಿಸುವ ಹಂಸಗಳಿಂದ ಕೂಡಿದ ; ಅಂಭಶ್ಚರಣೇಕ್ಷಣದ್ಯುತಿ–ನೀರಿನಲ್ಲಿ ಸಂಚರಿಸುವ ಮೀನುಗಳೇ ಕಣ್ಣಕಾಂತಿ ; ಸುರಸಾಕರ–ಒಳ್ಳೆಯ ರಸದ ಆಕರ ; ಉದ್ಭ್ರಮರಕಂ–ಹಾರಾಡುತ್ತಿರುವ ಭ್ರಮರದಿಂದ ಕೂಡಿದುದು)] ೬೧. ಅಲ್ಲಿರುವ ಆ ಪೂಗೊಳವು ಎರಡೂ ಪಕ್ಕಗಳಲ್ಲಿ ಕಾಣುವ ಕೆಂದಾವರೆಗಳೆಂಬ ಕೈಗಳಲ್ಲಿ, ಚಕ್ರವಾಕ ಪಕ್ಷಿಗಳೆಂಬ ಚಕ್ರಾಯುಧ, ಪ್ರಕಾಶಿಸುವ ಹಂಸಪಕ್ಷಿಯೆಂಬ ಶಂಖ, ಇವುಗಳ ಜೊತೆ ಯಿಂದ ಕೂಡಿಕೊಂಡು, ಕಮಲದ ಪ್ರಕಾಶಮಾನವಾದ ಧೂಳಿಯು ಉದುರಿ ಪೀತ ವರ್ಣದಂತೆ ನೀರು ಸೊಗಸಾಗಿ ಕಾಣುತ್ತಿರಲು, ಕನ್ನೈದಿಲೆಗಳ ಸಾಲು ಮನೋಹರ ದೇಹಕಾಂತಿಯಾಗಿ ಕಾಣುತ್ತಿರಲು, ವಿಷ್ಣುವಿನ ಹಾಗೆ ಕಾಣುತ್ತಿತ್ತು. [ಅಂಬುಜೋ ಜ್ವಲರಜಂ–ಕಮಲದ ಉಜ್ವಲ ಧೂಳು] ೬೨. [ಈ ಪದ್ಯ ಸರೋವರ ಮತ್ತು ಕ್ಷಿತಿಪತಿ (ರಾಜ)–ಎರಡರ ಪರ ಅರ್ಥವುಳ್ಳದ್ದು] **ಸರೋವರ** : ವಿಸ್ತಾರವಾದ (ಅಧಿಕವಾದ) ಪಕ್ಷಿಗಳ ರೆಕ್ಕೆಯ ಬಡಿಯುವಿಕೆಯಿಂದ ಚಲಿಸುವ ನೀರಿನಿಂದ ಕೂಡಿತ್ತು. ನೀರಿನಿಂದ, ತಾವರೆದಂಟಿನ ಮುಳ್ಳಿನಿಂದ, ತೆರೆಗಳಿಂದ ಕೂಡಿತ್ತು. ದುಂಬಿಯ ಆಸೆ ಯಿಂದ ಕೂಡಿ ಸರೋವರವು ನೀರಿನ ಹನಿಗಳೆಂಬ ಕಣ್ಣೀರನ್ನು ಸೂಸಿದನು. ವಿಶೇಷ ಸದ್ಗುಣಗಳುಳ್ಳ ಸೂರ್ಯಪತ್ನಿಯಾದ ಕಮಲಿನಿಯೊಡನೆ ಕೂಡಿದ 'ದೋಷಿಗೆ ಈ ಕಣ್ಣೀರನ್ನು ಸುರಿಸುವುದೊಂದು ಆಶ್ಚರ್ಯವೇನಲ್ಲ. **ರಾಜನ ಪರವಾಗಿ** : ಅನೇಕ ಶತ್ರುಗಳಿಂದ ಚಂಚಲವಾದ ಪ್ರಾಣಗಳುಳ್ಳವನು. ಅನೇಕ ಜಾಡ್ಯಗಳ ವಿಪತ್ತುಗಳ ಸ್ಥಿತಿಯಿಂದ ಕೂಡಿದವನು. ಸೋಲಿನಿಂದಲೂ ದುರಾಸೆಯಿಂದಲೂ ಕೂಡಿದವನು. ಇಂಥ ಸ್ಥಿತಿಯಲ್ಲಿರುವ ಕ್ಷಿತಿಪತಿಯು ಕಣ್ಣೀರಿನ ಹನಿಗಳನ್ನು ಸುರಿಸಿದನು. ಅನೇಕ ಸದ್ಗುಣಗಳುಳ್ಳ ಮಿತ್ರನ ಪತ್ನಿಯೊಡನೆ ಕೂಡಿದ ದೋಷಿಗೆ ಕಣ್ಣೀರನ್ನು ಸುರಿಸುವಿಕೆಯೇನೂ ಆಶ್ಚರ್ಯವಲ್ಲ [ವಿಪಕ್ಷ–ಪಕ್ಷಿಗಳ ರೆಕ್ಕೆ, ವೈರಿಗಳು ; ಜೀವನ– ಬಾಳು, ನೀರು ; ಜಾಡ್ಯ–ಜಡಸ್ವಭಾವ, ನೀರು ; ಕಂಟಕ–ಆಪತ್ತು, ಮುಳ್ಳು ; ಸಭಂಗ–ತೆರೆಗಳಿಂದ ಕೂಡಿದ, ಭಂಗದಿಂದ ಕೂಡಿದ ; ಮಿತ್ರ–ಸ್ನೇಹಿತ, ಸೂರ್ಯ. ಗುಣ–

ಕಂದರ್ಪಂ ಕಾಸಿರಿಸಿದ
ಕುಂದದ ಬಿರಯಿಗಳುರೋಸ್ರದಿಂ ತೊಯ್ದ ವಿಷಂ
ದಂದೂಡಿ[1]ದ ನಿಜ ಶರವೆನೆ
ಪೋಂದಾವರೆಯರುಣನಳಿನಮುತ್ಪಳಮೆಸೆಗುಂ ೬೩

ಶರನಿಧಿನಿದ್ರಿತನಾಗಿರೆ
ಹರಿ ಸಿರಿ ವಿರಹಾಗ್ನಿದಗ್ಧೆ ಸಾರ್ತಂದು ಸರೋಂ
ಬುರುಹದೊಳ್ ನೆಲಸೆ ಭೃಂಗೋ
ತ್ಕರಮದು ತಜ್ಜನಿತ ಧೂಮಮೆನೆ ನೆಗೆದೆಸೆಗುಂ ೬೪

ಅರುಣಾಬ್ಜದಳದೊಳೆಱಗಿದ
ವರ ಮಧುಕರ ತರುಣನೆಸೆದುದಾ ಸುಸಿಲೊಳ್ಭಾ
ಸ್ಕರನೆಸಗಿದ ದಂತಕ್ಷತ
ದಿರವೆನೆ ಪದ್ಮಿನಿಯ ಪಲ್ಲವಾಧರದೆಡೆಯೊಳ್ ೬೫

ಎಳವಾಳೆಗಣ್ಣ ಬೆಳಗು
ಜ್ವಳಿಸೆ ಕರಂ ನೋಡಿ ಸರಸಿ ತೆರೆದೋಳೆತ್ತು
ತ್ತೆಳಸಿ ನೊರೆವಾಲೆಯುಂ ತಂ
ದಿಳುಪಿದಳಾ ರಾಜಹಂಸಕಂಧರದೆಡೆಯೊಳ್ ೬೬

ನಾರು ಅಥವಾ ಎಳೆ, ಸ್ವಭಾವ] ೬೩. ಮನ್ಮಥನು ಕಾಸಿ ಇರಿಸಿದ ತನ್ನ ಬಾಣವೋ ಎನ್ನುವಂತೆ ಸುವರ್ಣವರ್ಣದ ತಾವರೆಯೂ, ಅಧಿಕರಾದ ವಿರಹಿಜನಗಳ ಎದೆಯ ರಕ್ತದಿಂದ ನೆನೆದ ತನ್ನ ಬಾಣವೋ ಎಂಬಂತಿರುವ ಕೆಂಪುಕಮಲವೂ, ವಿಷದಿಂದ ವ್ಯಾಪ್ತವಾದ ಬಾಣವೋ ಎಂಬಂತಿರುವ ಕನ್ನೈದಿಲೆ—ಇವು ಆ ಸರೋವರದಲ್ಲಿ ಶೋಭಿಸುತ್ತಿದ್ದವು. ೬೪. ವಿಷ್ಣುವು ಸಮುದ್ರದಲ್ಲಿ ನಿದ್ರೆ ಮಾಡುವವನಾಗಿರಲು, ಲಕ್ಷ್ಮಿಯು ವಿರಹಾಗ್ನಿಯಿಂದ ಸುಡಲ್ಪಟ್ಟವಳಾಗಿ ಇಲ್ಲಿಗೆ ಬಂದು (ಈ) ಸರೋವರದ ಕಮಲದಲ್ಲಿ ನೆಲಸಿರಲು, ಈ ಕಮಲದ ಮೇಲೆ ಸಂಚರಿಸುವ ದುಂಬಿಗಳ ಗುಂಪು ಮೇಲಕ್ಕೆ ಹಾರಿದುವು : (ಈ ರೀತಿಯ ಆ ದುಂಬಿಗಳ ಹಾರುವಿಕೆ) ಆ ಲಕ್ಷ್ಮಿಯ ವಿರಹಾಗ್ನಿಯಿಂದ ಉತ್ಪನ್ನವಾದ ಹೊಗೆಯೋ ಎಂಬಂತೆ ಕಾಣುತ್ತಿತ್ತು. ೬೫. ಸುರತ ಕಾಲದಲ್ಲಿ ಕಮಲಿನಿಯೆಂಬ ಹೆಂಗಸಿನ ಚಿಗುರೆಂಬ ತುಟಿಯ ಸ್ಥಳದಲ್ಲಿ ಸೂರ್ಯನು (ಚುಂಬಿಸುವಾಗ ಮಾಡಿದ) ಹಲ್ಲಿನ ಗಾಯವೋ ಎಂಬಂತೆ ಕೆಂಪುಕಮಲದ ಎಸಳಿನಲ್ಲಿ ಹಾರಿಬಂದು ಕುಳಿತಿರುವ ಶ್ರೇಷ್ಠವಾದ ದುಂಬಿಯ ತರುಣಮರಿಯು ಶೋಭಿಸುತ್ತಿತ್ತು. ೬೬. ಸರೋವರವೆಂಬ ಸ್ತ್ರೀಯು ಎಳೆಯ ಬಾಳೆಯ ಮೀನು ಎಂಬ ಕಣ್ಣಿನ ಕಾಂತಿಯು ಪ್ರಕಾಶಿಸುವ ಹಾಗೆ ಚೆನ್ನಾಗಿ ನೋಡಿ, ತರಂಗಗಳೆಂಬ ಬಾಹುಗಳನ್ನೆತ್ತುತ್ತ ಅಪೇಕ್ಷಿ

---

1 ದಿ(ಮ)

ಕರದಂಡಾತಿ ಪ್ರಿಯನೀ
ಮರಾಳನಕಟೀ ವಿಜಾತಿಜಂಗಾದುದು ಭಾ
ಸುರರಾಜಹಂಸನಾಮಂ
ಪರಿಕಿಸೆ ವಿಧಿಬಲದಿನಾವುದಾಗದೊ ಜಗದೊಳ್ ೬೭

ಇದು ಪೂತೊಪ್ಪುವ ಚೂತಮಲ್ತು ಸುಮನೋದಂತಾವಳಂ ನೋಳ್ಪೊಡಿಂ
ತಿದು ಪದ್ಮಾಕರಮಲ್ತು ನಿರ್ಜರಸುಧಾಕಾಸಾರಮೀ ತೋರ್ಪುದಿಂ
ತಿದು ಪಣ್ತೀವಿದ ನೇಱಿಲಲ್ತು ಮಣಿವೃಂದಂ ತಳ್ತ ನಾಕದ್ರು ಮೋ
ಣಿದು ಪೌರಪ್ರಮದಾಳಿಯಲ್ತು ಪುರುಹೂತಾಂತಃಪುರಸ್ತ್ರೀಜನಂ ೬೮

ವ॥ ಎನಿಸಿ—

ಪ್ರಮದಾಳಿ ವಿಪುಳ ರಂಭಾ
ಸುಮನಸ್ತ[1]ತಿ ಭಾಸ್ವದಪ್ಸರೋಗಣ ದಿವ್ಯ

ಪಟ್ಟು ಆ ರಾಜಹಂಸ ಪಕ್ಷಿಯು ಕುತ್ತಿಗೆಗೆ ನೊರೆಯೆಂಬ ಮಾಲಿಕೆಯನ್ನು ತಂದು ಹಾಕಿದಳು, ೬೭. ಈ ಮರಾಳ ಪಕ್ಷಿಯು ಕಮಲದ ದಂಟಿನಲ್ಲಿ ಅತಿ ಪ್ರೀತಿಯುಳ್ಳದ್ದು ; ಈ ಪಕ್ಷಿಜಾತಿಯಲ್ಲಿ ಹುಟ್ಟಿದವನಿಗೆ ಪ್ರಕಾಶಮಾನವಾದ ರಾಜಹಂಸನೆಂದು ಹೆಸರಾಯಿತು, ಅಯ್ಯೋ ! ಪರೀಕ್ಷಿಸಿ ನೋಡಿದರೆ, ಜಗತ್ತಿನಲ್ಲಿ ಬ್ರಹ್ಮನ ಬಲದಿಂದ ಯಾವುದು ಆಗುವುದಿಲ್ಲ ! [ಅಥವಾ–ಇನ್ನೊಂದು ಅರ್ಥ : ಕೈಯಿಂದ ಹೊಡೆದು ಹಿಂಸೆಮಾಡುವುದರಲ್ಲಿ ಪ್ರೀತಿಯುಳ್ಳ ನೀಚಜಾತಿಯಲ್ಲಿ ಹುಟ್ಟಿದವನಿಗೆ ರಾಜಶ್ರೇಷ್ಠನೆಂಬ ಪ್ರಕಾಶಿಸುವ ಹೆಸರಾಯಿತು. ಪರೀಕ್ಷಿಸಿನೋಡಿದರೆ ದೈವಬಲವಿದ್ದರೆ ಯಾವುದು ಆಗಲಿಕ್ಕಿಲ್ಲ ! (ಕರದಂಡ–ಕೈಯುದಂಡ, ಕಮಲದ ದೇಟು ; ವಿಜಾತಿ–ಜಾತಿಹೀನ, ಪಕ್ಷಿ ಜಾತಿ ;)] ೬೮. ಇದು ಹೂವು ಬಿಟ್ಟು ಒಪ್ಪುವ ಮಾವಿನಮರವಲ್ಲ ; ದೇವತೆಗಳ ಐರಾವತ, ವಿಚಾರಿಸಿ ನೋಡಿದರೆ, ಇದು ಸರೋವರವಲ್ಲ ; ದೇವತೆಗಳ ಅಮೃತ ಸರೋವರ. ಈ ರೀತಿಯಲ್ಲಿ ಇಲ್ಲಿ ಕಾಣುವ ಇದು ಹಣ್ಣಿನಿಂದ ತುಂಬಿದ ನೇರಳೇಮರ ವಲ್ಲ ; ರತ್ನಸಮುದಾಯದಿಂದ ತುಂಬಿದ ಕಲ್ಪವೃಕ್ಷ ಮತ್ತು ಈ ರೀತಿ (ಉದ್ಯಾನದಲ್ಲಿ ತಿರುಗಾಡುವ) ಇದು ಪಟ್ಟಣದ ಸ್ತ್ರೀಸಮೂಹವಲ್ಲ ; ದೇವೇಂದ್ರನ ಅಂತಃಪುರದಲ್ಲಿ ವಾಸಿಸುವ ಸ್ತ್ರೀ ಸಮೂಹ. ವ॥ ಎನಿಸಿ—೬೯. ಅಧಿಕವಾದ ಮದದಿಂದ ಕೂಡಿದ ಭ್ರಮರಗಳಿಂದ ತುಂಬಿದ, ವಿಪುಲವಾದ ಬಾಳೆಹೂವಿನ ಇರುವಿಕೆಯುಳ್ಳ ಪ್ರಕಾಶಿಸುವ ಜಲವುಳ್ಳ ಸರೋವರಗಳ ಸಮೂಹವುಳ್ಳ, ಶ್ರೇಷ್ಠವಾದ ಮರಗಳಿಂದ ತುಂಬಿರುವ, ಈ (ಕಲ್ಯಾಣ) ಪುರದ ಉಪವನವು ಸಾರ್ಥಕವಾದ (ಇಂದ್ರನ) ನಂದನವನವೆಂಬ ಹೆಸರನ್ನು ಹೊಂದಿರುವುದು ಎನಿಸಿದೆ. [ಅಥವಾ ನಂದನವನದ ಪರವಾಗಿ :

1 ಸ್ಥಿ (ಅ)

ದ್ರುಮಮಹಿತಂ ಬನಮನ್ವ
ರ್ಥಮನಾಳ್ದುದು ನಂದನಾಭಿಧಾನಮನೆನಿಕುಂ ೬೯

ವ॥ ಇಂತು ಭುವನಜನಮನೋಜ್ಞಮಾದ ವನಮಾಲಾವಳಯದಿಂದಮೊಳಗೆ—

ಜಳಕೇಳಿಗೈವ ಪನ್ನಗ
ವಿಳಾಸಿನೀಜನದ ನೆತ್ತಿಮಣಿಗಳಮೆತ್ತಂ
ತೊಳಗಿರೆ ಪುರರಮೆ ತಳೆದು
ಜ್ವಳಮಣಿಕಾಂಚಿಯುವೊಲಾಯ್ತು ಪರಿಖಾವಳಯಂ ೭೦

ದ್ವೀಪಂಗಳ್ ತತ ವೀಥಿಗಳ್ಕುಧರವೃಂದಂ ಸೌಧವೃಂದಂ ಸುಧಾ
ಕೂಪಾರಂ ನೃಪಮಂದಿರಂ ಜನಪದಂಗಳ್ಕೇರಿಗಳ್ಮೇರು ತ
ದ್ಭೂಪಾಗಾರ ಸುವರ್ಣಹರ್ಮ್ಯಮೆನೆ ಭೂಲೋಕಂಬೊಲಿಂಬಾದ ಶೋ
ಭಾ ಪೂರ್ಣೋರುಪುರಕ್ಕೆ ಸಾಲಮದು ಲೋಕಾಲೋಕದಂತೊಪ್ಪುಗುಂ ೭೧

ಪರಿಖಾವಾರಿಯೊಳೊಯ್ಯನೇಳ್ದು ತೆರೆಗೊಂಡೀಸಾಡಿ ಸಲ್ಲೀಲೆಯಿಂ
ಪರಿದಾ ಸಾಲಮನೇಱಿ ಮೇಲೆಸೆವ ಪೀಯೂಷಾಂಶುವಂ ರಾತ್ರಿಯೊ

ಸಂತೋಷದಿಂದ ಕೂಡಿದ ವಿಪುಲ ಸಖೀಜನರ ಸಮೂಹದಿಂದ ಕೂಡಿದ ರಂಭೆಯೆಂಬ ಅಪ್ಸರಸ್ತ್ರೀಯು ಮತ್ತು ದೇವತೆಗಳ (ಸುಮನಃ) ಇರುವಿಕೆಯುಳ್ಳದ್ದು ; ಪ್ರಕಾಶಿಸುವ ಅಪ್ಸರ ಸ್ತ್ರೀಸಮೂಹ (ಅಪ್ಸರೋಗಣ)ದ, ಕಲ್ಪವೃಕ್ಷದ ಇರುವಿಕೆಯಿಂದ ಪೂಜಾರ್ಹವಾದುದು. [ರಂಭಾಸುಮನ–ಬಾಳೆಯಹೂವು, ರಂಭೆ ಮತ್ತು ದೇವತೆ ; ಪ್ರಮದಾಳಿ–ಅಧಿಕಮದದಿಂದ ಕೂಡಿದ ತುಂಬಿ, ಸಂತೋಷದಿಂದ ಕೂಡಿದ ಸಖೀಜನ ಸಮೂಹ ; ಅಪ್‌ಸರ–ನೀರಿನಿಂದ ಕೂಡಿದ ಸರೋವರ, ಅಪ್ಸರಸ್ತ್ರೀ ; ದಿವ್ಯದ್ರುಮ–ಕಲ್ಪವೃಕ್ಷ, ಶ್ರೇಷ್ಠಮರ ; ಮಹಿತಂ–ಕೂಡಿದ, ಮಹಿಮಾನ್ವಿತವಾದ.] ವ॥ ಈ ರೀತಿ ಭೂಜನರಿಗೆ ಮನೋಹರವಾದ ವನ ಪಙ್ಕ್ತಿಯಿಂದ ಸುತ್ತುವರಿದ ಆ ಉದ್ಯಾನವನದ ಒಳಗಡೆಯಲ್ಲಿ—೭೦. ಜಲಕ್ರೀಡೆಯನ್ನು ಮಾಡುವ ನಾಗಲೋಕದ ವಿಲಾಸಿನೀ ಸ್ತ್ರೀಯರ ನೆತ್ತಿಯಲ್ಲಿರುವ ಆ ರತ್ನಗಳು, ಸುತ್ತಮುತ್ತ ಪ್ರಕಾಶಿಸುತ್ತಿರಲಾಗಿ, ವೃತ್ತಾಕಾರವಾದ ಕಂದಕವು (ಆ ಕಲ್ಯಾಣ) ಪಟ್ಟಣವೆಂಬ ಸ್ತ್ರೀಯು ಧರಿಸಿರುವ ಪ್ರಕಾಶಮಾನವಾದ ರತ್ನ ಖಚಿತ ಡಾಬಿನ ಹಾಗೆ ಆಯಿತು. ೭೧. ವಿಸ್ತಾರವಾದ ಬೀದಿಗಳು ದ್ವೀಪಗಳು ; ಉಪ್ಪರಿಗೆಗಳ ಸಮೂಹಗಳೇ ಪರ್ವತಗಳ ಸಮೂಹ, ರಾಜಗೃಹವೇ ಕ್ಷೀರಸಮುದ್ರ ; ಕೇರಿಗಳೇ ದೇಶಗಳು ; ಆ ಅರಮನೆಯ ಚಿನ್ನದ ಉಪ್ಪರಿಗೆಯೇ ಮೇರುಪರ್ವತ–ಎನ್ನುವ ಹಾಗೆ ಭೂಲೋಕದಂತೆ ಸಂಪೂರ್ಣ ಕಾಂತಿಯಿಂದ ಕೂಡಿದ ಶ್ರೇಷ್ಠವಾದ ಆ ಪುರಕ್ಕೆ ಇರುವ ಕೋಟೆಯು ಭೂಲೋಕದ ನೋಟದಂತೆ ಕಾಣುತ್ತಿತ್ತು. ೭೨. ಆ ಅಗಳಿನಲ್ಲಿರುವ ನೀರಿನಲ್ಲಿ ಪಾತಾಳಲೋಕದಲ್ಲಿರುವ ಸರ್ಪವು (ಆದಿಶೇಷನು) ಮುಳುಗಿ ಎದ್ದುದ್ದು ತೆರೆಗಳನ್ನನುಸರಿಸಿ ಈಸಾಡಿ,

ಳ್ಭರದಿಂ ಕಂಡು ತುಡುಂಕಲವ್ವಳಿಸುವಾಗಳ್ಮಧ್ಯಸಾರಂಗವೊಂ
ದಿರೆ ತದ್ಭೀತಿಯಿನ್ನೈದೆ ವ್ಯೈದೆಗೆವುದಾ ಪಾತಾಳವಾತಾಶನಂ ೭೨

ಬಿಱುವಿಸಿಲ ಕೋಳ್ಗೆ ಸೈರಿಸ
ಲಱಿಯದೆ ತತ್ಸೌಧಕೇತುಗಳ ಬಳಿನೆಳಲಂ
ನೆಱೆ ಸಾರ್ದು ಖಚರಿ ಮುತ್ತಿನ
ಕಿಱುಪುತ್ತಳಿಯಂತೆ ಬೆಮರ್ಗಳಿರೆ ಕಂಗೆಸೆದಳ್ ೭೩

ಇದು ಮುಗಿಲಿದು ಕೇತನಪಟ
ಮಿದು ರವಿಯಿದು ಕನಕಕಳಶಮಿದು ಶಶಿಯಿದು ಕ
ಟ್ಟಿದ ಮುಕುರಮೆಂಬ ಬಗೆ ಸ
ಲ್ಲದು ತತ್ತತ್ಕಾಲದಲ್ಲಿ ಹರ್ಮ್ಯಾಗ್ರಿಮದೊಳ್ ೭೪

ಕನಕಮಯ ಹರ್ಮ್ಯರುಚಿ ತೆ
ಕ್ಕನೆ ತೀವಿರೆ ಮಿಸುನಿವಣ್ಣಮಾಳ್ದಿರೆ ನಭಮಾ
ಘನ ಗಗನಕೇಶನದಱಿಂ
ಜನಮಱಿಯೆ ಹಿರಣ್ಯಕೇಶನೆನಿಸಿದನಲ್ತೆ ೭೫

ವಿಶೇಷವಾದ ಲೀಲೆಯಿಂದ ಹರಿದುಹೋಗಿ, ಕೋಟೆಯ ಗೋಡೆಯನ್ನು ಹತ್ತಿ, ಮೇಲ್ಭಾಗದಲ್ಲಿ ಪ್ರಕಾಶಿಸುವ ಅಮೃತಕಿರಣನಾದ ಚಂದ್ರನನ್ನು ಭರದಿಂದ ಕಂಡು ತುಡುಕಲು ಅಪ್ಪಳಿಸುವಾಗ ಮಧ್ಯದಲ್ಲಿ ಜಿಂಕೆಯು ಸೇರಿರುವುದನ್ನು ಕಂಡು ಅಂಜಿ, ಭೀತಿಯಿಂದ ಮೈಯನ್ನು ಹಿಂದಕ್ಕೆ ತೆಗೆಯಿತು. ೭೩. ಖೇಚರಸ್ತ್ರೀಯು ಅಧಿಕವಾದ ಬಿಸಿಲಿನಬಾಧೆಯನ್ನು ಸಹಿಸಲಾರದೆ ಆ ಪಟ್ಟಣದ ಸೌಧಗಳ ಮೇಲಿರುವ ಧ್ವಜಪಟಗಳ ಬಳಿಯಲ್ಲಿರುವ ನೆಳಲನ್ನು ಆಶ್ರಯಿಸಿದ್ದಳು. (ಅವಳು) ದೇಹದಲ್ಲಿ ತುಂಬಿರುವ ಬೆವರಿನ ಹನಿಗಳಿಂದ ಕೂಡಿದವಳಾಗಿ ಮುತ್ತಿನ ಕಿರುಗೊಂಬೆಯ ಹಾಗೆ ಕಂಗೊಳಿಸಿದಳು. ೭೪. ಬಂಗಾರದಿಂದ ಮಾಡಿದ ಉಪ್ಪರಿಗೆಯ ಮೇಲುಭಾಗದಲ್ಲಿ ಆಯಾಯ ಕಾಲಗಳಲ್ಲಿ ಈ ಕಾಣುವ ಮೋಡವು ಧ್ವಜಪಟ ; ಈ ಸೂರ್ಯನು ಕನಕಕಲಶ ; ಈ ಚಂದ್ರನು ಈ ಧ್ವಜಪಟಕ್ಕೆ ಕಟ್ಟಿದ ಕನ್ನಡಿ—ಎಂಬ ಯೋಚನೆಯೇ ಆಗುತ್ತಿರಲಿಲ್ಲ. ೭೫. ಬಂಗಾರದ ಉಪ್ಪರಿಗೆಗಳ ಕಾಂತಿಯು ಸಾಂದ್ರವಾಗಿ ಹರಡಿರಲು, ಆಕಾಶವು ಹೊಂಬಣ್ಣವನ್ನು ಹೊಂದಿತ್ತು. ಅದರಿಂದ ಆ ಘನವಾದ ಆಕಾಶವನ್ನೇ ಕೇಶವಾಗಿ ಉಳ್ಳ ಶಿವನು ಲೋಕದ ಜನವೆಲ್ಲ ತಿಳಿದಿರುವಂತೆ ಹಿರಣ್ಯವರ್ಣದ ಕೇಶವುಳ್ಳವನು ಎನಿಸಿದನಲ್ಲವೆ !

ಮಣಿವೆನೆಗಳೆಡೆಯೆಡೆಯೊಳುಡು
ಗಣಮಿರುಳೊಳ್ನುಸುಳ್ದು ಪಾಲ್ಗಡಲ ಕಡೆವಾಗ
ಳ್ಫಣಿಪನ [1]ಪೆಡೆ[1]ಯೆಡೆಯೆಡೆಯೊಳ
ಗಣಿತಂ ಮುಕ್ತಾಳಿ ನೆಗೆವ ಭಾವಮನಾಳ್ಗುಂ ೭೬

ನೀಲಪಟಕೇತುವಂ ಗಗ
ನಾಲಂಬಿಯನಂಬುಜಾಪ್ತನಿದು ರಾಹುವೆನು
ತ್ತಾಲೋಕಿಸಿ ಭಯಮುತ್ತು ವಿ
ಶಾಲಾಭ್ರದೆ ದಕ್ಷಿಣೋತ್ತರಾಯಣನಾದಂ ೭೭

ನೃಪಸೇವಾಯಾತ ಪೃಥ್ವೀಪತಿಸುತವೃತ ತೂರ್ಯಪ್ರಣಾದಂ ಪಯಃಪಾ
ನಪರ ಪ್ರಸ್ಪಂದಗಂಧದ್ವಿಪಗಣಘನಘಂಟಾಪ್ರಘೋಷಂ ಪಣಸ್ತ್ರೀ
ವಿಪುಳಾಗಾರಸ್ಥಳೀ ನಿರ್ಗತ ವಿಟಪಟಲೀಕಾಯಃಸೌರಭ್ಯವಾಂಛಾ[2]
ಚಪಲಾಳಿಧ್ವಾನಮಿಂಬಾಗಿರೆ ಕರಮೆಸೆಗುಂ ತತ್ಪುರೀರಾಜಮಾರ್ಗಂ ೭೮

೭೬. ರತ್ನದ ಕೋಟೆಯ ತೆನೆಗಳ ಸಂದುಗಳಲ್ಲಿ ನಕ್ಷತ್ರಗಳ ಸಮೂಹವು ರಾತ್ರಿಯ ಸಮಯದಲ್ಲಿ ನುಗ್ಗುತ್ತಿರಲು (ಅವು) ಕ್ಷೀರಸಮುದ್ರವನ್ನು ಕಡೆಯುವಾಗ ಆದಿಶೇಷನ ಹೆಡೆಯ ಪಕ್ಕದಲ್ಲಿ ಅಸಂಖ್ಯಾತ ಮುತ್ತುಗಳ ಸಮೂಹವು ಹಾರುವ ಭಾವವನ್ನು ಹೊಂದುತ್ತಿದ್ದವು. ೭೭. ಸೂರ್ಯನು ಅಂತರಿಕ್ಷವನ್ನು ಆಶ್ರಯಿಸಿರುವ ನೀಲವರ್ಣದ ಬಟ್ಟೆಯನ್ನುಳ್ಳ (ಆ ಪಟ್ಟಣದ ಮನೆಗಳ ಮೇಲಿರುವ) ಧ್ವಜಗಳನ್ನು ನೋಡಿ, ಇದು ರಾಹುಗ್ರಹವೆನ್ನುತ್ತ, ಭಯದಿಂದ ಕೂಡಿ, ವಿಸ್ತಾರವಾದ ಆಕಾಶದಲ್ಲಿ ದಕ್ಷಿಣೋತ್ತರ ದಿಕ್ಕಿನಲ್ಲಿ ಗಮಿಸುವವನಾದನು. [ಈ ಧ್ವಜವಿರುವ ಕಡೆಗೆ ಬರದಹಾಗೆ ಕೆಲವು ಕಾಲ ಉತ್ತರಕ್ಕೂ ಕೆಲವು ಕಾಲ ದಕ್ಷಿಣಕ್ಕೂ ಓರೆಯಾಗಿ ತಿರುಗಲುಪಕ್ರಮಿಸಿದನೆಂದು ಭಾವ] ೭೮. ಆ ಕಲ್ಯಾಣ ಪಟ್ಟಣದ ರಾಜಮಾರ್ಗವು, ರಾಜನ ಸೇವೆಗೋಸ್ಕರ ಬರತಕ್ಕ ರಾಜಪುತ್ರರುಗಳನ್ನು ಸುತ್ತಲೂ ಬಳಸಿರುವ ಅಧಿಕವಾದ ವಾದ್ಯ ಶಬ್ದದಿಂದಲೂ, ನೀರುಕುಡಿಯುವುದಕ್ಕೋಸ್ಕರ ಹೋಗುತ್ತಿರುವ ಮದೋದಕ ಗಂಧದಿಂದ ಕೂಡಿರುವ ಆನೆಗಳ ಸಮೂಹದ ಕೊರಳಲ್ಲಿ ಕಟ್ಟಿರುವ ದೊಡ್ಡ ದೊಡ್ಡ ಗಂಟೆಗಳ ಅಧಿಕವಾದ ಶಬ್ದದಿಂದಲೂ, ವೇಶ್ಯಾ ಸ್ತ್ರೀಯರ ದೊಡ್ಡ ದೊಡ್ಡ ಮನೆಗಳಿಂದ ಹೊರ ಹೊರಡುತ್ತಿರುವ ವಿಟಜನ ಸಮೂಹದ ಶರೀರಕ್ಕೆ ತೊಡೆದುಕೊಂಡ ಪರಿಮಳದ ಬಯಕೆಯಿಂದ (ಹಾರಿಬರುತ್ತಿರುವ) ಚಂಚಲಗಳಾದ ಭ್ರಮರಗಳ ಝೇಂಕಾರದಿಂದಲೂ ಮನೋಹರ

1 ಮಣಿ(ಅ) 2 ತಾ(ಮ) ಠಾ(ಗ) ಥಾ(ಮು) ದಾ(ಜ)

ತಳಿರೊಡೆದಂತೆ ಕಾಂತೆಯರ ಕಾಲ್ಗಳಲಕ್ತಕದಿಂದೆ ಕುಟ್ಮಳಂ
ದಳೆದವೊಲಾ ಲತಾಂಗಿಯರ ಪಾದನಖಪ್ರಭೆಯಿಂದೆ ಪೂತು ಕಂ
ಗೊಳಿಪವೊಲಾ ವಿಲಾಸಿನಿಯರಕ್ಷಿಯ ಬೆಳ್ವೆಳಗಿಂದೆ ತಳ್ತು ಮಂ
ಜುಳ ನೃಪವೀಥಿವಲ್ಲಿ ಮೆಱೆದತ್ತು ವಿಧೂಪಳಭಿತ್ತಿರುಗ್ಜಳಂ ೭೯

ಪುರರಮೆ ಸೋದರ ಶಶಿಯಂ
ಕೊ[1]ರಗಿಪ ರವಿಯಂ ಪರಾಭವಿಸಲೆಂದು ವಿಭಾ
ಕರಶತಮಂ ಪಡೆದಂದದೆ
ಕರಮೆಸೆದುದು ವಿಸುಪ ಕಂಚುಗಾಱರ ಪಸರಂ ೮೦

ಒರೆಯೆ ಪಸರಿಸಿದ ಪೊಸ ಪೊ
ನ್ನ ರಜಂ ಧೃತಘುಸೃಣಮೆನಿಸೆ ಪುರರಮೆಯ ಪಯೋ
ಧರದಂತೆ ಪೊಂಗಳೊಟ್ಟಿ
ಲ್ಪರಂಜಿಸೆ ಸೊನ್ನವರದವಸರಂ ಮೆಱೆಗುಂ ೮೧

ನೆಲದಳಕಿಳಿದಹಿರಾಜನ
ತಲೆವಣಿಯಂ ಜಲದೊಳಾಳ್ದ ಕೌಸ್ತುಭಮಂ ಕ
ಣ್ಬೊಲನಾಗರ ಸುರಮಣಿಯಂ
ಸಲೆ ಪಳಿಕೈದೆಸೆಗುಮಲ್ಲಿ ಗುಣಮಣಿವಸರಂ ೮೨

ವಾಗಿರಲು ಚೆನ್ನಾಗಿ ಶೋಭಿಸುತ್ತಿತ್ತು. ೭೯. ಚಂದ್ರಕಾಂತ ಶಿಲೆಯ ಗೋಡೆಗಳ ಕಾಂತಿಯುತ ನೀರುಳ್ಳ ಮನೋಹರವಾದ ರಾಜಮಾರ್ಗವೆಂಬ ಬಳ್ಳಿಯು–ಸ್ತ್ರೀಯರ ಪಾದಗಳಲ್ಲಿ ಲೇಪನ ಮಾಡಿರುವ ಅರಗಿನರಸದಿಂದ ವ್ಯಾಪ್ತವಾಗಿ, ಚಿಗುರು ಒಡೆದ ಹಾಗೆಯೂ, ಬಳ್ಳಿಯಂಥ ದೇಹವುಳ್ಳ (ಆ) ಸ್ತ್ರೀಯರ ಕಾಲುಗುರುಗಳ ಕಾಂತಿಯಿಂದ ಕೂಡಿ ಮೊಗ್ಗನ್ನು ಹೊಂದಿದ ಹಾಗೂ, ಅವರ ಕಣ್ಣುಗಳ ಬಿಳಿದಾದ ಕಾಂತಿಯಿಂದ ಚಿಗಿತು ಹೂಬಿಟ್ಟು ಪ್ರಕಾಶಿಸುವಹಾಗೂ ತೋರುತ್ತಿತ್ತು. [ವಿಧೂಪಳ+ಭಿತ್ತಿ+ರುಕ್+ಜಳಂ–ಚಂದ್ರಕಾಂತಶಿಲೆಯ ಗೋಡೆಗಳ ಕಾಂತಿಯುತ ಜಲ] ೮೦. ಆ ಕಲ್ಯಾಣ ಪಟ್ಟಣವೆಂಬ ಲಕ್ಷ್ಮೀದೇವಿಯು (ತನ್ನ) ಒಡಹುಟ್ಟಿದ ಚಂದ್ರನನ್ನು ಕಾಂತಿಹೀನನನ್ನಾಗಿ ಮಾಡುವ ಸೂರ್ಯನನ್ನು ಜಯಿಸಬೇಕೆಂದು ಅನೇಕ ಸೂರ್ಯರುಗಳನ್ನು ಪಡೆದ ಹಾಗೆ ಶೋಭಿಸುವ ಕಂಚುಗಾರರ ಅಂಗಡಿಗಳು ಚೆನ್ನಾಗಿ ಶೋಭಿಸುತ್ತಿದ್ದವು. ೮೧. ಒರೆಗೆ ಹಚ್ಚಿ ನೋಡುತ್ತಿರುವಾಗ ಹರಡಿಕೊಂಡಿರುವ ನೂತನವಾದ ಚಿನ್ನದ ಧೂಳಿಯು ಕುಂಕುಮ ಕೇಸರಿಯನ್ನು ಧರಿಸಿರುವುದೋ ಎನ್ನುವಹಾಗೆ (ಕಾಣುವ) ಚಿನ್ನದ ರಾಶಿಗಳು ಆ ಕಲ್ಯಾಣ ನಗರದ ಲಕ್ಷ್ಮಿಯ ಮೊಲೆಗಳಹಾಗೆ ಪ್ರಕಾಶಗೊಳ್ಳುತ್ತಿರಲು, ಚಿನಿವಾಲದವರ ಅಂಗಡಿಗಳು ಮೆರೆಯುತ್ತಿದ್ದವು. ೮೨. ಆ ಪಟ್ಟಣದಲ್ಲಿ (ಉತ್ತಮ) ಗುಣದಿಂದ ಕೂಡಿದ ರತ್ನದ ಅಂಗಡಿಗಳು (ಅಥವಾ ಹಾರದಲ್ಲಿ

1 ಕ (ಚ)

ಕುಮುದಾಮೋದಮನಪ್ಪಿದಿಂದುಕಿರಣಂ ಪಂಕೇಜಸೌರಭ್ಯ ಸಂ
ಕ್ರಮಣಂಬೊಂದಿದ ಬಾಲಭಾನುರುಚಿ ಮಲ್ಲೀಜಾತಿಕುಂದಾಳಿಗಾ
ಢಮಸಾಳ್ದಂಧತಮಂ ಪೊಣರ್ಕೆ ಗುರು ರಾಶೀಭೂತಮಾಗಿರ್ಪವೋಲ್
ಹಿಮದೊಟ್ಟಿಲ್ಘುಸೃಣೋತ್ಕರಂ ಮೃಗಮದೋದ್ಯದ್ರಾಶಿ ಕಣ್ಗೊಪ್ಪುಗುಂ ೮೩

ಇಟ್ಟಣಿಸಿ ನಡೆವ ಕಾಂತೆಯು
ರಿಟ್ಟೆಡೆ ಮೊಲೆಯೊರಸೆ ಸುರಿದ ಕುಂಕುಮರಜಮಂ
ಪಟ್ಟಗಜಂ ನಿಜ ಕುಂಭದೊ
ಳೊಟ್ಟಿಕೊಳುತ್ತಲ್ಲಿ ಗಂಧಗಜಮೆನಿಸಿರ್ಕುಂ ೮೪

ನಗೆವೆಳಗಿಂ ಕೈರವಮಂ
ಸೊಗಯಿಪ ಕರತಳದ ಕಾಂತಿಯಿಂ ಜಳರುಹಮಂ
ನಗಿಸಿ ನಱುಸುಯ್ಯ ಕಂಪಿಂ
ಮಿಗೆ ಪೊರೆದವನಲ್ಲಿ ಮಾಱುವರ್ ಮಾನಿನಿಯರ್ ೮೫

ಸಾಲಿಱಿದಳಿ ಕವಿದಿರೆ ಪೂ
ಮಾಲೆಯನಮರ್ದೆತ್ತಿ ಪಿಡಿದ ಕಾಮಿನಿಯೊರ್ವಳ್
ಲೀಲೆಯಿನಲರ್ವಿಲ್ಲಂ ಪೂ
ಗೋಲಂಗಿರದೆತ್ತಿ ಕೊಡುವ ರತಿಯಂ ಪೋಲ್ತಳ್ ೮೬

ಪೋಣಿಸಲ್ಪಟ್ಟ ರತ್ನಗಳುಳ್ಳ ಅಂಗಡಿಗಳು) ಪಾತಾಳಕ್ಕಿಳಿದ ಆದಿಶೇಷನ ಹೆಡೆಯಲ್ಲಿರುವ ರತ್ನವನ್ನೂ, ನೀರಿನಲ್ಲಿ ಮುಳುಗಿರುವ ಕೌಸ್ತುಭಮಣಿಯನ್ನೂ, ಕಣ್ಣಿಗೆ ಗೋಚರವಾಗದಿರುವ ಚಿಂತಾಮಣಿಯನ್ನೂ ಚೆನ್ನಾಗಿ ತಿರಸ್ಕರಿಸುವಹಾಗೆ ತೋರುತ್ತಿದ್ದವು. ೮೩. ಬಿಳಿಯನೈದಿಲೆಗಳ ಪರಿಮಳವನ್ನು ಅಪ್ಪಿಕೊಂಡ್ಡ ಚಂದ್ರನ ಬೆಳದಿಂಗಳು, ಕಮಲಗಳಸುಗಂಧ ಸಂಬಂಧವನ್ನು ಹೊಂದಿದ ಎಳೆಯಬಿಸಿಲು, ಮಲ್ಲಿಗೆ, ಜಾಜಿ, ಮೊಲ್ಲೆಯ ಹೂವು, ಇವುಗಳ ಸಮೂಹದ ಪರಿಮಳವನ್ನು ಹೊಂದಿದ ಗಾಢಾಂಧಕಾರ–(ಇವು ಪರಸ್ಪರ) ಯುದ್ಧಕ್ಕೋಸುಗ ದೊಡ್ಡ ದೊಡ್ಡ ಗುಡ್ಡೆಗಳೇ ಆಗಿರುವಹಾಗೆ ಪಚ್ಚಕರ್ಪೂರದ ರಾಶಿ, ಕುಂಕುಮ ಕೇಸರಿಯ ರಾಶಿ, ಕಸ್ತೂರಿಯ ದೊಡ್ಡರಾಶಿ–ಇವು ಕಣ್ಣಿಗೆ ಒಪ್ಪುತ್ತಿದ್ದವು. ೮೪. ಒತ್ತೊತ್ತಾಗಿ ಸೇರಿ ಹೋಗುತ್ತಿರುವ ಸ್ತ್ರೀಯರುಗಳ ಇಕ್ಕಟ್ಟಾದ ಮೊಲೆಗಳು ಒಂದಕ್ಕೊಂದು ತಿಕ್ಕಾಡುತ್ತಿರುವಾಗ ಅಲ್ಲಿ ಲೇಪಿಸಿಕೊಂಡಿರುವ ಕುಂಕುಮ ಕೇಸರಿಯು ಸುರಿಯಲಾಗಿ ಆ ಧೂಳನ್ನು ಪಟ್ಟದಾನೆಯು ತನ್ನ ಕುಂಭಸ್ಥಳದಲ್ಲಿ ಸುರಿದು ಒಟ್ಟಿಕೊಳ್ಳುತ್ತ ಪರಿಮಳದಿಂದ ಕೂಡಿದ ಗಂಧವಾರಣ ಎನಿಸಿತ್ತು. ೮೫. ಅಲ್ಲಿ ಸ್ತ್ರೀಯರುಗಳು (ತಮ್ಮ) ನಗುವಿಕೆಯ ಕಾಂತಿಯಿಂದ ಬಿಳಿಯನೈದಿಲೆಯನ್ನೂ ಪ್ರಕಾಶಮಾನವಾದ ಹಸ್ತಕಮಲದ ಕಾಂತಿಯಿಂದ ಕಮಲವನ್ನು ನಗಿಸಿ, ಪರಿಮಳವಿಶಿಷ್ಟವಾದ ನಿಶ್ವಾಸದ ಕಂಪಿನಿಂದ ತುಂಬಿ ಹೂಗಳನ್ನು ಮಾರುತ್ತಿದ್ದರು. ೮೬. ಹೂಮಾಲಿಕೆಗೆ ಸಾಲುಸಾಲಾಗಿ ಭ್ರಮರಗಳು ಕವಿದಿರಲಾಗಿ, (ಅದನ್ನು) ಗಟ್ಟಿಯಾಗಿ ಮೇಲಕ್ಕೆತ್ತಿ

ಮಲ್ಲಿಗೆಯೊರ್ಚರಂ ಮಿಸುಪ ಮೊಲ್ಲೆಯ ಮೊಗ್ಗೆಯ ಪಿಂಡುಗಂಕಣಂ
ಪಲ್ಲವದಿಂಬುವೆತ್ತ ಪದಕಂ ಸುರಹೊನ್ನೆಯ ಕಂಠಮಾಲೆ ಕಂ
ಕೆಲ್ಲಿಯ ಕರ್ಣಪೂರಮದಿಮುರ್ತ್ತೆಯ ಬಾಪುರಿ ಚಾರು ಚಂಪಕೋ
ತ್ಪಲ್ಲದ ನೇವುರಂ ಮೆಱೆವ ಪೂವಿನಸಂತೆ ಕರಂ ಮನೋಹರಂ ೮೭

ಮೊಗಸಿರಿ ನೈದಿಲ ಪೊಸಮ
ಲ್ಲಿಗೆಯಲರ್ಗಳ ಮಾಲೆವಿಡಿದಪೋಲ್ಕಣ್ಬೆಳಗುಂ
ನಗೆವೆಳಗುಂ ಪಸರಿಸೆ ಬಗೆ
ಮಿಗೆ ಪೋಲ್ತಳ್ಮಾಲೆಗಾರ್ತಿಯಲರಂಗಡಿಯುಂ ೮೮

ವ॥ ಇಂತನಂತ ವಸ್ತುವಿಸ್ತಾರಾನೂನ ಶೋಭಾಸ್ಪದಮಾದ ಪುರಮಧ್ಯಪ್ರದೇಶದಲ್ಲಿ—

ಬಳಸಿದ ಸಾಲದ ತೆನೆ ದಳ
ಮೊಳಗಣ ಪೊಮ್ಮಾಡಮುಮರ್ದ ಕರ್ಣಿಕೆ ಮಣಿಮುಂ
ಗಳ ಕಳಶಕಾಂತಿ ಮಧುವೆನೆ
ಜಳರುಹಮೆನಿಸಿದುದು ರಮೆಗೆ ಭೂವರಭವನಂ ೮೯

ಹಿಡಿದಿರುವ ಓರ್ವಸುಂದರಿಯು ಮನ್ಮಥನಿಗೆ ಪುಷ್ಪಧನುಸ್ಸನ್ನು ತಪ್ಪದೆ ಎತ್ತಿ ಕೊಡುತ್ತಿರುವ ರತಿದೇವಿಯನ್ನು ಹೋಲುತ್ತಿದ್ದಳು. ೮೭. ಮಲ್ಲಿಗೆಯ ಏಕಾವಳಿಸರ, ಶೋಭಿಸುವ ಮೊಲ್ಲೆಯ ಮೊಗ್ಗೆಯ ದಂಡೆಯ ಕಂಕಣ, ಚಿಗುರಿನ ಮನೋಹರ ಪದಕ, ಸುರಹೊನ್ನೆಯ ಕಂಠಮಾಲೆ, ಅಶೋಕ ಪುಷ್ಪದ ಕರ್ಣಾಭರಣ, ಅದಿಮುರ್ತ್ತೆಯ ಬಾಪುರಿ (ತೋಳಹಾರ), ಮನೋಹರ ಸಂಪಿಗೆ ಹೂವಿನ ಕಾಲಕಡಗ, ಇವೆಲ್ಲವುಗಳಿಂದ ಶೋಭಿಸುವ ಹೂವಿನ ಸಂತೆಯು ಮನೋಹರವಾಗಿತ್ತು. (ಸಂತೆಯೆಂಬ ಸ್ತ್ರೀಯು ಮನೋಹರವಾಗಿದ್ದಳು ಎಂದು ಭಾವ ?). ೮೮. ಮುಃಖವೆಂಬ ಲಕ್ಷ್ಮಿಯು ನೈದಿಲೆ ಹೂಗಳ ಮಾಲಿಕೆಯನ್ನು ಹಿಡಿದ ಹಾಗೆ ನೇತ್ರಕಾಂತಿಯೂ, ನೂತನವಾದ ಮಲ್ಲಿಗೆ ನಗೆಯ ಬೆಳಗೂ ಮನೋಹರವಾಗಿರುವ ಹಾಗೆ ಪ್ರಸಾರಗೊಂಡಿರಲು, ಹೂಮಾಡಿಗರ ಸ್ತ್ರೀಯರು ಹೂವಿನ ಅಂಗಡಿಯನ್ನೇ ಹೋಲುತ್ತಿದ್ದರು. ವ॥ ಈ ರೀತಿ ಅಪರಿಮಿತವಾದ ಪದಾರ್ಥಗಳ ವೈಶಾಲ್ಯದಿಂದ ಅಪೂರ್ವ ಕಾಂತಿಗೆ ಆಶ್ರಯವಾದದ್ದಾದ ಆ ಕಲ್ಯಾಣ ಪಟ್ಟಣದ ಮಧ್ಯದಲ್ಲಿ— ೮೯. ಸುತ್ತುವರಿದಿರುವ ಕೋಟೆಯ ತೆನೆಗಳೇ ಎಸಳುಗಳು ; ಒಳಗಿರುವ ಚಿನ್ನದ ಉಪ್ಪರಿಗೆಗಳೇ ಹೊಂದಿಕೊಂಡಿರುವ ಕರ್ಣಿಕೆ ; ರತ್ನ ಖಚಿತವೂ ಮಂಗಳಕರವೂ ಕಲಶಗಳ ಕಾಂತಿಯು ಮಕರಂದವೋ ಎನ್ನುವ ಹಾಗೆ ಆ ರಾಜನ ಅರಮನೆಯು

ಆ ಭವನದೊಳೆಸೆದಿರ್ಪಂ
ಭೂಭಾಮಿನಿಯಾಣ್ಮನತುಳ ಮದಯುತರಿಪುಮ
ತ್ತೇಭಮೃಗೇಂದ್ರಂ ಸಾಂದ್ರಯ
ಶೋಭರಿತಾಶಂ ಪುರಂದರೋನ್ನತವಿಭವಂ ೯೦

ಸಿರಿಯೊಳ್ ಶ್ರೀಪತಿಯಂತೆ ದಾನಗುಣದೊಳ್ಮಂದಾರ ಭೂಜಾತದಂ
ತರಿವಿಧ್ವಂಸನದೊಳ್ಸುರೇಂದ್ರಸುತನಂತೌಜ್ವಲ್ಯದೊಳ್ಪ್ರಸ್ತುತಂ
ಬರನೆಂಬಂತೆ ವಿದಗ್ಧತಾವಿಭವದೊಳ್ವಾಣೀ[1]ಶನಂತಿರ್ದನು
ರ್ವರೆಯೊಳ್ತಳ್ತವಳೋಕಮಾನಲಲನಾದೃಕ್ಕಜ್ಜಳಂ ಬಿಜ್ಜಳಂ ೯೧

ಕರತಳ ಖಡ್ಗಕೃತ್ತ[2]ರಿಪು ರಕ್ತರಸಾರ್ದ್ರಮಹೀತಳೋಪ್ತ ನಿ
ರ್ಭರಹತಕುಂಭಿಕುಂಭನಿಪತನ್ನವಮೌಕ್ತಿಕಬೀಜಜಾತ ವಿ
ಸ್ಫುರಿತ ಯಶೋಲಸಲ್ಲತೆ ಸುಧಾಂಶುಕರಚ್ಛಲದಿಂದೆ ಪರ್ಬಿ ಭಾ
ಸುರ ಭಗಣೇಂದು ಪುಷ್ಪಫಲಸಂಗತಮಾದುದು ತನ್ನರೇಂದ್ರನಾ ೯೨

ಲಕ್ಷ್ಮೀದೇವಿಗೆ ಮನೆಯಾದ ಕಮಲವೋ ಎನಿಸಿರುವುದು. ೯೦. ಆ ರಾಜ ಭವನದಲ್ಲಿ ಅನುಪಮವಾದ ಗರ್ವದಿಂದ ಕೂಡಿದ, ಶತ್ರುಗಳೆಂಬ ಮದೋನ್ಮತ್ತ ಆನೆಗಳಿಗೆ ಸಿಂಹ ರೂಪನೂ, ವಿಸ್ತಾರವಾದ ಕೀರ್ತಿಯಿಂದ ತುಂಬಿದ ದಶದಿಕ್ಕುಗಳುಳ್ಳವನೂ, ಇಂದ್ರನ ಉತ್ಕೃಷ್ಟವಾದ ವೈಭವಕ್ಕೆ ಸಮಾನವಾದ ವೈಭವವುಳ್ಳವನೂ, ಭೂಕಾಂತೆಯ ಪತಿಯೂ ಆದ ರಾಜನು ಶೋಭಿಸುತ್ತಿದ್ದನು. ೯೧. ನೋಡುವ ಲಲನೆಯರ ಕಣ್ಣುಗಳಿಗೆ ಕಾಡಿಗೆಯಂತಿರುವ ಬಿಜ್ಜಳನೆಂಬ ಅರಸನು ಭೂಮಿಯಲ್ಲಿ ಐಶ್ವರ್ಯದ ವಿಷಯದಲ್ಲಿ ಶ್ರೀಪತಿಯಾದ ವಿಷ್ಣುವಿನ ಹಾಗೂ, ದಾನ ಮಾಡುವ ಗುಣದಲ್ಲಿ ಕಲ್ಪವೃಕ್ಷದ ಹಾಗೂ, ಶತ್ರುಸಂಹಾರ ವಿಷಯದಲ್ಲಿ ಅರ್ಜುನನ ಹಾಗೂ, ತೇಜಸ್ಸಿನಲ್ಲಿ ಮನ್ಮಥನ ಹಾಗೂ, ವಿದ್ವತ್ತಿನ ವೈಭವದಲ್ಲಿ ಬ್ರಹ್ಮನ ಹಾಗೂ ಇದ್ದನು. ೯೨. ಆ ಬಿಜ್ಜಳನ ಕೈಯಲ್ಲಿರುವ ಕತ್ತಿಯಿಂದ ಕತ್ತರಿಸಲ್ಪಟ್ಟ ಶತ್ರುಗಳ ರಕ್ತ ಜಲದಿಂದ ಭೂಮಿಯು ತೊಯ್ದುಹೋಗಿತ್ತು. ಆ ಭೂಮಿಯಲ್ಲಿ ಅಧಿಕವಾಗಿ ಸತ್ತ ಆನೆಗಳ ಕುಂಭ ಸ್ಥಳದಿಂದ ಸಿಡಿದುಬಿದ್ದ ಮುತ್ತುಗಳೆಂಬ ಬೀಜಗಳು ಸೆಡಲ್ಪಟ್ಟಿದ್ದವು; ಅವು ಗಳಿಂದ ಉತ್ಪನ್ನವಾದ ಪ್ರಕಾಶಮಾನವಾದ ಕೀರ್ತಿಯೆಂಬ ಹೊಳೆಯುವ ಬಳ್ಳಿಯು ಬೆಳದಿಂಗಳೋ ಎಂಬ ನೆಪದಿಂದ ಹಬ್ಬಿತ್ತು. ಆ ಬಳ್ಳಿಯು ನಕ್ಷತ್ರ ಪಙ್ತಿಗಳೆಂಬ

1 ಗೀ(ಗ) 2 ತ್ತಿ(ಗ)

ಅತಿದೃಪ್ತಾರಾತಿಯೋಷಿಜ್ಜನದ ವದನಪೂರ್ಣೇಂದುವಂ ಮಂದಹಾಸ
ದ್ಯುತಿ ಚಂಚಜ್ಜ್ಯೋತ್ಸ್ನೆಯುಂ ಪಾಱಿಸಿ ಕೊರಗಿಸುತಂ ಹಾರ ಮುಕ್ತಾಳಿ ತಾರಾ
ತತಿಯುಂ ತಾಂ ಮಾಂಜಿಸುತ್ತಂ ಹೃದಯದಿನಕರಗ್ರಾವದೊಳ್ತಾಪವಹ್ನೀ
ಸ್ಥಿತಿಯುಂ ವ್ಯೈವರ್ಚಿಸುತ್ತಂ ಮೆಱೆದುದವನ ಶುಂಭತ್ಪ್ರತಾಪಾರ್ಕಬಿಂಬಂ ೯೩

ನಡುಗುಗುವಮಾ ನೃಪಖಡ್ಗಂ
ನಡುಗದ ಮುನ್ನಾಂತ ರಿಪುಗಳಸುವವನಸಿಯಿಂ
ಕಡಿಯದ ಮುನ್ನಂ ತೃಣಮಂ
ಕಡಿದಪುದರಿವರ್ಗಮೆನೆ ಪರಾಕ್ರಮಮೆನಿತೋ ೯೪

ಇನವಂಶ [1]ಜಾತ ನೃ[1]ಪತಿಯ
ಘನರುಚಿ ಕರವಾಲದಿಂದೆ ಮಡಿದಹಿತರ್ ತಾ
ಮಿನಮಂಡಲಮಂ ಭೇದಿಪ
ರೆನೆ ಮಡಿದೊಡಮರಿವಿರೋಧಮಂ ಬಿಟ್ಟಪನೇ ೯೫

ಹೂವು, ಚಂದ್ರನೆಂಬ ಹಣ್ಣು ಇವುಗಳಿಂದ ಕೂಡಿರುವ ಹಾಗೆ ಕಾಣುತ್ತಿತ್ತು. ೯೩. ಆ ಬಿಜ್ಜಳಮಹಾರಾಜನ ಪ್ರಕಾಶಮಾನವಾದ ಪ್ರತಾಪವೆಂಬ ಸೂರ್ಯಮಂಡಲವು ಅತಿ ಕೊಬ್ಬಿದಂತಹ ಶತ್ರುಗಳ ಸ್ತ್ರೀಯರ ಮುಗುಳ್ನಗೆಯ ಕಾಂತಿಯೆಂಬ ಬೆಳದಿಂಗಳ ಸೊಗಸನ್ನು ಹೋಗಲಾಡಿಸಿತ್ತು; (ಅವರ) ಮುಖವೆಂಬ ಪೂರ್ಣಚಂದ್ರನನ್ನು ಕಾಂತಿ ಹೀನನನ್ನಾಗಿ ಮಾಡಿತ್ತು; ಕಂಠದಲ್ಲಿರುವ ಮುತ್ತಿನಹಾರವೆಂಬ ನಕ್ಷತ್ರಗಳನ್ನು ಇಲ್ಲದಂತೆ ಮಾಡಿತ್ತು; ಹೃದಯವೆಂಬ ಸೂರ್ಯಕಾಂತ ಶಿಲೆಯಲ್ಲಿ ಸಂತಾಪವೆಂಬ ಬೆಂಕಿಯ ಸ್ಥಿತಿಯನ್ನು ಅಭಿವೃದ್ಧಿಪಡಿಸುತ್ತ ಮೆರೆಯುತ್ತಿತ್ತು. ೯೪. ಆ ಬಿಜ್ಜಳ ಮಹಾರಾಜನ ಖಡ್ಗವು ಅಲ್ಲಾಡುವುದಕ್ಕಿಂತಲೂ ಪೂರ್ವದಲ್ಲಿಯೇ (ಝಳಪಿಸುವ ಮೊದಲೇ) ಎದುರಾದ ಶತ್ರುಗಳ ಪ್ರಾಣವು ಕಂಪಿಸುತ್ತಿತ್ತು. ಅವನು ಕತ್ತಿಯಿಂದ ಕಡಿಯುವ ಮುನ್ನವೇ ಶತ್ರು ಸಮೂಹವು ಹುಲ್ಲನ್ನು ಕಚ್ಚುವುದು, ಎನ್ನುವಂತೆ ಇರಲು ಎಷ್ಟೊಂದು ಪರಾಕ್ರಮವೋ ಅವನಿಗೆ ! [ಯುದ್ಧದಲ್ಲಿ ಬಾಯಲ್ಲಿ ಹುಲ್ಲು ಕಚ್ಚುವುದು ಸೋಲನ್ನು ಒಪ್ಪಿಕೊಂಡುದರ ಲಕ್ಷಣ. ಹಾಗೆ ಹುಲ್ಲು ಕಚ್ಚಿದವನನ್ನು ಕೊಲ್ಲಕೂಡದೆಂದು ಯುದ್ಧ ನೀತಿ] ೯೫. ಸೂರ್ಯವಂಶದಲ್ಲಿ ಹುಟ್ಟಿದ ಆ ರಾಜನ ಅಧಿಕವಾದ ತೇಜಸ್ಸನ್ನುಳ್ಳ ಖಡ್ಗದಿಂದ ಸತ್ತ ಶತ್ರುಗಳು ತಾವು ಸೂರ್ಯಮಂಡಲವನ್ನು ಭೇದಿಸುವರು ಎನ್ನುವಾಗ, ಶತ್ರುವು ಸತ್ತರೂ ಶತ್ರು ವೈರವನ್ನು ಬಿಡುವನೇ ! ದ್ವಾವಿಮೌಪುರುಷೌ ಲೋಕೇ ಸೂರ್ಯಮಂಡಲಭೇದಿನೌ । ಪರಿವ್ರಾಟ್ ಯೋಗಯುಕ್ತಂಚ ರಣೇಚಾಭಿ ಮುಖೇಹತ :—ಎಂಬಂತೆ ರಣದಲ್ಲಿ ಶೌರ್ಯದಿಂದ ಹೋರಾಡಿದವನು ಸೂರ್ಯಮಂಡಲ

1 ಜತನೃ (ಗ, ಮು, ಚ, ತ, ಮ)

ಧರಿಣಿಪನಸಿದೂತಿ ರಿಪೂ
ತ್ಕರವಂ ಸುರನಾರಿಯರ್ಕಳೊಳ್ನೆರಪಲ್ ಸಾ
ರ್ದಿರದಿಳ್ದುಕೊಳ್ವಳಾ ರಿಪು
ಶಿರೋಧಿಗತರಕ್ತಬಿಂದುಮಣಿಮಾಲಿಕೆಯಂ ೯೬

ವ॥ ಎಂಬ ಗಂಭೀರಪ್ರತಾಪಮಿಂಬುವಡೆಯೆ ನೆಗಳ್ತೆವೆತ್ತ[1]ನ[1]ರೇಂದ್ರಂಗೆ—

ನಯಸಂಪನ್ನನಧೀತಶಾಸ್ತ್ರನಿಚಯಂ ನಾನಾ ಕಲಾಶಾಲಿ ದು
ರ್ನಯದೂರಂ ಶುಚಿ ಶೂರನೂರ್ಜಿತಯಶಂ ಶುದ್ಧಾನ್ವಯಂ ಕಾರ್ಯನಿ
ರ್ಣಯಧುರ್ಯಂ ಶಿವಭಕ್ತನೊಲ್ವ ಸಚಿವಂ ತಾನಾದನಾ ಮಾದಲಾಂ
ಬೆಯ ತಮ್ಮಂ ಬಲದೇವನೆಂಬನನಘಂ ಗಾಂಭೀರ್ಯರತ್ನಾಕರಂ ೯೭

ಗುರುಮಂತ್ರಜಪಪರಾಯಣ
ನುರುತರ ಕವಿವಿನುತನಾಗಿಯುಂ ಬಲದೇವಂ
ಗುರುಮಂತ್ರದ ಕವಿವಚನದ
ಪರಿಯಂ ಪಳಿಕ್ಕೈದು ಮೆಱೆವನೇನಚ್ಚರಿಯೋ ೯೮

ಭೇದಿಸಿಕೊಂಡು ಸ್ವರ್ಗಕ್ಕೆ ಹೋಗುವರು ಎಂಬ ನಂಬುಗೆಯಿದೆ.] ೯೬. ಆ ಬಿಜ್ಜಳ ಮಹಾರಾಜನ ಖಡ್ಗವೆಂಬ ಕುಂಟಣಿಯು ಶತ್ರುಸಮೂಹವನ್ನು ದೇವತಾ ಸ್ತ್ರೀಯರೊಡನೆ ಸೇರಿಸುವುದಕ್ಕೋಸುಗ ಸಮೀಪಕ್ಕೆ ಹೋಗಿ ತಪ್ಪದೆ ಆ ವೈರಿಗಳ ಕಂಠವನ್ನು ಹೊಂದಿಕೊಂಡಿರುವ ರಕ್ತದ ಹನಿಗಳೆಂಬ ರತ್ನದ ಸರವನ್ನು ಕಳಚಿಕೊಳ್ಳುತ್ತಿದ್ದಳು. **ವಚನ** : ಹೀಗೆಂಬ ಗಂಭೀರವಾದ ಪ್ರತಾಪದಿಂದ ಮನೋಹರವಾಗಿರುವ ಪ್ರಸಿದ್ಧಿ ಪಡೆದ ಬಿಜ್ಜಳರಾಜನಿಗೆ–೯೭. ಶಾಸ್ತ್ರ ಸಮುದಾಯವನ್ನು ಅಭ್ಯಾಸಮಾಡಿದವನೂ, ನಾನಾಕಲೆಗಳಿಂದ ಕೂಡಿದವನೂ, ದುಷ್ಟನೀತಿಯಿಂದ ದೂರವಾದವನೂ, ಪರಿಶುದ್ಧನೂ, ಪರಾಕ್ರಮಶಾಲಿಯೂ, ಅಧಿಕಕೀರ್ತಿ ಸಂಪನ್ನನೂ, ಕಾರ್ಯನಿರ್ವಾಹಸಮರ್ಥನೂ, ಪಾಪ ರಹಿತನೂ, ಗಾಂಭೀರ್ಯದಲ್ಲಿ ರತ್ನಾಕರನೂ ಬಸವಣ್ಣನ ತಾಯಿಯಾದ ಮಾದಲಾಂಬಿಕೆಯ ತಮ್ಮನೂ ಆದ ಶಿವಭಕ್ತ ಬಲದೇವನೆಂಬುವನು ಪ್ರೀತಿಗೆ ಪಾತ್ರನಾದ ಮಂತ್ರಿಯಾಗಿದ್ದನು. ೯೮. ಈ ಬಲದೇವ ಮಂತ್ರಿಯು ದೇವಗುರುವಾದ ಬೃಹಸ್ಪತ್ಯಾಚಾರ್ಯನ ಮಂತ್ರಾನುಷ್ಠಾನದಲ್ಲಿ ಆಸಕ್ತನಾದವನಾಗಿದ್ದವನು. (ಅಥವಾ ಗುರುಗಳಿಂದ ಉಪದೇಶಿಸಲ್ಪಟ್ಟ ಮಂತ್ರಾನುಷ್ಠಾನದಲ್ಲಿ ಆಸಕ್ತನಾದವನಾಗಿದ್ದನು.) ಶ್ರೇಷ್ಠ ದೇವಕವಿಯಾದ ಶುಕ್ರಾಚಾರ್ಯನ ಸ್ತೋತ್ರಕ್ಕೆ ಪಾತ್ರನಾದವನಾಗಿದ್ದನು. (ಅಥವಾ–ಉತ್ಕೃಷ್ಟ ಕವಿ ಜನರ ಸ್ತೋತ್ರಕ್ಕೆ ಪಾತ್ರನಾದವನಾಗಿದ್ದನು.) ಹೀಗಿದ್ದರೂ ಕೂಡ ಬೃಹಸ್ಪತಿಯ

1 ತನ್ನ(ಮ)

ಆ ಮಂತ್ರಿಪಬಲನ ಸುತೆ ಮದ
ಸಾಮಜಮೃದುಯಾನೆ ಮಾನನಿಧಿ ಸಕಳಕಳಾ
ಭೂಮಿಕೆ ಗಂಗಾಂಬಿಕೆಯೆಂ
ಬಾ ಮೃಗಮದಗಂಧಿ ಜವ್ವನಂಬಡೆದೆಸೆದಳ್ ೯೯

ವದನರುಚಿಯಿಂದೆ ಪರಿಭವಿ
ಸದಿರೆಮ್ಮಯ ಪತಿಯನೆಂದು ತಾರಾಂಗನೆಯ
ರ್ಸುದತಿಯ ಪದಯುಗಕೊಲ್ದೆಱ
ಗಿದವೆಂಬುದನಿಂಬುಕೈದವವಳಡಿಯುಗುರ್ಗಳ್ ೧೦೦

ಎಳೆಯಳ ಕಣೆಕಾಲ್ದೊಣೆಯೊಳ
ವಳಯದಿನಿಳಿತಂದು ಮಿಸುಪ ಮದನನ ರಾಗೋ
ಜ್ವಳಪಲ್ಲವಶರವೆನೆ ಬಗೆ
ಗೊಳಿಸಿದುದರುಣಾಂಶುರುಚಿರಪದತಳಮವಳಾ ೧೦೧

ಲಲನೆಯ ನುಣ್ದೊಡೆಯ ಸಮು
ಜ್ವಲರುಚಿಯುಂ ಪಡೆಯಲೆಳಸಿ ನಾರಂ ಪಡೆದು
ಟ್ಟಲಸದೆ ನೀರೀಂಟುತೆ ಸಲೆ
ನೆಲಸಿರ್ದಪುವಲ್ತೆ ಬಾಳೆಗಳ್ ಬನದೆಡೆಯೊಳ್ ೧೦೨

ಮಂತ್ರದ (ಅಥವಾ ಅಧಿಕತರವಾದ ಮಂತ್ರಾಲೋಚನೆಯ), ಶುಕ್ರಾಚಾರ್ಯನ ಮಾತಿನ (ಅಥವಾ ಶುಕ್ರನೀತಿಯನ್ನು ತಿಳಿದ ಕವಿಗಳ ಮಾತಿನ) ರೀತಿಯನ್ನು ತಿರಸ್ಕರಿಸಿ, ಪ್ರಕಾಶಿಸುತ್ತಿದ್ದನೆಂಬುದು ಏನು ಆಶ್ಚರ್ಯವೊ ! ೯೯. ಮತ್ತಗಜದ ಮಂದ (ಮೆತ್ತನೆಯ) ಗಮನದಂತಿರುವ ಗಮನವುಳ್ಳವಳೂ, ಮಾನಧನಳೂ, ಸಕಲ ಕಲೆಗಳ ಹುಟ್ಟಿಗೆ ಭೂಮಿಕೆ ಯಾದವಳೂ. ಕಸ್ತೂರಿಯ ಗಂಧದಂತೆ (ಶರೀರ) ಗಂಧವುಳ್ಳವಳೂ ಆದ 'ಗಂಗಾಂಬಿಕೆ' ಎಂಬ ಆ ಬಲದೇವ ಮಂತ್ರಿಯ ಮಗಳು (ಇದ್ದಳು) (ಅವಳು) ಯೌವನವನ್ನು ಪಡೆದು ಪ್ರಕಾಶಿಸುತ್ತಿದ್ದಳು. ೧೦೦. ನಕ್ಷತ್ರಗಳೆಂಬ ಸ್ತ್ರೀಯರು—'ನಮ್ಮ ವಲ್ಲಭವಾದ ಚಂದ್ರ ನನ್ನು ನಿನ್ನ ಮುಖಕಾಂತಿಯಿಂದ ತಿರಸ್ಕಾರ ಮಾಡಬೇಡ' ಎಂದು ಆ ಗಂಗಾಂಬಿಕೆಯ ಎರಡೂ ಪಾದಗಳಿಗೆ ಮನಸಾರ ನಮಸ್ಕರಿಸುವರೋ ಎಂಬಂತೆ ಆ ಗಂಗಾಂಬಿಕೆಯ ಕಾಲಿನ-ಉಗುರುಗಳು (ಅವಳ ಕಾಲಬೆರಳನ್ನು) ಆಶ್ರಯಿಸಿದ್ದವು. [ಗಂಗಾಂಬಿಕೆ ಈ ಕಾವ್ಯ ನಾಯಕನಾದ ಬಸವಣ್ಣನ ಪತ್ನಿಯಾಗುವವಳಾದ್ದರಿಂದ ಅವಳನ್ನು ಪಾದಗಳಿಂದ ಮೊದಲ್ಗೊಂಡು ವರ್ಣನೆಗೆ ಪ್ರಾರಂಭಿಸುತ್ತಾನೆ.] ೧೦೧. ಎಳೆಯ ವಯಸ್ಸಿನ ಆ ಗಂಗಾಂಬಿಕೆಯ ಕಣ ಕಾಲುಗಳೆಂಬ ಬತ್ತಳಿಕೆಯ ಒಳಭಾಗದಿಂದ ಇಳಿದು ಬಂದು ಶೋಭಿಸುವ, ಮನ್ಮಥನ ಅರುಣ್ಯ ವರ್ಣದಿಂದ ಪ್ರಕಾಶಮಾನವಾದ ಚಿಗುರಿನ ಬಾಣಗಳೋ ಎಂಬಂತ ಅವಳ ಕೆಂಪು ಬಣ್ಣದಿಂದ ಕೂಡಿದ ಶೋಭಾಯಮಾನವಾದ ಅಂಗಾಲುಗಳು ಕಂಗೊಳಿಸುತ್ತಿದ್ದವು. ೧೦೨. ಬಾಳೆಯ ಗಿಡಗಳು ಗಂಗಾಂಬಿಕೆಯ ನುಣ್ಣನೆಯ ತೊಡೆಯ ಉಜ್ವಲ ಕಾಂತಿಯನ್ನು ಹೊಂದುವದಕ್ಕೋಸುಗ ಆಸೆಪಟ್ಟು, ಪ್ರೀತಿಯಿಂದ ನಾರನ್ನುಟ್ಟು (ನಾರು ಬಟ್ಟೆಯನ್ನುಟ್ಟು) ಬೇಸರಪಟ್ಟುಕೊಳ್ಳದೆ ನೀರನ್ನು ಕುಡಿಯುತ್ತ

ಮುರಿದಿಳಿದ ವೇಣಿಕಾಬಂ
ಧುರ ಯಮುನಾನದಿಯ ಪೂರ್ಣಪುಳಿನಸ್ಥಳದಂ
ತಿರೆ ಕರಮೆಸೆದುದು ಘನ ಪೀ
ವರಜಘನಂ ಚಕಿತ ತರುಣಹರಿಣೇಕ್ಷಣೆಯಾ ೧೦೩

ಬಡಬಾಸೆಯೆಂಬ ಕಾರೊರೆ
ಯೊಡನಿರೆ ದಿಗ್ವಿಜಯಕರ್ಚಿಸಲ್ಮದನಂ ತಾಂ
ಪಿಡಿದಸಿಯನುರ್ಚಿ ನಿಲಿಸಿದ
ಬೆಡಂಗನಾಳ್ದುದು ತನೂದರೀತನುಮಧ್ಯಂ ೧೦೪

ಗುರುಕಚಘರ್ಷಣನಿಪತಿತ
ಸುರುಚಿರಕುಂಕುಮಪರಾಗಮುಮರ್ದಿರೆ ಕನಕಾಂ
ಬುರುಹಮದು ತರಳಮಣಿರವಿ
ಕಿರಣದಿನಲರ್ದಂತೆ ನಾಭಿ ಮೆಱೆದುದು ಸತಿಯಾ ೧೦೫

ಹಾರರುಚಿಸುಧೆಯನೀಂಟಲ್
ಸಾರೆಯೊಳೆಸೆದಿರ್ದ ನಾಭಿ ವಲ್ಮೀಕದೆ ಕಾ

ತೋಟಗಳಲ್ಲಿ ನೆಲಸಿರುವುವಲ್ಲವೆ ! [ನಾರುಬಟ್ಟೆಯನ್ನುಟ್ಟು ಕೇವಲ ನೀರನ್ನೇ ಸ್ವೀಕರಿಸುತ್ತ ಬಾಳೆಗಳು ತಪಸ್ಸು ಮಾಡುತ್ತಿದ್ದುವೆಂದು ಆಶಯ] ೧೦೩. ಮುರಿ ಮುರಿಯಾಗಿ ಇಳಿದ ಜಡೆಯೆಂಬ ಮನೋಹರ ಕಾಳಿಂದೀನದಿಯ ಸಮಗ್ರ ಮಳಲು ದಿಣ್ಣೆಯಹಾಗೆ, ಚಂಚಲವಾದ ತರುಣ ಜಿಂಕೆಯಂತೆ ಕಣ್ಣುಳ್ಳ ಗಂಗಾಂಬಿಕೆಯ ಉನ್ನತವಾಗಿಯೂ, ದಪ್ಪವಾಗಿಯೂ ಇರುವ ಕಟಿಪಶ್ಚಾತ್ ಭಾಗವು (ಅಂಡುಗಳ ಭಾಗವು) ಶೋಭಾವಹವಾಗಿತ್ತು. ೧೦೪. ತೆಳುವಾದ ಹೊಟ್ಟೆಯುಳ್ಳ ಗಂಗಾಂಬಿಕೆಯ ತೆಳು ನಡುವು, ಸಣ್ಣವಾಗಿರುವ ಹೊಟ್ಟೆಯ ಮೇಲಿನ ರೋಮರಾಜಿಯೆಂಬ (ಬಾಸೆಯೆಂಬ) ಕಪ್ಪು ಬಣ್ಣದ ಒರೆಯು ಸಂಗಡವೇ ಇರುತ್ತಿರಲಾಗಿ, ಮನ್ಮಥನು ತಾನು ಹಿಡಿದ ಕತ್ತಿಯನ್ನು ವಿಜಯಯಾತ್ರೆಗಾಗಿ, ಪೂಜೆ ಮಾಡುವುದಕ್ಕೆ ಒರೆಯಿಂದ ಹೊರಗೆಳೆದು ನಿಲ್ಲಿಸಿದ ಒಂದು ಬಗೆಯ ಸೊಗಸನ್ನು ಉಂಟುಮಾಡುತ್ತಿತ್ತು. ೧೦೫. ಆ ಗಂಗಾಂಬಿಕೆಯ ದಪ್ಪನಾದ ಮೊಲೆಗಳ ಘರ್ಷಣೆಯಿಂದ ಅಲ್ಲಿ ತೊಡೆದಿದ್ದ ಮನೋಹರವಾದ ಕುಂಕುಮ ಕೇಸರಿಯ ಧೂಳಿಯು ಉದುರಿ ಹೊಕ್ಕುಳಕ್ಕೆ ಮೆತ್ತಿಕೊಂಡಿತ್ತು (ಈ ಕಾರಣದಿಂದ ಆ ಹೊಕ್ಕುಳು) ಸುವರ್ಣವರ್ಣದ ಕಮಲದ ಹೂವು ಹಾರದ ಮಧ್ಯದಲ್ಲಿರುವ ನಾಯಕ ರತ್ನಮಣಿಯೆಂಬ ಸೂರ್ಯಕಾಂತಿಯಿಂದ ಅರಳಿದ ಹಾಗೆ ಕಾಣುತ್ತಿತ್ತು. [ಇಲ್ಲಿ ಕಮಲ ಅರಳಬೇಕಾದರೆ ಬೇಕಾಗುವ ಸೂರ್ಯನ ಆವಶ್ಯಕತೆಗೆ ಕೊರಳಲ್ಲಿ ಧರಿಸಿರುವ ಹಾರದ ಮಧ್ಯದ ರತ್ನವನ್ನು ಕವಿ ಬಳಸಿಕೊಂಡಿದ್ದಾನೆ] ೧೦೬. ಆ ಮನೋಹರವಾದ ಗಂಗಾಂಬಿಕೆಯ ಉದರದ ಮೇಲಿರುವ ರೋಮ ಪಙ್ಕ್ತಿಯು ಸಮೀಪದಲ್ಲಿಯೇ

ಳೋರಗ ಶಿಶು ನೆಗೆದೇಳ್ದವೊ
ಲಾ ರಮಣಿಯ ಬಾಸೆ ಬಗೆಗದೇಂ ಸೊಗಯಿಸಿತೋ ೧೦೬

ಎಲೆ ನಡು ಬಡವಾಗದಿರೆಂ
ದಲರಂಬಂ ಬರೆದ ಸುಮರಜೋರಕ್ಷೆಯ ಮಂ
ಜುಲರೇಖೆಗಳೆನೆ ಮೆಱೆಗುಂ
ವಲಿಗಳ್ಕೋಮಲೆಗೆ ಹಾರರುಚಿವಿಳಿತಂಗಳ್ ೧೦೭

ತರುಣಿಯ ಕುಚಕುಟ್ಮಳ ಭಾ
ಸುರತೆಯನಾನಲ್ಸರೋಜಮುಕುಳಂ ಕುಶವಿ
ಷ್ಟರದಲ್ಲಿ ನೆಲಸಿ ನೆಗಳ್ದಂ
ತಿರಳಿಧ್ವನಿವಿಷದೆ ಮಂತ್ರಜಪಮಾಂತೆಸೆಗುಂ ೧೦೮

ಎಳೆಯ ಮೃಣಾಳಮನಾ ಕೋ
ಮಳೆಯ ಭುಜಂ ಜಯಿಸೆ ಭಯದೆ ನೀರ್ಪುಗುತದು ಕು
ಟ್ಮಳತಾರುಣಾಬ್ಜವಿಷದಂ
ಜಳಿಯಂ ನಳಿತೋಳ್ಗೆ ಮಾಳ್ಪುದಾ ಶಶಿಮುಖಿಯಾ ೧೦೯

ಶೋಭಿಸುತ್ತಿದ್ದ ಹೊಕ್ಕುಳವೆಂಬ ಹುತ್ತದಲ್ಲಿದ್ದ ಕರಿಯ ಹಾವಿನಮರಿಯು (ಅವಳು ಧರಿಸಿರುವ) ಮುತ್ತಿನಹಾರದ ಕಾಂತಿಯೆಂಬ ಅಮೃತವನ್ನು ಕುಡಿಯುವುದಕ್ಕೆ (ಹುತ್ತದಿಂದ) ನೆಗೆದು ಮೇಲಕ್ಕೇರಿ ಬಂದಹಾಗೆ ಕಣ್ಣಿಗೆ ಅದೇನು ಮನೋಹರವಾಗಿ ಶೋಭಿಸುತ್ತಿತ್ತೋ ! ೧೦೭. ಕೋಮಲೆಯಾದ ಆ ಗಂಗಾಂಬಿಕೆಯ ಮುತ್ತಿನಹಾರದ ಕಾಂತಿಯಿಂದ ಶೋಭಿಸುವ ತ್ರಿವಳಿಗಳು (ಹೊಟ್ಟೆಯ ಮೇಲಿನ ಮೂರು ಗೆರೆಗಳು) 'ಎಲೈ ನಡುವೇ, ಬಡವಾಗಬೇಡ' ಎಂದು ಮನ್ಮಥನು ಪುಷ್ಪಧೂಳೆಂಬ ಭಸ್ಮದಿಂದ ಬರೆದ ಮನೋಹರ ಗೆರೆಗಳ ಹಾಗೆ ಶೋಭಿಸುತ್ತಿದ್ದವು. ೧೦೮. ಕಮಲದ ಮೊಗ್ಗುಗಳು ಆ ಗಂಗಾಂಬಿಕೆಯ ಮೊಗ್ಗುಗಳಂತಿರುವ ಮೊಲೆಗಳ ಮನೋಹರತ್ವವನ್ನು ಹೊಂದಲು, ದರ್ಭೆಯ ಆಸನ (ದರ್ಭೆಯ ಹುಲ್ಲಿನ ಚಾಪೆ)ದ ಮೇಲೆ ಕುಳಿತು ತುಂಬಿಯ ಝೇಂಕಾರವೆಂಬ ವ್ಯಾಜದಿಂದ ಮಂತ್ರ ಜಪವನ್ನು ಮಾಡುತ್ತಿರುವ ಹಾಗೆ ಶೋಭಿಸುತ್ತಿದ್ದವು. ೧೦೯. ಆ ಕೋಮಲೆಯಾದ ಗಂಗಾಂಬಿಕೆಯ ಬಾಹುವು ಎಳೆಯ ತಾವರೆಯ ನಾಳವನ್ನು ಸೋಲಿಸಿತು. (ಈ ಕಾರಣದಿಂದ) ಆ ಮೃಣಾಳವು ಭಯದಿಂದ ನೀರನ್ನು ಪ್ರವೇಶಿಸಿ, ಆ ಚಂದ್ರಮುಖಿಯಾದ ಗಂಗಾಂಬಿಕೆಯ ಕೋಮಲಬಾಹುವಿಗೆ ಕೆಂಪು

ಪರನೊಲ್ಲನೆಮ್ಮನೀಕೆಯ
ಕರಾಬ್ಜದಗ್ರಮನೆ ಸಾರ್ದು ಸಲ್ವೆವನಂಗೆಂ
ದಿರದೆಳಸಿ ಸಾರ್ದ ಕೈತಕ
ವರ ದಳಮನೆ ಮೆಱೆದುವವಳ ಕರರುಹನಿಚಯಂ ೧೧೦

ವರ ಮಂದ್ರ ಮಧ್ಯ ತಾರ
ಸ್ವರ ಸೀಮಾರೇಖೆಯೆನಿಸೆ ಮೂಗೆರೆ ಲಾವ
ಣ್ಯರಸಾಬ್ಧಿಯೊಳಮರ್ದೆಸೆದುದು
ಪರಿಕಲಿತ ಸುವರ್ಣಶಂಖಮೆನೆ ಗಳಮವಳಾ ೧೧೧

ವದನೇಂದುವಿಧುರಿತಂ ಸಲಿ
ಲದೊಳಂಬುಜಮಳ್ಕಿ ಪೊಕ್ಕು ರಾಕಾಶಶಿಮೂ
ಡಿದೊಡದನಾಕೆಯ ಮೊಗಮೆಂ
ದದು ನೋಡಲ್ಕಗಿದು ಮುಗಿವುದಿನ್ನುಂ ಮುನ್ನಂ ೧೧೨

ವದನೇಂದುವನರ್ಚಿಸಿದಂ
ಮದನಂ ದಿಗ್ವಿಜಯಕೆಂದು ಬಂದುಗೆಯಲರಿಂ
ದಿದು ನಿಜಮೆನಿಸಿ ವಿರಾಜಿಸಿ
ದುದು ಚಂದ್ರಾನನೆಯ ಬಿಂಬರುಚಿಲಸದಧರಂ ೧೧೩

ಕಮಲಗಳ ಮೊಗ್ಗಿನಂತೆ ಅರುಣ್ಯವರ್ಣವುಳ್ಳ ಅಂಗೈಗಳು ಮಾಡಲ್ಪಟ್ಟವು. ೧೧೦. ಕೇದಿಗೆ ಹೂವಿನ ಗರಿಗಳಂತಿರುವ ಅವಳ ಉಗುರುಗಳ ಸಮೂಹವು ಹೀಗೆ ಪ್ರಕಾಶಿಸುತ್ತಿತ್ತು. ನಮ್ಮನ್ನು ಪರಶಿವನು ತನ್ನ ಪೂಜೆಗೆ ಸ್ವೀಕರಿಸುವುದಿಲ್ಲ. (ಆದ್ದರಿಂದ) ಈ ಗಂಗಾಂಬಿಕೆಯ ಹಸ್ತ ಕಮಲದ ಅಗ್ರ ಭಾಗವನ್ನು ಹೊಂದಿ, ಆ ಪರಶಿವನ ಪೂಜೆಗೆ ಯೋಗ್ಯವಾಗೋಣ ಎಂದು ತಪ್ಪದೆ ಅಪೇಕ್ಷಿಸಿ ಆವೇ ಅವಳ ಉಗುರುಗಳಾದುವು. ೧೧೧. ಅವಳ ಕಂಠದಲ್ಲಿರುವ ಮೂರು ಮಡಿಕೆಗಳು ಶ್ರೇಷ್ಠವಾದ ಮಂದ್ರ, ಮಧ್ಯ ತಾರಸ್ವರ ಮಂಡಲದ ಗಡಿಪ್ರದೇಶದ ಗೆರೆಯೋ ಎಂಬಹಾಗೆ, ಕುತ್ತಿಗೆಯು ಕಾಂತಿಯೆಂಬ ರಸದ ಸಮುದ್ರದಲ್ಲಿ ಸೇರಿರುವ ಹೊಂಬಣ್ಣದ ಶಂಖವೋ ಎನ್ನುವ ಹಾಗೆ ಮನೋಹರವಾಗಿ ಶೋಭಿಸುತ್ತಿದ್ದುವು. ೧೧೨. ಆ ಗಂಗಾಂಬಿಕೆಯ ಮುಖವೆಂಬ ಚಂದ್ರನಿಂದ ಅಂಜಿಕೊಂಡ ಕಮಲವು ಹೆದರಿ, ನೀರಿನಲ್ಲಿ ಹೊಕ್ಕು ಪೂರ್ಣಚಂದ್ರನು ಮೂಡಿದರೂ ಕೂಡ, ಆ ಚಂದ್ರನನ್ನು ಗಂಗಾಂಬಿಕೆಯ ಮುಖವೇ ಎಂದು ನೋಡುವುದಕ್ಕೂ ಕೂಡ ಹೆದರಿ ಈಗಲೂ, ಇನ್ನು ಮುಂದೆಯೂ ಮೊಗ್ಗಾಗಿಯೇ ಇರುವುದಲ್ಲವೆ ! ೧೧೩. ಮನ್ಮಥನು ದಿಗ್ವಿಜಯಕ್ಕೆ ಹೋಗಬೇಕೆಂದು ಗಂಗಾಂಬಿಕೆಯ ಮುಖಚಂದ್ರನನ್ನು ಬಂದುಗೆಯ ಹೂವಿನಿಂದ ಪೂಜಿಸಿದನು (ಎಂಬುದು) ನಿಜವೇ ಹೌದು ! ಎನಿಸಿ, ಆ ಚಂದ್ರಾನನೆಯಾದ ಗಂಗಾಂಬಿಕೆಯ ತೊಂಡೇಹಣ್ಣಿನ ಕಾಂತಿಯಿಂದ

ಕುಂದುವ ಮೊಲ್ಲೆಯ ಮುಗುಳಂ
ಕುಂದದ ಮುಗುಳೆಂದು ನುಡಿವುದನುಚಿತಮಿಳೆಯೊ
ಳ್ಕುಂದದ ಚಂದದ ದಶನಂ
ಕುಂದದ ಮುಗುಳಲ್ತೆ ತನ್ಮೃದುಸ್ಮಿತಲತೆಯಾ ೧೧೪

ಮೂವಣ್ಣಕ್ಕೀಡಪ್ಪಂ
ತಾವರೆವಗೆಯೊಂದೆ ದಿನದೊಳೆನುತದನಿಳಿಕೈ
ದಾ ವನಿತೆಯ ನುಣ್ಗದಪದು
ಭಾವಿಸೆ ಶಾಶ್ವತ ನಿಜಪ್ರಕಾಶದಿನೆಸೆಗುಂ ೧೧೫

ಸಲೆ ಕನ್ನವುರದ ಚೆನ್ನೈ
ದಿಲಲರ್ಮೇಲೆಸೆಯೆ ತಳ್ತ ಪೂವೆನೆ ಕರ್ಣಂ
ನಲಿದಿರ್ಮಡಿಸಿದ ತನ್ಮಂ
ಜುಲನಾಳದ ಚೆಲ್ವನಾಳ್ದುದಾ ಶಶಿಮುಖಿಯಾ ೧೧೬

ತರುಣಿಯ ನಾಸಿಕದಂದದ
ಬಿರಿಮುಗುಳಂ ಪಡೆವೆನೆಂದು ಸಂಪಗೆ ಪಲವಂ
ಬಿರಿಮುಗುಳಂ ಪಡೆದದಕಿದು
ಸರಿವಾರದೆನುತ್ತೆ ಮುಗುಳ್ವು ಪಡೆದಪ್ಪುದಿನ್ನುಂ ೧೧೭

ಕೂಡಿರುವ ತುಟಿಯು ವಿರಾಜಿಸಿತು. ೧೧೪. ಈ ಭೂಮಿಯಲ್ಲಿ ಕಾಂತಿಹೀನವಾಗುವ ಮೊಲ್ಲೆ ಹೂವಿನ ಮೊಗ್ಗನ್ನು ಕೊರಗದಿರುವ ಮೊಗ್ಗು (ಕುಂದದ ಮೊಗ್ಗು) ಎಂದು ನುಡಿಯುವುದು ಉಚಿತವಲ್ಲ, ಕುಂದದ (ಕಾಂತಿ ಹೀನವಾಗದ) ಚಂದವಾದ ಹಲ್ಲುಗಳು ಆ ಗಂಗಾಂಬಿಕೆಯ ಮುಗುಳುನಗೆಯೆಂಬ ಬಳ್ಳಿಯ ಕುಂದದ ಮೊಗ್ಗಲ್ಲವೆ ! (ಕೊರಗದ ಮೊಲ್ಲೆಯ ಮೊಗ್ಗಲ್ಲವೆ !) [ಇಲ್ಲಿ ಮೊಲ್ಲೆಗೆ 'ಕುಂದ' ಎಂದು ಹೆಸರಿರುವುದರಿಂದ 'ಕುಂದ' ಎಂಬ ಶಬ್ದದ ಅರ್ಥ ಚಮತ್ಕಾರ ಪ್ರಧಾನವಾದದ್ದು] ೧೧೫. ಕಮಲದ ಶತ್ರುವಾದ ಚಂದ್ರನು ಒಂದೇ ದಿನದಲ್ಲಿ ಮೂರು ಬಣ್ಣಕ್ಕೆ ಗುರಿಯಾಗುವನು ಎನ್ನುತ್ತ ಆ ಗಂಗಾಂಬಿಕೆಯ ನುಣುಪಾದ ಕೆನ್ನೆಗಳು ವಿಚಾರ ಮಾಡಿ ನೋಡಿದರೆ ಸ್ಥಿರವಾದ ತಮ್ಮ ಕಾಂತಿಯಿಂದ ಆ ಚಂದ್ರನನ್ನು ಕೂಡ ತಿರಸ್ಕರಿಸಿ ಶೋಭಿಸುತ್ತಿದ್ದವು. ೧೧೬. ಕರ್ಣಾಭರಣಾರ್ಥವಾಗಿ ಧರಿಸಿರುವ ಕೆಂಪು ನೈದಿಲೆ ಹೂವು ಮೇಲ್ಗಡೆಯಲ್ಲಿ ಸೇರಿರುವ ಹೂವೋ ! ಎಂಬ ಹಾಗೆ ಶೋಭಿಸುತ್ತಿರಲು, ಆ ಚಂದ್ರಮುಖಿಯ ಕಿವಿಯು ನಲ್ಮೆಯಿಂದ ಎರಡಾಗಿ ಕವಲೊಡೆದ ಆ ಮನೋಹರವಾದ ನಾಳದ ಚೆಲುವನ್ನು ಹೊಂದಿತು. ೧೧೭. ಸಂಪಿಗೆಯ ಮರವು ಆ ಗಂಗಾಂಬಿಕೆಯ ಮೂಗಿನಂತಿರುವ (ತನ್ನ) ಅರಳಿದ ಹೂವುಗಳನ್ನು ಪಡೆದು, ಅವಳ ನಾಸಿಕಕ್ಕೆ ಈ ಹೂವು ಸಮಬಾರದು ಎಂದುಕೊಳ್ಳುತ್ತ ಪುನಃ ಪುನಃ ಈಗಲೂ ಬಿಡುತ್ತಲೇ ಇರುವುದು. [ಅವಳ ಮೂಗಿಗೆ ಸಮಾನವಾದ ಸೌಂದರ್ಯವುಳ್ಳ ಹೂವನ್ನು ಇನ್ನೂ ನಾನು ಪಡೆಯಲೇ ಇಲ್ಲವಲ್ಲಾ ! ಎಂದು ಭಾವ]

ಎಲೆ ಕರ್ಣಮೆ ಕರ್ಣ[1]ಪೂರಂ
ಸಲೆ ನಿನಗಾದಪ್ಪೆವಲ್ತೆ ಬಿಡು ಬಿಡು ಕರ್ಣೋ
ದಿಲ ಕರ್ಣಪೂರಮನೆಂದವ
ನಲಿವಪವೆನೆ ಮೊಱೆದುಪಾಯುತಾಕ್ಷಿಗಳವಳಾ ೧೧೮

ವದನಾಂಬುಜದೊಳ್ನೆಱೆ ತೀ
ವಿದ ಲಾವಣ್ಯಾಂಬುಪೂರವೆಳೆದೆರೆ ಪಕ್ಷ್ಮಾ
ಗ್ರದ ಪಡಿನೆಳಲೊಳ್ತಳ್ತಂ
ದದೆ ದೀರ್ಘೇಕ್ಷಣೆಗೆ ಪುರ್ಬದೇಂ ಸೊಗಯಿಸಿತೋ ೧೧೯

ಅಳಿಕಚಭರನೀಲಾಂಬುದ
ದೊಳವಳಯದಿನರ್ಧವೊಗೆದು ಕಾಣಿಪ ರುಚಿಮಂ
ಜುಳ ಶಶಿಯೆಂಬ ವಿಳಾಸಮ
ನೆಳೆಯುಳ ಪಣೆ ತಳೆದು ಕಣ್ಗೆದೇಂ ತೊಳಗಿದುದೋ ೧೨೦

ಮುಡಿಗಟ್ಟಿದಾಗಳಾಕೆಯ
ಮುಡಿಯಂದಕೆ ಸೋಲ್ತು ಕೇಕಿ ಕಡು ಮುಳಿಸಿಂದಂ
ಜಡೆವೆಣೆದೊಡಾಗಳಾಕೆಯ
ಜಡೆಯಂದದ ಫಣಿಯನಮಮ ನೋಣೆದಪುದಿನ್ನುಂ ೧೨೧

೧೧೮. ಎಲೈ ಕಿವಿಯೇ ನಿನ್ನ ಕರ್ಣಕ್ಕೆ (ನಾವು) ಆಭರಣವಾಗುತ್ತೇವಲ್ಲವೆ ? (ಆ) ಕನ್ನೈದಿಲೆ ಹೂವಿನ ಕರ್ಣಾಭರಣವನ್ನು ಬಿಟ್ಟುಬಿಡು ಎಂದು ಪೀಡಿಸುತ್ತಿರುವುವೋ ಎಂಬ ಹಾಗೆ ಅವಳ ದೀರ್ಘವಾದ ಕಣ್ಣುಗಳು ಶೋಭಿಸುತ್ತಿದ್ದವು. ೧೧೯. ಮುಖ ವೆಂಬ ಕಮಲದಲ್ಲಿ ಚೆನ್ನಾಗಿ ತುಂಬಿದ ಲಾವಣ್ಯವೆಂಬ ನೀರಿನ ಪ್ರವಾಹದ ಸಣ್ಣತೆರೆಯು ರೆಪ್ಪೆಯ ತುದಿಯ ಪಡಿನೆಳಲಲ್ಲಿ ಸೇರಿಕೊಂಡಹಾಗೆ ವಿಶಾಲವಾದ ನೇತ್ರಗಳುಳ್ಳ (ಆ) ಗಂಗಾಂಬಿಕೆಯ ಹುಬ್ಬು ಅದೇನು ಸೊಗಸಾಗಿ ಕಾಣುತ್ತಿತ್ತೊ ! ೧೨೦. ತುಂಬಿರುವ ಕೇಶರಾಶಿಯೆಂಬ ಕಪ್ಪುಮೋಡದ ಒಳಭಾಗದಿಂದ ಅರ್ಧಭಾಗ (ಮಾತ್ರ) ಉದ್ಭವಿಸಿ ಕಾಣಿಸಿಕೊಳ್ಳುವ ಮನೋಹರಕಾಂತಿಯ ಚಂದ್ರನೋ ಎಂಬ ಸೊಗಸಿನಿಂದ ಆ ಎಳೆಯಳಾದ ಗಂಗಾಂಬಿಕೆಯ ಶೋಭಿಸುವ ಹಣೆಯು ಅದೇನು ಮನೋಹರ ವಾಗಿತ್ತೋ ! ೧೨೧. ಕೂದಲನ್ನು (ಬಾಚಿ) ಮುಡಿಯನ್ನು ಕಟ್ಟಿದ ಕಾಲದಲ್ಲಿ, ಆ ಗಂಗಾಂಬಿಕೆಯ ಮುಡಿಯ ಸೊಗಸಿಗೆ ನವಿಲು ಸೋಲನ್ನಪ್ಪಿ, ಜಡೆಯನ್ನು ಹೆಣೆದ ಆ ಕಾಲದಲ್ಲಿ ಅತಿ ಕೋಪದಿಂದ ಆ ಜಡೆಯ ಆಕಾರದ ಸರ್ಪವನ್ನು ಅಮಮ !

---

1 ರ್ಣ(ದ)

ಅಂಬುಜವಕ್ತ್ರೆ ಚಾರುಕುಮುದೇಕ್ಷಣೆ ಶೈವಲ ರೋಮರಾಜಿ ರೋ
ಲಂಬ ಕಚಾಭಿರಾಮೆ ವಲಿ ವೀಚಿ ವಿರಾಜಿತೆ ಸಾರ ಸೈಕತಾ
ಡಂಬರವಲ್ಲಸಜ್ಜಘನೆ ಹಂಸಮದಾಲಸಯಾನೆ ತಾನೆ ಗಂ
ಗಾಂಬಿಕೆಯಪ್ಪುದೇನರಿದೆ ಮಂಗಳರೂಪಮಹಾಪ್ರಭಾವದಿಂ ೧೨೨

ಕಮಲಿನಿಯಂತೆ ಪೂರ್ಣಗುಣರಂಜಿತೆ ನಂದನಭೂಮಿಯಂತೆ ವಿ
ದ್ರುಮವಿಲಸಲ್ಲತಾಧರೆ ನಭಸ್ಥಳಿಯಂತೆ ಸುರಾಜಹಂಸಮಂ
ದಮಹಿತಯಾನೆ ಸಾರ ಕೃತಿಯಂತೆ ಸುಲಕ್ಷಣ ಭಾವವೃತ್ತಿಸಂ
ಕ್ರಮೆ ನದಿಯಂತೆ ದಲ್ ಭುವನವಿಶ್ರುತೆಯೆಂದೆನೆ ದೇವಿಯೊಪ್ಪಿದಳ್ ೧೨೩

ವ|| ಇಂತೆಸೆವ ಗಂಗಾಂಬಿಕೆಯ ನಿರುಪಮಾನ ರೂಪಾತಿಶಯಮಂ ಬಲದೇವನವಲೋಕಿ

ಈಗಲೂ ಭಕ್ಷಿಸುತ್ತಲೇ ಇದೆ. ೧೨೨. ಕಮಲದಂತಿರುವ ಮುಖದಿಂದಲೂ, ಮನೋಹರವಾದ ನೈದಿಲೆಯಂತಹ ಕಣ್ಣುಗಳಿಂದಲೂ, ಹಾವಸೆಯಂತಹ ರೋಮ ಪಙ್ಕ್ತಿಯಿಂದಲೂ, ಭ್ರಮರದಂತಿರುವ ಕೇಶದಿಂದಲೂ ಮನೋಹರಳಾದವಳೂ. ತೆರೆಗಳಂತಹ ತ್ರಿವಳಿಗಳಿಂದ ಪ್ರಕಾಶಮಾನಳಾದವಳೂ. ಶ್ರೇಷ್ಠ ಮಳಲ ರಾಶಿಯಂತಹ ಒಳ್ಳೆಯ ಜಘನವುಳ್ಳವಳೂ, ಮದದಿಂದ ಕೂಡಿದ ಹಂಸ ಪಕ್ಷಿಯಂತಹ ಮಂದಗಮನವುಳ್ಳವಳೂ ಆದಂಥವಳೇ ಮಂಗಳಕರವಾದ ಆಕಾರದಿಂದ ಅತ್ಯಧಿಕ ಮಹಿಮೆಗಳಿಂದ ಕೂಡಿದ ಗಂಗಾಂಬಿಕೆಯಾಗಿರುವುದೇನು ಅಸಾಧ್ಯವೇ ! [ಈ ಪದ್ಯಾರ್ಥವನ್ನು ಗಂಗಾನದಿಯ ಪರವಾಗಿ ಹೀಗೆ ಮಾಡಬಹುದು : ಕಮಲವೇ ಮುಖವಾಗಿ ಉಳ್ಳವಳು, ನೈದಿಲೆಯೇ ಕಣ್ಣಾದವಳು, ಹಾವಸೆಯೇ ರೋಮಪಂಕ್ತಿಯಾದವಳು ಭ್ರಮರವೇ ಕೇಶವಾದವಳು. ತೆರೆಗಳೇ ತ್ರಿವಳಿಯಾದವಳು. ಮಳಲರಾಶಿಯೇ ಜಘನವಾದವಳು. ಹಂಸಗಳ ಮದಾಲಸ ಗಮನವೇ ಗಮನವಾಗಿ ಉಳ್ಳವಳು] ೧೨೩. (ಅ) ಗಂಗಾಂಬಿಕೆಯು ಕಮಲಿನಿಯ ಹಾಗೆ ಸಂಪೂರ್ಣ ಗುಣಗಳಿಂದ ರಂಜಿತಳಾದವಳು–(ಕಮಲವು ಸಂಪೂರ್ಣ ಗುಣ ಎಂದರೆ ತಂತುವಿನಿಂದ ವಿಶಿಷ್ಟವಾದುದು); ಉಪವನಸ್ಥಳದ ಹಾಗೆ ಪ್ರಕಾಶಿಸುವ ಹವಳದ ಬಳ್ಳಿಯಂತಹ ತುಟಿಗಳುಳ್ಳವಳು (ಉಪವನ ಭೂಮಿಯು–ಪಕ್ಷಿಗಳಿಂದ ಕೂಡಿದ ದ್ರುಮ ಮತ್ತು ಬಳ್ಳಿಗಳುಳ್ಳದ್ದು); ನಭಸ್ಥಲಿಯ ಹಾಗೆ ಅಂದರೆ ಅಂತರಿಕ್ಷದ ಹಾಗೆ ಸಮೀಚೀನವಾದ ರಾಜಹಂಸಪಕ್ಷಿಯಂತಹ ಮಂದವಾದ ಶ್ರೇಷ್ಠ ನಡಿಗೆಯುಳ್ಳವಳು. (ನಭಸ್ಥಲವು–ಸಮೀಚೀನನಾದ ಚಂದ್ರ, ಸೂರ್ಯ, ಶನಿಗಳ ಪೂಜ್ಯವಾದ ನಡಿಗೆಯುಳ್ಳದ್ದು); ಸಾರತರವಾದ ಕಾವ್ಯದ ಹಾಗೆ–ಸಮೀಚೀನವಾದ ಒಳ್ಳೆಯ ದೇಹ ಲಕ್ಷಣ, ಆ ಲಕ್ಷಣಕ್ಕೆ ಯೋಗ್ಯವಾದ ಭಾವ, ಭಾವಕ್ಕೆ ಯೋಗ್ಯವಾದ ವೃತ್ತಿಗಳಿಂದ ಕೂಡಿರುವವಳು (ಸಾರತರವಾದ ಕಾವ್ಯವು–ಲಕ್ಷಣ ಬದ್ಧವಾದ ವ್ಯಾಕರಣ, ಛಂದಸ್ಸು,

ಸುತ್ತಮೀ ಕನ್ನಿಕೆಯ ಸೌಂದರ್ಯ ಸೌಶೀಲ್ಯಕ್ಕೆ ತಕ್ಕ ವರನಾವನೊಯೆಂದು ನಿಜ ಮನೋಹರಿಯೊಡನಾಳೋಚಿಸುತ್ತಿರ್ದನಿತಱೊಳ್ನೆನೆದಿಂತೆಂದಂ —

ಎನ್ನಯ ತಂಗಿಯಾತ್ಮಭವನೊರ್ವನಪೂರ್ವಗುಣಂ ಮಹತ್ವಮಂ
ಪನ್ನಗಧಾರಿಯಿಂ ಪಡೆದು ಕಪ್ಪಡಿಯೊಳ್ನೆಲಸಿರ್ಪನಾತನೀ
ಕನ್ನೆಗೆ ತಕ್ಕ ವಲ್ಲಭನವಂಗಿರದೀವೆನೆನುತ್ತೆ ಶೈವಸಂ
ಪನ್ನ ಬಲಾಧಿಪಂ ಬಸವನಲ್ಲಿಗೆ ಬಂದನವಂ ವಿಳಾಸದಿಂ ೧೨೪

ವ॥ ಅಂತು ಸಕಳ ವೈಭವಂ ಮಿಗೆ ಬಂದು ಗಣಸಭಾಸ್ಥಿತಬಸವರಾಜಂಗೆ ಭಕ್ತಿಯಿಂದೆಱಗಿ ಕನ್ಯಾರತ್ನಮಂ ಕೈಕೊಳ್ವುದೆಂದು ವಿಭೂತಿ ವೀಟಿಕೆವೆರಸಿ ಕಾಣ್ಕೆಗೈದು ಮಗುಳ್ದು ತನ್ನೂರ್ಗೆ ಪೋಗಿ ನಿಜರಾಜಧಾನಿಯಂ ಪೊಕ್ಕು ಮಯಮಾಂಡವ್ಯರಂ ಪಳಿವ ಗೃಹಮಹತ್ತರರಿಂ ತತ್ಕಲ್ಯಾಣಕ್ಕೆ ಕಲ್ಯಾಣದೊಳ್ಕಲ್ಯಾಣಮಂಟಪಮಂ ರಚಿಸುತ್ತಿರ್ದನಾ ಪ್ರಸ್ತಾವದೊಳ್—

ಭಾವ, ಕೈಶಿಕ್ಯಾದಿವೃತ್ತಿಗಳು ಇವುಗಳಿಂದ ಕೂಡಿದ್ದು); ನದಿಯು ಹಾಗೆ ಭೂಲೋಕದಲ್ಲಿ ಖ್ಯಾತಳಾದವಳು (ನದಿಯು ನೀರಿನಿಂದ ಭುವನ) ಖ್ಯಾತವಾದುದು—ಎಂದೆನ್ನುವಂತೆ ಶೋಭಿಸುತ್ತಿದ್ದಳು. [ಗುಣ-ಕಮಲದ ನಾರು, ಸದ್ಗುಣ; ವಿದ್ರುಮ—ಹವಳ, ಪಕ್ಷಿಗಳಿಂದ ಕೂಡಿದ ಗಿಡ; ರಾಜ—ಚಂದ್ರ, ರಾಜ; ಹಂಸ—ಸೂರ್ಯ, ಹಂಸಪಕ್ಷಿ; ಮಂದ-ಶನಿ, ಮೆಲ್ಲನೆ-ಲಕ್ಷಣ, ದೇಹದಸಲ್ಲಕ್ಷಣ, ವ್ಯಾಕರಣ ಶಾಸ್ತ್ರಾದಿ ಲಕ್ಷಣ; ವೃತ್ತಿ—ವರ್ತನೆ, ಕೈಶಿಕ್ಯಾದಿ ವೃತ್ತಿ; ಭುವನ—ನೀರು, ಲೋಕ;] **॥ವಚನ॥** ಹೀಗೆ ಶೋಭಿಸುತ್ತಿರುವ ಗಂಗಾಂಬಿಕೆಯ ಅನುಪಮ ರೂಪಾತಿಶಯವನ್ನು ತಂದೆಯಾದ ಬಲದೇವ ಮಂತ್ರಿಯು ನೋಡುತ್ತ, ಕನ್ಯೆಯ ಸೌಂದರ್ಯ ಮತ್ತು ಸದಾಚಾರ ಸಂಪನ್ನತೆಗೆ ಯೋಗ್ಯನಾದ ವರನು ಯಾವನಾದಾನೆಂದು ಮನೋಜ್ಞಳಾದ ತನ್ನ ಮಡದಿಯೊಡನೆ ಆಲೋಚಿಸುತ್ತಿದ್ದನು. ಅಷ್ಟರಲ್ಲಿ ಸ್ಮರಿಸಿಕೊಂಡು ಹೀಗೆ ಹೇಳಿದನು : ೧೨೪. ಅಪೂರ್ವಗುಣಗಳಿಂದ ಕೂಡಿದ ನನ್ನ ಸಹೋದರಿ ಮಾದಲಾಂಬಿಕೆಯ ಪುತ್ರನೊಬ್ಬನು ಪರಶಿವನ ಅನುಗ್ರಹವನ್ನು ಪಡೆದು ಕಪ್ಪಡಿ ಸಂಗಮದಲ್ಲಿ ವಾಸವಾಗಿದ್ದಾನೆ. ಅವನು ಈ ನಮ್ಮ ಕನ್ಯೆಗೆ ಯೋಗ್ಯನಾದ ಪತಿಯೆನಿಸುವನು. ಅವನಿಗೆ (ಇವಳನ್ನು) ತಪ್ಪದೆ ಕೊಡುತ್ತೇನೆ, ಎನ್ನುತ್ತ ಶಿವ ಸಂಬಂಧವಾದ ತತ್ತ್ವಜ್ಞಾನಿಯಾದ ಬಲದೇವನು ಸಂಭ್ರಮದಿಂದ ಬಸವಣ್ಣನಲ್ಲಿಗೆ ಬಂದನು. **॥ವಚನ॥** ಈ ರೀತಿ ಸಮಸ್ತವೈಭವದ ಆಧಿಕ್ಯದಿಂದ ಬಂದು ಶಿವಗಣ ಸಭಾ ಮಧ್ಯದಲ್ಲಿ ಕುಳಿತಿರುವ ಬಸವಣ್ಣನಿಗೆ ಭಕ್ತಿಯಿಂದ ನಮಸ್ಕರಿಸಿ, (ನನ್ನ ಈ ಕುಮಾರಿಯಾದ ಗಂಗಾಂಬಿಕೆ ಎಂಬ) ಕನ್ಯಾರತ್ನವನ್ನು ಸ್ವೀಕರಿಸುವುದು. ಎಂದು ವಿಭೂತಿ ಸಹಿತವಾದ ವೀಳಯವನ್ನು ಕಾಣಿಕೆಯಾಗಿ ಕೊಟ್ಟು, ಪುನಃ ತನ್ನ ರಾಜಧಾನಿಯಾದ ಕಲ್ಯಾಣ ಪಟ್ಟಣವನ್ನು ಪ್ರವೇಶಿಸಿ, ಮಯಮಂಡವ್ಯಾದಿ ಅಸುರರ ಸುರರ ಬಡಗಿಗಳನ್ನು ಕೂಡ ತಿರಸ್ಕರಿಸುವಂತಹ ಶಿಲ್ಪಶಾಸ್ತ್ರ ಬಲ್ಲವರಿಂದ ವಿವಾಹ ಮಂಟಪವನ್ನು ಬಸವೇಶ್ವರನ ವಿವಾಹಕ್ಕೋಸುಗ ಆ ಕಲ್ಯಾಣನಗರದಲ್ಲಿ ಮಾಡಿಸುತ್ತಿದ್ದನು. ಆ ಕಾಲ

ಬಲದೇವಂ ಪದೆದಿತ್ತ ಕನ್ನಿಕೆಗೆ ಭಾಸ್ವದ್ದೀಕ್ಷೆಯುಂ ಮಾಡಿಸು
ತ್ತೊಲವಿಂ ಸಂಗಮದೇವ ಸದ್ಗುರುವಿನಿಂ ತತ್ಪಾದಪದ್ಮಾರ್ಚನಾ
ಚಲವೃತ್ತಂ ಶುಭಚಿತ್ತನೊಪ್ಪಿದನುದಾತ್ತಂ ಸಚ್ಚಿದಾನಂದ ಸಂ
ಕಲಿತಾತ್ಮಂ ಕರುಣಾರ್ದ್ರ ಶುದ್ಧಹೃದಯುಂ ಸಿದ್ಧಾಂತವಿದ್ಯಾಧರಂ ೧೨೫

ಜಂಗಮಪದಾರ್ಚಕ ಭುಜಂಗಮವಿಭೂಷ ಹೃದ
ಯಂಗಮಚರಿತ್ರ ಗಣಸಂಗಮ ವಿಲೋಲಾ
ನಂಗಮದಭಂಜನ ಶುಭಾಂಗ ಮುನಿರಂಜನ ಪ
ತಂಗಜವಿಮರ್ದನ ಸುಧಾಂಗಧರವಾಹ
ಮಂಗಳಗುಣಾನ್ವಿತ ರಥಾಂಗಧರಸೇವಿತ ಕು
ರಂಗಧರಕಾಂತರುಚಿಸಂಗತ ದಯಾದ್ರಾ
ಪಾಂಗ ಪೊರೆಯೆನ್ನನವಿಭಂಗವಪುರಾತ್ತ ಶಿವ
ಲಿಂಗಗಣಹೃನ್ನಳಿನಭೃಂಗ ಬಸವೇಶಾ ೧೨೬

ಕಮಲನಯನೇ ಕಂಜಾತಾಸ್ಯೇ ಕಳಾಧರಧಾರಿಣೀ
ವಿಮಳಚರಿತೇ ವಿದ್ಯಾರೂಪೇ ವಿಪತ್ಕುಳಹಾರಿಣೀ

ದಲ್ಲಿ ೧೨೫. ಮಂಗಳಕರ ಮನಸ್ಸುಳ್ಳವನೂ, ಉತ್ಕೃಷ್ಟವಾದ ಸತ್–ಚಿತ್–ಆನಂದಾತ್ಮಕನೂ, ದಯಾರಸದಿಂದ ತೊಯ್ದು ಪರಿಶುದ್ಧ ಚಿತ್ತವುಳ್ಳವನೂ, ಶೈವ ಸಿದ್ಧಾಂತ ವಿದ್ಯೆಯನ್ನು ಪಡೆದವನೂ ಆದ ಬಲದೇವನು ಪ್ರೀತಿಯಿಂದ ಕೊಟ್ಟ ಕನ್ಯೆಗೆ ಗುರುಶ್ರೇಷ್ಠನಾದ ಸಂಗಮೇಶ್ವರ ದೇವನಿಂದ ಪ್ರೀತಿಯಿಂದ ಪವಿತ್ರವಾದ ಶಿವದೀಕ್ಷೆಯನ್ನು ಮಾಡಿಸಿದನು. ಮತ್ತು ತಾನು ಆ ಸಂಗಮೇಶ್ವರನ ಚರಣ ಕಮಲಗಳ ಪೂಜೆಯ ವಿಷಯದಲ್ಲಿ ದೃಢವಾದ ವ್ರತವುಳ್ಳವನಾಗಿ ಶೋಭಿಸಿದನು. ೧೨೬. ಜಂಗಮ ಪಾದ ಪೂಜೆಮಾಡುವವನೂ, ಸರ್ಪಾಭರಣಗಳಿಂದ ಭೂಷಿತನಾದ ಪರಮೇಶ್ವರನ ಮನೋಹರವಾದ ಚರಿತ್ರೆಗಳನ್ನು ತಿಳಿದವನೂ, ಶಿವಗಣಗಳ ಸಂಬಂಧದಲ್ಲಿ ಆಸಕ್ತಿಯುಳ್ಳವನೂ, ಮನ್ಮಥ ಮದವನ್ನು ಭಂಗಗೊಳಿಸಿದವನೂ, ಮಂಗಳಕರಚರಿತ್ರೆಯನ್ನುಳ್ಳವನೂ, ಯತೀಶ್ವರರನ್ನು ಸಂತೋಷಗೊಳಿಸುವವನೂ, ಯಮ (ಪತಂಗಜ)ನನ್ನು ನಾಶಮಾಡಿದವನೂ, ಚಂದ್ರಧರನಾದ ಪರಮೇಶ್ವರನಿಗೆ ವಾಹನವಾಗಿ ಉಳ್ಳವನೂ, ಮಂಗಳಕರ ಸದ್ಗುಣಗಳಿಂದ ಕೂಡಿದವನೂ, ವಿಷ್ಣುವಿನಿಂದ ಸೇವಿಸಲ್ಪಡುವವನೂ, ಕುರಂಗಧರನಾದ ಚಂದ್ರನಂತೆ ಮನೋಹರವಾದ ಕಾಂತಿಯಿಂದಕೂಡಿದವನೂ, ಕರುಣಾರಸದಿಂದ ತೊಯ್ದುಹೋದ ಕಡೆಗಣ್ಣುಗಳನೋಟವುಳ್ಳವನೂ, ನಾಶರಹಿತನಾದ ಶಿವಲಿಂಗವನ್ನು ಶರೀರದಲ್ಲಿ ಧರಿಸಿದವನೂ, ಪ್ರಮಥಗಣಗಳ ಹೃದಯಕಮಲಕ್ಕೆ ಭ್ರಮರಸ್ವರೂಪನೂ, ಆದ ಬಸವೇಶ್ವರನೇ ನನ್ನನ್ನು ರಕ್ಷಿಸು. ೧೨೭. ಕಮಲದಂತಹ ನೇತ್ರ, ಕಮಲದಂತಹ ಮುಖವುಳ್ಳವಳೇ, ಚಂದ್ರನನ್ನು ಧರಿಸಿರುವವಳೇ, ನಿರ್ಮಲವಾದ

ಶಮಿತ ಶಮನೇ ಶೈಪಾಧಾರೇ ಶಿವೇತರವಾರಿಣೀ
ದಮಿಸು ಭವಮಂ ಧರ್ಮಾಕಾರೇ ದಯಾವತಿ ಪಾರ್ವತೀ ೧೨೭

ಇದು ವಿನಮದಖಿಳ ಸುರಾಸುರೇಂದ್ರಮುಕುಟತಟಘಟಿತ ಮಣಿಗಣಾಗಣಿತರುಚಿನಿಚಯ
ತರುಣಾರುಣಾತಪಪರಿಲಸಿತಪರಮಶಿವಲಿಂಗಪಾದಾರವಿಂದಪರಾಗಭಸಿತ
ಭಾಸುರಲಲಾಟಪಟ್ಟ ಸರಸಜನಮಾನಿತೋಭಯಕವಿತಾವಿಶಾರದ
ಶ್ರೀಷಡಕ್ಷರಿದೇವಭಕ್ತಿವಿರಚಿತ
ಶ್ರೀಮದ್ [1]ಬಸವರಾಜ[1]ವಿಜಯಮಹಾಪುರಾಣದೊಳ್ ದೇಶಾದಿವರ್ಣನಂ
ಚತುರ್ಥಾಶ್ವಾಸಂ ಸಮಾಪ್ತಂ

ಅಂತು ಆಶ್ವಾಸ ೪ಕ್ಕೆ ಪದಗಣನೆ ೩೫೮ಕ್ಕೆ ಮಂಗಳಮಹಾ ಶ್ರೀ॥

ಚರಿತ್ರೆಯುಳ್ಳವಳೇ, ವಿದ್ಯಾಸ್ವರೂಪಳಾದವಳೇ, ಆಪತ್ತುಗಳ ಸಮೂಹವನ್ನು ನಾಶ ಮಾಡುವವಳೇ, ಯಮನನ್ನು ನಾಶಪಡಿಸಿದವಳೇ, ಶಿವಸಂಬಂಧವಾದವರಿಗೆ ಆಧಾರ ಳಾದವಳೇ, ಅಮಂಗಳವನ್ನು ನಾಶಮಾಡುವವಳೇ, ಧರ್ಮಸ್ವರೂಪಿಣಿಯೇ, ಕೃಪಾ ಶಾಲಿನಿಯೇ, ಪರ್ವತರಾಜ ಪುತ್ರಿಯೇ, ಪಾಪವನ್ನೂ ಸಂಸಾರ ಭಯವನ್ನೂ ನಾಶಪಡಿಸು.

ವೃಷಭೇಂದ್ರ (ತ, ಮ, ಗ, ಚ,)

ಪಂಚಮಾಶ್ವಾಸಂ

ಶ್ರೀಮದಗಜೇಕ್ಷಣೋತ್ಪಲ
ಸೋಮಂ ಸೋಮಾಂಕನಭವನತಿಶಯ ವಿಭವಂ
ಕಾಮದನಾಮಂ ದೇವಲ
ಲಾಮಂ ಪೊರೆಗೆಮ್ಮನಾವಗಂ ಶಿವಲಿಂಗಂ ೧

ಮಾಚವಿಭುಸನ್ನುತ ಸದಾಚರಣ ವಾದಿಮದ
ಮೋಚಕ ಸಮರ್ಥ ವರ ಬಾಚಯ ದಯಾದ್ರ್ರ
ಲೋಚನಸಮೀಕ್ಷ್ಯ ಯಮಿಗೋಚರಪದಾಬ್ಜ ಶಿವ
ವಾಚಕಸಮನ್ವಿತ ಚರಾಚರಸುರಕ್ಷಾ
ಖೇಚರ ಪರಿಸ್ತುತ ಕಳಾಚತುರಧೈರ್ಯವಿಜಿ
ತಾಚಲ ವಿತರ್ಜಿತ ವಿರೋಚನಜಮಾಯಾ
ರೇಚಕ ಸುತತ್ತ್ವನಿಧಿ ಸೂಚಕವಚಸ್ಕ ಪೊರೆ
ಕೀಚಕರಿಪುಪ್ರಿಯ ಸುವಾಚ ಬಸವೇಶಾ ೨

ಬಸವೇಶ್ವರ ವಿವಾಹ ವರ್ಣನ

೧. ಶ್ರೀಕರಳಾದ ಪಾರ್ವತಿದೇವಿಯ ಕಣ್ಣುಗಳೆಂಬ ನೈದಿಲೆಗೆ ಚಂದ್ರನೋಪಾದಿಯಲ್ಲಿರುವವನೂ, ಚಂದ್ರಧರನೂ, ಹುಟ್ಟು ಸಾವುಗಳಿಲ್ಲದವನೂ, ಅಧಿಕ ವೈಭವಸಂಪನ್ನನೂ. ಇಷ್ಟಾರ್ಥಗಳನ್ನು ಕೊಡುವವನೆಂಬ ನಾಮಧೇಯವುಳ್ಳವನೂ, ದೇವತಾ ಶ್ರೇಷ್ಠನೂ ಆದ ಶಿವಲಿಂಗನು ನಮ್ಮನ್ನು ನಿರಂತರವೂ ರಕ್ಷಿಸಲಿ. ೨. ಮಾಚಿದೇವನಿಂದ ನುತಿಸಲ್ಪಟ್ಟ ಸದಾಚರಣೆಯುಳ್ಳವನೂ, ಪರವಾದಿಗಳ ಗರ್ವನಾಶ ಪಡಿಸುವಿಕೆಯಲ್ಲಿ ಸಮರ್ಥನಾದವನೂ, ಶ್ರೇಷ್ಠನಾದ ಬಾಚಿರಾಜನ ಕೃಪಾರಸದಿಂದ ತೊಯ್ದು ಹೋದ ಕಣ್ಣುಗಳಿಂದ ನೋಡಲ್ಪಡುವವನೂ, ಋಷಿಗಳಿಗೆ ಪ್ರತ್ಯಕ್ಷವಾಗುವ ಪಾದ ಕಮಲಗಳ್ಳುವನೂ, ಈಶ್ವರ ನಾಮೋಚ್ಚಾರಣೆಯಿಂದ ಕೂಡಿದ ಸ್ಥಾವರ ಜಂಗಮಾತ್ಮವನ್ನು ಪಾಲಿಸುವವನೂ, ದೇವತೆಗಳಿಂದ ಸ್ತೋತ್ರ ಮಾಡಿಸಿಕೊಳ್ಳಲ್ಪಡುವವನೂ, ವಿದ್ಯಾಕೌಶಲ್ಯವುಳ್ಳವನೂ, ಧೈರ್ಯಗುಣದಿಂದ ಪರ್ವತವನ್ನು ಜಯಿಸಿದವನೂ, ಯಮನನ್ನು ಭಯಗೊಳಿಸಿದವನೂ, ಅಜ್ಞಾನ ಪರಿಹಾರಕನೂ, ಸಮೀಚೀನವಾದ ಪರಮಾತ್ಮನನ್ನು ಸೂಚಿಸುವಂತಹ ವಚನಗಳನ್ನು ಹಾಡಿದವನೂ, ಕೀಚಕವೈರಿಯಾದ ಭೀಮಸೇನನಿಗೆ ಪ್ರಿಯನಾದ ಪರಮೇಶ್ವರನೊಡನೆ ಸಮೀಚೀನವಾದ ಸಂಭಾಷಣೆಯನ್ನುಳ್ಳವನೂ ಆದ ಬಸವೇಶ್ವರನೇ ರಕ್ಷಿಸು [ವಿರೋಚನಜ–ಸೂರ್ಯ ಪುತ್ರನಾದ ಯಮ; ಸು + ತತ್ವ + ನಿಧಿ + ಸೂಚಕ + ವಚಸ್ಕ—ಉತ್ಕೃಷ್ಟವಾದ ಈಶ್ವರತತ್ತ್ವವೆಂಬ

ಮರಕತ ಭಿತ್ತಿ ಕಾಂಚನದ ವೇದಿಕೆ ವಿದ್ರುಮತೋರಣಂ ಸುರೇ
ಶ್ವರಮಣಿಕುಟ್ಟಿಮಂ ತೊಳಪ ಮುತ್ತಿನ ಲಂಬಣಮಾಲೆ ಕಾನಕಾಂ
ಬರದ ವಿತಾನಮಿಂದುಮಣಿಪುತ್ರಿಕೆ ಬಜ್ಜರದಾರವಂದದೆ
ಳ್ತರದ ಮಣಿಧ್ವಜಂ ಮಿಸುಗೆ ಕಂಗೊಳಿಸಿತ್ತು ವಿವಾಹಮಂಟಪಂ ೩

ಪೊಸಜಾಗಂ ಪೂರ್ಣಕುಂಭಂ ದಧಿ ಮಧು ಸುಧೆ ಮಾದೂಫಲಂ ದೂರ್ವೆ ಶಂಖಂ
ಬಿಸಸೂತ್ರಂ ಲಾಜೆ ನಾನಾ ಕುಸುಮವಿಸರಮಾದ್ರಾಕ್ಷತಂ ಶುಕ್ತಿರತ್ನ
ಪ್ರಸರಂ ಪುಂಡ್ರೇಕ್ಷುದಂಡಂ ಶಶಿಮಣಿಮುಕುರಂ ರೋಚನಂ ಪೂಗಪುಷ್ಪಂ
ಘುಸೃಣಂ ಮಾಣಿಕ್ಯದೀಪಂ ಮಿಸುಗೆ ಬಗೆಗೆ ಚೆಲ್ವಾದುದುದ್ವಾಹಗೇಹಂ ೪

ಅತಿ ಮಂಗಳಮತಿ ಮಂಜುಳ
ಮತಿ ರುಚಿಮಯಮತಿವಿ[1]ಶಾಲ[1]ಮತಿ ಚಿತ್ರಮಿದೆಂ
ಬತಿಶಯಮನಾಳ್ದು ಭುವನ
ಸ್ತುತಮೆನಿಸಿ ನೆಗಳ್ತೆವೆತ್ತುದುದ್ವಾಹಗೃಹಂ ೫

ಸಂಪತ್ತನ್ನು ಸೂಚಿಸುವ ಮಾತುಳ್ಳವನು] ೩. ಮರಕತದ ಶಿಲೆಯಿಂದ ಮಾಡಿದ ಗೋಡೆ, ಸುವರ್ಣದ ಜಗುಲಿ, ಹವಳದ ತೋರಣ, ಇಂದ್ರ ನೀಲ ರತ್ನದ ಕಟ್ಟೆ, ಪ್ರಕಾಶಿಸುವ ಮುತ್ತಿನ ಸಾಲುಸಾಲಾದ ತೂಗುಬಿಟ್ಟ ಕುಚ್ಚುಗಳು, ಹೊಂಬಣ್ಣದ ಬಟ್ಟೆಯ ಮೇಲುಕಟ್ಟು, ಚಂದ್ರಕಾಂತ ಶಿಲೆಯ ಪುತ್ಥಳಿಗಳು, ವಜ್ರದ ದ್ವಾರಬಂಧ, ಉನ್ನತವಾದ ರತ್ನಖಚಿತ ಧ್ವಜ ಇವು ಶೋಭಿಸುತ್ತಿರಲು, (ಆ ಬಸವ ಗಂಗಾಂಬಿಕೆಯರ) ವಿವಾಹಾರ್ಥವಾಗಿ ನಿರ್ಮಿಸಿದ ಮಂಟಪವು ಪ್ರಕಾಶಿಸಿತು. ೪. ಮಂಗಳ ಪ್ರಸಂಗಗಳಲ್ಲಿ ಅಂಕುರಾರ್ಪಣವೆಂಬ ಕರ್ಮದ ಅಂಗವಾಗಿ ಬೆಳೆಯಿಸಿದ ನೂತನ ಪಾತ್ರೆಯಲ್ಲಿನ ಸಸಿಗಳು, ತುಂಬಿದ ನೀರಿನ ಕೊಡ, ಮೊಸರು, ಜೇನುತುಪ್ಪ, ಹಾಲು, ಮಾದಳಫಲ, ಗರಿಕೆ ಪತ್ರೆ, ಶಂಖ, ತಾವರೆದಂಟಿನ ನೂಲು, ಬತ್ತದ ಅರಳು, ನಾನಾ ಬಗೆಯ ಪುಷ್ಪ ಸಮೂಹ, ಹರಿದ್ರಲೇಪನ ಮಾಡಿದ, ಹಸಿಯ ಅಕ್ಷತೆಗಳು, ಮುತ್ತಿನ ಚಿಪ್ಪು, ರತ್ನಗಳ ಸಮೂಹ, ಕಬ್ಬಿನ ತುಂಡುಗಳು; ಚಂದ್ರಕಾಂತ ಶಿಲೆಯ ಕನ್ನಡಿ, ಗೋರೋಚನ, ಅಡಿಗೆಯ ಹಿಂಗಾರ (ಅಡಿಕೆ ಮರದ ಹೊಂಬಾಳೆ), ಕುಂಕುಮ ಕೇಸರಿ, ಮಾಣಿಕ್ಯದ ದೀಪ (ಇತ್ಯಾದಿಗಳು ಲಗ್ನ ಮಂಟಪದಲ್ಲಿ) ಶೋಭಿಸುತ್ತಿರಲು ಮದುವೆಯು ಮನಸ್ಸಿಗೆ ಸೊಗಸಾದುದಾಗಿತ್ತು. ೫. ಇದು ಅತಿಶಯವಾಗಿ ಮಂಗಳ ಕಾರಕವಾದುದು ; ಅತಿ ಮನೋಹರವಾದುದು ; ಅತ್ಯಂತ ಕಾಂತಿಮಯವಾದುದು–ಎಂಬ ಹೆಚ್ಚಿನ ಪ್ರಖ್ಯಾತಿಯನ್ನು ಹೊಂದಿ, ಲೋಕದಲ್ಲೆಲ್ಲ ಶ್ಲಾಘ್ಯವಾದದ್ದೆನಿಸಿ ಆ

[1] ಲಾಸ (ದ)

ವ॥ ಇಂ[1]ತನೂನ[1] ಶೋಭಾವಹಮಪ್ಪಂತಿರುದ್ವಾಹಮಂಟಪಮನಲಂಕರಿಸಿ, ರಾಜವೀಥಿಯಂ ಸಿಂಗರಿಸಿ, ಶಿವಭಕ್ತಬಂಧುಜನಸಮೇತಂ ದಂಡನಾಥಾಗ್ರಣಿ ಕಪ್ಪಡಿ[2]ಗೆಯ್ತಂದು ಗಣಸಭೆಯೊಳ್ ಶಿವಕಥಾಗೋಷ್ಠಿಯೊಳ್ಸುಖಮಿರ್ದ ಬಸವರಾಜನಂ ಕಂಡು ಪೊಯ್ಯಿಕ್ಕಿ ಕೆಯ್ಯಂ ಮುಗಿದು ವಿವಾಹಕಾರ್ಯವಿಜ್ಞಾಪನಾನಂತರಂ ಪಣ್ಣಿಬಂದ ಗಂಧಸಿಂಧುರದ ಪೂರ್ವಾಸನದೊಳ್ಗಂಗಾಂಬಿಕೆವೆರಸಿ ಮೂರ್ತಿಗೊಳಿಸಿ, ಮುಂದೆ ಸಂದಣಿಪ ವಂದಿಮಾಗಧರ ಜಯ ಜಯ ಪ್ರಣಾದಮುಂ ಪಟುಪಟಹ ಶಂಖ ತಾಳ ಮುರಜಾ ಮೃದ ಗ ಬಹುಳ ಕಹಳಾನಾದಮುಂ ದಶದಿಶೆಯಂ ಪಸರಿಸೆ, ಪರಮೋತ್ಸಾಹದಿಂ ಸಮುಚಿತವಾಹನ ಸುಖಾಸನಂಗಳನೇಱಿ ಶಿವಗಣಕದಂಬಮೊಡನೆಯ್ತರೆ ನಿಜರಾಜಧಾನಿಯಂ ಪುಗಿಸಿ, ಮಣಿಗಣಗ್ರಥಿತ ತೋರಣ ಕುಸುಮಮಾಲಾಲಂಕೃತಮಾದ ರಾಜವೀಥಿಯೊಳ್ ಕರೆದುತರ್ಪಾಗಳ್—

ನುಡಿಸುವ ವೀಣೆಯಂ ಕೆಲದೊಳಿಕ್ಕಿ ವಿಳಾಸದ ನೆತ್ತದಾಟಮಂ
ಬಿಡುತೆ ಮನೋಜನಾಗಮಮನೋದುವರಂ ನಿಲವೇಳ್ದು ದೇಶಿಯಿಂ
ಪಡರ್ದ ಸುಲಾಸ್ಯಮಂ ತೊಱೆದು ಭೂಷಣವೃಂದಮನಾಂತು ಬೇಗದಿಂ
ಮಡದಿಯರ್ಕೈದಿ ನಿಂದು ನೆಲೆವಾಡದೊಳಗೀಕ್ಷಿಸಿದರ್ನೃಪೇಂದ್ರನಂ ೬

ಮದುವೆಯ ಮನೆಯು ಪ್ರಸಿದ್ಧವಾಗಿತ್ತು. ವ॥ ಈ ರೀತಿ ಅತ್ಯಧಿಕ ಕಾಂತಿ ವಿಶಿಷ್ಟವಾಗುವ ಹಾಗೆ, ವಿವಾಹ ಮಂಟಪವನ್ನು ಅಲಂಕರಿಸಿ, (ಆ) ಮಂತ್ರಿಶ್ರೇಷ್ಠವಾದ ಬಲದೇವನು ಶಿವ ಭಕ್ತರಾದ ನಂಟರೊಡನೆ, ಕಪ್ಪಡಿ ಸಂಗಮಕ್ಷೇತ್ರಕ್ಕೆ ಬಂದು, ಶಿವಕಥಾಗೋಷ್ಠಿಯಲ್ಲಿ ಸುಖದಿಂದ ಇರುತ್ತಿದ್ದ ಬಸವಣ್ಣನನ್ನು ಕಂಡು, ನಮಸ್ಕರಿಸಿ, ಕೈಯನ್ನು ಮುಗಿದು, ಮದುವೆಯ ಸಂಬಂಧವಾದ ವಿಷಯವನ್ನು ಬಿನ್ನವಿಸಿಕೊಂಡ ಮೇಲೆ ಸಿದ್ಧವಾಗಿ ಬಂದಿರುವ ಮದಗಜದ ಬೆನ್ನ ಮೇಲೆ ಕಟ್ಟಿರುವ ಅಂಬಾರಿಯಲ್ಲಿ ಗಂಗಾಂಬಿಕೆ ಸಮೇತವಾಗಿ, (ಬಸವಣ್ಣನವರನ್ನು) ಕುಳ್ಳಿರಿಸಿದನು. ಗುಂಪುಗುಂಪಾಗಿರುವ ವಂದಿ ಮಾಗಧರೇ ಮೊದಲಾದವರ ಜಯ ಜಯಶಬ್ದವೂ, ಪಟುವಾಗಿರುವ ತಮ್ಮಟೆ, ಶಂಖ, ತಾಳ, ಡೋಲು, ಮೃದಂಗ. ಅಧಿಕಕಹಳೆಗಳನಾದವೂ ದಶದಿಕ್ಕುಗಳಲ್ಲಿ ಹರಡಿತು, ಅತ್ಯುತ್ಸಾಹದಿಂದ ಯೋಗ್ಯವೂ, ಸುಖಕರವೂ ಆದ ಆಸನಗಳನ್ನು (ಬಸವಣ್ಣ ಗಂಗಾಂಬಿಕೆಯರು) ಏರಿ ಕುಳಿತರು. ಶಿವಗಣ ಸಮೂಹವು ಸಂಗಡವೇ ಬರುತ್ತಿತ್ತು. (ಹೀಗೆ ಬಂದು ರಾಜಧಾನಿಯಾದ) ಕಲ್ಯಾಣವನ್ನು ಪ್ರವೇಶ ಮಾಡಿ, ರತ್ನ ಸಮೂಹಗಳಿಂದ ಅಲಂಕರಿಸಲ್ಪಟ್ಟುದೂ, ಹೂಮಾಲೆಗಳಿಂದ ಶೃಂಗರಿಸಲ್ಪಟ್ಟುದೂ ಆದ ರಾಜ ಬೀದಿಯಲ್ಲಿ ಕರೆದುಕೊಂಡು ಬರುತ್ತಿರುವಾಗ—

೬. (ಆ ಕಲ್ಯಾಣ ನಗರದ) ಸ್ತ್ರೀಯರು (ತಾವು) ಬಾರಿಸುತ್ತಿದ್ದ ವೀಣೆಯನ್ನು ಪಕ್ಕಕ್ಕೆ ಇಟ್ಟು ಲೀಲೆಗೋಸುಗ ಪಗಡೆಯನ್ನಾಡುತ್ತಿದ್ದವರು ಆ ಆಟವನ್ನು ಬಿಟ್ಟು. ಮನ್ಮಥ ಶಾಸ್ತ್ರವನ್ನೋದುವವರು (ತಮ್ಮ) ಓದನ್ನು ನಿಲ್ಲಿಸಿ, ಚೆಲುವಾದ (ದೇಶಿ) ಮನೋಹರ ನರ್ತನವನ್ನು ನಿಲ್ಲಿಸಿ, ಆಭರಣಗಳನ್ನು ಧರಿಸಿಕೊಂಡು, ಬೇಗ ಬೇಗ ಓಡಿ ಬಂದು, (ತಮ್ಮ ತಮ್ಮ)ಮನೆಯ ಮಹಡಿಗಳ ಮೇಲೆ ನಿಂತು, ಬಸವಣ್ಣನನ್ನು ನೋಡುತ್ತಿದ್ದರು.

---

1 ನತಂತ (ಜ, ಮು)   2 ಡ (ಜ)

ಹರಿನೀಲಖಂಚಿತ ಹರ್ಮ್ಯದೊಳ್ಮುಗಿಲ ಮಿಂಚೆಂಬಂತೆ ಸೌವರ್ಣಭಾ
ಸುರ ಸೌಧಾಗ್ರದೆ ಹೇಮಪಂಕಜದ ಲಕ್ಷ್ಮೀದೇವಿಯೆಂಬಂತೆ ಬಂ
ಧುರ ಮಾಣಿಕ್ಯದ ಬಳ್ಳಿಮಾಡದೆ ತಳಿರ್ತೀವಿರ್ದ ಚೂತಾಗ್ರದಂ
ಬುರುಹಾಕ್ಷಾತ್ಮಜಪತ್ನಿಯಂತೆಸೆದು ನೋಡುತ್ತಿರ್ದರಬ್ಜಾಕ್ಷಿಯರ್ ೭

ಬಡನಡು ಬಳ್ಕೆ ಪೀನಜಘನಂ ಜಡಿವುತ್ತಿರೆ ಬಿಣ್ಪಸಾಳ್ದ ಪೊಂ
ಗೊಡವೊಲೆಗಳ್ಕದಕ್ಕದಿಸೆ ಸೋರ್ಮುಡಿ ಜಾಱೆ ಮುಖೇಂದುಕಾಂತಿ ಧೀಂ
ಕಿಡೆ ಕಡೆಗಣ್ಗದಿರ್ ಪರೆದು ಮುಂಬರಿವುತ್ತಿರೆ ಪೌರನಾರಿಯು
ಗ್ಗಡಣದೆ ಸಜ್ಜೆಮಾಡದೆಡೆಗೈದಿ ವೃಷೇಂದ್ರನನಂದು ನೋಡಿದರ್ ೮

ಜತಿಗೊಡೆ ನೂಪುರಧ್ವನಿ ಪದಾಬ್ಜನಖದ್ಯುತಿ ನರ್ತನಕ್ಕೆ ರಂ
ಜಿತ ಕುಚವಲ್ಗನಂ ನಿಮಿರೆ ಕಂಪಿಸೆ ಪೀನನಿತಂಬಬಿಂಬಮುಂ
ಚಿತ ಮಣಿಕಾಂಚಿಯಿಂಚರದೊಳೊಂದಿ ಪಳಂಚಿರೆ ಶಿಂಜಿತಂ ಕಳಾ
ವತಿ ಪೆಱಳೊರ್ವಳೈದಿ[1] ಜವದಿಂ ನಡೆ ನೋಡಿದಳಾ ವೃಷೇಂದ್ರನಂ ೯

೭. ಕಮಲದಂತೆ ಕಣ್ಣುಳ್ಳ (ಆ) ಸ್ತ್ರೀಯರು ಇಂದ್ರ ನೀಲ ಮಣಿಗಳಿಂದ ನಿರ್ಮಿತವಾದ ಉಪ್ಪರಿಗೆಗಳಲ್ಲಿ (ನಿಂತು ನೋಡುವಾಗ) ಮೋಡದಲ್ಲಿನ ಮಿಂಚೋ ಎಂಬ ಹಾಗೆ ಕಾಣುತ್ತಿದ್ದರು. ಮನೋಹರವಾದ ಮಾಣಿಕ್ಯದ ಬಳ್ಳಿಯಂತಿರುವ ಮಾಡದಲ್ಲಿ ಚಿಗುರಿನಿಂದ ತುಂಬಿರುವ ಮಾವಿನ ಮರದ ಮೇಲೆ ಇರುವ ರತಿದೇವಿಯ ಹಾಗೆ ಪ್ರಕಾಶಿಸುತ್ತಿದ್ದರು. (ಹೀಗೆ ಪ್ರಕಾಶಮಾನವಾಗಿ ಕಾಣುವ ಸ್ತ್ರೀಯರು ಬಸವಣ್ಣ ಗಂಗಾಂಬಿಕೆಯರನ್ನು) ನೋಡಿದರು. [ಮಾವಿನ ಮರವು ಮನ್ಮಥನ ಮದ್ದಾನೆಯೆಂದು ಕವಿ ಸಮಯ. ಆದ್ದರಿಂದ ಮಾವಿನ ಮರದ ಮೇಲೇರಿರುವ ರತಿ ದೇವಿಯೆಂದು ಕವಿ ಹೇಳಿದ್ದಾನೆ. (ಅಂಬು + ರುಹ + ಅಕ್ಷ + ಆತ್ಮ ಜ + ಪತ್ನಿ–ವಿಷ್ಣುವಿನ ಮಗನ ಪತ್ನಿ–ರತಿ ದೇವಿ] ೮. ಆ ಪಟ್ಟಣದಲ್ಲಿರುವ ಹೆಂಗಸರುಗಳ ಚಿಕ್ಕನಡು ಬಳುಕುತ್ತಿತ್ತು. ದಪ್ಪನಾದ ಕಟಿ ಪಶ್ಚಾದ್ಭಾಗವು ಅದುರುತ್ತಿತ್ತು. ಬಂಗಾರದ ಕಲಶದಂತಿರುವ ಮೊಲೆಗಳು ಗದಗದಿಸುತ್ತಿದ್ದವು. ಉದ್ದವಾದ ಮುಡಿಯು ಶಿಥಿಲಗೊಳ್ಳುತ್ತಿತ್ತು. ಮುಖವೆಂಬ ಚಂದ್ರನ ಕಾಂತಿಯು ಮುಂದು ಮುಂದಕ್ಕೆ ಕುಪ್ಪಳಿಸುತ್ತಿತ್ತು. ಕಡೆಗಣ್ಣಿನ ಕಾಂತಿಯು ಹರಿದು ಮುಂದಕ್ಕೆ ಚಾಚುತ್ತಿತ್ತು. (ಹೀಗಿರುವ ಸ್ತ್ರೀಯರುಗಳ ಸಮೂಹ) ಗುಂಪು ಗುಂಪಾಗಿ ಸೇರಿ, ತಮ್ಮ ಶಯನಗೃಹದ ಬಾಗಿಲಿಗೆ ಬಂದು ಬಸವೇಶ್ವರನನ್ನು ನೋಡಿದರು. ೯. ಓರ್ವವಿದ್ಯಾವತಿಯು ಕಮಲದಂತಿರುವ ಪಾದಗಳಲ್ಲಿನ ಉಗುರುಗಳ ಕಾಂತಿಯು ಕುಣಿಯುವಿಕೆಗೆ, ಪಾದದಲ್ಲಿ ಧರಿಸಿರುವ ಅಂದುಗೆಗಳ ಶಬ್ದವು ಮೇಳಗೊಂಡು ಲಯವನ್ನು ಕೊಡುತ್ತಿತ್ತು. ಶೋಭಿಸುವ ಮೊಲೆಗಳು ನಡುಗುತ್ತ ತಾಳಗೊಡುತ್ತಿದ್ದವು. ದಪ್ಪನಾದ ಕಟಿ ಪಶ್ಚಾದ್ಭಾಗವು ಅದುರುತ್ತಿತ್ತು.

---

1 ದ (ಜ, ಮು)

ಬಸವನನೀಕ್ಷಿಪುಜ್ಜುಗದ ಸಂಭ್ರಮದಿಂ ತೊಡವಾಂಪ ಕಾಂತೆ ತಾ
ನಸವಸದಿಂದೆ ಮಲ್ಲಿಗೆಯ ಮಾಲೆಯ ಕಂಠದೆ ಕಂಠಮಾಲೆಯಂ
ಮಿಸುಪ ಕಚೌಘದೊಳ್ತಳೆದು ಕತ್ತುರಿಯಂ ತೆಗೆದೆಚ್ಚು ಕಣ್ಗೆ ನು
ಣ್ಣೊಸಲೊಳೆ ತಿರ್ದಿ ಕಜ್ಜಳಮನಂಗನೆಯರ್ ನಗೆ ಬಂದು ನೋಡಿದಳ್ ೧೦

ವ॥ ಅಲ್ಲಿ ಪೆಱಳೊರ್ವಳ್—

ಅಕ್ಕ ನಿರೀಕ್ಷಿಸೀ ಬಸವನಂದಿನ ನಂದಿಯಮರ್ತ್ಯರಂ ಕನ
ಲ್ದಿಕ್ಕಿದ ಶಿಂಶುಮಾರನಸುರುಳ್ಚಿದ ಮ್ಮೈಗಲಿ ಬಂದನಿಂದು ಲೋ
ಕಕ್ಕೆ ಹಿತಾರ್ಥಮಾಗಿ ಪರಮೇಶ್ವರವಾಹನರೂಪನೆಂದು ಕೈ
ಮಿಕ್ಕು ಕರಂಗಳಂ ಮುಗಿವುತಾಳಿಗೆ ತೋಱಿಸಿದಳ್ ವೃಷೇಂದ್ರನಂ ೧೧

ಪುರನಾರೀ ನಯನಾಂಚಳ ಸ್ಮಿತ ಲಸದ್ಬಿಂಬಾಧರಪ್ರಾಂಶು ಸೈ
ಪರಿದೋಂದಾಗಿ ಕಳಿಂದಜಾಮರನದೀಶೋಣಾಪಗಾ ವಾರಿಗ
ಳ್ಬೆರಸಿರ್ದಂದಮನಾನೆ ಸತ್ತಿಗೆ ಸಿತಾಂಭೋಜಂಬೊಲಿಂಬಾಗೆ ಚಾ
ಮರವೃಂದಂ ನೆಗೆದಲ್ಲಿ ಪಾಱುವ ಮರಾಳವ್ರಾತದಂತೊಪ್ಪುಗುಂ ೧೨

ಆಭರಣಗಳ ಶಬ್ದವೂ, ಶ್ರೇಷ್ಠವಾದ ಒಡ್ಯಾಣದ ಗೆಜ್ಜೆಗಳೂ ಮಧುರ ಶಬ್ದ ಕೊಡುತ್ತಿದ್ದವು. ಹೀಗೆ ಮಧುರ ಸ್ವರದೊಡನೆ ಸಂಬಂಧಗೊಂಡವಳಾಗಿ (ಆ ಸ್ತ್ರೀಯು) ಬೇಗ ಬೇಗ ಬಂದು ಬಸವೇಶ್ವರನನ್ನು ಚೆನ್ನಾಗಿ ನೋಡಿದಳು. [ಇಲ್ಲಿ ಉಗುರಿನ ಕಾಂತಿಯ ನರ್ತನ, ಅಂದುಗೆಯ ಶಬ್ದದಲಯ, ಮೊಲೆ ಮತ್ತು ಕಟಿ ಪಶ್ಚಾದ್ಭಾಗಗಳು ತಾಳ, ಆಭರಣ ಶಬ್ದಗಳ ಶ್ರುತಿ–ಹೀಗೆಕೂಡಿಕೊಂಡಿತ್ತೆಂದು ಭಾವ] ೧೦. ಓರ್ವ ಸ್ತ್ರೀಯು ತಾನು ಒಡವೆಗಳನ್ನು ಧರಿಸಿಕೊಳ್ಳುತ್ತಿದ್ದಳು. (ಅವಳು) ಬಸವಣ್ಣನನ್ನು ನೋಡುವ ಸಂಭ್ರಮದಲ್ಲಿ ಅವಸರವಸರವಾಗಿಯೇ ಮಲ್ಲಿಗೆಯ ಹೂಮಾಲೆಯನ್ನು ಕುತ್ತಿಗೆಗೂ, ಕಂಠದಲ್ಲಿ ಹಾಕಿಕೊಳ್ಳುವ ಮುತ್ತಿನಸರವನ್ನು ತುರುಬಿಗೂ, ಧರಿಸಿಕೊಂಡು, ಕಸ್ತೂರಿಯನ್ನು ತೆಗೆದುಕೊಂಡು ಕಣ್ಣಿಗೂ, ಕಾಡಿಗೆಯನ್ನು ನುಣ್ಣನೆಯ ಹಣೆಗೂ ಹಚ್ಚಿಕೊಂಡು (ಇವನ್ನು ಕಂಡು ಬೇರೆ) ಸ್ತ್ರೀಯರು ನಗುತ್ತಿರಲಾಗಿ ಬಂದು ಬಸವಣ್ಣನನ್ನು ನೋಡಿದಳು. ವ॥ ಅಲ್ಲಿ ಮತ್ತೊಬ್ಬಳು. ೧೧. 'ಅಕ್ಕ, ನೋಡು ! ಶಿವನ ವಾಹನ ಸ್ವರೂಪನಾದ ಈ ಬಸವೇಶ್ವರನು ಪೂರ್ವಕಾಲದ ನಂದೀಶ್ವರನು, ದೇವತೆಗಳನ್ನು ಕೋಪದಿಂದ ನಾಶಪಡಿಸಿದ ಶಿಂಶುಮಾರನೆಂಬ ರಾಕ್ಷಸನನ್ನು ಕೊಂದು ಕೆಡವಿದ ಪರಾಕ್ರಮಶಾಲಿ. ಈಗ (ಇವನು) ಲೋಕಹಿತಾರ್ಥವಾಗಿ ಬಸವಣ್ಣನಾಗಿ ಬಂದಿದ್ದಾನೆ.' ಎಂದು ಅಧಿಕವಾಗಿ (ಭಕ್ತಿಯಿಂದ) ಕೈಮುಗಿಯುತ್ತ ತನ್ನ ಸಖಿಗೆ ತೋರಿಸಿದಳು. ೧೨. ಆ ಕಲ್ಯಾಣಪಟ್ಟಣದ ಸ್ತ್ರೀಯರ ಕಡೆಗಣ್ಣಿನ, ಮುಗುಳುನಗೆಯ, ಹೊಳೆಯುತ್ತಿರುವ ತೊಂಡೆಹಣ್ಣಿನಂಥ ತುಟಿಯ, ಅಧಿಕತರವಾದ ಕಾಂತಿಯು ಪಸರಿಸಿ, ಒಂದುಗೊಂಡು ಸೇರಿ, ಯಮುನಾನದಿ, ಅಮರ ಗಂಗಾನದಿ, ಶೋಣಾನದಿ–ಇವುಗಳ ನೀರು ಬೆರಸಿರುವುದೋ ಎಂಬ ಅಂಶವನ್ನು ಹೊಂದಿರಲಾಗಿ, (ಮೂಲೆ ಹಿಡಿದ)

ವ॥ ಮತ್ತಮಲ್ಲಿ—

ನೆಲೆವಾಡಂಗಳನೇಱಿ ನೋಳ್ಪ ಲಲನಾಸಂದೋಹದಕ್ಷಿಪ್ರಭಾ
ವಳಿ ಪುಷ್ಪಾಂಜಲಿಯಾಗೆ ಮಂಗಳಮಹಾಗೇಹಂಗಳಿಂ ಪೌರವಂ
ಜುಲಕಾಂತಾತತಿಯೆತ್ತುವಾರತಿ ಪದಪ್ರಾಂಚನ್ನಖಾದರ್ಶನಂ
ಕುಲದೊಳ್ಬಿಂಬಿಸಿ ಪೂಜೆಗೇಱಿಸಿದ ಚಾಂಪೇಯಕ್ಕೆ ತೋಡಪ್ಪಿನಂ ೧೩

ಅಱೆವೆಱೆಯುನಾನೆ ಪಶುಪತಿ
ನೆಱೆವೆಱೆಯುಂ ತಾಳ್ದನಿಲ್ಲಿ ಬಸವನೆನಿಪ್ಪಾ
ತೇಜನಂ ಪ್ರಕಟಿಸಿ ಮಕುಟದೆ
ಮಿಱುಗುವ ಮುಕ್ತಾತಪತ್ರವೊಸೆದೇಳ್ತಂದಂ ೧೪

ಮೃದುಯಾನಂ ಗಜಯಾನಮುಂ ಜಱೆಯೆ ಲೋಲಾಪಾಂಗ ಶುಭ್ರಾಂಶು ಪೆ
ರ್ಚಿದ ಚಂದ್ರಾತಪಮುಂ ಪಗಲ್ನೆಗಪೆ ವೃತ್ತೋತ್ತುಂಗ ವಕ್ಷೋಜಕುಂ
ಭದ ಬಿಣ್ಪಿಂ ನಡು ಬಳ್ಕೆ ರತ್ನಕಳಶಾದರ್ಶಂಗಳಂ ತಾಳ್ದು ತಾ
ನಿದಿರ್ವಂದತ್ತುರು ಭೂಷಣದ್ಯುತಿಯುತಾಂಗಂ ಶೈವಕಾಂತಾಜನಂ ೧೫

ಛತ್ರಿಯು ಬಿಳಿಯ ಕಮಲದ ಹಾಗೆ ಮನೋಹರವಾಗಿರಲು. ಬೀಸುತ್ತಿರುವ ಚಾಮರಗಳ ಸಮೂಹವು ಅಲ್ಲಿ ಹಾರಾಡುವ ಹಂಸಪಕ್ಷಿಯಂತೆ ಒಪ್ಪುತ್ತಿತ್ತು [ಕಾಳಿಂದೀನದಿಯ ನೀರು ಕಪ್ಪು, ಗಂಗಾನದಿಯ ನೀರು ಶುಭ್ರ ; ಶೋಣಾನದಿಯ ನೀರು ಕೆಂಪು ಎಂದು ಕವಿಸಮಯ. ಅದನ್ನು ಬಳಸಿ ಕಣ್ಣ ಕಾಡಿಗೆಯ ಕಪ್ಪು. ಮುಗುಳುನಗೆಯ ಬಿಳುಪು, ತುಟಿಯ ಕೆಂಪು ಕಾಂತಿಗಳು ಕೂಡಿಕೊಂಡವೆಂದು ಭಾವ] ವ॥ಮತ್ತು ಅಲ್ಲಿ ೧೩. ಮನೆಯ ಮಹಡಿಗಳನ್ನೇರಿ ನೋಡುತ್ತಿರುವ ಸ್ತ್ರೀಯರುಗಳ ಸಮೂಹದ ಕಣ್ಣುಗಳ ಕಾಂತಿಯ ಸಮೂಹವೇ ಪುಷ್ಪಾಂಜಲಿಗಳಾಗುತ್ತಿರಲು, ಮಂಗಳಕರಗಳಾದ ದೊಡ್ಡ ದೊಡ್ಡ ಮನೆಗಳಿಂದ ಬಂದ ಆ ನಗರದ ಮನೋಹರಿಯರಾದ ಸ್ತ್ರೀಯರ ಗುಂಪು ಎತ್ತುತ್ತಿರುವ ದೀಪಾರತಿಯು (ಆ ಬಸವೇಶ್ವರನ) ಪಾದಗಳಲ್ಲಿರುವ ಪ್ರಕಾಶಮಾನವಾದ ಉಗುರುಗಳೆಂಬ ಕನ್ನಡಿಗಳ ಸಮೂಹದಲ್ಲಿ ಪ್ರತಿಫಲನಗೊಂಡು (ಅವನ ಪಾದದ) ಪೂಜೆಗೆ ಏರಿಸಿದ ಸಂಪಿಗೆಯ ಹೂವಿಗೆ ಸದೃಶವಾಗಿರುವುದೋ ಎನ್ನುವಂತೆ ಶೋಭಿಸುತ್ತಿತ್ತು. ೧೪. (ಆ ಬಸವೇಶ್ವರನ) ಕಿರೀಟದ ಸಮೀಪದಲ್ಲಿ ಹೊಳೆಯುತ್ತಿರುವ ಮುತ್ತಿನಛತ್ರಿಯು (ಕೈಲಾಸದಲ್ಲಿ) ಪರಮೇಶ್ವರನು ಅರ್ಧಚಂದ್ರನನ್ನು ಧರಿಸಿರಲಾಗಿ. ಇಲ್ಲಿ ಬಸವೇಶ್ವರನು ಪೂರ್ಣಚಂದ್ರನನ್ನು ಧರಿಸಿರುವನು ಎನ್ನುವ ರೀತಿಯನ್ನು ಪ್ರಕಟಿಸುವುದಕ್ಕೋಸ್ಕರ ಪ್ರೀತಿಯಿಂದ ಬಂದನು (ಎಂಬಂತೆ ಕಾಣುತ್ತಿತ್ತು). ೧೫. ವಿಶೇಷವಾದ ಆಭರಣಗಳ ಕಾಂತಿಯಿಂದ ಕೂಡಿದ ಶರೀರವುಳ್ಳ ಶಿವಭಕ್ತರುಗಳ ಸ್ತ್ರೀಸಮೂಹವು ರತ್ನದಕಲಶ ಕನ್ನಡಿಗಳನ್ನು ಹಿಡಿದು, ಆನೆಯ ನಡಿಗೆಯನ್ನು ತಿರಸ್ಕರಿಸುವಂತಹ ಮಂದನಡಿಗೆಯಿಂದ ಬರುತ್ತಿದ್ದರು. (ಅವರು ತಮ್ಮ) ಚಂಚಲವಾದ ಕಡೆಗಣ್ಣುಗಳ ಶುಭ್ರವಾದ ಕಾಂತಿಯಿಂದ

ವ॥ ಅಂತೇಳ್ತಂದ ಕಾಂತಾಜನಕ್ಕೆ ಕಟಾಕ್ಷದಿಂ ಕಾರುಣ್ಯಮಂ ನೀಡುತ್ತಂ ಬಂದು, ಸಚಿವಂ ಕೈಗುಡೆ ತನ್ಮಂದಿರದ್ವಾರದೇಶದೊಳ್ವನಿತೆವೆರಸು ಗಜೇಂದ್ರಸ್ಕಂಧದಿನಿಳಿಗವತರಿಸಿತದ್ಗೃಹಮಂ ಪೊಕ್ಕು ಶಿವಗಣಪದಾಂಬುವಿಂ ಮಂಗಳಮಜ್ಜನಂಗೈದು ಶಿವಪ್ರಸಾದಿತ ದಿವ್ಯಪ್ರಸಾಧನಮಂ ತಳೆದು ಬಸವಂ ರಂಜಿಸಿರ್ಪನ್ನೆಗಮಾ ಬಲದೇವನ ಬೆಸದಿಂ ಸಖೀಜನಮೇಳ್ತಂದು ಸಡಗರಂ ಬೆರಸು ಸುರಲತೆಗೆ ಸುರನಾರಿಯರ್ ಸುರಭಿಪಯಮಂ ಸುರಿವಂತೆ ಸುರಭಿಸಲಿಲದಿಂ ಜಳಕಂಬೊಗಿಸಿ, ದಿನಲಕ್ಷ್ಮಿಗೆ ರವಿಕಿರಣಮನುಡಿಸುವಂತೆ ಕನಕಾಂಬರಮಂ ನಿಱಿವಿಡಿದುಡಿಸಿಯುಂ, ಕಾರ ಮುಂಬನಿಯಂ ತಳ್ತ ಮಯೂರನ ಸಿರಿಯಂನೊಳಗುಗೊಳಿಸಿ ತೋರಮುಡಿಯೊಳ್ಮಲ್ಲಿಗೆಯಂ ತುಱುಂಬಿಯುಂ, ಕುಚಕೋಕಯುಗಕೆ, ಮುಖಚಂದ್ರನತ್ತಣಿಂ ಭೀತಿಬೇಡೆಂದೆಳವಿಸಿಲ ಗವಸಣಿಗೆದೊಡಿಪಂತೆ ಮಿಸುನಿರವಕೆಯಂ ತುಡಿಸಿಯುಂ, ಕುರುಳ್ದುಂಬಿಗಳ್ಗೆ ನಳಿನಪರಾಗದ ಮೇಪನಿಕ್ಕುವಂತೆ ಬೈತಲೆಯೊಳ್ ಸಿಂದೂರಮನಮರ್ಚಿಯುಂ, ವದನಾಂಬುಜಂ ಸೆಜೆ[3]ಗೈದ ಬಾಲೇಂದು[1]ವೆನಿಸಿ[1]ನೊಸಲೊಳ್ಬಸಿತಲಸಿತ ತಿಲಕಮಂ ತಿರ್ದಿಯುಂ, ಕಪೋಲಶಶಿಯಂನೋಲಗಿಪ ತಾರಾಕದಂಬಮೆನಿಸಿ ಪೊಸಮುತ್ತಿನೋಲೆಯಂ [2]ಪಾಲೆಯೊಳ್[2]ಳವಡಿಸಿಯುಂ,

ಅಧಿಕವಾದ ಚಂದ್ರನ ಬೆಳದಿಂಗಳನ್ನೇ ಹಗಲಿನಲ್ಲಿರುವಂತೆ ಮಾಡಿದ್ದರು. ಗುಂಡಾಗಿಯೂ ದಪ್ಪನಾಗಿಯೂ ಇರುವ ಕುಂಭ ಸದೃಶಗಳಾದ ಮೊಲೆಗಳ ಭಾರದಿಂದ ನಡುವು ಬಳುಕುತ್ತಿರಲು ಆ ಸ್ತ್ರೀಸಮೂಹವು ಬಸವೇಶ್ವರನನ್ನು ಎದುರುಗೊಳ್ಳಲು ಬಂದಿತು. ವ॥ ಬಸವಣ್ಣನು ಹೀಗೆ ತನ್ನನ್ನು ಎದುರುಗೊಳ್ಳುವುದಕ್ಕೋಸುಗ ಬಂದ ಸ್ತ್ರೀಸಮೂಹಕ್ಕೆ(ತನ್ನ) ಕಡೆಗಣ್ಣುಗಳ ನೋಟದಿಂದಲೇ ಕಾರುಣ್ಯವನ್ನು ಉಂಟುಮಾಡುತ್ತ ಬಂದನು. ಬಲದೇವ ಮಂತ್ರಿಯು ತನ್ನ ಅರಮನೆಯ ಮುಂಭಾಗದಲ್ಲಿ(ಆ ಬಸವೇಶ್ವರನಿಗೆ)ಹಸ್ತಲಾಘವವನ್ನು ಕೊಟ್ಟನು. (ಆಗ ಬಸವೇಶನು)ಆನೆಯ ಹೆಗಲ ಮೇಲಿಂದ ಭೂಮಿಗೆ ಇಳಿದು ಮಂತ್ರಿಯ ಮನೆಯನ್ನು ಪತ್ನೀಸಮೇತನಾಗಿ ಪ್ರವೇಶಿಸಿದನು. ಶಿವಗಣಂಗಳ ಪಾದೋದಕದಿಂದ ಮಂಗಳಸ್ನಾನ ಮಾಡಿದನು. ಈಶ್ವರನಿಂದ ಅನುಗ್ರಹಿಸಲ್ಪಟ್ಟ ದಿವ್ಯಪ್ರಸಾದವನ್ನು ಸ್ವೀಕರಿಸಿ, ಶೋಭಿಸುತ್ತಿರುವಷ್ಟರಲ್ಲಿ ಆ ಬಲದೇವ ಮಂತ್ರಿಯ ಅಪ್ಪಣೆಯಂತೆ ಸಖೀಜನಗಳು ಬಂದು, ಸಡಗರದಿಂದ ಕೂಡಿದವರಾಗಿ, (ಕುಮಾರಿಯಾದ ಗಂಗಾದೇವಿಗೆ) ಕಲ್ಪವೃಕ್ಷಕ್ಕೆ ದೇವತಾ ಸ್ತ್ರೀಯರುಗಳು ಕಾಮಧೇನುವಿನ ಹಾಲನ್ನು ಸುರಿಯುವಂತೆ, ಸುಗಂಧ ಸಮ್ಮಿಶ್ರವಾದ ನೀರಿನಿಂದ ಸ್ನಾನಮಾಡಿಸಿದರು. ದಿವಸವೆಂಬ ಲಕ್ಷ್ಮಿಗೆ ಸೂರ್ಯನ ಬಿಸಿಲನ್ನೇ ಬಟ್ಟೆಯನ್ನಾಗಿಮಾಡಿ ಉಡಿಸಿದಹಾಗೆ, ಹೊಂಬಣ್ಣದ ಸೀರೆಯನ್ನು ನಿರಿಗೆ ಹಿಡಿದು ಉಡಿಸಿದರು. ಮುಂಗಾರಿನಲ್ಲಿ ಮೊದಲು ಸುರಿಯುವ ನೀರಿನಹನಿಯಿಂದ ಸಂಭ್ರಮಗೊಂಡ (ತಳ್ತ), ನವಿಲಿನ ಸೌಂದರ್ಯದ ಸಂಪತ್ತನ್ನುಂಟುಮಾಡುವ ದಪ್ಪನಾದ ಜಡೆಯಲ್ಲಿ ಮಲ್ಲಿಗೆಯ ಹೂವನ್ನು ತುಂಬಿದರು. ಚಕ್ರವಾಕಪಕ್ಷಿಗಳಂತಿರುವ ದಪ್ಪನಾದ

---

1 ವೆಂದೆನಿಸಿ (ಮು, ಐ) 2 ಅ (ಚ)

ಕಟಾಕ್ಷರುಚಿಲತೆ ಮುಗುಳಂಬಡೆದುದೆಂಬಿನಂ ತೋರಮುತ್ತಿನ ಬಾವುಲಿಯಂ ಕೊನೆಕೊಡಂಕೆಯೊಳ್ತೊಡರ್ಚಿಯುಮಧರಪಲ್ಲವರುಚಿ ಸಂಧ್ಯಾರಾಗದೊಳುದಯಿಸಿದ ಶುಕ್ರನೆನಿಸಿ ನವೀನಮೌಕ್ತಿಕನಾಸಾಭರಣಮನಲಂಕರಿಸಿಯುಂ, ತುಱುಗೆವೆಗರ್ಪು ಕವಲ್ತು ಕುಡಿಗೊಂಡುದೆನಿಸಿ ನಿಡುಗಣ್ಗಂಜನಮನೆಚ್ಚಿ ಸೋಗೆಯುಂ ರೇಖೆಗೊಳಿಸಿಯುಂ, [1]ಮುಖೇಂದುವಿಂದಧಃಕೃತನಾದ ಚಂದ್ರನೆನಿಸಿ ನುಣ್ಗೊರಲ್ಗೆ ರನ್ನದಾಳಿಯುನಾಳಿಸಿಯುಂ[1], ಪೂರ್ಣಕುಂಭಮಂ ವಿಚಕಿಲಮುಕುಲಮಾಲೆಯಿನರ್ಚಿಪಂತೆ ಕುಚಕುಂಭದೊಳ್ಮುಕ್ತಾಹಾರಮಂ ನೆಲೆಗೊಳಿಸಿ[2]ಯುಮರಲ್ದ[2] ಕೆಂದಾವರೆಯಂ ನೊರೆಮಾಲೆ ಬಳಸಿದುದೆನಿಸಿ ಕರಮೂಲದೊಳ್ಮುತ್ತಿನ ಕಂಕಣಮಂ ಕೈಗೊಳಿಸಿ[3]ಯುಂ[3], ಮರಲಂಬುತಳಿರಂಬುಗಳ್ಗೆ ರನ್ನದಣಸಂಬಂಧಿಪಂತಂಗುಲಿಗಳೊಳ್ ರನ್ನದುಂಗುರಂಗಳಂ ಸಂಗಳಿಸಿಯುಂ, ರೋಹಣಾಚಳಂ ಮಣಿಮಾಲೆಯಂ ತಾಳ್ದುದೆನಿಸಿ ಗುರು ನಿತಂಬಬಿಂಬಾಗ್ರದೊಳ್ ರತ್ನರಸನಾಸೂತ್ರಮಂ ಬಿಗಿದು ಬಂಧಿಸಿಯುಂ

ಮೊಲೆಗಳಿಗೆ ಮುಖವೆಂಬ ಚಂದ್ರನಿಂದ ಭಯವಾಗಬಾರದೆಂದು, ಎಳೆಬಿಸಿಲಿನ ಮೇಲು ಮುಸುಗನ್ನು ಹೊದಿಸಿದಹಾಗೆ, ಸುವರ್ಣದ ಕುಪ್ಪುಸವನ್ನು ತೊಡಿಸಿದರು. ಮುಂಗುರುಳುಗಳೆಂಬ ದುಂಬಿಗಳಿಗೆ ಕಮಲದ ಧೂಳಿಯ (ರಜದ) ಮೇವನ್ನು ಹಾಕುವಂತೆ ಬೈತಲೆಯಲ್ಲಿ ಚಂದ್ರದ ಹುಡಿಯನ್ನು (ಸಿಂಧೂರವನ್ನು) ಹಚ್ಚಿದರು. ಮುಖವೆಂಬ ಕಮಲವು ಸೆರೆಹಿಡಿದಂತಿರುವ ಎಳೆಯ ಚಂದ್ರನೋ ಎನ್ನುವಂತಿರುವ ಹಣೆಯಲ್ಲಿ ಭಸ್ಮರೇಖೆಗಳನ್ನು ತಿದ್ದಿ ಹಚ್ಚಿದರು. ಕೆನ್ನೆಗಳೆಂಬ ಚಂದ್ರನನ್ನು ಸೇವೆ ಮಾಡುವ ನಕ್ಷತ್ರಗಳ ಸಮೂಹವೋ ಎನ್ನುವಂತೆ ಕಾಣುವ ಮುತ್ತಿನ ಓಲೆಗಳನ್ನು ಕಿವಿಗಳ ಹೆಜ್ಜಗಳಲ್ಲಿ ಅಳವಡಿಸಿದರು. ಕಡೆಗಣ್ಣುಗಳ ಕಾಂತಿಯೆಂಬ ಬಳ್ಳಿಯು ಮೊಗ್ಗು ಬಿಟ್ಟಿರುವುದೋ ಎನ್ನುವಹಾಗೆ ಕಾಣುವ ದೊಡ್ಡ ದೊಡ್ಡ ಮುತ್ತಿನ ಬಾವುಲಿಗಳನ್ನು ಕಿವಿಗಳ ಕೊನೆಯಲ್ಲಿ ತೊಡಿಸಿದರು. ಚಿಗುರುಗಳಿಗೆ ಸಮಾನವಾದ ತುಟಿಗಳ ಕಾಂತಿಯೆಂಬ ಸಂಜೆಗೆಂಪಿನಲ್ಲಿ ಹುಟ್ಟಿದ ಶುಕ್ರಗ್ರಹನೋ ಎಂಬ ಹಾಗೆ ಕಾಣುವ ನೂತನವಾದ ಮುತ್ತಿನ ಮೂಗುತಿಯನ್ನು (ಮೂಗಿನಲ್ಲಿ) ಅಲಂಕರಿಸಿದರು. ದಟ್ಟವಾದ ಕೂದಲಿನಿಂದ ಕೂಡಿದ ಕಣ್ಣುರೆಪ್ಪೆಗಳ ಕಾಂತಿಯು ಕವಲೊಡೆದು ಕುಡಿಚಾಚಿ ಬೆಳೆದುದೋ ಎಂಬಂತೆ ಕಾಣುವ (ಆ) ದೀರ್ಘವಾದ ನೇತ್ರಗಳಿಗೆ ಕಾಡಿಗೆಯನ್ನು ಹಚ್ಚಿ ಸೋಗೆಯನ್ನು ಗೆರೆಗೊಳಿಸಿದರು (ರೇಖೆಗೊಳಿಸಿದರು). ಮುಖವೆಂಬ ಚಂದ್ರನಿಂದ ತಿರಸ್ಕರಿಸಲ್ಪಟ್ಟ ಚಂದ್ರನೋ ಎನ್ನುವಂತೆ ಕಾಣುವ ರತ್ನದ ತಾಳಿಯನ್ನು ನುಣುಪಾದ ಕೊರಳಿಗೆ ಅಳವಡಿಸಿದರು. ತುಂಬಿದ ಕೊಡವನ್ನು ಮಲ್ಲಿಗೆ ಮೊಗ್ಗಿನ ಸರದಿಂದ ಪೂಜಿಸುವಹಾಗೆ ದಪ್ಪನಾದ ಮೊಲೆಗಳ ಮೇಲೆ ಮುತ್ತಿನಹಾರವನ್ನು ನೆಲೆಗೊಳಿಸಿದರು. ಅರಳಿದ ಕೆಂಪು ಕಮಲವನ್ನು ನೊರೆಗಳ ಸಾಲು ಸುತ್ತಿಕೊಂಡಿತೋ ಎನ್ನುವಂತೆ ಮುಂಗೈಯಲ್ಲಿ ಮುತ್ತಿನ

---

1 × (ಚ) 2 ಯುಮ್ಮರಲ್ದ (ಮ) 3 ಯುಂ (ಚ, ತ, ಜ, ಮ)

ನುಣ್ದೊಡೆಗಳೆಂಬ ಪೊಂಬಾಳೆಗಂಬಕ್ಕೆ ಕುಂಕುಮರಜದಾಲವಾಲಮಂ ಸಮೆವಂತೆ ಕನತ್ಕನಕಮಯ ಮಂಜೀರಮಂ ಪದಾಗ್ರದೊಳ್ ಸಿಂಗರಿಸಿಯುಮಿಂತು ಸಿಂಗರದ ಸೀಮೆಯೆನಿಪ ಗಂಗಾಂಬಿಕೆಗೆ ಪಸದನಂಗೊಳಿಸಲೊಡನೆ —

ಮಣಿಗಳನೆಯ್ದೆ ಕಾತ ಸುರವಲ್ಲರಿಯಂತಿರೆ ದಿವ್ಯರತ್ನಭೂ
ಷಣದಿನುದರ್ಕಕಾಂತಿವಳೆದಬ್ಜಿನಿಯಂತೆ ಸುವರ್ಣಚೇಲದಿಂ
ಕ್ಷಣರುಚಿಯಾಂತ ಕಾರಸಿರಿಯಂತೆ ಕನನ್ಮಣಿಕಾಂಚಿಯಿಂದೆ ಪಾ
ರ್ವಣಶಶಿವಕ್ತ್ರೆ ಕಾಮನಧಿದೇವತೆಯಂತಿರೆ ಕಣ್ಗೆ ತೋಱಿದಳ್ ೧೬

ಪೊಳೆವಂಗಕ್ಕಳವಟ್ಟ ರೂಪು ಪೊಸರೂಪಮಂ ಬಣ್ಣವಿಟ್ಟೊಂದಿದು
ಜ್ವಳ ತಾರುಣ್ಯಮಲಂಪುವೆತ್ತ ನವತಾರುಣ್ಯಕ್ಕೆ ಮರ್ಯಾಂತ ಮಂ
ಜುಳಭಾವಂ ನವ ಭಾವಮಂ ಬಳೆಯಿಪುದ್ಯತ್ಪ್ರೌಢಿಯಾ ಪ್ರೌಢಿಯಂ
ಕಳೆಗೊಂಡಿರ್ಪ ಶಿವೈಕಭಕ್ತಿ ಸುಗುಣಂ ಪೆಂಪಾಂತವಾ ಕಾಂತೆಯಾ ೧೭

ಕಡಗವನ್ನು ಅಲಂಕರಿಸಿದರು. ಮನ್ಮಥನ ಚಿಗುರಿನ ಬಾಣಗಳಿಗೆ ರತ್ನದ ಅಣಸನ್ನು ಸಂಬಂಧಗೊಳಿಸಿದ ಹಾಗೆ ಬೆರಳುಗಳಿಗೆ ರತ್ನದ ಉಂಗುರಗಳನ್ನು ಅಳವಡಿಸಿದರು. ರೋಹಣಾಚಲವೆಂಬ ಹೆಸರಿನ ಪರ್ವತವು ರತ್ನದ ಹಾರವನ್ನು ಧರಿಸಿರುವುದೋ ಎನ್ನುವ ಹಾಗೆ ದಪ್ಪನಾದ ಕಟಿಪಶ್ಚಾದ್ಭಾಗದ ಮೇಲೆ ರತ್ನ ಖಚಿತವಾದ ಕಟಿಸೂತ್ರವೆಂಬ ಹೆಸರಿನ ಆಭರಣವನ್ನು ಬಿಗಿದು ಕಟ್ಟಿದರು. ನುಣುಪಾದ ತೊಡೆಗಳೆಂಬ ಪೊಂಬಾಳೆಯ ಕಂಬಗಳಿಗೆ ಕುಂಕುಮ ಕೇಸರಿಯ ಧೂಳಿಯ ಪಾತಿಯನ್ನು ಮಾಡಿರುವರೋ ಎಂಬ ಹಾಗೆ ಕಾಣುವ ಹೊಳೆಯುತ್ತಿರುವ ಚಿನ್ನದ ಕಾಲು ಕಡಗವನ್ನು ಪಾದಾಗ್ರದಲ್ಲಿ ತೊಡಿಸಿದರು. ಈ ರೀತಿ ಶೃಂಗಾರಕ್ಕೆ ಎಲ್ಲೆ ಕಟ್ಟು ಎನಿಸುವಂತೆ ಗಂಗಾಂಬಿಕೆಗೆ ಅಲಂಕಾರಗೊಳಿಸಲಾಗಿ—೧೬. ರತ್ನಗಳ ಕಾಯಿ ಬಿಟ್ಟ ಕಲ್ಪವೃಕ್ಷದ ಹಾಗೆ, ಶ್ರೇಷ್ಠವಾದ ರತ್ನಾಭರಣಗಳಿಂದಲೂ, ಸೂರ್ಯ ಕಾಂತಿಯನ್ನು ಧರಿಸಿರುವ ಕಮಲಿನಿಯ ಹಾಗೆ ಸುವರ್ಣವರ್ಣದ ಸೀರೆಯನ್ನುಟ್ಟುದರಿಂದಲೂ, ಮಿಂಚನ್ನು ಧರಿಸಿರುವ ಮಳೆಗಾಲದ ಲಕ್ಷ್ಮಿಯ ಹಾಗೆ ಹೊಳೆಯುವ ರತ್ನ ಖಚಿತವಾದ ನಡುವಿನ ಪಟ್ಟಿಯಿಂದಲೂ ಶೋಭಿಸುವ ಪೂರ್ಣಿಮೆಯ ಚಂದ್ರ ಸದೃಶ ಮುಖವುಳ್ಳ ಆ ಗಂಗಾಂಬಿಕೆಯು ಕಾಮನ ಅಧಿ ದೇವತೆಯಂತೆ ಕಣ್ಣಿಗೆ ಕಾಣುತ್ತಿದ್ದಳು. ೧೭. ಆ ಗಂಗಾಂಬಿಕೆಯಲ್ಲಿ ಹೊಳೆಯುವ ದೇಹಕ್ಕೆ ಸಮಾನವಾದ ರೂಪು ; ಈ ಹೊಸ ರೂಪಕ್ಕೆ ಬಣ್ಣವಿಟ್ಟುದಂಬಂತೆ ಕೂಡಿಕೊಂಡಿರುವ ಉಜ್ವಲವಾದ (ನೂತನ) ತಾರುಣ್ಯ ; ಸೊಗಸಾದ ಆ ನವತಾರುಣ್ಯಕ್ಕೆ ಮರ್ಯಾದೆಯನ್ನುಂಟು ಮಾಡುವಂತೆ ಇರುವ ಸದ್ಭಾವ; (ಇಂಥ) ನೂತನವಾದ ಸದ್ಭಾವವನ್ನು ಅಭಿವೃದ್ಧಿಗೊಳಿಸುವ ಶ್ರೇಷ್ಠವಾದ ಪ್ರೌಢಿಮೆ ; ಆ ಪ್ರೌಢಿಮೆಯನ್ನು ಜೊತೆಗೊಳಿಸಿಕೊಂಡಿರುವ ಶಿವನಲ್ಲಿ ಐಕ್ಯಗೊಳಿಸುವ ಭಕ್ತಿಭಾವ–

ಪರಸೆ ಗಣಂಗಳಾದರಿಸೆ ಭಕ್ತಜನಂ ಪದಪಿಂದೆ ಬಂದು ನಿಂ
ದಿರೆ ವೃಷಭೇಂದ್ರನಾ ಪಸೆಯ ಮಂಟಪದೊಳ್ ಬಲದೇವಮಂತ್ರಿ ಭಾ
ಸುರತರ ವೈಭವಂ ನಿಗೆ ತನೂಜೆಯನುಮೊಡಗೊಂಡು ಬಂದು ಭ
ಕ್ತರ ಮತವೇತುಟಂತಿರೆ ವಿವಾಹಮನಚ್ಚರಿಯಾಗೆ ಮಾಡಿದಂ ೧೮

ಇವು ಘನವಾಗಿ ಕೂಡಿಕೊಂಡಿದ್ದುವು. ೧೮. ಬಸವೇಶ್ವರನನ್ನು ಶಿವಗಣಗಳು ಹರಸುತ್ತಿದ್ದರು, ಶಿವಭಕ್ತ ಜನರುಗಳು ಆದರಿಸುತ್ತಿದ್ದರು. (ಹೀಗಿರುವಾಗ) ಅವನು ಬಂದು ಮದುವೆಯ ಮಂಟಪದಲ್ಲಿ ನಿಂತಿರಲಾಗಿ ಬಲದೇವ ಮಂತ್ರಿಯು ಪ್ರಕಾಶ ಮಾನವಾದ ವೈಭವ (ಸನ್ನಿವೇಶವು) ಅಧಿಕಗೊಂಡಿರಲು ತನ್ನ ಮಗಳನ್ನು ಸಂಗಡ ಕರೆದುಕೊಂಡು ಬಂದು, ಭಕ್ತರ ಅಭಿಪ್ರಾಯವು ಹೇಗೆ ಉಂಟೋ ಹಾಗೆ ವಿವಾಹವನ್ನು ಆಶ್ಚರ್ಯಕರವಾಗುವ ರೀತಿಯಲ್ಲಿ ಮಾಡಿದನು.*

* ಸಂಸ್ಕೃತದಲ್ಲಿ ಕಂಚಿ ಶಂಕರಾರಾಧ್ಯರೆಂಬುವರು ಬರೆದ ಸಂಸ್ಕೃತ ಬಸವಪುರಾಣದ ಬಗೆಗೆ ಷಡಕ್ಷರ ಕವಿ ಹೇಳಿದ್ದಾನೆ. (ವೃ. ವಿ. ೧–೨೮) ಅಲ್ಲಿ ಬರುವ ವಿವಾಹ ವಿಧಿಯ ವರ್ಣನೆ ಮನೋಹರವಾಗಿದೆ. ಪ್ರಕೃತ ಸಂದರ್ಭದಲ್ಲಿ ಆ ವರ್ಣನೆಯನ್ನು ವಿದ್ವಾಂಸರ ಗಮನಕ್ಕೆ ಈ ಕೆಳಗಿನಂತೆ ತರಲಾಗಿದೆ—ಷಡಕ್ಷರದೇವ ತನ್ನ ಈ ಪುರಾಣದಲ್ಲಿ ಅವನ್ನೆಲ್ಲ ಕೈಬಿಟ್ಟು ಕಥೆ ಸಾಗಿಸಿಕೊಂಡು ಹೋಗಿದ್ದಾನೆ.

ನಿವರ್ತಿತೇಷು ಪೂರ್ವೇದ್ಯುರ್ವಾಗ್ದಾನಾದಿಷು ಕರ್ಮಸು ।
ಬಸವಂ ಗೃಹಮಾಯಾತಂ ವರಂಕನ್ಯಾರ್ಥಿನಂ ಮುದಾ ॥ ೧ ॥
ಮಧುಪರ್ಕೇಣಾರ್ಹಯಿತ್ವಾ ಬಲದೇವೋದ್ವಿಜಾಗ್ರಣೀಃ ।
ವೀರ ಮಾಹೇಶ್ವರಾಂಸ್ತತ್ರ ಪೂಜಯಿತ್ವಾ ವಿಶೇಷತಃ ॥ ೨ ॥
ಸರ್ವಾಲಂಕಾರ ಸಂಯುಕ್ತಾಂ ನವ್ಯವಸ್ತ್ರೋಪ ವೇಷ್ಟಿತಾಂ ।
ಮಹೋಜ್ವಲಾಂಗೀಂ ಸೌಭಾಗ್ಯ ದೇವತಾಮಿವ ಶೋಭಿತಾಂ ॥ ೩ ॥
ಸುಶೀಲಾಂ ಭಾಗ್ಯಸಂಪನ್ನಾಂ ಗಂಗಾಂಬಾಂ ವರವರ್ಣಿನೀಂ ।
ತಸ್ಮೈ ಮಹಾತ್ಮನೇ ಪ್ರಾದಾದ್ಧಾರಾ ಸಂಕಲ್ಪ ಪೂರ್ವಕಂ ॥ ೪ ॥
ಶುಭೇಮುಹೂರ್ತೇ ಸಂಪ್ರಾಪ್ತೇ ಜೃಂಭಿತೇವಾದ್ಯ ಘೋಷಣೇ ।
ಮಂತ್ರಾರವೇಚ ಸಂಕೀರ್ಣೇ ಭಿಜನೇ ಸ್ವಸ್ತಿವಾದಿನಿ ॥ ೫ ॥
ಅರ್ಚಯಿತ್ವಾಥಮಾಂಗಲ್ಯಂ ಬಸವೇಶೋ ಮಹಾಮತಿಃ ।
ಗಂಗಾಂಬಾಯಾಃ ಕಂಠದೇಶೇ ಬಬಂಧಾ ತಿಮನೋಹರೇ ॥ ೬ ॥
ಆಚಾರ್ಯೈಸ್ಸಹ ಋತ್ವಿಗ್ಭಿರ್ದಂ ಪತ್ಯೋರುತ್ತ ಮಾಂಗಕೇ ।
ಪ್ರೋಕ್ಷಿತೇಪಂಚಕಲಶತೀರ್ಥೇನ ಚಮಹೀಮಸಾ ॥ ೭ ॥
ಉಮಾಮಹೇಶೌ ಸಂಪೂಜ್ಯ ಪಾಣಿಗ್ರಹಣ ಮಾಚರನ್ ।
ಶೇಷಾಣಿ ಸಪ್ತಪದ್ಯಾಧಿ ಕರ್ಮಾಣ್ಯಪಿಯಥಾ ವಿಧಿ ॥ ೮ ॥
ವಿಧಾಯ ಸಾಂಗಮಾರ್ತ್ಯಾನಾ ಮಾಶಿಷ ಶ್ಶಿರಸಾವಹನ್ ।
ಪ್ರದದೌ ಶಿವಭಕ್ತೇಭ್ಯಃ ಸ್ವರ್ಣ ರತ್ನಾಂಬರಾದಿಕಂ ॥ ೯ ॥

(—ಶಂಕರ ಕವಿಯ ಬಸವ ಪುರಾಣ)

ವ॥ ಅಂತು ಪರಮ ಸಂಭ್ರಮದಿಂ ವಿವಾಹಂಗೈದು ಕುಡಿತೆವೊಂಗಳಿಂ ಮಣಿಭರಣ ಕನಕ ವಸನ ಗಂಧ ಮಾಲ್ಯಾದಿಗಳಿಂ ಗಣಾರಾಧನೆಗೈದು ಬಲನಾಯಕಂ ನಿಜರಮಣಿವೆರಸು ಪರಮೋತ್ಸಾಹದಿ ನಿರ್ಪನ್ನೆಗಮಾ ಬಸವರಾಜಂ ಶಿವಗಣಪದಾಬ್ಜಂ ಶಿರಃಶೇಖರ ಮಾಗೆಯುಂ, ದೃಢವ್ರತಂ ಕಂಕಣದಾರವೆನಿಸೆಯುಂ, ಸಹಜ ಸದ್ಗುಣಮೆಂಬ ಮಣಿ ಭೂಷಣಂ ತೊಳತೊಳಗೆಯುಂ, ಶಿವನಿಷ್ಠೆ ಯೆಂಬ ಕಠಾರಿ ಸುಕರಸ್ಥಿತಿವಡೆದು ವಿಜೃಂಭಿಸೆಯುಂ, ಸಂಸೃತಿವಿಕಾರಕಾಂಡಪಟಮೋಸರಿಸೆಯುಂ, ಶರಣಕೃಪಾರಸಧಾರಾಪೂರ್ವಕಂ ದ್ವಿತೀಯವಿವಾಹಮೆನೆ ಭಕ್ತಿವನಿತೆಯಂ ಕಟ್ಟಳ್ಕರಿಂ ಕೈಕೊಂಡು ಮಗುಳ್ದು ರಮಣಿವೆರಸು ಹಗರಣಪ್ರಕರವೊಡವರೆ ಪರಮ ವೈಭವದಿಂ ಕಪ್ಪಡಿಗೇಳ್ತಂದು ಕರುಣಾ ಸಿಂಧುವಪ್ಪ ನಿಜಗುರುವಂ ಕಂಡು ಪೊಡಮಟ್ಟು ತತ್ಪಾದ ಸಪರ್ಯೆಗೈವುತ್ತಂ ಸುಖದೊಳಿರುತ್ತ ಮಿರ್ದನಿತ್ತಲ್ ಕೆಲವಾನುಂ ವತ್ಸರಂಗಳ್ ಸಲುತ್ತಮಿರೆ—

ಬಸವಂಗೆ ಮಗಳನರ್ಪಿಸಿ
ದೊಸಗೆಯನೀಶಂಗೆ ಬಿನ್ನವಿಸಲೆಯ್ದಿದವೋ
ಲಸಮ ಬಲದೇವನೆಯ್ದಿದ
ನಸದೃಶ ಕೈಲಾಸವಾಸಮಂ ಬಳಿಕಾಗಳ್ ೧೯

ವ॥ ಈ ರೀತಿಯಲ್ಲಿ ಅತ್ಯಂತ ಸಂಭ್ರಮದಿಂದ ವಿವಾಹವನ್ನು ಮಾಡಿ, ಬೊಗಸೆ ಬೊಗಸೆಯಿಂದ ರತ್ನಾಭರಣಗಳು, ಬಂಗಾರ, ವಸ್ತ್ರ, ಗಂಧಮಾಲ್ಯಾದಿಗಳಿಂದ ಶಿವಗಣಂಗಳನ್ನು ತೃಪ್ತಿಪಡಿಸಿ ಆರಾಧನೆ ಮಾಡಿ ಬಲದೇವ ಮಂತ್ರಿಯು ತನ್ನ ಧರ್ಮ ಪತ್ನಿಯೊಡನೆ ಅತ್ಯಂತ ಸಂತೋಷದಿಂದ ಇರುವಷ್ಟರಲ್ಲಿ ಆ ಬಸವರಾಜನು ಶಿವಗಣಗಳ ಪಾದಾಬ್ಜವನ್ನು ತನ್ನ ಶಿರೋಭೂಷಣನನ್ನಾಗಿ ಮಾಡಿದವನಾದನು. ಸ್ಥಿರವಾದ ಶಿವಪೂಜಾವ್ರತವು ಕಂಕಣದಾರವೆನಿಸಿತು. (ಅವನ) ಸ್ವಭಾವ ಸಿದ್ಧವಾದ ಸದ್ಗುಣಗಳೆಂಬ ರತ್ನ ಭೂಷಣಗಳು ಪ್ರಕಾಶಿಸುತ್ತಿದ್ದವು. ಶಿವನಲ್ಲಿಟ್ಟ ನಿಷ್ಠೆಯೆಂಬ ಕಠಾರಿಯು ಹಸ್ತದಲ್ಲಿ ಹಿಡಿಯಲ್ಪಟ್ಟು ಶೋಭಿಸಿತು. ಸಂಸಾರ ಸಂಬಂಧದ ವಿಕಾರವೆಂಬ ತೆರೆಯ ಬಟ್ಟೆಯು ಓರೆಯಾಯಿತು. ಶಿವಶರಣರುಗಳ ದಯಾರಸವೆಂಬ ನೀರಿನ ಧಾರೆಯಿಂದ ಸಹಿತವಾಗಿ ಎರಡನೆಯ ಮದುವೆಯೋ ಎಂಬಂತೆ ಶಿವಭಕ್ತಿಯೆಂಬ ಸ್ತ್ರೀಯನ್ನು ಅತ್ಯಂತ ಪ್ರೀತಿಯಿಂದ ಪರಿಗ್ರಹಿಸಿದನು. ಪುನಃ ಪತ್ನಿಯಾದ ಗಂಗಾಂಬಿಕೆಯೊಡನೆ ಕೂಡಿ, ಶಿವಗಣ ಸಮೂಹವು ಸಂಗಡವೇ ಬರುತ್ತಿರಲು ಪರಮ ವೈಭವದಿಂದ ಕಪ್ಪಡಿ ಸಂಗಮಕ್ಕೆ ಬಂದನು. (ಬಂದು) ದಯಾರಸಕ್ಕೆ ಸಮುದ್ರ ರೂಪನಾದ ತನ್ನ ಗುರುವಾದ ಸಂಗಮೇಶ್ವರನನ್ನು ಕಂಡನು. (ಅವನಿಗೆ) ನಮಸ್ಕರಿಸಿ ಆ ಗುರುವಿನ ಪಾದಪೂಜೆಯನ್ನು ಮಾಡುತ್ತ ಸುಖದಿಂದ ಇರತೊಡಗಿದನು. ಇತ್ತಕಡೆ ಕೆಲವು ವರ್ಷಗಳು ಕಳೆಯಲಾಗಿ—

೧೯. ಅನಂತರ ಅಸದೃಶಬಲಶಾಲಿಯಾದ ಬಲದೇವ ಮಂತ್ರಿಯು ಬಸವೇಶ್ವರನಿಗೆ ತನ್ನ ಮಗಳನ್ನು ಕೊಟ್ಟು ಸಂತೋಷದ ವಾರ್ತೆಯನ್ನು ಈಶ್ವರನಿಗೆ ಬಿನ್ನವಿಸಿಕೊಳ್ಳಲು ಹೋದಹಾಗೆ ಅಸದೃಶವಾದ ಕೈಲಾಸಪದವಿಯನ್ನು ಪಡೆದನು. (ಲಿಂಗೈಕ್ಯನಾದನು)

ಬಲದೇವನೆನ್ನ ಘನಭುಜ
ಬಲದೇವಂ ಪೋದನೆಂದು ಮರುಗುತೆ ಧರಣೀ
ಲಲನಾಪತಿ ಬಿಜ್ಜಳನುಸು
ರೆಲರುಷ್ಣಮನುಗುಳೆ ಸುಯ್ದು ಮಗುಳ್ದಿಂತೆಂದಂ ೨೦

ಇನ್ನೆನ್ನಯ ಸಾಮ್ರಾಜ್ಯ ಸ
ಮುನ್ನತಿ ನಿಷ್ಕಂಟಕತ್ವದಿಂ ನಡೆದಪುದಾ
ರಿನ್ನುತ ಸದ್ಗುಣಬಲಸಂ
ಪನ್ನಂ ಬಲದೇವನನ್ನನಾವನೊ ಧರೆಯೊಳ್ ೨೧

ವ॥ ಎಂದು ಚಿಂತಿಸಿ ಪಳಯಿಪ ಬಿಜ್ಜಳಂಗೆ ಕೆಲದೊಳಿರ್ದ ಕಳಾವಿದರ್ಕೈದಾವರೆಗಳಂ ಮುಗಿದು—

ಅವಧರಿಸೆಮ್ಮ ಬಿನ್ನಪಮನುರ್ವಿಪ ತದ್ಬಲದೇವನಾತ್ಮಸಂ
ಭವೆಯ ವರಂ ಕಳಾನಿಪುಣನುತ್ತಮಕೀರ್ತಿಯುತಂ ಧರಿತ್ರಿಗೊ
ಪ್ಪುವ ಘನಕಪ್ಪಡಿಸ್ಥಲದೊಳೀಶವರಂಬಡೆದಿರ್ದಪಂ ಗುಣಾ
ರ್ಣವನವನಾಗೆ ನಿನ್ನ ಸಚಿವಂ ನಿನಗಾರೆಣೆವರ್ಪರುರ್ವಿಯೊಳ್ ೨೨

ವ॥ ಎಂದು ಬಿನ್ನವಿಸಿ ತನ್ಮಹಿಮೆಯುಂ ಮುಂ[1]ಕೇಳ್ದು ಬಲ್ಲನಪ್ಪುದಱಿಂದವಂದಿರೊಡನಾತನಂ

೨೦. (ಆಗ) ಭೂಕಾಂತೆಗೆ ವಲ್ಲಭನೆನಿಸಿದ ಬಿಜ್ಜಳಮಹಾರಾಜನು ನನ್ನ ಬಲಭುಜ, ದಂತಿರುವ ಬಲದೇವಮಂತ್ರಿಯು (ಕೈಲಾಸಕ್ಕೆ) ಹೋದನೆಂದು ದುಃಖಪಡುತ್ತ, ಬಿಸಿಯುಸಿರನ್ನು ಉಗುಳುತ್ತ ನಿಟ್ಟುಸಿರುಬಿಟ್ಟು ಹೀಗೆ ಹೇಳಿದನು: ೨೧. ಇನ್ನು ಮುಂದೆ ನನ್ನ ಸಾಮ್ರಾಜ್ಯದ ಔನ್ನತ್ಯವು ನಿರ್ವಿಘ್ನವಾಗಿ ಯಾರಿಂದ ನಡೆದೀತು ! ಬಲದೇವ ಮಂತ್ರಿಗೆ ಸದೃಶನಾದ ಶ್ಲಾಘ್ಯವಾದ ಸದ್ಗುಣ, ಶಕ್ತಿ ಇವುಗಳಿಂದ ಕೂಡಿದವನು ಈ ಭೂಮಿಯಲ್ಲಿ ಯಾವನಿರುವನೋ ! ವ॥ ಹೀಗೆಂದು ಚಿಂತಿಸುತ್ತ ಪ್ರಲಾಪಿಸುತ್ತಿದ್ದ ಬಿಜ್ಜಳಮಹಾರಾಜನಿಗೆ ಅಕ್ಕಪಕ್ಕದೊಳಗಿದ್ದ ವಿದ್ವಾಂಸರುಗಳು ತಮ್ಮ ಕರಕಮಲಗಳನ್ನು ಮುಗಿದು—೨೨. ಎಲೈರಾಜನೇ, ನಮ್ಮ ವಿಜ್ಞಾಪನೆಯನ್ನು ಕೇಳು, ಆ ಬಲದೇವಮಂತ್ರಿಯ ಮಗಳ ಗಂಡನಾದ, ವಿದ್ಯಾಕುಶಲನಾದ, ಉತ್ಕೃಷ್ಟ ಯಶಸ್ಸಿನಿಂದ ಕೂಡಿದ, ಸದ್ಗುಣಗಳಿಗೆ ಸಮುದ್ರರೂಪನಾದ ಬಸವೇಶ್ವರನು ಈ ಭೂಮಿಯಲ್ಲಿ ಶೋಭಿಸುವ ಘನವಾದ ಕಪ್ಪಡಿಸಂಗಮ ಸ್ಥಳದಲ್ಲಿ ಈಶ್ವರ ಕಾರುಣ್ಯದಿಂದ ಕೂಡಿ ಇದ್ದಾನೆ, ಅವನು ನಿನ್ನ ಸಚಿವನಾಗಲು ಈ ಭೂಮಿಯಲ್ಲಿ ನಿನಗೆ ಯಾರು ಸಮಾನರಾದಾರು ? ವ॥ ಹೀಗೆಂದು (ಅವರು) ವಿಜ್ಞಾಪಿಸಿ ಕೊಳ್ಳಲಾಗಿ, ಆ ಬಸವಣ್ಣನ ಮಹಿಮೆಯನ್ನು ಈ ಮೊದಲೇ ಕೇಳಿ ತಿಳಿದವ

1 ಮುನ್ನಮೆ (ಅ)

ಕರೆದು ತನ್ನಿಮೆಂದುಸುರಲೊಡನವರ್ ಕಪ್ಪಡಿಗೇಳ್ತಂದು ಗಣಸಭೆಯೊಳಿರ್ದ ಗುಣನಿಧಿ [1]ಬಸವಂಗೆ[1] ಪೊಡಮಟ್ಟು ಬಿಜ್ಜಳನೆಂದುದನೆಲ್ಲಮಂ ಬಿನ್ನಪಂಗೈದವಂ ಕಳುಪಿದ ಮಣಿಭೂಷಣಾ[2]ವಳಿ[2]ಗಳಿನಲಂಕರಿಸಿ ಪಟ್ಟಗಜಮಸ್ತಕನೊಳ್ಮೂರ್ತಿಗೊಳಿಸಿ ಪರಮ ವೈಭವಂ ಮಿಗೆ ನಿಜರಾಜಧಾನಿಯಂ ಪುಗಿಸಿ ಕರೆದು ತರ್ಪಾಗಳ್—

ಆ ವೇಳೆಯೊಳತಿ ಸಂಭ್ರಮಮೆಸೆದಿರೆ
ಪೂವಲಿ ಪುರವೀಥಿಗಳೊಳ್ಪರೆದಿರೆ
ಜಲ್ಲಿಯು ಪಟ್ಟೆಯು ಮುಕುರದ ತೋರಣ-
ಮಲ್ಲಲ್ಲಿಗೆ ನೆಗಳ್ದಿರೆ ಮಣಿಕೀರಣ-
ಗೆಲಸದ ಕುರುಜುಗಳೊಪ್ಪಂಬಡೆದಿರೆ
ಮಳಯಜ ಘುಸೃಣದ ಚಳೆಯಂ ನೆರೆದಿರೆ
ಮುಂಗಡೆ ನಂದಿಧ್ವಜಮೊಲೆವುತ್ತಿರೆ
ಪಿಂಗಡೆ ರಾಜಸುತರ್ಪೆರೆದೇಳ್ತರೆ
ಕೆಲವಲದೊಳ್ಮದಗಜಹಯವಾಹಂ

ನಾದ್ದರಿಂದ ಆ ವಿದ್ವಾಂಸರೊಡನೆ 'ಆ ಬಸವೇಶ್ವರನನ್ನು ಕರೆದುಕೊಂಡು ಬನ್ನಿರಿ' ಎಂದು ಹೇಳಲಾಗಿ ಆ ಕೂಡಲೇ ಅವರುಗಳು ಕಪ್ಪಡಿಸಂಗಮಕ್ಕೆ ಬಂದು (ಅಲ್ಲಿ) ಶಿವಗಣಂಗಳ ಸಭೆಯಲ್ಲಿದ್ದ ಸದ್ಗುಣಗಳ ನಿಧಿಯಾದ ಬಸವೇಶ್ವರನಿಗೆ ನಮಸ್ಕಾರಮಾಡಿ, ಬಿಜ್ಜಳಮಹಾರಾಜನು ಹೇಳಿದ ಮಾತೆಲ್ಲವನ್ನೂ ಬಿನ್ನವಿಸಿ ಕೊಂಡು ಆ ಬಿಜ್ಜಳಮಹಾರಾಜನು ಕಳುಹಿಸಿಕೊಟ್ಟ ರತ್ನಾಭರಣಾದಿಗಳಿಂದ ಬಸವಣ್ಣನನ್ನು ಅಲಂಕಾರಗೊಳಿಸಿ, ಪಟ್ಟದಾನೆಯ ಮೇಲೆ ಕುಳ್ಳಿರಿಸಿ ವಿಶೇಷ ವೈಭವದಿಂದ ಕಲ್ಯಾಣರಾಜಧಾನಿಯನ್ನು ಹೊಗಿಸಿ ಕರೆದುತರುತ್ತಿರುವಾಗ—ಮುಂದಾನಿಲರಗಳೆ :—(ಕಲ್ಯಾಣ ನಗರವು) ಆ ವೇಳೆಯಲ್ಲಿ ಅತಿ ಸಂಭ್ರಮದಿಂದ ಕೂಡಿತ್ತು. ಪಟ್ಟಣದ ಬೀದಿಯಲ್ಲಿ ಅಂಜಲಿಯಿಂದ ಹೂವುಗಳನ್ನು ಎರಚಲಾಗಿತ್ತು. ಅಲ್ಲಲ್ಲಿ ಝಲ್ಲರಿಗಳು, ರೇಷ್ಮೆಬಟ್ಟೆಯ ಅಲಂಕಾರ, ಕನ್ನಡಿಗಳ ತೋರಣಗಳು ಕಟ್ಟಲ್ಪಟ್ಟಿದ್ದವು. ರತ್ನದಲ್ಲಿ (ಕಲಾತ್ಮಕ) ಕೆಲಸ ಮಾಡಿದ ಬುರುಜುಗಳು ಮನೋಹರವಾಗಿದ್ದವು. ಶ್ರೀಗಂಧ, ಕುಂಕುಮಕೇಸರಿಗಳ ಚಳೆಯಿಂದ ಮಾರ್ಗವು ಕೂಡಿತ್ತು. ಮುಂಭಾಗದಲ್ಲಿ ನಂದೀಧ್ವಜವು ಬಳುಕುತ್ತಿತ್ತು (ಕುಣಿದಾಡುತ್ತಿತ್ತು). ಹಿಂಭಾಗದಲ್ಲಿ ರಾಜಕುಮಾರರು ಗುಂಪುಗೂಡಿ ಬರುತ್ತಿದ್ದರು. ಎರಡೂ ಪಕ್ಕಗಳಲ್ಲಿ ಆನೆ ಕುದುರೆಗಳ ವಾಹನಗಳುಳ್ಳ ಶರಣರ ಸಮೂಹವು ಸಂತೋಷಗೊಂಡು ಬರುತ್ತಿತ್ತು.

1 ಬಸವರಾಜಂಗೆ (ಅ)   2 ದಿ (ಚ)

ನಲಿದೇಳ್ತರುತಿರೆ ಶರಣಸಮೂಹಂ
ಮುತ್ತಿನ ಸತ್ತಿಗೆ ಮೊತ್ತಂಜೆತ್ತಿರೆ
ಸುತ್ತಿ ತುರಂಗಿಗಳೊತ್ತರಿಸುತ್ತಿರೆ
ಮುಂದೆಸೆಯೊಳ್ ಭೇರೀಧ್ವನಿ ನಿಮಿರ್ದಿರೆ
ವಂದಿಗಳುಗ್ಘಡಣೆಗಳೊಪ್ಪುತ್ತಿರೆ
ಪಳಹದ ಶಂಖದ ಕಹಳೆಯ ನಿನದಂ-
ಮೊಳಗುತ್ತಿರೆ ದಶದಿಶೆಯೊಳ್ಬಿನದಂ
ಬಡೆದಾಡುವ ನರ್ತಕಿಯರ ವೃಂದಂ
ಗುಡಿ ನಡೆತೋರಣದೋರಣದಂದಂ
ಸೊಗಯಿಪ ತಾಳದ ಮೋಳದ ನಾದಂ
ಬಗೆಗೊಳೆ ಬುಧ ಜಯ ಜಯರವಮಾದಂ
ಬೀಸುವ ಚಾಮರವೀಜನವೊತ್ತಂ
ಸೂಸುವ ಸೀಗುರಿ ಮಿಸುಗಿರೆ ಸುತ್ತಂ
ತುಱುಗಿದ ಪೊಂದಳೆಗಳ ಬಳಿ ನೆಳಲೊಳ್
ನೆಱೆ ಬರ್ಪ ಗಣಂಗಳ ಕಳಕಳದೊಳ್
ವಿನಯಕಲಾಪಂ ತನುಗುಣಲೋಪಂ

ಮುತ್ತಿನ ಛತ್ರಿಗಳು ಗುಂಪು ಗುಂಪಾಗಿದ್ದವು. ಕುದುರೆಯನ್ನೇರಿದ ರಾವುತರು ಸುತ್ತಲೂ ಒತ್ತೊತ್ತಾಗಿ ಬರುತ್ತಿದ್ದರು. ಮುಂಭಾಗದಲ್ಲಿ ನಗಾರಿಯ ಶಬ್ದವು ಅಧಿಕವಾಗಿತ್ತು. ಸ್ತುತಿ ಪಾಠಕರ ಉಗ್ಘಡಣೆಯ ಕೋಲಾಹಲವು ಶೋಭೆಗೊಂಡಿತ್ತು. ತಮ್ಮಟೆ, ಶಂಖ, ಕಹಳೆ, ಕೊಂಬುಗಳ ಧ್ವನಿಯು ಹತ್ತೂ ದಿಕ್ಕುಗಳಲ್ಲಿ ಮೊಳಗುತ್ತಿತ್ತು. ವಿನೋದಗೊಂಡು ನರ್ತಕಿಯರ ಸಮೂಹವು ಕುಣಿಯುತ್ತಿತ್ತು. ಅಂದದಿಂದ ಗುಡಿತೋರಣಗಳು (ಮುಂದೆ ನಡೆಯುತ್ತಿದ್ದವು. ತಾಳ ಮತ್ತು ಮೋಳದವರ ನಾದವು ಸೊಗಸುಗೊಂಡು ನಡೆದಿತ್ತು) ವಿದ್ವಾಂಸರು ಜಯ ಜಯ ಎಂದು ಹೇಳುವ ಧ್ವನಿ ಚೆನ್ನಾಗಿ ಮನಂಬುಗುವಂತಿತ್ತು. ತಂಡತಂಡವಾಗಿ ಚಾಮರ ಮತ್ತು ಬೀಸಣಿಕೆಗಳನ್ನು ಬೀಸುತ್ತಿದ್ದರು. ಪ್ರಕಾಶಿಸುವ ಸೀಗುರಿಗಳು ಸುತ್ತಲೂ ತುಂಬಿದ್ದವು. ಶಿವಗಣಂಗಳು ಕಳಕಳನಾದ ಮಾಡುತ್ತ ಬಂಗಾರದ ಛತ್ರಿಗಳ ನೆಳಲಲ್ಲಿ ಗುಂಪು ಗುಂಪಾಗಿ ಬರುತ್ತಿದ್ದರು. (ಇಂಥ ಸನ್ನಿವೇಶದಲ್ಲಿ) ವಿನಯವೇ ಆಭರಣವಾಗುಳ್ಳವನೂ, ತನುಗುಣಗಳನ್ನು ನಾಶಮಾಡಿದವನೂ, ಶಿವಭಾವಾಪನ್ನಮನಸ್ಸಿನವನೂ, ಭವವೆಂಬ ಅರಣ್ಯಕ್ಕೆ ದಾವಾನಳನೂ, ಶರಣಜನರಲ್ಲಿ ಶ್ರೇಷ್ಠನೂ, ಅನ್ಯಮತಕ್ಕೆ ಭಯಂಕರನೂ, ಶಿವಗಣಂಗಳಿಗೆ ಸಂತೋಷವುಂಟು

ಶಿವಮಯಭಾವಂ ಭವವನದಾವಂ
ಶರಣಲಲಾಮಂ ಪರಮತಭೀಮಂ
ಗಣಕೃತತೋಷಂ ಗುಣಮಣಿಭೂಷಂ
ದುರಿತವಿದೂರಂ ಪರಹಿತಧೀರಂ
ಪ್ರಶಮಿತಮಾರಂ ಪಶುಪಕುಮಾರಂ
ವರ ಬಸವೇಶಂ ಕರುಣಾವೇಶಂ
ಗುರು ಸಂಭ್ರಮದಿಂ ಬರುತೊಪ್ಪಿರ್ದಂ

ವ॥ ಆಗಳ್—

ಮದಹಸ್ತಿಪ್ರಕರಂ ಕುಲಾದ್ರಿಚಯಮೆಂಬಂತೆಯ್ದೆ ಸದ್ವಾಜಿಬೃಂ
ದದ ಹೇಷಾರಸಿತಕ್ಕೆ ಭಾನುರಥದಶ್ವಂ ಬೆರ್ಚೆ ಚಂಚದ್ರಥೌ
ಘದ ಚೀತ್ಕಾರರವಂ ದಿಶಾವಿವರಮಂ ಪೂರೈಸೆ ಭೂಪಾಲನೊ
ಲ್ದಿದಿರ್ವಂದಂ ಭಟರಾಜಿ ಸಂದಣಿಸೆ ಪೂರ್ಣೋದ್ಯತ್ಸಮುತ್ಸಾಹದಿಂ ೨೩

ವ॥ ಅಂತಿದಿರ್ಗೊಂಡು ಬಿಜ್ಜಳನೃಪಂ ಬಸವರಾಜನಂ ಕಣ್ದುಂಬಿ ನೋಡಿ, ಮನದೊಳುತ್ಸವಿಸಿ ಕೂರ್ಮೆಯಿಂ ಕೊಂಡಾಡಿ ಮೃದುಮಧುರ ಸಲ್ಲಾಪದಿಂ ಯಥೋಚಿತ ವಿನಯಮಂ ಮೆಱೆದು ನಿಜಮಂದಿರಕ್ಕೆ ಕೈಗೊಟ್ಟು ಕರೆದೊಯ್ದು ಮಣಿಪೀಠದೊಳ್ಮೂರ್ಕಿಗೊಳಿಸಿ ತಾನುಂ ಸಮುಚಿತಾಸನಾರೂಢನಾಗಿ ಸುರೇಂದ್ರವೈಭವಂ ಮಿಗೆ ನರೇಂದ್ರನೊಡ್ಡೋಲಗಂಗೊಟ್ಟೊಪ್ಪುತ್ತಮಿರ್ಪನ್ನೆಗಂ—

ಮಾಡುವವನೂ, ಗುಣವೆಂಬ ರತ್ನಗಳಿಂದ ಅಲಂಕಾರಗೊಂಡವನೂ, ಪಾಪಗಳಿಂದ ದೂರನಾದವನೂ, ಅನ್ಯರ ಹಿತವನ್ನುಮಾಡುವಿಕೆಯಲ್ಲಿ ಸಮರ್ಥನೂ, ಮನ್ಮಥನ ಬಾಧೆಯನ್ನು ನಾಶಗೊಳಿಸಿಕೊಂಡವನೂ, ಪರಮೇಶ್ವರನ ಪುತ್ರನೂ, ದಯಾರಸ ಭರಿತನೂ ಆದ ಬಸವೇಶ್ವರನು ಬರುತ್ತ ಸಂಭ್ರಮದಿಂದ ಕೂಡಿದವನಾಗಿದ್ದನು. ವ॥ ಆಗ ೨೩. ಮದದಿಂದ ಕೂಡಿದ ಆನೆಗಳ ಗುಂಪು ಕುಲಾಚಲಪರ್ವತಗಳೋ ಎಂಬಂತೆ ಬರುತ್ತಿದ್ದವು. ಶ್ರೇಷ್ಠವಾದ ಕುದುರೆಗಳ ಹೇಷಾರವಕ್ಕೆ ಸೂರ್ಯನರಥಕ್ಕೆ ಕಟ್ಟಿದ ಕುದುರೆಗಳು ಬೆಚ್ಚುತ್ತಿದ್ದವು. ಹೊಳೆಯುತ್ತಿರುವ ರಥಗಳ ಸಮೂಹದ ಚೀತ್ಕಾರ ದಶದಿಕ್ಕುಗಳ ಸಂದನ್ನೂ ತುಂಬಿತ್ತು. ಶೂರರ ಸಮೂಹದಿಂದ ಕೂಡಿ ವಿಶೇಷವಾದ ಪೂರ್ಣ ಉತ್ಸಾಹದಿಂದ ಬಿಜ್ಜಳಮಹಾರಾಜನು ಎದುರುಗೊಂಡನು. ವ॥ ಹೀಗೆ ಎದುರುಗೊಂಡು, ಬಿಜ್ಜಳ ಮಹಾರಾಜನು ಬಸವಣ್ಣನನ್ನು ಕಣ್ತುಂಬ ನೋಡಿ, ಮನಸ್ಸಿನಲ್ಲಿ ಉತ್ಸಾಹಗೊಂಡವನಾದನು. ಪ್ರೀತಿಯಿಂದ ಕೊಂಡಾಡುತ್ತ, ಮೃದುವೂ ಮಧುರವೂ ಆದ ಯಥೋಚಿತದ ಮಾತುಗಳಿಂದ ತನ್ನ ವಿನಯವನ್ನು ಪ್ರಕಟಗೊಳಿಸಿದನು. ತನ್ನ ಅರಮನೆಗೆ ಕರೆದುಕೊಂಡು ಹೋಗಿ, ರತ್ನ ಖಚಿತವಾದ ಆಸನದಲ್ಲಿ ಕುಳ್ಳಿರಿಸಿದನು ; ತಾನು ಯೋಗ್ಯವಾದ ಆಸನವೊಂದರಲ್ಲಿ ಕುಳಿತುಕೊಂಡು ದೇವೇಂದ್ರನ ವೈಭವಕ್ಕೂ ಮಿಗಿಲಾದ ವೈಭವವನ್ನು ಹೊಂದಿದ ಸಭೆಯನ್ನು ಮಾಡಿ

ಹರಲಿಖಿತ ಲಿಪಿ ವಿರಾಜಿತ
ಮರಸನ ಸಭೆಯುಲ್ಲಿ ಬಿಳ್ದುದಾಕಸ್ಮಿಕದಿಃ
ಸುರಮಾರ್ಗದತ್ತಣಿಂ ಭಾ
ಸುರಲೇಖನಮೊಂದು ಶಂಕರಪ್ರೇರಣೆಯಿಂ ೨೪

ವ॥ ಆ ಲೇಖನಮನರಸನಾಶ್ಚರ್ಯಮಾನಸಂ ಕಂಡು ನಿಜಕರಾಗ್ರದಿಂ ನೆಗಪಿ ತಗೆದೋದ ಲುಜ್ಜುಗಿಸಿ ನೋಳ್ಪಿನಮಾ ಲಿಪಿಯದೃಷ್ಟಪೂರ್ವಮಶಕ್ಯಮಾಗೆ ಕೆಲದೊಳಿರ್ದ ನಾನಾ ದೇಶೀಯ ಬಹುಲಿಪಿವಿಚಕ್ಷಣರಾದ ಕರಣಿಕರಂ ಕರೆದವಂದಿರ ಕರಾಗ್ರದೊಳೀಯಲೊಡನಾಲೇಖನಮನವರು ಮೋದಲಱಿಯದೆ ಬೆಱಗಾಗಿ ಬೆಬ್ಬಳಿವೋಗಿ—

ಉರಗಪತಿ ವಿಧಿ ಬೃಹಸ್ಪತಿ
ಹರಿ ಗುಹ ಗಜವದನರಲ್ಲದಿದನೋದಲ್ಬ
ಲ್ಲರುಮೊಳರೆ ಧರೆಯೊಳಿದು ಶಾಂ
ಕರಲಿಪಿ ತಿಳಿದೋದಲೆಮಗೆ ಸಾಧ್ಯಮೆ ನೃಪತೀ ೨೫

ವ॥ ಎಂದರಸನ ಮುಂಗಡೆಯೊಳಿರಿಸಲೊಡನೀ ಲೇಖನಮನಾವನೋದುವನವಂಗೆ ಸರ್ವಾಧ್ಯಕ್ಷತೆ ಯನಿತ್ತಪೆಂ ನನ್ನಿಯೆಂದಿಳಾಧಿಪತಿಯೆಂಬುದುಮಾಗಳಾ ಶಿವಲಿಖಿತ ಪತ್ರಿಕೆಯಂ ಬಸವರಾಜ ನೋಜೆಯಿಂ ತೆಗೆದು ಶಿರದೊಳಿಟ್ಟು ಮಣಿದು—

ಶೋಭಿಸುತ್ತಿರುವಷ್ಟರಲ್ಲಿ—೨೪. ಈಶ್ವರನಿಂದ ಬರೆಯಲ್ಪಟ್ಟ ಬರವಣಿಗೆಯಿಂದ ಪ್ರಕಾಶಿಸುವ ಒಂದು ಮನೋಹರವಾದ ಪತ್ರವು ಶಿವಾನುಗ್ರಹದಿಂದ ಅಕಸ್ಮಾತ್ತಾಗಿ ಆಕಾಶದತ್ತಣಿಂದ ಆ ರಾಜಸಭೆಯಲ್ಲಿ ಬಿದ್ದಿತು. ವ॥ ಆ ಲೇಖನವನ್ನು ಅರಸನಾದ ಬಿಜ್ಜಳನು ಆಶ್ಚರ್ಯದಿಂದ ಕೂಡಿದ ಮನಸ್ಸುಳ್ಳವನಾಗಿ ನೋಡಿ, ತನ್ನ ಕೈಗಳಿಂದಲೇ ಅದನ್ನು ಎತ್ತಿಕೊಂಡು ತೆರೆದು ಓದಲು ಮೊದಲುಮಾಡಿ ನೋಡುತ್ತಿದ್ದಾಗ ಈ ಪೂರ್ವದಲ್ಲಿ ಎಂದೂ ಕಾಣದ ಲಿಪಿಯಿಂದ ಕೂಡಿದ ಅದರ ಅರ್ಥವನ್ನು ತಿಳಿಯಲಶಕ್ಯ ನಾದನು. ಆಗ ಪಕ್ಕದಲ್ಲಿದ್ದ ಅನೇಕ ದೇಶದ ಭಾಷೆಗಳನ್ನು ಓದುವುದರಲ್ಲಿ ತಜ್ಞರಾದ ಕರಣಿಕರುಗಳನ್ನು ಕರೆದು ಅವರ ಕೈಗೆ ಕೊಟ್ಟನು. ಅವರು ಆ ಕೂಡಲೆ ಆ ಲೇಖನ ವನ್ನು ಓದುವುದಕ್ಕೆ ತಿಳಿಯದವರಾಗಿ, ಬೆರಗುಗೊಂಡು ಭಯದಿಂದ ಸ್ತಂಭೀಭೂತ ರಾದರು. ೨೫. ಮಹಾರಾಜನೇ ಆದಿಶೇಷ, ಬ್ರಹ್ಮ, ಬೃಹಸ್ಪತಿ, ವಿಷ್ಣು, ಷಣ್ಮುಖ, ಗಣಪತಿ, ಇವರುಗಳು ಹೊರತಾಗಿ ಈ ಲೇಖನವನ್ನು ಓದುವವರು ಈ ಭೂಮಂಡಲ ದಲ್ಲಿ ಯಾರಾದರೂ ಇದ್ದಾರೆಯೆ ? ಇದು (ಸಾಕ್ಷಾತ್) ಶಂಕರನ ಬರವಣಿಗೆ. ಇದನ್ನು ತಿಳಿದು ಓದುವುದು ನಮ್ಮಿಂದ ಸಾಧ್ಯವಿಲ್ಲ. ವ॥ ಹೀಗೆಂದು ಅರಸನ ಮುಂದೆಯೇ ಒಯ್ದು ಆ ಲಿಪಿಯನ್ನು ಇಟ್ಟರು. (ಅರಸನು) ಈ ಲಿಪಿಯನ್ನು ಯಾರು ಓದುವರೋ ಅವರಿಗೆ ನನ್ನ ಸರ್ವಾಧಿಕಾರವನ್ನು ಕೊಡುತ್ತೇನೆ, ಇದು ಸತ್ಯವೆಂದು ಆ ಅರಸನು ಹೇಳಿದನು. ಆಗ ಆ ಶಿವನಿಂದ ಬರೆಯಲ್ಪಟ್ಟ ಲೇಖನವನ್ನು ಬಸವೇಶ್ವರನು ಶ್ರದ್ಧೆ

ಗಳಗಳನೋದಿದಂ ಕ್ಷಣದೊಳಾ ಲಿಪಿಯಂ ಸಭೆ ಕೇಳ್ದು ವಿಸ್ಮಯಂ
ಗೊಳೆ ನೃಪನೀಕ್ಷಿಸುತ್ತೆ ಪಿರಿದುಂ ಪೊಗಳುತ್ತಿರೆ ಪತ್ರಿಕಾರ್ಥಮಂ
ತಿಳಿದು ನರೇಂದ್ರ ನಿನ್ನ ಹರಿಪೀಠದಧಸ್ಸ್ಥಳದೊಳ್ನಿಧಾನಮು
ಜ್ವಳತರಮಿರ್ಕುಮೆಂದೊರೆದಗುಳ್ಚಿದನುತ್ಸವದಿಂ ವೃಷಾಧಿಪಂ ೨೬

ವ॥ ಅಂತಗುಳ್ಚಿ ಮುಚ್ಚುಳಂ ಬಿರ್ಚೆ ನರೇಂದ್ರಾದಿಗಳ್[1] ನೋಡುತ್ತಮಿರೆ—

ಕ್ಷಣರುಚಿ ಚಿರರುಚಿಯಕ್ಕೆಂ
ದಣೆಯುರಮುಜನಿಟ್ಟನೆನೆ ತಮೋಭಯದೆ ನಭೋ
ಮಣಿ ನಿಜರುಚಿಯಂ ಪೂಳ್ದವೊ
ಲೆಣೆಗೆಟ್ಟ ಸುವರ್ಣರಾಶಿಯೇಂ ಸೊಗಯಿಸಿತೋ ೨೭

ಒಳಗಮರ್ದ ಪೊನ್ನ ರಾಶಿಯ
ನಿಳೆ ತಳೆದು [2]ಹಿರಣ್ಯ[2]ಗರ್ಭೆಯೆನಿಸಿದಳಾಗಳ್
ನಳಿನಭವನಾತ್ಮದೇವತೆ
ಕುಳಮಾಗೆ ತದೀಯನಾಮಮಂ ತಾಳ್ದಿದವೋಲ್ ೨೮

ಯಿಂದ ಕೈಗೆತ್ತಿಕೊಂಡು ತಲೆಯ ಮೇಲಿಟ್ಟು ನಮಸ್ಕರಿಸಿ—೨೬. ಬಸವೇಶ್ವರನು (ಆ) ಕ್ಷಣದಲ್ಲಿಯೇ ಆ ಲಿಪಿಯನ್ನು ತಡಮಾಡದೆ ಸಭೆಯಲ್ಲಿ ಓದಿದನು. ಸಭಾಜನರೆಲ್ಲ ಕೇಳಿ ಆಶ್ಚರ್ಯ ಪಡುತ್ತಿದ್ದರು. ರಾಜನು ನೋಡಿ ವಿಶೇಷವಾಗಿ ಹೊಗಳತೊಡಗಿದನು. (ಬಸವೇಶ್ವರನು) ಆ ಲೇಖನದ ಅಭಿಪ್ರಾಯವನ್ನು ತಿಳಿದು, 'ರಾಜನೇ, ನಿನ್ನ ಈ ಸಿಂಹಾಸನದ ತಳ ಭಾಗದಲ್ಲಿ ಅತಿ ಪ್ರಕಾಶಮಾನವಾದ ನಿಕ್ಷೇಪವಿದೆ', ಎಂದು ಹೇಳಿ ಉತ್ಸಾಹದಿಂದ (ಆ ಭಾಗವನ್ನು ಅಗೆಸಿದನು. ವ॥ ಹೀಗೆ ಅಗೆಸಿ ಮೇಲ್ಭಾಗದ ಮುಚ್ಚಳವನ್ನು ಒಡೆದು ಎಲ್ಲ ನರೇಂದ್ರರೇ ಮೊದಲಾದವರು ನೋಡುತ್ತಿದ್ದಂತೆಯೇ —೨೭. ಮಿಂಚು ಬಹು ಕಾಲವುಳ್ಳದ್ದಾಗಿರಲಿ ಎಂದು ಬ್ರಹ್ಮನು ಕ್ರಮಪಡಿಸಿ ಇಟ್ಟಿರುವನೋ ಎನ್ನುವಂತೆ, ಸೂರ್ಯನು ಕತ್ತಲೆಯ ಹೆದರಿಕೆಯಿಂದ (ಕೇತುಗ್ರಹದ ಹೆದರಿಕೆಯಿಂದ) ನನ್ನ ಪ್ರಕಾಶವನ್ನು ಹುಗಿದಿಟ್ಟಿರುವನೋ ಎನ್ನುವಂತೆ ಲೆಕ್ಕವಿಲ್ಲದ ಬಂಗಾರದ ರಾಶಿಯು ಏನು ಸೊಗಸುಗೊಂಡು ಇತ್ತೋ! ೨೮. ತನ್ನೊಳಗೆ ಸೇರಿರುವ ಸುವರ್ಣದ ರಾಶಿಯನ್ನು ಭೂಮಿಯು ಹೊಂದಿದ ಕಾರಣವಾಗಿ (ಅದು) ಚಿನ್ನವೇ ಹೊಟ್ಟೆಯೊಳಗೆ ಉಳ್ಳವಳು ಎನಿಸಿದಳು. ಬ್ರಹ್ಮನು ತನ್ನ ಆತ್ಮದೇವತೆಯು ವಂಶಾನುಗತವಾಗಲು ಆ ಹಿರಣ್ಯ ಗರ್ಭೆಯು ಹೆಸರನ್ನು ಹೊಂದಿದ ಹಾಗೆ.

1 ಳೆ(ದ) 2 ಸುವರ್ಣ(ಅ)

ವಿತ್ತಮಿದು ಭೂಪ ಚಾಳೋ[1]
ಕ್ಯೋತ್ತಮಕುಲದರಸರಿಟ್ಟ ನಿಧಿ ಗಣನೆಯೊಳೆಂ
ಬತ್ತೆಂಟು ಕೋಟಿ ಮಿಸುಪುದೆ
ನುತ್ತಂ ತೋಱಿಸಿದನವನಿಪಂಗೆ ವೃಷೇಂದ್ರಂ ೨೯

ವ॥ ಆಗಳಾ ಪೊಂಗಳ್ ವೃಷೇಂದ್ರಕರಸ್ಪರ್ಶಪ್ರಭಾವದಿಂ ದ್ವಿಗುಣಿತಮಾಗಿ ಪೆರ್ಚೆ ನೃಪಂ ಕಂಡು ಸಾದ್ಭುತಾಂತಃಕರಣಂ ನನೆಕೊನೆವೋಗಿ ರಾಗಿಸಿ ಮಹಾಪುರುಷನೀ ಬಸವಂ ಬರೆವರೆ ಮುನ್ನಮೆಮಗೆ ಸಂಪದಂ ಸಮನಿಸಿದುದೆಂದು ನಿಜಪಾರ್ಶ್ವವರ್ತಿ ಮಂತ್ರಿಮಂಡಲಿಕರೊಳ್ಕೊಂಡಾಡಿ ಬಸವರಾಜನಂ ನೋಡಿ ದೇವ, ನೀನಪ್ಪೊಡೆ ಜಗದ್ಧಿತಾರ್ಥಮವತರಿಸಿದ ಮಹಾಮಹಿಮಂ ಸಂಗಮೇಶ್ವರ ಸಾಕ್ಷಾತ್ಕಾರಂಬಡೆದ ಮಹಾಪುರುಷಂ ಪುರಾಕೃತ ಮದೀಯ ಪುಣ್ಯಪ್ರಭಾವದಿಂ ಲಬ್ಧನಾದೆಯುಂತಱಿಂದೆನ್ನ ಸಾಮ್ರಾಜ್ಯಕ್ಕೆ ನಿಷ್ಕಂಟಕಮಪ್ಪಂತೆ ದಂಡಾಧಿಪತ್ಯಮಂ ಕೆಯ್ಕೊಳ್ವು ದೆಂದನುನಯಂ ಮಿಗೆ ನುಡಿದೊಡಂಬಡಿಸಿ ಪರಮ ಸಂಭ್ರಮದಿಂ ದಂಡನಾಥಪಟ್ಟಮಂ ಕಟ್ಟಲೊಡನೆ—

ವಸುಧಾಕಾಂತೆಗೆ ಪೊಸ ಸಂ
ತಸನೊಗೆದುದು ಶರಣತತಿ ಮುದಂದಳೆದುದು ಬೆಳ್

(ಹಿರಣ್ಯಗರ್ಭ ಎನಿಸಿದನು). ೨೯. ಮಹಾರಾಜ, ಪ್ರಕಾಶಿಸುವ ಈ ಐಶ್ವರ್ಯವು ಉತ್ತಮಕುಲದ ಚಾಳುಕ್ಯ ಅರಸರಿಟ್ಟ (ಗುಪ್ತ) ನಿಧಿ. ಎಣಿಕೆಯಲ್ಲಿ ಎಂಬತ್ತು ಕೋಟಿ ಎಂದು ವೃಷಭೇಂದ್ರನು ಆ ಬಿಜ್ಜಳ ಮಹಾರಾಜನಿಗೆ ತೋರಿಸಿದನು. ವ॥ ಆಗ ಆ ಹೊನ್ನುಗಳೆಲ್ಲ ಬಸವಣ್ಣನು ತನ್ನ ಕೈಯಿಂದ ಮುಟ್ಟಿದುದರ ಫಲವಾಗಿ ದ್ವಿಗುಣಿತ (ಎರಡರಷ್ಟು) ವಾಗಿ ಹೆಚ್ಚಿತು. (ಅದನ್ನು) ಅರಸನು ಕಂಡು ಅದ್ಭುತವೆಂದುಕೊಂಡು ಅಂತಃಕರಣ ಪೂರ್ವಕವಾಗಿ ಪ್ರೀತಿಗೊಂಡು ಈ ಬಸವಣ್ಣನು ಮಹಾಪುರುಷನು, ಇವನ ಮೊದಲ ಬರುವಿಕೆಯಿಂದಲೇ ನಮಗೆ ಸಂಪತ್ತು ಲಭ್ಯ ವಾಯಿತು ಎನ್ನುತ್ತ ತನ್ನ ಪಾರ್ಶ್ವದಲ್ಲಿದ್ದ ಮಂತ್ರಿ ಮತ್ತು ಮಾಂಡಳಿಕರೆದುರು ಕೊಂಡಾಡಿ ಬಸವರಾಜನನ್ನು ನೋಡಿ, 'ದೇವ, ನೀನಾದರೋ ಜಗತ್ತಿನ ಹಿತಾರ್ಥ ಕ್ಕೋಸುಗ ಅವತಾರವೆತ್ತಿದ ಮಹಾಮಹಿಮನಾಗಿದ್ದೀಯೆ. ಸಂಗಮೇಶ್ವರನ ಸಾಕ್ಷಾತ್ಕಾರ ಪಡೆದ ಮಹಾಪುರುಷನು. ಪೂರ್ವಜನ್ಮದಲ್ಲಿ ನಾನು ಮಾಡಿದ ಸುಕೃತದ ಪ್ರಭಾವದಿಂದ (ನನಗೆ) ಸಿಕ್ಕಿದ್ದೀಯೆ. ಆದ್ದರಿಂದ ನನ್ನ ಸಾಮ್ರಾಜ್ಯವು ನಿಷ್ಕಂಟಕವಾಗುವ ಹಾಗೆ ದಂಡಾಧಿಪತ್ಯ ಸ್ಥಾನವನ್ನು ಸ್ವೀಕಾರಮಾಡಬೇಕು' ಎಂದು ವಿಶೇಷ ವಿನಯದಿಂದ ಕೇಳಿ ಒಪ್ಪಿಸಿ ಅತ್ಯಂತ ಸಂಭ್ರಮದಿಂದ ದಂಡನಾಥಪಟ್ಟವನ್ನು ಕಟ್ಟಿದನು. ೩೦. (ಬಸವಣ್ಣನು ದಂಡಾಧಿಪತ್ಯವನ್ನು ಸ್ವೀಕರಿಸಿದ ಕಾರಣವಾಗಿ) ಭೂದೇವಿಗೆ ನೂತನ

1 ಣೋ(ಚ, ಮ, ಜ, ತ) ಣೂ(ಗ), ಣು(ದ)

ಜಸಮೆಣ್ದೆಸೆವರಿದುದು ಖಲ
ವಿಸರಂ ಕೊಱಗಿದುದು ವಿಬುಧರುತ್ಸವಮಾಂತರ್ ೩೦

ವ॥ ಮತ್ತಮಾಗಳರಸಂ ನಿಜಸಾಮ್ರಾಜ್ಯಭಾರಮನಪ್ಪುಕೆ[1]ಯ್ಸ[1]ಲಿಂತೆಂದಂ—

ಘನದಾನದ್ವಿಪರಾಜಿ ಸಪ್ತಶತಿಯಿರ್ಕುಂ ಸತ್ವಸಲ್ಲಕ್ಷಣಾಂ
ಗನಿಯುಕ್ತಾತಿಜವಾಶ್ವವೃಂದಮಿದು ಪನ್ನಿರ್ಚ್ಛಾಸಿರಂ ದಂಡಿಯೊ
ಳ್ಮೆನೆದೋರ್ಪಾಳ್ಗಳ ಶ್ರೇಣಿ ಪನ್ನೆರಡು ಲಕ್ಷಂ ದುರ್ಮದಾರಾತಿ ರಾ
ಜನಿಕಾಯಾಜಿತದರ್ಗವರ್ಗಮೆ ಶತಂ ಕಲ್ಯಾಣಮೀ ಪಟ್ಟಣಂ ೩೧

ಮೂವತ್ತುಕೋಟಿ ಪೊಂಗಳ್
ಭಾವಿಸುವೊಡನಂತಕೋಟಿ ಧಾನ್ಯೋತ್ಕರದಿಂ
ತೀವಿರ್ದ ರಾಶಿ ಲಕ್ಷಂ
ಭೂವಿನುತಾನರ್ಘ್ಯ ದಿವ್ಯಮಣಿಭರಣಂಗಳ್ ೩೨

ಇಳೆಗಧಿಕರೆನಿಪ ಸತ್ವಾ
ಮಳಮತಿಗಳ್ ಸತ್ಕುಲಕ್ರಮಾಗತರತ್ಯು
ಜ್ವಳ ಭಾಂಡಾಗಾರಸ್ಥಿತಿ
ಗಳವಟ್ಟಧಿಕಾರಿ ಮಂತ್ರಿಗಳ್ ಪನ್ನಿರ್ವರ್ ೩೩

ಸಂತೋಷವುಂಟಾಯಿತು. ಶರಣಜನ ಸಮೂಹವು ಆನಂದಗೊಂಡಿತು. ಶುಭ್ರ ಯಶಸ್ಸು ಎಂಟು ದಿಕ್ಕಿಗೂ ಪ್ರಸಾರಗೊಂಡಿತು. ದುಷ್ಟರ ಸಮೂಹ ಕೊರಗಿತು. ವಿದ್ವಾಂಸರು ಉತ್ಸಾಹವನ್ನು ಹೊಂದಿದರು. ವ॥ ಮತ್ತೆ ಆಗ ಆ ಅರಸನು ತನ್ನ ಸಾಮ್ರಾಜ್ಯಭಾರವನ್ನು ಬಸವೇಶ್ವರನು ಅಂಗೀಕರಿಸುವಂತೆ ಮಾಡಲು ಹೀಗೆ ಹೇಳಿದನು. ೩೧. ಶ್ರೇಷ್ಠವಾದ ಮದೋನ್ಮತ್ತ ಆನೆಗಳ ಸಮೂಹ ಏಳುನೂರು ; ಬಲ, ಸಲ್ಲಕ್ಷಣ, ದೇಹದಾರ್ಢ್ಯ ಮುಂತಾದ ಲಕ್ಷಣಗಳಿಂದ ಕೂಡಿ ಅತ್ಯಂತ ವೇಗದಿಂದ ಓಡಬಲ್ಲ ಕುದುರೆಗಳ ಗುಂಪು ಇದು ಹನ್ನೆರಡು ಸಾವಿರ ; ಯುದ್ಧರಂಗದಲ್ಲಿ ಶೌರ್ಯ ಪ್ರಕಟಮಾಡಬಲ್ಲ ಕಾಲಾಳುಗಳ ಗುಂಪು ಹನ್ನೆರಡು ಲಕ್ಷ ; ದುಷ್ಟ ಗರ್ವದಿಂದ ಕೂಡಿದ ಶತ್ರುರಾಜರ ಸಮೂಹದಿಂದ ಜಯಿಸಲಸಾಧ್ಯವಾದ ಕೋಟೆಗಳ ಸಮೂಹವೇ ನೂರು. ಈ ಪಟ್ಟಣವು ಕಲ್ಯಾಣಕಾರಕವಾದುದು. [ಕಲ್ಯಾಣವೆಂಬ ಹೆಸರಿನ ಈ ಪಟ್ಟಣವು ಕಲ್ಯಾಣವನ್ನುಂಟು ಮಾಡುವಂತಹದು ಎಂದು ಭಾವ] ೩೨. ಮೂವತ್ತುಕೋಟಿ ಚಿನ್ನದ ನಾಣ್ಯಗಳು (ಭಾಂಡಾಗಾರದಲ್ಲಿ ಇವೆ), ವಿಚಾರಮಾಡಿ ನೋಡಿದರೆ ಅನಂತಕೋಟಿ ಶ್ರೇಷ್ಠಧನದಿಂದ ತುಂಬಿದ ರಾಶಿ (ಇದೆ). ಭೂಲೋಕದ ಜನರಿಂದ ಶ್ಲಾಘಿಸಲ್ಪಡುವ ಅಮೂಲ್ಯವಾದ ಶ್ರೇಷ್ಠರತ್ನಾಭರಣಗಳು ಲಕ್ಷ (ಸಂಖ್ಯೆಯಲ್ಲಿವೆ). ೩೩. ಭೂಮಿಯಲ್ಲಿ ಶ್ರೇಷ್ಠರೂ, ಸತ್ವಶಾಲಿಗಳಾದ ಶ್ರೇಷ್ಠ ಬುದ್ಧಿವಂತರೂ, ಸತ್ಕುಲದ ಪರಂಪರೆಯಲ್ಲಿ ಬಂದಿರು

1 ಗೊಳಿಸ (ಮ, ಮು, ಜ, ಗ)

ಎನಗುಳ್ಳೀ ಸರ್ವಸ್ವಮ
ನನುನಯದಿಂ ನಿನ್ನ ಕರದೊಳಿತ್ತೆಂ ಬಲದೇ
ವನ ಮಾಳ್ಕೆಯಿಂದೆ ಪಾಲಿಪು
ದನವರತಂ ಬಸವ ಮಾಳ್ಪುದೆನ್ನಭಿಮತಮಂ ೩೪

ವ॥ ಎಂದೆಲ್ಲಮನೊಚ್ಚತವೊಪ್ಪುಗೊಟ್ಟತಿ ಪ್ರೇಮಂ ಮಿಗೆ ಸುವಸನ ಧನಕನಕಮಣಿ ಭೂಷಣಂಗಳನಗಣಿತಂಗಳಂ ಸಮರ್ಪಿಸುತ್ತೆನ್ನನಾ[1]ಗಳುಂ[1] ಪರಿಪಾಲಿಪುದೆಂದ ನರೇಂದ್ರಂಗೆ ವೃಷೇಂದ್ರ ನಿಂತೆಂದಂ—

ಭುವನಾವಳಿಯುಂ ಪಾಲಿಪ
ಶಿವಂಗೆ ನೃಪ ನಿನ್ನನೊರ್ವನಂ ಪೊರೆವುದು ಭಾ
ರವೆ ಭಯಭಕ್ತಿಯೊಳೊಂದಿರು
ಶಿವಭಕ್ತರೊಳೊಲ್ದು ನಿನ್ನನಭವಂ ಪೊರೆವಂ ೩೫

ಕಡಲಂ ಪೀರ್ವರಡರ್ತು ತುತ್ತಿಡುವರುಗ್ರೌರ್ವಾಗ್ನಿಯಂ ಪಾಯ್ದು ಪೊ
ಯ್ದೊಡೆವರ್ಭೂರಿ ಕುಲಾಚಲಂಗಳನಿಳಾಕಾಶಂಗಳಃ ಪಲ್ಲಟಂ
ಬಡಿಪರ್ಲೆಕ್ಕಿಸರಚ್ಯುತಾಬ್ಜಭವ ದೇವೇಂದ್ರಾದಿ ದೇವರ್ಕಳಂ
ಮೃಡಭಕ್ತರ್ ಪೃಥುಶಕ್ತಿಯುಕ್ತರವರೊಳ್ ನೀಂ ಗರ್ವಮಂ ಮಾಡದಿರ್ ೩೬

ಮವರೂ ಆದ ಅತ್ಯುಜ್ವಲವಾದ ಈ (ನಮ್ಮ) ಭಾಂಡಾರದಲ್ಲಿರುವುದಕ್ಕೆ ಯೋಗ್ಯವಾದ ಮಂತ್ರಿಗಳು (ಅಧಿಕಾರಿಗಳು) ಹನ್ನೆರಡು ಜನರಿದ್ದಾರೆ. ೩೪. ಬಸವಣ್ಣ, ನನಗಿರುವ ಈ ಪೂರ್ವದಲ್ಲಿ ಹೇಳಿದ ಸಕಲವಸ್ತುಗಳನ್ನೂ, ಪ್ರೀತಿಯಿಂದ ನಿನ್ನ ಕೈಗೆ ಕೊಟ್ಟಿದ್ದೇನೆ. ಬಲದೇವ ಮಂತ್ರಿಗಳ ರೀತಿಯಂತೆ ಯಾವಾಗಲೂ ಪಾಲನೆ ಮಾಡಿಕೊಂಡು (ರಾಜ್ಯ ವನ್ನು ಪಾಲಿಸಿಕೊಂಡು), ನನ್ನ ಇಷ್ಟಾರ್ಥವನ್ನು ನಡೆಯಿಸಿಕೊಡುವುದು. ವ॥ ಹೀಗೆಂದು ಹೇಳಿ ಎಲ್ಲವನ್ನೂ ಚೆನ್ನಾಗಿ ಒಪ್ಪಿಸಿಕೊಟ್ಟು, ವಿಶೇಷವಾದ ಪ್ರೀತಿಯಿಂದ ಎಣಿಸಲ ಶಕ್ಯವಾದ ಒಳ್ಳೆಯ ಬಟ್ಟೆ, ದ್ರವ್ಯ, ಬಂಗಾರ, ರತ್ನಾಭರಣಗಳನ್ನು ಸಮರ್ಪಣೆ ಮಾಡಿ, ನನ್ನನ್ನು ಯಾವಾಗಲೂ ಪಾಲಿಸಬೇಕೆಂದು ಹೇಳಿದ ಶ್ರೇಷ್ಠನಾದ ಅರಸನಿಗೆ, ವೃಷಭೇಂದ್ರನು ಹೀಗೆ ಹೇಳಿದನು. ೩೫. 'ರಾಜನೇ ಸಮಸ್ತಲೋಕಗಳನ್ನು ಪರಿ ಪಾಲಿಸುವ ಶಿವನಿಗೆ ನಿನ್ನೊಬ್ಬನನ್ನು ಸಂರಕ್ಷಿಸುವುದು ಭಾರವಾದೀತೇ ! ಶಿವಭಕ್ತರ ವಿಷಯದಲ್ಲಿ ಭಯಭಕ್ತಿಯಿಂದ ವರ್ತನೆಮಾಡಿಕೊಂಡು ಇರು. ಶಿವನು ರಕ್ಷಿಸುತ್ತಾನೆ' (ಎಂದನು). ೩೬. ಅಧಿಕ ಶಕ್ತಿಸಂಪನ್ನರಾದ ಶಿವಭಕ್ತರು (ಮನಸ್ಸು ಮಾಡಿದರೆ) ಸಮುದ್ರವನ್ನು ಕುಡಿಯಬಲ್ಲರು ; ಭಯಂಕರವಾದ ಬಡಬಾನಲವನ್ನೇ ಸೇರಿಸಿ ತುತ್ತು ಮಾಡಿಬಿಡುವವರು ; ದೊಡ್ಡ ದೊಡ್ಡ ಸಪ್ತಕುಲಾಚಲ ಪರ್ವತಗಳನ್ನು ಮೇಲೆಬಿದ್ದು ಹೊಡೆದು ಚೂರುಗೊಳಿಸುವವರು ; ಭೂಮಿ ಮತ್ತು ಆಕಾಶಗಳನ್ನು ವ್ಯತ್ಯಾಸಗಳಾಗು

1 ನಾವಾಗಳುಂ (ಅ)

ಪ್ರಜೆಯಂ ಪಾಲಿಸುವಲ್ಲಿ ಸತ್ಕೃಪೆಯರಾತಿವ್ರಾತದೊಳ್ಕಾಯ್ಪು ಶಿ
ಷ್ಟಜನಸ್ತೋಮದೊಳೊಲ್ಮೆ ಸಂಗರದೊಳುದ್ಯದ್ವಿಕ್ರಮಂ ಸದ್ಬುಧ
ವ್ರಜದೊಳ್ಮನ್ನಣೆ ಭಕ್ತಿವೃತ್ತಿ ಶಿವಭಕ್ತವ್ರಾತದೊಳ್ ನಿಗ್ರಹಂ
ಕುಜನಶ್ರೇಣಿಯೊಳಿಂತಿವಂ ಬಿಡದಿರೆಂದುಂ ಬಿಜ್ಜಳಕ್ಷ್ಮಾಪತೀ ೩೭

ವ॥ ಎಂದು ಯಥೋಚಿತ ಹಿತೋಪದೇಶಮನೊರೆದಂತಃಪುರಕ್ಕೆ ಬಿಜ್ಜಳನಂ ಬೀಳ್ಕೊಟ್ಟು ತತ್ಪೂರ್ವಪರಿಕಲ್ಪಿತಮಾದಗಣಿತ ಮಣಿಗಣಖಚಿತಕನಕಮಯ ಭವನ ವಿವಿಧ ವಿಭವ ಸೌಧಪ್ರಾಕಾರ ಪ್ರಕರ ಪ್ರಮದವನಪರಿವೃತ ಮಣಿಕಳಶರುಚಿನಿಚಯ ಖಚಿತಗಗನತಳ ಮಂಗಳಾಯತನ ಘನ ಮನೋಜ್ಞಸೌಭಾಗ್ಯಸಂಪೂರ್ಣತರಮೆನಿಸಿದ ಬಲದೇವನಂತಪುರಮಂ ನಿಜರಮಣಿವೆರಸಿ ಬಸವರಾಜಂ ಪುಗುತಂದೊಡವಂದ ಸಕಳ ದಂಡನಾಥಮಂಡಳಿಕರಂ ವಿನಯದಿಂ ಕಳುಪಿ ಪರಮೋ[1]ತ್ಸಾಹದಿಂ[1] ಶಿವಗಣ ಸಪರ್ಯೆಯಿನಿರುತ್ತಮೊಂದುದಿನಂ ಗಣ[2]ಕರಂ ಬರಿಸಿ ಸಾಮ್ರಾ[3]ಜ್ಯಸ್ಥಿತಿ[3]ಯನೆಲ್ಲಮಂ ತನ್ಮುಖದಿನಱಿದಾತ್ಮಾಯತ್ತಂ[4] ಮಾಡಿ ಯಥಾಕ್ರಮಂ ನಿಯೋಜಿಸಿ ನಿರ್ವಾಹಂಗೆಯ್ದು—

ವಂತೆ ಮಾಡುವವರು. ವಿಷ್ಣು, ಬ್ರಹ್ಮ, ದೇವೇಂದ್ರಾದಿ ದೇವತೆಗಳನ್ನು ಲಕ್ಷ್ಯಕ್ಕೆ ತಾರರು ! ಆ ಶಿವಶರಣರಲ್ಲಿ ನೀನು ಗರ್ವವನ್ನು ತೋರಿಸಿಕೊಳ್ಳಬೇಡ. ೩೭.
ಹೀಗೆಂದು ಔಚಿತ್ಯವಿಕ್ಕದಂತೆ ಹಿತೋಪದೇಶವನ್ನು ಮಾಡಿ, ಅಂತಃಪುರಕ್ಕೆ ಬಿಜ್ಜಳನನ್ನು ಬೀಳುಕೊಟ್ಟು, ಈ ಪೂರ್ವದಲ್ಲಿಯೇ ಮಾಡಲಾದ ಅಸಂಖ್ಯಾತ ರತ್ನ ಸಮೂಹ ಗಳಿಂದ ಕೆತ್ತಲಾದ ಸುವರ್ಣಮಯ ಮನೆಯಾದ, ನಾನಾ ಪ್ರಕಾರದ ವೈಭವಗಳುಳ್ಳ ಉಪ್ಪರಿಗೆಗಳಿಂದಲೂ, ಪ್ರಾಕಾರಗಳ ಸಮೂಹಗಳಿಂದಲೂ ಸ್ತ್ರೀಯರ ಕ್ರೀಡಾರ್ಥ ವಾದ ಉಪವನಗಳಿಂದ ಸುತ್ತುವರಿಯಲ್ಪಟ್ಟುದೂ, ರತ್ನಕಲಶದ ಕಾಂತಿಯ ಸಮೂಹ ದಿಂದ ಆಚ್ಛಾದಿಸಲ್ಪಟ್ಟ ಆಕಾರವುಳ್ಳದ್ದೂ, ಮಂಗಳಕರಗಳಾದ ಶಿವಪೂಜಾಸ್ಥಾನ ಗಳುಳ್ಳದ್ದೂ, ಘನತರವಾದುದೂ, ಮನೋಹರ ಸೌಂದರ್ಯದಿಂದ ಸಂಪೂರ್ಣವಾದುದೂ ಎನಿಸಿದಂಥ ಬಲದೇವಮಂತ್ರಿಯ ಅಂತಃಪುರವನ್ನು ತನ್ನ ಪತ್ನಿಯಾದ ಗಂಗಾಂಬೆ ಯೊಡನೆ ಪ್ರವೇಶಿಸಿದನು. ಆಗ ಸಂಗಡವೇ ಬಂದಂಥ ಸಮಸ್ತ ಮಂತ್ರಿ ಮಂಡಲ ದವರನ್ನು ವಿನಯದಿಂದ (ಅವರವರ ಸ್ಥಾನಕ್ಕೆ) ಕಳುಹಿಸಿದನು. ಪರಮೋತ್ಸಾಹದಿಂದ ಶಿವಗಣಂಗಳ ಪೂಜಾದಿಕಾರ್ಯಗಳಿಂದ ಇರುತ್ತಿದ್ದನು. ಒಂದುದಿನ ಲೆಕ್ಕಿಗರನ್ನು ಬರ ಮಾಡಿಕೊಂಡು ಅವರ ಮುಖದಿಂದ ಸಮಸ್ತ ಸಾಮ್ರಾಜ್ಯಸ್ಥಿತಿಯನ್ನು ತಿಳಿದುಕೊಂಡು, ಸ್ವಾಧೀನಪಡಿಸಿಕೊಂಡು ಅವರಿಗೆ ಕ್ರಮಬದ್ಧವಾಗಿ ಆಜ್ಞಾಪನೆಮಾಡಿ (ತನ್ನ ಅಧಿಕಾರ

1 ತ್ಸವದಿಂ (ಅ) 2 ಣಿ (ಅ) 3 ಜ್ಯಸ್ಥಿ(ದ) 4 ತಂ(ದ)ತ್ತಮಂ (ಅ, ತ)

ಕುಲಗೋತ್ರಾಂಚಿತವೈಭವಂ ಬಲಯುತಂ ಮಾನೋನ್ನತಂ ಸಮ್ಮದೋ
ಜ್ವಲನೆಂಬೇಳ್ಗೆಯನಿತ್ತನೀ ಬಸವನೀ ಭೂಜಾನಿಗೀತಂಗೆ ದಲ್
ಕುಲಗೋತ್ರಾರಿ ಕರಂ ವಿನಷ್ಟಬಲನೆಲ್ಲಾಗಳ್ ವಿಮಾನಸ್ಥಿತಂ
ಸಲೆ ಸಂಕ್ರಂದನನಿಂದ್ರನೆಂದೆನಿಸಿದಾ ತನ್ಮಂತ್ರಿಯೇಂ ಸಾಟಿಯೇ ೩೮

ಹರಿನಂದನಭಂಜನನಹಿ
ಮರುಚಿಸುತಾರಾತಿ ವಿಜಯನಾತ್ತಸುಭದ್ರಂ
ವರ ಭೀಮಧರ್ಮಯುತನಾ
ಗಿರುತಂ ನರನಲ್ತು ಬಸವನೆನಿಸಿದನಲ್ತೇ ೩೯

ವನ್ನು) ನಿರ್ವಾಹ ಮಾಡುತ್ತಿದ್ದನು. ೩೮. ಈ ಬಸವಣ್ಣನು ಭೂಮಿಪತಿಯಾದ ಬಿಜ್ಜಳನಿಗೆ ಸತ್ಕುಲ, ಶ್ರೇಷ್ಠಗೋತ್ರಗಳಿಂದ ಪೂಜ್ಯವಾದ ವೈಭವಗಳುಳ್ಳವನೂ, ಶಕ್ತಿಯುತನೂ, ಮರ್ಯಾದೆಯಿಂದ ಶ್ರೇಷ್ಠನೆನಿಸಿದವನೂ, ಸಂತೋಷದಿಂದ ಪ್ರಕಾಶಿಸುವವನೂ ಎಂಬ ಪ್ರಸಿದ್ಧಿಯನ್ನುಂಟುಮಾಡಿದನು. ಇದು ನಿಶ್ಚಯ : ಇಂದ್ರನು ವಂಶಗೋತ್ರಗಳಿಗೆ ವೈರಿ (ಕುಲಾಚಲ ಪರ್ವತಗಳಿಗೆ ಶತ್ರು), ಅತ್ಯಂತ ನಷ್ಟವಾದ ಶಕ್ತಿಯುಳ್ಳವನು (ಬಲಾಸುರನಾಶಕನು), ಯಾವಾಗಲೂ ಮಾನವನ್ನು ಬಿಟ್ಟವನು (ದೇವಯಾನವಾದ ವಿಮಾನದಲ್ಲಿರುವವನು), ಚೆನ್ನಾಗಿ ರೋದನ ಮಾಡುವವನು. (ಶತ್ರುಗಳನ್ನು ದುಃಖ ಪಡಿಸುವವನು) ಎಂದೆನಿಸಿದ್ದಾನೆ. ಇಂಥ ದೇವೇಂದ್ರನ ಮಂತ್ರಿಯಾದ ಬೃಹಸ್ಪತ್ಯಾಚಾರ್ಯನೂ ಕೂಡ ಈ ಬಸವೇಶ್ವರನಿಗೆ ಸಮಾನನಾದಾನೇ ? [ಗೋತ್ರ-ವಂಶಪರಂಪರೆ, ಪರ್ವತ; ಬಲ-ಶಕ್ತಿ, ಬಲನೆಂಬ ರಾಕ್ಷಸ; ವಿಮಾನ–ವಿಗತವಾದ ಮಾನ, ವಿಮಾನ; ಸಂಕ್ರಂದನ–ಇಂದ್ರ, ಚೆನ್ನಾಗಿ ಅಳುವುದು] ೩೯. ಈ ಬಸವಣ್ಣನು ವಿಷ್ಣುಪುತ್ರನಾದ ಮನ್ಮಥನನ್ನು ನಾಶಮಾಡಿದವನು. ಸೂರ್ಯಪುತ್ರನಾದ ಯಮನನ್ನು ನಾಶಗೊಳಿಸಿದವನು, ಮರಣಭಯವನ್ನು ಗೆದ್ದವನು. ಜಯಶೀಲನು, ಸನ್ಮಂಗಳಗಳನ್ನು ಹೊಂದಿದವನು. ಶ್ರೇಷ್ಠವಾದ ವೀರಶಿವಧರ್ಮದಿಂದ ಕೂಡಿದವನಾಗಿದ್ದರೂ ಮನುಷ್ಯನಲ್ಲ, ವೃಷಭೇಶ್ವರ ಎನಿಸಿದವನಲ್ಲವೇ ? [ಈ ಪದ್ಯಕ್ಕೆ ಇನ್ನೊಂದು ರೀತಿಯಲ್ಲಿ ಹೀಗೆ ಅರ್ಥಮಾಡಬೇಕು : ಇಂದ್ರನ ವನವನ್ನು ನಾಶಪಡಿಸಿದವನೂ, ಕರ್ಣನಿಗೆ ಶತ್ರುವೂ, 'ವಿಜಯ' ಎಂಬ ನಾಮಧೇಯವುಳ್ಳವನೂ. ಸುಭದ್ರಾದೇವಿಯನ್ನು ಪಡೆದವನೂ, ಶ್ರೇಷ್ಠರಾದ ಧರ್ಮರಾಜ, ಭೀಮಸೇನರುಗಳನ್ನುಳ್ಳವನೂ ಆದರೂ ಅರ್ಜುನನಲ್ಲ ಎನಿಸಿದನು. (ಇದು ಆಶ್ಚರ್ಯ ಎಂದು ಭಾವ) ಹರಿನಂದನ-ಇಂದ್ರನ ನಂದನವನ, ವಿಷ್ಣುವಿನಪುತ್ರ; ನರ-ಮನುಷ್ಯ, ಅರ್ಜುನ; ಅಹಿಮರುಚಿಸುತ-ಸೂರ್ಯ

ಪರಶಿವಧರ್ಮಂ ವಿಬುಧೋ
ತ್ಕರನುತಪದಪದ್ಮನಾತ್ತಲೈಂಗಂ ಶ್ರುತಿಪ್ರ
ಷ್ಕರಜಾದಿತ್ಯಂ ಶೈವಾ
ಶಿರುಚಿರವೃಷಭನೆ ಪುರಾಣಪುರುಷಂ ಧರೆಯೊಳ್ ೪೦

ವ॥ ಎಂಬ ಪೊಗಳ್ತೆಗಡರ್ಪಾಗಿ ಪೆಂಪುವಡೆದು ಮತ್ತಂ ಜಗತ್ಕರ್ತಂ ಪೆಱನೊರ್ವನುಂಟೆಂಬುದನಧಃಕರಿಸಿ ಶಿವನೊರ್ವನೆ ಕರ್ತನೆಂಬುದಂ ಪ್ರತಿಷ್ಠಿಸಿಯುಂ, ಕರ್ಮದ್ವಯಮಂ [1]ನೇತಿ[1]ಗಳೆದು ಚಿತ್ಕ್ರಿಯಾದ್ವಯಮನಂಗೀಕರಿಸಿಯುಂ, ತನುತ್ರಯ ವೃತ್ತಿಯಂ ಪಱಿದು ಲಿಂಗತ್ರಯಮನಂಗಂಗೊಳಿಸಿಯುಂ, ಚತುಷ್ಕರಣ ವ್ಯಾಪಾರಮಂ ತೂಳ್ದು ಚತುರ್ವಿಧ ವಾಗ್ವೃತ್ತಿಯಂ ಪ್ರಣವಾತ್ಮಕಂ ಮಾಡಿಯುಂ, ಪಂಚಕ್ಲೇಶಮಂ ದೂರೀಕರಿಸಿ ಪಂಚಾಚಾರಮನವಲಂಬಿಸಿಯುಂ, ಷಡಿಂದ್ರಿಯವರ್ತನಮನ[2]ಳಿದು ಷಡಕ್ಷರಮನಕ್ಷ[3]ಚಕ್ರಾದಿಗಳೊಳರ್ಚಿಯುಂ, ಸಪ್ತವ್ಯಸನಂಗ[4]ಳಂ ಪ್ರೋಜ್ಝಿ[5]ಸಿ ಸಪ್ತಸೋಪಾನಕ್ರಮದೊಳಾಚರಿಸಿಯುಂ, ಅಷ್ಟಮದಮನಪಹರಿಸುತಷ್ಟಾವರಣಮನುಪಸೇವಿಸಿಯುಂ ನವಜೀವಗುಣಮಂ ಮೀಱಿ ನವಲಿಂಗಾನುಸಂಧಾನಮನಿಂಬುಗೊಳಿಸಿಯುಂ, ದಶಪವನ ಧರ್ಮಮಂ, ತೆಮರ್ದು ದಶನಾದವಿನೋದದೊಳ್ಮನಮಂ ಮೇಳಯಿಸಿಯುಮನನ್ಯ ಸಾಮಾನ್ಯ ಮಹಿಮೆಯುಂ

ಪುತ್ರ ಕರ್ಣ. ಯುಮು] ೪೦. ಶ್ರೇಷ್ಠವಾದ ವೀರಶೈವಧರ್ಮ ಸ್ವರೂಪನೂ, ವಿದ್ವಾಂಸರ ಸಮೂಹದಿಂದ ನುತಿಸಲ್ಪಡುವ ಶ್ರೇಷ್ಠವಾದ ಪದ್ಮಗಳುಳ್ಳವನೂ, ಇಷ್ಟಲಿಂಗ ಸಂಬಂಧವುಳ್ಳವನೂ, ವೇದಗಳೆಂಬ ಕಮಲಗಳಿಗೆ ಸೂರ್ಯನೋಪಾದಿಯಲ್ಲಿರುವವನೂ, ಶಿವಭಕ್ತರಲ್ಲಿ ಮನೋಹರನಾದವನೂ ಆದ ಬಸವೇಶ್ವರನೇ ಈ ಭೂಮಿಯಲ್ಲಿ ಪುರಾಣ ಪುರುಷನೆನಿಸಿರುವನು. [ಇನ್ನೊಂದು ಅರ್ಥ : ಶ್ರೇಷ್ಠವಾದ ಶಿವಪುರಾಣ ವಿದ್ವಾಂಸರ ಸಮೂಹದಿಂದ ನುತಿಸಲ್ಪಡುವ ಶಬ್ದಗಳುಳ್ಳ ಪದ್ಮಪುರಾಣ, ಲೈಂಗ ಪುರಾಣ, ವೇದಗಳೆಂಬ ಕಮಲಗಳಿಗೆ ಸೂರ್ಯಸ್ವರೂಪವಾದ ಆದಿತ್ಯಪುರಾಣ, ಅತಿ ಮನೋಹರವಾದ ಶೈವಸಂಬಂಧವಾದ ವೃಷಭಪುರಾಣಾದಿಗಳೇ ಮೊದಲಾದವುಗಳ ಸ್ವರೂಪನಾದ ಬಸವೇಶ್ವರನು ಪುರಾಣಪುರುಷನೆನಿಸಿದ್ದಾನೆ.] **ವಚನ** : ಹೀಗೆಂಬ ಕೀರ್ತಿಗೆ ಆಶ್ರಯನಾಗಿ, ಅಧಿಕ್ಯವನ್ನು ಹೊಂದಿ. ಈ ಜಗತ್ತಿಗೆ ಕರ್ತನು ಬೇರೊಬ್ಬನುಂಟೆಂಬುದನ್ನು ತಿರಸ್ಕರಿಸಿ, ಶಿವನೋರ್ವನೇ ಜಗತ್ಕರ್ತನೆಂಬುದನ್ನು ಪ್ರತಿಷ್ಠಾಪಿಸಿದವನು: ಸುಕೃತ ದುಷ್ಕೃತ (?) ಗಳೆಂಬ ಕರ್ಮದ್ವಯವನ್ನು ಮೂಲೋತ್ಪಾಟನಮಾಡಿ ಲಿಂಗಾಂಗಸಾಮರಸ್ಯವನ್ನು ಅಂಗೀಕರಿಸಿದವನು, ತನುತ್ರಯ ವೃತ್ತಿಗಳಾದ ಸ್ಥೂಲ, ಸೂಕ್ಷ್ಮ ಕಾರಣ ದೇಹವ್ಯಾಪಾರವನ್ನು ಇಷ್ಟ, ಪ್ರಾಣ, ಭಾವಗಳೆಂಬ ಲಿಂಗತ್ರಯವನ್ನು ಅಂಗಗಳನ್ನಾಗಿ ಅಂಗೀಕರಿಸಿದವನು. ಮನ, ಬುದ್ಧಿ, ಚಿತ್ತ.ಅಹಂಕಾರಗಳೆಂಬ ಚತುರಂತಃಕರಣ ವ್ಯಾಪಾರವನ್ನು ಮೆಟ್ಟಿ, ಪರಾ, ಪಶ್ಯಂತಿ, ಮಧ್ಯಮಾ, ವೈಖರಿಯೆಂಬ ನಾಲ್ಕು

1 ನೆಲೆ (ಚ, ಮ, ಅ, ಜ, ತ) 2 ನು (ಅ) 3 ಕ್ಷರ (ಅ) 4 ನಾ (ಡ) 5 ಹಿ (ಜ, ಅ, ಗ)

ತಾಳ್ದು ಮತ್ತಂ ನಿತ್ಯಶಿವರಾತ್ರಿಗೆಯ್ವುದುಮುಂ ಶಿವಭಕ್ತರ್ಶಿವನೆಂದಿರ್ಪುದುಮುಂ ಶರಣರೊಳ್ಪಿರಿದು ಕಿಱಿದನಾಡದುದುಮುಂ ಜಂಗಮಕ್ಕೇನುಮುಂ ವಂಚನೆಮಾಡದುದುಮುಂ ಹರಭಕ್ತರ ಸಲ್ಗೆಯುಂ ಸಲಿಪುದುಮುಂ ಪರಸಮಯಗರ್ವಮುಂ ನಿಲಿಪುದುಮುಂ ಶರಣರೇನೆಂದೊಡಂ ಮಱುಮಾತುಗುಡದಪ್ಪುಕೆಯ್ವುದುಮುಂ ಚರಲಿಂಗಮಂ ಪ್ರಾಣಲಿಂಗಮೆಂದಿಪ್ಪುದುಮುಂ ಪರವಾದಿಜನಮಂ ಸೋಲಿಪುದುಮುಂ ಮೃಡಂಗೆ ಜಯಂಗುಡದೆ ಮೃಡಭಕ್ತರ್ಗೆ ಗೆಲ್ಲಂಗೊಟ್ಟು ಮಣಿವುದುಮುಂ ಶರಣನಿಂದೆಗೇಳದುದುಮುಂ ಶಿವೈಕಭಕ್ತಿಯನಲರ್ಚುವುದುಮುಂ ಸರ್ವೋರ್ವಿಯೊಳ್ [1]ಶಿವಾ[1]ಚಾರಮಂ ಬಳೆಯಿಪುದುಮುಂ ಪರಮತಮಾರ್ಗಮುಂ ಗಣನೆಗೊಳ್ಳದುದುಮುಂ ನುಡಿದು ತಪ್ಪದುದುಮುಂ ನಡೆದು ಪೆಡಂಮೆಟ್ಟದುದು

ವಾಗ್ವೃತ್ತಿಗಳನ್ನು ಓಂಕಾರರೂಪವನ್ನಾಗಿ ಮಾಡಿದವನು; ಅವಿದ್ಯಾ, ಅಸ್ಮಿತ, ರಾಗ, ದ್ವೇಷ, ಅಭಿನಿವೇಶನಗಳೆಂಬ ಪಂಚಕ್ಲೇಶಗಳನ್ನು ದೂರೀಕರಿಸಿ. ಸದಾಚಾರ, ಸಮಯಾಚಾರ, ಶಿವಾಚಾರ, ಗಣಾಚಾರ, ಭೃತ್ಯಾಚಾರಗಳೆಂಬ ಪಂಚ ಆಚಾರಗಳನ್ನು ಅವಲಂಬಿಸಿದವನು; ಚರ್ಮ, ಕಣ್ಣು. ಕಿವಿ. ನಾಲಿಗೆ. ಮೂಗು, ಮನಸ್ಸೆಂಬ ಆರು ಇಂದ್ರಿಯ ವರ್ತನವನ್ನು ಬಿಟ್ಟು 'ಓಂ ನಮಃಶಿವಾಯ' ಎಂಬ ಷಡಕ್ಷರಾತ್ಮಕ ಮಂತ್ರದಲ್ಲಿನ ಆರು ಅಕ್ಷರಗಳನ್ನು ಕ್ರಮವಾಗಿ ಮೂಲಾಧಾರ. ಸ್ವಾಧಿಷ್ಠಾನ, ಮಣಿಪೂರಕ. ಅನಾಹತ, ವಿಶುದ್ಧಿ, ಆಜ್ಞಾಚಕ್ರಗಳಲ್ಲಿ ಸಂಬಂಧಗೊಳಿಸಿದವನು; ತನು. ಮನ. ಧನ, ರಾಜ್ಯ, ವಿಶ್ವ, ಉತ್ಸಾಹ, ಸೇವಕಾದಿ ಏಳು ವ್ಯಸನಗಳನ್ನು ಹೋಗಲಾಡಿಸಿ(ಅಪೋಹಿಸಿ). ಏಳು ಸೋಪಾನಗಳ ಕ್ರಮದಲ್ಲಿ ಸುಖೇಚ್ಛೆ, ವಿಚಾರಣೆ, ತನುಮಾನಸ. ಸತ್ವಾಸಕ್ತಿ, ಸಂಸಕ್ತಿ, ಪದಾರ್ಥಭಾವನೆ, ತುರ್ಯಗಾಮಿ ಕ್ರಮದಲ್ಲಿ ಆಚರಿಸಿದವನು; ಧನ, ಕುಲ. ಛಲ, ಯೌವನ, ರೂಪ, ವಿದ್ಯಾ. ರಾಜ್ಯ, ತಪಾದಿಯಾದ ಅಷ್ಟಮದಗಳನ್ನು ಅಪಹಾರಮಾಡಿ (ದೂರೀಕರಿಸಿ), ಗುರು, ಲಿಂಗ, ಜಂಗಮ, ವಿಭೂತಿ, ರುದ್ರಾಕ್ಷಿ. ಮಂತ್ರ. ಪಾದೋದಕ, ಪ್ರಸಾದಗಳೆಂಬ ಅಷ್ಟಾವರಣಗಳನ್ನು ಆಚರಿಸಿದವನು, ಬುದ್ಧಿ, ಸುಖ, ದುಃಖ, ಇಚ್ಛೆ, ಯತ್ನ, ಧರ್ಮ, ಅಧರ್ಮ, ಭಾವನೆ, ದ್ವೇಷವೆಂಬ ನವವಿಧವಾದ ಜೀವಗುಣಗಳನ್ನು ಮೀರಿ, ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗ, ಇಷ್ಟಲಿಂಗ, ಪ್ರಾಣಲಿಂಗ. ಭಾವಲಿಂಗಗಳನ್ನು ಅನುಸಂಧಾನಕ್ಕೆ ಆಶ್ರಯಗೊಳಿಸಿದವನು. ಪ್ರಾಣ, ಅಪಾನ. ಸಮಾನ, ಉದಾನ, ವ್ಯಾನ. ನಾಗ, ಕೂರ್ಮ. ಕ್ರಕರ, ದೇವದತ್ತ, ಧನಂಜಯಗಳೆಂಬ ಹತ್ತು ವಿಧವಾದ ವಾಯುಗಳನ್ನು ತಳ್ಳಿ. ಸ್ವರನಿಘೋಷಣ, ನಿರ್ಣಯಧ್ವನಿ, ಘಂಟಾಧ್ವನಿ, ಕಹಳಾಧ್ವನಿ, ಶಂಖಧ್ವನಿ, ಮೇಘಧ್ವನಿ, ಮೃದಂಗಧ್ವನಿ, ಭೇರೀಧ್ವನಿ, ಮಂತ್ರಧ್ವನಿ. ಅವ್ಯಕ್ತಧ್ವನಿ, ಪ್ರಣವ ಧ್ವನಿಗಳೆಂಬ ದಶನಾದಗಳಲ್ಲಿ ಮನಸ್ಸನ್ನು ಮೇಳಗೊಳಿಸಿದವನು. (ಆಗಿ) ಅನ್ಯರಿಗೆ ಅಸಾಧ್ಯವಾದ

---

1 ಸದಾ (ಅ)

ಮಂ ನಿತ್ಯವ್ರತಮೆನಿಸಿ ಪೂಣ್ದು ಕೆಯ್ಕೊಂಡು ಪರಪುರುಷಾರ್ಥನಿಧಿ ಪರಮಪುರುಷಂ ಬಸವರಸ ನೊಪ್ಪುತ್ತುಮಿರೆಯಿರೆ ತನ್ಮಹಿಮೆಯುಂ ಕೇಳ್ದು —

ಲಾಳ ಕೊಂಕಣ ಸಿಂಧು ಗೂರ್ಜರ ಕೇರಳಾಂಗ ಕಳಿಂಗ ಪಾಂ
ಚಾಳ ಪಾಂಡ್ಯ ತುರುಷ್ಕ ಭೋಟ ವಿದರ್ಭ ಬರ್ಬರ ವಂಗ ನೇ
ಪಾಳ ಕೋಸಲ ಹೂಣ ಮಾಳವ ಗೌಳ ಚೋಳ ವರಾಳ ಬಂ
ಗಾಳ ದೇಶದ ಭಕ್ತರಾ ವೃಷಭೇಂದ್ರನಿರ್ಪೆಡೆಗೆಯ್ದಿದರ್ ೪೧

ಕರಮುರಸ್ಥಳಿ ಮಸ್ತಕಂ ಗಳಮಾಸ್ಯಮೊಪ್ಪುವ ಕಕ್ಷೆಯೊ
ಳ್ಧರಿಸಿ ಲಿಂಗಮನಾಂತು ಭೂತಿ ಶಿವಾಕ್ಷಿಮಾಲೆಯನಂಗದೊಳ್
ಕರಣಧರ್ಮಮಃನೊತ್ತಿ ನಿರ್ಮಳ ವೀರಶೈವಸುಮಾರ್ಗದೊಳ್
ಚರಿಸಿ ರಂಜಿಪರೆಯ್ದಿದರ್ ವೃಷಭೇಂದ್ರದರ್ಶನತತ್ಪರರ್ ೪೨

ಮಹಿಮೆಯನ್ನು ಹೊಂದಿದವನಾಗಿದ್ದನು. ಮತ್ತು ನಿತ್ಯನಿತ್ಯ ಶಿವರಾತ್ರಿಯ ವ್ರತವನ್ನು ಆಚರಿಸುವುದನ್ನೂ, ಶಿವಭಕ್ತರು 'ಶಿವ'ನೆಂದೇ ಭಾವಿಸಿರುವುದನ್ನು, ಶರಣರಲ್ಲಿ ಹಿರಿದು ಕಿರಿದೆಂದು ಮಾತನಾಡದುದನ್ನು, ಜಂಗಮಕ್ಕೆ ಯಾವುದನ್ನೂ ವಂಚನೆಮಾಡದುದನ್ನು, ಹರಭಕ್ತರಾದವರ ಇಚ್ಛೆಯನ್ನು ಸಲ್ಲಿಸುವುದನ್ನು, ಅನ್ಯಮತದವರ ಅಹಂಕಾರವನ್ನು ನಿಲ್ಲಿಸುವುದನ್ನು, ಶರಣರು ಏನೇ ಮಾತನಾಡಿದರೂ ಪ್ರತಿಯಾಗಿ ಮಾತನಾಡದೆ ಅಂಗೀಕರಿಸುವುದನ್ನು, ಜಂಗಮಲಿಂಗವೇ ಪ್ರಾಣಲಿಂಗವೆಂದು ತಿಳಿದು ಇರುವುದನ್ನು, ಪರವಾದಿ ಜನರನ್ನು ಸೋಲಿಸುವುದನ್ನು, ಶಿವನಿಗೆ ಗೆಲುವನ್ನು ಕೊಡದೆ ಶಿವಭಕ್ತರಿಗೆ ಗೆಲುವನ್ನುಂಟುಮಾಡುತ್ತ (ಶಿವನಿಗಿಂತಲೂ ಶಿವಭಕ್ತರೇ ಅಧಿಕರು ಎಂದು ಅವರಿಗೆ ಗೆಲುವಾಗುವಂತೆ ವ್ಯವಹರಿಸುತ್ತ) ಅವರಿಗೆ ನಮಸ್ಕಾರ ಮಾಡುವುದನ್ನು, ಶರಣರ ನಿಂದೆಯನ್ನು ಕೇಳದಿರುವುದನ್ನು, ಶಿವನಲ್ಲಿಯೇ ಏಕನಿಷ್ಠೆಯನ್ನು ಅರಳಿಸುವುದನ್ನು, ಸಮಸ್ತ ಭೂಮಂಡಲದಲ್ಲಿ ಶಿವಚಾರವನ್ನೇ ಹೆಚ್ಚಿಸುವುದನ್ನು, ಪರಮತದ ಮಾರ್ಗವನ್ನು ಲೆಕ್ಕಕ್ಕೆ ತಕ್ಕೊಳ್ಳದಿರುವುದನ್ನು, ಮಾತನಾಡಿ ತಪ್ಪದಿರುವುದನ್ನು, ಮುಂದೆ ಹೆಜ್ಜೆಯಿಟ್ಟು ಹಿಮ್ಮೆಟ್ಟದಿರುವುದನ್ನು, (ತನ್ನ) ನಿತ್ಯವ್ರತವನ್ನಾಗಿ ಪ್ರತಿಜ್ಞೆಮಾಡಿ ಸ್ವೀಕರಿಸಿ, ಶ್ರೇಷ್ಠವಾದ ಪುರುಷಾರ್ಥಗಳಿಗೆ ನಿಧಿಯಂತಿರುವ ಪರಮ ಪುರುಷನಾದ ಬಸವಣ್ಣನು ಶೋಭಿಸುತ್ತಿರಲಾಗಿ ಆತನ ಇಂಥ ಮಹಿಮಾತಿಶಯಗಳನ್ನು ಕೇಳಿ

೪೧. ಲಾಳ, ಕೊಂಕಣ, ಸಿಂಧು, ಗುರ್ಜರ, ಕೇರಳ, ಅಂಗ, ಕಳಿಂಗ, ಪಾಂಚಾಳ, ಪಾಂಡ್ಯ, ತುರುಷ್ಕ, ಭೋಟ, ವಿದರ್ಭ, ಬರ್ಬರ, ವಂಗ, ನೇಪಾಳ, ಕೋಸಲ, ಹೂಣ, ಮಾಳವ, ಗೌಳ, ಚೋಳ, ವರಾಳ ಬಂಗಾಳ ದೇಶದ ಭಕ್ತರು ಆ ಬಸವೇಶ್ವರನಿರುವ ಕಲ್ಯಾಣಪಟ್ಟಣಕ್ಕೆ ಬಂದರು. ೪೨. ಕೈ, ಎದೆ, ಶಿರಸ್ಸು, ಕುತ್ತಿಗೆ, ಬಾಯಿ, ಒಪ್ಪುವ ಕಂಕುಳ-ಈ ಸ್ಥಳಗಳಲ್ಲಿ ಶಿವಲಿಂಗವನ್ನು ಧರಿಸಿ, ದೇಹದಲ್ಲಿ ವಿಭೂತಿ ಮತ್ತು ರುದ್ರಾಕ್ಷ ಮಾಲೆಗಳನ್ನು ಧರಿಸಿ, ಇಂದ್ರಿಯಗಳನ್ನು ನಿಗ್ರಹಿಸಿ ಪವಿತ್ರ ವೀರಶೈವ

ಶಿವಪೂಜಾನಿಷ್ಠರಂಗೇಂದ್ರಿಯಗುಣರಹಿತರ್ಜಂಗಮಪ್ರೇಮಧಾಮ
ರ್ಭವಿಸಂಗತ್ಯಾಗಿಗಳ್ಭಾಸುರಗುಣನಿಧಿಗಳ್ಸತ್ಯಸಂಪನ್ನರಾಶಾ
ರ್ತಿವಿದೂರರ್ವೀರಶೈವಾಗಮನಿಗಮವಿವರ್ಮಾನಿಗಳ್ಮೌನಿಗಳ್ ಶಾಂ
ಭವಭಕ್ತಿಪ್ರಾಂಜಳರ್ಭೂಮಹಿತಮಹಿಮರೇಳ್ತಂದರಾನಂದದಿಂದಂ ೪೩

ನೊಸಲೊಳ್ಭಸ್ಮತ್ರಿಪುಂಡ್ರಂ ತೊಳಗೆ ಗಳದೊಳಿಂಬಾಗೆ ರುದ್ರಾಕ್ಷಮಾಲಾ
ವಿಸರಂ ಚೆಲ್ವಾಗೆ ಬಂಬಲ್ಜಡೆ ಮುಡಿ ಸುಲಿಪಲ್ಶೋಭೆಯಂ ಬೀಱೆ ದಂಡಂ
ಭಸಿತಾಧಾರಂ ಬಹಿರ್ವಾಸಮುಮಮರ್ದಿರೆ ಲಿಂಗಾಂಗಸಂಯುಕ್ತಯೋಗಿ
ಪ್ರಸರಂ ಬಂದಿರ್ದುದೋರಂತೆಸೆದು ಬಸವಸಂದರ್ಶನೋತ್ಕಂಠೆಯಿಂದಂ ೪೪

ವ॥ ಅಂತೇಳ್ತರ್ಪುದುಮಾಗಳ್ ಪನ್ನೀರ್ದಳಿಪದಿಂ ಕತ್ತುರಿಯ ಸಾರಣೆಯಿಂ ಪೊಸ ಮುತ್ತಿನ ರಂಗವಲಿಯಿಂ ಧವಳ ಚಾಮರ ಪಲ್ಲವಪ್ರಕರ ಮುಕುರನಿಕರ ಮಣಿಗಣಗ್ರಥಿತಾಗಣಿತ ತೋರಣಂಗಳಿಂ ಪಸದನಾಗೊಳಿಸಿ ರಾಜಿತಮಾದ ರಾಜವೀಥಿಯೊಳೆತ್ತಿದ ಪತಾಕೆಗಳ ಸೂಸುವ ಸೀಗುರಿಗಳ ಬೀಸುವ ಚಾಮರಂಗಳ ಸೊಗಯಿಪ ಧವಳಾತಪತ್ರಂಗಳ ನವರತ್ನದ ನಡೆತೋರಣಂಗಳ

ಮಾರ್ಗದಲ್ಲಿ ಆಚರಣೆಮಾಡಿ, ಪ್ರಕಾಶಮಾನರಾದ ಶಿವಭಕ್ತರು ಬಸವೇಶ್ವರನ ದರ್ಶನ ದಲ್ಲಿ ಆಸಕ್ತರಾಗಿ ಬಂದರು. ೪೩. ಶಿವಪೂಜೆಯಲ್ಲಿ ನಿಷ್ಠೆಯುಳ್ಳವರೂ. ದೇಹ ಮತ್ತು ಇಂದ್ರಿಯಗಳ ಗುಣಗಳಿಂದ ದೂರರಾದವರೂ, ಜಂಗಮಪ್ರೀತಿಗೆ ಸ್ಥಾನ ರಾದವರೂ, ಭವಿಗಳ ಸಂಗದಿಂದ ದೂರರಾದವರೂ, ಮನೋಹರವಾದ ಸದ್ಗುಣ ಗಳಿಗೆ ನಿಕ್ಷೇಪರೂಪರೂ, ಸತ್ಯಸಂಪನ್ನರೂ. ಆಸೆ ದುಃಖಗಳಿಂದ ದೂರರಾದವರೂ, ವೀರಶೈವಾಗಮ ವೇದಗಳನ್ನು ಬಲ್ಲವರೂ, ಗೌರವವುಳ್ಳವರೂ, ಮೌನಿಗಳೂ, ಶಿವಭಕ್ತಿಯಿಂದ ಮನೋಹರರೆನಿಸಿದವರೂ, ಭೂಜನರಿಂದ ಪೂಜಿಸಿಕೊಳ್ಳಲ್ಪಟ್ಟವರೂ ಆದ ಮಹಿಮರು ಆನಂದದಿಂದ (ಬಸವಣ್ಣನಿರುವ ಕಲ್ಯಾಣಕ್ಕೆ) ಬಂದರು. ೪೪. ಬಸವಣ್ಣನನ್ನು ನೋಡುವ ಕುತೂಹಲದಿಂದ ಹಣೆಯಲ್ಲಿ ಭಸ್ಮದ ಮೂರು ಗೆರೆಗಳು ಪ್ರಕಾಶಿಸುತ್ತಿರಲು, ಕಂಠದಲ್ಲಿ ರುದ್ರಾಕ್ಷ ಮಾಲೆಗಳ ಸಮೂಹವು ಇಂಬು ಗೊಂಡಿರಲು, ಗುಂಪು ಗುಂಪಾದ ಜಡೆಯ ಮುಡಿಯು (ತಲೆಯ ಮೇಲೆ) ಚೆಲುವು ಗೊಂಡಿರಲು, ಶುಭ್ರವಾದ ಹಲ್ಲುಗಳು ಕಾಂತಿಯನ್ನು ಬೀರುತ್ತಿರಲು, ಕೈಯಲ್ಲಿ ಹಿಡಿದ ದಂಡ, ಭಸ್ಮದ ಕರಡಿಗೆ, ಬಹಿರ್ವಾಸಗಳು ಕೂಡಿಕೊಂಡಿರಲು, ಲಿಂಗಾಂಗ ಸಾಮರಸ್ಯವುಳ್ಳ ಶಿವಯೋಗಿಗಳ ಸಮೂಹವು ಚೆನ್ನಾಗಿ ಶೋಭಿಸುತ್ತ ಬಂದರು. ವ॥ ಈ ರೀತಿಯಲ್ಲಿ (ಶಿವಶರಣರು) ಬರಲು, ಆಗ ಪನ್ನೀರಿನ ಚಳಿಯಿಂದಲೂ, ಕಸ್ತೂರಿಯ ಸಾರಣೆಯಿಂದಲೂ, ಹೊಸ ಮುತ್ತಿನ ರಂಗವಲ್ಲಿಗಳಿಂದಲೂ, ಶುಭ್ರವಾದ ಚಾಮರ, ಚಿಗುರುಗಳ ಸಮೂಹ, ಕನ್ನಡಿಗಳ ಸಮೂಹ, ರತ್ನ ಸಮೂಹದಿಂದ ಕಟ್ಟಲ್ಪಟ್ಟ ಅಸಂಖ್ಯಾತ ತೋರಣಗಳಿಂದ ಅಲಂಕರಿಸಿದ ರಂಜಿಸುವ ರಾಜ ಬೀದಿಯಲ್ಲಿ, ಎತ್ತಿ ಕಟ್ಟಿದ ಧ್ವಜಗಳ, ಸೂಸುತ್ತಿರುವ ಸೀಗುರಿಗಳ, ಬೀಸುತ್ತಿರುವ ಚಾಮರಗಳ,

ಕನ್ನೆಯರ್ಪಿಡಿದು ತರ್ಪ ಪೊಂಗಳಸ ರನ್ನಗನ್ನಡಿಗಳ ದಿಕ್ಪಾಲ[1]ರ ಕರ್ಣಕುಹರವಂ ಬಹುಳ ನಾದಂಗಳ ಪೊಗಳ್ವ ವಂದಿ ಮಾಗಧಪ್ರತಾನದ ಸಂದಣಿಪ ಮಾಹೇಶ್ವರರ ಗಗನದೊಳ್ಕುಣಿದ ಬಾದರಾಯಣ ಬಾಹುವಿನ ಪಿರಿಯ ಸಿರಿ ಕಂಗೊಳಿಸೆ ನಡೆಮಡಿವೆರಸುತಡಿಗಡಿಗೆ ಪುಷ್ಪಾಂಜಲಿಗೊಡುತೆ ಜಯಘಂಟಿ ಕಾರವದೊಳುಘೇರವಂ ತಡಂಗಲಿಸಿ ದಿಗಂತಕ್ಕೆ ಧೀಂಕಿಡೆ ಸಡಗರದಿನಿದಿರ್ಗೊಂಡು ಕಂಡು ಕೊಂಡಾಡಿ ದಂಡಪ್ರಣಾಮಂಗೆಯ್ದು ನಿಜಗೃಹಮಂ ಪುಗಿಸಿ ಮಣಿವಿಷ್ಟರದೊಳ್ಮೂರ್ತಿಗೊಳಿಸಿ ಧನಕನಕ ಮಣಿಭೂಷಣ, ಸುವಸನ ವಾಹನಾದಿಗಳಿ[2]ನವರವರಿಷ್ಟಮೆಂತಿರ್ದುದಂತೋಜೆಯಿಂ ಪೂಜಿಸಿ ದಾಸೋಹ ಭಾವಂಬಡೆದು ಪಾದೋದಕಪ್ರಸಾದಂಬಡೆದು ಸೇವಿಸಿ ಸರಸತರ ಸಾತ್ವಿಕಭಕ್ತವೆರಸಿ ತದೀಯ ಸುಖಗೋಷ್ಠಿಯೊಳ್ಸಂದು ಮತ್ತಮಿರದೆ—

ಸೊಗಯಿಪ ದಿವ್ಯ ಷಡ್ರಸ ಸುಭೋಜನದಿಂ ಘನಸಾರಗಂಧಿ ವೀ
ಟಿಗಳಿನಪೂರ್ವ ಕುಂಕುಮ ಮೃಗೋದ್ಭವ ಚಂದನ ಗಂಧಲೇಪದಿಂ

ಸೊಗಸನ್ನುಂಟುಮಾಡುವ ಶ್ವೇತ ಛತ್ರಗಳ, ನೂತನ ರತ್ನದಿಂದ ಕಟ್ಟಿದ ನಡೆತೋರಣಗಳ, ಸ್ತ್ರೀಯರು ಹಿಡಿದು ತರುತ್ತಿರುವ ಬಂಗಾರದ ಕಳಶ ರತ್ನದ ಕನ್ನಡಿಗಳ, ಅಷ್ಟದಿಕ್ಪಾಲಕರ ಕಿವಿಯ ರಂಧ್ರಗಳಲ್ಲಿ ಚಕ್ಕಳ ಗುಳಿಯಿಕ್ಕುವಂತೆ ಧ್ವನಿ ಮಾಡತಕ್ಕ ಮೃದಂಗ, ಶಂಖ, ತಾಳ, ಕಹಳೆ, ಕೊಂಬುಗಳ ಅಧಿಕವಾದ ಶಬ್ದಗಳ, ಹೊಗಳತಕ್ಕ ಸ್ತುತಿ ಪಾಠಕರ ಗುಂಪಿನ, ಒತ್ತೊತ್ತಾಗಿರುವ ಮಾಹೇಶ್ವರರುಗಳ, ಆಕಾಶದಲ್ಲಿ ಕುಣಿಯುವ ವ್ಯಾಸನತೋಳಿನ ಅಧಿಕವಾದ ಸಂಪತ್ತು ಕಂಗೊಳಿಸುತ್ತಿತ್ತು. ನಡೆಮಡಿಯನ್ನು ಹಾಸುತ್ತ ಹೆಜ್ಜೆಹೆಜ್ಜೆಗೂ ಅಂಜಲಿಯಿಂದ ಹೂಗಳನ್ನು ಸುರಿಸುತ್ತ, ಜೇಗಟೆ (ಜಯಗಂಟೆ)ಯನ್ನು ಬಾರಿಸುತ್ತ, ಉಘೇ ಉಘೇ ಎಂಬ ಶಬ್ದಮಾಡುತ್ತಿದ್ದನು. ಆ ಶಬ್ದವು ದಿಕ್ಕಿನ ಕೊನೆಯವರೆಗೂ ವ್ಯಾಪಿಸುತ್ತಿತ್ತು. (ಹೀಗೆ) ಅತಿ ಸಂಭ್ರಮದಿಂದ ಇದಿರುಗೊಳ್ಳುತ್ತಿದ್ದನು. (ಅವರನ್ನು) ನೋಡಿ, ಕೊಂಡಾಡುತ್ತ ದಂಡಪ್ರಣಾಮ ಮಾಡುತ್ತ ತನ್ನ ಮನೆಗೆ ಕರೆತಂದು ಹೊಗಿಸಿ ರತ್ನಖಚಿತವಾದ ಆಸನದಲ್ಲಿ ಕುಳ್ಳಿರಿಸಿ ಧನ, ಕನಕ, ರತ್ನಾಭರಣಗಳು, ಒಳ್ಳೆಯ ವಸ್ತ್ರ, ವಾಹನಗಳೇ ಮೊದಲಾದವುಗಳಿಂದ ಅವರ ಇಚ್ಛೆಗನುಸಾರವಾಗಿ ಕ್ರಮವಾಗಿ ಪೂಜಿಸಿ. ನಾನು ಸೇವಕನು ಎಂಬ ಭಾವನೆಯನ್ನು ಹೊಂದುತ್ತಿದ್ದನು. (ಅವರ) ಪಾದೋದಕ ಪ್ರಸಾದಗಳನ್ನು ಪಡೆದು ಸ್ವೀಕರಿಸುತ್ತಿದ್ದನು. ಸರಸತರವಾದ ರೋಮಾಂಚ, ಸ್ವೇದ, ಗದ್ಗದವೇ ಮೊದಲಾದ ಸಾತ್ವಿಕ ಭಾವಗಳಿಂದ ಸೂಚಿತವಾದ ಭಕ್ತಿ ಭಾವದಿಂದ ಕೂಡಿ, ಅವರ ಸಂಬಂಧವಾದ ಸದ್ಗೋಷ್ಠಿಯಲ್ಲಿರುವವನಾದನು ಮತ್ತು ತಪ್ಪದೆ—೪೫. ಆ ಜಂಗಮ ಸಮೂಹವನ್ನು ಸೊಗಸಾದ ಷಡ್ರಸೋಪೇತ ಭಕ್ಷ್ಯಭೋಜ್ಯಗಳಿಂದಲೂ, ಅಪೂರ್ವ ಕುಂಕುಮ ಕೇಸರಿ,

1 ಲಕ (ಚ, ಗ, ಜ, ತ.) 2 ಳ (ದ)

ಮೃಗಮದಗಂಧಪಚ್ಚ ಪೊಸರದೆ ಚಾರುತರಾಂಬರದಿಂದನರ್ಘ್ಯ ರ
ತ್ನಗಣವಿಭೂಷಣಾಳಿಗಳಿನರ್ಚಿಸಿದಂ ಚರಲಿಂಗವೃಂದಮಂ ೪೫

ಹರಿಸದೆ ನೋಡಿ ನೋಡಿ ಸುಖವಾರ್ಧಿಯೊಳಾಳುತೆ ಮೂಡಿ ಮೂಡಿ ಸಾ
ದರಮುಜ್ ಪಾಡಿ ಪಾಡಿ ಪದಪೂಜನಮಂ ಮಿಗೆ ಮಾಡಿ ಮಾಡಿ ಭ
ಕ್ತಿರತಿಯು ಕೂಡಿ ಕೂಡಿ ನಿಜದೇಹಮನಂಘ್ರಿಗೆ ನೀಡಿ ನೀಡಿ ಶಾಂ
ಕರಗಣವೃಂದಮಂ ಭಜಿಸಿ ತತ್ಕೃಪೆಯಂ ಪಡೆದಂ ವೃಷಾಧಿಪಂ ೪೬

ಕಾಮಸುಖಾರ್ಥಿಗಳ್ಗೆ ನವಯೌವನರೂಪವಿಳಾಸಯುಕ್ತ ಸ
ತ್ಕಾಮಿನಿಯರ್ಕಳಂ ದ್ರವಿಣರಾಶಿಯನಲ್ಲಿ ಧನಾರ್ಥಿಗಳ್ಗೆ ದಿ
ವ್ಯಾಮಳ ಭೂಷಣಾವಳಿಯನಾಭರಣಾರ್ಥಿಚಯಕ್ಕೆ ಲಿಂಗಪೂ
ಜಾಮತಿಗಳ್ಗೆ ಲಿಂಗಯಜನೋಚಿತವಸ್ತುವನೀವನಕ್ಕರಿಂ ೪೭

ವ್ರತಶೀಲಪರಾಯಣ ಸಂ
ತತಿಗಾ ವ್ರತಶೀಲಮಂ ಕರಂ ಸಲಿಸುತೆ ಭೂ
ಪತಿ ಭೋಗಮನೆರೆದರಸು
ನ್ನತತರ ರಾಜೋಪಚಾರದಿಂ ಪೂಜಿಸಿದಂ ೪೮

ಕಸ್ತೂರಿ, ಶ್ರೀಗಂಧಾದಿಗಳ ಲೇಪನದಿಂದಲೂ, ಗಮ ಗಮ ವಾಸನೆಯಿಂದ ಕೂಡಿದ ಹೊಸ ಹೂವಿನ ಮಾಲೆಗಳಿಂದಲೂ, ಅತಿ ಮನೋಹರವಾದ ಬಟ್ಟೆ ಬರೆಗಳಿಂದಲೂ, ಅಮೂಲ್ಯವಾದ ರತ್ನಗಳ ಆಭರಣಗಳಿಂದಲೂ ಪೂಜಿಸಿದನು. ೪೬. ಬಸವೇಶ್ವರನು ಆ ಶಿವಗಣ ಸಮೂಹವನ್ನು ಹರ್ಷದಿಂದ ನೋಡಿ ನೋಡಿ, ಸಂತೋಷ ಸಮುದ್ರದಲ್ಲಿ ಮುಳುಗುವವನಾಗಿ, ಆದರ ಪೂರ್ವಕವಾಗಿ ಹೆಚ್ಚಾಗಿ ಹಾಡಿ ಹಾಡಿ, ಪಾದಪೂಜೆಯನ್ನು ಚೆನ್ನಾಗಿ ಮಾಡಿ ಮಾಡಿ, ಶಿವಭಕ್ತಿಯಲ್ಲಿ ಆಸಕ್ತಿಯಿಂದ ಕೂಡಿ ಕೂಡಿ, ತನ್ನ ದೇಹವನ್ನು ಅವರ ಪಾದತಲಕ್ಕೆ ಚಾಚಿ, ಸಾಷ್ಟಾಂಗ ಪ್ರಣಾಮ ನೀಡಿ ನೀಡಿ, ಎದ್ದೆದ್ದು ಭಜನೆ ಮಾಡಿ, ಅವರ ಕಾರುಣ್ಯವನ್ನು ಪಡೆದನು. ೪೭. ಮನ್ಮಥ ಸಂಬಂಧದ ಸುಖಾಪೇಕ್ಷಿಗಳಿಗೆ ನೂತನ ಯೌವನ, ರೂಪ, ವಿಲಾಸಾದಿಗಳಿಂದ ಕೂಡಿದ ಶ್ರೇಷ್ಠ ಸ್ತ್ರೀಯರುಗಳನ್ನೂ, ದ್ರವ್ಯವನ್ನು ಅಪೇಕ್ಷಿಸುವವರಿಗೆ ದ್ರವ್ಯದ ರಾಶಿಯನ್ನೂ, ಆಭರಣಗಳನ್ನು ಬೇಡುವವರಿಗೆ ಶ್ರೇಷ್ಠವಾದ ನಿರ್ಮಲಾಭರಣಗಳನ್ನೂ, ಲಿಂಗ ಪೂಜಾಧುರಂಧರರಿಗೆ ಲಿಂಗ ಪೂಜೆಗೆ ಯೋಗ್ಯವಾದ (ಪತ್ರಿ ಪುಷ್ಪಾಕ್ಷತೆ ಗಂಧ ಚಂದ್ರಾದಿ) ಪದಾರ್ಥಗಳನ್ನು ಪ್ರೀತಿಯಿಂದ ಕೊಡುತ್ತಿದ್ದನು. ೪೮. ವ್ರತ, ಸದಾಚಾರ ಇವುಗಳಲ್ಲಿ ಆಸಕ್ತರಾದ ಶಿವಗಣಂಗಳಿಗೆ ಆ ವ್ರತ ಶೀಲಗಳಿಗೆ ಯೋಗ್ಯ ಸನ್ನಿವೇಶವನ್ನು ಒದಗಿಸುತ್ತಿದ್ದನು. ರಾಜಸುಖವನ್ನು ಬೇಡಿದವರಿಗೆ ಶ್ರೇಷ್ಠಕರವಾದ

ಚೆನ್ನೆಸೆವ ಸೂಳೆಮೇಳದ
ಬಿನ್ನಣದ ಭುಜಂಗ ಜಂಗಮೋತ್ಕರಮಿರ್ಕುಂ
ಪನ್ನೆರಡುಸಾಸಿರಂ ಬಳಿ
ಕಿನ್ನುಳಿದರನಾರೊ ಲೆಕ್ಕಿಸಲ್ಕೆ ಸಮರ್ಥರ್ ೪೯

ಅನಿಬರ್ಗೆಂದುಂ ಕುಂದದೆ
ಮನಕ್ಕೆ ಪರಿತುಷ್ಟಿಯಪ್ಪಿನಂ ಬಗೆದುದನೊ
ಲ್ದನುನಯದಿನಿತ್ತು ಮನ್ನಿಪ
ನನವಧಿಗುಣಧಿ ಶಿವೈಕ್ಯಜನಮಂದಾರಂ ೫೦

ಸುಜನಾಸ್ಯಾಬ್ಜವನಂ ಪೊದಳ್ದಲರೆ ಮೋಹೇಂದೀವರಂ ಕುಂದೆ ಚಿ
ತ್ತಜದರ್ಪಾಂಧತಮಂ ಕರಂ ಪರೆಯೆ ದುರ್ದಾಂತೋಡುಗಳ್ಕುಂದೆ ಭ
ಕ್ತಜನಸ್ವಾಂತವಿಲೋಚನಕ್ಕೆ ವಿಷಯಂ ಸರ್ವಾರ್ಥಮಪ್ಪಂತೆ ಮಾ
ಡಿ ಜಗದ್ವಂದ್ಯ ವೃಷಾರ್ಕನಭ್ಯುದಯಮಂ ಕೈಕೊಂಡು ಕಣ್ಗೊಪ್ಪಿದಂ ೫೧

ಬಸವನನೂನದಾನಗುಣದೇಳ್ಗೆಯನಾಲಿಸಿ ದೇವಧೇನು ತ
ನ್ನಸಕಮಡಂಗಿ ಲಜ್ಜೆ ಮಿಗೆ ಪಾಲ್ದೆಗೆದಿರ್ದುದು ನೈಜಮಲ್ಲದಂ
ದೊಸೆದಮೃತಾಂಧಸರ್ಮುಖದೆ ಬೇಳ್ವ ಸುಧಾಜ್ಯರಸಕ್ಕೆ ಮೋಜಿ[3]ವಾ
ತಸವಸದಿಂದೆ ಬಂದೆಳಸಿ ಸೇವಿಪರೆಂತೊ ತದೀಯ ಧೂಮಮಂ ೫೨

ರಾಜೋಪಚಾರದಿಂದ ಪೂಜಿಸುತ್ತಿದ್ದನು. ೪೯. ಸುಂದರಿಯರಾದ ವೇಶ್ಯಾ ಸ್ತ್ರೀಯರ ಸಂಗದಿಂದ ವಿನೋದ ಸುಖವನ್ನನುಭವಿಸುವ ವಿಟರುಗಳಾದ ಜಂಗಮರ ಸಮೂಹವು ಹನ್ನೆರಡು ಸಾವಿರವಿತ್ತು ಎನ್ನುವಾಗ ಇನ್ನುಳಿದವರನ್ನು ಲೆಕ್ಕ ಮಾಡುವುದಕ್ಕೆ ಯಾರು ಸಮರ್ಥರಾಗುವರೋ ! ೫೦. ಅನಂತವಾದ ಸದ್ಗುಣಗಳಿಗೆ ನಿಕ್ಷೇಪರೆನಿಸಿದ, ಶಿವನಲ್ಲಿ ಏಕತೆ ಹೊಂದಿದ ಜನರಿಗೆ (ಶಿವಭಕ್ತ ಜನರಿಗೆ) ಕಲ್ಪವೃಕ್ಷ ಸದೃಶನಾದ ಬಸವೇಶ್ವರನು, ಅಷ್ಟು ಜನ ಜಂಗಮರಿಗೂ ಸತತವೂ ತಪ್ಪದೆ ಮನಸ್ಸಂತೋಷವಾಗುವಂತೆ ಬಯಸಿದುದನ್ನು ಪ್ರೀತಿಯಿಂದ ಒಲಿದು ಕೊಡುತ್ತ ಮನ್ನಣೆಗೊಳಿಸುತ್ತಿದ್ದನು. ೫೧. ಜಗಜ್ಜನರಿಂದ ನಮಸ್ಕರಿಸಿಕೊಳ್ಳುವುದಕ್ಕೆ ಯೋಗ್ಯನಾದ ಬಸವೇಶ್ವರನೆಂಬ ಸೂರ್ಯನು ಸತ್ಪುರುಷರ ಮುಖವೆಂಬ ಕಮಲ ವನವು ಪ್ರಕಾಶಗೊಂಡು ಅರಳುತ್ತಿರಲು, ಮೋಹವೆಂಬ ಕನ್ನೈದಿಲೆಯು ಕೊರಗುತ್ತಿರಲು, ಮನ್ಮಥನ ಅಹಂಕಾರವೆಂಬ ಗಾಢಾಂಧಕಾರವು ಚೆನ್ನಾಗಿ ನಾಶವಾಗುತ್ತಿರಲು, ದುರ್ಜನರೆಂಬ ನಕ್ಷತ್ರಗಳು ಕಾಂತಿಹೀನವಾಗುತ್ತಿರಲು, ಶಿವಭಕ್ತರಾದ ಜನರ ಮನಸ್ಸೆಂಬ ನೇತ್ರಗಳಿಗೆ ಸಮಸ್ತ ಇಷ್ಟಾರ್ಥ ರೂಪವಾದ ವಿಷಯವು ಗೋಚರವಾಗುತ್ತಿರಲು ಅವರ ಸೇವೆ ಮಾಡಿ, ಅಭಿವೃದ್ಧಿಯನ್ನು ಹೊಂದಿ ನೋಟಕ್ಕೆ ಒಪ್ಪುವವನಾಗಿದ್ದನು. ೫೨. ಬಸವಣ್ಣನ ಕುಂದಿಲ್ಲದ ದಾನಗುಣದ ಏಳ್ಗೆಯನ್ನು ಕೇಳಿ, ಕಾಮಧೇನುವಿನ ತನ್ನ (ಕಾಮಿಸಿದುದನ್ನು) ಕೊಡುವ ಉದ್ಯೋಗವು ಅಡಗಿ ಹೋಗಲಾಗಿ ಹೆಚ್ಚಾದ ನಾಚಿಕೆಯಿಂದ ಹಾಲುಕರೆಯುವುದನ್ನೇ ಬಿಟ್ಟಿತು, ಎಂಬುದು ನಿಜವಾದುದು. ಹಾಗಿಲ್ಲದಿದ್ದ ಪಕ್ಷದಲ್ಲಿ ಅಂದು

ನೆಗಳ್ದ ಕರಸ್ಪರ್ಶನದಿಂ
ಸೊಗಯಿಪ ಸುರಮಣಿಯನೊಲ್ದು ಸೋಲಿಸುತೆನ್ನಂ
ಬಗೆಯದೆ ನೂಂಕಿದನೆನುತಂ
ಜಗದೊಳ್ ವೃಷಕೀರ್ತಿವನಿತೆ ದೂಱಿದಳವನಂ ೫೩

ದೆಸೆದೀವಿದ ಬಸವಯಶೋ
ವಸನಮನಿರದಾಂತು ತಾಂ ದಿಗಂಬರನಾಗು
ತ್ತಸಮಾಕ್ಷಂ ತೆಗೆದಿಟ್ಟಾ
ಪೊಸ ಸಮ್ಮಂ ತೋರ್ಪುದಂಬರಚ್ಛಲದಿಂದಂ ೫೪

ವಾರಿಜಸಂಭವಾಂಡಮಂಕಳಂಕಗುಣಾಂಕವೃಷೇಂದ್ರನುದ್ಯಶಃ
ಪೂರಮಳುಂಬಮಾಗಿ ಸಲೆ ತೆಕ್ಕನೆ ತೀವೆ ಬೆಳರ್ತುದು ಚಂದ್ರಮ
ಸ್ಸಾರ ಮರಾಳ ಶಾಬವೊಳಗೊಂದಿರೆ ತದ್ವಿಧಿ ಶಕ್ತಿಹಂಸೆಯಾ
ಧಾರ ಪಯಃಪ್ರದೇಶದೊಳಗಿಕ್ಕಿದ ತತ್ತಿಯವೋಲ್ವಿರಾಜಿಕುಂ ೫೫

ದೇವತೆಗಳು(ಅಮೃತಾಂಧಸರ್)ಯಜ್ಞದಲ್ಲಿ ಹವಿಸ್ಸನ್ನು ಕೊಡುವ ಹಾಲು ತುಪ್ಪಗಳನ್ನು ಪ್ರೀತಿಸಿ, ಜಾಗರೂಕತೆಯಿಂದ ಬಂದು ಅಪೇಕ್ಷೆಪಟ್ಟು ಮುಖವನ್ನು ಚಾಚಿ ಆ ಹೋಮದ ಹೊಗೆಯನ್ನು ಹೇಗೆ ಸೇವಿಸುವರೋ ! ೫೩. ಪ್ರಸಿದ್ಧವಾದ ತನ್ನ ಕರಸ್ಪರ್ಶನದಿಂದ (ಕೈಯಿಂದ ಮುಟ್ಟುವುದರಿಂದ ಮತ್ತು ಕೈಯಿಂದ ದಾನಮಾಡುವುದರಿಂದ) ಸುರಮಣಿಯನ್ನು (ಸುಂದರ ರಮಣಿಯನ್ನು ಮತ್ತು ದೇವಮಣಿಯೂದ ಚಿಂತಾರತ್ನವನ್ನು) ಒಲಿದು ಸೋಲಿಸುತ್ತ, ನನ್ನನ್ನೇ ಧಿಕ್ಕರಿಸಿ ಹೊರಗೆ ತಳ್ಳಿದನೆಂದು ಬಸವನ ಕೀರ್ತಿವನಿತೆಯು ಜಗತ್ತಿನಲ್ಲಿ ಅವನನ್ನು ದೂರಿದಳು (ಅವನ ಕೀರ್ತಿ ಜಗತ್ತಿನಲ್ಲಿ ಹರಡಿತು ಮತ್ತು ಅವನು ದಾನದಲ್ಲಿ ಚಿಂತಾರತ್ನವನ್ನು ಮೀರಿಸಿದನು ಎಂದು ಅಭಿಪ್ರಾಯ) ಟಿಪ್ಪಣಿ. ಸ್ಪರ್ಶನ = ಸ್ಪರ್ಶ, ದಾನ. ವೃಷ = ಬಸವ, ಇನ್ನೊಬ್ಬ ರಮಣಿಯನ್ನು ಬಯಸಿ ತನ್ನ ಕೀರ್ತಿವನಿತೆಯನ್ನು ಬಿಟ್ಟುಬಿಟ್ಟನೆಂದು ನಿಂದೆ. (ರಂ) ೫೪. ದಿಕ್ಕುಗಳಲ್ಲಿ ತೀವಿದ ಬಸವನ ಕೀರ್ತಿಯೆಂಬ ವಸ್ತ್ರವನ್ನುಟ್ಟು ಶಿವನು ದಿಗಂಬರನಾದನು ! ತಾನು ಮೊದಲು ಉಟ್ಟಿದ್ದ ಹೊಸ ಗಜಚರ್ಮವನ್ನು ತೆಗೆದಿಡಲಾಗಿ, ಅದು ಆಕಾಶದ ನೆವದಿಂದ ಕಾಣಿಸಿಕೊಳ್ಳುತ್ತಿದೆ. (ಕೀರ್ತಿ ಬೆಳ್ಳಗಿರುವುದರಿಂದ ಅದು ವಸ್ತ್ರವೆಂದು ಭ್ರಮಿಸಿ ಶಿವನು ತಾನು ಉಟ್ಟಿದ್ದ ಗಜಚರ್ಮವನ್ನು ಬಿಚ್ಚಿ ತೆಗೆದಿಟ್ಟನು. ಅದು ಕಪ್ಪಾದ ಆಕಾಶವೆನಿಸಿದೆ. ಕೀರ್ತಿಯನ್ನು ಉಡಲು ಬಾರದೆ ಇದ್ದುದರಿಂದ ದಿಗಂಬರನಾದನು ಎಂದು ಭಾವ. ಸಮ್ಮ = ಚರ್ಮ). (ರಂ) ೫೫. ಕಲಂಕರಹಿತವಾದ ಗುಣಗಳುಳ್ಳ ಬಸವೇಶ್ವರನ ಅಧಿಕವಾದ ಕೀರ್ತಿಯೆಂಬ ಪ್ರವಾಹವು, ಚೆನ್ನಾಗಿ ಪ್ರಕಾಶಗೊಂಡು, ಬ್ರಹ್ಮಾಂಡವನ್ನು ತುಂಬಲಾಗಿ. ಅದು ಬೆಳ್ಳಗಾಯಿತು. (ಅಲ್ಲಿರುವ) ಚಂದ್ರನೆಂಬ ಹಂಸಪಕ್ಷಿಯ ಮರಿಯು ಒಳಭಾಗದಲ್ಲಿ ಉಳ್ಳುದಾಗಿ, ಆ ಬ್ರಹ್ಮನ ಶಕ್ತಿಯೆಂಬ ಹೆಣ್ಣು ಹಂಸಪಕ್ಷಿಯು ತನಗೆ ಆಧಾರವಾದ ಜಲಪ್ರದೇಶದಲ್ಲಿ ಹಾಕಿದ ಮೊಟ್ಟೆಯಹಾಗೆ ಪ್ರಕಾಶಿಸುವುದು.

ವ॥ ಮತ್ತಮಲ್ಲಿ —

ನಾಗಲದೇವಿಯಲ್ಲೊಗೆದು ಜಂಗಮಶೇಷದಿನಂಗಲಿಂಗಸಂ
ಯೋಗಮನಾ ವೃಷೇಂದ್ರನುಪದೇಶದಿನಾಳ್ದು ಶಿವಾನುಭೂತಿ ಚೇ
ತೋಗತಮಾಗೆ ವಾದಿಗಳನಂಜಿಸಿ ಭಂಜಿಸಿ ಗೆಲ್ದು ಬೆಳ್ಪಸಂ
ನಾಗ ನರಾದಿ ಲೋಕದೊಳೆ ತೀವಿರೆ ಚನ್ನವೃಷಾಂಕನೊಪ್ಪಿದಂ ೫೬

ನುತಶೀಲಂ ಭಕ್ತಿಲೋಲಂ ಕರಣಗುಣವಿನಿರ್ಮುಕ್ತನೀಶಾನುರಕ್ತಂ
ಜಿತಕಾಮಂ ಚಿತ್ಸುಧಾಮಂ ಶಿವಸಮರಸಸದ್ಭಾವನುದ್ಯತ್ಪ್ರಭಾವಂ
ಭೃತಲಿಂಗಂ ಸಾಧುಸಂಗಂ ಪ್ರಮುದಿತ ಗಣಸಂದೋಹನುದ್ವೀತಮೋಹಂ
ಮತಿಧುರ್ಯಂ ಯೋಗಿವರ್ಯಂ ವಿತತ ಘನದಯಾಸಾರನತ್ಯಂತ ಧೀರಂ ೫೭

ಅಚಳಿತ ಸತ್ಯಭಾಷಣನಪಾಕೃತ ಲೌಕಿಕಮಾರ್ಗನತ್ಯಪೂ
ರ್ವಚರಿತನನ್ಯಕರ್ಮರಹಿತಂ ತ್ರಿವಿಧೇಶ್ವರಶೇಷಭೋಗಿ ಸ

[ಬಸವೇಶ್ವರನ ಕೀರ್ತಿಯೆಂಬ ಪ್ರವಾಹದಲ್ಲಿ ಬ್ರಹ್ಮಾಂಡವು ಬೆಳಗಾಗಿ ಮೊಟ್ಟೆಯಂತೆ ಕಾಣುವುದು. ಚಂದ್ರನು ಮಾತೆಯಲ್ಲಿರುವ ಹಂಸದ ಮರಿಯಂತೆ ಕಾಣುವನು ಎಂದು ಭಾವ] ವ॥ ಮತ್ತು ಅಲ್ಲಿ. ೫೬. (ಆ ಕಲ್ಯಾಣದಲ್ಲಿ) ನಾಗಲಾಂಬಿಕೆಯೆಂಬವಳ (ಬಸವೇಶ್ವರನ ಅಕ್ಕನ) ಗರ್ಭದಲ್ಲಿ ಜಂಗಮ ಪ್ರಸಾದದಿಂದ ಆವಿರ್ಭವಿಸಿದವನೂ, ಬಸವೇಶ್ವರನ ಉಪದೇಶದಿಂದ ಅಂಗಲಿಂಗ ಸಂಯೋಗಗೊಂಡವನೂ, ಶಿವಾನುಭಾವವನ್ನು ಹೃದ್ಗತ ಮಾಡಿಕೊಂಡವನೂ, ಪರಸಮಯವಾದಿಗಳನ್ನು ಅಂಜಿಸಿ, ನಾಶಗೊಳಿಸಿ ಗೆದ್ದವನೂ, ನಾಗಲೋಕ (ಪಾತಾಳ ಲೋಕ), ನರಲೋಕಗಳಲ್ಲಿ ಶುಭ್ರವಾದ ಕೀರ್ತಿಯಿಂದ ತುಂಬಿದವನೂ ಆದ ಚೆನ್ನಬಸವೇಶ್ವರನು ಶೋಭಿಸುತ್ತಿದ್ದನು. ೫೭. (ಆ ಚೆನ್ನಬಸವೇಶ್ವರನು) ಸ್ತೋತ್ರಾರ್ಹನಾದ ಶೀಲವುಳ್ಳವನೂ, ಶಿವಭಕ್ತರಲ್ಲಿ ಆಸಕ್ತಿಯುಳ್ಳವನೂ, ಇಂದ್ರಿಯ ಗುಣಗಳಿಂದ ದೂರನಾದವನೂ, ಈಶ್ವರನಲ್ಲಿ ಅನುರಕ್ತನಾದವನೂ, ಕಾಮನನ್ನು ಜಯಿಸಿದವನೂ, ಜ್ಞಾನಕ್ಕೆ ಒಳ್ಳೆಯ ಆಶ್ರಯನೂ, ಶಿವನಲ್ಲಿ ಸಾಮರಸ್ಯ ಹೊಂದಿದ ಚಿತ್ತವುಳ್ಳವನೂ, ಅತ್ಯಂತ ಮಹಿಮನೂ, ಶಿವಲಿಂಗಧಾರಿಯೂ, ಸತ್ಪುರುಷರ ಸಹವಾಸವುಳ್ಳವನೂ, ಗಣಸಮೂಹವನ್ನು ಮೋದಗೊಳಿಸುವವನೂ, ಮೋಹವನ್ನು ದೂರಮಾಡಿದವನೂ, ಬುದ್ಧಿಶಾಲಿಯೂ, ಶಿವಯೋಗಿಗಳಲ್ಲಿ ಶ್ರೇಷ್ಠನೂ, ಅಧಿಕವಾದ ದಯಾರಸದ ಸಾರವುಳ್ಳವನೂ, ಅತ್ಯಂತಧೀರನೂ (ಎನಿಸಿದ್ದನು). ೫೮. (ಆ ಚೆನ್ನಬಸವೇಶ್ವರನು) ಅಚಲಿತವಾದ ಸತ್ಯದ ನುಡಿಯುಳ್ಳವನು ; ಲೋಕ ಲೌಕಿಕಮಾರ್ಗವನ್ನು ತಿರಸ್ಕರಿಸಿದವನು ; ಅಪೂರ್ವವಾದ ಚರಿತ್ರೆಯುಳ್ಳವನು ; ಶಿವಪೂಜಾಕರ್ಮವಲ್ಲದೆ ಅನ್ಯಕರ್ಮದಿಂದ ದೂರನಾದವನು ; ಗುರುಲಿಂಗ ಜಂಗಮರೆಂಬ ಶ್ರೇಷ್ಠರ ಪ್ರಸಾದ ಭೋಗೋಪಭೋಗಿಯು ; ಸತ್ಪುರುಷ ಸಮೂಹದಿಂದ ಸ್ತೋತ್ರಮಾಡಿಸಿಕೊಳ್ಳುವವನು ;

ತ್ರ್ರಚಯಪರಿಸ್ತುತಂ ಗುರುಪರಾಯಣನನ್ವಿತ ಮೂಲಮಂತ್ರಸ
ದ್ರುಚಿ ನವಲಿಂಗಸಂಗತನಿಜಾಂಗನನಂಜನಭಕ್ತರಂಜನಂ ೫೮

ಗುರುಮೂರ್ತಿ ಬಸವರಾಜನ
ಚರಣಾಂಬುರುಹಕ್ಕೆ ಮಣಿದು ಮುಗುಳ್ದಿಜಿಗಿ ಗುಣಾ
ಕರ ಚನ್ನಬಸವನಾ ಗುರು
ವರ ನುತಿಯಂ ಪ್ರಮುದಮಲರೆ ಮಾಡಿದನಾಗಳ್ ೫೯

ಶಿವಮತಸಾರ ದಿವ್ಯಗುಣಹಾರ ಪರಾಪ[1]ರ ತತ್ತ್ವಧೀರ ಶಾಂ
ಭವ ನಿಜರೂಪ ಚಿದ್ಘನಕಲಾಪ ನಿರಾಕೃತಪುಷ್ಪಚಾಪ ದು
ರ್ಭವವನದಾವ ಲಿಂಗಮಯಭಾವ ಮಹಾಗುರುಮೂರ್ತಿ ದೇವ ಗೌ
ರವ ಸುಪಥಪ್ರಕಾಶ ಜಯ ಚಿನ್ನಿಧಿಕೋಶ ವೃಷೇಶ ಸಂತತಂ ೬೦

ಪರಮ ಶ್ರೀಗುರುಮೂರ್ತಿ ಪಾವನ ಪರಂಜ್ಯೋತಿ ಸ್ಫುರದ್ರೂಪ ಭಾ
ಸುರ ಸಚ್ಚಿದ್ರಸಪೂರ್ಣ ನಿಷ್ಕಳ ಕಳಾಸಂಯುಕ್ತ ಸಂಸಾರ ದು
ಸ್ತರನೀರಾಕರ ಕರ್ಣಧಾರ ದುರಿತಧ್ವಾಂತಾರ್ಕ ನಿನ್ನಂಘ್ರಿಪಂ
ಕರುಹಂಗಳ್ ಶರಣಂಗಳಕ್ಕೆಮಗಜಸ್ರಂ ಶ್ರೀ ವೃಷಾಧೀಶ್ವರಾ ೬೧

ಗುರುಭಕ್ತಿಯಲ್ಲಿ ಪರಾಯಣನು ; ಸಮೀಚೀನವಾದ 'ಓಂ ನಮಃ ಶಿವಾಯ' ಎಂಬ ಷಡಕ್ಷರಾತ್ಮಕ ಮಂತ್ರದಲ್ಲಿ ಪ್ರೀತಿಯುಳ್ಳವನು ; ಒಂಬತ್ತು ವಿಧವಾದ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗ, ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗಗಳಿಂದ ಸಮೇತವಾದ ಅಂಗವುಳ್ಳವನು ; ಮಾಯೆಯಿಂದ ದೂರನಾದ (ಅನಂಜನ) ಪರಶಿವನ ಭಕ್ತರನ್ನು ರಂಜಿಸುವವನು (ಆಗಿದ್ದನು). ೫೯. ಇಂಥ ಗುರುಮೂರ್ತಿಯಾದ ಚೆನ್ನಬಸವೇಶ್ವರನು ಬಸವರಾಜನ ಚರಣಕಮಲಗಳಿಗೆ ಪುನಃ ಪುನಃ ನಮಸ್ಕಾರ ಮಾಡುವವನಾಗಿ, ಅತಿಶಯಸಂತೋಷದಿಂದ ಕೂಡಿ ಆಗ ಆ ಗುರುಶ್ರೇಷ್ಠನಾದ ಬಸವೇಶ್ವರನ ಸ್ತೋತ್ರವನ್ನು ಮಾಡಿದನು. ೬೦. ಶಿವಮತದ ಸಾರನೇ, ಸಾರಭೂತವಾದ ಶ್ರೇಷ್ಠ ಸದ್ಗುಣಗಳೇ ಹಾರವಾಗಿ ಉಳ್ಳವನೇ, ಪರತತ್ತ್ವಸ್ವರೂಪನೇ, ಧೈರ್ಯಶಾಲಿಯೇ, ಈಶ್ವರಸ್ವರೂಪನೇ, ಜ್ಞಾನವನ್ನೇ ಶ್ರೇಷ್ಠ ಆಭರಣವಾಗಿ ಉಳ್ಳವನೇ, ಮನ್ಮಥನನ್ನು ತಿರಸ್ಕರಿಸಿದವನೇ, ಸಂಸಾರವೆಂಬ ಕೆಟ್ಟಕಾಡಿಗೆ ಕಾಡುಗಿಚ್ಚಾಗಿರುವವನೇ, ಲಿಂಗಮಯನಾದ ಭಾವವುಳ್ಳವನೇ, ಮಹಾಗುರುಮೂರ್ತಿಯೇ, ಗುರುತ್ವಮಾರ್ಗದಲ್ಲಿ ಪ್ರಕಾಶಿಸುವವನೇ, ಚಿತ್ತೆಂಬ ನಿಧಿಗೆ ಬೊಕ್ಕಸದಂತಿರುವ ಗುರುವೇ, ಬಸವೇಶ್ವರನೇ, (ನಿನಗೆ) ಯಾವಾಗಲೂ ಜಯವಾಗಲಿ. ೬೧. ಶ್ರೇಷ್ಠವಾದ ಶ್ರೀಗುರುಮೂರ್ತಿಯೇ, ಪವಿತ್ರವಾದ ಪರಂಜ್ಯೋತಿಯ ಪ್ರಕಾಶಿಸುವ ರೂಪವುಳ್ಳವನೇ, ಹೊಳೆಯುವ ಸತ್ತು ಚಿತ್ತುಗಳೆಂಬ ರಸದಿಂದ ಪೂರ್ಣಗೊಂಡವನೇ, ಕಳಾರಹಿತನೂ, ಸಕಲವಿದ್ಯೆಗಳಿಂದ ಕೂಡಿದವನೂ ಆದವನೇ, ದಾಟಲ

---

1 ತ(ಮ)

ಪರಶಿವಭಕ್ತಿವಾರ್ಧಿಪರಿವರ್ಧನ ಶೀತಮಯೂಖ ಸತ್ಕೃಪಾ
ಕರ ವಿಪುಳಪ್ರಭಾವ ಚರಲಿಂಗಸಮರ್ಚನಲೋಲ ಕಾಲಸಂ
ಹರನಪರಾವತಾರ ಪರಮಾರ್ಥವಿಶಾರದ ಸಾರಸದ್ಗುಣಾ
ಭರಣ ಪವಿತ್ರಗಾತ್ರ ಶರಣಾಗೆಮಗನ್ವಿತ ಮಂಗಳೋದಯಾ ೬೨

ವ॥ ಎಂದಿಂತು ಭಕ್ತಿಯಿಂಗೆ ಸನ್ನುತಿಗೆಯ್ದು ಗುರುಪ್ರಸಾದಂಬಡೆದು ಶಿವಾನಂದರಸಪರಿಪ್ಲುತಮಾನಸಂ ಚಿನ್ನಿಧಿ ಚನ್ನಬಸವಣ್ಣನುನ್ನತೋತ್ಸವದಿನೊಪ್ಪುತ್ತಮಿರ್ಪಿನಮಲ್ಲಿ ಪೆಱತೊಂದು ವಾಸರದೊಳ್ಬಸವರಾಜನೀಶಾರ್ಚನೆಗೆಯ್ದನಂತರಮನಿಮಿಷೇಕ್ಷಣದಿಂ ಶಿವಲೀಂಗಮಂ ನಿರೀಕ್ಷಿಸುತುಮಾ ಲಿಂಗದೊಳಪೂರ್ವತರ ರೂಪಾಂತರಂ ಮಾರ್ಪೊಳೆಯೆ ವಿಸ್ಮಯಂಬಟ್ಟು ನೋಡುವಾಗಳ್ತಾಂಬೂಲ ವಾಹಕನೊರ್ವಂ ಜವದಿಂ ಪರಿತಂದು ಕೈದಾವರೆಗಳಂ ಮುಗಿದು ದೇವಾ ಮುಕ್ತಕೇಶನಲಕ್ಷಿತ ತನುಚ್ಛಾಯಂ ಚೀರಾಂಬರಾವೃತಧೂಳಿ ಧೂಸರಕಳೇವರನಜಸ್ರ ಪರಿಸ್ರವಾನಂದಬಾಷ್ಪಜಲಕಲಿತ ನಿರ್ನಿಮೇಷಾಕ್ಷಿನಿರೀಕ್ಷಿತ ಕರತಳಸ್ಥಿತಶಿವಲಿಂಗನಗಣಿತ ವಾಪಿ ಕೂಪ ತಟಾಕಾನೋಕಹ ಸರಿತ್ಸಮುದ್ರ ಭೂ ಭೂಧರಾದಿ ಸದೃಶಗಮನಂ ಸಮಾಯಾತ ಕರಿತುರಗಾದಿ ದೂರೋತ್ಸೃಷ್ಟಪುರೋಭಾಗಂ ನಿಜಗಮನಾನುಕೂಲಪವನಗಮನಂ ಗಗನಭಾಗವಿವೃತಪತ್ರಪತತ್ರಿವರಪ್ರಕರಪರಿಸೇವ್ಯ ಮಾನಂ ಜಯ ಜಯ ರವಮುಖರ ನಿಖಿಲದಿಶಾಮುಖನುಂ ಪದಪಯೋಜವಿನ್ಯಾಸ ಪವಿತ್ರಿತಕ್ಷೇತ್ರತೀರ್ಥ ಸಮಾಜಂ ಕಟಾಕ್ಷ ವೀಕ್ಷಣಮಾತ್ರ ವಿನಿರ್ಧೂತಿಭೂತಜಾತತಮಃ ಸಮೂಹನೆನಿಸಿ ನೆಗಳ್ತೆವೆತ್ತ ಶಿವಯೋಗಿ

ಶಕ್ಯವಾದ ಸಂಸಾರವೆಂಬ ಸಾಗರವನ್ನು ದಾಟಿಸುವ ನಾವಿಕನೇ, ಪಾಪವೆಂಬ ಕತ್ತಲೆಗೆ ಸೂರ್ಯನೋಪಾದಿಯಲ್ಲಿರುವವನೇ, ವೃಷಾಧೀಶ್ವರನೇ, ನಿನ್ನ ಪಾದ ಕಮಲಗಳು ಸದಾ ನನ್ನನ್ನು ರಕ್ಷಿಸುವವುಗಳಾಗಲಿ. ೬೨. ಮಂಗಳಗಳ ಅಭಿವೃದ್ಧಿಯಿಂದ ಕೂಡಿದ ಬಸವೇಶ್ವರನೇ, ಶ್ರೇಷ್ಠನಾದ ಶಿವನಭಕ್ತಿಯೆಂಬ ಸಮುದ್ರವನ್ನು ಉಕ್ಕಿಸುವ ಚಂದ್ರನೇ ಸಮೀಚೀನವಾದ ಕೃಪೆಯೆಂಬ ರಸಕ್ಕೆ ಆಶ್ರಯನೇ, ವಿಶೇಷವಾದ ಮಹಿಮೆಯುಳ್ಳವನೇ, ಜಂಗಮಲಿಂಗವನ್ನು ಪೂಜಿಸುವುದರಲ್ಲಿ ಆಸಕ್ತನಾದವನೇ, ಕಾಲನನ್ನು ಸಂಹರಿಸಿದ ಶಿವನ ಅವತಾರಿಯೇ, ತತ್ತ್ವಾರ್ಥದಲ್ಲಿ ಸಮರ್ಥನೇ, ಸಾರತರವಾದ ಸದ್ಗುಣಗಳೇ ಆಭರಣವಾಗಿ ಉಳ್ಳವನೇ, ಪರಿಶುದ್ಧ ಶರೀರಿಯೇ, ನನ್ನ ಸಂರಕ್ಷಕನಾಗು. **ವಚನ :** ಈ ರೀತಿಯಲ್ಲಿ ವಿಶೇಷವಾಗಿ ಸ್ತೋತ್ರಮಾಡಿ, ಗುರುವಾದ ಆ ಬಸವಣ್ಣನ ಪ್ರಸಾದವನ್ನು ಹೊಂದಿ, ಶಿವಸಂಬಂಧವಾದ ಆನಂದ ರಸದಲ್ಲಿ ವ್ಯಾಪ್ತಗೊಂಡ ಮನಸ್ಸುಳ್ಳ ಚಿತ್ತೆಂಬ ನಿಧಿಯುಳ್ಳ ಚೆನ್ನಬಸವೇಶ್ವರನು ಉನ್ನತಿಗೊಂಡ ಸಂತೋಷದಿಂದ ಒಪ್ಪುತ್ತ ಇದ್ದನು. ಅಲ್ಲಿ (ಆಗ) ಬೇರೊಂದು ದಿನದಲ್ಲಿ ಬಸವರಾಜನು ಶಿವಪೂಜೆಯನ್ನು ಮಾಡಿದಮೇಲೆ ರೆಪ್ಪೆಯನ್ನು ಮಿಳುಕಿಸದಂತೆ ಶಿವಲಿಂಗವನ್ನು ನಿರೀಕ್ಷಣೆ ಮಾಡುತ್ತಿರಲು, ಆ ಲಿಂಗದಲ್ಲಿ ಅಪೂರ್ವವಾದ ಮತ್ತೊಂದು ರೂಪವು ಪ್ರತಿಫಲನಗೊಳ್ಳಲು, ಆಶ್ಚರ್ಯಗೊಂಡು ನೋಡುತ್ತಿರುವಾಗ ಒಬ್ಬ ವೀಳೆಯ ಕರಂಡಕಧಾರನು

ಸಾರ್ವಭೌಮನೊರ್ವಂ ದ್ವಾರದೇಶದೊಳೆಯ್ತಂದಿರ್ದಪನೆಂಬುದುಂ ಕೇಳ್ದು ಘಳಿಲನೇಳ್ದು ಬಂದು ಪೊಸ ಸಂತಸಮನಿದಿರ್ಗೊಳಲೊಡಲ್ಗುಡಿಗಟ್ಟಿದಂತೆ ರೋಮೋದ್ಗಮಂ ನಿಮಿರೆಯುಂ ಶಿವಾನಂದರಸಂ [1]ತನುವಂ[1] ತೀವಿ ಪೊಱಸೂಸಿದತ್ತೆನೆ ಸಂತಸಗಂಬನಿಗಳುಣ್ಮೆ ಭಕ್ತಿಸುಖಕ್ಕೆ ಸಮಸುಖಮೆಲ್ಲಿಯುಮಿಲ್ಲೆಂಬಂತೆ ಕರಕಂಪನಂ ನೆಗಳೆ ಮಹಾನುಭಾವನಿದಿರೊಳ್ತನುಭಾವಮೆಲ್ಲಿಯುದೆನಿಸಿ ಪಾರವಶ್ಯಂ ಮಿಗೆ ಸಾತ್ವಿಕಭಕ್ತಿಯಿಂ ಸಡಗರಿಸಿ ಗಣಸಮಿತಿಸಮೇತಂ ಬಂದು ಕಟ್ಟಿದಿರೊಳ್ಕೊಂಡು ಸಾಷ್ಟಾಂಗವೆಱಗಿ ಮಹೋತ್ಸವದಿನೊಡಗೊಂಡು ಪೋಗಿ ನಿಜಗೃಹದ ಸಮುನ್ನತಾಸನದೊಳ್ಕೆಯ್ಗೊಟ್ಟು ಮೂರ್ತಿಗೊಳಿಸಿ ಜಲಗಂಧಕುಸುಮಧೂಪದೀಪಾದಿಯಿಂ[2] ಪಾದಾಬ್ಜಮಂ ಪೂಜಿಸಿ ಕೂರ್ಮೆಯಿಂ ಕೊಂಡಾಡಿ ನಿತ್ಯತೃಪ್ತನೆಂಬುದಂ ಭಕ್ತಿಪಾರವಶ್ಯದಿಂ ಮಱೆದು ತೃಪ್ತಿಗೆಯ್ಯಲೆಳಸಿ ಬಸವಂ

ವೇಗವಾಗಿ ಓಡಿಬಂದು ಕರಕಮಲಗಳನ್ನು ಮುಗಿಯುತ್ತ "ದೇವ, ಬಿಚ್ಚಿದ ತಲೆಗೂದಲುವುಳ್ಳವನೂ, ನೆಳಲೇ ಇಲ್ಲದ ಶರೀರವುಳ್ಳವನೂ, ನಾರುಮಡಿಗಳನ್ನು ಉಟ್ಟುಕೊಂಡಿರುವವನೂ. ಧೂಳಿಯಿಂದ ಮಲಿನವಾದ ಶರೀರವುಳ್ಳವನೂ. ನಿರಂತರದಲ್ಲೂ ಆನಂದಬಾಷ್ಪಗಳನ್ನು ಸುರಿಸುವ ಕಣ್ಣಿನಿಂದ ಕೂಡಿದವನೂ, ಅನಿಮಿಷ ದೃಷ್ಟಿಯಿಂದ ಕರಸ್ಥಲದ ಶಿವಲಿಂಗವನ್ನು ನೋಡುತ್ತಿರುವವನೂ, ಅಸಂಖ್ಯಾತ ತೋಟದಬಾವಿ. ಬಾವಿ, ಸರೋವರ, ಪುರ. ಹೊಳೆ, ಸಮುದ್ರ, ಭೂಮಿ, ಪರ್ವತಗಳೇ ಮೊದಲಾದವುಗಳಿಗೆ ಸಮಾನವಾದ ಗಮನವುಳ್ಳವನೂ, ಅಧಿಕವಾದ ಆನೆ, ಕುದುರೆಗಳನ್ನು ದೂರದಲ್ಲಿಯೇ ಹಿಂದುಗಡೆ ಬಿಟ್ಟು ಮುಂದೆ ಬಂದವನೂ. ತನ್ನ ಗಮನಕ್ಕೆ ಅನುಕೂಲವಾಗಿ ಬೀಸುವ ಗಾಳಿಯುಳ್ಳವನೂ, ಆಕಾಶಭಾಗದಲ್ಲಿ ವ್ಯಾಪ್ತಗೊಂಡ ರೆಕ್ಕೆಗಳಿಂದ ಕೂಡಿದ ಪಕ್ಷಿಗಳ ಗುಂಪಿನಿಂದ ಸೇವಿಸಲ್ಪಡುವವನೂ. ಜಯ ಜಯ ಎಂಬ ಧ್ವನಿಯು ಸಮಸ್ತ ದಿಕ್ಕುಗಳ ತುದಿಯನ್ನು ಮುಸುಕುವಂತೆ ಮಾಡಿರುವವನೂ, ಚರಣಕಮಲಗಳ ವಿನ್ಯಾಸದಿಂದ ಸಮಸ್ತ ತೀರ್ಥಕ್ಷೇತ್ರಗಳ ಸಮೂಹವನ್ನು ಪವಿತ್ರಗೊಳಿಸಿದವನೂ, ಕಡೆಗಣ್ಣಿನ ನೋಟ ಮಾತ್ರದಿಂದ ಸಮಸ್ತ ಪ್ರಾಣಿಗಳ ಅಜ್ಞಾನವೆಂಬ ಕತ್ತಲೆಯ ಸಮೂಹವನ್ನು ಓಡಿಸುವವನೂ, ಎನಿಸಿ ಈ ಪ್ರಸಿದ್ಧಿ ಪಡೆದ ಓರ್ವ ಶಿವಯೋಗಿ ಸಾರ್ವಭೌಮನು ಬಾಗಿಲಿಗೆ ಬಂದು ನಿಂತಿರುವನು"—ಹೀಗೆಂದು ಹೇಳಿದುದನ್ನು ಕೇಳಿ ತಟ್ಟನೆ ಎದ್ದು ಬಂದು ನೂತನ ಸಂತೋಷದಿಂದ ಇದಿರುಗೊಂಡನು. ದೇಹವು ತೋರಣಗಳನ್ನು ಕಟ್ಟಿದಂತೆ ರೋಮಾಂಚನದಿಂದ ಕೂಡಿದ್ದನು, ಶಿವಸಂಬಂಧದ ಆನಂದರಸವು ದೇಹವನ್ನು ತುಂಬಿ ಹೊರಸೂಸಿತು ಎನ್ನುವಂತೆ ಆನಂದಾಶ್ರುಗಳು ಉಕ್ಕಿದವು. ಭಕ್ತ ಜೀವನದ ಸುಖಕ್ಕೆ ಸಮಾನವಾದ ಸುಖವು ಇನ್ನು (ಯಾವುದೂ) ಇಲ್ಲ, ಎಂಬಂತೆ ಕೈನಡುಗುವಿಕೆಯುಂಟಾಗುತ್ತಿತ್ತು. ಮಹಾ ಅನುಭಾವದ ಇದಿರಿನಲ್ಲಿ ದೇಹಭಾವವೆಂಬುದು

1 ಶಿರಂ(ದ) 2 ಗಳಿಂ(ಚ)

ಮಿಸುನಿಯಡ್ಡಣಿಗೆಯೊಳ್ಪೊಂಬರಿಯಾಣಮನಮರ್ಚಿ ನಾನಾ ಶಾಕೋಪದಂಶ ವ್ಯಂಜನ ಸೂಪಾಪೂಪ ಘೃತಾದಿಸಮೇತಮಮೃತೋಪಮಾನ್ನರಾಶಿಯುಂ ಗಡಣಿಸಿ ನಿಜಕರದಿಂ [3]ನಾಳಿಕೇರ[3]ಫಳಪ್ರಮಾಣ ಕಬಳಂಗೆಯ್ದು —

ಸುರಗಿಯ ಚೌಡಯ್ಯಂ ಶಂ
ಕರಂಗೆ ತುತ್ತುಗಳನೀವ ತೆಱದಿಂ ಬಸವಂ
ಗುರುಕಬಳಂಗಳನಿತ್ತೊಡೆ
ಹರಾರ್ಪಣಂ ಗೈದು ಸವಿದನಲ್ಲಮದೇವಂ ೬೩

ಲಕ್ಷಾಶೀತಿ ಸಹಸ್ರ ಸ
ಲಕ್ಷಣ ಚರತತಿಗೆ ಸಮೆದ ಸಕಳಾನ್ನಮನಂ
ದಾಕ್ಷಣಮೆ ಸವಿದನೆಂತುಟೊ
ಕುಕ್ಷಿಯ ತೆಱಪೆನೆ ಗಣಂಗಳಾ ಪ್ರಭುದೇವಂ ೬೪

ಎತ್ತಣಮ ಎಂದೆನಿಸಿ ಪರವಶನಾಗಿ, ಹೆಚ್ಚಾದ ಸಾತ್ವಿಕ ಭಕ್ತಿಯಿಂದ ಸಡಗರಗೊಂಡವನಾಗಿ ಶಿವಗಣ ಸಮೇತನಾಗಿ ಬಂದು ನೇರವಾಗಿ ಎದುರುಗಡೆಯಲ್ಲಿರುವ ಆ ಜಂಗಮ ಮೂರ್ತಿಗೆ ಸಾಷ್ಟಾಂಗ ಪೂರ್ವಕವಾಗಿ ನಮಸ್ಕರಿಸಿದನು. ಅತ್ಯುತ್ಸಾಹದಿಂದ ಸಂಗಡ ಕರೆದುಕೊಂಡು ಹೋಗಿ ಶೂನ್ಯ ಸಿಂಹಾಸನಕ್ಕೊಯ್ದು ಕೈಹಿಡಿದು ಕುಳ್ಳಿರಿಸಿ, ಜಲ, ಗಂಧ, ಕುಸುಮ, ಧೂಪ, ದೀಪಾದಿಗಳಿಂದ ಪಾದಕಮಲಗಳನ್ನು ಪೂಜಿಸಿದನು. ಪ್ರೀತಿಯಿಂದ ಕೊಂಡಾಡುತ್ತ ಹಾಡುತ್ತ, ನಿತ್ಯ ತೃಪ್ತನೆಂಬುದನ್ನು (ತನ್ನ) ಭಕ್ತಿ ಪರವಶತೆಯಿಂದ ಮರೆಸಿದನು ; (ಪ್ರಸಾದದಿಂದ) ತೃಪ್ತಿ ಪಡಿಸುವುದಕ್ಕೋಸುಗ ಬಯಸಿ ಬಸವಣ್ಣನು ಚಿನ್ನದ ಅಡ್ಡಣಿಗೆಯ ಮೇಲೆ ಚಿನ್ನದ ತಟ್ಟೆ (ದೊಡ್ಡ ಹರಿವಾಣ) ಯನ್ನು ಇರಿಸಿ, ಅನೇಕ ವಿಧವಾದ ಕಾಯಿಪಲ್ಲೆಗಳ ಪದಾರ್ಥಗಳು, ನಂಜಿಕೆಯ ವಸ್ತುಗಳು, ವ್ಯಂಜನಗಳು, ಸಾರು, ಹೋಳಿಗೆ, ತುಪ್ಪ ಇವೇ ಮೊದಲಾದವುಗಳಿಂದ ಕೂಡಿದ ಅಮೃತ ಸದೃಶಗಳಾದ ಆಹಾರ ರಾಶಿಯನ್ನು ಒಟ್ಟಿ, ಸ್ವತಃ ತನ್ನ ಕೈಯಿಂದಲೇ ತೆಂಗಿನ ಕಾಯಿ ಗಾತ್ರದ ತುತ್ತುಗಳನ್ನು ಮಾಡಿ—೬೩. (ಹಿಂದೆ) ಸುರಗಿಯ ಚೌಡಯ್ಯನೆಂಬ ಶರಣನು ಶಂಕರನಿಗೆ ತುತ್ತುಗಳನ್ನು (ಮಾಡಿ) ಕೊಡುವ ರೀತಿಯಲ್ಲಿ ಬಸವಣ್ಣನು ದೊಡ್ಡ ದೊಡ್ಡ ತುತ್ತುಗಳನ್ನು ಮಾಡಿ ಕೊಡುತ್ತಿರಲು ಅಲ್ಲಮ ಪ್ರಭು ದೇವರು ಶಿವಾರ್ಪಣ ಮಾಡಿ, ಊಟ ಮಾಡ ತೊಡಗಿದನು. ೬೪. ಸಲ್ಲಕ್ಷಣದಿಂದ ಕೂಡಿದ ಒಂದು ಲಕ್ಷ ಎಂಬತ್ತು ಸಾವಿರ ಜಂಗಮರಿಗಾಗಿ ಮಾಡಿದ ಸಮಸ್ತ ಅನ್ನವನ್ನೂ ಪ್ರಭು ದೇವರು ಕಬಳವನ್ನು ಮಾಡಿಕೊಟ್ಟ ಆಕ್ಷಣದಲ್ಲಿಯೇ ಸಕಲಗಣಂಗಳು ಹೊಟ್ಟೆಯ

3 ನಾರಿಕೇಳ(ಮು)

ಗಗನಂ ಬಾಯ್ದೆಱೆದಂದದಿಂದೆ ಸಕಲಾನ್ನವ್ರಾತಮಂ ಕೊಂಡ ಚಿ
ದ್ಗಗನಾಕಾರನ ಪೆರ್ಮೆಗದ್ಭುತ ಭಯಾಕ್ರಾಂತಾತ್ಮನಾಗುತ್ತೆ ಕೈ
ಮಿಗೆ ತತ್ತೃಪ್ತಿಗುಪಾಯಮಂ ಬಸವನೊಲ್ದಾಳೋಚಿಸುತ್ತಿರ್ಪ ವೇ
ಳೆಗೆ ಬಂದಂ ಚಿದಭಿನ್ನ ಚನ್ನಬಸವಂ ಕಲ್ಯಾಣಕಲ್ಪದ್ರುಮಂ ೬೫

ವ॥ ಅಂತೇಳ್ತಂದು ಬಸವನ ಪೊರೆಯೊಳ್ನಿಂದು ಮೆಲ್ಲನಿಂತೆಂದಂ—

ಬಡಬಶಿಖಿ ನೆಯ್ಯ ಸೀರ್ಪನಿ
ಗಡಣದಿ ತಣಿದಪ್ಪುದೆ ಪದ್ಮಜಾಂಡಾವಳಿಯಂ
ಕಡೆಗಾಲದೆ ನುಂಗಲ್ಬಾ
ಯ್ಬಿಡುವೀ ಘನಮಹಿಮನನ್ನದಿಂ ತಣಿದಪನೇ ೬೬

ನೀನೋಗರಮುಪದಂಶಕ
ಮಾನಾಗಿರೆ ಕೊಂಡು ತಣಿವಪಂ ತಡೆಯೆಂದಾ
ಮಾನನಿಧಿ ನುಡಿಯೆ ಬಸವಂ
ತಾನಂತೆಸಗಿದೊಡೆ ತಣಿದನಾ ಪ್ರಭುದೇವಂ ೬೭

ಅನಲನೊಳಕೊಂಡ ಹವಿಯಿಂ
ದನಿಮಿಷತತಿ ತೃಪ್ತಿವಡುವವೋಲ್ಪ್ರಭು ಸವಿದ
ನ್ನನಿಕಾಯದಿಂದೆ ತಣಿದೊ
ಯ್ಯನೆ ಜಂಗಮವಿತತಿ ತೇಗಿ ಬೀಗಿದುದಾಗಳ್ ೬೮

ವಿಸ್ತಾರ ಎಂಥದ್ದೋ ಎನ್ನುವಂತೆ ಊಟ ಮಾಡಿಬಿಟ್ಟನು. ೬೫. ಆಕಾಶವೇ ಬಾಯನ್ನು ತೆರೆದ ಹಾಗೆ, ಸಮಸ್ತ ಅನ್ನವನ್ನು ಸ್ವೀಕರಿಸಿದ ಜ್ಞಾನಾಕಾಶ ಸ್ವರೂಪನಾದ ಪ್ರಭುವಿನ ಮಹಾತ್ಮೆಗೆ ಬಸವಣ್ಣನು ಆಶ್ಚರ್ಯ ಮತ್ತು ಭಯದಿಂದ ಕೂಡಿದ ಮನಸ್ಸುಳ್ಳವನಾಗಿ ಕೈಮೀರಿ ಆ ಪ್ರಭು ದೇವರಿಗೆ ತೃಪ್ತಿ ಪಡಿಸಲು ಉಪಾಯವನ್ನು ಮನಪೂರ್ವಕ ಆಲೋಚಿಸುತ್ತಿರುವಷ್ಟರಲ್ಲಿ ಕಲ್ಯಾಣ ನಗರದ ಕಲ್ಪವೃಕ್ಷನೆನಿಸಿದ ಜ್ಞಾನ ಸ್ವರೂಪಿಯಾದ ಚೆನ್ನಬಸವಣ್ಣನು ಬಂದನು. ವ॥ ಆ ರೀತಿ ಬಂದು ಬಸವಣ್ಣನ ಹತ್ತಿರದಲ್ಲಿ ನಿಂತುಕೊಂಡು ಮೆಲ್ಲನೆ ಹೀಗೆ ಹೇಳಿದನು: ೬೬. 'ಬಡಬಾಗ್ನಿಯು ತುಪ್ಪದ ಸಣ್ಣ ಹನಿಗಳ ಸಮೂಹದಿಂದ ತೃಪ್ತಿ ಪಡುವುದೇ ? ಪ್ರಳಯ ಕಾಲದಲ್ಲಿ ಬ್ರಹ್ಮಾಂಡ ಮಂಡಲಗಳನ್ನು ನುಂಗುವುದಕ್ಕೆ ಬಾಯಿ ಬಿಡುವ ಈ ಘನ ಮಹಿಮನಾದ ಪ್ರಭುದೇವನು (ನಿನ್ನ) ಅನ್ನದಿಂದ ತಣಿಯುವನೇ ? ' ೬೭. 'ನೀನೇ ಅನ್ನ ; ನಾನೇ ಉಪ್ಪಿನಕಾಯಿ ಆದರೆ ಸ್ವೀಕರಿಸಿ ತೃಪ್ತಿಬಡುವನು ನಡೆ ಎಂದು ಆ ಮಾನನಿಧಿಯಾದ ಚೆನ್ನಬಸವಣ್ಣನು ನುಡಿಯಲಾಗಿ, ಬಸವೇಶ್ವರನು ಹಾಗೆಯೇ ಮಾಡಲು ಪ್ರಭುದೇವನು ತೃಪ್ತಿಗೊಂಡನು. ೬೮. ಅಗ್ನಿಯು ಸ್ವೀಕಾರ ಮಾಡಿದ ಯಜ್ಞ ಕಾಲದ ಹವಿಸ್ಸಿನಿಂದ ದೇವತೆಗಳ ಸಮೂಹವು ತೃಪ್ತಿಯನ್ನು ಪಡೆಯುವಂತೆ, ಪ್ರಭುದೇವರು ಊಟ ಮಾಡಿದ ಅನ್ನದ ಸಮೂಹದಿಂದ ಜಂಗಮ

ವ॥ ಅಂತುಮಾ ಚರತತಿಯುಂ ತಣಿಪಿ ಮತ್ತಂ ತಾಂ ವಿಶ್ವೋದರನಪ್ಪುದಱಿಂ ನಿಜ ತೃಪ್ತಿಯಿಂ ವಿಶ್ವಮಂ ತೃಪ್ತಿವಡಿಸಿ ಬಿಡದಿರ್ವರಂ ಬಿಗಿಯಪ್ಪಿ ಮುಂಡಾಡಿ ಕೊಂಡಾಡಿ ಕಾರುಣ್ಯಮಂ ನೀಡಿ ಮಚ್ಚಂ ಮುಚ್ಚಲಱಿಯದೆ ತನ್ನನೊಚ್ಚತಂಗೊಟ್ಟಾನಂದಿಸಿ ತತ್ಪ್ರಭುವರಂ ಬಸವನ [1]ನಭೀ[1]ಕ್ಷಿಸಿ—

ಎನ್ನ ಮನಕ್ಕೆ ಸಂತಸಮನಿತ್ತುದು ನಿನ್ನ ಮೃದೂಕ್ತಿ ನಿನ್ನ ಮಾ
ನೋನ್ನತಿ ನಿನ್ನ ಸಜ್ಜನತೆ ನಿನ್ನ ಗಭೀರತೆ ನಿನ್ನ ಸತ್ಯಸಂ
ಪನ್ನತೆ ನಿನ್ನ ಧರ್ಮರತಿ ನಿನ್ನ ಮಹಾಮತಿ ನಿನ್ನ ಸುವ್ರತಂ
ನಿನ್ನ ಸುವೃತ್ತಿ ನಿನ್ನ ಬಗೆ ನಿನ್ನಯ ಭಕ್ತಿರಸಂ ವೃಷಾಧಿಪಾ ೧೯

ಪೊಂಗೆ ಪೊಸ ಮಿಸುಗು ರನ್ನಕೆ
ರಂಗು ಸುಧಾರುಚಿಗೆ ಜೊನ್ನಮವಿನಾಭಾವಂ
ಸಂಗಳಿಸಿ ಮಿಸುಪ ತೆಱದಿಂ
ಕಂಗೊಳಿಪುದು ಭಕ್ತಿ ನಿನ್ನೊಳೆಲೆ ಬಸವೇಶಾ ೨೦

ಶಿವನಿಂದಗ್ಗಳ ದೈವಂ
ಶಿವಮಂತ್ರದಿನಧಿಕ ಮಂತ್ರಮಿಲ್ಲಂತೆ ಗುಣಾ
ರ್ಣವ ಬಸವನಿಂದೆ ಪಿರಿಯಂ
ಪ್ರವಿಮಳ ಶಿವಭಕ್ತನಾವನೀ ವಸುಮತಿಯೊಳ್ ೨೧

ಸಮುದಾಯವೆಲ್ಲ ತೃಪ್ತಿಗೊಂಡು ಒಮ್ಮೆಲೆ ಆಗ ತೇಗಿ ಆನಂದಗೊಂಡಿತು. ವ॥ ಈ ರೀತಿ ಜಂಗಮ ಸಮೂಹವನ್ನು ತಣಿಸಿ, ಮತ್ತು ತಾನು ವಿಶ್ವವನ್ನೇ ಒಡಲಾಗುಳ್ಳ ಕಾರಣದಿಂದ ತನ್ನ ತೃಪ್ತಿಯಿಂದ ಪ್ರಪಂಚದ ಸಕಲ ಪ್ರಾಣಿಗಳನ್ನು ತೃಪ್ತಿ ಪಡಿಸಿ, ಬಸವೇಶ್ವರ, ಚೆನ್ನಬಸವೇಶ್ವರರಿಬ್ಬರನ್ನೂ ಬಿಗಿದು ಅಪ್ಪಿಕೊಂಡು ಮೈಮೇಲೆ ಕೈಯಾಡಿಸಿ ಕೊಂಡಾಡುತ್ತ, ಕಾರುಣ್ಯವನ್ನು ಎರೆದು ತನ್ನ ಮೆಚ್ಚಿಗೆಯನ್ನು ಮುಚ್ಚಿಟ್ಟುಕೊಳ್ಳುವುದಕ್ಕಸಮರ್ಥನಾಗಿ ತನ್ನನ್ನೇ ಉಚಿತವನ್ನಾಗಿ ಕೊಟ್ಟು ಆನಂದಗೊಂಡು ಆ ಪ್ರಭುದೇವನು ಬಸವೇಶ್ವರನನ್ನು ನೋಡಿ—೧೯. ವೃಷಭೇಶನೇ, ನಿನ್ನ ಕೋಮಲವಾದ ಮಾತುಗಳು, ನಿನ್ನ ಮಾನದ ಔನ್ನತ್ಯ, ನಿನ್ನ ಸಜ್ಜನಿಕೆ, ನಿನ್ನ ಗಂಭೀರತೆ, ನಿನ್ನ ಸತ್ಯ ಸಂಪನ್ನತೆ, ನಿನ್ನ ಧರ್ಮದಲ್ಲಿನ ಆಸಕ್ತಿ, ನಿನ್ನ ಘನವಾದ ಮತಿ, ನಿನ್ನ ಸದ್ವ್ರತ, ನಿನ್ನ ಒಳ್ಳೆಯ ವರ್ತನೆ, ನಿನ್ನ ಮನಸ್ಸು, ನಿನ್ನ ಭಕ್ತಿಯ ರಸ—ಇವು ನನ್ನ ಮನಸ್ಸಿಗೆ ಸಂತೋಷವನ್ನಿತ್ತಿವೆ. ೨೦. ಬಸವೇಶ, ಬಂಗಾರಕ್ಕೆ ನೂತನವಾದ ಕಾಂತಿಯೂ, ರತ್ನಕ್ಕೆ ಬಣ್ಣವೂ, ಚಂದ್ರನಿಗೆ ಬೆಳದಿಂಗಳೂ ಸದಾ ಬಿಡದಿರುವ ಸಂಬಂಧವು ಕೂಡಿಕೊಂಡಿರುವ ರೀತಿಯಲ್ಲಿ ನಿನ್ನಲ್ಲಿ ಭಕ್ತಿಯು ಕಂಗೊಳಿಸುತ್ತಿರುವುದು. ೨೧. ಶಿವನಿಗಿಂತಲೂ ಅಧಿಕವಾದ ದೈವವೂ, ಶಿವ ಮಂತ್ರಕ್ಕಿಂತ ಅಧಿಕವಾದ ಮಂತ್ರವೂ ಇಲ್ಲ. ಅದರಂತೆ ಈ ಭೂಮಿಯಲ್ಲಿ ಸದ್ಗುಣಗಳಿಗೆ ಸಮುದ್ರ ರೂಪನಾದ ಬಸವೇಶ್ವರ

1 ನೀ(ದ)

ಹರಮತಕಲ್ಪಭೂರುಹಕೆ ಬೀಜಮುಮಾಧವ ಕೀರ್ತಿಪುಷ್ಪ ಮಂ
ಜರಿಗೆ ಸುಗಂಧಸಾರಮಭವಾಗಮಪದ್ಮಕೆ ಪಂಕಜಾಕರಂ
ಗಿರಿಶಘನಪ್ರಭಾವರವಿಗಿಂದ್ರದಿಶಾದ್ರಿ ಮಹೇಶಭಕ್ತಿ ವ
ಲ್ಲರಿಗೆಸೆವಾಲವಾಲಮೆನಿಸಿರ್ದನಿವಂ ಬಸವಂ ಧರಿತ್ರಿಯೊಳ್ ೭೨

ಈ ವಸುಮತಿಯೊಳ್ ಶರಣ
ರ್ಗೀವ ಸುಮತಿ ಬಗೆದ ಭಾಗ್ಯತತಿಯಂನಜಸ್ರಂ
ಭಾವಿಪರ ಬಗೆಯೊಳಿರ್ಪನು-
ಭಾವಿ ಪರಮಂನಲ್ತೆ ವಿಶ್ವಗುರು ವೃಷಭೇಂದ್ರಂ ೭೩

ವ॥ ಎಂದು ಬಸವನಂ ಪೊಗಳ್ದು ಚನ್ನಬಸವನಂ ನಿರೀಕ್ಷಿಸಿ—

ಬಸವಪ್ರಸಾದಶರಧಿಯೊ
ಳೊಸೆದೊಗೆದೆಸೆದಿರ್ದ ಚನ್ನಬಸವ ಶಶಾಂಕಂ
ಪಸರಿಸಿ ಚಿತ್ಕೌಮುದಿಯಂ
ರಸೆಯೊಳಲರ್ಚಿದುದು ಶರಣಹೃತ್ಕೈರವಮಂ ೭೪

ಗುಣಮನೊಳಕೆಯ್ವುದುಚಿತಂ
ಮಣಿ ಮಹಿಯೊಳ್ಬಸವನೆಂಬ ಶಿವಗಣಚಿಂತಾ
ಮಣಿಯನೊಳಕೆಯ್ದು ಮಿಸುಗಿದು
ದಣಿಯರಮೀ ಚನ್ನಬಸವಗುಣಮಿದು ಚಿತ್ರಂ ೭೫

ನಿಗಿಂತಲೂ ಅಧಿಕನಾದ ಪರಿಶುದ್ಧನಾದ ಶಿವಭಕ್ತನು ಯಾವನುಂಟು ? ೭೨. ಭೂಲೋಕದಲ್ಲಿ ಈ ಬಸವಣ್ಣನು ವೀರಶೈವ ಮತವೆಂಬ ಕಲ್ಪವೃಕ್ಷಕ್ಕೆ ಬೀಜ ರೂಪಾದವನು ; ಪರಶಿವನ ಯಶಸ್ಸೆಂಬ ಹೂಗೊಂಚಲಕ್ಕೆ ಶ್ರೇಷ್ಠವಾದ ಪರಿಮಳ ಸ್ವರೂಪವನು ; ಶೈವಾಗಮಗಳೆಂಬ ಕಮಲಕ್ಕೆ ಸರೋವರ ಸ್ವರೂಪನು ; ಪರಶಿವನ ಅಧಿಕವಾದ ಪರಾಕ್ರಮವೆಂಬ ಸೂರ್ಯನಿಗೆ ಪೂರ್ವ ದಿಕ್ಕಿನ ಪರ್ವತ ಸ್ವರೂಪನು ; ಶಿವಭಕ್ತಿಯೆಂಬ ಬಳ್ಳಿಗೆ ಶೋಭಿಸುವ ಪಾತಿ ಸ್ವರೂಪನು ಎನಿಸಿ ಇರುವನು. ೭೩. ಜಗದ್ಗುರುವಾದ ಬಸವೇಶ್ವರನು ಈ ಭೂಮಿಯಲ್ಲಿ ಶರಣರುಗಳಿಗೆ (ಅವರು) ಅಪೇಕ್ಷಿಸಿದ ಭಾಗ್ಯ ಸಮೂಹವನ್ನು ಕೊಡುವ ಸದ್ಬುದ್ಧಿಯುಳ್ಳವನು ; ಯಾವಾಗಲೂ ಧ್ಯಾನ ಮಾಡುವವರ ಮನಸ್ಸಿನಲ್ಲಿ ಇರುವ ಅನುಭಾವ ಸ್ವರೂಪನಾದ ಪರಮಾತ್ಮ ನಲ್ಲವೆ ! ವ॥ ಹೀಗೆಂದು ಬಸವಣ್ಣನನ್ನು ಹೊಗಳಿ, ಚೆನ್ನಬಸವಣ್ಣನನ್ನು ನೋಡಿ— ೭೪. ಬಸವಣ್ಣನ ಪ್ರಸಾದವೆಂಬ ಸಮುದ್ರದಲ್ಲಿ ಪ್ರೀತಿಯಿಂದ ಹುಟ್ಟಿದ ಈ ಚೆನ್ನಬಸವೇಶನೆಂಬ ಚಂದ್ರನು ಜ್ಞಾನವೆಂಬ ಬೆಳದಿಂಗಳನ್ನು ಭೂಮಿಯಲ್ಲಿ ಪ್ರಸಾರಗೊಳಿಸಲು, ಶರಣ ಜನರ ಹೃದಯವೆಂಬ ಕನ್ನೈದಿಲೆಯು ಅರಳಿತು. ೭೫. ಈ ಭೂಮಿಯಲ್ಲಿ ರತ್ನವು ದಾರವನ್ನು ಒಳಗು ಮಾಡಿಕೊಂಡಿರುವುದು ಉಚಿತವಾದುದು ; ಬಸವನೆಂಬ ಶಿವಗಣಗಳ ಚಿಂತಾಮಣಿಯನ್ನು ಈ ಚೆನ್ನಬಸವನೆಂಬ ದಾರವು

ವ॥ ಎಂದಿರ್ವರುಮಂ ಪ್ರಭುವರಂ ಪೊರೆಯ ಗಣನಿವಹದೊಳ್ ಪೊರೆಯೇಱಿ ಪೊಗಳ್ದು ನಗೆ ನಿರ್ವಂಚಕತ್ವದಿಂ ತನ್ನನಿತ್ತು ತೃಪ್ತಿಗೆಯ್ಸಿದ ಮಹಾಮಹಿಮನೀ ಬಸವನಲ್ಲದೆ ಪೆಱನಾವನೆಂದು ಮತ್ತೆ ಮತ್ತೆ ಬಸವನಂ ನುತಿಯಿಸುತ್ತಿರೆ ಬಸವನಾ ಪ್ರಭುವಿಂಗೆ ಭಯ ಭಕ್ತಿಯಿನೆಱಗಿ ಕಿಂಕರತೆ ಯನಪ್ಪುಕೆಯ್ದು ನಿಟಿಲತಟಘಟಿತಕರಪುಟನಾಗಿ ದೇವ ವಿಶ್ವೋದರನೆನಿಪ ನಿಮಗೆ ತೃಪ್ತಿಗೆಯ್ಯ ಲಾನೆನಿತಱವನೆಂದಾ ಪ್ರಸ್ತುತಕ್ಕೆ ಪುರಾಣವೃತ್ತಾಂತವೊಂದಂ ಬಿನ್ನಪಂ ಗೈದನೆಂತೆನೆ—

ತಾರಗಿರೀಂದ್ರದಗ್ರದೊಳೆ ಶಂಕರನೊರ್ಮೆ ವಿಳಾಸದಿಂದೆ ವಿ
ಸ್ತಾರ ಸಭಾನಿವಿಷ್ಟನೊಸೆದೊಪ್ಪಿರೆ ತತ್ಪದಸೇವೆಗೆಯ್ಯಲೆಂ
ದಾ ರಮಣೀಯಲೀಲೆ ಮಿಗೆ ಪಾರ್ವತಿ ತಾಂ ಬರುತಲ್ಲಿ ಕಂಡಳ
ಬ್ಜಾರಿಕಿರೀಟನಂತೆಸೆವ ಸತ್ಪ್ರಮಥರ್ಕಳ ದಿವ್ಯರೂಪಮಂ ೭೬

ವ॥ ಅಂತು ಕಂಡಾ ಜಗದಂಬಿಕೆಗಿವರಿರೊಳ್ ಶಿವನಾವನೊಯೆಂಬ ಸಂದೇಹಂ ಪುಟ್ಟಿದ ನಿತಱಿೊಳದಂ ತಿಳಿದು ಗಣಂಗಳ್ನಿಜರೂಪಮಂ ಮಱೆಸಿ—

(ಸದ್ಗುಣವು) ಒಳಗು ಮಾಡಿಕೊಂಡು (ಸ್ವಾಧೀನ ಪಡಿಸಿಕೊಂಡು) ಚೆನ್ನಾಗಿ ಶೋಭಿಸುತ್ತಿರುವುದೆಂಬುದು ಅತ್ಯಾಶ್ಚರ್ಯಕರ ! ವ॥ ಹೀಗೆಂದು ಬಸವ ಚೆನ್ನ ಬಸವರಿಬ್ಬರನ್ನೂ ಪ್ರಭುದೇವರು ಸಮೀಪದಲ್ಲಿರುವ ಗಣಂಗಳ ಸಮೂಹದಲ್ಲಿ ಸಂತೋಷಾಧಿಕ್ಯದಿಂದ ಹೊಗಳಿ, ನನಗೆ ವಂಚನೆ ಮಾಡದೆ ತನ್ನನ್ನೇ ಅರ್ಪಿಸಿ, ತೃಪ್ತಿ ಗೊಳಿಸಿದ ಮಹಾಮಹಿಮನು ಈ ಬಸವನಲ್ಲದೆ ಮತ್ತೊಬ್ಬನಾವನಿದ್ದಾನೆ ? ಎನ್ನುತ್ತ ಮತ್ತೆ ಮತ್ತೆ ಹೊಗಳುತ್ತಿರಲು ಬಸವಣ್ಣನು ಪ್ರಭು ದೇವರಿಗೆ ಭಯ ಭಕ್ತಿಯಿಂದ ನಮಸ್ಕರಿಸಿ, ಕೈಂಕರ್ಯವನ್ನು ಪ್ರಕಟಿಸುತ್ತ ಹಣೆಯ ಮೇಲೆ ಎರಡೂ ಕೈಗಳನ್ನೆತ್ತಿ ನಮಸ್ಕರಿಸುವವನಾಗಿ, ದೇವ, ವಿಶ್ವವನ್ನೇ ಒಡಲನ್ನಾಗಿ ಉಳ್ಳ ನಿಮ್ಮನ್ನು ತೃಪ್ತಿಗೊಳಿ ಸುವುದಕ್ಕೆ ನಾನೆಷ್ಟರವನು ? ಎಂದು ಆ ಸಂದರ್ಭಕ್ಕೆ ಪೂರ್ವದಲ್ಲಿ ನಡೆದ ಒಂದು ಪ್ರಸಂಗವನ್ನು ಬಿನ್ನವಿಸಿಕೊಂಡನು. ಹೇಗೆಂದರೆ:—೭೬. ಶಂಕರನು ಒಮ್ಮೆ ಕೈಲಾಸ ಪರ್ವತದ ಅಗ್ರದಲ್ಲಿ ವಿಸ್ತಾರವಾದ ಸಭೆಯಲ್ಲಿ ಸಂಭ್ರಮದಿಂದ ಕುಳಿತು ಶೋಭಿ ಸುತ್ತಿರಲಾಗಿ, ಪಾರ್ವತಿಗೆ ಆ ಪರಶಿವನ ಪಾದ ಪೂಜೆ ಮಾಡಬೇಕೆಂಬ ಮನೋಹರ ವಿಲಾಸವು ಅಧಿಕಗೊಂಡು ಅಲ್ಲಿಗೆ ಅವಳು ಬರುತ್ತಿರುವಾಗ ಪರಶಿವನಂತೆ ಶೋಭಿಸುವ ಶ್ರೇಷ್ಠ ಪ್ರಮಥರುಗಳ ದಿವ್ಯರೂಪವನ್ನು ಕಂಡಳು. [ತಾರ + ಗಿರೀಂದ್ರ–ಬೆಳ್ಳಿಯ ಗಿರಿಶ್ರೇಷ್ಠ ; ಅಬ್ಜ + ಅರಿ + ಕಿರೀಟ–ಕಮಲದ ಶತ್ರುವಾದ ಚಂದ್ರನನ್ನೇ ಕಿರೀಟವಾಗಿ ಉಳ್ಳವನು.] ವ॥ ಈ ರೀತಿ ಕಂಡ ಪಾರ್ವತಿಗೆ ಇವರುಗಳಲ್ಲಿ ಶಿವನು ಯಾವನು ? ಎಂಬ ಸಂದೇಹವುಂಟಾದ ಕೂಡಲೆ ಅದನ್ನು ತಿಳಿದು ಆ ಗಣಂಗಳು ತಮ್ಮ ಆ

ಹರಿ ಕರಿ ವಾಜಿ ವಾನರ ವರಾಹ ತರಕ್ಷು ಶಶಾಜ ಗೋ ಬಿಡಾ
ಲ ರುರು ವೃಕೋಷ್ಟ್ರ ಸೈರಿಭ ಭುಜಂಗ ಮರಾಳ ಮಯೂರ ತಾರ್ಕ್ಷ್ಯಕೇ
ಸರಿರಿಪು ಕುಕ್ಕುಟಾದಿ ಮುಖಮಂ ತಳೆದೀಶವಿಲಕ್ಷಣಾಂಗರಾ
ಗಿರೆ ಗಿರಿಜಾತೆ ಕಂಡು ಮಣಿದಳ್ನಿಜವಲ್ಲಭನಂಘ್ರಿಗಳ್ಭಿಯಿಂ ೭೭

ಇಂಗಿತಮಱಿದಾ ಪ್ರಮಥಗ
ಣಂಗಳ್ನೆಗಳ್ದಂದಮಂ ಸಮಂತೊರೆದವರ್ಗಾಂ
ಸಾಂಗಮೆನೆ ಮಾಳ್ಪೆನೌತಳ
ಮಂ ಗುಣನಿಧಿ ಬೆಸಸೆನುತ್ತಮಂಬಿಕೆ ನುಡಿದಳ್ ೭೮

ವ|| ಇಂತೆಂದು ನುಡಿದು ಮಂದಸ್ಮಿತಾಸ್ಯನಾದ ಸರ್ವಜ್ಞನನುಜ್ಞೆಯಂ ಪಡೆದು ಸಡಗರಂ ಮಿಕ್ಕು ಭಾರ್ಗವಿ ಭಾರತಿ ಮುಖ್ಯ ಸಖೀಜನಸಮೇತಮಂತಃಪುರಕ್ಕೆಳ್ತಂದು ಗಣವೃಂದಕ್ಕೆ ವಿಭೂತಿ ಗೊಟ್ಟನಂತರಂ—

ಬರಿಸಿದಳಲ್ಲಿಗಂಬಿಕೆ ಮರುನ್ನದಿಯಂ ವನದೇವತಾಳಿಯಂ
ಸುರದುಘಮಂ ದಿಶಾಂಗನೆಯರಂ ಸುರಸಿದ್ಧವಧೂಕದಂಬಮಂ
ಪುರಹರಮಿತ್ರನಂ ಸಸಖಮಾರುತನಂ ಮಧುವಾರ್ಧಿರಿಕ್ತಸಾ
ಗರಚಯಮಂ ಮುನಿಪ್ರಮದೆಯರ್ಕಳನಿಂದುವನಾ ವಸಂತನಂ ೭೯

ಆಕಾರವನ್ನು ಮರೆಮಾಚಿ—೭೭. ಸಿಂಹ, ಆನೆ, ಕುದುರೆ, ಕಪಿ, ಹಂದಿ, ಹುಲಿ, ಮೊಲ, ಆಡು, ಗೋವು, ಬೆಕ್ಕು, ಜಿಂಕೆ, ತೋಳ, ಒಂಟೆ, ಕೋಣ, ಹಾವು, ಹಂಸಪಕ್ಷಿ, ನವಿಲು, ಗರುಡ, ಶರಭ, ಕೋಳಿಗಳೇ ಮೊದಲಾದ ಪ್ರಾಣಿಗಳ ಮುಖದಂತಿರುವ ಮುಖವನ್ನು ಹೊಂದಿ, ಪರಶಿವನಿಂದ ಭಿನ್ನವಾದ ರೂಪ ಲಕ್ಷಣಗಳುಳ್ಳವರಾಗಿರಲು, ಪಾರ್ವತಿಯು ನೋಡಿ, ತನ್ನ ಪತಿಯ ಪಾದಗಳಿಗೆ ಪ್ರೀತಿಯಿಂದ ನಮಸ್ಕರಿಸಿದಳು. ೭೮. ಪ್ರಮಥ ಗಣಂಗಳು ತನ್ನ ಮನಸ್ಸಿನ ಅಭಿಪ್ರಾಯವನ್ನು ಅರಿತು ಮಾಡಿದ ಈ ರೀತಿಯನ್ನು ಚೆನ್ನಾಗಿ ಹೇಳಿ, ಅವರುಗಳಿಗೆ ನಾನು ಯಥಾಸಾಂಗವಾಗಿ ಔತಣವನ್ನು ಮಾಡಿಸುತ್ತೇನೆ. ಸದ್ಗುಣಗಳ ನಿಧಿಯಾದ ಪರಮೇಶ್ವರನೇ, ಅಪ್ಪಣೆ ಮಾಡಬೇಕು ಎಂದು ಪಾರ್ವತಿಯು ಹೇಳಿದಳು. ವ|| ಪಾರ್ವತಿಯು ಹೀಗೆ ಹೇಳಿ, ಮುಗುಳು ನಗೆಯಿಂದ ಕೂಡಿದ ಮುಖವುಳ್ಳ ಈಶ್ವರನ ಅಪ್ಪಣೆಯನ್ನು ಪಡೆದು ಹೆಚ್ಚಾದ ಸಡಗರದಿಂದ ಲಕ್ಷ್ಮಿ, ಸರಸ್ವತಿ ಮುಂತಾದ ಸಖಿಯರಿಂದೊಡಗೂಡಿ, ಅಂತಃಪುರಕ್ಕೆ ಬಂದು ಗಣ ಸಮೂಹಕ್ಕೆ ಪ್ರಸಾದ ಸ್ವೀಕಾರಕ್ಕೆ ಬರಬೇಕೆಂಬುದನ್ನು ಸೂಚಿಸುವ ವಿಭೂತಿ ವೀಳಯವನ್ನು ಕೊಟ್ಟ ನಂತರ—೭೯. ಪಾರ್ವತೀ ದೇವಿಯು ಆ ತನ್ನ ಪಾಕಶಾಲೆಗೆ ದೇವಗಂಗಾ ನದಿಯನ್ನು, ವನ ದೇವತೆಗಳ ಸಮೂಹವನ್ನು, ಕಾಮಧೇನುವನ್ನು, ದಿಗ್ದೇವತೆಗಳ ಹೆಂಡಿರನ್ನು, ದೇವತೆಗಳ ಸಿದ್ಧರುಗಳ ಹೆಂಡಿರ ಸಮೂಹವನ್ನು, ಕುಬೇರನನ್ನು, ಅವನ ಸ್ನೇಹಿತನಾದ ಅಗ್ನಿಯೊಡಗೂಡಿದ ಮಾರುತನನ್ನೂ,

ವ॥ ಅಂತು ಬರಿಸಲೊಡನವರೆಲ್ಲರ್ದೇವಿಗಾನಂದನಿರ್ಭರರಾಗಿ ಪೊಡಮಟ್ಟು ಬೆಸನೇನೆಂದು ಸಾಂಜಲಿಪುಟರ್ ಸಾಲ್ಗೊಂಡು ನಿಲೆ ಪೆಸರ್ಗೊಂಡು ಕರೆದವಂದಿರಂ ತತ್ತದ್ಯೋಗ್ಯ ಕರ್ಮಂಗಳೊಳಂಬಿಕೆ ಪುರುಳಱಿದು ನಿಯೋಜಿಸಿ—

ಸುರಭಿಸುಧಾರಸಪ್ರತಿಮ ಪಾನ ಕದಂಬಮನಲ್ಲಿ ಮಾಡಿದಳ್
ಸುರನದಿ ದೇವಭೂಜಮಧುರೋಜ್ವಲಸಾರಫಲಪ್ರತಾನಮಂ
ನೆರಪಿರದರಲ್ಲಿ ತಂದು ವನದೇವಿಯರಬ್ಧಿಸಮಾಮೃತಾಜ್ಯಭಾ
ಸುರ ದಧಿವೃಂದಮಂ ಸುರದುಘಂ ಕಱೆದತ್ತು ದಿಗೀಶಪತ್ನಿಯರ್ ೮೦

ಗಿರಿಸುತೆ ಪೇಳ್ದ ಕಜ್ಜಮನೊಡರ್ಚಿದರೆಲ್ಲೆಡೆಯೊಳ್ ಸುರಾಂಗನೋ
ತ್ಕರಮಿರದಲ್ಲಿಗಲ್ಲಿಗೆಡೆಗಜ್ಜಮನುಜ್ಜುಗಿಸಿತ್ತು ಬೆಂಜನಂ
ಸುರಭಿತಮಪ್ಪವೋಲ್ನೆಗಳ್ವ ವಸ್ತುಗಳಂ ಶಿವಮಿತ್ರನಿತ್ತನೊ
ಪ್ಪಿರೆ ಸಮೆದಂ ಸುಪಾಕಮನದಂ ಪವಮಾನಸಖಂ ಸಮೀರಣಂ ೮೧

ಜೇನು ತುಪ್ಪದ ಸಮುದ್ರವನ್ನೂ, ನೀರಿಲ್ಲದ ಸಮುದ್ರ ಸಮೂಹವನ್ನೂ, ಮುನಿಗಳ ಸ್ತ್ರೀಯರನ್ನೂ, ಚಂದ್ರನನ್ನೂ, ವಸಂತನನ್ನೂ ಬರಮಾಡಿಕೊಂಡಳು. ವ॥ ಹೀಗೆ ಬರಮಾಡಿಕೊಳ್ಳಲಾಗಿ ಅವರೆಲ್ಲರೂ ಅತ್ಯಂತ ಸಂತೋಷವುಳ್ಳವರಾಗಿ, ಪಾರ್ವತೀ ದೇವಿಗೆ ನಮಸ್ಕಾರ ಮಾಡಿ, 'ಏನಪ್ಪಣೆ' ಎಂದು ಸಾಲ್ಗೊಂಡು ನಿಂತು ಕೈಮುಗಿದು ಕೇಳಲು, ಪಾರ್ವತಿಯು ಅಷ್ಟು ಜನರನ್ನು ಹೆಸರುಗೊಂಡು ಹಿಡಿದು ಕರೆದು, ಅವರವರ ಶಕ್ತಿಯನ್ನರಿತು ಆಯಾಯ ಉದ್ಯೋಗ ಕರ್ಮಗಳಲ್ಲಿ ನೇಮಿಸಿದಳು. ೮೦. ದೇವ ಗಂಗೆಯು ಅಲ್ಲಿ ಕಾಮಧೇನುವಿನ ಹಾಲಿಗೆ ಸದೃಶವಾದ ಮಾಧುರ್ಯವುಳ್ಳ ಪಾಯಸವೇ ಮೊದಲಾದ ಪಾನ ಪರಿಕರಗಳನ್ನು ಮಾಡಿದಳು. ವನ ದೇವತೆಯರು ಕಲ್ಪವೃಕ್ಷದ ಮಧುರವಾಗಿಯೂ, ಮನೋಹರವಾಗಿಯೂ, ಶ್ರೇಷ್ಠವಾಗಿಯೂ ಇರುವ ಹಣ್ಣುಗಳನ್ನು ತಂದು ಸೇರಿಸಿದರು. ಕಾಮಧೇನುವು ಹಾಲನ್ನು ಕರೆದು ಸಮುದ್ರಕ್ಕೆ ಸಮಾನವಾದಷ್ಟು ಹಾಲು ತುಪ್ಪ ಮೊಸರು ಇವುಗಳನ್ನು ಮಾಡಿತು. ದಿಕ್ಪಾಲಕರ ಪತ್ನಿಯರು ೮೧. ಪಾರ್ವತೀ ದೇವಿಯು ಹೇಳಿದ ಕಾರ್ಯಗಳನ್ನು ಮಾಡಿದರು. ದೇವತಾಸ್ತ್ರೀ ಸಮೂಹವು ಎಲ್ಲಾ ಸ್ಥಳದಲ್ಲೂ ತಪ್ಪದೆ ಅಲ್ಲಲ್ಲಿಗೆ ಎಡೆ ಮಾಡುವ ಕಾರ್ಯದಲ್ಲಿ ನೇಮುಕಗೊಂಡಿತು. ಕುಬೇರನು ಪರಿಮಳದಿಂದ ಕೂಡಿದುದೆಂಬಂತೆ ತೋರುವ ನಂಜಿಕೆಯ ಪದಾರ್ಥಗಳನ್ನು ವಸ್ತುಗಳನ್ನು ಕೊಟ್ಟನು. ಅಗ್ನಿಯು ಒಪ್ಪುವ ಹಾಗೆ ಒಳ್ಳೊಳ್ಳೆಯ ಅಡಿಗೆಗಳನ್ನು ಮಾಡಿದನು. ವಾಯುವು—

ಬೀಸಿದನಾ ಸುರಾಂಗನೆಯರಂಗದ ಸೇದೆಯುಡಂಗೆ ಸಾರವಂ
ಸೂಸಿದುವಬ್ಧಿಗಳ್ ಮುನಿವಧೂತತಿ ಸಿಂಗರಿಸಿತ್ತು ಭೋಜನೋ
ಲ್ಲಾಸದ ಶಾಲೆಯಂ ಹಿಮಕರಂ ಚಳೆಯಂಗುಡುತಿರ್ದನೆತ್ತಲುಂ
ಮಾಸರಮಾಗೆ ಪೂದಳಿರ ಚಪ್ಪರಮಂ ಸಮೆದಂ ವಸಂತಕಂ ೮೨

ಓದನರಾಶಿಯೊಪ್ಪಿದುದು ರೌಪ್ಯನಗಕ್ಕೆಣೆಯಾಗಿ ಖಾದ್ಯಸಂ
ಪಾದಿತ ರಾಶಿ ಮಿಂಚಿದುದು ಕಾಂಚನಭೂಧರದಂತೆ ಕಣ್ಗೆ ಚ
ಲ್ವಾದುದು ವಿಂಧ್ಯಪರ್ವತಮಿದೆಂದೆನೆ ಬೆಂಜನ ರಾಶಿ ತುಂಬಿತಾ
ಮೋದಮುಜಾಂಡಮಂಡಲಮನಿಂಗಡಲಂತೆಸೆದತ್ತು ಪಾಯಸಂ ೮೩

ವ॥ ಇಂತತಿ ವಿಚಿತ್ರಮೆನೆ ಖಾದ್ಯಭೋಜ್ಯಾದಿ ಪಂಚವಿಧಾಹಾರಂ ನೆಗಳ್ದು ಭವಾನಿ ನಿಜ ಕಟಾಕ್ಷದಿಂ ನೋಡಿ ನೆನೆದು ನಾನಾವಿಧ ಪ್ರಾಜ್ಯ ಭೋಜ್ಯರಸರಸಾಯನಂಗಳನೊದವಿಸಿ ಸಜ್ಜೀಕೃತಂಗೆಯ್ದಾ ಪ್ರಮಥರಂ ಬಿಜಯಂಗೆಯ್ಸಿ ತರಲೆಂದು ಕಿಱಿಯ ಗಣನಾಥನೊರ್ವನಂ ಕರೆದು ಪೋಗೆಂದು ಬೆಸಸಲೊಡಂ—

ಜನನಿ ಪಸಿವಾದುದೆಮ್ಮಯ
ಘನಲಿಂಗಕೆ ತೃಪ್ತಿಗೈದು ಪೋದಪೆನಾಂ ಭೋ
ಜನಮಂ ನೀಡೆನೆ ಲಿಂಗಾ
ರ್ಚನೆಗೆಯ್ಸಿ ಗಿರೀಂದ್ರಜಾತೆ ಭೋಜ್ಯಾವಳಿಯಂ ೮೪

೮೨. ಸುರಾಂಗನೆಯರ ದೇಹದ ಬೆವರು ಅಡಗುವ ಹಾಗೆ ಗಾಳಿ ಹಾಕಿದನು ; ಸಮುದ್ರಗಳು ನೀರನ್ನು ತುಂಬಿದವು ; ಮುನಿಗಳ ಪತ್ನಿಯರ ಸಮೂಹವು ಉಲ್ಲಾಸದಿಂದ ಭೋಜನ ಶಾಲೆಯನ್ನು ಶೃಂಗಾರಗೊಳಿಸಿದರು ; ಚಂದ್ರನು ಎಲ್ಲ ಕಡೆಗೂ ನೀರನ್ನು ಸಿಂಪಡಿಸಿದನು. ವಸಂತನು ಶೋಭಿಸುವ ಹಾಗೆ ಹೂ ಚಿಗುರುಗಳ ಚಪ್ಪರವನ್ನು ನಿರ್ಮಿಸಿದನು. ೮೩. ಅನ್ನದ ರಾಶಿಯು ಕೈಲಾಸ ಪರ್ವತಕ್ಕೆ ಎಣೆಯಾಗಿ ಒಪ್ಪಿತ್ತು. ಭಕ್ಷ್ಯಭೋಜ್ಯಗಳ ರಾಶಿಯು ಮೇರು ಪರ್ವತದ ಹಾಗೆ ಮಿಂಚಿತು. ನಂಜಿಕೊಳ್ಳುವ ವಸ್ತುಗಳ ರಾಶಿ ಇದು ವಿಂಧ್ಯ ಪರ್ವತವೋ ಎನ್ನುವಂತೆ ಕಣ್ಣಿಗೆ ಚೆಲುವಾಗಿತ್ತು. ಆಹಾರ ಪದಾರ್ಥಗಳ ಸುಗಂಧವು ಬ್ರಹ್ಮಾಂಡ ವಲಯವನ್ನು ತುಂಬಿತು. ಪಾಯಸವು ಕ್ಷೀರ ಸಮುದ್ರದ ಹಾಗೆ ಪ್ರಕಾಶಿಸಿತು. ವ॥ ಈ ರೀತಿ ಅತಿ ವಿಚಿತ್ರವಾದುದೆಂಬಂತೆ ತಿನ್ನುವ, ಭುಂಜಿಸುವ, ನೆಕ್ಕುವ (ಲೇಹ್ಯ) ಕುಡಿಯುವ ತಿನಸುಗಳನ್ನು ಮಾಡಿಸಿ ಪಾರ್ವತಿಯು ಅಲ್ಲಿಲ್ಲದವುಗಳನ್ನು ಸ್ಮರಿಸಿ, ಅನೇಕ ವಿಧಗಳಾಗಿಯೂ, ವಿಶೇಷವಾಗಿಯೂ ಇರುವ ಭೋಜ್ಯ ರಸದ ರಸಾಯನಗಳನ್ನು ಒದಗಿಸಿ ಸಿದ್ಧಪಡಿಸಿದಳು. (ಆಗ)ಆ ಪ್ರಮಥರೆಲ್ಲರನ್ನೂ ಬರಮಾಡಿಕೊಳ್ಳಲೆಂದು ಕಿರಿಯ ಗಣಶ್ರೇಷ್ಠನೊಬ್ಬನನ್ನು ಕರೆದು 'ಹೋಗಿ ಕರೆದುಕೊಂಡು ಬಾ' ಎಂದು ಹೇಳಲು ಕೂಡಲೆ—೮೪. 'ತಾಯಿಯೇ ನಮ್ಮ ಘನ ಲಿಂಗಕ್ಕೆ ಹಸಿವು ಆಗಿರುವುದು. ನಾನು (ಊಟ ಮಾಡಿ) ತೃಪ್ತಿಗೊಂಡು ಹೋಗುತ್ತೇನೆ. ಊಟವನ್ನು ನೀಡು' ಎನ್ನಲಾಗಿ,

ಗಡಣಿಸೆ ತೇನ ತೇನವೊಡನರ್ಪಿಸುತಂ ನಿಜಲಿಂಗಮೂರ್ತಿಗೊ
ಲ್ದೊಡನೊಡನದ್ರಿತುಂಗಶಿಖರಾಕೃತಿಯಗ್ಗದ ತುತ್ತನೆತ್ತಿ ವಂ
ಗಡಿಸಿದ ಭೋಜ್ಯವಸ್ತುನಿವಹಂ ಬಱಿದಪ್ಪಿನಮಲ್ಲಿ ವಿಸ್ಮಯಂ
ಒಡೆ ಸಕಲಾಮರರ್ಸವಿದನಾ ಗಣಬಾಲಕನಾತ್ಮಲೀಲೆಯಿಂ ೮೫

ವ॥ ಆಗಳ್—

ಪ್ರಮಥಸಂಕುಳತೃಪ್ತಿಗಾಂ ಸಮೆದನ್ನಮೆಲ್ಲಮನೊರ್ವನೀ
ಪ್ರಮಥ ಬಾಲಕನುಂಡನೇವೆನೆನುತ್ತೆ ವಿಸ್ಮಯಮಾಂತುಮಾ
ರಮಣಿ ನಾಣ್ಚಿ ನಿಜೇಶನಲ್ಲಿಗೆ ಬಂದು ಪೇಳ್ದದನೆಲ್ಲಮಂ
ನಮಿಸೆ ದೈನ್ಯದಿನಂದು ಸಸ್ಮಿತನಾದನಿಂದುಕಳಾಧರಂ ೮೬

ವ॥ ಆಗಳಂತು ಸಸ್ಮಿತನಾಗಿ ನಿಜರಮಣಿಯಂ ಭುವನೈಕಪತಿ ಸಂತವಿಟ್ಟು ತೊಡೆಯೆಡೆಗೆ ತೊಡವಂ ಮಾಡಿ ಸವಿನಯಮಿಂತೆಂದಂ—

ನಿರವದ್ಯರ್ನಿತ್ಯತೃಪ್ತರ್ನಿರವಧಿವಿಭವರ್ನಿರ್ಭಯರ್ನಿಷ್ಕಳಂಕ
ರ್ನಿರಪಾಯರ್ನಿರ್ಮಲಾಂಗರ್ನಿರುಪಮಮಹಿಮರ್ನೀರಜಾಕ್ಷಾಜಸೇವ್ಯ

ಪಾರ್ವತಿಯು (ಅವನಿಗೆ) ಲಿಂಗಾರ್ಚನೆ ಮಾಡಿಸಿ, ಭೋಜ್ಯವಸ್ತು ಸಮೂಹವನ್ನು— ೮೫. ಮೇಲಿಂದ ಮೇಲೆ ರಾಶಿಯನ್ನು ಹಾಕಲು ಕೂಡಲೇ ಆ ಗಣನಾಥ ಬಾಲಕನು ತನ್ನ ಲಿಂಗದೇವನಿಗೆ ಪ್ರೀತಿಯಿಂದ ಅರ್ಪಣೆ ಮಾಡಿ, ಆ ಕೂಡಲೆ ಪರ್ವತ ಶಿಖರದಂತೆ ಎತ್ತರವಾದ ಗಾತ್ರದ ದೊಡ್ಡದಾದ ತುತ್ತನ್ನು ಎತ್ತಿ, ಗುಂಪುಗೂಡಿಸಿದ್ದ ಭಕ್ಷ್ಯ ಪದಾರ್ಥಗಳನ್ನೆಲ್ಲ ಸ್ವಲ್ಪವೂ ಉಳಿಯದ ಹಾಗೆ ಸಮಸ್ತ ದೇವತೆಗಳೂ ಅಲ್ಲಿ ವಿಸ್ಮಯ ಪಡುವ ಹಾಗೆ ಆತ್ಮ ಲೀಲೆಯಿಂದ ಊಟ ಮಾಡಿದನು. ವ॥—ಆಗ. ೮೬. ಪಾರ್ವತೀದೇವಿಯು ನಾನು ಪ್ರಮಥ ಸಮೂಹದ ತೃಪ್ತಿಗೋಸುಗ ಮಾಡಿಸಿದ ಅನ್ನ ವೆಲ್ಲವನ್ನೂ, ಈ ಪ್ರಮಥ ಬಾಲಕನೊಬ್ಬನೇ ಊಟ ಮಾಡಿದನು. ಇನ್ನೇನು ಮಾಡಲಿ? ಎನ್ನುತ್ತ ಆಶ್ಚರ್ಯಗೊಂಡವಳಾಗಿ, ನಾಚಿಕೆಯಿಂದ ತನ್ನ ಪತಿಯಾದ ಪರಶಿವನಿರುವ ಸ್ಥಲಕ್ಕೆ ಬಂದು, ನಡೆದುದೆಲ್ಲವನ್ನೂ ಹೇಳಿ ದೈನ್ಯದಿಂದ ನಮಸ್ಕರಿಸಿದಳು. ಆಗ ಚಂದ್ರಕಲಾಧರನಾದ ಶಿವನು ಮುಗುಳ್ನಗೆಯಿಂದ ಕೂಡಿದವನಾದನು. **ವಚನ** : — ಆಗ ಆ ರೀತಿ ಮುಗುಳ್ನಗೆಯಿಂದ ಕೂಡಿದ ಶಿವನು ತನ್ನ ಹೆಂಡತಿಯನ್ನು ಸಮಾಧಾನ ಪಡಿಸಿ, ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಸವಿನಯವಾಗಿ ಹೀಗೆಂದನು : ೮೭. 'ಕಮಲನೇತ್ರೆಯಾದ ಪಾರ್ವತೀ, ಕೇಳು : ಪ್ರಮಥಗಣವರರು ದೋಷ ರಹಿತರು ; ಅವರು ನಿತ್ಯ ತೃಪ್ತಿಯುಳ್ಳವರು ; ಕೊನೆ ಮೊದಲಿಲ್ಲದ ವೈಭವ ಸಂಪನ್ನರು ; ನಿರ್ಭಯವುಳ್ಳವರು ; ಕಳಂಕ ರಹಿತರು ; ಯಾವ ಅಪಾಯವೂ ಇಲ್ಲದ ವರು ; ನಿರ್ಮಲ ಶರೀರಿಗಳು ; ಅಸದೃಶ ಮಹತ್ವವುಳ್ಳವರು ; ವಿಷ್ಣುವೇ

ನಿರಘಾಖ್ಯರ್ನೀತಿಯುಕ್ತರ್ನಿರತಿಶಯಗುಣರ್ನೀರುಜರ್ನಿಶ್ಚಿತಾರ್ಥರ್
ನಿರನಂಗರ್ನಿತ್ಯಮುಕ್ತರ್ಪ್ರಮಥಗಣವರರ್ಕೇಳ್ಸರೋಜಾಯತಾಕ್ಷೀ ೮೭

ಜಡಜಭವಾಂಡಾವಳಿಯಂ
ಕಡೆಗಣ್ಣವಲೋಕಮಾತ್ರದಿಂ ಪುಟ್ಟಿಪ ಸೈ
ತಿಡುವ ಪಡಲಿಡಿಪ ಲೀಲೆಯ
ನೊಡರ್ಚುವ ಪ್ರಮಥರಳವದೇಂ ಕೇವಳಮೇ ೮೮

ಒಡೆವರಜಾಂಡಮಂ ಕುಡಿವರಂಬುಧಿಯಂ ಪಿಡಿವರ್ಲಯಾಗ್ನಿಯಂ
ತೊಡುವರನಂತನಂ ಪೊಡೆವರಂತಕನಂ ಜಡಿವರ್ವಿಧಾತ್ರನಂ
ಸುಡುವರನಂಗನಂ ಮಿಡಿವರರ್ಕನನಾಂತಿಡುವರ್ಕುಳಾದ್ರಿಯಂ
ಕಡಿವರಿದಿರ್ಚೆ ದೈತ್ಯತತಿಯಂ ಪ್ರಮಥರ್ಕಮಳೋಜ್ವಳಾನನೇ ೮೯

ಅಸುವೆನಗೆ ಶರಣರಾನವ
ರಸು ನನ್ನಿ ಸರೋಜಜಾಂಡತತಿಯುರುಳ್ದೊಡಮೀ
ಬಿಸಜಾಕ್ಷಾದಿಗಳಳಿದೊಡ
ಮಸಮಾನರ್ಶರಣರಳಿಯರಿಭಪತಿಯಾನೇ ೯೦

ಶ್ರುತಿತತಿಗಳಱಸಿ ಕಾಣದ
ವಿತತ ಮಹೋನ್ನತಮದೀಯ ಮಹಿಮೆಯನಱಿವ

ಮೊದಲಾದವರಿಂದ ಸೇವಿಸಲ್ಪಡುವವರು ; ಪಾಪರಹಿತರಾದ ನಾಮಧೇಯವುಳ್ಳವರು; ನೀತಿಯಿಂದ ಕೂಡಿದವರು ; ಶ್ರೇಷ್ಠ ಗುಣವುಳ್ಳವರು ; ರೋಗರಹಿತರು ; ತತ್ತ್ವಾರ್ಥ ನಿಶ್ಚಯರು ; ಕಾಮರಹಿತರು ; ನಿತ್ಯ ಮುಕ್ತರಾದವರು. ೮೮. ಬ್ರಹ್ಮಾಂಡ ಸಮೂಹವನ್ನು ಕಡೆಗಣ್ಣುಗಳ ನೋಟದಿಂದ ಹುಟ್ಟಿಸುವ, ಸಂರಕ್ಷಿಸುವ, ನಾಶಪಡಿಸುವ ಲೀಲೆಯನ್ನುಂಟುಮಾಡುವವರು. ಪ್ರಮಥರ ಆ ಸಾಮರ್ಥ್ಯವು ಸಾಮಾನ್ಯವೇ ? ೮೯. 'ತಾವರೆಯಂತೆ ಉಜ್ವಲವಾದ ಮುಖವುಳ್ಳ ಪಾರ್ವತಿಯೇ, ಪ್ರಮಥರುಗಳು ಬ್ರಹ್ಮಾಂಡವನ್ನೇ ಒಡೆಯುವರು ; ಸಮುದ್ರವನ್ನು ಕುಡಿಯುವರು ; ಪ್ರಳಯಕಾಲದ ಅಗ್ನಿಯನ್ನು ಹಿಡಿಯುವರು ; ಆದಿಶೇಷನನ್ನು ಆಭರಣ ಮಾಡಿಕೊಳ್ಳುವರು ; ಯಮನನ್ನು ಬಡಿಯುವರು ; ಬ್ರಹ್ಮನನ್ನು ಜಜ್ಜುವರು ; ಮನ್ಮಥನನ್ನು ಸುಡುವರು : ಸೂರ್ಯನನ್ನು (ಬೆರಳಿನಿಂದ) ಚಿಮ್ಮುವರು : ಕುಲಾಚಲ ಪರ್ವತ ಗಳನ್ನು ಹಿಡಿದು ಬಿಸಾಡುವರು ; ಎದುರಿಸಿದರೆ ರಾಕ್ಷಸರನ್ನು ಕತ್ತರಿಸುವರು'. ೯೦. 'ಐರಾವತದ ನಡಿಗೆಯಂತೆ ನಡಿಗೆಯುಳ್ಳ ಪಾರ್ವತಿಯೇ, ಶರಣರೇ ನನಗೆ ಪ್ರಾಣ ; ನಾನೇ ಅವರ ಪ್ರಾಣ ; (ಇದು) ನಿಶ್ಚಯ. ಬ್ರಹ್ಮಾಂಡಗಳ ಸಮೂಹವು ನಾಶವಾದರೂ. ಅದೃಶ್ಯರಾದ ಆ ಶರಣರು ನಾಶವಾಗುವುದಿಲ್ಲ ; ೯೧. 'ಅಪರ್ಣೆಯೇ, ವೇದ ಸಮೂಹಗಳು ಹುಡುಕಿ ಕಾಣಲಶಕ್ಯವಾದ ಅತ್ಯಧಿಕವಾದ ನನ್ನ ಮಹಿಮೆಯನ್ನು

ನ್ರುತ ಶರಣರವರ ಮಹಿಮೋ
ನ್ನತಿಯಂ ಪೆಱರಱಿಯರಾನೆ ಬಲ್ಲೆನಪರ್ಣೇ ೯೧

ಲಿಂಗಾಲಿಂಗಿತ ಮಂಗಳಾಂಗ ಮಹಿತರ್ಲಿಂಗಾಭಿಮಾನಾನ್ವಿತ
ರ್ಲಿಂಗಾನಂದರಸಾರ್ದ್ರಸಾರಹೃದಯರ್ಲಿಂಗಾರ್ಚನಾತತ್ಪರ
ರ್ಲಿಂಗಾಲೋಕವಿಲೋಕನಾತಿಚದುರರ್ಲಿಂಗಾರ್ಪಿತಾಸ್ವಾದಿಗಳ್
ಲಿಂಗಪ್ರಾಣಯುತರ್ಮದೀಯ ಶರಣರ್ಶೃಂಗಾರಸಾರಾಸ್ಪದೇ ೯೨

ಎಂದಭವನೊರೆಯೆ ಹಿಮಗಿರಿ
ನಂದನೆ ಬಗೆದಂ[1]ದು ಕೇಳ್ದು ತನ್ಮಹಿಮೆಯನಾ
ನಂದನಿಧಿ ಭಾವಿಸುತೆ ನಿಜ
ಸಂದೇಹಮನುಳಿದು ರಮಣನೊಡನೊಪ್ಪಿರ್ದಳ್ ೯೩

ಆಡಲೇಂ ಗಣಬಾಲಕಂಗೆ ಜಗತ್ತ್ರಯಾಂಬಿಕೆ ತೃಪ್ತಿಯಂ
ಮಾಡಲಾಱದೆ ನಿಂದಳೆಂದೆನೆ ದೇವ ವಿಶ್ವಕುಟುಂಬಮಂ
ನಾಡೆ ರಕ್ಷಿಪ ಚಿನ್ಮಯಪ್ರಭುಲಿಂಗ ಕೇಳ್ನಿನಗಾಂ ಕರಂ
ಮಾಡಲಾರ್ಪೆನೆ ತೃಪ್ತಿಯಂ ಜಿತಮಾಯ ಪೂರ್ಣಕೃಪಾನಿಧಿ ೯೪

ಶ್ಲಾಘ್ಯರಾದ ಶರಣರು ತಿಳಿಯುವರು ; ಅವರ ಮಹಿಮಾತಿಶಯವನ್ನು ಮತ್ತೊಬ್ಬರು ತಿಳಿಯರು ; ನಾನೇ ಬಲ್ಲೆನು. ೯೨. 'ಶೃಂಗಾರರಸದ ಸಾರವಾದ ಅಂಶಕ್ಕೆ ಆಶ್ರಯಳಾದ ಪಾರ್ವತಿಯೇ, ನನ್ನ ಶರಣರು ಶಿವಲಿಂಗವನ್ನು ಅಂಗದಲ್ಲಿ ಧರಿಸಿದ ಮಂಗಳಕರ ಶರೀರದಿಂದ ಪೂಜ್ಯರಾದವರು; ಲಿಂಗದಲ್ಲಿ ಅಭಿಮಾನದಿಂದ ಕೂಡಿದವರು; ಶಿವಲಿಂಗದಿಂದುಂಟಾದ ಸಂತೋಷ ರಸದಿಂದ ಆರ್ದ್ರಗೊಂಡ ಮನಸ್ಸುಳ್ಳವರು ; ಶಿವ ಪೂಜೆಯಲ್ಲಿ ತತ್ಪರರಾದವರು ; ಶಿವಲಿಂಗ ದರ್ಶನದಲ್ಲಿ ಅತಿ ಚತುರರು ; ಶಿವಲಿಂಗಕ್ಕೆ ಸಮರ್ಪಿಸಿದ ವಸ್ತುಗಳನ್ನು ಸ್ವೀಕಾರ ಮಾಡುವರು ; ಲಿಂಗವೇ ಪ್ರಾಣವಾಗಿ ಉಳ್ಳವರು.' ೯೩. ಹೀಗೆಂದು ಪರಮೇಶ್ವರನು ಹೇಳಲಾಗಿ, ಆನಂದನಿಧಿಯಾದ ಪಾರ್ವತಿಯು ಮನಃಪೂರ್ವಕವಾಗಿ ಕೇಳ್ದು, (ಶಿವನು ಹೇಳಿದ) ಆ ಶರಣರ ಮಹಾತ್ಮೆಯನ್ನು ಆಲೋಚಿಸುವವಳಾಗಿ, (ಗಣವರರ ವಿಷಯದಲ್ಲಿ ತನಗಿರುವ) ತನ್ನ ಸಂಶಯವನ್ನು ಬಿಟ್ಟು, ಪತಿಯೊಡನೆ ಒಪ್ಪಿ ಇದ್ದಳು. ೯೪. ಮೂರು ಲೋಕಗಳಿಗೆ ತಾಯಿಯಾದ ಪಾರ್ವತಿಯು ಬಾಲಕ ಗಣವರನಿಗೆ ತೃಪ್ತಿಯನ್ನು ಮಾಡಲಾರದೆ ನಿಂತಳು ಎನ್ನುವಾಗ ಹೇಳುವುದಿನ್ನೇನು ? ವಿಶ್ವಕುಟುಂಬಿಯಾಗಿ ಜೀವರುಗಳನ್ನು ಚೆನ್ನಾಗಿ ರಕ್ಷಣೆ ಮಾಡುವ, ಮಾಯೆಯನ್ನು ಗೆದ್ದ, ಪೂರ್ಣಕೃಪಾ ನಿಧಿಯೂ. ಚಿತ್ಸ್ವರೂಪನೂ ಆದ ದೇವ, ಪ್ರಭುಸ್ವಾಮಿಯೇ, ನಿನಗೆ ತೃಪ್ತಿಯನ್ನುಂಟುಮಾಡಲು ನಾನು

1 ಬಂ(ದ)

ನತಕಲ್ಪೋರ್ವೀಜ ನಾನಾಗಮ ನಿಗಮ ರಹಸ್ಯಾರ್ಥಸಾರಪ್ರಕಾಶಾ
ನ್ವಿತ ಸತ್ಯಾಲಾಪ ಸಂತರ್ಜಿತಮದನ ಗಣಾನಂದ ಪೀಯೂಷವಾರಾ
ಶಿತತಪ್ರದ್ಯೋತಶೀತಪ್ರಭ ಭವನಿವಹಧ್ವಾಂತಮಾರ್ತಾಂಡ ನಿತ್ಯಾ
ದ್ಭುತ ಲೀಲಾವಾಸ ಭಾಸ್ವತ್ಪ್ರಭುವೆ ವಿಭುವೆ ರಕ್ಷಿಪ್ಪುದೆಂದಂ ವೃಷೇಂದ್ರಂ ೯೫

ವ॥ ಎಂದು ಭಕ್ತಿಭರದಿಂ ಸ್ತೋತ್ರಂಗೆಯ್ವ ಬಸವನಂ ನೋಡಿ—

ನಿನ್ನನೆನಗಿತ್ತೆ ಮೊದಲೆ ದ
ಲೆನ್ನಂ ನಿನಗಿತ್ತೆನೀಗಳೆನ್ನಿಂ ನೀನ
ತ್ಯುನ್ನತ ವಿತರಣಗುಣ ಸಂ
ಪನ್ನಂ ನಿನ್ನನ್ನರೊಳರೆ ದಾನಿಗಳಿಳೆಯೊಳ್ ೯೬

ವ॥ ಎಂದು ಪೊಗಳ್ದು ಸುರಭಿ ಸುರತರು ಚಿಂತಾಮಣಿಗಳಂಗಣದೊಳ್ನೆಲೆಗೊಳ್ವಂತೆ ನಿಜ ಪ್ರಸಾದಮಂ ಕರುಣಿಸಿ ವಾಕ್ಸಿದ್ಧಿ ಮನಃಸಿದ್ಧ್ಯಾದಿ ಸಿದ್ಧಿಗಳುಮನಿತ್ತು ನೆನೆದಂತೆ ಸರ್ವಮಂ ನಿರ್ವಹಿಸೆಂದು ಬರಂಗೊಟ್ಟು ಮುನ್ನುಳ್ಳ ನಳಿನಗಂಧಮಂ ಪಸರಿಪ ರವಿಯಂತನಾದಿಸಂಸಿದ್ಧಮಾದ

ಸಮರ್ಥನಾದೇನೆ ? ೯೫. (ಆಗ) ಬಸವೇಶ್ವರನು—ನಮಸ್ಕಾರ ಮಾಡುವ ಜನರಿಗೆ ಕಲ್ಪವೃಕ್ಷಪ್ರಾಯನೂ, ಅನೇಕ ಆಗಮ, ವೇದಾದಿ ಸಮೂಹದ ರಹಸ್ಯಾರ್ಥದ ಶ್ರೇಷ್ಠ ಕಾಂತಿಯಿಂದ ಕೂಡಿದವನೂ, ಸತ್ಯಭಾಷೆಯುಳ್ಳವನೂ, ಮನ್ಮಥನನ್ನು ಭಯಗೊಳಿಸಿದ ವನೂ, ಶಿವಗಣಗಳ ಸಂತೋಷವೆಂಬ ಕ್ಷೀರಸಮುದ್ರಕ್ಕೆ ವಿಸ್ತಾರವಾದ ಕಾಂತಿಯಿಂದ ಕೂಡಿದ ಚಂದ್ರನಂತಿರುವವನೂ, ಪಾಪಸಮೂಹವೆಂಬ ಕತ್ತಲೆಗೆ ಸೂರ್ಯನೋಪಾದಿ ಯಲ್ಲಿರುವವನೂ, ಶಾಶ್ವತವಾದ ಆಶ್ಚರ್ಯಕರ ಲೀಲೆಗಳುಳ್ಳವನೂ, ಪ್ರಕಾಶಮಾನನೂ ಆದ ಪ್ರಭುವೇ, (ನನ್ನನ್ನು) ರಕ್ಷಿಸಬೇಕು, ಎಂದನು. ವ॥—ಹೀಗೆಂದು ಭಕ್ತಿಯ ಆಧಿಕ್ಯದಿಂದ ಸ್ತೋತ್ರ ಮಾಡುತ್ತಿರುವ ಬಸವಣ್ಣನನ್ನು (ಪ್ರಭುದೇವರು) ನೋಡಿ—೯೬. (ಬಸವಣ್ಣ) ನೀನು ಮೊದಲೇ ನಿನ್ನನ್ನು ನನಗೆ ಅರ್ಪಿಸಿದೆ. ಈಗ ನನ್ನನ್ನೇ ನಿನಗೆ ಕೊಟ್ಟಿದ್ದೇನೆ. ನನಗಿಂತಲೂ ನೀನೇ ಅಧಿಕವಾದ ಗುಣಗಳಿಂದ ಕೂಡಿ ದವನು. ನಿನ್ನಂಥ ದಾನ ಗುಣವುಳ್ಳವರು ಈ ಭೂಮಿಯಲ್ಲಿ ಇರುವರೇ ? ವ॥ ಹೀಗೆಂದು ಹೊಗಳಿ, ಕಾಮಧೇನು, ಕಲ್ಪವೃಕ್ಷ. ಚಿಂತಾಮಣಿ (ಬಸವೇಶ್ವರನ) ಅಂಗಳ ದಲ್ಲಿಯೇ ಸ್ಥಿರವಾಗಿ ನೆಲಸುವಂತೆ ಅನುಗ್ರಹವನ್ನು ಕರುಣಿಸಿದನು. ವಾಕ್‌ಸಿದ್ಧಿ, ಮನಃಸಿದ್ಧಿಯೇ ಮೊದಲಾದ ಸಿದ್ಧಿಗಳನ್ನು ಉಂಟುಮಾಡಿದನು. 'ಮನಸ್ಸಿನಲ್ಲಿ ಸ್ಮರಿಸಿದಂತೆ ಸರ್ವವನ್ನೂ ನಿರ್ವಹಿಸುವವನಾಗು' ; ಎಂದು ವರವನ್ನು ಕೊಟ್ಟು, ಮೊದಲೇ ಇದ್ದ ಕಮಲದ ಗಂಧವನ್ನು (ಅದು) ಹರಡುವಂತೆ ಮಾಡುವ ಸೂರ್ಯನ ಹಾಗೆ ಅನಾದಿಯಿಂದ ಅವನೊಡನೆ ಸಿದ್ಧಿಗೊಂಡು ಬಂದ ಶಿವಜ್ಞಾನವನ್ನು ಪ್ರಕಾಶನ

ತದೀಯ ಶಿವಜ್ಞಾನವಮುನುಜ್ವಲಂಗೆಯ್ದು ಬಸವನು ನಿರುಪಮಾನ ಶಿವಾನುಭವ ಸುಧಾತರಂಗಿಣಿ ಯೊಳವಗಾಹಂಗೆಯ್ಸಿ ಸುಖಮಿರಿಸಿ—

ತೆಗೆದಪ್ಪುತ್ತೆ ವೃಷೇಂದ್ರನಂ ಬಿಗಿದು ತಳ್ಕೈಸುತ್ತೆ ಸಂಪ್ರೀತಿ ಕೈ
ಮಿಗೆ ಪಾದಾನತನಾದ ಚನ್ನವೃಷನಂ ಶ್ರೀ ಮಾಚಿದೇವಾದಿ ವೀ
ರಗಣಾನೀಕಕೆ ಬೀಱಿ ತನ್ನ ಕೃಪೆಯಂ ಸರ್ವೋತ್ಸವಂ ಗೆಯ್ದು ಪೂ
ರ್ಣಗಭೀರಂ ಪ್ರಭುವೆಯ್ದಿದಂ ನಿಜರಹಸ್ಯಾಕಾರವಿಸ್ತಾರಮಂ ೯೭

ವ॥ ಅನಂತರಂ—

ಬಗೆಯೊಳ್ತಾಂ ಭಾವಿಸುತ್ತಂ ಪ್ರಭುಪದಯುಗಮಂ ತತ್ಪ್ರಶಸ್ತಪ್ರಭಾವೋ
ಕ್ತಿಗಳಂ ಸಂಪಾದಿಸುತ್ತಂ ಶರಣನಿವಹದೊಳ್ ಜಂಗಮಾನೀಕಮಂ ಕೈ
ಮಿಗೆ ಕೂರ್ತಾರಾಧಿಸುತ್ತಂ ಮೆಱೆದನುರುಶಿವಾಚಾರ ವಿಸ್ತಾರ ತಾರಾ
ಧ್ವಗತಸ್ಫೀತಾಮೃತಪ್ರಸ್ಫುರಿತರುಚಿಕಳಾಸಾಂದ್ರಚಂದ್ರಂ ವೃಷೇಂದ್ರಂ ೯೮

ಗೊಳಿಸಿ, ಆ ಬಸವಣ್ಣನನ್ನು ಉಪಮಾತೀತವಾದ ಶಿವಾನುಭಾವವೆಂಬ ಅಮೃತದ ನದಿಯಲ್ಲಿ ಮುಳುಗಿಸಿ (ಸ್ನಾನ ಮಾಡಿಸಿ), ಸುಖವಾಗಿ ಇರುವಂತೆ ಮಾಡಿದನು.

೯೭. ಪೂರ್ಣ ಗಂಭೀರನಾದ ಪ್ರಭುದೇವನು ಬಸವಣ್ಣನನ್ನು ಬಾಚಿಕೊಂಡು ಅಪ್ಪುತ್ತ, ಪಾದಗಳಿಗೆ ನಮಸ್ಕಾರ ಮಾಡಿದ ಚೆನ್ನಬಸವಣ್ಣನನ್ನು ಹೆಚ್ಚಾದ ಪ್ರೀತಿಯಿಂದ ಬಿಗಿದು ಆಲಿಂಗಿಸಿಕೊಂಡು, ಶ್ರೀ ಮಡಿವಳ ಮಾಚಿದೇವನೇ ಮೊದಲಾದ ವೀರ ಶಿವ ಗಣ ಸಮೂಹಕ್ಕೆ ತನ್ನ ಕೃಪೆಯನ್ನು ಬೀರುವವನಾಗಿ, ಸರ್ವರಿಗೂ ಸಂತೋಷವುಂಟಾ ಗುವಂತೆ ಮಾಡಿದನು. ತನ್ನ ಗೌಪ್ಯವಾದ ಆಕಾರದ ವೈಶಾಲ್ಯವನ್ನು (ನಿರಾಕಾರ ತತ್ತ್ವವನ್ನು ಅಥವಾ ನಿರಂಜನ ಸ್ಥಿತಿಯನ್ನು) ಹೊಂದಿದನು. ವ॥—ಆಮೇಲೆ

೯೮. ಅಧಿಕತರವಾದ ವೀರಶೈವಾಚಾರವೆಂಬ ವಿಶಾಲ ಆಕಾಶವನ್ನು ಹೊಂದಿದ, ಅಧಿಕವೂ, ಅಮೃತಮಯವೂ ಆದ ಪ್ರಕಾಶದ ಕಾಂತಿಯುಳ್ಳವನಾಗಿ ಷೋಡಶ ಕಲೆಗಳಿಂದ ಸಂಪೂರ್ಣನಾದ ಚಂದ್ರನಂತಿರುವ ಬಸವೇಶ್ವರನು ತಾನು ಪ್ರಭುದೇವರ ಪಾದದ್ವಯವನ್ನು ಮನಸ್ಸಿನಲ್ಲಿ ಧ್ಯಾನಿಸುತ್ತ, ಆ ಪ್ರಭುದೇವರು ಅಪ್ಪಣೆ ಕೊಡಿಸಿದ ಪರಿಶುದ್ಧವೂ, ಮಹಿಮಾಯುಕ್ತವೂ ಆದ ಮಾತುಗಳನ್ನು ಶರಣರುಗಳ ಸಮೂಹದಲ್ಲಿ ಸಂಭಾಷಿಸುತ್ತ, ಜಂಗಮ ಸಮೂಹವನ್ನು ಶಕ್ತಿ ಮೀರಿ ನಿತ್ಯವೂ ಆರಾಧನೆ ಮಾಡು

ಋಗ್ಯಜುಃರಭಿಸ್ತುತ ವಿರಾಗ್ಯಧಿಕ ಪದ್ಮಸಮ
ದೃಗ್ಯುಗಳ ಭಕ್ತಕೃತಭಾಗ್ಯಜಯ ನಿತ್ಯಾ-
ರೋಗ್ಯ ನಿರವದ್ಯ ಬಹುಭೋಗ್ಯ ನಿಗಮ ಪ್ರಬಲ
ಯುಗ್ಯ ಪುರಭಿದ್ಪುಜನಯೋಗ್ಯ ಜನಲೋಲಾ
ಪ್ರಾಗ್ಯಮಿಸಮೀಕ್ಷ್ಯ ದಶದಿಗ್ಯುತಯಃಶಸ್ಕ ಮನು
ವಾಗ್ಯಜನರಾಗಕೃತಶುಗ್ಯ ಮಹರಂಗಾ
ಸ್ಪೃಗ್ಯತಿವರೇಣ್ಯ ಜಲಮುಗ್ಯದುಕುಲೇಶ ಸಿತ
ರುಗ್ಯಗುರುಕಂಠ ಜಯ ಮೃಗ್ಯ ಬಸವೇಶಾ ೯೯

ಪ್ರಭುಕಥನವನಿದನಾವಂ
ಸುಭಕ್ತಿಯಿಂದೋದುವಂ ಮುದಂ ಮಿಗೆ ಕೇಳ್ವಂ

ವವನಾಗಿ ಶೋಭಿಸಿದನು. ೯೯. ಋಗ್ವೇದ ಯಜುರ್ವೇದಗಳಿಂದ ಸ್ತೋತ್ರ ಮಾಡಿಸಿ ಕೊಳ್ಳಲ್ಪಡುವವನೂ. ವಿರಕ್ತ ಶ್ರೇಷ್ಠನೂ, ಕಮಲ ಸದೃಶವಾದ ಎರಡು ನೇತ್ರಗಳುಳ್ಳ ವನೂ, ಭಕ್ತರಿಗೋಸ್ಕರ ಐಶ್ವರ್ಯ ಸಮೂಹವನ್ನು ವಿನಿಯೋಗಿಸುವವನೂ, ಸದಾ ಆರೋಗ್ಯವುಳ್ಳವನೂ, ಪವಿತ್ರವಾದ ಅನೇಕ ಭೋಗವಸ್ತುಗಳನ್ನುಳ್ಳವನೂ, ವೇದ ಗಳೆಂಬ ಅತ್ಯಂತ ಬಲವುಳ್ಳ ಕುದುರೆಗಳಿಂದ ತ್ರಿಪುರಗಳನ್ನು ಸಂಹರಿಸಿದ ಪರಮೇಶ್ವರನ ಪೂಜೆಯಿಂದ ಯೋಗ್ಯರೆನಿಸಿದ ಜನರಲ್ಲಿ ಆಸಕ್ತನಾದವನೂ, ಪ್ರಾಚೀನ ಋಷಿಗಳಿಂದ (ಮಾತ್ರ) ನೋಡುವುದಕ್ಕೆ ಯೋಗ್ಯವಾದ ಹತ್ತು ದಿಕ್ಕುಗಳಲ್ಲಿ ಹರಡಿರುವ ಕೀರ್ತಿಯು ಳ್ಳವನೂ, ಮಂತ್ರ ರೂಪವಾದ ಮಾತಿನಿಂದ ಮಾಡುವ ಪೂಜೆಯಲ್ಲಿ ಪ್ರೀತಿಯುಳ್ಳ ವನೂ, ಸರ್ವರಿಗೂ ದುಃಖವನ್ನುಂಟುಮಾಡುವ ಯಮನನ್ನು ನಾಶ ಮಾಡಿದ ಪರಮೇಶ್ವರನ ಅಂಶದಿಂದ ಅವತರಿಸಿದವನೂ, ಋಷಿಶ್ರೇಷ್ಠನಾದವನೂ, ಮೇಘ ವರ್ಣನೂ, ಯದುಕುಲಕ್ಕೆ ಸ್ವಾಮಿಯಾದವನೂ ಆದ ಶ್ರೀ ಕೃಷ್ಣನೋಪಾದಿಯಲ್ಲಿ ಕಪ್ಪಾದ ಕಾಂತಿಯಿಂದ ಕೂಡಿದ ವಿಶಾಲವಾದ ಕೊರಳುಳ್ಳವನೂ, ದಿವ್ಯಜ್ಞಾನದಿಂದ (ಮಾತ್ರ) ಹುಡುಕುವುದಕ್ಕೆ ಯೋಗ್ಯನಾದ ಬಸವೇಶನೇ ಜಯ—[ಪದ + ಸಮ + ದೃಕ್ + ಯುಗಳ—ಕಮಲಕ್ಕೆ ಸಮಾನವಾದ ಎರಡು ಕಣ್ಣು ; ನಿಗಮ + ಪ್ರಬಲ + ಯುಗ್ಯ—ವೇದಗಳೆಂಬ ಅತ್ಯಂತ ಪ್ರಬಲ ಕುದುರೆ ; ಪ್ರಾಕ್ + ಯಮಿ + ಸಮೀಕ್ಷ್ಯ— ಪ್ರಾಚೀನ ಋಷಿಗಳಿಂದ ನೋಡಲ್ಪಡುವುದಕ್ಕೆ ಯೋಗ್ಯ ; ಮನು + ವಾಕ್ + ಯಜನ + ರಾಗ—ಮಂತ್ರರೂಪ ವಾಕ್ಪೂಜೆಯಲ್ಲಿ ಪ್ರೀತಿಯುಳ್ಳ ; ಕೃತ + ಶುಕ್ + ಯಮ + ಹ + ಭಾಗ + ಸ್ಪೃಕ್—ಉಂಟುಮಾಡಲ್ಪಟ್ಟ ದುಃಖವುಳ್ಳ, ಯಮನನ್ನು ಸಂಹರಿಸಿದವ ನಾದ ಶಿವನ ಅಂಶವನ್ನು ಸೋಂಕಿದವ] ೧೦೦. ಈ ಪ್ರಭುದೇವ ಸಂಬಂಧವಾದ ಕಥೆಯನ್ನು ಯಾವನು ಸದ್ಭಕ್ತಿಯಿಂದ ಓದುವನೋ, ಸಂತೋಷಾಧಿಕ್ಯದಿಂದ ಕೇಳು

ಶುಭಸಂವಿದ್ವೈರಾಗ್ಯವು
ನಭಿಮತಮಂ ಪಡೆವನವನಿಳಾಮಂಡಳದೊಳ್ ೧೦೦

ಪಂಚಜನಭಂಜನ ವಿರಿಂಚಿಮುಖನಿರ್ಜರ ಸ
ಮಂಚಿತಪದಾಂಬುಜ ವಿವಂಚಿತಮನೋಜಾ
ಪ್ರಾಂಚಿತಕೃಪಾರಸದೃಗಂಚಲ ಶಿವೈಕ್ಯಗಣ
ಸಂಚಿತನಿದಾನ ಯಮಿಸಂಚಿತ ವರೇಣ್ಯಾ
ಕಾಂಚನನಗೇಂದ್ರತಟಸಂಚರಣಶೀಲ ಸಮು
ದಂಚಿತ ಮಹತ್ವಮಣಿಕಂಚುಕ ಚರೌಘಾ-
ವಂಚಕ ಬುಧಪ್ರಣುತ ಚಂಚದಮಳಾಂಗ ಪೊರೆ
ಪಂಚಮುಖಮಂತ್ರರಸನಾಂಚಲ ವೃಷೇಂದ್ರಾ ೧೦೧

ಗಿರೀಂದ್ರಾತ್ಮಜಾತೇ ಕರೀಂದ್ರಾಸ್ಯಮಾತೇ
ಸುರೇಂದ್ರಾಶ್ಮರೋಚೀಸ್ಫುರನ್ಮಂಜುಗಾತ್ರೀ

ವನೋ ಅವನು ಭೂಮಿಯಲ್ಲಿ ಶುಭವನ್ನೂ, ಸುಜ್ಞಾನವನ್ನೂ, ವೈರಾಗ್ಯವನ್ನೂ ಸಕಲ ಇಷ್ಟಾರ್ಥಗಳನ್ನೂ ಪಡೆಯುವನು. ೧೦೧. ವಿಷ್ಣು, ಬ್ರಹ್ಮ ಇವರೇ ಮೊದಲಾದವರಿಂದ ಪೂಜಿಸಲ್ಪಟ್ಟ ಪಾದಕಮಲಗಳುಳ್ಳವನೂ, ಮನ್ಮಥನನ್ನು ವಂಚಿಸಿದವನೂ, ದಯಾ ರಸದಿಂದ ಕೂಡಿದ ಕಡೆಗಣ್ಣುಗಳುಳ್ಳವನೂ, ಶಿವನಲ್ಲಿ ಏಕತ್ವಗೊಂಡ (ಅಭೇದಗೊಂಡ) ಗಣಸಮೂಹದಿಂದ ಸಂಪಾದಿತವಾದ ನಿಕ್ಷೇಪರೂಪನೂ, ಋಷಿಗಳ ಸಮೂಹದಲ್ಲಿ ಶ್ರೇಷ್ಠನಾದವನೂ, ಮೇರುಪರ್ವತದ ತಪ್ಪಲು ಪ್ರದೇಶದಲ್ಲಿ ಸಂಚಾರ ಮಾಡುವ ಸ್ವಭಾವವುಳ್ಳವನೂ, ಉತ್ಕೃಷ್ಟವಾದ ಮಹಿಮೆಯೆಂಬ ರತ್ನಕವಚವನ್ನುಳ್ಳವನೂ, ಚರಜಂಗಮಕ್ಕೆ (ಎಂದೂ) ವಂಚನೆಯನ್ನು ಮಾಡದವನೂ, ವಿದ್ವಾಂಸರಿಂದ ಹೊಗಳಿಸಿ ಕೊಳ್ಳಲ್ಪಡುವ ಪ್ರಕಾಶಿಸುವ ನಿರ್ಮಲ ಶರೀರವುಳ್ಳವನೂ, ಶಿವನ ಮಂತ್ರವೇ ನಾಲಗೆಯ ತುದಿಯಲ್ಲಿ ಉಳ್ಳವನೂ ಆದ ವೃಷಭೇಂದ್ರನೇ ರಕ್ಷಿಸು. [ಪಂಚಜನ ಭಂಜನ—ಸಮುದ್ರದಲ್ಲಿ ಸಂಚಾರ ಮಾಡುತ್ತಿದ್ದ 'ಪಂಚಜನ' ಎಂಬ ರಾಕ್ಷಸರನ್ನು ಸಂಹರಿಸಿದವನು—ವಿಷ್ಣು; ಪ್ರಾಂಚಿತ + ಕೃಪಾ + ರಸ + ದೃಕ್ + ಅಂಚಲ—ಕೂಡಿದ ಕೃಪೆಯೆಂಬ ರಸವುಳ್ಳ ದೃಷ್ಟಿಯ ಕೊನೆಯ ಭಾಗ; ಸಮ್ + ಉದಂಚಿತ + ಮಹತ್ವ + ಮಣಿ + ಕಂಚುಕ— ಸಮೀಚೀನವಾದ ಉತ್ಕೃಷ್ಟ ಮಹಿಮೆಯೆಂಬ ರತ್ನದ ಕವಚವನ್ನು ಉಳ್ಳವ] ೧೦೨. ಹಿಮಗಿರೀಂದ್ರನಿಂದ ಜನಿಸಿದವಳೇ, ವಿಘ್ನೇಶ್ವರನಿಗೆ ತಾಯಿ ಯಾದವಳೇ, ಇಂದ್ರನೀಲಮಣಿಯ ಕಾಂತಿಯಂತೆ ಪ್ರಕಾಶಿಸುವ ಮನೋಹರ ಕಾಂತಿ

ಕುರಂಗಾಂಕಮೌಲೀಹರಾಂಗಾರ್ಧಶಾಲೀ
ವರಾಂಭೋಜಪಾಣೇ ಜಯ ಶ್ರೀಮೃಡಾನೀ ೧೦೨

ಇದು ವಿನಮದಖಿಳ ಸುರಾಸುರೇಂದ್ರಮಕುಟತಚಘಟಿತ ಮಣಿಗಣಾಗಣಿತ ರುಚಿನಿಚಯ
ತರುಣಾರುಣಾತಪಪರಿಲಸಿತ ಪರಮ ಶಿವಲಿಂಗ ಪಾದಾರವಿಂದಪರಾಗಭಸಿತ
ಭಾಸುರಲಲಾಟಪಟ್ಟ ಸರಸಜನಮಾನಿತೋಭಯಕವಿತಾವಿಶಾರದ
ಶ್ರೀಷಡಕ್ಷರದೇವಭಕ್ತಿವಿರಚಿತ
ಶ್ರೀಮದ್ ಬಸವರಾಜವಿಜಯಮಹಾಪುರಾಣದೊಳ್
ಪ್ರಭುದೇವಾಗಮ ಬಸವಗಂಗಾಂಬಿಕಾವಿವಾಹವರ್ಣನಂ
ಪಂಚಮಾಶ್ವಾಸಂ ಸಮಾಪ್ತಂ.

ಅಂತು ಆಶ್ವಾಸ ೫ಕ್ಕೆ ಪದಗಣನೆ ೪೬೦ಕ್ಕೆ ಮಂಗಳಮಹಾ ಶ್ರೀ॥

ಯುಳ್ಳವಳೇ, ಜಿಂಕೆಯೇ ಗುರುತಾಗಿ ಉಳ್ಳ ಚಂದ್ರನನ್ನು ಮೌಳಿಯಲ್ಲಿ ಧರಿಸಿದ ಶಿವನ ಅರ್ಧ ಶರೀರದಿಂದ ಶೋಭಿಸುವಳೇ, ಶ್ರೇಷ್ಠ ಕಮಲದಂತೆ ಕೈಗಳುಳ್ಳವಳೇ ಶ್ರೀ ಮೃಡಾಣಿಯೇ ಜಯ.

ಪಂಚಮಾಶ್ವಾಸವು ಸಮಾಪ್ತವಾಯಿತು.

ಷಷ್ಠಾಶ್ವಾಸಂ

ಶ್ರೀಮದಪರ್ಣಾನನ ನವ
ತಾಮರಸಾಮೋದ ಮದಮಧುವ್ರತನಭವಂ
ಕಾಮಗಜಸಾಮಜಾರಿ ನ
ತಾಮರಕುಜನೀಗೆ ಸೌಖ್ಯಮಂ ಶಿವಲಿಂಗಂ ೧
*

ಪ್ರಭುವಿನ ಕೃಪೆಯಿಂದನುಪಮ
ವಿಭೂತಿಯಂ ಪಡೆದು ನಾಡೆ ಲಿಂಗತ್ರಯಮಂ
ವಿಭವದಿನರ್ಚಿಸುತಂ ಘನ
ಶುಭಚರಿತಂ ಬಸವನೊಪ್ಪುತಿರ್ಪನ್ನೆವರಂ ೨

ಸಂಗಮೇಶ್ವರನಿಗೆ ಲಲಾಟೇಕ್ಷಣದಾನ

೧. ಸಂಪದ್ಯುಕ್ತಳಾದ ಪಾರ್ವತಿಯ ಮುಖವೆಂಬ ನೂತನ ಕಮಲದ ಪರಿಮಳಕ್ಕೆ ಮದದಿಂದ ಕೂಡಿದ ಭ್ರಮರ ಸ್ವರೂಪನೂ, ಮನ್ಮಥನೆಂಬ ಆನೆಗೆ ಸಿಂಹಸ್ವರೂಪನೂ, ನಮಸ್ಕರಿಸುವವರಿಗೆ ಕಲ್ಪವೃಕ್ಷ ಸದೃಶನೂ ಆದ ಭವರಹಿತ ನಾದ ಶಿವಲಿಂಗನು (ನಮಗೆ) ಸೌಖ್ಯವನ್ನು ಕೊಡಲಿ, ೨. ಪ್ರಭುದೇವರ ಕೃಪೆಯಿಂದ ಅಸದೃಶವಾದ ವಿಭೂತಿಯನ್ನು (ಐಶ್ವರ್ಯವನ್ನು) ಪಡೆದು ಚೆನ್ನಾಗಿ ಇಷ್ಟಪ್ರಾಣಭಾವಲಿಂಗಗಳನ್ನು ವೈಭವದಿಂದ ಅರ್ಚಿಸುತ್ತ, ಘನವಾದ ಶುಭದಿಂದ ಕೂಡಿದ ಚರಿತ್ರೆಯುಳ್ಳವನಾದ ಬಸವಣ್ಣನು ಇರುತ್ತಿರುವಷ್ಟರಲ್ಲಿ **ಚೋರರ ಕಥೆ :**

---

*ಸ್ವಚ್ಛಮತಿ ಮಜ್ಜನವಿಪಚ್ಛಮನ ವಿಶ್ರುತಜ
ಗಚ್ಛರಣತತ್ವವಿದಚ್ಛಮುನಿವಂದ್ಯಾ-
ರಿಚ್ಛಲನಿವಾರಕ ಘೃಣಿಚ್ಛುರಿತವಿಗ್ರಹ ಶ
ರಚ್ಛವಿಸುಧಾಬ್ಧಿಧವಳಚ್ಛವಿಯಶಸ್ಕಾ
ಸಚ್ಛುಭವರಪ್ರದ ದಿಶಾಚ್ಛದ ಹೃತಪ್ರಬಳ
ಕಚ್ಛಪಸದೃಕ್ಷವಿಲಸಚ್ಛಮದಮಾಂಕಾ
ತುಚ್ಛಪರವಾದಿಜನಹೃಚ್ಛಿದಘದೂರ ಪೊರೆ
ಯುಚ್ಛಶಿವಭಾವಜಿತಪೃಚ್ಛಯ ವೃಷೇಂದ್ರಾ ॥ — ದ ಪ್ರತಿಯಲ್ಲಿ ಮಾತ್ರ

ಹರಭಕ್ತವೇಷದಿಂ ಬಸ
ವರಸನ ಮನೆವೊಕ್ಕು ಧನಮನೀಳ್ದಪೆವೆನುತಂ
ಪುರದ ಪೊಸ ಚೋರರೋರಂ
ತಿರೆ ತಳೆದರ್ವಿಸುಪ ಭಕ್ತಲಾಂಛನದಿರವಂ ೩

ತನುಮಲಿನಂ ವಿಭೂತಿಯ ವಿಲೇಪನದಿಂ ಮಱೆಯಾಗೆ ಕೈತವಂ
ವಿನುತ ಶಿವಾಕ್ಷಿಮಾಲೆಯಿನಡಂಗಿರೆ ವಸ್ತ್ರದೆ ಕಟ್ಟಿ ಲಿಂಗಮೆಂ
ದೆನೆ ಕಱಿದಾದ ನುಣ್ಬದನೆಗಾಯನಮರ್ಚುತೆ ಕಂಠದಲ್ಲಿ ಮೆ
ಲ್ಲನೆ ಬಸವಾಲಯಾಂತರಮನಂತವರೊಲ್ದೊಳಪೊಕ್ಕರದ್ಭುತಂ ೪

ವ|| ಆಗಳವರ್ಕೃತಕವೇಷದಿನೊಳಪೊಕ್ಕು ಬಸವನಂ ಕಂಡವನತರಾಗೆ ಬಸವನಾ ಕಪಟ ವಟುಗಳಂ ನೋಡಿ ತಸ್ಕರರೆಂದಱಿದೆಂತಾದೊಡಮೆಮ್ಮಂತಪುರಮಂ ಭವಿಗಳ್ ಪ್ರವೇಶಿಸಲಾಗದಿವರ್ ಪುರಾಕೃತ ಮಹಾತಪಃಕ್ಷಪಿತಕಲ್ಮಷರಾಗಲ್ವೇಳ್ಕುಮಲ್ಲದೊಡೆಂತಿಲ್ಲಿಗೇಳ್ತರ್ಪರೆಂದು ನಿರ್ಧರಿಸಿ ಕುಳ್ಳಿರಿಸಿ ಮೊಗಮಂ ನಿರೀಕ್ಷಿಸಿ—

ಇದೆ ಜಲಗಂಧೋದ್ಗಮತತಿ
ಬೆದಱದೆ ಶಿವಲಿಂಗಪೂಜೆಯಂ ಮಾಡಿಮೆನು
ತ್ತುದಧಿಗಭೀರಂ ಬಸವಂ
ಪದಪಿಂದಂ ನುಡಿಯೆ ಕಳ್ಳರಳ್ಕಿದರಾಗಳ್ ೫

೩. ಕಲ್ಯಾಣ ಪಟ್ಟಣದಲ್ಲಿದ್ದ ಹೊಸ ಕಳ್ಳರು ಶಿವಭಕ್ತರ ವೇಷದಿಂದ ಬಸವರಸರ ಮನೆಯನ್ನು ಹೊಕ್ಕು, ಐಶ್ವರ್ಯವನ್ನು ಅಪಹರಿಸುವೆವೆನ್ನುತ್ತ ಚೆನ್ನಾಗಿ ಶೋಭಿಸುವ ಶಿವಭಕ್ತ ಲಾಂಛನದ ರೀತಿಯನ್ನು ಧರಿಸಿದರು. ೪. ಧರಿಸಿದ ವಿಭೂತಿಯಿಂದ ದೇಹದ ಮಾಲಿನ್ಯವು ಮರೆಯಾಗಿರಲು ಶ್ಲಾಘ್ಯವಾದ ರುದ್ರಾಕ್ಷ ಮಾಲೆಗಳಿಂದ ಕಪಟದ (ಕಳ್ಳತನದ) ಉದ್ಯೋಗವು ಮರೆಗೊಂಡಿರಲು, ಲಿಂಗವೆಂದೆನ್ನುವಂತೆ ಕಪ್ಪುಬಣ್ಣದ ನುಣ್ಣನೆಯ ಬದನೆಯಕಾಯನ್ನು ವಸ್ತ್ರದಲ್ಲಿ ಕಟ್ಟಿ ಕಂಠದಲ್ಲಿ ಅಳವಡಿಸಿಕೊಂಡು, ಮೆಲ್ಲನೆ ಈ ರೀತಿಯಲ್ಲಿ ಅವರು ಬಸವೇಶ್ವರನ ಮನೆಯೊಳಗೆ ಪ್ರೀತಿಯಿಂದ ಹೊಕ್ಕರು. **ವಚನ** : ಆಗ ಅವರು ಕೃತಕವೇಷದಿಂದ ಒಳಗೆ ಪ್ರವೇಶಿಸಿ, ಬಸವಣ್ಣನನ್ನು ಕಂಡು ನಮಸ್ಕಾರ ಮಾಡಿದರು. ಬಸವಣ್ಣನು ಆ ಕಪಟವೇಷದ ವಟುಗಳಾಕೃತಿಯ ಕಳ್ಳರನ್ನು ನೋಡಿ, ಕಳ್ಳರೆಂದು ತಿಳಿದು ಹೇಗಾದರೂ ಭವಿಗಳಾದವರು ನಮ್ಮ ಅಂತಃಪುರವನ್ನು ಪ್ರವೇಶಿಸಲಿಕ್ಕೆ ಆಗದು. ಇವರು ಪೂರ್ವಜನ್ಮದಲ್ಲಿ ಮಾಡಿದ ಅಧಿಕವಾದ ತಪಸ್ಸಿನಿಂದ ಪಾಪವನ್ನು ನಾಶಗೊಳಿಸಿಕೊಂಡವರಾಗಿರಬೇಕು; ಅಲ್ಲದಿದ್ದರೆ, ಇಲ್ಲಿಗೆ ಹೇಗೆ ಬಂದಾರು? ಎಂದು ನಿರ್ಧಾರಮಾಡಿಕೊಂಡು, ಅವರನ್ನು ಕುಳ್ಳಿರಿಸಿ ಮುಖವನ್ನು ನೋಡಿ, ೫. ಸಮುದ್ರದಂತೆ ಗಂಭೀರನಾದ ಬಸವಣ್ಣನು ನೀರು ಗಂಧ ಹೂವುಗಳ ಸಮೂಹ ಇದೆ. ನೀವು ಅಂಜಿಕೊಳ್ಳದೆ ಶಿವಪೂಜೆಯನ್ನು ಮಾಡಿರಿ, ಎನ್ನುತ್ತ ಪ್ರೀತಿಯಿಂದ

ವ॥ ಅಂತಳ್ಕಿ ಬಳ್ಕಿ ಕೈನಡುಗೆ ಮೈಬೆಮರೆ ಬೆಳತರ್ಗು ಬೆಬ್ಬಳಿ[1]ವೋಗಿ—

ಪೊಲ್ಲಮಪ್ಪ ಬಂದಿಗೋತು ಬಂದೆವಿಲ್ಲಿಗಕ್ಕಟಿ
ಲ್ಲಿಲ್ಲ ಲಿಂಗಮೆಮ್ಮ ಜೀವಕಿಂದೆ ನೂಱು ತೀವಿತೆಂ
ದಲ್ಲಿ ಗಂಟನುರ್ಚಿ ಬಿರ್ಚಿ ನೋಡೆ ತತ್ಫಳಂಗಳಂ
ತೆಲ್ಲ ಲಿಂಗರೂಪನಾಳ್ದವಾ ವೃಷೇಂದ್ರನಿಚ್ಛೆಯಿಂ ೬

ಭಯಮಳಿಯೆ ಸಿತಗರತಿ ವಿ
ಸ್ಮಯಮಾಂತಾ ಲಿಂಗಮಂ ಸಮಂತರ್ಚಿಸಿ ದು
ರ್ನಯಮನುಳಿದೆಸೆದರೀ ಚಿ
ನ್ಮಯ ಬಸವಂಗಿದು ಶಿವೈಕ್ಯತತಿಗಚ್ಚರಿಯೇ ೭

ಮುನ್ನೊರ್ವನಭವಭಕ್ತಂ
ತನ್ನ ಪೆಸರ್ಮಲ್ಲಿಶೆಟ್ಟಿಯೆನೆ ಪೆಸರ್ವಡೆದಾ
ತನ್ನಗಜೇಶನನರ್ಚಿಸು
ತನ್ನಿಯಮದಿನುಣ್ಬನಲ್ಲದುಂದುಂಣಲೊಲ್ಲಂ ೮

ವ॥ ಆ ವಣಿಗ್ವರನಂತಿರುತ್ತಮಿರ್ದೊಂದು ದಿವಸಂ ನಿಜ ಬಂಧುಜನಸಮೇ[2]ತಂ ಪರದು ಗೆಯ್ಯಲೆಂದು ಪರದೇಶಕ್ಕೆ ಗಡಣದೆತ್ತುಗಳೊಳ್ನಾನಾ ಧಾನ್ಯಂಗಳಂ ಪೇಱಿಕೊಂಡು ನಡೆತಪ್ಪಾಗಳೆಡೆ

ನುಡಿಯಲಾಗಿ, ಕಳ್ಳರು ಆಗ ಭಯಗೊಂಡರು. **ವಚನ** : —ಆ ರೀತಿ ಹೆದರಿ ಕುಗ್ಗಿದವರಾಗಿ ಕೈ ನಡುಗಿತು ; ಮೈ ಬೆವರಿತು ; ಭಯದಿಂದ ಸ್ತಂಭೀಭೂತರಾದರು. ೬. ನೀಚವಾದ ಕಳ್ಳತನಕ್ಕೆ ಅಪೇಕ್ಷಿಸಿ ಇಲ್ಲಿಗೆ ಬಂದೆವು. ಅಯ್ಯೋ ! ಇಲ್ಲಿ ಲಿಂಗವಿಲ್ಲ. ನಮ್ಮ ಪ್ರಾಣಕ್ಕೆ ಇಂದು ನೂರುವರ್ಷ ತುಂಬಿತು ಎಂದು ಅಲ್ಲಿ ತಮ್ಮ (ಕಟ್ಟಿಕೊಂಡ ಲಿಂಗದ) ಗಂಟನ್ನು ಬಿಚ್ಚಿ ನೋಡಲಾಗಿ ಆ ಬದನೆಕಾಯಿಗಳು ಆ ಬಸವೇಶ್ವರನ ಇಚ್ಛೆಯಿಂದ ಲಿಂಗರೂಪಗಳನ್ನು ಹೊಂದಿದವು. ೭. ಕಳ್ಳರುಗಳ ಭಯವು ನಾಶವಾಯಿತು. (ಅವರು) ಅತ್ಯಂತ ವಿಸ್ಮಯಗೊಂಡವರಾಗಿ, ಲಿಂಗಪೂಜೆಯನ್ನು ಚೆನ್ನಾಗಿ ಮಾಡಿ, (ತಮ್ಮ) ದುಷ್ಟ ನೀತಿಯನ್ನು ಬಿಟ್ಟು, ಶೋಭಿಸಿದರು. ಈ ಕಳ್ಳತನ ಮಾಡುವಿಕೆಯು ಶಿವನಲ್ಲಿ ಐಕ್ಯಗೊಂಡಿರುವ ಜ್ಞಾನ ಸ್ವರೂಪಿಯಾದ ಬಸವಣ್ಣನ ಮಹಿಮೆಗೆ ಅಚ್ಚರಿಯೆ ? **ಮಲ್ಲಸೆಟ್ಟಿಯು ಕಥೆ** : ೮. ಪೂರ್ವದಲ್ಲಿ ಓರ್ವ ಶಿವಭಕ್ತನು 'ಮಲ್ಲಸೆಟ್ಟಿ'ಯೆಂಬ ಹೆಸರಿನಿಂದ ಪ್ರಸಿದ್ಧಿ ಪಡೆದಿದ್ದನು. ಆತನು ನಿಯಮದಿಂದ ಪಾರ್ವತೀ ವಲ್ಲಭನಾದ ಶಿವನನ್ನು ಪೂಜೆ ಮಾಡಿ ಊಟ ಮಾಡುತ್ತಿದ್ದನು. ಪೂಜೆ ನಡೆಯದಿದ್ದರೆ ಊಟ ಮಾಡುತ್ತಿರಲಿಲ್ಲ. **ವಚನ** : ಆ ವ್ಯಾಪಾರಿ ಶ್ರೇಷ್ಠನು ಹೀಗಿರುವಾಗ ಒಂದು ದಿವಸ ತನ್ನ ಬಂಧುಗಳು ಸಮೇತವಾಗಿ ವ್ಯಾಪಾರಕ್ಕೆಂದು ಪರದೇಶಕ್ಕೆ ಬಹು ಸಂಖ್ಯೆಯ ಎತ್ತುಗಳ ಮೇಲೆ ನಾನಾವಿಧವಾದ

1 ಳೆ(ದ, ಗ, ಮ, ಜ, ಚ) 2 ಹಿ(ದ)

ವಟ್ಟೆಯೊಳೆಲ್ಲಿಯುಂ ಲಿಂಗದರ್ಶನಂ ಸಮನಿಸದಿರಲೊಡನನೇಕೋಪವಾಸಂ ಪತ್ತಿ ಬಳಲ್ದು ಬಂದೊಂದಾರಾಮಸ್ಥಾನದೊಳ್ಬೀಡಿಕೆಯುಂ ಬಿಟ್ಟು ಶೆಟ್ಟಿ ಲಿಂಗಾಲಯಮನಿ[1]ಲ್ಲಿ ನೋಡಿ ಮೆಂಬುದುಮೊಡನಾಡಿಗಳಱಸಿ ಕಾಣದೆ—

ಕಡುಪಸಿವಡಸಿದುದೀತಂ
ಗಡದರ್ಣಿದು ಕಣ್ಬೇನೆ ಮೇಲೆ ವೃದ್ಧಂ ಬಿಸಿಲು
ಗ್ಗಡಮೀವನಿಂದುಣದಿರ್ದೊಡೆ
ಮಡಿಗುಂ ನಿಜಮೆಂದವರ್ಕರಂ ಚಿಂತಿಸಿದರ್ ೯

ವ॥ ಆಗಳೊಂದು ಪುಲ್ವೇಗುಲಮನವರವಸರವಸರದಿಂ ರಚಿಯಿಸಿ ಬಳ್ಳಮನೊಂದಂ ತಂ[2]ದವಾಙ್ಮುಖ[2]ಮಾಗಿ ನಟ್ಟು ಕಾಡಲರ್ಗೊಂಚಲ್ಗಳಿಂ ಪೂಜೆಗೈದು ಲಿಂಗಮೀಯೆಡೆ ಯೊಳ್ನಿನ್ನ ಪುಣ್ಯದಿನಿರ್ದದೆಂದು ಶೆಟ್ಟಿಯುಂ ಕೈಗೊಟ್ಟು ಕರೆದುತಂದೊಳಗಣ್ಗೆ ಪುಗಿಸಲೊಡನಾ ಪ್ರಷ್ಠಮಂ ಲಿಂಗಮೆಂದೇ ಭಾವಿಸಿ—

ನಮಃಶಿವಾಯಾದ್ರಿಸುತಾಪ್ರಿಯಾಯ ತೇ
ನಮೋಽಸ್ತು ಶಾಂತಾಯ ಭವಾಯ ತೇಯೆನು
ತ್ತಮಂದ ಸದ್ಭಕ್ತಿಪರಂ ವಣಿಗ್ವರಂ
ಪ್ರಮೋದದಿಂ ಕೀರ್ತಿಸಿ ಮೆಯ್ಯನಿಕ್ಕಿದಂ ೧೦

ಧಾನ್ಯಗಳನ್ನು ಹೇರಿಕೊಂಡು, ನಡೆದು ಬರುತ್ತಿರುವಾಗ ಮಾರ್ಗಮಧ್ಯದಲ್ಲಿ ಎಲ್ಲಿಯೂ ಲಿಂಗದರ್ಶನವುಂಟಾಗದೆ ಇರುವ ಕಾರಣದಿಂದ ಅನೇಕ ಉಪವಾಸಗಳನ್ನು ಹೊಂದಿ, ಬಳಲಿ, ಒಂದೊಂದು ಬಿಡಾರಕ್ಕೆ ಯೋಗ್ಯ ಸ್ಥಳದಲ್ಲಿ ಬೀಡು ಬಿಟ್ಟಾಗಲೂ, ಸೆಟ್ಟಿಯು 'ಇಲ್ಲಿ ಶಿವಾಲಯವನ್ನು ನೋಡಿರಿ' ಎನ್ನುತ್ತಿರಲು ಸಂಗಡ ಬಂದಿದ್ದವರು (ಶಿವಾಲಯವನ್ನು) ಹುಡುಕಿ ಕಾಣದೆ– ೯. ಈ ಮಲ್ಲಸೆಟ್ಟಿಗೆ ಹೊಟ್ಟೆಯ ಹಸಿವು ಅಧಿಕವಾಗಿ ಉಂಟಾಯಿತು. ಕಣ್ಣುಬೇನೆ ಬಂದಿದೆ. ಸಾಲದ್ದಕ್ಕೆ ವೃದ್ಧತ್ವ ಬೇರೆ. ಬಿಸಿಲು ಅಧಿಕಗೊಂಡಿದೆ. ಈತನು ಈ ದಿವಸ ಊಟ ಮಾಡದಿದ್ದರೆ ನಿಜವಾಗಿ ಸಾಯುತ್ತಾನೆ ಎಂದು ಅವರು ವಿಶೇಷವಾಗಿ ಚಿಂತಿಸಿದರು. **ವಚನ** :—ಆಗ ಅವರು ಒಂದು ಹುಲ್ಲಿನ ದೇವಸ್ಥಾನವನ್ನು ಅವಸರವಸರವಾಗಿ ನಿರ್ಮಿಸಿ ಅದರಲ್ಲಿ ಧಾನ್ಯವನ್ನು ಅಳೆಯುವ ಒಂದು ಬಳ್ಳವನ್ನು ತಂದು ಬುಡವನ್ನು ಮೇಲೆ ಮಾಡಿ (ನೆಲದಲ್ಲಿ) ನೆಟ್ಟು, ಕಾಡು ಹೂಗೊಂಚಲುಗಳಿಂದ ಅದನ್ನು ಪೂಜಿಸಿ, (ಸೆಟ್ಟಿಗೆ) ಈ ಎಡೆಯಲ್ಲಿ ಲಿಂಗವು ನಿನ್ನ ಪುಣ್ಯವಶದಿಂದ ಇರುವುದು. ಎನ್ನುತ್ತ ಸೆಟ್ಟಿಯನ್ನು ಕೈಹಿಡಿದು ಕರೆತಂದು (ಆ ಗುಡಿಸಲಿನ) ಒಳಗಡೆಗೆ ಹೊಗಿಸಿದ ಕೂಡಲೆ, ಅವನು ಆ ಬಳ್ಳವನ್ನು ಲಿಂಗವೆಂದೇ ಭಾವಿಸಿ– ೧೦. ಅಧಿಕವಾದ ಸದ್ಭಕ್ತಿಭಾವದಿಂದ ಆ ಶ್ರೇಷ್ಠ ವ್ಯಾಪಾರಿಯು 'ಪಾರ್ವತೀ ಪತಿಯೂ, ಮಂಗಳಕರನೂ ಆದ ನಿನಗೆ ನಮಸ್ಕಾರಗಳು'. ಶಾಂತನೂ,ಭವನೂ ಆದ ನಿನಗೆ ನಮಸ್ಕಾರಗಳು'

1 ನ(ಚ) 2 ದು ವಾಙ್ಮುಖ (ದ, ಜ, ಚ, ಗ)

ಆ ವಣಿಜನ ಸದ್ಭಕ್ತಿಯ
ಭಾವದಿನದು ಲಿಂಗವಾಯ್ತು ಬಳ್ಳಂ ಮುದದಿಂ
ಸೇವಿಸುತಾತಂ ಮರಳ್ದವ
ನಾವಾಸದೆ ಭುಂಜಿಸಿರ್ದನಿರ್ಪನ್ನೆವರಂ ೧೧

ವ॥ ಆಗಳಾತನ ಬಂಧುಗಳ್ಬಳಸಿ ನೆರದಿರ್ಪುದುಮವಂದಿ[1]ರೊಳ್ ಮೈದುನನಾದೊರ್ವನಾಶೆಟ್ಟಿಯುಂ ನೋಡಿ—

ಭಾವನ ನೇಮಂ ಲೇಸಾ
ಯ್ತೀ ವಿಧದಿಂ ನಟ್ಟ ಬಳ್ಳಮಂ ಲಿಂಗಮೆನು
ತ್ತೋವೋವೊ ಸೇವಿಸುತೆ ಬಂ
ದಾವಾಸದೊಳುಂಡನೆಂದು ಮಿಗೆ ನಗುತಾಗಳ್ ೧೨

ಅಳೆಯಲ್ವೇಳ್ಕುಂ ಧಾನ್ಯಮ
ನಿಳೆಯೊಳ್ ನಟ್ಟಿರ್ದ ಬಳ್ಳಮಂ ತನ್ನಿಮೆನು
ತ್ತುಳಿದರನೀಕ್ಷಿಸುತೆನೆ ಬ
ಲ್ಮುಳಿಸೇಱಿದುದಲ್ಲಿ ಮಲ್ಲಿಶೆಟ್ಟಿಯ ಮನದೊಳ್ ೧೩

ಎನ್ನುತ್ತ ಸಂತೋಷದಿಂದ ಪ್ರಾರ್ಥಿಸಿ ನಮಸ್ಕರಿಸಿದನು. ೧೧. (ಈ ರೀತಿಯ) ಆ ವ್ಯಾಪಾರಿಯ ಭಕ್ತಿಯ ಭಾವನೆಯಿಂದ ಆ ಬಳ್ಳವು ಲಿಂಗವೇ ಆಯಿತು. ಆ ರೀತಿ ಸಂತೋಷದಿಂದ (ಆ ಶಿವಲಿಂಗದ) ಸೇವೆಯನ್ನು ಮಾಡಿ, ಆ ವಸಸ್ಥಲದಲ್ಲಿ ಭೋಜನ ಮಾಡಿ ಇದ್ದನು. ಹೀಗಿರುವಷ್ಟರಲ್ಲಿ **ವಚನ** : ಆತನ ಬಂಧುಗಳು ಆತನ ಸುತ್ತಲೂ ಬಳಸಿ ನಿಂತಿರುವಷ್ಟರಲ್ಲಿ ಅವರಲ್ಲಿ ಭಾವ ಮೈದುನನಾದ ಒಬ್ಬನು ಆ ಸೆಟ್ಟಿಯನ್ನು ನೋಡಿ–೧೨. 'ನಮ್ಮ ಭಾವನವರ ನೇಮವು ಸರಿಹೋಯಿತು ! (ನೆಲದಲ್ಲಿ) ನೆಟ್ಟ ಬಳ್ಳವನ್ನು ಲಿಂಗವೆಂದು ತಿಳಿದು ಸೇವಿಸುತ್ತ ಬಂದು ಬಿಡಾರದಲ್ಲಿ ಉಂಡುಬಿಟ್ಟನು ! ಓ ಹೋ !! ಈ ರೀತಿಯಲ್ಲಿ ಮಾಡಿದುದರಿಂದ (ನಮ್ಮ) ಭಾವನ ವ್ರತವು ಒಳ್ಳೆಯದಾಯಿತು' ಎಂದು ನಕ್ಕನು. ಆಗ—೧೩. 'ಭೂಮಿಯಲ್ಲಿ ನೆಟ್ಟಿರುವ ಬಳ್ಳವನ್ನು ತೆಗೆದುಕೊಂಡು ಬನ್ನಿರಿ. (ಧಾನ್ಯವನ್ನು) ಅಳೆಯುವುದಕ್ಕೆ ಬೇಕಾಗಿದೆ' ಎನ್ನುತ್ತ (ಸೆಟ್ಟಿಯ ಭಾವನು) ಉಳಿದವರನ್ನು ನೋಡುತ್ತ ಹೇಳಲಾಗಿ ಮಲ್ಲಸೆಟ್ಟಿಗೆ ಆಗ ಮನಸ್ಸಿ

[1] ರದೊ(ದ, ಜ, ಮು, ಗ)

ಎಲೆ ಮೂಢ ಲಿಂಗಮುಂ ನೀಂ
ಪೊಲೆವಾತಿಂ ಬಳ್ಳಮೆಂಬುದಕ್ಕುಮೆ ಸೊರ್ಕಿಂ
ದುಲಿಯದಿರೆಂದವನೊಡವರೆ
ಚಲದಿಂ ಬಂದಭವನೆಂಬುದಂ ಕಾಣಿಸಿದಂ ೧೪

ವ॥ ಆಗಳಾ ದೇವರಂ ಬಳ್ಳಂ ಬಳ್ಳದಾಕೃತಿಯ ಲಿಂಗಮಾದುದಕ್ಕೆವಿಸ್ಮಯಂಬಟ್ಟು ಭಾವಂ ಮಹಾನುಭಾವನೆಂದು ಪೊಗಳ್ದೆಱಗೆ ತದ್ಬಂಧುಜನಮುಂ ಮಣಿದಾ ಮಲ್ಲಿಶೆಟ್ಟಿಯುಂ ಗುರುಭಾವದಿಂ ಭಜಿಸುತ್ತಮಿರ್ದುದಾ ಪ್ರಸ್ಥಲಿಂಗಮೀಗಳುಂ ಬಳ್ಳೇಶ್ವರಾಭಿಧಾನದಿಂದಿರ್ದಪುದಂತುಮಲ್ಲದೆಯುಂ—

ಧರಣೀಭಾಗದೆ ಕಾಟಕೋಟನೆನಿಪೊರ್ವಂ ಗೊಲ್ಲನೇಳ್ತಂದು ಸಾ
ದರವೊಂದಾಡಿನ ಪಿಳ್ಕೆ[1]ಯುಂ ಮಿಸುಪ ಲಿಂಗಂ ತಾನಿದಿಂತೆಂದು ಸೈ
ತಿರಿಸುತ್ತಂ ದೃಢಭಾವದಿಂ ಕಱ[3]ದು ಪಾಲಂ ಮೇಲೆ ಕುಂಭಂಗಳಿಂ
ಸುರಿವುತ್ತಂ ನಡೆನೋಡುತಂ ಕುಣಿವುತಂ ಕೂರ್ತೊಪ್ಪುತಿರ್ಪನ್ನೆಗಂ ೧೫

ಪಿತನಾಗಳ್ಬಂದು ಪಾಲಂ ಬಱಿದೆ ಸುರಿದು ಪಾಳ್ಮಾಡುತಿರ್ದಪ್ಪನೀ ದು
ರ್ಮತಿ ಪುತ್ರಂ ಪಿಳ್ಕೆಗೆಂದಾರ್ದೊದೆದು ಜಱ[3]ಯೆ ತಲ್ಲಿಂಗಮುಂ ಕಂಡು ಕೋಪಾ
ವೃತಚಿತ್ತಂ ಬೇಗದಿಂ ಕೈಗೊಡಲಿಯನಧಟಿಂದೆತ್ತಿ ಪೊಯ್ದುಕ್ಕಿದಂ ತ
ತ್ಪಿತನಂ ಧೊಪ್ಪೆಂದು ಮುಂಡಂ ಕೆಡೆಯೆ ತಲೆ ಕರಂ ಬೀಳ್ವಿನಂ ಕಾಟಕೋಟಂ ೧೬

ನಲ್ಲಿಯೇ ಅತ್ಯಧಿಕವಾದ ಕೋಪವುಂಟಾಯಿತು. ೧೪. 'ಎಲೈ ಮೂಢನೆ, ಲಿಂಗವನ್ನು ಹೊಲೆಯ ಮಾತಿನಿಂದ ನೀನು ಬಳ್ಳವೆಂದೆನ್ನುವುದಕ್ಕಾದೀತೇ ? (ಹೀಗೆ) ಸೊಕ್ಕಿನಿಂದ ಮಾತನಾಡಬೇಡ ಎಂದು ಅವನೊಡನೆಯೇ ಆ (ಲಿಂಗವಿದ್ದ ಗುಡಿಸಲಿಗೆ) ಛಲದಿಂದ ಬಂದು (ಅವರಿಗೆ) ಅಭವನೆಂಬುದನ್ನು ತೋರಿಸಿಕೊಟ್ಟನು. **ವಚನ** : ಆಗ ಆ ಬಳ್ಳವು ಬಳ್ಳದಾಕೃತಿಯ ಲಿಂಗವೇ ಆದುದಕ್ಕೆ ಆ ಮೈದುನ (ಆ ದೇವರಂ)ನು ಆಶ್ಚರ್ಯಗೊಂಡು ಈ ನನ್ನ ಭಾವನು ಮಹಾನುಭಾವನು ಎಂದು ಹೊಗಳಿ, ನಮಸ್ಕಾರಮಾಡಿದನು. ಅವನ ಬಂಧು ಬಾಂಧವರೂ,ನಂಟರ ಸಮೂಹವೂ ಕೂಡ ನಮಸ್ಕಾರ ಮಾಡಿತು. ಆ ಮಲ್ಲಸೆಟ್ಟಿ ಯನ್ನು ಗುರುವೆಂಬ ಭಾವದಿಂದ ಭಜನೆ ಮಾಡತೊಡಗಿತು. ಆ ಬಳ್ಳದ ಲಿಂಗವು ಈ ಗಲೂ 'ಬಳ್ಳೇಶ್ವರ' ಎಂಬ ಹೆಸರಿನಿಂದ ಇರುವುದು. ಇದೂ ಅಲ್ಲದೆ—**ಕಾಟಕೋಟನ ಕಥೆ:** ೧೫. ಭೂ ಭಾಗದಲ್ಲಿ 'ಕಾಟಕೋಟ' ಎಂಬ ಹೆಸರಿನ ಒಬ್ಬ ಗೊಲ್ಲನು (ಒಮ್ಮೆ) ಪ್ರೀತಿಯಿಂದ ತಾನು ಒಂದು ಆಡಿನ ಹಿಕ್ಕೆಯನ್ನು 'ಇದು ಪ್ರಕಾಶಿಸುವ ಶಿವಲಿಂಗ' ಎಂದು, ಮೆಲ್ಲಗೆ ಅದನ್ನು (ಒಂದು ಕಡೆ) ಇಡುತ್ತ ದೃಢವಾದ ಭಕ್ತಿಭಾವದಿಂದ ಹಾಲನ್ನು ಕರೆದು ತಂದು ಆ ಹಿಕ್ಕೆಯ ಮೇಲೆ ಸುರಿಯುತ್ತ ವಿಶ್ವಾಸದಿಂದ ಅದನ್ನು ಚೆನ್ನಾಗಿ ನೋಡುತ್ತ, ಕುಣಿದಾಡುತ್ತ ಒಪ್ಪಿ ಇರುತ್ತಿದ್ದನು. ಅಷ್ಟರಲ್ಲಿ—೧೬. ಆತನ ತಂದೆಯು ಬಂದು, 'ಈ ದುರ್ಬುದ್ಧಿಯ ಮಗನು ಹಿಕ್ಕೆಗೆ ಸುಮ್ಮ ಸುಮ್ಮನೆ ಹಾಲನ್ನು ಎರೆದು ಹಾಳು ಮಾಡುತ್ತಿದ್ದಾನೆ' ಎಂದು ಗಟ್ಟಿಯಾಗಿ ಗದರಿಸುತ್ತ, ಆ (ಹಿಕ್ಕೆಯ) ಲಿಂಗವನ್ನು ಒದ್ದು ಜರಿದು ಮಾತನಾಡಲಾಗಿ, ಕಾಟಕೋಟನು ಕಂಡು, ಕೋಪದಿಂದ

ಪಿತನಂ ಕೋಪಕೃತಾಪರಾಧಯುತನಂ ಕೊಂದಿಕ್ಕಲೆಂದಾ ಮಹಾ
ಮತಿ ಕೈಕೊಂಡು ಕುಠಾರಮಂ ಜಡಿಯೆ ಕೈಲಾಸಪ್ಪುರದ್ವಾರಕ
ಲ್ಪಿತ ಸಾರಾರ್ಗಳವರ್ಗಳಂ ಶಿಥಿಲಮಾಯ್ತಾರ್ದತ್ತು ಪಿಂದಣ್ಗೆ ಪೋ
ಯ್ತುತುಳಾಟೋಪದೆ ಪೊಯ್ಯೆ ಕಳ್ಕನೆ ಕವಾಟಂ ಬಿರ್ದತೇಂ ಚಿತ್ರಮೋ ೧೭

ಹರಭಕ್ತ ಕಾಟಕೋಟ
ಸ್ಫುರಿತ ಕರಸ್ಪರ್ಶಪೂತ ಪರಶುಪ್ರಹತಂ
ಪರಿದೋಡೆ ಪಾಪತತಿ ನಿ
ರ್ಜರಪುರವಂ ಪೊಕ್ಕು ಮಿಕ್ಕು ಸುಖದಿಂದಿರ್ದಂ ೧೮

ಕುಱಿಯ ಪಿಕ್ಕೆ[1]ಯನಿಂತು ಭಾವಿಸಿ ಲಿಂಗಮಂ ಮಿಗೆ ಮಾಡಿದಂ
ಮೆಱೆಯೆ ತನ್ನನುಮಾಧವಂ ಕಲಿ ಕಾಟಕೋಟನಿಳಾಗ್ರದೊಳ್
ಮಿಱುಪ ಜೋಳದ ರಾಶಿಯಂ ಘನ ಲಿಂಗಮೆಂದೆನೆ ಮ್ಮೈಮೆ ಕ
ಣ್ದೆಱೆಯೆ ಬಾಹುಪುರಾಶ್ರಯಾಶ್ರಿತ ಬೊಮ್ಮದೇವನೊಡರ್ಚಿದಂ ೧೯

ಕೂಡಿದ ಮನಸ್ಸುಳ್ಳವನಾಗಿ, ಕೂಡಲೇ (ಕೈಯಲ್ಲಿರುವ) ಕೊಡಲಿಯನ್ನೆತ್ತಿ ಶೌರ್ಯದಿಂದ ಆ ತಂದೆಯನ್ನು ತಲೆ ಹಾರುವಂತೆ ಹೊಡೆದು ಹಾಕಿದನು. ರುಂಡವಿಲ್ಲದ ಮುಂಡವು ದೊಪ್ಪೆಂದು ನೆಲದ ಮೇಲೆ ಬಿದ್ದಿತು. ೧೭. ಆ ಮಹಾಮತಿವಂತನಾದ ಕಾಟಕೋಟನು ಕೋಪದಿಂದ ಮಹಾಪರಾಧದಿಂದ ಕೂಡಿದ ತಂದೆಯನ್ನು ಕೊಂದುಹಾಕಬೇಕೆಂದು ಕೊಡಲಿಯನ್ನು ತೆಗೆದುಕೊಂಡು ಅಲ್ಲಾಡಿಸಲು ಕೈಲಾಸ ಪರ್ವತದ ಪ್ರಕಾಶಿಸುವ ಬಾಗಿಲಿಗೆ ಹಾಕಿದ ಶ್ರೇಷ್ಠವಾದ ದ್ವಾರಪ್ರತಿಬಂಧಕಾರ್ಗಳದ ಅಗುಳಿಯು ಶಿಥಿಲವಾಯಿತು. ಕೂಗಿಕೊಂಡು (ಕೊಡಲಿಯನ್ನು) ಎತ್ತಲಾಗಿ ಹಿಂದಕ್ಕೆ ಸರಿಯಿತು. ಅಧಿಕವಾದ ಆಡಂಬರದಿಂದ ಹೊಡೆಯಲು 'ಕಳಕ್' ಎಂದು ಶಬ್ದಮಾಡಿ ಕದವು ಬಿದ್ದಿತು. ಇದೇನಾಶ್ಚರ್ಯವೋ ! ೧೮. ಶಿವಭಕ್ತನಾದ ಕಾಟಕೋಟನ ಪ್ರಕಾಶಮಾನವಾದ ಹಸ್ತದ ಸೋಂಕುವಿಕೆಯಿಂದ ಪರಿಶುದ್ಧವಾದ, ಕೊಡಲಿಯಿಂದ ಹೊಡೆಯಲ್ಪಟ್ಟ ತಂದೆಯು ಪಾಪಸಮೂಹವು ಹರಿದು ಓಡಿಹೋಗಲಾಗಿ, ಅವನು ಸ್ವರ್ಗಲೋಕವನ್ನು ಹೊಕ್ಕು ಸುಖದಿಂದ ಇದ್ದನು. ೧೯. ಭೂಮಿಯಲ್ಲಿ ಕಾಟಕೋಟನು ಕುರಿಯ ಹಿಕ್ಕೆಯನ್ನು ಈ ರೀತಿಯಲ್ಲಿ ಭಾವನೆ ಮಾಡಿ ಲಿಂಗವನ್ನಾಗಿ ಮಾಡಿದನು. (ಇಂಥ) ಕಲಿಯಾದ ಕಾಟಕೋಟನನ್ನು ಶಿವನು ಮೆರೆಯುವಂತೆ ಮಾಡಿದನು. ಬಾಹುಪುರವೆಂಬ ಹೆಸರಿನ ಊರಿನಲ್ಲಿದ್ದ ಬೊಮ್ಮಯ್ಯನೆಂಬುವನು ಶೋಭಿಸುವ ಜೋಳದ ರಾಶಿಯನ್ನು ಮಹಿಮೆಯು ಕಣ್ದೆರೆಯುವಂತೆ ಘನ

[1] ಕ್ಕೆ(ದ)

ಆವರ ತೆಱದಿನೀಗಳ್ ತಾಳ್ದ ಪಾರ್ಥಕಮುಂ ಶಾಂ
ಭವಘನತರಲಿಂಗಂಗೆಯ್ದನೀ ಚೋರರುಂ ದು
ರ್ಭವಿಗಳೆನಿಪರಂ ದಲ್ಭಕ್ತರಂ ಮಾಡಿದಂ ಮೇ
ಣವನಿಯೊಳೆ ವೃಷೇಂದ್ರಂ ಭಕ್ತಿಸೌಭಾಗ್ಯಸಾಂದ್ರಂ ೨೦

ಶರಣರ ಸದ್ಭಾವಮೆ ಶಂ
ಕರನಿರ್ಪೆಡೆಯಲ್ತೆ ಪರಮಭಕ್ತಾಳಿಗಿದೇಂ
ಪಿರಿದೆ ಬಸವಂಗೆ ನಿಜಮಿದು
ಪರಿಕಿಪೊಡೆಂದಲ್ಲಿ ಭಕ್ತರುತ್ಸವಮಾಂತರ್ ೨೧

ವ|| ಇಂತು ಭಕ್ತಿಪ್ರಭಾವಮುಂ ತಿಳಿದಾನಂದಿಪ ಗಣಂಗಳ್ವೆರಸು ವಿತರಣಜಿತಪಾರಿಜಾತನೊಪ್ಪುತ್ತಮಿರ್ದೊಂದು ದಿವಸಮುದಯಸಮಯದೊಳ್ ಲಿಂಗಸಮರ್ಪಿತ ತೈಲಾಭ್ಯಂಗಮನೆಸಗುವಾಗಳ್ಮಾಹೇಶ್ವರನೊರ್ವಂ ಬಂದು ಲಿಂಗಾರ್ಚನೆಯ ರಂಗವಲ್ಲಿಗೆ ಪತ್ತು ಖಂಡಗ ಮುತ್ತುಗಳನರ್ಥಿಸಿದಪೆನೀವುದೆಂದು ಬೇಡಲೊಡಂ—

ಜೋಳದ ರಾಶಿಯುಂ ಶಿವಪಸಾಯದ ನಿರ್ಮಳ ದಿವ್ಯದೃಷ್ಟಿಯಿಂ
ಮೇಳಿಸಿ ನೋಡೆ ಪೊಚ್ಚ ಪೊಸ ಮುತ್ತಿನ ರಾಶಿಯದಾಗೆ ಭಕ್ತರಾಂ

ಲಿಂಗವನ್ನಾಗಿ ಮಾಡಿದನು. ೨೦. ಈ ಮೇಲೆ ಹೇಳಿದವರ ರೀತಿಯಲ್ಲಿ ಭೂಮಿಯಲ್ಲಿ ಭಕ್ತಿಯೆಂಬ ಐಶ್ವರ್ಯದಿಂದ ಸಂಪೂರ್ಣನಾದ ವೃಷಭೇಂದ್ರನು ಈಗ ಈ ಕಳ್ಳರು ಧರಿಸಿದ ಬದನೆಯ ಕಾಯಿಯನ್ನು ಶಂಭು ಸಂಬಂಧವಾದ ಶ್ರೇಷ್ಠ ಲಿಂಗವನ್ನಾಗಿ ಮಾಡಿದನು. ಮತ್ತು ಕೆಟ್ಟ ಭವಿಗಳೆನಿಸಿರುವ ಈ ಕಳ್ಳರುಗಳನ್ನು ಸದ್ಭಕ್ತರನ್ನಾಗಿ ಮಾಡಿದನು. ೨೧. 'ಶರಣರುಗಳ ಸದ್ಭಾವನೆಯೇ ಶಂಕರನು ಇರುವ ಸ್ಥಾನವಲ್ಲವೆ ? ಶ್ರೇಷ್ಠ ಭಕ್ತ ಸಮೂಹಕ್ಕೆ ಇದೇನು ದೊಡ್ಡದೇ ? ವಿಚಾರಿಸಿ ನೋಡಿದರೆ. ಬಸವೇಶನಿಗೆ ಇದು ಸ್ವಭಾವ ಸಿದ್ಧವಾದದ್ದು' ಎನ್ನುತ್ತ ಅಲ್ಲಿದ್ದ ಭಕ್ತರೆಲ್ಲ ಸಂತೋಷಗೊಂಡರು. ವ|| ಈ ರೀತಿ (ಬಸವಣ್ಣನ) ಭಕ್ತಿಯ ಪ್ರಭಾವವನ್ನು ತಿಳಿದು ಆನಂದಗೊಳ್ಳುತ್ತಿದ್ದ ಗಣಂಗಳು ಸಹಿತವಾಗಿ ದಾನಗುಣದಲ್ಲಿ ಕಲ್ಪವೃಕ್ಷವನ್ನೂ ಸೋಲಿಸಿದ ಬಸವಣ್ಣನು ಒಪ್ಪುತ್ತಿದ್ದನು, ಒಂದು ದಿವಸ ಸೂರ್ಯೋದಯ ಸಮಯದಲ್ಲಿ, ಶಿವಲಿಂಗಕ್ಕೆ ಸಮರ್ಪಿಸಲ್ಪಟ್ಟ ಎಣ್ಣೆ ನೀರಿನ ಸ್ನಾನ (ತೈಲಾಭ್ಯಂಜನ ಸ್ನಾನ) ವನ್ನು ಮಾಡುತ್ತಿದ್ದ ಸಮಯದಲ್ಲಿ ಒಬ್ಬ ಮಾಹೇಶ್ವರನು ಬಂದು, "ಲಿಂಗಪೂಜೆಯನ್ನು ಮಾಡುವ ಸ್ಥಳದಲ್ಲಿ ರಂಗವಲ್ಲಿಯನ್ನಿಕ್ಕಲು ಹತ್ತು ಖಂಡುಗ ಮುತ್ತುಗಳನ್ನು ಬೇಡುತ್ತಿದ್ದೇನೆ : ಕೊಡಬೇಕು." ಎಂದು ಕೇಳಲು, ಆ ಕೂಡಲೇ—೨೨. ಬಸವೇಶ್ವರನು ಶಿವಾನುಗ್ರಹದಿಂದುಂಟಾದ ಪವಿತ್ರದೃಷ್ಟಿ (ಪರುಷ ದೃಷ್ಟಿ) ಯಿಂದ ಜೋಳದ ರಾಶಿಯನ್ನು ನೋಡಿದನು. (ಆಗ) ಆ ರಾಶಿಯು ಹೊಚ್ಚ ಹೊಸಮುತ್ತಿನ ಮುತ್ತುಗಳ ರಾಶಿಯೇ ಆಯಿತು. (ಇದನ್ನು

ದೋಳಿತ ಮುಸ್ತುಕರ್ಪೂಗಳೆ ಕೊಳ್ವುದು ದೇವ ಯಥೇಷ್ಟಮೆಂದು ಮು
ಕ್ತಾಳಿಯು ರಾಶಿಯಂ ಮಣಿದವಂಗದನರ್ಪಿಸಿದಂ ವೃಷಾಧಿಪಂ ೨೨

ಮೊರಟದ ಬಂಕನೆಂಬ ಶರಣಂ ಶಿವಪೂಜಕನೊರ್ವನೆಯ್ದೆ ನ
ಟ್ಟಿರುಳೊಳೆ ತನ್ನ ಗೇಹಕವನಂಘ್ರಿಗೆ ವಂದಿಸಿ ಲಿಂಗಪೂಜೆಯುಂ
ವಿರಚಿಪುದಯ್ಯ ನೀಮೆನೆ ಕೊರಂಟಿನ ಬಿಲ್ವದಳಂಗಳಂ ಪ್ರಸೂ
ತಿರಹಿತ ಗೋಪಯೋರಸಮನೀಯಭವಾರ್ಚನೆಗೆಂದನಾ ಚರಂ ೨೩

ವ॥ ಎನೆ ಮಹಾಪ್ರಸಾದಮೆಂದು ಭೋಂಕನೆ ಬಂಕಿದೇವನಾ ಭಕ್ತನಡಿದಾವರೆಯಂ ಕರ್ಚಿತತ್ತೀರ್ಥೋದಕಮಂ ಮನೆಯ ಮುಂದಣ ಬರಡಾಕಳನದಂ ಕಟ್ಟಿರ್ದ ಗುಣಯುತ ಸ್ಥಾಣುವಂ ತಳಿಯೆ—

ಕಱುವಿಲ್ಲದ ಪಶು ಪಾಲಂ
ಕಱ^{3}ದುದಳುಂಬಂ ಕೊರಂಟು ಬಿಲ್ವದಳಂಗಳ್
ತುಱುಗೆ ಚಿಗುರ್ತುದವೆರಡಂ
ನೆಱ^3 ಕೊಟ್ಟಾ ವ್ರತಿಗೆ ಪೂಜೆಗೆಯ್ಸಿದನಾಗಳ್ ೨೪

ಎಂದೊರೆವ ಕಥೆಯನಾಲಿಪೆ
ವಿಂದಿಲ್ಲಿ ವೃಷೇಂದ್ರನೆರೆದ ಭಕ್ತಂಗೆ ಮನಂ
ಸಂದಿರೆ ಜೋಳದ ರಾಶಿಯ
ನಂದದ ಮುತ್ತುಗಳ ರಾಶಿಯಂ ನೆಗಳ್ದಿತ್ತಂ ೨೫

ಕಂಡು) ಭಕ್ತರು ತಲೆದೂಗುತ್ತ ಸ್ತೋತ್ರಮಾಡುತ್ತಿರಲು, 'ದೇವ ನಿಮ್ಮ ಇಷ್ಟಕ್ಕನು ಗುಣವಾಗಿ (ಮುತ್ತುಗಳನ್ನು)ತೆಗೆದುಕೊಳ್ಳಬೇಕು'ಎನ್ನುತ್ತ ನಮಸ್ಕರಿಸಿ ಆ ಮಾಹೇಶ್ವರನಿಗೆ ಮುತ್ತುಗಳ ರಾಶಿಯನ್ನು ಅರ್ಪಿಸಿದನು. **ಮೊರಟದ ಬಂಕಯ್ಯನ ಕಥೆ :** ೨೩. ಮೊರಟದ ಬಂಕನೆಂಬ ಶರಣನು ತನ್ನ ಮನೆಗೆ ನಡುರಾತ್ರಿಯಲ್ಲಿ ಓರ್ವ ಶಿವಭಕ್ತನು ಬರಲಾಗಿ, ಅವನ ಪಾದಗಳಿಗೆ ನಮಸ್ಕರಿಸಿ, 'ಅಯ್ಯನವರೇ, ನೀವು ಲಿಂಗಪೂಜೆಯನ್ನು ಮಾಡಿರಿ' ಎನ್ನಲಾಗಿ ಆ ಜಂಗಮನು ಶಿವಪೂಜೆಗೆ ಒಣಗಿದ ಕೊರಡಿನಲ್ಲಿ ಚಿಗಿತ ಬಿಲ್ವಪತ್ರೆಯ ದಳಗಳು ಮತ್ತು ಕರು ಹಾಕದ ಹಸು (ಗೊಡ್ಡು ಹಸು) ವಿನಿಂದ ಕರೆದ ಹಾಲನ್ನು ಕೊಡು' ಎಂದನು. ವ॥ ಹೀಗೆಂದು ಕೇಳಲು ಬಂಕಿದೇವನು 'ಮಹಾಪ್ರಸಾದ' ಎಂದು ಆ ಕೂಡಲೇ ಆ ಭಕ್ತನ ಪಾದಕಮಲವನ್ನು ತೊಳೆದು, ಆ ಪಾದತೀರ್ಥದ ಉದಕವನ್ನು ಮನೆಯ ಮುಂದಿರುವ ಬರಡು ಆಕಳಿಗೂ, ಅದನ್ನು ಕಟ್ಟಿದ್ದ ಹಗ್ಗದಿಂದ ಕೂಡಿದ ಗೂಟ (ಮೋಟು ಮರ) ಕ್ಕೂ ಸಿಂಪಡಿಸಲಾಗಿ, ೨೪. ಕರುವಿಲ್ಲದ (ಆ) ಹಸುವು ಅಧಿಕವಾಗಿ ಹಾಲನ್ನು ಕರೆಯಿತು. ಕೊರಡು ಬಿಲ್ವಪತ್ರೆಯ ದಳಗಳು ತುಂಬಿಕೊಳ್ಳುವಂತೆ ಬಿಗಿಯಿತು. ಆಗ ಆ ಎರಡನ್ನೂ ವ್ರತನೇಮದ ಭಕ್ತನಿಗೆ ಕೊಟ್ಟು ಪೂಜೆ ಮಾಡಿಸಿದನು. ೨೫. ಹೀಗೆಂದು ಹೇಳುತ್ತಿರುವ ಕಥೆಯನ್ನು ಕೇಳಿದ್ದೇವೆ. ಇಂದು ಇಲ್ಲಿ ವೃಷಭೇಂದ್ರನು–(ಮುತ್ತು ಬೇಕೆಂದು) ಬೇಡಿದ ಭಕ್ತನಿಗೆ ಮನಃಪೂರ್ವಕವಾಗಿ ಚೆನ್ನಾಗಿ ಜೋಳದ ರಾಶಿಯನ್ನು

ವ॥ ಇಂತಪ್ಪ ಮಹಿಮೆಯಂ ಕಣ್ಣಾರೆ ಕಂಡೆವೆಂದು ಸರ್ವರುಂ ಪೊಗಳುತ್ತಮಿರೆ ನೆಗಳ್ತೆವೆತ್ತು ಮತ್ತಂ ಭಕ್ತರ್ಗೆ ಚಿತ್ರಮಾಗೆ ಬಸವಂ ವಿತರಣವಿಳಾಸಮಂ ಮೆಱೆವುತ್ತಮಿರೆ ಸಂಗಮನಾಥಂ ಜಂಗಮ ರೂಪಂ ತಳೆದರ್ಥಿಪಳ್ತಿಯಿನೇಳ್ತಂದು ನಿಂದು —

ಅತಿದಾನಿ ಬಸವರಾಜನ
ನತನುಹರಂ ಕಾಲ್ಗೆ ಕಣ್ಣನೆರೆದನೆ ಪಣೆಗ
ದ್ಭುತ ನಯನಮನೆರೆದಂ ಘನ
ವಿತರಣೆಯಂ ಬೇಳ್ಪನಲ್ಪವಸ್ತುವನೆರೆಯಂ ೨೬

ವ॥ ಆಗಳ್—

ಮಾಯಾವಿ ದೇವ ನಿನ್ನಯ
ಮಾಯೆಯನಾಂ ಬಲ್ಲೆನಮಮ ನಿನಗಂಜೆನೆನು
ತ್ತಾ ಯತಿಯ ವದನಕಮಳ
ಚ್ಛಾಯೆಯ ಕನ್ನಡಿಯನೆತ್ತಿ ಪಿಡಿದಂ ಬಸವಂ ೨೭

ಅಲ್ಲಿ ಕಂಡು ಭಾಳನೇತ್ರಮಂ ಮನೋಜಮರ್ದನಂ
ಗೆಲ್ಲವಾರಿ ಸೋಲ್ತು ನಾಣ್ಚುತೋಡಿಪೋಗುತಿರ್ಪಿನಂ
ಸಲ್ಲದೋಡುವಂದಮಿಂತು ಸಂಗಮೇಶ ಪಂದೆ ನಿ
ಲ್ನಿಲ್ಲಿದೇಕೆ ಬೇಡು ಬೇಳ್ಪ ವಸ್ತುವಾವುದಿತ್ತಪೆಂ ೨೮

ಮನೋಹರವಾದ ಮುತ್ತಿನ ರಾಶಿಯನ್ನು ಮಾಡಿಕೊಟ್ಟನು. **ಲಲಾಟೇಕ್ಷಣ ದಾನ :** ವ॥ ಇಂತಹ ಮಹಿಮೆಯನ್ನು ಕಣ್ಣಾರ ಕಂಡೆವು, ಎಂದು ಸರ್ವರೂ ಹೊಗಳುತ್ತಿರಲು, ಬಸವಣ್ಣನು ಪ್ರಸಿದ್ಧಿಯನ್ನು ಹೊಂದಿದನು. ಮತ್ತು ಭಕ್ತರಿಗೆ ಆಶ್ಚರ್ಯವುಂಟಾಗುವಂತೆ, ದಾನಮಾಡುವ ಲೀಲೆಯನ್ನು ಮೆರೆಯುತ್ತ ಇರುತ್ತಿರಲು ಸಂಗಮನಾಥನು ಜಂಗಮಾ ಕಾರವನ್ನು ಹೊಂದಿ, ಬೇಡುವ ಪ್ರೀತಿಯಿಂದ ಬಂದು ನಿಂತುಕೊಂಡು—೨೬. ಮನ್ಮಥ ಹರನಾದ ಪರಮೇಶ್ವರನು ಅತ್ಯಂತ ದಾನಗುಣದಿಂದ ಕೂಡಿದ ಬಸವಣ್ಣನನ್ನು ಕಾಲಿಗೆ ಕಣ್ಣನ್ನು ಬೇಡಿದನೇ ? ಹಣೆಗೊಂದು ಅದ್ಭುತವಾದ ಕಣ್ಣು (ಬೇಕೆಂದು) ಬೇಡಿದನು. ಘನವಾದ ದಾನಗುಣವುಳ್ಳವನನ್ನು ಬೇಡುವವನು ಅಲ್ಪವಸ್ತುಗಳನ್ನು ಬೇಡುವುದಿಲ್ಲ. ವ॥ ಆಗ–೨೭. 'ಕಪಟವೇಷದ ದೇವನೇ, ನಿನ್ನ ಮಾಯೆಯನ್ನು ನಾನು ಬಲ್ಲೆನು. ಅಮಮ ! ನಿನಗೆ (ನಾನು) ಅಂಜುವವನಲ್ಲ' ಎನ್ನುತ್ತ ಬಸವಣ್ಣನು ಆ ಯತೀಶ್ವರನ ಮುಖಕಮಲವನ್ನು ಪ್ರತಿಬಿಂಬಿಸುವ ಕನ್ನಡಿಯನ್ನು ಎತ್ತಿಹಿಡಿದನು. ೨೮. ಮನ್ಮಥ ಮರ್ದನನಾದ ಶಿವನು ಕನ್ನಡಿಯಲ್ಲಿ (ತನ್ನ) ಹಣೆಯಲ್ಲಿ ಕಣ್ಣನ್ನು ಕಂಡು, ಗೆಲ್ಲುವೆನೆಂಬ ಮನೋಭಾವವು ಸೋತು, ನಾಚಿಕೊಂಡು ಓಡಿಹೋಗುತ್ತಿರಲು, ಬಸವೇಶ್ವರನು– 'ಸಂಗಮೇಶ್ವರ, ಈ ರೀತಿ ಓಡುವ ಪರಿಯು (ನಿನಗೆ) ಉಚಿತವಾದುದಲ್ಲ. ಬಂದೆನು, ನಿಲ್ಲು ನಿಲ್ಲು, ಇದೇಕೆ ? ಬೇಡುವ ವಸ್ತುವಾವುದೋ ಅದನ್ನು ಬೇಡಿದರೆ ಕೊಡುತ್ತೇನೆ'.

ವ॥ ಎಂದು ಬಸವಂ ಮುಟ್ಟಿ ಮೂದಲಿಸಿ ನಿಲಿಸಿ—

ಚೋಳನ ಮಾಳ್ಕೆಯಿಂ ಕನಕವೃಷ್ಟಿಯನರ್ಥಿಸೆನಯ್ಯ ನಂಬಿವೋ
ಲ್ಸೂಳೆಯ ಮಂದಿರಕ್ಕೆ ನಡೆಪಾಡಿಸೆನಾಂ ಸಿರಿಯಾಳನಂದದಿಂ
ಬಾಳನ ಜೀವಮಂ ಬಯಸೆನಕ್ಷಯ ಭಾಗ್ಯಮನೊರ್ವೆ ಬೇಡೆನ
ಭ್ರಾಳಕದಾಸನಂತೆ ಪರೆಯಂಕ್ಕೆಳಸೆಂ ಶಿವ ಗುಂಡನಂತೆವೋಲ್ ೨೯

ಶಿವ ನೀನೀವ ಸುರೇಂದ್ರಭೋಗಸುಖಮೋಕ್ಷಪ್ರಾಪ್ತಿಗಳ್ಮಾಣ್ಗೆ ನಿ
ನ್ನವರೊಲ್ದುಂಡುಳುಪಿರ್ದ ಶೇಷಮೆನಗುಂಟೆಂದೆಂದುಮಾ ಶೇಷಮಂ
ಸವಿದಾನಂದಮನಾಳ್ದು ಮಿಕ್ಕ ಸುಖಮೊಂದಂ ಬಾಳ್ತೆಗೆಯ್ಯೆಂ[1] ಕೃಪಾ
ರ್ಣವ ಪೀಯೂಷಮನುಂಡವಂ ಬಗೆವನೇ ಪೇಳಾರನಾಳಾಂಬುವಂ ೩೦

ವ॥ ಅಂತುಮಲ್ಲದೆಯುಂ—

ಗಿರಿಜಾವಲ್ಲಭ ನಿಮ್ಮ ಮಜ್ಜನದ ಭೃತ್ಯಂ ಗೊಲ್ಲಳಂ ಕಾಲಸಂ
ಹರ ಕೇಳ್ಪೂವಡಿಗಂ ಗಡಾ ನಿಮಗೆ ಭಾಸ್ವತ್ಪುಷ್ಪದತ್ತಂ ಕೃಪಾ
ಕರ ಪೂಮಾಲೆಯನಾಗಿಪಳ್ನಿಮಗೆ ತಾಂ ರೇಚವ್ವೆ ಕಣ್ಣಪ್ಪನೀ
ಶ್ವರ ನಿಮ್ಮಳ್ಕಱ ಪೂಜಕಂ ನಿಮಗಖಂಡಜ್ಯೋತಿಯಂ ಭಕ್ತಿಯಿಂ ೩೧

ವ॥ ಎನ್ನುತ್ತ ಬಸವಣ್ಣನು ಬೆನ್ನಟ್ಟಿ ಹೋಗಿ ಮೂದಲಿಸಿ ನಿಲ್ಲಿಸಿದನು. ೨೯. 'ಅಯ್ಯಾ (ಸಂಗಮೇಶ್ವರ) ನಾನು ಕರಿಕಾಲಚೋಳನ ರೀತಿಯಿಂದ ಹೊನ್ನಮಳೆಯನ್ನು ಬೇಡುವುದಿಲ್ಲ ; ನಂಬಿಯಣ್ಣನಂತೆ ಸೂಳೆಯ ಮನೆಗೆ (ನಿನ್ನನ್ನು) ನಡೆದಾಡಿಸುವುದಿಲ್ಲ ; ಸಿರಿಯಾಳ ಸೆಟ್ಟಿಯ ರೀತಿಯಲ್ಲಿ ಮಗನ ಜೀವವನ್ನು ಬಯಸುವುದಿಲ್ಲ ; ದೇವರ ದಾಸಿಮಯ್ಯನಂತೆ (ಅಭ್ರಾಳಕ ದಾಸನಂತೆ) ತವನಿಧಿಯನ್ನು ಒಂದಾವರ್ತಿಯೂ ಬೇಡುವುದಿಲ್ಲ ; ಶಿವ ಗುಂಡನ ಹಾಗೆ (ತಿರುನೀಲ ಕಂಠನಂತೆ) ಪ್ರಾಯಕ್ಕೆ ಅಪೇಕ್ಷಿಸುವುದಿಲ್ಲ. ೩೦. ಶಿವನೇ, ನೀನು ಕೊಡುವ ದೇವೇಂದ್ರಭೋಗ, ಸುಖ, ಮೋಕ್ಷ ಪ್ರಾಪ್ತಿಯೇ ಮೊದಲಾದುವು ಹಾಗಿರಲಿ : ನಿನ್ನ ಭಕ್ತರಾದವರು ಪ್ರೀತಿಯಿಂದ ಉಂಡು ಉಳಿಸಿದ ಶೇಷಪ್ರಸಾದವು ನನಗೆ ಉಂಟು. ಯಾವಾಗಲೂ, ಆ ಶೇಷಪ್ರಸಾದವನ್ನು ಉಂಡು ಆನಂದ ಹೊಂದಿ ಮಿಕ್ಕ ಯಾವೊಂದು ಸುಖವನ್ನೂ ಇಚ್ಛಿಸುವುದಿಲ್ಲ. ದಯಾರಸಕ್ಕೆ ಸಮುದ್ರನಾದ ಶಿವನೇ, ಅಮೃತವನ್ನುಂಡವನು ಅಕ್ಕಿಯನ್ನು ತೊಳೆದ ನೀರಿಗೆ ಅಪೇಕ್ಷೆ ಪಡುವನೇ ? ಹೇಳು. ವ॥ ಅದೂ ಅಲ್ಲದೆ—೩೧ ರಿಂದ ೩೪. ಗಿರಿಜಾಪತಿಯೇ, ಕಾಟಕೋಟನು ನಿಮಗೆ ಮಜ್ಜನ (ಸ್ನಾನ) ಮಾಡಿಸುವ ಆಳು. ಕಾಲಸಂಹರನೇ ಕೇಳು : ಪ್ರಕಾಶಮಾನನಾದ ಪುಷ್ಪದತ್ತನು ನಿಮ್ಮ ಹೂವಾಡಿಗನಲ್ಲವೆ ? ಕೃಪಾಕರನೇ, ರೇಚವ್ವೆಯು

---

1 ಯ್ಯಂ(ಚ, ಮು, ಜ, ತ)

ಸಲೆ ಬೆಳಗುವವಂ ದೀಪದ
ಕಲಿನಾಥಂ ದೇವ ನಿಮ್ಮ ದೀವಟಿಗಂ ವೆಗ್
ಗಲಿ ಕಡವಲ ನಂಬಿ ಮಹಾ
ಬಲ ನಿಮಗೊಳ್ಮುತ್ತಿನಾರತಿಯನೊಲವಿಂದಂ ೩೨

ಪಾಡುತ್ತಂ ಸೋವಿದೇವಂ ಬೆಳಗುವನನಿಶಂ ಜ್ಞಾನಸಂಬಂಧಿ ನಿಮ್ಮಂ
ನೋಡುತ್ತಂ ಭೂತಿಯಂ ನೀಡುತೆ ಪರಸುವವಂ ನವ್ಯ ಗಂಧಾನುಲೇಪಂ
ಮಾಡುತ್ತಂ ನಿಮ್ಮ ಚಿತ್ತಂಬಡೆವವನಣುಮೂರ್ತೀಶ್ವರಂ ಧೂಪಮಂ ಕೊಂ
ಡಾಡುತ್ತಂ ಮಾಚಿದೇವಂ ನಿಮಗೆ ಸಲಿಪವಂ ಘಂಟಿಕಾನಾದಕಾಳಿಂ ೩೩

ಹರ ನಿಮಗೋಹಿಲನೊಲವಿಂ
ದರಿಪಾಲಂ ಭಕ್ತನೈದೆ ಪಡಿಗೊಡುವವನ
ಚ್ಚರಿ ಮಿಗೆ ರೇಚಣ್ಣಂ ಕ
ಪ್ಪುರವೀಳೆಯಮಿತ್ತು ನಿಮ್ಮನೋಲಗಿಸುವವಂ ೩೪

ಬಂಕಂ ಪಾಲ್ಗಱೆವಂ ಶಶಾಂಕಧರ ಪಾಲಂ ಕಾಸಿ ಕಾದಣ್ಣೆವಾ
ಲಿಂ ಕೋಳೂರೆಳೆವೆಣ್ಕರಂ ತಣಿಪುವಳ್ನಿಮ್ಮಂ ಮಹಾದೇವ ನಿ
ಶ್ಶಂಕಂ ಶಂಕರದಾಸಯುಂ ನಿಮಗೆ ಕಟ್ಟಾಳ್ ಮಂಚಣಂ ಕೂರ್ಪಿನಾ
ಲೆಂಕಂ ಚಂಗಳೆ ಪಾಕಕರ್ತಿ[1] ಸಿರಿಯಾಳಂ ಸೂಪಕಾರೋತ್ತಮಂ ೩೫

ನಿಮಗೆ ಪೂಮಾಲೆಯನ್ನು ಧರಿಸುವಳು ; ಈಶ್ವರ, ಕಣ್ಣಪ್ಪನು ನಿಮ್ಮ ಪ್ರೀತಿಗೆ ಪಾತ್ರನಾದ ಪೂಜಾರಿಯು ; ದೇವ, ದೀಪದ ಕಲಿನಾಥನು, ನಿಮಗೆ ಭಕ್ತಿಯಿಂದ ಅಖಂಡವಾದ ದೀಪವನ್ನು ಚೆನ್ನಾಗಿ ಬೆಳಗುವವನು ; ಶೂರನಾದ ಕಡವಲನಂಬಿಯು ನಿಮ್ಮ ದೀವಟಿಗೆಯನ್ನು ಹಿಡಿಯುವವನು ; ಮಹಾಬಲನೇ, ಸೋವಿದೇವನು ಹಾಡುತ್ತಾ ಪ್ರೀತಿಯಿಂದ ನಿಮಗೆ ಒಳ್ಳೆಯ ಮುತ್ತಿನ ಆರತಿಯನ್ನೆತ್ತುವವನು ; ಜ್ಞಾನ ಸಂಬಂಧಿಯು ನಿರಂತರವೂ ನಿಮ್ಮನ್ನು ನೋಡುತ್ತ ಭಸ್ಮವನ್ನು ಕೊಡುತ್ತ ಆಶೀರ್ವದಿಸುವವನು ; ಮಾಚಿದೇವನು ಕೊಂಡಾಡುತ್ತ ನಿಮಗೆ ಧೂಪವನ್ನು ಸಲ್ಲಿಸುವವನು ; ಹರನೇ, ಓಹಿಲು ಒಲವಿನಿಂದ ನಿಮಗೆ ಘಂಟಾನಾದವನ್ನು ಮಾಡುವವನು ; ಅರಿವಾಳನು ಭಕ್ತನು (ಅವನು) ಆಶ್ಚರ್ಯಗೊಳ್ಳುವಂತೆ ಚೆನ್ನಾಗಿ ಪಡಿಯನ್ನು ಕೊಡುವವನು ; ರೇಚಣ್ಣನು ಕರ್ಪೂರ ಮಿಶ್ರಿತ ತಾಂಬೂಲವನ್ನಿತ್ತು ನಿಮ್ಮನ್ನು ಸೇವಿಸುವವನು. ೩೫. ಚಂದ್ರಶೇಖರ, ಬಂಕಯ್ಯನು (ನಿಮಗೆ) ಹಾಲೆರೆಯುವವನು : ಕೋಳೂರ ಎಳೆಯ ಬಾಲಿಕೆಯು ನಿಮಗೆ ಕಾಸಿದ ಮಧುರವಾದ ಹಾಲನ್ನು ನೀಡಿ ತೃಪ್ತಿಪಡಿಸುವಳು; ಮಹಾದೇವ, ನಿಶ್ಶಂಕನಾದ ಶಂಕರದಾಸಿಮಯ್ಯನು ನಿಮಗೆ ಭಂಟನು; ಮಂಚಣ್ಣನು ನಿಮ್ಮ ಪ್ರೀತಿಗೆ ಪಾತ್ರನಾದ ದಾಸನು; ಚಂಗಳೆಯು ಅಡಿಗೆಯವಳು; ಸಿರಿಯಾಳನು ಭಕ್ಷ್ಯ

1 ಕರ್ತಿ(ದ) ಕರ್ತ್ರಿ(ಅ, ಜ, ತ, ಗ)

ಹೊನ್ನಯ್ಯಂ ನಿಮಗೊಲ್ದು ಗಿಂಡಿವಿಡಿವಾತಂ ಮಾರಯಂ ಕಾಷ್ಠವಾ
ಹಂ ನೀರಾಜನಧಾತ್ರಿ ದೇವ ನಿಮಗಾ ಸೋಮವ್ವೆ ಚೋಳೋರ್ವಿಪಾ
ಲಂ ನಣ್ಪಿಂ ಪರಿಯಾಣಮಂ ಗಡಣಿಪಾತಂ ಪಾಕಸುಸ್ವಾದಮಂ
ಚನ್ನಯ್ಯಂ ತಿಳಿವಾತನೊಳ್ಳುಣಿಸನೀವಳ್ವೀರಚೋಳವ್ವೆ ಕೇಳ್ ೩೬

ಬಂಕಯ್ಯಂ ಸುಂಕಿಗಂ ಕೇಳ್ನಿಮಗಿರುಳ ತಳಾರಂ ಗಡಾ ಶೈವರಾತ್ರೀ
ಶಂಕಯ್ಯಂ ಶಂಕರಯ್ಯಂ ಸರಸ ಮಧುರ ರಾಗಂಗಳಂ ಪಾಡುವಾತಂ
ಮುಂಕೊಂಡೋರಂತೆ ನಿಮ್ಮಂ ನಗಿಪನೆ ಕಲಿಕಂಬಂ[1] ಭವತ್ಪಾಠಕಂ ನಿ
ಶ್ಶಂಕಂ ವಾಗೀಶ್ವರಂ ವೈಣಿಕನಮಳಗುಣಂ ಮಾದಿರಾಚಾರ್ಯನಲ್ತೇ ೩೭

ಮಲ್ಲಿಕಾರ್ಜುನಪಂಡಿತಂ ಕವಿ ಸಾಮವೇದಿ ಪುರೋಹಿತಂ
ಮಲ್ಲಿಶೆಟ್ಟಿಯೆ ನಿನ್ನ ಕೊಟ್ಟಿಗೆಯಾತನಂಕಿತಮಾಲೆಯಂ
ನಿಲ್ಲದೋದುವನುದ್ಭಟಂ ಕಲಿ ಚಂಡಯಂ ಪಶುಪಾಲಕಂ
ಕಲ್ಲಯಂ ಘನಗಾರುಡಂ ಮೃಗಯಾಚರಂ ಪಟು ಜೊಮ್ಮಯಂ ೩೮

ಗಳನ್ನು ಮಾಡುವುದರಲ್ಲಿ ಶ್ರೇಷ್ಠನು. ೩೬. ಹೊನ್ನಯ್ಯನು ಪ್ರೀತಿಯಿಂದ ನಿಮಗೆ ಗಿಂಡಿಹಿಡಿಯುವಾತನು (ತಾಂಬೂಲದ ಉಗುಳನ್ನು ಹಿಡಿಯುವ ಕಾಳಂಜಿಯನ್ನು ಹಿಡಿಯುವಾತನು) ಮೋಳಿಗೆಯ ಮಾರಯ್ಯನು ಕಟ್ಟಿಗೆಯನ್ನು ಹೊತ್ತು ತರುವವನು; ದೇವ, ಆ ಸೋಮವ್ವೆಯು ನಿಮಗೆ ನೀರಾಜನ (ಆರತಿ)ವನ್ನೆತ್ತುವವಳು; ಚೋಳ ಭೂಪಾಲನಾದ ಕಾರಿಕಾಲಚೋಳ ಮಹಾರಾಜನು ಪ್ರೀತಿಯಿಂದ ಭೋಜನ ಪಾತ್ರೆಯನ್ನು ಜೊತೆಗೊಳಿಸುವವನು; ಮಾದಾರ ಚೆನ್ನಯ್ಯನು ಅಡಿಗೆಯರುಚಿಯನ್ನು ತಿಳಿಯುವವನು, ವೀರಚೋಳವ್ವೆಯು ಒಳ್ಳೊಳ್ಳೆಯ ಭಕ್ಷ್ಯಭೋಜನಗಳನ್ನು ಕೊಡುವಳು. ೩೭. (ಶಿವನೇ) ಕೇಳು, ಬಂಕಯ್ಯನು ಸುಂಕದವನು, ಶಿವರಾತ್ರಿಯ ಸಂಕಯ್ಯನು ನಿಮಗೆ ರಾತ್ರಿಯಕಾಲದ ತಳವಾರ (ರಕ್ಷಕ) ನಲ್ಲವೆ ? ಶಂಕಯ್ಯ ಮತ್ತು ಶಂಕರಯ್ಯಗಳು ಸರಸ ಮಧುರ ರಾಗಗಳನ್ನು ಹಾಡುವವರು ; ಕಲಿಕಂಬನೆಂಬುವನು ನಿಮ್ಮ ಮುಂಭಾಗದಲ್ಲಿ (ಹಾಸ್ಯ ಮಾಡಿ) ಚೆನ್ನಾಗಿ ನಗಿಸುವವನು; ವಾಗೀಶ್ವರನು ನಿನ್ನ ಸ್ತುತಿ ಪಾಠಕನು; ನಿರ್ಮಲವಾದ ಸದ್ಗುಣಗಳುಳ್ಳ ಸಕಲೇಶ ಮಾದರಸನು ವೀಣೆಯನ್ನು ನುಡಿಸುವವನಲ್ಲವೆ? ೩೮. ಮಲ್ಲಿಕಾರ್ಜುನ ಪಂಡಿತಾರಾಧ್ಯನು (ನಿನ್ನ) ಕವಿ ; ಸಾಮವೇದಿಯು ಪುರೋಹಿತನು; ಮಲ್ಲಸೆಟ್ಟಿಯು ನಿನ್ನ ಕೊಟ್ಟಿಗೆಯುವನು; ಉದ್ಭಟದೇವನು ನಿನ್ನ ನಾಮಾಂಕಿತಗಳ ಮಾಲೆಯನ್ನು ನಿಲ್ಲದೆ ಓದುವವನು; ಕಲಿಚಂಡಯ್ಯನು ಗೋಪಾಲಕನು, ಕಲ್ಲಯ್ಯನೆಂಬುವನು ಶ್ರೇಷ್ಠ ಹಾವಾಡಿಗನು ; ಪಟುವಾದ ಜೊಮ್ಮಯ್ಯನು ಬೇಟೆ

1 ಪ(ಗ, ಮ)

ನಯಯುತ ನಾಟ್ಯನಮಿತ್ತಂ
ಡಿಯ ಬೆಜ್ಜಂ ನಿನಗೆ ನಂಬಿಯೊಡನಾಡಿಯುಮಾ
ಪ್ರಿಯ ದೇವರದಾಸಯ್ಯಂ
ನಿಯತಂ ಬಹುಧಾನ್ಯಕೋಶಪಾಲಕನಲ್ತೆ ೩೯

ಗಣನಾಥಂ ಸುಪ್ರಧಾನಂ ನಿನಗಧಿಕಹಿತಂ ಭೋಗಯಂ ಕೇಶಿರಾಜಂ
ಗಣಕಂ ಗೇಹಕ್ಕೆ ಸಮ್ಮಾರ್ಜನೆಯನೆಸಗುವಳ್ನಂಬಿ ಪೌರಾಣಿಕಂ ಸ
ದ್ಗುಣಧಾಮಂ ಮಾಯಿದೇವಂ ಮತಿಯುತಜಗದೇವಂ ಭವದ್ದಂಡನಾಥಂ
ರಣದೊಳ್ಗೆಲ್ವಂಕವೇಣಾಧಿಪತಿ ಪಡೆವಳಂ ಚೇರಮಂ ಚಂದ್ರಮೌಳೀ ೪೦

ನೆಗಳ್ದಮ್ಮವ್ವೆಯೆ ದಾದಿ ರುದ್ರಪಶುಪಂ ತ್ವನ್ಮೃತ್ಯುಹೃನ್ಮಂತ್ರವಾ
ದಿ ಗಭೀರಂ ಮಲಯಾಧಿಪಂ ನಿನಗೆ ಸಾಮಂತಂ ಭವನ್ಮುದ್ರೆಯುಂ
ಡಿಗೆಕಾಱಂ ಗಡ ಕಿನ್ನರಂ ಮಡಿಯನೀವಂ ಮಾಚಯಂ ನಿನ್ನ ಪೊ
ದುರ್ಗೆಗಾಱಂ ಮಿಗೆ ರಾಮಯಂ ಸುರಗಿಕಾಱಂ ಚೌಡಯಂ ಶಂಕರಾ ೪೧

ಹರ ನಿನಗಲ್ಲಮಪ್ರಭುವೆ ಸತ್ಪ್ರಭು ಧೀರ ಹಲಾಯುಧಂ ಭವ
ದ್ವರನಯಶಿಕ್ಷಕಂ ಕರುಳ ಕೇತಯನಂಕದವಂ ಪ್ರಸಾದಿ ಭಾ

ಯಾಡುವವನು; ೩೯. ನೀತಿ ವಿದನಾದ ನಾಟ್ಯನಮಿತ್ತಂಡಿಯು ನಿನ್ನ ವೈದ್ಯನು; ನಂಬಿಯಣ್ಣನು ಒಡನಾಡಿಯು, ಆ ಪ್ರೀತಿಯ ದೇವರದಾಸನು ನಿರಂತರ ನಿನ್ನ ಅಧಿಕವಾದ ಧಾನ್ಯ ಕೋಶಪಾಲಕನಲ್ಲವೆ ? ೪೦. ಗಣನಾಥನು ನಿನಗೆ ಒಳ್ಳೆಯ ಪ್ರಧಾನನು; ಕೆಂಬಾವಿ ಭೋಗಯ್ಯನು ಅಧಿಕವಾದ ಹಿತವನ್ನುಂಟುಮಾಡುವವನು; ಕೇಶಿರಾಜನು ಲೆಕ್ಕಿಗನು; ನಂಬಿಯಕ್ಕ ಮನೆಯ ಸಾರಣೆಯನ್ನು ಮಾಡುವವಳು; ಸದ್ಗುಣಗಳಿಗೆ ಆಶ್ರಯನಾದ ಮಾಯಿದೇವನೇ ಪುರಾಣ ಓದುವವನು; ಬುದ್ಧಿವಂತನಾದ ಜಗದೇವನು ನಿನ್ನ ಪ್ರಧಾನಮಂತ್ರಿಯು; ಏಣಾದಿನಾಥರು ಯುದ್ಧದಲ್ಲಿ ಗೆಲ್ಲುವ ಬಿರುದುಳ್ಳವನು; ಚಂದ್ರಮೌಳಿಯೇ, ಚೇರಮನು (ನಿನ್ನ) ಸೇನಾಪತಿಯು. ೪೧. ಪ್ರಸಿದ್ಧಳಾದ ಅಮ್ಮವ್ವೆಯೇ (ನಿನ್ನ) ದಾದಿಯು; ರುದ್ರ ಪಶುಪತಿಯು ನಿನ್ನ ಅಪಮೃತ್ಯುವನ್ನು ಹೋಗಲಾಡಿಸಲು ಮಂತ್ರಹಾಕುವವನು; ಗಂಭೀರನಾದ ಮಲಯರಾಜನು ನಿನ್ನ ಸಾಮಂತ ರಾಜನು; ಕಿನ್ನರ ಬೊಮ್ಮಯ್ಯನು ನಿನ್ನ ಮುದ್ರೆಯ ಉಂಡಿಗೆಯನ್ನೊತ್ತುವವನು; ಮಡಿವಾಳ ಮಾಚಯ್ಯನು (ನಿನಗೆ) ಮಡಿಯನ್ನು ಕೊಡುವವನು; ರಾಮಯ್ಯನು (ಏಕಾಂತ ರಾಮಯ್ಯ ?) ನಿನ್ನ ಏಕಾಂತದವನು ; ಶಂಕರನೇ, ಚೌಡಯ್ಯ ಖಡ್ಗವನ್ನು ಹಿಡಿಯುವ ಚಾಕರನು. ೪೨. ಹರ, ನಿನಗೆ ಅಲ್ಲಮಪ್ರಭುದೇವರೇ ಸಮೀಚೀನನಾದ ಸರ್ವಾಧಿಕಾರಿಯು ; ಧೀರನಾದ ಹಲಾಯುಧನು ನಿನಗೆ ಶ್ರೇಷ್ಠವಾದ ನೀತಿಯನ್ನು ಹೇಳುವವನು ; ಕರುಳ ಕೇತಯ್ಯನೆಂಬುವನೇ ಬಿರುದಿನ ಬಾಗಿಲುಕಾಯುವವನು ;

ಸುರಮತಿ ಬಿಬ್ಬಬಾಚವಿಭು ಕುಂಬಜನಗ್ಗದ ಗುಂಡಯುಂ ಗುಣಾ
ಕರನುತ ಕಕ್ಕಯುಂ ನಿನಗೆ ಯಾಮಿಕನಲ್ತೆ ಮನೋಜಭಂಜನಾ ೪೨

ಆರೂರ ಚೊಕ್ಕನಾಥಂ
ಮಾರಾಂತಕ ನಿನ್ನ ಸಹಣಿಯಿಱಿವತ್ತನಣಂ
ವಾರಣ ಶಿಕ್ಷಕನಮಳಾ
ಚಾರಂ ಬಸವಾಭಿದಂ ಭವತ್ಪ್ರತಿಹಾರಂ ೪೩

ವಿನಿಯೋಗದರೆಮ್ಮ ಪುರಾ
ತನರಿಂತಿಂತಮರ್ದುೞ್ಮೆಱೆಯೆ ನಿನ್ನರಸುತನ
ಕ್ಕಿನಿತುಂಟೆ ಕೊಱತೆಯಾನವ
ರನುಚರನೆನಗಾವ ವಸ್ತು ದುರ್ಲಭಮಭವಾ ೪೪

ಸ್ಮರಹರ ನಾಲ್ಕನೆಯಕ್ಷಿಯು
ನೆರೆ ಬೇಡಾಱನೆಯ ಮೊಗಮನರ್ಥಿಸು ಶೋಭಾ
ಕರ ನವಮಾಂಗಮನಾದೊಡ
ಮಿರದಿತ್ತಪೆನೀಗಳಂಜೆನಿದಕೆ ಪುರಾರೀ ೪೫

ಪ್ರಕಾಶಿಸುವ ಬುದ್ಧಿಶಕ್ತಿಯುಳ್ಳ ಬಿಬ್ಬಬಾಚಯ್ಯನು ಪ್ರಸಾದಿಯು ; ಶ್ರೇಷ್ಠನಾದ ಕುಂಬರ ಗುಂಡಯ್ಯನು (ನಿನಗೆ) ಗಡಿಗೆ ಮಡಿಕೆಗಳನ್ನು ಮಾಡಿಕೊಡುವವನು ; ಹೇ ಮನ್ಮಥಭಂಜನನೇ, ಗುಣಗಳಿಗೆ ಆಶ್ರಯನೂ ಶ್ಲಾಘ್ಯನೂ ಆದ ಕಕ್ಕಯ್ಯನು ನಿನಗೆ ಕಾಲವನ್ನು ತಿಳಿಯಪಡಿಸುವವನಲ್ಲವೆ ? ೪೩. ಹೇ ಮನ್ಮಥನಿಗೆ ಯಮಸ್ವರೂಪನಾದ ಶಿವನೇ, ಆರೂರ ಚೊಕ್ಕನಾಥನೆಂಬುವನು ನಿನ್ನ ಕುದುರೆಗಳನ್ನು ಪಳಗಿಸುವ (ಅಶ್ವಶಿಕ್ಷಕ) ವನು : ಆ 'ಇರಿದತ್ತ' ನೆಂಬುವನು (ನಿನ್ನ) ಆನೆಗಳನ್ನು ತಿದ್ದುವವನು (ಗಜಶಿಕ್ಷಕ) ; ನಿರ್ಮಲವಾದ ಆಚಾರವುಳ್ಳ ಬಸವನೆಂಬ ಹೆಸರಿನವನು ನಿನ್ನ ಪಡಿಯರ (ಪ್ರತಿಹಾರಿ)ನು. ೪೪. ಅಭವನೇ, ನಮ್ಮ ಪುರಾತನರು ಈ ರೀತಿಯಲ್ಲಿ ಸೇವಕರಾಗಿ ಸೇರಿ ಮೆರೆಯುತ್ತಿರುವಾಗ ನಿನ್ನ ಅರಸುತನಕ್ಕೆ ಸ್ವಲ್ಪವಾದರೂ ಕೊರತೆಯೆಂಬುದು ಉಂಟಾದೀತೇ ? ನಾನು ಆ ಪುರಾತನರುಗಳ ಸೇವಕನು ; ನನಗೆ ಯಾವ ವಸ್ತುವು ದುರ್ಲಭವಾದೀತು ? ೪೫. ಹೇ ಸ್ಮರಹರನೇ, ನಾಲ್ಕನೆಯ ಕಣ್ಣನ್ನೂ ಬೇಡು ; ಆರನೆಯ ಮುಖವನ್ನೂ ಬೇಡು ; ಕಾಂತಿಗೆ ಆಶ್ರಯನಾದ (ನೀನು) ಒಂಬತ್ತನೆಯ ದೇಹವನ್ನಾದರೂ ಬೇಡು ; ಈಗಲೇ ತಪ್ಪದೆ ಕೊಡುತ್ತೇನೆ. ಪುರಾರಿಯೇ, ಇವಕ್ಕೆ

ಭವದಷ್ಟಮೂರ್ತಿಗಳ್ಮಾ
ಧವ ವಿಧಿ ಮುಖರೊಗೆಯದಂದುಮೆನಗಾಳ್ದಂ ನೀಂ
ಭವದೀಯ ಭೃತ್ಯನಾಂ ಬೇ
ಆ಼ ವಿಚಾರಿಪುದೇನೊ ಮದನಮದವಿಧ್ವಂಸೀ ೪೬

ವ॥ ಎಂದು ವೃಷಭೇಂದ್ರಂ ಪೂಣ್ಕೆಯಿಂ ನುಡಿಯೆ ಸಂಗಮೇಶ್ವರಂ ಕೇಳ್ದು ತದ್ಭಕ್ತಿ ಸುಧಾರಸಮಂ ಸವಿದಂತೆ ಸಂತಪ್ತನಾಗಿ ನಿರುಪಮ ದಯಾರಸವಿಸರವಿಲುಳಿತಕಟಾಕ್ಷದಿನಡರೆ ನೋಡಿ ಕಾರುಣ್ಯಮಂ ನೀಡಿ ಪಿರಿದಾನಂದಿಸುತ್ತಮಿರೆಯಿರೆ—

ಶಿವನಿಂತೇಳ್ತಂದು ಭಾಳೇಕ್ಷಣಮನೆರೆಯೆ ತಾಃ ಕೊಟ್ಟು ತನ್ಮಾಯೆಯುಃ ತೂ
ಳ್ದು ವಿಳಾಸಂಬೆತ್ತು ಸದ್ಭಕ್ತಿಯಿನಭವನೋರಂತೆ ಗೆಲ್ದೊಪ್ಪಿದಂ ತಾಂ
ಭವ ಲೀಲಾಮೂರ್ತಿ ಕೀರ್ತಿದ್ಯುತಿಜಿತಹಿಮಕರ್ಪೂರಪಾಟೀರ ದುಗ್ಧಾ
ರ್ಣವ ತಾರಾಹೀರಹಾರಾಮರಕರಿ ಹರಿಶಯ್ಯಾಹಿ ಚಂದ್ರಂ ವೃಷೇಂದ್ರಂ ೪೭

ರಾಘವ ವಿಬೋಧಕ ಮಹಾಘಟಭವಸ್ತುತ ಯ
ಶೋಘಟಿತದಿಕ್ತಟ ಸುಧೀಘನ ಜನೈನೋ

ಹೆದರುವುದಿಲ್ಲ. ೪೬. ಹೇ ಮನ್ಮಥನ ಮದವನ್ನು ಸುಟ್ಟ ಶಿವನೇ, ನಿನ್ನ ಪೃಥ್ವಿ. ಅಪ್, ತೇಜ. ವಾಯುಗಳೇ ಮೊದಲಾದ ಅಷ್ಟತನುಗಳೂ, ವಿಷ್ಣು ಬ್ರಹ್ಮ ಮೊದಲಾದ ದೇವತೆಗಳೂ ಹುಟ್ಟದಿರುವ ಕಾಲದಲ್ಲೂ ನನ್ನನ್ನು ಪರಿಪಾಲಿಸಿದವನು ನೀನು. ನಾನು ನಿನ್ನ ಭೃತ್ಯನು. (ಇನ್ನು) ಬೇರೆ ವಿಚಾರ ಮಾಡುವುದಾದರೂ ಏನು ? ವಚನ : ಹೀಗೆಂದು ಬಸವೇಶ್ವರನು ಶೌರ್ಯದಿಂದ ನುಡಿಯಲಾಗಿ ಸಂಗಮೇಶ್ವರನು ಕೇಳಿ ಸದ್ಭಕ್ತಿಯೆಂಬ ಸುಧಾರಸವನ್ನು ಕುಡಿದಹಾಗೆ ಸಂತುಷ್ಟಿಗೊಂಡು, ಅನುಪಮವಾದ ಕೃಪೆಯೆಂಬ ರಸದಿಂದ ಕೂಡಿದ ಕಡೆಗಣ್ಣಿನ ನೋಟದಿಂದ ಚೆನ್ನಾಗಿ (ಆತನನ್ನು) ನೋಡಿ ಕಾರುಣ್ಯವನ್ನು ಎರೆದು ಅಧಿಕವಾಗಿ ಆನಂದಗೊಳಿಸುತ್ತ ಇರುತ್ತಿರಲಾಗಿ ೪೭. ಶಿವನು ಈ ರೀತಿಯಲ್ಲಿ ಬಸವಣ್ಣನಲ್ಲಿಗೆ ಬಂದು ಹಣೆಗಣ್ಣನ್ನು ಬೇಡಲು—ಈಶ್ವರನ ಲೀಲಾಮೂರ್ತಿ ಸ್ವರೂಪನಾದವನೂ, ಯಶಸ್ಸಿನ ಕಾಂತಿಯಿಂದ ಹಿಮ, ಕರ್ಪೂರ, ಶ್ರೀಗಂಧ, ಕ್ಷೀರಸಮುದ್ರ, ನಕ್ಷತ್ರ, ವಜ್ರ, ಮುತ್ತಿನಹಾರ, ಐರಾವತ, ವಿಷ್ಣುವಿನ ಹಾಸಿಗೆ, (ಆದಿಶೇಷ), ಚಂದ್ರ ಮೊದಲಾದವರನ್ನು ಸೋಲಿಸಿದ ಬಸವೇಶ್ವರನು ತಾನು ಕೊಟ್ಟು ಶಿವನ ಆ ಮಾಯೆಯುನ್ನು ಮೆಟ್ಟಿಹಾಕಿ, ವಿಲಾಸಗೊಂಡವನಾಗಿ ಸದ್ಭಕ್ತಿಯಿಂದ ಶಿವನನ್ನು ಚೆನ್ನಾಗಿ ಗೆದ್ದು ಒಪ್ಪಿದವನಾದನು. ೪೮. ಶ್ರೀರಾಮಚಂದ್ರನಿಗೆ ಜ್ಞಾನೋಪದೇಶವನ್ನು ಮಾಡಿದ, ಶ್ರೇಷ್ಠ ಅಗಸ್ತ್ಯನಿಂದ ಸ್ತೋತ್ರಮಾಡಿಸಿ

ಮಾಘಮದ ಸಂಹೃತಿ ನಿದಾಘ ಕರುಣಾಮೃತ ರ
ಸೌಘ ಪರಿಪೂರ್ಣದೃಗಮೋಘವರದಾತಾ
ಮೇಘರುಚಿಕಂಧರ ವಿಲಾಘವಚರಿತ್ರ ಸುಕ
ಳಾಘಟನ ಧೀರ ಮುನಿಪೌಘಕೃತ ನಿತ್ಯ
ಶ್ಲಾಘಭವಸಂಚಯ ಘನಾಘನಸಮೀರ ಪೊರೆ
ಭೂಘಟಕುಲಾಲ ವಿಜಿತಾಘ ಬಸವೇಶಾ ೪೮

ದರಸ್ಮಿತ ವಿರಾಜಿತ ಸರೋರುಹವರಾನನೆ ಸುರೇಶ್ವರ ವಿರಿಂಚಿ ವಿನುತೇ
ಪುರತ್ರಯಹರಪ್ರಿಯೆ ನಿರಂತರಗುರುಸ್ತನಭರಾನ್ವಿತೆ ಪುರಾತನಮತೇ

ಕೊಂಡ, ಕೀರ್ತಿಯಿಂದ ದಿಕ್ಪ್ರದೇಶಗಳನ್ನೆಲ್ಲ ತುಂಬಿದ, ವಿದ್ವಾಂಸರೆಂಬ ಶ್ರೇಷ್ಠರಾದ ಜನಗಳ ಪಾಪವೆಂಬ ಶಿಶಿರಕಾಲದ (ಚಳಿಯೆಂಬ) ಗರ್ವದ ಸಂಹರಣ ವಿಷಯದಲ್ಲಿ ಗ್ರೀಷ್ಮ ಋತುವಿನಂತಿರುವ, ದಯೆಯೆಂಬ ಅಮೃತರಸ ಪ್ರವಾಹದಿಂದ ಸಂಪೂರ್ಣವಾದ ನೇತ್ರ ಗಳನ್ನುಳ್ಳ, ವ್ಯರ್ಥವಾಗದ ವರಗಳನ್ನು ದಯಪಾಲಿಸುವ, ಮೋಡಗಳ ಕಾಂತಿಯಂತಿರುವ ಕಾಂತಿಯುಳ್ಳ ಕಂಠದಿಂದ ಕೂಡಿದ, ಲಾಘವರಹಿತವಾದ ಚರಿತ್ರೆಯನ್ನುಳ್ಳ, ಸದ್ವಿದ್ಯೆ ಯನ್ನುಪದೇಶಿಸುವುದರಲ್ಲಿ ಸಮರ್ಥವಾದ, ಮುನಿಶ್ರೇಷ್ಠರುಗಳ ಸಮೂಹದಿಂದ ನಿತ್ಯವೂ ಶ್ಲಾಘಿಸಲ್ಪಡುವವನಾದ, ಜನನ ಮರಣ ಸಮೂಹಗಳೆಂಬ ಮೇಘಗಳಿಗೆ ವಾಯು ಸ್ವರೂಪನಾದ, ಭೂಮಿಯೆಂಬ ಕುಂಭಕ್ಕೆ ಕುಂಬಾರನೆನಿಸಿದ, ಪಾಪಗಳನ್ನು ಜಯಿಸಿದ ಬಸವೇಶ್ವರನೇ ರಕ್ಷಿಸು. [ಮಹಾ + ಘಟ + ಭವ + ಸ್ತುತ—ಶ್ರೇಷ್ಠವಾದ ಘಟದಿಂದ ಹುಟ್ಟಿದ ಅಗಸ್ತ್ಯನಿಂದ ಸ್ತುತಿಸಿಕೊಳ್ಳುವವ ; ಸುಧೀ + ಘನ + ಜನ + ಐನಃ —ಘನವಾದವಿದ್ವಾಂಸ ಜನರ ಪಾಪವೆಂಬ; ಮುನಿಪ + ಓಘ + ಕೃತ + ನಿತ್ಯ + ಶ್ಲಾಘ– ಮುನೀಶ್ವರರ ಸಮೂಹದಿಂದ ಮಾಡಲ್ಪಡುವ ನಿತ್ಯ ಶ್ಲಾಘನೆ] ೪೯. ಮಂದಹಾಸ ದಿಂದ ಪ್ರಕಾಶಿಸುವ ಕಮಲದಂತಿರುವ ಮುಖವುಳ್ಳವಳೇ, ಇಂದ್ರಬ್ರಹ್ಮಾದಿ ದೇವತೆ ಗಳಿಂದ ಸ್ತೋತ್ರ ಮಾಡಿಸಿಕೊಳ್ಳುವವಳೇ, ತ್ರಿಪುರಗಳನ್ನು ಸುಟ್ಟಂಥ ಶಿವನ ಪ್ರೀತಿಗೆ ಪಾತ್ರಳಾದವಳೇ, ಸತತವೂ ದಪ್ಪನಾದ ಕುಚಗಳಿಂದ ಕೂಡಿರುವವಳೇ, ಪುರಾತನದಿಂದ ಪೂಜಿತಳಾದವಳೇ, ಮುರನೆಂಬ ರಾಕ್ಷಸಗೆನಿ ವೈರಿ ಸ್ವರೂಪನಾದ ವಿಷ್ಣುವೇ ಮೊದ ಲಾದ ದೇವತೆಗಳಿಗೆ ವರನನ್ನು ಕೊಡುವವಳೇ, ಸ್ಥಾವರ ಜಂಗಮಾತ್ಮಕವಾದ ಜಗತ್ತನ್ನು ಚೆನ್ನಾಗಿ ರಕ್ಷಿಸುವವಳೇ, ಓಂಕಾರ ರೂಪಿಣಿಯೇ, ಭವರೋಗರಹಿತಳೇ,

ಮುರಾಂತಕಪುರೋಗಮವರಪ್ರದೆ ಸುರಕ್ಷಿತ ಚರಾಚರೆ ಪರಾಕ್ಷರಮಯೀ
ನಿರಾಮಯೆ ನಿರಾಕುಳೆ ನಿರರ್ಗಳೆ ನಿರಂಜನೆ ಧರಾಧರಸುತೇ ಜಯ ಜಯಾ ೪೯

ಇದು ವಿನಮದಖಿಳ ಸುರಾಸುರೇಂದ್ರಮಕುಟತಟಘಟಿತ ಮಣಿಗಣಾಗಣಿತ ರುಚಿನಿಚಯ
ತರಣಾರುಣಾತಪಪರಿಲಸಿತ ಪರಮ ಶಿವಲಿಂಗ ಪಾದಾರವಿಂದಪರಾಗಭಸಿತ
ಭಾಸುರಲಲಾಟಪಟ್ಟ ಸರಸಜನಮಾನಿತೋಭಯಕವಿತಾವಿಶಾರದ
ಶ್ರೀಷಡಕ್ಷರಿದೇವಭಕ್ತಿವಿರಚಿತ
ಶ್ರೀಮದ್ ಬಸವರಾಜವಿಜಯಮಹಾಪುರಾಣದೊಳ್
ಸಂಗಮೇಶ್ವರಲಲಾಟೇಕ್ಷಣದಾನಕಥನಂ
ಷಷ್ಠಾಶ್ವಾಸಂ ಸಮಾಪ್ತಂ

ಅಂತು ಆಶ್ವಾಸ ೬ಕ್ಕೆ ಪದಗಣನೆ ೫೪೯ಕ್ಕೆ ಮಂಗಳಮಹಾ ಶ್ರೀ ॥

ವ್ಯಾಕುಲರಹಿತಳೇ, ತಡೆಯಿಲ್ಲದಿರುವವಳೇ, ಅಜ್ಞಾನರಹಿತಳೇ, ಪರ್ವತ ರಾಜ ಪುತ್ರಿಯೇ ಜಯಜಯ.

ಆರನೆಯ ಆಶ್ವಾಸವು ಸಮಾಪ್ತವಾಯಿತು.

ಸಪ್ತಮಾಶ್ವಾಸಂ

ಶ್ರೀ ಹೈಮವತೀಹೃದಯ ಕು
ತೂಹಲಕರ ದಿವ್ಯರೂಪನವ್ಯಯನಭವಂ
ಮೋಹಾಂಧಕಾರ ರವಿ ವೃಷ
ವಾಹಂ ಪೊರೆಗೆಮ್ಮನಾವಗಂ ಶಿವಲಿಂಗಂ ೧

ಮಣಿಪೀಠಾರೂಢನುದ್ಯತ್ಸಚಿವಚಯ ಸಮಾಸೇವ್ಯಮಾನಂ ವರಸ್ತ್ರೀ
ಕ್ವಣದಂಚತ್ಕಂಕಣಕ್ವಾಣಯುತ ಕರತಳಾಂದೋಳಿತೋಚ್ಚಾಮರಂ ಭೂ
ಷಣಕಾಂತಿಪ್ರಾಂಜಳಾಂಗಂ ಬುಧನುತನತುಳೋದ್ದಾಮ ಸಾಮಂತ ಭೂಭೃ
ದ್ಗಣಕೋಟೀರಾಂಶು ನೀರಾಜಿತನತುಳಕಳಾಮಂಜುಳಂ ಬಿಜ್ಜಳೇಂದ್ರಂ ೨

ಬಸವನು ಸರ್ವಗತ

೧. ಸಂಪದ್ಯುಕ್ತಳಾದ ಪಾರ್ವತೀದೇವಿಯ ಮನಸ್ಸಿಗೆ ಕುತೂಹಲವನ್ನುಂಟುಮಾಡುವ ಶ್ರೇಷ್ಠವಾದ ಆಕಾರವುಳ್ಳವನೂ, ಭವರಹಿತನೂ, ಮೋಹವೆಂಬ ಕತ್ತಲೆಗೆ ಸೂರ್ಯನೋಪಾದಿಯಲ್ಲಿರುವವನೂ, ವೃಷಭೇಶ್ವರನೇ ವಾಹನನಾಗಿ ಉಳ್ಳವನೂ, ಆದ ಶಿವಲಿಂಗನು ಯಾವಾಗಲೂ ನಮ್ಮನ್ನು ರಕ್ಷಿಸಲಿ. ೨. ಅಸದೃಶಗಳಾದ ವಿದ್ಯೆಗಳಿಂದ ಮನೋಹರನಾದವನೂ, ರತ್ನಖಚಿತವಾದ ಆಸನದಲ್ಲಿ ಕುಳಿತಿರುವವನೂ, ಶ್ರೇಷ್ಠರಾದ ಮಂತ್ರಿಸಮೂಹದವರಿಂದ ಸೇವಿಸಲ್ಪಡುವವನೂ, ಶ್ರೇಷ್ಠರಾದ ಸ್ತ್ರೀಯರು ಧ್ವನಿಮಾಡುತ್ತಿರುವ ಕೈಕಡಗಗಳ ಧ್ವನಿಯಿಂದ ಕೂಡಿದ ಕೈಯುಳ್ಳವರಾಗಿದ್ದಾರೆ, ಅವರು ಚಾಮರಗಳನ್ನು ಹಿಡಿದು ತೂಗಾಡಿಸುತ್ತಿದ್ದಾರೆ. ಅಂಥ ಅಧಿಕ ಸಂಖ್ಯೆಯ ಚಾಮರಗಳುಳ್ಳವನೂ, ಆಭರಣಗಳ ಕಾಂತಿಯಿಂದ ಮನೋಹರವಾಗಿ ಕಾಣುವ ಶರೀರವುಳ್ಳವನೂ, ವಿದ್ವಾಂಸರಿಂದ ಕೊಂಡಾಡಿಸಿಕೊಳ್ಳುವವನೂ, ಅಸದೃಶರಾದ ಶ್ರೇಷ್ಠ ಸಾಮಂತರಾಜರುಗಳ ಸಮೂಹದ ಕಿರೀಟಗಳ ಕಾಂತಿಯಿಂದ ಆರತಿಯನ್ನೆತ್ತಿಸಿಕೊಳ್ಳುತ್ತಿರುವವನೂ ಆದ

ಕುಂಜರಮುಹಾದನುಜಭಂಜನ ಪದಾಂಬುಜಕೃ
ತಾಂಜಲಿಸುಭಕ್ತಗಣರಂಜನನಿತಾಂತಾ
ಪ್ರಾಂಜಳಯಶೋಧನ ಧನಂಜಯಾದ್ಯಗರ್ಚಕ ಪ
ತಂಜಲಿಮುನಿಸ್ತುತ ಸಮಂಜಸಗುಣಾಂಕಾ
ಮಂಜುಳಕಟಾಕ್ಷರುಚಿ ಸಂಜನಿತ ಲೋಕ ಗುಣ
ಪುಂಜಯುತ ಭಕ್ತಪವಿಪಂಜರ ಸದರ್ಥಾ
ವ್ಯಂಜಕವಚಸ್ಕ ಪೊರೆ ಕಂಜಭವವಂದ್ಯ ಭವ
ಕುಂಜದವಪಾವಕ ನಿರಂಜನ ವೃಷೇಂದ್ರಾ —ದ ಪ್ರತಿಯಲ್ಲಿ ಮಾತ್ರ

ಓಲಗದೊಳೊಪ್ಪುತಿರೆ ತ
ದ್ಭೂಲಲನಾನಾಥನ ಸಭಾಸರೋನಿಧಿಹಂಸಂ
ಲೀಲೆಯಿನೆಸೆದಿರ್ದನುಮಾ
ಲೋಲ ಲಸದ್ಭಕ್ತಪುಂಗವಂ ಬಸವೇಶಂ ೩

ವ॥ ಅಂತೆಸೆವುತ್ತಮಿರ್ದು—

ಅರಸಂ ನಡೆನೋಡುತ್ತಿರೆ
ಕರಯುಗಮಂ ನೆಗಪಿ ಬಸವನಾಕಸ್ಮಿಕದಿಂ
ತರುಣಿಯುಗದುಗದು ನಿಲ್ಲೆಂ
ದುರವಣಿಸುತ್ತೆತ್ತೆ ಕಂಡು ನಕ್ಕನಿಳೇಶಂ ೪

ವ॥ ಅಂತು ನಗುತ್ತಿರ್ದಿದೇಂ ವಿಸ್ಮಯಬೊಟ್ಟನಿತು ಭಸಿತವನಿಟ್ಟವಂಗೆ ಬೆಟ್ಟದನಿತು ಮರುಳ್ತನಮೆಂಬುದು ನಿನ್ನೊಳ್ಕಾಣಲಾದುದು ಬಸವ ಕರಯುಗಮಂ ನೆಗಪಿ ಸಡಗರಿಸಿ ಪಿಡಿದುದೇನೆಂದು ತನ್ನರೇಂದ್ರಂ ಕೇಳಲೊಡನೆ—

ಉಸುರಲ್ಕಾಗದು ನಿಜಗುಣ
ವಿಸರಮನುಸುರದೊಡೆ ನಗುವುದೀ ಸಭೆಯೆನುತಂ
ಬೆಸಗೊಂಡರಸಂಗೆಂದಂ
ಬಸವಂ ಕೇಳ್ನೃಪತಿ ನಿನ್ನ ಪಟ್ಟಣದೆಡೆಯೊಳ್ ೫

ಬಿಜ್ಜಳೇಂದ್ರನು–೩. ರಾಜಸಭೆಯಲ್ಲಿ ಒಪ್ಪುತ್ತಿರಲು ಆ ಭೂಕಾಂತೆಯ ಪತಿಯೆನಿಸಿದ ಬಿಜ್ಜಳನ ಸಭೆಯೆಂಬ ಸಮುದ್ರಕ್ಕೆ ಹಂಸಪಕ್ಷಿಯಾದವನೂ, ಉಮಾಪತಿಯಾದ ಈಶ್ವರ ನಲ್ಲಿ ಆಸಕ್ತಿಯುಳ್ಳ ಸದ್‌ಭಕ್ತಶ್ರೇಷ್ಠನೂ ಆದ ಬಸವಣ್ಣನು ಲೀಲೆಯಿಂದ ಶೋಭಿಸು ತ್ತಿದ್ದನು. ೪. ಅರಸನು ಚೆನ್ನಾಗಿ ನೋಡುತ್ತಿದ್ದಹಾಗೆಯೇ ಬಸವಣ್ಣನು ಆಕಸ್ಮಿಕ ವಾಗಿ ಎರಡೂ ಕೈಗಳನ್ನು ಮೇಲೆತ್ತಿ 'ಸ್ತ್ರೀಯೇ, ಬೀಳದೆ ಎದ್ದುನಿಲ್ಲು' ಎಂದು ಆರ್ಭಟಿಸುತ್ತ (ವಸ್ತುವೊಂದನ್ನು ಎತ್ತಿದವನಂತೆ) ಎತ್ತಲಾಗಿ ರಾಜನು ಕಂಡು ನಕ್ಕನು. ವ॥ ಈ ರೀತಿ ನಗುತ್ತ ಇದ್ದಕ್ಕಿದ್ದಂತೆ ಇದೇನಾಶ್ಚರ್ಯ 'ಬೊಟ್ಟಿನಷ್ಟು ಭಸ್ಮವನ್ನು ಧರಿಸಿದವನಿಗೆ ಬೆಟ್ಟದಷ್ಟು ಹುಚ್ಚುತನ' ಎಂಬುದು ನಿಮ್ಮಲ್ಲಿ (ಈದಿನ) ಕಂಡುಬಂತು. ಬಸವಣ್ಣ, ಎರಡೂ ಕೈಗಳನ್ನು ಮೇಲಕ್ಕೆತ್ತಿ ಸಂಭ್ರಮಗೊಂಡು ಏನನ್ನು ಹಿಡಿದಿರಿ! ಎಂದು ಆ ಅರಸನು ಕೇಳಲಾಗಿ ಆ ಕೂಡಲೇ–೫. ತನ್ನ ಸದ್ಗುಣ ಸಮೂಹವನ್ನು ಹೇಳುವುದಕ್ಕೆ ಆಗುವುದಿಲ್ಲ. ಹೇಳದಿದ್ದರೆ ಈ ಸಭೆಯು ನಗುವುದು ಎಂದೆನ್ನುತ್ತ ಕೇಳಿದ ಅರಸನಿಗೆ ಬಸವಣ್ಣನು ಹೀಗೆ ಹೇಳಿದನು : "ಮಹಾರಾಜಾ, ಕೇಳು; ನಿನ್ನ

ಪರಮು ತ್ರಿಪುರಾಂತಕಮಂ
ದಿರಕ್ಕೆ ಪೂರ್ವದೊಳೆ ಮೆಱೆವುದರೆಗಾವುದದೊಳ್
ಸುರುಚಿರ ಕಪಿಲೇಶ್ವರನೆಂ
ಬುರುಲಿಂಗಂ ಮೇಣದಕ್ಕೆ ತಾಪಸನೊರ್ವಂ ೬

ಅಮೃತಘಟೀಸಹಸ್ರದಭಿಷೇಕಮನಾಗಿಸೆ ಭಕ್ತಿಯಿಂದೆ ತ
ದ್ವಿಮಳಸುಧಾರಸಂ ಪರಿದು ಕೋಳ್ಕೆಸಱೇಳ್ದಿರೆ ಬೀದಿಯಲ್ಲಿ ಗೋ
ಪವಹಿಳೆ ತಕ್ರವಿಕ್ರಯಕೆ ತಾನಳೆವೊತ್ತು ಬರುತ್ತೆ ಜಾಱಿ ಕ
ರ್ದಮದೆ ನಿಜಾಂಘ್ರಿ ಬೀಳ್ವ ಪಥದೊಳ್ ಬಸವಾಯೆನುತೆನ್ನ ನಾಮಮಂ ೭

ಪಿಡಿದತಿ ದೈನ್ಯದಿನೆನ್ನಂ
ಪಿಡಿದೆತ್ತೆನೆ ತಕ್ರಭಾಂಡಮುರುಳದ ಮುನ್ನಂ
ಪಿಡಿದೆತ್ತಿದೆನಾಕೆಯುನೆನೆ
ಕಡು ಚೋದ್ಯಂಬಟ್ಟು ನೃಪತಿ ಬರಿಸಿದನವಳಂ ೮

ಪಂಕಸಂಕಲಿತ ವಾಮಕರಾಬ್ಜಂ ತಕ್ರಘಟಾಂಚಿತಮಸ್ತಕಂ
ಸಂಕದೋಲೆ ಜಳಪಂಕಕಣಂ ತಳ್ತಂಚಿನ ಚೇಲಮುರಲ್ಗಳಂ
ನೂಂಕಿಬಿಟ್ಟ ಮುಡಿ ಘರ್ಮಜಲಾರ್ದ್ರಂ ಭಾಳವಿಭೂತಿ ಶಿವಾಕ್ಷಿಮಾ
ಲಾಂಕಿತಂಗಳಮರ್ದೊಪ್ಪಿರೆ ಬಂದಳ್ಗೋಪವಧೂಟಿ ವಿಳಾಸದಿಂ ೯

ಪಟ್ಟಣದ ಸಮೀಪದಲ್ಲಿ—೬. ಶ್ರೇಷ್ಠವಾದ ತ್ರಿಪುರಾಂತಕೇಶ್ವರ ದೇವಾಲಯಕ್ಕೆ ಪೂರ್ವ ದಿಕ್ಕಿನಲ್ಲಿ ಅರ್ಧಗಾವುದ ದೂರದಲ್ಲಿ ಮನೋಹರವಾದ ಕಪಿಲೇಶ್ವರನೆಂಬ ಹೆಸರಿನ ಶ್ರೇಷ್ಠಲಿಂಗವು ಮೆರೆಯುತ್ತಿರುವುದು. ಮತ್ತು ಅದಕ್ಕೆ ಓರ್ವ ಋಷಿಯು— ೭. ಭಕ್ತಿಯಿಂದ ಸಹಸ್ರ ಕುಂಭಗಳ ಹಾಲಿನ ಅಭಿಷೇಕವನ್ನು ಮಾಡಲು, ಆ ಶ್ರೇಷ್ಠ ವಾದ ಹಾಲು ಹರಿದು ಬೀದಿಯಲ್ಲಿ ಹಸಿ ಕೆಸರು (ಕೋಳ್ಗೆಸರು) ಎದ್ದಿರಲಾಗಿ (ಓರ್ವ) ಗೊಲ್ಲರ ಸ್ತ್ರೀಯು ತಾನು ಮಜ್ಜಿಗೆಯ ಮಾರಾಟಕ್ಕೆ ಮಜ್ಜಿಗೆ ಗಡಿಗೆಯನ್ನು ಹೊತ್ತು ಕೊಂಡು ಬರುತ್ತಿರುವಾಗ ಕೆಸರಿನಲ್ಲಿ ತನ್ನ ಕಾಲು ಜಾರಿ, ಬೀಳುವಷ್ಟರಲ್ಲಿ 'ಬಸವಾ' ಎನ್ನುತ್ತ ನನ್ನ ಹೆಸರನ್ನು–೮. ಹಿಡಿದು ಅತ್ಯಂತ ದೈನ್ಯದಿಂದ ಕೂಗಿಕೊಂಡು 'ನನ್ನನ್ನು ಎತ್ತು' ಎಂದಳು. ಮಜ್ಜಿಗೆಯ ಮಡಕೆಯು ಉರುಳಿ ಬೀಳುವುದಕ್ಕೆ ಮೊದಲೇ ಆಕೆ ಯನ್ನು ಹಿಡಿದು ಎತ್ತಿದೆನು ಎನ್ನಲು ಅರಸನು ಅತ್ಯಂತ ಆಶ್ಚರ್ಯಪಟ್ಟು, ಆ ಗೋಪಿ ಯನ್ನು (ಸಭೆಗೆ) ಬರಮಾಡಿಸಿದನು. ೯. ಕೆಸರಿನಿಂದ ಕೂಡಿದ ಎಡದ ಕಮಲದಂತಹ ಕೈ ಮಜ್ಜಿಗೆಯ ಗಡಿಗೆಯಿಂದ ಕೂಡಿರುವ ಹೆಗಲು, ಶಂಖದಿಂದ ಮಾಡಿರುವ ಕರ್ಣಾ ಭರಣ, ನೀರಿನ ಕೆಸರಿನಿಂದ ಕೂಡಿದ ಅಂಚಿನ ಸೀರೆ, ಹೂಗಳನ್ನು ನೂಕಿಬಿಟ್ಟಿರುವ ಜಡೆ ಮುಡಿ (ಕೇಶಬಂಧ), ಬೆವರಿನಿಂದ ನೆನೆದಿರುವ ಹಣೆಯ ವಿಭೂತಿ, ರುದ್ರಾಕ್ಷಿಗಳ ಸರ ದಿಂದ ಕೂಡಿದ ಕಂಠ—ಇವು ಶೋಭಿಸುತ್ತಿರಲು ಆ ಗೊಲ್ಲ ಸ್ತ್ರೀಯು ವಿಳಾಸದಿಂದ

ವ॥ ಅಂತೆಳ್ತಂದು ಬಸವಂಗಮರಸಂಗಂ ವಿನಯಾವನತೆಯಾಗಿ ನಿಂದು—

ಬೆಸಗೊಳೆ ಬಿಜ್ಜಳಭೂಪಂ
ಬಸವಂ ಮುನ್ನೊರೆದ ತೆಱದಿನಿನಿಸುಳಿಯದೆ ಚೆ
ಕ್ಕಸವೊದವೆ ಸಭೆಗೆ ಗೊಲ್ಲತಿ
ಯುಸುರ್ದಳ್ ತನ್ನೃಪತಿಗಾದ ಕಜ್ಜಮನಾಗಳ್ ೧೦

ವ॥ ಅಂತುಮಾ ಗೋಪಿ ಸವಿಸ್ತರಮುಸುರ್ದದಲ್ಲಿ ತನಗಾದ ಕುಱುಪುಗಳಂ ತೋಱೆ ಕಂಡು—

ಎಲೆ ಗೋಪಿಯೆನ್ನ ಸಭೆಯೊಳ್
ನೆಲಸಿರ್ದಿರ್ದಂತೆ ನಿನ್ನ ಘಟಮಂ ಬಸವಂ
ನಲಿದೆತ್ತಿದುದರಿದೆನೆ ಭೂ
ಲಲನೇಶಗೆ ಗೋಪಕಾಂತೆ ಮಗುಳ್ದಿಂತೆಂದಳ್ ೧೧

ಮುನ್ನೊರ್ವನಭವಭಕ್ತಂ
ಪೊನ್ನಾಂಬಲನಾಥನೆಂಬ ಪೆಸರಿಂದೆಸೆವಂ
ಪೊನ್ನಾಂಬಲಪುರದಲ್ಲಿ ಜ
ಗನ್ನುತ ಗುಣರತ್ನಭೂಷಣಂ ಕೇಳರಸಾ ೧೨

(ಸಭೆಗೆ) ಬಂದಳು. ವ॥ ಈ ರೀತಿಯಲ್ಲಿ (ಬಂದ ಆ ಸ್ತ್ರೀಯು) ಬಸವಣ್ಣನಿಗೂ, ಅರಸನಿಗೂ ವಿನಯದಿಂದ ನಮಸ್ಕರಿಸಿ ನಿಂತುಕೊಂಡು—೧೦. ಬಿಜ್ಜಳ ಭೂಪಾಲನು (ನಡೆದ ವೃತ್ತಾಂತವನ್ನು) ಕೇಳಲಾಗಿ, ಬಸವೇಶ್ವರನು ಈ ಮೊದಲು ಹೇಳಿದ ರೀತಿಯಲ್ಲಿ ಸ್ವಲ್ಪವೂ ಉಳಿಯದಂತೆ, ಸಭೆಯಲ್ಲಿರುವ ಜನಕ್ಕೆ ಆಶ್ಚರ್ಯವುಂಟಾಗುವಂತೆ ಆ ರಾಜನಿಗೆ ಅಲ್ಲಿ ನಡೆದ ಕಾರ್ಯಗಳನ್ನು ಹೇಳಿದಳು. ವ॥ ಆ ರೀತಿ ಆ ಗೊಲ್ಲ ಸ್ತ್ರೀಯು ವಿಸ್ತಾರವಾಗಿಯೇ (ಅಲ್ಲಿ ನಡೆದ ವೃತ್ತಾಂತವನ್ನು) ಹೇಳಿ, ತನಗಾದ ಗುರುತು ಗಳನ್ನು ತೋರಿಸಲು (ಅವನ್ನು ರಾಜನು) ಕಂಡು–೧೧. ಎಲೈ ಗೋಪಿಯೇ, ಬಸವಣ್ಣನು ನನ್ನ ಸಭೆಯಲ್ಲಿ ಕುಳಿತು ಇದ್ದಕ್ಕಿದ್ದಂತೆ ನಿನ್ನ ಘಟವನ್ನು ಎತ್ತಿದುದು ಅಸಾಧ್ಯ ವಾದುದು ಎನ್ನಲು ಆ ಭೂಲಲಾಮನಿಗೆ ಗೋಪಿಕಾಸ್ತ್ರೀಯು ಪುನಃ ಹೀಗೆ ಹೇಳಿದಳು : **ಪೊನ್ನಾಂಬಲನಾಥನ ಕಥೆ:** ೧೨. ಮಹಾರಾಜನೇ ಕೇಳು: ಪೂರ್ವದಲ್ಲಿ ಪೊನ್ನಾಂಬಲ ವೆಂಬ ಪಟ್ಟಣದಲ್ಲಿ ಲೋಕದಜನದಿಂದ ಶ್ಲಾಘಿಸಲ್ಪಟ್ಟ ಸದ್ಗುಣಗಳೇ ಆಭರಣವಾಗಿ ಉಳ್ಳಂಥ ಒಬ್ಬ ಶಿವಭಕ್ತನು 'ಪೊನ್ನಾಂಬಲನಾಥ' ಎಂಬ ಹೆಸರಿನಿಂದ ಶೋಭಿಸು

ಹರನಂ ಪೂಜಿಸುತಂ ಸಾ
ಸಿರ ಕುಸುಮಂಗಳಿನಜಸ್ರಮೊಪ್ಪುತ್ತಿರ್ದಾ
ವರ ಭಕ್ತಂ ಪೂದಿಱಿಯು
ಲ್ಕರಂಡಮುಂ ಕೊಂಡು ಪುಷ್ಪವನಕೇಳ್ತಂದು ೧೩

ಸುರಯಿಯರಲ್ಗಳುಂ ಮಿಸುಪ ಸಂಪಗೆಪೂಗಳನಿಂಪುವೆತ್ತ ಪಾ
ದರಿಯ ಲತಾಂತಮುಂ ವಿಚಕಿಲಪ್ರಸವಂಗಳನರ್ಕಪುಷ್ಪಮುಂ
ಸುರಚಿರ ಮಾಧವೀಕುಸುಮಮುಂ ಕಮಲೋದ್ಗಮಮುಂ ಸುಗಂಧ ಬಂ
ಧುರ ಕುಮುದಪ್ರಸೂನಕುಲಮುಂ ನವಬಿಲ್ವದಳಪ್ರತಾನಮುಂ ೧೪

ಪದಪಿಂ ಕೊಯ್ದು ಕರಂಡಕಂ ಜಡಿಯೆ ತೀವುತ್ತಂತದಂ ತಾಳ್ದು ತ
ಳ್ವದೆ ಬರ್ಪಲ್ಲಿ ನಿಜಾಂಘ್ರಿ ಜಾಱಿ ಕೆಸಱೊಳ್ ಮನ್ನಾಥ ದೇವೇಶ ಶಂ
ಭು ದಯಾವಾರ್ಧಿಚಿದಂಬರೇಶ ಪಿಡಿಯೆಂದಾ ಭಕ್ತನಂ ಬೀಳದಂ
ದದೆ ಬಂದೆತ್ತಿದನೀಶನಾ ಗಿರಿಶನಂತೆನ್ನಂ ವೃಷಾಧೀಶ್ವರಂ ೧೫

ಪಿಡಿದೆತ್ತಿದನಳೆದೀವಿದ
ಕೊಡನೊಡನೆ ಮಹಾಮಹಾತ್ಮನೀತನೆ ಪೆಂಪಂ
ನುಡಿಯಲಸದಳಮದೆಂತೆನೆ
ಪೊಡವಿಯೊಳೆ ಸುವರ್ಣವಲ್ಲಿಯೆಂಬಾ ಪುರದೊಳ್ ೧೬

ತ್ತಿದ್ದನು. ೧೩. (ಅವನು) ನಿರಂತರದಲ್ಲೂ ಸಹಸ್ರ ಸಂಖ್ಯೆಯ ಹೂವುಗಳಿಂದ ಹರನನ್ನು ಪೂಜಿಸುತ್ತ ಒಪ್ಪುತ್ತಿದ್ದನು. ಆ ಶ್ರೇಷ್ಠ ಭಕ್ತನು ಹೂವನ್ನು ಎತ್ತಿ ತರುವುದಕ್ಕೋಸುಗ ಹೂ ಬುಟ್ಟಿಯನ್ನು ಹಿಡಿದುಕೊಂಡು ಹೂದೋಟಕ್ಕೆ ಬಂದನು. ೧೪. (ಅಲ್ಲಿ) ಸುರಗಿಯ ಹೂವು, ಶೋಭಿಸುವ ಸಂಪಗೆ ಹೂವು, ಇಂಪಿನಿಂದ ಕೂಡಿದ ಪಾದರಿಯ ಹೂವನ್ನು, ಮಲ್ಲಿಗೆಯ ಹೂವುಗಳನ್ನು, ಎಕ್ಕದ ಹೂವುಗಳನ್ನು, ಮನೋಹರ ಮಾಧವೀ ಕುಸುಮಗಳನ್ನು, ತಾವರೆ ಹೂವನ್ನು, ಸುಗಂಧದಿಂದ ಬಂಧುರವಾದ ಕುಮುದ ಕುಸುಮಗಳನ್ನು, ಹೊಸ ಬಿಲ್ವಪತ್ರೆಯ ಸಮೂಹವನ್ನು— ೧೫. ಪ್ರೀತಿಯಿಂದ ಕೊಯ್ದುಕೊಂಡು (ಎತ್ತಿಕೊಂಡು) ಹೂವಿನ ಬುಟ್ಟಿಯು ಜಗ್ಗುವಂತೆ ತುಂಬಿಕೊಂಡು, ಅದನ್ನು ಹಿಡಿದುಕೊಂಡು ತಡಮಾಡದೆ ಬರುತ್ತಿರುವಷ್ಟರಲ್ಲಿ ಕೆಸರಿನಲ್ಲಿ ತನ್ನ ಕಾಲು ಜಾರಲಾಗಿ, "ನನ್ನ ಸ್ವಾಮಿಯಾದ ದೇವನೇ, ಶಂಭುವೇ, ದಯಾಸಮುದ್ರನೇ, ಚಿದಂಬರೇಶಾ, ಹಿಡಿದುಕೋ" ಹೀಗೆಂದು ಹೇಳಿದ ಆ ಭಕ್ತನನ್ನು (ನೆಲಕ್ಕೆ) ಬೀಳದ ಹಾಗೆ ಆ ಕೈಲಾಸವಾಸಿಯಾದ ಶಂಕರನು ಬಂದು ಎತ್ತಿದನು. ಅದೇ ರೀತಿಯಲ್ಲಿ ನನ್ನನ್ನು ಬಸವೇಶ್ವರನು ಎತ್ತಿದನು. ೧೬. ಮಜ್ಜಿಗೆ (ಅಳೆ)ಯಿಂದ ತುಂಬಿದ ಕೊಡವನ್ನು ಆ ಕೂಡಲೇ ಹಿಡಿದು ಎತ್ತಿದನು. ಅತ್ಯಂತ ಮಹಾತ್ಮೆಯುಳ್ಳ ಈ ಬಸವಣ್ಣನ ಅತಿಶಯವನ್ನು ನುಡಿಯಲಿಕ್ಕೆ ಅಸಾಧ್ಯವಾದುದು. ಅದು ಹೇಗೆಂದರೆ—ಈ ಭೂಮಿಯಲ್ಲಿ ಸುವರ್ಣವಲ್ಲಿ ಎಂಬ ಪಟ್ಟಣದಲ್ಲಿ—**ಸಿದ್ಧರಾಮ**

ಕರಮೆಸೆದಿರ್ಪನೊರ್ವನನಘಂ ತನುಧರ್ಮವಿಮುಕ್ತನುತ್ತರೋ
ತ್ತರ ಶಿವಯೋಗಧುರ್ಯನಕಳಂಕ ಮಹಾಮತಿ ಸಿದ್ಧರಾಮನೆಂ
ಬುರುತರ ತಾಪಸಂ ಶತಸಹಸ್ರ ನವೀನ ಶಿವಾಲಯಂಗಳಂ
ವಿರಚಿಸಿ ಮಲ್ಲಿಕಾರ್ಜುನನನಲ್ಲಿಗೆ ತಂದ ಮಹತ್ವಮುಂಡಿತಂ ೧೭

ಪಣೆಗಣ್ಣ ಪರಮ ಗುಣನಿಧಿ
ಮಣಿಮಕುಟದ ಮಹಿಮನಮಳ ಚಿನ್ಮಯನಿರ್ದಂ
ಗಣಸಭೆಯೊಳೊರ್ಮೆ ಸುಮನೋ
ಗಣಸನ್ನುತ ಸಿದ್ಧರಾಮನಭಿನವ ಭೀಮಂ ೧೮

ವ॥ ಅಗಳಾ ಶಿವಯೋಗಿಲಲಾಮನಂ ಸಕಳಮಾಹೇಶ್ವರರ್ಕೊಂಡಾಡಿ—

ಅನುದಿನಮೀಶಲೋಕಕೆ ಮಹಾಶಿವಯೋಗದೊಳೈದಿ ಮಾರಮ
ರ್ದನನ ಸಮೀಪದೊಳ್ ಪ್ರಮಥಗೋಷ್ಠಿಯೊಳೊಂದಿ ಶಿವಾನುಭಾವ ಸೇ
ವನೆಯನೊಡರ್ಚಿ ಬರ್ಪೆ ಗಡ ನೀಂ ಬಿಡದಲ್ಲಿಯುಮೀ ವೃಷೇಂದ್ರನಿ
ರ್ಪನೆ ನೆಲೆವೇಳ್ವುದೆಮ್ಮೊಡನೆನುತ್ತಮವರ್ಬೆಸಗೊಂಡರಾತನಂ ೧೯

ವ॥ ಎಂದವರ್ ಬೆಸಗೊಳ್ವಿನಮಾಂ ಕೈಲಾಸಕ್ಕೆ ಪೋಗಿ ಬಸವನಿರ್ಪುದಂ ತಿಳಿದೇಳ್ತಂದು ನಿಮ್ಮಡಿಗದ ಬಿನ್ನವಿಪೆನೆಂದು ಸಿದ್ಧರಾಮಂ ನುಡಿದು—

ಶಿವಯೋಗಿಯ ಕಥೆ: ೧೭. ಪಾಪರಹಿತನೂ, ದೇಹ ಧರ್ಮದಿಂದ ಮುಕ್ತನಾದವನೂ ಉನ್ನತೋನ್ನತವಾದ ಶಿವಯೋಗದ ಸ್ಥಿತಿಯಲ್ಲಿ ಸಮರ್ಥನೂ, ನಿರ್ದುಷ್ಟವಾದ ಮಹಾ ಬುದ್ಧಿಯುಳ್ಳವನೂ, ಮಹಿಮಾತಿಶಯದಿಂದ ಅಲಂಕಾರಗೊಂಡವನೂ ಆದ ಸಿದ್ಧರಾಮನೆಂಬ ಒಬ್ಬ ಶ್ರೇಷ್ಠ ತಪಸ್ವಿಯು ಲಕ್ಷ ಸಂಖ್ಯೆಯ ಶಿವಾಲಯಗಳನ್ನು ನಿರ್ಮಿಸಿ ಅಲ್ಲಿಗೆ (ಶ್ರೀಶೈಲದ) ಮಲ್ಲಿಕಾರ್ಜುನನ್ನು ತಂದನು. ೧೮. ಹಣೆಯಲ್ಲಿ ಕಣ್ಣನ್ನುಳ್ಳ, ಶ್ರೇಷ್ಠ ಗುಣನಿಧಿಯಾದ, ರತ್ನಖಚಿತ ಕಿರೀಟದ ಮಹಿಮನಾದ, ನಿರ್ಮಲಜ್ಞಾನ ಸ್ವರೂಪನಾದ, ನೂತನ ಪರಶಿವ ಸ್ವರೂಪನಾದ, ದೇವತೆಗಳ ಸಮೂಹದಿಂದ ಶ್ಲಾಘ್ಯನಾದ (ಆ) ಸಿದ್ಧರಾಮೇಶ್ವರನು ಒಮ್ಮೆ ಶಿವಗಣ ಸಭೆಯಲ್ಲಿ ಇದ್ದನು. ವ॥ ಆಗ ಆ ಶಿವಯೋಗಿ ಶ್ರೇಷ್ಠನನ್ನು ಸಕಲ ಮಾಹೇಶ್ವರರುಗಳು ಕೊಂಡಾಡಿ— ೧೯. "ನೀನು ಪ್ರತಿದಿನವೂ ಮಹಾ ಶಿವಯೋಗ ಬಲದಿಂದ, ಶಿವಲೋಕಕ್ಕೆ ಹೋಗಿ, ಆ ಮನ್ಮಥಮರ್ದನನ ಸಮೀಪದಲ್ಲಿ ಪ್ರಮಥಗಣಗಳ ಸಭೆಯಲ್ಲಿ ಪಾಲ್ಗೊಂಡು ಶಿವಾನುಭಾವದ ಸೇವೆಯನ್ನು ಮಾಡಿ ಬರುತ್ತೀಯಲ್ಲವೇ! ಆ ಕೈಲಾಸದಲ್ಲಿಯೂ ಈ ಬಸವೇಶ್ವರನು ಇರುವನೇ? ನಮ್ಮೊಡನೆ ನಿಶ್ಚಯವಾಗಿ ತಿಳಿಸಬೇಕು." ಎನ್ನುತ್ತ ಅವರು ಆ ಸಿದ್ಧರಾಮ ಶಿವಯೋಗಿಯನ್ನು ಕೇಳಿದರು. ವ॥ ಹೀಗೆಂದು ಅವರುಗಳು ಕೇಳಿಕೊಳ್ಳಲಾಗಿ ನಾನು ಕೈಲಾಸಕ್ಕೆ ಹೋಗಿ ಬಸವಣ್ಣ ನಿರುವುದನ್ನು ತಿಳಿದುಬಂದು ನಿಮ್ಮ ಪಾದಗಳಿಗೆ ಬಿನ್ನವಿಸಿಕೊಳ್ಳುತ್ತೇನೆ ಎಂದು ಆ

ನೆಗೆದಂ ತತ್‌ಕ್ಷಣದೊಳ್ದಿನೇಶರುಚಿಯುಂ ತಳ್ಳ್ಪೊಯ್ಯೆ ಕಾಯಾಂಶು ಕೈ
ಮಿಗೆ ತಾರಾಪಥದಲ್ಲಿ ಬರ್ಪ ದಿವಿಜರ್ ಸಂಪ್ರೀತಿಯಿಂ ಪೂಜೆಗೈ
ಯೆ ಗಣಾನೀಕಮಭೀಕ್ಷಿಸುತ್ತೆ ಮುದದಿಂ ಕೊಂಡಾಡೆ ಕೈಲಾಸಮಂ
ಪುಗುತಂದದ್ರಿಜೆಯಾಣ್ಮನಿರ್ಪ ಸಭೆಯಂ ಪೊಕ್ಕಂ ಮಹೋತ್ಸಾಹದಿಂ ೨೦

ವ॥ ಅಂತು ಪೊಕ್ಕು ನಿರೀಕ್ಷಿಪಾಗಳ್—

ಪಿಂಗಾಕ್ಷಂ ಭರ್ಗನುಗ್ರಂ ಶಮನದಮನನಿಂದ್ರಾರಿ ಗಂಗೋತ್ತಮಾಂಗಂ
ತುಂಗಾಂಗಂ ಧೂಮವರ್ಣಂ ವಿಧಿಮದಹರನುಗ್ರಾಕ್ಷನಾದಿತ್ಯವರ್ಣಂ
ಭೃಂಗೀಶಂ ನಾರಸಿಂಹಪ್ರಹರನತನುಭಸ್ಮಾಂಗನಭ್ರಾಂಗಕಂ ಮಾ
ತಂಗಪ್ರಧ್ವಂಸಿಯುಂಡಾಭರಣನಚಲಮಾಲಾಧರಂ ಶಂಕುಕರ್ಣಂ ೨೧

ದಂಡಪಾಣಿ ಮಹಾಬಲಂ ಮಖಮರ್ದನಂ ಶಿಖಿಲೋಚನಂ
ಪುಂಡರೀಕಹರಂ ಪುರಾರಿ ಶಿಖಂಡಿ ಧೂರ್ಜಟಿ ರೇಣುಕಂ
ಚಂಡಬಾಹುಹುತಾಶಶಾಸನನದ್ರಿಪಾತನನಕ್ಷರಂ
ರುಂಡಮಾಲಿ ಕಪಾಲಿ ಶೂಲಧರಂ ಧರಾಧರಕುಂಡಲಂ ೨೨

ಸಿದ್ಧರಾಮೇಶ್ವರನು ನುಡಿದು— ೨೦. ಆ ಕ್ಷಣದಲ್ಲಿಯೇ ಕೈಲಾಸಕ್ಕೆ ನೆಗೆದನು. ದೇಹಕಾಂತಿಯು ಅಧಿಕಗೊಂಡು ಸೂರ್ಯನ ಪ್ರಕಾಶವನ್ನು ಹಿಂದಕ್ಕೆ ತಳ್ಳುತ್ತಿರಲು ಅಂತರಿಕ್ಷದಲ್ಲಿ ಬರುತ್ತಿರುವ ದೇವತೆಗಳು ಅತಿ ಪ್ರೀತಿಯಿಂದ ಪೂಜೆ ಮಾಡಲಾಗಿ. ಪ್ರಮಥಗಣಗಳ ಸಮುದಾಯವು ನೋಡುತ್ತ ಮುದದಿಂದ ಕೊಂಡಾಡಿದರು. (ಹೀಗೆ) ಆಗ ಕೈಲಾಸವನ್ನು ಹೊಗುತ್ತ ಪಾರ್ವತೀ ಪತಿಯಾದ ಪರಶಿವನಿರುವ ಸಭೆಯನ್ನು ಮಹಾ ಉತ್ಸಾಹದಿಂದ ಹೊಕ್ಕನು. ವ॥ ಈ ರೀತಿ ಹೊಕ್ಕು ನೋಡುತ್ತಿರುವಾಗ (೨೧–೨೫) (ಅಲ್ಲಿ) ಪಿಂಗಾಕ್ಷ (ಶಿವ) ಭರ್ಗ, ಉಗ್ರ, ಶಮನದಮನ, ಇಂದ್ರಾರಿ, ಗಂಗೋತ್ತಮಾಂಗ, ತುಂಗಾಂಗ, ಧೂಮವರ್ಣ, ವಿಧಿಯ ಮದ ಹರಣ ಮಾಡಿದವ, ಉಗ್ರನೇತ್ರವುಳ್ಳವ, ಸೂರ್ಯ ವರ್ಣದವ, ಭೃಂಗೀಶ, ನರಸಿಂಹ ಸಂಹಾರಕ, ಮನ್ಮಥನ ಚಿತಾ ಭಸ್ಮವನ್ನು ಧರಿಸಿದವ, ಆಕಾಶ ದೇಹವುಳ್ಳವ, ಗಜಾಸುರ ಸಂಹಾರಕ, ಅಂಡಾಭರಣ, ಪರ್ವತಗಳ ಮಾಲೆ ಧರಿಸಿದವ, ಶಂಕುಕರ್ಣ, ದಂಡಪಾಣಿ, ಮಹಾಬಲ, ಮಖ (ಯಜ್ಞ) ಮರ್ದನ, ಶಿಖಿ (ಅಗ್ನಿ) ನೇತ್ರ, ಪುಂಡರೀಕಹರ, ಪುರಾರಿ, ಶಿಖಂಡಿ, ಧೂರ್ಜಟಿ, ರೇಣುಕ, ಚಂಡಬಾಹು, ಹುತಾಶಶಾಸನ, ಅದ್ರಿಪಾತ, ಅನಕ್ಷರ, ರುಂಡಮಾಲಿ, ಕಪಾಲಿ, ಶೂಲಧರ, ದಂಡಧರಕುಂಡಲ, ಶರಭಮುಖ, ಮೃಗೇಂದ್ರ (ಸಿಂಹ)ವದನ ತುರಗಾಸ್ಯ

ಶರಭಮುಖಂ ಮೃಗೇಂದ್ರವದನಂ ತುರಗಾಸ್ಯನಿಭಾನನಂ ಮಹಾ
ಗಿರಿಲಪನಂ ಕುರಂಗರಿಪುತುಂಡನಹೀಶ್ವರವಕ್ತ್ರನಭ್ರಮೂ
ವರರದಖಂಡನಂ ಕ್ಷಿತಿವಿಯತ್ತ್ರಳತಾಳನನಂತನೆಂಬುಜೋ
ದರ ರಥಪಕ್ಷಭಂಗನಿನನೇತ್ರಪಾತನನಿಂದುಪೇಷಣಂ ೨೩

ವಿಕಟಾಂಗಂ ಬಡಬಾನನಂ ಡಮರುಹಸ್ತಂ ಮೇಘನಾದಂ ಕರೋ
ಟಿಕರಂ ದಿಗ್ವರಭಂಜನಂ ವಿಜಯಕರ್ಣಂ ದೈತ್ಯವಿಧ್ವಂಸಿ ದಾ
ರುಕನುಕ್ಷಧ್ವಜನಪ್ರಮೇಯನನಲಾಂಗಂ ನಾಗರಾಜಾಂಗುಲೀ
ಯಕನೂರ್ಧ್ವೇಕ್ಷಣನಂಧಕಾರಿ ವಿಷಭಕ್ಷ್ಯಂ ದಕ್ಷಕೋಲಾಹಲಂ ೨೪

ಬಲಕಾಯಂ ವೀರರುದ್ರಂ ಸುಖಕರನಸಿತಗ್ರೀವನಭ್ರಾಳಕಂ ಪಿಂ
ಗಲನೀಶಾನಂ ಮಹಾನಾಟ್ಯಕನಭವನಜೇಯಂ ಗುಹಂ ವೀರಭದ್ರಂ
ಜ್ವಲದಂಗಂ ಕ್ರೂರದಂಷ್ಟ್ರಂ ಕಲವಿಕರಣನಾತ್ಮೇಶ್ವರಂ ವಿಶ್ವಪಾಲಂ
ಕುಲಿಶಾಂಗಂ ಶಂಭು ಮೃತ್ಯುಂಜಯನರುಣಜಟಂ ಧೀವರಂ ಕಾಲರುದ್ರಂ ೨೫

ವ॥ ಇವರ್ಮೊದಲಾದಗಣಿತಗಣನಿವಹಮಲ್ಲದೆಯುಂ —

ಶುಕ ಸೂತಾಗಸ್ತ್ಯ ಕಣ್ವ ದ್ರುಹಿಣಜ ಕಣಭುಗ್ವ್ಯಾಘ್ರಪಾದಾತ್ರಿ ಮೈತ್ರೇ
ಯಕ ಭಾರದ್ವಾಜ ಶಾತಾತಪ ಕಪಿಲ ಕಣಾದಾನಿಲಾದಾಕ್ಷಪತ್ಕೌ
ಶಿಕ ಮಾರ್ಕಂಡೇಯವತ್ಸ ಚ್ಯವನ ಭೃಗು ರುರು ವ್ಯಾಸ ಮುಖ್ಯಂ ಮುನೀಂದ್ರ
ಪ್ರಕರಂ ಸಾಲ್ಗೊಂಡು ವೇದಸ್ತವದಿನಭವನಂ ಕೀರ್ತಿಸುತ್ತಿರ್ದುದಾಗಳ್ ೨೬

(ಕುದುರೆ ಮುಖ) ನಿಭಾನನ, ಮಹಾಗಿರಿಲಪನ, ಕುರಂಗರಿಪುತುಂಡ (ಸಿಂಹ ಮುಖ), ಅಹೀಶ್ವರ (ಆದಿಶೇಷ)ವಕ್ತ್ರ, ಅಭ್ರಮೂವರರದಖಂಡನ, ಕ್ಷಿತಿವಿಯತ್ತ್ರಳತಾಳ, ಅನಂತ, ಅಂಬುಜೋದರರಥಪಕ್ಷಭಂಗ (ಗರುಡಪಕ್ಷಭಂಗ), ಇನನೇತ್ರನಿಪಾತನ, ಇಂದುಪೇಷಣ, ವಿಕಟಾಂಗ, ಬಡಬಾನಲ, ಡಮರುಹಸ್ತ, ಮೇಘನಾದ, ಕರೋಟಿಕರ, ದಿಗ್ವರಭಂಜನ, ವಿಜಯಕರ್ಣ, ದೈತ್ಯ ವಿಧ್ವಂಸಿ, ದಾರುಕ, ಉಕ್ಷಧ್ವಜ, ಅಪ್ರಮೇಯ, ಅನಲಾಂಗ, ನಾಗರಾಜಾಂಗುಲೀಯಕ, ಊರ್ಧ್ವೇಕ್ಷಣ, ಅಂಧಕಾರಿ, ವಿಷಭಕ್ಷ, ದಕ್ಷಕೋಲಾಹಲ, ಬಲಕಾಯ, ವೀರರುದ್ರ, ಸುಖಕರ, ಅಸಿತಗ್ರೀವ, ಅಭ್ರಾಳಕ, ಪಿಂಗಲ, ಈಶಾನ, ಮಹಾ ನಾಟ್ಯಕ, ಅಭವ, ಅಜೇಯ, ಗುಹ, ವೀರಭದ್ರ, ಜ್ವಲರಂಗ, ಕೂರದಂಷ್ಟ್ರ, ಕಲವಿಕರಣ, ಆತ್ಮೇಶ್ವರ, ವಿಶ್ವಪಾಲ, ಕುಲಿಶಾಂಗ, ಶಂಭು, ಮೃತ್ಯುಂಜಯ, ಅರುಣಜಟ, ಧೀವರ, ಕಾಲರುದ್ರ— ವ॥—ಇವರೇ ಮೊದಲಾದ ಅಗಣಿತವಾದ ಗಣ ಸಮೂಹವಿತ್ತು. ಇದಲ್ಲದೆಯೂ ಕೂಡ— ೨೬. ಶುಕ, ಸೂತ, ಅಗಸ್ತ್ಯ, ಕಣ್ವ, ದ್ರುಹಿಣಜ, ಕಣಭುಕ್, ವ್ಯಾಘ್ರಪಾದ, ಅತ್ರಿ, ಮೈತ್ರೇಯಕ, ಭಾರದ್ವಾಜ, ಶತಾತಪ, ಕಪಿಲ, ಕಣಾದ, ಅನಿಲಾದ, ಅಕ್ಷಪತ್, ಕೌಶಿಕ, ಮಾರ್ಕಂಡೇಯ, ವತ್ಸ, ಚ್ಯವನ, ಭೃಗು, ರುರು, ವ್ಯಾಸ—ಇವರೇ ಮೊದಲಾದ ಮುನೀಶ್ವರರ ಸಮೂಹವು ಆಗ (ಅಲ್ಲಿ) ಸಾಲು ಸಾಲಾಗಿ ವೇದ ಸ್ತೋತ್ರದಿಂದ ಶಿವನನ್ನು ಕೀರ್ತಿಸುತ್ತ ಇತ್ತು.

ಹರಿ ವಿಧಿ ಜಿಷ್ಣು ವಹ್ನಿ ಶಮನಂ ದನುಜಂ ವರುಣಂ ಪ್ರಭಂಜನಂ
ಹರಸಖನೀಶನಬ್ಜಸಖನಿಂದು ಕುಜಂ ಬುಧಜೀವಕಾವ್ಯಭಾ
ಸ್ಕರಸುತ ರಾಹುಕೇತುಗಳನಂತಮುಖಾಹಿಗಳಾಶ್ವಿನೇಯರ
ಚ್ಚರರಸುರರ್ಸುರರ್ವಸುಗಳೋಲಗಿಸಿರ್ದರುಮಾಧಿನಾಥನಂ ೨೭

ಗರುಡರ ಪಾಳಿ ಗಂಧರರ ತಿಂಥಿಣಿ ಸಿದ್ಧರ ಪಙ್ತಿ ಚಾರು ಕಿ
ನ್ನರರ ತೆರಳ್ಕೆ ಕಿಂಪುರುಷರೊಬ್ಬುಳಿ ಗುಹ್ಯಕರೊಗ್ಗು ಸಾಧ್ಯರು
ತ್ಕರಮೆಡೆಗೊಂಡ ಚಾರಣರ ಜಂಗುಳಿ ಯಕ್ಷರ ವಂಗಡಂ ಮಯೂ
ರರ ಪಡೆ ವೇದಪೂರುಷರ ದೊಂದುಳಿಯಲ್ಲಿ ಕರಂ ಮನೋಹರಂ ೨೮

ಕಾಲನ ಮುಂದೆ ತೋಳನೊಲಿದೆತ್ತಿ ದಿನೇಶನ ಮುಂದೆ ತನ್ನ ಕ
ಣ್ಣಾಲಿಯನೊತ್ತಿ ಮೆಳ್ಳಿಸಿ ವಿರಿಂಚಿವಧೂಟಿಯ ಮುಂದೆ ಮೂಗಿನೊ
ಳ್ಚಾಲಿಸುತಿಟ್ಟು ತರ್ಜನಿಯನಾಡಿಸಿ ದಕ್ಷನ ಮುಂದೆ ಮಂಡೆಯಂ
ಜ್ವಾಲಿಯ ಮುಂದೆ ಕೈಗೊಡಹಿ ಭೃಂಗಿ ಕರಂ ಕುಣಿದಾಡುತೊಪ್ಪಿದಂ ೨೯

೨೭. ಹರಿ, ವಿಧಿ, ಜಿಷ್ಣು, ವಹ್ನಿ, ಶಮನ (ಯಮ), ನೈಋತ, ವರುಣ, ವಾಯು, ಕುಬೇರ, ಈಶ, ಸೂರ್ಯ, ಚಂದ್ರ, ಕುಜ, ಬುಧ, ಬೃಹಸ್ಪತಿ (ಜೀವ), ಶುಕ್ರ, ಶನಿ, ರಾಹು, ಕೇತು, ಆದಿಶೇಷನೇ ಮೊದಲಾದ ಸರ್ಪಗಳು, ಅಶ್ವಿನೀ ದೇವತೆಗಳು, ಅಪ್ಸರರು, ರಾಕ್ಷಸರು, ದೇವತೆಗಳು, ಉಮಾಪತಿಯನ್ನು ಸೇವಿಸುತ್ತ ಇದ್ದರು. ೨೮. ಆ ಸಭೆಯಲ್ಲಿ ಗರುಡರ ಗುಂಪು, ಗಂಧರ್ವರ ಸಮೂಹ, ಸಿದ್ಧರ ಸಾಲು, ಮನೋಹರ ಕಿನ್ನರರ ಗುಂಪು, ಕಿಂಪುರುಷರ ಒಟ್ಟು, ಗುಹ್ಯಕರ ಸಮೂಹ, ಸಾಧ್ಯರ ಗುಂಪು, ದಟ್ಟವಾಗಿ ತುಂಬಿರುವ ಚಾರಣರ ಜಂಗುಳಿ, ಯಕ್ಷರ ರಾಶಿ, ಮಯೂರರ ಪಡೆ, ವೇದಪುರುಷರ ಗುಂಪು ಚೆನ್ನಾಗಿ ಮನೋಹರವಾಗಿತ್ತು (ಇಲ್ಲಿ–ಪಾಳಿ, ತಿಂತಿಣಿ–ಇತ್ಯಾದಿ ಪದಗಳೆಲ್ಲ ಸಮುದಾಯ ವಾಚಕಗಳೆಂದು ತಿಳಿಯುವುದು) ೨೯. (ಅಲ್ಲಿ) ಭೃಂಗಿಯು ಯಮನ ಮುಂದೆ ತೋಳನ್ನು ಅಲ್ಲಾಡಿಸಿ ಎತ್ತಿ, ಸೂರ್ಯನ ಮುಂದೆ ತನ್ನ ಕಣ್ಣಿನ ಗುಡ್ಡೆಯನ್ನು ಒತ್ತಿ ಮಿಳ್ಳಿಸಿ (ಮಿಳ್ಳಿಗಣ್ಣು ಮಾಡಿ ತೋರಿಸಿ), ಬ್ರಹ್ಮ ಪತ್ನಿಯಾದ ಸರಸ್ವತಿಯ ಮುಂದೆ ಮೂಗಿನ ಮೇಲೆ ತರ್ಜನಿಯ ಬೆರಳನ್ನು ಅಲ್ಲಾಡಿಸುತ್ತ ಇಟ್ಟುಕೊಂಡು, ದಕ್ಷನ ಮುಂದೆ ಶಿರಸ್ಸನ್ನು ಆಡಿಸುತ್ತ, ಜ್ವಾಲೆಯ ಮುಂದೆ ಕೈಯನ್ನು ಕೊಡವುತ್ತ, ಚೆನ್ನಾಗಿ ಕುಣಿದಾಡುತ್ತ ಶೋಭಿಸುತ್ತಿದ್ದನು. [ಇಲ್ಲಿ ಭೃಂಗಿಯು ಯಮನ ಮುಂದೆ ತೋಳನ್ನೆತ್ತಿದುದರಿಂದ ಈಶ್ವರನು ಯಮನ ತೋಳನ್ನು ಕತ್ತರಿಸಿದುದರ ಸ್ಮರಣೆಯೂ, ಸೂರ್ಯನ ಮುಂದೆ ಕಣ್ಣನ್ನು ಮೆಳ್ಳಿಸಿದುದರಿಂದ ಸೂರ್ಯನ ಪುತ್ರನಾದ ಶನಿಯು ಹುಟ್ಟಿದಾಗ ಸೂರ್ಯನಿಗಾದ ನೇತ್ರಹಾನಿಯ ಸ್ಮರಣೆಯೂ, ಸರಸ್ವತಿಯ ಮುಂದೆ ಮೂಗಿನ ಮೇಲೆ ಬೆರಳಾಡಿಸಿದುದರಿಂದ ದಕ್ಷ ಯಾಗದಲ್ಲಿ ಆಕೆಗೆ ವೀರಭದ್ರನಿಂದ ನಾಸಿಕಾಛೇದ ಸ್ಮರಣೆಯೂ, ದಕ್ಷನ ಮುಂದೆ ತಲೆಯನ್ನಲ್ಲಾಡಿಸಿದ್ದರಿಂದ ವೀರಭದ್ರನಿಂದ ಅವನಿಗಾದ ಶಿರಚ್ಛೇದನ ಸ್ಮರಣೆಯೂ, ಜ್ವಾಲೆಯ

ಎಡವಕ್ಕದೊಳಬ್ಜಾಕ್ಷಂ
ಜಡಜಭವಂ ಬಲದ ಪಕ್ಕದೊಳ್ನುತಿಗೈವು
ತ್ತೊಡನಿರೆ ಕಣ್ಗೆಸೆದಿರ್ದಂ
ಮೃಡನದ್ರಿಜೆವೆರಸಿ ದಿವ್ಯಸಿಂಹಾಸನದೊಳ್ ೩೦

ಪಾಡೆ ತುಂಬುರ ನಾರದರ್ನವಗಾನಮಂ ಮಿಗೆ ರಂಭೆ ತಾ
ನಾಡೆ ಲಾಸ್ಯ ಮನೋಜೆಯಿಂ ಘನಮಂತ್ರದೇವಿಯರಣ್ಮಿ ಕೊಂ
ಡಾಡೆ ವಿಷ್ಣು ವಿರಿಂಚಿಪತ್ನಿಯರಿರ್ಕೆಲಂಗಳೊಳಿಕ್ಕಿ ಕೈ
ನೀಡಿ ಭಾಸುರ ಚಾಮರಂಗಳನದ್ರಿಜಾಧಿಪನೊಪ್ಪಿದಂ ೩೧

ವ॥ ಆ ಸಮಯದೊಳ್ ಸಿದ್ಧರಾಮಯೋಗೀಂದ್ರನಾದರಂ ಮಿಗೆ ಪೊಡಮಟ್ಟು ಕರಾಂಜಲಿವೆರಸು ಸನ್ನುತಿ[1]ಗೈವು[1]ತ್ತಮಿರೆ—

ಬಾರಯ್ಯ ಸಿದ್ಧರಾಮ ದ
ಯಾರಸನಿಧಿ ಭಕ್ತರೈದೆ ಸುಖಮಿರ್ಪರೆ ಪೇಳ್
ಧಾರಿಣಿಯೊಳೆಂದು ಕೇಳೆ ಪು
ರಾರಿ ಮುದಂಬೆತ್ತು ಸಿದ್ಧರಾಮಂ ನುಡಿದಂ ೩೨

ಮುಂದೆ ಕೈಯನ್ನು ಕೊಡವಿದುದರಿಂದ ವೀರಭದ್ರನಿಂದ ದಕ್ಷ ಯಾಗದಲ್ಲಿ ಅವಳ ಶಿರಚ್ಛೇದನದ ಸ್ಮರಣೆಯೂ,—ಉಂಟಾಗುವಂತೆ ಮಾಡಿ ಹಾಸ್ಯ ಮಾಡಿದನೆಂದು ತಿಳಿಯಬೇಕು] ೩೦. (ಅಲ್ಲಿ) ಎಡಪಕ್ಕದಲ್ಲಿ ವಿಷ್ಣುವೂ, ಬಲಪಕ್ಕದಲ್ಲಿ ಬ್ರಹ್ಮನೂ, ಸ್ತುತಿ ಮಾಡುತ್ತ ಒಡನೆಯೇ ಇರಲು ಶಿವನು ಪಾರ್ವತಿಯೊಡನೆ ಕೂಡಿ, ದಿವ್ಯ ಸಿಂಹಾಸನದಲ್ಲಿ ಕಣ್ಣಿಗೆ ಶೋಭಿಸುತ್ತಿದ್ದನು. ೩೧. (ಅಲ್ಲಿ) ತುಂಬುರು ನಾರದರು ನೂತನವಾಗಿ ಹಾಡುತ್ತಿದ್ದರು ; ರಂಭೆಯೂ ಚೆನ್ನಾಗಿ ಲಾಸ್ಯವನ್ನು ಮನೋಹರ ವಾಗಿ ನಟಿಸುತ್ತಿದ್ದಳು ; ಶ್ರೇಷ್ಠ ಮಂತ್ರಾಧಿದೇವತೆಯರು ಪರಾಕ್ರಮ ವಿಶಿಷ್ಟವಾಗಿ ಕೊಂಡಾಡುತ್ತಿದ್ದರು; ಲಕ್ಷ್ಮೀಸರಸ್ವತಿಯರು ಎರಡೂ ಪಾರ್ಶ್ವಗಳಲ್ಲಿ ಕೈಬೀಸಿ ಪ್ರಕಾಶಿಸುವ ಚಾಮರಗಳನ್ನು ಬೀಸುತ್ತಿದ್ದರು–ಹೀಗೆ ಪಾರ್ವತೀನಾಥನು ಒಪ್ಪಿದನು. ವ॥ ಆ ಸಮಯದಲ್ಲಿ ಸಿದ್ಧರಾಮ ಶಿವಯೋಗೀಂದ್ರನು ಹೆಚ್ಚಾದ ಆದರದಿಂದ (ಪರಮೇಶ್ವರನಿಗೆ) ನಮಸ್ಕರಿಸಿ, ಕೈಮುಗಿದು ಶ್ರೇಷ್ಠವಾಗಿ ಸ್ತೋತ್ರ ಮಾಡು ತ್ತಿರಲಾಗಿ,– ೩೨. ಆ ದಯಾರಸದ ನಿಧಿಯಾದ ಶಿವನು–'ಸಿದ್ಧರಾಮಾ. ಬಾರಯ್ಯ; ಭೂಲೋಕದಲ್ಲಿ ಭಕ್ತರು ಚೆನ್ನಾಗಿ ಸುಖದಿಂದ ಇರುವರೆ ? ಹೇಳು' ಎಂದು ಕೇಳಲು

1 ಗೆಯ್ಯು (ಜ)

ಭವದೀಯ ಕೃಪೆಯಿನೆಲ್ಲರ್
ಭವಹರ ಸುಖಮಿರ್ಪರಲ್ಲಿ ಭಕ್ತರ್ಬಸವಂ
ಶಿವಲೋಕದೊಳುಂಟೆಂಬುದ
ನವಧರಿಸುತೆ ಬರ್ಪುದೆಂದು ಕಳುಪಿದರೆನ್ನಂ ೩೩

ವ॥ ಎನೆ ಸರ್ವಗತಂ ಬಸವನಿಲ್ಲದೆಡೆಯಾವುದಂತಾದೊಡಮಳುಂಬಮುಮರ್ಕೆಪೆತ್ತು—

ಎಸೆವಷ್ಟಾವರಣದೊಳಂ
ಮಿಸುಪ ಮಹಾಭಕ್ತರಲ್ಲಿಯುಂ ಪ್ರಮಥಗಣ
ಪ್ರಸರದೊಳಮೆನ್ನೊಳುಂ ರಂ
ಜಿಸುವಂ ಬಸವಂ ವಿದಗ್ಧ ನೀನಱಿಯದುದೇ ೩೪

ಎಂದು ಪುರಾರಿ ತನು ಹೃದಯಾಂಬುಜಮಂ ತೆಱೆದಲ್ಲಿ ನೋಳ್ಪ ಗೋ
ವಿಂದ ವಿರಿಂಚಿ ಮುಖ್ಯರರರೇ ಜಯಜೀಯೆನುತಲ್ಲಿ ಸಾಂಜಲಿ
ಸ್ಪಂದಲಲಾಟರಾಗಿ ನುತಿಸುತ್ತಿರೆ ತೋಱಿಸಿದಂ ಗಣೇಂದ್ರರಾ
ನಂದಿಸಿ ನೋಡೆ ಸಿದ್ಧಪತಿಗೊಲ್ದು ವೃಷೇಂದ್ರನನಾ ವೃಷಧ್ವಜಂ ೩೫

ಹರನ ಹೃದಯಾಬ್ಜದೊಳ್ಭಾ
ಸುರರೂಪಂ ಬಸವನೊಪ್ಪಿದಂ ಕರಲಿಂಗ
ಸ್ಥಿರದೃಷ್ಟಿ ಜಂಗಮಾಂಘ್ರಿಗೆ
ಶರಣೆನುತಂ ಭಸ್ಮಲಿಪ್ತಕಾಯನಜೇಯಂ ೩೬

ಸಿದ್ಧರಾಮನು ಸಂತೋಷದಿಂದ ಕೂಡಿ, ಹೇಳಿದನು : ೩೩. ಹೇ ಭವಹರನೇ ಆ ಭೂಲೋಕದಲ್ಲಿ ನಿನ್ನ ಕೃಪೆಯಿಂದ ಎಲ್ಲರೂ ಸುಖದಿಂದ ಇದ್ದಾರೆ. ಬಸವಣ್ಣನು ಶಿವಲೋಕದಲ್ಲಿ ಇದ್ದಾನೆಯೆ, ಎಂಬುದನ್ನು ನಿರ್ಧರಿಸಿಕೊಂಡು ಬರಬೇಕು ಎಂದು ಭಕ್ತರು ನನ್ನನ್ನು ಕಳುಹಿಸಿದ್ದಾರೆ. ವ॥ ಹೀಗೆಂದು ಸಿದ್ಧರಾಮನು ಹೇಳಲು—ಸರ್ವ–ವ್ಯಾಪಿಯಾದ ಬಸವಣ್ಣನಿಲ್ಲದ ಸ್ಥಳವು ಯಾವುದು? ಹಾಗಾದರೂ ಕೂಡ, ಅಧಿಕವಾಗಿ ಸೇರಿಕೊಂಡು—೩೪. ಬಸವಣ್ಣನು ಶೋಭಿಸುವ ಅಷ್ಟಾವರಣದಲ್ಲಿಯೂ, ಪ್ರಕಾಶಮಾನರಾದ ಮಹಾಭಕ್ತರಲ್ಲಿಯೂ, ಪ್ರಮಥಗಣಗಳ ಪ್ರಸರದಲ್ಲಿಯೂ, ನನ್ನಲ್ಲಿಯೂ, ರಂಜಿಸುತ್ತಿದ್ದಾನೆ. ಪ್ರೌಢನಾದ ಸಿದ್ಧರಾಮನೇ ಇದನ್ನು ನೀನು ಅರಿಯದವನೇ ? ೩೫. ಹೀಗೆಂದು ಪರಶಿವನು ತನ್ನ ಹೃದಯ ಕಮಲವನ್ನು ತೆರೆದು ನೋಡುತ್ತಿರುವ ವಿಷ್ಣು, ಬ್ರಹ್ಮರೇ ಮೊದಲಾದ ದೇವತೆಗಳು ಅರರೇ ! ಜಯ ಜಯ !! ಎನ್ನುತ್ತ ಆ ಸಭೆಯಲ್ಲಿ ಹಣೆಯ ಮೇಲೆ ಕೈಜೋಡಿಸಿ ಸ್ತೋತ್ರ ಮಾಡುತ್ತ ನಮಸ್ಕರಿಸುವವರಾಗಿ ಇರಲು, ಶಿವಗಣ ಶ್ರೇಷ್ಠರು ಆನಂದಗೊಂಡು ನೋಡುತ್ತಿರಲಾಗಿ, ಆ ವೃಷಭಧ್ವಜನಾದ ಪರಶಿವನು, ತನ್ನ ಹೃದಯ ಕಮಲದಲ್ಲಿಯೇ ಬಸವೇಶ್ವರನನ್ನು ಸಿದ್ಧರಾಮನಿಗೆ ಪ್ರೀತಿಯಿಂದ ತೋರಿಸಿದನು. ೩೬. ಪ್ರಕಾಶಿಸುವ ರೂಪವುಳ್ಳವನೂ, ಜಯಿಸಲಸಾಧ್ಯನೂ ಆದ ಬಸವೇಶನು ಪರಮೇಶ್ವರನ ಹೃದಯ ಕಮಲದಲ್ಲಿ ಹಸ್ತದಲ್ಲಿ ಹಿಡಿದಿರುವ ಲಿಂಗದಲ್ಲಿ ನಟ್ಟ ದೃಷ್ಟಿಯುಳ್ಳವನಾಗಿ ಜಂಗಮ

ಸ್ಥಿರಪದ್ಮಾಸನನರ್ಧಕುಟ್ಮಳಿತನೇತ್ರಂ ಶಂಕರಧ್ಯಾನನಿ
ರ್ಭರ ಸಂಜಾತಸುಖಾಶ್ರು ಫುಲ್ಲನಳಿನಸ್ಮೇರಾನನಂ ಭಸ್ಮಭಾ
ಸುರಭಾಳಂ ಗಳಮಸ್ತಕಾದಿ ವಿಲಸದ್ರುದ್ರಾಕ್ಷಮಾಲಂ ಪ್ರಭಾ
ಕರಕಾಯಂ ಕಳೆವೆತ್ತು ಕಂಗೊಳಿಸಿದಂ ಕಲ್ಯಾಣಕಲ್ಪದ್ರುಮಂ ೩೭

[1]ವ॥ ಆಗಳಂತಿರ್ಪ ಬಸವನಂ ಮುಕುಂದ ಶತಾನಂದ ಸಂಕ್ರಂದನಾದಿ ಸುರರ್ಕಂಡು ಕೌತುಕಂಬಟ್ಟು ಭಕ್ತಿಪಾರವಶ್ಯದಿಂ ಸಾರೆವಂದು ನಿಂದೆಱಗಿ ಬದ್ಧಾಂಜಲಿಗಳಾಗಿ—

ಪ್ರಮಥಗಣಾಂಬುಜಾತದಿವಸೇಂದ್ರ ವೃಷೇಂದ್ರ ಶಿವೈಕ್ಯ ಭಕ್ತಿಸಂ
ಕ್ರಮಣನಿಜಾಂತರಂಗ ಪರಮೋಕ್ಷಕರೋಕ್ಷವರಸ್ವರೂಪ ದು
ರ್ದಮ ರಿಪುವರ್ಗಭಂಜನ ನಿರಂಜನ ದಿವ್ಯ ಶಿವಪ್ರಸನ್ನ ಹೃ
ತ್ಕಮಳನಿವಾಸವಾಸಿತ ಜಗತ್ರಯ ರಕ್ಷಿಪುದೆಮ್ಮನಾವಗಂ ೩೮

ಪಾದಕ್ಕೆ ಶರಣು ಎನ್ನುತ್ತ, ಭಸ್ಮದಿಂದ ಲೇಪನಗೊಂಡ ದೇಹದಿಂದ ಶೋಭಿಸುತ್ತಿದ್ದನು.
೩೭. ಕಲ್ಯಾಣ ಪಟ್ಟಣದ ಕಲ್ಪವೃಕ್ಷನಾದ ಬಸವೇಶ್ವರನು ಸ್ಥಿರವಾಗಿ ಹಾಕಿ ಕುಳಿತ ಪದ್ಮಾಸನವುಳ್ಳವನಾಗಿಯೂ, ಅರೆದೆರೆದ ನೇತ್ರವುಳ್ಳವನಾಗಿಯೂ, ಈಶ್ವರನ ಧ್ಯಾನ ಮಾಡುವಿಕೆಯಿಂದ ಉಂಟಾದ ಸಂತೋಷದಿಂದ ಹುಟ್ಟಿದ ಆನಂದಬಾಷ್ಪಗಳುಳ್ಳವ ನಾಗಿಯೂ, ಅರಳಿದ ಕಮಲದಂತಿರುವ ಮುಗುಳುನಗೆಯಿಂದ ಕೂಡಿದ ಮುಖವುಳ್ಳವ ನಾಗಿಯೂ, ವಿಭೂತಿಯಿಂದ ಶೋಭಿಸುವ ಹಣೆಯುಳ್ಳವನಾಗಿಯೂ. ಕಂಠ ಮತ್ತು ಶಿರಸ್ಸುಗಳೇ ಮೊದಲಾದ ಕಡೆಗಳಲ್ಲಿ ಪ್ರಕಾಶಿಸುವ ರುದ್ರಾಕ್ಷಮಾಲಿಕೆಗಳುಳ್ಳವನಾ ಗಿಯೂ, ಕಾಂತಿಯಿಂದ ಕೂಡಿದ ದೇಹವುಳ್ಳವನಾಗಿಯೂ ತೇಜಸ್ಸಿನಿಂದ ಕಂಗೊಳಿಸಿದನು.
ವ॥ ಆಗ ಈ ರೀತಿಯಲ್ಲಿರುವ ಬಸವಣ್ಣನನ್ನು ವಿಷ್ಣು, ಬ್ರಹ್ಮ, ಇಂದ್ರನೇ ಮೊದಲಾದ ದೇವತೆಗಳು ಕಂಡು ಆಶ್ಚರ್ಯಗೊಂಡು ಭಕ್ತಿಪರವಶತೆಯಿಂದ ಸಮೀಪಕ್ಕೆ ಬಂದು ನಿಂತು ನಮಸ್ಕಾರಮಾಡಿ ಕೈಗಳನ್ನು ಮುಗಿಯುವವರಾಗಿ—(ಹೀಗೆ ಸ್ತೋತ್ರ ಮಾಡಿದರು)
೩೮. ಪ್ರಮಥಗಣಗಳೆಂಬ ಕಮಲಗಳಿಗೆ ಸೂರ್ಯನೋಪಾದಿಯಲ್ಲಿರುವವನೂ, ಶಿವನೊಡನೆ ಏಕತ್ವಗೊಂಡ ಭಕ್ತಿಯ ಸಂಬಂಧದಿಂದ ಕೂಡಿದ ಮನಸ್ಸುಳ್ಳವನೂ, ಉತ್ಕೃಷ್ಟವಾದ ಮೋಕ್ಷವನ್ನುಂಟು ಮಾಡುವವನೂ, ವೃಷಭೇಶ್ವರ ಸ್ವರೂಪನೂ, ದಮನಮಾಡಲ ಶಕ್ಯವಾದ ಅರಿಷಡ್ವರ್ಗ (ಕಾಮ-ಕ್ರೋಧಾದಿ) ಗಳನ್ನು ನಾಶಗೊಳಿಸಿದವನೂ, ಮಾಯಾ ರಹಿತನೂ, ಈಶ್ವರನ ಶ್ರೇಷ್ಠವೂ ನಿರ್ಮಲವೂ ಆದ ಹೃದಯ ಕಮಲದಲ್ಲಿ ವಾಸಿಸಿ ದವನೂ, ತನ್ನಲ್ಲಿ ವಾಸವಾಗಿರುವ ಮೂರು ಲೋಕಗಳುಳ್ಳವನೂ ಆದ ವೃಷಭೇಂದ್ರನೇ

1 × (ಗ)

ಬಸವ ಜಯ ಜಯ ರವಾನನ
ಬಿಸರುಹರಾ ದಿವಿಜರಿಂತು ಪೊಗಳುತ್ತಿರೆ ಶೈ
ಲಸುತೆಗೆ ವಿಸ್ಮಯವೊದವಿರೆ
ಪೊಸತೆಂದಾ ಸಿದ್ಧರಾಮನೀಕ್ಷಿಸುತಿರ್ದಂ ೩೯

ಗುರುಚರಹರಸ್ವರೂಪಕ
ಚರಾಚರವ್ಯಾಪಿ ತಾಪಸೇಂದ್ರಮನೋವಾ
ದಿರ ಬಸವರಾಜ ಶರಣೆಂ
ಬ ರವಂ ಪೊಣ್ಮಿದುದು ಸಿದ್ಧರಾಮನ ಮೊಗದೊಳ್ ೪೦

ವ॥ ಆಗಳ್—

ಪುರಹರನದ್ರಿಜಾತೆಯಲರ್ದಾನನಮಂ ನಿಡುನೇಹದಿಂದೆ ಕೇ
ಕರ ಸುಧೆಸೂಸೆ ನೋಡಿ ನುಡಿದಂ ಪ್ರಿಯೆ ನೋಡಿವನೇಳ್ಗೆವೆತ್ತ ಭ
ಕ್ತಿರಸದ ಪೆಂಪನೀತನ ಮಹತ್ವಮನೀತನ ಚೆಲ್ವನೀತನ
ಚ್ಚರಿಯ ಚರಿತ್ರದುನ್ನತೀಯನೀತನ ಗಾಡಿಯನೆಂ[2]ದು ನಲ್ಮೆಯಿಂ[3] ೪೧

ವ॥ ಮತ್ತಮಿಂತೆಂದಂ—

ಆನೆ ವೃಷೇಂದ್ರನಾದೆನಗಜಾತೆ ಚರಾಚರ ರಕ್ಷಣಾರ್ಥಮು
ನ್ಯೂನಮದೀಯ ಮಾನಸದೊಳಿರ್ಪನಿವಂ ಬಿಡದಿರ್ಪನೀ ಮಹಾ
ಜ್ಞಾನಿಯ ಹೃತ್ಸರೋರುಹದೊಳೀತನನಾದಿ ಸದಾದಿ ಚಿದ್ಘನಂ
ನೀನಱಿದಿರ್ಪುದೆನ್ನಸುವಿವಂ ಬಸವಂಗಸುವಾನಿವಂಗೆ ಕೇಳ್ ೪೨

ನಮ್ಮನ್ನು ನಿರಂತರವೂ ರಕ್ಷಿಸಬೇಕು. ೩೯. 'ಬಸವಣ್ಣ ಜಯ ಜಯ' ಎಂಬ ಧ್ವನಿಯಿಂದ ಕೂಡಿದ ಮುಖಕಮಲವುಳ್ಳ ಆ ದೇವತೆಗಳು ಈ ರೀತಿಯಲ್ಲಿ ಹೊಗಳುತ್ತ ಇರಲು, ಪಾರ್ವತಿಗೆ ವಿಸ್ಮಯವುಂಟಾಯಿತು. (ಇದು) ಹೊಸದು ಎಂದು ಸಿದ್ಧರಾಮನು ನೋಡುತ್ತ ಇದ್ದನು. ೪೦. (ಆಗ) ಸಿದ್ಧರಾಮನ ಮುಖದಲ್ಲಿ 'ಗುರು–ಲಿಂಗ–ಜಂಗಮ ಸ್ವರೂಪನೂ, ಸ್ಥಾವರಜಂಗಮಾತ್ಮಕ ಪ್ರಪಂಚ ವ್ಯಾಪಕನೂ, ಋಷಿಶ್ರೇಷ್ಠರ ಮನಸ್ಸೇ ಮನೆಯಾಗಿ ಉಳ್ಳವನೂ ಆದ ಬಸವರಾಜನೇ, ಶರಣು' ಎಂಬ ಧ್ವನಿಯು ಹೊರಹೊಮ್ಮಿತು. ವ॥ ಆಗ ೪೧. ಈಶ್ವರನು ಪಾರ್ವತೀದೇವಿಯ ಅರಳಿದ ಮುಖವನ್ನು ಅಧಿಕ ಪ್ರೀತಿಯಿಂದ ಕೂಡಿದ ಕಡೆಗಣ್ಣುಗಳ ನೋಟವೆಂಬ ಅಮೃತರಸವು ಹೊರಸೂಸುವಂತೆ ನೋಡುತ್ತ, 'ಪ್ರಿಯೇ, ಈ ಬಸವೇಶ್ವರನ ಘನತೆಯಿಂದ ಕೂಡಿದ ಭಕ್ತಿರಸದ ಆಧಿಕ್ಯವನ್ನು, ಆತನ ಮಹಿಮೆಯನ್ನು, ಸೌಂದರ್ಯವನ್ನು, ಆಶ್ಚರ್ಯಕರವಾದ ಚರಿತ್ರೆಯ ಉನ್ನತಿಯನ್ನು ಸೊಬಗನ್ನು ನೋಡುವವಳಾಗು' ಎಂದು ಪ್ರೀತಿಯಿಂದ ನುಡಿದನು. ವ॥ ಮತ್ತು ಹೀಗೆ ಹೇಳಿದನು. ೪೨. ಪರ್ವತಪುತ್ರಿಯೇ, ನಾನೇ ವೃಷಭೇಂದ್ರನಾದೆನು ; ಈ ವೃಷಭೇಂದ್ರನು ಚರಾಚರ ಪ್ರಪಂಚದ ರಕ್ಷಣಾರ್ಥವಾಗಿ

---

2 ನೆಂ (ಗ) 2–3 ದನಲ್ಮಿಯಿಂ (ಮ)

ನೆಗಳ್ದ ಜಗತ್ರಯಕ್ಕೆ ಗುರುವಾನಿವನಾ ಭುವನಾಳಿಗೊಳ್ಪನೀ
ವಗಣಿತದಾನಿಯಾಂ ಭುವನಶಿಕ್ಷಕನೀತನೆ ತತ್ಸುರಕ್ಷಕಂ
ಬಗೆವೊಡೆ ಮುಕ್ತಿಗಾನರಸನೀತನೆ ಭಕ್ತಿಗೆ ಪಟ್ಟಬದ್ಧನಾಂ
ಸೊಗಯಿಪ ಭಕ್ತವತ್ಸಲನಿವಂ ಘನಭಕ್ತಿನಿಧಾನನದ್ರಿಜೇ ೪೩

ಭಕ್ತಪ್ರಾಣನಿವಂ ಸರೋಜಮುಖಿ ಕೇಳ್ ಭಕ್ತಾಂಗ ನಾಂ ಸಂತತಂ
ವ್ಯಕ್ತಂ ಜಂಗಮನೀತನೀ ಭುವನಕಾಂ ಲಿಂಗಂ ದ್ವಿತೀಯೇಶ್ವರಂ
ಸೂಕ್ತಂ ಮೇಣಿವನೀಶ್ವರಂ ಬಗೆವೊಡಾಂ ಮದ್ಭಕ್ತಿಯಿಂದಪ್ಪ ಸ
ನ್ಮುಕ್ತಿಶ್ರೀ ನೆನೆದಾಕ್ಷಣಂ ದೊರೆಗುಮೀ ನಂದೀಶನಂ ಪಾರ್ವತೀ ೪೪

ವಸುಧೆಯೊಳೆ ಶಂಭುನಾಮಂ
ಮಿಸುಪುದು ಕೇಳೆಮಗಜಸ್ರಮೀ ವೃಷಭೇಂದ್ರಂ
ಗೆಸೆಗುಂ ದ್ವಿತೀಯ ಶಂಭು
ಪ್ರಸರದ್ಘನನಾಮಮುತ್ಪಳಪ್ರಭನಯನೇ ೪೫

ನಿರ್ದುಷ್ಟವಾದ ನನ್ನ ಮನಸ್ಸಿನಲ್ಲಿ ಇದ್ದಾನೆ. ನಾನು ಈ ಮಹಾಜ್ಞಾನಿಯ ಹೃದಯ ಕಮಲದಲ್ಲಿ ತಪ್ಪದೆ ವಾಸವಾಗಿದ್ದೇನೆ. ಈತನು ಆದಿರಹಿತನು ; ಸತ್ಪುರುಷರಲ್ಲಿ ಆದಿ ಪುರುಷನು ; ಸಾಂದ್ರವಾದ ಜ್ಞಾನಸ್ವರೂಪನು ; ಇವನು ನನ್ನ ಪ್ರಾಣ ; ನಾನು ಇವನ ಪ್ರಾಣ–ಇದನ್ನು ನೀನು ತಿಳಿದಿರಬೇಕು. ೪೩. ಗಿರಿಸುತೆಯೇ, ನಾನು ಪ್ರಸಿದ್ಧ ವಾದ ಮೂರು ಲೋಕಗಳಿಗೆ ಗುರು ; ಈ ಬಸವಣ್ಣನು ಆ ಭುವನಗಳಿಗೆ ಒಳಿತನ್ನುಂಟು ಮಾಡುವ ಅಗಣಿತವಾದ ದಾನಗುಣವುಳ್ಳವನು. ನಾನು ಪ್ರಪಂಚವನ್ನು ಶಿಕ್ಷಿಸುವವನು ; ಇವನು ಆ ಪ್ರಪಂಚವನ್ನು ಚೆನ್ನಾಗಿ ರಕ್ಷಿಸುವವನು ; ವಿಚಾರಮಾಡಿ ನೋಡಿದರೆ ನಾನು ಮುಕ್ತಿಗೆ ಅರಸು ; ಈತನು ಭಕ್ತಿಗೆ ಪಟ್ಟಕಟ್ಟಿಕೊಂಡಿರುವ ಅರಸು ; ನಾನು ಪ್ರಕಾಶಿಸುವ ಭಕ್ತವತ್ಸಲನು ; ಇವನು ಶ್ರೇಷ್ಠಭಕ್ತಿಗೇ ಆದಿಕಾರಣನು (ಎನಿಸಿದ್ದಾನೆ). ೪೪. ಕಮಲಮುಖಿಯಾದ ಪಾರ್ವತಿಯೇ, ಕೇಳು : ಈ ಬಸವಣ್ಣನು ಭಕ್ತರೇ ಪ್ರಾಣ ವಾಗಿ ಉಳ್ಳವನು ; ನಾನು ಸತತವೂ ಭಕ್ತರೇ ಶರೀರವಾಗಿ ಉಳ್ಳವನು. ಇವನು ಪ್ರಪಂಚಕ್ಕೆ ವ್ಯಕ್ತನಾದ ಜಂಗಮನು ; ನಾನು ಆ ಪ್ರಪಂಚದ ಶರೀರನು ಮತ್ತು ಇವನು ದ್ವಿತೀಯ ಶಂಭುವು. ವಿಚಾರಿಸಿ ನೋಡಿದರೆ ನಾನು ಈಶ್ವರನು. ನನ್ನ ಭಕ್ತಿ ಯಿಂದ ಆಗುವ ಶ್ರೇಷ್ಠವಾದ ಮೋಕ್ಷಲಕ್ಷ್ಮಿಯು ಈ ನಂದೀಶ್ವರನನ್ನು ನೆನೆದೊಡನೆಯೇ ಪ್ರಾಪ್ತವಾಗುವುದು. ೪೫. ಉತ್ಪಲ ಕುಸುಮದ ಪ್ರಭೆಯಂತೆ ಇರುವ ನೇತ್ರವುಳ್ಳ ಪಾರ್ವತಿಯೇ, ಕೇಳು : ಈ ಭೂಮಿಯಲ್ಲಿ ಸತತವೂ ನಮಗೆ ಶಂಭುವೆಂಬ ಹೆಸರು ಪ್ರಕಾಶಿಸುವುದು. ಈ ವೃಷಭೇಂದ್ರನಿಗೆ ಎರಡನೆಯ ಶಂಭುವೆಂಬ ಹೆಸರು ಶೋಭಿಸು

ಎನಗರ್ಥಪ್ರಾಣಾದಿಯ
ನನವದ್ಯಭಕ್ತರೀವರೋರೊಂ[1]ದೆಡೆಯೊಳ್
ಘನಮಹಿಮನೀ ವೃಷೇಂದ್ರಂ
ಮನದೊಲವಿಂದೀವನಾವಗಂ ವನಜಮುಖೀ ೪೬

ಮನ್ಮಹಿಮೆಯನಿವನಱಿವಂ
ಸನ್ಮತಿ ಮೇಣಿವನ ಮಹಿಮೆಯುಂ ಮೃಗಧರಭಾ
ಸ್ವನ್ಮುಖಿಯಾನಱಿವೆಂ ಹಿಮ
ವನ್ಮಹಿಧರಪುತ್ರಿ ಪೆಱರದೇನಱಿದಪರೇ ೪೭

ಆವಂ ಬಸವಾಕ್ಷರಮಂ
ಭಾವಂ ಮಿಗೆ ನುಡಿವನವನ ವದನಮೆ ಸದನಂ
ದೇವಿಯೆಮಗೆಮ್ಮ ಸತ್ಪ್ರಮ
ಥಾವಳಿಗಿದು ನನ್ನಿ ಪನ್ನಗಾಯತವೇಣೀ ೪೮

ಶ್ರೀಗುರುಲಿಂಗಜಂಗಮ ವಿಭೂತಿಶಿವಾಕ್ಷಿಪದಾಂಬುಶೇಷ ವೇ
ದಾಗಮಸಿದ್ಧಮಂತ್ರ ವರಭಕ್ತಿಸಮನ್ವಿತನಾಗಿ ತನ್ಮಹೀ
ಭಾಗದೊಳಿರ್ಪನಾವನವನೀ ಬಸವೇಶ್ವರನಂಶಮಕ್ಕುಮೆ
ಲ್ಲಾಗಳುಮೆನ್ನೊಳಿರ್ಪ ತೆಱದಿಂದೆಸೆವಂ ಬಸವಂ ಸುಭಕ್ತರೊಳ್ ೪೯

ತ್ತಿರುವುದು. ೪೬. ಕಮಲಮುಖಿಯಾದ ಪಾರ್ವತಿಯೇ, ನಿರ್ದುಷ್ಟರಾದ ಭಕ್ತರು ಒಂದೊಂದು ಕಾಲದಲ್ಲಿ ನನಗೆ ಅರ್ಥ, ಪ್ರಾಣಗಳೇ ಮೊದಲಾದುವನ್ನು ಅರ್ಪಿಸುವರು, ಘನಮಹಿಮಾಶಾಲಿಯಾದ ಈ ಬಸವೇಶ್ವರನು ಮನಃಪೂರ್ವಕವಾದ ಪ್ರೀತಿಯಿಂದ ಯಾವಾಗಲೂ ತನ್ನ ಅರ್ಥ ಪ್ರಾಣಾದಿಗಳನ್ನು ಕೊಡುವವನಾಗಿದ್ದಾನೆ. ೪೭. ಚಂದ್ರ ಮುಖಿಯಾದ ಗಿರಿರಾಜ ಪುತ್ರಿಯೇ, ಮತ್ತೂ ಕೇಳು : ಸಮೀಚೀನವಾದ ಬುದ್ಧಿಯುಳ್ಳ ಈ ಬಸವೇಶ್ವರನು ನನ್ನ ಮಹಾತ್ಮೆಯನ್ನು ತಿಳಿಯುವನು ; ಇವನ ಮಹಿಮೆಯನ್ನು ನಾನು ತಿಳಿಯುವೆನು. ಮಿಕ್ಕವರು ಅದನ್ನು ತಿಳಿಯಲಾರರು. ೪೮. ಸರ್ಪದಂತೆ ದೀರ್ಘವಾದ ಜಡೆಯುಳ್ಳ ದೇವಿಯೇ, ಯಾವಾತನು 'ಬಸವ' ಎಂಬ ಅಕ್ಷರಗಳನ್ನು ಮನಃಪೂರ್ವಕವಾಗಿ ಉಚ್ಚರಿಸುವನೋ, ಅವನ ಮುಖವೇ ನಮಗೆ ಮತ್ತು ಶ್ರೇಷ್ಠ ಪ್ರಮಥರುಗಳಿಗೆ ನಿಶ್ಚಯವಾಗಿ ಮನೆಯೆನಿಸುವುದು. ೪೯. ಈ ಭೂಲೋಕದಲ್ಲಿ ಯಾವನು ಮಂಗಳಕರಗಳಾದ ಗುರು, ಲಿಂಗ, ಜಂಗಮ, ವಿಭೂತಿ, ರುದ್ರಾಕ್ಷಿ, ಪಾದೋದಕ, ಪ್ರಸಾದ, ವೇದಾಗಮಗಳಲ್ಲಿ ಪ್ರಸಿದ್ಧವಾದ ಮಂತ್ರ, ಶ್ರೇಷ್ಠಭಕ್ತಿ ಇವುಗಳಿಂದ ಕೂಡಿದವನೆನಿಸಿ ಇರುವನೋ ಅವನು ಈ ಬಸವೇಶ್ವರನ ಅಂಶದಿಂದ ಜನಿಸಿದವನು ಎನಿಸುವನು. ಮತ್ತು (ಈ) ಬಸವಣ್ಣನು (ಹೇಗೆ) ನನ್ನಲ್ಲಿ ಇರುವನೋ ಹಾಗೆ ಶ್ರೇಷ್ಠ

1 ಳೊಂ (ಗ); ರೆಂ (ಮು).

ವ॥ಎಂದಗಜೆಗಾನಂದವೊದವೆ ಸಿದ್ಧರಾಮಂ ಶ್ರದ್ಧೆಯಿಂ ಮಣಿಯೆ ಬಸವನ ನಿಜಸ್ವರೂಪ ಮನೊರೆದನಿತಜಗೊಳ್ತನ್ನ ಹೃದಯನಳಿನದೊಳ್ಮೊಳಗಿ ಬೆಳಗುವಾ ಬಸವನಂ ನೋಡಿ ಮರ್ತ್ಯಲೋಕ ದೊಳ್ಸದ್ಭಕ್ತರೆನಿಬರೊಳರೆಂದು ಬೆಸಗೊಳೆ ಕೇಳ್ದು ಕೈದಾವರೆಗಳಂ ಮುಗಿದು—

ಸರ್ವೇಶ ಭಕ್ತನೆನಿಪವ
ನೊರ್ವನುಮಣಮಿಲ್ಲ ಮಹಿಯೊಳಾನೇ ಭಕ್ತಂ
ಸರ್ವರ್ಭಕ್ತರ್ಮನಸಿಜ
ಗರ್ವಾಪಹ ನಿನಗೆ ಸಮರೆನಿಪ್ಪುದಜಿಂದಂ ೫೦

ಆವಾವ ಭವದೊಳಾದೊಡ
ಮಾವಗಮಗಜೇಶ ಕೇಳ್ ಪ್ರಸಾದತ್ರಯ ಸಂ
ಸೇವನೆಯೆ ಸಾಲ್ಗುಮಿದು ಪರಿ
ಭಾವಿಸೆ ಕೈವಲ್ಯಸುಖದಿನಗ್ಗಳಮಲ್ತೇ ೫೧

ಖಗಮೃಗಪಿಪೀಲಿಕಾದಿಯೊ
ಳೊಗೆದೊಡಮಾ ಶರಣವಿತತಿ ಸವಿದೊಕ್ಕುದನುಂ
ಡಗಲದ ಸವಿ ದೊರೆಕೊಂಡೊಡೆ
ಮಿಗೆ ಸಂಸೃತಿ ಲೇಸು ಗಡ ಧನಂಜಯನಯನಾ ೫೨

ರಾದ ಆ ಭಕ್ತರಲ್ಲಿ ಬಸವಣ್ಣನು ಶೋಭಿಸುವನು. ವ॥ ಹೀಗೆ ಪಾರ್ವತಿಗೆ ಆನಂದ ವುಂಟಾಗಲು, ಸಿದ್ಧರಾಮನು ಶ್ರದ್ಧೆಯಿಂದ ನಮಸ್ಕಾರ ಮಾಡುತ್ತಿರಲು ಬಸವನ ನಿಜ ಸ್ವರೂಪವನ್ನು (ಶಿವನು) ಹೇಳಿದನು. ಅಷ್ಟರಲ್ಲಿ ತನ್ನ ಹೃದಯಕಮಲದಲ್ಲಿ ನಿರ್ಮಲ ವಾಗಿ ಪ್ರಕಾಶಿಸುವ ಆ ಬಸವಣ್ಣನನ್ನು ನೋಡಿ, ಭೂಲೋಕದಲ್ಲಿ ಸದ್ಭಕ್ತರೆನಿಸಿರು ವವರು ಎಷ್ಟು ಜನರಿರುವರು ? ಎಂದು ಕೇಳಲು ಅವನ್ನು ಕೇಳಿ (ಸಿದ್ಧರಾಮನು) ಕರಕಮಲಗಳನ್ನು ಮುಗಿದು—೫೦. ಮನ್ಮಥನ ಗರ್ವವನ್ನು ನಾಶಗೊಳಿಸಿದ ಸರ್ವೇ ಶ್ವರನೇ, ಭೂಮಿಯಲ್ಲಿ ಸಮಸ್ತ ಭಕ್ತರೂ ನಿನಗೆ ಸಮಾನರು ಎನಿಸಿರುವುದರಿಂದ ಭಕ್ತನೆನಿಸಿದವನು ಒಬ್ಬನೂ ಇಲ್ಲ. ನಾನೇ ಭಕ್ತನು. ೫೧. ಪಾರ್ವತೀ ಪತಿಯೇ, ಕೇಳು : ಯಾವ ಯಾವ ಜನ್ಮದಲ್ಲಾದರೂ, ನಿರಂತರವೂ, ಶುದ್ಧ, ಸಿದ್ಧ, ಪ್ರಸಿದ್ಧವೆಂಬ ತ್ರಿವಿಧವಾದ ಪ್ರಸಾದದ ಸೇವನೆಯೇ ನನಗೆ ಸಾಕು. ಈ ಪ್ರಸಾದ ಸೇವನೆಯು ವಿಚಾರ ಮಾಡಿ ನೋಡಿದರೆ ಮೋಕ್ಷ ಸುಖಕ್ಕಿಂತಲೂ ಅಧಿಕವಲ್ಲವೆ ? ೫೨. ಅಗ್ನಿನೇತ್ರನಾದ ಈಶ್ವರನೇ, ಪಕ್ಷಿ, ಮೃಗ, ಇರುವೆ ಮೊದಲಾದ ಜನ್ಮಗಳಲ್ಲಿ ಹುಟ್ಟಿದರೂ, ಆ ಶಿವ ಶರಣರ ಸಮೂಹವು ಸೇವಿಸಿ ಮಿಕ್ಕದ್ದನ್ನು (ಪ್ರಸಾದವನ್ನು) ಉಂಡು, (ಅದರಿಂದ) ಎಡೆಬಿಡದ ಮಾಧುರ್ಯವು ಪ್ರಾಪ್ತವಾದದ್ದಾದರೆ, ಅಂತಹ ಸಂಸಾರವೇ ಒಳ್ಳೆಯು

ಎನೆ ಕೇಳ್ದಾನಂದದಿಂದಾ ಬಸವನನಭವಂ ಸತ್ಕೃಪಾಪೂರಿತಾಲೋ
ಕನದಿಂದು ನೋಡಿ ತಾಂ ತೋಱಿಸೆ ಬಳಿಕದನುತ್ತೆಲ್ಲಮುಂ ಕಂಡು ಸದ್ಭ
ಕ್ತಿನಿಯುಕ್ತಂ ಸಿದ್ಧರಾಮಂ ಪೊಗಳ್ದೆಱಗುತೆ ಬೀಳ್ಕೊಂಡು ಭೂಲೋಕಕೆಳ್ತಂ
ದನವದ್ಯಂ ಸ್ವರ್ಣವಲ್ಲೀಪುರಮನೊಲವಿನಿಂ ಪೊಕ್ಕು ಭಕ್ತಾಳಿಗಾಗಳ್ ೫೩

ಶಿವಲೋಕದೊಳಂ ಬಸವಂ
ಶಿವಹೃದಯಾಂಬುಜದೊಳಿರ್ದಪಂ ಕಂಡೆನೆನು
ತ್ತವಿಕಲಮತಿಯೆಲ್ಲಮುಮಂ
ವಿವರಿಸೆ ಕೇಳ್ದಲ್ಲಿ ಶರಣರುತ್ಸವಮಾಂತರ್ ೫೪

ವ॥ ಅಂತು ಸಮುತ್ಸುಕಾಂತರಂಗರಾದ ಶರಣರ್ ಬಸವನೆಂತಿರ್ದಪನೆಂದು ಬೆಸಗೊಳೆ—

ನಿಜಹೃದಯಾಂಬುಜಾತಮನಲರ್ಚಿ ವೃಷೇಂದ್ರನನಿಲ್ಲಿ ನೋಡಿಮಂ
ಗಜಹರಮಾನಸಾಂಬುಜದೊಳಿಂತೆಸೆದಿರ್ದನನುತ್ತ ತೋಱಿಸು
ತ್ತಜರನನಾಮಯಂ ನೆಗಳ್ದ ತದ್ಘನವೃತ್ತಮನೈದೆ ಪೇಳ್ದನ
ತ್ರಿಜಧರ ಭಕ್ತರೊಳ್ ನೃಪತಿ ಕಂಡೆನಿದೆಲ್ಲಮನಲ್ಲಿ ಚೆಚ್ಚರಂ ೫೫

ದಲ್ಲವೆ ? ೫೩. ಹೀಗೆ ಹೇಳಲು ಶಿವನು (ಆ ಸಿದ್ಧರಾಮನ ಮಾತನ್ನು) ಕೇಳಿ, ಆನಂದದಿಂದ ಆ ಬಸವೇಶ್ವರನನ್ನು ಸಮೀಚೀನವಾದ ಕೃಪೆಯಿಂದ ತುಂಬಿದ ದೃಷ್ಟಿಯಿಂದ ನೋಡಿ, ಬಳಿಕ ತಾನು ನಡೆದುದೆಲ್ಲವನ್ನೂ ತೋರಿಸಲಾಗಿ, ಅನವದ್ಯನಾದ ಸಿದ್ಧರಾಮನು ಆಗ ಎಲ್ಲವನ್ನೂ ಕಂಡು ಶ್ರೇಷ್ಠ ಭಕ್ತಿಭಾವದಿಂದ ಕೂಡಿದವನಾಗಿ, ಹೊಗಳುತ್ತ, ನಮಸ್ಕರಿಸುತ್ತ, ಪರಮೇಶ್ವರನಿಂದ ಅಪ್ಪಣೆ ಪಡೆದು ಅವನು ಭೂಲೋಕಕ್ಕೆ ಬಂದು, ಸೊನ್ನಲಿಗೆಯನ್ನು ಪ್ರವೇಶಿಸಿ ಅಲ್ಲಿ ಭಕ್ತರುಗಳಿಗೆ—೫೪. 'ಶಿವಲೋಕದಲ್ಲಿ ಬಸವಣ್ಣನು ಶಿವನ ಹೃದಯಕಮಲದಲ್ಲಿ ಇರುವನು ; ನಾನು ನೋಡಿದೆನು' ಎನ್ನುತ್ತ ವಿಕಾರರಹಿತ ಬುದ್ಧಿಯ ಆ ಸಿದ್ಧರಾಮನು ಕೈಲಾಸದಲ್ಲಿ ನಡೆದ ಎಲ್ಲ ಕಾರ್ಯಗಳನ್ನು ವಿವರಿಸಲಾಗಿ ಶರಣರು ಕೇಳಿ ಸಂತೋಷಗೊಂಡರು. ವ॥ ಆ ರೀತಿ ಉತ್ಸಾಹಗೊಂಡ ಅಂತಃಕರಣವುಳ್ಳವರಾದ ಶರಣರು ಬಸವಣ್ಣನು ಹೇಗೆ ಇದ್ದಾನೆ ? ಎಂದು ಕೇಳಲು—೫೫. ಮುಪ್ಪು ಮತ್ತು ರೋಗಗಳಿಂದ ದೂರನಾದ ಸಿದ್ಧರಾಮೇಶನು–ತನ್ನ ಹೃದಯಕಮಲವನ್ನು ಬಿಚ್ಚಿ 'ಇಲ್ಲಿ ವೃಷಭೇಂದ್ರನನ್ನು ನೋಡಿರಿ' ಎಂದು ತೋರಿಸುತ್ತ 'ಇದೇ ರೀತಿಯಲ್ಲಿ ಬಸವೇಶ್ವರನು ಪರಮೇಶ್ವರನ ಹೃದಯಕಮಲದಲ್ಲಿ ಶೋಭಿಸುತ್ತಿದ್ದಾನೆ' ಎನ್ನುತ್ತ ಪ್ರಸಿದ್ಧವಾದ ಬಸವಣ್ಣನ ಶ್ರೇಷ್ಠ ವೃತ್ತಾಂತವನ್ನೆಲ್ಲ ಚಂದ್ರಶೇಖರನಾದ ಈಶ್ವರನ ಭಕ್ತರುಗಳಿಗೆ ಚೆನ್ನಾಗಿ ತಿಳಿಸಿದನು. ಎಲೈ ಬಿಜ್ಜಳಮಹಾರಾಜನೇ, ಇವೆಲ್ಲವನ್ನೂ ಆ ಶಿವ ಶರಣರ ಸಭೆಯಲ್ಲಿ ಶೀಘ್ರವಾಗಿ

ವರ ಗುರುಸಿದ್ಧರಾಮವಿಭುವಿಿಂದಱಿದೆಂ ನೃಪ ಕೇಳ್ ವೃಷೇಂದ್ರನ
ಳ್ಕರದ ಮಹತ್ವಮಂ ಬಗೆವೊಡಿಂತು ವಿರಾಜಿಸಿ ಪೆಂಪನಾಳ್ದ ಭಾ
ಸುರ ಬಸವಂ ತ್ವದೀಯ ಸಭೆಯಲ್ಲಿರುತಂ ಪಿಡಿದೆತ್ತಿದಂ ನಿಜ
ಸ್ಮರಣದಿನೆನ್ನನೊರ್ಗುಡಿಸದಂದದಿನೆಂಬುದಿದೊಂದು ಚೋದ್ಯಮೋ ೫೬

ವ॥ ಎಂದು ವೃಷೇಂದ್ರವೃತ್ತಾಂತಮನುಸುರೆ ಭೂಪಂ ಕೇಳ್ದು ಮೆಚ್ಚಿ ಗೋಪಾಂಗನೆಗನರ್ಘ್ಯಮಣಿಭರಣದಿವ್ಯಾಂಬರಂಗಳನಿತ್ತು ಸರ್ವಮಯನಣುಗಂ ಬಸವರಾಜಂ ಸರ್ವಮಯನೆನಿಪ್ಪುದಿದಾವ ಕೌತುಕಮೆಂದು ನಿರ್ಧರಿಸಿ ಸಭಾಸದರೊಡನೆ ಮಗುಳ್ದು ಪೊಗಳ್ದು ಗಣಿತಾನರ್ಘ್ಯಮಣಿಭೂಷಣಂಗಳಂ ಸಮರ್ಪಿಸಿ ಬಸವ[1]ರಾಜ[1]ಂಗೆ ಕರಾರವಿಂದಮಂ ಮುಗಿದು ನಿಜಗೃಹಕ್ಕೆ ಬೀಳ್ಕೊಡಲೊಡನೆ—

ಕವಿಗಳ್ ಕೈಯೆತ್ತಿ ಕೈವಾರಿಸೆ ಬುಧನಿವಹಂ ನಾಡೆ ಕೊಂಡಾಡೆ ಬಂದಿ
ರ್ದವನೀಶರ್ವಿಸ್ಮಯಾಂತಃಕರಣರೆಱಗೆ ಮಹೇಶ್ವರರ್ಮಾಣದತ್ಯು

ಕಂಡನು. ೫೬. ಬಿಜ್ಜಳ ಮಹಾರಾಜನೇ ಕೇಳು : ಶ್ರೇಷ್ಠಗುರು ಸ್ವರೂಪನಾದ ಸಿದ್ಧರಾಮೇಶ್ವರ ವಿಭುವಿನಿಂದ ಕೇಳಿದ ಬಸವೇಶ್ವರನ ಉತ್ಕೃಷ್ಟವಾದ ಮಹತ್ವವನ್ನು ತಿಳಿದೆನು. ವಿಚಾರಿಸಿ ನೋಡಿದರೆ ಈ ರೀತಿ ಪ್ರಕಾಶಿಸಿ ಮಹಾತ್ಮೆಯನ್ನು ಹೊಂದಿದ ಶೋಭಿಸುವ ಬಸವಣ್ಣನು ನಿನ್ನ ಸಭೆಯಲ್ಲಿರುವಾಗ ಆತನನ್ನು ಸ್ಮರಿಸಿದ ಕಾರಣದಿಂದ ನನ್ನನ್ನು ಬೀಳದಂತೆ ಹಿಡಿದೆತ್ತಿದನು ಎಂಬ ಈ ಮಾತು ಇದು ಒಂದು ಆಶ್ಚರ್ಯವಾದುದೇ ಅಲ್ಲವೆ ? (ಎಂದು ಆ ಗೊಲ್ಲರ ಸ್ತ್ರೀಯು ಹೇಳಿದಳು) ವ॥ ಹೀಗೆಂದು (ಆ ಗೊಲ್ಲ ಸ್ತ್ರೀಯು) ಬಸವೇಶ್ವರನ ವೃತ್ತಾಂತವನ್ನು ಹೇಳಲಾಗಿ, ಬಿಜ್ಜಳ ಭೂಪಾಲನು ಕೇಳಿ ಆ ಗೊಲ್ಲತಿಗೆ ಅಮೂಲ್ಯ ಆಭರಣಗಳು, ಶ್ರೇಷ್ಠವಸ್ತ್ರಗಳು ಇವನ್ನು ಕೊಟ್ಟು, ಸರ್ವವನ್ನು ವ್ಯಾಪಿಸಿಯೂ, 'ಅಣೋರಣೀಮಾನ್' ಆಗಿಯೂ ಶಿವಪುತ್ರನಾಗಿಯೂ ಇರುವ ಬಸವಣ್ಣನು ಸರ್ವವ್ಯಾಪಿಯೆನಿಸಿರುವುದು ಮಹಾ ಆಶ್ಚರ್ಯದ ವಿಷಯ ! ಎಂದು ನಿರ್ಧರಿಸಿ ಸಭಾಸದರೆದುರು ಪುನಃ ಪುನಃ ಹೊಗಳಿ, ಬಸವಣ್ಣನಿಗೆ ಅಸಂಖ್ಯಾತ ಅಮೂಲ್ಯ ರತ್ನಾಭರಣಗಳನ್ನು ಸಮರ್ಪಣೆ ಮಾಡಿ ಕರಕಮಲಗಳನ್ನು ಮುಗಿದು, ಅವನ ಮನೆಗೆ ಕಳುಹಿಸಿ ಕೊಡಲಾಗಿ—೫೭. ಕವಿಗಳು ಕೈಯೆತ್ತಿ ಸ್ತುತಿಸಿದರು; ವಿದ್ವಾಂಸರ ಸಮೂಹವು ಚೆನ್ನಾಗಿ ಕೊಂಡಾಡಿತು; ಸಭೆಗೆ ಬಂದಿದ್ದ ರಾಜರುಗಳು ಆಶ್ಚರ್ಯದಿಂದ ಕೂಡಿದ ಮನಸ್ಸುಳ್ಳವರಾಗಿ ನಮಸ್ಕರಿಸಿದರು; ಮಾಹೇಶ್ವರರುಗಳು

---

1 × (ಗ).

ತ್ಸವದಿಂದಾಲಿಂಗಿಸುತ್ತಂ ಪರಸೆ ಪರಮಸದ್ಭಕ್ತಿಸಂಪತ್ತಿಸಂಪೂ
ರ್ಣವಿಳಾಸಂ ಬಂದು ಶುದ್ಧಾಂತದೊಳೆಸೆದನಿಳಾಭಾಮಿನೀಭಾಗಧೇಯಂ ೫೭

ಸಜ್ಜನಸಮರ್ಚ ಚರಪಜ್ಜಳಸಮಾರಚಿತ
ಮಜ್ಜನ ನಿಜಾಂಘ್ರಿ ವಿನಮಜ್ಜನಸಮೂಹಾ
ಪಜ್ಜಳದಮಾರುತ ಮರುಜ್ಜನಕ ಶಿಷ್ಟಪರಿ
ಷಜ್ಜಲಜಭಾನು ಭವರಜ್ಜುಕರವಾಲಾ
ರುಜ್ಜಲಧಿಬಾಡಬ ಜಗಜ್ಜಠರ ತಾರಕಲ
ಸಜ್ಜಪನಿಯುಕ್ತ ಮದವಜ್ಜನವಿದೂರ
ಪ್ರೋಜ್ಜನಿತತತ್ತ್ವಕುಲ ಬಿಜ್ಜಳಪರಿಸ್ತುತ ವಿ
ಲಜ್ಜಖಲಭಂಜನ ಸಸಜ್ಜ ಬಸವೇಶಾ ೫೮

ಅಂಬುಜಾನನೆ ಕಂಬುಕಂಧರೆ ಕುಂಭಿನೀಧರನಂದಿನೀ
ಶಂಬರಾಹಿತಶಾಸನಪ್ರಿಯೆ ಶುಂಭದಾನವಮರ್ದಿನೀ

ತಪ್ಪದೆ ಅತ್ಯುತ್ಸಾಹದಿಂದ ಆಲಂಗಿಸಿ ಆಶೀರ್ವದಿಸಿದರು; ಉತ್ಕೃಷ್ಟವಾದ ಸದ್ಭಕ್ತಿಯೆಂಬ ಸಂಪತ್ತಿನಿಂದ ತುಂಬಿದ ವಿಲಾಸವುಳ್ಳವನೂ, ಭೂದೇವಿಯ ಭಾಗ್ಯಸ್ವರೂಪನೂ ಆದ ಬಸವೇಶ್ವರನು ಹೊರಟು ಬಂದು (ತನ್ನ) ಅಂತಃಪುರದಲ್ಲಿ ಶೋಭಿಸಿದನು. ೫೮. ಸತ್ಪುರುಷರಿಂದ ಪೂಜೆಗೊಳ್ಳಲು ಯೋಗ್ಯನಾದವನು,ಚರಜಂಗಮರ ಪಾದೋದಕದಿಂದ ಮಾಡಲ್ಪಟ್ಟ ಸ್ನಾನವುಳ್ಳವನೂ, ತನ್ನ ಪಾದಗಳಿಗೆ ನಮಸ್ಕಾರ ಮಾಡುವ ಜನರುಗಳ ಸಮೂಹದ ಆಪತ್ತುಗಳೆಂಬ ಮೋಡಗಳಿಗೆ ಗಾಳಿಯಂತಿರುವವನೂ, ದೇವತೆಗಳಿಗೆ ತಂದೆ ಯಾದವನೂ, ಸತ್ಪುರುಷರ ಸಮೂಹವೆಂಬ ಕಮಲಗಳಿಗೆ ಸೂರ್ಯನಾದವನೂ, ಜನನ ಮರಣಾತ್ಮಕ ಸಂಸಾರವೆಂಬ ಹಗ್ಗಕ್ಕೆ ಖಡ್ಗದೋಪಾದಿಯಲ್ಲಿರುವವನೂ, ದುಃಖವೆಂಬ ಸಮುದ್ರಕ್ಕೆ ಬಡಬಾನಲರೂಪನಾದವನೂ, ಲೋಕವನ್ನೆಲ್ಲ ಜಠರದಲ್ಲಿಟ್ಟುಕೊಂಡಿರು ವವನೂ, ತಾರಕ ಮಂತ್ರದ ಪ್ರಕಾಶಮಾನ ಜಪಾನುಷ್ಠಾನದಿಂದ ಕೂಡಿದವನೂ, ಗರ್ವಿಷ್ಠರಾದ ಜನಗಳಿಂದ ದೂರನಾದವನೂ, ತತ್ವಸಮೂಹವನ್ನು (ಮೂವತ್ತೆರಡು ತತ್ತ್ವ) ಉಂಟುಮಾಡಿದವನೂ, ಬಿಜ್ಜಳ ರಾಜನಿಂದ ಕೊಂಡಾಡಲ್ಪಟ್ಟವನೂ ನಾಚಿಕೆ ಯಿಲ್ಲದ ನೀಚರನ್ನು ನಾಶಮಾಡುವ ಸತ್ಪುರುಷೋತ್ತಮನಿಂದ ಕೂಡಿದ ಬಸವೇಶಾ (ರಕ್ಷಿಸು). ೫೯. ಕಮಲಮುಖಿಯೇ, ಶಂಖದಂತಿರುವ ಕಂಠವುಳ್ಳವಳೇ, ಪರ್ವತ ರಾಜನಿಗೆ ಸಂತೋಷಕಾರಿಣಿಯಾದವಳೇ, ಮನ್ಮಥನನ್ನು ನಿಗ್ರಹಗೊಳಿಸಿದ ಪರಮೇಶ್ವರನ ಪ್ರೀತಿಗೆ ಪಾತ್ರಳಾದವಳೇ, ಶುಂಭಾಸುರನನ್ನು ನಾಶಪಡಿಸಿದವಳೇ. ಇಂದ್ರ (ಶಂಬ

ಶಂಬಪಾಣಿವಿಧಾತೃವಿಷ್ಣುಕುಟುಂಬಿನೀ ಪರಿಪಾಲಿನೀ
ತುಂಬುರಾಜಜಗಾನಲೋಲೆ ಮದಂಬೆ ರಕ್ಷಿಪುದೀಶ್ವರೀ ೫೯

ಇದು ವಿನಮದಖಿಳ ಸುರಾಸುರೇಂದ್ರಮುಕುಟತಟಿಘಟಿತ ಮಣಿಗಣಾಗಣಿತ ರುಚಿನಿಚಯ
ತರುಣಾರುಣಾತಪಪರಿಲಸಿತ ಪರಮ ಶಿವಲಿಂಗ ಪಾದಾರವಿಂದಪರಾಗಭಸಿತ
ಭಾಸುರಲಲಾಟಪಟ್ಟಸರಸಜನಮಾನಿತೋಭಯಕವಿತಾವಿಶಾರದ
ಶ್ರೀಷಡಕ್ಷರಿದೇವಭಕ್ತಿವಿರಚಿತ
ಶ್ರೀಮದ್ ಬಸವರಾಜವಿಜಯಮಹಾಪುರಾಣದೊಳ್ ಬಸವಸರ್ವಗತತ್ವಕಥನಂ
ಸಪ್ತಮಾಶ್ವಾಸಂ ಸಮಾಪ್ತಂ

ಅಂತು ಆಶ್ವಾಸ ೭ಕ್ಕೆ ಪದಗಣನೆ ೫೬೮ಕ್ಕೆ ಮಂಗಳಮಹಾ ಶ್ರೀ॥

ಪಾಣಿ), ಬ್ರಹ್ಮ, ವಿಷ್ಣು ಇವರುಗಳ ಪತ್ನಿಯರನ್ನು ರಕ್ಷಿಸುವವಳೇ, ತುಂಬುರ ನಾರದರುಗಳ ಸಂಗೀತದಲ್ಲಿ ಆಸಕ್ತಳಾದವಳೇ, ನನ್ನ ತಾಯಿಯೇ ಈಶ್ವರಿಯೇ ರಕ್ಷಿಸುವುದು.

ಸಪ್ತಮಾಶ್ವಾಸವು ಸಮಾಪ್ತವಾಯಿತು

ಅಷ್ಟಮಾಶ್ವಾಸಂ

ಶ್ರೀಪರ್ವತೇಂದ್ರತನಯಾ
ಲಾಪಸುಧಾಪೂರ್ಣಕರ್ಣನಭವಂ ಘನಚಿ
ದ್ರೂಪಂ ವಿಧುರೋಪಂ ಗಿರಿ
ಚಾಪಂ ಪೊರೆಗೆಮ್ಮನಾವಗಂ ಶಿವಲಿಂಗಂ ೧
*

ಬಸವಾಧೀಶ್ವರನೊಂದು ವಾಸರದೊಳೆಲ್ಲಾ ಮಂತ್ರಿಗಳ್ಗೂಡಿ ರಂ
ಜಿಸೆ ಧಾತ್ರೀಶನ ನೇಮದಿಂ ಬಹುಬಲಕ್ಕೋರಂದದಿಂ ಜೀವಿತ
ಪ್ರಸರಂದಿರ್ದಲೊಡರ್ಚುತೊಪ್ಪಿರೆ ಬಳಿಕ್ಕಂತಲ್ಲಿಗೇಳ್ತಂದುದ
ಟ್ಟಸುತಂ ನಿಂದು ಭುಜಂಗಜಂಗಮನದೊರ್ವಂ ತದ್ವೃಷಾಧೀಶನಂ. ೨

ವಿಟ ಜಂಗಮ ಕಥನ (ಸೂರ್ಯಾಸ್ತ ಚಂದ್ರೋದಯ ವರ್ಣನೆ)

೧. ಮಂಗಳಕರಳಾದ ಪಾರ್ವತಿಯ ವಚನವೆಂಬ ಅಮೃತದಿಂದ ಸಂಪೂರ್ಣ ಕಿವಿಯುಳ್ಳ, ಭವರಹಿತನೂ, ಶ್ರೇಷ್ಠಜ್ಞಾನರೂಪನೂ, ವಿಷ್ಣುವೇ ಬಾಣವಾಗಿ, ಮೇರುಪರ್ವತವೇ ಬಿಲ್ಲಾಗಿ ಉಳ್ಳವನೂ ಆದ ಶಿವಲಿಂಗನು ಯಾವಾಗಲೂ ರಕ್ಷಿಸಲಿ. ೨. ಒಂದು ದಿವಸ ಬಸವರಸನು ಎಲ್ಲಾ ಮಂತ್ರಿಗಳೂ ಕೂಡಿ ರಂಜಿಸಿ, ಬಿಜ್ಜಳ ಮಹಾರಾಜನ ಅಪ್ಪಣೆ ಯಂತೆ ದೊಡ್ಡ ಸೈನ್ಯಕ್ಕೆ ಒಂದು ಕ್ರಮದಿಂದ ಸಂಬಳವನ್ನು ಕೊಡುವುದಕ್ಕೆ (?) ಸಿದ್ಧ ವಾಗಿ ಒಪ್ಪಿರಲು, ಆಗ ಅಲ್ಲಿಗೆ ವಿಟನಾದ ಒಬ್ಬ ಜಂಗಮನು ಬಂದು ಬಸವೇಶ್ವರನಿಗೆ

---

*ಲಾಟಮಗಧಾಂಧ್ರಕವಿರಾಟವಿಷಯಾಧಿಪಕಿ
ರೀಟತಟರತ್ನರುಚಿಪಾಟಲಿತಪಾದಾ
ಸ್ಫಾಟಿಕಸುಪೀಠಭೃತಕಾಟನಪದಾರಿಹೃತ
ತಾಟಕವಿನುತ್ಯ ಮೃಡನಾಟಕಸಹಾಯಾ
ಚಾಟುಪರವಾದಕುಜಪಾಟನಪಟಿಷ್ಠಮುನಿ
ಕೋಟಿಹೃದಯಾಂಬುರುಹಕೋಟರಗ ಶೃಂಗಾ
ತಾಟಿತನಗಶ್ರುತಿ ಸುಘೋಟಕಮತ್ತಾದಿ ಮಣಿ
ಕೂಟ ಪೊರೆ ನಮ್ಮಶಶಿಜೂಟ ಬಸವೇಶಾ ॥ —ದ ಪ್ರತಿಯಲ್ಲಿ ಮಾತ್ರ.

ಪೇಳಿಗೆದೀವಿದ ಪೊಂಗಳ
ಜಾಳಿಗೆಗಳ ಕುಡು ಕುಡಲ್ಲದೊಡೆ ಬಿಡೆನಾನೆಂ
ಬಾಳಾಪಂಗೇಳ್ದಲ್ಲಮ
ನಾಳೋಚಿಸದಿತ್ತನಂದವಂಗೆ ವೃಷೇಂದ್ರಂ ೩

ವ॥ ಅತೀಯಲೊಡಮಳ್ಕಜಂಬಟ್ಟು, ಕರಿಯಕೇಶವಂ ಕಾಳಿಮರಸಂ ಕಸವನುಗ್ರಚಂಡಿ ಮೈಲಾರಂ ಮಂಚಿಗಂ ಕುಂದತಮಿಯೆಂಬರೆಲ್ಲಮೇರ್ಳಂಗೊಂಡು ಕೊಂಡೆಗಕ್ಕಿ ನಾಲಗೆ ತಿಂತೆಮಸಗೆ ನರೇಂದ್ರನೆಡೆಗೈದಿ ನಿಂದೆಱಗಿ ಕರಂಗಳಂ ಮುಗಿದು—

ಕೇಳರಸ ನಿನ್ನ ಪೊಸ ಪೊಂ
ಜಾಳಿಗೆಗಳನೊಡೆದು ಮುದ್ರೆಯುಂ ವಿಟಭಕ್ತಂ
ಕೇಳೆ ಬಸವಣ್ಣನಿತ್ತಂ
ಪೇಳಿಗೆ ಬಱಿದಾದುದೊಗೆದುದೆಮಗಧಿಕ ಭಯಂ ೪

ವ॥ ಎಂದು ಪಿಸುಣರ್ ಪಿಸುಣಾಡೆ ನೃಪಂ ಕೇಳ್ದು ಕನಲ್ಕೆಗೊಂಡು ಬಸವರಸನಂ ಬರಿಸಿ—

ಸ್ಥಿರಗುಣಿಯೆಂದು ಸತ್ಯನಿಧಿಯೆಂದು ಪರಾರ್ಥಮನೆಂತುವೊಲ್ಲದ
ತ್ಯುರುಶುಚಿಯೆಂದು ನಂಬಿ ನಿನಾಗಾನೆನಗುಳ್ಳುದನೆಲ್ಲಮಂ ಸಮು
ದ್ಧರಿಸೆನುತಿತ್ತುದರ್ಕೆ ಫಲಮಾದುದು ಲೇಸನೊಡರ್ಚಿದೈ ಗುಣಾ
ಕರ ನಿನಗಾರ್ಸಮಾನರೊಡೆದೆನ್ನಯ ಮುದ್ರೆಯನಚ್ಚಪೊಂಗಳಂ ೫

ಎದುರಾಗಿ ನಿಂತನು. ೩. ಪೆಟ್ಟಿಗೆಯಲ್ಲಿ ತುಂಬಿದ ಬಂಗಾರ ನಾಣ್ಯಗಳ ಚೀಲಗಳನ್ನು ಬೇಗಕೊಡು; ಹಾಗಲ್ಲದಿದ್ದರೆ, ನಾನು ಬಿಡುವವನಲ್ಲ' ಎಂಬ (ಆ ವಿಟ ಜಂಗಮನ) ಮಾತನ್ನು ಕೇಳಿ, ಬಸವೇಶ್ವರನು ಯೋಚಿಸದೆ ಆಗ ಆ ಜಂಗಮನಿಗೆ ಹಣವೆಲ್ಲವನ್ನೂ ಕೊಟ್ಟು ಬಿಟ್ಟನು. ವ॥ ಈ ರೀತಿ (ಎಲ್ಲ ನಾಣ್ಯಗಳನ್ನೂ) ಕೊಡಲು ಕೂಡಲೆ ಕರಿಯ ಕೇಶವ, ಕಾಳಿಮರಸ, ಕಸವ, ಉಗ್ರಚಂದಿ, ಮೈಲಾರ, ಮಂಚಿಗ, ಕುಂದತಮಿ–ಎಂಬುವ ರೆಲ್ಲರೂ, ಮಾತ್ಸರ್ಯಪಟ್ಟು ಒಟ್ಟಾಗಿ ಸೇರಿ ಚಾಡಿಯನ್ನು ಹೇಳುವುದಕ್ಕೋಸುಗ ನಾಲಿಗೆಯ ತೀಟೆಯು ಹೆಚ್ಚಾದವರಾಗಿ, ಬಿಜ್ಜಳನಲ್ಲಿಗೆ ಹೋಗಿ ಕೈಗಳನ್ನು ಜೋಡಿಸಿ. ೪. ಮಹಾರಾಜಾ, ಕೇಳು : ವಿಟಭಕ್ತನೊರ್ವನು ಬಂದು ಕೇಳಲಾಗಿ ಬಸವಣ್ಣನು (ಪೆಟ್ಟಿಗೆಯ) ಮುದ್ರೆಯನ್ನೊಡೆದು ನಿನ್ನ ಹೊಸ ನಾಣ್ಯಗಳುಳ್ಳ ಚೀಲಗಳನ್ನು ಕೊಟ್ಟನು, ಪೆಟ್ಟಿಗೆ ಬರಿದಾಗಿ ಹೋಯಿತು; ನಮಗೆ (ಈ ಬಸವಣ್ಣನಿಂದ) ಹೆಚ್ಚಾದ ಭಯವುಂಟಾಗಿದೆ. ವ॥ ಹೀಗೆಂದು ಚಹಡಿಯುವರು ಚಹಡಿಯ ಮಾತನ್ನು ಹೇಳಲು, ಅರಸನು ಕೇಳುತ್ತ ಕೋಪಗೊಂಡು ಬಸವಣ್ಣನನ್ನು ಬರಮಾಡಿಕೊಂಡು—೫. ಸದ್ಗುಣ ಗಳಿಗೆ ಆಶ್ರಯನಾದ ಬಸವಣ್ಣ, ಸ್ಥಿರವಾದ ಸದ್ಗುಣಭರಿತನೆಂದೂ, ಸತ್ಯವೇ ಧನವಾಗಿ ಉಳ್ಳವನೆಂದೂ, ಅನ್ಯರ ದ್ರವ್ಯವನ್ನು ಯಾವರೀತಿಯಿಂದಲೂ ಅಪೇಕ್ಷಿಸದವ ನೆಂದೂ, ಅತ್ಯಂತ ಪರಿಶುದ್ಧನೆಂದೂ, ನಂಬಿ ನಾನು ನನಗಿರುವ ಸರ್ವಸ್ವವನ್ನು ಉದ್ಧಾರ ಮಾಡೆಂದೂ ನಿಮಗೆ ಒಪ್ಪಿಸಿದುದಕ್ಕೆ (ಭಂಡಾರವನ್ನು ಒಪ್ಪಿಸಿದುದಕ್ಕೆ)

ಬೇಡಿದ ಭುಜಂಗಭಕ್ತಂ
ಗಾಡಂಬರದಿಂದೆ ಕೊಟ್ಟ ನಿನ್ನಿಚ್ಚೆಯೊಳಿ
ನ್ನಾಡಲದೇಂ ಪರಧನಮಂ
ನೀಡುಂ ನಿನ್ನಂತೆ ಕೊಡುವ ದಾನಿಗಳೊಳರೇ ೬

ಇಂದಿತ್ತೆ ಪೊಂಗಳಂ ಬಗೆ
ಬಂದಂತಿರೆ ಬಸವ ನಾಳೆ ಬೇಡಿದ ಭಕ್ತಂ
ಗಂದಂ ಮಿಗೆ ಮದ್ರಾಜ್ಯಮ
ನೊಂದಿನಿಸುಳಿಯದೆವೊಲೀಯಲುಳ್ಳವನಲ್ತೇ ೭

ಪಳಿಗಂಜದೆಮ್ಮ ನರಪತಿ
ಮುಳಿದಪನೆಂದೆಣಿಸದನ್ಯಧನಮನದೆಂತುಂ
ಕೊಳಲೊಲ್ಲೆನೆಂಬ ನೇಮಮ
ನೆಳಸದೆ ಪಾಳ್ಗೈದೆ ಕೋಶಮಂ ಬಸವೇಶಾ ೮

ವ॥ ಎಂದು ನುಡಿದ ಅರಸನಾಗ್ರಹೋಕ್ತಿಗೆ ಮಹಿಮಾಕರಂ ಮುಗುಳ್ನಗೆನಕ್ಕು—

ಎಲೆ ನೃಪತಿ ನೀತಿದಪ್ಪಿದ
ಪಲವುಂ ನುಡಿಗಳನಿದೇಕೆ ನುಡಿದಪೆ ಭುವನಾ
ವಲಿಗರಸನಪ್ಪ ಶಿವನಂ
ನಲಿದರ್ಚಿಪ ಶರಣರನ್ಯಧನಕೆಳಸುವರೇ ೯

ಒಳ್ಳೆಯ ಕೆಲಸವನ್ನೇ ಮಾಡಿದಂತಾಯಿತು ! ನಿನಗೆ ಸಮಾನರಾರು ! ನನ್ನ ಮುದ್ರೆಯನ್ನು ಒಡೆದು ಹೊಸ ಹೊಸ ಬಂಗಾರದ ನಾಣ್ಯಗಳನ್ನು–೬. ಬೇಡಿದ (ಓರ್ವ) ವಿಟ ಜಂಗಮನಿಗೆ ನಿನ್ನಿಚ್ಛೆಯಿಂದಲೇ (ನಿನ್ನ) ಆಡಂಬರವನ್ನು ತೋರಿಸಿಕೊಳ್ಳಲು ಕೊಟ್ಟೆ. ಇನ್ನು ಮಾತನಾಡುವುದೇನಿದೆ ? ನಿನ್ನ ಹಾಗೆ ಇನ್ನೊಬ್ಬರ ದ್ರವ್ಯವನ್ನು ಕೊಡುವ ದಾನಿಗಳು (ಲೋಕದಲ್ಲಿ) ಇದ್ದಾರೆಯೆ ? ೭. ಬಸವಣ್ಣ, ಈ ದಿವಸ ಮನಸ್ಸು ಬಂದಂತೆ ಬಂಗಾರವನ್ನು ಕೊಟ್ಟೆ; ನಾಳೆ ಬೇಡಿ ಬಂದ ಭಕ್ತನಿಗೆ ಅದಕ್ಕೂ ಹೆಚ್ಚಾಗಿ ನನ್ನ ರಾಜ್ಯವನ್ನು ಒಂದಿಷ್ಟೂ ಉಳಿಯಗೊಡದಂತೆ ಕೊಡುವ ಮನಸ್ಸುಳ್ಳವನಲ್ಲವೇ ? ೮. ''ದೂಷಣೆಗೆ ಹೆದರದೆ, ನಮ್ಮ ರಾಜನು ಕೋಪಿಸಿಕೊಂಡಾನೆಂಬುದನ್ನು ಯೋಚಿಸದೆ, 'ಬೇರೆಯವರ ದ್ರವ್ಯವನ್ನು ಹೇಗಾದರೂ ತೆಗೆದುಕೊಳ್ಳುವವನಲ್ಲ' ಎಂಬ (ನಿನ್ನ) ನೇಮವನ್ನೂ ಅಪೇಕ್ಷೆ ಮಾಡದೆ (ಯೋಚಿಸದೆ) ಬಸವೇಶ ! ಬೊಕ್ಕಸವನ್ನು ಹಾಳು ಮಾಡಿದೆ.' ವ॥ ಹೀಗೆಂದು ನುಡಿದ ಅರಸನ ಆಗ್ರಹದಿಂದ ಕೂಡಿದ ಮಾತಿಗೆ ಮಹಿಮೆಗಳಿಗೆ ಆಶ್ರಯನಾದ ಬಸವಣ್ಣನು ಮುಗುಳು ನಗೆ ನಕ್ಕು–೯. ''ಎಲೈ ಮಹಾರಾಜನೇ, ನ್ಯಾಯವಲ್ಲದ (ಅನ್ಯರ) ಅನೇಕ ಮಾತುಗಳನ್ನು (ಕೇಳಿ) ಅದೇಕೆ ಮಾತನಾಡುತ್ತೀಯೆ ? ಲೋಕಗಳಿಗೆಲ್ಲ ಅರಸನಾದ ಶಿವನನ್ನು ಸಂತೋಷದಿಂದ ಅರ್ಚನೆ ಮಾಡುವ ಶರಣರು ಮತ್ತೊಬ್ಬರ ದ್ರವ್ಯಕ್ಕೆ ಅಪೇಕ್ಷೆಪಡುವರೇ ?''

ಸುರಭಿ ಸುರದ್ರುಮಂ ಸುರಸುರತ್ನಮಿವೆಲ್ಲಮುಮೀಯಲಾಜಿದ
ತ್ಯುರುತರ ಸಂಪದಸ್ಥಿತಿಯನೀವ ಮಹೇಶ್ವರಭಕ್ತಿಯಾಂತ ಸ
ತ್ಪುರುಷನದೆಂತು ಪೇಳ್ ಪರಧನಕ್ಕೆಳಸಿರ್ಪನಪಾರದುಗ್ಧಸಾ
ಗರದ ವಿಹಾರಿಪಂಚೆ ಕಿಱುವೆಂಚೆಯ ವಾರಿಗೆ ಚಿತ್ತಮೀವುದೇ ೧೦

ಸಾರಸುಧಾಮರೀಚಿರುಚಿಯಂ ತೆಗೆದೀಂಟುವ ಜೊನ್ನವಕ್ಕಿ ವಿ
ಸ್ತಾರಸರಃಸಮೂಹಮನದೇಂ ಬರೆ ಪೀರ್ವುದೆ ಚೂತಪಲ್ಲವೋ
ದಾರರಸಂಗಳಂ ಸವಿವ ಕೋಗಿಲೆ ಮೆಲ್ವುದೆ ವೇಣುಪತ್ರಮಂ
ಮಾರಹರಪ್ರಸಾದಭಜಕಂ ಕವರ್ದಪ್ಪನೆ ಲೋಗರರ್ಥಮಂ ೧೧

ಸಸಿ ಬಿಸಿಯಾದೊಡಂ ತರಣಿ ಕರ್ಗಿದೊಡಂ ಘನಕಾಂಚನಾದ್ರಿ ಕಂ
ಪಿಸಿದೊಡವೌರ್ವವಹ್ನಿ ಬಿಸುಪಾರಿದೊಡಂ ನಿಗಮೋಕ್ತಿಯೊಳ್ತೊದಳ್
ಮಸಗಿದೊಡಂ ಕಡಲ್ಬಱತೊಡಂ ಗಗನಂ ಪಡಲಿಟ್ಟೊಡಂ ದಿಶಾ
ವಸನನ ಭಕ್ತರನ್ಯಧನಕೊಲ್ದಳುಪರ್ಸತತಂ ಮಹೀಪತೀ ೧೨

ಇದು ನನ್ನಿ ನಿನ್ನ ಭಂಡಾ
ರದ ಲೆಕ್ಕದ ವಸ್ತುವಂ ವಿಚಾರಿಪುದಣುಮಾ
ತ್ರದ ಧನಮರೆಯಾದೊಡಮಾಂ
ಮದನಾರಿಯಭಕ್ತನಲ್ತು ಬಿಜ್ಜಳನೃಪತೀ ೧೩

೧೦. ಕಾಮಧೇನು, ಕಲ್ಪವೃಕ್ಷ, ಚಿಂತಾಮಣಿ–ಇವಾವುವೂ ಕೊಡಲಾರದ ಅತ್ಯಧಿಕವಾದ ಸಂಪತ್ತನ್ನು ಕೊಡುವ ಶಿವಭಕ್ತಿಯನ್ನು ಹೊಂದಿದ ಪುರುಷನು ಅನ್ಯರ ಹಣಕ್ಕೆ ಅದು ಹೇಗೆ ಅಪೇಕ್ಷೆಪಟ್ಟಾನು ? ಅನಂತವಾದ ಕ್ಷೀರ ಸಮುದ್ರದಲ್ಲಿ ಕ್ರೀಡೆ ಮಾಡುವ ಹಂಸಪಕ್ಷಿಯು ಸಣ್ಣ ಗುಂಡಿಯ ನೀರಿಗೆ ಮನಸ್ಸು ಮಾಡುವುದೇ ? ಹೇಳು. ೧೧. ಶ್ರೇಷ್ಠ ಚಂದ್ರನ ಕಾಂತಿಯನ್ನು ಸೆಳೆದು ಕುಡಿಯುವ ಚಕೋರ ಪಕ್ಷಿಯು ವಿಸ್ತಾರವಾದ ಕತ್ತಲೆಯ ಸಮೂಹವನ್ನು ಸೆಳೆದು ಕುಡಿದೀತೇ ? ಮಾವಿನ ಚಿಗುರಿನ ಶ್ರೇಷ್ಠ ರಸವನ್ನು ಹೀರುವ ಕೋಗಿಲೆಯು, ಬಿದಿರಿನ ಎಲೆಯನ್ನು ತಿನ್ನುವುದೇ ? ಪರಮೇಶ್ವರನ ಪ್ರಸಾದ ಸ್ವೀಕಾರ ಮಾಡುವವನು, ಅನ್ಯರ ದ್ರವ್ಯವನ್ನು ಬಾಚಿಕೊಳ್ಳುವನೇ ? ೧೨. ಮಹಾರಾಜನೇ, ಚಂದ್ರನು ಬಿಸಿಯಾದರೂ, ಸೂರ್ಯನು ಔಷ್ಣ್ಯದಿಂದ ತಗ್ಗಿದರೂ (ತಣ್ಣಗಾದರೂ). ಘನವಾದ ಮೇರುಪರ್ವತವು ನಡುಗಿದರೂ, ಬಡಬಾಗ್ನಿಯು ಬಿಸಿಗುಂದಿದರೂ, ವೇದಗಳ ವಾಕ್ಯದಲ್ಲಿ ಸುಳ್ಳು ಉಂಟಾದರೂ, ಸಮುದ್ರವು ಬತ್ತಿಹೋದರೂ, ಆಕಾಶವು ಕಿತ್ತುಬಿದ್ದರೂ, ಸದಾ ಪರಶಿವನ ಭಕ್ತರುಗಳು ಇನ್ನೊಬ್ಬರ ಐಶ್ವರ್ಯಕ್ಕೆ ಮನಸ್ಸಿನಿಂದಲೂ ಇಚ್ಛಿಸುವವರಲ್ಲ. ೧೩. ಬಿಜ್ಜಳ ಮಹಾರಾಜಾ, ಇದು ನಿಶ್ಚಯ. ನಿನ್ನ ಭಾಂಡಾಗಾರದ ಲೆಕ್ಕದ ವಸ್ತುಗಳನ್ನು ವಿಚಾರಿಸುವುದು. (ತನಿಖೆ ಮಾಡುವುದು). ಅಣುವಿನಷ್ಟು ಹಣವು (ಲೆಕ್ಕಕ್ಕೆ) ಕಡಿಮೆಯಾಗಿದ್ದರೂ ನಾನು ಮನ್ಮಥಾರಿಯಾದ

ಅವರೊಡವೆಯನವರ್ಗಿತ್ತೆಂ
ಶಿವನಱಿವಂ ನಿನ್ನ ವಸುವನಿತ್ತವನಲ್ಲ
ಲ್ಲವರೆಂತು ಕೊಳ್ವರಾನೆಂ
ತು ವಿಚಾರಿಪೊಡೀವೆನರಸ ನಿನ್ನಯ ಧನವಂ ೧೪

ಈಗಳೆ ನಿನ್ನಯ ಸಂಶಯ
ಪೂಗಂ ಪರಿವಂತೆ ತೋರ್ಪೆನೆಂದಾ ಬಸವಂ
ಬೇಗದೊಳೆ ತರಿಸಿದಂ ಭಾಂ
ಡಾಗಾರದ ಪೊನ್ನ ಪೇಟಿಕಾಸಮುದಯಮಂ ೧೫

ಕರೆಯಿಸಿದಂ ಗಣಕಾಳಿಯ
ನರಸನ ಸಂದೆಗದ ಕೀಲನುರ್ಚುವ ತೆಱದಿಂ
ಭರದಿಂ ಕೀಲ್ಗಳೆದಿಡಿದು
ಪ್ಪರಿಸುವ ಪೇಳಿಗೆಯ ಪೊಂಗಳಂ ಕಾಣಿಸಿದಂ ೧೬

ವ॥ ಅಂತು ತನ್ನ ತೇಜಃಪುಂಜದಂತೆ ಬರೆಪದ ಲೆಕ್ಕಕ್ಕರ್ಗಳಂ ಮಿಕ್ಕ ಪೊಂಗಳಂ ತೋಱಿಸೆ ಬಿಜ್ಜಳಂ ಸಭಾಸದರೊಡನೆ ಕಂಡು ಕೌತುಕಂಗೊಂಡು ಪಿಸು[1]ಣ್ಗೆ[1]ಡೆದ ಖಳರಂ ತರ್ಜನಂಗೈದು ಮತ್ಪುರದೊಳಿನ್ನಾವನಾದೊಡಮಿಂತು ಬಸವನಂ ಕೂರ್ತು ಪಿಸುಣ್ಗೆಡೆಯೆ ಜಿಹ್ವಾಚ್ಛೇದನಂಗೈಪೆ ನೆಂದು ಪೂಣ್ದು ನುಡಿದು ಬಸವನ ಮಹಿಮೆಯಂ ಬಗೆದಂದು ಕೀರ್ತಿಪಾಗಳ್—

ಶಿವನ ಭಕ್ತನೇ ಅಲ್ಲ. ೧೪. ಮಹಾರಾಜ, ಆ ಜಂಗಮರ ವಸ್ತುಗಳನ್ನು ಅವರಿಗೆ ಕೊಟ್ಟೆ (ಇದನ್ನು) ಶಿವನು ತಿಳಿಯುವನು; ನಿನ್ನ ಧನವನ್ನು ಕೊಟ್ಟವನು (ನಾನು) ಅಲ್ಲ. ವಿಚಾರಿಸಿನೋಡಿದರೆ ಆ ಜಂಗಮರಾದರೂ ನಿನ್ನ ಹಣವನ್ನು ಹೇಗೆ ತೆಗೆದುಕೊಂಡಾರು? ನಾನಾದರೂ ಹೇಗೆ ಕೊಟ್ಟೇನು ? ೧೫. ಈಗಲೇ ನಿನ್ನ ಸಂಶಯವು ಹೋಗುವಂತೆ ತೋರಿಸುತ್ತೇನೆ. ಎಂದು ಆ ಬಸವಣ್ಣನು ಬೇಗನೆ ಭಾಂಡಾಗಾರದಲ್ಲಿದ್ದ ಬಂಗಾರದ (ನಾಣ್ಯಗಳುಳ್ಳ) ಪೆಟ್ಟಿಗೆಗಳ ಸಮುದಾಯವನ್ನು ತರಿಸಿದನು. ೧೬. (ಆ ಕೂಡಲೇ) ಲೆಕ್ಕ ಮಾಡುವವರ ಸಮೂಹವನ್ನು ಕರೆಯಿಸಿದನು. ಅರಸನ ಸಂದೇಹದ ಕೀಲನ್ನು ಉಚ್ಚುವ ರೀತಿಯಲ್ಲಿ ಶೀಘ್ರವಾಗಿ ಭಾಂಡಾರದ ಬೀಗವನ್ನು ತೆಗೆದು, ತುಂಬಿ ಹುಲುಸು ತ್ತಿರುವ (ಹೆಚ್ಚುತ್ತಿರುವ) ಪೆಟ್ಟಿಗೆಯಲ್ಲಿನ ಬಂಗಾರದ ನಾಣ್ಯಗಳನ್ನು ತೋರಿಸಿದನು. ವ॥ ಈ ರೀತಿ ತನ್ನ ತೇಜಸ್ಸಿನ ಸಮೂಹದಂತೆ ಬರೆದಿರುವ ಲೆಕ್ಕಕ್ಕಿಂತಲೂ ಅಧಿಕವಾಗಿ ಮಿಕ್ಕಿ ಉಳಿದಿರುವ ಹೊನ್ನುಗಳನ್ನು ತೋರಿಸಲಾಗಿ ಬಿಜ್ಜಳನು ಸಭಾ ಸ್ಥಾನದವರೊಡನೆ ನೋಡಿ, ಆಶ್ಚರ್ಯಪಟ್ಟು, ಚಾಡಿಯನ್ನು ಹೇಳಿದ ದುಷ್ಟರನ್ನು, ಭಯಪಡಿಸಿ (ಬೆದರಿಸಿ), ನನ್ನ ಪಟ್ಟಣದಲ್ಲಿ ಇನ್ನು ಯಾರಾದರೂ, ಈ ರೀತಿ ಬಸವಣ್ಣನನ್ನು ಕುರಿತು ಚಾಡಿ ಯನ್ನು ಹೇಳಿದರೆ ನಾಲಿಗೆಯನ್ನು ಕತ್ತರಿಸಿ ಹಾಕುವೆನು, ಎಂದು ಪ್ರತಿಜ್ಞೆಮಾಡಿ

1 ಣ್ಗಳ (ದ).

ಮುನ್ನೊರ್ವಂ ಭಕ್ತವರ್ಯಂ ಮಧುರೆಯಧಿಪ ಪಾಂಡ್ಯಂಗೆ ಸನ್ಮಂತ್ರಿಯಾಗಿ
ದ್ದೌನ್ನತ್ಯಂ ಮಿಕ್ಕವಂ ಭಾಸುರಹಯಚಯಮಂ ಕೊಳ್ಳೆನುತಿತ್ತಗಣ್ಯಂ
ಪೊನ್ನೆಲ್ಲಂ ತೀರೆ ಕೊಟ್ಟಾ ಶರಣಗಣಕೆ ಮೇಣ್ಜಂಬುಕವ್ರಾತಮಂ ವ್ಯ
ತ್ಪನ್ನಂ ಭಾಸ್ವತ್ತುರಂಗೋತ್ಕರಮನೆಸಗಿ ಕೂರ್ತಿತ್ತನಾ ಚೊಕ್ಕನಾಥಂ ೧೭

ಅದಱಿಂ ಶಿವಭಕ್ತರ್ಗಿಂ
ತಿದು ಘನಮಲ್ತೆಂದು ಶರಣರುಲಿವುತ್ತಿರೆ ಸ
ನ್ಮುದಮಲರೆ ಕೈಮುಗಿದು ಭೂ
ಸುದತೀಶಂ ಬಸವರಾಜನಂ ಕೀರ್ತಿಸುತಂ ೧೮

ದಿನಮಣಿಗೆ ದೀವಿಗೆಯನಾ
ಘನರೋಹಣಗಿರಿಗೆ ರನ್ನಮಂ ಕೊಡುವವೊಲಾ
ಜನಪತಿ ಬಸವಂಗಿತ್ತಂ
ಕನಕಾಂಬರಮಂ ಮನೋಜ್ಞಮಣಿಭೂಷಣಮಂ ೧೯

ವ॥ ಅಂತಿತ್ತು ಸತ್ಕರಿಸಿ ವಿನಯದಿಂ ತನ್ಮಂದಿರಕ್ಕೆ ಬಸವನಂ ಬೀಳ್ಕೊಟ್ಟು ತಾನುಮಂತಃಪುರಂಬೊಕ್ಕಿರ್ದನಾಗಳ್—

ಮಾತನಾಡಿ, ಬಸವಣ್ಣನ ಮಹಿಮೆಯನ್ನು ಯೋಚಿಸುತ್ತ ಹೊಗಳುತ್ತಿರುವಾಗ—೧೭. ಪೂರ್ವಕಾಲದಲ್ಲಿ ಒಬ್ಬ ಭಕ್ತ ಶ್ರೇಷ್ಠನು ಮಧುರಾ ಪಟ್ಟಣದ ದೊರೆಯಾದ ಪಾಂಡ್ಯ ಮಹಾರಾಜನಿಗೆ ಶ್ರೇಷ್ಠಮಂತ್ರಿಯಾಗಿ ಇದ್ದು ಔನ್ನತ್ಯದಿಂದ ಕೂಡಿದ್ದನು. (ಅವನ ಹೆಸರು ಚೊಕ್ಕನಾಥ) ಆ ರಾಜನು ಮನೋಹರವಾದ ಕುದುರೆಗಳ ಸಮೂಹವನ್ನು ತೆಗೆದುಕೋ ಎನ್ನುತ್ತ (ಅವನಿಗೆ) ಕೊಟ್ಟಂಥ ಗಣನಾತೀತವಾದ ಧನವೆಲ್ಲವನ್ನು (ಅವನು) ಶರಣರುಗಳ ಸಮೂಹಕ್ಕೆ ಕೊಟ್ಟ ಕಾರಣ ತೀರಿ ಹೋಗಲು, ಕುಶಲನಾದ ಆ ಚೊಕ್ಕನಾಥನು, ನರಿಗಳ ಸಮೂಹವನ್ನೇ ಪ್ರಕಾಶಿಸುವ ಕುದುರೆಗಳನ್ನಾಗಿ ಮಾಡಿ, ಪ್ರೀತಿಯಿಂದ ಕೊಟ್ಟನು. ೧೮. ಆದ್ದರಿಂದ ಶಿವಭಕ್ತರಿಗೆ ಈ ರೀತಿಯಾಗಿ (ಬಸವಣ್ಣ ಮಾಡಿದುದು) ದೊಡ್ಡದೇನೂ ಅಲ್ಲ ಎಂಬುದಾಗಿ ಶರಣರು ಹೇಳುತ್ತಿರಲು (ಘೋಷಿಸುತ್ತಿರಲು) ಭೂಪತಿಯಾದ ಬಿಜ್ಜಳನು, ಶ್ರೇಷ್ಠವಾದ ಸಂತೋಷದಿಂದ ಅರಳಿದವನಾಗಿ, ಬಸವಣ್ಣನಿಗೆ ಕೈ ಮುಗಿದು ಕೊಂಡಾಡುತ್ತ—೧೯. ಸೂರ್ಯನಿಗೆ ದೀವಿಗೆಯನ್ನು, ಶ್ರೇಷ್ಠವಾದ ಆರೋಹಣಗಿರಿಗೆ ರತ್ನವನ್ನು ಕೊಡುವ ಹಾಗೆ, ಆ ಬಿಜ್ಜಳ ಮಹಾರಾಜನು ಬಸವಣ್ಣನಿಗೆ ಪೀತಾಂಬರವನ್ನೂ ಮನೋಹರವಾದ ರತ್ನಾಭರಣಗಳನ್ನೂ ಕೊಟ್ಟನು. ವ॥ ಈ ರೀತಿ ಸತ್ಕಾರಮಾಡಿ, ವಿನಯದಿಂದ ಅವನ ಮನೆಗೆ ಬಸವಣ್ಣನನ್ನು ಕಳುಹಿಸಿ ಕೊಟ್ಟು, ತಾನೂ (ತನ್ನ ಅಂತಃಪುರವನ್ನು ಪ್ರವೇಶಿಸಿ

ಪಲ್ಲವಜಂಗಮಂ ಪಣವಧೂಟಿಯ ಗೇಹದೊಳಿರ್ದು ಬೀಯಕಿಂ
ದಿಲ್ಲ ಧನಂಗಳಂ ಬಸವನಿತ್ತಪನೀಗಳೆ ಬೇಡಿ ತರ್ಪುದೆಂ
ದಲ್ಲಿಯ ಚೇಟಿಯಂ ಕಳುಪೆ ತದ್ಗೃಹಕೈದುತೆ ದೂತಿ ಕಂಡಳಾ
ಫುಲ್ಲಸರೋಜನೇತ್ರೆ ಬಸವಾಂಗನೆಯುಟ್ಟ ಮನೋಜ್ಞಚೇಲಮಂ ೨೦

ವ|| ಅಂತು ಕಂಡದಱ ಚೆಲ್ವಿಂಗೆ ಬೆಱಗುವಟ್ಟು ತಲೆದೂಗಿ ಪಣಮಂ ಬೇಳ್ಪುದನುಳಿದು ತನ್ನೆಱೆಯುಳಿರ್ದ ಗೃಹಕ್ಕೆ ಜವದಿಂ ಮಗುಳ್ದೈತಂದು ಸಡಗರಿಸಿ ನಿಂದು—

ನಿನಗೇನೆಂದಪೆನಕ್ಕ ಚಿತ್ರತರಮಂ ಗಂಗಾಂಬಿಕಾದೇವಿಯು
ಟ್ಟ ನವೀನಾಂಬರದಂದಮಂ ಪೊಗಳ್ವೊಡಾನೆಯ್ದೆಂ ನಯಂ ಕಾಂತಿ ಚೆ
ಲ್ವಿನಲಂಪಪ್ಪಿದ ತದ್ದುಕೂಲಕೆಣೆಯಿಲ್ಲೆಲ್ಲಿಯುಂ ದಿವ್ಯವ
ಸ್ತ್ರನಿಕಾಯಂಗಳೊಳೆಯ್ದೆ ನೋಳ್ಪೊಡೆ ವಲಂ ನಿನ್ನಾಣೆ ಚಂದ್ರಾನನೇ ೨೧

ವ|| ಅಂತುಮಲ್ಲದೆಮ್ಮವರ್ಪಲ್ಲವಜಂಗಮಾಳಿಯಿನುಪಾರ್ಜನಂಗೈದೊದವಿಸಿರ್ದ—

ಪಳಿ ಪಟ್ಟಾವಳಿ ಮೇಘರಂಜಿ ತವರಾಜಂ ಪಿಂಜರಾಗಂ ಲತಾ
ವಳಿ ಚಿತ್ರಾವಳಿ,ದೇವಪಟ್ಟೆ ಕುರವಿಂದಾಭಂ ಕುರಂಗಾಕ್ಷಿ ಪಿಂ

ದನು. ಆಗ—೨೦. (ಓರ್ವ) ವಿಟಜಂಗಮನು ಸೂಳೆಯ ಮನೆಯಲ್ಲಿದ್ದು 'ಈದಿನ ವೆಚ್ಚ ಮಾಡಲು (ನನ್ನಲ್ಲಿ ಹಣ) ಇಲ್ಲ. ಬಸವಣ್ಣನು ಹಣವನ್ನು ಕೊಡುತ್ತಾನೆ. ಈಗಲೇ (ಅವನನ್ನು) ಬೇಡಿ ತೆಗೆದುಕೊಂಡು ಬಾ', ಎಂದು ಅಲ್ಲಿಯ ದಾಸಿಯೋರ್ವಳನ್ನು ಕಳುಹಿಸಲು, ಆ ದೂತಿಯು ಆ ಬಸವೇಶ್ವರನ ಮನೆಗೆ ಹೋಗಿ, ಪೂರ್ಣ ಅರಳಿದ ಕಮಲದಂತಹ ಕಣ್ಣುಳ್ಳ ಬಸವಣ್ಣನವರ ಪತ್ನಿಯಾದ ಗಂಗಾಂಬಿಕೆಯು ಉಟ್ಟ ಮನೋಹರವಾದ ಸೀರೆಯನ್ನು ಕಂಡಳು. ವ|| ಹಾಗೆ ಆ ಸೀರೆಯನ್ನು ಕಂಡು ಅದರ ಸೌಂದರ್ಯಕ್ಕೆ ಆಶ್ಚರ್ಯಪಟ್ಟು, ತಲೆದೂಗಿ ಹಣವನ್ನು ಬೇಡುವುದು ಬಿಟ್ಟು, ತನ್ನ ಒಡತಿಯಿದ್ದ ಮನೆಗೆ ವೇಗದಿಂದ ಮರಳಿ ಬಂದು, ಸಡಗರದಿಂದ ನಿಂತುಕೊಂಡು—೨೧. ಅಕ್ಕಾ ! (ಒಂದು) ಅತ್ಯಾಶ್ಚರ್ಯವನ್ನು ನಿನಗೆ ಏನೆಂದು ಹೇಳಲಿ !! (ಬಸವಣ್ಣನ ಪತ್ನಿಯಾದ) ಗಂಗಾಂಬಿಕೆಯು ಉಟ್ಟ ನವೀನವಾದ ಸೀರೆಯ ಚೆಲುವನ್ನು ಹೊಗಳುವುದಕ್ಕೆ ನಾನು ಎಷ್ಟೂ ಸಮರ್ಥಳಲ್ಲ; ಚಂದ್ರಾನನೆಯೇ, ಮೃದುತ್ವ, ಕಾಂತಿ, ಚೆಲುವಿನ ಹೆಚ್ಚಳವನ್ನು ಹೊಂದಿರುವ ಆ ರೇಷ್ಮೆ ಸೀರೆಗೆ ಸದೃಶವಾದ ಸೀರೆ, ಎಲ್ಲೆಲ್ಲೂ ಯಾವ ಶ್ರೇಷ್ಠ ಸೀರೆಗಳ ಸಮೂಹದಲ್ಲಿಯೂ, ಹುಡುಕಿದರೆ ಸಿಗಲು ಶಕ್ಯವಿಲ್ಲ. ವ|| ಇದೂ ಅಲ್ಲದೆ ನಮ್ಮ ಸೂಳೆಯರುಗಳು, ವಿಟಜಂಗಮರ ಸಮೂಹದಿಂದ ಸಂಪಾದಿಸಿಕೊಂಡು ಕೂಡಿಟ್ಟಿರುವಂಥ—೨೨-೨೩. ಪಳಿ ಸೀರೆ, ಪಟ್ಟಾವಳಿಸೀರೆ, ಮೇಘದಂತೆ ರಂಜಿಸುವ ರಾಜ ಸೀರೆ, ಪಿಂಜರ ಬಣ್ಣದ ಸೀರೆ, ಲತಾವಳಿ ಸೀರೆ, ಚಿತ್ರಾವಳಿ, ದೇವಪಟ್ಟೆ, ಕುರುವಿಂದ ರತ್ನದ ಕಾಂತಿಯ ಸೀರೆ, ಜಿಂಕೆಯ ಕಣ್ಣಿನಂತಹ ಚಿತ್ರವುಳ್ಳ ಸೀರೆ, ಪಿಂಗಳ

ಗಳಿ ಚಂದ್ರಾತಪವಿಂದ್ರಗೋಪಮಮರಾಂಗಂ ಚೀನಿ ಚಿತ್ರಾಂಬರಂ
ತಳಿರ್ವಣ್ಣಂ ಮಣಿವಟ್ಟೆ ರುದ್ರತಿಲಕಂ ಕಾಂಭೋಜಿ ಗೌರೀಪ್ರಿಯಂ ೨೨

ಭಾವಜವಲ್ಲಭಂ ದಸರಿ ದಾಸಣವಟ್ಟೆ ತಮಾಲಪಟ್ಟೆ ನೇ
ತ್ರಾವಳಿ ರಾಜಶೇಖರಮಗಾವಳಿ ಮಾದಳಮಾನೆವಜ್ಜೆ ಸೂ
ತ್ರಾವಳಿ ಪಚ್ಚೆವಣ್ಣಮುದಯಾರುಣಮಂಜನರೇಖೆ ಶಾಲಿ ಹಂ
ಸಾವಳಿ ದೇವತಾವಳಿ ಶುಕಾವಳಿ ಗೂರ್ಜರಿ ಕಾಂಚನಾಂಬರಂ ೨೩

ಇಂತಿವು ಮೊದಲಾದಂಬರ
ಸಂತತಿ ಸರಿಯಲ್ತದರ್ಕೆ ಭಾಮಿನಿ ಭಾವಂ
ತಾಂ ತಳರ್ದು ಬೇಡೆ ಶಿವಗಣ
ಚಿಂತಾಮಣಿ ಬಸವನೀವನಂಬರಮನದಂ ೨೪

ಎನೆ ಕೇಳ್ದಾ ಪಣಕಾಂತೆ ದೂತಿಗೆ ಪಸಾಯಂಗೊಟ್ಟು ತಜ್ಜಂಗಮಾ
ನನಮಂ ಪ್ರೇಮದೆ ನೋಡಿ ಬೋಸರಿಸಿ ಮಂದಸ್ಮೇರಮಂ ಬೀಱಿ ಮು
ದ್ದಿನಿಮಾತಿಂ ಪ್ರಿಯ ಬೇಡಿ ತದ್ಬಸವನಿಂ ತಂದಿತ್ತು ಗಂಗಾಂಬೆಯು
ಟ್ಟ ನವೀನಾಂಬರಮಂ ಕರಂ ಮೆಱೆವುದೆನ್ನೊಳ್ಸಂದ ಸಂಪ್ರೀತಿಯಂ ೨೫

ವರ್ಣದ ಸೀರೆ, ಚಂದ್ರಕಾಂತಿ ಸೀರೆ, ಇಂದ್ರನೀಲ ಬಣ್ಣದ ಸೀರೆ, ಮೇರುಪರ್ವತದ ಚಿತ್ರವುಳ್ಳ ಸೀರೆ, ಪಟ್ಟೆಪಟ್ಟೆಯ ರೇಷ್ಮೆ ಸೀರೆ, ಚಿಗುರಿನ ಬಣ್ಣದ ಸೀರೆ, ರತ್ನಖಚಿತ ಪಟ್ಟೆ ಸೀರೆ, ಈಶ್ವರನ ತಿಲಕದಂತಿರುವ ಚಿತ್ರದ ಸೀರೆ, ಪ್ರಿಯವಾದ ಕಾಂಭೋಜದ ಬಿಳಿ ಸೀರೆ, ಭಾವಜ ವಲ್ಲಭ, ದಸರಿ, ದಾಸಣ ಪಟ್ಟೆ, ತಮಾಲವಟ್ಟೆ, ನೇತ್ರಾವಳಿ, ರಾಜಶೇಖರ, ಅಗಾವಳಿ, ಮಾದಳ, ಆನೆವಜ್ಜೆ, ಸೂತ್ರಾವಳಿ, ಅಚ್ಚೆವಣ್ಣ, ಉದಯಾರುಣ, ಅಂಜನಲೇಖೆ, ಶಾಲಿ, ಹಂಸಾವಳಿ, ದೇವತಾವಳಿ, ಶುಕಾವಳಿ, ಘೂರ್ಜರಿ· ಕಾಂಚನಾಂಬರ—೨೪. ಇವೇ ಮೊದಲಾದ ಸೀರೆಗಳ ಸಮೂಹವು, ಆ ಗಂಗಾಂಬಿಕೆಯುಟ್ಟ ಸೀರೆಗೆ ಸರಿಯಾಗವು. ಭಾಮಿನಿಯೇ, ಭಾವನಾದ ಆತನೇ (ಬಸವಣ್ಣನಲ್ಲಿಗೆ) ಹೋಗಿ, ಬೇಡಿದರೆ, ಶಿವಗಣಗಳಿಗೆ ಚಿಂತಾಮಣಿಯಂತಿರುವ ಆ ಬಸವಣ್ಣನು ಆ ಸೀರೆಯನ್ನು ಕೊಡುತ್ತಾನೆ. ೨೫. ಹೀಗೆ (ಆ ದೂತಿಯು) ಹೇಳಲು—ಆ ಸೂಳೆಯು ಕೇಳಿ, ದೂತಿಗೆ ಬಹುಮಾನ ವಸ್ತುಗಳನ್ನು ಕೊಟ್ಟು, ಪ್ರೇಮದಿಂದ ಆ ಜಂಗಮನ ಮುಖವನ್ನು ನೋಡಿ, ಕಪಟಾನುರಾಗವನ್ನು ತೋರಿಸಿ, ಮುಗುಳುನಗೆ ಬೀರಿ, ಮುದ್ದಿನಿಂದ ಕೂಡಿದ ಮಾತುಗಳಿಂದ—'ಪ್ರಿಯಾ ! ಗಂಗಾಂಬಿಕೆಯುಟ್ಟ ನವೀನಾಂಬರವನ್ನು ಬಸವಣ್ಣನಿಂದ ಬೇಡಿ, ತಂದುಕೊಟ್ಟು ನನ್ನಲ್ಲಿ ನಿನಗಿರುವ ಪ್ರೀತಿಯನ್ನು ಚೆನ್ನಾಗಿ ಮೆರೆಯುವುದು' (ಎಂದಳು)· ವ॥ ಹೀಗೆಂದು ಆ ಗಣಿಕೆಯು ಹೇಳಲು ವಿಟಜಂಗಮನು, ಉಲ್ಲಾಸದಿಂದ ಕೂಡಿದವನಾಗಿ, ಹಾಗೆಯೇ ಮಾಡುತ್ತೇನೆ, ಇದಾವ ಗಹನ ಕಾರ್ಯ ! ಎಂದು ತತ್‌ಕ್ಷಣವೇ

ವ॥ ಎನೆ ಪಲ್ಲವಚರನುಲ್ಲಾಸಂಬೆತ್ತಂತೆ ಗೈವೆನಿದಾವ ಗಹನವೆಂದಾಕ್ಷಣಂ ಬಸವನೆಡೆ ಗೇಳ್ತಂದು—

ಕೊಡು ಬಸವೇಶ ನಿನ್ನ ಸತಿಯುಟ್ಟತಿನೂತನ ದಿವ್ಯವಸ್ತ್ರಮಂ
ಬಿಡದೆಮಗೆಂದೊಡುತ್ಸವಿಸಿ ದೇವ ಚರೇಂದ್ರಮಹಾಪ್ರಸಾದಮೆಂ
ದುಡುಪತಿವಕ್ತ್ರೆಯಂ ಬರಿಸಿದಂ ನಿಜವಲ್ಲಭೆಯಂ ಸಭಾಸ್ಥಳ
ಕ್ಕಡರ್ದನುರಾಗದಿಂ ಬಸವನಾಗಳೆ ಭಕ್ತಿಯದೇನಳುಂಬಮೋ ೨೬

ಮುಡಿಗಂಪಿಂಗಾರ್ದು ಸಾರ್ತಂದೆಱಗೆ ಪರಮೆಗಳ್ಮಂದಯಾನಕ್ಕೆ ರಾಗಂ
ಬಡೆದಾದಂ ಪಿಂದೆಪಿಂದೈತರೆ ಸಮದ ಮರಾಳಾಳಿ ವಕ್ತ್ರೇಂದುವಿಂ ಧೀಂ
ಕಿಡೆ ಲೋಲಾಪಾಂಗರುಕ್ಚಂದ್ರಿಕೆ ನಿಜಪೃಥುವಕ್ಷೋಜಭಾರಕ್ಕಳುಂಬಂ
ನಡು ಮೆಲ್ಪಿಂ ಬಳ್ಕೆ ಬಂದಾ ಬಸವನಿದಿರೊಳಾ ದೇವಿ ನಿಂದಿರ್ದಳಾಗಳ್ ೨೭

ರತಿಯಂ ಗೆಲ್ವ ಮನೋಜ್ಞರೂಪವತಿಯಂ ಲಿಂಗಾರ್ಚನಾಸಕ್ತ ಸ
ನ್ಮತಿಯಂ ಪೂರ್ಣಕಳಾವಿಳಾಸವತಿಯಂ ಪ್ರಾಣೇಶಸದ್ಭಕ್ತ್ಯರುಂ
ಧತಿಯಂ ಪೂಜಿತಜಂಗಮಪ್ರತತಿಯಂ ಮಾಂಗಲ್ಯಸಾಕಲ್ಯ ಸಂ
ಗತಿಯಂ ಶ್ರೀ ವೃಷಭೇಂದ್ರನಾತ್ಮಸತಿಯಂ ನೋಡುತ್ತೆ ಸಂಪ್ರೀತಿಯಿಂ ೨೮

ಬಸವಣ್ಣನ ಬಳಿಗೆ ಬಂದು—೨೬. 'ಬಸವೇಶ್ವರ, ನಿನ್ನ ಸತಿಯು ಉಟ್ಟಿರುವ ಅತಿ ನೂತನವೂ, ಶ್ರೇಷ್ಠವೂ ಆದ ಅಂಬರವನ್ನು (ಸೀರೆಯನ್ನು) ತಪ್ಪದೆ ನಮಗೆ ಕೊಡು, ಎನ್ನಲಾಗಿ–ಬಸವಣ್ಣನು ಉತ್ಸಾಹಗೊಂಡವನಾಗಿ, 'ದೇವ, ಜಂಗಮ ಶ್ರೇಷ್ಠನೇ' ಮಹಾಪ್ರಸಾದ' ಎನ್ನುತ್ತ ವಿಶೇಷವಾದ ಪ್ರೀತಿಯಿಂದ ಚಂದ್ರಮುಖಿಯಾದ ತನ್ನ ಪತ್ನಿ ಗಂಗಾಂಬಿಕೆಯನ್ನು ಆ ಕೂಡಲೇ ಸಭಾಸ್ಥಾನಕ್ಕೆ ಬರಮಾಡಿಕೊಂಡನು. ಆ ಬಸವೇಶ್ವರನ ಭಕ್ತಿಯು ಎಷ್ಟು ಅಧಿಕವಾದದ್ದೋ ! ೨೭. (ಬಸವಣ್ಣನ ಪತ್ನಿಯಾದ ಗಂಗಾಂಬಿಕೆ ಸಭೆಗೆ) ಬಂದಾಗ, ಮುಡಿಯಲ್ಲಿ ಧರಿಸಿದ್ದ ಹೂಗಳ ಕಂಪಿಗೆ ದುಂಬಿಗಳು ಝೇಂಕಾರ ಮಾಡುತ್ತ ಸಮೀಪಕ್ಕೆ ಬಂದು ಮುತ್ತಿದವು ; ಮದೋನ್ಮತ್ತ ಹಂಸಪಕ್ಷಿಗಳ ಸಾಲು ಆ ಗಂಗಾಂಬಿಕೆಯ ಮಂದಗಮನಕ್ಕೆ ಅನುರಾಗಗೊಂಡು ಚೆಲುವಿನಿಂದ ಹಿಂದೆ ಹಿಂದೇ ಬರುತ್ತಿದ್ದವು ; ಚಂಚಲವಾದ ಕಡೆಗಣ್ಣುಗಳ ಕಾಂತಿಯೆಂಬ ಬೆಳದಿಂಗಳು ಮುಖವೆಂಬ ಚಂದ್ರನಿಂದ (ಮುಂದಕ್ಕೆ) ಹಾರಿಬರುತ್ತಿತ್ತು ; ಅವಳ ದಪ್ಪವಾದ ಸ್ತನಗಳ ಭಾಗಕ್ಕೆ ನಡುವು ವಿಶೇಷವಾಗಿ ಮೆಲ್ಲಗೆ ಬಳುಕುತ್ತಿತ್ತು. ಹೀಗೆ ಆ ಗಂಗಾದೇವಿಯು ಬಂದು ಬಸವಣ್ಣನ ಮುಂದುಗಡೆಯಲ್ಲಿ ನಿಂತಳು. ೨೮. (ಆಗ) ಶ್ರೀ ಬಸವೇಶ್ವರನು–ರತಿದೇವಿ ಯನ್ನು ಗೆಲ್ಲುವಂತಹ ಮನೋಹರ ಸೌಂದರ್ಯವುಳ್ಳವಳೂ, ಶಿವಲಿಂಗ ಪೂಜೆಯಲ್ಲಿ ಅನುರಕ್ತಗೊಂಡ ಬುದ್ಧಿಯುಳ್ಳವಳೂ, ಸಂಪೂರ್ಣವಾದ ವಿದ್ಯಾವಿಲಾಸವುಳ್ಳವಳೂ, ಪ್ರಾಣಕಾಂತನಾದ ಬಸವಣ್ಣನಲ್ಲಿರುವ ಭಕ್ತಿ ವಿಷಯದಲ್ಲಿ ಅರುಂಧತೀ ದೇವಿಗೆ ಸಮನಾದ ವಳೂ, ಜಂಗಮ ಸಮೂಹವನ್ನು ಅರ್ಚಿಸುವವಳೂ, ಸಮಸ್ತ ಮಂಗಳ ಸಮೂಹಗಳ ಸಂಬಂಧವುಳ್ಳವಳೂ ಆದ ತನ್ನ ಹೆಂಡತಿಯನ್ನು ವಿಶೇಷವಾದ ಪ್ರೀತಿಯಿಂದ ನೋಡುತ್ತ

ನುಡಿದಂ ಭಾಮಿನಿ ಭಕ್ತಿಯಿಂ [1]ಕೊಡು ಕೊಡೀ[1]ದೇವಂಗೆ ನೀನುಟ್ಟ ಚೆ
ಲ್ವಪರ್ದೀ ದಿವ್ಯದುಕೂಲಮಂ ಜವದಿನೆಂದುದ್ವೀತಲಜ್ಜಂ ಮಹಾ
ವೃಢಭಕ್ತಿಸ್ಥಿರಚಿತ್ತನೆಳ್ದು ಬಸವಂ ಗಂಗಾಂಬಿಕಾದೇವಿಯು
ಟ್ಟುಡೆಯಂ ಮುಟ್ಟಿ ಸೆಱಂಗನೀಳ್ದು ಸೆಳೆದೊಟ್ಟುತ್ತಿರ್ದನಾಸ್ಥಾನದೊಳ್ ೨೯

ಸೆಳೆದೊಡೆ ಬಳೆದುದು ಮತ್ತಂ
ಸೆಳೆದೊಡೆ ಮತ್ತಂತೆ ಬಳೆವುತಿರ್ದುದು ರುಚಿಮಂ
ಜುಳವಸನಂ ಬಸವನ ಕೈ
ದಳಸೋಂಕಿನ ಮೈಮೆ ಮಹಿಗೆ ಸಾಧಾರಣಮೇ ೩೦

ಬಸವೇಶಕರಸಮೀರಣ
ದೆಸಕದೆ ಕುಮುದಾಕ್ಷಿ ಕೋಕಕುಚೆ ಬಿಸಜಸಮು
ಲ್ಲಸಿತಾನನೆ ಗಂಗಾಂಬಿಕೆ
ವಸನತರಂಗಪ್ರತಾನಮಂ ತಳೆದೆಸೆದಳ್ ೩೧

೨೯. ಹೀಗೆ ನುಡಿದನು : 'ಭಾಮಿನೀ, ಈ ದೇವನಿಗೆ (ಜಂಗಮನಿಗೆ) ನೀನುಟ್ಟ ಚೆಲುವಿನ ಈ ಶ್ರೇಷ್ಠವಾದ ಪಟ್ಟೇ ಸೀರೆಯನ್ನು ಜೇಗನೆ ಕೊಡು ಕೊಡು' ! ಎಂದು ನುಡಿದನು. ಆಸ್ಥಾನದಲ್ಲಿ ಶಿವಭಕ್ತಿಯಲ್ಲಿ ದೃಢವಾದ ಚಿತ್ತವುಳ್ಳ ಬಸವಣ್ಣನು—ನಾಚಿಕೆಯನ್ನೇ ಬಿಟ್ಟವನಾಗಿ ಎದ್ದು ಗಂಗಾದೇವಿಯು ಉಟ್ಟ ಸೀರೆಯ ಉಡಿಯನ್ನು ಮುಟ್ಟಿ, ಸೆರಗನ್ನು ಹಿಡಿದು ಸೆಳೆಯುತ್ತ (ಸೀರೆಯ) ರಾಶಿಯನ್ನೇ ಹಾಕತೊಡಗಿದನು. ೩೦. (ಹೀಗೆ) ಸೆಳೆಯುತ್ತಿರಲಾಗಿ (ಸೀರೆಯು) ಮತ್ತೆ ಮತ್ತೆ ಬೆಳೆಯುತ್ತಲೇ ಇತ್ತು. ಮತ್ತೂ ಸೆಳೆಯುತ್ತಿದ್ದ ಹಾಗೆ ಕಾಂತಿಯಿಂದ ಕೂಡಿದ ಮನೋಹರವಾದ ಸೀರೆ ಬೆಳೆಯುತ್ತಲೇ ಇತ್ತು ! ಬಸವಣ್ಣನ ಹಸ್ತ ಪ್ರದೇಶದ ಸೋಂಕುವಿಕೆಯ ಮಹಿಮೆ ಸಾಮಾನ್ಯವಾದದ್ದೆ ! ೩೧. ನೈದಿಲೆಯಂತಹ ನೇತ್ರವುಳ್ಳವಳೂ, ಚಕ್ರವಾಕ ಪಕ್ಷಿಗಳಂತಹ ಕುಚವುಳ್ಳವಳೂ, ಕಮಲದಂತಹ ಪ್ರಕಾಶಮಾನವಾದ ಮುಖವುಳ್ಳವಳೂ ಆದ ಗಂಗಾಂಬಿಕೆಯು, ಬಸವೇಶ್ವರನ ಹಸ್ತದಿಂದ ಉದ್ಭವಿಸಿದ ವಾಯುವಿನ ಬೀಸುವಿಕೆಯಿಂದ ತೆರೆಯಂತಿರುವ ಸೀರೆಗಳ ಸಮೂಹವನ್ನು ಹೊಂದಿ ಶೋಭಿಸಿದಳು. [ಗಂಗಾನದಿಯು ಪರವಾಗಿ ಹೀಗೆ ಹೇಳಬಹುದು : ನೈದಿಲೆಯೆಂಬ ನೇತ್ರವುಳ್ಳ, ಚಕ್ರವಾಕ ಪಕ್ಷಿಗಳೆಂಬ ಸ್ತನಗಳುಳ್ಳ, ಕಮಲವೆಂಬ ಪ್ರಕಾಶಮಾನವಾದ ಮುಖವುಳ್ಳ, ಗಂಗಾನದಿಯು ಬಸವಣ್ಣನ ಹಸ್ತದಿಂದುದ್ಭವಿಸಿದ ವಾಯುವಿನಿಂದ ಸೀರೆಗಳಂತಿರುವ ತೆರೆಗಳ ಸಮೂಹವನ್ನು ಹೊಂದಿ,

1 ಕುಡು ಕುಡೀ (ದ, ಗ, ಮು, ಜ,)

ಧರಿಸಿದ ಭೂಷಣಾವಳಿಯ ಮುತ್ತು ಮುಗುಳ್ನಗೆಗಣ್ಣರಲ್ದರ
ಲ್ಕರತಳವೊಳ್ದಳಿರ್ಕುರುಳಬಂಬಲೆ ತಳ್ತಳಿವಿಂಡು ಲೋಹಿತಾ
ಧರವೆಳೆನುಣ್ದಳಿರ್ಫಲಮುರೋಜಮದಾಗಿರೆ ನವ್ಯಕಲ್ಪವ
ಲ್ಲರಿಯವೊಲಾ ವೃಷೇಂದ್ರವಧುವಿತ್ತಳನಂತ ವಿಚಿತ್ರವಸ್ತ್ರಮಂ ೩೨

ಸೆಳೆಮಿಂಚಪ್ಪಿದ ಶಾರದ
ಜಳಧರಮೆಂಬಂತೆ ಪೊಂಜೆಱಂಗಮುರ್ದಸಿತೋ
ಜ್ವಲವಸನಂ ಕಂಗೆಸೆದುದು
ನಳಿನಾಕ್ಷಿಯ ಘನನಿತಂಬಗಿರಿಕಂದರದೊಳ್ ೩೩

ವ॥ ಅಂತೊಪ್ಪುವಂಬರದೊಟ್ಟಿಲಂ ದೇವ ಯಥೇಷ್ಟಂ ಕೊಳ್ವುದೆಂದಾ ಪಲ್ಲವಚರಂಗೆ ಮನಂದಣಿಯೆ ಸಮರ್ಪಿಸೆ ಸರ್ವಜನಂ ಕಂಡು ವಿಸ್ಮಯಂಗೊಂಡು ಕೊಂಡಾಡುತ್ತಿರೆ ಶರಣರ್ಸಾದರಮಭೀಕ್ಷಿಸಿ

ಪೊಡವಿಯೊಳಿಂತಿದೊಂದರಿದೆ ಭಕ್ತಜನಕ್ಕೆ ತಪಸ್ವಿ ಬೇಡೆ ಮು
ನ್ನಿಡುಗುಡಿನಾಥನೀಯನೆ ನಿಜಾಂಗನೆಯುಟ್ಟ ನವೀನ ಚೇಲಮಂ
ತಡೆಯದೆ ಪನ್ನೆರಳ್ಬರಿಸಮುಂದಮರಲ್ದಿರೆ ನೆಯ್ದ ವಸ್ತ್ರಮಂ
ಕುಡನೆ ಚರೋತ್ತಮಂಗೆಳಸಿ ಜೇಡರದಾಸನತೀವ ಭಕ್ತಿಯಿಂ ೩೪

ಶೋಭಿಸುತ್ತಿತ್ತು] ೩೨. ಧರಿಸಿದ ಭೂಷಣ ಸಮೂಹದ ಮುತ್ತುಗಳೇ ಮೊಗ್ಗುಗಳು ; ನಗೆಗಣ್ಣುಗಳೇ ಅರಳಿದ ಹೂವುಗಳು ; ಅಂಗೈಯ ಪ್ರದೇಶವೇ ಒಳ್ಳೆಯ ಚಿಗುರು ; ಕೂದಲಿನ ಸಮೂಹವೇ ಮುತ್ತಿದ ದುಂಬಿಗಳ ಸಮೂಹ ; ಕೆಂಪಾದ ತುಟಿಗಳೇ–ಎಳೆಯವಾಗಿಯೂ, ಕೆಂಪಾಗಿಯೂ ಇರುವ ಚಿಗುರುಗಳು ; ಸ್ತನಗಳೇ ಹಣ್ಣುಗಳು–ಹೀಗಿರಲು ಆ ಬಸವೇಶ್ವರನ ಪತ್ನಿಯಾದ ಗಂಗಾಂಬಿಕೆಯು ನೂತನವಾದ ಕಲ್ಪವೃಕ್ಷದ ಹಾಗೆ ಲೆಕ್ಕವಿಲ್ಲದ ವಿಚಿತ್ರವರ್ಣದ ಸೀರೆಗಳನ್ನು ಕೊಟ್ಟಳು. ೩೩. ಕಮಲದಂತಹ ನೇತ್ರವುಳ್ಳ ಆ ಗಂಗಾಂಬಿಕೆಯ ಸುವರ್ಣಮಯವಾದ ಸೆರಗಿನಿಂದ ಕೂಡಿದ ಶುಭ್ರವಾಗಿ ಪ್ರಕಾಶಿಸುವ ಸೀರೆಯು, ಕಟಿಪಶ್ಚಾದ್ಭಾಗವೆಂಬ ಪರ್ವತ ಪ್ರದೇಶದಲ್ಲಿ ಸೂಕ್ಷ್ಮವಾದ ಮಿಂಚಿನಿಂದ ಕೂಡಿದ ಶರತ್ಕಾಲದಲ್ಲಿನ ಮೋಡವೋ ಎನ್ನುವಂತೆ ಕಂಗೊಳಿಸಿತು. ವ॥ ಈ ರೀತಿಯಾಗಿ ಶೋಭಿಸುವ ಸೀರೆಗಳ ರಾಶಿಯನ್ನು (ತೋರಿಸಿ) 'ದೇವ, ನಿಮಗೆ ಇಷ್ಟವಾದಷ್ಟನ್ನು ತೆಗದುಕೊಳ್ಳಬೇಕು' ಎಂದು ಆ ವಿಟಜಂಗಮನಿಗೆ ತೃಪ್ತಿಯಾಗುವಂತೆ ಅರ್ಪಿಸಲು ಸರ್ವಜನರೂ (ಈ ರೀತಿಯನ್ನು) ಕಂಡು ಆಶ್ಚರ್ಯಗೊಂಡು ಕೊಂಡಾಡುತ್ತಿರಲಾಗಿ, ಶರಣರು ಆದರಪೂರ್ವಕವಾಗಿ ನೋಡುತ್ತ—೩೪. ಭೂಮಿಯಲ್ಲಿ ಈ ಒಂದು ರೀತಿಯು ಶಿವಭಕ್ತ ಜನರಿಗೆ ಅಸಾಧ್ಯವಾದದ್ದೇನು ? ಪೂರ್ವದಲ್ಲಿ ಇಡುಗುಡಿ ನಾಥನೆಂಬುವನು ತಪಸ್ವಿಯೊಬ್ಬನು ಬಂದು ಬೇಡಲು ತನ್ನ ಪತ್ನಿಯು ಉಟ್ಟ ಹೊಸ ಸೀರೆಯನ್ನೇ ಕೊಡಲಿಲ್ಲವೇ ? ತಪ್ಪದೆ ಹನ್ನೆರಡು ವರ್ಷ ಚೆಂದವಾಗಿರುವ ಹಾಗೆ ಚೆನ್ನಾಗಿ ನೆಯ್ದ ವಸ್ತ್ರವನ್ನು ಜೇಡರದಾಸಿಮಯ್ಯನು ಅತ್ಯಂತ ಭಕ್ತಿಯಿಂದ ಅದನ್ನು

ಪಸೆನಿಂದಾತ್ಮಜೆಯುಂದವಮಾಳ್ದ ಮುಡಿಯುಂ ಕೊಯ್ದಿಯನೇ ಬೇಡೆ ತಾ
ಪಸನಾತಂಗುಱಿ ಮಾನಕಂಜನವನೀಶಂ ಸಿಂಧುಬಲ್ಲಾಳನು
ದ್ದೊಸೆದಾತ್ಮಾಂಗನೆಯುಂ ಸಮರ್ಪಿಸನೆ ಕೂರ್ತಯ್ಯಂಗೆ ಭೂಭಾಗದೊಳ್
ಪಸರಂಬೆತ್ತಳಿಪಾಱಿ ಪಲ್ಲವಚರೇಂದ್ರಂಗಳ್ಕಱಿಂ ಪೊಂಗಳಂ ೩೫

ಮೊನೆಯಧರನೀಯನೇ ಬಹು
ಧನಧಾನ್ಯಾವಳಿಯನೊಪ್ಪಿಸನೆ ಬಲ್ಬಱದೊಳ್
ಘನಶರಣತತಿಗೆ ಗುಣನಿಧಿ
ಯೆನಿಪಿಡುಗುಡಿಯಲ್ಲಿ ಮೆಱೆವ ಪೆರ್ಮಾಡಿಕರಂ ೩೬

ವ॥ ಎಂದೆಣಿಸುತ್ತಂ ಗಣಮಹಿಮೆಯುನಣಿಯರಂ ಪೊಗಳುತ್ತಮಿರೆಯಿರೆ—

ಆ ದಿವ್ಯಾಂಬರದೊಟ್ಟಿಲ
ನಾ ದೇವ ಕೊಂಡು ಬಸವನಂ ಪರಸಿ ಮಹಾ
ಮೋದಂ ಮಿಗೆ ಪೋದಂ ಸವಿ
ನೋದಂ ಗಣಿಕಾಲಯಕೆ ಸಂಭ್ರಮದಿಂದಂ ೩೭

ಪರಮಪತಿವ್ರತೆಯರ ಕುಲ
ಗುರು ಬಸವನ ಭಕ್ತಿಯಿಂದೆ ಮಾನೋನ್ನತಿಯೋ
ಸರಿಸದೆ ಸಭೆಯೊಳ್ಮಹಿಮೆಯು
ನಿರದಾಂತೆಳ್ತಂದು ದೇವಿ ಗೃಹಮಂ ಪೊಕ್ಕಳ್ ೩೮

ಪೇಕ್ಷಿಸಿದ ಜಂಗಮಶ್ರೇಷ್ಠನಿಗೆ ಕೊಡಲಿಲ್ಲವೆ ?' ೩೫–೩೬. ಮಾನಕಂಜರನು ತಾಪಸ ನಾಥನೊಬ್ಬನು ಬೇಡಲಾಗಿ ಹಸೆಯ ಮೇಲೆ ನಿಂತಿದ್ದ ತನ್ನ ಮಗಳ ಮನೋಹರವಾದ ಮುಡಿಯನ್ನೇ (ಕೂದಲುಗಳನ್ನೇ) ಕತ್ತರಿಸಿಕೊಡಲಿಲ್ಲವೆ ? ಸಿಂಧು ಬಲ್ಲಾಳನೆಂಬ ರಾಜನು ಅಪೇಕ್ಷಿಸಿದ ಅಯ್ಯನೊಬ್ಬನಿಗೆ ಅಂದು ಪ್ರೀತಿಯಿಂದ ತನ್ನ ಪತ್ನಿಯನ್ನೇ ಸಮರ್ಪಿಸಲಿಲ್ಲವೇ ? ವಿಸ್ತಾರವಾದ ದುರಾಸೆಯು ನಾಶವಾಗುವಂತೆ ಮೊನೆಯಧರ ನೆಂಬುವನು (ಓರ್ವ) ವಿಟಜಂಗಮನಿಗೆ ಹೊನ್ನುಗಳನ್ನು ಕೊಡಲಿಲ್ಲವೇ ?' ಇಡಗುಡಿ ಎಂಬ ಪಟ್ಟಣದಲ್ಲಿ ಗುಣನಿಧಿಯೆನಿಸಿದ್ದ 'ಪೆರ್ಮಾಡಿಕರ'ನೆಂಬಾತನು ದೊಡ್ಡ ಬರಗಾಲದಲ್ಲಿ ಶ್ರೇಷ್ಠ ಶರಣರಿಗೆ ವಿಶೇಷವಾಗಿ ಧಾನ್ಯ ಸಮೂಹವನ್ನು ಕೊಡಲಿಲ್ಲವೇ ?' ವ॥ ಹೀಗೆಂದು ಆಲೋಚಿಸುತ್ತ ಗಣಂಗಳ ಮಹಿಮೆಯನ್ನು ಮನೋಹರವಾಗಿ ಹೊಗಳುತ್ತ ಇರಲಾಗಿ—೩೭. ಆ ಜಂಗಮದೇವನು ಆ ಶ್ರೇಷ್ಠವಾದ ಸೀರೆಯ ರಾಶಿಯನ್ನು ತೆಗೆದು ಕೊಂಡು ಅಧಿಕವಾದ ಸಂತೋಷದಿಂದ ತುಂಬಿ, ಬಸವಣ್ಣನನ್ನು ಹರಸಿ, ವಿನೋದ ಸಹಿತವಾಗಿ ಸಂಭ್ರಮದಿಂದ ಸೂಳೆಯ ಮನೆಗೆ ಹೋದನು. ೩೮. ಪರಮಪತಿವ್ರತೆಯರ 'ಕುಲಗುರು' (ಎಂದೆನಿಸಿದ) ಗಂಗಾಂಬಿಕೆಯು ಬಸವಣ್ಣನ ಭಕ್ತಿಯ ದೆಸೆಯಿಂದ, ಸಭೆ ಯಲ್ಲಿ ಉನ್ನತಗೊಂಡ ತನ್ನ ಮಾನವು ಜಾರದಂತೆ ಮಹಿಮೆಯನ್ನು ಹೊಂದಿದವಳಾಗಿ,

ವ|| ಅನಂತರಮಾ ಬಸವರಾಜಂ ಗಣಸಮೇತಂ ನಿಜಾಂತಃಪುರಂಬೊಕ್ಕು ಸುಖವಿರ್ಪಿನ ಮಲ್ಲಿಗೊರ್ವ ಪಲ್ಲವಚರನೇಳ್ತಂದು ಮಾಯಾದೇವಿಯ ಮಣಿತಾಟಂಕಮಂ ಕಂಡು ಬೇಡೆ—

ಘಳಿಲನೆ ರಮಣಿಯ ಕಿವಿಯೊಳ್
ಥಳಥಳಪ ಮಣಿಪ್ರಕಾಶಮಂಡಿತ ಕನಕೋ
ಜ್ವಳ ಕುಂಡಳಮಂ ತೆಗೆದಾ
ಗಳೆ ಕೊಟ್ಟನವಂಗೆ ಭಕ್ತಜನಮಂದಾರಂ ೩೯

ವ|| ಅಂತಿತ್ತು ಬಸವಂ ಶಿವಗಣಗೋಷ್ಠಿಯೊಳಿರುತ್ತಮಿರ್ಪಾಗಳ್—

ಎನ್ನಣುಗನನೆನ್ನಂ ಬಸ
ವಂ ನಿಜವಿತರಣದೆ ತೇಜದಿಂ ಗೆಲ್ದನೆನು
ತ್ತಂ ನಾಣ್ಚುತಧೋಮುಖನಾ
ದಂ ನಿಜಮೆನೆ ಸೂರ್ಯನಿಳಿದನಸ್ತಾಚಲದೊಳ್ ೪೦

ಇನವಿರಹಿಣಿ ಪದ್ಮಿನಿ ಜೀ
ವನಮುಱೆ ನಿಜಕಂಠಗತಮದಾಗಿರೆ ಮೂರ್ಛಾ
ವನತೆ ಮುಗುಳ್ಚುವ ಕಣ್ಣೆಂ
ದೆನಿಸಿರ್ದುದು ತುಂಬಿವೆರಸಿ ಮುಗಿವಂಭೋಜಂ ೪೧

ಅಲ್ಲಿಂದ ಹೊರಟುಬಂದು ತನ್ನ ಮನೆಯನ್ನು ಹೊಕ್ಕಳು. ವ|| ಅನಂತರ ಆ ಬಸವ ರಾಜನು ಶಿವಗಣ ಸಮೇತನಾಗಿ ತನ್ನ ಅಂತಃಪುರವನ್ನು ಹೊಕ್ಕು ಸುಖದಿಂದ ಇರುತ್ತಿರು ವಲ್ಲಿಗೆ ಮತ್ತೊರ್ವ ವಿಟಜಂಗಮನು ಬಂದು, ಆ ಗಂಗಾಂಬಿಕೆಯ ರತ್ನ ಖಚಿತವಾದ ಓಲೆಯನ್ನು ಬೇಡಲಾಗಿ—೩೯. ಭಕ್ತರ ಕಲ್ಪವೃಕ್ಷನಾದ ಬಸವೇಶ್ವರನು (ತನ್ನ) ಹೆಂಡತಿಯ ಕಿವಿಯಲ್ಲಿ ಥಳಥಳಿಸಿ ಹೊಳೆಯುವ ರತ್ನಗಳ ಕಾಂತಿಯಿಂದ ಅಲಂಕಾರ ಗೊಂಡ ಚಿನ್ನದ ಪ್ರಕಾಶಿಸುವ ಕರ್ಣಾಭರಣಗಳನ್ನು (ಓಲೆಗಳನ್ನು) ಆ ಕ್ಷಣವೇ ತೆಗೆದು ಆ ಕೂಡಲೇ ಆ ಭಕ್ತನಿಗೆ ಕೊಟ್ಟನು. ವ|| ಈ ರೀತಿಯಲ್ಲಿ (ಓಲೆಗಳನ್ನು) ಕೊಟ್ಟು, ಶಿವಾನುಭವಗೋಷ್ಠಿಯಲ್ಲಿ ಇರುವ ಸಮಯದಲ್ಲಿ—೪೦. ನನ್ನ ಮಗನಾದ ಕರ್ಣನನ್ನು (ಈ) ಬಸವಣ್ಣನು ತನ್ನ ದಾನಗುಣದಿಂದ ಗೆದ್ದನು ; ತೇಜಸ್ಸಿನಿಂದ ನನ್ನನ್ನು ಗೆಲ್ಲುವನು, ಎನ್ನುತ್ತ ಸೂರ್ಯನು ನಾಚಿಕೊಂಡು ತಗ್ಗಿದ ಮುಖವುಳ್ಳವನಾಗಿ (ಪಾತಾಳಕ್ಕಭಿ ಮುಖನಾಗಿ) ಆದನು ಇದು ನಿಜ ! ಎಂಬಂತೆ ಪಶ್ಚಿಮಾದ್ರಿಯಲ್ಲಿ ಇಳಿದನು. ೪೧. ಸೂರ್ಯನೆಂಬ ನಾಯಕನ ವಿರಹವುಳ್ಳ ಕಮಲಿನಿಯೆಂಬ ಸ್ತ್ರೀಯು ಆ ಜೀವವು (ಆ ಜಲವು) ಕಂಠಕ್ಕೆ ಬಂದಿರುವುದು ಎಂಬಂತೆ ಆಗಿರಲು, ಭ್ರಮರ ಸಮೇತವಾಗಿ ಮುಕುಳಿತಗೊಳ್ಳುವ ಕಮಲವು ಮೂರ್ಛೆಯಿಂದ ಬಗ್ಗಿದ ಆ ಕಮಲಿನಿಯೆಂಬ ಸ್ತ್ರೀಯು ಮುಚ್ಚಿದ ಕಣ್ಣು ಎಂದೆನಿಸಿತು. [ಇನ–ಸೂರ್ಯ, ಗಂಡ; ಪದ್ಮಿನಿ–ಕಮಲ

ಅರಿರಾಜಂ ಬಂದಪನೆ
ನ್ನರಸಂ ಪಡುಗಡಲೊಳಿ[1]ೞಿದನೇಗೈದಪೆನೆಂ
ದರವಿಂದಿನಿಯುಮ್ಮಳದು
ಬ್ಬರದಿಂ ಕಣ್ಮುಚ್ಚಿದಂತೆ ಮುಗಿದುದು ನಳಿನಂ ೪೨

ಪವನವಣಿಗ್ವರನಳಿವಾ
ಸವಮಣಿಗಳ ಪಸರಮಿಕ್ಕಿ ಪಗಲಳಿಯೆ ಸಮಂ
ತವನಮರೆ ನಳಿನಮೆಂದೊ
ಪ್ಪುವ ಕಟ್ಟಣೆಯೊಳಗೆ ತೀವಿ ಕಟ್ಟಿದನಾಗಳ್ ೪೩

ಪಗೆಯ ಕೆಳೆಗೊಂಡ ಪದ್ಮಿನಿ
ನಗೆಗುಂದಿದಳವನಡಂಗೆ ಕೋಕಾನೀಕಂ
ಬಗೆಗುದಿದುದೆಂದಣಕದೆ
ನಗುವಂತೆವೊಲಲರ್ದುದುತ್ಪಲಂ ತಿಳಿಗೊಳದೊಳ್ ೪೪

ತಾರಾಮಾರ್ಗಸ್ಥಳೀಭಾಮಿನಿ ಮಲಿನತಮಸ್ಸ್ತಸ್ಕರಂ ಬದ್ಧಚಕ್ಷು
ಸ್ಸಾರಶ್ರೀಹಾರಿಯೇಳ್ತಂದಪನೆನುತೆ ಭಯಂಬಟ್ಟು ಮುಂಕಂಡು ಪದ್ಮಾ

ಪದ್ಮಿನೀ ಜಾತಿಯ ಸ್ತ್ರೀ; ಜೀವನ–ಪ್ರಾಣ, ನೀರು;] ೪೨. ವೈರಿಯಾದ ಚಂದ್ರನು ಬಂದನು; ನನ್ನ ಅರಸನಾದ ಸೂರ್ಯನು ಪಶ್ಚಿಮ ಸಮುದ್ರದಲ್ಲಿ ಮುಳುಗಿದನು. ಏನು ಮಾಡಲಿ? ಎಂದು ಕಮಲಿನಿಯು (ಕಮಲವೆಂಬ ಸ್ತ್ರೀಯು) ಚಿಂತೆಯು ಆಧಿಕ್ಯದಿಂದ ಕಣ್ಣನ್ನು ಮುಚ್ಚಿದ ಹಾಗೆ ಕಮಲವು ಮುಕುಳಿತವಾಯಿತು. ೪೩. ವಾಯುವೆಂಬ ಶ್ರೇಷ್ಠ ವರ್ತಕನು, ಭ್ರಮರಗಳೆಂಬ ಇಂದ್ರನೀಲ ರತ್ನಗಳ ಅಂಗಡಿಯನ್ನಿಕ್ಕಿ, ಹಗಲು ನಾಶವಾಗಲು, ಆ ರತ್ನಗಳನ್ನು ಚೆನ್ನಾಗಿ ಕಮಲವೆಂಬ ಶೋಭಿಸುವ ಕಂಟಲಿಯು ಚೀಲದಲ್ಲಿ ಸೇರಿರುವಂತೆ ತುಂಬಿ ಕಟ್ಟಿದನು. [ಅಳಿ+ ವಾಸುವ+ಮಣಿ—ಅಳಿಗಳೆಂಬ ವಾಸವ ಮಣಿ (ಇಂದ್ರನೀಲರತ್ನ)] ೪೪. ಶತ್ರುವಾದ ಸೂರ್ಯನನ್ನು ಪ್ರಿಯನನ್ನಾಗಿ ಮಾಡಿಕೊಂಡ ಕಮಲ ಲತೆಯು ಆ ಸೂರ್ಯನು ಕಾಣದಂತಾಗಲು ಸಂತೋಷಹೀನಳಾದಳು. ಚಕ್ರವಾಕ ಪಕ್ಷಿಗಳ ಸಮುದಾಯವು ಧೈರ್ಯಗೆಟ್ಟಿತು ಎಂದು ಅಣಕಿಸುತ್ತ ನಗುತ್ತಿರುವುವೋ ಎಂಬಂತೆ ನಿರ್ಮಲ ಸರೋವರದಲ್ಲಿ ಕನ್ನೈದಿಲೆಗಳು ಅರಳಿದವು. ೪೫. ಕಣ್ಣನ್ನು ಕಟ್ಟಿ ಸಾರಭೂತವಾದ ಸಂಪತ್ತನ್ನು ಅಪಹರಿಸತಕ್ಕ ಮಲಿನವರ್ಣದ ಕತ್ತಲೆಯೆಂಬ ಕಳ್ಳನು ಎದ್ದು ಬರುತ್ತಿರುವನೆಂದು ಗಗನಮಾರ್ಗಸ್ಥಳಿಯೆಂಬ ಸ್ತ್ರೀಯು ಹೆದರಿದಳು. ಪದ್ಮಿನಿಯು (ಪದ್ಮಿನಿಯೆಂಬ ಸ್ತ್ರೀ ಮತ್ತು ತಾವರೆ ಬಳ್ಳಿ) ಪದ್ಮವೆಂಬ ಗೃಹವನ್ನು ಮೊದಲೇ

---

1 ಳ (ದ)

ಗಾರಂ ಮುಚ್ಚಿರ್ದುದಂ ಪದ್ಮಿನಿ ದಿನಮಣಿಯುಂ ಬೇಗದಿಂ ಕಟ್ಟುತಂ ಸಂ
ಧ್ಯಾರಾಗಾರಮ್ಯ ರಕ್ತಾಂಬರದಿನಪರರತ್ನಾಕರಕ್ಕಿಟ್ಟಳಾಗಳ್ ೪೫

ಭುವನೋತ್ತರದೇಶದೊಳಾ
ಡುವ ಮೀನ್ಗಳ್ಗೆಳಸಿ ಕಾಲ ಧೀವರನಾಗಳ್
ತವಕದೆ ಬೀಸಿದ ಕರ್ಬಲೆ
ಭುವನಮನಾವರಿಸಿದಂತೆ ಕವಿದುದು ತಿಮಿರಂ ೪೬

ವ॥ ಆಗಳ್—

ನವಸಂಧ್ಯಾರಾಗರಕ್ತಾಂಬುಜನಿವಹಮನೊಲ್ದರ್ಪಿಸುತ್ತೊಂದಲರ್ಕುಂ
ದೆ ವಿಯತ್ಪದ್ಮಾಕ್ಷನಸ್ತಾರುಣನಿಜನಯನಾಂಭೋಜದಿಂದಸ್ತಭೂಭೃ
ಚ್ಛಿವಲಿಂಗಾರಾಧನಂಗೈದೊಲಿಸಿ ಪಡೆದ ಚಕ್ರಂಬೊಲಿಂಬಾಯ್ತು ಲೋಕ
ಸ್ತವನೀಯಪ್ರಾಂಶುದೃಪ್ಯತ್ತಿಮಿರದನುಭವದ್ರಾವಕಂ ಚಂದ್ರಬಿಂಬಂ ೪೭

ಮುಚ್ಚಿಬಿಟ್ಟಿರುವುದನ್ನು ನೋಡಿ, ದಿನಮಣಿಯನ್ನು (ಸೂರ್ಯನನ್ನು—ದಿನವೆಂಬ ರತ್ನವನ್ನು) ಸಂಧ್ಯಾರಾಗವೆಂಬ ಕೆಂಪು ಬಟ್ಟೆಯಲ್ಲಿ ಕಟ್ಟಿ (ಸಂಜೆಗೆಂಪಿನಿಂದ ರಮ್ಯವಾದ ಗಗನದಿಂದ) ಪಶ್ಚಿಮ ರತ್ನಾಕರಕ್ಕೆ—ಪಶ್ಚಿಮ ಸಮುದ್ರಕ್ಕೆ ಎಸೆದುಬಿಟ್ಟಳು. (ಕಳ್ಳನು ಬರುವನೆಂದು ಗೊತ್ತಾದರೆ ಜನರು ಹಣದ ಗಂಟನ್ನು ಬಾವಿಗೋ ಕೊಳಕ್ಕೋ ಎಸೆದು ರಕ್ಷಿಸಿಕೊಳ್ಳುತ್ತಾರೆಂಬ ಲೋಕ ವೃತ್ತಾಂತವು ಇಲ್ಲಿ ಸೂಚಿತವಾಗಿದೆ—(ರಂ) ೪೬. ಕಾಲವೆಂಬ ಬೆಸ್ತರವನು ಭೂಲೋಕದ ಮೇಲುಗಡೆಯಲ್ಲಿ (ಜಲದ ಮೇಲು ಭಾಗದಲ್ಲಿ) ಸಂಚರಿಸುವ ನಕ್ಷತ್ರಗಳಿಗೆ (ಸಂಚರಿಸುವ ಮೀನುಗಳಿಗೆ), ಅಪೇಕ್ಷಿಸಿ, ಕುತೂಹಲದಿಂದ ಬೀಸಿದಂತಹ ಕಪ್ಪಾದ ಬಲೆಯು ಲೋಕವನ್ನು (ನೀರನ್ನು) ಆವರಿಸಿದೆಯೋ ಎಂಬಂತೆ ಕತ್ತಲೆಯು ಕವಿಯಿತು. ವ॥ ಆಗ ೪೭. ಅಂತರಿಕ್ಷವೆಂಬ ವಿಷ್ಣುವು ನೂತನವಾದ ಆರುಣ್ಯವರ್ಣವೆಂಬ ಕೆಂದಾವರೆಗಳ ಸಮೂಹವನ್ನು ಪ್ರೀತಿಯಿಂದ ಅರ್ಪಿಸುತ್ತ ಒಂದು ಹೂವು ಕಡಿಮೆಯಾಗಲು, ಮುಳುಗುತ್ತಿರುವ ಸೂರ್ಯನೆಂಬ ತನ್ನ ನೇತ್ರಕಮಲದಿಂದ (ಪಶ್ಚಿಮ ದಿಕ್ಕಿನಲ್ಲಿರುವ) ಅಸ್ತಾಚಲವೆಂಬ ಶಿವಲಿಂಗವನ್ನು ಪೂಜಿಸಿ (ಶಿವನನ್ನು) ಒಲಿಸಿಕೊಂಡು, ಪಡೆದ ಚಕ್ರಾಯುಧದ ಹಾಗೆ, ಪ್ರಪಂಚದ ಜನರಿಂದ ಸ್ತೋತ್ರ ಮಾಡಿಸಿಕೊಳ್ಳುವುದಕ್ಕೆ ಯೋಗ್ಯವಾದ ವಿಶೇಷವಾದ ಕಾಂತಿಯುಳ್ಳ, ಕೊಬ್ಬಿದ ಕತ್ತಲೆಯೆಂಬ ರಾಕ್ಷಸ (ದನುಭವ)ನನ್ನು ಓಡಿಸುವ ಚಂದ್ರ ಬಿಂಬವು ಮನೋಹರವಾಗಿತ್ತು (ಚಂದ್ರೋದಯವಾಯಿತು). [ವಿಯತ್ + ಪದ್ಮಾಕ್ಷಂ—ಆಕಾಶವೆಂಬ ಶ್ರೀ ವಿಷ್ಣು; ಅಸ್ತ + ಅರುಣ + ನಿಜ + ನಯನಾಂಭೋಜ—ಅಸ್ತನಾಗುತ್ತಿರುವ ಸೂರ್ಯನೆಂಬ ತನ್ನ ಕಣ್ಣೆಂಬ ಕಮಲ; ಅಸ್ತ + ಭೂಭೃತ್ + ಶಿವಲಿಂಗ + ಆರಾಧನ—ಅಸ್ತವಾಗುವ ದಿಕ್ಕಿನಲ್ಲಿರುವ ಪರ್ವತವೆಂಬ—ಶಿವಲಿಂಗದ ಆರಾಧನೆ; ದೃಪ್ಯತ್ + ತಿಮಿರ + ದನುಭವ + ದ್ರಾವಕಂ—ಕೊಬ್ಬಿದ (ಮದಾಂಧನಾದ)

ಅಮೃತಕರಂ ಚಕೋರತತಿಗಭ್ರಸರೋವರಕಬ್ಜನಾ ನಿಶಾ
ರಮಣಿಗೆ ರಾಜನುತ್ಪಲಿನಿಗೊಪ್ಪುವ ಚಂದ್ರನಿದಿರ್ಚಿದಂಧಕಾ
ರಮೆನಿಪ ರಕ್ಕಸಂಗೆ ವಿಧು ನಲ್ಮೆಗಡರ್ಪೆನಿಸಿರ್ದ ತಾರಕಾ
ಪ್ರಮದೆಗೆ ಮೆಚ್ಚುಗಾಣಿಪ ಕಳಾನಿಧಿಯಾದ ಮೃಗಾಂಕನೊಪ್ಪಿದಂ ೪೮

ಪಸಿದ ಚಕೋರಚಾತಕಚಯಂ ನಲಿದೀಂಟೆ ವಿಧೂಪಲಂಗಳಿಂ
ದೊಸರ್ವ ಜಲಂ ಪೊನಲ್ವರಿಯೆ ಸಾಲ್ವಿಡಿದುಯ್ಯಲನಾಡುವಂಗನಾ
ವಿಸರದ ತೋರ ಸೋರ್ಮುಡಿನವಿಲ್ನೆಗೆದಾಡೆ ಸುಧಾಂಶುಬಿಂಬಮಂ
ಬಸದೃಶ ಗೌರನೀರದಮದೇಂ ಸುಗಿದತ್ತೊ ಸುಧಾಂಶುವೃಷ್ಟಿಯಂ ೪೯

ಹರಿ ಹರಿದದ್ರಿಕುಂಭದಿನೊಱಲ್ದೊಗೆದಿಂದುವೆನಿಪ್ಪಗಸ್ತ್ಯನ
ಚ್ಚರಿ ಮಿಗೆ ನೀಳ್ದ ತನ್ನ ಕರದಿಂ ಮೊಗೆದಂಧತಮಸ್ಸಮುದ್ರಮಂ

ಕತ್ತಲೆಯೆಂಬ, ದಾನವನನ್ನು ಓಡಿಸುವ] ೪೮. ಚಕೋರ ಪಕ್ಷಿಗಳ ಸಮೂಹಕ್ಕೆ ಅಮೃತವನ್ನುಂಟುಮಾಡುವವನೂ, ಅಂತರಿಕ್ಷವೆಂಬ ಸರೋವರಕ್ಕೆ ಕಮಲವಾಗಿರುವನೂ, ರಾತ್ರಿಯೆಂಬ ಸ್ತ್ರೀಗೆ ರಾಜನಾದವನೂ, ನೈದಿಲೆಯ ಬಳ್ಳಿಯೆಂಬ ಸ್ತ್ರೀಗೆ ಆಹ್ಲಾದಕಾರಿಯೂ, ಎದುರಿಸಿದ ಅಂಧಕಾರವೆಂಬ ರಾಕ್ಷಸನಿಗೆ ವಿಷ್ಣುವೂ, ಪ್ರೀತಿಗೆ ಆಶ್ರಯಳೆನಿಸಿರುವ ನಕ್ಷತ್ರವೆಂಬ ಸ್ತ್ರೀಗೆ (ರೋಹಿಣೀದೇವಿಗೆ ?) ಮೆಚ್ಚುಗೆಯನ್ನು ತೋರಿಸುವವನೂ (ಪ್ರೀತಿಯನ್ನು ತೋರಿಸುವವನೂ), ಕಲಾಶಾಸ್ತ್ರಕ್ಕೆ ನಿಧಿಯೂ (ಷೋಡಶ ಕಲೆಗಳಿಗೆ ನಿಧಿಯೂ), ಆದ ಚಂದ್ರನು ಶೋಭಿಸಿದನು. ೪೯. ಹಸಿದ ಚಕೋರ ಪಕ್ಷಿಗಳೆಂಬ ಚಾತಕ (ಚಾದಗೆ) ಪಕ್ಷಿಗಳ ಸಮೂಹವು ಸಂತೋಷಗೊಂಡು ಕುಡಿಯುವುದಕ್ಕೆ ಚಂದ್ರಕಾಂತ ಶಿಲೆಗಳಿಂದ ಒಸರುತ್ತಿರುವ ನೀರು ಪ್ರವಾಹವಾಗಿ ಹರಿಯಿತು. ಸಾಲುಸಾಲಾಗಿ ಉಯ್ಯಾಲೆಯನ್ನು (ಜೋಕಾಲಿಯನ್ನು) ಆಡುವ ಸ್ತ್ರೀ ಸಮೂಹದ ದಪ್ಪನಾದ ಉದ್ದದ ಕೇಶವೆಂಬ ನವಿಲು ಕುಣಿದಾಡತೊಡಗಲು ಚಂದ್ರ ಮಂಡಲವೆಂಬ ಅಸದೃಶವಾದ ಬಿಳಿಯ ಮೋಡವು ಅಮೃತ ಕಿರಣವೆಂಬ ಮಳೆಯನ್ನು ಅದೇನು ಸುರಿಸಿತ್ತೋ ! [ಬೆಳದಿಂಗಳ ರಾತ್ರಿಯಲ್ಲಿ ಸ್ತ್ರೀಯರು ಜೋಕಾಲಿಯನ್ನಾಡುತ್ತಿದ್ದರು; ಅವರ ಕೇಶವೆಂಬ ನವಿಲು ಕುಣಿದಾಡುತ್ತಿತ್ತು. ಇಲ್ಲಿ ಚಂದ್ರಮಂಡಲವೇ ಬಿಳಿಯ ಮೋಡ ಬೆಳದಿಂಗಳೇ ಅಮೃತ ಕಿರಣವೆಂಬ ಮಳೆ. ಮಳೆಗಾಲದಲ್ಲಿ ನವಿಲು ಕುಣಿಯುವುದು ಸ್ವಾಭಾವಿಕ] ೫೦. ಇಂದ್ರ ದಿಕ್ಕಿನಲ್ಲಿ (ಪೂರ್ವ ದಿಕ್ಕಿನಲ್ಲಿ) ಇರುವ ಪರ್ವತವೆಂಬ (ಉದಯಾಚಲವೆಂಬ) ಕೊಡದಿಂದ ಪ್ರೀತಿಯಿಂದ ಹುಟ್ಟಿದ ಅಗಸ್ತ್ಯನೆಂಬುವನು ಈಗ ಹೆಚ್ಚಾದ ಆಶ್ಚರ್ಯದಿಂದ ಹುಟ್ಟಿದನು. (ಅವನು) ತನ್ನ ಕೈಗಳಿಂದ (ಕಿರಣಗಳಿಂದ) ಗಾಢಾಂಧಕಾರವೆಂಬ ಸಮುದ್ರವನ್ನು ಅವಸರದಿಂದ ಕುಡಿಯುವಾಗ ಮಧ್ಯದಲ್ಲಿ ಸಿಕ್ಕ (ಕುಡಿಯುವಾಗ ಬಾಯಲ್ಲಿ ಸಿಕ್ಕ) ಮುತ್ತುಗಳನ್ನು ನಾಲಿಗೆಯಿಂದ

ತುರಿಪದಿನಿಂಟುತಾಗಳೆಡೆ ಸಿಲ್ಕಿದ ಮುತ್ತುಗಳಂ ತೆರಳ್ಚಿ ಪು
ಷ್ಕರದೆಡೆಯಲ್ಲಿ ತೂಂತಿಜಿದವೋಲ್ತುಱುಗಿರ್ದುದು ತಾರಕೋತ್ಕರಂ ೫೦

ಮೃಗಭೂಕಾಶ್ಮೀರದಿವ್ಯಾಗರುಮಲಯಜಮುಖ್ಯಾನುಲೇಪಂಗಳಂ ಕಂ
ಪೊಗೆವುದ್ಯತ್ಪುಷ್ಪಮಾಲಾವಳಿಯನಮಳ ತಾಂಬೂಲ ಭೂಷಾಂಬರ ಶ್ರೇ
ಣಿಗಳಂ ವೇಶ್ಯಾರತಕ್ಕೈದುವ ವಿಟಚರಸಂದೋಹಕೊಲ್ದೀವುತುಂ ಕೈ
ಮಿಗೆ ಕಣ್ಗೊಪ್ಪಿರ್ದನಾವೇಳೆಯೊಳೆ ವಿತರಣಾನಂದಸಾಂದ್ರಂ ವೃಷೇಂದ್ರಂ ೫೧

ಶುಂಠಶಿಶುಮಾರಮದಲುಂಠನಸಮರ್ಥದಶ
ಕಂಠನತಭೂಭೃದುಪಕಂಠತತಿಲೀಲೋ
ತ್ಕಂಠ ಭೃಗುಗಾರ್ಗ್ಯಹರಕಂಠ ಸನಕಸ್ತುತವಿ
ಕುಂಠಿ ಸುಮನಃಪ್ರಿಯಸುಕಂಠಸುರಗೇಯಾ
ಕುಂಠಿತದುರೀಹವಿತಕಂಠಕೃತಚಾರುತರ
ಕಂಠಿಕ ಗಜಾಸ್ಯಶಿಖಿಕಂಠರಥವಂದ್ಯಾ
ಕುಂಠನಿಜಶೌರ್ಯ ಪೊರೆ ಕಂಠಣಿತನಾದಕಳ
ಕಂಠರುಚಿನೀಲಗರಕಂಠ ಬಸವೇಶಾ ೫೨

ಬೇರ್ಪಡಿಸಿ ಆಕಾಶದ ಕಡೆಗೆ ಉಗುಳಿದನೋ (ಥೂ ಥೂ ಎಂದು ಉಗುಳಿದನೋ) ಎನ್ನುವಂತೆ ನಕ್ಷತ್ರ ಸಮೂಹವು (ಆಕಾಶದಲ್ಲಿ) ಒತ್ತೊತ್ತಾಗಿ ತುಂಬಿತ್ತು ! [ಹರಿ + ಹರಿತ್ + ಅದ್ರಿ—ಇಂದ್ರನ ದಿಕ್ಕು, ಪೂರ್ವ ದಿಕ್ಕು–ಅಲ್ಲಿರುವ ಅದ್ರಿ–ಪೂರ್ವಾಚಲ; ಅಂಧ + ತಮಃ + ಸಮುದ್ರ—ಕಪ್ಪಾದ ಕತ್ತಲೆಯೆಂಬ ಸಮುದ್ರ ; ಅಗಸ್ತ್ಯ ಸಪ್ತ ಸಾಗರ ಗಳನ್ನು ಕುಡಿದನೆಂಬ ಪುರಾಣ ಪ್ರಸಿದ್ಧಾಂಶವನ್ನು ಕವಿ ಇಲ್ಲಿ ಬಳಸಿಕೊಂಡು ಉತ್ಪ್ರೇಕ್ಷೆ ಮಾಡಿದ್ದಾನೆ.] ೫೧. ದಾನ ಮಾಡುವಿಕೆಯಿಂದ ಉಂಟಾದ ಸಂತೋಷದಿಂದ ತುಂಬಿದ ಬಸವೇಶ್ವರನು ಆ ವೇಳೆಯಲ್ಲಿ, ಸೂಳೆಯರೊಡನೆ ರತಿಕ್ರೀಡೆಗೆ (ಬಯಸಿ) ಹೋಗುವ ವಿಟರಾದ ಜಂಗಮ ಸಮೂಹಕ್ಕೆ ಕಸ್ತೂರಿ, ಕುಂಕುಮ ಕೇಸರಿ, ಶ್ರೇಷ್ಠ ಕೃಷ್ಣಾಗರು, ಶ್ರೀಗಂಧಗಳೇ ಮೊದಲಾದ ಅನುಲೇಪನ ವಸ್ತುಗಳನ್ನೂ, ಪರಿಮಳವನ್ನು ಬೀರುವ ಶ್ರೇಷ್ಠ ಪೂಮಾಲಿಕೆಗಳ ಸಮೂಹವನ್ನೂ, ಶ್ರೇಷ್ಠ ತಾಂಬೂಲ ದಿವ್ಯವಸ್ತ್ರಗಳ ಸಮೂಹವನ್ನೂ ಹೆಚ್ಚಾದ ಪ್ರೀತಿಯಿಂದ ಕೊಡುತ್ತ ಕಂಗೊಳಿಸುತ್ತಿದ್ದನು. ೫೨. ಸಮರ್ಥ (ಶುಂಠ)ನಾದ ಶಿಶುಮಾರನೆಂಬ ದೈತ್ಯನ ಮದವನ್ನು ಹೋಗಲಾಡಿಸುವುದರಲ್ಲಿ ಸಮರ್ಥನೂ, ರಾವಣನಿಂದ ನಮಸ್ಕಾರ ಮಾಡಿಸಿಕೊಂಡ ಕೈಲಾಸ ಪರ್ವತ ಸಮೀಪ ದಲ್ಲಿ ವಿಶೇಷವಾದ ಲೀಲೆಯ ಕುತೂಹಲವುಳ್ಳ ಭೃಗು, ಗಾರ್ಗ್ಯ, ಹರಕಂಠ, ಸನಕಾದಿ (ಋಷಿ)ಗಳಿಂದ ಸ್ತೋತ್ರ ಮಾಡಿಸಿಕೊಂಡವನೂ, ತಡೆಯಿಲ್ಲದ (ವಿಕುಂಠಿತ), ದೇವತೆ ಗಳಿಗೆ ಆಪ್ತರಾದ ಸಮೀಚೀನವಾದ ಕಂಠ ಮಾಧುರ್ಯವುಳ್ಳ, ದೇವತೆಗಳಿಂದ (ಕಿನ್ನರ ಗಂಧರ್ವಾದಿ ದೇವಗಾಯಕರಿಂದ) ಗಾನ ಮಾಡುವುದಕ್ಕೆ ಯೋಗ್ಯನಾದವನೂ, ಕೆಟ್ಟ ಆಸೆಗಳನ್ನು ಭಂಗಗೊಳಿಸಿದಂಥವನೂ, ವಿಷಕಂಠನಾದ ಶಿವನ ಮನೋಹರವಾದ

ಸೋಮಧಾಮರುಚಿಲೋಚನಾಂಚಳೇ
ಭೀಮವಾಮವಪುರನ್ವಿತೋಜ್ವಳೇ
ಹೇಮಧಾಮ ಸುಭುಜಾತಿಮಂಜುಳೇ
ಶ್ರೀಮಹೋಮ ಜಯ ಸರ್ವಮಂಗಳೇ ೫೩

ಇದು ವಿನಮದಖಿಳ ಸುರಾಸುರೇಂದ್ರಮಕುಟತಟಘಟಿತ ಮಣಿಗಣಾಗಣಿತ ರುಚಿನಿಚಯ ತರುಣಾರುಣಾತಪಪರಿಲಸಿತ ಪರಮ ಶಿವಲಿಂಗ ಪಾದಾರವಿಂದಪರಾಗಭಸಿತ ಭಾಸುರಲಲಾಟಪಟ್ಟಸರಸಜನಮಾನಿತೋಭಯಕವಿತಾವಿಶಾರದ ಶ್ರೀಷಡಕ್ಷರಿದೇವಭಕ್ತ್ಯವಿರಚಿತ ಶ್ರೀಮದ್ ಬಸವರಾಜವಿಜಯಮಹಾಪುರಾಣದೊಳ್ ಬಸವವಿತರಣವಿಳಾಸಕಥನಂ ಅಷ್ಟಮಾಶ್ವಾಸಂ ಸಮಾಪ್ತಂ

ಅಂತು ಆಶ್ವಾಸ ೮ಕ್ಕೆ ಪದಗಣನೆ ೬೨೧ಕ್ಕೆ ಮಂಗಳಮಹಾ ಶ್ರೀ॥

ಸಮೀಪವಾಗಿರುವಿಕೆ (ಸಾಮೀಪ್ಯ)ಯಿಂದ ಕೂಡಿದವನೂ, ಗಣಪತಿ, ನವಿಲುವಾಹನವಾಗಿ ಉಳ್ಳ ಷಣ್ಮುಖರುಗಳಿಂದ ನಮಸ್ಕಾರ ಮಾಡಿಸಿಕೊಳ್ಳುವುದಕ್ಕೆ ಯೋಗ್ಯನಾದವನೂ, ಅಧಿಕವಾದ (ಅ ಕುಂಠ) ನಿಜ ಪರಾಕ್ರಮವುಳ್ಳವನೂ, ಠಣತ್ಕಾರದ (ಠಣಠಣ ಎಂಬುದಾಗಿ) ಧ್ವನಿ ಮಾಡುವ ಕೋಗಿಲೆಯ (ಕಪ್ಪು) ಕಾಂತಿಯಂತೆ ಕಪ್ಪಾದ ವಿಷವನ್ನು ಕಂಠದಲ್ಲಿ ಉಳ್ಳವನೂ ಆದ ಬಸವೇಶನೇ ಪೊರೆ—

ಎಂಟನೆಯ ಆಶ್ವಾಸವು ಸಮಾಪ್ತವಾಯಿತು

ನವಮಾಶ್ವಾಸಂ

ಶ್ರೀಗೌರೀಪ್ರೇಮಸುಧಾ
ಸಾಗರಪೂರ್ಣೇಂದು ಸಸ್ಮಿತಾಮಳವದನಾ
ಭೋಗಂ ಭೋಗೇಶ್ವರಧರ
ನಾಗಮನುತನೀಗೆ ಸೌಖ್ಯಮಂ ಶಿವಲಿಂಗಂ ೧

*

ಗುಣನಿಧಿ ಬಸವಂ ವಿಟಚರ
ಗಣಮಂ ಗಣಿಕಾಲಯಕ್ಕೆ ಕಳುಪುವ ಪದದೊಳ್
ಪ್ರಣುತಮಹಿಮಾಕರಂ ಚಿ
ನ್ಮಣಿಮುಕುರಂ ಬಂದನೊರ್ವನಖಿಳ ಶಿವೈಕ್ಯಂ ೨

ಮುಗ್ಧಸಂಗಯ್ಯ—ಮೊದಲಾದವರ ಕಥೆ

೧. ಮಂಗಳಕರಳಾದ ಪಾರ್ವತಿಯ ಅನುರಾಗವೆಂಬ ಕ್ಷೀರಸಮುದ್ರಕ್ಕೆ ಪೂರ್ಣಚಂದ್ರನಂತಿರುವ, ಮುಗುಳು ನಗೆಯಿಂದ ಕೂಡಿದ (ಅವಳ) ಅಮಳ ಮುಖ ಮಂಡಲವುಳ್ಳ, ಆದಿಶೇಷನನ್ನು ಧರಿಸಿರುವ, ಆಗಮಾದಿಗಳಿಂದ ಸ್ತೋತ್ರ ಮಾಡಿಸಿ ಕೊಳ್ಳುವ ಶಿವಲಿಂಗನು ಸೌಖ್ಯವನ್ನು ಕೊಡಲಿ. ೨. ಗುಣಗಳ ನಿಧಿಯಾದ ಬಸವಣ್ಣನು ವಿಟಜಂಗಮರನ್ನು ಸೂಳೆಯರ ಮನೆಗೆ ಕಳಿಸುವ ಉದ್ಯೋಗದಲ್ಲಿರುವಾಗ (ಒಮ್ಮೆ) ಶ್ಲಾಘ್ಯವೂ, ಮಹತ್ವಪೂರ್ಣವೂ ಆದ ಜ್ಞಾನಕ್ಕೆ ರತ್ನದ ಕನ್ನಡಿಯೋ ಪಾದಿಯಲ್ಲಿರುವ ಅಚಲವಾದ ಶಿವೈಕ್ಯಚಿತ್ತದ ಓರ್ವ (ಜಂಗಮ)ನು ಬಂದನು.

---

* ದಂಡಧರಬಾಧಿತಮೃಕಂಡುಭವರಕ್ಷ ಪರಿ
ಪಾಂಡುರಕಳೇವರ ಪಿಚಂಡಭೃತವಿಶ್ವಾ
ಜಾಂಡ ಘನಕುಂಡಲಿಪಕುಂಡಲಮನೋಜ್ಞ ತತ
ತಾಂಡವಮೃಡ ಪ್ರಯುತಚಂಡಗಣನುತ್ಯಾ
ಪಂಡಿತಜನಾಂಬುರುಹಷಂಡರವಿ ದೃಪ್ತರಿಪು
ಖಂಡನ ಜಗದ್ಭರಣಶೌಂಡ ನಿಖಿಲಾಶಾ
ಖಂಡಿತಸುಕೀರ್ತಿಮಹಿಮಂಡಲಮಹೇಶ ಪೊರೆ
ಮಂಡಿತಮಹಾಗುಣಕರಣ್ಡ ಬಸವೇಶಾ ॥—ದ ಪ್ರತಿಯಲ್ಲಿ ಮಾತ್ರ.

ಸರ್ವೇಂದ್ರಿಯಲಿಂಗಯುತಂ
ದುರ್ವಿಷಯವಿದೂರನನ್ಯಲೌಕಿಕವಿಮುಖಂ
ಶರ್ವೀಕರಧವಶರಣನ
ಖರ್ವಗುಣಂ ಮುಗ್ಧಸಂಗನೆಂಬ ಮಹಾತ್ಮಂ ೩

ವ॥ ಅಂತೇಳ್ತಂದಲ್ಲಿ ಕುಸುಮಾನುಲೇಪನ ತಾಂಬೂಲಾದಿವೆರಸು ಸೂಳೆಗೈತಕ್ಕೆ ಪೋಪ ಚರನಿಕರಮಂ ನಿರೀಕ್ಷಿಸಿ ಶೂಲಿಪೂಜೆಗೆ ಪೋಪಂದಮೆಂದು ಬಗೆದು ತಾನುಂ ಪೋಗಲೆಳಸಿ ಮುನ್ನೆಂದುಮನಂಗಕೇಳಿಯನಱಿಯದ ಮುಗ್ಧಂ ಮುಗ್ಧಸಂಗಯ್ಯಂ ಬಸವನಿದಿರ್ಗೆವಂದಿವಂದಿ ರೊಡನಾನುಂ ಸೂಳೆಗೆಯ್ತಕ್ಕೆ ಪೋದಪೆನೆನ್ನಂ ಕಳುಪಲ್ವೇಳ್ಕುಮೆನೆ ಕೇಳ್ದು ಬಸವಂ ತನ್ಮುಗ್ಧತೆಗೆ ಮುಗುಳ್ನಗೆ ನಕ್ಕು—

ಪೋದಪಿರೆ ಪೋಗಿಮೆಂದ
ತ್ಯಾದರದೆ ಸುಗಂಧ ಮಾಲ್ಯ ಭೂಷಣ ರುಚಿರಾ
ಚ್ಛಾದನ ವಿಭೂಷಣಂಗಳಿ
ನಾ ದೇವನನೊಲ್ದು ತಾನೆ ಸಿಂಗರಿಸುತ್ತಂ ೪

೩. ಆರೂ ಇಂದ್ರಿಯಗಳನ್ನು ಆರು ಲಿಂಗ ಮುಖವನ್ನಾಗಿ ಮಾಡಿಕೊಂಡವನಾದ (ಹೃದಯದಲ್ಲಿ ಮಹಾಲಿಂಗ, ಮೂಗಿನಲ್ಲಿ ಆಚಾರಲಿಂಗ, ನಾಲಗೆಯಲ್ಲಿ ಗುರುಲಿಂಗ, ಕಣ್ಣಿನಲ್ಲಿ ಶಿವಲಿಂಗ, ಚರ್ಮದಲ್ಲಿ ಜಂಗಮಲಿಂಗ, ಕಿವಿಯಲ್ಲಿ ಪ್ರಸಾದಲಿಂಗ ಮುಖ ವನ್ನಾಗಿ ಮಾಡಿಕೊಂಡ) ದುಷ್ಟವಾದ ವಿಷಯ ಸುಖಗಳಿಂದ ದೂರನಾದ, ಲಿಂಗಾನು ಭವವಲ್ಲದೆ ಬೇರೆ ಲೌಕಿಕ ವಿಷಯಗಳಲ್ಲಿ ಪ್ರವೇಶ ಮಾಡದ, ಶಿವಶರಣನೂ, ಅಧಿಕ ವಾದ ಸದ್ಗುಣಗಳಿಂದ ಕೂಡಿದವನೂ ಆದ ಮುಗ್ಧಸಂಗಯ್ಯನೆಂಬ ಮಹಾತ್ಮನು— ವ॥ ಅಂತು ಬಂದು ಅಲ್ಲಿ ಹೂವು, ಗಂಧ, ತಾಂಬೂಲ ಮುಂತಾದವುಗಳಿಂದ ಕೂಡಿ, ಸೂಳೆಗಾರಿಕೆಗೆ ಹೋಗುವ ಜಂಗಮ ಸಮುದಾಯವನ್ನು ಕಂಡೂ (ಇದೂ)ಶಿವನ ಪೂಜೆಗೆ ಹೋಗುವ ಒಂದು ರೀತಿಯೆಂದು ಭಾವಿಸಿ, ತಾನೂ (ಅವರ ಹಾಗೆ) ಹೋಗಲು ಅಪೇಕ್ಷಿಸಿ, ಈ ಪೂರ್ವದಲ್ಲಿ ಯಾವಾಗಲೂ ಮನ್ಮಥ ಕೇಳಿಕೆಯೆಂದರೇನೆಂಬುದನ್ನು ಕೇಳಿಯರಿಯದ ಮುಗ್ಧನಾದ ಆ ಸಂಗಯ್ಯನೆಂಬುವನು ಬಸವಣ್ಣನ ಎದುರಿಗೆ ಬಂದು, ಇವರುಗಳ ಸಂಗಡ ನಾನೂ, ಸೂಳೆಗಾರಿಕೆಗೆ ಹೋಗುತ್ತೇನೆ; ನನ್ನನ್ನೂ ಕಳುಹಿಸಿ ಕೊಡಬೇಕು. ಎಂದನು. ಬಸವಣ್ಣನು (ಈ ಮಾತನ್ನು ಕೇಳಿ) ಅವನ ಮುಗ್ಧತೆಗೆ ಮುಗುಳುನಗೆ ನಕ್ಕು— ೪. (ನೀವೂ) ಹೋಗುತ್ತೀರಾ! ಹೋಗಿರಿ! ಎಂದು ಅತ್ಯಂತ ಆದರದಿಂದ ಸುಗಂಧ, ಹೂಮಾಲಿಕೆ, ಬಟ್ಟೆಬರೆ, ಆಭರಣಾದಿಗಳಿಂದ ಬಸವೇಶ್ವರನೇ ಆ ಮುಗ್ಧಸಂಗಯ್ಯನನ್ನು ಪ್ರೀತಿಯಿಂದ ಶೃಂಗಾರಗೊಳಿಸುತ್ತ

ಕುಸುಮವಿಲೇಪನಾದಿ ಬಹುವಸ್ತುಗಳಂ ಮಿಗೆ ಕೊಟ್ಟು ನಣ್ಪುವೆ
ತ್ತೆಸೆವನನೊರ್ವನಂ ಚರನನೊಲ್ವನುಯಾಯಿಯನಿತ್ತು ಜಾಣ್ಮೆ ರಂ
ಜಿಸುವ ಮಹೇಶಭಕ್ತಿಯುತೆಯಾದ ಪಣಾಂಗನೆಯಾಲಯಕ್ಕೆ ತಾ
ನೊಸೆದು ವಿನೋದದಿಂ ಕಳುಪಿದಂ ಬಸವಂ ಘನ ಮುಗ್ಧಸಂಗನಂ ೫

ವ॥ ಅಂತು ಕಳುಪೆ ಕಡುಸಡಗರಂಬೆತ್ತು—

ತಳರ್ವ ವಿಳಾಸಿನೀಜನದ ಕಾಂಚಿಯ ಗೆಜ್ಜೆಯ ಪಿಂಡುಗಂಕಣಂ
ಗಳ ಸೊಗಸಾಂತ ನೇವುರದ ತುಂಬಿ ತುಱುಂಬಿದ ಪೂಗೆ ಮೇಲೆ ಮಂ
ಡಳಿಪಳಿವಿಂಡಿನಿಂಚರಮೆ ತೆಕ್ಕನೆ ತೀವಿದ ಸೂಳೆಗೇರಿ ಕಂ
ಗೊಳಿಸಿರೆ ನೋಡುತಂ ನಡೆದನೀಶ್ವರಪಾದಸರೋಜಷಟ್ಪದಂ ೬

ಪಳುಕಿನ ಭಿತ್ತಿ ಬಜ್ಜರದ ಸೆಜ್ಜೆ ವಿಧೂಪಳರಮ್ಯಕುಟ್ಟಿಮ
ಸ್ಥಳಮಮರೇಂದ್ರನೀಲಮಯವೇದಿಕೆ ಪಚ್ಚೆಯ ಬಳ್ಳಿಮಾಡಮು
ಗ್ಗಳಿಸಿದ ಪದ್ಮರಾಗದ ಕನತ್ಕಳಶಂ ಪೊಸಪೊನ್ನ ಘಂಟೆ ಕಂ
ಗೊಳಿಸುವ ವಿದ್ರುಮಾವಳಿಯ ತೋರಣವೊಪ್ಪುವ ಸೂಳೆಗೇರಿಯೊಳ್ ೭

೫. ಬಸವಣ್ಣನು ಹೂವು ಮತ್ತು ಸುಗಂಧಗಳ ಬಹು ವಿಧವಾದ ವಸ್ತುಗಳನ್ನು ಅಧಿಕವಾಗಿ ಕೊಟ್ಟು, ನಯವಿನಯಯುಕ್ತನಾಗಿ ಶೋಭಿಸುವ ಒಬ್ಬ ಸೇವಕನನ್ನು ಪ್ರೀತಿಯಿಂದ ಜೊತೆಗೊಳಿಸಿಕೊಟ್ಟು, ಜಾಣ್ಮೆಯಿಂದ ಶೋಭಿಸುವ ಶಿವಭಕ್ತಿಯಿಂದ ಕೂಡಿದ (ಒಬ್ಬ) ಸೂಳೆಯ ಮನೆಗೆ ಆ ಮುಗ್ಧಸಂಗಯ್ಯನನ್ನು ಆ ಬಸವೇಶ್ವರನು ಪ್ರೀತಿ ಮತ್ತು ವಿನೋದದಿಂದ ಕಳುಹಿಸಿಕೊಟ್ಟನು. ವ॥ ಹೀಗೆ ಕಳುಹಿಸಲು ಅಧಿಕವಾದ ಸಡಗರದಿಂದ— ೬. ಓಡಾಡುತ್ತಿರುವ ವಿಲಾಸಿನಿಯರಾದ ಸ್ತ್ರೀಯರುಗಳ ನಡುವಿನ ಪಟ್ಟಿಯ ಗೆಜ್ಜೆಯ, ಕಾಂತಿಯಿಂದ ಕೂಡಿದ ಕೈಯ ಕಂಕಣಗಳ, ಕಾಲಿನ ಪೈಜಣಗಳ, ತಲೆಯಲ್ಲಿ ತುಂಬಾ ಮುಡಿದಿರುವ ಹೂವಿಗೆ ಮೇಲ್ಭಾಗದಲ್ಲಿ ಗುಂಪು ಗುಂಪಾಗಿ ಹಾರಾಡುವ ದುಂಬಿಗಳ ಹಿಂಡಿನ–ಮಧುರವಾದ ಸ್ವರವು ದಟ್ಟವಾಗಿ ತುಂಬಿದ ಸೂಳೆಯರ ಕೇರಿಯಲ್ಲಿ ಮನೋಹರವಾಗಿರಲು, ಶಿವನ ಪಾದಕಮಲಗಳಲ್ಲಿ ಭೃಂಗ ಸದೃಶನಾದ ಮುಗ್ಧಸಂಗಯ್ಯನು ಅದನ್ನೆಲ್ಲ ನೋಡುತ್ತ ನಡೆದನು. ೭. ಸ್ಫಟಿಕದ ಗೋಡೆ, ವಜ್ರದ ಶಯ್ಯಾಗೃಹ, ಚಂದ್ರಕಾಂತ ಶಿಲೆಯ ಮನೋಹರವಾದ ಕಟ್ಟೆ, ಇಂದ್ರನೀಲಮಣಿಯಿಂದ ನಿರ್ಮಿಸಲ್ಪಟ್ಟ ಜಗುಲಿ, ಪಚ್ಚೆಯೆಂಬ ರತ್ನದ ಬಳ್ಳಿಯ ಮನೆ, ಶ್ರೇಷ್ಠವಾದ ಪದ್ಮರಾಗದ ಹೊಳೆಯುವ ಕಳಶ, ನೂತನ ಚಿನ್ನದ ಘಂಟೆ, ಶೋಭಿಸುವ ಹವಳದ ಸಾಲುಗಳ ತೋರಣ–ಇವುಗಳಿಂದ ಶೋಭಿಸುವ ಸೂಳೆಯರ

ಇದು ಮದನೇಂದ್ರಜಾಲಿಕನೊಡರ್ಚಿದ ಕೌತುಕಮೊಂದು ನಿಂದು ನೋ
ಳ್ಪುದು ವಿಟರಾಜಿ ರಮ್ಯಮಣಿಹರ್ಮ್ಯದ ಮೇಲೆ ನವೀನ ಶಂಖದ
ಗ್ರದೊಳೊಗೆದಿರ್ದ ಪಂಕಜದೊಳುಳ್ಪಲದುತ್ಪಳದೊಳ್ಪೊದಳ್ದು ತು
ಳ್ಕಿದ ತಿಳಿಜೊನ್ನಮಂ ಪೆಱೆಯನಪ್ಪಿ ನಿಲುಂಬಿದ ಭೃಂಗಮಾಲೆಯುಂ ೮

ವ॥ ಮತ್ತಮಲ್ಲಿ ವಿದಗ್ಧೆ ನಿಜಸಖಿಗೆ ಬುದ್ಧಿವೇಳ್ದಳದೆಂತೆನೆ—

ಪೊಸಸರದಲ್ಲಿ ಪಾಡು ಪಿರಿದೀವನ ಕೇಳಿಯೊಳೊಂದು ಸದ್ರ್ರಮಾ
ವಿಸುಗಿರೆ ಕಾಮಧರ್ಮಗುಣವೃತ್ತಿಯನಾಳ್ದಿರಸಾರಗಂಧಮಂ

ಕೇರಿಯಲ್ಲಿ ೮· ವಿಟರುಗಳ ಸಮೂಹವು—ಮನೋಹರವಾದ ರತ್ನನಿರ್ಮಿತ ಉಪ್ಪರಿಗೆಯ ಮೇಲೆ, ನೂತನವಾದ ಶಂಖ, (ಆ ಶಂಖದ ಮೇಲುಗಡೆಯಲ್ಲಿ) ಶೋಭಿಸುತ್ತಿದ್ದ ಕಮಲವಿತ್ತು, (ಆ ಕಮಲದಲ್ಲಿ) ಅರಳಿರುವ ನೈದಿಲೆಯ ಹೂವಿನಲ್ಲಿ ತುಂಬಿತುಳುಕುತ್ತಿರುವ ನಿರ್ಮಲವಾದ ಬೆಳದಿಂಗಳುಳ್ಳ ಚಂದ್ರನಿದ್ದನು. ಆ ಚಂದ್ರನನ್ನು ಅಪ್ಪಿಕೊಂಡು ಜೋತಾಡುತ್ತಿರುವ ಭ್ರಮರಗಳ ಸಾಲು ಇತ್ತು. ಇದು, ಮದನನೆಂಬ ಇಂದ್ರಜಾಲ ವಿದ್ಯೆಯನ್ನು ಬಲ್ಲವನು ಮಾಡಿದ ಆಶ್ಚರ್ಯವೆಂದು ನಿಂತು ನೋಡುತ್ತಿತ್ತು [ಇಲ್ಲಿ ರತ್ನನಿರ್ಮಿತ ಹರ್ಮ್ಯವೇ ಆ ವೇಶ್ಯಾ ಸ್ತ್ರೀಯರ ರತ್ನಾಭರಣದಿಂದ ಕೂಡಿದ ಎದೆ, ಆ ಎದೆಯ ಮೇಲ್ಗಡೆಯಲ್ಲಿ ಶಂಖಾಕೃತಿಯ ಕಂಠ, ಆ ಕಂಠ ಪ್ರದೇಶದ ಮೇಲ್ಗಡೆಯಲ್ಲಿ ಕಮಲ ಸದೃಶ ಮುಖ. ಅಂಥ ಕಮಲ ಸದೃಶಮುಖದಲ್ಲಿ ಕಣ್ಣೆಂಬ ನೈದಿಲೆ ಹೂಗಳು ಅರಳಿದ್ದವು, ಆ ಹೂಗಳ ಕಾಂತಿಯೆಂಬ ಬೆಳದಿಂಗಳನ್ನು ಹಣೆ ಎಂಬ ಚಂದ್ರನು ಹೊರಸೂಸುತ್ತಿದ್ದನು. ಆ ಚಂದ್ರನನ್ನು ಅಪ್ಪಿಕೊಂಡು ಅಳಕಗಳೆಂಬ ದುಂಬಿಗಳು ನೇತಾಡುತ್ತಿದ್ದವು—ಇದೇ ಮನ್ಮಥನೆಂಬ ಇಂದ್ರಜಾಲ ವಿದ್ಯೆಯಿಂದಾದ ದೃಶ್ಯ–ಇಂಥ ಸ್ತ್ರೀಯರನ್ನು ವಿಟರುಗಳ ಸಮೂಹ ನೋಡುತ್ತಿತ್ತೆಂದು ಭಾವ.] ವ॥ ಅಲ್ಲಿ ಪ್ರೌಢೆಯಾದ ತನ್ನ ಸಖಿಗೆ ಒಬ್ಬಳು ಬುದ್ಧಿ ಹೇಳುತ್ತಿದ್ದಳು. ಅದು ಹೇಗೆಂದರೆ: ೯. ನನ್ನ ಸಖಿಯೇ, ನೂತನವಾದ ಸ್ವರದಿಂದ ಹಾಡು; ಹೆಚ್ಚಾಗಿ (ಹಣ) ಕೊಡುವವನನ್ನು ಸೇರು. ಸಮಿಾಚೀನವಾದ ಅನುರಾಗವು ತುಂಬಿರುವಂತೆ ಮನ್ಮಥ ಕೇಳಿಯ ಗುಣ ಧರ್ಮಗಳನ್ನು ಹೊಂದಿರುವವಳಾಗಿರು. ಶ್ರೇಷ್ಠವಲ್ಲದ ಗರ್ವವನ್ನು ಬಿಸಾಡು. ಮನೋಹರರಾದ ಐಶ್ವರ್ಯವಂತರಾದ ವಿದ್ವಾಂಸರಲ್ಲಿ ಪ್ರೀತಿಯನ್ನು ಪಡೆ. (ಅವರಲ್ಲಿ) ಕಾಮೋದ್ದೀಪನೆಯನ್ನು ನೂತನಗೊಳಿಸು. ಪ್ರಿಯರಾದ (ಇಂಥ ನಾಯಕರ) ಸಮಯವರಿತು ಸೋಂಕಿ ಸೌಖ್ಯವನ್ನು ಪಡೆ. [ಇಲ್ಲಿ ಶಬ್ದ ಶಕ್ತಿಯಿಂದ ತೋರುವ ಇನ್ನೊಂದರ್ಥ: (ಎಲೈ) ಮದವಿಶಿಷ್ಟವಾದ ಭ್ರಮರವೇ, ನೂತನ ಕೊಳದಲ್ಲಿ ಹಾಡು. (ಅಲ್ಲಿರುವ)

ಬಿಸುಡು ಮನೋಜ್ಞಪದ್ಮಸುಮನೋರುಚಿಯಂ ಪಡೆ ಪಾರುಗೈತವಂ
ಪೊಸಯಿಸಿ ಸೋಂಕಿ ಕಾದಲರೊಳಿಂಬಱಿದೊಂದು ಮದಾಳಿಸೌಖ್ಯಮಂ ೯

ವ॥ ಇಂತನೂನ ಶೋಭಾವರೇಣ್ಯಮಾದ ಮದನಮದಮಧುಕರಮಾಲತೀಮಾಲೆಯಂತೆಸೆವ ಗಣಿಕಾವಾಟಮಂ ಪೊಕ್ಕು ತನ್ನಿತಂಬಿನಿಯ ಮಣಿಮಯಮಂದಿರಬಂಧುರಾಂಕಣಮನವಂ ಪುಗುತಂದಾಗಳ್—

ಅಳಿಕುಳಕುಂತಳಂ ಪೆಱೆನೊಸಲ್ ಕುಮುದೇಕ್ಷಣಮಬ್ಜವೈರಿಮಂ
ಡಳವದನಂ ಪ್ರವಾಳಮಧುರಾಧರಮಂದದ ಕಂಬುಕಂಠಮು
ಜ್ವಳಕಳಶಸ್ತನಂ ನವಲತಾತನುಮಧ್ಯಮಿಭೇಂದ್ರಕುಂಭಮಂ
ಜುಳಕಟಿ ಬಾಳೆನುಣ್ದೊಡೆ ವಿರಾಜಿಪ ಕಾಮಿನಿ ಕಂಡಳಾತನಂ ೧೦

ವಿಳಸತ್ಸೀಮಂತರತ್ನಸ್ಫುಟಫಣಮಣಿವೇಣೀಲತಾಭೋಗಿ ತನ್ಮಂ
ಜುಳಪಾದೋದ್ಯನ್ನಖಪ್ರದ್ಯುತಿಸುಧೆಗೆಱಗಿರ್ದಂತೆ ಚೆಲ್ವಾಗೆ ನೇತ್ರಾಂ

ಶ್ರೇಷ್ಠವಾದ ಕಮಲವನದ ಕ್ರೀಡೆಯಲ್ಲಿ ಸೇರು. ಸಮೀಚೀನವಾದ ಶಬ್ದವು ಶೋಭಿಸುವಂತಿರಲು ಕಾಮನ ಧನುಸ್ಸಿನ ಸಿಂಜಿನಿಯ ವರ್ತನೆಯನ್ನು ಹೊಂದಿರು. ಶ್ರೇಷ್ಠವಲ್ಲದ ಪರಿಮಳವನ್ನು ಬಿಸಾಡು. ಮನೋಹರವಾದ ಕಮಲದ ಹೂವಿನಲ್ಲಿ ಪ್ರೀತಿಯನ್ನು ಪಡೆ. ಹಾರಿಹೋಗುವ ಕಾರ್ಯವನ್ನು ಬಲಪಡಿಸಿ (ಭದ್ರಪಡಿಸಿ) ಅವಕಾಶವನ್ನು ಅರಿತುಕೊಂಡು ಮಕರಂದಭರಿತ ಹೂವುಗಳಲ್ಲಿ (ಕಾದಲರೊಳ್) ಸೇರಿ ಸೌಖ್ಯವನ್ನು ಹೊಂದು] ವ॥ ಈ ರೀತಿಯಲ್ಲಿ ಯಾವ ಕೊರತೆಯೂ ಇಲ್ಲದ ಶೋಭೆಯಿಂದ ಶ್ರೇಷ್ಠವಾದ, ಮನ್ಮಥನೆಂಬ ಮದಿಸಿದ ಭ್ರಮರಕ್ಕೆ ಜಾಜಿ ಹೂವಿನ ಮಾಲಿಕೆಯಂತೆ ಶೋಭಿಸುವ ಸೂಳೆಯರ ಕೇರಿಯನ್ನು ಹೊಕ್ಕು ಆ ಬಸವೇಶ್ವರನಿಂದ ಸೂಚಿಸಲ್ಪಟ್ಟಿದ್ದ ಸೂಳೆಯ ರತ್ನಮಯವಾದ ಮನೆಯ ಮನೋಹರವಾದ ಅಂಗಳ ಪ್ರದೇಶ ಹೊಕ್ಕಾಗ— ೧೦. ಭ್ರಮರ ಸಮೂಹದಂತಿರುವ ಕೇಶಗಳು, ಚಂದ್ರನಂತಿರುವ ಹಣೆ, ನೈದಿಲೆಯಂತಿರುವ ಕಣ್ಣು, ಚಂದ್ರಮಂಡಳದಂತಿರುವ ಮುಖ, ಹವಳದಂತೆ ಮನೋಹರವಾದ ತುಟಿ, ಶಂಖದಂತಿರುವ ಅಂದವಾದ ಕಂಠ, ಪ್ರಕಾಶಮಾನವಾದ ಕಲಶಗಳಂತಹ ಮೊಲೆ, ನೂತನವಾದ ಬಳ್ಳಿಯಂತೆ ಕೃಶವಾದ ನಡು, ಶ್ರೇಷ್ಠ ಆನೆಯ ಕುಂಭಸ್ಥಳದಂತಿರುವ ಮಂಜುಳವಾದ ಕಟಿಪಶ್ಚಾದ್ ಭಾಗ, ಬಾಳೆಯ ಕಂಬದಂತಿರುವ ನುಣುಪಾದ ತೊಡೆ—ಇವುಗಳಿಂದ ಶೋಭಿಸುತ್ತಿದ್ದ ಆ ಸೂಳೆಯು ಆ ಮುಗ್ಧ ಸಂಗಯ್ಯನನ್ನು ಕಂಡಳು. [ಶುಭ ಚಿಹ್ನೆಯ ವಸ್ತುಗಳಿಂದ ಕೂಡಿದವಳಾಗಿ ಆ ಮುಗ್ಧಸಂಗಯ್ಯನನ್ನು ಎದುರ್ಗೊಂಡಳೆಂದು ತಾತ್ಪರ್ಯ] ೧೧. ಆ ವೇಶ್ಯಾಸ್ತ್ರೀಯು, ಬಳ್ಳಿಯಂತಿರುವ ಜಡೆಯೆಂಬ ಹೆಡೆಯಲ್ಲಿರುವ ರತ್ನದಂತೆ ಪ್ರಕಾಶಿಸುವ ಸೀಮಂತಮಣಿಯಿಂದ ಕೂಡಿದ ಹಣೆಯಿಂದ ಆ ಮುಗ್ಧಸಂಗಯ್ಯನಿಗೆ ನಮಸ್ಕಾರ

ಚಳತೇಜಃಪುಷ್ಪದಿಂ ಪೂಜಿಸಿ ಮಣಿದ ಪಣಸ್ತ್ರೀಯ ಭಾಳೇಂದುಗತ್ಯು
ಜ್ವಳ ಭಸ್ಮಜ್ಯೋತ್ಸ್ನೆಯಂ ಸಂಗಳಿಸಿ ಪರಸಿದಂ ಮುಗ್ಧಸಂಗಾರ್ಯನಾಗಳ್ ೧೧

ವ॥ ಅನಂರತಮಾ ವಾರಾಂಗನೆ ಕೈಗೊಟ್ಟು ಬಿಜಯಂಗೈಸಿನಿಜನಿಕೇತನಮನೊಳಪೊಗಿಸೆ ಮುಗ್ಧದೇವಂ ನಿರೀಕ್ಷಿಪಾಗಳ್ಕುಸುಮಶರಕೇಳೀನಿಳಯಾಂತರಾಳದೊಳ್ನೆಗಳ್ತೆವೆತ್ತ ಸುವರ್ಣಮಯ ಮಂಜುಳ ಪಂಜರಾಂತರಾಂಚಿತ ಮೃದುಮಧುರವಚನಚಯರುಚಿರತರಸುಭಗ ತನುಶುಕಶಾರಿಕಾ ನಿಕಾಯಮುಂ ವಿಶದಶಶಿಮಣಿಮಯಕುಟ್ಟಿಮಸ್ಥಳಪ್ರತಿಬಿಂಬ ಕದಂಬಾಡಂಬರದ್ವಿಗುಣಿತವಿಳಾಸ ವಿಶಾಲರುಚಿಶಾಲಿಸಾಲಭಂಜಿಕಾನಿಕುರುಂಬಮುಂ ಮದಮಧುಕರ ಪ್ರಕರಝೇಂಕೃತಿಸಂಕಲಿತತಾಮಂದಮ ರಂದರಸರಜೋರಾಜಿರಂಜಿತ ಕುಸುಮಮಾಲಾಸಂತಾನವಿತಾನಮುಂ ಚಂಚತ್ಕಾಂಚನಪೀಠಿಕಾರೂಢ ವಿಮಳಹಿಮಮಿಳಿತಮಧುರತರತಾಂಬೂಲ ಪರಿಕರಪರಿಮಿಳಿತ ಮಣಿಮಯಪಾತ್ರವರ್ಗಮುಂ ಕಮನಕಮಳಕುಮುದ ಕಲ್ಹಾರೋಶೀರ ಕರ್ಪೂರಸುರಭಿತ ಶಿಶಿರಮಧುರಸಲಿಲಸಂಭೃತಕನಕಭೃಂಗಾರ ವಾರಮುಂ ಶ್ಲಕ್ಷ್ಣತರಭಿತ್ತಿಚಿತ್ರಿತಚಿತ್ರತರ ಚಿತ್ರಸಂದೋಹಮುಂ ಗೃಹಮಧ್ಯಕುಡ್ಯಮಂಡಿತಾನರ್ಘ್ಯ ಮಣಿಮಯ ಸರ್ವಾಂಗದರ್ಶಕ ದಿವ್ಯರುಚಿ ನವ್ಯದರ್ಪಣಮುಂ ಮೃಗಮದ ಕಾಶ್ಮೀರಯಕ್ಷಕರ್ದಮ ರಸಭರಿತ ಕರಿವಿಷಾಣಕರಂಡಕಾಸಮುದಯಮುಂ ದ್ರಾಕ್ಷಾದಾಡಿಮಕಪಿತ್ಥ ಫಲಪಾನ

ಮಾಡಿದಳು. (ಆಗ ಆ ಹಾವು) ಅವನ ಪಾದದ ಉಗುರಿನ ಕಾಂತಿಯೆಂಬ ಅಮೃತ ಕ್ಕೋಸುಗ ಎರಗಿರುವುದೋ ಎನ್ನುವಂತೆ ಚೆಲುವಾಗಿತ್ತು. ಅವಳು ತನ್ನ ಕಡೆ ಗಣ್ಣಿನ ಕಾಂತಿಯೆಂಬ ಹೂವಿನಿಂದ ಪೂಜಿಸಿದಂತೆ ಇತ್ತು. (ಹೀಗೆ) ನಮಸ್ಕರಿಸಿದ ಆ ಪಣ್ಯಾಂಗನೆಯ ಹಣೆಯೆಂಬ ಚಂದ್ರನಿಗೆ ಮುಗ್ಧಸಂಗಯ್ಯನು ಆಗ ಅತ್ಯಂತ ಮನೋಹರವಾದ ಭಸ್ಮವೆಂಬ ಬೆಳದಿಂಗಳನ್ನು ಸಂಬಂಧಗೊಳಿಸಿ ಆಶೀರ್ವಾದ ಮಾಡಿದನು. ವ॥ ಅನಂತರ ಆ ವೇಶ್ಯೆಯು (ಆ ಮುಗ್ಧಸಂಗಯ್ಯನನ್ನು) ಕೈ ಹಿಡಿದು ಕರೆದುಕೊಂಡು ತನ್ನ ಮನೆಯೊಳಗೆ ಹೊಗಿಸಿದಳು. ಆ ಮುಗ್ಧಸಂಗಮ ದೇವನು (ಆ ಮನೆಯನ್ನು) ನೋಡುವಾಗ (ಆ)—ಮನ್ಮಥಕ್ರೀಡಾ ಗೃಹದ ಒಳಗಡೆ ಯಲ್ಲಿ, ಪ್ರಖ್ಯಾತವಾದ ಚಿನ್ನದ ಮನೋಹರ ಪಂಜರವಿತ್ತು. ಅದರ ಒಳಭಾಗದಲ್ಲಿ ಶ್ಲಾಘ್ಯವೂ, ಕೋಮಲವೂ ಆದಂಥ, ಇಂಪಾದ ಮಾತುಗಳ ಸಮೂಹದಿಂದ ಮನೋಹರಗಳೂ, ಸುಂದರ ಶರೀರವುಳ್ಳವುಗಳೂ ಆದಂಥ ಗಂಡು ಹೆಣ್ಣುಗಳ ಸಮೂಹವಿತ್ತು. ನಿರ್ಮಲವಾದ ಚಂದ್ರಕಾಂತ ಶಿಲೆಯ ಕಟ್ಟೆಯ ಸ್ಥಳದಲ್ಲಿ ವಿಶೇಷ ಲೀಲೆಯಿಂದಲೂ ಕಾಂತಿಯಿಂದಲೂ ಒಪ್ಪುತ್ತಿರುವ ಆ ಮನೆಯ ಸಾಲು ಗೊಂಬೆಗಳು ಪ್ರತಿಫಲಿಸಿದ್ದು ದ್ವಿಗುಣಿತಗೊಂಡು ಆಡಂಬರದ ಆಧಿಕ್ಯದಿಂದ ಕೂಡಿದವು. ಮದಿಸಿದ ದುಂಬಿಗಳ ಸಮುದಾಯದ ಝೇಂಕಾರದಿಂದ ಕೂಡಿದ, ವಿಸ್ತಾರವೂ, ಅಧಿಕವೂ ಆದ ಮಕರಂದದಿಂದಲೂ, ಪರಾಗರೇಣುವಿನಿಂದಲೂ ಪ್ರಕಾಶಿಸುವ ಹೂಮಾಲೆಗಳ ಎಡೆಬಿಡದ ಸಮೂಹವಿತ್ತು. (ಉದ್ದಕ್ಕೂ ಹೂಮಾಲೆಗಳಿಂದ ಅಲಂಕರಿಸಿದ್ದರೆಂದು

ಖರ್ಜೂರರಸಾಯನ ಪುಂಡ್ರೇಕ್ಷುಖಂಡಕದಂಬಕಲಿತ ಕಾಂಚನಮಯಪಾತ್ರಪ್ರಕರಮುಂ ವೀಣಾವೇಣು ವಲ್ಲಕೀಕುಸುಮ ಮಾಲಾತಾಲವೃಂತಾಕ್ಷಫಲಕಮಣಿಪಾದುಕಾದಿ ಪರಿಕರಪ್ರಸರಮುಂ ಕಂಗೊಸಿರ್ದುದಲ್ಲಿ—

ವಿಮಳಮರಾಳತೂಳಮೃದುತಳ್ಪವಿಭಾಸಿ ಮಣಿಪ್ರತಾನ ಸಂ
ಕ್ರಮಿತವಿತಾನಮಂಜುಳಮಮಂದ ಸುಗಂಧಲತಾಂತಮಾಲಿಕಾ
ಸಮುದಯಶೋಭಿ ಹೇಮಮಯಕಾಂಡಪಟ ಪ್ರವಿರಾಜಮಾನಮಂ
ದಮನಮರ್ದಪ್ಪಿ ತೋಱಿದುದು ಕಾಂಚನಮಂಚಮದೊಂದು ಚೆಲ್ವಿನಿಂ ೧೨

ಭಾವ). ಹೊಳೆಯುತ್ತಿರುವ ಚಿನ್ನದ ಮಣೆಯ ಮೇಲೆ, ರತ್ನಗಳಿಂದ ಮಾಡಿದ ಪಾತ್ರೆಗಳಲ್ಲಿ ನಿರ್ಮಲ ಪಚ್ಚಕರ್ಪೂರದಿಂದ ಕೂಡಿದ ಅತಿ ಸ್ವಾದವುಳ್ಳ ತಾಂಬೂಲದ ಸಾಮಗ್ರಿಗಳನ್ನು (ತುಂಬಿ) ಇಡಲಾಗಿತ್ತು. ಬಂಗಾರ ವರ್ಣದ ಕಮಲ, ಕನ್ನೈದಿಲೆ, ಕಲ್ಹಾರ (ಸುಗಂಧ ವಿಶಿಷ್ಟವಾದ ಕಮಲ), ಮುಡಿವಾಳ, ಕರ್ಪೂರ, ಪಚ್ಚಕರ್ಪೂರ—ಇವುಗಳಿಂದ ಸುಗಂಧವುಂಟಾಗುವಂತೆ ಮಾಡಿದ್ದ ಇಂಪಾದ ತಣ್ಣೀರು ಬಂಗಾರದ ಗಿಂಡಿಗಳಲ್ಲಿ ತುಂಬಿಡಲ್ಪಟ್ಟಿತ್ತು. ಗೋಡೆಗಳ ಮೇಲೆ ಅತಿ ಸೂಕ್ಷ್ಮವಾಗಿ ನಾನಾ ವಿಧವಾದ ಚಿತ್ರಗಳ ಸಮೂಹವು ಚಿತ್ರಿತಗೊಂಡಿತ್ತು. ಮನೆಯ ಮಧ್ಯದ ಗೋಡೆಯಲ್ಲಿ ರತ್ನದಿಂದ ಮಾಡಿದ, ಸರ್ವಾಂಗವನ್ನು ಏಕಕಾಲದಲ್ಲಿ ನೋಡಿಕೊಳ್ಳುವಂತಹ (ದೊಡ್ಡದಾದ) ಶ್ರೇಷ್ಠವಾದ ಕಾಂತಿಯಿಂದ ಕೂಡಿದ ನೂತನ ಕನ್ನಡಿಯಿತ್ತು. ಕಸ್ತೂರಿ, ಕುಂಕುಮ ಕೇಸರಿಗಳನ್ನು ಕೂಡಿಸಿ ಮಾಡಿದ, 'ಯಕ್ಷಕರ್ದಮರಸ'ವೆಂಬ ಹೆಸರಿನ ಅನುಲೇಪನ ದ್ರವ್ಯವು ಆನೆಯ ದಂತಗಳಿಂದ ಮಾಡಿದ ಭರಣಿಗಳಲ್ಲಿ ತುಂಬಿಡಲಾಗಿತ್ತು. ದ್ರಾಕ್ಷೆ, ದಾಳಿಂಬೆ, ಬೇಲ–ಇವುಗಳ ಪಾನಕವೂ, ಖರ್ಜೂರ ಹಣ್ಣಿನಿಂದ ಮಾಡಿದ ರಸಾಯನವೂ, ಶ್ರೇಷ್ಠವಾದ ಕಬ್ಬಿನ ತುಣುಕುಗಳ ಸಮೂಹವೂ–ಬಂಗಾರದಿಂದ ಮಾಡಿದ ಪಾನ ಪಾತ್ರೆಗಳ ಸಮೂಹಗಳಲ್ಲಿ ತುಂಬಿಡಲ್ಪಟ್ಟಿದ್ದವು. ವೀಣೆ, ಬಿದುರಿನ ವೀಣೆ (ವೇಣುವಲ್ಲಕಿ), ಹೂಮಾಲೆ, ಬೀಸಣಿಗೆ, ಪಗಡೆಯಾಟದ ಹಲಗೆ, ರತ್ನದ ಆವುಗೆ-ಇವೇ ಮೊದಲಾದ ಸಾಮಗ್ರಿಗಳ ಸಮೂಹವು, ಅಲ್ಲಲ್ಲಿ ಶೋಭಿಸುತ್ತಿತ್ತು.

೧೨. ನಿರ್ಮಲ ಹಂಸಪಕ್ಷಿಗಳ ತುಪ್ಪುಳಗಳಿಂದ ಮಾಡಿದ ಮೃದುವಾದ ಹಾಸಿಗೆಯಿಂದ ಪ್ರಕಾಶಿಸುವಂಥದೂ, ರತ್ನ ಸಮೂಹದಿಂದ ಕೂಡಿದ ಮೇಲು ಕಟ್ಟುಗಳಿಂದ ಮನೋಹರವಾದುದೂ, ಅಧಿಕವಾದ ಪರಿಮಳವುಳ್ಳ ಹೂವುಗಳ ಮಾಲೆಗಳ ಸಮೂಹದಿಂದ ಶೋಭಿಸುವಂತಹುದೂ, ಚಿನ್ನದ ಬಟ್ಟೆಯ ತೆರೆಯಿಂದ ಪ್ರಕಾಶಮಾನವಾದುದೂ ಆದ ಬಂಗಾರದ ಮಂಚವು ಅಂದದಿಂದ ಕೂಡಿ, ತನ್ನದೆ ಆದ ಚೆಲುವಿನಿಂದ

ವ॥ ಆ ಮನೋಜ್ಞಸುವರ್ಣಪರ್ಯಂಕಮಂ ಶಂಕರಸಮರ್ಚನೋಚಿತ ಮಂಟಪ ಮಕ್ಕುಮೆಂದದನೇಱಲೊಲ್ಲದೆ ತನ್ನಿಕಟದೊಳ್ಪಾಸಿರ್ದ ಮಣಿಕಂಬಳಾಸನದೊಳ್ಕುಳ್ಳಿರ್ದು ಪರಿಮಳಾಂಬುವಿಂ ನಿಜಪಾದಪ್ರಕ್ಷಾಳನಂ ಗೈದು ಪಾದೋದಕಂದಳೆದು ಭಕ್ತಿವೆರಸಿನಿಂದಿರ್ದ ಗಣಿಕಾಂಗನೆಯಾನನಮನವಲೋಕನಂಗೈದು—

ಎಲೆ ಭಕ್ತೆ ನಿನ್ನ ಮೆಯ್ಯೊ
ಳ್ಸಲಲಿತಭಸಿತಾನುಲೇಪನಂ ರುದ್ರಾಕ್ಷಾ
ವಲಿ ಕೊರಲೊಳ್ಶಿರದೊಳ್ಜಡೆ
ನೆಲಸದ ಬಗೆಯೇಂ ಮೃಗಾಕ್ಷಿ ಪೇಳೆನಗೀಗಳ್ ೧೩

ವ॥ ಎಂಬ ತನ್ಮುಗ್ಧೋಕ್ತಿಗೇಳ್ದು ವಿದಗ್ಧೆಯಂತಃಸ್ಮಿತೆಯಾಗಿ

ಪಳದಿಯ ಬಣ್ಣದ ಭಸಿತಮ
ನಿಳೆಯೊಳ್ದ್ವೀಪಾಂತರಾಗತವನನವರತಂ
ತಳೆದಿರ್ಪೆಂ ನೋಡೆಂದಾ
ಗಳೆ ತನ್ನೊಡಲರಿಸಿನಮನವಳ್ತೋಱಿಸಿದಳ್ ೧೪

ಕಾಣುತ್ತಿತ್ತು. ವ॥ ಇಂಥ ಮನೋಜ್ಞವಾದ ಸುವರ್ಣಮಂಚವನ್ನು ಶಿವನ ಪೂಜೆಗೋಸುಗ ಮಾಡಿದ ಯೋಗ್ಯವಾದ ಮಂಟಪವೇ ಆಗಿರಬೇಕು, ಎಂದು ಅದನ್ನು ಹತ್ತಲೊಲ್ಲದೆ, ಅದರ ಪಕ್ಕದಲ್ಲಿ ರನ್ನಗಂಬಳಿಯ ಆಸನದಲ್ಲಿ ಕುಳಿತುಕೊಂಡನು. (ಆಗ ಆ ವೇಶ್ಯೆಯು) ಸುಗಂಧ ವಿಶಿಷ್ಟವಾದ ನೀರಿನಿಂದ ಆತನ ಪಾದಗಳನ್ನು ತೊಳೆದು ಆ ಪಾದೋದಕವನ್ನು ತನಗೆ ಚಿಮುಕಿಸಿಕೊಂಡು ನಿಂತುಕೊಂಡಿದ್ದ, ಆ ವೇಶ್ಯೆಯ ಮುಖವನ್ನು (ಮುಗ್ಧಸಂಗಯ್ಯನು) ನೋಡಿ— ೧೩. ಮೃಗಾಕ್ಷಿಯಾದ ಎಲೆ ಭಕ್ತೆಯೇ, ನಿನ್ನ ದೇಹದಲ್ಲಿ ಮನೋಹರವಾದ ಭಸ್ಮಲೇಪನ, ಕೊರಳಲ್ಲಿ ರುದ್ರಾ ರುದ್ರಾಕ್ಷ ಮಾಲೆ, ತಲೆಯಲ್ಲಿ ಜಡೆ–ಇವು ಇರದಿರುವುದಕ್ಕೆ ಏನು ಕಾರಣ ? ಈಗ ನನಗೆ ಹೇಳು. (ಎಂದನು) ವ॥ ಹೀಗೆಂದ ಆ ಮುಗ್ಧಸಂಗಯ್ಯನ ಮುಗ್ಧವಾದ ಮಾತುಗಳನ್ನು ಕೇಳಿ ಪ್ರೌಢಳಾದ (ಆ ವೇಶ್ಯೆಯು) ಒಳಗೊಳಗೇ ಮುಗುಳು ನಗುವವಳಾಗಿ— ೧೪. ಅವಳು ದ್ವೀಪಾಂತರ ಭೂಮಿಯಿಂದ ಬಂದಂಥ ಹಳದಿಯ ಬಣ್ಣದ ಭಸ್ಮವನ್ನು ಯಾವಾಗಲೂ ಧರಿಸಿದ್ದೇನೆ ನೋಡು ಎಂದು ಆಗ ಅವನಿಗೆ

ಕ್ಷೀರಾಂಭೋಧಿಯ ತೀರದೊಳ್ಜನಿಸಿ ನುಣ್ಪಿಂದಾನನಂದೋಱದಾ
ಕಾರಂ ತಳ್ತಿರೆ ರಂಜಿಪೀ ಬಿಳಿಯರುದ್ರಾಕ್ಷಾಳಿಯಂ ತಾಳ್ದಿನೆಂ
ದಾ ರಾಜಾನನೆ ತೋಱಿಸುತ್ತೆಸೆವ ಮುಕ್ತಾಹಾರಮಂ ಮುಗ್ಧಸಂ
ಗಾರಾಧ್ಯಂಗೆ ಶಿವಪ್ರಸಾದಕುಸುಮಂದಾಳಲ್ಕಚಾರ್ಧಂಗಳಂ ೧೫

ಉಳಿಪಿ ನಿಮಿರ್ಚಿದ ಜೆಡೆಯಂ
ತಳೆದಿರ್ಪೆನಿದೊಂದನೀಕ್ಷಿಸೆಂದೊಲವಿಂದಂ
ಕಳಭಮ್ಮದುಯಾನೆ ನಿಜಮುಂ
ಜುಳಪಟ್ಟದ ನೀಲವೇಣಿಯಂ [1]ತೋಱಿ[1]ಸಿದಳ್ ೧೬

ಭವಿದೃಷ್ಟಿ ಪಾತಮೆನ್ನವ
ಯವನಿವಹಮನಂಟದಂತೆ ಸರ್ವಾಂಗಕ್ಕೊ
ಪ್ಪುವ ಕೌಪೀನವನಾಂತೆಂ
ವಿವರಿಪುದೆಂದುಟ್ಟ ಪಟ್ಟೆಯಂ ತೋಱಿಸಿದಳ್ ೧೭

ಪರಮ ಶಿವಭಕ್ತಿ ಭಾಸುರ
ಗಿರಿಜಾತೆಯ ಸಂಪ್ರದಾಯದಿಂ ಬಂದುದು ಬಂ
ಧುರ ಶಿವಲಾಂಛನವಿಂದನಾಂ
ಧರಿಸಿರ್ಪೆನೆಮ್ಮವರ್ಗಮವನೀತಳದೊಳ್ ೧೮

ತನ್ನ ದೇಹಕ್ಕೆ ತೊಡೆದುಕೊಂಡಿದ್ದ ಅರಿಸಿಣವನ್ನು ತೋರಿಸಿದಳು. ೧೫_೧೬. ಆ ಚಂದ್ರಮುಖಿಯು ಕ್ಷೀರಸಮುದ್ರದ ದಂಡೆಯಲ್ಲಿ ಹುಟ್ಟಿ, ನುಣುಪಿನಿಂದ ಕೂಡಿ, ಮುಖವೇ ಇಲ್ಲದಿರುವ ಶೋಭಿಸುವ ಈ ಬಿಳಿಯ ರುದ್ರಾಕ್ಷ ಮಾಲೆಯನ್ನು ಧರಿಸಿದ್ದೇನೆ ನೋಡು ಎಂದು ಆ ಮುಗ್ಧ ಸಂಗಾರಾಧ್ಯನಿಗೆ (ತನ್ನ ಕೊರಳಲ್ಲಿರುವ) ಪ್ರಕಾಶಿಸುವ ಮುತ್ತಿನ ಹಾರವನ್ನು ತೋರಿಸಿದಳು. ಶಿವನ ಪ್ರಸಾದ ರೂಪವಾದ ಪುಷ್ಪಗಳನ್ನು ಧರಿಸಿಕೊಳ್ಳಲು, ಅರ್ಧ ಕೂದಲುಗಳನ್ನು ಉಳಿಸಿ ಮಾಡಿರುವ ಇದೊಂದು (ರೀತಿಯ) ಜಡೆಯನ್ನು ಹೊಂದಿದ್ದೇನೆ ನೋಡು—ಎಂದು ಆ ಮದಗಜ ಗಮನದಂತೆ ಗಮನವುಳ್ಳ ವೇಶ್ಯಾ ಸ್ತ್ರೀಯು ತನ್ನ ಮನೋಹರವಾದ ಭ್ರಮರಗಳಂತೆ ಕಪ್ಪಾದ ಜಡೆಯನ್ನು ತೋರಿಸಿದಳು. ೧೭. ಲಿಂಗ ರಹಿತರಾದವರ ನೋಟವು ನನ್ನ ಅವಯವ ಸಮೂಹವನ್ನು ಅಂಟದ ಹಾಗೆ ಸರ್ವ ಅಂಗಕ್ಕೂ ಒಪ್ಪಿದ ಕೌಪೀನವನ್ನು ಧರಿಸಿದ್ದೇನೆ, ಪರಿಶೀಲಿಸಬಹುದು ಎಂದು ಉಟ್ಟ ಪಟ್ಟೆಯ ಸೀರೆಯನ್ನು ತೋರಿಸಿದಳು. ೧೮–೧೯. ಶ್ರೇಷ್ಠವಾದ ಶಿವಭಕ್ತಿಯಿಂದ ಪ್ರಕಾಶಮಾನಳಾದ ಪಾರ್ವತೀದೇವಿಯ ಸಂಪ್ರದಾಯದಿಂದ ಬಹುಕಾಲದಿಂದ ಬಂದಂತಹ ಬಂಧುರವಾದ ಈ ರೀತಿಯ ಶಿವಲಾಂಛನವನ್ನು ನಾನು ಧರಿಸಿದ್ದೇನೆ. ನಮ್ಮ ಈ ರೀತಿಯ

1 ಕಾಣಿ(ದ,ಗ)

ಸಾರಶ್ರೀಗಿರಿಯೊಳ್ದ್ರಾ
ಕ್ಷಾರಾಮದೊಳೆಸೆವ ಕಾಂಚಿಯೊಳ್ನೆಲಸಿರ್ಕುಂ
ಗೌರೀಧೃತ ಶಿವಾಲಾಂಛನ
ಧಾರಣದಿನುಮೇಶನಂಘ್ರಿಯುಂ ಭಜಿಯಿಸುತುಂ ೧೯

ಎಮಗನವರತಂ ಕೇಳ್ಜಂ
ಗಮನಿವಹಂ ಪ್ರಾಣಮವರ ಸೇವಾರತಿ ಸಂ
ಭ್ರಮಮಲ್ಲದೆ ಪೆಱತೊಂದು
ದ್ಯಮಮಿಲ್ಲಿದು ನಿಶ್ಚಯೆಂದವಳ್ನುಡಿಯಲೊಡಂ ೨೦

ಬಗೆಗೊಂಡು ಕೇಳ್ದು ನೋಡು
ತ್ತಗಲದೆ ಶಿವ ಶಿವ ವಿಚಿತ್ರಮೀಲಾಂಛನಮೀ
ಸುಗುಣೆಯ ಚರಿತ್ರಮೆಂದಾ
ಮುಗುದಂ ಸಾಶ್ಚರ್ಯಮುದಮನಾಳ್ದೆಸೆದಿರ್ದಂ ೨೧

ವ॥ ಅಂತೆಸೆದಿರ್ದನಿತಱೊಳ್[1] ಲಿಂಗಾರ್ಚನೆಗೈಯಲುಜ್ಜುಗಿಸಿದ ಮುಗ್ಧಸಂಗಮ ದೇವ ನಿಂಗಿತಮನಱಿದಾವಂದದಿನಾದೊಡಮೀ ದೇವಂಗೆ ಸಂತಸಮನೊಡರ್ಚುವುದೆ ಕಜ್ಜಮೆಂದು ನಿರ್ಧರಿಸಿ ತತ್ಪೂಜಾನಿಯೋಗಕ್ಕೆ ಬೇಗದಿನಾ ವಾರಾಂಗನೆ ನಿಯಮಿಸೆ ಸಾದರಂಮಿಗೆ ಸಂಭ್ರಮಿಸಿ ಮೃಗಮದಾ

ಸಮಾಜವು ಈ ಭೂಮಂಡಲದಲ್ಲಿ ಶ್ರೇಷ್ಠವಾದ ಶ್ರೀಶೈಲ ಗಿರಿಯಲ್ಲಿ, ದ್ರಾಕ್ಷಾರಾಮದಲ್ಲಿ, ಶೋಭಿಸುವ ಕಾಂಚಿಯಲ್ಲಿ, ಪಾರ್ವತೀದೇವಿಯಿಂದ ಧರಿಸಲ್ಪಟ್ಟ ಶಿವನ ಲಾಂಛನಗಳ ಧಾರಣೆಯಿಂದ ಈಶ್ವರನ ಪಾದಗಳನ್ನು ಧ್ಯಾನ ಮಾಡುತ್ತ ವಾಸ ಮಾಡಿಕೊಂಡಿದೆ. ೨೦. ನಮಗೆ ಸದಾ ಕಾಲವೂ ಜಂಗಮ ಸಮೂಹವೇ ಪ್ರಾಣ; ಅವರ ಸೇವೆಯ ಆಸಕ್ತಿಯಿಂದುಂಟಾದ ಸಡಗರವಲ್ಲದೆ ಮತ್ತೊಂದು ಉದ್ಯೋಗವೇ ಇಲ್ಲ; ಈ ಮಾತು ನಿಶ್ಚಯ ಕೇಳು ಎಂದು ಅವಳು ಹೇಳಿದ ಕೂಡಲೆ—೨೧. (ಆಗ) ಆ ಮುಗ್ಧ ಸಂಗಯ್ಯನು(ಅವಳಮಾತನ್ನು)ಆಲಿಸಿ ಕೇಳಿ, ಅವಳನ್ನು ಎಡೆಬಿಡದೆ ನೋಡುತ್ತ, ಶಿವ ಶಿವ ! ಈ ಚಿಹ್ನೆಯೂ, ಈ ಸದ್ಗುಣೆಯಾದ ಸ್ತ್ರೀಯ ಚರಿತ್ರೆಯೂ ಆಶ್ಚರ್ಯಕರವಾದದ್ದು ಎಂದು ಆಶ್ಚರ್ಯದಿಂದ ಕೂಡಿ ಸಂತೋಷಗೊಂಡು ಶೋಭಿಸುತ್ತಿದ್ದನು. ವ॥ ಈ ರೀತಿಯಲ್ಲಿ ಶೋಭಿಸುತ್ತಿರುವಷ್ಟರಲ್ಲಿ ಲಿಂಗಾರ್ಚನೆ ಮಾಡಲು ಸಿದ್ಧನಾದ ಮುಗ್ಧ ಸಂಗಯ್ಯನ ಮನೋಭಿಪ್ರಾಯವನ್ನು ತಿಳಿದು ಯಾವ ರೀತಿಯಿಂದಲಾದರೂ ಈ ದೇವನಿಗೆ ಸಂತೋಷವನ್ನುಂಟುಮಾಡುವುದೇ (ನನ್ನ) ಕಾರ್ಯವೆಂದು ನಿರ್ಧರಿಸಿದವಳಾಗಿ, ಅವನ ಪೂಜೆಯ ಸೇವೆಗೋಸ್ಕರ ಬೇಗನೆ ಆ ವೇಶ್ಯಾಂಗನೆಯು ಸಿದ್ಧಳಾಗಿ ಹೆಚ್ಚಾದ ಆದರದಿಂದ ಕೂಡಿ, ಸಂಭ್ರಮಗೊಂಡು, ಮೃಗಮದಾ

1 ಳಿ(ದ)

ಲೋಲೆಯೆಂಬವಳ್ಭೂಕಾಂತಗನುಲೇಪನಂಗೊಳಿಪಂತೆ ಸುರಭಿಜಲಮಿಳಿತ ಗೋಮಯಾನುಲೇಪನಂ ಗೈದು ಚೌಕಮಂ ರಚಿಸೆಯುಂ ಶಶಿಲೇಖೆಯೆಂಬವಳ್ಮಹೀಲತೆ ಪೂತುದೆನಿಸಿ ಮೌಕ್ತಿಕಚೂರ್ಣದಿಂ ವಿವಿಧ ಕುಸುಮಾಕೃತಿಕಲಿತ ರಂಗವಲ್ಲಿಯಂನೊಡರ್ಚೆಯುಂ ತರಂಗಿಣಿಯೆಂಬವಳ್ಮುಗ್ಧದೇವಂಗೆ ಧರಾವಧು ಭಕ್ತಿಯಿಂ ಕಳಶಂಬೊತ್ತಳೆನಿಸಿ ಸುರಭಿ ಶೀತಳ ಮಧುರ ವಾರಿಪೂರಿತ ಕನಕಕಳಶಮನಮರ್ಚೆಯುಂ ಗೌರಿಯೆಂಬವಳ್ ರವಿಬಿಂಬಮನಧಃಕರಿಪ ಕಾಂತಿಮಯ ಕನಕಚಷಕಸಂದೋಹಮಂ ಪೊಂಬರಿಯಾಣ ದೊಳಿಂಬುಗೊಳಿಸೆಯುಂ ವಸಂತಲತಿಕೆಯೆಂಬವಳ್ ದರದಳಿತ ಕಮಳಕುಮುದ ಕಲ್ಹಾರಬಕವಕುಳ ತಿಲಕಕಿಂಶುಕಮಲ್ಲಿಕಾಚಂಪಕಾದಿ ಕುಸುಮ ಬಿಲ್ವಾದಿ ಪಲ್ಲವಪ್ರತಾನಮಂ ಸರಂಗೊಳಿಸಿ ಕರಂಡಕಂದೀವಿ ಪಿಡಿದು ನಿಲೆಯುಂ ಕಾಶ್ಮೀರಮಂಜರಿಯೆಂಬವಳ್ ಹಿಮ ಕಾಶ್ಮೀರಮಲಯಜಂಗಳಿಂ ಘಟ್ಟಿಮಗುಳ್ಚಿದ ಘಟ್ಟಿಯಂ ಶುಕ್ತಿಯೊಳಿರಿಸಿ ಕೆಲದೊಳಿಡೆಯುಂ ನಕ್ಷತ್ರಮಾಲೆಯೆಂಬವಳ್ ಧವಳಾಕ್ಷತೆಗಳಂ ಪರಿಸರ ದೊಳಿರಿಸೆಯುಂ ಜ್ಯೋತಿಷ್ಮತಿಯೆಂಬವಳ್ ಪೇರುರಿ[1]ಯಾರತಿ[2]ಯನೋರಂತೆ ಪಿಡಿದು ಬೆಳಗೆಯುಂ ಸುರಭಿಯೆಂಬವಳ್ಸುಗಂಧಧೂಪಧೂಮಮಂ ಪರಪೆಯುಂ [3]ಕಾಳಿಕಾ[3]ದೇವಿಯೆಂಬವಳ್ ಮಧುರ ತರಾಹಾರಮಂ ನೆಗಳ್ಚಿ ಗಡಣಿಸೆಯುಂ ಕಲಾಮಾನಿನಿಯೆಂಬವಳ್ ಕರ್ಪೂರತಾಂಬೂಲಮಂ

ಮೋದೆಯೆಂಬುವಳು ಭೂಮಿಯೆಂಬ ಸ್ತ್ರೀಗೆ ಸುಗಂಧ ದ್ರವ್ಯಗಳನ್ನು ತೊಡೆಯು ವಂತೆ ಪರಿಮಳದ ನೀರಿನಿಂದ ಕೂಡಿದ ಹಸುವಿನ ಸೆಗಣಿಯಿಂದ (ನೆಲವನ್ನು) ಸಾರಿಸಿ, ಚೌಕವೊಂದನ್ನು ರಚಿಸಿದಳು. ಶಶಿಲೇಖೆ ಎಂಬುವಳು ಭೂಮಿಯೆಂಬ ಬಳ್ಳಿಯು ಹೂವನ್ನು ಬಿಟ್ಟಿತು ಎನ್ನುವಂತೆ ಮುತ್ತಿನ ಹುಡಿಯಿಂದ ನಾನಾ ವಿಧವಾದ ಹೂವುಗಳ ಆಕಾರದಲ್ಲಿರುವ ರಂಗವಲ್ಲಿಯನ್ನುಂಟುಮಾಡಿದಳು. ತರಂಗಿಣಿಯೆಂಬುವಳು–ಮುಗ್ಧ ದೇವನಾದ ಆ ಸಂಗಯ್ಯನಿಗೆ ಭೂಕಾಂತೆಯು ಭಕ್ತಿಯಿಂದ ಕಲಶವನ್ನು ಹೊತ್ತು ನಿಂತಿ ರುವಳೋ ಎಂಬ ರೀತಿಯಲ್ಲಿ ಪರಿಮಳದಿಂದ ಕೂಡಿದುದೂ, ತಂಪಾಗಿಯೂ ಮಧುರ ವಾಗಿಯೂ ಇರುವ ನೀರಿನಿಂದ ತುಂಬಿದ ಬಂಗಾರದ ಕಲಶಗಳನ್ನು ಹಿಡಿದಿದ್ದಳು. ಗೌರಿ ಎಂಬುವಳು ಸೂರ್ಯಮಂಡಲವನ್ನು ತಿರಸ್ಕರಿಸುವ ತೇಜೋ ಮಯವಾದ ಚಿನ್ನದ ಪಾನ ಪಾತ್ರೆ (ಚಷಕ)ಗಳ ಸಮೂಹವನ್ನು ಚಿನ್ನದ ಭೋಜನದ ತಟ್ಟೆಯಲ್ಲಿ (ಹರಿವಾಣದಲ್ಲಿ) ವ್ಯವಸ್ಥೆಗೊಳಿಸಿ ಇಟ್ಟಿದ್ದಳು. ವಸಂತಲತೆ ಎಂಬುವಳು ಅರ್ಧಮರ್ಧ ಅರಳಿದ ಕಮಲ, ಕುಮುದ, ಕಲ್ಹಾರ, ಬಕ, ಬಕುಳ. ತಿಲಕ, ಮುತ್ತುಗ, ಮಲ್ಲಿಗೆ, ಸಂಪಿಗೆ ಮೊದಲಾದ ಹೂವುಗಳನ್ನೂ, ಬಿಲ್ವವೇ ಮೊದಲಾದ ಪತ್ರೆಯ ಚಿಗುರು ಗಳ ಸಮೂಹವನ್ನೂ ಓರಣಗೊಳಿಸಿ ಹೂವಿನ ಬುಟ್ಟಿಯಲ್ಲಿ ತುಂಬಿ ಹಿಡಿದು ನಿಂತಿದ್ದಳು ಕಾಶ್ಮೀರ ಮಂಜರಿ ಎಂಬುವಳು–ನಿರ್ಮಲವಾದ ಪಚ್ಚಕರ್ಪೂರ, ಕುಂಕುಮ ಕೇಸರಿ,

---

2 ಯೊರಲೆ(ದ) 3 ಚಾಳಿಕ(ದ)

ಸಮರ್ಪಿಸೆಯುಂ ಭಾನುಮತಿಯೆಂಬವಳ್ ಸಾರನೀರಾಜನಮನೆತ್ತಿ ನೀರಾಜಿಸೆಯುಂ ಸಂಗೀತಮಂಗಳೆ ಯೆಂಬವಳ್ ಸಂಗೀತಮಂ ಪಾಡೆಯುಂ ತಾಳವಿದ್ಯಾಧರಿಯೆಂಬವಳ್ ತಾಳಮನೊತ್ತೆಯುಂ ಚಮತ್ಕಾರಿಣಿಯೆಂಬವಳ್ ಮೃದಂಗಮಂ ಬಾಜಿಸೆಯುಂ ಭರತ ಭಾರತಿಯೆಂಬವಳ್ ನವೀನಮೆನಿಸಿ ನರ್ತಿಸೆಯುಮಾ ಪಣಾಂಗನೆ ಪರಮಭಕ್ತಿಯಿಂ ವಿವಿಧೋಪಚಾರಮಂ ನಿವರ್ತಿಯುಮನುಪಮಾನಂದ ರಸನಿಮಗ್ನಮಾನಸಂ ಮುಗ್ಧದೇವಂ ಶಿವಲಿಂಗಪೂಜೆಯಂ ನೆಗಳ್ಚುತ್ತಮಿರೆಯಿರೆ—

ಕೂಜತ್ಕಾರಂಡಚಕ್ರಪ್ರಮುಖವಿರವನಿರ್ನಿದ್ರಕಂಜಾತಪುಂಜ
ಭ್ರಾಜದ್ಗಂಧಾನುಬಂಧಂ ರತಿರಮಣರಣಶ್ರಾಂತಕಾಂತಾಕದಂಬೋ
ರೋಜಶ್ರೀಖಂಡಮಿಶ್ರಶ್ರಮಜಲಕಣಿಕಾಹಾರಚೋರಂ ಪಣಸ್ತ್ರೀ
ರಾಜದ್ಧಮ್ಮಿಲ್ಲಮಾಲಾಸ್ಖಲಿತಗತಿಯುತಂ ಮಾರುತಂ ತೀಡಿತಾಗಳ್ ೨೨

ಶ್ರೀಗಂಧಗಳ ಸುಗಂಧದ ಕರಣಿಗೆಗಳ ಬಿಲ್ಲೆಗಳನ್ನು ಮುತ್ತಿನ ಚಿಪ್ಪುಗಳಲ್ಲಿಟ್ಟು ಒಂದು ಪಕ್ಕದಲ್ಲಿ ಇಟ್ಟಿದ್ದಳು. ನಕ್ಷತ್ರಮಾಲೆ ಎಂಬುವಳು ಶುಭ್ರವಾದ ಅಕ್ಕಿಯ ಕಾಳು ಗಳನ್ನು ಸಮೀಪದಲ್ಲಿ ಇಟ್ಟಿದ್ದಳು. ಜ್ಯೋತಿಷ್ಮತಿಯೆಂಬುವಳು ಅಧಿಕವಾದ ದೀಪಗಳನ್ನು ಹೊಂದಿದ ಅರತಿಯನ್ನು ಚೆನ್ನಾಗಿ ಹಿಡಿದು ಬೆಳಗಿದಳು. ಸುರಭಿಯೆಂಬು ವಳು ಸುಗಂಧದಿಂದ ಕೂಡಿದ ಧೂಪವನ್ನು ಹರಡಿದಳು. ಕಾಳಿಕಾದೇವಿಯೆಂಬು ವಳು ಅತಿ ಮಧುರವಾದ ಆಹಾರಗಳನ್ನು ಸಿದ್ಧಪಡಿಸಿ ಓರಣಗೊಳಿಸಿದಳು. ಕಲಾ ಮಾನಿನಿಯೆಂಬುವಳು ಕರ್ಪೂರ ಮಿಶ್ರವಾದ ತಾಂಬೂಲವನ್ನು ಸಮರ್ಪಿಸಿದಳು. ಭಾನುಮತಿಯೆಂಬುವಳು ಶ್ರೇಷ್ಠವಾದ ಆರತಿಯನ್ನು ವಿರಾಜಗೊಳಿಸಿದಳು. ಸಂಗೀತ ಮಂಗಳೆಯೆಂಬುಂವಳು ಸಂಗೀತವನ್ನು ಹಾಡಿದಳು. ತ್ತಾಳ ವಿದ್ಯಾಧರಿ ಎಂಬುವಳು (ಆ ಸಂಗೀತಕ್ಕೆ) ತಾಳ ಹಾಕಿದಳು. ಚಮತ್ಕಾರಿಯೆಂಬುವಳು ಮೃದಂಗ ನುಡಿಸಿದಳು. ಭರತಭಾರತಿಯೆಂಬುವಳು ಹೊಸಪರಿಯ ನರ್ತನವನ್ನು ಮಾಡಿದಳು. ಆ ಪಣ್ಯಾಂಗ ನೆಯು (ಈ ರೀತಿ) ಪರಮ ಭಕ್ತಿಯಿಂದ (ಮುಗ್ಧ ಸಂಗಯ್ಯನಿಗೆ) ವಿವಿಧವಾದ ಉಪಚಾರಗಳನ್ನು ನೆರವೇರಿಸಿದಳು. ಅಸದೃಶವಾದ ಸಂತೋಷ ಜಲದಲ್ಲಿ ಮುಳುಗಿದ ಮನಸ್ಸುಳ್ಳ ಆ ಮುಗ್ಧ ದೇವನು ಶಿವ ಪೂಜೆಯನ್ನು ಮಾಡುತ್ತ ಇರುತ್ತಿರಲಾಗಿ—
೨೨. ಕೂಗುತ್ತಿರುವ ಅವ್ಯಕ್ತ ಮಧುರವಾದ ಸ್ವರವುಳ್ಳ ಹಂಸ, ಚಕ್ರವಾಕಗಳೇ ಮೊದಲಾದ ಪಕ್ಷಿಗಳ ಕೂಜನದಿಂದ ನಿದ್ರೆಯಿಂದೆಚ್ಚೆತ್ತುದೂ, (ಹೋದ ನಿದ್ರೆಯು ಳ್ಳದ್ದೂ) ಕಮಲ ಸಮೂಹಗಳ ಮನೋಹರ ಗಂಧದ ಸಂಬಂಧವುಳ್ಳದ್ದೂ. ಮದನ ಯುದ್ಧದಿಂದ ಬಳಲಿದ ಸ್ತ್ರೀಯರ ಸಮೂಹದ ಮೊಲೆಗಳಲ್ಲಿರುವ ಶ್ರೀಗಂಧದಿಂದ ಕೂಡಿರುವ ಬೆವರಿನ ಹನಿಗಳೆಂಬ ಮುತ್ತಿನ ಹಾರಕ್ಕೆ ಕಳ್ಳನೆನಿಸಿದವನೂ. (ಆ ಬೆವರಿನ ಹನಿಗಳನ್ನು ಹೋಗಲಾಡಿಸುವವನು—ಎಂಬ ಭಾವ). ಸೂಳೆಯರ ಶೋಭಿಸುವ ಮುಡಿಯಲ್ಲಿ ಧರಿಸಿರುವ ಹೂಮಾಲೆಗಳ ಮೇಲೆ ಹಾಯ್ದು ಜಾರಿದ (ಮಂದ)

ಸರ್ವಸ್ವಾಪಹರಂ ರವಿ
ಪೂರ್ವಾಶೆಯೊಳೈದೆ ರಾಜವಸುದೆಗೆದಪನೆಂ
ದುರ್ವಿಗೆ ಕೂಗಿಟ್ಟಪುದೆನೆ
ಕೊರ್ವಿದ ಕುಕ್ಕುಟನಿಕಾಯಮೇಂ ಕೂಗಿದುದೋ ೨೩

ಬಿರಿವ ಸರೋರುಹಂ ಮುಗಿವ ಕೈರವಪಂಕ್ತಿ ಕುಕಿಲ್ವ ಪಕ್ಕಿ ಗಾ
ವರಿಪ ಮದಾಳಿಯುಂಕುರಿಪ ಮೆಲ್ಲೆಲರೊಂದುವ ಜೋಡುವಕ್ಕಿ ಮೈ
ಗರೆವುಡುರಾಜಿ ರಂಜಿಸುವ ಸಂಜೆಯಡಂಗುವ ಜೊನ್ನದೇಳ್ಗೆ ಕಾ
ತರಿಪ ಚಕೋರಮುರ್ಬಳಿವ ಸಾಗರಮೊಪ್ಪುವ ಸುಪ್ರಭಾತದೊಳ್ ೨೪

ಅಳಿಶಿಶುಗಬ್ಜಕೋರಕಪಯೋಧರಮಂ ಪದೆದಿತ್ತು ಪದ್ಮತಂ
ಡುಲಮನೆ ಕೊಟ್ಟು ವೀಚಿಭುಜದಿಂದೆಳೆಯಂಚೆಯನಪ್ಪಿ ಪದ್ಮಿನೀ
ದಳಮೆನಿಪೊಂದು ತೊಟ್ಟಿಲೊಳೆ ಪಟ್ಟಿರಿಸುತ್ತೆ ರಥಾಂಗಶಾಬಮಂ
ಗಳಿಲನೆ ತೂಗುತುಂ ಸರಸಿ ಪೋಲ್ತಳನೇಕ ಸುತೋಪಯುಕ್ತೆಯಂ ೨೫

ಉದಯಗಿರಿಶೃಂಗದಂಡಾ
ಗ್ರದೊಳೆತ್ತಿದ ದಿವಸರಮೆಯ ರುಚಿಮಯಮಾಣ
ಕ್ಯದ ಸತ್ತಿಗೆಯೆನಿಸಿದುದು
ರ್ವಿದ ಕೆಂಬೆಳಗಡರ್ದು ತೋರ್ಪ ದಿನಮಣಿಬಿಂಬಂ ೨೬

ಮಾರುತವು ಆಗ ಬೀಸಿತು. ೨೩. ಸಕಲ ಸ್ವತ್ತನ್ನು ಅಪಹರಿಸುವ (ಸಕಲರ ನಿದ್ರೆಯನ್ನು ನಾಶಪಡಿಸುವ) ಸೂರ್ಯನು ಪೂರ್ವ ದಿಗಂತದಲ್ಲಿ ಹುಟ್ಟಿ ಬಂದು, ದೊರೆಯ ದ್ರವ್ಯವನ್ನು ತೆಗೆದುಕೊಳ್ಳುವನು (ಚಂದ್ರನ ಕಿರಣಗಳನ್ನು ತಪ್ಪಿಸುವನು)– ಎಂದು ಭೂಮಂಡಲಕ್ಕೆ ಕೂಗಿ ಹೇಳುವುವೋ ಎನ್ನುವಂತೆ ಕೊಬ್ಬಿದ ಕೋಳಿಗಳ ಸಮೂಹವು ಅದೇನು ಕೂಗಿತೋ ! ೨೪. ಅರಳುವ ಕಮಲ, ಮುಕುಳಿತಗೊಳ್ಳುವ ಕನ್ನೈದಿಲೆಗಳ ಸಾಲು, ಶಬ್ದ ಮಾಡುವ ಪಕ್ಷಿ, ಝೇಂಕರಿಸುವ ಮದಿಸಿದ ಭ್ರಮರ, ತಲೆದೋರಿದ ಮಂದಮಾರುತ, ಗಂಡು ಹೆಣ್ಣುಗಳು ಒಂದನ್ನೊಂದು ಕೂಡುವ ಚಕ್ರವಾಕ ಪಕ್ಷಿಗಳು, ಕಾಣದಂತಾಗುವ ನಕ್ಷತ್ರಗಳ ಸಾಲು, ರಂಜಿಸುವ ಸಂಧ್ಯಾಕಾಲ (ರಾತ್ರಿಗೂ ಹಗಲಿಗೂ ಮಧ್ಯದ ಕಾಲ) ಏಳಿಗೆ ಅಡಗುವ ಬೆಳದಿಂಗಳು, ಭಯ ಪಡುವ ಚಕೋರ ಪಕ್ಷಿ, ಉಬ್ಬಿದ ಸಮುದ್ರದ ಇಳಿತ–ಇವುಗಳಿಂದ ಒಪ್ಪುವ ಪ್ರಾತಃ ಕಾಲದಲ್ಲಿ—೨೫. ಸರೋವರವೆಂಬ ಸ್ತ್ರೀಯು ಭ್ರಮರಗಳೆಂಬ ಶಿಶುಗಳಿಗೆ ಕಮಲದ ಮೊಗ್ಗೆಂಬ ಮೊಲೆಯನ್ನು ಪ್ರೀತಿಯಿಂದ ಕುಡಿಸಿ, ಕಮಲದ ಅಕ್ಕಿಯನ್ನು ಕೊಟ್ಟು ತನ್ನ ಅಲೆಗಳೆಂಬ ತೋಳುಗಳಿಂದ ಬಾಲ ಹಂಸ ಪಕ್ಷಿಯನ್ನು ಅಪ್ಪಿ, ಚಕ್ರವಾಕ ಪಕ್ಷಿಯ ಮರಿಯನ್ನು ಕಮಲದ ಎಲೆಯೆಂಬ ಒಂದು ತೊಟ್ಟಿಲಲ್ಲಿ ಮಲಗಿಸಿ ಘಳಿಲ್ಲೆಂದು ತೂಗುತ್ತ ಬಹು ಸಂಖ್ಯೆಯ ಶಿಶುಗಳಿಂದ ಕೂಡಿದ ತಾಯಿಯನ್ನು (ಸ್ತ್ರೀಯನ್ನು) ಹೋಲುತ್ತಿದ್ದಳು. ೨೬. ಹೆಚ್ಚಾದ ಕೆಂಪು ಕಾಂತಿಯು ಅಡರಿ ತೋರುವ ಸೂರ್ಯ ಮಂಡಲವು ಉದಯ ಪರ್ವತ (ಪೂರ್ವಾದ್ರಿ)ವೆಂಬ ದಿಣ್ಣೆಯೊಂದರ ಮೇಲೆ

ಶ್ರುತಿನಾದಂ ಚರಣಾಯುಧಧ್ವನಿ ಶಿವಾಗಾರಾಳಿತೂರ್ಯಸ್ವನು
ತತತೂರ್ಯಸ್ವನಮಿಂದುಸಿಂಧುಜಲಮಗ್ನಂ ನಾಳಿಕಾಪಾತ್ರಮು
ದ್ಗತಭೃಂಗೀರುತಿಶೋಭನಂ ನೆಱೆಯೆ ತಾಂ ಕೈಗೂಡಿದಳ್ ಪದ್ಮಿನೀ
ಸತಿ ಸಂಧ್ಯಾರುಚಿ ಜಾಱೆ ಕಾಂಡಪಟದಂತಾರಾಗಮಾರ್ತಂಡನೊಳ್ ೨೭

ಹರಿಣಾಂಕಂ ತೆಗೆದೋಡು
ತ್ತಿರೆ ಪಶ್ಚಿಮ ಗಿರಿಯ ಮಱೆಗೆ ಗಗನಾಟವಿಯೊಳ್
ನೆರೆದುಡುಗಳನಿಟ್ಟೊರಸುತ
ಪರೆದುವು ಬಿಯದರ್ಕಳಂತಿರರ್ಕಕರಂಗಳ್ ೨೮

ವ॥ ಆಗಳ್ ಮುಗ್ಧಸಂಗಮದೇವನುಷಃಕಾಲಶಿವಪೂಜಾಸಮಾಪ್ತ್ಯನಂತರಮಲ್ಲಿಂದೇಳ್ದು ಬಸವನೆಡೆಗೆಯ್ತಂದು ತ[1]ನ್ಮಾನಿತಂ ಸಂಭ್ರಮಂ ಮಿಗೆ ಗಣಪಮು[2]ದಯಕ್ಕೆ ನಗೆಯುಂ[3] ಪಸರಿಸಿ—

(ಛತ್ರದಂಡದ ಮೇಲೆ) ಎತ್ತಿದ ದಿವಸ ಲಕ್ಷ್ಮಿಯೆಂಬುವಳ ಕಾಂತಿಮಯವಾದ ಮಾಣಿಕ್ಯವೆಂಬ ರತ್ನದ ಛತ್ರಿಯೆಂದು ಎನಿಸಿತು. ೨೭. ಕೋಳಿಗಳ ಕೂಗೇ ವೇದ ಘೋಷ ; ಶಿವಾಲಯಗಳಲ್ಲಿ ಬಾಜಿಸುವ ವಾದ್ಯ ಧ್ವನಿಯೇ (ನಾಗಸ್ವರ ಮೃದಂಗಾದಿ ವಾದ್ಯ ಧ್ವನಿ), ಭೇರಿ ಮತ್ತು ತುತ್ತೂರಿಗಳ ವಿಸ್ತಾರವಾದ ಧ್ವನಿ ; ಸಮುದ್ರದಲ್ಲಿ ಮುಳುಗುತ್ತಿರುವ ಚಂದ್ರನೇ ಮಟ್ಟಕ್ಕಿಯ ಬುಟ್ಟಿ ; ಹೆಚ್ಚಾದ ಹೆಣ್ಣು ದುಂಬಿಗಳ ಝೇಂಕಾರವೇ ಶೋಭನ ಗೀತೆ–ಹೀಗೆ ಕೂಡಿರಲು ಸಂಧ್ಯಾಕಾಲದ ಕೆಂಪು ಕಾಂಡಪಟ ಸರಿದಂತೆ ಸರಿಯಲು, ಕಮಲ ಲತೆಯೆಂಬ ಸ್ತ್ರೀಯು ವಿಶೇಷವಾದ ಅನುರಾಗದಿಂದ ತಾನು ಸೂರ್ಯನೊಡನೆ (ಆರುಣ್ಯದಿಂದ ಕೂಡಿದ ಸೂರ್ಯನೊಡನೆ) ಪಾಣಿಗ್ರಹಣ ಮಾಡಿದಳು. ೨೮. ಚಂದ್ರನು ಪಶ್ಚಿಮಗಿರಿಯ ಮೇರೆಗೆ ನಿಲ್ಲದೆ ಓಡಿ ಹೋಗುತ್ತಿದ್ದನು. ಸೂರ್ಯ ಕಿರಣಗಳು ಬೇಡರುಗಳಂತೆ ಆಕಾಶವೆಂಬ ಕಾಡಿನಲ್ಲಿ ತುಂಬಿಕೊಂಡಿದ್ದ ನಕ್ಷತ್ರಗಳನ್ನು (ನಕ್ಷತ್ರಗಳೆಂಬ ಪ್ರಾಣಿಗಳನ್ನು) (ಕೈಗಳಿಂದ) ಹೊಡೆದು ಒರೆಸುತ್ತ ಹರಡಿಕೊಂಡವು. ವ॥ ಆಗ ಮುಗ್ಧಸಂಗಯ್ಯನು ಪ್ರಾತಃಕಾಲದ (ಬ್ರಾಹ್ಮೀ ಮುಹೂರ್ತ ಸಮಯದ) ಶಿವಪೂಜೆಯ ಸಮಾಪ್ತಿಯ ನಂತರದಲ್ಲಿ ಆ ವೇಶ್ಯಾಗೃಹದಿಂದ ಎದ್ದು ಬಸವಣ್ಣನ ಹತ್ತಿರಕ್ಕೆ ಬಂದು, ಅವನಿಂದ ಸನ್ಮಾನಿಸಲ್ಪಟ್ಟವನಾಗಿ, ಹೆಚ್ಚಾದ ತನ್ನ ಸಂಭ್ರಮದಿಂದ

1 ತತ್ಸ (ಚ) 2 ದಾ (ದ) 3 × (ದ, ಜ)

ಅದನೇವೇಳ್ವುದೊ ಸೂಳೆಗೆಯ್ತುದೆ ಪೊದಳ್ದಾನಂದದೊಂದಮಂದಂ
ಮದನಾರಾತಿಯೆ ಬಲ್ಲನೆನ್ನೊಡನೆ ನೀನೈತಂದುದಿಲ್ಲಯ್ಯ ತ
ಪ್ಪದೆ ನೀಂ ಬಂದೊಡೆ ತತ್ಸುಖಂ ನಿನಗಮಕ್ಕುಂ ನಿನ್ನನಾವೇಳೆಯೊಳ್
ಪದಪಿಂದಾಂ ನೆನೆದೆಂ ವೃಷೇಂದ್ರ ಗಣಿಕಾಸದ್ಭಕ್ತಿಯತ್ಯದ್ಭುತಂ ೨೯

ಪಳದಿಯ ಬಣ್ಣದುಜ್ವಳವಿಭೂತಿಯ ಲಿಪ್ತಿ ಸುಧಾಬ್ಧಿತೀರದೊ
ಳ್ಬಳೆ[1]ದಮರ್ದಂಗದಿಂದೊಗೆದ ನೂತ್ನ ಶಿವಾಕ್ಷಿಯ ಮಾಲೆ ದೀರ್ಘಕುಂ
ತಳಕೃತಮಾದುದೊಂದೆ ಜಡೆ ಬಾಹ್ಯಜನೇಕ್ಷಣಮಂಟದಂತೆ ಮೈ
ಯೊಳೆ ಬಿಗಿದುಟ್ಟ ಕೈಪು ಶಿವಲಾಂಛನಮಾಕೆಗದೇನಳುಂಬಮೋ ೩೦

ಆವ ಶಿವಾಗಮ ವಚನದಿ
ನಾ ವಧು ನಿರ್ಧರಿಸಿ ತಳೆದಳೋ ಬೆಳರ್ವಣ್ಣಂ
ತೀವಿದ ರುದ್ರಾಕ್ಷಿಯ ಮಣಿ
ಯಾವಗಮೆಸೆದಿರ್ಪುದವಳ ನಾಸಾಗ್ರಮದೊಳ್ ೩೧

ಗಿರಿಜಾತಾಸಾಂಪ್ರದಾಯಾಗತ ನವಶಿವಚಿಹ್ನಂ ದಲಿಂತೆಲ್ಲಮೆಂದಾ
ದರದಿಂ ತದ್ವೇಶ್ಯೆ ಪೇಳ್ದಳ್ ಬಳಿಕಮವಳ ಪೂಜಾಲಸನ್ಮಂಟಪಂ ಬಿ
ತ್ತರದಿಂ ಕಣ್ಗೊಪ್ಪುತಿರ್ಕುಂ ಸಕಳಪರಿಜನಂ ಶೈವಚಿಹ್ನಾಂಕಿತಂ ಕೇ
ಳಿರುಳೆಲ್ಲಂ ಸೂಳೆಗೈದಂ ಬಸವ ತವೆ ತದಾವಾಸದೊಳ್ಪ್ರೀತಿಯಿಂದಂ ೩೨

ಶಿವಗಣ ಸಮುದಾಯಕ್ಕೆ ನಗೆಯನ್ನು ಹರಡಿದನು. ೨೯. 'ಬಸವೇಶ್ವರನೇ, ಸೂಳೆಗಾರಿಕೆಯಲ್ಲಿ ಉಂಟಾದ ಆನಂದದ ಆ ಒಂದು ರೀತಿಯನ್ನು ಏನೆಂದು ಹೇಳಲಿ ! (ಅದನ್ನು) ಈಶ್ವರನೇ ಬಲ್ಲ ; ಅಯ್ಯಾ ! ನನ್ನೊಡನೆ ನೀನು ಬರಲಿಲ್ಲ ತಪ್ಪದೆ (ತಡಮಾಡದೆ) ನೀನು ಬಂದರೆ, ನಾನು ಅನುಭವಿಸಿದ ಆ ಸುಖವು ನಿನಗೂ ಆಗುವುದು. ನಾನು ಆ ವೇಳೆಯಲ್ಲಿ ನಿನ್ನನ್ನು ನೆನೆದುಕೊಂಡೆನು. ಸೂಳೆಯು ತೋರಿಸಿದ ಭಕ್ತಿ ಅತ್ಯದ್ಭುತವಾದುದಾಗಿತ್ತು. ೩೦. ಆಕೆಗೆ ಹಳದಿಬಣ್ಣದ ಪ್ರಕಾಶಮಾನವಾದ ವಿಭೂತಿಯ ಲೇಪನವಿತ್ತು ; ಕ್ಷೀರಸಮುದ್ರದ ದಂಡೆಯಲ್ಲಿ ಬೆಳೆದು ನುಣುಪಾದ ಅಂಗದಿಂದ ಕೂಡಿದ ಹೊಸ ರುದ್ರಾಕ್ಷಮಾಲೆ ಕಂಠದಲ್ಲಿತ್ತು ; ಉದ್ದವಾದ ಕೂದಲಿನಿಂದ ಮಾಡಲ್ಪಟ್ಟ ಒಂದೇ ಒಂದು ಜಟೆಯಿತ್ತು ; ಹೊರಗಿನ ಜನರ ದೃಷ್ಟಿಯು ಮೈಯಲ್ಲಿ ಅಂಟದ ಹಾಗೆ ಬಿಗಿದು ಉಟ್ಟಂಥ ಕೆಂಪುಬಣ್ಣದ ಕೌಪೀನವು ಅದು ಶಿವಲಾಂಛನವಾಗಿ ಏನು ಅಧಿಕವಾದುದಾಗಿತ್ತೋ ! ೩೧. ಆ ಸ್ತ್ರೀಯು ಯಾವ ಶಿವಾಗಮ ವಚನದಿಂದ ನಿರ್ಧರಿಸಿ ಧರಿಸಿದಳೋ ಗೊತ್ತಿಲ್ಲ : ಅವಳ ಮೂಗಿನ ಮುಂಭಾಗದಲ್ಲಿ ಬಿಳಿಯ ಬಣ್ಣದಿಂದ ಬೆಳಗುವ ರುದ್ರಾಕ್ಷಿಯಮಣಿ ನಿರಂತರದಲ್ಲೂ ಪ್ರಕಾಶಿಸುತ್ತಿತ್ತು. ೩೨. ಆ ವೇಶ್ಯೆಯು ಈ ರೀತಿಯಲ್ಲಿ ಪಾರ್ವತೀದೇವಿಯ ಸಂಪ್ರದಾಯದಿಂದ ಬಂದ ನೂತನವಾದ ಶಿವಲಾಂಛನಗಳೆಂದು ಆದರದಿಂದ ಹೇಳಿದಳು. ಅನಂತರ ಅವಳ ಶಿವಪೂಜೆಯ

---

1 ಳೆ(ಗ, ಚ, ಮ, ಜ)

ಪಗಲಿರುಳೆನ್ನದೆ ರಾಗಂ
ಮಿಗೆ ಸೊಬಗಿಂ ಸೂಳೆಗೈದ ಸುಖವೊಂದೆ ವಲಂ
ನೆಗಳ್ದಿರೆ ಮಿಕ್ಕ ಸುಖಂಗ
ಳ್ಪೊಗಯಿಸುವವೆ ಬಸವ ಭಕ್ತಸಂತತಿಗಿಳೆಯೊಳ್ ೩೩

ಆವಂ ಗುರುಚರಭಕ್ತನ
ದಾವಂ ಶಿವಸುಪ್ರಸಾದಭಾಜನನಾವಂ
ಪಾವನಗುಣಸಂಯುತನವ
ನೀ ವಿಧದಿಂ ಸೂಳೆಗೈದನಾಗನೆ ಮುನ್ನಂ ೩೪

ಎನಿತೆನಿತು ಕಾಲ ಮುಂ ನೀಂ
ಮನದೊಲವಿಂ ಸೂಳೆಗೈತವಂ ನೆಗೆಳ್ದಿಯೊ ಪೇ
ಳ್ನಿನಗಂತಲ್ಲದೊಡಕ್ಕುಮೆ
ಘನತರ ಶಿವಭಕ್ತಿಸಂಪದಂ ಬಸವೇಶಾ ೩೫

ವ|| ಎಂದಿಂತೆಲ್ಲಮನುಸುರ್ದ ಮುಗ್ಧಸಂಗಾರ್ಯನ ಮುಗ್ಧಾಲಾಪಮಂ ಕೇಳ್ದು ಭುಜಂಗ ಜಂಗಮನಿಕರಂ ಹಸನರಸವಿಲುಳಿತಾನನಮಾಗೆ ಬಸವಂ ಮಂದಸ್ಮಿತಮುಖಾಂಬುಜಂ ಚನ್ನಬಸವನಾನನಮಂ ನಿರೀಕ್ಷಿಸಿ ಮನೋವಾಕ್ಕಾಯಂಗಳೊಳ್ ಶಿವಧ್ಯಾನ ಶಿವಮಂತ್ರಜಪ ಶಿವಯಜನಂಗಳನಲ್ಲದೆ

ಪ್ರಕಾಶಿಸುವ ಮಂಟಪವು ವೈಶಾಲ್ಯದಿಂದ ಕೂಡಿ ಕಂಗೊಳಿಸುತ್ತಿರುವುದು ; ಸಮಸ್ತ ಸೇವಕವರ್ಗದವರೂ ಶಿವಚಿಹ್ನೆಗಳಿಂದ ಕೂಡಿರುವರು ; ಬಸವಣ್ಣ, ಕೇಳು : ಆ ಸೂಳೆಯ ಮನೆಯಲ್ಲಿ ರಾತ್ರಿಯೆಲ್ಲವೂ ಪ್ರೀತಿಯಿಂದ ಚೆನ್ನಾಗಿ ಸೂಳೆಗಾರಿಕೆ ಮಾಡಿದೆನು. ೩೩. ಬಸವೇಶ್ವರ, ಭೂಮಿಯ ಮೇಲಿನ ಭಕ್ತಸಮೂಹಕ್ಕೆ ಹಗಲಿರುಳೆಂದು ಶಂಕಿಸದೆ, ಹೆಚ್ಚಾದ ಪ್ರೀತಿಯಿಂದ ಸೊಗಸಾಗಿ ಸೂಳೆಗಾರಿಕೆಯ ಸುಖವು ಒಂದು ನಿಶ್ಚಯವಾಗಿ ಉಂಟಾದದ್ದಾದರೆ ಮಿಕ್ಕಸುಖಗಳು ಸೊಗಸಾದಾವೆ ? ೩೪. ಯಾವನು ಗುರು ಜಂಗಮರಲ್ಲಿ ಭಕ್ತಿಯುಳ್ಳವನೋ, ಯಾವನು ಶಿವನ ಶ್ರೇಷ್ಠ ಪ್ರಸಾದಕ್ಕೆ ಪಾತ್ರನೋ, ಯಾವನು ಪರಿಶುದ್ಧ ಗುಣಗಳಿಂದ ಕೂಡಿರುವನೋ ಅವನು ಮೊದಲು ಈ ವಿಧವಾದ ಸೂಳೆಗಾರಿಕೆಯನ್ನು ಮಾಡಿದವನಾಗಿರನೇ ? (ಸೂಳೆಗಾರಿಕೆಯನ್ನು ಮಾಡಿದ ಪುಣ್ಯ ದಿಂದಲೇ ಈಗ ಭಕ್ತನಾಗಿ ಹುಟ್ಟಿರಬೇಕು ಎಂದು ಭಾವ) ೩೫. ಬಸವೇಶ್ವರ, ಈ ಮೊದಲು ನೀನು ಎಷ್ಟು ಕಾಲ ಮನಃಪ್ರೀತಿಯಿಂದ ಇಂಥ ಸೂಳೆಗಾರಿಕೆಯನ್ನು ಮಾಡಿದೆ ಹೇಳು ? ಹಾಗಲ್ಲದಿದ್ದರೆ ನಿನಗೆ ಈ ತೆರನಾದ ಘನವಾದ ಶಿವಭಕ್ತಿಯ ಸಂಪತ್ತು ಹೇಗೆ ಲಭಿಸುತ್ತಿತ್ತು ! (ಹೇಗೆ ಆದೀತು !)' ವ|| ಹೀಗೆಂದು ಎಲ್ಲವನ್ನೂ ಹೇಳಿದ ಮುಗ್ಧ ಸಂಗಯ್ಯನ ಮುಗ್ಧ ಮಾತುಗಳನ್ನು, ವಿಟಜಂಗಮ ಸಮೂಹವು ಕೇಳಿ ನಗುಮುಖದಿಂದ ಕೂಡಿದುದಾಗಿರಲು, ಬಸವಣ್ಣನು ಮುಗುಳ್ನಗೆಯಿಂದ ಕೂಡಿದ ಮುಖಕಮಲವುಳ್ಳವನಾಗಿ, ಚೆನ್ನಬಸವಣ್ಣನ ಮುಖವನ್ನು ನೋಡಿ, 'ಇವನು ಮುಗ್ಧಸಂಗಯ್ಯನು. ಮನಸ್ಸು,

ಪೆಱತೊಂದನಱಿಯದ ಮುಗ್ಧಂ ಮುಗ್ಧಸಂಗಯ್ಯನಿವಂಗಿದು ಯುಕ್ತಮೆಂದು ತತ್ಪ್ರಭಾವಮಂ ಪೊಗಳುತ್ತಿರೆ ಚನ್ನಬಸವನಾಶ್ಚರ್ಯಂ ಮಿಗೆ ಕೇಳ್ದು ಪುರಾತನರೊಳ[1]ವ[1]ನಂತಪ್ಪ ಮುಗ್ಧಭಕ್ತರೊಳರೆ ಬೆಸಸಿಮೆಂದಾ ಬಸವಂಗೆಱಗಿ ಕೈದಾವರೆಗಳಂ ಮುಗಿದು ಭಕ್ತಿಯಿಂ ಬೆಸಗೊಳಲೊಡನೆ—

ಧರೆಯೊಳ್ಮುನ್ನೊಳರೆಮ್ಮಯ
ಪುರಾತನರ್ಮುಗ್ಧರಭವಬೋಧವಿದಗ್ಧ
ಕರುಣಾಕರರೆಂದಾ ಬಸ
ವರಸಂ ತತ್ಕಥೆಯನೊರೆಯಲುದ್ಯತನಾದಂ ೩೬

ವ|| ಅದೆಂತೆನೆ—

[ರುದ್ರಪಶುಪತಿಗಳ ಕಥೆ]

ವಸುಧೆಗೆ ತೊಡವೆನಿಸುತೆ ರಂ
ಜಿಸುವೆಲೆಯೂರೆಂಬ ಪೊಳಲೊಳೊಪ್ಪುವನೊರ್ವಂ
ಪೊಸತೆನಿಪ ರುದ್ರಪಶುಪತಿ
ವೆಸರಿಂದೆ ಗುಣಪ್ರಯುಕ್ತನೀಶ್ವರಭಕ್ತಂ ೩೭

ಮಾತು, ದೇಹಗಳಲ್ಲೆಲ್ಲ ಶಿವಧ್ಯಾನ, ಶಿವಮಂತ್ರಜಪ, ಶಿವಪೂಜೆಗಳಲ್ಲದೆ ಮತ್ತೊಂದು ಲೌಕಿಕ ವ್ಯಾಪಾರವನ್ನೇ ತಿಳಿಯದವನು. ಇವನಿಗೆ ಈ ಗುಣವು ಉಚಿತವಾದದ್ದು', ಎಂದು ಅವನ ಮಹಿಮಾತಿಶಯವನ್ನು ಹೊಗಳುತ್ತಿರಲು, ಚೆನ್ನಬಸವಣ್ಣನವರು ಕೇಳಿ, ಹೆಚ್ಚಾದ ಆಶ್ಚರ್ಯದಿಂದ ಕೂಡಿ, ಪುರಾತನದಲ್ಲಿ ಈ ಮುಗ್ಧಸಂಗಯ್ಯನಂಥವರು ಇರುವರೇ ? ಅಪ್ಪಣೆ ಕೊಡಿಸಬೇಕು' ಎಂದು ಬಸವರಾಜನಿಗೆ ನಮಸ್ಕರಿಸಿ, ಕರಕಮಲ ಗಳನ್ನು ಮುಗಿದು, ಭಕ್ತಿಯಿಂದ ಕೇಳಿಕೊಳ್ಳಲು ಆ ಕೂಡಲೆ—೩೬. 'ಭೂಮಿಯಲ್ಲಿ ಪೂರ್ವಕಾಲದಲ್ಲಿ ಶಿವಜ್ಞಾನದಿಂದ ಪ್ರೌಢರಾದ ಕರುಣಾಕರರೆನಿಸಿದ ಮುಗ್ಧರಾದ ನಮ್ಮ ಪುರಾತನರು ಇದ್ದರು' ಎನ್ನುತ್ತ ಆ ಬಸವರಾಜನು–ಅಂಥ ಮುಗ್ಧ ಶಿವಭಕ್ತರ ಕಥೆ ಯನ್ನು ಹೇಳಲು ಮೊದಲು ಮಾಡಿದನು. **ರುದ್ರಪಶುಪತಿಯ ಕಥೆ** : ೩೭. ಭೂ ಭಾಗಕ್ಕೆ ಆಭರಣವೆನಿಸುವಂತೆ ಶೋಭಿಸುವ 'ಎಲೆಯೂರು' ಎಂಬ ಹೆಸರಿನ ಪಟ್ಟಣದಲ್ಲಿ 'ರುದ್ರಪಶುಪತಿ' ಎಂಬ ನೂತನ ಹೆಸರಿನ ಸದ್ಗುಣಭರಿತನಾದ ಈಶ್ವರಭಕ್ತನೋರ್ವನು

1 ಳೀತ(ಚ)

ಅವನೊಂದು ದಿನದೊಳೊರ್ವಂ
ಶಿವನ ನಿಕೇತನದೊಳೋದೆ ಕಥಿಕಂ ಭುವನ
ಸ್ತವನೀಯ ಶಿವಪುರಾಣಮ
ನವಿಕಳಮತಿಯೊಲ್ದು ಕೇಳುತಿರ್ದಂ ಸಭೆಯೊಳ್ ೩೮

ಸುರರೆಲ್ಲಂ ಕೂಡಿ ಭೋಗೀಶ್ವರಗುಣಮಿಳಿತಂ ಮಂದರಂ ಮಂತಗೋಲಾ
ಗಿರೆ ದುಗ್ಧಾಂಭೋಧಿಯಂ ಮೇಣ್ಕಡೆಯೆ ಕಡೆಯೊಳಂಭೋಧರಶ್ಯಾಮಘೋರಂ
ಗರಳಂ ಪುಟ್ಟಿರ್ದು ಸರ್ವಾಮರರಳುರ್ದು ಬೆಂಬತ್ತೆ ಕಂಡಂತದಂ ಶಂ
ಕರನಾಗಳ್ನುಂಗಿ ಲೋಕಾವಳಿಯ ಪೊರೆದನೆಂಬುಕ್ತಿಯಂ ಕೇಳ್ದನಾಗಳ್ ೩೯

ವ॥ ಅಂತದಂ ಕೇಳ್ದು ಬೆದಱಿ ಬೆಬ್ಬಳಿವೋಗಿ—

ಹರ ಹರ ಹರನುಂಡನೆ ತ
ದ್ಗರಳಮನಿದು ನಿಜಮೆ ಪೇಳ್ವುದೆನೆ ಕಥಿಕಂ ಬಿ
ತ್ತರಿಸಿದನಿದು ನಿಜಮಾ ಶಂ
ಕರನುಂಡಂ ಘೋರಗರಳಮಂ ಶ್ರುತಿಸಿದ್ಧಂ ೪೦

ಎನೆ ಕೇಳ್ದಕ್ಕಟ ಕೆಟ್ಟೆನೆನ್ನ ಶಿವನೆನ್ನಾತ್ಮೇಶನೋವೋವೊ ಕೆ
ಮ್ಮನೆ ಹಾಲಾಹಲಮಂ ಮರುಳ್ತನದ ಪೆರ್ಚಿಂ ನುಂಗಿದಂ ನುಂಗಿ ಜೀ
ವನಮಂ ಕೊಂಡುಳಿದಪ್ಪನೆಂತೊ ಗತಿಯಾರ್ತನ್ನಂಘ್ರಿಯಂ ನಂಬಿ ನ
ಚ್ಚಿ ನಿತಾಂತಂ ಬಿಡದಿರ್ದವಂಗೆನಗೆನುತ್ತಾಕ್ರಂದನಂ ಗೆಯ್ವುತುಂ ೪೧

ಒಪ್ಪುತ್ತಿದ್ದನು. ೩೮. ಅವನು ಒಂದು ದಿವಸ ಶಿವದೇವಸ್ಥಾನದಲ್ಲಿ ಓರ್ವ ಕಥೆಯನ್ನು ಹೇಳುವವನು ಲೋಕದ ಜನಗಳ ಸ್ತೋತ್ರಕ್ಕೆ ಪಾತ್ರವಾದ ಶಿವಪುರಾಣವನ್ನು ಸಭೆಯಲ್ಲಿ ಓದಿದನು. ಆ ರುದ್ರಪಶುಪತಿಯು ಅಲ್ಲಾಡದ ಮನಸ್ಸಿನಿಂದ (ದೃಢಭಾವದಿಂದ) ಪ್ರೀತಿಯಿಂದ (ಆ ಕಥೆಯನ್ನು) ಕೇಳುತ್ತಿದ್ದನು. ೩೯. (ಆ ಕಥೆಯಲ್ಲಿ) ಆದಿಶೇಷನೆಂಬ ಹಗ್ಗದಿಂದ ಕೂಡಿದ ಮೇರುಪರ್ವತವೆಂಬುದು ಕಡೆಗೋಲಾಗಿರಲು, ಎಲ್ಲ ದೇವತೆಗಳೂ ಸೇರಿ ಕ್ಷೀರಸಮುದ್ರವನ್ನು ಕಡೆದರು. ಕೊನೆಯಲ್ಲಿ ಮೇಘದಂತೆ ಕಪ್ಪಾದ ಭಯಂಕರವಾದ ವಿಷವು ಹುಟ್ಟಿ, ಸಕಲ ದೇವತೆಗಳನ್ನೂ, ಮುಸುಕಿ ಬೆನ್ನಟ್ಟಿತು. ಆಗ ಶಂಕರನು (ಹಾಗೆ ಬೆನ್ನಟ್ಟಿದ) ಆ ವಿಷವನ್ನು ಕಂಡು, ಅದನ್ನು ನುಂಗಿ, ಲೋಕಸಮೂಹವನ್ನು ರಕ್ಷಿಸಿದನು–ಎಂದು ಆಗ ಪೌರಾಣಿಕನು ಹೇಳಿದ ಮಾತನ್ನು ಕೇಳಿ—ವ॥ ಹೀಗೆ (ಶಿವನು ವಿಷವನ್ನು ನುಂಗಿದ ಮಾತನ್ನು) ಕೇಳಿ ಬೆದರಿ ಬೆರಗಾಗಿ—೪೦. 'ಶಿವಶಿವ ! ಹರನು ಆ ವಿಷವನ್ನು ಉಂಡನೇ ? ಇದು ಸತ್ಯವೇ ಹೇಳಿರಿ' ಎನ್ನಲು ಪೌರಾಣಿಕನು (ಕಥಿಕನು) ಹೌದು ! ಈ ಮಾತು ನಿಜ. ಆ ಶಂಕರನು ಘೋರ ವಿಷವನ್ನು ಕುಡಿದನು. (ಇದು) ವೇದ ಪ್ರಸಿದ್ಧವಾದದ್ದು ಎಂದು ವರ್ಣಿಸಿದನು. ೪೧. ಹೀಗೆಂದೆನ್ನಲು ಕೇಳಿ, ಅಕ್ಕಟ! ಕೆಟ್ಟೆನು ! ನನ್ನ ಶಿವ ; ನನ್ನ ಆತ್ಮೇಶ! ಓಹೋ! ಸುಮ್ಮಸುಮ್ಮನೆ ಹೆಚ್ಚಾದ ಹುಚ್ಚುತನದಿಂದ ವಿಷವನ್ನು ಕುಡಿದನು ! ಅದನ್ನು ಕುಡಿದು ಪ್ರಾಣ ಧರಿಸಿ ಹೇಗೆ ಬದುಕಿ

ಅತಿಸುಕುಮಾರ ಸೋಮಧರನೆತ್ತ ಭಯಂಕರ ಕಾಲಕೂಟಮಂ
ಮತಿ ಮಿಗೆ ಪೀರ್ವುದೆತ್ತ ಸುಧೆಯಂ ತೆಗೆದುಂಬ ಮರಾಳನೆತ್ತ ಮಾ
ರುತಸಖನಾಳ್ದ ದಳ್ಳುರಿಯನೀಂಟುವುದೆತ್ತ ನಿಶಿತಚಂದ್ರಿಕಾ
ಮೃತಸುಚಕೋರನೆತ್ತ ಬಿಸಿಲಂ ಕುಡಿವಂದವಮದೆತ್ತ ಲೋಕದೊಳ್ ೪೨

ಗರಳಜ್ವಾಲೆಯ ಧೂಮರಾಜಿ ಮಿಗೆ ಕಣ್ಣೆ[1]ಂತಿರ್ದುದೋ ಪಾಣಿಪಂ
ಕರುಹಂ ಮೇಣ್ಪಿಡಿದೌಂಕಿದಂದೆನಿತು ತಾಂ ಕಂದಿರ್ದುದೋ ನುಂಗೆ ನು
ಣ್ಗೊರಲುಂ ಜಿಹ್ವೆಯುಮಾ ವಿಷಾಗ್ನಿಯುರಿಯಿಂದೇನಾದುದೋ ಕುಕ್ಷಿಯೊ
ಳ್ಭರದಿಂ ಪೊಕ್ಕು ಮಡಲ್ತೆನಿತ್ತೆಸಗಿತೋ ಸಂತಾಪಮಂ ದೇವನಾ[2] ೪೩

ಗರಳಮನುಣ್ಬುದಂ ಬಿಡಿಸದೇಕೆ ನಗಾತ್ಮಜೆ ಸುಮ್ಮನಿರ್ದೆ ರು
ದ್ರರೆ ಗಣವರ್ಯರೇ ವಿಷಮನೀಂಟುವ ವೇಳೆಯೊಳೆತ್ತಲಯ್ಯೊ ಪೋ
ದಿರಿ ಕರಿವಕ್ತ್ರಷಣ್ಮುಖರೆ ತಂದೆ ಬಿಸಂಗೊಳೆ ನೋಡುತಿರ್ಪುದೇ[3]
ಪರಿಹೃತಿಗೆಯ್ಯದಕ್ಕಟ ಪರಾಙ್ಮುಖನಪ್ಪುದೆ ವೀರಭದ್ರ ನೀಂ ೪೪

ಕೊಂಡಾನೋ ! ಅವನ ಅಂಘ್ರಿಯನ್ನು ದೃಢವಾಗಿ ಎಡಬಿಡದೆ ನಂಬಿದ ನನಗೆ ಗತಿ ಯಾರು ? ಎನ್ನುತ್ತ ಗೊಳೋ ಎಂದು ಅಳತೊಡಗಿದನು. ೪೨. ಅತಿಕೋಮಲ ಶರೀರಿಯಾದ ಚಂದ್ರಶೇಖರನೆಲ್ಲಿ ? ಬುದ್ಧಿಗೆಟ್ಟು ಕಾಳಕೂಟ ವಿಷವನ್ನು ಕುಡಿಯುವುದೆಲ್ಲಿ ? ಲೋಕದಲ್ಲಿ ಹಾಲನ್ನೇ ತೆಗೆದು ಕುಡಿಯುವ ಹಂಸನೆಲ್ಲಿ ? ಮಾರುತಸಖನಾದ ಅಗ್ನಿಯು ಧರಿಸಿದ ದಳ್ಳುರಿಯನ್ನು ಕುಡಿಯುವುದೆಲ್ಲಿ ? ಚಂದ್ರಿಕೆ (ಬೆಳದಿಂಗಳು) ಯಲ್ಲಿರುವ ಅಮೃತವನ್ನು ಪಾನಮಾಡುವ ಚಕೋರಪಕ್ಷಿಯೆತ್ತ ? ಬಿಸಿಲನ್ನು ಕುಡಿಯುವ ಅದರ ರೀತಿಯೆತ್ತ ? ೪೩. ವಿಷದುರಿಯ ಹೊಗೆಯ ಸಾಲು ಕಣ್ಣನ್ನು ಹೊಕ್ಕಾಗ ದೇವನ (ಆ) ಕಣ್ಣು ಹೇಗೆ ಇತ್ತೋ ! ಮತ್ತು (ಆ ಗರಳವನ್ನು) ಹಿಡಿದು ಅದುಮಿದ ಕಾಲದಲ್ಲಿ ಅವನ ಆ ಕಮಲಹಸ್ತವು ಎಷ್ಟು ಕಂದಿ ಇರುವುದೋ ! (ಅದನ್ನು) ನುಂಗಲಾಗಿ ಅವನ ನುಣುಪಾದ ಕಂಠವೂ ನಾಲಿಗೆಯೂ ಆ ವಿಷಾಗ್ನಿಯ ಉರಿಯಿಂದ ಏನಾಯಿತೋ ! ಹೊಟ್ಟೆಯಲ್ಲಿ ಅದು ಹಬ್ಬಿ ಎಷ್ಟೊಂದು ಸಂತಾಪವನ್ನುಂಟುಮಾಡಿತೋ ! ೪೪. ಪಾರ್ವತಿಯೇ, (ನಿನ್ನ ಪತಿಯು) ವಿಷವನ್ನುಣ್ಣುವುದನ್ನು ಬಿಡಿಸದೆ ಸುಮ್ಮನೇಕಿದ್ದೆ ? ರುದ್ರರೇ, ಗಣವರೇಣ್ಯರೇ, ಅಯ್ಯಾ ! (ನೀವೆಲ್ಲ) (ಶಿವನು) ವಿಷವನ್ನು ಉಣ್ಣುವ ವೇಳೆಯಲ್ಲಿ ಎಲ್ಲಿಗೆ ಹೋಗಿದ್ದಿರಿ ? ಗಣಪತಿ ಷಣ್ಮುಖರೇ, ನಿಮ್ಮ ತಂದೆ ವಿಷ ಕುಡಿಯುತ್ತಿದ್ದಾಗ ಅದನ್ನು ತಪ್ಪಿಸದೆ ನೋಡುತ್ತಿರುವುದೇ ? ಅಯ್ಯೋ ! ವೀರಭದ್ರ, ನೀನು

1 ಣ್ಗೆ(ದ) 2 ನಂ(ಚ) 3 ದೀ(ದ, ಜ)

ಸುರರೆಲ್ಲರಳಿದೊಡೇಂ ಪು
ಟ್ಟರೆ ನಿನ್ನನ್ನರ್ಕಳೊಗೆವರೇ ಮೃತಿಗಂಜು
ತ್ತಿರದಯ್ಯೊ ವಿಷಮವಿಷಮುಂ
ಪುರಹರ ನೀನುಂಡೆಯೆಂತೊ ಜೀವಿಪೆಯಕಟಾ ೪೫

ಜರೆ ರೋಗಂ ಮೃತಿ ನಿನ್ನಯ
ಶರೀರಮಂ ಸೋಂಕದಂತೆ ನಿಯತಿಯೊಳಾನೊ
ಲ್ದಿರದೆಸಗಿದಪೆಂ ಪಂಚಾ
ಕ್ಷರ[1]ಜಪಮಂ ಕೇಳ್ವೆನೆಂತೊ ವಿಷಮಿಂಟಿದುದಂ ೪೬

ವ|| ಎಂದು ನೊಂದು ಪಲುಂಬಿ ಪಳಯಿಸುತೆನ್ನಾಳ್ದಂ ಗರಳಂಗೊಂಡನೆಂಬುದನಾಲಿಪುದಱಿಂ ಮರಣಮೆ ಲೇಸೆಂದು ರುದ್ರಪಶುಪತಿಯಗಾಧಕೂಪದೊಳ್ಬೀಳ್ವನಿ[2]ತಱಿ[3]ಳ್ತದ್ಭಕ್ತಿಭಾವಕ್ಕೆ ಶಂಕರಂ ಪ್ರಮಥರುದ್ರಾದಿಗಣ ದಿವಿಜಗಣಸಮೇತಂ ಪ್ರಸನ್ನನಾಗಿ ಕರತಳದಿಂ ಪಿಡಿದು ನೆಗಪಿ ಬೋಳೈಸಿ ಮೆಚ್ಚಿದೆನೊಚ್ಚತಂ ವರಮಂ ಬೇಡೆನೆ ಭಕ್ತಂ ಪದಾರವಿಂದಕ್ಕೆಱಗಿ ಕರಾಂಜಲಿಗೈದು—

ಆವಾವ ವರಮನೊಲ್ಲೆನು
ಮಾವರ ನೀಂ ಪೀರ್ದ ವಿಷಮನುಗುಳುಗುಳುಗುಳ್ದಂ
ದೀವ ವರಕೋಟಿಯುಂ ನೀಂ
ಭಾವಜಹರ ನೆಟ್ಟನೆನಗೆ ಕೊಟ್ಟವನಲ್ತೆ ೪೭

ಈ ವಿಷಯದಲ್ಲಿ ಮುಖತಿರುಗಿಸಿದವನಾಗುವುದೇ ?' ೪೫. ತ್ರಿಪುರ ಸಂಹಾರಿಯೇ, ಎಲ್ಲಾ ದೇವತೆಗಳು ಸತ್ತರೇನು ಪುನಃ ಹುಟ್ಟುವುದಿಲ್ಲವೆ ? ನಿನ್ನಂಥವರು ಪುನಃ ಹುಟ್ಟಲಿಕ್ಕೆ ಸಾಧ್ಯವೆ ? ಸಾವಿಗೆ ಹೆದರದೆ ಅಯ್ಯೋ ! ಭಯಾನಕವಾದ ವಿಷವನ್ನು ಅಕ್ಕಟಾ ! ಉಂಡೆ ! ಇನ್ನೆಂತು ಜೀವಿಸುತ್ತೀಯೆ ! ೪೬. ಮುಪ್ಪು, ರೋಗ, ಸಾವುಗಳು ನಿನ್ನ ಶರೀರವನ್ನು ಸೋಂಕದ ಹಾಗೆ ನೇಮವಿಡಿದು ನಾನು ತಪ್ಪದೆ ಪಂಚಾಕ್ಷರ ಜಪವನ್ನು ಮಾಡುತ್ತೇನೆ. (ನೀನು) ವಿಷವ ಕುಡಿದುದನ್ನು (ನಾನು) ಹೇಗೆ (ಈ ಕಿವಿಯಿಂದ) ಕೇಳಲಿ ! ವ|| ಹೀಗೆಂದು ನೊಂದುಕೊಂಡು ಹಲುಬಿ, ಅಳುತ್ತ ನನ್ನ ಒಡೆಯನು ವಿಷವನ್ನು ಕುಡಿದನೆಂದು ಕೇಳುವುದಕ್ಕಿಂತ ಮರಣವೇ ಲೇಸು ಎಂದುಕೊಂಡು ಆ ರುದ್ರ ಪಶುಪತಿಯು ಅಗಾಧವಾದ ಆಳವಾದ ಬಾವಿಯಲ್ಲಿ ಬೀಳುವಷ್ಟರಲ್ಲಿ, ಶಂಕರನು ಅವನ ಭಕ್ತಿ ಭಾವಕ್ಕೆ ಮೆಚ್ಚಿದವನಾಗಿ, ಪ್ರಮಥರು ಏಕಾದಶ ರುದ್ರರುಗಳೇ ಮೊದಲಾದ ಶಿವಗಣ ಸಮೇತವಾಗಿ ಪ್ರತ್ಯಕ್ಷನಾಗಿ, (ಅವನನ್ನು) ಕೈಗಳಿಂದ ಹಿಡಿದು ನೆಗಹಿ ಮೇಲಕ್ಕೆತ್ತಿ ತಲೆಯ ಮೇಲೆ ಕೈಯಾಡಿ, (ನಿನಗೆ) ಚೆನ್ನಾಗಿ ಮೆಚ್ಚಿದ್ದೇನೆ, ವರವನ್ನು ಬೇಡು ಎನ್ನಲಾಗಿ, ಭಕ್ತನಾದ (ರುದ್ರ ಪಶುಪತಿಯು) ಶಿವನ ಪಾದಕಮಲಗಳಿಗೆ ನಮಸ್ಕರಿಸಿ— ೪೭. ಶಿವನೇ, ಯಾವ ಯಾವ ವರವನ್ನೂ ನಾನು ಒಲ್ಲೆನು. ನೀನು ಕುಡಿದ ವಿಷವನ್ನು ಉಗುಳು ! ಉಗುಳು ! ಮನ್ಮಥ ಹರನಾದ ಶಿವನೇ, (ಹಾಗೆ) ಉಗುಳಿದಾಗ ನೀನು

1 ಠ(ಚ) 2 ಂ(ದ) 3 ರ(ದ)

ಫಣಿಧರ ನೀಂ ಬಿಸಮುಂಡುದ
ನಣುಮಾತ್ರಂ ಕೇಳಲಾಱೆನುಗುಳುಗುಳೆಂದಾ
ಗುಣನಿಧಿ ಹರಿವಿಧಿಮುಖ ಸುರ
ಗಣಮಗಿವಿನಮುಸುರೆ ಶಂಕರಂ ನಗುತೆಂದಂ ೪೮

ನಂಜಿನ ಭಯಮೆನಗುಂಟೆಂ
ದಂಜದಿರೆಲೆ ಮಗನೆ ನೋಳ್ಪುದೆನ್ನಯ ಕೊರಲೊಳ್
ರಂಜಿಸುವಂಜನವರ್ಣದ
ಮಂಜಿನ ಸೀರ್ಪನಿವೊಲೆಸೆವ ಹಾಲಾಹಲಮಂ ೪೯

ವ॥ ಏಗೈದಪುದೆನ್ನನಿದೆಂದಭವಂ ನುಡಿಯಲೊಡಂ ಕೇಳ್ದು ರುದ್ರಪಶುಪತಿ ತದ್ಗರಳ ಸೀಕರಮನಭೀಕ್ಷಿಸಿ—

ಇದು ದಿನದಿನದೊಳ್ ಬಳೆ ಬಳೆ
ದುದರಮನೊಳಪುಗದೆ ಮಾಣ್ದಪುದೆ ಪೊಕ್ಕಾಗಳ್
ಪದುಳಮಿರಲೀವುದೇ ನಿ
ನ್ನ ದಯಾನಿಧಿ ಬಿಟ್ಟು ಕಳೆವುದೀ ಗಳಗರಮಂ ೫೦

ನನಗೆ ಇಂಥ ಕೋಟಿ ವರಗಳನ್ನು ಕೊಟ್ಟವನಾಗುತ್ತೀಯಲ್ಲವೆ ? ೪೮. ಸರ್ಪಾಭರಣನಾದ ಶಿವನೇ, ನೀನು ವಿಷಪಾನ ಮಾಡಿದುದನ್ನು ಅಣು ಮಾತ್ರವೂ ಕೇಳಲಾರೆನು. ಉಗುಳು ! ಉಗುಳು ! ಎಂದು ಆ ಗುಣ ನಿಧಿಯಾದ ರುದ್ರ ಪಶುಪತಿಯು ಹರಿ, ಬ್ರಹ್ಮಾದಿ ದೇವ ಗಣವು ಹೆದರುವ ಹಾಗೆ ಹೇಳಲಾಗಿ, ಶಂಕರನು ನಗುತ್ತ ಹೀಗೆ ಹೇಳಿದನು : [ಹರಿ ಬ್ರಹ್ಮಾದಿ ದೇವತೆಗಳು ಹೆದರಲು ಕಾರಣವೇನೆಂದರೆ ಶಿವನು ಈ ವಿಷವನ್ನು ಉಗುಳಿದರೆ ಮುಂದೆ ನಮ್ಮ ಗತಿಯೇನು ? ಎಂಬುದು] ೪೯. ಎಲೈ ಮಗನೇ, ವಿಷದ ಭಯವು ನಮಗೆ ಉಂಟು ಎಂದು ಹೆದರಬೇಡ. ನನ್ನ ಕೊರಳಿನಲ್ಲಿ ರಂಜಿಸುತ್ತಿರುವ ಕಾಡಿಗೆ (ಅಂಜನ) ಬಣ್ಣದ ಮಂಜಿನ ಸಣ್ಣ ಹನಿಯಂತೆ ಶೋಭಿಸುವ ಹಾಲಾಹಲವನ್ನು ನೋಡುವವನಾಗು. ವ॥ ಈ (ವಿಷವು) ನನ್ನನ್ನೇನು ಮಾಡೀತು ? ಎಂದು ಶಿವನು ಹೇಳಲು ರುದ್ರ ಪಶುಪತಿಯು ಕೇಳಿ, ತತ್‌ಕ್ಷಣದಲ್ಲಿಯೇ ಆ ವಿಷದ ಹನಿಯನ್ನು ನೋಡಿ—೫೦. ದಯಾನಿಧಿಯೇ, ಈ ವಿಷದ (ಚಿಕ್ಕ) ಹನಿಯು ದಿನ ದಿನವೂ ಬೆಳೆ ಬೆಳೆದು ಹೊಟ್ಟೆಯನ್ನು ಪ್ರವೇಶಿಸದೆ ಬಿಡುವುದೇ ? (ಹೊಟ್ಟೆಯನ್ನು) ಪ್ರವೇಶಿಸಿದ ಆ ಕಾಲದಲ್ಲಿ (ನಿನ್ನನ್ನು) ಸುಖವಾಗಿರಲು ಅವಕಾಶ ಕೊಡುವುದೇ ?

ಬಿಡದೊಡೆ ಕೇಳೆನ್ನಸುವಂ
ಬಿಡುವೆಂ ಬಿಡದಂದದೆಂತು ನೋಳ್ಪೆನೊ ನಿನಗ
ಪ್ಪಡವಳಲನೆಂದು ಕೂರಸಿ
ವಿಡಿದಂ ಮೃತಿಗಮರರಳ್ಕೆ ಪೊಗಳೆ ಗಣಂಗಳ್ ೫೧

ವ॥ ಅಂತು ತನ್ನಂ ಪರಿಚ್ಛೇದಂಗೆಯ್ಯಲುಜ್ಜುಗಿಸಿದ ಭಕ್ತವರನ ನೇಹದ ಬಗೆಗೆ ಮೆಚ್ಚಿ ಮದನಹರಂ ಕಾರುಣ್ಯದಿನೀಕ್ಷಿಸುತ್ತಮಿವಂ ವಿಷಮನುಗುಳದಿರೆ ಸಾಯದಿರಂ ವಿಷಮನುಗುಳೆ ಭುವನಂ ಬೇಯದಿರದೇಗೆಯ್ವೆನೆಂದು ಭಕ್ತಹಿತಭುವನಹಿತ ಕಾರ್ಯದ್ವಂದ್ವದೊಳಾಂದೋಳಿಪ ಮನಮನೊಂದೆಡೆಗೊಂದಿಸಿ ನೆನೆದುಭಯ ಹಿತಾರ್ಥಮಾಗಿ ಶಿವನಿಂತೆಂದಂ—

ಪ್ರಮಥವರರಾಣೆ ನಿನ್ನಾ
ಣೆ ಮಗನೆ ಗಳವಿಷದಿನಳಿಯೆನಳಿಯೆಂ ದಿಟಮೌ
ರ್ವಮಹಾಶಿಖಿ ನಂದಿದಪುದೆ
ಹಿಮಕಣದಿನೆನುತ್ತೆ ಶಂಭು ನಂಬುಗೆಗೊಟ್ಟಂ ೫೨

ವ॥ ಅಂತು ನಂಬುಗೆಯಿತ್ತಿದುಮಂ ನಂಬದೊಡೆನ್ನ ಬಲದೊಡೆಯನೇಱಿಕೊರಲಂ ನಿಚ್ಚಂ ನಿರೀಕ್ಷಿಸುತ್ತಿರೆಂದು ನುಡಿದೊಡಂಬಡಿಸುತಾತನನಂಕಾಲಂಕಾರನಂ ಶಂಕರಂ ಮಾಡೆ—

ಈಗಲೇ ಈ ವಿಷವನ್ನು ಕತ್ತಿನಿಂದ ತೆಗೆದು ಕಳೆಯಬೇಕು. ೫೧. ಕೇಳು (ಈ) ವಿಷವನ್ನು (ನೀನು) ಬಿಡದಿದ್ದರೆ, ನನ್ನ ಪ್ರಾಣವನ್ನೇ ಬಿಡುವೆನು. ಬಿಡದಿದ್ದರೆ ಹೇಗೆ ? (ಮುಂದೆ) ನಿನಗಾಗುವ ವ್ಯಥೆಯನ್ನು ನೋಡಲೇನು ? ಎಂದು ದೇವತೆಗಳೆಲ್ಲ ಹೆದರುತ್ತಿರಲು, ಅವನ ಸಾವಿಗೆ ದೇವತೆಗಳೆಲ್ಲ ಶ್ಲಾಘಿಸುತ್ತಿರಲು ಹರಿತವಾದ ಕತ್ತಿಯನ್ನು ಹಿಡಿದನು. ವ॥ ಈ ರೀತಿಯಲ್ಲಿ ತನ್ನನ್ನು ಕತ್ತರಿಸಿಕೊಳ್ಳುವುದಕ್ಕೋಸ್ಕರ ತೊಡಗಿದ ಭಕ್ತಶ್ರೇಷ್ಠನಾದ ರುದ್ರಪಶುಪತಿಯ ರೀತಿಗೆ ಪರಶಿವನು ಮೆಚ್ಚಿ, ಶ್ಲಾಘನೆಮಾಡುತ್ತ, ಕಾರುಣ್ಯ ದೃಷ್ಟಿಯಿಂದ ನೋಡುತ್ತ, (ನಾನು) ವಿಷವನ್ನು ಉಗುಳದಿದ್ದರೆ ಈ ಭಕ್ತನು ಸಾಯದೆ ಇರನು. ವಿಷವನ್ನು ಉಗುಳಿದರೆ ಭೂ ಮಂಡಲವು ಸುಟ್ಟು ಹೋಗದೇಇರದು. ಏನು ಮಾಡಲಿ ? ಎಂದು ಶಿವನು ಭಕ್ತನ ಹಿತ ಮತ್ತು ಲೋಕಹಿತ ಕಾರ್ಯಗಳೆರಡರ ವಿಷಯದಲ್ಲೂ ಡೋಲಾಯಮಾನವಾದ ಮನಸ್ಸನ್ನು ಒಂದು ಕಡೆ ನಿಲ್ಲಿಸಿ, ಭಕ್ತ ಮತ್ತು ಲೋಕ ಎರಡರ ಹಿತವನ್ನು ನೆನೆದವನಾಗಿ ಹೀಗೆ ಹೇಳಿದನು : ೫೨. ಮಗನೇ, (ಈ) ಪ್ರಮಥ ಶ್ರೇಷ್ಠರ ಆಣೆ, ನಿನ್ನ ಆಣೆ, ಕತ್ತಿನಲ್ಲಿರುವ ವಿಷದಿಂದ (ನಾನು)ಸಾಯುವುದಿಲ್ಲ! ಸಾಯುವುದಿಲ್ಲ, (ಈ ಮಾತು) ಸತ್ಯ. ಬಡಬಾಗ್ನಿಯು ಮಂಜಿನ ಒಂದು ಹನಿಯಿಂದ ನಂದಿ ಹೋಗುವುದೇ ? ಎನ್ನುತ್ತ ಶಂಭುವು (ಆ ರುದ್ರ ಪಶುಪತಿಗೆ) ಭರವಸೆಯನ್ನು ಕೊಟ್ಟನು. ವ॥ ಹೀಗೆ ನಾನು ಭರವಸೆಯನ್ನಿತ್ತುದನ್ನೂ ನಂಬದಿದ್ದರೆ, ನನ್ನ ಬಲ ದೊಡೆಯನ್ನು ಹತ್ತಿ ಕತ್ತನ್ನು ಯಾವಾಗಲೂ ನೋಡುತ್ತಿರು ಎಂದು ಹೇಳಿ ಅವನನ್ನು ಒಪ್ಪಿಸಿ, ತನ್ನ ತೊಡೆಗೆ ಅವನನ್ನು ಭೂಷಣನನ್ನಾಗಿ ಮಾಡಲು (ತನ್ನ ತೊಡೆಯ

ಕರವಾಲನುರ್ಚಿ ಪಿಡಿದೀ
ಶ್ವರನಂಕಮನೇಱಿ ಕೊರಲನೀಕ್ಷಿಸುತುತ್ಕಂ
ಧರ ರುದ್ರಪಶುಪನಿರ್ಪಂ
ಗರಳಂ ಮಿಡುಕಿದೊಡೆ ಮಡಿವೆನೆಂದತಿ ಮುಗ್ಧಂ ೫೩

ವರರುದ್ರಪಶುಪತಿಯ ಸ
ಚ್ಚರಿತಮನಿಂತೊರೆದು ಚನ್ನಬಸವಂಗೆ ಗುಣಾ
ಕರ ಬಸವಂ ಮಗುಳ್ದೊರ್ವನ
ಶರಣನ ಸತ್ಕಥೆಯನೊರೆವೆನೆಂದಿಂತೆಂದಂ ೫೪

ತಿರುನೀಲನಕ್ಕನ ಕಥೆ

ತಿರುನೀಲಕ್ಕನೆನಿಪ್ಪೀ
ಶ್ವರಭಕ್ತಂ ದ್ರವಿಡದೇಶದೊಳ್ನೆಲಸಿರ್ಪಂ
ಪರಮ ಗುಣಾನ್ವಿತನಾತನ
ತರುಣಿ ಸುಶೀಲಾಭಿಧಾನದಿಂ ಕಂಗೊಳಿಪಳ್ ೫೫

ಪರಮಾನಂದದಿನೊಂದು ವಾಸರದೊಳಾ ಭಕ್ತಂ ಶಿವಾಗಾರದೊ
ಳ್ವರ ಲಿಂಗಾರ್ಚನಮಂ ನೆಗಳ್ಚುತಿರೆ ತಲ್ಲಿಂಗಾಗ್ರದೊಳ್ಪತ್ತಿ ಮೇ
ಣ್ಬರಿತರ್ಪೊಂದು ಸೆಲಂದಿಯಂ ಜವದಿನಾಗಳ್ಕಂಡು ತತ್ಕಾಂತೆ ಬಾ
ಯೆರಲಿಂ ತೂಂತಿಱಿದಳ್ ಭಯಾಕುಲಿತೆ ಗಂಡಂ ಕಂಡನಾ ಕಜ್ಜಮಂ ೫೬

ಮೇಲೆ ಕುಳ್ಳಿರಿಸಿಕೊಳ್ಳಲು). ೫೩. ಅತಿ ಮುಗ್ಧನೂ, ಮೇಲಕ್ಕೆತ್ತಿದ ಕತ್ತನ್ನುಳ್ಳವನೂ ಆದ ರುದ್ರ ಪಶುಪತಿಯು, ಈ ವಿಷವು ಕತ್ತನ್ನು ಬಿಟ್ಟು ಚಲಿಸಿದರೆ, ಸಾಯುತ್ತೇನೆ ಎಂದು ಕತ್ತಿಯನ್ನು (ಒರೆಯಿಂದ) ಹೊರ ತೆಗೆದು ಹಿಡಿದು ಈಶ್ವರನ ತೊಡೆಯ ಮೇಲೇರಿ ಕೊರಳನ್ನೇ ನೋಡುತ್ತಿದ್ದನು. ೫೪. ಗುಣಗಳಿಗೆ ಆಕರನಾದ ಬಸವನು ಈ ರೀತಿ ಚೆನ್ನಬಸವೇಶ್ವರನಿಗೆ ಶ್ರೇಷ್ಠನಾದ ರುದ್ರ ಪಶುಪತಿಯ ಸತ್ಕಥೆಯನ್ನು ಹೇಳಿ ಪುನಃ ಮತ್ತೊರ್ವ ಶರಣನ ಸತ್ಕಥೆಯನ್ನು ತಿಳಿಸುವೆನೆಂದು ಹೀಗೆ ಹೇಳಿದನು : **ತಿರುನೀಲನಕ್ಕನ ಕಥೆ** ೫೫. ತಿರುನೀಲನಕ್ಕನೆಂದೆಂಬ ಈಶ್ವರ ಭಕ್ತನು ಶ್ರೇಷ್ಠ ಗುಣ ಸಮೂಹಗಳಿಂದ ಕೂಡಿದವನೆನಿಸಿ ದ್ರಾವಿಡ ದೇಶದಲ್ಲಿ ವಾಸವಾಗಿದ್ದನು. ಆತನ ಪತ್ನಿಯು 'ಸುಶೀಲೆ' ಎಂಬ ಹೆಸರಿನಿಂದ ಕಂಗೊಳಿಸುತ್ತಿದ್ದಳು. ೫೬. ಒಂದು ದಿವಸ ಆ ಭಕ್ತನು ಪರಮಾನಂದದಿಂದ ಶಿವ ದೇವಾಲಯದಲ್ಲಿ ಶ್ರೇಷ್ಠವಾದ ಲಿಂಗ ಪೂಜೆಯನ್ನು ಮಾಡುತ್ತಿರಲು, ಆ ಸಮಯದಲ್ಲಿ ಆ ಲಿಂಗದ ಮೇಲ್ಭಾಗದಲ್ಲಿ ಹತ್ತಿ ಹರಿದು ಬರುವ ಒಂದು ಜೇಡರ ಹುಳುವನ್ನು ಅವನ ಪತ್ನಿಯು ಶೀಘ್ರವಾಗಿ ಕಂಡು, ಭಯದಿಂದ ವ್ಯಾಕುಲಗೊಂಡವಳಾಗಿ, ಬಾಯಿಯ ಗಾಳಿಯಿಂದ ಊದಿದಳು. ಗಂಡನು

ಎಲೆ ಎಲೆ ದೋಷದೂಷಿತೆ ದುರಾತ್ಮಿಕೆ ಲಿಂಗದ ಪಾವನಾಂಗಮುಂ
ತೊಲಗದೆ ಬಾಯುಗುಳ್ ಸಿಡಿಯೆ ತೂಂತಿಱಿದಪ್ಪೆ ವರಾಕಿ ಪಾಱೆನು
ತ್ತುಲೆದುಲಿದಾಕೆಯುಂ ನಿಳಯದಿಂ ಪೊಱಗಿಕ್ಕಿ ನಿರೀಕ್ಷಿಪಾಗಳಾ
ಲಲನೆ ಬಿಗುರ್ತುಱ ತೂಂತಿಱಿಯದಿರ್ದ ತದೀಯ ಕಳೇವರಾರ್ಧದೊಳ್ ೫೭

ಕರ್ಪೂರದ ಮಣಿಗಣಮೆನೆ
ತೋರ್ಪ ನವಸ್ಫೋಟಕಂಗಳಿರೆ ಕಾಣುತ್ತುಂ
ಸರ್ಪಧರಭಕ್ತನುತ್ಸವ
ಮಿರ್ಪುಡುಗೆ ವಿಷಾದದಿಂದೆ ಬಿಸುಸುಯ್ದಾಗಳ್ ೫೮

ತೂಂತಿಱಿದು ಹಿತಮನೆಸಗಿದ
ಕಾಂತೆಯ ಕೆಡೆನೂಂಕಿ ಪೊಲ್ಲವೆಸಗಿದೆನೆಂದಾ
ಚಿಂತಾಭರಿತಂ ಭರದಿಂ
ತಾಂ ತರುಣಿಯ ಪೊರೆಗೆ ಬಂದು ಪೊಡಮಡುತೆಂದಂ ೫೯

ಪರಮ ಶಿವಭಕ್ತೆ ನಿನ್ನಯ
ಪರಿಯಂ ಮುನ್ನಱಿಯದಕಟ ಜಡಿದೆಂ ಬಡಿದೆಂ
ತರಳಾಕ್ಷಿ ನಿನಗೆ ತಪ್ಪಂ
ಕರಮೆಸಗಿದೆನೆನ್ನವೋಲ್ದುರಾತ್ಮಕರೊಳರೇ ೬೦

(ಇವಳ) ಈ ಕಾರ್ಯವನ್ನು ಕಂಡನು. ೫೭-೫೮-೫೯. ಎಲ್ಲೆಲೆ ಪಾಪ ವಿಶಿಷ್ಟಳಾದ ದುರಾತ್ಮಿಕೇ, ಲಿಂಗದ ಪರಿಶುದ್ಧವಾದ ಶರೀರವನ್ನು ಬಿಡದೆ ಬಾಯಿಯ ಉಗುಳು ಸಿಡಿಯುವಂತೆ ಉರುಬಿದ ನೀಚಳೇ, ಹೋಗು ಎನ್ನುತ್ತ ಪೀಡಿಸುತ್ತ, ಕೂಗಾಡುತ್ತ ಮನೆಯಿಂದ ಹೊರಕ್ಕೆ ಕಳುಹಿಸಿ, ನೋಡುವ ಕಾಲದಲ್ಲಿ ಆ ಸ್ತ್ರೀಯು ಭಯಗೊಂಡು ಉಗುಳದೆಯಿದ್ದ ಆ ಶಿವನ ಶರೀರಾರ್ಧದಲ್ಲಿ ಕರ್ಪೂರದಿಂದ ಮಾಡಿದ ಮಣಿಗಳ ಸಮೂಹವೋ ಎನ್ನುವಂತೆ, ಕಾಣುವ ನೂತನವಾದ ಗುಳ್ಳೆಗಳು ಕಾಣಲಾಗಿ, ಆ ಶಿವ ಭಕ್ತನಾದ ತಿರುನೀಲನಕ್ಕನು ಕಂಡು, ಉತ್ಸಾಹಗುಂದಿ ಮನಃಕ್ಲೇಶದಿಂದ ಬಿಸಿ ಯುಸಿರನ್ನು ಬಿಟ್ಟು, ಆಗ ತುಂತಿರಿನಿಂದ ಕೂಡಿರುವಂತೆ ಉರುಬಿ (ಶಿವನಿಗೆ) ಹಿತವನ್ನು ಮಾಡಿರುವಂಥ ಕಾಂತೆಯನ್ನು ಆಚೆಗೆ ನೂಕಿ ಉಚಿತವಲ್ಲದ ಕಾರ್ಯವನ್ನು ಮಾಡಿದೆನು, ಎಂದು ಚಿಂತಾಭರಿತನಾಗಿ ಶೀಘ್ರವಾಗಿ ಆ ತನ್ನ ಪತ್ನಿಯ ಸಮೀಪಕ್ಕೆ ಬಂದು, ನಮಸ್ಕರಿಸುತ್ತ ಹೀಗೆ ಹೇಳಿದನು : ೬೦. ಪರಮ ಶಿವಭಕ್ತೆಯೇ, ನಿನ್ನ ರೀತಿಯನ್ನು ಮೊದಲು ಅರಿಯದೆ ಅಯ್ಯೋ ! ಭಯಗೊಳಿಸಿದೆನು, ಹೊಡೆದೆನು, ಚಂಚಲನೇತ್ರೆಯೇ ನಿನ್ನ ವಿಷಯದಲ್ಲಿ ಮಹಾಪರಾಧ ಮಾಡಿದೆನು. ನನ್ನಂತಹ ದುರಾತ್ಮರು ಇರುವರೆ !

ಪೆಱೆದಲೆಯನಂಗದೊಳ್ ತೂಂ
ತಿಱಿದೆಡೆಯೊಳ್ನೀಂ ಮೃಗಾಕ್ಷಿ ಪುಗುಳಿಲ್ಲುಳಿದಾ
ತೆಱಪಿನೊಳೊಗೆದುದು ಬಂದದ
ನುಱೆ ತೂಂತಿಱಿದೊರಸಿ ಕಳೆ ಕಳಾಧರವದನೇ ೬೧

ಎನೆ ಕೇಳ್ದಾತನ ಕಾಂತೆ ನೊಂದು ಮನದೊಳ್ ಮದ್ದೇವದೇವಂಗೆ ನೋ
ವೆನಿತಾಯ್ತೋ ಪುಗುಳಿಂದೆ ಕೆಟ್ಟೆನಿನಿಯಂ ಕೋಪಾತುರಂ ಬೈದೊಡಂ
ಮುನಿಸಿಂ ಪೊಯ್ದೊಡಮೋವೊ ತೂಂತಿಱಿಯದಾನೇಕಿಲ್ಲಿಗೇಳ್ತಂದೆನೆಂ
ದು ನಿತಾಂತಂ ಪೊನಲಾಗೆ ಕಣ್ಬನಿಯಳುತ್ತೈತಂದು ತಲ್ಲಿಂಗದಾ ೬೨

ಕೆಲದೊಳ್ನಿಂದು ನಿರೀಕ್ಷಿಸುತ್ತೆ ನಿಬಿಡ ಸ್ಫೋಟಂಗಳಂ ಕಂಡು ಕಾ
ದಲನುಂ ತಾನುಮಮಂದ ಶೋಕರಸದೊಳ್ ತೇಂಕಾಡುತುಂ ಪುಷ್ಪಕೋ
ಮಲ ಲಿಂಗಾಂಗದೊಳಾಯ್ತು ಬಲ್ಪುಗುಳಿದೆನ್ನಿಂ ಮುನ್ನಮೇಗೈವೆನೆಂ
ದು ಲಸತ್ಖಡ್ಗದೆ ತನ್ನ ಗೋಣ್ಕೊಱೆಯೆ ಕೂರ್ಪಿಂ ಮಚ್ಚಿದಂ ಶಂಕರಂ ೬೩

ವ॥ ಅಂತುಮಾಮಹೇಶ್ವರಂ ದಿವಿಜಗಣಗಣೇಂದ್ರಸಹಿತಂ ತನ್ಮುಗ್ಧಭಕ್ತಿಗೊಲವಿಂ ಪ್ರತ್ಯಕ್ಷಮಾಗಿ ವರಮನಿತ್ತಪೆಂ ಬೇಡಿಮೆನೆ ಜಾಯಾಪತಿಗಳ್ ಸಾಷ್ಟಾಂಗಮೆಱಗಿ ಬದ್ಧಾಂಜಲಿಗಳಾಗಿ—

೬೧. ಮೃಗಾಕ್ಷಿಯೇ, ಚಂದ್ರಮುಖಿಯೇ, ನೀನು ಶಿವನ (ಪೆರೆದಲೆಯನ) ದೇಹದಲ್ಲಿ ತೂಪಿರಿದ ಕಡೆಯಲ್ಲಿ ಉಗುಳಿನ ಗುಳ್ಳೆಗಳಿಲ್ಲ ; ಮಿಕ್ಕ ಸ್ಥಳಗಳಲ್ಲಿ ಗುಳ್ಳೆಯು ಹುಟ್ಟಿರುವುದು. ನೀನು ಬಂದು ಆ ಗುಳ್ಳೆಗಳನ್ನು ಅಧಿಕವಾಗಿ ತೂಪಿರಿದು ಊದಿ, ಒರೆಸಿ ಹೋಗಲಾಡಿಸು (ಎಂದನು). ೬೨–೬೩. ಹೀಗೆಂದು ಹೇಳಲು ಆತನ ಆ ಹೆಂಡತಿಯು ಕೇಳಿ, ಮನಸ್ಸಿನಲ್ಲಿಯೇ ನೊಂದವಳಾಗಿ, ನನಗೆ ಸ್ವಾಮಿಯಾದ ಪತಿಗೆ ದೇವರಾದ ಶಿವನಿಗೆ ಗುಳ್ಳೆಗಳಿಂದ ಎಷ್ಟೊಂದು ನೋವಾಗಿರುವುದೋ ! ಕೆಟ್ಟೆನು. ಪತಿಯು ಕೋಪಾಸಕ್ತನಾಗಿ, ಬಯ್ದರೂ, ಸಿಟ್ಟಿನಿಂದ ಹೊಡೆದರೂ ನಾನು ತೂಪಿರಿದು ಊದದೆ ಇಲ್ಲಿಗೇಕೆ ಬಂದೆನೋ ! ಓಹೋ !! ಎಂದು ಬಹಳವಾಗಿ ಕಣ್ಣೀರ ಹನಿಗಳ ಪ್ರವಾಹವಿಳಿಯುವಂತೆ ಅತ್ತು, ಬಂದು, ಆ ಲಿಂಗದ ಪಾರ್ಶ್ವದಲ್ಲಿ ನಿಂತುಕೊಂಡು ನೋಡುತ್ತ ದಟ್ಟವಾಗಿ ಎದ್ದಿರುವ ಗುಳ್ಳೆಗಳನ್ನು ಕಂಡು. ಪತಿಯೂ ತಾನೂ ಅಧಿಕವಾದ ದುಃಖವೆಂಬ ಜಲದಲ್ಲಿ ತೇಲಾಡುತ್ತ, ಹೂವಿನಂತೆ ಕೋಮಲವಾದ ಲಿಂಗದೇವನ ದೇಹದಲ್ಲಿ ಈ ಬಲವಾದ ಗುಳ್ಳೆಗಳು ಮೊದಲು ನನ್ನಿಂದಲೇ ಆದುವು. ಈಗೇನು ಮಾಡಲಿ ?' ಎಂದು ಪ್ರಕಾಶಿಸುವ ಖಡ್ಗದಿಂದ ತನ್ನ ಶಿರಸ್ಸನ್ನು ಕತ್ತರಿಸಿಕೊಳ್ಳಲು, ಶಂಕರನು ಪ್ರೀತಿಯಿಂದ ಮೆಚ್ಚಿದನು. ವ॥ ಆ ರೀತಿ ಉಮಾ ಸಹಿತನಾದ ಪರಮೇಶ್ವರನು ದೇವತಾಗಣೇಂದ್ರರು ಸಹಿತವಾಗಿ ಅವರ ಮುಗ್ಧ ಭಕ್ತಿಗೆ ಪ್ರೀತಿಯಿಂದ ಪ್ರತ್ಯಕ್ಷನಾಗಿ. ವರವನ್ನು ಕೊಡುತ್ತೇನೆ, ಬೇಡಿರಿ ಎನ್ನಲು, ಆ ದಂಪತಿಗಳು

ಇನ್ನೆಮಗೆ ಬೇಱೆ ವರಮೇಂ
ನಿನ್ನಯ ತನು ಸುಖದೊಳಿರೆ ನಿರೀಕ್ಷಿಪುದೆ ವರಂ
ಭಿನ್ನ ವರಂಗಳನರ್ಥಿಸೆ
ನಿನ್ನಂಘ್ರಿಯನೊಲ್ಲದಿರ್ದರಾಗೆವೆ ನಿಜದಿಂ ೬೪

ಭವ ಭವದಂಘ್ರಿಸ್ಮರಣಮಿ
ದವಿರತಮಿರ್ಕೆಮಗೆ ನಿನ್ನ ಗಣಮುಂ ನೀನುಂ
ಪ್ರವಿತತ ಸುಖಮಿರ್ಪುದು ಬೇ
ಳ್ಪ ವರಂ ಬೇಱಿಲ್ಲ ಬಾಲಚಂದ್ರಾಭರಣಾ ೬೫

ವ॥ ಎಂದು ಬಿನ್ನೈಸಲೊಡನೆ—

ಹರಿವಿರಿಂಚಿಪುರಂದರಾದಿಗಳಂದು ತನ್ನಿಜ ಭಕ್ತಿಗ
ಚ್ಚರಿಯನಾನೆ ಗಣಾಳಿ ಸಂತಸಮೊಂದಿ ಕೀರ್ತಿಸೆ ಸತ್ಕೃಪಾ
ಶರಧಿಯಲ್ಲಿ ಮುಳುಂಗಿಸುತ್ತವರಂ ಮಹಾನಿಜಮೋಕ್ಷ ಭಾ
ಸುರ ಸುಖಸ್ಥಿತಿಯಿತ್ತು ಮನ್ನಿಸಿದಂ ಮನೋಭವಮರ್ದನಂ ೬೬

ವ॥ ಎಂದೀ ಕಥೆಯನುಸುರ್ದು ಮತ್ತಂ ಕೇಳ್ವುದೆಂದಿಂತೆಂದಂ—

ಸಾಷ್ಟಾಂಗ ನಮಸ್ಕಾರಮಾಡಿ ಕೈಗಳನ್ನು ಮುಗಿದವರಾಗಿ—೬೪. ಇನ್ನು ನಮಗೆ ಬೇರೆ ವರವೇಕೆ ? ನಿನ್ನ ದೇಹವು ಸುಖದಿಂದ ಇರುವುದನ್ನು ನೋಡುವುದೇ ನಮಗೆ ವರ. ಬೇರೆ ವರಗಳನ್ನು ಬೇಡಿದರೆ ನಿಜವಾಗಿಯೂ ನಿನ್ನ ಪಾದವನ್ನು ಇಚ್ಛಿಸದೆ ಇರುವವರಾಗುವುದಿಲ್ಲವೇ ? ೬೫. ಬಾಲಚಂದ್ರನನ್ನು ಆಭರಣವಾಗಿ ಧರಿಸಿರುವ ಶಿವನೇ, ಈ ನಿನ್ನ ಪಾದ ಸ್ಮರಣೆಯು ನಮಗೆ ನಿರಂತರದಲ್ಲೂ ಇರಲಿ. ನಿನ್ನ ಪ್ರಮಥಗಣರೂ,ನೀನೂ ವಿಶೇಷವಾದ ಸುಖವುಳ್ಳವರಾಗಿ, ಇರುವುದೇ ನಾವು ಬೇಡುವ ವರ, ಬೇರೆ (ಏನೂ) ಇಲ್ಲ. ವ॥ ಹೀಗೆಂದು ಕೇಳಿ ಕೊಳ್ಳಲಾಗಿ ಕೂಡಲೇ—೬೬. ವಿಷ್ಣು, ಬ್ರಹ್ಮ, ಇಂದ್ರ ಮೊದಲಾದವರು ಆಗ ಆ ತಿರುನೀಲಸಕ್ಕನ ಭಕ್ತಿಗೆ ಆಶ್ಚರ್ಯ ವನ್ನು ಹೊಂದಲು, ಪ್ರಮಥಗಣ ಸಮೂಹವು ಸಂತೋಷಗೊಂಡು ಹೊಗಳಲು, ಮದನಹರನಾದ ಶಿವನು ಆ ಮುಗ್ಧಭಕ್ತರನ್ನು ಸಮೀಚೀನವಾದ ದಯೆಯೆಂಬ ಸಮುದ್ರ ದಲ್ಲಿ ಮುಳುಗಿಸುತ್ತ, ಶ್ರೇಷ್ಠವಾದ ಮೋಕ್ಷದ ಪ್ರಕಾಶಮಾನವಾದ ಒಳ್ಳೆಯ ಸ್ಥಾನ ವನ್ನಿತ್ತು ಮನ್ನಿಸಿದನು. ವ॥ ಹೀಗೆಂದು ಈ ಕಥೆಯನ್ನು ಹೇಳಿ, ಮತ್ತೂ ಕೇಳಿರಿ,

[ಕೋಳೂರ ಕೊಡಗೂಸಿನ ಕಥೆ]

ವಿಳಸದ್ಬಾಹ್ಯವನೋಪರಮ್ಯ ಪರಿಖಾಪೂರ್ಣಾಂಬುಜಾತಾಂಬುಜೋ
ತ್ಪಳ ಕಲ್ಹಾರಸುಗಂಧಿ ಚುಂಬಿತ ನಭಶ್ಚಂದ್ರಾಶ್ಮಸಾಲಂ ಸಮು
ಜ್ವಳ ರತ್ನಾಲಯ ಹರ್ಮ್ಯ ಮಂಟಪ ಶಿವಾಗಾರಾಮಿತ ಶ್ರೀಯುತಂ
ಕಳೆವತ್ತಗ್ಗಳವಾಗಿ ರಂಜಿಪುದು ಕೋಳೂರೆಂಬ ಸತ್ಪತ್ತನಂ ೬೭

ಆ ಪಟ್ಟಣದೊಳಗಿರ್ಪಂ
ಗೋಪಧ್ವಜಪಾದಪೂಜಕಂ ಮೃದುಮಧುರಾ
ಳಾಪಂ ಸದ್ಗುಣನಿವಹ ಕ
ಳಾಪಂ ಶಿವದೇವನೆಂಬ ಭಕ್ತನದೊರ್ವಂ ೬೮

ಅವನ ತನುಜಾತೆ ಸೌಂದರಿ
ಕುವಲಯದಳನಯನೆ ಕೋಮಲಾಂಗಿ ಸುಧಾಮಾ
ರ್ದವವಿನಯವಾಣಿ ಮೃದುಹಸಿ
ತವನೇರುಹವದನೆ ಕನ್ಯೆ ಕಂಗೊಳಿಸಿರ್ಪಳ್ ೬೯

ವ॥ ಆ ಶಿವದೇವನೊಂದು ದಿನಂ ದೇವಕಾರ್ಯನಿಮಿತ್ತಂ ಗೃಹಿಣಿವೆರಸಿ ನೆರೆಯೂರ್ಗೆ

ಎಂದು ಹೀಗೆ ಹೇಳಿದನು : **ಕೋಳೂರು ಕೊಡಗೂಸಿನ ಕಥೆ:** ೬೭. ಪ್ರಕಾಶಮಾನವಾದ ಪಟ್ಟಣದ ಹೊರಗಿನ ಉಪವನದ ಸಮೀಪದಲ್ಲಿ ಮನೋಹರವಾದ ಅಗಳು (ಇದೆ). ಆ ಅಗಳಿನಲ್ಲಿ ತುಂಬಿರುವ ನೀರಿನಲ್ಲಿ ಕಮಲ, ಕನ್ನೈದಿಲೆ, ಕಲ್ಹಾರಗಳು ಹುಟ್ಟಿ, ಸಮೀಚೀನವಾದ ಅವುಗಳ ಪರಿಮಳ ಹರಡಿದೆ. ಆಕಾಶವನ್ನು ಚುಂಬಿಸುತ್ತವೆಯೋ ಎಂಬಂತೆ ಚಂದ್ರಕಾಂತಶಿಲೆಯಿಂದ ಕಟ್ಟಿದ ಕೋಟೆಯ ಗೋಡೆ ಸುತ್ತಲೂ ಇದೆ. (ಇದರ ಒಳಭಾಗದಲ್ಲಿ) ಪ್ರಕಾಶಮಾನವಾದ ರತ್ನ ನಿರ್ಮಿತ ಮನೆಗಳು, ಉಪ್ಪರಿಗೆಗಳು, ಶಿವಾಲಯಗಳು ಇವುಗಳ ಅಪರಿಮಿತ ಕಾಂತಿಯಿಂದ ಕೂಡಿದ ಕೋಳೂರೆಂಬ ಒಳ್ಳೆಯ ಪಟ್ಟಣವು ತೇಜೋವಿಶಿಷ್ಟವಾಗಿಯೂ ಶ್ರೇಷ್ಠವಾಗಿಯೂ ರಂಜಿಸುವುದು. ೬೮. ಆ ಪಟ್ಟಣದಲ್ಲಿ ವೃಷಭಧ್ವಜನಾದ ಪರಮೇಶ್ವರನ ಪಾದಪೂಜಕನೂ, ಕೋಮಲವೂ, ಇಂಪಾದುವೂ ಆದ ಮಾತುಗಳಿಂದ ಕೂಡಿದವನೂ, ಸದ್ಗುಣ ಸಮೂಹಗಳೆಂಬ ಆಭರಣವುಳ್ಳವನೂ ಆದ 'ಶಿವದೇವ' ಎಂಬ ಒಬ್ಬ ಭಕ್ತನಿದ್ದನು. ೬೯. ಅವನ ಮಗಳು ಸುಂದರಿ; ಕಮಲದ ಎಸಳಿನಂತಹ ಕಣ್ಣುಳ್ಳವಳು; ಕೋಮಲವಾದ ಶರೀರವುಳ್ಳವಳು; ಅಮೃತದಂತೆ ಮೃದುವಾದುವೂ, ವಿನಯದಿಂದ ಕೂಡಿದುವೂ ಆದ ಮಾತುಳ್ಳವಳು; ಸದಾ ಮುಗುಳುನಗೆಯುಳ್ಳವಳು; ಕಮಲದಂತೆ ಮುಖವುಳ್ಳವಳು; ಮದುವೆಯಾಗದವಳು ಅವಳು ಹೀಗೆ ಕಂಗೊಳಿಸುತ್ತಿದ್ದಳು. ವ॥ ಆ ಶಿವದೇವನು ಒಂದು ದಿನ ದೇವಕಾರ್ಯದ ಕಾರಣದಿಂದ ತನ್ನ ಹೆಂಡತಿಯೊಡನೆ ಕೂಡಿಕೊಂಡು ಪಕ್ಕದ

ತೆರಳಲುಜ್ಜುಗಿಸಿ ತನೂಜೆಯುಂ ಕರೆದು ಮೈದಡಪಿ ಗಲ್ಲಂಬಿಡಿದು ಮುದ್ದಿಸಿ ನಿಡುನೇಹದಿಂ ನಿರೀಕ್ಷಿಸಿ ಮನೆಗಾಂಪಿಗಿರಿಸಲೆಂದಿಂತೆಂದಂ—

ಮಗಳೆ ಮನೋಜ್ಞೆ ಮಾತೆ ಮಱೆದೊರ್ಮೆಯುಮಾಡದಿರಕ್ಕ ಮಕ್ಕಳೊಳ್
ಪೋಗದಿರು ಪಿತ್ತಲೋವರಿಯನೊರ್ವಳೆ ಪೋಗದಿರೆತ್ತಲುಂ ಮನಂ
ಬುಗುವ ದುಕೂಲಮಂ ಮಿಸುನಿಬೊಂಬೆಯನೊಪ್ಪುವ ಭೂಷಣಂಗಳಂ
ಬಗೆಮಿಗೆ ತಂದು ನಾಳೆ ನಿನಗಿತ್ತಪೆನಾಂ ಮನೆಗಾದಿರೊಪ್ಪದಿಂ ೭೦

ಶಿವನಿಳಯಕ್ಕೆಯ್ದಿ ತನೂ
ಭವೆ ನೀಂ ಪ್ರಸ್ಥೈಕಮಿತದ ಕಪಿಲೆಯ ಪಾಲಂ
ಶಿವಲಿಂಗಕೆ ಪೊಳ್ತಱಿದೊ
ಪ್ಪುವ ತೆಱದಿಂ ಸಲಿಸಿ ಸಲಿಪುದೆನ್ನೀ ವ್ರತಮಂ ೭೧

ವ॥ ಎಂದು ಮಗಳ್ಗೆ ಬುದ್ಧಿವೇಳ್ದು ನಿಜರಮಣಿವೆರಸಿ ಬೇಱೂರ್ಗಮಂ ಪೋದಾಗಳ್ ಪರಿಮಳೋದಕದಿಂ ಜಳಕಂಬೊಕ್ಕು ದಣಿಂಬಮನುಟ್ಟು ನೊಸಲೊಳ್ ಭಸಿತಮಂ ತಳೆದು ಸಿಂಗರಿಸುತಂ ಶಿವನಿಯಮಿತ ಕಪಿಲಾಕ್ಷೀರಮಂ ಕಮ್ಮಗಿನಿದಪ್ಪಂತೆ ಕಾಸಿ ಬಳ್ಳದಿನಳೆದು ಪೊಯ್ದು

ಊರಿಗೆ ಹೋಗಲು ಅಣಿಯಾಗಿ, ತನ್ನ ಮಗಳನ್ನು ಕರೆದು (ಅವಳ) ಮೈಮೇಲೆ ಕಯ್ಯಾಡಿಸಿ, ಮುದ್ದುಮಾಡಿ, ಅಧಿಕವಾದ ಪ್ರೀತಿಯಿಂದ ನೋಡಿ ಮನೆಯನ್ನು ಕಾಯ್ದುಕೊಂಡು ಇರುವುದಕ್ಕೋಸುಗ ಹೀಗೆ ಹೇಳಿದನು : ೭೦. ಮಗಳೇ, ಮನೋಹರಳಾದ ತಾಯಿಯೇ, ಅಕ್ಕ, ಮರೆತು ಒಮ್ಮೆಯೂ (ಉಳಿದ) ಮಕ್ಕಳೊಡನೆ ಆಡದಂತೆ ಇರು; ಹಿತ್ತಿಲಿನ ಪ್ರವೇಶದಲ್ಲಿ ಪ್ರವೇಶಿಸಬೇಡ; ಒಬ್ಬಳೇ ಯಾವಕಡೆಗೂ ಹೋಗದಂತೆ ಇರು; ನಾನು (ನಿನಗೆ) ಮನೋಹರವಾದ ರೇಷ್ಮೆಪಟ್ಟೆ ಸೀರೆಯನ್ನೂ, ಚಿನ್ನದ ಗೊಂಬೆಯನ್ನೂ; ಒಪ್ಪುವಂತಹ ಆಭರಣಗಳನ್ನೂ ಮನಸ್ಸಿನಿಚ್ಛೆಗೆ ಮೀರಿ ತಂದು, ನಾಳೆ ಕೊಡುತ್ತೇನೆ, ಚೆನ್ನಾಗಿ ಮನೆಯನ್ನು ಕಾಯ್ದುಕೊಂಡು ಇರು, ೭೧. ಮಗಳೇ ನೀನು ಶಿವದೇವಾಲಯಕ್ಕೆ ಹೋಗಿ, ಒಂದು ಬಳ್ಳದ ಅಳತೆಯ (ಪ್ರಸ್ಥೈಕಮಿತದ) (ನಮ್ಮ) ಕಪಿಲವರ್ಣದ ಹಸುವಿನ ಹಾಲನ್ನು ಶಿವನಿಗೆ ಕಾಲವರಿತು (ಅವನು) ಒಪ್ಪುವ ರೀತಿಯಲ್ಲಿ ಸಮರ್ಪಿಸಿ, ನನ್ನ ವ್ರತವನ್ನು ನೆರವೇರಿಸು. ವ॥ ಹೀಗೆಂದು ಮಗಳಿಗೆ ಬುದ್ಧಿಯನ್ನು ಹೇಳಿ. ತನ್ನ ಹೆಂಡತಿಯೊಡನೆ ಅವನು ಬೇರೆ ಊರಿಗೆ ಹೋದ ಮೇಲೆ, (ಕೊಡಗೂಸು) ಪರಿಮಳ ವಿಶಿಷ್ಟವಾದ ನೀರಿನಿಂದ ಜಳಕ ಮಾಡಿ. ಮಡಿಯನ್ನುಟ್ಟು, ಹಣೆಯಲ್ಲಿ ಭಸ್ಮವನ್ನು ಧರಿಸಿ, ಶೃಂಗಾರಮಾಡಿಕೊಂಡು, ಶಿವನಿಗಾಗಿ ನಿಯಮಿತಗೊಂಡ ಕಪಿಲವರ್ಣದ ಹಸುವಿನ ಹಾಲನ್ನು ಸುವಾಸನೆಯಿಂದ ಕೂಡಿ ಸವಿಯಾಗಿರುವಂತೆ ಕಾಯಿಸಿ, ಬಳ್ಳದಿಂದ ಅಳೆದು ಹೊನ್ನಿನ ಬಟ್ಟಲಿಗೆ ಹೊಯ್ದು ತುಂಬಿ. ಬಿಳಿಯ ವಸ್ತ್ರವನ್ನು ಎರಡು ಮಡಿಕೆ ಮಾಡಿ ಮೇಲೆ ಮುಚ್ಚಿ, ಸಂಭ್ರಮದಿಂದ ಹೊರಟು ಬಂದು

ಪೊಂಬಟ್ಟಲ್ದೀವಿ ಧವಳವಸ್ತ್ರಮನಿರ್ಮಡಿಕೆಯಿಂ ಮುಸುಂಕಿ ಸಡಗರದಿನೆಯ್ತಂದು ಶಿವಾಲಯಮಂ ಪೊಕ್ಕು ಕಲ್ಲಿನಾಥನಂ ಕಂಡೆಱಗಿ ಮುಂದೆ ಪಾಲ್ಬಟ್ಟಲನಿಟ್ಟು ದೇವ ಪಸಿದೆ ಪಾಲ್ಗುಡಿವುದೆಂದುಸುರ್ದು ಕೊಡಗೂಸು ಕಂಬಮಂ ಮಱೆಗೊಂಡು ನಿಂದಿರ್ದನಿಸಾನುಂ ಬೇಗದಿಂ ಮರಳ್ದು ನೋಳ್ಪನಮಾ ಪಾಲ್ಬಟ್ಟಲಿರ್ದಂತಿರೆ ಪೆಳರ್ದು ಮನಂನೊಂದು ಮಱುಗಿ—

ದಡದಡಿಪೆರ್ದೆ ಬಿಸಿ ಮಸಗುವ
ನಿಡುಸುಯ್ ಕಂಪಿಪ ಕರಂಗಳಿರ್ಪೊಣಗಿದ ಬಾ
ಯ್ಗುಡಗುಡನೆ ಸುರಿವ ಕಣ್ಬನಿ
ಯೊಡನಿರೆ ಕೊಡಗೂಸು ನೋಡಿ ಲಿಂಗಮನಾಗಳ್ ೭೨

ಏಂ ಕಾರಣಮೊ ಪಾಲಂ
ನೀಂ ಕುಡಿಯದೆ ಸುಮ್ಮನಿರ್ಪೆಯಕಟಕಟೆನಗಾ
ತಂಕಮನಾಗಿಪ್ಪುದುಚಿತಮೆ
ಶಂಕರ ನೀಂ ಪೇಳ್ವುದೆಂದು ಮಗುಳ್ದಿಂತೆಂದಳ್ ೭೩

ಪಸಿವೇನಾಗದೊ ದೇವ ಕೇಳ್ನಿನಗೆ ಪಾಲೇಂ ಕಾಯದೋ ಪೊತ್ತಿತೋ
ಬಿಸುಪಾಱಿರ್ದುದೊ ಕಮ್ಮನಾಗದೊ ತನಿತ್ತಿಂಪೇಱದೋ ಕಣ್ಗೆ ರಂ
ಜಿಸದೋ ಮೇಣ್ ಪೊಗೆ ಸುತ್ತಿದತ್ತೊ ಪೆಱರಿಂ ಕಣ್ಣೆಂಜಲಾದತ್ತೊ ಬ
ಲ್ಬಿಸಿಯಾಗಿರ್ದುದೊ ಮೊಸಲೋಸರಿಸಿತೋ ಪೇಳಿಂತಿದಿರ್ಪಂದಮಂ ೭೪

ಶಿವಾಲಯುವನ್ನು ಹೊಕ್ಕು, ಕಲ್ಲಿನಾಥನನ್ನು ಕಂಡು ನಮಸ್ಕಾರ ಮಾಡಿ, ಅವನ ಮುಂದೆ ಹಾಲಿನ ಬಟ್ಟಲನ್ನಿಟ್ಟು. 'ದೇವ, ಹಸಿದಿದ್ದೀಯೆ: ಹಾಲನ್ನು ಕುಡಿಯುವುದು; ಎಂದು ಹೇಳಿ (ಅಲ್ಲಿದ್ದ) ಕಂಬದ ಮರೆಗೆ ನಿಂತುಕೊಂಡು. ಸ್ವಲ್ಪ ಹೊತ್ತಿನಲ್ಲಿಯೇ ಪುನಃ ನೋಡುವಷ್ಟರಲ್ಲಿ ಆ ಹಾಲಿನ ಬಟ್ಟಲಿನಲ್ಲಿ ಹಾಲು ಇದ್ದಂತೆಯೇ ಇರಲು, ಹೆದರಿ, ಮನಸ್ಸಿನಲ್ಲಿ ನೊಂದುಕೊಂಡು ದುಃಖಿಸುತ್ತ—೭೨. ಕೊಡಗೂಸು ಬಡಿದುಕೊಳ್ಳುವ ಎದೆಯಿಂದಲೂ, ಬಿಸಿಯುಸಿರಿನಿಂದಲೂ, ನಡುಗುವ ಕೈಗಳಿಂದಲೂ, ಒಣಗಿ ಹೋದ ಬಾಯಿಯಿಂದ, ಗಳಗಳನೆ ಸುರಿಯುವ ಕಣ್ಣೀರ ಹನಿಯಿಂದ ಕೂಡಿರಲು ಲಿಂಗವನ್ನು ನೋಡುತ್ತ—೭೩. ಶಂಕರ, ನೀನು ಈ ಹಾಲನ್ನು ಯಾವ ಕಾರಣದಿಂದ ಕುಡಿಯದೆ ಸುಮ್ಮನಿರುವೆ ?' ಅಕಟಕಟ ! ನನಗೆ ನೀನು (ಈ ರೀತಿ) ಆತಂಕವನ್ನುಂಟು ಮಾಡು ವುದು ಯೋಗ್ಯವೇ ?' ಹೇಳು ಎಂದೆನ್ನುತ್ತ ಪುನಃ ಹೀಗೆ ಕೇಳಿದಳು. ೭೪. ದೇವ, ಕೇಳು, ನಿನಗೆ ಹಸಿವು ಆಗಿಲ್ಲವೋ ಹೇಗೆ ? ಹಾಲು ಕಾಯ್ದಿಲ್ಲವೋ (ಅಥವಾ) ಹೊತ್ತಿ ದೆಯೋ ? ಬಿಸಿಯೇನಾದರೂ ಆರಿ ಹೋಗಿದೆಯೋ ?' ಸುವಾಸನೆಯುಳ್ಳದ್ದಾಗಿ ಆಗಿ ಲ್ಲವೋ ?' ತನಿಯಾದ ಮಾಧುರ್ಯವು ಉಂಟಾಗಿಲ್ಲವೋ ? ಕಣ್ಣಿಗೆ ಶೋಭಿಸುತ್ತಿಲ್ಲವೋ? ಅಥವಾ ಹೊಗೆಸುತ್ತಾಗಿರುವುದೋ ಬೇರೆಯವರ ಕಣ್ಣೆಂಜಲೇನಾದರೂ ಆಗಿರುವುದೋ? ಬಹಳ ಬಿಸಿಯಾಗಿರುವುದೋ ? ವಾಸಲು ಕೆಟ್ಟಿರುವುದೋ ? ಕುಡಿಯದಿರುವ ರೀತಿ

ಮನಮೆಳಸಿ ನೋಡಿದೆನೆ ನು
ಣ್ಗೆನೆಯುಂ ಬೇರ್ಕೆಯ್ದು ತಂದೆನೇ ಪಾಲನಿದಂ
ಮನೆಯಲ್ಲಿ ತಡಂಗೆಯ್ದೆನೆ
ನೆನೆದೆನೆ ಪೆಱತೊಂದನೇಕೆ ನುಡಿಯೆ ಪುರಾರೀ ೭೫

ಬಿಸುಪಾಱಿದೊಡೆ ಸವಿಸವು
ನಿಸುಗುಮೆ ಬಗೆದಂದು ಜವದಿನೀಂಟಯ್ಯ ಸುಧಾ
ರಸಮುಂ ನೀಂ ಬಯಸಿದುದಂ
ಬೆಸಸೀಗಳೆ ಮನೆಗೆ ಪೋಗಿ ತಂದಪೆನಭವಾ ೭೬

ಪೊಸ ಸರ್ಕರೆಯುಂ ನವಮಧು
ರಸಮುಂ ನಱುನೆಯ್ಯನೆಸೆವ ಕದಳೀಫಲಮುಂ
ರಸನೆಯೊಳಸಿದುದನೆನ್ನೊ
ಳ್ಬೆಸಸೀಗಳೆ ನಿನಗೆ ತಂದಪೆಂ ಶಶಿಮೌಳೀ ೭೭

ಪುರಿಗಡುಬು ತಱಗು ಚಕ್ಕುಲಿ
ಕರಂಜಿಗಾಯತಿರಸಂ ಚಿಗುಳಿ ಲಡ್ಡುಗೆ ಸ
ಕ್ಕರೆ ಪೇಣೆಯೊಳವು ಮನ್ಮಂ
ದಿರದೊಳ್ನೀಂ ಬಯಸೆ ಪೋಗಿ ತಂದಪೆನೀಗಳ್ ೭೮

ಯೇನು ಹೇಳು. ೭೫. ತ್ರಿಪುರ ಹರನೇ, (ನಾನು ಈ ಹಾಲನ್ನು ಮನಸ್ಸಿನಿಂದ ಬಯಸಿ ನೋಡಿದೆನೆ? (ಮೇಲ್ಭಾಗದ) ಒಳ್ಳೆಯ ಕೆನೆಯನ್ನು ಬೇರೆಮಾಡಿ (ಕೆನೆಯಿಲ್ಲದ) ಹಾಲನ್ನು ತಂದಿರುವೆನೋ ? ಮನೆಯಲ್ಲಿ ತಡಮಾಡಿ ತಂದೆನೋ ? ಬೇರೊಂದನ್ನು ನೆನೆದೆನೋ ? ಏಕೆ ಕುಡಿಯುತ್ತಿಲ್ಲ ? ೭೬. ಬೆಚ್ಚಗೆ ಇರುವಿಕೆಯು ಆರಿದರೆ ಮಾಧುರ್ಯವು ಉಂಟಾಗುವುದೇ? ಮನಸ್ಸು ಮಾಡಿ, ಬೇಗನೆ ಹಾಲನ್ನು ಕುಡಿಯಯ್ಯ! ನೀನು ಬಯಸಿದುದನ್ನಾದರೂ ಹೇಳು. ಈಶ್ವರ, ಈಗಲೆ ಹೋಗಿ ನಿನಗೆ ತಂದು ಕೊಡುತ್ತೇನೆ. ೭೭. ನಿನ್ನ ನಾಲಿಗೆಯು ಅಪೇಕ್ಷಿಸಿದ ಹೊಸದಾದ ಸಕ್ಕರೆಯನ್ನು, ನೂತನವಾದ ಜೇನು ತುಪ್ಪವನ್ನು, ಸುವಾಸನೆಯಿಂದ ಕೂಡಿದ ತುಪ್ಪವನ್ನು, ರುಚಿಯಾದ ಬಾಳೆಯ ಹಣ್ಣನ್ನು, ಚಂದ್ರಧರನಾದ ಶಿವನೇ. ನನ್ನೊಡನೆ ಹೇಳು. ಈಗಲೇ (ಹೋಗಿ) ನಿನಗಾಗಿ ತರುತ್ತೇನೆ. ೭೮. ನಮ್ಮ ಮನೆಯಲ್ಲಿ ಪುರಿ. ಕಡುಬು, ತರಗು, ಚಕ್ಕುಲಿ, ಕರಜಿಕಾಯಿ, ಅತಿರಸ, ಚಿಗುಳಿ, ಲಡ್ಡುಗೆ. ಸಕ್ಕರೆಪೇಣಿ-ಇವೆಲ್ಲ ಇರುವುವು. ನೀನು

ಪಾಲೊಡನಾರೋಗಿಪೆನೆನೆ
ಲೀಲೆಯೊಳಾಂ ಪೋಗಿ ತರ್ಪೆನೋಗರಮನಿವ
ಳ್ಬಾಲಕಿ ಪುಸಿನುಡಿದಪಳೆಂ
ದಾಲೋಚಿಸದಿರು ಪರೀಕ್ಷಿಸೆನ್ನಯ ಗುಣಮಂ ೭೯

ಎನ್ನ ಮಾತನುಪೇಕ್ಷೆಗೆಯ್ಯದೆ ಪಾಲನೀಂಟಿದೊಡಯ್ಯ ಕೇ
ಳ್ನಿನ್ನನಾಂ ಕರೆದೊಯ್ವೆನೊಪ್ಪುವ ವೀರಭದ್ರನ ತೇರ್ಗೆ ಸಂ
ಪನ್ನಮದ್ಗುರು ಪರ್ವಕೆನ್ನಯ ತಂದೆ ನಾಳೆನಗೀವ ರ
ತ್ನೋನ್ನತಾಭರಣಂಗಳಂ ನಿನಗೀವೆನಿಂದುಕಳಾಧರಾ ೮೦

ವ॥ ಎಂದಡಿಗೆಱಗಿ ಮಱುಗಿ ಬಾಯುಳಿದು ಪಲವಂದದಿನೊಡಂಬಡಿಸಿದೊಡಂ ತುಟಿ ಮಿಡುಕದುಗ್ರಂ ಸುಮ್ಮನಿರೆ ಮನಂನೊಂದು ತಲ್ಲಣಿಸಿ ಮಲ್ಲಳಿಗೊಂಡು—

ನುಡಿಯಂ ಪಾಲ್ಗುಡಿಯಂ ಮಹೇಶನಕಟಿನ್ನೇಗೆಯ್ವೆನೆಂದಳ್ತು ಬಾ
ಯ್ಬಿಡುತುಂ ಸುಱ್ಱನೆ ಸುಯ್ವುತುಂ ಸುಗಿವುತುಂ ಬೇಳಾಗುತುಂ ಬೆರ್ಚಿ ಸೈ
ಗೆಡೆಯುತ್ತುಂ ಬಿಡದೆಳ್ದು ಡೆಂಡಣಿಸುತುಂ ಬಾಯಾಱುತುಂ ಬಳ್ಕುತುಂ
ಸೆಡೆವುತ್ತುಂ ಕೊಡಗೂಸು ಕೋಟಲೆಗೆ ಪಕ್ಕಾಗಿರ್ದಳಾ ವೇಳೆಯೊಳ್ ೮೧

ಇಚ್ಛಿಸಿದ್ದಾದರೆ ಈಗಲೇ ಹೋಗಿ ತರುತ್ತೇನೆ. ೭೯. (ನೀನು) ಅನ್ನವನ್ನು ಹಾಲಿನೊಡನೆ (ಸೇರಿಸಿ) ಊಟ ಮಾಡುತ್ತೇನೆಂದರೆ (ಹೇಳು) ನಾನು ಸಂತೋಷದಿಂದ (ಈಗಲೇ) ಹೋಗಿ ತರುತ್ತೇನೆ. ಇವಳು ಚಿಕ್ಕ ಹುಡುಗಿ, ಸುಳ್ಳು ಹೇಳುತ್ತಾಳೆ ಎಂದು ಆಲೋಚನೆ ಮಾಡದೆ ಇರು. ನನ್ನ ಗುಣವನ್ನಾದರೂ ಪರೀಕ್ಷಿಸು. ೮೦. ಚಂದ್ರಕಳೆಯನ್ನು ಧರಿಸಿದವನೇ, ನನ್ನ ಮಾತನ್ನು ಉದಾಸೀನ ಮಾಡದೆ ಹಾಲನ್ನು ಕುಡಿದದ್ದೇ ಆದರೆ ಅಯ್ಯಾ, ಕೇಳು : ನಿನ್ನನ್ನು ನಾನು ಶೋಭಿಸುವ ವೀರಭದ್ರನ ರಥೋತ್ಸವ ನೋಡಲು ಕರೆದುಕೊಂಡು ಹೋಗುತ್ತೇನೆ. ನನ್ನ ತಂದೆಯು ಮುಂದೆ ಬರುವ ಸಮೃದ್ಧನಾದ ನನ್ನ ಗುರುವಿನ ಹಬ್ಬಕ್ಕಾಗಿ ನಾಳೆ ನನ್ನ ತಂದೆಯು ನನಗಾಗಿ ತಂದು ಕೊಡುವ, ಶ್ರೇಷ್ಠವಾದ ರತ್ನಾಭರಣಗಳನ್ನು ನಿನಗೆ ಕೊಡುತ್ತೇನೆ. ವ॥ ಈ ರೀತಿ ಹೇಳಿ, (ಶಿವಲಿಂಗದ) ಪಾದಕ್ಕೆ ನಮಸ್ಕಾರಮಾಡಿ, ಸಂತಾಪಗೊಂಡು, ಸ್ವರವು ಕುಂದಿ, ಅನೇಕ ರೀತಿಯಿಂದ ಸಮಾಧಾನಪಡಿಸಿದರೂ, ಪರಶಿವನು ತುಟಿಯನ್ನೂ ಕೂಡ ಅಲ್ಲಾಡಿಸದೆ, ಸುಮ್ಮನೆ ಇರಲಾಗಿ, (ಕೊಡಗೂಸು) ಮನಸ್ಸಿನಲ್ಲಿ ನೊಂದುಕೊಂಡು, ಭಯದಿಂದ ನಡುಗಿದವಳಾಗಿ, ಬೆಚ್ಚಿ ಹೋದವಳಾಗಿ. ೮೧. ಆ ಸಮಯದಲ್ಲಿ ಕೊಡಗೂಸು—ಈ ಪರಮೇಶ್ವರನು ಮಾತನಾಡುತ್ತಿಲ್ಲ; ಹಾಲನ್ನು ಕುಡಿಯುತ್ತಿಲ್ಲ; ಅಕ್ಕಟ ! ಇನ್ನು ಏನು ಮಾಡಲಿ ?' ಎಂದು ಅತ್ತು, ಬಾಯನ್ನು ಬಿಟ್ಟು ಅಳುತ್ತ, ಸುರ್ರೆಂದು ನಿಟ್ಟುಸಿರು ಬಿಡುತ್ತ, ಭಯಗೊಳ್ಳುತ್ತ, ಮರುಳುಗೊಂಡವಳಂತೆ ಮಾಡುತ್ತ, ಬೆಚ್ಚುತ್ತ, ನಿಂತು ನಿಂತಂತೆ ಬೀಳುತ್ತ, ತಪ್ಪದೆ ಮೇಲಕ್ಕೇಳುತ್ತ, ದಡಗುಡುತ್ತ, ಬಾಯೊಣಗಿದವಳಾಗಿ, ಬಳುಕಾಡುತ್ತ, ಭಯಪಡುತ್ತ, ಮನೋವ್ಯಥೆಯಿಂದ ಕೂಡಿ

ವ॥ ಇಂತು ಪಿಡಿದು ವಿಷಾದಂಬಡೆದು ಪಾಲ್ಗುಡಿಯದ ನಿನಗೆನ್ನ ಹರಣಮಂ ಸಮರ್ಪಿಸುವೆನೆಂದು ಮರಣೋದ್ಯತೆಯಾಗಿ ಮುಂತಣ ಶಿಲಾಸ್ತಂಭಮಂ ಶಿರವೊಡ್ಡಿ ಘಳಿಲನೆ ಪಾಯಲೊಡನೆ—

ನಂದನೆ ನೊಂದಪಳೆಂದೊ
ಲ್ದಿಂದುಧರಂ ಪಿಡಿದು ನೆಗಪಿ ನಿಜಕರದಿನವ
ಳ್ತಂದಣ್ಣೆ ಪಾಲನೀಂಟಿದ
ನಂದಂ ಮಿಗೆ ಭಕ್ತವತ್ಸಲಂ ಬಳಿಕಾಗಳ್ ೮೨

ಎಳೆನಗೆಯುಣ್ಮೆ ಮುದ್ದುಮೊಗದೊಳ್ಸುಧೆಯಿಂದಭಿಷೇಕಿಪಂತೆ ಕಂ
ಬೆಳಗಡರ್ದೊಪ್ಪೆ ಲಿಂಗತನುವಂ ಕೊಡಗೂಸು ಮನೋನುರಾಗ ಸ
ಮ್ಮಿಳಿತ ವಿನೋದದಿಂ ಪಸುಳೆಯಾನೆನುತುಂ ಸುಧೆಯೊಂಟಲೊಲ್ಲದು
ಮ್ಮಳಮನೊಡರ್ಚಿ ಕಾಡಿದೆ ಗಡೆಂದೆನೆ ನಕ್ಕನಹೀಂದ್ರಭೂಷಣಂ ೮೩

ಜನಕಂ ಬಂದೊಡೆ ಪೇಳ್ದಪೆ
ನಿನಿತೆಲ್ಲಮನಯ್ಯ ಮಱೆಯದಿರ್ಬಳಿಕೆನಗಂ
ನಿನಗಂ ಸಂವಾದಮಪ್ಪುದುಂ
ಟೆನುತುಂ ಪೊಡಮಟ್ಟು ನಗುತೆ ಮನೆಗೇಳ್ತಂದಳ್ ೮೪

ದವಳಾದಳು. ವ॥ ಈ ರೀತಿಯಲ್ಲಿ ಹೆಚ್ಚಾದ ಮನಃಕ್ಲೇಶವನ್ನು ಹೊಂದಿದವಳಾಗಿ, ಹಾಲನ್ನು ಕುಡಿಯದಿರುವ ನಿನಗೆ ನನ್ನ ಪ್ರಾಣವನ್ನೇ ಸಮರ್ಪಿಸಿ ಬಿಡುತ್ತೇನೆ ಎನ್ನುತ್ತ ಸಾಯುವುದಕ್ಕೆ ಸಿದ್ಧಳಾಗಿ ಮುಂಭಾಗದಲ್ಲಿರುವ ಕಲ್ಲಿನ ಕಂಬಕ್ಕೆ ತಲೆಯನ್ನು ಚಾಚಿ, ಶೀಘ್ರವಾಗಿ ಘಳಿಲ್ ಎಂದು ಡಿಕ್ಕಿ ಹೊಡೆಯಲು ಮುಂದೆ ಹಾಯ್ದಾಗ—ಆ ಕೂಡಲೆ, ೮೨. ಕುಮಾರಿಯು ನೊಂದುಕೊಳ್ಳುತ್ತಾಳೆ ಎನ್ನುತ್ತ, ಚಂದ್ರಶೇಖರನು, ಪ್ರೀತಿಯಿಂದ ಅವಳನ್ನು ತನ್ನ ಕೈಗಳಿಂದ ಹಿಡಿದು ಮೇಲಕ್ಕೆತ್ತಿಕೊಂಡನು. ಅವಳು ತಂದ ಮಧುರವಾದ ಹಾಲನ್ನು ಭಕ್ತವತ್ಸಲನಾದ ಪರಶಿವನು (ಅವಳ ಮನಸ್ಸಿಗೆ) ಒಪ್ಪುವ ಹಾಗೆ ಕುಡಿದನು. ಅನಂತರ—೮೩. ಕೊಡಗೂಸು—ಮುದ್ದಾದ ಮುಖದಲ್ಲಿ ಮುಗುಳುನಗೆ ಹೊರಹೊಮ್ಮುತ್ತಿರಲು, ಕಣ್ಣಿನ ಕಾಂತಿಯು ಲಿಂಗದ ಶರೀರವನ್ನು ಮುತ್ತಿ, ಹಾಲಿನಿಂದ ಅಭಿಷೇಕ ಮಾಡುತ್ತಿರುವುದೋ ಎನ್ನುವ ರೀತಿಯಲ್ಲಿ ಪ್ರಕಾಶಿಸುತ್ತಿರಲು, ಮನಸ್ಸಿನಲ್ಲಿ ಉಂಟಾದ ಪ್ರೇಮದಿಂದ ಕೂಡಿದ ವಿನೋದದಿಂದ, 'ನಾನು ಚಿಕ್ಕವಳೆಂದುಕೊಂಡು, (ನಾನು ತಂದ) ಹಾಲನ್ನು ಕುಡಿಯದೆ (ನನಗೆ) ಮನೋವ್ಯಥೆಯನ್ನುಂಟುಮಾಡಿ, ಪೀಡಿಸಿದೆಯಲ್ಲವೆ ? ಎಂದೆನ್ನಲು, ಆ ಆದಿಶೇಷನನ್ನು ಧರಿಸಿದ ಪರಮೇಶ್ವರನು ನಕ್ಕನು. ೮೪. ಅಯ್ಯ ! ನಮ್ಮ ತಂದೆ ಬರಲಿ ; ಬಂದ ಮೇಲೆ, ನೀನು ಮಾಡಿದುದೆಲ್ಲವನ್ನೂ ತಪ್ಪದೆ ಹೇಳುತ್ತೇನೆ. ಮರೆಯಬೇಡ. ಆಮೇಲೆ ನನಗೂ ನಿನಗೂ ಮಾತುಕತೆಯುಂಟು ! ಎಂದು ಹೇಳುತ್ತ, ನಮಸ್ಕರಿಸಿ, ನಗುತ್ತ ಮನೆಗೆ ಹೊರಟು ಬಂದಳು.

ಬಾಲೆಯ ನುಣ್ನುಡಿ ಬಟ್ಟಲ
ಪಾಲಿಂದಿನಿದಾಗೆ ಕಿವಿಗೆ ಪಾಲ್ಗುಡಿಯದೆ ಮು
ನ್ನಾ ಲಲನೆಯ ಮುಗ್ಧೋಕ್ತಿಯ
ನಾಲಿಸಿದೆಂ ಮುದದಿನೆಂದನುಮೆಗೆ ಮಹೇಶಂ ೮೫

ಪಾಲಂ ತಂದನುದಿನಮಾ
ಬಾಲೆ ಪೊದಳ್ದಿಂಟೆ ಗಿರೀಶನೆಱೆದೈದುಗುಮಾ
ತ್ಮಾಲಯಕೆ ಮುಗ್ಧಭಕ್ತಿಸ
ಮಾಲಂಬಿತ ಚಿತ್ತೆ ಮತ್ತಮಿಂತೊಂದು ದಿನಂ ೮೬

ಬೇಱೂರ್ಗೆ ಪೋದ ಪಿತನಾ
ದಾರಿಯೊಳೈತರುತೆ ಬಱಿಯ ಬಟ್ಟಲ್ವಿಡಿದಂ
ದೋರಂತೆ ಬರ್ಪ ಸುತೆಯಂ
ಸಾರೆಯೊಳೀಕ್ಷಿಸುತೆ ನಾಡೆ ಕೆರಳ್ದಿಂತೆಂದಂ ೮೭

ಎಲೆ ತರುವಲಿ ಬಟ್ಟಲ ಪಾ
ಲ್ನೆಲಕೊಕ್ಕುದೊ ನೀನೆ ಪೀರ್ದೆಯೋ ಪೇಳಿದನು
ಕ್ಕಲಿಸದೊಡನಾಡಿಗಳ್ಗೆಂ
ನಲಿದೆಱೆದೆಯೊ ಬಱಿಯ ಬಟ್ಟಲಿರ್ದುದೆ ಕರದೊಳ್ ೮೮

೮೫. (ಆಗ) ಪರಮೇಶ್ವರನು ಪಾರ್ವತೀದೇವಿಗೆ ಹುಡಿಗೆಯ ಮೃದುವಾದ ಮಾತುಗಳು, ಬಟ್ಟಲಿನಲ್ಲಿದ್ದ ಹಾಲಿಗಿಂತಲೂ ಕಿವಿಗೆ ಮಧುರವಾದುವಾದ್ದರಿಂದ, ಹಾಲನ್ನು ಕುಡಿಯದೆ ಮೊದಲು ಆ ಹುಡಿಗೆಯ ಮುಗ್ಧವಾದ ಮಾತುಗಳನ್ನು ಸಂತೋಷದಿಂದ ಕೇಳಿದೆನು ಎಂದನು. ೮೬. ಅನಂತರ ಪ್ರತಿದಿವಸವೂ, ಮುಗ್ಧವಾದ ಭಕ್ತಿಯಿಂದ ಕೂಡಿದ ಮನಸ್ಸುಳ್ಳ ಆ ಚಿಕ್ಕ ಹುಡುಗಿಯು, ಹಾಲನ್ನು ತರುತ್ತ ಪರಮೇಶ್ವರನು ಕುಡಿಯುವಂತೆ (ಅವನಿಗೆ) ಸಮರ್ಪಿಸುತ್ತ ತನ್ನ ಮನೆಗೆ ಹೋಗುತ್ತಿದ್ದಳು. ಈ ರೀತಿ (ಸಮರ್ಪಿಸಿ ಹೋಗುವಾಗ) ಒಂದು ದಿವಸ—೮೭. ಬೇರೂರಿಗೆ ಹೋಗಿದ್ದ (ಈ ಹುಡುಗಿಯ) ತಂದೆಯು ಆ ದಾರಿಯಲ್ಲಿ ಬರುತ್ತ ಹಾಲಿಲ್ಲದ ಬರಿಯ ಬಟ್ಟಲನ್ನು ಹಿಡಿದುಕೊಂಡು ಆ ದಿನ ಉಲ್ಲಾಸದಿಂದ ಬರುತ್ತಿರುವ ಮಗಳನ್ನು ಸಮೀಪದಲ್ಲಿಯೇ ಕಂಡು ವಿಶೇಷವಾಗಿ ಕೋಪಗೊಂಡು ಹೀಗೆ ಹೇಳಿದನು : ೮೮. ಎಲೈ ತಬ್ಬಲಿ ಮಗಳೇ ! ಈ ಬರಿಯ ಬಟ್ಟಲು ಕಯ್ಯಲ್ಲಿದೆ ; ಬಟ್ಟಲಿನಲ್ಲಿದ್ದ ಹಾಲು ನೆಲಕ್ಕೆ ಸುರಿದುಹೋಯಿತೋ ! (ಅಥವಾ) ನೀನೇ ಕುಡಿದುಬಿಟ್ಟೆಯೋ ! ಸಂತೋಷದಿಂದ ಒಡನಾಡಿಗಳಾದ ಹುಡುಗಿ

ವ॥ ಎಂದಾಗ್ರಹಿಸಿ ಜನಕಂ ನುಡಿಯೆ ಬಿಗುರ್ತು ನಿಂದು—

ನೀಂ ಬೆಸಸಿದಂತೆ ಬಟ್ಟ
ಲ್ದುಂಬಿ ಸುಧಾರಸಮನೊಯ್ದು ಮುಂದಿಡೆ ಸವಿದಂ
ತ್ರ್ಯಂಬಕನೆಲೆ ಜನಕ ಬಳಿ
ಕ್ಕಂ ಬಱುವಟ್ಟಲನೆ ಕೊಂಡು ಬಂದಪೆನೀಗಳ್ ೮೯

ಅನುದಿನಮಿಂತಾರೋಗಿಪ
ನಿನಿವಾಲಂ ಶೂಲಿ ನನ್ನಿ ತೊವಳಲ್ಲೆನೆ ತ
ಜ್ಜನಕಂ ಪಾಲಂ ಶಿವನು
ಣ್ಬನೆ ಪುಸಿಪುಸಿಯೆಂದು ತನ್ನೊಳಂದಿಂತೆಂದಂ ೯೦

ಅತಿವೃದ್ಧಭಕ್ತತತಿ ಸಂ
ತತಮುಂ ಪ್ರಾರ್ಥಿಸಿದೊಡುಣ್ಬುದದು ದುರ್ಲಭಮಿ
ಸಿತಿಗಳನೇನುಮನಱಿಯದ
ಮತಿರಹಿತೆಯ ಮಾತುಗೇಳ್ದು ಪಾಲ್ಗುಡಿದಪನೇ ೯೧

ವ॥ ಎಂದು ಬಗೆಯುತ್ತುಂ ಶಿವಂಗಿವಳ್ಪಾಲ್ಗುಡಿ[1]ಪುದಂ ನಾಳೆ ನೋಳ್ಪೆನೆಂದು ನಿರ್ಧರಿಸಿ ಮಗಳ್ಗೂಡಿ ನಿಜಗೃಹಮಂಬೊಕ್ಕಿರ್ದು ಮಱುದಿನದುದಯದೊಳೆಂದಿನಂತಳೆದ[2] ಪಾಲಂಪೊಂಬಟ್ಟ

ಯರಿಗೆ ಕುಡಿಸಿದೆಯೋ ! ಇದನ್ನು ಮರೆಮಾಚದೆ ತಿಳಿಸು—ವ॥ ಹೀಗೆಂದು ಕೋಪಗೊಂಡು ನುಡಿಯಲಾಗಿ (ಅವಳು) ಭಯಗೊಂಡು ನಿಂತು—೮೯. ಅಪ್ಪಾ ತಂದೆಯೇ, ನೀನು ಅಪ್ಪಣೆ ಮಾಡಿದ ಹಾಗೆ ಹಾಲನ್ನು ಬಟ್ಟಲಿನ ತುಂಬ ತುಂಬಿಕೊಂಡು ಹೋಗಿ, ಮುಂದೆ ಇಡಲು ಆ ತ್ರಿನೇತ್ರನು (ಪರಶಿವನು) ಕುಡಿದನು. ಆದ್ದರಿಂದ ಈಗ (ನಾನು) ಬರಿದಾದ ಬಟ್ಟಲನ್ನು ತೆಗೆದುಕೊಂಡು ಬರುತ್ತಿದ್ದೇನೆ (ಎಂದಳು). ೯೦. ಪ್ರತಿದಿನವೂ ಈ ರೀತಿಯಲ್ಲಿ ಆ ಪರಮೇಶ್ವರನು ಮಧುರವಾದ (ನಾನು ಒಯ್ದ ಆ) ಹಾಲನ್ನು ಸ್ವೀಕಾರ ಮಾಡುವನು ; ಇದು ನಿಶ್ಚಯ ; ಸುಳ್ಳಲ್ಲ ಎನ್ನಲು ಅವಳ ಆ ತಂದೆಯು ಶಿವನು ಹಾಲನ್ನುಣ್ಣುವನೇ ? ಸುಳ್ಳು ಸುಳ್ಳು ! ಎನ್ನುತ್ತ ಆಗ ತನ್ನಲ್ಲಿಯೇ ಈ ರೀತಿ ಹೇಳಿಕೊಂಡನು : ೯೧. ಈ ವಿಷಕಂಠನಾದ ಶಿವನು ಅತ್ಯಂತ ವೃದ್ಧರಾದ ಭಕ್ತರ ಸಮೂಹವು ಸತತ ಪ್ರಾರ್ಥನೆ ಮಾಡಿಕೊಂಡರೂ ಕೂಡ (ಈ ರೀತಿ) ಪ್ರಸಾದ ಸ್ವೀಕರಿಸುವುದು ದುರ್ಲಭವಾಗಿರುವಾಗ ಏನನ್ನೂ ತಿಳಿಯದ ಬುದ್ಧಿಯಿಲ್ಲದ (ಈ) ಹುಡುಗಿಯ ಮಾತನ್ನು ಕೇಳಿ ಹಾಲನ್ನು ಕುಡಿಯುವನೇ ? ವ॥ ಹೀಗೆಂದು ಯೋಚನೆ ಮಾಡುತ್ತ, ಶಿವನಿಗೆ ಇವಳು ಹಾಲು ಕುಡಿಸುವುದನ್ನು ನಾಳೆ (ನಾನು) ನೋಡುತ್ತೇನೆ. ಎಂದು ನಿರ್ಧಾರ ಮಾಡಿಕೊಂಡು. ತನ್ನ ಮನೆಯನ್ನು ಪ್ರವೇಶಿಸಿದನು. ಮರುದಿವಸ ಬೆಳಗಿನ ಸಮಯದಲ್ಲಿ ಎಂದಿನಂತೆ ಅಳತೆ ಮಾಡಿದ ಹಾಲನ್ನು ಬಂಗಾರದ ಬಟ್ಟಲಲ್ಲಿ

---

1 + ಯಿ(ಮು, ಅ) 2 ದು(ಮು)

ಲ್ದೀವಿ ತಳೆದ ನಂದನೆಯುಂ ಮುಂದಿಟ್ಟೀಳ್ತಂದು ಶಿವದೇವಂ ಶಿವನಿದಿರೊಳ್ನಿಂದು ನಿರೀಕ್ಷಿಸುತ್ತಿರೆ ಕೊಡಗೂಸು ಮೃಡಂಗೆಱಗಿ ಪಾಲಂ ಮುಂದಿಟ್ಟು ಕೈಮುಗಿದಾರೋಗಿಪುದೆಂದು ಬಿನ್ನಪಂಗೆಯ್ಯೆ—

ಹರನಾ ಭಕ್ತಿಯ ಮಹಿಮೆಯ
ಪರಿಯಂ ಧರೆಗಱುಪಲೆಂದು ಪಾಲ್ಗುಡಿಯದೆ ಸೈ
ತಿರೆ ಸುರ್ಕಿ ಸುಗಿದಳಾಗ
ಳ್ತರಳೆ ಪಿತಂ ಕಂಡು ಕಾಯ್ದು ಸುತೆಗಿಂತೆಂದಂ ೯೨

ಕುಡಿಕುಡಿದು ನೀನೆ ಸುಧೆಯುಂ
ಮೃಡನೀಂಟುಗುಮೆಂದು ನುಡಿದೆ ಪುಸಿಯುಂ ನಿನ್ನಂ
ಕಡಿದಿಕ್ಕದೆ ಮಾಣ್ಬೆನೆ ಕೇ
ಳ್ಕಡುಪಾತಕಿಯೆಂದು ತಂದೆಯುಱೆಯಟ್ಟಲೊಡಂ ೯೩

ಹಾ ಮಹೇಶ್ವರ ಹಾ ಮದೀಶ್ವರ ನೀನೆ ಸದ್ಗತಿ ಕಾವುದೆಂ
ದಾ ಮಹಾಭಯಕಂಪಿತಾಂಗಿಯೊಱಲ್ದಿ ಬಾಯ್ವಿಡೆ ಬೇಗದಿಂ
ಸೋಮಶೇಖರನಂಜದಿರ್ತನುಜಾತೆಯೆಂದಭಯಂಗುಡು
ತ್ತಾ ಮನೋಜ್ಞಸುಧಾರಸಂಗುಡಿದಂ ಕೃಪಾನಿಧಿ ಶಂಕರಂ ೯೪

ತುಂಬಿ ಕೈಯಲ್ಲಿ ಹಿಡಿದ ಮಗಳನ್ನು ಆ ಶಿವದೇವನು ಮುಂದೆ ಮಾಡಿಕೊಂಡು, ಶಿವಾಲಯಕ್ಕೆ ಬಂದನು. (ಅವನು) ಶಿವನ ಎದುರಿನಲ್ಲಿಯೇ ನಿಂತು ನೋಡುತ್ತಿರಲಾಗಿ, ಕೊಡಗೂಸು ಶಿವನಿಗೆ ನಮಸ್ಕರಿಸಿ, ಹಾಲಿನ ಬಟ್ಟಲನ್ನು ಮುಂದೆ ಇಟ್ಟು ಕೈಮುಗಿದು ಕುಡಿಯಬೇಕು ಎಂದು ವಿಜ್ಞಾಪಿಸಿಕೊಳ್ಳಲು—೯೨. ಪರಮೇಶ್ವರನು ಈ ಭಕ್ತಿಯ ಮಹಿಮೆಯನ್ನು ಭೂಮಿಯ ಜನಕ್ಕೆ ತಿಳಿಸಬೇಕೆಂದುಕೊಂಡು, ಹಾಲನ್ನು ಕುಡಿಯದೆ ಸುಮ್ಮನೆ ಇರಲಾಗಿ, ಆ ಹುಡುಗಿಯು ಆಗ ಸಂಕೋಚಗೊಂಡು, ಭಯದಿಂದ ಕೂಡಿದಳು. ತಂದೆಯು (ಇದನ್ನು) ಕಂಡು, ಕೋಪದಿಂದ ಕೂಡಿದವನಾಗಿ ಮಗಳಿಗೆ ಹೀಗೆ ಹೇಳಿದನು : ೯೩. 'ಕಡುಪಾಪಿನಿಯೇ, (ದಿನದಿನವೂ) ನೀನೇ ಹಾಲನ್ನು ಕುಡಿದು ಕುಡಿದು, ಪರಮೇಶ್ವರನು ಕುಡಿಯುವನೆಂದು ಸುಳ್ಳು ಹೇಳಿದೆಯಾ ! ಕೇಳು : ನಿನ್ನನ್ನು ಕಡಿದುಹಾಕದೆ ಬಿಡುವುದಿಲ್ಲ' ಎಂದು (ಆ) ತಂದೆಯು (ಮಗಳನ್ನು) ಅಟ್ಟಿಸಿ ಕೊಂಡು ಬರಲು, ಆ ಕೂಡಲೆ—೯೪. ಹಾ ! ಮಹೇಶ್ವರನೇ ! ಹಾ ! ನನ್ನ ಸ್ವಾಮಿಯೇ ! ನೀನೇ ನನಗೆ ಸದ್ಗತಿ ರಕ್ಷಿಸು ಎಂದು ಅತ್ಯಂತ ಭಯದಿಂದ ನಡುಗು ತ್ತಿರುವ ದೇಹವುಳ್ಳ ಆ ಕೊಡಗೂಸು ಬಾಯಿಬಿಟ್ಟು ಅಳುತ್ತಿರಲು ಶೀಘ್ರವಾಗಿ ಚಂದ್ರಶೇಖರನು—'ಮಗಳೇ, ಭಯಪಡಬೇಡ' ಎಂದು ಅಭಯವನ್ನು ಕೊಡುತ್ತ ಕೃಪಾ

ಆ ಕೊಡಗೂಸಂ ಕರುಣಾ
ಲೋಕದಿ ನಡೆನೋಡಿ ತೆಗೆದು ಬಿಗಿದಪ್ಪುತೆ ಗೌ
ರೀಕಾಂತಂ ತನ್ನೊಡಲೊ
ಳ್ಜೋಕೆಯಿನೊಳಪೊಗಿಸೆ ಪೊಗುವ ಮಗಳಂ ಜನಕಂ ೯೫

ಕಂಡೆಲೆಲೆ ಪೋಗದಿರೆನುತುಂ
ಚಂಡಿಕೆವಿಡಿದೆಳೆಯೆ ಶಿಖಿಯೆ ಪೊಱಗುಳಿದಿರೆ ಭೂ
ಮಂಡಲಮಚ್ಚರಿವಡೆ ಮುಂ
ಕೊಂಡಾ ಕೊಡಗೂಸು ಲಿಂಗದೊಳವೊಕ್ಕಿರ್ದಳ್ ೯೬

ಅಮರ್ದಮಳ ಮುಗ್ಧಭಕ್ತಿಯೊ
ಳಮರ್ದಂ ತನಗಿತ್ತ ಮುಗ್ಧಭಕ್ತೆಗೆ ಸೊಗಯಿ
ಪ್ಪಮರ್ದನೊಸೆದಿತ್ತನಘಹರ
ನಮರ್ದುಣಿಗಳ್ಪೊಗಳೆ ನಲಿಯೆ ಶರಣಸಮೂಹಂ ೯೭

ಷಣ್ಮಾಸಕೊರ್ಮೆ ಲಿಂಗದೊ
ಳುಣ್ಮಿದ ಕುಂತಳಮನೀಗಳುಂ ಕತ್ತರಿಪ
ರ್ಪೆಣ್ಮಣಿಗಿಂತೆಸಗಿದನುಮೆ
ಯಾಣ್ಮಂ ತಾನಿದು ಸಮಸ್ತ ಭುವನಪ್ರಥಿತಂ ೯೮

ನಿಧಿಯಾದ ಆ ಶಂಕರನು ಆ ಮನೋಹರವಾದ ಹಾಲನ್ನು ಕುಡಿದನು. ೯೫–೯೬. ಪಾರ್ವತೀಪತಿಯಾದ ಈಶ್ವರನು ಆ ಕೊಡಗೂಸನ್ನು ದಯೆಯಿಂದ ಕೂಡಿದ ಕಣ್ಣಿನಿಂದ ಚೆನ್ನಾಗಿ ನೋಡುತ್ತ ಬರಸೆಳೆದು ಗಟ್ಟಿಯಾಗಿ ಎದೆಗವಚಿಕೊಂಡು, ತನ್ನ ಶರೀರದಲ್ಲಿ ಜೋಕೆಯಾಗಿ ಒಳಗೆ ಹೊಗಿಸಿಕೊಂಡನು. (ಶಿವನ ದೇಹದಲ್ಲಿ) ಇಳಿಯುತ್ತಿರುವ ಮಗಳನ್ನು ತಂದೆಯು ಕಂಡು 'ಎಲೆಲೇ ! ಹೋಗಬೇಡ' ಎನ್ನುತ್ತ ತಲೆಗೂದಲನ್ನು ಹಿಡಿದು ಎಳೆದನು. ಕೂದಲೇ ಹೊರಗೆ ಉಳಿಯಲಾಗಿ ಭೂಮಂಡಲವೇ ಆಶ್ಚರ್ಯಗೊಂಡಿತು. ಕೊಡಗೂಸು ಶೀಘ್ರವಾಗಿ ಲಿಂಗತನುವಿನೊಳಗೆ ಹೊಕ್ಕು ಇದ್ದಳು. ೯೭. ಪಾಪನಾಶಕನಾದ ಶಿವನು ದೇವತೆಗಳು ಹೊಗಳುವಂತೆ, ಶರಣರುಗಳ ಸಮೂಹವು ನಲಿಯುವ ಹಾಗೆ, ಶ್ರೇಷ್ಠವಾದ ಮುಗ್ಧ ಭಕ್ತಿಯಿಂದ ತನಗೆ ಹಾಲನ್ನು ಕೊಟ್ಟು (ಕುಡಿಸಿದ) ಆ ಮುಗ್ಧಳಾದ ಭಕ್ತೆಗೆ ಶೋಭಿಸುವ ಮೋಕ್ಷವನ್ನು ಪ್ರೀತಿಯಿಂದ ಕೊಟ್ಟನು. ೯೮. ಆರು ತಿಂಗಳಿಗೊಮ್ಮೆ ಲಿಂಗದಲ್ಲಿ ಉಂಟಾಗುವ (ಹುಟ್ಟಿಬೆಳೆಯುವ) ತಲೆಯ ಕೂದಲುಗಳನ್ನು ಈಗಲೂ ಕತ್ತರಿಸುತ್ತಿದ್ದಾರೆ. ಪಾರ್ವತೀಪತಿಯು ಸ್ತ್ರೀರತ್ನವಾದ ಆ ಕೊಡಗೂಸಿಗೆ ಈ ಪೂರ್ವದಲ್ಲಿ ವಿವರಿಸಿದ ರೀತಿಯಲ್ಲಿ (ಮೋಕ್ಷ ಸುಖವನ್ನು) ಉಂಟುಮಾಡಿದನು. ಈ ವಿಷಯವು ಎಲ್ಲಾ ಲೋಕದಲ್ಲೂ ಪ್ರಸಿದ್ಧವಾದು

ವ॥ ಅಂತುಮಲ್ಲದೆಯುಂ—

[ಬಿಜ್ಜಮಹಾದೇವಿಯ ಕಥೆ]

ಹರಚರಣಸ್ಮರಣಾಂತಃ
ಕರಣೆ ಗುಣಾಭರಣೆ ಬಿಜ್ಜಮಾದೇವಿವೆಸ
ರ್ಕರಮೆಸೆವ ಭಕ್ತೆಯೊರ್ವ
ಳ್ಧರಣೀತಳದೊಳ್ನೆಗಳ್ತೆವೆತ್ತೆಸೆದಿರ್ದಳ್ ೯೯

ವ॥ ಆ ಮುಗ್ಧಭಕ್ತೆಯೊಂದು ದಿವಸಂ

ನಟ್ಟ ನಿರೀಕ್ಷಣೆ ಕದಪಿನೊ
ಳಿಟ್ಟ ಕರಂ ಕಂದಿದಾನನಂ ಕದಡಿ ಹಸಂ
ಗೆಟ್ಟ ಮನಮಿರೆ ವಿಷಾದಂ
ಪುಟ್ಟೆ ಕರಂ ಶಂಕರಂಗವಳ್ಚಿಂತಿಸಿದಳ್ ೧೦೦

ಸತಿಯುಂ ಸುತರುಂ ಹಿತರುಂ
ನುತ ವಿನಿಯೋಗದರುಮೊಳರಿಳಾಧರತನಯಾ
ಪತಿಗಾತ್ಮಜನನಿಯಿಲ್ಲ
ದ್ಭುತಮಿದು ತಾನೊಗೆದನೆಂತೊ ತಾಯಿಲ್ಲದವಂ ೧೦೧

ಭೂತಪತಿಯೊಗೆವುದುಂ ತ
ನ್ಮಾತೆ ವಲಂ ಮಡಿದಳಕ್ಕುಮಲ್ಲದೊಡಾತಂ
ಪ್ರೇತಾವಾಸದೊಳಾಡುವ
ಭೂತಂಗಳ ಕೂಡೆ ವಿಹರಣಂ ಗೆಯ್ದಪನೆ ೧೦೨

ದಾಗಿದೆ. ವ॥ ಇದೂ ಅಲ್ಲದೆ—**ಬಿಜ್ಜಮಹಾದೇವಿಯ ಕಥೆ :** ೯೯. ಪರಶಿವನ ಪಾದಧ್ಯಾನದಿಂದ ಕೂಡಿದ ಮನಸ್ಸುಳ್ಳವಳೂ, ಸದ್ಗುಣಗಳೇ ಆಭರಣವಾಗಿ ಉಳ್ಳವಳೂ ಆದ ಬಿಜ್ಜಮಹಾದೇವಿ ಎಂಬ ಹೆಸರು ಚೆನ್ನಾಗಿ ಶೋಭಿಸುವಂಥ ಓರ್ವ ಶಿವಭಕ್ತೆಯು ಈ ಭೂಮಂಡಲದಲ್ಲಿ ಪ್ರಸಿದ್ಧಿ ಪಡೆದು ಶೋಭಿಸುತ್ತ ಇದ್ದಳು. ವ॥ ಆ ಮುಗ್ಧಭಕ್ತೆಯು ಒಂದು ದಿವಸ—೧೦೦. ಕೆನ್ನೆಯ ಮೇಲೆ ಕೈಯಿಟ್ಟುಕೊಂಡು, ಕಾಂತಿ ಹೀನವಾದ ಮುಖದಿಂದ ಕೂಡಿದವಳಾಗಿ, ಅಶಾಂತಿಯಿಂದ ಒಪ್ಪುಗೆಟ್ಟ ಮನಸ್ಸಿನವಳಾಗಿ, ವಿಷಾದಗೊಂಡು, ಆ ಬಿಜ್ಜಮಹಾದೇವಿಯು ನಟ್ಟದೃಷ್ಟಿಯಿಂದ ಕೂಡಿದವಳಾಗಿ ಈಶ್ವರನ ವಿಷಯದಲ್ಲಿ ಚಿಂತೆಗೊಳಗಾದಳು. ೧೦೧. ಪರ್ವತರಾಜ ಪುತ್ರಿಯ ಪತಿಯಾದ ಪರಮೇಶ್ವರನಿಗೆ ಪತ್ನಿಯೂ, ಮಕ್ಕಳೂ, ಬಂಧುಗಳೂ, ಶ್ಲಾಘ್ಯರಾದ ಸೇವಕರೂ ಇದ್ದಾರೆ. (ಆದರೆ) ತಾಯಿ ಮಾತ್ರ ಇಲ್ಲ. ತಾಯಿಯಿಲ್ಲದ ಇವನು ಹೇಗೆ ಜನಿಸಿದನೋ ? ಇದು ಅದ್ಭುತ ! ೧೦೨. ಆ ಪರಶಿವನು ಹುಟ್ಟಿದೊಡನೆಯೇ ತಾಯಿಯು ಸತ್ತಿರಬೇಕು ! ಇದು ನಿಶ್ಚಯ ! ಹಾಗಲ್ಲದಿದ್ದರೆ, ಆತನು ಶ್ಮಶಾನದಲ್ಲಿ

ಜಡೆಗಟ್ಟಿದ ಶಿರಮುಂ ಕೆಂ
ಪಡರ್ದಕ್ಷಿಯುಮ್ಮೈದೆ ಧೂಳಿವಡೆದಂಗಮುಮಿ
ರ್ಪುಡುಗಿದ ಮೆಯ್ಯುಮದೇಂ ಕ
ನ್ನಡಿಸವೆ ಕರಿಮುಖಪಿತಂಗೆ ತಾಯಿಲ್ಲದುದಂ ೧೦೩

ಜನನಿಯುಳ್ಳೊಡೆ ಸರ್ಪನಾಭರಣಂಗಳಂ ತಲೆಮಾಲೆಯುಂ
ತನಯನಂ ತೊಡಲೀವಳೇ ಬಿಸಗೊಂಬುದಂ ತಿರಿದುಣ್ಬುದಂ
ಮುನಿದು ಮಾಣಿಸದಿರ್ಪಳೇ ಕರಿಕೃತ್ತಿಯುಂ ಪುಲಿಸಮ್ಮಮಂ
ತನುಗೆ ತಾಂ ಪೊದೆವಂತೆ ಮಾಳ್ಪಳೆ ಬುದ್ಧಿಗೆಟ್ಟಿರೆ ತಾಳ್ವಳೇ ೧೦೪

ಮನೆ ಮನೆವಾಳ್ತೆಯನೇನಂ
ನೆನೆಯದೆ ತೊಡೆಜೆಡೆಯೊಳಾಗಳುಂ ಕುಳ್ಳಿರ್ದಾ
ವನಿತೆಯರಿರವಿಂಗಸಮಾ
ಕ್ಷನ ತಾಯ್ತಾನುಳ್ಳೊಡೆಂತುಮೇಂ ಸೈರಿಪಳೇ ೧೦೫

ಕಲಿ ಪಾರ್ಥಂ ಧನುವಿಂದೆ ಪೊಯ್ದನೊದೆದಂ ಕಾಲಿಂ ಪುಳಿಂದಂ ಮಹಾ
ಬಲಸಾಂಖ್ಯಂ ಬಿಱುಗಲ್ಲಳಿಂದೆ ಬಿಡದಿಟ್ಟಂ ಬಾಣನೋವೋವೊ ಬಾ
ಗಿಲ ಕಾಪಿಂಗಿರವೇಳ್ದು ನೇಮಿಸಿದನಂದಾ ನಂಬಿ ದೂದಟ್ಟಿ ಕಾ
ಳ್ಗಿಲಸಂ ಗೈಸಿದನಯ್ಯೊ ದೇಸಿಗನಿವಂ ತಾಯುಳ್ಳೊಡಿಂತಪ್ಪನೇ ೧೦೬

ಆಡುವ ಭೂತಗಳೊಡನೆ ಕ್ರೀಡಿಸುತ್ತಿದ್ದನೇ ? ೧೦೩. ಆನೆಯ ಮುಖದ ಗಣಪತಿಯ ಆ ತಂದೆಗೆ ಜಡ್ಡುಗಟ್ಟಿದ ತಲೆಯೂ, ಕೆಂಪಾದ ಕಣ್ಣೂ, ಚೆನ್ನಾಗಿ ಧೂಳಿನಿಂದ ಮುಸುಕಿದ ಶರೀರವೂ, ನೀರು ಕಾಣದ ಮೈಯೂ-ಇವೇ ತಾಯಿ ಇಲ್ಲದುದನ್ನು ಪ್ರಕಾಶಪಡಿಸುವು ದಿಲ್ಲವೇ ? ೧೦೪. ತಾಯಿಯು ಇದ್ದಿದ್ದರೆ, ಸರ್ಪದ ಆಭರಣಗಳನ್ನೂ, ರುಂಡಗಳ ಮಾಲೆಯನ್ನೂ, ತನ್ನ ಮಗನು ತೊಟ್ಟುಕೊಳ್ಳುವುದಕ್ಕೆ ಬಿಡುತ್ತಿದ್ದಳೇ ? ವಿಷ ಕುಡಿ ಯುವುದನ್ನೂ, ತಿರಿದು ತಂದು ಊಟಮಾಡುವುದನ್ನೂ ಕೋಪಮಾಡಿ ಬಿಡಿಸದೆ ಬಿಡು ತ್ತಿದ್ದಳೇ? ಆನೆಯ ಚರ್ಮವನ್ನೂ, ಹುಲಿಯ ತೊಗಲನ್ನೂ ದೇಹಕ್ಕೆ ಹೊದ್ದುಕೊಳ್ಳುವ ಹಾಗೆ ಅವಳು ಮಾಡುತ್ತಿದ್ದಳೇ ? ಮತಿಹೀನನಾಗಿ ಇರುವುದಕ್ಕೆ ತಡೆಯುತ್ತಿದ್ದಳೇ ? ೧೦೫. ಮನೆಯ ಸಂಸಾರದ ವ್ಯಾಪಾರವನ್ನೇನನ್ನೂ ಮನಸ್ಸಿಗೆ ಹಚ್ಚಿಕೊಳ್ಳದೆ, ತೊಡೆಯ ಮೇಲೆ ಕುಳಿತ ಪಾರ್ವತಿಯ, ಜಡೆಯಲ್ಲಿ ಕುಳಿತ ಗಂಗೆಯ (ಆ) ರೀತಿಗೆ ಶಿವನಿಗೆ ತಾಯಿಯಿದ್ದಿದ್ದರೆ ಹೇಗಾದರೂ ಸೈರಿಸುತ್ತಿದ್ದಳೇನು ? (ಸದಾ ಇವರು ತೊಡೆ ಜಡೆಗಳಲ್ಲಿ ಕುಳಿತು ಹಿಂಸೆ ಮಾಡುವುದಕ್ಕೆ ತಾಯಿಯು ಸೈರಿಸುತ್ತಿದ್ದಿಲ್ಲವೆಂದು ಭಾವ). ೧೦೬. ಶೂರನಾದ ಅರ್ಜುನನು ಬಾಣದಿಂದ ಹೊಡೆದನು. ಬೇಡರಕಣ್ಣಪ್ಪಯ್ಯನು ಕಾಲಿನಿಂದ ಒದ್ದನು. ಅತ್ಯಂತ ಬಲಶಾಲಿಯಾದ ಸಾಂಖ್ಯತೊಂಡನೆಂಬುವನು ತಪ್ಪದೆ ಬಿರುಗಲ್ಲುಗಳಿಂದ ಹೊಡೆದನು. ಓಹೋ ! (ಆ) ಬಾಣಾಸುರನು ತಪ್ಪದೆ ಬಾಗಿಲು ಕಾಯುವ ಕಾರ್ಯಕ್ಕೆ ನೇಮಿಸಿದನು. ಅಂದು ಆ ನಂಬಿಯಣ್ಣನು

ತನಿವಾಲಿಂ ಘೃತದಿಂ ಕರು
ಳೆನಸುಂ ಬಾಲ್ಯದೊಳೆ ನಾಂದುದಿಲ್ಲದಱಿಂ ತಾ
ನೆನಿತು ತಿರಿದುಂಡೊಡಂ ಪಸಿ
ವನುಗೆಡದಿರೆ ಬಸಿರ್ಗೆ ಬಿಟ್ಟಿಯೆಸಗಿದನಲ್ತೆ ೧೦೭

ವ॥ ಎಂದು ಪಲವಂದದಿಂ ಪಲುಂಬಿ ಪಳಯಿಸಿ ಜನನಿಯಿಲ್ಲದ ದೇಸಿಕಂಗಾನಾದೊಡಂ ಜನನಿಯಾಗಿ ಪೊರೆದಪೆನೆಂದು ನೇಹದಿಂ ನೆನೆದು ಶಿಶುಭಾವದಿಂ ನಿಜಲಿಂಗಮನವಲೋಕಿಪುದುಮನಿತಱೊಳಾ ಲಿಂಗಮಾ ಭಕ್ತೆಯನಿಳೆಯೊಳ್ಮೆಱೆಯಲೆಳಸಿ ಶಿಶುರೂಪನಾಳ್ದು ತೊಡೆಯೆಡೆಯೊಳ್ಪಟ್ಟಿರೆ ಕಂಡು ನನೆಕೊನೆವೋಗಿ ಮುಟ್ಟಿ ಮುದ್ದಿಸುತ್ತಮಿರೆಯಿರೆ—

ಅರೆಮುಗಿದ ಕಣ್ಗಳುಂ ಬಿದಿ
ರ್ವರುಣಾಂಘ್ರಿಕರಂಗಳುಂ ವಿರಾಜಿಸೆ ವೀಣಾ
ಸ್ವರದಂತಿರೆ ದನಿ ರೋದಿಪ
ತರುಣಂಗಾ ಜನನಿ ಮೊಲೆಯನೂಡಿದಳಾಗಳ್ ೧೦೮

ಸೇವಕನನ್ನಾಗಿ ಮಾಡಿಕೊಂಡು, ಕೆಟ್ಟ ಕೆಲಸವನ್ನೇ ಮಾಡಿಸಿಕೊಂಡನು. (ಕುಂಟಣಿಗೆಲಸವನ್ನು ಮಾಡಿಸಿಕೊಂಡನು.) ಅಯ್ಯೋ ! ಈ ಶಿವನು ಪರದೇಶಿ. ತಾಯಿಯಿದ್ದಿದ್ದರೆ, ಹೀಗಾಗುತ್ತಿದ್ದನೆ ? ೧೦೭. ಬಾಲ್ಯದಲ್ಲಿ (ತಾಯಿಯಿಂದ ಎರೆಯಲ್ಪಟ್ಟ) ತನಿ ಹಾಲಿನಿಂದ, ತುಪ್ಪದಿಂದ ಇತನ ಕರುಳು ಸ್ವಲ್ಪವೂ ನೆನೆಯಲೇ ಇಲ್ಲ. ಆದ್ದರಿಂದ ಇವನು ಎಷ್ಟೇ ತಿರಿದು ತಂದು ಉಂಡರೂ, ಹಸಿವು ಅಡಗದೆ ಇರಲು, ಹೊಟ್ಟೆಗೋಸ್ಕರ (ಹೊಟ್ಟೆಯ ಹಸಿವಿಗೋಸ್ಕರ) ಬಿಟ್ಟಿಯ ಕೆಲಸವನ್ನು (ದೋಸೆಯ ಪಿಷ್ಟವ್ವೆಗೋಸುಗ) ಮಾಡಿದನಲ್ಲವೇ ? ವ॥ ಹೀಗೆಂದು ಹಲವಾರು ಪ್ರಕಾರದಲ್ಲಿ ಹಂಬಲಿಸಿ, ಅತ್ತು ತಾಯಿಯಿಲ್ಲದ ಈ ಪರದೇಶಿಗೆ ನಾನಾದರೂ ತಾಯಿಯಾಗಿ ಸಂರಕ್ಷಣೆ ಮಾಡುತ್ತೇನೆ ಎಂದು ಪ್ರೀತಿಯಿಂದ ಯೋಚನೆ ಮಾಡಿ, ಲಿಂಗವನ್ನು ಮಗುವೆಂಬ ಭಾವನೆಯಿಂದ ನೋಡಿದಳು. ಅಷ್ಟರಲ್ಲಿ ಆ ಲಿಂಗದೇವನು ಆ ಭಕ್ತೆಯಾದ ಬಿಜ್ಜಮಹಾದೇವಿಯನ್ನು ಭೂಲೋಕದಲ್ಲಿ ಪ್ರಕಾಶಪಡಿಸುವುದಕ್ಕೋಸ್ಕರ ಅಪೇಕ್ಷೆಪಟ್ಟು, ಮಗುವಿನ ಆಕಾರವನ್ನು ಹೊಂದಿ, ತೊಡೆಯ ಮೇಲೆ ಮಲಗಿರಲು, ಬಿಜ್ಜಮಹಾದೇವಿ ಅತ್ಯಂತ ಸಂತೋಷಗೊಂಡವಳಾಗಿ, ಆ ಮಗುವನ್ನು ಮುಟ್ಟಿ ಮುದ್ದು ಮಾಡುತ್ತಿರಲಾಗಿ— ೧೦೮. ಅರ್ಧ ಮುಚ್ಚಿ ಅರ್ಧ ತೆರೆದಿರುವ ಕಣ್ಣುಗಳು ; ಸುತ್ತಲೂ ಚಲಿಸುವ (ಪ್ರಸರಿಸುವ) ಕೆಂಪು ಬಣ್ಣದ ಕೈ ಮತ್ತು ಕಾಲುಗಳು ಶೋಭಿಸುತ್ತಿರಲು, ಧ್ವನಿಯು ವೀಣೆಯ ಶಬ್ದದಂತೆ ಇರಲು, ಅಳುತ್ತಿರುವ ಆ ಮಗನಿಗೆ ಆ ತಾಯಿಯಾದ ಬಿಜ್ಜಮಹಾದೇವಿ ಆಗ ಮೊಲೆಯನ್ನು ಕುಡಿಸಿದಳು.

ತರಿಸಿ ಪೊಸತೊಟ್ಟಿಲಂ ಪ
ಟ್ಟಿರಿಸಿ ಕುಮಾರಕನನದಱ ಮೃದುತಳ್ಪದೊಳಾ
ದರಿಸಿ ನಡೆನೋಡಿ ಪಾಡಿದ
ಳರವಿಂದದಳಾಕ್ಷಿ ಗಾಡಿ ಮಿಗೆ ಮೃದುರವದಿಂ ೧೦೯

ಪಾವನಾತ್ಮಕ ಪನ್ನಗೇಂದ್ರಕಲಾಪ ಜೋ ಜೋ ಚಂದ್ರ ಕ
ಲಾವತಂಸಕ ಚಂಚದುಜ್ವಳರೂಪ ಜೋ ಜೋ
ಚಂಡತಾಂಡವಚಾಲಿತಾಬ್ಜಭವಾಂಡ ಜೋ ಜೋ ದಂಡಿತ
ದಂಡಪಾಣಿ ಫಣೀಂದ್ರಕುಂಡಲಗಂಡ ಜೋ ಜೋ
ಪ್ರಣವಸಾರಸರೋಜರಾಜಮರಾಳ ಜೋ ಜೋ ಮಂಗಳ
ಗುಣಸಮುದ್ರಮುನೀಂದ್ರಸನ್ನುತಿಲೋಲ ಜೋ ಜೋ
ದಕ್ಷಯಾಗಸಮಾಗತಾಮರಮರ್ದಿ ಜೋ ಜೋ ದಂತಿ ತ
ರಕ್ಷು ರಾಕ್ಷಸಕೃತ್ತಿವಸ್ತ್ರ ಕಪರ್ದಿ ಜೋ ಜೋ
ಅಂಬುಜಾಂಬಕಲೋಚನಾಂಬುಜಪಾದ ಜೋ ಜೋ ಪುಷ್ಪಕ
ಳಂಬದರ್ಪವಿಭಂಗ ಜಲ್ಪಿತವೇದ ಜೋ ಜೋ

೧೦೯. ಕಮಲದ ಹೂವಿನ ಎಸಳಿನಂತಹ ಕಣ್ಣುಳ್ಳ ಆ ಬಿಜ್ಜಮಹಾದೇವಿಯು– ನೂತನವಾದ ತೊಟ್ಟಿಲೊಂದನ್ನು ತರಿಸಿ ಕುಮಾರನನ್ನು ಆ ತೊಟ್ಟಿಲಿನಲ್ಲಿ ಮೃದುವಾದ ಹಾಸಿಗೆಯ ಮೇಲೆ ಮಲಗಿಸಿ, ಪ್ರೀತಿಯಿಂದ ಚೆನ್ನಾಗಿ ನೋಡಿ, ವಿಶೇಷವಾಗಿ ಕೋಮಲವಾದ ಮಾತುಗಳಿಂದ (ಜೋಗುಳ) ಹಾಡುತ್ತಿದ್ದಳು. **ಜೋಗುಳ** :– ಪರಿಶುದ್ಧಾತ್ಮವುಳ್ಳವನೇ, ಶ್ರೇಷ್ಠ ಸರ್ಪಗಳ ಆಭರಣವುಳ್ಳವನೇ ಜೋಜೋ ; ಚಂದ್ರಕಳೆಯನ್ನು ಆಭರಣವಾಗಿ ಉಳ್ಳವನೇ, ಥಳಥಳಿಸುವ ಪ್ರಕಾಶಮಾನವಾದ ಆಕಾರವುಳ್ಳವನೇ ಜೋಜೋ ; ಪ್ರಚಂಡವಾದ ತಾಂಡವನೃತ್ಯದಿಂದ ಬ್ರಹ್ಮಾಂಡವನ್ನು ಅಲ್ಲಾಡುವಂತೆ ಮಾಡುವವನೇ ಜೋಜೋ; ಯಮನನ್ನು (ದಂಡಪಾಣಿ) ದಂಡಿಸಿದವನೇ, ಶ್ರೇಷ್ಠವಾದ ಸರ್ಪಗಳ ಕರ್ಣಕುಂಡಲಗಳಿಂದ ಶೋಭಿಸುವ ಕಪೋಲಭಾಗವುಳ್ಳವನೇ ಜೋಜೋ; ಓಂಕಾರಪ್ರಣವನೆಂಬ ಶ್ರೇಷ್ಠವಾದ ಕಮಲಕ್ಕೆ ರಾಜಹಂಸ ಪಕ್ಷಿಯಂತಿರುವವನೇ ಜೋಜೋ ; ಮಂಗಳಕರಗಳಾದ ಸದ್ಗುಣಗಳಿಗೆ ಸಮುದ್ರ ಸ್ವರೂಪನಾದವನೇ, ಮುನೀಶ್ವರರಿಂದ ಮಾಡಲ್ಪಡುವ ಸ್ತೋತ್ರದಲ್ಲಿ ಆಸಕ್ತನಾದವನೇ ಜೋಜೋ ; ದಕ್ಷಬ್ರಹ್ಮನ ಯಾಗಕ್ಕೆ ಬಂದಿದ್ದ ದೇವತೆಗಳನ್ನು ಮರ್ದನ ಮಾಡಿದವನೇ ಜೋಜೋ ; ಗಜಾಸುರ ಮತ್ತು ವ್ಯಾಘ್ರಾಸುರರುಗಳ ಚರ್ಮವನ್ನು ಬಟ್ಟೆಗಳನ್ನಾಗಿ ಧರಿಸಿದವನೇ, ಜಟಾಜೂಟವುಳ್ಳವನೇ ಜೋಜೋ ; ಕಮಲನೇತ್ರನಾದ ವಿಷ್ಣುವಿನ ನೇತ್ರಕಮಲವನ್ನು ಚರಣದಲ್ಲಿ ಉಳ್ಳವನೇ ಜೋಜೋ ; ಪುಷ್ಪಗಳೇ ಬಾಣವಾಗಿ ಉಳ್ಳ ಮನ್ಮಥನ ಅಹಂಕಾರವನ್ನು ನಾಶಪಡಿಸಿದವನೇ,

ವ॥ ಎಂದಿಂತು ಜೋಗುಳಂ ಪಾಡೆ ರೋದನವನುಳಿದೊಯ್ಯನೆ ನಿದ್ರೆಗೆಯ್ದಿರ್ದನಿತಱೊಳಾ ಶಿಶು ವಿಕಸಿತಲೋಚನವಾಗೆ ಕಂಡಾ ಜನನಿ ಸಂತಸಂದಾಳ್ದು ತೆಗೆದು ಬಿಗಿದಪ್ಪಿ ಮೊಲೆಯೂಡಿ ಮುಂಡಾಡಿ ಮುದ್ದಿಸಿ –

ತಿಳಜಾಭ್ಯಂಗವನಳ್ಕಱಿಂ ರಚಿಸಿ ಮಂದೋಷ್ಣಾಂಬುವಿಂ ಮಜ್ಜನಂ
ಗೊಳಿಸುತ್ತಂಕದೊಳಿಟ್ಟು ಕಣ್ಕಿವಿಗಳಂ ಸೈತೂದಿ ದಿವ್ಯಾಂಬರಾಂ
ಚಳದಿಂ ಮೈಯೊರಸುತ್ತೆ ಮೈದಿಗುರನಿಟ್ಟಾಗಳ್ನಿಶಾಚೂರ್ಣದಿಂ
ದಳ[1]ಕಂದೀವಿ ಸುರಕ್ಷೆಯಂ ಪೊರೆದಳಾ ಮಾದೇವಿ ತದ್ಬಾಲನಂ ೧೧೦

ಚಿಣ್ಣನ ಚೆಲ್ವಿಂಗನ್ಯರ
ಕಣ್ಣೆಂಜಲ್ತಾಗೆ ತಾಜಗುಂ ತನುವೆನುತಾ
ಪೆಣ್ಣಾತ್ಮಪದಾಂಗುಷ್ಠದ
ಮಣ್ಣಿಂ ಶಿಶುವಿಂಗೆ ತಿಲಕಮಂ ವಿರಚಿಸಿದಳ್ ೧೧೧

ಪರಿಮಳಿಪ ನವಘೃತದೊಳೊಡ
ವೆರಸುತ್ತಿನಿವಾಲನೆಱೆವುತಂಗುಳಮುಳ್ಳಂ
ಕರದಂಗುಲಿಯಿಂದೊತ್ತುತೆ
ಸರಸಿರುಹಸುಗಂಧಿಯೋವಿದಳ್ಬಾಲಕನಂ ೧೧೨

ವೇದಗಳಿಂದ ಹೊಗಳಿಸಿಕೊಳ್ಳುವವನೇ ಜೋಜೋ ವ॥ ಎಂದು ಈ ರೀತಿಯಲ್ಲಿ ಜೋಗುಳವನ್ನು ಹಾಡಲು ಅಳುತ್ತಿರುವುದನ್ನು ಬಿಟ್ಟು ಮೆಲ್ಲ ನಿದ್ದೆಯನ್ನು ಮಾಡುತ್ತಿದ್ದನು. ಅಷ್ಟರಲ್ಲಿ ಆ ಶಿಶುವು ಕಣ್ಣುಗಳನ್ನು ತೆರೆಯಲು ಆ ತಾಯಿಯು ಕಂಡು ಸಂತೋಷಗೊಂಡು ಬರಸೆಳೆದು ಬಿಗಿಯಾಗಿ ಅಪ್ಪಿಕೊಂಡು, ಮೊಲೆಯನ್ನು ಕುಡಿಸಿ, ಮೈಮೇಲೆ ಕೈಯಾಡಿಸಿ, ತಬ್ಬಿಕೊಂಡು (ಕೈಯಲ್ಲಿ) ತೂಗಾಡುತ್ತ, ಮುತ್ತನ್ನು ಕೊಡುವಳು. ೧೧೦. ಆ ಬಿಜ್ಜಮಹಾದೇವಿಯು ಪ್ರೀತಿಯಿಂದ ತೈಲಾಭ್ಯಂಜನ ಸ್ನಾನವನ್ನು ಸ್ವಲ್ಪ ಬಿಸಿಯಾದ ನೀರಿನಿಂದ ಮಾಡಿಸುತ್ತ, ತೊಡೆಯ ಮೇಲೆ ಮಲಗಿಸಿಕೊಂಡು, ಕಣ್ಣನ್ನೂ ಕಿವಿಯನ್ನೂ ಊದಿ, ಶ್ರೇಷ್ಠವಾದ ಶುಭ್ರ ವಸ್ತ್ರದಿಂದ ಮೈಯನ್ನು ಒರೆಸಿ, ಆಗ ಅರಿಸಿಣದ ಧೂಳಿನಿಂದ ಮೈಗೆ ಲೇಪನವನ್ನಿಟ್ಟು, ಪವಿತ್ರ ಭಸ್ಮವನ್ನು ಹಣೆಗೆ ಧರಿಸಿ ಆ ಬಾಲಕನನ್ನು ಸಾಕುತ್ತಿದ್ದಳು. ೧೧೧. ಆ ಬಾಲಕನ ಚೆಲುವಿಕೆಗೆ ಬೇರೆಯವರ ದೃಷ್ಟಿದೋಷವು ತಗುಲಿದರೆ ದೇಹವು ಕುಂದುವುದೆಂದುಕೊಂಡು, ಆ ಬಿಜ್ಜಮಹಾದೇವಿಯು ತನ್ನ ಕಾಲಿನ ಹೆಬ್ಬೆಟ್ಟಿನ ಮಣ್ಣಿನಿಂದ ಹಣೆಗೆ ತಿಲಕವನ್ನಿಡುತ್ತಿದ್ದಳು. ೧೧೨. ಕಮಲದ ಸುವಾಸನೆಯಂತೆ ಅಂಗ ಪರಿಮಳವುಳ್ಳ ಆ ಬಿಜ್ಜಮಹಾದೇವಿಯು ಕಂಪಿನಿಂದ ಕೂಡಿದ ಹೊಸ ತುಪ್ಪದೊಡನೆ ಸಿಹಿಯಾದ ಹಾಲನ್ನು ಸೇರಿಸುತ್ತ ಕುಡಿಸುತ್ತಿದ್ದಳು. ಗಂಟಲಿನ ಗುಪ್ಪೆಯನ್ನು ಕೈಬೆರಳುಗಳಿಂದ

1 ಳಿ(ಮು, ಚ, ಜ, ಅ, ಗ)

ನಗಿಸುತ್ತಳ್ಕೆಯಿನೊಲ್ದು ಜಕ್ಕುಲಿಸಿ ಮುದ್ದಂ ಬೇಡುತುಂ ವಕ್ತ್ರಮಂ
ನಗೆಗಣ್ಣಿಂ ನಡೆನೋಡುತುಂ ಮುದಮನಾಳ್ದೊಪ್ಪುತ್ತೆ ಸಂಪ್ರೀತಿ ಕೈ
ಮಿಗೆ ಬಿಣ್ಪಿಂ ತೊರೆದೆಚ್ಚುಪಾಯ್ವ ಮೊಲೆವಾಲಂ ತೀವಿ ಬಾಯ್ಗೂಡುತುಂ
ಬಗೆವೆರ್ಚುತ್ತೆಳೆಗೂಸನಿಂತು ಬಿಡದೋವುತ್ತಿರ್ದಳಾ ವೇಳೆಯೊಳ್ ೧೧೩

ಭವರಹಿತಂ ಭವಂ ಭುವನವಲ್ಲಭನಾಕೆಯ ಭಕ್ತಿಗೊಲ್ದು ಶೈ
ಶವಮನಮರ್ಚಿ ಕೈಕೊಳುತೆ ತತ್ಕೃತ ಬಾಲ್ಯಹಿತೋಪಚಾರಮಂ
ವಿವಿಧವಿನೋದನಾಟಕಮನಾಳ್ದೆಸೆದಂ ಗಡ ಭಕ್ತವತ್ಸಲಂ
ಭುವನದ ಭಕ್ತರಿಚ್ಛೆವಿಡಿದಾ ಪರಿಜಂ ತಳೆವಂದವೊಪ್ಪದೇ ೧೧೪

ಕೆಳೆಯಂ ನಂಬಿಗೆ ಗುಂಡಯಂಗೆ ನಟನಾದಯ್ಯಂಗೆ ವೇಳಾಚರಂ
ವಿಳಸದ್ವೀರಗಣೇಶ್ವರಂಗೆಸೆವ ಶಿಷ್ಯಂ ತಂದೆ ಚಂಡಂಗೆ ನಿ
ಶ್ಚಳಭಾವಂ ಗುರುಲಿಂಗಯೋಗಿಗೆ ವರಂ ತಾನಾದನಂದಿಂದು ವ
ತ್ಸಳಭಾವಂ ಮಿಗೆ ವತ್ಸನಾದನಭವಂ ಮಾದೇವಿಗಾನಂದದಿಂ ೧೧೫

ವ॥ ಎಂದಿಂತು ಭಕ್ತನಿವಹಂ ಬಣ್ಣಿಸುತ್ತಿರ್ಪಿನಮಾ ಮಹಾದೇವಂ ಮಾದೇವಿಯ ಮ್ಮೆ ಮೆಯಂ ಮಹಿಯೊಳ್ ಪ್ರಕಟಂಗೆಯ್ಯಲೆಳಸಿ——

ಒತ್ತುತ್ತ ಆ ಬಾಲಕನನ್ನು ಸಂರಕ್ಷಿಸಿದಳು. ೧೧೩. ಪಕ್ಕೆಯಲ್ಲಿ ಬೆರಳಿಟ್ಟು ಪ್ರೀತಿಯಿಂದ ಚಕ್ಕುಳಿಗೊಟ್ಟು ನಗಿಸುವಳು ; 'ಮುದ್ದುಕೊಡು' ಎಂದು ಬೇಡುತ್ತ ಅವನ ಮುಖವನ್ನೇ ದೃಷ್ಟಿಯಿಟ್ಟು ನೋಡುತ್ತ ಸಂತೋಷಗೊಳ್ಳುವಳು ; ಅಪ್ಪಿಕೊಂಡು ಹೆಚ್ಚಾದ ಅನುರಾಗದಿಂದ ದಪ್ಪಗೊಂಡು ತೊರೆಸಿ ಹಾಲು ಚಿಮ್ಮಿ ಹಾರಿ ಬರುವ ಮೊಲೆಯನ್ನು ಬಾಯಿಗೆ ಇಟ್ಟು ಕುಡಿಸುವಳು. ಈ ರೀತಿ ಅತ್ಯುತ್ಸಾಹಗೊಂಡ ಮನಸ್ಸಿನಿಂದ ಆ ಎಳೆಗೂಸನ್ನು ತಪ್ಪದೆ ಸಾಕುತ್ತಿದ್ದಳು. ೧೧೪. ಜನನ ಮರಣ ರಹಿತನಾದವನೂ, ಸಮಸ್ತ ಭುವನಗಳ ಒಡೆಯನೂ ಆದ ಪರಶಿವನು ಆಕೆಯ ಭಕ್ತಿಗೆ ಮೆಚ್ಚಿ ಬಾಲ್ಯಾವಸ್ಥೆಯನ್ನು ಹೊಂದಿ, ಅವಳಿಂದ ಮಾಡಲ್ಪಡುವ ಬಾಲ್ಯಕಾಲದ ಹಿತವಾದ ಉಪಚಾರಗಳನ್ನು ಪಡೆಯುತ್ತ, ಆ ಭಕ್ತವತ್ಸಲನು ನಾನಾ ವಿಧವಾದ ಲೀಲಾಮಯ ನಾಟಕಗಳನ್ನು ಆಡುತ್ತ ಪ್ರಕಾಶಿಸಿದನಲ್ಲವೆ ! ಲೋಕದಲ್ಲಿ ಭಕ್ತರಾದವರ ಇಷ್ಟಕ್ಕನುಗುಣವಾಗಿ, ಆ ಆಕಾರವನ್ನು ಧರಿಸಿದ ರೀತಿಯು ಒಪ್ಪದೇ ? ೧೧೫. ಅಂದು ನಂಬಿಯಣ್ಣನಿಗೆ ಸ್ನೇಹಿತನು ; ಕುಂಬರ ಗುಂಡಯ್ಯನಿಗೆ ನರ್ತಕನು ; ಆದಯ್ಯನಿಗೆ ಕಾಲವನ್ನು ಸೂಚಿಸುವವನು ; ಪ್ರಕಾಶಮಾನನಾದ ವೀರಗಣೇಶ್ವರನೆಂಬುವವನಿಗೆ ಶೋಭಿಸುವ ಶಿಷ್ಯನು ; ಚಂಡೇಶನಿಗೆ ತಂದೆ ; ನಿಶ್ಚಲವಾದ ಮನಸ್ಸುಳ್ಳ ಗುರುಲಿಂಗ ಯೋಗಿಗೆ ವರನಾದ ಪರಶಿವನು ಇಂದು ಆನಂದದಿಂದ ಬಿಜ್ಜ ಮಹಾದೇವಿಯ ವಿಶೇಷ ವಾತ್ಸಲ್ಯಕ್ಕೆ ಪಾತ್ರನಾದ ಶಿಶುವಾದನು. ವ॥ ಎಂದು ಈ ರೀತಿಯಲ್ಲಿ ಭಕ್ತರುಗಳ ಸಮೂಹವು ವರ್ಣಿಸುತ್ತಿರಲು ಮಹಾದೇವನು ಮಹಾದೇವಿಯ ಮಹಿಮೆಯನ್ನು

ಕಣ್ಣುಂ ಮೊಗಮುಂ ಬೆಱತಿರೆ
ತಣ್ಣನೆ ಕೈಕಾಲ್ಗಳಿರೆ ನಿಜೋದರವಾಗಳ್
ತಿಣ್ಣಮದಾಗುತ್ತಿರೆ ಮು
ಕ್ಕಣ್ಣಂ ಮೊಲೆಯೊಲ್ಲದಂಗದಳವಱತಿರ್ದಂ ೧೧೬

ಪಡಿದೆಱೆದಂತೆ ಪಾಱುತಿರ್ದ ಕಾಣ್ಬುದುಮಾ ಶಿಶುಗಾದವಸ್ಥೆಯಂ
ನಡುಗಿ ಬೆಮರ್ತು ಸುಯ್ದುಳವುಗೆಟ್ಟೊಳಗಾಱಿ ಬಳಲ್ದಳಲ್ದು ಬಾ
ಯ್ವಿಡುತಲೆ ಕಂದ ಕೆಟ್ಟೆನಕಟೇನೊದವಿರ್ದುದೊ ರೋಗಮೇಕೆ ನಿ
ನ್ನೊಡಲಿರವಿಂತುಟಾದುದೆನುತಾಕೆ ಮನೋಗದದಿಂ ಪಲುಂಬಿದಳ್ ೧೧೭

ಎಳೆನಗೆಯುಣ್ಮೆ ಮುದ್ದುಮೊಗದೊಳ್ಮೊಳೆವಲ್ನಗೆವಳ್ಳಿ ತಾಳ್ದ ಕು
ಟ್ಮಳಮೆನೆ ತೋಱೆ ಬಾಯ್ದೆಱೆವುತಂ ಮೊಲೆಯುಂಬ ಮರಲ್ದು ನೋಳ್ಪ ಸಂ
ಗಳಿಸಿ ತೊದಳ್ವಿನೋದಿಪ ಕರಾಂಗುಲಿಯಂ ಪಿಡಿದೇಳ್ವ ನಿಲ್ವ ಕಂ
ಗೊಳಿಪ ಕುಮಾರ ನಿನ್ನ ತನುಗಾದ ಬಳಲ್ಕೆಯನೆಂತು ನೋಳ್ಪೆನೋ ೧೧೮

ಲೋಕದಲ್ಲಿ ಪ್ರಕಟಿಸಲು ಇಚ್ಛೆ ಹೊಂದಿ— ೧೧೬. ಕಣ್ಣುಗಳು, ಮುಖವೂ ಶುಷ್ಕವಾಗಿರಲು, ಕೈಕಾಲುಗಳು ತಣ್ಣಗಾಗಿರಲು, ತನ್ನ ಆ ಹೊಟ್ಟೆಯು ಉಬ್ಬಿಕೊಂಡದ್ದಾಗಿರಲು, ಆ ತ್ರಿಲೋಚನನು ಮೊಲೆಯನ್ನು ಕುಡಿಯದೆ ದೇಹಶಕ್ತಿಯೆಲ್ಲ ಕ್ಷೀಣವಾದದ್ದಾಗಿ ಇದ್ದನು. ೧೧೭. ಆ (ತನ್ನ) ಶಿಶುವಿಗಾದ ಈ ಅವಸ್ಥೆಯನ್ನು ನೋಡುತ್ತಲೆ (ಆ ಬಿಜ್ಜಮಹಾದೇವಿಯ) ಹೃದಯವು ತೆರೆದ ಕದವುಳ್ಳದ್ದಾಗಿ ಹಾರತೊಡಗಿತು. ಆಕೆಯು ನಡುಗುತ್ತ, ಬೆವರುತ್ತ, ನಿಟ್ಟುಸಿರು ಬಿಡುತ್ತ, ದಿಗ್ಭ್ರಮೆಗೊಂಡು, ಶಕ್ತಿಯುಡುಗಿ, ಒಳಗೊಳಗೇ ಒಣಗುತ್ತ, ಆಯಾಸಗೊಂಡು ಸಂಕಟಗೊಂಡು ಅಳುತ್ತ, ಬಾಯಿ ಬಿಡುತ್ತ—'ಎಲೆ ಕಂದ, ಕೆಟ್ಟೆನು ! ಅಕಟಕಟ ! ನಿನಗೆ ಏನು ರೋಗವು ಪ್ರಾಪ್ತವಾಯಿತೋ ! ನಿನ್ನ ಹೊಟ್ಟೆ ಈ ರೀತಿ ಏಕೆ ಉಬ್ಬಿತು !' ಎನ್ನುತ್ತ ಮನೋರೋಗದಿಂದ ಹಲುಬತೊಡಗಿದಳು. ೧೧೮. ಎಳೆಯ ನಗೆಯು ಮುದ್ದಾದ ಈ ಮುಖದಲ್ಲಿ ಹೊರಹೊಮ್ಮುತ್ತಿರಲು, ಮೊಳಕೆಯೊಡೆಯುತ್ತಿರುವ ಹಲ್ಲುಗಳು ನಗೆಯು ಬಳ್ಳಿಯು ಹೊಂದಿದ ಮೊಗ್ಗುಗಳೋ ಎನ್ನುವಂತೆ ಶೋಭಿಸುತ್ತ ಬಾಯಿ ಬಿಡುತ್ತಿದ್ದೆ. ಆ ಬಾಯಿಯಿಂದ ಮೊಲೆ ಕುಡಿಯುತ್ತಿದ್ದೆ. ಪುನಃ ನೋಡುತ್ತ ತೊದಲಿನಿಂದ ಕೂಡಿದ ಮಾತಿನಿಂದ ವಿನೋದಗೊಳಿಸುತ್ತಿದ್ದೆ. ಕೈ ಬೆರಳನ್ನು ಹಿಡಿದು ಮೇಲಕ್ಕೆ ಏಳುವ, ನಿಂತುಕೊಳ್ಳುವ, ಕಂಗೊಳಿಸುವ ಕುಮಾರನೇ, ನಿನ್ನ

ಪಲವೆಡೆಯೊಳ್ ವಿಷಮಾನ್ನಮ
ನಲಸದೆ ತಿರಿದುಂಡ ಕಾಲದೊಳ್ಘನ ಹಾಲಾ
ಹಲಮುಂ ಸವಿದಂದಿಲ್ಲದ
ಬಲವದ್ರುಜೆಯೀಗಳೊಗೆದುದೇಂ ಕಾರಣಮೋ ೧೧೯

ಅಂಜೆ ಬೆಳಗಾದುದೆಂದು ಜ
ನಂ ಜಗದೊಳ್ನುಡಿವ ತೆಱದೆ ನಿನಗೆ ಗದಂಗ
ಳ್ಸಂಜನಿಪವೆಂದು ಪಿರಿದಾ
ನಂಜುತ್ತಿರೆ ಬಂದುದುಗ್ರರುಜೆ ಸುಕುಮಾರಾ ೧೨೦

ಎನ್ನಯ ಜೀವರತ್ನಮಿದು ಕಱ್ಪನೆ ಕಂದಿದುದೆನ್ನ ರನ್ನದೊ
ಳ್ಗನ್ನಡಿ ಮಾಸಿದತ್ತು ಕೊರಗಿರ್ದಪುದೆನ್ನಯ ಪುಷ್ಪಮಾಲೆ ಮಾ
ಯ್ದೆನ್ನ ಸುಧಾರಸಂ ಬಱಿಯಲಿರ್ದಪುದಯ್ಯೊಯೆನುತ್ತೆ ಶೋಕರಾ
ವನ್ನೆಲೆವೆರ್ಚೆ ತತ್ಸುತನನೀಕ್ಷಿಸಿ ಸೂಸಿದಳಂಬಕಾಂಬುಮಂ ೧೨೧

ಸಂತಮಿರ್ದ ಶಿಶುಗಾಯ್ತು ರೋಗಮಿ
ನ್ನೆಂತು ಮಾಳ್ಪೆನಿದಕೌಷಧಂಗಳಂ
ಮುಂತೆ ಬಲ್ಲರಣಮಿಲ್ಲಮೆಂದವ
ಳ್ಚಿಂತೆಯಾಂತು ಬಗೆಗುಂದಿ ಕಂದಿದಳ್ ೧೨೨

ದೇಹಕ್ಕಾದ ಆಯಾಸವನ್ನು (ಈ ಕಣ್ಣುಗಳಿಂದ) ಹೇಗೆ ನೋಡಲಿ ? ೧೧೯. ಅನೇಕ ಕಡೆಗಳಲ್ಲಿ ಆಲಸ್ಯ ಪಡದೆ ಕಾಡು ಕೂಳನ್ನು ತಿರಿದು ಉಂಡ ಕಾಲದಲ್ಲಿ, ಭಯಂಕರವಾದ ಕಾಲಕೂಟ ವಿಷವನ್ನು ಉಂಡಾಗ ಇಲ್ಲದ ಬಲವಾದ ರೋಗವು ಈಗ ಅದೇನು ಕಾರಣ ಹುಟ್ಟಿತೋ ! ೧೨೦. ಅಂಜಿಕೆಯುಂಟಾಗುತ್ತಿರುವಷ್ಟರಲ್ಲಿ ಬೆಳಗೇ ಆಯಿತು ಎಂದು ಜನರು ಜಗತ್ತಿನಲ್ಲಿ ಹೇಳುವ ರೀತಿಯಲ್ಲಿ ನಿನಗೆ ರೋಗವು ಹುಟ್ಟುವುದೆಂದು ನಾನು ಹೆಚ್ಚಾಗಿ ಅಂಜುತ್ತ ಇರಲು ಸುಕುಮಾರನೇ ನಿನಗೆ ಭಯಂಕರವಾದ ರೋಗವು ಉಂಟಾಯಿತು. ೧೨೧. ನನ್ನ ಜೀವನದ ರತ್ನವಾದ ಈ ಶಿಶುವು ಕರ್ರನೆ ಕಂದಿ ಹೋಯಿತು ; ನನ್ನ ರತ್ನದ ಒಳ್ಳೆಯ ಕನ್ನಡಿ ಮಲಿನವಾಗಿ ಹೋಯಿತು ; ನನ್ನ ಪುಷ್ಪಮಾಲಿಕೆ ಬಾಡಿ ಹೋಯಿತು ; ನನ್ನ ಹಾಲು ಕಾದು ಹೊತ್ತಿ ಹೋಗುವುದಕ್ಕೆ ತೊಡಗಿತು ; ಅಯ್ಯೋ ! ಎನ್ನುತ್ತ ದುಃಖ ಧ್ವನಿಯು ಹೆಚ್ಚುಗೊಂಡು ಆ ಮಗುವನ್ನು ನೋಡಿ ಕಣ್ಣೀರನ್ನು ಸುರಿಸತೊಡಗಿದಳು. ೧೨೨. ಚೆನ್ನಾಗಿದ್ದ ಶಿಶುವಿಗೆ ರೋಗ ತಗುಲಿತು. ಇನ್ನು ಈ ರೋಗಕ್ಕೆ ಔಷಧಗಳನ್ನು ಹೇಗೆ ಮಾಡಲಿ ? ತಿಳಿದವರಂತೂ ಮೊದಲೇ ಸ್ವಲ್ಪವೂ ಇಲ್ಲ ; ಎಂದು ಅವಳು ಚಿಂತೆಗೊಳಗಾಗಿ,

ವ॥ ಅಂತು ಕಂದಿಕುಂದಿ ಮಾದೇವಿ ಮನಂ ಮಱುಗಿ ಮತ್ಪ್ರಾಣಸನ್ನಿಭನಾದ ಮಗಂಗಾದ ಬಳಲ್ಕೆಯುಂ ನೋಳ್ಪುದಱಿಂ ಮರಣಮೆ ಲೇಸೇದು ಹರಣಂಗಳೆಯಲುಜ್ಜುಗಿಸಿ ಕರತಳದಿಂ ಕರವಾಳ ನಡಸಿ ಪಿಡಿದು ತನ್ನ ಕೊರಲಂ ಕೊಱೆ[3]ವಾಗಳಾ ಬಾಲಬಾಲೇಂದುಧರಂ ಮೆಚ್ಚಿ ಹೋಹೋ ಎಂದು ಮರಣದುಜ್ಜುಗವುಂ ನಿವಾರಿಸಿ—

ವಿಳಸದ್ಬಾಲೇಂದು ಬಂಬಲ್ಜಡೆ ಸುರನದಿ ಭಾಳೇಕ್ಷಣಂ ಭೋಗಿಭೂಷಾ
ವಳಿ ನೀಲಗ್ರೀವಮುದ್ಯತ್ಪರಶು ಮೃಗವರಾಭೀತಿಭೃತ್ಪಾಣಿಗಳ್ಮಂ
ಜುಳಭಸ್ಮಾಲೇಪ[1]ಮುಗ್ರಾ[1]ಜಿನದ ಪೊದಕೆ ಕಾಲ್ಗಣ್ಣುಮಾದೇವಿ ತನ್ನೊ
ಳ್ಪೊಳಗುತ್ತುಂ ತೋಱೆ[3] ಕಣ್ಗೊಪ್ಪಿದನಮಳನಿಜಾಕಾರದಿಂ ಚಂದ್ರಚೂಡಂ ೧೨೩

ವ॥ ಆಗಳಿಂತು ತರುಣತರುಣೇಂದುಧರಂ ಸಕಲಗಣ [2]ಸುರಗಣ[2]ಸಮೇತಂ ಪ್ರತ್ಯಕ್ಷನಾಗಿ—

ಎನಗಂ ಸುರನಿವಹಕ್ಕಂ
ಜನನುತೆ ನಿಜದಿಂದೆ ನೀನೆ ಪಿರಿಯಬ್ಬೆಯೆನು

ಮನಗುಂದಿ ಕುಂದುತ್ತಿದ್ದಳು. ವ॥ ಈ ರೀತಿ ಬಿಜ್ಜಮಹಾದೇವಿಯು ಕಾಂತಿಹೀನಳಾಗಿ, ಕೊರಗಿ, ಉತ್ಸಾಹಗುಂದಿದವಳಾಗಿ–ನನ್ನ ಪ್ರಾಣ ಸದೃಶನಾದ ಈ ಮಗುವಿಗೆ ಉಂಟಾದ ಬಳಲಿಕೆಯನ್ನು ನೋಡುವುದಕ್ಕಿಂತ (ನನಗೆ) ಮರಣವೇ ಒಳ್ಳೆಯದು ಎಂದುಕೊಂಡು ಪ್ರಾಣವನ್ನು ಕಳೆದುಕೊಳ್ಳುವುದಕ್ಕೆ ಪ್ರಯತ್ನಿಸಿ, ಕೈಯಲ್ಲಿ ಕತ್ತಿಯನ್ನು ಅಳವಡಿಸಿಕೊಂಡು ಹಿಡಿದು, ತನ್ನ ಕಂಠವನ್ನು ಕತ್ತರಿಸಿಕೊಳ್ಳುತ್ತಿರುವಾಗ ಆ ಬಾಲಕನಾದ ಚಂದ್ರಕಳಾಧರನು ಮೆಚ್ಚುತ್ತ ಹೋ ಹೋ ! ಅವಳ ಮರಣದ ಉದ್ಯೋಗವನ್ನು ನಿವಾರಿಸಿ— ೧೨೩. ಚಂದ್ರಶೇಖರನು ಪ್ರಕಾಶಿಸುವ ಬಾಲಚಂದ್ರ, ಗುಂಪು ಗುಂಪಾದ ಜಡೆ, ದೇವಗಂಗಾನದಿ, ಹಣೆಯ ಕಣ್ಣು, ಸರ್ಪಾಭರಣ ಸಮೂಹ, ನೀಲವಾದ ಕಂಠ, ಶ್ರೇಷ್ಠವಾದ ಕೊಡಲಿ, ಶ್ರೇಷ್ಠವಾದ ಜಿಂಕೆ, ಅಭಯಪ್ರದಾನ ಹಸ್ತಮುದ್ರೆ, ಮನೋಹರವಾದ ಭಸ್ಮದ ಅನುಲೇಪನ, ಭಯಂಕರವಾದ ಚರ್ಮದ ಹೊದಿಕೆ, ಪಾದದ ಮೇಲೇರಿಸಿರುವ ವಿಷ್ಣುನೇತ್ರ, ಎಡಗಡೆಯಲ್ಲಿ ಧರಿಸಿರುವ ಪಾರ್ವತೀದೇವಿ–ಇವುಗಳಿಂದ ಪ್ರಕಾಶಮಾನವಾಗಿ ಪ್ರಕಟಗೊಂಡು, ನಿರ್ಮಲವಾದ ಸ್ವರೂಪದಿಂದ ಕಂಗೊಳಿಸಿದನು. ವ॥ ಆಗ ಈ ರೀತಿ ಬಾಲಕನಾಗಿದ್ದ ಚಂದ್ರಶೇಖರನು ಸಮಸ್ತ ಶಿವಗಣಗಳು ಮತ್ತು ದೇವಗಣ ಸಮೂಹಗಳೊಡನೆ ಕೂಡಿ ಪ್ರತ್ಯಕ್ಷನಾಗಿ— ೧೨೪. 'ಸರ್ವಜನರಿಂದ ಶ್ಲಾಘಿಸಲ್ಪಡುವ ಬಿಜ್ಜಮಹಾದೇವಿಯೇ, ನನಗೂ, ದೇವತೆಗಳ ಸಮೂಹಕ್ಕೂ, ನೀನೇ ನಿಜವಾಗಿ ದೊಡ್ಡ ತಾಯಿ ಎನ್ನುತ್ತ

---

1 ಮೃಗಾ(ಅ, ಪ) 2 × (ಮು)

ತ್ಸನುನಯದಿಂ ಕೊಂಡಾಡುತೆ
ನಿನಗಾವುದು ವರಮಭೀಪ್ಸಮದನೆರೆಯೆಂದಂ ೧೨೪

ಆ ನುಡಿಗೇಳ್ದನುರಾಗಿಸಿ
ಮಾನಿನಿ ನಸುನಗುತೆ ವರಮನಾವುದನೊಲ್ಲೆಂ
ನೀನರುಜನಾಗಿ ಸುಖಮಿರೆ
ಭೂನುತ ವರಕೋಟಿ ಬಂದುದಿಂದೆನಗೆಂದಳ್ ೧೨೫

ಎನೆ ಕೇಳ್ದಾನಂದದಿಂದಂ ತೆಗೆದು ಬಿಗಿದು ತಳ್ಕೈಸಿ ಕೇಳಮ್ಮತಾಯೆನ್ನೀ
ತನು ನಿನ್ನಂತಪ್ಪ ತಾಯೊಪ್ಪಿರೆ ಗದರಹಿತಂ ಬಾಳ್ವುದೇಂ ಚೋದ್ಯಮೋ ಪೇ
ಳೆನುತುಂ ನಿತ್ಯತ್ವಮಿತ್ತಂ ಗಿರಿಶನೊಸೆದು ಮಾದೇವಿಗೆಂದಿಂತು ವಿಶ್ವಾ
ವನಶೀಲಂ ಪೇಳ್ದನಾಗಳ್ಗಣತತಿಗೆ ಶಿವಾನಂದಸಾಂದ್ರಂ ವೃಷೇಂದ್ರಂ ೧೨೬

ಮುಗ್ಧಸಂಗವಿಭುಸಚ್ಚರಿತ್ರಮಂ
ಸ್ನಿಗ್ಧಭಕ್ತಿ ಮಿಗೆ ಕೇಳ್ದವಂ ಸುಧಾ
ರುಗ್ಧರೋರುಕೃಪೆಯಿಂದೆ ಮೋಕ್ಷಸ
ಮ್ಯಗ್ಧರಿತ್ರಿಗರಸಾಗಿ ರಂಜಿಪಂ ೧೨೭

ಪ್ರೀತಿಯಿಂದ ಕೊಂಡಾಡುತ್ತ ನಿನಗೆ ಇಷ್ಟವಾದಂಥ ವರವು ಯಾವುದು ? ಅದನ್ನು ಕೇಳು' ಎಂದನು. ೧೨೫. ಶಿವನ ಈ ಮಾತನ್ನು ಕೇಳಿ ಆ ಬಿಜ್ಜಮಹಾದೇವಿಯು ಆನಂದಭರಿತಳಾಗಿ ನಸುನಗುತ್ತ, ಯಾವ ವರವನ್ನೂ ನಾನು ಒಲ್ಲೆನು. ನೀನು ರೋಗವಿಲ್ಲದವನಾಗಿ ಸುಖದಿಂದ ಇದ್ದರೆ ಭೂಲೋಕದ ಜನರಿಂದ ಶ್ಲಾಘಿಸಲ್ಪಡುವ ಕೋಟಿ ವರವು ನನಗೆ ಬಂದ ಹಾಗೆಯೇ ಎಂದಳು. ೧೨೬. ಹೀಗೆಂದು ಆ ಬಿಜ್ಜ ಮಹಾದೇವಿಯು ಅನ್ನಲು ಪರಮೇಶ್ವರನು ಕೇಳಿ, ಆನಂದದಿಂದ ಬರಸೆಳೆದು ಬಿಗಿದು ಅಪ್ಪಿಕೊಂಡು. 'ತಾಯೇ, ಕೇಳು : ನಿನ್ನಂಥ ತಾಯಿಯು ಶೋಭಿಸುತ್ತಿರುವಾಗ ನನ್ನ ಈ ದೇಹವು ರೋಗವಿಲ್ಲದುದಾಗಿ, ಬದುಕುವುದೊಂದು ಆಶ್ಚರ್ಯವೇ ? ಹೇಳು, ಎನ್ನುತ್ತ ಪ್ರೀತಿಯಿಂದ ಆ ಬಿಜ್ಜಮಹಾದೇವಿಗೆ ಶಾಶ್ವತವಾದ ಜೀವಿತ್ವವನ್ನು ಕೊಟ್ಟನು (ಮೋಕ್ಷ ಸುಖವಿತ್ತನು). ಎಂದು ಆಗ ಪ್ರಪಂಚವನ್ನು ಸಂರಕ್ಷಿಸುವ ಸ್ವಭಾವವುಳ್ಳ ಪರಬ್ರಹ್ಮಾನಂದ ಸಂಪೂರ್ಣನಾದ ವೃಷಭೇಂದ್ರನು (ಶಿವನು) ಪ್ರಮಥ ಗಣ ಸಮೂಹವನ್ನು ಕುರಿತು ಹೀಗೆ ಹೇಳಿದನು : ೧೨೭, ಮುಗ್ಧ ಸಂಗಯ್ಯನೆಂಬ ಸಚ್ಚರಿತ್ರದಿಂದ ಕೂಡಿದ ಶರಣ ಮುಗ್ಧ ಭಕ್ತಿಯು ಕಥೆಯನ್ನು ಕೇಳಿದವನು ಚಂದ್ರ ಶೇಖರನ ವಿಶೇಷವಾದ ಕೃಪೆಯಿಂದ ಮುಕ್ತಿಯೆಂಬ ಶ್ರೇಷ್ಠ ಭೂಮಂಡಲಕ್ಕೆ ಅರಸ

ರುದ್ರಪಶುಪತಿಯ ಕಥೆಯುಂ
ಸದ್ರುಚಿಯಿಂದೋದೆ ಕೇಳೆ ಪಠಿಯಿಸೆ ಸಕಲೋ
ಪದ್ರವಮಳಿಗುಂ ಕೈಲಾ
ಸಾದ್ರಿಯೊಳತ್ಯಧಿಕಗಣಪದಂ ಸಮನಿಸುಗುಂ ೧೨೮

ತಿರುನೀಲನಕ್ಕಮಾಹೇ
ಶ್ವರಚರಿತಮನಾವನೋದುವಂ ಕೇಳ್ವಂ ಬಿ
ತ್ತರಿಪನವಂಗೀಶಂ ಭಾ
ಸುರ ನಿಜಪದಮಿತ್ತು ಪೊರೆವನೆಂಬುದು ಸಿದ್ಧಂ ೧೨೯

ಕೊಡಗೂಸಿನ ಸತ್ಕಥೆಯುಂ
ಬಿಡದಾವಂ ಬರೆವನಾವನೋದುವನಾವಂ
ಸಡಗರದಿಂ ಕೇಳ್ವನವಂ
ಪಡೆವಂ ಪರಮೇಶ್ವರಪ್ರಸಾದಾಮೃತಮಂ ೧೩೦

ಬಿಜ್ಜಮಹಾದೇವಿಯ ಗುಣ
ವಜ್ಜನಸನ್ನುತಚರಿತ್ರಮಂ ಕೇಳ್ವ ಮಹಾ

ನಾಗಿ ಹುಟ್ಟುತ್ತಾನೆ. ೧೨೮. ರುದ್ರಪಶುಪತಿಯ ಕಥೆಯನ್ನು ಸಮೀಚೀನವಾದ ಪ್ರೀತಿಯಿಂದ ಓದಿದರೆ, ಕೇಳಿದರೆ, ಓದಿಸಿದರೆ, ಸಮಸ್ತ ಬಾಧೆಗಳು ನಾಶವಾಗುವುವು. ಕೈಲಾಸ ಪರ್ವತದಲ್ಲಿ ಅತ್ಯಂತ ಶ್ರೇಷ್ಠವಾದ ಪ್ರಮಥಗಣರ ಸ್ಥಾನವು ಪ್ರಾಪ್ತವಾಗುವುದು. ೧೨೯. ತಿರುನೀಲನಕ್ಕಮಾಹೇಶ್ವರರ ಚರಿತ್ರೆಯನ್ನು ಯಾವನು ಓದುವನೋ, ಕೇಳುವನೋ, ಬಿತ್ತರಿಸುವನೋ (ಇನ್ನೊಬ್ಬರಿಗೆ ಹೇಳುವನೋ) ಅವನಿಗೆ ಈಶ್ವರನು ಮನೋಹರವಾದ ಸ್ಥಾನವನ್ನು (ಕೈಲಾಸ ಪದವಿಯನ್ನು) ಕೊಟ್ಟು ಸಂರಕ್ಷಿಸುವನು ಎಂಬುದು ಸಿದ್ಧವಾದದ್ದು. ೧೩೦. ಕೊಡಗೂಸಿನ ಶ್ರೇಷ್ಠ ಕಥೆಯನ್ನು ಯಾವನು ತಪ್ಪದೆ ಬರೆಯುವನೋ, ಯಾವನು ಓದುವನೋ, ಯಾವನು ಸಡಗರದಿಂದ ಕೇಳುವನೋ ಅವನು ಪರಮೇಶ್ವರನ ಪ್ರಸಾದವೆಂಬ ಅಮೃತವನ್ನೂ, ಮೋಕ್ಷವನ್ನೂ ಪಡೆಯುವನು. ೧೩೧. ಬಿಜ್ಜಮಹಾದೇವಿಯ ಸದ್ಗುಣಯುಕ್ತರಾದ

1 ಕ್ಕೈ (ಜ)

ಸಜ್ಜನತತಿಗೆ ಸಮಸ್ತ ಜ
ಗಜ್ಜನಕಂ ತವಿಪನೊಲ್ದು ಜನನಾಮಯಮಂ ೧೩೧

ಪಂಚಜನಭಂಜನ ವಿರಿಂಚಿಮುಖನಿರ್ಜರಸ
ಮಂಚಿತಪದಾಂಬುಜ ವಿಂವಚಿತಮನೋಜ
ಪ್ರಾಂಚಿತಕೃಪಾರಸದೃಗಂಚಲ ಶಿವೈಕ್ಯಗಣ
ಸಂಚಿತನಿಧಾನ ಯಮಿಸಂಚಯವರೇಣ್ಯ
ಕಾಂಚನನಗೇಂದ್ರತಟಸಂಚರಣಶೀಲ ಸಮು
ದಂಚಿತ ಮಹತ್ವಮಣಿಕಂಚುಕ ಚರೌಘಾ
ವಂಚಕ ಬುಧಪ್ರಣುತಚಂಚದಮಳಾಂಗ ಪೊರೆ
ಪಂಚಮುಖಮಂತ್ರರಸನಾಂಚಲ ವೃಷೇಂದ್ರಾ ೧೩೨

ಸುರರಾಜರತ್ನಮಕುಟಾಂಶುಮಂಜರೀ
ಪರಿರಮ್ಯಪಾದೆ ದುರಿತಾಬ್ಜಕುಂಜರೀ

ಜನರಿಂದ ಸ್ತೋತ್ರ ಮಾಡಿಸಿಕೊಳ್ಳಲ್ಪಡುವ ಚರಿತ್ರೆಯನ್ನು ಕೇಳುವ ಶ್ರೇಷ್ಠ ಸಜ್ಜನ ಸಮೂಹಕ್ಕೆ, ಸಮಸ್ತ ಲೋಕಗಳ ತಂದೆಯಾದ ಪರಮೇಶ್ವರನು ಪ್ರೀತಿಯಿಂದ ಜನನವೆಂಬ ರೋಗವನ್ನು ಕೊನೆಗೊಳಿಸುವನು. ೧೩೨. ಸಮುದ್ರ ಸಂಚಾರಿಯಾದ 'ಪಂಚಜನ' ಎಂಬ ರಾಕ್ಷಸನನ್ನು ಕೊಂದ ವಿಷ್ಣು, ಬ್ರಹ್ಮರೇ ಮೊದಲಾದ ದೇವತೆಗಳಿಂದ ಪೂಜಿಸಲ್ಪಡುವ ಪಾದಕಮಲವುಳ್ಳವನೂ, ಮನ್ಮಥನನ್ನು ವಂಚಿಸಿದವನೂ, ದಯಾರಸಪೂರ್ಣವಾದ ಕಡೆಗಣ್ಣುಗಳಿಂದ ಕೂಡಿದವನೂ, ಶಿವನೊಡನೆ ಏಕತ್ವವನ್ನು ಹೊಂದಿದ ಶಿವಗಣಗಳಿಂದ ಸಂಪಾದಿಸಲ್ಪಟ್ಟ ನಿಧಿಯಾಗಿ ಉಳ್ಳವನೂ, ಋಷಿ ಸಮೂಹಕ್ಕೆ ಶ್ರೇಷ್ಠವಾದವನೂ, ಮೇರುಪರ್ವತದ ತಪ್ಪಲು ಪ್ರದೇಶದಲ್ಲಿ ಸಂಚರಿಸುವ ಸ್ವಭಾವವುಳ್ಳವನೂ, ಉತ್ಕೃಷ್ಟವಾದ ಮಹಿಮೆಯೆಂಬ ರತ್ನ ಕವಚವನ್ನುಳ್ಳವನೂ ಜಂಗಮ ಸಮೂಹಕ್ಕೆ ವಂಚನೆಯನ್ನು ಮಾಡದವನೂ, ವಿದ್ವಾಂಸರಿಂದ ಹೊಗಳಲ್ಪಡುವ ಹೊಳೆಯುವ ಪವಿತ್ರ ಶರೀರವುಳ್ಳವನೂ, ಶಿವ ಮಂತ್ರವು ನಾಲಿಗೆಯ ತುದಿಯ ಮೇಲೆ ಉಳ್ಳವನೂ ಆದ ವೃಷೇಂದ್ರನೇ ಸಂರಕ್ಷಿಸು. ೧೩೩. ದೇವತೆಗಳ ರಾಜನಾದ ದೇವೇಂದ್ರನ ರತ್ನಖಚಿತವಾದ ಕಿರೀಟಗಳ ಕಾಂತಿಯೆಂಬ ಪುಷ್ಪಗುಚ್ಛದಿಂದ ಮನೋಹರವಾದ ಚರಣವುಳ್ಳವಳೂ, ಪಾಪವೆಂಬ ಕಮಲಕ್ಕೆ ಆನೆಯ ಸ್ವರೂಪಳಾದವಳೂ, ದೇವತಾ ಶ್ರೇಷ್ಠರುಗಳಿಗೆ ಶತ್ರುಗಳಾದ

ಮರುದಿಂದ್ರವೈರಿಚಯಹೃದ್ಭಯಂಕರೀ
ಪೊರೆಯೆನ್ನನಿಂದುಧರಜಾಯೆ ಶಾಂಕರೀ ೧೩೩

ಇದು ವಿನಮದಖಿಳ ಸುರಾಸುರೇಂದ್ರಮಕುಟತಟಘಟಿತ ಮಣಿಗಣಾಗಣಿತ ರುಚಿನಿಚಯ
ತರುಣಾರುಣಾತಪಪರಿಲಸಿತ ಪರಮ ಶಿವಲಿಂಗ ಪಾದಾರವಿಂದಪರಾಗಭಸಿತ
ಭಾಸುರಲಲಾಟಪಟ್ಟಸರಸಜನಮಾನಿತೋಭಯಕವಿತಾವಿಶಾರದ
ಶ್ರೀಷಡಕ್ಷರಿದೇವಭಕ್ತಿವಿರಚಿತ
ಶ್ರೀಮದ್ ಬಸವರಾಜವಿಜಯಮಹಾಪುರಾಣದೊಳ್
ಮುಗ್ಧಸಂಗಯ್ಯರುದ್ರಪಶುಪತಿತಿರುನೀಲನಕ್ಕಕನ್ಯಕಾಮಹಾದೇವೀಕಥನಂ
ನವಮಾಶ್ವಾಸಂ ಸಮಾಪ್ತಂ

ಅಂತು ಆಶ್ವಾಸ ೯ಕ್ಕೆ ಪದಗಣನೆ ೭೫೪ ಕ್ಕೆ ಮಂಗಳಮಹಾ ಶ್ರೀ॥

ರಾಕ್ಷಸ ಸಮೂಹದ ಹೃದಯಕ್ಕೆ ಭೀಕರಳೆನಿಸಿದವಳೂ ಎನಿಸಿದ ಶಿವನ ಪತ್ನಿಯಾದ ಶಂಕರಿಯೇ ನನ್ನನ್ನು ರಕ್ಷಿಸು.

ಒಂಬತ್ತನೆಯ ಆಶ್ವಾಸವು ಸಮಾಪ್ತವಾಯಿತು

ದಶಮಾಶ್ವಾಸಂ

ಶ್ರೀ ಮೇನಕಾತ್ಮಜಾನಯ
ನಾಮಳರುಚಿ ಧವಳಿತೇಭಚರ್ಮಾಂಬರನು
ದ್ದಾಮ ಗುಣಧಾಮನಮರಲ
ಲಾಮಂ ಪೊರೆಗೆಮ್ಮನಾವಗಂ ಶಿವಲಿಂಗಂ ೧

ವ॥ ಅದಲ್ಲದೆಯುಮಿನ್ನುಂ ಕೇಳ್ವುದೆಂದು ಬಸವರಸನಿಂತೆಂದು—

[ದೀಪದ ಕಲಿಯಾರನ ಕಥೆ]

ಪೊಳೆಯಿಂದಂ ಪರಿಕಾಲ್ಗಳಿಂ ಕಳಮಸುಕ್ಷೇತ್ರಂಗಳಿಂ ನಂದನಾ
ವಳಿಯಿಂದಿಕ್ಷುಕದಂಬಕಾದಳವನವ್ರಾತಂಗಳಿಂ ಚೆಲ್ವ ಪೂ
ಗೊಳದಿಂ ಸಂಪದದೇಳ್ಗೆವೆತ್ತ ವಿಳಸದ್ಗ್ರಾಮಂಗಳಿಂ ಲಿಂಗಮಂ
ಗಳ ಗೇಹಂಗಳಿನಾಗಳುಂ ಮಿಸುಪುದಾ ಚೋಳಕ್ಷಮಾಮಂಡಳಂ ೨

ವ॥ ತನ್ಮಹೀರಮಾರಮಣೀ ರಮಣೀಯಮಣಿಮುಕುರಮೆನಿಸಿ—

ದೀಪದ ಕಲಿಯಾರ ಮೊದಲಾದವರ ಕಥೆ : ೧. ಮಂಗಳಕರಳಾದ ಮೇನಕೆಯ ಪುತ್ರಿಯಾದ ಪಾರ್ವತಿಯ ನೇತ್ರಗಳ ನಿರ್ಮಲ ಕಾಂತಿಯಿಂದ ಶುಭ್ರವಾಗಿ ಮಾಡಲ್ಪಟ್ಟ ಗಜದ ಚರ್ಮವನ್ನು ವಸ್ತ್ರವಾಗಿ ಉಳ್ಳವನೂ, ಉದ್ದಾಮವಾದ ಗುಣಗಳಿಗೆ ಸ್ಥಾನ ಭೂತನೂ ದೇವತೆಗಳಲ್ಲಿ ಶ್ರೇಷ್ಠನೂ, ಎನಿಸಿದ ಶಿವಲಿಂಗನು ನಮ್ಮನ್ನು ಸದಾ ರಕ್ಷಿಸಲಿ. ವ॥ ಇದಲ್ಲದೆ ಇನ್ನೂ ಕೇಳುವುದು ಎಂದು ಬಸವರಸನು ಹೀಗೆ ಹೇಳಿದನು : **ದೀಪದ ಕಲಿಯಾರನ ಕಥೆ** : ೨. ಆ ಚೋಳ ಮಂಡಲವೆಂಬ ಭೂ ಭಾಗವು ಹೊಳೆಗಳಿಂದಲೂ, (ಸದಾ) ಹರಿಯುತ್ತಿರುವ ಕಾಲುವೆಗಳಿಂದಲೂ, ಬತ್ತದ ಗದ್ದೆಗಳಿಂದಲೂ ತೋಟಗಳ ಸಾಲು ಗಳಿಂದಲೂ, ಕಬ್ಬಿನ ಸಮೂಹ ಬಾಳೆಯ ವನಗಳ ಸಮೂಹಗಳಿಂದಲೂ, ಚೆಲುವಾದ ಹೂವಿನ ಸರೋವರಗಳಿಂದಲೂ, ಐಶ್ವರ್ಯದ ಆಧಿಕ್ಯವನ್ನು ಹೊಂದಿದ ಪ್ರಕಾಶಮಾನವಾದ ಊರುಗಳಿಂದಲೂ, ಶಿವದೇವಾಲಯಗಳಿಂದಲೂ ಸತತವೂ ಪ್ರಕಾಶಿಸುತ್ತಿರುವುದು. ವ॥ ಇಂಥ ಭೂಮಿಯೆಂಬ ಸ್ತ್ರೀಯಳ ಮನೋಹರವಾದ ರತ್ನದ ಕನ್ನಡಿಯೋ ಎಂದೆನಿಸಿ

ಪುರಮಧ್ಯೋದ್ಯಾನಕೇಳೀನಗಘನಜಘನಾಭೋಗೆ ಭೂಲಕ್ಷ್ಮಿ ತಾಳ್ದಂ
ಬರಮುಂಬಂತಾಗೆ ಸಾಲಂ ಸಜಳಪರಿಖೆ ಕಾಂಚೀಕಲಾಪಂಬೊಲಿಂಬಾ
ಗಿರೆ ಪಾಂಥಃಪಕ್ಷಿಕೋಲಾಹಲರುತಿವಿಳಸದ್‌ಭರ್ಮ್ಯ ಹರ್ಮ್ಯಪ್ರಭಾವಿ
ಸ್ಫುರಿತಾಭ್ರಂ ಪೊಂಜಳಂಬಂ ಮಿಸುಪವೊಲಿರೆ ಕಾಂಚೀಪುರಂ ಕಣ್ಗೆ ತೋರ್ಕುಂ ೩

ಆ ನಗರದೊಳೆಸೆದಿರ್ಪಂ
ಮೀನಧ್ವಜದರ್ಪಭಂಜನಪ್ರಿಯ ಭಕ್ತಂ
ಮಾನಿತ ಕಲಿಯಾರಾಖ್ಯನ
ನೂನ ಗುಣಾಭರಣನತುಳ ಸಂಪದದಿಂದಂ ೪

ವ॥ ಆ ಭಕ್ತನೊಂದುದಿನಂ ಪಗಲ್ ಬೇಱೂರ್ಗೆ ಪೋಗುತೆಡೆವಟ್ಟೆಯ ನಟ್ಟಡವಿಯೊಳೊಂದು ಜೀರ್ಣಾಲಯದೊಳ್ ಶಿವಲಿಂಗಮಿರೆ ಕಂಡು ಬಗೆ ಬೆದಱ[1]ಬೆಬ್ಬಳಿವೋಗಿ ತನ್ನೊಳಿಂತೆಂದಂ—

ಕಡೆದುದು ಮಂಟಪಂ ಜರಿದು ಬಿಳ್ದು[2]ದು ಸುತ್ತಿದ ಕಲ್ಲಕೋಟೆ ಕೀಲ್
ಸಡಿಲೆ ಕದಂಗಳಿಲ್ಲಿ ಪಳೆದಾಗಿ ಕರಂ ಪಡಲಿಟ್ಟವಯ್ಯೊ ಕ

೩. 'ಕಾಂಚಿಪುರ' ಎಂಬ ನಗರವು–ಪಟ್ಟಣ ಮಧ್ಯದಲ್ಲಿನ ಉಪವನಗಳಲ್ಲಿರುವ ಕ್ರೀಡಾ ಪರ್ವತಗಳೆಂಬ ಸಾಂದ್ರವಾದ (ದಪ್ಪನಾದ) ಕಟಿಪಶ್ಚಾತ್ ಭಾಗದಿಂದ ಕೂಡಿತ್ತು. ಭೂಮಿಯೆಂಬ ಲಕ್ಷ್ಮಿಯು ಉಟ್ಟ ವಸ್ತ್ರವೋ ಎಂಬ ಹಾಗೆ ಇರುವ ಕೋಟೆಯಿಂದ ಕೂಡಿತ್ತು, ನೀರುಹಕ್ಕಿಗಳ ಕಲಕಲ ಧ್ವನಿಯಿಂದ ವಿಶಿಷ್ಟವಾದ ನೀರಿನಿಂದ ತುಂಬಿದ ಕಂದಕವು (ಅಗಳು), ಒಡ್ಯಾಣ (ನಡುವಿನ ಪಟ್ಟಿ)ದ ಹಾಗೆ ಮನೋಹರವಾಗಿ ಇತ್ತು. ಶೋಭಿಸುವ ಚಿನ್ನದ ಉಪ್ಪರಿಗೆಯ ಮನೆಗಳ ಕಾಂತಿಯಿಂದ ಪ್ರಕಾಶಿಸುವ ಮೇಘ ಮಂಡಲವು ಸುವರ್ಣಮಯವಾದ ಮೇಲು ಮುಸುಕು ಎನಿಸಿ ಮನೋಹರವಾಗಿ ಕಣ್ಣಿಗೆ ತೋರುತ್ತಿತ್ತು. ೪. ಆ ನಗರದಲ್ಲಿ ಮನ್ಮಥನ ದರ್ಪವನ್ನು ನಾಶಗೊಳಿಸಿದ ಶಿವನ ಆಪ್ತ ಭಕ್ತನಾದವನೂ, ಶ್ರೇಷ್ಠವಾದ ಸದ್ಗುಣಗಳೇ ಆಭರಣವಾಗಿ ಉಳ್ಳವನೂ ಆದ ಸಕಲ ಜನರಿಂದ ಸನ್ಮಾನಿಸಿಕೊಳ್ಳಲ್ಪಟ್ಟವನೂ ಆದ ಕಲಿಯಾರನೆಂಬವನು ಅಸದೃಶವಾದ ಐಶ್ವರ್ಯದಿಂದ ಕೂಡಿದವನಾಗಿ ಶೋಭಿಸುತ್ತಿದ್ದನು. ವ॥ ಇಂಥ ಭಕ್ತನಾದ ಕಲಿಯಾರನು ಒಂದು ದಿವಸದ ಹಗಲಿನಲ್ಲಿ ಬೇರೆ ಊರಿಗೆ ಹೋಗುತ್ತ ಮಾರ್ಗ ಮಧ್ಯದ ಘೋರ ಅರಣ್ಯದಲ್ಲಿ ಒಂದು ಶಿಥಿಲಗೊಂಡ ಶಿವಾಲಯದಲ್ಲಿ ಶಿವ ಲಿಂಗವಿರುವುದನ್ನು ಕಂಡು, ಬೆದರಿದ ಮನಸ್ಸಿನವನಾಗಿ, ಸ್ತಂಭೀಭೂತನಾಗಿ, ತನ್ನ ಮನಸ್ಸಿನಲ್ಲಿಯೇ ಹೀಗೆಂದುಕೊಂಡನು. ೫. (ಈ ಶಿವಾಲಯದ) ಮಂಟಪವು ಉರುಳಿ ಬಿದ್ದಿದೆ ; ಸುತ್ತಲೂ ಕಟ್ಟಿದ ಕಲ್ಲುಕೋಟೆ ಜಾರಿ ಬಿದ್ದಿದೆ ; ಕೀಲುಗಳು ಸಡಿಲುಗೊಂಡು ಕದಗಳೆಲ್ಲ ಹಳೆಯದಾಗಿ ಪೂರ್ಣ ಬಿದ್ದುಹೋಗಿವೆ. ಅಯ್ಯೋ ! ಈ

1 ಱ³ (ಚ, ಜ) 2 ದ್ಧ (ಜ)

ಲ್ಗುಡಿಯಿದು ಮೇಲೆ ಬಿಳ್ದಪುದೊ ಬಲ್ಲವರಾರತಿ ಜೀರ್ಣಮಕ್ಕಟಿ
ನ್ನೊಡೆಯನಿದೇಕೆ ತಾಂ ನೆಲಸಿದಂ ಬಿಡದೊರ್ವನೆ ಗಾಂಪನಂದದಿಂ ೫

ಅರೆಪುಯ್ಯೊ[1]ಳೆಂದುಮಗಲದ
ಗಿರಿಸುತೆಯುಂ ಕಾಣೆನಳ್ಕಿ ಶಿವಲಿಂಗದೆ [2]ಮೆ
ಯ್ಗ[3]ರೆದಳೊ ಸಲೆ ಸೇವಿಪ ಸಹ
ಚರರೊರ್ವರುಮಿಲ್ಲದೊರ್ವನೇ ಶಿವನಿರ್ಪಂ ೬

ಪಳೆಗೊಂದೆ[3] ಬಳ್ದ ಪೊಸವು
ಲ್ಗಳ ಪೊದಱೊಳ್ತನ್ನನೆತ್ತುವವರಿಲ್ಲದೆ ಮೇ
ಣ್ಬಳಲುತ್ತಿರ್ದಪುದೀ ಮಂ
ಗಳಲಿಂಗಂ ಪೂಜೆಗೊಂಡ ಕುಱುಪಣಮಿಲ್ಲಂ ೭

ವ॥ ಅಂತುಮಲ್ಲದೆಯುಂ —

ಸೊರ್ಕಿ[4]ದ ದೈತ್ಯರಂ ಸದೆದನಂಧಕನ ತುಳಿದಂ ಪುರಾಂಗಜಾ
ತಾರ್ಕಜರಂ ಕನಲ್ದುರುಪಿದಂ ಮಖದೂಟಕೊಱಲ್ದು ಬಂದ ದೇ
ವರ್ಕಳನಿಕ್ಕಿದಂ ದ್ವಿಪಮೃಗಾರಿಸುರಾರಿಗಳಂ ಪೊರಳ್ಚಿ ತತ್
ಕರ್ಕಶಚರ್ಮಮಂ ಸುಲಿದನಬ್ಜಜನೊಳ್ದಲೆಗೊಯ್ದನೀಶ್ವರಂ ೮

ಕಲ್ಲಿನ ಗುಡಿ, ಲಿಂಗದ ಮೇಲೆ ಬಿದ್ದುಬಿಡುವುದೋ ಏನೋ ತಿಳಿದವರಾರು ? ಅತ್ಯಂತಶಿಥಿಲಗೊಂಡು ಹೋಗಿದೆ. ಅಕ್ಕಟ ! ನನ್ನ ಸ್ವಾಮಿಯಾದ ಶಿವನು ತಾನು (ಇಲ್ಲಿ) ತಪ್ಪದೆ ಒಬ್ಬನೇ ಮೂಢನ ಹಾಗೆ ಯಾಕೆ ನೆಲಸಿದನೋ ! ೬. ದೇಹದ ಅರ್ಧ ಭಾಗದಲ್ಲಿ ಸದಾ ಅಗಲದೆಯಿರುವ ಪಾರ್ವತೀದೇವಿಯನ್ನೂ ಕಾಣೆನು. (ಅವಳು) ಹೆದರಿಕೊಂಡು ಲಿಂಗದಲ್ಲಿ ಅಡಗಿಕೊಂಡಳೋ ಏನೋ ! ಚೆನ್ನಾಗಿ ಸೇವೆ ಮಾಡುವ ಸೇವಕರು ಒಬ್ಬರೂ ಇಲ್ಲದೆ ಶಿವನು ಒಬ್ಬನೇ ಇದ್ದಾನೆ. ೭. ಹಳೆಯದಾದ ನಂದಿಯು ಹೊಸದಾದ ಹುಲ್ಲಿನ ಹೊದರಿನಲ್ಲಿ ಬಿದ್ದು ತನ್ನನ್ನು ಎತ್ತುವವರೇ ಇಲ್ಲದೆ ಆಯಾಸ ಗೊಳ್ಳುತ್ತ ಇರುವುದು. ಶುಭಕರವಾದ ಈ ಲಿಂಗವು ಪೂಜೆಯನ್ನು ಮಾಡಿಸಿಕೊಂಡ ಚಿಹ್ನೆಯೂ ಕೂಡ ಸ್ವಲ್ಪವೂ ಇಲ್ಲ. ವ॥ ಇದೂ ಅಲ್ಲದೆಯೂ— ೮. (ಈ) ಈಶ್ವರನು ಕೊಬ್ಬಿಹೋದ ರಾಕ್ಷಸರನ್ನು ಸದೆಬಡಿದನು ; ಅಂಧಕಾಸುರನನ್ನು ತುಳಿದನು ; ತ್ರಿಪುರಾಸುರರು, ಮನ್ಮಥ, ಯಮ–ಇವರುಗಳನ್ನು ಕೋಪದಿಂದ ಸುಟ್ಟು ಹಾಕಿದನು ; ದಕ್ಷಯಜ್ಞದ ಊಟಕ್ಕೆ ಪ್ರೀತಿಯಿಂದ ಬಂದಂಥ ದೇವತೆಗಳನ್ನು ಬಡಿದನು. ಗಜಾಸುರನೆಂಬ ದೇವ ವೈರಿ, ವ್ಯಾಘ್ರಾಸುರ–ಇವರುಗಳನ್ನು ನೆಲಕ್ಕೆ ಕೆಡವಿ ಅವರುಗಳ ಕಠಿಣವಾದ (ಬಿರುಸಾದ) ಚರ್ಮವನ್ನು ಸುಲಿದನು. ಬ್ರಹ್ಮನ ಒಳ್ಳೆಯ ತಲೆಯನ್ನು

1 ವ್ಯೆಯೊ(ಮು, ಜ) 2 ವ್ಯೆಗ(ಜ, ಮು) 3 ದು(ಮು) 4 ಕ್ಕಿ(ಮು)

ಪಗೆವರನಂತರಂ ತಱಿದಿವಂ ಪಳೆಪಾಳ್ಗುಡಿಯಲ್ಲಿ ಕಜ್ಜದು
ಜ್ಯೋಗಮಿನಿತಿಲ್ಲದಿಂತು ನೆಲಸಿರ್ದಪನೊರ್ವನೆ ವೈರದಿಂದವ
ರ್ಗೆಮಿಗೆ ತತ್ಕುಲೋದ್ಭವರುಮೇನನೊಡರ್ಚುವರೆಂದು ಬಲ್ಲರಾ
ಮುಗುದನನೀತನಂ ಬಿಡದೆ ಕಾದಪೆನೆಚ್ಚಱಿಕೊಳೊಂದಿ ಚೆಚ್ಚರಂ ೯

ಪಗೆವರಿನಿಬರ್ಕಳಿರ್ದೊಡ
ಮಗಿಯದೆ ಲೆಕ್ಕಿಸದೆ ಘೋರವಿಪಿನಾಂತರದೊ
ಳ್ನಗಜಾಧಿಪನೇಂ ವೀರನೊ
ನೆಗಳ್ದೊರ್ವನೆ ನಿಂದನಿಲ್ಲಿ ಪಾಳ್ದೇಗುಲದೊಳ್ ೧೦

ವ॥ ಅಂತಾದೊಡಮಾನುಂ ಸಹಾಯನಾಗಿ ಕಾದಪೆನೆಂದು ನಿರ್ಧರಿಸಿ ತನಗುಳ್ಳ ಧನಕನಕಾದಿ ವಸ್ತುವೆಲ್ಲಮನವಂಚಕತ್ವದಿಂ ತರಿಸಿ ತದ್ದ್ರವ್ಯಮಂ ವೆಚ್ಚಿಸಿ ದೃಢತರ ಮನೋಜ್ಞ ಶಿವಾಲಯಶಿಖರಗೋಪುರದ್ವಾರಬಂಧಕವಾಟಮಂಟಪ ಪ್ರಕರಪ್ರಾಕಾರಪ್ರತೋಳಿಕಾಪರಿಖಾದಿಗಳಂ ಸಾಂಗಮೆನೆ ರಚಿಸಿಯುಂ ಪೆರ್ಗೊತ್ತಳ ಪಿರಿಯ ಪಿರಿಂಗಿಗಳನಮರ್ಚಿಯುಂ ಪಲಂ[1]ದೆನೆಗಳೊಳಂಬುಗಂಡಿಗಳನೊಡರ್ಚಿಯುಂ ದಸಿಬಸಿದ ಪೆರ್ದೊಲೆಗಳುಮಂ ಕಲ್ಗುಂಡು ಕವಣೆ ಪುರಿಮಣಲ್ಮರ್ದುದಿದಿ

ಕೊಯ್ದನು, ೯. ಇವನಿಗೆ ವೈರಿಗಳು ಅನೇಕರಾಗಿದ್ದಾರೆ. ಆದುದರಿಂದ ಈ ಶಿವನು, ಒಬ್ಬನೇ ಹಳೆಯದಾದ ಮುರುಕು ಗುಡಿಯಲ್ಲಿ, ಯಾವ ಕಾರ್ಯೋದ್ಯೋಗವೂ ಸ್ವಲ್ಪವೂ ಇಲ್ಲದೆ ಈ ರೀತಿ ವಾಸವಾಗಿದ್ದಾನೆ. ಹಗೆತನದಿಂದ ಆ ಶತ್ರುಗಳೂ ಅವರ ವಂಶದಲ್ಲಿ ಹುಟ್ಟಿದವರೂ ಏನೂ ಮಾಡುವರೋ ಎಂದು ಬಲ್ಲವರಾರು ! ಏನನ್ನೂ ಅರಿಯದ (ಮುಗ್ಧನಾದ) ಈ ಶಿವನನ್ನು ತಪ್ಪದೆ ಜಾಗರೂಕತೆಯಿಂದ (ಆದ್ದರಿಂದ) ಇಲ್ಲಿಯೇ ಇದ್ದು ಎಚ್ಚರಿಕೆಯಿಂದ ಕಾದುಕೊಂಡಿರುವೆನು. ೧೦. ಇಷ್ಟುಮಂದಿ ಶತ್ರುಗಳು ಇದ್ದರೂ ಈ ಪಾರ್ವತೀಪತಿಯು ಭಯಪಡದೆ (ಯಾವುದನ್ನೂ) ಲೆಕ್ಕಿಸದೆ, ಭಯಂಕರವಾದ ಈ ಕಾಡಿನ ಮಧ್ಯದಲ್ಲಿ ಈ ಹಾಳು ದೇವಾಲಯದಲ್ಲಿ ವಿಖ್ಯಾತವಾಗಿ ಒಬ್ಬನೇ ಉಳಿದಿದ್ದಾನೆ (ಇವನು) ಅದೇನು ಧೀರನೋ ! ವ॥ ಇಷ್ಟೊಂದು ಧೀರನಾದರೂ ನಾನೂ ಕೂಡ (ಇವನ) ಸಹಾಯಕನಾಗಿ ಕಾಯುತ್ತೇನೆ ಎಂದುಕೊಂಡು ಆ ಭಕ್ತನಾದ ಕಲಿಯಾರನು ನಿರ್ಧಾರ ಮಾಡಿಕೊಂಡು, ತನಗಿರುವ ಸಮಸ್ತ ಹಣ, ಬಂಗಾರವೇ ಮೊದಲಾದ ವಸ್ತುವೆಲ್ಲವನ್ನು ಸ್ವಲ್ಪವೂ ವಂಚನೆ ಮಾಡದೆ ತರಿಸಿ ಆ ದ್ರವ್ಯವನ್ನೆಲ್ಲ ವ್ಯಯಮಾಡಿ, ಅತಿ ಗಟ್ಟಿಯಾದ ಮನೋಹರವಾದ ದೇವಾಲಯ, ಕಳಶ, ಗೋಪುರ, ಚೌಕಟ್ಟು (ದ್ವಾರಬಂಧ). ಕದ, ಮಂಟಪಗಳ ಸಮೂಹ, ಕೋಟೆ, ದೊಡ್ಡ ಬೀದಿ, ಅಗಳುಗಳೇ ಮೊದಲಾದವುಗಳನ್ನು ಯಥಾ ಸಾಂಗವಾದದ್ದೆನ್ನುವಂತೆ ನಿರ್ಮಾಣ ಮಾಡಿಸಿದನು. ದೊಡ್ಡ ದೊಡ್ಡ ಕೊತ್ತಳಗಳನ್ನು ಕಟ್ಟಿಸಿ (ಅವುಗಳ ಮೇಲೆ)

---

1 ಳ (ಚ, ಗ, ಆ)

ಮೊದಲಾದೆಲ್ಲಮುಮನೆಡೆಗೆಡೆಗೆ ತರಂಗೊಳಿಸಿಯುಂ ಪುರಮಧ್ಯದೊಳಗಾದ ವಾಪಿಕೂಪಸರೋವರೋದ್ಯಾನಪುಷ್ಪಾರಾಮಂಗಳಂ ನಿರ್ಮಿಯುಮನವಧಿಕ ನಾನಾ ಧಾನ್ಯಲವಣಮರೀಚಾದಿ ವಸ್ತುಸಂಗ್ರಹಮಂ ಸಮಕಟ್ಟಿಯುಂ ಲೋಕತ್ರಯದೊಳಾಕ್ರಮಿಸಲಾವಂಗಮಶಕ್ಯಮೆಂಬಂತೆ ದುರ್ಗಮಂ ಬಲಿಯುತ್ತಮಾ ಭಕ್ತನಾಗಳ್—

ಕೂರಸಿಯಾಂತು ಬರೆ ವೀರಭಟವರ್ಗಂ
ಭೇರಿ ಜಯ ಘಂಟೆಗಳ ಭೂರಿರವದಿಂದಂ
ಕಾರಿರುಳೊಳೆಚ್ಚಱಿಸುತೋರಣದಿ ಸುತ್ತು
ತ್ತಾರುತುಱಿ ದುರ್ಗಮನುದಾರಮತಿ ಕಾದಂ ೧೧

ಎತ್ತಿದ ಪಂಜುಗಳುರಿ ಬೆಳ
ಗೆತ್ತಂ ಮಿಸುಗುವಿನಮೆಳ್ಚಱಿಳ್ತಱಿನುತ್ತಂ
ಬಿತ್ತರದಿನಾರ್ದು ತಿರುಗುತೆ
ಸುತ್ತಂ ಸಲೆ ಕೋಟೆಗಾದನಚಳಿತ ಧೀರಂ ೧೨

ದೊಡ್ಡ ದೊಡ್ಡ ಫಿರಂಗಿಗಳನ್ನು ಅಳವಡಿಸಿದನು. ಅನೇಕ ಕೋಟೆದೆನೆಗಳಲ್ಲಿ ಬಾಣಗಳನ್ನು ಹೊಡೆಯುವ ಕಿಂಡಿಗಳನ್ನು ಮಾಡಿಸಿದನು. ಚೂಪಾಗಿ ಕೆತ್ತಿಸಿದ ? ದೊಡ್ಡ ದೊಡ್ಡ ತೊಲೆಗಳನ್ನೂ, ಕಲ್ಲು, ಗುಂಡು, ಕವಣೆ, ಹುರಿಯುವ ಮಳಲು (ವೈರಿಗಳು ಬಂದಾಗ ಹುರಿದು ಅವನ ಮೈಮೇಲೆ ಎರಚುವುದಕ್ಕಾಗಿ ಸಂಗ್ರಹಿಸುವ ಮಳಲು), ಮದ್ದಿನ ತಿದಿಯೇ ಮೊದಲಾದುವೆಲ್ಲವನ್ನು ಆಯಾಯ ಸ್ಥಳದಲ್ಲಿ ಸಾಲುಸಾಲಾಗಿ, ಇಡಿಸಿದನು. ಆಳವಾದ ಕಪಿಲೆಬಾವಿ, ಸೇದುವಬಾವಿ, ಸರೋವರ, ಉದ್ಯಾನವನ ಹೂದೋಟಗಳನ್ನು ನಿರ್ಮಾಣ ಮಾಡಿಸಿದನು. ಅಪಾರವಾದ ನಾನಾವಿಧವಾದ ಧಾನ್ಯ, ಉಪ್ಪು, ಮೆಣಸುಗಳೇ ಮೊದಲಾದ ಪದಾರ್ಥಗಳ ಸಂಗ್ರಹವನ್ನು ವ್ಯವಸ್ಥೆಗೊಳಿಸಿದನು. ಮೂರು ಲೋಕಗಳಲ್ಲಿ (ಇವನನ್ನು) ಆಕ್ರಮಿಸಲು ಯಾವನಿಗೂ ಶಕ್ಯವಿಲ್ಲವೆಂಬಂತೆ ಕೋಟೆಯನ್ನು ಬಲಪಡಿಸಿದನು. ಆಗ—೧೧. ಉದಾರ ಬುದ್ಧಿಯುಳ್ಳ ಕಲಿಯಾರನು ರಾತ್ರಿಯ ಸಮಯದಲ್ಲಿ ಪರಾಕ್ರಮಶಾಲಿಗಳಾದ ಕಾಲಾಳ್ಗಳ ಸಮೂಹವು ತೀಕ್ಷ್ಣವಾದ ಖಡ್ಗವನ್ನು ಧರಿಸಿ ಬರುತ್ತಿರಲು, ನಗಾರಿ ಜಾಗಟೆಗಳ ಅಧಿಕವಾದ ಶಬ್ದದಿಂದ ಎಚ್ಚರಿಕೆಯನ್ನುಂಟು ಮಾಡುತ್ತ, ಕ್ರಮವಾಗಿ (ಆ ಶಿವಾಲಯವನ್ನು) ಸುತ್ತುವರಿಯುತ್ತ, ಗಟ್ಟಿಯಾಗಿ ಕೂಗುತ್ತ, ಚೆನ್ನಾಗಿ ಕೋಟೆಯನ್ನು ಕಾಯ್ದನು. ೧೨. ಸ್ಥಿರವಾದ ಧೈರ್ಯದ ಕಲಿಯಾರನು ಎತ್ತಿದ ಪಂಜುಗಳ ಉರಿಯ ಬೆಳಕು ಎಲ್ಲ ಕಡೆಗೂ ಪ್ರಕಾಶಿಸುವ ಹಾಗೆ ಮಾಡುತ್ತ, ಎಚ್ಚರ ! ಎಚ್ಚರ ! ಎಂದೆನ್ನುತ್ತ ಕೂಗಿ ಪ್ರಕಟ

ವ॥ ಅಂತು ಬೆಳಗಪ್ಪನ್ನೆಗಂ ಕಾದು ಪಲಕೆಲವು ದಿನಂಗಳಂ ಸವೆಸುತ್ತಿರೆ ನಿಜಧನವನಿತುಂ ತೀರೆ ಸಂಬಳಂಬಡೆಯದೊಡನೆ ಕೋಟೆಗಾವ ಸುಭಟರೆಲ್ಲರ್ಬಿಟ್ಟುಪೋಗೆ ಧೈರ್ಯಂಗುಂದದೊರ್ವನೆ ಬಹುಬಲಮಿರ್ಪುದೆಂಬಂತಾಳ್ವರಿಯ ಮೇಲೆ ನಿಶಿಯೊಳ್ಗಳಬಳಂದೋಱಿಗರ್ಜಿಸಿ—

ಉಡಿಗಂಟೆ ಢಣ ಢಣ ಧ್ವನಿ
ಗುಡೆ ಘುಲಘುಲಕೆಂದು ಪಲಕಮುಲಿವುತ್ತಿರೆ ಕಾ
ಲ್ದೊಡರದು ಝಣಝಣಸುತ್ತಿರೆ
ಪಿಡಿದಸಿಯುಂ ಪಂಜಸಲ್ಲಿ ಬಳಸುತ್ತಿರ್ಪಂ ೧೩

ವ॥ ಆಗಳ್ ತಾಂ ಸಂಗ್ರಹಂಗೆಯ್ದೆಣ್ಣೆಯೆಲ್ಲಂ ತೀರಲೊಡಮಿಂಧನಂಗಳಂ ತಂದುಪೊತ್ತಿಕ್ಕಿ ಪೇರುರಿಗೆಯ್ದು ಪಿಡಿದು ಮುನ್ನಿನಂತಬ್ಬರಿಸಿ ಬೊಬ್ಬೆಗೊಟ್ಟು ಕತಿಪಯದಿನಂಗಳ್ಕಳಿಯೆ ಕಾವುತ್ತಿರ ಲೊಡನಡುಗರ್ಬುಗಳುಂ ಸವೆಯೆ ಮರ ಕೊರಂಟು ಪುಲ್ಸರವಿ ಪೊದೆದುಟ್ಟ ವಸನಂ ಮೊದಲಾ ದವಱಿಂ ಪೊತ್ತಿಸಿದುರಿಗಳಿಂ ಪ್ರಜ್ವಳಿಸುತಂತಂತೆ ಕೋಟೆಗಾವುತ್ತಮಿರ್ಪಿನಮದುವುಂ ಸವೆಯುಲೊಡನೆ—

ಗೊಳಿಸುತ್ತ ಸುತ್ತಲೂ ತಿರುಗುತ್ತ ಚೆನ್ನಾಗಿ ಕೋಟೆಯನ್ನು ಕಾಯ್ದನು. ವ॥ ಈ ರೀತಿ ಬೆಳಗಾಗುವರೆಗೆ ಕಾಯ್ದು ಅನೇಕ ದಿನಗಳನ್ನು ಕಳೆದ ನಂತರ ತನ್ನ ಐಶ್ವರ್ಯವೆಲ್ಲ ತೀರಿ ಹೋಯಿತು. ಕೋಟೆಯನ್ನು ಕಾಯುವ ಒಳ್ಳೆಯ ಶೂರುರುಗಳೆಲ್ಲ ಸಂಬಳವನ್ನು ಕೊಡ ಲಾಗದ ಇವನನ್ನು ಬಿಟ್ಟು ಹೋದರು. ಕಲಿಯಾರನು ಇದರಿಂದ ಧೈರ್ಯಗುಂದದೆ, ಒಬ್ಬನೇ ಬಹು ಸೈನ್ಯ ಇರುವುದೆಂಬಂತೆ ಬತೇರಿ (ಆಳ್ವೇರಿ)ಮೇಲೆ ರಾತ್ರಿಯ ಸಮಯ ದಲ್ಲಿ ಗದ್ದಲ ಮಾಡುತ್ತ, ಗರ್ಜಿಸುತ್ತ—೧೩. ನಡುವಿನ ಸುತ್ತಲೂ ಕಟ್ಟಿಕೊಂಡಿರುವ ಗಂಟೆಗಳು ಢಣ ಢಣ ಎಂಬ ಶಬ್ದವನ್ನು ಮಾಡುತ್ತಿದ್ದವು. ಹಲಗೆಯು ಘುಲಘುಲಕು ಎಂದು ಶಬ್ದವನ್ನು ಮಾಡುತ್ತ ಇದ್ದವು. ಕಾಲಿನಲ್ಲಿ ಕಟ್ಟಿದ ಪೆಂಡೆ ಗೆಜ್ಜೆಗಳು ಝಣ್ ಝಣ್ ಎಂಬ ಶಬ್ದ ಮಾಡುತ್ತಿದ್ದವು. ಹೀಗೆ (ಕೈಯಲ್ಲಿ) ಖಡ್ಗವನ್ನು ಹಿಡಿದು ಅಲ್ಲಿ ಪಂಜನ್ನು ಬೆಳಗುತ್ತ ಇದ್ದನು. ವ॥ ಅಷ್ಟು ದಿನಕ್ಕೆ ತಾನು ಸಂಗ್ರಹಿಸಿಟ್ಟಿದ್ದ ಎಣ್ಣೆ ಯೆಲ್ಲವೂ ತೀರಿ ಹೋಗಲಾಗಿ ಕೂಡಲೇ ಸೌದೆಯನ್ನು ತಂದು ಹೊತ್ತಿಸಿ ದೊಡ್ಡ ಉರಿ ಯನ್ನು ಮಾಡಿ ಹಿಡಿದು, ಮೊದಲಿನ ಹಾಗೆಯೇ ಆರ್ಭಟಿಸುತ್ತಿದ್ದನು; ಬೊಬ್ಬೆ ಹಾಕು ತ್ತಿದ್ದನು. ಹೀಗೆ ಕೆಲವಾರು ದಿನಗಳು ಕಳೆಯುವವರೆಗೂ ಕಾಯುತ್ತ ಇರಲು, ಅನಂತರ ಸೌದೆಯೂ ತೀರಿ ಹೋಯಿತು. ಮರ, ಕೊರಡು, ಹುಲ್ಲು ಹಗ್ಗ, ಹೊದ್ದು ಕೊಂಡಿದ್ದ ಬಟ್ಟೆ ಬರೆ ಮೊದಲಾದವುಗಳಿಂದ ಹೊತ್ತಿಸಿದ ಉರಿಯಿಂದ ಬೆಳಕು ಮಾಡುತ್ತ ಹೇಗೋ ಹಾಗೆ ಕೋಟೆಯನ್ನು ಕಾಯುತ್ತ ಇರುತ್ತಿರಲು ಕೊನೆಗೆ ಅದೂ ಕೂಡ ಇಲ್ಲದಂತಾ

ಉರಿವೆಳಗಿಲ್ಲದೆ ಮರ್ಬಾ
ವರಿಸಲ್ಕಿದೆ ರಿಪುಗಳಱಿದೊಡೇಂ ಮೋಸಂಗೆ
ಯ್ವರೊ ಸಾಧನಮಿದಕಿಲ್ಲೆಂ
ದುರವಣಿಸುತೆ ನೆನೆದನೊಂದುಪಾಯಮನಾಗಳ್ ೧೪

ತಲೆನವಿರಂ ಪೊತ್ತಿಸಿ ಕ
ಳ್ತಲೆಯುಂ ಕಡೆಗಣಿಪೆನೆಂದು ಬಗೆದಾ ಭಕ್ತಂ
ನೆಲೆವೆಚ್ಚಿದ ಧೈರ್ಯದಿನು
ಜ್ವಲ ಕಚಮಂ ಪೊಸೆದು ಜೆಡೆಯೊಡರ್ಚಿದನಾಗಳ್ ೧೫

ವ॥ ಅಂತು ಜೆಡೆವೆಣೆದಾತ್ಮಕಚೌಘಮಂ ಸೊಡರ್ವತ್ತಿಸಿ ಪೆರ್ವೆಳಗಂ[1]ಗೆಯ್ದಾಳ್ವರಿಯ ಮೇಲೆ ತಿರುಗುತ್ತುಮಿರೆ—

ಧಗಧಗಧಂಧಗಧ್ವನಿ ಸಮೃದ್ಧಸಮುದ್ಧತ ವಿಸ್ಫುಲಿಂಗ ಸಂ
ಘಗತ ಧನಂಜಯಂ ನಿಮಿರ್ದು ದಳ್ಳುರಿ ಸೂಸಿ[2] ಶಿರೋಜವೃಂದಮಂ
ಬಗೆಮಿಗೆ ಪೊತ್ತಿನೆತ್ತಿಯ ಸರೋಜದ ಜ್ಯೋತಿಯೆ ಪೊಣ್ಮಿದಂತೆ ನೆ
ಟ್ಟಗೆ ನೆಗೆದೀಳ್ದು ಚುರ್ಚುತಿರೆ ಭಕ್ತನ ಮಸ್ತಕಮಂ ಕ್ಷಣಾರ್ಧದೊಳ್ ೧೬

ಇಂದುದೇವಸಿಂಧುಜೂಟನದ್ರಿಜಾಸಮನ್ವಿತಂ
ನಂದಿವಾಹನಗ್ನಿಲೋಚನಂ ಫಣೀಂದ್ರಭೂಷಣಂ

ಯಿತು. ಒಡನೆಯೇ—೧೪. ಉರಿಯ ಬೆಳಕು ಇಲ್ಲದೆ ಕತ್ತಲೆಯು ಮುಸುಕುವುದಕ್ಕೆ ಪ್ರಾರಂಭವಾಗತೊಡಗಿದೆ. ಶತ್ರುಗಳು (ಈ ವಿಷಯವನ್ನು) ತಿಳಿದರೆ, ಏನು ಮೋಸ ಮಾಡುವರೋ ! ಉರಿಯ ಬೆಳಕನ್ನು ಮಾಡಲು ಇರುವ ಸಾಧನವಿಲ್ಲದಂತಾಯಿತು. ಎಂದುಕೊಂಡು ಪೇಚಾಡಿಕೊಳ್ಳುತ್ತ ಒಂದು ಉಪಾಯವನ್ನು ನೆನೆದನು. ೧೫. ಆ ಭಕ್ತನು (ನನ್ನ) ತಲೆಯ ಕೂದಲನ್ನು ಹೊತ್ತಿಸಿ ಕತ್ತಲೆಯನ್ನು ದೂರ ಮಾಡುತ್ತೇನೆ ಎಂದು ಯೋಚಿಸಿ, ಸ್ಥಿರಗೊಂಡ ಧೈರ್ಯದಿಂದ ತನ್ನ ಉಜ್ವಲವಾದ ಕೂದಲುಗಳನ್ನು ಹೊಸೆದು ಆಗ (ಉದ್ದನಾಗಿ) ಜಡೆಯನ್ನು ಮಾಡಿದನು. ವ॥ ಆ ರೀತಿ ತನ್ನ ಕೂದಲುಗಳನ್ನು ಜಡೆಯಾಗಿ ಹೆಣೆದು ಅದಕ್ಕೆ ದೀಪ ಹಚ್ಚಿ ದೊಡ್ಡ ಬೆಳಕನ್ನಾಗಿ ಮಾಡಿಕೊಂಡು ಕೋಟೆಯ ಬತೇರಿಯ ಮೇಲೆ ತಿರುಗುತ್ತಿರಲಾಗಿ—೧೬-೧೭. (ಆಗ) 'ಧಗಧಗ ಧಂಧಗ' ಎಂಬ ಶಬ್ದದಿಂದ ಅಭಿವೃದ್ಧಿಗೊಂಡು ಮೇಲಕ್ಕೆ ಹಾರುತ್ತಿರುವ ಕಿಡಿಗಳ ಸಮೂಹವನ್ನು ಹೊಂದಿದ ಅಗ್ನಿಯು ಕುಡಿಚಾಚಿ ಹರಡಿ ಹೆಚ್ಚಾದ ಜ್ವಾಲೆಯು ಪ್ರಸಾರಗೊಂಡಿತು. ಕೂದಲಿನ ಸಮೂಹವನ್ನು, (ಆ ಬೆಂಕಿಯು) ಯಥೇಚ್ಛವಾಗಿ ಹೊತ್ತಿಕೊಂಡು, ನೆತ್ತಿಯಲ್ಲಿರುವ ಸಹಸ್ರಾರವೆಂಬ ಹೆಸರಿನ ಕಮಲ

1 ಗು(ಗ) 2 ಸೆ(ಮು, ಗ)

ಕುಂದಚಂದನಾರ್ಜುನಾಂಗನುಗ್ರ ನೀಲಕಂಧರಂ
ಚೆಂದದಿಂ ಪ್ರಸನ್ನನಾಗಿ ಮುಂದೆ ನಿಂದನೀಶ್ವರಂ ೧೭

ವ॥ ಅಂತು ಶಿವಂ ಪ್ರಸನ್ನನಾಗಿ ಕಡೆಗಣ್ಣ ಕರುಣಾರಸವರ್ಷದೊಳ್ತಲೆನವಿರುರಿಯಂ ನಂದೆ ವೊಯ್ದುಳ್ದಿತೆಗೆದು ಬಿಗಿದಾಲಿಂಗಿಸಿ ಬೋಳೈಸಿ ನುತಿಸಿ ನಿನ್ನ ನಿಶ್ಚಳ ಭಕ್ತಿವೃತ್ತಿಗಾನೊಚ್ಚತಂ ಮೆಚ್ಚಿದೆಂ ವರಮಂ ಬೇಳ್ಪುದೆನೆ ಭಕ್ತಂ ಮಂದಸ್ಮಿತಮುಖಾರವಿಂದನಾಗಿ ಪೊಡಮಡುತ್ತಿಂತೆಂದಂ—

ನಿನ್ನ ಪದಪದ್ಮಸೇವಾ
ಸನ್ನುತ ಸಾಮ್ರಾಜ್ಯಮೆನಗೆ ತೀವಿರೆ ಪೆಜಿತೊಂ
ದಿನ್ನಾವುದೆರೆವ ವರ ಮದ
ಜೆನ್ನೀನೀವನ್ಯ[1]ವರಮನೊಲ್ಲೆನುಮೇಶಾ ೧೮

ವ॥ ಎಂದು ಮುಗುಳ್ದಿಂತೆಂದಂ—

ಪೊಡವಿಗತಿಶಯದ ದುರ್ಗಂ
ಮೃಡ ಕೇಳ್ಕೈಲಾಸಮಲ್ಲಿ ಬಾಳ್ವುದನುಳಿದೀ
ಯಡವಿಯೊಳಿರ್ಪುದು ಯುಕ್ತಮೆ
ಬಡವನವೋಲ್ ಪೋಪಮಲ್ಲಿಗೇಳ್ವಪದಿಂದಂ ೧೯

ದಲ್ಲಿರುವ ಪರಂಜ್ಯೋತಿಯೋ ಹೊರ ಹೊರಟು ಬಂದಂತೆ, ಉರಿಯು ಚಟ್ಟನೆ ಮೇಲಕ್ಕೆ ನೆಗೆದು ಇಳಿದು ಆ ಭಕ್ತನಾದ ಕಲಿಯಾರನ ಮಸ್ತಕವನ್ನು ಸುಡತೊಡ ಗಿತು. ಕ್ಷಣಾರ್ಧದಲ್ಲಿ ಚಂದ್ರ ಮತ್ತು ಗಂಗೆಯರನ್ನು ಜಡೆಯಲ್ಲಿ ಧರಿಸಿದವನೂ, ಪಾರ್ವತೀ ಸಮೇತನಾದವನೂ, ನಂದೀಶ್ವರನನ್ನೇರಿದವನೂ ಅಗ್ನಿನೇತ್ರ, ನಾಗಾಭರಣ ಗಳಿಂದಲೂ, ಮೊಲ್ಲೆಯ ಹೂವು ಶ್ರೀಗಂಧಗಳಂತೆ ಶುಭ್ರ (ಅರ್ಜುನ)ವಾದ ಅಂಗವುಳ್ಳ ವನೂ, ಉಗ್ರವಾದ ವಿಷದಿಂದ ನೀಲವರ್ಣದಿಂದ ಶೋಭಿಸುವ ಕಂಠವುಳ್ಳವನೂ ಆದ ಶಿವನು ಪ್ರತ್ಯಕ್ಷವಾಗಿ ಮುಂದೆ ನಿಂತನು. ವ॥ ಈ ರೀತಿ ಶಿವನು ಪ್ರತ್ಯಕ್ಷನಾಗಿ ಕರುಣ ವೆಂಬ ರಸದ ಮಳೆಯನ್ನು ತಲೆಗೂದಲಿನ ಜ್ವಾಲೆಯು ಆರಿ ಹೋಗುವಂತೆ ಸುರಿಸಿದನು. (ಆ ಕರುಣಾರಸದಲ್ಲಿ ಅವನನ್ನು) ಅದ್ದಿ ತೆಗೆದು ಬಿಗಿಯಾಗಿ ತಬ್ಬಿಕೊಂಡು ತಲೆಯ ಮೇಲೆ ಕೈಯಾಡಿಸಿ, (ಅವನನ್ನು) ಶ್ಲಾಘನೆ ಮಾಡಿ 'ನಿನ್ನ ನಿಶ್ಚಲವಾದ ಭಕ್ತಿ ವ್ಯವಹಾರಕ್ಕೆ ನಾನು ನಿಜವಾಗಿ ಮೆಚ್ಚಿದ್ದೇನೆ. ವರವನ್ನು ಬೇಡುವುದು' ಎನ್ನಲು ಭಕ್ತನು (ಕಲಿಯಾರನು) ಮುಗುಳುನಗೆಯಿಂದ ಕೂಡಿದ ಮುಖ ಕಮಲವುಳ್ಳವನಾಗಿ, ನಮಸ್ಕಾರ ಮಾಡುತ್ತ ಹೀಗೆ ಹೇಳಿದನು : ೧೮–೧೯. "ಉಮಾಪತಿಯೇ, ನಿನ್ನ ಪಾದಕಮಲವನ್ನು ಸ್ತೋತ್ರಮಾಡುವಿಕೆಯೆಂಬ ರಾಜತನವು ನನಗೆ ಪ್ರಾಪ್ತವಾಗಿರು ವಾಗ ಬೇರೊಂದು ಬೇಡುವ ವಸ್ತುವಾದರೂ ಯಾವುದುಂಟು ? ಆದುದರಿಂದ ನೀನು ಕೊಡುವ ಬೇರೆ ವರವನ್ನು ಒಲ್ಲೆನು. ಪರಮೇಶ್ವರನೇ, ಕೈಲಾಸವು ಭೂಮಿಗೆ

1 ನು(ಮು)

ವ॥ ಎಂಬನಿತಱೊಳ್ಬಂದ ನವೀನ ಮಣಿಮಯ ಪುಷ್ಪಕಮನವನಭವನೊಡನೇಱಿ ಮೃಡಾಗಾರಸಹಿತಂ ಕೈಲಾಸಕ್ಕೆ ತಳರ್ದಲ್ಲಿರುತ್ತಮಿರೆ ನಿರೀಕ್ಷಿಸಿ—

ಆ ಕಲಿಯಾರಾಖ್ಯನನಾ
ಲೋಕೈಕಮಹೇಶನೊಲ್ದು ಕೊಂಡಾಡಿ ಗಣಾ
ನೀಕದೊಡನ್ನೈದೆ ಪೊಗಳ್ದು ಪಿ
ನಾಕಿ ಸುರರ್ಪೊಗಳೆ ನಿತ್ಯನಿಜಪದವಿತ್ತಂ ೨೦

ಎಂದಿಂತು ದೀಪದ ಕಲಿಯ
ಚಂದದ ಕಥನಮನುದಾರಮತಿಯೊರೆವುತೆ ಮ
ತ್ತೊಂದು ಮೃಡಭಕ್ತಕಥನಮ
ನಂದೊರೆದಂ ಬಸವರಾಜನೆಂತೆನೆ ಧರೆಯೊಳ್ ೨೧

[ನಾಟ್ಯನಮಿತ್ತ[1]ಂಡಿಯ ಕಥೆ]

ಮಂಡಿತ ಮಹಿಮೆಯನಿರದೊಳ
ಕೊಂಡಾ ಕಾಂಚಿಯೊಳೆ ದುರಿತಸರಸಿಜವನವೇ
ದಂಡವರಂ ನಾಟ್ಯನಮಿ
ತ್ತ[2]ಂಡಿಯೆನಿಪ್ಪೂರ್ವನಿರ್ಪನೀಶ್ವರಭಕ್ತಂ ೨೨

ಅತಿಶಯವಾದದ್ದೆನಿಸಿ ಅನ್ಯರ ಆಕ್ರಮಣಕ್ಕೆ ಅಸಾಧ್ಯವಾದದ್ದೆನಿಸಿದೆ. ಅಲ್ಲಿ (ನೀನು) ಬದುಕುವುದನ್ನು ಬಿಟ್ಟು ದರಿದ್ರನಂತೆ ಈ ಅಡವಿಯಲ್ಲಿರುವುದು ಯೋಗ್ಯವಾದದ್ದೇ ಹೇಗೆ ? ಆ ಕೈಲಾಸಕ್ಕೆ ಹೋಗೋಣ ಶೀಘ್ರವಾಗಿ ಏಳು.'' ವ॥ ಹೀಗೆನ್ನುತ್ತಿರುವಷ್ಟರಲ್ಲಿ ಅಲ್ಲಿಗೆ ಬಂದ ನೂತನವಾದ ರತ್ನಖಚಿತವಾದ ದೇವತೆಗಳ ವಿಮಾನವನ್ನು ಆ ಕಲಿಯಾರನು ಶಿವನೊಡನೆ ಹತ್ತಿ ಆ ದೇವಸ್ಥಾನ ಸಹಿತವಾಗಿ ಕೈಲಾಸಕ್ಕೆ ಹೊರಟುಹೋಗಿ ಅಲ್ಲಿ ಇರುತ್ತಿರಲಾಗಿ, (ಶಿವನು ಅವನನ್ನು) ನಿರೀಕ್ಷಿಸಿ—೨೦. ಆ ಸಮಸ್ತ ಲೋಕಗಳಿಗೆಲ್ಲ ಒಬ್ಬನೇ ಸ್ವಾಮಿಯಾದ ಪಿನಾಕವೆಂಬ ಧನುಸ್ಸನ್ನು ಧರಿಸಿರುವ ಶಿವನು ಆ ಕಲಿಯಾರನೆಂಬ ಹೆಸರಿನ ಭಕ್ತನಿಗೆ ಒಲಿದು ಪ್ರಮಥಗಣಗಳೊಡನೆ ಹೊಗಳಿದನು. ದೇವತೆಗಳು ಹೊಗಳುತ್ತಿರಲಾಗಿ ಅವನಿಗೆ ನಿತ್ಯ ಪದವಿಯನ್ನು (ಮೋಕ್ಷವನ್ನು) ಕೊಟ್ಟನು. **ನಾಟ್ಯನಮಿತ್ತಂಡಿಯ ಕಥೆ** : ೨೧-೨೨. ಈ ರೀತಿಯಾಗಿ ದೀಪದ ಕಲಿಯಾರನ ಚೆಂದವಾದ ಕಥೆಯನ್ನು ಉದಾರಮತಿಯಾದ ಬಸವರಾಜನು ಹೇಳುತ್ತ ಮತ್ತೊಬ್ಬ ಪರಮೇಶ್ವರ ಭಕ್ತನ ಕಥೆಯನ್ನು ಆಗ ಹೇಳಿದನು. ಅದು ಹೇಗೆಂದರೆ—ಭೂ ಮಂಡಲದಲ್ಲಿರುವ ಆ ಕಾಂಚಿಪಟ್ಟಣದಲ್ಲಿಯೇ ಮಹಿಮೆಯಿಂದ ಅಲಂಕಾರಗೊಂಡಿರುವ ಪಾಪವನವೆಂಬ ಕಮಲವನಕ್ಕೆ ದೊಡ್ಡ ಆನೆಯೋ

1 ತ್ತ(ಮು, ಜ) 2 ತ್ತಾ(ದ, ಚ)

ವ॥ ಆ ಮುಗ್ಧಭಕ್ತನೊಂದುದಿನಮೇಕಾಮ್ರನಾಥಾಲಯಕ್ಕೇಳ್ತಂದಲ್ಲಿ ಮಿಸುಪ ತಾಂಡವ [1]ಮೂರ್ತಿಯ[1] ಮೂರ್ತಿಯುಂ ಕಂಡಾರ್ತಿವಟ್ಟು ನೋಡಿ ತಳಮಳಗಃಗೊಂಡು ಕಳವಳಿಸಿ ಮಱುಗಿ ತತ್ಪೂಜಕನಪ್ಪ ಪಾರ್ವನಂ ಕರೆದವನೊಡನಿಂತೆಂದಂ—

ತನು ಮೂದಾಣದೆ ಕೊಂಕಿದತ್ತುಱುಗಿದತ್ತೀ ಮಧ್ಯಮಿೂ ವಕ್ತ್ರ ಜೀ
ವನಜಾತಂ ಬೆಱ[2]ತಿರ್ಪುದಯ್ಯೊ ನುಲಿಗೊಂಡತ್ತೀ ಕೊರಲ್ ಪಾದಮೊಂ
ದುನಿತಾಂತಂ ನೆಗೆದಿರ್ದುದಿಲ್ಲಿ ಮಗುಳ್ದೊಂದೂಱಿರ್ದುದೀ ಧಾತ್ರಿಯೊ
[3]ಳ್ನಿನಗೇವೇಳ್ದಪೆನೀ ಶಿರಂ ಕೆಲಕೆ ಬಾಗಿತ್ತಕ್ಕಟೀ ಪಾಣಿಗಳ್ ೨೩

ಕೆಲಕೆಲಕೆ ಕೊಃಕಿ ನೂಂಕಿದು
ವಲರ್ಗಣ್ದಕ್ಕಾಲಿವಿಳ್ದವೀ ಜಡೆಮುಡಿ ಬಿ
ಟ್ಟೊಲೆದಪುದಿದಾವ ರೋಗಂ
ಬಲಿದುದು ಪಶುಪತಿಗೆ ಪೇಳ್ವುದಿದನೆನಗೀಗಳ್ ೨೪

ವ॥ ಎನೆ ಕೇಳ್ದಾ ಸಿತಗಪಾರ್ವನಂತಃಸ್ಮಿತನಾಗಿ ಗಂಗಾಧರಂಗೆ ಮಹಾ[3]ವಾತರೋಗಂ ಸಮ

ಪಾದಿಯಲ್ಲಿರುವ 'ನಾಟ್ಯನಮಿತ್ತಂಡಿ' ಎಂಬ ಒಬ್ಬ ಪರಮೇಶ್ವರ ಭಕ್ತನಿದ್ದನು. ವ॥ ಆ ಮುಗ್ಧ ಭಕ್ತನು ಒಂದುದಿನ 'ಏಕಾಮ್ರನಾಥ' ಎಂಬ ಹೆಸರಿನ ಶಿವನ ದೇವಾಲಯಕ್ಕೆ ಬಂದು, ಅಲ್ಲಿ ಶೋಭಿಸುವ ತಾಂಡವಮೂರ್ತಿಯಾದ ಶಿವನ (ನೃತ್ಯಭಂಗಿಯ) ಆಕಾರ ವನ್ನು ಕಂಡು, ಮನೋವ್ಯಥೆಗೊಂಡು ನೋಡಿ, ವ್ಯಾಕುಲ ಹೊಂದಿದವನಾಗಿ, ಸಂಕಟ ಪಟ್ಟು, ದುಃಖಮಾಡಿ, ಆ ದೇವರನ್ನು ಪೂಜೆ ಮಾಡುತ್ತಿದ್ದ ಬ್ರಾಹ್ಮಣನನ್ನು ಕರೆದು, ಅವನೊಡನೆ ಹೀಗೆಂದನು : ೨೩-೨೪. (ಈ ಶಿವನ) ದೇಹವು ಮೂರು ಸ್ಥಳದಲ್ಲಿ ಕೊಂಕುಗೊಂಡಿದೆ; ನಡುವು ತಿರುಚಿಕೊಂಡಿದೆ; ಈ ಮುಖದ ರಸವೆಲ್ಲ ಒಣಗಿರುವುದು; ಅಯ್ಯೋ ! ಈ ಕೊರಳು ನುಲಿದುಕೊಂಡಿದೆ; ಒಂದುಕಾಲು ಅತ್ಯಂತವಾಗಿ ಮೇಲಕ್ಕೆದ್ದು ನಿಂತಿದೆ; ಮತ್ತೊಂದು ಕಾಲು ಭೂಮಿಯಲ್ಲಿ ಊರಿಕೊಂಡಿದೆ; ನಿನಗೆ ಏನು ಹೇಳಲಿ ! ಈ ತಲೆಯಾದರೋ ಮತ್ತೊಂದು ಕಡೆಗೆ ಬಾಗಿಕೊಂಡಿದೆ; ಅಕ್ಕಟ ! ಈ ಕೈಗಳು ಒಂದೊಂದು ಕಡೆಗೆ ಡೊಂಕುಗೊಂಡು ಚಾಚಿದವುಗಳಾಗಿವೆ; ಹೂವಿನಂತಿರುವ ಕಣ್ಣು ಗಳು ಜೋಲುಬಿದ್ದು ಹೋಗಿವೆ; (ಗುಳಿ ಬಿದ್ದು ಹೋಗಿವೆ); ಜಡೆಮುಡಿಯಾದರೋ ಬಿಚ್ಚಿ (ಹರಡಿ)ಕೊಂಡು ಒಲೆದಾಡುತ್ತಿರುವುದು; ಪಶುಪತಿಗೆ ಇದಾವ ರೋಗ ಬಲ ಗೊಂಡಿದೆ ? ಇದನ್ನು ನನಗೆ ಈಗಲೇ ಹೇಳಬೇಕು (ಎಂದನು.) ವ॥ ಹೀಗೆನ್ನಲು ವಂಚಕನಾದ ಆ ಬ್ರಾಹ್ಮಣನು (ಪೂಜಾರಿಯಾದ ಬ್ರಾಹ್ಮಣನು) ಒಳಗೊಳಗೆ ಮುಗುಳು

1 × (ಗ, ಚ) 2 ಗ (ಮು) 3 + ತಿ(ಜ)

ನಿಸಿದುದಱಿನೊಡಲಿಂತಾದುದೆಂದುಸುರೆ ಭಕ್ತಂ ಕೇಳ್ದಡವಳಲ್ಗೊಂಡೀ ರುಜೆಮಾಣ್ಬಂತೆ ಗೆಯ್ವರೊಳರೆ ಯೆನಲೊಡಮಾನೇ ಮಾಣ್ಬಂತೆ ಗೆಯ್ಯಲ್ಬಲ್ಲೆನೆನೆ ಬಾಯ್ಬಿಡುತವಂಗಿಂತೆಂದಂ—

ಎನಗುಳ್ಳ ಧನಮನನಿತಂ
ನಿನಗಿತ್ತಪೆನೀಗಳೀ ಗದಂ ಮಾಣ್ದೊಡೆ ಮ
ದ್ವನಿತೆಯುಮಣುಗನುಮಾನುಂ
ನಿನಗೆ ವಲಂ ತೊಳ್ತಿರಾಗಿ ಸೇವಿಪೆವನಿಶಂ ೨೫

ವ॥ ಎಂದು ಚಲ್ಲವತ್ತ ಪಾರ್ವನನೆಲ್ಲಂದದಿನೊಡಂಬಡಿಸಿ ನಿಜಾಲಯದೊಳುಳ್ಳ ಸರ್ವಸ್ವಮುಂ ವಿಕ್ರಯಂ ಗೆಯ್ದೊದವಿದನಿತು ಧನಮುಮಂ ಕೊಟ್ಟು[2] ಬೆಜ್ಜ[3]ಂಗೆಯ್ವುದೆನೆ ತದ್ಧನಮನವಂ ಕೊಂಡು ಸಡಗರಿಸಿ ಮತ್ತಾರುಂ ಕಾಣದಂತೆ ರಹಸ್ಯಸ್ಥಾನದೊಳೇರಂಡಾರ್ಕಾದಿ ಪರ್ಣಚಿತ್ರಮೂಲಾದಿ ವಿಚಿತ್ರ ಮೂಲಿಕಾದ್ಯೌಷಧಂಗಳ್ವೆರಸಿ ವಾತಹರ ತೈಲಮಂ ಕಾಸಿ ತಂದು ತದಂಗಕ್ಕೆ ಲೇಪಿಸಿಯುಂ ಕೊಂಕಿದೆಡೆಯ ಸಂದು ಸಂದುಗಳೊಳಿಟ್ಟು ಪೊಟ್ಟಣಂಗಳಂ ಕಾಸಿ ಪಿಡಿದೊತ್ತಿಯುಂ ವಾತವಾರಣೌಷಧಸಹ

ನಗೆನಕ್ಕು, ‘ (ಈ) ಗಂಗಾಧರನಿಗೆ ಹೆಚ್ಚಾದ ವಾಯುರೋಗವುಂಟಾಗಿದೆ. ಆದರಿಂದ ನೋಡುವುದಕ್ಕೆ ಹೀಗೆ ಕಾಣುತ್ತಿದೆ’ ಎಂದು ಹೇಳಲು ಭಕ್ತನಾದ ಆ ನಾಟ್ಯನಮಿತ್ತಂಡಿಯು ಕೇಳಿ, ದುಃಖಗೊಂಡು ‘ಈ ರೋಗವು ಪರಿಹಾರಗೊಳ್ಳುವಂತೆ ಮಾಡುವವರು ಇದ್ದಾರೆಯೆ’? ಎಂದನು. ಕೂಡಲೇ (ಆ ಬ್ರಾಹ್ಮಣನು) ‘ನಾನೇ ಈ ರೋಗ ಪರಿಹಾರವಾಗುವಂತೆ ಮಾಡುವುದನ್ನು ಬಲ್ಲೆನು’ ಎನ್ನಲಾಗಿ ಬಾಯ್ದೆರೆದು ಆತನಿಗೆ (ನಾಟ್ಯಮಿತ್ತಂಡಿಯು) ಹೀಗೆ ಹೇಳಿದನು : ೨೫. ‘ನನಗಿರುವ ದ್ರವ್ಯವನ್ನೆಲ್ಲ ನಿನಗೆ ಕೊಡುತ್ತೇನೆ. ಈಗಲೇ ಈ ರೋಗವು ವಾಸಿಯಾದರೆ, ನನ್ನ ಹೆಂಡತಿಯೂ, ನನ್ನ ಮಗನೂ, ನಾನೂ ನಿನಗೆ ನಿಜವಾಗಿ ಸೇವಕರಾಗಿ ಸತತವೂ ಸೇವೆ ಮಾಡುತ್ತೇವೆ.’ ವ॥ ಹೀಗೆಂದು ನಂಬಿಸಿ ತಿನ್ನುವ ಆ ಪೂಜಾರಿ ಬ್ರಾಹ್ಮಣನನ್ನು ಎಲ್ಲ ರೀತಿಯಿಂದಲೂ ಒಡಂಬಡಿಸಿ ತನ್ನ ಮನೆಯಲ್ಲಿರುವ ಸರ್ವಸ್ವವನ್ನೂ, ಮಾರಾಟ ಮಾಡಿದುದರಿಂದ ಬಂದಹಣವೆಲ್ಲವನ್ನು ತಂದು ಕೊಟ್ಟು ‘ಔಷಧವನ್ನು ಮಾಡುವುದು’ ಎಂದನು. ಆ ಬ್ರಾಹ್ಮಣನು ಆ ಹಣವನ್ನು ತೆಗೆದುಕೊಂಡು, ಸಂಭ್ರಮಗೊಂಡವನಾಗಿ ಇನ್ನಾರೂ ಕಾಣದ ಹಾಗೆ ಗುಪ್ತವಾದ ಸ್ಥಾನದಲ್ಲಿ ಹಣ್ಣಾದ ಹರಳು ಎಲೆ (ಔಡಲ ಎಲೆ) ಎಕ್ಕದ ಎಲೆಗಳೇ ಮೊದಲಾದ ಎಲೆಗಳು, ಚಿತ್ರ ಮೂಲವೇ ಮೊದಲಾದ ವಿಚಿತ್ರವಾದ ಮೂಲಿಕೆಗಳೊಡನೆ ಕೂಡಿಸಿ ವಾತರೋಗ ನಿವಾರಕವಾದ ಎಣ್ಣೆಯನ್ನು ಕಾಸಿತಂದು, ಆ ತಾಂಡವ ಮೂರ್ತಿಯ ದೇಹಕ್ಕೆ ಹಚ್ಚಿದನು. ಡೊಂಕಾದ ಸ್ಥಳದ ಸಂದು ಸಂದುಗಳಲ್ಲಿ ಬಟ್ಟೆಯ ಪೊಟ್ಟಣಗಳನ್ನು ಕಟ್ಟಿ ಒತ್ತಿ ಹಿಡಿದು ಕಾವು ಕೊಟ್ಟನು. ವಾಯುರೋಗವನ್ನು

---

2 ಬಿಜ(ಅ)

ಸಂತಪ್ತ ಸಲಿಲಂಗಳಭಿಷೇಚನಮೆಸಗಿಯುಮಿಂತು ಪಲಕೆಲವು ದಿವಸಂ ನಾನಾವಿಧ ಚಿಕಿತ್ಸೆಯ ನೊಡರ್ಚುತಿರೆ ಶಿವನೊಡಲ್ಗುಣಮಿಲ್ಲದೆಂದಿನಂತಿರೆ ನಾಟ್ಯನಮಿತ್ತಂಡಿ ಕಂಡು ಬಸವಳಿದು ಬಾಯಾಱಿ ಮಱುಗಿ—

ಗುಣಮಿನಿತಿಲ್ಲಂ ಕೇಳ್ಬ್ರಾ
ಹ್ಮಣ ನಿನ್ನೀ ಬೆಜ್ಜದಿಂದೆ ಶೂಲಿಗಿದೇಂ ಕಾ
ರಣಮೆನೆ ರೋಗಮಸಾಧ್ಯಂ
ಗುಣನಿಧಿ ವೈದ್ಯರ್ಗಿದೆಂದು ನುಡಿದಂ ಪಾರ್ವಂ ೨೬

ವ॥ ಎಂಬುದುಮಾ ಭಕ್ತಂ ಕೇಳ್ದು ಹಾ ಯೆಂದು ಹಮ್ಮೃದಂಬೋಗಿ ಮಗುಳ್ದುಂ ಮೆಲ್ಲ ನೆಚ್ಚತ್ತು ಮನಂ ನೊಂದು ಮಱುಗಿ—

ಮಾಣದು ಗಡ ರೋಗಮಿವಂ
ಪ್ರಾಣಂಗಳೆಯದಿರನೆಂತಿದಂ ನೋಳ್ಪೆಂ, ಮು
ತ್ಪ್ರಾಣಮನದಱಿಂ ಮುನ್ನಮೆ
ಮಾಣದೆ ಬಿಟ್ಟಪೆನೆನುತ್ತೆ ಬಗೆದಂ ಭಕ್ತಂ ೨೭

ವ॥ ಅಂತು ನೆನೆದು ನಿಶ್ಚೈಸಿ ಧೈರ್ಯಯುತನಾಗಿ ಕರಾಳಖಡ್ಗಮಂ ಕರತಳದಿಂ ಪಿಡಿದು ಜಡಿದು ಜವದಿಂ ತನ್ನ ಕೊರಲ್ಗಮರ್ಚಿ ಶಿವಂಗಿದಿರ್ಚಿ ನಿಂದು—

ರೋಗಲಾಡಿಸುವ ಔಷಧಗಳೊಡನೆ ಕಾಯಿಸಿದ ನೀರನ್ನು ಸ್ನಾನ ಮಾಡಿಸಿದನು. ಈ ರೀತಿ ಅನೇಕ ದಿವಸಗಳವರೆಗೆ ನಾನಾ ವಿಧವಾದ ರೋಗ ಹರಣ ನಿಮಿತ್ತದ ಚಿಕಿತ್ಸೆಯನ್ನು ಮಾಡುತ್ತಿದ್ದರೂ ಶಿವನ ದೇಹವು (ರೋಗದಿಂದ) ಗುಣವಾಗದೆ, ದಿನ ದಿನಂತೆಯೇ ಇರಲಾಗಿ, ಆ ನಾಟ್ಯನಮಿತ್ತಂಡಿಯು ಕಂಡು, ಸಂಕಟಗೊಂಡು, ಬಾಯ ನೀರೆಲ್ಲ ಬತ್ತಿ ದುಃಖದಿಂದ ಕೂಡಿದವನಾಗಿ—೨೬. 'ಎಲೈ ಬ್ರಾಹ್ಮಣನೇ, ಕೇಳು; ನಿನ್ನ ಈ ಔಷಧೋಪಚಾರದಿಂದ ಶಿವನಿಗೆ ಸ್ವಲ್ಪವೂ ಕೂಡ ಗುಣವಾಗಲಿಲ್ಲ; ಇದೇನು ಕಾರಣ ?" ಎಂದನು. (ಆಗ) ಆ ಬ್ರಾಹ್ಮಣನು 'ಎಲೈ ಸುಗುಣನಿಧಿಯೇ, ಈ ರೋಗವು ವೈದ್ಯರಿಗೂ ಕೂಡ ಅಸಾಧ್ಯವಾದದ್ದು' ಎಂದು ಹೇಳಿದನು. ವ॥ ಹೀಗೆಂದು ಹೇಳಿದ ಆ ಬ್ರಾಹ್ಮಣನ ಮಾತನ್ನು ಕೇಳಿದ ಆ ಭಕ್ತನು ಕೇಳಿ, ಹಾ ! ಎಂದು ಮೂರ್ಛೆಗೊಂಡವನಾಗಿ, ಪುನಃ ಮೆಲ್ಲನೆ ಎಚ್ಚರಗೊಂಡು, ಮನಸ್ಸಿನಲ್ಲಿ ನೊಂದುಕೊಂಡು ಸಂಕಟಪಟ್ಟವನಾಗಿ—೨೭. ಈ ರೋಗವು ವಾಸಿಯಾಗುವುದಿಲ್ಲವಷ್ಟೇ ! (ಇದರಿಂದ) ಈ ಶಿವನು ಜೀವವನ್ನು ಬಿಡದೆ ಇರಲಾರನು. (ಆ ಸ್ಥಿತಿಯನ್ನು ನಾನು) ಹೇಗೆ ನೋಡಲಿ ! ಆದ್ದರಿಂದ ನನ್ನ ಪ್ರಾಣವನ್ನು (ಅವನಿಗಿಂತ) ಮೊದಲೇ ತಪ್ಪದೆ ಬಿಟ್ಟು ಬಿಡುತ್ತೇನೆ. ಎನ್ನುತ್ತ ಆ ಭಕ್ತನು ನೆನೆದನು. ವ॥ ಈ ರೀತಿ ನೆನೆದು (ಪ್ರಾಣಬಿಡುವುದನ್ನು) ನಿಶ್ಚಯಿಸಿ, ಧೈರ್ಯಯುತನಾಗಿ ಭಯಂಕರವಾದ ಖಡ್ಗವನ್ನು ಕೈಯಲ್ಲಿ ಹಿಡಿದು, ಝಳಪಿಸುತ್ತ (ಅಲ್ಲಾಡಿಸುತ್ತ) ಶೀಘ್ರವಾಗಿ ತನ್ನ ಕೊರಳಿಗೆ ಸೇರಿಸಿ ಶಿವನಿಗೆ ಎದುರಾಗಿ ನಿಂತು

ಗರಿಲೆನೆ ಕೊಱೆಯದ ಮುನ್ನಂ
ಶಿರಮಂ ಶಂಕರನದೇಂ ಕೃಪಾಳುವೊ ಹೋ ಯೆಂ
ದುರವಣಿಸಿ ನಿಲಿಸಿ ತತ್ಕರ
ಕರಾಳಕರವಾಳಮಂ ಕರಂ ಬಿಸುಟಾಗಳ್ ೨೮

ಸೆಳೆಮಿಂಚಂ ಪೋಲ್ವ ಬಂಬಲ್ಜಡೆ ನಗೆಮೊಗಮರ್ಕೇಂದುವಹ್ನಿತ್ರಿನೇತ್ರಂ
ವಿಳಸಚ್ಚಂದ್ರಾರ್ಧಮಭ್ರಾಪಗೆ ಮಿಸುಪ ಜಟಾಜೂಟಮುಗ್ರಾಜಿನ ಪ್ರಾಂ
ಜುಳವಸ್ತ್ರಂ ಸರ್ಪಹಾರಂ ವರಪರಶು ಮೃಗಾಭೀತಿ ಭೃತ್ಪಾಣಿಗಳ್ಕಂ
ಗೊಳಿಸುತ್ತುಂ ತೋಱಿ ತಾನೊಪ್ಪಿದನತುಳಕಳಾಪೂರ್ಣಕೋಶಂ ಮಹೇಶಂ ೨೯

ವ॥ ಇಂತುಮಾರಮಣಂ ಪ್ರಸನ್ನನಾಗಿ ಮುಗ್ಧಭಕ್ತನಂ ಮುಂಡಾಡಿ ಮುದ್ದುಗೆಯ್ದು—

ಎರೆ ವರಮನೀವೆನೆಲೆ ಮು
ಗ್ಧರ ದೇವ ಯಥೇಷ್ಟಮೆಂದು ಬೆಸಸೆ ಗಿರೀಶಂ
ಶರಣಂ ತಚ್ಚರಣನವಾಂ
ಬುರುಹದ್ವಯಕೆಱಗಿ ಭಕ್ತಿಯಿಂದಿಂತೆಂದಂ ೩೦

ಕೊಂಡು—೨೮. ಗರಿಲ್ ಎನ್ನುವಂತೆ ಶಿರವನ್ನು ಕತ್ತರಿಸಿಕೊಳ್ಳುವ ಮೊದಲೇ, ಶಿವನು ಅದೇನು ಕೃಪಾಳುವೋ ! 'ಹೋ !' ಎಂದು ಅಬ್ಬರಿಸಿ ನಿಲ್ಲಿಸಿ, ಅವನ ಕೈಯಲ್ಲಿರುವ ಭಯಂಕರ ಖಡ್ಗವನ್ನು ಚೆನ್ನಾಗಿ (ಸೆಳೆದುಕೊಂಡು) ಬಿಸಾಡಿ ಆಗ—೨೯. ಸೆಳೆ ಮಿಂಚನ್ನು ಸೋಲಿಸುವಂಥ ಗುಂಪು ಗುಂಪಾದ ಜಡೆ, ನಗುವಿನಿಂದ ಕೂಡಿದ ಮುಖ, ಸೂರ್ಯಚಂದ್ರಾಗ್ನಿಗಳೆಂಬ ಮೂರು ಕಣ್ಣುಗಳು, ಪ್ರಕಾಶಿಸುವ ಅರ್ಧಚಂದ್ರ, (ಜಡೆ ಯಲ್ಲಿರುವ) ಆಕಾಶಗಂಗೆ, ಶೋಭಿಸುವ ಜಟಾಜೂಟ, ಸರ್ಪಗಳ ಹಾರಗಳು, ಕೊಡಲಿ, ಜಿಂಕೆ, ಅಭಯ ಮುದ್ರೆಗಳನ್ನುಳ್ಳ ಕೈಗಳು (ಇವುಗಳಿಂದ) ಮನೋಹರವಾಗಿ ಕಂಗೊಳಿ ಸುವವನಾಗಿ, ಅಸದೃಶವಾದ ಸಮಸ್ತ ವಿದ್ಯೆಗಳಿಗೆ ಸಂಪೂರ್ಣ ಬೊಕ್ಕಸ ಸ್ವರೂಪನಾದ ಪರಮೇಶ್ವರನು ಪ್ರಕಟವಾದನು. ವ॥ ಈ ರೀತಿ ಉಮಾಪತಿಯಾದ ಈಶ್ವರನು ಪ್ರಸನ್ನನಾಗಿ, ಮುಗ್ಧಭಕ್ತನಾದ ಆ ನಾಟ್ಯನಮಿತ್ತಂಡಿಯನ್ನು ಮುಂಡಾಡುತ್ತ, ಪ್ರೀತಿ ದೋರಿಸಿದನು—೩೦. 'ಎಲೈ ಮುಗ್ಧ ಭಕ್ತರ ದೇವನಂತಿರುವವನೇ, ನಿನಗೆ ಇಷ್ಟವಾದ ವರವನ್ನು ಬೇಡು; ಕೊಡುತ್ತೇನೆ.' ಎಂದು ಶಿವನು ಆಜ್ಞಾಪಿಸಲಾಗಿ, ಶರಣನಾದ ಆ ನಾಟ್ಯನಮಿತ್ತಂಡಿಯು ಆತನ ಚರಣಗಳೆಂಬ ನೂತನವಾದ ಕಮಲಗಳಿಗೆ ನಮಸ್ಕಾರ

ವರಮಂತಿರ್ಕೆಮ[1] ನಿನ್ನಯ
ಶರೀರಮಿಂತೇಕೆ ಕೊಂಕಿದುದು ಬಂದತಿ ದು
ಸ್ತರರೋಗವಾವುದೆಂತಿದು
ಪರಿಹರಿಪುದು ನನ್ನಿವೇಳ್ವುದೆನಗೆ ಗಿರೀಶಾ ೩೧

ಎನೆ ನಗುತೆ ಶಂಭು ನಿನ್ನಯ
ಘನ ಭಕ್ತಿಯೆ ಬೆಜ್ಜಮಾಯ್ತು ರೋಗಮದಿಲ್ಲಿ
ಲ್ಲೆನುತುಂ ತಾಂಡವಮೂರ್ತಿಯ
ತನುವಂ ತಾಂ ಸಸಿನೆ[2]ಗೆಯ್ದು ವಂಗೊಲವಿತ್ತಂ ೩೨

ವ॥ ಆಗಳಾ ಭಕ್ತಂ ನೇರಿತ್ತಾದ ಶಿವವಿಗ್ರಹಮಂ ಕಂಡೆನ್ನಾಳ್ದಂಗೆ ರೋಗಂ ಮಾಣ್ದುದಾಂ ಬರ್ದುಂಕಿದೆನೆಂದಳವಿಗಳಿ[3]ದಾನಂದಮಂನೊಳಕೊಂಡು ಮಗುಳ್ದು ಮಣಿದು—

ಮುನ್ನೇಂ ಕಾರಣಮಕ್ಕಟ
ನಿನ್ನಂಗಂ ಕೊಂಕುವೆತ್ತು ಸೆಡೆದುಱುಗಿದುದಿಂ
ದೆನ್ನೊಡನೆ ನನ್ನಿವೇಳೆನೆ
ಪನ್ನಗಧರನಿಂತು ನಾಟ್ಯಮಾಡಿದೆನೆಂದಂ ೩೩

ಮಾಡಿ, ಭಕ್ತಿಯಿಂದ ಹೀಗೆಂದನು : ೩೧. (ದೇವ,) ಆ ವರವು ಒತ್ತಟ್ಟಿಗಿರಲಿ. ನಿನ್ನ ಶರೀರವು ಇಷ್ಟೇಕೆ ಡೊಂಕಾಗಿರುವುದು ? ಬಂದಂಥ ಅತಿ ದುಸ್ತರವಾದ ಆ ರೋಗ ವಾವುದು ? ಹೇಗೆ ಈ ರೋಗವನ್ನು ಪರಿಹಾರ ಮಾಡಬೇಕು. ಗಿರೀಶನೇ, ನನಗೆ ಸತ್ಯವನ್ನು ಹೇಳು (ಎಂದನು). ೩೨. ಹೀಗೆನ್ನಲು ಶಂಭುವು ನಗುತ್ತ 'ನಿನ್ನ ಘನ ವಾದ ಭಕ್ತಿಯೇ (ಈ ರೋಗಕ್ಕೆ).ಔಷಧವಾಯಿತು. ಈಗ ಆ ರೋಗ ಇಲ್ಲ, ಇಲ್ಲ, ಎನ್ನುತ್ತ (ಶಿವನು ತನ್ನ) ತಾಂಡವಮೂರ್ತಿಯ (ನಾಟ್ಯ ಭಂಗಿಯ) ತನುವನ್ನು ನೆಟ್ಟಗೆ ಮಾಡಿ ತೋರಿಸಿ ಅವನಿಗೆ ಸಂತೋಷವನ್ನುಂಟುಮಾಡಿದನು. ವ॥ ಆಗ ಆ ಭಕ್ತನು— ನೆಟ್ಟಗಾದ ಶಿವನ ಶರೀರವನ್ನು ಕಂಡು, 'ನನ್ನ ಸ್ವಾಮಿಯ ರೋಗವು ವಾಸಿಯಾಯಿತು. ನಾನು ಬದುಕಿದೆನು', ಎಂದು ಅಪರಿಮಿತವಾದ ಆನಂದವನ್ನು ಹೊಂದಿದವನಾಗಿ, ಪುನಃ ನಮಸ್ಕಾರ ಮಾಡಿ—೩೩. 'ಅಕ್ಕಟ ! ಈ ಪೂರ್ವದಲ್ಲಿ ನಿನ್ನ ಶರೀರವು ಏನು ಕಾರಣ ಡೊಂಕುಗೊಂಡು ಸೆಡೆದುಕೊಂಡು ವಕ್ರವಾಗಿತ್ತು ?' ಈಗ ನನ್ನೆದುರಿಗೆ ಸತ್ಯ ವಾಗಿ ಹೇಳು' ಎನ್ನಲು ಸರ್ಪಾಭರಣನು ಈ ರೀತಿಯಲ್ಲಿ (ನಾನು) ನಾಟ್ಯಮಾಡಿದೆ

1 ಸು(ಮು) 2 ಸ(ಗ) 3 ಳ(ಮು)

ವ॥ ಎನೆ ಕೇಳ್ದು ನಾಟ್ಯನಮಿತ್ತ[1]ಂಡಿ ಕೌತುಕಂಬಟ್ಟು ನಾಟ್ಯಮನೀಗಳಾಂ ನೋಡಿದಪೆಂ ತೋಱಿವೇಃನೆ ಶಿವಂ ತನ್ನ ತಾಂಡವಮನವಂಗೆ ತೋಱಲುಪ್ಪುಗಿಸಿ—

ಪುಲಿದೊವಲಂದವಾಳ್ದ ಪೊಸ ಕಾಸೆ ವಿರಾಜಿಸೆ ಮತ್ತ ದೈತ್ಯಸಂ
ಕುಲದ ಶಿರಂಗಳೆಂಬ ಸರಗೆಜ್ಜೆಗಳಂಘ್ರಿಸರೋಜದೊಳ್ಪಳಂ
ಚಲೆದುಲಿಯುತ್ತೆ ತೋಱಿ ಡಮರುಸ್ಫುಟ ಡಾತ್ಕೃತಿ ಮೀಱಿ ಬೆನ್ನಮೇ
ಲೊಲೆಯೆ ಜಟಾಳಿ ತುಳ್ಕೆ ದಿವಿಜಾಪಗೆ ತಾಂಡವಮಂ ನಿಮಿರ್ಚಿದಂ ೩೪

ವ॥ ಆಗಳ್—

ಡಮರುಕರವಮಂ ಕೇಳ್ದಂ
ದಮರರ್ಸಡಗರಿಸುತೆಯ್ದಿ ಹರಿಧಾತ್ರಮುಖ
ಕ್ರಮದಿಂ ನರ್ತನ ವಾದ್ಯಮ
ನಮರ್ದಿರೆ ಬಾಜಿಸಿದರಾ ಮಹೇಶನ ಪೊರೆಯೊಳ್ ೩೫

ವ॥ ಆ ವಾದ್ಯದ ಜತಿವಿಡಿದಂಗೋಪಾಂಗ ಭಂಗಿ ಸಂಗಳಿಸೆ[2] ನಿಜಾಪಾಂಗವಲನ ಕರತಳ ಚಲನ ಭ್ರೂಲತಾವಿಕ್ಷೇಪವಿಭ್ರಮಂ ಬಡೆದು—

ನೆಂದನು. ವ॥ ನಾಟ್ಯನಮಿತ್ತಂಡಿಯು (ಈ ಮಾತನ್ನು) ಕೇಳಿ ಆಶ್ಚರ್ಯಗೊಂಡು 'ಈಗ ನಾನು (ನಿನ್ನ) ನಾಟ್ಯವನ್ನು ನೋಡಬೇಕು ತೋರಿಸು' ಎನ್ನಲು ಶಿವನು ತನ್ನ ತಾಂಡವ ನಾಟ್ಯವನ್ನು ಅವನಿಗೆ ತೋರಿಸುವುದಕ್ಕೆ ಸಿದ್ಧನಾದನು. ೩೪. ಹುಲಿಯ ಚರ್ಮ, ಅಂದವಾದ ಹೊಸಕಾಸೆ ಇವು ಶೋಭಿಸುತ್ತಿದ್ದವು; ಮದೋನ್ಮತ್ತ ರಾಕ್ಷಸರ ಸಮೂಹದ ತಲೆಬುರುಡೆಗಳೆಂಬ ಗೆಜ್ಜೆಯ ಸರಗಳು ಪಾದಕಮಲದಲ್ಲಿ ಒಂದಕ್ಕೊಂದು ಬಡಿದಾಡಿ ಶಬ್ದಮಾಡುತ್ತಿದ್ದವು; ಡಮರುಗದಿಂದ ಹೊರಹೊಮ್ಮುವ 'ಢಾಢಾ' ಎಂಬ ಶಬ್ದವು ಹೆಚ್ಚಾಯಿತು; ಜಡೆಗಳ ಸಮೂಹವು ಒಲೆದೊಲೆದು ಹೊರಳಾಡುತ್ತಿತ್ತು. ದೇವಗಂಗೆಯು ತುಳುಕಾಡುತ್ತಿತ್ತು. ಹೀಗೆ ತಾಂಡವ ನೃತ್ಯವನ್ನು ನಟಿಸಿದನು. ವ॥ ಆಗ ೩೫. ಡಮರುಗದ ಶಬ್ದವನ್ನು ಕೇಳಿದ ದೇವತೆಗಳು ಆಗ ಸಡಗರಗೊಂಡು ಹೊರಟು, ವಿಷ್ಣು. ಬ್ರಹ್ಮರೇ ಮೊದಲಾದವರು ಕ್ರಮವಾಗಿ ನರ್ತನಕ್ಕೆ ಅನುಕೂಲಕರಗಳಾದ ತಾಳ, ಮೃದಂಗಾದಿ ವಾದ್ಯಗಳನ್ನು (ನಾಟ್ಯಕ್ಕೆ) ಹೊಂದಿಕೊಳ್ಳುವಂತೆ ಆ ಮಹೇಶ್ವರನ ಸಮೀಪದಲ್ಲಿ ನುಡಿಸತೊಡಗಿದರು. ವ॥ ಆ ವಾದ್ಯದ ಗತ್ತುಗಳಿಗನುಗುಣವಾಗಿ, ಅಂಗ ಮತ್ತು ಉಪಾಂಗಗಳ ನಾಟ್ಯ ಭಂಗಿಯನ್ನು ಕೂಡಿಕೊಂಡು, ತನ್ನ ಕಡೆಗಣ್ಣುಗಳ ನೋಟದ ಚಾಲನೆ, ಕೈಗಳನ್ನಲ್ಲಾಡಿಸುವಿಕೆ, ಬಳ್ಳಿಯಂತಹ ಹುಬ್ಬುಗಳನ್ನು ಹಾರಿಸುವಿಕೆಯೇ ಮೊದಲಾದ ವಿಲಾಸವನ್ನು ಹೊಂದಿದವನಾಗಿ

---

1 ತ್ಯಾ(ಚ) 2 ಸಿ(ಚ,ಅ)

ಕಡೆಗಣ್ಮಿಂಚಮರಾಂಗನಾಜನದ ತದ್ಭೇರೀರವಂ ತಳ್ತ ಬ
ಲ್ಗುಡುಗಾಕಾಶಮೆ ನೀರದಂ ಸುರಿವ ಮಂದಾರಪ್ರಸೂನಂಗಳೇ
ಬಡಬಂ ಬಿತ್ತರಮಾಗೆ ಮಾಣದಿದಿರೊಳ್ಭಕ್ತೇಂದ್ರನುತ್ಸಾಹಮಂ
ಪಡೆದೊಪ್ಪುತ್ತಿರೆ ನೀಲಕಂಠನಟನಂ ಚೆಲ್ವಾದುದಾ ವೇಳೆಯೊಳ್ ೩೬

ಕುಣಿತದ ಕೋಲಾಹಲದಿಂ
ದಣಿಗೆಟ್ಟುರುಳ್ದಪುದು ಗಗನಮೆಂದಾ[1]ಂಕೆಯುನಿ
ಟ್ಟಣಕಮನವರ್ಚಿ ಮೆಱೆದ
ತ್ರಿಣಯುರಮುಭವಾಂಘ್ರಿದಂಡಮೊಂದಂಬರದೊಳ್ ೩೭

ಗಿರಿಜೆಯ ಕಣ್ಗದಿರ್ಜೊನ್ನದೆ
ಹರತನು ಶಶಿಕಾಂತಮೊಸರ್ದು ಪನಿವಿಡುವವೊಲಾ
ಶಿರದ ಸುರನಿಮ್ನಗೆಯ ಶೀ
ಕರತತಿ ನೆಗೆದಳುರ್ದು ತನುವನೇಂ ಮುಸುಕಿದುದೋ ೩೮

೩೬. ದೇವತಾಸ್ತ್ರೀಯರ ಕಡೆಗಣ್ಣುಗಳ ಮಿಂಚು ; ಆ ದೇವತೆಗಳ ದೇವ ದುಂದುಭಿಯ ಶಬ್ದವೇ ಉಂಟಾದ ಗುಡುಗು ; ಆಕಾಶವೇ ಮೋಡ ; ಸುರಿಯುತ್ತಿರುವ ಕಲ್ಪವೃಕ್ಷದ ಹೂವುಗಳೇ ಮಳೆಯ ವಿಸ್ತಾರವಾಗಿರಲು, ತಪ್ಪದೆ ಆ ಭಕ್ತಶ್ರೇಷ್ಠನಾದ ನಾಟ್ಯನಮಿತ್ತಂಡಿಯ ಎದುರಿನಲ್ಲಿ ಅವನು ಸಂತೋಷಗೊಂಡು ಶೋಭಿಸುವ ಹಾಗೆ ಆ ವೇಳೆಯಲ್ಲಿ ನೀಲಕಂಠನಾದ ಶಿವನ ನಾಟ್ಯವು ಚೆಲುವಾಯಿತು. [ನವಿಲಿಗೂ 'ನೀಲಕಂಠ'ನೆಂಬ ಹೆಸರಿರುವುದರಿಂದ ನವಿಲಿನ ನರ್ತನವು ಚೆಲುವಾಗಿತ್ತು ಎಂದೂ ನವಿಲಿನ ಪರವಾಗಿ ಅರ್ಥಮಾಡಬಹುದು. ಮಳೆಗಾಲದಲ್ಲಿ ಮಿಂಚು, ಗುಡುಗು, ಮಳೆ–ಇವು ನವಿಲಿನ ನರ್ತನಕ್ಕೆ ಕಾರಣಗಳು]. ೩೭. (ಶಿವನ) ಈ ಕುಣಿತದ ಕಲಕಲ ಶಬ್ದದಿಂದ ಆಕಾಶವೆಲ್ಲ ಸಡಿಲುಗೊಂಡು ಉರುಳಿ ಬೀಳುವುದು ಎಂದು ಅದು ಬೀಳದ ಹಾಗೆ ಒತ್ತು ಮರವನ್ನು ಇಟ್ಟಿರುವನೋ ಎಂಬ ಒಂದು ವ್ಯಾಜವನ್ನು ಹೊಂದಿ, ದಂಡದಂತಿರುವ ಈಶ್ವರನ ಒಂದು ಕಾಲು ಆಕಾಶದಲ್ಲಿ ಮನೋಹರವಾಗಿ (ಎತ್ತಿದುದಾಗಿ) ಶೋಭಿಸುತ್ತಿತ್ತು. ೩೮. ಪಾರ್ವತಿಯ ಕಣ್ಣಿನ ಕಾಂತಿಯೆಂಬ ಬೆಳದಿಂಗಳಿನಿಂದ ಈಶ್ವರನ ದೇಹವೆಂಬ ಚಂದ್ರಕಾಂತಶಿಲೆಯು ಒಸರುತ್ತ ಹನಿಹನಿಯಾಗಿ ಸುರಿಯುವಂತೆ ತಲೆಯಲ್ಲಿರುವ ದೇವಗಂಗೆಯ ನೀರಿನ ಹನಿಗಳ ಸಮೂಹವು ಹಾರಿ ಹಾರಿ ಇಳಿದು ಶಿವನ ಆ

1 ದ(ಮು)

ಕಡಲೇಳುಂ ತುಳ್ಕೆ ಭೂಭೃಚ್ಛಿಕರನಿಕರಮಲ್ಲಾಡೆ ದಿಕ್ಕುಂಭಿಗಳ್ಕುಂ
ಬಿಡೆ ಭೋಗೀಂದ್ರಸ್ಫಟಾಮಂಡಳಿ ಮಣಿಯೆ ಮಹಾಕೂರ್ಮನುಂ ಕುಗ್ಗಿ ತುಂ ಬಾ
ಯ್ಬಿಡೆ ದಿಗ್ಭಿತ್ತಿ ಪ್ರತಾನಂ ಬಿರಿಯೆ ನಡುಗೆ ಧಾತ್ರೀತಳಂ ಕಳ್ಕನೋರಂ
ತುಡುಜಾಲಂ ಸೂಸೆ ಲೇಖಾವಳಿ ಬೆದಱೆ ಹರಂ ತಾಂಡವಂಗೆಯ್ವುತಿರ್ದಂ ೩೯

ತತದಿಧ್ಯಧ್ವಿದ್ಯುದುದ್ಯದ್ರುಚಿನಿಚಿತಜಟಾಕೋಟಿಸಂಘಟ್ಟನಪ್ರ
ಚ್ಯುತನಕ್ಷತ್ರಪ್ರತಾನಂ ಗಗನಘನಪತತ್ಕಲ್ಪವೃಕ್ಷಪ್ರಸೂನೋ
ನ್ನತವೃಷ್ಟಿಪ್ರೋನ್ಮಿಳದ್ವಾರ್ಶಿಲೆಗಳೆನಿಸೆ ಚಂಚದ್ಭುಜೋದ್ಭೂತವಾತಾ
ಹತಕಂಪದ್ಭೂಧರಂ ತದ್ಭಯದೆ ನಡುಗುವಂತಾಗೆ ಚೆಲ್ವಾಯ್ತು ನಾಟ್ಯಂ ೪೦

ನೋಡಿ ರುದ್ರನ ನಾಟ್ಯಮಂ ಮಿಗೆ ಭಕ್ತನದ್ಭುತಮಾನಸಂ
ಬೇಡ ಬೇಡ ಮದೀಶ ಸಾಲ್ಗುಮಿನಿತ್ತೆ ಲೋಕಚಯಂಗಳ
ಳ್ಕಾಡುಗುಂ ವಲಮೆಂದು ವಂದಿಸಿ ವಿಷ್ಣು ಜಿಷ್ಣು ಸಮನ್ವಿತಂ
ಬೇಡಿಕೊಳ್ವಿನಮೀಶನಂತುಟೆ ಮಾಣ್ದು ನಾಟ್ಯಮನೊಪ್ಪಿದಂ ೪೧

ದೇಹವನ್ನು ಏನು ಮುಸುಕಿತ್ತೋ ! ೩೯. (ಆ ಸಮಯದಲ್ಲಿ) ಸಪ್ತಸಾಗರಗಳು ತುಳುಕಾಡಿದವು ; ಪರ್ವತಗಳ ಶಿಖರ ಸಮೂಹಗಳು ಅಲ್ಲಾಡಿದವು ; ದಿಕ್ಕಿನಲ್ಲಿರುವ ಆನೆಗಳು ಘೀಂಕಾರ ಮಾಡಿದವು (ಭಯದಿಂದ ಚೀರಿದವು) ; ಆದಿಶೇಷನ ಹೆಡೆಗಳ ಸಮೂಹವು (ಭಾರಕ್ಕೆ) ಬಾಗಿದವು ; ಆದಿಕೂರ್ಮನು ಕುಗ್ಗಿ ಬಾಯಿಬಿಟ್ಟನು ; ಅಷ್ಟ ದಿಕ್ಕುಗಳ ಗೋಡೆಗಳ ಸಮೂಹವು ಬಿರುಕುಬಿಟ್ಟಿತು ; ಭೂತಳವು ನಡುಗಿತು ; ನಕ್ಷತ್ರಗಳ ಸಮೂಹವು ಕ್ರಮವಾಗಿ ಕಳಕ್ ಎಂದು ಧ್ವನಿಮಾಡುತ್ತ ಉದುರತೊಡಗಿದವು ; ದೇವತೆಗಳ ಪಜ್ಕ್ತಿಯು ಬೆದರಿತು–ಹೀಗೆ ಶಿವನು ತಾಂಡವನೃತ್ಯ ಮಾಡುತ್ತಿದ್ದನು. ೪೦. ವಿಸ್ತಾರವಾಗಿ ಪ್ರಕಾಶಿಸುವ ಮಿಂಚಿನ ಅಧಿಕತರ ಕಾಂತಿಯಂತಿರುವ ಕಾಂತಿಯಿಂದ ವ್ಯಾಪ್ತಗೊಂಡ (ವಿಸ್ತಾರಗೊಂಡ) ಅನೇಕ ಜಡೆಗಳ ತಾಡನವಾಗುತ್ತಿತ್ತು. (ಅದರಿಂದ) ಉದುರುತ್ತಿರುವ ನಕ್ಷತ್ರಗಳ ಸಮೂಹವು ಆಕಾಶವೆಂಬ ಮೇಘದ ದೆಸೆಯಿಂದ ಬೀಳುತ್ತಿರುವ ಕಲ್ಪವೃಕ್ಷದ ಹೂವುಗಳೆಂಬ ದೊಡ್ಡ ಮಳೆಯಲ್ಲಿ ಕೂಡಿಕೊಂಡಿರುವ ಆಲಿಕಲ್ಲುಗಳೋ ಎನಿಸಿದ್ದವು. ಮಿಂಚುತ್ತಿರುವ ತೋಳುಗಳಿಂದ ಗಾಳಿಯು ಹುಟ್ಟುತ್ತಿತ್ತು. (ಅಂಥ) ಗಾಳಿಯಿಂದ ಹೊಡೆಯಲ್ಪಟ್ಟದ್ದಾದ ಕಾರಣದಿಂದ ಪರ್ವತಗಳು ಆ ಬಾಹುವಿನ ದೆಸೆಯಿಂದಾದ ಭೀತಿಯಿಂದ ನಡುಗುವಂತೆ ಅಲುಗುತ್ತಿರಲು, ಶಿವನ ಆ ನಾಟ್ಯವು ಚೆಲುವಾದುದಾಗಿತ್ತು. [ಏಕೆಂದರೆ ದೇವೇಂದ್ರನು ಹಿಂದೆ ತನ್ನ ವಜ್ರಾಯುಧವನ್ನೆತ್ತಿ ಹೊಡೆದು ಪಕ್ಷಗಳನ್ನು ಕತ್ತರಿಸಿದ್ದನು. ಆ ಕಾರಣದಿಂದಲೇ ಪರ್ವತಗಳಿಗೆ ತೋಳುಗಳ ಭಯ] ೪೧. ಭಕ್ತನಾದ ನಾಟ್ಯನಮಿತ್ತಂಡಿಯು ರುದ್ರನ ಈ ಭಯಂಕರವಾದ ನಾಟ್ಯವನ್ನು ಚೆನ್ನಾಗಿ ನೋಡಿ, ಆಶ್ಚರ್ಯದಿಂದ ಕೂಡಿದ ಮನಸ್ಸುಳ್ಳವನಾಗಿ–'ನನ್ನ ಸ್ವಾಮಿಯೇ ಬೇಡ ! ಬೇಡ !! ಇಷ್ಟೇ ಸಾಕು. ಲೋಕಗಳ ಸಮುದಾಯವು ನಿಶ್ಚಯವಾಗಿ ಭಯ

ವ॥ ಆಗಳ್—

ಅಂಬರ ಚಕ್ರಮುಂ ಬೆಳಗುತುಂ ನಿಜರತ್ನಕದಂಬಕಾಂತಿಯಿಂ
ತಾಂ ಬರೆ ಪುಷ್ಪಕಂ ಸುರಿವ ಪೂಮಳೆಯೊಳ್ಸುರದುಂದುಭಿಸ್ವನಾ
ಡಂಬರವೊಪ್ಪೆ ಶಂಭುಸಹಿತಂ ನಲಿದೇಱಿ ತದೀಯ ಲೋಕವಮಂ
ಬೆಂಬಿಡದೆಯ್ದಿ ಭಕ್ತನೊಸೆದೊಪ್ಪಿದನಾಳ್ದು ಶಿವಪ್ರಸಾದವಮಂ ೪೨

ವ॥ ಎಂದಿಂತು ಬಿತ್ತರಂ ವಿಗೆ—

ಮಂಡಿತಮತಿ ನಾಟ್ಯನಮಿ
ತ್ತಂಡಿಯ ಕಥೆವೇಳ್ದು ಮಗುಳ್ದು ಬಸವಂ ಬಗೆ ಮುಂ
ಕೊಂಡಾಲಿಪುದೆಂದೊಱೆದಂ
ಖಂಡೇಂದುಧರೈಕ ಭಕ್ತನೊರ್ವನ ಕಥೆಯುಂ ೪೩

ವ॥ ತತ್ಕಥಾಕಥನಮೆಂತೆನೆ—

[ಕಣ್ಣಪ್ಪನ ಕಥೆ]

ಮನವಾರ್ಧಾರೆಗಳಜ್ಝರಂ ರದನಮುದ್ಯದ್ವಜ್ರಶೃಂಗಂ ನಿಲುಂ
ಬಿದ ಮೇಘಂ ಕಿವಿ ಗುಂಡುಗಲ್ತಲೆ ತದಗ್ರಂ ನೇಲ್ವ ಪೆರ್ವಾವು ಕೊ
ರ್ವಿದ ಶುಂಡಂ ತನಗಾಗೆ ರಂಜಿಪ ನಗೇಂದ್ರಂ ಕಾಳಹಸ್ತಿಸ್ವಭಾ
ವದೆ ತಾಂ ತಾಳ್ದುದು ಕಾಳಹಸ್ತಿವೆಸರಂ ನೀಲಾಶ್ಮಕಾಯಪ್ರಭಂ ೪೪

ಪಟ್ಟುಕೊಳ್ಳುವುದು' ಎನ್ನುತ್ತ ನಮಸ್ಕರಿಸುತ್ತಿದ್ದನು. ದೇವೇಂದ್ರ ಸಹಿತನಾದ ವಿಷ್ಣುವು ಬೇಡಿಕೊಂಡನು. ಅಂತೆಯೇ ಈಶ್ವರನು ತನ್ನ ನಾಟ್ಯವನ್ನು ನಿಲ್ಲಿಸಿ ಶೋಭಿಸಿದನು. ವ॥ ಆಗ ೪೨. ತನ್ನ ರತ್ನ ಸಮೂಹಗಳ ಕಾಂತಿಯಿಂದ ಆಕಾಶಮಂಡಲವನ್ನು ಬೆಳಗುತ್ತ ಆ ಪುಷ್ಪಕ ವಿಮಾನವು ಬಂದಿತು. ಸುರಿಯುತ್ತಿರುವ ಹೂಗಳ ಮಳೆಯೊಡನೆಯೇ ದೇವದುಂದುಭಿಗಳ ಧ್ವನಿಯ ಆಡಂಬರವೂ ಕೂಡಿ ಒಪ್ಪುತ್ತಿರಲು, ಭಕ್ತನಾದ ನಾಟ್ಯನಮಿತ್ತಂಡಿ ಸಹಿತವಾಗಿ ಶಂಭುವು ಸಂತೋಷಪಟ್ಟು ವಿಮಾನವನ್ನೇರಿ ಶಿವಲೋಕವನ್ನು ಕುರಿತುಹೋಗಿ ಸೇರಿ, ಪ್ರೀತಿಯಿಂದ ಶಿವಪ್ರಸಾದವನ್ನು ಸ್ವೀಕರಿಸಿ ಶೋಭಿಸುತ್ತಿದ್ದನು. ವ॥ ಹೀಗೆಂದು ವಿಶೇಷ ವಿಸ್ತಾರವಾಗಿ—೪೩. ಅಲಂಕೃತ ಬುದ್ಧಿಯುಳ್ಳ ಬಸವಣ್ಣನು ನಾಟ್ಯನಮಿತ್ತಂಡಿಯ ಕಥೆಯನ್ನು ಹೇಳಿ, ಪುನಃ ಮುಂದು ವರಿದ ಮನಸ್ಸಿನಿಂದ ಕೇಳುವುದು—ಎಂದು ಶಿವನೊಬ್ಬನಲ್ಲೇ ಭಕ್ತಿಯನ್ನು ತಳೆದ ಇನ್ನೊಬ್ಬನ ಕಥೆಯನ್ನು ಹೇಳಿದನು. **ಬೇಡರ ಕಣ್ಣಪ್ಪನ ಕಥೆ** : ೪೪. ಗಿರಿನದಿಯೇ ಮದೋದಕದ ಪ್ರವಾಹಗಳು ; ಎತ್ತರವಾದ ವಜ್ರದ ಕೋಡುಗಲ್ಲುಗಳೇ ದಂತಗಳು (ಕೋಡುಗಳು) ; ಕವಿದ (ಆಶ್ರಯಿಸಿದ) ಮೋಡವೇ ಕಿವಿಗಳು ; ಗುಂಡುಗಲ್ಲುಗಳೇ ತಲೆ ; ಆ ಪರ್ವತದ ಮೇಲುಭಾಗದಲ್ಲಿ ನೇತಾಡುವ ದೊಡ್ಡ ಹಾವೇ, ಶುಂಡ (ಸುಂಡಿಲು)—ಹೀಗೆ ಆ ಪರ್ವತಕ್ಕೆ ಒಪ್ಪಿರಲು ಇಂದ್ರನೀಲ ರತ್ನವಂತಿರುವ ದೇಹ

ಮರಕತರುಚಿಯಿಂ ದೂರ್ವಾ
ಕುರಮೆಂದಿನರಥದ ಕುದುರೆಗುಳ್ಕುಂಬರಿದಾ
ಗಿರಿಯಗ್ರದೊಳಾಡುವ ಕೇ
ಸರಿಗಳ ಜೃಂಭಾರವಕ್ಕೆ ಪೆಳಗುರ್ವಜಸ್ರಂ ೪೫

ಗಿರಿಯಗ್ರದ ಪೆರ್ವುಲಿ ಮೃಗ
ಧರಮೃಗಮಂ ಪಿಡಿಯಲೆಳಸಿ ಕರಮುವ್ವಳಿಸು
ತ್ತಿರೆ ತನ್ಮೃಗಮಗಿದಾ ವಟ
ತರುವಿನ ಮಱೆವುಗುವುದೆಂದೊಡೇಸುನ್ನತಮೋ ೪೬

ಪಳುಕಿನ ಪಾಸಱೆಯೊಳ್ನೆಲ
ದಳದುರಗೇಂದ್ರನ ಫಣಾಮಣಿಯ ಕೆಂಬೆಳಗು
ರ್ಚಳಿಸಿರೆ ಪೊಸ ರಕ್ತಮಿದೆಂ
ದೆಳೆವುಲಿಗಳ್ನೆಕ್ಕುತಿರ್ಕುಮಾ ನಗತಟದೊಳ್ ೪೭

ಮರೆಯನೆರೆಗೊಂಡ ಜರದಜ
ಗರಮುಮರ್ದಿರೆ ರಸನೆಯಂತೆ ಪಱೆವೊಜ್ಝರಮೊ
ಪ್ಪಿರೆ ಲಾಲಾಜಳಮೆನೆ ತ
ದ್ಗಿರಿವೃದ್ಧನ ಬೋಡುವಾಯಿದೆನೆ ಗವಿ ಮೆಱೆಗುಂ ೪೮

ಕಾಂತಿಯು ಪ್ರಕಾಶಿಸುವ ಶ್ರೇಷ್ಠ ಪರ್ವತವು ಕಪ್ಪಾದ ಆನೆಯ ಸ್ವರೂಪದಿಂದ 'ಕಾಳ ಹಸ್ತಿ' ಎಂಬ ಹೆಸರನ್ನು ಹೊಂದಿತ್ತು. ೪೫. ಸೂರ್ಯನ ರಥದ ಕುದುರೆಗಳು ಪಚ್ಚೆ ರತ್ನದ ಕಾಂತಿಯನ್ನು ಗರಿಕೆಯ ಹುಲ್ಲಿನ ಮೊಳಕೆಯೆಂದು (ಎಳೆಯ ಗರಿಕೆ ಹುಲ್ಲೆಂದು) ಮುಂದಕ್ಕೆ ಹೋಗಿ, ಆ ಪರ್ವತದ ಅಗ್ರದಲ್ಲಿ ಆಡುವ ಸಿಂಹಗಳ ಗರ್ಜನೆ (ಸಿಂಹನಾದ)ಗೆ ಸತತವೂ ಭಯಪಡುತ್ತಿದ್ದವು. ೪೬. ಆ ಗಿರಿಯ ಮೇಲ್ಭಾಗದ ದೊಡ್ಡ ಹುಲಿಯು, ಚಂದ್ರನಲ್ಲಿರುವ ಜಿಂಕೆಯನ್ನು ಹಿಡಿಯಲು, ಇಚ್ಛಿಸಿ, ಚೆನ್ನಾಗಿ ಅಪ್ಪಳಿಸುತ್ತ (ಕುಪ್ಪಳಿಸುತ್ತ) ಇರಲು, ಆ ಜಿಂಕೆಯು ಹೆದರಿ ಆ ಚಂದ್ರನಲ್ಲಿರುವ ವಟವೃಕ್ಷದ ಮರೆಹೋಗುವುದು—ಎನ್ನುವಾಗ ಆ ಪರ್ವತವು ಎಷ್ಟು ಎತ್ತರವಾದುದೋ ! ೪೭. ಆ ಪರ್ವತದ ತಪ್ಪಲಿನ ಸ್ಫಟಿಕದ ಹಾಸುಗಲ್ಲಿನಲ್ಲಿ ಭೂಮಿಯನ್ನು ಹೊತ್ತಿರುವ ಆದಿಶೇಷನ ಹೆಡೆಯಲ್ಲಿರುವ ರತ್ನದ ಕೆಂಪಾದ ಬೆಳಕು ಹೊರಹೊರಟು ಇರಲಾಗಿ ಇದು ಹೊಸ ರಕ್ತವೆಂದು ಭಾವಿಸಿ ಹುಲಿಯ ಮರಿಗಳು ನೆಕ್ಕುತ್ತಿದ್ದವು. ೪೮. ಮರೆಯನ್ನು ಹೊಂದಿರುವ ಮುದಿ ಹೆಬ್ಬಾವು ನಾಲಿಗೆಯ ಹಾಗೆ ಸೇರಿರಲು, ಹರಿಯುವ ಗಿರಿನದಿಯೇ ಲಾಲಾಜಲ (ಜೊಲ್ಲು) ಎಂಬಂತೆ ಒಪ್ಪಿರಲು, ಇದು ಆ ಬೆಟ್ಟವೆಂಬ ಮುದುಕನ ಬೋಡುಬಾಯಿ

ಕರಿಕುಂಭಸ್ಥಳಮಂ ವಿದಾರಿಸೆ ಪುಳಿಂದಸರ್ಗಸಿದತ್ಯಂತ ಭಾ
ಸುರ ಮುಕ್ತಾತತಿ ಚೆಲ್ವನಾಳ್ದುದು ನಗೇಂದ್ರಾಧಿತ್ಯಕಾಕೀರ್ಣಧಾ
ತ್ರಿರುಹಪ್ರಾತಪಟುಪ್ರಭಂಜನಚಳಚ್ಛಾಖಾಗ್ರಪಾತಾಪತತ್
ಪಗಿಣದ್ಧಪ್ರಭನಿರ್ಝರಾಧ್ವಗತ ತಾರಾನೀಕಮೆಂಬಂತೆವೋಲ್ ೪೯

ವಿತತಾನೇಕಪದಾವಭಾಸಿ ಹರಿನಾಗಪ್ರಾಂಚಿತಂ ಖಡ್ಗಿವಂ
ಡಿತಮುತ್ಕೀರ್ಣ ವರಾಹವಾಸಮುಬಲಾಂಚದ್ಧೀವರೌಘಾಶ್ರಿತಂ

ಎನ್ನುವ ಹಾಗೆ (ಒಂದು) ಗವಿಯು ಶೋಭಿಸುತ್ತಿತ್ತು. ೪೯. ಬೇಡರುಗಳು ಆನೆಯ ಕುಂಭಸ್ಥಳವನ್ನು ಸೀಳಲಾಗಿ ಅಲ್ಲಿರುವ ಮುತ್ತುಗಳು ಚೆಲ್ಲಾಪಿಲ್ಲಿಗೊಂಡು ಆ ಪರ್ವತದ ಕೆಳಭಾಗದಲ್ಲಿ ಅತ್ಯಂತ ಪ್ರಕಾಶಮಾನವಾಗಿ ಹೊಳೆಯುತ್ತಿದ್ದವು. (ಇದು ಹೇಗಿತ್ತೆಂದರೆ) ಆ ಪರ್ವತದಲ್ಲಿ ಮರಗಳು ಬೆಳೆದು ನಿಂತಿದ್ದವು ; ಅವುಗಳ ಕೊಂಬೆಗಳು ದೊಡ್ಡ ಬಿರುಗಾಳಿಯಿಂದ ಅಲ್ಲಾಡುತ್ತಿದ್ದವು ; (ಈ ಅಲ್ಲಾಟದ ಕಾರಣವಾಗಿ) ಆಕಾಶದಲ್ಲಿರುವ ವಿಶೇಷ ಕಾಂತಿಯ ನಕ್ಷತ್ರಗಳ ಸಮೂಹವು ಉದುರಿ ಬಿದ್ದಿವೆಯೋ ಎಂಬ ಹಾಗೆ ಚೆಲುವುಗೊಂಡಿತ್ತು. ೫೦. ಆ ಪರ್ವತದ ತಪ್ಪಲು ಪ್ರದೇಶವು ಮನೋಹರವಾಗಿತ್ತು. (ಹೇಗೆಂದರೆ) : ಅಧಿಕಸಂಖ್ಯೆಯ ಆನೆ (ಅನೇಕಪ)ಗಳು, ಕಾಳ್ಗಿಚ್ಚು (ದಾವ)ಗಳಿಂದ ಪ್ರಕಾಶಿಸುವುದಾಗಿತ್ತು ; ಸಿಂಹ, ಸರ್ಪ ಇವುಗಳಿಂದ ಕೂಡಿತ್ತು ; ಖಡ್ಗಮೃಗಗಳಿಂದ ಅಲಂಕರಿಸಲ್ಪಟ್ಟಿತ್ತು ; ಚೆನ್ನಾಗಿ ಕಿಕ್ಕಿರಿದು ತುಂಬಿರುವ ಹಂದಿಗಳ ವಾಸದಿಂದ ಕೂಡಿತ್ತು ; ತಮ್ಮ ಸ್ತ್ರೀಯರುಗಳಿಂದ ಶೋಭಿಸುತ್ತಿರುವ ಬೇಡರುಗಳ ಸಮೂಹದಿಂದ ಕೂಡಿತ್ತು ; ಶೋಭಿಸುವ ಬಾಣದ ಹುಲ್ಲು (ಅಂಬುಕರಡ) ಮತ್ತು ಮರಗಳು ಹೆಣ್ಣಾನೆಗಳು ಇವುಗಳಿಂದಲೂ, ಅತಿ ಶ್ರೇಷ್ಠವಾದ ಜಿಂಕೆಗಳು, ಕಾಡುಕೋಣಗಳು ಇವುಗಳಿಂದಲೂ ಮನೋಹರವಾಗಿತ್ತು. [ಕಟಕ ಶಬ್ದಚಮತ್ಕಾರದಿಂದ ಶ್ಲೇಷೆಯಿಂದ ಸೈನ್ಯದ ಪರವಾಗಿಯೂ ಈ ಪದ್ಯಾರ್ಥವನ್ನು ಮಾಡಬಹುದು. ಕಟಕವು ವಿಶಾಲವಾಗಿ ಅನೇಕ ಹೆಜ್ಜೆಯ ಗುರುತು (ಪದ)ಗಳಿಂದ ಪ್ರಕಾಶಿಸುವಂತಹುದು ; ಕುದುರೆ, ಆನೆಗಳಿಂದ ಕೂಡಿದುದು ; ಖಡ್ಗಧರಿಸಿದ ಶ್ರೇಷ್ಠವಾದ ಆಹವದಲ್ಲಿ ಅಸಮಬಲರಾದ ಬುದ್ಧಿಶಕ್ತಿಯುಳ್ಳ ಶೂರರ ಸಮೂಹದಿಂದ ಕೂಡಿತ್ತು ; ಪ್ರಕಾಶಮಾನವಾದ ಶರಗಳನ್ನು ಧರಿಸಿದ ಬಿಲ್ಗಾರರಿಂದ ಶೋಭಿಸುತ್ತಿತ್ತು ; ಭೂಮಿಯಲ್ಲಿ ಹುಟ್ಟಿ ಮೇಲೇಳುವ ಧೂಳಿನಿಂದ (ರೇಣು) ಪ್ರಕಾಶಿಸುತ್ತಿತ್ತು ; ಶ್ರೇಷ್ಠವಾದ ಸೈನ್ಯ (ಚಮೂ)ದ ಧ್ವನಿಯಿಂದ ಭೂಮಿಯಲ್ಲಿ ಮಂಜುಳವಾಗಿತ್ತು—ಆ ಕಟಕ.] [ಅನೇಕಪ + ದಾವಭಾಸಿ—ಆನೆ ಮತ್ತು ದಾವಾನಲದಿಂದ ಪ್ರಕಾಶಿಸುವುದು ; ಅನೇಕಪದ + ಅವಭಾಸಿ—ಅನೇಕ ಹೆಜ್ಜೆ ಗುರುತುಗಳಿಂದ ಶೋಭಿಸುವುದು; ಹರಿ—ಕುದುರೆ, ಸಿಂಹ; ಖಡ್ಗಿ-ಖಡ್ಗಮೃಗ, ಖಡ್ಗಧಾರಿ; ವರ + ಆಹವ

ಭೃತಭಾಸ್ವಚ್ಛರಭಾಜಿ ಭೂರುಹಕರೇಣುಭ್ರಾಜಿತಂ ಸಚ್ಚಮೂ
ರುತಮಂ ಮಾಹಿಪಮಂಜುಳಂ ಕಟಕಮಿಂಬಾಗಿರ್ದುದಾ ಶೈಲದಾ ೫೦

ಪರಿಸದಱೆ ಸುರಮಣಿಯು ಬ
ಲ್ಮೊರಡಿ ಸುಧಾರಸದ ನಿರ್ಝರಂ ಸುರಭೂಜೋ
ತ್ಕರಮುರ್ವಿ ಪರಿವ ಪೊಸ ಸಿ
ದ್ಧರಸಂ ಮೆಱೆಗುಂ ತದದ್ರಿವರ ಕಂಧರದೊಳ್ ೫೧

ತಮದ ತವರ್ಮನೆ ಭೂರಿ
ದ್ರುಮದಿರ್ಕೆ ಮೃಗಪ್ರತಾನದಾಡುಂಬೊಲನು
ದ್ಯಮಯುತ ಪುಳಿಂದಗಣದಾ
ಶ್ರಮಮೆನಿಸಿತಗಣ್ಯಖಗವರೇಣ್ಯಮರಣ್ಯಂ ೫೨

ವ॥ ಅಂತಿರ್ಪ ಬಲ್ದಪ್ಪಲಲ್ಲಿ—

ಆಲಮಶೋಕೆ ತಾಱೆ ಕಡಮಿಂಗಳ ಮತ್ತಿ ಬಿದಿರ್ಪತಂಗಮಂ
ಕೋಲೆ ಹರೀತಕೀ ಖದಿರುಮಿಪ್ಪೆ ಪುಲಿಂಗಿಲೆರಂ ತಮಾಲ ಕಂ

+ ಅಸಮಬಲ—ಶ್ರೇಷ್ಠ ಯುದ್ಧದಲ್ಲಿ ಅಸಮಬಲವುಳ್ಳವ, ವರಾಹ + ವಾಸಂ—ಹಂದಿಗಳ ವಾಸಸ್ಥಳ ; ಭೃತ + ಭಾಸ್ವತ್ + ಶರ + ಭ್ರಾಜಿ—ಧರಿಸಿದ ಪ್ರಕಾಶಿಸುವ ಬಾಣದಿಂದ ಶೋಭಿಸುವವ, ಭೃತ + ಭಾಸ್ವತ್ + ಶರ + ಭಾಸಿ—ಧರಿಸಿರುವ ಪ್ರಕಾಶಮಾನವಾದ ಬಾಣದ ಹುಲ್ಲಿನಿಂದ ಶೋಭಿಸುವಂತಹುದು : ಭೂರುಹಕ + ರೇಣು—ಭೂಮಿಯಿಂದ ಹುಟ್ಟುವಧೂಳು ; ಭೂರೂಹ + ಕರೇಣು—ಗಿಡ ಮತ್ತು ಹೆಣ್ಣಾನೆ : ಸತ್ + ಚಮೂ + ರುತಂ ಶ್ರೇಷ್ಠ ಸೈನ್ಯದ ಧ್ವನಿ ; ಸತ್ + ಚಮೂರು + ತಮಂ—ಶ್ರೇಷ್ಠ ಜಿಂಕೆಗಳಿಂದ ವಿಶಿಷ್ಟ ; ಮಾಹಿಪ—ಭೂಮಿಗೆ ಸಂಬಂಧಿಸಿದ, ಕೋಣ :] ೫೧. ಆ ಪರ್ವತದ ಒಂದು ಸ್ಥಳದಲ್ಲಿ ಪರುಷದ ಬಂಡೆ, ಇಂದ್ರನೀಲ ರತ್ನದ ದೊಡ್ಡ ಮರಡಿ, ಅಮೃತದ ಗಿರಿನದಿ. ಕಲ್ಪವೃಕ್ಷಗಳ ಸಮೂಹ, ಉಕ್ಕಿಹರಿಯುವ ಹೊಸ ಸಿದ್ಧರಸ—ಇವು ಶೋಭಿಸುತ್ತಿದ್ದವು. ೫೨. ಅಪರಿಮಿತವಾದ ಪಕ್ಷಿ ಶ್ರೇಷ್ಠಗಳಿಂದ ಕೂಡಿದ ಆ ಅರಣ್ಯವು ಕತ್ತಲೆಯ ತವರುಮನೆ, ಅನೇಕ ವೃಕ್ಷಗಳ ಸ್ಥಾನ, ಮೃಗಸಮೂಹದ ಆಶ್ರಯಸ್ಥಾನ, ಬೇಟೆಯ, ಉದ್ಯೋಗದಲ್ಲಿ ನಿರತರಾದ ಬೇಡರುಗಳ ಸಮೂಹದ ಆಶ್ರಯ ಸ್ಥಾನವೆನಿಸಿತ್ತು. ವ॥ ಇಂತಹ ದೊಡ್ಡದಾದ (ಆ ಕಾಳಹಸ್ತಿ ಪರ್ವತದ) ತಪ್ಪಲಿನಲ್ಲಿ—೫೩. ಅಲ್ಲಿ ನಿರಂತರವೂ ಆಲ, ಅಶೋಕ, ತಾರೆ, ಕಡವ, ಇಂಗಳ, ಅತ್ತಿ, ಬಿದಿರು, ಎಕ್ಕ (ಪತಂಗ), ಅಂಕೋಲೆ, ಅಳಲೆ, ಕಗ್ಗಲಿ, ಇಪ್ಪೆ, ಹುಲಿಗಿಲು, ಎರ, ತಮಾಲಕ (?), (ಹೊಂಗೆ) (?), ಪಾಲೆ, ಮುತ್ತುಗ, ಎಕ್ಕಿ (ಎಕ್ಕೆ ?), ಬೆಳೆದ ಅಂಬಟ, ಪಾದರಿ, ಕಕ್ಕೆ, ಲೊಕ್ಕೆ (ಲಕ್ಕಿ

ಪಾಲೆ ಪಲಾಶಮೆಕ್ಕೆ ಬೆಳವಂಬಟಿ ಪಾದರಿ ಕಕ್ಕೆ ಲೊಕ್ಕಿ ದಿಂ
ಡಾಲಮಗಸ್ತ್ಯಮುಖ್ಯ ತರುಗಳ್ ತರದಿಂದೆಸೆಗುಂ ನಿರಂತರಂ ೫೩

ಮರಗುಟಗಂ ನವಿಲ್ಗಿಳಿ ಪಸುಂಬನಮಳ್ದಲೆವಕ್ಕಿ ತೊಂಡಿ ತಿ
ತ್ತಿರಿ ಪಿಕಳಂ ಬಕಂ ಶಕುನಿ ಜಾದಗೆ ಟಿಟ್ಟಿಭಮಂಚೆ ಕೊಂಚೆ ಕ
ತ್ತುರಿಗಱಿ ಹಂಗನಿಂಗೊರಲನಿಂಗದಿರ್ವಕ್ಕಿ ಶರಾರಿ ಗೂಗೆ ಹೆಂ
ಗುರು ಚಿಲುಕೂಲಿ ಕಾಗೆ ಗರುಡಂ ಗಿಡಿಗಂ ಮೆಱೆಗುಂ ವನಾಂತದೊಳ್ ೫೪

ವ॥ ಮತ್ತಂ—

ಹರಿ ಕರಿ ಜಂಬುಕಂ ಮರೆ ಮೊಲಂ ಪುಲಿ ಪುಲ್ಲೆ ಬಿಡಾಲಮೆಕ್ಕಲಂ
ಕರಡಿ ವನೇಚರಂ ಫಣಿ ವೃಕಂ ನಕುಲಂ ಶರಭಂ ಕರೇಣು ಕ
ತ್ತುರಿಯ ಮಿಗಂ ಲುಲಾಯಮೆನಿಪಗ್ಗದ ಸತ್ವಮಳುಂಬಮೊಪ್ಪೆ ಭೀ
ಕರತರಮಾಗಿ ಸರ್ವಮೃಗಪಕ್ಷಿ ಶರಣ್ಯಮರಣ್ಯಮೊಪ್ಪುಗುಂ ೫೫

ವ॥ ಆ ಗಹಾನಾಂತರಾಳದಲ್ಲಿ—

ಮೃಗಭೂಲಿಪ್ತಮಹೀತಳಂ ಗಜಶಿರೋಮುಕ್ತಾವಳೀ ಚಾಮರ
ಸ್ಥಗಿತಂ ಪ್ರಾಂಜುಳತೋರಣಂ ಫಣಿಫಣಾರತ್ನಪ್ರದೀಪಂ ಮನಂ

ಗಿಡ, ದಿಂಡಿಲು, ಅಗಸಿ (ಅಗಸ್ತ್ಯ) ಮುಖ್ಯವಾದ ಗಿಡಗಳು ಸಾಲಾಗಿ ಶೋಭಿಸುತ್ತಿದ್ದವು [ಹುಲಗಿಲು, ತಮಾಲ, ಹೊಂಗೆ—ಇವು ಮೂರೂ ಒಂದೇ ಎಂದು ಈಗ ವ್ಯವಹಾರದಲ್ಲಿದೆ ; ಪತಂಗ–ಅರ್ಕ–ಇದರ ತದ್ಭವ ಎಕ್ಕ ಎಂದು ತಿಳಿದು ಎಕ್ಕದಗಿಡ ಎಂದು ಅರ್ಥಮಾಡಬೇಕೇನೋ. ಆದರೆ ಮುಂದೆ 'ಎರ್ಕೆ' ಎಂದು ಹೇಳಿದುದರಿಂದ 'ಪತಂಗ' ಶಬ್ದದ ಮರವಾವುದೋ ಚಿಂತನೀಯ] ೫೪. (ಆ) ವನಾಂತರದಲ್ಲಿ ಮರಗುಟಿಗ, ನವಿಲು, ಗಿಳಿ, ಹಸುಬೆ (ಕಸುಂಬ), ಗಂಡಭೇರುಂಡ, ತೊಂಡೆ, ತಿತ್ತಿರಿ, ಕೋಗಿಲೆ, ತೋಲಬಾವುಲಿ, ಶಕುನ (ಆಲೇಹಕ್ಕಿ ಅಥವಾ ಹಾಲುಹಕ್ಕಿ), ಚಾತಕ, ಟಿಟ್ಟಿಭ, ಹಂಸ, ಬಕ, ಕತ್ತುರಿ, ಗರಿಹಂಗ, ಇಂಗೊರಲ, ಇಂಗದಿರ್ವಕ್ಕಿ, ಚಕೋರ, ಶರಾರಿ, ಗೂಗೆ, ಹೆಂಗುರು, ಚಿಲುಕೂಲಿ, ಕಾಗೆ, ಗರುಡ, ಗಿಡುಗ–ಪಕ್ಷಿಗಳು ಶೋಭಿಸುತ್ತಿದ್ದವು. ವ॥ ಮತ್ತು ೫೫. ಸಿಂಹ, ಆನೆ, ನರಿ, ಕಿರುಬ, ಮೊಲ, ಹುಲಿ, ಜಿಂಕೆ, ಕಾಡುಬೆಕ್ಕು, ಹಂದಿ, ಕರಡಿ, ಕೋತಿ, ಸರ್ಪ, ತೋಳ, ಕೀರ, ಶರಭ, ಹೆಣ್ಣಾನೆ, ಕಸ್ತೂರಿ ಮೃಗ, ಕಾಡುಕೋಣ–ಎಂದೆನಿಸುವ ಶ್ರೇಷ್ಠವಾದ ಪ್ರಾಣಿಗಳು ಅಧಿಕವಾಗಿ ಒಪ್ಪುತ್ತ ಇದ್ದು, ಆ ಅರಣ್ಯವು ಭಯಂಕರವಾಗಿ ಸಕಲ ಮೃಗಪಕ್ಷಿಗಳನ್ನು ಸಂರಕ್ಷಿಸುವ ಅರಣ್ಯವೆನಿಸಿ ಶೋಭಿಸುತ್ತಿತ್ತು. ವ॥ ಇಂತಹ ಘೋರಾರಣ್ಯದ ಮಧ್ಯದಲ್ಲಿ—೫೬. ಇಲ್ಲಿರುವ ಬೇಡರ ಮನೆ ಹೀಗಿತ್ತು : ಭೂಮಿಯು ಕಸ್ತೂರಿಯಿಂದ ಸಾರಿಸಲ್ಪಟ್ಟಿತ್ತು; ಆನೆಗಳ ತಲೆಯ ಮುತ್ತುಗಳು, ಚಮರೀ ಮೃಗಗಳ ಚಾಮರಗಳು–ಇವುಗಳಿಂದ ವ್ಯಾಪ್ತವಾಗಿ ಮನೋಹರವಾದ ತೋರಣದಿಂದ ಕೂಡಿತ್ತು; ನಾಗರಹಾವುಗಳ ಹೆಡೆಯ ರತ್ನಗಳ

ಬುಗೆ ಚೆಲ್ವಾದ ಕರೀಂದ್ರದಂತಕೃತಮಂಚಂ ತಳ್ತ ಕೇಳೀಗೃಹಾ
ಳಿಗಳಿಂ ಶೋಭೆಯನೈದೆ ಬೀಱಿದುದಿಳಾಲೋಕಕ್ಕಣಂ ಪಕ್ಕಣಂ ೫೬

ಪದೆವಿಲ್ಲಂ ಮಾಳ್ಪ ಬಾಣಾವಳಿಯ ಮಸೆವ ಶಸ್ತ್ರಂಗಳಂ ಕೂರ್ಪುಗೆಯ್ವ
ಗ್ಗದ ಬೆಳ್ಳಾರಂಗಳಂ ನಿರ್ವಿಸುವ ಕರಟಿಮುಕ್ತಾಳಿಯಂ ಕೋವ ಗುಂಜಾ
ಘದ ಚಂಚದ್ದಾಮಮಂ ಕಟ್ಟುವ ನವಿಲಕಲಾಪಂಗಳಿಂ ತಳ್ತ ಪೊಂಬ
ಗ್ಗದ ಭಾಸ್ವಚ್ಚರ್ಮದಿಂ ಟೊಪ್ಪರಮನೆಸಪ ಭಿಲ್ಲರ್ಕರಂ ರಂಜಿಸಿರ್ಪರ್ ೫೭

ಚೆಂದುಟಿ ಮಿಂಚುವಲ್ಸಗೆಮೊಗಂ ನಿಡುಗಣ್ಕುಡಿವುರ್ಬು ತೆಳ್ಗದಂ
ಪಂದವ ವೇಣಿ ಕಂಬುಗಳಮಂಬುಜಕೋಶಕುಚಂ ಪ್ರವಾಳಮಂ
ನಿಂದಿಪ ಕೆಂದಳಂ ಮಿಸುಪ ತೆಳ್ನಡು ಪೀನನಿತಂಬಬಿಂಬಮಿಂ
ಪೊಂದಿದ ಬಾಳೆನುಣ್ದೊಡೆ ವಿರಾಜಿಸೆ ಭಿಲ್ಲಿಯರಲ್ಲಿ ರಂಜಿಪರ್ ೫೮

ವ॥ ಇಂತಳುಂಬವೊಪ್ಪುವ ಬೇಡವಡೆಗೊಡೆಯನೆನಿಸಿ—

ಪ್ರಕಟಪ್ರತಾಪಭೂಷಣ
ನಕುಟಿಲಮತಿ ಮುಗ್ಧನಿಂದುಧರವರಭಕ್ತಂ
ವಿಕಟಚರಿತ್ರಂ ರಂಜಿಪ
ನಕಳಂಕಂ ಕಣ್ಣಪಯ್ಯನೆಂಬ ಪುಳಿಂದಂ ೫೯

ದೀಪಗಳು ಮನಂಬುಗುವಂತಿದ್ದವು; ಮನೋಹರವಾದ ಆನೆಯದಂತಗಳಿಂದ ಮಾಡಿದ ಮಂಚಗಳಿಂದ ಕೂಡಿತ್ತು; ಕ್ರೀಡಾಗೃಹಗಳನ್ನು ಒಳಗೊಂಡು ಲೋಕಕ್ಕೆ ವಿಶೇಷವಾಗಿ ಶೋಭೆಯನ್ನುಂಟುಮಾಡುವಂತಿತ್ತು. ೫೭. ಹೆದೆ ಮತ್ತು ಬಿಲ್ಲುಗಳನ್ನು ತಯಾರಿಸುವ, ಬಾಣಗಳ ಸಮೂಹವನ್ನು ಮಸೆಯುವ, ಶಸ್ತ್ರಗಳನ್ನು ಚೂಪು (ತೀಕ್ಷ್ಣ)ಗೊಳಿಸುವ, ಶ್ರೇಷ್ಠ ಬಲೆಗಳನ್ನು ಹೆಣೆಯುವ. ಆನೆಯ ಕುಂಭಸ್ಥಳದ ಮುತ್ತುಗಳನ್ನು ದಾರದಲ್ಲಿ ಪೋಣಿಸುವ, ಗುಲಗಂಜಿಗಳ ಸಮೂಹದ ಹೊಳೆಯುವ ಮಾಲಿಕೆಗಳನ್ನು ಕಟ್ಟುವ ನವಿಲಿನ ಗರಿಗಳಿಂದ ಮತ್ತು ಹೊಂಬಣ್ಣದ ಹುಲಿಯ ಪ್ರಕಾಶಿಸುವ ಚರ್ಮದಿಂದ ಶೋಭಿಸುವ ತಲೆಯ ಟೊಪ್ಪರ (ಟೊಪ್ಪಿಗೆ)ಗಳನ್ನು ರಚಿಸುವ ಬೇಡರು ಚೆನ್ನಾಗಿ ಶೋಭಿಸುತ್ತಿದ್ದರು. ೫೮. ಕೆಂಪಾದ ತುಟಿ, ಹೊಳೆಯುವ ಹಲ್ಲು, ನಗೆಮೊಗ, ದೀರ್ಘವಾದ ಕಣ್ಣು, ಡೊಂಕಾದ ಹುಬ್ಬು, ತೆಳುವಾದ ಕೆನ್ನೆ, ಚೆಂದದ ಜಡೆ. ಶಂಖದಂತಿರುವ ಕುತ್ತಿಗೆ, ಕಮಲದ ಮೊಗ್ಗಿನಂತಿರುವ ಮೊಲೆ, ಚಿಗುರನ್ನು ತಿರಸ್ಕರಿಸುವಂತಹ ಕೆಂಪಾದ ಅಂಗೈ, ಶೋಭಿಸುವ ತೆಳುವಾದ ನಡು, ದಪ್ಪನೆಯ ಕಟಿಪಶ್ಚಾತ್ ಭಾಗ, ಬಾಳೆಯಂತಿರುವ ನುಣ್ಣನೆಯ ತೊಡೆ ಶೋಭಿಸುತ್ತಿರಲು ಬೇಡರ ಹೆಂಗಸರು ಶೋಭಿಸುತ್ತಿದ್ದರು. ವ॥ ಈ ರೀತಿ ಅಧಿಕವಾಗಿ ಶೋಭಿಸುವ ಬೇಡರ ಸಮೂಹಕ್ಕೆ (ಸೈನ್ಯಕ್ಕೆ) ಒಡೆಯನೆನಿಸಿ ೫೯. ಪ್ರಸಿದ್ಧವಾದ ಪರಾಕ್ರಮವನ್ನೇ ಆಭರಣವಾಗಿ ಉಳ್ಳವನೂ, ಋಜು ಬುದ್ಧಿಯುಳ್ಳವನೂ, ಮುಗ್ಧನೂ, ಶಿವಭಕ್ತನೂ, ವಿಚಿತ್ರ, ಚರಿತ್ರೆಯುಳ್ಳವನೂ, ಕಳಂಕ

ವ॥ ಆ ಪುಳಿಂದಪತಿಯೊಂದುದಿನಂ ಬೇಂಟೆಗುಜ್ಜುಗಿಸಿ ಸಜ್ಜ[1]ಗೆಯ್ದು[1]—

ತೊಳಗುವ ಪೀಲಿದಂಡೆ ಮಿಳಿರ್ದಾಡುವ ನೆತ್ತಿಯ ಚಾಮರಂ ಮನಂ
ಗೊಳಿಪೆಳೆಮುತ್ತಿನೆಕ್ಕಸರಮುಟ್ಟತಳಿರ್ಪಸುರಂಗಿ ಗುಂಜಿಕಾ
ವಳಿಯ ವಿಭೂಷಣಂ ಪಿಡಿದ ಬಿಲ್ಸರಲಂದದ ಬೆನ್ನ ಚನ್ನ ಬ
ತ್ತುಳಿಕೆ ಮರಂದದಣ್ಪೆಸೆಯೆ ಬಂದನುದಗ್ರ ಪುಳಿಂದನಾಯಕಂ ೬೦

ಬಿಡುವಲೆ ಬೆಳ್ಳಾರಂ ಪೇ
ರಡಿ ಬಡಿಕೋಲುಣ್ಕೆಗಾಳಮಂಟಿಡುವಲೆ ಕೈ
ಪೊಡೆ ಬಿಲ್ಸರಲಡ್ಡಣಮುರೆ
ಯುಡಿಗಲ್ಲಿಗಳೊಪ್ಪೆ ಬಂದರೊಡನೆ ಪುಳಿಂದರ್ ೬೧

ತಳಿರುಡೆಯುಟ್ಟು ಪೀಲಿಯ ತರಂಗದ ಬಲ್ನಿಱಿಗಟ್ಟಿ ತೊಟ್ಟು ಮಂ
ಜುಳನವಗುಂಜಿಕಾಭರಣಮಂ ಪುಳಪಯುಚ್ಚಿ ಬೊಟ್ಟನಿಟ್ಟು ಪ
ಜ್ವಳಿಪೆಳೆಮುತ್ತಿನೆಕ್ಕಸರವೊಪ್ಪಿರೆ ಕತ್ತುರಿಯಣ್ಪುಗೆಯ್ದು ಕಂ
ಗೊಳಿಪ ಕಿರಾತಿಯರ್ ಪಿಡಿದು ಬಿಲ್ಸರಳಂ ನಡೆಗೊಂಡರೋಪರೊಳ್ ೬೨

ರಹಿತನೂ ಆದ ಕಣ್ಣಪಯ್ಯ ಎಂಬ ಹೆಸರಿನ ಬೇಡನು ಶೋಭಿಸುತ್ತಿದ್ದನು. ವ॥ ಆ ಪುಳಿಂದ ಪತಿಯು ಒಂದು ದಿನ ಬೇಟೆಗೆ ಹೋಗಲು ಸಿದ್ಧನಾಗಿ ಅದರ ಸಿದ್ಧತೆ (ಸನ್ನಾಹ)ಯನ್ನು ಮಾಡಿಕೊಂಡು—೬೦. ಶೋಭಿಸುವ ನವಿಲುಗರಿಯ ದಂಡೆ, ಅಲ್ಲಾಡುತ್ತಿರುವ ತಲೆಯ ಮೇಲ್ಭಾಗದಲ್ಲಿರುವ ಚಾಮರ, ಮನೋಹರವಾದ ಮುತ್ತಿನ ಒಂಟೆಳೆಸರ, ಉಟ್ಟ ಚಿಗುರಿನ ಉಡಿಗೆ (ನಡುವಿನ ಉಡಿಗೆ), ಹಸಿರು ಬಣ್ಣದ ಅಂಗಿ, ಗುಲಗಂಜಿಗಳ ಸರಗಳ ಆಭರಣ, ಕೈಯಲ್ಲಿ ಹಿಡಿದ ಬಿಲ್ಲು ಬಾಣಗಳು, ಬೆನ್ನಿನ ಮೇಲೆ ಮನೋಹರವಾದ ಬತ್ತಳಿಕೆ, ಮಕರಂದದ ಅನುಲೇಪನ ಇವು ಶೋಭಿಸುತ್ತಿರಲು ಭಯಂಕರನಾದ ಬೇಡರ ನಾಯಕನು ಬಂದನು. ೬೧. ಬಿಡುವ ಬಲೆ ಅಂದರೆ ಸುತ್ತಲೂ ಹರಡುವ ಬಲೆ, ನಿಂತು ಬೀಸುವ ಬಲೆ, ದೊಡ್ಡ ದೊಣ್ಣೆ, ಮುಂಭಾಗದಲ್ಲಿ ಗಂಟಿದ್ದು ಹಿಂಭಾಗದಲ್ಲಿ ಸಣ್ಣಗಿರುವ ಕೋಲು (ದೊಣ್ಣೆ), ಆಹಾರವನ್ನು ಸಿಕ್ಕಿಸಿ ಪ್ರಾಣಿಗಳನ್ನು ಹಿಡಿಯುವ ಗಾಳ, ಆಲ ಮೊದಲಾದ ಗಿಡಗಳ ಅಂಟನ್ನು ಹತ್ತಿಸಿ ಇಡತಕ್ಕ ಬಲೆ, ಬಾಣಕ್ಕೆ ಸೇರಿಸಿದ ಗರಿ (ಕೈ ಪೊಡೆ), ಬಾಣ, ಗುರಾಣಿ ಮೃಗಗಳ ಆಹಾರ ಕೊಂದ ಮೃಗ ಮೊದಲಾದುದನ್ನು ತುಂಬುವ ಚೀಲ–ಇವುಗಳು ಶೋಭಿಸುತ್ತಿರಲು ಬೇಡರುಗಳು ಅವನ ಹಿಂದೆಹಿಂದೆಯೇ ಬಂದರು. ೬೨. ಬೇಡರ ಹೆಂಗಸರು ತಮ್ಮ ಪ್ರಿಯರೊಡನೆ–ಚಿಗುರಿನ ಸೀರೆಯನ್ನುಟ್ಟು, ನವಿಲುಗರಿಯ ತರಂಗದಂತಿರುವ ದೊಡ್ಡ ನಿರಿಗೆಗಳನ್ನು ಕಟ್ಟಿ, ಮಂಜುಳವಾದ ಹೊಸ ಗುರುಗಂಜಿಗಳ ಆಭರಣಗಳನ್ನು ತೊಟ್ಟುಕೊಂಡು, ಹೊಳೆಯುವ ಪಚ್ಚೆಯ ಬೊಟ್ಟನ್ನು ಇಟ್ಟುಕೊಂಡು, ಪ್ರಕಾಶಿಸುವ (ಹೊಳೆಯುವ)

1 ಗೈದು(ಜ)

ವ॥ ಅಂತೇಳ್ತಂದ ಬೇಡವಡೆಗೂಡಿ ಮೃಗಯಾಸಂಭ್ರಮಂ ಮಿಗೆ ಪಣೆಗೆಯ್ದುತ್ತಮಲ್ಲಿ ನಿಜಬಲಕ್ಕೆ ಕೈವೀಸಲೊಡನೆ—

ಸರಳಿಸುವೇಣನೋಡುವ ಮೊಲಂ ಬಿಡದಾಲಿಪ ದಂತಿ ನಿಲ್ವ ಸೂ
ಕರನುಱಿದೆಳ್ದು ಮೆಯ್ಮು[1]ರಿವ ಕೇಸರಿ ಪಾಱುವ ಪಕ್ಕಿ ಪೊಕ್ಕು ಮೆ
ಯ್ಯುರಿವ ಮೃಗಾರಿ ಲಂಘಿಪ ವೃಕಂ ಬಗಗುಂದುವ ಖಡ್ಗಿಯೆತ್ತಲುಂ
ನೆರೆದಿರೆ ಕಾಡೊಳುಣ್ಮಿದುದು ಬೇಡರ ಬೇಂಟೆಯ ವಾದ್ಯದಬ್ಬರಂ ೬೩

ವ॥ ಆಗಳ್—

ತರುಶಾಖಾಗ್ರಮನೇಱಿ ನೋೞ್ಪ ಪೊದೆವೊಕ್ಕಾರೈವ ಸಾರ್ದಲ್ಲಿ ಬೇ
ಹಿರಿಸುತ್ತಂ ಪೊದಱಿಂ ತೆರಳ್ಚುವ ಜಲೋದ್ದೇಶಂಗಳೊಳ್ತೀವಿದೋ
ವರಿಯೊಳ್ ಕಾಪಡಿವಜ್ಜೆಯುಂ ಪರಿಕಿಪಾರ್ಪಿಂ ಕಂಡಳುಂಬಂ ಮೃಗೋ
ತ್ಕರಮಂ ಬೆಂಬಳಿಯಟ್ಟುವಗ್ಗದ ಕಿರಾತವ್ರಾತಮೇಂ [2]ತೀವಿತೋ[2] ೬೪

ಎಳೆ ಮುತ್ತಿನ ಒಂಟೆಳೆಸರವನ್ನು ಒಪ್ಪುವಂತೆ ಧರಿಸಿ, ಕಸ್ತೂರಿಯನ್ನು ಮೈಗೆ ತೊಡೆದು ಕೊಂಡು, (ತಾವೂ ಕೂಡ) ಬಿಲ್ಲು, ಬಾಣಗಳನ್ನು ಹಿಡಿದು, ಕಂಗೊಳಿಸುತ್ತ (ಅವರೂ) ನಡೆದರು. ವ॥ ಈ ರೀತಿಯಲ್ಲಿ (ಬೇಟೆಗೆ) ಹೊರಟ ಬೇಡರ ಪಡೆಯೊಡನೆ ಕೂಡಿ ಕೊಂಡು ಬೇಟೆಯ ಸಂಭ್ರಮವು ಅಧಿಕಗೊಂಡಿರಲು ಮೃಗಗಳು ವಾಸಮಾಡುವ ಸ್ಥಳ ಗಳನ್ನು ಕಾಣುತ್ತ, ಅಲ್ಲಿ ತನ್ನ ಸೈನ್ಯಕ್ಕೆ ಕೈ ಬೀಸಿದ ಕೂಡಲೆ ೬೩. ಹಾರುವ ಗಂಡು ಜಿಂಕೆ, ಓಡುವ ಮೊಲ, ತಪ್ಪದೆ ಶಬ್ದವನ್ನು ಆಲಿಸುವ ಆನೆ, ನಿಲ್ಲುವ ಹಂದಿ, ಕೋಪ ದಿಂದ ಉರಿದೇಳುವ ಎದ್ದು ಮೈಮುರಿಯುವ ಸಿಂಹ, ಹಾರುವ ಹಕ್ಕಿ, (ಪೊದೆಯನ್ನು ಹೊಕ್ಕು ಅಡಗಿಕೊಳ್ಳುವ ಹುಲಿ, ನೆಗೆದು ಓಡುವ ತೋಳ, ಹೆದರಿದ ಘೇಂಡಾಮೃಗ (ಖಡ್ಗಮೃಗ) ಇವು ಸುತ್ತೆತ್ತಲೂ ಕೂಡಿ, ಇರಲು ಕಾಡಿನಲ್ಲಿ ಬೇಡರ ಬೇಟೆಯ ಗದ್ದಲವು ಅಧಿಕಗೊಂಡಿತು. ವ॥—ಆಗ, ೬೪. ಮರದ ಕೊಂಬೆಯ ತುದಿಗೇರಿ ನೋಡುವ, ಪೊದೆಗಳನ್ನು ಹೊಕ್ಕು ಪರೀಕ್ಷೆ ಮಾಡುವ, ಹೋದ ಕಡೆ (ಮೃಗಗಳು ಓಡಿದ ಕಡೆ) ಗುಪ್ತವಾಗಿ ಹೋಗಿ, ಪೊದೆಗಳಿಂದ ಹೊರ ಹೊರಡಿಸುವ (ಬೈಲು ಪ್ರದೇಶಕ್ಕೆ ಬರುವಂತೆ ಮಾಡುವ), ನೀರಿರುವ ಸ್ಥಳಗಳಲ್ಲಿ ಹರಡಿರುವ, ಸಮೀಪದಲ್ಲಿ ಮಾಡಿದ ಕಾಲಿನ ಹೆಜ್ಜೆಯ ಗುರುತುಗಳನ್ನು ಪರೀಕ್ಷಿಸುವ, (ಆ ಹೆಜ್ಜೆಗಳನ್ನು) ಕಂಡು ಶೌರ್ಯದಿಂದ ಅತಿಶಯವಾಗಿ ಮೃಗಗಳ ಸಮೂಹವನ್ನು ಬೆನ್ನಟ್ಟಿ ಓಡಿ ಹೋಗುವ (ಅಟ್ಟಿಸಿಕೊಂಡು ಓಡುವ) ಶ್ರೇಷ್ಠವಾದ ಬೇಡರುಗಳ ಸಮೂಹವು ಏನು ತುಂಬಿತ್ತೋ!

1 ಮೊಮು(ಅ) 2 ತುಂಬಿತೋ(ಮು)

ಬಿಡು ಬೇಗಂ ನಾಯ್ಗಳಂ ಬಲ್ಬಲೆಯನಿಡು ಮೊಲಂ ಪುಲ್ಲೆ ಪೋದಪ್ಪವಾರ್ಪಿಂ
ಕೆಡಪೆತ್ತಂ ಪತ್ತು ಸುತ್ತಾರ್ದೆಸೆ ಮಸೆ ಸರಲಂ ದ್ವೀಪಿಯಂ ಪೊಯ್ಕುಜುತ್ತಿ
ರ್ಕಡಿಗೆಯ್ಬುಲ್ಪಂದಿಯಂ ಖಡ್ಗಿಯನಿಱಿ ತಿವಿ ಮತ್ತೇಭಮಂ ಸಿಂಗಮಂ ಮೋಕ್
ಪೊಡೆಯೆಂದೆಂಬಬ್ಬರಂ ಪರ್ಬಿದುದು ವನಚರವ್ರಾತವಕ್ತ್ರಪ್ರಭೂತಂ ೬೫

ಕರಿಯಂ ಕೊಂದು ಮೃಗಾರಿಯಂ ಸದೆದು ಸಾರಂಗಂಗಳಂ ಸೀಳ್ದು ಕೇ
ಸರಿಯಂ ಪೋಳ್ದು ವೃಕಂಗಳಂ ಬಡಿದು ಭಲ್ಲೂಕಂಗಳಂ ತೂಳ್ದು
ಳ್ಕರೆಯಂ ಪೊಯ್ದು ವರಾಹಮಂ ತಿವಿದು ಕಾಳ್ಕೋಣಂಗಳಂ ಬೀಳಲೆ
ಚ್ಚಿರದಾರ್ದಾಡಿದುದಲ್ಲಿ ವಿಕ್ರಮ ಕಿರಾತಪ್ರೋತ್ಕರಂ ಬೇಂಟೆಯಂ ೬೬

ವ॥ ಇಂತು ಪಲವೇಂಟೆಯಂ ಬಿಯದರಾ ಗಹನಂಬಿಡಿದಾಡುತ್ತುಮಿರ್ಪಾಗಳ್—

ಆಗಸದಲ್ಲಿ ಮಿಱಿ ಮಿಗೆ ಪಾಱುವ ದಿವ್ಯ ಖಗಕ್ಕೆ ಭಿಲ್ಲರಿಂ
ಬಾಗಿರೆ ಬೀಸಿದೊಳ್ವಲೆವೊಲೊಪ್ಪಿರೆ ಸಂಜೆಯ ಕೆಂಪು ಸಿಲ್ಕಿತ
ದ್ದಾಗುರೆಯಲ್ಲಿ ಕಾಲುಡುಗಿ ಪಶ್ಚಿಮ ವಾರ್ಧಿಗೆ ಬಿಳ್ದುದೆಂಬಿನಂ
ಬೇಗದೊಳಲ್ಲಿ ತತ್ಖಗಮಡಂಗಿದುದಾಹೃತಲೋಹಿತಾಂಶುಕಂ ೬೭

೬೫. ಬೇಗ ನಾಯಿಗಳನ್ನು ಬಿಡು; ದೊಡ್ಡಬಲೆಯನ್ನು ಬೀಸು; ಮೊಲ ಹುಲ್ಲೆ (ಓಡಿ) ಹೋಗುವುದು (ಅವನ್ನು) ಶೌರ್ಯದಿಂದ ನೆಲಕ್ಕೆ ಕೆಡವು; ಎತ್ತೆತ್ತಲೂ ಹತ್ತು ಸುತ್ತು; ಆರ್ಭಟಿಸಿ ಹೊಡೆ, ಬಾಣವನ್ನು ಮಸೆದುಕೋ; ಹುಲಿಯನ್ನೂ, ದೊಡ್ಡ ಹಂದಿಯನ್ನೂ ಕೋಪದಿಂದ (ಬಾಣಬಿಟ್ಟು ಹೊಡೆದು) ಎರಡು ತುಂಡುಮಾಡು; ಖಡ್ಗಮೃಗವನ್ನು ಇರಿ; ಮದ್ದಾನೆಯನ್ನು ತಿವಿ; ಮತ್ತು ಸಿಂಹವನ್ನು ಹೊಡೆ ಹೀಗೆ ಬೇಡರುಗಳ ಸಮೂಹದ ಬಾಯಿಂದ ಹೊರಟ ಕೂಗು, (ಆ ಅರಣ್ಯದಲ್ಲಿ) ಹಬ್ಬಿತು. ೬೬. ಆ ಅರಣ್ಯದಲ್ಲಿ ಪರಾಕ್ರಮದಿಂದ ಕೂಡಿದ ಬೇಡರ ಗುಂಪು, ಆನೆಯನ್ನು ಕೊಂದು, ಹುಲಿಯನ್ನು ನಾಶಮಾಡಿ, ತೋಳಗಳನ್ನು ಬಡಿದು, ಕರಡಿಗಳನ್ನು ತುಳಿದು, ಕಾಡು ಕಿರುಬವನ್ನು ಹೊಡೆದು, ಹಂದಿಯನ್ನು ತಿವಿದು, ಕಾಡುಕೋಣಗಳನ್ನು ನೆಲಕ್ಕೆ ಬೀಳುವ ಹಾಗೆ ಬಾಣದಿಂದ ಹೊಡೆದು, ತಪ್ಪದೆ ಗಟ್ಟಿಯಾಗಿ ಕೂಗುತ್ತ ಬೇಟೆಯನ್ನು ಆಡಿತು. ವ॥ ಈ ರೀತಿ ಆ ಬೇಡರು ಆ ಕಾಡನ್ನಾಶ್ರಯಿಸಿ, ಅನೇಕ (ರೀತಿಯ) ಬೇಟೆಯನ್ನು ಆಡುತ್ತ ಇರುವಾಗ—೬೭. ಆಕಾಶದಲ್ಲಿ ಎತ್ತರದಲ್ಲಿ ಹಾರುವ ಶ್ರೇಷ್ಠವಾದ ಹಕ್ಕಿಗೆ (ಸೂರ್ಯನಿಗೆ) ಬೇಡರು ಮನೋಹರವಾಗಿರುವಂತೆ ಬೀಸಿದ ಒಳ್ಳೆಯ ಬಲೆಯ ಹಾಗೆ, ಸಂಧ್ಯಾ ಕಾಲದ ಕೆಂಪು ವರ್ಣವು ಕಾಣಿಸಿತು. ಆ ಬಲೆಯಲ್ಲಿ ಸಿಕ್ಕು ಕಾಲು ಮುರಿದು. ಹಕ್ಕಿಯು (ಸೂರ್ಯನು) ಪಶ್ಚಿಮ ಸಮುದ್ರಕ್ಕೆ ಬಿದ್ದುದು ಎಂಬ ಹಾಗೆ ಶೀಘ್ರವಾಗಿ ಅಲ್ಲಿ ಕೆಂಪು ವಸ್ತ್ರದ ಬಲೆ ಸಹಿತ (ಕೆಂಪು ಕಾಂತಿ ಸಹಿತ) ಆ ಪಕ್ಷಿಯು (ಆ ಸೂರ್ಯನು) ಅಡಗಿತು. [ಇಲ್ಲಿ ಖಗ ಎಂದರೆ ಪಕ್ಷಿ, ಸೂರ್ಯ ಎಂಬ ಎರಡರ್ಥದ ಈ ಶಬ್ದ ಚಮತ್ಕಾರದಿಂದ (ದ್ವಂದ್ವಾರ್ಥ ಬರುವ ಹಾಗೆ) ವರ್ಣಿಸಲ್ಪಟ್ಟಿದೆ. ಹೊತ್ತು ಮುಳುಗಿತು ಎಂದು

ಗಿರಿಕಟಕದ ಬಿಯದರ ಕ
ರ್ಬರ ತನುರುಚಿ ಪರ್ಬಿದತ್ತೊ ಪೇಳೆನೆ ಮರ್ಬಾ
ವರಿಸಿದುದಖಿಳ ದಿಶಾವ
ಲ್ಲರಿಗೆ ಮುಗುಳ್ಮೂಡಿದಂತಿರೊಗೆದುದು ಭಗಣಂ ೬೮

ಪಿರಿದಂಧಕಾರ ಯಮುನಾ
ತರಂಗಿಣೀ ಜಲ ನಿಷಿಕ್ತ ಸುರಪದಿಶಾವ
ಲ್ಲರಿ ಲಕ್ಷ್ಮಭೃಂಗನವಮಂ
ಜರಿಯಂ ಪಡೆದಂತಿರೊಗೆದುದೈಂದವಬಿಂಬಂ ೬೯

ಮೃಗಯಾಶ್ರಮಮಂ ತೊಲಗಿಸಿ
ಮಿಗೆ ನಿಜರುಚಿಯಿಂದಲರ್ಚಿ ಮುಡಿಯಿಸಿ ನೆಯ್ದಿ[1]
ಲ್ಮುಗುಳಂ ಶಶಿ ಬಿಯದರನೋ
ಲಗಿಪಂತೆಸೆದಂ ನಿಜಾಂಕಮೃಗಹತಿ ಭಯದಿಂ ೭೦

ವ|| ಆಗಳಾ ಪುಳಿಂದಪತಿಯಪ್ಪ ಕಣ್ಣಪ್ಪಂ ಸಂಧ್ಯೋಚಿತಕ್ರಿಯಾನಿವರ್ತನಾನಂತರಂ ನಿಜಬಲ ಸಮೇತಮೆಳ್ತಂದೊಂದು ಬಾಲಚೂತದೋವರಿಯ ಪಳುಕುವಾಸಱೆ[3]ಯ ಕುಸುಮತಳ್ಪದೊ[2]ಳ್ಮೈಯ್ಯ[2]ಕ್ಕಿ ನಿದ್ರೆಗೆಯ್ದಿರೆ—

ತಾತ್ಪರ್ಯ] ೬೮. ಪರ್ವತದ ತಪ್ಪಲಿನಲ್ಲಿರುವ ಬೇಡರ ಕಪ್ಪಾದ ದೇಹ ಕಾಂತಿಯು ಹಬ್ಬಿತೋ ? ಹೇಳು, ಎನ್ನುವ ಹಾಗೆ ಕತ್ತಲೆಯು ಆವರಿಸಿತು. ಸಮಸ್ತ ದಿಕ್ಕುಗಳೆಂಬ ಬಳ್ಳಿಗಳಿಗೆ ಮೊಗ್ಗುಗಳು ಹುಟ್ಟಿದ ಹಾಗೆ ನಕ್ಷತ್ರ ಸಮೂಹವು (ಆಕಾಶದಲ್ಲಿ) ಕಾಣಿಸಿತು ೬೯. ಹೆಚ್ಚಾದ ಕತ್ತಲೆಯೆಂಬ ಯಮುನಾ ನದಿಯ ನೀರಿನಿಂದ ಸೇಚಿಸಲ್ಪಟ್ಟ (ಚಿಮುಕಿಸಲ್ಪಟ್ಟ) ಪೂರ್ವದಿಕ್ಕೆಂಬ ಬಳ್ಳಿಯು ಕಳಂಕವೆಂಬ ಭ್ರಮರವುಳ್ಳ ಹೊಸದಾದ ಹೂ ಗೊಂಚಲನ್ನು ಪಡೆದ ಹಾಗೆ ಇರಲು ಚಂದ್ರಬಿಂಬವು ಮೂಡಿತು (ಹುಟ್ಟಿತು). ೭೦. ಚಂದ್ರನು ತನ್ನ ಲಾಂಛನವಾದ ಜಿಂಕೆಯನ್ನು ಹೊಡೆಯುವರು ಎಂಬ ಭಯದಿಂದ ಬೇಟೆಯಿಂದುಂಟಾದ (ಅವರ) ಆಯಾಸವನ್ನು ತನ್ನ ಕಿರಣಗಳಿಂದ ಚೆನ್ನಾಗಿ ಹೋಗಲಾಡಿಸಿ, ನೈದಿಲೆಯ ಮೊಗ್ಗುಗಳನ್ನು ಅರಳಿಸಿ, (ಅವರ) ತಲೆಯಲ್ಲಿ ಧರಿಯಿಸಿ, (ಆ) ಬೇಡರನ್ನು ಸೇವಿಸುವ ಹಾಗೆ ಪ್ರಕಾಶಿಸಿದನು. ವ|| ಆಗ ಆ ಪುಳಿಂದರ ಯಜಮಾನನಾದ ಕಣ್ಣಪ್ಪನು ಸಾಯಂಕಾಲಕ್ಕೆ ಉಚಿತವಾದ ಕಾರ್ಯಗಳನ್ನು ನೆರವೇರಿಸಿದ ಮೇಲೆ ತನ್ನ ಸೈನ್ಯ ಸಮೇತವಾಗಿ ಹೊರಟು ಬಂದು ಒಂದು ಎಳೆಯ ಮಾವಿನ ಮರದ ಸಮೀಪದಲ್ಲಿ ಸ್ಫಟಿಕದ ಬಂಡೆಯಲ್ಲಿರುವ ಹೂಗಳ ಹಾಸಿಗೆಯಲ್ಲಿ ಮಲಗಿ ನಿದ್ರೆ

1 ಣ್ಯೆದಿ(ಜ) 2 ಳ್ಕೈಯ್ಯ(ಚ) ಕೈಯಿ(ಜ)

ಕನಸಿನೊ[1]ಳೆಯ್ದಿ[1] ಕಾಲಹರನೊಪ್ಪುವ ತಾಪಸವೇಷದಿಂ ನೊಸ
ಲ್ಗನುಪಮ ಭೂತಿಯುಂ ಧರಿಸಿ ತಚ್ಛಿರದೊಳ್ ಕರವಿಟ್ಟು ಪೇಳ್ದು ಮೆ
ಲ್ಲನೆ ಶಿವಮಂತ್ರಮಂ ಕಿವಿಯೊಳೀ ವನದೊಳ್ಶಿವಲಿಂಗವಿರ್ಕುಮೊ
ಲ್ಪನುನಯದಿಂ ಸಮರ್ಚಿಪುದೆನುತ್ತೊರೆ[2]ದೆಯ್ದಿ[2]ದನಾ ಮಹೇಶ್ವರಂ ೭೧

ವ|| ಅಲ್ಲಿಂ ಬಳಿಯಿನೆಳ್ಚತ್ತು ಕನಸನೆನಸುಂ ನಿಜಮೆಂದು ಬಗೆದಾ ಪುಳಿಂದಂ ಮುದಂದಳೆದಿರ್ಪಾಗಳ್—

ತಾರಾಕೋರಕಮಂಕಷಟ್ಪದಮಿಳಚ್ಚಂದ್ರಂ ಪ್ರಸೂನಂ ಪಯೋ
ಜಾರಿ ಗ್ರಾವಕದಂಬಕಂದಮಮಳಜ್ಯೋತ್ಸ್ನಾಲತಾಕುಂಜಮು
ಭ್ರಾರಣ್ಯಕ್ಕಡರ್ದೊಪ್ಪೆ ಪತ್ತಿದುದದೆತ್ತಂ ಕಂದಿ ಮೈಗುಂದಿ ಜಂ
ಭಾರಾತಿಕ್ಷಿತಿಭೃತ್ಪ್ರಭೂತಮರುಣಪ್ರದ್ಯೋತ ದಾವಾನಲಂ ೭೨

ವ|| ಆಗಳ್ ಯಥೋಚಿತ ಪ್ರಾತರಾಚಾರ ನಿವರ್ತನಾನಂತರಂ ಕಣ್ಣಪ್ಪದೇವನಲ್ಲಿಂದೆಳ್ದು ಬರ್ಪನ್ನೆಗಂ ಮುಂದೆ ಮುನ್ನೆಂದುಮಿಲ್ಲದುದೊಂದು ಕಿಱುವಟ್ಟೆಯಿರೆ ಕಂಡು ವಿಸ್ಮಯಮುತ್ತು

ಮಾಡುತ್ತಿರಲು—೭೧. (ಅವನ) ಕನಸ್ಸಿನಲ್ಲಿ ಶಿವನು ಪ್ರಕಾಶಿಸುವ ತಪಸ್ವಿಯ ವೇಷದಿಂದ ಬಂದು ಹಣೆಗೆ ಅನುಪಮವಾದ ವಿಭೂತಿಯನ್ನು ಧರಿಸಿ, ಅವನ ತಲೆಯ ಮೇಲೆ ಕೈಯನ್ನಿಟ್ಟು, ಕಿವಿಯಲ್ಲಿ ಮೆಲ್ಲನೆ ಶಿವಪಂಚಾಕ್ಷರೀ ಮಂತ್ರವನ್ನು ಉಸುರಿ, ಈ ವನದಲ್ಲಿ ಶಿವಲಿಂಗವಿರುವುದು. (ನೀನು) ಪ್ರೀತಿ ವಿಶ್ವಾಸಗಳಿಂದ ಪೂಜೆಮಾಡು ಎಂದು ಹೇಳಿ, ಆ ಮಹೇಶ್ವರನು ಹೋದನು. ವ|| ಅನಂತರ ಆ ಬೇಡನು ಎಚ್ಚರಗೊಂಡವನಾಗಿ, ನಿಜವಾಗಿಯೂ ಈ ಕನಸು ಸತ್ಯವೆಂದು ಯೋಚಿಸಿ ಸಂತೋಷದಿಂದಿರುವಾಗ—೭೨. ನಕ್ಷತ್ರಗಳೆಂಬ ಮೊಗ್ಗುಗಳುಳ್ಳ, ಕಳಂಕವೆಂಬ ಭ್ರಮರದಿಂದ ಕೂಡಿದ ಚಂದ್ರನೆಂಬ ಹೂವುಳ್ಳ, ಚಂದ್ರಕಾಂತ ಶಿಲೆಗಳ (ಪಯೋಜಾರಿಗ್ರಾವ) ಸಮೂಹವೆಂಬ ಗಡ್ಡೆಗಳುಳ್ಳ, ನಿರ್ಮಲವಾದ ಬೆಳದಿಂಗಳೆಂಬ ಬಳ್ಳಿಯ ಪೊದೆಯು, ಆಕಾಶವೆಂಬ ಅರಣ್ಯಕ್ಕೆ, ಅಡರಿ ಒಪ್ಪುತ್ತಿರಲು, ಆ ಪೊದೆಯು ಎಲ್ಲಾ ಕಡೆಗಳಲ್ಲೂ ಕಂದಿ ಕ್ಷೀಣವಾಗುವ ಹಾಗೆ ಪೂರ್ವ ದಿಕ್ಕಿನಲ್ಲಿರುವ ಪರ್ವತದಲ್ಲಿ ಉತ್ಪನ್ನವಾದ ಕೆಂಪಾದ ಕಾಂತಿಯನ್ನುಳ್ಳ ಸೂರ್ಯನೆಂಬ ಕಾಡಕಿಚ್ಚು ಹೊತ್ತಿಕೊಂಡಿತು. [ಸೂರ್ಯೋದಯವಾಯಿತು. ಆಗ ನಕ್ಷತ್ರಗಳೂ ಚಂದ್ರನೂ ಕುಂದಿದರು; ಚಂದ್ರಕಾಂತ ಶಿಲೆಯು ತನ್ನ ನೀರು ಒಸರುವ ಕಾರ್ಯ ನಿಲ್ಲಿಸಿತು, ಬೆಳದಿಂಗಳು ಮಾಯವಾಯಿತು, ಎಂದು ಭಾವ. ಪಯೋಜ + ಅರಿ + ಗ್ರಾವ–ಕಮಲದ ಅರಿ ಚಂದ್ರ–ಆ ಹೆಸರಿನ ಕಲ್ಲು. ಜಂಭ + ಅರಾತಿ + ಕ್ಷಿತಿಭೃತ್–ಇಂದ್ರ ದಿಕ್ಕಿನಲ್ಲಿರುವ ಪರ್ವತ] ವ|| ಆಗ ಯಥೋಚಿತವಾಗಿ ಪ್ರಾತಃ ಕಾಲದಲ್ಲಿ ಮಾಡುವ ಕ್ರಿಯೆಗಳನ್ನು ಮುಗಿಸಿದ ನಂತರ ಕಣ್ಣಪ್ಪ ದೇವನು ಅಲ್ಲಿಂದ ಎದ್ದು ಬರುತ್ತಿರುವಷ್ಟರಲ್ಲಿ. ಮುಂಭಾಗ

---

1 ಳೈದಿ(ಅ, ದ) 2 ದೈದಿ(ಅ, ಜ)

ಕನಸಿನ ಫಲಂ ನಿಜಮಾದುದೆಂದುತ್ಸವಿಸಿ ತನ್ಮಾರ್ಗಂಬಿಡಿದೇಳ್ತಂದನತಿ ದೂರದೊಳ್ ಕಂಗೊಳಿಪ ಶಿವ ಲಿಂಗಮುಂ ಕಂಡು—

ಕಳೆಯೇಱೆ ಕರಣಸಂಕುಳ
ಮುಳಿಪಿಂ ನಡೆದೋಡಿ ನಲಿದು ನಮಿಸುತೆ ಕೂರ್ಪ
ಗ್ಗಳಿಸೆ[1] ಬಿಗಿದಪ್ಪಿ ರಾಗಾ
ವಿಳಮತಿ ಮತ್ಪ್ರಾಣಲಿಂಗಮಿದು ನಿಜಮೆಂದಂ ೭೩

ವ॥ ಎಂದು ನಂಬಿ ನಚ್ಚಿ ನಲವೇಱೆ ತಲ್ಲಿಂಗಮನಭೀಕ್ಷಿಸಿ—

ಗಿರಿತನಯಾ ಗಂಗಾಂಬಿಕೆ
ಯರ ಕಲಹಕ್ಕಗಿದು ಬಂದು ಪೊಕ್ಕೆಯೊ ವಿಪಿನಾಂ
ತರಮಂ ಪುಲ್ಮೇಯಿಸಲೆಂ
ದುರು ವೃಷಭನನಿಲ್ಲಿಗೆಯ್ದಿದೆಯೊ ಪೇಳಭವಾ ೭೪

ಅಯ್ಯ ಮಱೆ ಬೇಡ ಪೇಳ್ಬಲ
ಗೆಯ್ಯೆಡೆಗಿನ್ನೊಂದು ಪುಲ್ಲೆಯಂ ಪಿಡಿಯಲ್ಕೆಂ
ದೊಯ್ಯನೆ ಬಂದೆಯೊ ನಿಗಮದ
ಪುಯ್ಯಲ್ಗೊಳಗಾಗದಿಲ್ಲಿ [2]ಮೆಯ್ಗ[2]ರೆದೆಯೊ ಪೇಳ್ ೭೫

ದಲ್ಲಿ ಈ ಪೂರ್ವದಲ್ಲಿ ಎಂದೂ ಇಲ್ಲದೆ ಇರುವ ಒಂದು ಚಿಕ್ಕ ದಾರಿಯು ಇರಲು ಅದನ್ನು ಕಂಡು ಆಶ್ಚರ್ಯಗೊಂಡು, ಕನಸಿನ ಫಲವು ನಿಜವಾಯಿತು ಎಂದುಕೊಂಡು ಸಂತೋಷಹೊಂದಿ, ಆ ದಾರಿಯನ್ನು ಬಿಡದೆ ಹೊರಟು ಬಂದು ಅತಿ ಸಮೀಪದಲ್ಲಿಯೇ ಶೋಭಿಸುವ ಶಿವಲಿಂಗವನ್ನು ಕಂಡು—೭೩. ಇಂದ್ರಿಯಗಳ ಸಮೂಹವು ಉತ್ಸಾಹ ಗೊಂಡಿತು. ಪ್ರೀತಿಯಿಂದ ಆ ಶಿವಲಿಂಗವನ್ನು ಚೆನ್ನಾಗಿ ನೋಡಿ, ಸಂತೋಷಪಟ್ಟು ನಮಸ್ಕಾರ ಮಾಡಿದನು. ಸ್ನೇಹವು ಅಧಿಕಗೊಂಡಿತು. (ಆ ಲಿಂಗವನ್ನು) ಬಿಗಿದಪ್ಪಿ ಅನುರಾಗದಿಂದ ತುಂಬಿದ ಬುದ್ಧಿಯುಳ್ಳವನಾಗಿ 'ಇದು ನನ್ನ ಪ್ರಾಣಲಿಂಗವೇ ನಿಜ;' ಎಂದನು. ವ॥ ಹೀಗೆಂದುಕೊಂಡು ನಂಬಿ, ನಚ್ಚಿ, ಸಂತೋಷ ವಿಶಿಷ್ಟನಾಗಿ, ಆ ಲಿಂಗ ವನ್ನು ನೋಡಿದನು. ೭೪. ಪಾರ್ವತಿ ಗಂಗಮ್ಮನವರ ಜಗಳಕ್ಕೆ ಭಯಪಟ್ಟು ಬಂದು ಈ ಕಾಡಿನ ಮಧ್ಯಭಾಗವನ್ನು ಹೊಂದಿದೆಯಾ ಅಭವನೇ? ನಿನ್ನ ದೊಡ್ಡ ವೃಷಭನನ್ನು ಹುಲ್ಲು ಮೇಯಿಸುವುದಕ್ಕೋಸುಗ ಇಲ್ಲಿಗೆ ಬಂದೆಯೋ ? ಹೇಳು. ೭೫. ಅಯ್ಯಾ, ಮುಚ್ಚುಮರೆ ಬೇಡ. ಬಲಗೈಯಲ್ಲಿ ಇನ್ನೊಂದು ಜಿಂಕೆಯನ್ನು ಹಿಡಿಯುವುದಕ್ಕೆಂದು ಮೆಲ್ಲನೆ (ಇಲ್ಲಿಗೆ) ಬಂದೆಯೋ ? ಹೇಳು. ವೇದಗಳ ಕೂಗುಗಳಿಗೆ ಒಳಗಾಗದೆ ಇಲ್ಲಿಗೆ

1 ಪಿ(ಚ, ದ) 2 ವ್ಯೆಗ(ಮು, ಜ)

ಉಟ್ಟ ಚಮೂರುಕೃತ್ತಿ ಪಳದಾಯ್ತು ನವೀನ ಮೃಗಾರಿಚರ್ಮಮಂ
ನೆಟ್ಟನೆ ಕೊಳ್ವೆನೆಂದೆಳಸಿ ಪೊಕ್ಕೆಯೊ ಮೌಲಿ ಶಶಿಕ್ಷಯಕ್ಕೆ ಕಾ
ಳ್ಪುಟ್ಟಿನ ಮರ್ದನೊಲ್ದಱಸಲೆಯ್ದಿದೆಯೋ ತಿರಿದುಂಡು ತೃಪ್ತಿ ಮೇ
ಣ್ಪುಟ್ಟದೆ ಕಾಡ ಪಣ್ಗಳಸಿ ಮೆಲ್ವೆಡೆ ಬಂದೆಯೊ ಪೇಳ್ಮಹೇಶ್ವರಾ ೭೬

ಕಲಿಪಾರ್ಥನಿಷ್ಟಮಂ ಕುಡ
ಲೊಲವಿಂ ವಿಪಿನಕ್ಕೆ ಬಂದ ತೆಱದಿಂದಂ ಕೇ
ಳೆಲೆ ದೇವ ಮಾಣದೆನ್ನಂ
ಸಲಪ[1]ಲ್ ಬಗೆದಿಲ್ಲಿಗೆಯ್ದಿದೆಯೋ ಪೇಳಭವಾ ೭೭

ಪರ್ವಿದ ಘೋರಾರಣ್ಯದೊ
ಳೊರ್ವನೆ ನೀನಿಂತುಟಿರ್ಪುದುಚಿತಮೆ ನಿನ್ನಂ
ಕೊರ್ವಿದ ಚಂಚರ್ಕಂಡೊಡ
ಗುರ್ವಿಸಿ ಕುಣಿಯಿಸದೆ ಕಾಡದೇನಿರ್ದಪರೇ ೭೮

ಅಡವಿಯ ಸರ್ಪಸಂತತಿ ಭವನ್ಮಕುಟಾಗ್ರದ ಚಂದ್ರಲೇಖೆಗಂ
ಡೊಡೆ ಕಡುಪಿಂ ತುಡುಂಕದೆ ಕರಾಗ್ರದ ಪುಲ್ಲೆಯನಿಲ್ಲಿಗೆಯ್ದಿ ಕಂ
ಡೊಡೆ ಪುಲಿ ಪೊಯ್ಯದಿರ್ದಪುದೆ ತೊಟ್ಟಹಿವೃಂದಮನೋವೊ ಬರ್ಹಿ ಕಂ
ಡೊಡೆ ಕಡಿದಿಕ್ಕದಿರ್ಕುಮೆ ವಿಚಾರಿಸದಳ್ಕದೆ ಕೆಮ್ಮನಿರ್ಪುದೇ ೭೯

ಬಂದು ಅಡಗಿಕೊಂಡಿರುವೆಯೋ ಹೇಗೆ ? ಹೇಳು. ೭೬. ಮಹೇಶ್ವರಾ, ಉಟ್ಟ ಜಿಂಕೆಯ ಚರ್ಮವು ಹಳೆಯದಾಯಿತು ಹೊಸದಾದ ಹುಲಿಯ ಚರ್ಮವನ್ನು ನೆಟ್ಟಗೆ ಸ್ವೀಕರಿಸುವೆನು, ಎಂದು ಅಪೇಕ್ಷಿಸಿ (ಈ ಕಾಡನ್ನು) ಹೊಕ್ಕೆಯೋ ? ಶಿರದಲ್ಲಿರುವ ಚಂದ್ರನ ಕ್ಷಯರೋಗಕ್ಕೆ ಕಾಡಿನಲ್ಲಿ ಹುಟ್ಟಿರುವ ಮೂಲಿಕೆಗಳ ಔಷಧವನ್ನು ಪ್ರೀತಿಯಿಂದ ಹುಡುಕಲು ಬಂದೆಯೋ ? ತಿರಿದು ಉಂಡು ಉಂಡು ತೃಪ್ತಿಗೊಳ್ಳದೆ ಕಾಡಿನ ಹಣ್ಣುಗಳಿಗೆ ಅಪೇಕ್ಷೆಪಟ್ಟು ತಿನ್ನುವುದಕ್ಕೆ ಬಂದೆಯೋ ? ಹೇಳು. ೭೭. ಅಭವನೇ, ಕೇಳು ; ಶೂರನಾದ ಅರ್ಜುನನ ಇಷ್ಟಾರ್ಥವನ್ನು ಕೊಡುವುದಕ್ಕೆ ಪ್ರೀತಿಯಿಂದ ಕಾಡಿಗೆ ಬಂದ ರೀತಿಯಲ್ಲಿ ಎಲೆ ದೇವನೇ, ತಪ್ಪದೆ ನನ್ನನ್ನು ಸಂರಕ್ಷಿಸುವುದಕ್ಕೋಸ್ಕರ ಯೋಚಿಸಿ ಇಲ್ಲಿಗೆ ಬಂದೆಯೋ ? ಹೇಳು. ೭೮. ನೀನು ಒಬ್ಬನೇ ಹಬ್ಬಿರುವ ಈ ಘೋರಾರಣ್ಯದಲ್ಲಿ ಹೀಗೆ ಇರುವುದು ಉಚಿತವೇ ? ನಿನ್ನನ್ನು ಕೊಬ್ಬಿದ ಚಂಚರು (ಕಾಡು ಜನರು), ಕಂಡರೆ ಭಯಪಡಿಸಿ, ಕುಣಿಯಿಸದೆ, ಪೀಡಿಸದೆ ಇರುವರೇ ? ೭೯. ಈ ಅಡವಿಯಲ್ಲಿರುವ ಹಾವುಗಳ ಸಮೂಹವು ನಿನ್ನ ಕಿರೀಟದ ಮೇಲಿರುವ ಚಂದ್ರಕಳೆಯನ್ನು ಕಂಡರೆ ಪರಾಕ್ರಮದಿಂದ ಹಿಡಿದುಕೊಳ್ಳುವುದಿಲ್ಲವೆ ? ಹುಲಿಯು ಇಲ್ಲಿಗೆ ಬಂದು ಒಂದು ಕೈಯಲ್ಲಿ ಹಿಡಿದಿರುವ ಹುಲ್ಲೆಯನ್ನು ಕಂಡರೆ ಹೊಡೆಯದೆ ಇರುವುದೇ? ನವಿಲು ನೀನು ತೊಟ್ಟ ಸರ್ಪಗಳ ಸಮೂಹವನ್ನು ಕಂಡರೆ ಓಹೋ!

1 ಹ(ಗ) ಬ(ಮು)

ಬಿಡು ನಿನ್ನ ಮರುಳ್ತನಮಂ
ನಡೆಯೆಮ್ಮೆಯ ಪಕ್ಕಣಕ್ಕೆ ನಿನ್ನನಜಸ್ರಂ
ನಡೆನೋಡಿ ಪೊರೆವೆನೆನ್ನಯ
ನುಡಿ ತೊದಳಲ್ಲಲ್ತು ಮುಂದೆ ನೀಂ ಕಾಣ್ಬೆಯುದಂ ೮೦

ಎಳಸಿದ ನಾನಾ ಪಲಲಾ
ವಳಿ ಮಧು ಮಧುರಂ ಫಲಾಳಿ ಪೆರ್ಮರೆವಾಲ್ಸಂ
ಗಳಿಸಿದ ಬಿದಿರಕ್ಕಿಯು ಮಂ
ಜುಳಪಾಯಸಮೊಳವು ಮದ್ಗೃಹದೊಳನವರತಂ ೮೧

ಮುಡಿವೊಡೆ ಕಾಡಮಲ್ಲಿಗೆಗಳುಂಟುಡಲಗ್ಗದ ಪೀಲಿಯುಂಟು ಮೇ
ಣ್ತೊಡುವೊಡೆ ಗುಂಜಿಯಾಭರಣಮುಂಟಿಭ ಮೌಕ್ತಿಕಮುಂಟು ಮಾಣದ
ಣ್ಪಿಡುವೊಡೆ ಚಂದನಪ್ರಸರಮುಂಟು ಮೃಗೋದ್ಭವಮುಂಟು ಕೇಳಿಯೊ
ಳ್ತೊಡರ್ವೊ[1]ಡೆ ಕೀರಶಾರಿಕೆಗಳೊಳ್ನುಡಿಯುಂಟು ಮದೀಯಗೇಹದೊಳ್ ೮೨

ಬಂದು ಸುಖಮಿರ್ಪುದೆನ್ನಯ
ಮಂದಿರದೊಳ್ದೇವ ನಿನ್ನನೋಲಗಿಪೆಂ ನೀ
ನೆಂದುದನಾಗಿಪೆನೆಂದು ಪು
ಳಿಂದಂ ನುಡಿನುಡಿದು ನುಡಿಯದಿರೆ ಗಿರಿಜೇಶಂ ೮೩

ಕಡಿದು ಎರಡು ತುಂಡು ಮಾಡದೆ ಇರುವುದೇ ? ವಿಚಾರ ಮಾಡದೆ, ಭಯಪಡದೆ ಸುಮ್ಮನೆ ಇರುವುದೇ ? ೮೦. ನಿನ್ನ (ಈ) ಹುಚ್ಚುತನವನ್ನು ಬಿಡು ; ನಮ್ಮ ಮನೆಗೆ ನಡೆ ; ನಿನ್ನನ್ನು ಸತತವೂ ಚೆನ್ನಾಗಿ ನೋಡಿ, ರಕ್ಷಿಸುವೆನು. ನನ್ನ ಮಾತು ಸುಳ್ಳು ಅಲ್ಲ, ಅಲ್ಲ ; ಮುಂದೆ ಆ ಮಾತಿನ ಸತ್ಯವನ್ನು ನೀನು ನೋಡುತ್ತೀಯೆ. ೮೧. (ನೀನು) ಅಪೇಕ್ಷಿಸಿದ ಅನೇಕ ವಿಧವಾದ ಮಾಂಸದ ಸಮೂಹ, ಜೇನುತುಪ್ಪದಂತೆ ಮಧುರವಾದ ಹಣ್ಣುಗಳ ಸಮೂಹ, ದೊಡ್ಡ ಕಿರುಬನ ಹಾಲಿನಿಂದ ಕೂಡಿದ ಬಿದಿರಕ್ಕಿಯ ರುಚಿಕರವಾದ ಪಾಯಸ ನನ್ನ ಮನೆಯಲ್ಲಿ ಸತತವೂ ಇರುತ್ತವೆ. ೮೨. ನನ್ನ ಮನೆಯಲ್ಲಿ ಮುಡಿದುಕೊಳ್ಳಲು ಕಾಡುಮಲ್ಲಿಗೆ ಹೂಗಳುಂಟು. ಉಟ್ಟುಕೊಳ್ಳಲು ಶ್ರೇಷ್ಠವಾದ ನವಿಲುಗರಿಯ ಬಟ್ಟೆಯುಂಟು. ತೊಟ್ಟುಕೊಳ್ಳಲು ಗುರುಗಂಜಿಯ ಆಭರಣವುಂಟು. ಆನೆಯ ಕುಂಭಸ್ಥಳದ ಮುತ್ತುಗಳುಂಟು. ತೊಡೆದುಕೊಳ್ಳುವುದಕ್ಕೆ ತಪ್ಪದೆ ಶ್ರೀಗಂಧ ಸಮೂಹವುಂಟು, ಕಸ್ತೂರಿಯುಂಟು. ಆಟವಾಡಿಕೊಂಡಿರಲು ಗಂಡು ಹೆಣ್ಣು ಗಿಳಿಗಳ ಒಳ್ಳೆಯ ಮಾತುಗಳುಂಟು, ೮೩. ದೇವ, ಬಂದು ನನ್ನ ಮನೆಯಲ್ಲಿ ಸುಖವಾಗಿ ಇರುವುದು. ನಿನ್ನನ್ನು ಸೇವಿಸುತ್ತೇನೆ. ನೀನು ಹೇಳಿದುದನ್ನು ನೆರವೇರಿಸುತ್ತೇನೆ ಎಂದು ಬೇಡನು ಹೇಳಿದರೂ ಪಾರ್ವತೀಪತಿಯು ಮಾತ

1 ದೊ(ಮು)

ಚಿರಕಾಲಮುಣಲ್ಪಡೆಯದೆ
ಪುರಾರಿ ಬಸವಳಿದು ನುಡಿಯದಿರ್ದಪನುಣಿಸಂ
ಕರಮೂಗಿಸಿ ಮುಗುಳ್ದಿವನಂ
ಕರೆದೊಯ್ವಪೆನೆಂದು ನೆನೆದನಂದು ಪುಳಿಂದಂ ೮೪

ವ॥ ಅಂತು ನೆನೆದು ಬಲ್ಸರಳಂ ಕೊಂಡು ಮೃಗಯಾಗಮನೋದ್ಯತನಾಗಿ ಶಿವಂಗೆ ಮುಗುಳ್ದು ಮಣಿದಗಲಲಾಱದೆಂತಕ್ಕೆ ಸಂತೈಸಿಕೊಂಡು ಲಿಂಗಮಂ ಪ್ರೇಮರಸಭರಕಟಾಕ್ಷದಿನಮರೆ ನೋಡಿ—

ಈಗಳೆ ಬಂದಪೆನಂಜದಿ
ರೀ ಗಹನದೊಳುಳ್ಳ ಸಾರಮೃಗಮಂ ಕೊಂಡೆಂ
ದಾ ಗುಣನಿಧಿ ಬೀಳ್ಕೊಂಡನು
ರಾಗಂ ಮಿಗೆ ಬೇಂಟೆಗೆಯ್ದುವಲ್ಲಿಂ ಮುನ್ನಂ ೮೫

ಅವನೀಭಾಗದೊಳಂದು ಸೌಂದರ ಮಹಾಕಾಯರ್ಕಳೆಂದೆಂಬ ದಾ
ನವರಾಳೋಚಿಸಿ ಭಾನುಸೂನು ಶಿಬಿ ಮುಖ್ಯರ್ತಮ್ಮ ದೇಹಂಗಳಂ
ಜವದಿಂದಿತ್ತು ಪರೋಪಕಾರಕೆ ಜಸಂಬೆತ್ತರ್ಗಡೆಮ್ಮಂಗಮಂ
ಶಿವಲಿಂಗಕ್ಕಿರದಿತ್ತು ಮುಕ್ತಿಪದಮಂ ಸಾರ್ದಪ್ಪೆವೆಂದೊಳ್ಪಿನಿಂ ೮೬

ನಾಡದೆ ಇರಲು— ೮೪. ಪುರಾರಿಯು, ಬಹುಕಾಲದಿಂದ ಊಟ ಮಾಡುವುದಕ್ಕೆ ಆಹಾರವನ್ನು ಪಡೆಯದೆ, ಆಯಾಸಪಟ್ಟು, ಮಾತನಾಡದೆ ಇರುವನು ; ಊಟವನ್ನು ಚೆನ್ನಾಗಿ ಮಾಡುವಂತೆ ಮಾಡಿಸಿ, ಪುನಃ ಇವನನ್ನು ಕರೆದುಕೊಂಡು ಹೋಗುವೆನು· ಎಂದು ಆಗ ಆ ಪುಳಿಂದನು ಯೋಚಿಸಿದನು. ವ॥ ಈ ರೀತಿಯಾಗಿ ಯೋಚಿಸಿ ಬಲವಾದ ಬಾಣಗಳನ್ನು ತೆಗೆದುಕೊಂಡು ಬೇಟೆಗೆ ಹೋಗುವುದಕ್ಕೆ ಸಿದ್ಧನಾಗಿ, ಶಿವನಿಗೆ ಪುನಃ ನಮಸ್ಕಾರ ಮಾಡಿ, ಬಿಟ್ಟು ಹೋಗಲಾರದ ಮನಸ್ಸಿಗೆ ಸಮಾಧಾನಪಡಿಸಿ, ಲಿಂಗವನ್ನು ಪ್ರೀತಿರಸದ ಆಧಿಕ್ಯದಿಂದ ಕೂಡಿದ ಕಡೆಗಣ್ಣುಗಳ ನೋಟವಂಟುವ ಹಾಗೆ ನೋಡಿ— ೮೫ + ೮೬ + ೮೭. ಆ ಗುಣನಿಧಿಯಾದ ಕಣ್ಣಪ್ಪನು ಈ ಕಾಡಿನಲ್ಲಿರುವ ಸಾರವತ್ತಾದ ಮೃಗಗಳನ್ನು ಈಗಲೇ ತೆಗೆದುಕೊಂಡು ಬರುವೆನು ಹೆದರಬೇಡ. ಎಂದು ಹೇಳಿ ಅಪ್ಪಣೆ ಪಡೆದು ವಿಶೇಷ ಅನುರಾಗದಿಂದ ಬೇಟೆಗೆ ಹೋಗುವಾಗ ಪೂರ್ವ ಕಾಲದಲ್ಲಿ ಈ ಭೂಮಿಯಲ್ಲಿ ಸುಂದರ ಮಹಾಕಾಯರೆಂಬುವ ರಾಕ್ಷಸರು ಯೋಚನೆ ಮಾಡಿ, ಕರ್ಣ, ಶಿಬಿ ಚಕ್ರವರ್ತಿಗಳೇ ಮೊದಲಾದವರು ತಮ್ಮ ದೇಹಗಳನ್ನು ಶೀಘ್ರವಾಗಿ ಪರೋಪಕಾರಕ್ಕೆ ಕೊಟ್ಟು, ಕೀರ್ತಿಯನ್ನು ಪಡೆದರಲ್ಲವೆ ? (ಈಗ) ನಮ್ಮ ಶರೀರವನ್ನು ತಪ್ಪದೆ ಶಿವಲಿಂಗಕ್ಕೆ ಕೊಟ್ಟು, ಮೋಕ್ಷ ಸ್ಥಾನವನ್ನು ಹೊಂದಿ ಇರುತ್ತೇವೆ ಎಂದು ಒಳ್ಳೆಯ ಬುದ್ಧಿಯುಳ್ಳ ಆ ರಾಕ್ಷಸರು ಘೋರ ತಪಸ್ಸನ್ನು

ಸುಮತಿಗಳಾಂತು ಘೋರ ತಪಮಂ ಭಜಿಸುತ್ತಿರೆ ತನ್ನನದ್ರಿಜಾ
ರಮಣನೊಱಲ್ದು ಮೆ[1]ಚ್ಚಿ ನಿಜರೂಪದೆ ನಿಂದು ಮುಕುಂದಪದ್ಮಜೇಂ
ದ್ರಮಹಿತ ಸಂಪದಂಗಳೊಳಗಿಪ್ಪುದಾವುದು ಬೇಡಿಮಿತ್ತಪೆಂ
ನಿಮಗೆನೆ ದಾನವರ್ಮುದಿತಮಾನಸರಾನತರಾಗಿ ಭಕ್ತಿಯಿಂ ೮೭

ಜಲಂಧರ ಮತಂಗಜ ಪ್ರಬಳ ತಾರಕೇಂದ್ರಾರಿಗ
ಳ್ಬಲಂಗೆಡಿಸಿ ಭಂಗಮಂ ಪಡೆದ ವಿಷ್ಣು ಪಂಕೇಜ ಭೂ
ಬಲಾರಿಗಳ ಭಾಗ್ಯಮಂ ಬಯಸೆವೇಂದುಮೆಮ್ಮಂಗಮಂ
ಕಲಾನಿಧಿಕಲಾಪ ನೀಂ ಸವಿಯೆ ಸಾಲ್ಗುಮೆಂದಾಡಿದರ್ ೮೮

ವ॥ ಎಂದು ಮತ್ತಮಿಂತೆಂದರ್—

ಹರ ಕೇಳೆಮ್ಮ ಜಲಂಧರಾಂಧಕ ಗಜವ್ಯಾಘ್ರಾಸುರರ್ಮುನ್ನಂ ಭವ
ಚ್ಚರಣಾಂಗುಷ್ಟಪದಾಬ್ಜಪಾಣಿಹತಿಯಿಂದಳ್ಕಾಡಿ ಮೋಕ್ಷಕ್ಕೆ ಸ
ಲ್ಲರೆ ನಿಮ್ಮಿಂದವರಂತಿರಾಮುಮೊಡಲಂ ಕೂರ್ತಿತ್ತು ನಿನ್ನಂಘ್ರಿಗೀ
ಶ್ವರ ಸನ್ಮುಕ್ತಿಗೆ ಸಲ್ವೆವೆಂದೆನೆ ಮಹೇಶಂ ಮೆ[1]ಚ್ಚಿ ಸಂಪ್ರೀತಿಯಿಂ ೮೯

ಆಚರಿಸಿ, ತನ್ನನ್ನು (ಶಿವನನ್ನು) ಸ್ತೋತ್ರ ಮಾಡುತ್ತ ಇರುವ ಪಾರ್ವತೀಪತಿಯು, ಪ್ರೀತಿಗೊಂಡು ಮೆಚ್ಚಿ ಪ್ರತ್ಯಕ್ಷನಾಗಿ ನಿಂತು–'ವಿಷ್ಣು, ಬ್ರಹ್ಮ, ಇಂದ್ರ–ಇವರುಗಳ ಶ್ರೇಷ್ಠವಾದ ಸಂಪತ್ತುಗಳೊಳಗೆ ಯಾವುದು ಇಚ್ಛೆ ? ಬೇಡಿರಿ, ನಿಮಗೆ ಕೊಡುತ್ತೇನೆ.' ಎನ್ನಲು ರಾಕ್ಷಸರು ಸಂತುಷ್ಟಿಗೊಂಡ ಮನಸ್ಸುಳ್ಳವರಾಗಿ, ನಮಸ್ಕಾರ ಮಾಡಿ ಭಕ್ತಿಯಿಂದ– ೮೮. ಜಲಂಧರ, ಗಜಾಸುರ, ಪ್ರಬಲನಾದ ತಾರಕಾಸುರ, ವೃತ್ರಾಸುರ (ಬಲಾಸುರ)–ಇವರುಗಳಿಂದ ಬಲವನ್ನು ಕುಂದಿಸಿಕೊಂಡು ಭಂಗಗೊಂಡ ವಿಷ್ಣು, ಬ್ರಹ್ಮ ಇಂದ್ರಾದಿಗಳ (ಕ್ರಮವಾಗಿ ವಿಷ್ಣುವು ಜಲಂದರನಿಂದಲೂ, ಬ್ರಹ್ಮನು ಗಜಾಸುರನಿಂದಲೂ, ಇಂದ್ರನು ಬಲಾಸುರನಿಂದಲೂ ಭಂಗಗೊಂಡರು) ಭಾಗ್ಯವನ್ನು ಯಾವಾಗಲೂ ಬಯಸುವುದಿಲ್ಲ. ಚಂದ್ರಭೂಷಣನೇ, ನಮ್ಮ ದೇಹವನ್ನು ನೀನು ತಿಂದರೆ ಸಾಕು ಎಂದು ಹಾಡಿದರು. ೮೯–೯೦. ಹರನೇ, ಕೇಳು : ನಮ್ಮ ಜಲಂಧರ, ಅಂಧಕಾಸುರ, ಗಜಾಸುರ, ವ್ಯಾಘ್ರಾಸುರರು–ಪೂರ್ವದಲ್ಲಿ (ಕ್ರಮವಾಗಿ) ನಿನ್ನ ಚರಣದ, ಅಂಗುಷ್ಟದ, ಪದಕಮಲದ, ಕೈಯ ಹೊಡೆತದಿಂದ ನಿಶ್ಶೇಷರಾಗಿ ಅವರು ನಿಮ್ಮಿಂದ ಮೋಕ್ಷಕ್ಕೆ ಯೋಗ್ಯರಾಗಲಿಲ್ಲವೆ ? ಹಾಗಿರುವಾಗ ನಾವು ನಿನ್ನ ಪಾದಕ್ಕೆ ಶರೀರವನ್ನು ಪ್ರೀತಿಯಿಂದ ಅರ್ಪಿಸಿ, ಶಿವನೇ, ಶ್ರೇಷ್ಠ ಮುಕ್ತಿಗೆ ಸಲ್ಲುವೆವು ಎಂದೆನ್ನಲು

1 ಮೆ(ಗ)

ನುಡಿದಂ ಕೇಳಿರೆ ಕಾವ್ಯಶಿಷ್ಯರಿರ ನೀವೆಂದಂತೆ ಮಾಳ್ಪೆಂ ಮುದಂ
ಬಡೆ ಕಣ್ಗೊಪ್ಪುವ ಕಾಳಹಸ್ತಿನಗಕಾಂತಾರಾಂತರಾಳಂಗಳೊಳ್
ಬಿಡದಿರ್ಪ್ಪುದು ಮೃಗಮಾಗಿಮಲ್ಲಿ ಭವದೀಯಾಂಗಂಗಳಂ ಸೀಳ್ದು ತಂ
ದಡಗಂ ಕೂರ್ತೆಮಗರ್ಪಿಪಂ ಬಿಯದನೊರ್ವಂ ಮಲ್ಲಸತ್ಕಿಂಕರಂ ೯೦

ಎನೆ ಕೇಳ್ದು ನಲಿದು ನಿಜಬಂ
ಧುನಿಕಾಯಸಮೇತಮೆಯ್ದಿ ತದ್ಗಿರಿವರಕಾ
ನನಮಂ ಮೃಗರೂಪಿಂದಂ
ಬಿನದಿಸುತೊಪ್ಪಿರ್ದರಮರವೈರಿಗಳದಱೊಳ್ ೯೧

ವ|| ಆಗಳಾ ಕಣ್ಣಪ್ಪದೇವಂ—

ಕಂಡು ಕಡಂಗಿ ಸಾರ್ದು ಹರಿಣದ್ವಯಮಂ ಗುಣಯುಕ್ತ ಚಂಡ ಕೋ
ದಂಡಮನಾರ್ಪಿನಿಂ ಸೆಳೆದು ಬೊಬ್ಬಿಱಿದೆಚ್ಚು ಸರಲ್ಗಳಿಂ ಮಹೀ
ಮಂಡಲದಲ್ಲಿ ಮುಂ ಕೆಡೆದ ತನ್ಮೃಗಯುಗ್ಮದ ಕಾಯಮಂ ಕರಂ
ಖಂಡಿಸಿ ಖಂಡಮಂ ತೆಗೆದು ಸೋದಿಸಿ ಕಿಚ್ಚೊಳಮರ್ಚಿ ಕಾಸುತುಂ ೯೨

ಸುಂಟಗೆಗೋಲಿಂದಡಗಂ
ಮೊಂಟಿ ಪೊರಳ್ಚುತ್ತೆ ಪಚಿಸಿ ನಾಲಗೆಗೊನೆಯಿಂ
ದಂಟಿ ರಸಮಿಂಪುಕಂಪುಗ
ಳುಂಟೆನಿಪವನಾಯ್ದು ಪರ್ಣಪಾತ್ರೆಯೊಳಿಡುತುಂ ೯೩

ಮಹೇಶ್ವರನು ಮೆಚ್ಚಿ ಬಹು ಪ್ರೀತಿಯಿಂದ ನುಡಿದನು : ಶುಕ್ರಾಚಾರ್ಯನ ಶಿಷ್ಯರಾದ ರಾಕ್ಷಸರುಗಳೇ, ಕೇಳಿರಿ, ನೀವು ಹೇಳಿದಂತೆ ಮಾಡುವೆನು. ಸಂತೋಷಗೊಂಡು ಶೋಭಿಸುವ ಕಾಳಹಸ್ತಿ ಪರ್ವತದ ಅರಣ್ಯ ಮಧ್ಯದಲ್ಲಿ ತಪ್ಪದೆ ನೀವಿಬ್ಬರೂ ಜಿಂಕೆಗಳಾಗಿ ಅಲ್ಲಿ ಇರಿ. ನನ್ನ ಶ್ರೇಷ್ಠ ಭಕ್ತನಾದ ಒಬ್ಬ ಬೇಡನು ನಿಮ್ಮ ಶರೀರವನ್ನು ಸೀಳಿ ಮಾಂಸವನ್ನು ತಂದು ಪ್ರೀತಿಯಿಂದ ನಮಗೆ ಅರ್ಪಿಸುವನು. ೯೧. ಎಂದೆನ್ನಲು ದೇವತೆಗಳ ಶತ್ರುಗಳಾದ (ಆ) ರಾಕ್ಷಸರು ಕೇಳಿ, ಸಂತೋಷಗೊಂಡು ತಮ್ಮ ಬಂಧು ಬಾಂಧವರು ಸಮೇತರಾಗಿ ಮೃಗಗಳ ರೂಪದಿಂದ (ಜಿಂಕೆಗಳ ಆಕಾರದಿಂದ) ಆ ಶ್ರೇಷ್ಠವಾದ ಕಾಳಹಸ್ತಿ ಬೆಟ್ಟದ ಕಾಡನ್ನು ಸೇರಿ, ಅದರಲ್ಲಿ ವಿನೋದಪಡುತ್ತ ಒಪ್ಪಿದ್ದರು. ವ|| ಆಗ ಆ ಕಣ್ಣಪ್ಪದೇವರು— ೯೨. ಎರಡು ಜಿಂಕೆಗಳನ್ನು ಕಂಡು, ಕುತೂಹಲಗೊಂಡು, (ಅವುಗಳ) ಸಮೀಪಕ್ಕೆ ಹೋಗಿ, ಸಿಂಜಿನಿಯಿಂದ ಕೂಡಿದ ತನ್ನ ಉತ್ತಮವಾದ ಬಿಲ್ಲನ್ನು, ಶೌರ್ಯದಿಂದ ಸೆಳೆದು ಕೋಲಾಹಲ ಮಾಡಿ, ಬಾಣಗಳನ್ನು ಬಿಟ್ಟು ಹೊಡೆದು ಹಾಕಿದನು. ಭೂಮಿಯ ಮೇಲೆ (ಆ ಹೊಡೆತದಿಂದ) ಬಿದ್ದ ಆ ಜಿಂಕೆಗಳೆರಡರ ದೇಹವನ್ನು ಚೆನ್ನಾಗಿ ಕತ್ತರಿಸಿ, ಕಂಡವನ್ನು ತೆಗೆದು ಶೋಧಿಸಿ, ಬೆಂಕಿಯ ಮೇಲಿಟ್ಟು ಕಾಯಿಸುತ್ತ– ೯೩. ಮಾಂಸವನ್ನು ಸುಡುವ ಕೋಲಿನಿಂದ ಆ ಮಾಂಸವನ್ನು ಮೀಟಿ ಹೊರಳಾಡಿಸಿ, ಬೇಯಿಸಿ, ನಾಲಿಗೆಯ ತುದಿಯಿಂದ ರುಚಿ

ಎಸೆವ ಕಕ್ಕೆಯಲರ್ಗಳಂ ನವಬಿಲ್ವಕೋಮಲಪಲ್ಲವ
ಪ್ರಸರಮಂ ಮುಡಿಯಲ್ಲಿ ತಾಳ್ದು ಪಲಾಶಪತ್ರದ ಪಾತ್ರೆಯೊಳ್
ಮಿಸುಪ ಮಾಂಸಮನಾಂತು ಕೈತಕವಾಹಿನೀವಿಮಳಾಂಬುವಂ
ಲಸಿತವಕ್ತ್ರದೆ ತೀವಿಕೊಂಡು ಕಿರಾತನೆಯ್ತರುತೊಪ್ಪಿದಂ ೯೪

ವ॥ ಅಂತೆಯ್ತಂದು ಶಿವಾಲಯಮನೊಲ್ದು ಪೊಕ್ಕು ಶಿವಲಿಂಗಮಂ ಸಾರ್ದು ನಿಂದು—

ಅದನೇನಂ ಪೇಳ್ವೆನಾ ಪೂಜೆಯ ಪೊಸಪರಿಯಂ ಕೆರ್ಪುತಳ್ತಂಘ್ರಿಯಿಂ ನೂಂ
ಕಿದನಾ ಲಿಂಗೋತ್ತಮಾಂಗೋದ್ಗಮಮನಮಮ ಗಂಡೂಷವಾರ್ಮಜ್ಜನಂ ಮಾ
ಡಿದನೀಶಂಗೊಲ್ದು ತಾಂ ಮುಡಿದ ಕುಸುಮಮಂ ಸೂಸಿದಂ ಮಾಂಸಮಂ ತ
ಳ್ವದೆ ಮುಂದಿಟ್ಟಳ್ಕಱಿಂದರ್ಪಿಸಿದನತಿಶಯಾನಂದದಿಂದಂ ಪುಳಿಂದಂ ೯೫

ವ॥ ಅಪೂರ್ವತರ ಪೂಜೆಯನಾ ಪುಳಿಂದನಿಂತೆಸಗಲೊಡನೆ—

ಗಿರಿಜೆಯ ಯಾವಕದ್ರವಪದಾಬ್ಜದ ಸೋಂಕಿನೊಳಾದ ಸೌಖ್ಯದಿಂ
ಪಿರಿದೆನಿಸಿತ್ತು ಪಾದುಕೆಯನಾಳ್ದ ತದಂಘ್ರಿಯ ಸೋಂಕಿನಿಂದ ಮು
ಬ್ಬರಿಸುವ ಸೌಖ್ಯಮಂಬರನದೀವಹನೋತ್ಸವದಿಂ ಸಮುತ್ಸವಂ
ಕರಮೆನಿಸಿತ್ತು ಶೂಲಿಗೆ ಮುಖೋದಕ ಮಜ್ಜನ[1][ಮಾ[2] ಕಪರ್ದದೊಳ್ ೯೬

ನೋಡಿ, ರಸ, ಮಾಧುರ್ಯ, ಕಂಪು ಇರುವುವುಗಳನ್ನು ಆಯ್ದುಕೊಂಡು ಎಲೆಗಳ ದೊನ್ನೆಗಳಲ್ಲಿ ಇಡುತ್ತ ೯೪. ಬೇಡನು ಶೋಭಿಸುವ ಕಕ್ಕೆ ಹೂವು, ಹೊಸ ಬಿಲ್ಪ ಪತ್ರೆಯ ಮೃದುವಾದ ದಳಗಳನ್ನು ತನ್ನ ತಲೆಗೂದಲಲ್ಲಿ ತುರುಕಿಕೊಂಡು, ಮುತ್ತುಗದ ಎಲೆಯ ದೊನ್ನೆಯಲ್ಲಿ ಶೋಭಿಸುವ ಮಾಂಸವನ್ನು ಹಾಕಿ ಹಿಡಿದುಕೊಂಡು, ಕಾಲುವೆಯ ನಿರ್ಮಲವಾದ ಜಲವನ್ನು ಪ್ರಕಾಶಿಸುವ ತನ್ನ ಬಾಯಲ್ಲಿ ತುಂಬಿಕೊಂಡು ಬರುತ್ತ ಶೋಭಿಸಿದನು. ವ॥ ಹಾಗೆ ಬಂದು ಶಿವಾಲಯವನ್ನು ಹೊಕ್ಕು ಶಿವಲಿಂಗದ ಸಮೀಪಕ್ಕೆ ಬಂದು ನಿಂತು ೯೫. (ಅವನು ಮಾಡಿದ) ಪೂಜೆಯ ಆ ಹೊಸ ರೀತಿಯನ್ನು ಏನೆಂದು ಹೇಳಲಿ ! ಆ ಬೇಡನು ಆ ಲಿಂಗದ ತಲೆಯ ಮೇಲಿರುವ ಹೂವನ್ನು ಕೆರದಿಂದ ಕೂಡಿದ ಕಾಲಿನಿಂದ ನೂಕಿದನು. ಅಬ್ಬಬ್ಬ ! ಮುಕ್ಕುಳಿಸಿದ ನೀರಿನಿಂದ ಮಜ್ಜನ ಮಾಡಿದನು (ಅಭಿಷೇಕ ಮಾಡಿದನು). ಪ್ರೀತಿಯಿಂದ ತಾನು ಮೊದಲು ಮುಡಿದು ಕೊಂಡಿದ್ದ ಹೂವನ್ನು ಈಶ್ವರನಿಗೆ ಮುಡಿಸಿದನು. ತಡಮಾಡದೆ (ತಾನು ತಂದ) ಮಾಂಸವನ್ನು (ಶಿವನ) ಮುಂದಿಟ್ಟು ಪ್ರೀತಿಯಿಂದ, ಅತಿಶಯವಾದ ಆನಂದದಿಂದ ಅರ್ಪಿಸಿದನು. ವ॥ ಅಪೂರ್ವವಾದ ಈ ರೀತಿಯ ಪೂಜೆಯನ್ನು ಆ ಬೇಡನು ಮಾಡಿದೊಡನೆ— ೯೬. ಶೂಲಿಗೆ ಕೆರವನ್ನುಳ್ಳ ಆ ಕಣ್ಣಪ್ಪನ ಕಾಲಿನ ಸೋಂಕಿನಿಂದ ಅಧಿಕವಾಗುವ ಸೌಖ್ಯ ಪಾರ್ವತಿಯ ಅರಗಿನ ರಸವನ್ನು ತೊಡೆದುಕೊಂಡಿದ್ದ ಪಾದಕಮಲದ ಸೋಂಕಿನಿಂದ ಆದ ಸುಖಕ್ಕಿಂತಲೂ ದೊಡ್ಡದೆನಿಸಿತ್ತು. ಬಾಯಿಯಲ್ಲಿ ತುಂಬಿಕೊಂಡು

1 ರಲ(ಜ) 2 ಜಲಂ(ಅ, ಗ, ಚ, ದ, ಮು, ಜ)

ವ॥ ಆಗಳಾ ಪೂಜಕ ಪುಳಿಂದಂ ಪೊರೆಯೇಱೆ ಪೊಂಪುಳಿವೋಗಿ —

ನಲಿನಲಿದು ಮಣಿದು ಕುಣಿದು
ಜ್ವಲ ರವದಿಂ ಪಾಡೆ ನೋಡಿ ಶಿವನಂ ಪ್ರೇಮಂ
ಬಲಿದೊಲೆದು ಕೆಲಕೆ ಬೆಮರ್ದಮ
ರ್ದಲರ್ದಳವಿಗಳುಂಬಮುತ್ಸವಂಬಡೆದಿರ್ದಂ ೯೭

ಪದಪಿಂ ಪೂಜಿಸುತಿಂತು ಶಂಕರನನಾ ಕಣ್ಣಪ್ಪನಿರ್ಪನ್ನಮೊಂ
ದುದಿನಂ ಪೂಜಕ ತಾಪಸಂ ಯಜಿಸಲೆಂದೇಳ್ತಂದು ಲಿಂಗಾಲಯು
ಕ್ಕದಱೊಳ್ಮೂಳೆಯನಾರ್ದ್ರಚರ್ಮಮನಸೃಙ್ಮಾಂಸಂಗಳಂ ಕಂಡು ಪೇ
ಸಿದನಾಗಳ್ಬಗೆಗುಂದಿ ಚಿಂತಿಸಿದನಿಂತೇಕಾದುದೆಂದಾ ದ್ವಿಜಂ ೯೮

ವ॥ ಇಂತು ಚಿಂತಿಸುತ್ತಮಿದು ಸದುಷ್ಕೃತ ದುಷ್ಕಿರಾತ ಕೃತಮಕ್ಕುಮೆಂದು ನಿರ್ಧರಂ ಗೆಯ್ದುವಂಗೆ ತಕ್ಕುದಂ ಬಳಿಯೊಳ್ಕಾಣ್ಬೆನೆಂದು ಸರ್ವಮ್ಮಾ[1]ರ್ಜನಿಯಿನದನೆಲ್ಲಮಂ ನಿವಾರಿಸಿ ಗೋಮಯವಾರಿಯಿಂ ಸಾರಣೆಗೆಯ್ದು ಮಂತ್ರೋದಕಮಂ ತಳಿ[2]ದು ಶಿವಲಿಂಗಕ್ಕೆ ಪಂಚಬ್ರಹ್ಮ

ಕೊಂಡುಬಂದು ಮುಕ್ಕುಳಿಸಿದ ನೀರಿನಿಂದ ಜಟಾಜೂಟದ ಮೇಲೆ ಮಾಡಿದ ಮಜ್ಜನ ದಿಂದಾದ ಸುಖವು ಸ್ವರ್ಗಂಗೆಯನ್ನು ತಲೆಯ ಮೇಲೆ ಧರಿಸಿದುದಕ್ಕಿಂತಲೂ ಹೆಚ್ಚಾದು ದೆನಿಸಿತ್ತು. ವ॥ ಆಗ ಆ ಪೂಜೆ ಮಾಡುವ ಬೇಡನು (ಭಕ್ತಿಯ) ಉತ್ಸಾಹದಿಂದ ಉಬ್ಬಿ, ರೋಮಾಂಚನಗೊಂಡವನಾಗಿ–೯೭. ನಲಿನಲಿದು ನಮಸ್ಕಾರ ಮಾಡಿ ಮಾಡಿ, ಮನೋ ಹರವಾದ ಶಬ್ದದಿಂದ ಹಾಡುತ್ತ ಶಿವನನ್ನು ನೋಡುತ್ತ, ಹೆಚ್ಚಾದ ಪ್ರೇಮದಿಂದ ಪಕ್ಕಕ್ಕೆ ಒಲೆದಾಡಿ, ಬೆವರಿ ಸಂತೋಷದಿಂದ ಅರಳಿದ ಹೃದಯವುಳ್ಳವನಾಗಿ ಗಣನೆಯಿಲ್ಲದ ಉತ್ಸಾಹವನ್ನು ಹೊಂದಿದನು. ೯೮. ಕಣ್ಣಪ್ಪನು ಈ ರೀತಿ ಶಂಕರನನ್ನು ಪ್ರೀತಿಯಿಂದ ಪೂಜಿಸುತ್ತಿರುವಷ್ಟರಲ್ಲಿ ಒಂದು ದಿನ ಅದರ ಪೂಜಾರಿ ತಪಸ್ವಿಯು ಪೂಜಿಸಬೇಕೆಂದು ಶಿವಾಲಯಕ್ಕೆ ಬಂದು ಅದರಲ್ಲಿ ಬಿದ್ದಿದ್ದ ಮೂಳೆಯನ್ನೂ, ಹಸಿಯ ಚರ್ಮವನ್ನೂ ರಕ್ತಮಾಂಸಗಳನ್ನೂ ಕಂಡು ಅಸಹ್ಯಪಟ್ಟನು. ಆಗ ಆ ದ್ವಿಜನು ಕೊರಗಿದ ಮನಸುಳ್ಳವನಾಗಿ ಹೀಗೇಕಾಯಿತು ? ಎಂದು ಚಿಂತಿಸಿದನು. ವ॥ ಈ ರೀತಿ ಚಿಂತಿಸುತ್ತ ಇದು ಪಾಪದಿಂದ ಕೂಡಿದ ದುಷ್ಟನಾದ ಬೇಡನಿಂದ ಮಾಡಲ್ಪಟ್ಟ ಕೆಲಸವಾಗಿದೆ ಎಂದು ನಿರ್ಧಾರಗೊಂಡು, ಆ ಬೇಡನಿಗೆ ತಕ್ಕದ್ದನ್ನು ಬೇಗನೆ ಕಾಣು ವೆನು, ಎಂದು ಆ ಮಾಂಸಾದಿಗಳೆಲ್ಲವನ್ನೂ, ಕಸ್ಪರಿಗೆಯಿಂದ ಗುಡಿಸಿ, ಹೋಗ ಲಾಡಿಸಿ, ಹಸುವಿನ ಸೆಗಣಿನೀರಿನಿಂದ ನೆಲವನ್ನು ಸಾರಿಸಿ, ಮಂತ್ರದಿಂದ ಪರಿಶುದ್ಧವಾದ ನೀರನ್ನು ಚಿಮುಕಿಸಿ, ಶಿವಲಿಂಗಕ್ಕೆ ಸದ್ಯೋಜಾತಾದಿ ಪಂಚಬ್ರಹ್ಮ ಮಂತ್ರದಿಂದಲೂ, ಪಂಚಾಕ್ಷರೀ ಮಂತ್ರದಿಂದಲೂ, ಹಸುವಿನ ಹಾಲು, ತುಪ್ಪ, ಮೊಸರು, ಸೆಗಣಿ,

1 ರ್ಮಾ(ಜ) 2 ಳೆ(ಮು)

ಪಂಚಾಕ್ಷರಂಗಳಿಂ ಪಂಚಗವ್ಯ ಪಂಚಾಮೃತಮನೆಱೆದು ರುದ್ರಸೂಕ್ತ ಪುರುಷಸೂಕ್ತಂಗಳಿಂ ಮಹಾ ಸ್ನಾನಂಗೆಯ್ದು ವಿಧಾನಂಬಿಡಿದೋಜೆಯಿಂ ಪೂಜಿಸಿ ಲಿಂಗದ ಪಿಂಗಡೆಯೊಳಡಂಗಿರ್ದು ಕಿರಾತಕೃತ್ಯ ಮನೆಲ್ಲಮಂ ಕಂಡು ಖಾತಿ ವಿಕ್ಕು—

ಮುಕ್ಕುಳ ನೀರ್ಮಜ್ಜನಕೇಂ
ತಕ್ಕುದೆ ಮುಡಿದಲರಪೂಜೆ ಯೋಗ್ಯಮೆ ನೈವೇ
ದ್ಯಕ್ಕಡಗುಚಿತಮೆ ಶಿವ ಶಿವ
ಮುಕ್ಕಣ್ಣಂಗಕಟ ಬೇಡನಿಂತೆಸಗಿದಪಂ ೯೯

ವ॥ ಅಂತುಮಲ್ಲದೆಯುಂ—

ಸುರೇಂದ್ರಜ ಶರಾಸನ ಪ್ರಹತಿ ಸಾಂಖ್ಯ ಹಸ್ತಚ್ಯುತ
ಸ್ಫುರದ್ಘನಶಿಲಾಹತಿಪ್ರತತಿಗಳ್ಕದಾ ಹೇವಮಂ
ಕರಂ ಬಗೆಗೆ ತಾರದಂದವರ್ಗೆ ಕೂರ್ತ ನಿರ್ಲಜ್ಜನೇಂ
ಕಿರಾತಪದಘಾತಮಂ ಬಗೆವನೇ ಕಿರಾತೇಶ್ವರಂ ೧೦೦

ವ॥ ಮುನ್ನಮೀ ಕಾಳಹಸ್ತಿಯಲ್ಲಿ—

ಒಂದು ಸೆ[1]ಲಂದಿ ಲಿಂಗಶಿರದೊಳ್ಪೊಸ ನೂ[2]ಲ್ಗಳಿನೆಯ್ದೆ ಬಲ್ಪಿಸಿ
ಲ್ಪೊಂದದ ಮಾಳ್ಕೆಯಿಂ[3] ರಚಿಸಿ ಗೂಡನೊಱಲ್ದಿರೆ ಹಸ್ತಿಯಲ್ಲಿಗೇ

ಮೂತ್ರ–ಇವನ್ನೂ, ಹಾಲು, ಮೊಸರು, ತುಪ್ಪ, ಜೇನುತುಪ್ಪ, ಸಕ್ಕರೆಗಳನ್ನೂ ಎರೆದು ರುದ್ರ ಸೂಕ್ತ, ಪುರುಷ ಸೂಕ್ತಗಳಿಂದ ಮಹಾಭಿಷೇಕ (ರುದ್ರಾಭಿಷೇಕ)ವನ್ನು ಮಾಡಿ, ವಿಧಿಗನುಸಾರವಾಗಿ, ಕ್ರಮದಿಂದ ಪೂಜೆ ಮಾಡಿ ಲಿಂಗದ ಹಿಂಭಾಗದಲ್ಲಿ ಅಡಗಿಕೊಂಡು ಕುಳಿತಿದ್ದು, ಬೇಡನ ಕೃತ್ಯಗಳೆಲ್ಲವನ್ನೂ, ಕಂಡು ಅತಿಶಯ ಕೋಪದಿಂದ— ೯೯. ತ್ರಿನೇತ್ರನಿಗೆ ಬಾಯಿಯಲ್ಲಿ ತುಂಬಿಕೊಂಡು ಬಂದು ಮುಕ್ಕುಳಿಸಿದ ನೀರು ಅಭಿಷೇಕಕ್ಕೆ ತಕ್ಕದ್ದೇ ? ಮುಡಿದುಕೊಂಡು ಬಂದ ಹೂಗಳ ಪೂಜೆ ಯೋಗ್ಯವೇ ? ನೈವೇದ್ಯಕ್ಕೆ ಮಾಂಸವು ಉಚಿತವೇ ? ಶಿವ ಶಿವ ! ಅಕ್ಕಟ !! ಬೇಡನು ಹೀಗೆ ಮಾಡಿದನು !!! ವ॥ ಅದೂ ಅಲ್ಲದೆ ೧೦೦. ಅರ್ಜುನನ ಬಾಣದ ಹೊಡೆತ, ಸಾಂಖ್ಯನ ಕೈಯಿಂದ ಬಿದ್ದ ಪ್ರಕಾಶಿಸುವ ದಪ್ಪನಾದ ಕಲ್ಲುಗಳ ಏಟು ಇವುಗಳ ಸಮೂಹಕ್ಕೆ ಹೆದರದೆ, ಆ ಅಪಮಾನವನ್ನು ಮನಕ್ಕೆ ತಂದುಕೊಳ್ಳದೆ, ಅಂದು ಅವರುಗಳಿಗೆ ಪ್ರೀತಿ ತೋರಿದ ನಾಚಿಕೆಗೇಡಿಯಾದ ಕಿರಾತೇಶ್ವರನು ಬೇಡನ ಕಾಲಿನ ತುಳಿತದ ಏಟನ್ನು ಲೆಕ್ಕಿಸುವನೇ ? ವ॥ ಪೂರ್ವದಲ್ಲಿ ಈ ಕಾಳಹಸ್ತಿಯಲ್ಲಿ— ೧೦೧–೧೦೨. ಒಂದು ಜೇಡರ ಹುಳುವು, ಬಲವಾದ ಬಿಸಿಲು ಉಂಟಾಗಬಾರದೆಂದು ಹೊಸದಾದ ತನ್ನ ನೂಲುಗಳಿಂದ ಶಿವಲಿಂಗದ ಮೇಲು ಭಾಗದಲ್ಲಿ ಚೆನ್ನಾಗಿ ಒತ್ತೊತ್ತಾಗಿ ಗೂಡನ್ನು

1 ಪಿ(ಗ) 2 ನಾ(ನ) 3 ಯುಂ)ದ, ಜ)

ಳ್ತಂದದನೊತ್ತಿ ಕಿಳ್ತು ಸವನಂಗೊಡುತಂಬುಜದಿಂದೆ ಪೂಜಿಸು
ತ್ತಂದಿರದೆಯ್ದುಗುಂ ಪ್ರತಿದಿನಂ ನೆಗಳ್ದಾಗುಣಗರ್ಭನಂತದಂ ೧೦೧

ಕಂಡತಿ ಕೋಪದಿಂ ಪರಿದು ಸುಂಡಿಲನೀಳ್ದೊಳಪೊಕ್ಕು ಕಾಲ್ಗಳಿಂ
ಖಂಡಮನೊತ್ತಿ ಪೊಯ್ದು ನೆಜಿನಂ ಕರಿಯುಂ ಮಡಿಪುತ್ತೆ ತಾನುಮಾ
ಸುಂಡಿಲೊಳುಬ್ಬಸಂಬಡೆದು ಸಾಯೆ ವಿಮುಕ್ತಿಯನಿತ್ತನಾ ಮದೋ
ದ್ದಂಡ ಗಜೇಂದ್ರರುಂದ್ರಗುಣಗರ್ಭೆಯುಗಕ್ಕೆ ಶಶಾಂಕಶೇಖರಂ ೧೦೨

ಮದಯುತ ಕಿರಾತನುಱ ಬ
ಲ್ಲಿದನಾದೊಡವೇನೊ ಮತ್ತಕರಿಯುಂ ಕೊಂದಿ
ಕ್ಕಿದ ಗುಣಗರ್ಭನವೋಲ್ತ
ಪ್ಪದೆ ಕೊಲ್ವೆಂ ಖಲನನಲ್ಲದಂದುಣಲೊಲ್ಲೆಂ ೧೦೩

ವ॥ ಎಂದು ಪೂಣ್ದು ನಿಜಾಲಯಕ್ಕೇಳ್ತಂದೊಂದು ಖಡ್ಗಮುಂ ಕೊಂಡು ಮಗುಳ್ದೆಯ್ತಂದಾ ಲಿಂಗದ ಪಿಂಗಡೆಯೊಳಡಂಗಿ ಪಾರ್ವಂ ನಿರೀಕ್ಷಿಪಾಗಳ್—

ರಚಿಸಿರಲು, ಒಂದು ಆನೆಯು ಅಲ್ಲಿಗೆ ಬಂದು ಅದನ್ನು (ಆ ಗೂಡನ್ನು) ಒತ್ತಿ ಕಿತ್ತು ಹಾಕಿ, ಸ್ನಾನವನ್ನು (ಆ ಶಿವಲಿಂಗಕ್ಕೆ) ತಪ್ಪದೆ ಮಾಡಿಸುತ್ತ, ಕಮಲಗಳಿಂದ ಪೂಜಿಸುತ್ತ ಆಗ ಹೊರಟು ಹೋಗುತ್ತಿತ್ತು. ಪ್ರತಿದಿನವೂ ತಾನು (ಬಿಸಿಲು ಶಿವಲಿಂಗಕ್ಕಾಗ ಬಾರದೆಂದು) ಕಟ್ಟಿದ ಗೂಡು ಅಂತು (ಹಾಳಾಗುತ್ತಿರುವುದನ್ನು) ದಾರವನ್ನು ಗರ್ಭ ದಲ್ಲಿ ಧರಿಸಿದ ಆ ಜೇಡವು ಅಂತು ನೋಡಿ, ಅತ್ಯಂತ ಕೋಪದಿಂದ ಹರಿದು ಬಂದು ಆ ಆನೆಯ ಸುಂಡಿಲನ್ನು ಸೆಳೆದು ಒಳಹೊಕ್ಕು ತನ್ನ ಕಾಲುಗಳಿಂದ ಮಾಂಸವನ್ನು ಕೆರೆದು ಕಿತ್ತುಹಾಕಿ, ಬಡಿದು ಬೇಗನೆ ಆ ಆನೆಯನ್ನು ಸಾಯಿಸಿ, ತಾನೂ ಕೂಡ ಆ ಸುಂಡಿಲಿನಲ್ಲಿಯೇ ಉಸಿರುಕಟ್ಟಿ ಸತ್ತುಹೋಯಿತು. ಚಂದ್ರಶೇಖರನು ಆ ಅಧಿಕ ಗರ್ವದ ಆನೆ, ವಿಶಾಲವಾದ ದಾರವನ್ನು ಗರ್ಭದಲ್ಲಿ ಧರಿಸಿದ ಜೇಡರ ಹುಳು ಈ ಎರಡು ಪ್ರಾಣಿಗಳಿಗೂ ಮೋಕ್ಷವನ್ನು ಕೊಟ್ಟನು. ೧೦೩. ಗರ್ವಿಷ್ಠನಾದ ಈ ಬೇಡನು ಬಲಶಾಲಿಯು ; ಆದರೂ ಏನೋ ? ಮದೋನ್ಮತ್ತವಾದ ಆನೆಯನ್ನು ಕೊಂದು ಹಾಕಿದ ಜೇಡದ ಹುಳುವಿನಂತೆ ಈ ನೀಚನನ್ನು ತಪ್ಪದೆ ಕೊಲ್ಲುತ್ತೇನೆ, ಹಾಗಾಗದ ಪಕ್ಷದಲ್ಲಿ ಊಟವನ್ನೇ ಮಾಡುವುದಿಲ್ಲ. ವ॥ ಹೀಗೆಂದು ಪ್ರತಿಜ್ಞೆ ಮಾಡಿ ತನ್ನ ಮನೆಗೆ ಆ ಬ್ರಾಹ್ಮಣನು ಬಂದು ಒಂದು ಕತ್ತಿಯನ್ನು ತೆಗೆದುಕೊಂಡು ಪುನಃ ಶಿವಾ ಲಯಕ್ಕೆ ಬಂದು ಆ ಲಿಂಗದ ಹಿಂಭಾಗದಲ್ಲಿ ಅಡಗಿ ಕುಳಿತು ನೋಡುತ್ತಿರುವಷ್ಟರಲ್ಲಿ—

ಎಂದಿನಂತೆ ಮಾಂಸಪಾಣಿ ವಾರಿಪೂರಿತಾಸ್ಯನಾ
ನಂದದಿಂದೆ ಪುಷ್ಪಪೂರ್ಣಮಸ್ತನಲ್ಲಿಗೇಳ್ತರು
ತ್ತಂದು ಮುನ್ನಿನಂತೆ ಲಿಂಗಪೂಜೆಯಂ ಯಥೇಷ್ಟಮೋ
ರಂದದಿಂ ನಿಮಿರ್ಚಿ ನೋಡುತಿರ್ದನಾ ವನೇಚರಂ ೧೦೪

ವ॥ ಆಗಳಾ ಭಕ್ತನ ದೃಢಭಕ್ತಿಯಂದಮಂ ಪಾರ್ವತೀಪತಿ ಪಾರ್ವಂಗೆ ತೋಱಲೆಳಸಿ ನಯನದ್ವಯಮಂ ಮಿಸುಪ ಮೊಗಮೊಂದಂ ತಳೆದು—

ಬೆಳರ್ಗಣ್ಕೆಂಪಡರ್ದಶ್ರುಗ
ಳಿಳಿತರ್ಪಮೊಲೆಸಗೆ ಕಂಡು ಕಣ್ಣಪ್ಪಂ ಪೇ
ರಳಲೊಳಗುಮರಿಯೆ ಚಿಂತಾ
ಕುಳನಾಗಳ್ಸುಯ್ದು ಸುಗಿದು ಸಿಡಿಮಿಡಿಗೊಂಡಂ ೧೦೫

ವ॥ ಆಗಳವಂ ನಿರ್ವೇದಂಬಟ್ಟು ನಿರೀಕ್ಷಿಸುತ್ತುಮಿರೆ—

ತ್ರ್ಯಂಬಕನಾ ಭಕ್ತನ ವಿಮ
ಳಾಂಬಕಮಂ ಪಡೆಯಲೆಳಸಿ ಕಣ್ಣೀರ್ಗಱೆವಾ
ಡಂಬರಮನಾಳ್ದು ಸುರಿವ ದೃ
ಗಂಬುಗಳಿಂಬಾದುವಾಗಳಾ ಶಶಿಧರನಾ ೧೦೬

ವ॥ ಅಂತಿಳಿತರ್ಪಶ್ರುಧಾರಾಪೂರಮಂ ಪುಳಿಂದನಭೀಕ್ಷಿಸಿ ಶಿವಂಗಿಂತೆಂದಂ—

೧೦೪. ದಿನದ ಹಾಗೆ ಮಾಂಸವನ್ನು ಕೈಯಲ್ಲಿ ಉಳ್ಳ, ನೀರಿನಿಂದ ತುಂಬಿದ ಬಾಯುಳ್ಳ, ಹೂವಿನಿಂದ ತುಂಬಿದ ತಲೆಯುಳ್ಳ ಆ ಬೇಡನು ಆನಂದದಿಂದ ಆ ದೇವಸ್ಥಾನಕ್ಕೆ ಬಂದು, ಆಗ ಮೊದಲಿನ ಹಾಗೆ ಯಥೇಷ್ಟವಾಗಿ ಕ್ರಮವಾಗಿ ಲಿಂಗಪೂಜೆಯನ್ನು ಮಾಡಿ ನೋಡುತ್ತಿದ್ದನು. ವ॥ ಆಗ ಆ ಭಕ್ತನಾದ ಕಣ್ಣಪ್ಪನ ದೃಢವಾದ ಭಕ್ತಿಯ ರೀತಿಯನ್ನು ಬ್ರಾಹ್ಮಣನಿಗೆ ತೋರಿಸಲು ಪರಮೇಶ್ವರನು ಅಪೇಕ್ಷೆಪಟ್ಟು, ಎರಡು ಕಣ್ಣು ಮತ್ತು ಪ್ರಕಾಶಮಾನವಾದ ಮುಖವೊಂದನ್ನು ಧರಿಸಿ—೧೦೫. ಬೆಳ್ಳಗಿದ್ದ ಕಣ್ಣು ಕೆಂಪೇರಿ ಕಣ್ಣೀರುಗಳು ಇಳಿದು ಬರುವ ಹಾಗೆ ಮಾಡಿದನು. (ಇದನ್ನು) ಕಣ್ಣಪ್ಪನು ಕಂಡು ಹೆಚ್ಚಾದ ದುಃಖವು ಮನಸ್ಸನ್ನು ವ್ಯಾಪಿಸಲಾಗಿ ಆಗ ಚಿಂತೆಯಿಂದ ವ್ಯಾಕುಲಗೊಂಡವನಾಗಿ, ನಿಟ್ಟುಸಿರುಬಿಡುತ್ತ ಭಯದಿಂದ ಕಳವಳಗೊಂಡನು. ವ॥ ಆಗ ಆ ಕಣ್ಣಪ್ಪನು ದುಃಖಗೊಂಡು ನಿರೀಕ್ಷಣೆ ಮಾಡುತ್ತ ಇರಲು—೧೦೬. ತ್ರಿಣೇತ್ರನು ಆ ಭಕ್ತನ ನಿರ್ಮಲವಾದ ಕಣ್ಣನ್ನು ಹೊಂದುವುದಕ್ಕೆ ಅಪೇಕ್ಷಿಸಿ, ಕಣ್ಣೀರನ್ನು ಸುರಿಸುವ ಆಡಂಬರವನ್ನು ಹೊಂದಿದವನಾಗಿ, ಆ ಚಂದ್ರಧರನ ಸುರಿವ ಕಣ್ಣೀರಿನಿಂದ ಕೂಡಿದ ಕಣ್ಣುಗಳು ಮನೋಹರಗೊಂಡವು. ವ॥ ಈ ರೀತಿ ಇಳಿದು ಬರುತ್ತಿರುವ ಕಣ್ಣೀರಿನ

ಆಲಿಸಿ ನಿನ್ನ ನಿಂದೆಯನಪರ್ಣೆಯೊಡಲ್ವಿಡುವಂದು ದೇವತಾ
ಪಾಲಕಸೂನು ಬಿಲ್ವಿಡಿದು ಭಂಡಣದೊಳ್ಪೊಡೆವಂದು ಜೂದಿನೊ
ಳ್ಸೋಲಿಸುತಚ್ಯುತಾಖ್ಯನುಱೆ ಕೈಗಳನೋವದೆ ಕಟ್ಟುವಂದು ಲೀ
ಲಾಲಸಸಾಂಖ್ಯನಣ್ಮಿ ಬಿಱುಗಲ್ಗಳನಾಂತಿಡುವಂದು ಕಂಚಿಯೊಳ್ ೧೦೭

ಸಿರಿಯಾಳ್ವಂ ನಿನಗೆಂದು ತನ್ನ ಮಗನಂ ಸೀಳ್ವಂದು ಕೂರ್ಪಿಂ ಕೃಪಾ
ಕರ ಪಿಟ್ಟವ್ವೆಗೆ ಬಿಟ್ಟಿಗೆಯ್ವ ಪದದೊಳ್ಭೂಭೃಚ್ಚರರ್ವೇತ್ರದಿಂ
ಕರಮುರ್ಕಿಂ ಬಡಿವಂದು ಚಂದವಿಭು ನಿನ್ನಂ ಬಿಟ್ಟು ಪೋಪಂದು ಕೇ
ಳ್ಪರಕಾಂತಾರತಿಗೊಲ್ದು ಗಾಸಿವಡೆದಂದಿಲ್ಲಂಬು ನಿನ್ನಕ್ಷಿಯೊಳ್ ೧೦೮

ಈಗಳೇಕೆ ಭವದಕ್ಷಿಯಿಂ ಪಯಃ
ಪೂಗಮಿಂತು ಸುರಿತರ್ಪುದಕ್ಕಟಾ
ಭೋಗಿಭೂಷ ಮಱೆ ಬೇಡ ಪೇಳ್ವುದಿಂ
ಬಾಗಿ ನಿನ್ನ ಬಗೆಗಾದ ದುಃಖಮಂ ೧೦೯

ತೊಱೆದೊಳ್ವೆಂಡಿರನಾತ್ಮಜಾತರನರಣ್ಯಂಬೊಕ್ಕೆನೆಂದಳ್ವೆಯೋ
ಸೆಱೆಯಾದೆಂ ಪುಲಿಸಿಂಗಮಿರ್ಪಡವಿಗಿನ್ನೆಂತೆಂದು ಕಣ್ಣೀರ್ಗಳಂ
ಕಱೆಯುತ್ತಿರ್ಪೆಯೊ ತಳ್ವಿದಂ ಬಿಯದನೆಂದೆನ್ನತ್ತಣಿಂದಾದ ಬ
ಲ್ಮಱುಕಂ ಕಣ್ಬನಿಯಂ ನಿಮಿರ್ಚಿತೊ ಬಸಿಕರ್ಯ್ಪೇಱೆ ಶೋಕಿಪ್ಪೆಯೋ ೧೧೦

ಪ್ರವಾಹವನ್ನು ಬೇಡನು ನೋಡಿ ಶಿವನಿಗೆ ಹೀಗೆ ಹೇಳಿದನು : ೧೦೭–೧೦೮–೧೦೯. ಪಾರ್ವತಿಯು ದಕ್ಷಬ್ರಹ್ಮನಿಂದ ಮಾಡಲ್ಪಟ್ಟ ನಿಂದೆಯನ್ನು ಕೇಳಿ ಶರೀರವನ್ನು ಬಿಡುವ ಕಾಲದಲ್ಲಿ, ಇಂದ್ರಪುತ್ರನಾದ ಅರ್ಜುನನು ಬಿಲ್ಲು ಹಿಡಿದು ಯುದ್ಧರಂಗದಲ್ಲಿ ಬಾಣದಿಂದ ಹೊಡೆಯುವ ಕಾಲದಲ್ಲಿ, ಅಚ್ಯುತನೆಂಬುವನು ಜೂಜಿನಲ್ಲಿ ಸೋಲಿಸುತ್ತ ಚೆನ್ನಾಗಿ ನಿನ್ನ ಕೈಗಳನ್ನು ಪ್ರೀತಿದೋರದೆ ಕಟ್ಟುವ ಕಾಲದಲ್ಲಿ, ವಿಲಾಸದಿಂದ ಪ್ರಮತ್ತನಾದ ಸಾಂಖ್ಯನು ಉತ್ಸಾಹದಿಂದ ಬಿರುಗಲ್ಲುಗಳನ್ನು ಹಿಡಿದು ಹೊಡೆಯುವ ಕಾಲದಲ್ಲಿ ಕಂಚಿಯಲ್ಲಿ ಸಿರಿಯಾಳನು ನಿನಗೆ ಎಂದು ತನ್ನ ಮಗನನ್ನೇ ಸೀಳಿದ ಕಾಲದಲ್ಲಿ– ಹೇ ದಯೆಗೆ ಆಸ್ಪದನಾದ ಶಿವನೇ, ಕೇಳು: ಪಿಟ್ಟವ್ವೆಗೆ ಬಿಟ್ಟಿಯಾಗಿ ಸೇವೆ ಮಾಡುವಾಗ, ರಾಜಸೇವಕರು ಗರ್ವದಿಂದ ಚೆನ್ನಾಗಿ ಬೆತ್ತದಿಂದ ಹೊಡೆಯುವಾಗ, ಚಂದ್ರವಿಭುವು ನಿನ್ನನ್ನು ಬಿಟ್ಟು ಹೋಗುವಾಗ, ಅನ್ಯ ಸ್ತ್ರೀಯರೊಡನೆ ಸುರತಕ್ರೀಡೆಗೆ ಇಚ್ಛಿಸಿ ಗಾಸಿಗೊಂಡಾಗ ನಿನ್ನ ಅಕ್ಷಿಯಲ್ಲಿ ನೀರು ಬರಲಿಲ್ಲ. ಈಗೇಕೆ ನಿನ್ನ ಕಣ್ಣಿನಿಂದ ನೀರಿನ ಧಾರೆಯು ಹೀಗೆ ಸುರಿಯುತ್ತಿರುವುದು ? ಅಕ್ಕಟಾ ! ಸರ್ಪಾಭರಣನೇ, ಮುಚ್ಚಿಟ್ಟುಕೊಳ್ಳಬೇಡ ನಿನ್ನ ಮನಸ್ಸಿಗಾದ ದುಃಖವನ್ನು ವಿವರವಾಗಿ ಹೇಳುವುದು. ೧೧೦. ಒಳ್ಳೆಯ ಹೆಂಡತಿಯರನ್ನೂ, ಮಕ್ಕಳನ್ನೂ ತೊರೆದು ಅರಣ್ಯವನ್ನು ಹೊಕ್ಕೆನೆಂದು ಅಳುವೆಯಾ ? ಹುಲಿ, ಸಿಂಹಗಳಿರುವ ಅಡವಿಗೆ ಸೆರೆಯಾದೆನು ಇನ್ನು ಹೇಗೆ ? ಎಂದು ಕಣ್ಣೀರನ್ನು ಸುರಿಸುತ್ತಿರುವೆಯೋ ? ಬೇಡನು (ನನ್ನನ್ನು) ತಬ್ಬಿಕೊಂಡನು

ಎಂದು ಪಲುಂಬಿ ನಾಡೆ ಪಲವಾಡುವನಪ್ಪುವನೊರ್ಮೆ ಮುದ್ದಿಪಂ
ತಂದೆಯಿದೇಕೆ ಕಣ್ಬನಿ ಕಳಲ್ದಪುದೆಂದಳವಾಱಿನೋವನು
ಪ್ಪೆಂದುಸುರಿಕ್ಕಿ ಸುಯ್ವನಕಟೆನ್ನವನಿಂತಿರೆ ತಾಳ್ವೆನೆಂತೆನು
ತ್ತಂದಳಲುಣ್ಮೆ ತಲ್ಲಣಿಪನೊಯ್ಯನೆ ದೃಗ್ಜಳಮಂ ಸೆಱಂಗಿನಿಂ ೧೧೧

ಬಿಡದೊರಸಿ ನೋಳ್ಪನಂಬಕ
ದೆಡೆಯೊಳರವೆ ಪೊಕ್ಕುದೆಂದು ಮೊಗವಿಟ್ಟೂದು
ತ್ತೊಡನೊಡನಾಲಿಗೆ ನಾಲಿಗೆ
ಗುಡಿಯಿಟ್ಟೊರೆದೊರೆದು ತಿರುಪಿ ಸೋದಿಸಿ ನೋಳ್ಪಂ ೧೧೨

ದಟ್ಟಿಯು ಸೆಱಂಗಿನಿಂ ಪೊಸ
ಪೊಟ್ಟಣಮಂ ಕಟ್ಟಿ ಬಾಯ ಸೆಕೆಗೊಳಿಸಿ ಮನಂ
ನಟ್ಟೊತ್ತಿದೊಡದು ದೃಗ್ಜಲ
ದಿಟ್ಟಣದಿಂ ನನೆಯೆ ಕಂಡು ಬಾಯ್ವಿಡುತಿರ್ಪಂ ೧೧೩

ಕಡೆಗಣ್ಣನೊತ್ತೆ ಕಣ್ಣೀ
ರ್ಗಡಣಿಸಿ ಕಣ್ಗುಣಿಕೆವಿಡಿದು ಸುರಿಗುಂ ಕರದಿಂ
ನಿಡುಗಣ್ಗುಣಿಕೆಯನೊತ್ತಿದೊ
ಡೊಡನಿೞಿಗುಮಪಾಂಗದತ್ತಣಿಂದಶ್ರುಜಲಂ ೧೧೪

ಎಂದು ನನ್ನ ದೆಸೆಯಿಂದಾದ ಬಲವಾದ ದುಃಖವು ಕಂಬನಿಗಳನ್ನುಂಟುಮಾಡಿತೋ ? ಹೊಟ್ಟೆ ಉರಿದು ಅಳುತ್ತಿರುವೆಯೋ ?' ೧೧೧–೧೧೨. ಹೀಗೆಂದು ಹಂಬಲಿಸುತ್ತ ಚೆನ್ನಾಗಿ ಅನೇಕ ವಿಧವಾಗಿ ಮಾತಾಡುವನು ; ಅಪ್ಪುವನು ; ಒಂದೊಂದಾವರ್ತಿ ಮುದ್ದುಕೊಡುವನು. ತಂದೇ, ಈ ನಿನ್ನ ಕಣ್ಣೀರ ಹನಿ ಏಕೆ ಇಳಿಯುತ್ತಿದೆ ?' ಎಂದು ಶಕ್ತಿಗುಂದಿದವನಾಗಿ ಬಾಧೆಗೊಳಗಾಗುವನು. ಉಃಪ್ ಎಂದು ಊದುತ್ತ ನಿಟ್ಟುಸಿರು ಬಿಡುವನು. ಅಕ್ಕಟ ! ನನ್ನವನಾದ ಶಿವನು ಈ ರೀತಿ ಇರಲು ನಾನು ಹೇಗೆ ಬದುಕಲಿ ?' ಎನ್ನುತ್ತ ಆಗ ದುಃಖವು ಹೊರಹೊಮ್ಮುತ್ತಿರಲು ನಡುಗುವನು ; ಮೆಲ್ಲನೆ ಕಣ್ಣೀರನ್ನು ಸೆರಗಿನಿಂದ ಬಿಡದಂತೆ ಒರೆಸಿ ನೋಡುವನು ; ಕಣ್ಣಿನ ಹತ್ತಿರ ಚಿಕ್ಕ ಒಂದು ಅಣುವು ಹೊಕ್ಕಿದೆ ಎಂದು ಮುಖವಿಟ್ಟು (ಕಣ್ಣನ್ನು) ಊದುತ್ತ, ಒಡನೊಡನೆಯೇ ಕಣ್ಣು ಗುಡ್ಡೆಗೆ ನಾಲಿಗೆ ತುದಿಯನ್ನಿಟ್ಟು ಸವರಿ ಸವರಿ ತಿರುತಿರುಗಿಸಿ ಸೋದಿಸಿ ನೋಡುವನು. ೧೧೩. ತಾನುಟ್ಟ ಪಂಚೆಯ ಸೆರಗಿನಿಂದ ಚಿಕ್ಕಗಂಟನ್ನು ಮಾಡಿ ಅದನ್ನು ಬಾಯಲ್ಲಿಟ್ಟು ಬಿಸಿಮಾಡಿ, ನಟ್ಟಮನಸ್ಸಿನಿಂದ ಒತ್ತಿದಾಗ ಆ ಪೊಟ್ಟಣವು ಕಣ್ಣೀರಿನ ಆಧಿಕ್ಯದಿಂದ ನೆನೆದು ತೇವಗೊಳ್ಳಲು ಅದನ್ನು ಕಂಡು ಅಳುತ್ತ ಇದ್ದನು. ೧೧೪. ಕಣ್ಣೀರು ಒಟ್ಟಾಗಿ ತುಂಬಿ, ಕಣ್ಣುಕುಣಿಕೆಯನ್ನು ಒತ್ತಿಕೊಂಡು ಬರಲಾಗಿ, ಆ ಕಣ್ಣಿನ ಕುಣಿಕೆಯನ್ನು ಅನುಸರಿಸಿ ನೀರು ಸುರಿಯುವುದು. ನಿಡಿದಾದ ಕಣ್ಣಿನ ಕುಣಿಕೆಯನ್ನು

ವ॥ ಆಗಳದಂ ಕಂಡು ಪುಳಿಂದಪತಿ ತಳವೆಳಗಾಗಿ—

ಇದು ಸುಖಬಾಷ್ಪಂ ಕಾರು
ಣ್ಯದೆ ತೊರೆದ ದೃಗಂಬು ಶೋಕಜನಿತಾಶ್ರುಗಳೆಂ
ಬುದಕೆ ತೆಱಪಿಲ್ಲ ಸುರಿತ
ರ್ಪುದು ಗಡ ಕಣ್ಣೊಂದಱಿಂದೆ ಜಳಮುದಱಿಂದಂ ೧೧೫

ವ॥ ಎಂದು ಮುಗ್ಧಂ ವಿದಗ್ಧನಂತೆ ವಿಚಾರಂಗೆಯ್ದಕ್ಷಿರೋಗಮಕ್ಕುಮೆಂದು ನಿರ್ಧರಿಸಿ—

ಅಳಿಗಣ್ಣೋ ಪೊಸ ನೀಲಿಗಣ್ಣೊ ಪಱೆಗಣ್ಣೋ ಬೇನೆಗಣ್ಣೋ ರುಜಾ
ವಿಳದುರ್ಮಾಂಸದ ಕಣ್ಣೊ ಪೈಲಿಗೆಯ ಕಣ್ಣೋ ತಿಂತೆಗಣ್ಣೋ ನಿರ
ರ್ಗಳ ವಾತಾಮಯಮಾಳ್ದ ಕಣ್ಣೊ ಕುಟಿಗಣ್ಣೋ ಚುರ್ಚುಗಣ್ಣೋ ಜಳಾ
ಕುಳವೊಂದಿರ್ದಱಿಗಣ್ಣೊ ಕಣ್ಗದಕೆ ಮದ್ದಂ ಮಾಡಲಾಂ ಬಲ್ಲೆನೇ ೧೧೬

ಏಗೆಯ್ದಪೆನಾರ್ಗಱಿಪುವೆ
ನೀಗಹನದೊಳೊರ್ವರಿಲ್ಲ ಮಾಣ್ದಪುದೆಂತೀ
ರೋಗಮಕಟಕಟ ಕಾಳ್ಪುರ
ಮಾಗಿಳಿದಪುದಶ್ರು ಕಣ್ಣದೇಂ ಬಾಳ್ದಪುದೇ ೧೧೭

ಒತ್ತಿದರೆ ಆ ಕೂಡಲೇ ಕಡೆಗಣ್ಣಿನ ಕಡೆಯಿಂದ ಕಣ್ಣೀರು ಇಳಿಯುವುದು. ವ॥ ಆಗ ಅದನ್ನು ಕಂಡು ಆ ಬೇಡನಾಯಕನು, ಬೆರಗಾಗಿ—೧೧೫. ಕಣ್ಣೀರು ಒಂದು ಕಣ್ಣಿನಿಂದ ಸುರಿಯುತ್ತಿರುವುದಲ್ಲವೇ ? ಆದರಿಂದ ಈ ನೀರು ಸಂತೋಷಬಾಷ್ಪವೆಂದಾಗಲಿ, ಕಾರುಣ್ಯದಿಂದ ಸುರಿಸುವ ಕಣ್ಣೀರೆಂದಾಗಲಿ, ದುಃಖದಿಂದಾದ ಕಣ್ಣೀರೆಂದಾಗಲಿ ಹೇಳುವುದಕ್ಕೆ ಅವಕಾಶವೇ ಇಲ್ಲ. (ಹಾಗಾಗಿದ್ದರೆ ಎರಡೂ ಕಣ್ಣಿನಲ್ಲಿ ನೀರು ಬರಬೇಕಾಗಿತ್ತು ಎಂದು ಭಾವ) ವ॥ ಹೀಗೆಂದು ಆ ಮುಗ್ಧನು ಪ್ರೌಢನಂತೆ ವಿಚಾರಮಾಡಿ, ಇದು ಕಣ್ಣಿನ ನೋವೇ ಆಗಿದೆ ಎಂದು ನಿರ್ಧರಿಸಿ—೧೧೬. ಕೆಟ್ಟ ಕಣ್ಣೋ ? ಹೊಸ ನೀಲಿ ಬಣ್ಣವಾಗುವ ರೋಗದ ಕಣ್ಣೋ ? ಪರೆಬಂದ ಕಣ್ಣೋ ? ಕಣ್ಬೇನೆ ಬಂದ ಕಣ್ಣೋ ? ರೋಗದಿಂದ ದುರ್ಮಾಂಸ ಬೆಳದ ಕಣ್ಣೋ ? ಕೊಳೆ ತುಂಬಿದ ಕಣ್ಣೋ ? ತೀಟೆಗೊಂಡ ಕಣ್ಣೋ ? ಅತಿಶಯವಾದ ವಾತರೋಗವನ್ನು ಹೊಂದಿದ ಕಣ್ಣೋ ? ಕುಟಿಗೆಯ ಕಣ್ಣೋ ? ಚುಚ್ಚುವ ಕಣ್ಣೋ ? ನೀರಿನಿಂದ ತುಂಬಿಕೊಂಡಿರುವ ಅರೆಬೇನೆ ಬಂದ ಕಣ್ಣೋ ? ಈ ರೀತಿಯ ರೋಗ ಬಂದ ಕಣ್ಣಿಗೆ ನಾನು ಔಷಧ ಮಾಡಲು ತಿಳಿದಿರುವೆನೆ ? ೧೧೭. ಏನು ಮಾಡಲಿ ? ಯಾರಿಗೆ ತಿಳಿಸಲಿ ? ಈ ಘೋರವಾದ ಕಾಡಿನಲ್ಲಿ ಒಬ್ಬನೂ (ಈ ರೋಗವನ್ನು ತಿಳಿದವನು) ಇಲ್ಲ. ಹೇಗೆ ವಾಸಿಯಾದೀತು ? ಅಕಟಕಟ ! ಕಣ್ಣೀರಿನ ಹನಿಯು ಪ್ರವಾಹರೂಪವಾಗಿ ಇಳಿಯುತ್ತಿರುವುದು ಈ ಕಣ್ಣು (ಇನ್ನು) ಬಾಳುವುದೇ ?

ಕಣ್ಮೂಱುಳ್ಳನೆನಿಪ್ಪನಿನ್ನೆಸಕಮಂ ಕಂಡಚ್ಯುತಾಜತುರಾ
ಷಾಣ್ಮುಖ್ಯಾಮರರಳ್ಕುವರ್ವಿಗತನೇತ್ರಂ ತತ್ಸುರಶ್ರೇಣಿಗೆಂ
ತಾಣ್ಮಂ ನೀನೆನಿಸಿರ್ಪೆಯೇಂ ನಗರೆ ಕಣ್ಣಿಂ ಬೆಂದವರ್ನಿನ್ನನಿಂ
ಮಾಣ್ಮಾಣಂಬಕದಂಬುವಂ ಕಱೆವುದಂ ಶ್ರೀಕಾಳಹಸ್ತೀಶ್ವರಾ ೧೧೮

ಕರಿಮುಕ್ತಾಸ್ರಜದಿಂದಲಂಕರಿಸಿ ವಕ್ಷೋಭಾಗಮಂ ಗುಂಜಿಕಾ
ಭರಣಶ್ರೇಣಿಯನಿಟ್ಟು ಸಾರಮೃಗಭೂವಿಂದಣ್ಪುಗೆಯ್ದೂರ್ಣಭಾ
ಸುರಸೂತ್ರಾಂಬರಮಂ ಮರಲ್ದುಡಿಸಿ ನಿನ್ನಂಗಂಗಳಂ ನಾಡೆ ಸಿಂ
ಗರಿಸಲ್ಕಾನೊಸೆದಿರ್ಪಿನಂ ನಯನಮಿಂತೇಕಾದುದೈ ಶಂಕರಾ ೧೧೯

ವ॥ ಎಂದು ಪಲುಂಬಿ ಪಳಯಿಸಿ—

ಜನಿಯಿಸಿದಂದಿಂದಂ ವೇ
ದನೆಯಱಿಯದಿದೆನ್ನ ಕಣ್ಣದಂ ಪತ್ತಿಸಿ ನೋ
ಳ್ಪೆನೆನುತ್ತೆ ಮಸೆದ ಕೂರಂ
ಬಿನ ಮೊನೆಯಿಂದೊತ್ತಿ ಮೀಂಟಿ ನಿಜಲೋಚನಮಂ ೧೨೦

ತೆಗೆದತುಳ ಧೀರನಾ ಚ
ಕ್ಷುಗೆ ಪತ್ತಿಸಿ ಬೆಚ್ಚತೆಱದಿನಮರ್ದಿರೆ ಕಂಡೊಂ
ದುಗುಮಿಗೆಯ ಮುದಮನೊಳಕೊಂ
ಡಗಲದೆ ನಡೆನೋಡುತಿರ್ದನಾ ಕಣ್ಣಪ್ಪಂ ೧೨೧

೧೧೮. ಶ್ರೀಕಾಳಹಸ್ತೀಶ್ವರನೇ, ಮೂರು ಕಣ್ಣುಳ್ಳವನು ಎಂದೆನಿಸಿರುವ ನಿನ್ನ ಈ ಉದ್ಯೋಗವನ್ನು ವಿಷ್ಣು ಬ್ರಹ್ಮರು ಇಂದ್ರನೇ ಮೊದಲಾದ ದೇವತೆಗಳು ಕಂಡು ಭಯಗೊಳ್ಳುವರು. ಕಣ್ಣು ಕಳೆದುಕೊಂಡವನಾದ ನೀನು ಆ ದೇವತೆಗಳ ಸಮೂಹಕ್ಕೆ ಹೇಗೆ ಒಡೆಯನೆಂದೆನಿಸಿಕೊಳ್ಳುವೆ ? ನಿನ್ನ ಕಣ್ಣಿನಿಂದ ಬೆಂದು ಹೋದವರು (ಈಗಿನ ನಿನ್ನ ಈ ಸ್ಥಿತಿಯನ್ನು ಕಂಡು) ಹಾಸ್ಯ ಮಾಡುವುದಿಲ್ಲವೆ ? (ಈಗ) ನೀನು ಕಣ್ಣಿನಿಂದ ನೀರನ್ನು ಸುರಿಸುವುದನ್ನು ಬಿಟ್ಟುಬಿಡು. ೧೧೯. ಎದೆಯನ್ನು ಆನೆಯ ತಲೆಯ ಮುತ್ತುಗಳ ಸರದಿಂದ ಅಲಂಕರಿಸಿ, ಗುರುಗಂಜಿಯ ಒಡವೆಗಳ ಸಾಲುಗಳನ್ನು ಇಟ್ಟು, ಶ್ರೇಷ್ಠವಾದ ಕಸ್ತೂರಿಯನ್ನು ಮೈಗೆ ಲೇಪಿಸಿ, ಅನಂತರ ಜೇಡರಹುಳದ ನೂಲಿನ ಮನೋಹರ ಬಟ್ಟೆಯನ್ನುಡಿಸಿ, ನಿನ್ನ ಶರೀರವನ್ನು ಚೆನ್ನಾಗಿ ಶೃಂಗಾರಮಾಡುವುದಕ್ಕೆ ನಾನು ಪ್ರೀತಿಯಿಂದಿರುವಾಗ ಶಂಕರ, ನಿನ್ನ ಕಣ್ಣು ಹೀಗೇಕೆ ಆಯಿತು ? ವ॥ ಎಂದು ಹಲುಬಿ ಪ್ರಲಾಪಗೆಯ್ದು ೧೨೦–೧೨೧. ಈ ನನ್ನ ಕಣ್ಣು ಹುಟ್ಟಿದಂದಿಂದ ಮೊದಲ್ಗೊಂಡು ನೋವನ್ನೇ ತಿಳಿಯದು. ಇದನ್ನು (ಈ ನಿನ್ನ ರೋಗದ ಕಣ್ಣಿಗೆ) ಹತ್ತಿಸಿ ನೋಡುತ್ತೇನೆ. ಎನ್ನುತ್ತ ಸಾಣೆಯಿಂದ ಮಸೆದು ತೀಕ್ಷ್ಣಗೊಳಿಸಿದ (ಹರಿತಗೊಳಿಸಿದ) ತೀಕ್ಷ್ಣವಾದ ಬಾಣದ ತುದಿಯಿಂದ ತನ್ನ ಕಣ್ಣನ್ನು ಮೀಟಿ, ಆ ಅತುಳ ಪರಾಕ್ರಮಿಯಾದ ಕಣ್ಣಪ್ಪನು ತೆಗೆದು ಆ ನೀರು ಸುರಿಸುತ್ತಿದ್ದ ಕಣ್ಣಿಗೆ ಹತ್ತಿಸಿ ಬೆಸೆದ ರೀತಿಯಲ್ಲಿ

ಒಳಗಿಡಿದುಣ್ಮಿದ ಕರುಣಾ
ಜಳಮದು ಪೊಱಸೂಸುವಂತೆ ವಾಮೇಕ್ಷಣದಿಂ
ದಿಳಿದ ಜಳಧಾರೆ ತಳೆದುದು
ನಳಿ[1]ನೋಜ್ವಳ[1] ನವಮರಂದಧಾರೆಯ ಚಲ್ವಂ ೧೨೨

ಬಲಗಣ್ಣೀರ್ ನಿಲೆ ವಾಮಲೋಚನಮದಂಬುವ್ರಾತಮಂ ಸೂಸೆ ಕಂ
ಡೊಲವಂ ಪೇರಳಲಂ ಕರಂ ತಳೆದು ಕಣ್ಗೊಪ್ಪಿರ್ದನರ್ಕಾಂಶು ಮೇ
ಘಲಸಚ್ಛಾಯೆಯನಾಳ್ದ ವಾಸರದವೋಲ್ ಗಂಗಾಕಳಿಂದಾತ್ಮಜಾ
ಸಲಿಲಂದಾಳ್ದ ಸಮುದ್ರದಂತೆ ಶಿವಭಕ್ತಿಶ್ರೀವರಂ ಧೀವರಂ ೧೨೩

ವ॥ ಅಂತೊಂದು ನಿಮಿಷಾರ್ಧಮಿರ್ದನಿತಱೊಳ್ತಿಳಿವೆನಗಿನ್ನುಮೊಂದು ವಿಲೋಚನಮಿರ್ಕುಮಾಸಂಜೆನಂಜೆನೆಂದು ದರಸ್ಮಿತಾಸ್ಯಂ ಪಾದುಕಾಂಚಿತಪಾದಾಂಗುಷ್ಠದಿಂ ಕಣ್ಗುಱುಪನೊತ್ತಿ ದೃಢಭಾವಂ ಬಲಿದು—

ನಿಜವಾಮೇಕ್ಷಣಮಂ ನಿಶಾತಶರದಿಂದಂ ಮೀಂಟುವಾಗಳ್ ಕರಾಂ
ಬುಜಮಂ ನೀಡಿ ತದೀಯಪಾಣಿವಿಡಿದೊಲ್ದ ಭ್ರಾಪಗಾಚಂದ್ರಚಾ

ಸೇರಿಸಿರಲು (ಅದನ್ನು) ಕಂಡು ಅಧಿಕವಾದ ಸಂತೋಷವನ್ನು ಹೊಂದಿದವನಾಗಿ ಒಂದೇ ಸಮನೆ ದಿಟ್ಟಿಸಿ ನೋಡುತ್ತ ಇದ್ದನು. ೧೨೨. ಒಳಗೆ ತುಂಬಿಕೊಂಡು ಹೊರಹೊಮ್ಮುವ ಆ ದಯಾರಸವು ಎಡಗಣ್ಣಿನಿಂದ ಹೊರ ಹೊರಡುವ ಹಾಗೆ ಇಳಿಯುತ್ತಿದ್ದ ಜಲದ ಧಾರೆಯು ಕಮಲಪುಷ್ಪದಿಂದ ಸುರಿಯುವ ನೂತನ ಮಕರಂದದ ಧಾರೆಯಂತೆ ಸೌಂದರ್ಯವುಳ್ಳದ್ದಾಯಿತು. ೧೨೩. ಬಲಗಣ್ಣಿನಿಂದ ಸುರಿಯುವ ನೀರು ನಿಲ್ಲಲು, ಆ ಎಡಗಡೆಯ ಕಣ್ಣು ನೀರಿನ ಸಮೂಹವನ್ನು ತುಂಬಿಕೊಂಡು ಸುರಿಸತೊಡಗಲು, ಶಿವಭಕ್ತಿಯೆಂಬ ಲಕ್ಷ್ಮಿಗೆ ಪತಿಯಾದ ಆ ಬೇಡನು ಕಂಡು ಸಂತೋಷವನ್ನೂ, ಅಧಿಕ ದುಃಖವನ್ನೂ ಚೆನ್ನಾಗಿ ಹೊಂದಿದವನಾಗಿ, ಬಿಸಿಲು, ಮೋಡದ ನೆಳಲು ಇವುಗಳನ್ನು ಹೊಂದಿದ ಹಗಲಿನ ಹಾಗೆ, ಗಂಗೆ ಯಮುನೆಗಳ ನೀರನ್ನು ಹೊಂದಿದ ಸಮುದ್ರದ ಹಾಗೆ ಕಂಗೊಳಿಸಿದನು. ವ॥ ಆ ರೀತಿ ಒಂದು ನಿಮಿಷಾರ್ಧ ಇದ್ದು ಅಷ್ಟರಲ್ಲಿ ತಿಳಿದು ನನಗೆ ಇನ್ನೂ ಒಂದು ಕಣ್ಣು ಇರುವುದು. ನಾನು ಹೆದರೆನು ! ಹೆದರೆನು ! ಎಂದು ಮುಗುಳು ನಗೆಯಿಂದ ಕೂಡಿದ ಮುಖವುಳ್ಳವನಾಗಿ, ಕೆರದಿಂದ ಕೂಡಿದ ಕಾಲಿನ ಹೆಬ್ಬೆರಳಿನಿಂದ ಕಣ್ಣಿನ ಗುರುತನ್ನು ಒತ್ತಿ, ನಿಶ್ಚಲವಾದ ಮನಸ್ಸು ವೃದ್ಧಿಗೊಂಡು— ೧೨೪. ತನ್ನ ಎಡಗಡೆಯ ಕಣ್ಣನ್ನು ತೀಕ್ಷ್ಣವಾದ ಬಾಣದಿಂದ ಮೀಟುವಾಗ, ದೇವಗಂಗೆ ಚಂದ್ರ ಇವರುಗಳಿಂದ ಮನೋಹರವಾದ ಜಡೆಯನ್ನು ಧರಿಸಿರುವ, ಉಮಾ ಸಹಿತನಾದ, ಕಪ್ಪಾದ ಕೊರಳುಳ್ಳ, ಮೂರು

1 ನವಳ (ದ, ಗ)

ರಜತಾಜೂಟನುಮಾಸಮೇತನಸಿತಗ್ರೀವಂ ತ್ರಿನೇತ್ರಂ ಮಹಾ
ಭುಜಗಾಕಲ್ಪನಿಭಾಜಿನಾಂಬರಧರಂ ಪ್ರತ್ಯಕ್ಷನಾದಂ ಶಿವಂ ೧೨೪

ಮೊಳಗಿದುದು ದೇವದುಂದುಭಿ
ವಿಳಸಿತ ಸುರಭೂಜಕುಸುಮವರ್ಷಂ ಭೋರೆಂ
ದಿಳಿದುದು ಪದೆದೇಳ್ತಂದುದು
ಜಳಜಾಕ್ಷಮುಖಾಮರಾಳಿಯುಂ ಗಣತತಿಯುಂ ೧೨೫

ವ॥ ಆಗಳ್—

ತನ್ನ ಮುನ್ನಿನಶ್ರುಮಿಶ್ರಿತಾಂಬಕಂಗಳಂ ಶಿವಂ
ನನ್ನಿ ಕಣ್ಣಪಂಗೆ ಕೊಟ್ಟನೆಂಬ ಮಾತಿದೆಂಬಿನಂ
ಪ್ರೋನ್ನತಪ್ರಭಂ ಸುಖಾಶ್ರುಮಿಶ್ರಲೋಚನದ್ವಯಂ
ಚನ್ನನಪ್ಪಿ ರಂಜಿಸಿರ್ದುದಾಸ್ಯದೊಳ್ಪಳಿಂದನಾ ೧೨೬

ಶಿವನವನ ನಯನಯುಗಳಮ
ನವನಭವನ ನಯನಯುಗಮನೀಕ್ಷಿಪ ಪದದೊಳ್
ನವನಯನದೆ ನಿಜನಯನಮ
ನವಧಾನದೆ ನೋಡುವಂತಿರೇನೊಪ್ಪಿದರೋ ೧೨೭

ಹರನಿತ್ತ ಲೋಚನದಿನಾ
ಹರಮೂರ್ತಿಯನೊಲ್ದು ನೋಡುತಡಿದಾವರೆಯೊಳ್
ಪರಮಾನಂದಮನೊಳಕೊಂ
ಡಿರದೆಱಗಿದನತುಳ ಭಕ್ತಿನಿಧಿ ಕಣ್ಣಪ್ಪಂ ೧೨೮

ನೇತ್ರಗಳುಳ್ಳ, ದೊಡ್ಡ ಹಾವುಗಳೇ ಆಭರಣವಾಗುಳ್ಳ, ಆನೆಯ ಚರ್ಮದ ವಸ್ತ್ರವನ್ನು ಧರಿಸಿರುವ ಶಿವನು ತನ್ನ ಕರಕಮಲಗಳನ್ನು ಚಾಚಿ ಆ ಕಣ್ಣಪ್ಪನ ಕೈಯನ್ನು ಹಿಡಿದು ಪ್ರೀತಿಯಿಂದ ಪ್ರತ್ಯಕ್ಷನಾದನು. ೧೨೫. ದೇವ ದುಂದುಭಿಗಳು ಮೊಳಗಿದವು ; ಪ್ರಕಾಶಿಸುವ ಕಲ್ಪವೃಕ್ಷದ ಹೂಮಳೆಯು ಭೋರ್ ಎಂದು ಸುರಿಯಿತು. ವಿಷ್ಣು ಮೊದಲಾದ ದೇವತೆಗಳ ಸಮೂಹವೂ, ಶಿವಗಣ ಸಮೂಹವೂ ಪ್ರೀತಿಯಿಂದ ಹೊರಟು ಬಂದಿತು. ವ॥ ಆಗ, ೧೨೬. ಶಿವನು ತನ್ನ ಮೊದಲಿನ ಕಣ್ಣೀರಿನಿಂದ ಕೂಡಿದ ಕಣ್ಣುಗಳನ್ನು ಕಣ್ಣಪ್ಪನಿಗೆ ಕೊಟ್ಟನೆಂಬ ಈ ಮಾತು ನಿಶ್ಚಯ ಎನ್ನುವಂತೆ ಬೇಡನಾದ ಆ ಕಣ್ಣಪ್ಪನ ಮುಖದಲ್ಲಿ ಅಧಿಕ ಕಾಂತಿಯಿಂದ ಕೂಡಿದ ಸಂತೋಷ ಬಾಷ್ಪಗಳಿಂದ ಕೂಡಿದ ಕಣ್ಣುಗಳೆರಡು ತನ್ನನ್ನು ಅಪ್ಪಿಕೊಂಡು ರಂಜಿಸಿದುವು. ೧೨೭. ಶಿವನು ಆ ಕಣ್ಣಪ್ಪನ ಎರಡು ಕಣ್ಣುಗಳನ್ನು, ಕಣ್ಣಪ್ಪನು ಆ ಶಿವನ ಎರಡು ಕಣ್ಣುಗಳನ್ನು ನೋಡುವ ಸಮಯದಲ್ಲಿ, ಹೊಸ ಕಣ್ಣಿನಿಂದ ತಮ್ಮ ತಮ್ಮ ಮೊದಲ ಕಣ್ಣನ್ನು ಜಾಗರೂಕತೆಯಿಂದ ನೋಡುವ ರೀತಿಯಲ್ಲಿ ಇರಲು ಅದೇನು ಒಪ್ಪಿತ್ತೋ! ೧೨೮. ಅಸದೃಶ ಭಕ್ತಿ ನಿಧಿಯಾದ ಕಣ್ಣಪ್ಪನು ಹರನು ಕೊಟ್ಟ ಕಣ್ಣಿನಿಂದಲೇ, ಆ ಶಿವನ ದೇಹವನ್ನು ಪ್ರೀತಿಯಿಂದ ನೋಡುತ್ತ ಪರಮಾನಂದದಿಂದ ಕೂಡಿದವನಾಗಿ ಪಾದಕಮಲದಲ್ಲಿ

ಕರುಣಾರಸಮಕ್ಷಿಯೊಳೊಸ
ರ್ದಿರೆ ಶಂಕಾತಂಕ ಶಂಕರಂ ನೋಡಿದನಾ
ವರಭಕ್ತನನಾ ಭಕ್ತಂ
ಸುರಿವ ಸುಖಾಶ್ರುಗಳ ಭರದಿನೀಕ್ಷಿಸುತಿರ್ದಂ ೧೨೯

ನಿಮಿರ್ದಮರ್ದು ಪೊಳೆವ ನವನಯ
ನಮಯೂಖಾಮೃತಮರೀಚಿರುಚಿ ಪಸರಿಸಿ ಸಂ
ಕ್ರಮಿಸಿ ಮುಗಿದರುಣ ಸರಸಿರು
ಹಮಿದೆನೆ ಮುಗಿದಳಿಕನಯನಮೆಸೆದುದು ಶಿವನಾ ೧೩೦

ಶಿವನವನಿತ್ತಕ್ಷಿಗಳಂ
ಜವದಿಂದವನಾಸ್ಯಮೆಂಬ ನವಮುಕುರದೊಳು
ತ್ಸವದಿಂದೀಕ್ಷಿಸೆ ಮಾರ್ಪೊಳೆ
ವವೊಲೊಪ್ಪಿದುದಾ ಪುಳಿಂದನೀಕ್ಷಣಯುಗಳಂ ೧೩೧

ಸ್ಮರಕಾಲಾಭ್ರಪುರಾಧ್ವರಾಂಬುಜಭವಾಂಡವ್ರಾತಮಂ ಸುಟ್ಟ ನಿ
ಷ್ಠುರ ತೇಜಸ್ವಿ ಲಲಾಟನೇತ್ರಮುದು ಕಾರುಣ್ಯಾರ್ದ್ರ ಕಣ್ಣಪ್ಪ ಭಾ
ಸುರನೇತ್ರದ್ವಯದೊತ್ತಿನೊಳ್ನೆಲಸಿ ತಾನುಂ ಶಾಂತಿವೆತ್ತೋಜೆಯಿಂ
ದಿರದೇಂ ಪೋಕುಮೆ ಭರ್ಗನುಗ್ರನೆನಿಪಾಖ್ಯಾನಕ್ಕೆ ಪಕ್ಕಪ್ಪನೇ ೧೩೨

ತಪ್ಪದೆ ನಮಸ್ಕರಿಸಿದನು. ೧೨೯. ಕಣ್ಣಿನಲ್ಲಿ ಕರುಣಾರಸವು ಒಸರಿರಲು, ಶಂಕೆ ಮತ್ತು ಆತಂಕಗಳಿಂದ ಇವುಗಳಿಂದ ಕೂಡಿದ ಈಶ್ವರನು ಆ ಶ್ರೇಷ್ಠ ಭಕ್ತನಾದ ಕಣ್ಣಪ್ಪನನ್ನು ನೋಡಿದನು. ಆ ಭಕ್ತನೂ ಕೂಡ ಸುರಿಸುತ್ತಿರುವ ಆನಂದಬಾಷ್ಪಗಳ ಆಧಿಕ್ಯದಿಂದ ನೋಡುತ್ತಿದ್ದನು. ೧೩೦. ಉದ್ದವಾಗಿ ಚಾಚಿ ಹೊಳೆಯುತ್ತಿರುವ ನೂತನವಾದ ಕಣ್ಣಿನ ಕಾಂತಿಯೆಂಬ ಬೆಳದಿಂಗಳು (ಎಲ್ಲ ಕಡೆಗೂ) ಹರಡಿ ಕೊಡಿಕೊಂಡಿರಲು, ಇದು ಮೊಗ್ಗುಗೊಂಡ ಕೆಂದಾವರೆಯೋ ಎನ್ನುವ ಹಾಗೆ ಶಿವನ ಮುಚ್ಚಿದ ಹಣೆಗಣ್ಣು ಶೋಭಿಸಿತು. ೧೩೧. ಶಿವನು ಆ ಬೇಡನಿತ್ತ ಕಣ್ಣುಗಳನ್ನು ತೀವ್ರವಾಗಿ ಆ ಬೇಡನ ಮುಖವೆಂಬ ಹೊಸ ಕನ್ನಡಿಯಲ್ಲಿ ಸಂತೋಷಗೊಂಡು ನೋಡಲಾಗಿ ಪ್ರತಿಬಿಂಬಿಸಿದ ಹಾಗೆ ಆ ಬೇಡನ ನೇತ್ರದ್ವಯವು ಶೋಭಿಸಿತು. ೧೩೨. ಮನ್ಮಥ, ಯಮ, ತ್ರಿಪುರ (ಆಕಾಶದಲ್ಲಿದ್ದ ಮೂರು ಪಟ್ಟಣ), ಬ್ರಹ್ಮಾಂಡ–ಇವುಗಳ ಸಮೂಹವನ್ನು ಸುಟ್ಟ ಆ ನಿಷ್ಠುರ ತೇಜಸ್ಸಿನ ಹಣೆಗಣ್ಣು, ದಯಾರಸದಿಂದ ನೆನೆದ ಕಣ್ಣಪ್ಪನ ಮನೋಹರವಾದ ಎರಡು ಕಣ್ಣುಗಳ ಬಳಿಯಲ್ಲಿ, ತಾನೂ ನೆಲಸಿ, ಕಾಂತಿಯಿಂದ ಕೂಡಿ, ಕ್ರಮದಿಂದ ಇರದೆ ಹೋಗುವುದೇ ? ಶಿವನು ಮನ್ಮಥ, ಯಮಾದಿಗಳನ್ನು ನಾಶ

ಕಣ್ಣಪ್ಪಂಗೆ ಮಹೇಶಂ
ಕಣ್ಣಪ್ಪಂ ತನ್ನಿರೀಕ್ಷಣಾಸ್ಪದನೆಂದುಂ
ಕಣ್ಣಪ್ಪಂ ಶಶಿಮೌಲಿಗೆ
ಕಣ್ಣಪ್ಪಂ ತನ್ನಿರೀಕ್ಷಣಾಸ್ಪದನನಿಶಂ ೧೩೩

ವ॥ ಇಂತು ಶಂಕರ ಪ್ರಸನ್ನತೆಯುಂ ಪಡೆದೊಪ್ಪುವ ತದ್ಭಕ್ತನ ಮಹತ್ವಮನಾ ಭೂಸುರಂ ಕಂಡು—

ನಡನಡನೆ ನಡುಗಿ ಭಯದಿಂ
ಪಿಡಿದಸಿಯಂ ಬಿಸುಟು ಕಣ್ಣಪಯ್ಯನ ಕೆಪ್ಪಾರಿಂ
ತಡಿದಾವರೆಗೆಜಗುತೆ ಕಿ
ತ್ತಡಿ ಕೀರ್ತಿಸಿದಂ ಸವಿಸ್ಮಯಸ್ಮಿತವದನಂ ೧೩೪

ಕರುಣಾನಿಧಿ ಕಲಿಮಲಹರ
ಪರಮ ಗುಣಾಭರಣ ಪಾವನಾಂಗ ಮಹಾಶಂ
ಕರ ಭಕ್ತಿಲೋಲ ಮಹಿಮಾ
ಕರ ಕರುಣಿಪುದೆಂದುಃ ಪೊಗಳ್ದು ಮಗುಳ್ದಿಂತೆಂದಂ ೧೩೫

ಹರಕೋಟೀರದ ಚಂದ್ರಮಂಗಮರ್ದಗಂಗಾದೇವಿಗಾದತ್ತು ಭಾ
ಸುರ ಸಂಧ್ಯಾರುಣರೋಚಿ ಬೈತಲೆಯ ಸಿಂಧೂರಂ ಭವತ್ಪಾದುಕಾ

ಮಾಡಿದವನು, ಉಗ್ರನು ಎನ್ನುವ ಕಥೆಗೆ ಆಸ್ಪದನಾಗುವನೇ ? ೧೩೩. ಮಹೇಶ್ವರನು ಕಣ್ಣಪ್ಪನಿಗೆ, ಅವನ ನೋಟಕ್ಕೆ ಆಶ್ರಯನಾಗಿ ಎಂದೂ ನೇತ್ರ ಸ್ವರೂಪನೇ ಆದನು. ಕಣ್ಣಪ್ಪನು ಈಶ್ವರನಿಗೆ ಅವನ ನೋಟಕ್ಕೆ ಆಶ್ರಯನಾಗಿ ಕಣ್ಣೇ ಆದನು. ವ॥ ಈ ರೀತಿ ಶಂಕರನ ಪ್ರಸನ್ನತೆಯನ್ನು ಪಡೆದು ಶೋಭಿಸುತ್ತಿರುವ ಆ ಕಣ್ಣಪ್ಪನ ಮಹತ್ವವನ್ನು ಆ ಲಿಂಗದ ಹಿಂದುಗಡೆಯಲ್ಲಿ ಅಡಗಿದ್ದ ಬ್ರಾಹ್ಮಣ ಶ್ರೇಷ್ಠನು ಕಂಡು—೧೩೪. ತಪಸ್ವಿಯಾದ ಆ ಬ್ರಾಹ್ಮಣನು ಭಯದಿಂದ ಗಡಗಡ ನಡುಗುತ್ತ, ಕೈಯಲ್ಲಿ ಹಿಡಿದ ಕತ್ತಿಯನ್ನು ಬಿಸಾಡಿ, ಕಣ್ಣಪಯ್ಯನ ಕೆರದಿಂದ ಕೂಡಿದ ಪಾದಕಮಲಕ್ಕೆ ನಮಸ್ಕಾರ ಮಾಡುತ್ತ ಆಶ್ಚರ್ಯಯುಕ್ತವಾದ ಮುಗುಳು ನಗೆಯಿಂದ ಕೂಡಿದ ಮುಖವುಳ್ಳವನಾಗಿ, ಹೊಗಳಿದನು. ೧೩೫. ಕರುಣಾನಿಧಿಯೇ, ಕಲಿಕಾಲದ ಪಾಪವನ್ನು ನಾಶ ಮಾಡುವ ಶ್ರೇಷ್ಠ ಗುಣಗಳೇ ಆಭರಣವಾಗಿ ಉಳ್ಳವನೇ, ಪರಿಶುದ್ಧವಾದ ದೇಹವುಳ್ಳವನೇ, ಶ್ರೇಷ್ಠನಾದ ಶಂಕರ ಭಕ್ತಿಯಲ್ಲಿ ಆಸಕ್ತನಾದವನೇ, ಮಹಿಮಾಕರನೇ, ಕರುಣಿಸಬೇಕು ಎನ್ನುತ್ತ ಪುನಃ ಪುನಃ ಈ ರೀತಿ ಹೊಗಳಿದನು. ೧೩೬. ಬೇಡರಿಗೆ ಅಧಿಪತಿಯಾದವನೇ, ನಿನ್ನ ಪಾದರಕ್ಷೆಯೆಂಬ ಆಭರಣದ ಕಾಂತಿಯುತವಾದ ಚರಣಕಮಲದ ಧೂಳಿಯು ಈಶ್ವರನ ಕಿರೀಟದಲ್ಲಿರುವ ಚಂದ್ರಮನಿಗೆ, ಮನೋಹರವಾದ ಸಂಧ್ಯಾಕಾಲದಲ್ಲುಂಟಾಗುವ ಕೆಂಪು ಬಣ್ಣದ ರೂಪವಾದದ್ದು ; ಶಿರಸ್ಸಿನಲ್ಲಿ ಸೇರಿರುವ ಗಂಗಾದೇವಿಗೆ

ಭರಣ ಶ್ರೀಪದಪದ್ಮಪಾಂಶು ನಖಜಾಲಂ ತಾರಕಾಪಾಳಿ ಭಾ
ಸುರ ಸೀಮಂತದ ಮೌಕ್ತಿಕಾವಳಿಯಲಂಕಾರಂ ಕಿರಾತೇಶ್ವರಾ ೧೩೬

ಮೃಡನ ಜಡೆಮುಡಿಯ ಶಶಿ ನಿ
ನ್ನಡಿಗೆರ್ಪಿನ ಸೋಂಕಿನಿಂ ಜಗದ್ವಂದಿತಮಾ
ಯ್ತೊಡನೆಸೆವ ಗಂಗೆಯುಂ ಮೇ
ಣ್ಪಡೆದತ್ತು ಪವಿತ್ರಭಾವಮಂ ಶುಭಚರಿತಾ ೧೩೭

ಸಕಳಾಮ್ನಾಯ ಶಿರಸ್ಸ್ತುಗಿ ತಪಾದಂ ಶಂಕರಂ ತನ್ನ ಮ
ಸ್ತಕದೊಳ್ನಿನ್ನಡಿಗೆರ್ಪನಾಂತು ಭುವನಾನೀಕಂಗಳೊಳ್ ಖ್ಯಾತಿವೆ
ತ್ತಕಳಂಕಸ್ಫುಟ ಭಕ್ತವತ್ಸಲತೆಯುಂ ಕೆಯ್ಕೊಂಡನೀ ನಿನ್ನ ಪಾ
ದುಕೆ ತಾನಾಗಿರೆ ಬೊಮ್ಮನೀಶಶಿರಮಂ ಪೇಳ್ಕಾಣದೇಂ ಪೋಕುಮೇ ೧೩೮

ಇದು ಮುಕ್ತಿ ಭಾಮಿನಿಯ ಸ
ಮ್ಮದಕರ ಪರಿಣಯನವಾಂಪ ಸುಕೃತಿಗೆ ಲೀಲಾ
ಸ್ಪದ ಮಸ್ತಕ ಶೇಖರಮೆ
ನ್ನದೆ ಪೆಱತೇನೆಂದಪೆಂ ಭವತ್ಪಾದುಕೆಯುಂ ೧೩೯

ಬೈತಲೆಯ ಸಿಂಧೂರದ ಹುಡಿಯ ರೂಪವಾದದ್ದು—ಆಗಿರುವುದು. ನಿನ್ನ ಉಗುರುಗಳ ಸಮೂಹವು ಹರನ ಶಿರಸ್ಸಿನಲ್ಲಿರುವ ಚಂದ್ರಮನಿಗೆ ನಕ್ಷತ್ರಗಳ ಸಾಲು ಎನಿಸಿರುವುದು ; ಗಂಗಾದೇವಿಗೆ ಬೈತಲೆಯಲ್ಲಿರುವ ಮುತ್ತುಗಳ ಸಾಲಿನ ಆಭರಣವೆನಿಸಿರುವುದು. ೧೩೭. ಮಂಗಳಕರ ಚರಿತ್ರೆಯುಳ್ಳವನೇ, ನಿನ್ನ ಪಾದರಕ್ಷೆಯ ಸೋಂಕಿನಿಂದ ಈಶ್ವರನ ಜಡೆಮುಡಿಯಲ್ಲಿರುವ ಚಂದ್ರರೇಖೆಯು ಲೋಕದಿಂದ ನಮಸ್ಕರಿಸಿಕೊಳ್ಳಲ್ಪಡುವುದಾಯಿತು. ಮತ್ತು ಆ ಚಂದ್ರನೊಡನೆ ಜಡೆಯಲ್ಲಿ ಶೋಭಿಸುವ ಗಂಗೆಯೂ ಪರಿಶುದ್ಧತೆಯನ್ನು ಪಡೆಯಿತು. ೧೩೮. ಸಕಲ ಉಪನಿಷತ್ತುಗಳಲ್ಲೂ ಸ್ತೋತ್ರ ರೂಪದಿಂದ ಪ್ರಖ್ಯಾತವಾದ ಚರಣಗಳುಳ್ಳ ಶಂಕರನು, ತನ್ನ ತಲೆಯ ಮೇಲೆ ನಿನ್ನ ಕೆರದಿಂದ ಕೂಡಿದ ಪಾದವನ್ನು ಧರಿಸಿ, ಸಮಸ್ತ ಲೋಕಗಳಲ್ಲಿ, ಪ್ರಸಿದ್ಧಿಯನ್ನು ಹೊಂದಿ, ನಿರ್ದುಷ್ಟರಾದ ಭಕ್ತರಲ್ಲಿ ವಾತ್ಸಲ್ಯವನ್ನು ಸ್ವೀಕರಿಸಿದನು. ಬ್ರಹ್ಮನು ತಾನು ಈ ನಿನ್ನ ಪಾದುಕೆಯಾಗಿದ್ದರೆ, ಈಶ್ವರನ ಶಿರಸ್ಸನ್ನು ಕಾಣದೇ ಹೋಗುತ್ತಿದ್ದನೇ ? ಹೇಳು. ೧೩೯. ನಿನ್ನ ಪಾದರಕ್ಷೆಯನ್ನು—ಇದು ಮುಕ್ತಿಯೆಂಬ ಸ್ತ್ರೀಯ ಸಂತೋಷವನ್ನುಂಟು ಮಾಡುವ ಮದುವೆಯನ್ನು ಹೊಂದುವ ಪುಣ್ಯಶಾಲಿಗೆ ಲೀಲೆಗೆ ಆಸ್ಪದವಾದ ತಲೆಯ

ಭವದೀಯಾಸ್ಯ ಪವಿತ್ರಸಾರಸಲಿಲಸ್ನಾತಂ ಭವತ್ಪಾದುಕಾ
ಪ್ರವಿರಾಜತ್ಪದಪದ್ಮಪೂಜಿತಶಿರಂ ತ್ವನ್ಮೌಲಿ ನಿರ್ಮಾಲ್ಯ ಪು
ಷ್ಪವಿತಾನಾರ್ಚಿತನತ್ಯಪೂರ್ವಭವದುಚ್ಛಿಷ್ಟೋದನಾದಂ ಸದಾ
ಶಿವತಾಸಂಗತನಬ್ಜಮೌಲಿ ಘನಪುಷ್ಪಾಂಕಂ ಪ್ರಸಾದಾನ್ವಿತಂ ೧೪೦

ಕುವಲಯ ಹಿತಕರನಧಿಗತ
ಭುವನೋನ್ನತಪತ್ರ ಶಿವಸುಖಪ್ರದಪಾದಂ
ಪ್ರವರಶುಚಿಯೆನಿಪ ನಿನ್ನಂ
ಶಿವಂಗೆ ಕಣ್ಣಪ್ಪನೆನ್ನದಿರ್ಪರೆ ವಿಬುಧರ್ ೧೪೧

ಕಿರೀಟವೆಂದೆನ್ನದೆ ಬೇರೆ ಏನೆಂದು ಹೇಳಲಿ ? ೧೪೦. ನಿನ್ನ ಬಾಯಿಯ ಪರಿಶುದ್ಧವಾದ ನೀರಿನ ಅಭಿಷೇಕವನ್ನು ಹೊಂದಿದ ಶಿವನು ಸದಾ ಶಿವತ್ವದಿಂದ ಅಂದರೆ ಮಂಗಳದಿಂದ ಕೂಡಿದವನೆನಿಸಿದನು ; ನಿನ್ನ ಪಾದುಕೆಗಳುಳ್ಳ ಪವಿತ್ರವಾದ ಪಾದಕಮಲಗಳಿಂದ ಪೂಜಿಸಲ್ಪಟ್ಟ ಶಿರಸ್ಸುಳ್ಳ ಶಿವನು ಕಮಲವೇ ಕಿರೀಟದಲ್ಲಿ ಉಳ್ಳವನು ಎನಿಸಿದನು ; ನಿನ್ನ ಶಿರದಲ್ಲಿ ಮುಡಿದ ಹೂವುಗಳ ಸಮೂಹದಿಂದ ಅರ್ಚನೆಗೊಂಡ ಶಿವನು ಶ್ರೇಷ್ಠವಾದ ಹೂವುಗಳೇ ಚಿಹ್ನೆಯಾಗುಳ್ಳವನೆನಿಸಿದನು ; ಅತಿ ನೂತನವಾದ ನಿನ್ನ ಎಂಜಲಿನ ಮಾಂಸಾನ್ನವನ್ನು ತಿಂದ ಶಿವನು ಪ್ರಸಾದದಿಂದ ಕೂಡಿದವನೆನಿಸಿದನು. [ಇಲ್ಲಿ ಶಿವನು ಮಂಗಳ ಸ್ವರೂಪನು, ವಿಷ್ಣುವಿನಿಂದ ಕಮಲ ಪುಷ್ಪಗಳ ಪೂಜೆಗೊಂಡನು, ಅಬ್ಜಮೌಲಿ ಎಂದರೆ ಚಂದ್ರಮೌಲಿ ಎಂದು ಇನ್ನೊಂದರ್ಥವನ್ನೂ ಮಾಡಬಹುದು ; ಘನಪುಷ್ಪಾಂಕಂ ನೀರನ್ನು ಚಿಹ್ನೆಯಾಗುಳ್ಳವನು ಎಂದರೆ ಗಂಗಾಧರ ಎಂದು ಮತ್ತೊಂದರ್ಥ ಮಾಡಬಹುದು. ಮಾಂಸಾನ್ನವನ್ನು ಭುಂಜಿಸಿ ನಿರ್ಮಲತ್ವದಿಂದ ಕೂಡಿದವನು ಹೀಗೆಯೂ ಹೇಳಬಹುದು.] ೧೪೧. ನಿನ್ನನ್ನು ವಿದ್ವಾಂಸರು ಶಿವನಿಗೆ ಕಣ್ ಅಪ್ಪವನು ಎನ್ನದೆ ಇರುವರೇ ? (ಏಕೆಂದರೆ ಮೂರು ಕಣ್ಣುಳ್ಳ ಶಿವನ) ಚಂದ್ರನೇತ್ರವು–ನೈದಿಲೆಗಳಿಗೆ ಹಿತವನ್ನುಂಟುಮಾಡುವುದು ; ಕಣ್ಣಪ್ಪನು ಕುವಲಯಕ್ಕೆ ಅಂದರೆ ಭೂವಲಯಕ್ಕೆ ಹಿತವನ್ನುಂಟುಮಾಡುವವನು ಸೂರ್ಯನೇತ್ರವು–ಜಲದಲ್ಲಿ ಹುಟ್ಟಿದ (ಅಧಿಗತಭುವನ), ಉದ್ದವಾದ ದಳಗಳುಳ್ಳ ಕಮಲಗಳಿಗೆ ಮಂಗಳಕರಗಳಾದ ಸುಖವನ್ನುಂಟುಮಾಡುವ ಕಿರಣಗಳುಳ್ಳದ್ದು : ಕಣ್ಣಪ್ಪನು ಅಧಿಗತವಾದ ಭೂಮಂಡಲಕ್ಕೆ ದೊಡ್ಡವನಾದ ವೃಷಭೇಶ್ವರನೇ ವಾಹನ (ಪತ್ರ)ವಾಗಿ ಉಳ್ಳ ಈಶ್ವರನಿಗೆ ಸೌಖ್ಯವನ್ನುಂಟುಮಾಡುವ ಚರಣವುಳ್ಳವನು. ಅಗ್ನಿನೇತ್ರವು–ಅತ್ಯಂತ ಶ್ರೇಷ್ಠವಾದ ಶುಚಿಯುಳ್ಳದ್ದು ; ಕಣ್ಣಪ್ಪನು ಅತ್ಯಂತ ಶ್ರೇಷ್ಠವಾದ (ಭಕ್ತಿಯಿಂದ) ಪರಿಶುದ್ಧನು. [ಈ ಕಾರಣದಿಂದ ವಿದ್ವಾಂಸರು ಶಿವನಿಗೆ ಕಣ್ಅಪ್ಪಂ (ಕಣ್ಣಪ್ಪಂ) ಎನ್ನದೆ ಇರುತ್ತಾರೆಯೆ ? ಎಂದು ಭಾವ]. [ಕು + ವಲಯ–ಭೂಮಂಡಲ, ಕುವಲಯ–ಕನ್ನೈದಿಲೆ ; ಭುವನ + ಉನ್ನತ + ಪತ್ರ–ಭೂಮಿಯಲ್ಲಿ ಉನ್ನತವಾದ ವಾಹನ ಅಂದರೆ ವೃಷಭ ಎಂದು ಭಾವ ; ಭುವನ +

ಚಕ್ರಮನರ್ಥಿಸಿ ಹರಿ ಗಿರಿ
ಶಕ್ರಮುಕರ್ಪಿಸಿದನಲ್ತೆ ಕಣ್ಣಂ ಭಾಸ್ವ
ದ್ವಿಕ್ರಮ ಶಿವನಕ್ಷಿಯುಗಕೆ
ಸಕ್ರಮಮರ್ಥಿಸದೆ ನಿನ್ನ ಕಣ್ಗಳನಿತ್ತೈ ೧೪೨

ಖಲರ ಕೆಳೆತನದೆ ಸುಜನರ
ಕಲಹಂ ಲೇಸೆಂಬ ವಾಣಿ ಸತ್ಯಂ ನಿನ್ನಂ
ಕೊಲಲೆಳಸಿ ಬಂದು ಶಿವನು
ಜ್ವಲ ಪದಮಂ ಕಂಡೆನಯ್ಯ ನಿನ್ನಯ ಕೃಪೆಯಿಂ ೧೪೩

ಆವಾಗಮ ನಿಗಮದೆ ಸಂ
ಭಾವಿತಮಿದು ಭರ್ಗನೊಲ್ಮೆ ನಿನ್ನಯ ಚರಿತಂ
ದೇವನ ಮಹಿಮೆಯ ಭಕ್ತರ
ಭಾವಮನವರಿರ್ವರಲ್ಲದುಳಿದವರಱಿಯರ್ ೧೪೪

ಪಿತನಂ ಕೊಲ್ವುದುಮಾತ್ಮಜಾತನ ಸುಹಿಂಸಾಕೃತ್ಯಮುಂ ಶೇಷಮಂ
ಶಿತಿಕಂಠಂಗುಣಲೀವುದುಂ ಪಣವಧೂಗೇಹಕ್ಕೆ ದೂದಟ್ಟುವಾ
ಯತಿಯುಂ ಶಂಭುವನಂಬಿಕಾಪತಿಗೆ ನೀಂ ಮಾಂಸಾರ್ಪಣಂ ಗೆಯ್ವುದುಂ
ಕ್ಷಿತಿಯೊಳ್ನೋಳ್ಪೊಡಿದಾವ ವೇದವಿಹಿತಂ ಮೇಣಾವ ಶಾಸ್ತ್ರಕ್ರಮಂ ೧೪೫

ಉನ್ನತ + ಪತ್ರ–ನೀರಿನಲ್ಲಿ ಹುಟ್ಟಿದ ಉದ್ದವಾದ ದಳಗಳುಳ್ಳ ಕಮಲ ; ಶಿವ–ಮಂಗಳ, ಈಶ್ವರ ;] ೧೪೨. ವಿಷ್ಣುವು ಚಕ್ರಾಯುಧವನ್ನು ಬೇಡಿ ಕಣ್ಣನ್ನು ಶಿವನ ಪಾದಕ್ಕೆ ಅರ್ಪಿಸಿದನಲ್ಲವೇ ? ಪ್ರಕಾಶಿಸುವ ಪರಾಕ್ರಮವುಳ್ಳ ಕಣ್ಣಪ್ಪನೇ, (ನೀನಾದರೋ) ಏನನ್ನೂ ಬೇಡದೆ ಶಿವನ ಎರಡು ಕಣ್ಣುಗಳಿಗೆ ಕ್ರಮಯುಕ್ತವಾಗಿ ನಿನ್ನ ಕಣ್ಣುಗಳನ್ನು ಕೊಟ್ಟೆಯಲ್ಲವೇ ? ೧೪೩. 'ನೀಚರಾದವರ ಮಿತ್ರತ್ವಕ್ಕಿಂತಲೂ ಸುಜನರಾದವರ ಕಲಹವೇ ಲೇಸು.' ಎಂಬ ಮಾತು ಸತ್ಯವಾದುದು ; ನಿನ್ನನ್ನು ಕೊಲ್ಲುವುದಕ್ಕೋಸ್ಕರ ಅಪೇಕ್ಷೆಪಟ್ಟು ಬಂದು ಅಯ್ಯಾ, ನಿನ್ನ ಕೃಪೆಯಿಂದಲೇ ಶಿವನ ಪ್ರಕಾಶಿಸುವ ಪಾದವನ್ನು ಕಂಡೆನು. ೧೪೪. ಶಿವನ ಈ ಪ್ರೀತಿಯೂ ನಿನ್ನ ಚರಿತ್ರೆಯೂ ಯಾವ ಆಗಮ ವೇದಗಳಲ್ಲಿ ಪ್ರತಿಪಾದಿಸಲ್ಪಟ್ಟೀತು ? ದೇವನ ಮಹತ್ವವನ್ನೂ ಭಕ್ತರ ಮನಸ್ಸನ್ನೂ, ಆ ಶಿವ ಮತ್ತು ಆ ಭಕ್ತರು ಅಲ್ಲದೆ ಉಳಿದವರು ತಿಳಿಯರು. ೧೪೫. ತಂದೆಯನ್ನು ಕೊಲ್ಲುವುದು, ಮಗನನ್ನು ಹಿಂಸೆ ಮಾಡುವ ಕಾರ್ಯವು, ಉಂಡು ಮಿಕ್ಕಿದನ್ನು ಈಶ್ವರ ನಿಗೆ ಉಣ್ಣುವುದಕ್ಕೆ ಕೊಡುವುದು, ಶಂಭುವನ್ನು ಸೂಳೆಯರ ಮನೆಗೆ ದೂತನ ಕಾರ್ಯಕ್ಕೆ ಕಳುಹಿಸುವ ರೀತಿ, ನೀನು ಅಂಬಿಕಾಪತಿಗೆ ಮಾಂಸಾರ್ಪಣೆ ಮಾಡುವುದು–ಭೂಮಿಯಲ್ಲಿ ವಿಚಾರ ಮಾಡಿ ನೋಡಿದರೆ ಇದು ಯಾವ ವೇದದಲ್ಲಿ ಹೇಳಲ್ಪಟ್ಟದ್ದು ? ಮತ್ತು ಯಾವ

ನಿನ್ನನ್ನರಪ್ಪ ಶರಣರ
ಸನ್ನುತನವಚರಿತಮಪ್ರಮೇಯಮತರ್ಕ್ಯಂ
ನನ್ನಿ ಕೃತಾಗಸ್ಕನನೊ
ಲ್ದೆನ್ನಂ ಪೊರೆಯೆಂದು ಪೊಗಳ್ದು ಮಗುಳ್ದೆಱಗಿರ್ದಂ ೧೪೬

ವ॥ ಅಂತೆಱಗಿರ್ದ ಧರಾಮರೇಂದ್ರನಂ ಕರುಣಾರ್ದ್ರಕಟಾಕ್ಷದಿನಡರೆ[1] ನೋಡಿ ಶಿವ ಪ್ರಸಾದ ಭಾಜನನಂ ಮಾಡಿ ತಾನುಮಾ ಶಿವನೊಳವಿನಾಭಾವಂಬಡೆದು ನಿರಂತರ ಪರಮಾನಂದ ನಿರ್ಭರನಾಗಿ ರಂಜಿಸಿರ್ದನಾ ಪರಮಶಿವಂ ನಿಜಲಿಂಗದೊಳಂತರ್ಗತನಾಗಿರ್ದನನಂತರಂ—

ಹರದೃಷ್ಟಿಯೊಡನೆ ತನ್ನಯ
ವರದೃಷ್ಟಿ ತಗುಳ್ವಿನಾನೆ ಕಣ್ಣಪ್ಪಂ ಭಾ
ಸುರಲಿಂಗದ ಕಟ್ಟಿದಿರೊಳ್
ನಿರಂತರಂ ಭುವನಮಱಿಯೆ ಮೆಱೆದೆಪನಲ್ತೇ ೧೪೭

ಬಗೆಗೊಂಡೀಗಳುಮಲ್ಲಿ ಪೂಜಕಜನೌಘಂ ಕಾಳಹಸ್ತೀಶ್ವರಂ
ಗೆ ಗುಣಾಲಂಕೃತ ಕಣ್ಣಪಯ್ಯನ ಮುಖಾಂಭೋಜಾತಗಂಡೂಪವಾ
ರಿಗಳಿಂ ಮಜ್ಜನಮಂ ತದೀಯ ಕಚನಿರ್ಮಾಲ್ಯಂಗಳಿಂ ಪೂಜೆಯುಂ
ಮಿಗೆ ಮಾಳ್ಕುಂ ಶಿವನೊಲ್ಲನೂಟಮನವಂ ಕೊಂಡಲ್ಲದಾಹಾರಮುಂ ೧೪೮

ಶಾಸ್ತ್ರ ಕ್ರಮ? ೧೪೬. ನಿನಗೆ ಸದೃಶರಾದಂಥವರ ಶ್ಲಾಘ್ಯವಾದ ನೂತನ ಚರಿತ್ರೆಯು, ಗಣನಾತೀತವಾದದ್ದು (ಎಣೆಯಿಲ್ಲದುದು) ; ಊಹಿಸಲಸಾಧ್ಯವಾದದ್ದು ; ಸತ್ಯವಾಗಿ ಅಪರಾಧವನ್ನು ಮಾಡಿದವನಾದ ನನ್ನನ್ನು ಪ್ರೀತಿಯಿಂದ ರಕ್ಷಿಸು—ಎಂದು ಹೊಗಳುತ್ತ ಪುನಃ ನಮಸ್ಕಾರ ಮಾಡಿ ಇದ್ದನು. ವ॥ ಆ ರೀತಿ ನಮಸ್ಕರಿಸಿದ ಶ್ರೇಷ್ಠನಾದ ಬ್ರಾಹ್ಮಣನನ್ನು ಕರುಣಾರ್ದ್ರವಾದ ಕಡೆಗಣ್ಣುಗಳಿಂದ ದಿಟ್ಟಿಸಿ ನೋಡಿ, (ಆ ಬ್ರಾಹ್ಮಣ ನನ್ನು) ಶಿವಾನುಗ್ರಹಕ್ಕೆ ಪಾತ್ರನಾದವನನ್ನಾಗಿ ಮಾಡಿ, ತಾನು ಆ ಶಿವನೊಡನೆ ಅವಿನಾ ಭಾವ ಸಂಬಂಧವನ್ನು (ಅಂದರೆ ಒಬ್ಬರನ್ನು ಬಿಟ್ಟು ಇನ್ನೊಬ್ಬರಿಲ್ಲದಂತಿರುವ ಸಂಬಂಧ ವನ್ನು) ಪಡೆದು, ಶಾಶ್ವತವೂ, ಉತ್ಕೃಷ್ಟವೂ ಆದ ಸಂತೋಷದ ಆಧಿಕ್ಯವುಳ್ಳವನಾಗಿ ಪ್ರಕಾಶಿಸುತ್ತ ಇದ್ದನು. ಆ ಪರಶಿವನು ತನ್ನ ಶಿವಲಿಂಗದಲ್ಲಿ ಅಂತರ್ಗತನಾಗಿ ಇದ್ದನು. ಅನಂತರ— ೧೪೭. ಹರನ ದೃಷ್ಟಿಯೊಡನೆ ತನ್ನ ಶ್ರೇಷ್ಠ ದೃಷ್ಟಿಯು ಸಂಬಂಧವಾಗಿರು ವಿಕೆಯನ್ನು ಹೊಂದಿದ ಕಣ್ಣಪ್ಪನು ಪ್ರಕಾಶಮಾನವಾದ ಲಿಂಗದ ನೇರ ಎದುರಿನಲ್ಲಿ ನಿರಂತರವೂ ಲೋಕವೆಲ್ಲ ತಿಳಿಯುತ್ತಿರುವಂತೆ ಮೆರೆದನಲ್ಲವೆ ! ೧೪೮. ಈಗಲೂ ಆ ಕಾಳಹಸ್ತಿಯಲ್ಲಿ ಮನೋಹರವಾಗಿ ಪೂಜೆ ಮಾಡುವ ಜನ ಸಮೂಹವು ಆ ಕಾಳ ಹಸ್ತೀಶ್ವರನಿಗೆ ಕಮಲದಂತಿರುವ ಮುಖದಿಂದ ಮುಕ್ಕುಳಿಸಿದ ನೀರಿನಿಂದ ಅಭಿಷೇಕ ವನ್ನು, ಅವನ ಕೇಶದಲ್ಲಿ ಮುಡಿದಿದ್ದ ಹೂವುಗಳಿಂದ ಚೆನ್ನಾಗಿ ಪೂಜೆಯನ್ನು ಮಾಡು

1 ೦ (ಗ)

ಎಂದಿಂತು ಭಕ್ತಸಮುದಯ
ಮಂದಾರಂ ಬಸವನೊರೆಯೆ ಕಣ್ಣಪ್ಪನ ಚ
ಲ್ವೊಂದಿದ ಕಥೆಯುಂ ಕೇಳ್ದಾ
ನಂದಂಬೆತ್ತೆಸೆದುದಲ್ಲಿ ಶರಣಸಮಾಜಂ ೧೪೯

ದೀಪದ ಕಲಿಯಾರ ಕಥಾ
ಳಾಪಮನೋದಿದೊಡೆ ಭಕ್ತಿಯಿಂ ಕೇಳ್ದೊಡೆ ಸ
ರ್ವಾಪತ್ಕುಳಮಳಿಗುಂ ಚಿ
ದ್ರೂಪ ಶಿವಜ್ಞಾನಸಿದ್ಧಿಯಪ್ಪುದಮೋಘಂ ೧೫೦

ಚಿತ್ತೋತ್ಸವದಿಂ ನಾಟ್ಯನ
ಮಿತ್ತಂಡಿಯ ಕಥೆಯನೋದಿದರ್ಗಾಲಿಸಿದ
ರ್ಗೆತ್ತಣದು ಜನನ ರುಜೆ ಬಳಿ
ಕ್ಕೆತ್ತಣದಳಿವೆನೆ ಶಿವಾಧವಂ ದಯೆಗೆಯ್ವಂ ೧೫೧

ಕಣ್ಣಪ್ಪನ ಕಥೆಯನಿದಂ
ಬಣ್ಣಿಸಿ ಬರೆದೋದೆ ಕೇಳೆ ಸುಜನವಿರ್ಗೆ ಮು
ಕ್ಕಣ್ಣನೊಸೆದವರ್ಗೆ ಕೊಡುವಂ
ತಣ್ಣನೆ ತಣಿವಂತೆ ಸೌಖ್ಯಸಾರಾಮೃತಮಂ ೧೫೨

ವರು. ಆ ಕಣ್ಣಪ್ಪನು ಆಹಾರವನ್ನು ಸ್ವೀಕರಿಸಿದ ಹೊರತು ಶಿವನು ಊಟವನ್ನು ಒಲ್ಲನು ೧೪೯. ಎಂದು ಈ ರೀತಿಯ ಭಕ್ತರ ಸಮೂಹಕ್ಕೆ ಕಲ್ಪವೃಕ್ಷನಾದ ಬಸವಣ್ಣನು ಕಣ್ಣಪ್ಪನ ಕಥೆಯನ್ನು ಈ ಪ್ರಕಾರವಾಗಿ ಹೇಳಲು ಆ ಸಭೆಯಲ್ಲಿ ಶರಣರ ಸಮೂಹವು ಕಣ್ಣಪ್ಪನ ಚೆಲುವಾದ ಕಥೆಯನ್ನು ಕೇಳಿ, ಆನಂದಗೊಂಡು ಶೋಭಿಸುತ್ತಿತ್ತು. ೧೫೦. ದೀಪದ ಕಲಿಯಾರನ ಕಥೆಯ ವಿವರವನ್ನು ಭಕ್ತಿಯಿಂದ ಓದಿದರೆ, ಕೇಳಿದರೆ, ಸಮಸ್ತ ಆಪತ್ತುಗಳ ಸಮೂಹವು ನಾಶವಾಗುವುದು; ಅಮೋಘವಾದ (ವ್ಯರ್ಥವಾಗದ) ಪ್ರಕಾಶರೂಪನಾದ ಪರಶಿವ ಸಂಬಂಧದ ಜ್ಞಾನದ ಪ್ರಾಪ್ತಿಯುಂಟಾಗುವುದು. ೧೫೧. ನಾಟ್ಯನಮಿತ್ತಂಡಿಯ ಕಥೆಯನ್ನು ಚಿತ್ತೋತ್ಸವದಿಂದ ಓದಿದವರಿಗೆ, ಕೇಳಿದವರಿಗೆ ಹುಟ್ಟುವಿಕೆಯೆಂಬ ರೋಗವು ಎತ್ತಣದು ? ಬಳಿಕ ನಾಶವೆಂಬುದು ಎಲ್ಲಿಯದು ? ಎನ್ನುವಂತೆ ಪಾರ್ವತೀ ಪತಿಯು ದಯೆದೋರುವನು. ೧೫೨. ಕಣ್ಣಪ್ಪನ ಈ ಕಥೆಯನ್ನು ಸಜ್ಜನರು ಬಣ್ಣಿಸಿ ಪ್ರೀತಿಯಿಂದ ಓದಿದರೆ, ಮುಕ್ಕಣ್ಣನು ಸಂತೋಷಗೊಂಡು ಅವರಿಗೆ ಹೆಚ್ಚಾಗಿ ತಣ್ಣನೆ ತಣಿಯುವ ಹಾಗೆ, ಸೌಖ್ಯವೆಂಬ ಶ್ರೇಷ್ಠ ಮೋಕ್ಷವನ್ನುಂಟು

ಎಂದೀತೋರಂತೆ ಮುಗ್ಧಾಂಬುಜರಿಪುಧರ ಸುಸ್ನಿಗ್ಧಮುಗ್ಧಪ್ರತಾನಾ
ಮಂದೋಪಾಖ್ಯಾನಮಂ ಚನ್ನಬಸವಮುಖಮಾಹೇಶ್ವರವ್ರಾತಕತ್ಯಾ
ನಂದಂ ಮೆಯ್ವೆರ್ಚೆ ಪೇಳುತ್ತೆಸೆದು ಚರಲಸತ್ಪೂಜನಂ ಗೆಯ್ವುತಿರ್ದಂ
ನಂದೀಶಂ ಭಕ್ತಿಕೋಶಂ ಜಗದವನಕಳಾವೀತತಂದ್ರಂ ವೃಷೇಂದ್ರಂ ೧೫೩

ಮೃಗೇಂದ್ರನಿಜವಾಹನೇ ಮೃಡಕೃತೋರುಸಮ್ಮೋಹನೇ
ಖಗೇಂದ್ರರಥಪೂಜಿತೇ ಖಮಣಿಕಾಂತಿವಿಭ್ರಾಜಿತೇ
ನಗೇಂದ್ರವರನಂದನೇ ನತಸುರವ್ರಜಾನಂದನೇ
ಜಗತ್ರಯವಿಧಾಯಿನೀ ಜಯ ಮದಂಬ[1] ಕಾತ್ಯಾಯನೀ ೧೫೪

ಇದು ವಿನಮದಖಿಳ ಸುರಾಸುರೇಂದ್ರಮಕುಟತಟಘಟಿತ ಮಣಿಗಣಾಗಣಿತ ರುಚಿನಿಚಯ
ತರುಣಾರುಣಾತಪಪರಿಲಸಿತ ಪರಮ ಶಿವಲಿಂಗ ಪಾದಾರವಿಂದಪರಾಗಭಸಿತ
ಭಾಸುರಲಲಾಟಪಟ್ಟ ಸರಸಜನಮಾನಿತೋಭಯಕವಿತಾವಿಶಾರದ
ಶ್ರೀ ಷಡಕ್ಷರಿದೇವ ಭಕ್ತಿ ವಿರಚಿತ
ಶ್ರೀಮದ್ ಬಸವರಾಜವಿಜಯಮಹಾಪುರಾಣದೊಳ್
ದೀಪದಕಲಿನಾಥ ನಾಟ್ಯನಮಿತ್ತಂಡಿ ಕಣ್ಣಪ್ಪದೇವ ಕಥಾವಿವರಣಂ
ದಶಮಾಶ್ವಾಸಂ ಸಮಾಪ್ತಂ

ಅಂತು ಅಶ್ವಾಸ ೧೦ಕ್ಕೆ ಪದಗಣನೆ ೯೦೮ ಕ್ಕೆ ಮಂಗಳಮಹಾ ಶ್ರೀ

ಮಾಡುವನು. ೧೫೩. ಹೀಗೆಂದು ಈ ರೀತಿಯ ಶಿವಭಕ್ತಿಗೆ ಬೊಕ್ಕಸದಂತಿರುವ ನಂದೀಶ್ವರನೆಂಬ ಹೆಸರಿನ ಲೋಕವನ್ನು ಪರಿಪಾಲಿಸುವ (ಅವನ) ವಿದ್ಯಾ ವಿಷಯದಲ್ಲಿ ಆಲಸ್ಯರಹಿತನಾದ (ವೀತತಂದ್ರಂ) ವೃಷಭೇಶ್ವರನು ಮುಗ್ಧನಾದ ಪರಶಿವನ ಮನೋಹರ ಭಕ್ತರಾದ ಮುಗ್ಧರ ಸಮೂಹದ ವಿಶೇಷವಾದ ಕಥೆಗಳನ್ನು ಚೆನ್ನ ಬಸವೇಶ್ವರ ಮುಂತಾದ ಮಾಹೇಶ್ವರರ ಸಮೂಹಕ್ಕೆ ಆನಂದವು ಅಧಿಕವಾಗುವಂತೆ ಚೆನ್ನಾಗಿ ಹೇಳುತ್ತ ಶೋಭಿಸಿ, ಜಂಗಮರ ಪ್ರಕಾಶಿಸುವ ಪಾದಪೂಜೆಯನ್ನು ಮಾಡುತ್ತ ಇದ್ದನು. ೧೫೪. ಸಿಂಹವೇ ತನ್ನ ವಾಹನವಾಗಿ ಉಳ್ಳ, ಪರಮೇಶ್ವರನಿಂದ ಮಾಡಲ್ಪಟ್ಟ ಅಧಿಕವಾದ ಪ್ರೀತಿಯುಳ್ಳ, ವಿಷ್ಣುವಿನಿಂದ ಪೂಜಿಸಲ್ಪಟ್ಟ, ಸೂರ್ಯನ ಕಾಂತಿ ಯಂತಿರುವ ಕಾಂತಿಯಿಂದ ಪ್ರಕಾಶಿಸುವ, ಪರ್ವತ ರಾಜನ ಶ್ರೇಷ್ಠ ಪುತ್ರಿಯಾದ, ನಮಸ್ಕಾರ ಮಾಡಿದ ದೇವತೆಗಳ ಸಮೂಹವನ್ನು ಸಂತೋಷಪಡಿಸುವ ಮೂರು ಲೋಕಗಳನ್ನು ನಿರ್ಮಾಣ ಮಾಡುವ ನನ್ನ ತಾಯಿಯಾದ ಪಾರ್ವತಿಯೇ ಜಯ.

ಹತ್ತನೆಯ ಆಶ್ವಾಸವು ಸಮಾಪ್ತವಾಯಿತು.

---

1 ಬೆ(ಗ, ಮು, ಜ)

ಏಕಾದಶಾಶ್ವಾಸಂ

[ಸಕಲೇಶ ಮಾದರಸರ ಕಥೆ]

ಶ್ರೀಧರಣೀಧರ ವರ ತನ
ಯಾಧರ ನವಬಿಂಬಚುಂಬನ ಪ್ರಮದ ಶುಕಂ
ಭೂಧರಚಾಪಂ ಚಂದ್ರಕ
ಳಾಧರನೆಮಗೀಗೆ ಸೌಖ್ಯಮಂ ಶಿವಲಿಂಗಂ ೧

ಪ್ರಮದವನೋಪಕಂಠಪರಿಖಾಪರಿರಂಜಿತ ತುಂಗವಪ್ರಮು
ತ್ತಮಕನಕಧ್ವಜಾಂಕಮಣಿಹರ್ಮ್ಯಮುದಂಚಿತ ಸೋಮಸೂರ್ಯವೀ
ಥಿ ಮಹಿತಮಭ್ರಚುಂಬಿಘನಗೋಪುರಲಿಂಗನಿಕೇತನಂ ವಿಳಾ
ಸಮನವರ್ದ್ದಿದರ್ದುದಂಬೆಯೆನಿಪೊಳ್ಪೆಸರಾಂತ ಪುರಂ ಮನೋಹರಂ ೨

ಆ ಪಟ್ಟಣದಧಿಪತಿಯಂ
ಬಾಪತಿಪದಭಕ್ತನಮಳರುಚಿನಿಚಿತ ಯಶೋ

ಸಕಳೇಶ ಮಾದರಸನ ಕಥೆ

೧. ಮಂಗಳಕರಳಾದ ಪಾರ್ವತೀದೇವಿಯ ತುಟಿಯೆಂಬ ನೂತನವಾದ ತೊಂಡೆಯ ಹಣ್ಣನ್ನು ಚುಂಬಿಸುವ ವಿಷಯದಲ್ಲಿ ಗಿಳಿಯಂತಿರುವವನೂ, ಮೇರುಪರ್ವತವೇ ಬಿಲ್ಲಾಗಿ ಉಳ್ಳವನೂ ಚಂದ್ರಕಳೆಯನ್ನು ಧರಿಸಿದವನೂ ಆದ ಶಿವಲಿಂಗನು ನಮಗೆ ಸೌಖ್ಯವನ್ನು ಕೊಡಲಿ. ೨. ಸಂತೋಷವನ್ನುಂಟುಮಾಡುವ ಉಪವನಗಳ ಸಮೀಪದಲ್ಲಿರುವ ಅಗಳು (ಕಂದಕ)ಗಳಿಂದ ಪ್ರಕಾಶಮಾನವಾದ, ಉನ್ನತವಾದ ಮಣ್ಣು ದಿಣ್ಣೆಗಳನ್ನುಳ್ಳ, ಶ್ರೇಷ್ಠವಾದ ಚಿನ್ನದ ಧ್ವಜಗಳೇ ಚಿಹ್ನೆಯಾಗುಳ್ಳ, ರತ್ನಮಯವಾದ ಉಪ್ಪರಿಗೆಗಳುಳ್ಳ, ಶ್ಲಾಘ್ಯವಾದ ಸೋಮಸೂರ್ಯ ಬೀದಿ (ನೇರಬೀದಿ,ಅಡ್ಡಬೀದಿ) ಗಳಿಂದ ಪೂಜ್ಯವಾದ, ಆಕಾಶವನ್ನು ಸೋಂಕುತ್ತಿರುವ ಶ್ರೇಷ್ಠಗೋಪುರಗಳಿಂದ ಕೂಡಿದ ಶಿವಾಲಯಗಳುಳ್ಳ, ಮನೋಹರವಾದ ಒಳ್ಳೆಯ ಹೆಸರನ್ನು ಹೊಂದಿದ 'ಅಂಬೆ' ಎಂಬ ಪಟ್ಟಣವು ವೈಭವದಿಂದ ಕೂಡಿತ್ತು. (೩–೪–೫) ಆ ಪಟ್ಟಣದ ಸ್ವಾಮಿಯು ಪಾರ್ವತೀಪತಿ ಪದ ಭಕ್ತನೂ, ಅಸದೃಶಕಾಂತಿಯಿಂದ ಲೋಕವನ್ನು ಪ್ರಕಾಶಪಡಿಸಿ

ದೀಪಿತಭು[1]ವನಂ ವಿನಯ ಕ
ಲಾಪಂ ವಿತತಪ್ರತಾಪನಭಿನವರೂಪಂ ೩

ನಮಿತಪ್ರತ್ಯರ್ಥಿಪೃಥ್ವೀಧವನಿವಹಮಹಾಮೌಲಿಮಾಣಿಕ್ಯಮಾಲಾ
ಸಮುದಂಚತ್ಕಾಂತಿನೀರಾಜಿತ ನಿಜಚರಣಾಂಭೋಜನುದ್ಯತ್ಪ್ರತಾಪಾ
ರ್ಯಮಧಾಮೋದ್ಧೂತವೇಳಾಚಲಚರಮಧರಾರೂಢಗಾಢಾಂಧಕಾರಂ
ದಮಿತಾರಿವ್ರಾತನಭ್ಯರ್ಚಿತಹರಪದನ.ತ್ಪಾದಿತಾರ್ಯಪ್ರಮೋದಂ ೪

ಶಿವಧ್ಯಾನರಕ್ತಂ ಶಿವಜ್ಞಾನಯುಕ್ತಂ
ಶಿವಾದ್ವೈತಭಾಜಂ ಶಿವೈಕ್ಯಾಬ್ಧಿರಾಜಂ
ಶಿವಪ್ರೇಮಧಾಮಂ ಶಿವಾನಂದಭೂಮಂ
ಶಿವಪ್ರಾಣಿಯೊಲ್ದೊಪ್ಪಿದಂ ಮಾದಿರಾಜಂ ೫

ಶಿವಯೋಗಸುಖಮನಾಳ್ದೊ
ಪ್ಪುವ ಮಾದಾರ್ಯನ ಮರುಳ್ಚಲಾರ್ತುದೆ ಸಾಮ್ರಾ
ಜ್ಯವಿಶೇಷಸುಖಂ ಸುಧೆಗೊಂ
ಡವನಂ ಮೇಣಂಬಿಲಂ ವಲಂ ಮಚ್ಚಿಕುಮೇ ೬

ದವನೂ, ನೀತಿಯನ್ನೇ ಆಭರಣವಾಗಿ ಉಳ್ಳವನೂ, ವಿಶೇಷ ಪರಾಕ್ರಮವುಳ್ಳವನೂ, ನೂತನ ಆಕಾರವುಳ್ಳವನೂ ನಮಸ್ಕಾರ ಮಾಡಿದ ಶತ್ರುರಾಜರ ಸಮೂಹದ ಕಿರೀಟದಲ್ಲಿರುವ ರತ್ನ ಪಙ್ಕ್ತಿಯಿಂದ ಹೊರಹೊಮ್ಮುತ್ತಿರುವ ಪ್ರಕಾಶವು ಆರತಿಯನ್ನೆತ್ತಿದ ಹಾಗೆ ಇರುವ ಪಾದವುಳ್ಳವನೂ, ಅಧಿಕವಾದ ಪ್ರತಾಪವೆಂಬ ಸೂರ್ಯನ ತೇಜಸ್ಸಿನಿಂದ ಕುಲಾಚಲ ಪರ್ವತಗಳನ್ನು ವ್ಯಾಪಿಸಿದ್ದ ಗಾಢವಾದ ಕತ್ತಲೆಯನ್ನು ಹೋಗಲಾಡಿಸಿದವನೂ, ಶತ್ರುಸಮೂಹವನ್ನು (ತನ್ನ ಶೌರ್ಯದಿಂದ) ದಮನಗೊಳಿಸಿದವನೂ, ಶಿವನ ಪಾದ ಕಮಲಗಳನ್ನು ಪೂಜಿಸುವವನೂ, ಪೂಜ್ಯರಾದವರ ಸಂತೋಷಕ್ಕೆ ಪಾತ್ರನಾದವನೂ, ಈಶ್ವರನನ್ನು ಧ್ಯಾನಿಸುವುದರಲ್ಲಿ ಆಸಕ್ತನಾಗಿದ್ದವನೂ, ಶಿವನಲ್ಲಿ ಅಭೇದ ಭಾವವನ್ನು ಹೊಂದಿದವನೂ ಶಿವನಲ್ಲಿ ಏಕತ್ವಭಾವವನ್ನು ಹೊಂದಿರುವವರೆಂಬ ಸಮುದ್ರಕ್ಕೆ ಚಂದ್ರನಂತಿದ್ದವನೂ, ಶಿವಾನಂದಕ್ಕೆ ಸ್ಥಾನನಾದವನೂ, ಲಿಂಗವೇ ಪ್ರಾಣವೆಂದರಿತವನೂ ಎನಿಸಿ ಮಾದಿರಾಜ (ಸಕಳೇಶ ಮಾದರಸ)ನು ಶೋಭಿಸುತ್ತಿದ್ದನು. ೬. ಶಿವಯೋಗ ಸುಖವನ್ನು ಹೊಂದಿ, ಒಪ್ಪುತ್ತಿರುವ ಮಾದಿರಾಜನನ್ನು ದೊರೆತನದಿಂದುಂಟಾದ ವಿಶೇಷ ಸುಖವು ಸಂತೋಷಗೊಳಿಸಲು ಸಮರ್ಥವಾದೀತೇ ? ಅಮೃತವನ್ನುಂಡವ

1 ಭ (ಗ)

ಆ ಮಾದಿರಾಜನಿಂದುಕ
ಲಾವಮೌಲಿಯನೊಲ್ದು ಭಜಿಸುತಂ ಭಕ್ತಿಯಿನು
ದ್ದಾಮತರ ತಂತ್ರಿವಾದ್ಯ ಕ
ಳಾಮಹಿತಂ ವೀಣೆಗೇಳಿಸಲ್ಬಗೆದಂದಂ ೭

ವ॥ ಅಂತು ಬಗೆದಂದು ರಾವಣ ರುದ್ರ ಕೂರ್ಮ ಕೈಲಾಸಕಾಶ ಗೌರಿ ಸ್ವಾಯಂಭುವ ಕಿನ್ನರ ವೀಣೆಗಳುಮಂ ವೇಣುಸ್ವರಮಂಡಲಗಳುಮಂ ಶ್ರುತಿಗೊಳಿಸಿ ಕಳೆವೆಚ್ಚಿಸಿ ಹರನಿದಿರೊಳ್ತರಂಗೊಳಿಸಿದಾ ಗಳಾವ ರಾಗಮಾವ ವೀಣೆಯೊಳ್ತಾನೆ ಪುಟ್ಟುಗುಮಾ ವೀಣೆಯುಂ ಕೈಕೊಂಡಾ ರಾಗಮನೆ ಹರಂಗೆ ಕೇಳಿಸಲೆಳಸಿ—

ಕತ್ತರ ಬಿತ್ತರಂ ನಿಮಿರೆ ಕಾಕುಳಿ ಪೊಣ್ಮೆ ಪೊದಳ್ದ ದೇಸಿ ಮೆ
ಯ್ವೆತ್ತಿರೆ ತೇನ ತೇನವೊದಗುತ್ತಿರೆ ತಾನರವಂ ಲಯಂ ಜವಂ
ಬೆತ್ತಿರೆ ಮೂರ್ಛನಾಪ್ರಸರಮೊಂದಿರೆ ಜೇನ್ಮಳೆ ಸೂಸಿದಂತಿರಿಂ
ಪೊತ್ತರಿಸುತ್ತೆ ರಾಗರಸಮುರ್ವಿರೆ ತೋಱುತೆ ಬಿನ್ನಣಂಗಳಂ ೮

ಲಳಿತಗಾಢಮಿಂತಾಯಿ ಲಂಘಿತಕಾಕುಜಾಯನುಜಾಯಿಂಪಂ
ಜಳ ಬಜಾವಣೆ ತಾಳ ಸಾರಿ ಸುರೀತಿ ರಕ್ತಿ ಪದಕ್ರಮಂ
ವಳಿಸುರಂಗಿತಮಾಯುತಂ ಮ[1]ಣಿಕಂಪಿತಂ ಹಳುವಾಯಿಂಚೊ
ಕ್ಕಳಮನೂದ್ಗತವೃತ್ತಿ ಪಾಳಿ ವಿಮೋಕ್ಷಮಿಂಪು ಲಯಾಸ್ಪದಂ ೯

ನನ್ನು ಅಕ್ಕಿಯನ್ನು ತೊಳೆದ ಅಕ್ಕಚ್ಚು (ಅಂಬಿಲ) ನಿಜವಾಗಿ ಮೆಚ್ಚಿಸೀತೆ ? ೭. ಉತ್ಕೃಷ್ಟವಾದ ತಂತಿಯ ವಾದ್ಯವಿದ್ಯೆಯಲ್ಲಿ (ವೀಣೆ ಮೊದಲಾದ ತಂತಿಯ ವಾದ್ಯ ಗಳನ್ನು ನುಡಿಸುವುದರಲ್ಲಿ) ಶ್ರೇಷ್ಠನೆನಿಸಿದ ಆ ಮಾದಿರಾಜನು ಚಂದ್ರಕಳಾಧರನನ್ನು ಒಲಿದು ಪ್ರೀತಿಯಿಂದ ಭಜನೆ ಮಾಡುತ್ತಾ, ಅವನಿಗೆ ವೀಣೆಯ ವಾದ್ಯವನ್ನು ಕೇಳಿಸುವು ದಕ್ಕೋಸುಗ ಯೋಚಿಸಿದನು. ೮. ಈ ರೀತಿ ಯೋಚಿಸಿ, ರಾವಣ, ರುದ್ರ, ಕೂರ್ಮ, ಕೈಲಾಸ, ಆಕಾಶ, ಗೌರೀ, ಸ್ವಾಯಂಭುವ, ಕಿನ್ನರ-ಇತ್ಯಾದಿ ಹೆಸರುಗಳುಳ್ಳ ವೀಣೆ ಗಳನ್ನೂ ಬಿದಿರಿನ ಕೊಳಲುಗಳೇ ಮುಂತಾದ ವಾದ್ಯಗಳನ್ನೂ, ಶ್ರುತಿಮಾಡಿ ಹೆಚ್ಚಾದ ಕಳೆಯುಂಟಾಗುವಂತೆ ಮಾಡಿ, ಈಶ್ವರನ ಎದುರಿನಲ್ಲಿ ಸಾಲು ಸಾಲಾಗಿಟ್ಟು, ಯಾವ ರಾಗವು ಯಾವ ವೀಣೆಯಲ್ಲಿ ಹುಟ್ಟುವುದೋ ಅಂಥಂಥ ವೀಣೆಯನ್ನು ಕೈಗೆತ್ತಿಕೊಂಡು ಆಯಾಯ ರಾಗಗಳನ್ನು ಶಿವನಿಗೆ ಕೇಳಿಸುವುದಕ್ಕೋಸ್ಕರ ಇಚ್ಛಿಸಿ—೯-೧೦-೧೧-೧೨. ಕತ್ತರಿಯು ವಿಸ್ತಾರಗೊಂಡು ಹರಡಲು. 'ಕಾಕಳಿ' ಯುಂಟಾಗಲು ಶೋಭಿಸುವ ದೇಶಿಯು ಪ್ರಕಾಶಗೊಂಡಿರಲು, ಸಪ್ತಸ್ವರಗಳ ಆರೋ ಹಣ ಅವರೋಹಣ ಸಮೂಹವು ಹೊಂದಿಕೆಯಾಗಿ ಸೇರಿ, ಜೇನಿನ ಮಳೆಯೇ ಸುರಿದ ಹಾಗೆ (ಗಾನದ) ಇಂಪು ಸಾಂದ್ರಗೊಂಡು ರಾಗದ ರಸವು ಉಕ್ಕ

1 ವ(ದ, ಗ)

ಭ್ರಮರಲೀಲೆ ಲುಳಿ ದೇಸಿ ಮೊಚ್ಚೆಯುಂ
ಗಮಕವೊಳ್ಪು ಲಳಿ ನೇರ್ಪು ಚಾಪ[1]ಳಂ
ಕ್ರಮನಿಬಂಧಮುಚಿತಸ್ವರಂ ಬೆಡಂ
ಗಮರೆ ಬಾಜಿಸುತೆ ಚಾರುವೀಣೆಯುಂ ೧೦

ವ॥ ಮತ್ತಂ—

ಮಾಳವಮಾ ಶ್ರೀರಾಗಂ
ಸಾಳಗಮುರು ನಾಟಿ ಶಂಕರಾಭರಣಂ ಬಂ
ಗಾಳಂ ಗೂರ್ಜರಿ ತೋಂಡಿ ವ
ರಾಳಿಕೆ ಕಲ್ಯಾಣಿ ದೇಸಿ ಕನ್ನಡರಾಗಂ ೧೧

ವರಾಳಿ ಮಧುಮಾಧವಿ ಲಲಿತೆ ಗೌಳ ವೇಳಾವಳೀ
ಕುರಂಜಿ ಘಳಮಂಜರಿ ಬಹುಳಿ ನಾದರಾಮಕ್ರಿಯಾ
ಹಿರಿಪ್ರಬಳ ಭೈರವಿ ಮಲಹರೀವಸಂತಂಗಳಿಂ
ಬುರುಸ್ಫುರಿತರಾಗಸಂಚಯಮನೋಜೆಯಿಂ ಬಾಜಿಪಂ ೧೨

ತ್ತಿರಲು ನೈಪುಣ್ಯ (ಬಿನ್ನಾಣ)ವನ್ನು ತೋರಿಸುತ್ತ–ಲಲಿತಗಾಢಮಿಠಾಯಿ, ಲಂಘಿತಕಾಕು ಜಾಯಿ, ಅನುಜಾಯಿ, ಪಂಜಳ ಬಜಾವಣೆ, ತಾಳ, ಸಾರಿ, ಸುರೀತಿ, ರಕ್ತಿ, ಪದಕ್ರಮ, ವಳಿ, ಸುರಂಗಿತ, ಆಯತ, ಮಣಿಕಂಪಿತ, ಹಳುವಾಯಿ, ಜೊಕ್ಕಳ, ಅನೂದ್ಗತವೃತ್ತಿ ಪಾಳಿ, ವಿಮೋಕ್ಷ, ಇಂಪು, ಲಯಾಸ್ಪದ, ಭ್ರಮರಲೀಲೆ, ಲುಳಿ, ದೇಶೀ, ಒಚ್ಚೆಯ, ಗಮಕ, ಒಳ್ಪು, ಲಳಿ, ನೇರ್ಪು, ಚಾಪಳ, ಕ್ರಮನಿಬಂಧ, ಉಚಿತಸ್ವರ, ಬೆಡಗು-(ಈ ಎಲ್ಲ ವೀಣೆಯನ್ನು ನುಡಿಸುವ ಹಾಡುವ ಭೇದಗಳು) ಕ್ರಮವಾಗಿ ಹೊಂದಿಕೆಯಾಗುವಂತೆ ಮನೋಹರ ವೀಣೆಯನ್ನು ಬಾಜಿಸುತ್ತ-ಮಾಳವ, ಶ್ರೀರಾಗ, ಸಾಳಗ, ಶ್ರೇಷ್ಠವಾದ ನಾಟಿ, ಶಂಕರಾಭರಣ, ಬಂಗಾಳ, ಘೂರ್ಜರಿ, ತೋಡಿ, ವರಾಳಿಕೆ, ಕಲ್ಯಾಣಿ, ದೇಶಿ, ಕನ್ನಡರಾಗ (ಕಾನಡಾ), ವರಾಳಿ, ಮಧು, ಮಾಧವಿ, ಲಲಿತೆ, ಗೌಳ, ಮೇಳಾವಳಿ, ಕುರಂಜಿ, ಪಳಮಂಜರಿ, ಬಹುಳಿ, ನಾದ ನಾಮಕ್ರಿಯಾ, ಆಹಿರಿ, ಪ್ರಬಲವಾದ ಭೈರವಿ, ಮಲಹರಿ, ವಸಂತಗಳೆಂದು ಅಧಿಕವಾಗಿ ಪ್ರಕಾಶಿಸುವ ರಾಗಗಳ ಸಮುದಾಯವನ್ನು ಕ್ರಮವಾಗಿ ಬಾಜಿಸುವನು. [ಇಲ್ಲಿ-ಕತ್ತರಿ, ಕಾಕಳಿ, ತೇನತೇನ-ಇವು ನಾನಾವಿಧವಾಗಿ ಹಾಡುವ ಜಾತಿಗಳು. ಈ ಪದ್ಯಗಳು ಸಂಗೀತ ಶಾಸ್ತ್ರಕ್ಕೆ ವೀಣಾ ವಾದನಕ್ಕೆ ಸಂಬಂಧ ಪಟ್ಟ

---

1 ವ(ಅ)

ಶಾರದೆಯ ತುಂಬುರನ ನವ
ನಾರದನ ಗಿರೀಂದ್ರಸುತೆಯ ವೀಣೆಯ ಬರ್ದಿಂ
ಸಾರತರಮಿಂತಿದೆಂದು ಪು
ರಾರಿ ಕರಂ ಕೇಳ್ದು ಕೇಳ್ದು ಮೆಚ್ಚುತ್ತಿರ್ಪಂ ೧೩

ಅನುದಿನಮೀಶನಾಲಿಸಿ ಮುದಂಬಡೆ ಕೇಳಿಸುತಿಂತು ವೀಣೆಯಂ
ವಿನುತ ಶಿವಾಂಗಜಂಗಮಕದಂಬಮನರ್ಚಿಸುತುಂ ಸಮಾಧಿವೆ
ತ್ತನುಪಮಲಿಂಗಮಂ ಬಿಡದೆ ಜಾನಿಸುತುಂ ನಿಜರಾಜ್ಯಭೋಗಮಂ
ನೆನೆಯದೆ ಮಾದಿರಾಜವಿಭುವಿರ್ದನನೂನ ವಿರಕ್ತಿವೃತ್ತಿಯಿಂ ೧೪

ವ॥ ಅಂತಿರುತ್ತಮಿರ್ದೊಂದು ದಿವಸಂ ಶ್ರೀಗಿರಿಯಿಂ ಬಂದ ಮಾಹೇಶ್ವರರಿಂ ತತ್ಪರ್ವತ ಪ್ರಭಾವಮುಮನಾಗಿರಿಯೊಳ್ವೈರಾಗ್ಯದೇಳ್ಗೆಯಿಂ ಸಾಮ್ರಾಜ್ಯಭೋಗಮುಮನುಳಿದೆಯ್ದಿ ಶಿವಯೋಗ ದೊಳ್ನೆಲಸಿರ್ದ ಶಿವಯೋಗಿ ಮಲ್ಲರಸನೆಂಬ ಶಿವೈಕ್ಯನ ಪೆರ್ಮೆಯುಮನಾಕರ್ಣಿಸಿ ತದ್ದರ್ಶನೋತ್ಕಂಠೆ ಯಿನಖಿಳ ರಾಜಸಂಪದ ಬಂಧುಸಂದೋಹಮಂ ವಿಸ[1]ರ್ಜಿಸಿ ಸಕಳೇಶ ಮಾದರಸಂ ತತ್ಪರ್ವತ ಮನೆಯ್ದಿ ನಿಂದು ನಿರೀಕ್ಷಿಪಾಗಳ್—

ಅಂಶಗಳು ಅರ್ಥಸ್ಪಷ್ಟ] ೧೩. ಸರಸ್ವತಿಯ, ತುಂಬುರನ, ನವನಾರದನ, ಪಾರ್ವತಿಯ ವೀಣೆಯ ಮಾಧುರ್ಯಕ್ಕಿಂತಲೂ ಮಾದರಸನ ವೀಣೆಯ ಮಾಧುರ್ಯದ ಈರೀತಿಯ ಶ್ರೇಷ್ಠ ವಾದದ್ದೆಂದು ಶಿವನು ವಿಶೇಷವಾಗಿ ಕೇಳಿ, ಕೇಳಿ ಮೆಚ್ಚುತ್ತಿದ್ದನು. ೧೪. ಈಶ್ವರನು ಪ್ರತಿ ದಿನವೂ ಕೇಳಿ ಸಂತೋಷವನ್ನು ಹೊಂದುವಂತೆ ಮಾದಿರಾಜ ವಿಭುವು ಈ ರೀತಿ ವೀಣೆಯನ್ನು ಬಾಜಿಸುತ್ತ, ಶ್ಲಾಘ್ಯವಾದ ಶಿವನ ಅವಯವ ರೂಪರಾದ (ಅಥವಾ ಮಂಗಳಕರ ಅವಯವಗಳುಳ್ಳ) ಚರ ಮೂರ್ತಿಗಳ ಸಮೂಹವನ್ನು ಅರ್ಚಿಸುತ್ತ, ಶಿವ ಯೋಗ ಸಮಾಧಿಯಲ್ಲಿ ಅನುಪಮವಾದ ಶಿವಲಿಂಗವನ್ನು ತಪ್ಪದೆ ಧ್ಯಾನ ಮಾಡುತ್ತ ತನ್ನ ರಾಜ ಭೋಗವನ್ನು ನೆನೆಯದೆ ಅಧಿಕವಾದ ವಿರಕ್ತಿಭಾವವನ್ನು ಹೊಂದಿದ್ದನು. ವ॥ ಈ ರೀತಿ (ಆ ಸಕಳೇಶ ಮಾದರಸನು ವಿರಕ್ತಿ ಭಾವದಿಂದ) ಇರುತ್ತಿದ್ದು ಒಂದು ದಿವಸ ಶ್ರೀ ಶೈಲಗಿರಿಯಿಂದ ಬಂದ ಮಾಹೇಶ್ವರರುಗಳಿಂದ ಆ ಶ್ರೀಶೈಲದ ಮಹಿಮೆ ಯನ್ನೂ, ಆ ಪರ್ವತದಲ್ಲಿ ವೈರಾಗ್ಯದ ಆಧಿಕ್ಯದಿಂದ ಸಾಮ್ರಾಜ್ಯ ಭೋಗವನ್ನು ಬಿಟ್ಟು ಬಂದು, ಶಿವಯೋಗದಲ್ಲಿ ನೆಲಸಿದ್ದ 'ಶಿವಯೋಗಿ ಮಲ್ಲರಸ'ನೆಂಬ ಶಿವೈಕ್ಯನ ಹಿರಿಮೆ ಯನ್ನು ಕೇಳಿ, ಆ ಶ್ರೀಗಿರಿಯನ್ನೂ, ಅಲ್ಲಿರುವ ಆ ಮಲ್ಲರಸನನ್ನೂ ನೋಡಬೇಕೆಂಬ ಕುತೂಹಲದಿಂದ ಸಮಸ್ತ ರಾಜ್ಯ, ಐಶ್ವರ್ಯ, ನಂಟರುಗಳ ಸಮೂಹವನ್ನು ಬಿಟ್ಟು, ಆ

1 ವ(ಮು)

ವಿತತಾಭ್ರಂಕಷ ಶೃಂಗಪಾಳಿ ವಿಳಸತ್ಪಾತಾಳ ಪಾತಾಶನಾ
ಶ್ರಿತ ಶುಂಭದ್ಬಿಲರಾಜಿ ಖೇಚರಚಯಾಂಚತ್ಪುಷ್ಪಕಸ್ಪರ್ಶಿ ವಿ
ಶ್ರುತಶಾಖಕ್ಷಿತಿಜಾತಜಾತಿ ರವಿಬಿಂಬಾಲಿಂಗನೋತ್ಕೀರ್ಣಮುಂ
ಡಿತರೋಚಿಷ್ಕಣ ದೀಪ್ಯದರ್ಕಮಣಿಬೃಂದ ಶ್ರೀಧರಂ ಭೂಧರಂ ೧೫

ಮುನಿಗಳ ಬೀಡು ಮುಕ್ತಿಯ ತವರ್ಮನೆ ಪುಣ್ಯದ ಪುಂಜದಿಕ್ಕೆ ಪೆಂ
ಪಿನ ನೆಲೆ ಘೋರಗಂಹರದ ಬಾಳ್ಕೆ ಮೊದಲುರ್ವಿಯ ಸೈಪಿನಾಗರಂ
ಬಿನದಿಪ ದೇವತಾವಳಿಯ ಚಾವಡಿ ಸಿದ್ಧರ ಕೋಶಗೇಹಮುಂ
ದೆನಿಸಿ ವಿರಾಜಿಸಿರ್ದುದು ಧರಾತ್ತಪಯೋಧರಮಾ ಮಹೀಧರಂ ೧೬

ಪಿರಿಯತನಕ್ಕಿದಿರ್ಚಿ ಕಡೆಗಾದುದು ಮಂದರಮಾಗಿರೀಂದ್ರದೊಳ್
ಸುರಗಿರಿ ಬಾಗಿದತ್ತು ಪಿಡಿತಕ್ಕೊಳಗಾಗಿ ಹಿಮಾದ್ರಿ ಸೇಡುವ
ಟ್ಟಿರದೆ ಬೆಳರ್ತು ನಿಂದುದು ಕುಲಾಚಲಸಂತತಿ ಮೂಲೆವೊಕ್ಕು ಮೆ
ಯ್ಗರೆದುದು ಮಿಕ್ಕ ಪರ್ವತಚಯಂ ಮುಳುಗಿರ್ದುದು ವಾರ್ಧಿವಾರಿಯೊಳ್ ೧೭

ಪರ್ವತವನ್ನು ಸೇರಿ, ನಿಂತು ನೋಡುತ್ತಿರುವಾಗ—೧೫. ವಿಸ್ತಾರವಾಗಿ ಹಬ್ಬಿ ಅಂತರಿಕ್ಷವನ್ನು ಚುಂಬಿಸುತ್ತಿರುವ ಶಿಖರಗಳ ಸಾಲುಗಳನ್ನೂ, ಪ್ರಕಾಶಿಸುವ ಪಾತಾಳಲೋಕದೊಳಗಿನ ಸರ್ಪಗಳಿಂದ ಆಶ್ರಯಿಸಲ್ಪಟ್ಟ ಗವಿಗಳ ಸಾಲುಗಳನ್ನೂ, ದೇವತೆಗಳ ಸಮೂಹದಿಂದ ಪೂಜ್ಯವೆನಿಸಿದ ಪುಷ್ಪಕ ವಿಮಾನವನ್ನು ಸೋಂಕುತ್ತಿರುವ ವಿಸ್ತಾರವಾದ ಕೊಂಬೆಗಳನ್ನುಳ್ಳ ಮರಗಳ ಸಮೂಹವನ್ನೂ, ಸೂರ್ಯನ ಬಿಂಬವನ್ನು ಆಲಿಂಗಿಸುವುದರಿಂದ ಮೇಲಕ್ಕೆ ಪ್ರಸಾರಗೊಂಡು ಅಲಂಕರಿಸಲ್ಪಟ್ಟ ಕಾಂತಿಗಳ ಕಣಗಳಿಂದ ಪ್ರಕಾಶಿಸುತ್ತಿರುವ ಸೂರ್ಯಕಾಂತ ಮಣಿ ಶಿಲೆಗಳ ಸಮೂಹದ ಸಂಪತ್ತನ್ನೂ ಹೊಂದಿರುವ ಆ ಪರ್ವತವು (ಕಣ್ಣಿಗೆ ಕಂಡಿತು). ೧೬. ಕೆಳ ಭಾಗದಲ್ಲಿ ಮೇಘಗಳು ಸಂಚರಿಸುತ್ತಿದ್ದ ಆ ಪರ್ವತವು (ಧರಾಧರಂ), ಮುನಿಗಳು ವಾಸಮಾಡುವ ನೆಲೆ, ಮುಕ್ತಿಗೆ ತವರುಮನೆ ; ಪುಣ್ಯದ ಸಮೂಹವಿರುವ ತಾಣ ; ಘನತೆಯ ನೆಲೆ (ಹಿರಿಮೆಯ ವಾಸಸ್ಥಾನ), ಭಯಂಕರವಾದ ಗುಹೆಗಳ ಬಾಳಿನ ಮೂಲ ; ಭೂಮಂಡಲದ ಪುಣ್ಯದ ಆಗರ ; ಸಂತೋಷಗೊಳಿಸುವ ದೇವತಾ ಸಮೂಹದ ಸಭಾಮಂಟಪ : ಸಿದ್ಧಪುರುಷರ ಬೊಕ್ಕಸದ ಮನೆಯೆಂದೆನಿಸಿ ಶೋಭಿಸುತ್ತಿತ್ತು. ೧೭. ಆ ಗಿರಿಶ್ರೇಷ್ಠನೊಡನೆ ಔನ್ನತ್ಯಕ್ಕೋಸುಗ ಪ್ರತಿಭಟಿಸಿ (ಸ್ಪರ್ಧಿಸಿ) ಮಂದರಪರ್ವತವು (ಸೋತು) ಕಡೆಗೋಲಾಯಿತು : ಆ ಗಿರಿಶ್ರೇಷ್ಠನೊಡನೆ ಮೇರುಪರ್ವತವು (ಸುರಗಿರಿ) ತಲೆಬಾಗಿತು ; ಹಿಮಾಲಯವು ಶೈತ್ಯವನ್ನು ಹೊಂದಿ, ತಪ್ಪದೆ ಬಿಳಚಿಕೊಂಡು ನಿಂತಿತು. ಸಪ್ತಕುಲಾಚಲ ಪರ್ವತಗಳ ಸಮೂಹವು ಮೂಲೆಯನ್ನು ಹೊಕ್ಕು ಮೈಮರೆಸಿಕೊಂಡಿತು. ಉಳಿದ ಪರ್ವತಗಳ

ಅಲ್ಲಿಯ ಭಿಲ್ಲಮ್ರುನಿವರ
ರಲ್ಲಿಯ ಘನನಿರ್ಜರಾಂಬು ತೀರ್ಥೋದಕಮಂ
ತಲ್ಲಿಯ ಶಿಲೆ ಲಿಂಗಂ ನೆಗ
ಳ್ದಲ್ಲಿಯ ತತಪಾಂಶು ಭಸಿತಮೆನೆ ಬಣ್ಣಪರಾರ್ ೧೮

ಅತಿದೂರಂ ಕೇತಾರಂ
ಮೃತಿವಡೆಯೆ ವಿಮುಕ್ತಿಗೊಡುವುದಾ ಕಾಶಿ ಮಹೋ
ನ್ನತಮಿೂ ಶ್ರೀಗಿರಿಮೋಕ್ಷ
ಸ್ಥಿತಿಯಂ ಶಿಖರಾವಲೋಕಮಾತ್ರದಿನೀಗುಂ ೧೯

ವ॥ ಮತ್ತಮಾ ಶ್ರೀಗಿರಿಯುದಯನಗದಂತೆ ಲೋಕನೇತ್ರರುಚಿರಮುಮಸ್ತಾಚಲದಂತೆ ವೃದ್ಧ ಹಂಸಾಶ್ರಿತಮುಂ ಸುರಧರಾಧರದಂತೆ ನಾಕಾಲಯಾಶ್ರಯಮುಮಿಂದ್ರಕೀಲಕುತ್ಕೀಲದಂತೆ ನರವರಾಭೀಷ್ಟದಮುಂ ಹಿಮಶೈಲದಂತೆ ಗಂಗಾಧರಸ್ಥಿತಿವಿರಾಜಿತಮುಮಂಜನಾದ್ರಿಯಂತಂಧಕಾರಾತಿರುಚಿ

ಸಮೂಹವು ಸಮುದ್ರದಲ್ಲಿ ಮುಳುಗಿದವು. ೧೮. ಆ ಪರ್ವತದಲ್ಲಿರುವ ಬೇಡರು ಮುನಿಶ್ರೇಷ್ಠರು ; ಅಲ್ಲಿಯ ಘನವಾದ ಗಿರಿ ಪ್ರವಾಹಗಳು ತೀರ್ಥಜಲ ; ಹಾಗೆಯೇ ಅಲ್ಲಿನ ಕಲ್ಲುಗಳು ಲಿಂಗಗಳು ; ಪ್ರಸಿದ್ಧವಾದ ಅಲ್ಲಿನ ವಿಶೇಷವಾದ ಧೂಳಿಯೇ ಭಸ್ಮವೆನ್ನುವಂತೆ ಇರುತ್ತಿರಲು ಅದನ್ನು ವರ್ಣಿಸುವರಾರು ? ೧೯. ಬಹಳ ದೂರದಲ್ಲಿರುವ ಹಿಮವತ್ಕೇದಾರ, ಕಾಶಿಗಳು ಮರಣಹೊಂದಿದವರಿಗೆ ಮೋಕ್ಷವನ್ನು ಕೊಡುವುವು ; ಮಹೋನ್ನತವಾದ ಈ ಶ್ರೀಶೈಲ ಗಿರೀಂದ್ರನಾದರೋ ಶಿಖರವನ್ನು ನೋಡಿದ ಮಾತ್ರದಿಂದಲೇ ಮೋಕ್ಷ ಸ್ಥಿತಿಯನ್ನು ಕೊಡುವುದು. ವ॥ ಮತ್ತು ಆ ಶ್ರೀಶೈಲವು—ಉದಯ ಪರ್ವತದ ಹಾಗೆ–ಜನರ ಕಣ್ಣಿಗೆ ಮನೋಹರ, ಅಸ್ತಾಚಲದ ಹಾಗೆ ಮುದುಕರಾದ ಯತಿಶ್ರೇಷ್ಠರಿಗೆ ಆಶ್ರಯ ನೀಡಿರುವಂತಹದು. [ಉದಯಪರ್ವತವು–ಸೂರ್ಯನಿಂದ (ಲೋಕನೇತ್ರ) ಮನೋಹರವಾದದ್ದು ; ಅಸ್ತಾಚಲವು–ಮುಳುಗುತ್ತಿರುವ ವೃದ್ಧ ಸೂರ್ಯನಿಂದ ಆಶ್ರಯಿಸಲ್ಪಟ್ಟದ್ದು]. ಆ ಶ್ರೀಶೈಲ ಪರ್ವತವು–ಸುರಧರಾಧರದಂತೆ ಅಂದರೆ–ಮೇರುಪರ್ವತದ ಹಾಗೆ-ದೇವತೆಗಳಿಗೆ (ಮಲ್ಲಿಕಾರ್ಜುನಾದಿ ದೇವತೆಗಳಿಗೆ) ವಾಸಸ್ಥಳವಾದದ್ದು ; ಇಂದ್ರಕೀಲ ಪರ್ವತದ ಹಾಗೆ (ಇಂದ್ರಕೀಲ ಕುತ್ಕೀಲದಂತೆ) ಪುರುಷ ಶ್ರೇಷ್ಠರಿಗೆ ಅಭೀಷ್ಟವನ್ನುಂಟುಮಾಡುವಂತಹದು ; [ಮೇರುಪರ್ವತವು–ಸ್ವರ್ಗದಲ್ಲಿ ವಾಸಿಸುವವರ ಮನೆಗಳಿಗೆ ಆಶ್ರಯವಾದದ್ದು ; ಇಂದ್ರಕೀಲವು ನರವರನಾದ ಅರ್ಜುನನಿಗೆ ಇಷ್ಟವಾದ ವರವನ್ನು ಕೊಡಿಸಿದುದು.] ಆ ಶ್ರೀಶೈಲ ಪರ್ವತವು–ಹಿಮವತ್ಪರ್ವತದ ಹಾಗೆ–ಈಶ್ವರ ಎಂದರೆ ಮಲ್ಲಿಕಾರ್ಜುನ ಶಿವಲಿಂಗದ ಇರುವಿಕೆಯಿಂದ ಪ್ರಕಾಶಿಸುವಂತಹುದು. ಅಂಜನಾದ್ರಿಯ ಹಾಗೆ ಅಂದರೆ ನೀಲಗಿರಿಯ ಹಾಗೆ–ಅಂಧಕಾಸುರನಿಗೆ ಶತ್ರುವಾದ ಈಶ್ವರನ ಅತ್ಯಂತ ಪ್ರೀತಿಯಿಂದ ಕೂಡಿದುದು. [ಹಿಮವತ್ಪರ್ವತವು–ಗಂಗಾನದಿಯನ್ನು ಧರಿಸಿರುವ ಸ್ಥಿತಿಯಿಂದ ಪ್ರಕಾಶಮಾನವಾದದ್ದು ;

ವಿಳಿತಮುಂ ಮೈನಾಕಮಹೀಧ್ರ[1]ದಂತೆ ಸಮುದ್ರ ಸತ್ವ ಗುಣಪರಿವೃತಮುಂ ಮಲಯಭೂಧರದಂತೆ ಮನೋಜ್ಞಮರುದಾಡಂಬರಮುಮೆನಿಸಿರ್ದುದಂತುಮಲ್ಲದೆಯುಂ—

ಮಿಸುಗುವ ಮಂದರಾಗದೆ ಮಹೋನ್ನತಿಯುಂ ಸೆಳೆದೀಳ್ದುಕೊಂಡು ರಂ
ಜಿಸುವ ಸುರಾಗದಿಂ ಗರಿಮೆಯುಂ ತೆಗೆತಂದಪರಾಗದಿಂ ಗುಣ
ಪ್ರಸರಮನೀಶನೀ ಗಿರಿಯನಾಗಿಸದಿರ್ದೊಡಿದಕ್ಕಿನಿತ್ತು ಪೊ
ಪೆಸೆವುದೆ ಕೀಳಲಾನಮಿಸಲೊತ್ತರಿಸಲ್ಕವು ಸಾಧ್ಯಮಪ್ಪುವೆ[2] ೨೦

ಅಂಜನಾದ್ರಿಯು—ಅಂಧಕಾರ ಅಂದರೆ ಕತ್ತಲೆಯೋಪಾದಿಯಲ್ಲಿರುವ ಅತಿಶಯ ಕಾಂತಿಯಿಂದ ಕೂಡಿದುದು (ಕಪ್ಪು ವರ್ಣದ ಅತಿಶಯದಿಂದ ಕೂಡಿದುದು) ಎಂದು ಭಾವ.] ಆ ಶ್ರೀಶೈಲ ಪರ್ವತವು—ಮೈನಾಕ ಪರ್ವತದಂತೆ—ಸಮುದ್ರ ಅಂದರೆ ಆಕಾರ ಸಹಿತವಾದ ಸತ್ವಗುಣದಿಂದ ಆವರಿಸಲ್ಪಟ್ಟದ್ದು. [ಮೈನಾಕವು—ಸಮುದ್ರದಲ್ಲಿರುವ ಪ್ರಾಣಿ (ಸತ್ವ), ಕ್ಷಾರಾದಿಗುಣ—ಇವುಗಳಿಂದ ಸುತ್ತುವರಿಯಲ್ಪಟ್ಟದ್ದು.] ಆ ಶ್ರೀಶೈಲವು—ಮಲಯ ಪರ್ವತದಂತೆ—ಮನೋಹರವಾದ ದೇವತೆಗಳ ಆಡಂಬರವುಳ್ಳದ್ದು. [ಮಲಯಪರ್ವತವು ಮನೋಹರವಾದ ವಾಯುವಿನ ಆಡಂಬರ ಅಂದರೆ ಅತಿಶಯದಿಂದ ಕೂಡಿದುದು.]—ಹೀಗೆನಿಸಿ ಇತ್ತು-ಇದೂ ಅಲ್ಲದೆ [ಲೋಕನೇತ್ರ—ಸೂರ್ಯ, ಲೋಕದ ಜನರ ಕಣ್ಣು : ವೃದ್ಧಹಂಸ—ವೃದ್ಧರಾದ ಯತಿಗಳು, ಮುಳುಗುವ ಸೂರ್ಯ ; ನಾಕಾಲಯ—ಸ್ವರ್ಗದ ಮನೆ, ದೇವತೆಗಳ ಆಶ್ರಯ ; ನರ—ಅರ್ಜುನ, ಮನುಷ್ಯ ; ಗಂಗಾಧರ—ಗಂಗೆಯನ್ನು ಧರಿಸಿರುವ ಮೇರು, ಗಂಗೆಯನ್ನು ಧರಿಸಿರುವ ಶಿವ ; ಅಂಧಕ + ಆರಾತಿ + ರುಚಿ—ಅಂಧಕನೆಂಬ ರಾಕ್ಷಸನ ವೈರಿಯಾದ ಶಿವ (ರುಚಿ ಮುಂದಕ್ಕೆ ಅನ್ವಯ), ಅಂಧಕಾರ—ಕತ್ತಲೆ ; ಸಮುದ್ರ, ಆಕಾರಸಹಿತ, ಅಂಬುಧಿ ; ಮರುತ್-ವಾಯು, ದೇವತೆ.]

೨೦. ಈಶ್ವರನು ಪ್ರಕಾಶಮಾನವಾದ ಮಂದರಪರ್ವತದ ದೆಸೆಯಿಂದ ಶ್ರೇಷ್ಠವಾದ ಔನ್ನತ್ಯವನ್ನು ಸೆಳೆದು ತಕ್ಕೊಂಡು, ರಮ್ಯವಾದ ಮೇರುಪರ್ವತದ ದೆಸೆಯಿಂದ ದೊಡ್ಡ ತನವನ್ನು ಕಿತ್ತುಕೊಂಡು, ಪಶ್ಚಿಮ ದಿಗ್ಭಾಗದಲ್ಲಿರುವ ಅಸ್ತಾಚಲದಿಂದ ಗುಣಗಳ ಸಮೂಹವನ್ನು ತೆಗೆದುಕೊಂಡು ಬಂದು—ಈ ಶೈಲವನ್ನು (ಶ್ರೀಶೈಲವನ್ನು) ಮಾಡದೆ ಇದ್ದಿದ್ದರೆ, ಈ ಪರ್ವತವು ಇಷ್ಟೊಂದು ಹಿರಿಮೆಯುಳ್ಳದ್ದಾಗಿ ಶೋಭಿಸುತ್ತಿತ್ತೆ ?—ಆ ಮಂದಾರಪರ್ವತ, ಮೇರುಪರ್ವತ, ಅಸ್ತಾಚಲಗಳು ಕೀಳುವುದಕ್ಕೆ ಬಗ್ಗಿಸುವುದಕ್ಕೆ ಒತ್ತರಿಸುವುದಕ್ಕೆ ಸಾಧ್ಯವಾಗುತ್ತಿದ್ದುವೇ ? [ಹೀಗೆಂದರೆ—ಮಂದರಪರ್ವತವು ಸಮುದ್ರ ಮಥನ ಕಾಲದಲ್ಲಿ ದೇವಾಸುರರಿಂದ ಕೀಳಲ್ಪಟ್ಟಿತು ; ಮೇರು ಪರ್ವತವು ತ್ರಿಪುರ ಸಂಹಾರ ಕಾಲದಲ್ಲಿ ಬಿಲ್ಲಾಗಿ ಬಾಗಿಹೋಯಿತು ; ಅಸ್ತಾಚಲವು ಪಶ್ಚಿಮ ಸಮುದ್ರದ ತೀರದಲ್ಲಿರುವುದರಿಂದ ಸಮುದ್ರದಿಂದ ಹಿಂದಕ್ಕೆ ಒತ್ತರಿಸಲ್ಪಟ್ಟಿತು—ಎಂದು ತಾತ್ಪರ್ಯ.]

---

1 ಂದ್ರ(ಚ, ಗ) 2 ಮೆ(ಮು, ಜ)

ಹರನೇತ್ರತ್ರಯುವುಂಜುಳ ತ್ರಿದಳಸಂದೋಹಾವಿಳದ್ದೀರ್ಘಭಾ
ಸುರ ಶಾಖಾನ್ವಿತಮಾಶ್ರಿತಪ್ರಕರಮೋಘ ಶ್ರೀಕರಂ ತಾಪಸೋ
ತ್ಕರಸಂಸೇವಿತಮಾತ್ಮವೈಭವಜಿತಸ್ವರ್ಣಂದನಂ ಕಣ್ಗೆ ಬಂ
ಧುರಮಾಗಿರ್ದುದು ತತ್ಕುಭೃತ್ಕಟಕದೊಳ್ಬಿಲ್ವೀವನಂ ಪಾವನಂ ೨೧

ವ॥ ತದ್ಬಿಲ್ವೀವನವಲಯಾಂತರಾಳಭಾಸುರಮೆನಿಸಿ—

ನುತರುದ್ರಾಕ್ಷಧರಾಧರಪ್ರತತಿರುದ್ರಾಕ್ಷಕ್ಷಮಾಜಾತ ಸಂ
ತತಿ ರುದ್ರಾಕ್ಷಖನಿಪ್ರತಾನಮುರು ರುದ್ರಾಕ್ಷಾಪಗಾಪಾಳಿ ಸಂ
ಗತಭಸ್ಮಾಚಲಪಙ್ತಿ ಭಸ್ಮತರುಷಂಡಂ ಭಸ್ಮನದ್ಯಾಳಿ ವಿ
ಶ್ರುತ ಸದ್ಭಸ್ಮಖನಿವ್ರಜಂ ನೆಱೆಗುಮತ್ಯಾಶ್ಚರ್ಯಮಂ ಬೀಱುತುಂ ೨೨

ಲಿಂಗಧರಾಧರಪ್ರತತಿ ಲಿಂಗಮಹೀರುಹಪಙ್ತಿ ಲಿಂಗತೀ
ರ್ಥಂಗಳ ರಾಜಿ ಲಿಂಗತಟನೀತತಿ ಜಂಗಮಶೈಲಸಂಕುಲಂ
ಜಂಗಮಪಾದಪಾಳಿ ಘನಜಂಗಮಗುಲ್ಮವಿತಾನಮುಲ್ಲಸ
ಜ್ಜಂಗಮವಲ್ಲರೀಸಮಿತಿ ಕಣ್ಗೆಸೆದಿರ್ದುದು ಮಾದಿರಾಜನಾ ೨೩

೨೧. ಆ ಪರ್ವತದ (ತತ್‌ಕುಭೃತ್) ತಪ್ಪಲು ಪ್ರದೇಶದಲ್ಲಿ, ಈಶ್ವರನ ಮೂರು ಕಣ್ಣುಗಳೋಪಾದಿಯಲ್ಲಿ, ಮನೋಹರವಾದ ಮೂರು ಎಸಳುಗಳ ಸಮೂಹದಿಂದ ಎಲ್ಲಾ ಕಡೆಯಲ್ಲೂ ತುಂಬಿರುವ, ಉದ್ದವೂ, ಪ್ರಕಾಶಮಾನವೂ ಆದ ಕೊಂಬೆಗಳಿಂದ ಕೂಡಿದವೂ, ಆಶ್ರಯಿಸಿದ ಜನಸಮೂಹಕ್ಕೆ ಮುಕ್ತಿಯ ಸಂಪತ್ತನ್ನುಂಟುಮಾಡು ವಂಥವೂ, ಋಷಿಗಳ ಸಮೂಹದಿಂದ ಸೇವಿಸಲ್ಪಟ್ಟವೂ, ತನ್ನ ವೈಭವದಿಂದ ಸ್ವರ್ಗ ಲೋಕದಲ್ಲಿರುವ ಉಪವನವನ್ನು ಜೈಸಿದವೂ, (ದೇವೇಂದ್ರನ ಉದ್ಯಾನವನವನ್ನು ಜಯಿಸಿದವೂ) ಆದ ಪರಿಶುದ್ಧ ಬಿಲ್ವವೃಕ್ಷ (ಬಿಲ್ವೀ) ಗಳ ಕಾಡು ಕಣ್ಣಿಗೆ ಬಂಧುರವಾಗಿ ಇತ್ತು. ವ॥ ಆ ಬಿಲ್ವವೃಕ್ಷಗಳ ಮಂಡಲದ ಮಧ್ಯಭಾಗದಲ್ಲಿ ಮನೋಹರವಾದು ದೆನಿಸಿ—೨೨. ಶ್ಲಾಘ್ಯಗಳಾದ ರುದ್ರಾಕ್ಷಗಳ ಬೆಟ್ಟಗಳ ಸಮೂಹ, ರುದ್ರಾಕ್ಷಗಳ ಮರಗಳ ಸಮೂಹ, ರುದ್ರಾಕ್ಷಗಳ ಗಣಿಗಳ ಸಮೂಹ, ಉತ್ಕೃಷ್ಟ ರುದ್ರಾಕ್ಷಗಳ ಹೊಳೆ ಗಳ ಸಾಲು, ವಿಭೂತಿಯಿಂದ ಕೂಡಿದ ಬೆಟ್ಟಗಳ ಸಾಲು, ವಿಭೂತಿಯ ಮರಗಳ ಗುಂಪು, ವಿಭೂತಿಯ ಹೊಳೆಗಳ ಸಮೂಹ, ಪ್ರಸಿದ್ಧವೆನಿಸಿದ ವಿಭೂತಿಗಳ ಗಣಿಗಳು (ಇವುಗಳು) ಅತ್ಯಂತ ಆಶ್ಚರ್ಯಯುಕ್ತವಾಗಿ (ಅಲ್ಲಿ) ಶೋಭಿಸುತ್ತಿದ್ದವು. ೨೩. ಲಿಂಗಗಳ ಬೆಟ್ಟಗಳ ಸಮೂಹ, ಲಿಂಗದ ಮರಗಳ ಗುಂಪು, ಲಿಂಗದ ತೀರ್ಥಗಳ ಸಮೂಹ, ಲಿಂಗದ ಹೊಳೆ ಗಳ ಗುಂಪು, ಜಂಗಮಶೈಲ ಸಂಕುಲ, ಜಂಗಮ ಮರಗಳ ಸಮೂಹ, ಜಂಗಮ ಪೊದೆ ಗಳ ಸಮೂಹ, ಹೆಚ್ಚಾಗಿ ಪ್ರಕಾಶಿಸುವ ಜಂಗಮ ರೂಪದ ಬಳ್ಳಿಗಳ ಗುಂಪು, ಆ

ನುಡಿವ ಲತೆ ನುಡಿವ ಗಿರಿತತಿ
ನುಡಿವ ಮಹಾಗುಲ್ಮಸವಿತತಿ ನುಡಿವಗನಿವಹಂ
ನಡೆವ ಲತೆ ನಡೆವ ಗಿರಿತತಿ
ನಡೆವ ಮಹಾಗುಲ್ಮವಿತತಿ ನಡೆವಗನಿವಹಂ ೨೪

ಪಾಡುವ ಪಕ್ಷಿ ಪಾಡುವ ಮಹಾಫಣಿ ಪಾಡುವ ಭೃಂಗಸಂಕುಳಂ
ಪಾಡುವ ದಂತಿ ಪಾಡುವ ಮೃಗಾವಳಿ ಪಾಡುವ ಸಿಂಹಸಂಚಯಂ
ಪಾಡುವ ವಾನರಪ್ರತತಿ ಪಾಡುವ ಶೈಲಲತಾತರುವ್ರಜಂ
ಪಾಡುವ ಗುಲ್ಮನಿಮ್ನಗೆಗಳೊಪ್ಪುಗುಮದ್ಭುತಮಂ ನೆಗಳ್ಚುತುಂ ೨೫

ಕುಣಿವ ಗಿರಿ ಕುಣಿವ ತರುಗ
ಳ್ಕುಣಿವಹಿ ಕುಣಿವಂಡಜಾಳಿ ಕುಣಿವ ಮೃಗಂಗ
ಳ್ಕುಣಿವ ಲತೆ ಕುಣಿವ ಗುಲ್ಮಂ
ಕುಣಿವ ಕಪಿವ್ರಾತಮೇಂ ಮನಂಗೊಳಿಸಿದುವೋ[1] ೨೬

ಜ್ಯೋತಿರ್ಣದಿ ನವಕಾಷ್ಠ
ಜ್ಯೋತಿ ತೃಣ ಜ್ಯೋತಿ ವಾಲುಕ ಜ್ಯೋತಿ ಶಿಲಾ

ಮಾದಿರಾಜನ ಕಣ್ಣಿಗೆ ಶೋಭಿಸುತ್ತಿದ್ದವು. ೨೪-೨೫. ಮಾತನಾಡುವ ಬಳ್ಳಿ, ನುಡಿಯುವ ಗುಡ್ಡಗಳ ಸಮೂಹ, ನುಡಿಯುವ ದೊಡ್ಡದೊಡ್ಡ ಪೊದೆಗಳ ಸಮೂಹ, ಮಾತನಾಡುವ ಮರಗಳ ಗುಂಪು, ನಡೆದಾಡುವ ಬಳ್ಳಿ, ನಡೆದಾಡುವ ಗುಡ್ಡಗಳ ಸಮೂಹ, ನಡೆದಾಡುವ ಪೊದೆಗಳ ಗುಂಪು, ನಡೆದಾಡುವ ಪರ್ವತಗಳ ಸಾಲು, ಹಾಡುವ ಪಕ್ಷಿಗಳು, ಹಾಡುವ ಹಾವುಗಳು, ಹಾಡುವ ಭ್ರಮರಗಳ ಸಮೂಹ, ಹಾಡುವ ಆನೆ, ಹಾಡುವ ಮೃಗಗಳ ಸಮೂಹ, ಹಾಡುವ ಸಿಂಹಗಳ ಗುಂಪು, ಹಾಡುವ ಕಪಿಗಳ ಸಮೂಹ, ಹಾಡುವ ಗುಡ್ಡ, ಬಳ್ಳಿ, ಗಿಡಗಳ ಸಮೂಹ, ಹಾಡುವ ಪೊದೆಗಳು, ನದಿಗಳು, (ನೋಡುವವರಿಗೆ) ಅದ್ಭುತವನ್ನುಂಟುಮಾಡುತ್ತ ಒಪ್ಪುತ್ತಿದ್ದವು. ೨೬. ಕುಣಿದಾಡುವ ಬೆಟ್ಟ, ಕುಣಿದಾಡುವ ಗಿಡ, ಕುಣಿದಾಡುವ ಹಾವು. ಕುಣಿದಾಡುವ ಪಕ್ಷಿ, ಕುಣಿದಾಡುವ ಮೃಗಗಳು, ಕುಣಿದಾಡುವ ಲತೆ, ಕುಣಿದಾಡುವ ಪೊದೆ, ಕುಣಿದಾಡುವ ಕೋತಿಗಳ ಸಮೂಹ. ಏನು ಮನೋಹರವಾಗಿದ್ದುವೊ ! ೨೭-೨೮. ಜ್ಯೋತಿ ರೂಪವಾದ ಹೊಳೆ, ನೂತನವಾದ ಕಟ್ಟಿಗೆಗಳ ಜ್ಯೋತಿ ತೇಜೋರೂಪವಾದ ಹುಲ್ಲು, ತೇಜೋ ರೂಪವಾದ ಮಳಲು,

1 ದೊ(ಮು, ದ)

ಜ್ಯೋತಿ ಜಲಗಿರಿ ಜಲಾವನಿ
ಜಾತಂ ಜಲಹರಿಣಸಮಿತಿ ಜಲವಿಹಗ ಕುಲಂ ೨೭

ನಾನಾವರ್ಣಮನಾಳ್ದ ಶೈಲತತಿ ನಾನಾವರ್ಣ ಭೂಜೋತ್ಕರಂ
ನಾನಾವರ್ಣದ ವಲ್ಲರೀವಿತತಿ ನಾನಾವರ್ಣಗುಲ್ಮವ್ರಜಂ
ನಾನಾರೂಪಮಹೀಧರಪ್ರತತಿ ನಾನಾರೂಪ ಭೂರುಟ್ಚಯಂ
ನಾನಾರೂಪ ಲತಾಳಿ ಗುಲ್ಮನಿವಹಂ ತೀವಿರ್ಪುದಾ ತಾಣದೊಳ್ ೨೮

ಖೇಚರಾಚಲರಾಜಿ ಖೇಚರ ಭೂಜಗುಲ್ಮಸಮುತ್ಕರಂ
ಖೇಚರಾತುಳವ[1]ಲ್ಲಿಕಾತತಿ ಹರ್ಮ್ಯರೂಪಗಿರಿವ್ರಜಂ
ಪ್ರಾಚುರಂ ಮಣಿಹರ್ಮ್ಯರೂಪನಗಾಳಿ ಹರ್ಮ್ಯ ಲತಾಚಯಂ
ರೋಚಿರುಜ್ವಳ ಹರ್ಮ್ಯಗುಲ್ಮವಿತಾನವೊಪ್ಪಿದುದೇಳ್ಗೆಯಿಂ ೨೯

ನರರೂಪಧರಾಧರತತಿ
ನರರೂಪಮಹೀಜರಾಜಿ ರಂಜಿಸಿದುದು ಮೇ
ಣ್ಸುರರೂಪಗಿರಿ ಕದಂಬಂ
ಸುರರೂಪಮನಾಳ್ದ ವಿಟಪಿಸಂಕುಳಮದಱೊಳ್ ೩೦

ತೇಜೋ ರೂಪವಾದ ಕಲ್ಲು; ನೀರಿನ ಬೆಟ್ಟ, ನೀರಿನ ಮರ, ನೀರಿನ ಜಿಂಕೆಗಳ ಗುಂಪು, ನೀರಿನ ಹಕ್ಕಿಗಳ ಗುಂಪು, ನಾನಾ ಬಣ್ಣಗಳನ್ನು ಹೊಂದಿದ ಗುಡ್ಡಗಳ ಸಮೂಹ, ನಾನಾ ವರ್ಣದ ಮರಗಳ ಸಮೂಹ, ನಾನಾ ಬಣ್ಣದ ಬಳ್ಳಿಗಳ ಸಮೂಹ, ನಾನಾ ಬಣ್ಣದ ಪೊದೆಗಳ ಗುಂಪು, ನಾನಾ ವರ್ಣದ ಪರ್ವತಗಳ ಸಮೂಹ, ನಾನಾ ರೂಪದ ಗಿಡಗಳ ಸಮೂಹ, ನಾನಾ ರೂಪದ ಲತೆಗಳ ಮತ್ತು ಪೊದೆಗಳ ಸಮೂಹ, ಆ ಸ್ಥಾನ ದಲ್ಲಿ ತುಂಬಿತ್ತು. ೨೯. ಆಕಾಶದಲ್ಲಿ ಸಂಚರಿಸುವ ಬೆಟ್ಟಗಳ ಸಾಲುಗಳು, ಆಕಾಶದಲ್ಲಿ ಸಂಚರಿಸುವ ಗಿಡ ಪೊದೆಗಳ ಗುಂಪು, ಅಂತರಿಕ್ಷದಲ್ಲಿ ಸಂಚರಿಸುವ ಅಸದೃಶ ಬಳ್ಳಿಗಳ ಸಮೂಹ, ಉಪ್ಪರಿಗೆಗಳ ಆಕಾರದ ಗುಡ್ಡಗಳ ಸಾಲು, ಪ್ರಸಿದ್ಧವಾದ ರತ್ನದ ಉಪ್ಪರಿಗೆಗಳಂತಿರುವ ಮರಗಳ ಸಾಲು, ಉಪ್ಪರಿಗೆಗಳಂತಿರುವ ಬಳ್ಳಿಗಳ ಸಮೂಹ, ಕಾಂತಿಯಿಂದ ಪ್ರಕಾಶಮಾನವಾದ ಉಪ್ಪರಿಗೆಗಳಂತಿರುವ ಪೊದೆಗಳ ಸಮೂಹ, ಏಳ್ಗೆ ಗೊಂಡು ಒಪ್ಪಿತ್ತು. ೩೦. ಮೃಗಗಳ ರೂಪದ ಗಿರಿಗಳ ಸಮೂಹ, ಮೃಗ ರೂಪದ ಗಿಡಗಳ ಸಮೂಹ, ಮತ್ತು ಪಕ್ಷಿರೂಪವುಳ್ಳ ಪರ್ವತಗಳ ಸಮೂಹ, ಪಕ್ಷಿಗಳ ರೂಪದ

1 ಮ(ದ, ಗ)

ಮೃಗರೂಪಭೂ[1]ಧರಾವಳಿ
ಮೃಗರೂಪ ಮಹೀರುಹಾಳಿ ಕಣ್ಗೆಸೆದುದು ಮೇ
ಣ್ಖಗರೂಪ ಶೈಲಸಂತತಿ
ಖಗರೂಪ ತರುಪ್ರತಾನಮಾ ಶ್ರೀಗಿರಿಯೊಳ್ ೩೧

ಪ್ರಸೂತ ಭೂತಾಳಿ ನಗಾಗಸಂಕುಳಂ
ವಸಂತಲಕ್ಷ್ಮೀಚಿರಭೃತ್ತರುವ್ರಜಂ
ಲಸತ್ಸುರಾಧೀಶ ಭಯಂಕರ ಪ್ರಭಾ
ಪ್ರಸನ್ನ ಶೈಲಾವಳಿಯಲ್ಲಿ ರಂಜಿಕುಂ ೩೨

ವರಗಂಧರ್ವಸ್ವರೂಪಂಬಡೆದ ತರುಲತಾಗುಲ್ಮಶೈಲಪ್ರತಾನಂ
ಕರಮೊಂದುಂ ಛಾಯೆಯಲ್ಲಾಡದ ಗಿರಿತರುವೃಂದಂ ನೆಳಲ್ಗೆಟ್ಟ ಭೂಜೋ
ತ್ಕರಮದ್ರಿವ್ರಾತಮುಂ ದೂರದೆ ನೆಳಲೆಸೆವತ್ಯುನ್ನತ ಕ್ಷ್ಮಾಜ ಧಾತ್ರೀ
ಧರಜಾತಂ ಬೆಟ್ಟುಬೆಟ್ಟೊಳ್ಕೆರೆಯೆ ಜವದೆ ಪುಟ್ಟಿರ್ದ ಬಾಲಾಚಲೌಘಂ ೩೩

ತರುತರುಯೋಗದಿಂ ಜನಿಯಿಪರ್ಭಕಪಾದಪರಾಜಿ ಭೂಧರೋ
ತ್ಕರಮಿರದೋಲಗಂಗುಡೆ ವಿರಾಜಿಪ ರಾಜಮಹೀಧರಾಳಿ ವಿ
ಸ್ತರ ಧರಣೀರುಹಪ್ರತತಿಯೋಲಗಿಸುತ್ತಿರೆ ಬಾಳ್ವ ಧಾರಿ[2]ಣೀ
ವರತರುಜಾತಮದ್ರಿಯಡರ್ವದ್ರಿಗಳಂತೆಸಪಂಘ್ರಿಪವ್ರಜಂ ೩೪

ಗಿಡಗಳ ಸಮೂಹ, ಆ ಶ್ರೀಶೈಲ ಪರ್ವತದಲ್ಲಿ ಕಣ್ಣಿಗೆ ಶೋಭಿಸುತ್ತಿತ್ತು. ೩೧. ಮನುಷ್ಯರೂಪದ ಪರ್ವತಗಳ ಸಮೂಹ, ಮನುಷ್ಯರೂಪದ ಗಿಡಗಳ ಸಮೂಹ ಮತ್ತು ದೇವತೆಗಳ ಆಕಾರದ ಪರ್ವತಗಳ ಗುಂಪು, ದೇವತೆಗಳ ರೂಪವನ್ನು ಹೊಂದಿದ ವೃಕ್ಷಗಳ ಸಮೂಹ ಇವು ಆ ಶ್ರೀಶೈಲ ಪರ್ವತದಲ್ಲಿ ರಂಜಿಸುತ್ತಿದ್ದವು. ೩೨. ಆ ಪರ್ವತದಲ್ಲಿ ಮರಿಗಳನ್ನು ಹಾಕಿದ ಪ್ರಾಣಿಗಳ ಸಮೂಹವುಳ್ಳ ಪರ್ವತ ಮತ್ತು ಮರಗಳ ಸಮೂಹವೂ, ವಸಂತ ಕಾಲದ ಲಕ್ಷ್ಮಿಯನ್ನು ಅನೇಕಕಾಲ ಧರಿಸಿರುವ (ಚಿರಕಾಲ ಧರಿಸಿರುವ) ಮರಗಳ ಗುಂಪೂ, ಪ್ರಕಾಶಿಸುವ ದೇವೇಂದ್ರನಿಗೆ ಭೀತಿಯನ್ನುಂಟು ಮಾಡುವ ಕಾಂತಿಯಿಂದ ನಿರ್ಮಲವಾಗಿ ಕಾಣುವ ಬೆಟ್ಟಗಳ ಸಮೂಹವೂ ರಂಜಿಸುತ್ತಿತ್ತು. ೩೩-೩೭. ಶ್ರೇಷ್ಠರಾದ ಗಂಧರ್ವರ ಸ್ವರೂಪವನ್ನು ಪಡೆದ ಗಿಡ, ಬಳ್ಳಿ, ಪೊದೆ, ಬೆಟ್ಟಗಳ ಸಮೂಹವೂ, ಚೆನ್ನಾಗಿ ಯಾವಾಗಲೂ ನೆಳಲೇ ಚಲಿಸದಂತಹ ಗುಡ್ಡ ಮತ್ತು ಗಿಡಗಳ ಸಮೂಹವೂ, ನೆಳಲೇ ಇಲ್ಲದಿರುವಂತಹ ಮರಗಳ ಗುಂಪು ಮತ್ತು ಗುಡ್ಡಗಳ ಸಮೂಹವೂ, ದೂರದಲ್ಲಿರುವ ನೆಳಲಿನಿಂದ ಶೋಭಿಸುವ ಬಹು ದೊಡ್ಡದಾಗಿರುವ ಮರ ಮತ್ತು ಬೆಟ್ಟಗಳ ಗುಂಪೂ (ಅಂದರೆ ಬೆಟ್ಟ ಮರಗಳು ಒಂದು ಕಡೆಯಿದ್ದರೆ ಅವುಗಳ ನೆಳಲು ಬಹು ದೂರದಲ್ಲಿ ಕಾಣುವಿಕೆ), ಒಂದು ಬೆಟ್ಟವು ಇನ್ನೊಂದು ಬೆಟ್ಟದೊಡನೆ ಸಂಗಮಗೊಳ್ಳಲು (ಸಂಯೋಗಗೊಳ್ಳಲು), ಅವುಗಳಿಂದ ಅತಿ ಶೀಘ್ರವಾಗಿ

1 ಧರ(ಮು) 2 ರು(ಮು)

ಅಡದೊರ್ಡೆ ಸಮಸ್ತ ಲೋಕಮು
ನೆಡೆವಱಿಯದೆ ತೋರ್ಪ ಗಿರಿತರುವ್ರಜಮುಣ್ಬಿಂ
ದಡದುರ್ಂಕಿಸೆ ನೆನೆದಲ್ಲಿಗೆ
ಕಡುವೇಗದೆ ಪೊತ್ತು ಪರಿವ ನಗಮಹಿಜಕುಳಂ ೩೫

ಮಳೆಗಾಳಿ ಬಿಸಿಲ್ಬೊನ್ನಂ
ಗಳನೊಲವಿಂ ಕಾಲಮುಱಿದು ಕಱ[1]ವ ಮಹೀಜಾ
ವಳಿಯುಡದೊರ್ಡನ್ಯರೂಪಂ
ಕೆ[1]ಳೆಗೊಳಿಪ ಮಹೀಧರಾಳಿ ಭೂಜಸಮಾಜಂ ೩೬

ಮೃಗಮರ್ಧಂ ನಗಮರ್ಧಂ
ಖಗಮರ್ಧಂ ಭೂಜಮರ್ಧಮೆನಿಪಚ್ಚರಿಯುಂ
ನೆಗಳ್ವಗವಿಟಪಿಕದಂಬಂ
ಬಗೆಗೊಂಡುದು ಮಾದಿರಾಜ ಮಾಹೇಶ್ವರನಾ ೩೭

ಹುಟ್ಟಿದ ಮರಿ ಬೆಟ್ಟಗಳ ಸಮೂಹವೂ, ಮರಮರಗಳ ಸಂಯೋಗದಿಂದ ಹುಟ್ಟಿದ ಎಳೆಯ ಮರಗಳ ಸಮೂಹವೂ, ಬೆಟ್ಟಗಳ ಗುಂಪು ತಪ್ಪದೆ ಸೇವೆಯನ್ನು ಕೊಡಲಾಗಿ ಶೋಭಿಸುವ ಅರಸು ಬೆಟ್ಟಗಳ ಸಾಲೂ, ವಿಶಾಲವಾಗಿ ಬೆಳೆದ ಮರಗಳ ಸಮೂಹವು ಸೇವಿಸುತ್ತಿರಲು, ಬಾಳುವ (ಶೋಭಿಸುವ) ಅರಸು ಗಿಡಗಳ ಸಮೂಹವೂ, ಬೆಟ್ಟವನ್ನು ಹತ್ತುವ ಬೆಟ್ಟಗಳಂತೆ ಶೋಭಿಸುವ ಮರಗಳ ಗುಂಪೂ, ಹತ್ತಿದರೆ ಸಮಸ್ತ ಲೋಕವನ್ನು ಬೇರೊಂದು ಕಡೆಗೆ ಹೋಗದ ಹಾಗೆ ಕಾಣಿಸುವ ಗುಡ್ಡ ಗಿಡಗಳ ಸಮೂಹವೂ, ಶೌರ್ಯದಿಂದ ಹತ್ತಿ ಅದುಮಿದರೆ (ಹತ್ತಿದವನು) ಸ್ಮರಿಸಿದ ಸ್ಥಳಕ್ಕೆ ಹೊತ್ತುಕೊಂಡು ಓಡುವ ಪರ್ವತ ಮತ್ತು ಮರಗಳ ಸಮೂಹವೂ, ಮಳೆ, ಗಾಳಿ, ಬಿಸಿಲು, ಬೆಳದಿಂಗಳುಗಳನ್ನು ಪ್ರೀತಿಯಿಂದ ಸಮಯವನ್ನರಿತು ಸುರಿಸುವ ಗಿಡಗಳ ಸಮೂಹವೂ, ಹತ್ತಿದರೆ ಮತ್ತೊಂದು ಆಕಾರವನ್ನು (ಹತ್ತಿದವನಿಗೆ) ಉಂಟು ಮಾಡುವ ಗುಡ್ಡ ಮತ್ತು ಮರಗಳಿಂದಲೂ, ಅರ್ಧಭಾಗವು ಮೃಗದ ರೂಪ, ಅರ್ಧ ಗುಡ್ಡ, ಅರ್ಧ ಪಕ್ಷಿ, ಅರ್ಧಗಿಡ ಎನಿಸುವಂತಹ ಆಶ್ಚರ್ಯವನ್ನುಂಟುಮಾಡುವ ಬೆಟ್ಟ ಗಿಡಗಳ ಸಮೂಹವೂ ಆ

---

1 ೯(ದ, ಅ)

ಅಂದಂಬಡೆದಿನಿವಣ್ಣಂ
ಕುಂದದೆ ಸಲೆ ಗಳಿಗೆಗಳಿಗೆಗಳ್ಗೊಲವಿಂದೊಂ
ದೊಂದನುದಿರ್ಚುವ ಭೂರುಹ
ವೃಂದವುಮೊರ್ಮೊರ್ಮೆ ಕೂಗುವಚಲವಿತಾನಂ ೩೮

ಮೊದಲಂ ತಱಿದೊಡೆ ಮೊದಲಂ
ದದೆ ಪತ್ತುವ ಭೂಧರಾಳಿಯುಂ ತರುಕುಳಮುಂ
ಮೊದಲೆಡೆಯಿಂ ತೆಗೆದಿಡೆ ತ
ಪ್ಪದೆ ಮೊದಲೆಡೆಗೆಯ್ದಿ ನಿಲ್ವ ಕಲ್ಗಳ ತತಿಯುಂ ೩೯

ಬಿಳಿಯಾನೆ ಬಿಳಿಯ ಪೆರ್ಬುಲಿ
ಬಿಳಿಯ ಪಿಕಂ ಬಿಳಿಯ ತುಂಬಿ ಬಿಳಿಯ ಕುರಂಗಂ
ಬಿಳಿಯ ಕಪಿ ಬಿಳಿಯ ಭಲ್ಲಂ[1]
ಬಿಳಿಯ ವರಾಹಂಗಳಲ್ಲಿ ಮೆಱೆಗುಮಳುಂಬಂ ೪೦

ಕರಿಯ ಮರಾಲಂ ಕರಿಯ ಶುಕಂ
ಕರಿಯ ಮರಾಳಾಳಿ ಕರಿಯ ಕಂಠೀರವಮುಂ
ಕರಿಯುರಲ ಮಲ್ಲಿಕಾಲತೆ
ಕರಿಯ ಚಕೋರಾಳಿ ಚಿತ್ರಮೆನೆ ಕಂಗೊಳಿಕುಂ ೪೧

ಮಾಹೇಶ್ವರನಾದ ಮಾದಿರಾಜನ ಮನಸ್ಸನ್ನು ಆಕರ್ಷಿಸಿತು. ೩೮-೩೯. ಸ್ವಲ್ಪವೂ ಕಡಿಮೆಯಾಗದೆ ಚೆನ್ನಾಗಿ ಗಳಿಗೆ ಗಳಿಗೆಗೆ (ಪ್ರತಿಗಳಿಗೆಗೂ) ಒಲವಿನಿಂದ ಚೆಂದವನ್ನು ಹೊಂದಿದ ಮಧುರವಾದ ಫಲವನ್ನು ಒಂದೊಂದನ್ನಾಗಿ ಉದುರಿಸುವ ಮರಗಳ ಸಮೂಹವೂ, ಒಮ್ಮೊಮ್ಮೆ ಕೂಗುವ ಬೆಟ್ಟಗಳ ಗುಂಪೂ, ಬುಡವನ್ನು ಕತ್ತರಿಸಿದರೆ ಮೊದಲಿನ ರೀತಿಯಲ್ಲಿ ಪುನಃ ಹತ್ತಿಕೊಳ್ಳುವ ಬೆಟ್ಟಗಳ ಸಾಲೂ ಮತ್ತು ಗಿಡಗಳ ಸಮೂಹವೂ, ಮೊದಲ ಸ್ಥಳದಿಂದ ತೆಗೆದು ಇಟ್ಟರೆ ತಪ್ಪದೆ ಮೊದಲಿನ ಸ್ಥಳಕ್ಕೆ ಬಂದು ನಿಲ್ಲುವ ಕಲ್ಲುಗಳ ಸಮೂಹವೂ (ಆ ಮಾದಿರಾಜನ ಕಣ್ಣಿಗೆ ಕಾಣಿಸಿದವು). ೪೦. ಅಲ್ಲಿ ಬೆಳ್ಳಗಿರುವ ಆನೆ, ಬಿಳಿಯ ಹೆಬ್ಬುಲಿ, ಬಿಳಿಯ ಕೋಗಿಲೆ, ಬಿಳಿಯ ತುಂಬಿ, ಬಿಳಿಯ ಜಿಂಕೆ, ಬಿಳಿಯ ಕಪಿ, ಬಿಳಿಯ ಕರಡಿ, ಬಿಳಿಯ ಹಂದಿಗಳು, ಹೆಚ್ಚಾಗಿ ಮೆರೆಯುತ್ತಿದ್ದವು. ೪೧. ಕಪ್ಪು ಬಣ್ಣದ ಮೊಲ, ಕರಿಯ ಗಿಳಿ, ಕರಿಯ ಹಂಸ ಪಕ್ಷಿಗಳ ಸಾಲು, ಕರಿಯ ಸಿಂಹ, ಕರಿಯ ಹೂವಿನ ಮಲ್ಲಿಗೆ ಬಳ್ಳಿ ಕರಿಯ ಚಕೋರ ಪಕ್ಷಿಗಳ ಸಾಲು ಆಶ್ಚರ್ಯವೋ

---

1 ಲ್ಲುಂ(ದ)

ಹರಿಕರಿಯಂತೆ ತೋರ್ಪ ಕರಿ ದುರ್ಗೆಯ ಕೇಸರಿಯಂತಿರ್ಪ ಕೇ
ಸರಿ ಯಮರಾಜನೆಳ್ತರದ ಕೋಣನವೋಲ್ಬಗೆಗೊಳ್ವ ಕೋಣನೀ
ಶ್ವರ ಕರದೇಣನಂತಿರೆಸೆವೇಣನುದಗ್ರಮುರಾರಿ ತಾರ್ಕ್ಷ್ಯಮಂ
ಪರಿಕಿಸೆ ಪೋಲ್ವ ತಾರ್ಕ್ಷ್ಯಮೆಸೆಗುಂ ಘನಘೋರವನಾಂತರಾಳದೊಳ್ ೪೨

ವ॥ ಮತ್ತಮಾ ಗಹನಾಂತರಾಳದೊಳತಿ ವಿಚಿತ್ರಮೆನಿಸಿ ರವಿಯೊಡನುದಯಂಬಡೆದು ಮಧ್ಯಂ ದಿನದೊಳಿನನಂ ಮುಟ್ಟಿ ದಿನಮಣಿಯೊಡನಿಳಿದಹಪ್ಪತಿಯೊಡನಸ್ತಮಿಪ ಭಾಸ್ಕರತಾಳತರುಗಳುಂ ತತ್ಪ್ರಕಾರಮನಾಳ್ದಹಸ್ಕರ ಗಿರಿಗಳುಂ ಚತುರ್ದಿಶಾವಲಂಬಿ ಚತುಃಶಿಖರಾಗ್ರಮನೇಱೆ [1]ಹರಪುರ[1] ಚತುರ್ದ್ವಾರಮಂ ಕಾಣಿಪ ವನಸ್ಪತಿಗಳುಂ ತದ್ವಿಧಮಾದ ನಗತತಿಗಳುಂ ತುದಿಗೋಡನಾರೋಹಿಸಿದ ಮನುಜರಂ ಪಾತಾಳಗಂಗಾಜಲದೊಳೋಲಾಡಿಸುವ ಗಂಗಾಜನಿತ ಕುಜವ್ಯೂಹಮುಮಾಪರಿಗೆಯ್ವ ಗಂಗಾಜನಿತ ಶೈಲಸಮೂಹಮುಂ ಮೇಲನಾರೋಹಿಸಿದರ್ಥಿಜನಮನಷ್ಟಾಪಷ್ಟಿತೀರ್ಥಮಂ ಕಾಣಿಸಿ ತುಷ್ಟಿವಡಿಪಷ್ಟಾಪಷ್ಟಿ ಭೂರುಹಪ್ರಕರಮುಮಂತಪ್ಪ ಭೂಧರನಿಕರಮುಂ ಪರಸ್ಪರ ನಿಘರ್ಷಣದಿ ನೊಗೆದಡವಿಯಂ ಸುಡಲೊಡರ್ಚುವನಲನುರಿಯಂ ಮುಂಜುಗಱೆದು ನಂದೆಯ್ವ ಪಾದಪಪ್ರತಾನ

ಎನ್ನುವಂತೆ ಕಂಗೊಳಿಸುತ್ತಿತ್ತು. ೪೨. ಇಂದ್ರನ ಆನೆಯ ಹಾಗೆ ಕಾಣುವ ಆನೆ, ಪಾರ್ವತಿಯ ಸಿಂಹದಂತೆ (ಪಾರ್ವತಿಯ ವಾಹನವಾದ ಸಿಂಹದಂತೆ) ಇರುವ ಸಿಂಹ, ಯಮಧರ್ಮ ರಾಜನ ಎತ್ತರವಾದ ಕೋಣನಂತೆ ಮನೋಹರವಾಗಿ ಕಾಣುವ ಕೋಣ, ಶಿವನ ಕಯ್ಯಲ್ಲಿರುವ ಜಿಂಕೆಯಂತೆ ಶೋಭಿಸುವ ಜಿಂಕೆಗಳು, ಪರೀಕ್ಷಿಸಿ ನೋಡಿದರೆ ಉತ್ಕೃಷ್ಟವಾದ ವಿಷ್ಣುವಿನ ಗರುಡವನ್ನು ಹೋಲುವ ಗರುಡನೂ, ದಟ್ಟವಾಗಿಯೂ ಭಯಂಕರವಾಗಿಯೂ ಬೆಳೆದಿರುವ (ಆ) ಕಾಡಿನ ಮಧ್ಯದಲ್ಲಿ ಶೋಭಿಸುತ್ತಿದ್ದವು.
ವ॥ ಮತ್ತು ಆ ಅರಣ್ಯ ಮಧ್ಯದಲ್ಲಿ—ಅತಿ ವಿಚಿತ್ರವೆನಿಸಿ ಸೂರ್ಯೋದಯದೊಡನೆಯೇ ಹುಟ್ಟಿ ಮಧ್ಯಾಹ್ನದಲ್ಲಿ ಸೂರ್ಯನನ್ನು ಮುಟ್ಟಿ, ಸೂರ್ಯನು ಇಳಿಯುತ್ತಿರುವಂತೆಯೇ ಪುನಃ ಇಳಿದು ಸೂರ್ಯ ಮುಳುಗಿದೊಡನೆಯೇ ಮುಳುಗುವ ಸೂರ್ಯನಂತಿರುವ ತಾಳೆಯ ಮರಗಳು (ಇದ್ದವು). ಆ ತಾಳೆಯ ಮರಗಳ ರೀತಿಯನ್ನು ಹೊಂದಿದ ಸೂರ್ಯನಂತಿರುವ ಬೆಟ್ಟಗಳು (ಅಂದರೆ ಸೂರ್ಯೋದಯದೊಡನೆ ಹುಟ್ಟಿ, ಮಧ್ಯಾಹ್ನಕ್ಕೆ ಅವನನ್ನು ಮುಟ್ಟಿ ಸೂರ್ಯನು ಇಳಿದಂತೆ ಇಳಿದು ಅವನು ಮುಳುಗಿದೊಡನೆ ಇಲ್ಲದಂತಾಗುವ ಬೆಟ್ಟಗಳು) (ಅಲ್ಲಿದ್ದವು). ನಾಲ್ಕು ದಿಕ್ಕುಗಳನ್ನು ಆಶ್ರಯಿಸಿರುವ ನಾಲ್ಕು ಕೋಡುಗಲ್ಲುಗಳ ತುದಿಯನ್ನು ಹತ್ತಿದರೆ ಕೈಲಸ ನಗರದ ನಾಲ್ಕು ಬಾಗಿಲುಗಳನ್ನು ಕಾಣುವಂತೆ ಮಾಡುವ ವನಸ್ಪತಿಗಳೂ, ಅದೇ ಪ್ರಕಾರದ ಪರ್ವತಗಳೂ (ಅಲ್ಲಿದ್ದವು). ಮರಗಳ ಕೊಂಬೆಯ ತುದಿಯನ್ನೇರಿದ ಮನುಷ್ಯರನ್ನು

---

1 ಪುರಹರಪುರ(ಜ)

ಮುಮಂತೆಗೆಯ್ವ ಪರ್ವತವಿತಾನಮುಂ ಹಿಮಪಾತದಿಂ ಸುಗಿದಡರ್ದವರ್ಗಿರುಳೊಳರ್ಕಾತಪಮುಂ ಬಿಸಿಲ ಬಿಸುಪಿಂ ಬಳಲ್ದಾರೋಹಿಸಿದವರ್ಗೆ ಪಗಲ್ಚಂದ್ರಾತಪಮಂ ಕಱೆವ ವೃಕ್ಷಪ್ರಚಯಮುಮಂತೆ ತೆಱೆದ ಕುತ್ಕೀಲನಿಚಯಮುಂ ನಿರಂತರ ಸುಧಾರಸಪೂರ್ಣೋದೀರ್ಣಮಹೀರುಹತಟಾಕತಟಿನೀದೀರ್ಘಿಕಾಳಿಗಳುಂ ನಿರವಧಿಕ ದಧಿ ಪೂರಿತಾನೋಕಹ ತರಂಗಿಣಿವಾಪಿಕೂಪಪಾಳಿಗಳುಂ ಮಧುರತರಘೃತರಸ ಸಮೃದ್ಧ ಸಾಲಸರೋವರಸರಿತ್ಕದಂಬಮುಂ ನಿಜಾಭ್ಯಂತರಂ ಮಿಸುಪ ಕನಕಮಯಶಿಖರಿ ಧರಣೀರುಹ ಲತಾಗುಲ್ಮತಟಾಕಸರಃಕಮಳವಾಳುಕಾಶೈವಲಮಧುಪಖಗಮೃಗಬಿಲೇಶಯಮಪ್ರಹರ್ಮ್ಯಸುರಾಲಯ ನಿಕುರುಂಬಮುಂ ನವ ನವರತ್ನಮಯಧರಾಧರ ಧರಾರುಹಶಕುಂತ ಹರಿಣ ಫಣಿಸಾಲ ಸೌಧಪುರಮಾತ್ರಮುಮಶ್ವತ್ಥ ನಾಳಿಕೇರ ಕ್ರಮುಕ ಜಂಬೂಜಂಬೀರ ನಾಗಕೇಸರಾಶೋಕಚೂತ ಪನಸ ಘನಸಾರ ಚಂದನ ಸರಳಾನೇಕ ಶಾಖಾವಲಂಬಿತ ಭೂಮಿ ಜಾತ ಸಂಜಾತಮುಮೊಂದೊಂದು ಶಾಖಾಗ್ರದನೇಕ ಗುಚ್ಛಂಗಳೊಳ್ಪ್ರತ್ಯೇಕಮರಲ್ದ ಬಕವಕುಳತಿಲಕ ಚಂಪಕ ಬಂದೂಕ ಕರ್ಣಿಕಾರ ಕರವೀರ ಕೇಸರ ಮಾಧವಿ ಮಾಲತಿ ಮಲ್ಲಿಕಾ ಜಾತಿ ಯೂಥಿಕಾ ಪುನ್ನಾಗ ಕುಂದಾರವಿಂದಮಂದಾರ ಕಲ್ಹಾರ ಕುಸುಮಸಮುದಯಮನಾಳ್ದ ಕಾಶ್ಯಪೀರುಹ ಸಂಘಾತಮುಂ ಕೊಂಬುಕೊಂಬುಗಳೊಂದೊಂದಱೊಳ್ ಸಂದಣಿಸಿ ನಿಲುಂಬಿದ ರಸಾಲ ಪನಸ ಕದಳಿ ಕಪಿತ್ಥ ನಾರಂಗ ಮಾತುಳಂಗ ಗೋಸ್ತನೀ ಜಂಬು ಜಂಬೀರ ಬದರಿ ದಾಡಿಮ ತಿಂತ್ರಿಣಿ ಪರಿಪಕ್ವ ಫಲಂಗಳಂ ತಳೆದು ನಿಂದ ಕುಜಾತ ಪ್ರಜಾತಮುಂ ಮೊದಲೊಂದಱೊಳ್ತಳ್ತ ಕೊಂಬುಗಳೊಳ್ಪಂಚವರ್ಣಮನಾಳ್ದ ಮಹೀಜರಾಜಿಯುಮಂತೆಸೆವ

ಪಾತಾಳಗಂಗೆಯ ನೀರಿನಲ್ಲಿ ತೂಗಾಡಿಸುವ, ಗಂಗೆಯಲ್ಲಿ ಹುಟ್ಟಿದ ಮರಗಳ ಗುಂಪೂ, ಅದೇ ರೀತಿಯನ್ನುಂಟುಮಾಡುವ ಗಂಗೆಯಲ್ಲಿ ಹುಟ್ಟಿದ ಬೆಟ್ಟಗಳ ಗುಂಪೂ (ಅಲ್ಲಿದ್ದವು). ಮೇಲ್ಭಾಗಕ್ಕೆ ಹತ್ತಿದಂಥ ಅಪೇಕ್ಷಿಸಿದ ಜನರಿಗೆ ಅರವತ್ತೆಂಟು ತೀರ್ಥಗಳನ್ನು ಕಾಣಿಸಿ ಸಂತೋಷಪಡಿಸುವ ಅರವತ್ತೆಂಟು ಪ್ರಕಾರದ ಮರಗಳ ಸಮೂಹವೂ, ಅದೇ ರೀತಿಯನ್ನುಂಟುಮಾಡುವ ಬೆಟ್ಟಗಳ ಸಮೂಹವೂ (ಅಲ್ಲಿದ್ದವು). ಒಂದಕ್ಕೊಂದು ತಿಕ್ಕಾಡುವುದರಿಂದ ಹುಟ್ಟಿ, ಅರಣ್ಯವನ್ನು ಸುಡುವುದಕ್ಕೆ ಪ್ರಯತ್ನಪಡುವ ಅಗ್ನಿಯ ಜ್ವಾಲೆಯನ್ನು ಹಿಮವನ್ನು ಸುರಿಸಿ ಆರಿ ಹೋಗುವಂತೆ ಹೊಯ್ಯುವ ಮರಗಳ ಗುಂಪೂ, ಅದೇ ರೀತಿಯನ್ನುಂಟುಮಾಡುವ ಪರ್ವತಗಳ ಗುಂಪೂ (ಅಲ್ಲಿದ್ದವು). ಮಂಜಿನ ಸುರಿಯುವಿಕೆಯಿಂದ ಭಯಪಟ್ಟು ಹತ್ತಿದವರಿಗೆ ರಾತ್ರಿಯಲ್ಲಿ ಸೂರ್ಯನ ಬಿಸಿಲನ್ನೂ, ಬಿಸಿಲಿನ ಉಷ್ಣದಿಂದ ಬಳಲಿ ಆಯಾಸಗೊಂಡವರಿಗೆ ಹಗಲಿನಲ್ಲಿಯೇ ಬೆಳದಿಂಗಳನ್ನೂ ಸುರಿಸುವ ಗಿಡಗಳ ಸಮೂಹವೂ, ಅದೇ ರೀತಿಯನ್ನುಂಟುಮಾಡುವ ಬೆಟ್ಟಗಳ ಸಮೂಹವೂ (ಅಲ್ಲಿತ್ತು). ನಿರಂತರವೂ ಹಾಲಿನಿಂದ ಪೂರ್ಣ ತುಂಬಿದ ವಿಶೇಷವಾದ ವೃಕ್ಷಗಳು, ಕೆರೆಗಳು, ಹೊಳೆಗಳು, ಕೊಳಗಳ ಸಮೂಹಗಳೂ, ಅಪಾರವಾದ ಮೊಸರಿನಿಂದ ತುಂಬಿದ ಮರ, ಹೊಳೆ, ಕಪಿಲೇ ಬಾವಿ (ವಾಪಿ), ಸೇದುವ ಬಾವಿ (ಕೂಪ)ಗಳ ಸಮೂಹವೂ (ಅಲ್ಲಿದ್ದವು). ಅತಿ ರುಚಿಯಾದ ತುಪ್ಪದಿಂದ ತುಂಬಿದ ವೃಕ್ಷ (ಸಾಲ),

ಗಿರಿಸಂದೋಹಮುಂ ದ್ರಾಕ್ಷಾಪ್ರವಾಲ ಫಣಿಲತಾಕೃತಿಯನೇಕಮೂಲಂ ಬಿಡಿದು ತಳೆದ ವಲ್ಲೀನಿಕಾಯಮುಂ ಸುಳಿಸುಳಿದು ಶಿವಾಲಯರಜಮನುಡುಗುವ ಮಂದಪವನಮುಂ ಲಿಂಗಾಂಗಣಕ್ಕೆ ಚಳೆಯಂಗುಡುವ ನಿಜಿರ್ಮುಗಿಲ್ಗಳುಂ ಭವಭವನದೊಳ್ಸಾಂಗಮೆನೆ ರಂಗವಲ್ಲಿಯಂ ನಿರ್ಮಿರ್ಚುವ ಸಸ್ಯಂಗಳುಂ ಗಂಗಾಧರಂಗೆ ಮಜ್ಜನಂ ಮಾಳ್ಪ ತೀರ್ಥಂಗಳುಂ ಚಂದ್ರಮೌಳಿಗೆ ಗಂಧಾನುಲೇ[1]ಪನಂ[1]ಗೆಯ್ವ ಚಂದನ ಕ್ಷ್ಮಾರುಹಂಗಳುಂ ಪರಮಂಗೆ ಪರಿಮಳದಲರಂ ಸಮರ್ಪಿಪ ಸಲ್ಲಲಿತವಲ್ಲಿಗಳುಂ ಧೂರ್ಜಟಿಗೆ ಧೂಪಾರ್ಪಣಂಗೆಯ್ವ ಗುಗ್ಗುಲ ತರುಗಳುಂ ದಿವ್ಯ ಲಿಂಗಮೂರ್ತಿಗೆ ದೀಪಮಂ ನೀರಾಜಿಪ ಸಾರತರ ಜ್ಯೋತಿರ್ಲತೆಗಳುಂ ನಗಜಾಧಿಪಂಗೆ ನಾನಾ ಮಧುರತರ ಫಲಮನೀವ ನಾಕದ್ರುಮಂಗಳುಂ ತತ್ವಮಯಂಗೆ ತಾಂಬೂಲಂಗುಡುವ ಪೂಗಾದಿ ವಿಟಪಿಗಳುಂ ನಿಜನಾಮಂಗಳಿಂ ಲಿಂಗಪ್ರತಿಷ್ಠೆಗೆಯ್ದು ಭಕ್ತಿ ಮಿಗೆ ಗಿರಿಶಾಯ ನಮೋಯೆಂದು ಗಿರಿಲಿಂಗಮಂ ಪೂಜಿಪ ಗಿರಿಗಳ ತೆರಳ್ಕೆಯುಂ ವೃಕ್ಷೇಶಾಯ ನಮೋಯೆಂದು ವೃಕ್ಷಲಿಂಗಮನೋಲಗಿಪ ವೃಕ್ಷಂಗಳ ಪಙ್ಕ್ತಿಯುಂ ಪಕ್ಷಿಪತಯೇ ನಮೋಯೆಂದು ಪಕ್ಷಿಲಿಂಗಮನಾರಾಧಿಪ ಪಕ್ಷಿಗಳ ನೆರವಿಯುಂ ಮೃಗಕುಲೇಶಾಯ ನಮೋಯೆಂದು ಮೃಗಲಿಂಗಮಂ ಸೇವಿಪ ಮೃಗಂಗಳ ಜಂಗುಳಿಯುಂ ನಾಗನಾಥಾಯ ನಮೋಯೆಂದು ನಾಗಲಿಂಗಮಂ ಭಜಿಪ ನಾಗಂಗಳ ತಂಡಮುಮಳಿನಾಯಕಾಯ ನಮೋಯೆಂದಳಿಲಿಂಗಮನರ್ಚಿಪಳಿಗಳ ಬಳಗಮುಂ ಜಳವರೇಣ್ಯಾಯ ನಮೋಯೆಂದು ಜಳಲಿಂಗಮಂ ಯಜಿಯಿಪ ಕೊಳಂಗಳೊಬ್ಬುಳಿಯುಂ ತೀರ್ಥಾಧಿ

ಸರೋವರ, ಹೊಳೆ ಇವುಗಳ ಸಮೂಹವೂ (ಅಲ್ಲಿದ್ದವು), ಆ ಅರಣ್ಯ ಮಧ್ಯದಲ್ಲಿ ಶೋಭಿಸುವ ಸುವರ್ಣಮಯವಾದ ಶಿಖರಗಳು, ಮರಗಳು, ಬಳ್ಳಿಗಳು, ಪೊದೆಗಳೂ, ಕೆರೆಗಳು, ಸರೋವರಗಳು, ಕಮಲಗಳು, ಮಳಲಿನ ರಾಶಿಯೂ, ಹಾವಸೆಯೂ, ಭ್ರಮರಗಳು, ಮೃಗಗಳು, ಸರ್ಪಗಳು, ದಿಣ್ಣೆ (ವಪ್ರ)ಗಳು, ಉಪ್ಪರಿಗೆಗಳು, ದೇವತಾ ಗೃಹಗಳು-ಇವುಗಳ ಸಮೂಹವೂ (ಇತ್ತು). ನವರತ್ನಮಯವಾದ ಬೆಟ್ಟಗಳು, ಮರಗಳು, ಪಕ್ಷಿಗಳು, ಜಿಂಕೆಗಳು, ಹಾವುಗಳು, ಕೋಟೆಗಳು, ಉಪ್ಪರಿಗೆಗಳು, ಪಟ್ಟಣಗಳು, ಇವುಗಳ ಸಮೂಹವು (ಅಲ್ಲಿತ್ತು). ಅರಳಿ, ತೆಂಗು, ಅಡಿಕೆ, ನೇರಿಳೆ, ನಿಂಬೆ, ನಾಗಕೇಸರ, ಅಶೋಕ, ಮಾವು, ಹಲಸು, ಪಚ್ಚಕರ್ಪೂರದ ಮರ, ಶ್ರೀಗಂಧ, ದೇವದಾರುಗಳೆಂಬ ಅನೇಕ ಕೊಂಬೆಗಳಿಂದ ಕೂಡಿದ ಕೂಡಿದ ಸಮೂಹವೂ (ಅಲ್ಲಿತ್ತು). ಒಂದೊಂದು ಕೊಂಬೆಯ ತುದಿಯಲ್ಲಿರುವ ಅನೇಕ ಗೊಂಚಲುಗಳಲ್ಲಿ ಬೇರೆ ಬೇರೆಯಾಗಿ ಹುಟ್ಟಿ ಅರಳಿರುವ ಬಕಪಕ್ಷಿ ಹೂವು, ಬಕುಳದ ಹೂವು (ಪಗಡೆ ಹೂವು), ತಿಲಕದ ಹೂವು, ಸಂಪಿಗೆ ಹೂವು, ಬಿಂದಿಗೆ ಹೂವು (ಬಂಧೂಕ), ಕರ್ಣಿಕಾರದ ಹೂವು (ಬೆಟ್ಟದಾವರೆ ಹೂವು), ಕಣಗಿಲೆ ಹೂವು, ಸುರಗಿ ಹೂವು, ವಸಂತದೂತಿ ಎಂಬ ಹೂವು, ಕೆಂಪುಜಾಜಿ, ಮಲ್ಲಿಗೆ, ಜಾಜಿ, ಕಾಡು ಮಲ್ಲಿಗೆ, ಸುರಹೊನ್ನೆ, ಮೊಲ್ಲೆ, ತಾವರೆ, ಮಂದಾರ ಪುಷ್ಪ, ಕಲ್ಹಾರ (ಸುಗಂಧವುಳ್ಳ ಕಮಲ)ಗಳೆಂಬ ಅನೇಕ ಪ್ರಕಾರದ ಪುಷ್ಪಗಳ ಸಮೂಹವು (ಅಲ್ಲಿತ್ತು). ತುಂಬಿ

---

1 ಲೇಪಂ(ದ, ಮ)

ಪತಯೇ ನಮೋಯೆಂದು ತೀರ್ಥಲಿಂಗಮನಭಿವಂದಿಪ ತೀರ್ಥಂಗಳ ತಿಂತಿಣಿಯುಂ ಮುನಿಪಾಲಕಾಯ ನಮೋಯೆಂದು ಮುನಿಲಿಂಗಮಂ ಜಾನಿಪ ಮುನಿಗಳ ಮೊತ್ತಮುಂ ಶಬರರಾಜಾಯ ನಮೋಯೆಂದು ಶಬರಲಿಂಗಮಂ ಸಪರ್ಯೆಗೆಯ್ವ ಶಬರರ ವಂಗಡಮುಂ ಮತ್ತಂ ವನಸಲಿಲಕೇಳಿ ಗೆಯ್ದು ಪರೆದು ನೆರೆದು ಬಿನದಿಪ ಗರುಡ ಗಂಧರ್ವ ಕಿನ್ನರ ಕಿಂಪುರುಷ ದಂಪತಿಗಳ ಮೊಗ್ಗರಮುಮಿಂದ್ರಾದಿಗಳಳ್ಕೆ

ಕೊಂಡು ಇರುವ ಕಶ್ಯಪ ಸಂಬಂಧದ ವೃಕ್ಷ (ಕಾಶ್ಯಪೀರುಹ)ಗಳ ಗುಂಪು, ಕೊಂಬೆ ಕೊಂಬೆಗಳೊಂದೊಂದರಲ್ಲಿ ಗುಂಪಾಗಿ ಆಶ್ರಯಿಸಿಕೊಂಡಿರುವ ಮಾವು, ಹಲಸು, ಬಾಳೆ, ಬೇಲ, ಕಿತ್ತಳೆ, ಮಾದಾಳ, ದ್ರಾಕ್ಷಿ, ನೇರಿಳೆ, ನಿಂಬೆ, ಎಲಚಿ, ದಾಳಿಂಬೆ, ಹುಣಿಸೆ– ಇವುಗಳ ಚೆನ್ನಾಗಿ ಮಾಗಿದ ಹಣ್ಣುಗಳನ್ನು ತಳೆದು ನಿಂತಂಥ ಮರಗಳ ಗುಂಪು (ಅಲ್ಲಿತ್ತು). ಮೊದಲು ಒಂದು ಬುಡದಲ್ಲಿ ಹುಟ್ಟಿ, ಚಿಗಿತ ಕೊಂಬೆಗಳು ಐದು ಬಣ್ಣವನ್ನು ಹೊಂದಿದ ಮರಗಳ ಸಾಲೂ ಹಾಗೆಯೇ ಐದು ಬಣ್ಣಗಳನ್ನು ಹೊಂದಿದ ಗುಚ್ಛಗಳ ಸಾಲು (ಅಲ್ಲಿದ್ದವು). ದ್ರಾಕ್ಷಿಯ ಬಳ್ಳಿ, ಹವಳದ ಬಳ್ಳಿ, ಎಲೆಗಳ (ವೀಳ್ಯದೆಲೆಗಳ) ಬಳ್ಳಿ ಇವುಗಳ ಆಕಾರದ ಅನೇಕ ಬುಡಗಳನ್ನು ಹೊಂದಿದ ಬಳ್ಳಿಗಳ ಸಮೂಹವೂ (ಅಲ್ಲಿತ್ತು). ಸುಳಿ ಸುಳಿದು ಶಿವಾಲಯದ ಧೂಳನ್ನು ಗುಡಿಸುವ, ಮಂದ ಮಾರುತವೂ, ಶಿವಲಿಂಗದ ದೇವಾಲಯದ ಅಂಗಣದಲ್ಲಿ ನೀರನ್ನು ಚಿಮುಕಿಸುವ ಗುಂಪು ಗುಂಪಾದ ಮೋಡಗಳೂ, ಶಿವದೇವಾಲಯದಲ್ಲಿ ಸಾಂಗವಾಗಿ ರಂಗವಲ್ಲಿಗಳನ್ನು ಹಾಕುವ ಸಸ್ಯಗಳೂ, ಗಂಗಾಧರನಿಗೆ ಅಭಿಷೇಕ ಮಾಡಿಸುವ ತೀರ್ಥಗಳೂ ಚಂದ್ರಮೌಳಿಗೆ ಶ್ರೀಗಂಧವನ್ನು ಅನುಲೇಪನಗೊಳಿಸುವ ಶ್ರೀಗಂಧದ ಮರಗಳೂ, (ಅಲ್ಲಿದ್ದವು). ಪರಮ ಶ್ರೇಷ್ಠನಾದ ಶಿವನಿಗೆ ಪರಿಮಳದಿಂದ ಕೂಡಿದ ಹೂವನ್ನು ಸಮರ್ಪಣೆ ಮಾಡುವ ಮನೋಹರವಾದ ಬಳ್ಳಿಗಳು (ಅಲ್ಲಿದ್ದವು). ಧೂರ್ಜಟಿಗೆ ಧೂಪವನ್ನು ಸಮರ್ಪಿಸುವ ಗುಗ್ಗುಳ (ಧೂಪದ) ಮರಗಳು (ಅಲ್ಲಿದ್ದವು). ದಿವ್ಯನಾದ ಲಿಂಗಮೂರ್ತಿಗೆ ದೀಪವನ್ನು ಬೆಳಗುವ ಸಾರವತ್ತಾದ ಜ್ಯೋತಿರ್ಲತೆಗಳೂ, ಪಾರ್ವತೀಪತಿಗೆ ನಾನಾ ವಿಧವಾದ ಮಧುರವಾದ ಹಣ್ಣುಗಳನ್ನು ಕೊಡುವ ಕಲ್ಪವೃಕ್ಷಗಳೂ (ಅಲ್ಲಿದ್ದವು), ತತ್ತ್ವಮಯನಾದ ಪರಶಿವನಿಗೆ ತಾಂಬೂಲವನ್ನು ಸಮರ್ಪಿಸುವ ಅಡಿಗಿಯೇ ಮೊದಲಾದ ಮರಗಳು, (ಅಲ್ಲಿದ್ದವು). ತಮ್ಮ ತಮ್ಮ ಹೆಸರಿನಿಂದ ಲಿಂಗಗಳನ್ನು ಪ್ರತಿಷ್ಠೆ ಮಾಡಿ, ಹೆಚ್ಚಾದ ಭಕ್ತಿಯಿಂದ ಗಿರೀಶ್ವರನಿಗೆ ನಮಸ್ಕಾರಗಳು, ಎಂದು ಪರ್ವತ ಲಿಂಗವನ್ನು ಪೂಜಿಸುವ ಗಿರಿಗಳ ಗುಂಪು (ಅಲ್ಲಿತ್ತು). ವೃಕ್ಷೇಶ್ವರನಿಗೆ ನಮಸ್ಕಾರಗಳು ಎಂದು ವೃಕ್ಷಲಿಂಗವನ್ನು ಸೇವಿಸುವ ವೃಕ್ಷಗಳ ಗುಂಪು (ಅಲ್ಲಿತ್ತು). ಪಕ್ಷಿಪತಿಗೆ ನಮಸ್ಕಾರಗಳು ಎಂದು ಪಕ್ಷಿಲಿಂಗವನ್ನು ಆರಾಧಿಸುವ ಪಕ್ಷಿಗಳ ಗುಂಪು (ಅಲ್ಲಿತ್ತು). ಮೃಗಕುಲಕ್ಕೆ ಈಶನಾದವನಿಗೆ ನಮಸ್ಕಾರಗಳು ಎಂದು ಮೃಗಲಿಂಗವನ್ನು ಪೂಜಿಸುವ ಮೃಗಗಳ ಸಮೂಹವು (ಅಲ್ಲಿತ್ತು). ನಾಗಗಳಿಗೆ

ಘೋರತಪಂಗೆಯ್ವ ಸಂಯಮಿಗಳ ಸಾಲ್ಗಳುಂ ತರುಗಿರಿಗ[1]ಳ್ನೀ[1]ಡುವ ಫಳನಿರ್ಝರಾಮೃತಭಿಕ್ಷೆಯುಂ ಕೈಕೊಂಡು ಸಂತಮಿರ್ಪ ತಪಸ್ವಿಗಳ ಬಂಬಲುಮನ್ಯೋನ್ಯ ವೈರಮನುಳಿದೊಂದೆಡೆಯೊಳೊಡನಾಡುವ ನಾನಾ ಮೃಗಂಗಳ ತಿಂಥಿಣಿಯುಂ ಗಿರಿಶಲಿಂಗ ಪೂಜೋತ್ಸವಕ್ಕೆಳಸಿ ಸಡಗರದಿಂ ಬರ್ಪ ದಿಗ್ವನಿತಾ ದಿಕ್ಪತಿಗಳೋಳಿಯುಂ ಹರನಿದಿರೊಳ್ನರ್ತಿಸಂಗೆಯ್ವ ನಿರ್ಜರೀನಿರ್ಜರ ಜನದ ಪಾಳಿಯುಂ ಜಲರುಹಾದಿ ಜಲೋದ್ಭವಂದಿನೀಶನಂ ಪೂಜೆಗೆಯ್ದು ಮಣಿವ ಜಲಕನ್ಯಕಾಜಲಪು[2]ರುಷರ ಗೊಂದಣಿಯುಮಪೂರ್ವ

ನಾಥನಾದ ಶಿವನಿಗೆ ನಮಸ್ಕಾರಗಳು ಎಂದು ಸರ್ಪಲಿಂಗವನ್ನು ಭಜಿಸುವ ಹಾವುಗಳ ತಂಡವು (ಅಲ್ಲಿತ್ತು). ಅಳಿಗಳ ನಾಯಕನಾದ ಪರಮೇಶ್ವರನಿಗೆ ನಮಸ್ಕಾರ ಗಳು ಎಂದು ಭ್ರಮರ ಲಿಂಗವನ್ನು ಪೂಜಿಸುವ ಭ್ರಮರಗಳ ಗುಂಪು (ಅಲ್ಲಿತ್ತು). ಜಲವರೇಣ್ಯನಾದ ಶಿವನಿಗೆ ನಮಸ್ಕಾರಗಳು ಎಂದು ಜಲಲಿಂಗವನ್ನು ಪೂಜಿಸುವ ಕೊಳಗಳ ಸಮೂಹವು (ಅಲ್ಲಿತ್ತು). ತೀರ್ಥಾಧಿಪತಿಯಾದ ಶಿವನಿಗೆ ನಮಸ್ಕಾರಗಳು ಎಂದು ತೀರ್ಥಲಿಂಗವನ್ನು ನಮಸ್ಕರಿಸುತ್ತಿರುವ ತೀರ್ಥಗಳ ಗುಂಪು (ಅಲ್ಲಿತ್ತು). ಮುನಿಗಳ ಪಾಲಕನಾದ ಪರಶಿವನಿಗೆ ನಮಸ್ಕಾರಗಳು ಎಂದು ಮುನಿಲಿಂಗವನ್ನು ಧ್ಯಾನ ಮಾಡುವ ಮುನಿಗಳ ಮೊತ್ತ (ಅಲ್ಲಿತ್ತು). ಶಬರ ರಾಜನಾದ ಪರಮೇಶ್ವರನಿಗೆ ನಮಸ್ಕಾರಗಳು ಎಂದು ಕಿರಾತಲಿಂಗವನ್ನು ಪೂಜೆ ಮಾಡುವ ಶಬರರುಗಳ ಗುಂಪು (ಅಲ್ಲಿತ್ತು). ಮತ್ತು ಕಾಡಿನಲ್ಲಿರುವ ನೀರಿನ ಮಡುಗಳಲ್ಲಿ ನೀರಾಟವಾಡಿ, ಹರಿದಾಡಿ, ಸುತ್ತಾಡಿ, ಗುಂಪುಕೂಡಿ, ವಿನೋದಪಡುತ್ತಿರುವ ಗರುಡ, ಗಂಧರ್ವ, ಕಿನ್ನರ, ಕಿಂಪುರುಷ ದಂಪತಿಗಳ ಗುಂಪು (ಅಲ್ಲಿತ್ತು). ಇಂದ್ರಾದಿಗಳು ಭಯಪಡುವಂತೆ ಘೋರ ವಾದ ತಪಸ್ಸು ಮಾಡುವ ಋಷಿಗಳ ಸಾಲುಗಳು, ಮರಬೆಟ್ಟಗಳು ಕೊಡುತ್ತಿರುವ ಹಣ್ಣು ಮತ್ತು ಗಿರಿನದಿಗಳ ನೀರಿನ ಭಿಕ್ಷೆಯನ್ನು ಸ್ವೀಕಾರ ಮಾಡಿ, ಸುಖವಾಗಿರುವ ತಪಸ್ವಿಗಳ ಗುಂಪೂ (ಅಲ್ಲಿತ್ತು). ಪರಸ್ಪರ ದ್ವೇಷವನ್ನು ತೊಲಗಿಸಿಕೊಂಡು ಒಂದೇ ಸ್ಥಳದಲ್ಲಿ ಜೊತೆಯಲ್ಲಿ ಆಡುತ್ತಿರುವ ನಾನಾ ವಿಧವಾದ ಮೃಗಗಳ ಸಮೂಹವು (ಅಲ್ಲಿತ್ತು). ಪರಮೇಶ್ವರನ ಪೂಜೆಯ ಉತ್ಸವಕ್ಕೆ ಬಯಸಿ, ಸಡಗರದಿಂದ ಬರುತ್ತಿ ರುವ ದಿಕ್ಕೆಂಬ ಕಾಂತೆಯರ ಮತ್ತು ದಿಕ್ಪತಿಗಳ ಸಮೂಹವೂ. ಹರನ ಎದುರಿನಲ್ಲಿ ನರ್ತನ ಮಾಡುತ್ತಿರುವ ದೇವತೆಗಳು ಮತ್ತು ಅವರ ಪತ್ನಿಯರುಗಳು ಇವರುಗಳ ಸಾಲೂ. ಜಲದಲ್ಲಿ ಹುಟ್ಟುವ ತಾವರೆಯೇ ಮೊದಲಾದ ನೀರು ಹೂವುಗಳಿಂದ ಈಶ್ವರನನ್ನು ಪೂಜಿಸುವ, ಬಾಗಿ ನಮಸ್ಕಾರ ಮಾಡುವ. ಜಲಕನ್ನಿಕೆಯರು ಮತ್ತು ಜಲದೇವತೆಗಳ ಸಮೂಹವೂ, ಅಪೂರ್ವವಾದ ವಸ್ತುವನ್ನು ಪರಮೇಶ್ವರನಿಗೆ ಕಾಣಿಕೆ ಕೊಟ್ಟು ನಮಸ್ಕಾರ ಮಾಡುತ್ತಿರುವ ಬಿಲಗಳಲ್ಲಿ ವಾಸಿಸುವ ಹೆಂಗಸರು ಮತ್ತು

---

1 ಳುಂಳ್ನೀ(ಮು) 2 ಪೂ(ಮು, ಜ)

ವಸ್ತುವನಭಂಗೆ ಕಾಣ್ಕೆಗೊಟ್ಟು ನಮಿಪ ಬಿಲಕನ್ಯಕಾ ಬಿಲಪುರುಷರ ಸಂದಣಿಯುಮನವರತಮಿಂತು ಮಹಾದ್ಭುತ ರಸಮನೊದವಿ ರಂಜಿಸೆ ಚತುರ್ದಶ ಭುವನಸ್ಥಿತಿಯನೆಲ್ಲಮನಲ್ಲಿಯೆ ತೋರಿಸಲಾರ್ಪ ಬಿಲ್ವೀವನದ ಪೆರ್ಮೆಯುಂ ನಡೆನೋಡಿ ನುತಿಯಿಸುತ್ತಮಲ್ಲಲ್ಲಿ ಸಲ್ಲೀಲೆಯಿಂ ಲಿಂಗಪೂಜೆಗೆಯ್ದು ತವಡಿಗಡಿಗೆ ನಮಿಸುತಂ ಮಾದಿರಾಜಂ ಬರುತ್ತುಮಿರೆ ಮತ್ತಮಲ್ಲಿ—

ವರಮಹಿಮಯುತರನಾದಿಯ
ಪಿರಿಯರ್ನಿಜಲಿಂಗಸಂಗ ದೇಹೇಂದ್ರಿಯರ
ಚ್ಚರಿ ಮಿಗೆ ಕಂಗೊಳಿಸಿರ್ದರ್
ಕರುಣಾಭರಣರ್ಮುನೀಂದ್ರರಪಗತತಂದ್ರರ್ ೪೩

ಜಡೆಗೆ[1] ಸುಂಕಿಡುವಕ್ಷಮಾಲೆಯ ಕೋವ ವಲ್ಕಲ ವಸ್ತ್ರಮಂ
ಪಡರೆ ನೆಯ್ದು ವಿಭೂತಿಲೇಪಮನಾಂಪ ಶಾಂಭವ ಯೋಗಮಂ
ಪಡೆವ ಸಾರ ಶಿವಾಗಮ ಶ್ರುತಿಗೇಳ್ವ ಕಂದಫಲಂಗಳಂ
ಬಿಡದೆ ತರ್ಪ ಕುಮಾರ ತಾಪಸಬೃಂದಮೇನೆಸೆದಿರ್ದುದೋ ೪೪

ಗಂಡಸರುಗಳ ಸಮೂಹವೂ. ಸತತವೂ ಅಲ್ಲಿ ಈ ರೀತಿಯಿಂದ (ನೋಡುವವರಿಗೆ) ಅತ್ಯಾಶ್ಚರ್ಯವನ್ನುಂಟು ಮಾಡಿ, ಪ್ರಕಾಶಿಸುತ್ತಿರಲು, ಹದಿನಾಲ್ಕು ಲೋಕಗಳ ಇರುವಿಕೆಯನ್ನೂ, ಅಲ್ಲಿಯೇ ಕಾಣುವಂತೆ ಮಾಡುವ ಸಮರ್ಥವಾದ ಬಿಲ್ವವನದ ಹಿರಿಮೆಯನ್ನು ಮಾದಿರಾಜನು ಚೆನ್ನಾಗಿ ನೋಡಿ, ಸ್ತೋತ್ರ ಮಾಡುತ್ತ ಆಯಾಯ ಸ್ಥಳಗಳಲ್ಲಿ ವಿಶೇಷೋತ್ಸಾಹದಿಂದ ಲಿಂಗ ಪೂಜೆಯನ್ನು ಮಾಡುತ್ತ ಅಡಿಗಡಿಗೆ ನಮಸ್ಕಾರ ಮಾಡುತ್ತ ಬರುತ್ತಿದ್ದನು: ಮತ್ತು ಅಲ್ಲಿ— (ಇದೆಲ್ಲವೂ ಆ ಶ್ರೀ ಶೈಲ ಪರ್ವತದಲ್ಲಿರುವ ಬಿಲ್ವವನದ ಮಹಿಮಾತಿಶಯ). ೪೩. ಶ್ರೇಷ್ಠವಾದ ಮಹಿಮೆಯಿಂದ ಕೂಡಿದವರೂ, ತಮಗಿಂತ ಹಿರಿಯರಾರೂ ಇಲ್ಲದ ದೊಡ್ಡವರಾದ. ತಮ್ಮ ಇಷ್ಟ ಲಿಂಗದೊಡನೆ ಸಂಬಂಧವನ್ನುಳ್ಳ, ಶರೀರ ಇಂದ್ರಿಯಗಳಿಂದ ಕೂಡಿದ, ಕರುಣೆಯೇ ಆಭರಣವಾಗಿ ಉಳ್ಳ, ಆಲಸ್ಯರಹಿತರಾದ ಮುನೀಶ್ವರರು ವಿಶೇಷಾಶ್ಚರ್ಯದಿಂದ ಕಂಗೊಳಿಸಿದ್ದರು. ೪೪. ಜಡೆಗೆ ಅಂಟುಗಟ್ಟಿಸುವ (ಜಡೆಯನ್ನು ಎಸಳು ಎಸಳಾಗಿ ಗಂಟು ಕಟ್ಟುವಂತೆ ಮಾಡುವ), ಜಪಮಾಲಿಕೆಯನ್ನು ಪೋಣಿಸುವ. ನಾರು ಬಟ್ಟೆಯನ್ನು ಮನೋಹರವಾಗಿರುವಂತೆ ನೆಯ್ಗೆ ಮಾಡುವ. ವಿಭೂತಿಯನ್ನು (ಅಂಗಕ್ಕೆ) ಲೇಪಿಸಿಕೊಳ್ಳುವ. ಶಿವಯೋಗ ಸಂಬಂಧವನ್ನು ಹೊಂದುವ. ಶ್ರೇಷ್ಠವಾದ ಶೈವಾಗಮಗಳನ್ನು ವೇದಗಳನ್ನು ಕೇಳುವ. ಗಡ್ಡೆಗೆಣಸುಗಳನ್ನು ತಪ್ಪದೆ ತರುವ ಬಾಲಕರಾದ

1 ಯು(ಮು)

ಮಳೆಗಾಲಂಗಳೊಳಿಂಬುವೆತ್ತ ವಟಭೂಜಚ್ಛಾಯೆಯೊಳ್ಮಂಜು ಮಂ
ಜುಳವಾಗೊಪ್ಪುವ ಮಾಗೆಯೊಳ್ಪೊಳೆಪುಳಿಲ್ದಾಣಂಗಳೊಳ್ ಬಲ್ಬಿಸಿ
ಲ್ಭಿಳಿಲೆಂಬುಗ್ರ ನಿದಾಘದೊಳ್ಸುದಿದ ಪಂಚಾಗ್ನಿಪ್ರದೇಶಂಗಳೊ
ಳ್ಕಳೆವೆತ್ತುಗ್ರ ತಪಂಗಳಂ ತಳೆದದೇನೊಪ್ಪಿರ್ದರೋ ತಾಪಸರ್ ೪೫

ಚರಣಾಂಗುಷ್ಠಮನೂರಿ ಧಾತ್ರಿಯೊಳೆ ಬಾಹುದ್ವಂದ್ವಮೂರ್ಧ್ವಕ್ಕೆ ಸಂ
ದಿರೆ ನಿಂದುಗ್ರತಪಂಗಳಂ ನೆಗಳ್ವ ಮೇಗಣ್ಗೆತ್ತಿ ಪಾದಂಗಳಂ
ಶಿರಮಂ ಸೂಚಿಯ ಮೇಲೆ ಸಾರ್ಚಿ ತಪಮಂ ಮಾಳ್ಪನ್ಯಭಾವಂ ವಪುಃ
ಕರಣ[1]ವ್ಯಾವೃ[2]ತಿಶೂನ್ಯಮಾದ ಮುನಿವೃಂದಂ ಬೀರಿತಾಶ್ಚರ್ಯಮಂ ೪೬

ತನುವಂ ಪುತ್ತುಡರ್ದಿರೆ ಮೇ
ಲೆ ನಿತಾಂತಂ ಜಡೆ ಮಡಲ್ತು ಲತೆಯವೊಲಿರೆ ಚಿ
ದ್ಘನ ಶಿವನಂ ನೆನೆವಗ್ಗದ
ಮುನಿಗಳ್ಕಿಱಿಪೆಟ್ಟಿನಂತಿರೇನೊಪ್ಪಿದರೋ ೪೭

ತಪಸ್ವಿಗಳ ಸಮೂಹ ಏನು ಶೋಭಿಸುತ್ತಿತ್ತೋ ! ೪೫. ತಾಪಸರು ಮಳೆಗಾಲದಲ್ಲಿ ಮನೋಹರವಾದ ಆಲದ ಮರದ ನೆಳಲಿನಲ್ಲಿ, ಮನೋಹರವಾಗಿ ಒಪ್ಪುವ ಹಿಮದ ಕಾಲದಲ್ಲಿ (ಚಳಿಗಾಲದಲ್ಲಿ) ಹೊಳೆಯ ಮಳಲಿನ ಸ್ಥಳಗಳಲ್ಲಿ, ಬಲವಾದ ಬಿಸಿಲು ಛಳಿಲ್ ಎನ್ನುವಂತಹ ಭಯಂಕರ ಬೇಸಿಗೆ ಕಾಲದಲ್ಲಿ ಸುತ್ತಲೂ ಬೆಂಕಿಯಿಂದ ಆವರಿಸಿದ ಪಂಚಾಗ್ನಿ ಪ್ರದೇಶಗಳಲ್ಲಿ (ಮೇಲೆ ಸೂರ್ಯನ ಬಿಸಿಲು ಸುತ್ತಲೂ ಬೆಂಕಿ–ಹೀಗೆ ಐದು ಕಡೆ ಉಷ್ಣವುಳ್ಳ ಸ್ಥಾನಗಳಲ್ಲಿ) ತೇಜೋ ವಿಶೇಷದಿಂದ ಕೂಡಿದವರಾಗಿ ಉಗ್ರವಾದ ತಪಶ್ಚರ್ಯೆಯಲ್ಲಿ ಅದೇನು ಒಪ್ಪಿದ್ದರೋ ! ೪೬. ಭೂಮಿಯಲ್ಲಿ ಕಾಲಿನ ಹೆಬ್ಬೆರಳನ್ನು ಊರಿ, ಎರಡೂ ತೋಳುಗಳನ್ನೂ ಮೇಲಕ್ಕೆತ್ತಿ ಇರಲು, (ಹೀಗೆ) ನಿಂತುಕೊಂಡು ಉಗ್ರವಾದ ತಪಸ್ಸನ್ನಾಚರಿಸುವ, ಪಾದಗಳನ್ನು ಮೇಲಕ್ಕೆ ಎತ್ತಿ, ತಲೆಯನ್ನು ಸೂಜಿಯ ಮೇಲೆ ಇಟ್ಟು, ತಪಸ್ಸನ್ನು ಮಾಡುವ, ತಾನೂ ಆತ್ಮನೂ ಬೇರೆ ಬೇರೆ ಎಂಬ ಅಭಿಪ್ರಾಯ ಮತ್ತು ದೇಹೇಂದ್ರಿಯಗಳ ವ್ಯವಹಾರ ದೂರರಾದ ಮುನಿಗಳ ಸಮೂಹವು (ನೋಡುವವರಿಗೆ) ಆಶ್ಚರ್ಯವನ್ನುಂಟು ಮಾಡುತ್ತಿತ್ತು. ೪೭. ದೇಹಕ್ಕೆ ಹುತ್ತವು ಅಡರಿರಲು, ಮೇಲ್ಭಾಗದಲ್ಲಿ ಅತ್ಯಂತವಾಗಿ ಜಡೆಯು ಹಬ್ಬಿದ ಬಳ್ಳಿಯಂತೆ, ಇರುತ್ತಿರಲು, ಜ್ಞಾನ ಪ್ರಕಾಶನಾದ ಪರಶಿವನನ್ನು ನೆನೆಯುತ್ತಿರುವ ಶ್ರೇಷ್ಠರಾದ ಮುನಿ

---

1 ಣಂ(ಜ, ಗ) 2 ಪೃ (ಜ)

ತನುವೃತ್ತಂ ನೇತ್ರದೊಳ್ನೇತ್ರದ ಗತಿ ವಿಳಸತ್ಪ್ರಾಣದೊಳ್ಪ್ರಾಣಜಾತಂ
ಮನದೊಳ್ತನ್ಮಾನಸಂ ಬುದ್ಧಿಯೊಳಮರ್ದ ಮಹಾ ಬುದ್ಧಿ ಚಿತ್ತಾಗ್ರದೊಳ್ಪೆಂ
ಪಿನ ಚಿತ್ತಂ ತಾನಹಂಕಾರದೊಳೊದವಿದಹಂಕಾರಮಾ ಜೀವನೊಳ್ಜೀ
ವನಖಂಡಜ್ಯೋತಿಯೊಳ್ಸಂದಳಿಯೆ ಮಿಸುಪ ಯೋಗೀಶ್ವರರ್ ಕಣ್ಗೆವಂದರ್ ೪೮

ಹರಿಯೊಳ್ಚಲ್ಲಮನಾಡುವಾನೆ ಪುಲಿಯೊಳ್ಮೇಳಾಪಮಂ ತಾಳ್ದು ಸಂ
ಚರಿಪುದ್ಯನ್ಮೃಗರಾಜಿ ಬರ್ಹಿಯ ಲಸಲ್ಲಾಸ್ಯಂಗಳಂ ಸಾರ್ದು ನೋ
ಳ್ಪುರಗಶ್ರೇಣಿ ನಖಾಗ್ರದಿಂ ಶರಭ ಕಂಡೂವಾರಣಂ ಗೆಯ್ವ ಕೇ
ಸರಿಬೃಂದಂ ಭಯಮಿಲ್ಲದಿರ್ಕುಮನಿಶಂ ತತ್ತಾಪಸಾವಾಸದೊಳ್ ೪೯

ವ॥ ಮತ್ತಮೊಂದು ರುಚಿರಪ್ರದೇಶದಲ್ಲಿ—

ಸುರಕುಜಮೂಲದೊಳ್ಮಿಸುಪ ಚಂದ್ರಶಿಲಾತಳ ಪುಷ್ಪತಳ್ಪದೊ
ಳ್ಪರೆದೆಸೆದಿರ್ದ ಭಸ್ಮರಜಮುಂ ಘುಸೃಣಾರುಣರೇಣುವುಂ ಸಡಿ
ಲ್ದರೆಯೆಡೆಯೊಕ್ಕ ಕಕ್ಕೆಯುರಲುಂ ನಜುಮಲ್ಲಿಗೆಮಾಲೆಯುಂ ಕ್ಷಮಾ
ಧರತನಯಾಮಹೇಶರೊಳಗಿರ್ದುದನೇಂ ಪಿಸುಣಾಡಲಾರ್ತವೋ ೫೦

ಗಳು ಸಣ್ಣ ಬಟ್ಟದ ಹಾಗೆ ಅದೇನು ಶೋಭಿಸುತ್ತಿದ್ದರೋ ! ೪೮. ದೇಹ ವ್ಯಾಪಾರವೆಲ್ಲ ನೇತ್ರದಲ್ಲಿ, ನೇತ್ರದ ಗಮನವು ಪ್ರಕಾಶಮಾನವಾದ ಪ್ರಾಣವಲ್ಲಿ, ಪ್ರಾಣಗಳ ಸಮೂಹವು (ಪಂಚಪ್ರಾಣಗಳು) ಮನಸ್ಸಿನಲ್ಲಿ, ಆ ಮನಸ್ಸು ಬುದ್ಧಿಯಲ್ಲಿ ಸೇರಿದ, (ಅಂತಹ) ಬುದ್ಧಿಯು ಚಿತ್ತದ ಕೊನೆಯಲ್ಲಿ, ಹಿರಿಮೆಯ ಆ ಚಿತ್ತವು ತಾನು ಅಹಂಕಾರದಲ್ಲಿ, (ಹೀಗೆ) ಕೂಡಿಕೊಂಡ ಅಹಂಕಾರವು ಜೀವದಲ್ಲಿ, ಜೀವವು ಅಖಂಡವಾದ ಜ್ಯೋತಿಯಲ್ಲಿ ಸೇರಿ ಬಯಲುಗೊಂಡಿರಲು (ಭಾವ ನಿರ್ಭಾವಗೊಂಡಿರಲು) ಯೋಗೀಶ್ವರರು ಕಂಗೊಳಿಸುತ್ತಿದ್ದರು. ೪೯. ಸಿಂಹದೊಡನೆ ವಿಲಾಸದಿಂದ ಆಡುವ ಆನೆ ; ಹುಲಿಯೊಡನೆ ಒಡನಾಟವನ್ನು ಹೊಂದಿ ಸಂಚಾರ ಮಾಡುವ ಶ್ರೇಷ್ಠವಾದ ಜಿಂಕೆಗಳ ಸಮೂಹ, ಸಮೀಪಕ್ಕೆ ಹೋಗಿ ನವಿಲಿನ ಮನೋಹರವಾದ ಕುಣಿತಗಳನ್ನು ನೋಡುವ ಹಾವುಗಳ ಸಾಲು, ಉಗುರಿನ ತುದಿಯಿಂದ ಶರಭ ಮೃಗದ ಕಡಿತವನ್ನು (ಕೆರೆದು) ಹೋಗಲಾಡಿಸುವ ಸಿಂಹಗಳ–ಗುಂಪು ಇದು ಯಾವಾಗಲೂ ಆ ಋಷಿಗಳು ವಾಸ ಮಾಡುವ ಆಶ್ರಮದಲ್ಲಿ ಭಯವಿಲ್ಲದೆ ಇತ್ತು. ವ॥ ಮತ್ತು ಒಂದು ಮನೋಹರವಾದ ಪ್ರದೇಶದಲ್ಲಿ— ೫೦. ಕಲ್ಪವೃಕ್ಷದ ಬುಡದಲ್ಲಿ ಶೋಭಿಸುವ ಚಂದ್ರಕಾಂತ ಶಿಲೆಯ ಮೇಲಿರುವ ಹೂವಿನ ಹಾಸಿಗೆಯಲ್ಲಿ (ವ್ಯಾಪಕವಾಗಿ) ಹರಡಿ, ಪ್ರಕಾಶಿಸುತ್ತಿದ್ದ ವಿಭೂತಿಯ ಧೂಳಿಯೂ, ಕುಂಕುಮ ಕೇಸರಿಯ ಧೂಳೂ, ಸಡಿಲಿದ ಮುಡಿಯಿಂದ

ಕರವಿಂತು ಸಂತತಂ ಭಾ
ಸುರಮಹಿಮೆಯನಾಳ್ದ ಗಿರಿಯನೀಕ್ಷಿಸಿ ಪಿರಿದ
ಚ್ಚರಿವಡುತೆ ಮಾದಿರಾಜಂ
ಗುರುವಂ ಪಿಗೆ ಕಾಣ್ಬ ತವಕದಿಂ ಬರ್ಪಾಗಳ್ ೫೧

ಹರತೇಜಃಪುಂಜಪೂರ್ಣಾಕೃತಿಯೊ ಶಿವವಿರಾಣ್ಮೂರ್ತಿಯೋ ಭಸ್ಮಧಾತ್ರೀ
ಧರವೋ ಶ್ರೀಪರ್ವತಾಗ್ರಸ್ಥಿತಮುನಿಜನಪುಣ್ಯಸ್ಫುರದ್ರಾಶಿಯೋಯೆಂ
ಬಿರವಂ ಕೈಕೊಂಡು ಮಾರ್ಗಂಬಿಡಿದು ಮಹಿನಭೋಭಾಗಮುಂ ಮುಟ್ಟಿ ಯೋಗೀ
ಶ್ವರನುತ್ತುಂಗಾಂಗನಡ್ಡಂಗೆಡೆದಿರೆ ಪದಪಿಂ ಕಂಡನಾ ಮಾದಿರಾಜಂ ೫೨

ವ॥ ಅಂತು ಕಂಡು ಮುಂದಣ್ಗೆ ಪೋಗಲಳವಲ್ಲದೆ ಸವಿಸ್ಮಯಾಂತಃಕರಣನೀ ಮಹಾಮಹಿಮ ನಿರವಂ ಪರೀಕ್ಷಿಪೆನೆಂದು ತನ್ಮಸ್ತಕಾಗ್ರದತ್ತಲ್ ವರ್ಷತ್ರಯುಂ ನಡೆದಂತುಗಾಣದತ್ತಲ್ಪಾದಾಬ್ಜಮಂ ಕಂಡು ಪೊಡಮಡುವುದನುಳಿದಿತ್ತಲೇಳ್ತಂದುದಪರಾಧಮೆಂದು ಬಗೆದು ಮಗುಳ್ದಾ ಮಸ್ತಕದಿಶಾ ಭಾಗದಿಂ ಪದನಳಿನದಿಶಾ ಭಾಗಕ್ಕೆ ವರ್ಷಾಷ್ಟಕಂಬರಂ ನಡೆಗೊಳುತ್ತುಂ ತದಂಘ್ರಿಯುಂ ಕಾಣದತಿ ಚಕಿತನಾಗಿ ಕಾರ್ಪಣ್ಯಮನಾಳ್ದು ನಿಂದು—

ಅಲ್ಲಲ್ಲಿ ಸುರಿದಿರುವ ಕಕ್ಕೆಯ ಹೂವೂ, ಸುಗಂಧವಿಶಿಷ್ಟವಾದ ಮಲ್ಲಿಗೆ ಹೂವಿನ ಸರವೂ, ಪಾರ್ವತೀಪರಮೇಶ್ವರರು ಮಲಗಿದ್ದರೆಂಬುದನ್ನು ಚಾಡಿ ಹೇಳಲು ಏನು ಸಮರ್ಥ ವಾಗಿದ್ದವೋ ! ೫೧–೫೨. ಈ ರೀತಿಯಲ್ಲಿ ಅಧಿಕವಾಗಿ ಪ್ರಕಾಶಿಸುವ ಮಹಿಮೆ ಯನ್ನು ಹೊಂದಿದ ಶ್ರೀಶೈಲ ಗಿರಿಯನ್ನು ಮಾದಿರಾಜನು ನೋಡಿ, ವಿಶೇಷವಾಗಿ ಆಶ್ಚರ್ಯಗೊಂಡು ತನ್ನ ಗುರುವನ್ನು ಕಾಣುವ ಹೆಚ್ಚಾದ ತವಕದಿಂದ ಬರುತ್ತಿರುವಾಗ, ಹರನ ತೇಜೋ ವಿಶಿಷ್ಟವಾದ ಸಂಪೂರ್ಣ ಆಕಾರವೋ ಎಂಬಂತೆ ಉನ್ನತವಾದ ದೇಹ ವುಳ್ಳ ಯೋಗೀಶ್ವರನು ಶಿವನ ವಿರಾಡ್ರೂಪವೋ, ವಿಭೂತಿಯ ಪರ್ವತವೋ, ಶ್ರೀ ಶೈಲಪರ್ವತದಲ್ಲಿರುವ ಋಷಿ ಜನಗಳ ಪ್ರಕಾಶಿಸುವ ಪುಣ್ಯದ ರಾಶಿಯೋ,—ಎಂದೆನ್ನುವ ಸ್ಥಿತಿಯನ್ನು ಹೊಂದಿ ಮಾರ್ಗಕ್ಕೆ ಅಡ್ಡಲಾಗಿ ದಾರಿಯನ್ನು ಕಟ್ಟಿ ಭೂಮಿ ಆಕಾಶಗಳಿಗೆ ಏಕಾಗಿಬಿದ್ದುಕೊಂಡಿರಲು ಮಾದಿರಾಜನು ಉತ್ಸಾಹದಿಂದ ನೋಡಿದನು. ವ॥ ಹಾಗೆ ಕಂಡು ಮುಂದಕ್ಕೆ ಅಡಿಯಿಡಲು ಸಾಧ್ಯವಾಗದೆ, ವಿಸ್ಮಯಗೊಂಡ ಅಂತಃಕರಣವುಳ್ಳವ ನಾಗಿ ಈ ಮಹಾಮಹಿಮನ ಇರುವಿಕೆಯನ್ನು ಪರೀಕ್ಷಿಸುತ್ತೇನೆಂದು ಕೊಂಡು ಅವನ ತಲೆಯ ಕಡೆಗೆ ಮೂರು ವರ್ಷಗಳ ವರೆಗೆ ನಡೆದು ಕೊನೆಗಾಣದೆ, ಆ ಕಡೆಗೆ (ಇರುವ) ಪಾದಕಮಲಗಳನ್ನು ಕಂಡು ನಮಸ್ಕಾರ ಮಾಡುವುದನ್ನು ಬಿಟ್ಟು ಇತ್ತ ಕಡೆ ಬಂದದ್ದು ಅಪರಾಧವೆಂದು ಯೋಚಿಸಿ, ಪುನಃ ಆ ತಲೆಯ ಕಡೆಯ ದಿಕ್ಕಿನಿಂದ ಪಾದಕಮಲಗಳಿ ರುವ ದಿಕ್ಕಿನ ಕಡೆಗೆ ಎಂಟು ವರ್ಷಪರ್ಯಂತ ನಡೆದು ಹೋಗುತ್ತ ಅವನ ಪಾದಗಳನ್ನು ಕಾಣದೆ, ಬಹಳ ಭಯಗೊಂಡವನಾಗಿ, ದೀನಭಾವವನ್ನು ಹೊಂದಿ ನಿಂತುಕೊಂಡು—

ಮನುಮುನಿಗಳಱಸಿ ಕಾಣದ
ಘನಮಹಿಮ ಭವನ್ಮಹತ್ವಮಂ ಪರಿಕಿಪೊಡಾ
ನೆನಿತಱವಂ ಕಾಡದೆ ಪದ
ವನಜಮನೆನಗಿಲ್ಲಿ ತೋಱಿ ಪೊರೆ ಕರುಣಾಬ್ಧೀ ೫೩

ವ॥ ಎಂದು ಭಯಭಕ್ತಿಯಿಂ ಪೊಗಳ್ದು ಪಕ್ಷದ್ವಯಂಬರಂ ದಂಡಪ್ರಣಾಮಂಗೆಯ್ದಿರುತ್ತು ಮಿರೆ ಶಿವಯೋಗಿ ಮಲ್ಲಿಕಾರ್ಜುನಂ ಪ್ರಸನ್ನನಾಗಿ ತನ್ನ ಮುನ್ನಿನ ದೇಶಿಕಾಕೃತಿಯಂ ತಾಳ್ದು ಕರಾಂ ಬುಜದಿಂದೆತ್ತಿ ಗಾಢಾಲಿಂಗನಂಗೆಯ್ದು ಕೃಪಾದ್ರ್ರಾಲೋಕನದಿನಭೀಕ್ಷಿಸಿ—

ಕರುಣಾಮೃತರಸಮೊಗೆದು
ಪ್ಪರಿಸಿ ಮುಖಾಂಬುಜದೆ ತುಳ್ಕಿದಂತಿರೆ ದಶನ
ಸ್ಫುರಿತರುಚಿ ನುಡಿದನಾ ಮ
ಲ್ಲರಸಂ ಮಾದರಸನೊಡನೆ ನಸುನಗುತಾಗಳ್ ೫೪

ಪ್ರಾಜ್ಯತರಮಾದ ನಿಜ ಸಾ
ಮ್ರಾಜ್ಯಮನುಳಿದರರೆ ಘೋರ ವಿಪಿನಾಂತರದೊ
ಳ್ಪೂಜ್ಯಮತಿ ಬಂದೆ ನಿನ್ನವೊ
ಲೀ ಜ್ಯಾಮಂಡಲದೊಳಧಿಕ ಸಾಹಸಿಯಾವಂ ೫೫

೫೩. 'ಕರುಣಾಬ್ಧಿಯೇ, ಮನುಮುನಿಗಳು ಹುಡುಕಿ ಕಾಣದಿರುವ ಅತ್ಯಂತ ಮಹಿಮೆಯಿಂದ ಕೂಡಿದ ನಿನ್ನ ಮಹತ್ವವನ್ನು ಪರೀಕ್ಷಿಸಲು ನಾನೆಷ್ಟರವನು! (ನನ್ನನ್ನು) ಕಾಡದೆ ನನಗೆ ಇಲ್ಲಿ(ನಿನ್ನ) ಚರಣಕಮಲಗಳನ್ನು ತೋರಿ ರಕ್ಷಿಸು! ವ॥ ಹೀಗೆಂದು ಭಯದಿಂದ ಕೂಡಿದ ಭಕ್ತಿಯಿಂದ ಹೊಗಳಿ, ಎರಡು ಪಕ್ಷ ಪರ್ಯಂತ (ಒಂದು ತಿಂಗಳು ಪರ್ಯಂತ) ಸಾಷ್ಟಾಂಗ ಪ್ರಣಾಮಗಳನ್ನು ಮಾಡಿ ಇರುತ್ತಿರಲು, ಶಿವಯೋಗಿ ಮಲ್ಲಿಕಾರ್ಜುನನು (ಮಲ್ಲರಸನೆಂಬ ಶಿವಯೋಗಿಯು) ಪ್ರಸನ್ನನಾಗಿ ತನ್ನ ಮೊದಲಿನ ಗುರುರೂಪವನ್ನು ಆಕೃತಿಯನ್ನು ಹೊಂದಿ, ತನ್ನ ಕರಕಮಲಗಳಿಂದ ಹಿಡಿದೆತ್ತಿ ಗಾಢವಾಗಿ ಆಲಿಂಗಿಸಿಕೊಂಡು, ದಯಾರಸಭರಿತವಾದ ದೃಷ್ಟಿಯಿಂದ ನೋಡಿ, ೫೪. ಕರುಣವೆಂಬ ಅಮೃತ ರಸವು ಮುಖಕಮಲದಿಂದ ಹೊರಹೊರಟು ತುಳುಕಿದಂತೆ ಹಲ್ಲುಗಳ ಶುಭ್ರವಾದ ಕಾಂತಿಯು ಪ್ರಕಾಶಿಸುತ್ತಿರಲು ಮುಗುಳು ನಗುತ್ತ ಮಲ್ಲರಸನು ಮಾದರಸನೊಡನೆ ಆಗ ಮಾತನಾಡಿದನು. ೫೫. ಪೂಜಿಸುವುದಕ್ಕೆ ಯೋಗ್ಯವಾದ ಬುದ್ಧಿಯುಳ್ಳವನೇ, ಅತ್ಯಧಿಕವಾದ ನಿನ್ನ ರಾಜ್ಯಸತ್ತೆಯನ್ನು ಬಿಟ್ಟು ಭಯಂಕರವಾದ ಈ ಕಾಡಿನ ಮಧ್ಯದಲ್ಲಿ ಬಂದಿದ್ದೀಯೆ! ಅರರೇ!! ಈ ಭೂಮಂಡಲದಲ್ಲಿ ನಿನ್ನಂತೆ ಅಧಿಕ ಸಾಹಸಿಯು ಇನ್ನಾವ

ವ॥ ಎಂದು ಪೊಗಳ್ದವನಂ ನಿಜಾಶ್ರಮಕ್ಕೆ ಕರೆದೊಯ್ದು ಲಿಂಗಾರ್ಚನಂಗೆಯ್ಸಿ ಶಿವಯೋಗಿ ವರೇಣ್ಯಂ ನಿಜಪ್ರಸಾದಾಮೃತದಿಂ ತೃಪ್ತಿವಡಿಸಿ ಶಿವಾನುಭಾವಪ್ರಸಂಗದಿಂ ಕಿಱಿದುಪೊಳ್ದಂ ಕಳೆದು ಮತ್ತಮಿಂತೆಂದಂ—

ದಿನವೊಳವು ನಿನಗೆ ಮನುಜಾ
ವನಿಯೊಳ್ಕೆಲವಿನ್ನುಮಂತಱಿಂ ಧಾತ್ರಿಗೆ ಪಾ
ವನಶೀಲ ಪೋಗು ಸದ್ವ
ರ್ತನೆಯಿಂ ನಡೆದಿಲ್ಲಿಗೆಯ್ದಲಕ್ಕುಂ ಬಳಿಯಿಂ ೩೬

ವ॥ ಎನೆ ಮಾದಿರಾಜನಾ ನುಡಿಗೇಳ್ದು ಮನಮುಚ್ಚೆಗದಿಂ ಮಗುಳ್ದಿಂತೆಂದಂ—

ಬಡತನಮುಡಸಿದ ಮನುಜಂ
ಕಡವರಮಂ ಕಂಡು ಬಿಡುವನೇ ಯತ್ನದೆ ನಿ
ಮ್ಮಡಿಗಂಡವೋಲೆ [1]ತೊಱೆದಾ[1]
ವೆಡೆಗಾದೊಡಮೆಯ್ದಲಾರ್ಪೆನೇ ಗುಣಭರಣಾ ೩೭

ಎನೆ ಲೇಸೆನುತ್ತ ಮಗುಳ್ದಾ
ತನ ಮನಮಂ ನೋಡಲೆಳಸುತಲ್ಲಿಂದೊಡಗೊಂ
ಡನುನಯದೆ ಬಂದು ಬಬ್ಬೂ
ರ ನಗದ ಮೊದಲೋವರಿಯೊಳೆ ಕುಳ್ಳಿರಿಸಲೊಡಂ ೩೮

ನಿದ್ದಾನೆ ? ವ॥ ಎಂದು ಆ ಶಿವಯೋಗಿವರೇಣ್ಯನಾದ ಮಲ್ಲರಸನು ಮಾದಿರಾಜನನ್ನು ಹೊಗಳಿ, ಅವನನ್ನು ತನ್ನ ಆಶ್ರಮಕ್ಕೆ ಕರೆದುಕೊಂಡು ಹೋಗಿ, ಲಿಂಗಾರ್ಚನೆ ಮಾಡಿಸಿ, ತನ್ನ ತೀರ್ಥ ಪ್ರಸಾದಾದಿಗಳಿಂದ ತೃಪ್ತಿಪಡಿಸಿ, ಶಿವಾನುಭಾವ ಶಾಸ್ತ್ರಪ್ರಸ್ತಾಪದಿಂದ, ಸ್ವಲ್ಪ ಸಮಯವನ್ನು ಕಳೆದು, ಮತ್ತೂ ಹೀಗೆ ಹೇಳಿದನು : ೩೬. ಪರಿಶುದ್ಧವಾದ ಶೀಲವುಳ್ಳವನೇ, ನಿನಗೆ ಈ ಮಾನವ ಭೂಮಿಯಲ್ಲಿ ಇನ್ನು ಕೆಲವೇ ದಿನಗಳು ಉಂಟು. ಆದುದರಿಂದ ನೀನು ಧರೆಗೆ ಹೋಗು. ಒಳ್ಳೆಯ ನಡತೆಯಿಂದ ನಡೆದುಕೊಂಡು ಅನಂತರ ಇಲ್ಲಿಗೆ ಬರುವುದಕ್ಕೆ ಆದೀತು. ವ॥ ಹೀಗೆನ್ನಲು ಮಾದಿರಾಜನು ಮಲ್ಲರಸನ ಆ ಮಾತು ಗಳನ್ನು ಕೇಳಿ, ಉದ್ವೇಗಗೊಂಡ ಮನಸ್ಸಿನಿಂದ ಪುನಃ ಹೀಗೆ ಹೇಳಿದನು. ೩೭. ಗುಣ ಗಳೇ ಆಭರಣವಾಗಿ ಉಳ್ಳವನೇ, ಬಡತನವು ಸಂಭವಿಸಿದ ಮನುಷ್ಯನು, ಸುವರ್ಣವನ್ನು ಕಂಡು ಬಿಡುವನೇ ? ಪ್ರಯತ್ನದಿಂದ ನಿಮ್ಮ ಪಾದಗಳನ್ನು ಕಂಡಮೇಲೆ, (ಅವನ್ನು) ತೊರೆದು ಇನ್ನಾವ ಸ್ಥಳಕ್ಕಾದರೂ ಹೋಗುವುದಕ್ಕೆ ಸಮರ್ಥನಾಗುವೆನೇ ? ೩೮–೩೯. ಎಂದೆನ್ನಲು, 'ಒಳ್ಳೆಯದು' ಎಂದು ಪುನಃ ಆತನ ಮನಸ್ಸನ್ನು ಪರೀಕ್ಷಿಸಿ ನೋಡ ಲಪೇಕ್ಷಿಸಿ, ಅಲ್ಲಿಂದ ಅವನನ್ನು ಕೂಡಿಕೊಂಡು, ಪ್ರೀತಿಯಿಂದ (ಹೊರಟು) ಬಂದು

1 ತೋಱಿದ(ಜ)

ಪರಶಿವಯೋಗದೊಳಾ ಮಾ
ದರಸಂ ಬೊಬ್ಬುಲಿಯ ನೆಳಲೊಳಿರೆ ಕಡೆಸರಿದಾ
ಗುರುಮಲ್ಲಿಕಾರ್ಜುನಂ ತಾ
ನಿರದಾಗಳ್ಗೋಪರೂಪಮಂ ಕೈಕೊಂಡಂ ೫೯

ವ॥ ಅದೆಂತೆನೆ —

ಬಿರಿವಡಿ ಡೊಂಕುವೆತ್ತ ಬೆರಲೋರೆಯ ಪೆರ್ದೊಡೆ ವಕ್ರ ಮಧ್ಯಮು
ಬ್ಬರಿಸಿದ ಪೆರ್ಬಸಿಱ್ ನಸು ಕುನುಂಗಿದ ಬೆನ್ನೆಡೆದೇಳ್ವ ಬೀಸುದೋ
ಳ್ಸಿರೆ ನೆಗೆದಿರ್ದ ಗೋಣ್ಬ[1]ಱಿತ ಮೋಱ್ ಮುರುಂಟಿದ ಕರ್ಣಮುರ್ವಿ ಕೆ
ಕ್ಕರಿಸಿದ ಕಣ್ಮರಂಟುದಲೆ ಪಾವಸೆವಲ್ಮಿಗೆ ಗಂಟುಪುರ್ಬುಗಳ್ ೬೦

ನೊರೆವಾಯ್ಜೋಲ್ದುಟಿ ಪೆರ್ಮೂ
ಗರಲ್ದ ಕೆಮ್ಮೀಸೆ ಕೆದರ್ದ ಪಱಿಗಡ್ಡಂ ಕ
ರ್ಬುರರುಚಿಯನುಗುಳ್ವ ಕಾರೊಡ
ಲಿರೆ ಮೆಱೆದು ಕರಾಗ್ರದಲ್ಲಿ ಮುಳ್ಗತ್ತಿಗೆಯುಂ ೬೧

ಒಂದು ಜಾಲಿಯ ಮರದ ಬುಡದ ಸಂದಿಯಲ್ಲಿ ಕುಳ್ಳಿರಿಸಿದೊಡನೆಯೇ, ಆ ಮಾದರಸನು ಆ ಬೊಬ್ಬಳಿಮರದ ಬುಡದಲ್ಲಿಯೇ ಶಿವಯೋಗ ಸಮಾಧಿಸ್ಥನಾದನು. ಆಗ ಮಲ್ಲರಸನು (ಮಲ್ಲಿಕಾರ್ಜುನನು) ತಾನು ಬೇರೊಂದು ಕಡೆಗೆ ಹೋಗಿ ಆಗ ತಪ್ಪದೆ ಓರ್ವದನಗಾಹಿ(ಗೊಲ್ಲ)ಯ ಆಕಾರವನ್ನು ಪಡೆದನು. ೬೦–೬೩. ಬಿರುಕುಬಿಟ್ಟ ಕಾಲು, ಡೊಂಕು ಡೊಂಕಾದ ಬೆರಳುಗಳು, ಓರೆಗೊಂಡ ದಪ್ಪ ತೊಡೆಗಳು, ಡೊಂಕಾದ ನಡು, ಉಬ್ಬಿಕೊಂಡ, ದೊಡ್ಡ ಹೊಟ್ಟೆ, ಸ್ವಲ್ಪ ಬಾಗಿದ ಬೆನ್ನು, ಸೆಡೆದು. ಎದ್ದ ಬೀಸುವ ತೋಳುಗಳು ಹೆಚ್ಚಾಗಿ ಉದ್ದವಾದ ಗೋಣು, ರಸಹೀನವಾದ (ಒಣಗಿದ) ಮುಖ, ಮುರುಟಿಕೊಂಡಿದ್ದ ಕಿವಿ, ಉಬ್ಬಿಕೊಂಡು ಕೆಂಪಾಗಿ ಕಾಣುವ ಕಣ್ಣುಗಳು, ಕೂದಲು ಕೆದರಿರುವ ತಲೆ, ಹಸುರುಗಟ್ಟಿದ ಹಲ್ಲು. ಗಂಟುಗಟ್ಟಿದ ಹುಬ್ಬು, ನೊರೆಬೆರೆತ ಬಾಯಿ, ಜೋತಾಡುವ ತುಟಿ, ದಪ್ಪನಾದ ಮೂಗು, ನೆರೆಗೊಂಡಿರುವ ಕೆಂಪಾದ ಮೀಸೆ, ಕೆದರಿದ ಉದ್ದವಾದ ಗಡ್ಡ (ಅಥವಾ ಪರಕುಗಡ್ಡ), ಆಕಾಶದ ಕಾಂತಿಯಂತಿರುವ ಕಾಂತಿಯನ್ನು ಹೊರಸೂಸುವ ಕಪ್ಪಾದ ದೇಹದಿಂದ ಶೋಭಿಸುತ್ತ ಕಯ್ಯಲ್ಲಿ ಮುಳ್ಳುಕಡಿಯುವ ಕತ್ತಿಯನ್ನೂ, ಕುಡುಗೋಲು, ಚಾವಟಿ, ಕೊಡ (ನೀರು ತುಂಬಿದ ಚಿಕ್ಕ ಮಗಿ) ತಪ್ಪದೆ

———————

1 ಣ್ಬೆ(ಜ, ಚ, ಗ, ಅ)

ತಿರಿಯುಂ ಚಟಿಯುಂ ಘಟವುಂ
ಪರಶುವನಿರದಾಂತು ಕುಱಿದೊವಲ್ದಿದಿ ಪೆಗಲೊ
ಳ್ಕರವೆಸೆಯೆ ಟೊಂಕದೊಳ್ ನೇ
ಲ್ದಿರೆ ಕಚ್ಚೆಯಿೞುಂಕೆ ಕೌಂಕುಳೊಳ್ ಕುಱಿವಱಿಯುಂ ೬೨

ಕೋಲಂ ಬೀಸುತೆ ಸಿಳ್ಳಿಡು
ತಾಲಿಸುತತ್ತಿತ್ತಮೀಕ್ಷಿಸುತೆ ಕೆಕ್ಕುತೆ ಪೆ
ರ್ಗಾಲಡ್ಡಮೊಡ್ಡಿ ನಿಲುತಂ
ಕೌಲೇಯಮನಲ್ಲಿ ಕರೆವುತಂ ನಡೆತಂದಂ ೬೩

ಧೊಪ್ಪುಧೊಪ್ಪನೆ ಕಲ್ಗಳಿಂದಿಡುತೋಡುವಾಡುಗಳಂ ಕರಂ
ತಪ್ಪುವಂತಿರೆ ಮೆಲ್ಲಮೆಲ್ಲನೆ ಬಂದು ಮಾದರಸಾರ್ಯನಿ
ರ್ದೊಪ್ಪುವೆತ್ತ ಮರಕ್ಕೆ ನೋಡುತವಂಗೆ ತಣ್ಣೆಳಲಾಗಿ ರಾ
ಜಿಪ್ಪ ತತ್ಕುಜ ಶಾಖೆಯಂ ತಱಿದಂ ಕರಾಗ್ರ ಕುಠಾರದಿಂ ೬೪

ವ॥ ಅಂತು ತಱಿವುತ್ತಮಿರ್ಪ ಕಾಟಕೋಟಾಗ್ರಜನಂತಿರ್ದ ಕಪಟ ಗೋಪರೂಪತಾಪಸೇಶ್ವರನಂ ಸಕಳೇಶದೇವಂ ಕನಲ್ದು ನೋಡಿ—

ಮದಮತ್ತಾಧಮ ಖುಲ್ಲಗೊಲ್ಲಪದೆದಾಂ ಕುಳ್ಳಿರ್ದ ಭೂಜಾತಮ
ಲ್ಲದೆ ಭೂಜಾತಮರಣ್ಯದೊಳ್ಪಱಿವೊಡೇನಿಲ್ಲಾದುದೇ ಪಾಪಿ ಪೆ
ರ್ಚಿದ ಕೊರ್ಬಿಂದಿದನೇಕೆ ನೀಂ ತಱಿದಪೈ ಮಾಣ್ಮಾಣದಿರ್ದಂದು ತ
ಳ್ವದೆ ಶಾಪಾಗ್ರತರ ಜ್ವಲಜ್ವಲನದಿಂ ನಿನ್ನಂಗಮಂ ಸುಟ್ಟಪೆಂ ೬೫

ಕೊಡಲಿಗಳನ್ನು ಧರಿಸಿದವನಾಗಿ ಹೆಗಲ ಮೇಲೆ ಕುರಿಯ ತೊಗಲಿನಿಂದ ಮಾಡಿದ ತಿದಿಯು ಶೋಭಿಸುತ್ತಿರಲು, ನಡುವಿನಲ್ಲಿ ಕಚ್ಚೆಯು ಜೋತಾಡುತ್ತಿರಲು, ಬಗಲಲ್ಲಿ ಕುರಿಮರಿಯನ್ನು ಇರುಕಿಸಿಕೊಂಡು, ಕೋಲು ಬೀಸುತ್ತ, (ಕುರಿ ಕಾಯುವವರಂತೆ) ಸಿಳ್ಳಿಯನ್ನು ಹಾಕುತ್ತ, ಅತ್ತಇತ್ತ ಧ್ವನಿಯನ್ನು ಆಲಿಸುತ್ತ, ಅತ್ತಇತ್ತ ನೋಡುತ್ತ, ಕೇಕರಿಸುತ್ತ, ದೊಡ್ಡ ಕಾಲನ್ನು ಅಡ್ಡತಿಡ್ಡವಾಗಿ ಇಡುತ್ತ, ನಿಲ್ಲುತ್ತ, ನಾಯಿಗಳನ್ನು ಕರೆಯುತ್ತ ನಡೆದುಬಂದು, ಮೆಲ್ಲಮೆಲ್ಲನೆ ಓಡುವ ಆಡುಗಳನ್ನು ತಾನಿದ್ದ ಕಡೆಗೆ ತಿರುಗಿಸಲು ಕಲ್ಲುಗಳನ್ನು ದೊಪ್ಪದೊಪ್ಪೆಂದು ಬೀಸುತ್ತ ಆ ಸಕಳೇಶ ಮಾದರಸನಿರುವ ಬೊಬ್ಬುಳಿ ಮರದ ಸಮೀಪಕ್ಕೆ ಮೆಲ್ಲಮೆಲ್ಲನೆ ಬಂದು, ಅವನಿಗೆ ನೆಳಲಾಗಿ ಶೋಭಿಸುವ ಆ ಮರದ ಕೊಂಬೆಗಳನ್ನು ಕೈಯಲ್ಲಿದ್ದ ಕೊಡಲಿಯಿಂದ ಕತ್ತರಿಸಿದನು. ವ॥ ಈ ರೀತಿ ಕೊಂಬೆಗಳನ್ನು ಕತ್ತರಿಸುತ್ತಿದ್ದ ಕಾಟಕೋಟನ ಅಣ್ಣನ ಹಾಗೆ ಇರುವ ಕೃತ್ರಿಮಗೊಲ್ಲನಾಕಾರದಲ್ಲಿರುವ ಋಷಿ ಶ್ರೇಷ್ಠನನ್ನು ಸಕಳೇಶಮಾದರಸನು ಕೋಪದಿಂದ ನೋಡುತ್ತ—
೬೫. ಎಲೈ ಗರ್ವದಿಂದ ಕೊಬ್ಬಿ ಹೋದ ನೀಚನಾದ ದುಷ್ಟಬೇಡನೆ, ನಾನು ಪ್ರೀತಿಯಿಂದ ಕುಳಿತಿರುವ ಈ ಮರದ ಹೊರತು ಕತ್ತರಿಸಲಿಕ್ಕೆ ನಿನಗೆ ಈ ಅರಣ್ಯದಲ್ಲಿ ಬೇರೆ ಮರಗಳೇ ಇಲ್ಲವಾದುವೇ ? ಪಾಪಿ ! ಹೆಚ್ಚಾದ ಕೊಬ್ಬಿನಿಂದ ಇದನ್ನು ನೀನೇಕೆ ತರಿ

ವ॥ ಎಂದ ಮಾದಿರಾಜನ ಮಾತುಗೇಳ್ದು ಕಪಟಪಟು ಮಲ್ಲರಸ ಮಾಹೇಶ್ವರನಟ್ಟಹಾಸಂ ಗೆಯ್ದು—

ಅಮುಮು ದಯಾಪರ ವಿಳಸಿತ
ಯಮು ನಿಯಮಾ ಕಳಾಪ ಭಾಪು ಚಾಗುರೆ ಘನ ವಿ
ಕ್ರಮು ಭಲರೆ ಶಾಂತಿಯುತ ಸಂ
ಯಮಿಗಳ್ನಿನ್ನನ್ನರೊಳರೆ ಧರಣೀತಳದೊಳ್ ೬೬

ನಿನಗೀ ಭೂರುಹಮಲ್ಲದನ್ಯತರುವೇನಿಲ್ಲಾದುದೇ ಕುಳ್ಳಿರ
ಲ್ಕನ ಕಾಂತಾರದೊಳಿತ್ತರಾರ್ನಿನಗಿದಂ ನೀಂ ಶಾಖೆಯಂ ಸಾಕಿದಾ
ತನೊ ಕಾಡಿಂತಿದು ನಿನ್ನದೋ ಬಱಿದೆ ಕೋಪಂಗೆಯ್ವ ನೀಂ ಪಾಪಿಯ
ಲ್ತೆ ನಿತಾಂತಂ ಮುಳಿದೆನ್ನನೆಂತು ಸುಡುವೈ ಕೋಪಾಗ್ನಿಯಿಂ ತಾಪಸಾ ೬೭

ಮಳೆ ಮಂಜು ಗಾಳಿ ಬಿಸಿಲುಂಪ
ಟಳಕಳ್ಕದೆ ಮಾಳ್ಪ ನಿನ್ನ ತಪಮೆತ್ತ ನಿರಾ
ಕುಳಮೀ ತರುವಿನ ಬಳಿ ನೆಳ
ಲಳಿಪೆತ್ತ ವಿಚಿತ್ರಮಲ್ತೆ ನಿನ್ನ ಚರಿತ್ರಂ ೬೮

ಯುತ್ತಿದ್ದೀಯೆ ? ಬಿಡು ; ಬಿಡದೆ ಇದ್ದರೆ ತಡಮಾಡದೆ ನಿನ್ನ ದೇಹವನ್ನು ಭಯಂಕರವಾಗಿ ಉರಿಯುವ ಶಾಪವೆಂಬ ಬೆಂಕಿಯಿಂದ ಸುಟ್ಟುಬಿಡುತ್ತೇನೆ. ವ॥ ಹೀಗೆಂದ ಮಾದರಸನ ಮಾತನ್ನು ಆ ಕೃತ್ರಿಮ ವ್ಯಾಪಾರದಲ್ಲಿ ಸಮರ್ಥನಾದ ಮಲ್ಲರಸನೆಂಬ ಮಾಹೇಶ್ವರನು ಕೇಳಿ, ಅಟ್ಟಹಾಸದಿಂದ ಕೂಡಿ ನಕ್ಕು—೬೬. ಅಬ್ಬಬ್ಬಾ ! ಕರುಣಾಸಕ್ತನೇ ! ಪ್ರಕಾಶಿಸುವ ಯಮ–ನಿಯಮಾದಿಗಳ ಆಭರಣವುಳ್ಳವನೇ, ಭಲೇ ! ಚಾಗುರೇ ! ಘನ ಪರಾಕ್ರಮಿಯೇ ! ಭಲರೇ ! ಶಾಂತಿಯುತನೇ ! ಈ ಭೂ-ಭಾಗದಲ್ಲಿ ನಿನ್ನಂತಹ ಸಂಯಮಿಗಳೂ ಉಂಟೇ ? ೬೭. ತಪಸ್ವಿಯೇ, ಈ ದೊಡ್ಡಕಾಡಿನಲ್ಲಿ ನಿನಗೆ ಕುಳಿತುಕೊಳ್ಳಲು, ಈ ಗಿಡವಲ್ಲದೆ ಬೇರೆ ಗಿಡಗಳೇ ಇಲ್ಲದಂತಾಗಿದ್ದವೇ ! ನಿನಗೆ ಈ ಮರವನ್ನು ಕುಳಿತುಕೊಳ್ಳಲು ಕೊಟ್ಟವರಾರು ? ನೀನು ಈ ಮರವನ್ನು ಸಾಕಿದವನೋ ? ಇದೇ ರೀತಿಯಲ್ಲಿ ಈ ಕಾಡು ನಿನ್ನದೋ ? ನೀನು ವ್ಯರ್ಥವಾಗಿ ಕೋಪಮಾಡುತ್ತಿದ್ದೀಯೆ ! ನಿಜವಾಗಿ ನೀನೆ ವಿಶೇಷವಾದ ಪಾಪಿಯಾಗಿದ್ದೀಯಲ್ಲವೇ ? ನನ್ನನ್ನು ನಿನ್ನ ಕೋಪವೆಂಬ ಬೆಂಕಿಯಿಂದ ಹೇಗೆ ಸುಡುವಿಯಯ್ಯಾ ! ೬೮. ಮಳೆ, ಮಂಜು, ಗಾಳಿ, ಬಿಸಿಲುಗಳ ಬಾಧೆಗೆ ಭಯಪಡದೆ ಮಾಡುವ ನಿನ್ನ ಈ ತಪಸ್ಸೆತ್ತ ? ಈ ಗಿಡದ ನಿಶ್ಚಂಚಲವಾದ ಕೆಳಭಾಗದ ನೆಳಲು ಇಲ್ಲದ ಹಾಗೆ ಮಾಡುವಿಕೆಯೆತ್ತ ? ನಿನ್ನ ಈ ಚರಿತ್ರೆ

ತನುವಂ ಬಡಿದೊಡಮೆಂತುಂ
ಮುನಿಯರ್ ಮುನಿವರರುದಗ್ರ ಶಾಂತರ್ಮುನಿವ್ಯೆ
ಬನದಗಮಂ ತಱಿದೊಡೆ ದು
ರ್ಜನತಾಪಸ ನಿನ್ನವೋಲ್ದುರಾತ್ಮಕರೊಳರೇ ೧೯

ಕೋಪಾಗ್ನಿಯಿಂದೆ ಬೆಂದಪೆ
ಶಾಪಾಗ್ನಿಯಿನೆನ್ನನುರುಪಲೆಳಸಿರ್ಪೆ ತಪೋ
ಲೋಪಮಿದಱಿಂದಮೆಂಬುದ
ನೇಪೊಳ್ತುಂ ತಿಳಿಯೆ ಮೂಢಜನಕುಲತಿಲಕಾ ೨೦

ಕಪಟಿಯ ಜಪಮುಂ ಕೋಪಿಯ
ತಪಮುಂ ಪಿಶುನನ ಮೃದೂಕ್ತಿಯುಂ ಪರನಿಂದಾ
ಲಪಿತನ ವಿದ್ಯೆಯುಮುಗ್ಗದ
ಕೃಪಣನ ಸನ್ಮಾನಮುಂ ನಿರರ್ಥಕಮಲ್ತೇ ೨೧

ವಿನಯಾರಣ್ಯದವಾನಲಂ ಶಮಸುಖಜ್ಯೋತ್ಸ್ನಾದಿನೇಶಾತಪಂ
ಘನ ಸಂತೋಷದ ಸಾಂಬುರಾಶಿ ಬಡಬಜ್ವಾಲಾಕಲಾಪಂ ವಿವೇ
ಕನಗಾಗ್ರಸ್ಫುಟಮೇಘವಹ್ನಿಯೆನಿಪೀ ಕೋಪಾಗ್ನಿಪೀರ್ಗುಂ ಮನೋ
ವನಜಾತಾಂಚಿತ ಚಿನ್ಮರಂದರಸಮಂ ಕಾಯ್ಪೇಱೆ ತಜ್ಜೀವನಂ ೨೨

ವಿಚಿತ್ರವಾದುದಲ್ಲವೆ ? ೧೯. ಉತ್ಕೃಷ್ಟ, ಶಾಂತ ಚಿತ್ತರಾದ ಮುನಿಶ್ರೇಷ್ಠರು ದೇಹವನ್ನು (ಯಾರಾದರೂ) ಬಡಿದರೂ ಯಾವ ರೀತಿಯಿಂದಲೂ ಕೋಪಗೊಳ್ಳುವುದಿಲ್ಲ. ದುಷ್ಟ ತಪಸ್ವಿಯೇ, ಕಾಡಿನಲ್ಲಿರುವ ಮರವನ್ನು (ನಾನು) ತರಿದರೆ, ಕೋಪಗೊಂಡವನಾದೆ! ನಿನ್ನ ಹಾಗೆ ದುರಾತ್ಮರಾದವರು ಉಂಟೆ ? ೨೦. ಕೋಪವೆಂಬ ಅಗ್ನಿಯಿಂದ ಬೆಂದು ಹೋಗಿರುವ, ಮೂಢ ಜನಸಮೂಹಕ್ಕೆ ತಿಲಕಪ್ರಾಯನಾದವನೇ, ನನ್ನನ್ನು ಶಾಪವೆಂಬ ಅಗ್ನಿಯಿಂದ ಸುಡುವುದಕ್ಕೆ ಅಪೇಕ್ಷೆಪಟ್ಟು ಇದ್ದೀಯೆ! ಈ ಕೋಪ ಮತ್ತು ಶಾಪಗಳ ಪ್ರಕಟನೆಯಿಂದ ಯಾವಾಗಲೂ ತಪಸ್ಸಿಗೆ ಹಾನಿಯೆಂಬುದನ್ನು ನೀನು ತಿಳಿಯುದವನಾಗಿದ್ದೀಯೆ. ೨೧. ಮೋಸಗಾರನ ಜಪವೂ, ಕೋಪಿಯ ತಪಸ್ಸೂ, ಚಾಡಿಕೋರನ ಮೃದುವಾದ ಮಾತುಗಳೂ, ಅನ್ಯದೂಷಣೆಯ ಮಾತುಳ್ಳವನ ವಿದ್ಯೆಯೂ, ಅಧಿಕ ಕೃಪಣನ ಸನ್ಮಾನವೂ ನಿಷ್ಪ್ರಯೋಜಕಗಳಲ್ಲವೇ ? ೨೨. ನಮ್ರತೆಯೆಂಬ ಕಾಡಿಗೆ ದಾವಾನಳವೂ, ಶಾಂತಿಯುಂಟಾಗುವ ಸೌಖ್ಯವೆಂಬ ಬೆಳ್ದಿಂಗಳಿಗೆ ಸೂರ್ಯನ ಕಿರಣವೂ, ಸಾಂದ್ರವಾದ (ಘನವಾದ) ಸಂತೋಷರಸದ ಸುಖವೆಂಬ ಸಮುದ್ರಕ್ಕೆ ಬಡಬಾಗ್ನಿಯ ಉರಿಯ ಸಮೂಹವೂ, ತಿಳುವಳಿಕೆಯೆಂಬ ಬೆಟ್ಟದ ತುದಿಗೆ ಸ್ಫುಟವಾದ (ವ್ಯಕ್ತವಾದ) ಸಿಡಿಲೂ—ಎಂದೆನಿಸುವ ಈ ನಿನ್ನ ಕೋಪವೆಂಬ ಬೆಂಕಿಯು ಮನಸ್ಸೆಂಬ ಕಮಲದಲ್ಲಿರುವ ಜ್ಞಾನವೆಂಬ ಮಕರಂದರಸವನ್ನು ಕುಡಿಯುವುದು. ಆ ಕಾವು ಹೆಚ್ಚಾದರೆ ಆ

ಹೃದಯಾಲವಾಲದೊಳ್ ಪು
ಟ್ಟಿದ ವಿಮಳ ಜ್ಞಾನಲತೆಗೆ ಶಮಜಳಮಂ ಸೂ
ಸದೆ ಕೋಪಶಿಖಿಯಿ[1]ನುರುಪಿದೊ
ಡದು ಸುಖರಸಮೋಕ್ಷಫಳಮನೇನಿತ್ತಪುದೇ ೭೩

ಧನವನಿತಾನಿಕೇತನಮನೊಲ್ಲದೆ ಬಿಟ್ಟು ವಿರಕ್ತಿವೃತ್ತಿಯಂ
ಮನದೊ[2]ಳಳಂ[2]ಕೆಗೆಯ್ದು ಶಿವಯೋಗಸುಖಂಬಡೆಯಲ್ಕೆ ಬಂದು ಕಾ
ನನದೆಡೆಗೀಶ್ವರಾಂಘ್ರಿಯುಗಮಂ ಸಲೆ ಜಾನಿಸುತಿರ್ದುಮಿಲ್ಲಿ ಕೆ
ಮ್ಮನೆ ನೆಳಲಾಸೆವೆತ್ತು ಮುಳಿಸಾಂತಪೆ ನಿನ್ನವೊಲಾರೊ ಗಾವಿಲರ್ ೭೪

ಸೋಲಮಿದೆಂಬರ್ಕಬ್ಬಿನ
ಕೋಲೊಂದಿನಿಸುಳಿಯೆ ತಱಿಯೆ ಕಬ್ಬಿನ ಪೊಱೆಯುಂ
ಲೀಲೆಯಿಗೆ ತಾಳ್ದ ಶೀಲದ
ಜಾಲದೊಳಿನಿಸುಳಿಯೆ ಸೋಲಮಲ್ಲದೆ ಪೆಱತೇಂ ೭೫

ಕಡು ಬಾಸೆಗೆಯ್ದು ರಣದೊ
ಳ್ತೊಡಂಕಿ ಸೋಲ್ತಸಿಯನಿಟ್ಟು ಬರ್ಪನ ತೆಱದಿಂ
ನುಡಿಯಂತೆ ನಡೆಯಲಱಿಯದ
ಜಡರಂ ಮೃಡಭಕ್ತರೊಲ್ವರೇ ವಸುಮತಿಯೊಳ್ ೭೬

ಪ್ರಾಣವನ್ನೇ ಹೀರಿಬಿಡುವುದು. ೭೩. ಹೃದಯವೆಂಬ ಪಾತಿ (ಆಲವಾಲ)ಯಲ್ಲಿ ಹುಟ್ಟಿದ ನಿರ್ಮಲವಾದ ಜ್ಞಾನವೆಂಬ ಬಳ್ಳಿಗೆ (ಮೋಕ್ಷ ವಿಷಯಕ ಬುದ್ಧಿಯೆಂಬ ಬಳ್ಳಿಗೆ), ಶಾಂತಿಯೆಂಬ ನೀರನ್ನು ಎರೆಯದೆ ಕೋಪವೆಂಬ ಬೆಂಕಿಯಿಂದ ಸುಟ್ಟು ಬಿಟ್ಟರೆ, ಆ ಬಳ್ಳಿಯು ಸೌಖ್ಯವೆಂಬ ಮಧುರರಸವುಳ್ಳ ಮೋಕ್ಷವೆಂಬ ಹಣ್ಣನ್ನು ಕೊಡುವುದೇ ? ೭೪. ಹೊನ್ನು, ಸ್ತ್ರೀ, ಮನೆಮಠಗಳನ್ನೊಲ್ಲದೆ ಬಿಟ್ಟು (ಬಂದು) ವಿರಕ್ತಿಭಾವವನ್ನು ಮನಸ್ಸಿನಿಂದ ಇಚ್ಛೈಪಟ್ಟು, ಶಿವಯೋಗ ಸುಖವನ್ನು ಪಡೆಯಬೇಕೆಂದು ಕಾಡಿಗೆ ಬಂದು, ಈಶ್ವರನಪಾದಕಮಲಗಳನ್ನು ಧ್ಯಾನ ಮಾಡುತ್ತ ಇದ್ದು, ಇಲ್ಲಿ ವ್ಯರ್ಥವಾಗಿ ನೆಳಲಿನ ಆಸೆಯನ್ನು ಹೊಂದಿ ಕೋಪಗೊಳ್ಳುತ್ತಿದ್ದೀಯೆ ! ನಿನ್ನಂತಹ ಮೂಢರು ಯಾರೋ ? (ಆಸೆಯನ್ನು ಬಿಟ್ಟು ಬಂದರೂ ಇಲ್ಲಿ ನೆಳಲಿನ ಆಸೆ ನಿನಗೆ ಉಂಟಾಯಿತೆಂದು ಭಾವ) ೭೫. ಕಬ್ಬಿನ ಹೊರೆಯನ್ನು ಕತ್ತರಿಸುತ್ತೇನೆಂದು ಒಂದು ಕಬ್ಬು ಉಳಿಯುವಂತೆ ಕತ್ತರಿಸಿದರೆ ಅದನ್ನು ಸೋಲು ಎಂದೆನ್ನುವರು. (ಅದರಂತೆ) ಹೆಚ್ಚಾದ ಲೀಲೆಯಿಂದ ತಾಳಿದ ಸತ್‌ಶೀಲದ ಸಮೂಹದಲ್ಲಿ ಬಂದು ಅವಗುಣ ಉಳಿದರೂ ಅದು ಸೋಲಲ್ಲದೆ ಬೇರೆ ಏನು ? ೭೬. ದೃಢ ಪ್ರತಿಜ್ಞೆಯನ್ನು ಮಾಡಿ ಯುದ್ಧದಲ್ಲಿ (ಎದುರಾಳಿಯೊಡನೆ) ಎದುರಿಸಿ ನಿಂತು, ಸೋತು (ಕೈಯ) ಕತ್ತಿಯನ್ನೇ ಕಳೆದುಕೊಂಡು

1 ಯ(ದ) 2 ಳಿಶ(ಅ)

ಶಿವಭಕ್ತಿಗೆ ಶಿವಯೋಗಕೆ
ಶಿವವ್ರತಕ್ಕಮುಳತರ ಶಿವಜ್ಞಾನಕೆ ಶಾಂ
ತಿವಿಹಿತಮದಿಲ್ಲದಿರೆ ಕೇಳ್
ಲವಣೋ ನ ವ್ಯಂಜನೋಪಮಾನಮದಕ್ಕುಂ ೭೭

ಎನೆ ಕೇಳ್ದು ಮಾದಿರಾಜಂ
ಮುನಿಸಳಿದು ಬಿಗುರ್ತು ವಿಸ್ಮಯಂಬಡೆವುತೆ ನೋ
ಳ್ಪನಿತಱೊಳೆ ಮಲ್ಲಿಕಾರ್ಜುನ
ಘನಮುನಿಪಂ[1] ಮುನ್ನಿನಂದಮಂ ಕೈಕೊಂಡಂ ೭೮

ವ॥ ಅಂತಮಂ ಗೊಲ್ಲವರಿಜಸುಳಿದು ಗುರುರೂಪಮಂ ಕೈಕೊಂಡಿರೆ ಮಾದಿರಾಜಂ ಕಂಡು ನಾಣ್ಚಿ ತನು ಜರಿಯೆ ಮನಂ ಕದಡಿ ಶೋಕಾಶ್ರುಕಣಕಲಿತಮುಖನಾಗಿ ತಲೆವಾಗಿ ತಲ್ಲಣಂಬೆತ್ತು—

ಎನಗೇಕಪ್ಪುದು ಶಾಂತಿ ಸೈರಣೆ ಮಹಾಸದ್ಭಕ್ತಿ ಸಂಪತ್ತಿ ಪಾ
ವನ ವೈರಾಗ್ಯಮಪಕ್ವ ದುರ್ಮತಿಗೆ ದುರ್ದಾಂತಂಗೆ ತಾಳ್ದಪ್ಪುದೇ
ತನಿವಣ್ಣೊಪ್ಪಮನಚ್ಚ ಪೂಮಿಡಿ ವಲಂ ಕೊಯ್ದಿಕ್ಕೆ ತಾನಂತೆ ಚಿ
ದ್ಘನಸಾರಾಮೃತಮೀಶನೊಲ್ಮೆವಡೆದಂಗಕ್ಕುಂ ಪೆಱರ್ಗಕ್ಕುಮೇ ೭೯

ಬರುವವನ ರೀತಿಯಲ್ಲಿ ಈ ಭೂಮಿಯಲ್ಲಿ ನುಡಿದಂತೆ ನಡೆಯಲು ತಿಳಿಯದ ಮೂಢರನ್ನು ಶಿವನಭಕ್ತರು ಒಲಿಯುವರೇ ? ೭೭. ಶಿವನಭಕ್ತಿಗೆ, ಶಿವಯೋಗಕ್ಕೆ, ಶಿವನ ಸಂಬಂಧದ ವ್ರತಕ್ಕೆ, ಶ್ರೇಷ್ಠವಾದ ಶಿವ ಜ್ಞಾನಕ್ಕೆ ಶಾಂತಿಯು ಉಚಿತವಾದದ್ದು ! ಆ ಶಾಂತಿಯು ಇರದಿದ್ದರೆ, ಕೇಳು ಆ ಶಿವ ಭಕ್ತಿಯೇ ಮೊದಲಾದುವು ಉಪ್ಪಿಲ್ಲದ ಉಪ್ಪಿನ ಕಾಯಿಗೆ ಸಮಾನವಾದದ್ದೆನಿಸುವುದು. ೭೮. ಹೀಗೆಂದು (ಗೊಲ್ಲನ ಆಕಾರದ ಆ ಮಲ್ಲರಸನು) ಹೇಳಲು, ಮಾದರಸನ ಕೋಪವು ಅಳಿದು, ಭಯಗೊಂಡು ಆಶ್ಚರ್ಯಗೊಂಡವನಾಗಿ ನೋಡುವಷ್ಟರಲ್ಲಿ, ಮಲ್ಲಿಕಾರ್ಜುನ ಮುನೀಶ್ವರನು ತಾನು ಮೊದಲಿನ ರೂಪವನ್ನು ಹೊಂದಿದನು. ವ॥ ಆ ರೀತಿ ದನಕಾಯುವವನ ಆಕಾರವನ್ನು ತ್ಯಜಿಸಿ, ಗುರುರೂಪವನ್ನು ಧರಿಸಿರಲು, ಮಾದರಸನು ಕಂಡು ನಾಚಿ, ತನುಕುಂದಿ, ಮನ ಕದಡಿ, ದುಃಖಗೊಂಡು ಕಣ್ಣೀರಿನ ಹನಿಗಳಿಂದ ಕೂಡಿದ ಮುಖವುಳ್ಳವನಾಗಿ, ತಲೆಯನ್ನು ಬಗ್ಗಿಸಿ, ತಲ್ಲಣಗೊಂಡನು. ೭೯. ಶಾಂತಿ, ಸೈರಣೆ, ಶ್ರೇಷ್ಠವಾದ ಸದ್ಭಕ್ತಿಯೆಂಬ ಐಶ್ವರ್ಯ, ಪರಿಶುದ್ಧವಾದ ವಿರಕ್ತಿಭಾವ, ಇವು ಪಕ್ವಗೊಳ್ಳದ ದುರ್ಬುದ್ಧಿಯುಳ್ಳವನೂ. ಇಂದ್ರಿಯನಿಗ್ರಹ ಶೂನ್ಯನೂ ಆದ ನನಗೆ ಹೇಗುಂಟಾದೀತು ? ನೂತನ ಹೂಮಿಡಿಯನ್ನು ಕೊಯ್ದು ಒತ್ತೆಯಿಕ್ಕಿದರೆ ಅದು ಪಕ್ವವಾದ ಹಣ್ಣಿನ ರೀತಿಯನ್ನು ಹೊಂದೀತೇ ? ಅದರ ಹಾಗೆ ಪರಮೇಶ್ವರನ ಒಲುಮೆಯನ್ನು ಪಡೆದವರಿಗೆ ಜ್ಞಾನ

---

1 ತಾಂ(ಗ, ಚ,) ; ಪಂ ತಾಂ(ಅ)

ಸಕಳೇಶ ನಿಮ್ಮ ಕಾರು
ಣ್ಯ ಕಟಾಕ್ಷವದೊಂದದೆನಗೆ ಬರ್ಕುಮೆ ಶಾಂತಿ
ಪ್ರಕಟ ಸುಖಂ ಶರಣಾಗೆನು
ತಕಳಂಕಂ ಮಲ್ಲಿಕಾರ್ಜುನಂಗೆಱಗಿರ್ದಂ ೮೦

ವ॥ ಆಗಳಾ ಶಿವಯೋಗಿಯಾತನಂ ತೆಗೆದೆತ್ತಿ ಬಿಗಿಯಪ್ಪಿ ಮೆಯ್ದಡವಿ ಮನ್ನಿಸಿ—

ನಂದನ ಕೇಳಪಕ್ವಮತಿ ನೀನಣಮಲ್ತು ಮದೀಯದರ್ಶನಂ
ಕುಂದದಪಕ್ವ ದುರ್ಮತಿಗದೇಂ ದೊರೆಕೊಳ್ಗುಮೆ ನೀಂ ಧರಿತ್ರಿಗೆ
ಯ್ದಿಂದೊಡೆ ಪೋಗೆನೆಂದ ನುಡಿಗಾಂ ನೆಗಳ್ದಿನ್ನ ವಿನೋದವಿಂತಿದಾ
ವಂದದಿನಾದೊಡಂ ಧರೆಗೆ ನೀನಿರದೆಯ್ದುವ ಕಜ್ಜಮುತ್ತಮಂ ೮೧

ವ॥ ಅದೇಂ ಕಾರಣಮೆಂಬೆಯಪ್ಪೊಡೆ—

ಹರನಿತ್ತ ನಿರೂಪದೆ ಭಾ
ಸುರ ವೃಷಭಂ ಬಸವರೂಪದಿಂ ಬಂದೀಗಳ್
ಧರೆಗೆಸೆದಿರ್ಪಂ ಭಕ್ತಿಯ
ಪರಿಯಂ ಪ್ರಕಟಿಸುತೆ ಭಕ್ತಜನಮಂದಾರಂ ೮೨

ವೆಂಬ ಶ್ರೇಷ್ಠ ಅಮೃತವು ದೊರೆಯುವುದಲ್ಲದೆ, ಅನ್ಯರಿಗೆ ದೊರೆತೀತೇ ? ೮೦. (ಎನ್ನುತ್ತ ಆ) ಅಕಳಂಕನಾದ ಮಾದರಸನು (ಮಲ್ಲರಸನನ್ನು ಕುರಿತು) ಸಕಲೇಶನೆ, ನಿಮ್ಮ ಕರುಣಾರಸ ವಿಶಿಷ್ಟವಾದ ಕಡೆಗಣ್ಣಿನ ನೋಟವನ್ನು ಪಡೆಯದ ನನಗೆ ಶಾಂತಿಯಿಂದ ಪ್ರಕಟಗೊಳ್ಳುವ ಸುಖವು ಲಭ್ಯವಾದೀತೇ ? ನನಗೆ ನೀನೇ ರಕ್ಷಕನಾಗು ಎನ್ನುತ್ತ (ಅವನ ಪಾದಕ್ಕೆ) ನಮಸ್ಕರಿಸಿದನು. ವ॥ ಆಗ ಆ ಶಿವಯೋಗಿಯಾದ ಮಲ್ಲರಸನು ಸಕಳೇಶ ಮಾದರಸನನ್ನು ಬಾಚಿಕೊಂಡು ಬಿಗಿಯಾಗಿ ತಬ್ಬಿಕೊಂಡು, ಮೈಮೇಲೆ ಕೈಯಾಡಿಸಿ ಮನ್ನಣೆ ಮಾಡಿ—೮೧. 'ಮಗನೇ, ಕೇಳು : ನೀನು ಸಂಪೂರ್ಣ ಅಪಕ್ವಮತಿಯೆನಲ್ಲ. ನನ್ನ ದರ್ಶನವು ಅಪಕ್ವಬುದ್ಧಿಯು ಕಡಿಮೆಯಾದವನಿಗಲ್ಲದೆ (ಉಳಿದವರಿಗೆ) ಲಭಿಸೀತೇ ? ನೀನು ಭೂಲೋಕಕ್ಕೆ ಹೋಗು ಎನ್ನಲು, ಹೋಗುವುದಿಲ್ಲ ಎಂದ (ಮಾದರಸನ) ಮಾತಿಗೆ, ನಾನು (ಗೊಲ್ಲನ ರೂಪದಿಂದ) ಈ ರೀತಿ ಮಾಡಿದ್ದು ನನ್ನ ಒಂದು ವಿನೋದ ಪ್ರಸಂಗ, ನೀನು ಯಾವ ರೀತಿಯಿಂದಲಾದರೂ ಭೂಲೋಕಕ್ಕೆ ತಪ್ಪದೆ ಹೋಗುವುದು ಉತ್ತಮ ಕಾರ್ಯ (ಎಂದನು). ವ॥ ಅದೇನು ಕಾರಣ ಹೋಗಬೇಕು, ಎನ್ನುವುದೇ ಆದರೆ—(ಕೇಳು). ೮೨. ಪರಮೇಶ್ವರನ ಆಜ್ಞಾನುಸಾರ ಪ್ರಕಾಶಮಾನನಾದ ವೃಷಭೇಶ್ವರನು ಈಗ ಭೂಮಿಗೆ ಬಸವನ ರೂಪದಿಂದ ಬಂದು, ಭಕ್ತಿಯ ರೀತಿಯನ್ನು ಪ್ರಕಟಿಸುತ್ತ, ಭಕ್ತಜನರಿಗೆ ಕಲ್ಪವೃಕ್ಷ ಸದೃಶನಾಗಿ

ಆತನ ಪೊರೆಗೆಯ್ದಿ ಕರಂ
ನೂತನ ಗೀತಾಮೃತಾಂಬುಧಿಯೊಳಗವನಂ
ಪ್ರೀತಿಯೊಳೋಲಾಡಿಸಿ ವಿ
ಖ್ಯಾತ ಸುಖಂಬೆತ್ತು ಭಕ್ತಿಯಂ ಪ್ರಕಟಿಸುತಂ ೮೩

ಶ್ರೀ ವೀರಶೈವ ದೇಶಿಕ
ಭಾವಮನಾಳ್ದೆಸೆದು ಚರಿಸುತುಂ ಬರ್ಪುದು ನೀ
ನೈವತ್ತು ಬರಿಸಕೆಮ್ಮ ಪ
ದಾವಾಸಕ್ಕೆಂದು ನುಡಿದು ಮಗುಳ್ದಿಂತೆಂದಂ ೮೪

ಸ್ಥಿತಿ ನಿನಗೆ ಸಪ್ತಶತಿ ಪರಿ
ಮಿತ ವತ್ಸರಮಿಳೆಯೊಳುಳಿದುದೈವತ್ತು ಸಮು
ನ್ನತ ವತ್ಸರಮದು ಕಳಿದೊಡೆ
ಸುತ ನಿನ್ನಂ ಬರಿಸಿಕೊಳ್ವೆನೆನ್ನೆಡೆಗೊಲವಿಂ ೮೫

ವ॥ ಎಂದುಸುರೆ ಮಹಾಪ್ರಸಾದವೆಂದು ನಿಜಾನುಜ್ಞೆಯಂ ಕೈಕೊಂಡ ಮಾದಿರಾಜನಂ ನಿನ್ನ ಮನೋರಥಮನ[1]ರೆಯೆನಲೊಡಂ—

ಶ್ರೀಯಂ ಬೇಡುವೊಡನ್ಯ ಕಾಂತೆ ಘನದೀರ್ಘಾಯುಷ್ಯಮಂ ಬೇಳ್ಪೆನೇ
ಮಾಯಾಮಂದಿರಮಿಂದ್ರಭೋಗಮಚಿರಂ ಕೈವಲ್ಯಮಂ ಬೇಳ್ಪೊಡಾ
ಮಾಯಾತೀತಮೆನಿಪ್ಪ ಶಂಭುಪದಮಿಂತನ್ಯಾರ್ಥಮಂ ಬೇಡುವ
ನ್ಯಾಯಕ್ಕಾಂ ಬಗೆದಾರೆನೆಂದೆಜಗಿ ಬೀಳ್ಕೊಂಡಂ ಮಹಾಭಕ್ತಿಯಿಂ ೮೬

ಶೋಭಿಸುತ್ತಿದ್ದಾನೆ. ೮೩-೮೪. ಆವನ ಬಳಿಗೆ ಹೋಗಿ, ಚೆನ್ನಾಗಿ, ನೂತನವೆನಿಸಿದ ಸಂಗೀತವೆಂಬ ಕ್ಷೀರ ಸಮುದ್ರದಲ್ಲಿ ಆ ಬಸವೇಶ್ವರನನ್ನು ಸಂತೋಷದಿಂದ ಓಲಾಡಿಸು. ವಿಖ್ಯಾತವಾದ ಸೌಖ್ಯವನ್ನು ಹೊಂದಿ ಭಕ್ತಿಯನ್ನು ಪ್ರಕಟಿಸುತ್ತ, ಶ್ರೀ ವೀರಶೈವ ಮತ ಸಂಬಂಧವಾದ ಗುರೂತ್ತಮ ಸ್ಥಾನವನ್ನು ಹೊಂದು ; ಪ್ರಕಾಶಮಾನವಾಗಿ (ಅದನ್ನು) ಆಚರಣೆ ಮಾಡಿ, ನೀನು (ಇನ್ನು ಮುಂದೆ) ಐವತ್ತು ವರ್ಷಗಳ ನಂತರ ನಮ್ಮ ಪಾದ ಗಳೆಡೆಗೆ ಬರುವುದು, ಎಂದು ಹೇಳಿ ಪುನಃ ಹೀಗೆ ಹೇಳಿದನು : ೮೫. ನಿನಗೆ ಏಳು ನೂರು ವರ್ಷಗಳು ಭೂಮಿಯಲ್ಲಿ ವಾಸವಿದೆ. (ಆಯುಷ್ಯವಿದೆ). ಇನ್ನು ಮುಂದೆ ಐವತ್ತು ವರ್ಷಗಳು ಉಳಿದಿವೆ. ಅದು ಕಳೆದ ಮೇಲೆ ಎಲೈ ಮಗನೇ, ನಿನ್ನನ್ನು ನನ್ನ ಸ್ಥಳಕ್ಕೆ ಪ್ರೀತಿಯಿಂದ ಬರಿಸಿಕೊಳ್ಳುತ್ತೇನೆ. ವ॥ ಹೀಗೆಂದು ಮಲ್ಲರಸನು ಹೇಳಲು ಮಹಾಪ್ರಸಾದವೆಂದು (ಹೇಳಿ) ತನ್ನ ಅಪ್ಪಣೆಯನ್ನು ಸ್ವೀಕರಿಸಿದ ಮಾದಿರಾಜನನ್ನು ಕುರಿತು, 'ನಿನ್ನ ಮನೋರಥವನ್ನು ಬೇಡು' ಎನ್ನಲು ಆ ಕೂಡಲೇ—೮೬. ಲಕ್ಷ್ಮಿಯನ್ನು ಬೇಡುವೆನೇ ಅವಳು ಬೇರೊಬ್ಬನ ಕಾಂತೆ ; ಘನವಾದ ದೀರ್ಘಾಯುಷ್ಯವನ್ನು ಬೇಡು ವೆನೇ ಅದು ಮಾಯೆಗೆ ಆಶ್ರಯವಾದದ್ದು ; ಇಂದ್ರ ಭೋಗವನ್ನು ಕೇಳುವೆನೇ ಅದು

---

1 ನೊ(ದ)

ವ॥ ಅನಂತರಂ —

ವಿಮಳ ಸ್ವಾಂತಾಬ್ಜದೊಳ್ಪ್ಜಿಸುತೆ ಮಿಸುಪ ತದ್ದೇಶಿಕ ಶ್ರೀಪದಾಂಭೋ
ಜಮನಾಗಳ್ ಬಂದು ಕಲ್ಯಾಣಮನತಿ ಜವದಿಂ ಪೊಕ್ಕು ಲಿಂಗಾರ್ಚನಾ ಸಂ
ಭ್ರಮದೊಳ್ತಳ್ತಿರ್ದ ಭಾಸ್ವದ್ಬಸವನಿದಿರೊಳಾಲಿಂಗದೊಳ್ಬಿಂಬಿಸಿರ್ದಂ
ಪ್ರಮಥೇಂದ್ರಾಚಾರ ಸಾರಪ್ರಥಿತ ಗುಣಗಣಭ್ರಾಜಿತಂ ಮಾದಿರಾಜಂ ೮೭

ಸಂಗಮದೇವನೊಳ್ಪೊಳೆವ ಜಂಗಮಮೂರ್ತಿಯನೀಕ್ಷಿಸುತ್ತೆ ಸಾ
ಷ್ಟಾಂಗಲಸತ್ಪ್ರಣಾಮಮನೊಡರ್ಚುತೆ ಮೆಲ್ಲನೆ ನೋಳ್ಪ ವೇಳೆಯೊ
ಳ್ಮುಂಗಡೆ ನಿಂದು ಮಾದರಸನಾ ಪರಿಜಾಂತಿರೆ ನೋಡಿ ವಿಸ್ಮಯಾ
ಲಿಂಗಿತ ಮಾನಸಂ ಬಸವನೊಲ್ದೆಱಗಿರ್ದನವಂಗೆ ಭಕ್ತಿಯಿಂ ೮೮

ವ॥ ಆಗಳ್ —

ಮಾದಿರಾಜ ವಿಭು ತದ್ವೃಷೇಂದ್ರನಂ
ಮೋದದಿಂದೆ ಬಿಗಿಯಪ್ಪಿ ಸಾರಸಂ
ವಾದಮೋದೆ ಕೃಪೆಗೆಯ್ದು ಸರ್ವತ
ತ್ತ್ವಾದಿ ಚಿತ್ಸುಖಮನೀವುತೊಪ್ಪಿದಂ ೮೯

ಪದೆದಾಗಳ್ಮಾದಿರಾಜಾಚಾರ್ಯನ ಪದತಳಮಂ ಪೂಜಿಸುತ್ತಂ ವಿಳಾಸಾ
ಸ್ಪದ ಕಾರುಣ್ಯಾರ್ದ್ರತದ್ವೀಕ್ಷಣರುಚಿವಿಳಸಚ್ಚಂದ್ರಿಕಾಸಾರದಿಂ ಸ

ಅಲ್ಪಕಾಲಿಕವಾದದ್ದು ; ಮೋಕ್ಷವನ್ನು ಬೇಡುವೆನೇ ಅದು ವೇದಗಳನ್ನು ಅತಿಕ್ರಮಿಸಿದುದು ಎನಿಸಿರುವ ಈಶ್ವರನ ಸ್ಥಾನ—ಈ ರೀತಿ ಮತ್ತೊಬ್ಬರ ಪದಾರ್ಥವನ್ನು ಬೇಡುವ ಅನ್ಯಾಯಕ್ಕೆ ಮನಸ್ಸು ಕೊಡುವುದಿಲ್ಲ, ಎಂದು ಮಹಾಭಕ್ತಿಯಿಂದ ನಮಸ್ಕರಿಸಿ, ಹೊರಡಲು ಅಪ್ಪಣೆ ಪಡೆದನು. ವ॥ ಅನಂತರ ೮೭. ಪ್ರಮಥ ಶ್ರೇಷ್ಠರ ಆಚಾರದ ಸಾರದಿಂದ ಪ್ರಸಿದ್ಧವಾದ ಸದ್ಗುಣ ಸಮೂಹ ಪ್ರಕಾಶಿಸುವ ಮಾದರಸನು ತನ್ನ ನಿರ್ಮಳವಾದ ಹೃದಯ ಕಮಲದಲ್ಲಿ ಶೋಭಿಸುವ ಆ ಗುರೂತ್ತಮನಾದ ಮಲ್ಲರಸನ ಪಾದ ಕಮಲಗಳನ್ನು ಧ್ಯಾನಮಾಡುತ್ತ, ಆಗ ಅಲ್ಲಿಂದ ಹೊರಟು ಬಹುಬೇಗದಿಂದ ಕಲ್ಯಾಣಪಟ್ಟಣವನ್ನು ಹೊಕ್ಕನು. ಅಲ್ಲಿ ಲಿಂಗ ಪೂಜಾ ಸಂಭ್ರಮದಲ್ಲಿ ತೊಡಗಿದ್ದ ಪ್ರಕಾಶಮಾನವಾದ ಬಸವಣ್ಣನ ಹಸ್ತದಲ್ಲಿರುವ ಲಿಂಗದಲ್ಲಿ ಪ್ರತಿಬಿಂಬಿಸಿದನು. ೮೮. ಹೀಗೆ (ತನ್ನ) ಇಷ್ಟಲಿಂಗವಾದ ಸಂಗಮದೇವನಲ್ಲಿ ಹೊಳೆಯುತ್ತಿರುವ ಜಂಗಮ ಮೂರ್ತಿಯನ್ನು ಬಸವಣ್ಣನು ಕಂಡು ಸಾಷ್ಟಾಂಗ ಪ್ರಣಾಮವನ್ನು ಮಾಡಿ ಆ ಮಾದರಸನನ್ನು ಕಂಡಾಗ ಅವನು ಲಿಂಗದಲ್ಲಿ ಕಂಡ ಆಕಾರವನ್ನು ಧರಿಸಿರುವುದನ್ನು ನೋಡಿ, ಆಶ್ಚರ್ಯದಿಂದ ಕೂಡಿದ ಮನಸ್ಸುಳ್ಳವನಾಗಿ ಪ್ರೀತಿಭಕ್ತಿಗಳಿಂದ ಅವನಿಗೆ ನಮಸ್ಕರಿಸಿದನು. ವ॥ ಆಗ ೮೯. ಮಾದಿರಾಜ ವಿಭುವು ಆ ಬಸವೇಶ್ವರನನ್ನು ಪ್ರೀತಿಯಿಂದ ಗಾಢವಾಗಿ ಆಲಿಂಗಿಸಿ, ಸಾರವತ್ತಾದ ಸಂವಾದ ಹೊಂದಿ ಕೃಪೆದೋರಿ ಸಮಸ್ತ ತತ್ತ್ವಗಳಿಗೂ ಮೂಲವಾದ ಪರಶಿವನ ವಿಷಯಕವಾದ ಜ್ಞಾನದಿಂದುಂಟಾದ ಸೌಖ್ಯವನ್ನುಂಟು ಮಾಡುತ್ತ ಒಪ್ಪಿದ್ದನು. ೯೦. ಅಸಮಾನವಾದ ಶಿವಾದ್ವೈತ ವಿದ್ಯೆಗೆ ಸಮುದ್ರದೋಪಾದಿಯಲ್ಲಿರುವ ಬಸವಣ್ಣನು ಸಂತೋಷಗೊಂಡು ಆಗ ಮಾದಿರಾಜನ

ಮ್ಮದ ದುಗ್ಧಾಂಭೋಧಿ ಪ್ರೈವರ್ಚಿರೆ ನಲಿಯೆ ಹೃದಿಂದೀವರಂ ಚಿತ್ಕಳಾಸಂ
ಪದಮಂ ಕೈಕೊಂಡು ಕಣ್ಗೊಪ್ಪಿದನತುಳ ಶಿವಾದ್ವೈತ ವಿದ್ಯಾಸಮುದ್ರಂ ೯೦

ಹರರೂಪ ಮಾದಿರಾಜನ
ಚರಿತ್ರಮಂ ಕೇಳ್ದ ಪೇಳ್ದ ಪಠಿಸಿದ ಸುಜನರ್
ಪುರುಷಾರ್ಥ ಚತುಷ್ಟಯಮಂ
ವರ ಭಕ್ತಿಜ್ಞಾನವಿರತಿಯಂ ಸಲೆ ಪಡೆವರ್ ೯೧

ಶಿವೇ ಸರ್ವಾಧಾರೇ ಶಶಧರಕಲಾಭೂಷಣಧರೇ
ಸುವರ್ಣಾಂಭೋಜಾಭಸ್ಫುಗಿತವದನೇ ಕುಂದರದನೇ
ಹವಿರ್ಭೋಕ್ತ್ರಾರಾಧ್ಯೇ ಹರಹೃದಯ ಹರ್ಷೋದಯಕರೇ
ಭವಾನೀ ಕಲ್ಯಾಣೀ ಭುವನಜನನೀ ಪಾಲಿಸಿಳೆಯಂ ೯೨

ಇದು ವಿನಮದಖಿಳ ಸುರಾಸುರೇಂದ್ರಮುಕುಟತಟಘಟಿತ ಮಣಿಗಣಾಗಣಿತ ರುಚಿನಿಚಯ
ತರುಣಾರುಣಾತಪಪರಿಲಸಿತ ಪರಮ ಶಿವಲಿಂಗ ಪಾದಾರವಿಂದಪರಾಗಭಸಿತ
ಭಾಸುರಲಲಾಟಪಟ್ಟ ಸರಸಜನಮಾನಿತೋಭಯಕವಿತಾವಿಶಾರದ
ಶ್ರೀಷಡಕ್ಷರಿದೇವಭಕ್ತಿವಿರಚಿತ

ಶ್ರೀಮದ್ ಬಸವರಾಜವಿಜಯಮಹಾಪುರಾಣದೊಳ್
ಸಕಳೇಶ ಮಾದಿರಾಜ ಕಥಾಭಿವರ್ಣನಂ

ಏಕಾದಶಾಶ್ವಾಸಂ ಸಮಾಪ್ತಂ.

ಅಂತು ಆಶ್ವಾಸ ೧೧ಕ್ಕೆ ಪದಗಣನೆ ೧೦೦೦ಕ್ಕೆ ಮಂಗಳಮಹಾ ಶ್ರೀ॥

ಪಾದಗಳನ್ನು ಪೂಜೆ ಮಾಡುತ್ತ, ವಿಲಾಸದಿಂದ ಕೂಡಿದ, ಕಾರುಣ್ಯದಿಂದ ತೊಯ್ದು ಆ ಮಾದಿರಾಜನ ನೋಟದ ಕಾಂತಿಯೆಂಬ ಪ್ರಕಾಶಿಸುವ ಬೆಳದಿಂಗಳ ಧಾರೆಯಿಂದ ಬಸವಣ್ಣನ ಸಂತೋಷವೆಂಬ ಕ್ಷೀರ ಸಾಗರವು ಉಕ್ಕಿತು. ಹೃದಯವೆಂಬ ಕನ್ನೈದಿಲೆಯು ಶಿವಜ್ಞಾನವೆಂಬ ಸಂಪತ್ತನ್ನು ಹೊಂದಿ ಕಣ್ಣಿಗೆ ಶೋಭಿಸುವಂತೆ ಒಪ್ಪಿದನು. ೯೧. ಹರರೂಪನಾಗಿ ಬಂದ ಆ ಮಾದಿರಾಜನ ಚರಿತ್ರೆಯನ್ನು ಕೇಳಿದ, ಹೇಳಿದ ಸಜ್ಜನರುಗಳು ಧರ್ಮಾರ್ಥಕಾಮಮೋಕ್ಷಗಳೆಂಬ ಪುರುಷಾರ್ಥಚತುಷ್ಟಯವನ್ನೂ ಶ್ರೇಷ್ಠವಾದ ಭಕ್ತಿ, ಜ್ಞಾನ, ವೈರಾಗ್ಯವನ್ನೂ ಚೆನ್ನಾಗಿ ಪಡೆಯುವರು. ೯೨. ಶಿವೆಯೇ, ಸರ್ವಕ್ಕೂ ಆಧಾರ ಭೂತಳೇ, ಚಂದ್ರನ ಕಿರಣವೆಂಬ ಆಭರಣವನ್ನು ಧರಿಸಿದವಳೇ, ಸುವರ್ಣ ಕಮಲದಂತೆ ಇರುವ ಕಾಂತಿಯಿಂದ ಪ್ರಕಾಶಿಸುವ ಮುಖವುಳ್ಳವಳೇ, ಮೊಲ್ಲೆಯ ಹೂವಿನಂತಿರುವ ದಂತ ಪಜ್ಞ್ತಿಯುಳ್ಳವಳೇ, ದೇವತೆಗಳಿಂದ ಪೂಜಿಸುವುದಕ್ಕೆ ಯೋಗ್ಯವಾದವಳೇ, ಈಶ್ವರನ ಮನಸ್ಸಿಗೆ ಸಂತೋಷವುಂಟಾಗುವಂತೆ ಮಾಡುವ ಭವಾನಿಯೇ, ಮಂಗಳ ಕರಳೇ ಜಗತ್ತಿನ ತಾಯಿಯೇ ಭೂಮಿಯನ್ನು ರಕ್ಷಿಸು.

ದ್ವಾದಶಾಶ್ವಾಸಂ
[ಮಡಿವಳಯ್ಯನ ಕಥೆ]

ಶ್ರೀ ಕಲ್ಯಾಣೀರಮಣನಿ
ಳಾಕುಶಿಖಿಪವನಗಗನರವಿಶಶಿಪುರುಷಾ
ನೇಕತನುಃ ಚಾರುಚಂದ್ರಕ
ಲಾ[1]ಕಂ ಪೊರೆಗೆಮ್ಮನಾವಗಂ ಶಿವಲಿಂಗಂ ೧

ಸಾರಸಾರಸಾರಿಮಿತ್ರ ವಾಯುಮಿತ್ರನೇತ್ರ ಜಂ
ಭಾರಿ ಭಾರತೀ ರಮೇಶ ಸೇವಿತಾಂಘ್ರಿ ನಿತ್ಯ ಸಾ
ಕಾರಕಾರಣಾತ್ಮ ದೇವ ರಕ್ಷಿಸೆನ್ನನಕ್ಷಯೋ
ದಾರ ದಾರುಣಾಸುರೇಂದ್ರಶೈಳ ಶಂಬ ಶಂಕರಾ ೨

ಸುರು[2]ಚಿರನಂದನಾಳಿ ನವಶಾಳಿ ವನಾವಳಿ ಪಂಕಜಾಕರೋ
ತ್ಕರತಟಿನೀಪಶುಪ್ರಕರ ಮಾಹಿಷಮಂಡಿತ ಸಂಪದಾಸ್ಪದ
ಸ್ಫುರಿತಪುರೀಕದಂಬ ವಿಳಸಜ್ಜನರಂಜಿತ ದೇಶಮಧ್ಯ ಬಂ
ಧುರತರಮಾಗಿ ಪಿಪ್ಪಲಿಗೆಯೆಂಬ ಪುರಂ ಮೆಱೆಗುಂ ವಿಳಾಸದಿಂ ೩

ಮಡಿವಾಳಯ್ಯನ ಕಥೆ

೧. ಮಂಗಳಕರಳಾದ ಪಾರ್ವತೀಪತಿಯೂ, ಭೂಮಿ, ನೀರು, ಅಗ್ನಿ, ವಾಯು, ಆಕಾಶ, ಸೂರ್ಯ, ಚಂದ್ರ, ಆತ್ಮವೇ ಆದಿಯಾದ ಅನೇಕ ತನುಗಳುಳ್ಳವನೂ, ಮನೋಹರನಾದ ಚಂದ್ರನೇ ಆಭರಣವಾಗಿ ಉಳ್ಳವನೂ ಆದ ಶಿವಲಿಂಗನು ನಮ್ಮನ್ನು ಸದಾ ರಕ್ಷಿಸಲಿ. ೨. ಸಾರವತ್ತಾದ ಚಂದ್ರ (ಸಾರಸಾರಿ), ಸೂರ್ಯ (ಮಿತ್ರ), ವಾಯುಮಿತ್ರನಾದ ಅಗ್ನಿಗಳೇ ನೇತ್ರವಾಗಿ ಉಳ್ಳವನೂ, ದೇವೇಂದ್ರ, ಸರಸ್ವತೀ, ಲಕ್ಷ್ಮೀದೇವಿಯರುಗಳ ಪತಿಗಳಾದ ಬ್ರಹ್ಮ ಮತ್ತು ವಿಷ್ಣು ಇವರಿಂದ ಸೇವಿಸಲ್ಪಡುವ ಪಾದಗಳುಳ್ಳವನೂ, ಶಾಶ್ವತನೂ, ಆಕಾರಸಹಿತನಾದವನೂ, ಸಕಲ ಬ್ರಹ್ಮಾಂಡಕ್ಕೂ ಮೂಲಕಾರಣನಾದ ದೇಹವುಳ್ಳವನೂ, ಸಕಲಕ್ಕೂ ಸ್ವಾಮಿಯಾದವನೂ, ನಾಶವಾಗದ ಔದಾರ್ಯ ಗುಣವುಳ್ಳವನೂ, ಭಯಂಕರರಾದ ರಾಕ್ಷಸಶ್ರೇಷ್ಠರೆಂಬ ಪರ್ವತಗಳಿಗೆ ವಜ್ರಾಯುಧ ಪ್ರಾಯನೂ ಆದ ಶಂಕರನೇ ನನ್ನನ್ನು ರಕ್ಷಿಸು. ೩. ಪಿಪ್ಪರಿಗೆ (ಪಿಪ್ಪಲಿಗೆ) ಎಂಬ ಪಟ್ಟಣವು ಮನೋಹರವಾದ ಉಪವನಗಳ ಸಮೂಹ, ನೂತನ ಬತ್ತದ ಗದ್ದೆಗಳು, ಕಾಡುಗಳ ಸಮೂಹ, ಸರೋವರ ಸಮೂಹ, ಹೊಳೆಗಳು, ದನಕರುಗಳ ಗುಂಪು, ಕೋಣಗಳು,–ಇವುಗಳಿಂದ ಅಲಂಕಾರಗೊಂಡದ್ದಾಗಿ, ಐಶ್ವರ್ಯಕ್ಕೆ ಆಸ್ಪದವೆನಿಸಿ,

---

1 ಲಾಂ(ಮು) 2 ರ(ಮು, ಚ, ಗ, ಅ)

ಆ ಪುರದಲ್ಲಿ ಪೆರ್ಮೆ ವಿೞಗೆ ರಂಜಿಪನೊರ್ವನಪೂರ್ವವೃತ್ತನು
ರ್ವೀಪರಿಪಾಲನಾರ್ಥವೊಗೆತಂದ ಮಹೇಶ್ವರ ದಿವ್ಯಮೂರ್ತಿ ದಿ
ಗ್ವ್ಯಾಪಿಯಶಸ್ಕನಸ್ಖಲಿತ ಸದ್ಗುಣಭೂಷಣನರ್ದಿತೇಷಣಂ
ಚಾಪಲವಾದಿಭಂಜನನನಂಜನನೀಶ್ವರಭಕ್ತಿ[1]ರಂಜಿತಂ ೪

ವಿಲಸದ್ವೀರ ಶಿವೈಕ್ಯಮಾರ್ಗ ನಿರತಂ ವಿಜ್ಞಾನ ಸಂಪನ್ನನು
ಜ್ವಲ ವೀರವ್ರತನಿಷ್ಠನಪ್ರತಿಮ ವೈರಾಗ್ಯಸ್ವಭಾಗ್ಯಂ ನಿರಾ
ಕುಲಚಿತ್ತಂ ನಿರವದ್ಯ ಹೃದ್ಯಚರಿತಂ ನಿರ್ಧೂತ ತಾಪವ್ರಜಂ
ಕಲಿಕಾಲುಷ್ಯನಿವಾರಕಂ ಶುಭಕರಂ ಕಾರುಣ್ಯರತ್ನಾಕರಂ ೫

ಜಿತಕಾಲಕ್ರಮಕರ್ಮನೂರ್ಮಿರಹಿತಂ ನಿರ್ಮಾಯನಂಗೇಂದ್ರಿಯೋ
ನ್ನತ ಲಿಂಗಾನ್ವಿತನಾತ್ಮದರ್ಶನ ಸದಾಪಾಲಂ ಸಭಾಜ್ಯೋತಿ ವಿ

ಶೋಭಿಸುವ ಜನಗಳಿಂದ ರಂಜಿಸುತ್ತಿರುವ (ಕರ್ನಾಟಕ) ದೇಶದ ಮಧ್ಯದಲ್ಲಿ ಬಂಧುರವಾದುದೆನಿಸಿ ವೈಭವದಿಂದ ಮೆರೆಯುತ್ತಿತ್ತು. ೪-೫-೬. ಆ ಪಟ್ಟಣದಲ್ಲಿ ಅಪೂರ್ವ ಚರಿತ್ರೆಯುಳ್ಳವನೂ, ಭೂಮಿಯನ್ನು ರಕ್ಷಿಸುವುದಕ್ಕೋಸುಗ ಅವತರಿಸಿದವನೂ, ಪರಮೇಶ್ವರನ ದಿವ್ಯ ಆಕಾರವುಳ್ಳವನೂ, ದಿಕ್ಕುಗಳಿಗೆಲ್ಲ ವ್ಯಾಪಿಸಿರುವ ಯಶಸ್ಸುಳ್ಳವನೂ, ಅಚಲವಾದ ಸದ್ಗುಣಗಳೇ ಆಭರಣವಾಗಿ ಉಳ್ಳವನೂ, ಅರ್ಥೇಷಣ, ಪುತ್ರೇಷಣ, ದಾರೇಷಣಗಳೆಂಬ ಈಷಣತ್ರಯಗಳನ್ನು ನಾಶಗೊಳಿಸಿದವನೂ, ಚಪಲದಿಂದ ಕೂಡಿದ ಪರವಾದಿಗಳನ್ನು ನಾಶಪಡಿಸಿದವನೂ, ಮಾಯಾರಹಿತನೂ, ಈಶ್ವರ ಭಕ್ತಿಯಿಂದ ಶೋಭಿಸುವವನೂ, ಪ್ರಕಾಶಿಸುವ ವೀರಶೈವ ಮಾರ್ಗದಲ್ಲಿ ಆಸಕ್ತನೂ, ವಿಶೇಷವಾದ ಶಿವಜ್ಞಾನ ಸಂಪನ್ನನೂ, ಉಜ್ವಲವಾದ ವೀರಶೀಲವ್ರತದಲ್ಲಿ ನಿಷ್ಠೆಯುಳ್ಳವನೂ, ಅಸದೃಶ ವಿರಕ್ತಿಭಾವವೇ ತನ್ನ ಐಶ್ವರ್ಯವಾಗಿ ಉಳ್ಳವನೂ, ಆಕುಲವಿಲ್ಲದ ಮನಸ್ಸಿನವನೂ, ನಿರ್ದುಷ್ಟವೂ ಮನೋಹರವೂ ಆದ ಚರಿತ್ರೆಯುಳ್ಳವನೂ, ಆಧ್ಯಾತ್ಮಿಕ, ಆಧಿ ಭೌತಿಕ, ಆಧಿ ದೈವಿಕಗಳೆಂಬ ತಾಪತ್ರಯಗಳನ್ನು ಹೋಗಲಾಡಿಸಿದವನೂ (ಕೊಡವಿ ಹಾಕಿದವ), ಕಲಿಕಾಲದ ಪಾಪವನ್ನು ಹೋಗಲಾಡಿಸಿಕೊಂಡವನೂ, ದಯಾ ಸಮುದ್ರನೂ, ಭೂತ, ಭವಿಷ್ಯತ್, ವರ್ತಮಾನಗಳೆಂಬ ಮೂರು ಕಾಲಗಳ ಕರ್ಮವನ್ನು ಜೈಸಿದವನೂ, ಕ್ಷುತ್ತು (ಹಸಿವು) ಪಿಪಾಸೆ (ನೀರಡಿಕೆ), ಶೋಕ, ಮೋಹ, ಜರಾ (ವಾರ್ಧಕ್ಯ), ಮರಣಗಳೆಂಬ ಷಡೂರ್ಮಿಗಳನ್ನು ತ್ಯಜಿಸಿದವನೂ, ಮಾಯಾರಹಿತನೂ (ಅಜ್ಞಾನದೂರನೂ), ದೇಹ ಮತ್ತು ಇಂದ್ರಿಯಗಳಲ್ಲಿ ಶ್ರೇಷ್ಠವಾದ ಲಿಂಗ ಕಳೆಯನ್ನು ತುಂಬಿಕೊಂಡಿರುವವನೂ, ಸತತವೂ ಆತ್ಮದರ್ಶನ ಪಾಲನೆಯುಳ್ಳವನೂ,

---

1 ಕ್ತ (ಮು, ಚ, ಗ, ಅ)

ಶ್ರುತ ತೇಜೋಮಯನಪ್ರಮೇಯ ರಜಕತ್ವಚ್ಛನ್ನರುದ್ರಂ ಪ್ರತ
ರ್ಜಿತಮದ್ಯದ್ಭವಿಸಂಘನೂರ್ಜಿತನಯೋನಿಪ್ರೋದ್ಭವಂ ಮಾಚಯಂ ೬

ಬಸವಾಧೀಶನ ಭಕ್ತಿವಾರಿಧಿಗೆ ಚಂದ್ರಂ ಬರ್ಪವೋಲ್ತದ್ಗುಣ
ಪ್ರಸರಃಕರ್ಣನ ಕರ್ಣನಾತ್ಮಪುರದಿಂ ಕಲ್ಯಾಣಕೇಳ್ತಂದು ವಂ
ದಿಸುತಾ ತಾಣದೊಳಿರ್ದ ಜಂಗಮಚಯಕ್ಕಾನಂದದಿಂ ನಡೆ ಪೂ
ಜಿಸಿ ಕೊಂಡಲ್ಲಿ ವೃಷೇಂದ್ರನಿಂದೆ ಮೆಱೆದಿರ್ದಂ ಮಾಚಿದೇವಾಹ್ವಯಂ ೭

ವ|| ಅಂತಿರ್ದು ಮಾಚಿದೇವನೆನ್ನ ದಾಸೋಹಂಭಾವಕ್ಕೆ ತಕ್ಕ ಕಜ್ಜಂಗೆಯ್ವೆನೆಂದು ಭಕ್ತಿಮಿಗೆ ಶಿವಗಣದ ಮಾಸಿದಂಬರಕದಂಬಮನರುಣೋದಯದಿಂ ಮುನ್ನಮೆ ಕೊಂಡು ಪೋಗಿ ತಾಂ ಬೇಱೆ ನೆಗಳ್ದ ದೀರ್ಘಿಕೆಯ ತಿಳಿನೀರಿಂ ತೊಳೆದು ವಿಮಳಂಗೆಯ್ದೊಣಗಿಸಿ ಮಡಿಕೆಗೊಳಿಸಿ ಘಟ್ಟನೆಯ್ದು ಪೊಱೆಗಟ್ಟಿ ಪೊತ್ತು ಜಂಗಮಹಿಮಾಚಲದಂತೆ ರಾಜವೀಥಿವಿಡಿದು—

ಭವಿಜನಮೇಳ್ತರುತ್ತುಮಿರೆ ತನ್ನಿದಿರೊಳ್ಜಯಘಂಟಿಕಾಲಸ
ದ್ರವಮನೊಡರ್ಚುತುಂ ಜಡಿದು ಚಿಮ್ಮುತೆ ಕೈಯ ನಿಶಾತ ಖಡ್ಗಮಂ

ನಿರಂತರವೂ ಪ್ರಖ್ಯಾತವಾದ ತೇಜೋಮಯ ಶರೀರಿಯೂ (?), ಅಗಣ್ಯವಾದ ಮಡಿವಳ ರೂಪದ ಗುಪ್ತ ವೇಷ ಧರಿಸಿದ ರುದ್ರನೂ, ಮದೋನ್ಮತ್ತ ಲಿಂಗಹೀನ ಸಮೂಹವನ್ನು ಭಯಗೊಳಿಸಿದವನೂ, ಬಲಶಾಲಿಯೂ, ಅಯೋನಿಜನೂ ಆದ ಮಾಚಯ್ಯನೆಂಬ ಹೆಸರಿನ ಒಬ್ಬನು (ಆ ಹಿಪ್ಪರಿಗೆಯಲ್ಲಿ) ಹೆಚ್ಚಾದ ಹಿರಿಮೆಯಿಂದ ಮೆರೆಯುತ್ತಿದ್ದನು, ೭. ಆ ಮಾಚಿದೇವನೆಂಬ ಹೆಸರಿನ (ಶರಣನು) (ಕಲ್ಯಾಣದ) ಬಸವೇಶ್ವರನ ಸದ್ಗುಣಗಳನ್ನು ಕಿವಿಯಾರ ಕೇಳಿದವನಾಗಿ, ಆ ಬಸವೇಶ್ವರನು ಮಾಡುವ ಭಕ್ತಿಯೆಂಬ ಸಮುದ್ರಕ್ಕೆ ಚಂದ್ರನು ಮೂಡಿ ಬರುವಂತೆ ತನ್ನ ಹಿಪ್ಪರಿಗೆಯೆಂಬ ಊರಿನಿಂದ ಕಲ್ಯಾಣಕ್ಕೆ ಬಂದನು. ಅಲ್ಲಿದ್ದ ಜಂಗಮ ಸಮೂಹಕ್ಕೆ ನಮಸ್ಕಾರ ಮಾಡುತ್ತ ಆನಂದದಿಂದ ಅಲ್ಲ ಬಸವೇಶ್ವರನಿಂದ ಚೆನ್ನಾಗಿ ಪೂಜೆಗೊಳ್ಳುತ್ತ ಮೆರೆಯುತ್ತಿದ್ದನು. ವ|| ಹೀಗೆ ಆ ಮಾಚಿದೇವನಿದ್ದುಕೊಂಡು ನನ್ನ ದಾಸೋಭಾವಕ್ಕೆ ಯೋಗ್ಯವಾದ ಕಾಯಕವನ್ನು ಮಾಡುವೆನು ಎಂದು ವಿಶೇಷವಾದ ಭಕ್ತಿಭಾವದಿಂದ ಶಿವಶರಣರ ಮೈಲಿಗೆಯ ಬಟ್ಟೆ ಸಮೂಹವನ್ನು ಸೂರ್ಯೋದಯಕ್ಕೆ ಮೊದಲೇ ತಗೆದುಕೊಂಡು ಹೋಗಿ, ತನಗಾಗಿ ತಾನು ಪ್ರತ್ಯೇಕವಾಗಿ ಮಾಡಿಕೊಂಡ ಬಾವಿಯ ಸ್ವಚ್ಛ ನೀರಿನಲ್ಲಿ ತೊಳೆದು ಮಡಿ ಮಾಡಿ, ಒಣಗಿಸಿ, ಮಡಿಕೆಗೊಳಿಸಿ, ಬಡಿದು ಹೊರೆ ಕಟ್ಟಿಕೊಂಡು ಹೊತ್ತು ಚಲಿಸುತ್ತಿರುವ ಹಿಮಾಲಯ ಪರ್ವತವೋ ಎನ್ನುವ ಹಾಗೆ ರಾಜಮಾರ್ಗವನ್ನು ಅನುಸರಿಸಿ—೮–೯. ಭವಿಗಳಾದ ಜನರು ತನ್ನ ಎದುರಿನಲ್ಲಿ ಬರುತ್ತಿರಲು, ಜಯ ಘಂಟೆ ಶೋಭಿಸುವ ಶಬ್ದವನ್ನು ಮಾಡುತ್ತ, ಕಯ್ಯಲ್ಲಿರುವ ತೀಕ್ಷ್ಣವಾದ ಖಡ್ಗವನ್ನು ಝಳಪಿಸುತ್ತ, ಶಿವಶರಣರ ಮಡಿಯ ಬಟ್ಟೆಗಳನ್ನು ಸೋಂಕದ ಹಾಗೆ ದೂರ ಹೋಗೆಂದು ಚಿಮ್ಮುತ್ತ, (ಒಂದು ವೇಳೆ) ಮುಟ್ಟಿದ್ದೇ ಆದರೆ ನಾನು (ಅವರನ್ನು)

ಶಿವಗಣದಂಬರವ್ರಜಮನಂಟದೆ ಸಾರ್ತೆಲಗಂಟಿದಾಗಳಾಂ
ತವಿಪೆನೆನುತ್ತೆ ಸಾರುತಧಟಿಂ ನಡೆತಂದು ವಿಳಾಸದೇಳ್ಗೆಯಿಂ ೮

ಅಂಬರಮನೆರೆದ ಭಕ್ತ ಕ
ದಂಬಕ್ಕಂಬರಮನೇನನಾದೊಡಮೀವು
ತ್ತಂ ಬಸವನೀಕ್ಷಿಸುತ್ತೆ ಮು
ದಂಬಡೆ ಮೆಱೆದಿರ್ದನಮಿತ ಮಹಿಮಾವರಣಂ ೯

ವ॥ ಆಗಳಾ ಮಾಚಿದೇವನ ಮಹಿಮೆಗಂಡು ಭಕ್ತಗಣಂ ತಲೆದೂಗಿ ಬೀಗಿ—

ಪುಲಿಯುಡುಪನೆಂಬ ರಜಕನ
ಸುಲಲಿತತರ ಭಕ್ತಿಯೊಳ್ಳಿತಾದುದು ಮುನ್ನಂ
ನಲಿದೇಕಾಳಿಯೊಡರ್ಚಿದ
ಮಲಹರ ಸದ್ಭಕ್ತಿ ಮಱೆದುದೀಗಳ್ ಧರೆಯೊಳ್ ೧೦

ಮಡಿ[1]ವಳ್ಳ[1] ಮಾಚಿದೇವನ
ಬೆಡಂಗುವಡೆದೆಸೆವ[2] ಭಕ್ತಿಯಾ ಭಕ್ತಿಯಿನು
ಗ್ಗಡಮಾದುದಿವನ ಸಾಸದ
ಪೊಡರ್ಪು ಪೊಸತೆಂದು ಪೊಗಳೆ ಭಕ್ತಸಮಾಜಂ ೧೧

ನಾಶಗೊಳಿಸುವೆನು, ಎನ್ನುತ್ತ, ಸಾರುತ್ತ, ಶೌರ್ಯದಿಂದ ಕೂಡಿದವನಾಗಿ ಬಂದು, ಅಧಿಕ ವೈಭವದಿಂದ ಬಟ್ಟೆಯನ್ನು ಕೊಟ್ಟ ಶರಣರುಗಳ ಸಮೂಹಕ್ಕೆ ಅವರವರ ಬಟ್ಟೆಗಳನ್ನು ಕೊಡುತ್ತ, ಬೇಡಿದುದನ್ನು ಕೊಡುತ್ತ, ಬಸವಣ್ಣನನ್ನು ನೋಡಿ ಸಂತೋಷಗೊಳ್ಳುತ್ತ, ಅಪರಿಮಿತ ಮಹಿಮೆಗಳೆಂಬ ವಸ್ತ್ರಗಳಿಂದ ಆವರಿಸಲ್ಪಟ್ಟ ಮಾಚಿದೇವನು (ಆ ಕಲ್ಯಾಣ ದಲ್ಲಿ) ಶೋಭಿಸುತ್ತಿದ್ದನು. ವ॥ ಆಗ ಆ ಮಾಚಿದೇವನ ಮಹಿಮೆಯನ್ನು ನೋಡಿ ಭಕ್ತರುಗಳ ಸಮೂಹವು ತಲೆದೂಗಿ ಉತ್ಸಾಹಗೊಂಡವರಾಗಿ—೧೦–೧೧. ಈ ಪೂರ್ವ ದಲ್ಲಿ 'ಪುಲಿಯುಡುಪ' ನೆಂಬ ಹೆಸರಿನ ಅಗಸನ ಶ್ರೇಷ್ಠವಾದ ಭಕ್ತಿಯೂ ಸಂತೋಷ ದಿಂದ 'ಏಕಾವಳಿ' ಎಂಬ ಹೆಸರಿನ ಮಡಿವಳ ಭಕ್ತನು ಮಾಡಿದ ಶಿವನ ಭಕ್ತಿಯೂ ಮೆರೆದಿತ್ತು. ಈಗ ಭೂಮಿಯಲ್ಲಿ ಈ ಮಾಚಿದೇವನ ಬೆಡಗಿನಿಂದ ಕೂಡಿದ ಭಕ್ತಿ, ಆ ಹಿಂದಿನ ಪುಲಿಯುಡುಪ ಮತ್ತು ಏಕಾವಳಿಗಳ ಭಕ್ತಿಗಿಂತಲೂ ಉತ್ಕೃಷ್ಟವೂ ನೂತನ

---

1 ವಾಳ(ಚ, ಪ, ಅ) 2 ದ(ಚ)

ಕೋಕಾಳಿಗೆ ನಯಮಂ ಸಲೆ
ಘೂಕಾಳಿಗೆ ಭಯಮನೆಸಪ ರವಿಯವೊಲೆ ಗಣಾ
ನೀಕಕ್ಕೆ ನಯಮನಾ ಭವಿ
ಲೋಕಕ್ಕತಿ ಭಯಮನೆಸಗಿ ಕರಮೆಸೆದಿರ್ದಂ ೧೨

ವ॥ ಪ್ರಬಳ ತಮೋಹರ ಪ್ರತಾಪಶಾಲಿಯಪ್ಪ ಮಾಚಿದೇವನಂತಿರುತ್ತಮಿರ್ದೊಂದುದಿನ ಮೆಂದಿನಂತೆ ವಸನವಿಸರಮಂ ಪೊಱೆಗಟ್ಟಿ ಪೊತ್ತು ನಡೆವಾಗಳ್ಬೀದಿಯೊಳ್ಮದಾವಿಳ ಮಾನಸಂ ಭವಿಯೊರ್ವನಂಬರಕದಂಬಮಂ ಸೋಂಕೆ ಕುಪಿತನಾಗಿ—

ಜಡಿದಲಗನೆತ್ತಿ ಭೋಂಕನೆ
ಪೊಡೆದಾತನ ತಲೆಯನಾಗಸಕ್ಕಿರದಿಟ್ಟಾ
ಮಡಿವಳ್ಳ ಮಾಚಿದೇವಂ
ನಡೆತಂದು ಗಣಾಂಘ್ರಿಸೇವೆಗೆಯ್ಯುತ್ತಿರ್ದಂ ೧೩

ವ॥ ಆಗಳಾ ಪುರದಖಿಲಜನನಿವಹಂ ಕಂಡು ಕಡು ಕನಲ್ದು ಮಂತಣಂಗೊಂಡು ಗುಜು ಗುಜಿ ಸುತಂ ಪರಿತಂದು ಮಣಿದೇಳ್ವ ರಾಜಪುತ್ರರ ಮೌಳಿಘೃಣಿಗಣದಿಂ ಪಜ್ವಳಿಪ ಬಿಜ್ಜಳನೋಲಗಮಂ ಪೊಕ್ಕು ತುಳಿಲ್ಗೆಯ್ದು ಕರಂಗಳಂ ಮುಗಿದು ನಿಂದು—

ರೀತಿಯದೂ ಎಂದು ಭಕ್ತಸಮಾಜವು ಹೊಗಳುವಂತಾಗಿತ್ತು. ೧೨. ಚಕ್ರವಾಕ ಪಕ್ಷಿಗಳ ಸಮೂಹಕ್ಕೆ ನಯವನ್ನೂ (ಗಂಡು ಹೆಣ್ಣುಗಳು ಸೇರುವ ನೀತಿಯನ್ನೂ) ಗೂಬೆಗಳ ಸಮೂಹಕ್ಕೆ ಭಯವನ್ನೂ ಉಂಟುಮಾಡುವ ಸೂರ್ಯನ ಹಾಗೆ, ಶಿವಗಣಗಳ ಸಮೂಹಕ್ಕೆ ನೀತಿಯನ್ನೂ, ಭವಿಗಳಿಗೆ ಭಯವನ್ನೂ ಉಂಟುಮಾಡುತ್ತ ವಿಶೇಷ ಮನೋಹರತೆಯಿಂದ (ಆ ಕಲ್ಯಾಣದಲ್ಲಿ ಮಾಚಿದೇವನು) ಇದ್ದನು. ವ॥ ಪ್ರಬಲವಾದ ಅಜ್ಞಾನವೆಂಬ ಕತ್ತಲೆಯನ್ನು ನಾಶಪಡಿಸುವ ಪರಾಕ್ರಮಶಾಲಿಯಾದ ಮಾಚಿದೇವನು ಈ ರೀತಿ ಇರುತ್ತ, ಒಂದು ದಿವಸ ದಿನದಿನದಂತೆ ಬಟ್ಟೆಗಳನ್ನು ಹೊರೆ ಕಟ್ಟಿಕೊಂಡು ಹೊತ್ತು ನಡೆಯುತ್ತಿರುವಾಗ ಬೀದಿಯಲ್ಲಿ ಗರ್ವದಿಂದ ಕೂಡಿದ ಮನಸ್ಸುಳ್ಳ ಒಬ್ಬ ಭವಿಯು ಬಟ್ಟೆಗಳ ಸಮೂಹವನ್ನು ಮುಟ್ಟಲಾಗಿ (ಮಾಚಿದೇವನು) ಕೋಪದಿಂದ ಕೂಡಿದವನಾಗಿ—೧೩. (ಆಗ) ಆ ಮಾಚಿದೇವನು ಕತ್ತಿಯನ್ನು ಝಳಪಿಸುತ್ತ ಎತ್ತಿ ಆ ಕೂಡಲೇ ಅವನ ತಲೆಯನ್ನು ಹೊಡೆದು ತಪ್ಪದೆ ಆಕಾಶಕ್ಕೆ ಹಾರಿಸಿ, ಹೊರಟುಬಂದು ಶಿವಶರಣರ ಪಾದಸೇವೆ ಮಾಡುತ್ತ ಇದ್ದನು. ವ॥ ಆಗ ಆ ಪಟ್ಟಣದ ದುಷ್ಟ ಸಮೂಹವು (ಮಾಚಿದೇವನ ಈ ರೀತಿಯನ್ನು) ಕಂಡು ಅತಿ ಕೋಪಗೊಂಡು ಅಲ್ಲಲ್ಲಿ ಗುಜುಗುಜು ಮಾತನಾಡುತ್ತ, ಓಡಿಬಂದು ನಮಸ್ಕಾರ ಮಾಡಿ ಏಳುತ್ತಿರುವ ರಾಜಪುತ್ರರ ಕಿರೀಟದಲ್ಲಿರುವ ರತ್ನಗಳ ಕಾಂತಿಯ ಸಮೂಹದಿಂದ ಪ್ರಜ್ವಲಿಸುತ್ತಿದ್ದ ಬಿಜ್ಜಳ ಭೂಪಾಲನ ಸಭೆಯನ್ನು ಪ್ರವೇಶಿಸಿ ನಮಸ್ಕಾರಮಾಡಿ ಕೈಮುಗಿದು ನಿಂತು—

ಧರಣಿಪ ನಿನ್ನ ಪಟ್ಟಣದೊಳುದ್ಧತನೊರ್ವನಖರ್ವಗರ್ವ ನಿ
ಷ್ಠುರನೆಸೆದಿರ್ದಪಂ ರಜಕನದ್ಭುತಮಾತನ ವೃತ್ತಮಾರುಮಂ
ಪುರದೊಳೆ ಬೀದಿಯೊಳ್ಸುಳಿಯಲೀಯನುದಗ್ರ ಕೃಪಾಣಪಾಣಿಯುಂ
ಬರಚಯಮುಂಟಿದಾತನ ಕಱುತ್ತಿಱಿದಪ್ಪೆನೆನುತ್ತೆ ಸಾಱುತುಂ ೧೪

ಮೃಡಭಕ್ತನೆಂಬ ಗರ್ವದ
ಪೊಡರ್ಪು ತಲೆಗೇಱಿ ಬಡಿವನೆಂತಪ್ಪರುಮಂ
ಕಡು ಸಾಸಿಗಳಂ ಪೆಱರಂ
ಮಡಿಪುವ ಮೃಡಭಕ್ತಿಯೊಳವೆ ವಸುಧಾತಳದೊಳ್ ೧೫

ಅಂಗಡಿಯೆತ್ತಿ ಕಟ್ಟಿದುದು ಕೆಟ್ಟುದು ಮಾಱುವ ಸಂತೆ ಮಸ್ತಮಾ
ತಂಗ ತುರಂಗ ಗೋ ಶಕಟಸಂತತಿಯದ್ಭುತಮೆಂತೊ ಗೆಂಟಿನೊ
ಳ್ಪಿಂಗುಡುತೋಡುಗುಂ ಜವದಿನಾ ರಜಕಂ ಬರೆ ಬರ್ಪನೊರ್ವನಂ
ಮುಂಗಡೆಯಲ್ಲಿ ಖಡ್ಗದೆ ಕಱುತ್ತಿಱಿದಾಗಸಕೆತ್ತಿ ಚಿಮ್ಮಿದಂ ೧೬

ಪೆಣನದು ಬಯಲಾದುದೊ ತಾ
ನೊಣೆದನೊ ನುಂಗಿದುದೊ ಗಗನಮದು ಕಾಣಿಸದೇ
ನಣಕವೊ ರಜಕನ ಬಗೆ ತ
ಲ್ಲಣಮನಿದಂ ತವಿಸಿ ನೃಪತಿ ಪೊರೆ ಪುರಜನಮಂ ೧೭

೧೪. ಭೂಪಾಲನೇ, ನಿನ್ನ ಪಟ್ಟಣದಲ್ಲಿ ಕೊಬ್ಬಿದ ಅಧಿಕ ಅಹಂಕಾರದಿಂದ ಕಠಿಣನೆನಿಸಿದ ಒಬ್ಬ ಅಗಸನು ಶೋಭಿಸುತ್ತಿದ್ದಾನೆ. ಅವನ ಚರಿತ್ರೆಯು ಆಶ್ಚರ್ಯಕರವಾದದ್ದು ; ಉತ್ಕೃಷ್ಟವಾದ ಖಡ್ಗದಿಂದ ಕೂಡಿದ ಕೈಯುಳ್ಳವನಾಗಿ, (ಅವನು) ತಾನು 'ಹೊತ್ತ ಬಟ್ಟೆಗಳ ಸಮೂಹವನ್ನು ಮುಟ್ಟಿದವರನ್ನು ಕೋಪಗೊಂಡು ಕೊಲ್ಲುವೆನು', ಎಂದು ಸಾರುತ್ತ ಪಟ್ಟಣದ ಬೀದಿಯಲ್ಲಿ ಯಾರನ್ನೂ ಸುಳಿದಾಡಲು ಕೊಡುತ್ತಿಲ್ಲ. ೧೫. (ತಾನು) ಮೃಡಭಕ್ತನೆಂಬ ಗರ್ವದ ಆಧಿಕ್ಯವು ತಲೆಗೇರಿ, ಅತಿ ಸಾಹಸಿಗಳಾದ ಅನ್ಯ ಅಲಿಂಗಿಗಳು ಎಂಥವರಾದರೂ ಬಡಿಯುತ್ತಿದ್ದಾನೆ. ಲೋಕದಲ್ಲಿ ಕೊಲ್ಲುವ ಶಿವ ಭಕ್ತಿಯೂ ಉಂಟೆ ? ೧೬. ಅಂಗಡಿ ಮುಂಗಟ್ಟುಗಳು ಮುಚ್ಚಿದವು ; ಮಾರಾಟದ ಸಂತೆ ಹಾಳಾಯಿತು ; ಮದಿಸಿದ ಆನೆಗಳು, ಕುದುರೆಗಳು, ಹಸುಗಳು, ಗಾಡಿಗಳೇ ಮೊದಲಾದವುಗಳ ಸಮೂಹವು ಆ ಅಗಸನು ಬರುತ್ತಿರಲು ಹಿಂದಿರುಗಿ, ವೇಗವಾಗಿ ದೂರಕ್ಕೆ ಓಡಿಹೋಗುವುವು. ಅದ್ಭುತವೆಂಬಂತೆ ಮುಂದುಗಡೆಯಲ್ಲಿ ಬರುವ ಒಬ್ಬ ನನ್ನು ಕೋಪದಿಂದ ಕೂಡಿ ಖಡ್ಗದಿಂದ ಕತ್ತರಿಸಿ ಆಕಾಶಕ್ಕೆ ಚಿಮ್ಮಿದನು. ೧೭. ಮಹಾರಾಜಾ, (ಹಾಗೆ ಚಿಮ್ಮಿದ ಆ ಮನುಷ್ಯನ) ಹೆಣವು ಬಯಲಾಗಿಹೋಯಿತು. (ಆ ಹೆಣವನ್ನು) ಆ ಅಗಸನೇ ತಿಂದನೋ ? ಆಕಾಶವೇ ನುಂಗಿತೋ ? ಅದು ಕಾಣಿಸಲೇ ಇಲ್ಲ. ಅಗಸನ ರೀತಿಯು ಏನದ್ಭುತವೋ ? (ನಮಗುಂಟಾಗಿರುವ) ಈ ಭಯವನ್ನು

ವ॥ ಎಂಬ ಪಿಶುನ ದುರಾಲಾಪವುನರಸನಾಲಿಸಿ ಕೋಪಾವೇಶಪಾಟಲಕಟಾಕ್ಷನಾಗಿ ಬಸವಾಮಾತ್ಯನಾನನವುನಭೀಕ್ಷಿಸಿ —

ರಾಕ್ಷಸನೊ ಮನುಜರೂಪತ
ರಕ್ಷುವೊ ಖಲ ರಜಕನೀಶಭಜಕನೆನುತ್ತುಂ
ಭಕ್ಷಿಸಿದಪನಿದಿರ್ಗೆಯ್ತುಂ
ದಾಕ್ಷಣಮಪರಾಧರಹಿತರಂ ಮಾನವರಂ ೧೮

ಜನಪತಿಯಾದೆನ್ನತ್ತಣೆ
ನಿನಿತುಂ ಭಯಮಿಲ್ಲದವುವು ರಜಕಂ ಮೆಯ್ಗೊ
ಬ್ಬಿನ ಪೆರ್ಚುಗೆಯಿಂ ಕೊಂದಪ
ನನಿಮಿತ್ತಂ ಸಾರ್ದ ನರರನೀ ಪುರವರದೊಳ್ ೧೯

ಪಳೆಗರ್ಪಡವುಂ ಕರ್ಚುವ
ಚಳಕದ ಕರವೆತ್ತಸ್ತ್ರ ಚಾಳನವಿದ್ಯಾ
ಬಳವೆತ್ತಲಿವಂ ಮನುಜಾ
ವಳಿಲಯಕರ ರಜಕರೂಪ ರಾಕ್ಷಸನಲ್ತೇ ೨೦

ಚೋಳ ವರಾಳ ಕೇರಳ ಕಳಿಂಗ ತುರುಷ್ಕ ವಿದರ್ಭ ಪಾಂಡ್ಯ ಪಾಂ
ಚಾಳ ಮುಖಾವನೀಪತಿಗಳಳ್ಕಿ ಮದಾಜ್ಞೆಗೆ ಬಾಳ್ವುದಾವಗಂ
ಕಾಳಗಕಾಂಪ ಶೂರರಣಮಿಲ್ಲಮಿವಂ ಕಡು ಕೊರ್ಬಿ ತನ್ನ ತೋ
ಳ್ಬಾಳ ವಿಡಾಯಮಂ ಮೆಱೆಯಲಾಟಿಪನೆಮ್ಮೊಳದೆಂತೊ ಸಾಹಸಂ ೨೧

ನಿವಾರಣೆ ಮಾಡಿ, ಪಟ್ಟಣಿಗರನ್ನು ರಕ್ಷಿಸು, ವ॥ ಹೀಗೆಂದು ಆ ಚಾಡಿಕೋರರು ಕೊಟ್ಟ ಮಾತುಗಳನ್ನು ಅರಸನಾದ ಬಿಜ್ಜಳನು ಕೇಳಿ, ಕೋಪಾವೇಶದಿಂದ ಕೆಂಪಾದ ಕಡೆಗಣ್ಣುಳ್ಳವನಾಗಿ, ಮಂತ್ರಿಯಾದ ಬಸವೇಶ್ವರನ ಮುಖವನ್ನು ನೋಡಿ—೧೮. 'ನೀಚನಾದ ಅಗಸನು ಈಶ್ವರಭಕ್ತನೆಂದು ಹೇಳಿಕೊಳ್ಳುತ್ತ ತಪ್ಪಿಲ್ಲದ ಮನುಷ್ಯರನ್ನು ಎದುರಿಗೆ ಬಂದ ಮಾತ್ರದಿಂದ ಭಕ್ಷಿಸುವ (ಅವನೇನು) ರಾಕ್ಷಸನೋ ಮನುಷ್ಯರೂಪದ ಹುಲಿಯೋ ?' ೧೯. 'ಆ ಅಗಸನು ಜನಪಾಲಕನಾದ ನನ್ನ ಭಯವು ಸ್ವಲ್ಪವೂ ಇಲ್ಲದೆ ಕೊಬ್ಬಿದ ಶರೀರದ ಆಧಿಕ್ಯದಿಂದ ನಿಷ್ಕಾರಣವಾಗಿ ಈ ಶ್ರೇಷ್ಠ ಪಟ್ಟಣದಲ್ಲಿ ತಿರುಗಾಡುವನು–ದುಷ್ಟರನ್ನು ಕೊಲ್ಲುವನೇ ! ಅಮಮ !' ೨೦. 'ಹಳೆಯ ಬಟ್ಟೆಗಳನ್ನು ತೊಳೆಯುವ ಜಾಣತನವುಳ್ಳ ಕೈಯೆತ್ತ ? ಶಸ್ತ್ರಗಳನ್ನು ಝಳಪಿಸುವ ವಿದ್ಯಾಶಕ್ತಿಯಿದೆತ್ತ ? ಅವನು ಮನುಷ್ಯ ಸಮೂಹವನ್ನು ನಾಶಗೊಳಿಸುವ ಅಗಸನ ರೂಪದ ರಾಕ್ಷಸನಲ್ಲವೆ ? ೨೧. 'ಚೋಳ, ವರಾಳ, ಕೇರಳ, ಕಳಿಂಗ, ತುರುಷ್ಕ, ವಿದರ್ಭ, ಪಾಂಡ್ಯ, ಪಾಂಚಾಳರೇ ಮುಖ್ಯರಾದ ರಾಜರುಗಳು ನನ್ನ ಆಜ್ಞೆಗೆ ಭಯಪಟ್ಟು, ಸತತವೂ ಬಾಳುತ್ತಿದ್ದಾರೆ. (ನನ್ನೊಡನೆ) ಯುದ್ಧಕ್ಕೆ ಎದುರಾಗುವ ಶೂರರಂತೂ ಸ್ವಲ್ಪವೂ ಇಲ್ಲ. ಈ ರಜಕನು ವಿಶೇಷವಾಗಿ ಕೊಬ್ಬಿದವನಾಗಿ, ತನ್ನ ತೋಳಿನ ಕತ್ತಿಯ

ಅಱಿಯದವನಂತೆ ವಸನಂ
ಕಱೆಗೊಳ್ವುದೆ ನುಂಗಲಕ್ಕುಮೇ ಪೇಳವನಂ
ನೆಱೆ ಸೊರ್ಕಿದಸಗನಧಟಂ
ಮುಱಿಯದೆ ಬಿಡೆನೆಂದು ಬಿಜ್ಜಳಂ ಘೂರ್ಮಿಸುತಂ ೨೨

ನಿಜ ಸಿಂಹಾಸನದಿರ್ಕೆಲಂಬಿಡಿದು ನಿಂದುದ್ಯತ್ಕೃಪಾಣೋಲ್ಲಸ
ದ್ಭುಜರಂ ಧೀರಭಟರ್ಕಳಂ ಬೆಸಸಿದಂ ನೀಮೆಯ್ದಿ ಕೂರ್ಪಿಂದೆ ತ
ದ್ರಜಕಂ ಬರ್ಪೆಡೆಗಾಂತು ಗರ್ಜಿಸುತೆ ಮುನ್ನುಂಗಿರ್ದನಂ ತಳ್ವದೊ
ಟ್ಟಜೆಯಿಂ ಕಾಱೆನುತಾರ್ದು ಕೊಲ್ವುದೆನುತುಂ ಕೋಪೋಜ್ವಳಂ ಬಿಜ್ಜಳಂ ೨೩

ವ॥ ಇಂತೆಂದು ಗಳಪುವ ಬಿಜ್ಜಳನಂ ವೃಷೇಂದ್ರನಭೀಕ್ಷಿಸಿ—

ಎಲೆ ನೃಪತಿ ಖಲರ ಕಾಕರ
ಮಲಿನಾತ್ಮರ ಮಾತುಗೇಳ್ದು ಮರುಳಾದೆ ಮದಾ
ವಿಲಮಾನಸ ಮೇಲಱಿಯದೆ
ಪಲವಂ ಗಳಪಿದಪೆ ಬಲ್ಲರೊಲ್ವರೆ ನಿನ್ನಂ ೨೪

ಡಂಭವನ್ನು ನನ್ನಲ್ಲಿ ತೋರಿಸುವುದಕ್ಕೋಸುಗ ಆಟವಾಡುವ ಅವನ ಆ ಸಾಹಸ ಎಂಥದೋ !' ೨೨. 'ತಿಳಿಯದವರು ಅವನನ್ನು ಮುಟ್ಟಿದರೆ (ಅವನು ಹೊತ್ತ) ಬಟ್ಟೆಗಳು ಕಪ್ಪಾಗುವುವೇ ? ಅಂಥ ಜನರನ್ನು ನುಂಗಿ ಬಿಡಬೇಕೆ ? (ಕೊಲ್ಲಬೇಕೆ ?) ಹೇಳು ! (ಹೀಗೆ) ಚೆನ್ನಾಗಿ ಸೊಕ್ಕಿದ ಆ ಅಗಸನ ಸಾಮರ್ಥ್ಯವನ್ನು ಮುರಿಯದೆ ಬಿಡುವುದಿಲ್ಲ,' ಎಂದು ಬಿಜ್ಜಳನು ಗರ್ಜಿಸಿದನು, ೨೩. ತನ್ನ ಸಿಂಹಾಸನದ ಎರಡು ಪಾರ್ಶ್ವಗಳನ್ನನುಸರಿಸಿ ನಿಂತುಕೊಂಡು, ಉತ್ಕೃಷ್ಟವಾದ ಕತ್ತಿಗಳಿಂದ ಪ್ರಕಾಶಿಸುತ್ತಿರುವ ತೋಳುಗಳುಳ್ಳ ಧೈರ್ಯಶಾಲಿಗಳಾದ ಭೃತ್ಯರನ್ನು ಕುರಿತು, ನೀವು (ಈಗಲೆ) ಕೆಚ್ಚುಳ್ಳವರಾಗಿ ಹೋಗಿ, ಆ ಅಗಸನು ಬರುವ ದಾರಿಗೆ ಎದುರಾಗಿ ನಿಂತು ಗರ್ಜನೆ ಮಾಡಿ. ಮೊದಲು ಒಬ್ಬ ಮನುಷ್ಯನನ್ನು ನುಂಗಿದ ಅವನನ್ನು ತಪ್ಪದೆ ಆವೇಶದಿಂದ (ಒಟ್ಟಜೆಯಿಂ) 'ಕಕ್ಕು' ಎನ್ನುತ್ತ ಕೂಗಿ, ಕೊಲ್ಲಬೇಕು, ಎನ್ನುತ್ತ ಉಜ್ವಲ ಕೋಪದಿಂದ ಬಿಜ್ಜಳನು ಆಜ್ಞಾಪಿಸಿದನು. ವ॥ ಹೀಗೆಂದು ವ್ಯರ್ಥಾಲಾಪ ಮಾಡಿದ ಬಿಜ್ಜಳನನ್ನು ಬಸವೇಶ್ವರನು ನೋಡಿ,—೨೪. ಎಲೈ ವರಪತಿಯೇ, ನೀಚರೂ, ಕುತ್ಸಿತರೂ, ಮಲಿನವಾದ ಆತ್ಮವುಳ್ಳವರೂ ಆದ (ಈ ಜನರ) ಮಾತನ್ನು ಕೇಳಿ, ಹುಚ್ಚನಾದೆ. ಗರ್ವದಿಂದ ಕೂಡಿದ ಮನಸ್ಸುಳ್ಳ ಅರಸೇ, ಮುಂದರಿಯದೆ ಹಲವು ವಿಧದಲ್ಲಿ ವ್ಯರ್ಥವಾಗಿ ಆಡುತ್ತಿದ್ದೀಯೆ. ತಿಳಿದವರು ನಿನ್ನ (ಈ ಮಾತನ್ನು) ಒಪ್ಪಲಾರರು.

ಅಸಗನಿವನೆಂದು ಬಗೆದೇ
ೞಿಸುವೈ ತಿಳಿವಿಲ್ಲದರಸ ಕೇಳಸಗನೆ ತಾಂ
ರಸೆಯನಡಿಸೋಂಕಿನಿಂ ಪಾ
ಲಿಸಲೆಯ್ದಿದ ರುದ್ರಮೂರ್ತಿಯಾ ಮಾಚಯ್ಯಂ ೨೫

ಆವನೆ ಕುಲಹೀನನುಂ ಮೇ
ಣವನೆ ಕುಲಾನ್ವಿತನುಮವನೆ ತದುಭಯಭಾವಂ
ಸವನಿಸದ ಸರ್ವಗತನುಂ
ಪ್ರವಿದಿತ ಸಾಕ್ಷಾನ್ಮಹೇಶ್ವರಂ ಮಾಚಯ್ಯಂ ೨೬

ವ॥ ಮತ್ತಮಾ ಮಾಚಿದೇವನವಿರಳಮದಮಿಳಿತನಳಿನಭವಜಟಾಘಟಿತಯಜ್ಞಸೂತ್ರ ಮನುರದೊಳಳವಡಿಸಿ ಕರತಳದೊಳ್ ತತ್ಕರೋಟಿ ಭಿಕ್ಷಾಪಾತ್ರೆಯುಂ ತಳೆದು ಭುವನಭವನದೊಳ್ಭಿಕ್ಷಾಟನಂಗೆಯ್ವ ಮಹಾ ಬ್ರಾಹ್ಮಣನುಂ ಸಂಪೂಜ್ಯ ಮೋಕ್ಷಸಾಮ್ರಾಜ್ಯರಕ್ಷಣವಿಚಕ್ಷಣನೆನಿಪ[1]ಕ್ಷಯ[1]ಕ್ಷತ್ರಿಯನುಂ ಚಪಳತರ ಕರ್ಮೋರ್ಮಿಮಾಲಾ ಕುಲಭವಸಮುದ್ರದೊಳ್ಜೀವವಸ್ತು ನಿಬಿಡಿತತನುವಹಿತ್ರಸಮುದಯಮುಂ ತಿರಿಗಿಪುದಱಿಂ ವೈಶ್ಯನುಂ ಮಾಯಾಧರಿತ್ರಿಯೊಳ್ಜೀವಸಸ್ಯಂಗಳಂ ಬೆಳೆಯಿಸಿ ಕಾಲ

೨೫. ಜ್ಞಾನವಿಲ್ಲದ ಅರಸನೇ, ಇವನು (ಸಾಮಾನ್ಯ) ಅಗಸನೆಂದು ಭಾವಿಸಿ ತಿರಸ್ಕರಿಸುತ್ತಿದ್ದೀಯೆ. ಆ ಮಾಚಯ್ಯನು ಅಗಸನೇ ? (ಈ) ಭೂಮಿಯನ್ನು ತನ್ನ ಪಾದ ಸ್ಪರ್ಶದಿಂದ ಪಾಲಿಸಲಿಕ್ಕೆ ಬಂದ ರುದ್ರಮೂರ್ತಿಯಾಗಿದ್ದಾನೆ. ೨೬. ಆ ಮಾಚಯ್ಯನೆಂಬುವನೇ ಕುಲಹೀನನೂ (ಕುಲವೇ ಇಲ್ಲದವನು ಎಂಬ ಭಾವ), ಅವನೇ ಕುಲಾನ್ವಿತನೂ (ರುದ್ರನೇ ಮಾಚಯ್ಯನಾಗಿ ಬಂದುದರಿಂದ ಕುಲಾನ್ವಿತನು ಎಂಬ ಭಾವ) ಆಗಿದ್ದಾನೆ. ಅವನೇ ಆ ಕುಲೀನತೆ ಅಕುಲೀನತೆಗಳಿಲ್ಲದ, ಸರ್ವವ್ಯಾಪಿಯಾದ ಲೋಕ ಪ್ರಸಿದ್ಧನಾದ ಸಾಕ್ಷಾತ್ ಪರಮೇಶ್ವರನು (ಆಗಿದ್ದಾನೆ ಎಂದು ಭಾವ). ವ॥ ಮತ್ತು ಆ ಮಾಚಿದೇವನು ವಿಶೇಷ ಗರ್ವದಿಂದ ಕೂಡಿದ ಬ್ರಹ್ಮನ ಜಡೆಯಲ್ಲಿ ಸೇರಿಸಲ್ಪಟ್ಟ ಯಜ್ಞೋಪವೀತವನ್ನು ಎದೆಯ ಮೇಲೆ ಅಳವಡಿಸಿಕೊಂಡು, ಕೈಯಲ್ಲಿ ಆ ಬ್ರಹ್ಮನ ತಲೆಯ ಓಡೆಂಬ ಭಿಕ್ಷಾಪಾತ್ರೆಯನ್ನು ಹಿಡಿದು ಜಗತ್ತೆಂಬ ಮನೆಯಲ್ಲಿ ಭಿಕ್ಷಾಟನೆ ಮಾಡುವ ಮಹಾ ಬ್ರಾಹ್ಮಣನೆನಿಸಿದ್ದಾನೆ ; ಪೂಜಿಸುವುದಕ್ಕೆ ಯೋಗ್ಯವಾದ ಮೋಕ್ಷವೆಂಬ ಸಾಮ್ರಾಜ್ಯವನ್ನು ಪಾಲನೆ ಮಾಡುವುದರಲ್ಲಿ ಕುಶಲನಾದ ಕ್ಷತ್ರಿಯನೆನಿಸಿದ್ದಾನೆ ; ಅತಿ ಚಪಲಗಳಾದ ಕರ್ಮಗಳೆಂಬ ತರಂಗ ಮಾಲೆಗಳಿಂದ ವಿಸ್ತಾರಗೊಂಡ ಸಂಸಾರವೆಂಬ ಸಮುದ್ರದಲ್ಲಿರುವ ಪ್ರಾಣಿಗಳೆಂಬ ಪದಾರ್ಥಗಳಿಂದ ತುಂಬಿರುವ ದೇಹವೆಂಬ ಹಡಗುಗಳ ಸಮೂಹವನ್ನು ತಿರುಗಿಸುವುದರಿಂದ ವೈಶ್ಯನೆನಿಸಿದ್ದಾನೆ ; ಮಾಯೆಯಿಂದ (ಭ್ರಮೆಯಿಂದ ಅಥವಾ ಅಜ್ಞಾನದಿಂದ) ಕೂಡಿದ ಈ ಭೂಮಿಯಲ್ಲಿ ಪ್ರಾಣಿಗಳೆಂಬ ಪೈರುಗಳನ್ನು ಬೆಳೆಸಿ, ಕಾಲವನ್ನರಿತು ಅವನ್ನು ಕೊಯ್ಲು ಮಾಡಿ ಹಾಕಿ, (ಅಂಥ

---

1 × (ಚ, ಗ, ಅ)

ಮುಱಿದು ಕೊಯ್ದೊಕ್ಕಿ ರಾಸಿಗೆಯ್ವುದಱಿಂದನುಪಮಾನ ಶೂದ್ರನುಂ ನಾದಬಿಂದು ಫಲಕದೊಳಾದಿ ಶಕ್ತಿ ಚಕ್ರಮನವುರ್ಚಿ ಕಳಾದಂಡದಿನಜಾಂಡ ಭಾಂಡಂಗಳಂ ತಿರುಪಿ ನಿರ್ಮಿಪ ಘಟಿಕಾಜನುಂ ಪ್ರಳಯ ಜಲಧಿಯೊಳಳವಿಗಳಿದಳವಿನಿಂ ವಿಚಾರಿಪ ಸಮದ ಮತ್ಸ್ಯ ಕೂರ್ಮಂಗಳನಾದಿ ಭೂಧಾರಕ ಪಿಶಿತಮಿಳಿತ ನೃಹರಿನಖಸಂಘಟಿತ ಫಣಿಪಗುಣನಿಯುತ ತ್ರಿವಿಕ್ರಮ ಕಂಕಾಳದಂಡವೆಂಬ ಗಾಳಮನಿಟ್ಟು ಸೆಳೆವ ವಾಗುರಿಕನುಂ ಮೃಗರೂಪನಾಳ್ದ ನಳಿನಜನ ಶಿರಮನೆಚ್ಚುರುಳ್ಚಿದತುಳಬಳ ಕಿರಾತನುಂ ಸಕಲ ಜಗಂ ನಿಲಯನಿವಹ ನಿರ್ಮಾಣಕರ್ಮ ಕರ್ಮಠನೆನಿಪ ಕಮ್ಮಾಱನುಂ ವಿಮಲ ದೀಕ್ಷಾನಲನಿನಾತ್ಮ ಕನಕ ಮಲಿನಮನಪೋಹಿಪ ಹೇಮಕಾರಕನುಂ ಲೋಕೇಶ ವಾಸವಾದಿ ಪಶುಪ್ರಕರ ಪಾಲನಂಗೆಯ್ವ ಗೋವಳನುಂ ಪ್ರಕೃತಿ ಸೂತ್ರಮಂ ಪಿಡಿದು ನರೋರಗ ದಿವಿಜರೆಂಬ ಬೊಂಬೆಗಳನಾಡಿಪ ಸೂತ್ರಿಕನುಂ ಏಕಾರ್ಣವದೊಳಳ್ದಿ ನಾಕಿಜನವೆಂಬ ವಸನಮಂ ವಿಲಯ ಸಮಯದೊಳೊಗೆವ ರಜಕನುಂ ತಾನೆ ನಿಜಮೆನಿಸಿ ರಂಜಿಪನವಂಗೊಂದು ಜಾತಿ ಕಲ್ಪನೆ ಗೆಯ್ವುದವಿವೇಕ ವಿಳಸನಮಕ್ಕುಮಾ ಮಹಾತ್ಮನ ಪೆಂಪನಭಿವರ್ಣಿಪೊಡನಂತಾನಂತರ್ಗಮಾದೊಡಮಶಕ್ಯಮಂತುಮಲ್ಲದೆಯುಂ—

ಧಾನ್ಯದ) ರಾಶಿಯನ್ನು ಮಾಡುವುದರಿಂದ ಉಪಮಾತೀತನಾದ ಶೂದ್ರನೆನಿಸಿದ್ದಾನೆ ; ನಾದ ಬಿಂದುಗಳೆಂಬ ಹಲಗೆಯ ಮೇಲೆ, ಆದಿಶಕ್ತಿಯೆಂಬ ಚಕ್ರವನ್ನು ಜೋಡಿಸಿ, ಕಳೆ ಎಂಬ ಕೋಲಿನಿಂದ ತಿರುಗಿಸಿ, ಬ್ರಹ್ಮಾಂಡಗಳೆಂಬ ಗಡಿಗೆ ಮಡಕೆಗಳನ್ನು ನಿರ್ಮಾಣ ಮಾಡುವ ಕುಂಬಾರನೆನಿಸಿದ್ದಾನೆ ; ಪ್ರಳಯ ಕಾಲದ ಸಮುದ್ರದಲ್ಲಿ ಗಣನಾತೀತವಾದ ಶಕ್ತಿಯಿಂದ ವಿಹಾರ ಮಾಡುವ ಮದದಿಂದ ಕೂಡಿದ ಮೀನು, ಆಮೆಗಳನ್ನು ಆದಿ ವರಾಹನ ಮಾಂಸವನ್ನು ನರಸಿಂಹನ ಉಗುರೆಂಬ ಗಾಳದಲ್ಲಿ ಸಿಕ್ಕಿಸಿ (ಸಂಘಟಿತ), ಆದಿಶೇಷನೆಂಬ ಸಣ್ಣ ಹುರಿಯಿಂದ ಕೂಡಿದ ವಾಮನ ಮೂರ್ತಿಯ ದೊಣ್ಣೆಯಂತಿರುವ ಮೂಳೆಯೆಂಬ ಗಾಣವನ್ನು ಹಾಕಿ, ಸೆಳೆಯುವ ಬೆಸ್ತನೆನಿಸಿದ್ದಾನೆ ; (ದಕ್ಷ ಬ್ರಹ್ಮನ ಯಾಗದಲ್ಲಿ) ಜಿಂಕೆಯಾಕಾರವನ್ನು ಧರಿಸಿ ಹೊಂದಿದ ಬ್ರಹ್ಮನ ಶಿರವನ್ನು ಬಾಣದಿಂದ ಹೊಡೆದು ಕೆಡವಿದ ಅಸದೃಶ ಬಲವುಳ್ಳ ಬೇಡನೆನಿಸಿದ್ದಾನೆ ; ಸಮಸ್ತ ಲೋಕ ಸಮೂಹಗಳ ಲಯ, ಸೃಷ್ಟಿಗಳೆಂಬ ಕ್ರಿಯೆಯನ್ನು ಮಾಡುವ ಕರ್ಮಠನಾದ ಕಮ್ಮಾರನಾಗಿದ್ದಾನೆ ; ಪವಿತ್ರವಾದ ಶಿವಭಕ್ತಿಯೆಂಬ ಬೆಂಕಿಯಿಂದ ತನ್ನ ದೇಹೇಂದ್ರಿಯಗಳಿಗೆ ಸಂಬಂಧಿಸಿದ ಚಿನ್ನದ ಕೊಳೆಯನ್ನು ನುಂಗಿ ಹಾಕುವ (ಸುಟ್ಟು ಕಳೆಯುವ) ಅಕ್ಕಸಾಲಿಗನೆನಿಸಿದ್ದಾನೆ ; ಬ್ರಹ್ಮ, ವಿಷ್ಣು, ಇಂದ್ರನೇ ಮೊದಲಾದ ಪಶುಗಳ ಸಮೂಹವನ್ನು ಕಾಯುವ ಗೋಪಾಲಕ (ದನಗಾಹಿ) ನೆನಿಸಿದ್ದಾನೆ ; ಪ್ರಕೃತಿಯೆಂಬ ದಾರವನ್ನು ಹಿಡಿದು, ಮನುಷ್ಯರು, ಉರಗರು (ಸರ್ಪಗಳು) ದೇವತೆಗಳೆಂಬ ಗೊಂಬೆಗಳನ್ನು ಕುಣಿಸುವ (ಆಡಿಸುವ) ಸೂತ್ರಧಾರನೆನಿಸಿದ್ದಾನೆ ; ಅಖಂಡವಾದ ಸಮುದ್ರದಲ್ಲಿ ದೇವತೆಗಳೆಂಬ ಬಟ್ಟೆಯನ್ನು (ನೀರಿನಲ್ಲಿ) ಅದ್ದಿ, ಪ್ರಳಯ ಸಮಯದಲ್ಲಿ ಒಗೆಯುವ (ಬಡಿಯುವ) ಅಗಸನೆನಿಸಿದ್ದಾನೆ ; (ಹೀಗೆ ಎಲ್ಲಕ್ಕೂ) ನಿಜವಾಗಿ ತಾನೇ ಎನಿಸಿ, ರಂಜಿಸು

ಹರನಾತ್ಮಲೀಲೆಯಿಂದಂ
ಕಿರಾತನೆನಿಸಿರ್ದನಂದು ಪಾರ್ಥಹಿತಾರ್ಥಂ
ಶರಣಹಿತಾರ್ಥಂ ಮಾಚಯ
ವರರೂಪಂ ತಾಳ್ದು ರಜಕನೆನಿಸಿದನಲ್ತೇ ೨೭

ಕರಿಚರ್ಮಾಂಬರ ಭಕ್ತರಂಬರಮನೆಲ್ಲಾಗಳ್ಸಮುತ್ಸಾಹದೆ
ಳ್ತರದಿಂದಂ ತೊಳೆದೀವನನ್ಯವಸನವ್ರಾತಂಗಳಂ ಮುಟ್ಟನಾ
ದರದಿಂದಂ ಕೊಡುವಂ ಚರವ್ರಜಕೆ ಭಾಸ್ವದ್ವಸ್ತ್ರಮಂ ಬಾಹ್ಯ ದು
ರ್ನರರಂಟುತ್ತಿರೆ ಸೈರಿಸಂ ಶರಣವಾಸಶ್ರೇಣಿಯಂ ಮಾಚಯಂ ೨೮

ನಿಟಿಲನಯನಸ್ವರೂಪನ
ಪಟುಭುಜಬಳಮಹಿತ ಮಾಚಿರಾಜನ ಮಹಿಮೋ
ತ್ಕಟತೆಯನಱಿವೊಡೆ ಸಾಧ್ಯಮೆ
ಕುಟಿಲಾತ್ಮರ್ಗೇಕೆ ನೃಪತಿ ನಿನ್ನಯ ಭಟರಂ ೨೯

ಕಳುಪಿದಪೆ ಮುಳಿದು ತಱಿಗೆಲೆ
ಗಳನುರಿಯೆಡೆಗಟ್ಟುವಂತಿರಾತನ ಬಳಿಗಾ
ಬಳವದ್ವಿಕ್ರಮನೀ ಖಳ
ಬಳಮಂ ಬಱಿಕ್ಕೈವನೊಂದೆ ನಿಮಿಷದೊಳಧಟಿಂ ೩೦

ತ್ತಿರುವ ಅವನಿಗೆ ಒಂದು ಜಾತಿಯುವನೆಂಬ ಕಲ್ಪನೆ ಮಾಡುವುದು ಅಜ್ಞಾನದ ವಿಲಾಸವೇ ಆಗುವುದು. ಆ ಮಹಾತ್ಮನ ಹಿರಿಮೆಯನ್ನು ವಿವರಿಸುವುದಕ್ಕೆ ಅನಂತ ಆದಿಶೇಷರಿಗಾದರೂ ಅಶಕ್ಯವಾದುದು ; ಅದೂ ಅಲ್ಲದೆ : ೨೭. ಹರನು ತನ್ನ ಲೀಲೆಯಿಂದ ಅರ್ಜುನನಿಗೆ ಹಿತವನ್ನುಂಟು ಮಾಡುವುದಕ್ಕೋಸುಗ ಪೂರ್ವ ಕಾಲದಲ್ಲಿ ಬೇಡನೆನಿಸಿದ್ದನು, (ಈಗ) ಶರಣರ ಹಿತಾರ್ಥವಾಗಿ (ಈ) ಮಾಚಿದೇವನ ರೂಪವನ್ನು ಹೊಂದಿ ಅಗಸನೆನಿಸಿದನಲ್ಲವೇ ? ೨೮. ಆ ಮಾಚಯ್ಯನು ಆನೆಯ ಚರ್ಮವನ್ನೇ ಬಟ್ಟೆಯನ್ನಾಗಿ ಧರಿಸಿರುವ ಶಿವನಭಕ್ತರ ಬಟ್ಟೆಗಳನ್ನು ನಿರಂತರವೂ ವಿಶೇಷೋತ್ಸಾಹದ ಆಧಿಕ್ಯದಿಂದ ತೊಳೆದು (ಮಡಿ ಮಾಡಿ) ಕೊಡುವನು ; ಇತರ ಅಲಿಂಗಿಗಳ ಬಟ್ಟೆಗಳ ಸಮೂಹವನ್ನು ಮುಟ್ಟುವುದಿಲ್ಲ ; ಜಂಗಮ ಸಮೂಹಕ್ಕೆ ಆದರದಿಂದ ಶ್ರೇಷ್ಠವಾದ ವಸ್ತ್ರಗಳನ್ನು ಕೊಡುವನು ; ಶಿವಶರಣರ ಬಟ್ಟೆಯ ಸಮೂಹವನ್ನು ದುಷ್ಟ ನೀತಿಯುಳ್ಳವರು ಸೋಂಕುತ್ತಿದ್ದರೆ (ಅವನು) ಸೈರಿಸುವುದಿಲ್ಲ. ೨೯–೩೦. ಅಗ್ನಿನೇತ್ರವುಳ್ಳ ಶಿವನ ಸ್ವರೂಪನಾದ ಸಮರ್ಥವಾದ ಭುಜಬಲದಿಂದ ಪೂಜ್ಯನೆನಿಸಿದ (ಆ) ಮಾಚಯ್ಯನ ಮಹಿಮಾತಿಶಯವನ್ನು ತಿಳಿಯುವುದಕ್ಕೆ ಕುಟಿಲಾತ್ಮರಾದವರಿಗೆ ಸಾಧ್ಯವೇ ? ಮಹಾರಾಜಾ ನಿನ್ನ ಭಟರನ್ನು ತರಗೆಲೆಗಳನ್ನು ಉರಿಯ ಬಳಿಗೆ ಅಟ್ಟುವ ಹಾಗೆ ಆ ಮಾಚಯ್ಯನ ಬಳಿಗೆ ಏಕೆ ಅಟ್ಟಿದೆ ? ಪ್ರಬಲ ಪರಾಕ್ರಮಿಯಾದ ಆ ಮಾಚಯ್ಯನು ಶೌರ್ಯದಿಂದ (ನೀನು ಕಳಿಸಿದ) ಈ ನೀಚ ಸೈನ್ಯವನ್ನು ಒಂದೇ

ಮುಳಿಸಿಂದಂ ಚಾತುರಂಗಬೆರಸು ನೃಪತಿ ನೀನಾಂತೊಡಂ ದೋರ್ಬಳಪ್ರೋ
ಜ್ವಳನಾ ಮಾಚಯ್ಯನೇಂ ಲೆಕ್ಕಿಪನೆ ಬಱಿದೆ ಸೌರಂಭದಿಂ ಸೈನ್ಯಮಂ ನೀಂ
ಕಳುಪುತ್ತುಂ ಮಾನಭಂಗಂಬಡೆಯದಿರವನೊಳ್ಗೆಲ್ಲಮಂ ಕೊಳ್ವರಾರ್ತ್ವ
ದ್ಬಳಮಂ ಪಾಳ್ಗೆಯ್ದಣಂ ತಾಳದಿರಪಯಶಮಂ ಬಿಜ್ಜಳ ಕ್ಷೋಣಿಪಾಲಾ ೩೧

ವ॥ ಎಂಬುದುಮಾ ಬಿಜ್ಜಳಂ ಕೇಳ್ದು ರೋಷೋನ್ಮಿಷಿತ[1]ಹಸಿತ[1] ಶೌರ್ಯೋಕ್ತಿಮುಖರ ಮುಖನಾಗಿ—

ಸಮಯಾಭಿಮಾನಜನಿತ
ಭ್ರಮೆಯಿಂ ಕಾರಣ ಕಥಾಳಿಯಂ ಕಲ್ಪಿಸುತ[2]
ಕ್ರಮುವನೊರೆಯದಿರೆನುತೆ ದು
ರ್ದಮ ನರಪತಿ ಬಸವನುಕ್ತಿಯುಂ ವಾರಿಸುತುಂ ೩೨

ಪೊಡಕರಿಸಿ ಮೊಳೆತುದೆರ್ದೆ ನೆಲ
ದೆಡೆಯೊಳ್ ಕಡೆಗಣ್ಣೊಳುಱೆ ತಳಿರ್ತುದು ಕೊಂಕಿಂ[3]
ಕುಡಿಗೊಂಡುದು ಪುರ್ಬಿನೊಳಲ
ರ್ವಡೆದುದು ವದನದೊಳೆ ಕೋಪಲತೆ ಭೂಭುಜನಾ ೩೩

ನಿಮಿಷದಲ್ಲಿ ನಾಶಪಡಿಸುವನು. ೩೧. ಮಹಾರಾಜಾ, ನೀನು ಕೋಪದಿಂದ ಆನೆ, ಕುದುರೆ, ರಥ, ಕಾಲಾಳುಗಳೆಂಬ ಚತುರಂಗ ಬಲದಿಂದ ಕೂಡಿ ಎದುರಿಸಿದರೂ, ಭುಜಬಲ ಪ್ರತಾಪಿಯಾದ ಆ ಮಾಚಯ್ಯನು ಗಣನೆ ಮಾಡುವನೇ ? ನೀನು ಸುಮ್ಮನೆ ಸಡಗರದಿಂದ ಕಳುಹಿಸುತ್ತ ಮಾನಭಂಗಗೊಳ್ಳದೆ ಇರು. ಅವನೊಡನೆ (ಸೆಣಸಿ) ಜಯವನ್ನು ಪಡೆಯುವವರು ಯಾರು ? ಬಿಜ್ಜಳಮಹೀಪತಿಯೇ, ನಿನ್ನ ಸೈನ್ಯವನ್ನು (ವೃಥಾ) ಹಾಳು ಮಾಡಿಕೊಂಡು ಅಪಯಶಸ್ಸನ್ನು ಸ್ವಲ್ಪವೂ ತಾಳದ ಹಾಗೆ ಇರು. ವ॥ ಹೀಗೆ (ಬಸವೇಶ್ವರನು) ಹೇಳಲಾಗಿ ಬಿಜ್ಜಳನು ಕೋಪಾಧಿಕ್ಯದಿಂದ ಕೂಡಿದ ನಗುವಿನ (ವಿಕಟಾಟ್ಟಹಾಸದ ನಗೆ) ಪರಾಕ್ರಮೋಕ್ತಿಗಳ ಮುಖವುಳ್ಳವನಾಗಿ ೩೨–೩೩. ಮತಾಭಿಮಾನದಿಂದುಂಟಾದ ಯಥಾರ್ಥವಲ್ಲದ ಕಥೆಗಳನ್ನು ಕಲ್ಪಿಸಿ ಕೊಂಡು ಅಕ್ರಮವಾದುದನ್ನು ಹೇಳದೆ ಇರು, ಎನ್ನುತ ದುಷ್ಟನಾದ ಆ ರಾಜನು ಬಸವಣ್ಣನ ಮಾತುಗಳನ್ನು ತಡೆದು ಆ ಭೂಭುಜನ ಕೋಪವೆಂಬ ಬಳ್ಳಿಯು ಹೃದಯ ವೆಂಬ ಭೂಮಿಯಲ್ಲಿ ವಿಜೃಂಭಣೆಯಿಂದ ಮೊಳಕೆಯೊಡೆದು ಮೇಲೆ ಬಂದು ಕಡೆಗಣ್ಣು ಗಳಲ್ಲಿ ಚೆನ್ನಾಗಿ ಚಿಗುರುಗಳಿಂದ ತುಂಬಿ, ಹುಬ್ಬಿನಲ್ಲಿ ವಕ್ರತೆಗೊಂಡು, ಕುಡಿ ಚಾಚಿ

---

1 ಹಿತ(ದ) 2 ತೆ(ಚ, ಗ) 3 ಕೀ(ಅ)

ದೀನಂ ದಾನವಿಧಾನವಾಣಗೆ ಮನಂದಂ[1]ದಪ್ಪನೇ ಸತ್ಕೃಪಾ
ಹೀನಂ ಶಾಂತಿ ಸು[2]ಖೋಕ್ತಿಗೇಳ್ವನೆ ಮನೋಜೋನ್ಮಾದಿ ವೈರಾಗ್ಯ ವಾ
ಕ್ಯಾನೀಕಕ್ಕೆ ಸಡಿಲ್ವನೇ ಸಿ[3]ರಿಗರಂ ಸೋಂಕಿರ್ದ ತದ್ಬಿಜ್ಜಳೋ
ರ್ವೀನಾಥಂ ಬಸವೋಕ್ತ ಭಕ್ತಮಹಿಮಾಲಾಪಕ್ಕೆ ಮುಯ್ಯಾಂಪನೇ ೩೪

ವ|| ಎನಿಸಿ ತದ್ವಚನಮನೇಳಿದಂಗೆಯ್ದು ದುರ್ನಯಧುರೀಣಂ ತನ್ನ ಮನ್ನಣೆಯ ಮಾವುತನನಭೀಕ್ಷಿಸಿ—

ತೊಡರ್ದೊಡೆ ಜಂಭಭಿದ್ಗಜಮನಾದೊಡಮರ್ದಿಸಲಾರ್ಪ ಶಕ್ತಿ ಸಂ
ಗಡಿಸಿದ ನೀಲಭೂಧರಸಮಾನ ಮದಾಂಧಮದೀಯ ಹಸ್ತಿಯಂ
ಕಡುಪಿನೊಳಾತನೆಯ್ದುವಡೆವಟ್ಟೆಯೊಳಾರ್ದಿದಿರಾಂತು ನೂಂಕಿ ಮು
ಗಡೆಗವನಂ ಪಡಲ್ವಡಿಸಿ ಮರ್ದಿಪುದೆಂದನವದ್ಯಮಾನಸಂ ೩೫

ವ|| ಎಂದ ನರೇಂದ್ರನನುಜ್ಞೆಯನಾ ಧೋರಣಂ ತಾಳ್ದಿಭೇಂದ್ರಮಂ ಪಣ್ಣಿ ಕೆಯ್ಗೆಯ್ದೇಱಿ ಮಿಱಿ ಪರಿಯಿಪಾಗಳ್—

ಹಬ್ಬಿ, ಮುಖದಲ್ಲಿ ಹೂ ಬಿಟ್ಟಿತು. ೩೪. ದರಿದ್ರನಾದವನು ದಾನದ ವಿಧಾನವನ್ನು ಹೇಳುವ ಮಾತಿಗೆ ಮನಸ್ಸನ್ನೀಯುವನೇ ? ಸತ್ಕೃಪೆಯಿಂದ ದೂರನಾದವನು ಶಾಂತಿ ಸುಖದ ಮಾತುಗಳನ್ನು ಕೇಳುವನೇ ? ಮನ್ಮಥನಿಂದ ಉನ್ಮಾದಗೊಂಡವನು ವೈರಾಗ್ಯ ವನ್ನುಂಟುಮಾಡುವ ಮಾತುಗಳ ಸಮೂಹಕ್ಕೆ ಸಡಿಲುಗೊಳ್ಳುವನೇ ? ಐಶ್ವರ್ಯ ವೆಂಬ ಭೂತದಿಂದ ಸೋಂಕಿದ ಆ ಬಿಜ್ಜಳ ಭೂಪಾಲನು ಬಸವೇಶ್ವರನು ಹೇಳಿದ ಮಹಿಮಾಯುಕ್ತವಾದ ಮಾತುಗಳಿಗೆ ಮನ್ನಣೆ ಕೊಡುತ್ತಾನೆಯೇ ? ವ|| ಹೀಗೆಂದೆನಿಸಿ (ಬಸವೇಶ್ವರನು ಹೇಳಿದ) ಆ ಮಾತುಗಳನ್ನು ತಿರಸ್ಕಾರ ಮಾಡಿ, ದುರ್ನೀತಿಯಲ್ಲಿ ಸಮರ್ಥನೆನಿಸಿದ ಬಿಜ್ಜಳನು ತನ್ನ ಪ್ರೀತಿಗೆ ಪಾತ್ರನಾದ ಮಾವಟಿಗನನ್ನು ನೋಡಿ— ೩೫. ದುಷ್ಟ ಮನಸ್ಸಿನವನಾದ ಆ ರಾಜನು–ಎದುರಿಸಿದರೆ ದೇವೇಂದ್ರನ ಐರಾವತ ವನ್ನಾದರೂ ಕೊಲ್ಲುವುದಕ್ಕೆ ಸಮರ್ಥವಿರುವ ಬಲದಿಂದ ಕೂಡಿದುದೂ, ನೀಲಗಿರಿಗೆ ಸಮಾನ ಎತ್ತರವುಳ್ಳದ್ದೂ, ಮದದಿಂದ ಕೊಬ್ಬಿದುದೂ ಆದ ನನ್ನ (ಪಟ್ಟದ) ಆನೆ ಯನ್ನು (ತೆಗೆದುಕೊಂಡು ಹೋಗಿ) ಶೌರ್ಯದಿಂದ ಆ ಮಾಚಯ್ಯನು ಬರುವ ಮಾರ್ಗ ದಲ್ಲಿ ಆರ್ಭಟಿಸುತ್ತ ಎದುರಿಸಿ, ನೂಕಿ, ಅವನನ್ನು ಗೋಳಾಡಿಸಿ, ಮರ್ದನಗೊಳಿಸುವುದು ಎಂದನು. ವ|| ಹೀಗೆಂದ ಮಹಾರಾಜನ ಅಪ್ಪಣೆಯನ್ನು ಆ ಮಾವುತನು ಹೊಂದಿ ದವನಾಗಿ ಶ್ರೇಷ್ಠವಾದ ಆ ಆನೆಯನ್ನು (ರಾಜನು ಹೇಳಿದ ಆನೆಯನ್ನು) ಸಿದ್ಧಗೊಳಿಸಿ

---

1 ದಾ(ಜ) 2 ಸ(ಅ) 3 ಸ(ಗ)

ಮದವದ್ದಿಗ್ದಂತಿಗಳ್ಕುಂಬಿಡೆ ರವಿರಥದಶ್ವವ್ರಜಂ ಬೆರ್ಚೆ ಕಲ್ಪಾಂ
ತದ ಮೇಘಧ್ವಾನಮೆಂಬಂತಿರೆ ಪಟುನಿನದಂ ಬೃಂಹಿತಂಗೆಯ್ದು ಚಂಚ
ದ್ರದನಾಗ್ರಪ್ರಾಂಶು ಮಿಂಚಂ ಜಡಿಯೆ ಪೊಡೆದು ನುರ್ಗೊತ್ತುತುಂ ಕೇರ್ಗಳಂ ಪಾ
ಯ್ದುದು ಕೋಪಾಟೋಪದಿಂದಂತಕಮಹಿಷನಿಭಂ ಭೂಮಿಭೃತ್ಕುಂಜರೇಂದ್ರಂ ೩೬

ವ॥ ಅಂತೇಳ್ತರ್ಪ ಸಿಂಧುರೇಂದ್ರಮಂನಣೆದು ತನ್ನ ಮೇಲ್ವರಿಯಿಪಾಟೋಪಮಂ ತೊಟ್ಟನೆ ಕಟ್ಟಿದಿರೊಳ್ಮಾಚಿದೇವಂ ಕಂಡು ರೋಷಭೀಷಣ ಕಲ್ಪಾಂತಭೈರವಾಕೃತಿವಡೆದು ನೆರೆದ ಬ್ಬಲಂ ಝಲ್ಲನೆ ಕೆದಱೆ ವಿಳಯಜಳಧರನಿರ್ಘೋಷಮನಿಳಿಪ ಜಯಘಂಟಾರವಮಂ ನೆಗಳ್ಚಿ ತಾಂ ಪೊತ್ತಂಬರಭಾರ ಮನಂಬರಕೇಶನುತ್ತಮಾಂಗದೊಳ್ಪೊಱಿಸುವಂತೆ ಜಯಘಂಟೆಯನಲ್ಲಿ ತೊಡರ್ಚುತಂಬರಕೆ ನೆಗಪಿ ನಿಲಿಸಿ ಬಾಹಾಸ್ಫಾಲನಂಗೆಯ್ದು ನಿಲ್ನಿಲ್ಲೆನುತುಂ ಗಜಱೆ ಗರ್ಜಿಸಿ ವಿಜೃಂಭಿಸಿ—

ಕಡುಪಿಂದಗ್ರಪ್ರದೇಶಕ್ಕೊಗೆದು ನೆಗೆದು ಮೇಲ್ವಾಯ್ದು ಪಾದಾಗ್ರದಿಂದಂ
ಕೆಡಪುತ್ತುಂ ಜೋದನಂ ಮುಂಬರಿವ ಕರಿಯ ಶುಂಡಾಗ್ರಮಂ ಕೈಗಳಿಂದಂ

ಕೊಂಡು ಹತ್ತಿ, (ಮೇರೆ) ಮೀರಿ, ಓಡಿಸಿಕೊಂಡು ಬರುವ ಕಾಲದಲ್ಲಿ–೩೬. ಮದೋನ್ಮತ್ತವಾದ ದಿಕ್ಕಿನಲ್ಲಿರುವ ಆನೆಗಳು (ಭಾರಕ್ಕೆ) ಬಾಗಿದವು ; ಸೂರ್ಯನ ರಥಕ್ಕೆ ಕಟ್ಟಿದ ಕುದುರೆಗಳು ಬೆಚ್ಚಿದವು ; ಯಮನ ಕೋಣಕ್ಕೆ ಸಮಾನವಾದ ಬಿಜ್ಜಳ ಮಹಾರಾಜನ ಗಜ ಶ್ರೇಷ್ಠವು ಪ್ರಳಯ ಕಾಲದ ಗುಡುಗೋ ಎಂಬ ಹಾಗೆ ಇರುವ ಕಠಿಣವಾದ ಧ್ವನಿಯಿಂದ ಗರ್ಜನೆ ಮಾಡಿತು. (ಅದರ) ಹೊಳೆಯುತ್ತಿರುವ ದಂತ (ಕೊಂಬು) ಗಳ ತುದಿಯ ವಿಶೇಷವಾದ ಕಾಂತಿಯು ಮಿಂಚನ್ನೂ ತಿರಸ್ಕರಿಸಿತು. (ಅದು) ಗೋಡೆಗಳನ್ನು ಹೊಡೆದು ಉರುಳಿಸಿ ನುಚ್ಚುನುರಿ ಮಾಡುತ್ತ, ಕೋಪದ ಅಟ್ಟಹಾಸದಿಂದ ಮುಂದಕ್ಕೆ ಹೊರಟಿತು. ವ॥ ಈ ರೀತಿಯಿಂದ ಬರುತ್ತಿರುವ ಗಜ ಶ್ರೇಷ್ಠನನ್ನು ತಿಳಿದು ತನ್ನ ಮೇಲೆ ಹರಿಯಿಸುವ ಆರ್ಭಟವನ್ನು ನೇರ ಎದುರಿನಲ್ಲಿ ಒಮ್ಮೆಲೆ ಮಾಚಿದೇವನು ನೋಡಿ, ಕೋಪದಿಂದ ಭಯಂಕರನಾದ ಪ್ರಳಯಕಾಲದ ಭೈರವನ ಆಕಾರವನ್ನು ಹೊಂದಿ, ಗುಂಪಾಗಿದ್ದ ಸೈನ್ಯವು ಝಲ್ಲೆನ್ನುವಂತೆ ಚೆಲ್ಲಾಪಿಲ್ಲಿಯಾಗುವಂತೆ ಪ್ರಳಯಕಾಲದ ಮೋಡಗಳ ಭಯಂಕರ ಸಿಡಿಲನ್ನು ತಿರಸ್ಕರಿಸುವ ಜಯ ಘಂಟೆಯ ಧ್ವನಿಯನ್ನು ಮೊಳಗಿಸಿ, ತಾನು ಹೊತ್ತಂಥ (ಶಿವಶರಣರ) ಬಟ್ಟೆಯ ಗಂಟಿನ ಭಾರವನ್ನು ಆಕಾಶ ಕೇಶನಾದ ಶಿವನ ತಲೆಯ ಮೇಲೆ ಹೊರಿಸುವಂತೆ, ಕೈಯಲ್ಲಿದ್ದ ಜಯ ಘಂಟೆಯನ್ನೂ ಆ ಗಂಟಿನಲ್ಲಿಯೇ ಸೇರಿಸುತ್ತ ಆಕಾಶಕ್ಕೆ ಎತ್ತಿ ನಿಲ್ಲಿಸಿದನು. (ಆಗ) ಭುಜಗಳನ್ನು ತಟ್ಟುತ್ತ ನಿಲ್ಲು ! ಎನ್ನುತ ಗದ್ದರಿಸಿ, ಗರ್ಜಿಸಿ ವಿಜೃಂಭಿಸಿದನು. ೩೭. ಮಾಚಿದೇವನು ಶೌರ್ಯದಿಂದ ಆನೆಯ ಮುಂಭಾಗ ಪ್ರದೇಶಕ್ಕೆ ಬಂದು ನೆಗೆದು ಮೇಲೆ ಬಿದ್ದು ಮಾವುತನನ್ನು ಕಾಲಿನಿಂದೊದ್ದು

ಪಿಡಿದೊತ್ತುತ್ತೆತ್ತುತಾರ್ದಪ್ಪಳಿಸಿ ಪೊಡೆದು ದಂತಂಗಳಂ ಕೀಳುತುಂ ಘೀ
ಳಿಡೆ ಸೀಳ್ದಂ ಸೀಳ್ದವೋಲ್ಧೂರ್ಜಟಿ ಕರಟಿ ಮಹಾದೈತ್ಯನಂ ಮಾಚಿದೇವಂ ೩೭

ವ॥ ಮತ್ತಂ—

ಕಿರಿಹರಿದಂಷ್ಟ್ರಮಂ ಮುಱಿದ ಷಣ್ಮುಖನಂದಮನಾಳ್ದು ಮಾದ್ಯದು
ದ್ದುರದರದಂಗಳಂ ಮುಱಿದನುಗ್ರನೃಸಿಂಹನನಂದು ಸೀಳ್ದ ಭಾ
ಸುರ ಶರಭೇಂದ್ರನೇಳ್ಗೆಯು ವಿಳಾಸಮನಾಂತು ಗಜೇಂದ್ರ ಕಾಯಮಂ
ಭರದಿನಡರ್ತು ಸೀಳ್ದನಹಿತರ್ಬೆದಱುತ್ತಿರೆ ಚಂಡವಿಕ್ರಮಂ ೩೮

ವ॥ ಆಗಳಾ ಮಾನವೇಂದ್ರನ ಮದಗಜಮುಂ ಸದೆವಂತೆ ಮದಗಜಮಂ ಮಾಚಿದೇವನಾರ್ಪಿಂ ಸದೆಯೆ ಭಕ್ತವ್ರಜಂ ಕಂಡು ನಣ್ಪನೊಳಕೊಂಡು ಕೊಂಡಾಡುತ್ತುಮಿರೆ—

ಜನಪಂ ಕೇಳ್ದನಿತೆಲ್ಲಮಂ ಬಗೆ ಭಯಕ್ಕೀಡಾಗೆ ಲಜ್ಜಾನತಾ
ನನನಾಗಿರ್ಪುದುಮೆಂದನಲ್ಲಿ ಬಸವಂ ನೀಂ ಕೇಳದಾಂ ಪೇಳ್ದ ಮಾ
ತನಿಳಾಧೀಶ ಮದಾಂಧಗಂಧಗಜಮಂ ನೀಗಾಡಿದೈ ಮಾನಹಾ
ನಿ ನಿತಾಂತಂ ನಿನಗಾದುದಕ್ಕಟ ದುರಾತ್ಮಾಲಾಪಮೇಗೆಯ್ಯದೋ ೩೯

ಕೆಡವಿ, ಮುಂಬರಿದು ಬರುವ ಆನೆಯ ಸುಂಡಿಲ ತುದಿಯನ್ನು ಕೈಗಳಿಂದ ಹಿಡಿದು ಒತ್ತಿ, ಮೇಲಕೆತ್ತಿ ಗರ್ಜಿಸಿ, ಭೂಮಿಗೆ ಬಡಿದು, ಹಲ್ಲುಗಳನ್ನು ಕಿತ್ತು, ಅದು ಕೂಗಿಕೊಳ್ಳುತಿರುವಂತೆಯೇ ಶಿವನು ಗಜಾಸುರನನ್ನು ಸೀಳಿದ ಹಾಗೆ ಸೀಳಿದನು. ವ॥ ಮತ್ತು ೩೮. ಸಮರ್ಥವಾದ ಪರಾಕ್ರಮವುಳ್ಳ ಮಾಚಿದೇವನು ವರಾಹ ರೂಪನಾದ ವಿಷ್ಣುವಿನ ಕೋರೆದಾಡೆಯನ್ನು ಮುರಿದ ಷಣ್ಮುಖನ ರೀತಿಯನ್ನು ಹೊಂದಿ, ಮಲೆಯುತ್ತಿರುವ ದೊಡ್ಡ ಆನೆ ಕೊಂಬುಗಳನ್ನು ಮುರಿದು, ಶತ್ರುಗಳು ಭಯಪಡುತ್ತಿರುವಂತೆ—ಹಿಂದೆ ನರಸಿಂಹನನ್ನು ಪ್ರಕಾಶಮಾನನಾದ ಶರಭೇಂದ್ರನು ಸೀಳಿದ ರೀತಿಯ ಸಂಭ್ರಮದಿಂದ ಶೀಘ್ರವಾಗಿ ಆ ಗಜಶ್ರೇಷ್ಠನ ದೇಹವನ್ನು ಅಡರಿ ಸೀಳಿದನು. ವ॥ ಆಗ ಆ ಮಾಚಿದೇವನು ಆ ರಾಜನಾದ ಬಿಜ್ಜಳನ ಗರ್ವವೆಂಬ ಆನೆಯನ್ನು ಸದೆಬಡಿಯುವಂತೆ ಶೌರ್ಯದಿಂದ ಮದ್ದಾನೆಯನ್ನು ಕೊಲ್ಲಲಾಗಿ, ಶಿವಭಕ್ತ ಸಮೂಹವು ನೋಡಿ, ಪ್ರೀತಿಯಿಂದ ಕೂಡಿದವರಾಗಿ ಕೊಂಡಾಡುತ್ತ ಇರುತ್ತಿರಲು—೩೦. ಅಷ್ಟೆಲ್ಲವನ್ನೂ, ರಾಜನು ಕೇಳಿ, ಭಯಗೊಂಡ ಮನಸ್ಸಿನವನಾಗಿ, ನಾಚಿಕೆಯಿಂದ ತಗ್ಗಿದ ಮುಖವುಳ್ಳವನಾಗಿರಲು ಆಗ ಬಸವಣ್ಣನು—'ನಾನು ಹೇಳಿದ ಮಾತನ್ನು ನೀನು ಕೇಳದೆ ಮಹಾರಾಜಾ, ಮದಾಂಧನಾಗಿ ಮದವಿಶಿಷ್ಟವಾದ (ಶ್ರೇಷ್ಠ) ಆನೆಯನ್ನು ಕಳೆದುಕೊಂಡೆ. (ಅದಲ್ಲದೆ) ನಿನಗೆ ವಿಶೇಷವಾದ ಮಾನಹಾನಿಯೂ ಆಯಿತು. ಅಯ್ಯೋ ! ದುಷ್ಟರ

ಅನುಜ ಗುರು ವಿನಯ ವಚನಮ
ನನಾದರಂಗೆಯ್ದು ಕಿಡರೆ ಮುನ್ನೀ ಧರೆಯೊಳ್
ದನುಜಾಧಿಪ ಮನುಜಾಧಿಪ
ರೆನಿಸುವ ದಶಕಂಠ ಕೌರವರ್ಮೂರ್ಖತೆಯಿಂ ೪೦

ಶ್ರೀಮದತಿಮಿರಾಂಧರ್ಗೆ ಮ
ಹೀಮಹಿತ ಬುಧೋಕ್ತಿದೀಪಮಪ್ಪುದಜಸ್ರಂ
ತಾಮದನೊಲ್ಲದೊಡವರ್ಗೆ ಧ
ರಾಮಾನಿನಿಯರಸ ಸುಪಥಮೇಂ ಕಾಣಿಪುದೇ ೪೧

ರಾಜದ್ವೇಷಂ ಮಧುಪ ಸ
ಮಾಜಾತಿಪ್ರೀತಿ ತನ್ನ ಸಂಗದೆ ಗುಣ ನೀ
ರೇಜಕ್ಕೊಳವೆನಿಸಿದ ಲ
ಕ್ಷ್ಮೀಜಾಯೆಗೆ ಕೂರ್ತವಂಗೆ ಮತಿ ಸಮನಿಪುದೇ ೪೨

ನರರೂಪ ರುದ್ರರೆನಿಸುವ
ಹರಭಕ್ತರ ಮಹಿಮೆ ಮತ್ತಜನಬುದ್ಧಿಗೆ ಗೋ
ಚರಿಪುದೆ ದಿನಕರಕಿರಣೋ
ತ್ಕರಮಧಮದಿವಾಂಧದೃಷ್ಟಿಗೇಂ ಕಾಣಿಪುದೇ ೪೩

ಮಾತುಗಳು ಏನನ್ನು ತಾನೇ ಮಾಡಲಿಕ್ಕಿಲ್ಲ !' (ಎಂದನು). ೪೦. ಪೂರ್ವದಲ್ಲಿ ಈ ಭೂಮಿಯೊಳಗೆ ರಾಕ್ಷಸ ಮತ್ತು ಮನುಷ್ಯ ರಾಜರುಗಳು ಎಂದೆನಿಸುವ ರಾವಣ ದುರ್ಯೋಧನರು ಮೂರ್ಖತೆಯಿಂದ ತಮ್ಮನ ಮತ್ತು ಗುರುಹಿರಿಯರ ಮಾತುಗಳನ್ನು ಅನಾದರ ಮಾಡಿ ಕೆಡಲಿಲ್ಲವೆ ? [ರಾವಣನು ತಮ್ಮನಾದ ವಿಭೀಷಣನ ಮಾತನ್ನೂ, ಕೌರವನು ಭೀಷ್ಮಾದಿ ಗುರುಹಿರಿಯರ ಮಾತನ್ನು ಕೇಳದೆ ಕೆಟ್ಟರೆಂದು ತಾತ್ಪರ್ಯ] ೪೧. ಭೂಕಾಂತೆಯ ಒಡೆಯನಾದ ಬಿಜ್ಜಳನೇ, ಐಶ್ವರ್ಯವೆಂಬ ಕತ್ತಲೆಯಿಂದ ಕುರುಡರಾದವರಿಗೆ ಭೂಮಿಯಲ್ಲಿ ಪೂಜ್ಯಗಳೆನಿಸಿದ ವಿದ್ವಾಂಸರುಗಳ ಮಾತು ಯಾವಾಗಲೂ ದೀಪದಂತೆ (ದೀಪದ ಬೆಳಕಿನಂತೆ) ಆಗುವುವು. ಅವನ್ನು ಒಲ್ಲದಿದ್ದರೆ ಅವರಿಗೆ ಸನ್ಮಾರ್ಗವು ಕಾಣುವುದೇ ? ೪೨. ಸದ್ಗುಣ ವಿಶಿಷ್ಟವಾದ ಕಮಲಕ್ಕೆ (ತಂತು ವಿಶಿಷ್ಟವಾದ ಕಮಲಕ್ಕೆ), ತನ್ನ ಸಂಗದಿಂದ ರಾಜನ ದ್ವೇಷವೂ (ಚಂದ್ರನ ದ್ವೇಷವೂ), ಹೆಂಡಗುಡುಕರ ಗುಂಪಿನಲ್ಲಿ ಅತಿ ಪ್ರೀತಿಯೂ (ಭ್ರಮರಗಳ ಗುಂಪಿನ ಬಹುಪ್ರೀತಿಯೂ), ಉಂಟಾಗುವುದೆನಿಸಿದ ಲಕ್ಷ್ಮಿಯೆಂಬ ಪತ್ನಿಯನ್ನು ಪ್ರೀತಿಸಿದವನಿಗೆ ಬುದ್ಧಿಯು ಉಂಟಾದೀತೇ? ೪೩. ಮನುಷ್ಯ ರೂಪದ ರುದ್ರರೆಂದೆನಿಸುವ ಶಿವಭಕ್ತರ ಮಹಿಮೆ ಮತ್ತರಾದ ಜನಗಳ ಬುದ್ಧಿಗೆ ಗೋಚರವಾಗುವುದೇ ? ಸೂರ್ಯನಕಾಂತಿ ಸಮೂಹವು ನೀಚವಾದ

ಮೃಡಭಕ್ತರಳವನಱಿಯದ
ಜಡಮತಿಗಳ ಮಾತುಗೇಳ್ದು ಮಾನಕ್ಷತಿಯುಂ
ಪಡೆದೆ ಗಡ ಮಾಚಿದೇವನ
ತೊಡಂಕಿ ನೀಂ ಭಕ್ತರಳವದೇಂ ಕೇವಳಮೋ ೪೪

ಧರಣೀಪಾಲಕ ಕೇಳ್ ಧರಾತಳದೊಳಂದಂಬೆತ್ತ ತದ್ರಾವಿಡೋ
ರ್ವರೆಯೊಳ್ ಪೆರ್ಮೆಯುನಾಳ್ದು ತಾಳ್ದು ಸೊಬಗಂ ಸೌಂದರ್ಯದಿಂ ಗೋತ್ರಭಿ
ತ್ಪುರಮಂ ತಾಂ ಪಳಿಕೆಯ್ದು ಕಂಗೊಳಿಪುದುದ್ಯದ್ವಪ್ರ ವಿಸ್ತಾರ ಗೋ
ಪುರ ನಾನಾಮಣಿಹರ್ಮ್ಯಶೋಭಿ ಕರವೂರೆಂದೆಂಬ ಸತ್ಪಟ್ಟಣಂ ೪೫

ಅದನಾಳ್ವನಭವಭಕ್ತಂ
ಮದವದ್ರಿಪುದರ್ಪದಂತಿದಳನಮೃಗೇಂದ್ರಂ
ಸದಮಳಗುಣನಿಧಿ ವಿಶದಾ
ಭ್ಯುದಿತಯಶಂ ಚೋಳರಾಯನೆಂಬ ನರೇಂದ್ರಂ ೪೬

ವ॥ ಆ ಪುರವರದೊಳ್ಮತ್ತಮೊರ್ವನಸಮನಯನನಪರಾವತಾರನೆನಿಸಿ—

ಗೂಬೆಯ ಕಣ್ಣಿಗೆ ಕಾಣಿಸುವುದೇ ? ೪೪. ಮೃಡನ ಭಕ್ತರ ಸಾಮರ್ಥ್ಯವನ್ನು ತಿಳಿಯದ ಮೂಢ ಬುದ್ಧಿಯ ಜನಗಳ ಮಾತನ್ನು ಕೇಳಿ, ಮಾಚಿ ದೇವನ ಕೂಡ ತೊಡಕುಂಟು ಮಾಡಿಕೊಂಡು ಗೌರವ ಹಾನಿಯನ್ನು ಪಡೆದೆಯಲ್ಲವೆ ? ಭಕ್ತರ ಆ ಸಾಮರ್ಥ್ಯವು ಸಾಮಾನ್ಯವಾದದ್ದೇ ? **ಚೋಳರಾಜ ಇರಿವತ್ತರ ಕಥೆ** : ೪೫. ಭೂಮಿ ಪಾಲನೇ ಕೇಳು : ಭೂಮಂಡಲದಲ್ಲಿ ಮನೋಹರವಾದ (ದ್ರಾವಿಡ ದೇಶ). ಆ ದ್ರಾವಿಡ ದೇಶದಲ್ಲಿ ಎಲ್ಲ ಪೈರು ಪಚ್ಚೆಗಳಿಂದ ಪೂರ್ಣವಾದ ಭೂಮಿಯಲ್ಲಿ, ಶ್ರೇಷ್ಠ ವಾದ ಪ್ರಾಕಾರ, ವಿಶಾಲವಾದ ಗೋಪುರ (ಅಗಸೆ ಬಾಗಿಲ ಗೋಪುರ) ನಾನಾ ಪ್ರಕಾರ ವಾದ ರತ್ನ ನಿರ್ಮಿತ ಉಪ್ಪರಿಗೆಗಳು—ಇವುಗಳಿಂದ ಪ್ರಕಾಶಿಸುವ 'ಕರವೂರು' ಎಂಬ ಶ್ರೇಷ್ಠ ಪಟ್ಟಣವು ಪ್ರಸಿದ್ಧಿಯನ್ನು ಹೊಂದಿ, ಸೊಗಸಿನಿಂದ ಕೂಡಿ, ಸೌಂದರ್ಯದಿಂದ ಇಂದ್ರನ ಅಮರಾವತಿ ಪಟ್ಟಣವನ್ನು ತಿರಸ್ಕರಿಸಿ ಶೋಭಿಸುತ್ತಿತ್ತು. ೪೬. ಆ ಪಟ್ಟಣ ವನ್ನು ಗರ್ವದಿಂದ ಕೂಡಿದ ಶತ್ರುಗಳ ಅಹಂಕಾರವೆಂಬ ಆನೆಯನ್ನು ಸೀಳುವುದರಲ್ಲಿ ಸಿಂಹಸ್ವರೂಪವಾದನೂ, ನಿರ್ಮಲವಾದ ಸದ್ಗುಣಗಳಿಗೆ ಆಗರ ನೆನಿಸಿದವನೂ, ವಿಶದವೂ, ಅಭಿವೃದ್ಧಿಯುತವೂ ಆದ ಕೀರ್ತಿಯುಳ್ಳವನೂ, ಆದ ಶಿವಭಕ್ತ ಚೋಳರಾಯನೆಂಬ ನರೇಂದ್ರನು ಆಳುತ್ತಿದ್ದನು. ವ॥ ಆ ಶ್ರೇಷ್ಠ ಪಟ್ಟಣದಲ್ಲಿ ಮತ್ತೊಬ್ಬ ಪರಮೇಶ್ವರನ

ಪರಮ ಗುಣಾಕರಂ ಪ್ರಬಳ ಶೈವಮತಾಂಬುಜಭಾನು ಸತ್ಯಸಂ
ಗರನಭವಾಂಘ್ರಿಭಕ್ತನಹಿತಾಚಲಶಂಬನಮುಂದಶಕ್ತಿ ವಿ
ಸ್ಫುರಿತನಪಾಸ್ತಕರ್ಮನುರರೀಕೃತಸುವ್ರತನನ್ಯವಾದಿ[1]ವಾ
ರ್ಧರ ಪವಮಾನನಾನತಜನಾಮರಭೂಜನತರ್ಕ್ಯ ವಿಕ್ರಮಂ ೪೭

ಗುರುಚರಭಕ್ತಿತತ್ಪರನುಪಾತ್ತವಿಭೂತಿಶಿವಾಕ್ಷಮಾಲಿಕಾ
ಭರಣನಜೇಯನಂಗಗುಣವರ್ಜಿತನೂರ್ಜಿತಲಿಂಗನಿಷ್ಠನೀ
ಶ್ವರಭಜಕಾಪಕಾರಿಹರಣೈಕದೃಢವ್ರತಸಂಗತಂ ಕೃಪಾ
ಕರನಿಱಿವತ್ತನೆಂಬ ಶರಣಂ ಶರಣಾಗತವಜ್ರಪಂಜರಂ ೪೮

ವ॥ ಒಪ್ಪುತ್ತುಮಿರ್ಪಿನಮಲ್ಲಿ—

ಚೋಳನೃಪಾಲ ಪಟ್ಟಗಜಮದ್ರಿನಿಭಂ ಮದಮಾಂತು ಶೃಂಖಲಾ
ಜಾಳಮನೊತ್ತಿ ಕಿಳ್ತು ತಡೆವಗ್ಗದ ಜೋದರನಿಕ್ಕಿ ಮೆಟ್ಟಿ ಮ
ತ್ತಾಳಿಗಳಂ ಪಳಂಚಲೆದು ಕರ್ಣದಿನುತ್ಕಟ ಕೋಪದಿಂ ಮಹಾ
ಭೀಳತೆವೆತ್ತು ಸ್ವೈರದಿಂದಾ ಪೊಳಲುಜ್ವಳ ರಾಜವೀಥಿಯೊಳ್ ೪೯

ಅಪರಾವತಾರನೆನಿಸಿದ— ೪೭-೪೮. ಶ್ರೇಷ್ಠವಾದ ಗುಣಗಳಿಗೆ ಆಗರನೆನಿಸಿದ, ಪ್ರಬಲವಾದ ಶಿವ ಮತವೆಂಬ ಕಮಲಕ್ಕೆ ಸೂರ್ಯನೆನಿಸಿದ, ಸತ್ಯ ಪ್ರತಿಜ್ಞೆಯುಳ್ಳ, ಶಿವನ ಪಾದಕಮಲಗಳಲ್ಲಿ ಭಕ್ತಿಯನ್ನು ಹೊಂದಿದ, ಶತ್ರುಗಳೆಂಬ ಪರ್ವತಗಳಿಗೆ ವಜ್ರಾಯುಧನಾದ, ವಿಶೇಷವಾದ ಶಕ್ತಿಯಿಂದ ಪ್ರಕಾಶಿಸುವ, ಕರ್ಮಗಳನ್ನು ಹೋಗಲಾಡಿಸಿಕೊಂಡ, ಒಳ್ಳೆಯ (ಶಿವ) ವ್ರತಗಳನ್ನು ಅಂಗೀಕರಿಸಿದ್ದ, ಪರಮತ ವಾದಿಗಳೆಂಬ ಮೋಡಕ್ಕೆ ವಾಯುವೆನಿಸಿದ, ನಮಸ್ಕರಿಸಿದ ಜನಕ್ಕೆ ಕಲ್ಪವೃಕ್ಷ ಪ್ರಾಯನಾದ, ತರ್ಕಿಸುವುದಕ್ಕೆ ಅಸಾಧ್ಯವಾದ ಪರಾಕ್ರಮವುಳ್ಳ, ಗುರು ಜಂಗಮ ಭಕ್ತಿ ತತ್ಪರನಾದ, ಪಡೆದಂತಹ ವಿಭೂತಿ, ರುದ್ರಾಕ್ಷ ಮಾಲಿಕೆಗಳೇ ಆಭರಣವಾಗಿ ಉಳ್ಳ, ಮತ್ತೊಬ್ಬರಿಂದ ಜೈಸುವುದಕ್ಕೆ ಅಸಾಧ್ಯನೆನಿಸಿದ, ಅಂಗಗುಣಗಳನ್ನು ನಿವಾರಿಸಿ ಕೊಂಡ, ತೇಜೋವಿಶೇಷದಿಂದ ಕೂಡಿದ ಲಿಂಗದಲ್ಲಿ ವಿಶ್ವಾಸವುಳ್ಳ, ಈಶ್ವರ ಸೇವಕರಿಗೆ ಅಪಕಾರ ಮಾಡುವವರನ್ನು ನಾಶ ಪಡಿಸುವ, ದೃಢವಾದ (ಶಿವ) ವ್ರತವೊಂದರಲ್ಲಿ ಕೂಡಿದ, ಕೃಪಾಕರನಾದ 'ಇರಿವತ್ತ' ಎಂಬ ಶರಣನು ಶರಣಾಗತರಾದವರಿಗೆ ವಜ್ರ ಪಂಜರನಾಗಿ ವ॥ ಒಪ್ಪುತ್ತ ಇರುತ್ತಿರುವಾಗ ಅಲ್ಲಿ—೪೯. ಬೆಟ್ಟದಂತಿರುವ ಚೋಳ ಮಹಾರಾಜನ ಪಟ್ಟದಾನೆಯು, ಮದಗೊಂಡು, (ಕಾಲಿಗೆ ಕಟ್ಟಿದ್ದ) ಸರಪಳಿಗಳ ಸಮೂಹವನ್ನು ಜಗ್ಗಿ ಕಿತ್ತು, (ತನ್ನನ್ನು) ತಡೆದ ಶ್ರೇಷ್ಠ ಯೋಧರನ್ನು ಹೊಡೆದು ಮೆಟ್ಟಿ, ಮದ ವಿಶಿಷ್ಟವಾದ ಭ್ರಮರಗಳನ್ನು ಕಿವಿಗಳಿಂದ ಹೊಡೆದು ಓಡಿಸಿ, ಹೆಚ್ಚಾದ ಕೋಪದಿಂದ ಅತಿ ಭಯಂಕರಾಕಾರ ಹೊಂದಿ,

---

1 ದ(ಅ)

ವ॥ ಆ ವೇಳೆಯೊಳದ್ಭುತಂ ಮಸಗೆ—

ನಡೆ ನಡೆ ಪಿಂಗು ಪಿಂಗು ಕಡೆಗೋಡಿರದೋಡು ಗಜಂ ಗಜಂ ಕರಂ
ಪಿಡಿದುದು ಪೊಯ್ದುದೆತ್ತಿದುದು ಪತ್ತಿದುವೊತ್ತಿದುದ[1]ತ್ತಮಿತ್ತಲುಂ
ಕೆಡಪಿದುದಿಟ್ಟುದೀಡೊ[2]ರಸಿ ಕೊಂದುದು ಸೀಳ್ದುದು ತೂಳ್ದುದಯ್ಯೊ ಬೆಂ
ಗೊಡುವ ಜನಂಗಳಂ ಜವದಿನೆಂಬ ರವಂ ಪಿರಿದಾಯ್ತು ವೀಥಿಯೊಳ್ ೫೦

ವ॥ ಆ ಸಮಯದೊಳ್ಶಿವಭಕ್ತನೊರ್ವಂ ಶಿವಪೂಜೆಗೆ ಪೂದಿಱಿಯಲೆಳಸಿ ಪುಷ್ಪವಾಟಿಯಂ ಪೊಕ್ಕು—

ಎಲರಲ್ಲಾಡದ ಮಂಜು ಪೊಯ್ಯದಳಿ ಕಂಪಂ ಪೀರದಿರ್ಪಾಜಿದು
ಳ್ಳಲರ್ದೊಪ್ಪಂಗಿಡದಚ್ಚವೊಗ್ಗೆಯೆನಿಪಂದಂದಾಳದಚ್ಛಿದ್ರಕೋ
ಮಲಭಾಸ್ವದ್ದಳ ಚಾರುಕೇಸರ ಸುಗಂಧಾಕೀರ್ಣ ನವ್ಯೋದ್ಗಮಾ
ವಲಿಯಂ ಕೊಯ್ದು ಕರಂಡಕಂ ಜಡಿಯೆ ತೀವುತ್ತುಂ ಸಮುತ್ಸಾಹದಿಂ ೫೧

ಹರಪೂಜೆಗೆಯ್ವ ಪೊಳ್ತೋ
ಸರಿಪುದೆನುತ್ತವನತೀವ ಜವದಿಂ ತಾಳ್ದಾ

ಆ ಪಟ್ಟಣದ ಉಜ್ವಲವಾದ ರಾಜ ಬೀದಿಯಲ್ಲಿ ಸಂಚರಿಸಿತು. ವ॥ ಆ ವೇಳೆಯಲ್ಲಿ ಅದ್ಭುತವೊಂದು ಉಂಟಾಗಲು—೫೦. ನಡೆ ನಡೆ ಹಿಂದಿರುಗಿ ಹೋಗು ! ಒಂದೇ ಪಾರ್ಶ್ವದಲ್ಲಿ ಓಡು ! ತಪ್ಪದಂತೆ ಓಡು ! (ಕಡೆಗ + ಓಡು + ಇರದೆ + ಓಡು). ಆನೆ ! ಆನೆ ! ಚೆನ್ನಾಗಿ ಹಿಡಿಯಿತು ! ಹೊಡೆಯಿತು ! ಹತ್ತಿತು ! ಅತ್ತ ಇತ್ತ ಕೆಡವಿತು ! ನೆಲಕ್ಕಿಕ್ಕಿತು ! ನೆಲಕ್ಕೆ ಕೆಡವಿ ಕಾಲಿನಿಂದ ತಿಕ್ಕಿಕೊಂಡಿತು ! ಬೆನ್ನು ತೋರಿಸಿ ಹೋಗುವ ಜನಗಳನ್ನು ಒಮ್ಮೆಲೇ ತುಳಿಯಿತು ! ಎಂಬ ಧ್ವನಿ ಬೀದಿಯಲ್ಲಿ ಹೆಚ್ಚಾಯಿತು. ವ॥ ಆ ಸಮಯದಲ್ಲಿ ಒಬ್ಬ ಶಿವ ಭಕ್ತನು ಶಿವ ಪೂಜೆಗೆ ಹೂವುಗಳನ್ನೆತ್ತಿರಲು ಅಪೇಕ್ಷಿಸಿ, ಹೂದೋಟವನ್ನು ಹೊಕ್ಕು—೫೧–೫೨. ಗಾಳಿಯಿಂದ ಅಲ್ಲಾಡದ, ಮಂಜು ಮುಸುಕದ (ಹೊಡೆಯದ), ಅಳಿಗಳು ಮಕರಂದವನ್ನು ಹೀರದೆ ಇರುವ, ಒಣಗದ, ಆಗ ತಾನೆ ಅರಳುತ್ತಿರುವ, ಸೌಂದರ್ಯವು ಕೆಡದ, ಮೊಗ್ಗು ಎನ್ನುವ ಅಂದವನ್ನು ತಾಳದ (ಇನ್ನೂಕಾಯಿ ಮೊಗ್ಗಿನಂತೆ ಇರುವ), ತೂತು ಬಿದ್ದಿರುವ, ಮೃದುವಾದ, ಪ್ರಕಾಶಮಾನವಾದ ಎಸಳುಗಳಿಂದ ಮನೋಹರವಾದ, ಕೇಸರ, ಸುಗಂಧ ಇವುಗಳಿಂದ ತುಂಬಿದ, ನೂತನವಾದ ಹೂವುಗಳ ಸಮೂಹವನ್ನು ಕೊಯ್ದು ಹೂ ಬುಟ್ಟಿಯು ಜಗ್ಗುವಂತೆ ಅತ್ಯಂತ ಉತ್ಸಾಹದಿಂದ ತುಂಬಿಕೊಳ್ಳುತ್ತ, ಆ ಭಕ್ತನು ಶಿವ ಪೂಜೆ ಮಾಡುವ ಹೊತ್ತು ಮಿಕ್ಕುತ್ತದೆ ಎಂದು ಅತಿ ವೇಗದಿಂದ ಆ ಹೂ ಬುಟ್ಟಿಯಲ್ಲಿ ಹೂವನ್ನು ತುಂಬಿಕೊಂಡು ಹಿಡಿದು ಆ ಪಟ್ಟಣದ ಬೀದಿಯಲ್ಲಿ ಭರದಿಂದ

1 ದೆ(ಚ) 2 ದಿಟ್ಟೊ(ಮು)

ಕರಡಗೆಯುಲರಂ ಭಕ್ತಂ
ಪುರವೀಥಿಯೊಳೆಯ್ದೆ ಬರ್ಪ ಸಮನಂತರದೊಳ್ ೫೨

ಕಟ್ಟಿದಿರಲ್ಲಿ ಕಂಡು ಕರಿ ಕಾಯ್ಪು ವಿಜೃಂಭಿಸಿ ಬರ್ಪ ಭಕ್ತನಂ
ಮುಟ್ಟಿ ಕರಾಗ್ರದಿಂ ಸೆಳೆದು ಸುತ್ತಿ ನಭಸ್ಸ್ಥಳಕಿಟ್ಟು ತೀವ್ರದಿಂ
ನೆಟ್ಟನೆ ಕೊಂಬನೊಡ್ಡಿ ನಿಲೆ ತದ್ರದನಾಗ್ರದೆ ಬಿಳ್ದು ರಕ್ತಮಂ
ಧಿಟ್ಟಣಿಸುತ್ತೆ ಸೂಸಿ ಹರಣಂಗಳೆವಾಗಳವಂ ವಿಷಾದದಿಂ ೫೩

ಹರಹರ ಪಾರ್ವತೀಶ ಪರಮೇಶ ಮದೀಶ ಮಹೇಶ ಪಾಹಿಯೆಂ
ಬ ರವಮನಾಲಿಸುತ್ತಗಿದು ಕೆಟ್ಟೆನಿದೆಲ್ಲಿಯ ಭಕ್ತರೋದನ
ಸ್ವರಮೆನುತಲ್ಲಿಗೆಯ್ದಿ ಜವದಿಂದಿರಿವತ್ತನಿಳಾತಳಕ್ಕೆ ಬಿ
ಳ್ದುರುಳ್ದ ಮಹೇಶಭಕ್ತನನಿಭೇಂದ್ರಮನೀಕ್ಷಿಸಿ ತತ್ಕ್ಷಣಾರ್ಧದೊಳ್ ೫೪

ಪಟು ಕೋಪಾಟೋಪದಿಂ ಗರ್ಜಿಸಿ ಘುಡಿಘುಡಿಸುತ್ತಾರ್ದು ಹೋ ನಿಲ್ಲೆನುತ್ತಾ
ರ್ಭಟಿಸುತ್ತುಂ ಪೊಕ್ಕು ಮೇಗಣ್ಗೊಗೆದು ನೆಗೆದು ತತ್ಕಂಠಮಂ ಮೆಟ್ಟಿ ನಿಂದು
ತ್ಕಟಿಸುತ್ತುಂ ಜೋದನಂ ಪೊಯ್ದೊದೆದು ಬಿದುವದಿರ್ಬೋಳ್ಸಮಂತಾಗೆ ಶೈಲ
ಸ್ಫುಟಕಾಯೋಗ್ರೇಭಮಂ ಕೆಯ್ಗೊಡಲಿಯಿನಧಟಿಂ ಸೀಳ್ದನುಗ್ರಾವತಾರಂ ೫೫

ಬರುವ ಸಮಯದಲ್ಲಿ ನೇರವಾಗಿ ಎದುರಿನಲ್ಲಿ (ಇವನನ್ನು) ಆ ಆನೆಯು ಕಂಡು ಕೋಪವು ಅಧಿಕಗೊಂಡು, ಬರುತ್ತಿರುವ ಆ ಭಕ್ತನನ್ನು ಮುಟ್ಟಿ, ಸೊಂಡಿಲಿನ ತುದಿಯಿಂದ ಬಿಗಿದು ಸುತ್ತಿ ಆಕಾಶಕ್ಕೆ ಎಸೆದು ಬೇಗನೆ ತನ್ನ ಕೊಂಬುಗಳನ್ನು ಅವನಿಗೆ ಒಡ್ಡಿ ನಿಂತಿತು. (ಆ ಭಕ್ತನು ಆಕಾಶದಿಂದ) ಆ ಆನೆಯ ಕೊಂಬಿನ ತುದಿಯ ಮೇಲೆ ಬಿದ್ದು, ರಕ್ತವನ್ನು ಚಿಮ್ಮಿಸುತ್ತ ಪ್ರಾಣವನ್ನು ಕಳೆಯುವ ಸಮಯದಲ್ಲಿ ಆ ಭಕ್ತನು ವಿಷಾದದಿಂದ–'ಪುರಹರ, ಪಾರ್ವತೀ ಪತಿಯೇ, ಪರಮೇಶ್ವರ, ಮದೀಶನೇ, ಮಹೇಶ್ವರನೇ, ರಕ್ಷಿಸು !' ಎನ್ನುವ ಧ್ವನಿಯನ್ನು 'ಇರಿವತ್ತ'ನೆಂಬ ಭಕ್ತನು ಕೇಳಿದವನಾಗಿ, ಭಯಗೊಂಡು 'ಕೆಟ್ಟೆನು ! ಇದು ಯಾವ ಕಡೆಯಿಂದ ಬರುವ ಭಕ್ತನ ಅಳುವಿನ ಧ್ವನಿ'? ಎಂದೆನ್ನುತ್ತ ಶೀಘ್ರವಾಗಿ ಅಲ್ಲಿಗೆ ಹೋಗಿ ಭೂಮಿಯ ಮೇಲೆ ಬಿದ್ದು ಉರುಳಾಡುತ್ತಿರುವ ಭಕ್ತನನ್ನು ಮತ್ತು ಗಜ ಶ್ರೇಷ್ಠನನ್ನು ನೋಡಿ, ಆ ಕ್ಷಣಾರ್ಧದಲ್ಲಿಯೇ ಆ ಭಯಂಕರನಾದ ಇರಿವತ್ತನು ತೀಕ್ಷ್ಣವಾದ ಕೋಪಾಧಿಕ್ಯದಿಂದ ಗರ್ಜನೆ ಮಾಡಿ, ಘುಡುಘುಡಿಸಿ, ಚೀರಿ, 'ಹೋ ! ನಿಲ್ಲು' ಎನ್ನುತ್ತ ಆರ್ಭಟ ಮಾಡುತ್ತ ಅದರ ಸಮೀಪಕ್ಕೆ ಹೋಗಿ ಮೇಲ್ಭಾಗಕ್ಕೆ ಜಿಗಿದು ಅದರ ಕುತ್ತಿಗೆಯನ್ನು ಮೆಟ್ಟಿ ನಿಂತು, ಅತ್ಯುಗ್ರತೆಯನ್ನು ಪ್ರಕಟಿಸುತ್ತ, (ಆನೆಯ ಮೇಲಿದ್ದ) ಮಾವುತನನ್ನು ಹೊಡೆದು, ಒದ್ದು ನೂಕಿ ಪರ್ವತದಂತೆ ಸ್ಫುಟವಾಗಿ ಕಾಣುವ ದೇಹವುಳ್ಳ ಆ ದೊಡ್ಡ ಆನೆಯನ್ನು ಪರಾಕ್ರಮದಿಂದ ಕೈಯಲ್ಲಿದ್ದ ಕೊಡಲಿಯಿಂದ ಕುಂಭ ಸ್ಥಳವು ಚೆನ್ನಾಗಿ ಎರಡು ಹೋಳಾಗುವ

ಕೆಡೆದುದು ಸಿಂಧುರಂ ಧರಣಿಯೊಳ್ ಹರಿ ಪೊಯ್ವೊಡೆ ನೀಲಪರ್ವತಂ
ಪಡಲಿಡುವಂದದಿಂ ಶರಣನಿಂತೆಸಗಿರ್ದುದನೆಲ್ಲಮಂ ಮಹಾ
ಮೃಡಪದಭಕ್ತ ಚೋಳವಿಭು ಕೇಳ್ದಗಿದೇಳ್ತರುತಲ್ಲಿ ಕಂಡು ಸಂ
ಗಡದ ನರೇಂದ್ರರಚ್ಚರಿಯನಾಳೆ ತದಂಘ್ರಿಗೆ ಮೆಯ್ಯನಿಕ್ಕಿದಂ ೫೬

ವ॥ ಅಂತು ಮೆಯ್ಯಿಕ್ಕಿ ಪೊಗಳ್ದು ಕೆಯ್ಯಂ ಮುಗಿದು ನಿಂದು ಕಿಂಕರತೆಯನಪ್ಪುಕೆಯ್ದು—

ಶ್ರೀವರ ವಾಗ್ವರ ಪ್ರಮುಖ ನಿರ್ಜರರಾದೊಡಮೊರ್ಮೆ ತೀವ್ರ ಗ
ರ್ವಾವಿಳರಾಗಿ ಮಾರ್ಮಲೆಯೆ ಶಿಕ್ಷಿಸಲಾರ್ಪ ಘಟುಳ್ಳವಂಗೆ ದಂ
ತಾವಳಮರ್ದನಂ ಪಿರಿದೆ ಕೇಳ್ನಿನಗಂತಜಿಸಂತದಿರ್ಕೆ ಮಾ
ದೇವನ ಭಕ್ತನಂ ಮಡಿಪಿ[1]ತಕ್ಕ[1]ಟ ದುಷ್ಟಮದಾಂಧಮದ್ಗಜಂ ೫೭

ಏಗೆಯ್ವೆನಿದಕೆ ಪೇಳ್ಗುಣ
ಸಾಗರ ಸದ್ಭಕ್ತಮೃತಿಗೆ ಮೋಸೆನ್ನಸುವಂ
ನೀಗೆ ಸರಿಬರ್ಕುಮೆಂದುಸು[2]
ರ್ದಾಗಳೆ ಬಾಯ್ಪುಳಿಯದಿರ್ಕುಮೋ ನಿಜದಿಂದಂ ೫೮

ಹಾಗೆ ಸೀಳಿದನು. ೫೬. ಇಂದ್ರನು ಹೊಡೆದರೆ, ನೀಲ ಪರ್ವತವು ಬೀಳುವ ರೀತಿಯಲ್ಲಿ ಆನೆಯು ಭೂಮಿಯ ಮೇಲೆ ಬಿತ್ತು. ಇರಿವತ್ತನೆಂಬ ಶರಣನು ಹೀಗೆ ಮಾಡಿದುದೆಲ್ಲವನ್ನೂ, ಮಹಾಶಿವ ಭಕ್ತನಾದ ಚೋಳ ಭೂಪಾಲನು ಕೇಳಿ, ಭಯಪಟ್ಟು, ಹೊರಟು ಬಂದು ಅಲ್ಲಿ (ಇರಿವತ್ತನನ್ನೂ, ಅವನು ಮಾಡಿದ ಆನೆಯ ಸಂಹಾರ ಕಾರ್ಯವನ್ನೂ) ನೋಡಿ, ಸಂಗಡವೇ ಬಂದಿದ್ದ ರಾಜರುಗಳು ಆಶ್ಚರ್ಯ ಪಡುತ್ತಿರಲಾಗಿ, ಆ ಇರಿವತ್ತನೆಂಬ ಶಿವಭಕ್ತನ ಪಾದಕ್ಕೆ ನಮಸ್ಕಾರ ಮಾಡಿದನು. ವ॥ ಈ ರೀತಿ ನಮಸ್ಕರಿಸಿ ಹೊಗಳಿ, ಕೈಗಳನ್ನು ಮುಗಿದು ನಿಂತು, ಕಿಂಕರ ಭಾವವನ್ನು ಹೊಂದಿದವನಾಗಿ—೫೭. ಲಕ್ಷ್ಮೀಶನಾದ ವಿಷ್ಣು, ಸರಸ್ವತೀ ಪತಿಯಾದ ಬ್ರಹ್ಮ ಇವರೇ ಮೊದಲಾದ ದೇವತೆಗಳಾದರೂ, ಒಂದಾವರ್ತಿ ಅಹಂಕಾರ ಯುಕ್ತರಾಗಿ ಎದುರಿಸಿದರೆ, ಶಿಕ್ಷಿಸುವಂತಹ ಸಾಮರ್ಥ್ಯದ ಕಾರ್ಯವುಳ್ಳ ನಿನಗೆ ಈ ಆನೆಯನ್ನು ಕೊಲ್ಲುವುದೊಂದು ದೊಡ್ಡದೇ ? ಹೇಳು ಆದ್ದರಿಂದ ಆ ಗಜದ ಸಂಹರಣ ಕಾರ್ಯವು ಅದಂತಿರಲಿ, ಈ ಮದಾಂಧವಾದ ನನ್ನ ಆನೆಯು ಮಹಾದೇವನ ಭಕ್ತನನ್ನು ಕೊಂದಿತಲ್ಲಾ ! ಅಕ್ಕಟಾ !! ೫೮. ಹೇ ಗುಣಸಾಗರನೇ, ಈ ಭಕ್ತನ ಮರಣಕ್ಕೆ ಏನು ಮಾಡಲಿ ? ಹೇಳು. ಈ ಸದ್ಭಕ್ತನ ಸಾವಿಗೆ ನನ್ನ ಪ್ರಾಣವನ್ನೇ ಬಿಟ್ಟರೆ ಸರಿಯಾದೀತು ! ಎಂದು ಹೇಳಿದಾಗಲೇ

1 ತುತ್ಕ(ಜ, ಮ) 2 ಸಿ(ಗ)

ಎನ್ನ ಗಜಮೆಸಗಿದೀ ತ
ಪ್ಪೆನ್ನದು ವಲಮಳಿದು ಶುದ್ಧನಪ್ಪೆನೆನುತ್ತುಂ
ಸನ್ನುತ ಗುಣನಿಧಿ ಚೋಳಂ
ತನ್ನಯ ಶಿರಮರಿದುಕೊಳ್ವ ಸಮಯದೊಳಾಗಳ್ ೫೯

ಸುರಗಂಗಾಶಶಭೃತ್ಕಪರ್ದನನಲಾದಿತ್ಯೇಂದುನೇತ್ರಂ ಮಹಾ
ಗರಳಗ್ರೀವನಹೀಂದ್ರಭೂಷನಗಜಾಸಂಯುಕ್ತನುಗ್ರದ್ವಿಪಾ
ಸುರಚರ್ಮಾಂಬರನನ್ವಿತಾಭಯವರ ಶ್ರೀಪಾಣಿಪದ್ಮಂ ಪ್ರಭಾ
ಕರಕೋಟಿಪ್ರಭನಕ್ಷಪಾದನನಘಂ ಪ್ರತ್ಯಕ್ಷನಾದಂ ಮೃಡಂ ೬೦

ವ॥ ಅಂತು ಶಿವಂ ಪ್ರಸನ್ನನಾಗುತ್ತಿಱಿವತ್ತನ ವೀರವ್ರತಕ್ಕಂ ಚೋಳರಾಯನ ಭಕ್ತಿವ್ರತಕ್ಕಂ ಮಚ್ಚಿ ಗಣನಿವಹದೊಳ್ಪೊಗಳ್ದಿರ್ವರಂ ಬಿಗಿಯಪ್ಪಿ ಮುಂಡಾಡಿ ಮಡಿದ ಭಕ್ತಂಗಂ ಗಜಾ[1] ಧೋರಣರ್ಗಂ ಹರಣಮಂ ಕರುಣಿಸಿ ಸುರಕುಜಕುಸುಮವರ್ಷಂ ಭೋರೆಂದು ಸುರಿಯೆ ಸುರದುಂದುಭಿ ನಿರ್ಘೋಷಂ ದಿಗಂತಕೆ ಧೀಂಕಿಡೆ ಬಂದ ಮಣಿ ಪುಷ್ಪಕದೊಳ್ಕುಳ್ಳಿರಿಸಿಕೊರ್ಮೆವೆರಸು[2]ಕೈಲಾಸಕ್ಕೆ ಕರೆದೊಯ್ದು ಗಣಸಭೆಯೊಳ್ಸುಖಮಿರಿಸಿಮೆಱೆದಿರ್ದನಾ ಚೋಳೋರ್ವಿಪಂ ಭಕ್ತನಂ ನಿಜಗಜಂ ಮಡಿಪ

ನನ್ನ ಬಾಯಿ ಹುಳಿತು ಹೋಗದೆ ಇರುತ್ತದೆಯೇ ? ೫೯–೬೦. ನನ್ನ ಆನೆಯು ಮಾಡಿದ ಈ ತಪ್ಪು ನನ್ನ ತಪ್ಪು. ಇದು ನಿಶ್ಚಯ; (ನಾನು) ಸತ್ತು ಶುದ್ಧನಾಗುತ್ತೇನೆ ಎಂದು ಆ ಶ್ಲಾಘ್ಯವಾದ ಗುಣಗಳ ನಿಧಿಯೆನಿಸಿದ ಚೋಳ ಭೂಪಾಲನು ತನ್ನ ಶಿರಸ್ಸನ್ನು ಕತ್ತರಿಸಿ ಕೊಳ್ಳುವ ಸಮಯದಲ್ಲಿ ದೇವಗಂಗೆ, ಚಂದ್ರ ಇವರುಗಳೇ ಜಡೆಯಲ್ಲಿ ಉಳ್ಳವನೂ, ಅಗ್ನಿ, ಚಂದ್ರ, ಸೂರ್ಯರೇ ನೇತ್ರವಾಗಿ ಉಳ್ಳವನೂ, ಅಧಿಕವಾದ ಕಾಲ ಕೂಟವೆಂಬ ವಿಷವನ್ನು ಕಂಠದಲ್ಲಿ ಉಳ್ಳವನೂ, ಹಾವಿನ ಆಭರಣವುಳ್ಳವನೂ, ಪಾರ್ವತೀ ಸಮೇತನೂ, ಭಯಂಕರ ಗಜಾಸುರನ ಚರ್ಮವೇ ಬಟ್ಟೆಯಾಗಿ ಉಳ್ಳವನೂ, ಅಭಯ ವರಪ್ರದಾನ ಮುದ್ರೆಯ ಸಂಪತ್ತಿನಿಂದ ಕೂಡಿದ ಕರ ಕಮಲವುಳ್ಳವನೂ, ಅನೇಕ ಸೂರ್ಯರ ಕಾಂತಿಯಂತಿರುವ ಕಾಂತಿಯುಳ್ಳವನೂ, ಚರಣದಲ್ಲಿ ಕಣ್ಣುಳ್ಳವನೂ, ಪಾಪರಹಿತನೂ ಆದ ಮೃಡನು ಪ್ರತ್ಯಕ್ಷನಾದನು. ವ॥ ಆ ರೀತಿ ಶಿವನು ಪ್ರತ್ಯಕ್ಷ ನಾಗುತ್ತ ಇರಿವತ್ತನ ವೀರ ವ್ರತಕ್ಕೂ, ಚೋಳರಾಜನ ಭಕ್ತಿ ವ್ರತಕ್ಕೂ, ಮೆಚ್ಚಿ, ಶಿವಗಣ ಸಮೂಹದ ಎದುರಿನಲ್ಲಿ ಕೊಂಡಾಡಿ ಇಬ್ಬರನ್ನೂ ಬಿಗಿಯಾಗಿ ಅಪ್ಪಿಕೊಂಡು ಮೈ ಮೇಲೆ ಕಯ್ಯಾಡಿಸಿ, ಸತ್ತು ಹೋದ ಭಕ್ತನಿಗೂ ಆನೆಯ ಮಾವುತನಿಗೂ, ಜೀವದಾನ ಮಾಡಿ, ಕಲ್ಪ ವೃಕ್ಷದ ಹೂವುಗಳು (ಆಕಾಶದಿಂದ) ಧೋ! ಎಂದು ಸುರಿಯುತ್ತಿರಲು, ದೇವದುಂದುಭಿಯ ಶಬ್ದವು ದಿಕ್ಕಿನ ಕೊನೆಯವರೆಗೆ ಧೀಂಕಿಡುತ್ತಿರಲು, (ಕೈಲಾಸದಿಂದ) ಬಂದ ರತ್ನ ಖಚಿತವಾದ ವಿಮಾನದಲ್ಲಿ ಕುಳ್ಳಿರಿಸಿ

1 ಜ(ಮು, ಗ, ದ) 2 ಸಿ(ಚ)

ಲೊಡಂ 'ಭೃತ್ಯಾಪರಾಧಾತ್ ಸ್ವಾಮಿನೋ ದಂಡ' ಎಂಬ ನಯಂಬಿಡಿದು ನಿಜಪ್ರಾಣಮಿತ್ತನೆಂಬಾಗಳೞಂ ಬೇಡೆಂದು ಸಾಱಿದೊಡಂ ಮೀಱಿ ಮದೋದ್ರೇಕದಿಂ ಮುಂಗಾಣದೆ ಭಕ್ತವಧೆಗೆಳಸಿ ಮತ್ತಗಜಮನಟ್ಟಿದ ನಿನಗಾದ ಶಿವದ್ರೋಹಕ್ಕೆ ನಿಷ್ಕೃತಿಯಾವುದೆಂದು ಮೂದಲಿಸಿ ಮತ್ತಮಿಂತೆಂದಂ—

ಧರಣಿಯೊಳತುಳಿತ ಶೋಭಾ
ಕರಮಿದೆ ಪೆಱತಿಲ್ಲಮೆಂಬ ಪೆರ್ಮೆಗಡರ್ಪಾ
ಗಿರೆ ಬಾಹೂರೆಂಬ ಮಹಾ
ಪುರಮದಱೊಳ್ಮೆಱೆವನೊರ್ವನಚಳ ಶಿವೈಕ್ಯಂ ೬೧

ಕಲುಷಕುಜಕುಠಾರಂ ಕಾಲಕರ್ಮಾತಿದೂರಂ
ವಿಲಸಿತಗುಣಧಾಮಂ ವೀರಶೈವಾಬ್ಧಿಸೋಮಂ
ಸುಲಲಿತಶುಭರೂಪಂ ಶುದ್ಧವಿದ್ಯಾಕಲಾಪಂ
ವಿಲಯರಹಿತಭಾವಂ ವಿಶ್ವದೊಳ್ಬೊಮ್ಮಿದೇವಂ ೬೨

ಕೊಂಡು ಪ್ರೀತಿಯಿಂದ ಕೂಡಿದವನಾಗಿ, ಕೈಲಾಸಕ್ಕೆ ಕರೆದುಕೊಂಡು ಹೋಗಿ ಶಿವಗಣ ಸಭೆಯಲ್ಲಿ ಸೌಖ್ಯವಾಗಿ ಇರಿಸಿ ಶೋಭಿಸಿದನು. ಆ ಚೋಳ ಭೂಪಾಲನು ತನ್ನ ಆನೆಯು ಭಕ್ತನನ್ನು ಸಾಯಿಸಿದ ಕೂಡಲೇ 'ಭೃತ್ಯನಾದವನ ತಪ್ಪಿನ ದೆಸೆಯಿಂದ ಒಡೆಯನಿಗೆ ಶಿಕ್ಷೆ' ಎಂಬ ನೀತಿಯನ್ನನುಸರಿಸಿ, ತನ್ನ ಪ್ರಾಣವನ್ನು ಕೊಟ್ಟನು. ಹೀಗೆನ್ನುವಾಗ ನಾನು ಬೇಡ ಎಂದು ಹೇಳಿದರೂ ನನ್ನ ಮಾತನ್ನು ಮಿಕ್ಕಿ ಗರ್ವಾಧಿಕ್ಯದಿಂದ ಮುಂದಾಗುವುದನ್ನು ಲೆಕ್ಕಿಸದೆ ಭಕ್ತನ ಸಾವನ್ನು ಬಯಸಿ ಮದೋನ್ಮತ್ತ ಆನೆಯನ್ನು ಅಟ್ಟಿದವನಿಗೆ ಆದ ಶಿವ ದ್ರೋಹಕ್ಕೆ ಪರಿಹಾರವಾವುದು ? ಎಂದು ಮೂದಲಿಸಿ ಪುನಃ ಹೀಗೆ ಹೇಳಿದನು : **ಬೊಮ್ಮಿ ದೇವನ ಕಥೆ** ೬೧. ಭೂಮಂಡಲದಲ್ಲಿ ಇದೇ ಅಸದೃಶ ಕಾಂತಿಗೆ ಆಸ್ಪದವಾದದ್ದು; ಮತ್ತೊಂದು ಇಲ್ಲ, ಎಂಬ ಹಿರಿಮೆಗೆ ಕಾರಣವೆನಿಸಿ ಇರುವ 'ಬಾಹೂರು' ಎಂಬ ಮಹಾ ಪಟ್ಟಣದಲ್ಲಿ ಅಚಲನಾದ ಶಿವನಲ್ಲಿ ಐಕ್ಯಗೊಂಡ ಚಿತ್ತವುಳ್ಳ ಒಬ್ಬ (ಭಕ್ತನು) ಶೋಭಿಸುತ್ತಿದ್ದನು. ೬೨–೬೩. ಪ್ರಪಂಚದಲ್ಲಿ ಪಾಪವೆಂಬ ಮರಕ್ಕೆ ಕೊಡಲಿಯಾದ, ವರ್ತಮಾನ, ಭೂತ, ಭವಿಷ್ಯತ್ಕಾಲಗಳ ಕರ್ಮಗಳಿಗೆ ದೂರನಾದ, ಪ್ರಕಾಶಿಸುವ ಸದ್ಗುಣಗಳಿಗೆ ಸ್ಥಾನವಾದ, ವೀರಶೈವ ಮತವೆಂಬ ಸಮುದ್ರಕ್ಕೆ ಚಂದ್ರನಾದ, ಪ್ರಕಾಶಿಸುವ ಮಂಗಳಕಾರವಾದ ರೂಪವುಳ್ಳ, ಪರಿಶುದ್ಧ ವಿದ್ಯೆಗಳೇ ಆಭರಣವಾಗಿ ಉಳ್ಳ, ನಾಶ ರಹಿತವಾದ ಭಾವವುಳ್ಳ ಬೊಮ್ಮಿ ದೇವನು, ವೀರಶೈವಾಚಾರದಲ್ಲಿ ಕ್ರೀಡಿಸುವವನು; ಶ್ರೇಷ್ಠನು ; ಪಾಪರಹಿತನೂ ; ಮಾಯಾಪಾಶವನ್ನು ನಾಶ ಗೊಳಿಸಿದವನು ; ಶ್ರೇಷ್ಠವಾದ ಕಾರುಣ್ಯಕ್ಕೆ ಆಕರನು ; ಉಪಮಾತೀತವಾದ ಮಹಿಮೆಯುಳ್ಳ

ವೀರಾಚಾರ[1]ವಿಹಾರನಾರ್ಯಜನನಘಂ ಪ್ರಧ್ವಸ್ತಪಾಶಂ ಮಹಾ
ಕಾರುಣ್ಯಾಕರನಪ್ರಮೇಯಮಹಿಮಂ ನಿರ್ಧೂತದೋಷಂ ಗುಣಾ
ಧಾರಂ ದಿಕ್ತಟಪೂರ್ಣಕೀರ್ತಿಮಹಿತಂ ಸದ್ಭಕ್ತ ಸಂದೋಹಮಂ
ದಾರಂ ಶ್ರೀ ಗುರುಲಿಂಗಜಂಗಮಪದಾಂಭೋಜಾತ ಪೂಜೋತ್ಸವಂ ೬೩

ವ|| ಎನಿಸಿ ಪೆಂಪುವೆತ್ತಾ ಬಾಹೂರ ಬೊಮ್ಮಿದೇವಂ ಸ್ವಲೀಲೆಯಿನೊಂದು ಕುಸುಮಾರಾಮಮಂ ನೆಗಳ್ಚಿ ಪೂಗಿಡು[2]ಗಳನಾದರಂ ಬೆತ್ತೋವಿ ಬಕವಕುಳ ತಿಲಕ ಚಂಪಕ ಕೇಸರ ಕರವೀರ ಕರ್ಣಿಕಾರ ಕಲ್ಹಾರ ಕಮಳ ಕುಮುದ ಪುನ್ನಾಗ ಜಾತಿ ಯೂಥಿಕಾ ಮಾಲತಿ ಮಲ್ಲಿಕಾದಿ ಕುಸುಮ ಸಮುದಯಮನಲ್ಲಿ ತಿಱಿದತಿ ವಿಚಿತ್ರಮಪ್ಪಂತೆ ಮಱ[3]ಮಿಂಡೆದಂಡೆ ಚೆಂಡುಗಳಂ ಸಮೆದು ಶಿವಭಕ್ತರ್ಗೆ ಕಾಣ್ಕೆಗೆಯ್ದುದಱಿನೊದವಿಸಿದ ವಿತ್ತದಿಂ ಪಿಂಗದೆ ಜಂಗಮಾರ್ಚನೆಗೆಯ್ವುತ್ತುಮೀನಿಯಮದಿನನವರತ ಮೆಸೆದಿರ್ದನಂತುಮಲ್ಲದೆ—

ಪರವಾದಿವ್ರಜಮೆಯ್ದೆ ವಾದಿಸೆ ಚಲಂ ಬೆತ್ತೀಶಭಕ್ತಂ ಜಗ
ದ್ಗುರುವೆಂದಂದು ಕರಂ ಪ್ರತಿಷ್ಠಿಸಿದನಿಕ್ಷುವ್ರಾತಮಂ ಪೆರ್ಮೆ ತ
ಳ್ತಿರೆ ತಾಂ ಮೇಯಿಸಿ ಕಲ್ಲನಂದಿಗೆ ಜಸಂ ಬೆತ್ತೊಪ್ಪಿದಂ ಜೋಳಮಂ
ವರ ಲಿಂಗಾಕೃತಿಗೆಯ್ದುದಲ್ಕುಡಿಸಿದಂ ಸದ್ಭಕ್ತಿಸಾರಾನ್ವಿತಂ ೬೪

ವನು ; ಪಾಪವನ್ನು ಹೋಗಲಾಡಿಸಿದವನು ; ಸದ್ಗುಣಗಳಿಗೆ ಆಧಾರನು ; ದಶ ದಿಕ್ಕುಗಳ ಕೊನೆಯ ವರೆಗೆ ತುಂಬಿದ ಯಶಸ್ಸಿನಿಂದ ಪೂಜ್ಯನಾದವನು ; ಸದ್ಭಕ್ತರುಗಳ ಸಮೂಹಕ್ಕೆ ಕಲ್ಪವೃಕ್ಷಪ್ರಾಯನು ; ಶ್ರೀ ಗುರುಲಿಂಗ ಜಂಗಮ ಪಾದ ಕಮಲ ಪೂಜೆಯಲ್ಲಿ ಉತ್ಸುಕನು. ವ|| ಎನಿಸಿ ಘನತೆ ಹೊಂದಿದ ಬಾಹೂರ ಬೊಮ್ಮಿ ದೇವನು ತನ್ನ ಲೀಲೆಯಿಂದ ಒಂದು ಹೂದೋಟವನ್ನು ಮಾಡಿಕೊಂಡು ಹೂವಿನ ಗಿಡಗಳನ್ನು ಆದರದಿಂದ ಕೂಡಿ ರಕ್ಷಣೆ ಮಾಡಿದ್ದನು. (ಅದರಲ್ಲಿ) ಬಕ, ವಕುಳ, ತಿಲಕ, ಸಂಪಗೆ, ಸುರಗಿ (ಕೇಸರ), ಕಣಗಿಲೆ, ಬೆಟ್ಟ ತಾವರೆ, ಕಲ್ಹಾರ, ತಾವರೆ, ನೈದಿಲೆ, ಸುರಹೊನ್ನೆ, ಜಾಜಿ, ಕಾಡು ಮಲ್ಲಿಗೆ, ಮಾಲತಿ, ಕೆಂಪು ಜಾಜಿ, ಮಲ್ಲಿಗೆಗಳೇ ಮೊದಲಾದ ಹೂವುಗಳ ಸಮೂಹವನ್ನು ಅಲ್ಲಿ ಎತ್ತಿಕೊಂಡು ಅತಿ ವಿಚಿತ್ರವೆನಿಸುವಂತೆ ಮೆರೆಯುವ ದುಂಡು ದಂಡೆ, ಚೆಂಡುಗಳನ್ನು ಕಟ್ಟಿ, ಶಿವಭಕ್ತರಿಗೆ ಕಾಣಿಕೆಯನ್ನು ಮಾಡಿದುದರಿಂದ ಕೂಡಿಸಿಟ್ಟ ಹಣದಿಂದ ತಪ್ಪದೆ ಜಂಗಮಾರ್ಚನೆಯನ್ನು ಮಾಡುವ, ಈ ವ್ರತದಿಂದ ಸದಾ ಮೆರೆದು ಇದ್ದನು ಹಾಗೂ ಅಲ್ಲದೆ ೬೪. ಸದ್ಭಕ್ತಿಯ ಸಾರದಿಂದ ಕೂಡಿದ ಆ ಬೊಮ್ಮಿದೇವನು ಪರವಾದಿಗಳ ಸಮೂಹವು ಬಿಡದೆ ವಾದಿಸಲಾಗಿ, ಛಲದಿಂದ ಕೂಡಿ ಈಶಭಕ್ತನು 'ಜಗದ್ಗುರು' ಎಂದು ಆಗ ಚೆನ್ನಾಗಿ ಪ್ರತಿಷ್ಠಾಪನೆ ಮಾಡಿದನು. ಕಲ್ಲನಂದಿಗೆ ಹೆಮ್ಮೆಗೊಳ್ಳುವ ರೀತಿಯಲ್ಲಿ ಆವನು ಕಬ್ಬಿನ ಸಮೂಹವನ್ನು ಮೇಯಿಸಿ, ಕೀರ್ತಿಯುತವಾಗಿ

---

1 ರ್ಯ(ಚ) 2 ಡ(ಮು)

ವ॥ ಇಂತು ನಿರುಪಮ ನಿಜಪ್ರಭಾವಮಂ ಮೆಱೆವುತ್ತುಂ ಬೊಮ್ಮಿದೇವನೆಸೆದಿರ್ಪಿನಮಲ್ಲಿ ಮತ್ತಮದೊಂದು ದಿನದೊಳದ್ಭುತಂ ಮಸಗೆ ನರೇಂದ್ರನೊರ್ವಂ ಪರನೃಪಾಲನ[1] ಮೇಲೆ ದಂಡೆತ್ತಿ ಬರುತ್ತುಮಾಪುರಬಹಿರ್ವಳಯ ಪುಷ್ಪಾರಾಮ ನಿಕಟ ತರಂಗಿಣೀ ತಟದೊಳ್ಪಾಳೆಯಂಗೆಯ್ದಿರ್ಪಿನಮಾ ನೃಪನ ಪಟ್ಟಗಜಂ ಸಪ್ತಮದಾವಸ್ಥೆಯಿಂ ಮುಂಗಾಣದೆ ಕಂಗನೆ ಕನಲ್ದು ದಿಕ್ಕುಂಭಿಗಳಳ್ಕೆ ಬೃಂಹಿತಂಗೆಯ್ದು ನಿಗಳಮಂ ಪಱಿದು ನಿಟ್ಟೋಟದಿಂ ಬೀದಿವರಿದಾರೆಕಾಱರ[2]ನಟ್ಟಿ[2] ಮಾವುತನಂ ಕೆಡಪಿ ಕಟ್ಟುಬ್ಬಟೆಯನೊಳಕೊಂಡು ಮಾಮಸಕಂ ಮಸಗಿ ಕೋಲಾಹಲಮನೆಸಗಿ ತಡೆಯಲೊಡರ್ಚಿದರನಡಂಗೆ ಪೊಯ್ದು ಕಾಲೊಗೆದ ನೀಲಾಚಲದಂತೆ ಪೊಡವಿಯೊಳಡಿಗೊಳ್ವ ಕಲ್ಪಾಂತಮೇಘದಂತೆ ಭರಿಕೈವಡೆದಾದಿವರಾಹನಂತೆ ವಿಜೃಂಭಿಸಿ ತನ್ನಿದಿರೊಳ್ಪರಿದು ತುಡುಂಕಲವ್ವಳಿಪಿನಮಾ ಬೊಮ್ಮಿದೇವಂ ತೊಟ್ಟನೆ ಕಂಡದಿರದಿದಿರ್ವರಿದು ಸಿಂಹನಾದಂಗೆಯ್ದು ಗರ್ಜಿಸಿ ದಕ್ಷಿಣ ಕರಾಗ್ರಮಂ ನೆಗಪಿ ಹೋ ಹೋ ಎಂದು ನಿವಾರಿಸಿ—

ಒಪ್ಪಿದ್ದನು. ಜೋಳವನ್ನು ಲಿಂಗಾಕೃತಿಯನ್ನಾಗಿಮಾಡಿ ಮಾತನಾಡಿಸಿದನು. ಇದೂ ನಿಜವಾಗಿ ನಿಶ್ಚಯ. ವ॥ ಈ ರೀತಿ ಬೊಮ್ಮಿದೇವನು ನಿರುಪಮವಾದ ತನ್ನ ಪ್ರಭಾವ ಮೆರೆಯುತ್ತ ಶೋಭಿಸುತ್ತಿರಲು, ಅಲ್ಲಿ ಮತ್ತೊಂದು ದಿವಸದಲ್ಲಿ ಆಶ್ಚರ್ಯವೊಂದು ಉಂಟಾಯಿತು : ಒಬ್ಬ ರಾಜನು ಬೇರೊಬ್ಬ ರಾಜನ ಮೇಲೆ ದಂಡೆತ್ತಿ ಬರುತ್ತ ಆ ಬಾಹೂರಿನ ಹೊರ ವಲಯದಲ್ಲಿರುವ (ಬೊಮ್ಮಿದೇವನ) ಹೂದೋಟದ ಸಮೀಪದಲ್ಲಿರುವ ಹೊಳೆಯ ದಂಡೆಯಲ್ಲಿ ಬೀಡುಬಿಟ್ಟು ಇರುತ್ತಿರುವಾಗ ಆ ಅರಸನ ಪಟ್ಟದಾನೆಯು ಸಪ್ತಮದಾವಸ್ಥೆಯಿಂದ ಮುಂದುಗಾಣದೆ ಅಧಿಕವಾಗಿ ಕೋಪಗೊಂಡು, ದಿಗ್ಗಜಗಳು ಭಯಪಡುವ ಹಾಗೆ ಘರ್ಜನೆ ಮಾಡಿ ಸರಪಳಿಯನ್ನು ಕಿತ್ತೆಸೆದು ನಿಟ್ಟೋಟದಿಂದ ಬೀದಿಯಲ್ಲಿ ಹರಿದು ಕಾವಲುಗಾರರನ್ನೂ ಅಟ್ಟಿಸಿಕೊಂಡು ಹೋಗಿ, ಮಾವುತರನ್ನೂ ನೆಲಕ್ಕೆ ಕೆಡವಿ. ವಿಶೇಷವಾದ ಆರ್ಭಟವನ್ನು ಒಳಗೊಂಡು, ಅತ್ಯಂತ ಕೋಪದಿಂದ ಕೋಲಾಹಲವನ್ನುಂಟುಮಾಡಿತು. (ಅದನ್ನು) ತಡೆಯಲು ಪ್ರಯತ್ನಿಸಿದವರನ್ನು ಸಾಯುವಂತೆ ಹೊಡೆದು, ಕಾಲುಗಳು ಬಂದ ನೀಲಾಚಲವೋ ಎಂಬಂತೆ ಭೂಮಿಯ ಮೇಲೆ ನಡೆಯುವ ಪ್ರಳಯ ಕಾಲದ ಮೋಡಗಳ ಹಾಗೆ, ಸುಂಡಿಲನ್ನು ಹೊಂದಿದ ಆದಿವರಾಹನಂತೆ ವಿಜೃಂಭಿಸುತ್ತಿತ್ತು, ಬೊಮ್ಮಿದೇವನು ತನ್ನ ಎದುರಿನಲ್ಲಿ ಸಂಚರಿಸಿ ಹಿಡಿಯುವುದಕ್ಕೆ ಅದು ಆತುರಪಡುವಲ್ಲಿ ಅವನು ಅತಿ ಶೀಘ್ರವಾಗಿ ಕಂಡು ಹೆದರದೆ (ಅಚಲಿತವಾಗಿ) ಎದುರಿಗೇ ಓಡಿ ಬಂದು, ಸಿಂಹಧ್ವನಿಯನ್ನು ಮಾಡಿ (ಸಿಂಹದ ಗರ್ಜನೆಯ ಹಾಗೆ ಗರ್ಜನೆ ಮಾಡಿ), ಹೆದರಿಸಿ, ಬಲಗೈ ತುದಿಯನ್ನು ಎತ್ತಿ ಹೋ ಹೋ ! ಎನ್ನುತ್ತ ತಡೆದು

1 ರ(ಗ, ಅ) 2 ನಱಿಯಟ್ಟ(ದ)

ಕೆಡೆ ಕೆಡೆಯೆಂದು ನಿಂದೊದಱೆ ಕೇಳ್ದಳರ್ದಚ್ಚಗವಾಂತು ಕುಂಭಮಂ
ಕೊಡಪುತೆ ಕಾಲ್ಗಳಂ ಬಿದಿರ್ದು ಸುಂಡಿಲ ನೆತ್ತಿಯೊಳಿಟ್ಟು ಮುಂಬರ
ಲ್ಪಡೆಯದೆ ಕರ್ಣವಿಹ್ವಳಲೆ ಕಣ್ಮುಗಿವುತ್ತಿರೆ ಘೀಳಿಡುತ್ತೆ ಸೊ
ರ್ಕುಡುಗಿ ಕುನುಂಗಿ ಪಿಂದೆಗೆದು ಬಿಳ್ದುದು ಸತ್ತುದು ಮತ್ತಕುಂಜರಂ ೬೫

ವ॥ ಆ ಮದಗಜಮಿಂತು ತರಂಗಿಣೀತಟದೊಳ್ಕೆಡೆದು ಮಡಿಯೆ ದೂತರ್ಭೂತಳಾಧಿಪನಿರ್ದಲ್ಲಿ
ಗತಿ ವೇಗದಿಂ ಪರಿದೀ ವೃತ್ತಾಂತಮನೆಲ್ಲಮಂ ಸವಿಸ್ತರಂ ಪೇಳೆ ಕೇಳ್ದು—

ಜನಪಾಲಂ ಮಿಗೆ ಭೀತಿವಟ್ಟು ನಡೆತಂದಾ ಭಕ್ತನಿರ್ದಲ್ಲಿಗಾ
ಳ್ತನಮಂ ತಾಂ ತಳೆದಂಘ್ರಿಪಂಕಜಕೆ ಮೆಯ್ಯಂ ಸಾರ್ಚಿ ಕಂಬಿಟ್ಟು ದೇ
ವ ನಿತಾಂತಂ ಮದಮತ್ತ ಮತ್ಕರಿಕೃತಂ ತಪ್ಪೆನ್ನದೋರಂತೆ ತ
ಪ್ಪನಿದಂ ನೀಂ ಕ್ಷಮಿಸೆಂದು ಮತ್ತಮೆಱಗಿರ್ದಂ ದೀನನಮ್ರಾನನಂ ೬೬

ಎಱಗಿದರಮಗನ ಮೌಲಿಯ
ನುಱೆ ಪಿಡಿದೆತ್ತುತ್ತೆ ಪರಸಿ ಮಡಿದಾನೆಯುನೆ
ಳ್ಚಱಿಸುತಸುವಿತ್ತು ಬಲ್ಲಿದ
ರೆಱೆಯುಂ ಕೃಪೆಗೆಯ್ದು ಬೊಮ್ಮಿದೇವಂ ಮೆಱೆದಂ ೬೭

೬೫. (ಅವರ ಎದುರಿನಲ್ಲಿ) ನಿಂತು, ಬೀಳು ! ಬೀಳು ! ಎಂದು ಕೂಗಲು, ಮದ್ದಾನೆಯು (ಅವನ ಆ ಧ್ವನಿಯುನ್ನು) ಕೇಳಿ ಭಯಪಟ್ಟು, ಆಶ್ಚರ್ಯಹೊಂದಿ, ತನ್ನ ಕುಂಭಸ್ಥಳವನ್ನು ಕೊಡವುತ್ತ, ಕಾಲುಗಳನ್ನು ಮಡಿಚಿ (ಬಿದಿರ್ಚಿ) ಸುಂಡಿಲನ್ನು ನೆತ್ತಿಯ ಮೇಲೆ ಹೊತ್ತು ಮುಂದಕ್ಕೆ ಬರಲು ಶಕ್ಯವಾಗದೆ, ಕಿವಿಗಳು ಜೋಲುಬಿದ್ದು ಅಲ್ಲಾಡುತ್ತಿರಲು, ಕಣ್ಣು ಮುಚ್ಚಿ ಇರಲು, ಕೂಗಿಕೊಂಡು (ಘೀಂಕಾರಮಾಡಿ), ಗರ್ವವೆಲ್ಲ ನಾಶವಾಗಿ. ಕುಗ್ಗಿ ಹಿಂದಕ್ಕೆ ಸರಿದು ಬಿದ್ದು ಸತ್ತುಹೋಯಿತು. ವ॥ ಆಮದೋನ್ಮತ್ತ ಗಜವು ಹೀಗೆ ಹೊಳೆಯದಂಡೆಯಲ್ಲಿ ಬಿದ್ದು ಸಾಯಲಾಗಿ ಆಳುಗಳು ದೊರೆಯ ಹತ್ತಿರಕ್ಕೆ ಅತಿ ವೇಗದಿಂದ ಬಂದು, ಆ ವೃತ್ತಾಂತವೆಲ್ಲವನ್ನೂ ವಿಸ್ತಾರವಾಗಿ ಹೇಳಲಾಗಿ (ದೊರೆಯು) ಕೇಳಿ, ೬೬. ಮಹಾರಾಜನು ಹೆಚ್ಚಾದ ಭೀತಿಗೊಂಡು ಆ ಭಕ್ತನಿದ್ದಲ್ಲಿಗೆ ನಡೆದು ಬಂದು ಅವನ ಪಾದಕಮಲಗಳಿಗೆ ಮೈಯನ್ನು ಚಾಚಿ, ನಮಸ್ಕರಿಸಿ, ದೇವನೇ, ಮದೋನ್ಮತ್ತವಾದ ನನ್ನ ಆನೆಯಿಂದ ಮಾಡಲ್ಪಟ್ಟ ತಪ್ಪು, ನನ್ನ ತಪ್ಪು ; ಇದನ್ನು ನೀನು ದಯದೋರಿ ಕ್ಷಮಿಸು, ಎಂದು ದೈನ್ಯದಿಂದ ತಗ್ಗಿದ ಮುಖವುಳ್ಳವನಾಗಿ ಪುನಃ ನಮಸ್ಕರಿಸಿದನು. ೬೭. ಶ್ರೇಷ್ಠ ಬಲಶಾಲಿಯಾದ ಬೊಮ್ಮಯ್ಯನು ನಮಸ್ಕರಿಸಿದ ರಾಜಪುತ್ರನ ಹಣೆಯನ್ನು ಹಿಡಿದು ಎತ್ತುತ್ತ ಆಶೀರ್ವಾದ ಮಾಡಿ ಸತ್ತ ಆನೆಯನ್ನು ಎಚ್ಚರಗೊಳಿಸಿ ಅದಕ್ಕೆ ಪ್ರಾಣವನ್ನು ಕೊಟ್ಟು

ಕವಿಗಳ್ ವಿಬುಧಭೂರ್ಭುಜ
ರವಿಕಲಮತಿ ಸುಜನರೆಯ್ದೆ ಚಿತ್ರಮಿದೆಂದು
ತ್ಸವಮಾಂತು ಪೊಗಳೆ ಮಹಿಮಾ
ರ್ಣವನಿಂತೆಸಗಿರ್ದನರಸ ಕೇಳದಱಿಂದಂ ೬೮

ಮಱೆವುಗೆ ಕಾವರಿದಿರ್ಚಿದೊ
ಡಿಱಿವರ್ಪದಕೆಱಗೆ ಭವಮನಳಿವರ್ಬಿಡದೆ
ಚ್ಚಱಿಕೆಯೊಳೊಂದಿ ಭಜಿಸೆ ಮಾಳ್ಪ
ರ್ತಱಿಸಂದಪವರ್ಗಸುಖಮನೀಶ್ವರಭಕ್ತರ್ ೬೯

ಧರಣಿಪಕೇಳನಾದಿಪುರುಷಂ ಕಲಿಕಾಲ ಕಪರ್ದಿ ಸಾಹಸಾ
ಭರಣನಯೋನಿಜಂ ಮನುಜನಲ್ಲ ವಿಚಾರಿಸೆ ಮಾಚಿದೇವನಾ
ವರಗುಣಶೀಲನಂಘ್ರಿಯನೊಱಲ್ದು ಶರಣ್ಬುಗು ಭೂಪ ನಿನ್ನನು
ದ್ಧರಿಸುವನೀವನೀಹಿತಮನಲ್ಲದೊಡಪ್ಪುದು ಕಾರ್ಯವಿಪ್ಲವಂ ೭೦

ವ|| ಎಂದ ವೃಷೇಂದ್ರನ ಸತ್ಯಾಲಾಪಮಂ ಬಿಜ್ಜಳನಾಕರ್ಣಿಸಿ—

ಕೃಪೆದೋರಿ ಪ್ರಕಾಶಿಸಿದನು. ೬೮–೬೯. - ಕವಿಗಳು, ವಿದ್ವಾಂಸರು, ರಾಜರು, ವಿಕಾರರಹಿತ ಬುದ್ಧಿಯ ಸತ್ಪುರುಷರು ಇದು ವಿಚಿತ್ರವೆಂದು ಚೆನ್ನಾಗಿ ಉತ್ಸಾಹಗೊಂಡವರಾಗಿ ಹೊಗಳಿ, ಆ ಮಹಿಮೆಗಳಿಗೆ ಸಮುದ್ರದೋಪಾದಿಯಲ್ಲಿರುವ ಬೊಮ್ಮದೇವನು ಹೀಗೆ ಶೋಭಿಸುತ್ತಿದ್ದನು. ಬಿಜ್ಜಳ ಮಹಾರಾಜನೇ ಕೇಳು, ಆದ ಕಾರಣದಿಂದ ಶಿವಭಕ್ತರು ಮರೆಹೊಕ್ಕವರನ್ನು ರಕ್ಷಿಸುವರು ; ಇದಿರಿಸಿದರೆ ಕೊಲ್ಲುವರು ; ಪಾದಕ್ಕೆ ನಮಸ್ಕರಿಸಿದರೆ (ಅವರ) ಜನನ ಮರಣರೂಪದ ಭವವನ್ನೇ ಹೋಗಲಾಡಿಸುವರು ; ತಪ್ಪದೆ ಎಚ್ಚರಗೊಂಡು ಸೇವಿಸಿದರೆ ನಿಜವಾಗಿ ಅವರಿಗೆ ಮೋಕ್ಷ ಸುಖವನ್ನು ಮಾಡುವರು. ೭೦. ಬಿಜ್ಜಳ ಮಹಾರಾಜನೇ ಕೇಳು. ಆ ಮಡಿವಳ ಮಾಚಿದೇವನು ಸಕಲಕ್ಕೂ ಆದಿಪುರುಷನು ; ಕಲಿಯುಗದ ಈಶ್ವರನು ; ಸಾಹಸವೇ ಆಭರಣವಾಗಿ ಉಳ್ಳವನು ; ಅಯೋನಿಜನು ; ವಿಚಾರಿಸಿ ನೋಡಿದರೆ (ಅವನು) ಮನುಷ್ಯನಲ್ಲ ; ಮಹಾರಾಜ, ಆ ಶ್ರೇಷ್ಠವಾದ ಗುಣಗಳೇ ಶೀಲವಾಗಿ ಉಳ್ಳ ಮಾಚಿದೇವನ ಪಾದಗಳನ್ನು ಪ್ರೀತಿಯಿಂದ ಶರಣುಹೋಗು ; ನಿನ್ನನ್ನು ಉದ್ಧರಿಸುವನು ; ಇಷ್ಟಾರ್ಥಗಳನ್ನು ಕೊಡುವನು. ಇಲ್ಲವಾದರೆ ಕಾರ್ಯ ಹಾನಿಯುಂಟಾಗುವುದು. ವ|| ಹೀಗೆ ಹೇಳಿದ ಬಸವೇಶ್ವರನ ಸತ್ಯವಾದ ಮಾತುಗಳನ್ನು ಬಿಜ್ಜಳನು ಕೇಳಿ

ನರನಾದೊಡೆ ಮಾಚಯ್ಯಂ
ಗಿರಿನಿಭಕರಿಯಂ ಕರಾಗ್ರದಿಂ ಕೊಲ್ವನೆ ತಾಂ
ಹರರೂಪನಕ್ಕುಮೀ ಬಸ
ವರಸನ ನುಡಿ ನನ್ನಿಯೆಂದು ನಂಬಿದನರಸಂ ೭೧

ವ॥ ಆಗಳಿಂತು ವಿಚಾರಿಸಿ ನಂಬುಗೆವೆತ್ತು ನಾಣಲಿತನಂ ಮಿಕ್ಕು ಮಂತ್ರಿಮಂಡಲಿಕ ದಂಡನಾಥರೊಡನೇಳ್ತರೆ ನಡೆತಂದು ಮಾಚಿದೇವನಿದಿರೊಳವನಿವಿ[1]ನಿಹಿ[1]ತೋತ್ತಮಾಂಗನಾಗಿ ಪೊಡವಟ್ಟಿರೆ ಬಸವರಸನಾ ವೀರಾವತಾರನಡಿ[2]ದಾವರೆ[3]ಗೆಱಗಿ ಕರಾಂಜಲಿಗೆಯ್ದು ಭಯಭಕ್ತಿನೆರಸಿ ಕೀರ್ತಿಸಿ ದೇವ ಬಿನ್ನಪ[3]ಮೆಂದಿ[3]ಂತೆಂದಂ—

ಜಡಮತಿ ಮುನ್ನಮಾಂ ಜಡಿದು ಬೇಡೆನೆ ಕೇಳದೆ ತನ್ನ ದಂತಿಯಂ
ಬಿಡದವಿಚಾರದಿಂ ಕಳುಪಿ ನೀಗಿದ ಬನ್ನದೆ ಲಜ್ಜೆಗೆಟ್ಟು ನಿ
ಮ್ಮಡಿಯೆಡೆಗೆಯ್ದಲಳ್ಕುತಭಯಂ ಬಡೆಯಲ್ಕಪರಾಧಿಯತ್ತ ಸೈ
ಗೆಡೆದೆಱಗಿರ್ದಪಂ ನಿಮಗೆ ಬಿಜ್ಜಳನುಜ್ಜ್ವಳ ಶೌರ್ಯಭೂಷಣಂ ೭೨

ಎಣಿಪೊಡಜಾಂಡ ಮಂಡಲದೊಳೀಶ್ವರಸನ್ನಿಭ ನಿಮ್ಮೊಳಾರ್ಪಿನಿಂ
ಸೆಣಸಿ ಬದುಂಕಲಾರ್ಪ ಕಲಿಯಾವನಜೇಯ ಪರಾಕ್ರಮೈಕಭೂ

೭೧. ಮಾಚಯ್ಯನು ಮನುಷ್ಯನೇ ಆಗಿದ್ದರೆ ಪರ್ವತೋಪಮವಾದ ಆನೆಯನ್ನು ಕೊಲ್ಲುವನೇ ? (ಆದ್ದರಿಂದ) ಅವನು ಶಿವರೂಪನೇ ಅಹುದು ; ಈ ಬಸವರಾಜನ ಮಾತು ಸತ್ಯವಾದದ್ದು, ಎಂದು ಆತನನ್ನು ನಂಬಿದನು, ವ॥ ಈ ರೀತಿ ವಿಚಾರಿಸಿ ಆಗ ನಂಬುಗೆಗೊಂಡವನಾಗಿ ನಾಚಿಕೆಯನ್ನು ಬಿಟ್ಟು ಮಂತ್ರಿಗಳು, ಸಾಮಾಜಿಕರು ದಂಡನಾಯಕರು ತನ್ನೊಡನೆಯೇ ಬರುತ್ತಿರಲು ಮಾಚಿದೇವನ ಎದುರಿಗೆ ಬಂದು ಭೂಮಿಯಲ್ಲಿ ಇಡಲ್ಪಟ್ಟ ಶಿರಸ್ಸುಳ್ಳವನಾಗಿ ನಮಸ್ಕಾರ ಮಾಡುತ್ತಿರಲು ಬಸವಣ್ಣನು ಆ ವೀರಭದ್ರೇಶ್ವರನ ಅವತಾರಿಯಾದ ಮಾಚಯ್ಯನ ಪಾದಗಳಿಗೆ ನಮಸ್ಕಾರ ಮಾಡಿ ಕೈಮುಗಿದು ಭಯಭಕ್ತಿಯಿಂದ ಕೂಡಿ ಹೊಗಳುತ್ತ–'ದೇವ ನನ್ನ ವಿಜ್ಞಾಪನೆ ಈ ರೀತಿ ಎಂದನು : ೭೨. ಉಜ್ವಲವಾದ ಶೌರ್ಯವೇ ಭೂಷಣವಾಗಿ ಉಳ್ಳ ಮಾಚಯ್ಯ, ಮೂಢಬುದ್ಧಿಯ ಬಿಜ್ಜಳನು ಮೊದಲು ನಾನು ಭಯಪಡಿಸಿ ಬೇಡವೆಂದರೂ ಕೇಳದೆ ವಿಚಾರ ಹೀನನಾಗಿ ತಪ್ಪದೆ ತನ್ನ ಆನೆಯನ್ನು (ನಿನ್ನ ಮೇಲೆ) ಕಳಿಸಿ, ಹಾಳು ಮಾಡಿಕೊಂಡು, ಸಂಕಟದಿಂದ (ಈಗ) ಲಜ್ಜೆಗೆಟ್ಟು ನಿಮ್ಮ ಪಾದದತ್ತ ಬರಲು ಅಪರಾಧ ಮಾಡಿದವನಾಗಿ ಭಯದಿಂದ ಅಭಯಪಡೆಯಲು ನಿಮಗೆ ನಮಸ್ಕಾರ ಮಾಡಿದ್ದಾನೆ. ೭೩. ಪರಶಿವ ಸದೃಶನಾದವನೇ, ಅಜೇಯವಾದ ಪರಾಕ್ರಮವೇ ಭೂಷಣವಾಗಿ ಉಳ್ಳ ಮಾಚಿದೇವನೇ, ವಿಚಾರ ಮಾಡಿ ನೋಡಿದರೆ ಬ್ರಹ್ಮಾಂಡವಲಯದಲ್ಲಿ ನಿಮ್ಮೊಡನೆ ಶೌರ್ಯದಿಂದ ಯುದ್ಧಮಾಡಿ, ಬದುಕುವುದಕ್ಕೆ ಶಕ್ತನಾಗುವ ಸಾಮರ್ಥ್ಯ

---

1 ನೀ(ಚ) 2 × (ಮ) 3 ದಿನಿಂ(ಚ), ಮಿ(ಅ, ಮ, ಗ, ಜ)

ಷಣ ನಿಮಗೀ ನೃಪಂ ತೃಣಕಣೋಪಮವೀತನೊಳೇಕೆ ಸಾಹಸೋ
ಲ್ಬಣದ ಬೆಡಂಗು ವಿಪ್ಪಿಕಳಿಕೆ ಪಾಶುಪತಾಸ್ತ್ರಮದೇಕೆ ಲೋಕದೊಳ್ ೭೩

ಪ್ರಣುತಗುಣಭರಣ ಭಯದಿಂ
ಪ್ರಣಾಮಮೆಸಗಿರ್ದ ಭೂಪನಪರಾಧಮನಿಂ
ದಣೆಯುರಮಭಿನವ ಭಾಳೇ
ಕ್ಷಣ ಸೈರಿಸಿ ಕರುಣಿಸೆಂದು ಮುಗುಳ್ದೆಜಗಿರ್ದಂ ೭೪

ಬಸವಾಧೀಶ ಪ್ರಗಲ್ಭಾಮಳ ವಿನಯುನಯಲಾಪ ಚಂದ್ರಾತಪಂ ಮಾಂ
ಜಿಸಿ ತಚ್ಚೇತಸ್ಫುರತ್ಸೂರ್ಯಮಣಿಜನಿತ ಕೋಪಾಗ್ನಿಯಂ ಶಾಂತಿವೆತ್ತಾ
ರಸೆಯಾಣ್ಮಂಗಿತ್ತು ತಾನೊಲ್ದಭಯಮನಳಿದಿರ್ದಾನೆಯಂಗಂಗಳಂ ಬಂ
ಧಿಸಿ ರಕ್ಷಾರೇಣುವಂ ಮೇಣ್ ತಳಿದಸುಗೊಳಿಸುತ್ತಿರ್ದಂ ಮಾಚಿದೇವಂ ೭೫

ಅನಿತಱೊಳಲ್ಲಿ ಪೂರ್ವ ದಿನದಲ್ಲಿಱಿದಾಗಸವಟ್ಟಿಗಿಟ್ಟ ಪೆಂ
ಪಿನ ಪೆಣನದ್ಭುತಂ ಮಸಗೆ ನೋಳ್ಪ ಜನಾವಳಿ ಭೀತಿವಟ್ಟು ಜ
ಲ್ಲನೆ ಕೆದರ್ದೋಡೆ ಭೋಂಕನಿಳೆಯೊಳ್ ಪಡಲಿಟ್ಟುದು ತಾನದಕ್ಕೆ ಜೀ
ವನಮನಮರ್ಚಿ ಮಾಚವಿಭು ಭಕ್ತಮಹೋತ್ಸವಮಂ ನೆಗಳ್ಚಿದಂ ೭೬

ವುಳ್ಳ ಶೂರನು ಯಾವನಿದ್ದಾನೆ ? ನಿಮಗೆ ಈ ಅರಸನು ಹುಲ್ಲಿನ ಕಣಕ್ಕೆ ಸಮಾನನು. ಈತನೊಡನೆ ಅಧಿಕ ಸಾಹಸದ ಕೌಶಲವಾದರೂ ಏಕೆ ? ಲೋಕದಲ್ಲಿ ಕೋಳಿಯ ಮೇಲೆ ಪಾಶುಪತಾಸ್ತ್ರವಾದರೂ ಏಕೆ ಬೇಕು ? ೭೪. ಶ್ಲಾಘ್ಯವಾದ ಗುಣಗಳೇ ಆಭರಣವಾಗಿ ಉಳ್ಳವನೇ, ಅಭಿನವ ಈಶ್ವರನೇ, ಭಯದಿಂದ ನಮಸ್ಕಾರ ಮಾಡಿರುವ ಈ ರಾಜನ ಅಪರಾಧವನ್ನು ಕ್ಷಮಿಸಿ, ಕರುಣೆ ತೋರಿಸು ಎಂದು ಪುನಃ ನಮಸ್ಕರಿಸಿದನು. ೭೫. ಬಸವೇಶ್ವರನ ಪ್ರೌಢವೂ, ನಿರ್ಮಲವೂ, ನಮ್ರತೆಯಿಂದ ಕೂಡಿದವೂ ಆದ ನೀತಿಯ ಮಾತುಗಳೆಂಬ ಬೆಳದಿಂಗಳು ಆ ಮಾಚಿದೇವನ ಮನಸ್ಸೆಂಬ ಪ್ರಕಾಶಿಸುವ ಸೂರ್ಯಕಾಂತ ಶಿಲೆಯಿಂದ ಹುಟ್ಟಿದ ಕೋಪವೆಂಬ ಅಗ್ನಿಯನ್ನು ಶಾಂತಪಡಿಸಲು ಮಾಚಿದೇವನು ತಾನು ಶಾಂತಿಯಿಂದ ಕೂಡಿದವನಾಗಿ, ಆ ದೊರೆಗೆ ಅಭಯ ಪ್ರದಾನ ಮಾಡಿ, ಸತ್ತು ಬಿದ್ದಿದ್ದ ಆನೆಯ (ಬೇರೆ ಬೇರೆಯಾಗಿದ್ದ) ಅಂಗಾಂಗಗಳನ್ನು ಜೋಡಿಸಿ ಅದರ ಮೇಲೆ ಭಸ್ಮದ ಧೂಳನ್ನು ಚಿಮುಕಿಸಲು ಅದಕ್ಕೆ ಪ್ರಾಣವನ್ನು ಬರಿಸಿ ಉದ್ಧರಿಸಿದನು. ೭೬. ಅಷ್ಟರಲ್ಲಿ ಅಲ್ಲಿ ಹಿಂದಿನ ದಿನ ಇರಿದುಕೊಂಡು ಆಕಾಶಮಾರ್ಗಕ್ಕೆ ಬಿಸಾಡಿದ್ದ ಘನವಾದ ಹೆಣವು ಅದ್ಭುತವು ಹೆಚ್ಚಾಗುವಂತೆ, ನೋಡುವ ಜನಗಳು ಭೀತಿಗೊಂಡು ಝಲ್ಲನೆ ಚಲ್ಲಾಪಿಲ್ಲಿಯಾಗಿ ಕೆದರಿಕೊಂಡು ಓಡುತ್ತಿರಲು, ಬೇಗನೆ ಭೂಮಿಯ ಮೇಲೆ

ಇದು ಚಂದ್ರಾತಪದೊಟ್ಟಿಲೋ ಗಗನಗಂಗಾಜಾತಶುಭ್ರಾಂಬುಜಾ
ತದ[1] ಸಂಜಾತವೊ ಶಾರದಾಂಬುದದ ಪಿಂಡೋ ನೋಳ್ಪೊಡೆಂದೆಂಬ ಸಂ
ಪದಕೀಬಾಗಿ ನಭೋಂತದೊಳ್ಮಿಸುಪ ವಾಸೋಭಾರಮಂ ಬೆನ್ನೊಳಿಂ
ತುದಿತೋತ್ಸಾಹದಿನೆಂದಿನಂತೆ ಪದೆದೇಳ್ತಂದಂ ಗಣಾಗ್ರೇಸರಂ ೭೭

ವ॥ ಅಂತೇಳ್ತಂದು ತನ್ನಡಿದಾವರೆಯನೋಲಗಿಸಿ ಬಂದ ವೃಷೇಂದ್ರನಂ ಬೀಳ್ಕೊಟ್ಟಾ ಮಾಚಿದೇವಂ ನಿಜಮಂದಿರಂಬೊಕ್ಕು ಶರಣಸಪರ್ಯೆಯಿಂ ಸುಖಮಿರ್ದನಾ ಬಿಜ್ಜಳಂ ಮಾಚಿದೇವನ ಮಹಿಮೋನ್ನತಿಗೆ ವಿಸ್ಮಿತನಾಗಿ ನಿಜಮಂತ್ರಿಮಂಡಲಿಕರೊಳ್ಪೊಗಳುತ್ತುಂ ಬಂದು ನಿಜಾಲಯಮಂ ಪೊಕ್ಕಿರ್ದನಾ ಪ್ರಸ್ತಾವದೊಳ್—

ಬಗೆದಂದಾ ಮಾಚಿದೇವಂ ನೆಗಳ್ದ ಘನತರಾಶ್ಚರ್ಯಮಂ ಭಾವಿಸುತ್ತುಂ
ಪೊಗಳುತ್ತುಂ ಭಕ್ತಸಂದೋಹದೊಳವನಳವಂ ಬಂದು ಶುದ್ಧಾಂತಮಂ ತಾಂ
ಪುಗುತಂದೋರಂತೆ ನಾನಾರ್ಥಮನಮಿತ ಚರಶ್ರೇಣಿಗೊಲ್ದೀವುತುಂ ಕೆ
ಯ್ಮಿಗೆ ಕೂರ್ತಾರಾಧಿಸುತ್ತುಂ ಮೆಱೆದನತಳ ಕಲ್ಯಾಣ ಕಲ್ಪಕ್ಷಮಾಜಂ ೭೮

ಪರಮಗುರು ಮಾಚಿದೇವನ
ಚರಿತ್ರಮಂ ಕೇಳೆ ಪೇಳೆ ಬಿತ್ತರಿಸೆ ಸುಖೋ
ತ್ತರ ಪರಿಣತೆ ದೊರೆಕೊಳ್ಗುಂ
ಧರಿತ್ರಿಯೊಳ್ ಸುಜನವಿತತಿಗಭವನ ಕೃಪೆಯಿಂ ೭೯

ಬಿದ್ದಿತು. ಆ ಮಾಚಿದೇವನು ಆ ಹೆಣಕ್ಕೆ ಪ್ರಾಣವನ್ನು ಬರಿಸಿ ಕೊಡಿಸಿ, ಭಕ್ತ ಸಮೂಹಕ್ಕೆ ಅತ್ಯಂತ ಹರ್ಷವುಂಟಾಗುವಂತೆ ಮಾಡಿದನು. ೭೭. ಶಿವಗಣದಲ್ಲಿ ಶ್ರೇಷ್ಠನಾದ ಮಾಚಿದೇವನು—ಇದು ನೋಡುವುದಕ್ಕೆ ಬೆಳದಿಂಗಳ ರಾಶಿಯೋ ! ಆಕಾಶ ಗಂಗೆ ಹುಟ್ಟಿದ ಬೆಳ್ದಾವರೆಗಳ ಸಮೂಹವೋ ! ಶರತ್ಕಾಲದ ಮೋಡಗಳ ಹಿಂಡೋ ! ಎಂದೆನ್ನುವ ಸಂಶಯಕ್ಕೆ ಕಾರಣವಾಗುವಂತೆ ಅಂತರಿಕ್ಷ ಮಧ್ಯದಲ್ಲಿ ಪ್ರಕಾಶಿಸುತ್ತಿದ್ದ ಬಟ್ಟೆಯ ಹೊರೆಯನ್ನು ಬೆನ್ನಿನ ಮೇಲೆ ಧರಿಸಿ ಎಂದಿನ ಹಾಗೆ ಅಧಿಕವಾದ ಉತ್ಸಾಹ ದಿಂದ ಸಂತೋಷಗೊಂಡು ಬಂದನು. ೭೮. ಪರಮ ಗುರುವಾದ ಮಾಚಿದೇವನ ಚರಿತ್ರೆಯನ್ನು ಭೂಮಿಯಲ್ಲಿ ಕೇಳಿದರೆ, ಹೇಳಿದರೆ, ವಿಸ್ತಾರಪಡಿಸಿದರೆ (ಪ್ರಚಾರ ಗೊಳಿಸಿದರೆ) (ಅಂಥ) ಸಜ್ಜನರ ಸಮೂಹಕ್ಕೆ ಪರಮಾತ್ಮನ ಕೃಪೆಯಿಂದ ಅಧಿಕವಾದ ಸೌಖ್ಯ ಪ್ರಾಪ್ತಿಯಾಗುವುದು. ೭೯. ವಿಷ್ಣು, ಬ್ರಹ್ಮ ಇವರೇ ಮೊದಲಾದ ದೇವ ಶ್ರೇಷ್ಠರಿಂದ ಚೆನ್ನಾಗಿ ಸೇವಿಸಲ್ಪಡುವ ಚರಣವುಳ್ಳವಳೇ, ದೇವತೆಗಳ ವೈರಿಗಳಾದ ರಾಕ್ಷಸರನ್ನು ನಾಶಪಡಿಸಲು ಪ್ರಸಿದ್ಧವಾದ, ಸಮರ್ಥವಾದ, ತೀಕ್ಷ್ಣವಾದ ಆಯುಧ

1 ಜ(ಅ)

ಮುರಾರಾತಿ ಬ್ರಹ್ಮಾದ್ಯಮರವರಸಂಸೇವಿತಪದೇ
ಸುರಾರಾತಿಧ್ವಂಸಸ್ಫುಟಪಟುಕಠೋರಾಯುಧಧರೇ
ವರಾರಾತಿಸ್ವಚ್ಛಸ್ಮಿತಮತಿಹೃದಂಭೋಜನಿಲಯೇ
ಪುರಾರಾತಿಪ್ರೇಮಾಸ್ಪದೆ ನಗತನೂಜೇ ಜಯ ಜಯಾ ೨೦

ಇದು ವಿನಮದಖಿಳ ಸುರಾಸುರೇಂದ್ರಮುಕುಟತಟಘಟಿತ ಮಣಿಗಣಾಗಣಿತ ರುಚಿನಿಚಯ
ತರುಣಾರುಣಾತಪಪರಿಲಸಿತ ಪರಮ ಶಿವಲಿಂಗ ಪಾದಾರವಿಂದಪರಾಗಭಸಿತ
ಭಾಸುರಲಲಾಟಪಟ್ಟಸರಸಜನಮಾನಿತೋಭಯಕವಿತಾವಿಶಾರದ
ಶ್ರೀಷಡಕ್ಷರಿದೇವಭಕ್ತಿವಿರಚಿತ

ಶ್ರೀಮದ್ ಬಸವರಾಜವಿಜಯಮಹಾಪುರಾಣದೊಳ್ ಮಡಿವಳಮಾಚಿದೇವಮಹಿಮಾಕಥನಂ
ದ್ವಾದಶಾಶ್ವಾಸಂ ಸಮಾಪ್ತಂ

ಅಂತು ಆಶ್ವಾಸ ೧೨ಕ್ಕೆ ಪದಗಣನೆ ೧೦೭೮ಕ್ಕೆ ಮಂಗಳಮಹಾ ಶ್ರೀ॥

ಗಳನ್ನು ಧರಿಸಿದವಳೇ, ಶ್ರೇಷ್ಠವಾದ ಆಯುಧದಂಚಿನೋಪಾದಿಯಲ್ಲಿ [(ಅರ ?) (ಅಥವಾ ಕಮಲದೋಪಾದಿಯಲ್ಲಿ (?)] ಸ್ವಚ್ಛವಾದ ಅರಳುವ ಬುದ್ಧಿಯುಳ್ಳವಳೇ, ಭಕ್ತರಾದವರ ಹೃದಯವೆಂಬ ಕಮಲವೇ ಮನೆಯಾಗಿ ಉಳ್ಳವಳೇ, ಈಶ್ವರನ ಅನುರಾಗಕ್ಕೆ ಆಶ್ರಯಳಾದವಳೇ, ಪರ್ವತರಾಜ ಪುತ್ರಿಯೇ ಜಯಜಯ.

ಹನ್ನೆರಡನೆಯ ಆಶ್ವಾಸವು ಸಮಾಪ್ತವಾಯಿತು

ತ್ರಯೋದಶಾಶ್ವಾಸಂ

(ಮಾಚಯ್ಯ ಬಸವೇಶ್ವರರ ಸಂವಾದಕಥನಂ)

ಶ್ರೀಮದಗರಾಜತನುಜಾ
ವಾಮಾಂಗಂ ವಾಮದೇವನುತನತನುಹರಂ
ಭೀಮನಭಿರಾಮಸೋಮಕ
ಳಾಮಕುಟಂ ಮಾಳ್ಕೆ ಸೌಖ್ಯಮಂ ಶಿವಲಿಂಗಂ ೧

ಗುರುರೂಪಂ ಕರುಣಾಬ್ಧಿ ಮಾಚವಿಭುವಿಂತೊಪ್ಪುತ್ತುಮಿರ್ದೊಂದು ವಾ
ಸರದೊಳ್ಭಕ್ತನದೊರ್ವನೋದೆ ಬಸವಾಗಾರಾಗತಂ ಬೇಡುವೀ
ಶ್ವರಭಕ್ತವ್ರಜಮಿಲ್ಲದಿಂತು ಬಡವಾದೆಂ ಮಾಣದಾನೆಂಬ ನಿ
ಷ್ಠುರ ತದ್ಗೀತಮನಾಲಿಸುತ್ತೆ ಮುಳಿಸಂ ತಾಳ್ದಾತ್ಮಕರ್ಣಂಗಳಂ ೨

ಕರತಳದಿನೊತ್ತಿಕೊಳುತಂ
ಹರಹರ ದುರ್ವಚನಮಿದನದೇಂ ಕೇಳ್ವರೆ ಶಂ
ಕರಶರಣರೆಮ್ಮ ಮುಂದಿದ
ನೊರೆಯದಿರೆಂದೆಯ್ದೆ ಜಡಿದು ಮಗುಳ್ದಿಂತೆಂದಂ ೩

ಮಾಚಿದೇವ–ಬಸವೇಶ್ವರ ಸಂವಾದ

೧. ಮಂಗಳಕರಳಾದ ಪರ್ವತರಾಜ ಪುತ್ರಿಯೇ ಎಡಮೆಯ್ಯೊಳುಳ್ಳವನೂ, ವಾಮದೇವನೆಂಬ ಋಷಿಯಿಂದ ನುತಿಸಲ್ಪಡುವವನೂ (ಅಥವಾ ವಾಮ ಅಂದರೆ ಸುಂದರವಾದ ದೇವತೆಗಳಿಂದ ನುತಿಸಲ್ಪಡುವವನೂ) ತನುರಹಿತನಾದ ಮನ್ಮಥನನ್ನು ಹರಣ ಮಾಡಿದವನೂ, ಭಯಂಕರನೂ ಮನೋಹರನಾದ ಚಂದ್ರಕಳೆಯನ್ನು ಮಕುಟದಲ್ಲಿ ಉಳ್ಳವನೂ ಆದ ಶಿವಲಿಂಗನು (ನಮಗೆ) ಸೌಖ್ಯವನ್ನುಂಟುಮಾಡಲಿ. ೨–೩. ಗುರುರೂಪನೂ, ದಯಾರಸಕ್ಕೆ ಸಮುದ್ರದೋಪಾದಿಯುಲ್ಲಿರುವವನೂ ಆದ ಮಾಚಿದೇವನು ಈ ರೀತಿ ಶೋಭಿಸುತ್ತಿರಲು, ಒಂದು ದಿನ ಬಸವೇಶ್ವರನ ಮನೆಯಿಂದ ಬಂದ ಒಬ್ಬ ಭಕ್ತನು "ಬೇಡುವ ಶಿವಭಕ್ತ ಸಮೂಹವಿಲ್ಲದೆ ತಪ್ಪದೆ ನಾ ನಿಂತು ಬಡ ವಾದೆನು" ಎಂಬ ನಿಷ್ಠುರದ ಬಸವಣ್ಣನಾಡಿದ ಗೀತ (ವಚನ) ವನ್ನು ಓದಲಾಗಿ, ಮಾಚಿದೇವನು ಕೇಳಿ, ಕೋಪಗೊಂಡು ತನ್ನ ಕಿವಿಗಳನ್ನು ಕೈಗಳಿಂದ ಮುಚ್ಚಿಕೊಳ್ಳುತ್ತ 'ಹರಹರ! ಈ ಕೆಟ್ಟ ಮಾತನ್ನು ಶಂಕರನ ಭಕ್ತರು (ಶರಣರು) ಕೇಳಬೇಕೇ? ನಮ್ಮ ಮುಂದೆ ಈ ಮಾತನ್ನು ಹೇಳಬೇಡ ಎಂದು ಚೆನ್ನಾಗಿ ಗದರಿಸಿ ಪುನಃ ಹೀಗೆ ಹೇಳಿದನು:

ಏನೆಂಬೆನಿದಂ ಶರಣ
ದೀರ್ನರ್ಗಡ ಬೇಳ್ಪ ವಸ್ತುವಂ ಕುಡುವ ಮಹಾ
ದಾನಿ ಗಡ ಬಸವನಮಮ ಮ
ಹೀನುತ ಸದ್ಭಕ್ತಿಭಾವಮಿಂತಿರವೇಡಾ ೪

ಮಱೆದನೆ ತನ್ನಯ ಭಾಷೆಯ
ತೆಱನಂ ಕಡು ಚಾಗಿಯೆಂಬ ಬಿಂಕಂ ಮನದೊ
ಳ್ಗಱಿಗಟ್ಟುತೆ ಭಕ್ತಿರಸಂ
ಬಱಿತುದೆ ಬಸವಂ ವಿವೇಕಮಂ ನೀಗಿದನೇ ೫

ಆತನ ಗೀತಮನಾತನ
ಮಾತಂ ಸಲೆ ಮಾಣ್ಬುದೆನ್ನೊ[1]ಳೆಂದುಸುರ್ದು ಕರಂ
ಖಾತಿ ಮಿಗೆ ತಳರ್ದನಾ ವಿ
ಖ್ಯಾತಂ ನಿಜ ಕಾಯಕಕ್ಕೆ ಮಾಚಯ್ಯದೇವಂ ೬

ಬಸವೇಶಂ ಮಾಚಿದೇವಂ ಮುಳಿದ ಬಗೆಯನಾಕರ್ಣಿಸುತ್ತುಂ ಮಹಾ ಸಾ
ಧ್ವಸದಿಂ ಮುಂಗೆಟ್ಟು ಚಿತ್ತಂ ಕದಡೆ ನಡುಗಿ ತನ್ಮಾರ್ಗಮಂ ಪತ್ತಿ ಸದ್ಭ
ಕ್ತಸಹಾಯಂ ನಿಂದು ನಿಂದೊಲ್ದಡಿಗಡಿಗಿಳೆಯೊಳ್ಕುಂಬಿಡುತ್ತೆಯ್ದಿ ತತ್ಪಾ
ದಸರೋಜಂಗಂಡು ತಾಂ ಸೈಗೆಡೆದು ಪೊಗಳ್ದು ಕಾರ್ಪಣ್ಯಮಂ ಬೀಱುತಾಗಳ್ ೭

೪. ಈ ಮಾತನ್ನು ಏನೆಂದು ಹೇಳಲಿ ! ಶರಣರು ಬಡವರೇ ? ಬಸವಣ್ಣನು (ಶರಣರು) ಬೇಡುವ ವಸ್ತುವನ್ನು ಕೊಡುವ ಮಹಾದಾನಿಯಂತೆ ! ಅಬ್ಬಬ್ಬಾ !! ಭೂಮಿಯ ಜನರಿಂದ ಶ್ಲಾಘ್ಯವಾದ ಭಕ್ತಿ ಸ್ಥಿತಿಯು ಹೀಗಿರಬೇಕೆ ? ೫. ಬಸವಣ್ಣನು ತಾನು ಮಾಡಿದ ಭಾಷೆಯ ರೀತಿಯನ್ನು ಮರೆತನೇ ? ಅತ್ಯಂತ ತ್ಯಾಗ ಗುಣವುಳ್ಳವನು ಎಂಬ ಬಿಂಕವು ಅವನ ಮನದಲ್ಲಿ ವೃದ್ಧಿಗೊಂಡಿತೇ ? ಅವನ ಭಕ್ತಿರಸವು ಬತ್ತಿಹೋಯಿತೇ ? ಬಸವಣ್ಣನು ವಿವೇಕವನ್ನೇ ಕಳೆದುಕೊಂಡನೇ ? ೬. ಆ ಬಸವಣ್ಣನ ಗೀತವನ್ನೂ, ಅವನ ಮಾತನ್ನೂ, ನನ್ನೆದುರಿಗೆ ಹೇಳಬೇಡವೆಂದು ಆ ಭಕ್ತನಿಗೆ ತಿಳಿಸಿ, ಅತಿ ಹೆಚ್ಚಾದ ಕೋಪದಿಂದ ಆ ಪ್ರಖ್ಯಾತನಾದ ಮಾಚಿದೇವನು ತನ್ನ ಕಾಯಕಕ್ಕಾಗಿ ಹೊರಟು ಹೋದನು. ೭–೮. ಮಾಚಿದೇವನು ಸಿಟ್ಟಾದ ರೀತಿಯನ್ನು, ಸದ್ಭಕ್ತ, ಸಹಾಯನೆನಿಸಿದ ಬಸವಣ್ಣನು ಕೇಳಿ ಅತ್ಯಂತ ಭಯದಿಂದ ಮುಂದುಗೆಟ್ಟು (ಮುಂದೇನೆಂಬುದನ್ನು ತಿಳಿಯದೆ), ಚಿತ್ತವು ಕಲಕಿ, ನಡುಗಿದವನಾಗಿ ಆ ಮಾಚಿದೇವನು ಹೋಗುತ್ತಿದ್ದ ಮಾರ್ಗವನ್ನನುಸರಿಸಿ, ನಿಂತು ನಿಂತು ಪ್ರೀತಿಯಿಂದ ಹೆಜ್ಜೆ ಹೆಜ್ಜೆಗೆ ಭೂಮಿಯಲ್ಲಿ ನಮಸ್ಕಾರ ಮಾಡುತ್ತ, ಹೋಗಿ ಚೆನ್ನಾಗಿ ಅವನ ಪಾದಕಮಲಗಳನ್ನೂ ಕಂಡು ಅವನು ಅಡ್ಡಬಿದ್ದು

1 ನ್ನೊ (ದ, ಚ, ಗ, ಅ)

ಕೃತಪಾಪಂ ದುಷ್ಪ್ರಲಾಪಂ ಕುಟಿಲಮತಿಯುತಂ ಕ್ರೂರನತ್ಯಂತ ಚೋರಂ
ವ್ರತಶೂನ್ಯಂ ವ್ರಾತ್ಯಮಾನ್ಯಂ ವಿಕೃತಿಶತ ಸಮಾಶ್ಲಿಷ್ಟನೀಹಾಹಿದಷ್ಟಂ
ಧೃತಿದೂರಂ ಧೂರ್ತಸಾರಂ ಸಮದಕುಮತಿ ಮೃಗ್ಯಂ ಸದಾಮಂದಭಾಗ್ಯಂ
ತತಮೋಹಂ ತಾಮಸಾಹಂಕೃತಿಯುತನೆನಿಪೆನ್ನಿಂ ಪರಂ ದುಷ್ಟನಾವಂ ೮

ಅರಿಷಡ್ವರ್ಗದ ದೂಸಱಿಂ ಕೊರಗಿದೆಂ ತಾಪಾಗ್ನಿಯಿಂ ಕಂದಿದೆಂ
ಕರಮಾಶಾಗ್ರಹದಿಂದೆ ಕಟ್ಟುವಡೆದೆಂ ಕ್ಲೇಶೌಘದಿಂ ಕುಂದಿದೆಂ
ಪರಿಣದ್ಧೋರ್ಮಿ ಪಯೋಧಿಯೊಳ್ಮುಳುಗಿದೆಂ ಕೂರ್ತೆನ್ನನಿನ್ನಾದೊಡಂ
ಕರುಣಾಸಾಗರ ನೋಡಿ ರಕ್ಷಿಪುದಘಧ್ವಾಂತಪ್ರಭಾವಲ್ಲಭಾ ೯

ಕೊಳ್ಳಿಯೊಳೆ ತಂಪನಗ್ಗದ
ಮುಳ್ಳೊಳ್ ಮಾರ್ದವಮನೆಲವದೊಳ್ನವ ಫಲಮಂ
ಪೊಳ್ಳೊಳ್ಪುರುಳಂ ನೋಳ್ಪವೊ
ಲೊಳ್ಳಿತ್ತಂ ಮಾಣದೆನ್ನೊಳಱಸಿದೊಡುಂಟೇ ೧೦

ಹೊರಳಿ ಆಗ ದೈನ್ಯ ಭಾವವನ್ನು ಪ್ರಕಟಿಸುವವನಾಗಿ ಪಾಪಮಾಡಿದವನೂ, ವ್ಯರ್ಥವಾದ ಕೆಟ್ಟ ಮಾತುಗಳನ್ನಾಡಿದವನೂ, ವಕ್ರ ಬುದ್ಧಿಯಿಂದ ಕೂಡಿದವನೂ, ಕ್ರೂರನೂ, ಅತಿ ಚೋರನೂ, ವ್ರತಗೇಡಿಯೂ, ಸಂಸ್ಕಾರವಿಲ್ಲದವರಿಂದ ಸನ್ಮಾನಿಸಲ್ಪಡುವವನೂ, ನೂರಾರು ವಿಕಾರಗಳಿಂದ ಚೆನ್ನಾಗಿ ಸೇರಿರುವವನೂ, ಆಸೆಯೆಂಬ ಹಾವಿನಿಂದ ಕಚ್ಚಿಸಿಕೊಂಡವನೂ, ಧೈರ್ಯರಹಿತನೂ, ವಂಚಕರಲ್ಲಿ ಶ್ರೇಷ್ಠನೆನಿಸಿದವನೂ, ಗರ್ವದಿಂದಲೂ, ಕೆಟ್ಟಬುದ್ಧಿಯಿಂದಲೂ ಕೂಡಿದ ಜನರಿಂದ ಹುಡುಕುವುದಕ್ಕೆ ಯೋಗ್ಯನಾದವನೂ, ಸದಾ ಅಲ್ಪವಾದ ಐಶ್ವರ್ಯವುಳ್ಳವನೂ, ವಿಸ್ತಾರ (ಅಧಿಕ) ವಾದ ಮೋಹದಿಂದ ಕೂಡಿದವನೂ, ತಾಮಸವಾದ ಅಹಂಕಾರದಿಂದ ಕೂಡಿರುವವನೂ ಎಂದೆನಿಸಿದ ನನಗಿಂತಲೂ ಬೇರೆ ದುಷ್ಟನು ಇನ್ನಾವನಿದ್ದಾನೆ? ೯. ಕಾಮಕ್ರೋಧ ಲೋಭ ಮೋಹ ಮದ ಮಾತ್ಸರ್ಯಗಳೆಂಬ ಅರಿಷಡ್ವರ್ಗ ನಿಮಿತ್ತದಿಂದ ಕೃಶಗೊಂಡೆನು ; ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕಗಳೆಂಬ ತಾಪತ್ರಯದ ಬೆಂಕಿಯಿಂದ ಕಂದಿಹೋದೆನು ; ಚೆನ್ನಾಗಿ ಆಸೆಯೆಂಬ ಭೂತದಿಂದ ಹಿಡಿಯಲ್ಪಟ್ಟೆನು ; ಅವಿದ್ಯೆ, ಅಸ್ಮಿತೆ, ರಾಗ, ದ್ವೇಷ, ಅಭಿನಿವೇಶವೆಂಬ ಕ್ಲೇಶಗಳ ಸಮೂಹದಿಂದ ಬಡವಾದೆನು ; ವಿಸ್ತಾರಗಳಾದ ಕ್ಷುತ್, ಪಿಪಾಸೆ, ಶೋಕ, ಮೋಹ, ಜನನ, ಮರಣಗಳೆಂಬ ಷಡೂರ್ಮಿಯ ಸಮುದ್ರದಲ್ಲಿ ಮುಳುಗಿದೆನು ; ಕರುಣಾ ಸಮುದ್ರನೇ, ಇನ್ನಾದರೂ ನನ್ನಲ್ಲಿ ಪ್ರೀತಿದೋರಿ ರಕ್ಷಿಸು. ೧೦. ಉರಿಯುವ ಕೊಳ್ಳಿಯಲ್ಲಿ ತಂಪನ್ನೂ, ದೊಡ್ಡದಾದ ಮುಳ್ಳಿನಲ್ಲಿ ಮೃದುತ್ವವನ್ನೂ, ಎಲವದ ಮರದಲ್ಲಿ ನೂತನವಾದ (ಪಕ್ವವಾದ) ಹಣ್ಣನ್ನೂ, ಪೊಳ್ಳಿನಲ್ಲಿ ತಿರುಳನ್ನೂ ನೋಡುವ ಹಾಗೆ ನನ್ನಲ್ಲಿ ಒಳ್ಳೆಯದನ್ನೂ ಅರಸಿದರೆ (ಅಪೇಕ್ಷೆ ಮಾಡಿದರೆ) ಇರುವುದೇ ? (ತನ್ನ

ಅಱಿಯದೆ ನೆಗಳ್ದೀ ತಪ್ಪಂ
ಮಱೆವುದು ರಕ್ಷಿಪ್ಪುದೆನ್ನನೆಂದಂಘ್ರಿಯುಗ
ಕ್ಕೆಱಗಿದ ಬಸವನನೀಕ್ಷಿಸಿ
ಬಿಱುವಾತಿಂ ಜಱೆದು ಮಾಚಿದೇವಂ ನುಡಿದಂ ೧೧

ಎಲೆ ದುರ್ದಾಂತ ಮದಾಂಧ ಕೊರ್ಬಿದೆ ಗಡಾ ಸದ್ಭಕ್ತರೇಂ ದೀನರೇ
ನೆಲದೊಳ್ನೀನೆ ಧನಾಢ್ಯನೇ ಬಡತನಕ್ಕಿಂಬಾದೆಯೆಂತೆಂತು ಬೇ
ಳ್ಪ ಲಸದ್ಭಕ್ತವಿತಾನಮಿಲ್ಲದೆ ವಲಂ ನೀನರ್ಥಮಂ ಜಂಗಮಾ
ವಲಿಗೊಲ್ದೀಯದೊಡೀವರಾರಮಮ ನಣ್ಪಿಂದಂ ವದಾನ್ಯೋತ್ತಮಾ ೧೨

ಕುಡುವಾತಂ ಕಲಿದೇವನರ್ಥತತಿಯಂ ಕೊಂಬಾತನುಂ ತಾನೆ ಬೇ
ಳ್ಪೊಡೆಯರ್ಗಾನಿರದೀವನಲ್ತು ನಿಜದಿಂದೇಂಬೊಂದು ಸದ್ಭಾವಮಾ
ಮೃಡಭಕ್ತಂಗಿರವೇಳ್ಕುಮಲ್ಲದೊಡಹಂಕಾರಾನ್ವಿತಂ ಭಕ್ತಿ ನೋ
ಳ್ಪೊಡೆ ತಾಂ ರಾಜಸಮಿಶನೊಲ್ಮೆಗದು ದೂರಂ ಶುದ್ಧಮೆಂತಪ್ಪುದೈ ೧೩

ಅಹಂಕಾರವನ್ನು ಖಂಡನೆ ಮಾಡಿಕೊಂಡನೆಂದು ತಾತ್ಪರ್ಯ). ೧೧. ಅರಿಯದೆ ಮಾಡಿದ ನನ್ನ ಈ ತಪ್ಪನ್ನು ಮರೆಯುವುದು; ನನ್ನನ್ನು ರಕ್ಷಿಸಬೇಕು ಎಂದು ಎನ್ನುತ್ತ ಪಾದಗಳಿಗೆ ನಮಸ್ಕಾರ ಮಾಡಿದ ಬಸವಣ್ಣನನ್ನು ಮಾಚಿದೇವನು ನೋಡಿ, ಕಠಿಣವಾದ ಮಾತು ಗಳಿಂದ ಹೀಯಾಳಿಸಿ (ಹೀಗೆ) ಮಾತನಾಡಿದನು; ೧೨–೧೩. ಎಲೈ ದುಷ್ಟ ಸಂಯಮಿಯೇ, ಮದದಿಂದ ಕಣ್ಕಾಣದವನೇ, (ನೀನು) ಕೊಬ್ಬಿದೆಯಲ್ಲವೇ ? ಸದ್ಭಕ್ತರೆಂಬುವರು ಬಡವರೇನು ? ಈ ಭೂಮಿಯಲ್ಲಿ ನೀನೊಬ್ಬನೇ ಧನವಂತನೇ ? ಬೇಡುವ ಶ್ರೇಷ್ಠಭಕ್ತ ಸಮೂಹವು ಇಲ್ಲದೆ ಹೇಗೆ ಹೇಗೆ ಬಡವಾಗಿದ್ದೀಯೆ (ಹೇಳು) ? ನಿಶ್ಚಯ ! ನೀನು ದಾನಿಗಳಲ್ಲಿ ಶ್ರೇಷ್ಠನೇ ಹೌದು ! ನೀನು ಜಂಗಮ ಸಮುದಾಯಕ್ಕೆ ಪ್ರೀತಿಸಿ ದ್ರವ್ಯವನ್ನು ಕೊಡದಿದ್ದರೆ (ನಿನ್ನಂತೆ) ವಿಶ್ವಾಸದಿಂದ ಕೊಡುವವರು ಯಾರಿದ್ದರು ! ಅಮಮ !! ಸಂಪತ್ತಿನ ಸಮೂಹವನ್ನು ಕೊಡುವವನು ಕಲಿದೇವನು (ಪರಮೇಶ್ವರನು), ತೆಗೆದುಕೊಳ್ಳುವವನೂ ಆತನೇ ; ಬೇಡುವ ಒಡೆಯರಿಗೆ ನಾನು ನಿಜವಾಗಿ ತಪ್ಪದೆ ಕೊಡುವವನಲ್ಲ, ಎಂಬ ಒಂದು ಒಳ್ಳೆಯ ಭಾವನೆ ಆ ಮೃಡನ ಭಕ್ತನೆನಿಸಿದವನಿಗೆ ಇರಬೇಕು. ಅಲ್ಲದಿದ್ದರೆ ಭಕ್ತಿಯೆಂಬುದು ಅಹಂಕಾರದಿಂದ ಕೂಡಿದ್ದೆನಿಸುವುದು. ವಿಚಾರಿಸಿ ನೋಡಿದರೆ ಅಂಥ ಭಕ್ತಿಯು ರಜೋಗುಣ ಸಂಬಂಧವಾದದ್ದೆನಿಸುವುದು. ಇಂಥ ಭಕ್ತಿ ಈಶ್ವರನ ಒಲುಮೆಗೆ ದೂರವಾದದ್ದು. ಅಂಥ ಭಕ್ತಿ ಹೇಗೆ

ಸುರರತ್ನಂ ತಾನೆ ಕಾಲ್ಗರ್ಚುವ ಶಿಲೆ ಸುರಧೇನುವ್ರಜಂ ಗೋಕುಲಂ
ತತ್ಸುರಭೂಜಶ್ರೇಣಿ ಪಿತ್ತಿಲ್ಬನಮುರುಕನಕಕ್ಷ್ಮಾಧರಂ ಕೇಳಿಶೈಲಂ
ಸುರಪಂ ಭೃತ್ಯಂ ಧನೇಶಂ ನವನಿಧಿವಿಲಸತ್ಕೋಶಮಂ ಕಾವನಪ್ಪಂ
ತಿರೆ ಮಾಳ್ಪರ್ತಮ್ಮನೆಂದುಂ ಭಜಿಪ ಸುಜನಸಂತಾನಕೊಲ್ದೀಶಭಕ್ತರ್ ೧೪

ಶಿವಗಣಕೆ ನೀಂ ಕುಡುವ ದಂ
ತಿ ವಾಜಿ ವಸು ವಸನವಿಸರ ವನಿತಾಮಣಿಗಳ್
ವಿವರಿಪೊಡೇವಾಳ್ತಿ ಸರಿ
ದ್ಧವಂಗೆ ಮುಗಿಲೀವ ಪನಿಗಳಂತಿರೆ ಧರೆಯೊಳ್ ೧೫

ನಡೆ ನೋಡು[1] ಬಸವ ಶರಣರ
ಬಡತನಮಂ ತೋರ್ಪೆನೀಗಳೆಂದಾಕ್ಷಣದೊಳ್
ಮಡಿವಳ್ಳಮಾಚಯ್ಯಂ ತ
ನ್ನಡಿದಾವರೆಯಿಂದೆ ನೀರ್ಗಳಂ ಕೆದಱಲೊಡಂ ೧೬

ನವ ಜಲಕಣಗಣಮದು ಮಣಿ
ಪವಳಂ ಪೊಸ ಮುತ್ತು ಪುಷ್ಯರಾಗಂ ವಜ್ರಂ
ಪವಿಧರಮಣಿ ವೈಡೂರ್ಯಂ
ತವೆ ಗೋಮೇಧಿಕಮುದಾರ ಮರಕತರತ್ನಂ ೧೭

ಶುದ್ಧವೆಂದೆನಿಸೀತು ? ೧೪. ಈಶ್ವರನ ಭಕ್ತರು ತಮ್ಮನ್ನು ಭಜಿಸತಕ್ಕ ಸತ್ಪುರುಷ ಸಮೂಹಕ್ಕೆ ಒಲಿದು ಸದಾ ಚಿಂತಾರತ್ನವು ಕಾಲುತೊಳೆಯಲು (ಮನೆಯ ಮುಂದೆ ಹಾಕಿದ) ಕಲ್ಲಾಗುವಂತೆ, ಕಾಮಧೇನುಗಳ ಸಮೂಹವು ಹಸುಗಳ ಹಿಂಡಾಗುವಂತೆ, ಆ ಕಲ್ಪವೃಕ್ಷಗಳ ಸಮೂಹವು ಹಿತ್ತಿಲಿನಲ್ಲಿರುವ ವನವಾಗುವಂತೆ, ದೊಡ್ಡದಾದ ಮೇರು ಪರ್ವತವು ಕ್ರೀಡಾರ್ಥವಾಗಿ ಮಾಡಿಕೊಂಡ ಗುಡ್ಡವನ್ನಾಗಿ, ದೇವೇಂದ್ರನು ಸೇವಕನಾಗುವಂತೆ, ಕುಬೇರನು ಮಹಾಕರ್ಮ, ಪದ್ಮ, ಶಂಖ, ಮಕರ, ಕಚ್ಛಪ, ಮುಕುಂದ, ಕುಂದ, ನೀಲ, ವರಗಳೆಂಬ ಒಂಬತ್ತು ಪ್ರಕಾರದ ನಿಧಿಯಿಂದ ಪ್ರಕಾಶಿಸುವ ಬೊಕ್ಕಸ ವನ್ನು ಕಾಯುವವನನ್ನಾಗಿ ಇರುವ ಹಾಗೆ ಮಾಡುವರು. ೧೫–೧೬. ಭೂಮಿಯಲ್ಲಿ ಮೋಡವು ನದಿಗಳ ಪತಿಯಾದ ಸಮುದ್ರ ರಾಜನಿಗೆ ಕೊಡುವ ನೀರಿನ ಹನಿಗಳ ಹಾಗೆ ಶಿವಗಣ ಸಮೂಹಕ್ಕೆ ನೀನು ಕೊಡುವ ಆನೆ, ಕುದುರೆ, ದ್ರವ್ಯ, (ಏನು) ವಸ್ತ್ರಸಮೂಹ, ಸ್ತ್ರೀಯರು, ರತ್ನಗಳು ವಿವರಿಸುವುದಾದರೆ ಯಾವ ಲೆಕ್ಕ ? ೧೭. 'ಬಸವಣ್ಣ, ಶರಣರ ಬಡತನವನ್ನು ಈಗ ತೋರಿಸುವೆನು, ಚೆನ್ನಾಗಿ ನೋಡು' ಎಂದು ಆಕ್ಷಣ ದಲ್ಲಿಯೇ ಮಡಿವಾಳ ಮಾಚಯ್ಯನು ತನ್ನ ಪಾದಕಮಲಗಳಿಂದ ನೀರನ್ನು ಕೆದರಲಾಗಿ ಆ ಕೂಡಲೆ ಆ ನೂತನ ನೀರಿನ ಹನಿಗಳ ಸಮೂಹವು ಕೆಂಪು ರತ್ನ, ಹವಳ, ಹೊಸ

1 ಡ (ದ, ಮು)

ವ॥ ಎನಿಪ್ಪ ಮಣಿಗಣದ ರಾಶಿಯಾಗಿ ನಿಜರುಚಿಯಿಂ ತರಣಿಕಿರಣಮನಧಃಕರಿಸಿ ತಳತಳಿಸಿ ಪೊಳೆಯೆ ಮತ್ತಮಾಗಳ್—

ಪ್ರಮಥ ಪ್ರಸಾದ ಲಬ್ಧಂ
ಸುಮನೋಮಹಿಜಾತ ಜಾತಸುಮನೋವರ್ಷಂ
ಸುಮನೋಜ್ಞಮಾಗಿ ಮೇಲಿಳಿ
ಯೆ ಮಹೋತ್ಸವಮಾಂತು ಪೊಗಳೆ ಭಕ್ತ ಕದಂಬಂ ೧೮

ವ॥ ಆಗಳ್ಮಹೀಪತಿ ಮಾಚಿದೇವಮಹಿಮಾವಲೋಕನೋತ್ಸುಕಂ ಮಂತ್ರಿ ಮಂಡಲಿಕರ್ವೆರಸಿ ಬಂದು ನಿರೀಕ್ಷಿಸಿ ವಿಸ್ಮಯಮುತ್ತು ಪೊಗಳುತ್ತಿರೆ ತನ್ಮಹಿಮೆಯಂ ನುತಿಸಲ್ಕೀಶ್ವರಂ ಪಲವರಿಜುವಡೆ ದೇಳ್ತಂದನೆನಿಸಿ ಗಣನಿವಹಂ ನೋಡಿ ಕೊಂಡಾಡೆ ರಂಜಿಪ ಕಲಿಕಾರಣರುದ್ರನಪ್ಪ ಮಾಚಿರಾಜನ ಪದಸರೋಜಕವನತನಾಗಿ ಸಾತ್ವಿಕಂ ನಿಮಿರೆ ಬಸವಂ ಭಯಭಕ್ತಿವೆರಸಿ ಕೀರ್ತಿಸಿ—

ಪರಸಮಯಾತಿಭೀಮ ಪಟುಸಾಹಸಧಾಮ ಪರಾಸ್ತಕಾಮ ಭಾ
ಸುರಗುಣರತ್ನಹಾರ ಭವಿಮೇಘಸಮೀರ ಭಪಾಪಹಾರ ಶಾಂ

ಮುತ್ತು, ಪುಷ್ಯರಾಗ, ವಜ್ರ, ಇಂದ್ರನೀಲರತ್ನ, ವೈಡೂರ್ಯ, ಗೋಮೇಧಿಕ ಉತ್ಕೃಷ್ಟ ಮರಕತರತ್ನ ವ॥ ಎನಿಸುವ ರತ್ನ ಸಮೂಹದ ರಾಶಿಯಾಗಿ ತಮ್ಮ ಪ್ರಕಾಶದಿಂದ ಸೂರ್ಯನ ಕಿರಣಗಳನ್ನು ತಿರಸ್ಕರಿಸಿ, ತಳತಳ ಎಂದು ಹೊಳೆಯುಲಾಗಿ ಮತ್ತೆ ಆಗ— ೧೮. ಪ್ರಮಥರ ಪ್ರಸಾದ (ಅನುಗ್ರಹ) ದಿಂದ ಪಡೆದ ಕಲ್ಪವೃಕ್ಷದ ದೆಸೆಯಿಂದ ಉತ್ಪನ್ನವಾದ ಹೂಗಳ ಮಳೆಯು ಅತ್ಯಂತ ಮನೋಹರವಾಗಿ ಮೇಲಿನಿಂದ ಬೀಳುತ್ತಿರಲು (ನೆರೆದ) ಭಕ್ತರುಗಳ ಸಮೂಹವು ಅತ್ಯಂತ ಉತ್ಸಾಹದಿಂದ ಹೊಗಳಿತು. ವ॥ ಆಗ ಬಿಜ್ಜಳ ಮಹೀಪಾಲನು ಮಾಚಿದೇವನನ್ನು ನೋಡಬೇಕೆಂಬ ಕುತೂಹಲವುಳ್ಳವನಾಗಿ, ಮಂತ್ರಿಗಳು, ನಾಗರಿಕರುಗಳನ್ನೊಡಗೊಂಡು ಬಂದು ನೋಡಿ ಆಶ್ಚರ್ಯಗೊಂಡವನಾಗಿ, ಹೊಗಳುತ್ತ ಇರಲು, ಆ ಮಾಚಿದೇವನ ಮಹಿಮೆಯನ್ನು ಸ್ತೋತ್ರ ಮಾಡಿದನು. ಈಶ್ವರನು ಹಲವು ಆಕಾರಗಳನ್ನು ಹೊಂದಿ ಬಂದನೋ ಎನಿಸುವಂತೆ ಗಣಸಮೂಹವು ಬಂದು ನೋಡಿಕೊಂಡಾಡಿತು. ಪ್ರಕಾಶಿಸುವ ಕಲಿಯುಗದ ರುದ್ರ ರೂಪನಾದ ಮಾಚದೇವನ ಪಾದಕಮಲಗಳಿಗೆ ಬಾಗಿದವನಾದನು. ರೋಮಾಂಚನ, ಗದ್ಗದಾದಿ ಸಾತ್ವಿಕ ಭಾವಗಳು ಉಂಟಾದುವು. (ಆಗ) ಬಸವಣ್ಣನು ಭಯ ಭಕ್ತಿಯಿಂದ ಕೂಡಿ, ಆ ಮಾಚಿದೇವನನ್ನು ಸ್ತೋತ್ರ ಮಾಡಿದನು. (ಅದು ಹೀಗೆ :) ೧೯–೨೦. ಪರಸಮಯಕ್ಕೆ ಅತಿ ಭಯಂಕರನೂ, ಪ್ರಬಲ ಸಾಮರ್ಥ್ಯಕ್ಕೆ ಮೂಲಸ್ಥಾನನೂ, ಮನ್ಮಥನನ್ನು ನಾಶಗೊಳಿಸಿದವನೂ, ಮನೋಹರವಾದ ಗುಣಗಳೆಂಬ ರತ್ನಗಳೇ ಹಾರವಾಗಿ ಉಳ್ಳವನೂ, ಭವಿಗಳೆಂಬ ಮೇಘಗಳಿಗೆ ಗಾಳಿಯಂತಿರುವವನೂ, ಪಾಪವನ್ನು ನಾಶಗೊಳಿಸಿದವನೂ, ಶಿವಮತವೆಂಬ ಸಮುದ್ರಕ್ಕೆ ಚಂದ್ರನೂ, ಯಮನೆಂಬ ಪರ್ವತಕ್ಕೆ ದೇವೇಂದ್ರನಂತಿರುವವನೂ, ಮಂಗಳಕರವಾದ ಅಂಗಗಳಿರುವ ಕಾಯವಿದವನೂ (ಅಘನಾ

ಕರಮುತಸಿಂಧುಚಂದ್ರ ಶಮನಾದ್ರಿಮಹೇಂದ್ರ ಶಿವಾಂಗ[1]ರುಂದ್ರ[1] ಸ
ದ್ವರದ ಕೃಪಾಸಮುದ್ರ ವಸುಧಾತಳರುದ್ರ ವಿನಿದ್ರವೈಭವಾ ೧೯

ಶರಣಾಗತರಕ್ಷಣತ
ತ್ಪರ ಪರಮಾರಾಧ್ಯ ಮಾಚಿದೇವ ಮಹತ್ವಾ
ಕರ ಕರುಣಾನಿಧಿ ಕರುಣಿಸಿ
ಪರಭವಸಾಗರದಿನೆನ್ನನುದ್ಧರಿಸಭವಾ

ಪಶುವಾಂ ದೇವೇಶ ಕೇಳ್ನೀಂ ಪತಿ ಪಟುಖಲಸಾಂ ಸಾಧು ನೀಂ ಕ್ರೋಧಿಯಾಂ ಪೂ
ರ್ಣಶಮಾಂಕಂ ನೀಂ ಸದಾ ದುಷ್ಕೃತಶತಕರನಾಂ ಧರ್ಮಿ ನೀಂ ಘೋರ ಮಾಯಾ
ವಶನಾಂ ಮಾಯಾವಿ ನೀಂ ಚಿದ್ರಸವಿರಹಿತನಾಂ ಜ್ಞಾನಿ ನೀಂ ಸಾಪರಾಧಂ
ಶಿಶುವಾಂ ಮೇಣ್ತಂದೆ ನೀಂ ಲೋಭದ ನೆಲೆವನೆಯಾಂ ದಾನಿಂ ನೀಂ ಮಾಚಿದೇವಾ ೨೧

ಖ್ಯಾತಂ ಲಕ್ಷ ಚತುಷ್ಟಯಂ ಮಿಸುವ ತೊಂಭತ್ತಾಱು ಸಾಹಸ್ರಮಂ
ಗೀತವ್ರಾತಮನೆಯ್ದೆ ಪಾಡಿದೆನರಣ್ಯಾಕ್ರಂದನಂಗೆಯ್ದುವೋ
ಲ್ಜಾತಾಹಂಕೃತಿಯಾದೆನಾನದಱಿನೆಲ್ಲಂ ಮೋಘಮಾದತ್ತು ತ
ದ್ಗೀತಂ ನಿಮ್ಮಡಿಯೊಲ್ಮೆಯಿಲ್ಲದೊಡೆ ಪೇಳೇಗೆಯ್ವೆನೆಂತಿರ್ಪೆನೋ ೨೨

ಶಿವಜ್ಞಾನಮಯವಾದ ಅಂಗ ಗುಣಗಳುಳ್ಳವನೂ), ಶ್ರೇಷ್ಠ ವರಗಳನ್ನು ಕೊಡುವವನೂ, ಕೃಪೆಗೆ ಸಮುದ್ರದೋಪಾದಿಯಲ್ಲಿರುವವನೂ, ಭೂತಳಕ್ಕೆ ರುದ್ರನಂತಿರುವವನೂ, ಉಜ್ವಲ ವೈಭವಯುಕ್ತನೂ, ಶರಣಾಗತರಾದವರನ್ನು ಸಂರಕ್ಷಿಸುವುದರಲ್ಲಿ ಆಸಕ್ತನಾದವನೂ, ಶ್ರೇಷ್ಠರಾದವರಿಂದ ಆರಾಧಿಸಲ್ಪಡುವವನೂ, ಮಹತ್ವಗಳಿಗೆ ಆಗರನಾದವನೂ, ಕರುಣೆಯ ನಿಧಿಯೂ, ಜನನ ಮರಣರಹಿತನೂ ಆದ ಹೇ ಮಾಚಿದೇವ, ಕರುಣೆದೋರಿ ನನ್ನನ್ನು ಜನನ ಮರಣಾತ್ಮಕವಾದ ಈ ಭವಸಾಗರದಿಂದ ಮೇಲಕ್ಕೆತ್ತು. ೨೧. ದೇವೇಶ, ಹೇ ಮಾಚಿದೇವ, ಕೇಳು : ನಾನು ಪಶು, ನೀನು ಪತಿ. ನಾನು ಅತಿ ನೀಚನು, ನೀನು ಸತ್ಪುರುಷನು, ನಾನು ಕೋಪಿಷ್ಠ, ನೀನು ಶಾಂತಿಯೇ ಚಿಹ್ನೆಯಾಗಿ ಉಳ್ಳವನು. ನಾನು ಸದಾ ನೂರಾರು ದುಷ್ಕೃತ್ಯ ಮಾಡಿದವನು, ನೀನು ಪುಣ್ಯ ಕಾರ್ಯವುಳ್ಳವನು. ನಾನು ಘೋರವಾದ ಮಾಯೆಗೆ ವಶನಾದವನು, ನೀನು ನೀನು ಮಾಯಾರಹಿತನು. ನಾನು ಜ್ಞಾನವೆಂಬ ಪ್ರಕಾಶರಹಿತನು, ನೀನು ಜ್ಞಾನಿ. ನಾನು ಅಪರಾಧ ಸಮೇತನಾದ ಶಿಶು, ನೀನಾಧರೋ ತಂದೆ. ನಾನು ಲೋಭಕ್ಕೆ ಆಶ್ರಯಸ್ಥಾನನು, ನೀನು ದಾನ ಗುಣವುಳ್ಳವನು. ೨೨. ವಿಖ್ಯಾತವಾದ ನಾಲ್ಕು ಲಕ್ಷ ತೊಂಬತ್ತಾರು ಸಾವಿರ ವಚನ (ಗೀತ) ಗಳನ್ನು ಅರಣ್ಯರೋದನದಂತೆ ಹಾಡಿದೆನು. (ಹೀಗೆ ಗೀತೆಗಳನ್ನು ಹಾಡಿ) ನಾನು ಅಹಂಕಾರಿಯಾದೆನು. ಆದ್ದರಿಂದ ಆ ನನ್ನ

1 ರುದ್ರ (ಜ)

ವ॥ ಎಂದಾಂ ನೆಗಳ್ದ ಶತಾಪರಾಧಮಂ ಕ್ಷಮಿಪುದೆಂದು ಪೊಡಮಟ್ಟಿರ್ದ ಬಸವರಾಜನಂ ಮಾಚಿದೇವಂ ಕೃಪಾವಲೋಕನದಿನಭೀಕ್ಷಿಸಿ ತೆಗೆದು ಬಿಗಿಯಪ್ಪಿ ಮನ್ನಿಸುತುಮಿರ್ಪಾಗಳ್—

ತೊಳೆವಾತನಂಬರಕ್ಕೇಂ
ಮುಳಿವನೆ ಮಲಿನಕ್ಕೆ ಮುಳಿವನಲ್ಲದೆ ಸುಗುಣೋ
ಜ್ವಳ ಬಸವನ ಭಕ್ತಿಗೆ ನಿ
ರ್ಮಳತೆಯನಾಗಿಪೊಡೆ ಮುನಿದನೀ ಮಾಚಯ್ಯಂ ೨೩

ಕಡಿದೊಡೆ ಕಬ್ಬು ಸೀಯನಿನಿದೀಯದೆ ಮಾಣ್ಬುದೆ ದಿವ್ಯ ಚಂದನಂ
ಪಿಡಿದಮುರ್ದೊತ್ತಿ ತೇದೊಡೆ ಸುಗಂ[1]ಧಮ[1]ನಾನದೆ ಕಾಸಿ ವಹ್ನಿಯಿಂ
ಬಡಿದೊಡೆ ಕಾಂತಿಯಂ ಪಡೆಯದೇ ಕನಕಂ ಕಡುಕಾಯ್ದು ಮಾಚಯಂ
ಜಡಿದೊಡೆ ಭಕ್ತಿಯುಜ್ವಳತೆಯಂ ಬಸವಂ ತವೆ ಬೀಜದಿರ್ಪನೇ ೨೪

ವ॥ ಎಂದು ಶಿವಗಣಸಂದೋಹಂ ಬಣ್ಣಿಸುತ್ತುಮಿರೆ ವೃಷೇಂದ್ರನಂ ನೋಡಿ ಮಾಚಿದೇವ ನಿಂತೆಂದಂ—

ವಿನಯಂ ಶಮೆ ದಮೆ ನಿರ್ವಂ
ಚನೆ ದಾರ್ಢ್ಯಂ ಸತ್ಯಮಾರ್ಜವಂ ನಿರ್ಮದಭಾ

ವಚನಗಳೆಲ್ಲವೂ ವ್ಯರ್ಥವಾದವು. ನಿಮ್ಮ ಪಾದದ ಪ್ರೀತಿಯಿಲ್ಲದಿದ್ದರೆ ನಾನು ಮಾಡುವುದೇನು ? ಹೇಗಿದ್ದೇನು ? ಹೇಳು. ವ॥ ಹೀಗೆಂದು ತಿಳಿದು ನಾನು ಮಾಡಿದ ಅಪರಾಧವೆಲ್ಲವನ್ನೂ ಕ್ಷಮಿಸಬೇಕು, ಎಂದು ನಮಸ್ಕಾರ ಮಾಡಿದ ಬಸವಣ್ಣನನ್ನು ಮಾಚಿದೇವನು ಕೃಪಾಪೂರ್ಣವಾದ ದೃಷ್ಟಿಯಿಂದ ನೋಡಿ ಬರಸೆಳೆದು ಬಿಗಿಯಾಗಿ ಅಪ್ಪಿಕೊಂಡು ಸಾಂತ್ವನಗೊಳಿಸುತ್ತಿರುವ ಸಂದರ್ಭದಲ್ಲಿ—೨೩. ಬಟ್ಟೆಗಳನ್ನು ತೊಳೆಯುವವನು ಕೊಳೆಗೆ ಕೋಪಿಸಿಕೊಳ್ಳುವವನಲ್ಲದೆ, ಬಟ್ಟೆಗೆ ಕೋಪಿಸಿಕೊಳ್ಳುವನೇ ? ಆ ಮಾಚಯ್ಯನು, ಸುಗುಣಗಳಿಂದ ಮನೋಹರನಾದ ಬಸವಣ್ಣನ ಭಕ್ತಿಗೆ ಪರಿಶುದ್ಧತೆಯುಂಟಾಗಲು ಕೋಪಿಸಿಕೊಂಡನು. ೨೪. ಕಬ್ಬನ್ನು ಕಡಿದರೆ ಸಿಹಿಯ ರುಚಿಯನ್ನು ಕೊಡದೆ ಇರುವುದೇ ? ಗಟ್ಟಿಯಾಗಿ ಹಿಡಿದು ಒತ್ತಿ (ಸಾಣೆ ಕಲ್ಲಿನ ಮೇಲೆ) ತೆಯ್ದರೆ ಶ್ರೇಷ್ಠ ಶ್ರೀಗಂಧವು ಒಳೆಯ ಪರಿಮಳವನ್ನು ಹೊಂದಿರುವುದಲ್ಲವೇ ? ಬೆಂಕಿಯಿಂದ ಕಾಯಿಸಿ, ಬಡಿದರೆ ಚಿನ್ನವು ಕಾಂತಿಯನ್ನು ಹೊಂದದೆ ಇರುವುದೇ ? ಮಾಚಯ್ಯನು ವಿಶೇಷ ಕೋಪದಿಂದ ಭಯಗೊಳಿಸಿದರೆ ಬಸವಣ್ಣನು ಹೆಚ್ಚಾದ ಭಕ್ತಿಯ ಪ್ರಕಾಶವನ್ನು ಬೀರದೆ ಇರುವನೇ ? ವ॥ ಹೀಗೆಂದು ಶಿವಗಣ ಸಮೂಹವು ವರ್ಣಿಸುತ್ತಿರಲು ಮಾಚಯ್ಯನು ಬಸವಣ್ಣನನ್ನು ನೋಡಿ ಹೀಗೆ ಅಂದನು. ೨೫–೨೬. ಬಸವೇಶ್ವರಾ, ನಿರ್ದುಷ್ಟವಾದ ನಮ್ರತೆ, ಶಾಂತಿ, ಇಂದ್ರಿಯ ನಿಗ್ರಹ, ನಿರ್ವಂಚನೆ, ದೃಢತೆ. ಸತ್ಯ,

1 ಧಿಯಃ(ಗ)

ವನೆ ದಾಸ್ಯಂ ಭಯಮನುನಯ
ಮನವದ್ಯಂ ಭಕ್ತಿ ಲಕ್ಷಣಂ ಬಸವೇಶಾ ೨೫

ಮದಮದು ಭಕ್ತಿಗೆ ಕಂಟಕ
ಮದನಳಿಯಲ್ವೇಳ್ಕುಮದಱಿನೆಮ್ಮಯ ಶರಣ
ರ್ಮದನಾರಿಯ ಪದಭಕ್ತರ್
ಮದಮಂ ಮುನ್ನಳಿದು ಭಕ್ತಿಯಂ ಪ್ರಕಟಿಸಿದರ್ ೨೬

ಎಂತೆನೆ ಪೇಳ್ದಪೆನವನೀ
ಕಾಂತೆಯ ಸೀಮಂತ ರತ್ನಮೆನೆ ಕಂಗೊಳಿಕುಂ
ಕಾಂತಿ ಮಿಗೆ ನವಿಲೆಯೆಂಬ ಪು
ರಂ ತಾನಳಕಾಭಿರಾಮಗುಣಪರಿಮಿಳಿತಂ ೨೭

ಆ ಪುರದೊಳೆಸೆವನೊರ್ವನು
ಮಾಪತಿಪದಭಕ್ತನಮಿತ ಶಿವಸುಖಭರಿತಂ
ತಾಪಸನುತ ಸುಜ್ಞಾನ ಕ
ಳಾಪಂ ಮೃಡರೂಪನಪಗತಾಖಿಲ ತಾಪಂ ೨೮

ಭವಮ್ಮತಿಕಾಲಕರ್ಮರಹಿತಂ ಹರಿಧಾತೃಮುಖಾನ್ಯದೈವ ಗ
ರ್ವವನದವಾಗ್ನಿ ಚಂಡಭುಜದಂಡನಖಂಡಗುಣಾಂಕನದ್ರಿಜಾ
ಧವಮತ ಪಾರಿಜಾತನಭವಾಗಮಧೀರನತರ್ಕ್ಯವಿಕ್ರಮಂ
ಭವಿಮತ ಪದ್ಮಪಂಡಕಳಭಂ ಪರಭೀಮ ಸಮಗ್ರ ವಿಗ್ರಹಂ ೨೯

ಋಜುತ್ವ, ಅಹಂಕಾರವಿಲ್ಲದ ಅಭಿಪ್ರಾಯ, ಸೇವಕತನ, ಭಯ, ನೀತಿ–ಇವು ಭಕ್ತಿಯ ಲಕ್ಷಣಗಳು. ಮದವೆಂಬುದು ಭಕ್ತಿಗೆ ಕಂಟಕಪ್ರಾಯವಾದದ್ದು. ಅದನ್ನು ಅಳಿಯ ಬೇಕು. ಅದರಿಂದ ಪೂರ್ವದಲ್ಲಿ ನಮ್ಮ ಶರಣರು ಶಿವನ ಪಾದ ಭಕ್ತಿಯುಳ್ಳವರ ಗರ್ವವನ್ನು ನಾಶಪಡಿಸಿ ಭಕ್ತಿಯನ್ನು ಪ್ರಕಟಿಸಿದರು. **ಶಂಕರದಾಸಿಮಯ್ಯನ ಕಥೆ :** ೨೭. ಹೇಗೆಂದರೆ ಹೇಳುತ್ತೇನೆ (ಕೇಳು) : ಭೂಮಿಯೆಂಬ ಕಾಂತೆಯ ಬೈತಲೆಯ ರತ್ನವೋ ಎಂಬಂತೆ 'ನವಿಲೆ' ಎಂಬ ಪಟ್ಟಣವು ವಿಶೇಷ ಕಾಂತಿಯಿಂದ ಕುಬೇರನ ಅಲಕಾವತಿ ಪಟ್ಟಣದ ಮನೋಹರವಾದ ಗುಣಗಳೋಪಾದಿಯಲ್ಲಿ ಶ್ರೇಷ್ಠ ಗುಣಗಳಿಂದ ಕೂಡಿ ಕಂಗೊಳಿಸುತ್ತಿತ್ತು. ೨೮. ಆ ಪಟ್ಟಣದಲ್ಲಿ ಪರಮೇಶ್ವರನ ಪಾದಭಕ್ತನೂ, ಶಿವನಿಂದ ಉಂಟಾದ ಅಪರಿಮಿತ ಸೌಖ್ಯದಿಂದ ಕೂಡಿದವನೂ, ಋಷಿಗಳಿಂದ ಸ್ತೋತ್ರ ಮಾಡಲ್ಪಟ್ಟವನೂ, ಶ್ರೇಷ್ಠ ಜ್ಞಾನವೇ ಆಭರಣವಾಗುಳ್ಳವನೂ, ಮೃಡ ರೂಪನೂ, ಸಮಸ್ತ ತಾಪಗಳನ್ನು ನೀಗಿದವನೂ ಆದ ಒಬ್ಬ (ಶಿವಭಕ್ತನು) ಶೋಭಿಸುತ್ತಿದ್ದನು. ೨೯–೩೦–೩೧. ವಿಷ್ಣು, ಬ್ರಹ್ಮ ಇವರೇ ಮೊದಲಾದ ಅನ್ಯ ದೈವ ಅಹಂಕಾರವೆಂಬ ಕಾಡಿಗೆದಾವಾಗ್ನಿಯಾದ, ಪ್ರಚಂಡವಾದ ಬಾಹು ದಂಡವುಳ್ಳ, ಭಂಗವಿಲ್ಲದ ಸದ್ಗುಣಗಳೇ ಲಕ್ಷಣವಾಗಿ ಉಳ್ಳ, ಶಿವ ಮತಕ್ಕೆ ಕಲ್ಪವೃಕ್ಷನಾದ, ಶೈವಾಗಮಗಳಲ್ಲಿ ಪಂಡಿತನಾದ,

ಶಂಕರಕಿಂಕರ ಜನತಾ
ಶಂಕರನಘಚಯಭಯಂಕರಂ ಪರಿಹೃತಮಾ
ಯಾಂಕುರನಿರ್ಪಂ ಪೆಸರಿಂ
ಶಂಕರದಾಸಯ್ಯನೆಂಬನಚಳ ಶಿವೈಕ್ಯಂ ೩೦

ಜೆಡೆಯ ಶಂಕರದೇವ ದಿವ್ಯ ಸಭಾಸ್ಥಿತಂ ಮೆಱೆದಿರ್ಪನೊ
ಳ್ಪಡೆಱೆ ಸೂಚಿಯ ಕಾಯಕಂ ಕ್ರಿಯೆಯೊಪ್ಪೆ ವೇಣದೆಱಿಂದೆ ತಾಂ
ಪಡೆದು ತಂದೊಡನೈದು ಮಾನ ಸುಧಾನ್ಯದಿಂದರಿದೆಂಬಿನಂ
ಮೃಡನ ಭಕ್ತ ಸಹಸ್ರಕಾದೊಡಮಲ್ಲಿ ತೃಪ್ತಿಯನಾಗಿಪಂ ೩೧

ವ॥ ಅನವರತಮಾ ಮಹಿಮಾನ್ವಿತನೀ ನಿಯಮದಿನಿರೆಯಿರೆ ತದ್ದರ್ಶನೋತ್ಕಂಠೆಯಿಂ ಜೇಡರ ದಾಸಯ್ಯನೆಂಬ ಹರಭಕ್ತನೆಳ್ತಂದವನಡಿಗವನತನಾಗಿ ಶಿವಾನುಭವಗೋಷ್ಠಿಯಿನಿರ್ದನಂತರಂ ನಿಜಭವನಕ್ಕೆಳ್ತಂದು ನಿಜರಮಣಿಯೊಡನುಮ್ಮಳಿಸುತಿಂತೆಂದಂ—

ಹರಭಕ್ತನಾಗಿಯುಂ ಶಂ
ಕರದಾಸಂ ಬಡತನಕ್ಕೆ ಪಕ್ಕಾಗಿರ್ಪಂ
ತರಳಾಕ್ಷಿ ಕಳಿಪು ಧಾನ್ಯೋ
ತ್ಕರಮಂ ಪಸಿದಿರ್ಕುಮಾತನಲ್ಲದೊಡೀಗಳ್ ೩೨

ಊಹಿಸುವುದಕ್ಕೆ ಶಕ್ಯವಿಲ್ಲದ ಪರಾಕ್ರಮವುಳ್ಳ, ಲಿಂಗಹೀನರ ಮತವೆಂಬ ಕಮಲ ಸಮೂಹಕ್ಕೆ ಮದಗಜನಾದ, ಪರಮ ಭೀಮನಾದ ಶಿವಗುಣಗಳಿಂದ ಪೂರ್ಣ ವಿಗ್ರಹ ನೆನಿಸಿದ (ಅಂದರೆ ಲಿಂಗ ಗುಣಗಳಿಂದ ಸಂಗತನಾದ), ಶಿವನ ಸೇವಕರಾದ ಜನ ಸಮೂಹಕ್ಕೆ ಸುಖವನ್ನುಂಟುಮಾಡುವ, ಪಾಪ ಸಮೂಹಕ್ಕೆ ಭಯವನ್ನುಂಟುಮಾಡುವ, ಮಾಯೆಯ ಮೊಳಕೆಯನ್ನೇ ನಾಶಗೊಳಿಸಿದ, ನಿಶ್ಚಂಚಲವಾದ ಶಿವನಲ್ಲಿ ಸಾಮರಸ್ಯ ಹೊಂದಿದ 'ಶಂಕರದಾಸಯ್ಯ' ಎಂಬುವನು ಜಡೆಯ ಶಂಕರದೇವನೆಂಬುವನ ಶ್ರೇಷ್ಠ ಸಭೆಯಲ್ಲಿರುವವನಾಗಿ, ಮೆರೆಯುತ್ತಿದ್ದನು. ಒಳ್ಪಿನಿಂದ (ಒಳ್ಳೆಯತನದಿಂದ) ಕೂಡಿ ಸೂಜಿಯ ಕಾಯಕ (ಬಟ್ಟೆ ಹೊಲಿಯುವ ಕಾಯಕ) ವೆಂಬ ಕ್ರಿಯೆಯಲ್ಲಿ ಅವನು ಒಪ್ಪುತ್ತಿರಲು ಆ ಕಾಯಕದಿಂದ ತಾನು ಪಡೆದು ತಂದ ಐದು ಸೇರು ಧಾನ್ಯ ವಿಶೇಷದಿಂದ ಅಸಾಧ್ಯವೆನ್ನುವಂತೆ ಸಹಸ್ರ ಸಹಸ್ರ ಸಂಖ್ಯೆಯ ಶಿವಭಕ್ತರಿಗೆ ತೃಪ್ತಿ ಗೊಳಿಸುತ್ತಿದ್ದನು. ೩೨. ಆ ಮಹಿಮಾನ್ವಿತನು ಯಾವಾಗಲೂ ಈ ವ್ರತದಿಂದ ಇರುತ್ತಿರಲು ಜೇಡರದಾಸಯ್ಯನೆಂಬ ಶಿವಭಕ್ತನು ಆ ಶಂಕರದಾಸಯ್ಯನನ್ನು ನೋಡ ಬೇಕೆಂಬ ಕುತೂಹಲದಿಂದ ಬಂದು, ಅವನ ಪಾದಗಳಿಗೆ ನಮಸ್ಕರಿಸಿ, ಶಿವಾನುಭವ ಗೋಷ್ಠಿಯಲ್ಲಿ ಇದ್ದು, ಅನಂತರ ತನ್ನ ಮನೆಗೆ ಬಂದು, ದುಃಖಿಗೊಳ್ಳುತ್ತ ತನ್ನ

ವ॥ ಎಂದು ಬೆಸಸೆ ತದ್ಭಾರ್ಯೆನಿಪ ದುರ್ಗಾದೇವಿ ತಳ್ವದೆ ಧಾನ್ಯಮಂ ಕಳುಪೆ ಶಂಕರ ದಾಸಯ್ಯನದಂ ಕಂಡು ಮುಗುಳ್ನಗೆ ನಕ್ಕು—

ಒದವಿರ್ದತ್ಯಂತ ಭಾಗ್ಯಂ ಮಿಸುಗೆ ಪೊಱೆವ ದಾಸಯ್ಯನೆಮ್ಮೀ ದರಿದ್ರ
ತ್ವದ ಪಾಂಗಂ ಕಂಡು ತಾನೇಂ ಕರುಣಿಯೊ ಮಱುಕಂಬೆತ್ತು ಧಾನ್ಯಂಗಳಂ ತ
ಳ್ವದೆ ತಂದಿತ್ತಂ ಮೊದಲ್ಧಾನ್ಯದ ಘನನಿಧಿಯಂ ವಸ್ತ್ರಮಂ ಕೊಟ್ಟುಕೊಂಡಂ
ಪದೆದಾನಿನ್ನೇನನೀವೆಂ ಕೃಪಣನವುವು ಸದ್ಭಕ್ತನಿಂತಾಗವೇಡಾ ೩೩

ವ॥ ಎಂದು ರೋಡಾಡುತೊಂದು ಮುಷ್ಟಿಯೊಳಾನೆಲ್ಲನೆಲ್ಲಮನಡಸಿ ಪಿಡಿದು ಪೊಡವಿಯೊಳಿಡೆ ಗೃಹದೊಳಿರ್ದಕ್ಷಯನಿಧಿ ತತ್ಕ್ಷಣದೊಳಡಂಗೆ ಕಂಡು ಬೆಬ್ಬಳಿವೋಗಿ ತಳವೆಳಗುಗೊಂಡು ಕಳವಳಿಪ ನಿಜಪತಿಯಂ ನೋಡಿ ದುರ್ಗಾಂಬೆಯಿಂತೆಂದಳ್—

ಸರಿ ಬೆಸದಾಟಮನೇಂ ಕೇ
ಸರಿಯೊಡನಾಡಿದರುಮೊಳರೆ ಶರಣನ ಪರಿಯಂ
ಪರಿಕಿಸದೆ ಕಳುಪಿ ಧಾನ್ಯಮ
ನುರುಮದದೀ ನಿಧಿಯನಿಂತು ನೀಗಿದೆಯಕಟಾ ೩೪

ಹೆಂಡತಿಗೆ ಹೀಗೆ ಹೇಳಿದನು : ೩೨. ಶಂಕರದಾಸಯ್ಯನು ಹರಿಭಕ್ತನಾಗಿಯೂ ಕೂಡ ಬಡತನದಿಂದ ಕೂಡಿದ್ದಾನೆ. ಹೇ ಚಂಚಲ ನೇತ್ರೆಯೇ, (ಆ ಶಂಕರದಾಸಯ್ಯನಿಗೆ) ಧಾನ್ಯ ಸಮೂಹವನ್ನು ಕಳಿಸು ಇಲ್ಲದಿದ್ದರೆ ಅವನು ಈಗ ಹಸಿದು ಇರಬೇಕಾಗುತ್ತದೆ. ವ॥ ಹೀಗೆಂದು (ಜೇಡರ ದಾಸಯ್ಯನು ತನ್ನ ಹೆಂಡತಿಗೆ) ಆಜ್ಞಾಪಿಸಲು, ಅವನ ಹೆಂಡತಿಯಾದ (ಆ) ದುರ್ಗಾದೇವಿ ತಡಮಾಡದೆ ಧಾನ್ಯವನ್ನು ಕಳಿಸಿಕೊಡಲು ಶಂಕರದಾಸಯ್ಯನು ಅದನ್ನು ಕಂಡು ಮುಗುಳುನಗೆ ನಕ್ಕು–೩೩. (ತನಗೆ) ಪ್ರಾಪ್ತವಾಗಿರುವ ಅತ್ಯಂತ ಭಾಗ್ಯವು ಶೋಭಿಸುತ್ತಿರಲು ದಾಸಯ್ಯನು (ಜೇಡರದಾಸಿಮಾರ್ಯನು) ನಮ್ಮ ಈ ಬಡತನದ ರೀತಿಯನ್ನು ಕಂಡು ಮರುಕಗೊಂಡು ತಡಮಾಡದೆ ಧಾನ್ಯಗಳನ್ನು ತಂದುಕೊಟ್ಟನು. ಆ ಜೇಡರದಾಸಯ್ಯನು ಏನುಕರುಣಿಯೋ ! ಮೊದಲು (ಅವನು) ಬಟ್ಟೆಯನ್ನು ಕೊಟ್ಟು ಧಾನ್ಯದ ಘನನಿಧಿಯನ್ನು ತೆಗೆದುಕೊಂಡನು. (ಶಿವನಿಗೆ ಬಟ್ಟೆಯನ್ನು ಕೊಟ್ಟು ತವನಿಧಿಯನ್ನು ಪಡೆದನು.). ಅಬ್ಬಬ್ಬಾ ! ಬಡವನಾದ ನಾನು ಪ್ರೀತಿಸಿ ಇನ್ನು ಏನನ್ನು ಕೊಡಲಿ ? ಸದ್ಭಕ್ತನೆನಿಸಿದರೆ ಈ ದಾಸಯ್ಯನ ಹಾಗೆ ಇರಬೇಡವೇ ? ವ॥ ಹೀಗೆಂದು ತಿರಸ್ಕರಿಸುತ್ತ ಒಂದು ಹಿಡಿಯಲ್ಲಿ ಆ ಬತ್ತವೆಲ್ಲವನ್ನೂ ಸೇರಿಸಿ ಹಿಡಿದು ಭೂಮಿಯ ಮೇಲಿಡಲು ಜೇಡರದಾಸಯ್ಯನ ಮನೆಯಲ್ಲಿದ್ದ ನಾಶವಾಗದ ನಿಧಿಯು ಆ ಕ್ಷಣಾರ್ಧದಲ್ಲಿ ಮರೆಯಾಗಿ ಹೋದುದನ್ನು ಕಂಡು (ಜೇಡರ ದಾಸಯ್ಯನು) ಭಯದಿಂದ ಸ್ತಂಭೀಭೂತನಾಗಿ, ವ್ಯಾಕುಲಗೊಂಡು, ಕಳವಳಗೊಳ್ಳುವ ನಿಜಪತಿಯನ್ನು ನೋಡಿ ದುರ್ಗಾದೇವಿಯು ಹೀಗೆ ಹೇಳಿದಳು : ೩೪. ಸಿಂಹದೊಡನೆ ಆಟವಾಡುವವರೂ ಉಂಟೆ ? ಶರಣರ ರೀತಿಯನ್ನು ಪರೀಕ್ಷಿಸದೆ, ಅಧಿಕಗರ್ವದಿಂದ

ತಂದೈದು ಮಾನಧಾನ್ಯದೊ
ಳಿಂದುಧರಾರ್ಚಕ ಸಹಸ್ರಮಂ ತಣಿಪಿದಪಂ
ಕುಂದದೆ ಶಂಕರದಾಸನ
ವಂ ದಿಟದಿಂ ಪ್ರಿಯ ದರಿದ್ರನೇನಾದಪನೇ ೩೫

ಆತನ ಪೆರ್ಮೆಯಂ ಪೊಗಳಲಾರ್ನೆಱೆವರ್ನಿಜರೂಪದಿಂದೆ ಸಂ
ಪ್ರೀತಿಯೊಳೀಶನೆಯ್ದಿ ವರಮಂ ಮಿಗೆ ಬೇಡೆನೆ ನಕ್ಕು ದೇವ ಮ
ತ್ತಾತ ಭವತ್ಪದಾಬ್ಜನಿಧಿ ಸನ್ನಿಧಿವೆತ್ತಿರೆ ಬೇಱೆ ಬೇಳ್ಪ ವಿ
ಖ್ಯಾತವರಂಗಳುಂಟೆ ವರಮಿತ್ತಪೆನೆಂದೆನೆ ಬೇಡನಿಂತಿವಂ ೩೬

ಎಂಬ ಲಜ್ಜೆ ನಿನ್ನ ಚಿತ್ತಕಾಗದಂತೆ ಬೇಳ್ಪೆನೊ
ಲ್ದಂಬಿಕೇಶ ರಾತ್ರಿಯಲ್ಲಿ ಸೂಜಿಗಣ್ಗೆ ಸೂತ್ರಮಂ
ಇಂಬುವೆತ್ತು ಕೊಯ್ಯಲೀಕ್ಷಿಸುತ್ತೆ ಕಾಣ್ಬ ಮಾಳ್ಕೆಯಿಂ
ದಂಬಕಪ್ರಕಾಶವೊಂದನೀಯೆ ಸಾಲ್ಗುಮೀಶ್ವರಾ ೩೭

ವ॥ ಎಂಬ ಭಕ್ತನುಕ್ತಿಗೆ ಶಂಭು ಸಂಭ್ರಮಿಸುತಿರುಳೊಳ್ಪರ್ಬಿದ ಮರ್ಬಿನುರ್ಬನಳಿವಳವನಳಂಗಲ್ಲದಿಲ್ಲೆಂದು ನಿಟಿಲತಟದೊಳ್ಪಾವಕಾಕ್ಷಿಯಂ ದೇವದೇವಂ ಕರುಣಿಪೆ ಕೆಯ್ಕೊಂಡು ವಿಲಯಕಾಲದೊಳ್ಘುಳುಘುಳಿಪ ಕಾಲಾಗ್ನಿರುದ್ರನಂತೆ ಪರದೈವ ಕೋಲಾಹಲಂ ಪರವಾದಿ ಜನಮದ ಮದಗಜ ಬಿದುವಿದಳನ

ಧಾನ್ಯವನ್ನು ಕಳುಹಿಸಿ ಈ ರೀತಿ ಅಕ್ಷಯ ನಿಧಿಯನ್ನು ಹೋಗಲಾಡಿಸಿಕೊಂಡೆ. ಅಯ್ಯೋ! ೩೫–೩೭. ಶಂಕರದಾಸಯ್ಯನು ತಾನು ತಂದ ಐದು ಮಾನದ ಅಳತೆಯ ಧಾನ್ಯ ವಿಶೇಷದಿಂದ ಸಹಸ್ರ ಸಹಸ್ರ ಜನ ಶಿವಭಕ್ತರನ್ನು ಯಾವ ಕೊರತೆಯೂ ಆಗದಂತೆ ತೃಪ್ತಿಗೊಳಿಸುತ್ತಿದ್ದಾನೆ. ಪ್ರಿಯನೆ, ಅವನು ನಿಜವಾಗಿಯೂ ದರಿದ್ರನಾಗುವನೇ ?ಆತನ ಹಿರಿಮೆಯನ್ನು ಹೊಗಳಲು ಸಮರ್ಥರಾರಿದ್ದಾರೆ ? ಈಶ್ವರನು ಅತ್ಯಂತ ಪ್ರೀತಿಯಿಂದ ನಿಜರೂಪದಿಂದ ಬಂದು 'ವರವನ್ನು ಬೇಡು' ಎಂದರೆ, ನಕ್ಕು ದೇವ, ನನ್ನ ತಂದೆಯೇ ನಿನ್ನ ಪಾದಕಮಲವೆಂಬ ನಿಕ್ಷೇಪವು ಸಮೀಪದಲ್ಲಿಯೇ ಇರಲಾಗಿ ಬೇರೆ ಬೇಡುವ ಪ್ರಖ್ಯಾತವಾದ ವರಗಳೂ ಉಂಟೆ ? 'ವರವನ್ನು ಕೊಡುತ್ತೇನೆಂದರೆ ಈ ರೀತಿ ಇವನು ಬೇಡುತ್ತಿಲ್ಲ ಎಂಬ ನಾಚಿಕೆಯು ನಿನ್ನ ಮನಸ್ಸಿಗೆ ಆಗದ ಹಾಗೆ ಒಲಿದು ಬೇಡುತ್ತೇನೆ : ಎಲೆ ಪಾರ್ವತೀಪತಿಯೇ, ರಾತ್ರಿಯ ಹೊತ್ತು ಸೂಜಿಯ ಕಣ್ಣಿಗೆ ದಾರವನ್ನು ಚೆನ್ನಾಗಿ ಪೋಣಿಸಲು ಕಾಣುವ ರೀತಿಯಲ್ಲಿ ಕಣ್ಣಿನ ಕಾಂತಿಯೊಂದನ್ನು ಕೊಟ್ಟರೆ ಸಾಕು. ವ॥ ಹೀಗೆಂಬ ಭಕ್ತನಾದ ಶಂಕರದಾಸಿಮಯ್ಯನ ಮಾತಿಗೆ ಶಂಭುವು ಸಂಭ್ರಮಗೊಂಡು ರಾತ್ರಿಯಲ್ಲಿ ಹಬ್ಬಿದ ಕತ್ತಲೆಯ ಆಧಿಕ್ಯವನ್ನು ನಾಶಗೊಳಿಸುವ ಶಕ್ತಿಯು ಅಗ್ನಿಗಲ್ಲದೆ ಮತ್ತೊಬ್ಬರಿಗಿಲ್ಲವೆಂದು ಅವನಿಗೆ ಹಣೆಯಲ್ಲಿ ಅಗ್ನಿನೇತ್ರವನ್ನು ದಯಪಾಲಿಸಿದನು. ಅವನ್ನು ಸ್ವೀಕರಿಸಿ ಪ್ರಳಯಕಾಲದಲ್ಲಿ ಘುಳುಘುಳಿಸುವ ಪ್ರಳಯ ಕಾಲ ರುದ್ರನಂತೆ ಪರದೈವ ಕೋಲಾಹಲನಾದ, ಅನ್ಯಮತವಾದಿ ಜನಗಳ ಗರ್ವವೆಂಬ

ಕಂಠೀರವಂ ಹರಸಮಯಂ ನಲಿಯೆ ಪರಸಮಯಂ ಬೆದಱೆ ಸಂಭ್ರಮದಿಂ ನಡೆಗೊಂಡು ಪರದೈವನಿಕೇತನಂಗಳನಳವಿಯೊಳ್ನಿಂದು ನಿಜ ನಿಟಿಲತಟಘಟಿತಪಟುತರ ವಿಕಸ್ವರವೀತಿಹೋತ್ರವಿಲೋಚನದಿಂ ಮುಳಿದು ಘುಳು ಘುಳಿಸಿ ಘಳಿಲನುರುಪ್ಪುವಾಗಳಸವಸದಿನರ್ಧಾಲಯಮುರಿಯೆ ಸರಭಸಂ ಪರಿವ ಬಳಾರಿ ಮಾರಿ ಮಾತೃಕಾ ನಿಕಾಯಮುಂ ಮಿಳ್ಳಿಱಿದು ಬಳ್ಳಿವರಿವ ದಳ್ಳುರಿಯುಳುರ್ಕೆಯಿಂ ಗೋಪುರಂ ಸೀಳ್ದು ಸೆಕ್ಕೆ ವಿಡೆ ಮುಕ್ಕೊಡೆ ಛಿಟಿಲೆನೆ ಸಿಡಿಯೆ ಪೆಳರ್ದು ನಡುಗಿ ಬಾಯ್ವಿಡುವ ಮಾಳವಿವೆರಸು ನಿಟ್ಟೋಟದಿನೋಡುವ ಮೈಲಾರನುಂ ಪ್ರಚುರ ಕಚನಿಚಯಂ ಗರಿಗರಿಲನುರಿಯೆ ತಳಮಳಗುಗೊಂಡ ತಲೆಗೊಡಪಿ ಕಡೆವರಿವೇಕನಾಥೆಯುಂ ಬಿಗಿದುಟ್ಟ ಪಟ್ಟಣಿಗೆ ನಿಂದುರಿಯೆ ಕೇಸುರಿವೆಳಗು ನಿತಂಬಮಂಡಳ ಮನಳುರ್ದು ಮಾಸುರಿಕೆಮಿಗೆ ತಳಿರುಟ್ಟ ಪುಳಿಂದಿಯರ ವಿಭ್ರಮಂದಳೆದು ಮೊಱೆಯಿಡುತೆ ಪರಿವ ಯಕ್ಷಿಣಿಯರುಂ ಕರತಳದ ಪಿಂಛಗುಚ್ಛಮುರಿವರಿದು ಬೇಯೆ ಭೋಂಕನೆ ಬಿಸುಟು

ಮದ್ದಾನೆಗಳ ಕುಂಭ ಸ್ಥಳವನ್ನು ಸೀಳುವುದರಲ್ಲಿ ಸಿಂಹಸ್ವರೂಪನಾದ ಶಂಕರ ದಾಸಯ್ಯನು ಶಿವಸಮಯವು ನಲಿಯುವಂತೆ ಪರಸಮಯವು ಭಯಗೊಳ್ಳುವಂತೆ, ಸಂಭ್ರಮದಿಂದ ಹೊರಟು ಪರದೈವದ ಗುಡಿಗಳ ಸಮೀಪದಲ್ಲಿ ನಿಂತು ತನ್ನ ಹಣೆಯಲ್ಲಿರುವ ಅತ್ಯಂತ ಸಾಮರ್ಥ್ಯದ ಪ್ರಜ್ವಲಿಸುವ ಅಗ್ನಿಯ ಕಣ್ಣಿನಿಂದ ಕೋಪಿಸಿ, ಘುಳು ಘುಳಿಸಿ, ಘಳಿಲ್ ಎನ್ನುವಂತೆ (ತೀವ್ರವಾಗಿ) ಸುಡುವ ಅವಸರದಿಂದ ಅರ್ಧದೇವ ಸ್ಥಾನವು ಉರಿಯಲು ಅತಿ ರಭಸದಿಂದ ಕೂಡಿ ಓಡುತ್ತಿರುವ ಬಲರಾಕ್ಷಸ ವೈರಿಯಾದ ಇಂದ್ರ, ಮಾರಿ, ಬ್ರಾಹ್ಮಿ, ಮಾಹೇಶ್ವರಿ, ಕೌಮಾರಿ, ವೈಷ್ಣವಿ, ವಾರಾಹಿ, ಇಂದ್ರಾಣಿ, ಚಾಮುಂಡಿಕೆ ಎಂದೆಂಬ ಸಪ್ತಮಾತೃಕೆಯರ ಸಮೂಹವೂ, ಹಬ್ಬದ ಬಳ್ಳಿಯಂತೆ ವಿಸ್ತಾರಗೊಂಡು ಮುಂದುವರಿಯುತ್ತಿರುವ ಅಧಿಕ ಜ್ವಾಲೆಯು ಆವರಿಸಿದಕಾರಣ ದೇವಾಲಯದ ಗೋಪುರವು ಸೀಳಿ, ಚಕ್ಕೆಬಿಡಲು, ಮೇಲ್ಭಾಗದಲ್ಲಿರುವ ಮೂರು ಛತ್ರಿಗಳೂ ಛಟಿಲ್ ಎನ್ನುವಂತೆ ಸಿಡಿದವು. (ಆಗ) ಭಯಪಟ್ಟು ನಡುಗಿ, ಬಾಯಿ ಬಿಡುತ್ತಿದ್ದ 'ಮಾಳವಿ' ಎಂಬ ಶಕ್ತಿಯಿಂದ ಕೂಡಿ ನೇರವಾದ ವೇಗದ ಓಟದಿಂದ (ನಿಟ್ಟೋಟದಿಂದ) ಓಡುವ ಮೈಲಾರನೆಂಬ ದೇವತೆಯೂ, ಪ್ರಸಿದ್ಧವಾದ ಕೂದಲಿನ ಸಮೂಹವು ಘರಿಘರಿಲೆಂದು ಉರಿಯಲು ತಳಮಳಗೊಂಡು ತಲೆಯನ್ನು ಕೊಡವಿ ಕೊಳ್ಳುತ್ತ ಒಂದು ಪಾರ್ಶ್ವವನ್ನು ಹಿಡಿದು ಓಡುವ ಏಕನಾಥೆ ಎಂಬ ಶಕ್ತಿದೇವತೆಯೂ, ಬಿಗಿದು ಉಟ್ಟುಕೊಂಡಿದ್ದ ಪಟ್ಟೆಸೀರೆಯು ಬೆಂಕಿ ಹತ್ತಿ ಉರಿಯುತ್ತಿರಲು (ಅದರ) ಕೆಂಪಾದ ಜ್ವಾಲೆಯ ಬೆಳಕು ಕಟಿಪಶ್ಚಾದ್ಭಾಗವನ್ನು ಆವರಿಸಿ ಉರಿಯುವಿಕೆ ಅಧಿಕ ಗೊಳ್ಳಲು ಚಿಗುರನ್ನುಟ್ಟುಕೊಂಡು ಬೇಡರ ಸ್ತ್ರೀಯರ ವಿಲಾಸಗೊಂಡು ಗೋಳಾಡುತ್ತ ಓಡುತ್ತಿರುವ, ಯಕ್ಷಪತ್ನಿಯರೂ, ಕಯ್ಯಲ್ಲಿ ಹಿಡಿದಿರುವ ನವಿಲುಗರಿಯ ಪಿಂಛವು ಉರಿ ಹತ್ತಿ ಸುಡುತ್ತಿರಲು ಅದನ್ನು ಬೇಗನೆ ಬಿಸಾಡಿ, ಇಷ್ಟ ಬಂದ ಕಡೆಗೆ ಓಡುವ ಬತ್ತಲೆಯಿಂದ ಕೂಡಿದ ಜಿನದೇವತೆಗಳ ಸಮೂಹವೂ, ಕಾಡಿನ ಕಿಚ್ಚು ಹತ್ತಿ ಉರಿಯುತ್ತಿರುವ

ವಿಸಟಂಬರಿವ ನಗ್ನಾಂಗಜಿನಪ್ರಕರಮುಂ ದಾವಾನಲಂ ಕೊಂಡ ಕಾಳ್ಕೊ[1]ರಡಂತೆ ಶಿಖಿಶಿಖಾಕ ಬಳಿತಾಂಗನಾಗಿ ಬಿಗುರ್ತು ಹಾಹಾರವಂ ಪೊಣ್ಮೆ ಮುನ್ನುಂಡಜಾ[2]ರಕ್ತರಸಮುಂ ಕಾಱುತ್ತುಂ ಪಾಱುವ ಪೋತರಾಜನುಮಿಂತು ಪಲಾಯನಂಬೆತ್ತು ತಲ್ಲಣಿಸಿ ಮಲ್ಲಳಿಗೊಳ್ವ ಸಕಲ ದೇವತಾ ನಿಕುರುಂಬಮೆಲ್ಲಂ ಪುಲ್ಗರ್ಚಿಪಲ್ಗಿಱಿದು ಕೃತಾಂಜಲಿಪುಟಂಬೆರಸು ನಿಜಚರಣ ನಳಿನಮಂ ಶರಣ್ಬುಗೆ ತಜ್ಜಗದ್ಗುರು ನಿಶ್ಶಂಕ ಶಂಕರದಾಸದೇವನಭಯಮನಿತ್ತು ಕರುಣಿಸೆ ತದ್ದೇವತಾನಿವಹಮಾ ಘನಮಹಿಮನಂಘ್ರಿಯ ನೋಲಗಿಸಲೆಳಸಿ—

ಮೈಲಾರಂ ಛತ್ರಮಂ ಮಾಳವಿ ಮಣಿಮಯ ತತ್ಪಾದುಕಾದ್ವಂದ್ವಮಂ ತಾಂ
ಬೂಲೋದ್ಯತ್ಪೇಟಿಯಂ ಬ್ರಾಹ್ಮಿಕೆ ಭಸಿತವಿಳತ್ಪಾತ್ರಿಯಂ ಬ್ರಹ್ಮರ[3]ಕ್ಷಃ
ಪಾಲಂ ಸೂಚೀಗುಣಂ ತೀವಿದ ಕರಡಗೆಯಂ ಡಾಕಿನೀಶಕ್ತಿ ಶೌರ್ಯ
ಶ್ರೀಲೋಲಂ ಭೈರವಂ ಶೂಲಮನೆ ತಳೆದು ತತ್ಸೇವೆಗೆಯ್ಯುತ್ತುಮಿರ್ದರ್ ೩೮

ಚಾರುತರಾಲಯಾಂಕನರಜಂದೆಗೆವಳ್ಮಸಣಬ್ಬೆ ಸುತ್ತುವ
ಛ್ಕರಿರುಳಪ್ಪುದುಂ ಬಳಸಿ ತದ್ಗೃಹಮಂ ಘನ ಕಾಳರಾತ್ರಿಯಾ

ಕಾಡುಕೊರಡಿನಂತೆ ಅಗ್ನಿಜ್ವಾಲೆಗೆ ತುತ್ತಿನಂತಾದ ಅವಯವವುಳ್ಳವನಾಗಿ, ಭಯದಿಂದ ಹಾಹಾಕಾರ ಮಾಡುವ ಶಬ್ದವು ಹೊರ ಹೊಮ್ಮುತ್ತಿರಲು, ಈ ಪೂರ್ವದಲ್ಲಿ ಊಟಮಾಡಿದ ಆಡಿನ ರಕ್ತವನ್ನು ಕಾರುತ್ತ, ಓಡುವ ಪೋತರಾಜನೂ, ಈ ರೀತಿ ಪಲಾಯನಗೊಂಡು ಭಯದಿಂದ ಬೆರಗಾಗಿ ಸಂಕಟಗೊಂಡ ದೇವತಾಸಮೂಹ ಬಾಯಲ್ಲಿ ಹುಲ್ಲು ಕಚ್ಚಿಕೊಂಡು ಹಲ್ಲು ಕಿರಿದು ಕೈಗಳನ್ನು ಮುಗಿದವರಾಗಿ, ತನ್ನ (ಆ ಶಂಕರದಾಸಿಮಯ್ಯನ) ಚರಣಕಮಲಗಳಲ್ಲಿ ಶರಣುಹೊಗಲು ಆ ಜಗದ್ಗುರುವಾದ ಶಂಕಾರಹಿತನಾದವ ಶಂಕರದಾಸಿಮಯ್ಯನು (ಎಲ್ಲರಿಗೂ) ಅಭಯವನ್ನು ಕೊಡುತ್ತ ಕರುಣಿಸಲು ಆ ದೇವತಾ ಸಮೂಹವು ಆ ಘನಮಹಿಮಾಶಾಲಿಯ ಪಾದವನ್ನು ಸೇವಿಸುವುದಕ್ಕೋಸ್ಕರ ಅಪೇಕ್ಷೆಪಟ್ಟು— ೩೮. ಮೈಲಾರನೆಂಬುವನು ಛತ್ರಿಯನ್ನೂ, ಮಾಳವಿಯು ರತ್ನಖಚಿತವಾದ ಆ ಶಂಕರದಾಸಯ್ಯನ ಎರಡು ಪಾದುಕೆಗಳನ್ನೂ (ಆವುಗೆಗಳನ್ನೂ), ಬ್ರಾಹ್ಮಿಕೆಯು ಶ್ರೇಷ್ಠವಾದ ತಾಂಬೂಲದ ಪೆಟ್ಟಿಗೆಯನ್ನೂ, ಬ್ರಹ್ಮರಕ್ಷಃಪಾಲ ಎಂಬುವನು (ಬ್ರಹ್ಮರಾಕ್ಷಸ ಎಂಬುವನು) ಭಸ್ಮದಿಂದ ತುಂಬಿದ ಕರಂಡಕವನ್ನೂ, ಢಾಕಿಣಿಯೆಂಬ ಶಕ್ತಿಯು ಸೂಜಿ ದಾರಗಳಿಂದ ತುಂಬಿದ ಭರಣಿಯನ್ನೂ, ಪರಾಕ್ರಮವೆಂಬ ಸಂಪತ್ತಿನಲ್ಲಾಸಕ್ತನಾದ ಭೈರವನು ಶೂಲವನ್ನೂ ಹಿಡಿದು ಅವನ ಸೇವೆ ಮಾಡುತ್ತ ಇದ್ದರು. ೩೯-೪೦. ಆ ಶಂಕರದಾಸಯ್ಯನ ಮನೆಯಲ್ಲಿ, ಮಸಣಬ್ಬೆಯೆಂಬುವಳು ಮನೋಹರವಾದ ಅವನ ಮನೆಯ ಧೂಳನ್ನು ಹೊಡೆಯುತ್ತಿದ್ದಾಳೆ. ಘನಕಾಳರಾತ್ರಿ ಕಪ್ಪಾದ ರಾತ್ರಿ ಯುಂಟಾಗುತ್ತಲೇ ಅವನ

1 ಳ್ಗೊ (ಮು, ಜ) 2 ಜ(ಜ), × (ದ) 3 ರಾ (ಗ)

ಭೈರವಿ ತರ್ಪಳಿಂಧನಮನೊಳ್ದುಱುಗಾವಳೊಱಲ್ದು ಚಂಡಿಕಾ
ನಾರಿ ಕುಮಾರಿಮಾರಿ ಮಿದಿವರ್ನಱುನೆಲ್ಗಳನಲ್ಲಿ ಪಾಡುತುಂ ೩೯

ಚಳೆಯಂಗೆಯ್ವವಳೇಕನಾಥೆ ಸಲೀಲ ಬ್ರಹ್ಮಾಣಿ ನೀರ್ದರ್ಪಳು
ಜ್ವಳ ಚಾಮುಂಡಿಕೆ ಕಾವಳಾಲಯದ ಬಾಗಿಲ್ವಾಡಮಂ ಚಾರು ಕಾ
ಹಳಿಯಂ ಕಾಟಕಮೋಟಕರ್ನುಡಿಯಿಪರ್ಕಪ್ಪಂಗಳಂ ತೆತ್ತು ಮಂ
ಜುಳ ಭಾವಂ ಮಿಗೆ ಯೋಗಪೀಠನಿವಹಂ ಬಾಳ್ಗುಂ ತದೀಯಾಜ್ಞೆಯಿಂ ೪೦

ವ॥ ಸಂತತಮಿಂತೆಸೆವ ಶಂಕರದಾಸದೇವನ ನಿರಂಕುಶ ಮಹಿಮೆಯಂ ಜಗದೇಕಮಲ್ಲನೆಂಬ ಭೂವಲ್ಲಭಂ ಕೇಳ್ದಳ್ಕಱಂಗೊಂಡು—

ಫಣಿಧರನಿಂ ಪಡೆದಂ ಗಡ
ಪಣೆಗಣ್ಣಂ ಸುರರನುರುಪುವಂ ಗಡ ಪರರಂ
ಗಣಿಸಂ ಗಡ ನೋಳ್ಪೆಂ ತ
ನ್ನಣಕಮನೆಮ್ಮೂರೊಳಿರ್ಪ ದಾಮೋದರನಂ ೪೧

ಸುಟ್ಟೊಡೆ ತನ್ನಯ ಮಹಿಮೆಯು
ಕಟ್ಟುರ್ಬಟೆಯುಱಿಯಲಕ್ಕುಮೆಂದಾಗ್ರಹಮಂ

ಮನೆಯ ಸುತ್ತಲೂ ಸುತ್ತುವಳು. ಆ ಭೈರವಿಯು ಸೌದೆಯನ್ನು ತರುವಳು. ಚಂಡಿಕೆಯೆಂಬ ಹೆಂಗಸು ಪ್ರೀತಿಯಿಂದ ಅವನ ಮನೆಯ ಶ್ರೇಷ್ಠ ಗೋವುಗಳನ್ನು ಕಾಯುವಳು. ಕುಮಾರಿ ಮತ್ತು ಮಾರಿ ಎಂಬುವರಿಬ್ಬರೂ, ಗಂಧಸಾಲಿ ಬತ್ತವನ್ನು (ಪುನುಗುರಾಜ ಬತ್ತವನ್ನು) ಹಾಡುತ್ತ ಕುಟ್ಟುವರು. ಏಕನಾಥೆ ಎಂಬುವಳು (ಮನೆ ಮತ್ತು ಅಂಗಳಗಳಿಗೆ) ನೀರನ್ನು ಚಿಮುಕಿಸುವಳು. ಸಲಿಲ ಬ್ರಹ್ಮಾಣಿ ಎಂಬುವಳು ನೀರನ್ನು ತರುವಳು. ಉಜ್ವಲಳಾದ ಚಾಮುಂಡಿಕೆಯು ಮನೆಯ ಮಹಾದ್ವಾರವನ್ನು ಕಾಯುವಳು. ಕಾಟಕ ಮೋಟಕರು ಮನೋಹರವಾದ ಕಹಳೆಯನ್ನು ಊದುವರು. ಯೋಗಾಸನ ವಿಶಿಷ್ಟರಾದವರ ಸಮೂಹವು ಕಪ್ಪ ಕಾಣಿಕೆಗಳನ್ನು ಕೊಟ್ಟು ಮನೋಹರವಾದ ಅಭಿಪ್ರಾಯವನ್ನು ಚೆನ್ನಾಗಿ ಹೊಂದಿದವರಾಗಿ ಆ ಶಂಕರ ದಾಸಯ್ಯನ ಆಜ್ಞೆಯನ್ನು ಅನುಸರಿಸಿ ಬಾಳುತ್ತಿದ್ದಾರೆ. ವ॥ ಸತತವೂ ಹೀಗೆ ಶೋಭಿಸುವ ಶಂಕರ ದಾಸಿಮಾರ್ಯನ ಪ್ರತಿಬಂಧಕವಿಲ್ಲದ ಮಹಾತ್ಮ್ಯವನ್ನು ಜಗದೇಕಮಲ್ಲನೆಂಬ ರಾಜನು ಕೇಳಿ ಹೊಟ್ಟೆ ಕಿಚ್ಚನ್ನು ಹೊಂದಿದವನಾಗಿ ೪೧–೪೨. 'ಸರ್ಪಧರನಾದ ಶಿವನಿಂದ ಹಣೆಗಣ್ಣನ್ನು ಪಡೆದನಂತೆ! ದೇವತೆಗಳನ್ನು ಉರಿಸುವನಂತೆ! ಶಿವಭಕ್ತೇತರರನ್ನು ಲೆಕ್ಕಿಸುವುದಿಲ್ಲವಂತೆ! ಆತನ ಕಾರ್ಯವನ್ನು ನೋಡಿಕೊಳ್ಳುತ್ತೇನೆ. ನಮ್ಮ ಊರಿನಲ್ಲಿರುವ ದಾಮೋದರನನ್ನು ಸುಟ್ಟರೆ ಆತನ ಮಹಿಮೆಯು ಆ ಅಧಿಕ ಶೌರ್ಯವನ್ನು ತಿಳಿಯಲಿಕ್ಕೆ ಆಗುವುದು' ಎಂದು ಪಂಥಕೊಟ್ಟು ಗರ್ವಗೊಂಡು ಪಂಚಲೋಹಗಳಿಂದ ಭಯಂಕರಾಕಾರದ ದಾಮೋದರನ

ತೊಟ್ಟುರ್ಕಿ ಪಂಚಲೋಹದೆ
ದಿಟ್ಟಂ ಮಾಡಿಸಿದನುಗ್ರ ದಾಮೋದರನಂ ೪೨

ಸ್ಥೂಲಹರಿವಿಗ್ರಹಕೆ ತ
ಕ್ಕಾಲಯಮಂ ನೆಗಳ್ದು ರನ್ನದೊಡವಿಟ್ಟು ಮಹೀ
ಪಾಲಂ ಪೂಜಿಸಿ ಸಂಭ್ರಮ
ಲೋಲಂ ಮದಮತ್ತಚಿತ್ತನಿರ್ಪಿನಮಿತ್ತಲ್ ೪೩

ಶಂಕರದಾಸಂ ವೈರಿಭ
ಯಂಕರನಾವಾರ್ತೆಯಂ ಸಮಾಕರ್ಣಿಸಿ ನಿ
ಶ್ಶಂಕಮತಿಯಾರ್ಪುವೆರಸಿ ಕ
ರಂ ಕಾಯ್ಪಿಂದಲ್ಲಿಗೆಯ್ದಲುಜ್ಜುಗಿಸಿರ್ದಂ ೪೪

ವ॥ ಅನ್ನೆವರಮಾ ದಾಮೋದರಮಂದಿರಾಂತರಾಳದೊಳ್—

ಸೊಡರ್ಗುಡಿ ನಂದಿದತ್ತು ಪಗಲೂಳ್ದುದು ಜಂಬುಕರಾಜಿ ಗೋಪುರಂ
ನಡುಗಿದುದೇಳ್ಗೆವೆತ್ತ ಕಳಶಂ ಮುಱಿವಿಳ್ದುದು ಗಾರುಡಧ್ವಜಂ
ಕೆಡೆದುದು ಸಾಲಭಂಜಿಕೆಗಳಿಕ್ಕಿದುವಶ್ರುವನಲ್ಲಿ ಕೋವುಳೆ
ಳ್ದಡಿಗಡಿಗಾಡುತಿರ್ದುದು ಮುಗಿಲ್ಮಿಗೆ ಸೂಸಿತು ರಕ್ತವೃಷ್ಟಿಯುಂ ೪೫

ವಿಗ್ರಹವನ್ನು (ಆ ಜಗದೇಕಮಲ್ಲನೆಂಬ ರಾಜನು) ಸಿದ್ಧ ಮಾಡಿಸಿದನು. [ದಾಮ ಅಂದರೆ ವೈಜಯಂತಿಯೆಂಬ ಮಾಲಿಕೆಯನ್ನು ಉದರದ ಮೇಲೆ ಉಳ್ಳವನಾದ್ದರಿಂದ ದಾಮೋದರ] ೪೩–೪೪. ಆ ರಾಜನು ದಪ್ಪನಾದ ಆ ವಿಷ್ಣು ವಿಗ್ರಹಕ್ಕೆ ಯೋಗ್ಯವಾದ ಗುಡಿಯನ್ನು ಮಾಡಿಸಿ, ಅದಕ್ಕೆ ರತ್ನದ ಆಭರಣಗಳನ್ನಿಟ್ಟು ಪೂಜಿಸಿ, ಸಡಗರದಿಂದ ಕೂಡಿ, ಗರ್ವದಿಂದ ಕೂಡಿದ ಮನಸ್ಸುಳ್ಳವನಾಗಿರುತ್ತಿರಲು ಇತ್ತ ಕಡೆಗೆ ವೈರಿಭಯಂಕರನಾದ ಶಂಕರ ದಾಸಯ್ಯನು ಜಗದೇಕಮಲ್ಲರಾಜನ ಸಂಬಂಧದ ಈ ಸುದ್ದಿಯನ್ನು ಕೇಳಿ, ನಿಶ್ಶಂಕವಾದ ಬುದ್ಧಿಯಿಂದ ಶೌರ್ಯದಿಂದ ಕೂಡಿ, ಅತಿ ಕೋಪದಿಂದ ಆ ವಿಷ್ಣು ದೇವಸ್ಥಾನದ ಬಳಿಗೆ ಬರಲು ಪ್ರಯತ್ನಿಸಿ ಇದ್ದನು. ವ॥ ಅಷ್ಟರಲ್ಲಿ ಆ ದಾಮೋದರ ದೇವಾಲಯದ ಒಳ ಭಾಗದಲ್ಲಿ—೪೫. ದೀಪದ ಕುಡಿಯು ಆರಿ ಹೋಯಿತು ; ಹಗಲಿನಲ್ಲೇ ನರಿಗಳ ಸಮೂಹವು ಕೂಗತೊಡಗಿತು ; ಗುಡಿಯ ಗೋಪುರ ಅಲ್ಲಾಡತೊಡಗಿತು ; ಉನ್ನತವಾದ ಕಳಶವು ಮುರಿದು ಬಿತ್ತು ; ಗರುಡಗಂಬವು ಉರುಳಿತು. (ಗುಡಿಯಲ್ಲಿ ಕಡೆದಿದ್ದ) ಸಾಲಭಂಜಿಕೆ ಗೊಂಬೆಗಳು ಕಣ್ಣೀರನ್ನು ಸುರಿಸಿದುವು; ಅಲ್ಲಿ ಕೆಂಧೂಳು ಎದ್ದು, ಅಡಿಗಡಿಗೆ ಹಾರ ತೊಡಗಿತು. ಮೋಡವು ಹೆಚ್ಚಾಗಿ ರಕ್ತದ

ವ॥ ಇಂತುತ್ಪಾತಶತಂ ನೆಗಳ್ವಿನಮಾ ಶಂಕರದಾಸನಧ್ವರಮರ್ದನಕ್ಕೆ ತಳರ್ವ[1] ವೀರಭದ್ರನಂತೆ ವೀರಗಣಪರಿವೃತನಾ ನಗರಿಗೇಳ್ತಂದು ತದಾಲಯಪ್ರತೋಳಿಕೆಯುಂ ಪೊಕ್ಕುವಿುಕ್ಕುಮಾಮುಸಕಂ ಮಸಗಿ ಪೊಂದೆರೆಯನಾಗಳೆ ನೂಂಕಿ ಸರಿಸದೊಳ್ನಿಂದು ಮುಳಿಸಿಂ ನಿಟಿಲತಟ ಶಿಖಿನಯನಮಂ ನಸುದೆಱೆಯ ಲೊಡನೆ—

ಛಟಛಟ ನಿಸ್ವನಂ ನಿವಿುರೆ ಕೆಂಗಿಡಿ ಸೂಸೆ ಪೊದಳ್ದು ಪೊಣ್ಮಿತು
ತ್ಕಟಿಸಿ ಕಪಂಗಿ ಪೊಂಬೆಳಗನಾಳ್ದುರಿ ಮಾಲೆಯನಪ್ಪಿ ಲೋಹಸಂ
ಘಟಿತ ಮುಕುಂದವಿಗ್ರಹಮನೊತ್ತಿ ತುಡುಂಕಿ ಮುಸುಂಕಿ ಪಾಯ್ದುದ್ದ
ತ್ಪಟುನಿಟಿಲಾಕ್ಷಿವಹ್ನಿ ಪರಿಯಿಟ್ಟುದು ಸುಟ್ಟುದು ತತ್‌ಕ್ಷಣಾರ್ಧದೊಳ್ ೪೬

ಜಲದಧಿಪತಿ ಹರಿಯಂಗಂ
ಜಲಮಯಮಾಗುತ್ತೆ ವಹ್ನಿದೇವತೆಯೊಳ್ನಿ
ಶ್ಚಲಮೊಂದಿ ತೋರ್ಪವೋಲು
ಜ್ವಲಿಸಿತು ಕರಗಿದ ತದುಷ್ಣಲೋಹಾಂಗರಸಂ ೪೭

ವ॥ ಅಂತು ಹರಿಯಂಗಮೆಲ್ಲಮುರಿಗಣ್ಣುರಿಯಿನುರಿಗೊಂಡರಗಿನಂತೆ ಕರಗಿಪೋಗೆ ಶರಣಜನಂ ನಲಿಯೆ ಪರಸಮಯಂ ಕೊರಗೆ ಜಗದ್ಗುರು ಶಂಕರದಾಸನಿಂತೆಸಗಿದ ವೃತ್ತಾಂತಮನಾ ಜಗದೇಕಮಲ್ಲಂ

ಮಳೆಯನ್ನುಸುರಿಸಿತು. ವ॥ ಈ ರೀತಿ ನೂರಾರು ಉತ್ಪಾತಗಳುಂಟಾಗುತ್ತಿರಲು, ಆ ಶಂಕರದಾಸನು ಯಜ್ಞನಾಶಕ್ಕೆ ಹೋಗುವ ವೀರಭದ್ರನಂತೆ, ವೀರ ಶಿವಭಕ್ತ ಗಣಗಳಿಂದ ಸುತ್ತುವರಿಯಲ್ಪಟ್ಟವನಾಗಿ, ಆ ಜಗದೇವ ಮಹಾರಾಜನ ಪಟ್ಟಣಕ್ಕೆ ಬಂದು, ಆ ದೇವಾಲಯದ ಹೊರ ಭಾಗದ ಅಂಗಣವನ್ನು ಪ್ರವೇಶಿಸಿ ಹೆಚ್ಚಾಗಿ ಮಹಾ ಕೋಪದಿಂದ ಕೂಡಿ, ಚಿನ್ನದ ಅಡ್ಡ ತೆರೆಯನ್ನು ಸರಿಸಿ ಸಮೀಪದಲ್ಲಿ ನಿಂತು, ಕೋಪದಿಂದ ಹಣೆ ಗಣ್ಣನ್ನು ಸ್ವಲ್ಪ ತೆರೆಯಲು ಆ ಕೂಡಲೇ—೪೬. (ಅವನ ಆ) ಹಣೆಗಣ್ಣಿನ ಬೆಂಕಿಯು ಛಟ ಛಟ ! ಎಂಬ ಶಬ್ದವು ಹೆಚ್ಚಾಯಿತು ; ಕೆಂಪಾದ ಕಿಡಿಗಳು ಅಧಿಕವಾಗಿ ಹೊರ ಸೂಸಿದವು, ಉಬ್ಬಿ ಕೋಪದಿಂದ ಮುಂದುವರಿದು ಹೊಂಬಣ್ಣದ ಕಾಂತಿಯನ್ನು ಹೊಂದಿದ್ದ ಆ ಜ್ವಾಲೆಗಳ ಮಾಲೆಯು ಲೋಹದಿಂದ ಮಾಡಲ್ಪಟ್ಟ ವಿಷ್ಣುವಿನ ದೇಹ ವನ್ನು ಅಪ್ಪಿ ಒತ್ತಿ, ತುಡುಕಿ ಮುಸುಕಿ, ಮೇಲೆ ಬಿದ್ದು ಸಂಚಾರ ಮಾಡಿತು. ಕ್ಷಣಾರ್ಧ ದಲ್ಲಿ ಅದು ಸುಟ್ಟು ಹೋಯಿತು. ೪೭. ನೀರಿಗೆ ಅಧಿಪತಿಯಾದ ವಿಷ್ಣುವಿನ ದೇಹವು ಜಲಮಯವಾಗುತ್ತ ಅಗ್ನಿದೇವತೆಯೊಡನೆ, ನಿಶ್ಚಲವಾಗಿ ಸೇರಿ ಕೊಂಡು ಕಾಣುವಂತೆ ಕರಗಿ ಹೋದ ಆ ಕಾದ ಲೋಹದ ನೀರು ಪ್ರಕಾಶಿಸಿತು. ವ॥ ಆ ರೀತಿ ಹರಿಯ ವಿಗ್ರಹದ ದೇಹವೆಲ್ಲ ಉರಿಗಣ್ಣಿನ ಉರಿಯಿಂದ ಉರಿಗೆ ಸಿಕ್ಕ ಅರಗಿನಂತೆ ಕರಗಿ ಹೋಗಲಾಗಿ ಶರಣ ಜನರು ನಲಿದರು ; ಪರಸಮಯದವರು ಕೊರಗಿದರು ; ಜಗದ್ಗುರು

1 ರ್ದ (ಮು)

ಕೇಳ್ದು ಬಗೆ ಬೆದಱೆ ವಿಸ್ಮಯಂಬಟ್ಟು ಜವದಿನೇಳ್ತಂದವನತನಾಗುತಭಯಂಬಡೆದಿರ್ದನಂತಪ್ಪ ಪೆರ್ಮೆಗಡಪರ್ಗಾಗಿ ಹರಿ ಮುಖ್ಯ ಪರದೈವ ಕೋಲಾಹಲನೆಂಬ ಬಿರುದಾಂತು ಮೆಱೆವ ಶಂಕರಾವತಾರ ಶಂಕರದಾಸಯ್ಯಂಗೆ ದರಿದ್ರಾತಂಕಮೆಂದು ಶಂಕೆವೆತ್ತು ಭೋಂಕನಹಂಕಾರದಿಂ ಧಾನ್ಯಂಗಳುಂಪಿ ನಿತ್ಯ ನಿಧಿಯಂ ನಿರರ್ಥಂ ನೀಗಾಡಿದ ಮುಸುಳರ್ಗೆಮಗೆ ತಚ್ಚರಣಮೆ ಶರಣಮೆಂದಿರ್ವರೇಕಚಿತ್ತರಾಗುತ್ತಡಿಗಡಿಗೆ ಪೊಡಮಡುತ್ತುಮಾವರ್ಪಸಿಯಿಸಿರ್ದ ಮಠಕ್ಕೇಳ್ತಂದೊಳಗಣ್ಗೆ ಪೊಕ್ಕುನೋಳ್ಪಿನಮಾಗಳ್—

ಜಲಮಂ ತಾರೆಲೆ ಕಾಳಿ ಪಾದ್ಯಕೆ ಸರಾಗಂಗೆಯುದ್ದು ಸತ್ಪುಷ್ಪ ಸಂ
ಕುಲಮಂ ಗಂಧಮುನಲ್ಲಿ ನೀನಿರಿಸು ಲಂಕಾದೇವಿ ನೀಂ ಪೂಜಿಸು
ಜ್ವಲ ಜಾಲಂಧ್ರದ ದೇವಿ ಗದ್ದುಗೆಯನಿಕ್ಕೋರಂತೆ ನೀಂ ಭೂತಿಯಂ
ನಲವಿಂ ಶಾರದೆ ನೀಡು ಹಿಂಗುಳೆ ಕುಡೀ ಕರ್ಪೂರ ತಾಂಬೂಲಮಂ ೪೮

ಮೆಲ್ಲನೆ ವೀಜನಮಂ ಪಿಡಿ
ದಿಲ್ಲಿ ಕರಂ ಬೀಸು ಮಾಣಿಕಾದೇವಿಯೆನು
ತ್ತಲ್ಲಿ ನೆರೆನೆರೆದು ಸೇವಿಪ
ಸಲ್ಲಲಿತಂ ಶಕ್ತಿವೃಂದಮೇನೊಪ್ಪಿದುದೋ ೪೯

ಶಂಕರ ದಾಸಮಯ್ಯನು ಮಾಡಿದ ಈ ವೃತ್ತಾಂತವನ್ನು ಆ ಜಗದೇಕ ಮಲ್ಲನು ಕೇಳಿ, ಬೆದರಿದ ಮನಸ್ಸಿನವನಾಗಿ ಆಶ್ಚರ್ಯಗೊಂಡು, ಶೀಘ್ರವಾಗಿ ಹೊರಟು ಬಂದು ನಮಸ್ಕಾರ ಮಾಡುತ್ತ ಅಭಯವನ್ನು ಪಡೆದನು. ಅಂತಹ ಹಿರಿಮೆಗೆ ಕಾರಣನಾಗಿ ಹರಿಯೇ ಮೊದಲಾದ ಅನ್ಯದೇವ ಕೋಲಾಹಲನೆಂಬ ಬಿರುದನ್ನು ಧರಿಸಿ, ಶಂಕರನ ಅವತಾರನಾದ ಶಂಕರದಾಸಿಮಯ್ಯನಿಗೆ ಬಡತನ ಬಂದಿದೆಯೆಂಬ ಸಂಶಯವನ್ನು ಹೊಂದಿ (ಅಥವಾ ಊಹಿಸಿ), ಶೀಘ್ರವಾಗಿ ಅಹಂಕಾರದಿಂದ ಧಾನ್ಯವನ್ನು ಕಳುಹಿಸಿ ಶಾಶ್ವತವಾದ ನಮ್ಮ ತವ ನಿಧಿಯೆಂಬ ನಿಕ್ಷೇಪವನ್ನು ವ್ಯರ್ಥವಾಗಿ ಹಾಳು ಮಾಡಿಕೊಂಡು ಹುಚ್ಚರಾದ ನಮಗೆ ಆ ಶಂಕರ ದಾಸಿಮಯ್ಯನ ಚರಣವೇ ರಕ್ಷಣೆ ಕೊಡುವಂತಹುದು. ಹೀಗೆಂದು ಕೊಂಡು [ಆ ಜೇಡರ ದಾಸಯ್ಯ ಮತ್ತು ದುರ್ಗಾಂಬೆ (ದುಗ್ಗಳೆ) ಎಂಬ]ದಂಪತಿಗಳು ದೃಢ ಚಿತ್ತವುಳ್ಳವರಾಗಿ ಹೆಜ್ಜೆ ಹೆಜ್ಜೆಗೆ ನಮಸ್ಕಾರ ಮಾಡುತ್ತ ಆ ಶಂಕರ ದಾಸಯ್ಯನವರು ವಾಸ ಮಾಡಿದ್ದ ಮಠಕ್ಕೆ ಹೊರಟು ಬಂದು ಒಳಗೆ ಪ್ರವೇಶಿಸಿ, ನೋಡುತ್ತಿದ್ದಾಗ ೪೮–೪೯. ಎಲೇ ಕಾಳಿ ಜಲವನ್ನು ಪಾದ್ಯಕ್ಕೆ ತೆಗೆದುಕೊಂಡು ಬಾ ; ಗಂಗೇ ನೀನು ಪ್ರೀತಿಯಿಂದ ಶ್ರೇಷ್ಠ ಪುಷ್ಪ ಸಮೂಹ ಮತ್ತು ಗಂಧವನ್ನು ಇಲ್ಲಿ ಇಡು; ಲಂಕಾದೇವಿಯೇ (?) ನೀನು ಪೂಜೆ ಮಾಡು ; ಉಜ್ವಲ ಜಾಲೇಂದ್ರದ ದೇವಿಯೇ ಪೀಠವನ್ನು ಚನ್ನಾಗಿ ಇಡು ; ಶಾರದೆಯೇ ನೀನು ಪ್ರೀತಿಯಿಂದ ವಿಭೂತಿಯನ್ನು ಕೊಡು ; ಹಿಂಗುಲೆಯೇ, ಈ ಪಚ್ಚ ಕರ್ಪೂರ ಮಿಶ್ರಿತ ತಾಂಬೂಲವನ್ನು ಕೊಡು ; ಮಾಣಿಕಾ ದೇವಿಯೇ, ನೀನು ಬೀಸಣಿಕೆಯನ್ನು ಹಿಡಿದು ಇಲ್ಲಿ ಚೆನ್ನಾಗಿ ಮೆತ್ತಗೆ ಬೀಸು ಎನ್ನುತ್ತ ಅಲ್ಲಿ ಎಲ್ಲರೂ ನೆರೆದು ಸೇವೆ ಮಾಡುವ ಸಲ್ಲಲಿತವಾದ ಶಕ್ತಿ ದೇವಿಯರ ಗುಂಪು

ಪ್ರಣುತ ಶ್ರೀವಾಣಿಯರ್ಕಂಕಣ ಝಣರಣಿತಂ ಪೊಣ್ಮೆ ಕೆಯ್ಗಣ್ಮೆ ಲೋಲೇ
ಕ್ಷಣಧಾಮಂ ನಿಂದು ಬೀಸುತ್ತಿರೆ ಚಮರರುಹದ್ವಂದ್ವಮಂ ಪಾಡೆ ತದ್ಯ
ಕ್ಷಿಣಿಯರ್ಕರ್ಣೋತ್ತರ್ಾಡೆ ಕಾಳೀವಧು ಪೊಗಳೆ ಮಹಾಭೈರವಂ ಜಟ್ಟಿಗಂ ಯೋ
ಗಿಣಿಯರ್ಶಂಖಾದಿ ವಾದ್ಯಧ್ವನಿಯನೆಸಗೆ ಪೇರೋಲಗಂ ತೋಱತಾಗಳ್ ೫೦

ಅಣಿಮಾದ್ಯಷ್ಟ ವಿಭೂತಿಗ
ಳಣಿಯರಮೋಲಗಿಪ ದಿವ್ಯ ಸಿಂಹಾಸನದೊ
ಳ್ಮಣಿದೇಳ್ವ ನಿರ್ಜರರ ಸಂ
ದಣಿಯೊಳ್ಕಣ್ಗೆಸೆದನರರೆ ಶಂಕರದಾಸಂ ೫೧

ವ॥ ಅಂತೆಸೆವ ಶಂಕರದಾಸಯ್ಯಂಗೆ ದಂಡಪ್ರಣಾಮಂಗೆಯ್ದು ಕಾರ್ಪಣ್ಯಂದೋಱ ಕೆಯ್ಮುಗಿದು ನಿಂದು—

ಶರಣಶರಣ್ಯ ಶಾಂತ ಶಶಿಶೇಖರಸಂಗತಚಿತ್ತಚೇತನಾ
ದರ ಚರಸಂಚಯಾಂಘ್ರಿ ಸರಸೀಜ ಸದಾರ್ಚಕ ಸಾರ ಸತ್ಯಸಂ
ಗರ ತತಸಾಹಸಾಂಕ ಗಣರಂಜನ ನಿರ್ಜಿತಕಾಲ ನೀತನಿ
ರ್ಜರತತಿಲಜ್ಜ ಧೀರ ಜಯ ಶಂಕರದಾಸ ಜಗತ್ರಯಾಧಿಕಾ ೫೨

ಶೋಭಿಸುತ್ತಿತ್ತು. ೫೦. ಆಗ ಶ್ಲಾಘ್ಯರಾದ ಲಕ್ಷ್ಮೀ ಸರಸ್ವತಿಯರು ತಮ್ಮ ಕೈ ಬಳೆಗಳ ಝಣ ಝಣ ಶಬ್ದವು ಅಧಿಕಗೊಳ್ಳುತ್ತಿರಲು, ಚಂಚಲವಾದ ಕಣ್ಣುಗಳ ಕಾಂತಿಯು ಅತಿಶಯಗೊಳ್ಳುತ್ತಿರಲು ನಿಂತುಕೊಂಡು, ಎರಡು ಚಾಮರಗಳನ್ನು ಬೀಸುತ್ತಿದ್ದರು; ಆ ಯಕ್ಷ ಸ್ತ್ರೀಯರು ಹಾಡುತ್ತಿದ್ದರು ; ಕಾಳೀವಧುವು ಪ್ರೀತಿಯಿಂದ ಕುಣಿಯುತ್ತಿದ್ದಳು ; ಜಟ್ಟಿಗನಾದ ಮಹಾ ಭೈರವನು ಹೊಗಳುತ್ತಿದ್ದನು (ಸ್ತುತಿ ಪಾಠಕನಾಗಿದ್ದನು) : ಯೋಗಿನಿಯರು ಶಂಖವೇ ಮೊದಲಾದ ವಾದ್ಯ ಧ್ವನಿಯನ್ನು ಮಾಡುತ್ತಿದ್ದರು–ಹೀಗೆ ದೊಡ್ಡ ಸಭೆಯೇ ತೋರಿತು. (ಜೇಡರ ದಾಸಯ್ಯ ದುಗ್ಗಳೆಯರಿಗೆ ತೋರಿತು) ೫೧. ಶಂಕರದಾಸಯ್ಯನು ಅಣಿಮಾ ಮಹಿಮಾದಿ ಅಷ್ಟ ಸಿದ್ಧಿಗಳು ಮನೋಹರವಾಗಿ ಸೇವೆ ಮಾಡುತ್ತಿರುವ ದಿವ್ಯ ಸಿಂಹಾಸನದಲ್ಲಿ ಕುಳಿತು ಕೊಂಡಿದ್ದನು. ನಮಸ್ಕರಿಸಿ ಮೇಲೇಳುವ ದೇವತೆಗಳ ಸಮೂಹ ಸುತ್ತಲೂ ಇತ್ತು. ಹೀಗೆ (ಒಳ ಭಾಗದಲ್ಲಿ) ಕಂಗೊಳಿಸುತ್ತಿದ್ದನು. ವ॥ ಹೀಗೆ ಶೋಭಿಸುವ ಶಂಕರ ದಾಸಿಮಯ್ಯನಿಗೆ (ಜೇಡರ ದಾಸಯ್ಯ ಮತ್ತು ದುಗ್ಗಳೆಯರು) ಸಾಷ್ಟಾಂಗ ಪ್ರಣಾಮ ಮಾಡಿ, ದೈನ್ಯ ಭಾವದಿಂದ ಕೈ ಮುಗಿದು ನಿಂತು— ೫೨. ಶರಣರಿಗೆ ಸಂರಕ್ಷಕನಾದ, ಶಾಂತನಾದ, ಈಶ್ವರ ಜ್ಞಾನ ದಿಂದ ಕೂಡಿದ, ಮನಸ್ಸು, ಬುದ್ಧಿಯುಳ್ಳವರಲ್ಲಿ ಪ್ರೀತಿಯುಳ್ಳವನಾದ ಜಂಗಮ ಸಮೂಹದ ಪಾದ ಕಮಲವನ್ನು ಸದಾ ಪೂಜಿಸುವವನಾದ, ಶ್ರೇಷ್ಠರಾದ ಸತ್ಯ ಪ್ರತಿಜ್ಞೆಯುಳ್ಳ, ವಿಶೇಷವಾದ ಸಾಹಸವೇ ಲಕ್ಷಣವಾಗಿ ಉಳ್ಳ, ಶಿವಗಣವನ್ನು ಸಂತೋಷ ಪಡಿಸುವವನಾಗಿ, ಯಮನನ್ನು ಜಯಿಸಿದವನಾಗಿ, ದೇವತೆಗಳ ಸಮೂಹಕ್ಕೆ

ವ॥ ಎಂದು ಸನ್ನುತಿಗೆಯ್ದು—

ಕರುಣಾಸಾಗರ ಜೀಯ ದಿವ್ಯ ಮಹಿಮಾಲಂಕಾರ ಭಾಳಾಕ್ಷ ಶಂ
ಕರದಾಸಾರ್ಯ ಭವನ್ಮಹತ್ವಮನದೆಂತುಂ ಕಾಣದಜ್ಞರ್ಗೆ ನೀಂ
ಶರಣಾಗೊಲ್ದೆಮಗನ್ಯಥಾಗತಿವಿಹೀನರ್ಗೆಂದು ಬಾಯ್ವಿಟ್ಟು ತ
ಚ್ಚರಣಾಂಭೋರುಹಯುಗ್ಮದೊಳ್ಕೆಡೆದರಾ ದುರ್ಗಾಂಬೆಯುಂ ದಾಸನುಂ ೫೩

ವ॥ ಎಱಗಿ ನಿಧಿ ಬಯಲಾದಂದವಂನಱಿಪೆ ಶಂಕರದಾಸಂ ದರಸ್ಮಿತಾಸ್ಯನಾಗಿ—

ಶರಣಾರ್ಥಿರವಂಗುಡುತುಂ
ಶರಣಂ ನಡೆ ನೋಡಿ ನುಡಿದನೆಮಗಾದೆಡರಂ
ಪರಿಹರಿಸಿ ಧಾನ್ಯಮಿತ್ತು
ದ್ಧರಿಸಿದೆ ನಿನ್ನಂತಿರಾಪ್ತ[1]ತಮರೆಮಗೊಳರೇ ೫೪

ಇನ್ನೆವರಮೆನ್ನೆಡರನೆಲೆ
ನಿನ್ನವೊಲಾರ್ಪಱಿದರಯ್ಯ ಕಡುಬಡತನದಿಂ
ದನ್ನವೆವ ಭಕ್ತತತಿಗೆ ಜ
ಗನ್ನುತ ನೀಂ ಬಗೆವೊಡಮರಭೂರುಹಮಲ್ತೇ ೫೫

ನಾಚಿಕೆಯನ್ನುಂಟುಮಾಡಿದವನಾಗಿ ಧೈರ್ಯ ಶಾಲಿಯಾಗಿ, ಮೂರು ಲೋಕಕ್ಕೆ ಒಡೆಯನಾಗಿರುವ ಶಂಕರದಾಸಯ್ಯನಿಗೆ ಜಯ ಜಯ ವ॥ ಎಂದು ಸ್ತೋತ್ರ ಮಾಡಿ ೫೩. ಕರುಣಾಸಾಗರನೇ, ಸ್ವಾಮಿಯೇ, ಶ್ರೇಷ್ಠವಾದ ಮಹಿಮೆಯೇ ಆಭರಣವಾಗಿ ಉಳ್ಳವನೇ ಹಣೆಗಣ್ಣನ್ನುಳ್ಳ ಶಂಕರದಾಸಯ್ಯನೇ, ನಿನ್ನ ಮಹಿಮೆಯನ್ನು ಯಾವ ರೀತಿಯಿಂದಲೂ ಕಾಣದ ಮೂಢರಾದ ನಮಗೆ ನೀನಲ್ಲದೆ, ಬೇರೆ ಗತಿ ಇಲ್ಲ. (ಇಂಥ) ನಮಗೆ ನೀನೇ ಸಂರಕ್ಷಕನಾಗು ಎಂದು ಆ ದುಗ್ಗಳೆಯೂ. ಜೇಡರದಾಸಯ್ಯನೂ ಬಾಯಿ ಬಿಟ್ಟು ಕೇಳಿಕೊಂಡು, ಅವನ ಎರಡೂ ಪಾದಕಮಲಗಳಲ್ಲಿ ನಮಸ್ಕಾರ ಮಾಡಿದರು. ವ॥ ಹೀಗೆ ನಮಸ್ಕರಿಸಿ (ತಮ್ಮ) ನಿಕ್ಷೇಪವು ಕಾಣದಂತಾದ ರೀತಿಯನ್ನು ಹೇಳಿಕೊಳ್ಳಲು ಶಂಕರದಾಸಯ್ಯನು ಮುಗುಳ್ನಗೆಯಿಂದ ಕೂಡಿದ ಮುಖವುಳ್ಳವನಾಗಿ—೫೪. ಶಂಕರದಾಸನು—'ಶರಣಾರ್ಥಿ' ಎಂಬ ಶಬ್ದವನ್ನು ಮಾಡುತ್ತ ಚೆನ್ನಾಗಿ ನೋಡಿ, ನುಡಿದನು:—''ನಮಗೆ ಆದ ತೊಂದರೆಯನ್ನು ಧಾನ್ಯವನ್ನು ಕೊಟ್ಟು ಪರಿಹರಿಸಿ ಉದ್ಧರಿಸಿದ ನಿನ್ನ ಹಾಗೆ ನಮಗೆ ಅತ್ಯಂತ ಮಿತ್ರರು ಬೇರೆ ಉಂಟೇ ? ೫೫. ಅಯ್ಯಾ ಇಲ್ಲಿಯವರೆಗೆ ನಿನ್ನ ಹಾಗೆ ನನ್ನ ತೊಂದರೆಯನ್ನು ಹರಿದವರು ಯಾರು ? ವಿಚಾರ ಮಾಡಿ ನೋಡಿದರೆ, ಜಗತ್ತಿನಿಂದಲೇ ಶ್ಲಾಘಿಸಲ್ಪಡುವ ನೀನು ಬಡತನದಿಂದ ಕ್ಷೀಣರಾಗುತ್ತಿರುವ ಭಕ್ತಸಮೂಹಕ್ಕೆ

---

1 ತ್ಯ(ಮು)

ಜಲನಿಧಿಯೆನಿಪಕ್ಷಯ ನವ
ಜಲನಿಧಿಯಂ ಪಡೆದು ಜಲಮನೀವಬ್ದದ ವೋ
ಲ್ಸಲೆ ನೀಂ ಧಾನ್ಯದ ನಿಧಿವಡೆ
ದಲಸದೆ ಧರೆಗೀವೆ ಧಾನ್ಯಮಂ ಘನಮಹಿಮಾ ೫೬

ಎನಗಿನ್ನುಂ ಧಾನ್ಯಮಂ ಕೊಟ್ಟಪನತುಳವದಾನ್ಯೋತ್ತಮಂ ನನ್ನಿಯೆಂದಾಂ
ನೆನೆವುಶ್ತಿರ್ಪನ್ನೆಗಂ ನಿನ್ನಯ ನಿಧಿ ಬಯಲಾಯ್ತಕ್ಕಟಾ ದೇವನೇಂ ಕೊಂ
ಡನೊ ಚೋರರ್ಬಂದು ಕಳ್ದೊಯ್ದರೊ ಧರಣಿತಳಂ ನುಂಗಿತೋ ಖೇಚರರ್ಕಿ
ಮ್ಮನೆ ಕೊಂಡೇಂ ಪೋದರೋ ತನ್ನಿಧಿಯನುಸುರದೇಕಿರ್ದಪೈ ಭಕ್ತವರ್ಯಾ ೫೭

ಮೃಡನಿತ್ತಕ್ಷಯ ನಿಧಿಯಂ
ತಡಂಗೆ ನೀಂ ಸುಮ್ಮನಿರ್ಪುದೇ ತನ್ಮೃಡನಂ
ತಡೆದೀಗಳ್ಕೊಟ್ಟಲ್ಲದೆ
ಬಿಡೆನೆನೆ ಮಗುಳ್ದೀವನಲ್ತೆ ನಿನಗಾ ನಿಧಿಯಂ ೫೮

ಬಡತನದಿಂ ನವೆದಪೆನೆ
ನ್ನಡಿವಿಡಿದೊಡೆ ನಿನಗದೇನನಿತ್ತಪೆನಿನ್ನುಂ
ಬಿಡದೊಂದಂಬರಮಂ ನೀಂ
ಮೃಡಂಗೆ ನೆಯ್ದಿತ್ತು ಪಡೆವುದಕ್ಷಯ ನಿಧಿಯಂ ೫೯

ಕಲ್ಪವೃಕ್ಷ ಪ್ರಾಯನಲ್ಲವೇ? ೫೬. ಘನಮಹಿಮನೇ, 'ಜಲನಿಧಿ' ಎನಿಸುವ ಕ್ಷೀಣವಾಗದ ಸಮುದ್ರವನ್ನು ಪಡೆದು ಜಲವನ್ನು ಕೊಡುವ ಮೋಡದ ಹಾಗೆ ನೀನು ಚೆನ್ನಾಗಿ ಧಾನ್ಯದ ನಿಧಿಯನ್ನು ಪಡೆದು ಆಲಸ್ಯಗೊಳ್ಳದೆ ಭೂಮಿಗೆ ಧಾನ್ಯವನ್ನು ಕೊಡುತ್ತಿದ್ದೀಯೆ ೫೭. ಇನ್ನೂ ನನಗೆ ಧಾನ್ಯವನ್ನು ಕೊಡುವನು ; ಅಸದೃಶರಾದ ದಾನಿಗಳಲ್ಲಿ ಶ್ರೇಷ್ಠನಾದವನು ಇದು ನಿಶ್ಚಯ ! ಎಂದು ನಾನು (ನಿನ್ನನ್ನು) ನೆನೆಯುತ್ತ ಇರುವಷ್ಟರಲ್ಲಿ ನಿನ್ನ ನಿಧಿಯೇ ಬಯಲಾಯಿತೇ ! ಅಕ್ಕಟಾ !! ಆ ನಿಕ್ಷೇಪವನ್ನು ಈಶ್ವರನು ತೆಗೆದು ಕೊಂಡನೋ ? ಏನು ಕಳ್ಳರು ಕದ್ದೊಯ್ದರೋ ? (ಅಥವಾ) ಈ ಭೂಮಿಯೇ ನುಂಗಿತೋ ? ದೇವತೆಗಳು ಸುಮ್ಮನೆ ತೆಗೆದುಕೊಂಡು ಹೋಗಿರುವರೋ ? ಭಕ್ತಶ್ರೇಷ್ಠನೇ, ಹೇಳದೆ ಏಕೆ ಇದ್ದೀಯೆ ? ೫೮. ಪರಮೇಶ್ವರನು ಕೊಟ್ಟ ಅಕ್ಷಯನಿಧಿ ಹಾಗೆ ಅಡಗಿಹೋದರೆ ನೀನು ಸುಮ್ಮನೇಕಿರುವೆ ? ಆ ಮೃಡನನ್ನೇ ತಡೆದು ಈಗ ಕೊಟ್ಟಲ್ಲದೆ ಬಿಡುವುದಿಲ್ಲ ಎಂದರೆ ಪುನಃ ನಿನಗೆ ಆ ನಿಧಿಯನ್ನು ಕೊಡುವನಲ್ಲವೆ ? ೫೯. ಬಡತನದಿಂದ (ನಾನು) ಕೃಶನಾಗುತ್ತಿದ್ದೇನೆ. ನನ್ನ ಪಾದವನ್ನು ಹಿಡಿದರೆ ನಿನಗೆ ನಾನು ಏನನ್ನು ತಾನೇ ಕೊಟ್ಟೇನು ? ಈಗಲೂ ನೀನು ತಪ್ಪದೆ ಒಂದು ವಸ್ತ್ರ

ಒಂದಂ ಕೊಟ್ಟೆರಡು ಕೊ
ಳ್ವಂದದ ವಿಕ್ರಯದ ಜಾಣ್ಮೆ ನಿಮಗೊಪ್ಪುಗುಮೇ
ನೆಂದಱಿಯೆನದಂ ನಿನಗಾ
ವಂದದಿನೊಲ್ದೀಶನೀವನೆನಗಿತ್ತಪನೇ ೬೦

ಭಯಭಕ್ತಿಭರಿತ ಚರಿತಂ
ನಯವಿನಯ ಸಮೇತನಖಿಳಮಾನ್ಯ ವದಾನ್ಯಂ
ಕ್ರಯವಿಕ್ರಯ ಕ್ರಿಯಾ ನಿ
ರ್ಣಯ ನಿಪುಣಂ ನೀನೆ ದಾಸ ನಿನಗೆಣೆಯಾವಂ ೬೧

ವ॥ ಎಂದು ವಿಡಂಬಿಸಿ ನುಡಿದು ಖನಿತ್ರಮಂ ಕೆಯ್ಯೊಳಿತ್ತು ಭೂತಳಮನಿದನೀಗಳಗುಳೆಂದು ಚರಚರಣರಜಮನಲ್ಲಿ ತಳಿದು ಶಂಕರದಾಸಂ ದಾಸಂಗೆ ಬೆಸಸೆ ತದಾಜ್ಞೆಯಂ ಕೆಯ್ಕೊಂಡಾ ಧರಿತ್ರಿಯನ ವನಗುಳಲೊಡಮಪರಿಮಿತಂ ಪೊನ್ನರಾಶಿ ಪೊಱಸೂಸೆ ಕಂಡು—

ಪಿರಿದದ್ಭುತಮೊಗೆಯೆ ಭಯ
ಸ್ಫುರಿತಾಂತಃಕರಣರಾಗಿ ದುರ್ಗಾಂಬಿಕೆಯುಂ
ವರ ದಾಸಯ್ಯನುಮಾ ಶಂ
ಕರದಾಸಯ್ಯಾಂಘ್ರಿವಿಡಿದು ಪೊಡಮಟ್ಟರ್ದರ್ ೬೨

ವನ್ನು ನೇಯ್ದು ಶಿವನಿಗೆ ಕೊಟ್ಟು ಅಕ್ಷಯನಿಧಿಯನ್ನು ಪಡೆದರಾಯಿತು. ೬೦. ಒಂದು ಕೊಟ್ಟು ಒಂದು ಕೊಳ್ಳುವ ಅಂದವಾದ ವ್ಯಾಪಾರದ ಜಾಣ್ಮೆ ನಿಮಗೆ ಒಪ್ಪುವುದು. (ನಾನು) ಇದನ್ನು ಏನೆಂದೂ ತಿಳಿಯೆನು. ನಿನಗೆ ಈಶ್ವರನು ಯಾವ ರೀತಿಯಿಂದಲಾದರೂ ಕೊಡುವನು ! ನನಗೆ ಕೊಡುವನೇ ? ೬೧. ದಾಸಯ್ಯನೇ, ನೀನೇ ಭಯದಿಂದ ಕೂಡಿದ ಭಕ್ತಿಯ ಚರಿತ್ರೆಯುಳ್ಳವನು ; ನಯ, ವಿನಯಗಳಿಂದ ಸಮೇತನಾದವನು ; ಸಕಲರಿಂದ ಸನ್ಮಾನಿಸುವುದಕ್ಕೆ ಯೋಗ್ಯನಾದ ದಾನಶಾಲಿಯು : ಕ್ರಯ ವಿಕ್ರಯ (ಕೊಡುವ ಕೊಳ್ಳುವ) ಕಾರ್ಯದ ನಿಶ್ಚಯದಲ್ಲಿ ಕುಶಲನಾದವನು ? ನಿನಗೆ ಸದೃಶನಾದವನು ಯಾವನು ? ವ॥ ಹೀಗೆಂದು ಶಂಕರದಾಸಯ್ಯನು ಅಪಹಾಸ್ಯ ಮಾಡಿ ನುಡಿದು ಗುದ್ದಲಿಯನ್ನು (ಜೇಡರದಾಸಯ್ಯನ) ಕೈಗೆ ಕೊಟ್ಟು, ಈ ಭೂಮಿಯನ್ನು ಈಗ ಅಗೆ, ಎಂದು ಅಲ್ಲಿ ಜಂಗಮರ ಪಾದ ಧೂಳಿಯನ್ನು ಉದುರಿಸಿ, ಜೇಡರದಾಸಯ್ಯನಿಗೆ ಅಜ್ಞಾಪಿಸಲು, ಅವನು ಆ ಆಜ್ಞೆಯನ್ನು ಸ್ವೀಕರಿಸಿ, ಭೂಮಿಯನ್ನು ಅಗೆತ ಮಾಡಲು ಆ ಕೂಡಲೇ ಅಪರಿಮಿತವಾದ ಬಂಗಾರದ ರಾಶಿಯು ಹೊರಕ್ಕೆ ಹೊರಡಲು ಅದನ್ನು ಕಂಡು—೬೨ ಹಿರಿದಾದ ಆಶ್ಚರ್ಯವುಂಟಾಗಲು ಆ ದುಗ್ಗಳೆಯೂ ಶ್ರೇಷ್ಠ ದಾಸಿಮಾರ್ಯನೂ ಭೀತಿಯಿಂದ ಕೂಡಿದ ಮನಸ್ಸುಳ್ಳವರಾಗಿ ಶಂಕರದಾಸಿಮಾರ್ಯನ ಪಾದ

ದೇವ ಭವದೀಯ ಮಹಿಮೆಯ
ನೀ ವಸುಮತಿಯಲ್ಲಿ ನೋಳ್ಪೊಡಾನೆನಿಸಜೀವಂ
ಪಾವನಮೂರ್ತಿ ಕೃಪಾಕರ
ಭಾವಜಮದಹರವಿಲಾಸ ಶಂಕರದಾಸಾ ೬೩

ಪರಶಿವಮೂರ್ತಿ ನಿನ್ನನಖಿಳೋನ್ನತ ಭಾಗ್ಯಸಮಗ್ರನೆಂದು ನಿ
ರ್ಧರಿಸದೆ ಮೇಣಕಿಂಚನನೆನುತ್ತವಿವೇಕದೆ ವಿತ್ತಪಂಗೆ ಪೊ
ನ್ನೊರೆಯನಹೀಶ್ವರಂಗೆ ಪೊಸ ಟಿಕ್ಕೆಯನೀವವೊಲಲ್ಪ ಧಾನ್ಯಮಂ
ಸರಭಸಮಿತ್ತು ಮಾಡಿದಪರಾಧ[1]ವಿದಂ[1] ಕ್ಷಮಿಸಾರ್ಯಶೇಖರಾ ೬೪

ಪಶುವಾಂ ಪತಿ ನೀಂ ನಿಮ್ಮಯ
ಶಿಶುವಾಂ ಸಲೆ ತಂದೆ ನೀಂ ಮಲೀಮಸಮತಿಯಾಂ
ಕುಶಲಮತಿ ನೀನವಿದ್ಯಾ
ವಶನಾಂ ವಶಿ ನೀನವದಾನಿಯಾಂ ವಿತರಣ ನೀಂ ೬೫

ವ|| ಎಂದತಿದೈನ್ಯದಿಂ ವನಿತೆವೆರಸಿ ಸರ್ವಾಪರಾಧಮಂ ಸೈರಿಪುದೆಂದಡಿದಾವರೆಗೆಱಗಿರ್ದ ದಾಸಯ್ಯನಂ ಶಂಕರದಾಸಯ್ಯಂ ಕರುಣಾರ್ದ್ರ ಕಟಾಕ್ಷದಿಂ ನಿರೀಕ್ಷಿಸಿ ಮನ್ನಿಸಿ ತೆಗೆದೆತ್ತುತಭಯಮಿತ್ತು ಮುನ್ನಿನಂತಿರಕ್ಷಯನಿಧಿಯುಂ ಕರುಣಿಸಿ ದಂಪತಿಯುಂ ಭಕ್ತಿಸುಖದೊಳಿರಿಸಿದನದು ಕಾರಣದಿಂ—

ವಿಡಿದು ನಮಸ್ಕರಿಸಿ ಇದ್ದರು. ೬೩. ಪಾವನ ಮೂರ್ತಿಯೇ, ಕೃಪಾಕರನೇ, ಮನ್ಮಥನ ಗರ್ವವನ್ನು ನಾಶಗೊಳಿಸಿದ ಲೀಲೆಯ ಸ್ವಾಮಿಯಾದ ಶಂಕರದಾಸಿಮಾರ್ಯನೇ ಈ ಭೂಮಿಯಲ್ಲಿ ನಿನ್ನ ಮಹತ್ವವನ್ನು ನೋಡುವುದಕ್ಕೆ ನಾನೆಷ್ಟರವನು ? ೬೪. ಈಶ್ವರ ಸ್ವರೂಪನೇ, ಶ್ರೇಷ್ಠರಲ್ಲಿ ಶ್ರೇಷ್ಠನೇ, ನಿನ್ನನ್ನು ಸಮಸ್ತ ಉತ್ಕೃಷ್ಟವಾದ ಐಶ್ವರ್ಯಗಳಿಂದ ಸಂಪೂರ್ಣನಾದವನೆಂದು ನಿರ್ಧರಿಸಿದೆ, ದರಿದ್ರನೆಂದು ಅವಿವೇಕದಿಂದ ಕುಭೇರನಿಗೆ ಚಿನ್ನದ ಒಂದು ಒರೆಯನ್ನು, ಆದಿಶೇಷನಿಗೆ ನೂತನ ಹಾಸಿಗೆಯನ್ನು ಕೊಡುವ ಹಾಗೆ ರಭಸದಿಂದ ಕೂಡಿ ಅಲ್ಪವಾದ ಧಾನ್ಯವನ್ನು ಕೊಟ್ಟು ಮಾಡಿದ ನನ್ನ ಅಪರಾಧವನ್ನು ಕ್ಷಮಿಸು. ೬೫. ನಾನು ಪಶು ; ನೀನು ಪತಿ. ನಾನು ನಿಮ್ಮ ಶಿಶು; ನೀನೇ ನನ್ನ ತಂದೆ. ಮಲಿನವಾದ ಬುದ್ಧಿಯವನು ನಾನು ; ನೀನು ಪ್ರೌಢ ಬುದ್ಧಿಯವನು. ನಾನು ಅವಿದ್ಯೆಯೆಂಬ ಕ್ಲೇಶಕ್ಕೆ ಅಧೀನನು ; ನೀನು ವಿದ್ಯೆಯ ಸ್ವಾಧೀನವುಳ್ಳವನು. ನಾನು ದಾನಗುಣವಿಲ್ಲದವನು; ನೀನು ದಾನಗುಣವುಳ್ಳವನು. ವ|| ಹೀಗೆಂದು ಅತಿ ದೈನ್ಯದಿಂದ ತನ್ನ ಹೆಂಡತಿಯೊಡನೆ ಸರ್ವಾಪರಾಧಗಳನ್ನು ಕ್ಷಮಿಸಬೇಕೆಂದು ಅಡಿದಾವರೆಗಳಿಗೆ ನಮಸ್ಕರಿಸಿದ್ದ ದಾಸಯ್ಯನನ್ನು ಶಂಕರದಾಸಯ್ಯನು ಕರುಣೆಯಿಂದ ಆರ್ದ್ರಗೊಂಡ ಕಡೆಗಣ್ಣಿನ ಕಾಂತಿಯಿಂದ ನೋಡಿ, ಮನ್ನಣೆ ಮಾಡಿ ಹಿಡಿದೆತ್ತುತ್ತ ಅಭಯ ಪ್ರದಾನ ಮಾಡಿ, ಮೊದಲಿನ ಹಾಗಿರುವಂತೆ ಅಕ್ಷಯ ನಿಧಿಯನ್ನು ಕರುಣಿಸಿ

---

1 ಮನೀಂ(ಗ)

ಶರಣರೊಳೆ ಮದಮುದಾಗದು
ಧರೆಯೊಳ್ಭಕ್ತಂಗೆ ಭಕ್ತಿಚಂದ್ರಿಕೆಗದು ವಾ
ರ್ಧರಪಟಲಮುದಳಿದೊಡೆ ಸುಖ
ಶರನಿಧಿ ವರ್ಧಿಪುದು ಕೇಳ್ಗುಣಾರ್ಣವಚಂದ್ರಾ ೬೬

ಇಂತೆಂದಾ ಮಾಚಿದೇವಂ ಪದೆದೊರೆದ ಮಹಾಭಕ್ತವೃತ್ತಾಂತಮಂ ಕೇ
ಳ್ದಂತಿಂತೆಂದೂಹಿಸಲ್ಬಾರದ ಘನ ಸುಖಮಂ ತಾಳ್ದು ಸದ್ಭಕ್ತಿಯುಕ್ತ
ಸ್ವಾಂತಂ ತತ್ಪಾದಪದ್ಮಕ್ಕೆಱಗಿ ನುತಿಸುತುಂ ರಂಜಿಸಿರ್ದಂ ದಿಗಂತಾ
ಕ್ರಾಂತ ಸ್ವಚ್ಛಪ್ರಭಾಭಾಸುರಯಶನವನೀಮಾನಿನೀಮಾನನೀಯಂ ೬೭

ವಿಲಸಿತ ಕುಂದಸುಸ್ಮಿತೆ ಮುಕುಂದ ಸಮರ್ಚಿತೆ ನೀಲವೇಣಿ ಮಂ
ಜುಲತರಪದ್ಮಪಾಣಿ ಮಕರಧ್ವಜಪಾಲಿನಿ ಕಚ್ಛಪಾಂಘ್ರಿ ನಿ
ಶ್ಚಲವರದಾತ್ರಿ ಶಂಭುನಿಧಿಯೆಂದೆನಿಪಗ್ಗದನೂನಕಾಂತಿಸ
ಲ್ಲಲಿತತನೂವಿರಾಜಿತೆ ಮಹೇಶ್ವರಿ ರಕ್ಷಿಪುದೆನ್ನನಳ್ಕಱಿಂ ೬೮

ಇದು ವಿನಿಮದಖಿಳ ಸುರಾಸುರೇಂದ್ರಮಕುಟತಟಘಟಿತ ಮಣಿಗಣಾಗಣಿತ ರುಚಿನಿಚಯ
ತರುಣಾರುಣಾತಪಪರಿಲಸಿತ ಪರಮ ಶಿವಲಿಂಗ ಪಾದಾರವಿಂದಪರಾಗಭಸಿತ
ಭಾಸುರಲಲಾಟಪಟ್ಟಸರಸಜನಮಾನಿತೋಭಯಕವಿತಾವಿಶಾರದ
ಶ್ರೀಷಡಕ್ಷರಿದೇವಭಕ್ತಿವಿರಚಿತ

ಕೊಟ್ಟು ಆ ದಂಪತಿಗಳನ್ನು ಭಕ್ತಿ ಸುಖದೊಳಿರಿಸಿದನು. ಆ ಕಾರಣದಿಂದ ೬೬. ಪ್ರಮಥ ಗಣಗಳೆಂಬ ಸಮುದ್ರಕ್ಕೆ ಚಂದ್ರನೋಪಾದಿಯಲ್ಲಿರುವ ಬಸವಣ್ಣ, ಕೇಳು ; ಭೂಮಿಯಲ್ಲಿ ಭಕ್ತನಾದವನಿಗೆ ಶರಣರಲ್ಲಿ ಮದವು ಸಲ್ಲದು. ಆ ಗರ್ವವು ಅಳಿದರೆ ಸೌಖ್ಯವೆಂಬ ಸಮುದ್ರವು ವೃದ್ಧಿಗೊಳ್ಳುವುದು. ೬೭. ಹೀಗೆಂದು ಆ ಮಾಚಿದೇವನು ಪ್ರೀತಿಯಿಂದ ಹೇಳಿದ ಮಹಾಭಕ್ತರ ವೃತ್ತಾಂತವನ್ನು, ದಿಕ್ಕುಗಳ ಕೊನೆಯುವರೆಗೂ ಹರಡಿರುವ ಕಾಂತಿಯಿಂದಪ್ರಕಾಶಿಸುವ ಯಶಸ್ಸುಳ್ಳವನೂ, ಭೂಕಾಂತೆಯಿಂದ ಸನ್ಮಾನಿಸಲ್ಪಡುವುದಕ್ಕೆ ಯೋಗ್ಯನಾದವನೂ ಆದ ಬಸವೇಶ್ವರನು ಕೇಳಿ, ಹಾಗೆ ಹೀಗೆ ಎಂದು ಊಹಿಸಲಿಕ್ಕೆ ಬಾರದ ಸುಖವನ್ನು ಹೊಂದಿ, ಒಳ್ಳೆಯ ಭಕ್ತಿಯಿಂದ ಕೂಡಿದ ಮನಸ್ಸುಳ್ಳವನಾಗಿ, ಆ ಮಾಚಿದೇವನ ಚರಣಕಮಲಗಳಿಗೆ ನಮಸ್ಕರಿಸಿ, ಸ್ತೋತ್ರಮಾಡುತ್ತ ಶೋಭಿಸುತ್ತಿದ್ದನು. ೬೮. ಪ್ರಕಾಶಿಸುವ ಮೊಲ್ಲೆಯ ಹೂವಿನಂತೆ ಇರುವ ಮುಗುಳು ನಗೆಯುಳ್ಳವಳೇ, ವಿಷ್ಣುವಿನಿಂದ ಪೂಜಿಸಿಕೊಳ್ಳಲ್ಪಟ್ಟವಳೇ, ನೀಲವಾದ ಜಡೆಯುಳ್ಳವಳೇ, ಅತಿ ಮನೋಹರವಾದ ತಾವರೆಯಂತಿರುವ ಹಸ್ತವುಳ್ಳವಳೇ. ಮನ್ಮಥನನ್ನು ಸಂರಕ್ಷಿಸಿದವಳೇ, ಆಮೆಯಂತೆ (ಮಧ್ಯಭಾಗದಲ್ಲಿ ಸ್ವಲ್ಪ ಉಬ್ಬಿದ) ಇರುವ ಪಾದ

ಶ್ರೀಮದ್ ಬಸವರಾಜವಿಜಯಮಹಾಪುರಾಣದೊಳ್ ಶಂಕರದಾಸದೇವಕಥಾಕಥನಂ
ತ್ರಯೋದಶಾಶ್ವಾಸಂ ಸಮಾಪ್ತಂ

ಅಂತು ಆಶ್ವಾಸ ೧೩ಕ್ಕೆ ಪದಗಣನೆ ೧೧೪೬ಕ್ಕೆ ಮಂಗಳಮಹಾ ಶ್ರೀ॥

ವುಳ್ಳವಳೇ, ಸ್ಥಿರವಾದ ವರವನ್ನು ಕೊಡುವವಳೇ, ಈಶ್ವರನ ನಿಕ್ಷೇಪವೆನಿಸಿದವಳೇ, ಶ್ರೇಷ್ಠವಾದ ಈ ಕೊರತೆಯಿಲ್ಲದ ಕಾಂತಿಯಿಂದ ಕೂಡಿದ ಲಲಿತವಾದ ದೇಹದಿಂದ ಪ್ರಕಾಶಿಸುವವಳೇ, ಮಹೇಶ್ವರಿಯೇ ನನ್ನನ್ನು ಪ್ರೀತಿಯಿಂದ ರಕ್ಷಿಸುವುದು.

ಹದಿಮೂರನೆಯ ಆಶ್ವಾಸವು ಸಮಾಪ್ತವಾಯಿತು.

ಚತುರ್ದಶಾಶ್ವಾಸಂ

[ಸಿರಿಯಾಳ್ವನ ಕಥೆ]

ಶ್ರೀದೇವೀಮಾನಸ ಹ
ರ್ಷೋದಯಕರರೂಪನನಘನನವಧಿಮಹಿಮಂ
ವೇದಾಶ್ವನಖಿಳಜಗದು
ತ್ಪಾದಕನೆಮಗೀಗೆ ಸೌಖ್ಯಮಂ ಶಿವಲಿಂಗಂ ೧

ಅಲಘುತರವಿಕ್ರಮಂ ಮಂ
ಜುಲಗುಣನಿಧಿ ಮಾಚಿದೇವನಿನ್ನುಂ ಕೇಳೆಂ
ದೊಲವಿಂದುಸುರ್ದಂ ಶುಭನಿ
ಶ್ಚಲಮತಿ ಬಸವಂಗೆ ಭಕ್ತನೊರ್ವನ ಕಥೆಯಂ ೨

ವ॥ ಅದೆಂತೆನೆ—

ಅವನೀಭಾಗದೊಳೇಳ್ಗೆವೆತ್ತ ಜಸಮಂ ತಾಳ್ದೊಪ್ಪುಗುಂ ಸಂಪದ
ಪ್ರವಿರಾಜದ್ಗೃಹರಾಜಿ ದಿವ್ಯಮಣಿಹರ್ಮ್ಯವ್ರಾತವಿಭ್ರಾಜಿ ಶಾಂ
ಭವಗೇಹವ್ರಜಶೋಭಿ ನವ್ಯಕನಕಪ್ರಾಕಾರಕೀರ್ಣಾಂಶು ನೀ
ಡೆ ವಿಯಲ್ಲಕ್ಷ್ಮಿಗೆ ಕಾಂಚಿಯಂ ಮಿಸುಪ ಕಾಂಚೀನಾಮ ಚಂಚತ್ಪುರಂ ೩

ಸಿರಿಯಾಳ್ವನ ಕಥೆ

೧. ಮಂಗಳಕರವಾದ ಪಾರ್ವತೀ ದೇವಿಯ ಮನಸ್ಸಿಗೆ ಸಂತೋಷಾಭಿವೃದ್ಧಿಯನ್ನುಂಟುಮಾಡುವ ಆಕಾರವುಳ್ಳವನೂ, ಪಾಪರಹಿತನೂ, ಕೊನೆಯೇ ಇಲ್ಲದ ಮಹತ್ವವನ್ನುಳ್ಳವೇದಗಳೇ ಕುದುರೆಗಳಾಗಿ ಉಳ್ಳವನೂ, ಸಮಸ್ತಲೋಕ ಜನಕನೂ ಆದ ಶಿವಲಿಂಗನು, ನಮಗೆ ಸೌಖ್ಯವನ್ನು ಕೊಡಲಿ. ೨. ಅತ್ಯಧಿಕ ಪರಾಕ್ರಮವುಳ್ಳ ಮನೋಹರವಾದ ಗುಣಗಳ ನಿಧಿಯಾದ ಮಾಚಿ ದೇವನು ಇನ್ನೂ ಕೇಳು ಎಂದು ಪ್ರೀತಿಯಿಂದ ಆ ಶ್ರೇಷ್ಠವಾದ ನಿಶ್ಚಲ ಬುದ್ಧಿಯ ಬಸವಣ್ಣನಿಗೆ ಓರ್ವ ಭಕ್ತನ ಕಥೆಯನ್ನು ಹೇಳಿದನು. ವ॥ ಅದು ಹೇಗೆಂದರೆ–೩. ಭೂ ಭಾಗದಲ್ಲಿ ಐಶ್ವರ್ಯದಿಂದ ಪ್ರಕಾಶಿಸುವ ಮನೆಗಳ ಸಾಲಿನಿಂದಲೂ, ಶ್ರೇಷ್ಠವಾದ ರತ್ನ ನಿರ್ಮಿತ ಉಪ್ಪರಿಗೆಯು ಪ್ರಕಾಶಿಸುವ ಮನೆಗಳಿಂದಲೂ, ಶೋಭಿಸುವ ಶಿವಾಲಯಗಳ ಸಮೂಹದಿಂದಲೂ, ನೂತನವಾದ ಬಂಗಾರದ ಪ್ರಾಕಾರಗಳಿಂದ ಹರಡಿರುವ ಕಾಂತಿಯ ಪ್ರಕಾಶದಿಂದಲೂ ವಿಜಯಲಕ್ಷ್ಮಿಗೆ ಒಡ್ಯಾಣ(ನಡು ಪಟ್ಟಿ) ವನ್ನು ನೀಡಿದಂತಿರುವ 'ಕಾಂಚಿ' ಎಂಬ ಹೆಸರಿನಿಂದ ಪ್ರಸಿದ್ಧವಾದ ಪಟ್ಟಣವು ಅಧಿಕ

ಘನ ಮೋಕ್ಷಶ್ರೀಗೆ ತವ
ರ್ಮನೆ ಭರಣೀಯುಕ್ತ ಚೈತ್ರವಾಸರಮಧ್ಯಂ
ದಿನದೊಳ್ಶಿವವೃಷಘಂಟಾ
ನಿನಾದಮಂ ಕೇಳಿಪೇಳ್ಗೆವೆತ್ತೆಸೆದಿರ್ಕುಂ ೪

ವ॥ ಮತ್ತಮಾ ಪಟ್ಟಣಮಯೋಧ್ಯೆಯಾಗಿಯುಮಲಂಕಾರಾತಿಭವಾನ್ವಿತಮುಂ ರಾಜಹಂಸ ಸಮಂಚಿತಮಾಗಿಯುಮಂಧಕಾರಾತಿರುಚಿರಮುಂ ಕಮಳಾಭಿರಾಮಮಾಗಿಯುಮಜಡಾಶ್ರಯಮುಂ ಗುರುಬುಧಕವಿಲಸಿತಮಾಗಿಯುಮನವ ಗ್ರಹವಿಳಾಸಯುತಮುಮನಂತಭೋಗಿ ಲೋಕಾಶ್ರಿತಮಾಗಿಯುಂ

ಪಾದ ಕೀರ್ತಿಯನ್ನು ಹೊಂದಿ ಒಪ್ಪುತ್ತಿತ್ತು. ೪. (ಅದು) ಉತ್ಕೃಷ್ಟವಾದ ಮುಕ್ತಿಯೆಂಬ ಲಕ್ಷ್ಮಿಗೆ ತವರು ಮನೆ. ಭರಣೀ ನಕ್ಷತ್ರದಿಂದ ಕೂಡಿದ ಚೈತ್ರ ಮಾಸದ ದಿವಸದ ಮಧ್ಯಾಹ್ನದಲ್ಲಿ ಶ್ರೀ ಶಿವ ಮತ್ತು ವೃಷಭನ ಗಂಟೆಯ ಧ್ವನಿಯನ್ನು ಕೇಳಿಸುವ ಏಳ್ಗೆಯನ್ನು ಹೊಂದಿ ಆ ಪಟ್ಟಣವು ಶೋಭಿಸುತ್ತಿತ್ತು. ವ॥ ಮತ್ತು ಆ ಕಾಂಚಿ ಪಟ್ಟಣವು ಅಯೋಧ್ಯಾ ಪಟ್ಟಣವಾಗಿಯೂ ಲಂಕಾಪತಿಯಾದ ರಾವಣನ ಶತ್ರುವಾದ ರಾಮನ ವೈಭವದಿಂದ ಕೂಡಿದ್ದಿಲ್ಲ (ಅಯೋಧ್ಯೆಯು–ಅನ್ಯರಿಂದ ಯುದ್ಧ ಮಾಡಿ ಜಯಿಸುವುದಕ್ಕೆ ಆಗದುದು ಆಗಿಯೂ ಅಲಂಕಾರದ ಅತಿ ವೈಭವದಿಂದ ಕೂಡಿದೆ). ಆ ಕಾಂಚಿ ಪಟ್ಟಣವು–ಚಂದ್ರ, ಸೂರ್ಯ ಇವರಿಂದ ಸಮನ್ವಿತವಾಗಿಯೂ ಕೂಡ ಕತ್ತಲೆಯಿಂದ; ಅತಿ ಮನೋಹರವಾದದ್ದಾಗಿತ್ತು. (ರಾಜಹಂಸ ಸಮನ್ವಿತಂ–ರಾಜ ಶ್ರೇಷ್ಠರಿಂದ ಕೂಡಿರುವುದಾಗಿಯೂ ಅಂಧಕಾಸುರನಿಗೆ ವೈರಿಯಾದ ಈಶ್ವರನಿಂದ ರಂಜಿತವಾದುದು) ಆ ಕಾಂಚಿ ಪಟ್ಟಣವು–ಕಮಳಾಭಿರಾಮ-ಅಂದರೆ ಕಮಲ ತಾವರೆಯ ಹೂವುಗಳಿಂದ ಮನೋಹರವಾದುದು ಆಗಿಯೂ ನೀರಿನ ಆಶ್ರಯವಿಲ್ಲದ್ದು; (ಕಮಲಾ ಅಂದರೆ ಲಕ್ಷ್ಮಿಯಿಂದ ಅಂದರೆ ಸಂಪತ್ತಿನಿಂದ ಅಭಿರಾಮವಾದುದು, ಮೂಢರಲ್ಲದ ಪಂಡಿತರಿಗೆ ಆಧಾರವಾದದ್ದು). ಆ ಪಟ್ಟಣವು–ಬೃಹಸ್ಪತಿ, ಬುಧ, ಶುಕ್ರ–ಇವರುಗಳಿಂದ ಪ್ರಕಾಶಯುತವಾದುದಾದರೂ ನವಗ್ರಹಗಳ ವಿಲಾಸದಿಂದ ಕೂಡಿದ್ದಿಲ್ಲ. (ಗುರುಗಳು, ಆಚಾರ್ಯ (ಬುಧ)ರು, ಕವಿಗಳು ಇವರಿಂದ ಮನೋಹರವಾಗಿದ್ದರೂ ಅನಾವೃಷ್ಟಿ (ಅವಗ್ರಹ)ಯೇ ಇಲ್ಲದಿರುವಿಕೆಯು ಲೀಲೆಯಿಂದ ಕೂಡಿತ್ತು) ಆ ಪಟ್ಟಣವು–ಆದಿಶೇಷನೇ ಮೊದಲಾದ ಇತರ ಸರ್ಪಗಳಿರುವ ಪಾತಾಳ ಲೋಕದಿಂದ ಆಶ್ರಿತವಾದುದಾದರೂ, ದೇವತೆಗಳಿಂದ ಪ್ರಕಾಶಿಸುವುದು. (ಅಪರಿಮಿತವಾದ ಭೋಗಿಗಳಾದ ಜನರಿಂದ ಆಶ್ರಿತವಾದುದಾಗಿಯೂ, ಸ್ವರ್ಗಲೋಕದೋಪಾದಿಯಲ್ಲಿ ವಿರಾಜಮಾನವಾಗಿತ್ತು). ಆ ಪಟ್ಟಣವು–ಅಖಿಲ ವರ್ಣಗಳ ಅಂದರೆ ಪೂರ್ಣ ವರ್ಣಮಾಲಾಕ್ಷರಗಳಿಂದ ಸಂಪೂರ್ಣವಾದುದಾದರೂ, ಪವರ್ಗದ ಇಲ್ಲದಿರುವಿಕೆಯನ್ನು ಹೊಂದಿರುವಂತಹುದು ಅಥವಾ ತೊಲಗಿದ (ಅಪಗತ) ವರ್ಣಭೇದವುಳ್ಳದ್ದು. (ಬ್ರಾಹ್ಮಣಾದಿ ಚತುರ್ವರ್ಣಗಳಿಂದ

ನಾಕಲೋಕವಿರಾಜಿತಮುಮಖಿಲವರ್ಣ ಸಂಪೂರ್ಣಮಾಗಿಯುಮಪವರ್ಗಾವಹಮುಂ ಪರಸಹಕಾರಾಳಿ ಮಂಡಿತಮಾಗಿಯುಮೇಕಾಮ್ರವಲ್ಲಭ ಸಲ್ಲಲಿತಮೆನಿಸಿರ್ದುದಂತುಮಲ್ಲದೆಯುಂ—

ಸುರಪುರದಂತೆ ದಿವ್ಯಸುಮನೋಗಣನಂದನಭಾಪಿ ದೈತ್ಯಸಂ
ಹರ ಪುರದಂತನಂತಬಲತಾರ್ಕ್ಷ್ಯವಿರಾಜಿತಮಂಬುಜಾರಿಶೇ
ಖರಪುರದಂತೆ ವೀರಗಣನಾಯಕಶಕ್ತಿಧರಾಂಚಿತಂ ಧನೇ
ಶ್ವರಪುರದಂತೆ ಪುಣ್ಯಜನಸನ್ನಿಧಿರಂಜಿತಮಾಯ್ತು ತತ್ಪುರಂ ೫

ಸಂಪೂರ್ಣವಾಗಿಯೂ ಮೋಕ್ಷ (ಅಪವರ್ಗ) ವನ್ನು ಉಂಟುಮಾಡುವಂತಹುದು). ಆ ಪಟ್ಟಣವು–ಪರ ಅಂದರೆ ಉತ್ಕೃಷ್ಟವಾದ ಸಿಹಿ ಮಾವಿನ ಮರಗಳ ಸಾಲಿನಿಂದ ಅಲಂಕಾರಗೊಂಡದ್ದಾದರೂ, ಏಕಾಮ್ರವಲ್ಲಭ ಸಲ್ಲಲಿತ ಎಂದರೆ ಒಂದೇ ಒಂದು ಶ್ರೇಷ್ಠವಾದ ಮಾವಿನ ಮರ (ಆಮ್ರ ವಲ್ಲಭ)ದಿಂದ ಮನೋಹರವಾದದ್ದು. [ಅನ್ಯರಿಗೆ (ಪರ) ಸಹಕಾರ ಮಾಡುವವರ ಸಮೂಹ ಅಲಂಕಾರಗೊಂಡದ್ದಾದರೂ, ಏಕಾಮ್ರ ನಾಥ ನೆಂಬ ದೇವರಿಂದ ಮನೋಹರವಾದದ್ದು] [ಅಂಧಕ–ಅಂಧಕನೆಂಬ ರಾಕ್ಷಸ, ಕತ್ತಲೆ; ಕಮಳಾ–ಲಕ್ಷ್ಮಿ, ಐಶ್ವರ್ಯ; ಅಜಡ–ಜಲವಿಲ್ಲದಿರುವ, ಮೂಢರಲ್ಲದ ; ಗುರು–ಬೃಹಸ್ಪತಿ, ವಿದ್ಯಾಗುರು ; ಕವಿ–ಶುಕ್ರಾಚಾರ್ಯ, ಕಬ್ಬಿಗ ; ಬುಧ–ಬುಧ ಗ್ರಹ, ಜ್ಞಾನಿ ಅಥವಾ ವಿದ್ವಾಂಸ ; ಅವಗ್ರಹ-ಅನಾವೃಷ್ಟಿ ; ಅನಂತ–ಆದಿಶೇಷ, ಅಂತವಿಲ್ಲದ ; ಭೋಗಿ–ಹಾವು, ಭೋಗ ಸುಖದ ಮನುಷ್ಯ ; ವರ್ಣ–ಅಕ್ಷರ, ಚತುರ್ವರ್ಣ.] ೫. ಆ ಕಾಂಚೀ ಪಟ್ಟಣವು ಅಮರಾವತೀ ಪಟ್ಟಣದ ಹಾಗೆ–ಶ್ರೇಷ್ಠರಾದ ವಿದ್ವಾಂಸರ ಸಮೂಹದಿಂದಲೂ ನಂದನರು (ಮಕ್ಕಳುಗಳು)ಗಳಿಂದ ಅಥವಾ ವಿಹಾರಾರ್ಥವಾದ ವನಗಳಿಂದಲೂ ಪ್ರಕಾಶಮಾನವಾದದ್ದು ; (ಅಮರಾವತಿಯು-ದಿವ್ಯ ಅಂದರೆ ಸ್ವರ್ಗದಲ್ಲಿ ಉತ್ಪನ್ನವಾಗುವ ಮಂದಾರ ವೃಕ್ಷದ ಶ್ರೇಷ್ಠ ಹೂವುಗಳ ಗಣ (ಸಮೂಹ)ದಿಂದ ಕೂಡಿದ ನಂದನ ವನದಿಂದ ಶೋಭಿಸುವಂತಹುದು) ಆ ಪಟ್ಟಣವು ದೈತ್ಯ ಸಂಹರಪುರ ದಂತೆ ಅಂದರೆ ದೈತ್ಯ ಸಂಹಾರನಾದ ವಿಷ್ಣುವಿನ ವೈಕುಂಠದ ಹಾಗೆ ಅಪರಿಮಿತವಾದ ಸೈನ್ಯ (ಬಲ), ಕುದುರೆ (ತಾರ್ಕ್ಷ್ಯ) ಅಥವಾ ರಥ–ಇವುಗಳಿಂದ ವಿರಾಜಿತವಾದದ್ದು ; ದೈತ್ಯ ಸಂಹರ ಪುರವು–ಆದಿಶೇಷ (ಅನಂತ) ಬಲರಾಮ, ಗರುಡ (ತಾರ್ಕ್ಷ್ಯ)–ಇವರು ಗಳಿಂದ ವಿರಾಜಮಾನವಾದದ್ದು). ಆ ಪಟ್ಟಣವು–ಅಂಬುಜಾತಾರಿ ಪುರದಂತೆ ಅಂದರೆ ಚಂದ್ರ ಧರನೇ ಶಿರೋ ಭೂಷಣವಾಗಿ ಉಳ್ಳ ಪರಮೇಶ್ವರನ ಕೈಲಾಸ ಪುರದ ಹಾಗೆ–ವೀರಶೈವ ಮತದಲ್ಲಿ ನಿರತರಾದ ಶಿವಗಣ ಶ್ರೇಷ್ಠರು (ಪುರಾತನರು)ಗಳು, ಇಚ್ಛಾ, ಜ್ಞಾನ, ಕ್ರಿಯಾಶಕ್ತಿಗಳನ್ನು ಹೊಂದಿರುವವರು ಅಥವಾ ಪ್ರಭು, ಮಂತ್ರ, ಉತ್ಸಾಹ ಶಕ್ತಿಯಿಂದ ಕೂಡಿದವರುಗಳಿಂದ ಶೋಭಿಸುವಂತಹುದು ; (ಅಂಬುಜಾತಾರಿಪುರವು–ವೀರಭದ್ರ (ವೀರ), ಗಣ ನಾಯಕನಾದ ಗಣಪತಿ, ಶಕ್ತ್ಯಾಯುಧ ಧರಿಸಿದ ಷಣ್ಮುಖ

ಆ ಪಟ್ಟಣದೊಳ್ವಿನಯಕ
ಲಾಪಂ ಕುಲದೀಪನಭವಲಾಂಛನಧರಸೇ
ವಾಪರನಿರ್ಪಂ ದುರಿತದೂ
ರಾಪಂ ಸಿರಿಯಾಳ್ವನೆಂಬನತಿಸಂಪದದಿಂ ೬

ಮಂಗಳಮಯೆ ಮಾನಿನಿಚರ
ಲಿಂಗಾರ್ಚನನಿರತೆ ಚತು[1]ರೆ ಪತಿಭಕ್ತಿಸಮಾ
ಲಿಂಗಿತೆ ಕಂಗೊಳಿಸಿರ್ದ
ಳ್ಚಂಗಳೆಯೆನಿಸಿರ್ದ ತನ್ನಿತಂಬಿನಿ ಜಸದೊಳ್ ೭

ಆ ದಂಪತಿಗ[2]ಳ್ಗಜ[2] ಸುತ
ನಾದಂ ಚೀಲಾಳನೆಂಬನಿಳೆಯೊಳ್ಕಣ್ಗಂ
ಬಾದಂ ನಿಜವಿಮಳಗುಣಾ
ಮೋದಿತ ಪಿತೃಹೃದಯನಮಿತರುಚಿಮಯಕಾಯಂ ೮

ಇವರುಗಳಿಂದ ಪೂಜ್ಯವಾದುದು.) ಆ ಪಟ್ಟಣವು–ಧನೇಶ್ವರ ಪುರದಂತೆ ಅಂದರೆ ಕುಬೇರನ ಅಲಕಾವತಿ ನಗರದ ಹಾಗೆ–ಪರಿಶುದ್ಧರಾದ ಜನಗಳ ಸಾನ್ನಿಧ್ಯದಿಂದ ರಂಜಿತವಾಗಿತ್ತು. (ಅಲಕಾವತಿಯು–ದೇವತೆಗಳ ಸಮೂಹದಿಂದ (ಪುಣ್ಯ ಜನ) ಮತ್ತು ಸತ್ ನಿಧಿ ಎಂದರೆ–ಸಮೀಚೀನವಾದ ನವನಿಧಿಗಳಿಂದ ರಂಜಿತವಾಗಿತ್ತು. ೬. ಇಂತಹ ಕಾಂಚೀ ಪಟ್ಟಣದಲ್ಲಿ ನಮ್ರ ಗುಣ ಸಮೂಹವುಳ್ಳವನೂ, ವಂಶೋದ್ಧಾರಕನೂ, ಶಿವನ ಲಾಂಛನಗಳಾದ ವಿಭೂತಿ ರುದ್ರಾಕ್ಷಿಗಳೇ ಮೊದಲಾದವುಗಳನ್ನು ಧರಿಸಿರುವ ಶಿವಭಕ್ತರ ಸೇವೆಯಲ್ಲಿ ತತ್ಪರನೂ, ಪಾಪ ರಹಿತನೂ ಆದ 'ಸಿರಿಯಾಳ'ನೆಂಬುವನು ವಿಶೇಷ ಸಂಪತ್ತಿನಿಂದ ಕೂಡಿದ್ದನು. ೭. ಅವನ ಹೆಂಡತಿಯಾದ ಚಂಗಳೆಯೆಂಬುವಳು–ಮಂಗಳಕರಳೂ, ಮಾನವತಿಯೂ ಗುರು ಜಂಗಮಗಳನ್ನು ಪೂಜಿಸುವುದರಲ್ಲಿ ಆಸಕ್ತಿಯುಳ್ಳವಳೂ, ಚಾತುರ್ಯದಿಂದ ಪತಿಭಕ್ತಿಯನ್ನು ಆಚರಿಸುವವಳೂ ಎನಿಸಿ ಕೀರ್ತಿಯಿಂದ ಶೋಭಿಸುತ್ತಿದ್ದಳು. ೮. (ಇಂಥ) ಆ ದಂಪತಿಗಳು ಪ್ರೀತಿಗೆ ಪಾತ್ರನಾದ ಚೀಲಾಳನೆಂಬ ಮಗನು ತನ್ನ ನಿರ್ಮಲವಾದ ಸದ್ಗುಣಗಳಿಂದ ತಂದೆ ತಾಯಿಗಳ ಹೃದಯಕ್ಕೆ ಮೋದವನ್ನುಂಟುಮಾಡುವವನಾಗಿ ಅಪರಿಮಿತ ಕಾಂತಿಯಿಂದ ಕೂಡಿದ ಶರೀರವುಳ್ಳವನಾಗಿ ನೋಡುವುದಕ್ಕೆ ಸೊಗಸಾಗಿ

1 ದು (ದ) 2 ಳವರ (ಅ)

ಅನುದಿನಮೆಳಸಿದ ರುಚಿಭೋ
ಜನದಿಂ ಜಂಗಮಸಹಸ್ರಮಂ ತಣಿಪುತೆ ಪಾ
ವನಚರಿತರ್ಸಲೆ ಭಜಿಸುತೆ
ಮನಸಿಜಹರನಂ ವಧೂವರರ್ವೆಱಿದಿರ್ದರ್ ೯

ವ॥ ಅಂತವರನವರತಮಿಂತು ಚರಲಿಂಗ ಸಮರ್ಚನೋತ್ಸವಪರಾಯಣರೆಸೆದಿರ್ಪನ್ನೆಗಂ—

ವರುಣಾಶಾಕುಂಭಿಶುಂಭತ್ಕರಟತಟಗಳದ್ದಾನಧಾರಾತಿಸೌರ
ಭ್ಯರಸಾಶ್ಲಿಷ್ಟಂ ಪ್ರತೀಚ್ಯಂಬುಧಿಚಳದಚಳಸ್ಪರ್ಧಿ ಕಲ್ಲೋಲಮಾಲಾ
ಸ್ಫುರದುದ್ಯನ್ನರ್ತಕೀನರ್ತಕನನುಪಮನೀಪಕ್ಷಮಾರುಟ್ಪ್ರಸೂನೋ
ತ್ಕರಧೂಳೀಭೂರಿಭಾರಂ ಸುಳಿದುದಸದಳಂ ಪಶ್ಚಿಮಾಶಾಸಮೀರಂ ೧೦

ಕಡವಲರೇಱಿ ಕೊರ್ವಿದುದು ಕೇತಕಿ ಪೂತುದು ಸೋಗೆ ರಾಗಮಂ
ಪಡೆದುದು ಸಣ್ಪುಸಪ್ಪಿದುದು ಚಾದಗೆ ಬೇಸಗೆ ಬೀತುದಂಚೆ ಬ
ಲ್ಪುಡುಗಿ ಬಿಗುರ್ತು ಪಾಱಿದುದು ಮೊಲ್ಲೆ ಮುಗುಳ್ತುದು ಬಳ್ಳಿಮಿಂಚು ಸಂ
ಗಡಿಸಿ ಪಳಂಚಿ ಮಿಂಚಿದುದು ಬಲ್ಮುಗಿಲೆಳ್ದುದು ದಿಕ್ತಟಾನದೊಳ್ ೧೧

ಭೂಮಿಯಲ್ಲಿ ವಿಶೇಷವಾಗಿ ಪ್ರಕಾಶಿಸುತ್ತಿದ್ದನು. ೯. ಪರಿಶುದ್ಧ ಚರಿತ್ರರಾದ ಈ ಸತಿಪತಿಗಳು ಯಾವಾಗಲೂ ಅಪೇಕ್ಷೆ ಮಾಡಿದ ರುಚಿಕರವಾದ ಭೋಜನದಿಂದ ಸಾವಿರಾರು ಜಂಗಮರನ್ನು ತಣಿಸುತ್ತ, ಶಿವನನ್ನು ಚೆನ್ನಾಗಿ ಭಜಿಸುತ್ತ ಶೋಭಿಸುತ್ತಿದ್ದರು. ವ॥ ಈ ರೀತಿಯಲ್ಲಿದ್ದ ದಂಪತಿಗಳು ಸತತವೂ ಜಂಗಮ ಲಿಂಗವನ್ನು ಪೂಜಿಸುವ ಉತ್ಸಾಹದಲ್ಲಿ ಆಸಕ್ತರಾಗಿ ಶೋಭಿಸುತ್ತಿರುವನಿತರಲ್ಲಿ—೧೦. ಪಶ್ಚಿಮ ದಿಗ್ಭಾಗದಲ್ಲಿರುವ ಅಷ್ಟದಿಗ್ಗಜಗಳಲ್ಲಿ ಒಂದಾದ 'ಅಂಜನ' ಎಂಬ ಹೆಸರಿನ ಆನೆಯ ಶೋಭಿಸುವ ಗಂಡಸ್ಥಲ (ಕುಂಭಸ್ಥಲ)ದಿಂದ ಇಳಿಯುತ್ತಿರುವ ಮದೋದಕ ಧಾರೆಯ ವಿಶೇಷವಾದ ಸುಗಂಧದಿಂದ ತುಂಬಿದುದೂ, ಪಶ್ಚಿಮ ಸಮುದ್ರದಲ್ಲಿ ಚಲಿಸುತ್ತಿರುವ ಅಂಜನಾದ್ರಿ ಪರ್ವತದೊಡನೆ ನಾನು ಹೆಚ್ಚು ತಾನು ಹೆಚ್ಚೆಂದು ಸ್ಪರ್ಧಿಸುತ್ತಿರುವ ದೊಡ್ಡ ದೊಡ್ಡ ತೆರೆಗಳ ಪಙ್ಕ್ತಿಯೆಂಬ ಪ್ರಕಾಶಮಾನವಾದ ಉತ್ಕೃಷ್ಟ ನರ್ತಕಿಯನ್ನು ಕುಣಿಸುವಂತಹುದೂ, ಅಸದೃಶವಾದ ನೀಪವೃಕ್ಷ (ನೀಪ + ಕ್ಷಮಾ + ರುಟ್) ದ (ಕಡವದ ಮರದ) ಹೂಗಳ ಸಮೂಹದ ಪರಾಗವೆಂಬ ಭಸ್ಮ ಧರಿಸಿದುದೂ ಆದ ಉಪಮಾರಹಿತವಾದ ಪಶ್ಚಿಮ ದಿಗ್ಭಾಗದಿಂದ ಬೀಸುವ ಗಾಳಿಯು ಬೀಸಿತು. (ಪಶ್ಚಿಮ ದಿಕ್ಕಿನ ಶೈತ್ಯ ಸೌರಭ್ಯ ಮಾಂದ್ಯ ವಿಶಿಷ್ಟವಾದ ಗಾಳಿಯೂ ಬೀಸಿತೆಂದು ತಾತ್ಪರ್ಯ) ೧೧. (ಆಗ) ನೀಪ ವೃಕ್ಷವು (ಕಡವು) ಹೂವಿನಿಂದ ತುಂಬಿ ಕೊಬ್ಬಿತು ; ತಾಳೆಯ ಮರವು (ಕೇತಕಿ) ಹೂ ಬಿಟ್ಟಿತು ; ನವಿಲು ಅನುರಾಗವನ್ನು ಹೊಂದಿತು ; ಚಾತಕ ಪಕ್ಷಿಯು ಸೊಗಸುಗೊಂಡಿತು ; ಬೇಸಿಗೆ ಕಳೆದು ಹೋಯಿತು ; ಹಂಸ ಪಕ್ಷಿಯು ಶಕ್ತಿಗುಂದಿ ಭಯಪಟ್ಟು ಹಾರಿ ಹೋಯಿತು ; ಮೊಲ್ಲೆಯ ಬಳ್ಳಿಯು ಮೊಗ್ಗುಗೊಂಡಿತು;

ವಸುಧೆಯ ರಾಜಹಂಸತತಿಯುಂ ನಿಜಗರ್ಜಿತಮಾತ್ರದಿಂದೆ ಪಾ
ಱಿಸಿದನಿತೆಯ್ದದಭ್ರದೊಳೆ ಕೈದೆಗೆವಂತಿರೆ ರಾಜಹಂಸರಂ
ದೆಸಗುತೆ ತನ್ನಿದಾಘವಿಭುವಂ ಸದೆದೆಣ್ದೆಸೆಯೊಳ್ಸತೇಜಮಂ
ಪಸರಿಸಿದಂ ತಟಿಚ್ಛಲದಿನಂಬುಧರಾಗಮ ಭೂಮಿಪಾಲಕಂ ೧೨

ಪೊರೆವತ್ತಿಸಿದನೊ ಪಳೆಯುಂ
ಬರಮಿದು ನೆಱೆ ಪಱಿಗುವೆಂದು ಬಿದಿ ನವನೀಲಾಂ
ಬರದಿನೆನೆ ತೀವಿ ಕವಿದಂ
ಬರಮನದಂ ನೀಲಜಲದಮೇಂ ರಂಜಿಸಿತೋ ೧೩

ನಿಯತದಿನಮರ್ದಿನೊಳಮರ್ದೆ
ನ್ನಯ ಜೀವನಮಂ ಮರಾಳಮಿದು ಬೇರ್ಪಡಿಕುಂ
ನಯರಹಿತಮೆಂಬ ಮುಳಿಸಿಂ
ಪಯೋಧರಂ ಗರ್ಜಿಸುತ್ತದಂ ಪಾಱಿಸುಗುಂ ೧೪

ಬಳ್ಳಿಯಂತಿರುವ ಸೆಳೆಮಿಂಚು ಪ್ರಕಾಶಮಾನವಾಗಿ ಮಿಂಚಿತು ; ದಿಕ್ಕುಗಳ ಸಮೂಹದಲ್ಲಿ ಬಲವಾದ ಮೋಡವು ಎದ್ದಿತು. [ಮಳೆಗಾಲ ಬಂದೊಡನೆ ಹಂಸಗಳು ಮಾನಸ ಸರೋವರಕ್ಕೆ ಹೋಗುತ್ತವೆ ಎಂಬುದು ಕವಿ ಸಮಯ] ೧೨. ಬರುತ್ತಿರುವ ಮೋಡವೆಂಬ ರಾಜನು ತನ್ನ ಗುಡುಗಿನ ಮಾತ್ರದಿಂದಲೇ ಭೂಮಿಯಲ್ಲಿನ ರಾಜ ಶ್ರೇಷ್ಠರ ಸಮೂಹವನ್ನು (ರಾಜ ಹಂಸಗಳ ಸಮೂಹವನ್ನು) ಹಾರಿಸಿದನು. ಅಷ್ಟರಲ್ಲಿಯೇ ಅಂತರಿಕ್ಷದಲ್ಲಿ ರಾಜ ಶ್ರೇಷ್ಠರು (ಚಂದ್ರ ಸೂರ್ಯರು) ಹೋಗದೆ ಹಿಂದೆಗೆಯುತ್ತಿರುವರೋ ಎನ್ನುವ ಹಾಗೆ ಮಾಡುತ್ತ ಆ ಗ್ರೀಷ್ಮ ಕಾಲವೆಂಬ ರಾಜನನ್ನು ಕೊಂದು ಎಂಟೂ ದಿಕ್ಕಿನಲ್ಲಿ ತನ್ನ ಪರಾಕ್ರಮವನ್ನು ಮಿಂಚಿನ ವ್ಯಾಜದಿಂದ ಪ್ರಸಾರ ಗೊಳಿಸಿದನು. (ಗ್ರೀಷ್ಮ ಋತು ತೊಲಗಿ ಮಳೆಗಾಲದ ಮೋಡ ಮುಸುಕಿ ಸೂರ್ಯ ಚಂದ್ರರು ಮರೆಗೊಂಡು ಮಿಂಚು ಎಲ್ಲಲ್ಲೂ ಕಾಣತೊಡಗಿತೆಂದು ಭಾವ) ೧೩. ಬ್ರಹ್ಮನು—ಇದು ಹಳೆಯದಾದ ಬಟ್ಟೆ (ಅಂಬರ ಅಥವಾ ಆಕಾಶ), ಅಧಿಕವಾಗಿ ಹರಿದು ಹೋಗುವುದು ಎಂದು ಹೊಸದಾದ ಕರಿಯ ಬಟ್ಟೆಯಿಂದ ಜೊತೆಗೆ ತೇಪೆ ಹಚ್ಚಿಸಿದನೋ ಎನ್ನುವಂತೆ ಕಪ್ಪು ಮೋಡವು ಆ ಅಂಬರತಲವನ್ನು ತುಂಬಿ ಏನು ರಂಜನೆಗೊಳಿಸಿತೋ ! ೧೪. ಮೋಡವು ಹಾಲಿನಲ್ಲಿ ಸೇರಿದ ನನ್ನ ಜೀವನವನ್ನು (ನೀರನ್ನು), ನೀತಿ ಹೀನವಾದ ಈ ಹಂಸ ಪಕ್ಷಿಯು ನಿಶ್ಚಯವಾಗಿ ಬೇರೆ ಮಾಡುವುದು ಎಂಬ ಕೋಪದಿಂದ

ಎಳೆಮಿಂಚು ಬಳ್ಳಿಮಿಂಚು
ಚ್ಚಳಿಸುವ ಸೆಳೆಮಿಂಚು ತೋರಮಿಂಚಸಿಮಿಂಚ
ವ್ವಳಿಸುವ ಗೊಂಚಲ್ಮಿಂಚ
ಗ್ಗಳಿಸಿದ ಕುಡಿಮಿಂಚು ಮಿಂಚಿದುವು ಕಾರ್ಮೊಗದೊಳ್ ೧೫

ಛಿಳಿಛಿಟಿಲೆಂಬ ಗರ್ಜನವೊಡಂಬಡೆ ಮಿಂಚುವ ದಂಷ್ಟ್ರದಂತೆ ಮಿಂ
ಚಳವಡೆ ಶಕ್ರಗೋಪತತಿ ಸೂಸುವ ರಕ್ತಕಣಂಗಳಾಗೆ ಕಂ
ಗೊಳಿಸೆ ಖರಾಂಶು ಚಕ್ರಮೆನೆ ಮೇಲೆ ಘನಾಗಮ ಫಾಲನೇತ್ರನಿ
ರ್ದಳಿತ ಜಲಂಧರೋಗ್ರಶಿರಮೆಂಬವೊಲಾದುದು ನೀಲನೀರದಂ ೧೬

ಜಳದ ಶ್ಯಾಮಳ ಕಾಯಕಾಂತಿ ಬಿಡದೆತ್ತಂ ಪೊಣ್ಮೆ ನಿಂದಿಂದ್ರಚಾ
ಪಳಸಚ್ಚಾಪಮನಾಂತು ಚಾಪಳ ತಟಿಜ್ಜ್ಯಾಕರ್ಷಣಂಗೆಯ್ದು ನಿ
ಸ್ತುಳಮೇಘಧ್ವನಿಗರ್ಜಿತಂಗುಡುತೆ ಪೂಡುತ್ತೆಚ್ಚನುದ್ಯಚ್ಛರಾ
ವಳಿಯಿಂ ಗ್ರೀಷ್ಮಸುರಾರಿ ಬೆಂಗುಡುವಿನಂ ಕಾರೆಂಬ ನಾರಾಯಣಂ ೧೭

ಗರ್ಜನೆ ಮಾಡುತ್ತ ಆ ಹಂಸಪಕ್ಷಿಯನ್ನು ಹಾರಿಸುತ್ತಿತ್ತು. ೧೫. ವರ್ಷಾ ಕಾಲದ ಆರಂಭದಲ್ಲಿ (ಮುಂಗಾರಿನಲ್ಲಿ), ಬಳ್ಳಿಮಿಂಚು, ಮೇಲಕ್ಕೆ ನೆಗೆಯುವ ಸೆಳೆಮಿಂಚು, ದಪ್ಪನೆಯ ಮಿಂಚು, ಕತ್ತಿಯಂತೆ (ಹೊಳೆಯುವ) ಮಿಂಚು, ಅಪ್ಪಳಿಸುವ ಮಿಂಚು, ಗೊಂಚಲು ಗೊಂಚಲಾಗಿ ಹೊಳೆಯುವ ಮಿಂಚು ಅಥವಾ ಅನೇಕ ಕವಲು ಗೊಂಡು ಮಿಂಚುವ ಮಿಂಚು, ಅಧಿಕವಾದ ಕುಡಿ ಮಿಂಚುಗಳು ಮಿಂಚಿದುವು. ೧೬. 'ಛಿಳಿಛಿಟಿಲ್' ಎಂಬ ಭಯಂಕರ ಧ್ವನಿಯನ್ನು ಮಾಡುವಿಕೆಯಿಂದ ಕೂಡಿರಲು, ಮಿಂಚುವ ಕೋರೆದಾಡೆಯ ಹಾಗೆ ಮಿಂಚು ಅಳವಟ್ಟಿರಲು, ಮಿಂಚು ಹುಳಗಳು ಸುರಿಸುವ ರಕ್ತದ ಹನಿಗಳೋಪಾದಿಯಲ್ಲಿ ಆಗಿರಲು, ಸೂರ್ಯನು ಈಶ್ವರನ ಕಾಲಿನ ಹೆಬ್ಬೆರಳಿನಿಂದ ಬರೆದ ಚಕ್ರದ ಹಾಗೆ ಕಂಗೊಳಿಸಿರಲು, ಮೇಲ್ಭಾಗದಲ್ಲಿ ನೀಲವರ್ಣದ ಕಪ್ಪಾದ ಮೋಡವು ವರ್ಷಾಕಾಲವೆಂಬ ಈಶ್ವರನಿಂದ ಸೀಳಿಹಾಕಿದ ಜಲಂಧರನೆಂಬ ರಾಕ್ಷಸನ ಭಯಂಕರ ಶಿರದ ಹಾಗೆ ಆಯಿತು. [ಕಾಲಬೆರಳಿನಿಂದ ಬರೆದ ಶಿವನ ಚಕ್ರವೇ ಜಲಂಧರನ ಶಿರಸ್ಸನ್ನು ಕತ್ತರಿಸಿತೆಂಬುದು ಪುರಾಣಪ್ರಸಿದ್ಧ ಕಥೆ.] ೧೭. ವರ್ಷಾಕಾಲ ವೆಂಬ ವಿಷ್ಣುವು, (ತನ್ನ) ಮೇಘದ ಕಪ್ಪಾದ ದೇಹ ಕಾಂತಿಯು (ಮೋಡದಂತೆ ಕಪ್ಪಾದ ಶರೀರದ ಕಾಂತಿಯು) ತಪ್ಪದೆ ಎಲ್ಲಾ ಕಡೆಗೂ ಹೊಮ್ಮಿರಲು, ನಿಂತುಕೊಂಡು, ಇಂದ್ರ ಧನುಸ್ಸು (ಕಾಮನ ಬಿಲ್ಲು) ಎಂಬ ಪ್ರಕಾಶಿಸುವ ಬಿಲ್ಲನ್ನು ಧರಿಸಿ, ಚಂಚಲವಾದ ಮಿಂಚೆಂಬ ಹೆದೆಯನ್ನು ಎಳೆದು ಅಸದೃಶವಾದ ಗುಡುಗೆಂಬ ಧನುಷ್ಟೇಂಕಾರ ಮಾಡುತ್ತ, ಧನುಸ್ಸಿಗೆ ಬಾಣವನ್ನು ಸೇರಿಸುತ್ತ ಬೇಸಗೆಯೆಂಬ ರಾಕ್ಷಸನು ಹಿಮ್ಮೆಟ್ಟಿ ಓಡಿಹೋಗುವ ಹಾಗೆ ಅಧಿಕವಾದ ಬಾಣಗಳ ಪಙ್ಕ್ತಿಯನ್ನು (ಜಲಪಙ್ಕ್ತಿ) ಪ್ರಯೋಗಿಸಿ

ಜಳದಗಜಂ ಜಳಮದಜಳ
ಮಿಳಿತರೆ ಮೇಲ್ವಾಯ್ದು ಮಿಗೆ ಬಿಸಿಲ್ಗುದುರೆಗಳಂ
ತುಳಿಯೆ ರವಿ ನಿಜರಥಾಶ್ವಾ
ವಳಿಯಂ ಕೊಂಡೋಡುತಗಿದಡಂಗಿದನಲ್ತೇ ೧೮

ವನಧಿಯ ನೀರನುಂಡು ಜಳದಳ್ಕಮೆಯಾಗೆ ಖರಾಂಶುವೆಂಬ ಮ
ದ್ದಿನ ಕಬಳಂಗೊಳುತ್ತೆ ಜಳದಂ ಸೆಳೆಮಿಂಚೆನಿಸಿರ್ದ ಕಾದ ಕಾಂ
ಚನದ ಶಲಾಕೆಯಿಂ ಸುಡಿಸಿ ಕೊಂಡೆಲರೊಳ್ಮರಿತಕ್ಕೆ ಮೆಯ್ಗೊಡು
ತ್ತನುಗತಿಯಿಂ ಮಗುಳ್ಚಿದವೊಲಂಬುವನೇಂ ಮಳೆ ಚೆಲ್ವನಾಳ್ದುದೋ ೧೯

ಗಗನಶ್ರೀವಧು ಚಂಚಲೇಕ್ಷಣದೆ ಪೂರ್ಣಪ್ರೇಮದಿಂ ನೋಡಿ ಚಾ
ದಗೆಯೆಂಬರ್ಭಕನಂ ಕರಂ ತೊರೆದು ಬಿಣ್ಪಿಂ ಬೀಗಿ ಮೇಲ್ವಾಯ್ದು ಕೆ
ಯ್ಮಿಗೆ ಸೊಂಪಾಂತ ಬೃಹತ್ಪಯೋಧರದಿನೋರಂತೆಚ್ಚು ಪಾಯ್ತರ್ಪ ಧಾ
ರೆಗಳಿಂ ತಳ್ತ ಪಯೋರಸಪ್ರಸರದಿಂ ಸರ್ವೋರ್ವಿಯಂ ನಾಂದಿದಳ್ ೨೦

ವನಧರ ಕರಿಗಳ್ನಿರ್ಜರ
ಧುನಿಯೊಳ್ನೀರ್ಗುಡಿದು ತಣಿದು ಪೂತ್ಕರಿಸೆ ತದೀ
ಯನವಾಂಬುಕಣಗಣಂ ಮೇ
ದಿನಿಗುರುಳ್ವವೊಲಿಳಿವ ಮಳೆಯದೇಂ ರಂಜಿಸಿತೋ ೨೧

ದನು: [ಶರ–ನೀರು, ಬಾಣ ;] ೧೮. ಮೋಡವೆಂಬ ಆನೆಯು ನೀರೆಂಬ ಮದೋದಕವು ಸುರಿಯುತ್ತಿರಲು ಹೆಚ್ಚಾಗಿ ಮೇಲೆಬಿದ್ದು, ಬಿಸಿಲುಗುದುರೆಗಳನ್ನು ತುಳಿದು ಹಾಕಲು, ಸೂರ್ಯನು ಭಯಪಟ್ಟು ತನ್ನ ಕುದುರೆಗಳ ಸಾಲನ್ನು (ಸಪ್ತಾಶ್ವಗಳನ್ನು) ತಿರುಗಿಸಿಕೊಂಡು ಓಡಿಹೋಗಿ ಅಡಗಿಕೊಂಡನಲ್ಲವೆ ? ೧೯. ಮೋಡವು ಸಮುದ್ರದ ನೀರನ್ನುಂಡು, ನೀರಿನ ಅಜೀರ್ಣವಾಗಲು, ಸೂರ್ಯನೆಂಬ ಔಷಧದ ತುತ್ತನ್ನು ತೆಗೆದುಕೊಳ್ಳುತ್ತ, ಸೆಳೆಮಿಂಚೆನಿಸಿದ ಕಾಯ್ದ ಚಿನ್ನದ ಶಲಾಕೆಯಿಂದ ಸುಡಿಸಿಕೊಂಡು, ಸುತ್ತಿ ಬೀಸುವ ಒಳ್ಳೆಯ ಗಾಳಿಯ ಬೀಸುವಿಕೆಗೆ ಮೈಗೊಟ್ಟು ಕ್ರಮವಾಗಿ ನೀರನ್ನು ಪುನಃ ಕಕ್ಕಿಕೊಂಡ ಹಾಗೆ ಮಳೆ ಏನು ಚೆಲುವನ್ನು ಹೊಂದಿತ್ತೋ. ೨೦. ಅಂತರಿಕ್ಷವೆಂಬ ಲಕ್ಷ್ಮೀವಧುವು ಚಾತಕ ಪಕ್ಷಿಯೆಂಬ ಶಿಶುವನ್ನು ಪೂರ್ಣಪ್ರೇಮಭಾವದಿಂದ ಮಿಂಚೆಂಬ ಕಣ್ಣುಗಳಿಂದ ನೋಡಿ, ಹೆಚ್ಚಾಗಿ ತೊರೆಸಿ ದಪ್ಪನಾಗಿ ಉಬ್ಬಿಕೊಂಡು ಮೇಲಕ್ಕೆ ಕೈಮಿಕ್ಕು ಹಾರುತ್ತಿರುವ ಸೊಗಸಾದ ಮೊಲೆಹಾಲನ್ನು ಕ್ರಮವರಿತು ಕುಡಿಸುವಳೋ ಎಂಬ ಹಾಗೆ ಧಾರಾಕಾರವಾಗಿ ಇಳಿದು ಬರುತ್ತಿರುವ ಮಳೆಯ ನೀರಿನ ಸಮೂಹದಿಂದ ಸಮಸ್ತ ಭೂಮಿಯನ್ನು ನೆನೆಸಿದಳು (ನಾದಿದಳು). ೨೧. ಮೋಡಗಳೆಂಬ ಆನೆಗಳು ದೇವಗಂಗಾ ನದಿಯಲ್ಲಿ ನೀರುಕುಡಿದು ತೃಪ್ತಿಗೊಂಡು 'ಫೂ' ಎಂದು ಊದಲು (ಸುಂಡಿಲಿನಿಂದ ಫೂತ್ಕಾರ ಮಾಡಲು), ಆ ಉರುಬುವಿಕೆಯಿಂದುಂಟಾದ ಹೊಸ ನೀರಿನ

ಕಡಲಂಬುಗೊಂಬ ಸಮಯದೊ
ಳೆಡೆಸಿಲ್ಕಿದ ಮೌಕ್ತಿಕಾಳಿಯುಂ ಸುರಿದಪುದೀ
ಜಡಧರಮೆನೆ ಜಲಶಿಲೆಗಳ
ಗಡಣದ ಮಳೆ ಸುರಿದು ಪರಿದು ಪಸರಿಸಿತಾಗಳ್ ೨೨

ಜಲಧರ ಕಟಾಹಪೂರಿತ
ಜಲಮುಂ ಮಿಂಚೆಂಬ ಪೊನ್ನ ಜೀರ್ಕೊಳವೆಗಳಿಂ
ಜಲದೇವತೆಯುರ್ಬಿನದದಿ
ನಲರ್ದೋಸಗೆಗೆ ಸೂಸಿದಂತೆ ಸುರಿದುವು ಮಳೆಗಳ್ ೨೩

ನಿರವಿಸೆ ಜಿಷ್ಣುವಾಣತಿಯೊಳಬ್ದಕುಲಂ ತದರಾತಿ ಭೂಧರೋ
ತ್ಕರಮನಪಾರ ವಾರಿಯೊಳಡಂಗಿಸಿಕೊಂಡ ಸರೋಧಿಯಂಬುವಂ
ಬರೆ ತೆಗೆದೀಂಟಿ[1] ತಂದು ಸುರಿವುತ್ತಿರೆ ಧಾತ್ರಿಗೆ ಮತ್ತೆ ಮಿಕ್ಕ ಭೂ
ಧರತತಿ ಸಿಂಧುವಿಂದದನೆ ಪೂರಿಪುದಾರೊ ಕುಲಕ್ಕೆ ಕೂರ[2]ದರ್ ೨೪

ಇಳೆಯೇಕಾರ್ಣವಮಾದವೊ
ಲಳುರ್ದೊತ್ತರಿಸುತ್ತೆ ಪರಿವ ಕಾಳ್ಪುರದೊದವಿಂ

ಹನಿಗಳ ಸಮೂಹವು ಭೂಮಿಗೆ ಉರುಳುವ ಹಾಗೆ ಇಳಿದು ಬರುತ್ತಿರುವ ಮಳೆ ಅದು ಏನು ರಂಜನೆಗೊಂಡಿತ್ತೋ ! ೨೨. ಈ ಮೋಡವು ಸಮುದ್ರದ ನೀರನ್ನು ಗ್ರಹಿಸುವ ಸಮಯದಲ್ಲಿ, ಮಧ್ಯದಲ್ಲಿ ಸಿಕ್ಕಿದ ಮುತ್ತಿನ ಸಮೂಹವನ್ನು ಸುರಿಸುತ್ತಿರುವುದೋ ಎನ್ನುವಂತೆ ಆಲಿಕಲ್ಲುಗಳ ಸಮೂಹದಿಂದ ಕೂಡಿದ ಮಳೆಯು ಆಗ ಸುರಿದು, ಹರಿದು ಪ್ರಸಾರಗೊಂಡಿತು. ೨೩. ಜಲಾಭಿಮಾನಿದೇವತೆಗಳು, ಮೋಡವೆಂಬ ಕೊಪ್ಪರಿಗೆಯಲ್ಲಿ ತುಂಬಿದ ನೀರನ್ನು ಮಿಂಚೆಂಬ ಚಿನ್ನದ ಜೀರ್ಕೊಳವಿ (ಪಿಚಕಾರಿ)ಗಳಿಂದ ವಿನೋದ ಗೊಂಡು ಉತ್ಸವಕ್ಕೋಸ್ಕರ ಹೆಚ್ಚಾಗಿ ಚೆಲ್ಲುತ್ತಿರುವರೋ ಎಂಬಂತೆ ಮಳೆಹನಿಗಳು, ಸುರಿಯುತ್ತಿದ್ದವು. ೨೪. ಆಜ್ಞಾಪಿಸಲಾಗಿ (ಆ) ಇಂದ್ರನ ಆಜ್ಞೆಯ ಪ್ರಕಾರ ಮೇಘ ಸಮೂಹವು ಆ ಇಂದ್ರನಿಗೆ ಶತ್ರುಗಳಾದ ಬೆಟ್ಟಗಳ ಸಮೂಹವನ್ನು ಕೊನೆಯಿಲ್ಲದ ನೀರಿನಲ್ಲಿ ಅಡಗಿಸಿಕೊಂಡ ಸಮುದ್ರದ ನೀರನ್ನು ಈಚೆಗೆ ಹಾಕಿ, ಕುಡಿದು ಭೂಮಿಗೆ ಸುರಿಸುತ್ತಿರಲು ಪರ್ವತಗಳ ಸಮೂಹವು ಹೆಚ್ಚಾಗಿ ನದಿಗಳ ರೂಪವಾಗಿ ಆ ಸಮುದ್ರ ವನ್ನು ಪುನಃ ತುಂಬಿಸಿ ಬಿಡುವುದು. ವಂಶದ ವಿಷಯದಲ್ಲಿ ಪ್ರೀತಿಸದವರು ಯಾರೋ ! ೨೫. ಭೂಮಿಯೆಲ್ಲ ಒಂದು ಸಮುದ್ರವೇ ಆಗಿಹೋಗಿತು, ಎಂಬ ಹಾಗೆ (ನೀರು ಭೂಮಿಯನ್ನೆಲ್ಲ) ಆವರಿಸಿ, ಒತ್ತರಿಸುತ್ತ, ಹರಿಯುತ್ತಿರುವ ಪ್ರವಾಹದ ಆಧಿಕ್ಯದಿಂದ,

1 ಟು (ದ) 2 ಳ (ದ)

ಕೊಳವೆಂಟೆ ಪಳ್ಳ ತೊಱೆ ಕೆಱೆ
ಪೊಳೆಯೆಂಬ ವಿಭೇದವಿಲ್ಲವಾದುದು ಮಳೆಯೊಳ್ ೨೫

ಜಡಿವಳೆ ಜಿನುಂಗು ಬಲ್ಸರಿ
ಯಿಡುಕುಂಬನಿ ನಟ್ಟವನಿಗಳಱವಳೆ ತುಂತುರ್
ಬಡಸರಿ ಸೂಳ್ಸರಿ ಕಾಲ್ಸರಿ
ಯೆಡೆಗುಡದೊತ್ತರಿಸಿ ಕಱೆದುವಿರುಳುಂ ಪಗಲುಂ ೨೬

ಜಲಮಯಮಿಳೆಯೆಲ್ಲಂ ಪ್ರ
ಜ್ವಲಿತ ತಟನ್ಮಾಲಿಕಾಮಯಂ ದೆಸೆಯೆಲ್ಲಂ
ಜಲದಮಯಮಭ್ರಮೆಲ್ಲಂ
ನೆಲಿವೆತ್ತಿರೆ ಬಿಡದೆ ಕಟ್ಟಿ ಕಱೆದುವು ಮಳೆಗಳ್ ೨೭

ವ॥ ಅಂತೇಳ್ತಂದ ಕಾರ್ಗಾಲದೊಳಿಪ್ಪತ್ತೊಂದು ದಿನವೆಡೆವಿಡದೆ ಕಱೆವ ಮಳೆಯೊಳ್ಸಿರಿಯಾಳ್ವನ ಭಕ್ತಿಭಾವಮನಿಳೆಯೊಳ್ನೋಡಲೆಳಸಿ ಪರಶಿವಂ ನಿಜಗಣಂಗಳಂ ಕಳುಪಲೊಡನವರ್ಚರ ರೂಪಂ ತಳೆದು ಧರಾತಳಕ್ಕಿಳಿದು ಕಾಂಚೀಪುರಮನೊಳಪೊಕ್ಕು ಭಕ್ತಮಂದಿರಮಂ ಸಾರ್ತರೆ ತದ್ಭಕ್ತ ನಱದಿದಿರ್ವಂದು ಸಂಭ್ರಮದಿನೆಱಗುತೊಡಗೊಂಡು ಪೋಗಿ ಮಣಿಮಯಾಸನದೊಳ್ಮಾರ್ತಿಗೊಳಿಸಿ

ಆ ಮಳೆಯಲ್ಲಿ ಕೊಳ, ಕುಂಟೆ, ಹೊಳೆ, ಹಳ್ಳ, ಕೆರೆ ಎಂಬ ಭೇದವಿಲ್ಲದಂತಾಯಿತು. ೨೬. ಜಡಿಮಳೆ, ಜಿನುಗುವ ಮಳೆ, ದೊಡ್ಡಮಳೆ, ಡೊಂಕಾಗಿ ಅತ್ತಇತ್ತ ಎರಚುವ ಹನಿ ಮಳೆ, ನೆಟ್ಟಗೆ (ನೇರವಾಗಿ) ಸುರಿಯುವ ಹನಿಗಳ, ಹದವಲ್ಲದ ಅರ್ಧಮರ್ಧ ಮಳೆ, ಹನಿ, ತುಂತುರುಹನಿ, ಬಡಮಳೆ, ಸರತಿಯ ಮೇಲೆ ಬರುವಮಳೆ, ನೀರು ಹರಿಯುವ ಮಳೆ—ಇವು ಸತತವಾಗಿ ಒತ್ತರಿಸಿ ಹಗಲೂ ಇರುಳೂ ಸುರಿಯುತ್ತಿದ್ದವು. ೨೭. ಭೂಮಿಯೆಲ್ಲ ಜಲಮಯ ; ದಿಕ್ಕೆಲ್ಲವೂ ಪ್ರಕಾಶಿಸುವ ಮಿಂಚಿನ ಮಾಲೆಗಳ ಮಯ ; ಆಕಾಶವೆಲ್ಲ ಮೋಡಗಳ ಮಯ—ಹೀಗೆ ಇವು ನೆಲೆಗೊಂಡು ತಪ್ಪದೆ ಮಳೆಗಳು ಗುಂಗೂಡಿ ಸುರಿದವು. ವ॥ ಈ ರೀತಿಯಲ್ಲಿ ಬಂದ ಮಳೆಗಾಲದಲ್ಲಿ ಇಪ್ಪತ್ತೊಂದು ದಿನಗಳವರೆಗೆ ಎಡೆಬಿಡದೆ ಸುರಿಯುತ್ತಿರುವ ಮಳೆಯಲ್ಲಿ ಸಿರಿಯಾಳ್ವನ ಭಕ್ತಭಾವವನ್ನು ಭೂಮಿಯಲ್ಲಿ ನೋಡಬೇಕೆಂದಪೇಕ್ಷಿಸಿ, ಪರಮೇಶ್ವರನು ತನ್ನ ಶಿವಗಣದವರನ್ನು ಕಳಿಸಲಾಗಿ ಅವರು ಜಂಗಮ ವೇಷವನ್ನು ಹೊಂದಿ, ಭೂಭಾಗಕ್ಕೆ ಇಳಿದು ಬಂದು ಕಾಂಚಿ ಪಟ್ಟಣವನ್ನು ಪ್ರವೇಶಿಸಿ, ಭಕ್ತನಾದ ಸಿರಿಯಾಳನ ಮನೆಯನ್ನು ತಲುಪಲಾಗಿ ಆ ಸಿರಿಯಾಳನು ತಿಳಿದು ಎದುರಿಗೆ ಬಂದು ಸಡಗರದಿಂದ ಅವರಿಗೆ ನಮಸ್ಕಾರ ಮಾಡಿ, ಒಳಗೆ ತನ್ನೊಡನೆ ಕರೆದುಕೊಂಡು ಹೋಗಿ, ರತ್ನಖಚಿತವಾದ ಪೀಠದಲ್ಲಿ ಕುಳ್ಳಿರಿಸಿ, ರೋಮಾಂಚಾದಿ ಸಾತ್ವಿಕ ಭಕ್ತಿಭಾವಗಳನ್ನು ಪ್ರಕಟಿಸುತ್ತ ಅವರ ಪಾದಗಳನ್ನು ತೊಳೆದು ಪಾದೋದಕವನ್ನು ಧರಿಸಿ, ತಾನೂ ತನ್ನ ಹೆಂಡತಿಯೂ ಸೇರಿ ಯಥಾ

ಸಾತ್ವಿಕ ಭಕ್ತಿಯಿಂ ಪಾದಪ್ರಕ್ಷಾಳನಂಗೆಯ್ದು ಪಾದೋದಕಂದಳೆದು ವನಿತೆಯುಂ ತಾನುಮುಚಿತ ಸತ್ಕಾರಮಂ ನೆಗಳ್ದಾರೋಗಣೆಗೆ ವಿಜ್ಞಾಪನಂಗೆಯ್ದನಂತರಂ ಚಂಗಳೆದೇವಿ ಬಹು ಶಾಕಪಾಕ ಸಾಮಗ್ರಿಯಂ ಸಂಗ್ರಹಿಸಿ ಪಾಕಂಗೆಯ್ವಾಗಳಡುಗರ್ಬೆಲ್ಲಂ ತೀರೆ ಮಗುಳ್ದು ತರಿಪ್ಪೊಡಿಂಧನಕ್ಕೆ ವೃಷ್ಟಿ ಬಂಧನಮಾಗೆ ಮನಂಗುಂದದೆ—

ಕೆಲಬಲದಾಲಯಂಗಳ ಮರಂಗಳ ಜಂತಿಗೆಯಂ ಪೊದಳ್ದ ಪೆ
ರ್ದೊಳೆಗಳನೆಲ್ಲಮಂ ಮುರಿಗಗೆಯ್ದುಳುರ್ವೆಣ್ಣೆಯೊಳಾಜ್ಯದೊಳ್ತಡಂ
ಗಲಿಸಿದ ಪಟ್ಟೆಚಿತ್ರವಸನಂ ಮೊದಲಾದ ನವೀನ ವಸ್ತ್ರಸಂ
ಕುಲಮನುದಾರ ಧೀರೆಯುರುಪ್ರೀತಿ ಸುಪಾಕಮನೊಲ್ದು ಮಾಡಿದಳ್ ೨೮

ವ॥ ಅಂತು ಪಾಕಂಗೆಯ್ದೆಲ್ಲಮಂ ಸಂಜೋಗಿಸಿ ಗಣನಿವಹಮಂ ಬರಿಸಿ ಮಣಿಮಯಾಸನದೊಳ್ಮೂರ್ತಿಗೊಳಿಸಿ ಪರಮ ಭಕ್ತಿಯಿಂ ಲಿಂಗಾರ್ಚನಂಗೆಯ್ಸಿ ಮಿಸುನಿಯೊಡ್ಡಣಿಗೆಯೊಳ್ಪೊಂಬರಿಯಣಂಗಳಂ ತರಂಗೊಳಿಸಿ ಶುಚಿರುಚಿ ಸರಸತರ ಸುರಭಿಪರಿಮಿಳಿತ ನಾನಾ ಶಾಕಪಾಕೋಪದಂಶ

ಯೋಗ್ಯವಾದ ಸತ್ಕಾರವನ್ನು (ಪೂಜಾದಿಗಳನ್ನು) ಮಾಡಿ, ಊಟಮಾಡುವುದಕ್ಕೋಸುಗ ಬಿನ್ನವಿಸಿಕೊಂಡ ನಂತರ ಚಂಗಳೆಯು ಅನೇಕ ವಿಧವಾದ ಕಾಯಿಪಲ್ಲೆಗಳ ಸಾಮಗ್ರಿಗಳನ್ನು ಸಂಗ್ರಹಿಸಿ ತಂದು ಅಡಿಗೆಯನ್ನು ಮಾಡುವಾಗ ಸೌದೆಯೆಲ್ಲವೂ ಮುಗಿದು ಹೋಗಲು, ಪುನಃ ಸೌದೆಯನ್ನು ತರಬೇಕೆಂದರೆ ಮಳೆಯು ಸೌದೆಯನ್ನು ತರುವುದಕ್ಕೆ ಪ್ರತಿಕೂಲವಾಗಿರಲು, ಮನಸ್ಸು ಕುಂದದೆ—೨೮. ಉದಾರಧೀರೆಯಾದ ಆ ಚಂಗಳೆಯು ಆಚೆ ಈಚೆಯಿರುವ ತಮ್ಮ ಮನೆಯ ಮರದ ತುಂಡು, ಜಂತಿಗಳು, ದಪ್ಪದಪ್ಪನೆಯ ತೊಲೆಗಳು,—ಎಲ್ಲವನ್ನೂ ಮುರಿದು ತಂದು ಉರಿಸಿ, ವಿಶೇಷವಾಗಿ ಎಣ್ಣೆ, ತುಪ್ಪ, ರೇಷ್ಮೆಯ ನಾನಾ ಬಣ್ಣದ ಬಟ್ಟೆಬರೆ ಮೊದಲಾದ ಹೊಸಬಟ್ಟೆಗಳ ಸಮೂಹವನ್ನು ಕೂಡಿಸಿ ಉರಿಸುತ್ತ ಪ್ರೀತಿಯಿಂದ ಒಳ್ಳೆಯ ಅಡಿಗೆಯನ್ನು ಮಾಡಿದಳು ವ॥ ಈ ರೀತಿ ಅಡಿಗೆಯನ್ನು ಮಾಡಿ ಜೋಡಿಸಿಟ್ಟು ಗಣಸಮೂಹವನ್ನು ಬರಮಾಡಿಕೊಂಡು, ಮಣಿಮಯವಾದ ಒಳ್ಳೆಯ ಆಸನದಲ್ಲಿ ಕುಳ್ಳಿರಿಸಿ, ಪರಮಭಕ್ತಿಯಿಂದ ಲಿಂಗಾರ್ಚನೆಯನ್ನು ಮಾಡಿಸಿ, ಬಂಗಾರದ ಅಡ್ಡಣಿಗೆಗಳ ಮೇಲೆ, ಬಂಗಾರದ ತಟ್ಟೆಗಳನ್ನು ಸಾಲುಗೊಳಿಸಿ ಹಾಕಿ, ಶುದ್ಧವೂ, ರುಚಿಕರವೂ, ಮಧುರ ರಸ ಭರಿತವೂ, ಸುಗಂಧದಿಂದ ಕೂಡಿದುದೂ ಆದ ನಾನಾ ಬಗೆಯ ಶಾಕ, ಪಾಕ, ಉಪ್ಪಿನಕಾಯಿ, ನಂಜಿಕೆ ಪದಾರ್ಥಗಳು, ಮೇಲೋಗರ (ಸಾರು) ಹೋಳಿಗೆ (ಅಥವಾ ಪೂರಿ), ತುಪ್ಪ, ಹಾಲು, ಅಗಿದು ತಿನ್ನುವ (ಚಕ್ಕುಲಿ, ಕರಜಿ ಕಾಯಿ ಇತ್ಯಾದಿ) ಆಹಾರಗಳು, ಭುಂಜಿಸಲು ಯೋಗ್ಯವಾದ ಇತರ ಪದಾರ್ಥಗಳು, ಹಣ್ಣುಗಳಿಂದ ಮಾಡಿದ ರಸಾಯನ—ಇವೇ ಮೊದಲಾದವುಗಳಿಂದ ತೃಪ್ತಿಪಡಿಸಿ, ಸುಗಂಧ ದ್ರವ್ಯಗಳಲ್ಲಿ ಕೈಯದ್ದಿ ಸಿ (ಕೈಗಟ್ಟಿಯಿತ್ತು

ವ್ಯಂಜನ ಸೂಪಾಪೂಪ ಘೃತಾಮೃತ ಖಾದ್ಯ ಭೋಜ್ಯ ರಸ ರಸಾಯನಾದಿಯಿಂ ತೃಪ್ತಿವಡಿಸಿ ಕೈಗಟ್ಟಿಯಿತ್ತು ಕರ್ಪೂರ ತಾಂಬೂಲಮಂ ಸಮರ್ಪಿಸಿ ಪರಿಮಳ ಸುಮನೋಮಾಲಿಕಾ ಸುವಸನ ಮಣಿಭೂಷಣಾದಿಯಿನಲಂಕರಿಸಿ ಪೂಜಿಸಲೊಡಂ ಮುದಂದಳೆದು ದಂಪತಿಯಂ ಪರಸಿ ಬಳಿಯಿಂ ಕೈಲಾಸಕೇಳ್ತರೆ ಹರಂ ಕೇಳ್ದು ಪರಮ ಹರ್ಷಂದಾಳ್ದು ತದ್ಭಕ್ತಸಂ ನಿಜಪುರಕ್ಕೆ ತರಲೆಳಸಿ ನೆನೆದು ಕಪಟನಾಟಕಲೀಲಾ ಲಾಲಸಚಿತ್ತಂ ಬಿನದದಿಂ ಭೈರವಾಕೃತಿದಾಳ್ದನದೆಂತೆನೆ—

ಜಡೆಯೆಡೆಯಾಂತ ಕೇತಕಿಯ ನುಣ್ಣೆಸಳಾಗೆ ಶಶಾಂಕರೇಖೆ ಚೆ
ಲ್ವಿದರ್ದಳಿಕೇಕ್ಷಣಂ ನೊಸಲ ಸಿಂಧುರ ಬ[1]ಟ್ಟಿನ ಪಾಂಗನಾಳೆ ಪೆಂ
ಪಿಡಿದಜ ಚಕ್ರಿ ಮಸ್ತಕಯುಗಂ ಶ್ರುತಿಕುಂಡಲಯುಗ್ಮಮಾಗೆ ತಾ
ಳ್ದೊಡನೆ ನಿಕೃತ್ತಹಸ್ತ್ಯಸುರಮಸ್ತಕ ಮೌಕ್ತಿಕ ಕಂಠಮಾಲೆಯಂ ೨೯

ತಳೆದುಗ್ರದ್ವೀಪಿ ದಂತಾವಳನೃಹರಿಲಸತ್ಕೃತ್ತಿಕಂಥಾವೃತಾಂಗಂ
ಬಳವತ್ಕೂರ್ಮಾರಿಭೃತ್ಖರ್ಪರ ತರಳಸುರಾಸ್ಥಿವ್ರಜಸ್ರಗ್ವಿಭೂಷೋ

(ಅಂದರೆ ಕೈ ಮುಖಗಳ ವಾಸನೆ ತೊಲಗಲು ಸುಗಂಧ ದ್ರವ್ಯ ವಿಶಿಷ್ಟ ನೀರನ್ನು ಕೊಡುವುದು), ಪಚ್ಚೆ ಕರ್ಪೂರ ಮಿಶ್ರವಾದ ತಾಂಬೂಲವನ್ನು ಕೊಟ್ಟು, ಪರಿಮಳ ವಿಶಿಷ್ಟವಾದ ಹೂಮಾಲಿಕೆಗಳು, ಒಳ್ಳೆಯ ಬಟ್ಟೆಬರೆಗಳು, ರತ್ನಾಭರಣಗಳು—ಇವೇ ಮೊದಲಾದವುಗಳಿಂದ ಅಲಂಕಾರಗೊಳಿಸಿ ಪೂಜಿಸಿದ ಕೂಡಲೇ (ಆ ಶಿವಗಣವು) ಸಂತೋಷಗೊಂಡು ಗಂಡಹೆಂಡಿರನ್ನು ಆಶೀರ್ವಾದ ಮಾಡಿ, ಅನಂತರ ಕೈಲಾಸಕ್ಕೆ ಬಂದರು. ಶಿವನು (ಇದೆಲ್ಲವನ್ನೂ ಅವರ ಮುಖದಿಂದ ಕೇಳಿ) ಸಂತೋಷಗೊಂಡು ಆ ಸಿರಿಯಾಳ ಸೆಟ್ಟಿಯನ್ನು ಕೈಲಾಸಕ್ಕೆ ಕರೆಯಿಸಿಕೊಳ್ಳಲು, ಯೋಚಿಸಿ ಕೃತ್ರಿಮವಾದ ಒಂದು ನಾಟಕದ ವಿಲಾಸದಿಂದ ಮತ್ತವಾದ ಮನಸ್ಸುಳ್ಳ ಶಿವನು ವಿನೋದದಿಂದ ಭೈರವನ ಆಕಾರ ಹೊಂದಿದನು—ಅದು ಹೇಗೆಂದರೆ—೨೯. ಚಂದ್ರ ಕಳೆಯು ಜಡೆಯಲ್ಲಿ ಧರಿಸಿದ ಕೇತಕೀ ಪುಷ್ಪದ ನುಣುಪಾದ ಗರಿಯಾಯಿತು; ಸುಂದರವಾದ ಹಣೆಯಕಣ್ಣು, ಹಣೆಯಲ್ಲಿಟ್ಟಿರುವ ಸಿಂಧೂರದ ಬೊಟ್ಟಿನ ರೀತಿಯನ್ನು ಹೊಂದಿತು ; ಹಿರಿಮೆಯಿಂದ ಕೂಡಿದ ಬ್ರಹ್ಮ ವಿಷ್ಣುಗಳ ತಲೆಗಳೆರಡೂ ಕಿವಿಯಲ್ಲಿನ ಎರಡು ಕಡುಕು (ಕುಂಡಲ ಅಥವಾ ಮುರುವು) ಗಳಾದುವು—ಹೀಗೆ ಕತ್ತರಿಸಲ್ಪಟ್ಟ ಗಜಾಸುರನ ಶಿರಸ್ಸಿನಲ್ಲಿದ್ದ ಮುತ್ತುಗಳ ಕಂಠ ಮಾಲೆಯನ್ನು ಹಾಕಿಕೊಂಡು—೩೦–೩೧. ಭಯಂಕರವಾದ ವ್ಯಾಘ್ರ, ಗಜ, ನರಸಿಂಹ ಇವರುಗಳ ಪ್ರಕಾಶಿಸುವ ಚರ್ಮದ ಕಂಥೆಯಿಂದ ಆವರಿಸಲ್ಪಟ್ಟ ದೇಹವುಳ್ಳ, ಶಕ್ತಿ ವಿಶಿಷ್ಟನಾದ ಆಮೆಯ ಅವತಾರಿಯಾದ ವಿಷ್ಣುಗೆ ಶತ್ರುವಾದ ವನಾದ ಕಾರಣ ಧರಿಸ

---

1 ಪ (ಚ)

ಜ್ವಳವಕ್ಷಂ ತತ್ತ್ವರೂಪ ತ್ರಿಶಿಖಿಖರ ಶಿಖಾದೀಪ್ತಶೂಲಾಯುಧಂ ಪ್ರಾಂ
ಜುಳನಾದೋದ್ಬಿಂದು ಚಂಚನ್ಮಣಿಯುಗಮಿಳದೋಂಕಾರ ಡಕ್ಕಾಂಕಹಸ್ತಂ ೩೦

ಶ್ರುತಿಚಂಚಚ್ಚರಣಾಂಗದಂ ತೊಳಗೆ ದತ್ತೂರಪ್ರಸೂನಂ ಜಟಾ
ತತಿಯೊಳ್ಶೋಭಿಸೆ ಜೋಗವಟ್ಟಿಗೆ ಫಣಾಭೃನ್ನಾಥನಂದಾಗೆ ಸ
ನ್ನುತವಿದ್ಯಾಮಯಕಕ್ಷಪಾಲಿಕೆ ಬೆಡಂಗಂ ಬೀಱೆ ತಾಳ್ದಿಂದು ಪಾ
ರ್ವತಿಯಾಣ್ಮಂ ನವಭೈರವಾಕೃತಿಯನಾಳ್ದೆಯ್ತಂದನಾನಂದದಿಂ ೩೧

ವ॥ ಅಂತೇಳ್ತಂದು ಕಾಂಚೀನಗರಮಂ ಪೊಕ್ಕು ಭಕ್ತಗೃಹಬಹಿರ್ದೇಶದಾಚಮರವೊದಲೊಳ್
ಬಗ್ಗದೊವಲ ಪಾಸುಗೆಯಲ್ಲಿ ಸಲ್ಲೀಲೆಯಿಂ ಮೂರ್ತಿಗೊಂಡಿರೆಯಿರೆ—

ಚರವೃಂದಂ ಧೂರ್ಜಟಿಪ್ರೇರಣೆಯಿನುರು ನಿಜಾವಾಸಕಂದೆಯ್ದದಿರ್ಪೊಂ
ದಿರವಿಂಗಾತಂ ವಿಷಾದಂಬಡೆದು ತವೆ ತದನ್ವೇಷಣಂಗೆಯ್ಯಲೆಂದಾ
ದರದಿಂ ತದ್ವೀಥಿಯೊಳ್ಪಾಯ್ದುಜಿಸುತಿದಿರೊಳೊಪ್ಪಿರ್ದ ತಚ್ಛೈರವಾಧೀ
ಶ್ವರನಂ ಕಂಡಂ ಚಕೋರಂ ಶಶಿಯನೊಸೆದು ಕಂಡಂತಿರಾ ದಭ್ರಭಕ್ತಂ ೩೨

ಲ್ಪಟ್ಟ ಅಪರ ಬೆನ್ನಿನ ಓಟೆ (ಖರ್ಪರ)ಯೆಂಬ ಹಾರಮಧ್ಯದ ಪದಕವಾಗಿ ಉಳ್ಳ, ದೇವತೆಗಳ ಅಸ್ಥಿಗಳ ಸಮೂಹದ ಮಾಲಿಕೆ ಯೆಂಬ ಅಲಂಕಾರದಿಂದ ಮನೋಹರವಾದ ಎದೆಯುಳ್ಳ, ತತ್ತ್ವ ಸ್ವರೂಪನಾದ, ಮೂರು ಅಗ್ನಿಗಳ ತೀಕ್ಷ್ಣವಾದ ಜ್ವಾಲೆಗಳೋಪಾದಿಯಲ್ಲಿ ಪ್ರಜ್ವಲಿಸಿರುವ ತ್ರಿಶೂಲವೆಂಬ ಆಯುಧವುಳ್ಳ, ಮನೋಹರವಾದ ನಾದ, ಉತ್ಕಟವಾದ ಬಿಂದು—ಇವುಗಳೆಂಬ ಹೊಳೆಯುತ್ತಿರುವ ಎರಡು ಮಣಿಗಳಿಂದ ಕೂಡಿದ ಓಂಕಾರ ಪ್ರಣವ ವೆಂಬ ಢಕ್ಕೆಯನ್ನು ಹಿಡಿದಿರುವ ಕೈಯಿಂದ ಕೂಡಿದ, ವೇದಗಳೆಂಬ ಪ್ರಕಾಶಿಸುವ ಪಾದದ ಗಗ್ಗರಗಳು ಪ್ರಕಾಶಿಸಲು, ಧತ್ತೂರ (ಮದ ಗುಣಿಕೆ)ದ ಹೂವು ಜಡೆಯ ಸಮೂಹದಲ್ಲಿ ಶೋಭಿಸುತ್ತಿರಲು, ಆದಿ ಶೇಷನು ಯೋಗ ಪಟ್ಟಿಗೆ ಆಗಿರಲು, ಶ್ಲಾಘ್ಯವಾದ ವಿದ್ಯೆಗಳ ರೂಪವನ್ನು ಹೊಂದಿದ ಬಗಲ ಜೋಳಿಗೆಯು ಸೊಗಸನ್ನು ಬೀರುತ್ತಿರಲು—ಈ ರೀತಿ ಪಾರ್ವತೀ ಪತಿಯು ನೂತನ ಭೈರವಾಕಾರದ ವೇಷವನ್ನು ತಳೆದು ಆನಂದದಿಂದ ಬಂದನು. ವ॥ ಈ ರೀತಿ ಬಂದು ಕಾಂಚೀನಗರವನ್ನು ಹೊಕ್ಕು ಆ ಭಕ್ತನ ಮನೆಯ ಹೊರಗಣ ಸ್ಥಳದ ಆ ಚಮರದ ಬುಡದಲ್ಲಿ ಹುಲಿ ಚರ್ಮವನ್ನು ಹಾಸಿಕೊಂಡು ಒಳ್ಳೆಯ ವಿಲಾಸದಿಂದ ಕುಳಿತು ಇರುತ್ತಿರಲಾಗಿ—೩೨. ಜಂಗಮ ಸಮೂಹವು ಈಶ್ವರನ ಪ್ರೇರಣೆಯಿಂದ ತನ್ನ ಶ್ರೇಷ್ಠವಾದ ಮನೆಗೆ ಆದಿನ ಬಾರದೆ ಇದ್ದ ರೀತಿಗಾಗಿ, ಅವನು ವಿಷಾದಗೊಂಡು ಶೀಘ್ರವಾಗಿ ಅವರನ್ನು ಹುಡುಕಿಕೊಂಡ ಬರುವುದಕ್ಕೋಸ್ಕರ ಆದರದಿಂದ ಆ ಬೀದಿಯಲ್ಲಿ ಅಂದರೆ ಆ ಭೈರವೇಶ್ವರ ವೇಷಧಾರಿ ಶಿವನು ಕುಳಿತಿದ್ದ ಬೀದಿಯಲ್ಲಿ ಹೊರಟು ಹುಡುಕುತ್ತ ಚಕೋರ ಪಕ್ಷಿಯು ಪ್ರೀತಿಯಿಂದ ಚಂದ್ರನನ್ನು ಕಂಡ ಹಾಗೆ ಆ ಸಿರಿಯಾಳ್ವನು ಇದಿರಿನಲ್ಲಿಯೇ ಆ ಭೈರವ ಶ್ರೇಷ್ಠನನ್ನು

ವ॥ ಅಂತು ಕಂಡು ಕಳೆಯೇಱಿ ಸಾರೆವಂದು ಸಾಷ್ಟಾಂಗವೆಱಗಿ ಕೃತಾರ್ಥಭಾವಮಂ ಕೆಯ್ಕೊಂಡು ದೇವ ನಿಮ್ಮಡಿಗಳೆನ್ನಮೇಲಣ ಕಾರುಣ್ಯದಿಂ ಮದೀಯ ಗೃಹದೊಳಿಂದಾರೋಗಣೆಗೆಯ್ವು ದೆಂದು ಬಿನ್ನಪಂಗೆಯ್ಯೆ ಕಪಟವೇಷದೀಶ್ವರಂ ಕೇಳ್ದು—

ಎಲೆ ಮಗನೆ ಕೇಳೆಮಗೆ ನಿ
ಶ್ಚಲಸುವ್ರತಮುಂಟು ಸಲಿಪ ಕಲಿಯಾವನದಂ
ನೆಲದೊಳ್ನೆನೆವೊಡಸಾಧ್ಯಮು
ದೊಲವಿಂ ನೀಂ ಸಲಿಸೆ ನಿನ್ನ ಜನ್ಮಮೆ ಸಫಲಂ ೩೩

ಆಱುದಿಂಗಳ್ಗೊರ್ಮೆ ಕೇಳ್ಭೋಜನಮೆಮಗದು ಸದ್ವಂಶಜಂ ಕೋಮಲಾಂಗಂ
ನೆಱೆಚೆಲ್ವಂ ಪಂಚವರ್ಷೀಯನೆನಿಪ ಗುಣವದ್ಬಾಲಸಂ ತಂದೆತಾಯ್ಗ
ಳ್ಚಱಿದುದ್ಯದ್ಭಕ್ತಿಯಿಂ ಮಾಡಿದ ಪಿಶಿತದಿನಾದಪ್ಪುದೀ ಮಾಳ್ಕೆಯಿಂ ನೀ
ನುಱೆ ಮಾಡಲ್ವೇಳ್ಕುಮಿಂತಲ್ಲದೊಡೆ ಬಱಿಯ ಮಾತಿಂದದೇಂ ದಭ್ರಭಕ್ತಾ ೩೪

ಎನೆ ಕೇಳ್ದು ಭೈರವೋಕ್ತಿಯ
ನನವದ್ಯಂ ದೇವ ಮಾಳ್ಪೆನೀ ಮಾಳ್ಕೆಯೊಳೆಂ
ದೆನುತೆಱಗಿ ಮುದದೆ ವಿಜ್ಞಾ
ಪನಮಂ ತಾಂ ಮಾಡಿ ಸೆಟ್ಟಿ ಮನೆಗೇಳ್ತಂದಂ ೩೫

ಕಂಡು—ವ॥ ಆ ರೀತಿ ಭೈರವನನ್ನು ಕಂಡು ಉತ್ಸಾಹಗೊಂಡು ಹತ್ತಿರಕ್ಕೆ ಬಂದು ಸಾಷ್ಟಾಂಗ ನಮಸ್ಕಾರ ಮಾಡಿ, ಕೃತಾರ್ಥನಾದೆನೆಂದು ಭಾವಿಸಿಕೊಂಡು, ದೇವ ಪೂಜ್ಯ ಪಾದರಾದ ತಾವು ನನ್ನ ಮೇಲೆ ಕಾರುಣ್ಯವನ್ನು ತೋರಿಸಿ, ನನ್ನ ಮನೆಯಲ್ಲಿ ಈ ದಿನ ಊಟ ಮಾಡಬೇಕು ಎಂದು ಬಿನ್ನವಿಸಿಕೊಳ್ಳಲು ಕಪಟ ದೇಷದ ಶಿವನು ಕೇಳಿ—೩೩. ಎಲೆ ಮಗನೆ ಕೇಳು : ನಮಗೆ ನಿಶ್ಚಲವಾದ ಒಳ್ಳೆಯ ನಿಯಮವೊಂದುಂಟು. ಆ ವ್ರತ ವನ್ನು ಭೂಮಿಯಲ್ಲಿ (ನಮಗೆ) ನೆರವೇರಿಸುವ ಸಮರ್ಥನಾರು ? ಅದು ಸ್ಮರಿಸಿದರೇ ಅಸಾಧ್ಯವಾದದ್ದು; ನೀನು ಸಲಿಸಿದರೆ ನಿನ್ನ ಜನ್ಮವೇ ಸಾರ್ಥಕವಾಗುವುದು. ೩೪. ಎಲೈದಭ್ರ ಭಕ್ತನೇ ಕೇಳು : ನಮಗೆ ಆರು ತಿಂಗಳಿಗೊಂದಾವರ್ತಿ ಒಳ್ಳೆಯ ಕುಲದಲ್ಲಿ ಹುಟ್ಟಿದವನು, ಕೋಮಲವಾದ ಅವಯವಗಳುಳ್ಳವನು, ಚೆನ್ನಾಗಿ ಸುಂದರನಾಗಿರು ವವನು, ಐದು ವರ್ಷ ವಯಸ್ಸಾಗಿರುವವನು, ಎನಿಸುವ ಗುಣವಂತನಾದ ಬಾಲಕನನ್ನು ತಂದೆ ತಾಯಿಗಳೇ ಕತ್ತರಿಸಿ ವಿಶೇಷ ಭಕ್ತಿಯಿಂದ ಮಾಡಿದ ಮಾಂಸದ ಭೋಜನವು ಆಗಬೇಕು. ಈ ರೀತಿಯಲ್ಲಿ ನೀನು ಚೆನ್ನಾಗಿ ಮಾಡಬೇಕು. ಹೀಗಿಲ್ಲದಿದ್ದರೆ ಬರಿಯ ಪ್ರಯೋಜನವಿಲ್ಲದ ಮಾತಿನಿಂದೇನು ಪ್ರಯೋಜನ ? ೩೫. ಹೀಗೆಂದು (ಆ ಭೈರವನು) ಹೇಳಲು, ನಿರ್ದುಷ್ಟನಾದ ಆ ಸಿರಿಯಾಳ ಸೆಟ್ಟಿಯು, ಆ ಭೈರವನ ಮಾತನ್ನು ಕೇಳಿ, 'ದೇವ, ಈ ರೀತಿಯಿಂದಲೇ ಮಾಡುವೆನು,' ಎಂದೆನ್ನುತ್ತ ನಮಸ್ಕರಿಸಿ ಸಂತೋಷ

ವ॥ ಅಂತೇಳ್ತಂದು ನಿಜರಮಣಿಯಾನನಮನಭೀಕ್ಷಿಸಿ ತನ್ಮನಮನೊರೆದು ನೋಡಲಿಂತೆಂದಂ—

ತಾಪಸನೊರ್ವನೊಲ್ದು ನವಭೈರವವೇಷಮನಾಂತು ಬಂದನಿಂ
ದೋಪಳೆ ಕೇಳವಂಗೆ ಶಿಶುಮಾಂಸನಿಷೇವಣಸುವ್ರತಂ ಗಡಿಂ
ದೀ ಪುರದೊಳ್ವಲಂ ಬಲಿತು ತಂದು ಸಲಕ್ಷಣ ಬಾಲನಂ ಬಳಿ
ಕ್ಕಾ ಪರಮಂಗೆ ಕೊಯ್ದಡಗನಟ್ಟುಣಲಿಕ್ಕುವ ಕಜ್ಜಮೊಪ್ಪದೇ ೩೬

ವ॥ ಎಂದ ವಲ್ಲಭನ ವಚನಮನೇಳಿದಂಗೇಳ್ದು ಚಂಗಳೆದೇವಿಯಿಂತೆಂದಳ್—

ಶಿವ ಶಿವ ಬೆಳ್ತ[1]ನಂ ನಿಮಗೆ ಸಲ್ವುದೆ ತಾಪಸವೇಷದೀಶನು
ತ್ಸವಮತಿ ಬೇಡ ಲೋಗರ ತನೂಜರನೀಯಲದೇಕೆ ಮತ್ತನೂ
ಭವನಿರೆ ಮಂಜುಳಾಂಗನಿವನಂ ವಧಿಸುತ್ತುಮವಂಗೆ ತೃಪ್ತಿ ಸಂ
ಭವಿಪವೊಲಿತ್ತು ಮಾಂಸಚಯಮಂ ತವೆ ತಾಳ್ವುದು ಧನ್ಯಭಾವಮಂ ೩೭

ವ॥ ಎಂದ ಮನದನ್ನಳ ವಿನಯ ವಚನಂ ಮನಃ[2]ಕಂಡೂಯನಮಾಗೆ ಬಗೆಯೊಳ್ಮಚ್ಚಿ ಮುದಂಬಟ್ಟು ಸೆಟ್ಟಿ ಪಠನಾಗಾರದೊಳೋದುವಣುಗನಂ ತರಲೆಂದು ನಡೆಗೊಳ್ವುದಱಿಂ ಮುನ್ನಮೆ

ದಿಂದ ಬಿನ್ನಹವನ್ನು ಮಾಡಿ ಮನೆಗೆ ಬಂದನು. ವ॥ ಹಾಗೆ ಮನೆಗೆ ಬಂದು ತನ್ನ ಹೆಂಡತಿಯ ಮುಖವನ್ನು ನೋಡಿ, ಮಾತನಾಡುತ್ತ ಅವಳ ಮನಸ್ಸನ್ನು ನೋಡಲು ಹೀಗೆ ಹೇಳಿದನು : ೩೬. ಪ್ರೀತಿಯವಳೇ, ಕೇಳು ಓರ್ವ ತಾಪಸನು ನವ ಭೈರವನ ವೇಷವನ್ನು ಧರಿಸಿ ಇಂದು ಬಂದಿದ್ದಾನೆ. ಅವನಿಗೆ ಮಗುವಿನ ಮಾಂಸವನ್ನು ತಿನ್ನುವ ಒಳ್ಳೆಯ ವ್ರತವಂತೆ! ಇಂದು ಈ ಪಟ್ಟಣದಲ್ಲಿ ನಿಶ್ಚಯ ವಾಗಿ ಸಲ್ಲಕ್ಷಣನಾದ ಬಾಲಕನನ್ನು ಕ್ರಯಕ್ಕೆ ತಂದು ಅನಂತರ ಅವನನ್ನು ಕೊಯ್ದು ಆ ಉತ್ಕೃಷ್ಟನಾದ ಭೈರವನಿಗೆ ಮಾಂಸದ ಅಡಿಗೆಯನ್ನು ಮಾಡಿ, ಊಟ ಮಾಡುವುದಕ್ಕೆ ಇಡುವ ಕಾರ್ಯವು (ನಿನ್ನಿಂದ) ಆಗುವುದೇ ? ವ॥ ಹೀಗೆಂದು ಹೇಳಿದ ಪತಿಯ ಮಾತನ್ನು ಚಂಗಳೆಯು ತಿರಸ್ಕರಿಸಿ ಹೀಗೆ ಹೇಳಿದಳು : ೩೭. ಶಿವಶಿವ : ನಿಮಗೆ ಈ ಹುಚ್ಚುತನವು ಯೋಗ್ಯವೇ ? ತಪಸ್ವಿ ವೇಷದ ಪರಮೇಶ್ವರನು ಸಂತೋಷಗೊಂಡ ಮನಸ್ಸಿನಿಂದ ಬೇಡಿದರೆ ಮನೋಹರವಾದ ಅವ ಯವವುಳ್ಳ ನಮ್ಮ ಮಗನೇ ಇರುತ್ತಿರಲು ಇತರರ ಮಕ್ಕಳನ್ನು ಕೊಡುವುದೇಕೆ ? ಆ ನಮ್ಮ ಮಗನನ್ನು ಕೊಲ್ಲುತ್ತ ಆ ಈಶ್ವರನಿಗೆ ತೃಪ್ತಿಯುಂಟಾಗುವ ಹಾಗೆ ಮಾಂಸ ಸಮೂಹವನ್ನು ಕೊಟ್ಟು ಕೃತಾರ್ಥತೆಯನ್ನು ಚೆನ್ನಾಗಿ ಪಡೆಯುವುದು. ವ॥ ಹೀಗೆಂದ ಆ ಮನಃ ಕಾಂತೆಯ ನಮ್ರತೆಯಿಂದ ಕೂಡಿದ ಮಾತು ಮನಸ್ಸೆಂಬ ಕಜ್ಜಿಗೆ (ಕಡಿತಕ್ಕೆ) ತೀಟೆಯುಂಟಾಗಲು (ಕೆರೆದು ಕೊಂಡಂತಾಗಲು), ಮನಸ್ಸಿನಲ್ಲಿ ಶ್ಲಾಘಿಸಿ, ಸಿರಿಯಾಳ ಸೆಟ್ಟಿಯು ಸಂತೋಷಗೊಂಡು, ಓದುವ ಮಠದಲ್ಲಿ (ಪಾಠಶಾಲೆಯಲ್ಲಿ) ಓದುತ್ತಿರುವ

1 ಳೆ (ಚ) 2 + ಕಂಡೂ (ಗ, ಚ, ಮ, ಅ, ಜ)

ತತ್ತಾಪಸಂ ಸೌಮ್ಯವೇಷಂದಳೆದಾ ಚೀಲಾಳನಿರ್ದಲ್ಲಿಗೆಯ್ತಂದವನಂ ಕೆಲಕ್ಕೆ ಕರೆದು ಮಣಿದಾತನು ನೋಡಿ ನಿಡುಸುಯ್ದು ಕಂಬನಿದುಂಬುತಿಂತೆಂದಂ—

ಎಲೆ ಸುಕುಮಾರ ನಿನ್ನ ಸುಕುಮಾರಶರೀರಮನಯ್ಯೊ ಪೆತ್ತರಿಂ
ದಲಸದೆ ಬಂದ ರಾಕ್ಷಸ ತಪಸ್ವಿಗೆ ಕೀಳ್ಬಲಿಗಟ್ಟಿ ಮಾಂಸಮಂ
ಸುಲಿದುಣಲಿಕ್ಕಲಿರ್ದಪರದಂ ತಿಳಿದಾಂ ನಿನಗೆಲ್ಲಮಂ ಸಮು
ಜ್ವಲಮತಿ ಪೇಳಲೆಯ್ದಿದೆನಳಲ್ಪಿರಿದಾಗೆ ಮದೀಯ ಚಿತ್ತದೊಳ್ ೩೮

ಪೋಗು ರಹಸ್ಯವಾಸದೊಳಡಂಗಿರು ನಿನ್ನಯ ತಂದೆ ಬಂದು ನೀ
ಡಾಗದೆ ಕಂಡೊಡಿಂ ಬಿಡುವನೇ ಪಿಡಿದೊಯ್ಯದೆ ಕಂದ ಸಾವಿಗೀ
ಡಾಗದಿರಯ್ಯೊ ಸತ್ತು ಪಡೆವಗ್ಗದ ಮೋಕ್ಷಮದೇಕೆ ಧಾರಿ[1]ಣೀ
ಭೋಗಮನುಣ್ಬುದಂ ಬಿಸುಟು ಸಾವುದಱಿಂದತಿ ಕಷ್ಟಮಾವುದೋ ೩೯

ಪಿಡಿದಡಸಿ ಕೆಡಪಿ ಚೆಂಡಿಕೆ
ವಿಡಿದೌಂಕಿ ಕರಾಳ ಖಡ್ಗದಿಂ ಘರಿಲೆನೆ ಸೊಂ

ಮಗನನ್ನು ಕರೆತರಬೇಕೆಂದು ಹೋಗುವುದಕ್ಕಿಂತ ಮುನ್ನವೇ ಆ ಖುಷಿಯು ಸೌಮ್ಯವಾದ ವೇಷವನ್ನು ಧರಿಸಿ ಆ ಚೀಲಾಳನು (ಸಿರಿಯಾಳ ಶೆಟ್ಟಿಯು ಮಗನು) ಇದ್ದ ಸ್ಥಳಕ್ಕೆ ಬಂದು, ಅವನನ್ನು ಒತ್ತಟ್ಟಿಗೆ ಕರೆದು, ನಮಸ್ಕರಿಸಿದ ಅವನನ್ನು ನೋಡಿ ನಿಟ್ಟಿಸಿರು ಬಿಟ್ಟು ಕಣ್ಣೀರನ್ನು ತುಂಬಿಕೊಂಡು ಹೀಗೆ ಹೇಳಿದನು : ೩೮. ಎಲೈ ಸುಕುಮಾರನೇ, ಕೇಳು : ತಾಯಿ ತಂದೆಗಳು ಅಯ್ಯೋ ! ನಿನ್ನ (ಈ) ಕೋಮಲವಾದ ದೇಹವನ್ನು ಈ ದಿವಸ ಆಲಸ್ಯ ಪಡದೆ ಬಂದಂಥ ಖುಷಿ ವೇಷದ (ಒಬ್ಬ) ರಾಕ್ಷಸನಿಗೆ ಬಲಿ ಪಶುವನ್ನಾಗಿ ಕಟ್ಟಿ, ಮಾಂಸವನ್ನು ತೆಗೆದು ಊಟ ಮಾಡುವುದಕ್ಕೆ ಇಡುವುದಕ್ಕೋಸ್ಕರ, ಪ್ರಯತ್ನ ಮಾಡುತ್ತಿರುವರು. ನಾನು ಅದನ್ನು ತಿಳಿದು ನನ್ನ ಮನಸ್ಸಿನಲ್ಲಿ ಅತೀವ ದುಃಖವುಂಟಾಗಲು, ಎಲೈ ಪ್ರಕಾಶಮಾನವಾದ ಬುದ್ಧಿಯುಳ್ಳವನೇ, ನಿನಗೆ ಅದೆಲ್ಲವನ್ನೂ ಹೇಳುವುದಕ್ಕೆ ಬಂದೆನು. ೩೯. ಕಂದ, ಹೋಗು; ಗುಟ್ಟಾದ ಸ್ಥಳದಲ್ಲಿ ಅಡಗಿಕೊಂಡಿರು. ನಿನ್ನ ತಂದೆ ಬಂದು ಕಂಡರೆ ತಪ್ಪದೆ ಹಿಡಿದುಕೊಂಡು ಹೋಗದೆ ಬಿಡುವನೇ ? ಅಯ್ಯೋ ! ಸಾವಿಗೆ ಗುರಿಯಾಗದೆ ಇರು. ಸತ್ತು ಪಡೆಯುವ ಶ್ರೇಷ್ಠವಾದ ಆ ಮೋಕ್ಷವಾದರೂ ಏಕೆ ? ಭೂಮಿಯಲ್ಲಿನ ಸೌಖ್ಯವನ್ನು ಅನುಭವಿಸುವುದನ್ನು ಬಿಸಾಡಿ, ಸಾಯುವುದಕ್ಕಿಂತಲೂ ಅತಿ ಕಷ್ಟವಾದದ್ದಾವುದಿದೆಯೋ ? ೪೦. ನಿನ್ನ ತಾಯ್ತಂದೆಗಳು (ನಿನ್ನನ್ನು) ಹಿಡಿದು ಮೆಟ್ಟಿ ಕೆಡವಿ, ಜುಟ್ಟನ್ನು ಹಿಡಿದು ಅದುಮಿ ಭಯಂಕರ ಖಡ್ಗದಿಂದ ಗರಿಲ್ ಎಂದು ಸೊಗಸಾಗಿ ಬೆಳೆದಿರುವ ನಿನ್ನ ಕುತ್ತಿಗೆಯನ್ನು

1 ರು(ಆ)

ಪಡರ್ದೆಸೆವ ನಿನ್ನ ಕೊರಲಂ
ತಡೆಯದೆ ಕೊಱೆದಪ್ಪರಕಟ ನಿನ್ನಯ ಪಿತರರ್ ೪೦

ವ॥ ಎಂಬ ತಾಪಸಾಲಾಪಮನೇಳಿದಂಗೇಳ್ದು ನಕ್ಕು ಚೀಲಾಳನಿಂತೆಂದಂ—

ಒಡಲಭ್ರಚ್ಛಾಯೆಯೆಂತುಂ ಕಿಡುಗುಮಿದನದಾವಂ ದೃಢಂಗೆಯ್ವನೆನ್ನಂ
ಪಡೆದರ್ತ್ತಾಪಸಗಿಂತಳಿವ ತನುವನೊಲ್ದೀಯೆ ಸಾಫಲ್ಯಮಂ ತಾಂ
ಪಡೆಗುಂ ಕೇಳೆನ್ನ ಭಾಗ್ಯಕ್ಷಿತಿರುಹಮದಱಿಂದಂ ಭಯಂದೋರ್ಪ ನಿನ್ನೀ
ನುಡಿಗಳ್ಗಾನಳ್ಕೆನೆನ್ನಿಂಗಿತಮನಱಿಯದಿಂತೆಂಬುದೇ ತಾಪಸೇಂದ್ರಾ ೪೧

ಜನನಿಗೆ ಜನಕಂಗೆ ಮುದಂ
ಜನಿಪ್ಪುದು ಗಡ ಯೋಗಿಗಾದಪುದು ತೃಪ್ತಿ ಗಡೀ
ತನುವಿಂದೊರ್ಮೆಯೆ ನಿಜಮೆಂ
ದೆನೆ ಪೇಳೆನ್ನಿಂದೆ ಧನ್ಯನನ್ಯನದಾವಂ ೪೨

ವ॥ ಎಂದ ಚೀಲಾಳ[1]ದೇವ[1]ನ ನಿಶ್ಚಳಭಾವಕ್ಕೆ ಭವಾನಿಯರಸಂ ಮನದೊಳ್ಮೆಚ್ಚಿ—

ಜನನಿಯ ಬಗೆಯುಂ ಜನಕನ
ಮನಮುಂ ತನುಜನ ಹೃದಯಮುಮೊಂದಾದುದು ಪೇ
ಳೆನಗೆಲ್ಲಿಯದಿವರಂ ಗೆ
ಲ್ವನುವೆಂದು ಪುರಾರಿ ನಾಣ್ಚಿ ಮೆಲ್ಲನೆ ಸರಿದಂ ೪೩

ತಡೆಯದೆ ಕತ್ತರಿಸುವರು. ಅಕ್ಕಟಾ ! ವ॥ ಹೀಗೆಂದ ಆ ತಪಸ್ವಿಯ ವ್ಯರ್ಥವಾದ ಮಾತುಗಳನ್ನು ಕೇಳಿ, ಚೀಲಾಳನು ಅವನನ್ನು ತಿರಸ್ಕರಿಸಿ ಹೀಗೆ ಹೇಳಿದನು : ೪೧. ದೇಹವೆಂಬುದು ಮೋಡದ ನೆಳಲಿನಂತೆ. ಹೇಗೂ ನಾಶವಾಗುವ ಈ ದೇಹವನ್ನು ಯಾವನು ತಾನೆ ಸ್ಥಿರವಾದುದನ್ನಾಗಿ ಮಾಡುತ್ತಾನೆ ? ನನ್ನನ್ನು ಆ ತಾಪಸನಿಗಾಗಿಯೇ ಪಡೆದಿದ್ದಾರೆ. ನಾಶವಾಗುವ ದೇಹವನ್ನು ಪ್ರೀತಿಯಿಂದ (ಆ ತಾಪಸನಿಗೆ) ಕೊಟ್ಟರೆ ನನ್ನ ಐಶ್ವರ್ಯವೆಂಬ ವೃಕ್ಷವು ತಾನು ಸಾಫಲ್ಯಗೊಳ್ಳುವುದು. ಆದ್ದರಿಂದ ಭಯವನ್ನು ತೋರಿಸುವ ನಿನ್ನ ಈ ನುಡಿಗಳಿಗೆ ನಾನು ಭಯ ಪಡುವುದಿಲ್ಲ. ತಾಪಸ ಶ್ರೇಷ್ಠನೇ, ಕೇಳು : ೪೨. ಈ ದೇಹದಿಂದ ಒಮ್ಮೆಲೆ ನಿಶ್ಚಯವಾಗಿ ತಾಯಿ ತಂದೆಗಳಿಗೆ ಸಂತೋಷವು ಉಂಟಾಗುವುದಲ್ಲವೇ ! ಯೋಗಿಗೆ ತೃಪ್ತಿ ಯಾಗುವುದಿಲ್ಲವೆ ! ಹೀಗಿರುವಾಗ ನನಗಿಂತಲೂ ಧನ್ಯನು ಮತ್ತೊಬ್ಬನು ಯಾವನು ? ಹೇಳು. ವ॥ ಹೀಗೆಂದ ಚೀಲಾಳ ದೇವನ ನಿಶ್ಚಳವಾದ ಭಾವಕ್ಕೆ ಈಶ್ವರನು ಮನಸ್ಸಿನಲ್ಲಿ ಮೆಚ್ಚಿ ೪೩. ತಾಯಿಯ ಮನಸ್ಸೂ, ತಂದೆಯ ಮನಸ್ಸೂ, ಮಗನ ಹೃದಯವೂ ಒಂದಾದಾಗ ನನಗೆ ಇವರನ್ನು ಗೆಲ್ಲುವ ರೀತಿ ಇನ್ನೆಲ್ಲಿಯದು ? ಹೇಳು ಎಂದು ಶಿವನು ನಾಚಿ ಮೆಲ್ಲಗೆ ಹಿಂದಿರುಗಿ

1 x (ಮ)

ವ॥ ಅಂತು ಸರಿದಿವಂದಿರನಿನ್ನು ನೋಳ್ಪೆನದಕ್ಕೇನೆಂದು ತದ್ಭೈರವಾಕೃತಿಯುಂ ತಳೆದಿರ್ಪಾಗಳಿತ್ತಲ್—

ಸಿರಿಯಾಳ್ವಂ ವೋದದಿಂದೋದುವ ಮಠದೆಡೆಗೇಳ್ತಂದು ಚೀಲಾಳನಂ ಸ
ತ್ಕರಿಸುತ್ತುಂ ತಾಳ್ದು ಬೆನ್ನೊಳ್ಮನೆಗೆ ಮಗುಳ್ದು ಬಂದಲ್ಲಿ ವಧ್ಯೋಚಿತಾಲಂ
ಕರಣಂ ಗೆಯ್ದೈಹಿಕೈಕಸ್ಪೃಹೆಯನುಳಿದು ಮೋಕ್ಷಾರ್ಥಿಯಾಗಿರ್ದ ಶೋಭಾ
ಕರನಂ ಮುಂಡಾಡಿ ನೋಡುತ್ತೊಸಗೆಯ ದಿನಮೆಂದೆಂದು ಸಂತೋಷದಿಂದಂ ೪೪

ಮಗನೆ ಮಹೇಶ್ವರಂ ಕೃಪೆಯಿನೆಮ್ಮ ಭವಾಮಯಮಂ ಸಡಿಲ್ಚಲು
ಜ್ಜುಗಿಸಿ ಚರಾಂಗನೆಯ್ದಿ ನವಭೋಜ್ಯಮನರ್ಥಿಸಿ ಬೇಡಿದಂ ದಯಾ
ಳುಗಳಧಿನಾಥನೆಂದು ಮಣಿದಾಕ್ಷಣಮಿತ್ತೆನವಂಗೆ ಲೀಲೆ ಕ
ಯ್ಮಿಗೆ ಭವದೀಯ ಕಾಯಮಿದು ಕಾಯಜವೈರಿಗಭೀಷ್ಟಭೋಜನಂ ೪೫

ವ॥ ಎಂಬ ಪಿತೃವಚನಮನೊಲ್ದು ಚೀಲಾಳಂ ಕೇಳ್ದು—

ಬಹು ಸುಕೃತರಾಶಿ ಫಲಿಸಿದು
ದಹಿಧರ ಕರುಣೈಕಲತಿಕೆ ಪೂತುದು ಪರೆದ
ತ್ತಹಿತಕುಲಂ ಘನ ಸಂಸೃತಿ
ಗಹನಂ ಕಡಿವಡೆದುದಾದೆನಾನತಿ ಧನ್ಯಂ ೪೬

ದನು. ವ॥ ಹಾಗೆ ಹಿಂಜರಿದು ಇವರನ್ನು ಇನ್ನೂ ನೋಡುತ್ತೇನೆ ಅದಕ್ಕೇನು? ಎಂದು ಆ ಭೈರವನ ಆಕಾರವನ್ನು ಹೊಂದಿ ಇರುವಾಗ—೪೪–೪೫. ಸಿರಿಯಾಳ ಸೆಟ್ಟಿಯು ಸಂತೋಷದಿಂದ (ತನ್ನ ಮಗನು) ಓದುವ ಮಠದ ಹತ್ತಿರ ಬಂದು ಚೀಲಾಳನ್ನು ಉಪಚರಿಸುತ್ತ ಬೆನ್ನ ಮೇಲೆ ಹೊತ್ತುಕೊಂಡು ಮನೆಗೆ ಹಿಂದಿರುಗಿ ಬಂದು ಅಲ್ಲಿ (ಮಗನನ್ನು) ಕೊಲ್ಲುವುದಕ್ಕೆ ಯೋಗ್ಯವಾದ ವ್ಯವಸ್ಥೆ ಮಾಡಿ, ಈ ಲೋಕ ಸಂಬಂಧವಾದ ಆಸೆಯನ್ನೆಲ್ಲ ಮರೆತು, ಮುಕ್ತಿಯನ್ನಪೇಕ್ಷಿಸಿದವನಾಗಿ ಇದ್ದೊಬ್ಬ ಶೋಭಾಕರನಾದ ಮಗನನ್ನು ಮುಂಡಾಡಿ ನೋಡಿ, ಇದೇ ಉತ್ಸವದ ದಿನವೆಂದು ಸಂತೋಷದಿಂದ, ಮಗನೇ, ದಯಾಳುಗಳ ಅಧಿನಾಥನಾದ ಪರಮೇಶ್ವರನು ಕೃಪೆಯಿಂದ ನಮ್ಮ ಭವವೆಂಬ ರೋಗವನ್ನು ಜಾರಿಸುವುದಕ್ಕುದ್ಯುಕ್ತನಾಗಿ ಜಂಗಮಾಕಾರದಿಂದ ಬಂದು ಹೊಸದಾದ ಆಹಾರವನ್ನು ಪ್ರೀತಿಸಿ ಬೇಡಿದ್ದಾನೆ. ಈ ದಿನ ನಾನು ನಮಸ್ಕಾರ ಹಾಕಿ ಆ ಕೂಡಲೇ ಆನಂದದಿಂದ ಅವನಿಗೆ ಒಪ್ಪಿಗೆ ಕೊಟ್ಟೆನು. ನಿನ್ನ ಕಾಯವು ಕಾಯಜ (ಮನ್ಮಥ) ವೈರಿಯಾದ ಈಶ್ವರನ ಇಷ್ಟವಾದ ಭೋಜನ (ಎನಿಸಿದೆ.) ವ॥ ಹೀಗೆಂದ ತಂದೆಯ ಮಾತನ್ನು ಚೀಲಾಳನು ಪ್ರೀತಿಯಿಂದ ಕೇಳಿ—೪೬. ಅಧಿಕವಾದ ಪುಣ್ಯದ ಸಮೂಹವು ಫಲಕಾರಿಯಾದುದು. ಈಶ್ವರನ ದಯೆಯೆಂಬ ಪ್ರಮುಖವಾದ ಬಳ್ಳಿಯು ಹೂ ಬಿಟ್ಟಿತು. ಶತ್ರುಸಮೂಹವು ಹರಿಯಿತು. ದಟ್ಟವಾದ ಸಂಸಾರವೆಂಬ ಅರಣ್ಯವು ಕತ್ತರಿಸಿ ಬಿತ್ತು.

ವ॥ ಎಂದ ಮಗನ ಧೀರತೆಯ ಬಗೆಗೆ ಮಚ್ಚಿ ಪೆರ್ಚಿ ಸೆಟ್ಟಿ ಕಟ್ಟಳ್ಕಱಿಂ ನಿರೀಕ್ಷಿಸಿ—

ಮಱೆಯದಿರಯ್ಯ ಶಂಕರ ಪದಾಂಬುಜಮಂ ಶಿವಮಂತ್ರದೆಚ್ಚಱಿಂ[1]
ತೊಱೆಯದಿರಂಬಿಕಾಧವನೊಳಚ್ಚಿಱಿದಂತಿರು ನಿನ್ನೊಳೀಗಳ
ಳ್ಕಱಿನಪ[2]ವರ್ಗ[2]ಕಾಂತೆ ಪಸೆನಿಂದಪಳೈಹಿಕಜಾಡ್ಯಭೋಗದೊಂ
ದೆಱಕದಿನೇನೊ ನಿತ್ಯಸುಖಮಂ ಪಡೆ ಮತ್ಕುಲಕಲ್ಪಭೂರುಹಾ ೪೭

ವ॥ ಎಂದು ಮತ್ತುಮಿರದೆ—

ಜವದಿಂ ವಧ್ಯೋಚಿತಾಲಂಕೃತಿದಳೆದು ಶಿವಧ್ಯಾನಮಾಂತೊಪ್ಪುವಾತ್ಮೋ
ದ್ಭವನಂ ತನ್ಮಾತೆ ಸಾರ್ಚುತ್ತಡಸಿ ಪಿಡಿಯೆ ನಿರ್ಮೋಹದಿಂ ಭಕ್ತನತ್ಯು
ತ್ಸವಚಿತ್ತಂ ಖಡ್ಗದಿಂ ಮಸ್ತಕಮನರಿದು ಬೇರ್ಕೆಯ್ದದಂ ಮುಂಡಮಂ ಸೀ
ಳ್ದವಿಳಂಬಂ ಮಾಂಸಖಂಡಂದೆಗೆದು ಸಲಿಲದಿಂ ಕ್ಷಾಳನಂ ಗೆಯ್ಯುತಾಗಳ್ ೪೮

ನೀಡೆ ಪರಿಮಳಿಪ ಸಂಬರ
ದಾಡಂಬರಮೆಸೆಯೆ ಪೊರೆದು ಘೃತಮೆಱೆದು ಮುದಂ
ಗೂಡಿ ನವಶಾಕಮಂ ರುಚಿ
ಮೂಡಿರೆ ಖಾದ್ಯಪ್ರತಾನಮಂ ಸತಿ ಸಮೆದಳ್ ೪೯

ನಾನು ಅತ್ಯಂತ ಧನ್ಯನಾದೆನು. ವ॥ ಹೀಗೆಂದ ಮಗನ ಧೈರ್ಯದ ಬಗೆಗೆ ಸೆಟ್ಟಿಯು ಮನಸ್ಸಿನಲ್ಲಿಯೇ ಮೆಚ್ಚಿಕೊಂಡು ಉಬ್ಬಿದವನಾಗಿ ಅತಿ ಪ್ರೀತಿಯಿಂದ (ಮಗನನ್ನು) ನೋಡಿ. ೪೭. ಅಯ್ಯಾ, ನನ್ನ ಕುಲದ ಕಲ್ಪವೃಕ್ಷವೇ, ಶಂಕರನ ಪಾದಕಮಲವನ್ನು ಮರೆಯದೆ ಇರು; ಶಿವ ಮಂತ್ರದ ಎಚ್ಚರವನ್ನು ಬಿಡದೆ ಇರು; ಈಶ್ವರನೊಡನೆ ಬೆರೆಸಿದವನಾಗಿ ಇರು; ಈಗ ನಿನ್ನೊಡನೆ ಮುಕ್ತಿಯೆಂಬ ಕಾಂತೆಯು ಪ್ರೀತಿಯಿಂದ ಮದುವೆಗೆ ನಿಂತುಕೊಳ್ಳುವಳು; ಈ ಲೋಕ ಸಂಬಂಧದ ಜಡದಿಂದ ಕೂಡಿದ ಸುಖದ ಒಂದು ಪ್ರೀತಿಯಿಂದ ಏನು ಪ್ರಯೋಜನ ? ಶಾಶ್ವತವಾದ ಸೌಖ್ಯವನ್ನು ಹೊಂದು. ೪೮-೪೯. ಶೀಘ್ರವಾಗಿ ಸಾವಿಗೆ ಯೋಗ್ಯವಾದ ಅಲಂಕಾರಗೊಂಡು ಶಿವ ಧ್ಯಾನದಿಂದ ಕೂಡಿದ ಮಗನನ್ನು ಅವನ ತಾಯಿಯು ಮಲಗಿಸಿ ಗಟ್ಟಿಯಾಗಿ ಅಮುಕಿ ಹಿಡಿಯಲು ಭಕ್ತನಾದ ಸಿರಿಯಾಳನು ಮೋಹರಹಿತವಾಗಿ ಅತ್ಯಂತ ಸಂತೋಷದಿಂದ ಕೂಡಿದ ಮನಸ್ಸಿನಿಂದ ಖಡ್ಗದಿಂದ ಶಿರಸ್ಸನ್ನು ಕತ್ತರಿಸಿ ಬೇರೆ ಮಾಡಿ ಆ ಮುಂಡವನ್ನು ಸೀಳಿ, ಶೀಘ್ರವಾಗಿ ಮಾಂಸದ ತುಂಡುಗಳನ್ನು ತೆಗೆದು ನೀರಿನಲ್ಲಿ ತೊಳೆಯುತ್ತ, (ಪತ್ನಿಯ

1 ಱಿಂ(ಜ, ಚ) 2 ಗರ್ವ(ಚ)

ವ॥ ಅಂತು ಶಿಶುಮಾಂಸದಿಂ ಷಡ್ವಿಧಾಹಾರಮಂ ಚಂಗಳೆದೇವಿ ವಿರಚಿಸುತ್ತಿರೆ ತದ್ಗೃಹದಾ[1]ಸಿ ಚಂಡಿನಿಯೆಂಬವಳ್ ಕೇಶದೂಷಿತಮೆಂದು ಕೆಲಂದೆಗೆದಿರ್ದ ಶಿಶುಶಿರಮನೊರಳೊಳ್ಮಿದಿದು ಪುಳಿವೆರಸಿ ಮೇಲೋಗರಂಗೆಯ್ದು ಜನತಂ ಮಿಗೆ ಚೈತಿಟ್ಟಿರ್ದಳಾಗಳ್—

ಅಟ್ಟಿಳುಪಿ ಭಸ್ಮರಕ್ಷೆಯು
ನಿಟ್ಟಾ ಭಾಜನಸಮಾಜಮಂ ಬಾಸಣಿಸು
ತ್ತಿಟ್ಟಣಿಪ ಸಂಭ್ರಮದೆ ಗುಡಿ
ಗಟ್ಟಿ ಗೃಹಾಂಕಣಮನಂದವಳ್ ಕೆಯ್ಗೆಯ್ದಳ್ ೫೦

ಕತ್ತುರಿಯ ಸಾರಣೆಯು ಬಿಡು
ಮುತ್ತಿನ ಪೊಸ ರಂಗವಲಿಯನಾಳ್ದಿಳೆ ಕಣ್ಗೇಂ
ಬಿತ್ತರಮಾದುದೊ ತಾರೆಗ
ಳೊತ್ತರಿಸಿದ ಗಗನದಂತೆ ತನ್ಮಂದಿರದೊಳ್ ೫೧

ವ॥ ಆಗಳಾ ಚಂಗಳಾಂಬೆ ನಿಜರಮಣನಂ ನೋಡಿ

ಪಸಿದಂ ದಿವ್ಯತಪಸ್ವಿ ತಳ್ವದೊಡಗೊಂಡೆಯ್ತರ್ಪುದೆಂದಾಡೆ ಸಂ
ತಸದಿಂ ಸೆಟ್ಟಿ ಮಹೇಶನಿರ್ದ ಮಠನಂ ಸಾರ್ತಂದು ಕಂಡಾತನಂ
ಘಿಸರೋಜದ್ವಯಕಳ್ಕಱಿಂದೆಱಗಿ ವಿಜ್ಞಪ್ತಿಪ್ರಕಾರೋಕ್ತಿ ರಂ
ಜಿಸೆ ಕೈಗೊಟ್ಟತಿ ಭಕ್ತಿಯಿಂ ಕರೆದುತಂದಂ ಮಂದಿರಕ್ಕೊಳ್ಪಿನಿಂ ೫೨

ಕೈಗೆ ಕೊಡಲು) ಆಗ ಪತ್ನಿಯು ಹೆಚ್ಚಾದ ಪರಿಮಳ ಬೀರುವ ಸಂಬಾರದ ಆಡಂಬರವು ಶೋಭಿಸುವಂತೆ ಬೆರಸಿ, ತುಪ್ಪವನ್ನು ಹಾಕಿ, ಸಂತೋಷದಿಂದ ಕೂಡಿ ರುಚಿ ಹುಟ್ಟುವಂತಿರುವ ಹೊಸ ಪಲ್ಲೆಯನ್ನೂ, ಅಗಿಯುವ ಖಾದ್ಯಗಳ ಸಮೂಹವನ್ನೂ ಸಿದ್ಧಪಡಿಸಿದಳು. ೫೦. (ಈ ರೀತಿ) ಆ ಚಂಗಳೆಯು ಅಡಿಗೆಯನ್ನು ಮಾಡಿ ; ಪಾತ್ರೆಗಳನ್ನು (ಒಲೆಯಿಂದ) ಇಳುಹಿ, (ಆ ಪಾತ್ರೆಗಳಿಗೆ) ವಿಭೂತಿಯ ರಕ್ಷೆಯನ್ನು ಬರೆದು, ಮುಚ್ಚಿಟ್ಟು, ಅತಿಶಯವಾದ ಸಂಭ್ರಮದಿಂದ ತೋರಣ ಕಟ್ಟಿ (ಅಥವಾ ರೋಮಾಂಚನಾದಿ ಸಾತ್ವಿಕ ಭಾವದಿಂದ ಕೂಡಿದವಳಾಗಿ) ಅಲಂಕಾರಗೊಳಿಸಿದಳು. ೫೧. ಅವರ ಮನೆಯಲ್ಲಿ ಕಸ್ತೂರಿಯ ಸಾರಣೆ, ಬಿಡು ಮುತ್ತಿನ ನೂತನ ರಂಗವಲ್ಲಿಗಳನ್ನು ಹೊಂದಿದ ನೆಲವು ನಕ್ಷತ್ರಗಳು ತುಂಬಿದ ಗಗನದಂತೆ ಕಣ್ಣಿಗೆ ಅದೇನು ಸೊಗಸಾಗಿ ಆಗಿತ್ತೋ ? ವ॥ ಆಗ ಆ ಚಂಗಳಾಂಬೆಯು ತನ್ನ ಗಂಡನನ್ನು ನೋಡಿ. ೫೨. 'ದಿವ್ಯ ತಪಸ್ವಿಯು ಹಸಿದಿರುವನು ಬೇಗನೆ ಅವನನ್ನು ಒಡಗೊಂಡು ಬನ್ನಿರಿ'. ಎಂದು ಹೇಳಲು ಸೆಟ್ಟಿ ಸಂತೋಷದಿಂದ ಆ ಮಹೇಶ್ವರನಿದ್ದ ಮಠದ ಬಳಿಗೆ ಬಂದು ಆತನನ್ನು ಕಂಡು ಪ್ರೀತಿಯಿಂದ ಪಾದ ಕಮಲಗಳಿಗೆ ನಮಸ್ಕರಿಸಿ, ವಿಜ್ಞಾಪನಾಪೂರ್ವಕವಾದ ವಚನವು

1 ದಾ(ಜ)

ಸತಿಯುಂ ಪತಿಯುಂ ಯತಿಪದ
ಶತದಳಮಂ ತೊಳೆದು ತೀರ್ಥಜಲಮಂ ತಳೆದು
ನ್ನತ ಪೀಠಮಿತ್ತು ಗಂಧಾ
ಕ್ಷತ ಸುಮನೋಮಾಲಿಕಾದಿಯಿಂದರ್ಚಿಸಿದರ್ ೫೩

ಮಿಸುಗುವ ಪೊನ್ನಡ್ಡಣಿಗೆಯೊ
ಳೊಸೆದೊಪ್ಪುವ ಪೊನ್ನಪರಿಯಣಮನಳವಡಿಸು
ತ್ತೆಸೆಯೆ ಚಷಕಾಳಿ ಚಂಗಳೆ
ಪೊಸಮಾಂಸದ ಶಾಕಪಾಕಮಂ ಗಡಣಿಸಿದಳ್ ೫೪

ವ॥ ಅಂತು ಗಡಣಿಸಿ ಕೆಲಸಾರ್ದು ದೇವ ಕೃಪೆಯಿನಾರೋಗಿಪುದೆಂದೆಱಗೆ ಕಪಾಲಿ ಪಿಸಿತಾನ್ನಮಂ ಬೇಱೆ ಬೇಱೆ ಪರೀಕ್ಷಿಸುತ್ತುಮದಱೊಳ್ ಶಿರೋಮಾಂಸಮಿಲ್ಲದಿರೆ ನೋಡಿ ಮುಳಿದಿಂತೆಂದಂ—

ನಿಮಗಾತ್ಮೋದ್ಭವನಲ್ಕಱೇಂ ಪಿರಿದೊ ಮಿಕ್ಕಂಗಂಗಳಂ ಸೀಳ್ದು ಮಾಂ
ಸಮನೀಗಳ್ ಸಮೆದಿಕ್ಕಿ ವಂಚಿಸಿದಿರೀಗಳ್ ನೋಡಲೆಂದುತ್ತಮಾಂ
ಗಮನೀ ಭಕ್ತಿಗೆ ಮೆಚ್ಚಿದೆಂ ಭಲರೆ ನಿಮ್ಮಂತಪ್ಪರಾರ್ದಾತರೂ
ಟಮನೊಲ್ಲೆಂ ವ್ರತಭಂಗಮಕ್ಕುಮೆಮಗೀ ಶೇಷಾಂಗಮಾಂಸಗಳಿಂ ೫೫

ರಂಜಿಸುವಂತೆ ಕೈ ಹಿಡಿದು ಅತಿ ಭಕ್ತಿಯಿಂದ ಮನೆಗೆ ಚೆನ್ನಾಗಿ ಕರೆತಂದನು. ೫೩. ಸತಿಯೂ ಪತಿಯೂ ಆ ಸಂನ್ಯಾಸಿಯ ಪಾದ ಕಮಲಗಳನ್ನು ತೊಳೆದು ಪಾದೋದಕ ಜಲವನ್ನು ಮೈ ಮೇಲೆ ಚಿಮುಕಿಸಿಕೊಂಡು ಎತ್ತರವಾದ ಪೀಠ ಕೊಟ್ಟು ಕುಳ್ಳಿರಿಸಿ, ಗಂಧಾಕ್ಷತೆ ಪುಷ್ಪ ಮಾಲಿಕೆಗಳಿಂದ ಪೂಜಿಸಿದರು. ೫೪. ಶೋಭಿಸುವ ಬಂಗಾರದ ದೊಡ್ಡ ತಟ್ಟೆಯನ್ನು ಹಾಕಿ, ಕುಡಿಯುವ ಗಿಂಡಿ ; ತಾಲಿ ಮೊದಲಾದ ಪಾತ್ರೆಗಳ ಸಾಲು ಶೋಭಿಸುತ್ತಿರಲು, ಚಂಗಳೆಯು ಹೊಸ ಮಾಂಸದ ಶಾಕ ಪಾಕಗಳನ್ನು (ತಟ್ಟೆಯಲ್ಲಿ) ಒಟ್ಟಿದಳು. ವ॥—ಈ ರೀತಿ ಗುಡ್ಡೆ ಹಾಕಿ (ಅಂದರೆ ಊಟದ ತಟ್ಟೆಯಲ್ಲಿ ರಾಶಿ ರಾಶಿಯಾಗಿ ಇಟ್ಟು) ಹಿಂದಕ್ಕೆ ಸರಿದು 'ದೇವ, ಕೃಪೆಯಿಟ್ಟು ಊಟ ಮಾಡುವುದು' ಎಂದು ನಮಸ್ಕಾರ ಹಾಕಲು ಕಾಪಾಲಿಯು ಮಾಂಸಾಹಾರವನ್ನು ಬೇರೆ ಬೇರೆ ಪರೀಕ್ಷೆ ಮಾಡುತ್ತ, ಅದರಲ್ಲಿ ತಲೆಯ ಮಾಂಸದಿಂದ ಮಾಡಿದ ಭಕ್ಷ್ಯವಿಲ್ಲದಿರಲು, ನೋಡಿ ಕೋಪಗೊಂಡು ಹೀಗೆ ಹೇಳಿದನು : ೫೫. ನಿಮಗೆ ನಿಮ್ಮ ಮಗನ ಮೇಲಿನ ಪ್ರೀತಿಯು ಅದೇನು ದೊಡ್ಡದೋ ! ಮಿಕ್ಕಾದ ದೇಹ ಭಾಗಗಳನ್ನು ಸೀಳಿ ಮಾಂಸವನ್ನು ಅಡಿಗೆ ಮಾಡಿ, ಈಗ (ನನಗೆ) ನೀಡಿ, ಶಿರಸ್ಸನ್ನು ನೋಡುವುದಕ್ಕೆಂದು ಈಗ ಮುಚ್ಚಿಟ್ಟು ಕೊಂಡಿರುವಿರಿ. ಈ (ನಿಮ್ಮ) ಭಕ್ತಿಗೆ ಮೆಚ್ಚಿದೆನು. ಭಲರೇ ! ನಿಮ್ಮಂಥ ದಾನಿಗಳು ಯಾರು ? ಊಟವನ್ನು ನಾನು ಒಲ್ಲೆನು. ನಮಗೆ (ಈಗ ನೀಡಿರುವ ಈ) ಶೇಷಾಂಗ

ವ॥ ಎಂದು 'ಸರ್ವಸ್ಯ ಗಾತ್ರಸ್ಯ ಶಿರಃ ಪ್ರಧಾನವೆ'ಂದುಂಟಪ್ಪುದಱಿಂದುತ್ತಮಾಂಗ ಪಲಲವಿಲ್ಲದೆಯಧಮಾಂಗಮಾಂಸಮನಾಂ ಕೊಳ್ವನಲ್ಲೆಂದು ಕಾಪಾಲಿಕಂ ಕೋಪಿಸಲೊಡನವರಳ್ಕಿ ಬಳ್ಕಿ ಬೆಬ್ಬಳೆವೋಗುತೋರೊರ್ವರಮೊಗಮಂನವಲೋಕಿಪಾಗಳ್ ಚಂಡಿನಿ ಮುನ್ನ ತಾಂ ಸಮೆದಿರಿಸಿದ ಶಿರೋಮಾಂಸಮನಿದೆಯೆಂದು ತೋಱಿಸಿ—

ಪೊಂಪುಳಿವೋಗುತ್ತಾಗಳ್
ದಂಪತಿ ಮಿಗೆ ಮೆಚ್ಚುಗೊಟ್ಟು [1]ಚೇಟಿಗೆ[1] ಪಿರಿದುಂ
ಸೊಂಪೆಸೆವ ತಲೆಯಮಡಗನೊಲ
ವಿಂ ಪರಮನಗಲ್ಗೆ[2] ನೀಡಿ ಮಗುಳ್ದೆಱಗಲೊಡಂ ೫೬

ಆವಾವ ತೆಱದಿಸಾದೊಡ
ಮೀ ವಧುವುಂ ವರನುಮರರೆ ಸೋಲರೆನುತ್ತುಂ
ಬಾವರನಾಳೋಚಿಸಿ ಮೇ
ಣೀ ವಿಧದಿಂ ಗೆಲ್ವೆನೆಂದು ನೆನೆದಿಂತೆಂದಂ ೫೭

ಎಲೆ ಸದ್ಭಕ್ತ ಮದೀಯ ಪಙ್ತಿಯೊಳೆ ನೀನುಂಡಲ್ಲದಾನೊಲ್ಲೆನೀ
ಪಲಲಾಹಾರಮನೆನ್ನ ಸುವ್ರತಕೆ ಭಂಗಂ ಬರ್ಕುಮುಂಡಂದು ಶಂ

ಗಳ ಮಾಂಸದ ಭಕ್ಷಣೆಯಿಂದ ವ್ರತಭಂಗವಾಗುವುದು. ವ॥ ಎಂದು ಸಮಸ್ತಾಂಗಗಳಲ್ಲಿ ತಲೆಯೇ ಪ್ರಧಾನವಾದದ್ದು ಎಂಬ ನೀತಿಯುಂಟಾದ್ದರಿಂದ ಶಿರಸ್ಸಿನ ಮಾಂಸವಿಲ್ಲದ ಈ ನೀಚವಾದ ಅವಯುವಗಳ ಮಾಂಸವನ್ನು ನಾನು ಕೊಳ್ಳುವವನಲ್ಲ ಎಂದು ಕಪಾಲಿಯು ಬಹಳವಾಗಿ ಕೋಪಿಸಲು ಆ ಕೂಡಲೇ ಅವರು ಹೆದರಿ, ಆಯಾಸಗೊಂಡು ಬೆರಗಾಗಿ ಒಬ್ಬರಿಗೊಬ್ಬರು ಮುಖ ನೋಡುತ್ತಿರುವಾಗ 'ಚಂಡಿನಿ' ಎಂಬ ಹೆಸರಿನ ಗೌಡಿಯು (ಅಡಿಗೆಯವಳು) ಮೊದಲು ನಾನು ಮಾಡಿ ಇರಿಸಿದ ಶಿರಸ್ಸಿನ ಮಾಂಸವನ್ನು 'ಇದೆ' ಎಂದು (ಕಂಡು) ತೋರಿಸಲಾಗಿ—೫೬. ಆಗ ದಂಪತಿಗಳು ರೋಮಾಂಚನಗೊಳ್ಳುತ್ತ ಆ ಗೌಡಿಗೆ ಹೆಚ್ಚಾಗಿ ಬಹುಮಾನ ಕೊಟ್ಟು ಸೊಗಸಾಗಿ ಶೋಭಿಸುವ ತಲೆಯ ಮಾಂಸವನ್ನು ಪ್ರೀತಿಯಿಂದ ಶ್ರೇಷ್ಠನಾದ ಯತಿಯ ತಟ್ಟೆಗೆ ನೀಡಿ ಪುನಃ ನಮಸ್ಕರಿಸಲು ಆ ಕೂಡಲೇ—೫೭. ಯಾವ ರೀತಿಯಿಂದಲೂ ಈ ಸತಿಪತಿಗಳು ಸೋಲುವುದಿಲ್ಲ ಅರರೆ! ಎನ್ನುತ್ತ ಪಾರ್ವತೀ ಪತಿಯು ಆಲೋಚನೆ ಮಾಡಿ, ಮತ್ತೆ 'ಈ ವಿಧದಿಂದ ಗೆಲ್ಲುತ್ತೇನೆಂ'ದು ಯೋಚಿಸಿ ಹೀಗೆ ಹೇಳಿದನು. ೫೮. ಎಲೈ ಸದ್ಭಕ್ತನೇ, ನನ್ನ ಈ ಊಟದ ಪಙ್ತಿಯಲ್ಲಿ ನೀನು ಉಣದಿದ್ದರೆ ನಾನು ಈ

1 ಚಂಡಿಗೆ(ಚ) 2 ಲ್ಲೆ(ದ)

ಛುಲಸದ್ಭಕ್ತನಸಾಕ್ಷಿಕಂ ಬಱಿದೆ ತಾನೇನುಣ್ಬನೇ ಕುಳ್ಳಿರೆಂ
ದಲರ್ದಾಕ್ಷೇಪದಿನೆಂದನಂದು ಸಿರಿಯಾಳ್ವಂಗಾ ಮಹಾಭೈರವಂ ೫೮

ವ॥ ಆ ನುಡಿಯಂ ಕೇಳ್ದು ನಿಜರಮಣಿಯಾನನಮನವಂ ನೋಡಲೊಡನೆ—

ಒಡೆಯರ್ಬೆಸಸಿದ ಮಾಳ್ಕೆಯೊ
ಳಡಿಗೆಡದೆ ಮದೀಶ ಕುಳ್ಳಿರೆಂದಧಿಪತಿಯಂ
ನುಡಿದಲ್ಲಿ ಕುಳ್ಳಿರಿಸುತೊಂ
ದೆಡೆಗೆಯ್ದಾತಂಗೆ ಮಡದಿ ಮಡಗಿದಳಾಗಳ್ ೫೯

ವ॥ ಅಂತು ಲಿಂಗಾರ್ಚನಾನಂತರಂ ತತ್ಪಾಕಮನವಳ್ಗಡಣಿಸೆ ಕಂಡು ತತ್ಪೋಧನನಚ್ಚರಿ ವಡುತಿಂತೆಂದಂ—

ತನುಭವನಿಲ್ಲದ ಮನೆ ಪಾ
ಳ್ಮನೆಯಿದಱೊಳದೆಂತು ಕೊಂಬೆನಶನಮನೀಗ
ಳ್ನಿನಗೆಂತು ಗಂಟಲೊಳ್ಬೋ
ಜನಮಿಳಿದಪುದೆತ್ತ ಪೋದನೋ ನಿನ್ನಣುಗಂ ೬೦

ಅತಿಥಿ ಗುರುಪೂಜೆ ಗೃಹದೊ
ಳ್ಸುತರಿಲ್ಲದೆ ಸುಭಗಮಲ್ತು ಸುತರಹಿತತೆಯಿಂ
ಗತಿಗೆಟ್ಟ ನಿನ್ನ ಗೃಹದೊ
ಳ್ಮತಿಗೆಟ್ಟಾನುಂಡು ಶೀಲಮಂ ನೀಗುವೆನೇ ೬೧

ಮಾಂಸಾಹಾರವನ್ನು ಒಲ್ಲೆನು. ಹಾಗೆ ಉಂಡರೆ ನನ್ನ ವ್ರತಕ್ಕೆ ಭಂಗಬರುವುದು. ಶಂಭುವು ಸದ್ಭಕ್ತನಾದವನ ಸಾಕ್ಷಿಯಿಲ್ಲದೆ ತಾನೇ ಉಣ್ಣುವನೇ ? ಕುಳಿತುಕೋ, ಎಂದು ಹೆಚ್ಚಾದ ಆಕ್ಷೇಪದಿಂದ ಆಗ ಆ ಮಹಾಭೈರವನು ನುಡಿದನು. ವ॥ ಆ ಮಾತನ್ನು ಕೇಳಿ ತನ್ನ ಹೆಂಡತಿಯ ಮುಖವನ್ನು (ಸೆಟ್ಟಿಯು) ನೋಡಲು—ಆ ಕೂಡಲೆ ೫೯. ಮಡದಿಯು ನನ್ನ ಸ್ವಾಮಿಯೇ, ಒಡೆಯರು ಅಪ್ಪಣೆ ಮಾಡಿದ ರೀತಿಯಲ್ಲಿ ಹೆಜ್ಜೆ ತಪ್ಪದೆ ಕುಳಿತುಕೋ ಎಂದು ಗಂಡನಿಗೆ ಹೇಳಿ, ಅಲ್ಲಿ ಕುಳ್ಳಿರಿಸುತ್ತ ಆಗ ಆತನಿಗೂ ಒಂದು ಎಡೆಯನ್ನು ಮಾಡಿ ಮುಂದಿಟ್ಟಳು. ವ॥ ಆ ರೀತಿ ಲಿಂಗಾರ್ಚನೆಯ ನಂತರ ಆ ಗಂಡಹೆಂಡಿರು ಆ ಆಹಾರವನ್ನು ಒಟ್ಟಲು ಆ ತಪಸ್ವಿಯು ಕಂಡು ಆಶ್ಚರ್ಯಪಡುತ್ತ ಹೀಗೆ ಹೇಳಿದನು. ೬೦. ಮಗನಿಲ್ಲದ ಮನೆ ಹಾಳು ಮನೆ. ಅಂಥ ಮನೆಯಲ್ಲಿ ಆಹಾರ ವನ್ನು ಹೇಗೆ ಸ್ವೀಕರಿಸುವೆನು ? ಈಗ ನಿನ್ನ ಗಂಟಲಲ್ಲಿ ಅನ್ನವು ಹೇಗೆ ಇಳಿಯುವುದು ? ನಿನ್ನ ಮಗನು ಯಾವ ಕಡೆಗೆ ಹೋದನೋ ? ೬೧. ಮನೆಯಲ್ಲಿ ಮಕ್ಕಳಿಲ್ಲದೆ ಅತಿಥಿ ಗಳಾದ ಆಚಾರ್ಯರ ಪೂಜೆಯು ಮನೋಹರವಾದದ್ದಾಗದು. ಮಕ್ಕಳಿಲ್ಲದಿರುವಿಕೆಯಿಂದ ಗತಿಗೆಟ್ಟ ನಿನ್ನ ಮನೆಯಲ್ಲಿ ಮತಿಗೆಟ್ಟು ನಾನು ಉಂಡು ಸದ್ವ್ರತವನ್ನು ಬಿಡಲೇ ?

ಬೇಡೆಮಗೆ ಭೋಜನಂ ತೆಗೆ
ನೀಡಿರ್ದಗಲಂ ನಿತಾಂತಮೆಂದಾ ಯತಿಯಂ
ನೋಡಿ ಪೆಳರ್ದಕ್ಕಟೇನಂ
ಮಾಡುವೆವಿದಕೆಂದವರ್ಕರಂ ಚಿಂತಿಸಿದರ್ ೬೨

ವ॥ ಅಂತು ಚಿಂತಿಸುವ ದಂಪತಿಯನೀಶ್ವರಂ ನೋಡಿ ಮನದನುರಾಗದಿಂದಿಂತೆಂದಂ—

ಚಂಗಳೆ ಪೋಗು ನಿನ್ನಣುಗನಂ ಕರೆ ಬಂದಪನೀಗಳೆಂದ ಮಾ
ರಾಂಗಹರೋಕ್ತಿಯಂ ಮನದೆಗೊಂಡುಜಿ ನಂಬಿ ಪೊದಳ್ದು ದಭ್ರಭ
ಕ್ತ್ಯಂಗನೆ ಬಂದು ಬೀದಿಯೊಳೆ ನಿಂದು ನಿರೀಕ್ಷಿಸಿ ಕೆಯ್ಯ ನೀಡಿ ತ
ನ್ಮಂಗಳರೂಪೆ ಕೋಕಿಲಕಲಧ್ವನಿಯಿಂ ಕರೆದಳ್ಕುಮಾರನಂ ೬೩

ಚನ್ನಿಗರಾಳ್ಮ ಬಾರ ಸುಕುಮಾರಶಿರೋಮಣಿ ಬಾರ ಶೈವ ಸಂ
ಪನ್ನಗುಣಾಂಕ ಬಾರ ಶಿವಭೋಜ್ಯಕಳೇವರ ಬಾರ ದುಗ್ಧ[1]ಭಾ
ಸ್ವನ್ನವಮುಗ್ಧ ಜಲ್ಪನಮುಖಾಂಬುಜ ಬಾರ ಮದೀಯಮಾನಸೋ
ದ್ಯನ್ನಳಿನಾರ್ಕ ಬಾರ ಸುತ ಬಾರೆನುತಿರ್ದಳುದಾತ್ತ ಲೀಲೆಯಿಂ ೬೪

ಶರಣರ ಕೆಯ್ಯ ಕನ್ನಡಿಯೆ ಬಾರ ಪುರಾತನರಂಘ್ರಿರೇಣುವ
ಯ್ಯೊರೆದಸೆವಾನೆ ಬಾರ ಶಿವತತ್ವಸುಧಾರಸಹಂಸ ಬಾರ ಶಾಂ
ಕರಮತಸಾರಚೂತಶುಕ ಬಾರ ಪುರಾತನಗೀತಜಾತಷಂ
ಕರುಹಮದಾಳಿ ಬಾರ ಸುತ ಬಾರೆನುತುಂ ಕರೆದಳ್ಕುಮಾರನಂ ೬೫

೬೨. 'ನನಗೆ ಊಟಬೇಡ ; ನೀಡಿರುವ ಬಟ್ಟಲನ್ನು ಶೀಘ್ರವಾಗಿ ತೆಗೆಯಿರಿ', ಎಂದ ಆ ಯತಿಯನ್ನು ಅವರು ನೋಡಿ ಭಯಪಟ್ಟು, 'ಅಕ್ಕಟ ! ಇದಕ್ಕೇನು ಮಾಡೋಣ !' ಎಂದು ಬಹುವಾಗಿ ಚಿಂತಿಸಿದರು. ವ॥ ಆ ರೀತಿ ಚಿಂತಿಸುತ್ತಿರುವ ದಂಪತಿಗಳನ್ನು ಈಶ್ವರನು ಕಂಡು, ಮನಸ್ಸಿನ ಅನುರಾಗದಿಂದ ಹೀಗೆ ಹೇಳಿದನು : ೬೩. 'ಚಂಗಳೆಯೇ, ಹೋಗು ನಿನ್ನ ಮಗನನ್ನು ಕರೆ. ಈಗಲೇ ಬರುತ್ತಾನೆ,' ಎಂದ ಮನ್ಮಥನ ಅಂಗವನ್ನು ಹರಣ ಮಾಡಿದ ಶಿವನ ಮಾತನ್ನು ಮನಸ್ಸಿಗೆ ತಂದುಕೊಂಡು, ಅದನ್ನು ಅತಿಶಯವಾಗಿ ನಂಬಿ, ಉತ್ಸಾಹದಿಂದ ಆ ಮಂಗಳ ಶರೀರವುಳ್ಳ ಚಂಗಳೆಯು ಬೀದಿಗೆ ಬಂದು ನಿಂತು ನಿರೀಕ್ಷಣೆ ಮಾಡಿ ಕೈಬೀಸಿ, ಕೋಗಿಲೆಯ ಕೂಗಿನಂತೆ ಅವ್ಯಕ್ತ ಮಧುರವಾದ ಧ್ವನಿಯಿಂದ ಮಗನನ್ನು ಕರೆದಳು : ೬೪. ಸುಂದರರಿಗೆಲ್ಲ ಒಡೆಯನಂತಿರುವವನೇ, ಬಾರ ; ಸುಕುಮಾರ ಶಿರೋರತ್ನವೇ, ಬಾರ ; ಶಿವಭಕ್ತರಲ್ಲಿರುವ ಗುಣವೇ ಗುರುತಾಗಿ ಉಳ್ಳವನೇ, ಬಾರ ; ಈಶ್ವರನ ಭೋಜನಕ್ಕೆ ಯೋಗ್ಯಶರೀರವುಳ್ಳವನೇ, ಬಾರ ; ಹಾಲಿನಂತೆ ಶೋಭಿಸುವ ನೂತನವೂ ಸುಂದರವೂ ಆದ ಮಾತಿನಿಂದ ಕೂಡಿದ ಮುಖಕಮಲವುಳ್ಳವನೇ, ಬಾರ ; ನನ್ನ ಮನಸ್ಸೆಂಬ ಕಮಲಕ್ಕೆ ಸೂರ್ಯನಂತಿರುವವನೇ, ಬಾರ ;

1 ದ್ಗ(ಚ, ಜ), ದುದ್ದ(ಅ, ಗ), ದುದ್ಧ(ಮ)

ಕಂದ ಬಾರ ಕಲಿಸೂದನ ಬಾರಂಗೇಂದ್ರಿಯಮೋಹವಿದೂರ ಬಾ
ರಿಂದುಮೌಳಿಪದಪಂಕಜಸೇವಾಲಾಲಸ ಬಾರ ಪರಾಪರಾ
ನಂದಕಾರಣ ಕುಮಾರಕ ಬಾರೈ ಮೋಕ್ಷಸುಖಾಮೃತಹಂಸ ಬಾ
ರಂದಮಾಳ್ದ ಕುಲಭೂಷಣ ಬಾರೈ ಬಾರೆಲೆ ಭದ್ರಕಳಾನಿಧೀ ೬೬

ವ॥ ಅಂತು ಕರೆಯಲೊಡನೆ—

ಝಣಝಣ ನಿಸ್ವನಂ ನಿಮಿರೆ ಚೆಲ್ವೆಸೆವಂದುಗೆ ಗಂಡಯುಗ್ಮದೊಳ್
ಕುಣಿಯೆ ಸುವರ್ಣಚಾರುಮಣಿಕುಂಡಳಮಂದದ ಮುದಹಾಸಮಿ
ಟ್ಟಣಿಸೆ ಪೊದಳ್ದು ಮುದ್ದುಮೊಗದೊಳ್ಪೊಸಲೊಳ್ಪೊನೆದಾಡೆ ಭಾಳಭೂ
ಷಣಮಿದಿರೊಳ್ಕುಮಾರನೊಸೆದೇಳ್ತರುತಿರ್ದನದೊಂದು ಲೀಲೆಯಿಂ ೬೭

ಜನನಿಯ ದೀರ್ಘಾಪಾಂಗದ
ತನಿವೆಳಗಿಂ ತಳ್ತು ಜೊನ್ನಮುಮರ್ದೆಳೆವಱೆಯುಂ
ನೆನೆಯಿಸಿದನಪ್ಪಿದುಡುಗಣ
ಮೆನಿಸಿರೆ ನಕ್ಷತ್ರಮಾಲೆಯಾ ಚೀಲಾಳಂ ೬೮

ಬಾರ ; ಮಗನೇ ಬಾರ ; ಎನ್ನುತ್ತ ಉತ್ಕೃಷ್ಟವಾದ ಲೀಲೆಯಿಂದ (ಕೂಗುತ್ತ) ಇದ್ದಳು. ೬೬. ಕಂದ, ಬಾರ ; ಕಲಿಪುರುಷನನ್ನು ನಾಶಮಾಡಿದವನೇ, ಬಾರ ; ದೇಹ ಮತ್ತು ಇಂದ್ರಿಯ ಸಂಬಂಧವಾದ ಅಜ್ಞಾನದಿಂದ ದೂರನಾದವನೇ, ಬಾರ ; ಈಶ್ವರನ ಪಾದ ಕಮಲವನ್ನು ಸೇವಿಸುವುದರಲ್ಲಿ ಆಸಕ್ತನಾದವನೇ, ಬಾರ ; ಶಿವಾನಂದಕ್ಕೆ ಕಾರಣೀ ಭೂತನಾದ ಮಗನೇ, ಬಾರಯ್ಯ ; ಮೋಕ್ಷವೆಂಬ ಮಂಗಳಕರವಾದ ಅಮೃತಕ್ಕೆ ಹಂಸ ಪಕ್ಷಿಯಂತಿರುವವನೇ ಬಾರ ; ಅಂದವಾದ ಕುಲಕ್ಕೆ ಭೂಷಣ ಪ್ರಾಯನಾದವನೇ, ಬಾರಯ್ಯ ; ಎಲೈ ಮಂಗಳಕರವಾದ ಕಾಂತಿಗೆ ನಿಕ್ಷೇಪ ಸ್ವರೂಪನೇ, ಬಾರಯ್ಯ ! ೬೭. ಚೆಲುವಾಗಿ ಶೋಭಿಸುವ ಕಾಲಂದಿಗೆಯ ಝಣಝಣತ್ಕಾರ ಧ್ವನಿಯು ಉಂಟಾಗು ತ್ತಿರಲು, ಚಿನ್ನದ ಮನೋಹರವಾದ ರತ್ನಕುಂಡಲಗಳು, ಎರಡೂ ಕೆನ್ನೆಗಳಲ್ಲಿ ಕುಣಿದಾಡು ತ್ತಿರಲು, ಅಂದವಾದ ಮುಗುಳುನಗೆಯು ಮುದ್ದಾದ ಮುಖದಲ್ಲಿ ಪ್ರಕಾಶಗೊಂಡು ಹೊರಹೊಮ್ಮುತ್ತಿರಲು, (ಹಣೆಯಲ್ಲಿ) ಕಟ್ಟಿರುವ (ಅರಳೆಲೆ) ಆಭರಣವು ಹಣೆಯ ಮೇಲೆ ಕುಣಿದಾಡುತ್ತಿರಲು ಎದುರಿನಲ್ಲಿ (ಚೀಲಾಳ) ಕುಮಾರನು ಸಂತೋಷದ ಅದೊಂದು ಲೀಲೆಯಿಂದ ಓಡಿಬರುತ್ತಿದ್ದನು. ೬೮. ಆ ಚೀಲಾಳನು—ಕಂಠದಲ್ಲಿ ಹಾಕಿರುವ ಇಪ್ಪತ್ತೇಳು ಮುತ್ತುಗಳ ನಕ್ಷಮಾಲಿಕೆಯು, ಅಪ್ಪಿಕೊಂಡಿರುವ ನಕ್ಷತ್ರಗಳ ಸಮೂಹವೋ ಎಂಬಂತೆ ಇರಲು ತಾಯಿಯ ನೀಳವಾದ ಕಡೆಗಣ್ಣಿನ ತಂಪಾದ ಕಾಂತಿ ಯಿಂದ ವ್ಯಾಪ್ತವಾಗಿ ಬೆಳದಿಂಗಳಿನಿಂದ ಕೂಡಿದ ಬಾಲಚಂದ್ರನನ್ನು ಜ್ಞಾಪಕಕ್ಕೆ ತರುವಂತೆ (ಆ ಕುಮಾರನು) ಮಾಡಿದನು. (ಬಾಲಚಂದ್ರನಂತೆ ಮನೋಹರವಾಗಿ ಓಡಿ

ತನುಜನ ಬರವಿಂಗಾ ಕಾ
ಮಿನಿ ನಲಿದಳ್ಪುತ್ರಮೋಹದಿಂದಮೆಯುಲ್ಲ
ಲ್ಲನವದ್ಯ ಮುನಿಗಿವಂ ಭೋ
ಜನಮಕ್ಕುಂ ನಾಳೆಯುಂ ದಲೆಂಬೀ ಬಗೆಯಿಂ ೬೯

ಪಿತನಾನಂದಮನಾನೆ ಸರ್ವಜನಮುಂ ಕೊಂಡಾಡೆ ಚೀಲಾಳನಾ
ವೃತಿಪಾದಾಂಬುಜಕೇಳ್ದುಶುತ್ತೆಱಗೆ ನೀನಾರೋಗಿಸಿನ್ನೆಂದು ಪಾ
ರ್ವತಿಯಾಣ್ಮಂಗೆನೆ ಸೆಟ್ಟಿ ಕಂಡ[1]ವರ ಸೌಮ್ಯಗ್ಪ[2]ಕ್ತಿಯುಂ ವಿಶ್ವವಿ
ಶ್ರುತತೇಜೋನಿಧಿ ಮಚ್ಚಿ ತನ್ನ ನಿಜರೂಪಂ ತೋಱಿದು ನಲ್ಮೆಯಿಂ ೭೦

ಕುಂಡಲೀಶಮಣಿಕುಂಡಲಕರ್ಣಂ ಭೀಮಗರಾಂಕಿ[3]ತಕಂಧರಂ
ಖಂಡಚಂದ್ರಸುರಸಿಂಧುಕಪರ್ದಂ ಶೂಲಪರಶ್ವಧಪಾಣಿ ಮಾ
ರ್ತಂಡಕೋಟಿರುಚಿ ಮಾಧವಚಕ್ಷುಃಪಾದನಿಭಾಜಿನವಾಸಸಂ
ಮಂಡಿತಾಂಗನಮಳಸ್ಮಿತವಕ್ತ್ರಂ ಕಣ್ಗೆಸೆದಂ ವೃಷಭಧ್ವಜಂ ೭೧

ಬರುತ್ತಿರುವ ಮಗನು ಕಂಡನೆಂದು ಭಾವ) ೬೯. ಆ ಕಾಮಿನಿಯಾದ ಚಂಗಳೆಯು, ಮಗನ ಬರುವಿಕೆಯಿಂದ, ಆ ಪುತ್ರನ ಮೇಲಣ ವಾತ್ಸಲ್ಯದಿಂದಲೇ ಸಂತೋಷಗೊಂಡ ವಳಲ್ಲ ಅಲ್ಲ! (ಮತ್ತೇನೆಂದರೆ) ಈ ಮಗನು ನಾಳೆಯೂ ಪವಿತ್ರನಾದ ಋಷಿಗೆ ಭೋಜನವಸ್ತುವಾಗತಕ್ಕವನೇ ! ಎನ್ನುವ ಈ ರೀತಿಯ ಮನಸ್ಸಿನಿಂದ (ಸಂತೋಷ ಪಟ್ಟಳು) ಇದು ನಿಶ್ಚಯ. ೭೦. ಪಿತನು ಆನಂದ ಹೊಂದಲು, ಬಂಧುಗಳು ಕೊಂಡಾಡು ತ್ತಿರಲು ಚೀಲಾಳನು ಬರುತ್ತ, ಆ ಶೀಲಸಂಪನ್ನನಾದ ವ್ರತಿಯ ಪಾದಕಮಲಕ್ಕೆ ನಮಸ್ಕರಿಸಲು, ಸಿರಿಯಾಳ ಸೆಟ್ಟಿಯು ಪಾರ್ವತೀಪತಿಗೆ—'ನೀನು ಇನ್ನು ಊಟಮಾಡು' ಎಂದು ಹೇಳಲು ಪ್ರಪಂಚದಲ್ಲೆಲ್ಲ ಪ್ರಸಿದ್ಧವಾದ ತೇಜಸ್ಸಿನ ಮೂಲಮೂರ್ತಿಯಾದ ಶಿವನು ಆ ಪತಿ, ಪತ್ನಿ, ಪುತ್ರರುಗಳ ಒಳ್ಳೆಯ ಭಕ್ತಿಯನ್ನು ಕಂಡು ಮೆಚ್ಚಿ, ಶ್ಲಾಘನೆ ಮಾಡಿ ಪ್ರೀತಿಯಿಂದ ತನ್ನ ನಿಜರೂಪವನ್ನು ತೋರಿಸಿದನು. ೭೧. ಆದಿಶೇಷನೆಂಬ ರತ್ನದ ಹತ್ತ ಕಡಕುಗಳನ್ನು (ಕರ್ಣಾಭರಣಗಳು) ಕಿವಿಯಲ್ಲುಳ್ಳವನೂ, ಭಯಂಕರವಾದ ವಿಷವನ್ನು ಕತ್ತಿನಲ್ಲಿ ಧರಿಸಿದವನೂ, ಚಂದ್ರನ ಒಂದು ತುಣುಕು–ದೇವಗಂಗೆ–ಇವರು ಗಳನ್ನು ಜೆಡೆಯಲ್ಲುಳ್ಳವನೂ, ತ್ರಿಶೂಲ, ಗಂಡುಗೊಡಲಿಗಳಿಂದ ಕೂಡಿದ ಕೈಗಳುಳ್ಳ ವನೂ, ಕೋಟಿ ಸೂರ್ಯರ ಕಾಂತಿಯುಂತಿರುವ ದೇಹಕಾಂತಿಯುಳ್ಳವನೂ, ವಿಷ್ಣುವಿನ ಕಣ್ಣನ್ನು ಚರಣದಲ್ಲಿ ಉಳ್ಳವನೂ, ಗಜಚರ್ಮವೆಂಬ ವಸ್ತ್ರದಿಂದ ಆಚ್ಛಾದಿಸಲ್ಪಟ್ಟ ದೇಹವುಳ್ಳವನೂ, ನಿರ್ಮಲವಾದ ಮುಗುಳುನಗೆಯಿಂದ ಕೂಡಿದ ಮುಖವುಳ್ಳವನೂ

1 ಡಾ(ಮು) 2 ದ್ಭ(ಜ) 3 ಚಿ(ಅ, ಮು, ಜ)

ಸುರದುಂದುಭಿರವದೊಡನೊ
ತ್ತರಿಸುತೆ ಭೋರೆಂದು ಸುರಮಹೀರುಹಸುಮನೋ
ಹರವರ್ಷಂ ಕಱೆದುದು ವಿಧಿ
ಹರಿ ಸುರಪ ನಿಳಿಂಪರಲ್ಲಿ ನೆರೆದೇಳ್ತಂದರ್ ೭೨

ಪರಮ ಚಿಱುತೊಂಡ ಮಾಹೇ
ಶ್ವರಂಗೆ ಚಂಗಳೆಗೆ ಮಿಸುಪ ಚೀಲಾಳಂಗಾ
ಪುರದೇಳು ಕೇರಿಯ ಜನೋ
ತ್ಕರಕ್ಕೆ ಪುರವೈರಿ ಬರಿಸಿದಂ ಪುಷ್ಪಕಮಂ ೭೩

ವ|| ಆ ಪುಷ್ಪಕದೊಳಿಂದುಧರನವಂದಿರಂ ಕೂರ್ಪೆಯಿಂ ಕುಳ್ಳಿರಿಸಿ ಕೈಲಾಸವಾಸಮನೆಯ್ದಿಸಿ ಭದ್ರಾಸನದೊಳಪರ್ಣಾನ್ವಿತಂ ಸುರನಿಕರವೋಲಗಿಸೆ ಪರಮೋತ್ಸಾಹದಿಂ ಮೂರ್ತಿಗೊಡೊಂಪ್ಪುತ್ತು ಮಿರ್ಪಾಗಳ್—

ಸಭೆಯೊಳ್ಕುಳ್ಳಿರ್ದು ತನ್ನಂ ತನುಭವನನುಮಾಧೀಶನಂ ನೋಡಿ ವಿಶ್ವ
ಪ್ರಭುವಿಂಗಾರೋಗಿಸಲ್ಕಿತ್ತಣುಗನನೊಲಿಸುತ್ತಣ್ಮಿ ಕೈಲಾಸಭಾಸ್ವ
ದ್ವಿಭವ ಶ್ರೀಯಾಂತರಾರೆನ್ನವೊಲಿಳೆಯೊಳೆ ಮತ್ಕೃತ್ಯಮನ್ಯರ್ಗಣಂ ದು
ರ್ಲಭಮಕ್ಕುಂ ಮಾಣದೆಂದುತ್ಸವಿಸುತೆ ಮದಮುಂ ತಾಳ್ದನಾ ದಭ್ರಭಕ್ತಂ ೭೪

ಆದ ಪರಮೇಶ್ವರನು ಕಣ್ಣಿಗೆ ಶೋಭಿಸಿದನು. ೭೨. ದೇವಲೋಕದ ನಗಾರಿಯ ಶಬ್ದದೊಡನೆ, ಕಲ್ಪವೃಕ್ಷದ ಹೂವುಗಳ ಶ್ರೇಷ್ಠವಾದ ಮಳೆಯು ಒತ್ತರದಿಂದ ಭೋರ್ ಎಂದು ಸುರಿಯಿತು. ಅಲ್ಲಿಗೆ ಬ್ರಹ್ಮ, ವಿಷ್ಣು, ದೇವೇಂದ್ರಾದಿ ದೇವತೆಗಳ ಸಮೂಹವು ಗುಂಪು ಕೂಡಿ ಬಂದು ನೆರೆಯಿತು. ೭೩. ಪರಮೇಶ್ವರನು ಪರಮ ಶ್ರೇಷ್ಠನಾದ ಚಿರುತೊಂಡನೆಂಬ ಹೆಸರುಳ್ಳ ಸಿರಿಯಾಳಸೆಟ್ಟಿಯೆಂಬ ಮಾಹೇಶ್ವರನಿಗೆ, (ಇವನಿಗೆ ಚಿರುತೊಂಡ, ಸಿರಿಯಾಳ್ವ, ಸಿರಿಯಾಳ, ದಭ್ರಭಕ್ತ—ಇತ್ಯಾದಿ ಹೆಸರುಗಳು), ಚಂಗಳೆಗೆ, ಶೋಭಿಸುವ ಚೀಲಾಳನಿಗೆ ಆ ಪಟ್ಟಣದ ಏಳುಕೇರಿಗಳ ಜನಸಮುದಾಯಕ್ಕೋಸ್ಕರ ಪುಷ್ಪಕ (ಹೂವಿನ) ವಿಮಾನವನ್ನು ಬರಮಾಡಿಕೊಂಡನು. ವ|| ಶಿವನು ಆ ಪುಷ್ಪಕ ವಿಮಾನದಲ್ಲಿ ಅವರೆಲ್ಲರನ್ನೂ ಪ್ರೀತಿಯಿಂದ ಕುಳ್ಳಿರಿಸಿಕೊಂಡು ಕೈಲಾಸವಾಸವನ್ನುಂಟು ಮಾಡಿ, ದೇವತಾ ಸಮೂಹವೆಲ್ಲ ಸೇವಿಸುತ್ತಿರಲು ಪಾರ್ವತೀ ಸಮೇತನಾಗಿ ಮಂಗಳ ಕರವಾದ ಪೀಠದಲ್ಲಿ ಪರಮೋತ್ಸಾಹದಿಂದ ಕುಳಿತು ಒಪ್ಪುತ್ತಿದ್ದಾಗ—೭೪. ಆ ದಭ್ರ ಭಕ್ತನು (ಸಿರಿಯಾಳ ಸೆಟ್ಟಿಯು) ಶಿವನ ಸಭೆಯಲ್ಲಿ ಕುಳಿತುಕೊಂಡು ತನ್ನನ್ನೂ, ತನ್ನ ಮಗನನ್ನೂ, ಪರಮೇಶ್ವರನನ್ನೂ ನೋಡಿ, ನನ್ನ ಹಾಗೆ ಭೂಮಿಯಲ್ಲಿ ಪ್ರಪಂಚಕ್ಕಧಿಪತಿಯಾದ ಪರಮೇಶ್ವರನಿಗೆ ಮಗನನ್ನು ಕೊಂದು ಅವನ ಮಾಂಸದಿಂದ ಅಡಿಗೆಮಾಡಿ ಊಟಮಾಡುವುದಕ್ಕೆ ಕೊಟ್ಟು ಈಶ್ವರನನ್ನು ಒಲಿಸುತ್ತ ಸಾಮರ್ಥ್ಯದಿಂದ ಕೈಲಾಸದ ಈ ಪ್ರಕಾಶಿಸುವ ವೈಭವ ಸಂಪತ್ತನ್ನು ಹೊಂದಿದವರು ಯಾರಿದ್ದಾರೆ ? ನನ್ನ ಈ

ಆತನ ಗರ್ವದ ಬಗೆಯಂ
ಭೂತೇಶಂ ತಿಳಿದು ಭಕ್ತ ಬಾರೆನುತಾಗಳ್
ಪ್ರೀತಿ ಮಿಗೆ ಕೈವಿಡಿದು ಧರ
ಣೀತಳಕವನೊಡನೆ ಶಂಭು ಬರ್ಪನಮಾಗಳ್ ೭೫

ಧರಣೀಭಾಗದೊಳೇಳ್ಗೆವೆತ್ತು ಗುಣದಿಂ ವೀರವ್ರತಸ್ನಿ[1]ಗ್ಧೆ ಶಂ
ಕರಪಾದಾಂಬುಜಲಗ್ನಮಾನಸೆ ಗಣವ್ರಾತಾಂಘ್ರಿಪದ್ಮಾರ್ಚನಾ
ಪರೆ ಸಂಸಾರಕಲಂಕದೂರೆ ಚರದಾಸೀಭಾವಸಂಪನ್ನೆ ಭಾ
ಸುರಭಕ್ತಪ್ರಮದಾನುಕೂಲೆ ಮೆಱೆದಿರ್ದಳ್ನಿಂಬಿಯೆಂಬಳ್ಕರಂ ೭೬

ಶರಣರ ಮನೆದುಱುಗಾಮಂ
ತರುಣಿ ತಾಂ ನೀರನಡುಕುವಳ್ಮೇಲಮಿದಾ
ಗಿರೆತನಗದಱಿಂದೊದವಿದ
ವರಧನದಿಂ ಚರಪದಾಬ್ಜಮಂ ಪೂಜಿಸುವಳ್ ೭೭

ಆ ಕಾಂತೆಯ ಮಂದಿರಕೆ ಪಿ
ನಾಕಿ ಚರಾಕೃತಿಯನಾಳ್ದು ಭಕ್ತಾನ್ವಿತನ
ಸ್ತೋಕಮತಿ ಬಂದು ನಿಂದವ
ಲೋಕಿಪ ವೇಳೆಯೊಳೆ ನಿಂಬಿಯವರಂ ಕಂಡಳ್ ೭೮

ಕಾರ್ಯವು ಅನ್ಯರಿಗೆ ಸ್ವಲ್ಪವೂ ದುರ್ಲಭವಾದುದಾಗಿದೆ ಎಂದು ಸಂತೋಷಪಡುತ್ತ, ಗರ್ವವನ್ನು ಹೊಂದಿದನು. ೭೫. ಈತನ ಗರ್ವದ ರೀತಿಯನ್ನು ಶಿವನು ಅರಿತವನಾಗಿ, ಭಕ್ತನೇ ಬಾ ಎಂದು ಹೆಚ್ಚಾದ ಪ್ರೀತಿಯಿಂದ ಕೈಹಿಡಿದು ಅವನೊಡನೆ ಶಂಭುವು ಭೂಮಿಗೆ ಬರುತ್ತಿರುವಷ್ಟರಲ್ಲಿ ಆಗ—**ನಿಂಬ್ಯಕ್ಕನ ಕಥೆ** ೭೬. ಭೂಮಂಡಲದಲ್ಲಿ (ಉತ್ತಮ) ಗುಣದಿಂದ ಏಳ್ಗೆ ಹೊಂದಿದವಳೂ, ವೀರಶೈವ ವ್ರತದಲ್ಲಿ ಸ್ನೇಹದಿಂದ ಕೂಡಿದ (ಸಾಂದ್ರಗೊಂಡ) ವಳೂ, ಶಂಕರನ ಪಾದಕಮಲಗಳಲ್ಲಿ ಸೇರಿದ ಚಿತ್ತವುಳ್ಳವಳೂ, ಶಿವಗಣ ಸಮೂಹದ ಪಾದಕಮಲಗಳನ್ನು ಪೂಜಿಸುವುದರಲ್ಲಿ ಆಸಕ್ತಳಾದವಳೂ, ಸಂಸಾರದ ದೋಷದಿಂದ ದೂರಳಾದವಳೂ, ಜಂಗಮದಲ್ಲಿ ದಾಸಭಾವದಿಂದ ಕೂಡಿರುವವಳೂ, ಪ್ರಕಾಶಮಾನರಾದ ಶಿವಭಕ್ತರ ಪತ್ನಿಯರಿಗೆ ಸಹಾಯಕಳೂ ಆದ 'ನಿಂಬಿ' (ನಿಂಬ್ಯಕ್ಕ) ಎಂಬ ಹೆಸರಿನವಳು (ಭಕ್ತೆಯು) ಚೆನ್ನಾಗಿ ಶೋಭಿಸುತ್ತಿದ್ದಳು. ೭೮. ಅತ್ಯಧಿಕ ಬುದ್ಧಿಯುಳ್ಳ ಶಿವನು ಜಂಗಮಾಕಾರವನ್ನು ತಳೆದು ಸಿರಿಯಾಳನೊಡನೆ ಕೂಡಿ, ಆ ನಿಂಬ್ಯಕ್ಕನ ಮನೆಗೆ ಬಂದು ನಿಂತು ನೋಡುವ ಸಮಯದಲ್ಲಿ ನಿಂಬಿಯು ಅವರನ್ನು

1 ಸ್ನಿ (ಜ, ಅ, ಮ), ಭಸ್ಮಿ (ಚ)

ಸಡಗರಿಸಿ ನಿಂಬಿ ಮನದೊಳ್
ಗುಡಿಗಟ್ಟುತ್ತೆಱಗಿ ಚರಣಮಂ ಕರ್ಚಿ ಪೊದ
ಳ್ದಡಿಯೊರಸಿ ಕುಳ್ಳಿರಿಸಿದ
ಳ್ಮೃಡಭಕ್ತೆ ನವೀನ ಮೃದುಳ ತಳ್ಪಸ್ಥಳದೊಳ್ ೭೯

ವ॥ ಅಂತು ಕುಳ್ಳಿರಿಸಿ ಕೂರ್ಮೆಯಿಂ ಯಥೋಚಿತ ವಿನಯಮಂ ಮೆಱೆದವರ್ಗೆ[1]ಬೋನ[1]ಮಂ ಸಮೆಯಲೆಳಸಿ—

ಗಾರಿಗೆ ಮಂಡಗೆ ಚಕ್ಕುಲಿ
ಪೂರಿಗೆಯೊಡೆ ಪೇಣಿ ಪಾಯಸಂಗಳನೊಲವಿಂ
ಸಾರತರ ಶಾಕಪಾಕಮು
ನಾ ರುಚಿರ ರಸಾಯನಂಗಳಂ ಸಲೆ ಸಮೆದಳ್ ೮೦

ವ॥ ಅಂತು ಸಮೆದವಂ ಧವಳವಸ್ತ್ರದಿಂ ಬಾಸಣಿಸಿ ಭಕ್ತೆ ಘಟಮಂ ಕೊಂಡರ್ಘ್ಯಕ್ಕೆ ಪೊಸನೀರ್ಗೆ ಪೋಗಲೊಡನಾಗಳ್—

ಕಱುಗಾಯಲ್ಪೋದ ಪುತ್ರಂ ಪಸಿವಡಸಿ ನಿಜಾಗಾರಕೇಳ್ತಂದು ನಿಂದೊ
ಲ್ದಱಸುತ್ತುಂ ಮಾತೆಯುಂ ಕಾಣದೆ ಮಡಕೆಯನನ್ವೇಷಣಂಗೆಯ್ದು ಮುಚ್ಚ
ಳ್ದೆಱೆವುತ್ತುಂ ಕಂಡು ಕಜ್ಜಾಯಮನತಿ ಜವದಿಂದೆತ್ತಿ ಮೆಲ್ವಾಗಳೆಯ್ತಂ
ದುಱ ಕಂಡಳ್ನಿಂಬಿ ಕಾಯ್ಪಿಂನೊನಕೆವಿಡಿದವಂ ಬೀಳ್ವಿನಂ ಪಾಯ್ದು ಪೊಯ್ದಳ್ ೮೧

ಕಂಡಳು. ೭೯. ಮೃಡಭಕ್ತೆಯಾದ ನಿಂಬಿಯು ಮನದಲ್ಲಿ ಸಡಗರಗೊಂಡು, ರೋಮಾಂಚನಗೊಂಡವಳಾಗಿ ನಮಸ್ಕರಿಸಿ ಪಾದಗಳನ್ನು ತೊಳೆದು, ವಿಸ್ತಾರವಾದ ಆ ಅಡಿಗಳನ್ನು ಒರೆಸಿ, ನೂತನವಾದ ಕೋಮಲ ಹಾಸಿಗೆಯ ಮೇಲೆ ಕುಳ್ಳಿರಿಸಿದಳು. ವ॥ ಹಾಗೆ ಕುಳ್ಳಿರಿಸಿ, ಪ್ರೀತಿಯಿಂದ ಯಥಾ ಯೋಗ್ಯವಾದ ನಮ್ರತೆಯನ್ನು ತೋರಿಸಿ, ಅವರಿಗೆ ಭೋಜನಕ್ಕಾಗಿ ಅಡಿಗೆ ಮಾಡಲು ಅಪೇಕ್ಷೆಪಟ್ಟು—೮೦. ಗಾರಿಗೆ, ಮಂಡಿಗೆ, ಚಕ್ಕುಲಿ, ಪೂರಿಗೆ (ಪುರಿ) ಫೇಣಿ, ಪಾಯಸಗಳನ್ನೂ ಸಾರವತ್ತಾದ ಶಾಕಪಾಕಗಳನ್ನೂ, ಮಧುರವಾದ ರಸಾಯನಾದಿಗಳನ್ನೂ ಮಾಡಿದಳು. ವ॥ ಆ ಭಕ್ತೆಯು ಆ ರೀತಿ (ಅಡಿಗೆ) ಮಾಡಿ, ಆ ಆಹಾರ ಪದಾರ್ಥಗಳನ್ನು ಶುಭ್ರ ವಸ್ತ್ರದಿಂದ ಮುಚ್ಚಿ, ಕೊಡವನ್ನು ತೆಗೆದುಕೊಂಡು ಅರ್ಘ್ಯಕ್ಕೆ ಎರೆಯುವ ನೀರಿಗಾಗಿ ಹೋದ ಕೂಡಲೆ ಆಗ—೮೧. ಹಸುಗಳನ್ನು ಕಾಯುವುದಕ್ಕೆ ಹೋದ ಮಗನು ಹಸಿವುಗೊಂಡು, ತಮ್ಮ ಮನೆಗೆ ಬಂದು, ನಿಂತು ಪ್ರೀತಿಯಿಂದ ತಾಯಿಯನ್ನು ಹುಡುಕುತ್ತ, ಕಾಣದೆ ಮಡಕೆಗಳನ್ನು ಹುಡುಕಿ ಮುಚ್ಚಳವನ್ನು ತೆಗೆಯುತ್ತ, (ತಾಯಿ ಮಾಡಿಟ್ಟ) ಕಜ್ಜಾಯವನ್ನು ಕಂಡು, ಅತಿ ಬೇಗನೆ ಎತ್ತಿಕೊಂಡು ತಿನ್ನುವ ಸಮಯದಲ್ಲಿ ನಿಂಬಿಯು ಬಂದು ಚೆನ್ನಾಗಿ

1 ಭೋಜನ (ಮು)

ವ॥ ಅಂತವಳಣುಗನಂ ಮನೆವೊಕ್ಕ ತುಡುಗುಣಿಸೇರಡಿಯುಂ ಬಡಿವಂತೆ ಬಡಿದು ಮಡಿಪಿ ಕಾಲ್ವಿಡಿದು ಸರಸರನೆಳೆದಾರುಮಱಿಯದಂತೊಂದು ಗೋಂಟುವಳ್ಳದೊಳಿಕ್ಕಿಪುಲ್ಲಂ ಕವಿಸುತಾಗ್ನೇ[1]ಯ ಸ್ನಾನಮೆಸಗಿ ಗೃಹಮುಂ ಶುಚಿಗೆಯ್ದು ಮೊದಲಂತೆಲ್ಲಮುಂ ಮಗುಳೆ ಸಮೆವೃತ್ತಿರ್ಪಾಗಳ್ಶಿವಂ ಸಿರಿಯಾಳ್ವಂಗೆ ಸನ್ನೆದೋಱಿ ಪುರ್ಬಿಂ[2] ಜರ್ಬಿ ಮೆಲ್ಲನಿಂತೆಂದಂ—

ಪಸಿದೇಳ್ತಂದು ನಿಜಾಲಯಕ್ಕಱಿಯದೋರಂತೊಂದು ಕಜ್ಜಾಯಮಂ
ರಸನಾಲಂಪಟನೆತ್ತಿ ಭಾಂಡದಿನದಂ ಮೆಲ್ವಂದಮಂ ಕಂಡು ಕೋ
ಪಿಸಿ ತನ್ನಳ್ಕಱ ತತ್ಕುಮಾರಕನನಿಂದೇಕಾಂತದೊಳ್ಕೊಂದಳೀ
ಬಿಸಜಾತಾಂಬಕಿ ನಿಂಬಿ ನೋಡೆನುತೆ ಪಾದಾಂಗುಷ್ಠದಿಂ ಪುಲ್ಗಳಂ ೮೨

ಕೆಲಂ ನೂಂಕುತ್ತಾಗಳ್ಪುರರಿಪು ಶವಂದೋಱಿಸಿ ನಿರ
ರ್ಗಲಾಶ್ಚರ್ಯಂಬೆತ್ತಾಕೆಯ ಪರಿಗೆ ಮೆಚ್ಚುತ್ತೆ ಪೊಗಳು
ತ್ತಲಂಪಿಂ ತದ್ಭಕ್ತೋತ್ತಮನಿರೆ ಸುಭೋಜ್ಯಾಳಿಯಂನವ
ಳ್ವಿಲಾಸಂ ಕೆಯ್ಗಣ್ಮುತ್ತಿರೆ ಸಮೆದಳಾ ನಿಂಬಿ ಜವದಿಂ ೮೩

ನೋಡಿದಳು. (ಆ ಕೂಡಲೇ) ಕೋಪದಿಂದ ಒನಕೆಯನ್ನು ಹಿಡಿದೆತ್ತಿ ಆ ಮಗನು ನೆಲಕ್ಕೆ ಬಿದ್ದು ಸಾಯುವಂತೆ ಮೇಲೆಬಿದ್ದು ಹೊಡೆದಳು. ವ॥ ಆ ರೀತಿ ಅವಳು ಮಗನನ್ನು ಮನೆಯನ್ನು ಹೊಕ್ಕ ತುಡುಗು ನಾಯಿಯಂತೆ ಹೊಡೆದು ಕೊಂದು ಸರಸರನೆ ಕಾಲು ಹಿಡಿದೆಳೆದುಕೊಂಡು ಹೋಗಿ ಯಾರೂ ತಿಳಿಯದಂತಹ ಒಂದು ಹಾಳು ಹಳ್ಳದಲ್ಲಿ ತುರುಕಿ ಮೇಲೆ ಹುಲ್ಲನ್ನು ಎಳೆದು ಮುಚ್ಚಿ, ಮೃತರ ಸಂಬಂಧವಾದ ಅಶುದ್ಧಿಯನ್ನು ಹೋಗಲಾಡಿಸುವ ಶೌಚಸ್ನಾನ ಮಾಡಿ, ಮನೆಯನ್ನು ಶುದ್ಧಿಗೊಳಿಸಿ, ಮೊದಲಿನ ಹಾಗೆ ಪುನಃ ಎಲ್ಲವನ್ನೂ ಅಣಿಗೊಳಿಸುವಷ್ಟರಲ್ಲಿ ಶಿವನು, ಸಿರಿಯಾಳನಿಗೆ ಸಂಜ್ಞೆಮಾಡಿ ಹುಬ್ಬಿನ ಹಾರಿಸುವಿಕೆ (ಜರುಬು) ಯಿಂದ ಹೀಗೆ ಹೇಳಿದನು : ೮೨–೮೩. ಹಸಿದು ನಿನ್ನ ಮನೆಗೆ ಬಂದು ಇಲ್ಲಿಯ ವಿಷಯವನ್ನು ತಿಳಿಯದೆ ಕ್ರಮದಂತೆ ನಾಲಿಗೆಯ ಆಸೆ ಯುಳ್ಳವನಾಗಿ ಒಂದು ಕಜ್ಜಾಯವನ್ನು ಮಡಕೆಯಿಂದ ಎತ್ತಿ ತಿಂದ ರೀತಿಯನ್ನು ಈ ಕಮಲನೇತ್ರೆಯಾದ ನಿಂಬಿಯು ಕಂಡು ಕೋಪಗೊಂಡು ತನ್ನ ಪ್ರೀತಿಗೆ ಪಾತ್ರನಾದ ಆ ಕುಮಾರನನ್ನು ರಹಸ್ಯವಾಗಿ ಕೊಂದು ಹಾಕಿದಳು, ನೋಡು ಎನ್ನುತ್ತ, ತನ್ನ ಪಾದದ ಅಂಗುಷ್ಠದಿಂದ ಹುಲ್ಲನ್ನು ಆ ಕಡೆಗೆ ಈ ಕಡೆಗೆ ನೂಂಕಾಡುತ್ತ, ಶಿವನು ಹೆಣವನ್ನು ತೋರಿಸಲು, ಆ ಭಕ್ತನಾದ ಸಿರಿಯಾಳನು, ಅಧಿಕಾಶ್ಚರ್ಯಭರಿತನಾಗಿ, ಆಕೆಯ ಈ ರೀತಿಗೆ ಮೆಚ್ಚುತ್ತ, ಪ್ರೀತಿಯಿಂದ ಹೊಗಳುತ್ತಿರಲು, (ಅತ್ತ) ಅವಳು ಹೆಚ್ಚಾದ ವಿಲಾಸದಿಂದ ಇದ್ದು ಶ್ರೇಷ್ಠವಾದ ಭೋಜನ ಪದಾರ್ಥ ವಿಶೇಷಗಳನ್ನು

---

1 ಜ್ಞೇ (ಗ, ಚ, ಮು, ಜ) 2 ರ್ವಿಂ (ದ)

ವ॥ ಅಂತು ಸಮೆದಿಳುಪ್ಪುತನಂತರಮಿರ್ವರ್ಗೆ ಸಾಂಗಮೆನೆ ಲಿಂಗಾರ್ಚನಂಗೆಯ್ಸು ತಾರೋಗಣೆಗೆಡೆಗೆಯ್ದು ಗಡಣಿಸಿ 'ದಾತಾ ಭೋಕ್ತಾ ಸ್ವಯಂ ಶಿವಃ' ಎಂದು ಪೂವಲಿ ಗೆದಱಿ ಪೊಡಮಟ್ಟಾರೋಗಿಪುದೆಂದು ಬಿನ್ನಪಂಗೆಯ್ಯೆ—

ತನುಭವನೆಲ್ಲಿದಂ ತರುಣಿ ತಾಂ ಪಸಿದಾಗಳೆ ಬಂದು ನಿನ್ನನೀ
ಮನೆಯೊಳಗಕ್ಕಱಿಂ ಕರೆದು ಕೋಟಲೆಗೊಂಡನವಂಗೆ ನೀಡೆ ಭೋ
ಜನಮನಿದೇಕೆ ಕಲ್ಲೆರ್ದೆತನಂ ನಿನಗೆನ್ನದೊ ಮಕ್ಕಳೆಯ್ದೆ ಬಿ
ದ್ದಿನರೆಮಗಪ್ಪುದೊಳ್ಳುಣಿಸೆನುತ್ತಭಿಲಾಷಿವುವಲ್ತೆ ಲೋಕದೊಳ್ ೮೪

ಆರೋಗಿಸಲುತ್ಸವಿಪ ಕು
ಮಾರನನುಳಿದೆಮಗೆ ನೀಡಿದತಿ ಮಧುರತರಾ
ಹಾರಮಿದೆಮ್ಮಯ ಗಂಟಲೊ
ಳೋರಂತಿಳಿದಪ್ಪುದೆ ತಂಗಿ ಕರೆ ತನುಭವನಂ ೮೫

ಪೊಡವಿಯೊಳಾವೇಂ ಮಕ್ಕಳ
ಪಡೆದಱಿಯೆವೆ ಪೆತ್ತ ಬಸಿಱದೆಂತಿರ್ಪುದುಣ
ಲ್ಪಡಗರಿಪಣುಗಂಗೀಯದೆ
ಬಡಿಸಿದೆಯುಕಟೆಮಗೆ ದಿವ್ಯಭೋಜನಮನಿದಂ ೮೬

ಸಿದ್ಧಮಾಡಿದಳು. ವ॥ ಆ ರೀತಿ ಸಿದ್ಧಪಡಿಸಿ ಇಳುಹಿ, ಅನಂತರ ಈ ಇಬ್ಬರಿಗೆಯೂ, ಯಥಾಸಾಂಗವಾಗಿ ಲಿಂಗಾರ್ಜನೆಯನ್ನು ಮಾಡಿಸಿ, ಭೋಜನಕ್ಕೆ ಎಡೆಮಾಡಿ, ಎಲ್ಲವನ್ನೂ ಒದಗಿಸಿ, 'ಶಿವನು ಸ್ವತಃ ತಾನು ದಾತನೂ ಊಟಮಾಡುವವನೂ ಆಗಿದ್ದಾನೆ' (ದಾತಾ ಭೋಕ್ತಾ ಸ್ವಯಂ ಶಿವಃ) ಎಂದು ಪುಷ್ಪಾಂಜಲಿಯನ್ನು ಹೇಳಿ ನಮಸ್ಕರಿಸಿ 'ಆರೋಗಿಸಬೇಕು' ಎಂದು ಬಿನ್ನವಿಸಿಕೊಳ್ಳಲು–೮೪. ಅಮ್ಮಾ ತರುಣಿಯೇ, ಮಗನೆಲ್ಲಿ ? ಆಗನು ಆಗಲೇ ಹಸಿದುಬಂದು, ಈ ಮನೆಯಲ್ಲಿ ನಿನ್ನನ್ನು ಪ್ರೀತಿಯಿಂದ ಕರೆದು (ನೀನಿಲ್ಲದುದರಿಂದ) ಮನೋವ್ಯಥೆ ಹೊಂದಿದನು. ಅವನಿಗೆ ಊಟವನ್ನು ಏಕೆ ನೀಡುವುದಿಲ್ಲ ? (ಜನರು) ನಿನಗೆ ಕಲ್ಲೆದೆಯವಳು ಎನ್ನುವದಿಲ್ಲವೋ ! ಲೋಕದಲ್ಲಿ ಔತಣದವರು ಬಂದಾಗ ಮಕ್ಕಳುಗಳು (ಈ ದಿನ) ನಮಗೆ ಒಳ್ಳೆಯ ಊಟವಾಗುವುದು ! ಎಂದು ಅಪೇಕ್ಷಿಸುವರಲ್ಲವೇ ? ೮೫. ತಂಗೀ, ಊಟಮಾಡಲು ತವಕಪಡುವ ಮಗನನ್ನು ಬಿಟ್ಟು, ನಮಗೆ ನೀಡಿದ ಅತ್ಯಂತ ರುಚಿಕರವಾದ ಆಹಾರವಾದ ಇದು ನಮ್ಮ ಗಂಟಲಲ್ಲಿ ಚೆನ್ನಾಗಿ ಇಳಿದೀತೇ ? (ನಿನ್ನ) ಮಗನನ್ನು ಕರೆ. ೮೬. ಭೂಮಿಯಲ್ಲಿ ನಾವೂ ಕೂಡ ಮಕ್ಕಳನ್ನು ಪಡೆದು ತಿಳಿಯೆವೆ ? ಹೆತ್ತ ಹೊಟ್ಟೆಯು ಅದು ಎಂತಿದ್ದೀತು ? ಊಟಮಾಡುವುದಕ್ಕೆ ಸಂಭ್ರಮಗೊಂಡ ಮಗನಿಗೆ ಕೊಡದೆ ನಮಗೆ ಈ ಭೋಜನವನ್ನು

ತನುಭವರಿಲ್ಲದ ಮನೆ ಕೆ
ಮ್ಮನೆ ಕೆಲದೊಳ್ಮಕ್ಕಳಿಲ್ಲದೂಟಂ ಕಾಟಂ
ತನಯರ್ಕಳಿಲ್ಲದೈಸಿರಿ
ಕನಸಿನ ಸಿರಿಯೆಂದು ಬಲ್ಲರುಲಿಗುಮಜಸ್ರಂ ೮೭

ವ॥ ಎಂದಿಂದುಧರಂ ಕುಮರನಳಿದುದನಱಿಯದವನಂತೆ ನುಡಿಯೆ ನಿಂಬಿಯಕ್ಕಂ ನಕ್ಕು—

ಬಿಡು ಬಿಡು ದೇವ ನಿನ್ನ ಚಪಲತ್ವದ ಠಕ್ಕಿನ ಮಾತನೆನ್ನೊಳೀ
ನುಡಿವಸರಕ್ಕೆ ಸಿಲ್ಕುವೆನೆ ನಿನ್ನಯ ಪಂಗಿನೊಳೆಯ್ದೆ ಬಾಳ್ವವಂ
ಬಡಸಿರಿಯಾಳ್ವನಂತವನ ಮಾಳ್ಕೆಯೊಳೆನ್ನನದೇಕೆ ನೋಡುವೈ
ಜಡಮತಿಯಲ್ತೆನುತ್ತೆ ತಿಳಿ ಭಕ್ತರ ಸಿಂಬಿಯನೆಯ್ದೆ ನಿಂಬಿಯಂ ೮೮

ಪಸುಳೆಯ ವಧಿಸುವ ಬರಿಸುವ
ಗಸಣಿಗಳೇಕೆಮಗೆ ದೇವ ನೀನೀವ ಸಮು
ಲ್ಲಸಿತ ರಜತಾಚಲಮನ
ರ್ಥಿಸೆನಾಂ ನೀನುಂಡೊಡಲ್ಲದಡಿಯಿಡಲೀಯೆಂ ೮೯

ನಿಮಗಾಂ ನೇಮಿಸಿ ಮಾಡಿದನ್ನಮನುಮೇಶದ್ರೋಹಿ ಕಳ್ದುಂಡ ಪಾ
ಪಮೆ ತದ್ರೋಹಿಯನಿಕ್ಕಿದತ್ತವನ ಪಂಬಲ್ಬೇಡ ಮಾಯಾವಿ ಭಾ
ವಮನಾದಂ ಬಿಡು ಭುಂಜಿಸೆಂದುಸುರೆ ತದ್ವಾಕ್ಯಂಗಳಂ ಕೇಳ್ದು ಪೆ
ಟ್ಟಿಮುದಂಗೆಟ್ಟತಿ ಭೀತಿವಟ್ಟು ತಲೆವಾಗಿರ್ದಂ ಮಹಾಲಜ್ಜೆಯಿಂ ೯೦

ಬಡಿಸಿದ್ದೀಯೆ, ಅಕ್ಕಟಾ ! ೮೭. ಮಕ್ಕಳಿಲ್ಲದ ಮನೆ ವ್ಯರ್ಥಮನೆ ; ಅಕ್ಕಪಕ್ಕಗಳಲ್ಲಿ ಮಕ್ಕಳು ಇಲ್ಲದಿರುವ ಊಟ ಕಾಟದೂಟ (ಕಾಟಾಚಾರದ್ದು) ; ಮಕ್ಕಳಿಲ್ಲದ ಐಶ್ವರ್ಯ ಕನಸಿನ ಸಿರಿ–ಎಂದು ತಿಳಿದವರು ಯಾವಾಗಲೂ ಹೇಳುತ್ತಾರೆ. ವ॥ ಎಂದು ಶಿವನು ಅವಳ ಮಗನು ಸತ್ತುದನ್ನು ತಿಳಿಯದವನ ಹಾಗೆ ನುಡಿಯಲು ನಿಂಬಿಯಕ್ಕ ನಕ್ಕು— ೮೮. ದೇವ, ನಿನ್ನ ಚಾಪಲ್ಯದ, ಠಕ್ಕಿನ ಮಾತನ್ನು ನನ್ನಲ್ಲಿ ಬಿಟ್ಟುಬಿಡು. ಈ ನಿನ್ನ ಮಾತಿನ ಸಮೂಹಕ್ಕೆ (ನಾನು) ಸಿಕ್ಕುವೆನೆ ? ನಿನ್ನ ಹಂಗಿನಲ್ಲಿ ಚೆನ್ನಾಗಿ ಬದುಕುವವನು ಆ ಬಡಸಿರಿಯಾಳ್ವನು, ಹಾಗೆ ಅವನ ರೀತಿಯಲ್ಲಿ ನನ್ನನ್ನು ಅದೇಕೆ ನೋಡುತ್ತೀಯೆ ? ಭಕ್ತರ ಸಿಂಬೆಯಂತೆ ಅವರ ಸೇವೆ ಮಾಡಿಕೊಂಡಿರುವ ನಿಂಬಿಯು ಮೂಢಬುದ್ಧಿಯವಳಲ್ಲ ಎಂಬುದನ್ನು ಚೆನ್ನಾಗಿ ತಿಳಿ (ಎಂದಳು). ೮೯. ಮಗುವನ್ನು ಕೊಲ್ಲುವ, ಬರಮಾಡುವ, ತಂಟೆಗಳು ನಮಗೇಕೆ ? ದೇವ, ನೀನು ಕೊಡುವ ಶ್ರೇಷ್ಠವಾದ ಬೆಳ್ಳಿಯ ಬೆಟ್ಟವನ್ನು ಬೇಡುವುದಿಲ್ಲ ; ನೀನು ಉಂಡ ಹೊರತು ನಿನ್ನನ್ನು ಬಿಡುವುದಿಲ್ಲ ; ೯೦. ನಿಮಗಾಗಿ ನೇಮಗೊಂಡು ನಾನು ಮಾಡಿದ ಅನ್ನವನ್ನು ಶಿವದ್ರೋಹಿಯಾದವನು ಕದ್ದು ಉಂಡ ಪಾಪವೇ ಆ ದ್ರೋಹಿಯನ್ನು ಹೊಡೆಯಿತು, ಅವನ ಹಂಬಲು ಬೇಡ ; ಅತಿಶಯವಾದ (ಈ) ಕಪಟತನವನ್ನು ಬಿಟ್ಟುಬಿಡು ; ಊಟ ಮಾಡು, ಎಂದು ಹೇಳಲು, ಸಿರಿಯಾಳ

ವ॥ ಆಗಳುಮಾರಮಣನವಳ ವಿರಕ್ತಿಭಾವಕ್ಕೆ ಮೆಚ್ಚಿ ಮನಂದಂದು—

ಕೊರಲ ಕಱ ಶಿರದ ಪೆಱ ಪೇ
ರುರದಹಿಪತಿ ನೊಸಲ ಕಣ್ಕರಾಗ್ರದ ಶೂಲಂ
ಪರಶು ಪೊದೆದುಟ್ಟ ಚರ್ಮಾಂ
ಬರಮರೆಯೊಡಲಸಿಯಳೆಸೆಯೆ ಮೆಱೆದಂ ಗಿರಿಶಂ ೯೧

ವ॥ ಅಂತು ಶಿವಂ ಪ್ರಸನ್ನನಾಗೆ ನಿಂಬಿಯಕ್ಕಂ ಕಂಡು ಮುಗುಳ್ನಗೆ ನಕ್ಕು—

ಎಲೆ ಎಲೆ ದೇವ ನಿನ್ನ ವಿಕಟಾಕೃತಿ ಸಾಲ್ಗುಮಿದೇಕೆ ಬಲ್ಲರು
ಜ್ವಲಗುಣಮೇ ವಿಚಾರಿಸುವೊಡಿಂತಿದು ದೇಹಕೆ ಜೀವಮಾನಿರಾ
ಕುಲತರಜೀವಕಂಗಮೆನಿಸಿರ್ದುಭಯಾಭಿದಲಿಂಗಜಂಗಮಾ
ರ್ಗಲತನುವಂ ಬಿಸುಟ್ಟು ಪೊಸತೊಂದು ಕಲೇವರಮಾಂಪ ವಿಭ್ರಮಂ ೯೨

ಮೊಲೆವಾಲ್ಗೊಳ್ವೆನೆನುತ್ತೆ ರೋದಿಪ ತನೂಜಾತಂಗೆ ಪಿಣ್ಯಾಕಮಂ
ಜುಲಪಿಂಡಂಗುಡುತೆಯ್ದೆ ತನ್ನ ಮೊಲೆಯುಂ ತಾಯ್ವಂಚಿಪಂತೀಗಳೀ
ನಿಲವಂ ಕಾಣಿಸಿ ಭಕ್ತಿಯಂ ಮಱೆಪಿಡುತ್ತುಂ ಜಾಣ್ಮೆಯಿಂ ಜಾಱಲೆಂ
ದಲೆ ನೀನಿರ್ದಪೆ ನಿನ್ನ ಮಾಯೆಗೊಳಗಾಗೆಂ ಬಲ್ಲೆನಾನೆಲ್ಲಮಂ ೯೩

ಸೆಟ್ಟಿಯು ಆ ಮಾತುಗಳನ್ನು ಕೇಳಿ, ಗರ್ವಹೀನನಾಗಿ, ಅತಿಯಾಗಿ ಹೆದರಿ, ಮಹಾಲಜ್ಜೆಯಿಂದ, ತಲೆಬಾಗಿಸಿದ್ದನು. ವ॥ ಆಗ ಉಮಾಪತಿಯು ಅವಳ ವಿರಕ್ತಭಾವಕ್ಕೆ ಮೆಚ್ಚಿ ೯೧. ಕೊರಳಿನ ಕಪ್ಪು, ಶಿರದ ಚಂದ್ರ, ವಿಶಾಲ ಎದೆಯ ಮೇಲೆ ಆದಿಶೇಷ, ಹಣೆಯ ಕಣ್ಣು, ಕೈಯಕೊನೆಯ ಶೂಲ, ಕೊಡಲಿ, ಪ್ರೀತಿಯಿಂದ ಉಟ್ಟ ಚರ್ಮದ ಉಡಿಗೆ, ಅರ್ಧಶರೀರದಲ್ಲಿರುವ ಸ್ತ್ರೀ—ಇವು ಶೋಭಿಸುತ್ತಿರಲು ಪ್ರಕಟನಾದನು. ವ॥ ಈ ರೀತಿ ಶಿವನು ಪ್ರಕಟನಾಗಲು ನಿಂಬೈಕ್ಕನು ಕಂಡು ಮುಗುಳುನಕ್ಕು—೯೨. ಎಲೆ ಎಲೆ ದೇವ, ನಿನ್ನ ವಿಕಟವಾದ ಆಕಾರವು ಸಾಕು. ಈ ಆಕಾರವು ಏತಕ್ಕೆ ? ವಿಚಾರಮಾಡಿ ನೋಡಿದರೆ ಈ ರೀತಿ ದೇಹಕ್ಕೆ ಜೀವವೂ, ಆ ನಿಶ್ಚಂಚಲವಾದ ಜೀವಕ್ಕೆ ಅಂಗನೆಂದೆನಿಸಿರುವ ಲಿಂಗ ಜಂಗಮವೆಂಬ ಎರಡು ಹೆಸರುಳ್ಳ ಶರೀರವನ್ನು ಬಿಸಾಡಿ, ಹೊಸದೊಂದು ಶರೀರವನ್ನು ಹೊಂದಿರುವ ಈ ವಿಭ್ರಮವು (ವಿಲಾಸವು) ತಿಳಿದವರ ಶ್ರೇಷ್ಠಗುಣವೇ ? [ಅಂದರೆ ನೀನು ಲಿಂಗಜಂಗಮ ರೂಪದಲ್ಲಿ ಮೈದೋರಿದಲ್ಲದೆ ಈ ರೀತಿ ವೇಷವನ್ನು ನಾನು ಒಪ್ಪುವುದಿಲ್ಲ ಎಂದು ಭಾವ] ೯೩. ಮೊಲೆಯ ಹಾಲನ್ನು ಉಣಿಸೆಂದು ಅಳುತ್ತಿದ್ದ ಮಗನಿಗೆ ತಾಯಿಯು ಎಳ್ಳಿನ ಹಿಂಡಿಯನ್ನು ಮನೋಹರವಾಗುವಂತೆ ಉಂಡೆಯನ್ನು ಮಾಡಿಕೊಡುತ್ತ—ಚೆನ್ನಾಗಿ ತನ್ನ ಮೊಲೆಯ ಹಾಲನ್ನು ವಂಚಿಸುವಂತೆ, ಈಗ, ಎಲೆ ಸ್ವಾಮಿಯೇ, ನೀನು ಈ ಸ್ಥಿತಿಯಲ್ಲಿ ಕಾಣಿಸಿಕೊಂಡು ಭಕ್ತಿಯನ್ನು ಮರೆ ಮಾಚುತ್ತ ಜಾಣತನದಿಂದ ಜಾರಿ ಹೋಗಬೇಕೆಂದು ಇದ್ದೀಯೆ. ನಾನು ನಿನ್ನ ಮಾಯೆಗೆ

ಬೆದಱದಿರಯ್ಯ ಬಿನ್ನಣಮದೇಂ ಬಿಡು ನಿನ್ನಯ ಮುನ್ನಿನಂದಮಂ
ಮದನವಿರೋಧಿ ಬೇರ್ಪಡಿಸಿ ನೋಡಿದೆನೇ ನಯನತ್ರಯಾಗ್ರದೇ
ಶದೊಳೊಗೆದಿರ್ದೊಡಂ ತ್ರಿನಯನಂ ನಯನತ್ರಯಮಿಲ್ಲದಿರ್ದೊಡಂ
ವಿದಿತ ಗುರೂಪದೇಶಮುಳವಟ್ಟರೊಳೀಕ್ಷಿಸೆ ಭೇದಮಾವುದೋ ೯೪

ದಾಸನ ವಸ್ತ್ರದಾನದೆಡೆಗಾವಹಿಭೂಷಣಮಾಂತು ಪೋದೆ ನೀಂ
ಭಾಸುರ ಗುಂಡಯಂಗೆ ನವಯೌವನಮಂ ಕುಡಲಾವ ಚಂದ್ರನಂ
ಲೇಸೆನೆ ಸೂಡುತೆಯ್ದಿದೆ ಕಚೌಘಮನರ್ಥಿಸಿ ಮಾನಕಂಜಧಾ
ತ್ರೀಸುದತೀಶನಿರ್ದೆಡೆಗದಾವಗನಂದನೆಗೂಡಿ ಬಂದೆ ಪೇಳ್ ೯೫

ನಲವಿಂದಂ ಸಿಂಧುಬಲ್ಲಾಳನ ನವವಧುವಂ ಬೇಡುವಂದಾದ ಹಾಲಾ
ಹಲಮಂ ತಾಳ್ದೆಯ್ದಿದೈ ಭೋಗಯನ ಮನೆಗೆ ಪೇಳಾವ ಸೋಮಾಗ್ನಿ ಸೂರ್ಯೋ
ಜ್ವಲನೇತ್ರಂಬೆತ್ತು ಬೇಗಂ ತಳರ್ದೆಯರರೆ ಮೇಣ್ಸಾಮವೇದದ್ವಿಜಂ ಮಾ
ಳ್ಪ ಲಸದ್ಯಜ್ಞಕ್ಕೆ ನೀನಾವಸಮವೃಷಭನಾರೋಹಣಂಗೆಯ್ದು ಪೋದೈ ೯೬

ತಳೆದಾವ ಚತುರ್ಭುಜಮಂ
ಘಳಿಲನೆ ಪಿಟ್ಟವ್ವೆಯೆಡೆಗೆ ಗಮಿಸಿದೆ ಪೇಳ್ಬಾಂ
ಬೊಳೆಯನದಾವುದನಾಳ್ದು
ಜ್ವಳಿಸುತೆ ಸಿರಿಯಾಳ್ವನಂಗಣಕ್ಕಡಿಯಿಟ್ಟೈ ೯೭

ಒಳಗಾಗುವುದಿಲ್ಲ ; ಎಲ್ಲವನ್ನೂ ಬಲ್ಲೆನು. ೯೪. ಅಯ್ಯ ದೇವರೇ, ಬೆದರದಿರು ; ಈ ನಿನ್ನ ನೈಪುಣ್ಯವೇನಿದು ? ಬಿಡು ; ಹೇ ಮದನ ವಿರೋಧಿಯೇ, ನಿನ್ನ ಮೊದಲಿನ ಅಂದವನ್ನು ಬೇರೆಯಾಗಿ ನೋಡಿದೆನೇನು ? ಮೂರು ಕಣ್ಣುಗಳ ಮೇಲುಗಡೆಯಲ್ಲಿ ಮೂರು ಕಣ್ಣುಗಳು ಹುಟ್ಟಿದರೂ, ಮೂರು ಕಣ್ಣುಗಳು ಇಲ್ಲದೆಯಿದ್ದರೂ, ಪ್ರಸಿದ್ಧವಾದ ಗುರುಬೋಧೆ ನೆಲೆಗೊಂಡವರಲ್ಲಿ ವಿಚಾರಿಸಿ ನೋಡಿದರೆ ಭೇದವೇನು ? ೯೫. ನೀನು ಜೇಡರ ದಾಸಯ್ಯನ ವಸ್ತ್ರದಾನದ ಸ್ಥಳಕ್ಕೆ ಯಾವ ಸರ್ಪದ ಆಭರಣವನ್ನು ಹೊಂದಿ ಹೋಗಿದ್ದೆ ? ಶೋಭಿಸುವ ಗುಂಡಯ್ಯನಿಗೆ ನೂತನ ಯೌವನವನ್ನು ಕೊಡಲು ಲೇಸಾದ ಯಾವ ಚಂದ್ರನನ್ನು ಧರಿಸಿಕೊಂಡು ಹೋಗಿದ್ದೆ ? ಕೂದಲುಗಳನ್ನು ಬೇಡಲು ಮಾನಕಂಜರ ರಾಜನಲ್ಲಿಗೆ ಯಾವ ಪಾರ್ವತಿಯೊಡನೆ ಹೋಗಿದ್ದೆ ಹೇಳು ? ೯೬. ಸಂತೋಷದಿಂದ ಸಿಂಧುಬಲ್ಲಾಳನ ಹೊಸ ಹೆಂಡತಿಯನ್ನು ಬೇಡುವಂದು ಯಾವ ಹಾಲಾಹಲ ವಿಷವನ್ನು ಧರಿಸಿ ಹೋಗಿದ್ದೆ ? ಭೋಗಯ್ಯನ ಮನೆಗೆ ಯಾವ ಚಂದ್ರ, ಸೂರ್ಯ, ಅಗ್ನಿನೇತ್ರಗಳಿಂದ ಕೂಡಿ ವೇಗದಿಂದ ಹೋಗಿದ್ದೆ? ಹೇಳು. ಅರರೇ ! ಮತ್ತು ಸಾಮವೇದಿಯೆಂಬ ಬ್ರಾಹ್ಮಣನು ಮಾಡುವ ಶ್ರೇಷ್ಠ ಯಜ್ಞಕ್ಕೆ ನೀನು ಯಾವ ಅಸದೃಶ ವೃಷಭನನ್ನೇರಿ ಹೋಗಿದ್ದೆಯಯ್ಯಾ ? ೯೭. ಯಾವ ನಾಲ್ಕು ತೋಳುಗಳನ್ನು ಹೊಂದಿ ಪಿಟ್ಟವ್ವೆಯ ಹತ್ತಿರಕ್ಕೆ ಬೇಗನೆ ಹೋದೆ ? ಹೇಳು. ಅದಾವ ಆಕಾಶಗಂಗೆಯನ್ನು ಧರಿಸಿ ಪ್ರಕಾಶಿಸುತ್ತ ಸಿರಿಯಾಳ್ವನ

ನಿನ್ನನವರ್ಮನ್ನಿಸರೆ ಮ
ಹೋನ್ನತ ಮಹಿಮರ್ಕಳವರ ಗೃಹದಾಸಿಯೆನಿ
ಪ್ಪೆನ್ನೊಡನಿದೇಕೆ ನಿನ್ನಯ
ಗನ್ನಂ ಬಿಡು ಬಿಡು ಭವಚ್ಚಮತ್ಕೃತಿಯೊಳ್ಪಂ ೯೮

ಎನ್ನಾಣೆ ನಿನಗೆ ಕೇಳೆಲೆ
ಪನ್ನಗಧರ ಭುಂಜಿಸೆಂಬ ಭಕ್ತೆಯ ನುಡಿಗೀ
ಶನ್ನಗುತೆ ನಲಿದು ಮಚ್ಚುತೆ
ಮನ್ನಿಸಿ ಚಿಱುತೊಂಡಯುಕ್ತನಾರೋಗಿಸಿದಂ ೯೯

ವ॥ ಅಂತಾರೋಗಿಸಿದಭವಂಗಮಾ ಚಿಱುತೊಂಡಮಾಹೇಶ್ವರಂಗಂ ಕರ್ಪೂರ ತಾಂಬೂಲಮಂ ಸಮರ್ಪಿಸಿ ಪರಮಾನಂದಂಬಡೆದಾಡಿ ಪಾಡಿ ಪುತ್ರನಿಸ್ಪೃಹೆ ಸಂಭ್ರಮಂ ಬಡೆದಿರೆ ಶಂಭು ತನ್ನಿಂಬಿಯ ನಭೀಕ್ಷಿಸಿ ಮುದಂಬೆತ್ತು ಸೆಟ್ಟಿಗಿಂತೆಂದಂ—

ಅಂದು ಚಂಡಕಾಟಕೋಟರೆಂಬ ಭಕ್ತಪುಂಗವ
ರ್ಕೊಂದರಲ್ತೆ ಸಾಪರಾಧರಾದ ತಂದೆಯಂ ಕನ
ಲ್ದಿಂದು ನಿಂಬಿ ಮತ್ಕೃತಾಪರಾಧನಾದ ಪುತ್ರನಂ
ನಿಂದೆಗೆಯ್ದು ತಿಕ್ಕಿ ಮಿಕ್ಕಳೀ ಮಹೀತಳಾಗ್ರದೊಳ್ ೧೦೦

ಅಂಗಳಕ್ಕೆ (ಮನೆಗೆ) ಹೆಜ್ಜೆಯಿಟ್ಟೆಯಯ್ಯಾ ?. ೯೮. ಆ ಮಹಾ ಶ್ರೇಷ್ಠ ಮಹಿಮೆಗಳನ್ನುಳ್ಳವರುಗಳು ನಿನ್ನನ್ನು ಮರ್ಯಾದಿಸಲಿಲ್ಲವೆ ?, ಅಂಥವರ ಮನೆಯ ದಾಸಿ (ಗೌಡಿ) ಎಂದೆನಿಸಿರುವ ನನ್ನೊಡನೆ ನಿನ್ನ ಈ ಮಾಯಾ ವಿದ್ಯೆ (ಮರೆಮಾಚುವ ವಿದ್ಯೆ) ಅದೇಕೆ ? ನಿನ್ನ (ಈ) ಚಮತ್ಕಾರದ ಸಮೀಚೀನತೆಯನ್ನು ಬಿಡು ಬಿಡು ! ೯೯. ಎಲೈ ಸರ್ಪಾಭರಣನೇ, ಕೇಳು : ನಿನಗೆ ನನ್ನ ಆಣೆ ! ಊಟ ಮಾಡು ; ಎನ್ನುವ ಆ ಭಕ್ತೆಯ ಮಾತಿಗೆ ಈಶ್ವರನು ನಗುತ್ತ ನಲಿದು ಸಂತೋಷಪಟ್ಟು ಶ್ಲಾಘನೆ ಮಾಡುತ್ತ ಮನ್ನಿಸಿ ಚಿರುತೊಂಡ ಸಮೇತ (ಸಿರಿಯಾಳ್ವ ಸಮೇತ)ನಾಗಿ ಊಟ ಮಾಡಿದನು. ವ॥ ಆ ರೀತಿ ಊಟ ಮಾಡಿದ ಪರಮೇಶ್ವರನಿಗೂ, ಚಿರುತೊಂಡ ಮಾಹೇಶ್ವರನಿಗೂ, ಮಗನಲ್ಲಿ ಆಸೆಯಿಲ್ಲದಿರುವ ನಿಂಬಿಯಕ್ಕನು ಕರ್ಪೂರ ತಾಂಬೂಲವನ್ನು ಸಮರ್ಪಣೆ ಮಾಡಿ, ಪರಮಾನಂದಗೊಂಡು, ಹೊಗಳಿ ಹಾಡಿ, ಸಂಭ್ರಮದಿಂದ ಇರಲು, ಶಂಭುವು ಆ ನಿಂಬ್ಯಕ್ಕನನ್ನು ನೋಡಿ, ಸಂತೋಷಗೊಂಡು ಸೆಟ್ಟಿಗೆ ಹೀಗೆ ಹೇಳಿದನು. ೧೦೦. ಈ ಪೂರ್ವಕಾಲದಲ್ಲಿ ಚಂಡೇಶ, ಕಾಟಕೋಟರೆಂಬ ಭಕ್ತಶ್ರೇಷ್ಠರು ಕೋಪಗೊಂಡು ಅಪರಾಧಗಳಿಂದ ಕೂಡಿದ ತಂದೆಯರನ್ನು ಕೊಂದರಲ್ಲವೆ ? ಇಂದು ನಿಂಬಿಯು ತನ್ನ ವಿಷಯದಲ್ಲಿ ತಪ್ಪನ್ನು ಮಾಡಿದವನಾದ ಮಗನನ್ನು ನಿಂದಿಸಿ ಹೊಡೆದು ಕೊಂದು

ವ॥ ಅಂತುಮಲ್ಲದೆಯುಂ—

ದ್ರಾವಿಡದೇಶದಲ್ಲಿ ನರಸಿಂಹನರಾಧಿಪನೆಂಬ ಭಕ್ತನು
ರ್ವೀವಧುಗಾಣ್ಮನಾಗಿ ಸಲೆ ಸದ್ಗುಣದೇಳ್ಗೆಯಿನೊಪ್ಪುತಿರ್ಪನೊ
ಲ್ದಾ ವಿಭುವಿಂಗೆ ಸಾರಸುಖದಾಯಿನಿ ವಿಶ್ರುತ ದಿವ್ಯರೂಪಿ ಶೋ
ಭಾವತಿ ಭಾಮೆ ರಂಜಿಪಳವಳ್ನೆಗಳ್ದೊಂದು ದಿನಂ ವಿಳಾಸದಿಂ ೧೦೧

ನಡೆತಂದೋರಂತೆ ಬಾಪೂರೆನಿಪ ಪುರದ ಭಾಳೇಕ್ಷಣಂಗರ್ಚನಂಗೆ
ಯ್ದೊಡನಲ್ಲಿಂದೇಳ್ತರುತ್ತಂದಿದಿರೊಳಸವಸಂ ಶಂಭುಗೆಂದಿರ್ದ ನೆಯ್ದಿ
ಲ್ಪಿಡುವೂಪಂ ಪಾಣಿಯಿಂದಂ ತೆಗೆದು ನೆಗಪುತುಂ ಘ್ರಾಣಿಸುತ್ತಿರ್ಪುದುಂ ತ
ಮ್ಮಡಿ ಕಂಡಾಕ್ಷೇಪದಿಂ ಮೂಗರಿದನವಳನಾ ವೇಳೆಯೊಳ್ ಚೇಟಿಯರ್ಕಳ್ ೧೦೨

ಪರಿತಂದಾ ನರಪಂಗೆ ಕೇಳರಸ ನಿನ್ನರ್ಧಾಂಗಿ ಗೌರೀಶಮಂ
ದಿರದಿಂದೇಳ್ತರುತೊಂದರಲ್ದೆಗೆದು ಗಂಧಾಸ್ವಾದನಂಗೆಯ್ಯೆ ಶಂ
ಕರಪೂಜಾರ್ಥದ ಪುಷ್ಪಮಂ ತೆಗೆವುದೇ ನೀನೆಂದು ಕಾಯ್ಪಿಂದೆ ಮೂ
ಗರಿದಂ ತಮ್ಮಡಿ ನಿನ್ನ ನಲ್ಲಳನೆನುತ್ತುಂ ಪೇಳೆ ಕೇಳ್ದುರ್ವಿಪಂ ೧೦೩

ಈ ಭೂಮಿಯಲ್ಲಿ ಅಧಿಕಳೆನಿಸಿದಳು, ವ॥ ಅಂತಲ್ಲದೆಯೂ—(ಕೇಳು) **ನರಸಿಂಹ ರಾಜನ ಕಥೆ :** ೧೦೧–೧೦೩. ದ್ರಾವಿಡ ದೇಶದಲ್ಲಿ ನರಸಿಂಹರಾಜನೆಂಬ ಭಕ್ತನು ಭೂಮಿಯೆಂಬ ಕಾಂತೆಗೆ ಪತಿಯೆನಿಸಿ ಚೆನ್ನಾಗಿ ಸದ್ಗುಣಗಳ ಆಧಿಕ್ಯದಿಂದ ಒಪ್ಪುತ್ತಿದ್ದನು. ಆ ಅರಸನಿಗೆ ಒಲಿದು ಶ್ರೇಷ್ಠ ಸೌಖ್ಯವನ್ನು ಕೊಡುವ ಪ್ರಖ್ಯಾತಳಾದ ಸೌಂದರ್ಯ ಶಾಲಿನಿಯಾದ 'ಶೋಭಾವತಿ' ಎಂಬ ಪತ್ನಿಯು ರಂಜಿಸುತ್ತಿದ್ದಳು. ಪ್ರಸಿದ್ಧಳಾದ ಅವಳು ಒಂದು ದಿನ ಲೀಲೆಯಿಂದ ಬಂದು, 'ಬಾಹೂರು' ಎಂಬ ಪಟ್ಟಣದಲ್ಲಿರುವ ಈಶ್ವರನಿಗೆ ಕ್ರಮವಾಗಿ ಪೂಜೆಯನ್ನು ಮಾಡಿ, ಕೂಡಲೇ ಅಲ್ಲಿಂದ ಹೊರಟು ಬರುವಾಗ ಎದುರಿನಲ್ಲಿ ಶಿವನಿಗೋಸ್ಕರವೆಂದು ಇಟ್ಟಿದ್ದ, ಹಿಡಿದುಕೊಳ್ಳುವುದಕ್ಕೆ ಅನುಕೂಲವಾಗಿರುವ ತೊಟ್ಟಿನಿಂದ ಕೂಡಿದ ನೈದಿಲೆ ಹೂವನ್ನು ಅವಸರವಾಗಿ ಕೈಯಿಂದ ತೆಗೆದುಕೊಂಡು ಮೇಲಕ್ಕೆತ್ತಿ ಮೂಸಿ ನೋಡುತ್ತಿರಲು ಪೂಜಾರಿಯು ಕಂಡು ಆಕ್ಷೇಪಣೆ ಮಾಡಿ (ಕೋಪದಿಂದ) ಅವಳ ಮೂಗನ್ನೇ ಕತ್ತರಿಸಿಬಿಟ್ಟನು. ಆ ವೇಳೆಯಲ್ಲಿ ಸಖೀ ಜನರು, ಓಡಿ ಬಂದು ಆ ನರಸಿಂಹರಾಜನನ್ನು ಕುರಿತು 'ಅರಸನೇ, ಕೇಳು : ನಿನ್ನ ಅರ್ಧಾಂಗಿಯು ಶಿವಾಲಯದಿಂದ ಹೊರಟು ಬರುತ್ತ (ಅಲ್ಲಿದ್ದ) ಒಂದು ಹೂವನ್ನು ತೆಗೆದುಕೊಂಡು ಪರಿಮಳವನ್ನು ಮೂಸಿ ನೋಡಲು ಪೂಜಾರಿಯು 'ಶಂಕರ ಪೂಜಾರ್ಥವಾದ ಹೂವನ್ನು ನೀನು ತೆಗೆದುಕೊಳ್ಳುವುದೇ ? ಎಂದು ಕೋಪದಿಂದ ಆ ನಿನ್ನ ನಲ್ಲಳ ಮೂಗು ಕೊಯ್ದುಬಿಟ್ಟ'ನೆಂದು ಹೇಳಲು ರಾಜನು ಕೇಳಿ 'ಹರಹರ! ನೀತಿತಪ್ಪಿ, ಮೂಗನ್ನು ಕತ್ತರಿಸಿದನೇ !' ಎನ್ನುತ್ತ ಆ ಶಿವನ ಪೂಜಾರಿಯನ್ನು ಬೇಗನೆ ಬರಮಾಡಿಕೊಂಡು ಹೇಳಿದನು : 'ಮೊದಲನೆಯ ತಪ್ಪನ್ನು ಮಾಡಿದ ಕೈ

ಹರ ಹರ ನೀತಿದಪ್ಪಿ ಕೊಱೆದಂ ಗಡ ಮೂಗನೆನುತ್ತೆ ಬೇಗದಿಂ
ಬರಿಸಿ ಮಹೇಶಪೂಜಕನನೆಂದನಿದೇಂ ಪ್ರಥಮಾಪರಾಧಿ ಕೆ
ಯ್ಯಿರೆ ಕಡಿದಿಕ್ಕದಿಂತು ಕಡೆದಪ್ಪನೊಡರ್ಚಿದ ಮೂಗನೆಯ್ದೆ ಕ
ತ್ತರಿಸಿದೆ ನೀನೆನುತ್ತೆ ತೆಗಳ್ದಂಗನೆಯಂ ನಡೆ ನೋಡಿ ಕೋಪದಿಂ ೧೦೪

ಶಿವಪೂಜಾರ್ಥಲತಾಂತಮಂ ತೆಗೆದ ಕೈ ತಾನೆಲ್ಲಿ ಮುನ್ನೀಡಿದಂ
ತೆವೊಲೀಗಳ್ಪೆಳೆ ನೀಡು ನೀಡೆನುತೆ ಕಾಯ್ಪಿಂ ಖಡ್ಗದಿಂದಾಕೆಯೊ
ಪ್ಪುವ ಕೆಯ್ಯಂ ಕಡಿದಿಕ್ಕಿದಂ ಗತವಿಮೋಹಂ ಕಂಡು ಭಕ್ತಾಳಿಯು
ತ್ಸವಮಂ ತಾಳೆ ಸಭಾಸದರ್ತಳೆಯೆ ತಳ್ತಾಶ್ಚರ್ಯಮಂ ಭೂಭುಜಂ ೧೦೫

ವ॥ ಆಗಳಾನವನ ಭಕ್ತಿಭರಕ್ಕೆ ಮೆಚ್ಚಿ ನಿಜರೂಪಂ ತೋಱಲೆಳಸಿ—

ಪಣೆಗಣ್ಕಿಱುವೆಱೆ ಸುರನದಿ
ಫಣಿಭೂಷಣಮಾಂತ ತಿಸುಳಮಿಗಮುನ್ನಿತಭೀ
ಷಣವಿಷಮಿಭಚರ್ಮಾಂಬರ
ಮಣಿಯುರಮುಮರ್ದೆಸೆಯೆ ರೂಪುದೋಱಿದೆನಾಗಳ್ ೧೦೬

ವ॥ ಅಂತು ರೂಪುದೋಱಿ ತನ್ನಿತಂಬಿನಿಗರಿದ ಮೂಗು ಕರಾಬ್ಜಮನಿತ್ತು ತದ್ಭಕ್ತಂಗೆ ಸಾಮೀಪ್ಯಪದಮಂ ಸಾರ್ಚಿದೆನಂತುಮಲ್ಲದೆಯುಂ—

ಇರಲು (ಹೂವನ್ನೆತ್ತಿಕೊಂಡು ಮೊದಲು ತಪ್ಪು ಮಾಡಿದ ಕೈ ಇರುವಾಗ ಅದನ್ನು) ನೀನು ಕತ್ತರಿಸಿ ಹಾಕದೆ ಹೀಗೆ ಕೊನೆಯ ತಪ್ಪನ್ನು ಮಾಡಿದ ಮೂಗನ್ನು ಬಿಡದೆ ಕತ್ತರಿಸಿದೆ ಇದೇನು ? ಎನ್ನುತ್ತ ನಿಂದಿಸಿ, ಹೆಂಡತಿಯನ್ನು ಕೋಪದಿಂದ ನಟ್ಟ ದೃಷ್ಟಿಯಲ್ಲಿ ನೋಡಿ—'ನೀಚಳೇ, ಶಿವ ಪೂಜಾರ್ಥವಾದ ಹೂವನ್ನು ಹಿಡಿದ ಕೈ ಎಲ್ಲಿ ! ಮೊದಲು ಹೂವನ್ನು ತೆಗೆದುಕೊಳ್ಳುವಾಗ ಚಾಚಿದ ಹಾಗೆ ಈಗ ಚಾಚು ;' ಎನ್ನುತ್ತ (ಹೆಂಡತಿಯ ಮೇಲಿನ) ಮೋಹದಿಂದ ದೂರನಾಗಿ, ಭಕ್ತರ ಸಮೂಹವು ಸಂತೋಷವನ್ನು ಹೊಂದಲು, ಸಭೆಯಲ್ಲಿರುವವರು ಆಶ್ಚರ್ಯದಿಂದ ಕೂಡಿದವರಾಗಿರಲು ರಾಜನು ಕೋಪದಿಂದ ಆಕೆಯ ಸುಂದರವಾದ ಕೈಯನ್ನು ಖಡ್ಗದಿಂದ ಕಡಿದುಹಾಕಿದನು.
ವ॥ ಆಗ ನಾನು ರಾಜನ ಭಕ್ತಿಭಾವಕ್ಕೆ ಮೆಚ್ಚಿ ನಿಜ ರೂಪವನ್ನು ತೋರಲು ಅಪೇಕ್ಷಿಸಿ—
೧೦೬. ಹಣೆಯ ಕಣ್ಣು, ಬಾಲಚಂದ್ರ, ಗಂಗಾನದಿ, ಹಾವಿನ ತೊಡುಗೆ, ಧರಿಸಿದ ತ್ರಿಶೂಲ, ಜಿಂಕೆ, ಕೂಡಿದ ಭಯಂಕರ ಕಾಲಕೂಟ ವಿಷ, ಆನೆಯ ಚರ್ಮದ ಬಟ್ಟೆ, ಇವುಗಳಿಂದ ಕೂಡಿ, ಶೋಭಿಸುತ್ತಿರಲು ಆಗ (ನನ್ನ) ರೂಪವನ್ನು ತೋರಿಸಿದೆನು.
ವ॥ ಆ ರೀತಿ ರೂಪ ತೋರಿಸಿ ಆ ಚೆಲುವೆಗೆ ಕತ್ತರಿಸಿ ಹೋದ ಮೂಗನ್ನೂ ಅಬ್ಜ ದಂತಿರುವ ಕೈಯನ್ನೂ ಕೊಟ್ಟು, ಆ ಭಕ್ತನಾದ ನರಸಿಂಹರಾಜನಿಗೆ (ನನ್ನ) ಸಾಮೀಪ್ಯ

ಭೂವರ ಚೋಳನಂದು ಬಱದೊಳ್ಚರವೃಂದಕೆ ನೇಮಿಸಿರ್ದ ಧಾ
ನ್ಯಾವಳಿಯಂ ಭಯಂಬಡದೆ ಭುಂಜಿಸೆ ತನ್ನ ವರಾಂಗಿ ಕಾಯ್ಪಿನಿಂ
ತೀವಿದ ಗರ್ಭಮಾಂತಿರೆಯು[1]ಮೋವ[1]ದೆ ಸೂನುಸಮೇತಮುಣ್ಮಿ ತ
ದ್ದೇವಿಯ ಪೆಂಪುವೆತ್ತ ಪೊಡೆಯಂ ಮಿಗೆ ಸೀಳ್ದಿನಮಾಕ್ಷಣಾರ್ಧದೊಳ್ ೧೦೭

ಬಗೆ ಮೆಚ್ಚುತ್ತೆ ತದೀಯ ಭಕ್ತಿಗೆ ಕಪರ್ದಂ ಬಾಲಚಂದ್ರಂ ಸುರಾ
ಪಗೆ ಕಂಠೋ[2]ಗ್ರಗರಂ ಲಲಾಟನಯನಂ ಶೂಲಂ ಮೃಗಂ ಭೀಮಪ
ನ್ನಗಹಾರಂ ತೆಗೆದುಟ್ಟ ಕೃತ್ತಿವಸನಂ ಚೆಲ್ವಾಗೆ ಮೆಯ್ದೋಱ ಕೆ
ಯ್ಮಿಗೆ ಬೇಡೆಂದೆನೆ ಮುಕ್ತಿಗೇಳ್ದನವನೆನ್ನಂ ಭಕ್ತಚೂಡಾಮಣೀ ೧೦೮

ತನಯಂಗಂ ವನಿತೆಗಮಾ
ನನುನಯದಿಂದಸುವನಿತ್ತು ಮಗುಳ್ದವರ್ಗೆ ಮಹಾ
ಘನಮೋಕ್ಷಪದಮೊಡರ್ಚಿದೆ
ನೆನುತುಂ ಶಶಿಮೌಳಿ ಪೇಳ್ದು ಮತ್ತಿಂತೆಂದಂ ೧೦೯

ಅವರೆಲ್ಲ ಬೇಡಿ ಪಡೆದ
ರ್ತವಕದಿನೆನ್ನಿಂದಭೀಷ್ಟ ಘನಪದಮಿಯನೀ
ಯುವತಿ ವರಮೀವೆನೆನೆಯುಂ
ಕಿವಿಗೇಳದ ತೆಱದೆ ಮುಟ್ಟಮಿರ್ದಪಳಲ್ತೇ ೧೧೦

ಸ್ಥಾನವನ್ನು ಕೊಟ್ಟೆನು ಅದೂ ಅಲ್ಲದೆ—೧೦೭-೧೦೮. ಅಂದು ಬರಗಾಲದಲ್ಲಿ ಚೋಳರಾಜನು ಜಂಗಮ ಸಮೂಹಕ್ಕೆ ಗೊತ್ತು ಮಾಡಿದ್ದ ಧಾನ್ಯ ಸಮೂಹವನ್ನು ತನ್ನ ಪತ್ನಿಯು ಭೀತಿಯಿಲ್ಲದೆ ಊಟ ಮಾಡಲು, ತುಂಬಿದ ಗರ್ಭವತಿಯಾಗಿದ್ದರೂ ರಕ್ಷಣೆ ಮಾಡದೆ ಕೋಪದಿಂದ ಪರಾಕ್ರಮ ವಿಶಿಷ್ಟನಾಗಿ, ಮಗನಿಂದ ಕೂಡಿಯೇ ಆ ದೇವಿಯ ಆಧಿಕ್ಯವನ್ನು ಹೊಂದಿದ ಹೊಟ್ಟೆಯನ್ನು ಚೆನ್ನಾಗಿ ಸೀಳುವಾಗ ಆ ಕ್ಷಣಾರ್ಧದಲ್ಲಿ ಆ ಚೋಳರಾಯನ ಭಕ್ತಿಗೆ ಮೆಚ್ಚಿದ ಮನಸ್ಸಿನಿಂದ ಶ್ಲಾಘನೆ ಮಾಡಿ, ಜಡೆ, ಬಾಲಚಂದ್ರ, ದೇವಗಂಗೆ, ಕಂಠದಲ್ಲಿ ಭಯಂಕರವಾಗಿರುವ ವಿಷ, ಹಣೆಗಣ್ಣು, ತ್ರಿಶೂಲ, ಜಿಂಕೆ, ಭಯಂಕರ ಹಾವುಗಳ ಮಾಲಿಕೆ, ಸುಲಿದು ಉಟ್ಟುಕೊಂಡ ಚರ್ಮ ವಸ್ತ್ರ—ಇವುಗಳು ಚೆಲುವಾಗಿರಲು ನಿಜ ದೇಹವನ್ನು ತೋರಿಸಿ, 'ಹೆಚ್ಚಾಗಿ ಬೇಡು' ಎಂದೆನ್ನಲು, ಆ ಭಕ್ತ ಚೂಡಾಮಣಿಯಾದ ಚೋಳಮಹಾರಾಜನು ನನ್ನಲ್ಲಿ ಮೋಕ್ಷವನ್ನು ಬೇಡಿದನು. ೧೦೯. ನಾನು ಮಗನಿಗೂ ಹೆಂಡತಿಗೂ ವಿಶ್ವಾಸದಿಂದ ಪ್ರಾಣವನ್ನಿತ್ತು ಪುನಃ ಅವರಿಗೆ ಮಹಾ ಘನವಾದ ಮೋಕ್ಷ ಸಾಮ್ರಾಜ್ಯವನ್ನುಂಟುಮಾಡಿದೆನೆನುತ್ತ ಶಶಿಮೌಳಿಯು ಹೇಳಿ ಪುನಃ ಹೀಗೆ ಹೇಳಿದನು : ೧೧೦. ಆ ಭಕ್ತರೆಲ್ಲರೂ ಬೇಡಿ ಶೀಘ್ರವಾಗಿ ನನ್ನಿಂದ ತಮಗೆ ಇಷ್ಟವಾದ ಶ್ರೇಷ್ಠ ಸ್ಥಾನವನ್ನು ಪಡೆದರು. ವರವನ್ನು

1 ಮೊಪ್ಪ(ಅ) 2 ಹಾ(ಅ)

ಅಪರಾಧಂಗೆಯ್ದ ತನ್ನಾತ್ಮಜನನುಜಿದೆ ಕೊಂದಳ್ಬಳಿಕ್ಕಾತನಂ ಕಾಂ
ಕ್ಷಿಪಳಲ್ಲೇನೆಂಬೆನೀ ನಿಂಬಿಯ ಘನತರ ಸದ್ಭಕ್ತಿಯಂ ಭಕ್ತ ನೀನಂ
ದುಪಹಾರಂಗೆಯ್ದಿಯಾಂ ಬೇಡಿದೊಡೆ ಬಳಿಯೊಳಾ ಪುತ್ರನಂ ಮತ್ತೆ ಭಕ್ತಿ
ವ್ಯಪದೇಶಂಬೆತ್ತು ನಣ್ಬಂ ಕರೆಯೆನೆ ಕರೆದೈ ಸೂನುವಂ ದಭ್ರಭಕ್ತಾ ೧೧೧

ಅದಱಿಂದೆ ನಿಂಬಿಯಕ್ಕನ
ಸದಮಳ ಸದ್ಭಕ್ತಿಯಿರವನೀಕ್ಷಿಸಿ ನಿನ್ನೀ
ಮದವನುಳಿಯೆಂದು ಸೆಟ್ಟಿಯೊ
ಳೊದವಿದ ಮದವಂ ತೆರಳ್ಚಿದಂ ಗಿರಿಜೇಶಂ ೧೧೨

ನಿಂಬಿಯ ನಂದನಂಗಸುವನಿತ್ತು ನಿರೀಕ್ಷಿಸಿ ಪುಷ್ಪಕಾಗ್ರದೊಳ್
ಸಾಂಬನೊಱಲ್ದು ಕುಳ್ಳಿರಿಸಿ ತನ್ನಯ ಲೋಕಮನೆಯ್ದಿಸುತ್ತೆ ಮ
ತ್ತಂ ಬಗೆದಂದು ತದ್ವನಿತೆಯುತ್ತಮ ಭಕ್ತಿಯನೊಲ್ದು ಕೀರ್ತಿಸು
ತ್ತಂ ಬಿಗಿಯಪ್ಪಿ ಮೆಯ್ದಡವಿ ಮನ್ನಿಸಿದಂ ಕೃಪೆಯಿಂದೆ ಶಂಕರಂ ೧೧೩

ವಿತತ ಚತುರ್ಮುಕ್ತಿಗಳಿಂ
ದತಿಶಯಮೀ ಶರಣಚರಣಸೇವನಮೆಂದೀ
ಕ್ಷಿತಿತಳದೊಳಿರ್ದಳಾ ಗುಣ
ಯುತೆ ನಿಂಬಿ ವಿಡಂಬಿಸುತ್ತೆ ಫಲಪದದೊಳ್ಪಂ ೧೧೪

ಕೊಡುತ್ತೇನೆಂದರೂ ಈ ಯುವತಿಯು ಕಿವಿಯೇ ಕೇಳದವಳಂತೆ, ಸುಮ್ಮನಿರುವಳಲ್ಲವೇ! ೧೧೧. ತಪ್ಪು ಮಾಡಿದ ತನ್ನ ಮಗನನ್ನು ತಪ್ಪದೆ ಕೊಂದಳು. ಬಳಿಕ ಆತನನ್ನು ಬಯಸುವವಳೇ ಅಲ್ಲ; ಈ ನಿಂಬಿಯ ಘನವಾದ ಶ್ರೇಷ್ಠ ಭಕ್ತಿಯನ್ನು ಏನೆಂದು ಹೇಳಲಿ ? ಭಕ್ತನೇ, (ಸಿರಿಯಾಳ ಸೆಟ್ಟಿಯೇ) ನೀನು ಅಂದು ನಾನು ಬೇಡಿದಾಗ ಭಕ್ತಿಯ ನೆವವನ್ನು ಹೊಂದಿ ಆ (ನಿನ್ನ) ಪುತ್ರನನ್ನು ಆಹಾರವನ್ನಾಗಿ ಮಾಡಿದೆ. ಮತ್ತೆ ನಾನು ಕರೆ ಎಂದರೆ ದಭ್ರ ಭಕ್ತನೇ, ಮಗನನ್ನು ಕರೆದೆಯಲ್ಲವೇ? ೧೧೨. 'ಆದ್ದರಿಂದ ಈ ನಿಂಬ್ಯಕ್ಕನ ಸಮೀಚೀನವಾದ ನಿರ್ಮಳ ಭಕ್ತಿಯ ರೀತಿಯನ್ನು ನೋಡಿ ನಿನ್ನ ಗರ್ವವನ್ನು (ನಾನೇ ಶ್ರೇಷ್ಠ ಭಕ್ತನೆಂಬ ಗರ್ವವನ್ನು) ಬಿಡು.' ಎಂದು ಸೆಟ್ಟಿಗೆ ಉಂಟಾಗಿದ್ದ ಮದವನ್ನು ಶಿವನು ಹೋಗಲಾಡಿಸಿದನು. ೧೧೩. ಶಿವನು ನಿಂಬಿಯ ಮಗನಿಗೆ ಪ್ರಾಣವನ್ನಿತ್ತು ನಿರೀಕ್ಷಿಸಿ, ಪುಷ್ಪಕ ವಿಮಾನದಲ್ಲಿ ಕುಳ್ಳಿರಿಸಿ ತನ್ನ ಲೋಕವನ್ನು ಸೇರಿಸುತ್ತ ಮತ್ತು ಶಂಕರನು ಆ ನಿಂಬಿಯ ಉತ್ತಮ ಭಕ್ತಿಯನ್ನು ಮನಸ್ಸಿಗೆ ತಂದುಕೊಂಡು ಪ್ರೀತಿಯಿಂದ ಶ್ಲಾಘಿಸುತ್ತ ಬಿಗಿದಪ್ಪಿ ಮೈಯನ್ನು ಸವರಿ ಕೃಪೆಯಿಂದ ಗೌರವಿಸಿದನು. ೧೧೪. ಪ್ರಸಿದ್ಧವಾದ ಸಾಲೋಕ್ಯ, ಸಾಯುಜ್ಯ, ಸಾಮೀಪ್ಯ, ಸಾರೂಪ್ಯಗಳೆಂಬ ನಾಲ್ಕು ವಿಧವಾದ ಮೋಕ್ಷಗಳಿಗಿಂತಲೂ, ಈ ಶರಣರುಗಳ ಚರಣ ಸೇವೆಯು ಅತಿಶಯವಾದುದು ಎಂದು ಆ ಗುಣಯುತೆ ನಿಂಬಿಯು ಚತುರ್ವಿಧವಾದ ಫಲದ ಸ್ಥಾನಗಳ ಸಮೀಚೀನತ್ವವನ್ನು ತಿರಸ್ಕರಿಸುತ್ತ ಈ ಭೂಮಿಯಲ್ಲಿಯೇ ಇದ್ದಳು.

ಅದಱಿಂ ಪೀಯೂಷಸಾರಂ ಪುಳಿಯೊಡವೆರೆದಂತಪ್ಪುದಾ ಭಕ್ತಿ ಚಂಚ
ನ್ಮದದೊಳ್ಮೇಳೈಸೆ ಕೇಳೆಂದೊರೆಯೆ ಗುರುತರಂ ಮಾಚಿದೇವಂ ವಿಳಾಸಾ
ಸ್ಪದಭಾವಂ ಮಿಕ್ಕು ಕೇಳ್ದೊಲ್ದೆಱಗುತವನ ದಿವ್ಯಾಂಘ್ರಿಯೊಳ್ಕೀರ್ತಿಸುತ್ತಿಂ
ಪದಪಿಂದೊಪ್ಪಿರ್ದನೀಶಾರ್ಪಿತಮತಿ ಶಿವಸಿದ್ಧಾಂತದುಗ್ಧಾಬ್ಧಿಚಂದ್ರಂ ೧೧೫

ಭೃಂಗವೇಣಿ ಭುವನತ್ರಯಪೂರ್ಣೇ
ಮಂಗಳಾಂಗಿ ಮೃದುವಾಣಿ ಸುಕರ್ಣೇ
ಕಂಗೊಳಿಪ್ಪ ಕನಕಾಂಚಿತವರ್ಣೇ
ಪಿಂಗದೊಲ್ದು ಪೊರೆಯೆನ್ನನಪರ್ಣೇ ೧೧೬

ಇದು ವಿನಮದಖಿಳ ಸುರಾಸುರೇಂದ್ರಮಕುಟತಟಘಟಿತ ಮಣಿಗಣಾಗಣಿತ ರುಚಿನಿಚಯ
ತರುಣಾರುಣಾತಪಪರಿಲಸಿತ ಪರಮ ಶಿವಲಿಂಗ ಪಾದಾರವಿಂದಪರಾಗಭಸಿತ
ಭಾಸುರಲಲಾಟಪಟ್ಟಸರಸಜನಮಾನಿತೋಭಯಕವಿತಾವಿಶಾರದ
ಶ್ರೀಷಡಕ್ಷರಿದೇವಭಕ್ತಿವಿರಚಿತ

ಶ್ರೀಮದ್ ಬಸವರಾಜವಿಜಯಮಹಾಪುರಾಣದೊಳ್ದಭ್ರಭಕ್ತಕಥಾವರ್ಣನಂ
ಚತುರ್ದಶಾಶ್ವಾಸಂ ಸಮಾಪ್ತಂ

ಅಂತು ಆಶ್ವಾಸ ೧೪ಕ್ಕೆ ಪದಗಣನೆ ೧೭೬೨ಕ್ಕೆ ಮಂಗಳಮಹಾ ಶ್ರೀ॥

೧೧೫. ಆದ್ದರಿಂದ ಆ ಭಕ್ತಿಯು ಚಪಲವಾದ ಗರ್ವದೊಡನೆ ಕೂಡಿದರೆ, ಶ್ರೇಷ್ಠ ಅಮೃತವು ಹುಳಿಯೊಡನೆ ಸೇರಿದಂತೆ ಆಗುವುದು ಕೇಳು ಎಂದು, ಮಹಾ ಗುರುವಾದ ಮಾಚಿದೇವನು ಹೇಳಲಾಗಿ, ಶಿವನಿಗೋಸ್ಕರ ಸರ್ವವನ್ನೂ ಸಮರ್ಪಿಸಲ್ಪಟ್ಟ ಬುದ್ಧಿಯುಳ್ಳವನೂ, ಶೈವ ಸಿದ್ಧಾಂತವೆಂಬ ಕ್ಷೀರ ಸಮುದ್ರಕ್ಕೆ ಚಂದ್ರನಂತಿರುವವನೂ, ಲೀಲೆಗೆ ಆಶ್ರಯವಾದ ಮನಸ್ಸಿನಿಂದ ಕೂಡಿದವನೂ ಆದ ಬಸವೇಶ್ವರನು ವಿಶೇಷವಾಗಿ ಕೇಳಿ, ಆ ಮಾಚಿದೇವನ ದಿವ್ಯ ಪಾದಗಳಲ್ಲಿ ಪ್ರೀತಿಯಿಂದ ನಮಸ್ಕರಿಸುತ್ತ ಉತ್ಸಾಹದಿಂದ ಹೊಗಳುತ್ತ ಶೋಭಿಸಿದನು. ೧೧೬. ಭ್ರಮರದಂತಿರುವ ಜಡೆಯುಳ್ಳ, ಮೂರು ಲೋಕಗಳಲ್ಲೂ ಸಂಪೂರ್ಣಳಾದ, ಮಂಗಳಕರ ಶರೀರವುಳ್ಳ, ಕೋಮಲ ಮಾತುಳ್ಳ, ಸಮೀಚೀನ ಕಿವಿಗಳುಳ್ಳ, ಕಂಗೊಳಿಸುವ ಪ್ರಕಾಶಮಾನವಾದ ಚಿನ್ನದಂತೆ ಬಣ್ಣವುಳ್ಳ, ಅಪರ್ಣೇ ತಪ್ಪದೆ ಒಲಿದು ನನ್ನನ್ನು ಕಾಪಾಡು.

ಹದಿನಾಲ್ಕನೆಯ ಆಶ್ವಾಸವು ಸಮಾಪ್ತವಾಯಿತು.

ಪಂಚದಶಾಶ್ವಾಸಂ

ಹಲಾಯುಧಯ್ಯನ ಕಥೆ

ಶ್ರೀಹಿಮಗಿರೀಂದ್ರತನಯಾ
ಸ್ನೇಹರಸಾಮತ್ರನತ್ರಿಪುತ್ರಕಿರೀಟಂ
ಮೋಹತಿಮಿರಾರ್ಕನಮರಸ
ಮೂಹಾರ್ಚಿತನೀಗೆ ಸೌಖ್ಯಮಂ ಶಿವಲಿಂಗಂ ೧

ವ॥ ಮತ್ತಂ ಬಸವಂಗೆ ಮಾಚಿದೇವನಿಂತೆಂದಂ—

ಪುರಹರನಾ ಪರದನ ಕರ
ಸರಸಿಜಮಂ ಪಿಡಿದು ಮೆಲ್ಲನಲ್ಲಿಂದೇಳ್ತಂ
ದುರುತರ ಹಲಾಯುಧಯ್ಯನ
ಪುರಮಂ ಪುಗುತಂದು ಪೊಕ್ಕನವನಂಗಣಮಂ ೨

ವ॥ ಆಗಳಾ ಹಲಾಯುಧನಪೂರ್ವತರ ಚರ[1]ರೂಪಮಂ ತಳೆದೇಳ್ತಂದರನಿರ್ವರಂ ಕಂಡು ದಂಡಪ್ರಣಾಮಂಗೆಯ್ದುಚಿತಸತ್ಕಾರಮಂ ಸಾಂಗಮೆನೆ ನೆಗಳ್ದನಂತರಂ ದೇವರಾವಾಸಮಾವುದೆನ್ನ ಮೇಲಣ ಕಾರುಣ್ಯದಿನಾವೆಡೆಯಿಂ ಬಿಜಯಂಗೆಯ್ದಿರೆಂದು ಕೇಳಲೊಡನಾ ಚರಮೂರ್ತಿ ಶಂಕರನವಂಗಿಂತೆಂದಂ—

ಹಲಾಯುಧಯ್ಯನ ಕಥೆ

೧. ಮಂಗಳಕರಳಾದ ಪಾರ್ವತೀದೇವಿಯ ಪ್ರೀತಿಯೆಂಬ ಜಲಕ್ಕೆ ಪಾತ್ರನಾದ ಅತ್ರಿ ಪುತ್ರನಾದ ಚಂದ್ರನನ್ನು ಮೌಳಿಯಲ್ಲಿ ಧರಿಸಿದ, ಅಜ್ಞಾನವೆಂಬ ಕತ್ತಲೆಯನ್ನು ಓಡಿಸುವ ಸೂರ್ಯನಾದ, ದೇವತೆಗಳ ಸಮೂಹದಿಂದ ಪೂಜಿಸಲ್ಪಟ್ಟ ಶಿವಲಿಂಗನು ಸೌಖ್ಯವನ್ನು ಕೊಡಲಿ. ವ॥ ಪುನಃ ಮಾಚಿದೇವನು ಬಸವಣ್ಣನಿಗೆ ಹೀಗೆ ಹೇಳಿದನು. ೨. ಪರಮೇಶ್ವರನು ಆ (ಸಿರಿಯಾಳ ಸೆಟ್ಟಿಯೆಂಬ) ವ್ಯಾಪಾರಿಯ ಕರಕಮಲವನ್ನು ಹಿಡಿದು, ಮೆಲ್ಲನೆ ಅಲ್ಲಿಂದ ಹೊರಟು ಬಂದು ಶ್ರೇಷ್ಠನಾದ ಹಲಾಯುಧಯ್ಯನ ಪಟ್ಟಣವನ್ನು ಹೊಗುತ್ತ ಆಗ ಹಲಾಯುಧಯ್ಯನ ಮನೆಯನ್ನು ಹೊಕ್ಕನು. ವ॥ ಆಗ ಹಲಾಯುಧಯ್ಯನು ಅಪೂರ್ವವಾದ ಜಂಗಮ ವೇಷವನ್ನು ಹೊಂದಿ ಬಂದಂಥ ಈ ಇಬ್ಬರನ್ನೂ ಕಂಡು ದೀರ್ಘದಂಡ ಪ್ರಣಾಮ ಮಾಡಿ ಯೋಗ್ಯವಾದ ಪೂಜೆಯನ್ನು ಯಥಾಸಾಂಗವಾಗಿ ಮಾಡಿದನಂತರ 'ಸ್ವಾಮಿಗಳ ಆವಾಸ ಸ್ಥಳವಾವುದು ? ನನ್ನ ಮೇಲಿನ ಕಾರುಣ್ಯದಿಂದ ಯಾವ ಸ್ಥಳದಿಂದ ಆಗಮಿಸಿದಿರಿ ?' ಎಂದು ಕೇಳಲು ಆ

---

1 + ಮೂರ್ತಿ(ಅ)

ಪರಮ ಚಿದಂಬರಪುರದ
ಲ್ಲಿರುತಿರ್ಪೆಂ ಪಿತರರಿಲ್ಲದಾಂ ಮುನ್ನಂ ಭಾ
ಸುರ ಶಿಶುರೂಪಂ ತಾಳ್ದಿರೆ
ಪೊರೆದಳ್ಮಾದೇವಿಯೆಂಬಳೆಲೆ ಗುಣನಿಳಯಾ ೩

ಎನಗೊಳ್ಪಿಂ ಕೊಡಗೂಸು ಪಾಲೆಱೆದಳನ್ನಪ್ರಾಶನಂ ಚೌಡಿದೇ
ವನಿನಾದತ್ತು ಧರಿತ್ರಿಯೊಳ್ನಡೆವ ಜಾಣ್ಭೋಗಯ್ಯನಿಂದಾಯ್ತು ಕೇ
ಳನವದ್ಯಂ ಸಹಭೋಜನಸ್ಥಿತಿಯನಾ ಚನ್ನಯ್ಯನೊಲ್ದಿತ್ತನೊ
ಯ್ಯನೆ ದಾಸಯ್ಯನುಡಲ್ಕರಂ ಕಲಿಸಿದಂ ತಾನಿತ್ತು ಸದ್ವಸ್ತ್ರವಂ ೪

ನೆಲೆಗೊಂಡತ್ತು ವಿಭೂತಿಧಾರಣವಿಧಾನಂ ಜ್ಞಾನಸಂಬಂಧರಿಂ
ದೊಲವಿಂದಂ ಜೆಡೆಗಟ್ಟುವಂದವುಮುರ್ದತ್ತಾ ಮಾನಕಂಜಾರರಿಂ
ವಿಲಸತ್ಸೌಂದರರಿಂದೆ ಜಾಣ್ನುಡಿಯೊಡಂಬಟ್ಟಿರ್ದುದೆನ್ನೊಳ್ಸಮು
ಜ್ವಲಕರ್ಮಪ್ರಚಯೈಕಶಕ್ತಿಯೆನಗಾ ಪಿಟ್ಟವ್ವೆಯಿಂದಾಯ್ತು ಕೇಳ್ ೫

ಕೂಡಲೆ ಆ ಜಂಗಮಾಕಾರದ ಶಿವನು ಅವನಿಗೆ ಹೀಗೆ ಹೇಳಿದನು : ೩–೬. ಎಲೈ ಸದ್ಗುಣಗಳಿಗೆ ಆಶ್ರಯನಾದ ಹಲಾಯುಧನೇ, ನಾನು ಶ್ರೇಷ್ಠವಾದ ಚಿದಂಬರಪುರ (ಜ್ಞಾನಾಕಾಶವೆಂಬ ಪಟ್ಟಣ)ದಲ್ಲಿ ಇರುತ್ತಿರುವೆನು. ತಾಯ್ತಂದೆಗಳು ಇಲ್ಲದೆ ಪ್ರಕಾಶಮಾನವಾದ ಶಿಶು ರೂಪವನ್ನು ಹೊಂದಿ ಇರಲು 'ಮಾದೇವಿ' ಎಂಬುವಳು ರಕ್ಷಿಸಿದಳು (ಬಿಜ್ಜಮಹಾದೇವಿ ಎಂಬುವಳು ರಕ್ಷಿಸಿದಳು); ನನಗೆ ಕೊಡಗೂಸು ಒಳ್ಳೆಯ ಹಾಲನ್ನು ಎರೆದಳು ; ಚೌಡಿದೇವನಿಂದ ಅನ್ನಪ್ರಾಶನವು (ಅನ್ನವನ್ನು ತಿನ್ನುವ ಪ್ರಥಮ ಸಂಸ್ಕಾರ) ಆಯಿತು ; ಭೋಗಯ್ಯನಿಂದ ಈ ಭೂಮಿಯಲ್ಲಿ ನಡೆಯುವ ಜಾಣ್ಮೆಯುಂಟಾಯಿತು ; ಕೇಳು : ನಿರ್ದುಷ್ಟನಾದ ಮಾದರ ಚೆನ್ನಯ್ಯನು ಒಲ್ದು ಒಡನೆಯೇ ಊಟ ಮಾಡುವಿಕೆಯನ್ನು ಉಂಟು ಮಾಡಿದನು ; ಜೇಡರದಾಸಯ್ಯನು ತಾನು ಚೆನ್ನಾಗಿ ಉಡುವುದಕ್ಕೆ ಒಳ್ಳೆಯ ಬಟ್ಟೆಗಳನ್ನು ಕೊಟ್ಟು ಕಲಿಸಿದನು ; ಭಸ್ಮವನ್ನು ಧರಿಸುವ ರೀತಿಯು ತಿರುಜ್ಞಾನ ಸಂಬಂಧದಿಂದ ಅಳವಟ್ಟಿತು ; ಪ್ರೀತಿಯಿಂದ ಜೆಡೆಯನ್ನು ಕಟ್ಟುವ ರೀತಿಯು ಆ ಮಾನಕಂಜರಾರ್ಯರಿಂದ ಉಂಟಾಯಿತು ; ಪ್ರಕಾಶಮಾನನಾದ ಸಂಬಿಯಣ್ಣನಿಂದ ಚಾತುರ್ಯದ ಮಾತುಗಳು ನನ್ನಲ್ಲಿ ಸಮ್ಮತವಾಗಿ ಉಂಟಾದುವು ; ಶ್ರೇಷ್ಠವಾದ ಕಾರ್ಯಗಳ (ಉದ್ಯೋಗಗಳ) ಸಮೂಹದಲ್ಲಿ ಒಲವು ಪಿಡ್ಡವ್ವೆಯಿಂದ ಆಯಿತು. ಉಜ್ವಲವಾದ ತೇಜಸ್ಸುಳ್ಳ ಸಿಂಧುಬಲ್ಲಾಳನು ಯೌವನ ವುಂಟಾಗುತ್ತಲೇ ತನ್ನ ಹೆಂಡತಿಯನ್ನರ್ಪಿಸಿದನು ; ಮೊನೆಯ ರಾಜನು ಅಧಿಕ ಪ್ರೇಮ

ಬಳಿಯೊಳ್ಜವ್ವನವಾಂಪುದುಂ ವಧುವನಿತ್ತುಂ ಸಿಂಧುಬಲ್ಲಾಳನು
ಜ್ವಳತೇಜಂ ಮೊನೆಯುಕ್ಷಿತೀಶನನಗುದ್ಯತ್ಪ್ರೇಮದಿಂದೀವನಾ
ಗಳುಮೊಳ್ಪಿಂ ತ್ರಿಗುಣೋಲ್ಲಸದ್ವ್ಯತಿಯನಿಂತಾದ್ಯರ್ಕಳಿಂ ಬಾಳ್ದೆನೀ
ಗಳುಮಾ ಭಕ್ತರ ಮೇಳದಿಂ ಕಳಿದಪೆಂ ಪೊಳ್ತುಂ ಮಹೋತ್ಸಾಹದಿಂ ೬

ವ॥ ಮತ್ತಂ—

ಹರನಂ ಪೂಜಿಪ ಮಾಳ್ಕೆಯಿಂ ಭಜಿಪರೆನ್ನಂ ಚನ್ನಯುಂ ಚೇರಮಂ
ಕರಿಕಾಲಂ ತಿರುನೀಲಕಂಠನತಿಭಕ್ತಂ ಮಾನಕಂಜಾರ ಸೌಂ
ದರ ವಾಗೀಶ್ವರ ಸೇದಿರಾಜ ವರಗುಂಡಾಧೀಶಮುಖ್ಯರ್ಮಹೇ
ಶ್ವರಭಕ್ತರ್ಗುಣಯುಕ್ತರನ್ವಿತ ಮಹಾವೀರವ್ರತಾಲಂಕೃತರ್ ೭

ಪಲವುಂ ದೇಶದ ಭಕ್ತರ
ನಿಲಯಂಗಳನೆಯ್ದೆ ಪೊಕ್ಕು ತತ್ಪೂಜೆಗಳಂ
ನಲವಿಂ ಕೆಯ್ಕೊಳುತೆಯ್ದಿದೆ
ನಲಂಪಿನಿಂ ಮಿಸುಪ ಕಾಂಚಿಯೆಂಬಾ ಪೊಳಲಂ ೮

ಆ ಪುರದೊಳೆಸೆವ ಸುಗುಣಕ
ಲಾಪನ ಚಿಱುತೊಂಡನಾಲಯಂಬುಗುತೆ ಸಮು
ದ್ದೀ[1]ಪಿತ ತದ್ಭಕ್ತಿರಸಮ
ನೇಪೊಳ್ತುಂ ಕೆಯ್ಕೊಳುತ್ತೆ ಸುಖಮಿರುತಿರ್ದೆಂ ೯

ದಿಂದ ನನಗೆ ಯಾವಾಗಲೂ, ಒಳ್ಳೆಯತನದಿಂದ ಸತ್ವ, ರಜ, ತಮೋ ಗುಣಗಳ ಶ್ರೇಷ್ಠ ವಾದ ಪೋಷಣೆಯನ್ನು ಕೊಡುವನು—ಈ ರೀತಿಯಲ್ಲಿ ಪುರಾತನರಿಂದ ಬಾಳಿದೆನು. ಈಗಲೂ ಆ ಭಕ್ತರ ಜೊತೆಯಲ್ಲಿಯೇ ಕಾಲವನ್ನು ಪರಮೋತ್ಸಾಹದಿಂದ ಕಳೆಯುತ್ತಿದ್ದೇನೆ. ವ॥ ಮತ್ತು ೭. ಮಹೇಶ್ವರ ಭಕ್ತರಾದ ಸದ್ಗುಣಶಾಲಿಗಳು ಮಹತ್ವವುಳ್ಳ ವೀರಶೈವ ಮತದಿಂದ ಅನ್ವಿತರಾಗಿ ಅಲಂಕಾರಗೊಂಡ ಚೆನ್ನಯ್ಯ, ಚೇರಮ, ಕರಿಕಾಲಚೋಳ, ಅತಿ ಭಕ್ತ, ತಿರುನೀಲಕಂಠ, ಮಾನಕಂಜರ, ಸೌಂದರನಂಬಿ, ವಾಗೀಶ, ಸೇದಿರಾಜ, ಗುಂಡಾಧೀಶರೇ ಮೊದಲಾದವರು ಲಿಂಗವನ್ನು ಪೂಜಿಸುವ ರೀತಿಯಿಂದ ನನ್ನನ್ನು ಸ್ತೋತ್ರಮಾಡುವರು. ೮. ಅನೇಕ ದೇಶಗಳಲ್ಲಿರುವ ಭಕ್ತರ ಮನೆಗಳನ್ನು ಚೆನ್ನಾಗಿ ಪ್ರವೇಶಿಸಿ ಆ ಭಕ್ತರು ಮಾಡಿದ ಪೂಜೆಗಳನ್ನು ಸಂತೋಷದಿಂದ ಕೈಗೊಂಡು ಪ್ರೀತಿಯಿಂದ ಶೋಭಿಸುವ ಕಾಂಚೀಪಟ್ಟಣವನ್ನು ಹೊಕ್ಕೆನು. ೯. ಆ ಪಟ್ಟಣದಲ್ಲಿ ಶೋಭಿಸುವ ಸದ್ಗುಣಗಳೇ ಆಭರಣವಾಗಿ ಉಳ್ಳ ಚಿರುತೊಂಡನ (ಸಿರಿಯಾಳ್ವನ) ಮನೆಯನ್ನು ಪ್ರವೇಶಿಸುತ್ತ ಯಾವಾಗಲೂ ಪ್ರಜ್ವಲಿಸುವ ಆತನ ಭಕ್ತಿಯನ್ನು ಸ್ವೀಕಾರ

---

1 ದ್ವೀ(ಚ, ಮ, ದ)

ಆ ಭಕ್ತನೊರ್ವರ್ ನೆಗಳ್ದ ಮ
ಹಾಭಕ್ತಿಯತೀವ ಚಿತ್ರಮೇವೇಳ್ದಪೆನೀ
ಭೂಭಾಗದೊಳಾವಂಗಮ
ದಾಭೀಳಂ ನೆನೆಯಲೆಸಪ ಕಲಿಯಾವನದಂ ೧೦

ಶಿವ ಶಿವ ಭೈರವಾಕೃತಿಯೊಳೀಶ್ವರನೆಯ್ದಿ ಭವತ್ಕುಮಾರನಂ
ತವೆ ಕಡಿದಿಕ್ಕವೇಳ್ಕುಮೆಮಗೆಂದೆನೆ ದೇವ ಮಹಾಪ್ರಸಾದಮೆಂ
ದವಿಚಲಿತಾತ್ಮಜನ ಗೋಣರಿದಳ್ಕದೆ ಸೀಳ್ದು ಮಾಂಸಮಂ
ಯುವತಿಯ ಕೆಯ್ಯೊಳೀಯೆ ಪಚಿಸುತ್ತುಮುಮಂ[1]ಗುಣಲಿತ್ತಳಿಶ್ತಿಯಿಂ ೧೧

ನಿಜಕುಲವರ್ಧನನೆನಿಪಾ
ತ್ಮಜನೊರ್ವನೆ ಚೆಲ್ವನೆಳೆಯನವನಂ ವಧಿಸು
ತ್ತೆ ಜಡಮತಿ ಭೈರವಂಗಾ
ಸುಜನಸ್ತುತನಿತ್ತನೆಂದೊಡೇವಣ್ಣಿಪುದೋ ೧೨

ವ್ರತವಿರ್ದು ಜನಂ ಪಡೆಗುಂ
ಸುತನಂ ಸುತಮೋಹಮರಿದು ಪಶುಪಕ್ಷಿಮೃಗ
ಪ್ರತತಿಗೆನೆ ತನ್ಮನಿಗೆ ನಿಜ
ಸುತನಂ ಕಡಿದಿತ್ತ ಸೆಟ್ಟಿಗಾರ್ದೊರೆ ಧರೆಯೊಳ್ ೧೩

ಮಾಡುತ್ತ ಸುಖವಾಗಿ ಇರುತ್ತಿದ್ದೆನು. ೧೦. ಆ ಭಕ್ತನು ಒಂದು ಸಲ ಮಾಡಿದ ಮಹಾಭಕ್ತಿಯು ಅತ್ಯಂತ ವಿಚಿತ್ರವಾದುದಾಗಿತ್ತು. ಏನೆಂದು ಹೇಳಲಿ ! ಈ ಭೂಮಿಯಲ್ಲಿ ಯಾವಾಗಲೂ ನೆನೆಯುವುದಕ್ಕೂ ಅದು ಭಯಂಕರವಾದ (ಭಕ್ತಿಯ ನಿಲುವು) ದ್ದಾಗಿದೆ. ಅಂಥ ಭಕ್ತಿಯನ್ನು ಮಾಡುವ ಕಲಿ ಯಾವನಿದ್ದಾನೆ ? ೧೧. ಶಿವಶಿವ! ಈಶ್ವರನು ಭೈರವಾಕಾರದಲ್ಲಿ ಬಂದು ನಮಗೆ ಚೆನ್ನಾಗಿ ನಿಮ್ಮ ಮಗನನ್ನೇ ಕಡಿದು ಇಕ್ಕಬೇಕು ಎನ್ನಲಾಗಿ, ನಿಶ್ಚಂಚಲ ಜೀವಿಯಾದ ಆ ಚಿರುತೊಂಡನು 'ದೇವ ! ಮಹಾಪ್ರಸಾದವೆಂದುಕೊಂಡು ಮಗನ ಗೋಣನ್ನೇ ಕತ್ತರಿಸಿ, ಹೆದರದೆ ಸೀಳಿ ಹೆಂಡತಿಯ ಕಯ್ಯಲ್ಲಿ ಮಾಂಸವನ್ನು ಕೊಡಲು (ಅವಳು) ಬೇಯಿಸಿ ಪ್ರೀತಿಯಿಂದ ಆ ಈಶ್ವರನಿಗೆ ಊಟಮಾಡುವುದಕ್ಕೆ ಕೊಟ್ಟಳು. ೧೨. ಚೆಲುವನೂ, ಚಿಕ್ಕವನೂ, ತಮ್ಮ ವಂಶವನ್ನು ಉದ್ಧರಿಸುವವನೂ ಎನಿಸಿದ ಮಗನು ಒಬ್ಬನೇ. ಅಂಥ ಅವನನ್ನು ಆ ಸಜ್ಜನ ಸ್ತೋತ್ರಕ್ಕೆ ಪಾತ್ರನಾದ ಚಿರುತೊಂಡನು ವಧಿಸುತ್ತ ಮೂಢ ಬುದ್ಧಿಯ ಭೈರವನಿಗೆ ಇತ್ತನೆಂದರೆ ಏನು ವರ್ಣಿಸುವುದೋ ! ೧೩. ಲೋಕದ ಜನರು ವ್ರತಗಳನ್ನು ಮಾಡಿ, ಮಗನನ್ನು ಪಡೆಯುತ್ತಾರೆ. ಪಶುಗಳು ಪಕ್ಷಿಗಳು, ಮೃಗಗಳು— ಇವುಗಳ ಸಮೂಹಕ್ಕೆ (ಇರುವ) ಮಕ್ಕಳ ಮೇಲಿನ ಪ್ರೀತಿಯು ಅಸಾಧ್ಯವಾಗಿರುವಾಗ

---

1 ದಂ(ದ)

ಹರನಂ ನಿಂದಿಸೆ ಕಾಟಕೋಟ ಘನಚಂಡರ್ತಂದೆಯಂ ಕೊಂದರೆಂ
ಬರದೇಂ ವಿಸ್ಮಯಮೋ ಸಮುಜ್ಜ್ವಲಿತ ಕೋಪಾಟೋಪಯುಕ್ತರ್ಮಹೇ
ಶ್ವರಭಕ್ತಂ ಚಿಱುತೊಂಡನೊಲ್ವ ಸುತನಂ ತಪ್ಪೊಂದದಿರ್ಪಾತನಂ
ಭರದಿಂ ಭೈರವನೊಲ್ದು ಬೇಡೆ ತಱಿದಿತ್ತಂ ಚಿತ್ರಮೀ ಧಾತ್ರಿಯೊಳ್ ೧೪

ಕಿಱಿಕಿಱಿದಾಗಿ ಕತ್ತರಿಸಿ ಪುತ್ರನನಟ್ಟುಣಲಿಟ್ಟು ಭಕ್ತಿಯಿಂ
ದೆಱಗಿ ಮಹೇಶ ಭುಂಜಿಸೆನೆ ಭುಂಜಿಪೆನೀಗಳೆ ನಿನ್ನ ಸೂನುವಂ
ನೆಱೆ ಕರೆಯೆಂದವಂ ಬೆಸಸೆ ತಾಂ ಕರೆದೀಶ್ವರನೊಲ್ಮೆಯಾನುತ
ಳ್ಕಱೊಳೆ ಸತೀಸುತಾಪ್ತಜನಸಂಯುತನೆಯ್ದಿದನೀಶಲೋಕಮಂ ೧೫

ವ॥ ಅಂತವಂ ನಿಜಪುರಸಪ್ತವೀಥಿಸಮೇತಂ ಕೈಲಾಸಮಂ ಪ್ರವೇಶಿಸಿ ಗಣಾಗ್ರಗಣ್ಯನೆನಿಸಿರ್ದ ನಿಂತಪ್ಪ ಮಹಿಮೆಯುಂ ಚಿರಕಾಲಂ ಬದುಕಿಯುಮಿನ್ನೆವರಮಾನೆಲ್ಲಿಯುಂ ಕಂಡುದಿಲ್ಲೆಂದು ತಾಪಸಂ ಸಿರಿಯಾಳ್ವನ ಮನದನುವಂ ಹಲಾಯುಧನಭಿಪ್ರಾಯಮನಱಿಯಲೆಂದೊರೆಯಲೊಡನಾ ಹಲಾಯುಧನೇಳಿದಂಗೆಲ್ದಿಂತೆಂದು——

ಆ ಯತಿಗೆ (ಭೈರವನಿಗೆ) ಮಗನನ್ನು ಕತ್ತರಿಸಿ ಉಣಲಿಟ್ಟಂಥ ಆ ಸೆಟ್ಟಿಗೆ ಸಮಾನರಾದ (ಭಕ್ತರು) ವರು ಯಾರು ? ೧೪. ಹರನನ್ನು ನಿಂದಿಸಲಾಗಿ ಕಾಟಕೋಟ ಮತ್ತು ಚಂಡೇಶರುಗಳು ಅಧಿಕವಾಗಿ ಉಜ್ವಲಗೊಂಡ ಕೋಪದ ಅತಿಶಯದಿಂದ ತಂದೆಗಳನ್ನೇ ಕೊಂದರು ಎನ್ನುವರು. ಅದು ಆಶ್ಚರ್ಯದ ಮಾತೇ ? ಭೈರವನು ಬೇಡಲಾಗಿ ಮಹೇಶ್ವರ ಭಕ್ತನಾದ ಚಿರುತೊಂಡನು ಪ್ರೀತಿಗೆ ಪಾತ್ರನೂ, ತಪ್ಪನ್ನು ಮಾಡದೆ ಇರುವವನೂ ಆದ ಮಗನನ್ನು ಭರದಿಂದ ಇರಿದು ನೀಡಿದನು. ಈ ಭೂಮಿಯಲ್ಲಿ ಇದು ಅದ್ಭುತವೇ ಸರಿ ! ೧೫. ಪುತ್ರನನ್ನು ತುಂಡುತುಂಡಾಗಿ ಕತ್ತರಿಸಿ, ಪಾಕಮಾಡಿ, ಉಣ್ಣಲು ನೀಡಿ, ಭಕ್ತಿಯಿಂದ ನಮಸ್ಕರಿಸಿ, 'ಮಹೇಶ್ವರನೇ, ಊಟಮಾಡು ಎನ್ನಲು, ಈಗಲೇ ಊಟ ಮಾಡುತ್ತೇನೆ (ಆದರೆ) ನಿನ್ನ ಮಗನನ್ನು ಕರೆ ಎಂದು ಆ ಈಶ್ವರನು ಆಜ್ಞಾಪಿಸಲು ಆಭಕ್ತನು ಕರೆದು ಈಶ್ವರನ ಪ್ರೀತಿಯನ್ನು ಪಡೆಯುತ್ತ-ಸತಿ, ಸುತ, ಆಪ್ತಜನಗಳು ಸಹಿತ ಪ್ರೀತಿಯಿಂದ ಶಿವಲೋಕವನ್ನು ಸೇರಿದನು. ವ॥ ಆ ರೀತಿ ಆ ಚಿರುತೊಂಡನು ತನ್ನ ಪಟ್ಟಣದ ಏಳು ಬೀದಿಗಳು ಸಮೇತವಾಗಿ ಕೈಲಾಸವನ್ನು ಪ್ರವೇಶಿಸಿ, ಗಣಗಳಲ್ಲಿ ಶ್ರೇಷ್ಠನೆಂದು ಎನಿಸಿದ್ದಾನೆ. ನಾನು ಇದುವರೆಗೆ ಬದುಕಿದ್ದರೂ ಈ ರೀತಿಯ ಮಹಿಮೆಯನ್ನು ಎಲ್ಲಿಯೂ ಕಂಡುದಿಲ್ಲ ಎಂದು ಆ ತಾಪಸಿಯು ಸಿರಿಯಾಳ್ವನ ಮನದ ರೀತಿಯನ್ನು ಹಲಾಯುಧನ ಎದುರಿಗೆ ಹೇಳಿ ಅವನ ಮನದ ಅಭಿಪ್ರಾಯವನ್ನು ತಿಳಿಯು

ಶಿವ ಶಿವ ಶಂಭುವೇಂ ಪಸಿಯ ರಕ್ಕಸನೇ ನರದೇಹಮಾಂಸಮಂ
ಸವಿವೊ[1]ಡೆ ಸೆಟ್ಟಿಯೇಂ ಶಿವಪರಾಯಣಸದ್ಗುಣಶೀಲಬಾಲನಂ
ತವಿಪೊಡೆ ಭಕ್ತಿಹೀನನೆಯಿದೇತಱ ಮಾತು ಮಹಾತ್ಮನಾದ ನೀಂ
ವಿವರಿಸದಿಂತುಟೇಂ ನುಡಿಯಲಕ್ಕುಮೆ ನಿನ್ನನದೇನನೆಂದಪೆಂ ೧೬

ನಿನ್ನಯ ನುಡಿಯಂ ತೊದಳೆಂ
ದಾಂ ನುಡಿಯಲ್ಕಶ್ಮೆನಯ್ಯ ಪೇಳ್ದೀ ಮಾತಂ
ಪನ್ನಗಧರ ಭಕ್ತರದೇಂ
ಮನ್ನಿಪರೆ ವಿದಗ್ಧರರಸ ನೀನಱಿಯದುದೇ ೧೭

ವ॥ ಎಂದ ಹಲಾಯುಧಂಗೆ ಚರರೂಪ ಚಂದ್ರಧರನಿಂತೆಂದಂ—

ಪುಸಿಯಲ್ತಲ್ತು ಮದೀಯ ವಾಕ್ಯಮಿದು ಕೇಳ್ ನಿನ್ನಾಣೆ ಭಕ್ತರ್ಗಿದೇಂ
ಪೊಸತೇ ಪೇಳ್ ಚಿಱುತೊಂಡಮಸ್ತಕದೊಳೇಂ ಪುಟ್ಟಿತ್ತೆ ಸದ್ಭಕ್ತಿಸಾ
ಹಸಯುಕ್ತರ್ಶರಣರ್ಕಳೀಯರೆ ವಧೂಪುತ್ರಾತ್ಮರಂ ಶಂಭುಗೀ
ರಸೆಯೊಳ್ಕೇಳ್ದಱಿದಿರ್ದುಮೇಕೆ ತೊದಳೆಂಬೈ ಭಕ್ತಚೂಡಾಮಣೀ ೧೮

ಲೆಂದು ಹೇಳಲಾಗಿ ಕೂಡಲೇ ಹಲಾಯುಧನು ತಿರಸ್ಕರಿಸಿ ಈ ರೀತಿ ಹೇಳಿದನು. ೧೬. ಶಿವಶಿವ ! ಶಂಭುವು ನರದೇಹ ಮಾಂಸವನ್ನು ತಿನ್ನಬೇಕಾದರೆ (ಅವನು) ಹಸಿಯ ರಾಕ್ಷಸನೇ ? ಸಿರಿಯಾಳಸೆಟ್ಟಿಯು ಶಿವನಲ್ಲಿ ಆಸಕ್ತಿಯುಳ್ಳ ಒಳ್ಳೆಯ ಗುಣಗಳೇ ಸ್ವಭಾವವಾಗಿ ಉಳ್ಳ ಬಾಲಕನಾದ ಮಗನನ್ನು ಕೊಲ್ಲಬೇಕಾದರೆ (ಅವನೇನು) ಭಕ್ತಿ ಹೀನನೇ ? ಇದೇತರ ಮಾತು ! ಮಹಾತ್ಮನಾದ ನೀನು ವಿಚಾರಮಾಡದೆ ಹೀಗೆ ಮಾತ ನಾಡುವುದು ಸರಿಯೇ ? ನಿನ್ನನ್ನು ನಾನು ಏನೆಂದು ತಿಳಿಯಲಿ !! ೧೭. ಅಯ್ಯ ನಿನ್ನ ಮಾತನ್ನು ಸುಳ್ಳೆಂದು ಹೇಳಲಿಕ್ಕೆ ನಾನು ಸಮರ್ಥನಾಗಲಾರೆನು. (ನೀನು) ಹೇಳಿದ ಈ ಮಾತನ್ನು ಶಿವನಭಕ್ತರಾದವರು ಸನ್ಮಾನಿಸುವರೇನು ? ವಿದ್ವಾಂಸರ ಒಡೆಯನೇ, (ಇದು) ನೀನು ಅರಿಯದ ವಿಷಯವೇ ! ವ॥ ಹೀಗೆಂದ ಹಲಾಯುಧನ ಮಾತಿಗೆ ಜಂಗಮರೂಪದ ಶಿವನು ಹೀಗೆ ಹೇಳಿದನು. ೧೮. 'ಈ ನನ್ನ ಮಾತು ನಿನ್ನಾಣೆಯಾಗಿ ಸುಳ್ಳಲ್ಲ ಕೇಳು : ಇದು ಭಕ್ತರಿಗೆ ಹೊಸದೇನೂ ಅಲ್ಲ. ಕೇಳು ; ಚಿರುತೊಂಡನೊಬ್ಬನ ತಲೆಯುಲ್ಲಿಯೇ ಹುಟ್ಟಿದ ಆಲೋಚನೆಯಲ್ಲ. ಈ ಭೂಮಿಯಲ್ಲಿ ಸದ್ಭಕ್ತಿಯು ಸಾಹಸ ಯುಕ್ತರಾದ ಶರಣರುಗಳು ಶಂಭುವಿಗೆ ಹೆಂಡತಿ, ಮಕ್ಕಳು ಮತ್ತು ಪ್ರಾಣ ಇವುಗಳನ್ನು ಕೊಡುವುದಿಲ್ಲವೆ ? ಭಕ್ತ ಚೂಡಾಮಣಿಯೇ ನನ್ನ ಮಾತನ್ನು ಕೇಳಿ ತಿಳಿದಿದ್ದೂ ಕೂಡ

1 ದೊ(ಅ)

ಅತಿಶಯ ದುರ್ಲಭವಸ್ತುವ
ನತನುಹರಂ ಬೇಳ್ಪನಲ್ತೆ ಭಕ್ತರನವರು
ನ್ನತಿ ಮಿಗೆ ಕೊಟ್ಟಪರವರಂ
ಸಿತಿಕಂಠಂ ಮೆಱೆವನವನಿಯೊಳ್ಗುಣಭರಣಾ ೧೯

ಧರೆಗೆ ಮೆಱೆದಪೆನಿವರ್ಗಾಂ
ಪರಮುಕ್ತಿಯನೀವೆನೆಂದು ಕೊಲಿಸಿದನೀಶಂ
ತರಳನನಾಗಳೆ ಕರೆಯಿಸಿ
ಬರಿಸಿದನಾ ಗೃಹಕೆ ಶಂಭುಗಾವುದೊ ದೋಷಂ ೨೦

ಒಪ್ಪದ ಮಗನಂ ವಧಿಸಿದೊ
ಡಪ್ಪುದು ಬೊಪ್ಪಂಗೆ ದೋಷಮಳಿಮೀಗೆಳಸು
ತ್ತೊಪ್ಪಿದ ಕುವರನ ವಧಿಸಿದೊ
ಡಪ್ಪುದೆ ಪೇಳ್ದೋಷಮದು ಮಹೀನುತಚರಿತಾ[1] ೨೧

ಎಂದು ಕಪರ್ದಿ ಮಾರ್ನುಡಿಯೆ ಕೇಳ್ದು ಹಲಾಯುಧನುಗ್ರಕೋಪರೂ
ಪಂ ದಳವೇಱೆ ಭಾಪು ಮಗುಳ್ದೆಂತುಟದೆಂತುಟು ಭಕ್ತವತ್ಸಲಂ
ಕಂದನ ಮಾಂಸಮಂ ಬಯಸಿ ಬೇಡಿದನೇ ಶಿವಭಕ್ತ ದಭ್ರಭ
ಕ್ತಂ ದಯೆಗೆಟ್ಟು ಕೊಂದನೆ ಮಹೇಶ್ವರಭಕ್ತನೆನಿಪ್ಪ ಬಾಲನಂ ೨೨

ಏಕೆ ಸುಳ್ಳೆನ್ನುತ್ತೀಯೆ ? ೧೯. ಗುಣಾಭರಣನೇ, ಮನ್ಮಥ ಧ್ವಂಸಿಯಾದ ಶಿವನು, ಭಕ್ತರಲ್ಲಿ ಅತ್ಯಂತ ದುರ್ಲಭವಾದ ವಸ್ತುವನ್ನೇ ಬೇಡುವನಲ್ಲವೆ ? ಆ ಭಕ್ತರೂ ಕೂಡ ಮೀರಿದ ಉನ್ನತಿಯಿಂದ ಕೊಡುವರು. ಅಂಥ ಭಕ್ತರನ್ನು ನೀಲಕಂಠನು ಭೂಮಿಯಲ್ಲಿ ಪ್ರಸಿದ್ಧಪಡಿಸುವನು. ೨೦. ಈಶ್ವರನು ಭೂಮಿಯಲ್ಲಿ (ಇವರನ್ನು) ಪ್ರಸಿದ್ಧಿಗೊಳಿಸುವೆನು ; ಇವರಿಗೆ ನಾನು ಉತ್ಕೃಷ್ಟ ಮೋಕ್ಷವನ್ನು ಕೊಡುವೆನು, ಎಂದು ಮಗನನ್ನು ಕೊಲಿಸಿದನು. (ಪುನಃ) ಆಗಲೇ ಆ ಮನೆಗೆ ಕರೆಸಿದನು. ಶಂಭುವಿಗೆ ದೋಷವಾವುದೋ! (ಗುಣವಾವುದೋ !) ೨೧. ಭೂಜನರಿಂದ ಶ್ಲಾಘಿಸಲ್ಪಡುವ ಚರಿತ್ರೆಯುಳ್ಳವನೇ, ಒಪ್ಪದೆ ಇರುವ ಮಗನನ್ನು ಕೊಂದರೆ ತಂದೆಗೆ ದೋಷವುಂಟಾಗುವುದು ; ಸಾಯುವುದಕ್ಕೆ ಇಚ್ಛಿಸುತ್ತ ಶೋಭಿಸುವ ಮಗನನ್ನು ಕೊಂದರೆ ಅದು ದೋಷವಾಗುವುದೇ ? ಹೇಳು. ೨೨. ಹೀಗೆಂದು ಶಿವನು ಎದುರುತ್ತರ ಕೊಡಲು, ಹಲಾಯುಧನು ಕೇಳಿ, ಭಯಂಕರ ಕೋಪದಿಂದ ಕೂಡಿದ ಆಕಾರವು ದಳವೇರಲಾಗಿ, ಪುನಃ ಆ ಚರರೂಪದ ಶಿವನಿಗೆ—'ಭಲರೇ ! ಅದು ಹೇಗೆ ಸಾಧ್ಯ ! ಹೇಗೆ ಸಾಧ್ಯ ! ಭಕ್ತವತ್ಸಲನಾದ ಶಿವನು ಕಂದನ ಮಾಂಸವನ್ನು ಬಯಸಿ ಬೇಡಿದನೇ ? ಶಿವಭಕ್ತನಾದ ಆ ಸಿರಿಯಾಳನು ದಯಾ

1 ತಂ(ಜ)

ಶಿರವೆಡೆಯೊಳ್ಕನಕದ ಕ
ವ್ಮ್ಮರಲಂ ತಳೆದಿರ್ದು ಮರುಳ ಕೆಳೆಗೊಂಡುದಱಿಂ
ಮರುಳಾದನಭವನಲ್ಲದೊ
ಡರವರಿಸದೆ ಭಕ್ತಸೂನುವಧೆಗೊಲ್ದಪನೇ ೨೩

ಧರೆಗವನಂ ಮೆಱೆವೊಡೆ ತ
ತ್ತರುಣನನಿಕ್ಕೆಂದು ಬೆಸಸೆ ಭಕ್ತಂ ಸುತಕಂ
ಧರಮುನರಿವಾಗಳಾದೊಡ
ಮಿರದೆ ಶಿವಂ ತಾಂ ಪ್ರಸನ್ನನಾಗಲ್ವೇಡಾ . ೨೪

ಮನುಜನನುತನಾಗಿರ್ದುಂ
ಮನುಜನ ಮಾಂಸಮನದೆಂತು[1] ಬಯಸಿದನೀಶಂ
ದನುಜನವೊಲಕಟ ಭಕ್ತನ[2]
ತನುಜನ ವಧೆಗೆಂತು ಚಿತ್ತಮಿತ್ತನೊ ತಿಳಿಯೆಂ ೨೫

ನಿಗಮಂ ತನ್ನಯ ವಾಕ್ಯಮಾಗಿರೆ 'ನ ಹಿಂಸ್ಯಾತ್ಸರ್ವಭೂತಾನಿ'ಯೆಂ
ದು ಗಭೀರೋಕ್ತಿಯನೊಲ್ದು ತಾನೊರೆದುಮುದ್ಯದ್ಧರ್ಮಿಯಾಗಿರ್ದುಮಿೂ

ಹೀನನಾಗಿ ಪರಮೇಶ್ವರನ ಭಕ್ತನೆನಿಸಿದ ಕಂದನನ್ನು ಕೊಂದನೇ ? ೨೩. ಆ ಶಿವನು ತಲೆಯಲ್ಲಿ ಉಮ್ಮತ್ತಿಯ (ಮದಗೊಳಿಕೆಯ ಅಥವಾ ಮದಗುಣಿಕೆಯ) ಸುಗಂಧ ವಿಶಿಷ್ಟವಾದ ಹೂವನ್ನು ಧರಿಸಿದ್ದುದರಿಂದ (ಮತ್ತು) ಭೂತಗಳನ್ನು ಸ್ನೇಹಿತರನ್ನಾಗಿ ಮಾಡಿಕೊಂಡುದರಿಂದ ಹುಚ್ಚನಾದನು. ಅಲ್ಲದಿದ್ದರೆ ತಿಳುವಳಿಕೆಯಿಲ್ಲದೆ ಶಿವಭಕ್ತನ ಮಗನನ್ನು ಕೊಲ್ಲಿಸುವುದಕ್ಕೆ ಒಪ್ಪುತ್ತಿದ್ದನೇ ? ೨೪. ಆ ಭಕ್ತನನ್ನು ಭೂಮಿಯಲ್ಲಿ ಮೆರೆಸಬೇಕಾದರೆ ಅವನ ಮಗನನ್ನು ಕೊಲ್ಲಬೇಕು. ಹಾಗೆಂದು ಶಿವನು ಅಪ್ಪಣೆ ಮಾಡಿದರೆ, ಭಕ್ತನು ಮಗನ ಕುತ್ತಿಗೆಯನ್ನು ಕತ್ತರಿಸುವಾಗಲಾದರೂ ತಪ್ಪದೆ ಶಿವನು ಪ್ರತ್ಯಕ್ಷನಾಗಬೇಡವೇ ? ೨೫. ಈಶ್ವರನು ಮಂತ್ರಗಳಿಂದಲೂ, ಲೋಕದ ಜನಗಳಿಂದಲೂ ಸ್ತೋತ್ರ ಮಾಡಿಸಿಕೊಳ್ಳಲ್ಪಡುವವನಾಗಿ (ಮನುಚಕ್ರವರ್ತಿಯ ವಂಶದವರೆನ್ನುವ ಮನುಷ್ಯರುಗಳಿಂದ ಸ್ತೋತ್ರಮಾಡಿಸಿಕೊಳ್ಳಲ್ಪಡುವವನಾಗಿ) ಇದ್ದುಕೊಂಡೂ, ರಾಕ್ಷಸರುಗಳ ಹಾಗೆ ಮನುವಂಶಪರಂಪರೆಯ ಜನಗಳ ಮಾಂಸವನ್ನು (ಮನುಷ್ಯರ ಮಾಂಸವನ್ನು) ಅದು ಹೇಗೆ ಬಯಸಿದನು ! ಅಯ್ಯೋ ! ಭಕ್ತನಾದವನ ಮಗನ ವಧೆಗೆ ಹೇಗೆ ಮನಸ್ಸು ಮಾಡಿದನೊ ತಿಳಿಯೆನು. ೨೬. ವೇದಗಳು ಅವನ ಮಾತುಗಳೇ ಆಗಿರುವಾಗ, 'ನಹಿಂಸ್ಯಾತ್ ಸರ್ವಭೂತಾನಿ' ಅಂದರೆ ಸಕಲಪ್ರಾಣಿಗಳಲ್ಲಿ ಯಾವುದನ್ನೂ ಕೊಲ್ಲಬಾರದು ಎಂಬ ಗಂಭೀರವಾದ ಮಾತನ್ನು ತಾನೇ ಪ್ರೀತಿಯಿಂದ ಹೇಳಿಯೂ ಕೂಡ, ಉತ್ಕೃಷ್ಟವಾದ ಧರ್ಮ

1 ದು (ದ) 2 ನು (ಜ)

ಮಗುವಂ ಸದ್ಗುಣಿಯಂ ಸ್ವಭಕ್ತರುಚಿಯಂ ವಿಧ್ವಂಸನಂಗೆಯ್ಸುವು
ಜ್ಜುಗಕೊಲ್ದಂ ಗಡ ತನ್ನನೇಂ ನಗರೆ ಸದ್ಭಕ್ತರ್ಮಹೀಭಾಗದೊಳ್ ೨೬

ಚರಲಿಂಗಾಕೃತಿಯಿಂ ಸಹಸ್ರಮುಖದಿಂ ಕ್ಷೀರಾನ್ನಮಂ ಕೊಂಡು ತ
ದ್ವರಭಕ್ತಾಲಯದೊಳ್ಪಳಿಕ್ಕಮವನುದ್ಯದ್ವಂಶಮಂ ಪೆರ್ಚಿಪೊಂ
ದಿರವಂ ಮಾಣ್ದವನಾತ್ಮಜಾತನಡಗಂ ತಾಂ ಭಕ್ಷಿಸಲ್ವೇಡಿ ಸಂ
ಹರಣಂಗೆಯ್ಸಿದನುಗ್ರನಳ್ಕದಪವಾದಕ್ಕೆಂದೊಡೇನೆಂದಪೆಂ ೨೭

ಮಸಣವಟ್ಟೆಯೊಳಾಡಿ ಪೆರ್ಮರುಳೊಂದುಗೂಡಿ ವಿರಾಜಿಸು
ತ್ತಸಮನೇತ್ರದೆ ಲೋಕಮೆಲ್ಲಮನಿಕ್ಕಿದಗ್ಗದ ದೋಷಮಂ
ನಿಸದಮಿೞ ಶಿವಭಕ್ತಮಂದಿರಮೆಯ್ದಿ ನೀಗಲೊಡರ್ಚಿ ದಿ
ಗ್ವಸನನಕ್ಕಟ ಭಕ್ತಪುತ್ರನ ಹಿಂಸೆಗೊಲ್ದನಿದದ್ಭುತಂ ೨೮

ತಿರಿದುಂಡ ಕುಂದು ಚನ್ನನೊ
ಳಿರದೊಡನುಂಡಂದು ಪೋದುದುಮೆಯರಸಂಗಾ
ಮರುಳೊಡನಾಡಿದ ಕಱೆ ಸೌಂ
ದರನೊಡನಾಡಿದುದಱಿಂದೆ ಪರಿದುದು ಪೆಱತೇಂ ೨೯

ವುಳ್ಳವನಾಗಿಯೂ ಕೂಡ ಇದ್ದು ಸದ್ಗುಣಿಯೂ, ತನ್ನ ಭಕ್ತಿಯಲ್ಲಿ ಪ್ರೀತಿಯುಳ್ಳವನೂ ಆದ ಆ ಮಗುವನ್ನು ಕೊಲ್ಲಿಸುವ ಪ್ರಯತ್ನಕ್ಕೆ ಪ್ರೀತಿಸಿದನಲ್ಲವೇ ! ಈ ಭೂಭಾಗದಲ್ಲಿ ಸದ್ಭಕ್ತರು ಅಂಥ ಈಶ್ವರನಿಗಾಗಿ ನಗದೆ ಇರುವರೇ ? ೨೭. ಈಶ್ವರನು ಆ ಶ್ರೇಷ್ಠನಾದ ಭಕ್ತನ ಮನೆಯಲ್ಲಿ ಜಂಗಮಲಿಂಗಾಕೃತಿಯಿಂದ ತನ್ನ ಸಹಸ್ರ ಮುಖಗಳಿಂದ ('ಸಹಶೀರ್ಷಾ ಪುರುಷಃ' ಎಂಬ ವೇದೋಕ್ತಿಯಂತೆ ಅನೇಕ ಮುಖಗಳಿಂದ) ಅನೇಕ ವಿಧವಾದ ಹಾಲು ಅನ್ನವನ್ನು ಸ್ವೀಕರಿಸಿ ಅನಂತರ ಆ ಭಕ್ತನ ಉತ್ಕೃಷ್ಟವಾದ ಸಂತತಿಯನ್ನು ಅಭಿವೃದ್ಧಿಗೊಳಿಸುವ ಒಂದು ರೀತಿಯಲ್ಲಿ ಆಚರಿಸುವುದು ಬಿಟ್ಟು ಅವನ ಮಗನ ಮಾಂಸವನ್ನೇ ತಾನು ತಿನ್ನಲುಬೇಡಿ (ಲೋಕದ) ನಿಂದೆಗೆ ಹೆದರದೆ ಸಂಹಾರಮಾಡಿಸಿದನೆಂದರೆ ಏನು ಹೇಳಲಿ ! ೨೮. ದಿಕ್ಕುಗಳೇ ವಸ್ತ್ರಗಳುಳ್ಳವನಾದ ಈಶ್ವರನು ಶ್ಮಶಾನ ಮಾರ್ಗದಲ್ಲಿರುವ ದೊಡ್ಡ ದೊಡ್ಡ ಪಿಶಾಚಿಗಳೊಡನೆ ಕೂಡಿ ಆಟವಾಡಿ, ವಿರಾಜಿಸುತ್ತ ಅಗ್ನಿನೇತ್ರದಿಂದ ಲೋಕವೆಲ್ಲವನ್ನೂ ನಾಶಗೊಳಿಸಿದ ದೊಡ್ಡ ದೋಷವನ್ನು (ಪಾಪವನ್ನು) ನೀಗಿಕೊಳ್ಳಲು, ಪ್ರಯತ್ನಪಟ್ಟು ನಿಶ್ಚಯವಾಗಿ ಶಿವಭಕ್ತರ ಮನೆಯನ್ನು ಹೊಕ್ಕು, ಭಕ್ತನ ಪುತ್ರನ ಹಿಂಸೆಗೆ ಪ್ರೀತಿಸಿದನು. ಅಕ್ಕಟ ! ಇದು ಅದ್ಭುತ ! ! ೨೯. ಉಮಾಪತಿಯಾದ ಶಿವನಿಗೆ ತಿರಿದು ಊಟಮಾಡಿದ ದೋಷವು ಚೆನ್ನಯ್ಯನೊಡನೆ ಕೂಡಿ ಉಂಡ ದಿನವೇ ಹೋಯಿತು ; ಪಿಶಾಚಿಗಳೊಡನೆ ಆಟವಾಡಿದ ದೋಷವು ಸುಂದರ

ಕರಿಚರ್ಮಾಂಬರಮಂ ಸಡಿಲ್ಚಿ ನವವಾಸೋಧಾರಣಂಗೆಯ್ಸಿದಂ
ವರದಾಸಂ ತಲೆಮಾಲೆಯಂ ಬಿಡಿಸುತುಂ ಬಾಹೂರ ಬೊ[1]ಮ್ಮಯ್ಯ[1]ನಾ
ದರದಿಂ ಕೌಸುಮಮಾಲೆಯಿತ್ತನೊಲಘಾಂಡಾಖ್ಯಂ ಚಿತಾಭಸ್ಮಮಂ
ಪರಮೇಶಂಗೆ ತೆರಳ್ಚಿ ಚಂದನವಿಲೇಪಂಗೆಯ್ದನೀ ಧಾತ್ರಿಯೊಳ್ ೩೦

ಇಂತೆಮ್ಮ ಪುರಾತನರಿಂ
ಕಂತುಹರಂ ಶುದ್ಧನೆನಿಸಿ ಭಕ್ತಾರ್ಭಕನಂ
ತಾಂ ತವಿಪಂತೆಸಗಿದನಿವ
ನಿಂ ತಿಳಿವೊಡೆ ಲೋಕದೊಳ್ಕೃತಘ್ನರುಮೊಳರೇ ೩೧

ನರಮಾಂಸಾರ್ಥಿ ಪುರಾರಿಯೊಲ್ದೆರೆಯೆ ಸಮ್ಯಗ್ವೀರಶೈವವ್ರತಾ
ಚರಣರ್ಮೆಚ್ಚಿ ನಿರೀಕ್ಷಿಸುತ್ತೆ ಶರಣರ್ಕೊಂಡಾಡೆ ನೈಜಾಂಗಭಾ
ಸುರಮಾಂಸವ್ರಜಂ ಸಮರ್ಪಿಸದೆ ತನ್ನಂ ವಂಚಿಸುತ್ತಕ್ಕಟಾ
ಸಿರಿಯಾಳ್ವಂ ಕಡಿದಿಕ್ಕಲಕ್ಕುಮೆ ಶಿವಾಜ್ಞಾಪಾಲನಂ ಬಾಲನಂ ೩೨

ತನಗೆ ಸುತನಾದೊಡೇಂ ಪಾ
ವನಜಂಗಮಮಲ್ತೆ ಶೈವಲಾಂಛನಧರನಾ

ನಂಬಿಯೊಡನೆ ಆಡಿದುದರಿಂದ ನಾಶವಾಯಿತು. ಬೇರೆ ಹೇಳುವುದಿನ್ನೇನಿದೆ ? ೩೦. ಈ ಭೂಮಿಯಲ್ಲಿ ಶ್ರೇಷ್ಠನಾದ ಜೇಡರ ದಾಸಿಮಯ್ಯನು ಪರಮೇಶ್ವರನಿಗೆ ಆನೆಯ ಚರ್ಮದ ಬಟ್ಟೆಯನ್ನು ಬಿಚ್ಚಿಸಿ ಹೊಸ ಬಟ್ಟೆಯನ್ನು ಧಾರಣ ಮಾಡಿಸಿದನು ; ಬಾಹೂರ ಬೊಮ್ಮಯ್ಯನು ಆದರದಿಂದ (ಕೊರಳಲ್ಲಿ ಧರಿಸಿದ) ತಲೆಗಳ ಮಾಲೆಯನ್ನು ತೆಗೆಯಿಸಿ ಹೂವಿನ ಮಾಲೆಯನ್ನು ಕೊಟ್ಟನು (ಹಾಕಿದನು). 'ಎಲಗೊಂಡ'ನೆಂಬ ಹೆಸರುಳ್ಳ ಭಕ್ತನು ಹೆಣದ ಬೂದಿಯನ್ನು ಕೆಡಿಸಿ ಶ್ರೀಗಂಧದ ಲೇಪನಮಾಡಿದನು. ೩೧. ಈ ರೀತಿ ನಮ್ಮ ಪುರಾತನರಿಂದ ಮನ್ಮಥಾರಿಯಾದ ಶಿವನು ಪರಿಶುದ್ಧನೆನಿಸಿ, ತಾನು ಭಕ್ತನ ಕೂಸನ್ನು ಕೊಲ್ಲುವ ಹಾಗೆ ಮಾಡಿದನು. ವಿಚಾರಮಾಡಿದರೆ ಲೋಕದಲ್ಲಿ ಈ ಈಶ್ವರನಿಗಿಂತಲೂ ಮಾಡಿದ ಉಪಕಾರವನ್ನು ಮರೆಯುವವರು (ಕೃತಘ್ನರು) ಉಂಟೆ ? ೩೨. ಪುರಾರಿಯು ಮನುಷ್ಯರ ಮಾಂಸವನ್ನು ಅಪೇಕ್ಷೆ ಮಾಡುವವನಾಗಿ ಪ್ರೀತಿಸಿ ಬೇಡಿದರೆ ಒಳ್ಳೆಯ ವೀರಶೈವ ವ್ರತಾಚಾರ ನಡೆಸುವ ಶರಣರು ನೋಡಿ ಕೊಂಡಾಡುವ ಹಾಗೆ ಆ ಸಿರಿಯಾಳ್ವನು ತನ್ನ ಶರೀರದ ಮನೋಹರವಾದ ಮಾಂಸವನ್ನು ಸಮರ್ಪಣೆ ಮಾಡದೆ ತನ್ನನ್ನು ವಂಚನೆ ಮಾಡಿಕೊಂಡು ಪರಮೇಶ್ವರನ ಆಜ್ಞೆಯನ್ನು ಪಾಲಿಸುವ ಬಾಲಕನನ್ನು ಕಡಿದು ಇಕ್ಕುವುದು ಆದೀತೇ ? ಅಕ್ಕಟಾ !! ೩೩. ತನಗೆ ಮಗನಾದರೇನು ? ಶಿವಸಂಬಂಧವಾದ ಲಾಂಛನವನ್ನು ಧರಿಸಿರುವವನು ಪಾವನ

---

1 ಮ್ಮಾರ್ಯ (ಜ)

ತನನಕಟ ವಧಿಸಿ ಭೈರವ
ಮುನಿಗಿಕ್ಕಿದನಮಮ ಭಕ್ತನಿಂತಿರವೇಡಾ ೩೩

ಶಿಶುಹಿಂಸಾಜನಿತಾಪವಾದಮಕಟೀತಂಗಕ್ಕುಮೀ ಶಂಭು ಕೂ
ರ್ತಶುಭಾರಂಭಮನಿಂತು ಮಾಡಿಸಿದನೆಂದೀ ಲೋಕದೊಳ್ನಾಡೆ ದು
ರ್ಯಶಮೆನ್ನಂ ಬಿಡದೆಂದು ಭೀತಿ ಮಿಗೆ ಬರ್ದಿಂ ಬೇಗದೊಳ್ಪ್ರಾಣದಾ
ಪಶುಪಂ ತಾಂ ಕರೆಯೆಂದು ವೇಣ್ಬರಿಸಿದಂ ಚೀಲಾಳನಂ ಲೀಲೆಯಿಂ ೩೪

ಭಕ್ತಂಗೆ ಹಿತಮನೆಸಗ
ಲ್ಭಕ್ತನನಿರದೆಂತು ಕೊಲಿಸಿದಂ ಪುರಹರನಾ
ಭಕ್ತಂ ಜಂಗಮತೃಪ್ತಿನಿ
ಯುಕ್ತಂ ಜಂಗಮಮನೆಂತು ಕೊಂದನೊ ಬಳಿಯಿಂ ೩೫

ಮಡಿಯಲೆಳಸಿರ್ದೊಡಂ ತ
ನ್ಮೃಡಚಿಹ್ನಾಂಕಿತನನಿಕ್ಕಲಕ್ಕುಮೆ ಸುತನು
ಪೊಡವಿಯೊಳೇತಱ ಭಕ್ತಿಯು
ಪೊಡರ್ಪಿ[1]ದಾತಂಗೆ ಬಲ್ಲರೊಲ್ವ[2]ರೆ ತನ್ನಂ ೩೬

ಜಂಗಮನೇ ಅಲ್ಲವೆ ? ಆತನನ್ನು ಅಯ್ಯೋ ! ಕೊಂದು ಭೈರವ ಮುನಿಗೆ ನೀಡಿದನೊ ! ಅಮಮ ! ಭಕ್ತನೆಂದರೆ ಹೀಗಿರಬೇಡವೇ ? ೩೪. ಈ ಸಿರಿಯಾಳ ಸೆಟ್ಟಿಗೆ ಮಗನನ್ನು ಕೊಂದುದರಿಂದುಂಟಾದ ಲೋಕಾಪವಾದವು ಆಗುವುದು. ಅಕ್ಕಟ ! 'ಈ ಶಂಭುವು ಪ್ರೀತಿಸಿ ಈ ರೀತಿ ಅಶುಭದ (ಅಮಂಗಳದ) ಉದ್ಯೋಗವನ್ನು ಮಾಡಿಸಿದನು.' ಎಂದು ಈ ಲೋಕದಲ್ಲಿ ಅಧಿಕವಾದ ಅಪಕೀರ್ತಿಯು ನನ್ನನ್ನು ಬಿಡುವುದಿಲ್ಲ ಎಂದು ಆ ಪಶುಪತಿಯು ತಾನು ಹೆಚ್ಚಾದ ಭಯದಿಂದ ತಾನು ಸಾಯುವುದಕ್ಕಿಂತಲೂ ಮೊದಲೇ ತಪ್ಪದೆ ಆ 'ಚೀಲಾಳನನ್ನು ಕರೆ' ಎಂದು ಲೀಲೆಯಿಂದ ಮತ್ತೆ ಬರಮಾಡಿಕೊಂಡನು. (ಕರೆಯಿಸಿಕೊಂಡನು) ೩೫. ಪುರಹರನು ಭಕ್ತನಿಗೆ ಹಿತವನ್ನುಂಟುಮಾಡುವುದಕ್ಕೆ ಭಕ್ತನನ್ನು ತಪ್ಪದೆ ಹೇಗೆ ಕೊಲಿಸಿದನು ? ಜಂಗಮನಿಗೆ ತೃಪ್ತಿಪಡಿಸುವುದರಲ್ಲಿ ಆಜ್ಞಪ್ತನಾದ ಆ ಭಕ್ತನು (ಸಿರಿಯಾಳನು) ಅನಂತರ ಜಂಗಮನನ್ನು ಹೇಗೆ ಕೊಂದನೋ ! (ಇಲ್ಲಿ ಭಕ್ತನಾದ ಸಿರಿಯಾಳನೂ ಪರಮೇಶ್ವರನೂ—ಇಬ್ಬರೂ ದೋಷಿಗಳೇ ಎಂದು ಭಾವ) ೩೬. ಸಾಯುವುದಕ್ಕೆ (ಆ ಚೀಲಾಳನು) ಬಯಸಿದರೂ ಕೂಡ ಆ ಶಿವಲಾಂಛನದಿಂದ ಯುಕ್ತನಾದ ಸುತನನ್ನು ಕೊಲ್ಲುವುದಕ್ಕಾದೀತೇ ? ಭೂಮಿಯಲ್ಲಿ ಆ ಸಿರಿಯಾಳನಿಗೆ ಮಗನನ್ನು ಕೊಲ್ಲುವ ಈ ಕಾರ್ಯ ಯಾವ ರೀತಿಯ ಭಕ್ತಿಯ ಆಧಿಕ್ಯ ? ಅವನನು

---

1 ರ್ಪಿಂ (ಗ) 2 ಲ್ದ (ದ)

ಎಳೆಗೂಸಂ ಕೊಲ್ವುದುಂ ಮೆಲ್ವುದುಮಿಳೆಯೊಳನಾಚಾರಮಿಂತಪ್ಪ ಕೃತ್ಯ
ಕ್ಕೆಳಸುತ್ತುಂ ಮಾಳ್ಪವರ್ದಾನವರವರನದೇನೊಲ್ವರೇ ಭಕ್ತರೀ ದು
ಷ್ಟ್ರಳರಿರ್ವರ್ತತ್ಕಥಾವಿಸ್ತರಮನೊರೆವವರ್ಕೇಳ್ವವರ್ಶಂಭುಭಕ್ತ
ಗೊರ್ಳಗಲ್ಲಲ್ತೆಂದವಂ ತಾಂ ಪೊಜಗೆನುತಧಟಂ ಡಂಗುರಂಬೊಯ್ದನಾಗಳ್ ೩೭

ವ॥ ಇಂತು[1]ಮಾ[1] ಹಲಾಯುಧಭಕ್ತನಾಕ್ಷೇಪದಿಂ ಬಹಿಷ್ಕರಿಸೆ ಶಂಕರಂ ಬಿಗುರ್ತು ಭೀತಿಯಿಂ ಮುಂದುಗೆಟ್ಟು ಕಡುನಡುಗುವ ಚಿಱುತೊಂಡಗಂಜದಿರೆಂದು ಮೆಲ್ಲನೆ ಸಂತವಿಸಿ ನಿಜಾಂಗನೆಯೆನಿಪ ಸರ್ವಮಂಗಳೆಯುಂ ನೆನೆದು ಚಂಗಳೆವೆರಸಿ ಬರಿಸೆ ತಪಸ್ವಿನೀ ವೇಷಮನಾ ದೇವಿ ತಳೆದೇಳ್ತಂದು ಹಲಾಯುಧನ ಮುಂದೆ ನಿಲ್ವುದುಮಾಗಳಾ ಭಕ್ತನಿದಿರೇಳ್ದಭಿವಂದಿಸಿ ಸಮುಚಿತಸತ್ಕಾರಮಂ ನೆಗಳ ಲೊಡನೆ ಕೆಯ್ಕೊಳುತ್ತುಮಪರ್ಣೆಯಿಂತೆಂದಳ್—

ತಿಳಿದವರು ಒಪ್ಪುವರೇ ? ೩೭. ಎಳೆಯ ಕೂಸನ್ನು ಕೊಲ್ಲುವುದು, ಅದನ್ನು ತಿನ್ನುವುದು–(ಇವೆರಡೂ) ಭೂಮಿಯಲ್ಲಿ ಅನಾಚಾರವೆನಿಸುವುವು. ಇಂತಹ ಕಾರ್ಯಕ್ಕೆ ಅಪೇಕ್ಷಿಸುತ್ತ ವ್ಯವಹರಿಸುವವರು ರಾಕ್ಷಸರು. ಅವರನ್ನು ಭಕ್ತರೆನಿಸಿದವರು ಪ್ರೀತಿಸುವುದಿಲ್ಲ. 'ಈ ಕೆಟ್ಟ ನೀಚರಾದ ಈಶ್ವರ ಮತ್ತು ಸಿರಿಯಾಳ ಸೆಟ್ಟಿಗಳಿಬ್ಬರೂ, ಇವರ ಈ ಕಥೆಯು ವಿಸ್ತಾರವನ್ನು (ಕಥಾ ವೃತ್ತಾಂತವನ್ನು) ಹೇಳುವವರು, ಕೇಳುವವರು ಪರಮೇಶ್ವರನ ಭಕ್ತರ ಗುಂಪಿನಲ್ಲಿ ಸೇರಿದವರು ಅಲ್ಲ ! ಅಲ್ಲ !! ಅವರು ಹೊರಗೆ ಎಂದು ಆ ಹಲಾಯುಧನು ಊರಲ್ಲಿ ಧೈರ್ಯದಿಂದ ಆಗಲೇ ಡಂಗುರವನ್ನು ಹೊಡೆದನು. ವ॥ ಈ ರೀತಿ ಹಲಾಯುಧ ಭಕ್ತನು ಆಕ್ಷೇಪಣೆ ಮಾಡಿ (ಶಿವ ಮತ್ತು ಸಿರಿಯಾಳ ಸೆಟ್ಟಿಗಳನ್ನು) ಶಿವ ಭಕ್ತರಿಂದ ಹೊರಗೆಂದು ಬಹಿಷ್ಕಾರ ಹಾಕಲು ಶಂಕರನು ಭಯಗೊಂಡನು. ಭೀತಿಯಿಂದ ಬುದ್ಧಿ ತೋಚದವನಾಗಿ ಬಹಳವಾಗಿ ನಡುಗುತ್ತಿದ್ದ ಚಿರು ತೊಂಡನಿಗೆ ಹೆದರಬೇಡ ಎಂದು ಮೆಲ್ಲನೆ ಸಮಾಧಾನಪಡಿಸಿ, ತನ್ನ ಅಂಗನೆಯಾದ ಪಾರ್ವತಿಯನ್ನು ಸ್ಮರಿಸಿಕೊಂಡು ಸಿರಿಯಾಳ ಪತ್ನಿಯಾದ ಚಂಗಳೆಯೊಡನೆ (ತಾನಿದ್ದಲ್ಲಿಗೆ) ಬರಮಾಡಿಕೊಂಡನು. ಆ ದೇವಿಯು ತಪಸ್ವಿನಿಯ ವೇಷ ಧರಿಸಿ ಬಂದು ಹಲಾಯುಧನ ಮುಂದೆ ನಿಲ್ಲುತ್ತಲೇ ಆ ಭಕ್ತನು ಆಗ ಇದಿರುಗೊಳ್ಳುವುದಕ್ಕೋಸ್ಕರ ಎದ್ದು ಅಭಿವಂದಿಸಿ ತತ್ಕಾಲೋಚಿತವಾದ ಪೂಜೆಯನ್ನು ಮಾಡಲು ಅಪರ್ಣೆಯು ಅದನ್ನು ಸ್ವೀಕರಿಸಿದವಳಾಗಿ ಹೀಗೆ ಹೇಳಿದಳು : ['ಅಪರ್ಣಾ' ಈಶ್ವರನನ್ನು ಕುರಿತು ಪಾರ್ವತಿಯು ತಪಸ್ಸು ಮಾಡುವ ಕಾಲದಲ್ಲಿ ಮರದ ಎಲೆಗಳನ್ನೂ ಕೂಡ ತಿನ್ನದೆ ತಪಸ್ಸು ಮಾಡುತ್ತಿದ್ದ ಕಾರಣ ಅ + ಪರ್ಣಾ–ಎಲೆಗಳನ್ನು ತಿನ್ನದವಳು ಎಂಬ ಹೆಸರು.]

---

1 × (ಜ)

ಎಲೆ ಹಲಾಯುಧ ಭಕ್ತ ಭಕ್ತರೊಳಗ್ರಗಣ್ಯನೆನಿಪ್ಪ ನೀ
ನಲಸದೀವೆ ಸಮಸ್ತ ಭಕ್ತರಭೀಷ್ಟವಸ್ತುವನೀ ಧರಾ
ವಲಯದಲ್ಲಿ ನಿತಾಂತಮಂತಱಿನೆನ್ನಭೀಷ್ಟಮನೀವುದೆಂ
ದೊಲವಿನಿಂ ಜಗದಂಬೆ ಬೇಡಿದೊಡೆಂದನಂದು ಹಲಾಯುಧಂ ೩೮

ಶರಣ[1]ಗಣ[1]ಪದರಜಃಕಣ
ಪರಮಾಣುನಿಭಂ ಭವನ್ಮನೋರಥದೊಳ್ಪಂ
ದೊರೆಕೊಳಿಪೊಡೆನಿತಱವನಾಂ
ಧರಣಿಯೊಳೆಲೆ ಜನನಿ ಶರಣಗಣಮೊಗುಮುದಂ ೩೯

ವ॥ ಎಂದ ಹಲಾಯುಧನ ನಿರ್ಮದೋಕ್ತಿಯನಪರ್ಣೆಯಾಕರ್ಣಿಸಿ—

ಪತಿಯೆ ಗತಿ ಸತಿಗವಂ ನಿ
ರ್ಗತಿಯಾದೊಡೆ ಬಾಳ್ವಳೆಂತು ಸತಿ ಲಕ್ಷ್ಮೀ-ಭಾ
ರತಿಯರವೊಲನ್ಯಪುರುಷಾ
ಶ್ರಿತತ್ವದಿಂ ಬಾಳಲಾರ್ಪಳೇ ವಸುಮತಿಯೊಳ್ ೪೦

ಪತಿ ಸದ್ಬಾಹಿರನಾಗೆ ಹಾನಿ ಸತಿಗಕ್ಕುಂ ಭಕ್ತ ನಿನ್ನಂಘ್ರಿಗಾ
ನತೆಯಾಗಿರ್ಪಳೆ ದಭ್ರಭಕ್ತವಧುವಾಂ ಶರ್ವಾಣಿಯೀ[2] ತಾಪಸೋ

೩೮. ಎಲೈ ಹಲಾಯುಧ ಭಕ್ತನೇ, ಭಕ್ತರಲ್ಲಿ ಅಗ್ರಗಣ್ಯನೆನಿಸಿದ ನೀನು ಈ ಭೂಮಂಡಲದಲ್ಲಿ ಸಮಸ್ತ ಭಕ್ತರ ಅಭೀಷ್ಟ ವಸ್ತುವನ್ನು ಆಲಸ್ಯ ಮಾಡದೆ ಶೀಘ್ರವಾಗಿ ಕೊಡುವವನು. ಆದ್ದರಿಂದ ನನ್ನ ಅಭೀಷ್ಟವನ್ನು ನೆರವೇರಿಸುವುದು, ಎಂದು ಪ್ರೀತಿಯಿಂದ ಜಗನ್ಮಾತೆಯಾದ ಪಾರ್ವತಿಯು ಬೇಡಲಾಗಿ ಆಗ ಹಲಾಯುಧನು ಹೀಗೆ ಹೇಳಿದನು. ೩೯. ಎಲೈ ಜನನಿಯೇ, ಶಿವಶರಣರ ಸಮೂಹದ ಪಾದ ಧೂಳಿಯ ಪರಮಾಣುವಿಗೆ ಸಮಾನನಾದ ನಾನು ನಿನ್ನ ಇಚ್ಛೆಯ ಸುಖವನ್ನು ನೆರವೇರಿಸಿ ಕೊಡಬೇಕಾದರೆ, ಈ ಭೂಮಿಯಲ್ಲಿ ನಾನೆಷ್ಟರವನು ? ಆ ನಿನ್ನ ಮನೋರಥವನ್ನು (ನಮ್ಮ) ಶರಣರ ಸಮೂಹವು ನಡೆಸಿಕೊಡುವುದು, ವ॥ ಹೀಗೆಂದ ಹಲಾಯುಧನ ಗರ್ವಹೀನವಾದ ಮಾತನ್ನು ಅಪರ್ಣೆಯು ಕೇಳಿ ೪೦. ಪತಿವ್ರತೆಯಾದವಳಿಗೆ ಪತಿಯೇಗತಿ· ಅಂಥ ಪತಿಗೆ ನಿರ್ಗತಿ ಸ್ಥಾನವುಂಟಾದರೆ (ಅವನ ಆ ಸತಿಯು) ಹೇಗೆ ಬದುಕುವಳು. (ಈ) ಭೂಮಂಡಲದಲ್ಲಿ ಲಕ್ಷ್ಮಿ, ಸರಸ್ವತಿಯರ ಹಾಗೆ ಮತ್ತೊಬ್ಬ ಪುರುಷರ ಆಶ್ರಯಿಸುವಿಕೆಯಿಂದ ಬಾಳಲು ಸಮರ್ಥಳಾಗುವಳೇ ? [ಲಕ್ಷ್ಮಿಯು ಅರಸರನ್ನು, ಸರಸ್ವತಿಯು ವಿದ್ವಾಂಸರನ್ನು ಆಶ್ರಯಿಸಬಲ್ಲರೆಂದು ಭಾವ] ೪೧. ಪತಿಯು ಸತ್ಪುರುಷರಿಗೆ ಹೊರಗಾದವನಾದರೆ ಸತಿಗೆ ಭಂಗವುಂಟಾಗುವುದು. ಭಕ್ತನೇ, (ಇಗೋ ಈ) ನಿನ್ನ ಪಾದಕ್ಕೆ ನಮಸ್ಕರಿಸಿ ಇರುವ ಇವಳೇ ಸಿರಿಯಾಳನ ಹೆಂಡತಿಯಾದ ಚಂಗಳಾ

---

1 ಜನ (ಜ) 2 ಯಾ (ಮು, ಜ)

ನ್ನತನಸ್ಮೃತ್ಪತಿಯಾತನಲ್ತೆ ಚಿಱುತೊಂಡಂ ಕೇಳ್ವುದಾವಿರ್ವರುಂ
ಪತಿಭಿಕ್ಷಾರ್ಥವೊಱಲ್ದು ನಿನ್ನ ಸಭೆಗಿಂದೇಳ್ತಂದೆವೌತ್ಸುಕ್ಯದಿಂ ೪೧

ವ॥ ಎಂಬುದಂ ಕೇಳ್ದಾ ಹಲಾಯುಧಸಭಾಜನಂ ಕುತೂಹಲಭಾಜನವಾಗಿ ನೋಡುತ್ತುಮಿರೆ 'ಪತಿಭಿಕ್ಷಾಂ ದೇಹಿ'ಯೆಂಬ ಚಂಗಳೆಯ ಸರ್ವಮಂಗಳೆಯ ದೈನ್ಯೋಕ್ತಿಯುಂ ಮನದೆಗೊಂಡು ಶಿವಗಣಸಮನ್ವಿತನಾ ಹಲಾಯುಧಂ ದೇವಂಗಮಾ ಭಕ್ತಂಗಮಭಯದಾನಂಗೆಯ್ದಿರ್ವರಂ ಬರಿಸಲೊಡನೆ—

ಆ ಸಮಯದೊಳತಿಸಂಭ್ರಮಮೆಸೆದಿರೆ
ಭಾಸುರ ಸುರದುಂದುಭಿ ಮೊಳಗುತ್ತಿರೆ
ಸುರಿಯೆ ಸುರಾಗಮ ಸುಮನೋವರ್ಷಂ
ಧರೆಯೊಳುಮಾಪತಿಗಣಮತಿ ಹರ್ಷಂ
ಮಿಗೆ ನೋಡುತ್ತಿರೆ ನಗಸುತೆಯೋಪಂ
ಸೊಗಯಿಸಿ ತೋಱಿಸಿದಂ ನಿಜರೂಪಂ
ಜಡೆಮುಡಿ ಬಾಂಬೊಳೆ ಶಶಿಕಳೆ ಮೆಱೆದಿರೆ
ತೊಡರ್ದಹಿಕುಂಡಳಮಂಡಳಮಮರ್ದಿರೆ
ನಗೆಮೊಗಮಿನಶಶಿಹುತವಹನೇತ್ರಂ
ಬಗೆಗೊಳೆ ಕಱಿಗೊರಲಹಿಪತಿಸೂತ್ರಂ
ವರಮಭಯಂ ಮೃಗಮತುಳ ಕುಠಾರಂ
ಕರಮೊಪ್ಪುತ್ತಿರೆ ಕರದೊಳುದಾರಂ
ಮದಗಜದಜಿನದ ಪೊದಕೆಯ ಳುಂಬಂ

ದೇವಿ; ನಾನೇ ಪಾರ್ವತಿ ; ಈಶ್ವರನ ಹೆಂಡತಿ. ಈ ತಾಪಸೋತ್ತಮನ ವೇಷದಲ್ಲಿರುವವನೇ ನನ್ನ ಪತಿ (ಶಿವನು). ಅವನೇ ಚಿರುತೊಂಡನು ಅಲ್ಲವೇ ? ಕೇಳು : ನಾವೀರ್ವರೂ ಪತಿಭಿಕ್ಷೆಗಾಗಿ ನರಳುತ್ತ ನಿನ್ನ ಈ ಸಭೆಗೆ ಇಂದು ಕುತೂಹಲದಿಂದ ಬಂದಿದ್ದೇವೆ. ವ॥ ಹೀಗೆಂದು ಅಪರ್ಣೆಯು ಹೇಳಿದ ಮಾತನ್ನು ಕೇಳಿದ ಆ ಹಲಾಯುಧನ ಸಭಾಜನತೆಯು ಕುತೂಹಲದಿಂದ ಕೂಡಿದವರಾಗಿ ನೋಡುತ್ತ ಇರಲು 'ಗಂಡನ ಭಿಕ್ಷೆಯನ್ನು ಕೊಡು' ಎಂಬ ಚಂಗಳೆ ಮತ್ತು ಸರ್ವ ಮಂಗಳೆಯರ ದೈನ್ಯದ ನುಡಿಯನ್ನು ಮನಸ್ಸಿನಲ್ಲಿ ಆಲೋಚಿಸಿ ಶಿವಗಣ ಸಮನ್ವಿತನಾದ ಹಲಾಯುಧನು ಈ ಈಶ್ವರನಿಗೂ, ಆ ಭಕ್ತನಾದ ಚಿರುತೊಂಡನಿಗೂ ಅಭಯ ದಾನವನ್ನು ಮಾಡಿ ಇಬ್ಬರನ್ನೂ (ಸಭೆಗೆ) ಬರಮಾಡಿದೊಡನೆಯೇ. ಮಂದಾನಿಲ ರಗಳೆ ಆ ಸಮಯದಲ್ಲಿ ಅತ್ಯಂತ ಸಂಭ್ರಮವುಂಟಾಯಿತು. ಶ್ರೇಷ್ಠವಾದ ದೇವ ದುಂದುಭಿಗಳು ಮೊಳಗಿದವು. ಕಲ್ಪವೃಕ್ಷದ ಪುಷ್ಪವೃಷ್ಟಿಯು ಸುರಿಯಿತು. ಭೂಮಿಯಲ್ಲಿ ಶಿವಭಕ್ತರ ಸಮೂಹವು ಅತ್ಯಂತ ಹರ್ಷ

ಸದಮಳ ನಿಜತನುಕಿರಣಕದಂಬಂ
ಮಿಸುಗೆ ವಿರಾಜಿಸಿದಂ ವೃಷವಾಹಂ
ಪೊಸತೆನೆ ಬಂದುದು ದಿವಿಜಸಮೂಹಂ
ಹರಿ ವಿಧಿ ಸುರಪತಿ ಶಿಖಿ ಯಮ ದನುಜರ್
ವರುಣ ಪವನ ಧನಪತಿ ಶೂಲಭುಜರ್
ಸುರ ಕಿನ್ನರ ಕಿಂಪುರುಷ ನಿಕಾಯಂ
ಗರುಡೋರಗ ಸಿದ್ಧರ ಸಮುದಾಯಂ
ಮನು ಮುನಿ ರವಿ ಶಿಖಿ ಶಶಿ ವಸು ವಿಸರಂ
ಘನ ನಿಗಮಾಗಮ ಪುರುಷಪ್ರಸರಂ
ನೆಗಳ್ದಾಡುವ ಸುರಲಲನೆಯುರಂದಂ
ಮಿಗೆ ಪಾಡುವ ಗಂಧರ್ವರ ಬೃಂದಂ
ಬಳಸಿರೆ ನಾನಾವಾದ್ಯನಿನಾದಂ
ವಿಳಸಿತ ಸಂಗೀತದ ಮೃದುನಾದಂ
ಜಯರವಮುಖರಮುಖಾಮರನಿಕರಂ
ನಿಯುತಪ್ರಥಿತ ಪ್ರಮಥಪ್ರಕರಂ
ತೆಱಪಱಿದೆತ್ತಂ ತುಱುಗಿರೆ ಸುತ್ತಂ

ದಿಂದ ನೋಡತೊಡಗಿತು. (ಹೀಗಿರಲು) ಪಾರ್ವತೀಪತಿಯಾದ ಶಿವನು ಸೊಗಸಾದ ನಿನ್ನ ನಿಜ ರೂಪವನ್ನು ತೋರಿಸಿದನು. ಜಡೆಮುಡಿ, ಆಕಾಶಗಂಗೆ, ಚಂದ್ರಕಳೆಗಳು ಕಿವಿಯಲ್ಲಿ ಸಿಲುಕಿಸಿಕೊಂಡ ಸರ್ಪದ ಕುಂಡಲಗಳು ಶೋಭಿಸಿದ್ದವು. ನಗೆಮುಖ, ಸೂರ್ಯ ಚಂದ್ರಾಗ್ನಿ ನೇತ್ರಗಳು ಮನೋಹರವಾಗಿದ್ದವು. ನೀಲಕಂಠ, ಆದಿಶೇಷನ ಯಜ್ಞೋಪವೀತ, ವರಪ್ರದಾನದ, ಅಭಯಪ್ರದಾನದ, ಜಿಂಕೆ, ಅಸದೃಶ ಪರಶು–ಇವುಗಳು ಕೈಯಲ್ಲಿ ಚೆನ್ನಾಗಿ ಒಪ್ಪಿದ್ದವು. (ಆ) ಉದಾರನಾದ ಶಿವನ ಮದಗಜದ ಚರ್ಮದ ಹೊದಿಕೆಯ ಆಧಿಕ್ಯವೂ ಸಮೀಚೀನವೂ ನಿರ್ಮಲವೂ ಆದ ದೇಹ ಕಾಂತಿಯ ಸಮೂಹವೂ ಪ್ರಕಾಶಿಸಿತು. (ಹೀಗೆ ಆ) ವೃಷಭ ವಾಹನನಾದ ಶಿವನು ಶೋಭಿಸಿದನು. ದೇವತೆಗಳ ಸಮೂಹವು ನೂತನವೆನ್ನುವಂತೆ ಬಂದಿತು. ವಿಷ್ಣು, ಬ್ರಹ್ಮ, ದೇವೇಂದ್ರ, ಅಗ್ನಿ, ಯಮ, ದನುಜರು, ವರುಣ, ವಾಯು, ಕುಬೇರ, ಈಶಾನರುಗಳು(ಇತರ) ದೇವತೆಗಳು,'ಕಿನ್ನರರು, ಕಿಂಪುರುಷರುಗಳ ಸಮೂಹ, ಗರುಡ, ಗಂಧರ್ವ, ಸಿದ್ಧರುಗಳ ಸಮುದಾಯವೂ, ಮನುಗಳು, ಮುನಿಗಳು, ಅಗ್ನಿ, ಚಂದ್ರ, ಸೂರ್ಯ, ಅಷ್ಟವಸುಗಳು, ಶ್ರೇಷ್ಠ ವೇದ ಪುರುಷರ ಆಗಮ ಪುರುಷರ ಸಮೂಹವೂ ಸೇರಿತು. ಪ್ರಸಿದ್ಧವಾಗಿ ನಾಟ್ಯಮಾಡುವ ದೇವತಾ ಸ್ತ್ರೀಯರಿದ್ದ ರೀತಿ, ಹಾಡುವ ಗಂಧರ್ವರ ಸಮೂಹ ಗುಂಪು ಗೂಡಿ ಸುತ್ತುವರೆದು

ಗುಣಮಣಿಹಾರಂ ಪ್ರಣವಾಕಾರಂ
ವಿತರಣಶೀಲಂ ನುತಗಣಪಾಲಂ
ಗಿರಿವರಚಾಪಂ ಮುರರಿಪುರೋಪಂ
ವೃಜಿನವಿಭಂಗಂ ವಿಜಿತಾನಂಗಂ
ಭವಮೃತಿದೂರಂ ಭುವನಾಧಾರಂ
ಕರುಣಾಪಾಂಗಂ ಗಿರಿಜಾರ್ಧಾಂಗಂ
ಸುರುಚಿಕಪರ್ದಂ ಕರಮೆಸೆದಿರ್ದಂ

ಸಿರಿಯಾಳ್ವನ ಚೋಳನ ಭೂ
ವರ ಚೇರಮನಮಳಚರಿತಮುಂ ಗಾಯಕರ
ಚ್ಚರಿ ವಿಗೆ ಪಾಡುತ್ತಿರ್ದ
ರ್ಪುರಹರನ[1]ಗ್ರಪ್ರದೇಶದೊಳ್ಪಿಡದಾಗಳ್ ೪೨

ಕಟ್ಟಿದಿರಲ್ಲಿ ಕಂಗೊಳಿಪ ಕಾಯಜವೈರಿಯ ದಿವ್ಯಮೂರ್ತಿಯಂ
ನೆಟ್ಟನೆ ಕಂಡು ಪೊಂಪುಳಿಯನಾಳ್ದು ವಿಲೋಚನದಿಂ ಸುಖಾಶ್ರುಗಳ್

ಸೇರಿತು. ನಾನಾ ವಿಧವಾದ ವಾದ್ಯಗಳ ಧ್ವನಿಯೂ, ಮನೋಹರವಾದ ಸಂಗೀತದ ಕೋಮಲ ಶಬ್ದವೂ, 'ಜಯಜಯ' ಎಂಬ ಧ್ವನಿಯಿಂದ ಶಬ್ದ ಮಾಡುತ್ತಿರುವ ಮುಖಗಳುಳ್ಳ ದೇವತೆಗಳ ಸಮೂಹವೂ, ನಿಶ್ಚಿಂತರಾಗಿ (ನಿಂತಿದ್ದ) ಪ್ರಸಿದ್ಧರಾದ ಪ್ರಮಥರ ಸಮೂಹವೂ, ಪ್ರಸಾರಗೊಂಡು ಎಲ್ಲ ಕಡೆಗೂ ಸುತ್ತಿಕೊಂಡು ತುಂಬಿ ನಿಂತಿತ್ತು. ಸದ್ಗುಣಗಳೆಂಬ ರತ್ನಗಳೇ ಹಾರವಾಗಿ ಉಳ್ಳ ಓಂಕಾರ ಸ್ವರೂಪನೂ, ದಾನಗುಣವೇ ಸ್ವಭಾವವಾಗಿ ಉಳ್ಳವನೂ, ಶ್ಲಾಘ್ಯವಾದ ಗಣಂಗಳನ್ನು ಸಂರಕ್ಷಿಸುವವನೂ, ಮೇರು ಪರ್ವತವೇ ಧನುಸ್ಸಾಗಿ, ವಿಷ್ಣುವೇ ಬಾಣವಾಗಿ ಉಳ್ಳವನೂ, ಪಾಪ ನಾಶಕನೂ, ಮನ್ಮಥನನ್ನು ಜಯಿಸಿದವನೂ, ಜನನ ಮರಣ ದೂರನೂ, ಪ್ರಪಂಚಕ್ಕೆ ಆಶ್ರಯನೂ, ಕರುಣೆಯಿಂದ ಕೂಡಿದ ಕಡೆಗಣ್ಣಿನ ನೋಟವುಳ್ಳವನೂ, ಪಾರ್ವತಿಯೇ ದೇಹಾರ್ಧವಾಗಿ ಉಳ್ಳವನೂ, ಸಮೀಚೀನವಾದ ಕಾಂತಿಯಿಂದ ಕೂಡಿದ ಜೆಡೆಯುಳ್ಳ ಶಿವನು ಚೆನ್ನಾಗಿ ಶೋಭಿಸಿದನು. ೪೨. ಆಗ ಶಿವನ ಮುಂದುಗಡೆಯಲ್ಲಿ ಗಾಯಕರುಗಳು ಸಿರಿಯಾಳನ, ಚೋಳನ, ಭೂಪಾಲನಾದ ಚೇರಮರಾಯನ ಶ್ರೇಷ್ಠ ಚರಿತ್ರೆಯನ್ನು ಹೆಚ್ಚಾದ ಆಶ್ಚರ್ಯವುಂಟಾಗುವಂತೆ ಹಾಡುತ್ತಿದ್ದರು. ೪೩. ಮುಂಭಾಗದಲ್ಲಿ ಕಂಗೊಳಿಸುವ ಈಶ್ವರನ ದಿವ್ಯಮೂರ್ತಿಯನ್ನು ಆ ಪಲಾಯುಧನು ಚೆನ್ನಾಗಿ ನೋಡಿ, ರೋಮಾಂಚನವನ್ನು ಹೊಂದಿ, ಕಣ್ಣುಗಳಿಂದ ಆನಂದಬಾಷ್ಪಗಳನ್ನು ತೊಟ್ಟು ತೊಟ್ಟಾಗಿ ಸುರಿಸು

---

1 ನು (ಜ)

ತೊಟ್ಟಿಡೆ ಗದ್ಗದಂ ನೆಗೆಯೆ ಮೆಯ್ಬೆವರೇಱೆ ಕರಾಗ್ರಕಂಪನಂ
ಪುಟ್ಟೆ ಸುಭಕ್ತಿಯಿಂದೆಱಗಿದಂ ಹರನಂಘ್ರಿಯೊಳಾ ಹಲಾಯುಧಂ ೪೩

ಪರಮ ಕೃಪಾಸಮುದ್ರ ಫಣಿರಾಜವಿಭೂಷಣ ಬಾಲಚಂದ್ರಶೇ
ಖರ ಭವಹಾರಿ ಮಂತ್ರಮಯರಮ್ಯಕಳೇವರ ಶರ್ವ ಷಣ್ಮುಖಾ
ದರ ಸಹಜಪ್ರಕಾಶಳಳಿತಾಕ್ಷರಮೂರ್ತಿ ನಗೇಂದ್ರಕನ್ಯಕಾ
ವರ ಶರಣಾಗೆನುತ್ತೆ ನುತಿಗೆಯ್ದೆಱಗಿರ್ದನನಪ್ಪಿದಂ ಶಿವಂ ೪೪

ವ|| ಅಂತು ನಿಜಭುಜದಿಂ ತೆಗೆದು ಬಿಗಿಯಪ್ಪಿ ಗಣನಿವಹದೊಳಣೆಯರಂ ಕೊಂಡಾಡಿ ದಿನಮಣಿಯಃನಣಕಿಪ ಘೃಣಿಗಣಮಹಿತಮಣಿಮಯಪುಷ್ಪಕದೊಳವನಾಳ್ವ ನವಪುರ ಸಮೇತಮಾ ಹಲಾಯುಧನಂ ಕುಳ್ಳಿರಿಸಿ ಗಿರಿಜಾಪತಿ ಪರಮೋತ್ಸವದಿಂ ದಿವಿಜರುಘೇಯೆನೆ ರಜತಾಚಲಕ್ಕೆ ಕೊಂಡೊಯ್ದು ತನ್ನನಿತ್ತು ಮನ್ನಿಸಿದನಾಗಳ್—

ಸಿರಿಯಾಳ್ವಂಗಾದಹಂಕಾರಮಂನುಡುಗಿಸಲೆಂದಿಂತು ಗೆಯ್ದಂ ಗಡಾ ಶಂ
ಕರನೀ ಭೂಲೋಕದೊಳ್ಮೇಣದಱಿನಮಳ ಭಕ್ತರ್ಗಣಂ ಸಲ್ಲದೀ ದು
ಸ್ತರ ಗರ್ವಂ ಕೇಳ್ವುದೆಂದಿಂತೊರೆದ ವರದ ಮಾಚಾರ್ಯನಂಘ್ರಿದ್ವಯಕ್ಕಾ
ದರದಿಂದಂ ವಂದಿಸುತ್ತುಂ ನುತಿಸುತೆಸೆದನಾನಂದಸಾಂದ್ರಂ ವೃಷೇಂದ್ರಂ ೪೫

ತ್ತಿದ್ದನು. ಗದ್ಗದವಾದ ಕಂಠಧ್ವನಿಯುಂಟಾಯಿತು. ಮೈ ಬೆವರೇರಿತು. ಕೈಗಳು ನಡುಗತೊಡಗಿದವು. (ಈ ರೀತಿಯ ಅವನು) ಶಿವನ ಪಾದಗಳಲ್ಲಿ ನಮಸ್ಕರಿಸಿದನು. ೪೪. ಪರಮಕೃಪಾ ಸಮುದ್ರನೇ, ಆದಿಶೇಷ ಭೂಷಣನೇ, ಬಾಲಚಂದ್ರ ಧರನೇ, ಪಾಪನಾಶಕನೇ, ಮಂತ್ರ ಸ್ವರೂಪನೇ, ಮನೋಹರ ಶರೀರಿಯೇ, ಶರ್ವನೇ, ಷಣ್ಮುಖ ಪ್ರಿಯನೇ, ಸಹಜ ಪ್ರಕಾಶಮಯನೇ, ಮನೋಹರವಾದ ನಾಶರಹಿತವಾದ ಶರೀರಿಯೇ, ಗಿರಿಜಾಪತಿಯೇ, ನನಗೆ ಸಂರಕ್ಷಕನಾಗು, ಎನ್ನುತ್ತ ಸ್ತೋತ್ರಮಾಡಿ ನಮಸ್ಕರಿಸಿದನು, ಇಂಥ ಹಲಾಯುಧನನ್ನು ಶಿವನು ಆಲಿಂಗಿಸಿದನು. ವ|| ಈ ರೀತಿ ತನ್ನ ತೋಳುಗಳಿಂದ ಬರಸೆಳೆದು ಬಿಗಿದಪ್ಪಿ (ಶಿವನು) ಸಮಸ್ತ ಗಣ ಸಮೂಹದಲ್ಲಿ ಮನೋಹರವಾಗಿ ಕೊಂಡಾಡಿದನು. ಸೂರ್ಯನನ್ನು ಕೂಡ ಅಣಕಿಸುವಂತಹ ಕಾಂತಿಯ ಸಮೂಹದಿಂದ ಪವಿತ್ರವಾದ ರತ್ನ ಖಚಿತ ವಿಮಾನದಲ್ಲಿ ಅವನು ರಾಜ್ಯಭಾರ ಮಾಡಿದ ಒಂಬತ್ತು ಪಟ್ಟಣಗಳು ಸಮೇತವಾಗಿ, ಆ ಹಲಾಯುಧನನ್ನು ಕುಳ್ಳಿರಿಸಿಕೊಂಡು ಗಿರಿಜಾಪತಿಯು ಪರಮೋತ್ಸಾಹದಿಂದ ದೇವತೆಗಳು ಉಘೇ ಎನ್ನುತ್ತಿರಲು ಕೈಲಾಸ ಪರ್ವತಕ್ಕೆ ಕರೆದು ಕೊಂಡು ಹೋಗಿ ತನ್ನ ಸಾರೂಪ್ಯ ಪದವಿಯನ್ನು ಕೊಟ್ಟು ಮನ್ನಿಸಿದನು. ೪೫. ಶಂಕರನು ಸಿರಿಯಾಳನಿಗಾದ ಅಹಂಕಾರವನ್ನು ಕಳೆಯಲು ಎಂದು ಈ ಭೂಲೋಕದಲ್ಲಿ ಈ ರೀತಿ ಮಾಡಿದನಲ್ಲವೇ ? ಮತ್ತು ಕೇಳು : ಆದ್ದರಿಂದ ಶ್ರೇಷ್ಠ ಭಕ್ತರಾಗಿರುವವರಿಗೆ ಇಂಥ ದುಸ್ತರವಾದ ಗರ್ವವು ಸ್ವಲ್ಪವೂ ಸಲ್ಲದು. ಈ ರೀತಿ ಹೇಳಿದ ಆ ಇಷ್ಟಾರ್ಥ ವನ್ನುಂಟುಮಾಡುವ ಮಾಚಿದೇವನ ಪಾದಕಮಲದ್ವಯಕ್ಕೆ ಬಸವೇಶ್ವರನು

ಶರಣಾಗತಾರ್ತಿಹರಣೇಕ್ಷಣಾಂಚಳೇ
ಪರಿಣದ್ಧಕಾಂತಿಭರಿತಾಸ್ಯಮಂಡಳೇ
ಗಿರಿಜಾತೆ ದಿವ್ಯತರ ಸದ್ಗುಣೋಜ್ವಳೇ
ಹರಪತ್ನಿಯೆನ್ನ ಪೊರೆ ಸರ್ವಮಂಗಳೇ ೪೬

ಇದು ವಿನಮದಖಿಳ ಸುರಾಸುರೇಂದ್ರಮಕುಟತಟಘಟಿತ ಮಣಿಗಣಾಗಣಿತ ರುಚಿನಿಚಯ
ತರುಣಾರುಣಾತಪಪರಿಲಸಿತ ಪರಮ ಶಿವಲಿಂಗ ಪಾದಾರವಿಂದಪರಾಗಭಸಿತ
ಭಾಸುರಲಲಾಟಪಟ್ಟ ಸರಸಜನಮಾನಿತೋಭಯಕವಿತಾವಿಶಾರದ
ಶ್ರೀಷಡಕ್ಷರಿದೇವಭಕ್ತಿವಿರಚಿತ

ಶ್ರೀಮದ್ ಬಸವರಾಜವಿಜಯಮಹಾಪುರಾಣದೊಳ್ ಹಲಾಯುಧವೃತ್ತಾಂತವರ್ಣನಂ
ಪಂಚದಶಾಶ್ವಾಸಂ ಸಮಾಪ್ತಂ

ಅಂತು ಆಶ್ವಾಸ ೧೫ಕ್ಕೆ ಪದಗಣನೆ ೧೩೦೮ಕ್ಕೆ ಮಂಗಳಮಹಾ ಶ್ರೀ ॥

ಆನಂದ ಪೂರ್ಣನಾಗಿ ಆದರದಿಂದ ನಮಸ್ಕರಿಸುತ್ತ ಸ್ತೋತ್ರ ಮಾಡುತ್ತ ಶೋಭಿಸಿದನು. ೪೬. ಶರಣಾಗತರಾದವರ ಮನೋವ್ಯಥೆಯನ್ನು ದೂರ ಮಾಡುವ ಕಡೆಗಣ್ಣಿನ ಕಾಂತಿಯುಳ್ಳವಳೇ, ವಿಸ್ತಾರವಾದ ಕಾಂತಿಯಿಂದ ತುಂಬಿದ ಮುಖ ಮಂಡಲವುಳ್ಳವಳೇ, ಗಿರಿರಾಜ ಪುತ್ರಿಯೇ, ಅತ್ಯಂತ ಶ್ರೇಷ್ಠವಾದ ಸದ್ಗುಣಗಳಿಂದ ಮನೋಹರಳಾದವಳೇ, ಹರನ ಪತ್ನಿಯೇ, ಸರ್ವಮಂಗಳೆಯೇ ನನ್ನನ್ನು ರಕ್ಷಿಸು.

ಹದಿನೈದನೆಯ ಆಶ್ವಾಸವು ಸಮಾಪ್ತವಾಯಿತು.

ಷೋಡಶಾಶ್ವಾಸಂ

[ಮೆಱೆಮಿಂಡದೇವನ ಕಥೆ]

ಶ್ರೀಕಾಳಿಕಾಭಿರುಚಿರ ಕ
ಳಾಕೇಳೀಶೀಲನಖಿಳ ಭುವನಾಳಿಜನಾ
ನೀಕಪರಿಪೂಜಿತಂ ಮಹಿ
ಮಾಕರನೆಮಗೀಗೆ ಸೌಖ್ಯಮಂ ಶಿವಲಿಂಗಂ ೧

ಸನ್ನುತಮಹಿಮಂ ಗುಣಸಂ
ಪನ್ನಂ ಬಸವಂಗೆ ಕೇಳ್ವುದಿನ್ನುಮೆನುತ್ತುಂ
ಪ್ರೋನ್ನತ ಮಾಚಪ್ರಭು ಪೇ
ಳ್ದನ್ನಲವಿಂ ಮತ್ತಮೊಂದು ಕಥನಮನಾಗಳ್ ೨

ನೆಲಸಿರಿ ನೆಲಸಿದ ಜಲರುಹ
ದಲರನೆ ರಂಜಿಪುದು ಸಜಳಪರಿಖಾಸರಸೀ
ವಿಲಸಿತಮುರುಸಾಲದಳಂ
ಸಲೆ ತಿರುಚಂಗೊಂಡೆಯೆಂಬ ಪೊಳಲಾ ಪುರದೊಳ್ ೩

ಮೆರೆಮಿಂಡದೇವನ ಕಥೆ ಮತ್ತು ಸ್ತೋತ್ರಗಳು

೧. ಮಂಗಳಕರಳಾದ ಕಾಳೀ ದೇವಿಯ ಮನೋಹರವಾದ ವಿದ್ಯೆಗಳ ಕ್ರೀಡೆಯೇ ಸ್ವಭಾವವಾಗಿ ಉಳ್ಳ ಸಕಲ ಲೋಕಗಳಲ್ಲಿ ಸಮೂಹದಲ್ಲಿರುವ ಜನಗಳ ಸಮೂಹದಿಂದ ಪೂಜಿಸಲ್ಪಟ್ಟ ಮಹಿಮಾಕರನಾದ ಶಿವಲಿಂಗನು ನಮಗೆ ಸೌಖ್ಯವನ್ನುಂಟುಮಾಡಲಿ. ೨. ಆಗ ಶ್ಲಾಘ್ಯವಾದ ಮಹಿಮೆಗಳನ್ನುಳ್ಳವನೂ, ಗುಣ ಸಂಪನ್ನನೂ, ಅತ್ಯುತ್ಕೃಷ್ಟನೂ ಆದ ಮಾಚಿದೇವನು 'ಬಸವಣ್ಣ, ಇನ್ನೂ ಕೇಳು ಎನ್ನುತ್ತ ಮತ್ತೂ ಒಂದು ಕಥೆಯನ್ನು ಸಂತೋಷದಿಂದ ಹೇಳಿದನು. ೩–೪. ಭೂ ಲಕ್ಷ್ಮಿಯು ವಾಸ ಮಾಡಿದ ಕಮಲದ ಹೂವೋ ಎಂಬ ಹಾಗೆ ತಿರುಚೆಂಗೊಂಡೆ ಎಂಬ ಪಟ್ಟಣವು ನೀರಿನಿಂದ ತುಂಬಿದ ಅಗುಳೆಂಬ ಸರೋವರದಲ್ಲಿ ಪ್ರಕಾಶಿಸುವ ಶ್ರೇಷ್ಠವಾದ ಕೋಟೆಯ ತೆನೆಗಳೆಂಬ ಎಸಳುಗಳುಳ್ಳದ್ದಾಗಿ ರಂಜಿಸುತ್ತಿರುವುದು. ಆ ಪಟ್ಟಣದಲ್ಲಿ ಜಂಗಮರ ಪಾದಕಮಲಗಳ ಪೂಜೆಯಲ್ಲಿ ಆಸಕ್ತನಾದವನೂ, ಕಾಮಾದಿ ಅರಿಷಡ್ವರ್ಗಗಳನ್ನು ದೂರ ಮಾಡಿದವನೂ, ಪರಮೇಶ್ವರನಲ್ಲಿ ಏಕತ್ವವನ್ನು ಹೊಂದಿದ್ದರಿಂದ ನಿಶ್ಚಂಚಲವಾದ ಮನಸ್ಸನ್ನುಳ್ಳವನೂ, ಕೊಬ್ಬಿದ ಅನ್ಯಮತವಾದಿಗಳ ಸಮೂಹದ ಗರ್ವವನ್ನು ನಾಶಪಡಿಸಿದವನೂ, ಅತ್ಯಂತ

ಚರಪಾದಾಂಭೋಜಪೂಜಾರತನಪಗತಷಡ್ವರ್ಗನೀಶ್ರೈಕಭಾವ
ಸ್ಥಿರಚಿತ್ತಂ ದೃಪ್ತವಾದಿವ್ರಜಮದಹರನತ್ಯಂತ ಸಾಮರ್ಥ್ಯಯುಕ್ತಂ
ಹರಭಕ್ತ[1]ಪ್ರೇಮಧಾಮಂ ಸುಗುಣಮಣಿಗಣಾಲಂಕೃತಂ ಶೈವಧರ್ಮೋ
ದ್ಧರಣಂ ಶೌರ್ಯಾಂಕನಿರ್ಪಂ ನಿರುಪಮ ಮೆಱೆಮಿಂಡಾರ್ಯನೆಂದೆಂಬ ಭಕ್ತಂ ೪

ನಿರಘಂ ನಿರ್ಮಮತಾಯುತಂ ದಲೆನಿಪಾ ಭಕ್ತಂ ಮಹೋತ್ಸಾಹದಿಂ
ತಿರುವಾರೂರೆನಿಪೇಳ್ಗೆವೆತ್ತ ನಗರಕ್ಕೇಳ್ತಂದು ವ[2]ಲ್ಮೀಕನಾ
ಥರುಚಿಸ್ಫೀತ ಗೃಹಾಂತರಾಳದೊಳೆ ತಲ್ಲಿಂಗಕ್ಕೆ ಸತ್ಪೂಜೆಯಂ
ನೆರಪುತ್ತುಂ ಶಿವರಾತ್ರಿ ಸದ್ವ್ರತಮನತ್ಯಾನಂದದಿಂ ಮಾಡಿದಂ ೫

ವ॥ ಅಂತು ವಲ್ಮೀಕನಾಥಾಲಯದೊಳಾಡಿ ಪಾಡಿ ಜಾಗರಣಮಿರ್ದು ಬೆಳಗಪ್ಪುದುಂ ಯಥೋಚಿತಂ ಪ್ರಾತರಾಚಾರಮಂ ನೆಗಳ್ದನಂತರಂ ರಂಗಮಂಟಪದೊಳ್ಭಕ್ತಗಣಸಮಾವೃತಂ ಶಿವ ಕಥಾಗೋಷ್ಠಿಯೊಳ್ ಸುಖಮಿರ್ಪಾಗಳ್—

ಪೊಗರೊಗುವಚ್ಚ ಜವ್ವನದ ನೀಳ್ದಲರ್ಗಂಗಳ ಚಂದ್ರಬಿಂಬಮಂ
ನಗುವ ದರಸ್ಮಿತಾನನದ ಪೇರುರದಾಯತಮಾದ ತೋಳ ಚೆ

ಸಾಮರ್ಥ್ಯದಿಂದ ಕೂಡಿದವನೂ, ಶಿವಭಕ್ತರ ಪ್ರೇಮಕ್ಕೆ ಸ್ಥಾನಭೂತನೂ, ಸದ್ಗುಣಗಳೆಂಬ ಮಣಿಗಳಿಂದ ಅಲಂಕೃತನಾದವನೂ, ಶೈವಮತೋದ್ಧಾರ ಮಾಡಿದವನೂ, ಶೌರ್ಯವೇ ಗುರುತಾಗಿ ಉಳ್ಳವನೂ, ಅಸದೃಶನಾದ ಮೆರೆಮಿಂಡ ದೇವನೆಂಬ ಭಕ್ತನು ಇದ್ದನು. ೫. ನಿಶ್ಚಯವಾಗಿ (ಅವನು) ಪಾಪರಹಿತನೂ 'ನಾನು' 'ನನ್ನದು' ಎಂಬ ಮಮತೆಯಿಂದ ದೂರನಾದವನೂ ಎಂದೆನಿಸಿದ ಆ ಭಕ್ತನು ಮಹೋತ್ಸಾಹದಿಂದ ತಿರುವಾರೂರೆಂಬ ಪ್ರಸಿದ್ಧವಾದ ನಗರಕ್ಕೆ ಬಂದು ವಲ್ಮೀಕನಾಥೇಶ್ವರನ ಕಾಂತಿಯಿಂದ ತುಂಬಿದ ದೇವಾಲಯದ ಒಳ ಭಾಗದಲ್ಲಿದ್ದುಕೊಂಡು ಆ ಲಿಂಗಕ್ಕೆ ಶ್ರೇಷ್ಠವಾದ ಪೂಜೆಯನ್ನು ನೆರವೇರಿಸುತ್ತ, ಅತ್ಯಾನಂದದಿಂದ ಶಿವರಾತ್ರಿಯ ಶ್ರೇಷ್ಠ ವ್ರತವನ್ನು ಮಾಡಿದನು. ವ॥ ಆ ರೀತಿ ವಲ್ಮೀಕನಾಥ ದೇವಾಲಯದೊಳಗೆ ಆಡಿ, ಹಾಡಿ, ರಾತ್ರಿಯೆಲ್ಲ ಎಚ್ಚರವಾಗಿದ್ದು, ಬೆಳಗಾದೊಡನೆ ಯಥೋಚಿತವಾಗಿ ಪ್ರಾತಃಕಾಲದ ಕ್ರಿಯೆಗಳನ್ನು ಮುಗಿಸಿದ ನಂತರ ರಂಗಮಂಡಪದೊಳಗೆ ಭಕ್ತ ಗಣದವರಿಂದ ಆವರಿಸಲ್ಪಟ್ಟವನಾಗಿ ಶಿವ ಕಥೆಯ ಸದ್ಗೋಷ್ಠಿಯಲ್ಲಿ ಸುಖವಾಗಿ ಇರುತ್ತಿದ್ದನು. ಆಗ ೬. ನೂತನ ಯೌವನದ ಕಾಂತಿಯು ಹೊರ ಹೊಮ್ಮುವ, ಉದ್ದವಾದ ಹೂವಿನಂತಿರುವ ಕಣ್ಣುಗಳ ಚಂದ್ರಬಿಂಬವನ್ನು ಹಾಸ್ಯ ಮಾಡುವಂತಹ ಮುಗುಳುನಗೆಯಿಂದ ಕೂಡಿದ ಮುಖದ, ದೊಡ್ಡ ವಕ್ಷಸ್ಥಳದ ಉದ್ದವಾದ ತೋಳಿನ, ಬೆಳ್ಳಗಿರುವ ಉಗುರುಗಳ, ಕಾಂತಿಯಿಂದ

1 ಕ್ತಿ (ಜ) 2 ವಾ (ಜ)

ಳ್ಪುಗುರ್ಗಳ ಕಾಂತಿ ತಳ್ತ ಕರಕಂಜದ ನುಣ್ದೊಡೆಯಾಮ್ರಪಲ್ಲವಾಂ
ಘ್ರಿಗಳ ಬೆಡಂಗು ರಂಜಿಸೆ ಕರಂ ಬರುತೊಪ್ಪಿದನಲ್ಲಿ ಸೌಂದರಂ ೬

ನಳನನಿ[1]ಳಿಂಕೆಗೆಯ್ದು ನಳಕೂಬರನಗ್ಗದ ಗಂಡಗಾಡಿಯಂ
ಪಳಿದು ಜಯಂತನಂ ಜಡಿದು ಬಿಕ್ಕುಡಿಗೆಯ್ದು ಬಸಂತನಂ ಸಮು
ಜ್ವಳಕುಸುಮಾಸ್ತ್ರನಂ ಜಱಿದು ಕಂಗೊಳಿಸಿರ್ದನವಂ ವಿಳಾಸದಿಂ
ವಿಳಸಿತ ಶೋಭೆಯಿಂ ಸೊಬಗಿನಿಂ ಚದುರಿಂ ಮಧುರಸ್ವಭಾವದಿಂ ೭

ಪರವೆಯ ತೋಳ ತಳ್ಕಿನೊಳೆ ಪತ್ತಿದ ಕುಂಕುಮರೇಖೆ ತತ್ತನೂ
ದರಿಯ ನಖಾಂಕಮೊಂದಿದ ಮನೋಹರ ಕಂಧರಮಾಕೆಯಿಟ್ಟ ಕ
ತ್ತೂರಿಯ ಲಲಾಮಮಂಟಿದ ನೊಸಲ್ ಮಿಸುಪೊಂದಿದ ತದ್ರದಕ್ಷತಾಂ
ಕುರವಳವಟ್ಟ ಚೆಂದುಟಿ ವಿರಾಜಿತಮಾದುದು ಸೌಂದರೇಂದ್ರನಾ ೮

ವ॥ ಮತ್ತಮರೆವಿರಿದ ವಿಚಕಿಲದಲರಮಾಲೆಯಂ ತಳೆದು ತೆಱಂಬೊಳೆವ ಮುಡಿಯಿಂ ವದನವಿಧುಬಿಂಬಪರಿವೃತ ತಾರಾವಾರದಂತೆಸೆವ ತಾರಾಹಾರಮುಂ, ಮುಖಸರಸಿಜಂ ಕಟ್ಟಿ ಸೆಱೆಯಿಟ್ಟ

ಕೂಡಿದ, ತಾವರೆಯಂತಿರುವ ಕಯ್ಯ, ನುಣ್ಣನೆಯ ತೊಡೆಯ, ಮಾವಿನ ಚಿಗುರಿನಂತಿರುವ ಕಾಲುಗಳ ಸೊಗಸು ರಂಜಿಸುತ್ತಿರಲು 'ಸೌಂದರ' ನೆಂಬವನು (ಭಕ್ತನು) ಅಲ್ಲಿಗೆ ಬರುತ್ತ ಶೋಭಿಸಿದನು. ೭. ಆ ಸುಂದರ ನಂಬಿಯು ನಳನನ್ನು ತನ್ನ ವಿಲಾಸದಿಂದ ತಿರಸ್ಕರಿಸುತ್ತಿದ್ದನು. ಕುಬೇರನ ಮಗನಾದ ನಳ ಕೂಬರನ ಪೌರುಷವನ್ನು ತನ್ನ ಪ್ರಕಾಶಿಸುವ ತೇಜಸ್ಸಿನಿಂದ ನಿಂದಿಸಿದ್ದನು. ಇಂದ್ರ ಪುತ್ರನಾದ ಜಯಂತನನ್ನು ಸೊಬಗಿನಿಂದ ತಿರಸ್ಕರಿಸಿದ್ದನು. ವಸಂತನನ್ನು ಚಾತುರ್ಯದಿಂದ ಭಯಪಡಿಸಿದ್ದನು. ಮನೋಹರನಾದ ಮನ್ಮಥನನ್ನು (ತನ್ನ) ಮಧುರಾಕಾರದಿಂದ ಹೀಯಾಳಿಸಿ ಕಂಗೊಳಿಸಿದ್ದನು. ೮. ಸೌಂದರನು ಆ ಪರವೆಯೆಂಬ ಹೆಂಡತಿಯ ಬಾಹುವಿನ ಆಲಿಂಗನದಿಂದ ಹತ್ತಿದ ಕುಂಕುಮ ರೇಖೆ, ಆ ತೆಳುವಾದ ದೇಹದ ಸ್ತ್ರೀಯ ನಖಕ್ಷತದ (ಉಗುರಿನ ಗಾಯದ) ಗುರುತನ್ನು ಹೊಂದಿದ ಮನೋಹರವಾದ ಕುತ್ತಿಗೆಯು, (ಅವಳು) ಇಟ್ಟ ಕಸ್ತೂರಿಯ ತಿಲಕವು ಅಂಟಿದ ಹಣೆ, ಪ್ರಕಾಶವನ್ನು ಹೊಂದಿದ ಆಕೆಯ ಹಲ್ಲಿನಿಂದುಂಟಾದ ಗಾಯದ ಗುರುತುಗೊಂಡ (ರದಕ್ಷತ – ಅಂಕುರ) ಕೆಂಪಾದ ತುಟಿ–ಇವು ರಂಜಿಸುವುವುಗಳಾಗಿ ಇದ್ದನು. ವ॥ ಮತ್ತು ಅರ್ಧ ಅರಳಿದ ಮಲ್ಲಿಗೆಯ ಹೂ ಮಾಲೆಯನ್ನು ಧರಿಸಿದುದರಿಂದ ಪ್ರಕಾಶಮಾನವಾದ ಕೇಶವೂ, ಮುಖವೆಂಬ ಚಂದ್ರಬಿಂಬವನ್ನು ಸುತ್ತುವರಿದಿರುವ ನಕ್ಷತ್ರಗಳ ಸಮೂಹದ ಹಾಗೆ ಶೋಭಿಸುವ ನಕ್ಷತ್ರಮಾಲಿಕೆಯೆಂಬ (ಇಪ್ಪತ್ತೇಳು ಮುತ್ತುಗಳಮಾಲಿಕೆ) ಮುತ್ತಿನಹಾರವೂ (ಕಂಠದಲ್ಲಿ ಶೋಭಿಸುತ್ತಿತ್ತು) ಮುಖವೆಂಬ ತಾವರೆಯು ಕಟ್ಟಿಹಾಕಿ ಸೆರೆಯಲ್ಲಿಟ್ಟ ನಕ್ಷತ್ರಗಳನ್ನು ಹೋಲಿಕೆಗೊಂಡು ಅತ್ಯಂತ

---

1 ನ (ಮು, ಚ, ಗ, ಅ, ಜ)

ನಕ್ಷತ್ರಂಗಳನನುಕರಿಸಿ ತೊಳತೊಳಗುವೆಳೆಮುತ್ತಿನ ಕರ್ಣಾಭರಣಮುಂ, ಭುಜಲತೆ ಕುಸುಮ ಮಂಜರಿಯಂ ತಳೆದಂತೆ ಪಜ್ಜಳಿಪ ಬಜ್ಜರದ ಬಾಹುಪೂರಮುಂ, ಕರಸರಸಿರುಹಮೂಲಮಂ ಮಾಲೆಗೊಂಡು ಬಳಸಿ ನಿಂದ ಮಱಿದುಂಬಿಗಳ ಬಂಬಲಂತೆಸೆವಿಂದ್ರನೀಲಮಣಿಯ ಕಂಕಣಮುಂ, ಕರತಳಾರುಣ ನಖಮಣಿರುಚಿಯನೆರೆಯಲ್ಬಯಸಿನಿಂದ ಮಣಿಗಣಮೆನೆ ಮೆಱೆವ ರನ್ನದುಂಗುರಮುಂ, ನಡೆನೋಡುವೆಳೆಜವ್ವನೆಯರ ವಿರಹಶಿಖಿಶಿಖಾತಪ್ತನಯನಾಂಚಳಾಂಚಿತರುಚಿನಿಚಯಂ ತಾಗೆ ಕೋಮಲಾಂಗಂ ಕಂದುಗುಮೆಂದು ಬೆಳ್ದಿಂಗಳಿಂ ಬಾಪಣಿಸಿದಂತೆ ಮನೋಜ್ಞಮಾದ ಧವಳತರರುಚಿರದುಕೂಲಮುಂ, ಪದನಳಿನಮಂ ಬಳಸಿ ತಳ್ತ ಮಂಜುಮರಾಳಿಕಾಂಡಮುಡದಂತೆ ಮಂಡಳಿಸಿ ನಿಂದ ಮೌಕ್ತಿಕಾನ್ವಿತ ಪಾದಕಟಕಮುಂ ಕಡುಬೆಡಂಗುವಡೆಯೆ, ತೊಡೆದ ಯಕ್ಷಕರ್ದಮದ ನಱುಗಂಪಿಂಗೆ ಪರಿಮಱಿಗೊಂಡೆಱಗುವ ಮಱಿದುಂಬಿಗಳ ಬಂಬಲಂ ಸಂಪಗೆಯ ಕಮ್ಮಲರ ಬಿಜ್ಜಣಿಗೆಯಿಂ ಬೀಸಿ ತೆಮರ್ವ

ಪ್ರಕಾಶಮಾನವಾದ ಎಳೆಯಮುತ್ತಿನ ಕಿವಿಯ ಆಭರಣಗಳು ಎರಡೂ ಕಿವಿಗಳಲ್ಲಿ ಇದ್ದವು. ತೋಳು ಎಂಬ ಬಳ್ಳಿಯು ಹೂಗೊಂಚಲನ್ನು ಧರಿಸಿರುವುದೋ ಎಂಬ ಹಾಗೆ ಪ್ರಜ್ವಲಿಸುವ ವಜ್ರದ ಭುಜಕೀರ್ತಿಗಳು ಭುಜಗಳ ಮೇಲೆ ಇದ್ದವು. ಹಸ್ತವೆಂಬ ಕಮಲದ ಬುಡವನ್ನು ಪಙ್ತಿಯಾಗಿ (ಮಾಲಾಕಾರವಾಗಿ) ಸುತ್ತುವರಿದು ನಿಂತ ಮರಿದುಂಬಿಗಳ ಗುಂಪಿನಹಾಗೆ ಶೋಭಿಸುವ ಇಂದ್ರನೀಲ ಮಣಿಗಳಿಂದ ಮಾಡಿದ ಕಂಕಣವು (ಕೈಯಮುಂಭಾಗದಲ್ಲಿ ಶೋಭಿಸುತ್ತಿದ್ದವು). ಹಸ್ತದಲ್ಲಿರುವ ಕೆಂಪುವರ್ಣದ ಉಗುರುಗಳೆಂಬ ರತ್ನ ಸಮೂಹದ ಕಾಂತಿಯನ್ನು ಪಡೆಯಬೇಕೆಂದು ಬಯಸಿ ನಿಂತಿರುವ ರತ್ನಗಳ ಸಮೂಹವೋ ಎಂಬಂತಿರುವ ರತ್ನದಉಂಗುರಗಳು (ಬೆರಳಿನಲ್ಲಿ ಶೋಭಿಸುತ್ತಿದ್ದವು). (ತನ್ನನ್ನು) ಚೆನ್ನಾಗಿ ಕಣ್ಣಿಟ್ಟು ನೋಡುವ ಎಳೆಯ ಪ್ರಾಯದಹುಡುಗಿಯರ ವಿರಹವೆಂಬ ಅಗ್ನಿಜ್ವಾಲೆಯಿಂದ ಸಂತಾಪಪಡಿಸಲ್ಪಟ್ಟ ಕಡೆಗಣ್ಣಿನ ಚಂಚಲವಾದ ಕಾಂತಿಯ ಸಮೂಹವು ತಾಕಲಾಗಿ (ಈ ಸೌಂದರನ) ಕೋಮಲವಾದ ಅಂಗವು ಕಂದಿಹೋಗುವುದು ಎಂದು ಬೆಳದಿಂಗಳಿಂದ ಆಚ್ಛಾದನಗೊಳಿಸಿದಹಾಗೆ ಮನೋಜ್ಞವೂ, ಅತಿಶುಭ್ರವೂ ಮನೋಹರವೂ ಆದ ಜರತಾರಿಯ ಬಟ್ಟೆಗಳು (ಮೈಮೇಲೆ ಶೋಭಿಸುತ್ತಿದ್ದವು). ಪಾದಕಮಲವನ್ನು ಸುತ್ತುವರಿದು ನಿಂತ ಮಂಜುಳವಾದ ಹೆಣ್ಣುಹಂಸಪಕ್ಷಿಗಳ ಮೊಟ್ಟೆಯ ಗುಂಪಿನಹಾಗೆ ವೃತ್ತಾಕಾರವಾಗಿ (ದೊಡ್ಡ ದೊಡ್ಡ) ಮುತ್ತಿನಿಂದ ಕೂಡಿದ ಕಾಲಿನ ಕಡಗಗಳು(ಪೆಂಡೆಕಾಲ್ಕಡಗಗಳು) (ಮುಂಗಾಲುಗಳಲ್ಲಿ ಶೋಭಿಸುತ್ತಿದ್ದವು). ಆನೆ ಬೆಡಗಿನಿಂದ ಕೂಡಿರುವ ಪರಿಚಾರಕಿಯರ ಗುಂಪು ಯಕ್ಷಕರ್ದಮ (ಕೂಟುಗಂಧ)ವನ್ನು ತೊಡೆದುಕೊಂಡಿದ್ದರು. ಅದರ ಆ ಸುಗಂಧಕ್ಕೆ (ನರುಗಂಪಿಗೆ) ದುಂಬಿಯಮರಿಗಳು ಸುತ್ತುವರಿದು ಮುಸುಕಿದ್ದವು. ಅಂಥ ದುಂಬಿಗಳನ್ನು ಸಂಪಿಗೆಯ ಹೂವಿನ ಬೀಸಣಿಕೆಯಿಂದ ಓಡಿಸುತ್ತಿದ್ದರು. ತಮ್ಮ ಕಡೆಗಣ್ಣಿನ ಕಾಂತಿಯಿಂದ ಎರಡರಷ್ಟು ಹೆಚ್ಚಾದ ಬಿಳಿಯ ಬಣ್ಣವನ್ನು ಹೊಂದಿದ್ದ ಬಿಳಿಯ ಚಾಮರವನ್ನು ಮೊರಹೊಮ್ಮುತ್ತಿರುವ

ಪರಿಚಾರಿಕಾನಿಕಾಯದಿಂ, ನಿಜಕಟಾಕ್ಷರುಚಿದ್ವಿಗುಣಿತ ಧವಳಿಮಧವಳಚಾಮರಮಂ[1]ಕಂಕಣಝಣತ್ಕಾರಂ ಪೊಣ್ಮೆ ಬೀಸುವ ಚಾಮರಗ್ರಾಹಿಣಿಯರಿಂ, ನಿಜಬಿರುದ ಗದ್ಯಪದ್ಯಪ್ರಬಂಧಸಂದೋಹಮನುಗ್ಗಡಿಸಿ ರಯ್ಯಮೆನೆ ಕೆಯ್ಯೆತ್ತಿಕೈವಾರಿಸುವ ವಂದಿಮಾಗಧಪ್ರತಾನದಿಂ, ಸರಸತರ ಮಂಗಳ ಸಂಗೀತಮಂ ಪಾಡುವ ಸಂಗೀತವಿಶಾರದರಿಂ, ಕೆಲವಲದೊಳೋಲಗಿಸಿ ಬರ್ಪ ರಾಜಪುತ್ರರಿಂ, ಸಡಗರದಿನೇಳ್ತಂದು ನಿಂದು ನಲವರಕೆಗೊಡುವ ಮಾಹೇಶ್ವರರಿಂ ಪರಮವಿಭ[2]ವಂ ಮಿಗೆ, ಭುವನತ್ರಯ ಸೌಂದರ್ಯ ಮೇಕತ್ವಂ ಬಡೆದಂತೆ ಮೋಹನಂಬೆತ್ತು, ವಿಟವಿದೂಷಕಾಪದಿ ಭೋಗಸಖ ಸಮೇತಂ ಪೊಗಳ್ವ ಬುಧರ್ಗೆ ಪಿಡಿಪೊಂಗಳನಳ್ತಿಯಿನಿತ್ತು ಮನ್ನಿಸುತ್ತುಂ, ಕರತಳದ ಕನತ್ಕನಕಕಿಂಕಿಣೀ ಮಾಲೆ ತಳ್ತ ಪೊಂಗತಾರಮಂ ಮೊನೆಗಾಣಿಸಿ ವಾಮಪ್ರಕೋಷ್ಠಮಂ ದಂಡೆಗೊಟ್ಟೊ[3]ಲಪುದೋಱಿ ಜಡಿಜಡಿದು ಚಿಮ್ಮುತ್ತುಂ, ಬೆಡಂಗುಮಿಗೆ ಪೆಡಂಮೆಟ್ಟಿ ಜಂಗಳಂಬಾಯ್ದು ನಡೆದೋಱುತ್ತುಂ ನಿಜಭುಜಾದಂಡಮನೋರೊರ್ಮೆ ನಡೆನೋಡಿ ನಲವೇಱುತ್ತುಂ, ಸ[4]ಖನಿಕರದೊಳ್ಸೊಳ್ಳುಡಿಗೊಳುತ್ತೆ ನಸುನಗುತ್ತುಂ, ಶಂಕರಕುಮಾರಂ

ಕೈ ಬಳೆಗಳ ಝಣ ಝಣತ್ಕಾರ ದೊಡನೆ ಬೀಸುತ್ತಿರುವ ಚಾಮರಗ್ರಾಹಿಣಿಯರು (ಅಕ್ಕಪಕ್ಕಗಳಲ್ಲಿ ಶೋಭಿಸುತ್ತಿದ್ದರು). ತನ್ನ (ಸೌಂದರನಂಬಿಯ) ಬಿರುದಾವಲಿಗಳನ್ನು ಸೂಚಿಸುವ ಗದ್ಯ, ಪದ್ಯ ಪ್ರಬಂಧ ಸಂದೋಹವನ್ನು ಗಟ್ಟಿಯಾಗಿ ಕೂಗಿ ಮನೋಹರವಾಗಿ (ರಯ್ಯಮೆನೆ) ಕೈಯೆತ್ತಿ ಹೊಗಳುವ ಭಟ್ಟಂಗಿಗಳು ಮತ್ತು ಸ್ತುತಿಪಾಠಕರುಗಳ ಗುಂಪಿನಿಂದ (ಶೋಭಿಸುತ್ತಿದ್ದನು) ಅತ್ಯಂತ ರಸಭರಿತವಾದ ಮಂಗಳಕರ ಗಾಯನವನ್ನು ಮಾಡುತ್ತಿರುವ ಸಂಗೀತ ವಿಶಾರದರು (ಮುಂಭಾಗದಲ್ಲಿ ಒಪ್ಪಿದ್ದರು). ಎಡಬಲಗಳಲ್ಲಿ ಸೇವಿಸಿಬರುತ್ತಿರುವ ರಾಜಪುತ್ರರಿಂದಲೂ, ಸಡಗರದಿಂದ ಎದ್ದುನಿಂತು, ಒಳ್ಳೆಯ ಹರಕೆಯನ್ನು ಮಾಡುತ್ತಿರುವ ಮಾಹೇಶ್ವರರುಗಳಿಂದಲೂ, ಪರಮವೈಭವದಿಂದ ಮಿಕ್ಕು ಮೂರುಲೋಕಗಳಲ್ಲಿನ ಸೌಂದರ್ಯವು ಒಂದೇ ಕಡೆಗೆ ಸೇರಿದಂತೆ ಇತ್ತು. ಪ್ರೀತಿಯಿಂದ (ಸೌಂದರನು) ವಿಟ, ವಿದೂಷಕ, ಭೋಗಸಖ ಸಮೇತವಾಗಿ ಹೊಗಳುತ್ತಿರುವ ವಿದ್ವಾಂಸರುಗಳಿಗೆ ಪ್ರೀತಿಯಿಂದ ಹಿಡಿಹಿಡಿಯಾಗಿ ಹಣವನ್ನು ಕೊಟ್ಟು ಮನ್ನಿಸುತ್ತಿದ್ದನು. ಕೈಯಲ್ಲಿರುವ ಹೊಳೆಯುತ್ತಿರುವ ಚಿನ್ನದ ಕಿರುಗೆಜ್ಜೆಗಳಿಂದ ಕೂಡಿದ ಚಿನ್ನದ ಕಠಾರಿಯ ಮುಂಭಾಗದ ಚೂಪಾದ ತುದಿಯನ್ನು ತೋರಿಸಿ, ಎಡತೋಳನ್ನು ನಡುವಿನ ಮೇಲೆ ಆನಿಸಿ ಮುಂಗೈಯನ್ನು ತೋರಿಸುತ್ತ (ಕರಭವನ್ನು ಮುಂದೆಮಾಡಿ ತೋರಿಸುತ್ತ) (?) ಒನಪನ್ನು ತೋರಿಸುತ್ತ ಧ್ವನಿಯನ್ನು ಮಾಡಿಮಾಡಿ ಚಿಮ್ಮಿಸುತ್ತಿದ್ದನು. ಹೆಚ್ಚಾದ ಬೆಡಗಿನಿಂದ ಹಿಂದಕ್ಕೆ ಸರಿದು ನಿಲ್ಲುತ್ತ ಸಡಿಲುಗೊಂಡು (ಜಂಗಳ) ನಡಿಗೆಯನ್ನು ತೋರಿಸುತ್ತ (ಸಡಿಲುಗೊಂಡು ಹಿಂದಕ್ಕೆ ಮುಂದಕ್ಕೆ ನಡೆದಾಡುವಿಕೆಯಿಂದ) ಇದ್ದನು, ಒಮ್ಮೆ ತನ್ನ ದಂಡಾಕಾರವಾದ ಭುಜಗಳನ್ನು (ತಾನೇ) ಚೆನ್ನಾಗಿ ನೋಡಿಕೊಳ್ಳುತ್ತ.

---

1 ಮುಂ(ಮು, ಜ) 2 ಭು(ಜ) 3 ಟ್ಟೈ(ಜ) 4 ಸು(ಜ)

ಸೌಂದರಂ ಸ್ವಲೀಲೆಯಿಂ ಮುಂದಿರ್ದ ಗಣಸಭೆಗೆ ಪೊಡಮಡದೆ ಮಣಿಪಾವುಗೆಯಂ ಮೆಟ್ಟಿ ನಡೆತರುತ್ತುಂ ಪಡಿವೊಂಗಳಂ ಬೇಳ್ಪ ತವಕದಿನಾ ಲಿಂಗಾಲಯಮಂ ಪುಗೆ ಮೆಱೆಮಿಂಡದೇವಂ ಘುಡಿಘುಡಿಸಿ ಕೋಪಾಟೋಪಮಂ ತಾಳ್ದು—

ಮೃಡಭಕ್ತವ್ರಾತಕೇಳ್ತಂದೆಱಗದೆ ಪಿರಿದುಂ ಕೊಬ್ಬಿನಿಂ ಪೋಪನಾರೀ
ಕಡು ಧೂರ್ತಂ ಕೇಳ್ದುಮೇಂ ತಾನಱಿಯನೆ ಶರಣಾಧಿಕ್ಯಮಂ ಪೋಗಿ ಪೊಕ್ಕಂ
ಗುಡಿಯಂ ಮಾಹೇಶ್ವರರ್ಕಾಯ್ದೊಡೆ ಪೊರೆಯಲದೇಂ ಶಕ್ತನೇ ಶಂಭು ತನ್ನಂ
ಕೆಡುವಾತಂಗೇಕೆ ಬರ್ಕುಂ ಸುಮತಿ ಶಿವಗಣದ್ರೋಹಿಯಂ ಬೇಗವೀಗಳ್ ೯

ಗುಡಿಯೊಳಗಿರಲೀಯದೆ ಪೊಱ
ಮಡಿಪುದು ನೀವೆಂದು ವೀರಗಣಕವನೆನೆ ಸಂ
ಗಡಿಸಿದ ಜನತತಿಯಚ್ಚರಿ
ವಡೆ ತಮ್ಮಡಿಯೊರ್ವನಲ್ಲಿ ಕೆಯ್ಮುಗಿದೆಂದಂ ೧೦

ಬಗೆಯದಿರಯ್ಯ ಸೌಂದರನ ಜಾವ[1]ಳನೆಂದು ಮಹೇಶ್ವರಂಗಿವಂ
ಮಗನೆನಿಸಿರ್ಪನೀತನ ಸುಗೀತಕೆಸೆ ೞಲ್ತನೊ ಭಕ್ತಿಗೊಲ್ದನೋ

ಸಂತೋಷಪಡುತ್ತಿದ್ದನು, (ತನ್ನ) ಸಖರುಗಳ ಸಮೂಹದೊಡನೆ ಆಗಾಗ ಒಂದೊಂದು ಮಾತನಾಡುತ್ತ ನಸುನಗುತ್ತಿದ್ದನು, (ಹೀಗೆ ಆ) ಶಂಕರ ಕುಮಾರನಾದ ಸೌಂದರನು ವಿಲಾಸದಿಂದ ಕೂಡಿ, ಮುಂದೆ ಇದ್ದಂಥ ಶಿವಗಣ ಸಮೂಹಕ್ಕೆ ನಮಸ್ಕಾರ ಮಾಡದೆ ರತ್ನದ ಅವುಗೆಗಳನ್ನು ಮೆಟ್ಟಿಕೊಂಡೇ ನಡೆದುಬರುತ್ತ (ಶಿವನಿಂದ) ಪಡಿಹೊನ್ನನ್ನು (ದಿನವೂ ಶಿವನು ತನಗೆ ಕೊಡುತ್ತಿದ್ದ ಬೊಗಸೆಹೊನ್ನಿನ ಹಣವನ್ನು)ಬೇಡುವ ಕೌತೂಹದಿಂದ ಆ ಶಿವಾಲಯವನ್ನು (ತಿರುವಾರೂರಿನ ಆ ಪ್ರಸಿದ್ಧ ವಲ್ಮೀಕೇಶ್ವರ ದೇವಾಲಯವನ್ನು) (ಶಿವಗಣಗಳ ಗೋಷ್ಠಿಯಲ್ಲಿದ್ದ) ಮೆರೆಯಿಂಡ (ಸೌಂದರನ ಈರೀತಿಯನ್ನು) ಕಂಡು, ಘುಡುಘುಡು ಗರ್ಜನೆಮಾಡಿ, ಕೋಪದ ಅಟ್ಟಹಾಸವನ್ನು ಹೊಂದಿ– ೯. ಮೃಡಭಕ್ತ ಸಮೂಹಕ್ಕೆ ನಮಸ್ಕರಿಸದೆ, ಹೆಚ್ಚಾದ ಕೊಬ್ಬಿನಿಂದ ಹೋಗುವ ಮಹಾಧೂರ್ತನು ಯಾರು ? ಶರಣರ ಮಹತ್ವವನ್ನು ಇವನು ಹೇಗೂ ಕೇಳಿ ತಿಳಿಯನೇ ? ಹೋಗಿ ಗುಡಿಯನ್ನು ಹೊಕ್ಕನಲ್ಲಾ ! ಈ ಭಕ್ತಗಣಗಳು ಕೋಪಿಸಿ ಕೊಂಡರೆ, ಶಂಭುವು ಅವನನ್ನು ಕಾಪಾಡುವುದಕ್ಕೆ ಶಕ್ಯನೇ ? ಕೆಡುವವನಿಗೆ ಒಳ್ಳೆಯ ಬುದ್ಧಿ ಏಕೆಬಂದೀತು ? ೧೦. 'ಇವನನ್ನು ಈಗುಡಿಯೊಳಗಿರಲವಕಾಶಕೊಡದೆ ಹೊರಗೆ ಹೊರಡಿಸಿರಿ' ಎಂದು ಆ ಮೆರೆಮಿಂಡ ದೇವನು ಆ ವೀರ ಶಿವಗಣಕ್ಕೆ ಹೇಳಲು ಸೇರಿದ್ದ ಆ ಜನಸಮೂಹವು ಆಶ್ಚರ್ಯಪಡುತ್ತ ಇರಲು ಅಲ್ಲಿನ ಒಬ್ಬ ಪೂಜಾರಿಯು ಕೈಮುಗಿದು ಹೀಗೆ ಹೇಳಿದನು : ೧೧. ಅಯ್ಯ ಸೌಂದರನನ್ನು ಒಬ್ಬ ಸಾಮಾನ್ಯನೆಂದು ಯೋಚಿಸದೆ ಇರು. ಇವನು ಮಹೇಶ್ವರನಿಗೆ ಮಗನೆನಿಸಿದ್ದಾನೆ. ಚಂದ್ರಶೇಖರನು ಇವನ ಒಳ್ಳೆಯ ಗಾನಕ್ಕೆ

1 ತ(ಅ)

ಮೃಗಧರಮೌಳಿಯಾನಱಿಯೆನರ್ಥಿಸಿದರ್ಥಮನೀವನದ್ಭುತಂ
ಮಿಗೆ ಪಡಿಪೊನ್ನಸಾಸಿರಮನಿತ್ತೊಡನಾಡುವನೊಲ್ದಹರ್ನಿಶಂ ೧೧

ಪಲವಾಳಾಪದೊಳೇನೊ ನಂಬಿ ಗಣಿಕಾಗೇಹಕ್ಕೆ ದೂದಟ್ಟೆ ಬಂ
ದೊಲವಿಂ ದೌತ್ಯಮನಾಗಿಪಂ ಬಳಿಯೊಳೊಲ್ದೈತರ್ಪನೇನೆಂದೊಡಂ
ಸಲೆ ಕೇಳ್ದಾಗಳೆ ಮಾಳ್ಪನಂಗಜಹರಂ ಕೇಳೆಂದವಂ ಪೇಳೆ ತ
ದ್ವಿಲಸದ್ವಾಕ್ಯಮನಾಲಿಸುತ್ತೆ ಮೆಱೆಮಿಂಡಂ ಮತ್ತೆ ಕಾಯ್ಪೇಱಿದಂ ೧೨

ವ॥ ಅಂತು ಕಾಯ್ಪೇಱಿ ವ[1]ಲ್ಮೀಕವಲ್ಲಭಂಗೆ ಭುಜಂಗನೊಡನಾಟಂ ತಕ್ಕುದೆಂದು ಗರ್ಜಿಸಿ ವಿಜೃಂಭಿಸಿ—

ಅತಿವೃದ್ಧಂ ಬುದ್ಧಿಗೆಟ್ಟೀ ಖಲನ ಕೆಳೆತನಂಬೊಕ್ಕನೇ ಶಂಭುವತ್ಯು
ದ್ಧ[2]ತನೀತಂ ತತ್ಸಹಾಯಂಬಡೆದ ಮದದಿನೀ ಭಕ್ತಬೃಂದಕ್ಕೆ ಬಂದಾ
ನತಿಯಂ ತಾಂ ಮಾಡದಿಂತೆಯ್ದಿದನೆ ಮಝರೆ ಲೇಸಾದುದೀ ಧೂರ್ತರಿರ್ವ
ಕ್ಷಿತಿಯೊಳ್ಮದ್ಭಕ್ತಸಂದೋಹಕೆ ಪೊಱಗೆನುತುಂ ಡಂಗುರಂಬೊಯ್ದನಾಗಳ್ ೧೩

(ಸ್ತೋತ್ರ ಗೀತೆಗೆ) ಸೋತನೋ ಅಥವಾ ಭಕ್ತಿಗೆ ಒಲಿದನೋ ನಾನರಿಯೆನು ; (ಆದರೆ) ಬೇಡಿದ ಅರ್ಥವನ್ನು ಕೊಡುತ್ತಿದ್ದಾನೆ. ಅದ್ಭುತ ! ಹೆಚ್ಚಾಗಿ ಬೊಗಸೆ ಹೊನ್ನಿನ ಸಾವಿರವನ್ನು (ದಿನವೂ) ಕೊಟ್ಟು ಹಗಲು ರಾತ್ರಿಯಲ್ಲೂ ಇವನೊಡನೆ ಆಡುವನು : ೧೨. ಅನೇಕ ಮಾತಿನಿಂದೇನು ? ಕೇಳು : ಸೌಂದರ ನಂಬ್ಯಣ್ಣನು ಈ ಪರಮೇಶ್ವರನನ್ನು ದೂತಕಾರ್ಯಕ್ಕೆ ಕಳಿಸಲು ಇವನು ಪ್ರೀತಿಯಿಂದಬಂದು, ದೌತ್ಯಕಾರ್ಯವನ್ನಾಗು ಮಾಡಿ ಕೊಡುವನು. ಇವನ ಸಂಗಡಲೇ ಬರುತ್ತಾನೆ, ಏನನ್ನು ಕೇಳಿದರೂ ಆ ಕೂಡಲೇ ಮಾಡುವನು ಎಂದು ಆ ಪೂಜಾರಿಯು ಹೇಳಲು ಅವನ ಆ ಶೋಭಿಸುವ ಮಾತುಗಳನ್ನು ಕೇಳಿ ಮೆರೆಮಿಂಡದೇವನು ಮತ್ತಷ್ಟು ಕೋಪಗೊಂಡನು. ವ॥ ಹೀಗೆ ಕೋಪಗೊಂಡು ವಲ್ಮೀಕೇಶ್ವರನಿಗೆ ಈ ವ್ಯಭಿಚಾರಿಯ ಒಡನಾಟ ಯೋಗ್ಯವೇ ಎಂದುಗರ್ಜನೆಮಾಡಿ ಆಟೋಪಗೊಂಡು—೧೩. ಅತಿವೃದ್ಧನಾದ ಈ ಶಂಭುವು ಬುದ್ಧಿಗೆಟ್ಟ ಈ ದುಷ್ಟನ ಗೆಳೆತನವನ್ನು ಮಾಡಿದನೇ ! ಅತ್ಯುದ್ಧತನಾದ ಈತನು ಆ ಶಿವನ ಸಹಾಯವನ್ನು ಹೊಂದಿದ ಮದದಿಂದ ಬಂದು ಈ ಭಕ್ತಸಮೂಹಕ್ಕೆ ಶಿರಬಾಗದೆ ತಾನು ಮದದಿಂದ ಶಿವಾಲಯವನ್ನು ಹೊಕ್ಕನೇ ! ಭಲರೇ ! ಒಳ್ಳೆಯದಾಯಿತು. ಸೌಂದರ ಮತ್ತು ಈ ಶಿವ ಈ ಇಬ್ಬರು ಧೂರ್ತರೂ ಭೂಮಿಯಲ್ಲಿ ನಮ್ಮ ಭಕ್ತಸಮೂಹಕ್ಕೆ ಹೊರಗು

---

1 ವಾ(ಜ, ದ) 2 ದ್ಯ(ಜ)

ವ॥ ಅಂತು ಡಂಗುರಂಬೊಯ್ದಿಂತು ಗಣಸಮೂಹಂಬೆರಸು ಕೋಲಾಹಲಮಂ ನೆಗಳ್ಚೆ[1] ಗುಡಿಯೊಳಿರ್ದು ಶಂಕರಂ ಕೇಳ್ದು ನಂಬಿಯಿದಿರೊಳ್ಭಕ್ತವತ್ಸಲತೆಯಂ ಪ್ರಕಟಿಸಲ್ಸಾಕಾ[2]ರತ್ವಂ[2]ಬಡೆದು ಬಿಗುರ್ತಂತೆ ಕಂಪಿಸುತ್ತುಂ, ಬೆಮರ್ತು ಬೆಬ್ಬಳೆವೋಗಿ ಕಟ್ಟಳಿದು ಕೆದರ್ದ ಕೆಂಜೆಡೆಗಳನಪಸರದಿಂ ಸುತ್ತಿ ಬಂಧಿಸುತ್ತುಮಿಳಿದೆಳಲ್ವ ತನ್ನುಡಿಗಚ್ಚೆಯುಮನಮರ್ಚಿ ಬಿಗಿದೇಱಿಸುತ್ತುಂ, ಕೂಗಿ ನುಡಿವುದನುಳಿದು ಸೌಂದರನಂ ಕೈಸನ್ನೆಯಿಂ ಸಾರೆಗರೆದೆಮಗಿನ್ನೇತೆಂದು ತನ್ಮನೋಭೂಮಿಯೊಳ್ಭೀತಿಬೀಜಮಂ ಬಿಳ್ತಿ ಬೇರ್ವರಿಯಿಸುತ್ತುಂ, ಶರಣಗಣಂ ಕಾಣ್ಗುಮೆಂದೆಳಲೆವಿಟ್ಟ ಪೂಮಾಲೆಗಳ ಬಂಬಲುಂ ಮಱೆ[3]ಗೊಳುತ್ತುಂ, ಗವಾಕ್ಷವಿವರದೊಳ್ಮೆಲ್ಲಮೆಲ್ಲನೆ ಜೋಲ್ದು ನೋಡುತ್ತುಂ, ಕೆಲಬಲದ [3]ಸೊಪ್ಪುಳ[3]ನಾರೈವುತ್ತುತಿ ಪ್ರಯಾಸದಿಂ ಪೊಱ[4]ಮಟ್ಟು ನಿಡುಮುಸುಂಕೆಸೆಯೆ ನೆರೆದ ಮಂದಿಯೊಳಪೊಕ್ಕು ದೇಗುಲದ ಪಿಂದಣ್ಗೆಯ್ತಂದು ಸುತ್ತುಂಗೋಂಟೆಯ ಕಲ್ಲನೊಂದು ಪಾದಾಗ್ರದಿಂ ಕೆಡಪಿ ರಂಧ್ರದೊಳ್ನುಸುಳ್ದು ಸೌಂದರಂ ಬೆರಸು ನಿಟ್ಟೋಟದಿನೋಡುತ್ತಂ ಕ್ರೋಶಪರಿಮಿತ ಸ್ಥಾನದೊಳೊಂದು ನಂದನಮಿರೆ ಕಂಡಾ ವನಮಂ ಪುಗುತರ್ಪಾಗಳ್—

(ಹೊರಗು)' ಎಂದು ಆ ಕೂಡಲೇ ಡಂಗುರವನ್ನು ಹೊಡೆದುಬಿಟ್ಟನು. ವ॥ ಆ ರೀತಿ ಡಂಗುರವನ್ನು ಹೊಡೆದು ಈ ರೀತಿ ಗಣಸಮೂಹದೊಡನೆ ಕೂಡಿಕೊಂಡು, ಕೋಲಾಹಲವನ್ನುಂಟುಮಾಡಲು ಶಂಕರನು ಗುಡಿಯೊಳಗಿದ್ದೇ ಕೇಳಿಕೊಂಡು, ನಂಬಿಯ ಎದುರಿಗೆ ಭಕ್ತರ ಮೇಲಿನ ವಾತ್ಸಲ್ಯವನ್ನು ತೋರಿಸುವ ಕಾರಣದಿಂದ ಆಕಾರವನ್ನು ಧರಿಸಿ, ಬೆದರಿ ಹಾಗೆ ಹಾಗೆಯೇ ನಡುಗುತ್ತ, ಬೆವರಿ, ಗಾಬರಿಗೊಂಡನು. ಕಟ್ಟುಬಿಚ್ಚಿ ಕೆದರಿಕೊಂಡಿದ್ದ ಜಡೆಗಳನ್ನು ಹಾಗೆಹಾಗೆಯೇ (ಅಪಸರದಿಂದ) ಸುತ್ತಿ ಕಟ್ಟಿಕೊಂಡನು, ಎಳೆದಾಡುತ್ತಿರುವ ಉಟ್ಟ ಪಂಚೆಯ ಕಚ್ಚೆಯನ್ನು ಎಳೆದು ಬಿಗಿದು ಏರಿಸಿ ಕಟ್ಟಿಕೊಂಡನು. ಗಟ್ಟಿಯಾಗಿ ಮಾತನಾಡುವುದನ್ನು ಬಿಟ್ಟು ಸೌಂದರನನ್ನು ಕೈಸನ್ನೆಯಿಂದಲೇ ಹತ್ತಿರಕ್ಕೆ ಕರೆದು ನಮಗೆ ಇನ್ನು ಏನು ಗತಿ ಎಂದು, ಆತನ ಮನೋಭೂಮಿಕೆಯಲ್ಲಿ ಭಯದ ಬೀಜವನ್ನು ಬಿತ್ತಿ, ಅದನ್ನು ಬೇರು ವರಿಯುವಂತೆ ಮಾಡಿದನು. ಶರಣರ ಸಮೂಹ ನೋಡಿ ಬಿಟ್ಟೀತೆಂದು ನೇತಾಡುತ್ತಿದ್ದ ಹೂಮಾಲಿಕೆಗಳ ಸಮೂಹವನ್ನು ಮರೆಗೊಳಿಸಿ ಜಾಲಂದ್ರದ ತೂತುಗಳಿಂದ ಮೆಲ್ಲಮೆಲ್ಲನೆ ಇಣಿಕಿ (ಹೊರಗಿನ ಶಿವಗಣದ ಉಗ್ರಸ್ಥಿತಿಯನ್ನು) ನೋಡುತ್ತಿದ್ದನು, ಅಕ್ಕಪಕ್ಕದಲ್ಲುಂಟಾಗುತ್ತಿದ್ದ ಸಪ್ಪಳವನ್ನು ಆಲಿಸುತ್ತಿದ್ದನು. ಅತ್ಯಂತ ಪ್ರಯಾಸದಿಂದ ಉದ್ದವಾದ ಮುಸುಕನ್ನು ಮುಖದ ಮೇಲೆ ಎಳೆದುಕೊಂಡು ಹೊರಹೊರಟು, ನೆರೆದ ಮಂದಿಯ ಒಳಗೆ ಹೊಕ್ಕು ನುಸುಳಿಕೊಂಡು ದೇವಾಲಯದ ಹಿಂಭಾಗಕ್ಕೆ ಬಂದು, ಸುತ್ತಲೂ ಇದ್ದ ಕೋಟೆಯ ಒಂದು ಕಲ್ಲನ್ನು ಪಾದದ ತುದಿಯಿಂದ ಕೆಡವಿ, ಆ ತೂತಿನಿಂದ ನುಸುಳಿಕೊಂಡು, ಸುಂದರ ನಂಬಿಯೊಡನೆ ನಿಟ್ಟೋಟದಿಂದ ಓಡುತ್ತ ಒಂದು ಕ್ರೋಶದಳತೆ

1 ಳ್ಚಿ(ಗ) 2 ರಂ(ಜ) 3 ಸೊಂಪುಗಳ(ಜ) 4 ದ(ಅ, ದ)

ವಿಳಸತ್ಪುಷ್ಪಿಣಿಯುಂ ಲತಾಲಲನೆಯುಂ ಮೈಸೋಂಕಿ ಚಂಡಾಳಿಯೊ
ಳ್ಕೆಳೆಗೊಂಡಪ್ಪುತೆ ಮಿತ್ರಜಾಯೆಯುಮುದಂಚದ್ರಾಜಹಂಸಾಂಗನಾ
ಕುಳಮುಂ ಚುಂಬಿಸಿ ಪಂಕಜಾಕರದ ನೀರೊಳ್ಮಿಂದು ತದ್ದೋಷಮುಂ
ಕಳೆಯಲ್ದೇವನ ಸೇವೆಗೆಯ್ದುವವೊಲೇಂ ಬಂದತ್ತೊ ಮಂದಾನಿಲಂ ೧೪

ವ॥ ಅಂತು ಬಂದ ಮಂದಾನಿಲನಂ ಮನವೆಗೊಂಡು ಖಂಡೇಂದುಧರಂ ಬರೆವರೆ—

ತಳಿರೆಲೆ ಮೊಗ್ಗೆಯುಳ್ಳಲರಲರ್ಮಿಡಿ ಬಲ್ಮಿಡಿ ದೋರೆಯುಚ್ಚಪ
ಣ್ಬೆಳಸಿದ ಕೊಂಬುಗೊಂಬೊಳಿಡಿದೊಪ್ಪಿರೆ ಕೀರ ಮಯೂರ ಭೃಂಗ ಕೋ
ಕಿಳ ಕುಳಮಲ್ಲಿ ತೀವಿರೆ ಮರಂಗಳೊಳರ್ಕ ಸುಧಾಂಶುರೋಚಿಯು
ಚ್ಚಳಿಸದ ತದ್ವನಂ ಬಗೆಗಡಂಗುವೊಡುತ್ಸವಮಿತ್ತುದೀಶನಾ ೧೫

ಎಳೆದಳಿರಾಂತಶೋಕೆ ನನೆ ತೀವಿದ ಮಲ್ಲಿಗೆ ಪೂತ ಚಂಪಕಂ
ಮಿಳಿಮಲರ್ಜೊಂಪಮುಂ ತಳೆದ ಮಾಧವಿ ಬಲ್ಮುಗುಳಾಂತ ಜಾತಿ ಕಾ

ಯಲ್ಲಿರುವ ನಂದನವನವನ್ನು ಕಂಡು ಆ ವನವನ್ನು ಹೊಗುವಾಗ—೧೪. ಆಗ ಮಂದಾನಿಲವು ಶೋಭಿಸುವ ಪುಷ್ಪಿಣಿಯೆನಿಸಿದ (ರಜಸ್ವಲೆಯೆನಿಸಿದ) ಲತೆಯೆಂಬ ಲಲನೆಯ ಮೈಯನ್ನು ಸೋಂಕುತ್ತ, ದುರುಳ ದುಂಬಿಗಳಲ್ಲಿ ಸ್ನೇಹದಿಂದ ಅಪ್ಪುತ್ತ, (ದುಷ್ಟರ ಸ್ನೇಹಮಾಡಿ ಅವರನ್ನು ಅಪ್ಪಿಕೊಳ್ಳುತ್ತ) ಸೂರ್ಯನ ಛಾಯೆಯೆನಿಸಿದ ಕಮಲ ವನ್ನೂ, ಶ್ರೇಷ್ಠವಾದ ರಾಜಹಂಸಪಕ್ಷಿಯೆಂಬ ಅಂಗನೆಯರ ಸಮೂಹವನ್ನೂ ಚುಂಬಿ ಸುತ್ತ, (ಮಿತ್ರಪತ್ನಿಯನ್ನೂ, ರಾಜಶ್ರೇಷ್ಠರ ಪತ್ನಿಯರನ್ನೂ ಚುಂಬಿಸುತ್ತ) ತನ್ನ ಆ ದೋಷವನ್ನು ಕಳೆಯಲು ಸರೋವರದ ನೀರಿನಲ್ಲಿ ಸ್ನಾನಮಾಡಿ, ದೇವನಾದ ಪರಮೇಶ್ವ ರನ ಸೇವೆ ಮಾಡಲಿಕ್ಕೆಂದು ಏನು ಬಂದಿತೋ ! [ನಂಬಿಯಣ್ಣನೊಡನೆ ಈಶ್ವರನು ಆ ಉದ್ಯಾನವನಕ್ಕೆ ಬಂದಾಗ ಶೈತ್ಯ ಸೌರಭ್ಯ ಮಾಂದ್ಯವಾದ ಮಂದಾನಿಲವು ಬೀಸಿತೆಂದು ಭಾವ] ವ॥ ಈ ರೀತಿಯಲ್ಲಿ (ಬೀಸುತ್ತ) ಬಂದ ಮಂದಾನಿಲನನ್ನು ಮನಸ್ಸಿನಿಂದ ಅನುಭವಿಸುತ್ತ ಚಂದ್ರ ಶಕಲ ಧರನಾದ ಈಶ್ವರನು (ಆ ಉದ್ಯಾನದಲ್ಲಿ) ಬರುಬರು ತ್ತಿರಲು—೧೫. ತಳಿರು, ಎಲೆ, ಮೊಗ್ಗು, ಅರಳಿದ ಹೂವು, ಮಿಡಿ, ದೊಡ್ಡಮಿಡಿ, ದೋರೆಹಣ್ಣು, ಪಕ್ವವಾದ ಹಣ್ಣುಗಳಿಂದ ತುಂಬಿದ ಕೊಂಬೆಗಳು, (ಆ) ಕೊಂಬೆಗಳಲ್ಲಿ ತುಂಬಿಕೊಂಡು ಶೋಭಿಸುವ, ಗಿಳಿ, ನವಿಲು, ಭೃಂಗ, ಕೋಗಿಲೆಗಳ ಸಮೂಹದಿಂದ ತುಂಬಿದ ದಟ್ಟವಾದ ಮರಗಳಲ್ಲಿ ಸೂರ್ಯ ಚಂದ್ರರ ಕಿರಣಗಳ ಬೆಳಕು ಇಳಿಯದಂತಿರುವ ಆ ವನವು ಮನಸ್ಸಿಗೆ ಒಪ್ಪುವುದಾಗಿ ಈಶ್ವರನ ಮನಸ್ಸಿಗೆ ಉತ್ಸುಕತೆಯನ್ನುಂಟು ಮಾಡಿತು. ೧೬. ಎಳೆಯ ತಳಿರನ್ನು ಧರಿಸಿದ ಅಶೋಕವೃಕ್ಷ, ಹೂವಿನಿಂದ ತುಂಬಿದ ಮಲ್ಲಿಗೆಯ ಬಳ್ಳಿ, ಹೂಬಿಟ್ಟ ಸಂಪಿಗೆ ಮರ, ಅಲ್ಲಾಡುತ್ತಿರುವ ತಳಿರಿನ ಕುಚ್ಚುಗಳನ್ನು ಧರಿಸಿರುವ ಮಾಧವೀಲತೆ, ದಪ್ಪನೆಯ ಮೊಗ್ಗುಗಳನ್ನು ಹೊಂದಿರುವ ಜಾಜಿಯಬಳ್ಳಿ,

ಯ್ಗಳನುೞಿ ಪೊತ್ತು ನಿಂದ ಪೊಸತೆ‌ಂಗು ನಿಲುಂಬಿದ ಪಣ್ಣಬಿಣ್ಪನಾ
ಳ್ದಿಳೆಗೆಱಗಿರ್ದ ಬಾಳೆ ಬಗೆಗೊಂಡುದು ತದ್ವನದೊಳ್ಪುರಾರಿಯಾ ೧೬

ವ॥ ಮತ್ತಮಲ್ಲಿ ಮಕರಧ್ವಜವಿಜಯಯಾತ್ರೆಗೆ ಬಸಂತಂ ಪೊಯ್ದಿಂದ್ರಗೋಪದ ಗೂಡಾರ ಮೆನಿಸಿ ರಂಜಿಸಿ ತಳಿರ್ತ ಮಾಮರದಳ್ಳೆಗೊಂಬಿನೊಳ್ಕುಳ್ಳಿರ್ದೆಲರಲ್[1]ಪದಿನೊಲೆದು ತೂಗುತಿನಿದೊಸರ್ವ ತನಿವಣ್ಣಂ ಮನವಾರೆ ನೋಡಿ ಪಕ್ಕದಿಂದಪ್ಪಿ ಚಂಚುಪುಟದಿಂ ಕರ್ದುಂಕಿ ಸೋರ್ವಿನಿರಸಮಂ ಪಕ್ಕಮೆಳಲೆ ಚೀತ್ಕಾರರವಂ ನಿಮಿರೆ ನಾಲಗೆಗೊನೆಯಿಂ ಸವಿಸವಿದು ಕಣ್ಮುಚ್ಚಿ ಪರಮಾನಂದ ಪರವಶತೆಯಿಂ ತಣಿದು ತೇಗಿ ಗಳಗಳನೆ ಗಳಪುವರಗಿಳಿಗಳ ಬಳಗಮುಂ ಸಲ್ಲಲಿತ ಪಲ್ಲವೋಲ್ಲಸಿತ ಸರಲಶಾಖಾಗ್ರಮನೇಱಿ ಮೀಱಿ ಕೊರಲಂ ನೀಡಿ ಮಿಂಚುವ ಚಂಚುವಿಂ ಸೆಳೆದೆಳೆದು ಕರ್ದುಂಕಿ ಚುದಳಿರ ರಸಮನಂದಂಬೆತ್ತು ಸವಿದು ನಲಿನಲಿದು ಚಂಚತ್ಪಂಚಶರನ ಬಂಚರದಂತೆ ಪಂಚಮೆನೆ ಪಂಚಮದಿಂಚರಂದೋಱಿ ಕಳಕಳಂಗೆಯ್ವ ಕಳಕಂಠಂಗಳುಮರೆವಿರಿದ ಸರಸಪರಿಮಳದರಲ ಕುಸುಂಕ

ಹೆಚ್ಚಾಗಿ ಕಾಯಿಗಳನ್ನು ಹೊತ್ತು ನಿಂತ ತೆಂಗಿನಗಿಡ, ಒತ್ತೊತ್ತಾಗಿರುವ ಹಣ್ಣುಗಳನ್ನು ಹೊಂದಿ, ಭಾರದಿಂದ ಬಾಗಿರುವ ಬಾಳೆಯಗಿಡ–ಇವು ಆ ವನದಲ್ಲಿ ಈಶ್ವರನ ಮನಸ್ಸನ್ನಾಕರ್ಷಿಸಿದವು. ವ॥ ಮತ್ತು ಆ ವನದಲ್ಲಿ ಮನ್ಮಥನ ವಿಜಯಯಾತ್ರೆಗೆ ವಸಂತನು ಹೊಡೆದ ಕೆಂಪುಬಟ್ಟೆಯ ಗೂಡಾರವೋ ಎಂದೆನ್ನುವಂತೆ ರಂಜಿಸಿತೋರುವ ಚಿಗಿತ ಮಾವಿನಮರದ ಸೆಳೆಗೊಂಬೆಯಲ್ಲಿ ಕುಳಿತುಕೊಂಡು ಬೀಸುವ ಗಾಳಿಯಿಂದ ಒಲೆದು ತೂಗಾಡುತ್ತ ಮಧುರರಸವು ಒಸರುತ್ತಿರುವ (ಜಿನುಗುತ್ತಿರುವ) ಪಕ್ವವಾದ ಹಣ್ಣುಗಳನ್ನು ಮನಸ್ಸಂತೋಷದಿಂದ ನೋಡಿ ಪಕ್ಕ (ಪಕ್ಷ) ಗಳಿಂದ ಅಪ್ಪಿಕೊಂಡು ಕೊಕ್ಕಿನ ತುದಿಯಿಂದ ಕುಕ್ಕಿ ಸೋರುವ ಆ ಮಧುರ ರಸವನ್ನು ಎರಡೂ ರೆಕ್ಕೆಗಳನ್ನು ಜೋಲು ಬಿಟ್ಟು, ಚೀತ್ಕಾರಧ್ವನಿಯು ಹೊರಹೊಮ್ಮುತ್ತಿರಲು, ನಾಲಿಗೆಯ ಕೊನೆಯಿಂದ ಸವಿನೋಡಿ ಕುಡಿಯುತ್ತ, ಕಣ್ಣುಗಳನ್ನು ಮುಚ್ಚಿ ಪರಮಾನಂದದಿಂದ ಮೈಮರೆತು, ತೃಪ್ತಿಗೊಂಡು ತೇಗಿ ಗಳಗಳ ಎಂದು ಮಾತನಾಡುವ ಅರಗಿಳಿಗಳ (ರಾಜಕೀರ) ಬಳಗವು (ಶೋಭಿಸುತ್ತಿತ್ತು). ಮನೋಹರವಾದ (ಮಾವಿನ) ಚಿಗುರಿನಿಂದ ಶೋಭೆಗೊಂಡ ನಿಡಿದಾದ ಕೊಂಬೆಯ ತುದಿಯನ್ನೇರಿ, ಉದ್ದಕ್ಕೆ ಕೊರಳನ್ನು ಮುಂದೆ ಚಾಚಿ, ಹೊಳೆಯುವ ಕೊಕ್ಕಿನಿಂದ, ಜಗ್ಗಿ ಎಳೆದುಕೊಂಡು ಕೊಕ್ಕಿನಿಂದ ಕುಕ್ಕಿ ಕೆಂಪಾದ ಚಿಗುರಿನ ರಸವನ್ನು ಆನಂದಗೊಂಡು ಕುಡಿದು ವಿಶೇಷವಾಗಿ ನಲಿದು (ಅಧಿಕ ಸಂತೋಷಗೊಂಡು), ಪ್ರಕಾಶಮಾನವಾದ ಮನ್ಮಥನ ವೀಣೆ ನುಡಿದ ಹಾಗೆ ವಿಸ್ತಾರಗೊಳ್ಳುವಂತೆ ಪಂಚಮ ಸ್ವರದ ಇನಿದಾದ ಧ್ವನಿಯನ್ನು ತೋರಿಸುತ್ತ ಕಳಕಳ ಶಬ್ದಮಾಡುತ್ತಿರುವ ಕೋಗಿಲೆಗಳು (ಶೋಭಿಸುತ್ತಿದ್ದವು). ಅರ್ಧ ಅರಳಿದ ಮಕರಂದ ರಸಭರಿತವಾದ ಸುಗಂಧ

1 ಲೇ(ಜ)

ಯೊಳ್ಮುಸುಱಿ ಮುಸುಂಬನಿಟ್ಟು ಪಸಿವಡಂಗೆ ಬಂಡುಂಡು ಪಿಂಡುಗೊಂಡು ಮಂಡಳಿಸಿನೆಗೆದ ಕಾಂಡ ಜಳಧರಶಂಕೆಯುಂ ಕಲಾಪಿಗಳ್ಗೆಸಗಿ ನರ್ತನಂಗೆಯ್ಸಿ ಪರಿದುಪರಿವಾರಿಗೊಂಬ ಭೃಂಗಂಗಳಂ ತಿಳಗೊಳದೊಳ್ಸುಳಿದು ಸುತ್ತಿ ನಳಿನವಿಳಸಿತಸುರಭಿರಜಮಂ ಕೊರಲ್ಕುಸಿವಿನಂ ಪೊತ್ತೆತ್ತಿ ಪೋಜಲಾಱದಡಿಗಡಿಗೆ ನಿಂದುನಿಂದಶೋಕಾನೋಕಹದ ಶಾಖೆಯುಂ ಮಲಂಗಿ ಮಧುಪರವವ್ಯಾಜದಿಂ ನರಲ್ದು ಮಂದ ಮಂದಂ ಬರ್ಪ ಗಂಧವಹನುಂ, ಸಲೆ ಮೆಱೆವ ಮನೋಜ್ಞದಳ ಫಳಕುಸುಮವಿಲಸಿತ ಕುಂದ ಕುಟಜ ಮಾಕಂದ ಮಂದಾರ ಜಂಬು ಜಂಬೀರ ನಾರಂಗಲುಂಗ ಮಾತುಳಂಗ ನಾಳಿಕೇರ ಪಟಲ ತಮಾಲ ತಾಲ ಹಿಂತಾಲ ಪೂಗ ಪುನ್ನಾಗ ನಾಗ ಕೇಸರ ಕುರವಕ ಬಕ ವಕುಳ ತಿಳಕ ಚಂಪಕ ದಾಡಿಮ ಪ್ರಮುಖ ತರುನಿಕರನಿಬಿಡಿತ ಜಾತಿ ಯೂಥಿಕಾ ಮಾಲತಿ ಮಲ್ಲಿಕಾ ಮಾಧವೀ ಮುಖಲಲಿತ ಲತಾ ವಿತಾನಸಮುದಂಚಿತಮೆನಿಸಿ ಕಂಪಿನ ಕಣಿಯುಂ ತಂಪಿನ ತವರ್ಮನೆಯುಮರಲಂಬನ ಬಲದ ಗರಡಿಯುಂ ಬಸಂತರಾಜನ ಸಿಬಿರಮುಂ ಚೈತ್ರಲಕ್ಷ್ಮೀಚಿತ್ರಶಾಲೆಯುಂ ವಿಯೋಗಿ ನಿವಹಕಾರಾಗಾರಮುಂ ಕಳಕಂಠಕುಳಸಂಗೀತ ಸದನಮುಂ ಶುಕನಿಕರಪಠನಾಗಾರಮುಮಳಿಪ್ರತಾನಾನೂನ ಪಾನೀಯಮಂಟಪಮುಂ ರತಿದೇವಿಯ

ಪುಷ್ಪಗಳ ಗೊಂಚಲುಗಳ ಸಂದಿಯಲ್ಲಿ ಮುತ್ತಿ ಮುಸುಡನ್ನು ಚಾಚಿ ಇಟ್ಟು ಹಸಿವು ತೊಲಗುವ ಹಾಗೆ ಮಕರಂದ ರಸವನ್ನು ಕುಡಿದು ಹಿಂಡು ಹಿಂಡಾಗಿ ಸುತ್ತುವರಿದು ಹಾರಾಡುವ ಆಕಾಶದಲ್ಲಿ ಮೋಡಗಳ ಶಂಕೆಯನ್ನು ನವಿಲುಗಳಿಗೆ ಉಂಟುಮಾಡುತ್ತ (ಅವುಗಳಿಂದ ಮಳೆಗಾಲ ಬಂತೆಂಬ ಭ್ರಮೆಯಿಂದ) ನರ್ತನಮಾಡಿಸುತ್ತ ಹರಿದು ಸಮೂಹಗೊಂಡು ಹಾರಾಡುತ್ತಿರುವ ಭ್ರಮರಗಳು (ಶೋಭಿಸುತ್ತಿದ್ದವು). ತಿಳಿನೀರಿನ ಸರೋವರದಲ್ಲಿ ಸುತ್ತಾಡಿ, ಕಮಲದ ಶೋಭಿಸುವ ಸುಗಂಧಯುಕ್ತವಾದ ಧೂಳನ್ನು ಗೋಣು ಕುಸಿಯುವ ಹಾಗೆ ಹೊತ್ತು ಎತ್ತಿಕೊಂಡು ಹೊರಲಾರದೆ ಹೆಜ್ಜೆಹೆಜ್ಜೆಗೆ ನಿಲ್ಲುತ್ತ ನಿಲ್ಲುತ್ತ ಅಶೋಕವೃಕ್ಷದ ಕೊಂಬೆಗಳಲ್ಲಿ ಮಲಗಿ ದುಂಬಿಗಳ ಝೇಂಕಾರ ಧ್ವನಿಯ ನೆಪದಲ್ಲಿ ನರಳುವಂತೆ ತೋರಿಸಿಕೊಂಡು ಮಂದ ಮಂದವಾಗಿ ಬೀಸುತ್ತ ಬರುತ್ತಿರುವ (ಶೈತ್ಯ, ಸೌರಭ್ಯ ಮಾಂದ್ಯ) ಮಾರುತವು (ಮನೋಹರವಾಗಿತ್ತು). ಚೆನ್ನಾಗಿ ಶೋಭಿಸುತ್ತಿರುವ ಮನೋಹರವಾದ ದಳಗಳಿಂದ, ಹೂಹಣ್ಣುಗಳಿಂದ ಪ್ರಕಾಶಿಸುವ ಮಲ್ಲಿಗೆ, ಕಾಡುಮಲ್ಲಿಗೆ, ಸಿಹಿಮಾವು, ಮಂದಾರ, ನೇರಿಳೆ, ಲಿಂಬೆ, ಕಿತ್ತಳೆ, ಲುಂಗ (?), ಮಾದಳ, ತೆಂಗು, ಪಾಟಲಿ, ಹೊಂಗೆ, ತಾಳೆ, ಶ್ರೀತಾಳೆ, ಅಡಿಕೆ, ಸುರಹೊನ್ನೆ, ನಾಗಕೇಸರ, ಗೋರಂಟಿ, ಬಕಪುಷ್ಪವೃಕ್ಷ, ಬಕುಳ, ತಿಳಕವೃಕ್ಷ, ಸಂಪಿಗೆ, ದಾಳಿಂಬೆಯೇ ಮೊದಲಾದ ಗಿಡಗಳ ಸಮೂಹದಿಂದ ದಟ್ಟವಾಗಿ, ಜಾಜಿ, ಯೂಥಿಕೆ (ಕಾಡುಮಲ್ಲಿಗೆಯ ಒಂದು ಜಾತಿ ?) ಮಾಲತಿ, ಮಲ್ಲಿಗೆ, ಮಾಧವಿಯೇ ಮೊದಲಾದ ಮನೋಹರವಾದ ಲತೆಗಳ ಸಮೂಹಗಳಿಂದ ದಟ್ಟವಾಗಿ ಹೆಣೆದುದೊಂದುದೆನಿಸಿ ಕಂಪಿನ ಗಣಿಯೆನಿಸಿತ್ತು ; ತಂಪಿನ ತವರು ಮನೆಯೆನಿಸಿತ್ತು ; ಮನ್ಮಥನ ಶಕ್ತಿವರ್ಧಕ ವ್ಯಾಯಾಮಶಾಲೆ (ಗರಡಿ) ಯೆನಿಸಿತ್ತು. ವಸಂತರಾಜನ ಬೀಡಾಗಿಯೂ, ಚೈತ್ರಮಾಸ

ಸೌಭಾಗ್ಯಭವನವುಂ ಮಂದಾನಿಲನ ಕೇಳೀ ನಿಳಯಮುಮನಂಗರಾಜನ ರಾಜಧಾನಿಯುಂ ತಾನೆಂದೆನಿಸಿ ಕಂಗೊಳಿಪುದ್ಯಾನವುಂ ಸೌಂದರನೊಡನೆ ಪೊಕ್ಕು ನಂದನದಂದಮುವನಲೋಕಿಸುತ್ತುಂ ಶುಕಪಿಕ ಮಧುಕರ ಪ್ರಕರ ಮಧುರರವಮನಾಕರ್ಣಿಸುತ್ತುಂ ಮುಂದಣ್ಗೆ ನಡೆತರ್ಪಾಗಳ್—

ವಿದಳತ್ಪುಷ್ಪ ಸ್ಫುರತ್ಸೌರಭರಸಭರಲುಬ್ಧಭ್ರಮದ್ಭೃಂಗಸಂಘಾ
ಸ್ಪದಚಂಚತ್ಪರ್ಣ ಕರ್ಣಂ ಗಳಿತ ಮಧುಮದಂ ಕೋರಕೋದಾರಭಾಸ್ವ
ದ್ರದನಂ ಪ್ರೋತ್ತುಂಗ ಶಾಖಾಕರಮುರುಸುಮನೋರೇಣುಶುಭ್ರಾಂಗಮಿಂಬಾ
ದುದು ಶಕ್ರೇಭಂಬೊಲಾನಂದನದೊಳಸದಳಂ ಪಾರಿಜಾತ ಕ್ಷಮಾಜಂ ೧೭

ಬಳಸಿ ನಿಲುಂಬಿ ತೀವಿದಳಿವಿಂಡು ಪಯೋಧರಮಲ್ಲಿ ತಳ್ತನ
ಲ್ಗಿಳಿಗಳ ಸಾಲ್ಸುರೇಂದ್ರಧನು ಕೆಂದಳಿರುಣ್ಮುವ ಮಿಂಚು ಕೋಕಿಲಾ
ವಳಿ ಪುಗಿಲೆಂಬ ಬಲ್ದನಿ ಘನಧ್ವನಿಯಾಗೆ ಗಳನ್ಮರಂದಮೇ
ಮಳೆಯೆನೆ ನೀಲಕಂಠ ನಯನೋತ್ಸವಮಿತ್ತುದು ತತ್‌ಕ್ಷಮಾರುಹಂ ೧೮

ವೆಂಬ ಲಕ್ಷ್ಮಿಯ ಚಿತ್ರಶಾಲೆಯಾಗಿಯೂ, ವಿಯೋಗಿ (ಅಗಲಿಕೆಗೊಂಡವರ) ಸಮೂಹದ ಮನೆಯಾಗಿಯೂ, ದುಂಬಿಗಳ ಸಮೂಹದ ಊನವಿಲ್ಲದ ಪಾನಗೃಹವಾಗಿಯೂ, ರತಿ ದೇವಿಯ ಸಂಪತ್ತಿನ ಗೃಹವಾಗಿಯೂ, ಮಂದಮಾರುತನ ಆಟಪಾಡುವ ಮನೆ ಯಾಗಿಯೂ (ಕ್ರೀಡಾಗೃಹ), ಮನ್ಮಥನೆಂಬ ರಾಜನ ರಾಜಧಾನಿಯಾಗಿಯೂ, ಎಂದೆನಿಸಿ ಕಂಗೊಳಿಸುವ ಉದ್ಯಾನವನವನ್ನು (ಶಿವನು) ಸೌಂದರ ನಂಬಿಯೊಡನೆ ಹೊಕ್ಕು ಆ ನಂದನವನದ ಚೆಲುವನ್ನು ನಿರೀಕ್ಷಿಸುತ್ತಲೂ, ಗಿಳಿ ಕೋಗಿಲೆ ದುಂಬಿಗಳ ಸಮೂಹದ ಮನೋಹರವಾದ ಧ್ವನಿಯನ್ನು ಕೇಳುತ್ತಲೂ ಮುಂಭಾಗಕ್ಕೆ ಬರುತ್ತಿರುವಾಗ— [ಕುಂದ, ಮಲ್ಲಿಕಾ, ಕುಟಜ–ಇವೆಲ್ಲ ಮಲ್ಲಿಗೆಯ ಒಂದೊಂದು ಪ್ರಕಾರಗಳು. ಮಲ್ಲಿಗೆ ಯಲ್ಲಿ ಅನೇಕ ಪ್ರಕಾರಗಳಿರುವುದು ಪ್ರಸಿದ್ಧ] ೧೭. ಅರಳಿರುವ ಹೂವುಗಳ ಶೋಭಿಸುವ ಸುಗಂಧಮಯವಾದ ಮಕರಂದ ರಸದ ಉತ್ಕಟೇಚ್ಛೆಯಿಂದ ಆಸೆಪಟ್ಟು ಸುತ್ತುವರಿದ ಭ್ರಮರಗಳನ್ನು ಅಲ್ಲಾಡುತ್ತಿರುವ ಎಲೆಗಳೆಂಬ ಕಿವಿಗಳಿಂದ ಹೋಗಲಾಡಿಸುತ್ತಲೂ, ಮಕರಂದವೆಂಬ ಮದೋದಕದಿಂದಲೂ, ಮೊಗ್ಗುಗಳ ಸಮೂಹವೆಂಬ ಪ್ರಕಾಶಮಾನ ವಾದ ದಂತ (ಕೊಂಬು) ಗಳಿಂದಲೂ, ಬಹು ಉದ್ದವಾದ ಶಾಖೆಯೆಂಬ ಸುಂಡಿಲಿ ನಿಂದಲೂ, ಶ್ರೇಷ್ಠವಾದ ಪುಷ್ಪ ಧೂಳೆಂಬ ಬಿಳಿದಾದ ದೇಹದಿಂದಲೂ, ಒಂದು ಅಸದೃಶವಾದ ಪಾರಿಜಾತ ವೃಕ್ಷವು ಇಂದ್ರನ ಐರಾವತದಂತೆ ಆ ನಂದನದಲ್ಲಿ ಶೋಭೆ ಯಿಂದ ಕೂಡಿತ್ತು. ೧೮. ಆ ಪಾರಿಜಾತ ವೃಕ್ಷವು–ಸುತ್ತಲೂ ಬಳಸಿ ಹಾರಾಡುತ್ತ ತುಂಬಿಕೊಂಡಿರುವ ದುಂಬಿಗಳ ಸಮೂಹವೇ ಮೋಡಗಳಾಗಿ, ಆ ಮರದಲ್ಲಿ ತುಂಬಿದ ಗಿಳಿಗಳ ಸಾಲುಗಳೇ ಕಾಮನಬಿಲ್ಲಾಗಿ (ಇಂದ್ರಧನುಸ್ಸಾಗಿ), ಕೆಂಪಾದ ಚಿಗುರುಗಳ ಪ್ರಕಾಶವೇ ಹೊರಹೊಮ್ಮುವ ಮಿಂಚಾಗಿ, ಕೋಗಿಲೆಗಳ ಪುಗಿಲ್ ಎಂಬ ದೊಡ್ಡ

ವ|| ಅಂತೆಸೆವ ಪಾರಿಜಾತಮಹೀಜಾತದ ತಳದ ತಣ್ಣೆಳಲ ಚಂದ್ರಕಾಂತಶಿಲಾತಳದಲರ್ವಸೆಯೊಳ್ಕುಳ್ಳಿರ್ದು ಸೌಂದರನಿಂ ಪದತಳಮನೊತ್ತಿಸಿಕೊಳುತ್ತುಂ ಮಂದಾನಿಲಂಗೆ ಮೆಯ್ಯೊಟ್ಟಿ ಪರಿದೋಡಿ ಬಂದ ಬಳಲ್ಕೆಯುಂ ಪರಿಹರಿಸಿಕೊಳುತ್ತುಂ ವಲ್ಮೀಕವಲ್ಲಭನಿರೆ ಸೌಂದರಂ ಮೆಲ್ಲನಿಂತೆಂದಂ—

ಇನಿತೊಂದುಬ್ಬಸಮಾದುದು
ಘನಮಹಿಮ ಮಹೇಶ ನಿನಗಿದೇಂ ಕಾರಣಮಿಂ
ದೆನಗಿದಱಿರವಂ ಪೇಳೆಂ
ದೆನ್ಕೆನಂಬಿಗೆ ಪೇಳ್ದನಂಬಿಕಾಧವನಾಗಳ್ ೧೯

ಎನಗಿನ್ನೆಲ್ಲಿಯ ಮಹಿಮೆಯ
ದೆನಗಿನ್ನೆತ್ತಣದೊ ಬಾಳ್ಕೆ ಮದ್ಭಕ್ತಗಣಂ
ಮುನಿದು ಪೋಗೆಂದ ಬಳಿಕಿ
ನ್ನೆನಗಾವುದು ಗತಿ ಬಳಲ್ದೆನೀ ಬೇವಸದಿಂ ೨೦

ಎಂದೊಡೆ ಸೌಂದರನಾಗಳ್
ತಂದೆಯಿದೇವೇಳ್ವೆ ನೀಂ ಸ್ವತಂತ್ರಂ ಗಡ ನಿ
ನ್ನಿಂದಧಿಕರೆ ಭಕ್ತರ್ಪೇ
ಳೆಂದೆನೆ ಶಶಿಮೌಳಿ ಮುಗ್ಧ ಕೇಳೆನುತೊರೆದಂ ೨೧

ದನಿಯೇ ಮೇಘಧ್ವನಿ (ಗುಡುಗಿನ ಧ್ವನಿ) ಯಾಗಿ, ಸುರಿಯುತ್ತಿರುವ ಮಕರಂದವೇ ಮಳೆಯಾಗಿ, ನೀಲಕಂಠನಾದ ಶಿವನ ಕಣ್ಣುಗಳಿಗೆ ಉತ್ಸವವನ್ನುಂಟುಮಾಡಿತು. [ನೀಲವಾದ ಕಂಠವನ್ನುಳ್ಳ ನವಿಲಿನ ಕಣ್ಣಿಗೆ ಮಳೆಗಾಲ ಬಂದಿತೆಂದು ಉತ್ಸವವನ್ನುಂಟು ಮಾಡಿತು] ವ|| ಆ ರೀತಿಯಲ್ಲಿ ಶೋಭಿಸುವ ಪಾರಿಜಾತವೃಕ್ಷದ ತಳದಲ್ಲಿರುವ ತಂಪಾದ ನೆಳಲಿನಲ್ಲಿರುವ ಚಂದ್ರಕಾಂತಶಿಲೆಯ ಜಗುಲಿಯ ಮೇಲೆ ಹೂವಿನ ಹಾಸಿಗೆಯ ಮೇಲೆ ಕುಳಿತುಕೊಂಡು ಸೌಂದರನಂಬಿಯಿಂದ ಕಾಲುಗಳನ್ನು ಒತ್ತಿಸಿಕೊಳ್ಳುತ್ತ, ಮಂದ ಮಾರುತಕ್ಕೆ ಮೈಯನ್ನೊಡ್ಡಿ ಹರಿದು ಓಡಿಬಂದ ಬಳಲಿಕೆಯನ್ನು ಪರಿಹಾರಮಾಡಿ ಕೊಳ್ಳುತ್ತ ಆ ವಲ್ಮೀಕನಾಥೇಶ್ವರನಿರುತ್ತಿರಲು ಸೌಂದರನಂಬಿಯು ಮೆಲ್ಲನೆ ಹೀಗೆಂದನು. ೧೯. 'ಘನಮಹಿಮಾಶಾಲಿಯಾದ ಮಹೇಶ್ವರನೇ, ನಿನಗೆ ಇದೇನು ಕಾರಣದಿಂದ ಇಷ್ಟೊಂದು ಆಯಾಸವುಂಟಾಯಿತು ? ಈಗ ನನಗೆ ಇದರ ವಿಚಾರವನ್ನು ಹೇಳು' ಎಂದೆನಲು ಆಗ ಅಂಬಿಕಾಪತಿಯಾದ ಶಿವನು ನಂಬಿಗೆ ಹೀಗೆ ಹೇಳಿದನು. ೨೦. ಆ ಮಹಿಮೆಯೆಂಬುದು ನನಗೆ ಇನ್ನೆಲ್ಲಿಯದು ! ನನಗೆ ಬಾಳುವಿಕೆಯಾದರೂ ಇನ್ನು ಎತ್ತಣದ್ದು ! ನನ್ನ ಭಕ್ತಗಣವು ಕೋಪದಿಂದ 'ಹೊರಗು' ಎಂದು ಬಹಿಷ್ಕರಿಸಿದ ಬಳಿಕ ಎನಗೆ ಗತಿಯಿನ್ನಾವುದು ! ಈ ದುಮ್ಮಾನದಿಂದ ಬಳಲಿದ್ದೇನೆ'. ೨೧. ಹೀಗೆ ಶಿವನು ಹೇಳಲು ಆಗ ಸೌಂದರನು 'ತಂದೆಯೇ, ಇದೇನು ಹೇಳುತ್ತೀಯೆ ! ನೀನು ಸ್ವತಂತ್ರ

ವಿತತಸ್ವಾತಂತ್ರ್ಯಮೆಲ್ಲಾಗಳುಮೊಳವೆನಗಂತಾದೊಡಂ ಭಕ್ತರೊಂದಾ
ಣತಿಯೊಳ್ಸಂದಿರ್ಪೆನಾ ಭಕ್ತರ ತನುವೆ ಮದೀಯಾಂಗಮಾಂ ಪ್ರಾಣಮಾಪ
ನ್ನುತ ಭಕ್ತರ್ಗಂತವರ್ಪ್ರಾಣಮೆನಿಪರೆನಗಾ ಭಕ್ತರೊಳ್ವಸ್ತುಭೇದ
ಸ್ಥಿತಿಯೊಂದುಂ ತೋಱದೆನ್ನೊಳ್ ಬಗೆವೊಡೆನಗೆ ಭಕ್ತರ್ಕಳಿಂದಾರೊ ಕೂರ್ಪರ್ ೨೨

ವ॥ ಮತ್ತಂ—

ಭಕ್ತರ್ಪಾದಪೂಜೆಯೆ ಮದೀಯ ಪದಾಂಬುಜಪೂಜೆಯೆಕ್ಕುಮಾ
ಭಕ್ತರ ತೃಪ್ತಿಯೇ ತಿಳಿವೊ[1]ಡೆನ್ನಯ ತೃಪ್ತಿಯೆನಿಪ್ಪುದಾವಗಂ
ಭಕ್ತರ ನಿಂದೆಯೇ ಜಗದೊಳೆನ್ನಯ ನಿಂದೆಯದಪ್ಪುದೆಯ್ದೆ ಕೇ
ಳ್ಭಕ್ತರ ಕೀರ್ತನಂ ನಿಜದಿನೆನ್ನಯ ಕೀರ್ತನಮಲ್ತೆ ಸೌಂದರಾ ೨೩

ಇದು ವೇದಾಗಮಸಿದ್ಧಮೆನ್ನ ಚರಪಾದಾಂಭೋಜಮಂ ಪೂಜಿಗೆ
ಯ್ಯದೆ ಮತ್ಪೂಜೆಯನೆಯ್ದೆ ಮಾಡೆ ವಿಫಲಂ ತಾನಕ್ಕುಮೆಂದಾ ರಹ
ಸ್ಯದೊಳೊಲ್ದಾನೊರೆದೆಂ ಮದಂಘ್ರಿಭಜನಾಸಕ್ತರ್ಗೆ ಲಿಂಗಾಂಗಯೋ
ಗದ ಸಂಸಿದ್ಧಿ ಚರಾಘ್ರಿಪೂಜನದಿನಕ್ಕುಂ ಪೇಳ್ವೆಜರ್ಗಕ್ಕುಮೇ ೨೪

ಸಲ್ಲವೇ ? ಆ ಭಕ್ತರು ನಿನಗಿಂತಲೂ ಶ್ರೇಷ್ಠರೇ ? ಹೇಳು'. ಎನ್ನಲು ಶಿವನು 'ಎಲೈ ಮುಗ್ಧನೇ ಕೇಳು ! ಎನ್ನುತ್ತ (ಹೀಗೆ) ಹೇಳಿದನು : ೨೨. ವಿಸ್ತಾರವಾದ (ವಿಶೇಷವಾದ) ಸ್ವಾತಂತ್ರ್ಯವು ಎನಗೆ ಯಾವಾಗಲೂ ಉಂಟು (ನಿಜ). ಹಾಗಿದ್ದರೂ ನಾನು ಭಕ್ತರ ಆಜ್ಞೆಯಲ್ಲಿಯೇ ವರ್ತಿಸುವವನಾಗಿದ್ದೇನೆ. (ಭಕ್ತರಾಜ್ಞೆಯನ್ನು ಮಿಕ್ಕಿ ಸ್ವಾತಂತ್ರ್ಯ ಪ್ರಕಟಿಸುವಂತಿಲ್ಲವೆಂಬ ಭಾವ). ಆ ಭಕ್ತರ ತನುವೇ ನನ್ನ ಶರೀರ ; ನಾನೇ ಶ್ಲಾಘ್ಯರಾದ ಆ ಭಕ್ತರಿಗೆ ಪ್ರಾಣ. (ಅಂದರೆ ನಾನು ಭಕ್ತದೇಹಿಕ ದೇವನೇ ಹೊರತು ಅನ್ಯಥಾ ಇಲ್ಲ ಎಂಬ ಭಾವ) ಅಂತೆಯೇ ಅವರು ನನಗೆ ಪ್ರಾಣವೆನಿಸಿರುವರು. ಆ ಭಕ್ತರಲ್ಲಿ ನನ್ನಲ್ಲಿ ವಸ್ತುಭೇದ ಸ್ಥಿತಿಯು ಎಂದೂ ಕಾಣದು. ವಿಚಾರಮಾಡಿ ನೋಡಿದರೆ ನನಗೆ ಭಕ್ತರುಗಳನ್ನುಳಿದು ಪ್ರೀತಿಸುವವರು ಯಾರಿದ್ದಾರೆ ? ವ॥ ಮತ್ತು ೨೩-೨೪. ಸೌಂದರಾ, ಕೇಳು : ಭಕ್ತರ ಪಾದಪೂಜೆಯೇ ನನ್ನ ಪಾದಕಮಲದ ಪೂಜೆಯೆನಿಸಿರುವುದು ; ವಿಚಾರಿಸಿ ನೋಡಿದರೆ ಆ ಭಕ್ತರ ತೃಪ್ತಿಯೇ ಯಾವಾಗಲೂ ನನ್ನ ತೃಪ್ತಿಯೆನಿಸುವುದು. ಈ ಜಗತ್ತಿನಲ್ಲಿ ಭಕ್ತರ ನಿಂದೆಯೇ ನನ್ನ ನಿಂದೆಯೆನಿಸುವುದು. ಚೆನ್ನಾಗಿ ಮಾಡಿದ ಭಕ್ತರ ಕೀರ್ತನೆಯೇ ನಿಜವಾಗಿ ನನ್ನ ಕೀರ್ತನೆಯಲ್ಲವೇ ! ಇದು ವೇದಾಗಮಸಿದ್ಧವಾದುದು. ನನ್ನ ಚರರೂಪರಾದ ಜಂಗಮರ ಪಾದಕಮಲವನ್ನು ಪೂಜೆಮಾಡದೆ ನನ್ನ ಪೂಜೆಯನ್ನು ಮಾಡಿದರೆ ಆ ಪೂಜೆಗೆ ಫಲವೇ ಇಲ್ಲ. ಆ ರಹಸ್ಯವನ್ನು ನಿನಗೀಗ ಪ್ರೀತಿಯಿಂದ ಹೇಳಿದ್ದೇನೆ. ನನ್ನ ಪಾದಕಮಲದ ಭಜನೆಯಲ್ಲಿ ಆಸಕ್ತರಾದವರಿಗೆ

1 ದೊ(ಜ)

ಭಕ್ತವತ್ಸಲನಪ್ಪೆನಾತ್ಮಜ ಭಕ್ತಲೋಕಸಮಾಶ್ರಿತಂ
ಭಕ್ತಸಂಕುಳವಶ್ಯನನ್ವಿತಭಕ್ತಚಿತ್ತಕಧೀಶ್ವರಂ
ವ್ಯಕ್ತಮಿಂತಿದು [1]ಕೇ[1]ಳ್ವುದೆಂತೆನೆ ಧಾತ್ರಿಯೊಳ್ಗುಣಧರ್ಮಸಂ
ಯುಕ್ತನೂರ್ಜಿತ ಶೈವಸಂಯಮಿ ಬಾಣನೆಂಬವನೊಪ್ಪಿದಂ ೨೫

ವ॥ ಅಂತೊಪ್ಪುವ ಬಾಣಂ ಮಾಣದನುದಿನಂ ಸಾಸಿರಸೂಳ್ಮತ್ಪೂಜೆಗೆಯ್ವ ನೇಮಮಂ ಕೆಯ್ಕೊಂಡು ಪೂಜಿಪಾಗಳ್ ತನುಧರ್ಮಾಚರಣಕ್ಕೆ ತೆಱಪಿಲ್ಲದಿರೆ ಕಂಡವಂಗಾಂ ಸಹಸ್ರಕರಮಂ ಕೊಡ ಲೊಡನವಂ ತತ್ಕರಂಗಳಿನೊರ್ಮೆಯೆ ಸಸಂಭ್ರಮಂ ಪೂಜಿಸುತ್ತಿರ್ಪಿನಮೆನ್ನಿಂ ಕರವರಂ ಬಡೆದ ವಾರ್ತೆಯಂ ಕೇಳ್ದವನಂ ನೋಡಲೆಳಸಿ ಭಕ್ತರ್ಬರೆ ತದ್ಗೋಷ್ಠಿಯೊಳವಂ ಸುಖಮಿರ್ಪಿನಂ ಪೊಳ್ತು ಪೋಗೆ ಮಗುಳೆ ಲಿಂಗಾರ್ಚನಂಗೆಯ್ದು ತತ್ಪ್ರಸಾದಸೇವನೆಗೆಯ್ವನ್ನೆವರಂ—

ಪರರಾರುಮಲ್ಲಿ ತನ್ಮಂ
ದಿರದೊಳಗಣ್ಗೆಯ್ದದಂತೆ ವಾರಿಸುತುಂ ಸಾ
ದರಮವನ ಗೃಹದ ಬಾಗಿಲ
ನಿರದಾಂ ಕಾದಿರ್ದೆನಲ್ತೆ ಧರೆಯುಂ ಮಿಸೆಗಂ ೨೬

ಲಿಂಗಾಂಗಯೋಗದ ಉತ್ತಮಸಿದ್ಧಿ ಜಂಗಮಪಾದ ಪೂಜೆಯಿಂದ ಉಂಟಾಗುವುದಲ್ಲದೆ ಬೇರೆಯುವರಿಗೆ ಉಂಟಾದೀತೇ ? ಹೇಳು.—**ಬಾಣನ ಕಥೆ**—೨೫. 'ಎಲೈ ಮಗನೇ, ನಾನು ಭಕ್ತರಲ್ಲಿ ವಾತ್ಸಲ್ಯವುಳ್ಳವನಾಗಿದ್ದೇನೆ ; ಸಮಸ್ತ ಭಕ್ತಸಮೂಹದಿಂದ ಆಶ್ರಯಿಸಲ್ಪಟ್ಟವನು ; ಭಕ್ತಸಮೂಹಕ್ಕೆ ವಶನಾದವನು ; ಭಕ್ತಿಯಿಂದ ಕೂಡಿದ ವರಚಿತ್ತಕ್ಕೆ ಅಧೀಶ್ವರನೂ ನಾನೇ ಎನಿಸಿದ್ದೇನೆ—ಇದು ಸ್ಪಷ್ಟವಾಗಿರುವ ವಿಷಯ. ಅದು ಹೇಗೆಂದರೆ ಕೇಳು : ಭೂಮಂಡಲದಲ್ಲಿ ಸದ್ಗುಣಗಳಿಂದಲೂ ಧರ್ಮಮಾರ್ಗದಿಂದಲೂ ಉತ್ಕರ್ಷಪಡೆದ ಶೈವಭಕ್ತನೂ, ಇಂದ್ರಿಯ ನಿಗ್ರಹಿಯೂ ಆದ 'ಬಾಣ'ನೆಂಬ (ಭಕ್ತನು) ಶೋಭಿಸುತ್ತಿದ್ದನು.' ವ॥ 'ಹೀಗೆ ಶೋಭಿಸುವ ಬಾಣನು ಪ್ರತಿದಿನವೂ ತಪ್ಪದೆ ಸಹಸ್ರಸಲ ನನ್ನ ಪೂಜೆಯನ್ನು ಮಾಡುವ ನೇಮವನ್ನು ಸ್ವೀಕರಿಸಿ ಪೂಜಿಸುತ್ತಿದ್ದನು. ಆಗ ಅವನಿಗೆ ದೇಹ ಧರ್ಮಾಚರಣೆಗೂ ಅವಕಾಶವಿಲ್ಲದೆ ಇರಲು ನೋಡಿ ಅವನಿಗೆ ನಾನು ಒಂದು ಸಾವಿರ ಕೈಗಳನ್ನು ಅನುಗ್ರಹಿಸಿದೆನು. ಕೂಡಲೆ ಅವನು ಆ ಕೈಗಳ ಸಾಧನೆಯಿಂದ ಒಮ್ಮೆಯೇ ಅತ್ಯಂತ ಸಂಭ್ರಮದಿಂದ ಪೂಜಿಸುತ್ತಿರುವಾಗ ನನ್ನಿಂದ ಕೈಗಳ ವರವನ್ನು ಪಡೆದ ವಾರ್ತೆಯನ್ನು ಕೇಳಿ ಅವನನ್ನು ನೋಡುವ ಅಪೇಕ್ಷೆಯಿಂದ ಭಕ್ತರನೇಕರು ಬರಲು ಆ ಭಕ್ತರಗೋಷ್ಠಿಯಲ್ಲಿ ಅವನು ಸುಖದಿಂದ ಇರುತ್ತಿರಲು ಅವರಲ್ಲಿಯೇ ಕಾಲಕಳೆಯಿತು. ಅದನ್ನು ತಿಳಿದು ಪುನಃ ಲಿಂಗಾರ್ಚನೆ ಮಾಡಿ ಆ ಪ್ರಸಾದ ಸೇವನೆ ಮಾಡಿ ಬರುವವರೆಗೆ—೨೬. ಬೇರೆ ಯಾರನ್ನೂ ತನ್ನ ಮಂದಿರದೊಳಗಡೆಗೆ ಬಾರದಂತೆ ತಡೆಹಿಡಿಯಲು ಆದರಪೂರ್ವಕವಾಗಿ ಅವನ ಮನೆಯ ಬಾಗಿಲನ್ನು

1 ಕೇಳ್ವೋ(ಅ)

ವ॥ ಅಂತುಮಲ್ಲದೆಯುಂ—

ಘನಭಕ್ತಂ ಕರಿಕಾಲ ಚೋಳವಿಭು ಕಾವೇರೀ ಸರಿದ್ಬಂಧನ
ಕ್ಕೆನಸುಂ ಬಿಟ್ಟಿಗೆಯಲ್ಕೆ ಸರ್ವಜನಮಂ ತಾಂ ಪ್ರೇರಿಪಂದಾರುಮಿ
ಲ್ಲೆನಗೆಂತೆಂದು ಬಳಲ್ವ ಭಕ್ತಿ ವಿಸುಪಾ ಪಿಟ್ಟವ್ವೆಗಾಳಾಗಿ ಕೇ
ಳ್ನಿನಗಾನಿರ್ದಪೆನೆಂದು ಸಂತವಿಡುತೊಲ್ದಾಂ ಬಿಟ್ಟಿಯುಂ ಮಾಡಿದೆಂ ೨೭

ದೊರೆವೊಡೆದೊಪ್ಪಮಾಳ್ದ ಸೊಬಗಿಂದೆಲೆ ನಂಬಿ ಧರಾತಳಾಗ್ರದೊಳ್
ತಿರುಕುಡಿಯೆಂಬ ನವ್ಯಪುರಮಿರ್ದುದು ತತ್ಪುರದೊಳ್ನಿರಂತರಂ
ಗುರುಚರಲಿಂಗಭೃತ್ಯತೆಯೊಡಂಬಡೆ ನೇಮಮದಾಗಿ ಸತ್ಯಸಂ
ಗರನೆಸೆದಿರ್ಪನಲ್ತೆ ಕಲಿಕಾಮನಕಾಮನಮೇಯವೈಭವಂ ೨೮

ಕೇಳ್ದಿಮ್ಮರ್ವರ ಮೇಳಮ
ನಾಳ್ದತಿ ಕೌತುಕಮನಮಳವ‌ತಿ ಬಲ್ಮುಳಿಸಂ
ತಾಳ್ದಕಟ ಸೌಂದರಂ ತ
ನ್ನಾಳ್ದಂಗಾಳ್ವೆಸಮನಿತ್ತನೆಂನೆಂಬೆನಿದಂ ೨೯

ತಪ್ಪದೆ ಲೋಕದವರೆಲ್ಲರಿಗೂ ತಿಳಿದಿರುವ ಹಾಗೆ ನಾನೇ ಕಾಯ್ದುಕೊಂಡಿದ್ದೆನಲ್ಲವೇ !' ವ॥ ಅದೂ ಅಲ್ಲದೆ—೨೭. ಮಹಾಭಕ್ತನಾದ ಕರಿಕಾಲಚೋಳರಾಜನು ಕಾವೇರೀ ನದಿಗೆ ಅಡ್ಡಕಟ್ಟೆಯನ್ನು ಚೆನ್ನಾಗಿ ಕಟ್ಟುವುದಕ್ಕಾಗಿ ಸರ್ವಜನರೂ ಬಿಟ್ಟಿ ಕೆಲಸ ಮಾಡಬೇಕೆಂದು ಅವನು ಪ್ರೇರೇಪಣೆ ಮಾಡುವ ಸಮಯದಲ್ಲಿ ನನಗೆ ಯಾರೂ ಇಲ್ಲ ವೆಂದು ಬಳಲುತ್ತಿದ್ದ ಶ್ರೇಷ್ಠ ಭಕ್ತಿಯಿಂದ ಕೂಡಿದ ಪಿಡ್ಡವ್ವೆ (ಪಿಟ್ಟವ್ವೆ) ಎಂಬುವಳಿಗೆ 'ಅಮ್ಮಾ, ನಿನಗೆ ನಾನಿದ್ದೇನೆ.' (ಎಂದು ಹೇಳಿ) ಸಂತೋಷಗೊಳಿಸಿ ಪ್ರೀತಿಯಿಂದ ನಾನೇ (ಅವಳ ಪಾಲಿನ) ಬಿಟ್ಟಿಯ ಕೆಲಸ ಮಾಡಿದೆನು. **ಕಲಿಕಾಮನ ಕಥೆ** ೨೮. ಎಲೈ ನಂಬಿಯಣ್ಣ, ಮನೋಹರವಾಗಿ ಪ್ರಾಪ್ತಗೊಂಡ ಸೊಬಗಿನಿಂದ ಭೂಮಂಡಲ ದೊಳಗೆ 'ತಿರುಕುಡಿ' ಎಂಬ ನೂತನ ಪಟ್ಟಣವಿರುವುದು. ಆ ಪಟ್ಟಣದಲ್ಲಿ ನಿರಂತರವೂ ಗುರು ಮತ್ತು ಜಂಗಮ ಸೇವಾತತ್ಪರತೆಯು ಒಪ್ಪಿಗೆಯಾಗುವಂತೆ ಆ ಒಂದು ವ್ರತವನ್ನು ಆಗುಮಾಡುತ್ತಿದ್ದ ಫಲಾಪೇಕ್ಷೆಯಿಲ್ಲದ 'ಕಲಿಕಾಮ' ಎಂಬಹೆಸರಿನ ಅಪರಿಮಿತವ್ರತದ ವೈಭವಸಂಪನ್ನನು ಶೋಭಿಸುತ್ತ ಇದ್ದನಲ್ಲವೇ ! ೨೯. ನಿರ್ಮಲಮನಸ್ಸಿನವನಾದ ಆ ಕಲಿಕಾಮನು ನನ್ನ ಮತ್ತು ನಿನ್ನ ಮೇಳದ ರೀತಿಯನ್ನು ಕೇಳಿದವನಾಗಿ, ಅತ್ಯಂತ ಕೌತುಕವನ್ನು ಹೊಂದಿ, ವಿಶೇಷ ಕೋಪಗೊಂಡು, ಅಕ್ಕಟಾ ! ಸೌಂದರನು ತನ್ನ ಒಡೆಯನಾದ (ಪರಮೇಶ್ವರ)ವನಿಗೇ ದೂತಕಾರ್ಯವನ್ನು ಕೊಟ್ಟನು. ಇದನ್ನು

ಮೃದುಪಾದಾಂಭೋರುಹಂ ಕಂದುಗುಮಕಟನುತುಂ ನೋಡದುದ್ದಾಮಕಾಮಾ
ಸ್ಪದಚಿತ್ತಂ ಮುಂದೆವಾಳಂ ಮಸಗಿ ಪಣವಧೂಗೇಹಕೊಲ್ದಟ್ಟುಗುಂ ಮಾ
ಣದೆ ಧೂರ್ತಂ ನಂಬಿಯಾತ್ಮೇಶ್ವರನನಿಳೆಯೊಳಿಂತಪ್ಪ ದುಷ್ಕೃತ್ಯಮುಂ ನೋ
ಳ್ಪದಯುಕ್ತಂ ಭಕ್ತವೃಂದಕ್ಕಿದನುಡುಗಿಸದೇಕಿರ್ಪರೋ ಭಕ್ತವರ್ಯರ್ ೩೦

ಜಗದಧಿಪತಿ ಸರ್ವಜ್ಞಂ
ಮುಗುದನವೋಲ್ಮನ್ನಳಿವನೆಗೆ ಧೂರ್ತನ ನಣ್ಪಂ
ಬಗೆಗೊಂಡು ನಡೆಯೆ ತನ್ನಂ
ನಗುವರ್ಬುಧರಿದನದೆಂತು ಸೈರಿಪೆನಿಳೆಯೊಳ್ ೩೧

ವ॥ ಎಂದು ಕೋಪಾಟೋಪಮಂ ತಾಳ್ದು ವಿಜೃಂಭಿಸಿ—

ನಿನ್ನ ಪೆಸರ್ಗೊಂಡರಂ ಸಲೆ
ನಿನ್ನೂರಿಂ ಬಂದ ಜನಮನಿಱಿಚಪೆನೆನುತಾ
ತನ್ನಿಯಮದಿನಿರೆ ಬರ್ದಿಂ
ದನ್ನಿಮ್ಮರ್ವರುಮನೊಂದು ಮಾಡಿದೆನಲ್ತೇ ೩೨

ಏನೆನ್ನಲಿ ? ೩೦. ಅಧಿಕವಾದ ಕಾಮಕ್ಕೆ ಆಶ್ರಯವಾದ ಮನಸ್ಸುಳ್ಳ ಧೂರ್ತನಾದ ಆ ನಂಬಿಯು ಅತ್ಯಂತ ಒರಟುತನದಿಂದ ಕೂಡಿ ಆ ಪರಮಾತ್ಮನ ಮೃದುವಾದ ಪಾದ ಕಮಲಗಳು ಕಂದುವವೆಂಬುದನ್ನು ನೋಡದೆ, ತಪ್ಪದೆ ಸೂಳೆಯ ಮನೆಗೆ ಒಲಿದು ಕಳುಹಿಸುತ್ತಿದ್ದಾನೆ. ಭೂಮಿಯಲ್ಲಿ ಭಕ್ತರ ಸಮೂಹಕ್ಕೆ ಇಂತಹ ದುಷ್ಕೃತ್ಯವನ್ನು ನೋಡುವುದು ಯುಕ್ತವಾದದ್ದಲ್ಲ. ಭಕ್ತಶ್ರೇಷ್ಠರಾದವರು ಇದನ್ನು ತಪ್ಪಿಸದೆ ಏಕೆ ಇರುವರೋ'? ೩೧. 'ಜಗತ್ತಿನಅಧಿಪತಿಯೂ, ಸರ್ವಜ್ಞನೂ, ಆದ ಆ ಶಿವನು ನೀಚನಾದ ಸೌಂದರ ನಂಬಿಯ ನಂಟನ್ನು ಮನಸ್ಸಿನಲ್ಲಿ ನೆನೆದು ಮುಗ್ಧಭಾವದವನಂತೆ (ಆ ನಂಬಿಯ) ಸೂಳೆಯ ಮನೆಗೆ ನಡೆಯುವುದನ್ನು ಈ ಭೂಮಿಯಲ್ಲಿ ಜ್ಞಾನಿಗಳಾದವರು ಹಾಸ್ಯ ಮಾಡುವರು. ಇದನ್ನು ಹೇಗೆ ನಾನು ಸೈರಿಸಿಕೊಳ್ಳಲಿ' ವ॥ ಹೀಗೆಂದು ಕೋಪದ ಆಟೋಪವನ್ನು ಹೊಂದಿ, ಉತ್ಸಾಹಗೊಂಡು ೩೨. 'ನಿನ್ನ ಹೆಸರನ್ನು ಹೊಂದಿದವನನ್ನು (ಅಥವಾ ನಿನ್ನ ಹೆಸರನ್ನುಸುರಿದವರನ್ನು) ಚೆನ್ನಾಗಿ ನಿನ್ನೂರಿನಿಂದ ಬಂದ ಜನರುಗಳನ್ನು ಕತ್ತರಿಸಿ ಹಾಕುತ್ತೇನೆ' ಎನ್ನುತ್ತ ಆ ಕಲಿಕಾಮ ದೇವನು ನೇಮವಿಡಿದು ಇರುತ್ತಿರಲಾಗಿ ಪ್ರೀತಿಯಿಂದ ನಿಮ್ಮಿರ್ವರನ್ನು ಒಂದು ಮಾಡಿದೆನಲ್ಲವೇ ? [ಭಾವ[1] ಅಸ್ಪಷ್ಟ]

---

1. ನಿಮ್ಮಿಬ್ಬರಿಗೂ ಸ್ನೇಹ ಮಾಡಿಸಿ ನಿಮ್ಮನ್ನು ಒಂದೇ ರೀತಿಯಲ್ಲಿ ಕಾಣುತ್ತಿದ್ದೇನೆ ಎಂದು ಭಾವ (ರು).

ಎನ್ನಯ ತಂದೆ ನಿನ್ನ ಪಿತನಿಂ ತೆಗೆದಿರ್ದನೆ ಮುನ್ನ ಸಾಲಮಂ
ನಿನ್ನಯ ಕೆಯ್ಯೊಳಾಂ ಕಡನನಾಂತೆನೆ ಪೇಳ್ದಿಟಮಂ ಕಡಂಗಿ ನಿ
ಚ್ಚನ್ನಿನಗೀವೆನಚ್ಚಪಡಿಹೊಂಗಳನೆಂದುದನೊಲ್ದು ಮಾಡುವೆಂ
ಮನ್ನಿಪೆನಲ್ತೆ ಭಕ್ತಿಹಿತಕಾರಣಮಲ್ಲದೊಡಿಂತು ಕೂರ್ಪೆನೇ ೩೩

ವ॥ ಎಂದು ನಿಜಭಕ್ತವತ್ಸಲತೆಯುಮಾ ಭಕ್ತರ ಪೆರ್ಮೆಯುಮಂ ತಚ್ಚರಿತ್ರಕಥನ ಪೂರ್ವಕಂ ಪಾರ್ವತೀಪತಿಯೊರೆದಿಂತಪ್ಪ ಮದ್ಭಕ್ತರೊಳಹಂಕರಿಪೊಡೆ ನೀನೆನಿತಱವಂ ನಿನ್ನೊಡನಾಡಿದ ದೋಷದಿ ನೆನಗಮೀ ಸಂಕಟಂ ಬಂದುದೆಂದು ಪೇಳೆ ಕೇಳ್ದು ನಂಬಿ ನಡನಡಂ ನಡುಗಿ ಬೆಗಡುಗೊಂಡು ಹರನಡಿಗೆಱಗಿ ತನ್ನಿರೂಪದಿಂ ತನ್ನ ಪೊಂದಾಳಮಂ ಕೆಯ್ಕೊಂಡು ತದ್ಗಣಕೃಪೆಯನಣೆಯುರಂ ಪಡೆಯಲೆಳಸಿ ಶಿವಗಣಮಂ[1]ತಾಳಲಯಂಬಿಡಿದು ಸರಸರವಮಂಕುರಿಸೆ ಭಕ್ತಿಯಿಂ ಪಾಡಿದನದೆಂತೆನೆ—

ಶಿವಲಿಂಗಕ್ಕೆ ಸುಗಂಧಚಂದನಮನೊಳ್ಪಿಂದೊಲ್ದು ಕಾಲತ್ರಯಂ
ತವೆ ತಾನರ್ಚಿಪ ನೇಮದಿಂದೆಸೆದು ಮೂಲದ್ರವ್ಯಮಾಳ್ಕಾಡೆ ತಾಂ

೩೩. ಸಂಭ್ರಮ (ಕಡುಂಗು) ಗೊಂಡು, ಪ್ರತಿನಿತ್ಯದಲ್ಲೂ ನಿನಗೆ ಕೊಡುವ ಪಡಿಯ ಹೊನ್ನುಗಳನ್ನು ಮೊದಲು ನನ್ನ ತಂದೆಯು ನಿಮ್ಮಪ್ಪನಿಂದ ಸಾಲವನ್ನು ತೆಗೆದು ಕೊಂಡಿದ್ದನೋ ? (ಹೇಗೆ ?) (ಅಥವಾ) ನಾನು ನಿನ್ನ ಕೈಯಲ್ಲಿ ಕಡದ ಹಣವನ್ನು ಹೊಂದಿದ್ದನೋ ? ನಿಜವಾಗಿ ಹೇಳು. ನೀನು ಹೇಳಿದುದನ್ನು ಒಲಿದು ಮಾಡುತ್ತೇನೆ. ಮನ್ನಿಸುವೆನಲ್ಲವೇ ? ಭಕ್ತಿಯು ನನಗೆ ಹಿತವಾಗಿರುವ ಕಾರಣವು ಅಲ್ಲದಾಗಿದ್ದರೆ ಈ ರೀತಿ ಪ್ರೀತಿಸುತ್ತಿದ್ದೇನೇ ? ವ॥ ಹೀಗೆಂದು ಶಿವನು ತನ್ನ ಭಕ್ತ ವಾತ್ಸಲ್ಯದ ರೀತಿಯನ್ನೂ, ಭಕ್ತರ ಹಿರಿಮೆಯನ್ನೂ ಆಯಾಯ ಭಕ್ತರ ಕಥಾ ವಿವರಣ ಪೂರ್ವಕವಾಗಿ ಹೇಳಿ, 'ಈ ರೀತಿಯ ನನ್ನ ಸಂಬಂಧದ ಭಕ್ತರಲ್ಲಿ ಅಹಂಕರಿಸುವುದಕ್ಕೆ ನೀನೆಷ್ಟರವನು ? ನಿನ್ನೊಡನೆ ಆಡಿದ ದೋಷದ ಕಾರಣದಿಂದ ನನಗೂ ಈಗ ಈ ಸಂಕಟವು ಬಂದುದಾಯಿತು.' ಎಂದು ಹೇಳಲು ನಂಬಿಯು ಕೇಳಿ, ಗಡ ಗಡ ನಡುಗಿ, ಬೆಪ್ಪನಂತಾಗಿ, ಪರಮೇಶ್ವರನ ಪಾದಗಳಿಗೆ ನಮಸ್ಕರಿಸಿದನು. ಆಗ ಆ ಪರಶಿವನ ಅಪ್ಪಣೆಯಂತೆ ಬಂಗಾರದ ತಾಳಗಳನ್ನು ಕೈಯಲ್ಲಿ ತೆಗೆದುಕೊಂಡು ಆ ಶಿವ ಗಣಗಳ ಕೃಪೆಯನ್ನು ಪಡೆಯುವುದಕ್ಕೋಸ್ಕರ ಬಯಸಿದವನಾಗಿ, ತಾಳಗತಿಯನ್ನನುಸರಿಸಿ, ಮಧುರವಾದ ಶಬ್ದವು ಅಂಕುರಗೊಳ್ಳುವಂತೆ (ಹೊರ ಹೊಮ್ಮುವಂತೆ) ಭಕ್ತಿಯಿಂದ ಹಾಡಲು ಮೊದಲು ಮಾಡಿದನು, ಅದು ಹೇಗೆಂದರೆ : (ಅಣುಮೂರ್ತಿಗಳ ಸ್ತೋತ್ರ) ೩೪–೩೬. ಶಿವಲಿಂಗಕ್ಕೆ ಸುಗಂಧ ಚಂದನಗಳನ್ನು ಒಳ್ಳೆಯ ರೀತಿಯಲ್ಲಿ ಒಲಿದು ತ್ರಿಕಾಲಗಳಲ್ಲೂ (ಮುಂಜಾವು–ಮಧ್ಯಾಹ್ನ, ಸಾಯಂಕಾಲಗಳಲ್ಲೂ) ತಾನು ಅರ್ಚಿಸುವ ನಿಯಮದಿಂದ ಶೋಭಿಸುತ್ತ ತಾನು ಗಳಿಸಿದ

---

1 ಮುಂ(ಜ)

ಭವಪೂಜೋಚಿತಚಂದನತ್ರಯಕೆಪರ್ಕಿಯ್ಗಣ್ಮೆ ಮೇಣುಳ್ಳ ವ
ಸ್ತುವದೆಲ್ಲಂ ಬಱಿದಾಗೆ ತಕ್ಕುಗೆಡದನ್ನಂಗಂಗಳಂ ಕೂರ್ಪಿನಿಂ ೩೪

ಕಡಿಕಡಿದೊತ್ತಿ ತೇದು ಪೊಸ ಗಂಧಮನರ್ಪಿಪೆನೆಂದು ನಿಂದು ತ
ನ್ಮೃಡನಿದಿರೊಳ್ಮದೀಶ ರುಧಿರು ನೆಗೆತಂದೊಡೆ ಕಂಪು ಸೊಂಪು ನು
ಣ್ಪಡರದೊಡಿಂಪು ತಣ್ಪೆಸೆಯದಿರ್ದೊಡೆ ಚಂದನಗಂಧವಾಗದಿ
ರ್ದೊಡೆ ಶಿವ ನಿನ್ನೊಳಂಕವೆನುತುಂ ಪೊಳಕೆಯ್ಮನತೀವ ನಿಷ್ಠೆಯಿಂ ೩೫

ಬಿಡದೊತ್ತಿ ತೇದು ಸಣ್ಣಗೆ
ಯೆಡೆಯೊಳ್ಸಿ[1]ರಿಗಂಪುವಡೆವುತಿತ್ತೊಲಿಯಿಸಿ ತ
ನ್ಮೃಡನಂ ಕೈಲಾಸಾದ್ರಿಗೆ
ನಡೆದಣುಮೂರ್ತಿಗಳ ಚರಣಕಿಂಕರನಪ್ಪೆಂ ೩೬

ಬೆಳಗುವೆನೀಶ್ವರಂಗೆ ಸಲೆ ಸಾಸಿರದೀಪಮನೆಂಬ ನೇಮಮಂ
ತಳೆದೆಸಗುತ್ತುಮಿರ್ಪಿರೆ ತದರ್ಥಮುಪಾರ್ಜಿತವಿತ್ತಮೆಲ್ಲಮುಂ
ತಳರ್ದೊಡೆ ದೀಪದಂಡಮೊಡಲಾತ್ಮಶಿರಂ ನವಪಾ[ತ್ರ][2] ಕೇಶಮಂ
ಕುಳಪಟೆ ಬತ್ತಿ ಭಕ್ತಿರಸಮಲ್ಲಿ ತಿಲೋದ್ಭವವಾಗೆ ಕೂರ್ಪಿನಿಂ ೩೭

ಮೂಲದ್ರವ್ಯವೆಲ್ಲ ಮುಗಿದು ಹೋಗಲು (ತನ್ನ ನೇಮವಾಗಿದ್ದ) ಚಂದನವನ್ನು ಕೊಂಡು ತರುವುದಕ್ಕೆ ವಿಘ್ನವುಂಟಾಯಿತು. ಆಗ ತನ್ನಲ್ಲಿದ್ದ ವಸ್ತು ಒಡವೆಗಳೆಲ್ಲವನ್ನೂ, ಬರಿದು ಮಾಡಿಕೊಂಡು ಧೈರ್ಯಗೆಡದೆ ಎನ್ನ ಅಂಗಾಂಗಗಳನ್ನೇ ಕಡಿಕಡಿದು ಒತ್ತಿ ಹಿಡಿದು ತೇದು ಹೊಸದಾದ ಗಂಧವನ್ನು ಸಮರ್ಪಿಸುತ್ತೇನೆ, ಎಂದು ಸಿದ್ಧವಾಗಿ ನಿಂತು, ಆ ಶಿವನ ಎದುರಿನಲ್ಲಿ 'ಹೇ, ನನ್ನ ಸ್ವಾಮಿಯೇ, ರಕ್ತವು ಹಾರಿದರೆ, ಪರಿಮಳ ಮತ್ತು ಸೊಗಸು, ನುಣುಪು–ಇವುಗಳು ಉಂಟಾಗದಿದ್ದರೆ ಚಂದನ ಗಂಧವಂತೆ (ಈ ನನ್ನ ದೇಹದ ಗಂಧವು) ಆಗದೆ ಇದ್ದರೆ, 'ಶಿವನೇ ನಿನ್ನಲ್ಲಿಯೇ ದೋಷವೆಂದು ಭಾವಿಸುತ್ತೇನೆ.' ಎಂದು ಕೊಂಡು ಬಹು ಶ್ರದ್ಧೆಯಿಂದ ಮೊಳಕೈಯನ್ನು ಮಳಲಿನ (ಮಳಲಿನಂತೆ ಹುದುಬರಕಾದ) ಸ್ಥಳದಲ್ಲಿ ಒತ್ತಿ ಹಿಡಿದು ತೆಯ್ದು, ಶ್ರೀಗಂಧವನ್ನು ಪಡೆಯುತ್ತ, ಶಿವನಿಗೆ ಅನುಲೇಪನ ಮಾಡಿ, ಆ ಮೃಡನನ್ನು ಒಲಿಸಿಕೊಂಡು ಕೈಲಾಸ ಪರ್ವತಕ್ಕೆ ನಡೆದ ಅಣುಮೂರ್ತಿಗಳ ಪಾದಗಳ ಕಿಂಕರನಾಗಿದ್ದೇನೆ. (ಕಡವಲ ನಾಯಿನಾ ಸ್ತೋತ್ರ) ೩೭-೩೮. ಈಶ್ವರನಿಗೆ ಚೆನ್ನಾಗಿ ಸಾವಿರ ದೀಪಗಳನ್ನು ಬೆಳಗುತ್ತೇನೆಂಬ ನೇಮವನ್ನು ಹೊಂದಿ, ಆ ರೀತಿ ಭಕ್ತಿಯನ್ನು ಮಾಡುತ್ತ ಇರಲಾಗಿ, ಆ ನೇಮಕ್ಕೋಸ್ಕರ ಸಂಪಾದಿಸಿಟ್ಟ ಹಣವೆಲ್ಲವೂ ಮುಗಿದು ಹೋಗಲಾಗಿ, ಶರೀರವೇ ದೀಪದ ಕಂಬದ ಆಕಾರವಾಗಿಯೂ, ತನ್ನ ತಲೆಯೇ ನೂತನ ಪಾತ್ರೆಯಾಗಿಯೂ, ಕೂದಲುಗಳ ಸಮೂಹದ ಜಡೆಯೇ

1 ಳ್ಬಿ(ಮು) 2 ತ್ರ(ಅ, ಐ, ಚ, ದ, ಗ, ಮು)

ಉರಿವೊ[1]ತ್ತಿಸಿ ದೀಪಮನಾ
ದರದಿಂ ಬೆಳಗುತ್ತೆ ಶಂಭುವಂ ಮೆಚ್ಚಿಸಿ ತ
ತ್ಪುರಮಂ ಪಡೆದೆಯ್ದಿದ ಬಂ
ಧುರ ಕಡವಲನಂಬಿಯೆಂಬ ಭಕ್ತನ ಬಂಟಂ ೩೮

ಇಳೆಯೊಳೆ ಪಾಂಡ್ಯಮಂಡಲದೊಳೊಪ್ಪುತೆ ನಿಮ್ನಗೆಗೆಯ್ದಿ ನಿಂದು ತ
ಜ್ಜಳದೊಳೆ ಜಾಲಮಂ ಪರಪಿ ಮುನ್ನಮೆ ಸಿಲ್ಕಿದ ಮೀನನೊಲ್ಲದುಂ
ತುಳುಪಿ ಶಿವಂಗೆನುತ್ತೆ ಕಡೆ ಸಿಲ್ಕಿದ ಮೀನ್ಗಳನೊಯ್ದು ಮಾಱುತುಂ
ಗಳಿಸಿದ ವಿತ್ತದಿಂದೆ ಚರಲಿಂಗಮನರ್ಚಿಸುತುಂ ನಿರಂತರಂ ೩೯

ನೇಮಮದಾಗೆ ವರ್ತಿಸುತುಮೊಂದು ದಿನಂ ಬಲೆವೀಸಿ ನೀರೊಳು
ದ್ದಾಮತೆಯಿಂದದಂ ಸೆಳೆದು ನೋಳ್ಪಿನಮುಜ್ಜ್ವಳ ರತ್ನಲೋಚನಂ
ಹೇಮಮಯಾಂಗಮೊಪ್ಪುವ ಝಷಂ ಬರೆ ಮುನ್ನಭವಂಗಿದೆಂದು ಬಿ
ಟ್ಟಾ ಮಡುನೀರೊಳಂತೆ ಬಲೆವೀಸಿದೊಡಂತದು ಸಿಲ್ಕೆ ಮೇಣದಂ ೪೦

ಬತ್ತಿಯಾಗಿಯೂ, ಅದಕ್ಕೆ ಭಕ್ತಿರಸವೇ ಎಣ್ಣೆ (ತಿಲೋದ್ಭವ) ಯಾಗಿಯೂ ಪ್ರೀತಿಯಿಂದ ಉರಿಯನ್ನು ಹೊತ್ತಿಸಿ, ಅದರ ಪೂರ್ವಕವಾಗಿ ದೀಪವನ್ನು ಬೆಳಗುತ್ತ ಶಂಭುವನ್ನು ಮೆಚ್ಚಿಸಿ ಪ್ರೀತಿಯಿಂದ ಆತನ ಕೈಲಾಸಕ್ಕೆ ಹೊರಟು ಹೋದ ಬಂಧುರವಾದ (ಭಕ್ತಿಯ) 'ಕಡವಲನಂಬಿ' ಎಂಬ ಭಕ್ತನ ಬಂಟನಾಗಿದ್ದೇನೆ. **(ಅತಿ ಭಕ್ತನ ಸ್ತೋತ್ರ)**
೩೯–೪೩. ಭೂ ಭಾಗದಲ್ಲಿರುವ ಪಾಂಡ್ಯ ಮಂಡಲದಲ್ಲಿ ಶೋಭಿಸುತ್ತ ನದಿಗೆ ಹೋಗಿ, ನಿಂತು ಆ ನದೀ ಜಲದಲ್ಲಿ ಬಲೆಯನ್ನು ಬೀಸಿ, ಮೊದಲು ಬಲೆಗೆ ಬಿದ್ದ ಮೀನನ್ನು ತಾನು ಅಪೇಕ್ಷಿಸದೆ ಅದು ಶಿವನಿಗೆ ಎನ್ನುತ್ತ ಉಳಿಸಿ ಪುನಃ ನೀರಲ್ಲಿ ಬಿಟ್ಟು, ಅನಂತರ ಸಿಕ್ಕಿದ ಮೀನುಗಳನ್ನು ಹಿಡಿದುಕೊಂಡು ಹೋಗಿ ಮಾರಿ ಸಂಪಾದಿಸಿದ ಹಣದಿಂದ ನಿರಂತರವೂ ಜಂಗಮರನ್ನು ಅರ್ಚನೆ ಮಾಡುತ್ತ ಇರುವುದು ಅವನ ನಿರಂತರ ನೇಮದ ವೃತ್ತಿಯಾಗಿತ್ತು. ಹೀಗೆ ವರ್ತಿಸುತ್ತ ಒಂದು ದಿನ ನೀರಿನಲ್ಲಿ ಬಲೆಯನ್ನು ಬೀಸಿ, ಶಕ್ತಿಯಿಂದ ಆ ಬಲೆಯನ್ನು ಎಳೆದು ನೋಡುತ್ತಿದ್ದಂತೆ, ಪ್ರಕಾಶಿಸುವ ರತ್ನದ ಕಣ್ಣುಗಳುಳ್ಳ, ಸುವರ್ಣಮಯವಾದ ದೇಹವುಳ್ಳ ಶೋಭಿಸುವ ಮೀನೊಂದು ಆ ಬಲೆಯಲ್ಲಿ ಬರಲು, ಈ ಮೀನು ಶಿವನಿಗೆ ಎಂದು ಅದನ್ನು ಪುನಃ ನೀರಿಗೆ ಬಿಟ್ಟು ಆ ಮಡುವಿನಲ್ಲಿ (ಪುನಃ) ಮೊದಲಿನ ರೀತಿಯಲ್ಲೇ ಬಲೆಯನ್ನು ಬೀಸಲಾಗಿ, ಅದೇ ಮೀನು ಸಿಗಲಾಗಿ ಪುನಃ ಅದನ್ನು (ಮೊದಲು ಸಿಕ್ಕ ಮೀನೇ ಆಗಿದೆ ಎಂದುಕೊಂಡು) ನೀರಿಗೆ ಬಿಡುತ್ತ ಮತ್ತೆ ಬಲೆ ಬೀಸಿದನು. ಉಳಿದ ಯಾವ ಮೀನೂ ಸಿಗದೆ ಆ ಮತ್ಸ್ಯವೇ ಬರಲಾಗಿ

---

3 ಪ(ಅ)

ಬಿಡುತುಂ ಮೇಣ್ಬೀಸೆ ಮತ್ತುಳಿದ ಮತ್ಸ್ಯಂ ಸಿಲ್ಕದಾ ಮೀನೆ ಬಂ
ದೊಡೆ ಕಂಡಚ್ಚರಿವಟ್ಟು ಬಿಟ್ಟು ಬಳಿಕಲ್ಲಿಂದೆಯ್ದಿ ಬೇಱೊಂದು ಪೆ
ರ್ಮಡುವೊಳ್ಜಾಲಮನಲ್ಲಿ ಬೀಸೆ ಮಗುೞ್ದಾ ಪಾಠೀನಮೇ ಸಿಲ್ಕೆ ತ
ಜ್ಜಡದೊಳ್ವರ್ಜಿಸುತಿಂತು ಸಂಜೆವರೆಗಂ ನೀರುಳ್ಳ ತಾಣಂಗಳೊಳ್ ೪೧

ಬಲೆವೀಸುತ್ತೆ ನವೀನ ಮೀನಮನದೆಂತುಂ ಕಾಣದೀ ಮೀನಮೇ
ಸಲೆ ತಾಂ ಬಂದಪುದೀ ಶಿವಾರ್ಪಣ ಮೀನಂ ಕೊಳ್ವುದೆಂತಕ್ಕುಮೀ
ಜಲದೊಳ್ಜಾಲಮನಿಟ್ಟು ನೋಳ್ಪೆನಣಮೀ ಮೀನೆಯ್ದೆ ಮಾಣ್ದಪ್ಪೆನೀ
ಬಲೆಯುಂ ಮೇಣೆನುತಣ್ಮಿ ಪೂಣ್ದು ಪುರಪೂರ್ವಾಶಾನದೀವಾರಿಯೊಳ್ ೪೨

ಜಾಲಮನಿಕ್ಕುತುಂ ಸೆಳೆಯೆ ತಳ್ತದಱೊಳ್ನಯನತ್ರಯುಂ ಜಟಾ
ಮಾಲೆ ನವೇಂದು ನಾಗಭರಣಂ ನಗಜಾತೆ ಗಜಾಜಿನಾಂಬರಂ
ಕಾಲಗಳಂ ವೃಷೇಂದ್ರನೊಡನೊಪ್ಪಿರೆ ಮೆಚ್ಚಿ ಮಹೇಶನೆಯ್ದೆ ಸ
ಲ್ಲೀಲೆಯೊಳಾತನೂರ್ಗೆ ನಡೆಗೊಂಡತಿಭಕ್ತನ ಭಕ್ತನಪ್ಪೆನಾಂ ೪೩

ಪ್ರತಿದಿನಮೀಶ್ವರಂಗೆ ಮೃದುಶಾಲಿಯ ತಂಡುಲದನ್ನಮರ್ಪಿಪಾ
ವ್ರತಮನೆ ತಾಳ್ದು ತಾನೆಸಗುತಾ ವ್ರತಕರ್ಥಮದೆಲ್ಲ ತೀರೆ ನಿ
ಶ್ಚಿತಮತಿ ಗರ್ದೆಗೊಯ್ದು ಪೊಸಕೂಲಿಯೊಳಾರ್ಜಿಸಿ ಶಾಲಿಯಕ್ಕಿಯುಂ
ರತಿಪತಿವೈರಿಗನ್ನಮನೊಡರ್ಚಿ ಸುಮರ್ಪಿಸುತಿಂತು ನೇಮಮಂ ೪೪

ಕಂಡು ಆಶ್ಚರ್ಯಪಟ್ಟು, ನೀರಿಗೆ ಬಿಡುವನು. ಬಳಿಕ ಅಲ್ಲಿಂದ ಹೊರಟು ಬೇರೊಂದು ದೊಡ್ಡ ಮಡುವಿನಲ್ಲಿ ಬಲೆಯನ್ನು ಬೀಸಿದನು. ಪುನಃ ಅದೇ ಮೀನು ಸಿಕ್ಕಿತು. ಅದನ್ನು ಅದೇ ನೀರಿನಲ್ಲಿ ಬಿಟ್ಟು ಈ ರೀತಿ ಸಂಜೆಯವರೆಗೂ ನೀರಿರುವ ಸ್ಥಳಗಳಲ್ಲಿ ಬಲೆಯನ್ನು ಬೀಸುತ್ತ ಹೊಸ ಮೀನನ್ನು ಯಾವ ರೀತಿಯಲ್ಲೂ ಕಾಣದೆ ಇದೇ ಮೀನವೇ (ಪದೇ ಪದೇ) ಬರುತ್ತಿರುವುದಲ್ಲಾ ! ಈಶ್ವರನಿಗೆ ಅರ್ಪಿಸಿದ ಈ ಮೀನನ್ನು ಕೊಲ್ಲುವುದು ಹೇಗೆ ? ಈ ನೀರಿನಲ್ಲಿ ಸ್ವಲ್ಪ ಬಲೆಯನ್ನಿಟ್ಟು ನೋಡುತ್ತೇನೆ, ಅದೇ ಮೀನು ಪುನಃ ಬಂದದ್ದಾದರೆ ಈ ಬಲೆಯನ್ನೇ ಬಿಟ್ಟು ಬಿಡುವೆನು, ಎನ್ನುತ್ತ ಪರಾಕ್ರಮದಿಂದ ಕೂಡಿದವನಾಗಿ, ಪ್ರತಿಜ್ಞೆ ಮಾಡಿ ಆ ಪಟ್ಟಣದ ಪೂರ್ವದಿಕ್ಕಿನಲ್ಲಿರುವ ಹೊಳೆಯ ನೀರಿನಲ್ಲಿ ಬಲೆಯನ್ನು ಹಾಕಿ ಎಳೆಯಲು ಅದರಲ್ಲಿ ಮೂರು ಕಣ್ಣುಳ್ಳವನೂ, ಜಟಾಮಾಲೆ, ನೂತನ ಚಂದ್ರ, ಹಾವುಗಳ ಆಭರಣವುಳ್ಳವನೂ, ಪಾರ್ವತಿ, ಆನೆಯ ಚರ್ಮವನ್ನುಳ್ಳವನೂ, ಕಪ್ಪುಗೊರಳನೂ, ವೃಷಭೇಂದ್ರ ಸಹಿತನಾದವನೂ, ಆದ ಶಿವನು ಸಿಕ್ಕಿಬರಲು ಪರಮೇಶ್ವರನು ಮೆಚ್ಚಿ, ಉತ್ಕೃಷ್ಟ ಲೀಲೆಯಿಂದ ಆ ಶಿವನ ಕೈಲಾಸಕ್ಕೆ ತೆರಳಿದ ಅತಿಭಕ್ತನ ಭಕ್ತನು ನಾನಾಗಿದ್ದೇನೆ. ಅರಿಪಾಲನ ಸ್ತೋತ್ರ ೪೪–೪೬. ಪ್ರತಿದಿನವೂ ಶಿವನಿಗೆ ಕೋಮಲವಾದ ಬತ್ತದ ಅಕ್ಕಿಯ ಅನ್ನವನ್ನು ಸಮರ್ಪಿಸುವ ವ್ರತವನ್ನು ಹೊಂದಿ, ತಾನು ಮಾಡುವ ಆ ವ್ರತಕ್ಕೆ ತನ್ನಲ್ಲಿರುವ ದ್ರವ್ಯವೆಲ್ಲ ಮುಗಿದು ಹೋಗಲಾಗಿ, ನಿಶ್ಚಲ

ಸಲಿಸುತ್ತಿರ್ಪನ್ನವಮಾ ಕೂಲಿಗೆ ಕರೆವರುಮಿಲ್ಲಾಗೆ ಸಪ್ತೋಪವಾಸಂ
ಸಲೆಗೊಂಡಿರ್ಪಂದು ಮಾನದ್ವಯಮಿಂತ ವಿಲಸತ್ತಂಡುಲಂ ಶಂಕರಾಜ್ಞಾ
ಬಲದಿಂ ಕೆಯ್ಯೊ‌ಡೆ ಕೊಂಡೆಯ್ದುವ ಸಮಯದೆ ತಾಂ ಬೀಳ್ವಿನಂ ಬೀದಿಯೊಳ್ತಂ
ಡುಲಮೆಲ್ಲಂ ಸೂಸೆ ಸುಯ್ಯುತ್ತಮನುಡುಗೆ ಕರಂ ಬಾರದಿರ್ದತ್ತದಾಗಳ್ ೪೫

ಅದನೀಕ್ಷಿಸಿ ನೊಂದು ಚಂದ್ರಧರನಾಹಾರಕ್ಕೆ ತಂದಕ್ಕಿ ಸೂ
ಸಿದುದೀ ತಪ್ಪನೊಡರ್ಚಿದೆಂ ಬಿಡುವೆನೆನ್ನೀ ಪ್ರಾಣಮಂ ಮಾಣದೆಂ
ದೊದಱುತ್ತುಂ ಕುಡುಗೋಲನೆತ್ತಿ ಕೊಱೆದಾತ್ಮಗ್ರೀವಮಂ ಶಂಭುವಂ
ಮುದದಿಂ ಮೆಚ್ಚಿಸಿ ಮೋಕ್ಷಮೊಂದಿದರಿಪಾಲಂಗಾಂ ಕರಂ ಕಿಂಕರಂ ೪೬

ವಿಳಸದ್ಗುಗ್ಗುಳಧೂಪಮಂ ಸಲೆ ಮಹಾದೇವಂಗೆ ಕಾಲತ್ರಯಂ
ಗಳೊಳೊಲ್ದರ್ಪಿಪ ನೇಮಮಂ ತಳೆದು ತಾನಿರ್ಪಾಗಳಾ ಧೂಪಕ
ರ್ಗಳವಿತ್ತಂ ವ್ಯಯಮಾಗೆ ವಸ್ತುಚಯಮಂ ನೈಜಾಂಗನಾಕಂಠಮಂ
ಗಳಸೂತ್ರಂ ಮೊದಲಾಗಿ ಮಾಱಿ ಸಲಿಸುತ್ತಾ ನೇಮಮಂ ಭಕ್ತಿಯಿಂ ೪೭

ವಾದ ಬುದ್ಧಿಯ ಗದ್ದೆಯನ್ನು ಕೊಯ್ಯುವ ಕೂಲಿಯ ಕಾಯಕದಿಂದ, ಆಯಾ ದಿನದ ಕೂಲಿಯ ರೂಪವಾಗಿ ಬಂದ ಅಕ್ಕಿಯನ್ನು ಸಂಪಾದಿಸಿ ಪರಮೇಶ್ವರನಿಗೆ ಅನ್ನವನ್ನು ಮಾಡಿ, ಸಮರ್ಪಣೆ ಮಾಡುತ್ತ ಇದ್ದನು. ಈ ರೀತಿಯ ನೇಮವನ್ನು ಸಲ್ಲಿಸುತ್ತ ಇರುವಷ್ಟರಲ್ಲಿ (ಅವನನ್ನು) ಆ ಕೂಲಿಯ ಕೆಲಸಕ್ಕೆ ಕರೆಯುವವರೂ ಇಲ್ಲದಂತಾಯಿತು. ಏಳು ಹೊತ್ತು ಉಪವಾಸವು ಒದಗಿ ಇರುವಷ್ಟರಲ್ಲಿ ಎರಡು ಸೇರು (ಮಾನದ್ವಯ) ಅಳತೆಯ ಶ್ರೇಷ್ಠವಾದ ಅಕ್ಕಿಯು ಶಂಕರನ ಆಜ್ಞೆಯ ಬಲದಿಂದ ದೊರಕಲು ಅದನ್ನು ಸ್ವೀಕರಿಸಿ ಹೊರಟು ಹೋಗುವ ಸಮಯದಲ್ಲಿ ಅವನೂ ಬಿದ್ದನು. ಅಷ್ಟರಲ್ಲಿ ಅಕ್ಕಿಯೂ ಬೀದಿಯಲ್ಲಿ ಸೂರೆಗೊಂಡಿತು. (ಆಗ) ನಿಟ್ಟುಸಿರು ಬಿಡುತ್ತ, ಆ ಬಿದ್ದ ಅಕ್ಕಿಯನ್ನು ಗುಡಿಸಲಾಗಿ, ಅದು ಆಗ ಅವನ ಕೈಗೆ ದೊರಕದ ರೀತಿಯಾಯಿತು. ಆಗ ಹೀಗಾದುದನ್ನು ನೋಡಿ, ನೊಂದುಕೊಂಡು, ಚಂದ್ರಧರನ ಆಹಾರಕ್ಕೆ ತಂದ ಅಕ್ಕಿ (ನೆಲಕ್ಕೆ) ಹರಡಿ ಹೋಯಿತು. ಇಂಥ ಒಂದು ಅಪರಾಧವನ್ನು ಮಾಡಿದೆನು. ತಪ್ಪದೆ ಈಗ ನನ್ನ ಪ್ರಾಣವನ್ನೇ ಬಿಡುತ್ತೇನೆ, ಎಂದು ಕೂಗುತ್ತ ಕುಡುಗೋಲನ್ನು ಎತ್ತಿ, ತನ್ನ ಕೊರಳನ್ನು ಕೊರೆದುಕೊಂಡು ಶಂಭುವನ್ನು ಪ್ರೀತಿಯಿಂದ ಮೆಚ್ಚಿಸಿ ಮೋಕ್ಷವನ್ನು ಹೊಂದಿದ ಅರಿಪಾಲನೆಂಬ ಭಕ್ತನಿಗೆ ನಾನು ಚೆನ್ನಾಗಿ ಆಳಾಗಿದ್ದೇನೆ. (ಆ ಕಲಿನಾಥನ ಸ್ತೋತ್ರ) ೪೭. (ಪ್ರತಿದಿನ) ಮೂರು ಕಾಲಗಳಲ್ಲಿ ಮಹಾದೇವನಿಗೆ ಚೆನ್ನಾಗಿ ಶ್ರೇಷ್ಠವಾದ ಗುಗ್ಗುಳ ಧೂಪವನ್ನು ಪ್ರೀತಿಯಿಂದ ಅರ್ಪಿಸುವ ನೇಮವನ್ನು ಹೊಂದಿ, ತಾನು ಇರುವಾಗ ಆ ಧೂಪಕ್ಕೆ ತನ್ನ ಅನರ್ಘ್ಯವಾದ ಐಶ್ವರ್ಯವೆಲ್ಲವೂ ವ್ಯಯವಾಗಿ ಹೋಯಿತು. ಮನೆಯ ಸಕಲಪದಾರ್ಥ ಸಮೂಹವನ್ನು, ತನ್ನ ಮಡದಿಯ ಕೊರಳ

ವ॥ ಇರ್ಪಿನಮಾಗಳ್ ತಿರಿಪಿನಂದನವೆಂಬ ಪುರವರದೊಳ್ ತಿರುಪರಂಧಾಮನೆಂಬ ನರೇಶ್ವರಂ ನಿರಂತರಂ ಭಜಿಪ ನಾಗನಾಥನೆಂಬ ಲಿಂಗಂ ಪುರೋಭಾಗದೊಳ್ ನಾಗಕನ್ನಿಕೆಯರ್ಪಾಡುವ ರಾಗರಸಕ್ಕೆ ರಾಗಿಸಿ ಮುಂಗಡೆಗೆ ಸಿಂಗದೊಲಿದು ಬಾಗಿರೆ ತನ್ನರೇಶ್ವರನೀ ಲಿಂಗಮಂ ಸಸಿನಂಗೆಯ್ದವಂಗೆ ಬೇಡಿದು ದನೀವನೆಂಬ ವಾರ್ತೆಯುಂ ಕೇಳ್ದು ಪುರಿಗೆಯ್ದೆ ದೇವಂಗೆಪಿರಿದುಂ ಗುಗ್ಗುಲಮನೀಯೆ ಲಿಂಗದೊಲೆ ಪಮಂ ನೇರಿತುಗೆಯ್ವೆನೆಂದು ಪೂಣ್ದು ನುಡಿಯುತೊಡನಮ ಬೇಡಿದನಿತಂ ಗುಗ್ಗುಳಮಂ ರಾಸಿಗೆಯ್ದು ಮುಂದಿಟ್ಟು ವಂದಿಸೆ ಕೆಯ್ಕೊಂಡು ತಲ್ಲಿಂಗದೆಡೆಗೆಯ್ದಿ ಪನ್ನತಿಕೆಯಿಂ ನಿಂದು—

ಧರಣಿಪನಲ್ಲಿ ನೋಡುತಿರೆ ಪಟ್ಟೆಯ ಚಿಂದಿಯೊಳೊಂದಿ ಬಂಧಿಸು
ತ್ತಿರಿದೆನೆ ಲಿಂಗದಂಗದ ತದಗ್ರದೆ ಕಟ್ಟಿದ ಬೊಮ್ಮಹಾಸಮಂ
ಕೊರಲೊಳಮರ್ಚಿ ತಾಂ ನಿಗುರೆ ನೆಟ್ಟನೆ ನಿಂದು ಶಿವಂ ಪ್ರಸನ್ನನಾ
ಗಿರೆ ಶಿವಲೋಕಮಂ ಪಡೆದ ಸತ್ಕಲಿನಾಥನ ಭೃತ್ಯನಪ್ಪೆನಾಂ ೪೮

ಸೊಗಯಿಪ ಶೈವಲಾಂಛನಧರರ್ಕಳನೀಶ್ವರನೆಂದು ಭಾವಿಸು
ತ್ತಗಲದೆ ಪೂಜಿಸುತ್ತೆ ರಿಪುಭೂಪರನರ್ದಿಸಿ ಕೀರ್ತಿವೆತ್ತು ಪೆ
ರ್ಮೆಗೆ ನೆಲೆಯಾಗಿರುತ್ತುಮಹಿತೋರ್ವಿಪನೊರ್ವನ ಯುದ್ಧರಂಗದೊಳ್
ನೆಗಳ್ದತಿ ಶೌರ್ಯದಿಂ ತೆಮರೆ ಸೋಲ್ತವನೀಶ್ವರಭಕ್ತವೇಷಮಂ ೪೯

ಮಂಗಳಸೂತ್ರ ಮೊದಲ್ಗೊಂಡು ಮಾರಿ ಭಕ್ತಿಯಿಂದ ಆ ನೇಮವನ್ನು ಸಲ್ಲಿಸುತ್ತ ವ॥ ಇರುತ್ತಿರುವಷ್ಟರಲ್ಲಿ 'ತಿರಿಪಿನಂದನ'ವೆಂಬ ಶ್ರೇಷ್ಠ ಪಟ್ಟಣದಲ್ಲಿ ತಿರುಪರಂಧಾಮ ಎಂಬ ನರಶ್ರೇಷ್ಠನು ನಿರಂತರದಲ್ಲೂ ಭಜನೆ ಮಾಡುತ್ತಿರುವ ನಾಗನಾಥ ಎಂಬ ಹೆಸರಿನ ಲಿಂಗವು ತನ್ನ ಮುಂಭಾಗದಲ್ಲಿ ಹಾಡುತ್ತಿರುವ ನಾಗಕನ್ನಿಕೆಯರ ರಾಗದರಸಕ್ಕೆ ಪ್ರೀತಿಗೊಂಡವನಾಗಿ ತಪ್ಪದೆ ಮುಂಭಾಗದಲ್ಲಿ ಅಲ್ಲಾಡಿ ಓರೆ (ಬಾಗು)ಗೊಂಡಿರಲು, ಆ ರಾಜನು ಈ ಲಿಂಗವನ್ನು ಮೊದಲಿನಂತೆ ಸರಿಮಾಡಿದವರಿಗೆ ಬೇಡಿದುದನ್ನು ಕೊಡುತ್ತೇನೆ ಎಂದು ಸಾರಿಸಿದ ಸುದ್ದಿಯನ್ನು ಕೇಳಿ ಆ ಪಟ್ಟಣಕ್ಕೆ ಬಂದು ನಮಗೆ ಹೆಚ್ಚಾಗಿ ಗುಗ್ಗುಳವನ್ನು ಕೊಟ್ಟರೆ ಈ ಲಿಂಗದ ವಾಲಿರುವಿಕೆಯನ್ನು ನೆಟ್ಟಗೆ ಮಾಡುತ್ತೇನೆ. ಎಂದು ಪ್ರತಿಜ್ಞೆ ಮಾಡಿ ನುಡಿಯಲಾಗಿ, ಕೂಡಲೇ ಅವನು ಬೇಡಿದಷ್ಟು ಗುಗ್ಗುಳವನ್ನು ರಾಶಿ ಹಾಕಿ ಮುಂದೆ ಇಟ್ಟು ನಮಸ್ಕರಿಸಲಾಗಿ ಆ ಗುಗ್ಗುಳವನ್ನು ಸ್ವೀಕರಿಸಿ, ಆ ಲಿಂಗದ ಹತ್ತಿರಕ್ಕೆ ಬಂದು, ಶೌರ್ಯದಿಂದ ನಿಂತು. ೪೮. ಆ ರಾಜನು ನೋಡುತ್ತಿರುವಂತೆಯೇ ರೇಷ್ಮೆ ಬಟ್ಟೆಯ ಚಿಂದಿಯಲ್ಲಿ ಸೇರಿಸಿ ಲಿಂಗ ಮೂರ್ತಿಯನ್ನು ಸೇರಿಸಿ ಕಟ್ಟುತ್ತ, ಆಶ್ಚರ್ಯವೆನ್ನುವ ಹಾಗೆ ಆ ರೇಷ್ಮೆ ಬಟ್ಟೆಯ ಚಿಂದಿಯ ಒಂದು ತುದಿಯಲ್ಲಿ ಕಟ್ಟಿದ ಬೊಮ್ಮಹಾಸವೆಂಬ ಕೂರಲಗನ್ನು ಕೊರಳಿಗೆ ಹೊಂದಿಸಿಕೊಂಡು ತಾನು ನಿಗುರಿ ನೆಟ್ಟಗೆ ನಿಲ್ಲುವಷ್ಟರಲ್ಲಿ ಶಿವನು ಪ್ರತ್ಯಕ್ಷನಾಗಿರಲು—ಈ ರೀತಿಯಿಂದ ಶಿವನ ಲೋಕವನ್ನು ಸೇರಿದ ಶ್ರೇಷ್ಠನಾದ ಕಲಿನಾಥನ ಭೃತ್ಯನು ನಾನಾಗಿದ್ದೇನೆ. ಏಣಾಧಿನಾಥನ ಸ್ತೋತ್ರ ೪೯-೫೦. ಪ್ರಕಾಶಿಸುವ ಶೈವ ಧರ್ಮದ ಲಾಂಛನಧಾರಿಗಳನ್ನು ಈಶ್ವರನೆಂದೇ ಭಾವಿಸುತ್ತ, ಸದಾ

ತಳೆದೇಳ್ತಂದಿದಿರಾಂತು ನಿಂದಿರೆ ರಣೋರ್ವೀಭಾಗದೊಳ್ಕಂಡು ನಿ
ಶ್ಚಳ ಸದ್ಭಕ್ತಿಯನಾಳ್ದು ಕೆಯ್ಯಸಿಯನಿಂದೀಡಾಡಿ ಮೆಯ್ಯಿಕ್ಕೆ ಭೂ
ತಳದೊಳ್ತದ್ರಿಪುಖಡ್ಗದಿಂ ಪೊಡೆಯೆ ತಾಂ ನಿಷ್ಪಂದನಾಗಿರ್ದ ನಿ
ರ್ಮಳಭಾವಕ್ಕೆ ಪುರಾರಿ ಮೆಚ್ಚುತಸಿಯುಂ ಪೂಮಾಲೆಗೆಯ್ದೊಲ್ಮೆಯಿಂ ೫೦

ಕ್ಷೋಣಿಜನವೀಕ್ಷಿಸುತ್ತಿರೆ
ಮಾಣದೆ ಪುಷ್ಪಕದೊಳೊಯ್ಯೆ ನಿಜನಗರಿಗೆ ಸಂ
ದೇಣಾಧಿನಾಥನಸಮು ಕೃ
ಪಾಣಂಬಿಡಿದೋಲಗಿಪ್ಪ ಕಿಂಕರನಪ್ಪೆಂ ೫೧

ಧರೆಯೊಳಿಶ್ರೀಪಂಚಮುದ್ರಾಂಕಿತರನಘಹರಶ್ರದ್ಧೆಯಿಂ ಕಂಡು ಪೂಜಾ
ಪರನಾಗುತ್ತೇಳ್ಗೆಯಿಂ ವರ್ತಿಸುತೆ ರಿಪುಧರಾಧೀಶರಂ ಪೊಯ್ದು ಯುದ್ಧೋ
ರ್ವರೆಯೊಳ್ ಬೆಂಬತ್ತೆ ಕೆಟ್ಟೋಡುತೆ ಪಟುಕಪಟೋಪಾಯದಿಂ ತಾಳ್ದು ಭಾಸ್ವ
ಚ್ಚರರೂಪಂ ಬಂದವರ್ತಳ್ತಿಱಿಯೆ ಧುರದೊಳಾತ್ಮಾಂಗಮಂ ಭಕ್ತಿಯಿಂದಂ ೫೨

ಅಗಲದಂತೆ (ಅವನನ್ನು) ಪೂಜೆ ಮಾಡುತ್ತ, ವೈರಿಗಳಾದ ರಾಜರನ್ನು ನಾಶಪಡಿಸಿ, ಯಶಸ್ಸಿನಿಂದ ಕೂಡಿ, ಹೆಮ್ಮೆಗೆ ನೆಲೆಯೋ ಎಂಬ ಹಾಗೆ ಇರುತ್ತ, ವೈರಿರಾಜನೊಬ್ಬನನ್ನು ರಣ ಭೂಮಿಯಲ್ಲಿ ಅತ್ಯಂತ ಶೌರ್ಯವನ್ನು ಪ್ರಕಟಿಸಿ ಓಡಿಸಲಾಗಿ, ಆ ಶತ್ರು ರಾಜನು ಹೀಗೆ ಸೋತು, ಭಕ್ತನ ವೇಷವನ್ನು ಹೊಂದಿದವನಾಗಿ ಆ ಯುದ್ಧ ಭೂಮಿಗೆ ಬಂದು, ಎದುರಾಗಿ ನಿಂತನು. ಇದನ್ನು ಕಂಡು ನಿಶ್ಚಲವಾದ ಭಕ್ತಿಯನ್ನು ಹೊಂದಿದವನಾಗಿ, ಕೈಯ್ಯಲ್ಲಿದ್ದ ಖಡ್ಗವನ್ನು ಬಿಸಾಡಿ, ಭೂಮಿಯ ಮೇಲೆ ಅಡ್ಡ ಬಿದ್ದು ನಮಸ್ಕಾರಮಾಡಿದನು. ಆಗ (ಆ ಭಕ್ತನ ವೇಷದ) ಶತ್ರು ರಾಜನು ಅದೇ ಖಡ್ಗದಿಂದ ಹೊಡೆಯಲಾಗಿ, ಅಲ್ಲಾಡದಂತೆ ಇದ್ದ ಅವನ ನಿರ್ಮಲವಾದ ಭಕ್ತಿ ಭಾವಕ್ಕೆ ಪರಮೇಶ್ವರನು ಮೆಚ್ಚುತ್ತ, ಆ ಖಡ್ಗವನ್ನು ಹೂವಿನ ಮಾಲೆಯನ್ನಾಗಿ ಮಾಡಿ, ಪ್ರೀತಿಯಿಂದ ಭೂಮಿಯ ಸರ್ವಜನರೂ ನೋಡುವಂತೆ ಪುಷ್ಪಕ ವಿಮಾನದಲ್ಲಿ ಕುಳ್ಳಿರಿಸಿಕೊಂಡು ಕೈಲಾಸಕ್ಕೆ ಕರೆದುಕೊಂಡು ಹೋದಂತಹ 'ಏಣಾಧಿನಾಥನ' ಅನುಪಮವಾದ ಖಡ್ಗವನ್ನೇ ಹಿಡಿದುಕೊಂಡು ಅವನನ್ನು ಸೇವಿಸುವ ಕಿಂಕರನಾಗಿದ್ದೇನೆ. **ಸೇದಿರಾಜನ ಸ್ತೋತ್ರ** ೫೨-೫೩. ಭೂಮಂಡಲದಲ್ಲಿ ವಿಭೂತಿ, ರುದ್ರಾಕ್ಷಿ, ಮಂತ್ರ, ಲಿಂಗ, ಕಷಾಯ ವಸ್ತ್ರವೇ ಮೊದಲಾದ ಐದು ಮುದ್ರೆಗಳ ಚಿಹ್ನೆಯುಳ್ಳವರನ್ನು ಈಶ್ವರನೇ ಎಂಬ ಶ್ರದ್ಧೆಯಿಂದ ಕಾಣುತ್ತ ಪೂಜೆ ಮಾಡುವವನೆನಿಸಿ (ಭಕ್ತಿ ಜೀವನದಲ್ಲಿ) ಏಳ್ಗೆಗೊಂಡು ವರ್ತನೆ ಮಾಡುತ್ತ ಯುದ್ಧ ಭೂಮಿಯಲ್ಲಿ ವೈರಿ ರಾಜರುಗಳನ್ನು ಹೊಡೆದು ಬೆನ್ನಟ್ಟಲು ಆ ವೈರಿ ರಾಜರು ಯುದ್ಧ ಭೂಮಿಯನ್ನು ತ್ಯಜಿಸಿ ಓಡಿ ಹೋಗಿ ಮೋಸದ ಉಪಾಯದಿಂದ ಅವರು (ಆ ಶತ್ರು ರಾಜರು) ಚರಜಂಗಮ ವೇಷವನ್ನು ಧರಿಸಿ ಬಂದು

ಶರಣೆಂದೊಪ್ಪಿಸಿ ಸೈಗೆಡೆ
ದಿರೆ ಧರೆಯೊಳ್ಮೆಚ್ಚಿ ಶಂಭು ಸಾರೂಪ್ಯಮನಂ
ದಿರದೀಯೆ ಮೆಱೆದ ಧೈರ್ಯಾ
ಕರನೆನಿಸುವ ಸೇದಿರಾಜನನುಚರನಪ್ಪೆಂ ೫೩

ಅನುದಿನವಿಊಶಲಾಂಛನಧರರ್ಕಳನೀಶ್ವರನೆಂಬ ಭಕ್ತಿಭಾ
ವನೆಯೊಡಗೂಡಿ ತಾಂ ಭಜಿಸುತುಂ ಪಿರಿದೇಳ್ಗೆಯನಾಳ್ದು ರಾಜ್ಯಪಾ
ಲನೆಯನೊಡರ್ಚುತಿರ್ದು ರಿಪುರಾಜರನಾಜಿಯೊಳಟ್ಟಿ ಪೊಯ್ದು ನೆ
ಟ್ಟನೆ ತಲೆಯೊಟ್ಟಿಲಂ ತರಿಸಿ ಭಂಡಿಯೊಳೀಕ್ಷಿಸುತಿರ್ಪ ಪೊಳ್ತಿನೊಳ್ ೫೪

ಕುನಿಕಿಲ್ಮೂವತ್ತು ತೀವಿರ್ದಹಿತಶಿರದೊಳೊಂದುತ್ತಮಾಂಗಂ ಕಚೌಘಂ
ನನೆದೆತ್ತಂ ರಕ್ತದಿಂ ಪತ್ತಿರೆ ಜೆಡೆದಲೆವೋಲ್ತೋಱೆ ಕಂಡಳ್ಕುತುಂ ಕ
ಳ್ಕನೆ ಚಂಚತ್ಖಡ್ಗದಿಂದಾತ್ಮಶಿರಮನರಿದಿತ್ತೀಶ್ವರಂ ಮೆಚ್ಚಿ ತಜ್ಜೀ
ವನಮಂ ಕೊರ್ಣೆತ್ತೆ ಮೋಕ್ಷಂಬಡೆದೆಸೆದ ಪಗಲ್ಚೋಳನಾಳಪ್ಪೆನೆಂದುಂ ೫೫

ಯುದ್ಧ ಭೂಮಿಯಲ್ಲಿ ಎದುರಿಗೆ ನಿಂತು ತನ್ನ ದೇಹವನ್ನು ಸೀಳಲಾಗಿ (ಅಂಥ ಸ್ಥಿತಿಯಲ್ಲೂ) ಭಕ್ತಿಯಿಂದ 'ಶರಣು' ಎಂದು ದೇಹವನ್ನು ಒಪ್ಪಿಸಿ ಭೂಮಿಯ ಮೇಲೆ ಸಾಷ್ಟಾಂಗ ನಮಸ್ಕಾರ ಮಾಡಿರಲು, ಆಗ ಶಂಭುವು ಮೆಚ್ಚಿ ತಪ್ಪದೆ ಸಾರೂಪ್ಯ ಪದವಿಯನ್ನು ಕೊಡಲಾಗಿ ಪ್ರಸಿದ್ಧನಾಗಿ ಮೆರೆದ ಧೈರ್ಯದ ಗಣಿಯೆಂದೆನಿಸುವ ಸೇದಿರಾಜರನ್ನು ಅನುಸರಿಸುವ ಸೇವಕನು ನಾನಾಗಿದ್ದೇನೆ. **ಪಗಲ್ಚೋಳರ ಸ್ತೋತ್ರ** ೫೪–೫೫. ಪ್ರತಿ ದಿನವೂ ಈಶ್ವರನ ಲಾಂಛನ ಧರಿಸಿದವರುಗಳನ್ನು ಈಶ್ವರನೆಂದೇ ಭಾವಿಸಿ ಭಕ್ತಿಭಾವದಿಂದ ಕೂಡಿ ಅವರನ್ನು ಸೇವಿಸುತ್ತ ವಿಶೇಷವಾದ ಏಳ್ಗೆಯಿಂದ ಕೂಡಿ ರಾಜ್ಯಭಾರಮಾಡುತ್ತ ಇದ್ದು, ವೈರಿರಾಜರನ್ನು ಯುದ್ಧರಂಗದಲ್ಲಿ ಬೆನ್ನಟ್ಟಿ ಹೊಡೆದುಹಾಕಿ, ಅವರ ತಲೆಯರಾಶಿಯನ್ನು ನೆಟ್ಟನೆ ಮೂವತ್ತು ಚೀಲಗಳಲ್ಲಿ ತುಂಬಿಸಿ, ಬಂಡಿಯಲ್ಲಿ ಹೇರಿಸಿ ತರಿಸಿ, ನಿರೀಕ್ಷಿಸುತ್ತಿರುವ ಸಮಯದಲ್ಲಿ, ಆ (ವೈರಿಗಳಾದವರ) ತಲೆಗಳಲ್ಲಿ ಒಂದು ತಲೆಯ ರಕ್ತದ ಮೆತ್ತುವಿಕೆಯಿಂದ ತಲೆಗೂದಲಿನ ಸಮೂಹವು ನೆನೆದು ಜಡೆಗಟ್ಟಿದ ತಲೆಯಹಾಗೆ ತೋರಲು, ಅಂಥ (ಜಡೆಗಟ್ಟಿದ) ತಲೆಯನ್ನು ಕಂಡು ಹೆದರುತ್ತ ಜಾಗ್ರತೆಯಾಗಿ (ಇದು ಶಿವನ ಲಾಂಛನಧಾರಿಯ ತಲೆಯೆಂದೇ ಭಾವಿಸಿ) ಹೊಳೆಯುವ ಖಡ್ಗದಿಂದ ತನ್ನ ಶಿರಸ್ಸನ್ನೇ ಕತ್ತರಿಸಿ ಆ ತಲೆಗೆ ಅರ್ಪಿಸಿದನು. ಈಶ್ವರನು ಈ ರೀತಿಯ ಭಕ್ತಿಭಾವಕ್ಕೆ ಮೆಚ್ಚಿ ಪ್ರೀತಿಯಿಂದ ಅವನನ್ನು ಉದ್ಧರಿಸಿದನು. (ಈ ರೀತಿಯಿಂದ) ಮೋಕ್ಷವನ್ನು ಸಂಪಾದಿಸಿ ಶೋಭಿಸಿದ ಪಗಲ್ಚೋಳರಿಗೆ ನಾನು ಎಂದೂ ಆಳಾಗಿದ್ದೇನೆ, **ಕಲಿಕಂಬನ**

ನಿಜದಾಸೀಪುತ್ರನೊರ್ವಂ ಕೆಲಸಕಲಸುತೆಳ್ದೋಡಿ ಭಸ್ಮಾಕ್ಷಮಾಲಾ
ಬೆಸನಂ ಬೆತ್ತಂಗದೊಳ್ಜಂಗಮತತಿಯೊಡನೇಳ್ತಂದು ಕಾಲ್ನೀಡೆ ಹಸ್ತಾಂ
ಬುಜದಿಂ ತಾಂ ಕರ್ಚುವಾಗಳ್ ಜಲಮನೆಱೆಯದಾ ಕಾಂತೆ ಮಲ್ಲಂ ಗಡೀತಂ
ನಿಜದಿಂ ಮಚ್ಚೇಟಿಯುಪ್ಪೀ ಸಿರಿಗಿಯುಣಂಗನೆಂದೇಳಿದಂಗೆಯ್ದೊಡಾಗಳ್ ೫೬

ಜಂಗಮದಲ್ಲಿ ಪೂರ್ವಕುಲನಾಮಮನೆತ್ತಿದಳಿಕೆಯೆಂದು ತ
ನ್ನಂಗನೆಯೊಪ್ಪವಾಳ್ದ ನಳಿತೋಳ್ಗಳನಾಗಳೆ ಕೊಯ್ದು ಖಂಡಿಸು
ತ್ತಂಗಜವೈರಿಯಂ ಪದೆದು ಮಚ್ಚಿಸಿ ತತ್ಕೃಪೆಯಿಂ ಗಣತ್ವದೊ
ಳ್ಸಂಗತಮಾದ ಭಕ್ತ ಕಲಿಕಂಬನ ಸಿಂಬಕನಪ್ಪೆನಾವಗಂ ೫೭

ಧರಣಿಯೊಳೊಪ್ಪುತುಂ ಹರಚರಾಂಘ್ರಿಸಮರ್ಚನಸೌಖ್ಯದಿಂದೆ ತಾ
ನಿರೆ ಪುರವೈರಿ ಬಂದೊಸೆದು ಜಂಗಮರೂಪದೊಳೊರ್ವೆ ತನ್ನ ಭಾ
ಸುರತರಮಾದ ಕಚ್ಚುಟಮನೊಪ್ಪದೆ ಬೈತಿದು ನಾಳೆ ಕೊಳ್ವೆನೆಂ
ದಿರಿಸುತದೃಶ್ಯಮಾಗಿಸುತಮಂ ಮಗುಳ್ದಿಯ್ದುತೆ ಬೇಡೆ ನೋಡುತುಂ ೫೮

ಸ್ತೋತ್ರ ೫೬-೫೭. ತನ್ನದಾಸೀಪುತ್ರನೊಬ್ಬನು (ಮನೆಯ) ಕೆಲಸವನ್ನು ಮಾಡುವುದಕ್ಕೆ ಆಲಸ್ಯ ಪಟ್ಟವನಾಗಿ, (ಮನೆಬಿಟ್ಟು) ಓಡಿಹೋಗಿ ದೇಹದಲ್ಲಿ ಭಸ್ಮ ರುದ್ರಾಕ್ಷ ಮಾಲೆಗಳನ್ನು ಧರಿಸಿದವನಾಗಿ, ಜಂಗಮಸಮೂಹದೊಡನೆ ಸೇರಿಬಂದು ಕಾಲನ್ನು ಮುಂದೆಮಾಡಲು ಕರಕಮಲದಿಂದ ಅವನ ಕಾಲನ್ನು ತೊಳೆಯುವ ಸಮಯದಲ್ಲಿ ಹೆಂಡತಿಯು ಈತನು ನಿಜವಾಗಿ ನಮ್ಮ ದಾಸಿಯ ಮಗನಾದ ಮಲ್ಲನೇಅಲ್ಲವೆ ? ಎಂದು ನೀರನ್ನು ಎರೆಯದೆ ತಿರಸ್ಕರಮಾಡಲಾಗಿ ಈ ನನ್ನ ಹೆಂಡತಿಯು ಜಂಗಮದಲ್ಲಿ ಅವನ ಪೂರ್ವಕುಲದ ಹೆಸರನ್ನೆತ್ತಿದಳೆಂದು ಅವಳ ಸೊಗಸಾದ ಕೋಮಲ ತೋಳುಗಳನ್ನು ಆ ಕೂಡಲೆ ಕೋಪದಿಂದ ಹೊಡೆದು ಕತ್ತರಿಸಿ ಪರಮೇಶ್ವರನನ್ನು ಪ್ರೀತಿಯಿಂದ ಮೆಚ್ಚುವಂತೆ ಮಾಡಿ ಅವನ ಆ ಕೃಪೆಯಿಂದ ಗಣಪದವಿಗೆ ಸೇರಿದ ಭಕ್ತ **'ಕಲಿಕಂಬ'** ನ ಸದಾ ಆಶ್ರಿತನು ನಾನಾಗಿದ್ದೇನೆ. ಅಮರ ನೀತಿಯು ಸ್ತೋತ್ರ ೫೮-೬೦. ಭೂಮಿಯಲ್ಲಿ, ಶೋಭಿಸುತ್ತ ಪರಮೇಶ್ವರನ ಜಂಗಮಸಮೂಹದ ಪಾದಪೂಜೆ ಮಾಡಿಕೊಂಡು ತಾನು ಇರಲಾಗಿ. ಪ್ರೀತಿಯಿಂದ ಈಶ್ವರನು ಒಮ್ಮೆ ಜಂಗಮ ವೇಷದಿಂದ ಬಂದು ತನ್ನ ಪ್ರಕಾಶಮಾನವಾದ ಕೌಪೀನ (ಲಂಗೋಟಿ)ವನ್ನು ಒಪ್ಪವಾಗಿ ಇದನ್ನು ಮುಚ್ಚಿಡು ನಾಳೆಬಂದು ಒಯ್ಯುತ್ತೇನೆ ಎಂದು ಹೇಳಿ ಇರಿಸಿ, ಅದನ್ನು ಅದೃಶ್ಯವಾಗುವಹಾಗೆ ಮಾಡಿದನು. (ತಿಳಿಸಿದಂತೆ ಮರುದಿನ) ಬಂದು ಆ ಕೌಪೀನವನ್ನು ಬೇಡಿದನು. ಆಭಕ್ತನು (ಅದನ್ನು ನೋಡುವುದಕ್ಕೆಂದು ಇಟ್ಟಸ್ಥಳದಲ್ಲಿ) ನೋಡಲಾಗಿ ಪೆಟ್ಟಿಗೆಯಲ್ಲಿ ಅದನ್ನು

ಪೇಳಿಗೆಯಲ್ಲಿ ಕಾಣದೆ ಮಹಾಭಯಮಾಳ್ದಿರೆ ಕಂಡು ಕಾಡುತಂ
ಕೇಳೆನಗಿಂದಿದಕ್ಕೆ ಪಡಿಕಟ್ಟುಟಮಿರ್ದಪ್ಪುದಂಬರಗಳಂ
ಪಾಳಿಯೊಳಿಂತಿದಕ್ಕೆ ಸರಿದೂಗಿ ಸಮರ್ಪಿಪ್ಪುದೆಂದು ತಾಪಸಂ
ಪೇಳೆ ಕಡಂಗಿ ಕಟ್ಟುಟಮನೊಂದೆಡೆದಟ್ಟೆಯೊಳಂಬರಂಗಳಂ ೫೯

ಒಂದೆಡೆದಟ್ಟೆಯಲ್ಲಿರಿಸಿ ತೂಗೆ ಸಮಾನಮದಾಗದಿರ್ದೊಡೋ
ರಂದದೆ ವಿತ್ತವಸ್ತುಚಯಮುಂ ಸತಿಯುಂ ಸುತನಂ ನಿಜಾಂಗಮುಂ
ಕುಂದದೆ ತೂಗಿ ತೋಡೆನಿಸಿ ಮೆಚ್ಚಿಸಿ ಶಂಭುವನೆಯ್ದೆ ಮೋಕ್ಷದೊ
ಳ್ನಿಂದು ವಿರಾಜಿಸಿರ್ದಮರನೀತಿಯ ಬಂಟರ ಬಂಟನಪ್ಪೆನಾಂ ೬೦

ಚರಲಿಂಗಾಂಘ್ರಿ ಸಮರ್ಚನಕ್ಕೆ ಧನಮೆಲ್ಲಂ ತೀರೆ ದಾರಿದ್ರ್ಯದಿಂ
ದಿರುತಂ ಪೆರ್ಮಳೆಯಲ್ಲಿ ವೃದ್ಧಚರವೇಷಂಬೊತ್ತು ಕಾಲಾರಿ ನ
ಟ್ಟಿರುಳೊಳ್ಬಂದು ನಿಜಾಲಯಕ್ಕೆ ಚಳಿಯಿಂದಂ ಕಂಪಿಸುತ್ತಾರ್ತಿಪೆ
ತ್ತಿರೆ ಕಿರ್ಚಂ ಪಟುಗೆಯ್ದು ತನ್ನ ಗುಡಿಲಂ ಕಿಳ್ತಿಕ್ಕಿ ಪೊತ್ತಿಕ್ಕುತಂ ೬೧

ಉರುಪಿದೊಡಲ್ಲಿ ಕಾದುರಿಯನಾ ಚಳಿಯಂಡಲೆಯುಂ ತೆರಳ್ಚಿ ತ
ದ್ವರಮುನಿ ಭಕ್ತ ಕೇಳ್ಪಸಿದೆನಂಬಕಳಂ ತುಱುಗಾದ ಸೂನುಗಂ

ಕಾಣದೆ ಅತ್ಯಂತ ಭಯಗೊಂಡವನಾಗಿ ಇದ್ದನು (ಇದನ್ನು ಕಂಡು (ಆ ವೇಷಧಾರಿಯಾದ ಶಿವನು ನನ್ನ ಕೌಪೀನವನ್ನು ಕೊಡು ಎಂದು) ಪೀಡಿಸುತ್ತ- ಕೇಳು ನನಗೆ ಈಗ ಈ ಕೌಪೀನಕ್ಕೆ ಸರಿದೂಗುವಷ್ಟು ಇರುವ ಬಟ್ಟೆಗಳನ್ನು ಕ್ರಮವಾಗಿ ತೂಕಮಾಡಿ ಕೊಡು ಸಮರ್ಪಣೆ ಮಾಡು ಎಂದು ಮತ್ತೊಂದು ಅಂಥದೇ ಕೌಪೀನವನ್ನು ತೋರಿಸಿ ಆ ಜಂಗಮನು (ತಾಪಸನನ್ನು) ಹೇಳಲಾಗಿ, (ಅಗಲಿ) ಎಂದು ಉತ್ಸಾಹಗೊಂಡು ಒಂದು ಕಡೆಯ ತಕ್ಕಡಿಯ ಪರಡಿಯಲ್ಲಿ (ಜಂಗಮನು ಕೊಟ್ಟ ಬೇಕೆಂದು) ಕೌಪೀನವನ್ನಿರಿಸಿ ಮತ್ತೊಂದು ತಕ್ಕಡಿ ಪರಡಿಯಲ್ಲಿ ಬಟ್ಟೆತೂಗಲು ಆ ಬಟ್ಟೆಗಳೆಲ್ಲವೂ (ಆ ಕೌಪೀನಕ್ಕೆ) ಸರಿದೂಗದೆ ಇರಲಾಗಿ, ಒಂದೇಸಮನೆ (ತನ್ನ) ಐಶ್ವರ್ಯ ಪದಾರ್ಥಗಳ ಸಮೂಹವನ್ನೂ (ಕೊನೆಗೆ) ಹೆಂಡತಿ, ಮಕ್ಕಳನ್ನು ತನ್ನನ್ನೂ (ಕೂಡ) ಕುಂದಿಲ್ಲದೆ ತೂಗಿ ಸಮವಾದದ್ದೆನಿಸಿ ಶಂಭುವನ್ನು ಚೆನ್ನಾಗಿ ಮೆಚ್ಚುವಂತೆ ಮಾಡಿ, ಮೋಕ್ಷದಲ್ಲಿ ನಿಂತು ಶೋಭಿಸುತ್ತಿರುವ ಅಮರನೀತಿಯ ಸೇವಕರ ಸೇವಕನು ನಾನಾಗಿದ್ದೇನೆ. **ಇಳೆಯಾಂಡ ಗುಡಿಮಾರರ ಸ್ತೋತ್ರ** ೬೧-೬೩. ಚರಲಿಂಗಗಳೆನಿಸಿದ ಜಂಗಮರ ಪಾದ ಪೂಜೆಗೆ(ಗಳಿಸಿ) ಧನವೆಲ್ಲ ತೀರಿಹೋಗಲು ದಾರಿದ್ರ್ಯದಿಂದ ಕೂಡಿರುವಾಗ ಒಂದು ದಿನ ನಡುರಾತ್ರಿಯಲ್ಲಿ ಸುರಿಯುತ್ತಿರುವ ಮಳೆಯಲ್ಲಿ ನೆನೆದವನಾಗಿ ಜಂಗಮ ವೇಷವನ್ನು ಧರಿಸಿ ಶಿವನು ಚಳಿಯಿಂದ ನಡುಗುತ್ತ ಬಾಧೆಗೊಂಡು ಬಂದನು. (ಈ ಅವಸ್ಥೆಯಲ್ಲಿ ಬಂದ ಆ ಚರ ರೂಪದ ಶಿವನಿಗೆ) ಬೆಂಕಿಯನ್ನು ಪುಟಗೊಳಿಸಿ (ಸೌದೆಯೆಲ್ಲ ತೀರಿಹೋಗಲು) ತನ್ನ ಗುಡಿಸಲನ್ನೇ ಕಿತ್ತು ಬೆಂಕಿಗೆ ಇಕ್ಕಿ ಉರುಬಿ ಹೊತ್ತಿಸಲಾಗಿ, ಆ ಶ್ರೇಷ್ಠ ಚರಮೂರ್ತಿಯು

ದಿರಿಸಿದುದುಂಳ್ಳೊಡಿಕ್ಕೆನೆ ನಿಜಾಂಗನೆಯಿಲ್ಲೆನೆ ಕೇಳ್ದು ನಟ್ಟಿರು
ಳ್ಸುರಿವತಿವೃಷ್ಟಿಯೊಳ್ತಳರ್ದು ತನ್ನಯುಗರ್ದೆಗೆ ತೇಲ್ವ ನೆಲ್ಗಳಂ ೬೨

ತಂದು ಪುರಿದೊಲ್ದು ವಿಡಿದವ
ಜಂದೋದನಮೆಸಗಿ ತಪ್ಪದುಣಲಿತ್ತೊಲಿಸು
ತ್ತಂದಭವನನುರುಮುಕ್ತಿಗೆ
ಸಂದೆಸೆವೆಳೆಯಾಂಡಗುಡಿಯಮಾರನ ಮಗನಾಂ ೬೩

ದಾನವಿಧಾನದಿಂ ನಿಗಮಸಮ್ಮತಿಯಿಂ ಸಲೆ ತೋರ್ಪ ದೃಷ್ಟಸಂ
ತಾನದಿನಾಗಳುಂ ಭವಿಗಳಂ ಶಿವಭಕ್ತರನೊಲ್ದು ಮಾಡುತುಂ
ತಾನೊಸೆದಾಳ್ವ ಧಾರಿಣಿಯೊಳೊಲ್ಲದರಂ ತಱಿದಿಕ್ಕುತುಂ ಪೊದ
ಳ್ದೀ ನಿಯಮಂ ಕರಂ ತನಗೆ ಶಾಶ್ವತಮಾಗಿರೆ ಬಾಳ್ವ ಕಾಲದೊಳ್ ೬೪

ನಿಕ್ಕುವಮೀತನ ಪರಿಯಂ
ಮೊಕ್ಕಳಮಾನಱಿವೆನೆಂದು ಚಂದ್ರಧರಂ ತಾ
ಳ್ದೊಕ್ಕಲಿಗವರಿಜನಾತ್ಮಪು
ರಕ್ಕೆಯ್ದುತೆ ಪೊರೆಗೆ ಬಂದು ನಿಂದಸವಸದಿಂ ೬೫

ಅಲ್ಲಿ ಉರಿಯನ್ನು ಕಾಯಿಸಿ ಕೊಂಡು, ಚಳಿಯ ಬಾಧೆಯನ್ನು ಹೋಗಲಾಡಿಸಿಕೊಂಡು 'ಭಕ್ತನೇ ಕೇಳು ; (ನಾನು) ಹಸಿದಿದ್ದೇನೆ' ಎನ್ನಲು ಆ ಭಕ್ತನು)' ದನರನ್ನು ಕಾಯುವ ಮಗನಿಗೆಂದು ಇರಿಸಿರುವಂತಹುದೇನಾದರೂ ಅಂಬಲಿಯಿದ್ದರೆ ನೀಡು' ಎನ್ನಲಾಗಿ ಆ ಭಕ್ತನ ಹೆಂಡತಿಯು 'ಇಲ್ಲ' ಎನ್ನಲು ಕೇಳಿದ ಆ ಭಕ್ತನು ನಡುರಾತ್ರಿಯಲ್ಲಿ ಸುರಿಯುತ್ತಿರುವ ಮಳೆಯಲ್ಲಿ ತನ್ನ ಗದ್ದೆಗೆ ಹೋಗಿ ತೇಲಾಡುತ್ತಿರುವ (ಬಿತ್ತಿದ) ಬತ್ತದ ಕಾಳುಗಳನ್ನೇ (ಆಯ್ದು) ತಂದು ಹುರಿದು ಪ್ರೀತಿಯಿಂದ ಕುಟ್ಟಿ ಅವರು ಅಗಲೇ ಅನ್ನವನ್ನು ಮಾಡಿ, ತಪ್ಪದೆ (ಆ ಚರ ರೂಪದ ಶಿವನಿಗೆ) ಊಟಕ್ಕೆ ಇಕ್ಕಿದರು. (ಈ ರೀತಿಯಿಂದ) ಆಗ ಶಿವನನ್ನು ಒಲಿಸಿಕೊಂಡು ಶ್ರೇಷ್ಠ ಮುಕ್ತಿಯನ್ನು ಪಡೆದ ಇಳೆಯಾಂಡ ಗುಡಿ ಮಾರರ ಮಗನು ನಾನು. **ಗಣನಾಥಭಕ್ತನ ಸ್ತೋತ್ರ** ೬೪–೭೦. ಭೂಮಿಯಲ್ಲಿ ದಾನ ಮಾಡುವ ವಿಧಾನವನ್ನು ವೇದದಲ್ಲಿ ಉಕ್ತವಾದ ರೀತಿಯಲ್ಲಿ ಮಾಡುವವನಾಗಿ, ತಾನು ಭೂಭಾಗವನ್ನು ಪ್ರೀತಿಯಿಂದ ಆಳುವವನಾಗಿ, ತಾನಾಳುವ ರಾಜ್ಯದಲ್ಲಿ ಅದೃಷ್ಟ ಸಂತಾನರುಗಳನ್ನು, ಭವಿಗಳನ್ನು ಪ್ರೀತಿಯಿಂದ ಶಿವಭಕ್ತರನ್ನಾಗಿ ಮಾಡುತ್ತ, ಹಾಗಾಗಲೊಲ್ಲದವರನ್ನು ಸಂಹರಿಸಿ ಹಾಕುತ್ತ ಶೋಭಿಸುವ ಈ ನಿಯಮವೇ ತನಗೆ ಶಾಶ್ವತವಾಗಿರುವಂತೆ ಬಾಳುವೆ ಮಾಡುತ್ತಿದ್ದ ಕಾಲದಲ್ಲಿ, ನಿಶ್ಚಯವಾಗಿ ಇವನ ಈ ರೀತಿಯನ್ನು ಚೆನ್ನಾಗಿ ನಾನು ತಿಳಿಯು ಬೇಕೆಂದು ಚಂದ್ರಧರನು (ಓರ್ವ) ಒಕ್ಕಲಿಗನ ಆಕಾರವನ್ನು ಹೊಂದಿ, ಅವನ ಪಟ್ಟಣದ ಸಮೀಪಕ್ಕೆ ವೇಗದಿಂದ ಬಂದು ನಿಂತು, 'ಬಿಟ್ಟಿ ಕೆಲಸ, ಹೊರೆ ಸುಂಕ, ತೆರಿಗೆ, ಸುಂಕ, ಕೊಟ್ಟಣ, ಈ ಮುಂತಾದ ಕಾಣಿಕೆಗಳು, (ಮತ್ತು) ಹುಲ್ಲ

ಬಿಟ್ಟ ಪೊರೆ[1] ತೆಱೆಗೆ ಸುಂಕಂ
ಕೊಟ್ಟಣಮಾ ಕಾಣ್ಕೆ ಖಾಣ ಕಡ್ದಾಯಮೊಳಂ
ಕೊಟ್ಟು ತಳರೆಂದು ನಿನ್ನವ
ರಟ್ಟಿ ಕರಂ ಕುಟ್ಟಿ ಕುಟ್ಟಿ ಬಾಧಿ[2]ಪರೆನ್ನಂ ೬೬

ನಿನಗಿದು ಧರ್ಮವೇ ನೃಪತಿಯೆಂದಳಲಿಂ ಮೊಱೆ[3]ಯಿಕ್ಕೆ ನೋಡಿ ಕಾ
ಪಿನವರನೆಂತಿವಂ ಕಳಿವುತೆಮ್ಮೆಡೆಗಯ್ದಿದನೆಂದು ವಿಸ್ಮಯಂ
ಜನಿಯಿಸಿ ಗೌಡ ಕೇಳ್ನಿನಗೆ ಕೊಟ್ಟಪೆನೀಗಳೆ ಸರ್ವಮಾನ್ಯಮಂ
ಘನ ಶಿವಭಕ್ತನಾಗಿರೆನೆ ಕೇಳಲೆ ಭೂಪತಿಯೆಮ್ಮ ಜಾತಿಯೊಳ್ ೬೭

ಶಿವಭಕ್ತಿಸ್ಥಿತಿಯಾಂತು ಬಾಳ್ದರಣಮಿಲ್ಲಾಂ ಭಕ್ತನೆಂತಪ್ಪೆನಂ
ಜುಮೆನೀ ಭಕ್ತಿಗೆನುತ್ತಮಂ ನುಡಿಯೆ ನಿನ್ನಂ ಬಾಳಿಪೆಂ ನಂಬು ಶಾಂ
ಭವದೀಕ್ಷಾವಿಧಿಯಾಂತು ಬಾಳ್ನಿನಗೆ ಧಾನ್ಯದ್ರವ್ಯರಾಜ್ಯಂಗಳಂ
ಜವದಿಂದೀವೆನೆನುತ್ತೊಡಂಬಡಿಸುತಾತಂ ಕೇಳದಿರ್ಪಂದಮಂ ೬೮

ಕಂಡತಿ ಕೋಪದಿಂ ಜಡಿದು ಕೂರಸಿಯಂ ಪೊಡೆದಿಕ್ಕೆ ಭೋಂಕನಾ
ಖಂಡಶಶಾಂಕಮೌಲಿ ನಿಜರೂಪಮನಾಳ್ದು ಪೊದಳ್ದು ಮೆಚ್ಚಿ ಭೂ

ಬನ್ನಿ ತೆರಿಗೆ (ಖಾಣ), ಕಡ್ಡಾಯದ ತೆರಿಗೆಗಳನ್ನು ಕೊಟ್ಟು ಹೋಗೆಂದು ನಿನ್ನವರುಗಳು (ರಾಜ ಭಟರುಗಳು) ನನ್ನನ್ನು ಬೆನ್ನು ಹತ್ತಿ, ಹೊಡೆದು ಬಡಿದು ಬಾಧಿಸುತ್ತಿದ್ದಾರೆ. ಮಹಾರಾಜಾ, ಇದು ನಿನಗೆ ಧರ್ಮವೇ' ? ಎಂದು ದುಃಖದಿಂದ ಮೊರೆಯಿಟ್ಟು ಹೇಳಿಕೊಳ್ಳಲಾಗಿ, ಕಾವಲುಗಾರರನ್ನು (ರಾಜನು) ನೋಡಿ, ಅಷ್ಟು ಜನ ಕಾವಲುಗಾರರನ್ನು ದಾಟಿ ನನ್ನ ಬಳಿಗೆ ಹೇಗೆ ಬಂದನು ? ಎಂದು ವಿಸ್ಮಯಗೊಂಡವನಾಗಿ, 'ಎಲೈ ಗೌಡನೇ, ಕೇಳು : ನಿನಗೆ ಈಗ ಸರ್ವವನ್ನು ಮನ್ನಾ (ಮುಕ್ತಗೊಳಿಸುವಂತೆ) ಮಾಡುತ್ತೇನೆ. ಶ್ರೇಷ್ಠನಾದ ಶಿವಭಕ್ತನಾಗಿರು, ಎಂದನು ಹೀಗೆನ್ನಲು (ಅವನು)' ಎಲೈ ಅರಸನೇ, ಕೇಳು. ನಮ್ಮ ಜಾತಿಯಲ್ಲಿ ಶಿವಭಕ್ತಿಯ ಸ್ಥಿತಿಯನ್ನು ಹೊಂದಿ ಬಾಳುವವರು ಒಬ್ಬರೂ ಇಲ್ಲ. ನಾನು ಹೇಗೆ ಶಿವಭಕ್ತನಾಗಲಿ ? ಈ ಭಕ್ತಿಗೆ ನಾನು ಹೆದರುತ್ತಿದ್ದೇನೆ.' ಎಂದು ಅವನು ನುಡಿದನು. (ಆಗ ಶಿವನು) ನಿನ್ನನ್ನು ಬಾಳುವಂತೆ ಮಾಡುತ್ತೇನೆ. (ನನ್ನ ಮಾತನ್ನು ನಂಬು. ಶಿವದೀಕ್ಷಾ ಸಂಸ್ಕಾರವನ್ನು ಹೊಂದಿ ಬಾಳು. ನಿನಗೆ ಧಾನ್ಯ, ದ್ರವ್ಯ ಮತ್ತು ರಾಜ್ಯಗಳನ್ನು ಶೀಘ್ರವಾಗಿ ಕೊಡುತ್ತೇನೆ.' ಎಂದು ಹೇಳಿ ಒಪ್ಪಿಸಲು ಯತ್ನಿಸಿದರೂ ಅವನು ಕೇಳದೆಯಿರುವ ರೀತಿಯನ್ನು ನೋಡಿ ಕೋಪಗೊಂಡು, ತೀಕ್ಷ್ಣವಾದ ಕತ್ತಿಯನ್ನು ಹಿಡಿದು ಝಳಪಿಸುತ್ತ ಹೊಡೆದಿಕ್ಕಲಾಗಿ, ಆ ಕೂಡಲೇ ಆ ಚಂದ್ರಚೂಡನು ನಿಜರೂಪ ಧಾರಣೆ ಮಾಡಿ, ಪ್ರಕಟಗೊಂಡು ಮೆಚ್ಚಿ ಸಮಸ್ತ ಭೂಮಂಡಲದ ಪಾಲನೆ ಮಾಡುವ

---

1 ಱಗೆ(ಅ, ಮು) 2 ೦(ಜ, ಗ)

ಮಂಡಲಪಾಲ ಬೇಡು ವರಮಿತ್ತಪೆನೆಂದವನೆ ಬೇಡ ತದ್ವರಂ
ಮಂಡಿತಲಿಂಗಮಂ ತಳೆ ನಿಜಾಂಗದೊಳಂಗಜಮಾನಮರ್ದನಾ ೬೯

ಎಂದು ಶಿವಲಿಂಗಮಂ ಬಿಡ
ದಿಂದುಧರಂಗೊಲ್ದು ಧರಿಸಿ ಗಣಸಂಕುಳದೊ
ಳ್ಸಂದ ಗಣನಾಥಭಕ್ತನ
ಚಂದಳಿರಡಿಗರ್ಪನಾಂಪ ಕಿಂಕರನಪ್ಪೆಂ ೭೦

ಮಿಸುಪ ಚಿದಂಬರಾಖ್ಯಪುರದೊಳ್ಶಿವಲಿಂಗನಿಕೇತನಕ್ಕೆ ಬಂ
ದೊಸೆದಭಿವಂದಿಸುತ್ತೆ ಸಲೆ ಪೋಗುವ ನೇಮದೊಳೊಪ್ಪುತೊಂದಿರುಳ್
ಮಸಗಿದ ಮರ್ಬಿನೊಳ್ ಪುರಹರಾಲಯದಿಂ ಮನೆಗಯ್ದುವಾಗಳಾ
ಗಸಕಡರ್ದೊಪ್ಪುವುಪ್ಪರಿಗೆಯಿಂ ಗಣಿಕಾಂಗನೆಯೆಂಜಲಂಬುವಂ ೭೧

ಮೇಲೆ ಚಲ್ಲೆ ಶೀಕರಾಳಿ ಪಾಱೆ ನೀಲಕಂಠ ಕಂ
ಕಾಲಪಾಣಿಯೆಂಬ ಸೊಲ್ಲನಾಲಿಸುತ್ತೆ ಪ್ರೀತಿಯಿಂ
ಬಾಲೆ ಬೇಗ ಬಂದು ಬೀದಿಗೊಲ್ದು ವಂದಿಸುತ್ತೆ ತ
ನ್ನಾಲಯಕ್ಕೆ ಕೊಂಡುಪೋಗಿ ದಿವ್ಯಗಂಧತೈಲಮಂ ೭೨

ವರವನ್ನು ಕೊಟ್ಟಿದ್ದೇನೆ. (ಇನ್ನೂ) ಬೇಡು' ಎಂದು ಕೇಳಲು, (ಆ ರಾಜನು). 'ಮನ್ಮಥನ ಗರ್ವವನ್ನು ನಾಶಗೊಳಿಸಿದ ಹೇ ಶಿವನೇ, ಆ ವರವು ನನಗೆ ಬೇಡ. ನನ್ನ ಶರೀರದಲ್ಲಿ (ನಾನು) ಧರಿಸಿರುವಂಥ ಲಿಂಗವನ್ನು ಧರಿಸು,' ಎಂದು ತಪ್ಪದೆ ಪರಮೇಶ್ವರನಿಗೂ, ಪ್ರೀತಿಯಿಂದ ಶಿವಲಿಂಗವನ್ನು ಧರಿಸಿ, ಶಿವಗಣ ಸಮೂಹದಲ್ಲಿ ಸೇರಿದ ಗಣನಾಥ ಭಕ್ತನ ಕೆಂಪಾದ ಚಿಗುರಿನಂತಿರುವ ಪಾದದ ಕೆರವನ್ನು ಧರಿಸುವ ಆಳು ನಾನಾಗಿದ್ದೇನೆ.

ತಿರುನೀಲಕಂಠ ಮಾಹೇಶ್ವರ ಸ್ತೋತ್ರ ೭೧–೭೬. ಶೋಭಿಸುವ 'ಚಿದಂಬರ' ಎಂಬ ಹೆಸರಿನ ಪಟ್ಟಣದೊಳಗೆ, ಶಿವಲಿಂಗ ನಿಲಯಕ್ಕೆ ಹೋಗಿ ಪ್ರೀತಿಯಿಂದ ನಮಸ್ಕಾರ ಮಾಡಿ ಹೋಗುವ ವ್ರತದಿಂದ ಒಪ್ಪುತ್ತಿದ್ದು, ಒಂದುದಿನ ರಾತ್ರಿಯಲ್ಲಿ ಮುಸುಕಿದ ಕತ್ತಲೆಯಲ್ಲಿ ಆ ಶಿವಾಲಯದಿಂದ (ತನ್ನ) ಮನೆಗೆ ಹೋಗುತ್ತಿರುವ ಸಮಯದಲ್ಲಿ ಆಕಾಶ ಮಧ್ಯಕ್ಕೆ ಅಡರಿ ಶೋಭಿಸುವ ಉಪ್ಪರಿಗೆಯ ಮೇಲಿಂದ (ಒರ್ವ) ಸೂಳೆಯು ಎಂಜಲ ಜಲವನ್ನು ಮೇಲಿನಿಂದ ಚಲ್ಲಲಾಗಿ, (ಆ ನೀರಿನ) ತುಂತುರು ಹನಿಗಳ ಸಮೂಹವು (ಈ ತಿರುನೀಲಕಂಠರ) ಮೇಲೆ ಬೀಳಲಾಗಿ, (ಅವರು) 'ನೀಲಕಂಠಾ, ಕಂಕಾಳಧರನೇ (ವಿಷ್ಣುವಿನ ದೇಹದ ಮೂಳೆಯು ಹಸ್ತದಲ್ಲಿ ಉಳ್ಳವನೇ,)' ಎಂದೆಂಬ ಮಾತನ್ನು (ಆ ಸೂಳೆಯು) ಕೇಳಿ, ಆ ಬಾಲೆಯು ಭಯದಿಂದ ಆ ಕೂಡಲೆ ಬೀದಿಗೆ ಬಂದು, ಪ್ರೀತಿಯಿಂದ ನಮಸ್ಕಾರಮಾಡಿ, ತನ್ನ ಮನೆಗೆ ಕರೆದುಕೊಂಡು ಹೋಗಿ, ದಿವ್ಯವಾದ ಸುಗಂಧ ತೈಲವನ್ನು ದೇಹಕ್ಕೆ ಲೇಪನಗೊಳಿಸಿ, ವಿಲಾಸದಿಂದ ಸ್ನಾನ ಮಾಡಿಸಿ, ಸುಗಂಧ, ಚಂದನ, ಹೂಮಾಲೆ, ವಸ್ತ್ರ, ಒಡವೆ ಎಂಬಿವೇ ಮೊದಲಾದವುಗಳನ್ನು ಅರ್ಪಣೆ

ಪೂಸಿ ವಿಲಾಸದಿಂದೆ ಜಳಕಂಬೊಗಿಸುತ್ತೆ ಸುಗಂಧ ಚಂದನಂ
ಪೊಸರಮಂಬರಾಭರಣಮೆಂಬಿವನರ್ಪಿಸಿ ದಿವ್ಯ ವೀಟಿಕಾ
ವಾಸಿತವಕ್ತ್ರನಂ ನೆಗಳ್ದು ಸೈರಿಪುದೆನ್ನಪರಾಧಮಂ ಭವ
ದ್ದಾಸಿ ಗಡಾನೆನುತ್ತೆಱಗಿ ಬೀಳ್ಕೊಡೆ ಬರ್ಪಿನಮಾತ್ಮಗೇಹದೊಳ್ ೭೩

ಪ್ರಿಯೆ ಬಿಗ ನೋಡಿ ತನ್ನ ಪೊಸ ವೇಷಮನಕ್ಕಟ ಪೊಳ್ತು ಪೋದುದ
ನ್ನೆಯಮನದೆ[1]ಂತು ಸೈರಿಪೆನಿದೆತ್ತಣದುಜ್ವಳವೇಷದೇಳ್ಗೆಯೆ
ಲ್ಲಿಯುದಪರ್ದಂಗರಾಗದಿನಿಗಂಪೊಸದಾವಳೊಳಿರ್ದು ಬಂದೆ ನಿ
ನ್ನಯ ಬತಮಿಂದು ಕಾಂತ ಫಲವಾದುದು ನನ್ನಿಯೆನುತ್ತೆ ಕಾಯ್ಪಿನಿಂ ೭೪

ಮಣಿಮಂಚಾಗ್ರಕೆ ಬಾರದಿರ್ಪ ಬಗೆಗಂಡೋರಂತೆ ಬಾರೆಂದು ಸಂ
ದಣಿಪ[2]ಳ್ಕರ್ಕೆ[2]ಗೆ ತತ್ಕರಂಬಿಡಿದು ತಾಂ ಮೇಲ್ವಾಯೆ ನೀಂ ಮುಟ್ಟದಿ
ರ್ಫಣಿರಾಡ್ಭೂಷಣನಾಣೆಯೆಂದೆನೆ ಕರಂ ಕೈವಿಟ್ಟು ತತ್ಕಾಂತೆಯೊ
ಳ್ಪ್ರಣಯಂ ಮಾಣ್ದಿರದಿರ್ದು ವತ್ಸರಮೆಂಭತ್ತಾಗುತಿರ್ಪನ್ನೆಗಂ ೭೫

ಮಾಡಿ, ಶ್ರೇಷ್ಠವಾದ ತಾಂಬೂಲದಿಂದ ಪರಿಮಳಗೊಳಿಸಲ್ಪಟ್ಟ ಮುಖವುಳ್ಳವನನ್ನಾಗಿ ಮಾಡಿ, 'ನನ್ನ ಅಪರಾಧವನ್ನು ಕ್ಷಮಿಸಬೇಕು. ನಾನು ನಿಮ್ಮ ದಾಸಿಯಲ್ಲವೆ ?' ಎನ್ನುತ್ತ ನಮಸ್ಕಾರ ಮಾಡಿ ಕಳುಹಿಸಿಕೊಟ್ಟಳು. (ಹೀಗೆ) ತನ್ನ ಮನೆಗೆ ಬರಲಾಗಿ, ಇವನ ಈ ಹೊಸ ವೇಷವನ್ನು (ಆ ತಿರುನೀಲಕಂಠರ) ಹೆಂಡತಿಯು ಚೆನ್ನಾಗಿ ನೋಡಿ, ಅಕ್ಕಟಾ ! ಮಿಕ್ಕಿ ಹೋದ ಹೊತ್ತಿನಲ್ಲಿ (ಈ ರೀತಿಯ) ಅನ್ಯಾಯವನ್ನು ಹೇಗೆ ಸೈರಿಸಲಿ ! ಇದೆಲ್ಲಿಯ ಉಜ್ವಲವಾದ ವೇಷದ ಉತ್ಕರ್ಷ ! ಮೈಗೆ ತೊಡೆಯಲ್ಪಟ್ಟ ಸುಗಂಧ ದ್ರವ್ಯದ ಸೊಗಸಾದ ವಾಸನೆ ಇದೆಲ್ಲಿಯದು ! ಯಾವಳೊಡನೆ ಪ್ರೀತಿಗೊಂಡು ಇದ್ದು ಬಂದೆ ಕಾಂತಾ ? ನಿನ್ನ ವ್ರತವು ಈ ದಿನ ಸಫಲವಾದುದಾಯಿತು.' ಎನ್ನುತ್ತ ಕೋಪಗೊಂಡವಳಾಗಿ, (ಅವಳು) ರತ್ನ ಖಚಿತವಾದ ಮಂಚದ ಮೇಲೆ ಬಾರದಿರುವ (ಅವಳ) ರೀತಿಯನ್ನು ನೋಡಿ, (ತಿರುನೀಲಕಂಠನು) ಕ್ರಮದಂತೆ (ಮಂಚಕ್ಕೆ) ಬಾ ಎಂದು ಹೆಚ್ಚಾದ ಅಕ್ಕರೆಯಿಂದ ತುಂಬಿದವನಾಗಿ ಅವಳ ಕೈಯನ್ನು ಹಿಡಿದು ಅವನು ಅವಳ ಮೇಲೇರಿ ಹೋಗಲು, (ಅವಳು) 'ನೀನು ಆದಿಶೇಷಾಭರಣನಾದ ಶಿವನ ಆಣೆಯಾಗಿ (ನನ್ನನ್ನು) ಮುಟ್ಟಬೇಡ,' ಎಂದೆನಲು, (ಅವನು ಅವಳ) ಕೈಯನ್ನು ಬಿಟ್ಟು, ಆ ಕಾಂತೆಯಲ್ಲಿ ಪ್ರಣಯವನ್ನು ಸಂಪೂರ್ಣ ತ್ಯಜಿಸಿದವನಾಗಿ, ಎಂಬತ್ತು ವರ್ಷಗಳು ಆಗುವವರೆಗೆ ಇರುತ್ತಿರುವಲ್ಲಿ, ಆಗ ಶಿವನು ಆಗ ಜಂಗಮಾಕಾರವನ್ನು ಹೊಂದಿ, ಅವನ ನಿಷ್ಠೆಗೆ ಒಲಿದು ಬಂದು (ಆತನನ್ನು ಕಂಡು) ಒಂದು ಭಿಕ್ಷಾಪಾತ್ರೆಯನ್ನು ಜೋಕೆಯಿಂದ ಮುಚ್ಚಿಡು ಎಂದು ತಿಳಿಸಿ ಕೊಟ್ಟು ಹೋದನು. ಆ ಪಾತ್ರೆಯು ಅವನಲ್ಲಿ ಮಾಯ

---

1 ದಿಂ (ಅ) 2 ಕರ್ಕ್ಕೆ (ಜ)

ಹರನಾಗಳ್ ಜಂಗಮಾಕಾರಮನೆ ತಳೆದು ತನ್ನಿಷ್ಟಗೊಲ್ದೆಯ್ದುತುಂ ಕ
ರ್ಪರಮೊಂದಂ ಜೋಳಿಯಿಂ ಬೈತಿಡುವುದೆನುತೆ ಕೊಟ್ಟೆಯ್ದುತುಂ ಮಾಯಮಪ್ಪಂ
ತಿರೆ ಗೆಯ್ದೋರಾತದಂ ತಾಂ ಮಱುದಿನಮೊಸೆದೇಳ್ತಂದು ತಾರೆಂದು ಬೇಡು
ತ್ತಿರೆ ಬೇಗಂ ಮುನ್ನ ಬೈತಿಟ್ಟೆಡೆಯೊಳಱಸುತುಂ ಕಾಣದುದ್ಭೀತಿಯಿಂದಂ ೭೬

ನಡುಗುತ್ತಿರ್ಪನ್ನಮೇಂ ಪೋದುದೆ ಕಿತವ ಲಸತ್ಕರ್ಪರಂ ಜೋಳಿಯಿಂ ಬೈ
ತಿಡು ನೀನೆಂದಿತ್ತೊಡೇಂ ವಂಚಿಪುದೆ ಜಗದೊಳಾರ್ಮೆಚ್ಚುವರ್ನಿನ್ನನಿಲ್ಲೆಂ
ದೊಡೆ ಸೊಲ್ಲಂ ನಂಬಲೆಂತಕ್ಕುಮೊ ಕುಡು ಕುಡು ಮತ್ಪಾತ್ರೆಯಂ ನಿನ್ನನೆಂತುಂ
ಬಿಡೆನೆಂದಾಸ್ಫೋಟಿಸುತ್ತುಂ ಶಿವದಿಡುತಿದಿರೊಳ್ತರ್ಜನಂಗೆಯ್ವುತಾಗಳ್ ೭೭

ಶಪಥಂ ಗೆಯ್ದಲ್ಲದೆಂತುಂ ಬಿಡೆನೆನುತಧಟಿಂದಿರ್ವರಂ ತೀರ್ಥವಾರಿ
ಸ್ನಪನಂಗೆಯ್ಸುತ್ತೆ ವಾರ್ಧಕ್ಯಮನಳಿದೊಲವಿಂ ಯುವ್ವನಂಗೊಟ್ಟು ಕಾರು
ಣ್ಯಪರಂ ಪ್ರತ್ಯಕ್ಷನಾಗುತ್ತಿಳೆಯೊಳಿರಿಸುತೆಂಭತ್ತು ಸಂವತ್ಸರಂ ಸೌ
ಖ್ಯಪದಂ ಕೆಯ್ಗಣ್ಮೆ ಮೇಣ್ಪುಷ್ಪಕದೊಳಿರಿಸಿ ಕೊಂಡೊಯ್ವುತುಂ ಕೂರ್ಮೆಯಿಂದಂ
೭೮

ಪರಮಗಣಪದಮನಾಪುರ
ಹರನೀಯೆ ತದೀಯ ಭುವನದೊಳ್ಮೆಱೆದ ಲಸ

ವಾಗುವ ಹಾಗೆ ಮಾಡಿದನು. ಮರುದಿನ ಬೆಳಗಿನ ಸಮಯಕ್ಕೆ ಪ್ರೀತಿಯಿಂದ ಬಂದು (ನಾನಿಟ್ಟು ಹೋದ ಪಾತ್ರೆಯನ್ನು) ಕೊಡು; ಎಂದು ಬೇಡುತ್ತಿರಲು (ಆ ತಿರುನೀಲ ಕಂಠನು) ಬೇಗನೆ ಮೊದಲು ಆ ಪಾತ್ರೆಯನ್ನು ಮುಚ್ಚಿಟ್ಟ ಸ್ಥಾನದಲ್ಲಿ ಹುಡುಕುತ್ತ (ಅದನ್ನು) ಕಾಣದೆ, ಹೆಚ್ಚಾದ ಭಯದಿಂದ ನಡಗುತ್ತ ಇರುವಲ್ಲಿ, (ಆ ಕಪಟ ವೇಷದ ಶಿವನು) ವಂಚಕನೇ, ಏನು ? ಶ್ರೇಷ್ಠವಾದ ಪಾತ್ರೆಯು ಹೋಯಿತೇ ? 'ನೀನು (ಅದನ್ನು) ಜೋಳಿಯಿಂದ ಇಡು ಎಂದು ಹೇಳಿ ಕೊಟ್ಟರೂ (ಈಗ) ಮೋಸ ಮಾಡು ವುದೇ ? (ಇಂಥ) ನಿನ್ನನ್ನು ಜಗದಲ್ಲಿ ಯಾರು ಮೆಚ್ಚುತ್ತಾರೆ ? (ಪಾತ್ರೆಯು) ಇಲ್ಲ ಎಂದರೆ (ಆ ನಿನ್ನ) ಮಾತನ್ನು ಹೇಗೆ ನಂಬುವುದಕ್ಕೆ ಆದೀತೋ ! ನನ್ನ ಪಾತ್ರೆಯನ್ನು ಕೊಡು ಕೊಡು ! ನಿನ್ನನ್ನು ಯಾವ ರೀತಿಯಿಂದಲೂ ನಾನು ಬಿಡುವವನಲ್ಲ.' ಎಂದು ಗರ್ಜನೆ ಮಾಡಿ ಮಾತನಾಡುತ್ತ ಶಿವನೇ ಇನ್ನೇನು ಗತಿ ಎಂದು ಅನ್ನುತ್ತ, ಅವನೆದುರು ಕೋಪದಿಂದ ಸಿಡಿ ಸಿಡಿದು ಬೀಳುತ್ತ, ಭಯ ಪಡಿಸುತ್ತ (ನೀನು) ಪ್ರತಿಜ್ಞೆಯನ್ನು ಮಾಡದ ವಿನಾ ಹೇಗೂ ನಾನು ಬಿಡುವವನಲ್ಲ, ಎಂದು ಕೆಚ್ಚಿನಿಂದ ಇಬ್ಬರನ್ನೂ ತೀರ್ಥ ಜಲದಲ್ಲಿ ಸ್ನಾನ ಮಾಡಿಸಿ, ಮುಪ್ಪನ್ನು ಕಳೆದು ಪ್ರೀತಿಯಿಂದ ಯೌವನವನ್ನು ಕರುಣಿಸಿ ಕಾರುಣ್ಯ ಪೂರ್ಣನಾದ ಶಿವನು ಪ್ರತ್ಯಕ್ಷನಾಗಿ ಭೂಮಿಯಲ್ಲಿ (ಮತ್ತೆ) ಎಂಬತ್ತು ವರ್ಷ ಗಳ ಪರ್ಯಂತ ಇರಿಸಿ ಮೋಕ್ಷ ಸುಖದ ಸ್ಥಾನವು ವಶವಾಗುವ ಹಾಗೆ ಪುಷ್ಪಕ ವಿಮಾನ ದಲ್ಲಿ ಕುಳ್ಳಿರಿಸಿಕೊಂಡು ಕರೆದೊಯ್ಯುತ್ತ ಆ ಶಿವನು (ಆ ತಿರುನೀಲಕಂಠನಿಗೆ) ಶ್ರೇಷ್ಠ

ತ್ತಿರುನೀಲಕಂಠಮಾಹೇ
ಶ್ವರಂಗೆ ಡಿಂಗರಿಗನಪ್ಪೆನಾನನವರತಂ ೭೯

ಮುದದಿಂ ವಿಕ್ರಮಚೋಳನೊರ್ವಂ ಗುಡಿಯಂ ಸೌವರ್ಣದಿಂ ಮಾಡುತಂ
ತದಱೊಳ್ ಶಂಕರನಂ ಪ್ರತಿಷ್ಠಿಸಿ ಕರಂ ಕಂಡಂತುಟಾತ್ಮೀಯ ಹೃ
ತ್ಪದದೊಳ್ದೇಗುಲಮಂ ನಿಮಿರ್ಚಿ ಶಿವಲಿಂಗಸ್ಥಾಪನಂಗೆಯ್ದು ತ
ಳ್ವದೆ ಕೈಲಾಸಕೆ ಪೋದ ಪೂಸಲವರಾಧೀಶಂಗೆ ತೊಳ್ತಾದಪೆಂ ೮೦

ಒದವಿದ ಸಾಮ್ರಾಜ್ಯದ ಸಂ
ಪದಮಂ ತೊಱೆದತಿ ವಿರಕ್ತಿಯಿಂ ಶಂಕರನಂ
ಪದೆದೊಲಿಸಿ ಮೆಱೆದ ಮಹಿಮಾ
ಸ್ಪದ ಕರಿಕಾಲಾಖ್ಯ ಭಕ್ತನನುಚರನಪ್ಪೆಂ ೮೧

ಮಿಸುಪಂತರಂಗದೊಳ್ಧ್ಯಾ
ನಿಸುತಂ ಭವಹರನನೆಸಗಿ ಮಾನಸಪೂಜಾ

ವಾದ ಗಣಪದವಿಯನ್ನು ಕೊಟ್ಟನು. ಆ ಈಶ್ವರ ಲೋಕದಲ್ಲಿ (ಈ ರೀತಿ) ಮೆರೆದ ಶ್ರೇಷ್ಠರಾದ ತಿರುನೀಲಕಂಠ ಮಾಹೇಶ್ವರರಿಗೆ ನಾನು ಸತತವೂ ಸೇವಕನಾಗಿದ್ದೇನೆ. **ಪೂಸಲವರಾಧೀಶ್ವರ ಸ್ತೋತ್ರ** ೮೦. ವಿಕ್ರಮ ಚೋಳ ಮಹಾರಾಜನು ಒಮ್ಮೆ ಸಂತೋಷದಿಂದ ಬಂಗಾರದಿಂದ ಗುಡಿಯನ್ನು ನಿರ್ಮಿಸಿ, ಹಾಗೆ ಕಟ್ಟಿಸಿದ ಆ ಗುಡಿಯಲ್ಲಿ, ಶಂಕರನನ್ನು ಪ್ರತಿಷ್ಠೆಗೊಳಿಸಲಾಗಿ, ಚೆನ್ನಾಗಿ ಕಂಡುಕೊಂಡ ರೀತಿಯಲ್ಲಿಯೇ ತನ್ನ ಹೃದಯ ಸ್ಥಲದಲ್ಲಿಯೂ ದೇವಸ್ಥಾನವನ್ನು ಮಾಡಿ. (ಅದರಲ್ಲಿ) ಶಿವಲಿಂಗವನ್ನು ಪ್ರತಿಷ್ಠೆ ಮಾಡಿ, ಕೈಲಾಸಕ್ಕೆ ಹೋದ ಪೂಸಲ ನಗರದ ಅಧೀಶ್ವರನಿಗೆ ನಾನು ದಾಸನಾಗಿದ್ದೇನೆ. **ಕರಿಕಾಲಾಖ್ಯರ ಸ್ತೋತ್ರ** ೮೧. ತನಗುಂಟಾದ ಸಾಮ್ರಾಜ್ಯದ ದೊರೆತನದಿಂದ ದೊರಕಿದ ಐಶ್ವರ್ಯವನ್ನು ತ್ಯಾಗ ಮಾಡಿ, ಅತ್ಯಂತ ವೈರಾಗ್ಯದಿಂದ ಶಂಕರನನ್ನು ಪ್ರೀತಿಸಿ ಮೆಚ್ಚಿಸಿಕೊಂಡು ಮೆರೆದ ಮಹಿಮಾಶಾಲಿಯಾದ ಕರಿಕಾಲನೆಂಬ ಹೆಸರಿನ ಭಕ್ತನ ಸೇವಕನು ನಾನಾಗಿದ್ದೇನೆ. **ತಿರುಕುರುಪೆಯರ ಸ್ತೋತ್ರ** ೮೨. ಪ್ರಕಾಶಿಸುವ ಅಂತರಂಗದಲ್ಲಿ ಭವಹರನಾದ ಪರಮಾತ್ಮನನ್ನು ಧ್ಯಾನ ಮಾಡುತ್ತ ಮನಸ್ಸಿನಲ್ಲಿ ಸಮಸ್ತ ಪೂಜಾ ಸಮೂಹದ ವ್ಯವಹಾರವನ್ನು ಮಾಡಿ, ಒಲಿಸಿಕೊಂಡ ಕ್ರಿಯಾ ಭಾವ ರಸಜ್ಞನಾದ (ಸಂವಿತ್ ರಸಿಕನ) 'ತಿರುಕುರುಪೆ'ಯವರ ಪಾದ ಸೇವಕನು ಆಗಿದ್ದೇನೆ. ಮಾನಸ ಪೂಜೆಯೆಂದರೇನೆಂಬ ಬಗೆಗೆ ಸಿದ್ಧಾಂತ ಶಿಖಾಮಣಿಯಲ್ಲಿ ಈ ವಿವರಣೆಯಿದೆ : ಅಂತಃ ಪವನ ಸಂಸ್ಪೃಷ್ಟೇ । ಸುಸೂಕ್ಷ್ಮಾಂಬರ ಶೋಭಿತೇ । ಮೂರ್ಧನ್ಯ ಚಂದ್ರ ವಿಗಳತ್ । ಸುಧಾ ಸೇಕಾತಿ ಶೀತಲೇ ॥ ಬುದ್ಧೀಂದ್ರಿಯನವದ್ವಾರೇ । ಬೋಧ ದೀಪೇ ಹೃದಾಲಯೇ । ಪದ್ಮಪೀಠ ಸಮಾಸೀನಂ । ತಲ್ಲಿಂಗಂ ಶಿವ ವಿಗ್ರಹಂ ॥ ಭಾವಯಿತ್ವಾ ಸದಾಕಾಲಂ । ಪೂಜಯೇತ್ ಭಾವವಸ್ತುಭಿಃ । ಕ್ಷಮಾಭಿಷೇಕಸಲಿಲಂ । ವಿವೇಕೋ

ವಿಸರವುನೊಲಿಸಿದ ಸಂವಿ
ದ್ರುಸಿಕನ ತಿರುಕುಱುಪೆಯಂಘ್ರಿಸೇವಕನಪ್ಪೆಂ ೮೨

ಚರಭಕ್ತಿವಿಡಿದು ರೋಹಿಣಿ
ವೆರಸಿ ಮಹೇಶ್ವರನನಳ್ಕಱಿಂದೊಲಿಸಿ ಶುಭಾ
ಕರ ಮುಕ್ತಿವಡೆದು ರಂಜಿಪ
ತಿರುಮೂಲನ ಚರಣನಳಿನಷಟ್ಪದಿಯಪ್ಪೆಂ ೮೩

ವಸ್ತ್ರ ಮುಚ್ಯತೇ ॥ ಸತ್ಯಮಾಭರಣಂ ಪ್ರೋಕ್ತಂ । ವೈರಾಗ್ಯಂ ಪುಷ್ಪ ಮಾಲಿಕಾ ಗಂಧ ಸ್ಸಮಾಧಿ ಸಂಪತ್ತಿಃ । ಅಕ್ಷತಾ ನಿರಹಂಕೃತಿಃ ॥ ಭ್ರಾಂತಿಮೂಲ ಪ್ರಪಂಚಸ್ಯ । ನಿವೇದ್ಯಂ ತನ್ನಿವೇದನಂ । ಮೌನಘಂಟಾ ಪರಿಸ್ಪಂದಃ । ತಾಂಬೂಲಂವಿಷಯಾರ್ಪಣಂ ವಿಷಯ ಭ್ರಾಂತಿರಾಹಿತ್ಯಂ । ತತ್ಪ್ರದಕ್ಷಿಣ ಕಲ್ಪನಾ । ಬುದ್ಧೇಸ್ತದಾತ್ಮಿಕಾಶಕ್ತಿಃ । ನಮಸ್ಕಾರ ಕ್ರಿಯಾಮತಾ । ಏವಂ ವಿಧೈರ್ಭಾವ ಪುಷ್ಪೈರುಪಚಾರೈರದೂಷಿತೈಃ । ಪ್ರತ್ಯಙ್ಮುಖ ಮನಾಭೂತ್ವಾ । ಪೂಜಯೇತ್ ಲಿಂಗಮಾಂತರಂ ॥ [ಪ್ರಾಣ ವಾಯುವಿನಿಂದ ವ್ಯಾಪ್ತ ವಾಗಿಯೂ, ಅತಿ ಸೂಕ್ಷ್ಮಾಕಾಶದಲ್ಲಿ ಪ್ರಕಾಶಮಾನವಾಗಿಯೂ, ಬ್ರಹ್ಮರಂಧ್ರವನ್ನೈದಿದ ಪೂರ್ಣಚಂದ್ರ ಮಂಡಲದಿಂದ ಸುರಿಯುತ್ತಿರುವ ಅಮೃತದ ಸೇಚನೆಯಿಂದ ಅತ್ಯಂತ ತಂಪಾಗಿರುವುದಾಗಿ ಕಿವಿ ಮೂಗು ಮೊದಲಾದ ಐದು ಇಂದ್ರಿಯ ದ್ವಾರಗಳು ಮುಚ್ಚಲ್ಪಟ್ಟವುಗಳಾಗಿ, ಪರಮಾತ್ಮ ಜ್ಞಾನವೆಂಬ ದೀಪವುಳ್ಳದ್ದಾಗಿ, ಇರುವ ಊರ್ಧ್ವ ಹೃದಯದಲ್ಲಿನ ದ್ವಾದಶ ಎಸಳುಗಳ ಕಮಲ ಪೀಠದಲ್ಲಿರುವ ಮಂಗಳ ಮೂರ್ತಿಯಾದ ಪ್ರಾಣಲಿಂಗವನ್ನು ಗುರುವಿನ ಉಪದೇಶ ಮಾರ್ಗಕ್ಕನುಗುಣವಾಗಿ ಧ್ಯಾನಿಸಿ, ಸದಾ ಕಾಲದಲ್ಲೂ ಮನಸ್ಸಿನಲ್ಲಿಯೇ ಕಲ್ಪಿಸಿಕೊಂಡ ಪೂಜೋಪಕರಣಗಳಿಂದ ಹೀಗೆ ಪೂಜಿಸ ಬೇಕು : ಅಭಿಷೇಕಜಲ–ಸಹನೆ; ವಸ್ತ್ರ–ನಿತ್ಯಾನಿತ್ಯ ವಸ್ತು ವಿವೇಕ; ಆಭರಣ–ಸತ್ಯ: ಹೂ ಮಾಲೆ-ಇಹಪರ ಭೋಗ ಸುಖದಲ್ಲಿ ಆಸೆಯಿಲ್ಲದಿರುವಿಕೆ; ಗಂಧ–ಏಕಾಗ್ರಚಿತ್ತ; ಅಕ್ಷತೆ-ಅಹಂಕಾರವಿಲ್ಲದಿರುವಿಕೆ; ದೀಪ–ಜಗತ್ಪ್ರಕಾಶಕರವಾದ ಮಹಾಜ್ಞಾನ: ನೈವೇದ್ಯ- ನಾನು ಈಶ್ವರನಲ್ಲವೆಂಬ ಜ್ಞಾನಕ್ಕೆ ಮೂಲಭೂತ ಪ್ರಪಂಚವಾದ ಶರೀರಾದಿ ಅಹಂಕಾರ ವರ್ಗವನ್ನು ತಿಳಿಸುವಿಕೆ; ಘಂಟಾನಾದ–ಅನಾಹತ ಚಕ್ರದಲ್ಲುಂಟಾಗುವ ನಾದದ ಅನು ಸಂಧಾನಕ್ಕೆ ಕಾರಣವಾದ ಮೌನ ; ತಾಂಬೂಲ–ವಿಷಯಸುಖ ಸಮರ್ಪಣೆ ; ಪ್ರದಕ್ಷಿಣೆ-ಶಿವನಲ್ಲಿ ಅಭೇದದ ಭ್ರಾಂತಿಯಿಲ್ಲದಿರುವಿಕೆ ; ನಮಸ್ಕಾರ–ಬುದ್ಧಿಯು ಲಿಂಗರೂಪವನ್ನೈದುವ ಶಕ್ತಿ–ಇದನ್ನೇ ಭಾವಪೂಜೆಯೆಂದು ಹೇಳಲಾಗಿದೆ. **ತಿರುಮೂಲರಸ್ತೋತ್ರ** ೮೩. ಜಂಗಮದಲ್ಲಿ ಭಕ್ತಿಯನ್ನು ಹಿಡಿದು (ಹೆಂಡತಿಯಾದ) ರೋಹಿಣಿಯೊಡನೆ ಕೂಡಿ ಪರಮೇಶ್ವರನನ್ನು ಪ್ರೀತಿಯಿಂದ ಒಲಿಸಿಕೊಂಡು, ಶುಭಪ್ರದವಾದ ಮುಕ್ತಿಯನ್ನು ಪಡೆದು ರಂಜಿಸುತ್ತಿರುವ ತಿರುಮೂಲನ ಪಾದ ಕಮಲಕ್ಕೆ ನಾನು ಭೃಂಗ ಸ್ವರೂಪನಾಗಿದ್ದೇನೆ. **ಚಿರುಪುಲಿಯನಾಥನ ಸ್ತೋತ್ರ**

ವಂಚಿಸದೆ ಚರಸಹಸ್ರಕೆ
ಸಂಚಿತಧನಮಿತ್ತು ತೃಪ್ತಿವಡಿಸುತೆ ನಿಚ್ಚಂ
ಪಂಚಮುಖನೂರ್ಗೆ ನಡೆದ ಸ
ಮುಂಚಿತ ಚಿಱುಪುಲಿಯನಾಥನನುಚರನಪ್ಪೆಂ ೮೪

ಪೊಸತೊಂದು ಪೊನ್ನನನುದಿನ
ಮಸಮಾಕ್ಷನಿನೊಲ್ದು ಪಡೆದು ಗಣತತಿಯಂ ಪೂ
ಜಿಸಿ ಸಂದ ಚಿಱುತ್ತೊಣೆಯರ
ಮಿಸುಪಡಿದಾವರೆಯ ಲೆಂಕನಪ್ಪೆನಜಸ್ರಂ ೮೫

ಭೂತಭವದ್ಭವಿಷ್ಯದಭವಾಂಘ್ರಿಸರೋರುಹ ಭಕ್ತಿತತ್ಪರ
ವ್ರಾತದ ಭೃತ್ಯನಪ್ಪೆನೆನುತುಂ ತಿರುಪಾಡುಗಳಿಂದೆ ಪಾಡುತುಂ
ಭೂತಳದಲ್ಲಿ ಸ್ಯೆಗೆಡೆವುತುಂ ಮುಗಿವುತ್ತೆ ಕರಾರವಿಂದಮಂ
ಭೀತಿಸಮೇತ ಭಕ್ತಿರಸದಿಂ ಮಿಗೆ ನಾಂದತಿದೈನ್ಯವೃತ್ತಿಯಿಂ ೮೬

ಭವದನುಚರ ಭೃತ್ಯಭಕ್ತದಾಸಂ
ಶಿವಗಣವೃಂದಮೆ ಮಾಣದಪ್ಪೆನಪ್ಪೆಂ
ಪ್ರವಿದಿತ ಕೃಪೆಗೆಯ್ವುದೆನ್ನೊಳೆಂದಾ
ಸವಿನಯ ಸೌಂದರನೊಲ್ದು ಕೀರ್ತಿಸುತ್ತುಂ ೮೭

೮೪. ನಿತ್ಯವೂ ಸಾವಿರ ಸಂಖ್ಯೆಯ ಜಂಗಮಸಮೂಹಕ್ಕೆ ವಂಚನೆಯನ್ನು ಮಾಡದೆ ಸಂಪಾದಿಸಿದ ಧನವನ್ನೆಲ್ಲ ಸಲ್ಲಿಸಿ ತೃಪ್ತಿಯನ್ನು ಪಡೆಯುತ್ತ ಪರಮೇಶ್ವರನ ಊರಾದ ಕೈಲಾಸಕ್ಕೆ ಹೋದ ಪರಮಶ್ರೇಷ್ಠನಾದ ಚಿರುಪುಲಿಯನಾಥನ ಸೇವಕ ನಾನಾಗಿದ್ದೇನೆ. **ಚಿರುತ್ತೊಣೆಯರ ಸ್ತೋತ್ರ**—೮೫. ಪ್ರತಿದಿನವೂ ಈಶ್ವರನ ಒಲುಮೆಯಿಂದ ಹೊಸ ದಾದ ಒಂದು ಹೊನ್ನನ್ನು ಪಡೆದು ಗಣಸಮೂಹವನ್ನು ಪೂಜಿಸುತ್ತ ಶಿವಲೋಕವನ್ನು ಪಡೆದ ಚಿರುತ್ತೊಣೆಯರ ಶೋಭಿಸುವ ಪಾದಕಮಲಗಳ ಆಳು ಸದಾ ನಾನಾಗಿದ್ದೇನೆ. ೮೬-೮೮. (ಈ ರೀತಿಯಲ್ಲಿ) 'ಹಿಂದಣ, ಈಗಿನ, ಮುಂದಣ ಪರಮೇಶ್ವರನ ಪಾದ ಕಮಲಗಳಲ್ಲಿ ಭಕ್ತಿತತ್ಪರರಾದವರ ಸಮೂಹದ ಸೇವಕನಾಗಿದ್ದೇನೆ' ಎಂದು ತಿರುಪಾಡು ಗಳನ್ನು ಹಾಡುತ್ತ ಭೂಭಾಗದಲ್ಲಿ ಅಡ್ಡಬಿದ್ದು ನಮಸ್ಕಾರ ಮಾಡುತ್ತ, ಕರಕಮಲ ಗಳನ್ನು ಮುಗಿಯುತ್ತ ಭಯದಿಂದ ಕೂಡಿದ ಭಕ್ತಿರಸದಿಂದ ನಾದಿ (ಮಿದಿದು) ಅತಿ ದೈನ್ಯವೃತ್ತಿಯಿಂದ, 'ಶಿವಗಣ ಸಮೂಹವೇ, ತಪ್ಪದೆ ನಿಮ್ಮಗಳ ಸೇವಕರ ಸೇವಕರ ಭಕ್ತನೂ, ಆಳೂ ಆಗಿದ್ದೇನೆ! ಆಗಿದ್ದೇನೆ!! ನನ್ನನ್ನು ಅರಿತು ಕೃಪೆ ಮಾಡಬೇಕು' ಎಂದು ಆ ವಿನಯಶಾಲಿಯಾದ ಸೌಂದರನಂಬಿಯು ಪ್ರಾರ್ಥನೆ ಮಾಡುತ್ತ ಪರಮೇಶ್ವ

ಪುರಹರನ ಪಿಂತೆ ಮೆಲ್ಲನೆ
ಬರುತಿರೆ ಮೆಱೆವಿಂಡನೊಲ್ದು ಶಿವಗಣಸಹಿತಂ
ಕರುಣಿಸುತಭಯಮನಿತ್ತಾ
ದರಿಸುತೆ ಸೌಂದರನನಭವನಂಘ್ರಿಗೆ ಮಣಿದಂ ೮೮

ವ॥ ಅಂತು ಮಣಿದು ಪರಮೋತ್ಸವಂ ಮಿಗೆ ಭಕ್ತಿವೆತ್ತು ಕೊಂಡಾಡಿ ಪಾಡುತ್ತುಮಿರೆ ಶಿವಂ ನೋಡಿ ಕಾರುಣ್ಯಮಂ ನೀಡಿ ಮಣಿಪುಷ್ಪಕಮಂ ಬರಿಸಿ ತತ್ಸಹಚರಗಣಸಮೇತಂ ಕುಳ್ಳಿರಿಸಿ ಮೆಱೆವಿಂಡದೇವನಂ ಕೈಲಾಸಕ್ಕೆ ಕರೆದೊಯ್ದು ನಿತ್ಯತ್ವಮನಿತ್ತು ಮನ್ನಿಸಿ ಮತ್ತಮಾಗಳ್—

ಮನಸಿಜಹರನಾ ಮೆಱೆವಿಂ
ಡನ ಮಹಿಮೆಯನಲ್ಲಿ ಪೊಗಳುತುಂ ಗಣತತಿಯೊಳ್
ಬಿನದಂ ಮಿಗೆ ನಿಜಭದ್ರಾ
ಸನದೊಳ್ಗಿರಿಜಾತೆವೆರಸು ಸುಖದಿಂದಿರ್ದಂ ೮೯

ಅದಱಿಂದಂ ಭಕ್ತರೊಳ್ಸಲ್ಲದು ಮದಮೆನುತುಂ ಮಾಚಯಂ ಪೇಳೆ ಕೇಳ್ದು
ತ್ಪದಿತೋತ್ಸಾಹಾನ್ವಿತಂ ತತ್ಪದನಳಿನನಮಸ್ಕಾರಮಂ ಮಾಡಿ ತೋರ್ಪ
ಗ್ಗದ ತತ್ಪಾದಾಂಬುಜೋಂಬುಪ್ರಭವನವಮಣಿಶ್ರೇಣಿಯಂ ಮಾಣದೀವು
ತ್ತ್ಮೊದವಿರ್ದಾನಂದದಿಂ ಜಂಗಮತತಿಗೆಸೆದಂ ಭಕ್ತಿಸಾಂದ್ರಂ ವೃಷೇಂದ್ರಂ ೯೦

ರನ ಹಿಂದುಹಿಂದೇ ಮೆಲ್ಲನೆ ಬರುತ್ತಿರಲು ಮೆರೆವಿಂಡದೇವನು ಒಲಿದು ಶಿವಗಣ ಸಮೇತನಾಗಿ ಕರುಣದೋರಿ, ಆ ಭಯವನ್ನು ಕೊಟ್ಟು, ಆದರಿಸುತ್ತ ಪರಮೇಶ್ವರನ ಪಾದಗಳಿಗೆ ನಮಸ್ಕರಿಸಿದನು. ವ॥ ಈ ರೀತಿ ನಮಸ್ಕರಿಸಿ ಹರ್ಷಾತಿರೇಕದಿಂದ ಮಿಕ್ಕ ಭಕ್ತಿಯೊಡನೆ ಬೆರಸಿ ಕೊಂಡಾಡುತ್ತ, ಹಾಡುತ್ತ ಇರಲು, ಶಿವನು ಕಂಡು ಕಾರುಣ್ಯ ವನ್ನುಂಟುಮಾಡಿ ರತ್ನಖಚಿತವಾದ ಪುಷ್ಪಕ ವಿಮಾನವನ್ನು ಬರಮಾಡಿಕೊಂಡು ಆ ಮೆರೆವಿಂಡ ದೇವನ ಸಹಚರರಾದ ಸಮಸ್ತಗಣ ಸಮೂಹ ಸಹಿತವಾಗಿ (ಆ ವಿಮಾನ ದಲ್ಲಿ) ಕುಳಿತುಕೊಂಡು ಕೈಲಾಸಕ್ಕೆ ಕರೆದೊಯ್ದನು. ಅಲ್ಲಿ ಅವರೆಲ್ಲರಿಗೆ ನಿತ್ಯ ಪದವಿ ಯನ್ನು ಕೊಟ್ಟು ಮನ್ನಣೆ ಮಾಡಿದನು. ಮತ್ತು ಆಗ—೮೯. ಅಲ್ಲಿ ಮನ್ಮಥವಿಕಾರ ದೂರನಾದ ಮೆರೆವಿಂಡದೇವನ ಮಹಿಮೆಯನ್ನು ಶಿವಗಣ ಸಮೂಹದೆದುರಿನಲ್ಲಿ ಹೊಗಳುತ್ತ, ಹೆಚ್ಚಾದ ಸಂತೋಷದಿಂದ ತನ್ನ ಮಂಗಳಕರವಾದ ಆಸನದಲ್ಲಿ ಪಾರ್ವತೀ ಸಮೇತನಾಗಿ ಸುಖದಿಂದ ಇದ್ದನು. ೯೦. 'ಆದ್ದರಿಂದ ಬಸವಣ್ಣ, ಭಕ್ತರೊಡನೆ ಮದವು ಸಲ್ಲದು.' ಎನ್ನುತ್ತ ಮಡಿವಳ ಮಾಚಿದೇವನು ಹೇಳಲು, ಆ ಸಾಂದ್ರಭಕ್ತಿಯ ವೃಷಭೇಂದ್ರನು ಕೇಳಿ, ಉತ್ಪನ್ನವಾದ ಅತ್ಯಂತ ಸಂತೋಷದಿಂದ ಕೂಡಿದವನಾಗಿ, ಆ ಮಾಚಿದೇವನ ಪಾದಕಮಲಗಳಿಗೆ ನಮಸ್ಕಾರ ಮಾಡಿ ಜಂಗಮ ಸಮೂಹಕ್ಕೆ (ಮಹಿಮಾ ಪ್ರದರ್ಶನಾರ್ಥವಾಗಿ) ಪಾದದಿಂದ ನೀರನ್ನು ಕೆದರಲು ಆಗ ಆ ನೀರಿನಿಂದ ಹುಟ್ಟಿದ ರತ್ನಗಳನ್ನು ತಪ್ಪದೆ (ಎಲ್ಲರಿಗೂ) ಕೊಡುತ್ತ ಆನಂದದಿಂದ ಕೂಡಿದವನಾಗಿ ಇದ್ದನು.

ನಮದಮರವಧೂಟಿಕಾಳಕಾಳೀ
ಭ್ರಮರವಿರಾಜಿತಪಾದಪದ್ಮಯುಗ್ಮೇ
ಹಿಮಗಿರಿತನುಜಾತೆ ರಕ್ಷಿಸೆನ್ನಂ
ಹಿಮಕರಶೇಖರ ಧರ್ಮಪತ್ನಿ ಗೌರೀ ೯೧

ಇದು ವಿನಮದಖಿಳ ಸುರಾಸುರೇಂದ್ರಮಕುಟತಟಘಟಿತ ಮಣಿಗಣಾಗಣಿತ ರುಚಿನಿಚಯ
ತರುಣಾರುಣಾತಪಪರಿಲಸಿತ ಪರಮ ಶಿವಲಿಂಗ ಪಾದಾರವಿಂದಪರಾಗಭಸಿತ
ಭಾಸುರಲಲಾಟಪಟ್ಟಸರಸಜನಮಾನಿತೋಭಯಕವಿತಾವಿಶಾರದ
ಶ್ರೀಷಡಕ್ಷರಿದೇವಭಕ್ತಿವಿರಚಿತ

ಶ್ರೀಮದ್ ಬಸವರಾಜವಿಜಯಮಹಾಪುರಾಣದೊಳ್ ಮೆಱೆವಿಂಡದೇವಕಥಾವರ್ಣನಂ
ಷೋಡಶಾಶ್ವಾಸಂ ಸಮಾಪ್ತಂ

ಅಂತು ಆಶ್ವಾಸ ೧೬ಕ್ಕೆ ಪದಗಣನೆ ೧೪೯ಕ್ಕೆ ಮಂಗಳಮಹಾ ಶ್ರೀ॥

೯೧. ನಮಸ್ಕರಿಸುತ್ತಿರುವ ದೇವತಾಸ್ತ್ರೀಯರುಗಳ ಮುಂಗುರುಳುಗಳ ಸಮೂಹವೆಂಬ ತುಂಬಿಗಳಿಂದ ಪ್ರಕಾಶಿಸುವ ಚರಣಕಮಲಗಳುಳ್ಳವಳೂ, ಹಿಮಗಿರಿಯಮಗಳೂ, ಚಂದ್ರಶೇಖರನ ಪತ್ನಿಯೂ ಆದ ಗೌರೀದೇವಿಯೇ, ನನ್ನನ್ನು ರಕ್ಷಿಸು.

ಹದಿನಾರನೆಯ ಆಶ್ವಾಸವು ಸಮಾಪ್ತವಾಯಿತು.

ಸಪ್ತದಶಾಶ್ವಾಸಂ

[ಕಿನ್ನರೇಶ್ವರನ ಕಥೆ]

ಶ್ರೀಮದಗಜಾಭುಜಾಸುಮ
ನೋಮಾಲಾಲಂಕೃತಾತ್ಮಕಂಧರನಭವಂ
ಭೀಮಾಂಧಕಾಂಧಕಾರಮ
ಹಾಮಿಹಿರಂ ಪೊರೆಗೆ ಭಕ್ತರಂ ಶಿವಲಿಂಗಂ ೧

ಧರಣೀಭಾಗದೊಳೇಳ್ಗೆವೆತ್ತೆಸೆವ ಪೂಡೂರೆಂಬ ಸದ್ಗ್ರಾಮದೊಳ್
ಪರಭೀಮಂ ದುರಿತಾಮಯಾರಿ ಸುಜನಸ್ತೋಮಸ್ತುತಂ ಸತ್ಯಸಂ
ಗರನಂಗೇಂದ್ರಿಯಲಿಂಗಸಂಗತನುದಾರಸ್ಫಾರವೀರವ್ರತಾ
ಚರಣಂ ಕಿನ್ನರ ಬೊಮ್ಮಿದೇವನೆಸೆದಂ ದುರ್ದಾಂತವಾಗ್ಭಂಜನಂ ೨

ಸರ್ವಪ್ರಾಣಿದಯಾಕರಂ ನಿಜಮತಾಂಭೋಜಾತಪದ್ಮಾಕರಂ
ದುರ್ವಾರಾಹಿತಭಂಜನಂ ಶರಣಚೇತೋರಂಜನಂ ಭಕ್ತಕ
ಲ್ಪೋರ್ವೀಜಂ ಭುವನೈಕಪೂಜ್ಯನನಘಂ ಸದ್ಭಕ್ತಿಯುಕ್ತಂ ಸದಾ
ಖರ್ವಶ್ರೀಗುಣಮಂಡನಂ ಶುಭಕರಂ ಸಂಗೀತವಿದ್ಯಾಧರಂ ೩

ಕಿನ್ನರಿಯ ಬ್ರಹ್ಮಯ್ಯನ ಕಥೆ

೧. ಮಂಗಳಕರವಾದ ಪಾರ್ವತೀ ದೇವಿಯ ತೋಳುಗಳೆಂಬ ಹೂಮಾಲಿಕೆಗಳಿಂದ ಅಲಂಕರಿಸಲ್ಪಟ್ಟ ತನ್ನ ಕುತ್ತಿಗೆಗಳುಳ್ಳ ಶಿವನು, ಭಯಂಕರವಾದ ಅಂಧಕಾಸುರನೆಂಬ ಕತ್ತಲೆಗೆ ಮಹಾಸೂರ್ಯನಂತಿರುವ ಶಿವಲಿಂಗನು ಭಕ್ತರನ್ನು ರಕ್ಷಿಸಲಿ. ೨. ಭೂಮಂಡಲ ದಲ್ಲಿ ಪ್ರಸಿದ್ಧಿಯನ್ನು ಹೊಂದಿದ 'ಪೂಡೂರು' ಎಂಬ ಶ್ರೇಷ್ಠ ಗ್ರಾಮದಲ್ಲಿ ಶಿವಭಕ್ತರಲ್ಲ ದವರಿಗೂ ಭಯಂಕರನಾದವನೂ, ಪಾಪವೆಂಬ ರೋಗಕ್ಕೆ ಶತ್ರುವಾದ, ಜನಸ್ತೋಮದ ಸ್ತೋತ್ರಕ್ಕೆ ಪಾತ್ರನಾದ, ಸತ್ಯ ಪ್ರತಿಜ್ಞೆಗಳನ್ನುಳ್ಳವನಾದ, ಸಮಸ್ತ ಅಂಗಗಳಲ್ಲೂ, ಇಂದ್ರಿಯಗಳಲ್ಲೂ ಲಿಂಗದ ಅರಿವಿನಿಂದ ಕೂಡಿದವನಾದ (ಅಂಗಗುಣಗಳೂ, ಇಂದ್ರಿಯ ಗುಣಗಳೂ ಲಿಂಗಗುಣಗಳಿಂದ ಕೂಡಿದವನಾದ) ಉದಾರವಾಗಿ ಪ್ರಕಾಶಿಸುವ ವೀರ ಶೈವಾಚರಣೆಯಿಂದ ಕೂಡಿದವನಾದ, ದುಷ್ಟಜನರ ಮಾತುಗಳನ್ನು ಭಂಗಗೊಳಿಸುವವ ನಾದ ಕಿನ್ನರಿ ಬೊಮ್ಮಯ್ಯನೆಂಬುವನು ಶೋಭಿಸುತ್ತಿದ್ದನು. ೩-೪-೫. ಸಕಲಪ್ರಾಣಿ ಗಳಲ್ಲಿ ದಯೆಯನ್ನು ತೋರಿಸುವ, ತನ್ನ ಶಿವಮತವೆಂಬ ಕಮಲಕ್ಕೆ ಸೂರ್ಯನಂತಿರುವ, ಇತರರಿಂದ ನಿವಾರಿಸಲು ಅಶಕ್ಯರಾದ ಶತ್ರುಗಳನ್ನು ನಾಶಗೊಳಿಸುವ, ಶಿವಶರಣರ ಮನಸ್ಸನ್ನು ಸಂತೋಷಗೊಳಿಸುವ, ಶಿವಭಕ್ತರಿಗೆ ಕಲ್ಪವೃಕ್ಷ ಸದೃಶನಾದ, ಲೋಕದ

ಸಕಳಕಳಾಪ್ರವೀಣನಕಳಂಕಗುಣಾಂಕನುದಾತ್ತಜಂಗಮ
ಪ್ರಕರಸಮರ್ಚನಕ್ಕೆ ತನುವಂ ಮನಮುಂ ಧನಮುಂ ನಿವೇದಿಸು
ತ್ತಕುಟಿಲವೃತ್ತನಿರ್ಜಿನಮುಪಾತ್ತಧನಂ ವ್ಯಯಮಾಗೆ ಕೊಂಕದು
ತ್ಸುಕಮತಿ ಚನ್ನಕಿನ್ನರಿಯನದ್ರಿಜೆಯಾಣ್ಮನ ಮುಂದೆ ಲೀಲೆಯಿಂ ೪

ಪಿಡಿದೋರಂತಿರೆ ಜೇನಸೋನೆ ಕಱೆದತ್ತೆಂಬಂತೆ ರಾಗಂಗಳಂ
ಕಡುಪಿಂ ಕೇಳಿಸೆ ಗಾನಲೋಲನಗಜೇಶಂ ಮೆಚ್ಚಿ ಸಂಪ್ರೀತಿಯಿಂ
ಕುಡೆ ಪೊನ್ನಂ ಪಣಪಾಗಮಂ ಪಡೆದು ನಿಚ್ಚಂ ಜಂಗಮಶ್ರೇಣಿಯಂ
ಬಿಡದಾರಾಧಿಸುತಿರ್ದನನ್ಯ ಸಮಯಾಹಂಕಾರಶಂಕಾಹರಂ ೫

ವ॥ ಅಂತಿರ್ಪಿನಮಾಗಳ್—

ಬಸವನ ಭಕ್ತಿಶಶಾಂಕ
ಪ್ರಸರಪ್ರಭೆ ತೀವೆ ಕಂಡು ತದ್ದರ್ಶನಕೆಂ
ದೊಸೆದೇಳ್ತಂದು ಕಿನ್ನರ
ನಸದೃಶ ಕಲ್ಯಾಣಪಟ್ಟಣಕ್ಕನುನಯದಿಂ ೬

ಜನರಿಂದ ಪೂಜಿಸಲ್ಪಡುವವನಾದ, ಪಾಪರಹಿತನೂ, ಸದ್ಭಕ್ತಿಯುಕ್ತನೂ, ಸದಾ ಅಧಿಕ ಸಂಪತ್ತನ್ನುಂಟುಮಾಡುವ ಆಭರಣವಾಗಿ ಉಳ್ಳವನೂ, ಸಂಗೀತ ವಿದ್ಯಾಧರನೆನಿಸಿ, ಎಲ್ಲ ಕುಶಲ ವಿದ್ಯೆಗಳಲ್ಲೂ ಪ್ರವೀಣನೆನಿಸಿ ನಿರ್ದುಷ್ಟ ಸದ್ಗುಣಗಳೇ ಚಿಹ್ನೆಯಾಗುಳ್ಳ ಬೊಮ್ಮಯ್ಯನು ಉದಾತ್ತರಾದ ಜಂಗಮರುಗಳ ಸಮೂಹದ ಅರ್ಚನೆಗೋಸ್ಕರ ತನು ಮನ ಧನಗಳನ್ನು ಅರ್ಪಿಸಿದವನಾಗಿ ಕುಟಿಲವಲ್ಲದ ನಡತೆಯಿಂದ ಕೂಡಿ, ಇರುತ್ತಿರುವಲ್ಲಿ ತಾನು ಉಪಾರ್ಜಿಸಿದ ಐಶ್ವರ್ಯವೆಲ್ಲ ತೀರಿಹೋಗಲು, ಧೈರ್ಯಗೆಡದೆ (ಕೊಂಕದೆ) ಉತ್ಸಾಹ ಗೊಂಡ ಮನಸ್ಸುಳ್ಳವನಾಗಿ, ಪರಮಾತ್ಮನ ಮುಂದೆ ಲೀಲೆಯಿಂದ ಕಿನ್ನರಿಯನ್ನು ಹಿಡಿದು ಕ್ರಮವಾಗಿ ಜೇನುಮಳೆಯೋ ಕರೆಯುತ್ತದೆಯೋ ಎಂಬ ಹಾಗೆ ರಾಗಗಳನ್ನು ವಿದಗ್ಧತೆ (ಪ್ರೌಢಿಮೆ) ಯಿಂದ ಬಾರಿಸಿ ಕೇಳಿಸುತ್ತ, ಸಂಗೀತದಲ್ಲಿ ಆಸಕ್ತಿಯುಳ್ಳ (ನಾದಲೋಲನಾದ) ಶಿವನನ್ನು ಮೆಚ್ಚಿಸುವನು. (ಈ ಕಾರಣದಿಂದ) ಆ ಶಿವನು ಹೊನ್ನನ್ನು ಕೊಡುತ್ತಿದ್ದನು. ಅನ್ಯಸಮಯ ಗರ್ವವನ್ನೂ, ಸಂಶಯಗಳನ್ನೂ ನಾಶ ಗೊಳಿಸುವ ಆ ಕಿನ್ನರಿ ಬೊಮ್ಮಯ್ಯನು ಹೀಗೆ ಹಣವನ್ನು ಪಡೆದು ತಪ್ಪದೆ ಜಂಗಮ ರನ್ನು ಆರಾಧಿಸುತ್ತ ಇದ್ದನು. ೬. ಬಸವಣ್ಣನವರ ಹರಡಿಕೊಳ್ಳುತ್ತಿದ್ದ ಶಿವಭಕ್ತಿ ಯೆಂಬ ಬೆಳದಿಂಗಳು ಎಲ್ಲೆಲ್ಲೂ ತುಂಬಿಕೊಳ್ಳಲು ಕಿನ್ನರಿ ಬೊಮ್ಮಯ್ಯನು ಕಂಡು ಆ ಬಸವಣ್ಣನವರ ದರ್ಶನಕ್ಕೆಂದು ಪ್ರೀತಿಯಿಂದ ಅಸದೃಶವೆನಿಸಿದ ಕಲ್ಯಾಣನಗರಕ್ಕೆ

ವ॥ ಇಂತೇಳ್ತಂದು ಬಸವನ ಶಿವಲಿಂಗದೊಳ್ಬಿಂಬಿಸೆ ಬಸವಂ ಕಂಡು ಸಮುತ್ಸುಕ ಚಿತ್ತನಪ್ಪ ನಿತಱೊಳೆ ಕಟ್ಟಿದಿರೊಳ್ ಪ್ರಸನ್ನನಾಗೆ ಸಾಷ್ಟಾಂಗವೆಱಗಿ ತನ್ನನುನ್ನತಾಸನದೊಳ್ಮೂರ್ತಿಗೊಳಿಸಿ ಯಥಾರುಚಿಸತ್ಕಾರಂಗೆಯ್ದು ಪೂಜಿಸಿ ಪಾದೋದಕಪ್ರಸಾದಂಗೊಂಡು ಕೃತಾರ್ಥಭಾವಮನಪ್ಪುಗೆಯ್ದಿರೆ—

ಕಿನ್ನರಬೊಮ್ಮಂ ಬಸವನ
ಸನ್ನುತ ಶಿವತತ್ವರಸ[1]ದೊಳೋಲಾಡಿಸುತುಂ
ಮನ್ನಣೆವೆತ್ತು ಶಿವೈಕ್ಯಸ
ಮುನ್ನತರೊಳ್ಕೂಡಿ ಮೆಱೆವುತಿರ್ದೊಂದು ದಿನಂ ೭

ಪರಮತ್ರಿಪುರಾಂತಕಮಂ
ದಿರ ಗೋಪುರದಲ್ಲಿ ಬಿಸನದದಿಂದೇಳ್ತಂದಾ
ದರದಿಂ ಕುಳ್ಳಿರ್ದ ಸುರ
ವರಹರಿದದ್ರಿಯೊಳೆ ತೊಳಪ ರವಿಬಿಂಬದವೋಲ್ ೮

ವ॥ ಆ ಸಮಯದೊಳೊರ್ವಂ ವಿಟಂ ವೇಶ್ಯಾಲಯದ ಪರ್ಬಕ್ಕೆ ವಧಿಸಲ್ಕೆತ್ತಕ್ಕ ಬಲ್ಗುಱಿಯುಂ ಬಿಲ್ತುಕೊಂಡು ಪುರವೀಥಿಯೊಳ್ಬರ್ಪಾಗಳಾ ಕುಱಿ ನೇಣಂ ಪಱಿದು ನಿಟ್ಟೋಟದಿನಱಿಚುತ್ತುಂ

ಪ್ರೀತಿಯಿಂದ ಬಂದನು. ವ॥ ಆ ರೀತಿಯಿಂದ (ಕಿನ್ನರಿ ಬೊಮ್ಮಯ್ಯನು) ಬರುವುದು ಬಸವಣ್ಣನ ಶಿವಲಿಂಗದಲ್ಲಿ ಪ್ರತಿಬಿಂಬಿಸಿ ಕಾಣುತ್ತಿರಲಾಗಿ ಬಸವಣ್ಣನು ಕಂಡು, ಅತ್ಯಂತ ಉತ್ಸಾಹಗೊಂಡ ಚಿತ್ತವುಳ್ಳವನಾಗಿರುವಷ್ಟರಲ್ಲಿ ಮುಂಭಾಗದಲ್ಲಿಯೇ ಪ್ರಕಟಗೊಂಡವನಾಗಿ, ಸಾಷ್ಟಾಂಗ ನಮಸ್ಕಾರ ಮಾಡಿದ ಕಿನ್ನರಿ ಬೊಮ್ಮಯ್ಯನನ್ನು ಉನ್ನತಾಸನದಲ್ಲಿ ಕುಳ್ಳಿರಿಸಿ, ತತ್ಕಾಲೋಚಿತವಾದ ಸತ್ಕಾರಗಳನ್ನು ಮಾಡಿ ಪೂಜಿಸಿ, ಪಾದೋದಕ ಪ್ರಸಾದಾದಿಗಳನ್ನು ಸ್ವೀಕರಿಸಿ, ಕೃತಾರ್ಥತೆಯನ್ನು ಹೊಂದಿ ಇರುತ್ತಿರಲಾಗಿ—೭-೮. ಕಿನ್ನರಿ ಬೊಮ್ಮಯ್ಯನು ಬಸವೇಶ್ವರನನ್ನು ಶ್ಲಾಘ್ಯವಾದ ಪರತತ್ತ್ವ ವಿಚಾರವೆಂಬ ಜಲದಲ್ಲಿ ತೇಲಾಡಿಸುತ್ತ ಮರ್ಯಾದೆಯನ್ನು ಹೊಂದಿ ಶಿವೈಕ್ಯ ಚಿತ್ತರೆನಿಸಿದ ಉನ್ನತ ಶಿವಾನುಭಾವಿಗಳೊಡನೆ ಕೂಡಿ ಶೋಭಿಸುತ್ತ ಇರುವಲ್ಲಿ ಒಂದು ದಿವಸ ಆನಂದದಿಂದ ಶ್ರೇಷ್ಠವಾದ ತ್ರಿಪುರಾಂತಕೇಶ್ವರ ದೇವಾಲಯದ ಗೋಪುರದ ತಲೆಬಾಗಿಲಿನಲ್ಲಿ ಆದರದಿಂದ ಪೂರ್ವ ದಿಗ್ಭಾಗದಲ್ಲಿರುವ ಪರ್ವತದಲ್ಲಿ (ಉದಯಗಿರಿಯಲ್ಲಿ) ಪ್ರಕಾಶಿಸುವ ಸೂರ್ಯಮಂಡಲದ ಹಾಗೆ ಕುಳಿತುಕೊಂಡಿದ್ದನು. ವ॥ ಆ ಸಮಯದಲ್ಲಿ ಓರ್ವ ವಿಟನು ತನ್ನ ಸೂಳೆಯ ಮನೆಯ ಹಬ್ಬದ ನಿಮಿತ್ತ ವಧೆಮಾಡುವುದಕ್ಕೆ ಒಂದು ದೊಡ್ಡ ಕುರಿಯನ್ನು ಕ್ರಯಕ್ಕೆ ತೆಗೆದುಕೊಂಡು ಪುರದ ಬೀದಿಯಲ್ಲಿ ಬರುತ್ತಿರುವಾಗ ಆ ಕುರಿಯು ಕೊರಳ ಹಗ್ಗವನ್ನು ಹರಿದು ಕಿತ್ತು ನಿಟ್ಟೋಟದಿಂದ, ಕೂಗಿಕೊಳ್ಳುತ್ತ ಓಡಿಬಂದು

1 ಸರ(ಗ)

ಪರಿತಂದು ಶಿವಗಾರಮಂ ಪುಗೆವುಗೆ ಬೆಂಬತ್ತಿ ಪಿಡಿಯಲಡವಡಿಪಾ[1]ಬೊಜಗನ ತವಕಮಂ ಕಾರುಣ್ಯನಿಧಿ ಕಿನ್ನರಯ್ಯಂ ಕಂಡು—

ಬಿಡು ಬಿಡು ಪಿಡಿಯದಿರೆಲೆಯೆಲೆ
ಜಡಮತಿ ಸಾವಿಂಗೆ ಪೆಳರ್ದು ಪೊಕ್ಕುದು ಬಂದೀ
ಗುಡಿಯಂ ಕುಱಿಯಿದು ಬೆಲೆಯಂ
ನುಡಿ ಕೊಟ್ಟಪೆನೆರಡು ಮಡಿಯನಾದೊಡಮೀಗಳ್ ೯

ಸರಿ ಸಕಳಜೀವರಾಶಿಗೆ
ಮರಣಭಯಂ ಮಗನೆ ಸುಗಿದು ಪೊಕ್ಕುದು ಕುಱಿ ಶಂ
ಕರಶರಣರ್ಮಱೆವೊಕ್ಕುದ
ನಿರದೀವರೆ ಗಾಂಪ ಪಿಡಿಯದಿರ್ಬಿಡು ಕುಱಿಯಂ ೧೦

ಬಳೆದಳಿಪಿನಿಂದೆ ಸೆಳೆದಪೆ
ತಳರದೆ ಪೆಱತೊಂದು ಬಿಲ್ತ ಕುಱಿಯಿಳಿಯದೆ ನಿ
ನ್ನಳಗಂಟಲೊಳೆಲೆ ಖಳ ಕುಲ
ತಿಳಕ ಬಿಡೀ ಕುಱಿಯ ಕುಱಿತ ವಿತ್ತಮನೀವೆಂ ೧೧

ವ॥ ಎನೆ ಕೇಳ್ದು ದುಷ್ಟ ಭುಜಂಗನಟ್ಟಹಾಸಂಗೆಯ್ದು—

(ಕಿನ್ನರಿ ಬೊಮ್ಮಯ್ಯನು ಕುಳಿತ ತ್ರಿಪುರಾಂತಕೇಶ್ವರ) ಶಿವಾಲಯವನ್ನು ಪ್ರವೇಶಿಸಲು, ಬೆನ್ನು ಹತ್ತಿಬಂದು ಹಿಡಿಯಲು ಆತುರಪಡುತ್ತಿದ್ದ ಆ ವಿಟನ ತವಕವನ್ನು ಕಾರುಣ್ಯ ನಿಧಿಯಾದ ಕಿನ್ನರಿ ಬೊಮ್ಮಯ್ಯನು ಕಂಡು—೯. 'ಎಲೆಲೆ ಮೂಢ ಮತಿಯವನೇ, ಹಿಡಿಯಬೇಡ ಬಿಡು ಬಿಡು ! ಈ ಕುರಿಯು ಸಾವಿಗೆ ಹೆದರಿ ಬಂದು ಈ ಗುಡಿಯನ್ನು ಹೊಕ್ಕಿದೆ. ಇದರ ಕ್ರಯವೇನು ಹೇಳು ? ಒಂದಕ್ಕೆ ಎರಡರಷ್ಟನ್ನಾದರೂ ಈಗಲೇ ಕೊಡುತ್ತೇನೆ.' ೧೦. 'ಎಲೈ ಮಗನೇ, ಸಕಲ ಪ್ರಾಣಿಗಳಿಗೂ, ಮರಣ ಭಯವು ಇರ ಬೇಕಾದುದೇ (ಸರಿ). ಈ ಕುರಿಯು ಭಯಪಟ್ಟು ಹೊಕ್ಕಿದೆ. ಎಲೈ ಮೂಢನೇ, ಶಂಕರನ ಶರಣರು ಬೆನ್ನು ಬಿದ್ದವರನ್ನು ರಕ್ಷಿಸದೆ ಬಿಡುತ್ತಾರೆಯೇ ? ಬಿಡು, ಕುರಿ ಯನ್ನು ಹಿಡಿಯಬೇಡ' ೧೧. 'ಬೆಳೆದ ದುರಾಸೆಯಿಂದ (ಯಾವುದಕ್ಕೂ) ಹೆದರದೆ ಎಳೆಯುತ್ತಿದ್ದೀಯೆ. ·ಕೊಂಡುಕೊಂಡ ಇನ್ನೊಂದು ಕುರಿಯು ನಿನ್ನಾಕೆಯ ಗಂಟಲಲ್ಲಿ ಇಳಿಯುವುದಿಲ್ಲವೇ ? ಎಲೈ ಮೂಢರ ಗುಂಪಿನಲ್ಲಿ ಶ್ರೇಷ್ಠನೇ, ಕುರಿಯನ್ನು ಬಿಡು ; ನೀನು ಮನಸ್ಸಿನಲ್ಲಿ ಇಚ್ಛಿಸಿದ ಹಣವನ್ನು ಕೊಡುತ್ತೇನೆ.' ವ॥ ಹೀಗೆನ್ನಲು ಆ ಕೆಟ್ಟ

1 ಪ(ಅ, ಮ)

ಅರರೆ ಬಲವಂತ ಚಾಗಿಗ
ಳರಸ ದಯಾಪರರದಾರೊ ನಿನ್ನವೊಲೆ ವಸುಂ
ಧರೆಯೊಳರಿದರಿದು ನಿನ್ನಯ
ಪರಿ ಕುಱಿಯುಂ ಬಿಡಿಸಲೆಂದು ಬಗೆದಂದಿರ್ದೈ ೧೨

ಪುಗುಗುಂ ಪೆಱರಂಗಣಮುಂ
ಪುಗುಗುಂ ಪರಗೃಹಮನೊರ್ವೆ ದೇವಾಲಯಮುಂ
ಪುಗುಗುಂ ಕುಱಿ ಪಿಡಿಯದಿರೆನೆ
ಜಗದೊಳ್ಬೆಲೆಗೊಟ್ಟು ಕೊಂಡರಂ ಬಿಟ್ಟಪರೇ ೧೩

ನರರ ಹರಣಕ್ಕೆ ಬೆಲೆ ಸಾ
ಸಿರ ಪೊಂಗಡ ಜೀವಮೆಲ್ಲ ಸರಿ ಗಡ ನೀಂ ಸಾ
ಸಿರ ಪೊನ್ನನಾದೊಡಂ ಸಾ
ದರಮಿತ್ತಜಪಶುವ ಬಿಡಿಸಲಾರ್ಪವನಲ್ತೇ ೧೪

ವ॥ ಎಂದವಂ ಕಟಕಿಯುಂ ಗಳಪುತ್ತೆನ್ನವಳಾಂ ತಳ್ವಿದನೆಂದು ಮುಳಿಯದಿರಳೆಂ[1]ದಜಪಶ
ವನವಂ ಜವದಿಂ ಸೆಳೆಯಲೊಡನೆ —

ವಿಟನು ಗಟ್ಟಿಯಾಗಿ ನಕ್ಕು (ಅಟ್ಟಹಾಸದ ನಗೆ ನಕ್ಕು) ೧೨. 'ಅರರೇ, ಬಲಿಷ್ಠನೇ, ತ್ಯಾಗಿಗಳಿಗೆಲ್ಲ ಅರಸನಂತಿರುವವನೇ, ಈ ಭೂಮಿಯಲ್ಲಿ ನಿನ್ನಂತೆ ದಯಾಪರರಾದವರು ಇನ್ನಾರೋ ? ನಿನ್ನ ಈ ರೀತಿ ಅಸಾಧ್ಯ ! ಅಸಾಧ್ಯ !! ಕುರಿಯನ್ನು ವಧೆಯಿಂದ ಬಿಡಿಸಬೇಕೆಂದು ಯೋಚನೆ ಮಾಡಿರುವೆಯಾ ?' ೧೩. 'ಈ ಜಗತ್ತಿನಲ್ಲಿ (ಯಾರಾದರೂ) ಕುರಿಯೊಮ್ಮೆ ಮತ್ತೊಬ್ಬರ ಅಂಗಳವನ್ನು ಹೊಕ್ಕಿತೆಂದು, ಮತ್ತೊಬ್ಬರ ಮನೆಯನ್ನು ಪ್ರವೇಶಿಸಿತೆಂದು, ದೇವಾಲಯವನ್ನು ಹೊಕ್ಕಿತೆಂದು, ಹಿಡಿಯ ಬೇಡ ಅಂದರೆ ದುಡ್ಡು ಕೊಟ್ಟು ಕೊಂಡವರು ಬಿಡುತ್ತಾರೆಯೆ ? ೧೪. 'ಮನುಷ್ಯರ ಪ್ರಾಣಕ್ಕೆ ಬೆಲೆಯು ಸಹಸ್ರ ಹೊನ್ನುಗಳಲ್ಲವೇ ? ಪ್ರಾಣವೆಲ್ಲವೂ ಸಮಾನವೇ ಅಲ್ಲವೇ ? ನೀನು ಸಾವಿರ ಹೊನ್ನನ್ನಾದರೂ ಆದರ ಪೂರ್ವಕವಾಗಿ ಕೊಟ್ಟು ಈ ಕುರಿಯನ್ನು ಬಿಡಿಸುವ ಸಮರ್ಥನಾಗುವವನಲ್ಲವೇ ?' ವ॥ ಹೀಗೆಂದು ಆ ವಿಟನು ವ್ಯಂಗ್ಯವಾಗಿ ಕೂಗಾಡುತ್ತ 'ನನ್ನವಳು ನಾನು ಕುರಿಯನ್ನು ತರದೆ ತಪ್ಪಿದವನು ಎಂದು ಕೋಪಗೊಳ್ಳದೆ ಇರಳು,' ಎಂದು ಅವನು ಆ ಕುರಿಯನ್ನು (ಆಡನ್ನು) ಶೀಘ್ರವಾಗಿ ಎಳೆ

---

1 ಳಿ(ಮು)

ಗಳಪದಿರು ಪಲವನೆಲೆ ಪೊಂ
ಗಳನೀವೆಂ ಪಿಡಿ ಸಹಸ್ರಮಂ ಕುಱಿಯುಂ ಕೊ
ಟ್ಟಳುಪಿದೊಡೆ ಬಿಡೆಂ ಮಗುಳ್ದೀ
ಗಳೆ ಶಿವನುಂಡಿಗೆಯನೊತ್ತಿಬಿಡುವೆನನೂನಂ ೧೫

ವ॥ ಎಂದು ಸಹಸ್ರವಿತ್ತಮಂ ತರಿಸಿ ಬೊಮ್ಮಿದೇವಂ ಕೊಡಲೊಡನವಂ ಕೊಂಡುಕುಱಿಯನುಳಿದು ಪಿರಿದು ಬೆಲೆವಡೆದೆನೆಂದುತ್ಸವಿಸಿ ಮಗುಳ್ದೊಂದು ಕುಱಿಯುಂ ಬಿಲ್ತುಕೊಂಡು ಗಾಣಿಕ್ಯ [1]ನಿಕೇತನಕ್ಕೆ ಬಂದು ತಂದ ಕುಱಿಯುಂ ತೋಱಿ ಸಾಸಿರ ಪೊಂಜಾಳಿಗೆಯುಂ ಮುಂದಿಟ್ಟಾದ ವೃತ್ತಾಂತದಾದ್ಯಂತಮನವಂ ಪೇಳೆ ಕೇಳ್ದು ಪಣ್ಯಾಂಗನೆ ಕನಲ್ದು ಪೊಂಜಾಳಿಗೆಯಂ ನೂಕಿ ಕಳೆದು—

ಪೊಲ್ಲದುಗೆಯ್ದಯಿದೇತಱ
ಬಲ್ಲತನಂ ಸಮವಿಟ್ಟರೊಳೆ ನಗೆಗೆಡೆಯಾದೈ
ಖುಲ್ಲ ಪದೆದೆನ್ನ ಬಳಿಯೊ
ಳ್ನಿಲ್ಲದೆ ತೊಲಗೆಂದು ಗಜಱಿ ಗರ್ಜಿಸುತಂಗಳ್ ೧೬

ಗಳಿಸಾ[2]ಳಿವೆಣ್ಗಳೆನ್ನಂ
ಪಳಿವಂತಿರೆ ಮಾಣದೆಮ್ಮ ಗೃಹದೇವತೆಯ
ಮುಳಿವಂತೆ ಮಾಡಿದೈ ಚಿಃ
ಖಳ ಪಣದಳಿಯಾಸೆಗಾಗಿ ನೀಗಿದೆ ಕುಱಿಯುಂ ೧೭

ಯುಲು ಆ ಕೂಡಲೆ ೧೫. ಎಲೈ, ಅನೇಕ ಮಾತುಗಳನ್ನು ಆಡಬೇಡ. ಸಹಸ್ರ ಹೊನ್ನುಗಳನ್ನಾದರೂ ಕೊಡುವೆನು ಹಿಡಿ; ಕುರಿಯನ್ನು ಕೊಟ್ಟು ಪುನಃ ಆಸೆ ಪಟ್ಟರೆ, ಬಿಡುವುದಿಲ್ಲ. ಈಗಲೇ (ಈ ಕುರಿಗೆ) ಶಿವನ ಮುದ್ರೆಯನ್ನು ಊಣೆಯವಿಲ್ಲದಂತೆ ಒತ್ತಿ ಬಿಡುವೆನು. ವ॥ ಎಂದು ಆ ಕಿನ್ನರಿಯ ಬೊಮ್ಮಯ್ಯನು ಸಹಸ್ರ ಹೊನ್ನುಗಳನ್ನು ತರಿಸಿ ಕೊಡಲಾಗಿ, ಆ ಕೂಡಲೆ ಅವನು (ಆ ಹಣವನ್ನು) ತೆಗೆದುಕೊಂಡು, ಕುರಿಯನ್ನು ಬಿಟ್ಟು ಹೆಚ್ಚಾದ ಬೆಲೆಯನ್ನೇ ಪಡೆದೆನೆಂದು ಉಬ್ಬಿ ಹೋಗಿ ಪುನಃ ಮತ್ತೊಂದು ಕುರಿಯನ್ನು ಕೊಂಡುಕೊಂಡು ಸೂಳೆಯ ಮನೆಗೆ ಬಂದು ತಂದ ಕುರಿಯನ್ನು ತೋರಿಸಿ, ಸಹಸ್ರ ಹೊನ್ನುಗಳ ಚೀಲವನ್ನು (ಅವಳ) ಮುಂದೆ ಇಟ್ಟು ನಡೆದ ವೃತ್ತಾಂತವನ್ನು ಆದ್ಯಂತವಾಗಿ ಅವನು ಹೇಳಲಾಗಿ, ಆ ಸೂಳೆಯು ಕೇಳಿ, ಕೋಪಿಸಿ, ಬಂಗಾರದ ನಾಣ್ಯಗಳಿರುವ ಚೀಲವನ್ನು ನೂಕಿ ಬಿಸಾಡಿ ೧೬–೧೮. 'ಕೆಟ್ಟಕಾರ್ಯವನ್ನು ಮಾಡಿದೆ. ಇದೇ ತರ ಪ್ರೌಢಿಮೆ ? ವಿಟರಲ್ಲಿ ನೀನು ಅಪಹಾಸ್ಯಕ್ಕೊಳಗಾದೆ. ನೀಚನೇ, ಪ್ರೀತಿಯಿಂದ ನನ್ನ ಬಳಿಯಲ್ಲಿ ನಿಲ್ಲದೆ (ಆಚೆ) ತೊಲಗು,' ಎಂದು ಗದರಿ ಗರ್ಜನೆ ಮಾಡುತ್ತ ಆಗ

1 ಗಣಿಕಾ(ಚ) 2 ಕಾ(ಚ)

ಪಣಮೇಂ ಬಾಳ್ತೆಯೆ ಪೇಳೆನ
ಗಣೆಯುರವಿೂ ಬೀದಿಯೊಳ್ಬಿತ್ತಿಪೆ ನಿ
ಟ್ಟಣೆಸಿರೆ ಪೊನ್ನಂ ಮತ್ಪುರ
ಗಣಿಕಾತತಿಯೆಲ್ಲ ಬಲ್ಲುದೆನ್ನಯ ಪೆಂಪಂ ೧೮

ಅದು ಗೃಹದೇವತಾಬಲಿಗೆ ನೇಮಿಸಿ ತಂದುದು ಬೇಗ ಪೋಗಿ ನೀ
ನದನೊಸೆದಿತ್ತ ವಿತ್ತತತಿಯಂ ಮಗುಳ್ದಿತ್ತದಱಿಂದೆ ತಂದೊಡ
ಲ್ಲದೆ ಪೊಸ ಪರ್ಬಮಂ ನೆಗಳ್ವುದಾಗದು ಮದ್ಗೃಹದೇವತಾಳಿ ಕಾ
ಯ್ವುದು ಪೆಱತೊಂದು ಬಲ್ಗುಱಿಯನಿಕ್ಕುತೆ ಪಲ್ಲವ ಮಾಡೆ ಪರ್ಬಮಂ ೧೯

ವ॥ ಎಂದವಳಾಕ್ಷೇಪದಿಂ ಗಳಪೆ ಕಾಮಾಂಧಂ ಮುಂದಪ್ಪನರ್ಥಮಂ ಲೆಕ್ಕಿಸದೆ ದೇಗುಲಕ್ಕೆ ಪರಿತಂದು ಲಿಂಗಮುದ್ರಾಂಕಿತಚ್ಛಾಗಮನವನಡಸಿ ಪಿಡಿಯಲೊಡನೆ ಕಿನ್ನರಯ್ಯಂ ಕೆರಳ್ದು ನೋಡಿ—

ಪಿಡಿಯದಿರಲೆ ಖಳ ಕುಱಿಯಂ
ಬಿಡು ಬಸವಾಧೀಶನಾಣೆ ಕಡು ಪಾತಕ ನೀಂ
ಬಿಡದೊಡೆ ನಿನ್ನಯ ತಲೆಯಂ
ಪೊಡೆಯದೆ ಬಿಡೆನೆಂದು ಶರಣನುದ್ಘೋಷಿಸಿದಂ ೨೦

(ಅವಳು) '(ಇತರ) ಸೂಳೆಯರು ನನ್ನನ್ನು ನಿಂದಿಸುವ ಹಾಗೆ, ನನ್ನ ಗೃಹ ದೇವತೆಗಳು ತಪ್ಪದೆ ಕೋಪಗೊಳ್ಳುವ ಹಾಗೆ ಮಾಡಿದೆ. ಛೀ ! ನೀಚ, ಹಣದ ಆಸೆಗಾಗಿ ಕುರಿಯನ್ನು ನೀಗಿಬಿಟ್ಟೆ. ನನಗೆ ಹಣದ ಆಸೆಯೇ ? ಹೇಳು. ಮನೋಹರವಾಗಿ ಈ ಬೀದಿ ಬೀದಿಯಲ್ಲಿ ಬಂಗಾರವನ್ನು (ಬೇಕಾದರೆ) ದಟ್ಟವಾಗಿ ಬಿತ್ತ ಬಲ್ಲೆ. ನಮ್ಮ ಪಟ್ಟಣದಲ್ಲಿರುವ ಸೂಳೆಯರ ಗುಂಪು ನನ್ನ ಹಿರಿಮೆಯನ್ನು ಬಲ್ಲುದು.' ೧೯. 'ಆ ಕುರಿಯು (ನನ್ನ) ಗೃಹದೇವತೆಯ ಬಲಿಗೆ ನೇಮಿಸಿ ತಂದ್ದದು ; ಬೇಗನೆ ನೀನು (ಅಲ್ಲಿಗೆ) ಹೋಗಿ, ಅವನು ಪ್ರೀತಿಯಿಂದ ಕೊಟ್ಟ ಆ ಹಣದ ಸಮೂಹವನ್ನು ಮರಳಿಕೊಟ್ಟು (ಆ ಕುರಿಯನ್ನು) ತಂದಲ್ಲದೆ (ಈ) ಹೊಸ ಹಬ್ಬವನ್ನು ಮಾಡಲಿಕ್ಕಾಗದು. ನನ್ನ ಗೃಹ ದೇವತೆಗಳು ಕೋಪಗೊಳ್ಳುತ್ತಾರೆ. ವಿಟನೇ, ಬೇರೊಂದು ಕುರಿಯನ್ನು ತಂದು ಕೊಲ್ಲುತ್ತ ಹಬ್ಬವನ್ನು ಮಾಡುವುದಿಲ್ಲ. ವ॥ ಹೀಗೆಂದು ಅವಳು ಆಕ್ಷೇಪಣೆ ಮಾಡಿ ಮಾತನಾಡಲು ಕಾಮಾಂಧನಾದ ಆ ವಿಟನು ಮುಂದಾಗುವ ಅನರ್ಥವನ್ನು ಗಣನೆಗೆ ತಾರದೆ, ದೇವಸ್ಥಾನಕ್ಕೆ ಓಡಿ ಬಂದು ಲಿಂಗಮುದ್ರೆಯ ಚಿಹ್ನೆಯುಳ್ಳ ಭಾಗವನ್ನು ಆವರಿಸಿ ಹಿಡಿಯಲಾಗಿ ಆ ಕೂಡಲೆ ಕಿನ್ನರಯ್ಯನು ಕೋಪಗೊಂಡು ನೋಡಿ ೨೦. 'ಎಲೈ ದುಷ್ಟ, ಕುರಿಯನ್ನು ಹಿಡಿಯಬೇಡ ಬಸವಾಧೀಶ್ವರನಾಣೆ ! ಬಿಡು ; ನೀನು ಮಹಾ ಪಾಪಿಷ್ಠ. ಬಿಡದಿದ್ದರೆ ನಿನ್ನ ತಲೆಯನ್ನು ಕತ್ತರಿಸದೆ ಬಿಡುವುದಿಲ್ಲ.' ಎಂದು ಶರಣನು

ವ॥ ಮತ್ತಂ—

ಎಲವೊ ಮದಾಂಧ ಸಿಂಹಶಿಶು ಕೆಯ್ಗೊಳಗಪ್ಪುದೆ ವನ್ಯದಂತಿಗು
ಜ್ವಲತರ ಲಿಂಗಮುದ್ರೆವಡೆದೀ ಕುಱಿ ನೀಂ ಪಿಡಿಯಲ್ಕೆ ಸಾಧ್ಯಮೋ
ತೊಲಗು ಶಿವೈಕ್ಯರಲ್ಲಿ ಶರಣಾಗತಪಂಜರರೆಂಬ ಪೆರ್ಮೆಯಾ
ಸಲೆ ಬಿರಿದುಂಟು ಕೇಳ್ಮಱಿಗೆ ಬಂದುದನೀವನೆ ಧೀರ ಕಿನ್ನರಂ ೨೧

ಛಡ ಛಡ ನೀನಲ್ಲೆಲೆ ನೀಂ
ಬಿಡದಾರಾಧಿಸುವ ನಿನ್ನ ಗೃಹದೇವತೆಯು
ರ್ಪಿಡಿದೀ ಕುಱಿಯಂ ಸೆಳೆದೊಡ
ಮಡಿಯಿಡದೆ ಕಱುತ್ತು ತಱಿದು ಕೆಡಪುವೆನೀಗಳ್ ೨೨

ವ॥ ಎಂದು ಮುಟ್ಟಿ ಮೂದಲಿಸಿ ನುಡಿಯೆ ಖಳಂ ಕೇಳ್ದು ಕೆರಳ್ದು ಕೂರಸಿಯನೆತ್ತಿ ತಿದಿರ್ಚಿ ನಿಲೆ ಕಿನ್ನರಯ್ಯಂ ಕಂಡು ಕೋಪಾಟೋಪಮಂ ತಾಳ್ದು ಕರತಳ ಕರಾಳ ಖಡ್ಗಮಂ ಜಡಿದಡಸಿ ನೋಡಿ—

ಕೆಡೆ ಕೆಡೆಯೆನುತ್ತೆ ಗರ್ಜಿಸಿ
ಪೊಡೆದನಡಾಯುಧದೆ ಕಿನ್ನರಂ ತಚ್ಛಿರಮಂ
ಕೆಡೆಯೆ ಕಬಂಧಂ ತಲೆಯುದು
ಸಿಡಿಯೆ ಪುರಾಂತಕನ ಗುಡಿಯ ಪೊಱಗಣ್ಗಾಗಳ್ ೨೩

ಗಟ್ಟಿಯಾಗಿ ಘೋಷಣೆ ಮಾಡಿದನು. ವ॥ ಮತ್ತು ೨೧. "ಎಲವೋ ಮಂದಾಧನೇ, ಸಿಂಹದ ಮರಿಯು ಕಾಡಿನ ಆನೆಯ ಅಧೀನವಾಗುವುದೇ ? ಪ್ರಕಾಶಮಾನವಾದ ಲಿಂಗ ಮುದ್ರೆಯನ್ನು ಹೊಂದಿದ ಈ ಕುರಿಯು ನೀನು ಹಿಡಿಯಲಿಕ್ಕೆ ಯೋಗ್ಯವೇ ? ತೊಲಗು ; ಶಿವೈಕ್ಯಚಿತ್ತರಾದವರು ಬೆನ್ನು ಬಿದ್ದವರಿಗೆ ಪಂಜರರೂಪರಾದವರು. ಎಂಬ ಬಿರುದು (ಅವರಿಗೆ) ಚೆನ್ನಾಗಿ ಉಂಟು. ಕೇಳು : (ನನ್ನ) ಮರೆ ಹೊಕ್ಕಿರುವ ಇದನ್ನು (ಈ) ಕಿನ್ನರಯ್ಯನು ಕೊಡುವನೇ ?" ೨೨. ಛಡಛಡ ! ನೀನಲ್ಲದೆ. ನೀನು ತಪ್ಪದೆ ಆರಾಧಿಸುವ ಗೃಹದೇವತೆಯರೂ ಕೂಡ ಈ ಕುರಿಯನ್ನು ಸೆಳೆದರೂ ಕೋಪಗೊಂಡು ಕಾಲನ್ನಾಚೆಗೆ ಇಕ್ಕಗೊಡದೆ ಈಗಲೇ ಕತ್ತರಿಸಿ ಕೆಡವುತ್ತೇನೆ. ವ॥ ಹೀಗೆಂದು ಮುಟ್ಟು ವಂತೆ ಗರ್ಜನೆ ಮಾಡಿ, (ಎದೆಯ ಮೇಲೆ ಕೈಯನ್ನಿಟ್ಟು ಶಪಥದ ಗರ್ಜನೆ ಮಾಡಿ), ನುಡಿಯಲು ಆ ದುಷ್ಟನು ಕೇಳಿ, ಕೋಪಗೊಂಡು, ತೀಕ್ಷ್ಣವಾದ ಕತ್ತಿಯನ್ನು ಹಿಡಿದೆತ್ತಿ ಎದುರಿಸಿ ನಿಲ್ಲಲಾಗಿ, ಕಿನ್ನರಯ್ಯನು ಕಂಡು ಕೋಪದ ಆಡಂಬರವುಳ್ಳವನಾಗಿ ಕೈಯಲ್ಲಿ ರುವ ಭಯಂಕರ ಖಡ್ಗವನ್ನೆತ್ತಿ ಝಳಪಿಸಿ ಗುರಿಯಿಟ್ಟು ನೋಡಿ ೨೩. ಕಿನ್ನರಯ್ಯನು 'ಬೀಳು ಬೀಳು ! ಎಂದು ಗರ್ಜಿಸಿ ಆ ವಿಟನ ತಲೆಯನ್ನು ಕತ್ತಿಯಿಂದ ಮುಂಡವು ನೆಲಕ್ಕೆ ಬೀಳುವ ಹಾಗೆ, ಆ ತಲೆಯು ತ್ರಿಪುರಾಂತಕನ ಗುಡಿಯ ಹೊರ ಭಾಗಕ್ಕೆ ಸಿಡಿದು

ವ॥ ಅಂತು ಪೊಡೆದು ಕೆಡೆದ ಮುಂಡಮಂ ದೇಗುಲದ ಪೊಱಗಣ್ಗೆ ಬಿಸುಡಿಸಿ ಕಿನ್ನರೇಂದ್ರ (ನಿ)[1]ರ್ಜಿನವಾದುರಾತ್ಮಕನ ಬಂಧುಗಳ್ನೆರೆದು ಸಂದಣಿಸಿ ಬಿಜ್ಜಳನ ಸಭೆಗೆಯ್ದಿ ಮೊಱೆಯಿಟ್ಟು ಮಱುಗಿ—

ಧರಣಿಪ ಬಿನ್ನಪಂ ಕುಱಿಯನೊಂದನಿವಂ ಬೆಲೆಗೊಟ್ಟುಕೊಂಡು ಭಾ
ಸುರಪುರವೀಥಿಯೊಳ್ತಳರ್ವ ವೇಳೆಯೊಳಾ ಕುಱಿ ಪೊಕ್ಕುದೀಶಮಂ
ದಿರಮನದಂ ಕರಂ ಪಿಡಿಯೆ ಮುಟ್ಟದಿರೆಂದಪರಾಧಮೇನುಮೊಂ
ದಿರದೆಸೆವೀತನಂ ತಱಿದುರುಳ್ಚಿದನುಗ್ರತೆವೆತ್ತು ಕಿನ್ನರಂ ೨೪

ವ॥ ಎಂದಾ ರುಂಡಮಂ ಮುಂಡಮಂ ಮುಂದಿಟ್ಟು ಮೊಱೆಯಿಡೆ ಧರಾಧಿಪಂ ಕೇಳ್ದು ಕೋಪಮಂ ತಾಳ್ದು ಬಸವರಸನ ಮುಖಾರವಿಂದಮಂ ನೋಡಿ—

ಪರಮ ದಯಾಪರರ್ಸತತ ನೀತಿಯುತರ್ಹರಭಕ್ತರೆಂದು ಸಾ
ದರಮೆನಗೆಂದ ನಿನ್ನ ನುಡಿ ತಪ್ಪುಗುಮೇ ವೃಷಭೇಂದ್ರ ನಿನ್ನ ಕಿ
ನ್ನರವಿಭು ದೇಗುಲಕ್ಕೆ ಕುಱಿ ಪೊಕ್ಕೊಡೆ ತನ್ನದದೆಂತೊ ಕೊಂಡವಂ
ಕರಮದನೀಳ್ದು ಸಂದೆಳೆಯೆ ಕೆಮ್ಮನೆ ಕೊಂದನುದಗ್ರವೃತ್ತಿಯಿಂ ೨೫

ಬೀಳುವ ಹಾಗೆ, ಆ ಕೂಡಲೇ ಹೊಡೆದನು. ವ॥ ಆ ರೀತಿ ಹೊಡೆದು (ಆ ದೇವಾಲಯದಲ್ಲಿ) ಬಿದ್ದ ಮುಂಡವನ್ನು ಕಿನ್ನರಯ್ಯನು ದೇಗುಲದ ಹೊರ ಭಾಗಕ್ಕೆ ಬಿಸಾಡಿಸಿರುವಷ್ಟರಲ್ಲಿ ಆ ದುಷ್ಟನಾದ ವಿಟನ ಬಂಧು ಬಳಗದವರು, ಗುಂಪಾಗಿ ಸೇರಿಕೊಂಡು ಬಿಜ್ಜಳನ ಸಭೆಗೆ ಹೋಗಿ, ದೂರನ್ನು ಹೇಳಿಕೊಂಡು ದುಃಖವನ್ನು ಪ್ರದರ್ಶಿಸಿ ೨೪. ಮಹಾರಾಜಾ, ವಿಜ್ಞಾಪನೆಯೇನೆಂದರೆ : ಈ ಸತ್ತಿರುಪಾತನು ಒಂದು ಕುರಿಯನ್ನು ಕ್ರಯಕ್ಕೆ ಕೊಂಡುಕೊಂಡು ಶೋಭಿಸುವ ಪಟ್ಟಣದ ಬೀದಿಯಲ್ಲಿ ಹೋಗುವ ಸಮಯ್ಯದಲ್ಲಿ, ಕುರಿಯು ಶಿವಮಂದಿರವನ್ನು ಪ್ರವೇಶಿಸಿತು. ಆ ಕುರಿಯನ್ನು ಹಿಡಿದುಕೊಂಡರೆ ಮುಟ್ಟಬೇಡ ಎನ್ನುತ್ತ ಯಾವ ಅಪರಾಧವೂ ಇಲ್ಲದೆ ಶೋಭಿಸುತ್ತಿದ್ದ ಇವನನ್ನು ಕಿನ್ನರಯ್ಯನು ಉಗ್ರ ಭಾವವನ್ನು ಹೊಂದಿ ಕತ್ತರಿಸಿ ಉರುಳಿಸಿದನು. ವ॥ ಎಂದು ಆ ರುಂಡವನ್ನೂ, ಮುಂಡವನ್ನೂ (ದೊರೆಯ) ಮುಂದೆ ಇಟ್ಟು, ಗೋಳಾಡಲು ಮಹಾರಾಜನು ಕೇಳಿ, ಕೋಪಗೊಂಡು ಬಸವರಸನ ಮುಖ ಕಮಲವನ್ನು ನೋಡಿ ೨೫. 'ವೃಷಭೇಂದ್ರ, ಶ್ರೇಷ್ಠರಾದ ಶಿವಭಕ್ತರು ಪರಮದಯಾಪರರೂ, ನೀತಿಯುತರೂ ಎಂದು ಆದರ ಪೂರ್ವಕವಾಗಿ ನನಗೆ ಹೇಳಿದ ನಿನ್ನ ಮಾತು ತಪ್ಪಬೇಕೆ ? ನಿನ್ನ ಕಿನ್ನರ ಬೊಮ್ಮಯ್ಯ ವಿಭುವು, ದೇವಾಲಯದಲ್ಲಿ ಕುರಿ ಹೊಕ್ಕರೆ ಅದನ್ನು ಏತಕ್ಕೊ ಕೊಂಡುಕೊಂಡವನು ಅದನ್ನು ಹಿಡಿದು ಎಳೆದುಕೊಂಡರೆ, ಸುಮ್ಮನೆ

---

1 ಮಿ(ಅ, ಗ, ಚ, ಜ, ದ, ಮು)

ದುರಿತಕ್ಕಳ್ಕದೆ ಪಳಿಗುಂ
ಧರೆತಿಂಬುದನಿಂಬುಕೆಯ್ಯದೆಂತಪ್ಪರುಮಂ
ಪರಿಕಿಸಿ ತಪ್ಪಿಲ್ಲದೆಯುಂ
ಹರಭಕ್ತರ್ಕೊಲ್ವರಿವರನಾರ್ಬಾರಿಪರೋ ೨೬

ಅರಸುತನಂ ತಮಗಾದಂ
ತಿರೆ ಪರರಂ ಕೊಲ್ವರಣಕಿಪರ್ಪರಮತಮಂ
ಪರದೈವಂಗಳನಳಿವ
ರ್ಪರ ಪ್ರಮಾಣೋಕ್ತಿ ಶಾಸ್ತ್ರಮಂ ಪಳಿಕೆಯ್ವರ್ ೨೭

ಮಗನಂ ಸೀಳ್ವುದುಮಂಘ್ರಿಯಿಂದೊದೆವುದುಂ ಮಾಂಸಾರ್ಪಣಂಗೆಯ್ವುದುಂ
ಬಗೆವೆರ್ಚಿಂ ಬಿಱುಗಲ್ಗಳಿಂದಿಡುವುದುಂ ತಂದೆಯುಂ ಕೊಲ್ವುದುಂ
ಸೊಗಯಿಪ್ಪಾತ್ಮವಧೂಟಿಯಂ ಕುಡುವುದುಂ ದುರ್ಜಾತಿಯೊಳ್ಬಾಳ್ವುದುಂ
ಜಗದೊಳ್ಭಕ್ತರ ನೀತಿಯೆಂಬರಿದನಾವಂ ನಚ್ಚುವಂ ಮಚ್ಚುವಂ ೨೮

ಅರಸರ್ಗಾಜ್ಞಾಭಂಗಮೆ
ಮರಣೋಪಮಮಲ್ತೆ ಶರಣರೆನ್ನಾಜ್ಞೆಯುಮಂ
ತ್ಯರಿಸಿ ನಡೆದಪರಿದೇಕೆಮ
ಗರಸುತನಂ ಬಸವ ನೀನೆ ಕೆಯ್ಕೊಳ್ವುದಿದಂ ೨೯

ಮಿತಿಮೀರಿದ ವರ್ತನದಿಂದ ಕೊಂದನು.' ೨೬. 'ಹರಭಕ್ತರಾದವರು ಪಾಪಕ್ಕೆ ಹೆದರದೆ, ಲೋಕದ ಜನರು ನಿಂದಿಸಿಯಾರು ಎಂಬುದನ್ನೂ ಗಣನೆಗೆ ತೆಗೆದುಕೊಳ್ಳದೆ, ವಿಚಾರಿಸಿ ನೋಡಿದರೆ ತಪ್ಪು ಇಲ್ಲದೆಯೇ ಎಂಥವರನ್ನಾದರೂ ಕೊಲ್ಲುತ್ತಾರೆ. ಇವನ್ನು ತಡೆಯುವರಾರೋ !' ೨೭. '(ಆ ಶಿವ ಭಕ್ತನು) ತಮಗೇ ಅರಸುತನವಾದವರ ಹಾಗೆ, ಪರರನ್ನು ಕೊಲ್ಲುತ್ತಿದ್ದಾರೆ ; ಪರಮತವನ್ನು ಹಾಸ್ಯ ಮಾಡುತ್ತಿದ್ದಾರೆ ; ಪರ ದೈವಗಳನ್ನು ನಾಶಪಡಿಸುತ್ತಾರೆ ; ಅನ್ಯರಾದವರ ಪ್ರಮಾಣೋಕ್ತಿಗಳುಳ್ಳ ಶಾಸ್ತ್ರ ಗಳನ್ನು ದೂಷಿಸುತ್ತಿದ್ದಾರೆ.' ೨೮. ಮಗನನ್ನು ಕೊಲ್ಲುವುದು, ಕಾಲಿನಿಂದ ಒದೆಯು ವುದು, ಮಾಂಸವನ್ನು ಅರ್ಪಿಸುವುದು, ಉತ್ಸಾಹಗೊಂಡ ಮನಸ್ಸಿನಿಂದ ದೊಡ್ಡ ದೊಡ್ಡ ಕಲ್ಲುಗಳಿಂದ ಹೊಡೆಯುವುದು, ಮತ್ತು ತಂದೆಯನ್ನು ಕೊಲ್ಲುವುದು, ಸೊಗಸಾದ ತಮ್ಮ ಪತ್ನಿಯನ್ನು ಕೊಡುವುದು, ಕೆಟ್ಟ ಜಾತಿಯವರೊಡನೆ ಬಾಳುವುದು, ಲೋಕದಲ್ಲಿ ಭಕ್ತರ ನೀತಿಯೆನ್ನುತ್ತಿದ್ದಾರೆ. ಇದನ್ನು ಯಾರು ಶ್ಲಾಘಿಸುತ್ತಾರೆ ? ೨೯. ಬಸವಣ್ಣ, ಅರಸರಿಗೆ (ಅವರ) ಆಜ್ಞಾ ಭಂಗವೇ ಮರಣ ಸಮಾನವಲ್ಲವೆ ? ಶರಣರು ನನ್ನ ಆಜ್ಞೆ ಯನ್ನು ಮೀರಿ ನಡೆಯುತ್ತಿದ್ದಾರೆ. ನಮಗೆ ಇಂಥ ಅರಸುತನವಾದರೂ ಏಕೆ ? ನೀನೇ

ವ॥ ಎಂದರಸಂ ವಿರಸಮಂ ನುಡಿಯೆ ಬಸವಂ ಕೇಳ್ದು ಮುಗುಳ್ನಗೆ ನಕ್ಕು—

ಶಿವಧರ್ಮಮಾರ್ಗಮಂ ಮಿ
ಱುವರಲ್ತಲ್ತೆಮ್ಮ ಶರಣರವನಿಪ ಮೇಲಂ
ವಿವರಿಸದೆ ಕಾರ್ಯಹಾನಿಯ
ನವಧರಿಸದೆ ಬಾಯ್ಗೆ ಬಂದವೋಲ್ನುಡಿದಪುದೇ ೩೦

ಕಿಱುಕುಳನಲ್ತು ಕಿನ್ನರಮಹಾವಿಭು ಶಂಕರರೂಪನಲ್ತೆ ತ
ಪ್ಪೆಱಗದೆ ಕೊಲ್ವನೇ ಪರನನೆಳ್ತಿರದೀದುದೆನುತ್ತೆ ಪೇಳೆ ಕೇ
ಳ್ದೆಱಕದೆ ಕಟ್ಟು ಕೊಟ್ಟಿಗೆಯೊಳೆಂಬವೊಲೀ ಖಳರುಕ್ತಿಗೇಳ್ದು ಮೇ
ಲಱಿಯದ ಕಾರ್ಯಮಂ ನುಡಿಯೆ ಬಲ್ಲವರೊಲ್ವರೆ ನಿನ್ನನುರ್ವಿಪಾ ೩೧

ಕಳುಪಾತನಲ್ಲಿಗೆಲೆ ಮಂ
ಜುಳಮತಿ ಮಂತ್ರಿಗಳನರಸ ಬಳಿಕವನಿರವಂ
ತಿಳಿ ತಪ್ಪೆಳ್ಳನಿತಾದೊಡ
ಮಿಳೇಶ ಕೇಳ್ಕಿನ್ನರಯ್ಯನೊಳ್ಪೊರ್ದುಗುಮೇ ೩೨

ವ॥ ಎನಲೊಡನಾ ನುಡಿಯನಿಂಬುಕೆಯ್ದು ಬಿಜ್ಜಳಂ ತನ್ನ [1]ಮನ್ನೆಯ[1] ಮಂತ್ರಿವರರಂ ಕಳುಪಲೊಡನವರ್ಬಂದು ಕಿನ್ನರನಂ ಕಂಡು ಪೊಡಮಟ್ಟು ನಿಟಿಲತಟಘಟಿತಕರಪುಟರಾಗಿ —

ಈ ಅರಸುತನವನ್ನು ಸ್ವೀಕರಿಸಿಬಿಡು. ವ॥ ಹೀಗೆಂದು ಅರಸನಾದ ಬಿಜ್ಜಳನು ವಿರಸದಿಂದ ನುಡಿಯಲಾಗಿ ಬಸವಣ್ಣನು ಕೇಳಿ ಮುಗುಳುನಗೆ ನಕ್ಕು ೩೦. 'ಮಹಾರಾಜಾ, ನಮ್ಮ ಶರಣರು ಶಿವಧರ್ಮ ಮಾರ್ಗವನ್ನು ಮಿಕ್ಕುವವರು ಅಲ್ಲವೇ ಅಲ್ಲ; ವಿಶೇಷಾಂಶವನ್ನು ವಿವರಿಸದೆ, ಕಾರ್ಯಹಾನಿಯನ್ನು ಆಲೋಚಿಸದೆ ಬಾಯಿಗೆ ಬಂದ ಹಾಗೆ ನುಡಿಯಬಹುದೇ?' ೩೧. ''ಕಿನ್ನರಮಹಾವಿಭುವು ನೀಚ ಕುಲದಲ್ಲಿ ಹುಟ್ಟಿದವನಲ್ಲ ; (ಅವನು) ಶಂಕರರೂಪನೇ ಅಲ್ಲವೆ ? ತಪ್ಪು ಹೊರದೆ ಅನ್ಯನನ್ನು ಕೊಲ್ಲುವನೇ ? ತಪ್ಪದೆ 'ಎತ್ತು ಈಯಿತು ಎಂದರೆ ಕೇಳಿ, ಪ್ರೀತಿಯಿಂದ ಕೊಟ್ಟಿಗೆಯಲ್ಲಿ ಕಟ್ಟು' ಎಂಬ ನಾಣ್ನುಡಿಯ ಹಾಗೆ, ಈ ದುಷ್ಟರ ಮಾತು ಕೇಳಿ, ಮುಂದೆ ಆಗುವುದನ್ನು ತಿಳಿಯದ ಕಾರ್ಯವನ್ನು ಮಾತನಾಡುತ್ತೀಯೆ ಮಹಾರಾಜಾ ! (ಇಂಥ) ನಿನ್ನನ್ನು ತಿಳಿದವರು ಒಪ್ಪುವರೇ ?'' ೩೨. 'ಮಹಾರಾಜಾ, ಆ ಕಿನ್ನರಯ್ಯನ ಬಳಿಗೆ ಶ್ರೇಷ್ಠ ಬುದ್ಧಿಯುಳ್ಳ ಮಂತ್ರಿಗಳನ್ನು ಕಳಿಸು ; ಅನಂತರ ಆ ಕಿನ್ನರಯ್ಯನ ರೀತಿಯನ್ನು ತಿಳಿ ಮಹಾರಾಜಾ, ಕೇಳು: ಕಿನ್ನರಯ್ಯನಲ್ಲಿ ತಪ್ಪು, ತಿಲಮಾತ್ರವಾದರೂ ಉಂಟಾದೀತೇ ?' ವ॥ ಎನ್ನಲು ಕೂಡಲೆ ಬಿಜ್ಜಳನು ಆ ಮಾತನ್ನು ಮನಸ್ಸಿಗೆ ತಂದುಕೊಂಡು, ತನ್ನ ಮನ್ನಣೆಗೆ ಪಾತ್ರರಾದ ಮಂತ್ರೀಶ್ವರರನ್ನು ಕಳುಹಿಸಲಾಗಿ, ಕೂಡಲೆ ಅವರು ಬಂದು ಕಿನ್ನರಬೊಮ್ಮಯ್ಯನನ್ನು

1 ಮನಮನ್ನಣೆಯ(ಗ) ಮನ್ನಣೆಯ(ಚ, ಜ)

ಅಮರ್ದೆತ್ತಂಬಿಲಮೆತ್ತ ಭಾನುಕಿರಣಂ ತಾನೆತ್ತ ಮರ್ಬೆತ್ತ ಚಂ
ದ್ರಮಯೂಖಾವಳಿಯೆತ್ತ ಚಕ್ರಚಯಮೆತ್ತಂಭೋಧಿಯೆತ್ತಲ್ಪಕ
ರ್ದಮವಾಪೀಗತಭೇಕಮೆತ್ತ ಶರಣರ್ನೀಮೆತ್ತ ದುರ್ನೀತ ದು
ರ್ದಮದೋಷಾರ್ಥಿಜನೌಘಮೆತ್ತಱಿಯೆವಾವಿಂತಪ್ಪ ಸಂಬಂಧಮಂ ೩೩

ವ॥ ದೇವ ನೀನಪ್ಪೊಡೆ ಮಹಾನುಭಾವಂ ಸ್ವತಂತ್ರಶೀಲಂ ಶಿವಾನಂದರಸ ಸಮಾಸ್ವಾದನಂ ತೃಣೀಕೃತಜಗದ್ವ್ಯಾಪಾರಂ ಭವಭಾರಿಯಪ್ಪ ಲೌಕಿಕ ವರಾಕಜನದೊಡನೆ ವಿವಾದಮನೇಂ ಕಾರಣಂ ತಗುಳ್ಚಿದೆಯಿಂದಂ ತಿಳಿಯಲರಸನೆಮ್ಮಂ ನಿಮ್ಮಲ್ಲಿಗಟ್ಟಿದನೆಂದವರ್ಪೇಳೆ ಕಿನ್ನರೇಂದ್ರನವಂದಿರೊರೆಯ ನಾಕರ್ಣಿಸಿ—

ಪಲವಾಳಾಪದೊಳೇನೊ ಪಾಪಿ ಕುಱಿಯುಂ ತರ್ಪಾಗಳುದ್ಯದ್ಭಯಾ
ಕುಲಮೇಷಂ ಪರಿದೀ ಪುರಾಂತಕನ ಗೇಹಂಬೊಕ್ಕುದಾತಂ ಮದಾ
ವಿಲಚಿತ್ತಂ ಬಳಿವಂದದಂ ಪಿಡಿಯೆ ಲಿಂಗಾಗಾರಮಂ ಪೊಕ್ಕುದಂ
ಕೊಲಲೇನಕ್ಕುಮೆ ಬೇಡ ಕೊಂಡ ಬೆಲೆಯಂ ನೀಂ ಪೇಳ್ವುದಾನಿತ್ತಪೆಂ ೩೪

ಇರ್ಮಡಿ ಮೂರ್ಮಡಿ ಪೊಂಗಳ
ನೊರ್ಮೆಯೆ ಪಿಡಿ ಕೊಡುವೆನಿಲ್ಲಿ ಬಿಡು ಮೇಷಮನೆಂ

ಕಂಡು, ನಮಸ್ಕಾರ ಮಾಡಿ, ಹಣೆಯ ಮೇಲೆ ಕೈಯೆತ್ತಿ ಮುಗಿಯುವವರಾಗಿ ೩೩. 'ಅಮೃತವೆತ್ತ ? ಅಂಬಲಿಯೆತ್ತ'? ಸೂರ್ಯನ ಕಿರಣಗಳೆತ್ತ ? ಕತ್ತಲೆಯೆತ್ತ ? ಚಂದ್ರಕಿರಣ ಸಮೂಹವೆತ್ತ ? ಚಕ್ರವಾಕ ಪಕ್ಷಿಗಳ ಸಮೂಹವೆತ್ತ ? ಸಮುದ್ರವೆತ್ತ ? ಕೆಸರಿನಿಂದ ಕೂಡಿದ ಅಲ್ಪವಾದ ಬಾವಿಯಲ್ಲಿರುವ ಕಪ್ಪೆಯೆತ್ತ ? ಶರಣರಾದ ನೀವೆತ್ತ ? ಕೆಟ್ಟ ನೀತಿಯುಳ್ಳ ಇಂದ್ರಿಯ ನಿಗ್ರಹವಿಲ್ಲದ ದೋಷವನ್ನು ಇಚ್ಛಿಸುವ ಜನರೆತ್ತ ? ಇಂಥ ಸಂಬಂಧವನ್ನು ನಾವು ತಿಳಿಯೆವು.' ವ॥ ದೇವ, ವಿಚಾರಿಸಿ ನೋಡಿದರೆ ನೀನು ಮಹಾನುಭಾವವುಳ್ಳವನು. ಸ್ವತಂತ್ರವಾದ ಶೀಲವುಳ್ಳವನು ; ಶಿವನ ಸಂಬಂಧವಾದ ಆನಂದವೆಂಬ ಜಲವನ್ನು ಪಾನ ಮಾಡುವುದರಿಂದ ಲೌಕಿಕ ವ್ಯವಹಾರವನ್ನು ತೃಣಕ್ಕೆ ಸಮಾನವಾಗಿ ಕಂಡವನು ; ಜನನ ಮರಣಾತ್ಮಕವಾದ ಈ ಸಂಸಾರ ಭಾರದ ಲೋಕ ಲೌಕಿಕದ ನೀಚ ಜನರೊಡನೆ ವಿವಾದವನ್ನೇನುಕಾರಣ ಮಾಡಿಕೊಂಡಿರಿ ? ಈ ಅಂಶವನ್ನು ತಿಳಿಯಲು ಬಿಜ್ಜಳ ಮಹಾರಾಜನು ನಮ್ಮನ್ನು ನಿಮ್ಮಲ್ಲಿಗೆ ಕಳುಹಿಸಿದ್ದಾನೆ.' ಎಂದು ಅವರು ಹೇಳಲಾಗಿ, ಕಿನ್ನರೇಂದ್ರನು ಅವರುಗಳ ಮಾತನ್ನು ಕೇಳಿ ೩೪–೩೫. 'ಹಲವು ಮಾತಿನಿಂದೇನು ? ಆ ಪಾತಕಿಯು ಕುರಿಯನ್ನು ತರುವಾಗ ಹೆಚ್ಚಾದ ಭೀತಿಯಿಂದ ಆ ಕುಲಗೊಂಡ ಆ ಕುರಿಯು ಓಡಿ ಬಂದು, ಈ ತ್ರಿಪುರಾತನ ದೇವಾಲಯವನ್ನು ಹೊಕ್ಕಿತು. ಗರ್ವದಿಂದ ಕೂಡಿದ ಚಿತ್ತವುಳ್ಳ ಆ ಬೋಜಗನು, ಸಮೀಪಕ್ಕೆ ಬಂದು ಈ ಕುರಿಯನ್ನು ಹಿಡಿಯಲು, ಶಿವಾಲಯವನ್ನು ಹೊಕ್ಕ ಇದನ್ನು ಕೊಲ್ಲಲಾದೀತೇ ? ಬೇಡಿಕೊಂಡ ಬೆಲೆಯನ್ನು ಹೇಳು ನಾನು ಕೊಡುತ್ತೇನೆ. ಒಂದಕ್ಕೆ

ದೊರ್ಮೊದಲೆ ನುಡಿದೆನಾ ದು
ಷ್ಕರ್ಮಾವಿಲನೆನ್ನನಣಕಿಸುತ್ತಿಂತೆಂದಂ ೩೫

ಉತ್ತಮ ಗುಣಗಣಪುರುಷ ಕು
ಲೋತ್ತಂಸಂ ಪ್ರಾಣಿಗಣ ದಯಾಪರನೀತಂ
ಮತ್ತೆನ್ನದೆ ಸಾಸಿರ ಪೊ
ನ್ನಿತ್ತಾದೊಡಮರರೆ ಕುಱಿಯ ಬಿಡಿಸದೆ ಮಾಣಂ ೩೬

ವ॥ ಎಂದವನಾಳವಾಡಿ ನುಡಿಯಲಾಕ್ಷಣಮೆ ಸಾಸಿರ ಪೊಂಗಳ ತರಿಸುತೆಣಿಸಿ ಕೊಟ್ಟುನೀಂ ಮಗುೞ್ದೞಿಪಿದೊಡಾನೆಂತುಂ ಬಿಡುವನಲ್ತೀ ಕುಱಿಗೆ ಲಿಂಗಾಂಕಿತಂಗೆಯ್ದು ಬಿಡುವೆನೆನೆ ಖಳನೊಡಂಬಟ್ಟು ಪೋಗಿ ಕಿಱಿದುಂ ಪೊೞ್ತುಂ ಕಳೆ[1]ದು ಮಗುೞ್ದಿಲ್ಲಿಗೇೞ್ತಂದೞಿಪಿ ಕುಱಿಯ ಕೊರಲ್ಗೆ ನೇಣಂ ಬಂಧಿಸಿ ಪಿಡಿದೆಳೆಯೆ ಕಂಡು—

ಎಲೆಯೆಲೆ ದುಷ್ಟ ನೀಂ ಬಿಡು ಬಿಡೀ ಕುಱಿಯುಂ ಪಿಡಿದಂದಮೆಂತೊ ಮುಂ
ಬೆಲೆಗೊಳುತಿತ್ತು ಮತ್ತಮೞಿಪಿ ನೀಂ ತೊಲಗೆಂದೆನೆ ಕಿೞ್ತನೆನ್ನಮೇ
ಲಲಗನಮಂ ಬಳಿಕ್ಕಮವನಂ ಕಡಿದಿಕ್ಕಿದೆನಾರೊಳಾಯ್ತು ತ
ಪ್ಪಲಸದೆ ನೋಡಿಮಿಂತಿದಕ್ಕೆ ಸಾಕ್ಷಿದಲೀ ತ್ರಿಪುರಾಂತಕೇಶ್ವರಂ ೩೭

ಎರಡು ಪಟ್ಟು ಮೂರು ಪಟ್ಟು ವರಗಳನ್ನು ಒಮ್ಮೆಲೇ ಕೊಡುತ್ತೇನೆ ಹಿಡಿ ; ಕುರಿಯನ್ನು ಇಲ್ಲಿ ಬಿಡು ಎಂದು ಊರಿಗಿಂತ ಮುಂಚೆಯೇ ಹೇಳಿದೆನು. ಆ ದುಷ್ಟತನದಿಂದ ಕೂಡಿದ ಕಲ್ಮಷಾತ್ಮನು ನನ್ನನ್ನೇ ಅಣಕಿಸುತ್ತ ಹೀಗೆ ಹೇಳಿದನು:' ೩೬. ಈ ಕಿನ್ನರಯ್ಯನು ಉತ್ತಮವಾದ ಗುಣ ಸಮೂಹದಿಂದ ಕೂಡಿದ ಪುರುಷರಲ್ಲೆಲ್ಲ ಉತ್ಕೃಷ್ಟನಾದವನು, ಮತ್ತು ಪ್ರಾಣಿಗಳಲ್ಲಿ ದಯಾಪರನು. ಸಾವಿರ ಹೊನ್ನುಗಳನ್ನಾದರೂ ಕೊಟ್ಟು ಕುರಿಯನ್ನು ಬಿಡಿಸಿಕೊಳ್ಳದೆ ಇರನು.' ವ॥ ಎಂದು ಅವನು ಪರಿಹಾಸ ಮಾಡಿ ನುಡಿಯಲು ಆ ಕ್ಷಣವೇ ಸಾವಿರ ಹೊನ್ನು ತರಿಸಿ ಎಣಿಸಿಕೊಟ್ಟು, 'ನೀನು ಪುನಃ ಇದಕ್ಕೆ ಆಸೆಪಟ್ಟರೆ, ನಾನು ಏನೆಂದರೂ ಬಿಡುವವನಲ್ಲ. ಈ ಕುರಿಗೆ ಲಿಂಗ ಮುದ್ರೆಯನ್ನು ಒತ್ತಿ ಬಿಡುವೆ'ನೆಂದು ಹೇಳಲು, ಆ ದುಷ್ಟನು ಒಡಂಬಟ್ಟು ಹೋಗಿ ಸ್ವಲ್ಪ ಕಾಲಾನಂತರ ಪುನಃ ಇಲ್ಲಿಗೆ ಬಂದು ಆಸೆಪಟ್ಟು ಕುರಿಯನ್ನು ಕೊರಳಿಗೆ ಹಗ್ಗ ಕಟ್ಟಿ ಹಿಡಿದು ಎಳೆಯುವುದನ್ನು ಕಂಡು ೩೭. 'ಎಲೆಲೆ ದುಷ್ಟ, ನೀನು ಕುರಿಯನ್ನು ಬಿಡು ಬಿಡು. ಈ ಮೊದಲು ಕ್ರಯವನ್ನು ತೆಗದುಕೊಂಡು, (ಇದನ್ನು) ಕೊಟ್ಟು, ಪುನಃ (ಇದಕ್ಕೇ) ಆಸೆಪಟ್ಟು ನೀನು ಹಿಡಿಯುವ ರೀತಿಯು ಯಾವುದೋ ? ತೊಲಗು, ಎಂದು ಹೇಳಲು, ಅವನು ನನ್ನ ಮೇಲೆಯೇ ಕತ್ತಿಯನ್ನು ಕಿತ್ತನು. ಆ ಬಳಿಕ ನಾನು ಅವನನ್ನು ಕಡಿದುಹಾಕಿದೆನು. ತಪ್ಪು ಯಾರದಾಯಿತು ?

1 ಳಿ(ಗ)

ವ॥ ಎಂಬುದುಮವರ್ಕೇಳ್ದು ವಿಸ್ಮಯಂಬಟ್ಟು ಸಭೆಯೊಳಿರ್ದ ಬಿಜ್ಜಳಂಗೇಳ್ತಂದೆಱಗಿ ವೇಷವೃತ್ತಾಂತಮಂ ತ್ರಿಪುರಾಂತಕನ ಸಾಕ್ಷಿಯುಮಂ ಸಚಿವರ್ಸವಿಸ್ತರಂ ಪೇಳೆ ಕೇಳ್ದು ಪರಿಹಾಸಂಗೆಯ್ದು—

ಪ್ರಕಟಿತ ಲಿಂಗಸಾಕ್ಷಿಯನುಮಂ ನುಡಿಯಿಪ್ಪುದು ಮನ್ಮನಕ್ಕೆ ಕೌ
ತುಕಮಿದನೆಯ್ದೆ ನೋೞ್ಪೆನನುತೆೞ್ದು ಸಭಾಸದರೆಯ್ದೆ ಪಿಂತೆ ಪಾ
ಠಕರೊಲವಿಂದಮುಗ್ಘಡಿಸೆ ಮುಂದೆ ತತಾನಕರಾವಮುಣ್ಮೆ ಬಂ
ದಕುಟಿಲ ಭಕ್ತನಿರ್ದ ಶಿವಮಂದಿರಮಂ ಪುಗುತಂದನುರ್ವಿಪಂ ೩೮

ವ॥ ಆಗಳಾ ಬಸವರಾಜಂ ಕಿನ್ನರೇಂದ್ರನಿರ್ದೆಡೆಗೇಳ್ತಂದೆಱಗಿ ಕರಾರವಿಂದಮಂ ಮುಗಿದು ನಿಂದು—

ಸಾರವಿಚಾರಧೀರ ಶಿವತತ್ವಸುಧಾರಸರಾಜಹಂಸ ವಿ
ಸ್ತಾರಯಶೋಂಕ ಯೋಗಿಜನವಲ್ಲಭ ಭಕ್ತಿಲತಾಂತಗಂಧಗಂ
ಭೀರ ಗುಣಾಭಿರಾಮ ಮಹನೀಯ ಕೃಪಾಕರ ಸುಪ್ರತಾಪ ತೇ
ಜೋರಮಣೀಯ ದೇವ ಜಯ ಕಿನ್ನರಬೊಮ್ಮ ನಿಸರ್ಗವೈಭವಾ ೩೯

ನ್ಯಾಯವಾಗಿ ನೋಡಿರಿ. ಇಂತು ಈ ಮಾತಿಗೆ ಈ ತ್ರಿಪುರಾಂತಕೇಶ್ವರನೇ ಸಾಕ್ಷಿ.' ವ॥ ಹೀಗೆಂದು ಹೇಳಲು ಆ ಮಂತ್ರಿಗಳು ಕೇಳಿ, ಆಶ್ಚರ್ಯಗೊಂಡು, ಅಲ್ಲಿಂದ ಹೊರಟು ಬಂದು, ಸಭೆಯಲ್ಲಿದ್ದ ಬಿಜ್ಜಳನಿಗೆ ನಮಸ್ಕರಿಸಿ ಆ ಕುರಿಯ ವೃತ್ತಾಂತವನ್ನೂ, ತ್ರಿಪುರಾಂತಕನ ಸಾಕ್ಷಿಯನ್ನೂ, ಆ ಮಂತ್ರಿಗಳು, ಸವಿಸ್ತಾರವಾಗಿ ಹೇಳಲು ಕೇಳಿ ಹಾಸ್ಯ ಮಾಡಿ—೩೮. 'ಆ ಕಿನ್ನರಯ್ಯನು ಲಿಂಗಸಾಕ್ಷಿಯನ್ನು ಪ್ರಕಟಗೊಳಿಸಿ ಹೇಳಿಸುವುದು ನನ್ನ ಮನಸ್ಸಿಗೆ ಆಶ್ಚರ್ಯವನ್ನುಂಟುಮಾಡುವಂತಹದು. ಇದನ್ನು ಚೆನ್ನಾಗಿ (ಪರೀಕ್ಷಿಸಿ) ನೋಡುವೆನು'—ಎನ್ನುತ್ತ ಎದ್ದು ಅವನ ಹಿಂದೆ ಸಭೆಯಲ್ಲಿದ್ದವರು ಬರುತ್ತಿರಲು ಸ್ತುತಿಪಾಠಕರು ಮುಂಭಾಗದಲ್ಲಿ ಪ್ರೀತಿಯಿಂದ ಬಿರುದಾವಳಿಗಳನ್ನು ಘೋಷಿಸುತ್ತಿರಲಾಗಿ, ವಿಶೇಷವಾಗಿ ತಮ್ಮಟೆ ಮೊದಲಾದ ಚರ್ಮವಾದ್ಯಗಳ ಶಬ್ದವು ಹೊರಹೊಮ್ಮುತ್ತಿರಲು, ಅರಸನು ಬಂದು ಕೃತ್ರಿಮರಹಿತ ಭಕ್ತನಾದ ಕಿನ್ನರ ಬೊಮ್ಮಯ್ಯನಿದ್ದ ಶಿವಾಲಯವನ್ನು ಪ್ರವೇಶಿಸಿದನು. ವ॥ ಆಗ ಬಸವರಾಜನು ಕಿನ್ನರಯ್ಯನಿದ್ದ ಸ್ಥಳಕ್ಕೆ ಹೋಗಿ (ಅವನಿಗೆ) ನಮಸ್ಕಾರ ಮಾಡಿ, ಕರಕಮಲಗಳನ್ನು ಮುಗಿದು ನಿಂತುಕೊಂಡು—೩೯. 'ಶ್ರೇಷ್ಠವಾದ (ವೇದಾಂತ) ವಿಚಾರವುಳ್ಳ, ಧೈರ್ಯಶಾಲಿಯಾದ, ಶಿವತತ್ತ್ವವೆಂಬ ಹಾಲಿಗೆ ಹಂಸಪಕ್ಷಿಯಾದ, ಸುತ್ತಲೂ ಹಬ್ಬಿದ ಯಶಸ್ಸುಳ್ಳ, ಯೋಗಿಜನ ಸ್ವಾಮಿಯಾದ, ಭಕ್ತಿಯೆಂಬ ಪುಷ್ಪದ ಸುಗಂಧರೂಪನಾದ, ಗಂಭೀರ ಗುಣಗಳಿಂದ ಶೋಭಿಸುವ, ಮಹಾತ್ಮನಾದ, ದಯೆಗೆ ಆಶ್ರಯನಾದ, ಶ್ರೇಷ್ಠವಾದ ಪ್ರತಾಪದ ತೇಜಸ್ಸಿನಿಂದ ಮನೋಹರನಾಗಿರುವ, ಸ್ವಭಾವಸಿದ್ಧವಾದ ವೈಭವವನ್ನು ಹೊಂದಿದ—ಕಿನ್ನರ ಬೊಮ್ಮ

ಚರಚರಣಾರ್ಚನಾಂಚಿತ ಚರಾಚರರಕ್ಷಣಶೀಲ ಸತ್ಯಸಂ
ಗರ ಘನಸತ್ಕಳಾನಿಧಿ ದಯಾರಸಸಾಗರ ದಾನಶೀಲ ಶಂ
ಕರಶರಣಾಳಿಸಂಗತಕಥಾಕಲನಾದರ ಸಾರಚಿದ್ಘನ
ಸ್ಥಿರತರಚಿತ್ತ ಧೀರ ಜಯ ಕಿನ್ನರನಾಯಕ ಶಾಂತಿದಾಯಕಾ ೪೦

ವ॥ ಎಂದು ಕೂರ್ಪಿನಿಯಿಂ ಕೊಂಡಾಡಿ ಪಾಡಿ ತತ್ಪ್ರಸನ್ನತೆವಡೆದು ಬಸವರಸನಿರ್ಪುದು ಮಾಗಳಾ ಕಿನ್ನರವಿಭು ಮಂದಸ್ಮಿತಮುಖಾಂಬುಜಂ ಸಮಸ್ತಭಕ್ತಜನಂ ಸಂಭ್ರಮಿಸೆ ನೆರೆದ ಜನಂ ನೋಡುತ್ತುಮಿರೆ ತಮ್ಮಡಿ ಬೀಯಗವನಿಕ್ಕಿ ಕೆತ್ತ ಪುರಾಂತಕ ನಿಶಾಂತ ಕವಾಟ ಪುಟಮನೋರೆ ನೋಟದಿಂ ನಸುನೋಡಲೊಡನೆ—

ಪುರವೈರಿ ಪೆಳರ್ದು ನಿಜಮಂ
ದಿರದ ಕವಾಟದೊಳೆ ತಳ್ತ ಬೀಯಗಮನದಂ
ಪರಿಹರಿಸಿ ತೆಗೆದು ಘಳಿಲನೆ
ಸರಭಸಮಾ ಜವಳಿವಡಿಯನೇಂ ಬಿರ್ಚಿದನೊ ೪೧

[1]ದಾಸಯ್ಯಂಗಂದುಮೇಶಂ ಪಡಿದೆಱೆದನೆನಿಪ್ಪುಕ್ತಿಯಂ ಕೇಳ್ವೆವೀಗ
ಳ್ಸಾಸಂಬೆತ್ತೊಪ್ಪುವೀ ಕಿನ್ನರವಿಭುಗೆ ಪುರಾರಾತಿ ಸಂಪ್ರೀತಿಯಿಂ ಪ್ರೋ

ದೇವನೇ, ಜಯ!' ೪೦. ಜಂಗಮ ಪಾದಪೂಜೆಯನ್ನು ಮಾಡುವುದರಿಂದ ಪೂಜ್ಯನೆನಿಸಿದ, ಸ್ಥಾವರ ಜಂಗಮಾತ್ಮಕಗಳನ್ನು ಸಂರಕ್ಷಿಸುವ ಸ್ವಭಾವವುಳ್ಳ, ದೃಢವಾದ ಪ್ರತಿಜ್ಞೆಯನ್ನುಳ್ಳ, ಶ್ರೇಷ್ಠವಾದ ಸತ್ಕಲೆಗಳಿಗೆ ನಿಧಿಯೆನಿಸಿದ, ದಯಾಸಾಗರನೆನಿಸಿದ, ವಿತರಣ ಗುಣವೇ ಶೀಲವಾಗುಳ್ಳ, ಶಿವಶರಣ ಸಮೂಹದ ಕಥೆಯನ್ನು ಕೇಳುವುದರಲ್ಲಿ ಆಸಕ್ತನಾದ, ಶ್ರೇಷ್ಠವಾದ ಸಾಂದ್ರಜ್ಞಾನದಿಂದ ಚಂಚಲರಹಿತವಾದ ಮನಸ್ಸುಳ್ಳ, ಧೀರನೇ, ಶಾಂತಿದಾಯಕನೇ, ಕಿನ್ನರ ನಾಯಕನೇ ಜಯ. ವ॥ ಹೀಗೆಂದು ಪ್ರೀತಿಯಿಂದ ಕೊಂಡಾಡಿ, ಹಾಡಿ, ಆತನ ಕೃಪೆಯನ್ನು ಪಡೆದು, ಇರಲಾಗಿ, ಆಗ ಆ ಕಿನ್ನರ ವಿಭುವು ಮುಗುಳು ನಗೆಯಿಂದ ಕೂಡಿದ ಮುಖಕಮಲವುಳ್ಳವನಾಗಿ, ಸಮಸ್ತ ಭಕ್ತ ಜನಗಳು ಸಂಭ್ರಮದಿಂದ ಕೂಡಲು, ನೆರೆದ ಜನರೆಲ್ಲ ನೋಡುತ್ತಿದ್ದಂತೆ, ಪೂಜಾರಿಯು ಬೀಗವನ್ನು ಹಾಕಿ ಮುಚ್ಚಿದ್ದ (ಕೆತ್ತ), ತ್ರಿಪುರಾಂತಕೇಶ್ವರ ದೇವಸ್ಥಾನದ ಕದಗಳೆರಡನ್ನೂ ಓರೆನೋಟದಿಂದ ಸ್ವಲ್ಪ ನೋಡಲಾಗಿ ಆ ಕೂಡಲೆ—೪೧. ಪುರವೈರಿಯಾದ ಈಶ್ವರನು ಭಯಗೊಂಡವನಾಗಿ, ತನ್ನ ಮನೆಯ ಬಾಗಿಲಿಗೆ ಹಾಕಿದ ಆ ಬೀಗವನ್ನೂ ನಾಶಪಡಿಸಿ ತೆಗೆದು ಗಳಿಲ್ ಎನ್ನುವಂತೆ ಆ ಎರಡೂ ಕದಗಳ ಪಡಕುಗಳನ್ನು ಅದೇನು ತೆಗೆದನೋ! ೪೨-೪೩-೪೪. ಹಿಂದೆ ಉಮಾಪತಿಯಾದ ಶಿವನು ದಾಸಿಮಯ್ಯನಿಗೆ ಕದವನ್ನು ತೆರೆದನು, ಎಂಬ ಮಾತನ್ನು ಕೇಳಿಬಲ್ಲೆವು. ಈಗ ಸಾಹಸವನ್ನು ಹೊಂದಿ, ಒಪ್ಪುವ ಕಿನ್ನರಯ್ಯ

1 + ವ॥ ಅಗಳ್(ದ)

ಲ್ಲಾಸಂ ಕೆಯ್ಗಣ್ಮೆ ತಾನೇ ಪಡಿದೆಱೆದನಿದಾಶ್ಚರ್ಯಮೀ ಲಿಂಗಮುಂ ಸ
ತ್ಯಾಸನ್ನಂ ಸಾಕ್ಷಿಯುಂ ದಲ್ನುಡಿಯಿಸದಿರನೆಂದುರ್ವಿ ಕೊಂಡಾಡೆ ಭಕ್ತರ್ ೪೨

ಮೃಡನ ಸಮೀಪದೊಳ್ನೆಲಸಿ ತನ್ನ ಕರಾಗ್ರಕರಾಳ ಖಡ್ಗಮಂ
ಜಡಿದು ಕಡಂಗಿ ನಿಂದು ಹರಭಕ್ತರ ಪಾದಸರೋಜರಾಜಿಯಂ
ಬಿಡದೊಲವಿಂದೆ ಜಾನಿಸುತಭೀಕ್ಷಿಸಿ ಲಿಂಗಮನಲ್ಲಿ ಭಕ್ತರು
ಗ್ಘಡಿಸುತುಘೇರವಗುಡೆ ಸಮಕ್ಷದೊಳೀಕ್ಷಿಸೆ ಭೂಭುಜಾದಿಗಳ್ ೪೩

ಪರಮೇಶಾನ ಪುರಾರಿ ಸೌಂದರಗಣೇಶಂಗಂದು ಕಾಂತಪಯೋ
ಧರದೊಳ್ ನೀನುಲಿದಂತಿಱುಂಪೆಯೊಳೆ ವಾದಂಗೆಯ್ದ ದಾಸಂಗೆ ಶಂ
ಕರ ಮಾತಾಡಿದ ಮಾಳ್ಕೆಯಿಂ ನೆಗಳ್ದ ಬೊಮ್ಮಯ್ಯಂಗೆ ಜೋಳಂಗಳು
ತ್ಕರದೊಳ್ನಿಂದುಸುರ್ದ[1]ಂತೆ ದೇವ ನುಡಿ ನೀಂ ಸತ್ಯಾರ್ಥಮಂ ಸಾದರಂ ೪೪

ವ॥ ಎಂದು ವಿಜೃಂಭಿಸಿ—

ಅತಿನಿಷ್ಠೆ ನಿಮಿರೆ ಶೌರ್ಯೋ
ನ್ನತಿಯಿಂ ಹರ ಹರ ಪುರಾಂತಕಾ ಎನೆ ಭಕ್ತಂ
ವಿತತಮಹಾಧ್ವನಿ[2]ಯೊಂದ[2]
ದ್ಭುತಮೊಗೆಯೆ ಪುರಾರಿ ತಳ್ವದೋಯೆನುತಿರ್ದಂ ೪೫

ವಿಭುವಿಗೆ ಈಶ್ವರನು ಸಂತೋಷದಿಂದ, ಅಧಿಕೋತ್ಸಾಹಗೊಂಡು ತಾನೇ ಕದಗಳೆರಡನ್ನೂ ತೆರೆದನು ಇದು ಆಶ್ಚರ್ಯ. ಸತ್ಯಶುದ್ಧನಾದ ಕಿನ್ನರಯ್ಯನು ಆಲಿಂಗದೇವನನ್ನು ಸಾಕ್ಷಿಯಾಗಿ ನಿಶ್ಚಯವಾಗಿ ನುಡಿಸದೆ ಬಿಡನು, ಎಂದು ಭಕ್ತಜನರು ಉತ್ಸಾಹಗೊಂಡು ಕೊಂಡಾಡುತ್ತಿರಲು, ಮೃಡನ ಸಮೀಪದಲ್ಲಿಯೇ ಹೋಗಿ ನಿಂತು, ತನ್ನ ಕೈಯಲ್ಲಿರುವ ಭಯಂಕರ ಖಡ್ಗವನ್ನು ಅಲ್ಲಾಡಿಸುತ್ತ ಉತ್ಸಾಹಗೊಂಡು ನಿಂತು ಶಿವಭಕ್ತರ ಪಾದಕಮಲ ಸಮೂಹವನ್ನು ತಪ್ಪದೆ ಧ್ಯಾನಮಾಡುತ್ತ, ಲಿಂಗವನ್ನು ನೋಡಿ, ಅಲ್ಲಿ ಆಗ ಭಕ್ತರು ಉಘೇ! ಉಘೇ! ಎಂದು ಉಗ್ಘಡಿಸುವ ಶಬ್ದ ಮಾಡುತ್ತಿರಲು, ರಾಜರೇ ಮೊದಲಾದವರು ಪ್ರತ್ಯಕ್ಷವಾಗಿ ನೋಡುತ್ತಿದ್ದ ಹಾಗೆಯೇ—'ಶ್ರೇಷ್ಠ ಈಶಾನ ಮೂರ್ತಿಯೇ, ಪುರಾರಿಯೇ, ಹಿಂದೆ ಸೌಂದರ ನಂಬಿಯಣ್ಣನೆಂಬ ಗಣೇಶ್ವರನಿಗೆ ಅವನ ಪತ್ನಿಯ ಮೊಲೆಯಿಂದಲೇ ನೀನು ಕೂಗಿದ ಹಾಗೆ, ಹೇ ಶಂಕರ, ಇರುವೆಯೊಡನೆ ವಿವಾದವನ್ನು ಮಾಡಿದ ದಾಸಯ್ಯನಿಗೆ ರೀತಿಯಿಂದ, ಪ್ರಸಿದ್ಧನಾದ ಬೊಮ್ಮಯ್ಯನಿಗೆ ಜೋಳದ ರಾಶಿಯಲ್ಲಿ ನಿಂತು ಮಾತನಾಡಿದ ಹಾಗೆ, ಹೇ ದೇವನೇ, ನೀನು ಆದರ ಪೂರ್ವಕವಾಗಿ ಯಥಾರ್ಥವನ್ನು (ಈಗ) ಮಾತನಾಡು.' ವ॥ ಎಂದು ವಿಜೃಂಭಿಸಿ—೪೫. ಭಕ್ತನಾದ ಕಿನ್ನರಯ್ಯನು ಹೆಚ್ಚಾದ ಶ್ರದ್ಧೆಯಿಂದ ಕೂಡಿದವನಾಗಿ ಉನ್ನತಿವೆತ್ತ ಶೌರ್ಯದಿಂದ, ಹರಹರ ! ಪುರಾಂತಕ ! ಎನ್ನಲಾಗಿ, ಪುರಾರಿಯು ತಡಮಾಡದೆ ಒಂದು ವಿಸ್ತಾರವಾದ

1 ರ್ದ(ಚ) 2 ಯತ್ಯ(ಜ)

ವ॥ ಆ ನಿರಂತರ ಮಹಾಧ್ವನಿ ದಶದಿಗಂತಮನಳುರ್ದು ಮುಕ್ಕುಳಿಸಿ ಮುಸುಂಕಲೊಡನೆ—

ಕಡಲೇಳುಂ ಕದಡೆಳ್ದು ತುಳ್ಕಿದುದಹೀಂದ್ರಂ ಬಳ್ಕಿದಂ ಕೂರ್ಮನು
ರ್ಕುಡುಗಿರ್ದಂ ಕುಲಭೂಧರಂ ಕೆಡೆದುದಾಶಾದಂತಿ ಬಾಯ್ಬಿಟ್ಟುದಂ
ದುಡುಜಾಲಂ ಬಿಡದುಳ್ಕಿದತ್ತು ಧರೆಯುಲ್ಲಾಡಿತ್ತು ನಂದಿರ್ದುದಾ
ಬಡಬಂ ನಿಂದುದು ವಾಯುವಸ್ತಮಿಸಿತರ್ಕಂ ದಿಗ್ವರರ್ಬೆರ್ಚಿದರ್ ೪೬

ಭ್ರಮೆಯಿಂದಂ ಬೆಗಡೊಂದಿ ಬಲ್ಪುಡುಗಿ ಬೇಗಂ ಹಮ್ಮದಂಬೋದುದೆ
ಯ್ದೆ ಮದೇಭಾಶ್ವನರಾದಿ ಜೀವನಿವಹಂ ಲೋಕವ್ರಜಂ ಬೆರ್ಚಿದ
ತ್ತಮರಶ್ರೇಣಿ ಬಿಗುರ್ತುದಂದುಳಿದರುದ್ಯಲ್ಲಿಂಗಸಂಯುಕ್ತರಾ
ಪ್ರಮಥರ್ಸಮ್ಮದಮಾಂತರೆಮ್ಮ ದಿನಮಾದತ್ತೆಂದು ಲೀಲೋತ್ಸುಕರ್ ೪೭

ಕುಣಿವ ಕುಕಿಲ್ವ ಕೂಗಿಡುವ ರಾಗಿಪ ರಂಜಿಪ ಜೋಲ್ವ ತೇಲ್ವ ಸಂ
ದಣಿಪ ಕಡಂಗುವಚ್ಚರಿಯೊಳಾಡುವ ಪಾಡುವ ಸುತ್ತಿ ಬರ್ಪ ಮೋಣ್
ಮಣಿವ ಮರಲ್ವ ಕೀರ್ತಿಸುವ ಪೊಂಪುಳಿವೋಪ ವಿನೋದ ಕೇಳಿಯೊ
ಳ್ತಣಿಯದ ಭಕ್ತವೃಂದಮೆಸೆದಿರ್ದುದು ಕಿನ್ನರನಗ್ರದೇಶದೊಳ್ ೪೮

ಇರುಳುಂ ಪಗಲುಂ ಪುರರಿಪು
ಮೊರೆವುತ್ತಿರೆ ಸಪ್ತ ದಿವಸ ಪರ್ಯಂತಂ ತ

ಮಹಾಧ್ವನಿಯು ಆಶ್ಚರ್ಯವುಂಟಾಗುವಂತೆ ಹೊರಹೊಮ್ಮಲು ಓ ! ಎನ್ನುತ್ತಿದ್ದನು. ವ॥ ಆ ವಿಚ್ಛಿತ್ತಿಯಿಲ್ಲದ ಕೂಗು ಹತ್ತು ದಿಕ್ಕುಗಳ ಕೊನೆಯವರೆಗೂ ಹರಡಿ, ತುಂಬಿಕೊಂಡು, ಆಚ್ಛಾದಿಸಲಾಗಿ ಆ ಕೂಡಲೇ—೪೬-೪೭. ಸಪ್ತಸಾಗರಗಳು ಕದಡಿ ತುಳುಕಾಡಿದವು ; ಆದಿಶೇಷನು ಬಗ್ಗಿದನು ; ಆದಿಕೂರ್ಮನು ಗರ್ವಗುಂದಿದನು ; ಸಪ್ತ ಕುಲಾಚಲ ಪರ್ವತಗಳು ಮುರಿದುಬಿದ್ದವು ; ದಿಗ್ಗಜಗಳು ಚೀರಿಕೊಂಡವು ; ನಕ್ಷತ್ರಗಳ ಸಮೂಹವು ತಪ್ಪದೆ ಕಳಚಿಬಿದ್ದವು ; ಭೂಮಿಯು ಅಲ್ಲಾಡಿತು ; ಸಮುದ್ರ ಮಧ್ಯದ ಬಡಬಾಗ್ನಿಯು, ನಂದಿ ಶಾಂತಗೊಂಡಿತು ; ಗಾಳಿಯು ಚಲಿಸದೆ ನಿಂತಿತು. ಸೂರ್ಯನು ಮುಳುಗಿದನು ; ಅಷ್ಟ ದಿಕ್ಪಾಲಕರು ಮೆಟ್ಟಿಬಿದ್ದರು ; ಮದೋನ್ಮತ್ತ ಆನೆ, ಕುದುರೆ, ನರರೇ ಮೊದಲಾದ ಜೀವಿಗಳ ಸಮೂಹವು ಭ್ರಾಂತಿಯಿಂದ ಭಯಪಟ್ಟು, ಶಕ್ತಿಗುಂದಿ, ಬೇಗನೆ ಗರ್ವಹೀನವಾದವು ; ಸಮಸ್ತಲೋಕಗಳ ಸಮೂಹವು ಬೆಚ್ಚಿಬಿದ್ದವು ; ದೇವತೆಗಳ ಗುಂಪು ಭಯಗೊಂಡಿತು ; ಆಗ ಶ್ರೇಷ್ಠರಾದ ಲಿಂಗ ಸಂಗತರಾದ ಪ್ರಮಥರುಗಳು ಇಂದು ನಮ್ಮ ಉತ್ಕರ್ಷದ ದಿನವಾಯಿತೆಂದು ಲೀಲೆಯಿಂದ ಕೂಡಿ ಉತ್ಸಾಹಭರಿತರಾದರು ; ಸಂತೋಷಗೊಂಡರು. ೪೮. ಕುಣಿದಾಡುವ, ಕೇಕೆ ಹಾಕುವ, (ಸಂತೋಷದಿಂದ) ಕೂಗಾಡುವ, ಪ್ರೀತಿಗೊಳ್ಳುವ, ಆಹ್ಲಾದಗೊಳ್ಳುವ, ಜೊಲಾಡುವ, (ಆನಂದದಿಂದ) ತೇಲಾಡುವ, ಗುಂಪುಗುಂಪಾಗಿ ಕೂಡುವ, ಉತ್ಸಾಹಗೊಳ್ಳುವ, ಆಶ್ಚರ್ಯದಿಂದ

ದ್ಧರಣಿಪಮುಖ್ಯಮೂರ್ಛೆಯೊ
ಳಿರೆ ಜಗದುದ್ಧರಣಶೀಲನೀಕ್ಷಿಸಿ ಬಸವಂ ೪೯

ಕರುಣಾನಿಧಿ ಕಿನ್ನರಪದ
ಸರಸಿರುಹಕ್ಕೆರಗಿ ಮುಗುಳ್ದು ಕೆಯ್ಮುಗಿಯುತೆ ಸಾ
ದರಮುಚಿತವಚನರಚನೋ
ತ್ಕರಮುಮರ್ದಿರೆ ಭಕ್ತಿವೆತ್ತು ಕೀರ್ತಿಸುತಿರ್ದಂ ೫೦

ಮಂಗಳಲಿಂಗಸಂಗತನಿಜಾಂಗ ಜಿತಾಂಗಜ ತುಂಗ ದುಷ್ಟಮಾ
ತಂಗಮತಂಗಜಾಹಿತ ಪತಂಗಜಭಂಗ ಚಿದಂಗ ಜಂಗಮೋ
ತ್ತುಂಗ ಭುಜಂಗರಾಜಧರ ಭಕ್ತಹೃದಂಬುಜಭೃಂಗ ಸದ್ದಯಾ
ಪಾಂಗ ಶಿವಾಂತರಂಗ ಗಣಪುಂಗವ ಸಾಂಗಸಮರ್ಚನಪ್ರಿಯಾ ೫೧

ಶ್ರೀಕರ ಮಹಿಮಾಕರ ಪರ
ಭೀಕರ ನತವನಜವನದಿವಾಕರ ಗುಣರ
ತ್ನಾಕರ ಬುಧಾಂಬುರಾಶಿಸು
ಧಾಕರ ದರ್ವೀಕರೇಂದ್ರಧರ ಹಿತಚರಿತಾ ೫೨

ಆಡುವ, ಹಾಡುವ, ಪ್ರದಕ್ಷಿಣೆ ಮಾಡುವ (ಅಥವಾ ತಮ್ಮ ಮೈಸುತ್ತನ್ನು ತಾವೇ ಸುತ್ತುವ) ಮತ್ತು ನಮಸ್ಕಾರಮಾಡುವ, ಹಿಂದಿರುಗುವ, ಕೀರ್ತನೆಗೆಯ್ಯುವ, ರೋಮಾಂಚನಗೊಳ್ಳುವ–ಸಂತೋಷದ ಆಟದಲ್ಲಿ ತೃಪ್ತಿ ಹೊಂದದಿರುವ ಭಕ್ತರುಗಳ ಸಮೂಹವು ಕಿನ್ನರಯ್ಯನ ಮುಂಭಾಗದಲ್ಲಿ ಶೋಭಿಸುತ್ತಿತ್ತು. ೪೯-೫೦. ಈಶ್ವರನು ಏಳು ದಿನಗಳ ವರೆಗೆ ಹಗಲೂ ರಾತ್ರಿಯೂ, ಕೂಗುತ್ತಲೇ ಇರಲು, ಆ ರಾಜನೇ ಮೊದಲಾದವರು ಮೂರ್ಛೆ ಹೊಂದಿದವರಾಗಿರಲು, ಜಗತ್ತನ್ನು ಕಾಪಾಡುವುದೇ ಶೀಲವಾಗಿ ಉಳ್ಳ ಬಸವಣ್ಣನು ನಿರೀಕ್ಷಣೆ ಮಾಡಿ–ಕರುಣಾ ಸಮುದ್ರನಾದ ಕಿನ್ನರಿ ಬೊಮ್ಮಯ್ಯನ ಪಾದ ಕಮಲಗಳಿಗೆರಗಿ, ಪುನಃ ಕೈಮುಗಿದು ಆದರ ಪೂರ್ವಕವಾಗಿ ತತ್ಕಾಲೋಚಿತವಾದ ಮಾತುಗಳ ಜೋಡಣೆಯ ಸಮೂಹವು ಸೇರಿದಂತೆ ಭಕ್ತಿಯನ್ನು ಹೊಂದಿ ಕೀರ್ತಿಸುತ್ತ ಇದ್ದನು. ೫೧-೫೨. ಮಂಗಳಕರವಾದ ಲಿಂಗದಿಂದ ಸಂಗತವಾದ ದೇಹವುಳ್ಳವನೇ, ಮನ್ಮಥನನ್ನು ಜಯಿಸಿದವನೇ, ದುಷ್ಟರಾದ ಆನೆಗಳಿಗೆ ಸಿಂಹಸ್ವರೂಪನಾದವನೇ, ಜ್ಞಾನ ಕ್ರಿಯೆಗಳಿಂದ ಕೂಡಿದ ಅಂಗವುಳ್ಳವನೇ, ಜಂಗಮ ಶ್ರೇಷ್ಠನೇ, ಆದಿಶೇಷನನ್ನು ಧರಿಸಿರುವ ಶಿವನ ಭಕ್ತರ ಹೃದಯವೆಂಬ ಕಮಲಕ್ಕೆ ಭೃಂಗನೆನಿಸಿದವನೇ, ಒಳ್ಳೆಯ ಕೃಪೆಯಿಂದ ತುಂಬಿದ ಕಡೆಗಣ್ಣಿನ ನೋಟವುಳ್ಳವನೇ, ಅಂತರಂಗದಲ್ಲಿ ಈಶ್ವರನನ್ನುಳ್ಳವನೇ, (ಅಥವಾ ಮಂಗಳಕರವಾದ ಅಂತರಂಗವುಳ್ಳವನೇ) ಶಿವಗಣ ಶ್ರೇಷ್ಠರನ್ನು ಯಥಾಸಾಂಗವಾಗಿ ಸಮರ್ಚನೆ ಮಾಡುವುದರಲ್ಲಿ ಪ್ರೀತಿಯುಳ್ಳವನೇ, ಸಂಪತ್ತನ್ನುಂಟು ಮಾಡುವವನೇ, ಮಹತ್ವಗಳಿಗೆ ಆಶ್ರಯನಾದವನೇ, ಪರಸಮಯಕ್ಕೆ ಭಯಂಕರ

ವ॥ ಎಂದು ಸನ್ನುತಿಗೆಯ್ದು—

ಕಿನ್ನರಪತಿಸಖ ಸನ್ನಿಭ
ಕಿನ್ನರಪತಿ ನಿಮ್ಮ ಮಹಿಮೆಯಂ ತಿಳಿಯದೆ ಸೊ
ರ್ಕಿನ್ನರಪತಿ ಮುಖರಳಿದ
ರ್ಕಿನ್ನರ ಪತಿಕರಿಸುತವರ ಪೊರೆ ಗುಣನಿಳಯಾ ೫೩

ವ॥ ಎಂದು ವೃಷೇಂದ್ರಂ ಬಿನ್ನವಿಸೆ ಕೇಳ್ದು ತತ್ಕರಾಗ್ರದೊಳ್ಕರಾರ್ಪಣಂಗೆಯ್ದು—

ನಗುತೆ ಪುರಾಂತಕನಿದಿರೊಳ್
ಮಿಗೆ ನಿಂದು ಪುರಾರಿ ಸಾಲ್ಗುವೋಹೋಯೆನುತುಂ
ನೆಗಪಿ ಕರಮಂ ನಿವಾರಿಸಿ
ಸುಗುಣಾಂಕಂ ಶಂಭು ಭೀಮರವಮುಳಿದೆಸೆದಂ ೫೪

ವ॥ ಆಗಳ್—

ಮೊದಲಂತೆ ಲೋಕಮೆಲ್ಲಂ
ಪದುಳಂ ಮಿಗೆ ಬಾಳ್ದುದವನಿಪಾಲಾದಿಗಳೊಂ
ದಿದ ಮೂರ್ಛೆ ತಿಳಿಯೆ ಬಿಡದೆ
ಳ್ದುದಿತೋತ್ಸವ ಕಿನ್ನರೇಂದ್ರನಡಿಗೆಜಿಗಿರ್ದರ್ ೫೫

ನಾದವನೇ, ತನ್ನನ್ನು ನಮಸ್ಕರಿಸಿದವರೆಂಬ ಕಮಲವನಕ್ಕೆ ಸೂರ್ಯನಂತಿರುವವನೇ, ಸದ್ಗುಣಗಳಿಗೆ ಸಮುದ್ರದೋಪಾದಿಯಲ್ಲಿರುವವನೇ, ವಿದ್ವಾಂಸರೆಂಬ ಸಮುದ್ರಕ್ಕೆ ಚಂದ್ರನಂತಿರುವವನೇ, ಸೌಟಿನೋಪಾದಿಯಲ್ಲಿ ಹೆಡೆಯುಳ್ಳ ಸರ್ಪಗಳ ಒಡೆಯನಾದ ಆದಿಶೇಷಾಭರಣನಾದ ಶಿವನಿಗೆ ಇಷ್ಟವಾದ ಚರಿತ್ರೆಯುಳ್ಳವನೇ, ಶಿವ ಸದೃಶನಾದ ಕಿನ್ನರ ಬೊಮ್ಮಯ್ಯ ಸ್ವಾಮಿಯೇ, ದೊರೆಯೇ ಮೊದಲಾದವರು ಸೊಕ್ಕಿನಿಂದ ನಿಮ್ಮ ಮಹಿಮೆಯನ್ನು ತಿಳಿಯದೆ, ನಾಶವಾದರು. ಗುಣನಿಲಯನಾದ ಕಿನ್ನರಯ್ಯ, ಮನ್ನಿಸಿ ರಕ್ಷಿಸು. ವ॥ ಹೀಗೆಂದು ಬಸವೇಶ್ವರನು ವಿಜ್ಞಾಪಿಸಿಕೊಳ್ಳಲು, (ಕಿನ್ನರಬೊಮ್ಮಯ್ಯನು) ಕೇಳಿ, ಆ ಬಸವೇಶ್ವರನ ಕಯ್ಯಮೇಲೆ ತನ್ನ ಕಯ್ಯನ್ನಿಟ್ಟು. ೫೪. ನಗುತ್ತ ಪುರಾಂತಕನ ಎದುರಿನಲ್ಲಿ ನಿಂತು ಪುರಾರಿ, ಓಹೋ ! ಸಾಕು, ಎನ್ನುತ್ತ ಕರವನ್ನು ಮೇಲಕ್ಕೆತ್ತಿ ತಡೆಯಲು ಸುಗುಣಗಳೇ ಚಿಹ್ನೆಯಾಗುಳ್ಳ ಶಿವನು ಭಯಂಕರವಾದ ಕೂಗನ್ನು ಬಿಟ್ಟು ಶೋಭಿಸಿದನು. ವ॥ ಆಗಳ್ ೫೫. ಮೊದಲಿನಂತೆ ಲೋಕದಲ್ಲಿ ಹೆಚ್ಚಾದ ಸುಖದಿಂದ ಬಾಳಿತು. ರಾಜರೇ ಮೊದಲಾದವರು ಹೊಂದಿದ್ದ ಮೂರ್ಛೆಯು ಕಳೆಯಲು (ಅವರು) ತಪ್ಪದೆ ಮೇಲಕ್ಕೆದ್ದು, ಉತ್ಸವದಿಂದ ತುಂಬಿ ಹೋಗಿದ್ದ ಕಿನ್ನರಿ ಬೊಮ್ಮಯ

ಮಂಗಳ ಸತ್ಯರೂಪ ಮಹಿಮಾರ್ಣವ ಮಾನನಿಧಾನ ಚಿಲ್ಲತಾ
ಲಿಂಗಿತಕಲ್ಪಭೂಜ ಕರುಣಾಕರ ಕಾಮವಿದೂರ ಲಿಂಗಸಂ
ಗಾಂಗ ದಿಗಂತಪೂರ್ಣಸಿತಕೀರ್ತಿವಿರಾಜಿತ ಕಿನ್ನರೇಂದ್ರ ದೀ
ನಂಗೆನಗಿತ್ತು ನೀನಭಯಮಂ ಕೃಪೆಯಿಂ ಪೊರೆ ಸದ್ಗುಣಾಕರಾ ೫೬

ಕಪಟಾಲಾಪನನಜ್ಞಭಾವಯುತನಂ ದುರ್ದಾಂತನಂ ಧೂರ್ತನಂ
ಚಪಲಸ್ವಾಂತನನಲ್ಪಚೇತನನನನ್ಯಾಯಾಧ್ವಸಂಚಾರನಂ
ಸುಪಥತ್ಯಾಗಿಯಸನ್ನಿತಾಪಜಯುಂ ನಿರ್ಲಜ್ಜನಂ ನೀಚನಂ
ಕೃಪೆಯಿಂದೆನ್ನನೊಱಲ್ದು ರಕ್ಷಿಸು ನಿತಾಂತಂ ಕಿನ್ನರಾಧೀಶ್ವರಾ ೫೭

ವ॥ ಎಂದಾಂ ನೆಗಲ್ದ ಶತಾಪರಾಧಮಂ ಸೈರಿಪುದೆಂದು ಬಿಜ್ಜಳಂ ಸಾಷ್ಟಾಂಗವೆಱಗಿ ಮಗುಳ್ದಿಂತೆಂದಂ—

ಮದನಮರ್ದನನಾಂತು ಮಸ್ತಕದಲ್ಲಿ ನಿನ್ನ ನಿಜಾಜ್ಞೆಯಂ
ಪದೆದು ನೀಂ ಕರೆದಾಗಳೋಯೆನುತಿರ್ದನಣ್ಮುತೆ ಹೋಯೆನು
ತ್ತೊದಱೆ ನಿಂದನದೆಂತೊ ನಿನ್ನಯ ಪೆರ್ಮೆ ಧಾತ್ರಿಯೊಳದ್ಭುತಂ
ವಿದಿತಮಿಂತಿದು ನಿನ್ನನಾ ಫಣಿರಾಜನಾರ್ಪನೆ ಬಣ್ಣಿಸಲ್ ೫೮

ಸ್ವಾಮಿಯ ಪಾದಗಳಿಗೆ ನಮಸ್ಕರಿಸಿ ಇದ್ದರು. ೫೬. ಮಂಗಳಕರವಾದ ಸರ್ವಸ್ವರೂಪನೇ, (ಯಥಾರ್ಥ ಸ್ವರೂಪವೇ), ಮಹಿಮೆಗಳಿಗೆ ಸಮುದ್ರ ಸ್ವರೂಪನೇ, ಮಾನಕ್ಕೆ ಆದಿಕಾರಣನಾದವನೇ, ಜ್ಞಾನವೆಂಬ ಬಳ್ಳಿಯಿಂದಾಲಿಂಗಿಸಲ್ಪಟ್ಟ ಕಲ್ಪವೃಕ್ಷ ಸ್ವರೂಪನೇ, ಕರುಣಾಕರ, ಕಾಮವಿದೂರ, ಲಿಂಗದಿಂದ ಸಂಗಗೊಂಡ ಅಂಗವುಳ್ಳವನೇ ದಿಕ್ಕುಗಳ ಕೊನೆಯವರೆಗೂ ಹಬ್ಬಿದ ಶುಭ್ರವಾದ ಕೀರ್ತಿಯಿಂದ ರಾರಾಜಿಸುವವನೇ, ಕಿನ್ನರೇಶನೇ, ಬಡವನಾದ ನನಗೆ ಕೃಪೆಯಿಂದ ಆ ಭಯವನ್ನು ಕೊಟ್ಟು ರಕ್ಷಿಸು' ೫೭. 'ಕಿನ್ನರೇಶ್ವರ, ಕೃತ್ರಿಮವಾದಮಾತುಳ್ಳ ಮೂಢತನದಿಂದ ಕೂಡಿದ, ದುಷ್ಟನಾದ, (ಕ್ರಮವಾಗಿ ಆಚಾರ್ಯರಿಂದ ಶಿಕ್ಷೆ ಹೊಂದದೆ ಇರುವ) ವಂಚಕನಾದ, ಚಂಚಲ ಮನಸ್ಸಿನ ಅಲ್ಪ ಚೇತನನಾದ, ಅಧರ್ಮ ಮಾರ್ಗದಲ್ಲಿ ಸಂಚರಿಸುವ, ಸನ್ಮಾರ್ಗವನ್ನು ತ್ಯಜಿಸಿದ, ಅಪಜಯದಿಂದ ಕೂಡಿದ, ನಾಚಿಕೆಯಿಲ್ಲದ, ನೀಚನಾದ ಎನ್ನನ್ನು ಕೃಪೆಯಿಂದ ಪ್ರೀತಿಸಿ ವಿಶೇಷವಾಗಿ ರಕ್ಷಿಸು.' ವ ॥ ಹೀಗೆಂದು ಬಿಜ್ಜಳನು ತಾನು ಮಾಡಿದ ಅನೇಕ ವಿಧವಾದ ತಪ್ಪುಗಳನ್ನು ಕ್ಷಮಿಸಬೇಕೆಂದು ಸಾಷ್ಟಾಂಗ ಪೂರ್ವಕವಾಗಿ ನಮಸ್ಕರಿಸಿ ಪುನ ಹೀಗೆ ಅಂದನು. ೫೮. ನಿನ್ನ ನಿಜಾಜ್ಞೆಯನ್ನು ಈಶ್ವರನು ಆನಂದದಿಂದ ತಲೆಯ ಮೇಲೆ ಹೊತ್ತು ನೀನು ಕರೆದಾಗಲೆಲ್ಲ ಓ ! ಎನ್ನುತ್ತ ಇದ್ದಾನೆ. ಪರಾಕ್ರಮದಿಂದ ಹೋ ! ಎನ್ನುತ್ತ ಕೂಗ ತೊಡಗಿದನು. ನಿನ್ನ ಹಿರಿಮೆಯು ಅತಿಶಯವಾದದ್ದು; ಅದು ಎಂತಹುದೋ ! ಧಾತ್ರಿಯಲ್ಲಿ ಇದೊಂದು ಅದ್ಭುತವೇ ಸರಿ ಎಂದು ತಿಳಿಯಲ್ಪಟ್ಟಿತು.

ಉಗ್ರಪ್ರತಾಪ ನಿನ್ನ ಸ
ಮಗ್ರಪ್ರೇರಣೆಯಿನಳಿದುದುಳಿದುದು ಜಗವಾ
ಯಗ್ರಣಿ ನೀನೆ ಜಗತ್ತ್ರಯ
ನಿಗ್ರಹ ಸಮನುಗ್ರಹ ಕ್ರಿಯಾಧೌರೇಯಂ ೫೯

ಪಶು ಮಱಿವುಗೆ ಕಾದ್ಯೆ ನರ
ಪಶುವಾಂ ಮಱಿವೊಕ್ಕೆನೊಲ್ದು ಪೊರೆದೆನ್ನಂ ನೀಂ
ಪಶುಪಾವತಾರನೆಂಬುದ
ನಶೇಷ ಭುವನದೊಳೆ ದೇವ ಮೆಱೆಯಲ್ವೇಳ್ಕುಂ ೬೦

ವಿರಹಿತಮನುಷ್ಯಧರ್ಮಂ
ಪರಿಗಳಿತಾಶಂ ಸದೇಕನಿಧಿಯೆನಿಸಿದ ಕಿ
ನ್ನರನಾಥ ಕೇಳ್ನಿನಗೆ ಶಂ
ಕರಮಿತ್ರತೆ ಪುಣ್ಯಜನನಿಷೇವ್ಯತೆ ಚಿತ್ರಂ ೬೧

ವ॥ ಎಂದು ಮಗುಳ್ದು ಮಗುಳ್ದೆಱಗಿ ಪೊಗಳ್ವ ನರೇಂದ್ರನಂ ಕೃಪಾಪಾಂಗದಿನಭೀಕ್ಷಿಸುತ ಭಯಮಂ ಕರುಣಿಸಿ—

ನಿನ್ನನ್ನು ವರ್ಣಿಸಲು ಆ ಆದಿಶೇಷನೂ ಕೂಡ ಸಮರ್ಥನಾಗುವನೇ ? ೫೯. ಭಯಂಕರ ವಾದ ಪ್ರತಾಪವುಳ್ಳವನೇ, ಶ್ರೇಷ್ಠರಿಗೆಲ್ಲ ಶ್ರೇಷ್ಠನೇ, ನಿನ್ನ ಸಮಗ್ರ ಪ್ರೇರಣೆಯಿಂದ ಜಗತ್ತು ಅಳಿಯುವುದು ಮತ್ತು ಉಳಿಯುವುದು. ಮೂರು ಲೋಕದ ಶಿಕ್ಷೆ ರಕ್ಷೆಗಳನ್ನು ಮಾಡುವ ಕಾರ್ಯಭಾರವನ್ನು ವಹಿಸಿರುವವನು ನೀನೇ (ಆಗಿದ್ದೀಯೆ) ೬೦. ದೇವ, ಪಶುವೆನಿಸಿದ ಕುರಿಯೊಂದು ಬೆನ್ನು ಬೀಳಲು (ಅದನ್ನು) ಕಾಪಾಡಿದೆ. ನಾನಾದರೋ ನರಪಶು; (ನಿನ್ನನ್ನು) ಮರೆಹೊಕ್ಕಿದ್ದೇನೆ. ಒಲಿದು ನನ್ನನ್ನು ನೀನು ರಕ್ಷಿಸಿ, ಪಶು ಪತಿಯು ಅವತಾರವೆಂಬುದನ್ನು ಸಮಸ್ತ ಭುವನದಲ್ಲಿ ಮೆರೆಯಬೇಕು. ೬೧. ವಿರಹಿತ ನಾದ ಅಂದರೆ ಬಿಡಲ್ಪಟ್ಟ ನರವಾಹನವುಳ್ಳವನು, (ಮನುಷ್ಯ ಸ್ವಭಾವದಿಂದ ದೂರ ನಾದವನು,) ಪರಿಗಳಿತವಾದ ಅಂದರೆ ಜಾರಿಹೋದ ದಿಕ್ಕುಳ್ಳವನು (ಬಿಟ್ಟು ಹೋದ ಆಸೆಯುಳ್ಳವನು), ಸಮೀಚೀನವಾದ ಮುಖ್ಯ ನಿಧಿಯುಳ್ಳವನು (ಸತ್ಪುರುಷರಿಗೆ ಮುಖ್ಯ ನಿಕ್ಷೇಪರೂಪನಾಗಿರುವವನು) ಎನಿಸಿದಂಥ ಕಿನ್ನರಿನಾಥನೇ ಕೇಳು : ನಿನಗೆ ಶಂಕರನ ಸ್ನೇಹವು (ಸುಖವನ್ನುಂಟು ಮಾಡುವುದರಿಂದ ಮಿತ್ರತ್ವವು) 'ಪುಣ್ಯಜನ' ಎಂಬ ಹೆಸರಿನ ಕುಬೇರನ ನಗರದ ಜನಗಳಿಂದ ಸೇವಿಸಲ್ಪಡುವಿಕೆಯು (ಪುಣ್ಯವಂತರಾದ ಅಂದರೆ ಪರಿಶುದ್ಧರಾದ ಜನರಿಂದ ಸೇವಿಸಲ್ಪಡುವಿಕೆಯು) ಆಶ್ಚರ್ಯಕರವಾದುದು. (ಚಿತ್ರ). [ಅಂದರೆ–ನೀನು ಕುಬೇರನಲ್ಲದಿದ್ದರೂ ಕುಬೇರನ ಹಾಗೆರುವುದೇ ಇಲ್ಲ ಆಶ್ಚರ್ಯಕರ ವಾದುದೆಂದು ತಾತ್ಪರ್ಯ] ವ॥ ಹೀಗೆಂದು ಪುನಃ ನಮಸ್ಕಾರ ಮಾಡಿ, ಹೊಗಳುತ್ತಿರುವ ಅರಸನನ್ನು, ದಯಾಪೂರ್ಣವಾದ ಕಡೆಗಣ್ಣೋಟದಿಂದ ನೋಡುತ್ತ ಅಭಯವನ್ನು

ಪೆಱದಲೆಯುನ ಶರಣರೊಳೆಲೆ
ಕಱವುಱಯಿಲ್ಲದೆ ಸಮೋತ್ತರಂಗುಡದೆ ಸುಖಂ
ನೆಱಬದುರ್ಕು ಪೋಗೆನುತೆ ನೆಲ
ದೆಱಯುನ ಬೀಳ್ಕೊಟ್ಟು ಮಡಿದ ಕುಱಿವಾನಿಸನಂ ೬೨

ಅಸುವೀವುತೆತ್ತುತಿಂತಿದು
ಪೊಸತೆಂದಾ ಪೌರರೆಯ್ದೆ ಕೊಂಡಾಡೆ ಗಣ
ಪ್ರಸರಂ ಮುದಮಾಳ್ದಿರೆ ನೆಗ
ಳ್ದಸಮಂ ನಿಜಗೃಹಮನೆಯ್ದಿದಂ ಗುಣನಿಳಯಂ ೬೩

ವ॥ ಅಂ[1]ತೆಯ್ದಿ ಕಿನ್ನರಯ್യಂ ಮುನ್ನಿನಂತೆ ನಿಜಮಹಿಮೆಪೆತ್ತೊಪ್ಪುತ್ತಿರ್ದನಾ ಪ್ರಸ್ತಾವ
ದೊಳ್—

ಪೊಗಳುತ್ತುಂ ಕಿನ್ನರೇಂದ್ರಂ ನೆಗಳ್ದ ಘನತರಾಶ್ಚರ್ಯಮಂ ಭಕ್ತರೊಳ್ ವಂ
ದಿಗಳಿಂ ಕೊಂಡಾಡಿಸುತ್ತುಂ ಶರಣನತುಳ ಸಾಮರ್ಥ್ಯಮಂ ಸಂಭ್ರಮಂ ಪೆಂ
ಪೊಗೆವನ್ನಂ ಬಂದು ಪೊಕ್ಕಂ ನಿಜಭವನಮನಾಮ್ನಾಯಗೇಯಂ ವಿಮಾಯಂ
ಸುಗುಣಾಲಂಕಾರವೀರವ್ರತಹಿತಚರಿತಂ ವೀರಶೈವಾಬ್ಧಿಚಂದ್ರಂ ೬೪

ಕರುಣಿಸುತ್ತ ೬೨–೬೩. ಎಲೈ (ಅರಸನೇ) ಚಂದ್ರಚೂಡನಾದ ಶಿವನ ಶರಣರಲ್ಲಿ ಕಳಂಕವೆಂಬುದಿಲ್ಲ ; ಮುಚ್ಚುಮರೆಯೆಂಬುದಿಲ್ಲ. ಅವರೊಡನೆ ಸಮಾನ ಉತ್ತರವನ್ನು ಕೊಡದೆ ಚೆನ್ನಾಗಿ ಸುಖದಿಂದ ಬದುಕು ಹೋಗು, ಎಂದು ಆ ಭೂಮೀಶ್ವರನನ್ನು ಕಳಿಸಿ ಕೊಡುತ್ತ ಸತ್ತ ಅಲ್ಪ ಮನುಷ್ಯನಿಗೆ (ಕುರಿಯ ಸಂಬಂಧದ ಮನುಷ್ಯನಿಗೆ) ಪ್ರಾಣವನ್ನಿತ್ತು ಎತ್ತಿ ಈ ರೀತಿಯು ಲೋಕಕ್ಕೆ ಹೊಸದು ಎಂದು ಪಟ್ಟಣಿಗರೆಲ್ಲ ಕೊಂಡಾಡುತ್ತಿದ್ದರು. ಶಿವನ ಸಮೂಹವೆಲ್ಲ ಸಂತೋಷಗೊಂಡು ಇರಲಾಗಿ, ಅಸದೃಶವಾದ ಸದ್ಗುಣ ಸಮೂಹಕ್ಕೆ ವಾಸ ಭೂಮಿಯಂತಿರುವ ಕಿನ್ನರ ಬೊಮ್ಮಯ್ಯನು ತನ್ನ ಮನೆಗೆ ಹೋದನು. ವ॥ ಹಾಗೆ ಕಿನ್ನರಿಯ ಬೊಮ್ಮಯ್ಯನು ಮನೆಗೆ ಹೋಗಿ ಮೊದಲಿನಂತೆ ತನ್ನ ಮಹಿಮಾತಿಶಯದಿಂದ ಶೋಭಿಸುತ್ತ ಇರುವ ಸಮಯದಲ್ಲಿ ೬೪. ವೇದಗಳಿಂದ ಹೊಗಳಿಸಿಕೊಳ್ಳುವುದಕ್ಕೆ ಯೋಗ್ಯನಾದ, ಮಾಯರಹಿತನಾದ, ಸದ್ಗುಣಗಳೇ ಆಭರಣವಾಗಿ ಉಳ್ಳ ವೀರಶೈವ ಧರ್ಮ ನಿಯಮದಿಂದ ಕೂಡಿದ, ಸಕಲರಿಗೂ ಇಷ್ಟವಾದ ನಡತೆಯುಳ್ಳ, ವೀರಶೈವವೆಂಬ ಸಮುದ್ರಕ್ಕೆ ಚಂದ್ರಪ್ರಾಯನಾದ ಬಸವೇಶ್ವರನು ಕಿನ್ನರಿ ಬೊಮ್ಮಯ್ಯನು ಮಾಡಿದ, ಘನತರವಾದ ಆಶ್ಚರ್ಯಕರ ಸಂಗತಿಯನ್ನು ಶರಣಜನ ಸಮೂಹದಲ್ಲಿ ವಿವರಿಸುತ್ತ, ಶರಣರಾದವರ ಉಪಮಾರಹಿತವಾದ ಸಾಮರ್ಥ್ಯವನ್ನು ಸ್ತುತಿಪಾಠಕರಿಂದ ಕೊಂಡಾಡಿಸುತ್ತ, ಸಡಗರವೂ, ಘನತೆಯೂ ಉಂಟಾಗುವಂತೆ

---

1 ಇಂ(ಅ)

ಘನಮಹಿಮ ಕಿನ್ನರೇಂದ್ರನ
ವಿನುತಚರಿತ್ರಮನದಾವನೋದುವನಾವಂ
ವಿನಯದೆ ಕೇಳ್ವನವಂ ನೆ
ಟ್ಟನೆ ಪಡೆವಂ ಸುಖಮನೈಹಿಕಾಮುಷ್ಮಿಕಮಂ ೬೫

ಶರಣಾಗತಾರ್ತಿಹರಣಾತಿರಂಜನೇ
ತರವಾರಿದೃಪ್ತಸುರವೈರಿಭಂಜನೇ
ಕರಿಮಂದಯಾನೆ ಹರಿಚಂದನಾರ್ಜುನೇ
ಪರಿಪಾಲಿಸೆನ್ನ ಗಿರಿರಾಜನಂದನೇ ೬೬

ಇದು ವಿನಮದಖಿಲ ಸುರಾಸುರೇಂದ್ರಮಕುಟತಟಘಟಿತ ಮಣಿಗಣಾಗಣಿತ ರುಚಿನಿಚಯ
ತರುಣಾರುಣಾತಪಪರಿಲಸಿತ ಪರಮ ಶಿವಲಿಂಗ ಪಾದಾರವಿಂದಪರಾಗಭಸಿತ-
ಭಾಸುರಲಲಾಟಪಟ್ಟಸರಸಜನಮಾನಿತೋಭಯಕವಿತಾವಿಶಾರದ
ಶ್ರೀಷಡಕ್ಷರಿದೇವಭಕ್ತಿವಿರಚಿತ

ಶ್ರೀಮದ್ ಬಸವರಾಜವಿಜಯಮಹಾಪುರಾಣದೊಳ್ ಕಿನ್ನರೇಂದ್ರವೈಭವಕಥನಂ
ಸಪ್ತಾದಶಾಶ್ವಾಸಂ ಸಮಾಪ್ತಂ

ಅಂತು ಆಶ್ವಾಸ ೧೭ಕ್ಕೆ ಪದಗಣನೆ ೧೪೬೫ಕ್ಕೆ ಮಂಗಳಮಹಾ ಶ್ರೀ ॥

ಮಾಡಿ ಬಂದು ತನ್ನ ಮನೆಯನ್ನು ಪ್ರವೇಶಿಸಿದನು. ೬೫. ಘನಮಹಿಮಾಶಾಲಿಯಾದ ಕಿನ್ನರಿ ಬೊಮ್ಮಯ್ಯನ ಶ್ಲಾಘ್ಯವಾದ ಚರಿತ್ರೆಯನ್ನು ಯಾವನು ಓದುವನೋ, ಯಾವನು ವಿನಯದಿಂದ ಕೇಳುವನೋ ಅವನು ಇಹಲೋಕ ಪರಲೋಕದಲ್ಲಾಗುವ ಸೌಖ್ಯವನ್ನು ನೆಟ್ಟಗೆ ಪಡೆಯುತ್ತಾನೆ. ೬೬. ಮರೆ ಹೊಕ್ಕವರ ಮನೋವ್ಯಥೆಯನ್ನು ನಾಶಗೊಳಿಸುವುದರಿಂದ ಬಹಳವಾಗಿ ಸಂತೋಷ ಪಡಿಸುವವಳೂ, (ತನ್ನ) ಖಡ್ಗಾಯುಧ (ತರವಾರಿ)ದಿಂದ ಕೊಬ್ಬಿದ ಅಸುರರನ್ನು ನಾಶಗೊಳಿಸುವವಳೂ, ಆನೆಯಂತೆ ಮಂದ ಗಮನವುಳ್ಳವಳೂ, ಹರಿಚಂದನ ಲೇಪನದಿಂದ ಬೆಳ್ಳಗೆ ಕಾಣುವ ಗಿರಿರಾಜ ಪುತ್ರಿಯು ನನ್ನನ್ನು ರಕ್ಷಿಸಲಿ. ಹರಿಚಂದನದಿಂದ ಅರ್ಜುನನ ಬೆಳ್ಳಗಿರುವ ಶರಣಾಗತ + ಆರ್ತಿ + ಹರಣ + ಅತಿರಂಜನೇ— ಶರಣಾಗತರಾದವರ, ದುಃಖವನ್ನು ಹರಣ ಮಾಡುವುದರ ಮೂಲಕ ವಿಶೇಷವಾಗಿ ರಂಜಿಸುವವಳು.

ಹದಿನೇಳನೆಯ ಆಶ್ವಾಸವು ಸಮಾಪ್ತವಾಯಿತು.

ಅಷ್ಟಾದಶಾಶ್ವಾಸಂ

[ಕಲ[1]ಕೇತ ಬೊಮ್ಮಯ್ಯನ ಕಥೆ]

ಶ್ರೀಮದಮಳಾಂಬಿಕಾಮುಖ
ತಾಮರಸದ್ಯುಮಣಿ ಗುಣಗಣಾಭರಣಗಣ
ಸ್ತೋಮಪರಿವೃತನಶೇಷಭ
ವಾಮಯಹರನೀಗೆ ಸೌಖ್ಯಮಂ ಶಿವಲಿಂಗಂ ೧

ವ॥ ಮತ್ತಮಭಿನವವಿಭವಂಬಡೆದೆಸೆವ ಕಲ್ಯಾಣನಗರದಲ್ಲಿ—

ಸ್ಥಿರಚಿತ್ತಂ ಜಂಗಮಶ್ರೀಪದಭಜಕನುದಾತ್ತಸ್ವತಂತ್ರಂ ಯಶೋಭಾ
ಸುರನಾದ್ಯಂ ಭಕ್ತನಂಗೇಂದ್ರಿಯಗುಣರಹಿತಂ ಲಿಂಗನಿಷ್ಠಾಪರಂ ಶಾಂ
ಕರಮಾರ್ಗೈಕಪ್ರದೀಪಂ ಕ್ಷಪಿತದುರಿತನುದ್ವೀತಮೋಹಂ ಕೃಪಾನಿ
ರ್ಭರಚಿತ್ತಂ ಸ್ವರ್ಣಲೋಷ್ಟಪ್ರಜಸಮಮತಿ ಲಿಂಗಾಧಿರೂಢಾಭಿಮಾನಂ ೨

ಕಲಕೇತ ಬೊಮ್ಮಯ್ಯನ ಕಥೆ

೧. ಮಂಗಳಕರವಾದವಳೂ ನಿರ್ಮಲಳೂ ಆದ ಪಾರ್ವತಿಯ ಮುಖ ಕಮಲಕ್ಕೆ ಸೂರ್ಯನಾದವನೂ, ಸದ್ಗುಣ ಸಮೂಹವೇ ಆಭರಣವಾಗಿ ಉಳ್ಳವನೂ, ಶಿವಶರಣರುಗಳ ಸಮೂಹದಿಂದ ಸುತ್ತುವರಿಯಲ್ಪಟ್ಟವನೂ, ಸಕಲ ಪಾಪವೆಂಬ ರೋಗವನ್ನು ನಾಶಮಾಡುವವನೂ ಆದ ಶಿವಲಿಂಗನು ಸೌಖ್ಯವನ್ನು ಕೊಡಲಿ. ವ॥ ಮತ್ತು ನೂತನ ವೈಭವದಿಂದ ಕೂಡಿ ಶೋಭಿಸುವ ಕಲ್ಯಾಣ ನಗರದಲ್ಲಿ—೨-೩. ದೃಢವಾದ ಚಿತ್ತವುಳ್ಳವನೂ, ಜಂಗಮದ ಶ್ರೀ ಪಾದಗಳನ್ನು ಭಜಿಸುವವನೂ, ಉದಾತ್ತವಾದ ಸ್ವತಂತ್ರವಾದ ಚರಿತ್ರೆಯುಳ್ಳವನೂ, ಕೀರ್ತಿಯಿಂದ ಪ್ರಕಾಶಮಾನನೂ, ಪುರಾತನನೂ, ಲಿಂಗದ ಪ್ರಾಕೃತ ಗುಣಗಳನ್ನು ನಾಶಪಡಿಸಿದವನೂ, ಶಿವಲಿಂಗದಲ್ಲಿ ನಿಷ್ಠೆಯುಳ್ಳವನೂ, ಶಂಕರ ಸಂಬಂಧವಾದ ಧರ್ಮಮಾರ್ಗವೊಂದರಲ್ಲಿ ಆಚರಿಸಿ ಪ್ರಕಾಶಮಾನನಾದವನೂ, ಪಾಪವನ್ನು ನಾಶಗೊಳಿಸಿಕೊಂಡವನೂ, ಅಜ್ಞಾನವನ್ನು ಕಳೆದುಕೊಂಡಿರುವವನೂ, ಸುವರ್ಣ ಮತ್ತು ಮಣ್ಣು ಹೆಂಟೆಗಳನ್ನು ಸಮವೆಂದು ಭಾವಿಸಿರುವವನೂ, ಲಿಂಗಧಾರಿಗಳಲ್ಲಿ ಅಭಿಮಾನವುಳ್ಳವನೂ, ಜೀವಿಸುವಾಗಲೇ ಮುಕ್ತಿ ಸುಖದಿಂದ ಕೂಡಿದವನೂ, ಸಮಸ್ತ ಭಕ್ತಸಮೂಹಕ್ಕೆ ಉಲ್ಲಾಸವನ್ನುಂಟುಮಾಡುವವನೂ, ಶುದ್ಧವಾದ ಧರ್ಮದಲ್ಲಿ ಜೀವಿಸುವವನೂ, ಗರ್ವರಹಿತನೂ, ಜಗಜ್ಜಾಲವನ್ನು ತೃಣಕ್ಕೆ ಸಮಾನವಾಗಿ ಭಾವಿಸಿರು

---

1 + ಹ (ಗ, ಚ)

ಜೀವನ್ಮುಕ್ತನಶೇಷಭಕ್ತನಿವಹೋಲ್ಲಾಸಪ್ರದಂ ಶುದ್ಧಧ
ರ್ಮಾವಾಸಂ ವಿಮದಂ ತೃಣೀಕೃತಜಗಜ್ಜಾಲಂ ಸುಲೀಲಾಸ್ಪದಂ
ಶ್ರೀವೀರವ್ರತಸಂಪದಂ ತ್ರಿವಿಧಶೇಷಾಸ್ವಾದನಾನಂದಸ
ದ್ಭಾವಂ ತಾಂ ಕಲಕೇತಬೊಮ್ಮವೆಸರಿಂದೊಪ್ಪಿರ್ಪನತ್ಯೂರ್ಜಿತಂ ೩

ವ॥ ಅಂತಭಿನವವೀರಭದ್ರನೆಂಬಂತೆಸೆದು—

ಮುಂದಲೆಯೊಳೊಲೆವ ಮುಡಿ ನೊಸ
ಲಂದದ ಸಿತಭಸಿತರೇಖೆ ಬಿಗಿದುಟ್ಟ ಪಸು
ರ್ಪೊಂದಿದ ವಸನಂ ಕರ್ಣದ
ಕೆಂದಳಿರವತಂಸಮೆಸೆಯೆ ಕಿಱುಗೆಜ್ಜೆಗಳಂ ೪

ಒಂದಡಿಯೊಳ್ತೊಡರ್ಚಿ ಪೆಱತೊಂದಡಿಯೊಳ್ ಝಣರೆಂಬ ಚೆಲ್ವ ಪೊ
ನ್ನಂದುಗೆಯಿಕ್ಕಿ ವಾಮಕರದೊಳ್ಬಲದಕ್ಷನಜಾಸ್ಯಶೃಂಗಮಂ
ಬಂದಮನಾಳ್ದ ಬಲ್ದಗರ ಕೋಡನಮರ್ಚಿ ಮುಕುಂದನಸ್ಥಿದಂ
ಡಂದಳೆದಂತೆ ದಕ್ಷಿಣಕರಾಗ್ರದೆ ಡಂಗೆಯನಾಂತು ಲೀಲೆಯಿಂ ೫

ತಿರುಪುತ್ತುಂ ಚೆಚ್ಚರಂ ಗಲ್ಗಲಕೆನೆ ಪಲಕಂ ದೇಸಿವೆತ್ತೋಜೆ ಚೆಲ್ವಾ
ಗಿರೆ ಮಂದಸ್ಮೇರಮಂ ಬೀಱುತೆ ಝಣರುಣನಿಕ್ವಾಣಮಂ ಸೂಸೆ ಪಾದ

ಪವನೂ, ಒಳ್ಳೆಯ ವಿಲಾಸಕ್ಕೆ ಆಸ್ಪದನಾದವನೂ, ಮಂಗಳಕರವಾದ ವೀರಶೈವಮತದ ವ್ರತವೆಂಬ ಐಶ್ವರ್ಯವುಳ್ಳವನೂ, ಮೂರು ವಿಧವಾದ ಶುದ್ಧ, ಸಿದ್ಧ, ಪ್ರಸಿದ್ಧ ಪ್ರಸಾದ ಗಳನ್ನು ಸ್ವೀಕರಿಸುವುದರಿಂದುಂಟಾದ ಸಂತೋಷದಿಂದಲೂ, ಸದ್ಭಾವದಿಂದಲೂ, ಕಲಕೇತ ಬೊಮ್ಮಯ್ಯನೆಂಬ ಅತ್ಯಂತ ಊರ್ಜಿತಗೊಂಡ ಶಿವಭಕ್ತನು ಒಪ್ಪಿದ್ದನು. ವ॥ ಹೀಗೆ ನೂತನ ವೀರಭದ್ರನೋ ಎಂಬಂತೆ ಶೋಭಿಸುತ್ತ—೪-೫. ಮುಂದಲೆಯಲ್ಲಿ ಒಲೆದಾಡುವ ಮುಡಿ, ಹಣೆಯಲ್ಲಿ ಶೋಭಿಸುವ ಭಸ್ಮದ ರೇಖೆಗಳು ಬಿಗಿದು ಉಟ್ಟು ಕೊಂಡ ಹಸುರು ಬಣ್ಣದಿಂದ ಕೂಡಿದ ವಸ್ತ್ರ, ಕಿವಿಯಲ್ಲಿರುವ ಕೆಂಪು ಚಿಗುರಿನ ಆಭರಣ- ಇವು ಶೋಭಿಸುತ್ತಿರಲು ಕಿರುಗೆಜ್ಜೆಗಳ ಸರವನ್ನು ಒಂದು ಕಾಲಿನಲ್ಲಿ ಕಟ್ಟಿಕೊಂಡು. ಮತ್ತೊಂದು ಪಾದದಲ್ಲಿ 'ಝಣರ್' ಎಂಬ ಚಿನ್ನದ ಅಂದುಗೆಯನ್ನು ಹಾಕಿಕೊಂಡು, ಎಡಗೈಯಲ್ಲಿ ದುಷ್ಟನಾದ ದಕ್ಷಬ್ರಹ್ಮನ ಆಡಿನ (ಟಗರಿನ ?) ಮುಖದ ಕೊಂಬೆಂಬ ಅಂದವನ್ನು ಹೊಂದಿದ ಬಲವಾದ ಟಗರಿನ ಕೊಂಬೊಂದನ್ನು ಹಿಡಿದುಕೊಂಡು, ಬಲಗೈ ಯಲ್ಲಿ ಮುಕುಂದನ ದೊಣ್ಣೆಯಂತಿರುವ ಮೂಳೆಯನ್ನು ಧರಿಸಿದ ಹಾಗೆ (ಕಂಕಾಳದ ಹಾಗೆ) ಗೆಜ್ಜೆಯನ್ನು ಕಟ್ಟಿದ ದೊಣ್ಣೆಯನ್ನು ಲೀಲೆಯಿಂದ ಹಿಡಿದುಕೊಂಡು—೬, (ಹಿಡಿದ ಕೋಲು) ಕಂಪನಗೊಂಡು 'ಘುಲ್ ಘುಲ್' ಎನ್ನುತ್ತಿರಲು ಬೇಗಬೇಗನೆ ತಿರುಗಿಸುತ್ತ, ಸೊಗಸುಗೊಳಿಸುತ್ತ, ಒಳ್ಳೆಯ ರೀತಿಯಿಂದ ಚೆಲುವನ್ನುಂಟು ಮಾಡು ತ್ತಿದ್ದನು. ಮುಗುಳುನಗೆಯನ್ನು ಬೀರುತ್ತ, ಕಾಲಿನಲ್ಲಿ ಕಟ್ಟಿರುವ ಅಂದುಗೆಯು

ಸ್ಫುರಿತಂ ಮಂಜೀರಮೊಯ್ಯಾರದೆ ನಡೆತರುತುಂ ಭಕ್ತರಾವಾಸಕತ್ಯಾ
ದರದಿಂ ನಿಂದೀಕ್ಷಿಸುತ್ತುಂ ಸರಸಮೃದುರವಂದೋಱುತುಂ ಪಾಡುತಾಗಳ್ ೬

ಪರಮತಗರ್ವಗಂಧಗಜಭಂಜನಕೇಸರಿ ಬಂದನಂಬಿಕಾ
ವರಶರಣಪ್ರತಾನಪದಪದ್ಮಮರಂದಮದಾಳಿ ಬಂದನೀ
ಶ್ವರಮತಪಂಕಜಾಕರಮರಾಳಕಿಶೋರನೊಱಲ್ದು ಬಂದನ
ಧ್ವರಹರಭದ್ರದಂತಿಪತಿ ಬಂದನಿವಂ ಕಲಕೇತಬೊಮ್ಮಯಂ ೭

ವ॥ ಎಂದು ವಿಳಾಸದಿನುಲಿವುತ್ತುಂ ಮತ್ತಮಿರದೆ —

ಬಂದಂ ಭಕ್ತರ ಮುದ್ದಿನ
ಕಂದಂ ತ್ರಿವಿಧಪ್ರಸಾದಸೇವಾನಿರತಂ
ಬಂದಂ ಪ್ರಮಥರ ಲೆಂಕಂ
ಬಂದಂ ಭೃಂಗೀಶನಣುಗನೀ ಕಲಕೇತಂ ೮

ಚಂಗಳೆಯ ಮಗಂ ದುಗ್ಗಳೆ
ಯಂಗಳಮಂ ಬೋಹರಿಪ್ಪ ಕಿಂಕರನಾದ
ಯ್ಯಂಗಳ ಭೃತ್ಯಂ ಭೋಗನ
ಡಿಂಗರಿಗಂ ಬಂದನಿಂದು ನೋಡಿರೆ ಶರಣರ್ ೯

'ಝಣಝಣ' ಎಂಬ ಶಬ್ದವನ್ನು ಹೊರ ಸೂಸುವಂತೆ ಮಾಡುತ್ತ, ಒನಪಿನಿಂದ ಭಕ್ತರುಗಳ ಮನೆಗಳಿಗೆ ನಡೆದುಬಂದು ಅತ್ಯಂತ ಆದರದಿಂದ ನಿಂತು ನೋಡುತ್ತ ಸರಸವಾದ ಮೃದು ಧ್ವನಿಯಿಂದ ಹಾಡುತ್ತಿದ್ದನು. ಆಗ—೭. ಪರಮತಗಳ ಗರ್ವವೆಂಬ ಮದೋನ್ಮತ್ತ ಆನೆಯನ್ನು ನಾಶಗೊಳಿಸುವ ಸಿಂಹ ಸ್ವರೂಪನು ಬಂದನು ; ಶಿವನ ಶರಣರ ಗುಂಪಿನ ಪಾದಕಮಲದ ಮಕರಂದಕ್ಕೆ ಮದಿಸಿದ ಭ್ರಮರದಂತಿರುವವನು ಬಂದನು ; ವೀರಶೈವ ಮತವೆಂಬ ಕಮಲ ಸರೋವರಕ್ಕೆ, ಹಂಸಪಕ್ಷಿಯ ಮರಿಯಂತಿರುವವನು ಕೂಗುತ್ತ (ಹಾಡುತ್ತ) ಬಂದನು ; ದಕ್ಷಯಜ್ಞವನ್ನು ನಾಶಪಡಿಸಿದ ವೀರಭದ್ರನ ಮಂಗಳಕರ ಆನೆಯೋಪಾದಿಯಲ್ಲಿರುವ ಈ ಕಲಿಕೇತ ಬೊಮ್ಮಯ್ಯನು ಬಂದನು. (ಹೀಗೆಂದು ಬೊಮ್ಮಯ್ಯನೇ ಹೇಳುತ್ತ ಬರುತ್ತಿದ್ದನು) ವ॥ ಹೀಗೆಂದು ವಿಲಾಸದಿಂದ ಉಲಿಯುತ್ತ ಪುನಃ ಇರದೆ—೮. 'ಭಕ್ತರ ಪ್ರೀತಿಗೆ ಪಾತ್ರನಾದ ಕಂದನು ಬಂದನು ; ತ್ರಿವಿಧಗಳಾದ ಶುದ್ಧ, ಸಿದ್ಧ, ಪ್ರಸಾದ ಸೇವೆಯಲ್ಲಿ ನಿರತನಾದವನು ಬಂದನು ; ಪ್ರಮಥರುಗಳ ಭಂಟನು ಬಂದನು ; ಭೃಂಗೀಶ್ವರನ ಪುತ್ರನೆನಿಸಿದ ಈ ಕಲಿಕೇತಯ್ಯನು ಬಂದನು.' ೯. 'ಚಂಗಳಾದೇವಿಯ ಮಗನೂ, ದುಗ್ಗಳಾದೇವಿಯ ಮನೆಯಂಗಳದಲ್ಲಿ ಕಾವಲಿರುವ ಸೇವಕನೂ, ಆದಯ್ಯನ ಸೇವಕನೂ, ಭೋಗಯ್ಯನ ಆಳೂ-(ಆದ

ಎಂದುಲಿದು ಪಾಡಿ ನಗಿಸುತೆ
ಕುಂದದೆ ತಾಂ ಪ್ರಸ್ಥಯುಗಳದಳತೆಯ ಧಾನ್ಯಂ
ದಂದೆನಿತು ಬಂದೊಡಂ ಚರ
ವೃಂದಮನದಱಿಂದೆ ತಣಿಪುತೆಸೆದಂ ಭಕ್ತಂ ೧೦

ವ॥ ಅಂತಿರ್ಪಿನಮೊಂದು ವಾಸರಂ ನಿಜಗೃಹಬಹಿರ್ದೇಶ ಭಾಸುರವೇದಿಕಾಗ್ರದೊಳ್ಶಿವ ಭಕ್ತನೊರ್ವಂ ಪಥಶ್ರಾಂತಿಯಿಂ ಕಂಗೆಟ್ಟು ಪಟ್ಟಿರ್ಪಿನಮಾತನಂ ಕಲಕೇತಯ್ಯಂ ಕಂಡು ನೀನಾರೇಂ ಕಾರಣಂ ಬಂದೆಯೆಂಬುದುಮಾ ಭಕ್ತಂ ತದ್ದಯಾರ್ದ್ರಕಟಾಕ್ಷವೀಕ್ಷಣಸಾಂದ್ರ ಚಂದ್ರಿಕಾನಿರಸ್ತಪಥಶ್ರಮಭರನಾಗುತಿಂತೆಂದಂ —

ಹರಭಕ್ತಭೃತ್ಯನಾಂ ಕಿ
ನ್ನರ ಬೊಮ್ಮನ ಪೊರೆಗೆ ಪೋಗುತನಗಾದೆಡರಂ
ಪರಿಹರಿಸಲೆಂದು ಬಂದೆಂ
ನಿರವದ್ಯಚರಿತ್ರನಾತನೇಂ ಜಾವಳನೇ ೧೧

ಪಡೆದಂ ಸೌಂದರನೆಂಬ
ರ್ಪಡಿವೊನ್ನಂ ಮುನ್ನಮಭವನಿಂ ಕಿನ್ನರನಾ
ಮೃಡನಿಂದನುದಿನಮೀಗಳ್
ಪಡೆವಂ ಪೊಸಪೊನ್ನನೆಂದೊಡೇವಣ್ಣಿಪುದೋ ೧೨

ಕಲಕೇತಯ್ಯನು) ಆದವನು ಬಂದಿದ್ದಾನೆ ಈಗಲೇ ಶರಣರು ನೋಡಿರೇ !' ೧೦. ಹೀಗೆಂದು ಕೂಗಿಕೊಳ್ಳುತ್ತ ಹಾಡಿ ನಗಿಸುತ್ತ, ತಪ್ಪದೆ ತಾನು ಎರಡು ಕೊಳಗದಳತೆಯ ಧಾನ್ಯವನ್ನು ತೆಗೆದುಕೊಂಡು ಬಂದು, ಜಂಗಮ ಸಮೂಹವು ಎಷ್ಟು ಬಂದರೂ ಆ ಧಾನ್ಯದಿಂದಲೇ ತೃಪ್ತಿಪಡಿಸುತ್ತ ಶೋಭಿಸುತ್ತಿದ್ದನು. ವ॥ ಹೀಗಿರುತ್ತಿರುವಾಗ ಒಂದು ದಿವಸ ತನ್ನ ಮನೆಯ ಹೊರಭಾಗದಲ್ಲಿ ಪ್ರಕಾಶಿಸುವ ಕಟ್ಟೆಯ ಮೇಲೆ ಒಬ್ಬ ಶಿವ ಭಕ್ತನು ಮಾರ್ಗಾಯಾಸದಿಂದ ಬಳಲಿ ಮಲಗಿರುವಾಗ, ಆತನನ್ನು ಕಲಕೇತ ಬೊಮ್ಮಯ್ಯನು ಕಂಡು 'ನೀನು ಯಾರು ? ಏನು ಕಾರಣದಿಂದ ಬಂದಿದ್ದೀಯೆ' ? ಎನ್ನಲಾಗಿ ಆ ಭಕ್ತನು ಆ ಕಲಿಕೇತಯ್ಯನ ದಯಾರ್ದ್ರವಾದ ಕಡೆಗಣ್ಣಿನ ಕಾಂತಿಯೆಂಬ ದಟ್ಟವಾದ ಬೆಳದಿಂಗಳಿನಿಂದ ಕಳೆದುಕೊಂಡ ಮಾರ್ಗಾಯಾಸವುಳ್ಳವನಾಗಿ, ಹೀಗೆ ಹೇಳಿದನು : ೧೧. ನಾನೊಬ್ಬ ಹರಭಕ್ತರ ಆಳು; ಕಿನ್ನರಿ ಬೊಮ್ಮಯ್ಯನ ಸಮೀಪಕ್ಕೆ ಹೋಗಬೇಕೆಂದು ಹೊರಟು ನನಗಾದ ತೊಂದರೆಯನ್ನು ನಿವಾರಿಸಿಕೊಳ್ಳಲು (ಇಲ್ಲಿಗೆ) ಬಂದೆನು. ನಿರ್ದುಷ್ಟನಾದ ಆ ಕಿನ್ನರಯ್ಯನು ಸಾಮಾನ್ಯನೇ ! ೧೨. ಈ ಪೂರ್ವದಲ್ಲಿ ಸುಂದರನಂಬಿಯು ಈಶ್ವರನಿಂದ ಪಡಿ ಹೊನ್ನನ್ನು ಪಡೆದನು, ಎನ್ನುತ್ತಾರೆ. ಕಿನ್ನರಯ್ಯನು ಈಗ ಆ ಈಶ್ವರನಿಂದ ನಿರಂತರವಲ್ಲೂ ಹೊಸ ಹೊನ್ನನ್ನು ಪಡೆಯುವ

ವ॥ ಎಂದು ಕಿನ್ನರೇಂದ್ರನಂ ಕೊಂಡಾಡುತ್ತುಮಾತನಿನಲ್ಲದೆನ್ನ ಬಡತನಂ ಪಱಿಪಡದಾ ಮಹಾಮಹಿಮನ ಗೃಹಮೆನಿತು ದೂರಮಾಂ ಪೋಗಲ್ವೇೞ್ಕುಮೆನೆ ಕಲಕೇತಯ್ಯಂ ಕೇಳ್ದು ಕಲುಷಿತ ಕಟಾಕ್ಷನಾಗಿ—

ನುಡಿಯದಿರೆನ್ನ ಮುಂದೆ ಬಿಡು ಕಿನ್ನರಬೊಮ್ಮನ ಪೆರ್ಮೆಯಂ ಧನಂ
ಬಡೆವಳಱಿಂದೆ ಪೂಜಿಪನುಮಾಧಿಪನಂ ಸಲೆ ಕೂಲಿಗೆಯ್ವವಂ
ಪಡೆಯನೆ ಧಾನ್ಯರಾಶಿಯನಿದೇತಱ ಭಕ್ತಿಯವಂ ಪಣಂಗಳಂ
ತಡೆಯದೆ ಕೊಳ್ವನಲ್ಲದೆ ವಿಶುದ್ಧ ಸುಭಕ್ತಿಸುಖಕ್ಕೆ ಸಲ್ವನೇ ೧೩

ಗಣಿಪೊಡಜಹರಿಗಳೈಸಿರಿ
ತೃಣಕಣಕೆಣೆಯಲ್ತೆ ಭಕ್ತಿಸಾಮ್ರಾಜ್ಯಪರಾ
ಯಣ ಶರಣಗಣಕೆ ತಾನೆನೆ
ಪಣದಾಸೆಗೊಱಲ್ದು ಭಜಿಪುದೇ[1] ಭವಹರನಂ ೧೪

ಕಿನ್ನರಿಯನೊಲ್ದು ನುಡಿಸುತೆ
ಮನ್ನಣೆಗೆಯ್ದಾಡಿ ಪಾಡಿ ಪೂಜಿಸಿ ಪಡೆವಂ
ಪೊನ್ನಂ ಪಣಮಂ ಪಾಗಮ
ನುನ್ನತಮತಿಯೀತನಂತೆ ಪಡೆದರುಮೊಳರೇ ೧೫

ನೆಂದ ಮೇಲೆ ಅದನ್ನು ವರ್ಣಿಸುವುದೇನಿದೆ ? ವ॥ ಹೀಗೆಂದು ಕಿನ್ನರೇಂದ್ರನನ್ನು, ಕೊಂಡಾಡುತ್ತ, 'ಆ ಕಿನ್ನರಯ್ಯನಿಂದಲ್ಲದೆ, ನನ್ನ ಬಡತನವು ನಾಶವಾಗುವುದಿಲ್ಲ ; ಆ ಮಹಾಮಹಿಮನ ಮನೆ ಎಷ್ಟು ದೂರವಿದೆ ? (ಅಲ್ಲಿಗೆ) ಹೋಗಬೇಕು.' ಎನ್ನಲು ಕಲಿಕೇತಯ್ಯನು ಕೇಳಿ, ಕೆಂಪಾದ ಕಡೆಗಣ್ಣುಳ್ಳವನಾಗಿ ೧೩. 'ನನ್ನ ಮುಂದೆ ಆ ಕಿನ್ನರಿ ಬೊಮ್ಮಯ್ಯನ ಹಿರಿಮೆಯನ್ನು ಹೊಗಳಬೇಡ, ಬಿಡು ! ಹಣವನ್ನು ಪಡೆಯುವ ಆಸೆ ಯಿಂದ ಪಾರ್ವತೀಪತಿಯನ್ನು ಪೂಜಿಸುತ್ತಿದ್ದಾನೆ. ಕೂಲಿಯನ್ನು ಮಾಡುವವನು ಧಾನ್ಯದ ರಾಶಿಯನ್ನು ಪಡೆಯುವುದಿಲ್ಲವೇ ? (ಅವನದು) ಇದಾವ ರೀತಿಯ ಭಕ್ತಿ ? ಅವನು ಹಣಗಳನ್ನು ತಡೆಯದೆ ಪಡೆಯುವವನಲ್ಲದೆ ನಿರ್ಮಲವಾದ ಒಳ್ಳೆಯ ಭಕ್ತಿ ಯಿಂದಾಗುವ ಸುಖಕ್ಕೆ ಯೋಗ್ಯನಾಗುವನೇ ? ೧೪. 'ಶಿವಭಕ್ತಿಯೆಂಬ ಸಾಮ್ರಾಜ್ಯ ದಲ್ಲಿ ಆಸಕ್ತರಾದ ಶಿವ ಶರಣರ ಗುಂಪಿಗೆ, ಲೆಕ್ಕ ಹಾಕಿದರೆ, ಬ್ರಹ್ಮ ವಿಷ್ಣುಗಳ ಐಶ್ವರ್ಯವೂ ಕೂಡ ಹುಲ್ಲಿನ ಚೂರಿಗೆ ಸಮವಲ್ಲವೆ ?' ಎನ್ನುತ್ತ 'ಹಣದ ಆಸೆಗೆ ಇಚ್ಛೆಪಟ್ಟು ಶಿವ ನನ್ನು ಪೂಜಿಸುವುದೇ ?' ೧೫. 'ಪ್ರೀತಿಯಿಂದ ಕಿನ್ನರಿಯನ್ನು ನುಡಿಸುತ್ತ (ಶಿವ ಶರಣರನ್ನು) ಆನಂದಪಡಿಸಿ, ಹಾಡಿ ಪಾಡಿ, ಪೂಜೆಗೆಯ್ದು, ಹಣ, ಹಾಗ, ಬಂಗಾರವನ್ನು ಪಡೆಯುವವನು ಶ್ರೇಷ್ಠ ಬುದ್ಧಿಯುಳ್ಳವನೇ ! ಇವನ ಹಾಗೆ ಹಣವನ್ನು ಪಡೆದವರು

1 ದೇಂ(ಅ)

ಮೃಡನಂ ಕರೆದೋಯೆನಿಪುದು
ಪಡೆವುದು ಪೊಸ ಪೊನ್ನನೆರಡು ಕಜ್ಜಮನೀತಂ
ಬಿಡದಭ್ಯಾಸಿಸಿದನಿವಂ
ಪೊಡವಿಯೊಳೇಂ ಮುನ್ನ ನಂಬಿಯೊಡನಾಡಿದನೋ ೧೬

ವ॥ ಎಂದು ಕಿನ್ನರಯ್ಯನಂ ವಿಡಂಬಿಸಿ ನುಡಿದು—

ಎಲೆ ಭಕ್ತ ಕಿನ್ನರಯ್ಯನ
ನಿಲಯಂ ಕಡುದೂರಮಲ್ಲಿಗೆಂತೆಯ್ದುವೆ ನೀ
ನಲಸಿಕೆವೆತ್ತಿರ್ದಪೆ ಸಂ
ಚಲಿಸದೆ ನಿನಗೀವೆನರ್ಥಮಂ ಕೊಳ್ಳೆನುತುಂ ೧೭

ಕಲಕೇತಬ್ರಹ್ಮದೇವಂ ಪಿಡಿದ ತಗರ ಬಲ್ಕೋಡನಲ್ಲಾಡಿಸುತ್ತುಂ
ನಲವಿಂದಂ ಜಾಡಿಸುತ್ತುಂ ಬಿದಿರೆ ಪಳಚನತ್ಯದ್ಭುತಂ ಪೊನ್ಮೆ ಪೂರ್ಣೋ
ಜ್ವಲತೇಜಂ ಪೊನ್ನದೆತ್ತಂ ಸುರಿದುದಸದಳಂ ಸಿಂಹಿಕಾಪುತ್ರವಕ್ತ್ರೋ
ಚ್ಚಲಿತಂ ಮುನ್ನುಂಗಿದರ್ಕಾಂಗದ ಪೊಸಕಡಿಗಳ್ಪೊಸುವೊಂದಂದದಿಂದಂ ೧೮

ವ॥ ಅಂತಳುಂಬು ಸೂಸಿ ರಾಶಿಯಾದ ಪೊಂಗಳನಾ ಭಕ್ತಂ ಕಂಡು ಕುತೂಹಲಮಾನಸಂ ಮನಂದಣಿವನಿತು[1] ಪೊನ್ನಂ ತನ್ನ ವಸನದಿಂ ಮೊಟ್ಟೆಗಟ್ಟಿ ಸಡಗರಂ ಮಿಗೆ ಪೊತ್ತು ಪೊಜಿಲಾಜಿದೆಡ

(ಎಲ್ಲಿಯಾದರೂ) ಉಂಟೇ ? ೧೬. ಈತನು ಶಿವನನ್ನು ಕರೆದು ಓ ! ಎನ್ನಿಸುವುದು, ಹೊಸ ಹೊನ್ನನ್ನು ಪಡೆಯುವುದು, ಈ ಎರಡು ಕಾರ್ಯಗಳನ್ನು ತಪ್ಪದೆ ಅಭ್ಯಾಸ ಮಾಡಿದವನು. ಇವನು ಭೂಮಿಯಲ್ಲಿ (ಆ) ಸೌಂದರನಂಬ್ಯಣ್ಣನ ಸ್ನೇಹವನ್ನು ಮಾಡಿದ್ದನೋ ಏನೋ ! ವ॥ ಹೀಗೆಂದು ಕಿನ್ನರಿ ಬೊಮ್ಮಯ್ಯನನ್ನು ತಿರಸ್ಕಾರಮಾಡಿ ನುಡಿದು ೧೭. ಎಲೈ ಭಕ್ತನೇ, ಕಿನ್ನರಯ್ಯನ ಮನೆ (ಇಲ್ಲಿಗೆ) ಬಹಳ ದೂರ. ನೀನಾದರೋ ಆಲಸ್ಯಗೊಂಡಿದ್ದೀಯೆ. ಅಲ್ಲಿಗೆ ಹೇಗೆ ಹೋಗುತ್ತೀಯೆ ? ನೀನು ಅಲ್ಲಿಗೆ ಹೋಗಬೇಡ ನಿನಗೆ ದುಡ್ಡನ್ನು ಕೊಡುತ್ತೇನೆ ಹಿಡಿ, ಎನ್ನುತ್ತ ಆ ಕಲಿಕೇತ ಬೊಮ್ಮಯ್ಯ ದೇವನು ಕಯ್ಯಲ್ಲಿ ಹಿಡಿದಿದ್ದ ಬಲವಾದ ಟಗರಿನ ಕೊಂಬನ್ನು ಅಲ್ಲಾಡಿಸುತ್ತ, ಸಂತೋಷದಿಂದ ಜಾಡಿಸುತ್ತ, ಕುಲುಕಾಡಲು ಅತ್ಯದ್ಭುತವು ಹೊರ ಹೊಮ್ಮುವಂತೆ ನಿರ್ಮಲವಾಗಿ (ಪಳಕ್ಕನೆ), ಸಂಪೂರ್ಣವಾಗಿ ಪ್ರಕಾಶಿಸುವ ಕಾಂತಿಯುಳ್ಳ ಆ ಹೊನ್ನುಗಳು ಎಲ್ಲ ಕಡೆಗೂ ಮೊದಲು ನುಂಗಿದ್ದ ಸೂರ್ಯನ ದೇಹದ ಹೊಸ ಕಿಡಿಗಳು ಕೇತುವಿನ ಬಾಯಿಯಿಂದ ಈಚೆಗೆ ಹೊರಟು ಬಂದು ಸುರಿಯುತ್ತಿರುವುವೋ ಎಂಬ ಒಂದು ರೀತಿಯಿಂದ ಅಸಾಧ್ಯವೆನಿಸಿ ಸುರಿದವು. ವ॥ ಈ ರೀತಿ ಅಧಿಕವಾಗಿ ಹೊರ ಸೂಸಿ ರಾಶಿಯಾದ ಹೊನ್ನುಗಳನ್ನು ಆ ಭಕ್ತನು ಕಂಡು ಕುತೂಹಲದಿಂದ ಕೂಡಿದ

1 ತು೦(ದ)

ವೆಗಲ್ಗಂ ಬಲವೆಗಲ್ಗಂ ಪಚ್ಚಿ ಪಲ್ಲಟಿಸಿ ತಳೆದು ದಡದಡಿಸುತೇೞ್ತಂದು ಬಸವನರಮನೆಯ ಮೊಗಸಾಲೆಯೊಳಿೞಿಪಿ ಬಳಲ್ದು ಬಸವರಾಜನೆಡೆಗೇೞ್ತಂದು ನಿಂದು ಕಲಿಕೇತದೇವನೆಂದುದುಮಂ ತಾನೆಂದುದುಮನಿಸುೞಿಯದೆಲ್ಲಮನುಸುರ್ದವನಿತ್ತ ಪೊನ್ನ ಪೊಱೆಯುಂ ಪೊಱಲಾಱನದಂ ಪೊಱಲೊರ್ವನತಿಬಳನಪ್ಪ ಚರನಂ ಕುಡುವುದೆಂದು ಬೇಡೆ ಬಸವಂ ಕೇಳ್ದು ಶಿರಮಂ ತೂಗಿ —

ಪಿರಿದುಂ ವಿಸ್ಮಿತನಾಗಿ ಕೋಡಿವನ ಕೆಯ್ಯೊಳ್ನಿಂದುದಕ್ಕುಂ ಚರಾ
ಚರದೊಳ್ತಾನೆ ವದಾನ್ಯವರ್ಯನಿವನೀ ಸಾಮರ್ಥ್ಯಮಂ ಬಣ್ಣಿಸ
ಲ್ಕುರಗಾಧೀಶಸಹಸ್ರಮುಂ ನೆಱೆಗುಮೇ ಭೂಭಾಗಸಾಕ್ಷಾನ್ಮಹೇ
ಶ್ವರನೀತಂ ಕಲಕೇತಬೊಮ್ಮನೆನುತುಂ ಕೊಂಡಾಡಿದಂ ಕೂರ್ಮೆಯಿಂ ೧೯

ವ॥ ಅಂತು ಕೊಂಡಾಡಿ ಮುದುಬಡೆದಾ ಭಕ್ತಂಗೆ ಪೊನ್ನಪೊಱೆಯುಂ ಪೊಱಲನುಚರನನಿತ್ತು ಕಳುಪಿ ಘಳಿಲನೆೞ್ದು ತದ್ದರುಶನೋತ್ಕಂಠೆಯಿಂ ವೃಷೇಂದ್ರಂ ಬಂದು ಕಲಕೇತ ದೇವನಂ ಕಂಡು ಸಾತ್ವಿಕಭಕ್ತಿಯಿಂ ಸಾಷ್ಟಾಂಗವೆಱಗಿ—

ಮನಸ್ಸುಳ್ಳವನಾಗಿ, ತನ್ನ ಮನಸ್ಸು ದಣಿಯುವಷ್ಟು ಹೊನ್ನನ್ನು ತನ್ನ ವಸ್ತ್ರದಲ್ಲಿ ಮೊಟ್ಟೆ ಕಟ್ಟಿಕೊಂಡು, ವಿಶೇಷವಾದ ಸಡಗರದಿಂದ ಹೊತ್ತುಕೊಂಡು, ಹೊರಲಾರದೆ ಎಡ ಹೆಗಲಿನಿಂದ ಬಲ ಹೆಗಲಿಗೂ, ಬಲ ಹೆಗಲಿನಿಂದ ಎಡ ಹೆಗಲಿಗೂ ಹಂಚುತ್ತ ಸ್ಥಾನವನ್ನು ತಪ್ಪಿಸಿ ಹೊತ್ತುಕೊಂಡು ಜೋಲಿ ಹೊಡೆಯುತ್ತ ಬಸವಣ್ಣನ ಅರಮನೆಯ ಮುಂಭಾಗದಲ್ಲಿರುವ ಪಡಸಾಲೆಯಲ್ಲಿ ಇಳುಹಿ. ಆಯಾಸಗೊಂಡು ಬಳಲಿದವನಾಗಿ. ಬಸವರಾಜನ ಹತ್ತಿರಕ್ಕೆ ಬಂದು ನಿಂತು, ಕಲಿಕೇತದೇವನು ಹೇಳಿದುದನ್ನು ಹೇಳಿ, ಅವನು ಕೊಟ್ಟ ಬಂಗಾರದ ಒಜ್ಜೆಯನ್ನು ಹೊರಲಾರೆನು; ಅದನ್ನು ಹೊತ್ತುಕೊಂಡು ಹೋಗುವುದಕ್ಕೆ ಒಬ್ಬ ಅತೀ ಬಲವಂತನಾದ ಆಳನ್ನು ಕೊಡಬೇಕೆಂದು ಬೇಡಲಾಗಿ ಬಸವಣ್ಣನು ಕೇಳಿ, ತಲೆದೂಗಿದವನಾಗಿ ೧೯. ಅತ್ಯಂತ ಆಶ್ಚರ್ಯಗೊಂಡವನಾಗಿ (ಟಗರಿನ) ಕೊಂಬು ಇವನ ಕಯ್ಯಲ್ಲಿ ನಿಂತಿರುವುದಾಗಿದೆ. ಈ ಚರಾಚರ ಪ್ರಪಂಚದಲ್ಲಿ ಇವನು ತಾನೇ ದಾನಿಗಳಲ್ಲಿ ಶ್ರೇಷ್ಠನಾದವನು. ಇವನ ಸಾಮರ್ಥ್ಯವನ್ನು ವರ್ಣಿಸಲು ಸಾವಿರ ಆದಿಶೇಷರಾದರೂ ಸಮರ್ಥರಾದಾರೆಯೇ ? ಈ ಕಲಿಕೇತ ಬೊಮ್ಮಯ್ಯನು ಈ ಭೂಮಂಡಲಕ್ಕೆ ಸಾಕ್ಷಾತ್ ಪರಮೇಶ್ವರನು.' ಎನ್ನುತ್ತ ಪ್ರೀತಿಯಿಂದ ಕೊಂಡಾಡಿದನು. ವ॥ ಆ ರೀತಿ ಬಸವಣ್ಣನು ಕೊಂಡಾಡಿ ಸಂತೋಷಗೊಂಡು ಬಂಗಾರದ ಹೊರೆಯನ್ನು ಹೊತ್ತುಕೊಂಡು ಹೋಗಲು ಆ ಭಕ್ತನಿಗೆ ಒಬ್ಬ ಆಳನ್ನು ಕೊಟ್ಟು ಕಳುಹಿಸಿ, ಬೇಗನೆ ಎದ್ದು, ಆ ಕಲಿಕೇತ ಬೊಮ್ಮನ ದರ್ಶನ ಮಾಡಬೇಕೆಂಬ ಕುತೂಹಲದಿಂದ ಕೂಡಿ, ಅಲ್ಲಿಗೆ ಬಂದು ಆ ಕಲಿಕೇತ ಬೊಮ್ಮಯ್ಯನನ್ನು ಕಂಡು ಸಾತ್ವಿಕ ಭಕ್ತಿಯಿಂದ ಸಾಷ್ಟಾಂಗ

ಅಣಿಮಾದಿ ಸಿದ್ಧಿಪದಕಾ
ರಣಮಲ್ತೆ ಭವತ್ಪದಾಬ್ಜಮೆಲೆ ದೇವಗಣಾ
ಗ್ರಣಿ ಭುವನತ್ರಿತಯದೊಳಾ
ರೆಣೆವರ್ಪರ್ನಿನಗೆ ಮಹಿಮೆಯೊಳ್ ವಿತರಣದೊಳ್ ೨೦

ವ॥ ಎಂದು ಪಲವಂದದಿಂ ಸನ್ನುತಿಗೆಯ್ದು ಕೃತಾಂಜಲಿಪುಟನಾಗಿರ್ದ ಬಸವನಾಥನ ಬಿಸುರಹ ಮನಭೀಕ್ಷಿಸಿ ಮಂದಸ್ಮಿತಾಸ್ಯನಾಗಿ —

ಎನ್ನನಿದೇಕೆ ಬಣ್ಣಿಪೆ ವೃಷಾಧಿಪ ನಿನ್ನಯ ಪನ್ನರೇಂದ್ರನಂ
ತುನ್ನತಿವೆತ್ತು ಕಿನ್ನರಿಯ ಬಾಜಿಸಿ ಪೂಜಿಸಿ ನಿಚ್ಚ ನಿಚ್ಚಮುಂ
ಪೊನ್ನನುಮೇಶನಿಂ ಪಡೆಯಲಾರ್ಪನೆ ಮೇಣವನಂತೆ ವಿತ್ತಸಂ
ಪನ್ನತೆಯುಂಟೆ ಪೇಳೆನಗೆ ಸುಮ್ಮನೆ ಪೆರ್ಮೆಯನುಂಟುಮಾಡುವೈ ೨೧

ಸಿರಿಯುಂ ಪಡೆದರ್ಗಡ ಸೌಂ
ದರ ಕಿನ್ನರರಿರ್ವರಭವನಂ ಭಜಿಸಿ ವಸುಂ
ಧರೆಯೊಳಿವರಂತೆ ಭಕ್ತೋ
ತ್ಕರದೊಳ್ ಪೆಸರ್ವೆತ್ತು ಪೆರ್ಮೆವಡೆದರುಮೊಳರೇ ೨೨

ಮೃಡನಂಘ್ರಿಪೂಜೆಯದು ಕೆ
ಯ್ಯೊಡನೆ ಕರಂ ಫಲಿತಮಾಯ್ತು ಕಿನ್ನರಪತಿಗೀ
ಪೊಡವಿಯೊಳದಱಿಂದೈಸಿರಿ
ವಡೆದಂ ಶಿವನಂಘ್ರಿಭಜನಮಿಂತಿರವೇಡಾ ೨೩

ಪೂರ್ವಕ ನಮಸ್ಕಾರ ಮಾಡಿ ೨೦. 'ಶಿವಗಣ ಶ್ರೇಷ್ಠನೇ, ಎಲೆ ದೇವನೇ, ನಿನ್ನ ಪಾದ ಕಮಲವು ಅಣಿಮಾ ಮಹಿಮಾ ಮೊದಲಾದ ಅಷ್ಟ ಸಿದ್ಧಿಗಳಿಗೆ ಕಾರಣವಾದದ್ದಲ್ಲವೇ ? ಮೂರು ಲೋಕದಲ್ಲಿ ನಿನ್ನ ಮಹಿಮೆಯಿಂದ ಕೂಡಿದ ಈ ವಿತರಣ ಗುಣಕ್ಕೆ ಯಾರು ಸಮನಾದಾರು ?' ವ॥ ಹೀಗೆಂದು ಹಲವು ಪ್ರಕಾರದಲ್ಲಿ ಶ್ರೇಷ್ಠವಾಗಿ ಶ್ಲಾಘಿಸಿ, ಕೈ ಮುಗಿದವನಾಗಿ, ಇದ್ದಂಥ ಬಸವಣ್ಣನವರ ಮುಖ ಕಮಲವನ್ನು ನೋಡಿ, ನಸುನಗೆಯಿಂದ ಕೂಡಿದ ಮುಖವುಳ್ಳವನಾಗಿ ೨೧. ವೃಷಭೇಶ್ವರ, ನನ್ನನ್ನು ಇದೇಕೆ ವರ್ಣಿಸುವೆ ? ಕಿನ್ನರಿ ಬೊಮ್ಮಯ್ಯನ ಹಾಗೆ ಔನ್ನತ್ಯದಿಂದ ಕೂಡಿ, ಕಿನ್ನರಿಯನ್ನು ಬಾರಿಸಿ, ಪೂಜಿಸಿ, ಪ್ರತಿ ದಿನವೂ ಉಮಾಪತಿಯಿಂದ ಹೊನ್ನುಗಳನ್ನು ಪಡೆಯಲು ಸಾಮರ್ಥ್ಯವುಳ್ಳವನೇ? ಹಾಗೂ ಅವನ ಹಾಗೆ ನನಗೆಐಶ್ವರ್ಯದಿಂದಕೂಡಿರುವಿಕೆಯುಂಟೆ? ಹೇಳು : ನಿಷ್ಕಾರಣವಾಗಿ ದೊಡ್ಡತನವನ್ನು (ನನಗೆ) ಉಂಟುಮಾಡುತ್ತಿದ್ದೀಯೆ.' (ಎಂದನು) ೨೨. 'ಲೋಕದಲ್ಲಿ ಸುಂದರನಂಬಿ ಮತ್ತು ಕಿನ್ನರಿ ಬೊಮ್ಮಯ್ಯ ಈ ಇಬ್ಬರೇ ಪರಮೇಶ್ವರನನ್ನು ಕುರಿತು ಹಾಡಿ, ಸಂಪತ್ತನ್ನು ಪಡೆದವರಲ್ಲವೆ ? ಅವರಹಾಗೆ ಭಕ್ತ ಸಮೂಹದಲ್ಲಿ ಹೆಸರು ಪಡೆದು ದೊಡ್ಡತನವನ್ನು ಹೊಂದಿದವರು ಇರುವರೇ ?' ೨೩. ಈ ಲೋಕದಲ್ಲಿ ಪರಮೇಶ್ವರನ ಪಾದ ಪೂಜೆಯೆಂಬುದು ಕಿನ್ನರಿ ಬೊಮ್ಮಯ್ಯ ಒಡೆಯನ ಮೂಲಕವಾಗಿಯೇ ಚೆನ್ನಾಗಿ ಫಲಕಾರಿಯಾದುದಾಯಿತು. ಅದರಿಂದ

ಉದಯದೊಳೆಳ್ದು ಬೈಗೆವರೆಗಂ ನೆಗಳ್ದಿಂ ಮಿಗೆ ತೊಳ್ತುಗಜ್ಜಮಂ
ಮದನವಿರೋಧಿಯಿಂ ಪಡೆದುದಿಲ್ಲರೆವಾಗಮನಾದೊಡಂ ಸಮಂ
ತೊದವಿದ ಮದ್ದರಿದ್ರತೆಯುಡಂಗಿದುದಿಲ್ಲಕಟಲ್ಪಧಾನ್ಯಮ
ಲ್ಲದೆ ಪೆಱತಾವುದುಂ ದೊರೆಯದೆನ್ನಯ ಪೂಜೆ ನಿರರ್ಥಮುರ್ವಿಯೊಳ್ ೨೪

ತ್ರೈಲೋಕ್ಯಪತಿಯನಭವನ
ನೋಲಗಿಸಿಯುಮಾಂ ದರಿದ್ರನಾಗಿರ್ಪೆಂ ವೀ
ಣಾಲಲಿತರವದೆ ಮೆಚ್ಚಿಸಿ
ಶೂಲಿಯನಾ ಕಿನ್ನರಂ ಕರಂ ಸಿರಿವಡೆದಂ ೨೫

ವ॥ ಎಂದು ಕಲಕೇತದೇವಂ ಕಟಕಿವಾತಂ ನುಡಿದು ಮತ್ತಮಿಂತೆಂದಂ—

ಹರನಂ ಕರೆದೋಯೆನಿಸಿದ
ಪರಿಯಂ ಕೇಳ್ದೆಳಸಿ ನೋಡಲೆಯ್ದಿದ ಮಾಹೇ
ಶ್ವರತತಿಯ ಪೂಜೆಗಾ ಕಿ
ನ್ನರಂಗೆ ಶಿವನಿತ್ತ ವಿತ್ತಮೇಂ ಸಾಲ್ದಪುದೇ ೨೬

ಹರನಂ ಪೂಜಿಸಿ ಲಜ್ಜೆಗೆಟ್ಟಿರೆದು ಭಾಗ್ಯಂಗೊಳ್ವನಲ್ಲಯ್ಯ ಶಂ
ಕರದಾಸಯ್ಯನ ಭೃತ್ಯನಾಂ ಬಸವ ತತ್ಪಾದಾಂಬುಜ ಧ್ಯಾನನಿ

(ಅವನು) ಐಶ್ವರ್ಯವನ್ನು ಹೊಂದಿದನು. ಶಿವ ಪಾದ ಪೂಜಕನು ಈ ರೀತಿ ಇರಬೇಡವೇ? ೨೪. ಸೂರ್ಯೋದಯ ಕಾಲದಲ್ಲೆದ್ದು, ಸಾಯಂಕಾಲದವರೆಗೂ ಹೆಚ್ಚಾಗಿ ತೊತ್ತುಗೆಲಸ ಮಾಡಿ, ಆ ಮನ್ಮಥಾರಿಯಾದ ಶಿವನಿಂದ ಅರ್ಧ ಹಾಗವನ್ನಾದರೂ ಪಡೆಯಲು (ನನಗೆ) ಆಗಲಿಲ್ಲ; ವಿಶೇಷವಾಗಿ ಪ್ರಾಪ್ತವಾಗಿರುವ ನನ್ನ ದರಿದ್ರತೆಯು ಅಡಗಲೂ ಇಲ್ಲ; ಅಕಟ! ನಾನು ಮಾಡುವ ಪೂಜೆ, ಸ್ವಲ್ಪ ಧಾನ್ಯದ್ದಲ್ಲದೆ (ಕೇವಲ ಎರಡು ಬಳ್ಳ ಧಾನ್ಯದ್ದಲ್ಲದೆ) ಮತ್ತಾವುದೊಂದನ್ನೂ ಅರಿಯದು. (ಈ ನನ್ನ ಪೂಜೆ) ಲೋಕದಲ್ಲಿ ವ್ಯರ್ಥವಾದದ್ದಾಗಿದೆ. ೨೫. ನಾನು ಮೂರು ಲೋಕಗಳ ಪತಿಯಾದ ಶಿವನನ್ನು ಸೇವಿಸಿಯೂ ಕೂಡ ದರಿದ್ರನಾಗಿ ಇದ್ದೇನೆ; ಆ ಕಿನ್ನರಯ್ಯನು ಶಿವನನ್ನು ವೀಣೆಯ ಮನೋಹರ ಧ್ವನಿಯಿಂದ ಮೆಚ್ಚಿಸಿ ಹೆಚ್ಚಾಗಿ ಐಶ್ವರ್ಯವನ್ನು ಹೊಂದಿದನು. ವ॥ ಹೀಗೆಂದು ಕಲಿಕೇತದೇವನು ಅಪಹಾಸ್ಯ (ಚುಚ್ಚುವ)ದ ನುಡಿಗಳನ್ನು ನುಡಿದು ಪುನಃ ಹೀಗೆ ಹೇಳಿದನು. ೨೬. 'ಹರನನ್ನು ಕರೆದು ಓ! ಎನಿಸಿದ ರೀತಿಯನ್ನು ಕೇಳಿ ಅಪೇಕ್ಷೆ ಪಟ್ಟು ನೋಡುವುದಕ್ಕೆ ಬರುವ ಮಾಹೇಶ್ವರ ಸಮೂಹದ ಪೂಜೆಗೆ, ಶಿವನು ಆ ಕಿನ್ನರೇಶನಿಗೆ ಕೊಡುವ ಹಣವು ಸಾಕಾಗುವುದೇ? ೨೭. 'ನಾನು ಹರನನ್ನು ಪೂಜಿಸಿ ಲಜ್ಜೆಗೆಟ್ಟು ಬೇಡಿ ಭಾಗ್ಯವನ್ನು ತೆಗೆದುಕೊಳ್ಳುವವನು ಅಲ್ಲವಯ್ಯ! ಶಂಕರ ದಾಸಯ್ಯನ ಭೃತ್ಯನು. ಬಸವಣ್ಣ, ಆ ಶಂಕರದಾಸಿಮಯ್ಯನ ಪಾದ ಕಮಲದ ಅತಿಶಯ ಧ್ಯಾನದಿಂದ ಕೂಡಿದ ಮನಸ್ಸುಳ್ಳವನಾಗಿ ಉತ್ತಮ ರೀತಿಯಿಂದ ಮಾಡುವ ಕಾಯಕ

ರ್ಭರಭಾವಂ ಮಿಗೆ ಮಾಳ್ಪ ಕಾಯಕದಿನಲ್ಪದ್ರವ್ಯಮುಂಟಂತದಂ
ತರವೇಳ್ ಕಿನ್ನರನಂ ಸಹಸ್ರ ಶಕಟವ್ರಾತಂಗಳಂ ಕೊಟ್ಟಪೆಂ ೨೭

ವ॥ ಎಂದಾ ಶರಣವರೇಣ್ಯಂ ನಗೆನಗುತ್ತುಂ ಕರತಳದಿಂ ಮೃತ್ತಿಕೆಯಂ ಪಿಡಿಪಿಡಿದೀಡಾಡ ಲೊಡನನಿತುಂ ಸುವರ್ಣಮಯಮಾಗೆ ಕಂಡು ಬಸವಂ ಬಿಸವಂದಂಬಡೆದು ಕೀರ್ತಿಸುತಿರ್ಪಿನಮಿತ್ತಲ್ಕಿ ನ್ನರಯ್ಯನದನೆಲ್ಲಮಂ ಕೇಳ್ದು ಪಿರಿದುಂ ಭೀತಿದಾಳ್ದು ಪರಿತಂದು ಕಲಕೇತಬ್ರಹ್ಮದೇವನಡಿದಾವರೆ ಯೊಳ್ಕೆಡೆದು—

ಶರಧಿಯ ಮುಂದೆ ಪಲ್ವಲದ ಪೆರ್ಮೆಯೆ ಸಿಂಹದ ಮುಂದೆ ಪುಲ್ಲೆಯ
ಳ್ತರವೆ ಸುರಾವನೀರುಹದ ಮುಂದೆ ಕರಂಜದ ಕೊರ್ವೆ ಚಾರುಚಂ
ಡರುಚಿಯ ಮುಂದೆ ಮಿಂಚುಳುಮಿನೇಳ್ಗೆಯೆ ಸತ್ವಮಹತ್ವಸಾರಭಾ
ಸುರತರ ನಿನ್ನ ಮುಂದೆ ನೆಗಳ್ದೆನ್ನಯ ತೇಜಮೆ ಪೇಳ್ದಯಾಕರಾ ೨೮

ವ॥ ಎಂದು ಕಿಂಕರತೆಯುನಪ್ಪುಕೆಯ್ದೆಱಗಿರ್ದ ಕಿನ್ನರಯ್ಯನಂ ಕಾರುಣ್ಯದಿಂ ನೋಡಿ ತೆಗೆದು ಬಿಗಿಯಪ್ಪಿ ಮನ್ನಿಸಿ—

ನಿರುಪಾಧಿ ನಿಷ್ಪ್ರಪಂಚ
ಸ್ಥಿರ ಭಕ್ತಿಯ ಕೀಲನುಸುರ್ದು ಲಿಂಗಾಂಗಪರಿ

ಶೀಲದಿಂದ (ಗಳಿಸಿದ) ಅಲ್ಪದ್ರವ್ಯ ನನ್ನಲ್ಲುಂಟು. ಆ ಕಿನ್ನರಯ್ಯನನ್ನು ಸಹಸ್ರ ಸಂಖ್ಯೆಯ ಬಂಡಿಗಳನ್ನು ಹೂಡಿಕೊಂಡು ಬರುವುದಕ್ಕೆ ತಿಳಿಸು. ಆ ಹಣವನ್ನು ಕೊಡುತ್ತೇನೆ. [ಅವನಿಗೆ ಶರಣರ ಸೇವೆಗೆ ಈಗ ದೊರಕುವ ಹಣ ಸಾಕಾಗುತ್ತಿಲ್ಲವೆಂದು ವ್ಯಂಗ್ಯವಾಗಿ ನುಡಿಯುತ್ತಿರುವನೆಂದು ಭಾವ] ವ॥ ಹೀಗೆಂದು ಶರಣವರೇಣ್ಯನಾದ ಆ ಕಲಿಕೇತ ಬೊಮ್ಮಯ್ಯನು ನಗು ನಗುತ್ತಲೇ ಕೈಯಿಂದ ಮಣ್ಣನ್ನು ಹಿಡಿದು ಸುತ್ತಲೂ ಬಿಸಾಡು ತ್ತಿರಲು ಆ ಎಲ್ಲಮಣ್ಣು ಸುವರ್ಣಮಯವಾಗುತ್ತಿರಲು ಬಸವಣ್ಣನು ಕಂಡು ಕೌತುಕ ಗೊಳ್ಳುತ್ತ ಶ್ಲಾಘಿಸುತ್ತಿರಲು, ಇತ್ತ ಕಿನ್ನರಿ ಬೊಮ್ಮಯ್ಯನು ಈ ವೃತ್ತಾಂತವನ್ನೆಲ್ಲ ಕೇಳಿ ಬಹು ಭಯಗೊಂಡು, ಓಡಿ ಬಂದು ಕಲಿಕೇತ ಬೊಮ್ಮಯ್ಯನ ಪಾದ ಕಮಲಗಳ ಮೇಲೆ ಬಿದ್ದು. ೨೮. ದಯಾಕರನೇ, ಸಮುದ್ರದ ಮುಂದೆ ಸಣ್ಣ ಹೊಂಡದ ಹಿರಿಮೆಯೆ ? ಸಿಂಹದ ಮುಂದೆ ಹುಲ್ಲೆಯ ಮರಿಯ ಆಧಿಕ್ಯವೇ ? ಕಲ್ಪವೃಕ್ಷದ ಮುಂದೆ ಹುಲಿಯು ಗುರು ಗಿಡದ ಕೊಬ್ಬೇ ? ಮನೋಹರವಾದ ಸೂರ್ಯನ ಮುಂದೆ ಮಿಂಚು ಹುಳದ ಹಿರಿಮೆಯೋ ? ಸತ್ಯದ ಸಾರದಿಂದ ಮನೋಹರನಾದವನೇ, ಖ್ಯಾತಿವೆತ್ತ ನಿನ್ನ ಮುಂದೆ ನನ್ನ ತೇಜಸ್ಸೇ? ಹೇಳು! ವ॥ ಹೀಗೆಂದು ಆ ಕಲಿಕೇತ ಬೊಮ್ಮಯ್ಯನ ಸೇವಕತ್ವನವನ್ನು ಸ್ವೀಕರಿಸಿ, ನಮಸ್ಕರಿಸಿದ ಕಿನ್ನರಯ್ಯನನ್ನು ಕಾರುಣ್ಯದಿಂದ ನೋಡಿ, ಬರಸೆಳೆದು ಬಿಗಿ ದಪ್ಪಿ ಮನ್ನಿಸಿ ೨೯–೩೧. ಆಗ ಕಿನ್ನರಯ್ಯನಿಗೆ ನಿಷ್ಕಪಟವಾದ ಪ್ರಪಂಚದ ಸುಖ ದುಃಖಗಳಿಂದ ದೂರವಾದ ಸ್ಥಿರ ಭಕ್ತಿಯ ರಹಸ್ಯವನ್ನು ಹೇಳಿ, ಲಿಂಗಾಂಗ ಸಾಮರಸ್ಯದ

ಸ್ಫುರಿತಸುಯೋಗದ ವರ್ದುವು
ನೊರೆದಳವಡಿಸುತ್ತೆ ಕಿನ್ನರಯ್ಯಂಗಾಗಳ್ ೨೯

ಕರೆದೊಡಗೊಂಡು ಪೋಗಿ ನಿಜಮಂದಿರದೊಳ್ಶಿವಪೂಜೆಗೆಯ್ಸಿ ಭಾ
ಸುರ ಪರಮಪ್ರಸಾದ ಪರಿತೃಪ್ತಿಯನಾಗಿಸಿ ದಿವ್ಯಭೂಷಣಾಂ
ಬರತತಿಯಿಂದಲಂಕರಿಸಿ ಸತ್ಕ್ರಿಯೆಯಿಂ ನೆಗಳ್ದಾ ಮಹಾತ್ಮನಾ
ದರಿಸುತೆ ಕಿನ್ನರೇಂದ್ರ ವೃಷಭಾಧಿಪರಂ ಕಳುಪುತ್ತೆ ಲೀಲೆಯಿಂ ೩೦

ಎಂದಿನ ತೆಜದಿಂ ಮಹಿಮೆಯ
ನಂದಂದಿಂಗಿಳೆಯೊಳೊಲ್ದು ಬೀಜುತೆ ಪರಮಾ
ನಂದಂ ಮಿಗೆ ಭಜಿಸುತೆ ಚರ
ವೃಂದಮನೊಪ್ಪಿರ್ದನಲ್ಲಿ ಕಲಕೇತಾರ್ಯಂ ೩೧

ಕಲಕೇತಬೊಮ್ಮಿದೇವನ
ವಿಲಸತ್ಕಥೆಯುಂ ವಿಳಾಸಮುಮದರ್ೋದೆ ಮನಂ
ನಲಿದೊಡನೆ ಕೇಳೆ ಮನುಜಾ
ವಲಿ ಶಂಕರನೀವನಭಿಮತೇಷ್ಟಮನನಿಶಂ ೩೨

ಪದಪಿಂದಂ ಕಿನ್ನರಾರ್ಯಂಗೆಱಗಿ ಕಳುಪುತುಂ ತನ್ನಿಶಾಂತಕ್ಕೆ ಕೆಯ್ಗ
ಟ್ಟಿದ ನಣ್ಪಂ ತನ್ಮಹತ್ವಸ್ಥಿತಿಯನುಱೆ ನಿಜಸ್ವಾಂತದೊಳ್ ಭಾವಿಸುತ್ತುಂ
ಮುದದಿಂ ಕೊಂಡಾಡುತುಂ ಭಕ್ತರೊಳೆ ತಳರ್ದು ಶುದ್ಧಾಂತಮಂ ಪೊಕ್ಕು ಭಕ್ತಾ
ಘದ ಭಾಗ್ಯಂ ರೂಪುಗೊಂಡಂತೆಸೆದನಭವಪೂಜಾವಿತಂದ್ರಂ ವೃಷೇಂದ್ರಂ ೩೩

ಗುಟ್ಟನ್ನು ಅವನಿಗುಂಟು ಮಾಡುತ್ತ ಸಂಗಡ ಕರೆದುಕೊಂಡು ಹೋಗಿ ತನ್ನ ಮಂದಿರದಲ್ಲಿ ಶಿವ ಪೂಜೆಯನ್ನು ಮಾಡಿಸಿ, ಶೋಭಿಸುವ ಉತ್ಕೃಷ್ಟ ಪ್ರಸಾದ ಸೇವನೆಯಿಂದುಂಟಾಗುವ ಸಂತೋಷವನ್ನುಂಟುಮಾಡಿ, ಶ್ರೇಷ್ಠವಾದ ವಸ್ತ್ರ ಒಡವೆಗಳಿಂದ ಅಲಂಕಾರಗೊಳಿಸಿ, ಆ ಮಹಾತ್ಮನಾದ ಕಲಿಕೇತಬೊಮ್ಮಯ್ಯನು ಸತ್ಕ್ರಿಯೆಯನ್ನು ಆಚರಿಸಿ, ಆದರದಿಂದ ಕಿನ್ನರೇಂದ್ರ ಮತ್ತು ಬಸವಣ್ಣನವರನ್ನು ಕಳುಹಿಸಿ ಲೀಲೆಯಿಂದ ಆ ಕಲ್ಯಾಣ ನಗರದಲ್ಲಿ ಎಂದಿನ ರೀತಿಯಿಂದ, ಆಯಾಯ ದಿವಸಕ್ಕೆ ಭೂಮಿಯಲ್ಲಿ (ಬೀರತಕ್ಕ) ಮಹಿಮಾ ವಿಶೇಷಗಳನ್ನು ಪ್ರೀತಿಯಿಂದ ಬೀರುತ್ತ, ಹೆಚ್ಚಾದ ಆನಂದದಿಂದ ಜಂಗಮ ಸಮೂಹವನ್ನು ಭಜಿಸುತ್ತ ಒಪ್ಪಿದನು. ೩೨. ಕಲಿಕೇತ ಬೊಮ್ಮಯ್ಯನ ಶ್ರೇಷ್ಠವಾದ ಕಥೆಯನ್ನು ಮನುಷ್ಯರ ಸಮೂಹವು ಪ್ರೀತಿಯಿಂದ ಓದಿದರೆ, ಮನಸ್ಸಂತೋಷದಿಂದ ಆ ಕೂಡಲೇ ಕೇಳಿದರೆ, ಶಂಕರನು ಯಾವಾಗಲೂ ಅವರವರ ಅಭಿಮತವಂತೆ ಇಷ್ಟಾರ್ಥಗಳನ್ನು ಕೊಡುವನು. ೩೩. ಪ್ರೀತಿಯಿಂದ ಕಿನ್ನರಾರ್ಯನಿಗೆ ಶಿವಪೂಜೆಯಲ್ಲಿ ಆಲಸ್ಯವಿಲ್ಲದ ಬಸವೇಶ್ವರನು ನಮಸ್ಕರಿಸಿ, ಅವನ ಮನೆಗೆ ಕಳುಹಿಸುತ್ತ ಕೈ ಮೀರಿದ ನಯದಿಂದ (ಅಧಿಕವಾದ ಪ್ರೀತಿಯಿಂದ) ಆ ಕಲಿಕೇತಯ್ಯನ ಮಹಿಮೆಯ ರೀತಿಯನ್ನು ಚೆನ್ನಾಗಿ ತನ್ನ ಮನಸ್ಸಿನಲ್ಲಿ ಭಾವಿಸುತ್ತ, ಭಕ್ತರೊಡನೆ ಕೊಂಡಾಡುತ್ತ

ಮುರಶಾಸನ ವಾಗ್ವರ ವಾಸವ ಭಾ
ಸುರಮೌಲಿವಿರಾಜಿತ ಪಾದಯುಗೇ
ಪರಮೇಶ್ವರಿ ಪಾವನರೂಪಿಣಿ ನೀಂ
ಪೊರೆಯೆನ್ನನಿಳಾಧರರಾಜಸುತೇ ೩೪

ಇದು ವಿನಮದಖಿಳ ಸುರಾಸುರೇಂದ್ರಮಕುಟತಟಘಟಿತ ಮಣಿಗಣಾಗಣಿತ ರುಚಿನಿಚಯ

ತರುಣಾರುಣಾತಪಪರಿಲಸಿತ ಪರಮ ಶಿವಲಿಂಗ ಪಾದಾರವಿಂದಪರಾಗಭಸಿತ

ಭಾಸುರಲಲಾಟಪಟ್ಟಸರಸಜನಮಾನಿತೋಭಯಕವಿತಾವಿಶಾರದ

ಶ್ರೀಷಡಕ್ಷರಿದೇವಭಕ್ತಿವಿರಚಿತ

ಶ್ರೀಮದ್ ಬಸವರಾಜವಿಜಯಮಹಾಪುರಾಣದೊಳ್ ಕಲಕೇತಬ್ರಹ್ಮವೈಭವಕಥನಂ

ಅಷ್ಟಾದಶಾಶ್ವಾಸಂ ಸಮಾಪ್ತಂ

ಅಂತು ಆಶ್ವಾಸ ೧೪ಕ್ಕೆ ಪದಗಣನೆ ೧೪೯೯ಕ್ಕೆ ಮಂಗಳಮಹಾ ಶ್ರೀ॥

ಹೊರಟು ಅಂತಃಪುರವನ್ನು ಸೇರಿ, ಭಕ್ತ ಸಮೂಹದ ಭಾಗ್ಯವೇ ಆಕಾರ ಧರಿಸಿದಂತೆ ಶೋಭಿಸಿದನು. ೩೪. ವಿಷ್ಣು ಬ್ರಹ್ಮ, ದೇವೇಂದ್ರ ಇವರುಗಳ ಪ್ರಕಾಶಿಸುವ ಕಿರೀಟದಲ್ಲಿನ ರತ್ನಪ್ರಕಾಶದಿಂದ ಶೋಭಿಸುವ ಚರಣಯುಗವುಳ್ಳ ಪರಮೇಶ್ವರಿಯೇ, ಪರಿಶುದ್ಧವಾದ ಆಕಾರವುಳ್ಳವಳೇ, ಪರ್ವತರಾಜ ಪುತ್ರಿಯೇ ನನ್ನನ್ನು ರಕ್ಷಿಸು.

ಹದಿನೆಂಟನೆಯ ಆಶ್ವಾಸವು ಸಮಾಪ್ತವಾಯಿತು

ಏಕೋನವಿಂಶಾಶ್ವಾಸಂ

[ಮೋಳಿಗೆ ಮಾರಯ್ಯನ ಕಥೆ]

ಶ್ರೀಕರ ಹಿಮಾದ್ರಿತನಯಾ
ಲೋಕನರುಚಿಚಂದನಚ್ಛಟಾಲಿಪ್ತಾಂಗಂ
ಸ್ವೀಕೃತನಿಗಮಂ ಪಾಲಿತ
ಲೋಕಂ ಪೊರೆಗೆಮ್ಮನಾವಗಂ ಶಿವಲಿಂಗಂ ೧

ವ॥ ಮತ್ತಮಾ ಕಲ್ಯಾಣಸಂಪದದಂಬೆತ್ತ ಕಲ್ಯಾಣಪುರದಲ್ಲಿ—

ಶರಣೇಚ್ಛಾಪರಿಪಾಲಕಂ ವಿಧಿನಿಷೇಧಾತೀತವೃತ್ತಂ ಶುಭಾ
ಕರಸೌಶೀಲ್ಯಸಮನ್ವಿತಂ ವಿಮಳಚಿತ್ತಂ ಷಟ್‌ಸ್ಥಲಜ್ಞಾನತ
ತ್ಪರನುದ್ಧೂತದುರೀಷಣಂ ದುರಿತದೂರಂ ಪ್ರಾಣಲಿಂಗೈಕ್ಯಭಾ
ಸುರನತ್ಯಂತ ವಿಶುದ್ಧಕೀರ್ತಿ ಚರಪಾದಾಂಭೋಜಪೂಜೋತ್ಸವಂ ೨

ಜಿತರಿಪುಷಡ್ವರ್ಗನಪಾ
ಕೃತಭವಿಸಂಸರ್ಗನಮಳಗುಣಭೂಷಣನ
ರ್ದಿತಮಾಯಾಮಯನುರರೀ
ಕೃತಸುವ್ರತನಪ್ರತರ್ಕ್ಯಮಹಿಮಾಧಾರಂ ೩

ಮೋಳಿಗೆ ಮಾರಯ್ಯನ ಕಥೆ

೧. ಮಂಗಳವನ್ನುಂಟುಮಾಡುವ (ಸಂಪತ್ತನ್ನುಂಟುಮಾಡುವ) ಪಾರ್ವತಿಯ ನೋಟದ ಕಾಂತಿಯೆಂಬ ಶ್ರೀಗಂಧದ ಸಮೂಹದಿಂದ (ಸಾಲುಗಳಿಂದ) ಲೇಪಿಸಲ್ಪಟ್ಟ ಅವಯವಗಳುಳ್ಳವನೂ, ವೇದಗಳನ್ನು ಅನುಗ್ರಹಿಸಿದವನೂ, ಪ್ರಪಂಚವನ್ನು ಸಂರಕ್ಷಿಸುವವನೂ, ಆದ ಶಿವಲಿಂಗನು ನಮ್ಮನ್ನು ಸದಾ ರಕ್ಷಿಸಲಿ. ವ॥ ಮತ್ತು ಆ ಮಂಗಳಕರವಾದ ಸಂಪತ್ತಿನಿಂದ ಮೆರೆಯುವ ಕಲ್ಯಾಣ ನಗರದಲ್ಲಿ ೨–೩–೪. ಶರಣರ ಇಚ್ಛೆಯನ್ನು ಪರಿಪಾಲಿಸುವ, ಈ ಕಾರ್ಯ ಮಾಡು, ಇದನ್ನು ಮಾಡಬೇಡ ಇತ್ಯಾದಿ, ಪ್ರಪಂಚದ ನಿಯಮವನ್ನು ಮೀರಿದ ನಡೆಯುಳ್ಳ, ಶುಭವನ್ನುಂಟುಮಾಡುವ ಒಳ್ಳೆಯ ಶೀಲದಿಂದ ಕೂಡಿದ ಪರಿಶುದ್ಧ ಚಿತ್ತವುಳ್ಳ, ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗ, ಶರಣ, ಐಕ್ಯರೆಂಬ ಷಟ್‌ಸ್ಥಲ ಜ್ಞಾನದಲ್ಲಿ ತತ್ಪರನಾದ, ಅರ್ಥೇಷಣ, ದಾರೇಷಣ, ಪುತ್ರೇಷಣ ಗಳೆಂಬ ಈಷಣತ್ರಯಗಳನ್ನು ಹೋಗಲಾಡಿಸಿದ (ತೊಡೆದು ಹಾಕಿದ), ಪಾಪವನ್ನು ದೂರೀಕರಿಸಿದ, ಪ್ರಾಣಲಿಂಗದಲ್ಲಿ ಐಕ್ಯಗೊಂಡ ಚಿತ್ತದಿಂದ ಪ್ರಕಾಶಿಸುವ, ನಿರ್ಮಲವಾದ ಅಧಿಕ ಯಶಸ್ಸಿನಿಂದ ಕೂಡಿದ, ಜಂಗಮ ಪಾದಕಮಲದ ಪೂಜೆಯಲ್ಲಿ ಉತ್ಸುಕನಾದ, ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಾದಿ ಆರು ವೈರಿಗಳನ್ನು

ಏಳಿಸಿ ಭೋಗಪೂಗದನುರಾಗಮನುದ್ಧ ಶಿವಾನುಭಾವದೊ
ಳ್ಕೇಳಿಸಿ ಚಿತ್ತಮಂ ನಿಜಪದಾನತರಂ ಶಿವಭಕ್ತಿಭಾಗ್ಯದೊ
ಳ್ಪಾಳಿಸಿ ಕರ್ಮವಾಸನೆ ತೊಡಂಕದಪಾಂಗಮಚರ್ಯತಾಗಳುಂ
ಮೋಳಿಗೆ ಮಾರನೀಶ್ವರಕುಮಾರನಪಾಕೃತಮಾರನೊಪ್ಪಿದಂ ೪

ಅನುದಿನಮುಗ್ರಕಾನನಕೆ ಪೋಗಿ ಕುಠಾರದಿನಿಂಧನಂಗಳಂ
ಮನದೊಲವಿಂದೆ ತಾಂ ತಱಿದು ಬಲ್ಪೊಱೆಗಟ್ಟಿ ಪೊದಳ್ದು ಪೊತ್ತು ನೆ
ಟ್ಟನೆ ತರುತಲ್ಲಿ ಮಾಱಿ ದೊರೆತರ್ಥದೆ ಜಂಗಮಕೋಟಿ ಬಂದೊಡಂ
ಘನಮಹಿಮಂ ಸುತೃಪ್ತಿಯನೊಡರ್ಚುತೆ ಮೋಳಿಗೆ ಮಾರನಿರ್ಪಿನಂ ೫

ಬಸವಗೃಹದಿವ್ಯಭೋಜನ
ವಿಸರದಿನುಱೆ ತಣಿಯದೆಯ್ದಿ ಜಂಗಮನಿವಹಂ
ಮಿಸುಪಂಬಕಳಮನಾರೋ
ಗಿಸಿ ತಣಿಗುಂ ಮಾರದೇವನಿಲಯದೊಳನಿಶಂ ೬

ವ॥ ಅಂತಾರೋಗಿಸಿದ ಚರಲಿಂಗನಿಕರಮೊಂದು ದಿನಂ ಬಸವನ ಗೃಹಕ್ಕೇಳ್ತಂದು ತನ್ಮುಖಾರವಿಂದಮನಭೀಕ್ಷಿಸಿ—

ಜಯಿಸಿದ, ಲಿಂಗಹೀನರ ಸಂಬಂಧವನ್ನು ತಿರಸ್ಕರಿಸಿದ, ಶ್ರೇಷ್ಠವಾದ ಗುಣಗಳಿಂದ ಭೂಷಣನಾದ, ಅಜ್ಞಾನವೆಂಬ ರೋಗವನ್ನು ಮಾಯಗೊಳಿಸಿದ, ಒಳ್ಳೆಯ ನಿಯಮವನ್ನು ಅಂಗೀಕರಿಸಿದ, ಊಹಿಸುವುದಕ್ಕಸಾಧ್ಯವಾದ ಮಹತ್ವಗಳಿಗೆ ಆಶ್ರಯನಾದ, ಮನ್ಮಥನನ್ನು ಕೀಳುಗೊಳಿಸಿದ, ಶಿವಪುತ್ರನಾದ ಮೋಳಿಗೆಯ ಮಾರಯ್ಯನು—ಇಹ ಲೋಕದ ಸೌಖ್ಯ ಪರಂಪರೆಗಳ ಅನುಭವವನ್ನೆಲ್ಲ ತಿರಸ್ಕರಿಸಿ, ಶ್ರೇಷ್ಠವಾದ (ಉದ್ಧ) ಶಿವಾನುಭಾವದಲ್ಲಿ ಚಿತ್ತವನ್ನು ಸೇರಿಸಿ, ತನ್ನ ಪಾದಕ್ಕೆ ನಮಸ್ಕರಿಸಿದವರನ್ನು, ಶಿವಭಕ್ತಿಯೆಂಬ ಐಶ್ವರ್ಯದಲ್ಲಿ ಜಾಲಾಡಿಸಿ, ವ್ಯರ್ಥಕರ್ಮಗಳ ವಾಸನೆಯ ತೊಡಕಾಗದ ರೀತಿಯನ್ನು ಸಂಬಂಧಗೊಳಿಸಿ (ಕರ್ಮವಾಸನೆಯನ್ನು ನಿವಾರಿಸಿ), ಸದಾ ಒಪ್ಪಿದ್ದನು. ೫. ಇಂಥ ಘನಮಹಿಮನಾದ ಮೋಳಿಗೆಯ ಮಾರಯ್ಯನು ಪ್ರತಿ ದಿನವೂ ಉಗ್ರವಾದ ಕಾಡಿಗೆ ಹೋಗಿ, ಮನಸ್ಸಂತೋಷದಿಂದ ಕೂಡಿ, ಕೊಡಲಿಯಿಂದ ಸೌದೆಗಳನ್ನು ಕತ್ತರಿಸಿ ದೊಡ್ಡ ಹೊರೆಯನ್ನು ಕಟ್ಟಿ, ಉತ್ಸಾಹದಿಂದ ಹೊತ್ತುಕೊಂಡು ನೆಟ್ಟಗೆ ತಂದು ಆ ಕಲ್ಯಾಣ ನಗರದಲ್ಲಿ ಮಾರಿ, ದೊರೆತ ದ್ರವ್ಯದಿಂದ ಬಂದ ಜಂಗಮ ಸಮೂಹಕ್ಕೆ ಸಂತೃಪ್ತಿಯನ್ನುಂಟು ಮಾಡುತ್ತ ಇರುತ್ತಿರುವಾಗ—೬. ನಿರಂತರವೂ ಜಂಗಮ ಸಮೂಹವು ಬಸವಣ್ಣನ ಮನೆಯ ದಿವ್ಯಭೋಜನ ಸಮೂಹದಿಂದ ಚೆನ್ನಾಗಿ ತಣಿಯದೆ ಬಂದು ಮಾರಿದೇವನ ಮನೆಯಲ್ಲಿ ಅಂಬಲಿಯನ್ನು ಸ್ವೀಕರಿಸಿ ತೃಪ್ತಿಪಡುತ್ತಿದ್ದರು. ವ॥ ಆ ರೀತಿ ಆರೋಗಣೆ ಮಾಡಿದ ಜಂಗಮಲಿಂಗ ಸಮೂಹವು, ಒಂದು ದಿನ

ಎಲೆ ಬಸವೇಶ ನಿನ್ನ ಗೃಹದೊಳ್ಸವೆದಿರ್ದ ನವೀನಸಾರವಂ
ಜುಲತರ ಪಡ್ರಸಾನ್ನತತಿ ನೋಳ್ಪೊಡೆ ಮೋಳಿಗೆ ಮಾರದೇವನಾ
ನಿಲಯದೊಳಿಂಬುವೆತ್ತು ಮಿಸುಪಂಬಲಿಕಕ್ಕೆಣೆವಾರದಾವಗಂ
ನಲಿವದನುಂಡ ಮದ್ರಸನೆಗನ್ಯರಸಂ ವಿರಸಂ ಧರಿತ್ರಿಯೊಳ್ ೭

ವ॥ ಎಂದು ಮತ್ತಮಿರದೆ—

ಅನುದಿನಮಾತ್ಮಕಾಯಕದಿನೊರ್ಕೊಳಗಂ ಬರೆ ಬತ್ತಮಂತದಂ
ಮನೆಗಿರದೊಲ್ದು ತಂದದಱಿನಚ್ಚರಿವೆತ್ತೆನಿತಲ್ಲಿ ಬಂದೊಡಂ
ಘನಚರವೃಂದಮಂ ತಣಿಪುಗುಂ ನೆಗಳ್ದಾತನ ಭಕ್ತಿಯಂದಮಂ
ಮನಸಿಜವೈರಿಯೊರ್ವನಱಿವಂ ಪೊಗಳಲ್ಪೆಱರೇಂ ಸಮರ್ಥರೇ ೮

ವ॥ ಎಂದು ಮಗುಳ್ದು ಮಗುಳ್ದು ಬಗೆವೆರ್ಚಿ ಪೊಗಳ್ವಿನಂ ಬಸವಂ ಕೇಳ್ದು ವಿಸ್ಮಯಾಂತಃಕರಣನಾಗಿ ತದ್ಭಕ್ತನಂ ನೋಡಲೆಳಸಿ ಗುಪ್ತಾಕಾರದಿಂ ಸಲ್ಲೀಲೆಯಿಂ ಮೆಲ್ಲನೇಳ್ತಂದವನಂಗಳಮಂ ಪುಗುತಂದು ಮಾರದೇವನ ರಾಣಿಯಂ ಕಂಡು ಭಕ್ತಿಯಿಂ ಶರಣೆಂದು ಕರಾರವಿಂದಮಂ ಮುಗಿಯುಲೊಡನೆ—

ಬಸವಣ್ಣನವರ ಮನೆಗೆ ಬಂದು ಅವನ ಮುಖಕಮಲವನ್ನು ನೋಡಿ—೭. ಎಲೈ ಬಸವೇಶ್ವರನೇ, ನಿನ್ನ ಮನೆಯಲ್ಲಿ ಮಾಡಿರುವ ಹೊಸವೂ ಸಾರವತ್ತಾದುವೂ, ಮಂಜುಲವಾದುವೂ ಆದ ಷಡ್ರಸಾನ್ನ ಸಮೂಹವು ವಿಚಾರಿಸಿ ನೋಡಿದರೆ ಮೋಳಿಗೆ ಮಾರಿದೇವನ ಮನೆಯಲ್ಲಿ ಮನೋಹರವಾಗಿ ಶೋಭಿಸುವ ಅಂಬಲಿಗೂ ಕೂಡ ಸಮಾನವಾಗಲಾರದು ; ಅಂಥ ಅಂಬಲಿಯನ್ನು ಸಂತೋಷದಿಂದ ಉಂಡ ನಮ್ಮ ನಾಲಿಗೆಗೆ ಲೋಕದಲ್ಲಿ ಮತ್ತೊಂದು ಪದಾರ್ಥದ ರುಚಿಯು ರಸವಿಹೀನವಾಗಿ ಕಾಣುವುದು. ವ॥ ಹೀಗೆಂದು ಹೇಳಿ ಮತ್ತು ತಪ್ಪದೆ—೮. ಅನುದಿನವೂ ತನ್ನ ಕಾಯಕದಿಂದ ಒಂದು ಕೊಳಗ ಬತ್ತವು ಬರಲು ಅದನ್ನು ಪ್ರೀತಿಯಿಂದ ಮನೆಗೆ ತಂದು ಅಲ್ಲಿ ಎಷ್ಟು ಜನ ಜಂಗಮ ಸಮೂಹ ಬಂದರೂ ಆಶ್ಚರ್ಯವನ್ನುಂಟುಮಾಡುವಂತೆ ತೃಪ್ತಿಪಡಿಸುವನು. ಪ್ರಸಿದ್ಧವಾದ ಅವನ ಭಕ್ತಿಯ ರೀತಿಯನ್ನು ಶಿವನೊಬ್ಬನೇ ಬಲ್ಲನಲ್ಲದೆ ಇತರರು ಬಣ್ಣಿಸುವುದಕ್ಕೆ ಸಮರ್ಥರಾದಾರೇ ? ವ॥ ಎಂದು ಪುನಃ ಪುನಃ ಮನಸ್ಸುಬ್ಬಿ ಹೊಗಳುತ್ತಿರುವಾಗ ಬಸವಣ್ಣನವರು ಕೇಳಿ ಆಶ್ಚರ್ಯದಿಂದ ಕೂಡಿದ ಮನಸ್ಸುಳ್ಳವರಾಗಿ, ಆ ಸದ್ಭಕ್ತನಾದ ಮೋಳಿಗೆಯ ಮಾರಯ್ಯನವರನ್ನು ನೋಡಲು ಅಪೇಕ್ಷಿಸಿ, ವೇಷಾಂತರದಿಂದ ಸಂತೋಷಗೊಂಡು ಮೆಲ್ಲಮೆಲ್ಲನೆ ಹೊರಟು ಬಂದು ಅವನ ಮನೆಯ ಅಂಗಳವನ್ನು ಪ್ರವೇಶಿಸಿ, ಮಾರಿದೇವನ ಧರ್ಮಪತ್ನಿಯಾದ ಮಹಾದೇವಿಯಮ್ಮನನ್ನು ಕಂಡು, ಭಕ್ತಿಯಿಂದ 'ಶರಣು' ಎನ್ನುತ್ತ ತನ್ನ ಹಸ್ತಕಮಲಗಳನ್ನು ಮುಗಿಯಲಾಗಿ ಕೂಡಲೆ—

ಶರಣೆಂದು ಮಗುಳ್ದು ಭಾವಿನಿ
ಭರದಿಂದಂ ತಂದ ಪಾದ್ಯಜಲಕಲಶಮನಾ
ದರದಿಂದೀಳ್ದುಕೊಳುತ್ತುಂ
ಕರದಿಂದಡಿದೊಳೆವುತೆಯ್ದಿದಂ ತದ್ಗೃಹಮಂ ೯

ವ॥ ಅಂತೆಯ್ದಿ ಸಲ್ಲೀಲೆ ಮಿಗೆ ಮೆಲ್ವಸೆಯೊಳ್ಕುಳ್ಳಿರ್ದು ಲಿಂಗಾರ್ಚನಂಗೆಯ್ದನಂತರಂ—

ಪಸಿವಾದತ್ತೆಮ್ಮ ದೇವರ್ಗೆಲೆ ಜನನಿ ಭವದ್ಗೇಹದಲ್ಲಿರ್ದವೋಲ್ಸಂ
ತಸದಿಂ ನೈವೇದ್ಯಮಂ ನೀಂ ಗಡಣಿಸೆನೆ ಮುದಂಬೆತ್ತು ತತ್ಕಾಂತೆಯಾರೋ
ಗಿಸಲಿತ್ತಾಹಾರಮಂ ತಾಂ ಸಲಿಸುತೆ ನಿಜಲಿಂಗಕ್ಕೆ ಮೇಣಚ್ಚಪೊಂಗಳ್
ದ್ವಿಸಹಸ್ರಂ ತೀವಿದೊಳ್ಜಾಳಿಗೆಗಳನೆರಡಂ ತಳ್ವದೊಳ್ಪಿಂದಮಾಗಳ್ ೧೦

ತೆಗೆದಾರುಂ ಕಾಣದವೋ
ಲ್ಪೊಗಯಿಪ ಮಜ್ಜನದ ಪಾತ್ರೆಯಡಿಯೊಳಲಂಪಿಂ
ಸುಗುಣಾಭರಣಂ ಬಸವಂ
ಮಿಗೆ ಬೈತಿಡುತೆಳ್ದು ಜನನಿ ಶರಣೆನುತಾಗಳ್ ೧೧

೯. ಆ ಮಾರಯ್ಯನ ಪತ್ನಿಯು (ತಾನೂ ತಿರುಗಿ) ಶರಣು ಎಂದು ಹೇಳಿ, ಅವಳು ಶೀಘ್ರವಾಗಿ ಪಾದಗಳನ್ನು ತೊಳೆಯಲು ತಂದ ನೀರಿನ ಕಲಶವನ್ನು ತನ್ನ ಕೈಗೆ ತೆಗೆದುಕೊಂಡು ಕಾಲು ತೊಳೆದುಕೊಂಡು ಅವರ ಮನೆಯನ್ನು ಪ್ರವೇಶಿಸಿದನು. ವ॥ ಹೀಗೆ ಒಳಹೊಕ್ಕು ವಿಶೇಷ ಪ್ರೀತಿಯಿಂದ ಮೆತ್ತಗಿರುವ ಪೀಠದಲ್ಲಿ ಕುಳ್ಳಿರಿಸಿ, ಲಿಂಗಾರ್ಚನೆಯನ್ನು ಮಾಡಿಸಿದ ಬಳಿಕ—೧೦–೧೨. 'ಅಮ್ಮಾ ತಾಯಿಯೇ, ನಮ್ಮ ದೇವರಿಗೆ ಹಸಿವು ಆಗಿರುವುದು. ನಿಮ್ಮ ಮನೆಯಲ್ಲಿ ಇದ್ದಂತಹ ನೈವೇದ್ಯವನ್ನು (ನಿವೇದಿಸುವುದಕ್ಕೆ ಯೋಗ್ಯವಾದ ಪ್ರಸಾದವನ್ನು) ಪ್ರೀತಿಯಿಂದ ನೀನು ಸಂಗ್ರಹಿಸು.' ಎನ್ನಲು ಆ (ಮಹಾದೇವಿಯಮ್ಮನೆಂಬ) ಮಾರಿದೇವನ ಪತ್ನಿಯು, ಮುದದಿಂದ ಬಸವಣ್ಣನಿಗೆ ಊಟಕ್ಕೆ ಆಹಾರವನ್ನು ಕೊಟ್ಟಳು. (ಬಸಪಣ್ಣನು ಆ ಆಹಾರವನ್ನು) ನಿಜಲಿಂಗಕ್ಕೆ ಸಮರ್ಪಿಸುತ್ತ ಆಮೇಲೆ ಎರಡು ಸಾವಿರ ಸಂಖ್ಯೆಯಿಂದ ತುಂಬಿದ ಹೊಸ ಹೊನ್ನಿನ ಜಾಳಿಗೆ (ಚೀಲ) ಗಳನ್ನು ತಡಮಾಡದೆ ಸಮೀಚೀನತ್ವದಿಂದ ಆ ಸುಗುಣಗಳೇ ಆಭರಣವಾಗಿ ಉಳ್ಳ ಬಸವೇಶ್ವರನು ಹೊರತೆಗೆದು ಯಾರೂ ಕಾಣದ ಹಾಗೆ ಶೋಭಿಸುವ ಮಜ್ಜನಪಾತ್ರೆ (ಶಿವಪೂಜೆಯ ಸಮಯದಲ್ಲಿ ಲಿಂಗಮಜ್ಜನಕ್ಕೆ ಉಪಯೋಗಿಸುವ ಪಾತ್ರೆ) ಯ ಸಂದಿನಲ್ಲಿ ಸಂತೋಷದಿಂದ ಬಚ್ಚಿಟ್ಟು ಊಟಮಾಡಿ ಎದ್ದು, 'ಜನನೀ ಶರಣು' ಎಂದು ಆಗಲೇ ಹೊರಹೊರಟು ಮನೆಯ ಅಂಗಳಕ್ಕೆ ಬಂದು ನಿಂತು ಅವನ ಆ ಗೃಹ

ಪೊಱಮಟ್ಟಂಗಣಕೆಯ್ದಿ ನಿಂದು ಗೃಹಮಂ ನೋಡುತ್ತೆ ಮೆಯ್ಯುರ್ಬುತ
ಳ್ಕಱಿನೊಳಾನಂದಿಸಿ ನೋಳ್ಪೊಡಿಂತಿದು ಮಹಾಮೋಹಾಂಧಕಾರಕ್ಕೆ ನೇ
ಸಱ ಬಿಂಬಂ ಪರಮುಕ್ತಿಭಾಮಿನಿಗೆ ಜನ್ಮಸ್ಥಾನಮನ್ಯೂನಮಾ
[1]ದಱ[1]ನೆಂದುಂ ನೆಲೆಗೊಂಡ ತಾಣಮಿದು ಜನ್ಮಾಂಭೋದರಝಂಝಾನಿಲಂ ೧೨

ವ॥ ಎಂದು ಭಕ್ತಮಂದಿರಮಂ ಪೊಗಳ್ದು ಮತ್ತಮಿರದೆ—

ಇದನಾವಂ ನೋಳ್ಪನಾ ಮಾನವನ ದುರಿತಮಳ್ಕಾಡದೇನಿರ್ಕುಮೋ ಮೇ
ಣಿದನಾವಂ ಸಾರ್ವನೊಲ್ದಾ ನರನ ಘನಸುಖಂ ಸಾರದೇಂ ಪೋಕುಮೋ ಮ
ತ್ತಿದನಾವಂ ಬಣ್ಣಿಪಂ ತಳ್ತವನನುರುಕಳಾಸಂಪದಂ ಪೊರ್ದದೇಂ ಮಾ
ಣ್ಬುದೆ ಬಂದಿ ಗೇಹದನ್ನಂಬಡೆದ ಮನುಜನೇನಾಗನೇ ಬಂಧಮುಕ್ತಂ ೧೩

ವ॥ ಎಂದು ಬಸವರಾಜಂ ಭಕ್ತಿಯಿಂ ಕೀರ್ತಿಸುತ್ತುಂ ನಿಜಗೃಹಮನೆಯ್ದಿದನಾ ಪ್ರಸ್ತಾವದೊಳ್—

ನೇಸಱ ಬಿಂಬಮಂಬರದ ಮಧ್ಯಮನೆಯ್ದಿದ ಪೊಳ್ತಿನೊಳ್ಪಮು
ಲ್ಲಾಸದೆ ಪೊತ್ತು ಬಿಣ್ಪಿನಡುಗರ್ಬಿನ ಬಲ್ಪೊಱೆಯಂ ಗಿರೀಂದ್ರಕ
ನ್ಯಾಸಹಚಾರಿಯುಂ ನೆನೆವುತುಂ ನನೆವುತ್ತೆ ಸುಖಾತ್ಮದಿಂ ನಿಜಾ
ವಾಸಮನೆಯ್ದಿ ನಿಂದಿಳುಪುತಿಂಧನಭಾರಮನಲ್ಲಿ ಮಾರಯಂ ೧೪

ವನ್ನು ನೋಡಿ, ಉಬ್ಬಿಹೋಗಿ ಪ್ರೀತಿಯಿಂದ ಆನಂದಗೊಂಡವನಾಗಿ, 'ವಿಚಾರಮಾಡಿ ನೋಡಿದರೆ ಈ ಮನೆಯು ಅಜ್ಞಾನವೆಂಬ ಅಂಧಕಾರಕ್ಕೆ ಸೂರ್ಯಬಿಂಬವು ; ಶ್ರೇಷ್ಠ ಮುಕ್ತಿಯೆಂಬ ಭಾಮಿನಿಗೆ ಜನನ ಸ್ಥಾನವು ; ಕೊರತೆಯಿಲ್ಲದ ಐಶ್ವರ್ಯವುಳ್ಳವನಾದ ಲಕ್ಷ್ಮೀಪತಿಯೇ ವಾಸಿಸುವ ಸ್ಥಾನವು ; ಜನನವೆಂಬ (ಉತ್ಪತ್ತಿಯೆಂಬ) ಮೋಡವನ್ನೋಡಿಸುವ ಝಂಝಾವಾತವು' ವ॥ ಹೀಗೆಂದು ಆ ಭಕ್ತನ ಮನೆಯನ್ನು ಹೊಗಳುತ್ತ ಪುನಃ ತಪ್ಪದೆ—೧೩. ಈ ಮನೆಯನ್ನು ಯಾವನು ನೋಡುವನೋ ಆ ಮಾನವನ ಪಾಪವು ಹೆದರಿ (ಓಡದೆ) ಇರುವುದೇ ? ಮತ್ತು ಇದನ್ನು ಪ್ರೀತಿಯಿಂದ ಯಾವನು ಸೇರುವನೋ ಆ ಮನುಷ್ಯನನ್ನು ಘನವಾದ ಸುಖವು ಹೊಂದದೆ ಹೋಗುತ್ತದೆಯೇ ? ಮತ್ತು ಇದನ್ನು ಯಾವನು ವರ್ಣಿಸುವನೋ ಅವನನ್ನು ಉತ್ಕೃಷ್ಟವಾದ ವಿದ್ಯೆಯೆಂಬ ಐಶ್ವರ್ಯವು ಸೇರಿಕೊಳ್ಳದೆ ಬಿಡುವುದೇ? ಇಲ್ಲಿಗೆ ಬಂದು ಈ ಮನೆಯಲ್ಲಿ ಅನ್ನವನ್ನುಂಡ ಮನುಷ್ಯನು ಸಂಸಾರಬಂಧದಿಂದ ವಿಮೋಚನೆಯನ್ನು ಹೊಂದದೆ ಇರುವನೇ ? ವ॥ ಹೀಗೆಂದು ಬಸವರಾಜನು ಭಕ್ತಿಯಿಂದ (ಆ ಮನೆಯನ್ನು ಕುರಿತು) ಶ್ಲಾಘಿಸುತ್ತ ತನ್ನ ಮನೆಯನ್ನು ಸೇರಿದನು. ಆ ಸಮಯದಲ್ಲಿ–೧೪–೧೫. ಸೂರ್ಯ ಬಿಂಬವು ನೆತ್ತಿಯ ಮೇಲೆ ಬಂದ ಹೊತ್ತಿಗೆ ಸರಿಯಾಗಿ (ಮಧ್ಯಾಹ್ನಕ್ಕೆ ಸರಿಯಾಗಿ) ದಪ್ಪವಾದ ಸೌದೆಯ ಭಾರವಾದ ಹೊರೆಯನ್ನು ವಿಶೇಷ ಉತ್ಸಾಹದಿಂದ ಹೊತ್ತುಕೊಂಡು, ಪಾರ್ವತಿಯೊಡನೆ

1 ದರ(ದ, ಚ,), ವರ(ತಿ), ವಱ(ಗ)

ನಿಜವಧುವಂಘ್ರಿಯಂ ತೊಳೆಯೆ ಬಂದೊಳಪೊಕ್ಕು ಪೊದಳ್ದ ಭಕ್ತಿಯಿಂ
ಸುಜನವರೇಣ್ಯನರ್ಚಿಸಿ ಚರವ್ರಜಮಂ ಶಿವಲಿಂಗಮೂರ್ತಿಯಂ
ಭಜಿಯಿಪ ವೇಳೆಯೊಳ್ ಮಿಸುಪ ಪೊಂಗಳ ಜಾಳಿಗೆಗಂಡು ಬಂದರಾ
ಭರ್ಗಜಗಧರ್ರೈಕ್ಯಭಕ್ತರಣಮೆಲ್ಲಿಯವೀ ಪೊಸಪೊನ್ನ ನೀವಿಗಳ್ ೧೫

ವ॥ ಎಂದು ವಲ್ಲಭೆಯಂ ಬೆಸಗೊಳಲೊಡನೆ—

ಆನಱಿಯೆನವನ ಕುಱುಪಂ
ಭೂನುತ ಕೇಳೊರ್ವನೆಯ್ದೆ ಭಕ್ತಂ ನೆಗಳ್ದೀ
ಸ್ಥಾನದೊಳೆ ಲಿಂಗಪೂಜೆಯ
ನಾನಂದದಿನೆಸಗಿ ತೆಳರ್ದನೆಂದವಳೆಂದಳ್ ೧೬

ವ॥ ಎಂದ ವಲ್ಲಭೆಯ ಸೊಲ್ಲಂ ಮೋಳಿಗೆಮಾರಿದೇವಂ ಕೇಳ್ದು ಬಂದವಂ ಬಸವನೆಂದು ನಿಜಾಂತರಂಗದೊಳ್ನಿರ್ಧರಿಸಿ—

ಮಂದಿರಕಿಂದು ಬಂದು ಪದೆದಿಂತು ಶಿವಾರ್ಚನೆಗೆಯ್ದು ಪೋದನಾ
ರೆಂದೆನವೇಡ ತಾನೆ ಬಸವಂ ಸತಿ ಸಂದೆಗಮೇ ದರಿದ್ರಭಾ
ವಂದಳೆದಿರ್ದ ಭಕ್ತತತಿಗರ್ಥಮನೀಯಲುಮೋವಲುಂ ಸಮ
ರ್ಥಂ ದಿಟಮಾತನಲ್ಲದಿಳೆಯೊಳ್ಪೆಱನಾವನೊ ನೋಡೆ ನಾಡೆಯುಂ ೧೭

ಸಂಚರಿಸುವ ಶಿವನನ್ನು ಧ್ಯಾನಿಸುತ್ತ, ಸಂತೋಷ ಬಾಷ್ಪಗಳಿಂದ ಆರ್ದ್ರಗೊಳ್ಳುತ್ತ, ತನ್ನಮನೆಗೆ ಬಂದು, ಅಲ್ಲಿ ಮಾರಯ್ಯನು ನಿಂತುಕೊಂಡು ಸೌದೆಯ ಹೊರೆಯನ್ನು ಇಳುಹುತ್ತ ತನ್ನ ಮಡದಿಯು ಬಂದು ಪಾದಗಳನ್ನು ತೊಳೆಯುತ್ತಿರಲು, ಸತ್ಪುರುಷ ಶ್ರೇಷ್ಠನಾದ ಮಾರಯ್ಯನು ಬಂದು ಒಳಕ್ಕೆ ಪ್ರವೇಶಿಸಿ ಅತಿಶಯವಾದ ಭಕ್ತಿಯಿಂದ ಜಂಗಮ ಸಮೂಹವನ್ನು ಅರ್ಚನೆಮಾಡಿ, ಶಿವಲಿಂಗಮೂರ್ತಿಯನ್ನು ಭಜಿಸುವ ಸಮಯದಲ್ಲಿ, ಶೋಭಿಸುವ (ಎರಡು) ಬಂಗಾರದ ನಾಣ್ಯಗಳ ತುಂಬಿರುವ ಚೀಲಗಳನ್ನು ನೋಡಿ, (ಹೆಂಡತಿಯನ್ನು ಕುರಿತು) 'ಶಿವನ ಭಕ್ತರಾರು ಇಲ್ಲಿಗೇ ಬಂದಿದ್ದರು ? ಈ ಹೊಸ ಹೊನ್ನಿನ ಚೀಲಗಳು ಎಲ್ಲಿಯವು ?' ವ॥ ಎಂದು ಪತಿಯು ಕೇಳಲು ಒಡನೆಯೇ–೧೬. ಹೇ ಭೂನುತನಾದ ಪತಿಯೇ, ಅವನ ಗುರುತನ್ನು ನಾನು ಅರಿಯೆನು ; ಒಬ್ಬ ಭಕ್ತನು ಬಂದು ಶೋಭಿಸುವ (ಪ್ರಸಿದ್ಧವಾದ) ಈ ಸ್ಥಾನದಲ್ಲಿ ಲಿಂಗಪೂಜೆಯನ್ನು ಆನಂದದಿಂದ ಮಾಡಿ, ಹೊರಟು ಹೋದನು, ಎಂದು ಅವಳು ಹೇಳಿದಳು. ವ॥ ಹೀಗೆಂದ ಪತ್ನಿಯ ಮಾತನ್ನು ಮೋಳಿಗೆಯ ಮಾರಯ್ಯನು ಕೇಳಿ, ಬಂದವನು ಬಸವಣ್ಣನೇ ಎಂದು ತನ್ನ ಮನಸ್ಸಿನಲ್ಲಿ ನಿಶ್ಚಯಿಸಿ–೧೭. ಎಲೈ ಪತ್ನಿಯೇ ಇಂದು ನಮ್ಮ ಮನೆಗೆ ಬಂದು ಪ್ರೀತಿಯಿಂದ ಈರೀತಿ ಶಿವಾರ್ಚನೆ ಮಾಡಿಕೊಂಡು ಹೋದವನು ಬೇರೆ ಯಾರೆಂದು ಅನ್ನಬೇಡ. ಅವನೇ ಬಸವಣ್ಣ (ಇದಕ್ಕೆ) ಸಂದೇಹವೇಕೆ ? ದಾರಿದ್ರ್ಯವನ್ನು ಹೊಂದಿರುವ ಭಕ್ತಸಮೂಹಕ್ಕೆ ಹಣವನ್ನು ಕೊಡುವುದಕ್ಕೂ (ಅವರನ್ನು) ರಕ್ಷಣೆ ಮಾಡುವುದಕ್ಕೂ ಆ ಬಸವಣ್ಣನೇ ಸಮರ್ಥನು ; (ಇದು) ನಿಶ್ಚಯ, ಲೋಕದಲ್ಲಿ

ಬಹುಪುಣ್ಯಾಧಿಕರಾದ ಭಾಗ್ಯನಿಧಿಗಳ್ ದಾರಿದ್ರ[1]ದಿಂ ನೋವರಂ
ಮಹಿಯೊಳ್ಪಾಲಿಪುದೇಂ ವಿಚಿತ್ರಮೆ ಮಹಾಭಾಗ್ಯಾಧಿಕಂ ತಾಂ ಗಡೀ
ಸಹಜಾತ್ಯಂತ ದರಿದ್ರಭಾವಹತರಾದೆಮ್ಮಂ ಕರಂ ಸತ್ಕೃಪಾ
ಮಹಿತಂ ನೋಡಿ ವೃಷೇಂದ್ರನಿತ್ತು ತಳರ್ದಂ ದಾನೋನ್ನತಂ ಪೊಂಗಳಂ ೧೮

ಕೇಳದೆ ಪೇಳದೆ ಪೊಸ ಪೊಂ
ಜಾಳಿಗೆಗಳನಿಂತುಟಿರಿಸಿ ಪೋದಂ ಬಸವಂ
ಪೇಳವನಲ್ಲದೆ ಘನಕರು
ಣಾಳು ಕರಂ ದಾನಿಯಾವನೀ ವಸುಮತಿಯೊಳ್ ೧೯

ನುಡಿಯಲರಿದಾದ ಬಡತನ
ಮೆಡೆಗೊಂಡಿರ್ದೆಮ್ಮೊಳಲ್ಲದಾರೊಳ್ಮೆಱೆವಂ
ಕಡುಚಾಗಿತನದ ತನ್ನಯ
ಬೆಡಂಗನೀ ಬಸವನಮಮ ದಾನನಿಧಾನಂ ೨೦

ದೊರೆಗುಮೆಮಗೆಮ್ಮ ಲಿಂಗಂ
ಕರುಣಿಸುತೊಲ್ದಿತ್ತ ಕಾಯಕದಿನರ್ಥಸಮು
ತ್ಕರಮಿಂತುಟಪ್ಪ ಪೆರ್ಮೆಯ
ಪರಿಯಂ ತಾಂ ಬಲ್ಲನಲ್ಲದಾನೆತ್ತಱಿವೆಂ ೨೧

ಆತನಲ್ಲದೆ ವಿಚಾರಿಸಿ ನೋಡಿದರೆ ಮತ್ತೊಬ್ಬನು ಇನ್ನಾವನೋ ! ೧೮. ಲೋಕದಲ್ಲಿ ಬಹುಪುಣ್ಯದಿಂದ ಅಧಿಕರಾದ ಭಾಗ್ಯಶಾಲಿಗಳು ದಾರಿದ್ರ್ಯದಿಂದ ನೋಯುತ್ತಿರುವವರನ್ನು ಸಂರಕ್ಷಿಸುವುದು ವಿಚಿತ್ರವೇ ? ಆ ಬಸವಣ್ಣನು ಮಹಾಭಾಗ್ಯಶಾಲಿಯಲ್ಲವೇ ! ದಾನ ಗುಣದಿಂದ ದೊಡ್ಡವನೂ, ಒಳ್ಳೆಯ ಮಹಿಮಾತಿಶಯದಿಂದ ಪೂಜ್ಯನೂ ಆದ ಆ ಬಸವಣ್ಣನು ಸ್ವಭಾವತಃ ಕಡು ಬಡತನದಿಂದ ಬಡಿಯಲ್ಪಟ್ಟು ನಮ್ಮನ್ನು ಚೆನ್ನಾಗಿ ಕಂಡು ಈ ಬಂಗಾರದ ಚೀಲಗಳನ್ನು ಕೊಟ್ಟು ಹೊರಟು ಹೋಗಿದ್ದಾನೆ, ೧೯. ಹೇಳದೆ ಕೇಳದೆ ಈ ರೀತಿ ಬಸವಣ್ಣನು ಹೊಸಬಂಗಾರದ ನಾಣ್ಯಗಳ ಚೀಲಗಳನ್ನು ಇರಿಸಿ ಹೋದನು. ಈ ಲೋಕದಲ್ಲಿ ಕರುಣಾಳುವು ಅವನಲ್ಲದೆ ಯಾವನು ತಾನೇ (ಈ ರೀತಿ) ಮಾಡುತ್ತಾನೆ ಹೇಳು ? ೨೦. ದಾನ ಗುಣ ಶೀಲನಾದ ಬಸವಣ್ಣನು ತನ್ನ ಬಹು ದಾನ ಗುಣದ ಈ ಬೆಡಗನ್ನು ಹೇಳಲಸಾಧ್ಯವಾದ ಬಡತನವನ್ನು ಹೊಂದಿರುವ ನಮ್ಮೊಳಲ್ಲದೆ ಇನ್ನಾರಲ್ಲಿ ತೋರ್ಪಡಿಸಿಯಾನು ! ಅವನು !! ೨೧. ನಮಗೆ ನಮ್ಮ ಲಿಂಗದೇವನು ಒಲಿದು ಕರುಣದಿಂದ ಕೊಟ್ಟ ಕಾಯಕಾರ್ಜಿತವಾದ ಹಣದ ರಾಶಿಯು ಈ ರೀತಿಯಲ್ಲಿ ದೊರೆಯುತ್ತಿರುವುದು, ಅಂತಹ ರೀತಿಯನ್ನು ಬಸವಣ್ಣನು ತಾನೇಬಲ್ಲ ನಲ್ಲದೆ ನಾನೆತ್ತ ತಿಳಿದೇನು !

---

1 ದ್ರ್ಯ(ಗ)

ವ॥ ಎಂದು ವಿಡಂಬನಂಗೆಯ್ದೆರಳ್ಪೊಂಜಾಳಿಗೆಗಳನಿರ್ವರ್ಮಾಹೇಶ್ವರರ್ಗಿತ್ತು ಮಣಿದು ಮತ್ತಮಿರದೆ—

ಅದನೇವೇಳ್ವುದೊ ಮೋಳಿಗಯ್ಯನ ಮಹಾಮಹಾತ್ಮ್ಯಮಂ ಜಂಗಮೌ
ಘದ ಪಾದಂದೊಳೆದಂಬುವಂ ತಳಿದು ಕಾಷ್ಠವ್ರಾತಮಂ ನೋಳ್ಪುದುಂ
ಪದದೆತ್ತಂ ಜವದಿಂ ಸುವರ್ಣಮಯಮಾದತ್ತಂತದಂ ಖಂಡಿಸು
ತ್ತೊದವಿರ್ದಾಳ್ಕೞನಿತ್ತನಂದು ಚರಸಂದೋಹಕ್ಕೆ ಭಕ್ತೋತ್ತಮಂ ೨೨

ವ॥ ಅಂತು ಥಳಥಳಿಸಿ ಪೊಳೆವ ಕನಕಕಾಷ್ಠಂಗಳಂ ಕಡಿಕಡಿದು ಸಾಸಿರಪೊನ್ನ ತೂಕದ ಕಡಿಗಳಂ ಸಮರ್ಪಿಸೆ ಕೆಯ್ಕೊಂಡು ಕೊಂಡುಕೊನೆದು ಕೊಂಡಾಡಿ ಜಂಗಮಸಮೂಹಂ ಬಸವನರಮನೆಗೆೞ್ತಂದು ಸಡಗರಿಸುತ್ತುಮಾ ಭಕ್ತನ ಮಹಿಮೆಯುಮಂ ಪಸರಿಸುತಾತನೆಸಗಿದಂದಮನೊರೆದೊರೆದು ಮಗುೞ್ದು ಕೀರ್ತಿಸುತ್ತುಮಿರೆ ಬಸವಂ ಕೇಳ್ದು ಭೀತಿಗೊಂಡು ಬೆಱಗುವಟ್ಟು ವೇಗದಿಂ ಮಾರಿದೇವನೆಡೆಗೆೞ್ತಂದು ಶರಣೆಂದು ಸಾಷ್ಟಾಂಗಮೆಱಗಿ ಕಿಂಕರತೆಯನಪ್ಪುಕೆಯ್ದು ಕಾರ್ಪಣ್ಯಂದೋಱಿ ಕರಾರವಿಂದಮಂ ಮುಗಿದು ನಿಂದು—

ಶರಣಾಗತಾರ್ತಿಹರ ಶಂ
ಕರರೂಪ ಶರಣ್ಯ ಶಾಂತಿಭೂಷಣ ಮಹಿಮಾ
ಕರ ಸರ್ವಾರ್ಥಪ್ರದ ಶುಭ
ಕರ ರಕ್ಷಿಪುದೆನ್ನನೆಂದು ಬಸವಂ ಪೊಗೞ್ದಂ ೨೩

ವ॥ ಹೀಗೆಂದು ಅಪಹಾಸ್ಯ ಮಾಡಿ ತಿರಸ್ಕರಿಸುತ್ತ ಎರಡೂ ಹೊನ್ನಿನ ಚೀಲಗಳನ್ನು ಇಬ್ಬರು ಮಾಹೇಶ್ವರರಿಗೆ ಕೊಟ್ಟು ನಮಸ್ಕರಿಸಿ, ಮತ್ತು ತಪ್ಪದೆ–೨೨. ಮೋಳಿಗಯ್ಯನ ಆ ಮಾಹಾತ್ಮ್ಯೆಯನ್ನು ಏನು ಹೇಳುವುದೋ! ಆ ಭಕ್ತಶ್ರೇಷ್ಠನು ಜಂಗಮ ಸಮೂಹದ ಪಾದತೊಳೆದ ನೀರನ್ನು ಸೌದೆಗಳ ರಾಶಿಯ ಮೇಲೆ ಸೇಚನಗೊಳಿಸಿ ಪ್ರೀತಿಯಿಂದ ಎಲ್ಲ ಕಡೆಗೂ ನೋಡಲಾಗಿ ಆ ಕೂಡಲೇ (ಆ ಸೌದೆಯ ರಾಶಿಯು) ಸುವರ್ಣ ಮಯವೇ ಆಯಿತು, ಹಾಗಾದ ಅದನ್ನು ತುಂಡು ತುಂಡಾಗಿಸಿ, ಪ್ರೀತಿಯಿಂದ ಅಲ್ಲಿ ತುಂಬಿದ್ದ ಜಂಗಮ ಸಮೂಹಕ್ಕೆ ಆಗ ಕೊಟ್ಟನು. ವ॥ ಈ ರೀತಿ ಥಳಥಳಿಸಿ ಹೊಳೆವ ಬಂಗಾರದ ಕಟ್ಟಿಗೆ ತುಂಡುಗಳನ್ನು ಸಾವಿರ ತೊನ್ನಿನ ತೂಕದಲ್ಲಿ ಕಡಿಕಡಿದು ಆ ತುಣುಕುಗಳನ್ನು ಜಂಗಮರಿಗೆ ಸಮರ್ಪಿಸಲಾಗಿ, ಅವರು ಅವನ್ನು ಸ್ವೀಕರಿಸಿ ಹಿಡಿದುಕೊಂಡು ಕೂಗಾಡುತ್ತ, ಕೊಂಡಾಡುತ್ತ ಬಸವಣ್ಣನ ಅರಮನೆಗೆ ಬಂದು ಸಡಗರದಿಂದ ಆ ಭಕ್ತನಾದ ಮಾರಯ್ಯನ ಮಹಿಮೆಯನ್ನು ಕೊಂಡಾಡುತ್ತ, ಅವನು ಮಾಡಿದ ಈ ರೀತಿಯನ್ನು ಹೇಳಿ, ಪುನಃ ಪುನಃ ಕೀರ್ತಿಸುತ್ತಿರಲು ಬಸವಣ್ಣನು ಕೇಳಿ ಭಯಗೊಂಡು, ಬೆರಗಾಗಿ ವೇಗದಿಂದ ಮಾರಯ್ಯನ ಹತ್ತಿರಕ್ಕೆ ಬಂದು 'ಶರಣು' ಎಂದು ಸಾಷ್ಟಾಂಗ ನಮಸ್ಕಾರ ಪೂರ್ವಕ ಎರಗಿ, ಕೈಂಕರ್ಯವನ್ನು ಹೊಂದಿ, ದೈನ್ಯಭಾವವನ್ನು ಪ್ರಕಟಿಸುತ್ತ, ಕರಕಮಲಗಳನ್ನು ಮುಗಿದು ನಿಂತುಕೊಂಡು–೨೩. 'ಮೊರೆಹೊಕ್ಕವರ ಮನೋವ್ಯಥೆಯನ್ನು ನಿವಾರಿಸುವ ಶಂಕರ ರೂಪನಾದವನೇ ಸಂರಕ್ಷಕನೇ, ಶಾಂತಿಯೇ ಆಭರಣವಾಗಿ ಉಳ್ಳವನೇ, ಮಹಿಮೆ

ವ॥ ಅಂತು ತನ್ನಂ ನುತಿಗೆಯ್ವ ಬಸವರಸನಂ ಮಾರಿದೇವನಭೀಕ್ಷಿಸಿ—

ಕಡು ಸಿರಿವಡೆದ ವದಾನ್ಯಂ
ಬಡವನನಿಂತೇಕೆ ಪೊಗಳ್ವಪ್ಪೈ ನೀನೆನ್ನಂ
ಪೊಡವಿಯೊಳಿದು ಯುಕ್ತಮೆ ಪೇಳ್
ಬಿಡದರ್ಥಿಗಳುಂ ವದಾನ್ಯರೇಂ ಪೊಗಳ್ದಪರೇ ೨೪

ಮುನ್ನೆಂದುಮಱಿಯದೀ ಪೊಸ
ಪೊನ್ನೊಪ್ಪುವ ಜಾಳಿಗೆಗಳನಿಂದಾನಱಿದೆಂ
ನಿನ್ನಯ ಕೃಪೆಯಿಂ ಬಡತನ
ಮನ್ನೀಗಿದೆನೆನಗೆ ನೀನೆ ಮಾನ್ಯವದಾನ್ಯಂ ೨೫

ಅತಿ ದಾರಿದ್ರದೊಳಿಪ್ಪನೀ ಬಣಗುಭಕ್ತಂ ಮಾಣದೆಂದೆಯ್ದಿ ಸ
ನ್ನುತ ಕಾರುಣ್ಯದೆ ಪೊನ್ನ ಜಾಳಿಗೆಗಳಂ ತಂದಿತ್ತೆ ನಿನ್ನಂತಿರಾ
ಪ್ತತಮರ್ಪೇಳೆನಗಾರೊ ಧಾತ್ರಿಯೊಳೆ ನಿನ್ನಂ ಪೋಲ್ವನಾವಂ ವದಾ
ನ್ಯತೆಯೊಳ್ನೀನೊಸೆದೀಯದಂದು ಬಡವರ್ಗಾರೀವರರ್ಥಂಗಳಂ ೨೬

ಕೋಡವೆರಡು ನಿನ್ನ (ಕ)[1]ರದೊ
ಳ್ಮೂಡಿದುದೆಲೆ ಬಸವ ಬಡವರಿರ್ದೆಡೆಗೆ ಮುದಂ
ಗೂಡಿ ಗಮನಿಸುತ್ತೆ ಧನಮುಂ
ನೀಡುವ ನಿನಗೆಣೆಯೆ ಸುರರ ಮರನುಂ ಮಣಿಯುಂ ೨೭

ಗಳಗಣಿಯೋ, ಸಕಲ ಇಷ್ಟಾರ್ಥಗಳನ್ನು ಕೊಡುವವನೇ, ಮಂಗಳಕರನೇ, ನನ್ನನ್ನು ರಕ್ಷಿಸಬೇಕು' ಎಂಬುದಾಗಿ ಬಸವಣ್ಣನು ಹೊಗಳಿದನು. ವ॥ ಈ ರೀತಿ ತನ್ನನ್ನು ಸ್ತೋತ್ರ ಮಾಡುತ್ತಿರುವ ಬಸವಣ್ಣನನ್ನು ಮೋಳಿಗೆಯ ಮಾರಿದೇವನು ನೋಡಿ–೨೪. 'ಬಹು ಸಂಪತ್ತನ್ನು ಹೊಂದಿದ ನೀನು ಬಡವನಾದ ನನ್ನನ್ನು ಹೀಗೇಕೆ ಹೊಗಳುತ್ತಿರುವೆ ? ಲೋಕದಲ್ಲಿ ಇದು ಯುಕ್ತವಾದದ್ದೇ ? ಹೇಳು ! ದಾನವನ್ನು ಮಾಡುವವರು ತಪ್ಪದೆ ಯಾಚಕರನ್ನು ಹೊಗಳುವರೇ !!' ೨೫. ಈ ಮೊದಲು ಎಂದೂ ಕಾಣದೆ ಇರುವ ಈ ಹೊಸ ಹೊನ್ನಿನ ಜಾಳಿಗೆಗಳನ್ನು ಇಂದು ನಾನು ನಿನ್ನ ಕೃಪೆಯಿಂದ ನೋಡಿದಂತಾಯಿತು ! ಬಡತನವನ್ನು ನೀಗಿದೆನು ! ನನ್ನಿಂದ ಸನ್ಮಾನ ಮಾಡಿಸಿಕೊಳ್ಳುವುದಕ್ಕೆ ಯೋಗ್ಯವಾದ ದಾನಿಯೆಂದರೆ ನೀನೇ ! (ಹೊರತು ಅನ್ಯರಲ್ಲ)? ೨೬. ಹುರುಳಿಲ್ಲದ ಈ ಭಕ್ತನು ಅತಿ ದಾರಿದ್ರ್ಯದಲ್ಲಿರುವನೆಂದು, ತಪ್ಪದೆ (ಇಲ್ಲಿಯವರೆಗೆ) ಬಂದು, ಶ್ಲಾಘ್ಯವಾದ ಕಾರುಣ್ಯ ಭಾವದಿಂದ ಹೊನ್ನಿನ ಚೀಲಗಳನ್ನೇ ತಂದು ತಂದುಕೊಟ್ಟ ನಿನ್ನಹಾಗೆ ಈ ಲೋಕದಲ್ಲಿ ನನಗೆ ಆಪ್ತತಮನು ಯಾರೋ ! ಹೇಳು. ದಾನಗುಣದಲ್ಲಿ ನಿನ್ನನ್ನು ಸರಿಗಟ್ಟುವವನು ಯಾರು ? ನೀನು ಪ್ರಸನ್ನನಾಗಿ ಬಡವರಿಗೆ ಐಶ್ವರ್ಯಗಳನ್ನು ಕೊಡದಿದ್ದರೆ ಇನ್ನಾರು ಕೊಡುವರು !!೨೭. 'ಎಲೆ ಬಸವಣ್ಣ, ನಿನ್ನ ತಲೆಯಲ್ಲಿ ಆ ಎರಡು ಕೋಡುಗಳು ಹುಟ್ಟಿ

---

1 ಶಿ(ಅ, ಗ, ಚ, ಜ, ದ, ಮು)

ಎನಗಿತ್ತಂತೆವೊಲಾರ್ಗೆ ಕೊಟ್ಟೆ ಧನಮಂ ಭಕ್ತರ್ಗೆ ಪೇಳ್ಮಾಚಿದೇ
ವನ ಕಟ್ಟಳ್ಕರಿ ಪಾತ್ರನಾಂ ಬಿಡದಿರೆನ್ನೊಳ್ಮಾಣದಿಂತಪ್ಪ ಸ
ದ್ಘನ ಕಾರುಣ್ಯಮನಯ್ಯ ನೀಂ ಪಿರಿದು ಭಾಗ್ಯಂಬೆತ್ತವಂ ನಿನ್ನ ಕೂ
ರ್ಪಿನಪಾಂಗಪ್ರಭೆಯೆನ್ನ ಮೇಲಿರೆ ನಿತಾಂತಂ ಭಾಗ್ಯದಿಂ ಬಾಳ್ವೆಪೆಂ ೨೮

ವ॥ ಎಂದು ಮೋಳಿಗಯ್ಯನಾಳವಾಡಿ ನುಡಿಯೆ ಬಸವಂ ಭಯಂಬಡೆದಂತಂತೆ ಕಂಪಿಸಿ ಬೆಮರ್ತರ್ಗೆ ಬೆಬ್ಬಳಿವೋಗಿ—

ಗಾವಿಲನೊಲಧಮನೊಳ್ಗ
ರ್ವಾವಿಲನೊಳ್ಖಳನೊಳಳಿಪನೊಳ್ದುರ್ದಮದೋ
ಷಾವೃತನೊಳನ್ನೊಳಮಳ ಗು
ಣಾವಳಿಯಂ ದೇವ ನೋಳ್ಪುದೇ ಘನಮಹಿಮಾ ೨೯

ಸಿದ್ಧರಸಂ ಪರೀಕ್ಷಿಪುದೆ ಲೋಹದ ದುರ್ಗುಣಮಂ ಸುವರ್ಣಭೂ
ಸ್ವದ್ಧರಣೀಭರಂ ಬಗೆವುದೇ ಮಿಗೆ ಕಾಗೆಯ ದುಷ್ಟವೃತ್ತಿಯಂ
ಶುದ್ಧತರಪ್ರಕಾಶಮತಿ ನೀಂ ಬಿಡದೆನ್ನೊಳನೇಕ ದೋಷಸಂ
ಬದ್ಧನೊಳೊಳ್ಪನೀಕ್ಷಿಪುದೆ ಮೋಳಿಗೆ ಮಾರ ಮಹಾಕೃಪಾಕರಾ ೩೦

ಕಲರವಮುಂಟೆ ದರ್ದುರದೊಳಂಬಿಲದೊಳ್ನವನೀತಮುಂಟೆ ಸ
ತ್ಫಲತತಿಯುಂಟೆ ಶಾಲ್ಮಲಿಯೊಳಿಂಗಳರಾಶಿಯೊಳುಂಟೆ ತಂಪು ಕ

ದವು. ಬಡವರಿದ್ದಲ್ಲಿಗೆ ಸಂತೋಷದಿಂದ ನೀನೇ ಹೋಗಿ, ಹಣವನ್ನು ಕೊಡುತ್ತೀಯೆ. ನಿನಗೆ ದೇವತೆಗಳ ಕಲ್ಪವೃಕ್ಷವೂ ಸಮಾನವಾಗಲಾರದು !' ೨೮. 'ಅಯ್ಯ ಬಸವಣ್ಣ, ನನಗೆ ಹಣವನ್ನು ಕೊಟ್ಟ ಹಾಗೆ ಇನ್ನಾವ ಭಕ್ತರಿಗೆ ಕೊಟ್ಟೆ ? ಹೇಳು. ನಾನು ಮಡಿವಳ ಮಾಚಿದೇವನ ಅತಿ ಪ್ರೀತಿಗೆ ಪಾತ್ರನಾದ ಮೊಮ್ಮಗನಿದ್ದ ಹಾಗೆ, ನನ್ನನ್ನು ಮರೆಯದೆ (ತಪ್ಪದೆ), ಇಂತಹ ಶ್ರೇಷ್ಠವಾದ ಘನ ಕಾರುಣ್ಯವನ್ನು ಬಿಡದಂತೆ ಇಟ್ಟಿರು ! ನೀನು ಹೆಚ್ಚಾದ ಐಶ್ವರ್ಯವನ್ನು ಹೊಂದಿದವನು. ನಿನ್ನ ಪ್ರೀತಿಯಿಂದ ಕೂಡಿದ ಕಡೆಗಣ್ಣಿನ ಕಾಂತಿಯು ನನ್ನ ಮೇಲಿದ್ದರೆ ಅತಿ ಭಾಗ್ಯದಿಂದ ಬದುಕುತ್ತೇನೆ.' ವ॥ ಹೀಗೆಂದು ಮೋಳಿಗೆ ಮಾರಯ್ಯನು ಪರಿಹಾಸ ಮಾಡಿ ನುಡಿಯಲು, ಬಸವಣ್ಣನು ಭಯವನ್ನು ಹೊಂದಿ, ಹಾಗೆ ಹಾಗೆ ನಡುಗುತ್ತ, ಮೈ ಬೆವರಿ ಬೆರಗುಗೊಂಡು ೨೯. 'ದೇವ, ಘನ ಮಹಿಮನೇ, ಮೂಢನೂ, ನೀಚನೂ, ಅಹಂಕಾರದಿಂದ ವ್ಯಾಪ್ತನೂ, ನೀಚನೂ, ದುರಾಸೆಯುಳ್ಳವನೂ, ಇಂದ್ರಿಯ ನಿಗ್ರಹ ಶೂನ್ಯನೂ, ದೋಷದಿಂದ ಆವರಿಸಲ್ಪಟ್ಟವನೂ ಆದ ನನ್ನಲ್ಲಿ ಸದ್ಗುಣ ಸಮೂಹವನ್ನು ಹುಡುಕಲುಂಟೆ ?' ೩೦. 'ಸಿದ್ಧರಸವು ಕಬ್ಬಿಣದ ದುರ್ಗುಣವನ್ನು ಪರೀಕ್ಷಿಸುವುದೇ ? ಬಂಗಾರದ ಮೇರುಪರ್ವತವು ಕಾಗೆಯ ದುಷ್ಟ ವೃತ್ತಿಯನ್ನು ನಿಜವಾಗಿ ಯೋಚಿಸುವುದೇ ? ಮಹಾಕೃಪಾಕರನಾದ ಮೋಳಿಗೆಯ ಮಾರಯ್ಯ, ಅತಿ ನಿರ್ಮಳನಾದ ಕಾರಣ ಪ್ರಕಾಶಿಸುವ ಬುದ್ಧಿಯುಳ್ಳ, ನೀನು ಅನೇಕ ದೋಷಗಳಿಂದ ಕೂಡಿದ ನನ್ನಲ್ಲಿ ಒಳ್ಳೆಯದನ್ನು ನೋಡಬಹುದೇ ?' ೩೧. 'ಲೋಕ

ಜ್ವಲದೊಳಮುಂಟೆ ಶುಭ್ರತೆ ಪಲಾಂಡುವೊಳುಂಟೆ ಪಟೀರಸೌರಭಂ
ಜಲರುಹಮುಂಟೆ ಕುಂಟೆಯೊಳೆನ್ನೊಳು ಸದ್ಗುಣಮುಂಟೆ ಧಾತ್ರಿಯೊಳ್ ೩೧

ಪಸಿದಂ ಪ್ರಭುವೆಂದಾಳೋ
ಚಿಸೆ ತಣಿಪಲ್ ಬಗೆದೆನಯ್ಯ ಮುನ್ನಂ ನಿನ್ನಂ
ವಸುರಹಿತನೆಂದು ನೆನೆದಂ
ವಸುಧೆಯೊಳಿಂದೆನ್ನ ಪೋಲ್ವ ಗಾಂಪರುಮೊಳರೇ ೩೨

ಗತಿಯುಂ ಮತಿಯುಂ ಹಿತನುಂ
ಪಿತನುಂ ಗುರುಸಂಗಮೇಶನುಂ ನೀನೆನಗೆ
ನ್ನತಿಶಯ ಶತಾಪರಾಧಮ
ನತರ್ಕ್ಯಮಹಿಮಾಬ್ಧಿ ಮಱೆದು ಪಾಲಿಪುದೆನ್ನಂ ೩೩

ವ॥ ಎಂದು ಅಭಯಮಂ ಬೇಡಿ ಭಯಭಕ್ತಿಯಿಂದಡಿಗೆಱಗಿರ್ದ ಬಸವನಂ ಮಾರಿದೇವಂ ಕಾರುಣ್ಯದಿಂ ನೋಡಿ ತೆಗೆದೆತ್ತಿ ಬಿಗಿಯಪ್ಪಿ ಸಮುಚಿತ ವಿನಯಮಂ ಮೆಱೆದು ಮನ್ನಿಸಿ ನಿಜಕೃಪಾಸುಧಾತರಂಗಿಣಿಯೊಳವಗಾಹಂಗೆಯ್ಸಿ—

ಸರಸ ಮಧುರೋಕ್ತಿಯಿಂ ಬಸ
ವರಸನ ಬಗೆಗಿತ್ತು ಮುದಮನೆಂದಿನ ತೆಱದಿಂ
ಗುರು ಮೋಳಿಗೆ ಮಾರಯ್ಯಂ
ಕರುಣಾನಿಧಿ ಭಕ್ತಜನ[1]ಯುತ[1] ಸುಖಮಿರ್ದಂ ೩೪

ದಲ್ಲಿ ಕಪ್ಪೆಯಲ್ಲಿ ಅವ್ಯಕ್ತ ಮಧುರವಾದ ನಾದವು ಉಂಟೆ ? ಅಕ್ಕಿಯನ್ನು ತೊಳೆದ ನೀರಿನಲ್ಲಿ ಬೆಣ್ಣೆಯುಂಟೆ ? ಬೂರುಗದ ಮರದಲ್ಲಿ ಒಳ್ಳೆಯ ಫಲಗಳ ಸಮೂಹವುಂಟೆ ?. ಕೆಂಡದ ರಾಶಿಯಲ್ಲಿ ತಂಪುಂಟೆ ? ಕಾಡಿಗೆಯಲ್ಲಿ ಬಿಳುಪುಂಟೆ ? ಈರುಳ್ಳಿಯಲ್ಲಿ ಶ್ರೀಗಂಧದ ಪರಿಮಳವುಂಟೆ ? ಚಿಕ್ಕಕುಂಟೆಯಲ್ಲಿ ತಾವರೆಯು ಉಂಟೆ ? (ಇದರಂತೆ) ನನ್ನಲ್ಲಿ ಸದ್ಗುಣವುಂಟೆ ?' ೩೨. 'ಅಯ್ಯಾ, ಈ ಪೂರ್ವದಲ್ಲಿ ಪ್ರಭುದೇವರು (ಅಲ್ಲಮಪ್ರಭುದೇವರು) ಹಸಿದಿದ್ದಾರೆಂದು ಭಾವಿಸಿ, ತೃಪ್ತಿಗೊಳಿಸುವುದಕ್ಕೆ ಆಲೋಚಿಸಿದೆನು. ಈಗ ನಿನ್ನನ್ನು ಹಣವಿಲ್ಲದವನೆಂದು ಭಾವಿಸಿದೆನು. ಲೋಕದಲ್ಲಿ ನನ್ನನ್ನು ಸರಿಗಟ್ಟುವ ಮೂಢರು ಇರುವರೇ ?' ೩೩. ಊಹಿಸುವುದಕ್ಕೇ ಸಾಧ್ಯವಿಲ್ಲದ ಮಹತ್ವಗಳಿಗೆ ಸಮುದ್ರದೋಪಾದಿಯಲ್ಲಿರುವ ಹೇ, ಮಾರಯ್ಯನೇ, ನನಗೆ ಗತಿಯೂ, ಮತಿಯೂ, ಹಿತನೂ, ಪಿತನೂ, ಗುರುವಾದ ಸಂಗಮೇಶ್ವರನೂ ನೀನೇ. ನನ್ನ ಅತಿಶಯವಾದ ಶತಾಪರಾಧಗಳನ್ನು ಮರೆತು ನನ್ನನ್ನು ರಕ್ಷಿಸು.' ವ॥ ಹೀಗೆಂದು ಮೋಳಿಗೆಯ ಮಾರಯ್ಯನಲ್ಲಿ ಬಸವಣ್ಣನು ಅಭಯವನ್ನು ಬೇಡಿ, ಭಯ ಭಕ್ತಿಯಿಂದ ಎರಗಲಾಗಿ ಮಾರಿದೇವನು ಕಾರುಣ್ಯದಿಂದ ನೋಡಿ ಬರಸೆಳೆದು ಬಿಗಿಯಾಗಿ ಅಪ್ಪಿಕೊಂಡು, ತತ್ಕಾಲೋಚಿತವಾದ ವಿನಯವನ್ನು ತೋರಿಸಿ, ಮನ್ನಣೆ ಮಾಡಿ, ತನ್ನ ಕೃಪೆಯೆಂಬ ಅಮೃತದ ಹಾದಿಯಲ್ಲಿ ಸ್ನಾನ ಮಾಡಿಸಿ ೩೪. ಕರುಣಾನಿಧಿಯಾದ ಮೋಳಿಗೆಯ

1 ದಿ ವಿಂಗ (ಜ), ಯುಕ್ತಂ (ಅ)

ವ॥ ಅನಂತರಂ—

ನಲವಿಂದಂ ಮಾರಿದೇವಂಗೆಱಗಿ ನುತಿಸಿ ಬೀಳ್ಕೊಂಡು ಹೃತ್ಪದ್ಮದೊಳ್ತ
ದ್ವಿಲಸತ್ಸಾಮರ್ಥ್ಯಮಂ ಭಾವಿಸುತೆ ಪೊಗಳುತುಂ ಭಕ್ತಸಂದೋಹದೊಳ್ ನಿ
ರ್ಮಲಚಿತ್ತಂ ಭಕ್ತಿಯುಕ್ತಂ ನಿರುಪಮಮಹಿಮಂ ಭವ್ಯ ಸೇವ್ಯಂ ಭವೌಘಾ
ಚಲಶಂಬಂ ಬಂದು ಪೊಕ್ಕಂ ನಿಜಗೃಹಮನವಂ ಶೈವವಿದ್ಯಾಸಮುದ್ರಂ ೩೫

ರಸೆಗೆಸೆವ ಮೋಳಿಗೆಯ್ಯನ
ವಿಸುಪ ಚರಿತ್ರಮನದಾವನೋದುವನಾವಂ
ಪಸರಿಸಿ ಕೇಳುವನವಗೊ
ಲ್ದಸಮಾಕ್ಷಂ ಮಾಳ್ಪನಭಿಮತಾರ್ಥಮನನಿಶಂ ೩೬

ಸ್ವರ್ಣಗಿರಿಮಂದಿರೆ ಸುವರ್ಣರುಚಿಭಾಸುರೆ ಸು
ಪರ್ಣರಥವಂದಿತೆ ಯಜುರ್ನುತಪದಾಬ್ಜೇ
ತೂರ್ಣಗಸಖೇಕ್ಷಣೆ ವಿಕೀರ್ಣಮದಿರಾಮದವಿ
ಘೂರ್ಣಿತವಿಲೋಚನಸದುರ್ನಯದುರೀಹಾ
ದೀರ್ಣದನುಜಾತಹರ ಕರ್ಣರಿಪುರೋಪದೆ ಗು
ಣಾರ್ಣವಶಿವೈಕಮತನಿರ್ಣಯ ಧುರೀಣೇ
ಪೂರ್ಣಗುಣಭೂಷಣೆ ಪಿತೀರ್ಣಭುವನವ್ರಜೆ ಸು
ಕರ್ಣೆ ಪರಿಪಾಲಿಪುದಪರ್ಣೆ ಬಿಡದೆನ್ನಂ ೩೭

ಮಾರಯ್ಯನು ಸರಸವೂ, ಮನೋಹರವೂ ಆದ ಮಾತುಗಳಿಂದ ಬಸವರಸನ ಮನಸ್ಸಿಗೆ ಸಂತೋಷವುಂಟಾಗುವಂತೆ ಮಾಡಿ, ಎಂದಿನರೀತಿಯಾಗಿ ಭಕ್ತಜನರೊಡನೆ ಕೂಡಿಕೊಂಡು, ಸುಖದಿಂದ ಇದ್ದನು. ವ॥ ಅನಂತರ ೩೫. ನಿರ್ಮಲ ಚಿತ್ತನೂ, ಭಕ್ತಿಯಿಂದ ಕೂಡಿದವನೂ, ಅತುಳವಾದ ಮಹಿಮೆಯಿಂದ ಕೂಡಿದವನೂ, ಮಂಗಳಾನ್ವಿತರಾದವರಿಂದ ಸೇವಿಸುವುದಕ್ಕೆ ಯೋಗ್ಯನಾದವನೂ, ಪಾಪದ ಸಮೂಹವೆಂಬ ಪರ್ವತಕ್ಕೆ ವಜ್ರಾಯುಧ ಪ್ರಾಯನೂ, ಶೈವಧರ್ಮಕ್ಕೆ ಸಂಬಂಧಿಸಿದ ವಿದ್ಯೆಗಳಿಗೆ ಸಮುದ್ರರೂಪನೂ ಆದ ಆ ಬಸವೇಶ್ವರನು, ಸಂತೋಷದಿಂದ ಮಾರಿದೇವರಿಗೆ ನಮಸ್ಕಾರ ಮಾಡಿ, (ಅವರಿಂದ) ಹೊರಡಲಪ್ಪಣೆ ಪಡೆದು, ತನ್ನ ಹೃದಯ ಕಮಲದಲ್ಲಿ ಆ ಮಾರಯ್ಯನ ಪ್ರಕಾಶಿಸುವ ಸಾಮರ್ಥ್ಯವನ್ನು ಯೋಚಿಸುತ್ತ ಭಕ್ತ ಸಮೂಹದವರಲ್ಲಿ ಹೊಗಳುತ್ತ ಬಂದು ತನ್ನ ಮನೆಯನ್ನು ಹೊಕ್ಕನು. ೩೬. ಭೂಮಿಯಲ್ಲಿ ಶೋಭಿಸುವ ಮೋಳಿಗೆ ಮಾರಯ್ಯನ ಪ್ರಕಾಶಿಸುವ ಚರಿತ್ರೆಯನ್ನು ಅದಾವನು ಓದುವನೋ ಯಾವನು ವಿಸ್ತರಿಸಿ ಕೇಳುವನೋ ಅವನಿಗೆ ವಿಷಮ ನೇತ್ರನಾದ ಶಿವನು, ಒಲಿದು ಯಾವಾಗಲೂ ಇಷ್ಟಾರ್ಥವನ್ನುಂಟುಮಾಡುವನು. ೩೭. ಮೇರುಪರ್ವತವೇ ಮನೆಯಾಗಿ ಉಳ್ಳ, ಚಿನ್ನದ ಕಾಂತಿಯಂತಿರುವ ಕಾಂತಿಯಿಂದ ಪ್ರಕಾಶಿಸುವ, ಸುಪರ್ಣವೇ ರಥವಾಗಿ ಉಳ್ಳ ವಿಷ್ಣುವಿನಿಂದ ನಮಸ್ಕರಿಸಿಕೊಂಡ, ಯಜುರ್ವೇದದಿಂದ ಸ್ತೋತ್ರ ಮಾಡಿಸಿಕೊಂಡ ಪಾದಕಮಲ ಉಳ್ಳ, ಅಗ್ನಿಯೇ ನೇತ್ರವಾಗಿ ಉಳ್ಳ, ಮತ್ತು ಚಂಚಲವಾದ ಮದ್ಯಪಾನದ ಗರ್ವದಿಂದ

ಇದು ವಿನಮದಖಿಳ ಸುರಾಸುರೇಂದ್ರಮುಕುಟತಟಘಟಿತ ಮಣಿಗಣಾಗಣಿತ ರುಚಿನಿಚಯ
ತರುಣಾರುಣಾತಪಪರಿಲಸಿತ ಪರಮ ಶಿವಲಿಂಗ ಪಾದಾರವಿಂದಪರಾಗಭಸಿತ
ಭಾಸುರಲಲಾಟಪಟ್ಟಸರಸಜನಮಾನಿತೋಭಯಕವಿತಾವಿಶಾರದ
ಶ್ರೀ ಷಡಕ್ಷರಿದೇವಭಕ್ತಿವಿರಚಿತ

ಶ್ರೀ ಮದ್ ಬಸವರಾಜವಿಜಯಮಹಾಪುರಾಣದೊಳ್ ಮೋಳಿಗೆ ಮಾರಿದೇವಮಹತ್ವಕಥನಂ
ಏಕೋನವಿಂಶಾಶ್ವಾಸಂ ಸಮಾಪ್ತಂ

ಅಂತು ಆಶ್ವಾಸ ೧೯ಕ್ಕೆ ಪದಗಣನೆ ೧೫೩೬ಕ್ಕೆ ಮಂಗಳಮಹಾ ಶ್ರೀ ॥

ತಿರುಗಿಸಲ್ಪಟ್ಟ ನೇತ್ರವುಳ್ಳವರಾದ ದುರ್ನೀತಿಯಲ್ಲಿ, ದುರಾಸೆಯಲ್ಲಿ ಉತ್ಕೃಷ್ಟರೆನಿಸಿದ ರಾಕ್ಷಸರನ್ನು ನಾಶಗೊಳಿಸಿದವಳೇ, ಅರ್ಜುನನಿಗೆ (ಕರ್ಣರಿಪುವಿಗೆ) ಅಂಜನಾಸ್ತ್ರವೆಂಬ ಬಾಣವನ್ನು ಕೊಟ್ಟವಳೇ, ಸದ್ಗುಣಗಳಿಗೆ ಸಮುದ್ರರೆನಿಸಿದ ಶಿವೈಕ್ಯಚಿತ್ತರಾದ (ಶಿವ ಶರಣರ) ಸಮಯವನ್ನು ನಿರ್ಣಯ ಮಾಡುವುದರಲ್ಲಿ ಸಮರ್ಥಳಾದ ಸಂಪೂರ್ಣವಾದ ಗುಣಗಳೇ ಆಭರಣವಾಗಿ ಉಳ್ಳವಳೇ, ಲೋಕ ಸಮುದಾಯವನ್ನು ವಿಸ್ತಾರಗೊಳಿಸಿ ದವಳೇ, ಸಮೀಚೀನವಾದ ಕಿವಿಗಳುಳ್ಳ ಅಪರ್ಣೆಯೇ (ಪಾರ್ವತಿಯೇ) ನನ್ನನ್ನು ತಪ್ಪದೆ ರಕ್ಷಿಸುವವಳಾಗು. [ತೂರ್ಣಗ + ಸಖ + ಈಕ್ಷಣೆ—ವೇಗವಾಗಿ ಗಮಿಸುವುದು ವಾಯು ಅದರ ಸಖ ಅಗ್ನಿ ; ವಿಕೀರ್ಣ + ಮದಿರಾ + ಮದ + ವಿಘೂರ್ಣಿತ—ಚಾಂಚಲ್ಯದಿಂದ ಕೂಡಿದ ಮದಿರೆಯ ಮದದಿಂದ ಅತ್ತ ಇತ್ತ ತಿರುಗಿದ : ಸದುರ್ಣಯ + ದುರೀಹ + ಉದೀರ್ಣ + ದನುಜ–ದುರ್ಣಯ, ದುರಾಸೆಗಳಲ್ಲಿ ಉತ್ಕೃಷ್ಟರೆನಿಸಿದ ದನುವಿನ ಮಕ್ಕಳು–ರಾಕ್ಷಸರು ; ಕರ್ಣ + ರಿಪು + ರೋಪ + ದೆ—ಅರ್ಜುನನಿಗೆ ಬಾಣ ಪ್ರದಾನ ಮಾಡಿ ದವಳು.]

ಹತ್ತೊಂಬತ್ತನೆಯ ಆಶ್ವಾಸವು ಸಮಾಪ್ತವಾಯಿತು

ವಿಂಶಾಶ್ವಾಸಂ

(ಕನ್ನದ ಬ್ರಹ್ಮಯ್ಯನ ಕಥೆ)

ಶ್ರೀಕುಧರಪತಿಸುತಾಸುಖ
ಮಾಕಂದವಸಂತನಂತಕಾಂತಕನಭವಂ
ಲೋಕೇಶ ಕೇಶವಾದಿ ದಿ
ವೌಕಸ್ತುತನೀಗೆ ಸೌಖ್ಯಮಂ ಶಿವಲಿಂಗಂ ೧

ಆ ಕಲ್ಯಾಣದೊಳಿರ್ಪಂ
ಶ್ರೀ ಕಲ್ಯಾಣೇಶವಿಮಳಪದಭಕ್ತನಘಾ
ನೀಕವಿರಹಿತಚರಿತನ
ಸ್ತೋಕಯಶೋಧವಳಿತಾಶನನುಪಮ ಮಹಿಮಂ ೨

ಮದನಾರಾತಿಪದೈಕಭಕ್ತಪದಪೂಜಾಲೋಲನೌದಾರ್ಯಶಾ
ಲಿ ದಯಾರಾಶಿ ಮಹಾದ್ಭುತೋನ್ನತಚರಿತ್ರಂ ಸಾರವೀರವ್ರತಾ
ಸ್ಪದನುದ್ಯತ್ಸುಬೋಧನಿರ್ಜಿತವಿಮೋಹಂ ಸಂತತಾನಂದಿ ಕ
ನ್ನದ ಬೊಮ್ಮಯ್ಯನವಂಚಕಪ್ರಥಿತಸಮ್ಯಗ್ಜಂಗಮಾರಾಧಕಂ ೩

ವಿತತ ಬಹಿರಂತರರ್ಚನ
ಚತುರಂ ಜಂಗಮಸಮರ್ಪಿತಾಂಗಪ್ರಾಣಾ

ಕನ್ನದ ಬ್ರಹ್ಮಯ್ಯನ ಕಥೆ

೧. ಮಂಗಳಕರಳಾದ ಪಾರ್ವತಿಯ ಸೌಖ್ಯವೆಂಬ ಮಾವಿನ ಮರಕ್ಕೆ ವಸಂತ ಋತುವಾದವನೂ, ಯಮನಿಗೂ ಅಂತಕವೆನಿಸಿದವನೂ, ಸಂಸಾರರಹಿತನೂ, ಬ್ರಹ್ಮ ವಿಷ್ಣುಗಳೇ ಮೊದಲಾದ ದೇವತೆಗಳಿಂದ ಕೊಂಡಾಡಲ್ಪಡುವವನೂ ಆದ ಶಿವಲಿಂಗನು ಸೌಖ್ಯವನ್ನು (ನಮಗೆ) ಕೊಡಲಿ. ೨–೩–೪. ಆ ಕಲ್ಯಾಣದಲ್ಲಿರುವ ಶ್ರೀ ಪಾರ್ವತೀ ಪತಿಯಾದ ಶಿವನ ಪಾದ ಭಕ್ತನೂ, ಪಾಪದ ಸಮೂಹದಿಂದ ದೂರವಾದ ಚರಿತ್ರೆಯುಳ್ಳವನೂ, ಅಧಿಕವಾದ ಕೀರ್ತಿಯಿಂದ ದಿಕ್ಕುಗಳನ್ನು ಶುಭ್ರಗೊಳಿಸಿದವನೂ, ಎಣೆಯಿಲ್ಲದ ಮಹತ್ವವುಳ್ಳವನೂ ಈಶ್ವರನ ಪಾದವೊಂದರಲ್ಲೇ ಭಕ್ತಿಯುಳ್ಳವರ ಪಾದ ಪೂಜೆಯಲ್ಲಿ ಆಸಕ್ತನಾದವನೂ. ಔದಾರ್ಯ ಗುಣ ಸಂಪನ್ನನೂ, ದಯಾ ರಾಶಿಯೂ, ಅತ್ಯಾಶ್ಚರ್ಯಕರವೂ ಉತ್ಕೃಷ್ಟವೂ ಆದ ನಡತೆಯುಳ್ಳವನೂ, ಸಾರಯುತವಾದ ವೀರಶೈವ ವ್ರತಾಚರಣೆಗೆ ಆಶ್ರಯನಾದವನೂ. ವಿಕಸಿತವಾದ ಶ್ರೇಷ್ಠ ಜ್ಞಾನವುಳ್ಳವರೂ, ಸತತ ಸಂತೋಷವುಳ್ಳವರೂ, ನಿಷ್ಕಪಟಿಗಳೂ, ಪ್ರಸಿದ್ಧರೂ, ಶ್ರೇಷ್ಠರೂ ಆದ ಜಂಗಮರನ್ನು ಆರಾಧಿಸುವವನೂ ಆದ 'ಕನ್ನದ ಬ್ರಹ್ಮಯ್ಯ'ನು ಇದ್ದನು. ಅವನು ಖ್ಯಾತವಾದ ಬಾಹ್ಯ ಮತ್ತು

ರ್ಥತತಿ ಜಿತಮಾಯನಮಳಿನ
ಮತಿ ಶಿವಲಿಂಗಾಭಿಮಾನಮಾನಿತವಿಭವಂ ೪

ವ॥ ಎನಿಸಿ ರಂಜಿಸಿ—

ಬಳಪಂ ಕತ್ತಿಗೆ ಚಂಡು ಕರ್ತರಿ ಮಣಲ್ ಮುಳ್ಮಾನಸೂತ್ರಾಂಕುಶಂ
ಸೆಳೆಗೋಲಕ್ಷತೆ ನಾರಸಂ ಪವನವಸ್ತ್ರಂ ರುದ್ರಭೂಭೂತಿ ನಾ
ಯ್ಗಳ ಬಾಯ್ಕಟ್ಟಿನಮರ್ದದೃಶ್ಯತಿಲಕಂ ದತ್ತೂರ ಬೀಜಾಳಿ ಕಾ
ಕಳಿವರ್ಣೋಪಳಮಂಜನಂ ಭ್ರಮರಪೂರ್ಣೋದ್ಯತ್ಕರಂಡೌಷಧಂ ೫

ಒಂದಟ್ಟೆಯು ಕೆರ್ಪಂ ನಲ
ವಿಂದಂ ಮೆಟ್ಟುತ್ತೆ ನೀಲಿಗಪ್ಪಡಮುಡೆ ಚೆ
ಲ್ವೊಂದಿರೆ ಸಾಧನಮೀದನೋ
ರಂದದೆ ಕೆಯ್ಕೊಂಡು ಗಾಢತಿಮಿರದೊಳಧಟಂ ೬

ಯೋಗಚೂರ್ಣಯೋಗವೃತ್ತಿಯಂ ಕರಾಗ್ರದಲ್ಲಿ ತಾ
ಳ್ದಾಗಳುತೆ ಬಂದು ವಿತ್ತಮುಳ್ಳರಾಲಯಂಗಳಂ
ರಾಗಿಸುತ್ತೆ ಸಾರ್ದು ಸೊಪ್ಪುಳಾಲಿಸುತ್ತೆ ನೋಡಿ ಸಂ
ಯೋಗಿಸುತ್ತೆ ತಕ್ಕುದೆಲ್ಲಮಂ ಕಡಂಗಿ ಜಾಣ್ಮೆಯಿಂ ೭

ನೆಲಗನ್ನಂ ಗೋಡೆಗನ್ನಂ ಮಿಸುಗುವ ಗುಳಿಗನ್ನಂ ದೃಢದ್ವಾರಬಂಧ
ಸ್ಥಲದೊಳ್ಗನ್ನಂ ದಲಿಂತೆಂಬವಱೊಳದಕೆ ತಕ್ಕುದದಿಂ ಕನ್ನಮಂ ತೋ
ಡಿ ಲಸತ್ಸಾಮರ್ಥ್ಯಯುಕ್ತಂ ಪುಗುತೊಳಗದು ಭಕ್ತಾಲಯಂ ನೈಜವಾದಂ
ದೊಲವಿಂದಂ ದೀಪಮಂ ತಾಂ ಬೆಳಗುತವರನೊಲ್ದೆಬ್ಬಿಸುತ್ತೊಲ್ಪಿನಿಂದಂ ೮

ಪದಪಿಂದಂ ತತ್ಪದಾಬ್ಜಕ್ಕೆಱಗಿ ಗಿರಿಶಸದ್ಭೃತ್ಯಭೃತ್ಯಂ ಪೆಸರ್ಕೆ
ನ್ನದ ಬೊಮ್ಮಂ ಬಂದೆನಾನೆಂದಱುಪಿ ಪಡೆದು ಪಾದಾಂಬುಶೇಷಂಗಳಂ ಸ
ಮ್ಮದದಿಂದಂ ಸೇವಿಸುತ್ತಯ್ದುವನದು ಭವಿಗೇಹಂ ದಲಾದಂದು ಬಾರ್ದು
ತ್ತೊದವಿರ್ದರ್ಥಂಗಳಂ ಕೊಂಡೊಸೆದು ತಳರ್ದು ತದ್ವಿತ್ತದಿಂ ಮತ್ತಮಾಗಳ್ ೯

ಬಂದ ಚರಲಿಂಗಮಂ ನಲ
ವಿಂದಂ ಪೂಜಿಸುತೆ ಸುಖದೊಳಿರೆ ಭಕ್ತಂ ಮ

ಅಂತರಂಗ ಪೂಜಾ ಕುಶಲನು ; ದೇಹ, ಪ್ರಾಣ, ಧನಗಳ ಸಮೂಹವನ್ನು ಜಂಗಮಕ್ಕೆ ಸಮರ್ಪಿಸಿದವನು ; ಮಾಯೆಯನ್ನು ಜಯಿಸಿದವನು ; ನಿರ್ಮಲವಾದ ಬುದ್ಧಿಯುಳ್ಳವನು ; ಶಿವಲಿಂಗದಲ್ಲಿ ತನ್ನ ಸನ್ಮಾನ, ಅಭಿಮಾನಗಳನ್ನು ಸಮರ್ಪಿಸಿದ ವೈಭವವುಳ್ಳವನು (ಆಗಿದ್ದನು). ೫ ರಿಂದ ೧೦. ಬರೆಯುವ ಬಳಪ, ಕನ್ನದಗತ್ತರಿ, ಚೆಂಡು, ಕತ್ತರಿ, ಮಳಲು, ಮುಳ್ಳು, ಅಳತೆ ದಾರಕ್ಕೆ ಕಟ್ಟಿರುವ ಡೊಂಕಾದ ಆಯುಧ (ಮಾನ ಸೂತ್ರಾಂಕುಶ), (ಸಾಮಾನುಗಳನ್ನು) ಸಿಕ್ಕಿಸಿ ಎಳೆದುಕೊಳ್ಳುವ ಕೋಲು, ಅಕ್ಷತೆಗಳು ನಾರಸವೆಂಬ ಆಯುಧ ವಿಶೇಷ, ಗಾಳಿಯ ಬಟ್ಟೆ (ಪವನ ವಸ್ತ್ರ), ಶ್ಮಶಾನದ ಬೂದಿ, ನಾಯಿಗಳು ಬೊಗಳದಂತೆ ಮಾಡುವ ಔಷಧ, ಅದೃಶ್ಯತಿಲಕ ಎಂದರೆ ಮತ್ತೊಬ್ಬರ

ತ್ತೊಂದು ದಿನಂ ಬಹುಜಂಗಮ
ವೃಂದಂ ಬಂದತ್ತು ತದ್ಗೃಹಕ್ಕೊಲವಿಂದಂ ೧೦

ವ॥ ಅಂತು ಬರೆ ಕಂಡು ಸಡಗರಂಗೊಂಡು ಬಹುಧನದಿನಲ್ಲದೀ ಬಹಳ ಜಂಗಮ ಸಪರ್ಯೆ

ಕಣ್ಣಿಗೆ ತಾನು ಕಾಣದಂತೆ ಮಾಡುವ ಕಪ್ಪಿನ ಬೊಟ್ಟನ್ನು ಹಣೆಯ ಮೇಲೆ ಧರಿಸಿ ಕೊಳ್ಳುವ ಅಂಜನ, ದತ್ತೂರಿಯ ಬೀಜಗಳ ಸಮೂಹ, ಕವಣೆ ಕಲ್ಲು (ಕಾಕಳಿ ವರ್ನೋಪಳ), ಅಂಜನ (ದುಡ್ಡು ಎಲ್ಲಿದೆ ಎಂಬುದನ್ನು ನೋಡಲು ಮಾಡಿರುವ ಒಂದು ರೀತಿಯ ಕಾಡಿಗೆ ವಿಶೇಷ,) ತುಂಬಿಗಳಿಂದ ಸಂಪೂರ್ಣ ತುಂಬಿರುವ ಕರಂಡಕದ ಔಷಧ, (ಇವುಗಳಿಂದ ಕೂಡಿ) ಒಂದಟ್ಟೆಯುಳ್ಳ ಕೆರ (ಮೆಟ್ಟು) ವನ್ನು ಮೆಟ್ಟಿಕೊಂಡು, ನೀಲ ವರ್ಣದ ಉಟ್ಟ ಬಟ್ಟೆ ಇವು ಚೆಲುವನ್ನುಂಟುಮಾಡುತ್ತಿರಲು, ಈ ಪೂರ್ವದಲ್ಲಿ ಹೇಳಿದ ಸಾಧನ ಸಾಮಗ್ರಿಗಳನ್ನು ಕ್ರಮವಾಗಿ ತೆಗೆದುಕೊಂಡು ದಟ್ಟವಾದ ಕತ್ತಲೆಯಲ್ಲಿ ಪರಾ ಕ್ರಮದಿಂದ, ಯೋಗಚೂರ್ಣವೆಂಬ ಪುಡಿಯಿಂದ ಕೂಡಿದ ಬತ್ತಿಯನ್ನು ಕರಾಗ್ರದಲ್ಲಿ ಹಿಡಿದು, ಸಂತೋಷ ಪಡುತ್ತ, ಹಣವಂತರಾದವರ ಮನೆಗಳ, ಹತ್ತಿರಕ್ಕೆ ಬಂದು, ಶಬ್ದವನ್ನು ಆಲಿಸುವನು ನೋಡಿ, (ಆ ಸನ್ನಿವೇಶಕ್ಕೆ) ಬೇಕಾಗುವ ಕನ್ನ ಹಾಕುವ ವಸ್ತು ಗಳನ್ನೆಲ್ಲ ಜೋಡಿಸಿಕೊಂಡು ಜಾಣತನದಿಂದ ಉತ್ಸಾಹಗೊಳ್ಳುವನು, ಭೂಮಿಯಲ್ಲಿ ರಂಧ್ರ ಕೊರೆಯುವ ಕನ್ನಗತ್ತರಿ, ಗೋಡೆಯನ್ನು ತೂತು ಕೊರೆಯುವ ಗೋಡೆ ಕನ್ನ ಗತ್ತರಿ, ಗುಳಿಯನ್ನಾಗಿ ಮಾಡುವ ಕನ್ನಗತ್ತರಿ, ಗಟ್ಟಿಯಾದ ಬಾಗಿಲ ನೆಲುವಿನ ಬಳಿಯಲ್ಲಿ ಹಾಕುವ ಕನ್ನಗತ್ತರಿ ಈ ಪ್ರಕಾರವಾಗಿರುವ ಕನ್ನ ಕೊರೆಯುವ ಸಾಧನಗಳಲ್ಲಿ ಆಯಾಯ ಕನ್ನಕ್ಕೆ ಯೋಗ್ಯವಾದ ಕನ್ನಗತ್ತರಿಯಿಂದ ಕನ್ನವನ್ನು ತೋಡಿ ಶ್ರೇಷ್ಠ ಸಾಮರ್ಥ್ಯದಿಂದ ಕೂಡಿದವನಾಗಿ, ಮನೆಯೊಳಗೆ ಪ್ರವೇಶ ಮಾಡುವನು. ಆ ಮನೆಯು ನಿಜವಾಗಿ ಭಕ್ತರ ಮನೆಯಾಗಿದ್ದರೆ, ತಾನೇ ದೀಪವನ್ನು ಮುಡಿಸಿ, ಆ ಮನೆಯವರನ್ನು ಪ್ರೀತಿಯಿಂದ ಎಬ್ಬಿಸುವನು, ಒಳ್ಳೆಯ ನಡೆವಳಿಕೆಯಿಂದ ಕೂಡಿದವನಾಗಿ ಪ್ರೀತಿಯಿಂದ ಅವರ ಪಾದ ಕಮಲಗಳಿಗೆ ನಮಸ್ಕರಿಸಿ, 'ನಾನು ಈಶ್ವರನ ಸೇವಕರ ಸೇವಕನು. ನನ್ನ ಹೆಸರು ಕನ್ನದ ಬೊಮ್ಮ ಎಂದು, ಬಂದಿದ್ದೇನೆ,' ಎಂದು ತಿಳಿಸಿ ಪಾದೋದಕ ಪ್ರಸಾದಗಳನ್ನು ಪಡೆದು ಸಂತೋಷದಿಂದ ಸೇವಿಸಿ ಹೋಗುವನು. ಆ ನುಗ್ಗಿದ ಮನೆಯು ನಿಜವಾಗಿ ಭವಿಗಳದಾಗಿ ದ್ದರೆ, ಅಲ್ಲಿದ್ದ ವಸ್ತುಗಳನ್ನೆಲ್ಲ ಬಾಚಿ ತೆಗೆದುಕೊಂಡು ಹೊರಟು ಆ ಐಶ್ವರ್ಯದಿಂದ ಕೂಡಿ, ಆ ಭಕ್ತನು ಬಂದು ಜಂಗಮರನ್ನು ಪ್ರೀತಿಯಿಂದ ಪೂಜಿಸುತ್ತ ಸುಖದಿಂದ ಇರುತ್ತಿರಲು ಮತ್ತೊಂದು ದಿವಸ ಅಧಿಕ ಸಂಖ್ಯೆಯ ಜಂಗಮ ಸಮೂಹ ತನ್ನ ಮನೆಗೆ ಬಂದಿತ್ತು. ವ॥ ಹಾಗೆ ಬಂದಿರಲು (ಅವರನ್ನು) ಕಂಡು ಸಂಭ್ರಮಗೊಂಡು, ಅಧಿಕವಾದ ಹಣ ದಿಂದಲ್ಲದೆ ಈ ಹೆಚ್ಚು ಸಂಖ್ಯೆಯಲ್ಲಿರುವ ಜಂಗಮರ ಪೂಜೆಯು ಯಥಾಸಾಂಗವಾಗಿ ನೇರವೇರದು, (ಆದ್ದರಿಂದ) ಅರಮನೆಗೇ ಕನ್ನ ಹಾಕಿ ಅಧಿಕ ವಸ್ತುಗಳನ್ನು ತರುತ್ತೇನೆ.

ಸಾಂಗಮಾಗದರಮನೆಯುಂ ಕನ್ನಮಿಕ್ಕಿ ಬಹುವಸ್ತುವಂ ತರ್ಪೆನೆಂದುಜ್ಜುಗಿಸಿ ಗೃಹಮಂ ಪೊಱಮಟ್ಟು ರಾಜವೀಥಿಯೊಳ್ಬರ್ಪಾಗಳಿದಿರೊಳ್ಕಂಡು ತನಗೆಱಗಿ ನುತಿಪ ಬಸವರಸನಂ ನೋಡಿ—

ಚರವೃಂದಂ ಬಂದುದಿಂದೆನ್ನಯ ಗೃಹಕೆ ವೃಷಾಧೀಶ ತತ್ಪೂಜೆಗುರ್ವೀ
ಶ್ವರಗೇಹಂಬೊಕ್ಕು ಕನ್ನಂದೆಗೆದು ಬಹುಧನಂದಪ್ಪೆನೆಂದೆಯ್ದಿದೆಂ ತ
ದ್ವರಕೋಶಾಗಾರಮಂ ತೋಱೆನಗೆ ದೊರೆಯದನ್ಯಾಲಯಂಬೊಕ್ಕೊಡರ್ಥೋ
ತ್ಕರಮೀಗಳ್ಪೋಪಮೇಳ್ಕತ್ತಿಗೆವಿಡಿ ನಡೆಯೆಂದಾಡಿದು ಬೊಮ್ಮಿದೇವಂ ೧೧

ವ॥ ಎನೆ ಕೇಳ್ದನುಚಿತಮಿದೆನ್ನದೆ ಭಕ್ತರೇನೆಂದೊಡಂ ಮಾರ್ನುಡಿಗೊಡದ ಭಾಷೆ ತನಗುಂಟಪ್ಪುದಱಿಂ ಮಹಾಪ್ರಸಾದಮೆಂದೊಡಗೊಂಡು ಪೋಗಿ ನಿರ್ಭೀತಿಯಿಂ ಮಧ್ಯಂ[1]ದಿನದೊಳರಮನೆಯುಂ ಪೊಕ್ಕು ಬಹುವಸ್ತುವಿದ್ದ ಭಾಂಡಾಗಾರಮಂ ಬಸವಂ ತೋಱಲೊಡನೆ ತತ್ಕರದೊಳಿರ್ದ ತನ್ನ ಕನ್ನಗ[2]ತ್ತಿಗ[3]ಯುಂ ಕೊಂಡಗುಳಿಗನ್ನಮಂ ಸಮೆದೊಕ್ಕ ಮಣ್ಣ ಪುಡಿಯೆಲ್ಲಂ ಪೊನ್ನ ಪುಡಿಯಾಗುದುರುತ್ತುಮಿರೆ ತಳ್ವದೊಳಪೊಕ್ಕುಮಿಕ್ಕು ಕೆಲವಲದ ಪೇಳಿಗೆಯುಂ ನೋಡಿ ತೆಗೆದಳುಂಬಂ ಪೊನ್ನಪೊಱೆಗಟ್ಟಿಕೊಂಡು ಪೋಪಿನಂ ಕಾಪಿನ ಚರರ್ಕಂಡು ಭೂಪನಿರ್ದೆಡೆಗೆ ಸರಭಸಂ ಪರಿದು ಪೋಗಿ ತದ್ವೃತ್ತಾಂತಮನೆಲ್ಲಮಂ ಪೇಳೆ ಕೇಳ್ದು ಬಿಜ್ಜಳಂ ಕೋಪೋಜ್ವಳಭೀಷಣೇಕ್ಷಣನಾಗಿ—

ಎಂದು ಸಿದ್ಧನಾಗಿ ಮನೆಯಿಂದ ಹೊರಟು, ರಾಜ ಬೀದಿಯಲ್ಲಿ ಬರುತ್ತಿರುವಾಗ ಎದುರಿನಲ್ಲಿಯೇ ತನ್ನನ್ನು ಕಂಡು ನಮಸ್ಕರಿಸುತ್ತಿರುವ ಬಸವಣ್ಣನನ್ನು ನೋಡಿ–
೧೧. 'ಬಸವಣ್ಣ, ಈದಿನ ನನ್ನ ಮನೆಗೆ ಜಂಗಮ ಸಮೂಹ ಬಂದಿದೆ, ಆ ಜಂಗಮರ ಪೂಜೆಗೋಸ್ಕರ ಕನ್ನವನ್ನು ಕೊರೆದು ಅರಮನೆಯನ್ನು ನುಗ್ಗಿ, ಬಹಳ ಧನವನ್ನು ತರುವೆನು, ಎಂದು ಬಂದಿದ್ದೇನೆ. ಆ ರಾಜನ ಶ್ರೇಷ್ಠವಾದ ಬೊಕ್ಕಸದ ಮನೆಯನ್ನು ನನಗೆ ತೋರಿಸು. ಅರಸನದಲ್ಲದೆ ಬೇರೆ ಮನೆಯನ್ನು ಹೊಕ್ಕರೆ ಹೆಚ್ಚಾದ ಹಣವು ದೊರಕುವುದಿಲ್ಲ. ಈಗ ಹೋಗೋಣ, ಏಳು ಕನ್ನಗತ್ತರಿಯನ್ನು ಹಿಡಿದುಕೋ, ನಡೆ,' ಎಂದು ಬೊಮ್ಮಿದೇವನು ಹೇಳಿದನು. ವ॥ ಹೀಗೆಂದು ಹೇಳಲು ಕೇಳಿ, ಇವನ ಈ ವೃತ್ತಿ ಅನುಚಿತವಾದದ್ದು ಎನ್ನದೆ ಭಕ್ತರಾದವರು ಏನೆಂದರೂ ಪ್ರತ್ಯುತ್ತರ ಕೊಡದ ಪ್ರತಿಜ್ಞೆಯೇ ತನಗೆ ಉಂಟಾಗಿರುವುದರಿಂದ ಮಹಾಪ್ರಸಾದ ಎಂದು ಅವನೊಡನೆ ಹೋಗಿ ನಿರ್ಭೀತಿಯಿಂದ ಮಧ್ಯಾಹ್ನದಲ್ಲಿಯೇ ಅರಮನೆಯನ್ನು ಹೊಕ್ಕು ಬಹುವಸ್ತು ವಿದ್ದ ಭಾಂಡಾಗಾರದ ಮನೆಯನ್ನು ತೋರಿಸಿದನು, ಕೂಡಲೆ ಬಸವಣ್ಣನ ಕಯ್ಯಲ್ಲಿದ್ದ ಕನ್ನಗತ್ತರಿಯನ್ನು ತೆಗೆದುಕೊಂಡು, ಗುಳಿಯನ್ನಾಗಿ ಮಾಡುವ ಗುಳಿಗನ್ನವನ್ನು ಹಾಕಿದನು. ಸಿಕ್ಕ ಮಣ್ಣು ಪುಡಿಯೆಲ್ಲವೂ ಹೊನ್ನಿನ ಪುಡಿಯಾಗಿ ಉದುರುತ್ತಿತ್ತು, ತಡಮಾಡದೆ ಒಳಹೊಕ್ಕು ಮಿಕ್ಕ ಆಚೆ ಈಚೆಯಿರುವ ಪೆಟ್ಟಿಗೆಗಳನ್ನು ನೋಡಿ, ತೆರೆದು, ಹೆಚ್ಚಾಗಿ ಹೊನ್ನಿನ ಹೊರೆಯನ್ನು ಕಟ್ಟಿಕೊಂಡು ಹೊತ್ತುಕೊಂಡು ಹೋಗುತ್ತಿದ್ದನು. ಅಷ್ಟರಲ್ಲಿ ಕಾವಲಿನ ಆಳುಗಳು ಕಂಡು ಮಹಾರಾಜನಿದ್ದಲ್ಲಿಗೆ ವೇಗವಾಗಿ ಓಡಿಹೋಗಿ ಆ ವೃತ್ತಾಂತವೆಲ್ಲವನ್ನೂ ಹೇಳಿದರು, ಬಿಜ್ಜಳನು ಕೇಳಿ ಕೋಪದಿಂದ ಪ್ರಕಾಶಿಸುವ

1 ಧ್ಯ(ಜ) 2 ತ್ರಿ(ದ) 3 ಏಃಂ(ಜ)

ಸ್ಥಿರಸತ್ಯವ್ರತನೀಶಭಕ್ತನೆನಗಾಪ್ತಂ ಧರ್ಮಯುಕ್ತಂ ಗುಣಾ
ಕರನೆಂದಾಂ ಸಕಲಾಧಿಪತ್ಯಪದಮಂ ಕೈಸಾರ್ಚಿತುಂ ನಂಬಿ ನ
ಚ್ಚಿರೆ ಲೇಸಂ ನೆಗಳ್ದಂ ಗಡಾ ಬಸವನೇನೆಂಬೆಂ ಪಗಲ್ಬಂದು ತ
ಸ್ಕರರಿಂ ತೋಡಿಸಿ ಕನ್ನಮಂ ಕಳಿಸಿದಂ ಮತ್ಕೋಶವಿತ್ತಂಗಳಂ ೧೨

ಬೇಡಿದೊಡೀಯೆನೇ ತನಗೆ ಭೂರಿಧನಂಗಳನೇಕೆ ಕನ್ನಮಂ
ತೋಡಿಸಿ ಕೋಶವಿತ್ತತತಿಯಂ ಬಱಿಕೆಯ್ದನಕಾರ್ಯಮೆಂಬುದಂ
ನೋಡದೆ ದುರ್ಯಶಸ್ಸ್ಥಿತಿಗೆ ಭಾಜನನಾದನಜಸ್ರಮಾಂ ಕರಂ
ಮಾಡಿದ ಲೇಸನೊತ್ತರಿಸಿದಂ ಗಡ ತನ್ನನದೆಂತು ನಂಬುವೆಂ ೧೩

ಹರಣಂಗೊಳಿಪುದಿವಂಗ
ಚ್ಚರಿಯ'ಲ್ತರ್ಥಾ ಬಹಿಶ್ಚರಾಃ ಪ್ರಾಣಾ' ಎಂ
ಬೊರೆಯುಂಟಪ್ಪುದಱಿಂ ತ
ಸ್ಕರರಿಂ ಮದ್ಧನಮನಿಂತು ಕಳಿಸಿದ ಕತದಿಂ ೧೪

ವ|| ಅದುಕಾರಣದಿಂ ಬಸವಸಚಿವನೊಡನಾಟಮೆನಗೆ ಸಾಲ್ಗುಮೆಂ[3]ದು ರೋಷಾವೇಶನಿರ್ಯದನಲಕಣಕಟಾಕ್ಷನಾಗಿ ಭಾಂಡಾಗಾರದೆಡೆಗೇಳ್ತಂದು ಕನ್ನಂದೆಗೆದ ತಾಣಮಂ ಮಾಣದವಶನಿಂದು ನಿರೀಕ್ಷಿಪಾಗಳ್—

ಕೆಂಪಾದ ಕಣ್ಣುಗಳುಳ್ಳವನಾಗಿ ೧೨. ಬಸವಣ್ಣನು ನಿಶ್ಚಂಚಲವಾದ ಸತ್ಯವೇ ವ್ರತವಾಗಿ ಉಳ್ಳವನು; ಈಶ್ವರನ ಭಕ್ತನು; ನನಗೆ ಆಪ್ತನು! ಧರ್ಮದಿಂದ ಕೂಡಿದವನು; ಸದ್ಗುಣ ಸಮೂಹವುಳ್ಳವನು–ಎಂದು ನಾನು'ಸಕಲಾಧಿಪತ್ಯವನೂ ಕೈಗೆ ಕೊಟ್ಟೆನು(ಹೀಗೆ ಕೊಟ್ಟು) ನಂಬಿ, ನಚ್ಚಿ ಇರುತ್ತಿರಲು ಒಳ್ಳೆಯದನ್ನೇ ಮಾಡಿದನಲ್ಲವೇ ? ಏನು ಹೇಳಲಿ ಹಗಲಿನಲ್ಲಿಯೇ ಕಳ್ಳರೊಡನೆ ಬಂದು ಕನ್ನವನ್ನು ತೋಡಿಸಿ, ನನ್ನ ಬೊಕ್ಕಸದ ಹಣವನ್ನು ಕಳಿಸಿದನು. ೧೩. ಬೇಡಿದ್ದರೆ ಆ ಬಸವಣ್ಣನಿಗೆ ಹೇರಳವಾಗಿ ಹಣವನ್ನು ಕೊಡುತ್ತಿರಲಿಲ್ಲವೆ ? ಕನ್ನವನ್ನು ಕೆರೆಯಿಸಿ ಭಾಂಡಾರದ ದ್ರವ್ಯಸಮೂಹವನ್ನು ಏಕೆ ಬರಿದುಗೊಳಿಸಿದನು ! (ತಾನು ಮಾಡುವ ಈ ಕಾರ್ಯ) ಮಾಡಬಾರದ ಕಾರ್ಯವೆಂಬುದನ್ನು ಯೋಚಿಸದೆ ಅಪಯಶಸ್ಸಿಗೆ ಭಾಜನನಾದನು. ಸದಾ ನಾನು (ಅವನಿಗೆ) ಮಾಡಿದ ಉಪಕಾರವನ್ನು ಮೂಲೆ ಗುಂಪಾಗಿಸಿದನಲ್ಲವೆ ? (ಅವನನ್ನು) ಹೇಗೆ ನಂಬಲಿ?' ೧೪. ಕಳ್ಳರಿಂದ ನನ್ನ ಹಣವನ್ನು ಈ ರೀತಿ ಕಳವು ಮಾಡಿಸಿದ ಕಾರಣದಿಂದ (ಇವನಿಗೆ) 'ದ್ರವ್ಯವು ಹೊರಗೆ ಸಂಚರಿಸುವ ಪ್ರಾಣಗಳು' ಎಂಬ ನಾಣ್ಣುಡಿಯಿರುವುದರಿಂದ ಈ ಬಸವಣ್ಣನಿಗೆ ಪ್ರಾಣವನ್ನು ತೆಗೆಯಿಸುವುದೂ ಆಶ್ಚರ್ಯವಲ್ಲ !' ವ|| 'ಆದಕಾರಣದಿಂದ ಬಸವ ಮಂತ್ರಿಯೊಡನೆ ನಮಗೆ ಒಡನಾಟವು ಸಾಕು !' ಹೀಗೆಂದು ರೋಷದಿಂದ ಕೂಡಿದ ಆವೇಶದಿಂದ ಹೊರಹೊರಡುತ್ತಿರುವ ಬೆಂಕಿಯ ಕಣ್ಣುಕೊನೆಗಳುಳ್ಳವನಾಗಿ, ಭಾಂಡಾರದ ಹತ್ತಿರಕ್ಕೆ ಹೊರಟುಬಂದು, ಕನ್ನವನ್ನು ಕೊರೆದ ಸ್ಥಳವನ್ನು ನಿಂತು ನೋಡುತ್ತಿರುವಾಗ

ಇದು ಶರಣಚರಣಕನಕಾ
ಬ್ಜದರಜಮೊರ್ಗುಡಿಸಿತೆನಿಸಿ ಕೋಶಶ್ರೀಯಂ
ಗದಕುಂಕುಮರಜಮುದುರ್ದವೊ
ಲೊದವಿದ ನವಕನಕರಜಮದೇಂ ರಂಜಿಸಿತೋ ೧೫

ವ॥ ಅಂತೆಸೆದು ಪರೆದು ಪಸರಿಸಿದ ಕನಕರಜೋರಾಜಿ[1]ಯುಂ ರಾಜೇಂದ್ರನಭೀಕ್ಷಿಸಿ ಕೋಪಮ ನುಳಿದು ವಿಸ್ಮಯಾಂತಃಕರಣನಾಗಿ ತಲೆಯುಂ ತೂಗಿ ಬಸವನಂ ಬರಿಸಿ—

ಏನಿದು ವಿಚಿತ್ರತರಮಿಡಿ
ದೀ ನೆಲದೊಳಗೊಕ್ಕ ಕನಕರಜಮೆತ್ತಣದಿಂ
ತೇನೆಸಗಿದೆ ಪೇಳೆನಗೆ ನಿ
ದಾನಮನೆಲೆ ಬಸವ ಬಂದ ಚೋರನದಾವಂ ೧೬

ವ॥ ಎಂದಾ ನೃಪಂ ಬೆಸಗೊಳೆ ನಸುನಗುತೆ ಬಸವರಸನಿಂತೆಂದಂ —

ವಿದಿತ ಸುಗುಣಾಂಕನೆಲೆ ಭೂ
ಸುದತೀಶ ವಿರಾಜಿಸಿರ್ಪನೀ ಪುರದೊಳ್ಕ
ನ್ನದ ಬೊಮ್ಮನೆಂಬನವನ
ಗ್ಗದ ಪೆಂಪಂ ಪೊಗಳಲೀಶ್ವರಂಗಮಶಕ್ಯಂ ೧೭

–೧೫. ತುಂಬಿದ ಆ ಹೊಸಚಿನ್ನದ ಹುಡಿಯು, ಶಿವಶರಣರ ಪಾದವೆಂಬ ಸುವರ್ಣ ಕಮಲದ ಧೂಳಿಯೇ ರಾಶಿಯಾಗಿರುವುದೋ ಎಂದೆನಿಸಿ, ಬೊಕ್ಕಸವೆಂಬ ಲಕ್ಷ್ಮಿಯ ದೇಹದ ಕುಂಕುಮದ ಧೂಳಿಯೇ ಉದುರಿರುವುದೋ ಎಂಬಂತೆ ಆ ಚಿನ್ನದ ಹುಡಿಯು ಅದೇನು ಶೋಭಿಸುತ್ತಿತ್ತೋ ! ವ॥ ಹಾಗೆ ಶೋಭಿಸುತ್ತ ಸುತ್ತಲೂ ಹರಡಿರುವ ಬಂಗಾರದ ಧೂಳಿನ ರಾಶಿಯನ್ನು ರಾಜಶ್ರೇಷ್ಠನಾದ ಬಿಜ್ಜಳನು ನೋಡಿ, ಕೋಪವನ್ನು ಬಿಟ್ಟು ಆಶ್ಚರ್ಯದಿಂದ ಕೂಡಿದ ಮನಸ್ಸುಳ್ಳವನಾಗಿ, ತಲೆದೂಗಿ ಬಸವಣ್ಣನನ್ನು ಬರ ಮಾಡಿಸಿಕೊಂಡು–೧೬. 'ಎಲೈ ಬಸವಣ್ಣನೇ, ಇದೇನು ವಿಚಿತ್ರ ? ಈ (ಭಾಂಡಾರ) ಭೂಮಿಯಲ್ಲಿ, ದಟ್ಟವಾಗಿ ಸುರಿದಿರುವ ಈ ಬಂಗಾರದ ಮಣ್ಣು ಎಲ್ಲಿಯದು ? ಈ ರೀತಿಯಾಗಲು ಏನು ಮಾಡಿದೆ ? ಇದರ ಮೂಲ ಕಾರಣವೇನು ಹೇಳು ; ಯಾವ ಕಳ್ಳನು ಬಂದಿದ್ದನು' ? ವ॥ ಹೀಗೆಂದು ಆ ಅರಸನು ಕೇಳಲಾಗಿ ನಸುನಗುತ್ತ ಬಸವರಾಜನು ಹೀಗೆ ಹೇಳಿದನು. ೧೭. 'ಎಲೈ ಭೂಕಾಂತೆಯ ಪತಿಯೇ, ಈ ಪಟ್ಟಣದಲ್ಲಿ ಪ್ರಸಿದ್ಧ ಸದ್ಗುಣಗಳೇ ಲಕ್ಷಣವಾಗುಳ್ಳ ಕನ್ನದ ಬೊಮ್ಮಯ್ಯನೆಂಬುವನು ಇದ್ದಾನೆ. ಅವನ ಪವಿತ್ರವಾದ ಘನತೆಯನ್ನು ಹೊಗಳಲು ಈಶ್ವರನಿಗೂ ಶಕ್ಯವಿಲ್ಲ.'

---

1 ಪಿ(ದ) 2 ಮಂ(ಜ)

ಸುರಭೂಜಂಗಳ ಮೂಲಮಾತನ ಪದಾಂಗುಷ್ಠದ್ವಯಂ ಸಾರ ನಿ
ರ್ಜರಧೇನುವ್ರಜಜನ್ಮಭೂಮಿಯುವನುದ್ಯದ್ವೀಕ್ಷಣಂ ದಿವ್ಯಭಾ
ಸುರಚಿಂತಾಮಣಿಗೇಹಮಾತನ ಕರಂ ಸಂಪೂರ್ಣ ಸುಜ್ಞಾನದಾ
ಕರಮಾ ದೇವನ ವಾಣಿ ಜನ್ಮಗದಭೈಷಜ್ಯಾಶ್ರಯಂ ತತ್ವದಂ ೧೮

ಆತನ ಪಾದಸ್ಪರ್ಶಂ
ಖ್ಯಾತಘನಸ್ಪರ್ಶವೇದಿಯಾತನ ಮುಳಿಸು
ತ್ಪಾತಲಯಕಾಲಮಾತನ
ಚೇತೋದಯು ಮುಕ್ತಿಮೂಲಕಾರಣಮರಸಾ ೧೯

ಅಣಿಮಾದಿ ಸಿದ್ಧಿಗಳ ತಿಂ
ತಿಣಿಯುವನಂ ಸೇವಿಪರ್ಗೆ ಸುಲಭಂ ಶರಣಾ
ಗ್ರಣಿಯಿಂತು ಪೆಂಪು ಮಿಗೆ ಸಂ
ದಣಿಸಿರೆಯುಂ ಧರಯೊಳಸಮ ಲಿಂಗಸಮರ್ಥಂ ೨೦

ಕನ್ನಮನಿಕ್ಕಿ ತಂದ ಧನದಿಂ ಸಲೆ ಜಂಗಮಪಾದಪೂಜೆಯುಂ
ಚನ್ನನೆ ಮಾಳ್ಪನಾತದು ನಿಜವ್ರತಮಾತ್ಮಮಹತ್ವದಿಂದಮಂ
ಪೊನ್ನನದೆಂತುಮಾರ್ಜಿಸನಿಳಾಧಿಪ ಕೇಳ್ಮಿವಭಕ್ತಿಯೆತ್ತ ಚೌ
ರ್ಯನ್ನೆಗಳ್ವಂದವೆತ್ತ ಪರಮಾರ್ಥವಿರೋಧಮಿದೆಂಬೆಯಪ್ಪೊಡಂ ೨೧

ಶಿವಭಕ್ತಿಯುಕ್ತನೊಲ್ದೆಸ
ಗುವ ದುಷ್ಕರ್ಮಂ ಸುಕರ್ಮಫಲಮನೆ ಮಾ[1]ಳ್ಕುಂ

೧೮. ಆತನ ಪಾದದ ಹೆಬ್ಬೆಟ್ಟುಗಳೆರಡೂ ಕಲ್ಪವೃಕ್ಷಗಳ ಬುಡ; ಅವನ ಉತ್ಕೃಷ್ಟ ಕಣ್ಣುಗಳು ಶ್ರೇಷ್ಠವಾದ ಕಾಮಧೇನುಗಳು ಹುಟ್ಟಿದ ಸ್ಥಳಗಳು; ಅವನ ಕೈ ದಿವ್ಯವಾಗಿ ಪ್ರಕಾಶಿಸುವ ಚಿಂತಾರತ್ನವಿರುವ ಮನೆ; ಆ ದೇವನ ಮಾತುಗಳು ಸಂಪೂರ್ಣವಾಗಿ ಸುಜ್ಞಾನದ ಆಗರ; ಅವನ ಪಾದಗಳು ಹುಟ್ಟೆಂಬ (ಜನನವೆಂಬ) ರೋಗದ ಔಷಧಿಗಳ ಸ್ಥಾನ. ೧೯. ಅಬ್ಬಬ್ಬಾ! ಅವನ ಪಾದದ ಸೋಂಕು ಪ್ರಸಿದ್ಧವಾದ ಮೇಘವನ್ನು ಸೋಂಕುವ ವೇದಿಕೆ (ಅಂದರೆ ದೇವಯಾನ); ಅವನ ಕೋಪ ಹಾನಿ ರೂಪವಾದ ಪ್ರಳಯಕಾಲ; ಅವನ ಮನಸ್ಸಿನ ಕೃಪೆಯು ಮೋಕ್ಷಕ್ಕೆ ಮೂಲ ಕಾರಣ (ಎನಿಸಿದೆ). ೨೦-೨೧-೨೨. ಭೂಮಿಯಲ್ಲಿ ಅವನನ್ನು ಸೇವಿಸಿದವರಿಗೆ ಅಣಿಮಾದಿ ಅಷ್ಟ ಸಿದ್ಧಿಗಳ ಸಮೂಹವು ಸುಖವಾಗಿ ಪಡೆಯುವುದಕ್ಕೆ ಯೋಗ್ಯವಾದುವಾಗಿದೆ. ಅನುಪಮವಾದ ಲಿಂಗ ಪೂಜಾ ಸಮರ್ಥನೂ, ಶರಣರಲ್ಲಿ ಅಗ್ರಗಣ್ಯನೂ ಆದ ಅವನು ಈ ರೀತಿ ಹೆಚ್ಚಾದ ಘನತೆಯಿಂದ ಕೂಡಿದ್ದರೂ, ಕನ್ನವನ್ನು ಕೊರೆದು ತಂದ ದ್ರವ್ಯದಿಂದ ಜಂಗಮರ ಪಾದ ಪೂಜೆಯನ್ನು ಚೆನ್ನಾಗಿ ಮಾಡುವನು. ಅದೇ ಅವನ ಶೀಲವಾಗಿದೆ. ಈ ರೀತಿಯ ತನ್ನ ಮಹಾತ್ಮ್ಯೆಯಿಂದ ಕೂಡಿದವನಾಗಿ ಅವನು ಸಂಪಾದನೆಗೆ ಈ ಕಾರ್ಯ ಮಾಡುತ್ತಿಲ್ಲ. ಮಹಾರಾಜಾ, ಕೇಳು: ಶಿವ ಭಕ್ತಿಯೆತ್ತ?

1 ಯಾ(ದ)

ಶಿವಭಕ್ತಿವಿರಹಿತರ್ಗದು
ವಿವರಿಸೆ ನಿಜಫಲವೆನಿಪ್ಪ ದುಃಖಮನೀಗುಂ ೨೨

ವ॥ ಅದೆಂತೆನೆ—

ಧರೆಯೊಳ್ಧರ್ಮಜನಾಡಿ ಜೂಜನವನೀಸೌಭಾಗ್ಯಮಂ ನೀಗಿ ಸೋ
ದರಯುಕ್ತಂ ವನವಾಸಿಯಾದನೆಸಗುತ್ತಾ ಜೂದನೆಯ್ದಿರ್ದನೀ
ಶ್ವರನಾವಾಸಮನಾ ಮೂರ್ಖನಾಥವಿಭು ರಾಮಂ ಬೇಂಟೆಯಿಂ ಜಾನಕೀ
ವಿರಹಾವಸ್ಥೆಯನಾಂತನಾಳ್ದನದಱಿಂದಂ ಕಣ್ಣಪಂ ಮುಕ್ತಿಯಂ ೨೩

ಧನವನಿತಾವಿಮೋಹಿತರಿಳಾಧಿಪರಂದಳಿದರ್ಕೆಲಂಬರಾ
ಘನಧನಕಾಮಿನೀತತಿಯನೊಂದಿದ ಸೌಂದರನಾಳ್ದನಾ ಮಹೇ
ಶನ ಪದಮಂ ತೊದಳ್ನುಡಿದಪೂಜ್ಯತೆಯಾಳ್ದನಜಂ ಧರಾತಿಪಾ
ವನ ಚಿಱುತೊಂಡನಾಡಿ ಪುಸಿಯಂ ಪುರವೈರಿಯ ಲೋಕಮೆಯ್ದಿದಂ ೨೪

ಮುನಿಮಾಂಡವ್ಯನೊಡರ್ಚಿ ಹಿಂಸೆಯನವಂ ಶೂಲಕ್ಕೆ ಪಕ್ಕಾದನಾ
ಘನ ಚಂಡೇಶ್ವರನಿಕ್ಕಿ ತಂದೆಯನುಮಾಧೀಶಪ್ರಸಾದಕ್ಕೆ ಭಾ
ಜನಮಾದಂ ಕುಱಿಗಳ್ದು ಶೂಲಕಿಳಿದಂ ಕೇಳ್ಶೂದ್ರಿಕಂ ಮಾರ್ಗತಾ
ಡನದಿಂದಂ ಕಲವತ್ತಿ ಭಕ್ತನಿಳೆಯೊಳ್ಸಾರ್ದಂ ಶಿವಾವಾಸಮಂ ೨೫

ಕಳ್ಳತನ ಮಾಡುವ ರೀತಿಯೆತ್ತ ? ಇದು ಪರಮಾರ್ಥಕ್ಕೆ ವಿರೋಧವಾದದ್ದು, ಎಂದು ನೀನು ಹೇಳುವೆಯಾದರೂ, ಶಿವಶಕ್ತಿಯುಕ್ತನಾದವನು ಒಲಿದು ಮಾಡುವ ದುಷ್ಟ ಕಾರ್ಯವೂ ಒಳ್ಳೆಯ ಕೆಲಸದಿಂದುಂಟಾಗುವ ಫಲವನ್ನೇ ಕೊಡುವುದು. ಆ ದುಷ್ಕಾರ್ಯವು ವಿಚಾರ ಮಾಡಿ ನೋಡಿದರೆ, ಶಿವಭಕ್ತಿಯಿಲ್ಲದವನಿಗೆ ತನ್ನ ಫಲವಾದುದೆನಿಸುವ ದುಃಖವನ್ನೇ ಕೊಡುವುದು.' ವ॥ ಅದು ಹೇಗೆಂದರೆ—೨೩. 'ಈ ಧರಣಿಯಲ್ಲಿ (ಹಿಂದೆ) ಧರ್ಮರಾಜನು ಜೂಜಾಡಿ ಭೂಮಿ ಸಂಬಂಧವಾದ ಸೌಖ್ಯವನ್ನು ಕಳೆದು ಕೊಂಡು ಸಹೋದರರೊಡನೆ ವನವಾಸಿಯಾದನು. ಮೂರ್ಖನಾಥನೆಂಬ ವಿಭುವು ಆ ಜೂಜನ್ನು ಆಡುತ್ತ ಈಶ್ವರನ ಆವಾಸಸ್ಥಾನವನ್ನು ಸೇರಿದನು. ಶ್ರೀ ರಾಮನು ಬೇಟೆಯನ್ನಾಡಿ ಜಾನಕಿಯಿಂದ ವಿಯೋಗಗೊಂಡನು. ಆ ಬೇಟೆಯಿಂದಲೇ ಕಣ್ಣಪ್ಪನು ಮುಕ್ತಿಯನ್ನು ಹೊಂದಿದನು.' ೨೪. 'ಪೂರ್ವ ಕಾಲದಲ್ಲಿ ಕೆಲವು ರಾಜರು ಹೊನ್ನು ಹೆಣ್ಣುಗಳಲ್ಲಿ ಆಸಕ್ತರಾಗಿ, ನಾಶವಾದರು. ಆ ಶ್ರೇಷ್ಠವಾದ ಹೊನ್ನು ಹೆಣ್ಣುಗಳ ಸಮೂಹವನ್ನು ಹೊಂದಿದ ಸೌಂದರನಂಬಿಯು ಆ ಪರಮೇಶ್ವರನ ಸ್ಥಾನವನ್ನು ಸೇರಿದನು. ಬ್ರಹ್ಮನು ಸುಳ್ಳನ್ನು ಹೇಳಿ ಪೂಜಿಸಿಕೊಳ್ಳುವ ಯೋಗ್ಯತೆಯನ್ನು ಕಳೆದು ಕೊಂಡನು. ಭೂಮಿಗೆ ಪಾವನನೆನಿಸಿದ ದಭ್ರಭಕ್ತನು (ಚಿರುತೊಂಡನು) ಸುಳ್ಳನ್ನಾಡಿ ಶಿವಲೋಕವನ್ನು ಸೇರಿದನು.' ೨೫. 'ಭೂಮಿಯಲ್ಲಿ (ಹಿಂದೆ) ಮುನಿಯಾದ ಮಾಂಡವ್ಯನು ಹಿಂಸೆಯನ್ನು ಮಾಡಿ, ಶೂಲವನ್ನು ಏರಿದನು. ಆ ಶ್ರೇಷ್ಠನಾದ ಚಂಡೇಶ್ವರನು ತಂದೆಯನ್ನು ಕೊಂದು ಶಿವಾನುಗ್ರಹಕ್ಕೆ ಭಾಜನನಾದನು. ಶೂದ್ರಿಕ ನೆಂಬುವನು ಅತಿಶಯವಾಗಿ ಕುರಿಗಳನ್ನು ಕದ್ದು ಶೂಲವನ್ನೇರಿದನು. ಕಲವತ್ತಿ

ಧರೆಯೊಳ್ರಾಜ್ಯಾಂತದೊಳ್ಕೇಳ್ನರಕಮವನಿಪರ್ಗೆಂಬ ವೇದೋಕ್ತಿಯಂವಾ
ಕರಿಸುತ್ತುಂ ಪ್ರಾಜ್ಯಸಾಮ್ರಾಜ್ಯಮನಿರದೊಲವಿಂ ಪಾಲಿಸುತಿರ್ದು ಗೌರೀ
ವರಸಮ್ಯಗ್ಭಕ್ತಿಯಿಂ ಮುಕ್ತಿಯೊಳೊಡವೆರೆದರ್ಚೇರಮಾಧೀಶ ಚೋಳಾ
ದ್ಯರಣಂ ಕರ್ತೀಶ್ವರಾರ್ಥಂ ನೆಗಳ್ದ ನಿಖಿಲ ದುಷ್ಕರ್ಮಮುಂ ಶಿಷ್ಟಧರ್ಮಂ ೨೬

ಇದು ಸತ್ಯಂ ಶಿವಭಕ್ತಸಂತತಿ'ಗಧರ್ಮೋ ಧರ್ಮತಾಂ ಯಾತಿ' ಯೆಂ
ದೊದಱುತ್ತಿರ್ಪುದು ಶೈವತಂತ್ರಮದಱಿಂ ಧಾತ್ರೀಶ ಕೇಳೆಮ್ಮ ಕ
ನ್ನದ ಬೊಮ್ಮಯ್ಯನ ವೃತ್ತಿ ಸಾಧುಚರಿತಂ ದುಷ್ಕರ್ಮಮಲ್ತಲ್ತು ದು
ರ್ಮದಮೋಹಸ್ಪೃಹೆಯಿಲ್ಲದಪ್ರತಿಮನಂ ಪೇಳ್ಬಣ್ಣಿಸಲ್ಬರ್ಕುಮೋ ೨೭

ಹರಭಕ್ತರ್ಮನೆಗೈದಿರಲ್ಕೇಳ್ತರೆ ಪಗಲಿರುಳೆಂದೆನ್ನದಾವೇಳೆಯೊಳ್ಸಂ
ವರಿಸುತ್ತುಂ ಬಂದು ಕನ್ನಂದೆಗೆದದು ಶರಣಾವಾಸಮುಂಡಾಗೆ ಸಾದ
ರದಿಂ ಕುಂಬಿಟ್ಟು ಪೋಪಂ ಪೆಸರನಱುಪುತನ್ಯಾಲಯಂ ತಾನದಾಗು
ತ್ತಿರೆ ಕೊಂಡರ್ಥೌಘಮಂ ತೂಳ್ದವರ ದುರಿತಮಂ ಧನ್ಯರಂ ಮಾಡಿ ಪೋಪಂ ೨೮

ಭಕ್ತನು ಮೃಗ ವಧೆಯ ಸುಖದಿಂದ ಶಿವನ ಆವಾಸವನ್ನು ಸೇರಿದನು.' ೨೬. ''ಮಹಾರಾಜಾ ಕೇಳು: ಭೂಮಿಯಲ್ಲಿ ಚೇರಮರಾಯ, ಚೋಳ ಮೊದಲಾದವರು 'ರಾಜರಾದವರಿಗೆ ರಾಜ್ಯ ಸುಖವನ್ನು ಅನುಭವಿಸಿಯಾದ ಮೇಲೆ ನರಕ' ಎಂದೆಂಬ ವೇದೋಕ್ತಿಯನ್ನು ತಿರಸ್ಕರಿಸಿ, ತಪ್ಪದೆ ಅಪಾರವಾದ ಸಾಮ್ರಾಜ್ಯವನ್ನು ಪ್ರೀತಿಯಿಂದ ಪಾಲಿಸುತ್ತ ಇದ್ದು, ಪರಮೇಶ್ವರನ ಶ್ರೇಷ್ಠ ಭಕ್ತಿಯಿಂದ ಮುಕ್ತಿಯನ್ನು ಹೊಂದಿ ಶೋಭಿಸಿದರು. ಸ್ವಲ್ಪವೇ ಆಗಲಿ ಪ್ರೀತಿಯಿಂದ ಶಿವನಿಗೋಸ್ಕರವಾಗಿ ಮಾಡಿದ ಕೆಟ್ಟ ಕೆಲಸವೆಲ್ಲವೂ ಶಿಷ್ಟ ಧರ್ಮವಾಗುವುದು.'' ೨೭. 'ಇದು ಸತ್ಯ ಸಂಗತಿ. ಶಿವಭಕ್ತ ಸಮೂಹಕ್ಕೆ 'ಕೆಟ್ಟ ಧರ್ಮವೇ ತಾನು ಸದ್ಧರ್ಮತ್ವವನ್ನು ಪಡೆಯುವುದು' ಎಂದು ಶೈವಾಗಮವು ಕೂಗುತ್ತಿರುವುದು. ಆದ್ದರಿಂದ ಮಹಾರಾಜನೇ, ಕೇಳು: ನಮ್ಮ ಕನ್ನದ ಬ್ರಹ್ಮಯ್ಯನ ವೃತ್ತಿಯು ಸತ್ಪುರುಷರ ನಡತೆಯೇ ಹೊರತು ದುಷ್ಕರ್ಮವಲ್ಲ. ಕೆಟ್ಟ ಅಹಂಕಾರ, ಅಜ್ಞಾನ, ಆಸೆಗಳಾವುವೂ ಇಲ್ಲದ ಅಸದೃಶನಾದ ಅವನನ್ನು ವರ್ಣಿಸುವುದಕ್ಕೆ ಬರುತ್ತದೆಯೆ? ಹೇಳು.' ೨೮. 'ಹರಭಕ್ತರಾದವರು ತನ್ನ ಮನೆಗೆ ಬರಲಾಗಿ, ಹಗಲು, ಇರುಳು ಎಂದು ನೋಡದೆ, ಆ ವೇಳೆಯಲ್ಲಿ (ತನ್ನ ಕಾಯಕದ ಸಾಮಗ್ರಿಗಳನ್ನು) ಸಿದ್ಧಪಡಿಸಿಕೊಂಡು ಬಂದು, ಕನ್ನವನ್ನು ಕೊರೆದ ಆ ಮನೆಯು ಶಿವಶರಣರ ಮನೆಯೇ ಆದುದಾಗಿದ್ದರೆ, ಆಗ ಆದರದಿಂದ ಆ ಮನೆಯವರ ಸಮೀಪಕ್ಕೆ ತಾನೇ ಹೋಗಿ, ನಮಸ್ಕರಿಸಿ, ತನ್ನ ಹೆಸರು ಹೇಳಿ, ಹೋಗುವನು. ಕನ್ನವನ್ನು ಹಾಕಿದ ಆ ಮನೆಯು ಶಿವಭಕ್ತೇತರರದಾಗಿದ್ದರೆ, ಹಣದ ರಾಶಿಯನ್ನು ಕೊಂಡು, ಆ ಮನೆಯವರ ಪಾಪವನ್ನು ಕಾಲಿನಿಂದ ಒರೆಸಿ, ಧನ್ಯರನ್ನಾಗಿ ಮಾಡಿ

ನರಪತಿ ನೋಡು ಮುಟ್ಟಿದೆಡೆ ಮೆಟ್ಟಿದ ತಾಣಮೊಱಲ್ದು ಕನ್ನಮಂ
ಶರಣನೊಡರ್ಚೆ ತಳ್ತಿಳಿ[1]ದ ಭಿತ್ತಿಯ ಮಣ್ಣೊರೆವೆತ್ತ ಕಾಂತಿ ಭಾ
ಸುರತರ ನವ್ಯಹೇಮಮಯಮಾಗಿ ವಿರಾಜಿಪುದಿಂತಿದಲ್ತೆ ತ
ದ್ಗುರುವಿಳಸನ್ಮಹತ್ವಕೆ ನಿದರ್ಶನಮುರ್ವಿಯೊಳದ್ಭುತಾಸ್ಪದಂ ೨೯

ಇಂತತುಳ ಮಹಿಮೆಯುಳ್ಳಂ
ಗೆಂತುಂ ದುರ್ಲಭಮದಾವುದಾತಂ ನಿನ್ನಂ
ಸಂತಸದೆ ಸಲಿಪಲೆಯ್ದಿದ
ನಂತಲ್ಲದೆ ಬಂದನಲ್ತು ವಿತ್ತಸ್ಪೃಹೆಯಿಂ ೩೦

ಜನಪತಿ ನಿನ್ನಯ ಕೋಶದ
ಧನಮನವಂ ಕವರ್ದುದಿಲ್ಲ ತೋರ್ಪೆನದಂ ನೆ
ಟ್ಟನೆ ನೋಳ್ಪುದೀಗಳೊಲ್ದೆಂ
ದನವದ್ಯಂ ತಾನೆ ಬರಿಸಿದಂ ಕರಣಿಕರಂ ೩೧

ವ॥ ಅಂತು ಬರಿಸಿ ಬಸನಂ ಲೆಕ್ಕಮನಿನಿತೆಂದೋದಿಸಿ ಪೊನ್ನ ಪೆಟ್ಟಿಗೆಗಳಂ ತೆಗೆದುತೋಱಿಸೆ ಮುನ್ನಿರ್ದ ಪೊಂಗಳಿರ್ಮಡಿಸಿ ಪೆರ್ಚಿರೆ ಬಿಜ್ಜಳಂ ಕಂಡು—

ತಲೆದೂಗಿ ವಿಸ್ಮಯಂ ಬಡೆ
ದೊಲವಿಂ ಕೊಂಡಾಡುತಿರ್ದನಿತ್ತಲ್ ಮಹಿಮೋ

ಹೋಗುವನು.' ೨೯. 'ಮಹಾರಾಜಾ, ನೋಡು : ಶರಣನು ಮುಟ್ಟಿದ ಈ ಸ್ಥಳ, ಮೆಟ್ಟಿದ ತಾಣ, ಪ್ರೀತಿಯಿಂದ ಕನ್ನವನ್ನು ಕೊರೆಯಲಾಗಿ ಸುರಿದ ಗೋಡೆಯ ಮಣ್ಣು ಪ್ರಸಿದ್ಧವಾದ ತೇಜಸ್ಸಿನಿಂದ ಮನೋಹರವಾದ ಹೊಸ ಚಿನ್ನದ ವಿಕಾರವೇ ಆದುದಾಗಿ ಪ್ರಕಾಶಿಸುತ್ತಿರುವುದು. ಈ ರೀತಿ ಇರುವ ಇದು ಆ ಗುರುವಿನ ಶೋಭಿಸುವ ಮಹಿಮೆಗೆ ಭೂಮಿಯಲ್ಲಿ ಆಶ್ಚರ್ಯಕರವಾದ ದೃಷ್ಟಾಂತವಲ್ಲವೇ ? ೩೦. 'ಈ ರೀತಿ ಅತುಳ ಮಹಿಮೆಯುಳ್ಳವರಿಗೆ ಅದು ಯಾವುದೇ ಆಗಿರಲಿ, ಹೇಗೆ ದುರ್ಲಭವಾದೀತು ? ಆತನು ನಿನ್ನನ್ನು ಸಂತೋಷದಿಂದ ಸಲಹುವುದಕ್ಕೆ ಬಂದವನಲ್ಲದೆ ಹಣದಾಸೆಯಿಂದ ಬಂದವನಲ್ಲ.' ೩೧. 'ಮಹಾರಾಜಾ, ನಿನ್ನ ಭಾಂಡಾರದ ಹಣವನ್ನು ಆವನು ದೋಚಿಲ್ಲ ; ಅದನ್ನು ನಾನು ತೋರಿಸಿಕೊಡುತ್ತೇನೆ. ಪ್ರೀತಿಯಿಂದ ಬಂದು ಈಗಲೇ ನೋಡಿಕೊಳ್ಳಿರಿ.' ಹೀಗೆಂದು ನಿರ್ದುಷ್ಟನಾದ ಆ ಬಸವಣ್ಣನು ತಾನೇ ಲೆಕ್ಕಿಗ (ಕರಣಿಕ)ರನ್ನು ಬರಮಾಡಿಸಿದನು. ವ॥ ಆ ರೀತಿ (ಕರಣಿಕರನ್ನು) ಬರಮಾಡಿಕೊಂಡು (ಭಾಂಡಾರದ ಹಣದ) ಲೆಕ್ಕವನ್ನು ಇಷ್ಟಿಷ್ಟೆಂದು ಓದಿಸಿ, ಹೊನ್ನಿನ ಪೆಟ್ಟಿಗೆಗಳನ್ನು ತೆಗೆದು ತೋರಿಸಲಾಗಿ, ಮೊದಲಿದ್ದ ಹೊನ್ನುಗಳು ಒಂದಕ್ಕೆರಡಾಗಿ ಹೆಚ್ಚುಗೊಂಡಿರಲು ಬಿಜ್ಜಳನು ಕಂಡು—೩೨. ತಲೆದೂಗಿ ಆಶ್ಚರ್ಯಗೊಂಡು, ಪ್ರೀತಿಯಿಂದ ಕೊಂಡಾಡುತ್ತಿದ್ದನು. ಇತ್ತ ಮಹತ್ವದಿಂದ

---

1 ಡ(ಮು)

ಜ್ವಲಗುಣಿ ಕನ್ನದ ಬೊಮ್ಮಂ
ನಿಲಯಕ್ಕೆಯ್ತಂದನಧಿಕ ಸಂಭ್ರಮದಿಂದಂ ೩೨

ವ॥ ಅಂತೆಯ್ತಂದು ತನ್ನ ಕನ್ನದುಪಕರಣಮಂ ತಂದ ಧನನಿಚಯಮನಿದಿರ್ವಂದಡಿಗೆಱಗಿರ್ದ ನಿಜಾಂಗನೆಯ ಕರದೊಳಿತ್ತವಳ್ವೆರಸು ಚರಲಿಂಗಪೂಜೆಯನೋಜೆಯಿಂ ರಚಿಸಿ ಪೊಡಮಟ್ಟು ಧನಕನಕ ಮಣಿಭೂಷಣಂಗಳನಳುಂಬಂ ಸಮರ್ಪಿಸಿ ಷಡ್ರಸಸಮಂಚಿತದಿವ್ಯಾನ್ನದಿಂ ತೃಪ್ತಿವಡಿಸಿ ಭಕ್ತಿ ಮಿಗೆ ತತ್ಪ್ರಸಾದಸಮಾಸ್ವಾದನಂಗೆಯ್ದು ತತ್ಕಾರುಣ್ಯ ಸುಧಾಶರಧಿಯೊಳೋಲಾಡಿ ಪಾಡಿ—

ಪರಮಾನಂದಮನಾಳ್ದೊ
ಪ್ಪಿರುತಿರ್ದಂ ಜಂಗಮಾಂಘ್ರಿಪೂಜೋತ್ಸವ ತ
ತ್ಪರನಾ ಕನ್ನದ ಬೊಮ್ಮಯ
ನುರುತರ ಶಿವಭಕ್ತಿಭಾಮಿನೀಮುಖಮುಕುರಂ ೩೩

ಅರಸಂಗಾದವಿವೇಕಮಂ ತೆಮಂರ್ದು ತನ್ಮಾಹಾತ್ಮ್ಯಮಂ ಮತ್ತೆ ಬಿ
ತ್ತರಿಸುತ್ತುಂ ತದಿಳಾಪತಿಪ್ರಣುತನಲ್ಲಿಂದೆಳ್ದು ಕಾರುಣ್ಯಸಾ
ಗರನಾ ಕನ್ನದ ಬೊಮ್ಮಿದೇವನ ಪದಾಂಭೋಜಂಗಳಂ ಧ್ಯಾನಿಸು
ತ್ತಿರದೇಳ್ತಂದೆಸೆದಿರ್ದನಾತ್ಮಗೃಹದೊಳ್ಸಿದ್ಧಾಂತವಿದ್ಯಾಧರಂ ೩೪

ಪಡೆದಿಳೆಯೊಳಾವನೀ ಕ
ನ್ನದ ಬೊಮ್ಮಯ್ಯನ ಚರಿತ್ರಮಂ ಕೇಳ್ವನವಂ

ಉಜ್ವಲವಾಗಿ ಪ್ರಕಾಶಿಸುವ ಗುಣವುಳ್ಳ ಕನ್ನದ ಬ್ರಹ್ಮಯ್ಯನು ವಿಶೇಷ ಸಂಭ್ರಮದಿಂದ ತನ್ನ ಮನೆಗೆ ಬಂದನು. ವ॥ ಹಾಗೆ ಬಂದು ತನ್ನ ಕನ್ನದ ಉಪಕರಣ ಗಳನ್ನು, (ಹೊತ್ತು) ತಂದ ಧನ ಸಮೂಹವನ್ನೂ ಎದುರಿಗೆ ಬಂದು ಪಾದಗಳಿಗೆ ನಮಸ್ಕಾರ ಮಾಡಿದ ಹೆಂಡತಿಯ ಕೈಗೆ ಕೊಟ್ಟು, ಅವಳೊಡನೆ ಸೇರಿ, ಜಂಗಮ ಪಾದ ಪೂಜೆಯನ್ನು ಕ್ರಮವಾಗಿ ಮಾಡಿ ನಮಸ್ಕರಿಸಿ, ಧನ, ಕನಕ, ರತ್ನಾಭರಣಗಳೇ ಮೊದಲಾದುವನ್ನು ಅಧಿಕವಾಗಿ ಸಮರ್ಪಣೆ ಮಾಡಿ, ಷಡ್ರಸೋಪಿತವಾದ ಮೃಷ್ಟಾನ್ನ ದಿಂದ ತೃಪ್ತಿಗೊಳಿಸಿ, ಅಧಿಕ ಭಕ್ತಿಯಿಂದ ಅವರ ಪ್ರಸಾದವನ್ನು ಸ್ವೀಕಾರಮಾಡಿ, ಅವರ ಕಾರುಣ್ಯವೆಂಬ ಅಮೃತಸಾಗರದಲ್ಲಿ ಈಸಾಡುತ್ತ, ಹಾಡುತ್ತ—೩೩. ಜಂಗಮರ ಪಾದಪೂಜೆಯ ಉತ್ಸವದಲ್ಲಿ ತತ್ಪರನೂ. ಉತ್ಕೃಷ್ಟವಾದ ಶಿವಭಕ್ತಿಯೆಂಬ ಸ್ತ್ರೀಯ ಮುಖಕ್ಕೆ ಕನ್ನಡಿಯಂತಿರುವವನೂ, ಆದ ಆ ಕನ್ನದ ಬ್ರಹ್ಮಯ್ಯನು ಪರಮಾನಂದಭರಿತ ನಾಗಿ ಇದ್ದನು. ೩೪. ಶಿವ ಸಿದ್ಧಾಂತ ವಿದ್ಯೆಯನ್ನು ಧಾರಣೆ ಮಾಡಿದ ಬಸವೇಶ್ವರನು ಅರಸನಿಗುಂಟಾದ ಅವಿವೇಕವನ್ನು ಹೋಗಲಾಡಿಸಿ, ಆ ಕನ್ನದ ಬೊಮ್ಮಯ್ಯನ ಮಹಾತ್ಮೆಯನ್ನು ಪುನಃ ವಿವರಿಸುತ್ತ ಆ ಬಿಜ್ಜಳನಿಂದ ಸ್ತೋತ್ರ ಮಾಡಿಸಿಕೊಂಡವನಾಗಿ ಅಲ್ಲಿಂದೆದ್ದು, ಆ ಕಾರುಣ್ಯ ಸಾಗರನಾದ ಕನ್ನದ ಬೊಮ್ಮಯ್ಯನ ಪಾದಕಮಲಗಳನ್ನು ಧ್ಯಾನ ಮಾಡುತ್ತ ಹೊರಟು ಬಂದು ತನ್ನ ಮನೆಯಲ್ಲಿ ಶೋಭಿಸುತ್ತಿದ್ದನು. ೩೫. ಪ್ರೀತಿಯಿಂದ ಯಾವಾತನು ಈ ಕನ್ನದ ಬೊಮ್ಮಯ್ಯನ ಚರಿತ್ರೆಯನ್ನು ಕೇಳುವನೋ,

ಮದನಾರಿಯ ಕೃಪೆಯಿಂ ತ
ಪ್ಪದೆ ಪಡೆವಂ ಸರ್ವಸಿದ್ಧಿಸೌಖ್ಯೋದಯಮಂ ೩೫

ಪ್ರಣೀತವೇದಾಗಮಶಾಸ್ತ್ರಸಂಕುಳೇ
ಕ್ಷಣದ್ಯುತಿಪ್ರಾಂಜುಳವೀಕ್ಷಣಾಂಚಳೇ
ಮಣಿಪ್ರಭಾಭೂಷಿತಹೇಮಕುಂಡಳೇ
ಗುಣಾಭಿರಾಮೇ ಜಯ ಸರ್ವಮಂಗಳೇ ೩೬

ಇದು ವಿನಮದಖಿಳ ಸುರಾಸುರೇಂದ್ರಮಕುಟತಟಘಟಿತ ಮಣಿಗಣಾಗಣಿತ ರುಚಿನಿಚಯ
ತರುಣಾರುಣಾತಪಪರಿಲಸಿತ ಪರಮ ಶಿವಲಿಂಗ ಪಾದಾರವಿಂದಪರಾಗಭಸಿತ
ಭಾಸುರಲಲಾಟಪಟ್ಟಸರಸಜನಮಾನಿತೋಭಯಕವಿತಾವಿಶಾರದ
ಶ್ರೀ ಷಡಕ್ಷರಿದೇವಭಕ್ತಿವಿರಚಿತ

ಶ್ರೀಮದ್ ಬಸವರಾಜವಿಜಯಮಹಾಪುರಾಣದೊಳ್
ಕನ್ನದ ಬೊಮ್ಮಿದೇವ ಮಹತ್ವವರ್ಣನಂ
ವಿಂಶಾಶ್ವಾಸಂ ಸಮಾಪ್ತಂ

ಅಂತು ಆಶ್ವಾಸ ೨೦ಕ್ಕೆ ಪದಗಣನೆ ೧೫೬೨ಕ್ಕೆ ಮಂಗಳಮಹಾ ಶ್ರೀ ॥

ಅವನು ಶಿವನ ಕೃಪೆಯಿಂದ ತಪ್ಪದೆ, ಸಮಸ್ತ ಸಿದ್ಧಿಗಳನ್ನೂ ಸುಖದ ಅಭಿವೃದ್ಧಿಯನ್ನೂ ಪಡೆಯುವನು. ೩೬. ವೇದಗಮಾದಿ ಶಾಸ್ತ್ರ ಸಮೂಹವನ್ನು ಸುರಿದವಳೇ, ಮಿಂಚಿನೋಪಾದಿಯಲ್ಲಿ ಪ್ರಕಾಶಿಸುವ ಕಡೆಗಣ್ಣುಗಳ ಕಾಂತಿಯುಳ್ಳವಳೇ, ರತ್ನಕಾಂತಿಯಿಂದ ಭೂಷಣಗೊಂಡ ಸುವರ್ಣದ ಕರ್ಣಕುಂಡಲಗಳನ್ನುಳ್ಳವಳೇ ಸದ್ಗುಣಗಳಿಂದ ಮನೋಹರಳಾದವಳೇ, ಜಯ.

ಇಪ್ಪತ್ತನೆಯ ಆಶ್ವಾಸವು ಸಮಾಪ್ತವಾಯಿತು.

ಏಕವಿಂಶಾಶ್ವಾಸಂ

(ಮುಸುಟಿ ಚೌಡಯ್ಯನ ಕಥೆ)

ಶ್ರೀಮದಿಳಾಧರತನಯಾ
ಕೋಮಳತರಬಾಹುಕನಕಚಾಂಪೇಯಲಸ
ದ್ದಾಮಾನ್ವಿತಗಳನಮರಲ
ಲಾಮಂ ಪೊರೆಗೆಮ್ಮನಾವಗಂ ಶಿವಲಿಂಗಂ ೧

ವಸುಧಾಲಲನೆಯ ಮಲಯಜ
ರಸತಿಲಕದ ತೆಱದೆ ಸೌಧರುಚಿಯಿಂ ತೊಳಗು
ತ್ತಸದೃಶ ವೈಭವದಿಂದಂ
ಮುಸುಟಿ[1]ಯೆನಿಪ್ಪೊಂದು ಪುರವರಂ ಸೊಗಯಿಸುಗುಂ ೨

ಆ ಪುರದೊಳೆಸೆವನಖಿಳಕ
ಳಾಪಂಡಿತನತರ್ಕ್ಯ ಮಹಿಮಾಕರನು
ರ್ವೀಪಾವನಪದನುಜ್ವಳ
ರೂಪಂ ಸಲೆ ಮುಸುಟಿ ಚೌಡನೆಂಬ ಶಿವೈಕ್ಯಂ ೩

ಶರಣಶರಣ್ಯನಾರ್ಯಜನನಘಂ ಸಫಲೀಕೃತಸತ್ಯವಾಕ್ಯನೀ
ಶ್ವರಮತಕಲ್ಪಭೂಜನನವದ್ಯಗುಣಾಂಬುಧಿ ಗಾಢಶೌರ್ಯಬಂ
ಧುರನನಿಮಿತ್ತಸಾಧುಜನಬಂಧು ವಿಶಾಲಯಶೋವಿಭಾಸಿ ಶಂ
ಬರಹರದರ್ಪಸರ್ಪಶಿಖಿ ದುರ್ಮತಗರ್ವಘನಪ್ರಭಂಜನಂ ೪

ಮುಸುಟಿ ಚೌಡಯ್ಯನ ಕಥೆ

೧. ಮಂಗಳಕರಳಾದ ಪಾರ್ವತಿಯ ಅಂತ್ಯಂತ ಕೋಮಲವಾದ ಬಾಹುಗಳೆಂಬ ಕನಕ ಚಂಪಕ (ಬಂಗಾರ ವರ್ಣದ ಸಂಪಿಗೆ)ದ ಪ್ರಕಾಶಿಸುವ ಶ್ರೇಷ್ಠ ಹೂ ಮಾಲೆಯಿಂದ ಕೂಡಿರುವ ಕಂಠವುಳ್ಳವನೂ, ದೇವತಾ ಸಾರ್ವಭೌಮನೂ ಆದ ಶಿವಲಿಂಗನು ನಿರಂತರದಲ್ಲೂ ನಮ್ಮನ್ನು ರಕ್ಷಿಸಲಿ. ೨. ಭೂ ಕಾಂತೆಯ ಶ್ರೀಗಂಧದ ರಸದ ತಿಲಕದ (ಹಣೆ ಬೊಟ್ಟಿನ) ರೀತಿಯಿಂದ, ದೊಡ್ಡ ದೊಡ್ಡ ಉಪ್ಪರಿಗೆಯ ಮನೆಗಳ ಕಾಂತಿಯಿಂದ ಪ್ರಕಾಶಿಸುತ್ತ ಅತ್ಯಧಿಕ ಸಂಪತ್ತಿನಿಂದ ಕೂಡಿದ 'ಮುಸುಡಿ' ಎಂಬ ಹೆಸರಿನ ಶ್ರೇಷ್ಠ ಪುರವು ಶೋಭಿಸುವುದು. ೩. ಆ ಪಟ್ಟಣದಲ್ಲಿ ಸಮಸ್ತ ವಿದ್ಯೆಗಳಲ್ಲಿ ಚತುರನೂ, ಊಹಿಸಲಸಾಧ್ಯವಾದ ಮಹತ್ವಕ್ಕೆ ಅಸ್ಪದನೂ, ಲೋಕಕ್ಕೆ ಪಾವನವಾದ ಪಾದಗಳುಳ್ಳವನೂ, ಪ್ರಕಾಶಮಾನವಾದ ರೂಪವುಳ್ಳವನೂ ಆದ ಮುಸುಟಿಯ ಚೌಡಯ್ಯನೆಂಬ

---

1 ಟಿ(ಮು)

ನಿರಪಾಯಂ ಗಿರಿಶಪ್ರಸಾದರಸಿಕಂ ವೀರವ್ರತಾಲಂಕೃತಂ
ಪರಮಾನಂದಮಯಂ ಚರಾಚರಚಯಾಭೀತಿಪ್ರದಾನಾದರಂ
ಕರುಣಾಶಾಲಿ ನಿರಸ್ತಕರ್ಮತತಿ ಶಾಪಾನುಗ್ರಹೋದ್ದಾಮಶ
ಕ್ತಿ ರಸಾಭಾಗಸಮಾಗತೇಶನಮೃತಾಪಾಂಗಂ ಪ್ರಬೋಧಾಸ್ಪದಂ ೫

ದೃಷ್ಟಾದೃಷ್ಟಫಲೋದಯ
ದೃಷ್ಟಿಸದಾಮೋಘಸತ್ಕ್ರಿಯಾತರ್ಪಣಸಂ
ತುಷ್ಟಶಿವನವನತಪ್ರಕ
ರೇಷ್ಟಪ್ರದನತುಳ ವೀರರಸಪರಿಪೂರ್ಣಂ ೬

ವ॥ ಎಂಬ ನೆಗಳ್ತೆಗಡರ್ಪೆನಿಸಿ—

ಗೂಳಿ ತಪಸ್ವಿ ಭಕ್ತರಿಳೆಯೊಳ್ಮಿಕೃತಿಯೊಂದಿರೆ ಜೀವವಿೞಿವುತಂ
ಬಾಳಿಪ ಮಾರ್ಗಕಡ್ಡವಿರೆ ದಳ್ಳುರಿ ಪೆರ್ವಳೆ ಮಳ್ಗಿಸುತ್ತದಂ

ಶಿವನಲ್ಲಿ ಐಕ್ಯಗೊಂಡ ಚಿತ್ತವುಳ್ಳವನು ಶೋಭಿಸುವನು. ೪. (ಅವನು) ಶಿವಶರಣರ ರಕ್ಷಕನು ; ಪೂಜ್ಯನು ; ಪಾಪದೂರನು ; ಸತ್ಯವಾಕ್ಯವನ್ನೇ ಸಫಲಗೊಳಿಸಿದವನು (ಅಂದರೆ–ಸತ್ಯವಾಕ್ಕೆಂಬುದು ಇವನಿಂದ ಸಫಲವಾಗಿ ಮಾಡಲ್ಪಟ್ಟಿತು) ಶಿವ ಸಂಬಂಧ ವಾದ ಮತಕ್ಕೆ ಕಲ್ಪವೃಕ್ಷ ಪ್ರಾಯನು. ನಿರ್ದುಷ್ಟವಾದ ಗುಣ ಸಮುದ್ರ ಸ್ವರೂಪನು ; ಅಧಿಕವಾದ ಪರಾಕ್ರಮದಿಂದ ಕೂಡಿದವನು ; ಸಾಧು ಜನರಿಗೆ ನಿಮಿತ್ತವಿಲ್ಲದೆಯೇ ಬಂಧುವೆನಿಸಿದವನು ; ವಿಶೇಷವಾದ ಕೀರ್ತಿಯನ್ನು ಪೊಂದಿದವನು ; ಮನ್ಮಥನ (ಶಂಬರಹರ) ದರ್ಪವೆಂಬ ಸರ್ಪಕ್ಕೆ ನವಿಲಿನಂತಿರುವವನು ; ದುಷ್ಟಮತದವರ ಗರ್ವ ವೆಂಬ ಮೋಡಗಳಿಗೆ ಝಂಝಾ ಮಾರುತ ಪ್ರಾಯನು. ೫. (ಅವನು) ಅಪಾಯ ದೂರನು ; ಶಿವಪ್ರಸಾದದಲ್ಲಿ ಅನುರಾಗವುಳ್ಳವನು ; ವೀರಶೈವ ವ್ರತನಿಯಮಗಳಿಂದ ಅಲಂಕಾರಗೊಂಡವನು ; ಉತ್ಕೃಷ್ಟವಾದ ಆನಂದ ಸ್ವರೂಪನು ; ಸ್ಥಾವರ ಜಂಗ ಮಾತ್ಮಕ ಪ್ರಪಂಚದ ಸಮೂಹಗಳಿಗೆ ಅಭಯವನ್ನು ಕೊಡುವುದರಲ್ಲಿ ವಿಶ್ವಾಸವುಳ್ಳ ವನು ; ದುಷ್ಕರ್ಮ ಸಮೂಹಗಳನ್ನು ಹೋಗಲಾಡಿಸಿದವನು : ಶಾಪ ಕೊಡುವುದರಲ್ಲಿ ಅನುಗ್ರಹ ತೋರಿಸುವಲ್ಲಿ ಉತ್ಕೃಷ್ಟ ಶಕ್ತಿಯುಳ್ಳವನು ; ಭೂಲೋಕಕ್ಕೆ ಇಳಿದು ಬಂದ ಪರಮೇಶ್ವರನು ; ಅಮೃತರಸವನ್ನು ಸುರಿಸುವ ಕಡೆಗಣ್ಣ ನೋಟವುಳ್ಳವನು ; ವಿಶೇಷವಾದ ಜ್ಞಾನಕ್ಕೆ ಆಸ್ಪದನೆನಿಸಿದವನಾಗಿ (ಇದ್ದನು). ೬. ಆಲೋಕನ ಮಾತ್ರ ದಿಂದಲೇ ಪ್ರತ್ಯಕ್ಷ ಮತ್ತು ಪರೋಕ್ಷ (ಅಪ್ರತ್ಯಕ್ಷ) ಫಲಸಿದ್ಧಿಗೊಳಿಸುವವನು ; ಸತತವೂ ಅಮೋಘವಾದ ಸತ್ಕ್ರಿಯಾಚಾರವನ್ನು ಅರ್ಪಿಸಿ ಶಿವನನ್ನು ತೃಪ್ತಿಪಡಿಸುವವನು ; ನಮಸ್ಕರಿಸಿದವರ (ಬಾಗಿದವರ) ಜನ ಸಮೂಹಕ್ಕೆ ಅವರ ಇಷ್ಟಾರ್ಥವನ್ನುಂಟು ಮಾಡುವವನು ; ಅಸಮಾನವಾದ ವೀರ ರಸದಿಂದ (ಶೌರ್ಯದಿಂದ) ಪೂರ್ಣನೆನಿಸಿದವನು (ಎನಿಸಿದ್ದನು). ವ॥ ಹೀಗೆಂಬ ಪ್ರಸಿದ್ಧಿಗೆ ಕಾರಣನೆನಿಸಿ. ೭. ಆ ಚೌತನ್ಯನು

ಪಾಳಿಯಿನಲ್ಲಿ ನಾಡೆ ನಡೆವುಜ್ಜುಗದೊಳ್ಳಪಥಂಗೊಳುತ್ತೆ ಭ
ಕ್ತಾಳಿಯಭೀಷ್ಟವಂ ಸಲಿಸುತುಂ ಪೆಱಿದಿರ್ದನವಂ ವಿಳಾಸದಿಂ ೭

ಇರೆ ಬಸವಭಕ್ತಿಕುಸುಮದ
ಪರಿಮಳಮೆಣ್ದೆಸೆಗೆ ತೀವೆ ಜಸಮು[1]ವನಂ[1] ಸಾ
ದರವೀಕ್ಷಿಸಲ್ಕೆ ಶಿವಗಣ
ವರರೊಡನೇಳ್ತಂದನತುಳ ಸಂಭ್ರಮದಿಂದಂ ೮

ವ॥ ಅಂತೇಳ್ತರ್ಪಾಗಳಾ ಮಾರ್ಗಮಧ್ಯದಲ್ಲಿ—
ಖರಕರರೋಚಿಯುರ್ಚದ ತರುವ್ರಜದಾಲಯಮಂಧಕಾರದಾ
ಗರಮಹಿವ್ರಾತದಿಕ್ಕೆ ಮೃಗರಾಜಿಯ ತಾಯ್ಮನೆ ಪಕ್ಕಿಪಿಂಡಿನೋ
ವರಿನೆಲೆ ದಾವಪಾವಕನ ಭೋಜನಶಾಲೆ ಕಿರಾತಕೋಶಮಂ
ದಿರಮೆನಿಸಿರ್ದುದೇಳ್ಗೆವಡೆದೊಪ್ಪುವ ಕಾನನಮೊಂದಗುರ್ವಿನಿಂ ೯

ವ॥ ಅಂತೆಸೆವ ಕಾನನದಂತರಾಳದೊಳ್ ಚೌಡದೇವಂ ನಡೆತರುತ್ತುಮಿರೆಯಿರೆ—

ಗೂಳಿಯೂ, ತಪಸ್ವಿಯೂ, ಭಕ್ತರೂ—ಮರಣವನ್ನು ಹೊಂದಿರಲಾಗಿ, ಅವರಿಗೆ ಪ್ರಾಣ ದಾನ ಮಾಡುತ್ತ, ಬಾಳುವಂತೆ ಮಾಡಿದ, ಮಾರ್ಗಕ್ಕೆ ಅಡ್ಡಬಂದ ದಳ್ಳುರಿ, ದೊಡ್ಡ ಹೊಳೆ (ಭೀಮರತಿಯೆಂಬ ಹೊಳೆ) ಅವನ್ನು ಕ್ರಮವಾಗಿ ತಗ್ಗಿಸುತ್ತ, ತಾನು ನಡೆಯುವ ಮಾರ್ಗದಲ್ಲಿ ಚೆನ್ನಾಗಿ ಆಣೆಗಳನ್ನು ಮಾಡುತ್ತ (ಶಪಥಗಳನ್ನು ಮಾಡುತ್ತ) ಭಕ್ತ ಸಮೂಹದ ಇಷ್ಟಾರ್ಥಗಳನ್ನು ಸಲ್ಲಿಸುತ್ತ ಮನೋಹರನೆನಿಸಿ (ಮುಸುಟಿಯಲ್ಲಿ) ಶೋಭಿಸುತ್ತಿದ್ದನು. ೮. ಹೀಗಿರುತ್ತಿರಲಾಗಿ ಬಸವೇಶ್ವರನ ಭಕ್ತಿ ಪುಷ್ಪದ ಸುವಾಸನೆಯೆಂಬ ಯಶಸ್ಸು ಎಂಟು ದಿಕ್ಕುಗಳಲ್ಲಿ ತುಂಬಿರಲಾಗಿ, ಆ ಬಸವೇಶ್ವರನನ್ನು ನೋಡಬೇಕೆಂದು ವಿಶ್ವಾಸದಿಂದ ಅತಿ ಸಡಗರದೊಡನೆ ಶಿವಶರಣರ ಸಮೂಹವನ್ನು ಕೂಡಿಕೊಂಡು (ಮುಸುಟಿಯಿಂದ ಕಲ್ಯಾಣಕ್ಕೆ) ಬಂದನು. ವ॥ ಹೀಗೆ ಬರುತ್ತಿರುವಾಗ ಮಾರ್ಗ ಮಧ್ಯದಲ್ಲಿ—೯. ಶೋಭಿಸುವ ಒಂದು ಅರಣ್ಯವು ಏಳ್ಗೆಯಿಂದ ಕೂಡಿ ಭಯಂಕರವಾಗಿ ಇತ್ತು. (ಅದು) ಸೂರ್ಯಕಿರಣಗಳು ತಳವನ್ನು ಮುಟ್ಟದಂತೆ ಇರುವ ವೃಕ್ಷಸಮುದಾಯ ಗಳ ಮನೆಯೆನಿಸಿತ್ತು. ಕತ್ತಲೆಯ ಆಗರ, ಸರ್ಪಸಮುದಾಯದ ವಾಸಸ್ಥಳ, ಮೃಗ ಸಮೂಹಗಳ ತವರುಮನೆ, ಪಕ್ಷಿಗಳ ಹಿಂದಿನ ಪೋಷಣಾಸ್ಥಾನ, ಕಾಡುಗಿಚ್ಚಿನ ಊಟದ ಮನೆ, ಬೇಡರುಗಳ ಬೊಕ್ಕಸದ ಮನೆ ಎನಿಸಿ ಇತ್ತು. ವ॥ ಈ ರೀತಿ ಶೋಭಿಸುವ ಅರಣ್ಯದ ಮಧ್ಯಭಾಗದಲ್ಲಿ ಮುಸುಟಿಯ ಚೌಡದೇವನು (ಶಿವಶರಣರೊಡನೆ) ನಡೆದು

1 ನವಂ (ಚ)

ಮಿಸುನಿಯ ಪೊಸಚೆಂಡುಗಳಂ
ತೆಸೆವಿಟ್ಟಿಯ ಪಣ್ಗಳಿದಿರೊಳಿರೆ ಕಂಡಾ ತಾ
ಪಸರೆಮ್ಮ ಲಿಂಗಕೊಲ್ದ
ರ್ಪಿಸಲ್ಕೆ ಬಯಸಿರ್ದಪೆಂಬ ನುಡಿಗೇಳ್ದಾಗಳ್ ೧೦

ನಸುನಗುತೆಯ್ದಿ ಕೂರಸಿಯನಾತರುಮೂಲದೊಳೂಱಿನಿಂದು ವೀ
ಕ್ಷಿಸಿ ಪೊಸಪಣ್ಗಳಂ ಸವಿವುದಿನ್ನೆನೆ ಚೌಡಯನಲ್ಲಿ ಜಂಗಮ
ಪ್ರಸರಮೊಱಲ್ದು ಪಣ್ದಱಿಯುತಿತ್ತು ಶಿವಂಗಮೃತೋಪಮಾನಮೀ
ರಸಮೆನುತುಂ ಪ್ರಸಾದಫಳಸೇವನೆಗೆಯ್ದುದದೇ[1]ನನೆಂದಪೆಂ ೧೧

ಇನಿಮಾವಿನ ತನಿವಣ್ಣಂ
ಮನದೊಲವಿಂ ಸೇವಿಪಂತಿರಿಟ್ಟಿಯ ಪಣ್ಣಂ
ಘನಜಂಗಮತತಿ ಸೇವಿಸು
ತನುನಯದಿಂ ತಣಿದು ಪೊಗಳ್ದುದಾ ಗುಣನಿಧಿಯಂ ೧೨

ವ॥ ಆ ಗಹನಾಂತರಾಳಮಂ ಕಳಿದು ಚೌಡದೇವಂ ನಿಜಲಿಂಗಮಧ್ಯದೊಳ್ಪೊಳೆಯೆ ಬಸವನಱಿದೊಸಗೆ ಮಿಗೆ ಗುಡಿಗಟ್ಟಿ ಸಡಗರದಿನಿದಿರ್ಗೊಂಡು ಸಾಷ್ಟಾಂಗಮೆಱಗಿ ಬಿಜಯಂಗೆಯ್ಸಿ ತಂದು ಸಮುಚಿತ ಸತ್ಕಾರಪೂರ್ವಕಂ ಪೂಜಿಸಿ ಪೊಗಳ್ದು ತತ್ಕಾರುಣ್ಯಮಂ ಪಡೆದು ನಿಜಗುರು ಸಂಗಮೇಶ್ವರನೆಂಬ ಭಾವದಿಂ ನಂಬಿ ನಲಿದು ಭಕ್ತಿಯಿಂ ಭಜಿಯಿಸುತ್ತುಮಿರೆ—

ಬರುತ್ತಿರಲಾಗಿ—೧೦-೧೧. ಮುಂಭಾಗದಲ್ಲಿ ಬಂಗಾರದ ನೂತನ ಚೆಂಡುಗಳ ಹಾಗೆ ಶೋಭಿಸುವ ಇಟ್ಟಿಯಮರದ ಹಣ್ಣುಗಳು ಇರಲಾಗಿ ಆ ತಪಸ್ವಿಗಳು ಕಂಡು, 'ಇವನ್ನು ನಮ್ಮ ಲಿಂಗದೇವನಿಗೆ ಪ್ರೀತಿಯಿಂದ ಅರ್ಪಿಸುವುದಕ್ಕೆ ಬಯಸಿದ್ದೇವೆ.' ಎಂಬ ನುಡಿಯನ್ನು ಕೇಳಿ ಆಗ ಚೌಡಯ್ಯನು ನಸುನಗುತ್ತ ಅಲ್ಲಿಗೆ ಬಂದು ತೀಕ್ಷ್ಣ ಖಡ್ಗವನ್ನು ಆ ಗಿಡದ ಬುಡದಲ್ಲಿ ಊರಿ ನಿಂತು ನೋಡಿ, 'ಇನ್ನು ಈ ಹೊಸ ಹಣ್ಣುಗಳನ್ನು ತಿನ್ನಿರಿ, ಎಂದನು. (ಆಗ) ಅಲ್ಲಿ ಜಂಗಮ ಸಮುದಾಯವು ಸಂಭ್ರಮದಿಂದ ಆ ಹಣ್ಣುಗಳನ್ನು ಕೊಯ್ದು ಶಿವಲಿಂಗಕ್ಕೆ ಸಮರ್ಪಿಸಿ, 'ಈ ಹಣ್ಣಿನ ರಸವು ಅಮೃತೋಪಮವಾಗಿದೆ,' ಎನ್ನುತ್ತ ಲಿಂಗಪ್ರಸಾದ ರೂಪವಾದ ಫಲವನ್ನು ಸ್ವೀಕರಿಸಿದುದನ್ನು ಏನೆಂದು ಹೇಳಲಿ ! ೧೨. ಸೀಮಾವಿನ ಮಾಗಿದ ಹಣ್ಣನ್ನು ಮನಃಪ್ರೀತಿಯಿಂದ ಸೇವಿಸುವಂತೆ ಇಟ್ಟಿಯ ಹಣ್ಣನ್ನು ಆ ಶ್ರೇಷ್ಠ ಜಂಗಮ ಸಮೂಹವು ತಿಂದು ತಣಿದು, ಆ ಗುಣನಿಧಿಯಾದ ಚೌಡಯ್ಯನನ್ನು ಸ್ತೋತ್ರ ಮಾಡಿತು. ವ॥ ಆ ಕಾಡನ್ನು ದಾಟಿ ಚೌಡಯ್ಯನು (ಬರುವಾಗ) ತನ್ನ ಇಷ್ಟಲಿಂಗ ಮಧ್ಯದಲ್ಲಿ ಹೊಳೆದು ತೋರುವ, ಈ ಚೌಡಯ್ಯನನ್ನು ಬಸವಣ್ಣನು ಕಂಡು ರೋಮಾಂಚನಗೊಂಡು ಸಡಗರದಿಂದ ಇದಿರುಗೊಂಡು ಸಾಷ್ಟಾಂಗ ನಮಸ್ಕಾರ ಮಾಡಿ ಬರಮಾಡಿಕೊಂಡು, ಕರೆತಂದು, ಯೋಗ್ಯವಾದ ಉಪಚಾರ ಪೂರ್ವಕವಾಗಿ ಪೂಜೆ ಮಾಡಿ, ಹೊಗಳಿ, ಆ ಚೌಡಯ್ಯನ ಕಾರುಣ್ಯವನ್ನು ಪಡೆದು, ತನ್ನ ಗುರುವಾದ ಸಂಗಮೇಶ್ವರನೇ ಎಂದು ನಂಬಿ ಭಾವಿಸುತ್ತ, ಸಂತೋಷದಿಂದಲೂ, ಭಕ್ತಿ

1 ಮೇ(ಮ, ಚ, ಚ, ಅ)

ಪರಮಾನಂದದಿನಾ ಚೌ
ಡರಸಂ ಬಸವನ ಸುಭಕ್ತಿಯುಂ ಕೆಯ್ಕೊಳುತುಂ
ಸುರುಚಿರ ಕಲ್ಯಾಣದೊಳೊ
ಪ್ಪಿರುತಿರ್ದಂ ವೀರವೃತ್ತಿ ತನಗೆಸೆವಿನೆಗಂ ೧೩

ವ॥ ಅಲ್ಲಿ ಪೆಱತೊಂದು ದಿವಸವಾರ್ಯಗೃಹವಿವಾಹನಿಮಿತ್ತಮವರಿಂ ಪ್ರಾರ್ಥಿಸಲ್ಪಟ್ಟು ಪರಮೋತ್ಸವಂ ಮಿಗೆ ಚೌಡದೇವಂ ಪೊಱಮಟ್ಟು ರಾಜವೀಥಿಯೊಳ್ಪರ್ಪಾಗಳ್ಪೊಟ್ಟನೆ ಕಟ್ಟಿದಿರೊಳಾಡಿಪಾಡುವ ಭಕ್ತಜನದ ಮಧ್ಯದೊಳೆತ್ತಿ ಬರ್ಪ ನಾನಾವಿಧ ಕುಸುಮಮಾಲಿಕಾ ಮುಕುರ ಕಿಂಕಿಣಿ ಚಾಮರ ಚಿತ್ರಾಂಬರ ಪ್ರಕರದಿನಲಂಕೃತಿವೆತ್ತೆಸೆವ ವಿಮಾನದೊಳಿರ್ದ ತಾಪಸನ ಶಬಮುಂ ಕಂಡು ಬಳಸಿರ್ದ ಭಕ್ತರೊಡನೆ—

ತಾಪಸವರ್ಯನಿಂ ಪರಕೆಯಾನದೆ ಪೋಪೆನೆ ಮಂಗಳಾರ್ಥಮಾ
ದೀ ಪಯಣಕ್ಕಿವಂ ಬೆರಸಿದಲ್ಲದೆ ಪೋದಪೆನೆಂತೊ ಕೇಳಿಮೆಂ
ದಾ ಪಟುವಿಕ್ರಮಂ ಜಡಿದು ಚಿಮ್ಮುತೆ ಕೆಯ್ಯ ನಿಶಾತಖಡ್ಗಮಂ
ಭಾಪೆನುತಾರ್ದು ಬೊಬ್ಬಿಱಿದು ಮುಂಗಡೆ ಸಾರ್ದು ಕಡಂಗುತುರ್ಬುತುಂ ೧೪

ಒಸಗೆಯಿದೇಂ ತಪಸ್ವಿ ಶರಣಾರ್ಥಿಯೆನುತ್ತಿರೆ ಜೀವರಿಕ್ತತಾ
ಪಸತನು ಜೀವನಂಬಡೆದು ಕೇಳ್ದು 'ಸದಾ ಶಿವಮಸ್ತು ತೇ'ಯೆನು

ಪೂರ್ವಕವಾಗಿಯೂ ಸ್ತೋತ್ರ ಮಾಡುತ್ತಿದ್ದನು. ೧೩. ಪರಮಾನಂದದಿಂದ ಕೂಡಿದ ಚೌಡರಸನು ಬಸವಣ್ಣನ (ಈ ರೀತಿಯ) ಸದ್ಭಕ್ತಿಯನ್ನು ಸ್ವೀಕಾರ ಮಾಡುತ್ತ, ಮನೋಹರವಾದ ಕಲ್ಯಾಣ ಪಟ್ಟಣದಲ್ಲಿ ತನಗೆ ಶೋಭಿಸುವ ವೀರವೃತ್ತಿಯನ್ನೆ ಕಾಯಕವನ್ನಾಗಿ ಒಪ್ಪಿ ಇರುತ್ತಿದ್ದನು. ವ॥ ಆ ಕಲ್ಯಾಣ ನಗರದಲ್ಲಿ ಮತ್ತೊಂದು ದಿವಸ ಪೂಜ್ಯನಾದವನೊಬ್ಬನ ಮನೆಯಲ್ಲಿ ನಡೆಯುವ ಲಗ್ನ ಸಮಾರಂಭದ ನಿಮಿತ್ತ ವಾಗಿ ಅವರ ಪ್ರಾರ್ಥನೆಯನ್ನನುಸರಿಸಿ, ಪರಮೋತ್ಸಾಹದಿಂದ ಚೌಡಯ್ಯನು (ಆ ಮದುವೆಯ ಮನೆಗೆ) ಹೊರಟನು. ಬರುವಾಗ ರಾಜಬೀದಿಯಲ್ಲಿ ಒಮ್ಮಿಂದೊಮ್ಮೆಲೆ ಮುಂಭಾಗದಲ್ಲಿ ಆಡುತ್ತ ಹಾಡುತ್ತ ಭಕ್ತಜನರ ಮಧ್ಯದಲ್ಲಿ ಎತ್ತಿಕೊಂಡು ಬರುತ್ತಿರುವ, ಅನೇಕ ಪ್ರಕಾರದ ಹೂಮಾಲಿಕೆಗಳು, ಕನ್ನಡಿ, ಕಿರುಗೆಜ್ಜೆ, ಚಾಮರ, ನಾನಾ ಬಣ್ಣದ ಬಟ್ಟೆ–ಇವುಗಳ ಸಮೂಹದಿಂದ ಅಲಂಕಾರಗೊಂಡು ಶೋಭಿಸುವ ಚಟ್ಟ (ವಿಮಾನ) ದಲ್ಲ ಇದ್ದ ತಾಪಸನ ಹೆಣವನ್ನು ಕಂಡು, ಅದನ್ನು ಸುತ್ತಿಕೊಂಡಿರುವ ಭಕ್ತಜನರನ್ನು ಕುರಿತು—೧೪–೧೫. ಈ ತಾಪಸ ಶ್ರೇಷ್ಠನಿಂದ ಆಶೀರ್ವಾದವನ್ನು ಹೊಂದದೆ, ಮಂಗಳಾರ್ಥವಾಗಿ ನಾನು ಹೋಗುವ ಈ ವಿವಾಹ ಕಾರ್ಯಕ್ಕೆ ಇವನನ್ನು ಕರೆದು ಕೊಂಡಲ್ಲದೆ ಹೇಗೆ ಹೋಗುವೆನೋ! ಕೇಳಿರಿ ಎನ್ನುತ್ತ ಆ ಮಹಾ ಪರಾಕ್ರಮಿಯಾದ ಚೌಡಯ್ಯನು ತನ್ನ ಕೈಯ ತೀಕ್ಷ್ಣವಾದ ಖಡ್ಗವನ್ನು ಅಲ್ಲಾಡಿಸುತ್ತ, ಹಾರಿಸುತ್ತ, ಭಾಪುರೇ! ಎನ್ನುತ್ತ ಗಟ್ಟಿಯಾಗಿ ಕಿರಿಚಿ ಕೋಲಾಹಲ ಮಾಡಿ, ಆ ಹೆಣದ ಮುಂದೆ ಬಂದು ಉತ್ಸಾಹದಿಂದ ಉಬ್ಬಿದವನಾಗಿ—'ಎಲೈ ತಪಸ್ವಿಯೇ, ಈ ನಿನ್ನ ಉತ್ಸವ

ತ್ತುಸುರೆ ಕಡಂಗಿ ಚೌಡವಿಭು ನಕ್ಕು ನಿರೀಕ್ಷಿಸಿ ತಾಪಸೇಂದ್ರ ನೀ
ನೊಸೆದಿೞಿ ನಂದಿವಾಹಮುೞಿದೀ ನರವಾಹನಮೇಱಿ ಬರ್ಪುದೇ ೧೫

ಅರರೆ ಪೊಸ ಚೋಹ[1]ಮಾಳ್ದಂ[1]
ತಿರೆ ನಿನ್ನಂ ನಗರೆ ನಗರದವರೆಲ್ಲರೆನು
ತ್ತುರವಣಿಸಿ ಚರಣತಳಮಂ
ಶರಣಂ ಪಿಡಿದಲುಗೆ ತಾಪಸಂ ಸಂಭ್ರಮದಿಂ ೧೬

ಇಳೆಯೊಳ್ಧುಮ್ಮಿಕ್ಕಿ ಬೇಗಂ ತೆಗೆದು ಬಿಗಿದು ತಳ್ಕೈಸಿ ಕೊಂಡಾಡೆ ದೇವಾ
ವಳಿಮರ್ತ್ಯಶ್ರೇಣಿ ಚೌಡಪ್ರಭು ಮುದದಿನಮಂಗೂಡಿ ವೈವಾಹಸನ್ಮಂ
ಗಳಕಾರ್ಯಕ್ಕೊಲ್ದು ಬರ್ಪಾ ಪಥದೊಳೆಸೆದುದುದ್ದಂಡಶಾಖಾಕದಂಬೋ
ಜ್ವಳಪರ್ಣೋದೀರ್ಣಶುಂಭತ್ಫಳಕುಳವಿಳಸಚ್ಛಾಯಕಂ ಪ್ಲಕ್ಷವೃಕ್ಷಂ ೧೭

ವ|| ಅಂತೊಪ್ಪುವ ಪೇರಾಲಮರದ ಬಳಿಗೊಂಡು ಸಾರ್ದು ತುಱುಗಾವ ಕಿಱುಕುಳರೆಲ್ಲರ್ನೆರೆದೆರಳ್ಬಳವಾಗಿ ನಿಂದು ಪರಿವರಿ[2]ದಾಡಲೆಳಸುತೀ ಬಸವನಾಲಮೆಮಗಂ ನಿಮಗಂ ಮಧ್ಯಸ್ಥಮಿದಂ

ವೇನು ? ಶರಣಾರ್ಥಿ' ಎನ್ನುತ್ತಿರಲು, ಪ್ರಾಣ ಹೊರಟು ಹೋದ ತಪಸ್ವಿಯ ಶರೀರವು ಪ್ರಾಣವನ್ನು ಪಡೆದು, 'ನಿನಗೆ ಸದಾ ಮಂಗಳವಾಗಲಿ' (ಸದಾ ಶಿವ ಮಸ್ತು ತೇ) ಎಂದು ಹೇಳಿದನು. (ಆಗ) ಚೌಡಯ್ಯವಿಭುವು ಉತ್ಸಾಹದಿಂದನಕ್ಕು, ಅವನನ್ನು ನೋಡಿ, 'ತಾಪಸೇಂದ್ರನೇ, ನೀನು ಪ್ರೀತಿಯಿಂದ ಇಳಿ, ನಂದಿಯ ವಾಹನ ವನ್ನೇರಿ ಬರುವುದನ್ನು ಬಿಟ್ಟು, (ಈ ನಾಲ್ಕು ಜನರ) ನರ ವಾಹನವೇರಿ ಬರುವುದೇ, (ಎಂದನು). ೧೬–೧೭. ಅರರೇ ! ನಿನ್ನನ್ನು (ಕಂಡು) ನಗರದವರೆಲ್ಲ ಹೊಸ ವೇಷವನ್ನು ಧರಿಸಿದವನೆಂದು ಹಾಸ್ಯ ಮಾಡಿ ನಗದಿರುವರೇ ? ಎನ್ನುತ್ತ ಚೌಡಿದೇವನು ಸಂಭ್ರಮ ದಿಂದ (ಆ ತಪಸ್ವಿಯು) ಕಾಲನ್ನು ಹಿಡಿದು ಅಲ್ಲಾಡಿಸಲಾಗಿ ಋಷಿಯು ಸಂಭ್ರಮದಿಂದ ಭೂಮಿಯ ಮೇಲೆ ವೇಗವಾಗಿ ಧುಮಕಿ, ಬರಸೆಳೆದು ಗಟ್ಟಿಯಾಗಿ ಅಪ್ಪಿಕೊಳ್ಳಲಾಗಿ, ದೇವತೆಗಳ ಸಮೂಹವೂ ಮನುಷ್ಯ ಸಮೂಹವೂ ಶ್ಲಾಘನೆ ಮಾಡಿತು. ಚೌಡಯ್ಯನು ಸಂತೋಷದಿಂದ ಆ ತಾಪಸನೊಡನೆ ಕೂಡಿಕೊಂಡು ಸನ್ಮಂಗಳದ ವಿವಾಹ ಕಾರ್ಯಕ್ಕೆ ಪ್ರೀತಿಯಿಂದ ಬರುತ್ತಿದ್ದನು. ಆ ಮಾರ್ಗದಲ್ಲಿ ನೀಳವಾದ ಕೊಂಬೆಗಳ ಸಮೂಹದಿಂದ ಪ್ರಕಾಶಮಾನವಾದ ಅಧಿಕವಾಗಿ ತುಂಬಿರುವ ಹಣ್ಣುಗಳ ಸಮೂಹದಿಂದಲೂ, ಶೋಭಿಸುವ ನೆಳಲಿನಿಂದಲೂ ಕೂಡಿದ ಒಂದು ಆಲದ ಮರವು ಪ್ರಕಾಶಿಸಿತು. ವ|| ಈ ರೀತಿಯಲ್ಲಿ ಒಪ್ಪುವ ಆ ದೊಡ್ಡ ಆಲದ ಮರದ ಹತ್ತಿರಕ್ಕೆ ಬಂದು ಸೇರಿದರು. (ಅಲ್ಲಿ) ದನ ಕಾಯುವ ಚಿಕ್ಕ ಹುಡುಗರೆಲ್ಲ ಸೇರಿ (ಅವರಲ್ಲಿ) ಎರಡು ಗುಂಪುಗಳಾಗಿ

1 ನಾಳ್ದಂ(ಚ) ಮಾಳ್ದಂ(ಆ)
2 ಲಿ(ಜ) ಱಿ(ಅ, ಚ)

ಮುಟ್ಟೆ ಗೆಲ್ಲಮಲ್ಲದೊಡೆ ಸೋಲಮೆಂಬ ಪೊಲ್ಲಂ ಕೇಳ್ದು ಚೌಡವಿಭುನಿಂದಾ ಗೋವಳರಂಕೆಯ್ವೀಸಿ ಕರೆದೀ ವಟವೃಕ್ಷಕ್ಕೆ ಬಸವನಾಲಮೆಂಬ ಪೆಸರೇಂ ಕಾರಣಂ ಬಂದುದೆಂದು ಬೆಸಗೊಳ್ವಿನಮಾ ತುಱುವಳರೊಳ್ಪಿರಿಯನಾದೊರ್ವನಿಂತೆಂದಂ —

ಕೇಳೆಲೆ ದೇವ ಸಪ್ತದಿವಸಂಬರಮೀ ಪೊಲದಲ್ಲಿ ಮುನ್ನೆರ
ಳ್ಗೂಳಿಗಳೆಯ್ದೆ ಕಾದುತಿರೆ ಮೇಣವಱೊಳ್ನೆಗಳ್ದೊಂದು ನೊಂದು ರ
ಕ್ತಾಳಿ ಪೊದಳ್ದು ಸೂಸೆ ಮಡಿದತ್ತದನೀಯೆಡೆಯಲ್ಲಿ ತಾಪಸ
ಪೂಳೆ ವಟಾಂಕುರಂ ನಿಮಿರ್ದು ಪೆರ್ಮರನಾದುದಿದೆಂದು ನಲ್ಮೆಯಿಂ ೧೮

ತನ್ನ ಪಿತಾಮಹಂ ತನಗೆ ಪೇಳ್ದನೆನುತ್ತಿದನೆಮ್ಮ ತಂದೆ ಪೇ
ಳ್ದನ್ನಿಜಮಂತಱಿಂ ಬಸವನಾಲಮಿದೆಂದೆನಿಸಿರ್ದುದುರ್ವಿಯೊ
ಳ್ಚನ್ನೆಸೆವೀ ಫಳಂ ಸವಿಯೆ ಮಾಂಸದ ಮಾಳ್ಕೆಯೊಳಿರ್ಪುದಯ್ಯ ಕೇ
ಳ್ನನ್ನಿಯಿದಲ್ತೆ ಸೀಳ್ದೆಡೆಯ ಪಾಲ್ಸುರಿದಪ್ಪುದು ರಕ್ತದಂತೆವೋಲ್ ೧೯

ವ॥ ಎಂದವನುಸುರ್ವಿನಂ ಬಳಸಿರ್ದ ಭಕ್ತಜನಂ ಕೇಳ್ದು ಬಹುಕಾಲ ವ್ಯತೀತ ವೃತ್ತಾಂತಮಿದಱೊಳೆಸಪ್ಪುಜ್ಜುಗಮೇಂ ಮುಂದಣ್ಗೆ ಬಿಜಯಂಗೆಯ್ಯಿಮೆನೆ ಚೌಡಿದೇವಂ ನಕ್ಕು ದೃಢತರ

ನಿಂತು ಓಡಿ ಆಡುವ ಆಟವನ್ನಾಡಲು ಅಪೇಕ್ಷಿಸಿದವರಾಗಿ, 'ಈ ಬಸವನಾಲ ಮರವು ನಮಗೂ ನಿಮಗೂ ಮಧ್ಯಸ್ಥವಾದದ್ದು ! ಇದನ್ನು ಮುಟ್ಟಲು ಗೆದ್ದ ಹಾಗೆ, ಅಲ್ಲದಿದ್ದರೆ ಸೋತ ಹಾಗೆ'—ಎಂದೆನ್ನುವ ಮಾತನ್ನು ಚೌಡಯ್ಯನು ಕೇಳಿ, ನಿಂತುಕೊಂಡು, ಆ ಬಾಲಗೋಪಾಲರನ್ನು ಕೈ ಬೀಸಿ ಹತ್ತಿರಕ್ಕೆ ಕರೆದು 'ಈ ಆಲದ ಮರಕ್ಕೆ 'ಬಸವನಾಲ' ಎಂಬ ಹೆಸರೇಕೆ ಬಂತು'? ಎಂದು ಕೇಳಲಾಗಿ ಆ ಗೋಪಾಲರಲ್ಲಿ ಒಬ್ಬ ದೊಡ್ಡವನಾದವನು ಹೀಗೆ ಹೇಳಿದನು: ೧೮–೧೯. ''ಎಲೈ ದೇವನೇ ಕೇಳು : ಈ ಮೊದಲು ಈ ಹೊಲದಲ್ಲಿ ಎರಡು ಗೂಳಿಗಳು ಏಳು ದಿನಗಳ ಪರ್ಯಂತ ಚೆನ್ನಾಗಿ ಕಾದಾಟ ಮಾಡುತ್ತ ಇದ್ದವು. ಅದರಲ್ಲಿ ಶ್ರೇಷ್ಠವಾದ ಒಂದು ಗೂಳಿಯು ಗಾಯಗೊಂಡು, ರಕ್ತ ಪ್ರವಾಹವು ವಿಶೇಷವಾಗಿ ಹರಿದು ಸತ್ತಿತು. ಅದನ್ನು ಇದೇ ಸ್ಥಾನದಲ್ಲಿ ಹೂಳಲಾಗಿ, ಈ ಆಲದ ಮರವು ಮೊಳಕೆಗೊಂಡು ಹುಟ್ಟಿ, ಎತ್ತರವಾಗಿ ಬೆಳೆದು ದೊಡ್ಡ ಮರವಾಯಿತು. ಪ್ರೀತಿಯಿಂದ (ಈ ಕಥೆಯನ್ನು) ನನ್ನ ಅಜ್ಜನು ಹೇಳಿದನೆಂದು ನನ್ನ ತಂದೆ ನನಗೆ ಹೇಳಿದನು. ಆದ್ದರಿಂದ ಇದು 'ಬಸವನಾಲ' ಎಂದು ಭೂಮಿಯಲ್ಲಿ ಖ್ಯಾತವಾಯಿತು. ಚೆನ್ನಾಗಿ ಶೋಭಿಸುವ ಈ ಆಲದ ಹಣ್ಣನ್ನು ತಿಂದರೆ, ಮಾಂಸದ ರೀತಿಯಲ್ಲೇ ಇರುವುದು. ಸೀಳಿದ ಕಡೆ ರಕ್ತದ ಹಾಗೆ ಹಾಲು ಸುರಿಯುವುದು. ಅಯ್ಯಾ, ಇದು ನಿಶ್ಚಯವಲ್ಲವೇ ಕೇಳು :'' ವ॥ ಹೀಗೆಂದು ಆ ಹುಡುಗನು ಹೇಳುವ ಸಮಯದಲ್ಲಿ ಸುತ್ತಲೂ ಬಳಸಿನಿಂತಿದ್ದ ಭಕ್ತ ಜನರು ಕೇಳಿ, ಕಳೆದುಹೋದ ಬಹುಕಾಲದ ಹಿಂದಿನ ವೃತ್ತಾಂತವಾದ ಇದರಿಂದಾಗುವ ಕೆಲಸವಾದರೂ ಏನು ? ಮುಂದಕ್ಕೆ ದಯಮಾಡಿಸಿರಿ' ಎನ್ನಲು ಚೌಡಿದೇವನು ನಕ್ಕು, ದೃಢತರವಾದ

ವೀರವ್ರತಪರಾಯಣರ್ಗೆ ಚಿರಂತನವೆಂಬ ಶಂಕೆಯಿಂ ಬಸವನಳಿವಂ ಕೇಳ್ದುಪೇಕ್ಷಿಸಿ ಪೋಗೆ ತದ್ವ್ರತ ಭಂಗವಾಗದೆಂತಿರ್ಕುಮದು ಕಾರಣದಿನೀಗಳ್—

ಮೃಡಭಕ್ತರ ಘನಕೃಪೆಯಿಂ
ಪಡೆದಪೆನೀ ಬಸವನಸುವನೀ ಮದುವೆಗಿವಂ
ಬಿಡನೊಡನೇಳ್ತಂದಲ್ಲದೆ
ನಡೆಯೆಂ ನಿಜಮೆಂದು ನಿಂದು ಬೊಬ್ಬಿಡುತಧಟಂ ೨೦

ನೆಱೆಗಲಿ ಕುರುಳ್ಚಿಮ್ಮುತೆ
ಮಿಱುಪಸಿಯಂ ವಟಮಹೀಜಮೂಲದೊಳೂಱು
ತ್ತುಱೆ ನಿಂದು ವೃಷಭ ಪೊಱಮಡು
ಪೊಱಮಡು ಜವದಿಂದಮೆಂಬುದುಂ ತತ್‌ಕ್ಷಣದೊಳ್ ೨೧

ಛಿಟಿಛಿಟಿಲೆಂದು ಬೇರ್ಸಿಡಿಯೆ ಪಣ್ಗಳಿಳಾಗ್ರದೊಳಲ್ಲಿ ಸೂಸೆ ತ
ದ್ವಟತರು ಕಂಪಿಸುತ್ತಿರೆ ಧರಾತಳಮಿರ್ಬಗಿಯಾಗೆ ಪೊಣ್ಮಿತು
ತ್ಕಟಿಸಿ ಕಡಂಗುತುರ್ಬಿ ಕೆಲೆವುತ್ತೆ ಠಣತ್ಕೃತಿಯುಣ್ಮೆ ತೀವ್ರದಿಂ
ಪುಟನೆಗೆದೆಳ್ದುದಂದು ಬಸವಂ ಬಿಸವಂದಮದಾಗೆ ನೋಳ್ಪರೊಳ್ ೨೨

ತನಗಂದೋರಂತೆ ಕೆಯ್ಗೆಯ್ದರಿಶಿನಮಲರೊಳ್ಬಾಸಿಗಂ ಪೂಸರಂ ಚಂ
ದನಲೇಪಂ ಭೂತಿ ಭೂರಿಸ್ನಾನ ಕನಕಲಸದ್ಘಂಟಿಕಾಕಿಂಕಿಣೀಮಾ

ವೀರಶೈವ ಧರ್ಮನಿಯಮದಂತೆ ನಡೆಯುವವರಿಗೆ ಬಹು ಹಿಂದಿನ ವೃತ್ತಾಂತವೆಂಬ ಶಂಕೆಯಿಂದ ಬಸವನ (ಗೂಳಿಯ) ಅಳಿಯುವಿಕೆಯನ್ನು ಕೇಳಿ ಉದಾಸೀನ ಮಾಡಿ ಹೋಗುವುದು ಆ ವೀರಶೈವ ವ್ರತಕ್ಕೆ ಭಂಗವಾಗದೆ ಎಂತಿದ್ದೀತು ? (ಭಂಗವಾಗುತ್ತದೆ ಎಂದು ಭಾವ) ಆ ಕಾರಣದಿಂದ ಈಗ—೨೦-೨೨. ಮೃಡಶರಣರ ಘನವಾದ ಕೃಪಾ ಬಲದಿಂದ ಈ ಗೂಳಿಯ ಪ್ರಾಣವನ್ನು ಪಡೆಯುತ್ತೇನೆ. ಈ ಮದುವೆಗೆ ಇವನು ತಪ್ಪದೆ ನಮ್ಮೊಡನೆ ಬರದ ಹೊರತು ನಾನು ಮುಂದಕ್ಕೆ ಹೋಗುವುದಿಲ್ಲ. ಇದು ನಿಶ್ಚಯ. ಎಂದು ನಿಂತುಕೊಂಡು, ಪರಾಕ್ರಮದಿಂದ ಬೊಬ್ಬಿರಿಯುತ್ತ, ಆ ಸಮರ್ಥನಾದ ಚೌಡಯ್ಯನು (ತನ್ನ ಕೈಯ) ಆಯುಧವನ್ನು ಝಳಪಿಸುತ್ತ, ಚಿಮ್ಮಿ ಆಡುತ್ತ, ಆ ಪ್ರಕಾಶಿಸುವ ಖಡ್ಗವನ್ನು ಆ ಆಲದ ಮರದ ಬುಡದಲ್ಲಿ ಊರಿ ನೆಟ್ಟಗೆ ನಿಂತು—'ಎಲೈ ವೃಷಭನೇ, ಜಾಗೃತೆಯಾಗಿ ಹೊರಹೊರಡು,' ಎನ್ನಲಾಗಿ, ಆ ಕೂಡಲೇ ಛಿಟಿ ಛಿಟಿಲ್ ಎಂದು ಬೇರುಗಳು ಹಾರಿ ಹಣ್ಣುಗಳು ಭೂಮಿಯಲ್ಲಿ ಸುರಿದವು. ಆ ಆಲದ ಮರವು ನಡುಗು ವುದಕ್ಕೆ ಮೊದಲಾಯಿತು. ಭೂಮಿಯು ಎರಡು ಭಾಗವಾಯಿತು. ಆಗ ಬಸವನು ಹೊರ ಹೊರಟು ಬಲದಿಂದಲೂ ಔತ್ಸುರ್ಯದಿಂದಲೂ ಉಬ್ಬಿ ಕೂಗುತ್ತ ಠಣತ್ಕಾರ ಮಾಡಿತು. ಬೇಗನೆ ಪುಟನೆಗೆದು ನೋಡುವವರಿಗೆ ಆಶ್ಚರ್ಯವುಂಟಾಗುವ ಹಾಗೆ ಎದ್ದು ಬಂದಿತು. ೨೩. (ಗೂಳಿಯು ಹೀಗೆ ಹೊರ ಬಂದ ಸಮಯದಲ್ಲಿ) ತನಗೆ ಸಾಯುವ ಪೂರ್ವದಲ್ಲಿ, ಕ್ರಮವಾಗಿ ಅಲಂಕಾರಗೊಳಿಸಿದ್ದ, ಅರಿಸಿನ, ಅಲಂಕಾರಗೊಂಡ ಹೂವಿನ ಒಳ್ಳೆಯ

ಲೆ ನದನ್ಮಂಜೀರವಾದಂ ಮಿಸುಗೆ ಮೆಱೆದುದುದ್ಯತ್ಕಕುದ್ಬಂಧುರಂ ಮಂ
ಜುನಿಜಾಂಗಂ ತುಂಗಶೃಂಗಂ ಮಿಳದರುಣಿಮಚಂಚತ್ಕಟಾಕ್ಷಂ ಮಹೋಕ್ಷಂ ೨೩

ಮಲೆಪುತ್ತುಂ ಪುತ್ತನೊಲ್ದಿಡಿರಿವುತಗಿವುತುಂ ಬಾಲಮಂ ಬೀಸುತುಂ ಸಂ
ಚಲಿಸುತ್ತುಂ ಚಲ್ಲದಿಂದಂ ನೆಗೆವುತೆ ಕೆಲನಂ ನೋಡುತುರ್ಬುತ್ತೆ ಪುಲ್ಲಂ
ನಲಿಗರ್ಚುತ್ತಿತ್ತಮಿತ್ತಂ ಪರಿವುತೆ ನೆಳಲಂ ಕಂಡು ಮೇಲ್ವಾಯ್ವುತುಂ ಕೋ
ಡಲುಗುತ್ತುಂ ಘೂರ್ಮಿಸುತ್ತುಂ ಕೆಲೆವುತೆಸೆದುದಾಮೋದಸಾಂದ್ರಂ ವೃಷೇಂದ್ರಂ ೨೪

ಪೆಱದನಿಯಾಗೆ ಕೇಳ್ದು ಕಿವಿಯಾಡಿಸುತುಂ ಮೊಗಮೆತ್ತಿ ಮೇಲೆ ಮೆ
ಲ್ಕಿಱಿವುತೆ ಮೂತ್ರಮಂ ಬಿಡುತೆ ಗೋಮಯಮಿಕ್ಕುತೆ ವೃಕ್ಷಪರ್ಣಮಂ
ಪಱಿವುತೆ ಶೃಂಗದಿಂ ಬಳಸಿ ಸುತ್ತುತೆ ನಕ್ಕುತೆ ವಾಸಿಸುತ್ತೆ ಪ
ಲ್ದಿಱಿವುತೆ ಪಾಯ್ವುತುಂ ಮೆಱೆದುದಾ ಶರಣಂ ಸಲವೆರ್ಚೆ ಪುಂಗವಂ ೨೫

ವ॥ ಅಂತು ನಿಜಲೀಲೆಯಿಂ ನಿಕಟದೊಳ್ಬಿನದಿಪ ವೃಷಭೇಂದ್ರನಂ ಚೌಡದೇವಂ ಮುದಂಮಿಗೆ ನೋಡಿ ಮೆಯ್ದಡಪಿ ಕೊರಲಂ ಬಿಗಿಯಪ್ಪಿ ರಾಗಿಸುತ್ತೆ ಮತ್ತಮಿರದೆ—

ಬಾಸಿಂಗ, ಹೂವಿನ ಮಾಲೆ, ಶ್ರೀಗಂಧದ ಲೇಪನ, ಹಚ್ಚಿದ ಭಸ್ಮ, ಅಧಿಕವಾಗಿ ಶಬ್ದ ಮಾಡುವ ಸುವರ್ಣದ ಹೊಳೆಯುವ ಗಂಟೆಗಳು, ಸಣ್ಣಗೆಜ್ಜೆ (ಹುರುಗೆಜ್ಜೆ) ಗಳ ಸರ. ನೂತನವಾದ ವಸ್ತ್ರ, (ಬೆನ್ನಿನ ಮೇಲೆ ಹಾಕಿದ ಜೂಲು) ಇವೆಲ್ಲ–ವಿಶೇಷವಾಗಿ ಶೋಭಾವಹವಾಗಿರಲು, ಉತ್ಕೃಷ್ಟವಾದ ಹಿಣಿಲಿನಿಂದಲೂ, ದಷ್ಟಪುಷ್ಟವಾದ ಮನೋಹರ ಶರೀರದಿಂದಲೂ, ಎತ್ತರವಾದ ಕೋಡುಗಳಿಂದಲೂ, ಕೆಂಪು ಬಣ್ಣನಿಂದ ಕೂಡಿರುವ ಚಪಲವಾದ ಕಡೆಗಣ್ಣುಗಳಿಂದಲೂ, ಶ್ರೇಷ್ಠ ಗೂಳಿಯು (ಎಲ್ಲರೆದುರೆಗೆ) ಶೋಭಿಸಿತು. ೨೪. ಕೊಬ್ಬಿನಿಂದ ಮಲೆದಾಡುತ್ತ, ಕೋಬಿನಿಂದ ಹುತ್ತವನ್ನು ತಿವಿಯುತ್ತ ಬಾಲವನ್ನು ಬೀಸಾಡಿ ಅಗಿಯುತ್ತ, ಸಂಚರಿಸುತ್ತ, ವಿಲಾಸದಿಂದ ನೆಗೆದಾಡುತ್ತ, ಅಕ್ಕಪಕ್ಕ ನೋಡುತ್ತ, ಉತ್ಸಾಹಗೊಳ್ಳುತ್ತ, ಹುಲ್ಲು ಕಚ್ಚುತ್ತ, ಅತ್ತಿತ್ತ ಸಂಚರಿಸುತ್ತ, ತನ್ನ ನೆಳಲನ್ನು ಕಂಡು ಮೇಲೆ ಬೀಳುತ್ತ, ಕೋಡನ್ನಲ್ಲಾಡಿಸುತ್ತ, ಗರ್ಜಿಸುತ್ತ, ಸುತ್ತುತ್ತ, ಕೆಲೆಯುತ್ತ ಪೂರ್ಣ ಸಂತೋಷದಿಂದ ಕೂಡಿದ ಆ ಗೂಳಿಯು ಶೋಭಿಸಿತು. ೨೫. ಆ ಶರಣನಾದ ಚೌಡಿದೇವನು ಸಂತೋಷಗೊಳ್ಳುವಂತೆ ಆ ಗೂಳಿಯು (ಪುಂಗವವು) ಬೇರೊಂದು ದನಿಯಾಗಲಾಗಿ, ಕೇಳಿ ಕಿವಿಯನ್ನು ಅಲ್ಲಾಡಿಸುತ್ತ, ಮುಖವನ್ನು ಮೇಲಕ್ಕೆತ್ತಿ ಮೆಲುಕು ಹಾಕುತ್ತ ಉಚ್ಚೆಯನ್ನು ಹೊಯ್ಯುತ್ತ, ಸೆಗಣಿಯನ್ನು ಹಾಕಿ, (ತೊಪ್ಪೆಯನ್ನು ಹಾಕಿ), ಗಿಡದ ಎಲೆಗಳನ್ನು ಕೋಡಿನ ತುದಿಯಿಂದ ಮುರಿಯುತ್ತ, ಸುತ್ತಲೂ ಸುತ್ತುತ್ತ, ನೆಕ್ಕುತ್ತ, (ಮುಸುಮುಸು ಎಂದು) ವಾಸನೆಯನ್ನು ನೋಡುತ್ತ, (ಆಘ್ರಾಣಿಸುತ್ತ) ಹಲ್ಲನ್ನು ಕಿರಿಯುತ್ತ, ಹಾರಾಡುತ್ತ (ಚಿನ್ನಾಟವಾಡುತ್ತ), ಮೆರೆಯಿತು. ವ॥ ಈ ರೀತಿ ತನ್ನ (ಸ್ವಭಾವ ಸಹಜವಾದ) ಲೀಲೆಯಿಂದ, (ತನ್ನ) ಸಮೀಪದಲ್ಲಿಯೇ ವಿನೋದಗೊಳ್ಳುತ್ತಿರುವ ಗೂಳಿಯನ್ನು (ವೃಷಭೇಂದ್ರನನ್ನು) ಚೌಡಯ್ಯನು ಅತಿಶಯ ಸಂತೋಷದಿಂದ ನೋಡಿ, ಮೈಯನ್ನು ಸವರಿ, ಕುತ್ತಿಗೆಯನ್ನು ಬಿಗಿದು ಅಪ್ಪಿಕೊಂಡು, ಪ್ರೀತಿಸುತ್ತ

ಒಲವಿಂ ತತ್ಪಾದಮಂ ತಾಂ ತೊಳೆದು ಕುಸುಮಗಂಧಾಕ್ಷತಾಮೋದಧೂಪೋ
ಜ್ವಲದೀಪಾನೀಕದಿಂದರ್ಚಿಸಿ ಮಧುರಸುಧಾಜ್ಯಾದಿ ಸಂತರ್ಪಣಂಗೆ
ಯ್ದಲರ್ದಿತ್ತೋರಂತೆ ಪುಷ್ಪಾಂಜಲಿಯನೆಲೆ ವೃಷಾಧೀಶ ನೀಂ ಬರ್ಪುದೆಮ್ಮೊ
ಳ್ವಿಲಸತ್ಕಲ್ಯಾಣಕಾರ್ಯಕ್ಕೆನುತೆ ತಳರ್ದನುಕ್ಷಾನ್ವಿತಂ ಚೌಡಿದೇವಂ ೨೬

ವ॥ ಅಂತು ಶಿವಗಣಾವೃತಂ ಮಾರ್ಗಮಂ ಪತ್ತಿ ಕಿಱಿದು ದೂರಂ ಪೋಗೆವೋಗೆ ಮುಂಗಡೆಯೊಳ್—

ಘುಳಿಘುಳಿಸುತ್ತೆ ಬರ಼್ ತೆರೆಯಿಂ ನೊರೆಯಿಂ ಕಳಹಂಸಪಙ್ಕ್ತಿಯಿಂ
ಜಳರುಹರಾಜಿಯಿಂ ಸಿಡಿದ ಸೀರ್ಪನಿಯಿಂ ನೆಗೆತರ್ಪ ಮೀನ್ಗಳಿಂ
ಸುಳಿಗಳ ಬಂಬಲಿಂ ಮಕರಕರ್ಕಟಕಾದಿ ವಿಚಿತ್ರಸತ್ವಸಂ
ಕುಳದಿನಲಂಪುವೆತ್ತು ಪೊಳೆಯೊಪ್ಪಿದುದಿರ್ದೊಱೆಯೆಂಬ ನಾಮದಿಂ ೨೭

ಶ್ರೀಯುತಪಂಕಜಂ ವದನಮಾಜಿಡಿಮಾಲೆ ಕಚೌಘಮುಲ್ಲಸ
ತ್ತೋಯಜರೇಣು ಪೀತವಸನಂ ಪುಳಿನಂ ಜಘನಂ ಚಳೋರ್ಮಿ ವೃ
ತ್ತಾಯತಬಾಹು ತಳ್ತ ಸುಳಿ ನಾಭಿ ಪಯಶ್ಚರಮಕ್ಷಿಯಾಗೆ ನಾ
ರಾಯಣಿಯಂತೆ ಚಕ್ರಜಲಜಾಂಕೆ ನದೀವಧು ಕಣ್ಗೆ ತೋಱಿದಳ್ ೨೮

ಇರಲಾಗಿ—೨೬. ಪ್ರೀತಿಯಿಂದ ಆ ವೃಷಭನ ಪಾದವನ್ನು ತೊಳೆದು. ಕುಸುಮ, ಗಂಧ, ಅಕ್ಷತೆ, ಪರಿಮಳದ ಧೂಪ, ಉಜ್ವಲದೀಪ—ಇವುಗಳ ಸಮೂಹದಿಂದ ಪೂಜಿಸಿ, ಮಧುರವಾದ ತುಪ್ಪವೇ ಮೊದಲಾದವುಗಳಿಂದ ಸಮಾರಾಧನೆ ಮಾಡಿ, ಸಂತೋಷ ವಿಶಿಷ್ಟನಾಗಿ ಪುಷ್ಪಾಂಜಲಿಯನ್ನು ಕೊಟ್ಟು, 'ಎಲೈ ವೃಷಭಾಧೀಶ, ಶೋಭಿಸುವ ಲಗ್ನ ಕಾರ್ಯಕ್ಕೆ ನಮ್ಮೊಡನೆ ನೀನು ಬರಬೇಕು.' ಎನ್ನುತ್ತ, ಆ ವೃಷಭನಿಂದ ಕೂಡಿದ ಚೌಡಯ್ಯನು (ಲಗ್ನಕ್ಕೆ) ಹೊರಟನು. ವ॥ ಆ ರೀತಿ ಪ್ರಮಥಗಣ ಸಮೇತನಾದ ಚೌಡಯ್ಯನು ದಾರಿಯನ್ನು ಹಿಡಿದು ಸ್ವಲ್ಪ ದೂರ ಹೋಗಲಾಗಿ ಮುಂದುಗಡೆಯಲ್ಲಿ—೨೭. ಘುಳು ಘುಳು ಧ್ವನಿಮಾಡುತ್ತ ಬರುವ ತೆರೆಗಳಿಂದಲೂ, ನೊರೆಯಿಂದಲೂ, ಅವ್ಯಕ್ತ ಮಧುರವಾದ ಹಂಸಪಕ್ಷಿಗಳ ಸಾಲುಗಳಿಂದಲೂ, ಕಮಲಗಳ ಸಮೂಹ ದಿಂದಲೂ; ಸಿಡಿಯುತ್ತಿರುವ ತುಂತುರು ಹನಿಗಳಿಂದಲೂ, ಹಾರುತ್ತಿರುವ ಮೀನು ಗಳಿಂದಲೂ, ಸುಳಿಗಳ ಸಮೂಹದಿಂದಲೂ, ಮೊಸಳೆ, ನಳ್ಳಿ ಮೊದಲಾದ ವಿಚಿತ್ರವಾದ ಪ್ರಾಣಿ ಸಮುದಾಯದಿಂದಲೂ, ಸೊಗಸುಗೊಂಡು 'ಇರ್ದೊರೆ' ಎಂಬ ಹೆಸರಿನ ಹೊಳೆಯು ಒಪ್ಪಿತ್ತು. ೨೮. ಕಾಂತಿಯಿಂದ ಕೂಡಿದ ಕಮಲವೇ ಮುಖ ; ಭ್ರಮರ ಗಳ ಸಮೂಹವೇ ಮುಂಗುರುಳು ; ಶೋಭಿಸುವ ಕಮಲಪುಷ್ಪದ ಧೂಳಿಯೇ ಪೀತ ವರ್ಣದ ಸೀರೆ ; ಮಳಲಿನ ದಿಣ್ಣೆಯೇ ಕಟಿಪಶ್ಚಾತ್ ಭಾಗ ; ಚಂಚಲವಾದ ತೆರೆಗಳೇ ದುಂಡನೆಯ ಉದ್ದವಾದ ತೋಳುಗಳು : ಕೂಡಿದ ಸುಳಿಯೇ ಹೊಕ್ಕಳು ; ಮೀನು ಗಳೇ ನೇತ್ರಗಳಾಗಿರಲಾಗಿ, ಚಕ್ರವಾಕ ಪಕ್ಷಿಗಳು, ನೀರಿನಲ್ಲಿ ಹುಟ್ಟುವ (ಇತರ) ವಸ್ತು ಗಳೇ ಚಿಹ್ನೆಯಾಗಿ ಉಳ್ಳ (ಚಕ್ರಾಯುಧ, ಕಮಲ–ಇವುಗಳೇ ಚಿಹ್ನೆಯಾಗಿ ಉಳ್ಳ) ನದಿಯೆಂಬ ಸ್ತ್ರೀಯು ಲಕ್ಷ್ಮಿಯ ಹಾಗೆ (ನಾರಾಯಣಿಯ ಹಾಗೆ) ಕಣ್ಣಿಗೆ ಕಾಣಿಸಿದಳು.

ವ॥ ಅಂತೆಸೆದಡ್ಡಂಬರಿವ ಬೃಹತ್ತರಂಗಿಣಿಯ ಸಾರ್ಕೆಗೆ ಸರಭಸಂ ಪರಿತಂದು ಚೌಡಿದೇವಂ ನಿಂದು ವಿಜೃಂಭಿಸಿ—

ಉಡುಗೆಲೆ ನಿನ್ನ ಬಿಂಕಮಂ ತರಂಗಿಣಿ ಭಕ್ತರ ಮುಂದೆ ಮುನ್ನಮೇಂ
ಕುಡಿಯನೆ ಕುಂಭಜಂ ಶರಣನೊರ್ವನೆಯೆ ನಿನ್ನಯ ಕಾಂತನಾದ ಪೆ
ರ್ಗಡಲನದಿರ್ಕೆ ನಾವಿಕನ ಮೂದಲೆಗಾ ಶಿವದಾಸನಣ್ಮಿ ಪಾ
ಯ್ದೊಡನೆ ಮಹಾನದೀಮದಮನಳ್ಗಿಸಿ ಕಾಲ್ನಡೆಯಿಂದಮೆಯ್ದನೇ ೨೯

ವ॥ ಅದಲ್ಲದೆಯುಂ—

ಪುರಹರನಂ ಗಜೇಶ ಮಸಣಯ್ಯನೆನಿಪ್ಪ ಮಹಾತ್ಮನಳ್ಕಱಿಂ
ದಿರೆ ನಿಜಭಾವದಿಂ ಕುಱುವದೊಳ್ಭಜಿಸುತ್ತಿರೆ ನೀಂ ನವಾಂಬು ನಿ
ರ್ಭರತೆಯಿನೆಯ್ದುತಿರ್ದೆಸೆಗೆ ಖಂಡಿಸಿದಂತೆವೊಲಾಂತು ಭೀತಿಯಂ
ಪರಿದೆ ಗಡಂದು ನೀಂ ಕುಡು ಕುಡಧ್ವಮನಿಂದೆಮಗೆಂದು ಶೌರ್ಯದಿಂ ೩೦

ಮೊನೆದೋಱುತ್ತೆ ಕೃಪಾಣಮಂ ಜಡಿದು ಚಿಮ್ಮುತ್ತೆತ್ತೆ ಕಂಡಳ್ಕಿ ಭೋಂ
ಕನೆ ಭಾಗದ್ವಯಮಾಗಿ ತಾಯ್ಮಣಲದೆತ್ತಂ ತೋಱೆ ಪಾಯ್ವಂಬು ನಿಂ
ದು ನಿತಾಂತಂ ಮೆಱೆದತ್ತು ತನ್ನದಿ ನಭೋಮಾರ್ಗಕ್ಕೆ ಧೀಂಕಿಟ್ಟು ತ
ದ್ಘನಕೀರ್ತ್ಯಂಗನೆಯಂಬರಾಂಬರದ ಭಾಸ್ವನ್ನೀವಿಯೆಂಬಂತೆವೋಲ್ ೩೧

ಶರಣಂಗೆ ಧರಾವಧು ಸಾ
ದರಮಿಕ್ಕುವ ಧವಳವಸನದೊಪ್ಪುವ ಪೊಸ ಸೀ

ವ॥ ಹಾಗೆ ಶೋಭಿಸುತ್ತ (ಹೋಗುವ ಮಾರ್ಗಕ್ಕೆ) ಅಡ್ಡವಾಗಿ ಹರಿಯುವ ದೊಡ್ಡ ನದಿಯ ಸಮೀಪಕ್ಕೆ ವೇಗವಾಗಿ ನಡೆದುಬಂದು, ಚೌಡಯ್ಯನು ನಿಂತು ಗರ್ಜಿಸಿ— ೨೯. 'ಎಲೈ ನದಿಯೇ, ಭಕ್ತರ ಮುಂದೆ ನಿನ್ನ ಗರ್ವವನ್ನು ಬಿಡು ; ಪೂರ್ವದಲ್ಲಿ ನಿನ್ನ ಗಂಡನಾದ ದೊಡ್ಡ ಸಮುದ್ರನನ್ನು ಒಂದೇ ಸಲಕ್ಕೆ ಶಿವಶರಣನಾದ ಅಗಸ್ತ್ಯ ಮಹರ್ಷಿಯು ಕುಡಿಯಲಿಲ್ಲವೇ ? ಅದು ಹಾಗೆಯಿರಲಿ. ನಾವಿಕನು ಹೀಯಾಳಿಸಿದ ಮಾತಿಗೆ ಆ ಶಿವದಾಸನು (ದಾಸಿಮಾರ್ಯನು) ಪರಾಕ್ರಮದಿಂದ ಹಾಯ್ದು ದೊಡ್ಡ ಹೊಳೆಯೆಂಬ ಅದರ ಗರ್ವವನ್ನು ನಾಶಮಾಡಿ, ಆ ಕೂಡಲೇ ಕಾಲುನಡಿಗೆಯಿಂದ ಹೋಗಲಿಲ್ಲವೇ ?' ವ॥ ಅದೂ ಅಲ್ಲದೆ—೩೧–೩೨. 'ಗಜೇಶ ಮಸಣಯ್ಯನೆಂಬ ಮಹಾತ್ಮನು ಪ್ರೀತಿಯಿಂದಲೂ, ಉತ್ಕೃಷ್ಟವಾದ ತನ್ನ ಭಾವದಿಂದಲೂ, (ಸುತ್ತಲೂ ನೀರಿರುವ) ನಡುಗಡ್ಡೆಯಲ್ಲಿ (ದ್ವೀಪದಲ್ಲಿ) ಕುಳಿತು ಪರಮೇಶ್ವರನನ್ನು ಭಜಿಸುತ್ತಿರಲಾಗಿ, ನೀನು ಹೊಸ ನೀರಿನ ಆಧಿಕ್ಯದಿಂದ ಬಂದು (ತುಂಬಿಬಂದು), ಎರಡು ದಿಕ್ಕಿಗೂ ಕತ್ತರಿಸಿದ ಹಾಗೆ ಹೆದರಿ, ಆ ಕಾಲದಲ್ಲಿ ಹಿಂತೆಗೆದೆ, ಈ ದಿನ ನಮಗೆ ನೀನು ದಾರಿಯನ್ನು ಕೊಡು ! ಕೊಡು !!' ಎಂದು ಶೌರ್ಯದಿಂದ ಸಾಮರ್ಥ್ಯವನ್ನು ಪ್ರಕಟಿಸುತ್ತ (ತೀಕ್ಷ್ಣತೆಯನ್ನು ತೋರಿಸುತ್ತ) ಝಳಪಿಸುತ್ತ, ಚಿಮ್ಮುತ್ತ, ಖಡ್ಗವನ್ನು ಮೇಲಕ್ಕೆತ್ತ

ಗುರಿಯೆನಿಸಿ ನಿಮಿರ್ದ ನದಿಯುಂ
ಬರನಿಧಿಯೊಳ್ಪೊಕ್ಕಡಲೆಳಸಿ ನೆಗೆದವೊಲೆಸೆಗುಂ ೩೨

ಪೊಡವಿಯೊಳೆ ಕಡಿಯೆ ಪೊಳೆಯಿ
ರ್ಕಡಿಯಕ್ಕುಮೆಂಬ ಗಾದೆಯುಂ ಮಾಣಿಸಿದಂ
ಕಡುಗಲಿ ಚೌಡಯ್ಯನೆನು
ತ್ತೊಡನೆ ಗಣಪ್ರತತಿಯಲ್ಲಿ ಪೊಗಳ್ದತ್ತಾಗಳ್ ೩೩

ಕುಣಿವ ಕುಕಿಲ್ವ ರಾಗಿಸುವ ತೂಗುವ ಬೀಗುವ ಸುತ್ತಿ ಬರ್ಪ ಸಂ
ದಣಿಪ ನಿರೀಕ್ಷಿಪಲ್ಲಿ ಪರಿದಾಡುವ ಪಾಡುವ ನಲ್ಮೆದೋರ್ಪ ಸಂ
ದಣಿಯುರಮುರ್ವಿ ಕೀರ್ತಿಸುವ ಪೊಂಪುಳಿಯಾಂಪ ಮರಲ್ವ ಭಕ್ತಿಯಿಂ
ಮಣಿವ ಕಡಂಗುವದ್ಭುತ ವಿಳಾಸಮನಾಳ್ದುದು ಭಕ್ತಸಂಕುಳಂ ೩೪

ವ॥ ಅಂತು ಸಮುತ್ಸವಿಪ ಶರಣಗಣಂಬೆರಸು—

ಮುಂದೆ ವೃಷೇಂದ್ರನುಂ ತಪಸಿಯುಂ ನಡೆವುತ್ತಿರೆ ನಂದಿಕೇತನಂ
ಬಾಂದಳದಲ್ಲಿ ಮಿಳ್ಳಿಱಿಯೆ ಮಂಗಳತೂರ್ಯರವಂ ಜಯಸ್ವನಂ

ಲಾಗಿ, (ನದೀದೇವತೆಯು) ಕಂಡು ಭಯಗೊಂಡು ಒಮ್ಮೆಲೇ ಎರಡು ಭಾಗವಾಗಿ, ನೀರಿನ ಕೆಳಗಡೆಯಿರುವ ಮಳಲು ಎಲ್ಲ ಕಡೆಗೂ ತೋರಿ (ಕಾಲು ಹೊಳೆಯಾಗಿ), ಮೇಲೆ ಹಾಯ್ದು ಬರುತ್ತಿರುವ ನೀರೆಲ್ಲ ನಿಂತು, ಅಧಿಕವಾಗಿ ಮೆರೆಯಿತು. ಆ ಹೊಳೆಯು ಆಕಾಶಮಾರ್ಗಕ್ಕೆ ಹಾರಿ, ಆ ಚೌಡಯ್ಯನ ಕೀರ್ತಿಯೆಂಬ ಸ್ತ್ರೀಯ ಆಕಾಶ ವೆಂಬ ಬಟ್ಟೆಯು ಶೋಭಿಸುವ ನೆರಿಗೆಯೋ ಎಂಬ ಹಾಗೆ ಪ್ರಕಾಶಮಾನವಾಗಿತ್ತು. ೩೩. "ಭೂಮಿಯಲ್ಲಿ 'ನದಿಯನ್ನು ಕತ್ತರಿಸಲಾಗಿ ಎರಡು ಭಾಗವಾದೀತೇ ?' ಎಂಬ ಗಾದೆಯನ್ನು ಚೌಡಯ್ಯನು ಸುಳ್ಳುಮಾಡಿದನು" ಎನ್ನುತ್ತ ಗಣಸಮೂಹವು ಆ ಕೂಡಲೆ ಅಲ್ಲಿ (ಚೌಡಯ್ಯನನ್ನು) ಹೊಗಳಿತು. ೩೪. ಕುಣಿದಾಡುವ, ಕೋಗಿಲೆಯ ಹಾಗೆ ಧ್ವನಿಮಾಡುವ, ಪ್ರೀತಿಸುವ, ತೂಗಾಡುವ, ಬೀಗಿ ನಿಲ್ಲುವ, ಸುತ್ತುತ್ತ ಬರುವ, ಗುಂಪುಗೂಡುವ, ದಿಟ್ಟಿಸಿನೋಡುವ, ಪ್ರೀತಿಯನ್ನು ಹೊಂದಿ ಆಡುವ, ಹಾಡುವ, ನಲ್ಮೆಯನ್ನು ತೋರಿಸುವ, ಶೀಘ್ರವಾಗಿ ಉಬ್ಬಿ ಸ್ತೋತ್ರಮಾಡುವ, ರೋಮಾಂಚನ ಗೊಳ್ಳುವ, ಅರಳುವ ಭಕ್ತಿಯಿಂದ ನಮಸ್ಕಾರ ಮಾಡುವ ಉತ್ಸಾಹಗೊಳ್ಳುವ, ಭಕ್ತಜನ ಸಮೂಹವು ಆಶ್ಚರ್ಯಕರ ಲೀಲೆಯನ್ನು ಹೊಂದಿತು. ವ॥ ಹಾಗೆ ಸಂತೋಷಪಡು ತ್ತಿರುವ ಶರಣರೊಡನೆ ಸೇರಿ—೩೫. ಮುಂಭಾಗದಲ್ಲಿ ಗೂಳಿಯೂ (ವೃಷಭೇಂದ್ರನೂ) ಋಷಿಯೂ ನಡೆಯುತ್ತಿದ್ದರು ; ವೃಷಭಧ್ವಜವು ಆಕಾಶದಲ್ಲಿ (ಪಟಧ್ವನಿಯಿಂದ) ಹಾರಾಡುತ್ತಿತ್ತು ; ಮಂಗಳಕರವಾದ ವಾದ್ಯಧ್ವನಿಗಳೂ, ಜಯಕಾರ ಧ್ವನಿಯೂ,

ಕುಂದದೆ ಕೂಡಿ ಘೂರ್ಣಿಸಿ ಮಹೋತ್ಸವಮಾಳ್ದಿರೆ ಭಕ್ತರಾಗಳಾ
ನಂದದೆ ತತ್ತರಂಗಿಣಿಯ ನುಣ್ಮಣಲೊಳ್ನಡೆದಂ ಗಣಾಧಿಪಂ ೩೫

ವ॥ ಅಂತು ಪಿರಿದು ಸಡಗರಂ ಬಿಗೆ ನಡೆತಂದಾರ್ಯನಗರಿಯಂ ಪೊಕ್ಕು ತನ್ಮನೋರಥಮ ನೊದವಿಸಿ ಪರಿಣಯಮಹೋತ್ಸವಮಂ ನೆಗಳ್ಚಿ ಮಗುಳ್ದಾ ಪೊಳೆಯ ಪುಳಿನ ತಳದೊಳ್ಶರಣಗಣ ಸಮೇತಮೆೞ್ತಂದು ಮುನ್ನಿನಂತಿರಾ ನದಿಯಂ ಪರಿಯಲ್ಬಿರವಿಸಿ ಪರಿಯಿಸಿ ವಿತತಾದ್ಭುತಚರಿತ್ರಂ ಚೌಡರಾಜಂ ಕಲ್ಯಾಣಪುರಮಂ ಪುಗುತಪ್ಪಾಗಳ್ —

ಗುಡಿಗಟ್ಟಿ[1] ಪೌರಭಕ್ತ
ಗಣಡಣದಿನಿದಿರ್ಗೊಳೆ ತಪಸ್ವಿವೃಷಭಸಮೇತಂ
ನಡೆತಂದನಮಮ ನೋಳ್ಪವ
ರೊಡನರಿದರಿದೆಂದು ಪೊಗಳುತಿರೆ ಚೌಡಾರ್ಯಂ ೩೬

ವ॥ ಆಗಳೊರ್ವಳಪೂರ್ವ ಲಾವಣ್ಯತಾರುಣ್ಯರೂಪವತಿ ಸುದತಿ ರಾಜವೀಥಿಯೊಳೆಯ್ತ ರುತುಂ ಕಂಡಿದಿರ್ವಂದು ಪದನಳಿನಂ ಪಣೆಸೋಂಕೆ ಮಣಿಯಲೊಡನೆ—

ಕುಂದದಂತೆ ಕೂಡಿ, ಶಬ್ದಾಯಮಾನವಾಗಿತ್ತು ; (ಹೀಗೆ) ಭಕ್ತರು ಅಧಿಕ ಉತ್ಸವವನ್ನು ಹೊಂದಿದವರಾಗಿ ಆ ಚೌಡಯ್ಯನು ಆನಂದದಿಂದ ಆ ನದಿಯ ನುಣ್ಣನೆಯ ಮಳಲಿನಲ್ಲಿ ನಡೆದನು. ವ॥ ಆ ರೀತಿ ಹೆಚ್ಚಾದ ಸಡಗರದಿಂದ ಕೂಡಿ, ನಡೆದುಬಂದು ಆ ಆರ್ಯ ನಿರುವ (ಲಗ್ನಕ್ಕೆ ಬರಬೇಕೆಂದು ಪ್ರಾರ್ಥಿಸಿಕೊಂಡಿದ್ದ ಆರ್ಯನು ಇರುವ) ನಗರವನ್ನು ಹೊಕ್ಕು, ಅವನ ಇಷ್ಟಾರ್ಥವನ್ನು ನೆರವೇರಿಸಿ, ವಿವಾಹಮಹೋತ್ಸವವನ್ನು ಯಥಾ ಸಾಂಗವಾಗಿ ನೆರವೇರಿಸಿ, ಪುನಃ ಆ ಹೊಳೆಯ ಮಳಲಿನ ಸ್ಥಾನದಲ್ಲಿ ಶರಣರುಗಳು ಸಮೇತವಾಗಿ ಹೊರಟುಬಂದು (ನದಿಯನ್ನು ದಾಟಿದವರಾಗಿ), ಮೊದಲಿನ ಹಾಗೆಯೇ ಆ ನದಿಯು ಹರಿಯಲು ಅಪ್ಪಣೆ ಮಾಡಿ, ಅದನ್ನು ಹರಿಯಿಸಿ (ಪ್ರವಾಹವುಂಟಾಗು ವಂತೆ ಮಾಡಿ) ಸುತ್ತೆಲ್ಲ ಹಬ್ಬಿದ ಅದ್ಭುತ ಚರಿತ್ರನಾದ ಚೌಡಯ್ಯ ರಾಜನು ಕಲ್ಯಾಣ ಪಟ್ಟಣವನ್ನು ಪ್ರವೇಶಿಸುವ ಆ ಸಮಯದಲ್ಲಿ—೩೬. ಪಟ್ಟಣದಲ್ಲಿರುವ ಭಕ್ತರು ತೋರಣಗಳನ್ನು ಕಟ್ಟಿ, ಸಾಮೂಹಿಕವಾಗಿ ಬಂದು ಇದಿರುಗೊಳ್ಳಲು, ತಪಸ್ವಿ ಮತ್ತು ಗೂಳಿಗಳು ಸಮೇತವಾಗಿ ಚೌಡಯ್ಯನು, ನೋಡಿದವರು ಅಸಾಧ್ಯ ! ಅಸಾಧ್ಯ ! ! ಎಂದು ಹೊಗಳುತ್ತಿದ್ದಂತೆ ನಡೆದುಬಂದನು ಅಮಮ ! ! ! ವ॥ ಆ ಸಮಯದಲ್ಲಿ ಒಬ್ಬಳು ಅಪೂರ್ವ ಲಾವಣ್ಯದಿಂದಲೂ, ತಾರುಣ್ಯದಿಂದಲೂ ಕೂಡಿದ ರೂಪವತಿಯಾದ ಸ್ತ್ರೀಯು, ರಾಜಬೀದಿಯಲ್ಲಿ ಬರುತ್ತ ಈ ಚೌಡಯ್ಯನನ್ನು ಕಂಡು ಎದುರಾಗಿ ಬಂದು,

1 + ಸಿ(ಜ)

ಯುವತಿ ನಿನಗಕ್ಕೆ ದೀರ್ಘಾ
ಯುಃವೆನುತ್ತುಂ ಪರಸಿ ಪರಮಸಂಭ್ರಮದಿಂದಂ
ವಿವಿಧೋತ್ಸವಮಂ ಶಿವಗಣ
ನಿವಹದೊಳೊದವಿಸುತೆ ನಿಜಗೃಹಕ್ಕೆಯ್ತಂದಂ ೩೭

ವ॥ ಅಂತೆಯ್ತಂದು ಚೌಡರಾಜನೆಂದಿನಂತೆ ಶಿವಾನುಭವಗೋಷ್ಠಿಯೊಳ್ಸುಖಮಿರ್ಪನ್ನೆಗಮಾ ಪರಕೆಗೊಂಡ ತರುಣಿ ಮರಣಮನೆಯ್ದಲೊಡನೆ ಪಿರಿದು ಶೋಕಂಬಡೆದವಳ ತಂದೆತಾಯ್ಗಳ್ಮಱುದಿನಂ ತತ್ಕಳೇವರಮಂ ತಂದು ಶರಣನಿದಿರೊಳಿರಿಸಿ ಪದಕಮಳದೊಳ್ಕೆಡೆದು ಕಣ್ಬನಿ ಕಾಳ್ಪುರಂ ಮಸಗೆ ಹಾಹಾರವಂ ಪೊಣ್ಮೆ ಮೊಱೆಯಿಟ್ಟು ಮಱುಗಿ—

ಎಲೆ ದೇವ ನಿನ್ನೆ ನಿಮ್ಮಯ
ನಳಿನಾಂಘ್ರಿಗೆ ಮಣಿದು ಪರಕೆವಡೆದೆಯ್ತಂದೀ
ಲಲನೆಯಿರುಳಳಿದಳೀಕೆಗೆ
ನಲವಿಂದಸುವಿತ್ತು ಪೊರೆ ದಯಾಳುಗಳರಸಾ ೩೮

ಅನಿಮಿತ್ತಬಂಧು ವಿನಯಾಂ
ಬುನಿಧಾನ ಮಹತ್ವಮಹಿತ ಮತ್ತನುಜೆಗೆ ಜೀ

ಪಾದಕಮಲಕ್ಕೆ ಹಣೆ ಸೋಂಕಿಸಿ ನಮಸ್ಕರಿಸಲು ಕೂಡಲೇ—೩೭. 'ಯುವತಿಯೇ, ನಿನಗೆ ದೀರ್ಘಾಯುವಾಗಲಿ' ಎಂದು ಹರಸಿ, ಪರಮ ಸಂಭ್ರಮಗೊಂಡು, ವಿವಿಧವಾದ ಉತ್ಸವಗಳನ್ನು ಶಿವಶರಣ ಸಮೂಹಕ್ಕೆ ಉಂಟುಮಾಡುತ್ತ ತನ್ನ ಮನೆಗೆ ಬಂದನು. ವ॥ ಹಾಗೆ ತನ್ನ ಮನೆಗೆ ಬಂದು ಚೌಡಯ್ಯನು ಎಂದಿನ ಹಾಗೆ, ಶಿವಾನುಭವಗೋಷ್ಠಿಯಲ್ಲಿ ಸುಖವಾಗಿ ಇರುತ್ತಿರುವಷ್ಟರಲ್ಲಿ ಆ ಹರಕೆಯನ್ನು ಪಡೆದ ಸುಂದರ ತರುಣಿಯು ಸತ್ತು ಹೋಗಲಾಗಿ, ಹೆಚ್ಚಾಗಿ ಶೋಕಾರ್ತರಾದ ಅವಳ ತಂದೆತಾಯಿಗಳು, ಮರುದಿನ ಸತ್ತವಳ ಆ ದೇಹವನ್ನು ತಂದು, ಚೌಡಯ್ಯ ಶರಣನಿದಿರಿನಲ್ಲಿ ಇರಿಸಿ, ಅವನ ಪಾದ ಕಮಲಗಳ ಮೇಲೆ ಬಿದ್ದು, ಕಣ್ಣೀರು ಪ್ರವಾಹವಾಗಿ ಹರಿಯುತ್ತಿರಲು, ಹಾಹಾಕಾರವು ಹೊರಹೊಮ್ಮುತ್ತಿರುವಂತೆ ಆರ್ತನಾದ ಮಾಡಿ, ಮರುಗುತ್ತ ೩೮. ಎಲೆ ದೇವನೇ, ನಿನ್ನೆಯ ದಿನ ನಿಮ್ಮ ಕಮಲದಂತಹ ಪಾದಗಳಿಗೆ ನಮಸ್ಕರಿಸಿ, ಹರಕೆಯನ್ನು ಪಡೆದು ಬಂದ ಈ ಸುಂದರಿಯು ರಾತ್ರಿ ಸತ್ತಳು. ಈಕೆಗೆ ಪ್ರೀತಿಯಿಂದ ಪ್ರಾಣ ದಾನಮಾಡಿ, ಹೇ ದಯಾಳುಗಳ ಅರಸನೇ, ರಕ್ಷಿಸು. ೩೯–೪೧. ಅನಿಮಿತ್ತ ಬಂಧುವೇ, ಸೌಮ್ಯತೆಯ ಸಮುದ್ರ ರೂಪನೇ, ಮಹಿಮೆಯಿಂದ ಪೂಜ್ಯನಾದವನೇ, ನಮ್ಮ ಈ ಮಗಳಿಗೆ ಪ್ರಾಣವನ್ನು ಕೊಟ್ಟು, ನಮ್ಮ ಮನಸ್ಸಿನ ದುಃಖವನ್ನು, ಹೋಗಲಾಡಿಸು,'

ವನಮಂ ನೀಮಿತ್ತೆಮ್ಮಯ
ಮನದಳಲಂ ಪಱಿವುದೆಂದು ಮುಗುಳ್ದೆಱಗಲೊಡಂ ೩೯

ಪರಮ ಕೃಪಾನಿಧಿಯವರಂ
ಕರುಣಾಲೋಕನದೆ ನೋಡಿ ಸಂತಯಿಡುತ್ತುಂ
ಕರತಳದೆ ಜಡಿದು ತನ್ನಯ
ಕರವಾಳಂ ಮುಟ್ಟಿಸುತ್ತೆ ಶಿಬಿಕೆಯನಧಟಿಂ ೪೦

ಪೆಸರ್ವಿಡಿದು ಕರೆವುತ್ತೇಳೇ
ಳ್ಬಿಸಜಾಕ್ಷಿಯೆನುತ್ತೆ ಕರೆಯಲೊಡನಾಕ್ಷಣದೊ
ಳ್ಪೊಸ ನುಲಿಗಳ್ಛಟಿಛಟಿ ರವ
ಮೊಸೆಯೆ ಕರಂ ಸಿಡಿಯೆ ಸಿಬಿಕೆಯಿಂದವಳೆಳ್ದಳ್ ೪೧

ನಿದ್ರೆ ತಿಳಿದೇಳ್ವವೋಲು
ನ್ನಿದ್ರೇಕ್ಷಣೆಯೆಳ್ದು ಚೌಡದೇವನ ಪದಭಾ
ಸ್ವದ್ರಾಜೀವಕೆ ಮಣಿಯ ಸ
ಮುದ್ರುಚಿಯಿಂ ನಲಿದರಾಗಳಾಕೆಯ ಪಿತರರ್ ೪೨

ವ|| ಅಂತು ನಲವೇಱಿ ನಮಿಸಿ ಕರಾಂಜಲಿಯಂ ನೊಸಲೊಳಮರ್ಚಿ ನಿಂದು—

ಪರಸಿದರೇಂ ಪ್ರಾಣಮನೀ
ವರೆ ಧರೆಯೊಳಗೆಂಬ ನುಡಿಯನಿಲ್ಲೆನಿಸಿ ಮೊದ
ಲ್ಪರಸಿದೆ ಮಡಿದವಳಸುವಂ
ಬರಿಸಿದೆ ಗಡ ದೇವ ನಿನ್ನ ಪೋಲ್ವರುಮೊಳರೇ ೪೩

ಎಂದು ಪುನಃ ನಮಸ್ಕರಿಸಿದ ಕೂಡಲೇ, ಪರಮ ಕೃಪಾನಿಧಿಯಾದ ಚೌಡಯ್ಯನು ಅವರನ್ನು ಕರುಣಾ ದೃಷ್ಟಿಯಿಂದ ನೋಡಿ, ಸಮಾಧಾನ ಪಡಿಸಿ, ಕೈಯಲ್ಲಿ ಖಡ್ಗವನ್ನು ಹಿಡಿದು ಝಳಪಿಸಿ, (ಅವಳನ್ನು ಎತ್ತಿಕೊಂಡು ಬಂದಿದ್ದ) ಚಟಕ್ಕೆ (ವಿಮಾನಕ್ಕೆ) ಪರಾಕ್ರಮದಿಂದ ಮುಟ್ಟಿಸುತ್ತ ಅವಳ ಹೆಸರು ಹಿಡಿದು ಕರೆಯುತ್ತ, 'ಹೇ ಕಮಲ ನೇತ್ರೆಯೇ, ಏಳು' ಎಂದು ಕರೆದ ಕೂಡಲೇ ಆ ಕ್ಷಣದಲ್ಲಿಯೇ (ಅವಳನ್ನು ಬಿಗಿದ) ಹೊಸ ಹಗ್ಗಗಳು ಛಿಟಿ ಛಿಟಿ ಧ್ವನಿಯಿಂದ ಸಿಡಿಯಲಾಗಿ, ವಿಮಾನದಿಂದ ಅವಳು ಎದ್ದಳು. ೪೨. ನಿದ್ರೆಯಿಂದ ಎಚ್ಚೆತ್ತವಳಂತೆ ಕಣ್ಣನ್ನು ಬಿಟ್ಟು, ಆ ಸ್ತ್ರೀಯು ಎಷ್ಟು ಚೌಡದೇವನ ಪ್ರಕಾಶಮಾನವಾದ ಪಾದ ಕಮಲಕ್ಕೆ, ನಮಸ್ಕರಿಸಲು, ಆಕೆಯ ತಾಯ್ತಂದೆಗಳು ಹೆಚ್ಚಾದ ಪ್ರೀತಿಯಿಂದ ನಲಿದಾಡಿದರು. ವ|| ಈ ರೀತಿಯಲ್ಲಿ ಸಂತೋಷಗೊಂಡು ನಮಸ್ಕರಿಸಿ, ಹಣೆಯ ಮೇಲೆ ಕೈಯತ್ತಿ ನಮಸ್ಕರಿಸಿ, ನಿಂತು— ೪೩, 'ಆಶೀರ್ವಾದವನ್ನು ಮಾಡಿದವರು ಪ್ರಾಣವನ್ನು ಕೊಡುವರೇ' ಎಂಬ ಲೋಕೋಕ್ತಿಯನ್ನು ಇಲ್ಲವೆನಿಸಿ, 'ಮೊದಲು ಆಶೀರ್ವದಿಸಿದೆ; ಈಗ ಸತ್ತವಳಾದ ಇವಳ

ದೇವ ಭವದಕ್ಷಿರುಚಿಸಂ
ಜೀವನದಿಂ ಪಡೆದೆ ಮಡಿದ ಮಗಳಸುವನಿಳಾ
ಪಾವನ ಕರುಣಾವರ್ಷದೆ
ತೀವಿದ ಮನ್ಮನದ ಬೇಗೆಯುಂ ಮಳ್ಗಿಸಿದೈ ೪೪

ಪ್ರತ್ಯುಪಕೃತಿಯಿದಕಿಲ್ಲಿದು
ಸತ್ಯಂ ಪ್ರಾಣೋಪಕಾರಕದಱಿಂ ಭುವನ
ಸ್ತುತ್ಯ ಸಲೆ ನಿಮ್ಮ ಭೃತ್ಯರ
ಭೃತ್ಯತೆಯಿಂ ಬಾಳ್ವೆವೆಮ್ಮನುದ್ಧರಿಸೊಲವಿಂ ೪೫

ವ॥ ಎಂದು ಸಾಷ್ಟಾಂಗವೆಱಗಿರ್ದ ದಂಪತಿಯುಮಾ [1]ಕನ್ಯಕೆ[1]ಯುಂ ಕಾರುಣ್ಯದಿಂ ನೋಡಿ ಲಿಂಗಾಂಗಸಂಯುಕ್ತರಂ ಮಾಡಿ ಮಗುಳ್ದು ಶತಾಯುರ್ಜೀವಿತ್ವಮಂ ಕರುಣಿಸಿ ಕಳುಪಿ ಮಹಾನುಭಾವನೊಪ್ಪಿರ್ದನಾಗಳ್ —

ಅಳಿದ ತಪೋಧನಂಗೆ ವೃಷಭಂಗೆ ವರಾಂಗಿಗೆ ಜೀವಮಿತ್ತು ತಾ
ನುಳಿಪಿದನೀ ಧರಿತ್ರಿಯೊಳೆ ಚೌಡಮಹಾವಿಭು ಚಿತ್ರಮೆಂದು ನಿ
ಶ್ಚಳಮತಿ ಸೂರಿಗಳ್ಪದೆದು ಬಣ್ಣಿಪ ಕೀರ್ತಿಯ ವಾರ್ತೆ ಲೋಕದೊ
ಳ್ಬಳೆದಿರೆ ಕೇಳ್ದು ಸೂಯೆಗೊಳುತನ್ಯಮತಸ್ಥಿತರೊಂದುಗೂಡುತುಂ ೪೬

ಪ್ರಾಣವನ್ನು ಬರಿಸಿದೆ! ದೇವ ನಿನ್ನನ್ನು ಹೋಲುವವರು ಯಾರಾದರೂ ಇದ್ದಾರೆಯೇ? ೪೪. ಇಳೆಯನ್ನು ಪಾವನಗೊಳಿಸುವ ದೇವನೇ, ನಿನ್ನ ನೇತ್ರ ಕಾಂತಿಯೆಂಬ ಸಂಜೀವನದಿಂದ, ಮಗಳ ಪ್ರಾಣವನ್ನು ಪಡೆದೆನು; ತುಂಬಿದ ನನ್ನ ಮನಸ್ಸಿನ ಸಂತಾಪವನ್ನು ಕರುಣೆಯೆಂಬ ಮಳೆಯಿಂದ ನಾಶಮಾಡಿದೆ. ೪೫. ಈ ಪ್ರಾಣವನ್ನು ರಕ್ಷಿಸಿದ ಉಪಕಾರಕ್ಕೆ ಪ್ರತಿಯಾಗಿ ಮಾಡುವ ಉಪಕಾರವೇ ಇಲ್ಲ; ಇದು ಸತ್ಯ. ಆದ್ದರಿಂದ ಲೋಕದಿಂದ ಸ್ತೋತ್ರ ಮಾಡಿಸಿಕೊಳ್ಳುವುದಕ್ಕೆ ಯೋಗ್ಯನಾದ ಸ್ವಾಮಿಯೇ, ನಿಮ್ಮ ಈ ಸೇವಕರಾದ ನಾವು ನಿಮ್ಮ ಸೇವೆಯಲ್ಲಿ ಬಾಳುವೆವು. ನಮ್ಮನ್ನು ಪ್ರೀತಿಯಿಂದ ರಕ್ಷಿಸು. ವ॥ ಹೀಗೆಂದು ಸಾಷ್ಟಾಂಗ ಪೂರ್ವಕವಾಗಿ ನಮಸ್ಕರಿಸಿದ್ದ ಗಂಡ ಹೆಂಡಿರನ್ನು ಮತ್ತು ಆ ಕನ್ನಿಕೆಯನ್ನು ಮಹಾನುಭಾವನಾದ ಚೌಡಿದೇವನು ನೋಡಿ, ಅವರನ್ನು ಲಿಂಗಾಂಗ ಸಂಯುಕ್ತರನ್ನಾಗಿ ಮಾಡಿ, (ವೀರಶೈವೋಪದೀಕ್ಷೆಯನ್ನು ಮಾಡಿ), ನೂರು ವರ್ಷಗಳವರೆಗೆ ಬಾಳುವುದನ್ನು ದಯಪಾಲಿಸಿ ಕಳಿಸಿ ಒಪ್ಪಿದ್ದನು. ೪೬–೪೭. ಸತ್ತ ತಪೋಧನನಿಗೆ, ಗೂಳಿಗೆ, ಶ್ರೇಷ್ಠ ಅಂಗವುಳ್ಳ ತರುಣಿಗೆ ಧರಿತ್ರಿಯಲ್ಲಿ ಚಂಚಲ ಶೂನ್ಯ ಮನಸ್ಸಿನ ಆ ಚೌಡಯ್ಯನು ಜೀವದಾನ ಮಾಡಿ ಉಳಿಸಿದ್ದು ಆಶ್ಚರ್ಯಕರವಾದದ್ದು. ಎಂದು ಜ್ಞಾನಿಗಳು ವರ್ಣಿಸುವ ಯಶೋಮಯವಾದ ಸುದ್ದಿಯು ಲೋಕದಲ್ಲಿ ಬೆಳೆದು ಹರಡಿರಲು, ಪರ ಮತಸ್ಥರಾದ ಮೂಢರು ಕೇಳಿ, ಹೊಟ್ಟೆಕಿಚ್ಚಿನಿಂದ ಒಂದುಗೂಡಿ, 'ಗೂಳಿಗೆ, ತಪಸ್ವಿಗೆ, ಕನ್ಯೆಗೆ ಪ್ರಾಣವನ್ನು ಕೊಟ್ಟು ತನ್ನ ಗರ್ವವನ್ನು ಭೂಮಿಯಲ್ಲಿ

1 ಕನ್ಯೆ (ದ)

ಪ್ರಾಣಮನಿತ್ತು ಗೂಳಿಗೆ ತಪ್ಪಸ್ವಿಗೆ ಕನ್ಯೆಗೆ ತನ್ನ ಬಿಂಕಮಂ
ಕ್ಷೋಣಿಯೊಳೆಯ್ದೆ ಬೀಱಿದಪನನ್ಯಮತಂಗಳ ಲೆಕ್ಕಿಸಂ ಪರಿ
ತ್ರಾಣಪರಾಯಣಂ ಧರೆಯೊಳೊರ್ವನೆ ತಾಂ ಗಡ ತನ್ನ ಪೆರ್ಮೆಯಂ
ಮಾಣಿಪೆವೆಂದೆನುತ್ತೆ ಕಪಟಸ್ಥಿತಿಯಂ ಬಗೆಗೊಂಡು ದುರ್ಬುಧರ್ ೪೭

ತೃಣಮಂ ತೀವಿ ತಪಸ್ವಿಯಾಕೃತಿಯನಾಗಳ್ಗೋಣಿಯಿಂ ಮಾಡುತಂ
ಪಣೆಯೊಳ್ಪೂಸಿ ವಿಭೂತಿಯಂ ತೊಡಿಸಿ ರುದ್ರಾಕ್ಷಾಳಿಯಂ ಶೈವಲ
ಕ್ಷಣಮಂ ಸಾರ್ಚಿ ಜಟಾಳಿಯಂ ರಚಿಸಿ ಕೌಪೀನಾನ್ವಿತಂಗೆಯ್ದು ನಿ
ರ್ಗುಣರಂದಂತದನೊಂದು ಪಾಳ್ಗುಡಿಯೊಳೋರಂತಿಟ್ಟು ಕೌಟಿಲ್ಯದಿಂ ೪೮

ನಗುತಂ ನಾನಾಜನಂ ತೀವಿದ ವಿಪಣಿಗಳೊಳ್ಚಲ್ಲದಿಂ ಶೈವಮಾರ್ಗಾ
ನುಗನೊರ್ವಂ ಬಿಳ್ದ[1]ದೇವಾಲಯದೊಳೆ ಮಡಿದಂ ತಾಪಸಂ ಮಾಣದಾ ದೇ
ಸಿಗನಂಗಂ ಬಾತು ನಾಱುತ್ತಕಟ ಕೆಡೆದು ತಾನಿರ್ಪುದಾರುಂ ಕರಂ ಸಾ
ರ್ದಿಗೆ ಸಾರರ್ನೋಡರೆತ್ತರ್ಪುರದೊಳಭವಭಕ್ತರ್ಕಳಾಶ್ಚರ್ಯಮಲ್ತೇ ೪೯

ತಮಗೇಂ ಬಾರದೆ ನಾಡೆ ಸಾಳೆ ಮರಣಂ ಸಾವೆಲ್ಲ ಜೀವರ್ಗೆ ತಾಂ
ಸಮಮೆಂಬೊಳ್ನುಡಿ ಸತ್ಯಮಲ್ತೆ ಶಿವಭಕ್ತಂ ಶೈವಮುದ್ರಾಂಕ ಸಂ
ಯಮಿ ದೀನಂ ಮೃತನಾಗೆ ನೋಡರವನುದ್ಯದ್ವಿತ್ತಸಂಪನ್ನನಾ
ಗೆ ಮಹೋತ್ಸಾಹದಿನರ್ಥದಾಶೆಗಳಿದಾಗಳ್ಬಾರದೇಂ ಪೋಪರೇ ೫೦

ತಪ್ಪದೆ ವಿಸ್ತರಿಸುವನು. ಪರ ಮತಗಳನ್ನು ಲೆಕ್ಕಿಸುವುದಿಲ್ಲ. ಧರೆಯಲ್ಲಿ ತಾನೋರ್ವನೇ ಅನ್ಯರ ರಕ್ಷಣೆಯಲ್ಲಿ ಆಸಕ್ತನಾದವನಲ್ಲವೇ ? ಅವನ ಈ ಹಿರಿಮೆಯನ್ನು ನಿಲ್ಲಿಸುತ್ತೇವೆ ಎಂದೆನ್ನುತ್ತ ಕಪಟ ಸ್ಥಿತಿಯನ್ನು ಯೋಚಿಸಿಕೊಂಡವರಾಗಿ ೪೮–೪೯. ಆಗ ಆ ನಿರ್ಗುಣಿಗರು ಗೋಣಿಯ ಚೀಲದಿಂದ ತಪಸ್ವಿಯ ಆಕೃತಿಯನ್ನು ಮಾಡುತ್ತ ಹುಲ್ಲನ್ನು ತುಂಬಿ ಹಣೆಯಲ್ಲಿ ವಿಭೂತಿಯನ್ನು ಹಚ್ಚಿ, ರುದ್ರಾಕ್ಷಿಗಳ ಸಮೂಹವನ್ನು ತೊಡಿಸಿ, ವೀರಶೈವ ಲಕ್ಷಣವನ್ನುಂಟು ಮಾಡಿ, ಜಟೆಗಳ ಸಮೂಹವನ್ನು, ರಚಿಸಿ, ಕೌಪೀನ ಧಾರಿಯನ್ನಾಗಿ ಮಾಡಿ, ಆಗ ಅದನ್ನು ಒಂದು ಹಾಳು ಗುಡಿಯಲ್ಲಿ ಕ್ರಮವಾಗಿ ಕಪಟದಿಂದ ಇಟ್ಟು ನಗುತ್ತ ನಾನಾ ಜನರುಗಳಿಂದ ತುಂಬಿದ ಅಂಗಡಿ ಮುಗ್ಗಟ್ಟುಗಳಲ್ಲಿ ವಿಲಾಸದಿಂದ 'ಶಿವ ಮಾರ್ಗವನ್ನು ಅನುಸರಿಸಿದ ಓರ್ವ ತಪಸ್ವಿಯು ದೇವಾಲಯದಲ್ಲಿ ಬಿದ್ದು ಸತ್ತಿದ್ದಾನೆ. ಆ ಗುರು ಶ್ರೇಷ್ಠನ ಅಂಗವು ತಪ್ಪದೆ ಬಾತುಕೊಂಡು ವಿಶೇಷವಾಗಿ ನಾರುತ್ತ ಬಿದ್ದಿದೆ. ಅಯ್ಯೋ ! ಈ ಪಟ್ಟಣದಲ್ಲಿ ಶಿವಭಕ್ತರಾರೂ ಸಮೀಪಕ್ಕೆ ಹೋಗಿಲ್ಲ ; ನೋಡಿಲ್ಲ ; ಆ ಹೆಣವನ್ನು ಎತ್ತಿಲ್ಲ. (ಇದು) ಆಶ್ಚರ್ಯವಲ್ಲವೇ ? ೫೦. 'ನಾಳೆ ತಮಗೆ ನಿಜವಾಗಿ ಮರಣ ಬರುವುದಿಲ್ಲವೆ ? ಸಾವೆಂಬುದು ಎಲ್ಲ ಜೀವರಿಗೂ ಸಮಾನವಾದದ್ದು. ಎಂಬ ಸೊಳ್ನುಡಿ ನಿಜವಲ್ಲವೆ ? ಶಿವಭಕ್ತನೂ

1 ಳ್ದು (ಜ, ಚ, ದ)

ಬಡತಪಸಿ ಮಡಿದನಕ್ಕಟ
ನಡೆನೋಳ್ಪವರಾರುಮಿಲ್ಲಮಾತನ ಪೆಣನಂ
ಮೃಡಭಕ್ತರೆತ್ತಲೊಲ್ಲ
ರ್ಪೊಡವಿಯೊಳಿದು ಭಕ್ತನೀತಿಯೇ ಬಗೆವಾಗಳ್ ೫೧

ಮಡಿದ ತಪಸ್ವಿಗೆ ಮುನ್ನಂ
ಪೊಡವಿಯೊಳಸುವಿತ್ತನೀತನಳಿದಿರ್ಪುದನಾ
ಕಡುಚಾಗಿ ಚೌಡಯಂ ಕಂ
ಡೊಡೆ ಹರಣಮನೀವನಱಿಯದಿರ್ದಪನಲ್ತೇ ೫೨

ವ॥ ಆತಂಗಮಾದೊಡಮೀ ಕುಣಪಮಂ ತೋಱಿದಪೆವೆಂದೊಂದು ವಿಮಾನಮಂ ರಚಿಸುತ್ತದಱೊಳಿಟ್ಟು ಬಂಧಿಸಿ ಬಡತಪಸಿಗಳುಮಂ ಗೊರವರುಮಂ ಕೆಲಂಬರಂ ನೆರಪುತವರ್ಗಳಿನಾ ಮಾಡಮಂ ಪೊಱಿಸಿಕೊಂಡು ಚೌಡದೇವನ ಗೃಹದ ಮುಂದಣ ಬೀದಿಯೊಳಾ ಧೂರ್ತಧುರಂಧರರ್ಪಲವಂದದಿಂ ಪರಿಹಾಸೋಕ್ತಿಗಳನಾಡುತ್ತುಂಬರುತ್ತುಮಿರೆ ಚೌಡದೇವನದಂ ಕಂಡು ಕೃತಕಶಬ್ದಮೆಂದಱಿದವರ ದುಶ್ಚೇಷ್ಟೆಯನಭೀಕ್ಷಿಸಿ ಮುಗುಳ್ನಗೆ ನಕ್ಕು—

ಬಡವನೂ, ಶಿವ ಚಿಹ್ನಾಂಕಿತನೂ ಆದ ಯೋಗಿಯು ಸತ್ತರೆ ನೋಡುವುದೇ ಇಲ್ಲ. ಅವನು ಉತ್ಕೃಷ್ಟವಾದ ಧನಸಂಪತ್ತುಳ್ಳವನಾಗಿದ್ದರೆ, ಸತ್ತ ಕೂಡಲೆ ಮಹೋತ್ಸಾಹದಿಂದ ದುಡ್ಡಿನ ಆಸೆಯಿಂದ ಬಾರದೆ ಇರುತ್ತಿದ್ದರೇ ?' ೫೧, ಬಡ ತಪಸ್ವಿಯು ಸತ್ತನು. ಚೆನ್ನಾಗಿ ಅವನನ್ನು ನೋಡುವವರು ಯಾರೂ ಇಲ್ಲ. ಅಯ್ಯೋ ! ಆತನ ಹೆಣವನ್ನು ಮೃಡಭಕ್ತರು ಎತ್ತುವುದಕ್ಕೆ ಬಲ್ಲರು, ಯೋಚನೆ ಮಾಡಿ ನೋಡಿದರೆ ಭೂಮಿಯಲ್ಲಿ ಇದು ಭಕ್ತರ ನೀತಿಗೆ ಯೋಗ್ಯವೇ ? ೫೨. ಈ ಪೂರ್ವದಲ್ಲಿ ಸತ್ತ ತಪಸ್ವಿಗೆ ಲೋಕದಲ್ಲಿ ಅತಿ ದಾನಶಾಲಿಯೆನಿಸಿದ ಚೌಡಯ್ಯನು ಪ್ರಾಣವಿತ್ತನು. ಈ ಋಷಿಯು ಸತ್ತಿರುವುದನ್ನು ಕಂಡರೆ ಪ್ರಾಣವನ್ನು ಕೊಡದೆ ಇರುತ್ತಿದ್ದನೇ ? ವ॥ ಆ ಚೌಡಯ್ಯನಿಗಾದರೂ ಈ ಹೆಣವನ್ನು ತೋರಿಸುವೆವು, ಎಂದು ಒಂದು ವಿಮಾನವನ್ನು ಸಿದ್ಧ ಪಡಿಸಿ, ಅದರಲ್ಲಿ ಆ ಹೆಣವನ್ನಿಟ್ಟು ಕಟ್ಟಿ, (ಉಳಿದ) ಬಡ ತಪಸ್ವಿಗಳನ್ನೂ ಗೊರವರೇ ಮೊದಲಾದ ಕೆಲವರನ್ನೂ ಗುಂಪು ಗೂಡಿಸಿಕೊಂಡು, ಅವರುಗಳಿಂದ ಆ ಚಟ್ಟವನ್ನು ಹೊರಿಸಿಕೊಂಡು ಚೌಡಯ್ಯನ ಮನೆಯ ಮುಂದೆ ಇರುವ ಬೀದಿಯಲ್ಲಿ ಆ ಧೂರ್ತತನದಲ್ಲಿ ಸಮರ್ಥರಾದವರು ನಾನಾ ರೀತಿಯ ಪರಿಹಾಸದ ಮಾತುಗಳನ್ನಾಡುತ್ತ ಬರುತ್ತಿರಲು, ಚೌಡಯ್ಯನು ಅದನ್ನು ಕಂಡು, ಕೃತ್ರಿಮವಾದ ಹೆಣವೆಂದರಿದು ಅವರ

ಘನವುಹಿಮಾಂಬುಧಿ ದೂಷಕ
ಜನವನಧರಚಂಡಮಾರುತಂ ಚೌಡಾರ್ಯಂ
ತನು ಪೊಂಪುಳಿವೋಗುತ್ತಿರೆ
ಬಿನದದ ನಡೆನೋಡಿ ತನ್ನೊಳಂದಿಂತೆಂದಂ ೫೩

ವನಜಭವಾಂಡಭಾಂಡಚಯಮಂ ಪಡೆಯಲ್ಕೆಡಪಲ್ಸಮರ್ಥರೆಂ
ದೆನಿಪ ಮಹೇಶಭಕ್ತವರರ್ಗೀ ಕಪಟಾಕೃತಿಗಂಗಮಿತ್ತು ಜೀ
ವನಮನಮರ್ಚುವಂದಮಿದು ಲಕ್ಷ್ಯಮೆ ಮಾಣದೆ ಮಾಳ್ಪೆನಿಂತುಟೆಂ
ದನವಧಿಶೌರ್ಯನುಣ್ಮಿ ನೆನೆದಾದ್ಯಗಣಾಂಘ್ರಿಸರೋಜರಾಜಿಯಂ ೫೪

ಕರತಳಖಡ್ಗಮಂ ಜಡಿದು ಚಿಮ್ಮುತೆ ತಾಪಸಜೀವನೋದಯ
ಕ್ಕರದಿದು ಕಾರಮಿಂಚೆನಿಸೆ ಲಂಘಿಸಿ ಮಾನದ ಮುಂದೆ ಪೌರರ
ಚ್ಚರಿವಡೆ ನಿಂದು ಕೃತ್ರಿಮ ತಪಸ್ವಿಯ ಕೈವಿಡಿದೆತ್ತುತೇಳ್ಗುಣಾ
ಕರ ಜವದಿಂದಮೆಂದುಸುರೆ ಚೌಡಮಹಾಪ್ರಭು ತತ್ ಕ್ಷಣಾರ್ಧದೊಳ್ ೫೫

ತನುಭಾವಂ ತಳ್ತು ಜೀವಂಬಡೆದು ಮಹಿಗೆ ಧುಮ್ಮಿಕ್ಕಿ ಮೆಯ್ಯಿಕ್ಕಿ ಚೌಡಾ
ರ್ಯನ ಪಾದಾಂಭೋರುಹಕ್ಕಾ ಕಪಟತಪಸಿ ದೇವೇಶ ನಿಮ್ಮ ಕೃಪಾಲೋ
ಕನದಿಂದಾಂ ಪುಟ್ಟಿದೆಂ ಕೇಳೆನಗೆ ಪಿತನುಮಾಚಾರ್ಯನುಂ ಲಿಂಗಮುಂ ನೀ
ನೆ ನಿತಾಂತಂ ಸತ್ಯಮೆನ್ನಂ ಪೊರೆವುದೆನುತೆ ಕೊಂಡಾಡಿದಂ ಭಕ್ತಿಯಿಂದಂ ೫೬

ದುಶ್ಚೇಷ್ಟೆಗಳನ್ನೂ ಕಂಡು, ಮುಗುಳ್ನಗೆ ನಕ್ಕು ೫೩. ಉತ್ಕೃಷ್ಟವಾದ ಮಹತ್ವಕ್ಕೆ ಸಮುದ್ರ ಪ್ರಾಯನೂ, ದೂಷಣೆ ಮಾಡತಕ್ಕ ಜನರುಗಳೆಂಬ ಮೇಘಕ್ಕೆ ಚಂಡಮಾರುತ ಪ್ರಾಯನೂ, ಆದ ಚೌಡಯ್ಯನು (ತನ್ನ) ಶರೀರವು ರೋಮಾಂಚನಗೊಳ್ಳುತ್ತಿರಲು ವಿನೋದದಿಂದ ಆಗ (ಆ ಹೆಣವನ್ನು) ನೋಡಿ; ತನ್ನಲ್ಲಿಯೇ ಇಂತೆಂದನು. ೫೪. ಪರಮೇಶ್ವರನ ಭಕ್ತರುಗಳು, ಬ್ರಹ್ಮಾಂಡಗಳೆಂಬ ಕುಂಭಗಳ ಸಮೂಹಗಳನ್ನು ಪಡೆಯಲು, ನಾಶಮಾಡಲು ಸಮರ್ಥರೆಂದೆನಿಸುವರು. ಅವರಿಗೆ ಈ ಕಪಟ ಕೃತಿಯ ಹೆಣಕ್ಕೆ ಶರೀರವನ್ನು ಕೊಟ್ಟು ಪ್ರಾಣವನ್ನು ಹೊಂದಿಸುವ ರೀತಿಯು ಇದೊಂದು ಲಕ್ಷ್ಯವೇ ? ತಪ್ಪದೆ ಹೀಗೆ ಮಾಡುವೆನು, ಎಂದು ಅಪಾರ ಪರಾಕ್ರಮಶಾಲಿಯಾದ ಚೌಡಯ್ಯನು ಪೌರುಷ ವಿಶಿಷ್ಟನಾಗಿ, ಪುರಾತನರಾದ ಶಿವಶರಣರ ಪಾದಗಳನ್ನು ನೆನೆದು, ೫೫–೫೬. ಕೈಯಲ್ಲಿರುವ ಖಡ್ಗವನ್ನು ಆ ಚೌಡಯ್ಯನು ವರ್ಷಾಕಾಲದ ಮಿಂಚೋ ಎಂಬಂತೆ ಚಿಮ್ಮುತ್ತ, ಝಳಪಿಸುತ್ತ ಆ ಕಪಟದಿಂದ ಮಾಡಿದ ತಪಸ್ವಿಯ ಉದ್ಭವ ಕಾರಣಕ್ಕಾಗಿ ನಡೆದು ಬಂದು ವಿಮಾನದ ಮುಂದೆ ನಿಂತು ಪಟ್ಟಣದ ಜನರೆಲ್ಲ ಆಶ್ಚರ್ಯಪಡುತ್ತಿರುವಂತೆ ಆ ಕೃತ್ರಿಮ ತಪಸ್ವಿಯ ಕೈಯನ್ನು ಹಿಡಿದು ಎತ್ತುತ್ತ, 'ಹೇ ಗುಣಾಕರನೇ, ಬೇಗನೆ ಏಳು ; ಎಂದೆನ್ನಲು ತತ್‌ಕ್ಷಣಾರ್ಧದಲ್ಲಿಯೇ ಆ ಕಪಟ ತಪಸ್ವಿಯು ಶರೀರ ವ್ಯಾಪಾರದಿಂದ ಕೂಡಿ, ಜೀವವನ್ನು ಪಡೆದು ಭೂಮಿಗೆ ಧುಮುಕಿ ಚೌಡಯ್ಯನ ಪಾದ ಕಮಲಗಳಿಗೆ ನಮಸ್ಕಾರ ಮಾಡಿ, 'ದೇವೇಶ, ನಿಮ್ಮ ಕೃಪಾ

ವ॥ ಇಂತು ಕರಕಂಜಮಂ ಮುಗಿದು ದೈನ್ಯಂ ಮಿಗೆ ಪೊಗಳ್ವ ತಾಪಸನಂ ಚೌಡಿದೇವಂ ಕೃಪಾಲೋಕನದಿನಭೀಕ್ಷಿಸಿ ಶಿವದೀಕ್ಷೆಯಂ ಕರುಣಿಸಿ ಚಿರಂಜೀವಿತ್ವಮನಿತ್ತು ರಕ್ಷಿಸಿ ನಿರರ್ಗಳ ನಿಜ ಪ್ರಭಾವಮಂ ಬೀಱುತ್ತುಮಿರ್ಪಿನಮಾಗಳ್—

ಪರಮತ ಮತ್ತವಾದಿತತಿಯುಚ್ಚರಿವಟ್ಟು ಪೊದಳ್ದ ಭೀತಿಯೊ
ಳ್ಪೊರೆದೊಡಲಂ ಧರಿತ್ರಿಯೊಳೆ ಸಾರ್ಚಿ ನಮಸ್ಕೃತಿಗೆಯ್ದು ದೇವ ಚೌ
ಡರಸ ಚರಾಚರಪ್ರಕರಪಾಲಕ ಪಾಲಿಪುದೆಮ್ಮನಜ್ಞರಂ
ದುರಿತನಿಯುಕ್ತರಂ ಪಶುಗಳಂ ಗುಣಹೀನರರನೆಂದು ದೈನ್ಯದಿಂ ೫೭

ಅಭಯಮನೊಲ್ದು ಬೇಡೆ ಮಱೆದಾ ಮದಮತ್ತರ ತಪ್ಪನಾಗಣ
ಪ್ರಭು ಪದೆದೀಕ್ಷಿಸುತ್ತೆ ಕೃಪೆಯಿಂದಭಯಂಗುಡುತನ್ಯದರ್ಶನ
ಪ್ರಭವಜಡತ್ವಮಂ ಬಿಡಿಸಿ ಶೈವಮತಸ್ಥಿತಿಯಂ ನೆಗಳ್ಚಿ ಸ
ದ್ವಿಭವದಿನೊಪ್ಪಿದಂ ಮುಸುಟಿ ಚೌಡಮಹಾತ್ಮನಿಳಾತಳಾಗ್ರದೊಳ್ ೫೮

ಇಳೆಯೊಳ್ಶ್ರೀಚೌಡಿದೇವಂ ಮುನಿಪ ವೃಷಭ ಕನ್ಯಾಗತಪ್ರಾಣಮಂ ಕೊ
ಟ್ಟಳಿಪರ್ಕೆಯ್ಗೆಯ್ದ ಮಾಯಾಮುನಿಗೆ ಹರಣಮಂ ಸಾರ್ಚಿ ಭೂನುತ್ಯನಾಗಿ
ರ್ದಳವಂ ಕೇಳ್ದೆಯ್ದಿ ನಣ್ಪಿಂದೆಱಗಿ ನುತಿಸುತಾನಂದಮಂ ತಾಳ್ದು ಭಕ್ತಾ
ವಳಿಯೊಳ್ಕೊಂಡಾಡುತುಂ ತನ್ಮಹಿಮೆಯನೆಸೆದಂ ಭಕ್ತಿಸಾಂದ್ರಂ ವೃಷೇಂದ್ರಂ ೫೯

ದೃಷ್ಟಿಯಿಂದ ನಾನು ಹುಟ್ಟಿದೆನು ; ಕೇಳು : ನನಗೆ ತಂದೆಯೂ, ಗುರುವೂ, ಲಿಂಗವೂ ನಿಜವಾಗಿ ನೀನೇ ಸತ್ಯ, ನನ್ನನ್ನು ರಕ್ಷಿಸುವುದು'—ಎಂದು ಭಕ್ತಿಯಿಂದ ಕೊಂಡಾಡಿದನು.

ವ॥ ಈ ರೀತಿ ಕರ ಕಮಲವನ್ನು ಮುಗಿದು, ಅತಿ ದೈನ್ಯದಿಂದ ಪೊಗಳುತ್ತಿರುವ ತಪಸ್ವಿಯನ್ನು ಚೌಡಿದೇವನು ಕೃಪಾ ದೃಷ್ಟಿಯಿಂದ ನೋಡಿ, (ಅವನಿಗೆ) ಶಿವ ದೀಕ್ಷೆಯನ್ನು ಕರುಣಿಸಿ, ದೀರ್ಘಕಾಲ ಬದುಕುವಂತೆ ವರವಿತ್ತು, ರಕ್ಷಿಸಿ, ನಿರರ್ಗಳವಾದ ತನ್ನ ಮಹಿಮೆಯನ್ನು ಪ್ರಕಟಿಸುತ್ತ ಒಪ್ಪಿದ್ದನು ಆಗ—೫೭–೫೮. ಅನ್ಯ ಮತದ ಕೊಬ್ಬಿದ ವಾದಿಗಳ ಸಮೂಹವು ಆಶ್ಚರ್ಯಪಟ್ಟು ವಿಶೇಷವಾದ ಭಯದಿಂದ ತುಂಬಿದವರಾಗಿ, ತಮ್ಮ ದೇಹವನ್ನು ಭೂಮಿಗೆ ಇಕ್ಕಿ ನಮಸ್ಕರಿಸಿ,' ದೇವ, ಚೌಡರಸ, ಸ್ಥಾವರ ಜಂಗಮಾತ್ಮಕ ಪ್ರಪಂಚವನ್ನು ರಕ್ಷಿಸುವವನೇ, ಮೂಢರೂ,' ಪಾಪದಿಂದ ಕೂಡಿದವರೂ ಪಶುಗಳು ಗುಣಹೀನರೂ ಆದ ನಮ್ಮನ್ನು ರಕ್ಷಿಸಬೇಕು, ಎಂದು ದೈನ್ಯದಿಂದ ಅಭಯವನ್ನು ಒಲಿದು ಬೇಡಲಾಗಿ, ಆ ಗರ್ವಯುಕ್ತರ ತಪ್ಪನ್ನು ಮರೆತು ಆ ಗಣ ಶ್ರೇಷ್ಠನಾದ ಮುಸುಡಿಯ ಚೌಡಯ್ಯ ಮಹಾತ್ಮನು ಸಂತೋಷದಿಂದ ನೋಡಿ. ಕೃಪೆಯಿಂದ (ಅವರಿಗೆ) ಅಭಯವನ್ನು ಕೊಡುತ್ತ, ಪರ ಪ್ರೇಕ್ಷಣದಿಂದುಂಟಾದ (ಅವರ) ಜಡತ್ವವನ್ನು ಬಿಡಿಸಿ, ಶಿವ ಮತದಲ್ಲಿ ಅವರೆಲ್ಲ ಇರುವ ಹಾಗೆ ಮಾಡಿ, ಭೂ ಭಾಗದಲ್ಲಿ ಒಪ್ಪಿದ್ದನು. ೫೯. ಲೋಕದಲ್ಲಿ, ಶ್ರೀ ಚೌಡದೇವನು ಋಷಿ, ವೃಷಭ, ಸ್ತ್ರೀ ಇವರುಗಳಿಗೆ ಹೋದ ಪ್ರಾಣವನ್ನು ಕೊಟ್ಟು, ನಿಂದಕರು ಸೃಷ್ಟಿಸಿದ ಮಾಯಾ ಮುನಿಗೆ ಪ್ರಾಣವನ್ನುಂಟು ಮಾಡಿ, ಭೂ ಜನದಿಂದ ಹೊಗಳುವುದಕ್ಕೆ ಯೋಗ್ಯನಾಗಿದ್ದ ಶಕ್ತಿಯನ್ನು ಭಕ್ತಿ ಸಾಂದ್ರನಾದ ಬಸವೇಶ್ವರನು ಕೇಳಿ, ಅಲ್ಲಿಗೆ ಎಂದು ಪ್ರೀತಿಯಿಂದ ನಮಸ್ಕಾರ ಮಾಡಿ,

ಮುಸುಟಿಯ ಚೌಡಯ್ಯನ ಸ
ಲ್ಲಸಿತಚರಿತ್ರಮನದಾವನೋದುವನಾವಂ
ರಸೆಯೊಳ್ಕೇಳ್ವನವಂ ಸಂ
ತಸದಿಂ ಪಡೆವಂ ಚಿರಾಯುವಂ ಘನಸುಖಮಂ ೬೦

ಶುಂಭನಿಶುಂಭಭಂಜನೆ ಕದಂಬಕದಂಬನಿವಾಸೆ ಕುಂಭಿರಾ
ಟ್ಕುಂಭಪಯೋಧರೋಜ್ವಲೆ ಚಿದಂಬರರೂಪಿಣಿ ಕಂಬುಕಂಠೆ ವಿ
ಶ್ವಂಭರಜಂಭವೈರಿಸುರವಂದ್ಯಪದಾಂಬುಜೆ ಶುಭುಸಂಭ್ರಮಾ
ರಂಭಣಶುಂಭದಂಬಿಕೆ ಮದಂಬಿಕೆ ಪಾಲಿಪುದೆನ್ನ ಶಾಂಭವೀ ೬೧

ಇದು ವಿನಮದಖಿಳ ಸುರಾಸುರೇಂದ್ರಮಕುಟತಟಘಟಿತ ಮಣಿಗಣಾಗಣಿತ ರುಚಿನಿಚಯ
ತರುಣಾರುಣಾತಪಪರಿಲಸಿತ ಪರಮ ಶಿವಲಿಂಗ ಪಾದಾರವಿಂದಪರಾಗಭಸಿತ
ಭಾಸುರಲಲಾಟಪಟ್ಟಸರಸಜನಮಾನಿತೋಭಯಕವಿತಾವಿಶಾರದ
ಶ್ರೀಷಡಕ್ಷರಿದೇವಭಕ್ತಿವಿರಚಿತ
ಶ್ರೀಮದ್ ಬಸವರಾಜವಿಜಯಮಹಾಪುರಾಣದೊಳ್ ಮುಸುಟಚೌಡಿದೇವಮಹತ್ವಕಥನಂ
ಏಕವಿಂಶಾಶ್ವಾಸಂ ಸಮಾಪ್ತಂ

ಅಂತು ಆಶ್ವಾಸ ೨೧ಕ್ಕೆ ಪದಗಣನೆ ೧೬೩೩ಕ್ಕೆ ಮಂಗಳಮಹಾ ಶ್ರೀ॥

ಆನಂದಗೊಂಡು ಸ್ತೋತ್ರ ಮಾಡುತ್ತ, ಭಕ್ತ ಸಮೂಹದಲ್ಲಿ ಅವನ ಮಹಿಮೆಯನ್ನು ಕೊಂಡಾಡುತ್ತ ಶೋಭಿಸಿದನು. ೬೦. ಮುಸುಟಿಯ ಚೌಡಯ್ಯನು ಒಳ್ಳೆಯ ಪ್ರಕಾಶಮಾನವಾದ ಈ ಕಥೆಯನ್ನು ಆದಾವನು ಓದುವನೋ, ಅವನು ಈ ಭೂಮಿಯಲ್ಲಿ ಕೇಳುವನೋ, ಅವನು ಸಂತೋಷದಿಂದ ಚಿರಾಯುವನ್ನು ಉತ್ಕೃಷ್ಟವಾದ ಸೌಖ್ಯವನ್ನು ಪಡೆಯುವನು. ೬೧. ಶುಂಭ ನಿಶುಂಭರೆಂಬ ರಾಕ್ಷಸರನ್ನು ನಾಶ ಮಾಡಿದ, ಕದಂಬ ವೃಕ್ಷಗಳ ಸಮೂಹದಲ್ಲಿ ನೆಲಸಿದ, ಗಜ ಶ್ರೇಷ್ಠನಾದ ಐರಾವತದ ಕುಂಭಸ್ಥಳದೋಪಾದಿಯಲ್ಲಿರುವ ಮೊಲೆಗಳಿಂದ ಪ್ರಕಾಶಮಾನಳಾದ, ಜ್ಞಾನಕಾಶ ಸ್ವರೂಪಿಣಿಯಾದ, ಶಂಖದಂತಿರುವ ಕುತ್ತಿಗೆಯುಳ್ಳ, ವಿಷ್ಣು, ಇಂದ್ರರೇ ಮೊದಲಾದ ದೇವತೆಗಳಿಂದ ನಮಸ್ಕರಿಸುವುದಕ್ಕೆ ಯೋಗ್ಯವಾದ ಪಾದಕಮಲವುಳ್ಳ, ನನ್ನ ತಾಯಾದ ಶಾಂಭವಿಯೇ, ಈಶ್ವರನ ಸಂತೋಷದ ಆವಿರ್ಭಾವದಿಂದ ಪ್ರಕಾಶ ಮಾನಳಾದ ಪಾರ್ವತಿಯೇ ನನ್ನನ್ನು ರಕ್ಷಿಸು.

ಇಪ್ಪತ್ತೊಂದನೆಯ ಆಶ್ವಾಸವು ಸಮಾಪ್ತವಾಯಿತು.

ದ್ವಾವಿಂಶಾಶ್ವಾಸಂ

[ಸುರಗಿಯ ಚೌಡಯ್ಯನ ಕಥೆ]

ಶ್ರೀಶಾಂಭವೀಮುಖಾಕ್ಷಿಕು
ಶೇಶಯ ಕುಮುದಾನುರಂಜನಾಕ್ಷಿದ್ವಯನಾ
ಕಾಶಮಣಿಜಾತಹರನಖಿ
ಳೇಶಂ ಪೊರೆಗೆಮ್ಮನಾವಗಂ ಶಿವಲಿಂಗಂ ೧

ವ॥ ಮತ್ತಮಾಪುರದಲ್ಲಿ—

ನಿರುಪಮ ದಿವ್ಯಮೂರ್ತಿ ನಿಜಲಿಂಗಸಮುಚಿತ ಮರ್ಮವೇದಿ ಸ
ದ್ಗುರುಚರಲಿಂಗಭಕ್ತನಘದೂರನುದಾರನಪಾರಪುಣ್ಯಕೀ
ರ್ತಿರುಚಿರನುಜ್ವಳಪ್ರಬಳಶೌರ್ಯನಪಾಸ್ತಕಳಂಕನೊಪ್ಪುಗುಂ
ಸುರಗಿಯ ಚೌಡದೇವನೆನಿಸಿರ್ಪ ಮಹಾತ್ಮನನೂನ ವೈಭವಂ ೨

ಜಿತಸಂಸಾರವಿಕಾರನಂಚಿತಮಹಾವೀರವ್ರತಾಧಾರನೂ
ರ್ಜಿತಲಿಂಗಪ್ರಣಯಪ್ರಸನ್ನಕರಣಂ ಲಿಂಗಾಭಿಮಾನಕ್ರಿಯಾ

ಸುರಗಿಯ ಚೌಡಯ್ಯನ ಕಥೆ

೧. ಮಂಗಳಕರಳಾದ ಪಾರ್ವತಿಯ ಮುಖ ಮತ್ತು ಅಕ್ಷಿಗಳೆಂಬ ಕಮಲಕನ್ನೈದಿಲೆಗಳನ್ನು ಸಂತೋಷಪಡಿಸುವವರಾದ (ಕಮವಾಗಿ) ಸೂರ್ಯ (ಮತ್ತು) ಚಂದ್ರರೆಂಬ ಎರಡು ನೇತ್ರಗಳುಳ್ಳವನೂ, ಸೂರ್ಯಕುಮಾರನಾದ ಯಮನನ್ನು ಸಂಹರಿಸಿದವನೂ, ಸರ್ವಲೋಕಸ್ವಾಮಿಯೂ ಆದ ಶಿವಲಿಂಗನು ಯಾವಾಗಲೂ ನಮ್ಮನ್ನು ರಕ್ಷಿಸಲಿ ವ॥ ಮತ್ತು (ಆ ಕಲ್ಯಾಣವೆಂಬ) ಪಟ್ಟಣದಲ್ಲಿ–೨ ನಿರುಪಮವಾದ ದಿವ್ಯ ಶರೀರಿಯೂ, ತನ್ನ ಇಷ್ಟಲಿಂಗ ಸಂಬಂಧದ ರಹಸ್ಯವನ್ನರಿತವನೂ, ಗುರುಲಿಂಗಜಂಗಮದಲ್ಲಿ ಭಕ್ತಿಯುಳ್ಳವನೂ, ಪಾಪದಿಂದ ದೂರನೂ, ಅಪಾರವಾದ ಪುಣ್ಯದಿಂದುಂಟಾದ ಕೀರ್ತಿಯಿಂದ ಮನೋಹರನೂ, ಉಜ್ವಲವಾದ ಪ್ರಬಲ ಶೌರ್ಯವುಳ್ಳವನೂ, ಕಳಂಕದೂರನೂ, ಅಧಿಕ ವೈಭವಶಾಲಿಯೂ ಆದ ಸುರಗಿಯ ಚೌಡಯ್ಯನೆಂಬ ಹೆಸರಿನ ಮಹಾತ್ಮನು ಒಪ್ಪಿದ್ದನು, ೩. (ಅವನು) ಸಂಸಾರಸಂಬಂಧದ ವಿಕಾರವನ್ನು ಗೆದ್ದವನು ; ಪೂಜ್ಯವೂ, ಮಹತ್ವವುಳ್ಳದ್ದೂ ಆದ ವೀರಶೈವ ವ್ರತಕ್ಕೆ ಆಶ್ರಯನಾದವನು ; ಲಿಂಗಸಂಬಂಧದ ತೇಜವುಳ್ಳವನು ; ಶ್ರೇಷ್ಠ ನೀತಿಯಿಂದ ನಿರ್ಮಲಗೊಂಡ ಅಂತಃಕರಣವುಳ್ಳವನು ; ಲಿಂಗದಲ್ಲಿ ಅಭಿಮಾನವುಳ್ಳ ಕ್ರಿಯಾಚಾರಕ್ಕೆ ಆಶ್ರಯನಾದವನು ; ಲೋಕದ ಜನರಿಂದ

ಶ್ರಿತಸುರ್ವಿೀವಿನುತಂ ಪ್ರಸಾದಯುಗಸೇವಾನಂದಯುಕ್ತಂ ಕೃಪಾ
ನ್ವಿತಚಿತ್ತಂ ಗುಣಶಾಲಿಯಷ್ಟವಿಧ ಸದ್ಭಕ್ತಿಕ್ರಮಭ್ರಾಜಿತಂ ೩

ವ॥ ಎಂಬ ನೆಗಳ್ತೆವೆತ್ತು—

ಅನುದಿನವೊಲ್ದು ತನ್ನ ಮನೆಗೆಯ್ದಿದ ಜಂಗಮಲಿಂಗಸಂಚಯ
ಕ್ಕನುನಯದಿಂ ನಮಸ್ಕರಿಸಿ ಪೂಜಿಸಿ ದಿವ್ಯರುಚಿಪ್ರಸನ್ನ ಭೋ
ಜನ ನವಶಾಕಪಾಕಪರಮಾನ್ನರಸಾಯನಖಾದ್ಯ ಮುಖ್ಯಮಂ
ಮನದೊಲವಿಂ ನಿವೇದಿಸಿ ಕರಾಂಜಲಿಗೆಯ್ದು ಪೊದಳ್ದ ಭಕ್ತಿಯಿಂ ೪

ವ॥ 'ರಸಾನ್ಭಕ್ತಸ್ಯ ಜಿಹ್ವಾಗ್ರಾದಶ್ನಾಮಿ ಕಮಲೋದ್ಭವ'ಯೆಂದು ಭವದ್ವಾಕ್ಯಮುಂಟಪ್ಪುದಱಿಂ ದೇವ ನೀಂ ಭಕ್ತರೂಪದಿಂ ಭುಂಜಿಪುದೆಂದು ಬಿನ್ನಪಂಗೆಯ್ದು ತಣಿ[1]ಪಿ ನೋಡಿಪರಮಾನಂದಮನಾಳ್ದನಂತರಂ ವ್ಯಾಘ್ರಾಜಿನಾಸ್ತರಣದೊಳ್ಪೂರ್ವಾಭಿಮುಖನಾಗಿ ಕುಳ್ಳಿರ್ದು ನಿಜೇಷ್ಟಲಿಂಗಮಂ ಪೂಜಿಸಲೆಂದು ಪಜ್ಜಳಿಪ ಸಜ್ಜೆಯಿಂ ಕರಾಂಬುಜಕ್ಕೆ ಬಿಜಯಂಗೆಯ್ಸಿ ತಲ್ಲಿಂಗಮುಂ ನೋಡಿ ಜಲಾಭಿಷೇಕದಿಂ ಮುನ್ನಮೆ ಸುಖಬಾಷ್ಪಜಲ ಕಲ್ಲೋಲದಿನಭಿಷೇಕಂಗೆಯ್ದು ಧೂಪಾರ್ಪಣದಿಂ ಮುನ್ನಮೆ ಚಿದಗ್ನಿವಿನಿಹಿತವಾಸನಾ ಧೂಪಧೂಮಮುಮಂ ಬೀಸಿ ಕುಸುಮೋಪಹಾರದಿಂ ಮುನ್ನಮಾತ್ಮೇಂದ್ರಿಯಾರ್ಪಣಮುಮಂ ನೆಗಳ್ದು ಗಂಧಾರ್ಪಣದಿಂ ಮುನ್ನಮೆ ಚಿದನುಭವಸುಗಂಧಾನು ಲೇಪ

ಶ್ಲಾಘಿಸಲ್ಪಡುವವನು ; ಶುದ್ಧ ಸಿದ್ಧ ಪ್ರಸಾದದ್ವಯ ಸ್ವೀಕಾರದಿಂದ ಆನಂದದಿಂದ ಕೂಡಿದವನು; ಕೃಪೆಯಿಂದ ಕೂಡಿದ ಚಿತ್ತವುಳ್ಳವನು ; ಸದ್ಗುಣಶಾಲಿಯು ; ಅಷ್ಟವಿಧ ಸದ್ಭಕ್ತಿಗಳಾದ–ಶಿವಕಥಾಶ್ರವಣ, ಶಿವಕೀರ್ತನ, ಶಿವಸ್ಮರಣ, ಶಿವಪಾದಸೇವನ, ಶಿವಾರ್ಚನ, ಶಿವಸೇವಾಭಾವ, ಶಿವವಂದನೆ, ಶಿವಾರ್ಪಣಾದಿಗಳ ಕ್ರಮದಿಂದ ಪ್ರಕಾಶಮಾನನಾದವನು–ಆಗಿದ್ದನು, ವ॥ ಎಂಬ ಖ್ಯಾತಿಯನ್ನು ಹೊಂದಿ–೪. (ಅವನು) ಪ್ರತಿದಿನವೂ ಪ್ರೀತಿಯಿಂದ ತನ್ನ ಮನೆಗೆ ಬಂದಂಥ ಲಿಂಗರೂಪರಾದ ಜಂಗಮ ಸಮೂಹಕ್ಕೆ ನಮಸ್ಕರಿಸಿ, ಪೂಜೆಮಾಡಿ, ಶ್ರೇಷ್ಠ ರುಚಿಯುಳ್ಳದಿವ್ಯ ಭೋಜನವಾದ ನೂತನ ಶಾಕಪಾಕಗಳು, ಉತ್ಕೃಷ್ಟ ಅನ್ನ, ರಸಾಯನ, ಇತರ ಖಾದ್ಯ ಪದಾರ್ಥಗಳೇ ಮೊದಲಾದುವುಗಳನ್ನು ಪ್ರೀತಿಯಿಂದ ಅರ್ಪಿಸಿ ಭಕ್ತಿಯಿಂದ ಉಬ್ಬಿದವನಾಗಿ ಕೈಮುಗಿದು (ಭಕ್ತಿಯನ್ನರ್ಪಿಸುತ್ತಿದ್ದನು.) ವ॥ 'ಹೇ ಬ್ರಹ್ಮನೇ, ಭಕ್ತನ ನಾಲಗೆಯ ತುದಿಯಿಂದ (ನಾನು) ಷಡ್ರಸಗಳನ್ನು ಅಂದರೆ ಹುಳಿ, ಉಪ್ಪು, ಕಾರ, ಮಧುರ, ಕಹಿ, ಒಗರು ಮೊದಲಾದುವನ್ನು ಸ್ವೀಕರಿಸುತ್ತೇನೆ' ಎಂಬ ಭಗವಂತನ ವಚನವುಳ್ಳುದರಿಂದ 'ದೇವನೆ, ನೀನು ಭಕ್ತನ ರೂಪದಿಂದ ಆಹಾರ ಸ್ವೀಕಾರ ಮಾಡಬೇಕೆಂದು, ಬಿನ್ನವಿಸಿಕೊಂಡು, ತೃಪ್ತಿಪಡಿಸಿ, ನೋಡಿ, ಪರಮ ಆನಂದವನ್ನು ಹೊಂದಿದನಂತರ ಹುಲಿಯ ಚರ್ಮದಿಂದ ಮಾಡಿದ ಪೀಠದಲ್ಲಿ ಪೂರ್ವಕ್ಕೆ ಮುಖ ಮಾಡಿ ಕುಳಿತುಕೊಂಡು, ತನ್ನ

1 ಣು(ಜ, ದ)

ಮಂ ನಿಮಿರ್ಚಿ ನೀರಾಜನಾರ್ಪಣದಿಂ ಮುನ್ನಮೆಯಾತ್ಮಾ[1]ಂತರಜ್ಯೋತಿಯಂ ಬೆಳಗಿ ನೈವೇದ್ಯಾರ್ಪಣದಿಂ ಮುನ್ನಮಾತ್ಮನೈವೇದ್ಯಮಂ ನಿವೇದಿಸಿ ತಾಂಬೂಲಾರ್ಪಣದಿಂ ಮುನ್ನಮೆಯನುರಾಗರಸ ತಾಂಬೂಲಮಂ ಸಮರ್ಪಿಸುತ್ತನಂತರಂ ಸಾಂಗಮೆನೆ ನೈವೇದ್ಯಾಂತ ಬಾಹ್ಯ ಪೂಜೆಯನೊಡರ್ಚುತಾಗಳ್—

ಮಿಱುಗುವ ಖಡ್ಗಮಂ ತೆಗೆದು ತನ್ನಯ ದಕ್ಷಿಣಭಾಗದಲ್ಲಿ ಕಿ
ಱ್ತೊಱೆಯನಮರ್ಚಿ ಸಾರ್ಚಿ ನಿಜಲಿಂಗಮನೀಕ್ಷಿಸಿ ಭೋಜ್ಯವಸ್ತುವಂ
ನೆಱೆಗಲಿ ನಿಷ್ಠೆಯಿಂ ಕರದೆ ಸತ್ಕಬಳಾಕೃತಿಗೆಯ್ದು ನೀಡೆ ನೀ
ಳ್ದಱಕದೆ ಶಂಭು ಕೆಯ್ಕೊಳುತೆ ಭುಂಜಿಸುತಿರ್ದನುದಾತ್ತಲೀಲೆಯಿಂ ೫

ವ॥ ಅಂತು ನಿಜೇಷ್ಟಲಿಂಗಂ ಕರಾಗ್ರದಿಂ ಕಬಳಂಗೊಂಡು ಚರಲಿಂಗಮಾರೋಗಿಪಂತಾರೋಗಿಸೆ ಕಂಡು ಕಳೆಯೇಱಿ ಮೀಱೆ—

ಇಷ್ಟ ಲಿಂಗವನ್ನು ಪೂಜಿಸಬೇಕೆಂದು ಪ್ರಜ್ವಲಿಸುವ ಲಿಂಗ ಕರಂಡಕದಿಂದ ಕರಕಮಲಗಳಿಗೆ ಬರಮಾಡಿಕೊಂಡು (ಕರಡಿಗೆಯಿಂದ ಲಿಂಗವನ್ನು ಕೈಯಲ್ಲಿ ಧರಿಸಿ) ಆ ಲಿಂಗವನ್ನು ದೃಷ್ಟಿಸಿ, ಜಲದಿಂದ ಅಭಿಷೇಕ ಮಾಡುವ ಪೂರ್ವದಲ್ಲಿಯೇ ಆನಂದಬಾಷ್ಪಗಳ ತರಂಗಗಳಿಂದ ಅಭಿಷೇಕ ಮಾಡಿ, ಧೂಪದ ಸುಗಂಧವನ್ನು ಅರ್ಪಣೆ ಮಾಡುವ ಮೊದಲೇ ಚಿತ್ ಎಂಬ ಅಗ್ನಿ (ಜ್ಞಾನ ಪ್ರಕಾಶವೆಂಬ ಅಗ್ನಿ)ಯಲ್ಲಿ ಸಂಸ್ಕಾರವೆಂಬ ಧೂಪವನ್ನು ಹಾಕಿ ಅದರಿಂದ ಬರುವ ಧೂಮವನ್ನು ಬೀಸಿ, ಪುಷ್ಪಗಳನ್ನು ಸಮರ್ಪಿಸುವುದಕ್ಕೆ ಮುನ್ನವೇ ತನ್ನ ಐದು ಜ್ಞಾನೇಂದ್ರಿಯ ಐದು ಕರ್ಮೇಂದ್ರಿಯಗಳನ್ನು ಸಮರ್ಪಣೆ ಮಾಡಿ (ಇಂದ್ರಿಯ ವ್ಯಾಪಾರಗಳನ್ನು ಲಿಂಗ ವ್ಯಾಪಾರಗಳನ್ನಾಗಿ ಮಾಡಿ), ಶ್ರೀಗಂಧವನ್ನು ಅನುಲೇಪನ ಮಾಡುವ ಮೊದಲೇ, ಜ್ಞಾನಾನುಭವವೆಂಬ ಸುಗಂಧವನ್ನು ಅನುಲೇಪನ ಮಾಡಿ, ಮಂಗಳಾರತಿಯನ್ನೆತ್ತುವುದಕ್ಕೆ ಮೊದಲೇ, ತನ್ನ ಅಂತರಾತ್ಮವೆಂಬ ಜ್ಯೋತಿಯನ್ನು ಬೆಳಗಿ, ನೈವೇದ್ಯವನ್ನು ಅರ್ಪಣೆ ಮಾಡುವ ಮೊದಲೇ, ಆತ್ಮನೈವೇದ್ಯವನ್ನು ನಿವೇದನೆ ಮಾಡಿ, ತಾಂಬೂಲವನ್ನು ಸಮರ್ಪಿಸುವುದಕ್ಕಿಂತ ಮೊದಲೇ ಸಂತೋಷವೆಂಬ ಒಳ್ಳೆಯ ತಾಂಬೂಲವನ್ನು ಸಮರ್ಪಣೆ ಮಾಡಿ—ಅನಂತರ ಯಥಾ ಸಾಂಗವಾಗಿ ಮಜ್ಜನ ಮೊದಲ್ಗೊಂಡು ನೈವೇದ್ಯ ಸಮರ್ಪಣೆಯವರೆಗೆ ಬಾಹ್ಯ ಪೂಜೆಯನ್ನು ಮಾಡುತ್ತ ಆಗ–೫. ಬಹು ಸಮರ್ಥನಾದ ಆ ಸುರಗಿಯ ಚೌಡಯ್ಯನು ತನ್ನ ಬಲಭಾಗದಲ್ಲಿ ಹೊಳೆಯುತ್ತಿರುವ ಖಡ್ಗವನ್ನು ಒರೆಯಿಂದ ಹಿರಿದು ಹೊರ ತೆಗೆದು, ಭೋಜ್ಯ ವಸ್ತುಗಳನ್ನೆಲ್ಲ ಶ್ರದ್ಧೆಯಿಂದ ಹೊಂದಿಸಿಟ್ಟು ತನ್ನ ಇಷ್ಟ ಲಿಂಗವನ್ನು ದೃಷ್ಟಿಸಿ, ಕೈಯಲ್ಲಿ ಒಳ್ಳೆಯ ತುತ್ತುಗಳನ್ನು ಮಾಡಿ, ಕೈಯನ್ನು ಮುಂದಕ್ಕೆ ಚಾಚಲಾಗಿ ಈಶ್ವರನು ಕೈಯನ್ನು ಚಾಚಿ ಪ್ರೀತಿಯಿಂದ ಸ್ವೀಕಾರ ಮಾಡಿ ಉತ್ಕೃಷ್ಟವಾದ ಲೀಲೆಯಿಂದ ಊಟ ಮಾಡುತ್ತಿದ್ದನು. ವ॥ ಆ ರೀತಿ ತನ್ನ ಇಷ್ಟ ಲಿಂಗವು ಕೈಯಿಂದ ತುತ್ತನ್ನು ತೆಗೆದುಕೊಂಡು ಜಂಗಮಮೂರ್ತಿಯು ಊಟ ಮಾಡುವ ಹಾಗೆ ಊಟ

---

1 ತ್ಮ (ಅ)

ನುದಿನಮೀತೆಱದಿಂ ನೆ
ಟ್ಟನೆ ಕಾಲತ್ರಯದೊಳಭವನಂ ತಣಿಪುತೆ ಪಾ
ವನತತ್ಪ್ರಸಾದಮಂ ತಾಂ
ಮನದೊಲವಿಂ ಸೇವಿಸುತ್ತುಮಿರ್ಪಿನಮಾಗಳ್ ೬

ಹರಭಕ್ತರಲ್ಲಿ ಕಂಡಾ
ಸುರಗಿಯ ಚೌಡಯ್ಯನೆಸಗಿದುಜ್ಜುಗಮನದಂ
ಪಿರಿದಾನಂದಮನಾಳ್ದು
ದರದಿಂ ಬಗೆವೆರ್ಚಿ ತಮ್ಮೊಳಂದಿಂತೆಂದರ್ ೭

ಮಿಱಿದ ಭಕ್ತಿಯಿಂದೆ ಕರಿಕಾಲಮಹೀಪತಿ ನಿಚ್ಚನಿಚ್ಚಮಿಂ
ಪೇಱಿದಭಿನ್ನಸೂಕ್ಷ್ಮಧವಳಾನವಶಾಲಿ ಸುತಂಡುಲಾಳಿ ಮು
ನ್ನೂಱಱುವತ್ತು ಖಂಡುಗಮದಂ ಮಿಸುಪೋದನಮಂ ನಿಮಿರ್ಚಿಂ ಸೊಂ
ಪಾಱದ ಶಾಕಪಾಕತತಿಯಂ ಸಮೆದಲ್ಲಿ ಮನೋನುರಾಗದಿಂ ೮

ಮೂವತ್ತು ಕೊಳಗ ಮೆಳಸಿಂ
ತೀವಿದ ಬಹುವಿಧ ರಸಾನ್ನತತಿಯನೊಡರ್ಚು
ತ್ತಾ ವಿಭು ಸಹಸ್ರಮಣಿಪಾ
ತ್ರಾವಳಿಯೊಳುಮೇಶ್ವರಂಗೆ ಗಡಣಿಸುತೊಲವಿಂ ೯

ಕರವಾಳಂ ಕರದಲ್ಲಿ ತಾಳ್ದೆಳಲೆವಿಟ್ಟೋರಂತೆ ಚೆಲ್ವಾದ ಪೊಂ
ದೆರೆಯಂ ನಿಂದೊಡನಾಲಿಸುತ್ತಿರೆ ಮಹೇಶಂ ಭಕ್ಷ್ಯಭೋಜ್ಯಾನ್ನ ಸಾ

ಮಾಡುತ್ತಿರುವುದನ್ನು ನೋಡಿ, ಕಳೆಯೇರಿದವನಾಗಿ—೬-೭. ಪ್ರತಿ ದಿನವೂ ಈ ರೀತಿಯಿಂದ ವಿಚ್ಛಿತ್ತಿಯಿಲ್ಲದಂತೆ ತ್ರಿಕಾಲದಲ್ಲೂ (ಬೆಳಗು, ಮಧ್ಯಾಹ್ನ, ಸಾಯಂಕಾಲದಲ್ಲೂ) ಶಿವನನ್ನು ತೃಪ್ತಿಪಡಿಸುತ್ತ, ಪರಿಶುದ್ಧವಾದ ಶಿವನ ಪ್ರಸಾದವನ್ನು ಮನಸ್ಸಂತೋಷದಿಂದ ಸೇವಿಸುತ್ತಿರುವಾಗ, ಹರಿಭಕ್ತರು ಅಲ್ಲಿ ಆ ಸುರಗಿಯ ಚೌಡಯ್ಯನು ಮಾಡಿದ ಆ ರೀತಿಯ ಕ್ರಿಯೆಯನ್ನು ಕಂಡು ವಿಶೇಷಾನಂದಭರಿತರಾಗಿ, ಮನಃಪೂರ್ವಕವಾಗಿ ತಮ್ಮಲ್ಲಿ ಹೀಗೆಂದು ಅಂದರು: ೮-೯-೧೦. (ಹಿಂದೆ ಆ ಕಾಂಚೀಪಟ್ಟಣದಲ್ಲಿ) ಕರಿಕಾಲ ಚೋಳನೆಂಬ ದೊರೆಯು, ವಿಶೇಷವಾದ ಭಕ್ತಿಯಿಂದ ಪ್ರತಿ ದಿನವೂ, ಸೊಗಸಾದ ಗೊನೆ ಮುರಿಯದಿರುವ ಸಣ್ಣನೆಯ ಶುಭ್ರವಾದ ಅಸದೃಶ ಬತ್ತದಿಂದ ಕುಟ್ಟಿ ಮಾಡಿದ ಒಳ್ಳೆಯ ಅಕ್ಕಿಯ ಮೂರುನೂರು ಕಂಡಗಗಳ ಸಮೂಹದಿಂದ ಶೋಭಿಸುವ ಅನ್ನವನ್ನು ಮಾಡಿಸಿ, ಸೊಂಪು ಆರದೆಯಿರುವ ಕಾಯಿಪಲ್ಲೆಗಳ ಸಮುದಾಯವನ್ನು ಮಾಡಿಸಿ, ಮೂವತ್ತು ಕೊಳಗ ಮೆಣಸುಗಳಿಂದ ಕೂಡಿದ ಬಹುವಿಧವಾದ ಸಾರುಗಳೇ 'ಮೊದಲಾದ ರಸಭರಿತ ಅನ್ನದ ಸಮೂಹವನ್ನು ಸಿದ್ಧಪಡಿಸುತ್ತಿದ್ದನು. (ಆಗ) ಆ ರಾಜನು ಅನೇಕ ರತ್ನಖಚಿತವಾದ ತಟ್ಟೆಗಳಲ್ಲಿ ಈಶ್ವರನ ಎದುರಿಗೆ ಪ್ರೀತಿಯಿಂದ (ಆ ಅನ್ನವನ್ನೆಲ್ಲ) ಜೋಡಿಸಿಟ್ಟು, ಖಡ್ಗವನ್ನು ಕೈಯಲ್ಲಿ

ಧುರುಚಿಪ್ರೀತರಸಾಯನಂಗಳನೊಲಿಲ್ದಾಸ್ವಾದನಂಗೆಯ್ದು ಭಾ
ಸುರನಾದಂ ಕಿವಿಗಿಂಪನೀಯೆ ಸವಿದಂ ತಾನಂದು ಭೂಭಾಗದೊಳ್ ೧೦

ಮನ್ನಣೆವೆತ್ತೊಪ್ಪುವ ಭ
ಕ್ತನ್ನಿಜ ಜಿಹ್ವೆಯೊಳೆ ಸವಿಯನೀವುತೆ ಮಗುಳ್ದಾ
ಚನ್ನಯ್ಯನಂಬಕಳವಂ
ತಾಂ ನಲಿದೊಡನುಣಿಸಿದಂ ಭವಾನೀ[1]ಪತಿಯುಂ ೧೧

ದ್ರಾಕ್ಷಾರಾಮಮೆನಿಪ್ಪ ಸತ್ಪುರದೊಳಿರ್ಪಳ್ಚೋಳಿಕಾದೇವಿ ರು
ದ್ರಾಕ್ಷಕ್ಷಾರಲಸತ್ಕಳೇವರೆಯಲಂಪಿಂ ಪುಳ್ಗಿಯಂಣ್ಬಂದು ಜಿ
ಹ್ವಾಕ್ಷಿಪ್ತಂ ಸವಿಯಾಗೆ ಪುಳ್ಗಿಯನದಂ ಸದ್ವಸ್ತ್ರದಿಂ ಮುಚ್ಚಿ ಭಾ
ಳಾಕ್ಷಂಗೀವುದೆನುತ್ತೆ ಚೇಟಿಯ ಕರಾಂಭೋಜಾತದಿಂದಟ್ಟಿದಳ್ ೧೨

ಹಿಡಿದುಕೊಂಡು ಮನೋಹರವಾದ ಸುವರ್ಣಮಯವಾದ ತೆರೆಯನ್ನು ಚೆನ್ನಾಗಿ ಜೋಲುಬಿಟ್ಟು ನಿಂತುಕೊಂಡು (ಶಿವನು ಊಟ ಮಾಡುವ ಸಪ್ಪಳವನ್ನು) ಆಲಿಸುತ್ತಿದ್ದನು. (ಆಗ) ಮಹೇಶ್ವರನು–ಭಕ್ಷ್ಯ, ಭೋಜ್ಯ, ಅನ್ನ, ವಿಶೇಷ ರುಚಿಯಿಂದ ಕೂಡಿದ ರಸಾಯನಗಳೇ ಮೊದಲಾದ ಪದಾರ್ಥಗಳನ್ನು ಪ್ರೀತಿಯಿಂದ (ಒರಲ್ದು) ಆಸ್ವಾದನೆ ಮಾಡಿ, ಪ್ರಕಾಶಮಾನನಾದನು; ಕಿವಿಗೆ ಇಂಪಾಗುವ ರೀತಿಯಿಂದ ಆ ಕಾಲದಲ್ಲಿ ಈ ಭೂಮಂಡಲದಲ್ಲಿ ಊಟ ಮಾಡಿದನು. (ಊಟ ಮಾಡುವಾಗ ಮನೋಹರವಾದ ಶಬ್ದ ಮಾಡುತ್ತಿದ್ದನೆಂದು ತಾತ್ಪರ್ಯ). ೧೧. ಮನ್ನಣೆಗೊಂಡು ಒಪ್ಪುತ್ತಿದ್ದ (ಕಾಂಚಿಯಲ್ಲಿದ್ದ ಮಾದಾರ) ಚೆನ್ನಯ್ಯನೆಂಬ ಭಕ್ತನು ತನ್ನ ನಾಲಿಗೆಯ ತುದಿಯಿಂದ ರುಚಿಯನ್ನು ಈಶ್ವರನಿಗುಂಟು ಮಾಡುತ್ತ ಪುನಃ ತಾನು ಸಂತೋಷದಿಂದ ಅಂಬಲಿಯನ್ನು ಶಿವನಿಗೆ ತನ್ನೊಡನೆಯೇ ಊಟ ಮಾಡಿಸಿದನು. (ಶಿವನು ಚೆನ್ನಯ್ಯನ ನಾಲಿಗೆಯ ತುದಿಯಿಂದಲೇ ಅಂಬಲಿಯ ರುಚಿಯನ್ನು ಸ್ವೀಕಾರ ಮಾಡಿದನೆಂದು ತಾತ್ಪರ್ಯ). ೧೨. ದ್ರಾಕ್ಷಾರಾಮವೆಂದೆನಿಸುವ ಆ ಪಟ್ಟಣದಲ್ಲಿ ಇರುವ ಭಸ್ಮ ರುದ್ರಾಕ್ಷಿಗಳಿಂದ ಅಲಂಕೃತಳಾಗಿದ್ದ ಚೋಳಿಕಾ ದೇವಿಯೆಂಬುವಳು ಹೋಳಿಗೆಯನ್ನು ಸಂತೋಷದಿಂದ ತಿನ್ನುವ ಸಮಯದಲ್ಲಿ, ತನ್ನ ನಾಲಿಗೆಯ ಮೇಲೆ ಇರಿಸಿಕೊಂಡಿದ್ದ ಹೋಳಿಗೆಯು ರುಚಿಯಾದುದಾಗಿರಲಾಗಿ (ಅದು ರುಚಿಯಾಗಿರುವ ಕಾರಣದಿಂದಲೇ ಅದನ್ನು ಬಾಯಿಯಿಂದ ತೆಗೆದು) ಒಳ್ಳೆಯ ಬಟ್ಟೆಯಿಂದ ಮುಚ್ಚಿ ಈಶ್ವರನಿಗೆ ಕೊಟ್ಟು ಬರುವುದೆಂದು ಹೇಳುತ್ತ ದಾಸಿಯೊಬ್ಬಳ ಕರಕಮಲಗಳಲ್ಲಿರಿಸಿ ಕಳುಹಿಸಿದಳು.

1 ನಿಯು(ಚ)

ಜವದಿಂ ಬಂದವಳಂಗಜಾರಿಯ ನಿವಾಸಕ್ಕಳ್ಕಱಿಂ ದೇವ ದೇ
ವವರೇಣ್ಯೋತ್ತಮ ಭೀಮನಾಥ ಪದೆದೆಮ್ಮಕ್ಕಂ ಕರಂ ಪೂಳ್ಗಿಯಂ
ಸವಿವೃತ್ತಿರ್ದಿನಿದಾಗೆ ನಿನ್ನ ನೆನೆದೆನ್ನಿಂದಟ್ಟಿದಳ್ಬಟ್ಟಲೊ
ಳ್ತವೆ ತಂದಿರ್ದಪೆನೆಂಬುದುಂ ತರುಣಿ ತಾರೆಂದೀಶ್ವರಂ ಪಾತ್ರೆಯಂ ೧೩

ಪ್ರಣಯದಿ ನೀಳ್ದುಕೊಳುತ್ತುಂ
ಘಣೆಕಟಕಂ ಸವಿದು ಪೂಳ್ಗಿಯಂ ಬಟ್ಟಲನಂ
ಗಣಕಿಟ್ಟಂ ಕ್ರೇಂಕಾರ
ಕ್ವಣಿತಂ ಕೆಯ್ಗಗ್ಗೆ ನೋಳ್ಪರರಿದೆಂಬಿನೆಗಂ ೧೪

ಎಂದೆಂಬ ಕಥೆಯನಾಲಿಪೆ
ವಿಂದೆಳೆಯೊಳ್ಕಂಡೆವಮವ ಚೌಡಯ್ಯಂ ನ
ಣ್ಪಿಂದಭವಂಗೂಡಿದನುಣಿ
ಸಂ ದಿಟಮಿದನೆಂದವರ್ಕರಂ ಕೀರ್ತಿಸಿದರ್ ೧೫

ವ॥ ಆಗಳ್—

ಬಸವರಸನೆಯ್ದಿ ನಿಜಪದ
ಬಿಸಜಕೆ ಪೊಡಮಟ್ಟು ನಲಿದು ಪೊಗಳುತ್ತಿರೆ ಸಂ
ತಸಮಲರ್ದು ಜಸದಿನೊಪ್ಪಿದ
ನಸದೃಶಕಲ್ಯಾಣನಗರದೊಳ್ಚಾಡಾರ್ಯಂ ೧೬

೧೩–೧೪. ಅವಳು ಶಿವಾಲಯಕ್ಕೆ ಪ್ರೀತಿಯಿಂದ ವೇಗವಾಗಿ ಹೋಗಿ, ದೇವ, ದೇವತಾ ಸಾರ್ವಭೌಮನೇ, ಭೀಮೇಶ್ವರಾ, ನಮ್ಮಕ್ಕ ಬಯಸಿ (ಈ) ಹೋಳಿಗೆಯನ್ನು ತಿನ್ನುತ್ತಿದ್ದಳು. ಇದು ಬಹಳ ರುಚಿಕರವಾದ್ದರಿಂದ ನಿನ್ನನ್ನು ನೆನೆದುಕೊಂಡು ಬಟ್ಟಲಲ್ಲಿಟ್ಟು ನನ್ನ ಕಯ್ಯಿಂದ ನಿನಗೆ ಕಳುಹಿಸಿಕೊಟ್ಟಿದ್ದಾಳೆ. ಆದ್ದರಿಂದ ತಂದಿದ್ದೇನೆ, ಎನ್ನಲು ಈಶ್ವರನು–'ಸ್ತ್ರೀಯಳೇ, ಆ ಪಾತ್ರೆಯನ್ನು ಇತ್ತ ಕೊಡು' ಎಂದು, ಆ ಹೋಳಿಗೆಯನ್ನು ವಿಶ್ವಾಸದಿಂದ ತೆಗೆದುಕೊಂಡು, ತಿಂದು 'ಜಣಲ್' ಎಂದು ಧ್ವನಿಯುಂಟಾಗುವ ಹಾಗೆ, ನೋಡುವವರೆಲ್ಲ ಆಶ್ಚರ್ಯಪಡುತ್ತಿರಲಾಗಿ (ಆ ಬಟ್ಟಲನ್ನು) ಮುಂದಣ ಬಯಲಿಗೆ ಬಿಸಾಡಿದನು. (ಶಿವಾಲಯದ ಕದ ಮುಚ್ಚಿದ್ದರಿಂದ ಹೊರಗೆ ನಿಂತುಕೊಂಡೇ ಹೇಳಿದ ಆ ದಾಸಿಯ ಮಾತನ್ನು ಕೇಳಿ ಹೋಳಿಗೆಯನ್ನು ಪಡೆದು ತಿಂದು ಬಟ್ಟಲನ್ನು ಹೊರಗೆ ಹೋಗಿ ಬೀಳುವಂತೆ ಮಾಡಿದನೆಂದು ತಾತ್ಪರ್ಯ). ೧೫. 'ಹೀಗೆಂದೆನ್ನುವ ಕಥೆಯನ್ನು ಕೇಳಿದ್ದೇವೆ. ಇಂದು ಈ ಲೋಕದಲ್ಲಿ ಚೌಡಯ್ಯನು ಶಿವನಿಗೆ ಊಟವನ್ನು ಮಾಡಿಸಿದನು. (ಅದನ್ನು) ಕಂಡೆವು.' ಅಬ್ಬಬ್ಬ! ಎಂದು ಅವರೆಲ್ಲ ಚೆನ್ನಾಗಿ ಸ್ತೋತ್ರ ಮಾಡಿದರು. ವ॥ ಆಗ—೧೬. ಆಗ ಬಸವರಸನು ಬಂದು, ಚೌಡಯ್ಯನ ಪಾದಕಮಲಗಳಿಗೆ ನಮಸ್ಕರಿಸಿ ಸಂತೋಷದಿಂದ ಹೊಗಳುತ್ತಿದ್ದನು. (ಹೀಗೆ) ಆ ಚೌಡಯ್ಯನು ಆ ಅಸದೃಶವೆನಿಸಿದ ಕಲ್ಯಾಣ ಪಟ್ಟಣದಲ್ಲಿ

ಮತ್ತಮೊರ್ವನಸವಮಾನನಲ್ಲಿ ಸ
ದ್ವೃತ್ತನೀಶಪದಭಕ್ತಿತತ್ಪರಂ
ಮತ್ತವಾದಿಚಯಹೃದ್ಭಯಂಕರೋ
ದಾತ್ತಶೌರ್ಯನಿಧಿ ಲೋಕಪಾವನಂ ೧೭

ಅನಘನನಾಮಯಂ ವಿಲಯದೂರನಪಾರಕೃಪಾಬ್ಧಿಚಂದ್ರಿಕಾ
ರ್ಜುನನಿಜಕೀರ್ತಿಪೂರಿತದಿಶಾಂತನನಂತಮಹತ್ವಶಾಲಿ ಸ
ಜ್ಜನನುತಿಪಾತ್ರನುಜ್ಜ್ವಳಚರಿತ್ರನುದಾತ್ತಕಿರಾತರುದ್ರನೆಂ
ದೆನಿಸಿ ತೆಲುಂಗ ಜೊಮ್ಮಯೆಸರಿಂದೆಸೆದಿರ್ಪನಖರ್ವವೈಭವಂ ೧೮

ಕಲಿಕಲುಷಹರಂ ಜಂಗಮ
ವಿಲಸತ್ಪದಭಕ್ತನಜಿತನನುಪಮಸುಗುಣೋ
ಜ್ಜ್ವಲನಮಿತಚಿದ್ಘನಾಸ್ಪದ
ನಲಘುತರಂ ವಿಧಿನಿಷೇಧವಿರಹಿತಚರಿತಂ ೧೯

ಬೆಂಬಿಡದೆ ಸುರಿಯೆ ಸಂತಸ
ಗಂಬನಿ ಪುಳಕಂಗಳುಣ್ಮೆ ಪರವಶಭಾವಂ
ಮುಂಬರಿಯೆ ಪೂಜಿಸುತೆ ನಿಟಿ
ಲಾಂಬಕನಂ ಭಕ್ತಿಭಾವದಿಂ ಜೊಮ್ಮಯ್ಯಂ ೨೦

ಹೆಚ್ಚಾದ ಸಂತೋಷದಿಂದಲೂ, ಯಶಸ್ಸಿನಿಂದಲೂ ಶೋಭಿಸುತ್ತಿದ್ದನು. ೧೭–೧೮. ಮತ್ತು ಆ ಕಲ್ಯಾಣ ಪಟ್ಟಣದಲ್ಲಿ ಒಬ್ಬ ಅಸದೃಶನಾದ, ಒಳ್ಳೆಯ ನಡತೆಯುಳ್ಳ, ಈಶ್ವರ ಪಾದಭಕ್ತಿಯಲ್ಲಿ ತತ್ಪರನಾದ, ಮದೋನ್ಮತ್ತರಾದ ಪರವಾದಿಗಳ ಸಮೂಹದ ಮನಸ್ಸಿಗೆ ಭೀತಿಯನ್ನುಂಟುಮಾಡುವ, ಉತ್ಕೃಷ್ಟ ಪರಾಕ್ರಮದ ನಿಧಿಯೆನಿಸಿದ, ಲೋಕಕ್ಕೆ ಪಾವನನೆನಿಸಿದ, ಪಾಪ ದೂರನಾದ, ರೋಗ ರಹಿತನಾದ, ನಾಶಕ್ಕೆ ದೂರನಾದ, ವಿಶೇಷ ಕೃಪಾಸಾಗರನೆನಿಸಿದ, ಬೆಳದಿಂಗಳೋಪಾದಿಯಲ್ಲಿರುವ ಶುಭ್ರವಾದ ತನ್ನ ಕೀರ್ತಿ ವಿಶೇಷವನ್ನು ದಿಗಂತದವರೆಗೂ ತುಂಬಿಸಿದ್ದ, ಸತ್ಪುರುಷರ ಶ್ಲಾಘನೆಗೆ ಪಾತ್ರನಾದ, ಪ್ರಕಾಶಮಾನ ಚರಿತ್ರೆಯುಳ್ಳ, ಶ್ರೇಷ್ಠನಾದ ಶಬರ ರೂಪ ಧರಿಸಿದ ಶಿವನೋ ಎಂದೆನಿಸಿದ, 'ತೆಲುಗು ಜೊಮ್ಮಯ್ಯ' ಎಂಬ ಹೆಸರಿನ ಅಧಿಕ ವಿಭವದಿಂದ ಕೂಡಿದ ಭಕ್ತನು ಶೋಭಿಸುತ್ತಿದ್ದನು. ೧೯–೨೦. ಕಲಿಕಾಲದ ಕಾಲುಷ್ಯವನ್ನು (ಪಾಪವನ್ನು) ನಾಸಮಾಡುವ, ಜಂಗಮದ ಪ್ರಕಾಶಿಸುವ ಪಾದ ಭಕ್ತಿಯುಳ್ಳ, ಇನ್ನೊಬ್ಬರಿಂದ ಜಯಿಸಲಶಕ್ಯನಾದ, ಅನುಪಮ ಸದ್ಗುಣಗಳಿಂದ ಶೋಭಿಸುವ, ಅಪರಿಮಿತವಾಗಿಯೂ ಉತ್ಕೃಷ್ಟವಾಗಿಯೂ ಇರುವ ಜ್ಞಾನಕ್ಕೆ ಆಶ್ರಯನಾದ, ತುಂಬಾ ಮಹತ್ವವನ್ನುಳ್ಳ. ವಿಧಿ–ನಿಷೇಧ ರಹಿತನಾದ ಆ ಜೊಮ್ಮಯ್ಯನು, ಧಾರಾಕಾರವಾಗಿ ಆನಂದಬಾಷ್ಪಗಳನ್ನು ಸುರಿಸುತ್ತ ರೋಮಾಂಚನಗೊಂಡು, ಪರವಶನಾಗಿ, ಶಿವನನ್ನು

ಚರಲಿಂಗದಾಸಭಾವ
ಸ್ಫುರಿತಂ ಸುಖಮಿರ್ದನಿತ್ತಲತಿರುಚಿರ ಶ್ರೀ
ಗಿರಿಯೊಳವಿರಳ ಸಮಾಧಿಯೊ
ಳಿರುತೆ ಶಿವಾನಂದನೆಂಬ ಮುನಿವರನೊರ್ವಂ ೨೧

ಪದನಖರಾಳಿ ಬೇರ್ವರಿಯೆ ಪಾಣಿನಖಾವಳಿ ನೀಳ್ದು ಬಳ್ವಳಂ
ಪುದಿದಿರೆ ಬೆಳ್ಳಿವಳ್ಳಿಗಳವೋಲದರುಜ್ವಳರೋಚಿ ಸುತ್ತಲುಂ
ಪದೆದು ಮುಸುಂಕೆ ಕೇಶಚಯಮಂಗಮನಾವರಿಸುತ್ತೆ ತೋಱೆ ಪಿಂ
ಗದೆ ಶಿವಲಿಂಗದಂಘ್ರಿಯನೆ ಜಾನಿಸುತಿರ್ದನತೀವ ಭಕ್ತಿಯಿಂ ೨೨

ಆ ಮುನಿಯ ಪಾದಸೇವೆಯ
ನಾಮೋದದಿನೆಸಗುತಿರ್ಪ ತದ್ವರ ಶಿಷ್ಯಂ
ಭೂಮಹಿತಕಂದಮೂಲ
ಸ್ತೋಮಂದರಲೆಂದು ತಳರುತುಂ ಕಟ್ಟಿದಿರೊಳ್ ೨೩

ಬಿನದಂಬೆತ್ತೇಳ್ತರುತ್ತುಂ ಯುವತಿ ಸಹಿತ ಗಂಧರ್ವಸಂದೋಹಮಾ ಪಿಂ
ಪಿನ ಯೋಗಾರೂಢ ಯೋಗೀಶ್ವರನನುರುಜಟಾಪ್ರಾವೃತಸ್ಥೈರ್ಯಭಾಸ್ವ
ತ್ತನುವಂ ಕಂಡಿಲ್ಲಿ ಚಿತ್ರಂ ಮುಸಿಪನೆಸೆದಪಂ ವೃದ್ಧಭಲ್ಲೂಕದಂತೆಂ
ದು ನಿತಾಂತಂ ಪೊಯ್ದು ಕೆಯ್ಯಂ ಮಿಗೆ ನಗೆ ಮುಳಿಸಿಂ ನೋಡುತಿಂತೆಂದನಾಗಳ್ ೨೪

ಭಕ್ತಿಭಾವದಿಂದ ಪೂಜಿಸುತ್ತ ಮುಂದುವರಿಯುತ್ತಿದ್ದನು. ೨೧-೨೨. ಹೀಗೆ ಚರಲಿಂಗ ಮೂರ್ತಿಗಳಲ್ಲಿ ದಾಸನೆಂಬ ಭಾವದಿಂದ ಪ್ರಕಾಶಿಸುತ್ತಿದ್ದ ಜೊಮ್ಮಯ್ಯನು ಸುಖದಿಂದ ಇರುತ್ತಿದ್ದನು. (ಇತ್ತ) ಅತಿ ಮನೋಹರವಾದ ಶ್ರೀಶೈಲ ಪರ್ವತದಲ್ಲಿ 'ಶಿವಾನಂದ' ಎಂಬ ಹೆಸರಿನ ಓರ್ವ ಮುನಿಶ್ರೇಷ್ಠನು ಅವಿಚ್ಛಿನ್ನವಾದ ಶಿವಯೋಗ ಸಮಾಧಿಯಲ್ಲಿ ಇರುವವನಾಗಿದ್ದನು. (ಅವನ) ಪಾದದ ಉಗುರುಗಳ ಪಙ್ಕ್ತಿಯು ಬೇರುಬಿಟ್ಟಿದ್ದವು. ಕೈಯಲ್ಲಿದ್ದ ಉಗುರುಗಳು ಉದ್ದವಾಗಿಯೂ ಬಲವಾಗಿಯೂ ಹೊರ ಹೊಮ್ಮಿ ಬೆಳೆದಿದ್ದವು. ಆ ಉಗುರುಗಳ ಪ್ರಕಾಶಮಯ ಕಾಂತಿಯು ಬೆಳ್ಳಿಯ ಲತೆಗಳ ಹಾಗೆ ಸುತ್ತೆತ್ತಲೂ ಹರಡಿದ್ದವು. ಕೂದಲುಗಳ ಸಮೂಹವು ಶರೀರವನ್ನೆಲ್ಲ ಆವರಿಸಿ ತೋರುತ್ತಿರಲು ತಪ್ಪದೆ ಅವನು ಅತಿ ಭಕ್ತಿಯಿಂದ ಶಿವಲಿಂಗದ ಪಾದವನ್ನು ಧ್ಯಾನಿಸುತ್ತ ಇದ್ದನು. ೨೩–೨೪. ಇಂಥ ಮುನಿಯ ಪಾದ ಸೇವೆಯನ್ನು ಸಂತೋಷದಿಂದ ಮಾಡುತ್ತಿದ್ದ ಆ ಮುನಿಶ್ರೇಷ್ಠನ ಶಿಷ್ಯನೊಬ್ಬನು ಭೂಮಿಯಲ್ಲಿ ತುಂಬಿರುವ ಶ್ರೇಷ್ಠವಾದ ಗಡ್ಡೆಗೆಣಸುಗಳ ಸಮೂಹವನ್ನು ತರುವುದಕ್ಕೆಂದು ಹೋಗುತ್ತ ಎದುರಿನಲ್ಲಿಯೇ ಪತ್ನೀ ಸಮೇತರಾದ ಗಂಧರ್ವರ ಸಮೂಹವು ವಿನೋದಗೊಂಡು ಬರುತ್ತಿತ್ತು. (ಆ ಗಂಧರ್ವರು) ಉತ್ಕೃಷ್ಟವಾದ ಜಡೆಗಳಿಂದ ಸುತ್ತುವರಿಯಲ್ಪಟ್ಟ, ಸ್ಥೈರ್ಯದಿಂದ ಪ್ರಕಾಶಮಾನವಾದ ಶರೀರವುಳ್ಳ ಆ ಹಿರಿಮೆವೆತ್ತ ಯೋಗಾರೂಢನಾದ ಋಷಿಶ್ರೇಷ್ಠನನ್ನು ಕಂಡು, 'ಓಹೋ! ಇಲ್ಲಿ ಆಶ್ಚರ್ಯ! (ಓರ್ವ) ಋಷಿಯು ಮುದಿಕರಡಿ

ಎಲೆ ದುಶ್ಚೇಷ್ಟ ಕನಿಷ್ಠಮಾನಸ ಮಹಾಕಾಮಾಂಧ ಗಂಧರ್ವ ಸಂ
ಕುಲಮೇ ಕೊರ್ವಿದ ಗರ್ವದಿಂ ಘನಶಿವಾನಂದಾಖ್ಯಯೋಗೀಂದ್ರನಂ
ವಿಲಯಾತೀತ ಶಿವೈಕ್ಯಭಾವಯುತನಂ ಭಲ್ಲೂಕದಂತಿರ್ಪನೆಂ
ದುಲಿಯಲ್ತಕ್ಕುದೆ ನೋಡದಾತನ ಮಹಾಮಾಹಾತ್ಮ್ಯವಿಸ್ತಾರಮಂ ೨೫

ಪರಮತಪೋಧನನಂ ಬ
ಲ್ಗರಡಿಯವೊಲಿನುತ್ತೆ ನುಡಿದ ಕತದಿಂ ಧರೆಯೊಳ್
ಕರಡಿಗಳಾಗಿರಿ ನೀವೆಂನು
ತಿರದಿತ್ತಂ ಘೋರಶಾಪಮಂ ಮುನಿತನಯಂ ೨೬

ವ॥ ಎನೆ ಕೇಳ್ದು ಗಂಧರ್ವರ್ನಡನಡಂ ನಡುಗಿ ಬೆಬ್ಬಳೆ[1]ವೋಗಿ ಪರಿತಂದು ಪದದೊಳ್ಮೆಯ್ಯಿಕ್ಕಿ ನಿಂದು ಕೆಯ್ಯಂ ಮುಗಿದು—

ಬಕವೃಂದಂ ಬಲ್ಲುದೇ ಹಂಸನ ಮಹಿಮೆಯನಂಭೋಜಸೌರಭ್ಯಮಂ ಭೇ
ಕಕದಂಬಂ ಬಲ್ಲುದೇ ಭಾನುವಿನ ಘನಲಸತ್ತೇಜಮಂ ಬಲ್ಲುದೇ ಕೌ
ಶಿಕಯೂಥಂ ಸಾರಕಂಠೀರವದಳವನದೇಂ ಬಲ್ಲುದೇ ದೇವ ಪೇಳ್ಗಂ
ಬುಕಸಂಘಂ ಶಂಭುಭಕ್ತೋನ್ನತಿಯ ಬಗೆಯನೇಂ ಬಲ್ಲವೇ ದುರ್ಮದಾಂಧರ್ ೨೭

ಯಂತೆ ಶೋಭಿಸುತ್ತಿದ್ದಾನೆ' ಎಂದು ಗಟ್ಟಿಯಾಗಿ ಕೈ ಚಪ್ಪಾಳೆಯನ್ನು ಹಾಕಿ, (ಹಾಸ್ಯ ಮಾಡಿ) ವಿಶೇಷವಾಗಿ ನಗುತ್ತಿರಲಾಗಿ, (ಶಿಷ್ಯನಾದ) ಆ ಋಷಿಯು, ಕೋಪದಿಂದ ಅವರನ್ನು ನೋಡುತ್ತ ಹೀಗೆ ಅಂದನು : ೨೫. 'ಎಲೈ ಕೆಟ್ಟ ಚೇಷ್ಟೆಯ, ನೀಚ ಮನಸ್ಸಿನ, ಕಾಮಾಂಧನಾದ ಗಂಧರ್ವ ಸಮೂಹವೇ, ಗರ್ವದಿಂದ ಕೊಬ್ಬಿ, ನಾಶ ರಹಿತನೂ, ಶಿವೈಕ್ಯ ಚಿತ್ತವುಳ್ಳವನೂ ಆದ ಶ್ರೇಷ್ಠ ಶಿವಾನಂದ ಯೋಗೀಶ್ವರನೆಂಬ ಮುನಿಯನ್ನು, ಕರಡಿಯ ಹಾಗಿರುವವನೆಂದು ಅವನ ಮಹಿಮಾತಿಶಯವನ್ನು ನೋಡದೆ (ಹಾಸ್ಯ ಮಾಡಿ) ಕೂಗುತ್ತಿರುವುದು ಯೋಗ್ಯವೇ ?' ೨೬. 'ಪರಮ ತಪೋಧನನಾದ ಇವನನ್ನು ದೊಡ್ಡ ಕರಡಿಯಂತೆ ಇರುವವನೆಂದು ನುಡಿದ ಕಾರಣದಿಂದ ನೀವು ಭೂಲೋಕದಲ್ಲಿ ಕರಡಿಗಳಾಗಿರಿ.' ಎಂದು ತಪ್ಪದೆ ಆ ಮುನಿಕುಮಾರ (ಶಿಷ್ಯ)ನು ಘೋರ ಶಾಪವನ್ನು ಕೊಟ್ಟನು. ವ॥ ಹೀಗೆ ಶಾಪ ಕೊಟ್ಟುದನ್ನು ಕೇಳಿ ಗಂಧರ್ವರು ನಡನಡ ನಡುಗಿ, ಬೆರಗಾಗಿ, ಓಡಿ ಬಂದು ಆ ಋಷಿಯ ಪಾದಕಮಲಗಳ ಮೇಲೆ ಬಿದ್ದು, ನಿಂತು ಕೈ ಮುಗಿದು—೨೭. 'ದೇವ, ಕೊಕ್ಕರೆಗಳ ಸಮೂಹವು ಹಂಸಗಳ ಮಹಿಮೆಯನ್ನು ತಿಳಿಯುವುದೇ ? ಕಪ್ಪೆಗಳ ಸಮೂಹವು ಕಮಲ ಪುಷ್ಪದ ಪರಿಮಳವನ್ನು ಬಲ್ಲವೇ ? ಗೂಗೆಗಳ ಸಮೂಹವು ಸೂರ್ಯನ ಅತ್ಯಂತ ಪ್ರಕಾಶಮಾನವಾದ ತೇಜಸ್ಸನ್ನು ಬಲ್ಲವೇ ? ನರಿಗಳ ಸಮೂಹವು ಶ್ರೇಷ್ಠವಾದ ಸಿಂಹದ ಪರಾಕ್ರಮವನ್ನು ಬಲ್ಲವೇ ? ಹೇಳು. ಕೆಟ್ಟ

1 ಳ(ಮು)

ಅದಱಿಂದಾಮಱಿಯದೆ ಮಾ
ಡಿದ ತಪ್ಪಂ ಮಱೆದು ದೇವ ನೀವಿತ್ತೀ ಶಾ
ಪದ ಮೋಚನಮಂ ಪರಿಪೂ
ರ್ಣ ದಯಾನಿಧಿ ಕರುಣಿಸೆಂದು ಮಗುಳ್ದೆಱಗಿರ್ದರ್ ೨೮

ವ॥ ಆಗಳಾ ತಾಪಸಕುಮಾರಂ ತಾನಿತ್ತಮಂಥ್ಯಾಶಾಪಂ ಪಱಿವಡುವಂದಮಂ ನೆನೆದು—

ಎಲೆ ಗಂಧರ್ವರೆ ಧರೆಯೊ
ಳ್ತೆಲುಂಗ ಜೊಮ್ಮಣ್ಣನೆಂಬ ಕಾರಣಪುರುಷಂ
ವಿಲಸತ್ಕಲ್ಯಾಣಪುರ
ಸ್ಥಳದೊಳ್ಕಂಗೊಳಿಪನಮಿತಮಹಿಮಾವರಣಂ ೨೯

ಅವನ ಕರದಿಂದೆ ಮೃತಿ ಸಂ
ಭವಿಸೆ ವಲಂ ನಿಮಗೆ ಶಾಪಮೋಚನಮಕ್ಕುಂ
ಶಿವಕರದಿನಳಿದ ದಾನವ
ನಿವಹಕ್ಕೆಂತಂತೆ ಮೋಕ್ಷಗತಿ ದೊರೆಕೊಳ್ಗುಂ ೩೦

ನಿಯತಂ ಕಲ್ಯಾಣದ ಸಾ
ರ್ಚೆಯೊಳೊಪ್ಪುವ ಕಾಡೊಳೆಯ್ದೆ ಕರಡಿಯ ರೂಪಿಂ
ಭಯಮಿಲ್ಲದೊಗೆವುದೆಂದಾ
ದಯಾಕರಂ ಬೆಸಸೆ ಬಂದು ಪುಟ್ಟಿದರದಱೊಳ್ ೩೧

ಗರ್ವದಿಂದ ಕುರುಡರಾದ ನಾವು ಶಿವಭಕ್ತಿಯ ಆಧಿಕ್ಯದ ರೀತಿಯನ್ನೆತ್ತ ಬಲ್ಲೆವು ? ೨೮. 'ದೇವ, ಪರಿಪೂರ್ಣ ದಯಾನಿಧಿಯೇ, ಆದ ಕಾರಣ ನಾವು ತಿಳಿಯದೆ ಮಾಡಿದ ತಪ್ಪನ್ನು ಮರೆತು ನೀವು ಈಗ ಕೊಟ್ಟ ಶಾಪವನ್ನು ವಿಮೋಚನಗೊಳಿಸಿ ಕರುಣಿಸಬೇಕು.' ಎಂದು ಪುನಃ ನಮಸ್ಕರಿಸಿದರು. ವ॥ ಆಗ ಆ ತಾಪಸ ಕುಮಾರನು ತಾನು ಕೊಟ್ಟ ಅವರ ಶಾಪವು ವಿಮೋಚನೆಗೊಳ್ಳುವ ರೀತಿಯನ್ನು ನೆನೆಯುತ್ತ ೨೯–೩೦. ಎಲೆ ಗಂಧರ್ವರೇ, ಈ ಲೋಕದಲ್ಲಿ ಅಮಿತ ಮಹಿಮೆಯಿಂದ ಕೂಡಿದ ಕಾರಣ ಪುರುಷನಾದ ತೆಲುಗು ಜೊಮ್ಮಯ್ಯನೆಂಬುವನು ಪ್ರಕಾಶಿಸುವ ಕಲ್ಯಾಣ ಪಟ್ಟಣದಲ್ಲಿ ಶೋಭಿಸುತ್ತಿದ್ದಾನೆ. ಅವನ ಕೈಯಿಂದ ನಿಮಗೆ ಸಾವು ಸಂಭವಿಸಲಾಗಿ, ನಿಶ್ಚಯವಾಗಿ ಶಾಪವಿಮೋಚನೆಯಾಗುವುದು. ಶಿವನ ಕೈಯಿಂದ ಸತ್ತ ರಾಕ್ಷಸರ ಸಮೂಹಕ್ಕೆ ಹೇಗೋ ಹಾಗೆ ನಿಮಗೆ ಮೋಕ್ಷ ಮಾರ್ಗವು (ಅವನ ಕೈಯಿಂದ ಸತ್ತಮೇಲೆ) ಉಂಟಾಗುವುದು. ೩೧. (ನೀವು) ಕಲ್ಯಾಣ ನಗರದ ಸಮೀಪದಲ್ಲಿರುವ ಶೋಭಿಸುವ ಅರಣ್ಯದಲ್ಲಿ ಹೋಗಿ ಕರಡಿಯ ರೂಪದಲ್ಲಿ ಭಯವಿಲ್ಲದೆ ನಿಶ್ಚಯವಾಗಿ ಹುಟ್ಟುವುದು, ಎಂದು ಆ ದಯಾಮೂರ್ತಿಯಾದ ಮುನಿಪುತ್ರನು ಆಜ್ಞಾಪಿಸಲಾಗಿ, ಅವರು ಆ (ಕಲ್ಯಾಣ ನಗರದ ಸಮೀಪದ) ಕಾಡಿನಲ್ಲಿ

ವ॥ ಅಂತವರ್ಭಲ್ಲೂಕಾಕೃತಿಯಿಂಪುಟ್ಟಿ ತದ್ವಿಪಿನಾಂತರಾಳದೊಳ್ತೆಲುಂಗ ಜೊಮ್ಮಯ್ಯನ ಬರವಂ ಬಯಸುತ್ತುಮಿರ್ಪಿನಮೊಂದುದಿವಸಂ—

ಆ ತೆಲುಂಗ ಜೊಮ್ಮನಾ ಮಹಾವನಾಂತರಕ್ಕೆ ಸಂ
ಪ್ರೀತಿಯಿಂದೆ ಬಂದು ಪುಷ್ಪಪತ್ರಪೂಗವಂ ಪುರಾ
ರಾತಿಪೂಜೆಗೆಂದು ಕೊಯ್ವ ವೇಳೆಯಲ್ಲಿ ಶಾಪಸಂ
ಜಾತ ಭಲ್ಲರೂಪರಲ್ಲಿ ಕಂಡರಾ ಮಹಾತ್ಮನಂ ೩೨

ಮುನಿ ಮುನ್ನ ಪೇಳ್ದ ಕುಱುಪಂ
ನೆನೆದೀತನೆ ಜೊಮ್ಮಯಾಖ್ಯನಪ್ಪಂ ದಿಟಮೆಂ
ದೆನುತೊಲ್ದು ಸುತ್ತಿಮುತ್ತಿದ
ರನಘನ ಮುಂದಣ್ಗೆ ನಡೆಯಲೀಯದೆ ಕಡುಪಿಂ ೩೩

ವ॥ ಅವಱೊಳೊಂದು ಬಲ್ಗರಡಿ ಮುಂದಣ್ಗೆವಂದು ಪೊಡಮಟ್ಟು ಪೊಗಳ್ದು—

ಕರಡಿಯ ಮಾಳ್ಕೆಯಿಂ ಮುನಿಪನಿರ್ದಪನೆಂದವಿವೇಕಭಾವದೆ
ಳ್ತರದೆ ಮಹಾತ್ಮನಂ ನುಡಿದ ವಾಚಿಕದೋಷದೆ ಶಾಪಮಾಂತು ತ
ದ್ವರಮುನಿಪುತ್ರನಿಂ ಕರಡಿಯಾಗಿರುತಿರ್ದಪೆವಿಲ್ಲಿ ಮುಂದೆ ಗಂ
ದರರೆನಿಸಿರ್ಪೆವಯ್ಯ ಭವದೀಯ ಕರಾಗ್ರಶರಾಗ್ರಪಾತದಿಂ ೩೪

ಮಡಿಯೆ ವಿಶಾಪಮಕ್ಕುಮೆಮಗುನ್ನತ ಮೋಕ್ಷಮೆ ಸಾರ್ಗುಮಲ್ತೆನಿ
ಮ್ಮಡಿಗಳೊಱಲ್ದು ಮೇಣದಱಿನಾಡುತೆ ಬೇಂಟೆಯನೆಮ್ಮ ರಕ್ಷಿಸ
ಲ್ನಡೆಯಲೆವೇಳ್ಕುಮಿಲ್ಲಿಗಿದನರ್ಥಿಪೆಮೆಂದೆನೆ ಲೇಸೆನುತ್ತೆ ಪೆಂ
ಪಡರ್ದಿರೆ ಸಂತಮಿಟ್ಟುರುಚಿದಕ್ಷಿಯೊಳೀಕ್ಷಿಸಿ ತತ್ಪ್ರಕಾರಮಂ ೩೫

ನೆನೆವುತ್ತುಂ ನಿಜಮಂದಿರಕ್ಕೆ ನಲವಿಂ ಬಂದುಂದು ತಾಂ ತಂದ ವ
ನ್ಯನವೀನಪ್ರಸವಂಗಳಿಂ ಭಜಿಸುತುಂ ಭಾಳಾಕ್ಷನಂ ಮಾಣದಾ

ಹುಟ್ಟಿದರು. ವ॥ ಹೀಗೆ ಆ ಗಂಧರ್ವರು ಭಲ್ಲೂಕಗಳ ಆಕಾರದಲ್ಲಿ ಹುಟ್ಟಲಾಗಿ, ಆ ಕಾಡಿನಲ್ಲಿ ತೆಲುಗು ಜೊಮ್ಮಯ್ಯನ ಬರುವಿಕೆಯನ್ನು ಎದುರು ನೋಡುತ್ತ ಇರುತ್ತಿರುವಾಗ ಒಂದು ದಿವಸ ೩೨. ಆ ತೆಲುಗು ಜೊಮ್ಮಯ್ಯನು ಆ ಅರಣ್ಯ ಪ್ರದೇಶಕ್ಕೆ ಪ್ರೀತಿಯಿಂದ ಬಂದು ಹೂವು, ಪತ್ರೆಗಳ ಸಮೂಹವನ್ನು ಶಿವ ಪೂಜೆಗೆಂದು ಕೊಯ್ಯುವ ಸಮಯದಲ್ಲಿ ಶಾಪದಿಂದ ಹುಟ್ಟಿದ ಕರಡಿಯ ಆಕಾರದ ಗಂಧರ್ವರು ಅಲ್ಲಿ ಆ ಮಹಾತ್ಮನನ್ನು ಕಂಡರು. ೩೩. ಮುನಿಯು ಮೊದಲು ಹೇಳಿದ ಗುರುತನ್ನು ನೆನೆದು 'ಈತನೇ ನಿಶ್ಚಯವಾಗಿ ತೆಲುಗು ಜೊಮ್ಮಯ್ಯನೆಂಬ ಹೆಸರಿನವನಾಗಿರಬೇಕು.' ಎಂದೆನ್ನುತ್ತ ಪ್ರೀತಿಯಿಂದ ಆ ಪಾಪ ಶೂನ್ಯನಾದ ಸ್ವಾಮಿಯನ್ನು ಸುತ್ತಿ ಮುತ್ತಿ, ಮುಂದಕ್ಕೆ ಅವನನ್ನು ನಡೆಯಲು ಅವಕಾಶಕೊಡದೆ ಶೌರ್ಯದಿಂದ (ತಡೆದರು). ವ॥ ಅವುಗಳಲ್ಲಿ ಒಂದು ದೊಡ್ಡ ಮುದಿ ಕರಡಿಯು ಮುಂದೆ ಬಂದು, ನಮಸ್ಕಾರಮಾಡಿ ಹೊಗಳಿ ೩೪–೩೬. 'ಅಯ್ಯಾ, ಕರಡಿಯ ರೂಪದಿಂದ ಈ ಮುನೀಶ್ವರನಿದ್ದಾನೆ ಎಂದು ಅವಿವೇಕದ ಆಧಿಕ್ಯದಿಂದ ಆಡಿದ ಮಾತಿನಿಂದುಂಟಾದ ಪಾಪದಿಂದ, ಆ ಮುನಿ

ದಿನಮಂ ನೂಂಕಿ[1] ಪಳಚ್ಚನರ್ಕನೊಗೆವಲ್ಲಿಂ ಮುನ್ನಮೆಳ್ದೀಶನಂ
ಮನಮೊಲ್ದರ್ಚಿಸಿ ತತ್ಪ್ರಸಾದರಸಮಂ ಕೆಯ್ಕೊಂಡು ಸಂಪ್ರೀತಿಯಿಂ ೩೬

ಅಳವಡೆ ಪಸುರಂಗಿಗೆಯಂ
ತಳೆದೊಳ್ಗರ್ಪಿಡಿದ ಚಿಂದಿಯಂ ಸುತ್ತಿ ಶರಾ
ವಳಿ ಪುದಿದ ಬೆನ್ನ ಪೊಸಬ
ತ್ತಳಿಕೆ ವಿರಾಜಿಸೆ ಮಯೂರಪಿಂಛಾಂಚಿತಮಂ ೩೭

ಧನುವಂ ಕೆಯ್ಕೊಂಡು ಗೇಣಂ ತಳೆದು ಕಟಿಯೊಳೋರಂತೆ ಮೆಟ್ಟುತ್ತೆ ಕೆರ್ಪಂ
ಸುನಿಗಳ್ಪಿಂದೆಯ್ದೆ ಕೂರ್ಪಿಂದೊಡವರೆ ಕಲಿವೇಡರ್ಕಳೇಳ್ತಂದು ತತ್ಕಾ
ನನಮಂ ತಾಂ ಪೊಕ್ಕು ವೀಕ್ಷಿಸುವ ಸಮಯದೊಳ್ ಪಿಂಡುಪಿಂಡಾಗಿ ಭಲ್ಲೂ
ಕನಿಕಾಯಂ ಬಂದು ಸಾರ್ದಪ್ಪಳಿಸಿ ಬಳಸೆ[2] ಕಂಡುರ್ವಿದಂ ಬೊಮ್ಮಿದೇವಂ ೩೮

ಶ್ರೇಷ್ಠನ ಶಿಷ್ಯನಿಂದ ಶಾಪ ಹೊಂದಿ ಕರಡಿಗಳಾಗಿ ಈ ಕಾಡಿನಲ್ಲಿ (ನಾವು) ಇದ್ದೇವೆ. ಮುಂಚೆ ಗಂಧರ್ವರೆನಿಸಿ ಇರುತ್ತೇವೆ. ಆದ್ದರಿಂದ ನಿನ್ನ ಕಯ್ಯಲ್ಲಿ ಹಿಡಿದ ಬಾಣದ ಹೊಡೆತದಿಂದ ಸಾಯಲು ವಿಶಾಪವಾಗುವುದು. ಉನ್ನತವಾದ ಮೋಕ್ಷವೇ ನಮಗೆ ಉಂಟಾಗುವುದು. ಆದ್ದರಿಂದ ಪೂಜ್ಯ ಪಾದರಾದ ತಾವು ಬೇಟೆಯನ್ನಾಡುತ್ತ, ನಮ್ಮನ್ನು ರಕ್ಷಣೆ ಮಾಡುವುದಕ್ಕೆ ಇಲ್ಲಿಗೆ ದಯ ಮಾಡಿಸಬೇಕು. ಇದನ್ನು ತಮ್ಮಲ್ಲಿ ಯಾಚಿಸುತ್ತಿದ್ದೇವೆ.' ಎನ್ನಲಾಗಿ 'ಒಳ್ಳೆಯದು' ಎಂದು ಅವರ ಮನಸ್ಸಿಗೆ ಸಮಾಧಾನವಾಗುವಂತೆ ಸಂತೈಸಿ ಆ ರೀತಿಯನ್ನು (ಅವರು ಕರಡಿಗಳಾದ ರೀತಿಯನ್ನು) ಉತ್ಕೃಷ್ಟವಾದ ಜ್ಞಾನ ದೃಷ್ಟಿಯಿಂದ ನೋಡಿ (ಹಿಂದಿನ ವೃತ್ತಾಂತವನ್ನೆಲ್ಲ) ನೆನೆದು ಆ ದಿವಸ ತನ್ನ ಮನೆಗೆ ಬಂದನು. ತಾನು ತಂದ ಅರಣ್ಯದ ನೂತನವಾದ ಪುಷ್ಪಗಳಿಂದ ಶಿವನನ್ನು ಅರ್ಚಿಸುತ್ತ ಚೆನ್ನಾಗಿ ಆ ದಿನವನ್ನು ಕಳೆದು, (ಮರುದಿನ) ಬೆಳಗಿನ ಸೂರ್ಯನು ಪಳಕ್ಕನೆ ಹುಟ್ಟುವ ಸಮಯಕ್ಕಿಂತ ಮುಂಚೆಯೇ ಎದ್ದು, ಈಶ್ವರನನ್ನು ಮನ ಮುಟ್ಟಿ ಪೂಜಿಸಿ, ಆತನ ಪ್ರಸಾದವನ್ನು ಅತಿ ಪ್ರೀತಿಯಿಂದ ಸ್ವೀಕರಿಸಿದನು. ೩೭. ಒಪ್ಪುವ ಹಾಗೆ ಹಸಿರು ಬಣ್ಣದಂಗಿಯನ್ನು ತೊಟ್ಟು, ಒಳ್ಳೆಯ ಕಪ್ಪಾದ ಚಿಂದಿಯ ಬಟ್ಟೆಯನ್ನು ತಲೆಗೆ ಸುತ್ತಿದನು. ನವಿಲು ಗರಿಯ ಪಿಂಛದಿಂದ ಕೂಡಿದ ಬಾಣ ಸಮೂಹಗಳಿಂದ ತುಂಬಿದ ಬತ್ತಳಿಕೆಯನ್ನು ಬೆನ್ನಿನಲ್ಲಿ ಶೋಭಿಸುವಂತೆ ಕಟ್ಟಿದನು. ಬಿಲ್ಲನ್ನು ಕೈಯಲ್ಲಿ ಹಿಡಿದು, ಖಡ್ಗವನ್ನು ನಡುವಿನಲ್ಲಿ ಚೆನ್ನಾಗಿ ಬಿಗಿದುಕೊಂಡು, ಕೆರಗಳನ್ನು (ಕಾಲಲ್ಲಿ) ಮೆಟ್ಟಿ, ಹಿಂದುಗಡೆಯಲ್ಲಿ ನಾಯಿಗಳು ಅನುಸರಿಸುತ್ತ ಬರುತ್ತಿದ್ದವು, ಶೂರರಾದ ಬೇಡರುಗಳು ಪ್ರೀತಿಯಿಂದ ಒಡಗೊಂಡು ಬರುತ್ತಿದ್ದರು. ಆ (ಕರಡಿಗಳಿರುವ) ಕಾನನವನ್ನು ಪ್ರವೇಶಿಸಿ ಚೆನ್ನಾಗಿ ಈಕ್ಷಿಸುವ ಸಮಯದಲ್ಲಿ, ಕರಡಿಗಳ ಗುಂಪು ಹಿಂಡು ಹಿಂಡಾಗಿ ಬಂದು ಸಮೀಪದಲ್ಲಿಯೇ ಸುತ್ತುವರಿದು ಅಪ್ಪಳಿಸಲಾಗಿ ಆ ಬೊಮ್ಮಯ್ಯನು ಕಂಡು

[1] ಕೆ(ಮು) [2] ಸಿ (ಚ, ಗ)

ವ|| ಅಂತುರ್ವಿ ಚಂಡಧನುರ್ದಂಡಮುಂ ಜೇವಡೆದು ಕೂರ್ಗಣೆಯುಂ ತೊಡರ್ಚಿ ತೆಗೆ ನೆರೆದು ನೀಡಡಿಗೊಂಡು ನಿಂದಾಗಳ್ನೆರೆದ ಕಿರಾತರಣ್ಮೆ ಕೊರಲ ಪಾಶಮುಂ ಸಡಿಲ್ಚಿ ಚಿಟುಂಕುದೋಱಿ ಬಿಡಲೊಡನೆ ಜವಂ ಮಿಗೆ ಗಜಂಗಳಂ ಬಾಯ್ದು ಸಿಂಗಂಗಳಂತೆ ಮುಂಕೊಂಡು ತುಡುಂಕುವ ಜಾಯಿಲಂಗಳ್ಗೆ ಮೆಯ್ಗೊಡದೊಡಮುರಿದು ಪರಿವರಿದೆಸುವ ಬಿಯದರಂಬಿಂಗೆ ಶಿಲ್ಕದೆ ಕಟ್ಟಿದಿರೊಳ್ ಪಾಯ್ದು ತನ್ನ ಕೂರ್ಗಣೆಗೊಡಲನೊಪ್ಪಿಸಿ ಸಡಗರಂ ಮಿಗೆ ಭಲ್ಲೂಕಂಗಳ್ನಿಲೆ ನಿರೀಕ್ಷಿಸಿ—

ನೆಱನೆಚ್ಚು ಕೆಡಪಿದಂ ಕಱೆ
ಮಱೆಯಿಲ್ಲದ ಶರಣನೊಲ್ದವಂ ತತ್ಕ್ಷಣದೊಳ್
ಪಱಿಪಡೆ ತತ್ತನು ಮಿಱುಗುತೆ
ಮೆಱೆದರ್ಮಣಿಭರಣಭೂಷಿತರ್ಗಂಧರ್ವರ್ ೩೯

ಮಣಿದವನಂಘ್ರಿಪಂಕಜಕೆ ದೇವ ಭವತ್ಕೃಪೆಯಿಂದೆ ಪೋದುದಿಂ
ದಣೆಯುರಮೆಮ್ಮ ಜಾಡ್ಯತನು ಪೂರ್ವತನುಸ್ಥಿತಿಯಾಂತೆವೆಂದು ಸಂ
ದಣಿಸಿದ ಭಕ್ತಿಯಿಂ ಪೊಗಳ್ದು ಬಂದ ವಿಮಾನಮನೇಱಿ ಗಾದರರ್
ಫಣಿಪತಿಭೂಷನಿರ್ಪ ಪುರಿಗೆಯ್ದಿ ವಿರಾಜಿಸಿದರ್ವಿನೋದದಿಂ ೪೦

ವ|| ಅನ್ನೆವರಮಿತ್ತಲ್—

ಉಬ್ಬಿದನು. ವ|| ಈ ರೀತಿ ಉಬ್ಬಿದವನಾಗಿ, ಪ್ರಚಂಡವಾದ ಬಿಲ್ಲಿನ ಹೆದೆಯನ್ನು ಮೀಟಿ ಝೇಂಕಾರ ಮಾಡಿ, ತೀಕ್ಷ್ಣವಾದ ಬಾಣಗಳನ್ನು ಹೂಡಿ ಚೆನ್ನಾಗಿ ಜಗ್ಗಿ ಒಂದು ಕಾಲನ್ನು ಹಿಂದಕ್ಕೆ ಚಾಚಿ, (ಗುರಿಯಿಟ್ಟು ನಿಂತಾಗ) ಉಳಿದ ಕಿರಾತರು ಪೌರುಷವನ್ನು ತಾಳಿ, ನಾಯಿಗಳ ಕೊರಳ ಹಗ್ಗವನ್ನು ಸಡಿಲಿಸಿ ಕೈ ಚಿಟುಕು ಹಾಕಿ ಛೂ ಬಿಡಲು, ಕೂಡಲೇ ಮಿಗಿಲಾದ ವೇಗದಿಂದ ಆನೆಗಳ ಮೇಲೆ ಬೀಳುವ ಸಿಂಹಗಳಂತೆ ಆ ಕರಡಿಗಳನ್ನು ತರುಬಿ ಮೇಲೆ ಬೀಳುವ ನಾಯಿಗಳಿಗೆ. ಅವು ಸಿಗದಂತೆ ತಿರುತಿರುಗಿ ಓಡಿ ಓಡಿ ಹೋಗಿ, ಬಾಣ ಬಿಡುವ ಬೇಡರಬಾಣಗಳಿಗೆ ಸಿಗದೆ, ನೇರ ಎದುರಿಗೇ ಹಾಯ್ದು ತನ್ನ ತೀಕ್ಷ್ಣ ಬಾಣಕ್ಕೆ ಶರೀರವನ್ನು ಒಪ್ಪಿಸಲು ಅತಿ ಸಡಗರದಿಂದ ಕರಡಿಗಳು ನಿಲ್ಲಲಾಗಿ ನೋಡಿ, ೩೯. ಜೊಮ್ಮಯ್ಯನು ಬೇಗನೆ ಬಾಣಗಳನ್ನು ಬಿಟ್ಟು ಪ್ರೀತಿಯಿಂದ ಆ ಕರಡಿಗಳನ್ನು ನೆಲಕ್ಕುರುಳಿಸಿದನು. ಆ ಕ್ಷಣದಲ್ಲಿಯೇ ಆ ಕರಡಿಗಳ ಶರೀರವು ಬೀಳಲಾಗಿ, ಪ್ರಕಾಶಿಸುವ ರತ್ನಾಭರಣಗಳಿಂದ ಅಲಂಕೃತರಾದ ಗಂಧರ್ವರು ಶೋಭಿಸಿದರು. ೪೦. (ಆಗ) ಆ ಗಂಧರ್ವರು ಜೊಮ್ಮಯ್ಯನ ಪಾದ ಕಮಲಗಳಿಗೆ ನಮಸ್ಕರಿಸಿ 'ದೇವಾ ತಮ್ಮ ಕೃಪೆಯಿಂದ ನಮ್ಮ ಈ ಜಡತನವು ನಿಶ್ಶೇಷವಾಗಿ ಹೋಯಿತು. ಈಗ ನಾವು ಮೊದಲಿನ (ಗಂಧರ್ವರ) ಸ್ಥಿತಿಯನ್ನು ಹೊಂದಿದೆವು.' ಎಂದು ವಿಶೇಷವಾದ ಭಕ್ತಿಯಿಂದ ಕೂಡಿ, ಹೊಗಳುತ್ತ (ತಮಗಾಗಿ) ಬಂದಂಥ ವಿಮಾನವನ್ನೇರಿ, ಆ ಗಂಧರ್ವರು ಶಿವನಿರುವ ಲೋಕವನ್ನು ಕುರಿತು ಪ್ರೀತಿಯಿಂದ ಹೋದರು. ವ|| ಅಷ್ಟರಲ್ಲಿ ಇತ್ತ

ಪ್ರತಿದಿನಮಿಂತೆಱದಿಂ ಸ
ನ್ನುತಮಹಿಮಂ ಸಪ್ತಭಲ್ಲಮಂ ಕವಿಸಿ ನಿಜ
ಸ್ಥಿತಿಗೊಳಿಸಿ ಕಳುಪುತಂ ಮಸು
ಮತಿಯೊಳ್ಮೃಗಯಾವಿನೋದಮಂ ತಳೆದೆಸೆದಂ ೪೧

ಅರಸಂ ಕಿರಾತಮುಖದಿಂ
ಶರಣನ ಪರಿಗೇಳ್ದು ನೋಡಲೆಳ್ತಂದು ವನಾಂ
ತರಕದನೆಲ್ಲಮನೀಕ್ಷಿಸಿ
ಪುರಜನದೊಡನಾಳ್ದು ಚೋದ್ಯಮಂ ಕೀರ್ತಿಸಿದಂ ೪೨

ವ॥ ಆಗಳ್ತನ್ಮಹಿಮೆಯಂ ಬಲ್ಲ ಮಹಾತ್ಮರಾ ತೆಲುಗು[1] ಜೊಮ್ಮಯ್ಯನನಭೀಕ್ಷಿಸಿ ಮುದಂ ಬಡೆದು—

ಪರಮವಿವೇಕಮೆಂಬ ಪೊಳೆವಿಟ್ಟಿಯೊಳಿಟ್ಟು ವಿಮೋಹಸಿಂಹಮಂ
ನಿರುಪಮಸಂವಿದುಜ್ವಳ ಕೃಪಾಣದೆ ಖಂಡಿಸುತಜ್ಞಭಾವಸಿಂ
ಧುರಮನಡುರ್ತು ಸೀಳ್ದು ಹರನಿಷ್ಠೆಯೆನಿಪ್ಪ ಸಿತಾಸಿಯಿಂದೆ ಸಂ
ಸರಣ ಚಮೂರುಮಂ ದುರಿತಖಡ್ಗಿಯನಿಕ್ಕಿ ವಿಲೋಕನಾಸ್ತ್ರದಿಂ ೪೩

ನಿರಹಂಕಾರಮೆನಿಪ್ಪ ಬಲ್ಸರಗಿಯಿಂ ಪೋಳ್ದುನ್ಮದೋದ್ರೇಕ ಸೂ
ಕರಮಂ ಜಾನಮೆನಿಪ್ಪಡಾಯುಧದೆ ಪೊಯ್ದಾ ಕಾಲುಲಾಯೌಘಮಂ
ವರವೀರವ್ರತಶೂಲದಿಂದಿಱಿದಸದ್ವ್ಯಾಪಾರಭಲ್ಲೂಕಮಂ
ಸ್ಥಿರವೈರಾಗ್ಯಕುಠಾರದಿಂ ತಱಿವುತಕ್ಷೋದ್ರೇಕಸಾರಂಗಮಂ ೪೪

ವಿತತ ಮಹತ್ವಮೆಂಬ ಗದೆಯಿಂ ಸವೆದುದ್ಧತವೃತ್ತಿ ಚಾಪಲಾ
ನ್ವಿತಪರವಾದಿವಾರಮೃಗವೃಂದಮನುರ್ವಿಯೊಳಿಂತು ಬೇಂಟೆಯಂ

ಕಡೆಯಲ್ಲಿ ೪೧. ಈ ರೀತಿಯಿಂದ ಶ್ಲಾಘ್ಯವಾದ ಮಹಿಮೆಯನ್ನುಳ್ಳ ತೆಲುಗು ಜೊಮ್ಮಯ್ಯನು ಪ್ರತಿದಿನವೂ ಏಳು ಕರಡಿಗಳನ್ನು ಕೊಲ್ಲುತ್ತ, ಅವಕ್ಕೆ ಅವುಗಳ ಪೂರ್ವಸ್ಥಿತಿಯುಂಟಾಗುವಂತೆ ಮಾಡಿ, ಸ್ವರ್ಗಕ್ಕೆ ಕಳುಹಿಸುತ್ತ ಬೇಟೆಯ ವಿಲಾಸವನ್ನು ಹೊಂದಿದವನಾಗಿ ಶೋಭಿಸಿದನು. ೪೨. ಅರಸನಾದ ಬಿಜ್ಜಳನು ಬೇಡರ ಕಡೆಯಿಂದ ಶರಣನಾದ ಜೊಮ್ಮಯ್ಯನ ರೀತಿಯನ್ನು ಕೇಳಿ, ನೋಡುವುದಕ್ಕೆ ಅರಣ್ಯ ಮಧ್ಯಕ್ಕೆ ಪುರಜನರೊಡನೆ ಬಂದು ಅದೆಲ್ಲವನ್ನು ಕಂಡು, ಆಶ್ಚರ್ಯಗೊಂಡು ಶ್ಲಾಘಿಸಿದನು. ವ॥ ಆಗ ಆ ಮಹಿಮೆಯನ್ನು ಬಲ್ಲ ಮಹಾತ್ಮರುಗಳು ತೆಲುಗು ಜೊಮ್ಮಯ್ಯನನ್ನು ನೋಡಿ, ಸಂತೋಷಗೊಂಡು ೪೩–೪೫. ಪರಮ ವಿವೇಕವೆಂಬ ಈಟಿಯಲ್ಲಿ, ಅಜ್ಞಾನವೆಂಬ ಸಿಂಹವನ್ನು ಹೊಡೆದು, ಉಪಮಾತೀತವಾದ ಜ್ಞಾನವೆಂಬ ಪ್ರಕಾಶಿಸುವ ಕತ್ತಿಯಿಂದ ಜಡ ಬುದ್ಧಿಯೆಂಬ ಆನೆಯನ್ನು ಕತ್ತರಿಸಿ, ಹರನ ನಿಷ್ಠೆಯೆಂಬ ತೀಕ್ಷ್ಣ ಖಡ್ಗದಿಂದ

[1] ಂಗ (ದ, ಜ, ಚ, ಜ)

ಪ್ರತಿದಿನವಾಡುತಿರ್ಪನೆನುತಂ ಪದಪಿಂ ಪೊಗಳುತ್ತುಮಿರ್ಪಿನಂ
ನುತಮಹಿಮಾಂಕ ಜೊಮ್ಮವಿಭು ರಂಜಿಸುತಿರ್ದನುದಾತ್ತ ಲೀಲೆಯಿಂ ೪೫

ಬಸವೇಶಂ ಬಂದು ಜೊಮ್ಮಪ್ರಭುವಿನಡಿಗೆ ಮೆಯ್ಯಿಕ್ಕಿ ದೇವೇಶ ನಿನ್ನಂ
ಘ್ರಿಸರೋಜಾಘಾತದಿಂದಂ ಮಡಿದ ಪುಳುಗಳುಂ ಮೋಕ್ಷಮಂ ಸಾರ್ಗುಮೆಂಬಂ
ದೊಸೆವಾದಂ ನಿನ್ನ ಕೆಯ್ಯಿಂದಳಿದ ಮೃಗಗಣಂ ಶಂಕರಾವಾಸಮಂ ಸಾ-
ರ್ದಪುದಂ ತಾಂ ಚೋದ್ಯಮೋ ಪೇಳೆನುತೆ ಪೊಗಳುತಿರ್ದಂ ಗಣಾಂಭೋಧಿಚಂದ್ರಂ ೪೬

ಸುರಗಿ ಚೌಡವಿಭು ಸಚ್ಚರಿತ್ರಮಂ
ಬರೆದೊಡೋದಿದೊಡೆ ಕೇಳ್ದೊಡಳ್ಕರಿಂ
ಧರೆಯೊಳೊಲ್ದು ಪಡೆವರ್ನಿರಂತರಂ
ನರರುಮೀಶಕೃಪೆಯಿಂದಭೀಷ್ಟಮಂ ೪೭

ಸಂಸಾರವೆಂಬ ಗಂಡು ಜಿಂಕೆಯನ್ನು ಅಡರಿ ಸೀಳಿಹಾಕಿ, ಜ್ಞಾನ ದೃಷ್ಟಿಯೆಂಬ ಆಯುಧ ದಿಂದ ಪಾಪವೆಂಬ ಖಡ್ಗಮೃಗವನ್ನು ಸಂಹರಿಸಿ, ನಿರಹಂಕಾರವೆನಿಸುವ ಬಲವಾದ ಖಡ್ಗದಿಂದ ಅತಿಯಾದ ಅಷ್ಟಮದಗಳಿಂದ ಕೂಡಿದ ಹಂದಿಗಳನ್ನು ಹೋಳು ಮಾಡಿ, ಧ್ಯಾನವೆಂಬ ಅಡಾಯುಧದಿಂದ (ದೊಣ್ಣೆಯಂಥ ಆಯುಧದಿಂದ) ಆಸೆಯೆಂಬ ಕೋಣ ಗಳ ಸಮೂಹವನ್ನು ಕೊಂದು, ಉತ್ಕೃಷ್ಟವಾದ ವೀರಶೈವ ನಿಯಮವೆಂಬ ತ್ರಿಶೂಲ ದಿಂದ ಕೆಟ್ಟ ನಡತೆಯೆಂಬ ಕರಡಿಯನ್ನು ಚುಚ್ಚಿ, ಸ್ಥಿರವಾದ ವೈರಾಗ್ಯವೆಂಬ ಕೊಡಲಿ ಯಿಂದ ಇಂದ್ರಿಯಗಳೆಂಬ ಕೊಬ್ಬಿದ ಸಾರಂಗಗಳನ್ನು ತರಿದು ಹಾಕುತ್ತ, ವಿಶೇಷ ಮಾಹಾತ್ಮ್ಯೆಯೆಂಬ ಗದೆಯಿಂದ ಕೊಬ್ಬಿದ ಚರಿತ್ರೆಯುಳ್ಳ, ಚಾಪಲ್ಯದಿಂದ ಕೂಡಿದ ಪರವಾದಿಗಳ ಸಮೂಹವೆಂಬ (ಇತರ) ಮೃಗ ಸಮೂಹವನ್ನು ಕೊಂದು ಹಾಕಿ, ಭೂ ಭಾಗದಲ್ಲಿ ಈ ರೀತಿ ಬೇಟೆಯನ್ನು ಪ್ರತಿದಿನವೂ (ಆ ಜೊಮ್ಮಯ್ಯನು) ಆಡುತ್ತಿರುವನು, ಎಂದು ಸಂತೋಷದಿಂದ ಹೊಗಳುತ್ತ ಇರುವಷ್ಟರಲ್ಲಿ ಶ್ಲಾಘ್ಯವಾದ ಮಹಿಮೆಯೇ ಚಿಹ್ನವಾಗುಳ್ಳ ಜೊಮ್ಮಯ್ಯನು ಉದಾತ್ತವಾದ ತನ್ನ ಲೀಲೆಯಿಂದ ರಂಜಿಸುತ್ತಿದ್ದನು. ೪೬. ಪ್ರಮಥರೆಂಬ ಸಮುದ್ರಕ್ಕೆ ಚಂದ್ರಪ್ರಾಯನಾದ ಬಸವೇಶ್ವರನು ಬಂದು ಜೊಮ್ಮಯ್ಯ ಪ್ರಭುವಿನ ಪಾದಗಳಿಗೆ ನಮಸ್ಕರಿಸಿ, 'ದೇವೇಶನೇ, ನಿನ್ನ ಪಾದಕಮಲ ತುಳಿತದಿಂದ ಸತ್ತ ಹುಳುಗಳೂ ಮೋಕ್ಷವನ್ನು ಹೊಂದುತ್ತವೆ ಎನ್ನುವಾಗ ನಿನ್ನ ಕೈಯಾರ ಸತ್ತ ಮೃಗಗಳನ್ನು ಈಶ್ವರನ ಆವಾಸವಾದ ಕೈಲಾಸವನ್ನು ಹೊಂದಿಸಿದ ಈ ನಿನ್ನ ಉದ್ಯೋಗವು ಆಶ್ಚರ್ಯವೇ ? ಹೇಳು' ಎಂದು ಹೊಗಳುತ್ತಿದ್ದನು. ೪೭. ಸುರಗಿಯ ಚೌಡಯ್ಯ ವಿಭುವಿನ ಸಮೀಚೀನವಾದ ಕಥೆಯನ್ನು ಸಂತೋಷದಿಂದ ಬರೆದರೆ, ಓದಿದರೆ, ಪ್ರೀತಿಯಿಂದ ಕೇಳಿದರೆ, ಲೋಕದಲ್ಲಿ ನರರು ಶಾಶ್ವತವಾಗಿ

ಭೂನುತ ತೆಲುಂಗ ಜೊಮ್ಮನ
ನೂನೋಪಾಖ್ಯಾನಮಂ ಸಮಂತೋದಿದೊಡೊ
ಲ್ದಾನಂದಿಸಿ ಕೇಳ್ದೊಡೆ ಗಿರಿ
ಜಾನಾಯಕನೀವನವರ್ಗೆ ನಿರುಪಮಸುಖಮಂ ೪೮

ಹರಿವಿಧಿಸುರರಾಜರತ್ನಮೌಳೀ
ಸ್ಫುರಿತಪದಾಬ್ಜೆ ಸುರಾಸುಹೃತ್ಕರಾಳೀ
ಪುರಹರಸುಮನೋಮನೋಜ್ಞಕೇಳೀ
ಪರಿಣತೆ ಪಾಲಿಪುದೆನ್ನ ಭದ್ರಕಾಳೀ ೪೯

ಇದು ವಿನಮದಖಿಳ ಸುರಾಸುರೇಂದ್ರಮಕುಟತಟಘಟಿತ ಮಣಿಗಣಾಗಣಿತ ರುಚಿನಿಚಯ

ತರುಣಾರುಣಾತಪಪರಿಲಸಿತ ಪರಮ ಶಿವಲಿಂಗ ಪಾದಾರವಿಂದಪರಾಗಭಸಿತ

ಭಾಸುರಲಲಾಟಪಟ್ಟಸರಸಜನಮಾನಿತೋಭಯಕವಿತಾವಿಶಾರದ

ಶ್ರೀಷಡಕ್ಷರದೇವಭಕ್ತಿವಿರಚಿತ

ಶ್ರೀಮದ್ ಬಸವರಾಜವಿಜಯಮಹಾಪುರಾಣದೊಳ್ ಸುರಗಿಚೌಡಯ್ಯಬೊಮ್ಮಯ್ಯಕಥಾಭಿವರ್ಣನು

ದ್ವಾವಿಂಶಾಶ್ವಾಸಂ ಸಮಾಪ್ತಂ

ಅಂತು ಆಶ್ವಾಸ ೨೨ಕ್ಕೆ ಪದಗಣನೆ ೧೬೮೨ಕ್ಕೆ ಮಂಗಳಮಹಾ ಶ್ರೀ॥

ಪರಮಾತ್ಮನ ಕೃಪೆಯಿಂದ ಇಷ್ಟಾರ್ಥವನ್ನು ಪಡೆಯುವರು. ೪೮. ಭೂಲೋಕದ ಜನರಿಂದ ನುತಿಸಲ್ಪಡುವ ತೆಲುಗು ಜೊಮ್ಮಯ್ಯನ ನ್ಯೂನತೆಯಿಲ್ಲದ ಚರಿತೆಯನ್ನು ಕ್ರಮವಾಗಿ ಓದಿದರೆ, ಪ್ರೀತಿಯಿಂದ ಆನಂದಿಸಿ ಕೇಳಿದರೆ, ಅವರಿಗೆ ಗಿರಿಜಾ ಪತಿಯಾದ ಶಂಕರನು ನಿರುಪಮವಾದ ಸುಖವನ್ನು ಕೊಡುವನು. ೪೮. ಹರಿ, ಬ್ರಹ್ಮ, ದೇವೇಂದ್ರರೇ ಮೊದಲಾದವರ ರತ್ನಖಚಿತವಾದ ಕಿರೀಟಗಳಿಂದ ಪ್ರಕಾಶಮಾನವಾದ ಪಾದಕಮಲ ವುಳ್ಳವಳೇ, ರಾಕ್ಷಸರ ಹೃದಯಕ್ಕೆ ಭಯಂಕರಳಾದವಳೇ, ಶಿವನೊಡನೆ, ದೇವತೆ ಗಳೊಡನೆ ಮನೋಹರವಾದ ಲೀಲೆಯಲ್ಲಿರುವ ಸಮರ್ಥಳಾದ ಭದ್ರಕಾಳಿಯೇ ನನ್ನನ್ನು ರಕ್ಷಿಸು.

ಇಪ್ಪತ್ತೆರಡನೆಯಆಶ್ವಾಸವು ಸಮಾಪ್ತವಾಯಿತು.

ತ್ರಯೋವಿಂಶಾಶ್ವಾಸಂ

[ಶಿವಯೋಗ ನಿದ್ರಾಮುದ್ರೆ]

ಶ್ರೀಸರ್ವಮಂಗಳಾಮುಖ
ಭಾಸುರಮಣಿಮುಕುರವೀಕ್ಷಣೋತ್ಸವನಖಿಳಾ
ವಾಸಂ ತನುರುಚಿಜಿತಕೈ
ಲಾಸಂ ಮಾಳ್ಕೆಮಗೆ ಸೌಖ್ಯಮಂ ಶಿವಲಿಂಗಂ ೧

ಹರಮತಸಿಂಧುಚಂದ್ರನಕಳಂಕಗುಣಾಂಕನನೂನಭಕ್ತಿಭಾ
ಸುರ ಬಸವೇಶ್ವರಂ ಚರಪದಾಬ್ಜಸಮರ್ಚನೆಗೆಯ್ದನಂತರಂ
ಸುರುಚಿರಲಿಂಗಪೂಜೆಗೆಯ[1]ಲುಜ್ಜುಗಿಸುತ್ತೆ ಸುಖಾಸನಸ್ಥನಾ
ಗಿರುತೆ ವಿಭೂತಿಧಾರಣಮನಾಳ್ದು ಶಿವಾಕ್ಷಿಮಣಿಪ್ರತಾನಮಂ ೨

ಧರಿಸುತ್ತುಂಗದೊಳೊಲ್ಮೆವೆತ್ತು ಶಿವಮಂತ್ರಧ್ಯಾನಯುಕ್ತಂ ಪ್ರಭಾ
ವರಣಂ ಲಿಂಗಮದೊ[2]ಲ್ದು ರಂಜಿಸೆ ಕರಾಂಭೋಜಾತದೊಳ್ ನೋಡಿ ನೋ
ಡಿ ರುಚಿಸ್ಫೂರ್ತಿಯನಾಳ್ದು ಬಾಳ್ದು ಕರದಿಂದಂ ಸೋಂಕಿ ಮೆಯ್ಸೋಂಕುತುಂ
ಕರಗುತ್ತುಂ ಶಿವ[3]ಸಂಗಸೌಖ್ಯಸುಧೆಯುಂ ತಾನೀಂಟಿ ಮೆಯ್ವೆರ್ಚುತುಂ ೩

ಶಿವಯೋಗ ನಿದ್ರಾಮುದ್ರೆ

೧. ಮಂಗಳಕರಳಾದ ಪಾರ್ವತೀದೇವಿಯ ಮುಖವೆಂಬ ಪ್ರಕಾಶಮಾನವಾದ ರತ್ನ ದರ್ಪಣವನ್ನು ನೋಡುವುದರಲ್ಲಿ ಸಂತೋಷವುಳ್ಳ, ಸಮಸ್ತ ಪ್ರಪಂಚದಲ್ಲೂ ವಾಸಮಾಡಿದ, ಶರೀರಕಾಂತಿಯಿಂದ ಕೈಲಾಸಾದ್ರಿಯ ಕಾಂತಿಯನ್ನು ಜಯಿಸಿದ, ಶಿವಲಿಂಗನು ನಮಗೆ ಸೌಖ್ಯವನ್ನುಂಟು ಮಾಡಲಿ. ೨-೩. ಶಿವಮತವೆಂಬ ಸಮುದ್ರಕ್ಕೆ ಚಂದ್ರನೂ, ಕಲಂಕರಹಿತವಾದ ಗುಣಗಳೇ ಚಿಹ್ನೆಯಾಗಿರುವವನೂ, ಅಧಿಕವಾದ ಭಕ್ತಿಯಿಂದ ಪ್ರಕಾಶಮಾನನಾದವನೂ ಆದ ಬಸವೇಶ್ವರನು ಜಂಗಮ ಪಾದಪೂಜೆಯನ್ನು ಮಾಡಿ, ಆಮೇಲೆ ಶ್ರೇಷ್ಠವಾದ ಇಷ್ಟಲಿಂಗಪೂಜೆಗೋಸ್ಕರ ಪ್ರಾರಂಭಿಸಿ ಸುಖಾಸೀನನಾಗಿ, ವಿಭೂತಿಯನ್ನು ಧಾರಣೆಮಾಡಿ, ರುದ್ರಾಕ್ಷಿಗಳ ಸಮುದಾಯವನ್ನು ಲಿಂಗದಮೇಲೆ ಧರಿಸಿದನು. ಪ್ರೀತಿಯಿಂದ ಶಿವ ಮಂತ್ರಧ್ಯಾನ ಯುಕ್ತನಾಗಿ (ಶಿವ) ತೇಜಸ್ಸೇ ಹೊದಿಕೆಯಾಗಿ ಉಳ್ಳ ಆ ಬಸವೇಶ್ವರನು ಕರಕಮಲದಲ್ಲಿ ಆ ಇಷ್ಟಲಿಂಗವು ಒಲಿದು ರಂಜಿಸುತ್ತಿರಲು, ಆ ಲಿಂಗವನ್ನು ನೋಡಿ, ಪ್ರೀತಿಯಿಂದ ಸ್ಫೂರ್ತಿಹೊಂದಿ ಬಾಳಿದೆನೆಂದುಭಾವಿಸಿ, ಕೈಯಿಂದ ಸೋಂಕಿದ ಲಿಂಗವು ಮೈಸೋಂಕಿ ಕರಗಿಹೋದವನಾಗಿ ಶಿವಲಿಂಗ ಸಂಗದಿಂದುಂಟಾದ ಸೌಖ್ಯವೆಂಬ ಅಮೃತವನ್ನು

---

[1] ಯ್ಯ (ಅ, ಮು, ಗ, ಚ, ಜ) [2]ನೊ(ಅ) [3] + ಲಿಂಗ (ಅ)

ಅಲರ್ಗಣ್ಣಿಂ ನಡೆ ನೋಡಿ ಪಾಡಿ ಪರಮಾನಂದಾಬ್ಧಿಯೊಳ್ಮೂಡಿ ಮೂ
ಡಿ ಲಸತ್ಸಂಭ್ರಮಮಾಳ್ದು ತಾಳ್ದು ತನುರೋಮಾಂಚಂಗಳಂ ಮಂಗಳಂ
ನೆಲೆವೆರ್ಚುತ್ತಿರೆ ಪತ್ತಿ ಸುತ್ತಿ ಬೆರಸುತ್ತಾಲಿಂಗದಾಲಿಂಗನಂ
ಬಲಿದೊಪ್ಪುತ್ತಿರೆ ಯೋಗರಾಗರಸದಿಂದಿರ್ದಂ ವೃಷಾಧೀಶ್ವರಂ ೪

ಒದವಿದ ಕಂಪನಂಬಡೆದ ಕೆಯ್ಯದು ಸತ್ಕ್ರಿಯೆಯುಂ ನಿಮಿರ್ಚಲೀ
ಯದು ಮುದಬಾಷ್ಪವಾರಿಯ ಪೊನಲ್ ಶಿವಲಿಂಗಮನೆಯ್ದೆ ನೋಡಲೀ
ಯದು ನವಗದ್ಗದಂ ನೆಗಳ್ದ ಸನ್ನುತಿಗೆಯ್ಯಲೊಡರ್ಚೆ ವಿಘ್ನಮಾ
ದುದು ತನುವಪ್ಪಲೆಳ್ಚಱದು ತಾನೆನೆ ಭಕ್ತಿಯದೇನಳುಂಬಮೋ ೫

ಪಳಕುಗೊಡದೊಳಗೆ ಪೊಱಗು
ಜ್ವ[1]ಳಿಪ ಮಣಿಜ್ಯೋತಿಯಂತಿರೊಳಪೊಱಗೆ ತಳ
ತ್ತಳಿಪ ಶಿವಲಿಂಗದಂಗದ
ಬೆಳಗಿನೊಳೆ ವೃಷೇಂದ್ರನಮರ್ದು ಬೆಳಗಾಗಿರ್ದಂ ೬

ಕುಡಿದು ಮೈಯುಬ್ಬಿದವನಾದನು. (ಉತ್ಸಾಹಗೊಂಡನು.) ೪. (ಆ ಶಿವಲಿಂಗವನ್ನು) ಕಮಲದಂತಿರುವ ಕಣ್ಣುಗಳಿಂದ ಚೆನ್ನಾಗಿ ನೋಡಿ, ಹಾಡಿ, ಉತ್ಕೃಷ್ಟವಾದ ಸಂತೋಷಸಾಗರದಲ್ಲಿ ಮುಳುಗಿ, ಎದ್ದು, ಪ್ರಕಾಶಮಾನವಾದ ಸಂಭ್ರಮವನ್ನು ಹೊಂದಿದನು. ದೇಹವು ರೋಮಾಂಚನಗೊಂಡಿತು. ಮಂಗಳವು ನೆಲೆಗೊಳ್ಳುತ್ತಿತ್ತು. ಅದರ ಬೆಂಬತ್ತಿ, ಸುತ್ತಿ, ಬೆರಸಿ, ಆಲಿಂಗನ ಸುಖವು ಅಧಿಕಗೊಂಡು ಒಪ್ಪುವಂತೆ ಇರುತ್ತಿರಲು ಆ ವೃಷಭೇಂದ್ರನು ಶಿವಯೋಗದ ಪ್ರೀತಿರಸದಿಂದ ಕೂಡಿದವನಾಗಿದ್ದನು. ೫. (ಸಾತ್ವಿಕಭಾವದ ಕಾರಣ) ನಡುಗುವಿಕೆಯಿಂದ ಕೂಡಿದ ಆ ಕೈಗಳು ಸತ್ಕ್ರಿಯೆಗಳನ್ನು ಮಾಡಲಿಕ್ಕೆ ಅವಕಾಶ ಕೊಡಲಿಲ್ಲ ; ಆನಂದದಿಂದುಂಟಾದ ಕಣ್ಣೀರಿನ ಪ್ರವಾಹವು ಶಿವಲಿಂಗವನ್ನು ಚೆನ್ನಾಗಿ ನೋಡಲಿಕ್ಕೆ ಅವಕಾಶ ಕೊಡಲಿಲ್ಲ ; ನೂತನವಾಗಿ ದೈನ್ಯವಾಣಿಯು ಗದ್ಗದ ಕಂಠದಿಂದ ಮಾತುಗಳು ಹೊರಹೊಮ್ಮಿ, ಸ್ತೋತ್ರ ಮಾಡುವುದಕ್ಕೆ ವಿಘ್ನವನ್ನುಂಟುಮಾಡಿದವು ; ಆ ದೇಹವು ಆಲಿಂಗಿಸುವುದಕ್ಕೋಸ್ಕರ ಎಚ್ಚರವನ್ನು ಹೊಂದಲಿಲ್ಲ ಎಂಬಂತೆ (ಆ ಬಸವಣ್ಣನ) ಭಕ್ತಿಯು ಅದೇನು ಅಧಿಕಗೊಂಡಿತೋ ! ೬. ಆ ಬಸವೇಶ್ವರನು ಸ್ಫಟಿಕದಿಂದ ಮಾಡಿದ ಘಟವು ಒಳಹೊರಗೆ ಜಾಜ್ವಲ್ಯಮಾನವಾಗಿ ಬೆಳಗುವಂತೆ, ಮಣಿದೀಪದ ರೀತಿಯಂತೆ ಇರಲು ಒಳಹೊರಗೆ ಪ್ರಕಾಶಿಸುವ ಶಿವಲಿಂಗ ಶರೀರದ ಬೆಳಗಿನಲ್ಲಿ ಸೇರಿ, ಪ್ರಕಾಶಿಸುತ್ತಿದ್ದನು.

---

[1] ಜ್ಜ(ಚ)

ಪರಮಶಿವಲಿಂಗರುಚಿಭಾ
ಸುರಚಂದ್ರಿಕೆಯುಳುರೆ ಕಾಯಶಶಿಮಣಿಯೊಸರ್ವಂ
ತಿರೆ ಬೆಮರಿರೆ ಸುಖಬಾಷ್ಪಂ
ಸುರಿದುದು ಕಣ್ಣೆ[2]ಯ್ದಿಲಲರ ಮಕರಂದದವೋಲ್ ೭

ಶಿವನೊಳಪೊಕ್ಕು ಮಿಕ್ಕಲರ್ದು ಸೊರ್ಕಿ ಸೊಬಗಂಬಡೆದುರ್ಬಿ ಪರ್ಬಿ ಬಾ
ಹ್ಯವಿಷಯವೃತ್ತಿಯಂ ಮಱೆದು ಜುಮ್ಮನೆ ಕೂರ್ತು ಬೆಮರ್ತು ನೇತ್ರಸಂ
ಭವಸುಖಬಾಷ್ಪದಿಂ ನನೆದು ಪೊಂಪುಳಿವೋಗಿ ಪೊದಳ್ದ ಭಕ್ತಿಯು
ತ್ಸವರಸದೊಳ್ಮುಳುಂಗಿ ಸುಖಮಿರ್ದನೊಱಲ್ದು ವೃಷಾಧಿನಾಯಕಂ ೮

ತನ್ನೊಳಗೆ ಶಿವಂ ಶಿವನೊ
ಳ್ತಾನ್ನೆಲೆಗೊಂಡೆಸೆದನವಂ ಕನ್ನಡಿಯಿದಿರೊ
ಳ್ಗನ್ನಡಿಯೊಳ್ಮಾರ್ಪೊಳೆವವೊ
ಲುನ್ನತಗುಣನಿಳಯನಭವಗಣಮಣಿಮುಕುರಂ ೯

ಪರೆದು ಪಸರಿಸಿದ ಕಿರಣಮ
ನರುಣಂ ಬರಸೆಳೆದು ಶರಧಿಯೊಳಪೊಕ್ಕವೊಲಾ

೭. ಉತ್ಕೃಷ್ಟವಾದ ಶಿವಲಿಂಗದ ಕಾಂತಿಯೆಂಬ ಪ್ರಕಾಶಮಾನವಾದ ಬೆಳದಿಂಗಳು ಆಚ್ಛಾದನೆಗೊಳ್ಳಲಾಗಿ, ಶರೀರವೆಂಬ ಚಂದ್ರಕಾಂತ ಶಿಲೆಯು ಸ್ರವಿಸುವ ಹಾಗೆ, ಬೆವರು ಹೊರಹೊಮ್ಮಿತು. ಆನಂದ ಬಾಷ್ಪಗಳು ಕಣ್ಣೆಂಬ ನೈದಿಲೆಯ ಹೂವಿನ ಮಕರಂದದ ಹಾಗೆ ಸುರಿದವು. ೮. ಬಸವೇಶ್ವರನು ಶಿವನಲ್ಲಿ ಒಳಹೊಕ್ಕು ವಿಶೇಷವಾಗಿ ಅರಳಿ, (ಶಿವಾನಂದದಿಂದ) ಸೊಕ್ಕಿ ಸುಖವನ್ನು ಪಡೆದು, ಉಬ್ಬಿ, ಹಬ್ಬಿ, ಬಹಿರಂಗ ವಿಷಯ ಸಂಬಂಧದ ವ್ಯಾಪಾರವನ್ನು ಮರೆತು, ಪ್ರೀತಿಯಿಂದ ಜಲ್ಲೆಂದು (ಜುಮ್ಮೆಂದು), ಬೆವರಿ, ಕಣ್ಣಿನಿಂದುದ್ಭವವಾದ ಸುಖಜಲದಿಂದ ನೆನೆದು, ರೋಮಾಂಚನಗೊಂಡು, ಅಧಿಕವಾದ ಭಕ್ತಿಯ ದೆಸೆಯಿಂದ ಉಂಟಾದ ಸಂತೋಷವೆಂಬ ನೀರಿನಲ್ಲಿ ಮುಳುಗಿ ವಿಶೇಷ ಸುಖದಲ್ಲಿದ್ದನು. ೯. ಉತ್ಕೃಷ್ಟವಾದ ಗುಣಗಳಿಗೆ ಆಶ್ರಯನಾದವನೂ, ಪ್ರಮಥರುಗಳಿಗೆ ರತ್ನ ನಿರ್ಮಿತ ಕನ್ನಡಿಯಂತಿರುವವನೂ ಆದ ಬಸವಣ್ಣನು ತನ್ನಲ್ಲಿ ಶಿವನೋ (ಅಥವಾ) ಶಿವನೊಳಗೆ ತಾನೋ ಎಂಬಂತೆ ನೆಲೆಗೊಂಡವನಾಗಿ ಮುಂಗಡೆಯಲ್ಲಿರುವ ಶ್ರೇಷ್ಠ ಕನ್ನಡಿಯಲ್ಲಿ ಕನ್ನಡಿಯು ಪ್ರತಿಫಲಿಸುವ ಹಾಗೆ ಶೋಭಿಸಿದನು. ೧೦. ಸುತ್ತಲೂ ಹರಿದು ಪ್ರಸಾರಗೊಂಡ ಕಿರಣ ಸಮೂಹವನ್ನು ಚೆನ್ನಾಗಿ ಸೆಳೆದುಕೊಂಡು, ಸೂರ್ಯನು ಸಮುದ್ರದೊಳಗೆ ಪ್ರವೇಶ ಮಾಡಿದ ಹಾಗೆ, ಆ ಶ್ರೇಷ್ಠ ಶರಣನಾದ ಬಸವೇಶ್ವರನು ತನ್ನ ಪ್ರಸಾರಗೊಂಡ

[2] ಣ್ಣೈ(ಅ)

ಶರಣವರೇಣ್ಯಂ ಪಸರಿಪ
ಕರಣಮನೊಳಕೆಯ್ದು ಲಿಂಗದೊಳಪೊಕ್ಕಿರ್ದಂ ೧೦

ವಾಯಂ ಜ್ಞಾತೃ ಜ್ಞಾನ
ಜ್ಞೇಯಮಿದೆಂಬಂತೆ ಮಱೆದು ನಿಜಹೃದಯಲಸ
ತ್ತೋಯರುಹಕರ್ಣಿಕಾಗ್ರದೊ
ಳಾಯತಿಯಿಂ ಮಿಸುಪ ಶಿವನೊಳೊಡವೆರಸಿರ್ದಂ ೧೧

ವ॥ ಅಂತು ಬೆಚ್ಚಂತೆ ಬೆರಸಿ ಬಿರ್ಚದಚ್ಚಳಿಯದ ಪರಮಾನಂದಮಯ ಶಿವಯೋಗ ನಿದ್ರಾಮುದ್ರಿತನಾಗಿ ಬಸವರಸನಿರ್ಪಿನವಲ್ಲಿ ಚನ್ನಬಸವೇಂದ್ರಂ ಬಂದು ನಿಜಗುರುವಿನಿರವಂ ನಿರೀಕ್ಷಿಸಿ ಸಾಶ್ಚರ್ಯಚಿತ್ತನಾಗಿ—

ನಿದ್ರೆಯದಿಲ್ಲದ ಚಿದ್ರಸ
ಮುದ್ರಿತಶಿವಯೋಗನಿದ್ರೆಯಳವಟ್ಟುದು ನಿ
ರ್ನಿದ್ರಗುರುವಿಂಗೆ ಮಾಯಾ
ನಿದ್ರಾನ್ವಿತಜನಕಿದೆಂತುಮೇಂ ಸಂದಪುದೇ ೧೨

ಇದು ತೆರೆ ನಿಂದ ಸಾಗರಮೊ ನೋಡಿದು ಮೇಘವಿಹೀನಮಾದ ಶಾ
ರದವಿಮಳಾಮರಾಧ್ವಮೊ ಪರೀಕ್ಷಿಪೊಡಿಂತಿದು ಪರ್ಣಶಬ್ದಮಿ

ಇಂದ್ರಿಯ ವ್ಯಾಪಾರವನ್ನೆಲ್ಲ ಒಳಗು ಮಾಡಿಕೊಂಡು ಲಿಂಗದೊಳಗೆ ಹೋಗುವವನಾಗಿದ್ದನು. (ಅಂದರೆ ಇಂದ್ರಿಯ ವ್ಯಾಪಾರವನ್ನೆಲ್ಲ ಲಿಂಗಮುಖಗೊಳಿಸಿದ್ದನೆಂದು ಭಾವ) ೧೧. ನಿಶ್ಚಯವಾಗಿ (ವಾಯು), ಇವನು ತಿಳಿಯುವವನು, ಇದು ತಿಳುವಳಿಕೆ, ಇದು ತಿಳಿಯುವ ವಸ್ತು–ಎಂಬ ತ್ರಿಪುಟಿಗಳನ್ನು ಹಾಗೆ ಹಾಗೆಯೇ ಮರೆತು, ತನ್ನ ಪ್ರಕಾಶಮಯವಾದ ಹೃದಯವೆಂಬ ಕಮಲದ ಕರ್ಣಿಕಾರದ ಮೇಲ್ಭಾಗದಲ್ಲಿ ಪ್ರಭಾವಯುತವಾಗಿ ಶೋಭಿಸುವ ಶಿವನಲ್ಲಿ ಚೆನ್ನಾಗಿ ಸೇರಿದವನೆನಿಸಿದನು. ವ॥ ಈ ರೀತಿ ಬೆಸುಗೆಗೊಂಡ ಹಾಗೆ (ಶಿವಲಿಂಗದಲ್ಲಿ) ಬೆರಸಿ, ಬಿಚ್ಚಿ ಬೇರೆಗೊಳಿಸಲಿಕ್ಕಾಗದ ಪರಮ ಆನಂದಮಯವಾದ ಶಿವಯೋಗವೆಂಬ ನಿದ್ರೆಯಿಂದ ಮುದ್ರೆಗೊಂಡವನಾಗಿ, ಬಸವೇಶ್ವರನಿರುತ್ತಿರಲಾಗಿ, ಚೆನ್ನಬಸವೇಂದ್ರನು ಬಂದು (ತನ್ನ) ನಿಜಗುರುವಿನ ಇರುವಿಕೆಯನ್ನು ನೋಡಿ ಆಶ್ಚರ್ಯಯುಕ್ತ ಚಿತ್ತವುಳ್ಳವನಾಗಿ ೧೨. ಮಾಯಾ ಸಂಬಂಧವಾದ ನಿದ್ರೆಯಿಂದ ದೂರನಾದ ಗುರುವಿಗೆ, ಆ ನಿದ್ರೆಯಿಲ್ಲದೆ ಶಿವಜ್ಞಾನರಸದಿಂದ ಮುದ್ರೆಗೊಳಿಸಲ್ಪಟ್ಟ, ಶಿವಯೋಗ ಸಂಬಂಧವಾದ ನಿದ್ರೆಯ ಮುದ್ರೆಯು ಉಂಟಾಯಿತು. ಇಂತಹ ನಿದ್ರೆಯು ಮಾಯೆಯಿಂದ ಉಂಟಾಗುವ ನಿದ್ರೆಯಿಂದ ಕೂಡಿದ ಜನಗಳಿಗೆ ಉಂಟಾದೀತೆ ? ೧೩. '(ಈ ಶಿವಯೋಗ ಸಂಬಂಧವಾದ ನಿದ್ರೆಯು) ತರಂಗಗಳಿಲ್ಲದ ಸಮುದ್ರವೋ, ವಿಚಾರಿಸಿ ನೋಡಿದರೆ, ಮೋಡವಿಲ್ಲದಿರುವ ಶರತ್ಕಾಲದ ನಿರ್ಮಲಾ

ಲ್ಲದ ವಿಳಸನ್ಮಹೀರುಹವೊ ಪೇಳೆನೆ ನಿಶ್ಚ[1]ಳ ಭಾವವಮಾಂತಡಂ
ಗಿದ ಕರಣಗಳಿಂ ವಿಸುಪ ಯೋಗವಿದೊಪ್ಪುಗುವಿೂ ವೃಷೇಂದ್ರನಾ ೧೩

ವ॥ ಎಂದು ಮತ್ತಮಿರದೆ—

ಶಿವಲಿಂಗೈಕ್ಯಾತಿಸೌಖ್ಯಂಬಡೆದು ಮಱಪಿನಿಂದಿರ್ಪನೋ ಕಂಗಳಿಂ ನೋ
ಡುವೊಡಾನಂದಾಶ್ರು ಕಾಣಲ್ವಿಡದೆನುತೆ ಮನೋನೇತ್ರದಿಂ ನೋಳ್ಪನೋ ಶಂ
ಭುವನೀತಂ ತೋಳ್ಗಳಿಂದಪ್ಪಿದೊಡೆ ಮೃದು ಶಿವಾಂಗಕ್ಕೆ ಕಂದಪ್ಪುದೆಂದ
ಪ್ಪುವೊಡಂತರ್ಭಾವ ಸತ್ಕೋಮಲಭುಜದಿನೊಱಲ್ದಿರ್ಪನೋ ದೇಶಿಕೇಂದ್ರಂ ೧೪

ವ॥ ಅಂತುಮಲ್ಲದೆಯುಮಲ್ಲಿ ಸೌಕುಮಾರ್ಯಂಬೆತ್ತೊಪ್ಪುವ ನಿರುಪಮ ನಿಜಶಿವ ಲಿಂಗಕ್ಕೆ ಕರತಳಾಸ್ತರಣಂ ಬೆಟ್ಟಿತಕ್ಕುಮೆಂದು ಬಿಟ್ಟು ಕಟ್ಟೆಳ್ಕಱಿಂ ಭಕ್ತಿಸೌರಭಪರಿಮಿಳಿತ ಮೃದುತರ ಹೃದಯನಳಿನಸುಖಾಸನದೊಳ್ಮೂರ್ತಿಗೊಳಿಸಿಯುಂ ವಿಮಳ ಶೀತೋಷ್ಣಜಳಾಭಿಷೇಕಮನಡಿಗಡಿ ಗೊಡರ್ಚೆ ಕೋಮಳಾಂಗಂ ಬಳಲ್ದಪುದೆಂದು ಶಮಸಲಿಲದಿನಭಿಷೇಕಮನೆಸಗಿಯುಮಿಳಾತಳದೊಳೊ ಗೆದ ಕುಸುಮವಿಸರಂ ಕಠಿನಮೆಂದುೞಿದು ಸುಲಲಿತಸಹಸ್ರದಳ ಕಮಳಮಂ ಸಮರ್ಪಿಸಿಯುಮಮ ಳತನು ಧೂಪಧೂಮಂ ತಾಗೆ ಕರ್ಪಡರ್ದಪ್ಪುದೆಂದು ವಿಸರ್ಜಿಸಿ ಜಗಜಗಿಪ ಚಿದಗ್ನಿಯೊಳಿಕ್ಕಿದ

ಕಾಶವೋ, ಎಲೆಗಳ ಅಲುಗಾಟವೇ ಇಲ್ಲದಿರುವ ಶೋಭಿಸುವ ವೃಕ್ಷವೋ ಹೇಳೆಂಬಂತೆ ಇಂದ್ರಿಯಗಳ ಉಪಟಳವಡಗಿಸಿ, ನಿಶ್ಚಳವಾದ ಭಾವವನ್ನು ಹೊಂದಿ, ಈ ಬಸವಣ್ಣನ ಈ ಶಿವಯೋಗವು ಶೋಭಿಸುತ್ತಿರುವುದು.' ವ॥ ಎಂದು ಪುನಃ ಇರದೆ ೧೪. 'ಗುರು ಶ್ರೇಷ್ಠನಾದ ಬಸವೇಶ್ವರನು ಶಿವಲಿಂಗದೊಡನೆ ಐಕ್ಯಗೊಂಡುದರಿಂದುಂಟಾದ ಅವಿರಳ ಸೌಖ್ಯವನ್ನು ಪಡೆದು ಪರವಶಭಾವದಿಂದ ಇರುವನೋ, ಈತನು ಶಂಭುವನ್ನು ನೋಡುವುದಕ್ಕೆ ಆನಂದಾಶ್ರುಗಳು ಅವಕಾಶಕೊಡುತ್ತಿಲ್ಲವಾದುದರಿಂದ ಮನಸ್ಸೆಂಬ ಕಣ್ಣಿನಿಂದಲೇ ನೋಡುತ್ತಿರುವನೋ, ತೋಳುಗಳಿಂದ ಅಪ್ಪಿದರೆ ಮೃದುವಾದ ಶಿವ ಲಿಂಗಕ್ಕೆ ಕಂದಾದೀತೆಂದು ಅಂತರ್ಭಾವಗೊಂಡ ಮನಸ್ಸೆಂಬ ಸಮೀಚೀನವಾದ ಮೃದು ಭುಜಗಳಿಂದ ಆಲಿಂಗಿಸುವುದಕ್ಕೋಸ್ಕರ ಪ್ರೀತಿಸಿರುವನೋ (ಎಂಬಂತೆ ಕಾಣುತ್ತಾನೆ)'. ವ॥ ಇದಲ್ಲದೆ, ಅಲ್ಲಿ ಸುಕುಮಾರತೆಯನ್ನು ಹೊಂದಿ ಶೋಭಿಸುವ ಉಪಮಾತೀತವಾದ ತನ್ನ ಇಷ್ಟಲಿಂಗಕ್ಕೆ ಹಸ್ತ ಪ್ರದೇಶವೆಂಬ ಗದ್ದುಗೆಯು ಕಠಿಣವಾಗುವುದೆಂದು ಕೈ ಬಿಟ್ಟು, ಅತಿ ಪ್ರೀತಿಯಿಂದ ಭಕ್ತಿಯೆಂಬ ಸುಗಂಧದಿಂದ ಕೂಡಿಕೊಂಡಿರುವ ಹೃದಯವೆಂಬ ಕಮಲದ ಮೃದುವಾದ ಆಸನದಲ್ಲಿ ಪ್ರತಿಷ್ಠಾಪನೆಮಾಡಿಯೂ, ಶ್ರೇಷ್ಠವಾದ ತಣ್ಣೀರು, ಬಿಸಿನೀರುಗಳ ಅಭಿಷೇಕವನ್ನು ಹೆಜ್ಜೆ ಹೆಜ್ಜೆಗೆ (ಬಾರಿ ಬಾರಿಗೂ) ಮಾಡಿದರೆ ಕೋಮಲ ವಾದ ಶಿವಲಿಂಗದ ಅಂಗವು ಬಾಡಿ ಹೋಗುವುದೆಂದು ಶಾಂತಿಯೆಂಬ ಜಲದಿಂದ ಅಭಿಷೇಕ ವನ್ನು ಮಾಡಿಯೂ, ಭೂಭಾಗದಲ್ಲಿ ಹುಟ್ಟಿದ ಹೂವಿನ ಸಮೂಹವು ಕಠಿಣವಾಗುವು ದೆಂದು ಅವನ್ನು ಬಿಟ್ಟು, ಮನೋಹರವಾದ (ನೆತ್ತಿಯಲ್ಲಿರುವ) ಸಹಸ್ರಾರವೆಂಬ

---

[1] ಚ್ಚ(ಅ)

ದಶೇಂದ್ರಿಯ ವಿಷಯದಶಾಂಗಧೂಪಮುಂ ಬೀಸಿಯುಂ ಪೇರುರಿಯ ನೀರಾಜನಮುಂ ಬೆಳಗೆ ಬಿಸಿಮುಸಗಿದಪ್ಪುದೆಂದು ವರ್ಜಿಸಿ ಜಗದ್ವರ್ತಿವಿಡಿದುಜ್ವಳಿಪ ಶಾಂತಪ್ರಕಾಶಮಾದಖಂಡಾತ್ಮಜ್ಯೋತಿಯುಂ ಬೆಳಗಿಯುಂ ಕ್ಷಾರಾಮ್ಲಾದಿ ರಸಮಿಳಿತಾಹಾರೋಪಹಾರಂ ಕ್ರೂರಮಕ್ಕುಮೆಂದು ತೊಲಗಿಸಿ ಮಿಸಲೋಸರಿಸದ ಮಧುರತರ ನಿಜಪ್ರಾಣನೈವೇದ್ಯಮಂ ನಿವೇದಿಸಿಯುಮಂತರರ್ಚನೆಯನಿಂತು ತೇನತೇನಂ ನಿಮಿರ್ಚಲೆಂದು ಭಾವರತಿಯೊಳ್ಮೃಡಿಮುಳುಂಗಿ —

ಪೊಱಗಂ ಮಱೆದಿರ್ಪನೊ ಕ
ಟ್ಟೆಱಕದಿನಮರ್ದಪ್ಪೆ ಪುಳಕತತಿ ನಾಂಟುಗುಮೆ
ನ್ನೆಱೆಯನನೆನುತಾತ್ಮನಿನ
ಳ್ಕೆಱೆಯೊಳಪ್ಪಲೊಡರ್ಚಿದಂದಮೋ ಬಗೆಮನೆಯೊಳ್ ೧೫

ಆಲೋಕಿಪ ತಾನುಂ ತ
ನ್ನಾಲೋಕಮುಮೊಡನೆ ನುಡಿವ ತಾನುಂ ನುಡಿಯುಂ
ಲೀಲೆ ಮಿಗೆ ನೆನೆವ ತಾನುಂ
ಮೇಲೆನಿಸಿದ ಮನಮುಮುಭಯಮನೊಳ್ಪಿರೆದಿರಮೋ ೧೬

ಹೆಸರಿನ ಸಹಸ್ರದಳದ ಕಮಲವನ್ನು ಸಮರ್ಪಣೆ ಮಾಡಿಯೂ, ಶ್ರೇಷ್ಠರಾದ ಶಿವಲಿಂಗದ ತನುವು ಧೂಪದ ಹೊಗೆಯು ತಾಗಿ ಕಪ್ಪು ಆದೀತೆಂದು ಅದನ್ನು ಬಿಟ್ಟು, ಜಗಜಗಿಸುವ ಜ್ಞಾನವೆಂಬ ಅಗ್ನಿಯಲ್ಲಿ ಹಾಕಿದ ಹತ್ತು ವಿಧವಾದ ಇಂದ್ರಿಯ (ಐದು ಜ್ಞಾನೇಂದ್ರಿಯ ಐದು ಕರ್ಮೇಂದ್ರಿಯ) ಗಳೆಂಬ (ಇಂದ್ರಿಯಗಳ ವ್ಯಾಪಾರವೆಂಬ) ದಶಾಂಗದ ಧೂಪವನ್ನು ಬೀಸಿಯೂ, ದೊಡ್ಡದಾದ ಉರಿಯಿಂದ ಕೂಡಿದ ಆರತಿಯನ್ನು ಬೆಳಗಿದರೆ ಕಾವು ಆದೀತೆಂದು ಅದನ್ನು ವರ್ಜನೆ ಮಾಡಿ, ಜಗತ್ತೆಂಬ ಬತ್ತಿಯನ್ನು ಅನುಸರಿಸಿ, ಪ್ರಕಾಶಿಸುವ ತಂಪಾದ ಜ್ವಾಲೆಯುಳ್ಳ ಅಖಂಡವಾದ ಆತ್ಮವೆಂಬ ಜ್ಯೋತಿ (ಪರಮಾತ್ಮ ಜ್ಯೋತಿ)ಯನ್ನು ಬೆಳಗಿಯೂ, ಉಪ್ಪು, ಹುಳಿಗಳೇ ಮೊದಲಾದುವುಗಳಿಂದ ಕೂಡಿದ ಆಹಾರ ಉಪಹಾರಗಳ ನೈವೇದ್ಯ ಪದಾರ್ಥಗಳ ಸಮೂಹವು ಕ್ರೂರವಾದದ್ದಾಗುವುದೆಂದು, ಅದನ್ನು ತೊಲಗಿಸಿ, ಮಿಸಲಳಿಯದ ಅತಿ ಮಧುರವಾದ ತನ್ನ ಪ್ರಾಣಗಳೆಂಬ ಪದಾರ್ಥಗಳನ್ನೇ ನೈವೇದ್ಯವಾಗಿ ಸಮರ್ಪಿಸಿಯೂ ಈ ರೀತಿಯಲ್ಲಿ ಮಾನಸಿಕ ಪೂಜೆಯನ್ನು ಮೇಲಿಂದ ಮೇಲೆ ಮಾಡಬೇಕೆಂಬ ಮನೋನುರಾಗದಲ್ಲಿ ಮುಳುಗಿದವನಾಗಿ ೧೫–೧೬. ಬಾಹ್ಯ ಪ್ರಪಂಚವನ್ನೆಲ್ಲ ಮರೆತು ಇರುವನೋ ವಿಶೇಷ ಪ್ರೀತಿಯಿಂದ ನನ್ನ ಪ್ರಭುವನ್ನು ಬೆರೆತು ಆಲಿಂಗಿಸಲಾಗಿ, ರೋಮಾಂಚನಗಳ ಸಮೂಹವು ಚುಚ್ಚುತ್ತದೆ ಎನ್ನುತ್ತ, ಮನಸ್ಸೆಂಬ ಮನೆಯಲ್ಲಿ ಆತ್ಮದಿಂದಲೇ ಪ್ರೀತಿಯಿಂದ ಅಪ್ಪುವುದಕ್ಕೆ ಮಾಡಿದ ರೀತಿಯೋ ! (ಶಿವಲಿಂಗವನ್ನು) ನೋಡುವ ತಾನೂ, ತನ್ನ ದೃಷ್ಟಿಯೂ, ಒಡನೆ ಮಾತನಾಡುವ (ಶಿವನೊಡನೆ ಮಾತನಾಡುವ) ತಾನೂ, ತನ್ನ ನುಡಿಯೂ, ವಿಶೇಷ ವಿಲಾಸದಿಂದ ನೆನೆಯುವ ತಾನೂ, ಉತ್ಕೃಷ್ಟವಾದ ಮನಸ್ಸು

ಕುಂದದ ಪೆರ್ಚದ ಕಡೆಮೊದ
ಲೊಂದದ ಚಿತ್ಸಲಿಲಪೂರ್ಣ ನಿರುಪಮ ಪರಮಾ
ನಂದಮಯ ಶಂಭುಶರಧಿಯೊ
ಳಿಂದು ಕರಂ ಮುಳುಗಿದಂದವೋ ವೃಷಭೇಂದ್ರಂ ೧೭

ಸಕಳ ಕರಣಾಳಿ ಪರಿಚಾ
ರಕ ಜನವಂ ತೊಲಗಿಸುತ್ತೆ ಸುಮನೋಗೃಹದೊ
ಳ್ಸ್ವೈರ ಶಿವಪತಿಯೊಳೊಡವೆರೆ
ದಕಳಂಕಂ ಸುಖದ ಸುಗ್ಗಿವಡೆದಿರ್ದಪನೋ ೧೮

ವ|| ಅಂತುಮಲ್ಲದೆಯುಮಖಿಳೇಂದ್ರಿಯದಮಸಂಗಿಯ್ಯದೆ ಯಮಮಾಗೆಯುಮೆಲ್ಲೆಡೆಯೊಳ್ನಿಜ ಪ್ರಾಣಲಿಂಗಮಲ್ಲದೆ ಪೆಱತಱಿಯದ ನಿಯಮಮೆ ನಿಯಮಮಾಗೆಯುಂ ಯೋಗನಿದ್ರಾಸೀನತೆಯೆ ಸುಖಾಸೀನಮಾಗೆಯುಂ ನಿರಹಂತೆಯಿಂ ನಿಜಮೃದುಶ್ವಾಸಮನೊಯ್ಯನೊಯ್ಯನೆ ಪೂರಿಪುದೆ ಪ್ರಾಣಾಯಾಮ ಮಾಗೆಯುಂ ನಿರ್ವಿಷಯಕರಣಾಂತರ್ಮುಖೀಕರಣವೃತ್ತಿಯೆ ಪ್ರತ್ಯಾಹಾರ ಮಾಗೆಯುಂ ಶಿವಜಂಗಮ ಸ್ವಪ್ನದರ್ಶನಮೆ ಮೂರ್ತಿಧ್ಯಾನಮಾಗೆಯುಮಿಂದನೆಡೆವಿಡದೆ ಧರಿಯಿಸಿಪ್ಪುದೆ

ಪರಮೇಶ್ವರನಲ್ಲಿ ಬೆರೆತಿರುವ ರೀತಿಯೋ ! ೧೭. ಬಸವೇಶ್ವರನು ಕೊರತೆಯಿಲ್ಲದ, ಹೆಚ್ಚದೆಯಿರುವ, ತುದಿ ಮೊದಲು ಇಲ್ಲದಂಥ, ಜ್ಞಾನವೆಂಬ ಅಮೃತದಿಂದ ತುಂಬಿ ನಿರುಪಮನೂ, ಉತ್ಕೃಷ್ಟನೂ ಆನಂದ ಸ್ವರೂಪನೂ ಆದ ಶಂಭುವೆಂಬ ಸಮುದ್ರದಲ್ಲಿ ಚಂದ್ರನು ಚೆನ್ನಾಗಿ ಮುಳುಗಿದ ಅಂದವೋ ೧೮. ಕಳಂಕರಹಿತನಾದ ಬಸವೇಶ್ವರನು (ತನ್ನ) ಶ್ರೇಷ್ಠವಾದ ಮನಸ್ಸೆಂಬ ಗೃಹದಲ್ಲಿ, ಸಮಸ್ತ ಇಂದ್ರಿಯಗಳೆಂಬ ಪರಿಚಾರಕರ ಸಮೂಹವನ್ನು ದೂರೀಕರಿಸುತ್ತ ಸಮೀಚೀನನಾದ ಪರಮೇಶ್ವರನೆಂಬ ಗಂಡನೊಡನೆ ಚೆನ್ನಾಗಿ ಬೆರೆತು ಸುಖದ ಸುಗ್ಗಿಯ ಆಧಿಕ್ಯವನ್ನು ಹೊಂದಿರುವನೋ ! ವ|| ಹೀಗೂ ಅಲ್ಲದೆ—ಸಮಸ್ತ ಇಂದ್ರಿಯಗಳನ್ನು ದಮನ ಮಾಡಿದುದೇ 'ಯಮ' ಎಂಬುವ ಅಷ್ಟಾಂಗಯೋಗದ ಮೊದಲನೆಯ ಲಿಂಗವಾಗಿಯೂ. ಎಲ್ಲೆಲ್ಲೂ ತನ್ನ ಪ್ರಾಣಲಿಂಗ ವನ್ನಲ್ಲದೆ ಬೇರೊಂದನ್ನರಿಯದ ನಿಯಮವೇ 'ನಿಯಮ'ವೆಂಬ ಅಂಗವಾಗಿಯೂ, ಶಿವಯೋಗನಿದ್ರೆಯಲ್ಲಿ ಕುಳಿತಿರುವುದೇ ಸುಖದ ಆಸನವೆಂಬ ಅಂಗವಾಗಿಯೂ, ಗರ್ವ ವಿಲ್ಲದಿರುವಿಕೆಯಿಂದ ತನ್ನ ಮೃದುವಾದ ಶ್ವಾಸವನ್ನು ಮೆಲ್ಲ ಮೆಲ್ಲನೆ ತುಂಬುವುದೇ ಪ್ರಾಣಾಯಾಮವೆಂಬ ಅಂಗವಾಗಿಯೂ, ವಿಷಯವ್ಯಾಪಾರಶೂನ್ಯವಾದ ಇಂದ್ರಿಯ ಗಳನ್ನು ಒಳಮುಖಗೊಳಿಸತಕ್ಕ ವ್ಯಾಪಾರವೇ ಪ್ರತ್ಯಾಹಾರವೆಂಬ ಅಂಗವಾಗಿಯೂ, ಶಿವನನ್ನೂ, ಜಂಗಮವನ್ನೂ ಸ್ವಪ್ನಾವಸ್ಥೆಯಲ್ಲೂ ಕೂಡ ನೋಡುವಿಕೆಯೇ ಮೂರ್ತಿ ಧ್ಯಾನವಾಗಿಯೂ, ಇಂತಹ ಶಿವನನ್ನೂ ಜಂಗಮವನ್ನೂ ಎಲ್ಲ ಅವಸ್ಥೆಗಳಲ್ಲೂ ಎಡೆಬಿಡದೆ ಧರಿಸಿರುವ ಮನಃಸ್ಥಿತಿಯೇ ಧಾರಣವೆಂಬ ಅಂಗವಾಗಿಯೂ, ನಿಶ್ಚಲವೂ, ನಿರುಪಾಧಿಕವೂ ಆದ ಭಕ್ತಿಯಿಂದ ಲಭ್ಯವಾದ ಶಿವಯೋಗವೆಂಬ ನಿದ್ರೆಯ ಸಮಾಧಿ

ಧಾರಣ[1]ವಾಗೆಯುಂ ನಿಶ್ಚಲ ನಿರುಪಾಧಿಕ ಭಕ್ತಿಲಬ್ಧಶಿವಯೋಗನಿದ್ರಾಸಮಾಧಿಯೆ ನಿರವಧಿಕ ಸುಖೋದಯ ಲಕ್ಷಣಾದ್ಭುತ ಸಮಾಧಿಯಾಗೆಯುಮಿಂತು ನಿಜಾನುಭಾವಾಷ್ಟಾಂಗಯೋಗಸಂಪತ್ತಿಯುಳ ವಡಲೊಡನೆ —

ಪರವಶಭಾವಂ ಮಿಗೆ ಮ
ದ್ಗುರು ನಿಶ್ಚಲ ನಿರ್ವಿಕಲ್ಪಸುಖದೊಳ್ಸಲೆ ಸಂ
ದಿರದೆಸೆವ ಪಾಂಗೊ ಚಕ್ರಾಂ
ತರಲಿಂಗಾಲೋಕ ಸೌಖ್ಯದಿಂದಿರ್ದಪನೋ ೧೯

ನಲಿದುರ್ವಿ ಪೊಗಳೆ ವರ್ಣಾ
ವಲಿಯೊತ್ತುಗುಮುಮಳ ಕೋಮಲಾಂಗನನೆಂದು
ಜ್ವಲಮೃದುಲಹೃದಯವಿಕಸಿತ
ನಲಿನದೊಳೆ ತದರ್ಥರೂಪನಂ ಜಾನಿಪನೋ ೨೦

ನೆನೆವುತ್ತುಂ ನಿಡುನೇಹದಿಂ ಭ್ರಮರಕೀಟನ್ಯಾಯದಿಂದಾನೆ ತ
ದ್ಘನಲಿಂಗಾಕೃತಿಯಾನೆ ತಪ್ಪುಗುಮನಾದಿಸ್ವಾಮಿ ಭೃತ್ಯತ್ವಮಂ

ಸ್ಥಿತಿಯೇ–ನಿರವಧಿಕವಾದ ಸುಖದ ಉದಯವೇ ಲಕ್ಷಣವಾಗುಳ್ಳ ಅದ್ಭುತ ಸಮಾಧಿಯೆಂಬ ಅಂಗವಾಗಿಯೂ–ಈ ರೀತಿ ಅಷ್ಟಾಂಗಯೋಗದ ಐಶ್ವರ್ಯವು ಅಳವಟ್ಟಿರಲು ಒಡನೆಯೇ—೧೯. ನನ್ನ ಗುರುವಾದ ಈ ಬಸವೇಶ್ವರನು—ಶಿವಯೋಗ ಸಮಾಧಿರೂಪವಾದ, ಶ್ರೇಷ್ಠ ಪರವಶತೆಯಿಂದ ವಿಕಲ್ಪರಹಿತವಾದ (ಅಥವಾ ನಿಶ್ಚಂಚಲವಾದ) ಶಾಶ್ವತ ಸುಖದಲ್ಲಿ ಚೆನ್ನಾಗಿ ಒಡೆವರೆದು ಶೋಭಿಸುವ ರೀತಿಯೋ ! ಮೂಲಾಧಾರ ಸ್ವಾಧಿಷ್ಠಾನ, ಮಣಿಪೂರ, ಅನಾಹತ, ವಿಶುದ್ಧಿ, ಆಜ್ಞಾನಾಮಕಗಳಾದ ಆರು ಚಕ್ರಗಳ ಸ್ಥಾನದಲ್ಲಿ ಕ್ರಮವಾಗಿ, ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗಗಳೆಂಬ ಆರು ಲಿಂಗಗಳನ್ನು (ಪ್ರತಿಷ್ಠಾಪಿಸಿ) ನೋಡುವ ಒಂದು ಸೌಖ್ಯದ ರೀತಿಯೋ ! ೨೦. ನಲಿವುಗೊಂಡು ಉಬ್ಬಿ ಕೋಮಲಾಂಗನಾದ ಪರಶಿವನನ್ನು ಅಕ್ಷರಾತ್ಮಕವಾಗಿರುವ ಮಾತುಗಳು ಒತ್ತುತ್ತವೆಯೇ ? ಎಂದು—ಉಜ್ವಲವೂ, ಕೋಮಲವೂ ಆದ ಹೃದಯವೆಂಬ ಅರಳಿದ ಕಮಲದಲ್ಲಿ ಆ ಪರಬ್ರಹ್ಮ ಸ್ವರೂಪವನ್ನು ಧ್ಯಾನಿಸುತ್ತಿರುವನೋ ? ೨೧. ಈ ಬಸವೇಶ್ವರನು ವಿಶೇಷ ಸ್ನೇಹದಿಂದ ನೆನೆಯುತ್ತ ಭ್ರಮರ ಕೀಟ ನ್ಯಾಯದಿಂದ ಅಂದರೆ ಕಡಜದ ಹುಳುವು ತಾನು ಹಿಡಿದುಕೊಂಡುಬಂದ ಕೀಡೆಯೊಂದು ಸತತ ಕಡಜವನ್ನೇ ನೋಡುತ್ತ ತಾನೂ ಕಡಜದ ಹುಳವೇ ಆಗುವ ನ್ಯಾಯದಂತೆ—ತಾನೇ ಆ ಉತ್ಕೃಷ್ಟವಾದ ಲಿಂಗದ ಆಕಾರವಾಗಲು, ಅನಾದಿಕಾಲದಿಂದ ಬಂದ ಸ್ವಾಮಿ ಮತ್ತು ಭೃತ್ಯತನವೆನಿಸುವ ಈ ಸಂಪತ್ತು

1 + ಯೋಗ(ಚ)

ದೆನಿಪೀ ಸಂಪದವೆಂದು ಮುನ್ನೆನೆದು ಮೇಣಂಜುತ್ತೆ ಹೃತ್ಪಂಕಜಾ
ಸನಲಿಂಗಕ್ಕೆ ಪೊದಳ್ದ ತನ್ಮನಮನಿತ್ತಂ[1]ತಿಂತು ಸ್ಯೆತಿರ್ಪನೋ[1] ೨೦

ಪತಿಯನೆ ನೆನೆನೆನೆದುದಱಿಂ
ಸತಿ ತತ್ಪತಿಯಾಗೆ ಫಲಮದೇಂ ಪಡೆವಳೆ ತ
ದ್ರತಿಸುಖಮನಂತುಟೀಶ
ಸ್ಮೃತಿಯಿಂ ತಾನೀಶನಾಗೆ ಫಲಮೇಂ ಭಕ್ತಂ ೨೧

ಮನಮಂ ದೂದಟ್ಟಿದೆಂ ಮತ್ಪ್ರಿಯನ ಪೊರೆಗೆ ಮುನ್ನಂ ಸಪತ್ನಿತ್ವಮಂ ತಾ
ಳ್ದು ನಿತಾಂತಂ ಕೂಡಿದತ್ತಕ್ಕಟ ಮನಮವನೊಳ್ನಪ್ಪಿದೇಂದೊಪ್ಪದಿಂ ಪಾ
ಣಿನಿ ಪೇಳ್ದಾಸೂತ್ರಮೇಂ ತಪ್ಪುಗುಮೆ ಬಳಿಕದಃತಾದೊಡಂ ಗಂಡರಂ ಪೆ
ಣ್ಣೆನಿಸುತ್ತುಂ ಕೂಡುವಸ್ಮತ್ಪತಿಗಿದು ವಧುವಾಗಿರ್ಪುದಾಶ್ಚರ್ಯಮೇ ದಲ್ ೨೨

ಎಂದೆಣಿಸುತೊಡನೆ ತನ್ನೆಡೆ
ವಂದ ಮನಂ ಮಗುಳ್ದು ಪರಿದು[2]ಬೆರಸದ[2]ಮುನ್ನಂ
ಕುಂದದೆ ನಿಜಪತಿಯೊಳ್ಸಲೆ
ಸಂದಿಲ್ಲದೆ ನೆರೆಯಲೆಳಸಿ ಪುರುಡಿಸುತಾಗಳ್ ೨೩

ಹೃದಯಸರೋಜಮೆಂಬ ಮಣಿಮಂಚದೊಳೊಯ್ಯನೆ ಭಕ್ತಿದೂತಿ ಪಾ
ಸಿದ ನಿಜನಿಷ್ಠೆಯೆಂಬ ಮೃದುತಳ್ಪದೊಳುಜ್ವಳಿಪಾತ್ಮಸಾಧನಂ

ಯಾವಾಗಲಾದರೂ ತಪ್ಪಿ ಹೋದೀತೆಂದು ಯೋಚಿಸಿ ಭಯಪಟ್ಟು ಹೃದಯ ಕಮಲವೇ ಪೀಠವಾಗಿ ಉಳ್ಳ ಲಿಂಗಕ್ಕೆ ಆ ಮನಸ್ಸನ್ನು ಕೊಟ್ಟು ಸುಮ್ಮನೆ (ನಿರ್ಮನನಾಗಿ) ಇರುತ್ತಿರುವನೋ ! ೨೧. ಪತಿಯನ್ನು ನೆನೆದು ನೆನೆದು ಸತಿಯು ಆ ಗಂಡನೇ ಆಗಲಾಗಿ, ಅವಳು ಆ ಪತಿಸಂಬಂಧದ ರತಿಸುಖವನ್ನು ಪಡೆಯುವಳೇನು ? ಅದಾವ ಫಲ ! ಹಾಗೆ ಶಿವಸ್ಮೃತಿಯಿಂದ (ಶಿವಧ್ಯಾನದಿಂದ) ಭಕ್ತನು ತಾನು ಈಶ್ವರನೇ ಆಗುವುದು ಏನುಫಲ ! ೨೨. ನನ್ನ ಪತಿಯಾದ ಶಿವನ ಸಮೀಪಕ್ಕೆ ಮನಸ್ಸನ್ನು ದೂತನನ್ನಾಗಿ ಅಟ್ಟಿದೆನು (ಕುಂಟಣಿತನಕ್ಕಾಗಿ ಕಳುಹಿಸಿದೆನು). ಮೊದಲು ಮನಸ್ಸು ಸವತಿಯತನವನ್ನು ಹೊಂದಿ, ಅಧಿಕವಾಗಿ (ಚೆನ್ನಾಗಿ) ಅವನೊಡ ಗೂಡಿರುವುದು ; ಅಕ್ಕಟಾ ! ಈ ಮನಸ್ಸು ನಪುಂಸಕವಾದುದು, ಎಂದು ಒಪ್ಪನಾಗಿ ಪಾಣಿನಿ ಆಚಾರ್ಯನು ಹೇಳಿದ ಸೂತ್ರವು ತಪ್ಪಾಗುತ್ತದೆಯೇನು ? ಹೀಗಾದರೂ ಅದು ಪುರುಷರನ್ನು ಹೆಣ್ಣು ಎನಿಸುತ್ತ ಕೂಡುವ ನನ್ನ ಗಂಡನಿಗೆ ಈ ಮನಸ್ಸು ಹೆಂಡತಿಯಾಗಿ ಇರುವುದು ಆಶ್ಚರ್ಯವಲ್ಲವೇ ? ಅಂದರೆ ಲೋಕದ ಗಂಡಸರೆಲ್ಲ ಪುಲ್ಲಿಂಗವಾದರೂ ಶಿವನ ವಿಷಯದಲ್ಲಿ ಹೆಂಡತಿಯಾಗುವುದು ಆಶ್ಚರ್ಯಕರವಾದುದು ಎಂದು ಭಾವ. ವೀರಶೈವ ಧರ್ಮದಲ್ಲಿ ಶಿವನಿಗೂ ಜೀವನಿಗೂ ಸತಿಪತಿ ಭಾವವನ್ನು ಹೇಳಲಾಗಿದೆ (ಶರಣಸತಿ–ಲಿಂಗಪತಿಯಾಗಿ ಆಚರಿಸುವ ಕ್ರಿಯಾಚರಣೆ ಇಲ್ಲಿ ಪ್ರಮುಖ) ೨೩–೨೫ ಹೀಗೆಂದು ತಿಳಿಯುತ್ತ,

[1]ತೆತ್ತು ಸ್ಯತಿರ್ಪನೋ(ಜ, ಮು, ಗ); ತೆನಿತೆತ್ತು ಸ್ಯೆತಿರ್ಪನೋ(ಚ); ತೆಂತು ಸ್ಯೆತಿರ್ಪನೊ(ದ); ತಿಂತು ಸ್ಯೆರಿಹನೋ(ಅ). [2]ಬೇಸರ(ಚ)

ಸದಮಳ ಚಿತ್ರಭಾಕ್ಷಿಯೊಳೆ ನೋಡುತಹಂಕೃತಿ ಲಜ್ಜೆ ಪಿಂಗೆ ತ
ಳ್ವದೆ ದೃಢಭಾವಬಾಹುವಿನೊಳಪ್ಪುತಿವಂ ನೆರೆದೊಪ್ಪುವಂದವೋ ೨೫

ನೆನೆವೊಡೆ ನಿಳ್ಕದೀಕ್ಷಿಪೊಡೆ ಸಿಲ್ಕದ ಕೀರ್ತಿಪೊಡೊಲ್ದು ಶಕ್ಯಮೆಂ
ದೆನಿಸದ ಕೂಡಲುಜ್ಜುಗಿಸೆ ತಳ್ಕಿಗೆ ಸಲ್ಲದ ದಿವ್ಯಲಿಂಗಮಂ
ಘನತರ ಭಕ್ತಿಯಿಂ ನೆನೆದಭೀಕ್ಷಿಸಿ ಕೀರ್ತಿಸಿ ಕೂಡಿ ಮಾಣದಾ
ನೆನಪು ನಿರೀಕ್ಷಣಾದಿನುತಿ ಕೂಟಮಿವೆಂಬಿವಡಂಗೆ ಲಿಂಗದೊಳ್ ೨೬

ತಾನೆಂಬುದಳಿದು ಪೊಱಗೊಳ
ಗಾನಂದವೆ ತೀವಿ ಬಾಹ್ಯರತಿಯುಱಿತು ಶಿವಂ
ತಾನಾದನೊ ತಾನೇ ಶಿವ
ನೇನಾದನೊ ಬಸವನಮಮ ಬಣ್ಣಿಪೊಡಳವೇ ೨೭

ಸೊಲ್ಲಿಡಬಾರದ ಪವಣಿಸೆ
ನಿಲ್ಲದ ತಣಿವಾದುದೊಲ್ಲೆನೆನಿಸದ ಪೆಱತೊಂ

ಕೂಡಲೇ ತನ್ನ ಸಮೀಪಕ್ಕೆ ಬಂದ ಮನಸ್ಸು ಪುನಃ ದೂರ ಹರಿದು ಕೂಡಿಕೊಳ್ಳುವ ಮೊದಲು ಕುಂದಿಲ್ಲದ ತನ್ನಗಂಡನಲ್ಲಿ ಭೇದವಿಲ್ಲದೆ ಚೆನ್ನಾಗಿ ಕೂಡುವುದಕ್ಕೋಸ್ಕರ ಅಪೇಕ್ಷೆಪಟ್ಟು ಸ್ಪರ್ಧೆಯುಳ್ಳದ್ದಾಗಿ ಆಗ ಭಕ್ತಿಯೆಂಬ ಕುಂಟಣಿಗಿತ್ತಿಯು ಹೃದಯ ಕಮಲವೆಂಬ ರತ್ನಖಚಿತವಾದ ಮಂಚದಲ್ಲಿ ಚೆನ್ನಾಗಿ ಹಾಸಿದ ನಿಜನಿಷ್ಠೆಯೆಂಬ, ಸ್ಥಿರ ವಾದ ಶ್ರದ್ಧೆಯೆಂಬ, ಕೋಮಲಹಾಸಿಗೆಯ ಮೇಲೆ ಹೊಳೆಯುತ್ತಿರುವ ತನ್ನ ಗಂಡನನ್ನು, ನಿರ್ಮಲವಾದ ಜ್ಞಾನವೆಂಬ ದೃಷ್ಟಿಯಿಂದ ನೋಡುತ್ತ, ಹೂಂಕೃತಿಯೆಂಬ ನಾಚಿಕೆಯು ಹಿಂದೆಗೆಯಲಾಗಿ ತಡಮಾಡದೆ ದೃಢವಾದ ತೋಳುಗಳಿಂದ ಗಾಢವಾಗಿ ಅಪ್ಪಿಕೊಳ್ಳುತ್ತ ಪರಸ್ಪರ ಸೇರುವ ಒಂದು ರೀತಿಯೋ ! ೨೬–೨೭. ವಿಚಾರಿಸುವುದಕ್ಕೂ ಗೋಚರವಾಗದ, ನೋಟಕ್ಕೆ ಸಿಗದ, ಪ್ರೀತಿಯಿಂದ ಸ್ಮರಿಸುವುದಕ್ಕೂ ಶಕ್ಯವೆಂದೆನಿಸದ, ಕೂಡಲಿಕ್ಕೆ ಅಪೇಕ್ಷೆಪಟ್ಟು ವ್ಯವಹರಿಸಲು ಆಲಿಂಗನಕ್ಕೆ ನಿಲುಕದ, ದಿವ್ಯಲಿಂಗವನ್ನು ಘನತರವಾದ ಭಕ್ತಿಭಾವದಿಂದ ಸ್ಮರಿಸಿ, ನೋಡಿ, ಹಾಡಿ, ಕೂಡಿ ತಪ್ಪದೆ ಆ ನೆನಪೂ ನೋಟ, ಸ್ತೋತ್ರ ಮೊದಲಾದ ಸಮೂಹವೂ ಲಿಂಗದಲ್ಲಿ ಅಡಗಲಾಗಿ (ಅಂದರೆ ಸಮಸ್ತ ಕ್ರಿಯಾ ಮುಖವೂ ಲಿಂಗದಲ್ಲಿ ಅಡಗಲಾಗಿ) ತಾನೆಂಬುದು ನಷ್ಟವಾಗಿ, ಹೊರ ಒಳಗೆಲ್ಲ ಆನಂದವೇ ತುಂಬಿ, ಬಾಹ್ಯ ಕ್ರಿಯಾ ವ್ಯವಹಾರವೆಲ್ಲ ನಾಶ ಗೊಂಡು ಶಿವನೇ ತಾನಾದನೋ ಅಥವಾ ತಾನೇ ಶಿವನಾದನೋ ಅಮಮ ! (ಬಸವಣ್ಣನ ಈ ಶಿವಯೋಗದ ಸ್ಥಿತಿಯನ್ನು) ಬಣ್ಣಿಸಲು ಶಕ್ಯವಾದೀತೇ ! ೨೮. ಮಾತಿಗೆ ನಿಲುಕದ, ಪ್ರಮಾಣಕ್ಕೆ ಸಿಕ್ಕದ, 'ತಣಿವು ಗೊಂಡೆನು ಇನ್ನು ಸಾಕು' ಎಂದೆನಿಸದ, ಇದಕ್ಕಿಂತ

ದೆಲ್ಲಿಯುಮತಿಶಯಮಿಲ್ಲದ
ಸಲ್ಲಲಿತ ಶಿವೈಕ್ಯ ಸೌಖ್ಯಮಂ ತಾಳ್ದಿದ[1]ನೋ ೨೮

ದ್ವೈತಾದ್ವೈತಭ್ರಮಿತರ
ಮಾತು ಮನಂಬುಗದ ನಿಗಮತತಿಯಱಿಯದ ವಿ
ಶ್ವಾತೀತವಿಮಳಲಿಂಗದೊ
ಳೋತೊಡಗೂಡಿರ್ದ ಭಾವಮೋ ವೃಷಭೇಂದ್ರಂ ೨೯

ವ॥ ಅಂತುಮಲ್ಲದೆಯುಂ—

ರಮಣನಗಲ್ಕೆಯಿಲ್ಲದೊಡನಾವಗಮೊಪ್ಪಿರೆ ಮುಂತಮಂಗಸಂ
ಗಮಸುಖಮಂ ವರಾಂಗಿ ವಿಜನಸ್ಥಲದೊಳ್ಪಡೆವಂತೆ ತನ್ನೊಳಿಂ
ಪಮರ್ದು ವಿಯುಕ್ತನಾಗದೆ ಶಿವಂ ಸಲೆ ವರ್ತಿಸೆಯುಂ ತದೀಯ ಯೋ
ಗಮಹಿತ ಸೌಖ್ಯಮಂ ಕರಣವಿಲ್ಲದವಸ್ಥೆಯೊಳೊಂದಿದಂದಮೋ ೩೦

ಬಲವದ್ಭಕ್ತಾಂಗಮಂಗಂ ತನಗೆನಿಪಭವಂಗಂಗಮಂ ಭಕ್ತಸತ್ಪ್ರಾ
ಣಲಸತ್ಪ್ರಾಣಂಗೆ ಮೇಣ್ಪ್ರಾಣಮನಮಳಿನ ಭಕ್ತಾಕ್ಷಮಾತ್ಮಾಕ್ಷಮಾಗಿ
ರ್ಪ ಲಲಾಟಾಕ್ಷಂಗೆ ನೈಜಾಕ್ಷಮನಳವಡಿಸುತ್ತೀವುತಾನೆಂಬುದಂ ತೊ
ಳ್ದೊಲವಿಂ ತದ್ಭಾವಮಂ ತಾಂ ಮಱೆದು ಬೆರೆದನೋ ಲಿಂಗದೊಳ್ ಶ್ರೀವೃಷೇಂದ್ರಂ ೩೧

ಬೇರೊಂದು ವಸ್ತುವು ಅನ್ಯತ್ರ ಇಲ್ಲದಿರುವ, ಮನೋಹರನಾದ ಶಿವನಲ್ಲಿ ಐಕ್ಯಗೊಳ್ಳುವುದರಿಂದುಂಟಾಗುವ ಸುಖವನ್ನು (ಈ ಬಸವಣ್ಣನು) ತಾಳಿರುವನೋ ! ೨೯. ಬಸವೇಶ್ವರನು ದ್ವೈತ ಅದ್ವೈತ ಎಂಬುದಾಗಿ ಭ್ರಾಂತಿ ಗೊಂಡು ಮಾತನಾಡುವವರ ಮಾತು ಮನಸ್ಸಿಗೆ ರುಚಿಸದೆ, ವೇದ ಸಮೂಹವು ಅರಿಯದಂಥ ಪ್ರಪಂಚವನ್ನೇ ಅತಿಕ್ರಮಿಸಿರುವ ನಿರ್ಮಲವಾದ ಶಿವಲಿಂಗದಲ್ಲಿ, ಓರಂತೆ ಒಡಗೂಡಿಕೊಂಡಿರುವ ಭಾವವೋ ! ವ॥ ಅದೂ ಅಲ್ಲದೆ ೩೦. ಮನೋಹರವಾದ ದೇಹವುಳ್ಳ ಸ್ತ್ರೀಯು ತನ್ನಗಂಡನ ವಿಯೋಗವಿಲ್ಲದೆ ಸದಾ ಅವನೊಡನೆಯೇ ಶೋಭಿಸುತ್ತಿರುವಾಗ ಅವನ ಅಂಗಸಂಗದ ಸುಖವನ್ನು ಮೊದಲು ನಿರ್ಜನ ಸ್ಥಳದಲ್ಲಿ ಪಡೆಯುವಹಾಗೆ, (ಭಕ್ತನಾದ) ತನ್ನಲ್ಲಿ ಇಂಪಾಗಿ ಬೆರೆತು ಕೊಂಡಿರುವ ಶಿವನು ಭಿನ್ನವೆನಿಸದೆ, ಚೆನ್ನಾಗಿ ಇದ್ದರೂ ಕೂಡ ಇಂದ್ರಿಯಗಳೇ ನಷ್ಟವಾದ ಕಾರಣ (ಇಂದ್ರಿಯ ವ್ಯಾಪಾರವೆಲ್ಲ ಲಿಂಗವ್ಯಾಪಾರವಾಗಿ ಮಾರ್ಪಟ್ಟ ಕಾರಣ) ಸತತವೂ ಆ ಶಿವನ ಸಂಬಂಧದಿಂದುಂಟಾದ ಶ್ರೇಷ್ಠವಾದ ಸೌಖ್ಯವನ್ನು ಹೊಂದಿದ ರೀತಿಯೋ ! ೩೧. ಶ್ರೀವೃಷಭೇಂದ್ರನು-ಬಲವಿಶಿಷ್ಟವಾದ ಭಕ್ತನ ಶರೀರವೇ ತನಗೆ ಲಿಂಗವೆಂದು ಎನಿಸಿರುವ ಶಿವನಿಗೆ ಅಂಗವನ್ನೂ, ಆ ಭಕ್ತನ ಸಮೀಚೀನವಾದ ಪ್ರಾಣವೇ ಪ್ರಕಾಶಮಾನವಾದ ಪ್ರಾಣವಾಗಿ ಉಳ್ಳ ಶಿವನಿಗೆ ಪ್ರಾಣವನ್ನೂ, ನಿರ್ಮಲವಾದ ಭಕ್ತನ ಇಂದ್ರಿಯಗಳೇ ತನ್ನ ಇಂದ್ರಿಯಗಳಾಗಿರುವ ಶಿವನಿಗೆ (ಲಲಾಟಾಕ್ಷನಾದ ಶಿವನಿಗೆ) ತನ್ನ ಇಂದ್ರಿಯಗಳನ್ನೂ,

---

1 ಹ (ಅ)

ಪರಿಕಿಪೊಡೆ ವಾಙ್ಮನಕಗೋ
ಚರವಿದು ಶಿವಯೋಗನಿದ್ರೆಯೆಂದೀ ತೆಱದಿಂ
ವರ ಚನ್ನಬಸವನಾ ಬಸ
ವರಸನ ಬಗೆಗಂಡು ಪೊಗಳುತಿರ್ಪಿನಮಾಗಳ್ ೩೨

ನಲಿದೊರ್ವಂ ಜಂಗಮಾರ್ಯಂ ಬರುತೆ ಬಸವಸಂದರ್ಶನೋತ್ಕಂಠೆಯಿಂ ತ
ನ್ನಿಲಯದ್ವಾರಕ್ಕೆ ಬಂದಲ್ಲಿಯ ಪಡಿಯಱರಿಂ ಕೇಳ್ದು ತದ್ಯೋಗನಿದ್ರಾ
ಚಲಭಾವಸ್ಫೂರ್ತಿಯಿಂ ತಾಂ ಮಗುಳಲೊಡನಣಂ ಜಂಗಮಪ್ರಾಣನಿಷ್ಠೋ
ಜ್ವಲಿತಾಸಂಪತ್ತಿಭಾಸ್ವದ್ಬಸವನಸುವದೊಂದಾಗಿ ಪೋದತ್ತನೂನಂ ೩೩

ವ॥ ಆಗಳಲ್ಲಿರ್ದ ಪರಿಚಾರಕಜನಮದಂ ಕಂಡು ಪೆಳರ್ದು ತಳಮಳಗುಗೊಂಡು ಸಂದಣಿಸು ವಿನಮಾ ಸಂಧ್ಯಾಸಮಯೋಚಿತ ಲಿಂಗಾರ್ಚನೆಗೆ ಪರಮ ಮಾಹೇಶ್ವರರ್ ಸಾಲ್ವಿಡಿದು ಕುಳ್ಳಿರ್ದು ಬಸವನಿರಮ ನಿರೀಕ್ಷಿಸಿ ಪಿರಿದದ್ಭುತಮನಾಳ್ದಿದೇಂ ಪ್ರಸ್ತುತಮಿಂತಪ್ಪುದಕ್ಕೆ ಕಾರಣಮಾವುದದನಱಿಯ

ಅಳವಡಿಸಿ ಕೊಡುತ್ತ, ಪ್ರೀತಿಯಿಂದ ಆನಂದವನ್ನು ಹರಡಿ (ಪ್ರಸಾರಗೊಳಿಸಿ) ಆ ಶಿವನ ಭಾವವನ್ನೇ ತಾನು ಮರೆತು ಲಿಂಗದಲ್ಲಿ ಬೆರೆತನೋ! (ಅಂದರೆ ಜ್ಞಾತೃ, ಜ್ಞಾನ, ಜ್ಞೇಯ ವ್ಯಾಪಾರ ಶೂನ್ಯನಾಗಿ ಸಮಸ್ತ ತನುಕರಣಗಳಲ್ಲೂ ಲಿಂಗ ಪ್ರಕಾಶವನ್ನು ಕಾಣುತ್ತ ಲಿಂಗಭಾವವನ್ನೇ ಮರೆತು ಶಿವಾದ್ವೈತಭಾವ ಹೊಂದಿದನೋ ಎಂಬ ಭಾವ) ೩೨–೩೩ ವಿಚಾರಮಾಡಿ ನೋಡಿದರೆ ಬಸವಣ್ಣನ ಈ ಶಿವಯೋಗ ನಿದ್ರೆಯು ಮಾತಿಗೂ, ಮನಸ್ಸಿಗೂ ಅಗೋಚರವಾದದ್ದು : ಈ ರೀತಿಯಿಂದ ಚೆನ್ನಬಸವಣ್ಣನು ಬಸವಣ್ಣನ ರೀತಿಯನ್ನು ಕಂಡು ಹೊಗಳುತ್ತಿದ್ದಾಗ, ಒಬ್ಬ ಜಂಗಮಶ್ರೇಷ್ಠನು ಬಸವಣ್ಣನನ್ನು ನೋಡಬೇಕೆಂಬ ಅತ್ಯಂತ ಕುತೂಹಲದಿಂದ ಸಂತೋಷದಿಂದ ಬರುತ್ತ, ಆ ಬಸವಣ್ಣನ ಮನೆಯ ಬಾಗಿಲಿಗೆ ಬಂದು ಅಲ್ಲಿದ್ದ ಬಾಗಿಲುಕಾಪಿನವರಿಂದ ಆವನ ಯೋಗನಿದ್ರೆಯಲ್ಲಿ ರುವ ನಿಶ್ಚಂಚಲವಾದ ಮನಸ್ಸಿನ ಸ್ಫೂರ್ತಿಯನ್ನು ಕೇಳಿ ಹಿಂದಿರುಗಿದನು. ಆ ಕೂಡಲೇ ಜಂಗಮವೇ ಪ್ರಾಣವೆಂಬ ನಿಷ್ಠೆಯ ಉಜ್ವಲ ಸಂಪತ್ತಿನಿಂದ ಪ್ರಕಾಶಮಾನವಾದ ಬಸವಣ್ಣನ ಪ್ರಾಣವೂ (ಆ ಜಂಗಮನ ಪ್ರಾಣದೊಡನೆ) ಒಂದಾಗಿ ಯಾವ ನ್ಯೂನತೆ ಯಿಲ್ಲದೆ ಹೊರಟು ಹೋಯಿತು, [ಬಸವಣ್ಣನು ಜಂಗಮ ಪ್ರಾಣ ಎನಿಸಿದ್ದರಿಂದ ಮನೆಗೆಬಂದ ಜಂಗಮವು ಹಿಂದಿರುಗಿ ಹೋಗಲಾಗಿ ಅವನ ಪ್ರಾಣದೊಡನೆ ಕೂಡಿ ಬಸವಣ್ಣನ ಪ್ರಾಣವೂ ಹೋಯಿತೆಂದು ಭಾವ] ವ॥ —ಆಗ ಅಲ್ಲಿದ್ದ ಸೇವಕ ಜನರು ಅದನ್ನು ಕಂಡು ಭಯಪಟ್ಟು, ತಳಮಳಗೊಂಡು, ಗುಂಪುಗುಂಪಾಗಿ ಸೇರಲಾಗಿ ಆ ಸಾಯಂಕಾಲಕ್ಕೆ ಉಚಿತವಾದ ಲಿಂಗಪೂಜೆಗೋಸ್ಕರ ಶ್ರೇಷ್ಠ ಮಾಹೇಶ್ವರರುಗಳು ಸಾಲುಸಾಲಾಗಿ ಕುಳಿತುಕೊಂಡು ಬಸವಣ್ಣನ ಈ ರೀತಿಯನ್ನು ಕಂಡು ಅತ್ಯಾಶ್ಚರ್ಯ ಗೊಂಡು ಪ್ರಕೃತ ಕಾಲಸ್ಥಿತಿಯು ಇದೇನು ? ಹೀಗಾಗುವುದಕ್ಕೆ ಕಾರಣವೇನು ? ಇದನ್ನು ತಿಳಿಯಬೇಕು ಎಂದು ಯೋಚಿಸುವವರಾಗಿ, ಎಲ್ಲಾ ಕರಣಿಕರು, ದ್ವಾರಪಾಲಕರು

ಲ್ವೇಳ್ಕುಮೆಂದು ಮಂತಣಂಗೊಂಡು ಸಕಲ ಕರಣಿಕ ದ್ವಾರಪಾಲಕಾದಿಗಳಂ ಬರಿಸಿ ವಿಚಾರಂಗೆಯ್ದು ಬಸವಗೀತಭಂಡಾರದ ಕವಳಿಗೆಗಳಂ ತರಿಸಿ —

ಬಸವಂ ಕೆಯ್ಕೊಂಡ ಶೀಲಸ್ಥಿತಿಯು ಶಪಥಗೀತಂಗಳಂ ನೋಡಿಮೀ ಕಾ
ಳ[1]ಸೆ ಮೇಣ್ಪ್ರಾಂ ಕಾಣಲಕ್ಕುಂ ಬಳಿಯಿನೆಮಗೆನುತ್ತಿಂತು ಪೇಳ್ವಾಗಳೇ ತಂ
ದೊಸೆದಾ ಮಾಹೇಶ್ವರೌಘಕ್ಕೆಱಗಿ ಮುಗಿವುತುಂ ಪಾಣಿಪದ್ಮಂಗಳಂ ಬೋ
ಧಸುಧಾವಾರಾಕರಂ ಚನ್ನಬಸವ ವಿಭು ವಿಜ್ಞಾಪನಂಗೆಯ್ದನಾಗಳ್ ೩೪

ಹರಪೂಜಾಕಾಲದೊಳ್ ಮದ್ಗುರುಪರಮಸುಖಾವಾಪ್ತಿಯಿಂ ಯೋಗನಿದ್ರಾ
ಭರಿತಂ ಸೈತಿರ್ಪಿನಂ ಜಂಗಮಮನುನಯದಿಂ ಬಂದು ತದ್ದ್ವಾರಪಾಲ
ರ್ಭರದಿಂದಂ ಯೋಗನಿದ್ರಾಸ್ಥಿತಿಯನಱಿಪೆ ಕೇಳ್ದಾಕ್ಷಣಂ ಪೋಗೆ ಕೂಡೊಂ
ದಿರದೆಯ್ದಿತ್ತಲ್ತೆ ಮದ್ದೇಶಿಕನಸು ಪೊಸತೆಂಬನ್ನೆಗಂ ಭಕ್ತವೃಂದಂ ೩೫

ಗುರುವರನ ಶಪಥಮುಂಟೀ
ಪರಿಯಿನದಂ ನೆನೆಯೆ ಬಿರಿವುದೆರ್ದೆ ನುಡಿದೊಡೆ ಭಾ
ಸುರರಸನೆ ಸೀಳ್ವುದೆನೆ ಭೀ
ಕರಮದು ನಡೆಯಲ್ಕೆ ಸಾಧ್ಯಮೋ ಪೆಱಗಿಱಳೆಯೊಳ್ ೩೬

ಗಳನ್ನು ಕರೆಯಿಸಿ ವಿಚಾರಮಾಡುತ್ತ ಬಸವಣ್ಣನವರು ಬರೆದ ಅವರ ಭಾಂಡಾರದ ಪುಸ್ತಕಗಳನ್ನು ತರಿಸಿ (ಓಲೆಗಳನ್ನು ತರಿಸಿ) ೩೪. 'ಬಸವಣ್ಣನು ಅಂಗೀಕರಿಸಿದ ಶೀಲಗಳಾವುವೆಂಬುದನ್ನು (ಅವನು ಹೇಳಿದ) ಶಪಥದ ವಚನಗಳಲ್ಲಿ ನೋಡಿರಿ, (ಆಗ) ಈಗಿನ ಈ ಸಂಬಂಧವನ್ನು ತಿಳಿಯಲಿಕ್ಕಾಗುವುದು' (ಅಂದರೆ–ಹೀಗೆ ಪ್ರಾಣ ಹೋದುದಕ್ಕೆ ಕಾರಣವೇನೆಂಬುದನ್ನು ತಿಳಿಯಲಾಗುವುದು) ಎನ್ನುತ್ತ ಹೇಳುತ್ತಿದ್ದರು. (ಆಗ) ಸದ್ಬೋಧೆಗೆ ಸಮುದ್ರಪ್ರಾಯನಾದ ಚೆನ್ನಬಸವೇಶ್ವರವಿಭುವು ಬಂದು, ಪ್ರೀತಿಯಿಂದ ಆ ಮಾಹೇಶ್ವರ ಸಮೂಹಕ್ಕೆ ನಮಸ್ಕರಿಸಿ, ಕೈಗಳನ್ನು ಮುಗಿಯುತ್ತ ವಿಜ್ಞಾಪಿಸಿಕೊಂಡನು. ೩೫. ನನ್ನ ಗುರುವಾದ ಬಸವೇಶ್ವರನು ಶಿವಪೂಜಾ ಕಾಲದಲ್ಲಿ ಉತ್ಕೃಷ್ಟವಾದ ಶಿವಯೋಗದ ಸೌಖ್ಯದ ಸಂಬಂಧದಿಂದ ಯೋಗ ನಿದ್ರಾಭರಿತನಾಗಿ ಸುಮ್ಮನೆ ಇರಲಾಗಿ ಪ್ರೀತಿಯಿಂದ ಜಂಗಮಸಮೂಹವು ಬಂದಿತು. ದ್ವಾರಪಾಲಕರು ಇವರ ಯೋಗ ನಿದ್ರಾಸ್ಥಿತಿಯನ್ನು ತಿಳಿಸಿದರು. ಇದನ್ನು ಕೇಳಿ ಆಕ್ಷಣವೇ ಆ ಭಕ್ತವೃಂದವು ಹಿಂದಿರುಗಿ ಹೋಯಿತು. ಇದೊಂದು ಹೊಸರೀತಿಯೋ ಎಂಬಂತೆ ನನ್ನ ಈ ಗುರುವಿನ ಪ್ರಾಣವು ಅವರ ಪ್ರಾಣದೊಡನೆ ತಪ್ಪದೆ ಹೋಗಿರಬೇಕಲ್ಲವೆ ? ೩೬. ಈ ರೀತಿಯಲ್ಲಿ (ಅಂದರೆ ನಾನು ಜಂಗಮ ಪ್ರಾಣಿಯೆಂಬುದಾಗಿ) ಗುರುವರನಾದ ಬಸವಣ್ಣನ ಆಣೆಯೇ ಉಂಟು. ಅದನ್ನು ನೆನೆದರೆ ಎದೆಬಿರಿಯುವುದು, ಶ್ರೇಷ್ಠವಾದ ನಾಲಗೆಯು ಆ ಕೂಡಲೇ ಸೀಳುವುದು ಎನ್ನುವಂತೆ ಭಯಂಕರವಾದುದು. ಆ ಶಪಥ ಬೇರೆಯವರಿಗೆ

1ೞ(ಚ)

ಪೊಸತೊಂದು ಗೀತಮಂ ತಾಂ
ಬೆಸಸಿದನಾ ಬಸವನಾತ್ಮಶಪಥಕ್ರಮಂಶೋ
ಲ್ಲಸಿತಮನೆಂತೆನೆ ಬಲ್ಲಂ
ತುಸುರ್ದಪೆನಾಲಿಪ್ಪುದು ಶರಣಸಂಸಂಕುಳಮಿಂಗಳ್ ೩೭

ಪ್ರಾಣಲಿಂಗಮೆ ಧಾತ್ರಿಯೊಳ್ ಶಿವಭಕ್ತಸಂತತಿಗೊಚ್ಚತಂ
ಪ್ರಾಣಮಾ ಘನಲಿಂಗಮೂರ್ತಿಗೆ ಸದ್ಗುರೂತ್ತಮನಾಗಳುಂ
ಪ್ರಾಣಮಾ ಗುರು ತಾನೆನಿಪ್ಪ ಸುಜಂಗಮಂ ನಿಜದಿಂದೆ ಮ
ತ್ಪ್ರಾಣಮೆಮ್ಮಯ ಸಂಗಮೇಶನಿದಕ್ಕೆ ಸಾಕ್ಷಿಸಮೀಹಿತಂ ೩೮

ವ್ರತಮಿದೆನಗೆಂದು ಪೂಣ್ದು
ನ್ನತಮತಿ ಗೀತಮನೊಳಿಲ್ದು ಪಾಡಿದನೀಗಳ್
ಕ್ಷಿತಿ ಪೊಗಳೆ ಪಾಡಿದಂದದೆ
ನುತಚರದೊಡನೆಯ್ದಿಸಿರ್ದನಸುವಂ ಬಸವಂ ೩೯

ನೆನೆಯಲ್ನುಡಿಯಲೊಡರ್ಚ
ಲ್ಕೆ ನಿತಾಂತಂ ಮಾದೃಶರ್ಗಿದೇಂ ಸಾಧ್ಯಮೆ ದಲ್
ನೆನೆದಂತೆ ನುಡಿದು ನುಡಿದಂ
ತೆ ನಡೆದನೀ ಗುರುವಿಮಂಗದಃ[1]ದೊರೆ ಧರೆಯೊಳ್ ೪೦

ಈ ಭೂಮಿಯಲ್ಲಿ ನಡೆಯಲಿಕ್ಕೆ ಸಾಧ್ಯವೇ ? ೩೭. ತನ್ನ ಭಾಷೆಯ ಕ್ರಮದಿಂದ ಪ್ರಕಾಶಿಸುವ ಬಸವಣ್ಣನು ಹೊಸದಾದ ಒಂದು ಗೀತೆಯನ್ನು (ವಚನವನ್ನು) ಆಜ್ಞಾಪಿಸಿದ್ದಾನೆ. ಅದು ಹೇಗೆಂದರೆ ನಾನುಬಲ್ಲಂತೆ ಹೇಳುತ್ತೇನೆ. ಶರಣಸಮೂಹವು ಕೇಳಬೇಕು : ೩೮. 'ಈ ಭೂಮಿಯಲ್ಲಿ ಶಿವಭಕ್ತಸಮೂಹಕ್ಕೆ ನಿಶ್ಚಯವಾಗಿ ಪ್ರಾಣಲಿಂಗವೇ ಪ್ರಾಣ; ಆ ಘನಲಿಂಗಮೂರ್ತಿಗೆ ಸದ್ಗುರೂತ್ತಮನು ಯಾವಾಗಲೂ ಪ್ರಾಣ; ಆ ಗುರುವೆನಿಸುವ ಶ್ರೇಷ್ಠಜಂಗಮನು ನಿಜವಾಗಿಯೂ ನನ್ನ ಪ್ರಾಣವೇ ಆಗಿದ್ದಾನೆ. ಇದಕ್ಕೆ ನಮ್ಮ (ಕೂಡಲ) ಸಂಗಮೇಶ್ವರನೇ ಸಮೀಹಿತ (ಬಯಕೆಯ) ಸಾಕ್ಷಿಯಾಗಿದ್ದಾನೆ. (ನಾನು ಬಯಸಿದ ಸಾಕ್ಷೀ ಭೂತನಾಗಿದ್ದಾನೆ') ೩೯. ಹೀಗೆಂದು ಆ ಉನ್ನತ ಬುದ್ಧಿಯ ಬಸವಣ್ಣನು ಇದು ನನಗೆ ವ್ರತವೆಂದು ಪ್ರತಿಜ್ಞೆಮಾಡಿ, ಗೀತೆಯನ್ನು (ವಚನವನ್ನು) ಉದ್ಘಾಟಿಸಿಕೊಂಡು ಹಾಡಿದ್ದಾನೆ. ಈಗ ಭೂಮಿಯೆಲ್ಲ ಹೊಗಳುವಂತೆ ಹಾಡಿದ ರೀತಿಯಿಂದ ತನ್ನ ಪ್ರಾಣವನ್ನು ಶ್ರೇಷ್ಠರಾದ ಜಂಗಮರ ಸಂಗಡವೇ ಸೇರಿಸಿ ಇದ್ದಾನೆ. (ಅವರು ಹೋಗಲಾಗಿ ಬಸವನ ಆ ಪ್ರಾಣವೂ ಹೋಯಿತೆಂದು ಭಾವ) ೪೦. ನೆನೆಯುವುದಕ್ಕೂ, ಮಾತನಾಡುವುದಕ್ಕೂ, ನಿಜವಾಗಿಯೂ ಆಚರಿಸುವುದಕ್ಕೂ ನಮ್ಮಂಥವರಿಗೆ ಆ ಭಾಷೆಯು ನಿಶ್ಚಯವಾಗಿ ಸಾಧ್ಯವಾದೀತೇ ? ಈ ಗುರುವಾದ ಬಸವಣ್ಣನು ನೆನೆದಂತೆ ನುಡಿದನು, ನುಡಿದಂತೆ ನಡೆದನು. ಲೋಕದಲ್ಲಿ ಇವನಿಗೆ ಯಾರುತಾನೆ

1 ಗೆಯಾ(ಜ, ಚ, ಮು); ಗಾ(ಗ)

ಬಿರಿದಿನ ಭಾಷೆಯ ಬಲ್ಮೆಯ
ಧುರಂಧರಂ ಭಕ್ತಿನಿಧಿ ಭವತ್ಕಿಂಕರನೀ
ಗುರುಬಸವನಮಮ ಮಗುಳ್ದಾ
ಚರಲಿಂಗದ ಬಳಿಯೊಳಸುವ ಸಲಿಸಿದನಲ್ತೇ ೪೧

ವ॥ ಎಂದು ಕೇಳ್ದು ಶಿವಗಣಂ ಮೆಚ್ಚಿ ವಿಸ್ಮಯಂಬಡೆಯೆ ಕೊಂಡಾಡಿ ಚೆನ್ನಬಸವಂ ಮುನ್ನಣೆಯ ಪಡಿಯಱರಂ ಕರೆದು ಶಿವಭಕ್ತಮಂದಿರಂಗಳೊಳ್ ತಜ್ಜಂಗಮಮಂ ಪುಡುಂಕಿ ತಳ್ವದೆ ತರ್ಪುದೆಂದ ನಿಯಾಮಿಸಲೊಡನವರ್ ಮಹಾಪ್ರಸಾದಮೆಂದು ತನ್ಮಂದಿರಂಗಳೊಳನ್ವೇಷಣಂಗೆಯ್ದು ಕಂಡು ತಜ್ಜಂಗಮಕ್ಕೆ ನಮಿಸಿ ಕರೆದುತರ್ಪುದುಮಾಗಳ್—

ಚರಲಿಂಗದೊಡನೆ ಗಮಿಸಿದ
ಹರಣಂ ಬಳಿಸಂದು ಬಂದು ನಿಜದೇಹಮನಾ
ವರಿಸೆ ಶರಣಾಳಿ ಪಿರಿದ
ಚ್ಚರಿವಡೆ ಬಸವೇಶನಕ್ಷಿದೆಱೆದಾಕ್ಷಣದೊಳ್ ೪೨

ಬಿಡದೆಳ್ದಾನಂದದಿಂದಂ ಚರಮುಖಶರಣಾನೀಕಪಾದಾಬ್ಜದೊಳ್ಸ್ರ
ಗೆಡೆವುತ್ತುಂ ಮುನ್ನಿನಂತರ್ಚಿಸುತೆ ಪೊಗಳುತುಂ ತತ್ಪ್ರಸಾದಾಮೃತಂಗೊಂ
ಡೊಡನೊಪ್ಪಿರ್ದಂ ಪ್ರಸನ್ನಪ್ರಕಟನಿಜಮಹಾಭಕ್ತಿಸಂಪನ್ನನುದ್ಯ
ನ್ಮೃಡಭಕ್ತಪ್ರಾಣಮಿತ್ರಂ ಸುಗುಣನಿಧಿ ಶಿವಾದ್ವೈತವಿದ್ಯಾಸಮುದ್ರಂ ೪೩

ಸಮಾನರಾದಾರು ? ೪೧. ಬಿರುದಿನ ಭಾಷೆಯ (ಪ್ರತಿಜ್ಞೆಮಾಡಿ ನುಡಿದ ಭಾಷೆಯ) ಆಧಿಕ್ಯದ ಧುರಂಧರನೂ, ಭಕ್ತಿಗೆ ನಿಕ್ಷೇಪನೂ, ನಿಮ್ಮ ಕಿಂಕರನೂ ಆದ ಈ ಬಸವೇಶ್ವರನು ಆ ಚರಲಿಂಗದ (ಜಂಗಮರ) ಬಳಿಯಲ್ಲಿಯೇ ಪುನಃ ತನ್ನ ಪ್ರಾಣವನ್ನು ಸಲ್ಲಿಸಿರುವನಲ್ಲವೇ ? ಅಮಮ ! ವ॥ ಹೀಗೆಂದು ಚೆನ್ನಬಸವಣ್ಣನು ಹೇಳಿದ ಮಾತನ್ನು ಕೇಳಿದ ಶಿವಗಣಂಗಳು ಮೆಚ್ಚಿದವರಾಗಿ, ಆಶ್ಚರ್ಯಗೊಂಡರು. ಚೆನ್ನಬಸವಣ್ಣನು ಮುನ್ನಣೆಯ ದ್ವಾರಪಾಲಕರುಗಳನ್ನು ಕರೆದು (ಈ ನಗರದ) ಶಿವಭಕ್ತರ ಮನೆಗಳಲ್ಲಿ ಆ ಜಂಗಮರುಗಳನ್ನು ಬೇಗನೆ ಹುಡುಕಿ ಕೊಂಡು ಬರಬೇಕೆಂದು ನಿಯಮಿಸಲಾಗಿ, ಕೂಡಲೇ ಅವರು 'ಮಹಾಪ್ರಸಾದ' ಎಂದು ಆಯಾಯ ಮನೆಗಳಲ್ಲಿ ಹುಡುಕಿ ಕಂಡು ಆ ಜಂಗಮರುಗಳಿಗೆ ನಮಸ್ಕಾರ ಮಾಡಿ, ಕರೆತಂದರು—ಆಗ—೪೨—೪೩. ಜಂಗಮರೊಡನೆಯೇ ಹೋದ (ಬಸವಣ್ಣನ) ಪ್ರಾಣವು ಬಂದು ಅವನ ಸಮೀಪಕ್ಕೆ ಹೋಗಿ ಆ ದೇಹವನ್ನು ಆವರಿಸಲಾಗಿ, ಶರಣರೆಲ್ಲ ಹೆಚ್ಚಿನ ಆಶ್ಚರ್ಯಗೊಳ್ಳುವಂತೆ ಬಸವಣ್ಣನು ಕಣ್ಣನ್ನು ಬಿಟ್ಟನು. ಆ ಕೂಡಲೇ ಅವನು ತಪ್ಪದೆ ಮೇಲಕ್ಕೆದ್ದು ಆನಂದದಿಂದ ಚರಜಂಗಮರೇ ಮೊದಲಾದ ಅನೇಕ ಶರಣರುಗಳ ಪಾದಕಮಲದಲ್ಲಿ ನಮಸ್ಕರಿಸುತ್ತ, ಮೊದಲಿನ ಹಾಗೆ ಅವರನ್ನು ಪೂಜಿಸುತ್ತ, ಹೊಗಳುತ್ತ, ಅವರ ಪ್ರಸಾದವೆಂಬ ಅಮೃತವನ್ನು ಸ್ವೀಕರಿಸುವವನಾಗಿ, ಪ್ರಸನ್ನವಾಗಿ ಪ್ರಕಟಗೊಳಿಸುವ ತನ್ನ ಮಹಾಭಕ್ತಿ ವಿಶೇಷವುಳ್ಳವನೂ, ಶ್ರೇಷ್ಠವಾದ ಮೃಡನ ಭಕ್ತರಾದವರ ಪ್ರಾಣಮಿತ್ರನೂ, ಸುಗುಣಗಳ ನಿಧಿಯೂ, ಶಿವಾದ್ವೈತ ತತ್ತ್ವವೆಂಬ ವಿದ್ಯೆಗೆ ಸಮುದ್ರಪ್ರಾಯನೂ ಆದ

ಶತಮುಖಮುಖದೇವತಾವಿತಾನ
ಸ್ತುತಭೃತವೈಭವ ದಿವ್ಯಪಾದಪದ್ಮೇ
ವಿತತಸಿತಿಗಳಾಂಗಸಂಗತಾಂಗೇ
ಸತತ ಕೃಪಾಕರೆ ರಕ್ಷಿಸೆನ್ನನಾರ್ಯೇ ೪೪

ಇದು ವಿನಮದಖಿಳ ಸುರಾಸುರೇಂದ್ರಮಕುಟತಟಘಟಿತ ಮಣಿಗಣಾಗಣಿತ ರುಚಿನಿಚಯ
ತರುಣಾರುಣಾತಪಪರಿಲಸಿತ ಪರಮ ಶಿವಲಿಂಗ ಪಾದಾರವಿಂದಪರಾಗಭಸಿತ
ಭಾಸುರಲಲಾಟಪಟ್ಟಸರಸಜನಮಾನಿತೋಭಯಕವಿತಾವಿಶಾರದ
ಶ್ರೀಷಡಕ್ಷರಿದೇವಭಕ್ತಿವಿರಚಿತ
ಶ್ರೀಮದ್ ಬಸವರಾಜವಿಜಯಮಹಾಪುರಾಣದೊಳ್ ಬಸವಜಂಗಮಪ್ರಾಣಿತ್ವಕಥನಂ
ತ್ರಯೋವಿಂಶಾಶ್ವಾಸಂ ಸಮಾಪ್ತಂ
ಅಂತು ಆಶ್ವಾಸ ೨೩ಕ್ಕೆ ಪದಗಣನೆ ೧೭೨೬ಕ್ಕೆ ಮಂಗಳಮಹಾ ಶ್ರೀ ॥

ಬಸವೇಶ್ವರನು ಶೋಭಿಸುತ್ತಿದ್ದನು. ೪೪. ಇಂದ್ರನೇ ಮೊದಲಾದ ದೇವತೆಗಳ ಸಮೂಹದಿಂದ ಸ್ತೋತ್ರ ಮಾಡಿಸಿಕೊಳ್ಳಲ್ಪಟ್ಟ ವೈಭವವನ್ನು ಧರಿಸಿರುವ ಮನೋಹರವಾದ ಪಾದಕಮಲವುಳ್ಳವಳೇ, ವಿಸ್ತಾರನಾದ ನೀಲಕಂಠನ ಶರೀರದಲ್ಲಿ ಕೂಡಿಕೊಂಡಿರುವ ಅಂಗವುಳ್ಳವಳೇ, ನಿರಂತರವಾದ ದಯೆಗೆ ಆಸ್ಪದಳಾದವಳೇ, ಆರ್ಯೆಯೇ ನನ್ನನ್ನು ರಕ್ಷಿಸು.

ಇಪ್ಪತ್ತುಮೂರನೆಯ ಆಶ್ವಾಸ ಸಮಾಪ್ತವಾಯಿತು.

ಚತುರ್ವಿಂಶಾಶ್ವಾಸಂ

[ಕಿನ್ನರ ಬಸವ ಪ್ರಾಣದಾನದ ಕಥೆ]

ಶ್ರೀಗೌರೀಕಚಭರಮಾ
ಲಾಗಣಮಕರಂದಸಿಕ್ತಭು[1]ಜನಜರನಜಂ
ಸಾಗರಜಾವರಮುಖಸುರ
ಪೂಗನುತಂ ಮಾಳ್ಕೆ ಸೌಖ್ಯಮಂ ಶಿವಲಿಂಗಂ ೧

ಮುನ್ನೊರ್ಮೆ ಬಸವನಸುವಿದು
ಕಿನ್ನರನಸುಗೂಡಿ ಪೋದುದೆಂದದರಿಜಿವಂ
ಚನ್ನಬಸವಣ್ಣನಾಗಳ್
ಬಿನ್ನವಿಸಿದನಖಿಳ ಶರಣಸಂತತಿಗೊಲವಿಂ ೨

ವ॥ ಅದೆಂತೆನೆ—

ಪ್ರಾಣಲಿಂಗಮೆನಗೀತನೆಂದು ವಿ
ಶ್ರಾಣನೈಕನಿಧಿ ಕಿನ್ನರಯ್ಯನಂ
ಮಾಣದೊಲ್ದು ಭಜಿಸುತ್ತೆ ಭಕ್ತಿಯಿಂ
ಕ್ಷೋಣಿಯಲ್ಲಿ ವೃಷಭೇಂದ್ರನಿರ್ಪಿನಂ ೩

ಹರನಾ ಬಸವನ ನೇಹದ
ಪರಿಯುಂ ಧರೆಗಱಿಪಲೆಂದು ನೆನೆವುತೆ ತತ್ಕಿ
ನ್ನರನಸುವಂ ತನ್ನೊಳ್ಮಿಗೆ
ಬೆರಸುತಡಂಗಿಸಿದನಾಗಳಾ ಬಸವೇಶಂ ೪
ಕಾಣುತ್ತೆ ಕಿನ್ನರಯ್ಯಂ
ಪ್ರಾಣಂಗಳೆದಂದವಮಂ ಭಯಂಬಡೆದು ಜಗ

ಕಿನ್ನರಬಸವ ಪ್ರಾಣದಾನದ ಕಥೆ

೧. ಮಂಗಳಕರಳಾದ ಪಾರ್ವತೀ ದೇವಿಯ ಶೋಭಿಸುವ ಕೇಶದಲ್ಲಿರುವ ಪುಷ್ಪ ಮಾಲೆಗಳ ಸಮುದಾಯದ ಮಕರಂದದಿಂದ ಕೂಡಿಕೊಂಡಿರುವ ಬಾಹುವುಳ್ಳ, ಮುಪ್ಪಿಲ್ಲದ, ಉತ್ಪತ್ತಿರಹಿತನಾದ (ಜನನ ರಹಿತನಾದ) ವಿಷ್ಣುವೇ ಮೊದಲಾದ ದೇವತೆಗಳ ಸಮುದಾಯದಿಂದ ಸ್ತೋತ್ರ ಮಾಡಿಸಿಕೊಳ್ಳಲ್ಪಟ್ಟ ಶಿವಲಿಂಗನು ಸೌಖ್ಯವನ್ನುಂಟು ಮಾಡಲಿ. ೨. ಈ ಪೂರ್ವದಲ್ಲಿ ಒಂದು ಸಲ ಕಿನ್ನರಿ ಬೊಮ್ಮಯ್ಯನ ಸಂಗಡವೇ ಬಸವಣ್ಣನವರ ಪ್ರಾಣವು ಹೋಗಿತ್ತೆಂಬುವ ಅರಿವನ್ನು ಚೆನ್ನಬಸವಣ್ಣನವರು ಆಗ ಸಮಸ್ತ ಶರಣ ಸಮೂಹಕ್ಕೆ ಪ್ರೀತಿಯಿಂದ ಬಿನ್ನವಿಸಿಕೊಂಡನು. ವ॥ ಅದು ಹೇಗೆಂದರೆ ೩–೫. ಲೋಕದಲ್ಲಿ ದಾನಗುಣಕ್ಕೆ ಪ್ರಮುಖ ನಿಕ್ಷೇಪ ಸ್ವರೂಪನಾಗಿರುವ ಈ ಕಿನ್ನರಿಯ

1 ಭೂ(ಮು)

ತ್ರಾಣಪರಂ ಬಿಸುಸುಯ್ದು
ಕ್ಷೀಣಗುಣಂ ಬಹಳ ಶೋಕಮಂ ಮಿಗೆ ತಳೆದಂ ೫

ವ॥ ಅಂತು ತಳೆದಳವಿಗಳಿದ ವಿಷಾದದಿಂ ತಲ್ಲಣಿಸಿ ಮಱುಗಿ—

ಹಾ ಮದೀಶಯಿದೆತ್ತಡಂಗಿದೆ ಕಿನ್ನರೇಶಾ । ಹಾ ಗುಣ
ಧಾಮ ನೀನಕಟಂತು ಪೋಪುದೆ ಕಿನ್ನರೇಶಾ ೬

ಸಾರವೀರಗುಣಾನುರಂಜನ ಕಿನ್ನರೇಶಾ । ಹಾ ಮದ
ದೂರ ದುರ್ಮತಗರ್ವಭಂಜನ ಕಿನ್ನರೇಶಾ ೭

ಪರಮಕರುಣಾಪಾರಸಿಂಧುವೆ ಕಿನ್ನರೇಶಾ । ಹಾ ಮೃದು
ಸರಸಭಾಷಣ ಭಕ್ತಬಂಧುವೆ ಕಿನ್ನರೇಶಾ ೮

ಕಾಲಕಾಲಮತಾಮರದ್ರುಮ ಕಿನ್ನರೇಶಾ । ಹಾ ಶುಭ
ಶೀಲ ಜಲ್ಪಿತಶಾಂಭವಾಗಮ ಕಿನ್ನರೇಶಾ ೯

ಪಂಡಿತಪ್ರಕರೈಕಪಾಲಕ ಕಿನ್ನರೇಶಾ । ಹಾ ಗುಣ
ಮಂಡಿತಾಮಳಶಾಂತಿಲೋಲಕ ಕಿನ್ನರೇಶಾ ೧೦

ಊರ್ಜಿತಾಖಿಳ ಯೋಗಿನಾಯಕ ಕಿನ್ನರೇಶಾ । ಹಾ ಬಲ
ನಿರ್ಜಿತಾತುಳಪುಷ್ಪಸಾಯಕ ಕಿನ್ನರೇಶಾ ೧೧

ಲಿಂಗಜಂಗಮ ಭಕ್ತಿಭಾಸುರ ಕಿನ್ನರೇಶಾ । ಹಾ ಗಣ
ಸಂಗನೀತ ಸಮಸ್ತವಾಸರ ಕಿನ್ನರೇಶಾ ೧೨

ದುರ್ಮತಾಂಬುಜಮತ್ತವಾರಣ ಕಿನ್ನರೇಶಾ । ಹಾ ಶಿವ
ಧರ್ಮಸಂಪದಶರ್ಮಕಾರಣ ಕಿನ್ನರೇಶಾ ೧೩

ಬೊಮ್ಮಯ್ಯನು ನನಗೆ ಪ್ರಾಣಲಿಂಗ ಸ್ವರೂಪನಾಗಿದ್ದಾನೆಂದು ಬಸವಣ್ಣನು ಆ ಕಿನ್ನರಯ್ಯ ನನ್ನ ಒಲುಮೆಯಿಂದ ತಪ್ಪದೆ ಭಜಿಸುತ್ತ ಶೋಭೆಯಿಂದ ಇರುತ್ತಿರುವಾಗ ಪರಮೇಶ್ವರನು ಬಸವಣ್ಣನ ಆ ಸ್ನೇಹದ ರೀತಿಯನ್ನು ಭೂಲೋಕಕ್ಕೆ ತಿಳಿಸಬೇಕೆಂದು ಚಿಂತಿಸಿದವನಾಗಿ ಆ ಕಿನ್ನರಯ್ಯನ ಪ್ರಾಣವನ್ನು ತನ್ನಲ್ಲಿ ಬೆರೆಸಿಕೊಂಡು ಅಡಗಿಸಿಬಿಟ್ಟನು. ಕಿನ್ನರಯ್ಯನು ಪ್ರಾಣಬಿಟ್ಟದ್ದನ್ನು ಕಂಡು ಭಯಪಟ್ಟು ಲೋಕದ ಜನರ ರಕ್ಷಣೆಯಲ್ಲಿ ಆಸಕ್ತನೂ, ಕ್ಷೀಣರಹಿತವಾದ ಗುಣವುಳ್ಳವನೂ ಆದ ಬಸವೇಶ್ವರನು ನಿಟ್ಟುಸಿರುಬಿಟ್ಟು ಅತ್ಯಂತ ಶೋಕವನ್ನು ಹೊಂದಿದವನಾದನು. ವ ॥ ಆ ರೀತಿಯಲ್ಲಿ ದುಃಖಿಗೊಂಡು ಅಗಣಿತವಾದ ಮಾನಸಿಕ ಕ್ಲೇಶದಿಂದ ತಲ್ಲಣಗೊಂಡು ಸಂಕಟಪಟ್ಟು ೬–೧೩. 'ಹಾ ! ನನ್ನ ಸ್ವಾಮಿಯೇ, ಇದೆಲ್ಲಿ ಅಡಗಿ ಹೋದೆ ? ಕಿನ್ನರೇಶಾ ! ಹಾ ! ಉದ್ದಾಮ ಗುಣ ಶ್ರೇಷ್ಠನೇ, ಕಿನ್ನರೇಶ್ವರಾ, ನೀನು ಈ ರೀತಿ ಹೋಗಬಹುದೇ ? ಸಾರವತ್ತಾದ ವೀರ ಗುಣದಿಂದ ಸಂತೋಷ ಪಡಿಸತಕ್ಕ ಕಿನ್ನರೇಶ್ವರಾ, ಮದದಿಂದ ದೂರನಾದವನೇ, ದುಷ್ಟ ಮತಗಳ ಅಹಂಕಾರ ನಾಶಕನಾದ ಕಿನ್ನರೇಶಾ ! ಪರಮ ಕರುಣಾಸಮುದ್ರನೇ, ಕಿನ್ನರೇಶಾ ! ಹಾ ! ಮೃದುವಾಗಿಯೂ ಸರಸವಾಗಿಯೂ ರಸವತ್ತಾಗಿಯೂ ಮಾತ ನಾಡುವವನೇ, ಭಕ್ತರ ಬಂಧುವೇ, ಕಿನ್ನರೇಶಾ ! ಶಿವ ಮತಕ್ಕೆ ಕಲ್ಪವೃಕ್ಷ ಸ್ವರೂಪ

ವ॥ ಎಂದು ಪಲುಂಬಿ ಪಳಯಿಸಿ ಮತ್ತಮಿರದೆ—

ಹಾ ಮದೀಯ ಮನೋವನೇರುಹವಾಸರಾಜಮರಾಳ ಹಾ
ಹಾ ಮದೀಯ ಸುಬೋಧಸಾರಸವಾಸರೇಶ್ವರ ಬಿಂಬ ಹಾ
ಹಾ ಮದೀಯವಿಲೋಚನೋತ್ಪಲಚಾರುಪೂರ್ಣಮೃಗಾಂಕ ಹಾ
ಹಾ ಮದೀಯ ವಿವೇಕನಂದನಚೈತ್ರ ಕಿನ್ನರನಾಯಕಾ ೧೪

ಕಿನ್ನರಪತಿಯಾನಿರೆ ಪರ
ಕಿನ್ನರಪತಿಯೊಡನೆ ಮೇಳಮೇ ನಿನಗೆಂದಾ
ಪನ್ನಗಧರನಂ ಭೂಬುಧ
ಸನ್ನುತ ಮೂದಲಿಸಲೆಂದು ಪದೆದೆಯ್ದಿದೆಯೋ ೧೫

ಕಿನ್ನರವರ್ಯ ನಿನ್ನ ನಡೆ ನಿನ್ನಯ ಮೆಲ್ನುಡಿ ನಿನ್ನ ಭಕ್ತಿ ಸಂ
ಪನ್ನತೆ ನಿನ್ನ ವಿಗ್ರಹದ ಚಲ್ವಿಕೆ ನಿನ್ನ ವಿನೋದದೇಳ್ಗೆ ಕೇ

ನಾದ ಕಿನ್ನರೇಶ್ವರನೇ, ಹಾ ! ಶುಭವಾದ ಶೀಲವುಳ್ಳವನೇ, ಶಿವಾಗಮಗಳಿಂದ ಹೊಗಳಿಸಿ ಕೊಳ್ಳಲ್ಪಟ್ಟವನೇ ಕಿನ್ನರೇಶಾ ! ಹೇ ಪಂಡಿತರ ಸಮೂಹಕ್ಕೆ ಪ್ರಮುಖ ರಕ್ಷಕನಾದ ಕಿನ್ನರೇಶ್ವರಾ, ಹಾ ! ಸದ್ಗುಣಗಳಿಂದ ಅಲಂಕರಿಸಲ್ಪಟ್ಟವನೂ, ನಿರ್ಮಲ ವಾದ ಶಾಂತಿಗುಣದಲ್ಲಿ ಆಸಕ್ತನಾದವನೂ ಆದ ಕಿನ್ನರೇಶ್ವರನೇ, ತೇಜಸ್ವಿಗಳಾದ ಸಮಸ್ತ ಋಷಿ ಜನಕ್ಕೆ ವಲ್ಲಭಪ್ರಾಯನಾದ ಕಿನ್ನರೇಶ್ವರನೇ, ಹಾ ! ಅಸದೃಶನಾದ ಮನ್ಮಥನನ್ನು ಜಯಿಸಿದವನೇ, ಲಿಂಗ ಮತ್ತು ಜಂಗಮರುಗಳಲ್ಲಿ ಪ್ರಕಾಶಮಾನವಾದ ಭಕ್ತಿಯಿಂದ ಕೂಡಿದವನೇ, ಸಮಸ್ತ ದಿನಗಳನ್ನೂ ಪ್ರಮಥರುಗಳ ಸ್ನೇಹದಿಂದ ಕಳೆಯುತ್ತಿದ್ದವನೇ ಹಾ ಕಿನ್ನರೇಶ್ವರಾ ! ಕೆಟ್ಟಮತಗಳೆಂಬ ಕಮಲಗಳಿಗೆ ಮದೋನ್ಮತ್ತ ಆನೆಯುಂತಿದ್ದವನೇ, ಶೈವಧರ್ಮವೆಂಬ ಸಂಪತ್ತುಳ್ಳವನೇ, ಸುಖಕ್ಕೆ ಮೂಲಭೂತ ನಾದವನೇ, ಹಾ ! ಕಿನ್ನರೇಶ್ವರಾ !' ವ॥ ಎಂದು ಹಲುಬಿ ಹಂಬಲಿಸಿ ಪುನಃ ತಪ್ಪದೆ ೧೪. 'ಹಾ ! ನನ್ನ ಮನಸ್ಸೆಂಬ ಕಮಲದಲ್ಲಿ ವಾಸವಾಗಿದ್ದ ಹಂಸ ಪಕ್ಷಿಯೇ, ಹಾ ! ಹಾ ! ನನ್ನ ನೇತ್ರವೆಂಬ ನೈದಿಲೆಗಳಿಗೆ ಮನೋಹರನಾದ ಪೂರ್ಣ ಚಂದ್ರನಂತಿದ್ದವನೇ, ಹಾ ! ನನ್ನ ವಿವೇಕವೆಂಬ ನಂದನವನಕ್ಕೆ ವಸಂತನಂತೆ ಇದ್ದವನೇ ಹಾ ! ಕಿನ್ನರ ನಾಯಕನೇ ! ೧೫. ಭೂಮಂಡಲದಲ್ಲಿರುವ ವಿದ್ವಾಂಸರುಗಳಿಂದ ಹೊಗಳಿಸಿಕೊಂಡ ಕಿನ್ನರೇಶ್ವರನೇ,' (ಈ ಲೋಕದಲ್ಲಿ) ಕಿನ್ನರ ಪತಿಯು ಹಾಗೆ (ಕುಬೇರನ ಹಾಗೆ) ನಾನೇ ಇರುತ್ತಿರುವಾಗ (ಸ್ವರ್ಗಲೋಕದ) ಬೇರೊಬ್ಬ ಕಿನ್ನರ ಪತಿಯೊಡನೆ ನೀನು ಸ್ನೇಹ ಹೊಂದಲೆಂದೋ, ಆ ಪರಶಿವನನ್ನು ಮೂದಲಿಸಲೆಂದೋ, ಇಚ್ಛೆಪಟ್ಟು ಹೋದೆಯೋ ೧೬. 'ಕಿನ್ನರವರ್ಯನೇ, ಕೇಳು : ನಿನ್ನ ನಡತೆ, ನಿನ್ನ ಮೃದುಮಾತು, ನಿನ್ನ ಭಕ್ತಿ ಸಂಪನ್ನತೆ, ನಿನ್ನ ಅಂಗ ಸೌಂದರ್ಯ, ನಿನ್ನ ಸಂತೋಷದ ಆಧಿಕ್ಯ, ನಿನ್ನ

ಳ್ನಿನ್ನ ಕಳಾವಿಳಾಸತೆಯುನೆಲ್ಲಮುಮೆನ್ನೆರ್ದೆಯಲ್ಲಿ ಬೆಚ್ಚು ನ
ಣ್ಪಿನ್ನೆಲೆಗೊಂಡು ತೋರ್ಪುದು ಗಡಿಂದಿನ ನಿನ್ನ ವಿಯೋಗಮದ್ಭುತಂ ೧೬

ಎನ್ನಸುರತ್ನಮೇ ನುಡಿಯೆಯೆನ್ನಯ ಕಂಗಳ ಪುಣ್ಯಮೇ ಪೊದ
ಳ್ಪೆನ್ನೊಡನೇಕೆ ನೀಂ ಮುನಿದೆಯೆನ್ನಯ ಬಾಳ್ಕೆಗಡರ್ಪೆ ಸತ್ಕೃಪಾ
ಸನ್ನತೆವೆತ್ತು ನಾಡು ನಡೆನೋಡೆ ಭವತ್ಪದಭೃತ್ಯನಾಗಿ ಬಾ
ಳ್ವೆನ್ನೊಳದೇಕೆ ನಿರ್ದಯತೆ ಕಿನ್ನರನಾಯಕ ಸತ್ಸಹಾಯಕಾ ೧೭

ವ॥ ಎಂದು ಪಲವಂದದಿಂ ಪಳಯಿಸಿ ಶೋಕಾಶ್ರುಕಣಕಲಿತವದನಮಂಡಳನಾಗಿ ಬಸವರಸನಿರ್ಪಿನಮಾಗಳ್ಪಡಿಯಱ ಬಾಚಯ್ಯನೆಂಬ ಭಕ್ತಕಂಚುಕಿ ಶಿವಗಣನಿರೂಪದಿಂ ಪ್ರಮಥಗಣಪಟ್ಟಗಜಮೆನಿಪ ಮಡಿವಳ್ಳ[1] ಮಾಚಿದೇವನಡಿಗಳೆಡೆಗೇಳ್ತಂದು ಭಕ್ತಿಯಿಂ ಪೊಡಮಟ್ಟು ಕಿನ್ನರೇಂದ್ರಂ ಪನ್ನಗಧರನೊಡವೆರೆದಿರವಂ ಬಿನ್ನಯಿಸಿ ಬನ್ನಿಮೆಂಬುದುಂ ಮಾಚಿದೇವಂ ಸಮುನ್ನತಚಿತ್ತಂ ಕೇಳ್ದು ಶಿವಗಣನಿವಹಮಲ್ಲಿ ಬಂದಿರ್ದಪುದೆ ಬಸವನೇಗೆಯ್ದಪಂ ಪೇಳೆಂಬುದುಮಾತನಿಂತೆಂದಂ—

ಬಂದಿರ್ಪುದಖಿಳ ಶಿವಗಣ
ವೃಂದಂ ಮಾದರಸ ಮುಖ್ಯಮಾಗಳ್ಪದೆದೇ

ವಿದ್ಯಾಶೋಭೆ–ಇವೆಲ್ಲವೂ ನನ್ನ ಹೃದಯದಲ್ಲಿ ಮನೋಹರವಾಗಿ ಸಂಬಂಧಿಸಿ ನೆಲೆಗೊಂಡು ತೋರುವುವಲ್ಲವೇ ! ಈ ದಿವಸ ನಿನ್ನ (ಈ ರೀತಿಯ) ಅಗಲಿಕೆಯು ಅದ್ಭುತ ! (ಎಂದೆನಿಸಿದೆ)' ೧೭. ನನ್ನ ಶ್ರೇಷ್ಠವಾದ ರತ್ನವೇ, (ನನ್ನೊಡನೆ) ಮಾತನಾಡುವುದಿಲ್ಲವೆ ? ಹೇ, ನನ್ನ ಕಣ್ಣುಗಳ ಪುಣ್ಯವೇ, ನನ್ನ ಸಹಾಯಕನೇ, ಕಿನ್ನರನಾಯಕನೇ, ಪ್ರಸಿದ್ಧವಾದ ನನ್ನೊಡನೆ ನೀನೇಕೆ ಕೋಪಿಸಿಕೊಂಡಿದ್ದೀಯೆ ? ಹೇ, ನನ್ನ ಬಾಳಿಗೆ ಆಶ್ರಯನಾಗಿದ್ದವನೇ, ನಿನ್ನ ಶ್ರೇಷ್ಠ ಕೃಪೆಗೆ ಪಾತ್ರನಾಗಿದ್ದು ಕೊಂಡು ಚೆನ್ನಾಗಿ ನಿನ್ನನ್ನು ನೋಡಿಕೊಂಡಿದ್ದ ನಿನ್ನ ಸೇವಕನಾಗಿಯೇ ಆಗಿ ಬಾಳಿದ್ದ ನನ್ನಲ್ಲಿ ಈ ನಿರ್ದಯತೆ (ನಿನಗೆ) ಏಕಾಯಿತು ?' ವ॥ ಹೀಗೆಂದು ಹಲವು ಪ್ರಕಾರದಿಂದ ಪ್ರಲಾಪವಮಾಡಿ, ದುಃಖದಿಂದ ಕೂಡಿದ ಕಣ್ಣೀರಿನಿಂದ ತುಂಬಿದ ಮುಖ ಮಂಡಲವುಳ್ಳವನಾಗಿ, ಬಸವೇಶ್ವರನು ಇರುತ್ತಿರುವಾಗ ಪ್ರತೀಹಾರಿಯಾದ ಬಾಚರಸನೆಂಬ ಶಿವಭಕ್ತ ಸೇವಕನು, ಶಿವಗಣಗಳ ಆಜ್ಞೆಯ ಪ್ರಕಾರವಾಗಿ ಪ್ರಮಥರೆಲ್ಲರ ಪಟ್ಟದಾನೆಯೆಂದೆನಿಸಿದ್ದ ಮಡಿವಳ ಮಾಚಿದೇವನ ಹತ್ತಿರಕ್ಕೆ ಬಂದು ಭಕ್ತಿಯಿಂದ ನಮಸ್ಕರಿಸಿ, ಕಿನ್ನರಿ ಬೊಮ್ಮಯ್ಯನವರು ಶಿವನಲ್ಲಿ ಬೆರೆತುಹೋದ ರೀತಿಯನ್ನು ವಿಜ್ಞಾಪಿಸಿಕೊಂಡು '(ಅಲ್ಲಿಗೆ ತಾವು) ಬರಬೇಕು' ಎಂದೆನ್ನಲಾಗಿ, ಶ್ರೇಷ್ಠಚಿತ್ತನಾದ ಮಾಚಿದೇವನು ಕೇಳಿ, 'ಶಿವ ಶರಣರ ಸಮೂಹವು ಅಲ್ಲಿಗೆ ಬಂದಿರುವುದೇ ? ಬಸವಣ್ಣನು ಏನು ಮಾಡುತ್ತಿದ್ದಾನೆ ? ಹೇಳು'. ಎಂದು ಆ ಮಡಿವಳ ಮಾಚಯ್ಯನು ಅನ್ನಲಾಗಿ, ಬಾಚಯ್ಯನು ಹೀಗೆ ಹೇಳಿದನು : ೧೮. 'ಮಾದರಸ (ಸಕಳೇಶ ಮಾದರಸ)ನೇ ಮೊದಲಾದ ಶಿವ ಶರಣರ ಸಮೂಹವು ಬಂದಿರುವುದು. ಈಗ ಬಸವಣ್ಣನೂ ಅಲ್ಲಿಗೆ ಬಂದು (ಆ

1 ವಾಳ(ಅ), ವಳ(ಮು)

ಳ್ತಂದಾ ಬಸವಂ ಕಿನ್ನರ
ನಂದದ ಕಂಧರವನಪ್ಪಿ ಶೋಕಿಪನಲ್ತೇ ೧೮

ಪ್ರಣಯದೆ ಕಿನ್ನರ ಬೊಮ್ಮನ
ಗುಣಂಗಳಂ ನೆನೆದು ನೊಂದು ಬಿಸುಸುಯ್ಯುತೆ ಸಂ
ದಣಿಪ ಕಡು ಶೋಕದಿಂ ತ
ಲ್ಲಣಿಸಿ ಪಲುಂಬಿದಪನಲ್ಲಿ ಬಸವಕುವರಾರಂ ೧೯

ವ॥ ಎಂದ ನುಡಿಯಂ ಮಾಚಿದೇವನೇಳಿದಂಗೇಳ್ದು ಮುಗುಳ್ನಗೆ ನಕ್ಕು—

ಕರುಣಾಳು ಬಸವನಲ್ಲದೆ
ಧರಣಿಯೊಳಾರುಂಟು ಶರಣನಳಿದೊಡೆ ಶೋಕಾ
ತುರನಾಗಿ ಮಱುಗಿದಪನೀ
ಧರಿತ್ರಿಯೊಳ್ಭಕ್ತಿಭಾವಮಿಂತಿರವೇಡಾ ೨೦

ಚರಲಿಂಗಪ್ರಾಣತೆಯದು
ಚಿರವ್ರತಂ ತನಗೆನಿಪ್ಪ ಭಾಷೆಯ ಪರಿಯಂ
ಪರುಠವಿಸಿದನೀಗಳ್ಬಸ
ವರಸಂ ಲೇಸಾದುದಮಮ ತನ್ನ ಚರಿತ್ರಂ ೨೧

ಶಿರವಂ ಪತ್ತುಗುವೊರ್ಮೆ ಭಕ್ತಿಮದದುದ್ರೇಕಂ ಪೊದಳ್ದಾಗಳು
ಬ್ಬರದಿಂಮಾಳ್ಪನಸಾಧ್ಯಸಾಧ್ಯ ಶಪಥೋನ್ಯಾಸಮಂ ಮುಂಬಿ ಬ
ರ್ಪಿರವಂ ಕಜ್ಜದ ಹಾನಿಯಂ ಪರಿಕಿಸಂ ಮತ್ತೆಲ್ಲ ಭಕ್ತರ್ಕಳಂ
ತಿರಲೊಲ್ಲಂ ಬಸವಂ ವಿಚಾರಿಸನದೇಕಾತ್ಮೀಯ ಸಾಮರ್ಥ್ಯಮಂ ೨೨

ಕಿನ್ನರಯ್ಯನಿರುವಲ್ಲಿಗೆ ಬಂದು) ಅವನ ಕೋಮಲ ಕಂಠವನ್ನಾಲಂಗಿಸಿಕೊಂಡು ಶೋಕಿಸು ತ್ತಿದ್ದಾನೆ.' ೧೯. 'ಬಸವಣ್ಣನವರು ಆ ಕಿನ್ನರಯ್ಯನ ಅಗಲಿಕೆಯ ಕಾರಣದಿಂದ ಅವನ ಗುಣ ಸಮೂಹವನ್ನೆಲ್ಲ ನೆನೆಯುತ್ತ ನಿಟ್ಟುಸಿರು ಬಿಡುತ್ತ ನೊಂದು ಹೋದವನಾಗಿ ವಿಶೇಷವಾದ ದುಃಖದಿಂದ ಸಂಕಟಪಟ್ಟು ಅಲ್ಲಿ ಹಲುಬುತ್ತ ಅಳುತ್ತಿದ್ದಾನೆ.' ವ॥ ಹೀಗೆಂದು ಮಾತನಾಡಿದ (ಬಾಚಯ್ಯನ) ಮಾತುಗಳನ್ನು ಮಡಿವಳ ಮಾಚಿದೇವನು ಕೇಳಿ ತಿರಸ್ಕರಿಸಿ, ಮುಗುಳುನಗೆ ನಕ್ಕು ೨೦. 'ಲೋಕದಲ್ಲಿ ಕರುಣಾಳುವು ಬಸವಣ್ಣ ನಲ್ಲದೆ ಇನ್ನಾರಿದ್ದಾರೆ ? ಶರಣನು ಅಳಿದು ಹೋದರೆ ಶೋಕಾತುರನಾಗಿ (ಅವನು) ಸಂಕಟಪಡುತ್ತಿದ್ದಾನೆ. ಲೋಕದಲ್ಲಿ ಭಕ್ತಿಭಾವವೆಂಬುದು ಈ ರೀತಿ ಇರಬೇಡವೇ !' ೨೧. ಬಸವಣ್ಣನಿಗೆ ಜಂಗಮಲಿಂಗವೇ ಪ್ರಾಣವೆಂಬ ಶಾಶ್ವತ ವ್ರತದ ಭಾಷೆಯುಳ್ಳವನು ಈಗ ಆ ಭಾಷೆಯನ್ನು ಉಲ್ಲಂಘಿಸಿ ಬಿಟ್ಟಂತಾಯಿತು. ಆತನ ಚರಿತ್ರೆ ಈಗ ಸಫಲವಾದ ಹಾಗಾಯಿತು ಅಬ್ಬಾ !' ೨೨. ಭಕ್ತಿ ಮದದ ಉದ್ರೇಕವು ಒಮ್ಮೊಮ್ಮೆ (ಆ ಬಸವಣ್ಣ ನಿಗೆ) ನೆತ್ತಿಗೇರಿ ಬಿಡುವುದು. ಹೀಗೆ ನೆತ್ತಿಗೇರಿದಾಗ ಅಬ್ಬರದಿಂದ ಇತರರಿಗೆ ಅಸಾಧ್ಯ ವಾದ ಭಕ್ತಿಯ ಶಪಥದ ಉಪನ್ಯಾಸವನ್ನೇ ಮಾಡುವನು. ಮುಂದೆ ಉಂಟಾಗಬಹು ದಾದ ಕಾರ್ಯ ಹಾನಿಯನ್ನು ಯೋಚಿಸುವುದೇ ಇಲ್ಲ. ಮತ್ತು ಉಳಿದೆಲ್ಲ ಭಕ್ತರಂತೆ ಆ ಬಸವಣ್ಣನು ಇರುವುದಿಲ್ಲ. ತನ್ನ ಆತ್ಮಶಕ್ತಿಯನ್ನು ಅವನು ಏಕೆ ವಿಚಾರಿಸುವುದಿಲ್ಲವೋ

ನೆನೆವಂತೆ ಕಿನ್ನರಾಧೀ
ಶನ ಗುಣಮಂ ಪೂಣ್ದ ತನ್ನ ಭಾಷೆಯನೀಗಳ್
ನೆನೆಯದೆ ಕಣ್ಬನಿಗಳ ಪೆ
ರ್ವೊನಲಿಂ ನಾಂದಪರೆ ಭಲರೆ ಭಕ್ತವರೇಣ್ಯಂ ೨೩

ಹರಭಕ್ತಂಗಳಿವೆಂಬುದು
ಪರಮಾರ್ಥಮೆ ಲಿಂಗಯೋಗಿಗೆತ್ತಣದಳಿವೀ
ಪರಿಯಂಱಿದಱಿಯದ ಜಡರಂ
ತಿರೆ ತಾಂ ಬಱಿದೇಕೆ ಬಸವನಾಕ್ರಂದಿಪನೋ ೨೪

ಜಂಗಮಮೆನಗಸುವೆಂದು ಕ
ಡಂಗಿ ಕರಂ ಪೂಣ್ದ[1] ಪೂಣ್ಕೆಯುಂ ಮಱೆದೀಗ
ಳ್ಪಿಂಗದೆ ಪಳಯಿಪ ಠಕ್ಕಂ
ಗಂಗಜಹರ ಕಲ್ಲಿನಾಥನೇನೊಲ್ದಪನೇ ೨೫

ಅಳಲಱಿಯೆನವನ ಗುಣಸಂ
ಕುಳಮಂ ನೆನೆನೆನೆದು ಪಾಡಿ ಬಸವರಸನವೋ
ಲ್ಪುಳಯಿಸಲಱಿಯೆಂ ಬಂದೊಡೆ
ಫಳಮೇನೆನ್ನಿಂದಮಲ್ಲಿಗಾತನೆ ಸಾಲ್ಗುಂ ೨೬

ಏನೋ !' ೨೩. 'ಕಿನ್ನರೇಶನ ಗುಣಗಳನ್ನು ನೆನೆಯುವಂತೆ (ಆ ಬಸವಣ್ಣನು) ತಾನು ಮಾಡಿದ ಪ್ರತಿಜ್ಞೆಯನ್ನು ನೆನೆಯದೆ ಕಣ್ಣೀರಿನ ದೊಡ್ಡ ಪ್ರವಾಹದಿಂದ ನೆನೆಯುತ್ತಿರುವನೇ ? ಭಲೇ ! ಭಕ್ತಶ್ರೇಷ್ಠನೇ !' ೨೪. 'ಹರಭಕ್ತನೆನಿಸಿದವನಿಗೆ ಸಾವು ಎಂಬುದು ಪರಮಾರ್ಥವೇ ? ಲಿಂಗಯೋಗದಲ್ಲಿರುವವನಿಗೆ ಅಳಿವು ಎಲ್ಲಿಯದು ? ಈ ತತ್ತ್ವವನ್ನು ಅರಿತೂ ಕೂಡ ತಿಳಿಯದ ಮೂಢರ ಹಾಗೆ ಸುಮ್ಮನೆ ಆ ಬಸವಣ್ಣನು ಏಕೆ ಅಳುವನೋ !' ೨೫. 'ಜಂಗಮವೇ ನನಗೆ ಪ್ರಾಣ ಎಂದು ಉತ್ಸಾಹದಿಂದ ಮಾಡಿದ ಪ್ರತಿಜ್ಞೆಯನ್ನು ಈಗ (ಪ್ರತ್ಯಕ್ಷವಾಗಿ) ಪ್ರಕಟಗೊಳಿಸುವುದನ್ನು ಮರೆತು ಬಿಟ್ಟು, ಈಗ ಒಂದೇ ಸಮನೆ ಪ್ರಲಾಪ ಮಾಡುವ ಆ ಠಕ್ಕನಿಗೆ ಮನ್ಮಥಧ್ವಂಸಿಯಾದ ಕಲಿ ದೇವರ ದೇವನು ಒಲಿಯುವನೇ. ('ಕಲಿ ದೇವರ ದೇವ'ನೆಂಬುದು ಮಡಿವಳ ಮಾಚಿದೇವರ ವಚನ ಮುದ್ರಿಕೆ. ಕವಿ ಅದನ್ನು ಲಕ್ಷ್ಯದಲ್ಲಿಟ್ಟು 'ಕಲ್ಲಿನಾಥ' ಎಂದಿದ್ದಾನೆ.) ೨೬. 'ಆ ಕಿನ್ನರಯ್ಯನ ಗುಣ ಸಂಪತ್ತನ್ನು ನೆನೆ ನೆನೆದು ದುಃಖ ಪಡುವುದಕ್ಕೆ (ಕಾರಣವನ್ನು) ತಿಳಿಯೆನು. ಆ ಬಸವರಸನ ಹಾಗೆ ಹಾಡಿ ಹಾಡಿ ಅಳುವುದನ್ನು ನಾನು ತಿಳಿಯೆನು (ಅದ್ದರಿಂದ) ಅಲ್ಲಿಗೆ ಬಂದರೆ ನನ್ನಿಂದೇನು ಫಲ ? ಅಲ್ಲಿಗೆ ಆ

[1]ಣ್ದು(ಚ)

ವ॥ ಎಂದುಮಾ ಭಕ್ತಿರಹಿತನ ಸಾರ್ಕೆಗಾಂ ಬಾರೆನೆಂದ ಮಾಚಿದೇವನಾಕ್ಷೇಪವಚನವುಂ ಕೇಳ್ದು ಪಡಿಯಱಂ ಬಿಗುರ್ತು ಬೆಬ್ಬಳೆವೋಗಿ ಜವದಿಂ ಪರಿತಂದು ಗಣಸಭೆಗೆ ಮಣಿದು ಮಾಚಿದೇವನೆಂದುದುಮನೆಲ್ಲಮುಂ ನಡುಕಂ ಮಿಗೆ ಬಿನ್ನಯಿಸೆ ಬಸವರಾಜಂ ಕೇಳ್ದು ನಿಜಪ್ರತಿಜ್ಞೆಯುಂ ನೆನೆದು ಶೋಕಮುಂ ಮಾಣ್ದು ಬೆಱಗುವಟ್ಟು ಕಿನ್ನರನಪ್ರಾಣದೊಳ್ತನ್ನಸುವಂ ರಯದಿಂ ಬಳಿಸಲಿಸಿದಾ ಪ್ರಸ್ತಾವದೊಳ್—

ಚರಲಿಂಗದಸುವಿನೊಡನಸು
ವೆರಸಿದನೀ ಬಸವನಸಮಗುಣನಿದು ಪೊಸತು
ರ್ವರೆಯೊಳ್ಕಂಡರೊಳಂ ಕೇ
ಳ್ದರೊಳಂ ಕಂಡೆಂದುಮಾಲಿಸಿಯುಮಱಿದಪೆವೇ ೨೭

ಮಾಚಯ್ಯಂ ಬೆಸಸಿದುದೆ ಸ
ದಾಚಾರಂ ತನಗೆನುತ್ತೆ ಕಡುಗಜ್ಜಮನಾ
ಳೋಚಿಸದೆ ನೆಗಳ್ದ ಮಹಿಮೆಯು
ಗೋಚರಮನ್ಯರ್ಗೆ ಬಸವದಂಡಾಧಿಪನಾ ೨೮

ವ॥ ಎಂದಲ್ಲಿಯ ಭಕ್ತಸಮುದಯಂ ಬಸವನಂ ಪೊಗಳುತ್ತುಮಿರ್ದು ಪಡಿಯಱ ಬಾಚಯ್ಯನಂ ಮಾಚಯ್ಯನೆಡೆಗೀ ಕಜ್ಜಮುಂ ಬಿನ್ನವಿಸೆಂದು ಕಳುಪಲೊಡನವಂ ಘಳಿಲನೇಳ್ತಂದಱಿಗಿ ಬಸವನೆಸ

ಬಸವಣ್ಣನೊಬ್ಬನೇ ಸಾಕು. ವ॥ ಹೀಗೆಂದು ಹೇಳಿ 'ಆ ಭಕ್ತಿರಹಿತನಾದ ಬಸವಣ್ಣನ ಹತ್ತಿರಕ್ಕೆ ನಾನು ಎಂದಿಗೂ ಬರುವುದಿಲ್ಲ. ಹೀಗೆಂದ ಮಡಿವಾಳ ಮಾಚಿದೇವನ ಆಕ್ಷೇಪಕರವಾದ ಮಾತುಗಳನ್ನು ಕೇಳಿ, ಕಂಚುಕಿ (ಸೇವಕ) ಯಾದ ಬಾಚಯ್ಯನು ಭಯಗೊಂಡು ಬೆರಗಾಗಿ, ವೇಗವಾಗಿ ಓಡಿಬಂದು, ಶಿವಗಣಗಳ ಸಭೆಗೆ ಶಿರಬಾಗಿ ಮಾಚಿದೇವರು ಹೇಳಿದ ಎಲ್ಲ ಮಾತುಗಳನ್ನು ನಡಗುತ್ತ ಚೆನ್ನಾಗಿ ವಿವರಿಸಲಾಗಿ, ಬಸವರಾಜನು ಕೇಳಿ, ತನ್ನ ಪ್ರತಿಜ್ಞೆಯನ್ನು ನೆನೆದು ದುಃಖವನ್ನು ನಿಲ್ಲಿಸಿ, ಅಶ್ಚರ್ಯಗೊಂಡು ಕಿನ್ನರಿ ಬೊಮ್ಮಯ್ಯನ ಪ್ರಾಣದಲ್ಲಿ ತನ್ನ ಪ್ರಾಣವನ್ನು ಜಾಗ್ರತೆಯಾಗಿ ಒಳಸೇರಿಸಿ ಬಿಟ್ಟನು. ಆ ಸಮಯದಲ್ಲಿ ೨೭. ಅನುಪಮಗುಣವುಳ್ಳ ಈ ಬಸವಣ್ಣನು ಚರಜಂಗಮಲಿಂಗದ ಪ್ರಾಣದೊಡನೆ ತನ್ನ ಪ್ರಾಣವನ್ನು ಬೆರೆಸಿದುದು, ಲೋಕದಲ್ಲಿ ಹೊಸದು. ಕಂಡವರೂ ಇಲ್ಲ ಕೇಳಿದವರೂ ಇಲ್ಲ. ನಾವಂತೂ ಕಂಡೂ, ಕೇಳಿಯೂ ಅರಿಯೆವು. ೨೮. ಮಾಚಯ್ಯನವರು ಅಪ್ಪಣೆ ಮಾಡಿದುದೇ ನನಗೆ ಸದಾಚಾರವೆನ್ನುತ್ತ ಇನ್ನಾವ ಶ್ರೇಷ್ಠಕಾರ್ಯವನ್ನೂ ಯೋಚನೆ ಮಾಡದೆ, ಬಸವ ದಂಡಾಧೀಶನ ಪ್ರಸಿದ್ಧವಾಗಿ ಮೆರೆದ ಮಹಿಮೆಯು ಅನ್ಯರಿಗೆ ತೋರುವುದು ಅಸಾಧ್ಯವಾದದ್ದು. 'ವ॥ ಹೀಗೆಂದು ಅಲ್ಲಿಯ ಭಕ್ತರುಗಳ ಸಮೂಹವು ಬಸವಣ್ಣನನ್ನು ಹೊಗಳುತ್ತಿದ್ದು (ಪುನಃ) ಪ್ರತೀಹಾರಿಯಾದ ಬಾಚಯ್ಯನನ್ನು ಮಾಚಯ್ಯನ ಹತ್ತಿರಕ್ಕೆ ನಡೆದ ಈ ವೃತ್ತಾಂತವನ್ನು ತಿಳಿಸಲಿಕ್ಕೆ ಕಳುಹಿಸಲಾಗಿ ಆ ಕೂಡಲೇ ಅವನು ಶೀಘ್ರವಾಗಿ

ಗಿದಂದವಮಂ ಬಿನ್ನಪಂಗೆಯ್ಯೆ ಕೇಳ್ದು ಮಾಚಿದೇವಂ ಸಂತಸಂದಾಳ್ದು ರೋಮಾಂಚಕಂಚುಕಿತಾಗ ನಾಗಿ—

ಗುಡಿಗಟ್ಟಿ ಭಕ್ತಜನಮು
ಗ್ಘಡಿಸುತೆ ಕೊಂಡಾಡುತಲ್ಲಿ ಬಸವನನೊಲವಿಂ
ದೊಡನೇಳ್ತರೆ ಮಾಚಯ್ಯಂ
ನಡೆತಂದಂ ವಿಪುಳ ಸಂಭ್ರಮಂ ಬೆರಸಾಗಳ್ ೨೯

ವಿಳಸಜ್ಜಂಗಮಜೀವ ಭಾಪುರೆ ಚರಪ್ರಾಣಾನ್ವಿತಪ್ರಾಣಮಂ
ಜುಳ ಶೀಲೋನ್ನತ ಚಾಗುರೇ ಶರಣ ಜೀವಸ್ಥಾಪನಾಚಾರ್ಯ ನಿ
ಶ್ಚಳಭಕ್ತಿಪ್ರಮದಾಮನೋಜ್ಞ ಭಲರೇ ಭಕ್ತಾರ್ಥ ಸರ್ವಾರ್ಥ ಸಂ
ಕುಳ ಭಾಸ್ವದ್ಬಸವೇಶ ಭಾಪೆನುತೆ ಮಾಚಯ್ಯಂ ಮಹೋತ್ಸಾಹದಿಂ ೩೦

ವ॥ ಮತ್ತಂ—
ಜಯ ಬಸವೇಂದ್ರ ಭಕ್ತಿಗುಣಸಾಂದ್ರ ಚಿದಂಬುಧಿಪೂರ್ಣಚಂದ್ರ ನಿ
ರ್ಜಯ ನಿಜರೂಪನಿರ್ಜಿತಕಲಾಪ ಮಹಾಶಿವತತ್ವದೀಪ ದು
ರ್ಣಯಪರಭಂಗ ಭಕ್ತಕೃತಸಂಗ ಶಿವೈಕ್ಯಪದಾಬ್ಜಭೃಂಗ ವಿ
ಸ್ಮಯಕರಕಾರ್ಯ ವಿಂಧ್ಯನಗಧೈರ್ಯ ಜಗತ್ತ್ರಯಧುರ್ಯವಿಗ್ರಹಾ ೩೧

ಬಂದು ನಮಸ್ಕರಿಸಿ ಬಸವಣ್ಣನವರು ಮಾಡಿದ ರೀತಿಯನ್ನು ವಿಜ್ಞಾಪಿಸಿಕೊಳ್ಳಲಾಗಿ ಕೇಳಿ ಮಡಿವಾಳ ಮಾಚಿದೇವನು ಸಂತೋಷಗೊಂಡವನಾಗಿ ರೋಮಾಂಚವೇ ಕವಚವಾಗಿ ಮಾಡಲ್ಪಟ್ಟ ಶರೀರವುಳ್ಳವನಾಗಿ ೨೯. ಭಕ್ತ ಸಮೂಹವು ಆಗ ಗುಂಪಾಗಿ ಸೇರಿ ಗಟ್ಟಿಯಾಗಿ ಜಯಜಯಕಾರ ಮಾಡುತ್ತಿತ್ತು. ಪ್ರೀತಿಯಿಂದ ಬಸವಣ್ಣನನ್ನು ಕೊಂಡಾಡುತ್ತ ಮಡಿವಾಳ ಮಾಚಿದೇವನು ಆಗ ವಿಶೇಷ ಸಂಭ್ರಮದಿಂದ ಕೂಡಿ ಬಂದನು. ೩೦. ಮಾಚಯ್ಯನು ಪ್ರಕಾಶಮಾನವಾದ ಜಂಗಮ ಪ್ರಾಣಿಯೋ ಭಾಪುರೇ ! ಜಂಗಮ ಪ್ರಾಣದಲ್ಲಿ ಕೂಡಿರುವ ಪ್ರಾಣದಿಂದ ಮನೋಹರವಾದ ಉನ್ನತ ಶೀಲದಿಂದ ಉತ್ಕೃಷ್ಟನೆನಿಸಿದವನೇ, ಚಾಗುರೇ ! ಶರಣಜೀವದ ಸ್ಥಾಪನಾಚಾರ್ಯನೇ, ನಿಶ್ಚಲವಾದ ಭಕ್ತಿಯೆಂಬ ಸ್ತ್ರೀಯಿಂದ ಮನೋಹರನಾದವನೇ, ಭಲರೇ ! ಭಕ್ತಜನರ ಪ್ರಯೋಜನಕ್ಕೋಸುಗ ಸಮಸ್ತ ದ್ರವ್ಯಸಮೂಹವನ್ನು ಅರ್ಜಿಸುವ ಪ್ರಕಾಶಮಾನನಾದ ಬಸವೇಶನೇ ಭಾಪು!' ಎಂದು ಅತ್ಯಂತ ಉತ್ಸಾಹದಿಂದ ಕೂಡಿ (ಹೊಗಳಿದನು). ವ॥ ಮತ್ತು ೩೧. 'ಬಸವೇಂದ್ರನೇ ಜಯ ; ಸಾಂದ್ರವಾದ ಭಕ್ತಿಗುಣವುಳ್ಳವನೇ, ಜ್ಞಾನವೆಂಬ ಸಮುದ್ರಕ್ಕೆ ಪೂರ್ಣಚಂದ್ರನೆನಿಸಿದವನೇ, ಚಂದ್ರನನ್ನು ಜಯಿಸಿದ ನಿರ್ಣಾಯಕವಾದ ನಿಜರೂಪವುಳ್ಳವನೇ, ಶ್ರೇಷ್ಠವಾದ ಶಿವತತ್ವಗಳನ್ನು ಪ್ರಕಾಶಪಡಿಸುವವನೇ, ದುರ್ನೀತಿಯಲ್ಲಿ ಆಸಕ್ತರಾದವರನ್ನು ನಾಶಪಡಿಸುವವನೇ, ಶಿವಭಕ್ತರ ಸಂಗಮಾಡಿದವನೇ, ಶಿವನಲ್ಲಿ ಐಕ್ಯಗೊಂಡ ಚಿತ್ತವುಳ್ಳವರ ಪಾದಕಮಲಗಳಿಗೆ ಭೃಂಗಸ್ವರೂಪನೇ, ವಿಂಧ್ಯಪರ್ವತದಂತಿರುವ ಧೈರ್ಯದಿಂದ ಆಶ್ಚರ್ಯಕರವಾದ ಕಾರ್ಯಗಳನ್ನು ಮಾಡುವವನೇ, ಮೂರುಲೋಕಗಳ ಭಾರವನ್ನು ಧರಿಸುವ ಶರೀರವುಳ್ಳವನೇ (ಸಾಮರ್ಥ್ಯ

ಚರಲಿಂಗಪ್ರಾಣಿತಾಬಂಧುರ ಜಯ ಜಯ ಸಾಮರ್ಥ್ಯಸಂಪನ್ನ ಸತ್ಯಾ
ಕರವೀರಾಚಾರಸಾರಾದರ ಜಯ ಜಯ ವಿಖ್ಯಾತ ಲಿಂಗಾಂಗಸಂಯೋ
ಗರಹಸ್ಯಾರ್ಥಾನುಭಾವಪ್ರದ ಜಯ ಜಯ ಸದ್ಭಕ್ತಿಸಾಮ್ರಾಜ್ಯಧೌರೇ
ಯ ರಸಾಕಾಂತಾವನಗರ್ಥಾಗತ ಜಯ ಜಯ ಭಕ್ತಾಬ್ಧಿಸಂಪೂರ್ಣಚಂದ್ರಾ ೩೨

ನುಡಿಯಲಱಿದಾದ ಭಾಷೆಯ
ನುಡಿದೈ ನುಡಿದಂತೆ ನಡೆದೆ ನಿನ್ನಯ ಪೆಂಪಂ
ಪಡಿಗಟ್ಟಿ ನುತಿಸಿದಪೆನೆಂ
ದೊಡೆ ಸಾಧ್ಯಮೆ ಬಸವ ಭಕ್ತಜನಮಂದಾರಾ ೩೩

ವ॥ ಎಂದು ಕೊಂಡಾಡಿ ಪಾಡಿ ನಲವೇರ್ಪುತ್ತುಮಾಗಳ್—

ಹರ ತೇಜಃಪುಂಜಮೋ ಶಂಕರಕರದ ಕರಾಳಾಸ್ತ್ರಮೋ ಶೈಲಜಾಧೀ
ಶ್ವರನುದ್ಯದ್ಜ್ವಾಳನೇತ್ರಪ್ರಭೆಯೊ ಮೃಡನ ಸಾಮರ್ಥ್ಯಮೋ ಮನ್ಮಥಾರಾ
ತಿರುಚಿಸ್ಫೂರ್ತಿಪ್ರತಾಪಾಕೃತಿಯೊ ಶಿವನ ಸಾಕಾರಮೋ ನೋಡಿಮೆಂಬಂ
ತಿರೆ ಬಂದಂ ದಿವ್ಯ ತೇಜೋಮಯತನು ಘನಶೌರ್ಯಾಕರಂ ಮಾಚಿದೇವಂ ೩೪

ನೋಡೆ ಸುಜನಾಳಿ ರತಿ ಮೂಡೆ ಶಿವಭಕ್ತತತಿ
ಪಾಡೆ ಪೊಸ ಕೇಳಿಕೆಯ ಮಾಡೆ ಚರಬೃಂದಂ

ವುಳ್ಳವನೇ, ಜಯ). ೩೨. ಜಂಗಮವೇ ಪ್ರಾಣವೆಂದು ಭದ್ರವಾಗಿ ನಂಬಿದವನೇ, ಜಯಜಯ ; ಸಾಮರ್ಥ್ಯಸಂಪನ್ನನೇ ಸತ್ಯದ ಆಗರನೇ ವೀರಶೈವ ನಿಯಮದಿಂದ ಕೂಡಿದ ಶ್ರೇಷ್ಠಶರಣರಲ್ಲಿ ಪ್ರೀತಿಯುಳ್ಳವನೇ, ಜಯಜಯ ; ಪ್ರಖ್ಯಾತವಾದ ಲಿಂಗಾಂಗ ಸಮರಸದ ರಹಸ್ಯಾರ್ಥ ವಿಷಯದ ಅನುಭವವನ್ನುಂಟು ಮಾಡುವವನೇ, ಜಯಜಯ; ಶ್ರೇಷ್ಠವಾದ (ಶಿವ) ಭಕ್ತಿ ಸಾಮ್ರಾಜ್ಯದ ಭಾರವನ್ನು ಧರಿಸಿದವನೇ ಭೂಕಾಂತೆ (ರಸಾಕಾಂತಾ)ಯನ್ನು ರಕ್ಷಿಸುವುದಕ್ಕೋಸ್ಕರ, ಅವತರಿಸಿದವನೇ, ಜಯಜಯ; ಭಕ್ತರೆಂಬ ಅಂಬುಧಿಗೆ ಚಂದ್ರಪ್ರಾಯನಾದವನೇ, (ಜಯಜಯ) ೩೩. ಭಕ್ತಜನ ಕಲ್ಪವೃಕ್ಷನಾದ ಬಸವಣ್ಣ, ನುಡಿಯಲಸಾಧ್ಯವಾದ ಮಾತುಗಳನ್ನಾಡಿದೆಯಯ್ಯ, ನುಡಿದ ಹಾಗೆ ನಡೆದೆ. ನಿನ್ನ ಈ ಘನತೆಯನ್ನು ಸರಿಹೋಲಿಸಿ ಸ್ತೋತ್ರ ಮಾತನಾಡುತ್ತೇನೆಂದರೆ (ಅದು ನನಗೆ) ಸಾಧ್ಯವೇ ?' ವ॥ ಹೀಗೆಂದು ಕೊಂಡಾಡಿ ಹಾಡಿ, ಸಂತೋಷಾಧಿಕ್ಯದಿಂದ ಆಗ ೩೪. ಮನೋಹರವೂ, ಕಾಂತಿಮಯವೂ ಆದ ಶರೀರವುಳ್ಳವನೂ, ಘನವಾದ ಶೌರ್ಯಕ್ಕೆ ಆಗರನೆನಿಸಿದವನೂ ಆದ ಮಾಚಿದೇವನು ಶಿವನಕಾಂತಿಯ ಸಮೂಹವೋ, ಶಂಕರನಹಸ್ತದ ಭಯಂಕರ ಬಾಣವೂ ಶೈಲಜಾಪತಿಯಾದವನ ಉತ್ಕೃಷ್ಟವಾದ ಹಣೆಗಣ್ಣಿನ ಜ್ವಾಲೆಯೋ, ಪರಮೇಶ್ವರನ ಸಾಮರ್ಥ್ಯವೋ ಮನ್ಮಥ ವೈರಿಯಾದವನ ತೇಜಸ್ಫುರಣದ ಶೌರ್ಯದ ಆಕಾರವೋ, ಶಿವನ ಸಾಕಾರವೋ, ನೋಡಿರಿ ಎಂಬಂತೆ ಬಂದನು. ೩೫. (ಈ ರೀತಿಯಿಂದ ಬಂದ ಮಾಚಿದೇವನನ್ನು) ಸಜ್ಜನಸಮೂಹವು ನೋಡಿ, ಅಂಕುರಗೊಂಡ ಪ್ರೀತಿಯಿಂದ ಹಾಡಿತು ; ಜಂಗಮ ಸಮೂಹವು ಹೊಸ

ನಾಡೆ ಮಣಿದೀಪ್ಸಿತವ ನೀಡೆನುತೆ ವಂದಿತತಿ
ಪಾಡೆ ಪರವಾದಿ ಜನಮೋಡೆ ಯಮವಕ್ತ್ರಂ
ಬಾಡೆ ಭಯವಿಹ್ವಳತೆಗೂಡೆ ಭವಿರಾಜಿ ಕುಣಿ
ದಾಡೆ ಬುಧಪಾಳಿ ಬಗೆ ಕೋಡೆ ಖಲಜಾಲಂ
ತೋಡಮರದಿರ್ಪ ಶಶಿಚೂಡನಿವನೆಂಬ ಬಗೆ
ನೀಡೆನಿಸಿ ಶರಣರೊಡನಾಡಿ ನಡೆತಂದಂ ೩೫

ವ॥ ಅಂತೇಳ್ತಂದು ಮನ್ನಣೆಯಿಂ ತನ್ನನಿದಿರ್ಗೊಳ್ವ ಶರಣಸಮುದಯಂ ಮಣಿಯೆ ಮಗುಳ್ದು ಮಣಿದಣಿಯರಮವರ್ಗೂಡಿ ಗಳಿಲನೇಳ್ತಂದು ಗಣಸಭೆಗೆ ಪೊಡಮಟ್ಟು ತದನುಜ್ಞೆಯಂ ಶಿರದೊಳ್ಪೊತ್ತು ಸಕಳ ಶಿವಗಣಚರಣಾರವಿಂದಂಗಳಂ ಮಾನಸದೊಳವರ್ಚಿ ಸಮಗ್ರನಿಷ್ಠೆಯಿಂ ನಿಂದು—

ಕಿನ್ನರೇಶ್ವರ ನಿನ್ನ ಸುಪ್ರಿಯಮಿತ್ರನಂ ವೃಷಭೇಂದ್ರನಂ
ಮುನ್ನ ನೀಂ ತೊಱೆದೆಯ್ದಲಕ್ಕುಮೆ ಮೇಣ್ಮಹೇಶ್ವರನಾಜ್ಞೆಯಂ[1]
ನನ್ನಿಯಿಂ ಪರಿಪೂರ್ತಿಗೆಯ್ಯದೆ ಬಂದೊಡೀತನನೆಂತು ಪೇಳ್
ನಿನ್ನೊಳಿಂದೊಡಗೂಡಿದ್ಯೆ ಹರನಾದೊಡಂ ಗಣವೃಂದಮಂ ೩೬

ವಂಚಿಸುತೆ ನಿಮ್ಮನಿರ್ವರ
ನಂಚಿತಮತಿಯುಳಿದದೆಂತು ಕೊಂಡೊಯ್ವನೊ ನಿ

ರೀತಿಯಲ್ಲಿ ಭಜನೆ ಮಾಡಿತು ; ವಂದಿಗಳ ಸಮೂಹವು ಚೆನ್ನಾಗಿ ನಮಸ್ಕರಿಸಿ, ಇಷ್ಟಾರ್ಥವನ್ನೀಯೆಂದು ಹಾಡಿತು. ಪರವಾದಿ ಸಮೂಹವು ಓಡಿಹೋಯಿತು ; ಯಮಧರ್ಮನ ಮುಖವು ಬಾಡಿತು; ಭವಿಗಳ ಸಮೂಹವು ಭಯದಿಂದ ವ್ಯಾಕುಲಗೊಂಡಿತು; ವಿದ್ವಾಂಸರ ಸಮೂಹವು ಕುಣಿದಾಡಿತು ; ನೀಚ ಜನರ ಗುಂಪು ಮನೋವ್ಯಥೆ ಹೊಂದಿತು. (ಹೀಗೆ) ಸರಿಸಾಟಿಯಿಲ್ಲದ ಚಂದ್ರಶೇಖರನೇ ಇವನು, ಎಂಬ ಯೋಚನೆಗೆ ಆಸ್ಪದನೆನಿಸಿ ಶರಣರೊಡನೆ ಚೆನ್ನಾಗಿ (ಮಡಿವಳ ಮಾಚಿದೇವನು) ಬಂದನು. ವ॥ ಈ ರೀತಿಯಲ್ಲಿ ಬಂದು, ಮರ್ಯಾದೆಯಿಂದ ತನ್ನನ್ನು ಎದುರುಗೊಳ್ಳುತ್ತಿರುವ ಶರಣರ ಸಮೂಹವು ನಮಸ್ಕಾರ ಮಾಡಲಾಗಿ, ಪುನಃ ಅವರಿಗೆ ನಮಸ್ಕಾರ ಮಾಡಿ (ಪ್ರತಿ ನಮಸ್ಕಾರ ಮಾಡಿ) ಸಡಗರದಿಂದ ಅವರೊಡನೆ ಕೂಡಿ ಶೀಘ್ರವಾಗಿ ಬಂದು, ಶಿವಗಣಸಭೆಗೆ ನಮಸ್ಕರಿಸಿ, ಅವರ ಆಶೀರ್ವಾದವನ್ನು ತಲೆಯ ಮೇಲೆ ಹೊತ್ತು ಸಮಸ್ತ ಶಿವಗಣಂಗಳ ಚರಣ ಕಮಲಗಳನ್ನು ಮನಸ್ಸಿನಲ್ಲಿ ಧರಿಸಿಕೊಂಡು ಪರಿಪೂರ್ಣಶ್ರದ್ಧೆಯಿಂದ ನಿಂತುಕೊಂಡು—೩೬–೩೭. 'ಹೇ ಕಿನ್ನರೇಶ್ವರನೇ, ನಿನ್ನ ಸುಪ್ರಿಯ ಮಿತ್ರನಾದ ವೃಷಭೇಂದ್ರನನ್ನು ಮೊದಲು ನೀನೇ ತೊರೆದು ಹೋಗಬಹುದೇ ? ಮತ್ತು ಪರಮೇಶ್ವರನ ಆಜ್ಞೆಯನ್ನು ಸತ್ಯವಾಗಿ ಪರಿಪೂರ್ಣಗೊಳಿಸದೆ

1 ಯಿಂ(ಮು)

ವ್ಯಂ ಚದುರರೊಲ್ದಪರೆ ಗಣ
ಸಂಚಯದೊಳ್ನಿಮಗೆ ಪೆರ್ಮೆ ಕೈಸಾರ್ದಪುದೇ ೩೭

ವಸುಧೆಯೊಳೆ ಬಸವನಿಲ್ಲದೊ
ಡಸಮಾಕ್ಷನ ಮಹಿಮೆಯೊಳವೆ ಶಿವಭಕ್ತಿಯ ಪೆಂ
ಪೆಸೆದಪುದೆ ಪಗಲ ಸಿರಿ ನವ
ಬಿಸಜದ ಸೊಂಪರ್ಕನಿಲ್ಲದೊಡೆ ಸಮನಿಪುದೇ ೩೮

ಚರಲಿಂಗಪ್ರಾಣಭಾವಂ ಬಸವನಸುವನೊಲ್ದಿತ್ತನಾತ್ಮಪ್ರತಿಜ್ಞಾ
ಪರಿಪಾಲಂ ಯುಕ್ತಮಾತಂಗದು ಪುರಹರನುಂ ನೀನುಮಾತ್ಮೇಚ್ಛೆಯಿಂ ಭ
ಕ್ತರನೊಳ್ಪಿಂ ವಂಚಿಸುತ್ತೀ ಶರಣನಸುವನೊಯ್ವಂದಮೇಂ ತಕ್ಕುದೇ ಕಿ
ನ್ನರ ನೀನೇಳೇಳ್ವೃಷಾಧೀಶ್ವರನೊಡನೆ ಧರಾಚಕ್ರದೊಳ್ ಬಾಳಲೀಗಳ್ ೩೯

ವ॥ ಎಂದು ಸಂಭ್ರಮಂ ವಿಜೃಂಭಿಸಿ ನುಡಿಯಲೊಡನೆ—

ತನುವಲುಗೆ ಕಿನ್ನರಯ್ಯಂ
ಕನಸಂ ಕಂಡೇಳ್ವ ತೆಱದಿನೆಳ್ದಪ್ಪಿರೆ ಭೋಂ

ನಿನ್ನೊಡನೆ ಈ ಬಂದಿರುವ ಈ ಬಸವಣ್ಣನನ್ನು ಹೇಗೆ ಜೊತೆಯಲ್ಲಿ ಸೇರಿಸಿಕೊಂಡೆ ; ಹೇಳು : ಹರನಾದರೂ ಕೂಡ ಶಿವಗಣ ಸಮೂಹವನ್ನು ವಂಚನೆ ಮಾಡಿ, ಪೂಜ್ಯ ಬುದ್ಧಿಯುಳ್ಳವನಾಗಿ ನಿಮ್ಮಿಬ್ಬರನ್ನೂ ಇಲ್ಲಿ ಬಿಡದೆ ಹೇಗೆ ಕರೆದುಕೊಂಡು ಹೋದನೋ ? ನಿಮ್ಮೀರ್ವರ ಈ ರೀತಿಯನ್ನು ಕುಶಲರಾದವರು ಒಪ್ಪುವರೇ ? ಗಣಸಮೂಹದಲ್ಲಿ ನಿಮಗೇ ದೊಡ್ಡತನವು ಕೈಗೂಡೀತೇ ?' ೩೮. 'ಈ ಲೋಕದಲ್ಲಿ ಬಸವಣ್ಣನಿಲ್ಲದಿದ್ದರೆ ಆ ಶಿವನ ಮಹಿಮೆಯು ಇರುವುದೇ ? ಶಿವಭಕ್ತಿಯ ಹಿರಿಮೆ ಶೋಭಿಸೀತೇ ? ಸೂರ್ಯ ನಿಲ್ಲದೆ ಹಗಲಿನ ಸಿರಿ, ನೂತನ ಕಮಲದ ಸೊಗಸು, ಉಂಟಾದೀತೇ ?' ೩೯. ಜಂಗಮ ಪ್ರಾಣ ಭಾವದ ಬಸವನು ಪ್ರಾಣವನ್ನು ಒಲಿದುಕೊಟ್ಟನು. ಅದು ಅವನ ಆತ್ಮ ಪ್ರತಿಜ್ಞೆಯ (ಮಾಡಿದ ಭಾಷೆಯ) ಪಾಲನೆ; ಅದು ಅವನಿಗೆ ಯುಕ್ತವೇ ಆಗಿದ್ದಾಯಿತು. (ಆದರೆ) ಶಿವನಿಗೂ ನೀನೂ ನಿಮ್ಮ ಇಚ್ಛೆಗನುಗುಣವಾಗಿ ಭಕ್ತರುಗಳ ಕ್ಷೇಮವನ್ನು ವಂಚನೆ ಮಾಡಿ, ಈ ಶರಣರ ಪ್ರಾಣವನ್ನು ಒಯ್ಯುವ ರೀತಿಯು (ನಿಮಗೆ) ಯೋಗ್ಯವೇ? ಕಿನ್ನರನೇ, ಬಸವೇಶ್ವರನೊಡನೆ ಈಗ ಭೂಭಾಗದಲ್ಲಿ ಬದುಕುವುದಕ್ಕೆ ನೀನು (ಈಗ) ಮೇಲಕ್ಕೇಳು.' ವ॥ ಹೀಗೆಂದು ವಿಶೇಷ ಸಂಭ್ರಮದಿಂದ ನುಡಿದ ಕೂಡಲೇ— ೪೦. ಆ ಕಿನ್ನರಯ್ಯನ ದೇಹವು ಅಲ್ಲಾಡಿತು. (ಅವನು) ಕನಸನ್ನು ಕಂಡು ಮೇಲಕ್ಕೇಳುವ

ಕನೆ ಬಸವನೆಳ್ದು ತತ್ಪದ
ವನರುಹದೊಳಮರ್ಚೆ ನೊಸಲನವನತನಾದಂ ೪೦

ವ॥ ಅಂತೆಜಿಗುತ್ತಿರ್ಪರುಂ ಮಾಚಿದೇವಂಗೆ ಮಣಿಯೆ ತನ್ಮಾಚಿದೇವನವರ್ಗೊಡಿ ಗಣಸಭೆಗೆ ಮಗುಳ್ದೆಱಗಿ ನಿಂದಾಗಳಾ ಮಾಹೇಶ್ವರರಾತನಂ ನೋಡಿ ಸಾಶ್ಚರ್ಯಮಾನಸರಾಗಿ ಸಮ್ಮದಂಬಡೆದು—

ಶರಣಪ್ರಾಣಪ್ರತಿಷ್ಠಾಪರ ಪರಮಶಿವಾದ್ವೈತವಿದ್ಯೋತವಿದ್ಯಾ
ಕರ ವಿದ್ವದ್ವಂದ್ಯ ವೀರವ್ರತಹಿತಕರ ಕಾರುಣ್ಯವಾರಾಶಿ ವಾದ್ಯು
ತ್ಕರಗರ್ವೋರ್ವೀಧ್ರಸಂಭೇದನಪವಿ ಭುವನಾರಾಧ್ಯ ಭೂರುದ್ರ ವಿಶ್ವಂ
ಭರ ಭದ್ರಾಕಾರ ಭೂಭೃದ್ದ್ವಿಪದಳನಮಹಾಶೌರ್ಯ ಮಾಚಾರ್ಯವರ್ಯಾ ೪೧

ಶರಣಗಣಪ್ರಭಾವಸರಸೀರುಹಭಾಸ್ಕರ ಭವ್ಯಸೇವ್ಯ ಶಾಂ
ಕರಮತಪಾರಿಜಾತ ಜಿತಮನ್ಮಥ ಜನ್ಮಜರಾವಿದೂರ ಸ

ರೀತಿಯಲ್ಲಿ ಎದ್ದು ಶೋಭಿಸುತ್ತಿರಲು ಬಸವಣ್ಣನೂ ಜಾಗ್ರತೆಯಾಗಿ ಎದ್ದು, ಆ ಮಡಿವಳ ಮಾಚಯ್ಯನ ಪಾದ ಕಮಲಗಳಲ್ಲಿ ಹಣೆಯನ್ನಿಟ್ಟು, ನಮಸ್ಕರಿಸಿದವನಾದನು. ವ॥ ಹೀಗೆ ನಮಸ್ಕರಿಸಿ ಅವರಿಬ್ಬರೂ ಮಾಚಿದೇವನೆದುರಿಗೆ ಬಾಗಿ ನಿಲ್ಲಲಾಗಿ ಆ ಮಾಚಿದೇವನು ಅವರಿಬ್ಬರು ಸಮೇತವಾಗಿ ಶಿವಗಣ ಸಮೂಹಕ್ಕೆ ಪುನಃ ನಮಸ್ಕರಿಸಿ ನಿಲ್ಲಲಾಗಿ, ಆ ಮಾಹೇಶ್ವರರು ಆ ಮಾಚಿದೇವನನ್ನು ನೋಡಿ, ಆಶ್ಚರ್ಯಯುಕ್ತ ಮನಸ್ಸಿನವರಾಗಿ, ಸಂತೋಷವನ್ನು ಹೊಂದಿ (ಹೊಗಳಿದರು). ೪೧–೪೨. 'ಶರಣರ ಪ್ರಾಣವನ್ನು ಪ್ರತಿಷ್ಠೆ ಮಾಡುವುದರಲ್ಲಿ ಆಸಕ್ತನೇ, ಉತ್ಕೃಷ್ಟವಾದ ಶಿವಾದ್ವೈತ ತತ್ತ್ವವನ್ನು ಹೇಳುವ ಪ್ರಕಾಶಿಸುವ ವಿದ್ಯೆಗಳಿಗೆ ಆಸ್ಪದನಾದವನೇ, ವಿದ್ವಾಂಸರಿಂದ ವಂದಿಸಲ್ಪಡುವವನೇ, ವೀರಶೈವ ವ್ರತವನ್ನು ಅನುಸರಿಸುವವರಿಗೆ ಹಿತವನ್ನುಂಟುಮಾಡುವವನೇ, ಕರುಣಾ ಸಮುದ್ರನೇ, ಪರವಾದಿಸಮುದಾಯದ ಅಹಂಕಾರವೆಂಬ ಪರ್ವತಗಳನ್ನು ಸೀಳುವುದರಲ್ಲಿ ವಜ್ರಾಯುಧ ಸ್ವರೂಪನೇ, ಜಗತ್ಪೂಜ್ಯನೇ, ಭೂಮಿಗೆ ರುದ್ರ ಸ್ವರೂಪನೇ, ಧರಿತ್ರಿಯ ಮಂಗಳಕರ ಆಕಾರನೇ, ಮಹಾರಾಜನಾದ ಬಿಜ್ಜಳನ ಆನೆಯನ್ನು ಸೀಳುವುದರ ಮೂಲಕ ಅಧಿಕ ಪರಾಕ್ರಮವನ್ನು ಪ್ರಕಟಿಸಿದ ಮಾಚಿದೇವಾರ್ಯವರ್ಯನೇ. (ನೀನು) ಶಿವಶರಣರ ಪ್ರಭಾವವೆಂಬ ಕಮಲಕ್ಕೆ ಸೂರ್ಯನಂತಿರುವವನು ; ಪೂಜ್ಯರಾದವರಿಂದ ಸೇವಿಸುವುದಕ್ಕೆ ಯೋಗ್ಯನಾದವನು ; ಪರಶಿವ ಮತಕ್ಕೆ (ವೀರಶೈವ ಮತಕ್ಕೆ) ಕಲ್ಪವೃಕ್ಷ ಪ್ರಾಯನು ; ಮನ್ಮಥನನ್ನು ಜಯಿಸಿದವನು ; ಹುಟ್ಟುಮುಪ್ಪುಗಳಿಂದ ದೂರನಾದವನು ; ಸಚ್ಚರಿತ್ರನು ; ಜಂಗಮರಲ್ಲಿ ಮಂಗಲರೂಪನು ; ದೃಢಕರ

ಚ್ಚರಿತ ಚರಾಚರಪ್ರಕರಪಾಲಕ ಜಂಗಮಲಿಂಗಮಂಗಳ
ಸ್ಥಿರತರಭಕ್ತಿಯುಕ್ತಗಣಸನ್ನುತ ಸದ್ಗುಣರತ್ನಭೂಷಣಾ ೪೨

ಹಾರ ಪಟೀರ ಹೀರ ಘನಸಾರ ಸುಧಾರಸ ಸಾರಸಾರಿ ಮಂ
ದಾರ ತುಷಾರ ತಾರಧರಣೀಧರ ನಾರದ ಗೌರಿ ಕೀರ್ತಿ ವಿ
ಸ್ತಾರ ವಿಚಾರಸಾರನಯವಾಕ್ಯ ವಿಶಾರದ ವೀರಶೈವ ಗಂ
ಭೀರಮತ ಪ್ರಶಸ್ತಮಕರಾಕರವರ್ಧನ ಪೂರ್ಣಚಂದ್ರಮಾ ೪೩

ಬಿಜ್ಜಳಮಾನವಪತಿಮದ
ಕಜ್ಜಳಸಲಿಲಪ್ರವಾಹಸಾಹಸಭರ ವಿ
ದ್ವಜ್ಜಳಧಿಚಂದ್ರ ಭಜಕವಿ
ಪಜ್ಜಳದಪಟುಪ್ರಭಂಜನಪ್ರಭವಿಭವಾ ೪೪

ಶೂಲಧರ ಭಕ್ತನಿವಹಮ
ನೀ ಲೋಕದ ಸುಜನನಿಕರಮಂ ಪರಮತಮಂ
ಲಾಲಿಸಲುಂ ಪಾಲಿಸಲುಂ
ಸೋಲಿಸಲುಂ ಮಹಿಗೆ ಬಂದ ಮಹಿಮಾಧಾರಾ ೪೫

ಬಸವನುಮಂ ಕಿನ್ನರನುಮ
ನಸುಸಹಿತರನಿತ್ತು ನೆಗಳ್ದ ಶಿವಮಹಿಮೆಗೆ ಬೆ

ವಾದ ಭಕ್ತಿಯಿಂದ ಕೂಡಿರುವ ಶಿವಗಣದಿಂದ ಸ್ತೋತ್ರ ಮಾಡಿಸಿಕೊಳ್ಳುವವನು; ಸದ್ಗುಣಗಳೆಂಬ ರತ್ನಗಳೇ ಆಭರಣವಾಗಿ ಉಳ್ಳವನು.' ೪೩. ಮುತ್ತಿನಂಥ ಹಾರ, ಶ್ರೀಗಂಧ, ವಜ್ರ, ಪಚ್ಚಕರ್ಪೂರ, ಅಮೃತ, ಚಂದ್ರ (ಸಾರಸಾರಿ), ಕಲ್ಪವೃಕ್ಷ, ಹಿಮಕಣ, ಬೆಳ್ಳಿಯ ಬೆಟ್ಟ (ಕೈಲಾಸ), ನಾರದ–ಇವರುಗಳೋಪಾದಿಯಲ್ಲಿ ಶುಭ್ರವಾದ ಯಶಸ್ಸುಳ್ಳವನು, ವಿಸ್ತಾರವಾದ ಅಧ್ಯಾತ್ಮ ವಿಚಾರದಿಂದ ಶ್ರೇಷ್ಠವೆನಿಸಿದ ನೀತಿವಾಕ್ಯದಲ್ಲಿ ನಿಪುಣನು, ವೀರಶೈವವೆಂಬ ಹೆಸರಿನ ಗಂಭೀರವೂ, ಪ್ರಶಸ್ತವೂ ಆದ ಸಮುದ್ರವನ್ನು ಉಕ್ಕಿಸುವ ಪೂರ್ಣಚಂದ್ರನು (ಎನಿಸಿದ್ದೀಯ) ? ೪೪–೪೫–೪೬. ಬಿಜ್ಜಳರಾಯನ ಗರ್ವವೆಂಬ ಕಾಡಿಗೆಗೆ ನೀರಿನ ಪ್ರವಾಹರೂಪನೂ, ಅತ್ಯಂತ ಪ್ರಯತ್ನಶಾಲಿಗಳಾದ ವಿದ್ವಾಂಸರೆಂಬ ಸಮುದ್ರಕ್ಕೆ ಚಂದ್ರಪ್ರಾಯನೂ, ವಿಪತ್ತುಗಳೆಂಬ ಮೇಘಗಳಿಗೆ ಸಮರ್ಥವಾದ ಜಂಝಾಮಾರುತನಿಗೆ ಸಮಾನವಾದ ವೈಭವವುಳ್ಳವನೂ, ಪರಶಿವಭಕ್ತರನ್ನೂ ಮತ್ತು ಈ ಲೋಕದ ಸಜ್ಜನಸಮೂಹವನ್ನೂ ಪಾಲನೆ ಮಾಡುವುದಕ್ಕೂ; ಅನ್ಯಮತದವರನ್ನು ಸೋಲಿಸುವುದಕ್ಕೂ ಈ ಭೂಮಿಗೆ ಅವತರಿಸಿದ ಮಹಿಮೆಗಳಿಗೆ ಆಶ್ರಯನಾದ

ಳ್ದಸಪುನಮರ್ಚಿದೆ ಭಕ್ತ
ಪ್ರಸರಕ್ಕೆ ಮಹೋತ್ಸವಂಗಳಂ ಪಡೆದಿತ್ತೈ ೪೬

ಗಣದುಗ್ಧಾಬ್ಧಿಸುಧಾಂಗ ನಿನ್ನ ನಯಯುಕ್ತಂ ನಿಷ್ಠುರಂ ವಾಣಿ ಸಂ
ದಣಿಮಾದ್ಯಷ್ಟವಿಭೂತಿ ಸರ್ವಪದಸನ್ಮೋಕ್ಷಗಳಂ ಮಾಳ್ಪ ಲ
ಕ್ಷಣಮಾಂತೊಪ್ಪುಗುಮುರ್ವಿಯೊಳ್ನುಡಿವುದೇಂ ಬಲ್ಲರ್ಗೆ ಮುಂಗೆಯ್ಯ ಕಂ
ಕಣಕೇಂ ಕನ್ನಡಿಯುಂಟೆ ನೋಳ್ಪೊಡಿದೆ ದೃಷ್ಟಾಂತಂ ವೃಷಾಧೀಶನಾ ೪೭

ವಿಮಳ ಪ್ರತಿಜ್ಞೆಯಿದಱಿಂ
ಪ್ರಮಥರ್ಕಳ ಶಾಸನಕ್ಕೆ ಸಂದುದು ಭಕ್ತಿ
ಪ್ರಮದೆಗೆ ಸೌಭಾಗ್ಯಂ ಗುಣ
ಸುಮನೋಮಾಲಿಕೆಗೆ ಕಂಪು ನೆರೆದುದು ಪೆಱತೇಂ ೪೮

ಎಮ್ಮ ಮನೋರಥಾಮರಮಹೀರುಹಮಾರ್ಯವರೇಣ್ಯ ತಾಳ್ದು ಸೊಂ
ಪಮ್ಮಿಗೆ ಸತ್ವರಂ ಫಲಿತಮಾದುದು ಜಂಗಮಮಾನಸಾಂಬುಜಂ
ಸಮ್ಮದ ಸೌರಭಂದಳೆದುದೆಂದೊಲವಿಂ ನುತಿಗೆಯ್ವತಿರ್ಪಿನಂ
ದಿಮ್ಮಿದರಲ್ಲಿ ಮಾಚವಿಭು ಸಸ್ಮಿತಲೋಚನದಿಂದೆ ನೋಡುತುಂ ೪೯

ಬಸವವಿಭುಮುಖ್ಯ ಶಿವಗಣ
ವಿಸರಮನಾತ್ಮೀಯ ವಿಮಳ ಕರುಣಾಮೃತ ಸಾ

ವನೇ (ನೀನು) ಬಸವಣ್ಣನನ್ನೂ ಕಿನ್ನರಿಯ ಬೊಮ್ಮಯ್ಯನನ್ನೂ ಪ್ರಾಣಸಹಿತರನ್ನಾಗಿ ಮಾಡಿ ಖ್ಯಾತಿವೆತ್ತೆ, ಶಿವಮಹಿಮೆಗೆ ಶುಭ್ರಕೀರ್ತಿಯನ್ನು ಸೇರಿಸಿದೆ. ಭಕ್ತಸಮೂಹಕ್ಕೆ ಮಂಗಳಕರವಾದ ಉತ್ಸವವನ್ನುಂಟುಮಾಡಿದೆ.' ೪೭. 'ಪ್ರಮಥರೆಂಬ ಕ್ಷೀರ ಸಮುದ್ರಕ್ಕೆ ಚಂದ್ರಸ್ವರೂಪನಾದ ಹೇ ಮಾಚಿದೇವನೇ, ನಿನ್ನ ನೀತಿಯಿಂದ ಕೂಡಿದವುಗಳೂ, ನಿಷ್ಠುರವಾದುವೂ ಆದ ಮಾತುಗಳು, ಅಣಿಮಾ ಮಹಿಮಾ ಇತ್ಯಾದಿ ಅಷ್ಟವಿಭೂತಿಗಳನ್ನುಂಟುಮಾಡುವಂಥವು. ಸರ್ವಕ್ಕೂ ಸ್ಥಾನವಾದ ಶ್ರೇಷ್ಠಮೋಕ್ಷವನ್ನುಂಟುಮಾಡುವ ಚಿಹ್ನೆಯನ್ನು ಧರಿಸಿ ಈ ಭೂಮಿಯಲ್ಲಿ ಶೋಭಿಸುವಂಥವುಗಳು (ಮಾತುಗಳು). ಎಲ್ಲವನ್ನೂ ತಿಳಿದವರಿಗೆ ಹೇಳುವುದೇನು ? ಮುಂಗಯ್ಯ ಕಂಕಣಕೆ ಕನ್ನಡಿ ಬೇಕೆ ? ವಿಚಾರಿಸಿ ನೋಡಿದರೆ ಆ ವೃಷಭಾಧೀಶ್ವರನೇ ದೃಷ್ಟಾಂತವು'. (ಎಂದರು) ೪೮. 'ಇದರಿಂದ ನಿರ್ಮಲವಾದ ಪ್ರತಿಜ್ಞೆಯು ಪ್ರಮಥರುಗಳ ಶಾಸನಕ್ಕೆ ಸಂದಿತು : ಭಕ್ತಿಯೆಂಬ ಹೆಂಗಸಿಗೆ ಸೌಭಾಗ್ಯವುಂಟಾಯಿತು ; ಸದ್ಗುಣಗಳೆಂಬ ಪುಷ್ಪಮಾಲಿಕೆಗೆ ಸುಗಂಧವು ಸೇರಿತು, ಬೇರೆ ಇನ್ನೇನು ? (ಬೇರೆ ಹೇಳುವುದೇನಿದೆ ?) ೪೯–೫೦. ಆರ್ಯ ಶ್ರೇಷ್ಠನೇ, ನಮ್ಮೆಲ್ಲರ ಇಷ್ಟಾರ್ಥವೆಂಬ ಕಲ್ಪವೃಕ್ಷವು ಸೊಂಪುಗೊಂಡು ಶೀಘ್ರವೇ

ರಸರೋಧಿಯೊಳೋಲಾಡಿಸು
.ತೆಸೆದಿರ್ದಂ ಭಕ್ತಹೃದಯಕುಮುದಶಶಾಂಕಂ ೫೦

ವ॥ ಆಗಳಾ ಭಕ್ತಗಣಂ ನಿಜಸಭೆಯೊಳೆಸೆವ ಬಸವರಸನಂ ನೋಡಿ ಕಾರುಣ್ಯಮಂ ನೀಡಿ—

ಪರಮೇಶಂ ತನ್ನೊಳೀ ಕಿನ್ನರನ ಹರಣಮಂ ಕೂಡಿಕೊಂಡಿರ್ಪಿನಂ ತ
ಳ್ತಿರದಾತ್ಮಪ್ರಾಣಮಂ ಬೆಂಕೊಳಿಸಿ ಬೆರೆಸಿದ್ಯೆ ಮತ್ತೆ ತತ್ಪ್ರಾಣಮಂ ಮಾ
ಚರಸಾರ್ಯಂ ಸತ್ಕೃಪಾವೀಕ್ಷಣದೆ ಬರಿಸೆ ನೀಂ ಬೆನ್ನನೆಯ್ತಂದೆ ಭಾಪು
ರ್ವರೆಯೊಳ್ನಿನ್ನನ್ನರಾರ್ಜಂಗಮುಮಿಳಿತ ನಿಜಪ್ರಾಣರಾರ್ಯಾಬ್ಧಿಚಂದ್ರಾ[1] ೫೧

ಕುಡಲಕ್ಕುಂ ಪೊಂಗಳಂ ಜಂಗಮಕೆ ತನುವನೆಂತೀಯಲಕ್ಕುಂ ವಲಂ ತ
ನ್ನೊಡಲಂ ಕೂರ್ತೀಯಲಕ್ಕುಂ ಬಗೆಯೆ ಮನಮನೆಂತೀಯಲಕ್ಕುಂ ಪೊಗಳ್ದಂ

ಫಲಬಿಟ್ಟುದಾಯಿತು. ಜಂಗಮರುಗಳ ಮನಸ್ಸೆಂಬ ಕಮಲವು, ಸಂತೋಷವೆಂಬ ಪರಿಮಳವನ್ನು ಧರಿಸಿತು. ಎಂದು ಶ್ರೇಷ್ಠ ಶಿವಭಕ್ತರು (ದಿಮ್ಮಿದರು) ಸಂತೋಷದಿಂದ ಸ್ತೋತ್ರ ಮಾಡುತ್ತಿರಲು ಮಾಚಿದೇವನು ಮುಗುಳ್ನಗೆಯಿಂದ ಕೂಡಿದ ಕಣ್ಣಿನಿಂದ ನೋಡುತ್ತಿದ್ದನು. ಆ ಭಕ್ತರ ಮನಸ್ಸೆಂಬ ಕನ್ನೈದಿಲೆಗಳಿಗೆ ಚಂದ್ರಪ್ರಾಯನಾದ ಮಾಚಿದೇವನು ಬಸವೇಶನೇ ಮೊದಲಾದ ಶಿವಗಣ ಸಮೂಹವನ್ನು ತನ್ನ ನಿರ್ಮಲವಾದ ಕರುಣರಸವೆಂಬ ಶ್ರೇಷ್ಠವಾದ (ಸಾರಭೂತವಾದ) ಸರೋವರದಲ್ಲಿ ತೇಲಾಡಿಸುತ್ತ ಇದ್ದನು. ವ॥ ಆಗ ಆ ಶಿವಭಕ್ತಸಮೂಹವು ತನ್ನ ಸಭೆಯಲ್ಲಿ ಶೋಭಿಸುವ ಬಸವರಸನನ್ನು ಕಂಡು ಕಾರುಣ್ಯವನ್ನೆರೆದು—೫೧. 'ಆರ್ಯರೆಂಬ ಸಮುದ್ರಕ್ಕೆ ಚಂದ್ರಪ್ರಾಯನಾದ ಬಸವೇಶ್ವರನೇ, ಪರಮೇಶ್ವರನು ತನ್ನೊಳಗೆ ಈ ಕಿನ್ನರಿ ಬ್ರಹ್ಮಯ್ಯನ ಪ್ರಾಣವನ್ನು ಕೂಡಿಸಿಕೊಂಡಿರುವಾಗ, ನೀನು ನಿನ್ನ ಪ್ರಾಣವನ್ನು ಆ ಕಿನ್ನರಯ್ಯನ ಪ್ರಾಣವನ್ನು ಬೆನ್ನು ಹತ್ತಿ ಹೋಗಿ ಬೆರೆಸಿಬಿಟ್ಟೆ. ಪುನಃ ಆ ಕಿನ್ನರಯ್ಯನ ಪ್ರಾಣವನ್ನು ಈ ಮಡಿವಾಳ ಮಾಚಿದೇವಾರ್ಯನು ತನ್ನ ಶ್ರೇಷ್ಠವಾದ ಕೃಪಾಪೂರ್ಣನೋಟದಿಂದ ಬರುವಂತೆ ಮಾಡಲಾಗಿ, ನೀನೂ ಕೂಡ ಆ ಕಿನ್ನರಯ್ಯನ ಬೆನ್ನು ಹತ್ತಿ ತಪ್ಪದೆ ಬಂದೆ. ಭಾಪುರೇ ! ಈ ಭೂಮಿಯಲ್ಲಿ ನಿನ್ನಂಥ ಜಂಗಮ ಪ್ರಾಣಿಗಳು ಇನ್ನಾರಿದ್ದಾರೆ ?' ೫೨. ಜಂಗಮರಿಗೆ ದ್ರವ್ಯವನ್ನು ಕೊಡಲು ಆದೀತು; ತನುವನ್ನು ಕೊಡುವುದು ಹೇಗಾದೀತು ? ತನುವನ್ನು ಪ್ರೀತಿಯಿಂದ ಕೊಡಲು ಆದೀತು; ಆದರೆ ಮನಸ್ಸನ್ನು

---

1 ದ್ರಂ (ಅ, ಚ)

ದೆಡೆಯೊಳ್ಮೆಣೇಯಲಕ್ಕುಂ ಮನಮನಸುವನೆಂತೀಯಲಕ್ಕುಂ ಪ್ರಯತ್ನಂ
ಬಡೆದೀಯಲ್ಬರ್ಕುಮಾರ್ಪಿಂದಸುವನಸವಸಂ ವೀರಭೃತ್ಯತ್ವದಿಂದಂ ೫೨

ಬೆಸುಗೆ ಮಿಗೆ ಜವದೆ ಜಂಗಮ
ದಸುವಿನೊಳಸುವಂ ನಿವೇದಿಸಲ್ಬರ್ಕುಮೆ ಪೇ
ಳ್ಬಸವ ಸಚಿವೇಂದ್ರ ನಿನ್ನವೊ
ಲಸದೃಶಮಿದು ಭಕ್ತಿಭಾವಮಾರ್ಗಮಶಕ್ಯಂ ೫೩

ಘನಲಿಂಗಪ್ರಾಣಯೋಗವ್ರತದಶಪಥಮಿಂತಾಗೆ ಸಂದಿರ್ದುದಂದೊ
ಳ್ಪಿನ ಸತ್ಯೇಶಂಗೆ ಪೊಣ್ಕೊಂಡಗುಳೆಯ ವಿಳಸತ್ಕೇಶಿರಾಜಂಗಿಳಾಪಾ
ವನ ಚಂದಯ್ಯಂಗೆ ಲೋಕೋತ್ತರಗುಣಕಮಳಾಂಬಾಖ್ಯೆಗಾ ತಂಗುಟೂರೊ
ಳ್ಬಿನದಂಬೆತ್ತಿರ್ಪ ಮಾರಪ್ರಭುಗೆ ಜಗದೊಳೆಂಬುಕ್ತಿಯಂ ಕೇಳ್ದೆವೀಗಳ್ ೫೪

ಚರಲಿಂಗಪ್ರಾಣಭಾಷಾವ್ರತಮಿದು ಬಸವಂಗೆಯ್ದೆ ಸಂದೊಪ್ಪಿದತ್ತು
ರ್ವರೆಯೊಳ್ ಲಿಂಗಾರ್ಪಿತಪ್ರಾಣತೆಯದು ಪೊಸತಲ್ತಲ್ತು ಭಾವಿಪ್ಪೊಡೀ ಭಾ

ಕೊಡುವುದು ಹೇಗಾದೀತು ? ಒಂದು ವೇಳೆ ಶೋಭಿಸುವ ಮನಸ್ಸನ್ನು ಕೊಡಲು ಆದೀತು; ಪ್ರಯತ್ನಪಟ್ಟು, ಸಾಮರ್ಥ್ಯದಿಂದ, ವೀರಭೃತ್ಯಭಾವದಿಂದ ಜಾಗ್ರತೆಯಾಗಿ ಅಸುವನ್ನು ಕೊಡಲು ಶಕ್ಯವಾದೀತೆ ?' (ಅಸಾಧ್ಯವೆಂದು ಭಾವ). ೫೩. 'ಗಾಢವಾದ ಬೆಸುಗೆಯಿಂದ ಜಾಗ್ರತೆಯಾಗಿ ಜಂಗಮದ ಪ್ರಾಣದಲ್ಲಿ ತನ್ನ ಪ್ರಾಣವನ್ನು ಸಮರ್ಪಿಸುವುದಕ್ಕೆ ಬರುವುದೇ ? ಹೇಳು. ಬಸವ ಮಂತ್ರೀಶ್ವರಾ ಉಪಮಾತೀತವಾದ ಈ ಭಕ್ತಿಯ ನಡೆವಳಿಕೆಯು ನಿನ್ನ ಹಾಗೆ ಇನ್ನಾರಿಗೂ ಶಕ್ಯವಾದದ್ದಲ್ಲ.' ೫೪. ಉತ್ಕೃಷ್ಟವಾದ ಲಿಂಗ ಮತ್ತು ಪ್ರಾಣ ಇವುಗಳ ಸಂಬಂಧವುಳ್ಳ ವ್ರತಾಚರಣೆಯ ಪ್ರತಿಜ್ಞೆಯು ಇದೇ ರೀತಿ ಈ ಜಗತ್ತಿನಲ್ಲಿ ಶ್ರೇಷ್ಠನಾದ ಸತ್ಯೇಶನೆಂಬ ಶರಣನಿಗೆ, ಮತ್ತು ಕೊಂಡಗುಳಿಯ ಪ್ರಕಾಶಿಸುವ ಕೇಶಿರಾಜನಿಗೆ, ಭೂಮಂಡಲಕ್ಕೆ ಪಾವನನೆನಿಸಿದ ಚಂದಯ್ಯನಿಗೆ ಲೋಕೋತ್ತರ ಗುಣವಿಶಿಷ್ಟಳಾದ ಕಮಲಾಂಬೆ ಎಂಬ ಶರಣೆಗೆ, ತಂಗಟೂರಿನಲ್ಲಿ ವಿನೋದಗೊಂಡು ವಾಸಿಸುತ್ತಿದ್ದ ಮಾರಪ್ರಭುವಿಗೆ ಇರುವುದೆಂದೆನ್ನುವ ಮಾತನ್ನು ಕೇಳಿದ್ದೇವು.' ೫೫. 'ಭೂಮಂಡಲದಲ್ಲಿ ಜಂಗಮವೇ ತನ್ನ ಪ್ರಾಣವೆಂಬ ಪ್ರತಿಜ್ಞೆಯ ವ್ರತವೂ, ಲಿಂಗದಲ್ಲಿ ಅರ್ಪಿಸಲ್ಪಟ್ಟ ಪ್ರಾಣವುಳ್ಳ ರೀತಿಯೂ, ಇದು ಬಸವಣ್ಣನೊಬ್ಬನಿಗೇ ಚೆನ್ನಾಗಿ ಶೋಭಿಸುತ್ತದೆ. (ಇದು ಈ ಬಸವಣ್ಣನಿಗೆ) ಹೊಸದೇನೂ ಅಲ್ಲ ; ಅಲ್ಲ. ವಿಚಾರಿಸಿ ನೋಡಿದರೆ ಈ ಪ್ರಕಾಶಮಾನವಾದ ಚರಿತ್ರೆಯುಳ್ಳ ಜಂಗಮವೇ ಪ್ರಾಣವಾಗಿ

ಸುರವೃತ್ತಂ ಜಂಗಮಪ್ರಾಣತೆ ಜಗದೊಳಪೂರ್ವಂ ದಲೆಂದೊಲ್ಪು ಮಾಹೇ
ಶ್ವರವೃಂದಂ ತನ್ನನೊಳ್ಪಿಂ ಪೊಗಳೆ ಮಜಿೆದನಾನಂದಸಾಂದ್ರಂ ವೃಷೇಂದ್ರಂ ೫೫

ಚಂಡಭಾನುಮಂಡಲಾಂತರಾಳಮಂದಿರೋಜ್ವಳೇ
ಖಂಡಿತಪ್ರಚಂಡಚಂಡಮುಂಡಶೌರ್ಯಮಂಜುಳೇ
ಖಂಡಚಂದ್ರಮೌಳಿಭಾಸುರಾಂಕಪೀಠನಿಶ್ಚಳೇ
ಚಂಡಿ ಚಾರುಮೂರ್ತಿ ಪಾಲಿಸೆನ್ನ ಸರ್ವಮಂಗಳೇ ೫೬

ಇದು ವಿನಮದಖಿಳ ಸುರಾಸುರೇಂದ್ರಮಕುಟತಟಘಟಿತ ಮಣಿಗಣಾಗಣಿತ ರುಚಿನಿಚಯ
ತರುಣಾರುಣಾತಪಪರಿಲಸಿತ ಪರಮ ಶಿವಲಿಂಗ ಪಾದಾರವಿಂದಪರಾಗಭಸಿತ
ಭಾಸುರಲಲಾಟಪಟ್ಟಸರಸಜನಮಾನಿತೋಭಯಕವಿತಾವಿಶಾರದ
ಶ್ರೀಷಡಕ್ಷರಿದೇವಭಕ್ತಿವಿರಚಿತ
ಶ್ರೀಮದ್ ಬಸವರಾಜವಿಜಯಮಹಾಪುರಾಣದೊಳ್ ಬಸವಕಿನ್ನರಸಹಪ್ರಾಣಿತ್ವಕಥನಂ
ಚತುರ್ವಿಂಶಾಶ್ವಾಸಂ ಸಮಾಪ್ತಂ

ಅಂತು ಆಶ್ವಾಸ ೨೪ಕ್ಕೆ ಪದಗಣನೆ ೧೭೮೨ಕ್ಕೆ ಮಂಗಳಮಹಾಶ್ರೀ ॥

ಉಳ್ಳ ಭಾವವು ನಿಶ್ಚಯವಾಗಿ ಅಪೂರ್ವವಾದದ್ದು; ಎಂದು ಪ್ರೀತಿಯಿಂದ ಮಹೇಶ್ವರರುಗಳ ಸಮೂಹವು ತನ್ನನ್ನು ಹೊಗಳುತ್ತಿರಲು ಸಾಂದ್ರವಾದ ಆನಂದವುಳ್ಳ ವೃಷಭೇಂದ್ರನು ಶೋಭಿಸಿದ್ದನು. ೫೬. ಪ್ರಖರವಾದ ಸೂರ್ಯಬಿಂಬದ ಮಧ್ಯದಲ್ಲಿರುವ ಮನೆಯಲ್ಲಿ ಉಜ್ವಲಗೊಂಡು ಶೋಭಿಸುವವಳೇ, ಪರಾಕ್ರಮದಿಂದ ಚಂಡ ಮತ್ತು ಮುಂಡರೆಂಬ ರಾಕ್ಷಸರನ್ನು ಕತ್ತರಿಸಿದವಳೇ, ಚಂದ್ರನ ಒಂದು ಕಲೆಯನ್ನು ತಲೆಯಲ್ಲಿ ಧರಿಸಿದ ಪರಶಿವನ ತೊಡೆಯೆಂಬ ಗದ್ದುಗೆಯ ಮೇಲೆ ಸ್ಥಿರವಾಗಿ ಕುಳಿತವಳೇ, ಚಂಡಿಕೆಯೇ, ಮನೋಹರ ಶರೀರವುಳ್ಳವಳೇ, ನನ್ನನ್ನು ರಕ್ಷಿಸು.

ಇಪ್ಪತ್ತು ನಾಲ್ಕನೆಯ ಆಶ್ವಾಸವು ಸಮಾಪ್ತವಾಯಿತು

(ಮುಂದುವರಿದದ್ದು)

ಕೆಳದಿನೃಪ ವಿಜಯ ● ದಮಯಂತೀ ಸ್ವಯಂವರ
ಶಾಂತಿಪುರಾಣ ● ಚಂದ್ರಪ್ರಭ ಪುರಾಣ
ಉದ್ಭಟ ಕಾವ್ಯ ● ಕುಸುಮಾವಳಿ
ಅಭಿನವ ದಶಕುಮಾರ ಚರಿತೆ
ಮಲ್ಲಿನಾಥಪುರಾಣ ● ರಾಜಶೇಖರ
ವಿಳಾಸ ● ಚಿಕ್ಕದೇವರಾಜ ವಂಶಾವಳಿ
ದಿವ್ಯಸೂರಿ ಚರಿತೆ ● ಸಿದ್ಧರಾಮಚಾರಿತ್ರ
ಬಸವಪುರಾಣ ● ಪ್ರಭುಲಿಂಗ ಲೀಲೆ

(ಮುಂದುವರಿದದ್ದು)

ಕೆಳದಿನೃಪ ವಿಜಯ ● ದಮಯಂತೀ ಸ್ವಯಂವರ
ಶಾಂತಿಪುರಾಣ ● ಚಂದ್ರಪ್ರಭ ಪುರಾಣ
ಉದ್ಭಟ ಕಾವ್ಯ ● ಕುಸುಮಾವಳಿ
ಅಭಿನವ ದಶಕುಮಾರ ಚರಿತೆ
ಮಲ್ಲಿನಾಥಪುರಾಣ ● ರಾಜಶೇಖರ
ವಿಳಾಸ ● ಚಿಕ್ಕದೇವರಾಜ ವಂಶಾವಳಿ
ದಿವ್ಯಸೂರಿ ಚರಿತೆ ● ಸಿದ್ಧರಾಮಚಾರಿತ್ರ
ಬಸವಪುರಾಣ ● ಪ್ರಭುಲಿಂಗ ಲೀಲೆ

1982

ಕನ್ನಡದ ಪ್ರಾಚೀನ ಕಾವ್ಯ ಸಂಪತ್ತು ಅಮೂಲ್ಯವಾಗಿದೆ. ಈ ಸಂಪತ್ತನ್ನು ಈಗಿನ ಕನ್ನಡ ಜನತೆ ಓದಿ ತಿಳಿದುಕೊಳ್ಳುವುದು ಅತ್ಯಾವಶ್ಯಕವಾಗಿದೆ. ಆದರೆ ಈ ಕಾವ್ಯಗಳು ಜನಸಾಮಾನ್ಯರಿಗೆ ಕಠಿಣವಾಗಿ ತೋರುವುದರಿಂದ ಇವುಗಳ ವ್ಯಾಸಂಗದಲ್ಲಿ ಉತ್ಸಾಹಪೂರ್ಣವಾದ ಪ್ರವೃತ್ತಿ ಕಂಡುಬರುತ್ತಿಲ್ಲ. ಅನೇಕ ಸಂದರ್ಭಗಳಲ್ಲಿ ಮೂಲಗ್ರಂಥಗಳೂ ದೊರೆಯುವುದಿಲ್ಲ....ಆದ್ದರಿಂದ ಈ ಕೊರತೆಯನ್ನು ನಿವಾರಣೆ ಮಾಡಲು ಕನ್ನಡ ಸಾಹಿತ್ಯ ಪರಿಷತ್ತು ತನ್ನ ಪಂಚವಾರ್ಷಿಕ ಯೋಜನೆಯಲ್ಲಿ ಹಳಗನ್ನಡ ಕಾವ್ಯಗಳ ಪುನರ್ಮುದ್ರಣಕ್ಕೆ ವಿಶೇಷಗಮನ ಹರಿಸಿ ಅದಕ್ಕಾಗಿ ಪ್ರತ್ಯೇಕ ಯೋಜನೆಯನ್ನು ಹಾಕಿಕೊಂಡಿತು. ಆರಿಸಿದ ಹಳಗನ್ನಡ ಹಾಗೂ ನಡುಗನ್ನಡ ಕಾವ್ಯಗಳನ್ನು ಹೊಸಗನ್ನಡ ಗದ್ಯದಲ್ಲಿ ಅನುವಾದಿಸಿ ಆ ಅನುವಾದದೊಡನೆ ಮೂಲಪಾಠವನ್ನು ಪ್ರಕಟಿಸಿ ಪುಸ್ತಕರೂಪದಲ್ಲಿ ಹೊರತರುವುದು ಮತ್ತು ಸರ್ಕಾರದ ಸಹಾಯ ಪಡೆದು ಆ ಪುಸ್ತಕಗಳು ಸಾಧ್ಯವಾದ ಮಟ್ಟಿಗೆ ಸುಲಭ ಬೆಲೆಯಲ್ಲಿ ದೊರೆಯುವಂತೆ ಮಾಡುವುದು ಇವು ಆ ಯೋಜನೆಯ ಮುಖ್ಯ ಅಂಶಗಳು.

—ಪ್ರಸ್ತಾವನೆಯಿಂದ

ಈ ಕಾರ್ಯಕ್ರಮದಲ್ಲಿ ಈಗ ಅಂಗೀಕರಿಸಿರುವ ಹಳಗನ್ನಡ–ನಡುಗನ್ನಡ ಕಾವ್ಯಗಳು ನಲವತ್ತನಾಲ್ಕು. ಇವುಗಳಲ್ಲಿ ಮೊದಲ ಕಂತಾಗಿ ಹದಿಮೂರು ಗ್ರಂಥಗಳು ಪರಿಷತ್ತಿನ ವಜ್ರಮಹೋತ್ಸವ ಸಂದರ್ಭದಲ್ಲಿ ಬಿಡುಗಡೆಯಾಗಲಿವೆ.

ವಜ್ರಮಹೋತ್ಸವ ವರ್ಷ

ಪಂಚವಾರ್ಷಿಕ ಯೋಜನೆಯ ಪುಸ್ತಕಮಾಲೆ

ಮಹಾಕವಿ ಷಡಕ್ಷರಿದೇವ ವಿರಚಿತ

ಬಸವರಾಜ ವಿಜಯಂ

(ಭಾಗ-೨)

ಗದ್ಯಾನುವಾದ

ಪಂಡಿತ ಚನ್ನಪ್ಪ ಎರೇಸೀಮೆ

ಕನ್ನಡ ಸಾಹಿತ್ಯ ಪರಿಷತ್ತು

ಚಾಮರಾಜಪೇಟೆ : : ಬೆಂಗಳೂರು-೧೮

೧೯೮೨



ವಜ್ರಮಹೋತ್ಸವ ವರ್ಷ

ಪಂಚವಾರ್ಷಿಕ ಯೋಜನೆಯ ಪುಸ್ತಕಮಾಲೆ

ಮಹಾಕವಿ ಷಡಕ್ಷರಿದೇವ ವಿರಚಿತ

ಬಸವರಾಜವಿಜಯಂ

(ಭಾಗ-೨)

ಗದ್ಯಾನುವಾದ

ಪಂಡಿತ ಚನ್ನಪ್ಪ ಎರೇಸೀಮೆ

ಕನ್ನಡ ಸಾಹಿತ್ಯ ಪರಿಷತ್ತು

ಚಾಮರಾಜಪೇಟೆ :: ಬೆಂಗಳೂರು-೧೮

೧೯೮೨

Mahakavi Shadaksharadeva Virachita BASAVARAJA VIJAYAM Part-2 Original with Prose rendering by Sri Pandita Channappa Eresime First Published in 1982 by Kannada Sahitya Parishat, Bangalore-560018 in Commemoration of its Diamond Jubilee, Demy Octavo Pages xxiv+612 Rs. 25-00

ಮೊದಲನೆಯ ಮುದ್ರಣ : ೧೯೮೨

ಬೆಲೆ : ಇಪ್ಪತ್ತೈದು ರೂಪಾಯಿಗಳು

ಪ್ರಕಾಶಕರು : ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು-೫೬೦ ೦೧೮

ಮುದ್ರಣ : ಶ್ರೀ ವಿ ಜೀರಾ ಪ್ರಿಂಟರ್ಸ್, ಶಿವರಾಂಪೇಟೆ, ಮೈಸೂರು-೫೭೦ ೦೦೧

ಮುನ್ನುಡಿ

ಷಡಕ್ಷರ ಕವಿಯು ಹಳಗನ್ನಡ ಶೈಲಿಯಲ್ಲಿ ಬರೆದಿರುವ 'ಬಸವರಾಜ ವಿಜಯ' ಕಾವ್ಯ ಕೃತಿಯ ಹೊಸಗನ್ನಡ ಗದ್ಯಾನುವಾದವನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ. ಷಡಕ್ಷರಿಯ ಸಾಹಿತ್ಯ ಗಾತ್ರ ಹಾಗೂ ಸತ್ವದಲ್ಲಿ ಮಹತ್ವ ಪಡೆದಿದೆ. ಷಡಕ್ಷರಿಯು ಕಥನ ಕೌಶಲವನ್ನು ಪರಿಶೀಲಿಸುವಾಗ ಅವನ ದೋಷ ದೌರ್ಬಲ್ಯಗಳಿಗೆ ಕುರುಡಾಗುವ ಕಾರಣ ವಿಲ್ಲ. ಬಹುಶಃ ಈ ಕವಿ ಚಂಪೂ ಪ್ರಕಾರಕ್ಕೆ ತೆಕ್ಕೆ ಬೀಳದೆ ಷಟ್ಪದಿ ಸಾಂಗತ್ಯಗಳಿಗೆ ಮೊರೆ ಹಾಕಿದ್ದರೆ ಕಾವ್ಯ ಹಾಗೂ ಕಥೆಗಾರಿಕೆಗೆ ಇನ್ನೂ ಹೆಚ್ಚಿನ ಹಾಸು ಬೀಸು ಬರುವ ಸಾಧ್ಯತೆಯಿತ್ತು. ಷಡಕ್ಷರಿ ಕವಿಯ ಕಥನ ಕೌಶಲ ಅಖಂಡವಾದ ಪರಿಭಾವನೆಗೆ ಮ್ಲಾನವಾಗಿ ಕಂಡರೂ ಬಿಡಿಬಿಡಿಯಾದ ಪರಿಶೀಲನೆಗೆ ಕೆಲವು ಕಡೆ ಅತ್ಯುನ್ನತ ಮಟ್ಟ ದಲ್ಲಿ ಮೈದೋರಿರುವುದನ್ನು ಮನಗಾಣಬಹುದು.

ಷಡಕ್ಷರಿಯ ಸಾಹಿತ್ಯ ಗಾತ್ರ ಹಾಗೂ ಸತ್ವದಲ್ಲಿ ಮಹತ್ವ ಪಡೆದಿದೆ. ಈತನ ಮೂರು ಪ್ರಮುಖ ಕಾವ್ಯಗಳಲ್ಲಿ ಒಂದಾದ ರಾಜಶೇಖರ ವಿಳಾಸದ ಕಥೆ ಹಳೆಯುದು. ಅದು ಸತ್ಯೇಂದ್ರ ಚೋಳನನ್ನು ಕುರಿತದ್ದು. ಇದನ್ನು ಈಗ ತಿಳಿದಿರುವಂತೆ ಪಿಳ್ಳೆ ನಾಯನಾರರು (ತಿರುಜ್ಞಾನ ಸಂಬಂಧರು) ತಮಿಳಿನಲ್ಲಿ ಹೇಳಿದುದನ್ನು ಕನ್ನಡಿಸಿದವನು ಗುಬ್ಬಿಯ ಮಲ್ಲಣಾರ್ಯ (ಸುಮಾರು 1513). ತಮಿಳು ಕಾವ್ಯ ಹೇಗಿದೆಯೊ ತಿಳಿ ಯದು, ಮಲ್ಲಣಾರ್ಯನ ಕಾವ್ಯ ಮಾತ್ರ ತೀರ ಸಾಮಾನ್ಯ. ಆದರೆ ಷಡಕ್ಷರಿಯು ಕಾವ್ಯ ಶಕ್ತಿಯು, ಕಥನ ಕಲೆಯ ಮಡುವಿನಲ್ಲಿ ಮಿಂದೆದ್ದ ಕಾವ್ಯವಸ್ತು ಮಲ್ಲಣಾರ್ಯಾದಿಗಳ ಪ್ರತಿಕೃತಿ ಎನಿಸದೆ ಮರುಹುಟ್ಟು ಪಡೆದಿದೆ. ಸತ್ಯೇಂದ್ರ ಚೋಳನ ಕಥೆ ಕನ್ನಡಿಗರಿಗೆ ಅರುಚಿಯಾಗಿತ್ತು, ಮಲ್ಲಣಾರ್ಯನ ಅಕಾವ್ಯ ರಚನೆಯಿಂದ. ಆದರೆ ಅದನ್ನು ಸರ್ವ ಜನ ಆಸ್ವಾದ್ಯವನ್ನಾಗಿಸಿ ಪುನರ್ಜನ್ಮವಿತ್ತು ರಸಸಿಂಚನೆ ಮಾಡಿದವನು ಷಡಕ್ಷರದೇವ.

ಆ ಹಳೆಯ ಕಥೆಯ ಹೊನಲನ್ನು ಷಟ್ಪದಿಯ ಪ್ರಣಾಲಿಯಿಂದ ಚಂಪೂಕಾಲುವೆಗೆ ಹರಿಸಿ ಹೊರಮೈ ಬದಲಾಯಿಸಿದ್ದೇ ಅಲ್ಲದೆ ಅದರ ಅಂತರಂಗಕ್ಕೂ ಕಾವ್ಯದ ಜೀವ ತುಂಬಿ ಪುಷ್ಟಿಯ ಪ್ರಾಣಪ್ರತಿಷ್ಠಾಪನೆ ಮಾಡಿದ್ದಾನೆ. ಈತನ ಕುಶಲ ಕಥೆ ಗಾರಿಕೆಯ ಕುಬಚ್ಚಿನಲ್ಲಿ ನುಸುಳಿಬರುವಾಗ ಆ ಪುರಾತನ ಕಥೆ ಚರ್ವಣ ಇಲ್ಲವೇ ಬಡ ಕಲು ಎಂದನ್ನಿಸದು. ಅದಕ್ಕೊಂದು ಹೊಸ ಹೊಳಪು, ಮೊನಚು, ಒಪ್ಪ ಓರಣ ಲಭಿ ಸಿರುವುದು ಎದ್ದು ಕಾಣುತ್ತದೆ.

ಪಾತ್ರಗಳಿಗೆ ಪ್ರಭೆ, ವಸ್ತುವಿಗೆ ಪರಿಷ್ಕಾರ—ಇವೆರಡೂ ಕಥೆಗಾರ ಷಡಕ್ಷರಿಯ ದೇಣಿಗೆ. ಸತ್ಯೇಂದ್ರಚೋಳ (ರಾಜ), ಅಮೃತಮತಿ (ರಾಣಿ), ಪತಿಮೋಹಿ (ಮಂತ್ರಿ), ಮಿತವಚನ (ಸಚಿವಪುತ್ರ), ರಾಜಶೇಖರ (ರಾಜಪುತ್ರ), ತಿರುಕೊಳವಿನಾಚಿ (ಭಕ್ತೆ),

ಕುಮಾರ ಶಂಕರ (ಭಕ್ತೆಯ ಮಗ)— ಇವರೆಲ್ಲ ಶಿವಪುರಾಣದ ಹಾಜರಿ ಪುಸ್ತಕದಲ್ಲಿ ಬರುವ ಸಪ್ಪೆ ಹೆಸರುಗಳಾಗಿ ಭಾವಚಿಂತಾರತ್ನದಲ್ಲಿ ಓದುಗರಿಂದ ದೂರ ಉಳಿಯುತ್ತಾರೆ. ಇಲ್ಲಿ ಅವರು ಮತ್ತೆ ಸಹೃದಯರಿಗೆ ಆತ್ಮೀಯರಾಗುತ್ತಾರೆ. ಇದು ಇವನ ಕಥನ ಕೌಶಲದ ಸ್ಪರ್ಶಜನ್ಯ ಮಾರ್ಪು. ಅವರ ನೋವು ನಲಿವುಗಳು ನಮ್ಮವೇ ಆಗುತ್ತವೆ. ಕಡೆಗೆ ಪವನಗಮನ, ಹರಿಣಗತಿ ಎಂಬ ಆ ಜಾತ್ಯಶ್ವಗಳು ಕೂಡ (ಕಾವ್ಯದ) ಕಥಾನಕದ ಸಕ್ರಿಯ ಸಜೀವ ಪಾತ್ರಗಳಾಗಿಬಿಡುತ್ತವೆ. ಇಂದ್ರನ ಮಗ ಜಯಂತನ ಜೊತೆಯಲ್ಲಿ ಕುಬೇರನ ಮಗ ನಳಕೂಬರ ವೈಹಾಳಿ ಹೊರಟಂತೆ ರಾಜಶೇಖರ ಮಿತವಚನರು ವೈಹಾಳಿಗೆ ಹೊರಟಾಗ ನೋಡಬೇಕು ಕಥೆಯಲ್ಲಿನ ಹಯಗತಿಯನ್ನು.

ಕಂತುಕದಂತ ಪುಷ್ಕರತಳಕ್ಕೊಗೆದೂರ್ಮಿಕೆಯಂತೆ ಪಾಯ್ದು ಮಿೂ
ನಂತಿರೆ ಮಿೂರಿ ಲಂಘಿಸಿ ಲಸನ್ಮೃಗದಂತಿರೆ ದಾಂಟಿ ಮಿಂಚಿ ದೆಂ
ಬಂತೆ ಸಭಾಂತದೊಳ್ ಪೊಳೆದು ಸುಟ್ಟುರೆಯಂತಿರೆ ಸುತ್ತಿಪತ್ತಿ ನಾ
ಗಾಂತಕನಂತೆ ಪಾರಿದುದು ತುಂಗ ತುರಂಗಮಿಳಾಧಿನಾಥನಾ ॥

ಪರಿಯಿಪ ನೆಟ್ಟುವುಟ್ಟುವಿದಿರೇರಿಪ ಪಾರಿಪ ಕಿಳ್ತು ಪಾಂಟಿಪಿ
ರ್ಬರಿಯೊಳೆ ಸುತ್ತಿಪಾಯತಿಕೆಯಿಂ ಮಿಗೆ ನರ್ತಿಪ ದಿಂಡುವಾಯಲು
ಪ್ಪರಿಪ ಬೆಡಂಗಿನಿಂ ನಡೆಯಿಪಂಗವಲುಗಂದೆ ಪಂಚಧಾರೆಯೊಳ್
ಪರಿಣತಿದೋರ್ಪ ವಾಹಳಿತನಂ ಬಗೆಗೊಂಡುದು ಮಂತ್ರಿ ಪುತ್ರನಾ ॥

ಸುಳಿ ಸುಳಿದೊತ್ತಿ ಪತ್ತಿ ತಪೆ ಸುತ್ತಿ ಕಡಂಗಿ ಬೆಂಡಗುವೆತ್ತು ಸಂ
ಚಳಿಸಿ ನಭಕ್ಕೆ ಮಿೂರಿ ಮಿಗೆ ಪಾರಿ ಚಮತ್ಕೃತಿವೀರಿ ತೋರಿ ತ
ನ್ನಳವನಿಳಾತಳಕ್ಕೆ ಕಿಳಿರ್ದುಪ್ಪಳಿಸುತ್ತುರೆ ಮಿೂಂಟಿದಾಂಟಿ ಕಂ
ಟಳಿಸಿ ಪೊದಳ್ದು ಪಾಯ್ದು ಪರಿಯಿಟ್ಟುದು ಪಾಯುರಯಂ ಹಯದ್ವಯಂ ॥

ಕಥೆಗಾರನ ಬಂಡವಾಳ ಮಾತುಗಾರಿಕೆ, ಶಬ್ದಗಳ ಸರಕನ್ನು ಢಾಳಾಗಿ ಪ್ರದರ್ಶಿಸಬೇಕು. ಇಲ್ಲಿನ ಶಬ್ದರಚನೆ, ಛಂದಸ್ಸು ಕುದುರೆಯ ಖುರಪುಟದಂತೆ ತಾಳಕುಟ್ಟುವ ಗತಿಯಲ್ಲಿದೆ. ಇದನ್ನು ಗಟ್ಟಿಯಾಗಿ ಓದಿಯೇ ಪುಲಕ ಹಾಕಬೇಕು. ಅದರಲ್ಲಿಯೂ ಮೊದಲನೆಯ ಪದ್ಯದಲ್ಲಿ ದಂತ್ಯಧ್ವನಿ ತಕಾರದ ಪುನರಾವೃತ್ತಿಯನ್ನು ಪರಿಭಾವಿಸಬೇಕು. ಅದು ಬಿಡಿಯಾಗಿ ಬರದೆ ಅನುನಾಸಿಕದ ಜೊತೆಯಲ್ಲೇ ಬರುತ್ತದೆ ; ಅಂತೆ, ಅಂತಿರೆ—ಎಂಬಂತೆ ಎರಡನೆಯ ವೃತ್ತದಲ್ಲಿ—ಇಪ ಪ್ರತ್ಯಯಾಂತ ರೂಪಗಳ ಲಾಲಿತ್ಯಕ್ಕೆ ಕಿವಿಗೊಡಬೇಕು. ಮೂರನೆಯ ಪದ್ಯದಲ್ಲಿ ಇವೆರಡರ ಜೊತೆ ರೇಫದ ಕುಪ್ಪಳಿಸುವಿಕೆಯನ್ನು ಗಮನಿಸಬೇಕು. ಅಲ್ಲದೆ ಇಲ್ಲಿನ ಇನ್ನೊಂದು ವಿಶೇಷವೆಂದರೆ ಜೋಡಿಗುದುರೆಗಳ ಜತೆಗತಿಯೂ ಸೇರಿದೆ. ಸಂಭ್ರಮದ ಸ್ಪಂದನವೇ ಇಲ್ಲಿಯ ನ್ಯಾಯ. ಭಾವನೆಯನ್ನು ಭಾಷೆಯಲ್ಲಿ ಬಿಂಬಿಸುವುದು ಕಥೆಯ ಕೌಶಲಮತ ಕಲೆಗಾರನ ಕೆಲಸ. ಆದರ ಕುಸುರಿಗೆಲಸ ಇಂಥ

ಕಡೆಗಳಲ್ಲಿ ಮೈದೊರೆಯುತ್ತದೆ. ಇವೆಲ್ಲದರ ಪರಿಣಾಮವಾಗಿ ಇದು ಅಶ್ವವಿಹಾರವಾಗಷ್ಟೇ ಪರ್ಯವಸಾನವಾಗುವುದಿಲ್ಲ. ಅದನ್ನು ದಾಟಿ ಕಾವ್ಯವಿಹಾರವೂ ಆಗಿ ಸುಖ ಕೊಡುತ್ತದೆ.

ಗೆಳೆಯರಿಬ್ಬರು ವೈಹಾಳಿಗೆ ಹೊರಡುವಲ್ಲಿಂದ ಹಿಡಿದು ಶಂಕರ ಕುಮಾರ (ಹೆಸರುಗಳೂ ಪ್ರತಿಮೆಗಳೇ) ಅವರ ಕುದುರೆ ಕಾಲಿಗೆ ಸಿಕ್ಕಿ ಸಾಯುವತನಕ ಒಟ್ಟು ಪ್ರಸಂಗವನ್ನು ತನಿಯಾಗಿ ತೆಗೆದು ಓದಿ ಓದಿ ತಲೆದೂಗಬಹುದು. ಆದರೆ, ಅಷ್ಟರ ಗುಣಗಳನ್ನೇ ಗಣಿಸಿ ಪ್ರಾಯೋಗಿಕ ವಿಮರ್ಶೆಕೂಡ ಮಾಡಿ ನೋಡಿ ಆನಂದಿಸಬಹುದು. ಕಾರಣ, ಈ ಪ್ರಸಂಗವನ್ನು ಲವಲವಿಕೆಯೊಂದು ತುಂಬಿಕೊಂಡಿದೆ. ಉತ್ಸಾಹವೇ ನೆಲೆಯಾಗಿ ಉದ್ದಕ್ಕೂ ಉಲ್ಲಾಸ ಉಕ್ಕುತ್ತದೆ. ಕುದುರೆಯ ಲಯಗತಿ ಸವಾರರ ಮನೋಗತ ಭಾವವನ್ನು ಬಹಿರಂಗದಲ್ಲೆ ಬಿಂಬಿಸಿದಂತೆ ಭಾಸವಾಗುತ್ತದೆ. ವಸ್ತುವಿನ ಮೇಲಿನ ಇಲ್ಲಿನ ಹಿಡಿತ, ಒಬ್ಬ ಪಳಗಿದ ಕಥೆಗಾರನಿಗೆ ಮಾತ್ರ ಸಾಧ್ಯ ಎನ್ನುವ ಮಟ್ಟದಲ್ಲಿದೆ. ಕಾವ್ಯದುದ್ದಕ್ಕೂ ಇದೇ ತೂಕದ ಎಚ್ಚರದ ಸಂಗ್ರಹದ ನಿರೂಪಣೆ ಇರಬಾರದಿತ್ತೆ ಎಂಬ ಸಂಚಾರಿ ಭಾವ ಹಾಯುತ್ತದೆ. ಏಕೆಂದರೆ ಇಲ್ಲಿ ಮಾತ್ರ, ಅಶ್ವಾರೋಹಿಯ ಹಿಡಿತ ತಪ್ಪಿದರೂ, ಕವಿಯ ಹಿಡಿತ ಕಥೆಯ ನಿಯಂತ್ರಣದಿಂದ ಎಡವಿಲ್ಲ.

ಕಾವ್ಯದ ಆರಂಭದ ಒಂಬತ್ತು ಆಶ್ವಾಸಗಳು ಕೇವಲ ಒಂದು ಆಶ್ವಾಸಕ್ಕಷ್ಟೇ ಸೀಮಿತವಾಗುವ ಮಿತವಸ್ತುವೆನ್ನಿಸಿ, ಈ ಭಾಗದ ಮತ್ತು ಇದರ ಅನಂತರದ ಕಥೆ ಮಾತ್ರ ಕಣ್ಮುಂದೆ ನಡೆದುಹೋಗುತ್ತದೆ. ಆಧುನಿಕ ಪರಿಸರದ ಉಪಮೆ ತೆಗೆದು ಹೇಳುವದಾದರೆ, ಚಲನಚಿತ್ರದಲ್ಲಿ ಕುಳಿತು ರಜತ ಪರದೆಯ ಮೇಲೆ ಅಭಿನಯವಾಗುವ ದೃಶ್ಯಾದಿಗಳನ್ನು ನೋಡಿದ ಜೀವಂತ ಅನುಭವ ಆಗುತ್ತದೆ. ಅದೇ ಮಟ್ಟದ ತಾದಾತ್ಮ್ಯ ದಕ್ಕುತ್ತದೆ. ಅವನ ಮೂರೂ ಕನ್ನಡ ಚಂಪೂಕಾವ್ಯಗಳಿಂದ ಹಲವು ಇಂಥ ತನಿ ಚಿತ್ರಗಳನ್ನು ತೆಗೆದು ಕಥಾಪ್ರಿಯರು ದೃಶ್ಯಾತ್ಮಕ ಅನುಭವವನ್ನು ಶ್ರವ್ಯಾತ್ಮಕ ಕಾವ್ಯದಲ್ಲೂ ಆಸ್ವಾದಿಸಬಹುದು. ಶಿವ ಲೀಲಾವಿನೋದಕ್ಕಾಗಿ ಶಬರನಾಗಿ ಕಾಣಿಸಿಕೊಂಡ ಚಿತ್ರವನ್ನು ಕೇಳುಗರ ಕಣ್ಮುಂದೆ ಕಡೆದಿಟ್ಟಿದ್ದಾರೆ :

ಜಡೆಗಳ ಬಂಬಲೇ ತಲೆದಳಿರ್ ಫಣಿ ಸುತ್ತಿದ್ದ ಬಳ್ಳಿ ತಾಳ್ದ ಬಾನ್
ಗಡಲದು ಪುಷ್ಪಮಾಲೆ ಗಟಿವೂ ಗಜಿ ತೆಳ್ವಜಿಬಗ್ಗ ಸಮ್ಮದೊ
ಳ್ಪೊಡೆ ಪೊಸಚಲ್ಲಣಂ ಕರಿಯ ಕುಪ್ಪಸಮಾನೆಯ ಕೃತ್ತಿಯಂಗದೊಳ್
ತೊಡೆದ ವಿಭೂತಿಯುದ್ಗಮಪರಾಗ ವಿಲೇಪನ ಮುಗ್ಗಿಲೋಚನಂ ॥

ಅದರ ಜೊತೆಗೇ ವಾಗರ್ಥದಂತೆ ಸಂಪೃಕ್ತರಾಗಿ ಬಂದ ಪಾರ್ವತಿ ಶಬರಿತಿಯಾಗಿ ಕಾಣಿಸಿಕೊಂಡ ಚಿತ್ರ ಕೊಡುತ್ತಾನೆ :

ತಳಿರುಡೆ ಸಂಜೆಗೆಂಪು ಪೂಸಮುತ್ತಿನ ಹಾರಮೆ ತಾರಕಾಳಿ ತ
ಳ್ತಳಿರುಚಿ ಕಾಯಕಾಂತಿ ಕಡುಗಲೆಲೆ ಮೂಗುತಿ ಮುತ್ತು ಶುಕ್ರಮಂ ।

ಡಳಮುಮುದೊರ್ಪ್ಪೆ ಭಿಲ್ಲಿಯ ವಿಳಾಸಮನಾಳ್ದಸೆದಂದು ಸರ್ವಮುಂ
ಗಳೆ ನಿಜಕಾಳರಾತ್ರಿ ಪೆಸರಂ ಮಿಗೆ ಸಾರ್ಥಕಮಂ ತಿಗಟ್ಚಿದಳ್ ॥

ಇದೇ ಸಂದರ್ಭದಲ್ಲಿ ರಾಜಶೇಜರವಿಲಾಸದಲ್ಲಿ (5-24) ಬರುವ ಬೇಡನೆ ವರ್ಣನೆಯೊಡನೆ ಇವನ್ನೂ ತೂಗಿ ನೋಡಿ ಅಲ್ಲಿನ ಸ್ವಭಾವೋಕ್ತಿಯ ಸೊಗಸನ್ನೂ ಚಪ್ಪರಿಸಬಹುದು.

ಮಾನವ ಸ್ವಭಾವದ ಸೂಕ್ಷ್ಮಗಳನ್ನೂ ಸಂವೇದನೆಗಳನ್ನೂ ಸಂಕೀರ್ಣತೆಗಳ ಸುಳಿಗಳನ್ನೂ ಕವಿ ಆಳವಾಗಿ ಅರಿತು ಕಾವ್ಯದಲ್ಲಿ ಅಳವಡಿಸಿದ್ದಾನೆ. ಕಥೆ ಪೇಲವ ಇಲ್ಲವೇ ಸಪ್ಪೆ ವರದಿಯಾಗಿ ಸಾಗದೆ ಈತನ ಕಥೆಯು ತಂತ್ರದಲ್ಲಿ ರಕ್ತಮಾಂಸ ಮಜ್ಜೆಗಳಿಂದ ಉಸಿರಾಡುವ ಪಾತ್ರಗಳ ಕುಟುಂಬ ಚಿತ್ರಣವಾಗಿ ಬರುತ್ತದೆ. ತಂದೆ-ತಾಯಿ, ಭಕ್ತ-ಭಗವಂತ, ರಾಜ-ಮಂತ್ರಿ, ತಂದೆ-ಮಗ, ತಾಯಿ-ಮಗ, ರಾಜ-ಪ್ರಜೆ, ಗೆಳೆಯರ ಗೆಳೆತನ ಹೀಗೆ ಹಲವು ಭಾವಗಳ, ಸಂಬಂಧಗಳ ಸಂಗಮದಿಂದ ರಾಜಶೇಖರವಿಳಾಸ ವರ್ತುಲವಾಗಿ ಸಾಗುತ್ತದೆ. ಈ ಬಗೆಯ ಭಾವಾವಳಿಯ ಪ್ರಭಾವಳಿಯಲ್ಲಿ ಪಾತ್ರಗಳು ಸ್ಫುಟವಾಗಿ ಕಾಣುತ್ತಾರೆ. ಪುತ್ರವಾತ್ಸಲ್ಯ, ಪ್ರಜಾವಾತ್ಸಲ್ಯಗಳ ತಕ್ಕಡಿಯ ತೂಗಾಟ ನವೀನ ಕಲ್ಪನೆಯಲ್ಲ. ಇಲ್ಲಿ ಶಿವಭಕ್ತಿಯ ಕೇಂದ್ರದ ಸುತ್ತ ಸ್ವಾಮಿಭಕ್ತಿ ಗುರುಭಕ್ತಿ ಪತಿಭಕ್ತಿಗಳು ಗೂಡು ಕಟ್ಟಿವೆ. ಈ ನಿರೂಪಣೆಯನ್ನು ಸುತ್ತಿಕೊಂಡ ಆತ್ಮೀಯ ಪರಿವೇಶ ಈ ಕವಿಯ ಸ್ವೋಪಜ್ಞ ಸ್ಪರ್ಶ. ಇಂಥ ಸ್ವಂತಿಕೆಯ ಆಕರ್ಷಕ ರಸಮಯ ಸನ್ನಿವೇಶಗಳು ಒಳ್ಳೆಯ ಕಥೆಗಾರನ ಕಾಣ್ಕೆಗೆ ಸಾಧ್ಯವಾಗುವಂತಹವು. ಸ್ವಪ್ರತಿಭೆಯಲ್ಲಿ ಅದ್ದಿ ತೆಗೆದ ಕಥಾಕಂಚದ ಬೀಸಿನಿಂದ ಕಾವ್ಯಗಳು ಕಲಾಕೃತಿಗಳಾಗಿವೆ.

ಕಥೆ ರಂಜಕವಾಗಲು, ಯಶಸ್ವಿಯಾಗಲು, ಹೃದ್ಯವಾಗಲು ಅಗತ್ಯವಾದ (ಕಾವ್ಯಪಾಕ) ಪರಿಕರಗಳೇನೆಂಬುದು ಕಥೆಗಾರ ಷಡಕ್ಷರಿಗೆ ಕರತಲಾಮಲಕ. ಆತ ಕಥಾತ್ಮಕ ನಿರೂಪಣೆಗೆ ಒಲಿದುದರಿಂದ ಶೈಲಿ ವರ್ಣನಾತ್ಮಕವಾಗಿದೆ. ಇದರಿಂದ ಕಾವ್ಯ ಒಂದು ಸಲಿಲವಾಗಿ, ಕಥಾವಾಹಿನಿಯಾಗಿ ಪ್ರವಹಿಸುತ್ತದೆ. ವೃತ್ತ ಕಂದಗಳ ಮಿತಿಯಲ್ಲೇ ಆತ ತನ್ನ ಸಮಕಾಲೀನ ಛಂದಸ್ಸಾದ ಷಟ್ಪದಿ ಸಾಂಗತ್ಯಗಳ ಗತಿಯನ್ನು ತರುತ್ತಾನೆ. ಆಗ ಕಾವ್ಯಲಯ ಲಲಿತವಾಗಿ ಕದಳೀಪಾಕವಾಗುತ್ತದೆ.

ಕಥೆ ಗೆಲ್ಲಲು, ಮತ್ತು ಜನಮನವನ್ನು ಮುಟ್ಟಲು ಬೇಕಾದ ಸಾಮಗ್ರಿಯನ್ನು ಕವಿ ಆಶ್ರಯಿಸುತ್ತಾನೆ. ಭಗವಂತ ಭಕ್ತಿ ಸಂಧಾನಕ್ಕೆ ಸುಲಭ ಸಾಧ್ಯನೆಂಬ ಸತ್ಯಾಂಶದ ಸ್ಪಷ್ಟತೆಗಾಗಿ ಹುಟ್ಟಿಕೊಂಡ ಪದ್ಯವಿದು :

ಪೊಱಪೆಯ್ಯವೇಷದಿರವೇ
ತೆಱನಾದೊಡಮೇನೋ ಮಾನಸಾಬ್ಜಾಂತರದೊಳ್ ।
ಕಱಿ ಗೊರಲನಂಘ್ರಿದಳಿದ
ಬ್ಬಱಿಯೊಳಾಂ ಜಾನಿಸಿ ಮಹೇಶನಂ ಮೆಚ್ಚಿಸುವೆಂ ॥

ಶಬರಶಂಕರವಿಳಾಸದ ಈ ಪದ್ಯ ಮನುಷ್ಯನ ಆತ್ಮ ಪ್ರತ್ಯಯವನ್ನೂ ಮನೋದೃಢತೆ ಯನ್ನೂ ಕನ್ನಡಿಸುತ್ತದೆ. ಕಥೆಗಾರ ಇಂಥ ಕಡೆಗಳಲ್ಲಿ ತನ್ನ ಉದ್ದೇಶವನ್ನು ಸಹೃದಯ ರೊಡನೆ ಹೇಗೆ ಸಂವಹನಗೊಳಿಸಿದ್ದಾನೆಂಬುದನ್ನು ಪರಿಶೀಲಿಸಬಹುದು. ಸೋತ ಜೀವ ದಲ್ಲಿ ವಿಶ್ವಾಸದ ತರಂಗಗಳನ್ನು ಬಡಿದೆಬ್ಬಿಸುವ ಪ್ರಸಂಗವಿದು. ಕಾವ್ಯಧರ್ಮ—ಜಿನ ಧರ್ಮ ಮೇಳೈಸಿಕೊಂಡ ಜೈನ ಚಂಪೂಪುರಾಣಗಳಂತೆ ಇಲ್ಲಿ ಕಾವ್ಯಧರ್ಮದ ಕವಚ ತೊಟ್ಟ ಶಿವ ಧರ್ಮ ಇದೆ. ತಾನು ಸೆಣಸಿದ ಶಬರನೇ ಶಿವನೆಂಬ ಸತ್ಯಾಂಶ ಪ್ರಕಟ ವಾದಾಗ ಅರ್ಜುನನ ಚಿತ್ತಸ್ಥಿತಿಯನ್ನು ಸ್ಫುಟವಾಗಿ ಬಿಂಬಿಸುವ ಪದ್ಯ :

> ಪಡಿದೆಱೆದಂತೆ ಪಾಱಿತೆರ್ದೆ ಪವ್ವನೆ ಜುಮ್ಮನೆ ಮೆಯ್ನವಿರ್ ಪೊದ
> ಳ್ದುಡಿವಿಱಿದತ್ತು ಘರ್ಮಜಲಮುಣ್ಮಿದುದಂಗದೊಳಾಗ್ರಹ ಗ್ರಹಂ ।
> ಕಡೆದೊಲಗಿತ್ತು ಕೌತುಕರಸಂ ಬಗೆಗುರ್ವಿದುದುತ್ಸವಂ ಮಡ
> ಲ್ತಡರ್ದುದು ಭೀತಿ ಬೇರ್ವರಿದುದೇೞ್ಗೆಯನಾಳ್ದುದು ರಾಗ ಸಂಪದಂ ॥

ಭಾವಕ್ಕೆ ಅನುಗುಣವಾಗಿ ಕುಣಿಯುವ, ತಾಳ ಹಾಕುವ ಭಾಷೆಯ ಛಾಯೆ ಇಲ್ಲಿದೆ. ಶಬರಶಂಕರವಿಳಾಸದಲ್ಲಿ ಪಾತ್ರಗಳು ಕಡಿಮೆ. ಕಾರಣ ಅದು ಪಾತ್ರ ಪ್ರಧಾನ ಕಾವ್ಯ ಅಲ್ಲ. ಅದು ಘಟನಾ ಪ್ರಧಾನ ಕಾವ್ಯ. ಆದ್ದರಿಂದ ಕಥೆಯ ಕ್ರಿಯೆಯೆಲ್ಲ ಇರುವುದು ಶಬರಾರ್ಜುನರ ಕಲಹದಲ್ಲಿ ಅಲ್ಲಿ ಮಿಂಚಿನ ಕ್ರಿಯೆ ನಿರೀಕ್ಷಿತ ಪ್ರಮಾಣದಲ್ಲಿ ಇಲ್ಲ: ನಾಟಕೀಯ ಪ್ರತಿಭೆ ತಕ್ಕಮಟ್ಟಿಗಿದೆ. ಕಥಾಂಶಕ್ಕೆ ಮಾತ್ರ ಕೊರತೆಯಿಲ್ಲ.

ವೀರ, ಕರುಣ, ಶೃಂಗಾರ ಇವು ಮೂರು ಬಹುಬೇಗ ಜನಸಾಮಾನ್ಯರ ಹೃದಯ ಮಿಡಿಯುವ ರಸಗಳು. ಈ ಕವಿ ಈ ಮೂರರೂ ರಸಗಳನ್ನು ಸರಿಯಾಗಿ ಉಪಯೋಗಿಸಿ ಕೊಂಡು ಕಥೆ ಹೆಣೆಯುತ್ತಾನೆ. ನೇಮಿಚಂದ್ರನೊಡನೆ ಹುರುಡಿಸುವ ಭರದಲ್ಲೆ ಶೃಂಗಾರದ ಕಟ್ಟಲೆಯೂ ಆಗಿಬಿಡುತ್ತದೆ. ಶಬರಶಂಕರ ವಿಲಾಸದಲ್ಲಂತೂ ಶೃಂಗಾರದ ದಾಸನಾಗಿ ಮುಗ್ಗರಿಸಿ ಆಭಾಸ ಮಾಡುತ್ತಾನೆ. ಅರ್ಜುನನ ತಪಃಪ್ರಭಾವದಿಂದ ನಿಸ್ತೇಜರಾದ ಯತಿತಂಡ ಶಿವನಲ್ಲಿ ಮೊರೆಯಿಡುತ್ತಾ, ಇಂದ್ರಕೀಲ ನಗರದ ಬಣ್ಣನೆಯಲ್ಲಿ ಖಚರ ದಂಪತಿಗಳ ಪ್ರಣಯ ವಿಲಾಸ ನಿರೂಪಣೆಯಲ್ಲಿ ಆಸಕ್ತರಾಗುತ್ತಾರೆ. ಸ್ಮರಶಸ್ತ್ರ ಸದನ ಸದೃಶಕಾಸಾರ, ಕಾಮುಕನಂತಿರೆ ಸುಳಿವ ಮಂದಮಾರುತ, ಮಲಯಜವಿಲಿಪ್ತ ಕುಚ ಕುಂಭದಂತೆ ಆನೆಯ ಕುಂಭಸ್ಥಳ—ಇನ್ನೂ ಮುಂತಾಗಿ ಋಷಿವಾಣಿ ಮೊಳಗುತ್ತದೆ. ಋಷಿ ನಡೆಗೆ ಈ ರಸಿಕನುಡಿ ಸಂಗಮಿಸುವುದಿಲ್ಲ. ಒಳ್ಳೆಯ ಕಥೆಗಾರನೂ ಔಚಿತ್ಯ ತಪ್ಪಿದಾಗ, ಒಮ್ಮೊಮ್ಮೆ ಹೇಗೆ ಸೋಲುತ್ತಾನೆಂಬುದಕ್ಕೆ ಇದು ಲೇಸಾದ ದೃಷ್ಟಾಂತ. ಶಬರಶಂಕರ ವಿಲಾಸದಲ್ಲಿ ಶೃಂಗಾರದಲ್ಲಿ ಸೋತರೂ ರಾಜಶೇಖರ ವಿಲಾಸದಲ್ಲಿ ಸಾವರಿಸಿ ಕೊಳ್ಳುತ್ತಾನೆ. ವಾಸ್ತವವಾಗಿ ಶಬರವೇಷಿಯಾದ, ಶಿವನ ಮಹಾತ್ಮೆಯ ಕಿರುಕಾವ್ಯ ದಲ್ಲೂ ಶೃಂಗಾರವನ್ನು ತರುವ ಚಪಲದಿಂದ ಸೋತಿದ್ದಾನೆ. ರಾಜಶೇಖರವಿಳಾಸದಲ್ಲಿ ಶೃಂಗಾರಕ್ಕೆ ಮೊದಲೆ ಅವಕಾಶ ಮಾಡಿಕೊಂಡಿದ್ದಾನೆ. ಸತ್ಯೇಂದ್ರಚೋಳನರ್ಧಾಂಗಿ

ಅಮೃತಮತಿಯ ಚೆಲುವನ್ನು ಕಂಡರಿಸುವಾಗ ಅವನ ಕಣ್ಣು ಅದರಾಚೆಗಿನ ಆರು ಆಶ್ವಾಸಗಳವರೆಗೆ ಚಾಚಿಕೊಂಡಿದೆ.

ಪಂಪ, ಅರ್ಜುನನನ್ನು ದ್ವಾರಕೆಯಲ್ಲಿ ಕೃಷ್ಣ ಸ್ವಾಗತಿಸಿದಾಗ ಊರ ಚೆಲುವೆಲ್ಲ ಮೈಗಣ್ಣಾಗಿ ಕಂಡ ಪರಿಯನ್ನು ವರ್ಣಿಸಿರುವ ಸೊಗಸಾದ (ಚತುರ್ಥಾಶ್ವಾಸದ) ಭಾಗದಿಂದ ಸಹಜವಾಗಿ ಸ್ಫೂರ್ತಿಗೊಂಡು ಷಡಕ್ಷರದೇವ, ರಾಜಶೇಖರನನ್ನು ಸಿಂಹಳೇಂದ್ರ ರಾಜವೀಧಿಯೊಳೋಜೆಮಿಗೆ ನಡೆದಿದಿರ್ಗೊಂಡುದನ್ನು ವರ್ಣಿಸಿದ್ದಾನೆ. ಆದರೆ ನೆಲೆವಾಡಂಗಳ ನೆಲೆನೆಲೆಯೊಳಗೆ ನೆರೆನೆರೆದು ನಿಂತ ನೀರೆಯರು ರಾಜಶೇಖರನನ್ನು ನೋಡುವ ಹಾಗೂ ಸರ್ವಮಂಗಳೆಯನ್ನು ವರ್ಣಿಸುವ ಪ್ರಸಂಗದಲ್ಲೂ ಪಂಪನನ್ನೇ ಆಶ್ರಯಿಸಿ ಅನುಸರಿಸದೆ, ನೇಮಿಚಂದ್ರನ ಮಾದರಿಯನ್ನು ಅವಲಂಬಿಸುತ್ತಾನೆ. ಕವಿಸಮಯಗಳಿಗೆ ಜೋತುಬೀಳುತ್ತಾನೆ. ಕಾವ್ಯದ ದೃಷ್ಟಿಯಿಂದ ಇಂಥ ಹತ್ತು ಕುಂದುಗಳನ್ನು ಪೋಣಿಸಬಹುದು. ಕಥೆಯ ದೃಷ್ಟಿಯಿಂದ ಕುಂದೆ? ಎಂದು ಪ್ರಶ್ನಿಸಿದಾಗ ಉತ್ತರ ನಿಷೇಧಾರ್ಥಕವಾಗಿರದು. ಕಥೆಯನ್ನು ರಂಜಕವನ್ನಾಗಿಸಲು ನೂರು ದಾರಿಗಳಿವೆ. ಹೇಳುವ ವಿಷಯವನ್ನು ನೂರ್ಮಡಿಸಿ ಉತ್ಪ್ರೇಕ್ಷಿಸಿ ಹೇಳಿದರೆ ಕೇಳುಗರಲ್ಲಿ ನಿರೀಕ್ಷಿತ ಪರಿಣಾಮ ಸ್ಥಾಪಿತವಾಗುತ್ತದೆಂಬುದೇ ಒಟ್ಟು ಆಶಯ.

ಇದು ಕುಸುಮಾಸ್ತ್ರನಸ್ತ್ರಮಿದು ದರ್ಪಕನಾರ್ಪು ಮನೋಜನೋಜೆ ನೋ
ಡಿದು ನನೆವಿಲ್ಲ ಬಲ್ಲಹನ ಚೆಲ್ವಿದು ಕಾವನ ಜೀವರತ್ನಮಿಂ
ತಿದು ರತಿಕಾಂತನಾಂತ ಪೊಸಕೂರಸಿ ತಾನಿದು ಮಾರವೀರನ
ಗ್ಗದ ಸದಳುಕೃತಿಧ್ವಜಮಿದೆಂದೆನಿಸಿರ್ದುದು ರೂಪು ನೀರೆಯಾ ॥

ಎಂಬ ಒಂದು ಪದ್ಯ ಸಾಕೆಂದೆನಿಸಬಹುದು ಹಿತಮಿತ ಪ್ರಿಯ ಪಂಡಿತ ಮಂಡಳಿಗೆ. ಸರ್ವಮಂಗಳೆಯ ಸೌಂದರ್ಯವನ್ನು ಕಾವ್ಯಶಿಲ್ಪದಲ್ಲಿ ಕಡೆಯ ಹೊರಟ ಕಥೆಗಾರನಿಗೆ ಇದಿಷ್ಟೇ ಸಾಲದು. ಉತ್ಪ್ರೇಕ್ಷಾಲಂಕಾರಗಳ ಮೊರೆ ಹೊಕ್ಕಾಗಲೇ ಅವನಿಗೆ ತೃಪ್ತಿ. ಅದಕ್ಕಾಗಿ ಆತ ಹನ್ನೆರಡು ಪದ್ಯಗಳಲ್ಲಿ ಚೆಲುವಿನ ಪರಿಗಳನ್ನು ವಿವಿಧ ಕೋನದಿಂದ ನಿರೂಪಿಸುತ್ತಾನೆ. ಎರಡು ಉದಾಹರಣೆ:

ಅಂದುಗೆಯ ಕಳನಿನಾದದೊ
ಳೊಂದಿದ ಸುಂದರಿಯ ಮಂದಗತಿಯತಿಶಯಮಂ।
ಕುಂದದೆ ಮಾಡೆಂದಜನಂ
ಬಂದೀಗಳ್ ಪೊತ್ತು ಸೇವಿಪುದು ಕಳಹಂಸಂ ॥
ತರಳೆಯ ತ್ರಿವಳಿಯ ಪೋಲ್ವೆಯ
ತರಂಗಮಂ ಪಡೆವೆನೆಂದು ಸುರನದಿ ಪುಲವುಂ।
ತೆರೆಗಳನೆ ಪದೆದು ಪಡೆಯದೆ
ಸರಿದೆರೆಯಂ ಮಾಂಜಿ ಮಗುಳ್ದು ಪಡೆದಪುದಿನ್ನುಂ ॥

ಈ ಮೊದಲಾದ ಹನ್ನೆರಡೂ ಪದ್ಯಗಳು ವಾಙ್ಮಯ ವಿಹಾರಿಗಳಿಗೆ ಹೊಸವಲ್ಲ. ಆದರೆ ಸಾಮಾನ್ಯ ಓದುಗರನ್ನು ಗಮನಿಸಿದಾಗ ಅವರನ್ನೆಲ್ಲ ಒಂದೇ ತಕ್ಕಡಿಯಲ್ಲಿ ತೂಗುವಂತಿಲ್ಲ. ಅವರಿಗಾಗಿ ಕಥೆಗಾರ ಮತ್ತೆ ಮತ್ತೆ ವಿಸ್ತರಿಸಿ ಹೇಳಬೇಕಾಗುತ್ತದೆ. ಷಡಕ್ಷರ ದೇವ ಅಂಥವರನ್ನು ಗುರುತಿಸಿ ಇವನ್ನು ಬರೆದಿರಬಹುದು. ಎರಡನೆಯದಾಗಿ ಚಂಪೂ ಕಾವ್ಯಗಳು ತಮ್ಮ ಪ್ರಚಾರವನ್ನು ಕುಗ್ಗಿಸಿಕೊಂಡಿದ್ದುವು. ಅವುಗಳನ್ನು ಪುನರ್ ನವೀಕರಣಗೊಳಿಸುವ ಕಾರ್ಯಕ್ಕೆ ತೊಡಗಿದ ಕವಿ ಈ ಮಾಮೂಲಿನ ವರ್ಣನೆಗಳನ್ನೂ ಕೊಟ್ಟಿದ್ದಾನೆ. ವೀರರಸವನ್ನು ಶಬರಶಂಕರ ವಿಲಾಸದಲ್ಲೂ, ತಕ್ಕಮಟ್ಟಿಗೆ ರಾಜಶೇಖರ ವಿಳಾಸದಲ್ಲೂ ಅಲ್ಲಲ್ಲೆ ವೃಷಭೇಂದ್ರ ವಿಜಯದಲ್ಲೂ ತಂದಿದ್ದಾನೆ. ಕರುಣರಸವನ್ನೂ ಸಾಕಷ್ಟು ಬಳಸಿಕೊಂಡಿದ್ದಾನೆ. ತಿರುಕೊಳವಿನಾಚಿಯ ಪ್ರಲಾಪ ರಾಜಶೇಖರವಿಳಾಸದ ಹೃದಯ. ಈ ಹೃದಯ ಸ್ಪರ್ಶಿಯಾದ ಕೇಂದ್ರದ ಸುತ್ತ ಕಾವ್ಯದ, ಕಥೆಯ ಕಮಾನು ಕಟ್ಟಿದ್ದಾನೆ. ಇಲ್ಲಿ ಕರುಣರಸ ಓದುಗರ ಕರುಳು ತಟ್ಟಿ ಹೃದಯ ಮುಟ್ಟಿ ರಸಸಿದ್ಧಿ ಪಡೆದಿದೆ. ಕುದುರೆ ತುಳಿತಕ್ಕೆ ಸಿಕ್ಕಿ ಕೂಸು ಶಂಕರ ಹರಣಹೋಗಿ ಹೊಸೆದ ಹೂವಾಗಿದ್ದಾನೆ. ಹಡೆದಬ್ಬೆ ಪಡೆದ ಕಂದನಿಗಾಗಿ ಹಲುಬುವ ಪ್ರಸಂಗ. ಕಂದನ್ನ ನೆನೆನೆನೆದು ತಾಯ್ಗರುಳು ಹಾಗೂ ಮನದಳಲು ಕಟ್ಟು ಹರಿದ ಪಂಜಾಗುತ್ತದೆ. ಇಂಥ ಹೃದಯ ವಿದ್ರಾವಕ ಪ್ರಸಂಗ ಕನ್ನಡ ಸಾಹಿತ್ಯದಲ್ಲಿ ಹೊಸದಲ್ಲ. ಹರಿಶ್ಚಂದ್ರ ಕಾವ್ಯದಲ್ಲಿ ಚಂದ್ರಮತಿಯ ಪ್ರಲಾಪ, ಮಹಾಭಾರತದಲ್ಲಿ ಅಭಿಮನ್ಯು ಸತ್ತಾಗಿನ ಪ್ರಲಾಪ ಇತ್ಯಾದಿ. ಆದರೆ ಈ ಕವಿಯ ಕಥನಶಕ್ತಿಯು ಪರಮಾವಧಿ ಇಲ್ಲಿ ಮಡುಗಟ್ಟಿದೆ. ಈ ಭಾಗವನ್ನು ಸಾಮಾನ್ಯವಾಗಿ ಎಲ್ಲ ವಿಮರ್ಶಕರೂ ಉದಾಹರಿಸುತ್ತಾರೆ, ಆದರಿಂದ ಇಲ್ಲಿ ಇದನ್ನು ವಿಸ್ತರಿಸುವುದಿಲ್ಲ.

ಮಲ್ಲಣಾರ್ಯನಲ್ಲಿ ಪಾತ್ರ—ಪ್ರಸಂಗಗಳು ಕಳಾಹೀನ ಎಲುಬಿನ ಹಂದರಗಳಾಗಿವೆ, ಷಡಕ್ಷರದೇವ ಅದಕ್ಕೆ ಕಥೆಯ ಜೀವ ತುಂಬಿದ್ದಾನೆ—ಎಂಬರ್ಥದ ಹೇಳಿಕೆಗೆ ಪುಷ್ಟಿ ಕೊಡಲು ಈ ಸನ್ನಿವೇಶ ಒದಗಿ ನಿಲ್ಲುತ್ತದೆ. ಷಡಕ್ಷರ ದೇವನಲ್ಲೇ ಅನ್ಯತ್ರ ವರ್ಣನೆಗಳು ಅತಿಯಾಗುತ್ತವೆ. ಆದರೆ ಇಲ್ಲಿ ಎಲ್ಲ ಸಾರ್ಥಕವಾಗಿ ಸಾವಯವ ಸಮಗ್ರೀಕರಣದ ಸಾಫಲ್ಯವಿದೆ. ಅಯ್ದು ವರ್ಷದ ಮಗುವಿನ ತಲೆ ತುರಂಗಗೊರಸಿಂದ ಕತ್ತರಿಸಿ ಬಿದ್ದಿದೆ. ನೆರೆದ ಪುರಜನ ರುಂಡ—ಮುಂಡಗಳನ್ನು ಕಂಡು ಅಕಟಕಟಾ ಎಂದು ನೊಂದು ನೋಡುತ್ತಿದ್ದರೆಂಬಲ್ಲಿಂದ ಕಾವೇರಿದ ಕಾವ್ಯ ಕಾವೇರಿ ಕಾವ್ಯಾಂತದವರೆಗೆ ಉಸಿರಾಡಲವ ಕಾಶವಾಗದಂತೆ ಘಟನಾವಳಿಗಳಿಗೆಡೆಗೊಡುತ್ತದೆ. ಕಥೆಗಾರ ಷಡಕ್ಷರಿ ಇಲ್ಲಿ ದಿಗ್ವಿಜಯವನ್ನೇ ಪಡೆದಿದ್ದಾನೆ. ಪಂಪಾದಿ ಚಂಪೂ ಕವಿಗಳ ಸಾರ ಮೈಗೂಡಿಸಿಕೊಂಡ ಬೆಡಗು ಇಲ್ಲಿ ಬಯಲಾಗುತ್ತದೆ.

ಎಲೆ ಸುಕುಮಾರಶಂಕರ ಕುಮಾರಕ ಬಾರ ಮದೀಯ ಲೋಚನೋತ್ಪಳರ ಜನೀಶ......ಎಂದು ಆರಂಭವಾಗುವ ವೃತ್ತದಲ್ಲಿ ತಾಯಿ ಮಗನನ್ನು ಕೂಗುವ

ಕರೆಯೇ ಅನುರಣಿತವಾಗುತ್ತದೆ: ಸುಕುಮಾರ ಕುಮಾರಬಾರ—ಎಂಬುದಂತೂ ಪ್ರತಿಭೆಯ ಕುಡಿ.

ಕರಿಗಳ ಕಾಲ್ಗೊಳಗಾದನೊ
ವರೂಥ ಚಕ್ರಕ್ಕೆ ಸಿಲ್ಕಿದನೊ ಹಯ ಚಂಚತ್
ಖುರಹತಿಯಿಂದಳಿದನೊ ಶಂ
ಕರನಕಟಕಟೆಂದು ಬಗೆದು ಬಾಯ್ವಿಡುತಿರ್ದಳ್ ॥

ಕಣ್ಣರಿಯದೊಡಂ ಕರುಳರಿಯದೆ ಎಂಬ ಗಾದೆ ಮಾತಿಗೆ ಇದು ನಿದರ್ಶನ. ಬಾಹ್ಯ ಘಟನೆಗಳನ್ನು ಕಣ್ಣಾರೆ ನೋಡದಿದ್ದರೂ ಅಂತರಂಗ ಒಮ್ಮೊಮ್ಮೆ ಪರೋಕ್ಷ ಘಟನೆಗಳನ್ನು ಗುರುತಿಸಿಕೊಳ್ಳುತ್ತದೆ. ಕುದುರೆಯ ಗೊರಸಿನೇಟಿನಿಂದ ಅಳಿದನೊ ಎಂಬ ಇಲ್ಲಿನ ಮಾತು 'ಸಾಫೋಕ್ಲಿಸ್‌ಐರನಿ'ಯ ಮಾದರಿಯದು. ನಡೆದ ದುರಂತ ಈಗಾಗಲೇ ತಿಳಿದಿರುವ ಓದುಗರಿಗೆ ತಿರುಕೊಳವಿನಾಚಿಯ ಬಾಯಿಂದ ಬಂದ ಈ ಅನಿರೀಕ್ಷಿತ ನುಡಿ ವಿಲಕ್ಷಣ ಪ್ರಭಾವವನ್ನುಂಟುಮಾಡುತ್ತದೆ.

ತನುಭವನೆಲ್ಲಿದ ನೆಲ್ಲಿದ
ನಿನಿವಾತಿನ ನೀರನೆಲ್ಲಿದಂ ಮೆಲ್ಪಗೆಯಿಂ
ಪಿನ ಸೊಬಗನೆಲ್ಲಿದಂ ಚೆ
ಲ್ವಿನ ಕಣಿಯೆಲ್ಲಿದನೊ ಮನ್ಮನೋಂಬುಜಹಂಸಂ ॥

ಎಂಬಲ್ಲಿನ ಪರಿಣಾಮವೂ ಅಷ್ಟೆ: ಮಾತೃ ಹೃದಯದಲ್ಲಿ ಮನೆ ಮಾಡಿದ ಪುತ್ರವಾತ್ಸಲ್ಯ ಕೆನೆಗಟ್ಟಿದೆ. ಮಾಂಸದ ಮುದ್ದೆಯಾಗಿಬಿದ್ದ ಮುದ್ದು ಮಗುವನ್ನು ಕಂಡಾದಮೇಲೆ ಬರುವ—

ಎಳಗಿಳಿಯಂ ಕೊರಲ್ ಮುರಿದು ಪೋದಿದರಾರ್ ಮರಿಯಂಚೆಯಂ ಭಯಂ
ಗೊಳಿಸುತೆರಂಕೆಯಂ ಪರಿದು ಪೊಯ್ದವರಾರ್ ಮೃಗಶಾಬಮಂ ಕರಂ
ಮುಳಿದು ಶಿರೋಧಿಯಂ ಕಿಡೆಯಲೆಚ್ಚವರಾರ್ ಬಿಸನಾಳಕಾಂಡಕೋ
ಮಳತರ ಕಂಠಮಂ ಕಡಿದುರುಳ್ಚಿದರಾರ್ ಸುಕುಮಾರ ಶೇಖರಾ ॥

—ಇಲ್ಲಿನ ಉಪಮಾನ ಉಪಮೇಯಗಳ ಪುದುವಾಳ್ಕನ ಮೆಚ್ಚುಗೆ ಗಳಿಸುತ್ತದೆ. ಮುಂದಿನ ಭಾಗವೂ ಇದೇ ಮಟ್ಟದಲ್ಲಿ ಮುಂದುವರಿಯುತ್ತದೆ. ಕಥೆಯೇ ಭಾವಪರವಶಗೊಳಿಸುವಂತಹದು. ಅದರ ಜೊತೆಗೆ ಕಥೆಯನ್ನು ನಡೆಸಿಕೊಂಡು ಹೋಗುವ ಕೌಶಲ್ಯವೂ ಉನ್ನತವಾಗಿದೆ. ಪಂಪರನ್ನರ ಪದ್ಯಗಳನ್ನು ಸಮಯೋಚಿತವಾಗಿ ಇಲ್ಲಿ ಅನುವಾದಿಸಿಕೊಂಡು ಕಥೆಗೆ ವ್ಯಥೆಯ ಚಿತ್ರಗಳನ್ನು ಬಿಡಿಸುತ್ತಾನೆ. ಹಾ ಮಗನೆ ಹಾ ಮನೋಜ್ಞನೆ, ಎಲ್ಲಿಯ ಹಯಮೆಲ್ಲಿಯನೃಪ..., ಸರಿವರೆಯದ ಮಕ್ಕಳ್ ಶಂಕರನೆಲ್ಲಿದ ..., ದುಃಖಮನಾರಂಟೆನಗಕಟ..., —ಎಂಬ ಕಂದಗಳು ದುಃಖಾರ್ತರ ಕಂದಲ್ಗಳಂತೆ ಬೇರು ಬಿಡುತ್ತವೆ.ಮಗನ ಗುಣಾವಳಿಯನ್ನು ಪೋಣಿಸಿ ಕಟ್ಟಿದ—

ಮಗನೆ ನೀನಿಂತಳಿಯೆ ಸೈರಿಪೆನೆಂತೋ ಪೇಳೈಶಂಕರಾ
ಸುಗುಣನಿಧಿ ನೀನೆನ್ನ ಮೊರೆಗಳನೊರ್ಮೆ ಕೇಳೈಶಂಕರಾ

....

ಎಂತು ಮರೆವೆನೋ ಸವಿಯನಾಲಿಡುವಮುದ್ದು ನಗೆಯುಂ ಶಂಕರಾ
ಕಾಂತಿ ಶೋಭಿಸಿ ಮುದ್ದುವೀರುವ ಮೊಗದ ಬಗೆಯುಂ ಶಂಕರಾ
ಝುಣಝುಣೆಸಿ ಕಿರುಗೆಜ್ಜೆ ಕರತಳ ತಾಳರವಕೆ ಶಂಕರಾ
ಕುಣಿವ ನಿನ್ನಯ ಬಿನದವೊಪ್ಪುಗುಮೆನ್ನಮನಕೆ ಶಂಕರಾ

—ಮುಂತಾಗಿ ಸಾಗುವ ರಗಳೆ ಶೋಕರಗಳೆಯಾಗಿ ಆಳಲನ್ನು ಜಿನುಗಿಸುತ್ತಾ ಸಾಗುತ್ತದೆ. ಓದುಗರ ಮೇಲೆ ಇದು ಎಂಥ ಪರಿಣಾಮ ಬೀರುತ್ತದೆಂಬುದನ್ನು ಮತ್ತೆ ಒತ್ತಿ ಹೇಳುವ ಅಗತ್ಯವಿಲ್ಲ.

ವೃಷಭೇಂದ್ರ ವಿಜಯವೂ ಷಡಕ್ಷರಿ ಉತ್ತಮ ಕತೆಗಾರನೆಂದು ಸಾರುತ್ತದೆ. ವೃಷಭೇಂದ್ರವಿಜಯ ಮಂಗಳ ಜೀವನವನ್ನು ಆಳಿದವರ, ಬಾಳಿದವರ ಅಂಗಳ. ಅದು ಜೈನಪುರಾಣಗಳಲ್ಲಿ ಬರುವ ಹಲವು ಕಥೆಗಳ ಗೊಂಚಲಿನಂತೆ. ಜೈನಪುರಾಣಗಳಂತೆ ಇದೂ ಒಂದು ವೀರಶೈವಪುರಾಣವೇ. ಆದರೂ ಇಲ್ಲಿ ಜೈನಪುರಾಣಗಳ ಭವಾವಳಿಗಳ ಜೈನಾಪೆಟ್ಟಿಗೆ ಇಲ್ಲ. ಅಲ್ಲಿ ಕೆಲವು ಭವಾವಳಿಗಳಲ್ಲಾದರೂ ತೋರುವ ಸಿಕ್ಕುಗೋಜುಗಳು ಇಲ್ಲ. ಅನೇಕ ಶಿವಶರಣರ ಕಥೆಗಳು ತನಿತನಿಯಾಗಿ ಬರುತ್ತದೆ. ಈ ಎಲ್ಲ ಕಥಾ ಪುಷ್ಪಗಳೂ ಕೇವಲ ಶಿವಾರ್ಪಣೆಗೆಂದು ಕೋದಮಾಲೆ, ಶಿವಮಾಲೆ ; ಈ ಮಾಲೆಯ ಬಡಿಸೊಗಸು ಕಥಾಗಾರಿಕೆಯಲ್ಲಿ ಕಂಡುಬರುತ್ತದೆ.

ಹತ್ತಿರ ಹತ್ತಿರ ಎಂಬತ್ತು ಜನ ಶಿವಶರಣರ ಕಥೆಗಳು ಇಲ್ಲಿವೆ. ಭಕ್ತಿಯ ನವ ದೃಷ್ಟಿಯಿಂದ ಅವರೆಲ್ಲ ಶಿವಭಕ್ತಿ ನಾಣ್ಯದ ಮುಖಗಳು. ವ್ಯಕ್ತಿ ಸ್ವಭಾವದ ವ್ಯಷ್ಟಿದೃಷ್ಟಿಯಿಂದ ಅವರು ಬೇರೆ ಬೇರೆ. ಇದರಿಂದ ಕಥೆಗೆ ವಿಸ್ತಾರ ವೈವಿಧ್ಯ ಉಂಟಾಗಿದೆ. ಬೇಡರಕಣ್ಣಪ್ಪ, ಕೋಳೂರು ಕೊಡಗೂಸಿನಂಥ ಮುಗ್ಧರ ಕಥೆಗಳಿವೆ ; ಓಹಿಲಾರ್ಯ, ಸುರಗಿ ಚೌಡಯ್ಯ, ದೀಪದ ಕಲಿಯಾರರಂಥ ಉಗ್ರ ನಿಷ್ಕಾಮಂತ ಶರಣರ ಕಥೆಗಳಿವೆ : ಎಲೇಶ್ವರ ಕೇತಯ್ಯ ; ಮಲ್ಲಶೆಟ್ಟಿ ಮುಂತಾದ ಲಿಂಗನಿಷ್ಠರ ಕಥೆಗಳಿವೆ ; ಸಿದ್ಧರಾಮ, ಮೋಳಿಗೆ ಮಾರಯ್ಯ, ಮೇದಾರ ಕೇತಯ್ಯಾದಿಕಾಯಕ ಯೋಗಿಗಳ ಕಥೆಗಳಿವೆ.

ಇಲ್ಲಿನ ಸಣ್ಣಪುಟ್ಟ ಕಥೆಗಳನ್ನು ಲೆಕ್ಕಿಸಿದಾಗ ಬ್ರಹ್ಮಾಂಡದ ವಿಹಂಗಮ ನೋಟವೇ ಆಗುತ್ತದೆ : ವೀರ ಮಹೇಶ್ವರರು, ಕ್ರಾಂತಿಪುರುಷರು, ಭೂಲೋಕವನ್ನು ಕೈಲಾಸ ಕ್ಕೊಯ್ದು ಭೂಕೈಲಾಸವೆಸಗಿದವರು, ಕಾಮ (ಸ್ಮರ) ತತ್ವದ ಮೂಲಕ (ಶಿವ) ಪರತತ್ವದ ತುದಿಮುಟ್ಟಿದವರು, ಅರ್ಪಿತರು, ಸಂಗವರ್ಜಿತರು ಹೀಗೆ ನಾನಾ ಶೀಲ ಸ್ವಭಾವದೆರಕದ

ಪಾತ್ರಗಳು ಕವಿಯ ಕಥೆಯಲ್ಲಿ ಮೆರವಣಿಗೆ ಬರುತ್ತಾರೆ. ಇವರಲ್ಲಿ ಹಲವರು ಸಜೀವ ಪುತ್ಥಳಿಗಳು. ಮಹತ್ತರವಾದ ಆದರ್ಶವನ್ನು ಬಾಳಿಗೆ ಅಳವಡಿಸಿಕೊಂಡ, ವ್ಯಕ್ತಿಜೀವನದ ಉದಾತ್ತತೆಯ ತರತಮ ಭಾವಲಹರಿ ಇಲ್ಲಿದೆ. ಶಿವಭಕ್ತರ ಜೀವನ ಪರಿಶುದ್ಧಿ ಕಥಾರೂಪವಾಗಿ ಇಲ್ಲಿ ಪ್ರಕಾಶವಾಗಿದೆ.

ಷಡಕ್ಷರಿಯ ಕಥನ ಕೌಶಲವನ್ನು ಪರಿಶೀಲಿಸುವಾಗ ಅವನ ದೋಷ ದೌರ್ಬಲ್ಯಗಳಿಗೆ ಕುರುಡಾಗುವ ಕಾರಣವಿಲ್ಲ. ಬಹುಶಃ ಈ ಕವಿಯು ಚಂಪೂ ಪ್ರಕಾರಕ್ಕೆ ತೆಕ್ಕೆ ಬೀಳದೆ ಷಟ್ಪದಿ ಸಾಂಗತ್ಯಗಳಿಗೆ ಮೊರೆಹೊಕ್ಕಿದ್ದರೆ ಕಾವ್ಯ ಹಾಗೂ ಕಥೆಗಾರಿಕೆಗೆ ಇನ್ನೂ ಹೆಚ್ಚಿನ ಹಾಸುಬೀಸು ಬರುವ ಸಾಧ್ಯತೆಯಿತ್ತು. ಚಂಪೂವಿನ ಬಿಗಿಯಾದ ಇಕ್ಕಟ್ಟಿನಲ್ಲಿ ಈತನ ಕಥೆಗಾರಿಕೆಗೆ ಸ್ವಾತಂತ್ರ್ಯಹರಣವಾಗಿರುವಂತೆ ಅನೇಕ ಕಡೆ ಕಂಡಿದೆ. ಪಾತ್ರಗಳು ಅಸ್ಪಷ್ಟವಾಗಿ, ವಿವರಣೆ ಅಸ್ಫುಟವಾಗಿ ಕಾವ್ಯ-ಕಲೆ ಸೋತಿರುವುದಕ್ಕೆ ಇದೂ ಒಂದು ಕಾರಣ. ಮತ್ತು ಕಥೆಯು ಗತಿಯಲ್ಲಿ ಚುರುಕು ಸಾಲದು. ಹಲವು ಸಲ ಔಚಿತ್ಯ ಹಿಂದೇಟು ಹಾಕುತ್ತದೆ. ಉತ್ಪ್ರೇಕ್ಷೆಗೆ ಲಂಗುಲಗಾಮು ಇರುವುದಿಲ್ಲ. ನಾಲಿಗೆ ಉದ್ದ, ಬಾಯಿ ಜೋರು, ಸಂಗ್ರಹ ಗುಣದಲ್ಲಿ ಶೈಥಿಲ್ಯವಿದೆ—ಹೀಗೆ ಈ ಪಟ್ಟಿ ಲಂಬವಾಗುವುದಕ್ಕವಕಾಶವಿದೆ.

ಹಾಗೆಂದು ಷಡಕ್ಷರದೇವನ ಕಥನ ಕೌಶಲವನ್ನು ಕಡೆಗಣಿಸುವಂತಿಲ್ಲ. ಅದು ಅಖಂಡವಾದ ಪರಿಭಾವನೆಗೆ ಮ್ಲಾನವಾಗಿ ಕಂಡರೂ, ಬಿಡಿಬಿಡಿಯಾದ ಪರಿಶೀಲನೆಗೆ ಕೆಲವು ಕಡೆ ಅತ್ಯುನ್ನತ ಮಟ್ಟದಲ್ಲಿ ಮೈದೋರಿರುವುದನ್ನು ಮನಗಾಣಬಹುದು.

ಕನ್ನಡ ಸಾಹಿತ್ಯ ಪರಿಷತ್ತು ಹಮ್ಮಿಕೊಂಡಿರುವ ಹಳಗನ್ನಡ ಕಾವ್ಯಗಳ ಹೊಸಗನ್ನಡ ಮಾಲೆಯಲ್ಲಿ ಈ ಪುಸ್ತಕವನ್ನು ಪ್ರಕಟಿಸಲಾಗುತ್ತಿದೆ. ಇದನ್ನು ಆಸಕ್ತಿಯಿಂದ ಸಕಾಲದಲ್ಲಿ ಸಿದ್ಧಪಡಿಸಿಕೊಟ್ಟ ಶ್ರೀ ಚನ್ನಪ್ಪ ಎರೇಸೀಮೆ ಅವರಿಗೆ ಕೃತಜ್ಞತೆಗಳನ್ನು ತಿಳಿಸುತ್ತಿದ್ದೇನೆ.

ಹಂಪ. ನಾಗರಾಜಯ್ಯ
ಪ್ರಧಾನ ಸಂಪಾದಕ

ಅನುವಾದದ ಯೋಜನೆ

ಕನ್ನಡದ ಪ್ರಾಚೀನ ಕಾವ್ಯಸಂಪತ್ತು ಅಮೂಲ್ಯವಾಗಿದೆ. ಈ ಸಂಪತ್ತನ್ನು ಈಗಿನ ಕನ್ನಡ ಜನತೆ ಓದಿ ತಿಳಿದುಕೊಳ್ಳುವುದು ಅತ್ಯಾವಶ್ಯಕವಾಗಿದೆ. ಆದರೆ ಈ ಕಾವ್ಯಗಳು ಜನಸಾಮಾನ್ಯರಿಗೆ ಕಠಿಣವಾಗಿ ತೋರುವುದರಿಂದ ಅವುಗಳ ವ್ಯಾಸಂಗದಲ್ಲಿ ಉತ್ಸಾಹಪೂರ್ಣವಾದ ಪ್ರವೃತ್ತಿ ಕಂಡುಬರುತ್ತಿಲ್ಲ. ಅನೇಕ ಸಂದರ್ಭಗಳಲ್ಲಿ ಮೂಲ ಗ್ರಂಥಗಳೂ ದೊರೆಯುವುದಿಲ್ಲ. ಎಷ್ಟೋ ವೇಳೆ ವಿಶ್ವವಿದ್ಯಾನಿಲಯದವರು ಪ್ರಾಚೀನ ಕಾವ್ಯಗಳನ್ನು ಕನ್ನಡ ಬಿ.ಎ. ಎಂ.ಎ. ಪದವಿ ಪರೀಕ್ಷೆಗಳಿಗೆ ಪಠ್ಯಪುಸ್ತಕಗಳಾಗಿ ಇಟ್ಟಾಗ ಲಂತೂ ಮೂಲ ಗ್ರಂಥಗಳ ಅಭಾವ ವಿಶೇಷವಾಗಿ ಕಂಡುಬರುತ್ತದೆ.

ಆದ್ದರಿಂದ ಈ ಕೊರತೆಯನ್ನು ನಿವಾರಣೆ ಮಾಡಲು ಕನ್ನಡ ಸಾಹಿತ್ಯ ಪರಿಷತ್ತು ತನ್ನ ಪಂಚವಾರ್ಷಿಕ ಯೋಜನೆಯಲ್ಲಿ ಹಳಗನ್ನಡ ಕಾವ್ಯಗಳ ಪುನರ್ಮುದ್ರಣಕ್ಕೆ ವಿಶೇಷ ಗಮನ ಹರಿಸಿ ಅದಕ್ಕಾಗಿ ಪ್ರತ್ಯೇಕ ಯೋಜನೆಯನ್ನು ಹಾಕಿಕೊಂಡಿತು. ಆರಿಸಿದ ಹಳಗನ್ನಡ ಹಾಗೂ ನಡುಗನ್ನಡ ಕಾವ್ಯಗಳನ್ನು ಹೊಸಗನ್ನಡ ಗದ್ಯದಲ್ಲಿ ಅನುವಾದಿಸಿ ಆ ಅನುವಾದದೊಡನೆ ಮೂಲಪಾಠವನ್ನು ಪ್ರಕಟಿಸಿ ಪುಸ್ತಕ ರೂಪದಲ್ಲಿ ಹೊರ ತರುವುದು ಮತ್ತು ಸರ್ಕಾರದ ಸಹಾಯಪಡೆದು ಆ ಪುಸ್ತಕಗಳು ಸಾಧ್ಯವಾದ ಮಟ್ಟಿಗೆ ಸುಲಭ ಬೆಲೆಯಲ್ಲಿ ದೊರೆಯುವಂತೆ ಮಾಡುವುದು. ಇವು ಆ ಯೋಜನೆಯ ಮುಖ್ಯ ಅಂಶಗಳು. ಅಲ್ಲದೆ,

1. ಭಾರತೀಯ ಜ್ಞಾನಪೀಠದವರು, ವಿಶ್ವವಿದ್ಯಾನಿಲಯದವರು, ಖಾಸಗಿ ಪ್ರಕಾಶಕರು ಪರಿಷತ್ತಿನ ಉದ್ದೇಶದಿಂದ ಈಗಾಗಲೇ ಕನ್ನಡ ಕಾವ್ಯಗಳನ್ನು ಅನುವಾದ ಮಾಡಲು ಕಾರ್ಯ ಕೈಗೊಂಡಿದ್ದರೆ ಅಂಥ ಕಾವ್ಯಗಳನ್ನು ಪರಿಷತ್ತು ಅನುವಾದಕ್ಕೆ ತೆಗೆದುಕೊಳ್ಳಬೇಕಾಗಿಲ್ಲ.

2. ಆಗತ್ಯಕಂಡರೆ ಮೂಲವನ್ನು ಪರಿಷ್ಕರಿಸಿ ಅನುವಾದವನ್ನು ಕೈಗೊಳ್ಳ ತಕ್ಕದ್ದು.

3. ಈ ಕೆಳಗೆ ಕಾಣಿಸಿದ ಹಳಗನ್ನಡ ಮತ್ತು ನಡುಗನ್ನಡ ಕಾವ್ಯಗಳನ್ನು ಸದ್ಯದಲ್ಲಿ ಅನುವಾದಕ್ಕೆ ಆರಿಸಿಕೊಳ್ಳತಕ್ಕದ್ದು.

ಹಳಗನ್ನಡ : ವಿಕ್ರಮಾರ್ಜುನ ವಿಜಯ, ಆದಿಪುರಾಣ, ಗದಾಯುದ್ಧ, ನೇಮಿನಾಥ ಪುರಾಣ (1. ಕರ್ಣಪಾರ್ಯ 2. ನೇಮಿಚಂದ್ರ), ಯಶೋಧರ ಚರಿತ್ರೆ, ಅನಂತನಾಥ ಪುರಾಣ, ಧರ್ಮಾಮೃತ, ಕಾದಂಬರಿ, ಪಂಚತಂತ್ರ, ನಳಚಂಪು, ವಡ್ಡಾರಾಧನೆ, ಗಿರಿಜಾ ಕಲ್ಯಾಣ, ಜಗನ್ನಾಥ ವಿಜಯ, ಕಬ್ಬಿಗರ ಕಾವ, ಶಬರಶಂಕರವಿಳಾಸ, ಹರಿಹರನ

ರಗಳೆಗಳು, ಕೆಳದಿನೃಪ ವಿಜಯ, ದಮಯಂತೀ ಸ್ವಯಂವರ, ಶಾಂತಿಪುರಾಣ, ಚಂದ್ರ ಪ್ರಭ ಪುರಾಣಂ, ಉದ್ಭಟಕಾವ್ಯಂ, ಕುಸುಮಾವಳಿ ಕಾವ್ಯ, ಅಭಿನವ ದಶಕುಮಾರ ಚರಿತೆ, ಮಲ್ಲಿನಾಥ ಪುರಾಣ, ರಾಜಶೇಖರ ವಿಳಾಸ, ಚಿಕ್ಕದೇವರಾಜ ವಂಶಾವಳಿ, ದಿವ್ಯ ಸೂರಿಚರಿತೆ.

ನಡುಗನ್ನಡ : ಸಿದ್ಧರಾಮ ಚರಿತ್ರ, ಬಸವಪುರಾಣ, ಪ್ರಭುಲಿಂಗಲೀಲೆ, ತೊರವೆ ರಾಮಾಯಣ, ರಾಮನಾಥ ಚರಿತೆ, ಭರತೇಶ ವೈಭವ, ಅನುಭವಾಮೃತ, ಗೀತ ಗೋಪಾಲ, ಹದಿಬದೆಯ ಧರ್ಮ, ನಳಚರಿತ್ರೆ, ಅದ್ಭುತ ರಾಮಾಯಣ, ಚೆನ್ನಬಸವ ಪುರಾಣ, ಭಾಗವತ, ಹರಿಕಥಾಮೃತಸಾರ, ಭಿಕ್ಷಾಟನ ಚರಿತ, ಮೋಹನ ತರಂಗಿಣಿ.

(ಅ) ಒಬ್ಬೊಬ್ಬ ಅನುವಾದಕನಿಗೆ ಒಂದೊಂದು ಕಾವ್ಯವನ್ನು ಪೂರ್ತಿಯಾಗಿ ಅನುವಾದಿಸುವ ಕಾರ್ಯವನ್ನು ವಹಿಸಿಕೊಡಬೇಕು. ವಿಶೇಷ ಸಂದರ್ಭದಲ್ಲಿ ಒಂದು ಪುಸ್ತಕವನ್ನು ಇಬ್ಬರು, ಮೂವರು ಅನುವಾದಕರಿಗೆ ವಹಿಸಿಕೊಡಬಹುದು.

(ಆ) ಅನುವಾದದಲ್ಲಿ ಏಕರೂಪತೆ ಇರಬೇಕು, ಮಧ್ಯದಲ್ಲಿ ವಿಚ್ಛಿನ್ನತೆ ಕಾಣ ಬಾರದು. ಕಥೆಯಂತೆ ಓದಿಸಿಕೊಂಡು ಹೋಗಬೇಕು.

(ಇ) ಅನುವಾದವು ಆಧುನಿಕರಿಗೆ ಪ್ರಿಯವಾಗುವ ಹೊಸಗನ್ನಡ ಗದ್ಯದಲ್ಲಿ ಇರಬೇಕು.

(ಈ) ಭಾಷೆಯು ಸರಳವಾಗಿಯೂ ಶುದ್ಧವಾಗಿಯೂ ಇರಬೇಕು. ಅನುವಾದವು ಮೂಲದಿಂದ ದೂರ ಹೋಗಬಾರದು ಮತ್ತು ಮೂಲವನ್ನು ಬಿಡಲೂಬಾರದು.

(ಉ) ಇದು ಪ್ರಾಚೀನ ಕಾವ್ಯಗಳ ಅನುವಾದವಾದ್ದರಿಂದ ವಿಷಯದ ಗಂಭೀರತೆ ಪವಿತ್ರತೆಗಳಿಗೆ ಅನುಗುಣವಾಗಿ ಭಾಷೆಯು ಲಲಿತ ಗಂಭೀರವಾಗಿ ಇರಬೇಕು.

(ಊ) ಪ್ರತಿಯೊಬ್ಬ ಅನುವಾದಕನೂ ತಾನು ಅನುವಾದಿಸಿದ ಗ್ರಂಥಕ್ಕೆ ಒಂದು ಉಪೋದ್ಘಾತ, ಶಬ್ದಾರ್ಥಕೋಶ ಅನುಬಂಧಗಳನ್ನು ತಯಾರಿಸಿ ಕೊಡಬೇಕು. ಉಪೋದ್ಘಾತದಲ್ಲಿ ಪ್ರಸ್ತುತ ಕವಿಯ ದೇಶ ಕಾಲಾದಿ ಪರಿಚಯ, ಪ್ರಸ್ತುತ ಕಾವ್ಯದ ವಿಮರ್ಶೆ ಮುಂತಾದುವು ಸಂಕ್ಷೇಪವಾಗಿ ಇರಬೇಕು. ಕಾವ್ಯದಲ್ಲಿ ಬಂದಿರುವ ನ್ಯಾಯಗಳು, ಗಾದೆಗಳು, ಪೂರ್ವಕತೆಗಳು ಮುಂತಾದುವುಗಳ ವಿವರಣೆ ಅನುಬಂಧದಲ್ಲಿ ಇರಬೇಕು. ವಿವರಣೆ ಸಂಕ್ಷಿಪ್ತವಾಗಿದ್ದರೆ ಆಯಾ ಪುಟದ ಅಡಿಟಿಪ್ಪಣಿಯಲ್ಲಿ ಬರಬಹುದು.

(ಋ) ಅನುವಾದಕನು ಮೂಲ ಪರಿಷ್ಕೃತ ಪಾಠವನ್ನೂ ಅದರ ಕೆಳಗಡೆ ಅನುವಾದವನ್ನೂ ಕೊಡಬೇಕು.

(ಊ) ಉಪೋದ್ಘಾತದಲ್ಲಿ ಅನುವಾದಕನು ತನ್ನ ಸ್ವಂತ ವಿಷಯವೇನನ್ನೂ ಪ್ರಸ್ತಾಪಿಸಕೂಡದು.

(ಎ) ಯಾವೊಬ್ಬ ಅನುವಾದಕನ ಅನುವಾದಕಾರ್ಯ ಮಂಡಳಿಗೆ ತೃಪ್ತಿಕರವಾಗಿ ಕಂಡುಬಾರದಿದ್ದಲ್ಲಿ ಅಥವಾ ಅನುವಾದಕನು ತಾನಾಗಿ ಒಪ್ಪಿಸಿದ ಕಾರ್ಯ ಮಾಡಲು ತನ್ನಿಂದ ಸಾಧ್ಯವಿಲ್ಲವೆಂದು ತಿಳಿಸಿದ ಸಂದರ್ಭದಲ್ಲಿ ಆ ಅನುವಾದಕ ಮಂಡಳಿ ಅಧ್ಯಕ್ಷ ಪರಿಷತ್ತಿನ ಅಧ್ಯಕ್ಷರಿಗೆ ಆ ವಿಷಯವನ್ನು ತಿಳಿಸಿ ಆ ಕಾರ್ಯಕ್ಕೆ ಬೇರೊಬ್ಬ ವಿದ್ವಾಂಸರನ್ನು ಗೊತ್ತು ಮಾಡಬಹುದು. ಹಾಗೆಯೇ ಅನುವಾದಕ ಮತ್ತು ಅನುವಾದಕ ಮಂಡಳಿ ಅಧ್ಯಕ್ಷರ ಮಧ್ಯೆ ಉದ್ಭವಿಸಬಹುದಾದ ಸಮಸ್ಯೆಗಳನ್ನು ಪರಿಷತ್ತಿನ ಅಧ್ಯಕ್ಷರು ಪರಿಹರಿಸತಕ್ಕದ್ದು.

(ಏ) ನಿಯಮದಂತೆ ಗ್ರಂಥದ ಅನುವಾದ ಕಾರ್ಯ ಮುಗಿದ ಕೂಡಲೆ ಮಂಡಳಿಯ ಅಧ್ಯಕ್ಷರು ಅದನ್ನು ಅನುವಾದಕರಿಂದ ಪಡೆದು ತಮ್ಮ ಸಲಹೆಯೊಡನೆ ಅದನ್ನು ಪರಿಷತ್ತಿನ ಅಧ್ಯಕ್ಷರಿಗೆ ಕಳುಹಿಸಿಕೊಡತಕ್ಕದ್ದು.

4. ಹೀಗೆ ಅನುವಾದ ಕಾರ್ಯವನ್ನು ವಿದ್ವಾಂಸರಿಂದ ಮಾಡಿಸಿದಾಗ ಅವರಿಗೆ ಯುಕ್ತ ಸಂಭಾವನೆಯನ್ನು ಕೊಡುವ ಬಗ್ಗೆ ಸಭೆ ತೀರ್ಮಾನ ಕೈಗೊಂಡು, ಸಂಭಾವನೆ ಗ್ರಂಥದ ಪರಿಮಾಣದ ಆಧಾರದ ಮೇಲೆ ಸಲ್ಲಬೇಕೆಂಬುದು ನಿರ್ಣಯಿಸಿ, ಗ್ರಂಥದ 400 ಅಕ್ಷರಗಳಿಗೆ ಒಂದು ಘಟಕವೆಂದೂ ಒಂದು ಘಟಕಕ್ಕೆ 2 ರೂ. ನಂತೆ ಸಂಭಾವನೆ ನೀಡಬೇಕೆಂದೂ ನಿಶ್ಚಯಿಸಲಾಯಿತು. ಮತ್ತು ಅನುವಾದಕ ಮಂಡಳಿಯ ಅಧ್ಯಕ್ಷರಿಗೆ ಅನುವಾದಕರಿಗೆ ಸಲ್ಲುವ ಸಂಭಾವನೆಯ ಶೇಕಡ 15 ರಷ್ಟನ್ನು ಸಂಭಾವನೆಯಾಗಿ ಕೊಡತಕ್ಕದ್ದೆಂದೂ ಸಭೆ ನಿರ್ಣಯಿಸಿತು, ಮತ್ತು ಅದರ ಮೂಲಪಾಠ ಪರಿಷ್ಕಾರ, ಮುನ್ನುಡಿ, ಉಪೋದ್ಘಾತ, ಶೋಧನೆ ಮೇಲ್ವಿಚಾರಣೆ ಇತ್ಯಾದಿ ಕಾರ್ಯಗಳನ್ನು ಗಮನದಲ್ಲಿಟ್ಟುಕೊಂಡು ಹಸ್ತಪ್ರತಿಯನ್ನು ಸಿದ್ಧಪಡಿಸಿ ಪರಿಷತ್ತಿಗೆ ಒಪ್ಪಿಸತಕ್ಕದ್ದೆಂದೂ ತೀರ್ಮಾನಿಸಲಾಯಿತು.

5. ಅನುವಾದಕರಿಗೆ ಅನುವಾದ ಕಾರ್ಯಕ್ಕಾಗಿ ಹಣ ಸಂದಾಯವಾದ ಮೇಲೆ ಆ ಗ್ರಂಥದ ಪೂರ್ಣ ಹಕ್ಕು ಪರಿಷತ್ತಿಗೆ ಸೇರುತ್ತದೆ. ಪುಸ್ತಕ ಪ್ರಕಟಣೆಯಾದ ಮೇಲೆ ಅನುವಾದಕರಿಗೆ ಈ ಗ್ರಂಥದ ಇಪ್ಪತ್ತೈದು ಪ್ರತಿಗಳನ್ನು, ಅನುವಾದಕ ಮಂಡಲಿ ಅಧ್ಯಕ್ಷರಿಗೆ ಎರಡು ಪ್ರತಿಗಳನ್ನು ಉಚಿತವಾಗಿ ನೀಡತಕ್ಕದ್ದು.

ಮೇಲ್ಕಂಡ ತೀರ್ಮಾನದಂತೆ ಅನುವಾದಕಾರ್ಯ ಕೈಗೊಳ್ಳಲು ಪರಿಷತ್ತು ಮೈಸೂರಿನಲ್ಲಿ ಮತ್ತು ಬೆಂಗಳೂರಿನಲ್ಲಿ ಅನುವಾದಕ ಮಂಡಲಿಗಳನ್ನು ರಚಿಸಿ ಅವಕ್ಕೆ ಬೇಕಾದ ಸಲಕರಣೆಗಳನ್ನು ಒದಗಿಸಿಕೊಟ್ಟಿದೆ. ಯೋಜನೆಯ ಪ್ರಕಾರ ಅನುವಾದ

ಕಾರ್ಯ ಎರಡು ಕಡೆಯೂ ನಡೆಯುತ್ತಿದೆ, ಈಚೆಗೆ ಧಾರವಾಡದಲ್ಲೂ ಅನುವಾದ ಕಾರ್ಯ ನಡೆಯುತ್ತಿದೆ. ವಿದ್ವಾಂಸರು ಅನುವಾದ ಮಂಡಲಿ ಅಧ್ಯಕ್ಷರೊಡನೆ ಸಹಕರಿಸುತ್ತಿದ್ದಾರೆ. ಅನುವಾದಕ ಮಂಡಳಿ ಅಧ್ಯಕ್ಷರು ವಿಶೇಷ ಆಸಕ್ತಿ ವಹಿಸಿ ಅನುವಾದ ಕಾರ್ಯ ಅಚ್ಚುಕಟ್ಟಾಗಿ ನಡೆಯುವಂತೆ ಶ್ರಮಿಸುತ್ತಿದ್ದಾರೆ.

ಈ ಅನುವಾದ ಗ್ರಂಥಗಳು ಕನ್ನಡ ಜನತೆಗೆ ಸುಲಭ ಬೆಲೆಯಲ್ಲಿ ದೊರೆಯಬೇಕೆಂಬ ಆಶೆಯು ಸರ್ಕಾರದ ನೆರವಿನಿಂದ ಕೈಗೂಡಿದೆ ಎಂದು ತಿಳಿಸಲು ಸಂತೋಷಿಸುತ್ತೇನೆ.

ಹಂಪ. ನಾಗರಾಜಯ್ಯ
ಅಧ್ಯಕ್ಷ
ಕನ್ನಡ ಸಾಹಿತ್ಯ ಪರಿಷತ್ತು

ಪ್ರಸ್ತಾವನೆ

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಚಟುವಟಿಕೆಗಳಲ್ಲಿ ಗ್ರಂಥ ಪ್ರಕಟಣೆ ಒಂದು ಪ್ರಮುಖವಾದ ಚಟುವಟಿಕೆ. ಪ್ರಾರಂಭದಲ್ಲಿ ಪರಿಷತ್ತು ತನ್ನ ಆರ್ಥಿಕ ಸ್ಥಿತಿಯನ್ನು ಅವಲಂಬಿಸಿ ಕೆಲವೇ ಪುಸ್ತಕಗಳನ್ನು ಪ್ರಕಟಿಸಿತು. ಆದರೆ ಆ ಪುಸ್ತಕಗಳು ಅತ್ಯಂತ ಅಮೂಲ್ಯದವೂ ಅಪೂರ್ವದವೂ ಅತ್ಯುಪಯುಕ್ತದವೂ ಆಗಿವೆ. 1969 ರಿಂದ ಈಚೆಗೆ ಪರಿಷತ್ತು ತನ್ನ ಚಟುವಟಿಕೆಗಳನ್ನು ಯೋಜನಾ ಬದ್ಧವಾಗಿ ರೂಪಿಸಿಕೊಂಡು ತ್ರೈವಾರ್ಷಿಕ ಯೋಜನೆಯಲ್ಲಿ 100 ಪುಸ್ತಕಗಳನ್ನೂ ಪಂಚವಾರ್ಷಿಕ ಯೋಜನೆಯಲ್ಲಿ 150 ಪುಸ್ತಕಗಳನ್ನೂ ಹೊರತರಲು ಆಲೋಚಿಸಿತು. ಆದರಂತೆ ತ್ರೈವಾರ್ಷಿಕ ಯೋಜನೆಯಲ್ಲಿನ 100 ಪುಸ್ತಕಗಳೂ ಪಂಚವಾರ್ಷಿಕ ಯೋಜನೆಯ 141 ಪುಸ್ತಕಗಳೂ ಈಗಾಗಲೇ ಪ್ರಕಟವಾಗಿವೆ. ಉಳಿದವು ಪ್ರಕಟಣೆಯ ಬೇರೆ ಬೇರೆ ಹಂತದಲ್ಲಿವೆ.

ಪರಿಷತ್ತು ಈಗ ಎರಡನೆಯ ಪಂಚವಾರ್ಷಿಕ ಯೋಜನೆಯ ಕಾರ್ಯಕ್ರಮಗಳನ್ನು ಆರಂಭಿಸಿದೆ. ಈ ಯೋಜನೆಯಲ್ಲೂ ಪುಸ್ತಕ ಪ್ರಕಟಣೆಯ ಚಟುವಟಿಕೆಯನ್ನೇ ಪ್ರಧಾನ ಕಾರ್ಯವನ್ನಾಗಿ ರೂಪಿಸಿಕೊಂಡಿದೆ. ಆದರೆ ಕಾಲವನ್ನು ಅನುಸರಿಸಿ ಆಯಾ ಕಾಲದ ಕನ್ನಡ ಸಾಹಿತ್ಯದ ಎಲ್ಲಾ ಆಯಾಮಗಳನ್ನೂ ಸಾಹಿತ್ಯ ಧೋರಣೆಯನ್ನೂ ಗಮನದಲ್ಲಿಟ್ಟುಕೊಂಡು ಪ್ರಕಟಣೆಗೆ ಪುಸ್ತಕಗಳನ್ನು ಆಯ್ದುಕೊಳ್ಳುತ್ತಿದೆ. ಅದೆಂದರೆ ಪರಿಷತ್ತು ಪ್ರಕಟಿಸುವ ಗ್ರಂಥಗಳನ್ನು ಒಂದು ಗ್ರಂಥ ಪ್ರಕಟಣಾ ಸಲಹಾ ಸಮಿತಿ ಪರಿಶೀಲಿಸಿ ನಿರ್ಧರಿಸುತ್ತದೆ. ಹಾಗೆ ನಿರ್ಧರಿಸುವಾಗ ಪುಸ್ತಕಗಳ ವಿಷಯವನ್ನು ಕುರಿತು ಕೆಲವೊಮ್ಮೆ ಆಯಾ ವಿಷಯದಲ್ಲಿ ತಜ್ಞರಾದವರ ಅಭಿಪ್ರಾಯವನ್ನು ಪಡೆಯುತ್ತದೆ.

24–7–78 ರಿಂದ ಹೊಸ ಪದಾಧಿಕಾರಿಗಳು ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಹೊಸ ದೃಷ್ಟಿಯಿಂದ ಗ್ರಂಥ ಪ್ರಕಟಣ ಸಲಹಾ ಸಮಿತಿಯನ್ನು ರಚಿಸಿದೆ. ಈ ಸಮಿತಿಯ ಸಲಹೆ ಸಹಕಾರಗಳಿಂದ ಇಂದಿನ ಪುಸ್ತಕಗಳು ಹೊರಬರುತ್ತಿವೆ. ಈ ಪುಸ್ತಕಗಳಲ್ಲಿ ಅಚ್ಚಾಗದ ಪ್ರಾಚೀನ ಗ್ರಂಥಗಳು, ಭಾಷಾಂತರದ ಕೃತಿಗಳು, ಜನಸಾಮಾನ್ಯರಿಗೆ ಶಾಸ್ತ್ರ, ಸಾಹಿತ್ಯ, ಕಲೆ, ವಿಜ್ಞಾನ, ಜನಪದ ಸಾಹಿತ್ಯ, ನಿಘಂಟುಗಳು ಇರುತ್ತವೆ.

ಕನ್ನಡ ಜನತೆಗೆ ಒಳ್ಳೆಯ ಸಾಹಿತ್ಯವನ್ನು ಸುಲಭ ಬೆಲೆಗೆ ಒದಗಿಸಬೇಕು, ಕಾಲಕಾಲಕ್ಕೆ ಜನತೆಯ ಆಶೋತ್ತರಗಳನ್ನು ಪೂರೈಸುವಂತೆ ವೈಚಾರಿಕ ಸಾಹಿತ್ಯವನ್ನು ನೀಡಬೇಕು. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಶ್ರೇಷ್ಠ ಕೊಡುಗೆಗಳನ್ನು ಪರಿಷತ್ತು ಜನತೆಗೆ

ನೀಡಬೇಕು ಎಂಬ ಪರಿಷತ್ತಿನ ಧ್ಯೇಯ ಧೋರಣೆಗಳನ್ನು ಗಮನಿಸಿ ಕರ್ನಾಟಕ ರಾಜ್ಯ ಸರ್ಕಾರದವರು ಉದಾರ ಸಹಾಯ ನೀಡಿದ್ದಾರೆ ಮತ್ತು ನೀಡುತ್ತಿದ್ದಾರೆ.

ಪರಿಷತ್ತು ಈಗ ತನ್ನ ಎರಡನೆಯ ಪಂಚವಾರ್ಷಿಕ ಯೋಜನೆಯ ಕಾರ್ಯಗಳನ್ನು ಆರಂಭಿಸಿದೆ. ಆ ಅವಧಿಯಲ್ಲಿ ಮೇಲೆ ತಿಳಿಸಿದಂತೆ ಅನೇಕ ಹೊಸ ಪುಸ್ತಕಗಳನ್ನು ಹೊಸದಾಗಿ ಹಾಕಿಕೊಂಡ ಧ್ಯೇಯ ಧೋರಣೆಗಳಿಗನುಸಾರವಾಗಿ ಹೊರತರಲು ಯತ್ನಿಸುತ್ತಿದೆ ಎಂಬ ನಂಬಿಕೆ ನನಗಿದೆ. ಈ ಕಾರ್ಯದಲ್ಲಿ ಗ್ರಂಥ ಪ್ರಕಟಣ ಸಲಹಾ ಸಮಿತಿ ಸದಸ್ಯರು, ಲೇಖಕರು, ಸಾಹಿತ್ಯ ವಿದ್ವಾಂಸರು ಮತ್ತು ರಾಜ್ಯ ಸರಕಾರ—ಸಹಕಾರ ನೀಡುತ್ತಿದ್ದಾರೆ. ಅವರಿಗೆ ಪರಿಷತ್ತು ತನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ಪರಿಷತ್ತಿನ ಪ್ರಕಟಣೆಗಳು ಕನ್ನಡಿಗರಿಗೆ ಲಾಭದಾಯಕವಾಗುವುದರಲ್ಲಿ ಸಂದೇಹವಿಲ್ಲ. ಆ ಲಾಭವನ್ನು ಅವರು ಪಡೆದು ನಾಡುನುಡಿಯ ಸೇವೆಯಲ್ಲಿ ಪಾಲುದಾರರಾಗಬೇಕೆಂದು ಪ್ರಾರ್ಥಿಸುತ್ತೇನೆ. ಈ ಮಾಲೆಯಲ್ಲಿ ಚನ್ನಪ್ಪ ಎರೇಸೀಮೆ ಅವರು ಷಡಕ್ಷರದೇವ ಕವಿಯ ಬಸವರಾಜ ವಿಜಯ ಕಾವ್ಯವನ್ನು ಅನುವಾದ ಮಾಡಿಕೊಟ್ಟಿದ್ದಾರೆ. ಅವರಿಗೆ ಪರಿಷತ್ತಿನ ಕೃತಜ್ಞತೆಗಳು ಸಲ್ಲುತ್ತವೆ.

ಹಂಪ. ನಾಗರಾಜಯ್ಯ
ಅಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು

ಬಿನ್ನಹ

ಹಳಗನ್ನಡ ಕಾವ್ಯಗಳ ಅನುವಾದ ಮಾಲೆಯಲ್ಲಿ ಪ್ರಕಟವಾಗುತ್ತಿರುವ ''ಬಸವ ರಾಜ ವಿಜಯ'' ವು ಓದುಗರಿಗೆ ಕನ್ನಡ ಸಾಹಿತ್ಯ ಪರಿಷತ್ತು ಒದಗಿಸುವ ಇನ್ನೊಂದು ಬೆಲೆಯುಳ್ಳ ಕೊಡುಗೆಯಾಗಿದೆ. ಷಡಕ್ಷರ ಕವಿಯ ಕೃತಿಗಳನ್ನು ಟೀಕಾಗ್ರಂಥಗಳ ಸಹಾಯವಿಲ್ಲದೆ ಅರ್ಥ ಮಾಡಿಕೊಳ್ಳುವುದು ಇಂದಿನವರಿಗೆ ಕಷ್ಟವಾಗುತ್ತದೆ. ಅನುವಾದಕ್ಕೆ ಅದರದೇ ಅದ ಇತಿಮಿತಿಯಿದ್ದರೂ, ಓದುಗರ ಸೌಕರ್ಯ ದೃಷ್ಟಿಯಿಂದ ಅಲ್ಲಲ್ಲಿ ವಿಶೇಷ ವಿವರಗಳನ್ನು ಒದಗಿಸುವುದು ನಮ್ಮ ಅನುವಾದ ಮಾಲೆಯ ನೀತಿ. ಶ್ರೀ ಎರೇಸೀಮೇ ಚನ್ನಪ್ಪನವರು ಈಗಾಗಲೆ ಷಡಕ್ಷರ ಕವಿಯ ರಾಜಶೇಖರ ವಿಲಾಸ ವನ್ನು ಅನುವಾದ ಮಾಡಿಕೊಟ್ಟಿದ್ದಾರೆ. ಅದೇ ಕ್ರಮವನ್ನು ಪ್ರಕೃತ ಗ್ರಂಥದ ಅನುವಾದದಲ್ಲಿಯೂ ಅನುಸರಿಸಿ, ವಾಚಕರಿಗೆ ಸೌಲಭ್ಯವೊದಗಿಸಿರುವರು. ಕಾವ್ಯಾಭ್ಯಾಸಿಗಳು ಇದರ ಪ್ರಯೋಜನವನ್ನು ಪಡೆದು ಕೊಳ್ಳುವರೆಂದು ಹಾರೈಸುತ್ತೇನೆ.

ಅನುವಾದ ಮಾಡಿಕೊಟ್ಟ ಶ್ರೀ ಚನ್ನಪ್ಪನವರಿಗೂ, ಅನುವಾದ ಮಾಲೆಯುನ್ನು ಪೋಷಿಸಿಕೊಂಡು ಬರುತ್ತಿರುವ ಪರಿಷತ್ತಿನ ಅಧ್ಯಕ್ಷ ಶ್ರೀ ಹಂಪ. ನಾಗರಾಜಯ್ಯನವರಿಗೂ ಅಭಿನಂದನೆಗಳು.

ಬೆಂಗಳೂರು 18
17-8-1982

ರಾ. ನೆಂ. ಕುಲಕುರಣಿ
ಅಧ್ಯಕ್ಷ
ಬೆಂಗಳೂರು ಅನುವಾದ ಮಂಡಲಿ
ಕನ್ನಡ ಸಾಹಿತ್ಯ ಪರಿಷತ್ತು

ಗದ್ಯಾನುವಾದಕನ ನುಡಿ

ರಾಜಶೇಖರ ವಿಳಾಸವನ್ನು ಸಾಹಿತ್ಯಪರಿಷತ್ತಿಗೆ ಪರಿಷದಧ್ಯಕ್ಷ ಸನ್ಮಾನ್ಯ ಶ್ರೀ ಜಿ. ನಾರಾಯಣರವರ ಅನುಜ್ಞೆಯ ಮೇರೆ ಮಾಡಿಕೊಟ್ಟುದು ನನ್ನ ಪುಣ್ಯವಿಶೇಷ. ಆ ಕವಿಯ ಇನ್ನೊಂದು ಶ್ರೇಷ್ಠವೂ ಕ್ಲಿಷ್ಟವೂ ಆದ ಬಸವರಾಜ ವಿಜಯ ಅಥವಾ ವೃಷಭೇಂದ್ರ ವಿಜಯವನ್ನು ಗದ್ಯಾನುವಾದಕ್ಕಾಗಿ ಶ್ರೀ ಜಿ. ನಾರಾಯಣರವರು ನನ್ನನ್ನೇ ಆರಿಸಿದಾಗ ಮೈನಡುಗಿತು. ಷಡಕ್ಷರ ದೇವನ ಕಾವ್ಯಗಳನ್ನು ಜೀರ್ಣಿಸಿಕೊಂಡು ತಕ್ಕ ಹಾಗೆ ಗದ್ಯಾನುವಾದ ಮಾಡುವ ಕಾರ್ಯಸುಲಭಸಾಧ್ಯವೇನೂ ಅಲ್ಲ. ಆದರೆ ಧೈರ್ಯದಿಂದ ದೇವರಮೇಲೆ ಭಾರಹಾಕಿ ಒಪ್ಪಿಕೊಂಡು ಸತತ ಪ್ರಯತ್ನಮಾಡಿ ತಿಳಿಯದಿದ್ದಾಗ ಗದ್ಯಾನುವಾದ ಮಂಡಳಿಯ ಅಧ್ಯಕ್ಷರಾದ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನ ನಿವೃತ್ತ ಮಹಾಮಹೋಪಾಧ್ಯಾಯ ಶ್ರೀ ರಂಗನಾಥಶರ್ಮಾಜಿ ಅವರೊಡನೆ ಇನ್ನಿತರ ವಿದ್ವಾಂಸರೊಡನೆ ಚರ್ಚಿಸಿ ಈ ಕಾರ್ಯವನ್ನು ಮುಗಿಸಿದುದು ಭಗವತ್ಕೃಪೆಯಲ್ಲದೆ ನನ್ನಲ್ಲಿ ಅಂಥಶಕ್ತಿಯಿದೆಯೆಂದೇನೂ ಅಲ್ಲ. ಪರಿಷದಧ್ಯಕ್ಷ ಶ್ರೀ ಜಿ. ನಾರಾಯಣರವರು ಹಳಗನ್ನಡ ಕಾವ್ಯಗಳ ಅರ್ಥಸಾಮಾನ್ಯರಿಗೂ ಆಗಬೇಕೆಂದೆತ್ತಿಕೊಂಡಿರುವ ಈ ಕಾರ್ಯ ಅತ್ಯಂತ ಸ್ತುತ್ಯವಾದುದು. ಇಂಥ ಕಾರ್ಯಕ್ರಮವನ್ನು ಹಾಕಿಕೊಳ್ಳುವವರಿಗೆ ಅದ್ಭುತಧೈರ್ಯಬೇಕು. ಇವೇನು ಚಿಕ್ಕಕಾರ್ಯಗಳೇ ! ಲಕ್ಷಲಕ್ಷಧನವನ್ನು ಆರ್ಜಿಸಿತಂದು ಸುರಿದು ಅವನ್ನು ಸುಲಭ ಬೆಲೆಗೆ ಒದಗಿಸಬೇಕು. ಈ ಮಹಾಸಾಹಸಕ್ಕೆ ಕೈ ಹಾಕಿ ಈಗಾಗಲೇ ಅನೇಕ ಮಹತ್ವದ ಕೃತಿಗಳನ್ನು ಅವರು ಹೊರತಂದು ಕನ್ನಡಿಗರಿಗೆ ಮಹೋಪಕಾರ ಮಾಡಿದ್ದಾರೆ. ಅವರ ಶಾಶ್ವತ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಪರಿಷತ್ತು ಇಂಥ ಅಧ್ಯಕ್ಷ ಶ್ರೇಷ್ಠರನ್ನು ಎಂದೋ ಒಮ್ಮೊಮ್ಮೆ ಪಡೆಯುತ್ತದೆ. ಆಗ ಇಂಥ ಅದ್ಭುತ ಪವಾಡಗಳು ನಡೆದು ಹೋಗುತ್ತವೆ. ಶ್ರೇಷ್ಠಮಟ್ಟದ ಸಂಘಟನಾಚತುರರೂ, ಧೈರ್ಯಸ್ಥೈರ್ಯ ವಿಶಿಷ್ಟರೂ, ಸದ್ದುಗದ್ದಲವಿಲ್ಲದೆ ಕಾರ್ಯವನ್ನು ಮಾಡಿ ಮುಗಿಸುವ ಶಾಂತಗಂಭೀರರೂ ಆದ ಅವರ ಈ ಸ್ತುತ್ಯವಾದ ಮಹಾಕಾರ್ಯ ಯಶಸ್ವಿಯಾಗಿ ನಡೆದು ಕನ್ನಡ ಸಾಹಿತ್ಯದ ಹಳಗನ್ನಡ ಶ್ರೇಷ್ಠ ಕೃತಿಗಳೆಲ್ಲ ಕನ್ನಡಿಗರ ಹಸ್ತಭೂಷಣಗಳಾಗಲೆಂದು ಈಶ್ವರನಲ್ಲಿ ಪ್ರಾರ್ಥಿಸುತ್ತೇನೆ.

ಬೆಂಗಳೂರು
೪–೭–೭೮

ಚನ್ನಪ್ಪ ಎರೇಸೀಮೆ
597, 4ನೇ ಮೇನ್, 2ನೇ ಕ್ರಾಸ್
ವಿಜಯನಗರ, ಬೆಂಗಳೂರು–40

ವಿಷಯಾನುಕ್ರಮಣಿಕೆ

ಮಹಾಕವಿ ಷಡಕ್ಷರದೇವ ವಿರಚಿತ

ಬಸವರಾಜ ವಿಜಯಂ

ಭಾಗ - ೨

ಪಂಚವಿಂಶಾಶ್ವಾಸಂ

[ಮೋದರ ಕೇತಯ್ಯನ ಕಥೆ]

ಶ್ರೀ ಸದಮಳಾಂಬಿಕಾದರ
ಹಾಸದ್ಯುತಿಮಲ್ಲಿಕಾಮಧುವ್ರತನಭವಂ
ವಾಸವಮುಖಸುರಹೃದಯೋ
ಲ್ಲಾಸಪ್ರದನೀಗೆ ಸೌಖ್ಯಮಂ ಶಿವಲಿಂಗಂ ೧

ವ॥ ಇಂತು ಚನ್ನಬಸವಂ ಬಸವವೃತ್ತಾಂತಮಂ ಬೆಸಸಿ ಗಣನಿವಹಕಾನಂದಮನೊದವಿಸಿ ಸುಖಮಿರುತಿರೆ ಮತ್ತಮಲ್ಲಿ—

ಚರಲಿಂಗಂ ಸ್ವಾಮಿ ಸುಜ್ಞಾನಮೆ ಸಮುಚಿತ ಸನ್ಮಂತ್ರಿಯಾಚಾರಮೇ ಭಾ
ಸುರರಾಷ್ಟ್ರಂ ಶಾಂತಿ ದುರ್ಗಂ ವಿಮಳಗುಣಮೆ ಮಿತ್ರಂ ಮಹಾಮೂಲಮಂತ್ರಂ
ಚಿರಕೋಶಂ ಶುದ್ಧಬುದ್ಧಿಪ್ರಭೃತಿಬಲಮಿಂತಾಗೆ ಸಪ್ತಾಂಗಮಾಳ್ದ
ಚ್ಚರಿಯಿಂ ಸದ್ಭಕ್ತಿಸಾಮ್ರಾಜ್ಯಕೆ ವಿಭುವೆನಿಸುತ್ತೊಪ್ಪುತಿರ್ದಂ ವೃಷೇಂದ್ರಂ ೨

ಜಿತರಿಪುವರ್ಗನುಪಾಯಾ
ನ್ವಿತನಧಿಗತಮಂತ್ರಶಕ್ತಿತಂತ್ರೋದಿತ ವಿ

ಮೋದಾರ ಕೇತಯ್ಯನ ಕಥೆ

೧. ಮಂಗಳಕರಳಾದ ಪವಿತ್ರ ಪಾರ್ವತಿಯ ಮುಗುಳುನಗೆಯ ಕಾಂತಿಯೆಂಬ ಮಲ್ಲಿಗೆಯ ಹೂವಿಗೆ ಭ್ರಮರ ಸ್ವರೂಪನೂ, ಭವರಹಿತನೂ, ಇಂದ್ರನೇ ಮೊದಲಾದ ದೇವತೆಗಳ ಮನಸ್ಸಿಗೆ ಸಂತೋಷವನ್ನುಂಟುಮಾಡುವವನೂ ಆದ ಶಿವಲಿಂಗನು ಸೌಖ್ಯವನ್ನು ಉಂಟುಮಾಡಲಿ. ವ॥ ಈ ರೀತಿಯಲ್ಲಿ ಚೆನ್ನಬಸವಣ್ಣನು ಬಸವೇಶ್ವರನ ವೃತ್ತಾಂತವನ್ನು ಶಿವಗಣಸಮೂಹಕ್ಕೆ ಹೇಳಿ, ಆನಂದವನ್ನುಂಟುಮಾಡುತ್ತ ಸುಖವಾಗಿ ಇರುತ್ತಿರಲು ಮತ್ತು ಅಲ್ಲಿ—೨. ಜಂಗಮಲಿಂಗವೇ ಸ್ವಾಮಿ, ಸುಜ್ಞಾನವೇ ಯೋಗ್ಯನಾದ ಮಂತ್ರಿ, ಆಚಾರವೇ ಶೋಭಿಸುವ ರಾಷ್ಟ್ರ, ಶಾಂತಿಯೇ ಕೋಟೆ, ಶ್ರೇಷ್ಠ ಸದ್ಗುಣಗಳೇ ಮಿತ್ರ, ಮಹಾಮೂಲಮಂತ್ರವೇ (ಶಿವಷಡಕ್ಷರಿಯೇ) ಶಾಶ್ವತ ಕೋಶ, ಶುದ್ಧವಾದ ಮನಸ್ಸೇ ಮೊದಲಾದುವುಗಳು ಸೈನ್ಯ (ಬಲ)–ಈ ರೀತಿ ಇವು ಉಂಟಾಗಿರಲು ಇಂಥ ಸಪ್ತಾಂಗ (ಏಳು ಲಿಂಗ)ಗಳನ್ನು ಹೊಂದಿ, ಆನಂದದಿಂದ ಸದ್ಭಕ್ತಿಯೆಂಬ ಸಾಮ್ರಾಜ್ಯಕ್ಕೆ ಪ್ರಭುವೆಂದೆನಿಸಿ ವೃಷಭೇಂದ್ರನು (ಕಲ್ಯಾಣದಲ್ಲಿ) ಇರುತ್ತಿದ್ದನು. ೩. (ಅವನು) ರಿಪುವರ್ಗವನ್ನು ಜಯಿಸಿದ್ದನು. (ಕಾಮಕ್ರೋಧಾದಿ ಅರಿಷಡ್ವರ್ಗಗಳನ್ನು ಗೆದ್ದಿದ್ದನು); ಸಾಮ ದಾನ ಭೇದ ದಂಡಾದಿ ಚತುರೋಪಾಯಗಳಿಂದ

ಶ್ರುತಗುಣಗಣನಿಧಿಯುವನೀ
ಶತೆಯಂ ತಳೆದಾಳ್ವುದರಿದೆ ಜಸವಂ ಬಸವಂ ೩

ಬಸವಪದಾಬ್ಜಪಾಂಶು ಧರೆಯಂ ಬಸವೇಶನ ದಿವ್ಯಕೀರ್ತಿಯೆ
ಣ್ದೆಸೆಯಧಿನಾಥರಂ ಬಸವರಾಜನಪಾಂಗದ ಕಾಂತಿ ಚಂದ್ರಸಾ
ರಸಸಖರೋಚಿಯಂ ಪದೆದು ಸೋಂಕಿದ ಮಾತ್ರದೆ ಪಾವನತ್ವಮಂ
ಪೊಸಯಿಸಿ ರಂಜಿಸಿರ್ದುವೆನೆ ತನ್ಮಹಿಮಾಬ್ಧಿಯ ಪೆರ್ಮೆಯೆಂತುಟೋ ೪

ವ॥ ಎನಿಸಿ ನೆಗಳ್ತೆವೆತ್ತು ಬಸವಂ ತ್ರಿವಿಧ ಲಿಂಗಸಪರ್ಯೆಯಿಂ ಸುಖಮಿರ್ಪನ್ನಮಾ ಪುರ ವರದಲ್ಲಿ—

ಖ್ಯಾತಗುಣರಾಶಿ ಮೇದರ
ಕೇತಯ್ಯನೆನಿಪ್ಪ ಶರಣನೊಪ್ಪಿರೆ ಪದಪಿಂ
ದಾತನಸುವಂ ಶಿವಂ ಸಂ
ಪ್ರೀತಿಯಿನೊಡಗೂಡಿಕೊಂಡನಂದೊಂದುದಿನಂ ೫

ವ॥ ಆಗಳಾ ಪೊಳಲ ಭಕ್ತಗಣಂಬೆರಸು ವೃಷೇಂದ್ರನೆಳ್ತಂದು ಸರ್ವಮಾಹೇಶ್ವರರ್ನೆರೆ ದೊಡ್ಡೋಲಗಂಗೊಟ್ಟು ತತವಿತತಘನಸುಷಿರವಾದ್ಯಧ್ವನಿ ವಿಜೃಂಭಿಸೆ ಪುಷ್ಪಾಂಜಲಿಗಳೊಡನುಘೇರ ವಂಗುಡುತ್ತುಂ ಶಿವಸಂಕೀರ್ತನಂಗಳಂ ಪಾಡುತಾಡುತಂ ಬಿನದಂಬೆತ್ತಿರ್ಪುದುಂ ಕಂಡು ತತ್ಸಭೆಗೆ

ಕೂಡಿದ್ದನು. (ಶುಭವನ್ನುಂಟುಮಾಡುವ ಉಪಾಯಗಳಿಂದ ಕೂಡಿದ್ದನು) ; ರಾಜ ತಂತ್ರದಲ್ಲಿ ಹೇಳಲ್ಪಟ್ಟ ಪ್ರಸಿದ್ಧವಾದ ಸದ್ಗುಣ ಸಮೂಹಗಳ ನಿಕ್ಷೇಪನೆನಿಸಿದ್ದನು. [ಆಗಮಗಳಲ್ಲಿ ಹೇಳಲ್ಪಟ್ಟ ಪ್ರಸಿದ್ಧವಾದ ಸದ್ಗುಣಭರಿತರಾದ ಶಿವಗಣ ಸಮೂಹಕ್ಕೆ ನಿಧಿಯೆನಿಸಿದ್ದನು]; (ಹೀಗೆ) ಆ ಬಸವಣ್ಣನು ಭೂಮಿಪಾಲನ ಅಧಿಕಾರವನ್ನೂ ಹೊಂದಿ ಕೀರ್ತಿಯನ್ನು ಹೊಂದಿರುವುದು ಅಸಾಧ್ಯವಾದದ್ದೇ ? ೪. ಬಸವಣ್ಣನ ಪಾದಕಮಲದ ಧೂಳು ಭೂಮಿಯನ್ನೂ, ಬಸವೇಶ್ವರನ ದಿವ್ಯಕೀರ್ತಿಯು ಎಂಟೂದಿಕ್ಕಿನಲ್ಲಿರುವ ಅರಸರನ್ನೂ, ಬಸವರಾಜನ ಕಡೆಗಣ್ಣಿನ ಕಾಂತಿಯು ಚಂದ್ರ ಮತ್ತು ಸೂರ್ಯರ ಕಿರಣಗಳ(ತೇಜಸ್ಸನ್ನು) ಹೊಂದಿ, ಸೋಂಕಿದ ಮಾತ್ರದಿಂದಲೇ ಪರಿಶುದ್ಧತೆಯನ್ನುಂಟು ಮಾಡಿ, ರಂಜಿಸಿರುವುದೋ ಎನ್ನುವಂತೆ ಆ ಮಹಿಮಾ ಸಮುದ್ರನಾದ ಬಸವನ ಹಿರಿಮೆ ಹೇಗಿತ್ತೋ ! ವ॥ ಹೀಗೆನಿಸಿ ಖ್ಯಾತಿಯನ್ನು ಹೊಂದಿ ತ್ರಿವಿಧ (ಇಷ್ಟ, ಪ್ರಾಣ, ಭಾವ) ಲಿಂಗಪೂಜೆಯಿಂದ ಸುಖದಿಂದ ಇರುತ್ತಿರುವಾಗ—೫. ವಿಖ್ಯಾತವಾದ ಗುಣಗಳ ಸಮೂಹವುಳ್ಳ ಮೇದಾರಕೇತಯ್ಯನೆಂಬ ಶರಣನು (ಆ ಕಲ್ಯಾಣದಲ್ಲಿ) ಶೋಭಿಸು ತ್ತಿದ್ದನು. ಒಂದು ದಿವಸ ಪ್ರೀತಿಯಿಂದ ಆತನ ಪ್ರಾಣವನ್ನು ಶಿವನು ತನ್ನ ಜೊತೆಯಲ್ಲಿ ಸೇರಿಸಿಕೊಂಡನು (ಲಿಂಗೈಕ್ಯನಾದನು). ವ॥ ಆಗ ಆ ಕಲ್ಯಾಣ ನಗರದ ಭಕ್ತಗಣ ಸಮೇತವಾಗಿ ಬಸವೇಶ್ವರನು ಬಂದು, ಸಕಲ ಮಾಹೇಶ್ವರರುಗಳೊಡನೆ ಒಡ್ಡೋಲಗ ವನ್ನು ನಡೆಸಿದನು. (ಅಲ್ಲಿ) ತತ, ವಿತತ, ಘನ, ಸುಷಿರ (ತಂತ್ರೀ ವಾದ್ಯಗಳು, ಚರ್ಮ

ಸಾಷ್ಟಾಂಗವೆಱಗಿ ತದನುಜ್ಞೆಯಿಂ ಕುಳ್ಳಿರ್ದು ಶರಣಂ ಹರಣಂಗಳೆದನೆಂದು ಮನಂ ನೊಂದು ಮಱುಗುತನಿತಱೊಳ್ತನ್ನ ಭಾಷೆಯಂ ನೆನೆದು ನೇಹಂಮಿಗೆ ನಿಜಪ್ರಾಣಮನಾಕ್ಷಣದೊಳ್ವಿಸರ್ಜಿಸೆ ಗಣ ನಿವಹಮದಂ ಕಂಡು ಕೌತುಕಂಗೊಂಡು ಪಡಿಯಱ ಬಾಚಿದೇವನಂ ಮಾಚಿದೇವನಡಿಗಳಿರ್ದೆಡೆಗೀ ಕಜ್ಜಮೆಲ್ಲಮಂ ಬಿನ್ನವಿಪುದೆಂದು ಬೆಸಸಿ ಕಳುಪಲೊಡನೆ—

ಕಡುವೇಗದಿನೇಳ್ತಂದಾ
ಪಡಿಯಱನಾ ಮಾಚಿದೇವನಡಿದಳಿರೊಳ್ಸ್ರ
ಗೆಡೆದೆಳ್ದು ಮುಗಿದ ಕೈ ನೊಸ
ಲೆಡೆಯೊಳ್ನಿಲೆ ದೇವ ಕೇಳ್ವುದೆಂದಿಂತೆಂದಂ ೬

ಮೋದರ ಕೇತದೇವನಸು ಲಿಂಗದೊಳೊಂದೆ ವೃಷೇಂದ್ರನಂದು ತಾ
ನೋದಿದ ಗೀತಮಂ ನೆನೆದು ಪವ್ವನೆ ಪಾಱ ಭವತ್ಪದಾಬ್ಜಮಂ
ಸಾದರಮೆಯ್ದೆ ಜಾನಿಸುತೆ ನೋಳ್ಪರೊಳದ್ಭುತಮುಣ್ಮೆ ಸತ್ಯರ
ತ್ನೋದಧಿ ತನ್ನ ಜೀವನಮನಾಗಳೆ ಬಿಟ್ಟನದೇನನೆಂದಪೆಂ ೭

ವ॥ ಆಗಳಲ್ಲಿ ಸಕಳ ಗುಣನಿಧಿಯೆನಿಪ ಸಕಲೇಶಮಾದರಸಯ್ಯನುಂ, ಜಗನ್ನುತಮಹಿಮನೆನಿಪ

ವಾದ್ಯಗಳು, ತಾಳಗಳು, ಕೊಳಲುಗಳ) ವಾದ್ಯಗಳ ಧ್ವನಿಯು ವಿಜೃಂಭಿಸುತ್ತಿದ್ದವು. ಪುಷ್ಪಾಂಜಲಿ ಸಮೇತವಾಗಿ ಉಘೇ ಉಘೇ ! ಎಂಬ ಧ್ವನಿಯನ್ನುಂಟುಮಾಡುತ್ತ ಶಿವ ಸಂಕೀರ್ತನಗಳನ್ನು ಹಾಡುತ್ತ, ಆಡುತ್ತ ವಿನೋದಗೊಂಡಿರುವುದನ್ನು ಕಂಡು, ಆ ಸಭೆಗೆ ಸಾಷ್ಟಾಂಗ ನಮಸ್ಕಾರ ಪೂರ್ವಕ ನಮಸ್ಕರಿಸಿ, ಅವರ ಅಪ್ಪಣೆಯ ಮೇರೆಗೆ ಕುಳಿತು ಕೊಂಡು, ಶರಣನು (ಮೋದರಕೇತಯ್ಯ ಶರಣನು) ಪ್ರಾಣವನ್ನು ಬಿಟ್ಟನು, ಎಂದು ಮನಸ್ಸಿನಲ್ಲಿ ನೊಂದುಕೊಂಡು, ಮರುಗುತ್ತ ಅಷ್ಟರಲ್ಲಿ ತನ್ನ ಭಾಷೆಯನ್ನು ನೆನೆದು ಸ್ನೇಹಾಧಿಕ್ಯವುಂಟಾಗಲು ತನ್ನ ಪ್ರಾಣವನ್ನು ಆ ಕ್ಷಣದಲ್ಲಿಯೇ ಬಿಟ್ಟನು. ಶಿವಗಣ ಸಮೂಹವು ಅದನ್ನು ಕಂಡು ಆಶ್ಚರ್ಯಗೊಂಡು ಪ್ರತೀಹಾರಿಯಾದ ಬಾಚಯ್ಯದೇವ ನನ್ನು ಕುರಿತು—ಮಡಿವಳ ಮಾಚಿದೇವನ ಪಾದಗಳು ಎಲ್ಲಿವೆಯೋ ಅಲ್ಲಿಗೆ ಹೋಗಿ ಬಸವಣ್ಣನ ಈ ಕಾರ್ಯವನ್ನು ವಿಜ್ಞಾಪಿಸುವುದು, ಎಂದು ಅಪ್ಪಣೆ ಮಾಡಿ ಕಳಿಸಲಾಗಿ ೬. ಅತಿ ಜಾಗ್ರತೆಯಾಗಿ ಆ ಪ್ರತೀಹಾರಿ ಬಾಚಯ್ಯನು ಹೊರಟುಬಂದು, ಆ ಮಡಿವಳ ಮಾಚಿದೇವನ ತಳಿರಿನಂತಹ ಪಾದಗಳಿಗೆ ಅಡ್ಡಬಿದ್ದು, ಮೇಲೆದ್ದು, ಹಣೆಯ ಮೇಲೆ ಕೈ ಹೊತ್ತು ಮುಗಿದು, ನಿಂತು,—'ದೇವ, ಕೇಳಬೇಕು' ಎಂದು ಹೀಗೆ ಅಂದನು. ೭. 'ಮೋದಾರ ಕೇತಿದೇವನ ಪ್ರಾಣವು ಲಿಂಗದಲ್ಲಿ ಐಕ್ಯಗೊಳ್ಳಲು, ಜಂಗಮ ಪ್ರಾಣಿ ಯೆಂಬ ತಾನು ಹೇಳಿದ ವಚನವನ್ನು ನೆನೆದು ಹೌಹಾರಿದವನಾಗಿ, ಭಗವಂತನ ಪಾದ ಕಮಲವನ್ನು ಪ್ರೀತಿಯಿಂದ ಧ್ಯಾನ ಮಾಡುತ್ತ ನೋಡುವವರಿಗೆ ಆಶ್ಚರ್ಯವೆನಿಸುವಂತೆ ಆಗ ಸತ್ಯವೆಂಬ ರತ್ನಕ್ಕೆ ಸಮುದ್ರ ಪ್ರಾಯನಾದ ಬಸವೇಶ್ವರನು ತನ್ನ ಜೀವವನ್ನು ಬಿಟ್ಟನು. ಅದನ್ನು ಅದೇನೆಂದು ಹೇಳಲಿ!' ವ॥ 'ಆ ಸಮಯದಲ್ಲಿ ಅಲ್ಲಿ ಸಕಲ

ಜಗದೇವಯ್ಯನುಂ, ಕಲಿಕಲುಷಹರನಾದ ಕಲ[1]ಕೇತಿದೇವನುಂ, ತ್ರಿಲಿಂಗಾರಾಧಕನಾದ ತೆಲುಂಗ ಜೊಮ್ಮಯ್ಯನುಂ, ಶಂಕರನಂಕಕಾಜನೆನಿಪ ಶಂಕರಯ್ಯನುಂ, ಬಲವದಾಚಾರ ಚತುರನಾದ ಬಾಚಿ ರಾಜಯ್ಯನುಂ, ಕಲಿಕ್ಲೇಶನಾಶಕನೆನಿಪ ಕೇಶಿರಾಜಯ್ಯ[2]ನುಂ, ದಾಸೋಹ ಭಾವಮಳವಟ್ಟ ದಾಸಿಮಯ್ಯನುಂ, ಕಜಿ[3]ಮಜಿ[3]ಯಳಿದ ಮೊಜಿನ ವೇಮಯ್ಯನುಂ, ಗಣದಾಸಭಾವೋದ್ದಾಮನೆನಿಪ ಗಣದಾಸಿ ಭೀಮಯ್ಯನುಂ, ಸುರವಿನುತ ಚರಿತ್ರನಾದ ಸುರಗಿ ಚೌಡಯ್ಯನುಂ, ಸಲ್ಲೀಲಾಶಾಲಿ ಯೆನಿಪ ಕಲ್ಲಿದೇವನುಂ, ಪಾಶಹರಣಪರಿಣತನಪ್ಪ ಕಾಶಿನಾಥನುಂ, ಮನ್ನಣೆಯ ಮಹಿಮೆವೆತ್ತ ಕಿನ್ನರ ಬೊಮ್ಮಯ್ಯನುಂ, ಧರಾತಳದಯಾ ಪರನಾದ ದಸರಯ್ಯನುಂ, ಭರ್ಗಪ್ರಿಯಚರಿತ ಗೊಗ್ಗಯ್ಯನುಂ, ಕಾರ್ಕಶ್ಯರಹಿತಹೃದಯ ನೆನಿಪ ಕಕ್ಕಯ್ಯನುಂ, ಸಲ್ಲಲಿತ ಪ್ರಭಾವಂಬಡೆದಲ್ಲಮದೇವನುಂ, ಮಾಧುರ್ಯ ಗುಣಮಹಿತನಾದ ಮಧುವಯ್ಯನುಮಿವರ್ಮೊದಲಾದ ನಿರುಪಮ ಸಮಗ್ರೋದಗ್ರಭಕ್ತಿ ಜ್ಞಾನ ವಿರತಿ ವಿಳಸಿತರಾದ ಮಹಾನುಭಾವರ್ನೆರೆದು ಚರಲಿಂಗಮೂರ್ತಿಗಳ್ವೆರಸು ಬಸವ ನಸುವಂ ವಿಸರ್ಜಿಸೆ ವಿಷಾದಂಬಡುತ್ತುಮಿರ್ದೆನ್ನಂ ನಿಮ್ಮಂಘ್ರಿ ಗಳೆಡೆಗಿದನೆಲ್ಲಮಂ ಬಿನ್ನವಿಸಿ ತಳ್ವದೊಡಗೊಂಡು

ಗುಣನಿಧಿಯೆನಿಸಿರುವ ಸಕಳೇಶ ಮಾದರಸನೂ ಪ್ರಪಂಚದ ಜನರಿಂದ ಶ್ಲಾಘಿಸಲ್ಪಡುವ ಜಗದೇವಯ್ಯನೂ, ಕಲಿಯುಗ ಸಂಬಂಧವಾದ ಪಾಪ ನಾಶಕನೆನಿಸಿದ ಕಲಿಕೇತ ಬ್ರಹ್ಮಯ್ಯನೂ, ಇಷ್ಟ ಪ್ರಾಣ ಭಾವ ಲಿಂಗಾರಾಧಕನೆನಿಸಿದ ತೆಲಗು ಜೊಮ್ಮಯ್ಯನೂ, ಶಂಕರನ ಬಿರುದಿನ ಭಂಟನೆನಿಸಿದ ಶಂಕರದೇವನೂ, ಸಮರ್ಥವಾದ ಆಚಾರದಲ್ಲಿ ಕುಶಲನೆನಿಸಿದ ಬಾಚಿರಾಜಯ್ಯನೂ, ಕಲಿಯುಗ ಸಂಬಂಧದ ಕ್ಲೇಶಗಳನ್ನು ನಾಶ ಮಾಡುವವನೆನಿಸಿದ ಕೇಶಿರಾಜಯ್ಯನೂ, ದಾಸೋಹಂಭಾವವು (ಜೀವನಕ್ಕೆ) ಅಳವಟ್ಟ, ದಾಸಿಮಯ್ಯನೂ, ಪಾಪ ವಂಚನೆಗಳನ್ನು ದೂರಗೊಳಿಸಿದ ಮೊರನವೇಮಯ್ಯನೂ, ಶಿವಶರಣರ ಸೇವಾಭಾವನೆಯಿಂದ ಉತ್ಕೃಷ್ಟನೆಂದು ಪ್ರಸಿದ್ಧನಾದ ಗಣದಾಸಿ ಭೀಮಯ್ಯನೂ, ದೇವತೆಗಳಿಂದಲೂ ಶ್ಲಾಘನೆ ಮಾಡಿಸಿಕೊಳ್ಳುವ ಚರಿತ್ರೆಯುಳ್ಳ ಸುರಗಿಯ ಚೌಡಯ್ಯನೂ, ಶ್ರೇಷ್ಠ ಲೀಲಾಮೂರ್ತಿಯೆನಿಸಿದ ಕಲ್ಲಿದೇವನೂ, ಮಾಯಾ ಪಾಶವನ್ನು (ಅಥವಾ ಯಮನ ಪಾಶವನ್ನು) ನಾಶಪಡಿಸುವಲ್ಲಿ ಸಮರ್ಥನೆನಿಸಿದ ಕಾಶಿನಾಥನೂ, ಪೂಜ್ಯತೆಯ ಮಹಿಮಾ ವಿಶೇಷವನ್ನು ಹೊಂದಿರುವ ಕಿನ್ನರಿಯ ಬೊಮ್ಮಯ್ಯನೂ, ಭೂಮಂಡಲದ ಸಕಲ ವಸ್ತು ವಿಶೇಷದಲ್ಲೂ ದಯಾಶಾಲಿಯೆಂದೆ ನಿಸಿದ ದಸರಯ್ಯನೂ, ಶಿವನ ಪ್ರೀತಿಗೆ ಪಾತ್ರವಾದ ಚರಿತ್ರೆಯುಳ್ಳ ಗೊಗ್ಗಯ್ಯನೂ, ಕಾಠಿಣ್ಯ ರಹಿತವಾದ ಹೃದಯವುಳ್ಳವನೆಂದೆನಿಸಿದ ಕಕ್ಕಯ್ಯನೂ, ಮನೋಹರವಾದ ಮಹಿಮಾ ವಿಶೇಷವನ್ನು ಪಡೆದಿರುವ ಅಲ್ಲಮಪ್ರಭು ದೇವನೂ, ಮಧುರವಾದ ಗುಣದಿಂದ ಕೂಡಿದ ಮಧುವರಸನೂ,—ಇವರೇ ಮೊದಲಾದ ಸಮಗ್ರವಾಗಿ ಉತ್ಕೃಷ್ಟ ವೆನಿಸಿರುವ ಭಕ್ತಿ, ಜ್ಞಾನ, ವೈರಾಗ್ಯಗಳಿಂದ ಪ್ರಕಾಶಮಾನರಾದ ಮಹಾನುಭಾವರೆಲ್ಲ ಸೇರಿ, ಜಂಗಮ ಮೂರ್ತಿಗಳು ಸಹಿತವಾಗಿ, ಬಸವಣ್ಣನು ಪ್ರಾಣವನ್ನು ವಿಸರ್ಜಿಸಲಾಗಿ,

---

1 ಲಿ(ಅ) 2 × (ಮು)

ಬರ್ಪುದೆಂದು ಕಳುಪಿದರಂದವಂ ನುಡಿಯೆ ಮಾಚಿದೇವಂ ಕೇಳ್ದು ಮೆಯ್ಯುರ್ವಿ ಪೊಂಪುಳಿವೋಗಿ ಸಸಂಭ್ರಮಂ ನಿರೀಕ್ಷಿಸಿ—

ಎಂತೆಂತು ಮಗುಳ್ದುಮೊರ್ಮೆ ನಿ
ತಾಂತಂ ಪೇಳ್ವೇಳ್ ಶಿವೈಕ್ಯನಸುವಿನೊಳಸುವಂ
ತಾಂ ತಳ್ವದೆ ಬೆರಸಿದನೆ ಮ
ಹಾಂತಂ ವೃಷಭೇಂದ್ರನಮಮ ಶುಭಗುಣಸಾಂದ್ರಂ ೮

ಪೊಡವಿಯೊಳೆ ಮೃಡನ ಮಾಯೆಯ
ತೊಡಂಕನಪಹರಿಸಿ ತನ್ನ ಭಾಷೆಯ ಚಲಮಂ
ನುಡಿದಂತೆ ನಡೆದು ತೋಱಿದ
ನೆಡೆಯುಡುಗದೆ ಭಕ್ತಿಭಾಮಿನೀಮುಖಮುಕುರಂ ೯

ಪಡುಗಡಲೊಳರ್ಕನುದಯಿಸಿ
ದೊಡಮಂಬುಧಿ ಮೇರೆದಪ್ಪಿದೊಡಮಮರನಗಂ
ನಡೆಗೊಂಡೊಡಮಾಕಾಶಂ
ಕೆಡೆದೊಡಮೇಂ ಬಸವಭಾಷೆ ತೊದಳಾದಪುದೇ ೧೦

ಶರಣನಸು ಪೋಗೆ ತನ್ನಯ
ನಿರುಪಮ ಶಪಥಕ್ರಮೋಕ್ತಿಯಂ ನೆನೆದಿಳೆಗ

ವಿಷಾದಗೊಂಡವರಾಗಿ ನನ್ನನ್ನು ತಮ್ಮ ಪಾದಗಳಿಗೆ ಈ ವಿಷಯವನ್ನೆಲ್ಲ ಬಿನ್ನವಿಸಿ ತಡಮಾಡದೆ ತಮ್ಮನ್ನು ಕರೆದುಕೊಂಡು ಬರಬೇಕೆಂದು ಕಳುಹಿಸಿದರು', ಎಂದು ಆ ಪಡಿಯರನಾದ ಬಾಚಯ್ಯನು ಹೇಳಲು, ಮಾಚಿದೇವನು ಕೇಳಿ, ಉತ್ಸಾಹದಿಂದ ರೋಮಾಂಚನಗೊಂಡವನಾಗಿ ಸಂಭ್ರಮದಿಂದ ಕೂಡಿ ನಿರೀಕ್ಷಿಸುತ್ತ—೮. 'ಹೇಗೆ ಹೇಗೆ ನಡೆಯಿತು ? ಇನ್ನೊಮ್ಮೆ ವಿವರವಾಗಿ ತಿಳಿಸು ! ಮಹಾಮಹಿಮನೂ, ಮಂಗಳಕರವಾದ ಗುಣಗಳಿಂದ ಪರಿಪೂರ್ಣನೂ ಆದ ಆ ಬಸವೇಶ್ವರನು ಶಿವೈಕ್ಯನಾದ (ಕೇತಯ್ಯನ) ಪ್ರಾಣದೊಡನೆ ತನ್ನ ಪ್ರಾಣವನ್ನೂ ಬೆರಸಿದನೇ ! ಅಮಮ !! ೯. 'ಭಕ್ತಿಯೆಂಬ ಸ್ತ್ರೀಯ ಮುಖಕ್ಕೆ ಕನ್ನಡಿಯೆಂದೆನಿಸಿದ ಭೂಮಿಯಲ್ಲಿ ಪರಮೇಶ್ವರನ ಮಾಯೆಯ ಪ್ರತಿಬಂಧನವನ್ನು ಅಪಹರಿಸಿ ತಾನು ಮಾಡಿದ ಭಾಷೆಯ ಛಲವನ್ನು ಚಾಚೂ ತಪ್ಪದ ಹಾಗೆ ನುಡಿದಂತೆ ನಡೆದು ತೋರಿಸಿದನು'. ೧೦. 'ಪಶ್ಚಿಮ ಸಮುದ್ರದಲ್ಲಿ ಸೂರ್ಯನು ಹುಟ್ಟಿದರೂ, ಸಮುದ್ರವು ದಡವನ್ನು ಮಿಕ್ಕಿದರೂ, ಮೇರುಪರ್ವತವು ನಡೆಯುವಿಕೆಯಿಂದ ಕೂಡಿದರೂ, ಆಕಾಶವು ಕಳಚಿ ಬಿದ್ದರೂ, ಬಸವಣ್ಣನ ಭಾಷೆಯು ಸುಳ್ಳಾದೀತೇ ?' ೧೧. ಶರಣನಾದ ಮೇದರಕೇತಯ್ಯನ ಪ್ರಾಣವು ಹೋಗಲು (ಬಸವಣ್ಣನು) ತನ್ನ ಅನುಪಮವಾದ ಪ್ರತಿಜ್ಞೆಯ ಕ್ರಮವನ್ನು

ಚ್ಚರಿಯೊದವೆ ನಿಜಪ್ರಾಣಮ
ನಿರದಿತ್ತಂ ಬಸವನೆಂದೊಡೇವಣ್ಣಿಪುದೋ ೧೧

ವ॥ ಎಂದು ಮಾಚಿದೇವಂ ಪಲವಂದದಿಂ ನಲಿಸಲಿದು ಕೊಂಡಾಡುತ್ತುಂ ಗಣಸಭೆಗೇಳ್ತಂದು ಸಡಗರಂ ಮಿಗೆ ಭಕ್ತಿಯಿಂ ಪೊಡಮಡಲೊಡನಲ್ಲಿ ಶರಣಗಣಂ ಕಂಡು ಸತ್ಕರಿಸಿ ಬನ್ನಿಮೆಂದಾತನಂ ಕೆಯ್ವಿಡಿದು ಮೂರ್ತಿಗೊಳಿಸಿ—

ನೋಡಿರೆ ಮಾಚಿದೇವ ಬಸವೇಶನ ಭಕ್ತಿಯದೊಂದು ಪೆರ್ಮೆಯುಂ
ಪಾಡಿದ ತನ್ನ ಗೀತದಳವಂ ನೆನೆದಿಂತಸುವಿಟ್ಟ ಭಕ್ತನಂ
ನಾಡೆ ನಿರೀಕ್ಷಿಸುತ್ತೊಡನೆ ತನ್ನಸುವಂ ಸಲಿಸಿರ್ದನದ್ಭುತಂ
ಮೂಡೆ ಧರಿತ್ರಿಗೀ ಬಸವನೀತನ ಬಣ್ಣಿಸಲಾರ್ಗೆ ಗೋಚರಂ ೧೨

ಖಂಡಶಶಿಮೌಳಿ ಭಕ್ತನ
ಕೊಂಡೊಯ್ದೊಡೆ ಬಸವನಂತಿರಸುವಿತ್ತವರಂ
ಕಂಡರೊಳಂ ಕೇಳ್ದರೊಳಂ
ಕಂಡಱಿಯೆವು ಕೇಳ್ದುಮಱಿಯೆವೀ ಭೂತಳದೊಳ್ ೧೩

ವಿದಿತಪವನಾಂಗಜಂಗಮ
ಕಿದು ಯುಕ್ತಂ ಪ್ರಾಣಮಾರುತಾರ್ಪಣಮೆನುತುಂ
ಪದೆದದನರ್ಪಿಪ ಜಾಣ್ಮಂ
ದುದು ಗಡ ಬಸವಂಗೆ ನೋಳ್ಪೊಡೀ ವಸುಮತಿಯೊಳ್ ೧೪

ನೆನೆದು ಲೋಕಕ್ಕೆ ಆಶ್ಚರ್ಯವುಂಟಾಗುವ ಹಾಗೆ ತನ್ನ ಪ್ರಾಣವನ್ನು ತಪ್ಪದೆ ಕೊಟ್ಟನೆಂದರೆ ಅದನ್ನು ಏನು ವರ್ಣಿಸುವುದೋ !' ವ॥ ಹೀಗೆಂದು ಮಡಿವಳ ಮಾಚಿದೇವನು ಹಲವಾರು ವಿಧದಲ್ಲಿ ನಲಿ ನಲಿದು ಕೊಂಡಾಡುತ್ತ, ಶಿವಗಣ ಸಭೆಗೆ ಅತ್ಯಂತ ಸಡಗರದಿಂದ ಹೊರಟುಬಂದು ಭಕ್ತಿಯಿಂದ ನಮಸ್ಕಾರ ಮಾಡಲಾಗಿ ಅಲ್ಲಿದ್ದ ಶರಣ ಸಮೂಹವು ಮಾಚಿದೇವರನ್ನು ಕಂಡು ಸತ್ಕಾರ ಮಾಡಿ, 'ಬನ್ನಿರಿ' ಎಂದೆನ್ನುತ್ತ ಆತನನ್ನು ಕೈ ಹಿಡಿದು ಕರೆದೊಯ್ದು ಕುಳ್ಳಿರಿಸಿ—೧೨. 'ಮಾಚಿದೇವನೇ, ಬಸವಣ್ಣನ ಭಕ್ತಿ ಜೀವನದ ಹಿರಿಮೆಯನ್ನು ನೋಡಿದಿರಾ ! ಬಸವಣ್ಣನು ತಾನು ಹಾಡಿದ ಪ್ರತಿಜ್ಞಾ ವಚನದ ರೀತಿಯನ್ನು ನೆನೆದು ಪ್ರಾಣ ಬಿಟ್ಟ ಭಕ್ತನಾದ ಮೋದರಕೇತಯ್ಯನನ್ನು ಚೆನ್ನಾಗಿ ನಿರೀಕ್ಷಿಸಿ ಭೂಮಂಡಲಕ್ಕೇ ಅದ್ಭುತವು ಮೂಡುವ ಹಾಗೆ ಆ ಕೂಡಲೇ ತನ್ನ ಪ್ರಾಣವನ್ನೂ ಸಲ್ಲಿಸಿ ಇದ್ದಾನೆ. ಈತನ ಈ ಸ್ಥಿತಿಯನ್ನು ವರ್ಣಿಸುವುದಕ್ಕೆ ಯಾರಿಗೆ ತಿಳಿದೀತು !' ೧೩. 'ಈ ಭೂಮಂಡಲದಲ್ಲಿ ಚಂದ್ರಕಳಾಧರನಾದ ಶಿವನು ತನ್ನ ಭಕ್ತನನ್ನು ಕರೆದುಕೊಂಡು ಹೋದರೆ (ಶಿವಭಕ್ತನು ಸತ್ತರೆ), ಬಸವಣ್ಣನ ಹಾಗೆ ಪ್ರಾಣವನ್ನು ಕೊಟ್ಟವರನ್ನು ನಾವು ಕಂಡವರಲ್ಲ, ನೋಡಿದವರಲ್ಲ ಕಂಡೂ ಅರಿಯೆವು ! ಕೇಳಿಯೂ ತಿಳಿಯೆವು'. ೧೪. 'ವಿಖ್ಯಾತವಾದ ವಾಯುವೇ ಅಂಗವಾದ ಜಂಗಮಕ್ಕೆ ಈ ರೀತಿಯ ಪ್ರಾಣ ವಾಯು ಸಮರ್ಪಣೆಯು, ಯುಕ್ತವಾದದ್ದು ? ಎಂದೆನ್ನುತ್ತ 'ಪ್ರೀತಿಯಿಂದ ಅದನ್ನು ಅರ್ಪಿಸುವ ಜಾಣತನವು ಈ ಭೂಮಂಡಲದಲ್ಲಿ ವಿಚಾರಿಸಿ

ವ॥ ಎಂದು ಶರಣಸಮುದಯಂ ಬಸವನೇಳ್ಗೆಯಂ ಕೀರ್ತಿಸುತ್ತುಮಿರ್ಪಿನಮಲ್ಲಿ ಮತ್ತೆ ಕೆಲಂಬ ಭಕ್ತರಳಲ್ದು ಮಱುಗಿ—

ಜಂಗಮಲಿಂಗ ಸಂಕಲಿತಭಕ್ತಿಪರಾಯಣ ಜಂಗಮಕ್ರಿಯಾ
ಸಂಗತ ಜಂಗಮಪ್ರಕರ ಪಾವನಪಾದಸರೋರುಹೋಲ್ಲಸ
ದ್ಭೃಂಗ ಸಮಸ್ತಜಂಗಮಸಮರ್ಚನಲೋಲುಪ ಜಂಗಮಾಳಿಸಂ
ಸಂಗತಜೀವಜಂಗಮಸುರದ್ರುಮ ಪೋಪುದೆ ನೀಂ ವೃಷಾಧಿಪಾ ೧೫

ಕಲ್ಯಾಣಮೂರ್ತಿ ನೀನಿರೆ
ಕಲ್ಯಾಣಮಿದೆನಿಪ್ಪುದಲ್ತೆ ಮಿಸುಪೀ ನಗರಂ
ಕಲ್ಯಾಣಮಲ್ಲದಿರ್ದೊಡ
ಕಲ್ಯಾಣಂ ತಾನೆನಿಪ್ಪುದೀ ಭೂತಳದೊಳ್ ೧೬

ಜ್ಞಾನಾಭಿವೃದ್ಧಿ ಭಕ್ತಿ ವಿ
ಧಾನಂ ಶಿವಧರ್ಮಸಂಪದಂ ಶಿವಚರಣ
ಧ್ಯಾನರತಿಯೆಂಬಿವೆಲ್ಲಂ
ನೀನಿಲ್ಲದೊಡೊಳವೆ ಪೇಳ್ಗುಣಾರ್ಣವಚಂದ್ರಾ ೧೭

ನೀನುಳ್ಳೊಡುಂಟು ಶರಣ ಜ
ನಾನಂದಂ ತ್ರಿವಿಧಲಿಂಗ ಚರಣಾಂಭೋಜಾ

ನೋಡಿದರೆ ಬಸವಣ್ಣನೊಬ್ಬನಿಗೇ ಪ್ರಾಪ್ತವಾಯಿತಲ್ಲವೇ !' ವ॥ ಹೀಗೆಂದು ಶರಣ ಸಮುದಾಯವು ಬಸವಣ್ಣನ ಹಿರಿಮೆಯನ್ನು ಕೊಂಡಾಡುತ್ತಿರುವಷ್ಟರಲ್ಲಿ ಮತ್ತೆ ಕೆಲವು ಭಕ್ತರು ಸಂಕಟದಿಂದ ಮರುಗಿದವರಾಗಿ—೧೫. 'ಜಂಗಮರಲ್ಲಿ ಕೂಡಿಸಲ್ಪಟ್ಟ ಭಕ್ತಿಯಲ್ಲಿ ಆಸಕ್ತನಾದವನೂ, ಜಂಗಮ ಸಂಬಂಧವಾದ ವ್ಯವಹಾರದಿಂದ ಕೂಡಿರುವವನೂ, ಜಂಗಮ ಸಮೂಹದ ಪರಿಶುದ್ಧವಾದ ಚರಣವೆಂಬ ಕಮಲಕ್ಕೆ ಶೋಭಿಸುವ ಭೃಂಗದೋಪಾದಿಯಲ್ಲಿರುವವನೂ, ಜಂಗಮ ಪಾದ ಪೂಜೆಯಲ್ಲಿ ಆಸಕ್ತಿಯುಳ್ಳವನೂ, ಜಂಗಮ ಸಮೂಹದಲ್ಲಿ ಚೆನ್ನಾಗಿ ಸೇರಿಹೋದ ಪ್ರಾಣವುಳ್ಳವನೂ, ಜಂಗಮರಿಗೆ ಕಲ್ಪವೃಕ್ಷಪ್ರಾಯನೂ ಆದ ಬಸವಣ್ಣನೇ ನೀನು (ಈ ರೀತಿ) ಹೋಗುವುದೇ ?' ೧೬. 'ಮಂಗಳಕರ ಶರೀರಿಯೇ, ನೀನಿದ್ದರೆ ಶೋಭಿಸುವ ಈ ಕಲ್ಯಾಣನಗರವು ಮಂಗಳಕರವಾದುದು (ಕಲ್ಯಾಣವಾದುದು) ಎಂದು ಎನಿಸುವುದಲ್ಲವೇ ? ಮಂಗಳ ಸ್ವರೂಪನಾದ ನೀನು ಇಲ್ಲದಿದ್ದರೆ, ಭೂಮಂಡಲದಲ್ಲಿ ಈ ನಗರವು ಅಮಂಗಳವೆನಿಸುವುದಿಲ್ಲವೇ?' ೧೭. 'ಸದ್ಗುಣಗಳೆಂಬ ಸಮುದ್ರಕ್ಕೆ ಚಂದ್ರಪ್ರಾಯನಾದ ಬಸವೇಶ್ವರನೇ, ಶಿವ ಜ್ಞಾನದ ಅಭಿವೃದ್ಧಿ, ಶಿವಭಕ್ತಿಯ ವಿಧಾನ, ಶಿವಧರ್ಮದ ಸಂಪತ್ತು, ಶಿವನ ಪಾದದ ಧ್ಯಾನದಲ್ಲಿ ಪ್ರೀತಿ—ಎನಿಸುವ ಇವೆಲ್ಲ ನೀನಿಲ್ಲದಿದ್ದರೆ ಇರುತ್ತವೆಯೇ ? ಹೇಳು'. ೧೮. 'ಸನ್ಮಾನ್ಯರೆನಿಸಿದ ಜನರಿಗೆ ಕಲ್ಪವೃಕ್ಷಪ್ರಾಯನಾದ ಬಸವಣ್ಣ, ನೀನು ಇದ್ದರೆ ಶರಣ ಜನರಿಗೆ ಸಂತೋಷವುಂಟು. ಇಷ್ಟಲಿಂಗ, ಪ್ರಾಣಲಿಂಗ, ಭಾವ

ನೂನಪರಿಪೂಜನಾರತಿ
ಮಾನಿತ ಶುಭವೃತ್ತಿಮಾನ್ಯಜನಮಂದಾರಾ ೧೮

ಮಾಮರನಿಲ್ಲದಾರವೆ ಮಹೀವರನಿ[1]ಲ್ಲದ ಭೂರಿರಾಜ್ಯಮು
ದ್ದಾಮಶಶಾಂಕನಿಲ್ಲದಿರುಳುತ್ಪಲವಿಲ್ಲದ ವಾರಿಜಾಕರಂ
ತಾಮರಸಾಪ್ತನಿಲ್ಲದ ಪಗಲ್ ನಯಮಿಲ್ಲದ ಬಾಳ್ಕೆ ದಿವ್ಯಸೌ
ದಾಮಿನಿಯಿಲ್ಲದಿರ್ಪ ಮುಗಿಲಂಬಕಮಿಲ್ಲದನಾನನಾಂಬುಜಂ ೧೯

ಶ್ರುತಿಯಿಲ್ಲದ ಪಾರ್ವಂ ಸ
ನ್ಮತಿಯಿಲ್ಲದ ಮಂತ್ರಿ ಸತ್ಯಮಿಲ್ಲದ ತಪದು
ನ್ನತಿ ಕವಿತೆಯಿಲ್ಲದ ವಿದ
ಗ್ಧತೆ ಬಸವಾಧೀಶನಿಲ್ಲದಿಳೆ ಸೊಗಯಿಕುಮೇ ೨೦

ದಿನಮಣಿಯಿಲ್ಲದೊಡಂಬುಜ
ವನಮಲರ್ವುದೆ ಚಂದ್ರನಿಲ್ಲದೊಡೆ ಕುಮುದಕುಲಂ
ನನೆಕೊನೆವೋಪುದೆ ಶರಣ
ರ್ಗೆ ನಿತಾಂತಂ ಬಸವನಿಲ್ಲದೊಡೆ ಮುದಮೊಳವೇ ೨೧

ಶರಣಲಲಾಮ ಸತ್ಯಗುಣಧಾಮ ಪವಿತ್ರಚರಿತ್ರ ಸಜ್ಜನಾಂ
ಬುರುಹದಿನೇಶ ಭಕ್ತಿನಿಧಿಕೋಶ ಕೃತಾಂತಲತಾಂತಬಾಣಸಂ
ಹರನವತಾರ ನಿರ್ಜಿತವಿಕಾರ ನಿಜಾಂಗಭುಜಂಗಭೂಪ ಭಾ
ಸುರಮತವಾರ್ಧಿಚಂದ್ರ ವೃಷಭೇಂದ್ರ ಭವಾಂಬುಧಿಕುಂಭಸಂಭವಾ ೨೨

ಧಾರಿಣಿಯೊಳ್ಜಂಗಮತತಿ
ಯಾರಂ ಬೇಡುಗುಮುದಾರನಾಶ್ರೈಸುಗುಮಿ

ಲಿಂಗಗಳೆಂದೆನಿಸುವ ತ್ರಿವಿಧ ಲಿಂಗಗಳ ಚರಣಕಮಲಗಳ ಪರಿಪೂರ್ಣ ಪೂಜೆಯ ವಿಶ್ವಾಸವುಂಟು. ಮನ್ನಣೆಗೊಂಡ ಮಂಗಳಕರವಾದ ಕಾಯಕ ವೃತ್ತಿಯುಂಟು.' (ನೀನಿಲ್ಲದಿದ್ದರೆ ಇವೆಲ್ಲ ಇರುವುದಿಲ್ಲವೆಂದು ಭಾವ) ೧೯–೨೦. 'ಮಾವಿನ ಮರವಿಲ್ಲದ ಉದ್ಯಾನವನ, ರಾಜನಿಲ್ಲದ ಅಧಿಕವಾದ ರಾಜ್ಯ, ಉತ್ಕೃಷ್ಟ ಚಂದ್ರನಿಲ್ಲದ ರಾತ್ರಿ, ನೈದಿಲೆಯಿಲ್ಲದ ಸರೋವರ, ಸೂರ್ಯನಿಲ್ಲದ ಹಗಲು, ನೀತಿಯಿಲ್ಲದ ಜೀವನ, ಮನೋಹರವಾದ ಮಿಂಚಿಲ್ಲದಿರುವ ಮೋಡ, ಕಣ್ಣಿಲ್ಲದ ಮನುಷ್ಯನ ಮುಖ, ವೇದ ಜ್ಞಾನವಿಲ್ಲದ ಬ್ರಾಹ್ಮಣ, ಶ್ರೇಷ್ಠ ಬುದ್ಧಿಶಕ್ತಿಯಿಲ್ಲದ ಮಂತ್ರಿ, ಸತ್ಯವಿಲ್ಲದ ತಪಸ್ಸಿನ ಔನ್ನತ್ಯ, ಕವಿತಾ ಶಕ್ತಿಯಿಲ್ಲದ ಪ್ರೌಢಿಮೆ, ಬಸವೇಶ್ವರಾ, ನೀನಿಲ್ಲದ ಭೂಮಂಡಲ—(ಇವೆಲ್ಲ) ಶೋಭಿಸುತ್ತವೆಯೇ ?' ೨೧. 'ಸೂರ್ಯನಿಲ್ಲದಿದ್ದರೆ ಕಮಲಗಳ ಸಮೂಹವು ಅರಳುವುದೇ ? ಚಂದ್ರನಿಲ್ಲದಿದ್ದರೆ, ಕನ್ನೈದಿಲೆಗಳ ಸಮೂಹವು ಸಂತೋಷದಿಂದ ಕೂಡುವುದೇ ? ಶರಣರಿಗೆ ನಿಶ್ಚಯವಾಗಿ ಬಸವಣ್ಣನಿಲ್ಲದಿದ್ದರೆ ಸಂತೋಷವುಂಟೇ ?' ೨೨–೨೩. 'ಶರಣರ ಆಭರಣಪ್ರಾಯನೇ, ಸತ್ಯ ವಿಶಿಷ್ಟವಾದ

---

1 ೦(ಜ)

ನ್ನಾರಂ ಕಾಡುಗುಮಾರೊಡ
ನೋರಂತೆ ವಿನೋದಕೇಳಿಯಂ ನಟಿಯಿಸುಗುಂ ೨೩

ಇನ್ನೆಲ್ಲಿಯದಕಟೆಮ್ಮಯ
ಹೃನ್ನಳಿನವಿಕಾಸದೇಳ್ಗೆವಡೆದೈಸಿರಿ ಮೇ
ಣಿನ್ನೆಲ್ಲಿಯದಭಿಮತಸುಖ
ಮಿನ್ನೆಲ್ಲಿಯದೋವೊ ಬಸವ ನೀಂ ಪೋದುದಱಿಂ ೨೪

ಹರಪಾದಾಂಬುಜದಲ್ಲಿ ಚಿತ್ತಮನುದಂಚತ್ಕೀರ್ತಿಯಂ ದಿಕ್ಸಮು
ತ್ಕರದೊಳ್ ಚನ್ನವೃಷಾಂಕನೊಳ್ವಿಮಳ ಸಮ್ಯಜ್ಞಾನಮಂ ಪ್ರಾಣಮಂ
ಚರರೂಪಾನ್ವಿತಕೇತಿದೇವನೊಳೆ ನೀನಿಟ್ಟಂತೆ ನಿನ್ನತ್ಯುದಾ
ರರಸಶ್ರೀಯುನದಾರೊಳಿಟ್ಟುತಳರ್ದೈ ಪೇಳ್ಭಕ್ತಚೂಡಾಮಣೀ ೨೫

ವ॥ ಎಂದಿಂತು ಭಕ್ತತತಿ ಪಲವಂದದಿಂ ಪಲುಂಬಿ ಪಳಯಿಸುತ್ತುಮಿರೆ ಮಾಚಿದೇವಂ ಮಾಣಿಸಿ

ಪ್ರಮಥತತಿರುದ್ರಸಮುದಯ
ಮುಮೆಯೆಮ್ಮ ಪುರಾತನರ್ಕಳಱಿಯದ ತೆಱದಿಂ

ಗುಣಗಳಿಗೆ ಮನೆಯಾಗಿರುವವನೇ, ಪವಿತ್ರವಾದ ಚರಿತ್ರೆಯುಳ್ಳವನೇ, ಸಜ್ಜನರೆಂಬ ಕಮಲಕ್ಕೆ ಸೂರ್ಯಪ್ರಾಯನಾದವನೇ, ಭಕ್ತಿಯೆಂಬ ನಿಧಿಗೆ ಭಂಡಾರನಾದವನೇ, ಯಮ ಮತ್ತು ಮನ್ಮಥ (ಲತಾಂತಬಾಣ) ರುಗಳನ್ನು ಸಂಹರಿಸಿದವನೇ, ಶಿವನ ಅವತಾರನೆನಿಸಿದವನೇ, ಮನೋವಿಕಾರಗಳನ್ನು ಜಯಿಸಿದವನೇ, ಸರ್ವಾಂಗದಲ್ಲೂ ಶಿವ ಕಳೆಯಿಂದ ಕೂಡಿದವನೇ, ಶ್ರೇಷ್ಠವಾದ ವೀರಶೈವ ಮತವೆಂಬ ಸಮುದ್ರವನ್ನುಕ್ಕಿಸುವ ಚಂದ್ರನೇ, ಸಂಸಾರವೆಂಬ ಸಮುದ್ರಕ್ಕೆ ಅಗಸ್ತ್ಯನಂತಿರುವವನೇ, ಹೇ ಬಸವೇಶ್ವರಾ, ಈ ಭೂಮಿಯಲ್ಲಿ ಇನ್ನು ಜಂಗಮ ಸಮೂಹವು ಯಾರನ್ನು ಬೇಡಬೇಕು ? ಅದಾರನ್ನು ಆಶ್ರಯಿಸಬೇಕು ? ಇನ್ನಾರನ್ನು ಕಾಡಬೇಕು ? ಯಾರೊಡನೆ ವಿನೋದ ಕ್ರೀಡೆಯನ್ನು ಚೆನ್ನಾಗಿ ನಟಿಸಬೇಕು ?' ೨೪. 'ಬಸವಣ್ಣ ನೀನು ಹೋದುದರಿಂದ ನಮ್ಮ ಹೃದಯ ಕಮಲಗಳನ್ನು ಅರಳಿಸುವ ಏಳ್ಗೆಯನ್ನು ಹೊಂದಿದ ಐಶ್ವರ್ಯವು ಇನ್ನೆಲ್ಲಿಯದು ? ಅಕಟಾ ! ಇಷ್ಟಾರ್ಥವನ್ನು ಪಡೆಯುವ ಸುಖವು ಇನ್ನು ನಮಗೆ ಎಲ್ಲಿಯದು? ಓಹೋ!' ೨೫. 'ಹೇ ಭಕ್ತರ ಚೂಡಾಮಣಿಯೆನಿಸಿದ ಬಸವಣ್ಣ ಹರನ ಪಾದಕಮಲದಲ್ಲಿ ಚಿತ್ತವನ್ನೂ, ದಿಕ್ಕುಗಳ ಸಮೂಹದಲ್ಲಿ ಉತ್ಕೃಷ್ಟವಾದ ಯಶಸ್ಸನ್ನೂ, ಚನ್ನಬಸವೇಶ್ವರ ನಲ್ಲಿ ಪರಿಶುದ್ಧವಾದ ಸಮ್ಯಕ್ ಜ್ಞಾನವನ್ನೂ, ಜಂಗಮ ರೂಪದಿಂದ ಕೂಡಿದ ಮೇದಾರಕೇತಯ್ಯನಲ್ಲಿ ಪ್ರಾಣವನ್ನೂ—ನೀನು ಇಟ್ಟ ಹಾಗೆ ನಿನ್ನ ಅತ್ಯಂತ ಔದಾರ್ಯ ದಿಂದ ಕೂಡಿದ ಸಂಪತ್ತನ್ನು ಯಾರಲ್ಲಿಟ್ಟು ಹೊರಟು ಹೋದೆಯಯ್ಯಾ ! ಹೇಳು !!' ವ॥ ಹೀಗೆಂದು ಭಕ್ತಸಮುದಾಯವು ಹಲವಾರು ಪ್ರಕಾರದಿಂದ ಹಲುಬಿ ಅಳು ತ್ತಿರಲು ಮಾಚಿದೇವನು (ಅವರೆಲ್ಲರ ಅಳುವಿಕೆಯನ್ನು) ಹೋಗಲಾಡಿಸಿ ೨೬. ಚಂದ್ರ ಧರನಾದವನು ಈ ಪ್ರಮಥರ ಸಮೂಹ, ರುದ್ರರುಗಳ ಸಮುದಾಯ, ನಮ್ಮ ಪುರಾತನ

ಹಿಮಕರಧರನೀ ಭಕ್ತೋ
ತ್ತಮರಸುವಂ ತನ್ನೊಳಿಟ್ಟೊಡಾಂ ಸೈರಿಪೆನೇ ೨೬

ವ॥ ಎಂದುತ್ಕಟಿಸಿ ನಿಂದು ಭೂಭಾಗಭಾಳನೇತ್ರಂ ವಿಜ್ರುಂಭಿಸಿ—

ಶರಣಪ್ರಾಣವ್ರತಭಾ
ಸುರ ಬಸವಂ ಶರಣನಳಿಯೆ ಹರಣಮನಿತ್ತು
ರ್ವರೆಯಱಿಯೆ ವಿಜಯನಾದಂ
ಹರನಿವರಂ ನುಂಗಿ ಪೊಲ್ಲದೆಸಗಿದನಲ್ತೇ ೨೭

ವ॥ ಎಂದು ಮತ್ತಮಿರದೆ—

ಚರಚರಣಾಬ್ಜ ಪೂಜನಪರಾಯಣ ಭಕ್ತರನಿಂತಕಾಲದೊಳ್
ಪುರಹರ ನೀಂ ವಿಚಾರಿಸದೆ ನಿನ್ನೊಳಡಂಗಿಸಿಕೊಳ್ವುದೇಂ ಸದಾ
ಚರಣಮೆ ಚೆಚ್ಚರಂ ಕುಡು ಕುಡೀಗಳೆ ತಳ್ವದೆ ಕೇತಿದೇವನಾ
ಹರಣಮನೆಯ್ದುಗುಂ ಬಸವಜೀವನಮೊಲ್ದದಱೊಂದುಗೂಡುತುಂ ೨೮

ವ॥ ಎಂದು ಪನ್ನತಿಕೆಯಿಂ ನುಡಿದು—

ಮೃಡಭಕ್ತರಸುವನಭವಂ
ಕುಡದೀಗಳ್ತಳ್ಗುಗೆಯ್ದುನಾಂ ಸೈರಿಪೆನ
ಲ್ತೆಡೆಯಃಡುಗದೆ ಡಂಗುರವುಂ
ಪೊಡೆದಪೆನೆಂದಾರ್ದು ಶರಣನುದ್ಘೋಷಿಸಿದಂ ೨೯

ರುಗಳು ಇವರೆಲ್ಲರಿಗೆ ತಿಳಿಯದ ಹಾಗೆ ಈ ಭಕ್ತೋತ್ತಮರಾದ ಬಸವಣ್ಣನವರ ಪ್ರಾಣವನ್ನು ತನ್ನೊಡನೆ ಇಟ್ಟುಕೊಂಡರೆ ನಾನು ಸೈರಿಸುತ್ತೇನೆಯೇ ?' ವ॥ ಹೀಗೆಂದು ಭೂಭಾಗದ ಪರಮೇಶ್ವರಸಂತಿರುವ ಮಾಚಿದೇವನು ಉತ್ಕಟಗೊಂಡು ನಿಂತು ಶೌರ್ಯ ಪ್ರದರ್ಶನ ಮಾಡುತ್ತ ೨೭. 'ಶರಣರೇ ತನ್ನ ಪ್ರಾಣವೆಂಬ ಭಾಷೆಯಿಂದ ಪ್ರಕಾಶಮಾನನಾದ ಬಸವೇಶ್ವರನು, ಶರಣನಾದ ಮೇದರ ಕೇತಯ್ಯನು ಸಾಯಲು ಭೂಮಂಡಲವೆಲ್ಲ ತಿಳಿಯುವಂತೆ ತನ್ನ ಪ್ರಾಣವನ್ನು ಅವನೊಡನೆ ಅರ್ಪಿಸಿ ವಿಜಯವನ್ನು ಸಂಪಾದಿಸಿದನು. ಪರಮೇಶ್ವರನು ಇಂಥವನನ್ನು ನುಂಗಿ ಮಾಡಬಾರದ ಕಾರ್ಯವನ್ನು ಮಾಡಿದನು.' ೨೮. 'ಹೇ ತ್ರಿಪುರ ಸಂಹಾರಿಯೇ, ಜಂಗಮರ ಪಾದಕಮಲ ಪೂಜೆಯಲ್ಲಿ ಆಸಕ್ತರಾದ ಭಕ್ತರನ್ನು ಈ ರೀತಿ ಕಾಲವಲ್ಲದ ಕಾಲದಲ್ಲಿ ನೀನು ಯಾರನ್ನೂ ವಿಚಾರಿಸದೆ ನಿನ್ನಲ್ಲಿ ಅಡಗಿಸಿಕೊಳ್ಳುವುದು ಯೋಗ್ಯಕ್ರಿಯೆಯೇ? ಈ ಕೂಡಲೇ ಮೇದರಕೇತಿ ದೇವನ ಪ್ರಾಣವನ್ನು ಸಾವಕಾಶಮಾಡದೆ ಜಾಗ್ರತೆಯಾಗಿ ಕೊಡು ಕೊಡು. (ಆಗ) ಬಸವಣ್ಣನ ಜೀವವೂ ಅದರೊಡನೊಂದುಗೂಡಿ ಒಲಿದು ಬರುತ್ತದೆ.' ವ॥ ಹೀಗೆಂದು ಶೌರ್ಯದಿಂದ ಕೂಡಿದ ಮಾತನ್ನಾಡಿ ೨೯. ಶಿವನು ಮೃಡಭಕ್ತರ ಪ್ರಾಣಗಳನ್ನು ಕೊಡದೆ ಸಾವಕಾಶ ಮಾಡುತ್ತಿದ್ದಾನೆ. (ಇದಕ್ಕೆ) ನಾನು ಸೈರಿಸುವವನಲ್ಲ. (ಈಗ ನಾನೂ ಕೂಡ) ತಡಮಾಡದೆ ಡಂಗುರವನ್ನು ಹೊಡೆಯಿಸುತ್ತೇನೆ.' ಎಂದು ಆ ಮಡಿವಾಳ ಮಾಚಿದೇವಶರಣನು

ವ॥ ಅಂತುದ್ಘೋಷಿಸಿ —

ಅದಿರೆ ನಭಸ್ಥಳಂ ಕೆದಱೆ ತಾರಗೆ ತುಳ್ಕೆ ಪಯೋಧಿ ಬಳ್ಕ ಪೆಂ
ಪೊದವಿದಹೀಂದ್ರನಿಂದ್ರಮುಖದಿಗ್ವರರಳ್ಕೆ ವಿರಿಂಚಿ ವಿಷ್ಣುಗ
ಳ್ಬೆದಱೆ ಗಣೇಂದ್ರರದ್ಭುತರಸಾಸ್ಪದರಾಗೆ ಮೃದುಸ್ಮಿತಾಮೃತಂ
ಪೊದಳೆ ಕಡುಂಗುತಣ್ಮೆ ಪೊಡೆದಂ ಮಿಗೆ ಡಂಗುರಮಂ ಗಣಾಧಿಪಂ ೩೦

ತ್ರ್ಯಕ್ಷನ ಸಭೆ ಗಜಬಜಿಸಿದು
ದಾಕ್ಷಣಮಾ ಪ್ರಮಥರುದ್ರಗಣಮುತ್ಸವಿಸಿ
ತ್ತಕ್ಷಯಮಹಿಮನ ಶೌರ್ಯಮ
ನೀಕ್ಷಿಸಿ ಪೊಸತೆಂದು ಪೊಗಳ್ದರಘಹರಭಕ್ತರ್ ೩೧

ನಂಬಿಯನಂಬಿಕಾರಮಣನಂ ಮೊಱೆಮಿಂಡನದೊರ್ವ ದಭ್ರಭ
ಕ್ತಾಂಬರನಿಮ್ನಗಾಧರನಂದು ಹಲಾಯುಧನೊರ್ವ ಗಾಢಶೌ
ರ್ಯಂಬಡೆದೆಮ್ಮವರ್ಗೆ ಪೊಱಗೆಂದೆನುತುಂ ಜಡಿದಾರ್ದು ಪೊಯ್ದನಾ
ಡಂಬರವೊಪ್ಪೆ ಡಂಗುರಮನಿಂದಿಳೆ ಸೈವೆಱಗಾಗೆ ಮಾಚಯಂ ೩೨

ಹೊಡೆದಂ ಡಂಗುರವನಿವಂ
ಮೃಡಂಗೆನುತ್ತಲ್ಲಿ ಶರಣತತಿ ಕೊಂಡಾಡು

ಗಟ್ಟಿಯಾಗಿ ಕೂಗಿ, ಗರ್ಜನೆಮಾಡಿದನು. ವ॥ ಹೀಗೆ ಉದ್ಘೋಷಣೆ ಮಾಡುತ್ತ ೩೦. ಪ್ರಮಥಗಣದ ಅಧಿಪತಿಯಾದ ಮಾಚಿದೇವನು–ಆಕಾಶವೇ ಅಲ್ಲಾಡುವಂತೆ, ನಕ್ಷತ್ರವು ಉದುರುವಂತೆ, ಸಮುದ್ರವು ತುಳುಕಾಡುವಂತೆ, ಹಿರಿಮೆಯಿಂದ ಕೂಡಿದ ಆದಿಶೇಷನು ಬಳುಕುವಂತೆ, ಇಂದ್ರನೇ ಮೊದಲಾದ ದಿಕ್ಪತಿಗಳು ಭಯಗೊಳ್ಳುವಂತೆ, ಬ್ರಹ್ಮವಿಷ್ಣು ಗಳು ಬೆದರುವಂತೆ, ಶಿವಗಣಶ್ರೇಷ್ಠರು ಆಶ್ಚರ್ಯರಸಾವಿಷ್ಟರಾಗುವಹಾಗೆ, ಮೃದುವಾದ ಮುಗುಳುನಗೆಯೆಂಬ ಅಮೃತವು ಅಧಿಕ್ಯಗೊಂಡು ಕೋಪದಿಂದ ಕೂಡಿದ ಶೌರ್ಯದಿಂದ ಚೆನ್ನಾಗಿ ಡಂಗುರವನ್ನು ಹೊಡೆದನು. ೩೧. ಆ ಕೂಡಲೇ ಪರಮೇಶ್ವರನ ಸಭೆಯು ಗಜಿಬಿಜಿಗೊಂಡಿತು; ಪ್ರಮಥರ ರುದ್ರರ ಸಮೂಹವು ಉತ್ಸಾಹಗೊಂಡಿತು; ಪರಮೇಶ್ವರ ಭಕ್ತರು ನಾಶರಹಿತವಾದ ಮಹತ್ವವುಳ್ಳ ಮಾಚಿದೇವನ ಕಾರ್ಯವನ್ನು ನೋಡಿ,'(ಇದು) ಹೊಸರೀತಿ'ಯೆಂದು ಹೊಗಳಿದರು. ೩೨–೩೩ 'ಹಿಂದೊಮ್ಮೆ, ಮೆರೆಮಿಂಡ ದೇವನು ಅಗಾಧ ಶೌರ್ಯದಿಂದಕೂಡಿ, ನಂಬಿಯಣ್ಣನನ್ನೂ ಪಾರ್ವತೀ ಪತಿಯಾದ ಶಿವನನ್ನೂ, (ಇವರಿಬ್ಬರೂ) ನಮ್ಮ ಭಕ್ತಸಮೂಹಕ್ಕೆ ಹೊರಗು ಎಂದೆನ್ನುತ್ತ ಗದರಿಸಿ ಗರ್ಜಿಸಿ ಆಡಂಬರದಿಂದ ಡಂಗುರವನ್ನು ಹೊಡೆದನು. ಮತ್ತೊಮ್ಮೆ ಹಲಾಯುಧನು ಸಿರಿಯಾಳ ಸೆಟ್ಟಿ ಮತ್ತು ಗಂಗಾಧರನಾದ ಶಿವ ಇವರಿಬ್ಬರನ್ನೂ ಗಾಢವಾದ ಶೌರ್ಯದಿಂದ ನಮ್ಮ ಭಕ್ತ ಸಮೂಹಕ್ಕೆ ಹೊರಗು ಎಂದೆನ್ನುತ್ತ ಗದರಿ ಗರ್ಜಿಸಿ ಶೋಭಿಸುವ ಆಡಂಬರದಿಂದ ಡಂಗುರವನ್ನು ಹೊಡೆದನು. ಈಗ ಭೂಮಿಯೆಲ್ಲ ಬೆರಗಾಗುವಂತೆ ಮಾಚಿದೇವನು

ತ್ರೊಡನೊಪ್ಪಿರೆ ಕೈಲಾಸದೊ
ಳೆಡೆವಿಡದಾ ಪ್ರಮಥರಭವನೊಡನಿಂತೆಂದರ್ ೩೩

ಕುಡು ಕುಡು ಬೇಗವಿಾಗಳೆಲೆ ದೇವ ವೃಷೇಂದ್ರನ ಕೇತಿದೇವನು
ಗ್ಗಡದಸುವಂ ಕಡಂಗಿ ಕುಡದಿದೊರ್ಡೆ ಸೈರಿಪನಲ್ತು ಮಿಕ್ಕು ತ
ಕ್ಕಡರ್ದ ಮಹಾಬಳಂ ಪ್ರಮಥರಾಳ್ಕಲಿದೇವನ ಭದ್ರಸಿಂಧುರಂ
ಪೊಡವಿಯ ರುದ್ರಮೂರ್ತಿ ಭವದೀಯಮತಾಂಬುಜಭಾನು ಮಾಚಯಂ ೩೪

ಅಲ್ಲಿಯ ಭಕ್ತಾಳಿಗೆ ಮೇ
ಣಲ್ಲಿಯ ಶರಣರ್ಗೆ ದೇವ ಪೊಜಗಾಗಿರೆ ಮ
ತ್ತೆಲ್ಲಿಯದೊ ನಿನಗೆ ಪುಗಲೆಡ
ಯೆಲ್ಲಿಯದತಿ ಮಹಿಮೆ ಬೇಗ ಕಳುಪಿವರಸುವಂ ೩೫

ಫಳವಿಲ್ಲದ ಕೊಳನಿಲ್ಲದ
ಜಳವಿಲ್ಲದ ಬಸವನಿಲ್ಲದಗಮುಂ ಬನಮುಂ
ವಿಳಸಿತ ತಟಾಕಮುಂ ಭೂ
ವಳಯಮುಮೇಂ ದೇವ ಪೇಳ್ ಮನಂಗೊಳಿಸುಗುಮೇ ೩೬

ರವಿರುಚಿಯಿಂ ಶಶಿಕರದಿಂ
ಭುವನಜಮುಂ ಕುಮುದಮುಂ ಪೊದಳ್ದಲರ್ವವೊಲು
ತ್ಸವವೆಸಪ ಭಕ್ತಿಯಲರ್ವುದು
ಕುವಲಯಸಖಮೌಳಿ ಬಸವನಿಂ ಭೂತಳದೊಳ್ ೩೭

ಈ ಡಂಗುರವನ್ನು ಶಿವನಿಗೆ ಹೊಡೆದನು,' ಎನ್ನುತ್ತ ಅಲ್ಲಿನ ಶರಣಸಮೂಹವೆಲ್ಲ ಕೂಡಿಕೊಂಡಾಡುತ್ತ ಶೋಭಿಸುತ್ತಿರಲು ಆ ಕೈಲಾಸದಲ್ಲಿರುವ ಶಿವನ ಪ್ರಮಥಗಣದವರೆಲ್ಲ ತಡಮಾಡದೆ ಶಿವನೊಡನೆ ಹೀಗೆ ಹೇಳಿದರು. ೩೪. 'ಎಲೈ ಪರಮೇಶ್ವರನೇ, ಬಸವಣ್ಣನ ಮತ್ತು ಕೇತಿದೇವನ ಉತ್ಕೃಷ್ಟವಾದ ಪ್ರಾಣವನ್ನು ಈಗಲೇ ಶೀಘ್ರವಾಗಿ ಕೊಡು! ಕೊಡು!! ನೀನು ಕೋಪದಿಂದ ಕೊಡದೆಹೋದರೆ, ವಿಶೇಷವಾಗಿ ಪ್ರಮಥರಲ್ಲಿ ಕೂಡಿಕೊಂಡು ಅಧಿಕ ಬಲಶಾಲಿಯಾಗಿರುವ ಕಲಿದೇವನ (ಪರಮೇಶ್ವರನ) ಮಂಗಳಕರ ಆನೆಯಂತಿರುವವನೂ, ಭೂಮಿಯ ರುದ್ರಮೂರ್ತಿಯೂ, ನಿನ್ನ ವೀರಶೈವಮತವೆಂಬ ಕಮಲಕ್ಕೆ ಸೂರ್ಯನೂ ಆದ ಮಡಿವಳ ಮಾಚಿದೇವನು ಸೈರಿಸುವವನಲ್ಲ.' ೩೫. 'ದೇವ, ಅಲ್ಲಿಯ ಭಕ್ತಸಮೂಹಕ್ಕೆ ಮತ್ತು ಇಲ್ಲಿಯ ಶರಣರಿಗೆ ನೀನು ಹೊರಗಾಗಿದ್ದರೆ, ನಿನಗೆ ಹೊಗುವುದಕ್ಕೆ ಸ್ಥಾನವೆಲ್ಲಿಯದು ? ಮಹಿಮೆಯೆಲ್ಲಿಯದು ? ಬೇಗನೆ ಇವರಿಬ್ಬರ ಪ್ರಾಣವನ್ನು ಕಳಿಸು.' ೩೬. 'ಪರಮೇಶ್ವರನೇ, ಫಲವಿಲ್ಲದ ವೃಕ್ಷವೂ, ಸರೋವರವಿಲ್ಲದ ನಂದನವನವೂ, ನೀರಿಲ್ಲದ ಶೋಭಿಸುವ ಕೆರೆಯೂ, ಬಸವಣ್ಣನಿಲ್ಲದ ಭೂಭಾಗವೂ ಮನೋಹರವಾಗಿರುವುದೇ ಹೇಳು?' ೩೭. 'ಕನ್ನೈದಿಲೆಗೆ ಸಖನಾದ ಚಂದ್ರನನ್ನು ಶಿರದಲ್ಲಿ ಧರಿಸಿರುವ ಹೇ ಶಿವನೇ, ಸೂರ್ಯನಕಿರಣಗಳಿಂದ ಕಮಲವೂ, ಚಂದ್ರಕಿರಣಗಳಿಂದ ಕನ್ನೈದಿಲೆಯೂ ಶೋಭೆಗೊಂಡು ಅರಳುವಹಾಗೆ ಉತ್ಸಾಹದಿಂದ ಶೋಭಿಸುವ

ಶಿತಿಕಂಠ ನಿಮ್ಮ ಜಂಗಮ
ತತಿಗೀಪ್ಸಿತ ವಸ್ತುವಿತ್ತು ಪೂಜಿಪರಾರ್ಸ
ನ್ನುತ ಬಸವನಿಲ್ಲದಿರೆ ವಸು
ಮತಿಯೊಳ್ಸರ್ವಜ್ಞದೇವ ನೀನಱಿಯದುದೇ ೩೮

ಪುರಹರ ಕಳುಪೀಗಳೆ ಮೇ
ದರ ಕೇತಯ್ಯಂಗಳೊಡನೆ ಬಸವನನಖಿಳೋ
ರ್ವರೆಯೊಳ್ಭಕ್ತಿಯ ಸೊಬಗಂ
ಪರಿಪೂರ್ಣಂಗೆಯ್ವುದೆಂದವರ್ನುಡಿಯಲೊಡಂ ೩೯

ಆಲಿಸಿ ಶಂಕರಂ ನಗುತೆ ತತ್ಪ್ರಮಥರ್ಕಳ ಮುಂದೆ ನಣ್ಪಿನಿಂ
ಲಾಲಿಸುತಂ ವೃಷಾಧಿಪನಮೇದರಕೇತಯನಂ ಕಡಂಗಿ ಸ
ಲ್ಲೀಲೆಯೊಳೆಯ್ದಿಮಿನ್ನಿಳೆಗೆ ನೀವೆನೆ ಕೇಳ್ದು ಬಿಗುರ್ತು ಭಕ್ತಿಯಿಂ
ಶೂಲಿಗಮಾ ಗಣಾವಳಿಗೆ ವಂದಿಸಿ ಕೆಯ್ಮುಗಿವುತ್ತೆ ಸಾದರಂ ೪೦

ಗಣತತಿ ಬಿನ್ನಪಂ ಮಹಿಯ ಭೋಗಮನೆಲ್ಲಮನೊಲ್ದು ಬಲ್ಲೆವಾ
ವಣೆಯುರಮಲ್ಲಿಗೆಯ್ದೆವು ಭವತ್ಪದಪದ್ಮದಗಲ್ಕೆಗಾಱೆವೆಂ
ದೆಣೆವಡೆದಿರ್ವರುಂ ನುಡಿಯೆ ಕೇಳ್ದು ಪುರಾಂತಕನೆಂದನಾ ಗಣಾ
ಗ್ರಣಿಯೆನಿಸಿರ್ದ ತದ್ಬಸವನಾನನಮಂ ನಡೆನೋಡಿ ನಣ್ಪಿನಿಂ ೪೧

ದಾಸೋಹಂಭಾವಮನುಳಿ
ದಾ ಸೋಹಂಭಾವದೆಡೆಗೆ ಮನಮಿಕ್ಕದೆ ನೀಂ

ಭಕ್ತಿಯು ಬಸವಣ್ಣನಿಂದ ಭೂಭಾಗದಲ್ಲಿ ಅರಳುವುದು.' ೩೮. 'ಎಲೈ ನೀಲಕಂಠನೇ, ಭೂಮಿಯಲ್ಲಿ ಶ್ಲಾಘ್ಯವಾದ ಬಸವಣ್ಣನಿಲ್ಲದಿದ್ದರೆ, ನಿಮ್ಮ ಜಂಗಮಸಮೂಹಕ್ಕೆ ಇಷ್ಟಾರ್ಥಗಳನ್ನು ಕೊಟ್ಟು ಪೂಜಿಸುವವರಾರು ? ಸರ್ವವನ್ನೂ ಅರಿತಿರುವ ಎಲೈ ಸ್ವಾಮಿಯೇ, ನೀನು ತಿಳಿಯದೆ ಇರುವುದೇ ಇದು.' ೩೯—೪೦. 'ಪುರಹರನೇ, ಮೇದರಕೇತಯ್ಯನನ್ನೂ ಅದರೊಡನೆಯೇ ಬಸವಣ್ಣನನ್ನೂ ಈಗಲೇ ಕಳಿಸಿಕೊಟ್ಟು ಸಮಸ್ತ ಭೂಭಾಗದಲ್ಲಿ ಭಕ್ತಿಯ ಸೊಗಸನ್ನು ಸಂಪೂರ್ಣಗೊಳಿಸುವುದು' ಎಂದು ಪ್ರಮಥರು ನುಡಿದ ಕೂಡಲೇ, ಶಂಕರನು ನಗುತ್ತ ಆ ಪ್ರಮಥರೆಲ್ಲರ ಎದುರಿಗೆ (ಅವರಾಡಿದುದನ್ನೆಲ್ಲ) ಪ್ರೀತಿಯಿಂದ ಕೇಳುತ್ತ ಬಸವೇಶ್ವರನನ್ನು, ಮೇದರ ಕೇತಯ್ಯನನ್ನು ಕುರಿತು ಉತ್ಸಾಹದಿಂದ 'ನೀವಿನ್ನು ಭೂಮಿಗೆ ಸಂತೋಷದಿಂದ ಹೋಗಿರಿ,' ಎನ್ನಲಾಗಿ (ಅವರು) ಭಯಪಟ್ಟು ಭಕ್ತಿಯಿಂದ ಶಿವನಿಗೂ ಶಿವನ ಆ ಪ್ರಮಥಗಣಗಳಿಗೂ ನಮಸ್ಕಾರ ಮಾಡಿ ಆದರ ಪೂರ್ವಕವಾಗಿ ಕೈಮುಗಿಯುತ್ತ, ೪೧–೪೨. 'ಹೇ ಪ್ರಮಥ ಸಮೂಹವೇ, ಪ್ರೀತಿಯಿಂದ ಕೂಡಿದ ನಮ್ಮ ಬಿನ್ನಹಗಳು: ನಾವು ಭೂಮಿಯ ಸಮಸ್ತ ಭೋಗದ ಅತಿಶಯವನ್ನು ಬಲ್ಲೆವು. ಅಲ್ಲಿಗೆ ನಾವು (ಪುನಃ) ಹೋಗುವುದಿಲ್ಲ. ನಿನ್ನ ಪಾದ ಪದ್ಮದ ವಿಯೋಗಕ್ಕೆ ನಾವು ಸಮರ್ಥರಲ್ಲ' ಎಂದು ಇಬ್ಬರೂ ಒಂದೇ ಸಮನಾಗಿ ನುಡಿಯಲಾಗಿ, ಶಿವನು ಕೇಳಿ, ಆ ಪ್ರಮಥಗಣಶ್ರೇಷ್ಠ

ಲೇಸನೊಡರ್ಚಿದೆ ಭಲರೆ ಮ
ಹಾಸಾಹಸಿ ಬಸವಭಕ್ತಿಯಿಂತಿರವೇಡಾ ೪೨

ವಿಪುಳ ಗುರುಲಿಂಗಜಂಗಮ
ಸಪರ್ಯೆಯಿಂ ತೋಱಿ ಬೀಱಿ ಭಕ್ತಿಯನೆಲ್ಲ
ರ್ಗುಪದೇಶಿಸಿ ಬರ್ಪುದನುೞಿ
ದುಪಾಯದಿಂದಿತ್ತಲಿರ್ಪೆನೆಂಬುದು ಮತಮೋ ೪೩

ವ॥ ಅಂತುಮಲ್ಲದೆಯುಂ—

ಅಳಿ ಮಕರಂದಮಂ ಗಿಳಿ ಲಸತ್ಫಳಮಂ ಪೊಸಮಾವು ಚೈತ್ರನಂ
ಜಳರುಹಮರ್ಕನಂ ಕುವಲಯಂ ಶಶಿಯಂ ನವಿಲಂಬುವಾಹಮಂ
ಬೆಳೆ ಘನವೃಷ್ಟಿಯಂ ಬಯಸುವಂತೆ ಧರಿತ್ರಿಯೊಳೆನ್ನ ಭಕ್ತಸಂ
ಕುಳಮೊಲೆ ನಿನ್ನನೇ ಬಯಸುತಿರ್ಪುದಲ್ತೆ ವೃಷಾಧಿನಾಯಕಾ ೪೪

ಈ ಲೋಕಮುಮಾ[1]ಲೋಕಮು
ಮಾಲೋಕಿಪೊಡೊಂದೆ ಬಸವ ಮದ್ಭಕ್ತಿಯುತ
ರ್ಗಾಲಾಪಿಪುದೇಂ ಭೇದಕ
ಥಾಲವಮುಂ ತೋಱದೆಂದುಮೆನಗಂ ನಿನಗಂ ೪೫

ನೆಂದಿಸಿದ್ದ ಬಸವೇಶ್ವರನ ಮುಖವನ್ನು ದಿಟ್ಟಿಸಿ ನೋಡಿ ಪ್ರೀತಿಯಿಂದ 'ಮಹಾಸಾಹಸಿಯಾದ ಬಸವಣ್ಣ, ದಾಸೋಹಂಭಾವವನ್ನು ಬಿಟ್ಟು ನೀನು ಆ ಪರ ಬ್ರಹ್ಮನೇ ನಾನೆಂಬ (ಸೋಽಹಂ) ನಂಬಿಕೆಯ ಸ್ಥಾನಕ್ಕೆ ಮನಸ್ಸು ಮಾಡಿದೆ. ಒಳ್ಳೆಯದನ್ನೇ ಬಯಸಿದ್ದೀಯೆ. ಭಲೇ! ಭಕ್ತಿಯೆಂಬುದು ಹೀಗಿರಬೇಡವೇ!' ೪೩. 'ವಿಶೇಷವಾದ ಗುರುಲಿಂಗ ಜಂಗಮರೆಂಬುವರ ಪೂಜೆಯಿಂದ ಭಕ್ತಿಯನ್ನು ಹರಡಿ ತೋರಿಸಿಕೊಟ್ಟು, ಎಲ್ಲರಿಗೂ ಉಪದೇಶ ಮಾಡಿ, ಉಪಾಯದಿಂದ (ಇಲ್ಲಿಗೆ) ಬರುವುದನ್ನು ಬಿಟ್ಟು, ಇಲ್ಲಿಯೇ ಇರುತ್ತೇನೆನ್ನುವುದು ಯೋಗ್ಯವೇ ?' ವ॥ ಅದೂ ಅಲ್ಲದೆ ೪೪. 'ಎಲೈ ವೃಷಾಧಿ ನಾಯಕನೇ, ದುಂಬಿಯು ಮಕರಂದವನ್ನೂ, ಗಿಳಿಯು ಶ್ರೇಷ್ಠವಾದ ಹಣ್ಣನ್ನೂ, ಹೊಸ ಮಾವು ವಸಂತ ಋತುವನ್ನೂ, ಕಮಲವು ಸೂರ್ಯನನ್ನೂ, ಕನ್ನೈದಿಲೆಯು ಚಂದ್ರನನ್ನೂ, ನವಿಲು ಮೇಘವನ್ನೂ, ಬೆಳೆಯು (ಪೈರು) ದೊಡ್ಡ ಮಳೆಯನ್ನೂ, ಬಯಸುವ ಹಾಗೆ ಭೂಮಂಡಲದಲ್ಲಿ ನನ್ನ ಭಕ್ತರುಗಳು ನಿನ್ನನ್ನೇ ಬಯಸುತ್ತಿರುವರಲ್ಲವೇ ?' ೪೫. 'ಬಸವಣ್ಣ ನನ್ನಲ್ಲಿ ಭಕ್ತಿಯುಳ್ಳವರಿಗೆ ವಿಚಾರ ಮಾಡಿನೋಡಿದರೆ ಈ ಲೋಕವೂ ಆ ಲೋಕವೂ ಒಂದೇ ; ಹೇಳುವುದಿನ್ನೇನು ? ನನಗೂ ನಿನಗೂ

---

1 ಮೂ(ಚ)

ಎನ್ನ ನಿರೂಪವಮಂ ತಳೆದು ಪೋದೆ ಗಡಂದು ವೃಷೇಂದ್ರ ಭೂತಳ
ಕ್ಕಿನ್ನುಮೊಸಲ್ದು ಪೋಗಿ ಗುರುಲಿಂಗಚರೋತ್ತಮಭಕ್ತಿಯಂದಮಂ
ಚನ್ನಲರ್ವಂತೆ ನೀಂ ಪಸರಿಸುತ್ತಿಳೆಯೊಳ್ ಬಗೆದಿಲ್ಲಿಗೆಯ್ದ್ವೆನು
ತ್ತುನ್ನಗಜಾಧಿಪಂ ಬೆಸಸೆ ತತ್ಪದಕೊಲ್ದೆಅಗುತ್ತೆ ಭಕ್ತಿಯಿಂ ೪೬

ಪ್ರಮಥಗಣಪದಸರೋಜ
ಕ್ಕಮರ್ದೆಅಗುತ್ತೊಲ್ದು ಕೇತಿದೇವಸಮೇತಂ
ವಿಮಳಮತಿ ತನ್ನಿರೂಪ
ಕ್ರಮಮಂ ಪದೆದಿಳೆಗೆ ಬಸವರಾಜಂ ಬಂದಂ ೪೭

ವ॥ ಅಂತು ಕೇತಿದೇವಸಮೇತಂ ಕಲ್ಯಾಣಕಟಕಕ್ಕೆಳ್ತಂದು ಚೈತನ್ಯಂಬಡೆದೆಳ್ದು ಶರಣ ಗಣದೊಡನೊಡ್ಡೋಲಗಂಗೊಟ್ಟಿರ್ದ ಮಾಚಿದೇವಂಗಮಾ ಗಣಸಭೆಗಂ ಸಾಷ್ಟಾಂಗವೆಅಗಿದಾಗಳ್ ಮಾಚಿದೇವನುತ್ಸವಿಸುತೆಳ್ದು ತಾನುಮಾ ಗಣಸಭೆಗೆ ಸಾಷ್ಟಾಂಗ ಪ್ರಣಾಮಂಗೆಯ್ದು ಕರಾರವಿಂದಂ ಗಳಂ ಮುಗಿದು—

ಬಂದಂ ನಿಮ್ಮಡಿಯೊಲ್ಮೆಯ
ಕಂದಂ ನಿಜಭಕ್ತಿಮಲ್ಲಿಕಾವೇಷ್ಟಿತಮಾ
ಕಂದಂ ಶಿವಗಣವಿತತಾ
ನಂದಂ ಬಸವಂ ಶಿವಾಂಘ್ರಿನಳಿನಮರಂದಂ ೪೮

ಯಾವಾಗಲೂ ಭಿನ್ನತೆಯನ್ನು ಹೇಳುವಿಕೆಯೋ ತೋರುವುದಿಲ್ಲ'. ೪೬–೪೭. 'ಬಸವಣ್ಣ, ಅಂದು (ಹಿಂದೆ) ಭೂಭಾಗಕ್ಕೆ ನನ್ನ ಅಪ್ಪಣೆಯನ್ನು ಧರಿಸಿ, ಹೋದೆ ಯಲ್ಲವೇ! ಈಗಲೂ ಪ್ರೀತಿಯಿಂದ ಹೋಗಿ, ಗುರುಲಿಂಗ ಜಂಗಮರ ಶ್ರೇಷ್ಠವಾದ ಭಕ್ತಿಯ ಅಂದವನ್ನು ಮನೋಹರವಾಗಿ ಅರಳುವ ಹಾಗೆ ಭೂಮಿಯಲ್ಲಿ ನೀನು ಹರಡಿ, (ಅನಂತರ) ಇಚ್ಛೆಪಟ್ಟು ಇಲ್ಲಿಗೆ ಬಾ' ಹೀಗೆಂದು ಪರಮೇಶ್ವರನು ಅಪ್ಪಣೆ ಮಾಡಲಾಗಿ, ಆ ಪರಮೇಶ್ವರನ ಪಾದಕ್ಕೆ ಭಕ್ತಿಯಿಂದ ನಮಸ್ಕಾರ ಮಾಡಿ, ಆ ಪರಿಶುದ್ಧ ಬುದ್ಧಿ ಯುಳ್ಳ ಬಸವಣ್ಣನು ಕೇತಿದೇವ ಸಮೇತನಾಗಿ ಪ್ರೀತಿಯಿಂದ ಶಿವಲೋಕದ ಆ ಪ್ರಮಥ ಗಣ ಸಮೂಹಕ್ಕೆ ನಮಸ್ಕರಿಸುತ್ತ ಆ ಪರಶಿವನ ಆಜ್ಞೆಯನ್ನು ಹೊಂದಿದವನಾಗಿ ಭೂಮಿಗೆ ಬಂದನು. ವ॥ ಈ ರೀತಿ ಬಸವಣ್ಣನು ಕೇತಿದೇವ ಸಮೇತನಾಗಿ ಕಲ್ಯಾಣ ಪಟ್ಟಣಕ್ಕೆ ಬಂದು, (ದೇಹದಲ್ಲಿ) ಪ್ರಾಣದುಂಬಿ ಎದ್ದು, ಶರಣ ಸಮೂಹದೊಡನೆ ಒಡ್ಡೋಲಗವನ್ನು ಕೊಟ್ಟಿದ್ದ ಮಾಚಿದೇವನಿಗೂ, ಶರಣರ ಸಭೆಗೂ, ಸಾಷ್ಟಾಂಗ ಪ್ರಣಾಮಗಳನ್ನು ಮಾಡಿದಾಗ ಮಾಚಿದೇವನು ಉತ್ಸಾಹಗೊಂಡೆದ್ದು, ತಾನೂ ಕೂಡ ಆ ಪ್ರಮಥ ಗಣ ಸಭೆಗೆ ನಮಸ್ಕರಿಸಿ ಕರಕಮಲಗಳನ್ನು ಮುಗಿದು ನಿಂತು—೪೮. 'ನಿಮ್ಮೆಲ್ಲರ ಪಾದಗಳ ಪ್ರೀತಿಯ ಶಿಶುವಾದವನೂ, ದೃಢವಾದ ಭಕ್ತಿಯೆಂಬ ಮಲ್ಲಿಗೆಯ ಬಳ್ಳಿಯಿಂದ ಸುತ್ತಲ್ಪಟ್ಟ ಮಾವಿನ ಮರದಂತಿರುವವನೂ, ಪ್ರಮಥ ಸಮೂಹದ ವಿಶೇಷವಾದ ಆನಂದ ರೂಪನೂ, ಪರಶಿವನ ಪಾದ ಕಮಲಕ್ಕೆ ಮಕರಂದಪ್ರಾಯನಾದ

ಶರಣವರೇಣ್ಯರೆ ನಿಮ್ಮಯ
ಚರಣಾಂಬುಜಭೃತ್ಯರಿರ್ವರುಂ ಬಂದರಿವಂ
ದಿರ ಕರದಿಂ ಸೇವೆಯನಾ
ದರದಿಂ ಕೆಯ್ಕೊಂಡು ಸುಖದಿನಿನ್ನಿರವೇಳ್ಕುಂ ೪೯

ಭವದೀಯ ಕೃಪಾಶರಧಿಯೊ
ಳವಗಾಹಂಗೆಯ್ಸುತಿವರನೆನಗೊಳ್ಪಿಂದೊ
ಪ್ಪುವ ನಿಮ್ಮ ಸುಪ್ರಸಾದಮ
ನವಿರತವಿಂತಿತ್ತು ಕೂರ್ತು ಪೊರೆಯಲ್ವೇಳ್ಕುಂ ೫೦

ವ॥ ಎಂದು ಮಗುಳ್ದುಂ ಮಾಚಿದೇವಂ ಸಾಷ್ಟಾಂಗವೆಱಗೆ ಭಕ್ತತತಿಯುಂ ಜಂಗಮ ನಿಕರ ಮುಮಾನಂದಂ ಮಿಗೆ ತೆಗೆದು ಬಿಗಿಯಪ್ಪಿ ಮನ್ನಿಸಿ—

ಅರರೆ ಗಣಾಗ್ರಗಣ್ಯ ಭವದೀಯ ಮಹತ್ವಮನಿಂತುಟೆಂದು ಬಿ
ತ್ತರಿಸಲದಾರ್ಗೆ ಗೋಚರಿಪುದೀ ನರರುಂ ಸುರರುಂ ಭಯಾರ್ತಿವ
ಟ್ಟಿರೆ ಧರೆಯುಂ ನಭಸ್ಸ್ಥಳಮುಮದ್ಭುತ ಕಂಪಮನಾಳೆ ಪೊಯ್ದೆ ಡಂ
ಗುರಮನನಂಗಮರ್ದನನಮೇಲೆ ಮಹೀತಳಭಾಳಲೋಚನಾ ೫೧

ಮದಕರಿಯ ಕರದ ಕರ್ಬಂ
ಪದಪಿಂ ಸೆಳೆವಂತೆ ಸೆಳೆದೆ ಹರನೊಳಕೊಂಡ

ಬಸವಣ್ಣನು ಬಂದನು'. ೪೯. 'ಶರಣವರೇಣ್ಯರೇ, ನಿಮ್ಮ ಚರಣ ಕಮಲಗಳ ಭೃತ್ಯರಾದ ಇಬ್ಬರೂ (ಬಸವಣ್ಣ–ಕೇತಯ್ಯಗಳಿಬ್ಬರೂ) ಬಂದರು. ಇವರ ಕೈಯಿಂದ ಸೇವೆಯನ್ನು ಆದರ ಪೂರ್ವಕವಾಗಿ ಸ್ವೀಕರಿಸಿ ಇನ್ನು ಸುಖವಾಗಿ ಇರುವವರಾಗಿರಿ'. ೫೦. 'ಇವರನ್ನು ನಿಮ್ಮ ಕೃಪಾ ಸಮುದ್ರದಲ್ಲಿ ಮುಳುಗಿಸುತ್ತ, ನನಗೆ ಶ್ರೇಷ್ಠವಾಗಿ ಒಪ್ಪುವ ನಿಮ್ಮ ಒಳ್ಳೆಯ ಪ್ರಸಾದವನ್ನು ಸತತವೂ ಕೊಡುತ್ತ ಪ್ರೀತಿಯಿಂದ ರಕ್ಷಿಸ ಬೇಕು'. ವ॥ ಹೀಗೆಂದು ಹೇಳುತ್ತ ಪುನಃ ಮಾಚಿದೇವನು (ಪ್ರಮಥ ಸಮೂಹಕ್ಕೆ) ಸಾಷ್ಟಾಂಗ ನಮಸ್ಕಾರ ಮಾಡಲು, ಭಕ್ತರುಗಳ ಸಮೂಹವೂ, ಜಂಗಮರ ಗುಂಪೂ, ಪರಮಾನಂದ ಆಧಿಕ್ಯದಿಂದ ಅವನನ್ನು ಬರಸೆಳೆದು ಬಿಗಿದು ಅಪ್ಪಿಕೊಂಡು, ಮನ್ನಣೆ ಮಾಡಿ—೫೧. 'ಅರರೇ, ಗಣ ಸಮೂಹಕ್ಕೆ ಅಗ್ರಗಣ್ಯನೆನಿಸಿದ ಮಾಚಿದೇವನೇ, ನಿನ್ನ ಮಹತ್ವವನ್ನು ಇಷ್ಟೇ ಎಂದು ವರ್ಣಿಸುವುದಕ್ಕೆ ಯಾರಿಗೆ ತಿಳಿದೀತು? ಭೂ ಭಾಗದ ಪರಮೇಶ್ವರನೇ, ಈ ನರರೂ, ಸುರರೂ, ಭಯದಿಂದ ಪೀಡಿತರಾಗಿರಲು, ಭೂಮಿಯೂ ಆಕಾಶವೂ ಅದ್ಭುತವಾದ ಕಂಪನದಿಂದ ಕೂಡಿರಲು, ಮನ್ಮಥ ಧ್ವಂಸಿ ಯಾದ ಶಿವನ ಮೇಲೆ ಡಂಗುರವನ್ನು ಹೊಡೆದುಬಿಟ್ಟೆ'. ೫೨. 'ಉನ್ನತವಾದ ಪ್ರಬಲ ಸಾಮರ್ಥ್ಯ ಪ್ರತಾಪಗಳೇ ಆಭರಣವಾಗಿ ಉಳ್ಳ ಮಾಚಿದೇವನೇ, ಮದೋನ್ಮತ್ತ

ಗ್ಗ[1]ದ ಶರಣರಸುವನಸವಸ
ಮುದಿತಪ್ರಬಳಪ್ರತಾಪವಮಹಿಮಾಭರಣಾ ೫೨

ಮೂದಲಿಸಿ ಹರನನಧಟಿಂ
ನಾದಂಬೊಯ್ದಳಿದ ಭಕ್ತರಸುವಂ ಪಡೆದೈ
ಮೇದಿನಿಯೊಳಮಮ ಘನಮಹಿ
ಮೋದಧಿ ನಿನ್ನಳವನಾರೊ ಬಣ್ಣಿಸಲಾರ್ಪರ್ ೫೩

ಆಲೋಕದೊಳೀ ಲೋಕದೊ
ಳಾಲೋಕಿಪೊಡರರೆ ನೀನೆ ಪೆಸರ್ವೆತ್ತೈ ಸ
ತ್ಯಾಲಾಪ ಬಸವನಸುವಂ
ಲೀಲೆಯಿನೀ ತೆಱದೆ ಸೆಳೆದು ತಂದಿತ್ತುದಱಿಂ ೫೪

ಚರಲಿಂಗಕೆ ಹರಣಂ ಬಸ
ವರಸಂ ಬಸವಂಗಮೆಮಗಮಸು ನೀಂ ಗಡ ಮಾ
ಚರಸಾರ್ಯರ್ಜ ಭಕ್ತವದನಾಂ
ಬುರುಹಾಬಳಸೂರ್ಯ ಸೂರಿಜನನುತಶೌರ್ಯಾ ೫೫

ಎಂದಭಿವಂದಿಸುತ್ತೆ ಗಣಸಂತತಿ ಸಂಭ್ರಮವಾಳ್ದು ನೇತ್ರದಾ
ನಂದಜಲಂ ಪೊನಲ್ವರಿಯೆ ಕೀರ್ತಿಸುತೊಪ್ಪಿರೆ ತದ್ಗಣಾಳಿಗೋ

ವಾದ ಆನೆಯು ಸೊಂಡಿಲಿನಲ್ಲಿರುವ ಕಬ್ಬನ್ನು ಪ್ರೀತಿಯಿಂದ ಸೆಳೆದ ಹಾಗೆ ಹರನೊಡನೆ ಅಂತರ್ಭಾವಗೊಂಡ ಶರಣನ ಪ್ರಾಣವನ್ನು (ನೀನು) ಜಾಗ್ರತೆಯಾಗಿ ಸೆಳೆದೆ.' ೫೩. 'ಘನವಾದ ಮಹಿಮೆಗೆ ಸಮುದ್ರನೆನಿಸಿದ ಮಾಚಿದೇವನೇ, ಹರನನ್ನು ಪರಾಕ್ರಮದಿಂದ ಮೂದಲಿಸಿ, ಡಂಗೂರವನ್ನು ಹೊಡೆದು, ಅಳಿದು ಹೋದ ಭಕ್ತರುಗಳ ಪ್ರಾಣವನ್ನು ಈ ಭೂಮಿಯಲ್ಲಿ ನೀನು ಪಡೆದೆ ಅಮಮ! ನಿನ್ನ ಸಾಮರ್ಥ್ಯವನ್ನು ಬಣ್ಣಿಸುವುದಕ್ಕೆ ಸಮರ್ಥರು ಯಾರೋ!' ೫೪. 'ಎಲೈ ಸತ್ಯ ವಾಕ್ಯವುಳ್ಳವನೇ, ಈ ಭೂಲೋಕದಲ್ಲಿ, ಆ ಕೈಲಾಸದಲ್ಲಿ ವಿಚಾರ ಮಾಡಿ ನೋಡಿದರೆ ಬಸವನ ಪ್ರಾಣವನ್ನು ಲೀಲೆಯಿಂದ ಈ ರೀತಿಯಲ್ಲಿ ಸೆಳೆದು ತಂದು ಕೊಟ್ಟುದರಿಂದ, ಅರರೇ! ನೀನೇ ಖ್ಯಾತಿಯನ್ನು ಹೊಂದಿದವನಾದೆ'. ೫೫. 'ಭಕ್ತರ ಮುಖವೆಂಬ ಕಮಲಗಳಿಗೆ ಸೂರ್ಯನಾಗಿಯೂ ವಿದ್ವಜ್ಜನರಿಂದ ಸ್ತೋತ್ರ ಮಾಡಲ್ಪಡುವ ಪರಾಕ್ರಮವುಳ್ಳವನೂ ಆದ ಮಾಚರಸಾರ್ಯನೇ, ಜಂಗಮಲಿಂಗಕ್ಕೆ ಬಸವಣ್ಣನೇ ಪ್ರಾಣ; ನೀನು ಬಸವಣ್ಣನಿಗೂ ನಮಗೂ ಪ್ರಾಣ; ಅಲ್ಲವೆ?' ೫೬. ಹೀಗೆಂದು ಶಿವಗಣ ಸಮೂಹವು ಅಭಿನಂದಿಸುತ್ತ ಸಂಭ್ರಮಗೊಂಡವರಾಗಿ, ನೇತ್ರದಿಂದ ಸಂತೋಷ ಬಾಷ್ಪಗಳು ಪ್ರವಾಹ ರೂಪವಾಗಿ ಹರಿಯುತ್ತಿರಲು, ಸ್ತೋತ್ರ ಮಾಡುತ್ತ ಒಪ್ಪಿರಲಾಗಿ, ಮಾಚಿದೇವನು ಆ ಶಿವಗಣ

1೧೯(ಚ)

ರಂದದೆ ಮಾಚಿದೇವನೆಜಿಗುತ್ತತಿ ಭಕ್ತಿಯೊಳಲ್ಲಿ ತತ್ಕೃಪಾ
ಮಂದಸುಧಾತರಂಗಿಣಿಯೊಳಾಳ್ದೊಡನೊಪ್ಪಿದನುತ್ಸವಾನ್ವಿತಂ ೫೬

ಗಣಸಂದೋಹಕ್ಕಮಾ ಮಾಚಯ್ಯನ ಚರಣಕಂಜಾತಕಂ ಭಕ್ತಿಯಿಂದಂ
ಮಣಿವುತ್ತುಂ ಕೀರ್ತಿಸುತ್ತುಂ ಪಡೆವುತವರ ಕಾರುಣ್ಯಮಂ ಬೀಳ್ಕೊಳುತ್ತುಂ
ಪ್ರಣಯಂ ಕೆಯ್ಗಣ್ಮೆ ಭಕ್ತಪ್ರತತಿ ಸಹಿತ ಕೇತಾರ್ಯನೊಲ್ದೆಯ್ದೆ ಪೊಕ್ಕಂ
ಮಣಿಭಿತ್ತಿದ್ಯೋತಭಾಸ್ವನ್ನಿಜಭವನಮನಾನಂದಸಾಂದ್ರಂ ವೃಷೇಂದ್ರಂ ೫೭

ಸಾರಾಕಾರೇ ಸರಸಹೃದಯೇ ಸರ್ವಲೋಕೈಕಮಾತೇ
ಭೂರಿಶ್ರೀರಾಜಿತಪದಯುಗೇ ಭ್ರೂಲತಾಜ್ಞಪ್ತಭೂತೇ
ಪಾರಾವಾರಾಪ್ರಭವಲಲನಾರಾಧಿತೇ ಸತ್ಪವಿತ್ರೇ
ಮಾರಾರಾತಿಪ್ರಿಯೇ ಪೊರೆ ಸಮಂತನ್ನನದ್ರೀಂದ್ರಜಾತೇ ೫೮

ಇದು ವಿನಮದಖಿಳ ಸುರಾಸುರೇಂದ್ರಮಕುಟತಟಘಟಿತ ಮಣಿಗಣಾಗಣಿತ ರುಚಿನಿಚಯ
ತರುಣಾರುಣಾತಪಪರಿಲಸಿತ ಪರಮ ಶಿವಲಿಂಗ ಪಾದಾರವಿಂದಪರಾಗಭಸಿತ
ಭಾಸುರಲಲಾಟಪಟ್ಟಸರಸಜನಮಾನಿತೋಭಯಕವಿತಾವಿಶಾರದ
ಶ್ರೀಷಡಕ್ಷರಿದೇವಭಕ್ತಿವಿರಚಿತ
ಶ್ರೀಮದ್ ಬಸವರಾಜವಿಜಯಮಹಾಪುರಾಣದೊಳ್ ಬಸವಭಕ್ತಪ್ರಾಣಸಖಿತ್ವಕಥನಂ
ಪಂಚವಿಂಶಾಶ್ವಾಸಂ ಸಮಾಪ್ತಂ
ಅಂತು ಆಶ್ವಾಸ ೨೫ಕ್ಕೆ ಪದಗಣನೆ ೧೮೪೦ಕ್ಕೆ ಮಂಗಳಮಹಾಶ್ರೀ ||

ಸಮೂಹಕ್ಕೆ ಕ್ರಮವಾಗಿ ಅತ್ಯಂತ ಭಕ್ತಿಯಿಂದ ನಮಸ್ಕಾರ ಮಾಡುತ್ತ, ಸಂತೋಷದಿಂದ ಕೂಡಿದವನಾಗಿ, ಆ ಪ್ರಮಥರುಗಳ ಅತ್ಯಧಿಕ ದಯೆಯೆಂಬ ಅಮೃತದ ನದಿಯಲ್ಲಿ ಮುಳುಗಿ ಅವರೊಡನೆ ಶೋಭಿಸುತ್ತಿದ್ದನು. ೫೭. ವಿಶೇಷವಾದ ಆನಂದ ಭರಿತನಾದ ಬಸವೇಶ್ವರನು ಆ ಪ್ರಮಥಗಣ ಸಮೂಹದ, ಮಾಚಿದೇವನ ಪಾದ ಕಮಲಗಳಿಗೆ ಭಕ್ತಿಯಿಂದ ನಮಸ್ಕರಿಸುತ್ತ, ಸ್ತೋತ್ರ ಮಾಡುತ್ತ ಅವರ ಕಾರುಣ್ಯವನ್ನು ಪಡೆಯುತ್ತ, ಬೀಳ್ಕೊಳ್ಳುತ್ತ ಮೇರೆಯಿಕ್ಕಿದ ವಿಶ್ವಾಸದಿಂದ, ಭಕ್ತರ ಸಮೂಹವೂ, ಮೇದರಕೇತಿದೇವನೂ ಪ್ರೀತಿಯಿಂದ ಹಿಂಬಾಲಿಸಿ ಬರುತ್ತಿರಲಾಗಿ, ತನ್ನ ರತ್ನನಿರ್ಮಿತ ಗೋಡೆಗಳ ಕಾಂತಿಯಿಂದ ಪ್ರಕಾಶಮಾನವಾದ ಮನೆಯನ್ನು ಹೊಕ್ಕನು. ೫೮. ಸಾರವತ್ತಾದ ಆಕಾರವುಳ್ಳವಳೇ, ಸದ್ಗುಣಪೂರ್ಣವಾದ ಹೃದಯವುಳ್ಳವಳೇ, ಸಮಸ್ತ ಲೋಕಗಳ ಏಕೈಕ ಮಾತೆಯೇ, ಹೆಚ್ಚಾದ ಶೋಭೆಯಿಂದ ವಿರಾಜಿಸುವ ಪಾದಗಳುಳ್ಳವಳೇ, ಲತೆಗಳಂತಿರುವ ಹುಬ್ಬಿನ ಹಾರಿಸುವಿಕೆಯಿಂದ ಪಂಚಭೂತಗಳಿಗೆ ಅಪ್ಪಣೆ ಮಾಡುವವಳೇ, ಸಮುದ್ರದಿಂದ ಹುಟ್ಟಿದ ಲಲನೆಯಾದ ಲಕ್ಷ್ಮಿಯಿಂದ ಆರಾಧಿಸಲ್ಪಡುವವಳೇ, ಒಳ್ಳೆಯ ಪವಿತ್ರಳೇ, ಮನ್ಮಥ ವೈರಿಯಾದ ಶಿವನ ವಲ್ಲಭೆಯೇ, ಪರ್ವತೇಶ್ವರನ ಪುತ್ರಿಯೇ—ನನ್ನನ್ನು ಪ್ರೀತಿಯಿಂದ ರಕ್ಷಿಸು.

ಇಪ್ಪತ್ತೈದನೆಯ ಆಶ್ವಾಸವು ಸಮಾಪ್ತವಾಯಿತು.

ಷಡ್ತ್ರಿಂಶಾಶ್ವಾಸಂ

[ದಸರಯ್ಯನ ಕಥೆ]

ಶ್ರೀಮದುಮಾಕಬರೀಸುಮ
ದಾಮರಜೋರಾಜಿರಂಜಿವಾಮಾಂಸಕನು
ದ್ದಾಮಗುಣಧಾಮನಘಹರ
ನಾಮಂ ಪೊರೆಗೆಮ್ಮನಾಗಳುಂ ಶಿವಲಿಂಗಂ ೧

ಹರಭಕ್ತಿಪ್ರಮದಾಮುಖೈಕಮುಕುರಂ ಪಂಚೇಷುದೂರಂ ಶುಭಾ
ಕರವೃತ್ತಂ ಗಳಿತೇಷಣಂ ವಿಗತದೋಷಂ ವಿಶ್ವನುತ್ಯಂ ಕೃಪಾ
ಭರಣಂ ಭಕ್ತಜನಾಂತರಂಗನನಘಂ ಗಾಂಭೀರ್ಯವಾರಾಕರಂ
ಪರಿಶುದ್ಧಂ ದಸರಯ್ಯನೆಂಬ ಶರಣಂ ದಾನಾಮರಕ್ಷ್ಮಾರುಹಂ ೨

ಸರ್ವಜೀವದಯಾಪರಂ ಸಕಳಪ್ರಪಂಚವಿವರ್ಜಿತಂ
ನಿರ್ವಿಕಾರನನಾಮಯಂ ನಿಗಮಾಗಮಾರ್ಥವಿಶಾರದಂ
ಗರ್ವದೂರನವಂಚಕಂ ಜಿತಪಾಶನಾತ್ಮಯಶೋಜಿತಾ
ಖರ್ವಪಾರ್ವಣಚಂದ್ರಿಕಂ ಚರಲಿಂಗಭಕ್ತಿಪರಾಯಣಂ ೩

ದಸರ ದೇವಯ್ಯನ ಕಥೆ

೧. ಮಂಗಳಕರಳಾದ ಪಾರ್ವತಿಯ ಕೇಶಗಳಲ್ಲಿರುವ ಪುಷ್ಪಮಾಲಿಕೆಗಳ ಪರಾಗ ಸಮೂಹದಿಂದ ಪ್ರಕಾಶಮಾನವಾದ ಎಡದೋಳುಳ್ಳವನೂ, ಉತ್ಕೃಷ್ಟವಾದ ಗುಣಗಳಿಗೆ ಮಂದಿರನಾದ, ಪಾಪ ನಾಶಕನೆಂಬ ಹೆಸರುಳ್ಳ, ಶಿವಲಿಂಗನು ನಮ್ಮನ್ನು ಯಾವಾಗಲೂ ರಕ್ಷಿಸಲಿ. ೨–೩. ಶಿವಭಕ್ತಿಯೆಂಬ ಸ್ತ್ರೀಯುಳ ಮುಖಕ್ಕೆ ಪ್ರಮುಖ ದರ್ಪಣ ಪ್ರಾಯನೂ, ಮನ್ಮಥನ ವಿಕಾರದೂರನೂ, ಮಂಗಳಕ್ಕೆ ಆಗರವಾದ ಚರಿತ್ರೆಯುಳ್ಳ ವನೂ, ವಿತ್ತೇಷಣ, ದಾರೇಷಣ, ಪುತ್ರೇಷಣಗಳೆಂಬ ಈಷಣತ್ರಯಗಳಿಂದ ದೂರನೂ, ಪಾಪದಿಂದ ದೂರನೂ, ಪ್ರಪಂಚದ ಜನರಿಂದ ಸ್ತೋತ್ರ ಮಾಡಿಸಿಕೊಳ್ಳಲ್ಪಡುವವನೂ, ಕೃಪೆಯೇ ಆಭರಣವಾದವನೂ, ಭಕ್ತ ಜನರನ್ನು ಅಂತರಂಗದಲ್ಲಿ ಉಳ್ಳವನೂ, ಅನಘನೂ,ಗಂಭೀರತನಕ್ಕೆ ಸಮುದ್ರದೋಪಾದಿಯುಲ್ಲಿರುವವನೂ, ಪರಿಶುದ್ಧನೂ, ದಾನದಲ್ಲಿ ಕಲ್ಪವೃಕ್ಷಪ್ರಾಯನೂ ಆದ ದಸರಯ್ಯ ಎಂಬ ಶರಣನು ಸಮಸ್ತ ಪ್ರಾಣಿ ಗಳಲ್ಲಿ ಕರುಣೆಯಿಂದ ಕೂಡಿದ್ದನು, ಸಮಸ್ತ ಮಾಯಾ ಪ್ರಪಾಚದಿಂದ ದೂರನಾಗಿದ್ದನು, ನಿರ್ವಿಕಾರನೂ, ರೋಗ ರಹಿತನೂ ಆಗಿದ್ದನು. ವೇದಾರ್ಥದಲ್ಲಿ ಬಲ್ಲಿದನೂ, ಗರ್ವ ರಹಿತನೂ, ಕಪಟವಿಲ್ಲದವನೂ ಆಗಿದ್ದನು. (ಸಾಂಸಾರಿಕ) ಬಂಧನಗಳಿಂದ ದೂರ ನಾಗಿದ್ದನು. ತನ್ನ ಯಶಸ್ಸಿನಿಂದ ಪೌರ್ಣಿಮೆಯ ಚಂದ್ರನ ಬೆಳದಿಂಗಳನ್ನು ಜಯಿಸಿದ್ದನು.

ಘನಸಚ್ಚಿದಾತ್ಮಕಂ ಸ
ಜ್ಜನವಿನುತಂ ಸತ್ಯವಾಣಿ ನಿಜನಿರುಪಮಪಾ
ವನವೃತ್ತನಹಿಂಸಾಧ
ರ್ಮನಿಯುಕ್ತಂ ಪೆರ್ಮೆವೆತ್ತು ಕಂಗೊಳಿಸಿರ್ದಂ ೪

ಶಮದಮಯಮನಿಯಮದಯೋ
ತ್ತಮ ಶಿವಧರ್ಮಂಗಳೆಸೆಯೆ ಗುರುಚರಲಿಂಗ
ಕ್ರಮಕಮಳಂಗಳನರ್ಚಿಸು
ತಮರ್ದೊಪ್ಪಿದನಮಳ ಸುಗುಣವಿಸರಂ ದಸರಂ ೫

ನಡೆವೆಡೆಯೊಳ್ಪದಹತಿಯಿಂ
ಮಡಿಗುಂ ಕ್ರಿಮಿಸಮಿತಿಯೆಂದು ಬಗೆದಾರಯ್ದು
ತ್ತಡಿಯಿಡುವನೊಯ್ಯನೊಯ್ಯನೆ
ಪೊಡವಿಯೊಳಾ ದಸರನತಿದಯಾರಸಭರಿತಂ ೬

ನೆಗೆದಡ್ಡಂಬಾಱುವ ಕೀ
ಟಗಣಕ್ಕಳಿವಪ್ಪುದೆಂದು ಬೀಸದೆ ತೋಳಂ
ಸುಗುಣನಿಧಿ ನಡೆವುತಖಿಳೋ
ರ್ವಿಗಹಿಂಸಾಧರ್ಮಶಾಲಿ ತಾನೆನೆ ನೆಗಳ್ದಂ ೭

ಜಂಗಮಲಿಂಗ ಭಕ್ತಿಪರಾಯಣನೆನಿಸಿದ್ದನು. ೪. ಶ್ರೇಷ್ಠವಾದ ಸತ್–ಚಿತ್–ಆನಂದಗಳ ಸ್ವರೂಪನೂ, ಸಜ್ಜನರಿಂದ ಶ್ಲಾಘ್ಯನೂ, ಸತ್ಯವಾಣಿಯುಳ್ಳವನೂ, ದೃಢವಾದ, ಅಸದೃಶವಾದ, ಪರಿಶುದ್ಧ ಚರಿತ್ರೆಯುಳ್ಳವನೂ, ಅಹಿಂಸಾಧರ್ಮದಿಂದ ಕೂಡಿದವನೂ–ಎನಿಸಿದ ದಸರಯ್ಯನೆಂಬ ಶರಣನು ಹಿರಿಮೆಯಿಂದ ಕಂಗೊಳಿಸುತ್ತಿದ್ದನು. ೫. ನಿರ್ಮಲವಾದ ಸದ್ಗುಣಗಳ ಸಮೂಹದಿಂದ ಕೂಡಿದ ದಸರಯ್ಯನು ಶಾಂತಿ, ಇಂದ್ರಿಯ ನಿಗ್ರಹ, ಸಂಯಮ, ದಯಾದಿ ಶ್ರೇಷ್ಠ ಶಿವಧರ್ಮ ಮಾರ್ಗದಿಂದ ಶೋಭಿಸುತ್ತ ಗುರುಲಿಂಗ ಜಂಗಮರ ಪಾದಕಮಲಗಳನ್ನು ಅರ್ಚಿಸುತ್ತ ಶೋಭಿಸುತ್ತಿದ್ದನು. ೬. ಅತ್ಯಂತ ದಯಾ ರಸಭರಿತನಾದ ದಸರಯ್ಯನು ನಡೆಯುವಾಗ ಹೆಜ್ಜೆಯಿಡುವಿಕೆಯಿಂದ ಕ್ರಿಮಿಗಳ ಸಮೂಹವು ಸಾಯುತ್ತವೆ, ಎಂದು ಯೋಚಿಸಿ, ಪರೀಕ್ಷೆ ಮಾಡಿ, ಭೂಮಿಯಲ್ಲಿ ಮೆಲ್ಲ ಮೆಲ್ಲನೆ ಹೆಜ್ಜೆಯಿಡುತ್ತಿದ್ದನು. ೭. ಸದ್ಗುಣಗಳ ನಿಧಿಯಾದ ದಸರಯ್ಯನು (ತನಗೆ) ಅಡ್ಡಲಾಗಿ ಹಾರಿ ಬರುವ ಹುಳಗಳ ಸಮೂಹವು ನಾಶವಾಗುವುದೆಂದು ತೋಳನ್ನು ಬೀಸದ ಹಾಗೆ ನಡೆಯುತ್ತ ಸಮಸ್ತ ಭೂಮಿಯಲ್ಲಿ

ಹರಚರಣಾರ್ಚನಕ್ಕೆ ಪೊಸಪೂದಿಱಿಯಲ್ಕನಕೆಯ್ದಿ ಪೂಗಳಂ
ತುರಿಪದಿನೀಳ್ದು ಕೊಯ್ಯೆ ಸೆಳೆಗೊಂಬುಡಿದಾಯೆಡೆಯಿಂದೆ ನೆತ್ತರೊ
ತ್ತರಿಸುತೆ ಸೂಸೆ ಝೋರೆನುತೆ ಪೂಗಿಡು ನೊಂದೆನೆನುತ್ತಳಲ್ದು ಸು
ರ್ಕಿರೆ ನಡೆನೋಡಿ ನೊಂದು ಬಿಸುಟಾ ಕುಸುಮಾವಳಿಗೊಯ್ವ ಕಜ್ಜಮಂ ೮

ಮರದಡಿಯೊಳ್ಗೋಮಯದಿಂ
ವಿರಚಿಸಿ ಸಾರಣೆಯನಲ್ಲಿ ಮಱೆಗಟ್ಟುತೆ ಕ
ಮ್ಮಗಲುದುರೆ ಕೊಂಡವಂ ಸ
ಚ್ಚರಿತಂ ಶಿವಪೂಜೆಗೆಯ್ವನೋಜೆಯೊಳನಿಶಂ ೯

ವ॥ ಇಂತು ಶಾಂತಿರಸವಿಸರಂ ಪಸರಂಬೆತ್ತಿರೆ ದಸರಿದೇವಂ ರಸೆಯೊಳ್ಯಶದಿನೆಸೆವುತ್ತುಮಿರೆ ಪರಸಮಯಸ್ಥರಾತನ ನೆಗಳ್ತೆಗಸೂಯಾಪರರಾಗುತೆಲ್ಲರ್ಮಂತಣಂಗೊಂಡು ಕುಳ್ಳಿರ್ದೊಂದು ಕಪಟೋಪಾಯಮನಾಳೋಚಿಸಿ—

ಪರರಂ ತನ್ನಂತೆ ನೋಳ್ಪಂ ಗಡ ಪರರ ಮನಂ ನೋಗುಮೆಂದಾಗಳುಂ ನಿ
ಷ್ಠುರ ವಕ್ರಾಲಾಪಮಂ ತಾಂ ಮಱೆದುಮುಸುರದಿರ್ಪಂ ಗಡಾ ಸರ್ವಜಂತೂ
ತ್ಕರಮೆಂತುಂ ನೋಯದಂತಾಚರಿಪ ಪರಮಶಾಂತಂ ಗಡಾ ವೀರಮಾಹೇ
ಶ್ವರರೊಳ್ಮುಖ್ಯಂ ಗಡೀತಂ ಪಿಡಿದ ಬ್ರತದ ಸಾಮರ್ಥ್ಯಮಂ ನೋಳ್ಪೆವೀಗಳ್ ೧೦

ತಾನು ಅಹಿಂಸಾಧರ್ಮದಿಂದ ಒಪ್ಪುವವನು, ಎನಿಸಿ ಪ್ರಖ್ಯಾತನಾಗಿದ್ದನು. ೮–೯. ಪರಮೇಶ್ವರನ ಪಾದಪೂಜೆಗೆ ಹೊಸ ಹೂವುಗಳನ್ನು ಎತ್ತಿಕೊಂಡು ಬರುವುದಕ್ಕೋಸುಗ, ತೋಟಕ್ಕೆ ಹೋಗಿ ಹೂವುಗಳನ್ನು ಜಾಗ್ರತೆಯಾಗಿ ಕೈ ಚಾಚಿ ಕೊಯ್ಯುತ್ತಿರುವಾಗ ಸಣ್ಣ ಕೊಂಬೆಯು ಮುರಿದು ಆ ಸ್ಥಳದಿಂದ ಜೋರ್ ಎಂದು ನೆತ್ತರು ಒತ್ತರಿಸಿ ಹೊರ ಬರಲು, ಹೂವಿನ ಗಿಡವು ನೊಂದೆನು ಎನ್ನುತ್ತ ಸಂಕಟಪಟ್ಟು, ಸುಕ್ಕಿಕೊಂಡು ಇರಲು (ಬತ್ತಿಕೊಂಡಿರಲು) ಅದನ್ನು ಚೆನ್ನಾಗಿ ನೋಡಿ, ಸಂಕಟಪಟ್ಟು ಹೂವುಗಳನ್ನೆತ್ತಿ ತರುವ ಕಾರ್ಯವನ್ನೆ ಕೈ ಬಿಟ್ಟು, ಆ ಸಚ್ಚರಿತನು ಮರದ ಕೆಳ ಭಾಗದಲ್ಲಿ ಗೋವಿನ ಸೆಗಣಿಯಿಂದ ನೆಲವನ್ನು ಸಾರಿಸಿ, ಅಲ್ಲಿಯೇ ಮರೆಯನ್ನು ಕಟ್ಟಿ, ಕಂಪಾದ ಹೂವು ಉದುರಲಾಗಿ ಅಂಥ ಹೂವನ್ನು ತೆಗೆದುಕೊಂಡು ಕ್ರಮವಾಗಿ ಸತತವೂ ಪೂಜೆ ಮಾಡುತ್ತಿದ್ದನು. ವ॥ ಈ ರೀತಿ ಶಾಂತಿರಸ ಸಮೂಹವು ವಿಸ್ತಾರ ಹೊಂದುತ್ತಿರಲಾಗಿ ಆ ದಸರಯ್ಯನು ಭೂಮಿಯಲ್ಲಿ ಯಶಸ್ಸಿನಿಂದ ಶೋಭಿಸುತ್ತಿರಲು ಇತರ ಸಮಯದ ಜನರು ಆತನ ಈ ವಿಖ್ಯಾತಿಗೆ ಮಾತ್ಸರ್ಯ ಪಡುವವರಾಗಿ ಎಲ್ಲರೂ ಗುಂಪಾಗಿ ಸೇರಿ, ಒಂದು ಕಪಟದ ಉಪಾಯವನ್ನು ಆಲೋಚನೆ ಮಾಡಿ—೧೦. 'ಪರರನ್ನು ತನ್ನ ಹಾಗೆಯೇ ನೋಡುತ್ತಾನಂತೆ! ಪರರ ಮನಸ್ಸು ನೋಯುವುದು ಎಂದು ಯಾವಾಗಲೂ, ಕಠಿಣವಾಗಿಯೂ, ವಕ್ರವಾಗಿಯೂ ಇರುವ ಮಾತನ್ನು ತಾನು ಮರೆತೂ ಕೂಡ ಮಾತನಾಡದೆ ಇರುವನಂತೆ! ಸಮಸ್ತ ಪ್ರಾಣಿಗಳ ಸಮೂಹವು ನೋಯದಂತೆ ವ್ಯವಹರಿಸುವ ಪರಮ ಶಾಂತನಂತೆ! ವೀರ ಮಾಹೇಶ್ವರರಲ್ಲಿ ಇವನು ಮುಖ್ಯನಂತೆ! ಹೀಗೆ ಇವನು ಅನುಸರಿಸುತ್ತಿರುವ ವ್ರತ ಸಾಮರ್ಥ್ಯವನ್ನು ಈಗ ನೋಡುತ್ತೇವೆ'.

ವ॥ ಎಂದನಿಬರುಮಾಳೋಚನಂಗೆಯ್ದು ಕೆಯ್ಗೆಟ್ಟ ಕಾಳ್ಮಾನಿಸನೊರ್ವನಂ ಕಾಪಟ್ಯದಿಂ ಕರೆದುತಂದು—

ಶಿರಮಂ ಭದ್ರಿಸಿ ನುಣ್ಣನಾಗೆ ಕೊರಲೊಳ್ರುದ್ರಾಕ್ಷೆಯಂ ತೀವಿ ಮೆಯ್‌
ಗಿರದುದ್ಧೂಳಿಸಿ ಭಸ್ಮಮಂ ಪಣೆ ಮೊಗಕ್ಕಾಲೇಪನಂಗೆಯ್ದು ಮು
ಪ್ಪುರಿಯಂ ಕಟ್ಟಿ ಕಟೀತಟಕ್ಕೆ ಸುಲಿದೊಳ್ಪಿಂ ಪಲ್ಗಳಂ ಕಾಲ್ಗಳಂ
ಕರದಿಂದಂ ತೊಳೆದೋದು ಕೋವಣಮನಾಂತಂಗೊಲ್ದು ಕೆಯ್ಗೆಯ್ವುತುಂ ೧೧

ಒಳಗೆ ಮೃದುವಸ್ತ್ರಮಂ ಸಂ
ಗಳಿಸುತೆ ಬಱಿಸೆಜ್ಜೆಯೊಂದನಳವಡಿಸುತ್ತುಂ
ಗಳದೊಳ್ಶೈವಲಾಂಛನಮಂ
ಕೆಳೆಗೊಳಿಸಿದರರರೆ ಚೋದ್ಯಮೆನೆ ಪೌರಜನಂ ೧೨

ವ॥ ಇಂತು ಬಱಿ ಚೋಹಮನಳವಡಿಸಿ ನಲವಾಂತು ನೋಡಿ—

ದಸರಯ್ಯನನೆಱಗಿಸಿ ಕೊಂ
ಡಸವಸದಿಂ ಪೊಡೆವುದವನ ಶಿರಮಂ ನಿನ್ನೀ
ಮಿಸುಗುವ ಮೋಟುಂಗೆಯ್ಯಿಂ
ರಸೆಯಚ್ಚರಿವಡೆಯೆ ಮಲ್ಲ ಪೋಗೆನುತಾಗಳ್‌ ೧೩

ಬೋಳೈಸಿ ಕಳುಪೆ ಖಳರಾ
ವೇಳೆಯೊಳೆಯ್ತಂದನತುಳ ಸಂಭ್ರಮದಿಂ ಪು

ವ॥ ಎಂದು ಆ ಎಲ್ಲರೂ ಆಲೋಚನೆ ಮಾಡಿ ಕೈ ಮುರಿದ ಒಬ್ಬ ಕಾಡು ಮನುಷ್ಯನನ್ನು ಕಪಟದಿಂದ ಕರೆದುಕೊಂಡು ಬಂದು—೧೧–೧೨. ಅವನ ತಲೆಯನ್ನು ನುಣ್ಣಗೆ ಕೂದಲು ಬೋಳಿಸಿ, ಕೊರಳಿನಲ್ಲಿ ರುದ್ರಾಕ್ಷಿಗಳ ಮಾಲೆಯನ್ನು ಹಾಕಿ, ಮೈಗೆ ತಪ್ಪದೆ ಭಸ್ಮೋದ್ಧೂಳನಗೊಳಿಸಿ, ಹಣೆಗೂ, ಮುಖಕ್ಕೂ ಭಸ್ಮವನ್ನು ಧರಿಸಿ, ನಡುವಿಗೆ ಉಡಿದಾರವನ್ನು ಬಿಗಿದು, ಹಲ್ಲುಗಳನ್ನು ಶುಭ್ರಗೊಳಿಸಿ, ಕಾಲುಗಳನ್ನು ಕೈಯಿಂದ ತಿಕ್ಕಿ ತೊಳೆದು, ಕೌಪೀನವನ್ನು ಒಲಿದು ಕಟ್ಟುತ್ತ, ಒಂದು ಮೃದುವಾದ ವಸ್ತ್ರವನ್ನು ಹೊದಿಸಿ, ಬರಿಯ ಲಿಂಗದ ಕರಡಿಗೆಯನ್ನು (ಲಿಂಗವಿಲ್ಲದ ಕರಡಿಗೆ) ಕಂಠದಲ್ಲಿ ಸಂಬಂಧಗೊಳಿಸಿ, ಪಟ್ಟಣದ ಜನಗಳು ಅಬ್ಬಾ ! ಇದೇನು ವಿಚಿತ್ರ ! ಎನ್ನುವಂತೆ ಶೈವ ಲಾಂಛನವನ್ನು ಅವನಿಗೆ ಉಂಟುಮಾಡಿದರು. ವ॥ ಈ ರೀತಿ ಬರಿಯ ವೇಷವನ್ನು ಅಳವಡಿಸಿ ಸಂತೋಷಗೊಂಡವರಾಗಿ ಅವನನ್ನು ನೋಡುತ್ತ—೧೩–೧೪. ಎಲೈ ಮಲ್ಲನೇ, ದಸರಯ್ಯನಿಂದ ನಮಸ್ಕಾರ ಮಾಡಿಸಿಕೊಂಡು, ಹಿಂದು ಮುಂದು ನೋಡದೆ ಅವನ ತಲೆಯನ್ನು ಈ ನಿನ್ನ ಶೋಭಿಸುವ ಮೋಟುಗೈಯಿಂದ ಲೋಕದ ಜನವೆಲ್ಲ ಅಚ್ಚರಿಪಡುವಂತೆ ಹೊಡಿಯಬೇಕು ಹೋಗು' ಎನ್ನುತ್ತ ಆಗ ಆ ದುಷ್ಟರು ಆತನ ತಲೆಯನ್ನು ಸವರಿ ಕಳಿಸಿದರು. (ಅವನು) ಬಂದು, ಆ ಸಮಯದಲ್ಲಿ ಅತ್ಯಂತ ಸಂಭ್ರಮದಿಂದ ಹೂವು

ಪ್ಪಾಳಿದರಲೆಂದು ಪೋಪ ದ
ಯಾಳುವನಾ ದಸರವಿಭುವನೊಯ್ಯನೆ ಕಂಡಂ ೧೪

ವ॥ ಅಂತು ಕಂಡು ಸಡಗರಂ ವಿೞಗೆ ರಾಜವೀಥಿಯೊಳ್ಬಳಿಸಂದು ನಡೆತರುತ್ತುಂ ನೋೞ್ಪರಂ ನಗೆಗಡಲೊಳೋಲಾಡಿಸಿ—

ನಗುತುಂ ದರ್ಪನೆ ತೇಗುತುಂ ತೊನೆವುತುಂ ಪುರ್ಬಿಕ್ಕುತುಂ ಪಾಱುತುಂ
ನೆಗೆವುತ್ತುಂ ಕೆಲೆವುತ್ತೆ ಕೀಕರಿಸುತಡ್ಡಂಬಾಯ್ಪುವತುಂ ಮಂದಿಯೊ
ಳ್ಪುಗುತುಂ ಮೋಱೆಯನೆತ್ತುತುಂ ಮುಱುಕಿಸುತ್ತಂತಂತೆ ತನ್ನಂಗಮಂ
ವಿೞಗೆ ನೋಡುತ್ತೊಲೆದಾಡಿಸುತ್ತೆ ಮುಡುಪಂ ಪೆಂಪೇಱುತುಂ ಪಾಡುತುಂ ೧೫

ಸೆಡೆದು ಪೆಡಂಮೆಟ್ಟುತೆ ಮುಂ
ಗಡೆಗೊರ್ಗುಡಿಪಂತೆ ಜಗಳಂಬಾಯ್ಪುವತೆ ಪಿಂ
ಗಡೆಗೊಲೆದು ನಿಲುತೆ ನೋಡು
ತ್ತೆಡವಲಮನಲರ್ಚೆ ಕಣ್ಗಳಂ ಪುರ್ಬಿಡುತುಂ ೧೬

ಮುಂಡೆಯನಂತಿಂತೊಲೆವುತೆ
ತುಂಡಿಸಿದ ಕರಂಗಳೊಡ್ಡಿ ದಂಡೆಗೊಡುತ್ತುಂ
ದುಂಡಿಸುತಾಡಿಸುತೆ ಕಟೀ
ಮುಂಡಲಮಂ ಬೀಗಿ ಬೆಱೆವುತಣೆದಡಿಯಿಡುತುಂ ೧೭

ಗಳ ಸಮೂಹವನ್ನು ತರಲೆಂದು ಹೋಗುತ್ತಿರುವ ದಯಾಳುವಾದ ಆ ದಸರಯ್ಯ ವಿಭುವನ್ನು ಒಮ್ಮೆಲೆ ಕಂಡನು. ವ॥ ಹಾಗೆ (ಆ ದಸರಯ್ಯನನ್ನು) ಕಂಡು, ಹೆಚ್ಚಾದ ಸಡಗರದಿಂದ ರಾಜಬೀದಿಯಲ್ಲಿ ಹತ್ತಿರಕ್ಕೆನಡೆದು ಬರುತ್ತ ನೋಡುವವರನ್ನು ನಗೆ ಗಡಲಲ್ಲಿ ಮುಳುಗುವಂತೆ ಮಾಡುತ್ತ–೧೫–೧೬–೧೭. ನಗುತ್ತ, ದರ್ಪನೇ ತೇಗುತ್ತ, ತೂಗಾಡುತ್ತ, ಹುಬ್ಬು ಹಾರಿಸುತ್ತ, ನೆಗೆಯುತ್ತ ಕೆಲೆಯುತ್ತ (ಗುಟುರು ಹಾಕುತ್ತ), ಕೀಕರಿಸುತ್ತ (ಗಂಟಲಲ್ಲಿ ಸಿಕ್ಕ ಉಗುಳನ್ನು ಉಗುಳುವಂತೆ ಮಾಡುತ್ತ) ಅಡ್ಡಗಟ್ಟಿ ಬರುತ್ತ, ಜನರ ಗುಂಪಿನಲ್ಲಿ ನುಗ್ಗುತ್ತ, ಮುಖವನ್ನು ಮೇಲಕ್ಕೆತ್ತುತ್ತ, ಮುರಿಯುತ್ತ (ಮುಖ ಮುರಿಯುತ್ತ), ಹಾಗೆ ಹಾಗೆಯೇ ತನ್ನ ಅಂಗಾಂಗಗಳನ್ನು ನೋಡಿಕೊಳ್ಳುತ್ತ ಉಟ್ಟಿರುವ ವಸ್ತ್ರವನ್ನು ಒಲೆದಾಡಿಸುತ್ತ, ಹೆಮ್ಮೆಯಿಂದ ಬೀಗುತ್ತ, ಹಾಕುತ್ತ, ಸೆಡೆದು ನಿಲ್ಲುತ್ತ, ಹಿಂದಕ್ಕೆ ಸರಿದು ನಿಲ್ಲುತ್ತ, ಮುಂದುಗಡೆಗೆ ಒಂದುಗೂಡಿಸುವಂತೆ ಟಣ್ಣನೆ ಹಾರುತ್ತ, ಹಿಂದಕ್ಕೆ ಸೆಡೆದು ನಿಲ್ಲುತ್ತ, ಎಡಬಲ ಪಾರ್ಶ್ವಗಳನ್ನು ಕಣ್ಣುಗಳನ್ನರಳಿಸಿ ನೋಡುತ್ತ, ಹುಬ್ಬು ಹಾರಿಸುತ್ತ, ತಲೆಯನ್ನು ಅತ್ತ ಇತ್ತ ತೂಗಾಡಿಸುತ್ತ, ಕತ್ತರಿಸಿ ಹೋದ ಕೈಗಳನ್ನು ಮುಂದೆ ಮಾಡಿ ಚಾಚುತ್ತ, ಚಕ್ರಾಕಾರವಾಗಿ ತಿರುವುತ್ತ, ನಡುವನ್ನು ಅಲ್ಲಾಡಿಸುತ್ತ, ಹರ್ಷಗೊಂಡು ಬೆರೆಯುತ್ತ, ಬಡಿ ಬಡಿದು ಹೆಜ್ಜೆ ಹಾಕುತ್ತ (ನಡೆದು

ತಳರ್ದಿಂತು ದಸರಿದೇವನ
ಬಳಿಸಾರ್ದು ಕಡಂಗಿ ನೋಡಿ ಶರಣಾರ್ಥಿಯೆನ
ಲ್ಕಳವಡದೆ ಪರಸಿದಂ ತೊದ
ಲೆಳಸಿರ್ಪಿನಮಲ್ಪವಾಯು ನಿನಗಕ್ಕೆನುತುಂ ೧೮

ವ॥ ಎಂದವಂ ಕಪಟಚರವೇಷವುಂ ತಳೆದೇಳ್ತಂದೆನೆಂಬ ಲಜ್ಜೆಯಿಂ ತಡಬಡಂಬೋಗಿ ಪರಸಿ—

ಎಲೆ ದಸರಿದೇವ ಕುಶಲವೆ
ನಲವಿಂದಾವೆಡೆಗೆ ಪೋಪೆ ಕಜ್ಜಮದೇಂ ನಿ
ಶ್ಚಲಮತಿ ನಿನ್ನಯ ಸುಗುಣಾ
ವಲಿಯಂ ಕೇಳ್ದೆಳಸಿ ನೋಡಲೆಯ್ದಿದೆವೀಗಳ್ ೧೯

ನಿಯತದೊಳೆ ಮಲ್ಲಿನಾಥಾ
ಹ್ವಯಮೆಸೆದಪುದೆಮಗೆ ಸುಪ್ರಸಿದ್ಧಂ ಸರ್ವೋ
ರ್ವಿಯೊಳೆಮಗೆಣೆವರ್ಪರದಾ
ರ್ನಯ ನಿಯಮ ಮಹತ್ವಸತ್ವಸಾರೋನ್ನತಿಯೊಳ್ ೨೦

ಪರ್ವತನಾಥನ ಸುತನಾ
ನುರ್ವರೆಯೊಳ್ಕಿಱಿಯನಲ್ತು ನಿನಗೆಂತುಟೊ ಪೇ
ಳ್ಗರ್ವಂ ನುಡಿಯದೆ ಪೋದಪೆ
ನಿರ್ವಂಚಕ ಭಕ್ತವರ್ಯ ನಿನಗಿದು ಗುಣಮೇ ೨೧

ಬರುತ್ತಿದ್ದನು). ೧೮. ಈ ರೀತಿ ದಸರಯ್ಯನ ಸಮೀಪಕ್ಕೆ ಹೋಗಿ, ಉತ್ಸಾಹಿತನಾಗಿ (ಅವನನ್ನು) ನೋಡಿ, ಶರಣಾರ್ಥಿ ಎಂದೆನ್ನಲಿಕ್ಕೆ ಹೊಂದಿಕೆಯಾಗದೆ (ತೋರದೆ) ಸುಳ್ಳಿನಿಂದ ಕೂಡಿರುವುದಕ್ಕೆ ಬಯಸಿ 'ನಿನಗೆ ಅಲ್ಪಾಯುಷ್ಯವಾಗಲಿ' ಎಂದು ಹರಸಿದನು. ೧೯. 'ಎಲೈ ದಸರಿ ದೇವನೇ ಕುಶಲವೇ ? ಪ್ರೀತಿಯಿಂದ ಯಾವ ಕಡೆಗೆ ಹೋಗುತ್ತಿರುವೆ ? ಅದೇನು ಕೆಲಸ ? ಎಲೈ ಚಾಂಚಲ್ಯವಿಲ್ಲದ ಬುದ್ಧಿಯುಳ್ಳವನೇ, ನಿನ್ನ ಸದ್ಗುಣ ಸಮೂಹವನ್ನು ಕೇಳಿ, ಈಗ ನಿನ್ನನ್ನು ನೋಡಲಿಕ್ಕೆ ಅಪೇಕ್ಷಿಸಿ ಬಂದಿದ್ದೇನೆ.' ೨೦. 'ಈ ಸಮಸ್ತ ಭೂಮಂಡಲದಲ್ಲಿ ನಮಗೆ ನಿಯತವಾಗಿ (ನಿಶ್ಚಯವಾಗಿ) ಮಲ್ಲಿನಾಥನೆಂದೆನ್ನುವ ಹೆಸರು ಶೋಭಿಸುತ್ತಿರುವುದು. ನೀತಿ, ನಿಯಮ, ಮಹಾತ್ಮೆಗಳ ಸತ್ವದಿಂದ ಸಾರಗೊಂಡು ಔನ್ನತ್ಯವನ್ನೂ ಹೊಂದಿ ನಮಗೆ ಸಮಾನರೆನಿಸಿದವರು ಯಾರಿದ್ದಾರೆ ? ೨೧. 'ಪರ್ವತನಾಥನಾದ ಮಲ್ಲಿಕಾರ್ಜುನನ ಮಗನಾದ ನಾನು ಈ ಭೂಭಾಗದಲ್ಲಿ ಚಿಕ್ಕವನೇನಲ್ಲ. ನಿನಗೆ ಎಷ್ಟೊಂದು ಗರ್ವ ! ನುಡಿಯದೆ ಹೋಗುತ್ತಿದ್ದೀಯೆ. ಕೇಳು : ಕಪಟಗಳಲ್ಲಿ ಶ್ರೇಷ್ಠನಾದವನೇ ! ನಿನಗೆ ಇದು ತಕ್ಕದ್ದೇ ?'

ನುಡಿದೊಡೆ ನಿನ್ನ ಮಹತ್ವಂ
ಕಿಡುಗುಮೆ ನಡೆನೋಡೆ ನಿನ್ನ ಪೌರುಷವಳಿವಂ
ಪಡೆಗುಮೆ ಮಣಿದೊಡೆ ನಿನ್ನಯ
ಮೃಡಭಕ್ತಿಗೆ ಹಾನಿಯಕ್ಕುಮೇ ಬಗೆವಾಗಳ್ ೨೨

ಚರಮೂರ್ತಿಯಾನೆ ನಿನ್ನಂ
ಕರೆವುತಿರೆ ಕೇಳದಂತೆ ತಳರ್ದಪೆ ನಿನಗಾಂ
ಚರಮೂರ್ತಿಯಲ್ಲನೇ ಪೇ
ಳ್ಪರಮಾರ್ಥಮನೇಕೆ ನುಡಿಯೆ ಗುಣಮಣಿಭರಣಾ ೨೩

ಚರಭಕ್ತಿಯುತನಹಿಂಸಾ
ಪರನಧಿಕ ದಯಾಳು ಧಾರ್ಮಿಕಂ ನೀನೆಂದಾ
ದರದಿನಭೀಕ್ಷಿಸಲೆಂದಾ
ನಿರದೇಳ್ತಂದಿರವನಿಂದು ಸಫಳಂಗೆಯ್ದ್ಯ ೨೪

ಎಮ್ಮೊಡನಾಡಿಗಳಿರ್ಪ
ರ್ದಿಮ್ಮಿದರಿದನೆಯ್ದೆ ಕೇಳ್ದೊಡೆಮ್ಮಂ ಬಳಿಯೊಳ್
ಸಮ್ಮನಿಪರೆ ಲಘುಮಾಡಿದೆ
ಕೆಮ್ಮನೆ ನೀನಕಟ ಸರಿಯ ತಾಪಸರೆಡೆಯೊಳ್ ೨೫

ಒಡೆಯರ್ಕಳಿದ್ದೆಡೆಗೆ ಕೇ
ಳ್ಮೃಡಭಕ್ತಂ ಪೋಗುತೆಱಗಿ ತತ್ಕೃಪೆಯುನಣಂ

೨೨. '(ನನ್ನೊಡನೆ) ಮಾತನಾಡಿದರೆ ನಿನ್ನ ಮಹತ್ವವು ಕೆಡುವುದೇನು ? ಚೆನ್ನಾಗಿ ನೋಡಿದರೆ ನಿನ್ನ ಪೌರುಷವು ನಾಶವಾಗುವುದೇ ? ನಮಸ್ಕಾರ ಮಾಡಿದರೆ ನಿನ್ನ ಶಿವ ಭಕ್ತಿಗೆ ಹಾನಿಯುಂಟಾಗುವುದೇ ?' ೨೩. 'ಸದ್ಗುಣವೆಂಬ ರತ್ನವೇ ಆಭರಣವಾಗಿ ಉಳ್ಳವನೇ, ಜಂಗಮನಾದ ನಾನೇ ನಿನ್ನನ್ನು ಕರೆಯುತ್ತಿದ್ದರೆ ಕೇಳಿಸದವನಂತೆ ಹೋಗು ತ್ತಿದ್ದೀಯೆ. ನಿನಗೆ ನಾನು ಜಂಗಮ ಮೂರ್ತಿಯಲ್ಲವೇ ? ಪರಮಾರ್ಥವನ್ನು (ಶ್ರೇಷ್ಠ ಸತ್ಯವನ್ನು) ಮಾತನಾಡು. ಏಕೆ ಮಾತನಾಡುತ್ತಿಲ್ಲ ?' ೨೪. 'ನೀನು ಜಂಗಮ ಭಕ್ತಿಯುತನು : ಹಿಂಸೆ ಮಾಡಬಾರದೆಂಬುದರಲ್ಲಿ ಆಸಕ್ತನಾದವನು ; ವಿಶೇಷ ದಯಾಳುವು ; ಧರ್ಮಿಷ್ಠನು ಎಂದು ನಾನು ಆದರಿಂದ ನೋಡುವುದಕ್ಕೆಂದು ತಪ್ಪದೆ ನಿನ್ನಲ್ಲಿಗೆ ಬಂದ ರೀತಿಯನ್ನು ಈಗ ಫಲಕಾರಿಯಾದುದನ್ನಾಗಿ ಮಾಡಿದಂತಾಯಿತು ! ೨೫. ನಮ್ಮ ಒಡನಾಡಿಗಳು ಬಹು ದೊಡ್ಡವರಿದ್ದಾರೆ. (ಅವರು) ಈ ವೃತ್ತಾಂತವನ್ನು ತಪ್ಪದೆ ಕೇಳಿದರಾದರೆ, ನಮ್ಮನ್ನು ಅವರು ತಮ್ಮ ಬಳಿಯಲ್ಲಿ ಸನ್ಮಾನ ಮಾಡುವರೇ ? ಸುಮ್ಮನೆ ನೀನು ಸರಿಸಮಾನರಾದ ತಪಸ್ವಿಗಳ ಹತ್ತಿರ ನಮ್ಮನ್ನು ಲಘುವಾದರವರನ್ನಾಗಿ ಮಾಡಿದೆ ; ಅಕ್ಕಟ !' ೨೬. 'ಎಲೈ ಒಳ್ಳೆಯ ಬುದ್ಧಿಯುಳ್ಳ ದಸರಯ್ಯನೇ ಕೇಳು: ಒಡೆಯರುಗಳು ಇದ್ದ ಸ್ಥಾನಕ್ಕೆ ಶಿವಭಕ್ತನು (ತಾನೇ) ಹೋಗಿ ನಮಸ್ಕರಿಸಿ ಅವರ

ಪಡೆಯಲ್ವೇಳ್ಕುಂ ನೀನಿ
ರ್ದೆಡೆಗಾನಿರದೆಯ್ದೆ ಸುಮ್ಮನಿರ್ಪುದೆ ಸುಮತೀ ೨೬

ಮದವೊ ಮರುಳ್ತನವೋನಿನ
ಗಿದು ಜಗದೊ[1]ಳ್ಮೋಟ[1]ಮಲ್ಲಿನಾಥನ ದೊರೆವೆ
ತ್ತೊದವಿದ ಪೆರ್ಮೆಯ ಕೇಳ್ದುಂ
ಪದೆದಱಿದುಂ ಮಣಿಯದಿರ್ಪ ನಿನ್ನ ವಿಡಾಯಂ ೨೭

ವ॥ ಎಂದಿಂತು ಬಲಾತ್ಕರಿಸಿ ಗಳಪುವ ಶಿವಲಾಂಛನಧಾರಿಯಾದ ಮೋಟಮಲ್ಲನಿರವಂ ದಸರಯ್ಯಂ ಪಿಂದಿರಿಗಿ ನೋಡಿ—

ದುರುಳನಿವನೆಂದು ಬಗೆದನೆ
ದುರಿತಾತ್ಮಕನೆಂದು ನೆನೆದನೇ ಖಲನೆಂದೋ
ಸರಿಸಿದನೆ ಕುಹಕವೇಷವು
ನಿರದಾಂತ ಮದಾಂಧನೆಂದದೇಂ ನೋಡಿದನೇ ೨೮

ಕರವಿಲ್ಲದ ಮೋಟಂ ತ
ಸ್ಕರಚರಿತಂ ಕಪಟಿಯೆಂದುಪೇಕ್ಷಿಸಿದನೆ ಶಾಂ
ಕರಲಾಂಛನಧರನಂ ಭಾ
ಸುರ ಜಂಗಮಮೆಂದು ಭಕ್ತಿಯಿಂ ಭಾವಿಸಿದಂ ೨೯

ಕೃಪೆಯನ್ನು ನಿಜವಾಗಿ ಪಡೆಯಬೇಕು. ಆರ್ಯನೇ, ನೀನಿದ್ದಲ್ಲಿಗೇ ನಾನು ಬಂದರೂ ಕೂಡ ಹೀಗೆ ಸುಮ್ಮನೆ ಇರುವುದೇ ?' ೨೭, 'ಈ ಭೂಮಿಯಲ್ಲಿ ಮೋಟಮಲ್ಲಿನಾಥನೆಂದು ಪ್ರಸಿದ್ಧಿಯನ್ನು ಹೊಂದಿ, (ನನಗೆ) ಪ್ರಾಪ್ತವಾದ ಹಿರಿಮೆಯನ್ನು ಕೇಳಿಯೂ ಕೂಡ, ಸಂತೋಷದಿಂದ ತಿಳಿದೂ ಕೂಡ, ನಮಸ್ಕರಿಸದೆ ಇರುವ ನಿನ್ನ ಈ ಆಡಂಬರ (ನೋಡಿದರೆ) ನಿನಗೇನು ಇದು ಮದವೋ ಹುಚ್ಚೋ (ತಿಳಿಯದು), ವ॥ ಹೀಗೆಂದು ಈ ರೀತಿ ಬಲಾತ್ಕರಿಸಿ ಗಳಪುತ್ತಿರುವ ಶೈವಲಾಂಛನ ಧಾರಿಯಾದ ಆ ಮೋಟಮಲ್ಲನ ಇರುವಿಕೆಯನ್ನು ದಸರಯ್ಯನು ಹಿಂದಿರುಗಿ ನೋಡಿ ೨೮. ಇವನು ದುಷ್ಟನೆಂದು ಯೋಚಿಸಿದನೇ ? ಪಾಪದಿಂದ ಕೂಡಿದ ಆತ್ಮವುಳ್ಳವನೆಂದು ನೆನೆದನೇ ? ದುಷ್ಟನೆಂದು ಹಿಂಜರಿದನೇ ? ಕುಹಕ ವೇಷವನ್ನು ಧರಿಸಿದ ಮದಾಂಧನೆಂದು ಹಿಂದು ಮುಂದೆ ಅದೇನು ನೋಡಿದನೇ ? ೨೯. ಕೈಯಿಲ್ಲದ ಮೋಟನೆಂದು ಕಳ್ಳ ನಡೆವಳಿಕೆಯ ಕಪಟಿಯೆಂದು ಉಪೇಕ್ಷೆ ಮಾಡಿದನೆ ? ಶಿವಲಾಂಛನ ಧಾರಿಯಾದ ಈ ಮೋಟಮಲ್ಲ

1 ಳ್ಮೊಟ್ಟ (ಅ)

ವ|| ಅಂತು ಭಾವಿಸಿ ಭಾವಜಾಂತಕನೆಂದೆ ನಂಬಿ ನಲವೇರ್ಚೆ ವಿಶ್ವಾಸಮೆ ನಿಜಪ್ರಾಣಮಾಗಿ ಭಯಭಕ್ತಿನೆರಸಿ ನಿಂದು—

ನರದೇಹಾನ್ವಿತಚಂದ್ರಚೂಡ ಕರುಣಾವಾರಾಶಿ ತಪ್ಪುಂಟು ಸಾ
ಸಿರಮೆನ್ನೊಳ್ಮದಮತ್ತನೊಳ್ಮಱೆದಿದಂ ಕಾರುಣ್ಯದಿಂದೆನ್ನನು
ದ್ಧರಿಸೊಲ್ಪಿಂ ಸಡೆನೋಡಿ ನೀಂ ಪೊರೆವುದೆಂದಾತ್ಮಾಂಗಮಂ ಧಾತ್ರಿಯೊ
ಳ್ಪರಪುತ್ತುಂ ಪೊಗಳುತ್ತೆ ಮತ್ತೆ ಮಣಿದಿರ್ದಂ ತತ್ಪದದ್ವಂದ್ವದೊಳ್ ೩೦

ವ|| ಆಗಳಾ ಮೋಟಮಲ್ಲಿನಾಥನಾಕ್ಷೇಪಂ ಮಿಗೆ ತನಗೆಱಗಿರ್ದ ದಸರಿದೇವನವನತೋತ್ತಮಾಂಗಮಂ ಕೀಣಕ[1]ಲಿತಂಗಳಾದ ತನ್ನ ಕೂನಕೈಗಳಿನಡಸುತಟವಟಿಸಿ ತಿವಿದು—

ಒಡನೊಡನೆ ಬಡಿಬಡಿದು ಪೊಡೆ
ಪೊಡೆದಡಿಗಡಿಗಟ್ಟಹಾಸಮಂ ನೆಗಳ್ದು ಕರಂ
ಜಡಿದಣ್ಮಿ ಭಕ್ತನಂ ಬ
ರ್ಕುಡಿಗೆಯ್ದಂ ಮೋಟಮಲ್ಲನಪ್ರತಿಮಲ್ಲಂ ೩೧

ಬು[2]ಗುಟೊಗೆಯೆ ಶಿರದೊಳಲ್ಲ
ಲ್ಲಿಗೆ ರಂಧ್ರಂಗಳ್ಪೊದಳ್ದು ನೆತ್ತರ್ಝುಲ್ಲೆಂ
ದುಗೆ ಚಲ್ಲದಿಂದೆ ಮಲ್ಲಂ
ಮಿಗೆ ನಿರ್ದಯಶೀಲನಣ್ಮಿ ಪೊಡೆದಂ ಬಡಿದಂ ೩೨

ನನ್ನು ಪ್ರಕಾಶಮಾನನಾದ ಜಂಗಮನೇ ಎಂದು ಭಕ್ತಿಯಿಂದ ಭಾವಿಸಿದನು. ವ|| ಆ ರೀತಿ ಭಾವಿಸಿಕೊಂಡು (ಅವನನ್ನು) ಶಿವನೆಂದೇ ನಂಬಿ, ಹೆಚ್ಚಾದ ಸಂತೋಷದಿಂದ ವಿಶ್ವಾಸವೇ ತನ್ನ ಪ್ರಾಣವಾಗಿ ಭಯಭಕ್ತಿಯಿಂದ ಕೂಡಿ ನಿಂತು ೩೦. 'ದಯಾಸಮುದ್ರನೇ, ಮನುಷ್ಯಾಕಾರದ ಚಂದ್ರಧರನೇ, ಮದೋನ್ಮತ್ತನಾದ ನನ್ನಲ್ಲಿ ಸಾವಿರ ತಪ್ಪುಗಳುಂಟು, ಇದನ್ನು ಮರೆತು ಕರುಣದಿಂದ ನನ್ನನ್ನು ಉದ್ಧಾರ ಮಾಡು; ಪ್ರೀತಿಯಿಂದ (ನನ್ನನ್ನು) ನೀನು ಚೆನ್ನಾಗಿ ನೋಡಿ ರಕ್ಷಿಸಬೇಕು,' ಎಂದು ತನ್ನ ದೇಹವನ್ನು ಭೂಮಿಯಲ್ಲಿಟ್ಟು (ಸಾಷ್ಟಾಂಗ ನಮಸ್ಕಾರ ಮಾಡಿ), ಹೊಗಳುತ್ತ ಮತ್ತು ಅವನ ಎರಡೂ ಪಾದಗಳಲ್ಲಿ ನಮಸ್ಕರಿಸಿದನು. ವ|| ಆಗ ಆ ಮೋಟಮಲ್ಲಿನಾಥನೂ, ವಿಶೇಷವಾಗಿ ಆಕ್ಷೇಪ ಮಾಡುತ್ತ ತನಗೆ ನಮಸ್ಕರಿಸಿದ್ದ ದಸರ ದೇವನ ತಲೆಯನ್ನು ಜಡ್ಡುಗಟ್ಟಿ ಗಂಟಿನಿಂದ ಕೂಡಿದವುಗಳಾದ ತನ್ನ ಮೋಟುಗೈಗಳಿಂದ ಒತ್ತಿ ಹಿಡಿದು ಮೋಸದಿಂದ ತಿವಿದು ೩೧. ಆ ಅಸದೃಶನಾದ ಮೋಟುಮಲ್ಲನು ಮೇಲಿಂದ ಮೇಲೆ ಭಕ್ತನಾದ ದಸರಯ್ಯನನ್ನು ಬಡಿಬಡಿದು ಬಾರಿ ಬಾರಿಗೂ, ಹಾಸ್ಯ ಮಾಡಿ ನಗುತ್ತ, ಭಯಗೊಳಿಸಿ, ಪೌರುಷದಿಂದ ಬೆರಗುಗೊಳಿಸಿದನು. ೩೨, (ಆಗ ದಸರಯ್ಯನಿಗೆ) ತಲೆಯಲ್ಲಿ ಬುಗುಟು ಉಂಟಾಯಿತು. ಅಲ್ಲಲ್ಲಿ ಗಾಯಗಳಾಗಿ ವಿಶೇಷವಾಗಿ ರಕ್ತವು ಝುಲ್ ಎಂದು ಸುರಿಯಿತು. ನಿರ್ದಯವೇ ಶೀಲವಾಗಿ ಉಳ್ಳ ಆ ಮೋಟುಮಲ್ಲನು (ಹೀಗೆ) ಚೆಲ್ಲಾಟ

[1] ಕೀ (ಅ, ಚ, ಮು, ಗ) [2] ಬ(ಅ)

ವ॥ ಅಂತವನಳುರ್ಕೆಯಿಂ ಪೊಡೆಯಲೊಡನೆ —

ಅಗಿದು ಬೆಮರ್ತನೇ ಸುಗಿದು ಕುರ್ಗಿದನೇ ನೆಱೆನೊಂದೆನೆಂದು ಪಿಂ
ದೆಗೆದನೆ ತಪ್ಪ ಸಾದಿಸದೆ ಪೊಯ್ದಪನೀ ಖಲನೆಂದು ಚಿತ್ತದೊ
ಳ್ಪಗೆದನೆ ಪೊಯ್ಯದಿರ್ಬಱಿದೆ ನೀನಕಟೆಂದನೆ ಬಂದು ಕೆಮ್ಮನಿಂ
ತಗಣಿತಮಾವ ಬಾಧೆಗೊಳಗಾದೆನೆನುತ್ತುಮಳಲ್ಕೆಯಾಂತನೇ ೩೩

ಕಿಸುಗಣ್ಣ ನೋಡಿದನೆ ಮಾ
ಮಸಕಂ ಮಸಗಿದನೆ ಸೂರುಳಿಟ್ಟಣ್ಮಿ ನಿವಾ
ರಿಸಿದನೆ ನಿನಗೇಂ[1] ಮುಳಿಯರೆ
ಸಸಿದಲೆಯನ ಭಕ್ತರೆಂದನೇ ದಸರಯ್ಯಂ ೩೪

ಧೃತಿಗುಂದದೆ ಮತಿ ನಂದದೆ
ರತಿಯೋಡದೆ ಬಲ್ಪು ಬಾಡದಳ್ಕದೆ ನಿ
ಶ್ಚಿತಚಿತ್ತವೃತ್ತಿ ಭಕ್ತಿ
ಸ್ಥಿತಿ ಜಾಱದೆ ಮೀಱದಾತ್ಮಶೀಲಕ್ರಮಮಂ ೩೫

ಪರಮಶಮೆ ಭಕ್ತರೂಪಂ
ಕರಮಾಂತುದೊ ದಮೆಯೆ ತಾಳ್ದುದೋ ಪದಪಿಂದಂ
ಪುರುಷಾಕಾರಮೆನೆ ಶಾಂ
ತಿರಸಾಂಕಂ ದಸರಿದೇವನೊಪ್ಪಿದನಾಗಳ್ ೩೬

ದಿಂದ ವಿಶೇಷ ಪರಾಕ್ರಮದಿಂದ ಕೂಡಿ ಹೊಡೆದನು. ವ॥ ಹೀಗೆ ಅವನು ಅಧಿಕವಾಗಿ ಹೊಡೆಯಲಾಗಿ ಕೂಡಲೆ ೩೩. (ದಸರಯ್ಯನು) ಭಯಪಟ್ಟು ಬೆವರಿದನೇ ? ಅಂಜಿ ಕುಗ್ಗಿದನೇ ? ಹೆಚ್ಚಾಗಿ ಸಂಕಟಪಟ್ಟನೆಂದು ಹಿಂದೆಗೆದನೇ ? ಈ ದುಷ್ಟನು ತಪ್ಪಿಲ್ಲದೆ ಹೊಡೆಯುವನೆಂದು ಮನಸ್ಸಿನಲ್ಲಿ ಯೋಚಿಸಿದನೇ ? ಅಯ್ಯೋ ! ನೀನು ಸುಮ್ಮ ಸುಮ್ಮನೆ ಹೊಡೆಯಬೇಡ ಎಂದನೇ ? ಸುಮ್ಮ ಸುಮ್ಮನೆ ಬಂದು ಈ ರೀತಿ, ವಿಶೇಷ ವಾದ ಬಾಧೆಗೊಳಗಾದೆವೆಂದು ಸಂಕಟವನ್ನು ಹೊಂದಿದನೇ ? ೩೪. ದಸರಯ್ಯನು ಕೆಂಪಾದ ಕಣ್ಣಿನಿಂದ ಅವನನ್ನು ನೋಡಿದನೇ? ಮಹಾ ಶೌರ್ಯವನ್ನು ಪ್ರಕಟಿಸಿದನೇ? ಶಪಥ ಮಾಡಿ ಪರಾಕ್ರಮವನ್ನು ಪ್ರಕಟಿಸಿ ನಿವಾರಿಸಿಕೊಂಡನೇ? 'ಶಿವಭಕ್ತರು ನಿನಗೆ (ಈ ರೀತಿ ವ್ಯವಹರಿಸಿದರೆ) ಕೋಪಿಸಿಕೊಳ್ಳುವದಿಲ್ಲವೇನು ?' ಎಂದನೇ ? ೩೬. ಉತ್ಕೃಷ್ಟ ಶಾಂತಿಯೇ ಭಕ್ತನ ಆಕಾರವನ್ನು ಚೆನ್ನಾಗಿ ಹೊಂದಿರುವುದೋ ; ಇಂದ್ರಿಯನಿಗ್ರಹವೇ ಪ್ರೀತಿಯಿಂದ ಪುರುಷಾಕಾರವನ್ನು ಪಡೆದಿರುವುದೋ ಎನ್ನುವ ಹಾಗೆ ಶಾಂತಿಯೇ

---

[1] ಗಂ(ಅ, ಚ)

ವ॥ ಅಂತೊಪ್ಪುತ್ತುಮಿರ್ದಾ ಮಲ್ಲಿನಾಥಂ ನಿಲ್ಲದೆ ಬಡಿಯೆ ಶಿರಮೆಲ್ಲಂ ಸೀಳ್ದೊಡೆಯೆ ಧೃತಿಗಿಡದೆ ಭಕ್ತವರ್ಯಂ ಕ್ಷಮಾನಿಧಿ ತನ್ನೊಳಿಂತೆಂದಂ—

ಅಪರಾಧಮಿಲ್ಲದೇಂ ಬಡಿ
ದಪನೆ ಮಹಾತ್ಮಂ ಮದೀಯ ಶಿರಮಂ ಶಿಕ್ಷಾ
ವ್ಯಪದೇಶಂ ಭಕ್ತಿಸ್ಥಿತಿ
ಯುಪದೇಶಮಿದಪ್ಪುದಾದೆನಾನತಿಧನ್ಯಂ ೩೭

ಹರಮಿಯನಿಳೆಯೊಳ್ಕೊಳ್ವ
ರ್ಕರದಿಂ ಟೊಣೆದಲ್ತೆ ಕೊಳ್ವರೆನ್ನಯ ಶಿರಮಂ
ಭರದಿಂ ಪೊಡೆದು ಪರೀಕ್ಷಿಸಿ
ಪುರುಳಂ ಕೆಯ್ಕೊಳ್ವನೆನ್ನನೀ ಘನಮಹಿಮಂ ೩೮

ಶಿವಹಸ್ತಮನಂದಿಟ್ಟಂ
ಜವದಿಂ ಪೂರ್ವಾಂಗಮಳಿಯಲೆನ್ನಯ ಶಿರದೊಳ್
ಶಿವಮೂರ್ತಿಯೆನ್ನನೀಗಳ್
ಶಿವಭಕ್ತನನೆಸಗಲೆಂದು ಮೇಣ್ಮರವಿಟ್ಟಂ ೩೯

ವ॥ ಎಂದು ಮತ್ತಮಿರದೆ—

ಲಕ್ಷಣವಾಗಿ ಉಳ್ಳ ದಸರದೇವನು ಆಗ ಶೋಭಿಸುತ್ತಿದ್ದನು. ವ॥ ಆ ರೀತಿ ಶೋಭಿಸುತ್ತಿದ್ದ (ತನ್ನನ್ನು) ಆ ಮಲ್ಲಿನಾಥನೆಂಬ ಕಪಟ ಹೆಸರಿನವನು ಹೊಡೆಯುತ್ತಿರಲು, ತಲೆಯೆಲ್ಲ ಸೀಳಿ, ಒಡೆದು ಹೋಗಲು ಭಕ್ತ ಶ್ರೇಷ್ಠನೂ, ಕ್ಷಮಾ ರಾಶಿಯೂ ಆದ ದಸರಯ್ಯನು ಧೈರ್ಯಗೆಡದೆ ತನ್ನಲ್ಲಿಯೇ ಹೀಗೆಂದುಕೊಂಡನು. ೩೭. '(ಈ) ಮಹಿಮನು ಅಪರಾಧವಿಲ್ಲದೆಯೇ ನನ್ನ ತಲೆಯನ್ನು ಬಡಿಯುತ್ತಿರುವನೇ ? (ಅಲ್ಲ) ಇದು (ನನಗೆ) ಬುದ್ಧಿಯನ್ನು ಕಲಿಸುವ (ಒಂದು) ನೆಪವೂ ಭಕ್ತಿಯ ಉಪದೇಶವೂ ಆಗಿರುವುದು. ನಾನು ಧನ್ಯನಾದೆನು.' ೩೮. 'ಲೋಕದಲ್ಲಿ ಹರವಿಯನ್ನು ಕೊಂಡುಕೊಳ್ಳುವವರು (ಮೊದಲು) ಅದನ್ನು ಕೈಯಿಂದ ಬಾರಿಸಿ (ನೋಡಿ) ಕೊಂಡುಕೊಳ್ಳುವದಿಲ್ಲವೇ ? ಈ ಘನಮಹಿಮನು ನನ್ನ ತಲೆಬುರುಡೆಯನ್ನು ಗಟ್ಟಿಯಾಗಿ ಬಾರಿಸಿ ನೋಡಿ ಸತ್ಯವನ್ನು (ಸ್ಥಿರಾಂಶವನ್ನು) ಪರೀಕ್ಷೆ ಮಾಡಿ ನನ್ನನ್ನು ಅಂಗೀಕರಿಸುವನು.' ೩೯. ಹಿಂದೆ ಗುರುಮೂರ್ತಿಯು ನನ್ನ ಪೂರ್ವದಲ್ಲಿದ್ದ ಶರೀರವು ನಾಶವಾಗಲು (ಅಂದರೆ ಪ್ರಾಕೃತ ಶರೀರವನ್ನು ಕಳೆದು ಮಂತ್ರ ಶರೀರವನ್ನಾಗಿ ಮಾಡಲು) ತನ್ನ ಮಂಗಳಕರವಾದ ಹಸ್ತವನ್ನು (ತಲೆಯ ಮೇಲೆ) ಶೀಘ್ರವಾಗಿ ಇಟ್ಟನು (ಅಂದರೆ ಹಸ್ತಮಸ್ತಕ ಸಂಯೋಗವನ್ನುಂಟು ಮಾಡಿದನು). ಈಗ ನನ್ನನ್ನು ಶಿವಭಕ್ತನನ್ನಾಗಿ ಮಾಡಬೇಕೆಂದು ತಲೆಯ ಮೇಲೆ ಮತ್ತೊಮ್ಮೆ ಹಸ್ತವನ್ನಿಟ್ಟನು.' ವ॥ ಹೀಗೆಂದು ಅನ್ನುತ್ತ ಮತ್ತು ತಪ್ಪದೆ–

ಒಳಗೆ ಮದೀಯ ಮಸ್ತಕಮಣಂ ಕಠಿನಂ ಪೊಡೆದಪ್ಪನಯ್ಯನು
ಜ್ವಳಮೃದುಪಾಣಿಪದ್ಮಮೆನಿತಕ್ಕಟನೊಂದುದೊ ಲಿಂಗಜಂಗಮಾ
ವಳಿಗೆಱಗಿರ್ದ ಪೆರ್ಮೆ ತನಗುಳ್ಳೊಡೆ ಮಲ್ಲಸದತ್ತಮಾಂಗಮೊ
ಳ್ಪೊಳವಡೆ ಪುಷ್ಪದಂತೆ ಮೃದುವಕ್ಕೆ ಗಡೀತನ ಪಾಣಿಗನ್ವಿತಂ ೪೦

ಶಿರಮತಿ ಕಠಿನಂ ಪೊಡೆದೊಡೆ
ಕರದ್ವಯಂ ನೋಗುಮೆಂದು ನುಡಿದೊಡೆ ಮನದೊ
ಳ್ಕೊರಗುವನೊ ನಿಜಶಿರೋವ್ಯಥೆ
ಗಿರದೀತಂ ನೆವಮನಿಟ್ಟು ನುಡಿದಪನೆನುತುಂ ೪೧

ನೆನೆದೊಂದುಪಾಯಮಂ ಮಣಿ
ದನುನಯದಿಂ ದೇವ ನಿನ್ನ ಮೃದುಕರಮಿದು ಮ
ದ್ಘನಕಠಿನ ಮಸ್ತಕದ ತಾ
ಡನದಿಂ ನೊಂದಪ್ಪುದೀಗಳೆನ್ನಯ ಮೆಯ್ಯೊಳ್ ೪೨

ಮೃದುವಪ್ಪೆಡೆಯಂ ಪೊಡೆ ನೀ
ನದಱಿಂಬಿನದಕ್ಕೆ ಕೊಱತೆಯಾವುದೊ ನಿನ್ನೀ
ಸದಮಳ ಕರಯುಗಳಂ ನೋ
ಯದು ಗಡ ಮದನುಗ್ರಹಾರ್ಥಮಿಂತಿದೆ ಕಜ್ಜಂ ೪೩

೪೦. 'ನನ್ನ ತಲೆಯ ಒಳಭಾಗವು ಬಹಳ ಕಠಿಣವಾಗಿದೆ. (ಇಂತ ಕಠಿಣವಾದ ತಲೆಯನ್ನು) ಹೊಡೆಯುತ್ತಿರುವ ಈ ಅಯ್ಯನ ಪ್ರಕಾಶಮಾನವಾದ ಮೆತ್ತನೆಯ ಕರಕಮಲಗಳು ಅಕ್ಕಟಾ! ಅದೆಷ್ಟು ನೋವಾದುವೋ! ಲಿಂಗಜಂಗಮ ಸಮೂಹಕ್ಕೆ ನಮಸ್ಕಾರ ಮಾಡಿದ್ದ ಹಿರಿಮೆಯು ತನಗೇನಾದರೂ ಇದ್ದರೆ, ಈತನ ಕೈಗಳಿಗೆ ಸಂಬಂಧಿಸಿದ (ಸಿಲುಕಿರುವ) ನನ್ನ ಪ್ರಕಾಶಿಸುವ ತಲೆಯು ಒಳ್ಪಿನಿಂದ ಕೂಡಿ ಹೂವಿನ ಹಾಗೆ ಮೃದುವಾಗಿ ಆಗಲಿ! ಅಲ್ಲವೆ!! ೪೧–೪೩. (ನನ್ನ) ತಲೆಯಾದರೋ ಅತಿ ಕಠಿಣ; ಹೊಡೆದರೆ ಎರಡೂ ಕೈಗಳು ನೋಯುತ್ತವೆ ಎಂದು ಹೇಳಿದರೆ, ಮನಸ್ಸಿನಲ್ಲಿ ಮರುಗುವನೋ ಏನೋ! ಇವನು ತನ್ನ ತಲೆಯ ನೋವಿನ ವ್ಯಥೆಗೆ ತಪ್ಪದೆ ನೆಪವನ್ನು ಇಟ್ಟು (ಹೀಗೆ) ನುಡಿಯುತ್ತಾನೆಯೋ ಏನೋ, ಎಂದುಕೊಂಡಾನೆಂದು ಯೋಚಿಸುತ್ತ ಒಂದು ಉಪಾಯವನ್ನು ಜ್ಞಾಪಿಸಿಕೊಂಡು, ಪ್ರೀತಿಯಿಂದ (ಆ ಮೋಟು ಮಲ್ಲನಿಗೆ) ನಮಸ್ಕರಿಸಿ 'ದೇವ, ನಿನ್ನ ಈ ಕರವು ಮೃದುವಾದದ್ದು; ನನ್ನ ಈ ದೊಡ್ಡದಾದ ತಲೆಯು ಗಟ್ಟಿಯಾದದ್ದು; (ಆದ್ದರಿಂದ) ತಲೆಯನ್ನು ಹೊಡೆಯುವುದರಿಂದ (ಇವು) ನೋಯುತ್ತವೆ. ಈಗ ನನ್ನ ಮಯ್ಯಲ್ಲಿ ಮೃದುವಾಗಿರುವ ಸ್ಥಾನಗಳನ್ನು ನೀನು ಹೊಡೆ. ಅದರಿಂದ (ನಿನ್ನ) ವಿನೋದಕ್ಕೆ ಕೊರತೆ ಯಾವುದೋ! (ಆಗ) ಈ ನಿರ್ಮಲವಾದ ಎರಡು ಕೈಗಳೂ, ನೋಯುವುದಿಲ್ಲವಲ್ಲವೇ! ನನ್ನನ್ನು ಅನುಗ್ರಹಿಸುವುದಕ್ಕೋಸುಗ ಈ ರೀತಿಯ ಕಾರ್ಯ ಇದೇ'. (ಈ ಕಾರ್ಯದಿಂದ ಈಗ ಅನುಗ್ರಹಿಸು ಎಂದು ಭಾವ)

ಎಂದೊಯ್ಯನೆ ನುಡಿವುತ್ತುಂ
ವಂದಿಸುತುಂ ದೇವ ನಿನ್ನ ಕರಸರಸಿರುಹಂ
ನೊಂದುದಕಟಕಟೆನುತೆ ಬಗೆ
ಗುಂದಿ ಕರಂ ದಸರನವನ ಮೋಟತಕರಮಂ ೪೪

ನಿಜಕರದಿಂದೆ ತಾಂ ಪಿಡಿದು ನೋಡಿ ನಿಗುರ್ಚಿ ನಿಗುರ್ಚಿ ನೇಹದಿಂ
ವೃಜಿನವಿದೂರನೊತ್ತಿ ತೆಗೆಯುತ್ತಿರೆ ಚಿತ್ರಮದೆಂತೊ ರಕ್ತನೀ
ರಜನಿಭಪಾಣಿ ತಳ್ತಲರ್ದು ಮೂಡಿ ವಿರಾಜಿತಮಾದುದಂದು ಕಾ
ಯಜರಿಪುವಿಂದೆ ಬಾಣಕರಪಂಕಜಮೊಲ್ದೊಗೆತಂದ ಮಾಳ್ಕೆಯಿಂ ೪೫

ವ॥ ಮತ್ತಂ—

ಮೊರಟದ ಬಂಕಿದೇವವಿಭುವಿಂದೆ ಕೊರಂಟು ತಳಿರ್ತ ಪಾಂಗಿನಿಂ
ಪರಮಗುಣಾಂಕ ಚನ್ನಯನ ಜಿಹ್ವೆಗೆ ಮಂಜುಳ ಭಕ್ತಿಭಾವದಿಂ
ಕರಮೊಗೆದಂತೆ ಶಾಂತ ದಸರಯ್ಯನ ಭಾವದ ಬಲ್ಪಿನಿಂದಮಂ
ಕುರಿಸಿ ನಿಮಿರ್ಕೆವೆತ್ತು ಕರಪಲ್ಲವಮೊಪ್ಪಿದುದಾ ತಪಸ್ವಿಯಾ ೪೬

ದಸರವಿಭುಭಕ್ತಿಚೈತ್ರಂ
ಪಸರಿಸಿ ಸೋಂಕಿಂದೆ ಜಂಗಮಸ್ಥಾಣುವಲಂ

೪೪–೪೫. ಹೀಗೆಂದು ಸಾವಕಾಶವಾಗಿ (ಮೆಲ್ಲನೆ) ನುಡಿಯುತ್ತ, ನಮಸ್ಕಾರ ಮಾಡುತ್ತ, ದೇವ, ನಿನ್ನ ಹಸ್ತ ಕಮಲಗಳು ನೊಂದವು. ಅಕ್ಕಟ ! ಅಕ್ಕಟ !! ಎನ್ನುತ್ತ, ಕುಂದಿದ ಮನಸ್ಸಿನವನಾಗಿ, ದಸರಯ್ಯನು ಅವನ ಆ ಮೋಟು ಕೈಯ್ಯನ್ನು ಚೆನ್ನಾಗಿ (ಆ) ಪಾಪ ವಿದೂರನಾದ ದಸರಯ್ಯನು ತನ್ನ ಕೈಗಳಿಂದ ಹಿಡಿದು, ನೆಟ್ಟಗೆ ಮಾಡಿ ಮಾಡಿ ನೋಡಿ, ಸ್ನೇಹದಿಂದ (ಪ್ರೀತಿಯಿಂದ) ಒತ್ತಿ ತೆಗೆಯುತ್ತಿರಲು (ಆಯಾಸಪರಿಹಾರ ಮಾಡುತ್ತಿರಲು) ಅದೆಂತಹ ಆಶ್ಚರ್ಯವೋ ! ಆಗ ಕೆಂದಾವರೆಗೆ ಸಮಾನವಾದ ಹಸ್ತವು ಸೇರಿಕೊಂಡು, ವಿಕಾಸಗೊಂಡು ಮೂಡಿ, (ಹಿಂದೆ) ಮನ್ಮಥಾರಿಯಾದ ಶಿವನ ಪ್ರೀತಿಯಿಂದ ಬಾಣಾಸುರನ ಹಸ್ತಕಮಲವು ಹುಟ್ಟಿದ ಹಾಗೆ ವಿರಾಜಮಾನವಾಯಿತು. ವ॥ ಮತ್ತು—
೪೬. ಮೊರಟದ ಬಂಕಿದೇವ ಪ್ರಭುವಿನಿಂದ ಕೊರಡು ಚಿಗುರಿದ ರೀತಿಯಿಂದ, ಪರಮ ಗುಣಗಳೇ ಗುರುತಾಗಿ ಉಳ್ಳ ಮಾದರ ಚೆನ್ನಯ್ಯನ ಮನೋಹರ ಭಕ್ತಿ ಭಾವದಿಂದ ಅವನ ನಾಲಿಗೆಗೇ ಕೈಗಳು ಹುಟ್ಟಿದಂತೆ (ಈ ಚೆನ್ನಯ್ಯನ ನಾಲಿಗೆಯೆಂಬ ಕೈಗಳ ಮೂಲಕವಾಗಿಯೇ ಈಶ್ವರನಿಗೆ ಅಂಬಲಿಯ ಪ್ರಸಾದವನ್ನು ಅರ್ಪಿಸಿದ ಕಾರಣ, ಆ ನಾಲಿಗೆಯೇ ಕೈಗಳಾಗಿ ಮಾಡಿದ ಹಾಗೆ) ಶಾಂತಿಯಿಂದ ಕೂಡಿದ ದಸರಯ್ಯನ ಮನಸ್ಸಿನ ಶಕ್ತಿಯ (ಸಾಮರ್ಥ್ಯದಿಂದ) ಮೊಳಕೆಯಾಗಿ ಉದ್ದವಾಗಿ ಬೆಳೆದು ಆ ತಪಸ್ವಿಯ (ಆ ಕಪಟ ತಪಸ್ವಿಯ) ಚಿಗುರಿನಂತಹ ಕೈಗಳು ಶೋಭಿಸಿದವು.
೪೭. ದಸರದೇವನ ಭಕ್ತಿಯೆಂಬ ಚೈತ್ರ ಮಾಸವು ಪ್ರಸಾರಗೊಳ್ಳಲು, (ಅದರ) ಸ್ಪರ್ಶದಿಂದ ಜಂಗಮವೆಂಬ ಮೋಟು ಮರವು ಅತಿಶಯವಾಗಿ ಬೆಳೆದು ಚಿಗುರಿದ

ಪೊಸರೆ ತಳಿರ್ತವೊಲೇಂ ಕಂ
ಗೆಸೆದುವೊ ಲಸದರುಣಪಾಣಿಪಲ್ಲವಯುಗಳಂ ೪೭

ವ ॥ ಮತ್ತಮಾ ದಯಾರಸನಿಧಿಯ ಶಾಂತಿರಸಕಾಸಾರದೊಳುಳ್ಳಲರ್ದ ಕೆಂದಾವರೆಗಳಂತೆಯುಮಾ ಭಕ್ತಿಸರೋನಿಧಿಯ ಭಕ್ತಿಭಾವಿನೀಕರ್ಣಾವತಂಸಂಗೆಯ್ದು ತಳೆದ ಚಂದಳಿರ್ಗಳಂತೆಯುಮಳವಿಗಳಿದ ಸೌಂದರ್ಯಮನೊಳಕೊಂಡು ತಳತಳಿಸಿ ಪೊಳೆವ ಬಳ್ಳಿವೆಳಗಿಂ ಪಗಿಲ್ತ ಬೆಳ್ಳುಗುರ್ಗಳೆಂಬ ತರಳ ತಾರಗೆಗಳ್ಗೆ ಸಂಧ್ಯಾರಾಗರುಚಿಯಂ ಪೂರೈಪ ಸೋಂಪಡರ್ದ ಕೆಂಪಂ ತಳೆದು ತೆಜಂಬೊಳೆವ ಭಸಿತಾನುಲಿಪ್ತದೀರ್ಘಬಾಹಾಮೃಣಾಳನಾಳದಗ್ರದೊಳಮರ್ದರುಣಸರಸಿರುಹಮೆನಿಸಿ ತತ್ಕರಂಗಳ್ಕರಮೆಸೆದಿರ್ದುವಂತುಮಲ್ಲದೆ—

ಇರುಳಂತೆ ನಖಮಣಿಪ್ರ
ಸ್ಫುರಿತಂ ಪಗಲಂತಿರರುಣರುಚಿಶೋಭಿ ಸುಧಾ
ಕರನಂತೆ ಪರ್ವಶೋಭಾ
ಕರಮಾ ಕರಮಭ್ರದಂತೆ ಲೇಖಾಧಾರಂ ೪೮

ಹಾಗೆ ಪ್ರಕಾಶಿಸುವ ಕೆಂಪಾದ ಚಿಗುರಿನೋಪಾದಿಯಲ್ಲಿರುವ ಕರಯುಗ್ಮಗಳು ಕಣ್ಣಿಗೆ ಅದೇನು ಶೋಭಿಸಿದವೋ ? ವ॥ ಮತ್ತು ಆ ಕೈಗಳು ಕೃಪಾ ಸಮುದ್ರನಾದ ಆ ದಸರಯ್ಯನ ಶಾಂತಿರಸವೆಂಬ ಸರೋವರದಲ್ಲಿ ಚೆನ್ನಾಗಿ ಅರಳಿದ ಕೆಂಪು ತಾವರೆಗಳಂತೆಯೂ, ಶಿವಭಕ್ತಿಗೆ ಸಮುದ್ರ ಸ್ವರೂಪನಾದ ಅವನ ಆ ಶಿವಭಕ್ತಿಯೆಂಬ ಹೆಂಗಸಿನ ಹಸ್ತಕ್ಕೆ ಆಭರಣವನ್ನಾಗಿ ಮಾಡಿ, ಧರಿಸಿದ ಕೆಂಪಾದ ಚಿಗುರುಗಳ ಹಾಗೆಯೂ, ಗಣನಾತೀತವಾದ ಸೌಂದರ್ಯದಿಂದ ಕೂಡಿ, ತಳ ತಳಿಸಿ ಹೊಳೆಯುವ ಬಳ್ಳಿಯ ಹಾಗಿರುವ ಕಾಂತಿಯಿಂದ ಹಬ್ಬಿದ ನೀಳವಾದ ಉಗುರುಗಳೆಂಬ ಚಂಚಲ ನಕ್ಷತ್ರಗಳಿಗೆ ಸಂಧ್ಯಾ ಕಾಲದ ಕೆಂಪಿನ ಕಾಂತಿಯನ್ನು ಪರಿಪೂರ್ತಿಗೊಳಿಸುವ ಸೊಗಸುಗೊಂಡ ಅರುಣ ವರ್ಣವನ್ನು ಹೊಂದಿ, ಪ್ರಕಾಶಿಸುವ ವಿಭೂತಿಯಿಂದ ಬಳಿಯಲ್ಪಟ್ಟ ಉದ್ದವಾದ ಭುಜಗಳೆಂಬ ತಾವರೆಯ ದಂಟಿನ ಕೊನೆಯಲ್ಲಿ ಸೇರುವೆಗೊಂಡ ಕೆಂಪು ತಾವರೆಯೋ ಎಂದೆನಿಸಿ ಚೆನ್ನಾಗಿ ಶೋಭಿಸಿದವು—ಹಾಗೂ ಅಲ್ಲದೆ—೪೮. ಅವನ ಆ ಹಸ್ತವು-ರಾತ್ರಿಯ ಹಾಗೆ—ರತ್ನ ಸದೃಶಗಳಾದ ಉಗುರುಗಳಿಂದ ಪ್ರಕಾಶಮಾನವಾದುವು. [ರಾತ್ರಿಯು—ಸೂರ್ಯನ ಇಲ್ಲದಿರುವಿಕೆಯಿಂದ ಪ್ರಕಾಶಿಸುವುದು (ನ + ಖಮಣಿ)] ; ಹಸ್ತವು—ಹಗಲಿನ ಹಾಗೆ—ಕೆಂಪಾದ ಕಾಂತಿಯಿಂದ ಪ್ರಕಾಶಮಾನವಾದದ್ದು ; (ಹಗಲು—ಸೂರ್ಯನ ಕಾಂತಿಯಿಂದ ಪ್ರಕಾಶಿಸುವುದು); ಕರವು—ಚಂದ್ರನ ಹಾಗೆ—ಪರ್ವ ಎಂದರೆ ಗಿಣ್ಣು ಗಿಣ್ಣುಗಳ ಶೋಭೆಗೆ ಆಗರವಾದದ್ದು ; (ಚಂದ್ರನು—ಪರ್ವ ಎಂದರೆ ಹುಣ್ಣಿಮೆಯ ಕಾಲಗಳಲ್ಲಿ ಕಾಂತಿಗೆ ಆಗರವಾದದ್ದು); ಕರವು—ಆಕಾಶದ ಹಾಗೆ—ರೇಖೆಗಳಿಗೆ ಅಂದರೆ ಹಸ್ತದಲ್ಲಿರುವ ರೇಖೆಗಳಿಗೆ ಆಧಾರಭೂತವಾದದ್ದು ; (ಆಕಾಶವು—ಲೇಖ ಎಂದರೆ ದೇವತೆಗಳಿಗೆ

ಅದು ಪಂಚಾಕ್ಷರದಂತೆವೋಲ್ಪ್ರಣವವರ್ಣಪ್ರಾಂಚಿತಂ ಭಸ್ಮದಂ
ತುದಿತ ಶ್ರೀಕರಲಕ್ಷಣಪ್ರಕಟಿತಂ ರುದ್ರಾಕ್ಷಿಯಂತಿಷ್ಟಸಂ
ಪದದಾನೋತ್ತಮಭೂಷಣಂ ಗಿರಿಶನಂತಂತಬ್ಜರೇಖಾಶ್ರಿತಂ
ಮದನಾರಾತಿಯ ಭಕ್ತನಂತೆ ಸತತಾಶೋಕೋರುರಾಗೋರ್ಜಿತಂ ೪೯

ವ॥ ಮತ್ತಮಾ ಕರಂ ತಾಪಸತಪೋವೃತ್ತಿಯಂತೆ ಸಕಲ ಪುರುಷಾರ್ಥಪ್ರದಮುಂ ಶಿವದೀಕ್ಷೆಯಂತೆ ಪೂರ್ವವರ್ಣನಿವಾರಕಮುಂ ಹರವರಾಭಯಕರದಂತೆ ಸುಪರ್ವ ಶೋಭಾವಹಮುಂ ವೇದಾದಿ ವರ್ಣದಂತೆ ಕಳಾವಿರ್ಭಾವಕರಮುಂ ಶಿವಯೋಗೀಗಣದಂತಾತ್ಮಲಿಂಗಪೂಜೋಚಿತಕರಣಮುಂ ಪಾಶ

ಆಶ್ರಯವಾದದ್ದು) ೪೯. (ಆ ಕಪಟ ವೇಷದ ಜಂಗಮನ ಚಿಗುರಿದ) ಆ ಹಸ್ತವು–ಪಂಚಾಕ್ಷರಿ ಮಂತ್ರದ ಹಾಗೆ–ಪ್ರಣವ ಎಂದರೆ ಪ್ರಕೃಷ್ಟವಾಗಿಯೂ ನೂತನವಾಗಿಯೂ ಇರುವ ಬಣ್ಣದಿಂದ ಪೂಜ್ಯವಾದದ್ದಾಗಿತ್ತು ; (ಪಂಚಾಕ್ಷರಿಯು–ಪ್ರಣವ ವರ್ಣವಾದ ಓಂಕಾರದಿಂದ ಪೂಜ್ಯವಾದದ್ದಾಗಿದೆ); ಹಸ್ತವು–ಭಸ್ಮದ ಹಾಗೆ–ಉದಿತವಾದ ಅಂದರೆ ಉದಯವಾಗುವ ಅಷ್ಟೈಶ್ವರ್ಯ (ಶ್ರೀ) ವನ್ನು ಉಂಟು ಮಾಡುವ (ಕರ), ಧನ ರೇಖೆಯೇ ಮೊದಲಾದ (ಹಸ್ತ ಸಾಮುದ್ರಿಕಾ ಶಾಸ್ತ್ರದ) ಲಕ್ಷಣಗಳಿಂದ ಪ್ರಸಿದ್ಧವಾದದ್ದಾಗಿತ್ತು ; (ಭಸ್ಮವು-ಉದ್ಧಾರ ಕಾರಣವಾದ ಮೋಕ್ಷ ಸಂಪತ್ತನ್ನು ಉಂಟು ಮಾಡುವ ಚಿಹ್ನೆಯಿಂದ ಪ್ರಸಿದ್ಧವಾದದ್ದು); ಹಸ್ತವು-ರುದ್ರಾಕ್ಷಿಯ ಹಾಗೆ–ಇಷ್ಟವಾದ ಸಂಪತ್ತನ್ನು ದಾನ ಮಾಡುವುದೇ ಮೊದಲಾದ ಉತ್ಕೃಷ್ಟವಾದ ಆಭರಣವಾಗಿ ಉಳ್ಳದ್ದು ; (ರುದ್ರಾಕ್ಷಿಯು–ಇಚ್ಛೆಪಟ್ಟ ಸಂಪತ್ತನ್ನು ಕೊಡುವುದರಿಂದ ಶ್ರೇಷ್ಠವಾದ ಆಭರಣವಾಗಿದೆ) ಹಸ್ತವು–ಶಿವನು ಹೇಗೋ ಹಾಗೆ–ಅಬ್ಜ ಎಂದರೆ–ಸಮುದ್ರದಲ್ಲಿ ಹುಟ್ಟುವ ಶಂಖವೇ ಮೊದಲಾದ ಗೆರೆಗಳಿಂದ ಆಶ್ರಯಿಸಲ್ಪಟ್ಟದ್ದು ; [ಶಿವನು–ಅಬ್ಜ ಎಂದರೆ ಚಂದ್ರನ ಒಂದು ಕಲೆಗೆ (ರೇಖೆಗೆ) ಆಶ್ರಯ ಕೊಟ್ಟವನು] ಹಸ್ತವು–ಮದನಾರಾತಿಯಾದ ಶಿವನ ಭಕ್ತನಂತೆ-ನಿರಂತರದಲ್ಲೂ, ಅಶೋಕ ವೃಕ್ಷದ ಹಾಗೆ ಅಧಿಕವಾದ ಕೆಂಪು ಬಣ್ಣ (ರಾಗ) ದಿಂದ ಕೂಡಿದ ತೇಜಸ್ಸುಳ್ಳದ್ದು ; [ಮದನಾರಾತಿಯ ಭಕ್ತನು–ನಿರಂತರದಲ್ಲೂ ಶೋಕ ರಹಿತನಾಗಿ (ಅಶೋಕ) ವಿಷಯಾಭಿಲಾಷೆಗಳಿಂದ ದೂರನಾಗಿ ಊರ್ಜಿತಗೊಂಡಿರುವನು] (ಈ ರೀತಿಯಲ್ಲಿ ಆತನ ಕೈಗಳು ಒಪ್ಪಿದ್ದವು–ಎಂದು ಭಾವ.) ವ॥ ಮತ್ತು ಆ ಕರವು–ತಾಪಸರ ತಪೋ ವ್ಯವಹಾರದ ಹಾಗೆ–ಸಕಲ ಪುರುಷ ಎಂದರೆ ಸಮಸ್ತ ಪುರುಷರಿಗೂ ಅರ್ಥ ಎಂದರೆ ಸಂಪತ್ತನ್ನು ಕೊಡತಕ್ಕಂಥಾದ್ದು ; (ತಾಪಸ ವೃತ್ತಿಯು–ಸಕಲರಿಗೂ ಧರ್ಮಾರ್ಥ ಕಾಮ ಮೋಕ್ಷ ರೂಪವಾದ ಫಲಗಳನ್ನು ಕೊಡತಕ್ಕಂಥಾದ್ದು); ಕರವು–ಶಿವ ದೀಕ್ಷೆಯಂತೆ–ಪೂರ್ವದ ಬಣ್ಣವನ್ನು ಹೋಗಲಾಡಿಸಿಕೊಂಡಂತಹುದು). (ದೀಕ್ಷೆಯು–ಮೊದಲಿನ ವರ್ಣ ಎಂದರೆ ಜಾತಿಯನ್ನು ಹೋಗಲಾಡಿಸುವಂತಹುದು); ಕರವು–ಹರನ ವರದ ಅಭಯ ಕರದಂತೆ–ಅಂದರೆ ಶಿವನ ವರ ಮತ್ತು ಅಭಯ ಇವುಗಳನ್ನುಂಟುಮಾಡುವ ಹಸ್ತದ ಹಾಗೆ–

ಪತಾಸ್ತ್ರದಂತೆ ಗುರುಶಿಷ್ಯ ಸಮಿಾಹಿತ ಪ್ರದಮುಂ ಕಣ್ಣಪ್ಪದೇವಪಾದುಕೆಯುಂತೆ ಶಿವೋತ್ತಮಾಂಗ ಸ್ಪರ್ಶಿಯುಂ ಶಿವನಾಗದೇವ ಕರಾಬ್ಜದಂತೆ ಪರಮಾಮೃತಪ್ರದಾನಮಹಿತಮುಮೆನಿಸಿ—

ಕರಮೆರಡುಮಿಂತು ರಂಜಿಸು
ತಿರೆ ಕೊರಲಾ ಬಱಿಯ ಸೆಜ್ಜೆ ಲಿಂಗಮನಾಳ್ದೊ
ಪ್ಪಿರೆ ಚರವೇಷಮದಳವ
ಟ್ಟಿರೆ ತನಗಾ ಮಲ್ಲಿದೇವನೀಕ್ಷಿಸುತಾಗಳ್ ೫೦

ಬಗೆ ಬೆದಱುತ್ತೆ ಸಂತಸಮನಾಸುತೆ ನೋಡುತೆ ತನ್ನ ಚಾರು ಪಾ
ಣೆಗಳನರಲ್ದೊಱಲ್ದು ಪೊಸ ಸೆಜ್ಜೆಯ ಲಿಂಗಮನಂಟಿ ವೇಳೆ ವೇ
ಳೆಗೆ ಬಗೆದೀಕ್ಷಿಸುತ್ತೆ ದಸರಯ್ಯನ ನಿಟ್ಟಸುತಲ್ಲಿ ಲಜ್ಜೆಯಿಂ
ಮಿಗೆ ತಲೆವಾಗಿ ಮಲ್ಲವಿಭುವಂಗುಟದಿಂ ಬರೆವುತ್ತೆ ಧಾತ್ರಿಯಂ ೫೧

ಮುನ್ನೆಗಳ್ದ ತನ್ನ ತಪ್ಪುಗ
ಳನ್ನೆನೆವುತೆ ದಸರನಮಳ ಶಮದಮಗುಣಸಂ

ಒಳ್ಳೆಯ ಹಸ್ತ, ಮೊಳಕೈ, ತೋಳುಗಳ ಭಾಗಗಳಿಂದ ಕೂಡಿದುದು ; [ಅಭಯ ಕರವು–ದೇವತೆ (ಸುಪರ್ವ) ಗಳಿಗೆ ಸದಾ ಶೋಭೆಯನ್ನು ಉಂಟು ಮಾಡುವಂತಹುದು] ಕರವು–ವೇದಾದಿ ವರ್ಣದಂತೆ–ಕಳೆಯ ಆವಿರ್ಭಾವದಿಂದ (ನೂತನ ಕಳೆಯು ಹೊರ ಹೊಮ್ಮುವಿಕೆಯಿಂದ) ಅತಿಶಯಗೊಂಡದ್ದಾಗಿರುವುದು. [ವೇದಾದಿ ವರ್ಣವು–ಷಂಗಡವಾಗಿರುವ ನಾಲ್ಕು ವೇದಗಳಲ್ಲಿನ ಅಕ್ಷರ ವಿದ್ಯೆಯನ್ನು (ತಿಳುವಳಿಕೆಯನ್ನು) ಉಂಟುಮಾಡುವಂಥವುಗಳಾಗಿರುವುವು.]; ಕರವು–ಶಿವಯೋಗಿ ಗಣದಂತೆ–ಇಷ್ಟಲಿಂಗ ವನ್ನಿಟ್ಟುಕೊಂಡು ಪೂಜೆ ಮಾಡಲು ಯೋಗ್ಯವಾದ ಉಪಕರಣವಾಗಿರುವುದು ; [ಯೋಗಿ ಗಣವು–ತಮ್ಮ ಇಷ್ಟಲಿಂಗ ಪೂಜೆಗೆ ಉಚಿತವಾದ ಇಂದ್ರಿಯ ವ್ಯಾಪಾರದಿಂದ (ಅಂದರೆ ಶಮದಮಾದಿ ಇಂದ್ರಿಯ ವ್ಯಾಪಾರ) ಕೂಡಿರುವಂತಹುದು]; ಕರವು–ಪಾಶುಪ ತಾಸ್ತ್ರದಂತೆ–ಗುರುವು ಶಿಷ್ಯನ ಆಸೆಯಾದ ಶಿವನ ಅನುಗ್ರಹವನ್ನು ಕೊಡುವಂತಹುದು; (ಪಾಶುಪತಾಸ್ತ್ರವು–ಶಿಷ್ಯನು ಅಪೇಕ್ಷಿಸಿದ ಜಯ ಲಾಭವನ್ನು ಕೊಡುವಂತಹುದು.) ಕರವು–ಕಣ್ಣಪ್ಪದೇವನ ಕೆರವಿನಂತೆ–ಮಂಗಳಕರವಾದ ಉತ್ತಮಾಂಗ ಅಂದರೆ ತಲೆ ಯನ್ನು ಸ್ಪರ್ಶ ಮಾಡಿದುದು ; (ಕಣ್ಣಪ್ಪದೇವರ ಪಾದುಕೆಯು–ಶಿವನ ಉತ್ತಮಾಂಗದ ಮೇಲೆ ಇಡಲ್ಪಟ್ಟದು.) ಕರವು–ಶಿವನಾಗ ದೇವನ ಕರಕಮಲದಂತೆ–ಶ್ರೇಷ್ಠವಾದ ಸಂಪತ್ತಾಗಿ ಮೃತಪಾಗಿದ್ದ ಕೈಗೆ ಪೂರ್ಣ ಹಸ್ತವಾಗುವ ವರಪ್ರದಾನದಿಂದ ಕೂಡಿ ದುದು ; (ಶಿವನಾಗಮಯ್ಯನ ಕರಕಮಲವು–ಪರಮ ಅಂದರೆ ಶ್ರೇಷ್ಠವಾದ ಹಾಲನ್ನು (ಅಮೃತ) ಸುರಿಸುವುದರ ಮೂಲಕ ಮಹತ್ವವುಳ್ಳದ್ದು ಎನಿಸಿತ್ತು.) ೫೦–೫೨. ಎರಡೂ ಕೈಗಳೂ ಹೀಗೆ (ಆ ಕಪಟ ವೇಷದ ಜಂಗಮನಾದ ಮೋಟ ಮಲ್ಲನಿಗೆ) ವಿರಾಜಿಸುತ್ತಿರಲಾಗಿ, ಕೊರಳ ಆ ಬರಿದಾದ ಕರಡಿಗೆಯಲ್ಲಿ ಶಿವಲಿಂಗವು ತುಂಬಿಕೊಂಡು

ಪನ್ನತೆಯುಂ ಬಗೆವುತೆ ಮಹಿ
ಮೋನ್ನತಿಯುಂ ಭಾವಿಸುತ್ತೆ ತಾಪಸನಿರ್ದಂ ೫೨

ದಸರಯ್ಯಂ ತಚ್ಚರಪದ
ಬಿಸಜಕೆ ಪೊಡಮಡುತೆ ಮತ್ತಮೊತ್ತುತೆ ಕರಸಾ
ರಸಮಂ ಚಿಟುಂಕಿಸುತೆ ಸ
ಲ್ಲಸಿತಾಂಗುಲಿಯುಂ ಕಡಂಗುತೊಪ್ಪಿರೆ ಕೆಲದೊಳ್ ೫೩

ಕರುಣಾರಸಭರಿತೇಕ್ಷಣ
ಶರಣರ್ನಡೆ ನೋಡಿ ಪುಳಕಮಂ ತಾಳ್ದು ಕಳೇ
ವರದೊಳಿದು ಲೇಸು ಲೇಸೆಂ
ದಿರದಾನಂದಿಸುತೆ ದಸರನಂ ಕೀರ್ತಿಸಿದರ್ ೫೪

ನಿರುಪಮಶಾಂತ ನಿರ್ಜಿತಲತಾಂತಕಳಂಬ ಕಳಾನಿಶಾಂತ ಶಾಂ
ಕರಮತಪಾರಿಜಾತ ಶಮಿತೇಂದ್ರಿಯಜಾತ ಸದಾಭಿಜಾತ ಬಂ
ಧುರಗುಣಭೂಷ ಭಕ್ತಹಿತಭಾಷ ಭವಾಮಯಭೇಷಜಾಂಘ್ರಿಪಂ
ಕರುಹ ಕೃಪಾಕಟಾಕ್ಷ ಸಚರಾಚರರಕ್ಷಣ ಸದ್ವಿಚಕ್ಷಣಾ ೫೫

ಶಮ ದಮ ಯಮ ನಿಯಮ ಮಹಿಮ
ಹಿಮಕರಧರಶರಣಚರಣಸರಸಿರುಹಮದ

ಒಪ್ಪಿರಲಾಗಿ, ಅವನಿಗೆ ಆ ಜಂಗಮ ವೇಷವು (ನಿಜವಾಗಿ) ಅಳವಟ್ಟಿತು. ಅವನು ತನ್ನನ್ನೇ ತಾನು ನೋಡಿಕೊಂಡು ಬೆದರಿದ ಮನಸ್ಸಿನವನಾದನು; ಸಂತೋಷ ವುಂಟಾಯಿತು; ತನ್ನ ಮನೋಹರ ಕೈಗಳನ್ನು ನೋಡಿಕೊಂಡು–ಉಬ್ಬಿ ಹೋಗಿ, ನೂತನವಾದ ಲಿಂಗದ ಕರಡಿಗೆಯ ಲಿಂಗವನ್ನು ಮುಟ್ಟಿ, ಪ್ರೀತಿಯಿಂದ ವೇಳೆ ವೇಳೆಗೂ ಇಚ್ಛೆಪಟ್ಟು ನೋಡಿಕೊಳ್ಳುತ್ತ ದಸರಯ್ಯನನ್ನು ಕಂಡು ನಾಚಿ ತಲೆ ತಗ್ಗಿಸಿ ಕಾಲಿನ ಹೆಬ್ಬೆರಳಿನಿಂದ ಭೂಮಿಯನ್ನು ಕೆರೆಯುತ್ತ ಈ ಪೂರ್ವದಲ್ಲಿ ತಾನು ಮಾಡಿದ ತಪ್ಪುಗಳನ್ನೆಲ್ಲ ನೆನೆದುಕೊಂಡು ದಸರಯ್ಯನ ಶ್ರೇಷ್ಠ ಶಮ ದಮೆಯೇ ಮೊದಲಾದ ಗುಣ ಸಂಪನ್ನತೆಯನ್ನು ಚಿಂತಿಸುತ್ತ ಅವನ ಮಹಿಮಾ ವಿಶೇಷವನ್ನು ಯೋಚಿಸುತ್ತಿದ್ದನು. ೫೩–೫೪. ದಸರಯ್ಯನು ಆ ಜಂಗಮನ ಪಾದಕಮಲಕ್ಕೆ ನಮಸ್ಕರಿಸುತ್ತ ಪುನಃ (ಅವನ) ಹಸ್ತ ಕಮಲವನ್ನು ಒತ್ತುತ್ತ ಸೊಗಸಾದ ಬೆರಳುಗಳನ್ನು ಚಿಟುಕುಗೊಳಿಸುತ್ತ (ಮುರಿದು ಚಿಟಿಕ್ ಎನಿಸುತ್ತ) ಉತ್ಸಾಹಗೊಂಡು ಶೋಭಿಸುತ್ತಿದ್ದನು. ಪಕ್ಕದಲ್ಲಿ ಕೃಪಾರಸದಿಂದ ತುಂಬಿ ಹೋದ ಕಣ್ಣುಳ್ಳವರಾಗಿ ದಿಟ್ಟಿಸಿ ನೋಡುತ್ತಿದ್ದ ಶರಣರ ಶರೀರದಲ್ಲಿ ರೋಮಾಂಚನವುಂಟಾಯಿತು. 'ಇದು ಲೇಸಾದದ್ದು, ಲೇಸಾದದ್ದು' ಎನ್ನುತ್ತ ಆನಂದಗೊಳ್ಳುತ್ತ ದಸರಯ್ಯನನ್ನು ಹೊಗಳಿದರು. ೫೫–೫೭. 'ಅಸಮಾನ ಕಾಂತಿಯುಳ್ಳ, ಮನ್ಮಥನನ್ನು ಜಯಿಸಿದ, ವಿದ್ಯೆಗಳಿಗೆ ಮಂದಿರನಾದ, ವೀರಶೈವ ಮತಕ್ಕೆ ಕಲ್ಪವೃಕ್ಷನಾದ, ಇಂದ್ರಿಯಗಳನ್ನು ಶಾಂತಗೊಳಿಸಿದ, ಸರ್ವ ಕಾಲದಲ್ಲೂ

ಭ್ರಮರ ಮೃದುಮಧುರಗಂಭೀ
ರಮನೋಹರವಚನವಿಸರ ದಸರ ದಯಾಬ್ಧೀ ೫೬

ಭವದೀಯ ಮಸ್ತಕದೊಳು
ದ್ಭವಿಸಿದುದು ಮಹೇಶಭಕ್ತಿ ಭಾವಿಸೆ ಭಕ್ತೋ
ತ್ಸವಕರ ನಿನ್ನ ಚರಿತ್ರಂ
ನವಕಮಿದಂ ಬಣ್ಣಿಸಲ್ಕೆ ಬಲ್ಲರುಮೊಳರೇ ೫೭

ಅವಿನೀತಂ ಲಿಂಗಬಾಹ್ಯಂ ಕರವಿರಹಿತನೇಳ್ತಂದು ಮಾಯಾವಿ ಮಿಥ್ಯಾ
ಶಿವಚಿಹ್ನಂಬೆತ್ತು ಕಾಯ್ಪಿಂ ಬಡಿಯೆ ಶಿರಮನಲ್ಲಾಡದಾತಂಗೆ ಪೂರ್ಣೋ
ತ್ಸವದಿಂ [1]ಕೆಯ್ಯೀವು[1]ತುಂ ಸಜ್ಜಕೆಯುನಮಳಲಿಂಗಾನ್ವಿತಂಗೆಯ್ದಣಂ ಶಾಂ
ಭವರೂಪಂ ಸಾರ್ಚಿದೈ ನಿನ್ನಯ ಬಗೆ ಪೊಸತೀ ಧಾತ್ರಿಯೊಳ್ಭಕ್ತವರ್ಯಾ ೫೮

ಕೃತಕ ತಪಸ್ವಿಯೆಂದು ತಿಳಿದುಂ ಶಿವಲಾಂಛನಮಂ ನಿರೀಕ್ಷಿಸು
ತ್ತತಿಶಯ ಭಕ್ತಿಯಿಂದೆಱಗೆ ತಪ್ಪಿನಿತಿಲ್ಲದೆ ಕೂನ ಕೈಗಳಿಂ[2]
ಗತದಯನಾರ್ಪಿನಿಂ ಬಡಿಯೆ ನೆತ್ತಿಯ ನೆತ್ತರ ಧಾರೆ ಸೋರ್ವಿನಂ
ಸಿತಮತಿ ನೋಯದಾತನ ಕರಂ ಕಡು ನೊಂದುದೆನುತ್ತೆ ಸಾರ್ಚಿದೈ ೫೯

ಸತ್ಕುಲಪ್ರಸೂತರಿಂದ ಕೂಡಿದ, ಸದ್ಗುಣಗಳಿಂದ ಭೂಷಣನಾದ, ಭಕ್ತರಲ್ಲಿ ಹಿತಕರವಾದ ಮಾತುಗಳನ್ನುಳ್ಳ, ಜನನ ಮರಣಾತ್ಮಕವಾದ ಸಂಸಾರವೆಂಬ ರೋಗಕ್ಕೆ ಔಷಧ ರೂಪನಾದ, ಕಮಲದಂತಹ ಪಾದಗಳುಳ್ಳ, ಕೃಪೆಯಿಂದ ಕೂಡಿದ ಕಣ್ಣಿನ ಕೊನೆಯುಳ್ಳ, ಸ್ಥಾವರ ಜಂಗಮಾತ್ಮಕವಾದವುಗಳನ್ನು ರಕ್ಷಿಸುವ, ಶಮ (ಶಾಂತಿ), ದಮ (ಇಂದ್ರಿಯ ನಿಗ್ರಹ), ಯಮ, ನಿಯಮಾದಿ ಯೋಗಗಳಿಂದ ಪೂಜ್ಯನೆನಿಸಿದ, ಶಿವಶರಣರ ಪಾದಕಮಲಗಳಿಗೆ ಮದಿಸಿದ ಭ್ರಮರ ಸ್ವರೂಪನಾದ, ಕೋಮಲವೂ, ಮಧುರವೂ, ಗಂಭೀರವೂ, ಮನೋಹರವೂ ಆದ ಮಾತುಗಳ ಸಮೂಹದಿಂದ ಕೂಡಿದ ದಸರಯ್ಯ ದೇವ, ಹೇ, ಭಕ್ತರನ್ನು ಉತ್ಸಾಹಗೊಳಿಸುವವನೇ, ವಿಚಾರಿಸಿ ನೋಡಿದರೆ; ನಿನ್ನ ತಲೆಯಲ್ಲಿ ಮಹೇಶ ಭಕ್ತಿಯು ಉದ್ಭವಿಸಿತು ; ನಿನ್ನ ಚರಿತ್ರೆಯು ನೂತನವಾದದ್ದು ; ಇದನ್ನು ಬಣ್ಣಿಸುವುದಕ್ಕೆ ಬಲ್ಲವರು ಇರುವರೇ ?' ೫೮. 'ಭಕ್ತಶ್ರೇಷ್ಠನೇ, ನೀತಿ ರಹಿತನೂ, ಭವಿಯೂ, ಕೈಗಳಿಲ್ಲದವನೂ, ಮಾಯಾವಿಯೂ, ಸುಳ್ಳಾದ ಶಿವ ಲಾಂಛನಧಾರಿಯೂ ಬಂದು ಕೋಪದಿಂದ ತಲೆಯನ್ನು ಬಡಿದರೆ ಅಲ್ಲಾಡದಂತೆ ಇದ್ದು ಆತನಿಗೆ ಪೂರ್ಣ ಸಂತೋಷದಿಂದ ಕೈ ಬರುವಂತೆ ಮಾಡಿ, ಕರಡಿಗೆಯಲ್ಲಿ ಶ್ರೇಷ್ಠ ಶಿವಲಿಂಗವಿರುವಂತೆ ಮಾಡಿ ಅಧಿಕವಾದ ಶಿವ ಸಂಬಂಧವಾದ ರೂಪವನ್ನು ಉಂಟುಮಾಡಿದೆ; ಈ ಭೂಮಿಯಲ್ಲಿ ನಿನ್ನ ಈ ರೀತಿಯು ಹೊಸದಾದುದು.' ೫೯–೬೦. 'ಶುಭ್ರ ಮನಸ್ಸಿನ ದಸರಯ್ಯನೇ, ಕೃತಕ ತಪಸ್ವಿಯೆಂದು ತಿಳಿದೂ ಕೂಡ

1 ಕೈಗೆಯ್ವು(ಜ) 2 ಳಂ(ಅ)

ಶಾಂತಾಗ್ರಗಣ್ಯ ನಿನ್ನಯ
ಶಾಂತಿ ಪ್ರಭೆಗೆಯ್ದೆ ಸೋಲ್ತು ಶಶಿಯುಂ ಗಂಗಾ
ಕಾಂತೆಯುಮಾ ಶಿವನ ಜಟಾ
ಕಾಂತಾರಮನೊಡನೆ ಪೊಕ್ಕು ಮೆಯ್ಗರೆದಿರ್ಪರ್ ೬೦

ಅಂದು ವೃಷೇಂದ್ರನಾತ್ಮಗೃಹಕೆಯ್ದಿದ ಚೋರರನೊಲ್ದು ನೋಡಿ ನ
ಣ್ಪಿಂದವರಾಂತ ನುಣ್ಬದನೆಗಾಯ್ಗಳ ಲಿಂಗಮನೊಲ್ದು ಮಾಡುತೊ
ಳ್ಪಿಂದೆ ಚರಾಂಗರಂ ನೆಗಳ್ದನಿಂದು ಕರಂಗಳನಿತ್ತು ಸಜ್ಜೆಯೊ
ಳ್ಪಂದಿಸಿ ಲಿಂಗಮಂ ನೆಗಳ್ದೆ ಧೂರ್ತತಪಸ್ವಿಗೆ ಜಂಗಮತ್ವಮಂ ೬೧

ವ॥ ಎಂದು ಕೂರ್ಮೆಯಿಂ ಕೊಂಡಾಡಿ ಮೋಟಕರತಾಡಿತ ತದುತ್ತಮಾಂಗಮನವಲೋಕಿಪಾಗಳೋರೊಂದೆಡೆಯೊಳೊಡೆದು ಸಾಂಖ್ಯನಾಥನ ಬಿಱುಗಲ್ಲ ಹತಿಯಿಂದೊಡೆದ ಶಿವಶಿರದಂತೆಯುಂ ಪೆಱತೊಂದು ತಾಣದೊಳ್ಬುಗುಟುವೆತ್ತು ಪಿಟ್ಟಪ್ಪೆಂಬೆಯ ಭಕ್ತಿನಿಮಿತ್ತಂ ಚೋಳಂಗೆ ಮೃತ್ತಿಕಾಭಾರಮಂ ಪೊಱಲೊಡನೆ ಬುಗುಟೊಗೆದ ಮೃಗಧರಧರನ ಮಸ್ತಕದಂತೆಯುಂ ಪರಪ್ರದೇಶದೊಳ್ಸುಲಿವೆತ್ತು ಕಣ್ಣಪ್ಪದೇವಪಾದುಕಾಸಂಘರ್ಷಣದಿಂ ಸುಲಿವೆತ್ತ ಹರವರಾಂಗದಂತೆಯುಮಪರಸ್ಥಾನದೊಳ್ಕಿಂಗಲೆ

ಶಿವ ಲಾಂಛನವನ್ನು ಕಂಡು, ಅತಿಶಯ ಭಕ್ತಿಯಿಂದ ನಮಸ್ಕಾರ ಮಾಡಲು ನಿರ್ದಯನಾದ ಮೋಟು ಮಲ್ಲನು ನಿನ್ನಲ್ಲಿ ತಪ್ಪೇನೂ ಇಲ್ಲದಿದ್ದರೂ ಮೋಟುಗೈಗಳಿಂದ ತಲೆಯ ನೆತ್ತರ ಧಾರೆಯು ಸೋರುವ ಹಾಗೆ ಬಡಿಯಲು ನೊಂದುಕೊಳ್ಳದೆ, ನಿನ್ನ ಕೈ ವಿಶೇಷವಾಗಿ ನೊಂದಿತು ಎಂದೆನ್ನುತ್ತ ಸಂಕೋಚಗೊಂಡೆ. ಶಾಂತರಲ್ಲಿ ಅಗ್ರಗಣ್ಯನೇ, ನಿನ್ನ ಹಾಗೆ ಶಾಂತಿಯ ಪ್ರಭೆಗೆ, ಚಂದ್ರನೂ, ಗಂಗಾಮಾತೆಯೂ, ನಿಜವಾಗಿಯೂ ಸೋತು ಶಿವನ ಜಡೆಯೆಂಬ ದೊಡ್ಡ ಕಾಡನ್ನು ಹೊಕ್ಕು ಆ ಕೂಡಲೇ (ಶೀಘ್ರವಾಗಿ) ಅಡಗಿಕೊಂಡಿರುವರು'. ೬೧. 'ಹಿಂದೆ ಬಸವಣ್ಣನವರು ತಮ್ಮ ಮನೆಗೆ ಬಂದ ಕಳ್ಳರನ್ನು ಪ್ರೀತಿಯಿಂದ ಒಲಿದು ನೋಡಿ, ಆ ಕಳ್ಳರು ಧರಿಸಿದ್ದ ನುಣ್ಣನೆಯ ಬದನೇಕಾಯಿಗಳನ್ನು ಲಿಂಗಗಳನ್ನಾಗಿ ಮಾಡುತ್ತ ಅವರನ್ನು ಒಳ್ಪಿನಿಂದ ಜಂಗಮರನ್ನಾಗಿಯೇ ಮಾಡಿದನು. ಈ ದಿನ ಧೂರ್ತನಾದ ಈ ತಪಸ್ವೀ ವೇಷದವನಿಗೆ) ಕೈಗಳನ್ನು ಕೊಟ್ಟು ಕರಡಿಗೆಯಲ್ಲಿ ಲಿಂಗವನ್ನು ಸಂಬಂಧಗೊಳಿಸಿ, ಜಂಗಮತ್ವವನ್ನುಂಟು ಮಾಡಿದೆ'. ವ॥ ಹೀಗೆಂದು ಅತಿ ಸ್ನೇಹದಿಂದ ಕೊಂಡಾಡಿ ಮೋಟುಗೈಯಿಂದ ಹೊಡೆಯಲ್ಪಟ್ಟ ಅವನ ಆ ತಲೆಯನ್ನು ನೋಡುವಾಗ ಒಂದೊಂದು ಕಡೆಯಲ್ಲಿ ಒಡೆದರೆ ಸಾಂಖ್ಯತೊಂಡನ ಬಿರುಗಲ್ಲುಗಳ ಹೊಡೆತದಿಂದ ಒಡೆದು ಹೋದ ಶಿವನ ತಲೆಯ ಹಾಗೆಯೆ ಇತ್ತು. ಮತ್ತೊಂದು ಕಡೆಯಲ್ಲಿ ಬುಗುಟೆದ್ದು, ಪಿಟ್ಟವ್ವೆಯ ಭಕ್ತಿಯ ಕಾರಣದಿಂದ ಚೋಳ ಭೂಪಾಲನ ಮಣ್ಣಿನ ಭಾರವನ್ನು ಹೊರುವ (ಬಿಟ್ಟಿ ಕೆಲಸದ ಸಮಯದಲ್ಲಿ ಶಿವನ ತಲೆಯಲ್ಲಿ ಎದ್ದ ಬುಗುಟಿನ ಹಾಗೆ ಇತ್ತು. ಬೇರೊಂದು ಕಡೆಯಲ್ಲಿ (ಚರ್ಮವು) ಸುಲಿದು ಹೋಗಿ, ಕಣ್ಣಪ್ಪ ದೇವನ ಪಾದರಕ್ಷೆಯ ತಿಕ್ಕಾಟದಿಂದ ಸುಲಿದು

ವಡೆದು ಭೋಗನಾಥನ ಪಿಂದುರುಳಲೊಡಂ ಕೆಂಗಲೆ ತಳ್ತ ಶಿವಾರಮಣನ ಶೀರ್ಷದಂತೆಯುಮನ್ಯ ದೇಶದೊಳುರ್ಬಿ ದಭ್ರಭಕ್ತಂಗೆ ಸಹಾಯಮಾಗಿ ಕರ್ಬು[ವೊ][1]ಱೆಯುಂ ಪೊಱಲೊಡನುರ್ಬಿದಭವನ ವಿಭವಂಬಡೆದ ಪೆರ್ದಲೆಯುಂತೆಯುಂ ಕರಮೆಸೆಯೆ ಕಂಡು ಕೌತುಕಂಬಡೆದು—

ಸಲೆ ತಲೆ ಸಾಸಿರಂಬಡೆದನಂ ತಳೆದಗ್ಗದ ರಕ್ಕಸರ್ಕಳಾ
ತಲೆಗಳ ಮಾಲೆಯುಂ ಧರಿಸಿ ಪಾಣಿಪಯೋಜದೊಳಬ್ಜಜಾತನೊ
ಳ್ದಲೆಯುನಮರ್ಚಿ ದೇವರೊಳೆ ಪೆರ್ದಲೆವೆತ್ತು ವಿರಾಜಿಸಿರ್ಪನಾ
ತಲೆಯದು ಸಾಟಿ ನಿನ್ನ ತಲೆಗನ್ಯರ ಬೀಳ್ದಲೆ ಸಾಟಿಯಕ್ಕುಮೇ ೬೨

ಪರಮ ಜಗತ್ಕಾರಣ ಶಂ
ಕರ ಶಿರವೊಂದಲ್ಲದುಳಿದ ವಿಧಿಗುಹದಶಕಂ
ಧರಫಣಿವರರ ಶಿರಂಗಳ್
ಸರಿ ಬರ್ಕುಮೆ ನಿನ್ನ ಶಿರದೊಳೆಲೆ ಮಹಿಮಾಬ್ಧೀ ೬೩

ಶರಣಜನಪಾದಜಲಬಂ
ಧುರ ತತ್ಪದನಖರಚಂದ್ರಶೇಖರಮೆನಿಪೀ

ಹೋದ ಶಿವನ ಶಿರಸ್ಸಿನ ಹಾಗೆ ಇತ್ತು. ಬೇರೊಂದು ಕಡೆಯಲ್ಲಿ ಕೆಂಪುಕಲೆ ಕಟ್ಟಿ ಭೋಗನಾಥನ (ಕೆಂಭಾವಿ ಭೋಗಣ್ಣನೆಂಬುವನ), ಹಿಂದೆ ಉರುಳಿಕೊಂಡು ಹೋಗಲಾಗಿ, ಕೂಡಲೆ ಕೆಂಪುಕಲೆಯುಂಟಾದ ಪಾರ್ವತೀ ಪತಿಯ ತಲೆಯ ಹಾಗೆ ಇತ್ತು. (ತಲೆಯ) ಮತ್ತೊಂದು ಪ್ರದೇಶದಲ್ಲಿ ಉಬ್ಬಿಕೊಂಡು ಸಿರಿಯಾಳ ಸೆಟ್ಟಿಗೆ, ಸಹಾಯಕವಾಗಿ ಕಬ್ಬಿನ ಹೊರೆಯನ್ನು ಹೊರಲಾಗಿ, ಆ ಕೂಡಲೆ ಉಬ್ಬಿ ಹೋದ ಶಿವನ ವೈಭವವನ್ನು ಪಡೆದ ದೊಡ್ಡ ತಲೆಯ ಹಾಗೂ ಇತ್ತು. ಹೀಗೆ (ಆ ದಸರಯ್ಯನ ತಲೆಯು) ಮನೋಹರವಾಗಿ ಶೋಭಿಸುತ್ತಿರಲು ಕಂಡು ಕೌತುಕವನ್ನು ಹೊಂದಿ. ೬೨. 'ಸಾವಿರ ಶಿರಸ್ಸುಗಳನ್ನು ಪಡೆದ ಆದಿಶೇಷನನ್ನು ಧರಿಸಿದವನೂ, ಶೂರರಾದ ರಾಕ್ಷಸರುಗಳ ಶಿರಸ್ಸುಗಳ ಮಾಲೆಯನ್ನು ಧಾರಣೆ ಮಾಡಿದವನೂ, ಕರಕಮಲದಲ್ಲಿ ಬ್ರಹ್ಮನ ಒಳ್ಳೆಯ ತಲೆಯನ್ನು ಹಿಡಿದವನೂ, ಆದ ದೇವತೆಗಳಲ್ಲೆಲ್ಲ ದೊಡ್ಡ ತಲೆಯನ್ನು (ಹಿರಿದಲೆಯೆನಿಸಿ) ಹೊಂದಿ ಪ್ರಕಾಶಿಸುವ ಆ ಪರಶಿವನ ತಲೆಯು ನಿನ್ನ ತಲೆಗೆ ಸಮಾನವೇ ? ಅನ್ಯರ ಬಿದ್ದು ಹೋಗುವ ತಲೆಗೆ (ಸತ್ತುಹೋಗುವವರ ತಲೆಗೆ) ನಿನ್ನ ಈ ತಲೆ ಸಾಟಿಯಾದೀತೆ ?' ೬೩. 'ಎಲೈ ಮಹಿಮಾ ಸಮುದ್ರನೇ, ನಿನ್ನ ತಲೆಯೊಡನೆ, ಪರಮನೂ ಜಗತ್ಕಾರಣನೂ ಆದ ಶಂಕರನ ತಲೆಯೂ ಸಮಾನವಲ್ಲ; ಮಿಕ್ಕ ಬ್ರಹ್ಮ, ಷಣ್ಮುಖ, ರಾವಣ, ಆದಿಶೇಷ ಮುಂತಾದವರ ತಲೆಗಳು ಸರಿಬರುವುವೇ ?' ೬೪. 'ಈ ಭೂಮಂಡಲದಲ್ಲಿ ಶರಣ ಜನರ ಪಾದೋದಕದಿಂದ ಬಂಧುರವೆನಿಸಿದುದೂ, ಆ ಶರಣ ಜನರ ಪಾದದ

1 ವ(ಅ, ಜ, ಚ, ಮ, ಗ, ದ)

ಶಿರಮಿದು ಗಂಗಾಶಶಿಧರ
ಶಿರಕೆಣೆ ತಾನಪ್ಪುದೀ ಮಹೀಮಂಡಲದೊಳ್ ೬೪

ಓದಲ್ಬರ್ಕುಂ ಶಾಸ್ತ್ರಮ
ನೋದಿದುದಂ ಮಗುಳ್ದು ಪೆಱರ್ಗೆ ಬೋಧಿಸಲಕ್ಕುಂ
ಮೇದಿನಿಯೊಳಮಮ ಶಮಸುಖ
ಮೇದುರ ನಿನ್ನಂತೆ ನಡೆದು ತೋರ್ಪರುಮೊಳರೇ ೬೫

ಇದು ಚಿತ್ರಂ ಕ್ಷಮೆಯೆಂಬ
ಗ್ಗದ ಖಡ್ಗದೆ ಕೋಪರಿಪುವನಾರ್ಪಿಂ ಕಡಿದಿ
ಕ್ಕಿದ ನಿನಗಹಿಂಸಕಂ ಸ
ರ್ವ ದಯಾಪರನೆಂಬ ಕೀರ್ತಿ ವಿಶ್ವಂಭರೆಯೊಳ್ ೬೬

ಲಿಂಗದ್ವಯ ಸಮಭಾವಂ
ಮಂಗಳಮಯ ನಿನಗೆ ಸಂದುದೀ ಕೃತ್ರಿಮವೇ
ಷಾಂಗದ ಕುಟಿಲನುಮಂ ನೀಂ
ಜಂಗಮಮೆಂದೊಲ್ದು ಬಗೆದು ನಂಬಿದ ಕತದಿಂ ೬೭

ಬರಿಸಿದೆ ಕಡಿವಡೆದೆರಡುಂ
ಕರಂಗಳಂ ಬಱಿಯ ಸೆಜ್ಜೆಯೊಳ್ ಲಿಂಗಮನೊ

ಉಗುರುಗಳ ಸಾಲೆಂಬ ಚಂದ್ರನನ್ನೇ ಶಿರೋ ಭೂಷಣವೆನಿಸಿದುದೂ ಆಗಿ ಪ್ರಕಾಶಿಸುವ ಈ ತಲೆಯು ತಾನು, ಆ ಗಂಗೆಯನ್ನೂ ಚಂದ್ರನನ್ನೂ ಧರಿಸಿರುವ ಶಿವನ ತಲೆಗೆ ಸಮಾನವೆನಿಸಿದುದಾಗಿದೆ.' ೬೫. 'ಶಾಂತಿ ಸುಖದಿಂದ ಕೂಡಿದ ದಸರಯ್ಯನೇ, ಭೂಮಿಯಲ್ಲಿ ಶಾಸ್ತ್ರವನ್ನು ಓದಲು ಬಂದೀತು. ಓದಿದ ಶಾಸ್ತ್ರವನ್ನು ಪರರಿಗೆ ಬೋಧಿಸಲು ಬಂದೀತು. ನಿನ್ನ ಹಾಗೆ ನಡೆದು (ಶಾಸ್ತ್ರೋಕ್ತ ಅರ್ಥದಂತೆ ನಡೆದು) ತೋರಿಸುವವರು (ಯಾರಾದರೂ) ಇರುವರೇ ?' ೬೬. 'ಈ ಭೂಮಂಡಲದಲ್ಲಿ ಕ್ಷಮೆಯೆಂಬ ಖಡ್ಗದಿಂದ ಕೋಪವೆಂಬ ವೈರಿಯನ್ನು ಶೌರ್ಯದಿಂದ ಕತ್ತರಿಸಿದ ಹಾಕಿದ ನಿನಗೆ ಹಿಂಸೆ ಮಾಡದೆ ಇರುವವನು ಸರ್ವರಲ್ಲೂ ದಯಾಪರನು ಎಂದೆನ್ನುವ ಈ ನಿನ್ನ ಕೀರ್ತಿಯು ಆಶ್ಚರ್ಯಕರವಾದುದು.' ೬೭. 'ಹೇ ಮಂಗಲ ಮಯನೇ, ನೀನು ಈ ಕಪಟ ವೇಷದ ಅವಯವವುಳ್ಳ ಕಪಟಿಯನ್ನು ಜಂಗಮವೆಂದು ಭಾವಿಸಿ, ಪ್ರೀತಿಯಿಂದ ನಂಬಿದ ಕಾರಣದಿಂದ ನಿನಗೆ ಲಿಂಗ ಜಂಗಮವೆರಡರಲ್ಲೂ ಸಮಾನವಾದ ಭಾವನೆಯು (ಲಿಂಗ ಮುಖವೇ ಜಂಗಮವೆಂಬ ವೀರಶೈವ ತತ್ತ್ವದ ಭಾವನೆಯು) ಪ್ರಾಪ್ತವಾಯಿತು.' ೬೮. 'ಭಕ್ತಿರಸವೆಂಬ ಕಮಲಕ್ಕೆ ಸೂರ್ಯನೋಪಾದಿಯಲ್ಲಿರುವ ದಸರಯ್ಯನೇ, ಮೋಟುಗೊಂಡಿದ್ದ ಎರಡೂ ಕೈಗಳನ್ನೂ (ನಿನ್ನ) ಮನಸ್ಸೆಂಬ ಕೈಗಳಿಂದ ಬರುವಂತೆ ಮಾಡಿದೆ; ಬರಿದಾದ

ಲ್ದಿರಿಸಿದೆ ಬಗೆಗೆಯ್ಯದೆ ಭ
ಕ್ತಿರಸಾಂಬುರುಹ[1]ಸರ ದಸರ ನಿನಗೆಣೆಯಾವಂ ೬೮

ದಸರ ಚರಾಚರಪ್ರಸರಪಾಲಕ ಸಾಧುಸರೋಧಿಚಂದ್ರ ಸ
ದ್ವಿಸರ ಮನೋಜ್ಞ ಮಾನ್ಯ ಮಹನೀಯ ಮಹೇಶ್ವರದಿವ್ಯಪಾದಸಾ
ರಸರಸಭೃಂಗ ಮಂಗಳಮಹತ್ವಸಮನ್ವಿತ ಸದ್ಗುಣಾಂಬುಜಾ
ತಸರ ಸರದ್ವಳಕ್ಷರುಚಿಕೀರ್ತಿಸಮಂಚಿತಸರ್ವದಿಕ್ತಟಾ ೬೯

ವ॥ ಎಂದಿತು ಭಕ್ತಜನಂ ನಲಿನಲಿದು ಕೀರ್ತಿಸುತ್ತುಮಿರೆ ಪರಸಮಯಸ್ಥರೆಲ್ಲಂ ಬಿಗುರ್ತು ಬೆಱಗುವಟ್ಟು ನಿರೀಕ್ಷಿಸಿ—

ಬಡಿದೊಡಮಳಲದೆ ಕೊಟ್ಟಂ
ಕಡಿವಡೆದೆರಡುಂ ಕರಂಗಳಂ ಮಲ್ಲಂಗೊ
ಲ್ದಡಿಗೆಱಗಿದೊಡೇನನಿವಂ
ಕುಡುವನೊ ಘನಮಹಿಮನೆಮಗೆ ವರಮಂ ದಸರಂ ೭೦

ವ॥ ಎಂದೆಲ್ಲರೊಂದುಗೂಡಿ ತಚ್ಚರಣಾರವಿಂದಕ್ಕೆ ಸಾಷ್ಟಾಂಗಮೆಱಗಿ ಲಲಾಟಘಟಿತ ಕರಪುಟರಾಗಿ—

ಕರಡಿಗೆ (ಲಿಂಗ ಕರಂಡಕ) ಯಲ್ಲಿ ಲಿಂಗವನ್ನು ಒಲಿದು ಇರುವಂತೆ ಮಾಡಿದೆ. ನಿನಗೆ ಸಮಾನನಾದವನು ಯಾವನಿದ್ದಾನೆ.' ೬೯. ಸ್ಥಾವರ ಜಂಗಮಾತ್ಮಕ ಸಮೂಹವನ್ನು ರಕ್ಷಿಸುವ, ಸತ್ಕುಲ ಪ್ರಸೂತರೆಂಬ ಜನಸಮೂಹಕ್ಕೆ ಚಂದ್ರನಾಗಿರುವ ಸತ್ಪುರುಷರ (ಅಥವಾ ವಿದ್ವಾಂಸರ) ಸಮೂಹದಿಂದ ಮನೋಹರನೆನಿಸಿ ಸನ್ಮಾನಿಸಿಕೊಳ್ಳಲು ಯೋಗ್ಯನಾದ, ದೊಡ್ಡವನೆನಿಸಿದ, ಪರಶಿವನ ಮನೋಹರವಾದ ಪಾದ ಕಮಲದ ಜಲವೆಂಬ ಮಕರದಿಂದಕ್ಕೆ ಭೃಂಗರೂಪನಾದ, ಮಂಗಳಕರವಾದ ಮಹಿಮೆಯಿಂದ ಕೂಡಿದ, ಒಳ್ಳೆಯ ಗುಣಗಳೆಂಬ ಕಮಲಗಳಿಗೆ ಸರೋವರ ರೂಪನಾದ, ವಿಸ್ತಾರವಾಗುತ್ತಿರುವ, ಶುಭ್ರವಾದ ಕಾಂತಿಯುಳ್ಳ ಯಶಸ್ಸಿನಿಂದ ಕೂಡಿರುವ ಸಮಸ್ತ ದಿಕ್ಕುಗಳ ಕೊನೆಗಳುಳ್ಳ ದಸರಯ್ಯನೇ ? ವ॥ ಹೀಗೆಂದೆನ್ನುತ್ತ ಭಕ್ತ ಸಮೂಹವು ನಲಿ ನಲಿದು ನರ್ತಿಸುತ್ತಿರಲು ಪರ ಸಮಯದವರೆಲ್ಲ ಭಯಗೊಂಡು ಬೆರಗಾಗಿ ನೋಡುತ್ತ ೭೦. 'ಘನಮಹಿಮನಾದ ಆ ದಸರಯ್ಯನು–ಹೊಡೆದರೂ, ಸಂಕಟಪಡದೆ ಮಲ್ಲನಿಗೆ ಮುರಿದುಹೋಗಿದ್ದ (ನಾಶವಾಗಿದ್ದ) ಎರಡೂ ಕೈಗಳನ್ನು ಕೊಟ್ಟನು; ಪ್ರೀತಿಯಿಂದ ಪಾದಕ್ಕೆ ನಮಸ್ಕಾರ ಮಾಡಿದರೆ ನಮಗೆ ಏನು ವರವನ್ನು ಕೊಡುವನೋ?' ವ॥ ಎಂದು ಎಲ್ಲರೂ ಕೂಡಿ ಆತನ ಪಾದಕಮಲಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡಿ, ಹಣೆಯ ಮೇಲೆ

+ 1 ನೆ(ಅ), + ಏ(ಚ, ಜ, ದ)

ಖಲರಂ ಕಾಪಟ್ಯಕರ್ಮಾಶ್ರಿತರನಧಮರಂ ದುಷ್ಟರಂ ಧೂರ್ತರಂ ದು
ರ್ಬಲರಂ ದುರ್ನೀತರಂ ದುರ್ದಮರನಧಿಕಪಾಪಾತ್ಮರಂ ವ್ಯರ್ಥಗವಾ
ವಿಲರಂ ಪಾಷಂಡಮಾರ್ಗಸ್ಥಿತರನಪಯಶೋಯುಕ್ತರಂ ಮೋಹಮೂರ್ಛಾ
ಕುಲರಂ ಸರ್ವಾಪರಾಧಾನ್ವಿತರನೊಸೆದು ನೀಂ ಕಾವುದೆಮ್ಮಂ ದಯಾಬ್ಧೀ ೭೧

ಸರ್ವದಯಾಪರ ನಿನ್ನಯ
ಪರ್ವಿದ ಮಹಿಮಾತಿಶಯಮನಱಿವಂ ಜಗದೊಳ
ಗ್ಸರ್ವಜ್ಞನೊರ್ವನಲ್ಲದೆ
ದುರ್ವಾರಮದಾಂಧಮತಿಗಳಾವಱಿದಪೆವೇ ೭೨

ನೆಗಳ್ದಪರಾಧಮಂ ನಿನಗೆ ತಾಂ ಪಡೆದಂ ಗಡ ಪಾಣಿಯುಗ್ಮಮಂ
ಬಗೆಮಿಗೆ ಮಲ್ಲಿನಾಥನವನಿಂ ಮೊದಲಾದಪರಾಧಮೆಮ್ಮದು
ಜ್ಜುಗಿಸಿದೆವಾವದಂ ಬಗೆವೊಡಂತದಱಿಂ ಪೊರೆ ಮಾಣದೆಮ್ಮ ಪೆಂ
ಪಗಲದ ಕೂರ್ಮೆಯಿಂ ದಸರ ನೀಂ ಸುಜನೋತ್ತಮನಾದ ಕಾರಣಂ ೭೩

ವ॥ ಎಂದು ಸನ್ನುತಿಗೆಯ್ವುತೆಮ್ಮಪರಾಧಸರ್ವಸ್ವಮಂ ಸೈರಿಸಿ ಕರುಣಿಪುದೆಂದು ಮಗುಳ್ದು ಮಣಿದಭಯಂಬಡೆದು ಕೃತಾರ್ಥತೆಯನಾಳ್ದಿಸೆದಿರ್ದರಾ ಪ್ರಸ್ತಾವದೊಳ್—

ಹೊತ್ತುನಿಂತ ಕೈಗಳುಳ್ಳವರಾಗಿ ೭೧. ದಯಾಸಾಗರನೇ, ದುರ್ಜನರೂ, ಕಪಟ ವ್ಯಾಪಾರದಿಂದ ಕೂಡಿದವರೂ, ಅಧಮರೂ, ದುಷ್ಟರೂ, ವಂಚಕರೂ, ಬಲಹೀನರೂ, ವಿನಯರಹಿತರೂ, ದುರ್ಮದವುಳ್ಳವರೂ, ಅಧಿಕ ಪಾಪಾತ್ಮರೂ, ಪ್ರಯೋಜನವಿಲ್ಲದವರೂ, ಮೂಢರೂ, ವೇದೋಕ್ತ ಧರ್ಮ ಮಾರ್ಗದೂರರೂ, ಅಪಯಶಸ್ಸಿನಿಂದ ಕೂಡಿದವರೂ, ಮೋಹವೆಂಬ ಮೂರ್ಛೆಯಿಂದ ಆಕುಲಗೊಂಡವರೂ, ಸರ್ವಅಪರಾಧಗಳಿಂದ ಕೂಡಿದವರೂ, ಆದ ನಮ್ಮನ್ನು ನೀನು ರಕ್ಷಿಸಬೇಕು.' ೭೨. 'ಹೇ ಸರ್ವಜೀವ ದಯಾಪರನೇ, ನಿನ್ನ ಹಬ್ಬಿರುವ ಮಹಿಮೆಯ ಆಧಿಕ್ಯವನ್ನು ಈ ಜಗತ್ತಿನಲ್ಲಿ ಸರ್ವಜ್ಞನೊಬ್ಬನೇ ತಿಳಿದಿರುವನಲ್ಲದೆ, ತಡೆಗಟ್ಟಲಸಾಧ್ಯವಾದ ಗರ್ವದಿಂದ ಕುರುಡರಾದ ಬುದ್ಧಿಯುಳ್ಳ ನಾವು ತಿಳಿಯುತ್ತೇವೆಯೇ ?' ೭೩. 'ಮಲ್ಲಿನಾಥನು ನಿನ್ನ ವಿಷಯದಲ್ಲಿ ಅಪರಾಧವನ್ನು ಮಾಡಿಯೂ ತಾನು ಮಿಗೆ ಮೀರಿದ ಎರಡೂ ಕೈಗಳನ್ನೂ ಪಡೆದನಲ್ಲವೇ ? ಅವನಿಗಿಂತ ಮೊದಲು ಆದ ಅಪರಾಧವು ನಮ್ಮದು. ಅದನ್ನು ಯೋಚಿಸಿದ್ದಾದರೆ ನಾವೂ ಅಪರಾಧ ಮಾಡಿದೆವು. ಆದ್ದರಿಂದ ಹೇ ಸುಜನೋತ್ತಂಸನೇ (ಸತ್ಪುರುಷ ಶ್ರೇಷ್ಠನೇ) ನಿನ್ನ ಕೃಪಾವಿಶೇಷವು ಅಗಲದಂತೆ ಪ್ರೀತಿಯಿಂದ ನಮ್ಮನ್ನು ತಪ್ಪದೆ ರಕ್ಷಿಸು.' ವ॥ ಹೀಗೆಂದು ಸ್ತೋತ್ರ ಮಾಡಿ, ನಮ್ಮ ಸರ್ವಾಪರಾಧಗಳನ್ನು ಸೈರಿಸಿ ಕರುಣೆದೋರಬೇಕೆಂದು ಪುನಃ ನಮಸ್ಕಾರ ಮಾಡಿ, ಅಭಯವನ್ನು ಪಡೆದು ಕೃತಾರ್ಥ

ಧರೆ ಜಯ ಜೀಯೆನೆ ಶರಣ
ರ್ಪರಮಾನಂದದೊಳೆ ಪರಸೆ ನುತಿಯಿಸುತಿರೆ ಸ
ರ್ವರುಮಲ್ಲಿ ಮಲ್ಲಿನಾಥಂ
ಗೆರಡುಂ ಕೆಯ್ಯಿತ್ತು ಮೆಱೆದನಾ ದಸರಯ್ಯಂ ೭೪

ಬಸವಂ ಕೇಳ್ದು ಮಹತ್ವಸ್ಥಿತಿಯನೊಸಗೆಯಿಂದೆಯ್ದಿ ಸದ್ಭಕ್ತಸಂದೋ
ಹಸಮೇತಂ ಕಂಡು ದಂಡಪ್ರಣತಿಯೆಸಗಿ ಕೊಂಡಾಡುತಾನಂದಬಾಷ್ಪ
ಪ್ರಸರಂ ಕೆಯ್ಗಣ್ಮೆ ತಾಳ್ದು ದಸರನಮಳ ಕಾರುಣ್ಯಮಂ ಬಂದು ಪೊಕ್ಕೊ
ಲ್ದೆಸೆದಂ ಶುದ್ಧಾಂತದೊಳ್ಜಂಗಮಚಯಚರಣಾಂಭೋಜಪೂಜಾವಿತಂದ್ರಂ ೭೫

ದಸರಯ್ಯನಮಳಚರಿತಮ
ನೊಸೆದಾವಂ ಕೇಳ್ವನಾವನೋದುವನಾವಂ
ಪಸರಿಪನವನಗಜೇಶ
ಪ್ರಸಾದದಿಂ ಪಡೆಗುಮಿಷ್ಟಸುಖಸಂಪದಮಂ ೭೬

ಚಿದಂಬರಸ್ವರೂಪೆ ಚಿತ್ತಜನ್ಮವಂದ್ಯೆ ಚಿನ್ಮಯೀ
ಕದಂಬವಾಟಿಕಾನಿವಾಸೆ ಕಾಳಿ ಕಾಲಭಂಜನೇ

ರೆನಿಸಿ ಶೋಭಿಸುತ್ತಿದ್ದರು. ಆ ಸಮಯದಲ್ಲಿ—೭೪. ಲೋಕವೆಲ್ಲ ಜಯ ಜಯ ಎನ್ನುತ್ತಿರಲು, ಶರಣರೆಲ್ಲ ಪರಮಾನಂದದಿಂದ ಆಶೀರ್ವಾದ ಮಾಡುತ್ತಿರಲು, ಸರ್ವರೂ ಸ್ತೋತ್ರ ಮಾಡುತ್ತಿರಲು ಆ ದಸರಯ್ಯನು ಮಲ್ಲಿನಾಥನಿಗೆ ಎರಡೂ ಕೈಗಳನ್ನೂ ಕೊಟ್ಟು ಶೋಭಿಸಿದನು. ೭೫. ಬಸವಣ್ಣನು ಈ ಮಹತ್ವದ ಸುದ್ದಿಯನ್ನು ಕೇಳಿ, ಉತ್ಸವಗೊಂಡು ಸದ್ಭಕ್ತ ಸಮೂಹ ಸಹಿತವಾಗಿ ಹೊರಟುಬಂದು (ದಸರಯ್ಯನನ್ನು) ಕಂಡು, ದೀರ್ಘದಂಡ ನಮಸ್ಕಾರ ಮಾಡಿ, ಕೊಂಡಾಡುತ್ತ, ಆನಂದಬಾಷ್ಪ ಸಮೂಹವು ಅಧಿಕಗೊಂಡು ದಸರಯ್ಯನ ಪರಿಶುದ್ಧವಾದ ಕಾರುಣ್ಯವನ್ನು ಪಡೆದು (ಹಿಂತಿರುಗಿ) ಬಂದು, ತನ್ನ ಅಂತಃಪುರವನ್ನು ಪ್ರವೇಶಿಸಿ, ಪ್ರೀತಿಯಿಂದ ಜಂಗಮ ಸಮುದಾಯದ ಪಾದಪೂಜೆಯಲ್ಲಿ ನಿರತನಾಗಿ ಶೋಭಿಸಿದನು. ೭೬. ದಸರಯ್ಯನ ಪರಿಶುದ್ಧವಾದ ಚರಿತ್ರೆಯನ್ನು ಪ್ರೀತಿಯಿಂದ ಯಾವನು ಕೇಳುವನೋ. ಯಾವನು ಓದುವನೋ, ಯಾವನು ವಿಸ್ತಾರಗೊಳಿಸುವನೋ (ಹರಡುವನೋ), ಅವನು ಪಾರ್ವತೀ ಪತಿಯ ಅನುಗ್ರಹದಿಂದ ಇಷ್ಟ ಸುಖ ಸಂಪತ್ತುಗಳನ್ನು ಪಡೆಯುವನು. ೭೭. ಜ್ಞಾನಾಕಾಶ ಸ್ವರೂಪಿಣಿಯೂ, ಮನ್ಮಥನಿಂದ ನಮಸ್ಕರಿಸಿ ಕೊಳ್ಳುವವಳೂ, ಜ್ಞಾನಾತ್ಮಕಳೂ, ಕದಂಬವೃಕ್ಷ ಸಮೂಹದಲ್ಲಿ ವಾಸಿಸುವವಳೂ, ಕಪ್ಪಾದ ಶರೀರವುಳ್ಳವಳೂ, ಯಮನನ್ನು

ಸದಂಬುಜಾಯತಾಕ್ಷಿ ಚಕ್ರಪಾಣಿ ಶಕ್ರಸೇವಿತೇ
ಮದಂಬೆ ರಕ್ಷಿಸೆನ್ನನಿಂದುಮೌಳಿಪತ್ನಿ ಪಾರ್ವತೀ ೭೭

ಇದು ವಿನಮದಖಿಳ ಸುರಾಸುರೇಂದ್ರಮಕುಟತಟಘಟಿತ ಮಣಿಗಣಾಗಣಿತ ರುಚಿನಿಚಯ
ತರುಣಾರುಣಾತಪಪರಿಲಸಿತ ಪರಮ ಶಿವಲಿಂಗ ಪಾದಾರವಿಂದಪರಾಗಭಸಿತ
ಭಾಸುರಲಲಾಟಪಟ್ಟ ಸರಸಜನಮಾನಿತೋಭಯಕವಿತಾವಿಶಾರದ
ಶ್ರೀಷಡಕ್ಷರಿದೇವಭಕ್ತಿವಿರಚಿತ
ಶ್ರೀಮದ್ ಬಸವರಾಜವಿಜಯಮಹಾಪುರಾಣದೊಳ್ ದಸರಿದೇವಕಥಾಭಿವರ್ಣನಂ
ಷಡ್ವಿಂಶಾಶ್ವಾಸಂ ಸಮಾಪ್ತಂ

ಅಂತು ಆಶ್ವಾಸ ೨೬ಕ್ಕೆ ಪದಗಣನೆ ೧೯೧೭ಕ್ಕೆ ಮಂಗಳಮಹಾಶ್ರೀ

ಭಂಗಗೊಳಿಸಿದವಳೂ, ಶ್ರೇಷ್ಠ ತಾವರೆಯಂತೆ ದೀರ್ಘನೇತ್ರವುಳ್ಳವಳೂ, ಚಕ್ರಾಯುಧವೇ ಹಸ್ತದಲ್ಲುಳ್ಳವಳೂ, ಇಂದ್ರನಿಂದ ಸೇವಿಸಿಕೊಳ್ಳುವವಳೂ, ನನ್ನ ತಾಯಿಯೂ ಈಶ್ವರ ಪತ್ನಿಯೂ ಆದ ಪಾರ್ವತಿಯೇ, ನನ್ನನ್ನು ರಕ್ಷಿಸು.

ಇಪ್ಪತ್ತಾರನೆಯ ಆಶ್ವಾಸವು ಸಮಾಪ್ತವಾಯಿತು.

ಸಪ್ತವಿಂಶಾಶ್ವಾಸಂ

[ಗುರುಭಕ್ತಯ್ಯನ ಕಥೆ]

ಶ್ರೀ ಭೂಧರೇಂದ್ರತನಯಾ
ಶೋಭಾವಹಕಲ್ಪವಲ್ಲರೀಸುರತರು ಮ
ತ್ತೇಭಾಜಿನಾಂಬರಂ ನಾ
ಗಾಭರಣಂ ಪೊರೆಗೆ ಶಿಷ್ಟರಂ ಶಿವಲಿಂಗಂ ೧

ವ॥ ಮತ್ತಮಲ್ಲಿ—

ಗುರುಚರಣಾರುಣಾಂಬುಜಯುಗಸ್ಮರಣಸ್ಥಿರಚಿತ್ತನಾ ಲಸ
ದ್ಗುರುಕರುಣಾಕಟಾಕ್ಷರುಚಿಚಂದ್ರಮರೀಚಿಚಕೋರನಾತ್ಮವಿ
ದ್ಗುರುಪದಪದ್ಮಶೇಖರಶಿರಂ ಗುರುವಾಕ್ಯಸುಧಾಸುಪಾನಜಾ
ತರುಚಿ ಗುರುಪ್ರಸಾದರಸಿಕಂ ಗುರುಲಿಂಗಸದಾಸಮರ್ಚಕಂ ೨

ಗುರುಭಕ್ತಿನವಮರನ್ಮಣಿ
ಗುರುಭಕ್ತಿಸುಧಾಸರೋಧಿ ಗುರುಭಕ್ತಿಸುಖಾ
ಕರಮೂರ್ತಿ ರಂಜಿಸಿರ್ದಂ
ಗುರುಭಕ್ತಿಧುರೀಣನಮಮ ಗುರುಭಕ್ತಾರ್ಯಂ ೩

ಗುರುಭಕ್ತಯ್ಯನ ಕಥೆ

೧. ಮಂಗಳಕರಳಾದ ಪಾರ್ವತೀದೇವಿಯೆಂಬ ಕಾಂತಿಯುತವಾದ ಕಲ್ಪಲತೆಗೆ ಕಲ್ಪವೃಕ್ಷ ಪ್ರಾಯನೂ, ಮದೋನ್ಮತ್ತವಾದ ಗಜಾಸುರನ ಚರ್ಮವನ್ನೇ ಬಟ್ಟೆಯನ್ನಾಗಿ ಧರಿಸಿದವನೂ, ನಾಗಾಭರಣನೂ ಆದ ಶಿವಲಿಂಗನು ಸತ್ಪುರುಷರನ್ನು ರಕ್ಷಿಸಲಿ. ವ॥ ಮತ್ತು ಅಲ್ಲಿ. ೨–೩. ಗುರುವಿನ ಪಾದವೆಂಬ ಕೆಂದಾವರೆಗಳೆರಡರ ನೆನೆಯುವಿಕೆಯಲ್ಲಿ ಸ್ಥಿರವಾದ ಮನಸ್ಸುಳ್ಳವನೂ, ಅಂಥ ಪ್ರಕಾಶಮಾನವಾದ ಗುರುವಿನ ಕರುಣೆಯಿಂದ ಕೂಡಿದ ಕಟಾಕ್ಷದ ಕಾಂತಿಯೆಂಬ ಬೆಳದಿಂಗಳಿಗೆ ಚಕೋರಪಕ್ಷಿಯಂತಿರುವವನೂ, ಪರಮಾತ್ಮನನ್ನು ತಿಳಿದ ಗುರುವಿನ ಪಾದ ಕಮಲವೆಂಬ ಶಿರೋಭೂಷಣವನ್ನು ತಲೆಯ ಮೇಲೆ ಧರಿಸಿರುವವನೂ, ಗುರುವಿನ ವಚನವೆಂಬ ಅಮೃತದ ಉತ್ತಮ ಪಾನೀಯದಲ್ಲಿ ಮನೋಹರವಾದ ಅಭಿರುಚಿಯುಳ್ಳವನೂ, ಗುರುವಿನ ಅನುಗ್ರಹವೆಂಬ ರಸಜ್ಞನೂ, ಗುರುಲಿಂಗಗಳನ್ನು ಸದಾ ಅರ್ಚನೆ ಮಾಡುವ, ಗುರುಭಕ್ತಿಗೆ ನೂತನ ಚಿಂತಾಮಣಿಯೆನಿಸಿದವನೂ, ಗುರುಭಕ್ತಿಗೆ ಕ್ಷೀರಸಮುದ್ರ ಪ್ರಾಯನಾದವನೂ. ಗುರುಭಕ್ತಿಯೆಂಬ ಸುಖಕ್ಕೆ ಆಸ್ಪದವಾದ ಶರೀರಿಯೆನಿಸಿದವನೂ, ಗುರುಭಕ್ತಿ ಧುರಂಧರನೂ ಆದ ಗುರುಭಕ್ತಾರ್ಯನೆಂಬುವನು

ಗುರುಕರುಣಮೆ ಪ್ರಾಣಂ ಗುರು
ಚರಣಮೆ ನಿಜ ಚಿತ್ತ ಹಸ್ತಿಗಾಲಾನಂ ತ
ದ್ಗುರುಭಜನಸುಖಮೆ ಮೋಕ್ಷ
ಸ್ಥಿರಸುಖಮಾಗಿರೆ ಪೊದಳ್ದು ನಲವೇಳ್ದಿರ್ದಂ ೪

ಅಧಿಕರಿಸಿ ನಂಬಿ 'ನ ಗುರೋ
ರಧಿಕಮ್' ನಿಪ್ಪಾಗಮೋಕ್ತಿಯುಂ ಗುರುವಿಂ ಬೇ
ಱಧಿಕಮಣಮಿಲ್ಲೆನುತ ಭ
ಕ್ತಿಧುರಂಧರನೊಲ್ದು ಭಜಿಯಿಪಂ ಗುರುವರನಂ ೫

ಗುರುಚರಣಾಬ್ಜರೇಣು ಭಸಿತಂ ಗುರುನಾಮಮೆ ದಿವ್ಯಮಂತ್ರಮಾ
ಗುರುಭಜನಂ ನಿಜೇಷ್ಟಯಜನಂ ಗುರುಪಾದಮೆ ಸರ್ವಸಂಪದೋ
ತ್ಕರಜನನಸ್ಥಳಂ ಗುರುನಿರೂಪಮೆ ಜೀವನಮಾಗೆ ಸಂತತಂ
ಗುರುಚರಣಾಂಬುಜದ್ವಯಮನರ್ಚಿಸುತುಂ ಗುರುಭಕ್ತನೊಪ್ಪುಗುಂ ೬

ಪರಿಮಳವಾರಿಯಿಂ ಗುರುಪದಾಂಬುಜಮಂ ತೊಳೆದಷ್ಟಗುಣದಿಂ
ಪೊರೆದು ಸುಗಂಧಪುಷ್ಪಚಯಮುಂ ಪದೆದೇಱಿಸಿ ಧೂಪದೀಪ ಭಾ
ಸುರಮಧುರಾನ್ನವೀಟಿಕೆಗಳಿಂ ನಲಿದರ್ಚಿಸಿ ಸಾತ್ವಿಕಂ ಪೊದ
ಳ್ದಿರೆ ಪೊಗಳುತ್ತೆ ಕೂರ್ತೆಱಗಿ ಮತ್ತೆಱಗುತ್ತೆ ಮನೋನುರಾಗದಿಂ ೭

ನೆನೆನೆನೆದು ಗುರುಮಹತ್ವಮ
ನನುನಯದಿಂ ನೋಡಿ ತನ್ಮೂರ್ತಿಯನೋ

ಶೋಭಿಸುತ್ತಿದ್ದನು. ೪. ಗುರುಕರಣವೇ ಪ್ರಾಣ; ಗುರುಚರಣವೇ ತನ್ನ ಮನಸ್ಸೆಂಬ ಆನೆಯನ್ನು ಕಟ್ಟುವ ಕಂಬ ಆ ಗುರುವನ್ನು ಭಜನೆ ಮಾಡುವುದರಿಂದಾಗುವ ಸುಖವೇ ಮೋಕ್ಷದ ಶಾಶ್ವತ ಸುಖವಾಗಿರಲಾಗಿ ಖ್ಯಾತಿಯನ್ನು ಹೊಂದಿ ಸಂತೋಷದಿಂದ ಇದ್ದನು. ೫. ಭಕ್ತಿ ಜೀವನವೆಂಬ ಭಾರವನ್ನು ಹೊತ್ತ ಆ ಗುರುಭಕ್ತನು 'ನ ಗುರೋರಧಿಕಂ' ಎಂದರೆ–ಗುರುವಿಗಿಂತ ಹೆಚ್ಚಿನದು ಯಾವುದೂ ಇಲ್ಲವೆಂಬ ಆಗಮ ವಚನವನ್ನು ಅಧಿಕವೆಂದು ಭಾವಿಸಿ, ಗುರುವಿಗಿಂತ ಬೇರೆ ಅಧಿಕವಾದದ್ದು ಸ್ವಲ್ಪವೂ ಇಲ್ಲವೆಂದು ತಿಳಿದು ಸಂತೋಷದಿಂದ ಗುರುವನ್ನು ಸ್ತೋತ್ರ ಮಾಡುತ್ತಿದ್ದನು. ೬. ಗುರುವಿನ ಪಾದಕಮಲದ ಧೂಳಿಯೇ ಭಸ್ಮ, ಗುರುನಾಮವೇ ದಿವ್ಯಮಂತ್ರ; ಗುರು ಭಜನೆಯೇ ತನ್ನ ಇಷ್ಟಲಿಂಗದ ಪೂಜೆ: ಗುರುಪಾದವೇ ಸಮಸ್ತ ಸಂಪತ್ತುಗಳ ಸಮೂಹದ ಜನ್ಮಭೂಮಿ: ಗುರುವಿನ ಆಜ್ಞೆಯೇ ಜೀವನವಾಗಿರಲು ಸತತವೂ ಆ ಗುರುಭಕ್ತನು ಗುರುವಿನ ಪಾದಕಮಲಗಳೆರಡನ್ನೂ ಪೂಜಿಸುತ್ತ ಒಪ್ಪಿದ್ದನು. ೭–೮. ಗುರುವಿನ ಪಾದಕಮಲಗಳನ್ನು ಪರಿಮಳೋದಕದಿಂದ ತೊಳೆದು, ಅಷ್ಟಗಂಧ ಅಂದರೆ ಚಂದನ, ದೇವದಾರು, ಚಂಗಲ್ ಕೋಷ್ಠ, ಕೇಸರಿ, ಕಲ್ಲುಹೂವು, ಜಟಾಮಾಸಿ, ಗೋರೋಚನ, ಅಗಿಲು ಇತ್ಯಾದಿಗಳ ಕೂಟದಿಂದ ಮಾಡಿದ ಗಂಧವನ್ನು ಅನುಲೇಪನ

ಯ್ಯನೆ ಮಣಿದು ಮಣಿದು ತತ್ಕೀ
ರ್ತನಮಂ ಬಗೆದಂದು ನೆಗಳ್ದನಾ ಗುರುಭಕ್ತಂ ೮

ಶಿವಮಯಭಾವ ಶಿಷ್ಯಜನಪಾಶನಿಕೃಂತನ ಶಿಷ್ಟವಂದ್ಯ ಶಾಂ
ಭವಮತಕಲ್ಪಭೂಜ ಶರಣಾಗತರಕ್ಷಕ ಶಾಂತ ಶಾರ್ವರೀ
ಧವರುಚಿಕೀರ್ತಿಭಾಸುರ ಶರಣ್ಯವರೇಣ್ಯ ಶಶಾಂಕಮೌಲಿಭ
ಕ್ತವಿಸರಭಾವನೀಯ ಜಯ ದೇಶಿಕಶೇಖರ ಸದ್ಗುಣಾಕರಾ ೯

ನಿರವದ್ಯಂ ನಿಷ್ಪ್ರಪಂಚಂ ನಿರವಧಿಮಹಿಮಂ ನಿರ್ಗುಣಂ ನಿಷ್ಕಳಂಕಂ
ನಿರಪಾಯಂ ಚಿನ್ಮಯಂ ತಾನೆನಿಪ ಪರಶಿವಂ ನೀನೆ ಕಾರುಣ್ಯದಿಂದಂ
ಗುರುರೂಪಂ ತಾಳ್ದು ತೂಳ್ದಿ ಭವಮನಮಳಲಿಂಗಾಂಗಸಂಯೋಗಮಂ ಬಿ
ತ್ತರಿಸುತ್ತುಂ ಶಿಷ್ಯಪಾಶಪ್ರತತಿಯ ಪಱಿದೈ ಧಾತ್ರಿಯೊಳ್ದೇಶಿಕೇಂದ್ರಾ ೧೦

ಒದವಿದಾಗಮಮಸ್ತಕಪ್ರತತಿ ಲಕ್ಷ್ಮೀಶಾಜರುಂ ಕಾಣದ
ಗ್ಗದ ಚಿನ್ಮಾತ್ರಮೆನಿಪ್ಪ ದಿವ್ಯನಿಜಲಿಂಗಾಕಾರಮಂ ಕಾಣಿಸು

ಮಾಡಿ, ಪರಿಮಳ ವಿಶಿಷ್ಟವಾದ ಹೂವುಗಳ ಸಮೂಹವನ್ನು ಸಂತೋಷದಿಂದ ಏರಿಸಿ, ಧೂಪ, ದೀಪ. ತಾಂಬೂಲಗಳಿಂದ ನಲಿದು ಪೂಜೆ ಮಾಡಿ, ರೋಮಾಂಚಾದಿ ಸಾತ್ವಿಕ ಭಾವಗಳು ವ್ಯಾಪಕವಾಗಿ ಉಂಟಾಗುತ್ತಿರಲು ಸ್ತೋತ್ರ ಮಾಡುತ್ತ, ಪ್ರೀತಿಸುತ್ತ, ನಮಸ್ಕಾರ ಮಾಡುತ್ತ ಮತ್ತೆ ಮತ್ತೆ ಮನೋನುರಾಗದಿಂದ ನಮಸ್ಕಾರ ಮಾಡುತ್ತ, ಆ ಗುರುಭಕ್ತನು (ಹೀಗೆ) ಗುರುಮಹತ್ವವನ್ನು ನೆನೆ ನೆನೆದು ಅನುರಾಗದಿಂದ ಆ ಗುರು ಮೂರ್ತಿಯನ್ನು ನೋಡಿ, ನೋಡಿ ಮೆಲ್ಲನೆ ಮಣಿ ಮಣಿದು, ಗುರುಸ್ತೋತ್ರವನ್ನು ಮನಸ್ಸಿನಲ್ಲಿ ತಂದುಕೊಂಡು ಶೋಭಿಸಿದ್ದನು. ೯. ಶಿವಭಾವಾಪನ್ನವಾದ ಮನಸ್ಸುಳ್ಳ ಶಿಷ್ಯಜನರ ಭವವೆಂಬ ಹಗ್ಗವನ್ನು ಕತ್ತರಿಸುವ, ಶಿಷ್ಟರಾದ (ಸತ್ಪುರುಷರಾದ) ಜನರಿಂದ ವಂದಿಸಿಕೊಳ್ಳಲ್ಪಡುವ, ವೀರಶೈವ ಮತಕ್ಕೆ ಕಲ್ಪವೃಕ್ಷಪ್ರಾಯನಾದ, ಶರಣಾಗತರಾದ ವರನ್ನು ಸಂರಕ್ಷಿಸುವ, ಶಾಂತನೂ, ರಾತ್ರೀಶ್ವರನೂ ಆದ ಚಂದ್ರನ ಕಾಂತಿಯಂತಿರುವ ಕೀರ್ತಿಯಿಂದ ಪ್ರಕಾಶಮಾನನಾದ; ರಕ್ಷಕರಲ್ಲಿ ಶ್ರೇಷ್ಠನೆನಿಸಿದ, ಚಂದ್ರಮೌಳಿಯ ಭಕ್ತರ ಸಮೂಹದಿಂದ ಧ್ಯಾನಿಸಲ್ಪಡುವುದಕ್ಕೆ ಯೋಗ್ಯನೆನಿಸಿದ, ಸದ್ಗುಣಗಳಿಗೆ ಆನೆಕರನಾದ ಗುರುಶ್ರೇಷ್ಠನೇ, ಜಯ! ೧೦. 'ಹೇ ದೇಶಿಕೇಂದ್ರನೇ, ನಿರ್ದೋಷಿ, ಪ್ರಾಪಂಚಿಕ ವ್ಯಾಪಾರ ಶೂನ್ಯನು ಕೊನೆಯಿಲ್ಲದ ಮಹಿಮನು, ಸತ್ವರಜಸ್ತಮೋಗುಣದೂರನು, ಪಾಪರಹಿತನು, ಅಪಾಯದೂರನು, ಜ್ಞಾನರೂಪನು—ಎನಿಸುವ ಪರಮಶಿವನು ನೀನೇ ಆಗಿದ್ದೀಯೇ, ಕಾರುಣ್ಯದಿಂದ ಲೋಕದಲ್ಲಿ ಗುರುರೂಪ ಧರಿಸಿ, ಜನನ ಮರಣಾತ್ಮಕ ವಾದ ಸಂಸಾರವನ್ನೂ ಓಡಿಸಿದ್ದೀಯೇ. ಶ್ರೇಷ್ಠವಾದ ಲಿಂಗಾಂಗ ಸಾಮರಸ್ಯ ಜ್ಞಾನವನ್ನು ಬಿತ್ತರಿಸುತ್ತ ಶಿಷ್ಯರ ಮಾಯಾ ಪಾಶ ಸಮೂಹವನ್ನು ಕಿತ್ತು ಹಾಕಿದೆ.' ೧೧. 'ಪೂರ್ಣದಯಾಸಾಗರನೇ, ಪ್ರಾಪ್ತವಾಗಿರುವ ವೇದ ಶಿರಸ್ಸುಗಳೆನಿಸಿದ ಉಪನಿಷತ್ತುಗಳ ಸಮೂಹವೂ (ಮತ್ತು) ವಿಷ್ಣು, ಬ್ರಹ್ಮರೂ ಕಾಣದೆಯಿರುವ ಶ್ರೇಷ್ಠ

ತ್ತದನುದ್ಯದ್ವಪುರಿಂದ್ರಿಯಾಸುಮುಖಸಮ್ಯಗ್ವ್ಯಾಪ್ತಮಂ ಮಾಡಿ ಪೂ
ರ್ಣದಯಾಸಾಗರ ಸಾರ್ಚಿದೈ ವಿಮಳಜೀವನ್ಮುಕ್ತಿಯಂ ಭಕ್ತರೊಳ್ ೧೧

ವರ ಪಂಚಬ್ರಹ್ಮಮೈದುಂ ಕಲೆ ಮಿಸುಪ ಮಹಾಪಂಚಸಾದಾಖ್ಯ ಪಂಚಾ
ಮರವೃಂದಂ ಪಂಚತನ್ಮಾತ್ರೆಗಳಮರ್ದ ಲಸತ್ಪಂಚಭೂತಂ ಪ್ರಪಂಚೋ
ದರಪಂಚೀಭೂತತತ್ವಪ್ರತತಿಯೆನಿಪಿವಂ ತಾಳ್ದ ಪಂಚಾಂತ ಪಂಚಾ
ಕ್ಷರಮಂ ದೇಹೇಂದ್ರಿಯಾಸುಸ್ಥಿತಮನೆಸಗಿದೈ ದೇಶಿಕೇಂದ್ರಾವತಂಸಾ ೧೨

ನಿಯತದಿನಂಗಮಿಲ್ಲದ ಸದಾಶಿವನಂ ಶಿವಲಿಂಗಮೂರ್ತಿಯೊ
ಳ್ನಿಯಮಿಸಿ ಸಾರ್ಚಿ ಸರ್ವಗತನಂ ನತಹೃದ್ಗತನಂ ನೆಗಳ್ಚುಚಾ
ರಯೆ ಜಗದಾತ್ಮನಂ ಮಿಸುಪ ಭಕ್ತನಿಜಾತ್ಮನನೊಲ್ದು ಮಾಡಿ ಚಿ
ನ್ಮಯನನೊಡರ್ಚಿ ಭಕ್ತಮಯನಂ ಪೆಸರ್ವೆತ್ತೆಯುದಾತ್ತವೈಭವಾ ೧೩

ವಾದ ಜ್ಞಾನವೇ ತಾನಾಗಿರುವುದೆನಿಸಿರುವ ದಿವ್ಯ ಶಿವಲಿಂಗಾಕೃತಿಯಾಗಿ ಕಾಣಿಸುತ್ತ, ಆ ಶಿವಲಿಂಗವನ್ನು ಉತ್ಕೃಷ್ಟವಾದ ಶರೀರ, ಇಂದ್ರಿಯಗಳೇ ಆದಿಯಾದವುಗಳ ಮುಖದಲ್ಲಿ ಚೆನ್ನಾಗಿ ವ್ಯಾಪ್ತಿಗೊಳಿಸಿ (ಅಂದರೆ ಸರ್ವಾಂಗಲಿಂಗಮಯವನ್ನಾಗಿ ಮಾಡಿ), ಭಕ್ತರಲ್ಲಿ ಪರಿಶುದ್ಧ ಜೀವನ್ಮುಕ್ತಿಯನ್ನು (ಜೀವಂತವಾಗಿರುವಾಗಲೇ ಮುಕ್ತಿಯನ್ನು) ಉಂಟುಮಾಡಿದ್ದೀಯಲ್ಲವೆ !' ೧೨. 'ದೇಶಿಕೇಂದ್ರರಲ್ಲಿ ಶ್ರೇಷ್ಠನಾದವನೇ, ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನವೆಂಬ ಪಂಚಬ್ರಹ್ಮವು ; ನಿವೃತ್ತಿ, ಪ್ರತಿಷ್ಠಾ, ವಿದ್ಯಾ, ಶಾಂತಿ, ಶಾಂತ್ಯತೀತಗಳೆಂಬ ಕಲೆಗಳು ; ಶೋಭಿಸುವ ಶ್ರೇಷ್ಠಪಂಚಸಾದಾಖ್ಯಗಳೆನಿಸಿರುವ ಕರ್ತೃಸಾದಾಖ್ಯ, ಕರ್ಮಸಾದಾಖ್ಯ, ಮೂರ್ತಿಸಾದಾಖ್ಯ, ಅಮೂರ್ತಿಸಾದಾಖ್ಯ, ಶಿವಸಾದಾಖ್ಯಗಳು ; ಬ್ರಹ್ಮ, ವಿಷ್ಣು, ರುದ್ರ, ಈಶ್ವರ, ಸದಾಶಿವರೆಂಬ ಪಂಚ ಅಮರವೃಂದವು ; ಶಬ್ದ ಸ್ಪರ್ಶ, ರೂಪ, ರಸ, ಗಂಧಗಳೆಂಬ ಪಂಚತನ್ಮಾತ್ರೆಗಳು ; ಪ್ರಕರ್ಷದಿಂದ ಕೂಡಿ ಪ್ರಕಾಶಿಸುವ–ಪೃಥ್ವಿ, ಅಪ್, ತೇಜ, ವಾಯು, ಆಕಾಶಗಳೆಂಬ ಪಂಚಮಹಾಭೂತಗಳು ; ಪ್ರಪಂಚವೇ ಗರ್ಭವಾಗಿ ಉಳ್ಳ ಪರವಸ್ತುವಿನಿಂದ ವಿಸ್ತಾರಗೊಳಿಸಲ್ಪಟ್ಟ (ಪಂಚೀಭೂತ), ಚತುರ್ವಿಂಶತಿ (ಇಪ್ಪತ್ತುನಾಲ್ಕು) ತತ್ವಗಳ ಸಮೂಹ ವಿಶಿಷ್ಟನಾಗಿ ಹಿರಿಮೆಯನ್ನು ಹೊಂದಿದ ಪಂಚಾಕ್ಷರೀಮಂತ್ರವನ್ನು, ದೇಹ ಮತ್ತು ಇಂದ್ರಿಯಗಳಲ್ಲಿ ಸುವ್ಯವಸ್ಥಿತಸ್ಥಿತಿಯಲ್ಲಿ ಇರುವಹಾಗೆ ಮಾಡಿದೆಯಲ್ಲವೇ !' ೧೩. 'ಉತ್ಕೃಷ್ಟವಾದ ವೈಭವ ಸಂಪನ್ನ ಗುರುವೇ, ನಿಶ್ಚಯವಾದ ದೇಹವಿಲ್ಲದ ಪರಶಿವನನ್ನು ಶಿವಲಿಂಗಮೂರ್ತಿಯಲ್ಲಿ ನೆಲೆಗೊಳಿಸಿ, ಸರ್ವವ್ಯಾಪಿಯಾದವನನ್ನು ನಮ್ರರಾದವರ ಹೃದಯದಲ್ಲಿ ಹೊಂದಿದವನನ್ನಾಗಿ ಮಾಡುತ್ತ ವಿಚಾರಿಸಲಾಗಿ ಜಗತ್ತೇ ತನ್ನಲ್ಲುಳ್ಳ ಪರಬ್ರಹ್ಮನನ್ನು ಶೋಭಿಸುವ ಭಕ್ತನ ಸ್ವಕೀಯ ಪ್ರಾಣದ ಸ್ವರೂಪವನ್ನಾಗಿಯೇ ಒಂದುಮಾಡಿ. ಅವನನ್ನು ಚಿನ್ಮಯ (ಜ್ಞಾನಮಯ) ನನ್ನಾಗಿಯೂ, ಭಕ್ತಮಯನನ್ನಾಗಿಯೂ ಮಾಡಿ ಪ್ರಸಿದ್ಧಿಯನ್ನು

ಮಾಣದೆ ವಿಶ್ವೇಶ್ವರನಂ
ಪ್ರಾಣೇಶ್ವರನೆನಿಸಿ ನೆಗಳ್ದೆ ಕರಪಂಕಜದೊ
ಳ್ಕಾಣಿಸಿದೆ ಬೊಮ್ಮಮುಂ ನಿ
ಮ್ಮಾಣತಿಯೊಳ್ಸಂದು ಬಾಳ್ವನಗಜಾರಮಣಂ ೧೪

ಅದಱಿಂ ನೀನೇ ಸ್ವತಂತ್ರಂ ನಿರುಪಮಮಹಿಮಂ ಸಚ್ಚಿದಾನಂದರೂಪಂ
ವಿದಿತಂ ತತ್ವಾದಿಬೀಜಂ ಗುರುವರ 'ಗುರುದೇವಾತ್ಪರಂ ನಾಸ್ತಿ'ಯೆಂಬು
ಕ್ತಿ ದಿಟಂ ನಿನ್ನತ್ತಣಿಂದು ಪರಮಿನಿತುಮಣಂ ತೋಱದೀ ವಿಶ್ವಮೆಲ್ಲಂ
ತ್ವದಧೀನಂ ಲಿಂಗಮುಂ ಜಂಗಮುಮುಮತುಳಿತಾಚಾರ್ಯನುಂ ನೀನೆ ದೇವಾ ೧೫

ಮುದಮಂ ತೂಳ್ದು ಮನೋಜನಂ ತುಳಿದು ಮಾಯಾಮೋಹಮಂ ನೂಂಕಿ ಪೆ
ರ್ಚಿದಹಂಕಾರಮನಿಕ್ಕಿ ದುರ್ವ್ಯಸನಮಂ ನುರ್ಗೊತ್ತಿ ರಾಗಾದಿಯಂ
ಸದೆದಂಗೇಂದ್ರಿಯವೃತ್ತಿಯಂ ಪಱಿದು ಪಂಚಕ್ಲೇಶಮಂ ಕಿಳ್ತು ಚಿ
ತ್ಪದಮಂ ಸಾರ್ಚುಗುಮಲ್ತೆ ನಿನ್ನ ವಚನಂ ಪ್ರತ್ಯಕ್ಷ ಭಾಳೇಕ್ಷಣಾ ೧೬

ಕಡೆಗಣ್ಕಾಮದುಘಂ ಕರಂ ದಿವಿಜಭೂಜಂ ನಿನ್ನ ಚೆಲ್ವಾಳ್ದ ಮೆ
ಲ್ಲಡಿ ಚಿಂತಾಮಣಿ ವಾಣಿ ಸರ್ವಸುಪದಾರ್ಥಜ್ಯೋತಿಯೆಂದಳ್ಕಱಿಂ

ಪಡೆದವನಾದೆ.' ೧೪. 'ಜಗದೀಶ್ವರನನ್ನು ತಪ್ಪದೆ ಪ್ರಾಣೇಶ್ವರನನ್ನಾಗಿ (ಭಕ್ತನ ಪ್ರಾಣಕ್ಕೆ ಈಶ್ವರನನ್ನಾಗಿ) ಮಾಡಿದೆ. ಕರಕಮಲದಲ್ಲಿ ಪರಬ್ರಹ್ಮ ಸ್ವರೂಪವಾದ ಇಷ್ಟಲಿಂಗವನ್ನು ಕಾಣುವಂತೆ ಮಾಡಿದೆ. (ಆಗ) ಆ ಶಿವನು ನಿಮ್ಮ ಆಜ್ಞೆಯನ್ನನು ಸರಿಸಿ ಬಾಳುವನು. (ಅಲ್ಲವೇ !)' ೧೫. 'ಆದ್ದರಿಂದ (ಗುರುವೇ) ನೀನೇ ಸ್ವತಂತ್ರನು; ಉಪಮಾತೀತವಾದ ಮಹಿಮೆಯುಳ್ಳವನು ; ಸತ್, ಚಿತ್, ಆನಂದಸ್ವರೂಪನೆನಿಸಿ ಪ್ರಸಿದ್ಧನು ; ತತ್ವಗಳಿಗೆ ಆದಿಕಾರಣನು ; ಹೇ ಗುರುಶ್ರೇಷ್ಠನೇ; ಗುರುದೇವನಿಗಿಂತಲೂ, ಉತ್ಕೃಷ್ಟವಾದ ಬೇರೊಂದು ವಸ್ತುವು ಇಲ್ಲವೆಂಬ ಮಾತು ಸತ್ಯವಾದುದು; ನಿನಗಿಂತಲೂ ಉತ್ಕೃಷ್ಟವಾದುದು ಸ್ವಲ್ಪವೂ ತೋರುವುದಿಲ್ಲ ; ಹೇ ದೇವ, ಈ ಪ್ರಪಂಚವೆಲ್ಲ ನಿನ್ನ ಅಧೀನ ; ಲಿಂಗವೂ, ಜಂಗಮವೂ, ಅಸದೃಶ ಗುರುವೂ ನೀನೇ ಆಗಿದ್ದೀಯೆ.' ೧೬. 'ಹೇ ಪ್ರತ್ಯಕ್ಷಫಾಲನೇತ್ರನಾದ ಗುರುವೇ, ನಿನ್ನ ಮಾತುಗಳು ಗರ್ವವನ್ನು ಓಡಿಸಿ, ಮನ್ಮಥನನ್ನು ತುಳಿದು, ಅಜ್ಞಾನದಿಂದುಂಟಾದ ಮೋಹವನ್ನು ಆಚೆಗೆ ತಳ್ಳಿ, ಹೆಚ್ಚಾದ ಅಹಂಕಾರವನ್ನು ಮೆಟ್ಟಿಹಾಕಿ, ದುಷ್ಟವ್ಯಸನಗಳನ್ನು ಒತ್ತಿ, ಅನುರಾಗಾದಿ ಗಳನ್ನು ನಾಶಮಾಡಿ, ಶರೀರೇಂದ್ರಿಯಗಳ ಅಜ್ಞಾನಮಯ ವ್ಯಾಪಾರವನ್ನು ಹರಿದು ಹಾಕಿ, ಅವಿದ್ಯೆ, ಅಸ್ಮಿತೆ, ರಾಗ, ದ್ವೇಷ, ಅಭಿನಿವೇಶಗಳೆಂಬ ಐದು ತರದ ಕ್ಲೇಶಗಳನ್ನು ಕಿತ್ತುಹಾಕಿ, ಜ್ಞಾನದ ಸ್ಥಾನವನ್ನು ಉಂಟುಮಾಡುವುವಲ್ಲವೆ.' (ನಿನ್ನವಚನಗಳು ಎಂದು ತಾತ್ಪರ್ಯ). ೧೭. 'ನಿನ್ನ ಕಡೆಗಣ್ಣೇ ಕಾಮಧೇನುವು ; ನಿನ್ನ ಹಸ್ತವೇ ಕಲ್ಪವೃಕ್ಷವು ; ನಿನ್ನ ಚೆಲುವಾದ ಮೃದುಪಾದಗಳೇ ಚಿಂತಾಮಣಿ ; ನಿನ್ನ ಸಮಸ್ತ ಮಾತುಗಳೇ ಸಮೀಚೀನವಾದ ಪದಾರ್ಥಗಳ (ಪದ ಮತ್ತು ಅರ್ಥಗಳ) ಜ್ಯೋತಿ ಸ್ವರೂಪಗಳು –

ನುಡಿವರ್ಕಳೀವಿದರಿಂತದಿರ್ಕೆ ಭವಮಂ ಬೇರ್ಕೊಯ್ವ ಜೀವತ್ವಮಂ
ಕಿಡಿಪಾನಂದಮನೀವ ಮುಕ್ತಿಗುಡುವಂದಂ ಮೇಣವರ್ಕಿರ್ಕುಮೇ ೧೭

ಅನಿಮಿತ್ತಬಂಧು ಮನುಮುನಿ
ಜನರ್ಕಗೋಚರಮೆನಿಪ್ಪ ಲಿಂಗಮನೆನ್ನೀ
ತನುಮನದೊಳ್ಭಾವದೊಳಾ
ತ್ಮನೊಳಂ ನೆಲೆಗೊಳಿಸಿ ಪೊರೆದೆ ನೀಂ ಘನಮಹಿಮಾ ೧೮

ವ॥ ಎಂದು ಕೂರ್ಮೆಯಿಂ ಕೊಂಡಾಡಿ ದಂಡಪ್ರಣಾಮಂಗೆಯ್ದು ಚರಣಮಂ ಶಿರದೊಳ್ಪೊತ್ತು ಭಯಭಕ್ತಿವೆರಸು ಕಿಂಕರತೆಯನಪ್ಪುಕೆಯ್ದು ಗುರುಭಕ್ತಂ ಗುರುಕೃಪೆಯಂ ಪಡೆದು ಜಡಭಾವಮಂ ನೀಗಿ ಮೃಡಭಾವಮಳವಟ್ಟು ಗುರುದಕ್ಷಿಣೆಗೆ 'ಶರೀರಮರ್ಥಂ ಪ್ರಾಣಂ ಚ ಸದ್ಗುರುಭ್ಯೋ ನಿವೇದಯೇತ್' ಎಂಬ ವಾಕ್ಯಾನುಸಾರದಿಂ ನಿಜಾಂಗವಸು ಪ್ರಾಣಂಗಳಂ ನಿವೇದಿಸಿ—

ಧುರಿತಧ್ವಾಂತಾರ್ಕಬಿಂಬಂ ಭವಜಳಧರಜಂಝಾನಿಲಂ ಮೋಹಧಾತ್ರೀ
ಧರಶಂಬಂ ಶೋಕಕಾಕೋದರಖಗಪತಿ ತಾಪಾಬ್ಧಿಕುಂಭೋದ್ಭವಂ ದು

ಎಂದು ಸಂತೋಷದಿಂದ ತಿಳಿದವರು ನುಡಿಯುತ್ತಿದ್ದಾರೆ. ಅದೊತ್ತಟ್ಟಿಗಿರಲಿ, ಭವ ಪ್ರಪಂಚವನ್ನು ಬೇರೆ ಮಾಡುವ, ಪ್ರಾಣಿತನವನ್ನು ನಾಶಮಾಡತಕ್ಕ, ಆನಂದವನ್ನುಂಟು ಮಾಡುವ, ಮತ್ತು ಪ್ರಾಣಿತನವನ್ನು ನಾಶಮಾಡತಕ್ಕ, ಆನಂದವನ್ನುಂಟುಮಾಡುವ, ಮತ್ತು ಮುಕ್ತಿಯನ್ನುಕೊಡುವ ಸಾಮರ್ಥ್ಯವು ಅವುಗಳಿಗೆ (ಅಂದರೆ ಕಾಮಧೇನು ಕಲ್ಪ ವೃಕ್ಷಾದಿಗಳಿಗೆ) ಉಂಟಾದೀತೇ ?' ೧೮. ಅನಿಮಿತ್ತ ಬಂಧುವಾದ ಘನಮಹಿಮನೇ, ನೀನು ಮನುಮುನಿಗಳೇ ಮೊದಲಾದ ಜನರಿಗೆ, ಕಾಣಿಸದಿರುವವನೆನಿಸುವ ಲಿಂಗವನ್ನು ನನ್ನ ತನುಮನಭಾವಗಳಲ್ಲಿ (ಕ್ರಮವಾಗಿ ಇಷ್ಟಲಿಂಗ; ಪ್ರಾಣಲಿಂಗ; ಭಾವಲಿಂಗ ರೂಪವಾಗಿ) ಮತ್ತು ಆತ್ಮದಲ್ಲಿ (ಮಹಾಲಿಂಗವೆನಿಸಿ) ನೆಲೆಗೊಳಿಸಿ ರಕ್ಷಿಸಿದೆ.' ವ॥ ಹೀಗೆಂದು ಆ ಗುರುಭಕ್ತನು (ತನ್ನ ಗುರುವನ್ನು) ಪ್ರೀತಿಯಿಂದ ಕೊಂಡಾಡಿ, ಸಾಷ್ಟಾಂಗನಮಸ್ಕಾರ ಮಾಡಿ, ಚರಣಗಳನ್ನು ಶಿರದಲ್ಲಿ ಹೊತ್ತು ಭಯದಿಂದ ಭಕ್ತಿಯಿಂದಲೂ ಕೂಡಿ, ಕೈಂಕರ್ಯಭಾವವನ್ನು ಹೊಂದಿದವನಾಗಿ, ಆ ಗುರುವಿನ ಕೃಪಾವಿಶೇಷವನ್ನು ಪಡೆದು, ಜಡಭಾವ (ಅಜ್ಞಾನಭಾವವನ್ನು) ತೊಲಗಿಸಿ, ಶಿವಭಾವವನ್ನು ಅಳವಡಿಸಿಕೊಂಡು, 'ಗುರುದಕ್ಷಿಣೆ ಶರೀರ, ಅರ್ಥ, ಪ್ರಾಣಗಳನ್ನು ಅರ್ಪಿಸಬೇಕು' (ಶರೀರಮರ್ಥಂ ಪ್ರಾಣಂಚ ಸದ್ಗುರುಭ್ಯೋ ನಿವೇದಯೇತ್) ಎಂಬ ವಾಕ್ಯಕ್ಕನುಸಾರವಾಗಿ, ತನ್ನ ದೇಹ, ದ್ರವ್ಯ, ಪ್ರಾಣಗಳನ್ನು ನಿವೇದಿಸಿ—೧೯. ಶಕ್ತಿಯಿಂದ ಕೂಡಿದ, ಗುರುವಿನ ಪಾದದಲ್ಲಿಟ್ಟ ಪ್ರಕಾಶಮಾನವಾದ ಭಕ್ತಿಯು (ಶಕ್ತಿವಿಶಿಷ್ಟವಾದ ಶಿವಾದ್ವೈತಭಕ್ತಿಯು) ಪಾಪವೆಂಬ ಕತ್ತಲೆಗೆ ಸೂರ್ಯಮಂಡಲವು ; ಜನನ ಮರಣಾತ್ಮಕವಾದ ಸಂಸಾರವೆಂಬ ಮೋಡಗಳಿಗೆ ಬಿರುಗಾಳಿಯು ; ಅಜ್ಞಾನವೆಂಬ ಪರ್ವತಕ್ಕೆ ವಜ್ರಾಯುಧಪ್ರಾಯವು ; ದುಃಖವೆಂಬ ಸರ್ಪಕ್ಕೆ (ಶೋಕವೆಂಬ ವಿಷವನ್ನು ಹೊಟ್ಟೆಯುಳ್ಳ ಕಾಕೋದರವೆನಿಸುವ

ಸ್ತರಮಾಯಾಭೂರುಹಪ್ರಸ್ಫುರಿತಪರಶು ಕಾಮೇಭಕಂಠೀರವಂ ಭೀ
ಕರಕಾಲಾರಣ್ಯದಾವಂ ಗುರುಪದವಿಳಸದ್ಭಕ್ತಿಶಕ್ತಿಪ್ರಯುಕ್ತಂ ೧೯

ಗುರುಪದಭಕ್ತಿ ದೇವತರುಗೀಶ್ವರಸತ್ಕೃಪೆ ಮೂಲಮುಲ್ಲಸ
ಚ್ಚರಚರಣಾರ್ಚನಾಭಿರತಿ ಪಲ್ಲವಮಾಗಮನಿಷ್ಠೆ ಶಾಖೆ ಶಾಂ
ತಿರಸಮರಂದಬೋಧಮಲರನ್ವಿತಮಾಗಿರೆ ಲಿಂಗಸಂಗಸೌ
ಖ್ಯರುಚಿಸುಮೋಕ್ಷದಿವ್ಯಫಲಮಪ್ಪುದು ತಪ್ಪದು ಭೂತಳಾಗ್ರದೊಳ್ ೨೦

ಕಡಿವೊಡೆ ದುರಿತವ್ರಜಮಂ
ಸುಡುವೊಡೆ ಭವವನಮನಭವಚರಣಾಂಬುಜಮಂ
ಪಿಡಿವೊಡೆ ಸಂಪದಮುಕ್ತಿಯ
ಪಡೆವೊಡೆ ಗುರುಭಕ್ತಿ ಮುಖ್ಯ ಕಾರಣಮಲ್ತೇ ೨೧

ಗುರುಭಕ್ತಿ ಸರ್ವರುಜೆಯುಂ
ಪರಿಹರಿಸುಗುಮೀಗುಮೈಹಿಕಾಮುಷ್ಮಿಕಭಾ
ಸುರಸುಖಮುನನಿಷ್ಟಮನೊ
ತ್ತರಿಸುಗುಮಭವಾಂಘ್ರಿಭಕ್ತಿಯುಂ ವರ್ಧಿಸುಗುಂ ೨೨

ಭವರೋಗಕ್ಕಿದು ಭೇಷಜ
ಮವಿಕಲಶಿವಪದಸುಸೌಧಕಿದು ಸೋಪಾನಂ

ಸರ್ಪಕ್ಕೆ) ಗರುಡಪ್ರಾಯವು ; ಆಧ್ಯಾತ್ಮಿಕ, ಆಧಿ ಭೌತಿಕ, ಆಧಿ ದೈವಿಕ ರೂಪತಾಪ ತ್ರಯವೆಂಬ ಸಮುದ್ರಕ್ಕೆ ಅಗಸ್ತ್ಯ ಋಷಿ ಸ್ವರೂಪ; ದಾಟಲಶಕ್ಯವಾದ ಮಾಯೆಯೆಂಬ ಮರಗಳ ಗುಂಪಿಗೆ ಹೊಳೆಯುವ ಕೊಡಲಿಯು ; ಮನ್ಮಥನೆಂಬ ಆನೆಗೆ ಸಿಂಹ ಸ್ವರೂಪವು ; ಭಯಂಕರನಾದ ಯಮನೆಂಬ ಕಾಡಿಗೆ ದಾವಾನಳ (ಕಾಡ್ಗಿಚ್ಚು)ವು– (ಆದದ್ದಾಗಿದೆ). ೨೦. ಈ ಭೂತಳಾಗ್ರದಲ್ಲಿ, ಗುರುಪಾದಭಕ್ತಿಯೆಂಬ ಕಲ್ಪವೃಕ್ಷಕ್ಕೆ ಈಶ್ವರನ ಸತ್ಕೃಪೆ ಬುಡ ; ಪ್ರಕಾಶಿಸುವ ಜಂಗಮರ ಪಾದಪೂಜಾಸಕ್ತಿಯು (ಆ ಕಲ್ಪ ವೃಕ್ಷದ) ಚಿಗುರು ; ಶೈವಾಗಮಗಳಲ್ಲಿನ ಶ್ರದ್ಧೆಯೇ ಕೊಂಬೆಗಳು ; ಶಾಂತಿಗುಣವೆಂಬ ಮಕರಂದವುಳ್ಳ ಜ್ಞಾನವೇ ಹೂವುಗಳು—ಹೀಗೆ ಕೂಡಿರಲು, ಶಿವಲಿಂಗ ಯೋಗದಿಂದ (ಶಿವಲಿಂಗಸಂಬಂಧದಿಂದ) ಉಂಟಾದ ಸೌಖ್ಯದ ಸಂತೋಷವೇ, ಶ್ರೇಷ್ಠವಾದ ಮುಕ್ತಿ, ಯೆಂಬ ದಿವ್ಯಫಲವಾಗುವುದು ತಪ್ಪುವುದಿಲ್ಲ. ೨೧. ಪಾಪಸಮೂಹವನ್ನು ಕತ್ತರಿಸ ಬೇಕಾದರೆ, [ಸಂಸಾರವೆಂಬ ಕಾಡನ್ನು ಸುಡಬೇಕಾದರೆ. ಶಿವನ ಪಾದಕಮಲವನ್ನು ಹಿಡಿಯ ಬೇಕಾದರೆ, ಮೋಕ್ಷ ಸಂಪತ್ತನ್ನು ಪಡೆಯಬೇಕಾದರೆ ಗುರುಭಕ್ತಿಯೇ ಮೂಲಕಾರಣ ವಲ್ಲವೇ ? ೨೨. ಗುರುಭಕ್ತಿಯೆಂಬುದು ಎಲ್ಲ ರೋಗಗಳನ್ನು ಪರಿಹರಿಸುವುದು;ಇಹ ಪರ ಲೋಕಗಳೆರಡರಲ್ಲೂಆಗಬೇಕಾದ ಸೌಖ್ಯವನ್ನು ಕೊಡುವುದು ; ಅನಿಷ್ಟವನ್ನು (ಇಷ್ಟವಲ್ಲ ದುದನ್ನು) ಆಚೆಗೆ ನೂಕುವುದು ; ಈಶ್ವರ ಪಾದಸೇವಾಭಕ್ತಿಯನ್ನು ವರ್ಧಿಸುವುದು. ೨೩. ಈ ಗುರು ಭಕ್ತಿಯೆಂಬುದು ಜನನಮರಣಾತ್ಮಕ ಸಂಸಾರವೆಂಬ ರೋಗಕ್ಕೆ ಔಷಧಿಯು ;

ಪ್ರವಿಮಳ ಪರಮಜ್ಞಾನಾ
ರ್ಣವಕಿದು ಭಾವಿಪೊಡೆ ಪೂರ್ಣಹಿಮಕರಕಿರಣಂ ೨೩

ಗುರುಚರಣಭಕ್ತಿಯಿಲ್ಲದ
ಹರಪೂಜೆ ನಿರರ್ಥಮೆಂಬುದಾಗಮವಚನಂ
ಹರಭಕ್ತಿಗೆ ಚರಭಕ್ತಿಗೆ
ಗುರುಭಕ್ತಿಯೆ ಮೂಲಕಾರಣಂ ಧಾರುಣಿಯೊಳ್ ೨೪

ಗುರುವಿಂಗೊಡಲಂ ಲಿಂಗಕೆ
ಹರಣಮನಾ ಜಂಗಮಕ್ಕೆ ನಿರ್ವಂಚನೆ ಸಂ
ದಿರೆ ಧನಮನಿತ್ತು ಸೇವಿಪ
ವರಭಕ್ತಂ ತತ್ಪ್ರಸಾದಸಿದ್ಧಿಯನಾಳ್ಗುಂ ೨೫

ಹರಮೂರ್ತಿತ್ರಯಮೆನಿಸುವ
ಗುರುಚರಲಿಂಗತ್ರಯಕ್ಕೆ ತನುವಂ ಮನಮಂ
ಹರಣಮನೀಯದೆ ವಂಚಿಸೆ
ಸರಿವುದು ಶಿವಲಿಂಗಧಾರಣವ್ರತಭಾಗ್ಯಂ ೨೬

ಕಪಟಿಗೆ ಕುಟಿಲಂಗಾಶಾ
ಚಪಲಂಗೆ ಖಲಂಗೆ ಮೋಹಶೀಲಂಗೆ ವೃಥಾ
ಕುಪಿತಂಗೆ ಡಂಭಕಂಗತಿ
ಕೃಪಣಂಗೀ ತ್ರಿವಿಧಭಕ್ತಿ ಕೈಸಾರ್ದಪುದೇ ೨೭

ಇದು ವಿಕಾರರಹಿತವಾದ (ನ್ಯೂನತೆಯಿಲ್ಲದ) ಈಶ್ವರನ ಸ್ಥಾನದ ಒಳ್ಳೆಯ ಉಪ್ಪರಿಗೆಯ ಮನೆಯ ಪಾವಟಿಗೆಯು ; ಇದು ವಿಚಾರ ಮಾಡಿನೋಡಿದರೆ ಅತಿನಿರ್ಮಲವಾದ ಜ್ಞಾನವೆಂಬ ಸಮುದ್ರಕ್ಕೆ ಪರಿಪೂರ್ಣ ಚಂದ್ರನ ಕಾಂತಿಯು. ೨೪. ಗುರುಪಾದ ಭಕ್ತಿಯಿಲ್ಲದ ಲಿಂಗಪೂಜೆಯು ನಿರರ್ಥಕವಾದದ್ದು ; ಹೀಗೆಂದು ಆಗಮ ವಚನವುಂಟು. ಲಿಂಗಭಕ್ತಿಗೆ, ಜಂಗಮ ಭಕ್ತಿಗೆ ಗುರುಭಕ್ತಿಯೇ ಈ ಲೋಕದಲ್ಲಿ ಮೂಲಕಾರಣ (ವೆನಿಸಿದೆ.) ೨೫. ಗುರುವಿಗೆ ತನುವನ್ನೂ, ಲಿಂಗಕ್ಕೆ ಪ್ರಾಣವನ್ನೂ, ಆ ಜಂಗಮಕ್ಕೆ ನಿರ್ವಂಚಕವಾದ ಭಾವ (ಕಾಪಟ್ಯ ರಹಿತವಾದ ಭಾವ) ವು ಕೂಡಿಕೊಂಡಿರುವಂತೆ ಐಶ್ವರ್ಯವನ್ನು ಸಮರ್ಪಿಸಿ ಸೇವಿಸುವ (ಭಕ್ತಿಜೀವನವನ್ನಾಚರಿಸುವ) ಶ್ರೇಷ್ಠ ಭಕ್ತನು ಅ ಗುರುಲಿಂಗ ಜಂಗಮದ, ಪರಮಾನುಗ್ರಹ ಪ್ರಾಪ್ತಿಯನ್ನು ಹೊಂದುವನು. ೨೬. ಶಿವನ ಮೂರ್ತಿ ತ್ರಯವೆನಿಸುವ (ಶಿವನ ಮೂರುಮೂರ್ತಿಗಳಾಗಿರುವ) ಗುರು-ಲಿಂಗ-ಜಂಗಮತ್ರಯಕ್ಕೆ (ಕ್ರಮವಾಗಿ) ತನು-ಮನ-ಪ್ರಾಣವನ್ನು ಅರ್ಪಿಸದೆ ವಂಚನೆ ಮಾಡಿದರೆ, ಶಿವಲಿಂಗವನ್ನು ಧರಿಸುವಿಕೆಯೆಂಬ ನಿಯಮದಿಂದುಂಟಾಗುವ ಐಶ್ವರ್ಯವು ಜಾರಿ ಹೋಗುವುದು. ೨೭. ಕಪಟಿಗೆ, ಕುಟಿಲನಿಗೆ, ಆಶೆಯಿಂದ ಚಂಚಲಗೊಂಡ ಮನಸ್ಸಿನವನಿಗೆ, ನೀಚನಿಗೆ, ಮೋಹದ ಸ್ವಭಾವವುಳ್ಳವನಿಗೆ, ನಿಷ್ಕಾರಣವಾಗಿ ಕೋಪಗೊಳ್ಳುವವನಿಗೆ, ಡಂಭಾಚಾರವುಳ್ಳವನಿಗೆ, ಅತಿಯಾದ ಜೀನ

[1]ವ॥ ಮಾತ್ರಂ[1]—

ದುರುಳಂಗಾಚಾರಶೂನ್ಯಂಗಧಿಕಮದನಿಯುಕ್ತಂಗೆ ಧೂರ್ತಂಗೆ ದುರ್ಬೋ
ಧರುಚಿಸ್ವಾಂತಂಗೆ ಹಿಂಸಾಕರಣಮತಿಗೆ ವಿಶ್ವಾಸಹೀನಂಗೆ ದುಷ್ಕ
ರ್ಮರತಂಗಜ್ಞಂಗೆ ಸಂದೇಹಿಗೆ ಪರಮತಶೀಲಂಗೆ ಪಾಷಂಡಿಗೆಂದುಂ
ಚರಲಿಂಗಾಚಾರ್ಯಭಕ್ತಿತ್ರಯಮಳವಡದೆಂದೆಂಬರೀಶಾಗಮಜ್ಞರ್ ೨೮

ವಿಮಳಸ್ವಾಂತಂಗೆ ವಿದ್ಯಾವಿನಯನಯಸದಾಚಾರಯುಕ್ತಂಗೆ ಭಕ್ತೋ
ತ್ತಮಸಂಸರ್ಗಾಭಿಯುಕ್ತಂಗಭವಪದದಿದೃಕ್ಷಾಪರಂಗನ್ಯ ಮಾರ್ಗ
ಭ್ರಮದೂರಂಗಪ್ರಮತ್ತಂಗಚಳಮತಿಗಹಂಕಾರಮುಕ್ತಂಗೆ ಶೈವಾ
ಗಮಸಿದ್ಧಂ ಭಕ್ತಿಲಿಂಗತ್ರಯದೊಳೊಗೆವುದೀಶಪ್ರಸಾದಾಭಿಜಾತಂ ೨೯

ಕನಸಿನ ಸಿರಿಯವೊಲಳಿವೀ
ತನುಧನಮಂ ಮನಮನಿತ್ತು ಗುರುಚರಲಿಂಗ
ಕ್ಕನುನಯದಿನೆಂದುಮಳಿಯದ
ಘನಶಿವಪದಸಿದ್ಧಿವಡೆಯಲೊಲ್ವನೆ ಜಾಣಂ ೩೦

ನಿಗೆ–ಈ ಗುರುಲಿಂಗ ಜಂಗಮ ಭಕ್ತಿಯು ಪ್ರಾಪ್ತವಾದೀತೇ ? ವ॥ ಮತ್ತು ೨೮. ಶಿವಾಗಮ ಶಾಸ್ತ್ರವನ್ನು ಬಲ್ಲವರು–ದುಷ್ಟನಾದವನಿಗೆ, ಆಚಾರದಿಂದ ದೂರನಾದವನಿಗೆ, ಹೆಚ್ಚಾದ ಗರ್ವದಿಂದ ಕೂಡಿದವನಿಗೆ, ನೀಚನಿಗೆ, ದುಷ್ಟಜ್ಞಾನದಲ್ಲಿ ಪ್ರೀತಿಯುಳ್ಳ ಮನಸ್ಸಿನವನಿಗೆ, ಹಿಂಸೆಗೊಳಿಸುವ ಬುದ್ಧಿಯುಳ್ಳವನಿಗೆ, ವಿಶ್ವಾಸವಿಲ್ಲದವನಿಗೆ, ಕೆಟ್ಟ ಕೆಲಸದಲ್ಲಿ ಆಸಕ್ತಿಯುಳ್ಳವನಿಗೆ, ಮೂಢನಿಗೆ, ಸಂಶಯಾತ್ಮನಿಗೆ, ಶಿವಮತವನ್ನು ಹೊರತುಪಡಿಸಿದ ಮತದ ನಡತೆಯುಳ್ಳವನಿಗೆ, ವೇದಬಾಹಿರನಿಗೆ ಯಾವಾಗಲೂ ಜಂಗಮ, ಲಿಂಗ, ಮತ್ತು ಗುರು–ಇವರುಗಳಲ್ಲಿನ ಭಕ್ತಿತ್ರಯವು ಅಳವಡುವುದಿಲ್ಲ ಎನ್ನುತ್ತಾರೆ. ೨೯. ನಿರ್ಮಲವಾದ ಮನಸ್ಸುಳ್ಳವನಿಗೆ, ವಿದ್ಯೆ, ವಿನಯ, ನಯ, ಸದಾಚಾರ—ಇವುಗಳಿಂದ ಕೂಡಿದವನಿಗೆ, ಈಶ್ವರ ಪಾದವನ್ನು ಕಾಣಬೇಕೆಂಬುದರಲ್ಲಿ ಆಸಕ್ತಿಯುಳ್ಳವನಿಗೆ, ಅನ್ಯಧರ್ಮ ಮಾರ್ಗದ ಭ್ರಮೆಯನ್ನು ದೂರ ಮಾಡಿದವನಿಗೆ, ಧನವನಿತಾದಿ ಮದಗಳಿಂದ ದೂರನಾದವನಿಗೆ, ಸ್ಥಿರ ಚಿತ್ತವುಳ್ಳವನಿಗೆ, ಅಹಂಕಾರದಿಂದ ಮುಕ್ತನಾದವನಿಗೆ, ಶೈವಾಗಮಗಳ ಸಿದ್ಧಿಯನ್ನು ಮಾಡಿಕೊಂಡವನಿಗೆ, ಶಿವಾನುಗ್ರಹ ದಿಂದ ಉತ್ಪನ್ನವಾದ ಗುರುಲಿಂಗ ಜಂಗಮರಲ್ಲಿ ಭಕ್ತಿಯು ಹುಟ್ಟುವುದು. ೩೦. ಕನಸಿನ ಐಶ್ವರ್ಯದಂತೆ ನಾಶವಾಗುವ ಈತನು ಧನ–ಮನಗಳನ್ನು ಗುರು ಮತ್ತು ಜಂಗಮ ಲಿಂಗಕ್ಕೆ ಪ್ರೀತಿಯಿಂದ ಕೊಟ್ಟು ಎಂದೂ ನಾಶವಾಗದ ಶ್ರೇಷ್ಠವಾದ ಶಿವನ ಸ್ಥಾನದ

---

1 × (ಮು)

ಶತಕೋಟಿವರ್ಷಕೃತಘೋ
ರತರ ತಪೋವೃಂದವೊಂದೆ ದಿನವೆ[2]ಸಪ ಸಮು
ನ್ನತ ಗುರುಚರಹರಭಕ್ತಿಯು
ಚತುರ್ಥಭಾಗಕ್ಕಮಾದೊಡಂ ಪಾಸಟಿಯೇ ೩೧

ವ॥ ಎಂಬ ಶಿವಾಗಮವಾಕ್ಯಮನವಧರಿಸಿ—

ಆದಱಿಂ ಗುರುಭಕ್ತಂ ಗುರು
ಪದಭಕ್ತಿಯಂ ನಾಳ್ದು ಮುಖ್ಯಮೆನೆ ಲಿಂಗಕಳಾ
ಸ್ಪದಜಂಗಮಪದಭಕ್ತಿಯು
ನೊದವಿಸುತುಂ ತನುಮನೋಧನಾರ್ಪಣದಿಂದಂ ೩೨

[1]ವ॥ ಮತ್ತಂ[1]—

ಗುರುಸೇವಾರತಿಯೇ ತಪಂ ಗುರುಪದಾಬ್ಜಧ್ಯಾನಮೇ ಧ್ಯಾನಮಾ
ಗುರುನಾಮಸ್ಮೃತಿಯೇ ಜಪಂ ಗುರುಪದಾಧೀನತ್ವಮೇ ಸದ್ವ್ರತಂ
ಗುರುತತ್ತ್ವಪ್ರಮೆಯೇ ನಿಜಪ್ರಮೆ ಗುರೂಕ್ತಾಚಾರಮೇ ಶೀಲಮಾ
ಗುರುನಿಷ್ಠಾವಿಧಿಯೇ ವಿಧಾನಮೆನೆ ಕಣ್ಗೊಪ್ಪಿರ್ದನತ್ಯೂರ್ಜಿತಂ ೩೩

ಸಿದ್ಧಿಯನ್ನು ಪಡೆಯುವುದನ್ನು ಪ್ರೀತಿಸುವವನೇ ಜಾಣನು. ೩೧. ನೂರು ಕೋಟಿ ವರ್ಷ ಪರ್ಯಂತ ಮಾಡಿದ ಅತಿ ಭಯಂಕರವಾದ ತಪಸ್ಸಿನ ಸಮುದಾಯವು ಒಂದು ದಿವಸ ಮಾಡುವ ಬಹು ಉನ್ನತವಾದ ಗುರು-ಲಿಂಗ-ಜಂಗಮ ಭಕ್ತಿಯ ಕಾಲುಭಾಗಕ್ಕಾದರೂ ಸರಿಯಾದೀತೇ ? ವ॥ ಹೀಗೆಂಬ ಶಿವಾಗಮ ವಾಕ್ಯವನ್ನು ಕೇಳಿ—೩೨. ಆದರಿಂದ ಆ ಗುರುಭಕ್ತನು ಗುರುವಿನ ಪಾದಭಕ್ತಿಯೇ ಮುಖ್ಯವೆಂದು ಅದನ್ನು ಹೊಂದಿ, ಲಿಂಗಕಲೆಗೆ ಆಸ್ಪದವಾದ ಜಂಗಮಪದ ಭಕ್ತಿಯನ್ನು ತನು-ಮನ-ಧನಗಳ ಸಮರ್ಪಣ ಭಾವದಿಂದ ಆಚರಿಸುತ್ತ (ಇದ್ದನು). ೩೩. (ಭಕ್ತಿಜೀವನದಲ್ಲಿ) ಅತಿ ಊರ್ಜಿತ ಸ್ಥಿತಿಯಲ್ಲಿದ್ದ ಆ ಗುರುಭಕ್ತಾರ್ಯನು–ಗುರುಸೇವೆಯಲ್ಲಿನ ಬಯಕೆಯೇ ತಪಸ್ಸು, ಗುರವಿನ ಪಾದಕಮಲ ಧ್ಯಾನವೇ ಧ್ಯಾನ ; ಗುರುವಿನ ನಾಮ ಸ್ಮರಣೆಯೇ ಜಪ, ಗುರುಪಾದಕ್ಕೆ ವಶನಾಗಿರುವುದೇ ಒಳ್ಳೆಯ ವೀರಶೈವ ವ್ರತ, ಗುರುವಿನ ತತ್ತ್ವದಲ್ಲಿ ಯಥಾರ್ಥ ಜ್ಞಾನವೇ ತನ್ನ ಸ್ಥಿರಬುದ್ಧಿ, ಗುರುವಿನಿಂದ ಉಕ್ತವಾದ ಆಚಾರವೇ ಶೀಲ, ಆ ಗುರುವಿನಲ್ಲಿ ನಿಷ್ಠೆಯಿಂದ ವರ್ತಿಸುವ ವ್ಯವಹಾರವೇ ಕ್ರಿಯೆ-ಎನ್ನುವಂತೆ

---

[2]ಮೊ(ಅ) 1 × (ಮು)

ವ॥ ಇಂತು ಜಗಜ್ಜನನುತಚರಿತ್ರಂ ಗುರುಭಕ್ತಿಪ್ರಭಾವದಿನೊಪ್ಪುತ್ತುಮಿರ್ದೊಂದು ದಿನಂ ಗುರುಸಮರ್ಚನೆಗರಲ್ದರಲೆಂದು ಕುಸುಮಕರಂಡಕಮಂ ಕೊಂಡು ಬೆಳಗುಜಾವದೊಳೆಳ್ದು ಜವದಿಂ ನಡೆತರ್ಪಾಗಳಾ ಗುರುಚರಣರಕ್ಷೆಗಳಂ ನಿಜಾಂಘ್ರಿಗಳ್ಸೋಂಕೆ ಕಂಡಳ್ಕಿ ಬಳ್ಕಿ ಮನಂಗುಂದಿ ನೊಂದು—

ಅಕಟಕಟ ಗುರುವರನ ಪಾ
ದುಕೆಯುಂಟಿದುದೆನ್ನ ಬೆಂದ ಕಾಲ್ಪನತರ ಪಾ
ತಕವಾದುದೆನಗೆ ಪಿಂಗೆ ದೇ
ಶಿಕಚರಣದ್ರೋಹಿಯೆನ್ನವೋಲ್ಪೆಱನಾವಂ ೩೪

ವ॥ 'ಪಾದುಕಾಸನಶಯ್ಯಾದಿ ಗುರುಣಾ ಯದಧಿಷ್ಠಿತಂ ನ ಸ್ಪೃಶೇದಂಘ್ರಿಣಾ'ಯೆಂಬ ವಚನಮುಂಟಪ್ಪುದಱಿಂದಿಂತೆನಗಾದ ದುಷ್ಕೃತಕ್ಕೆ ನಿಷ್ಕೃತಿಯಾವುದೆಂದು ತನ್ನೊಳಾಳೋಚಿಸಿ—

ಕಡಿಕಡಿದೀ ಪದದ್ವಯಮನುದ್ಗತರಕ್ತರಸಾಜ್ಯದಿಂದೆ ಸಂ
ಗಡಿಸಿದ ಮಾಂಸಮೆಂಬ ಪೊಸಪಿಂಡದೆ ಖಂಡಿಸಿದಸ್ಥಿಯೆಂಬ ಪೆಂ
ಪಡರ್ದ ಸಮಿತ್ಸಮೂಹದೆ ಗುರೂತ್ತಮನಾಮಮೆನಿಪ್ಪ ಮಂತ್ರದಿಂ
ದೊಡನೆ ಹರಪ್ರಕೋಪಶಿಖಿಗಾಹುತಿಗೊಟ್ಟಪೆನೆಂದು ಕೂರ್ಪಿನಿಂ ೩೫

ಕರವಾಳಂ ಜಡಿವುತೆ ತ
ನ್ನೆರಡುಂ ಕಾಲ್ಗಳನಡುರ್ತು ತುಂಡಿಸಿ ರುಧಿರೋ
ತ್ಕರಮೆಚ್ಚು ಪಾಯ್ವುತಿರೆ ಗುರು
ವರಶರಣೆಂದಾರ್ದು ಕೆಲದೊಳಿರಿಸಿದನಾಗಳ್ ೩೬

ವಿದಿತ ಗುರುಭಕ್ತಿದೇವತೆ
ಗಿದು ಬಲಿಗೆದರ್ದರುಣನಳಿನಮೆಂಬಂತಿರೆ ತ

ಕಂಗೊಳಿಸುತ್ತಿದ್ದನು. ವ॥ ಈ ರೀತಿ ಲೋಕದಲ್ಲಿರುವ ಜನಗಳಿಂದ ಹೊಗಳಿಸಿಕೊಳ್ಳುವ ಚರಿತ್ರೆಯುಳ್ಳ (ಆ ಗುರುಭಕ್ತನು) ಗುರುವಿನಲ್ಲಿಟ್ಟಿರುವ ಭಕ್ತಿಯ ಪ್ರಭಾವದಿಂದ ಒಪ್ಪುತ್ತಿರಲಾಗಿ ಒಂದು ದಿವಸ, ಗುರುಪಾದ ಪೂಜೆಗೆ ಹೂವುಗಳನ್ನು ತರಬೇಕೆಂದು, ಹೂ ಬುಟ್ಟಿಯನ್ನು ತೆಗೆದುಕೊಂಡು, ನಸುಕಿನಲ್ಲಿ ಎದ್ದು ಶೀಘ್ರವಾಗಿ ನಡೆದು ಬರುತ್ತಿರುವಾಗ ಆ ಗುರುವಿನ ಪಾದರಕ್ಷೆಗಳು (ಮೆಟ್ಟುಗಳು ಅಥವಾ ಆವುಗೆಗಳು) ತನ್ನ ಕಾಲುಗಳಿಗೆ ಸೋಂಕಲಾಗಿ ಕಂಡು ಭಯಪಟ್ಟು, ಬಳುಕಿ, ಉತ್ಸಾಹಹೀನನಾಗಿ ನೊಂದುಕೊಂಡು—೩೪. ಅಕಟಕಟ ! ನನ್ನ ಈ ಸುಟ್ಟಕಾಲು (ಹಾಳಾದ ಕಾಲು) ಗುರುಶ್ರೇಷ್ಠನ ಪಾದುಕೆಗಳನ್ನು ಸೋಂಕಿತೇ ! ನನಗೆ ಬಹು ಹೆಚ್ಚಾದ ಪಾಪವುಂಟಾಯಿತು. ನನ್ನ ಹಾಗೆ ಗುರುವರ್ಯನ ಪಾದದ್ರೋಹಿಯು ಮತ್ತೊಬ್ಬನಾವನಿದ್ದಾನೆ ? ವ॥ 'ಆಚಾರ್ಯನಿಂದ ಆರೋಹಿಸಲ್ಪಟ್ಟ ಯಾವ ಪಾದುಕೆ, ಪೀಠ, ಹಾಸಿಗೆ ಇವೇ ಮೊದಲಾದ ವಸ್ತುಗಳನ್ನು ಕಾಲಿನಿಂದ ಸೋಂಕಬಾರದು.' ಎಂಬ (ಶಾಸ್ತ್ರದ) ಮಾತು ಇರುವುದಾದ ಕಾರಣ (ಈ ದಿನ) ಈ ರೀತಿಯಲ್ಲಿ ನನಗಾದ ಪಾಪಕ್ಕೆ ಪ್ರಾಯಶ್ಚಿತ್ತವು ಯಾವುದು ? ಎಂದು ತನ್ನಲ್ಲಿಯೇ ಆಲೋಚಿಸಿ—೩೫-೩೭. ಈ ನನ್ನ ಎರಡೂ ಕಾಲುಗಳನ್ನು ಕಡಿಕಡಿದು

2 ಡ(ಮು, ಜ)

ತ್ಪದಯುಗಳಮಮಳಗುರುಚರ
ಣದ ಜಾನುಬಿಡಿದು ಭಕ್ತನೊಪ್ಪುತ್ತಿರ್ದಂ ೩೭

ವ|| ಆ ಸಮಯದೊಳಮರಗುಂಡ ಮಲ್ಲಿನಾಥಪಂಡಿತರೆಂಬ ತದ್ಗುರುಗಳ್ ಶಿಷ್ಯನಿಂತೆ[1]ಸಗಿದದ್ಭುತವಾರ್ತೆಯುಮನಾಕರ್ಣಿಸಿ ಕರುಣಾತಿರೇಕದಿಂ ಶರಣಗಣಸಮೇತಮಾ ತಾಣಕ್ಕೆ ಗಳಿಲನೆ ಬಿಜಯಂಗೆಯ್ವಿನಂ ಗುರುಭಕ್ತಯ್ಯಂ ಕಟ್ಟಿದಿರೊಳ್ಕಂಡು ನಯವಿನಯ ಸಂಭ್ರಮಂಬೆರಸು ಭಯಭಕ್ತಿಪಾರವಶ್ಯದಿನಿರ್ದಿನಿಸಾನುಂ ಬೇಗದಿನೆಳ್ಚತ್ತು ಸಾಷ್ಟಾಂಗಮೆಱಗಲೇಳಲುಜ್ಜುಗಿಸುತಳವಿಲ್ಲದೆ ತಲ್ಲಣಿಪಾಗಳ್—

ಅರಿದೆಂದು ಶರಣಗಣಮ
ಚ್ಚರಿವಡೆ ತರುಣಾರುಣಾಂಶುವಿಕಸಿತವಿಲಸ
ತ್ತರುಣಾರುಣನಳಿನಯುಗ
ಸ್ಫುರಿತಂ ಪದಯುಗಳ ಮೊಗೆದದೇಂ ರಂಜಿಸಿತೋ ೩೮

ಹೊರಹೊರಟ ರಕ್ತವೆಂಬ ತುಪ್ಪದಿಂದ ಕೂಡಿದ ಮಾಂಸವೆಂಬ ಹೊಸ ಪಿಂಡದಿಂದ ಚೂರಾದ ಮೂಳೆಯೆಂಬ ಶ್ರೇಷ್ಠ ಸಮಿತ್ತುಗಳ ಸಮೂಹದಿಂದ, ಗುರುಶ್ರೇಷ್ಠನ ನಾಮವೆಂಬ ಮಂತ್ರದಿಂದ ಈ ಕೂಡಲೇ ಈಶ್ವರನ ಕೋಪವೆಂಬ ಬೆಂಕಿಗೆ ಆಹುತಿಯನ್ನು ಕೊಡುತ್ತೇನೆಂದು ಉತ್ಕಟಭಾವದಿಂದ ಖಡ್ಗವನ್ನು ಝಳಪಿಸುತ್ತ ತನ್ನ ಎರಡೂ ಕಾಲುಗಳನ್ನು ಸೇರಿಸಿ ಕತ್ತರಿಸಿ ರಕ್ತಧಾರೆಯು ಹೊರಹೊರಟು ಹರಿಯುತ್ತಿರಲು ಗುರುವರನೇ, ಶರಣು ಎಂದು ಗಟ್ಟಿಯಾಗಿ ಚೀರಿ, ಪಕ್ಕದಲ್ಲಿ ಇರಿಸಿದನು. ಆಗ ಆ ಗುರುಭಕ್ತಾರ್ಯನ ಎರಡೂ ಕಾಲುಗಳು ಇದು ಪ್ರಸಿದ್ಧವಾದ ಗುರುಭಕ್ತಿಯೆಂಬ ದೇವತೆಗೆ ಪೂಜಾರ್ಥವಾಗಿ ಎರಚಿದ ಕೆಂಪುಕಮಲವೋ ಎಂಬಂತಿರಲು ಆ ಭಕ್ತನು ಶ್ರೇಷ್ಠನಾದ ಗುರುವಿನ ಚರಣದ ಧ್ಯಾನವನ್ನು ಹೊಂದಿ ಶೋಭಿಸುತ್ತಿದ್ದನು. ವ|| ಆ ಸಮಯದಲ್ಲಿ ಅಮರಗೊಂಡದ ಮಲ್ಲಿನಾಥ ಪಂಡಿತರೆಂಬ ಆತನ ಗುರುಗಳು ಶಿಷ್ಯನು ಹೀಗೆ ಮಾಡಿದ ಅದ್ಭುತ ವಾರ್ತೆಯನ್ನು ಕೇಳಿ, ಅಧಿಕವಾದ ದಯೆಯಿಂದ ಶರಣ ಸಮೂಹ ಸಹಿತವಾಗಿ ಆ ಗುರು ಭಕ್ತಾರ್ಯನಿದ್ದ ಸ್ಥಳಕ್ಕೆ ವೇಗವಾಗಿ ದಯಮಾಡಿಸಲಾಗಿ, ಗುರುಭಕ್ತಯ್ಯನು ನೇರ ಎದುರಿನಲ್ಲಿ ಗುರುವನ್ನು ಕಂಡು, ನಯ-ವಿನಯ-ಸಂಭ್ರಮಗಳಿಂದ ಕೂಡಿ, ಭಯದಿಂದಲೂ ಭಕ್ತಿಯಿಂದಲೂ ಉಂಟಾದ ಪರವಶ ಭಾವದಿಂದ ಇದ್ದು, ಸ್ವಲ್ಪ ಹೊತ್ತಿನಲ್ಲಿಯೇ ಎಚ್ಚತ್ತು ಸಾಷ್ಟಾಂಗ ಪೂರ್ವಕವಾಗಿ ನಮಸ್ಕಾರ ಮಾಡುವುದಕ್ಕಾಗಿ ಏಳಲು ಪ್ರಯತ್ನಿಸುತ್ತ ಶಕ್ತಿಯಿಲ್ಲದೆ ತಲ್ಲಣಿಸುತ್ತಿರುವಾಗ—೩೮. ಶಿವಶರಣ ಸಮೂಹವು (ಇದು) ಅಸಾಧ್ಯವಾದ ಕಾರ್ಯವೆಂದು ಆಶ್ಚರ್ಯಪಡುತ್ತಿರಲು ಬಾಲ-ಸೂರ್ಯನ ಕಿರಣದಿಂದ ಅರಳಿದ ಪ್ರಕಾಶಮಾನವಾದ ತರುಣಾರುಣ ಕಮಲ ಪುಷ್ಪ ಯುಗಳದ ಹಾಗೆ ಪ್ರಕಾಶಿಸುವ ಆ ಪಾದದ್ವಯವು ಹುಟ್ಟಿ, ಅದೇನು ಶೋಭಿಸಿತೋ !

1 ನೆ (ಜ, ಮು, ಗ)

ಜಡಭವಪರಿಭವಕರನಿ
ರ್ಜಡಭವನಿಜಮೂರ್ತಿಯೆನಿಪ ಗುರುವಿನ ಕೃಪೆಯಿಂ
ದೊಡನೊಗೆದಡಿದಾವರೆಯದು
ಜಡಭವಮಂ ನಗುವವೋಲ್ನಖದ್ಯುತಿ ಪೆಱಗುಂ ೩೯

ತಳಿರುಡಿಯೆ ಮೂಡುಗುಂ ಪೊಸ
ತಳಿರಿಳೆಯೊಳ್ಪೂಗಳುಡಿಯೆ ಮೂಡುಗುಮೆ ನಿರಾ
ಕುಳಮಲರಿವನಡಿದಾವರೆ
ಪೊಳೆತುದು ಮುನ್ನುಡಿಯೆ ತನ್ನನಿದು ಚಿತ್ರತರಂ ೪೦

ಅಗಜಾಧಿಪಂಗೆ ದಾನಂ
ಸೊಗಯಿಸುಗುಮೆ ಕುಣಿವ ಭೃಂಗಿಗೊಂದಡಿಯಿತ್ತಂ
ಮಿಗೆ ಗುರುಕುಂಜರನತಿದಾ
ನಗುಣಂ ಭಕ್ತಂಗೆ ಪಾದಯುಗಳಮನಿತ್ತಂ ೪೧

ವ॥ ಎಂದಲ್ಲಿ ಬಲ್ಲರೆಲ್ಲಂ ಸಲ್ಲೀಲೆಯಿಂ ನುತಿಸುತ್ತುಮಿರ್ಪಾಗಳ್—

೩೯. ಜಡವಾದ ಸಂಸಾರವನ್ನು ಪರಾಜಯಗೊಳಿಸುವ ಚೈತನ್ಯಮಯನಾದ ಶಿವನ ನಿಜಮೂರ್ತಿಯೆನಿಸಿದ ಗುರುವಿನ ಕೃಪೆಯಿಂದ ಹುಟ್ಟಿದ (ಗುರುಭಕ್ತಯ್ಯನ) ಅಡಿದಾವರೆಯು ಜಡಭವಮಂ= ಜಲಜವಾದ ಕಮಲವನ್ನು ಮತ್ತು ಜಡವಾದ ಸಂಸಾರವನ್ನು ಕಂಡು ನಗುವುದೋ ಎಂಬಂತೆ ಅದರ ಉಗುರುಕಾಂತಿಯು ಪ್ರಕಾಶಿಸಿತು (ಅಡಿದಾವರೆಯು ಸುಂದರವಾಗಿದ್ದುದರಿಂದ ಕಮಲವನ್ನು ಹಾಸ್ಯ ಮಾಡುವಂತೆ ಇದ್ದಿತು. ಉಗುರಿನ ಕಾಂತಿ ನಗುವಿನಂತೆ ಕಾಣಿಸಿತು. ಗುರು 'ಜಡಭವಪರಿಭವಕರ' ನಾದ್ದರಿಂದ ಅವನ ಕೃಪೆಯಿಂದ ಹುಟ್ಟಿದ ಪಾದ 'ಜಡಭವ'ವನ್ನು ಕಂಡು ನಗುವುದು ಸಹಜ ಎಂದು ಭಾವ) (ರಂ) ೪೦. ಲೋಕದಲ್ಲಿ ಚಿಗುರನ್ನು ಮುರಿಯಲು ಹೊಸ ಚಿಗುರು ಮೂಡುವುದು ; (ಅದರಂತೆ) ಹೂವುಗಳನ್ನು ಹರಿದರೆ (ಬೇರೆ) ಹೂವು ನಿಜವಾಗಿ ಹುಟ್ಟುತ್ತದೆಯೆ ? ಆದರೆ ಇವನ ಪಾದಕಮಲವು ಮತ್ತೆ ಪೊಳೆಯಿತು. ಇದು ಆಶ್ಚರ್ಯಕರವಾದುದು. (ಇಲ್ಲಿ ಹೂವನ್ನು ಹರಿದರೆ ಬೇರೆ ಹೂವು ಹುಟ್ಟಲು ಸಾಧ್ಯವಿಲ್ಲವಾದರೂ, ಈ ಗುರುಭಕ್ತಾರ್ಯನ ಪಾದವೆಂಬ ಹೂವನ್ನು ಹರಿಯಲು ಪುನಃ ಪಾದವೆಂಬ ಹೂವು ಹುಟ್ಟಿದುದೇ ಚಿತ್ರ) ೪೧. ಶಿವನು ಕುಣಿಯುತ್ತಿದ್ದ ಭೃಂಗೀಶ್ವರನಿಗೆ ಒಂದು ಕಾಲನ್ನು ಕೊಟ್ಟನು. ಶಿವನಿಗೆ ದಾನವು ಸೊಗಸುವುದೇ ? ಗುರು ಕುಂಜರನೆನಿಸಿದ ಅಮರಗೊಂಡದ ಮಲ್ಲಿನಾಥ ಗುರುವು ಭಕ್ತನಾದ ಗುರುಭಕ್ತಾರ್ಯನಿಗೆ ಶ್ರೇಷ್ಠವಾದ ಎರಡು ಕಾಲುಗಳನ್ನು ಕೊಟ್ಟನು. (ಇವನು) ಅತ್ಯಂತ ಹೆಚ್ಚಿನ ದಾನಗುಣವುಳ್ಳವನು. ವ॥ ಹೀಗೆಂದು ಎಲ್ಲ ಬುದ್ಧಿವಂತರೂ ವಿಶೇಷೋಲ್ಲಾಸದಿಂದ ಸ್ತೋತ್ರ

ಗುರುಚರಣರಕ್ಷೆಯಂ ನಿಜ
ಶಿರದೊಳ್ಮಿಗೆ ಪೊತ್ತು ಪೊಣ್ಮದಾನಂದದೆ ತ
ಚ್ಚರಣನಳಿನಕ್ಕೆ ಮಣಿದಾ
ದರದಿಂ ಪೊಗಳುತ್ತುಮಿರ್ದನಾ ಗುರುಭಕ್ತಂ ೪೨

ವ॥ ಆ ಸಮಯದೊಳ್ಶರಣಗಣಂ ಕಂಡು ಕಣ್ದುಂಬಿ ನೋಡಿ ಮುದಂಬಡೆದು—

ಎಲೆ ಗುರುಭಕ್ತ ನಿನ್ನ ಗುರುಭಕ್ತಿ ಸಮುಜ್ಜ್ವಲವೃತ್ತಿಜಾತನಿ
ಶ್ಚಲಿತಮಹತ್ವಕಿಂತಿದು ವಿಚಿತ್ರಮೆ ದೂರಮಿದಲ್ತು ಮೊನ್ನೆ ಭೂ
ಲಲಿತಜನೌಘಮೆಲ್ಲಱಿಯೆ ನೀಂ ನೆಗಳ್ದದ್ಭುತಕಾರ್ಯಮಂ ಧರಾ
ತಲದೊಳೆ ಕಂಡು ಬಲ್ಲೆವಣಮೆಂತೆನೆ ನಿನ್ನಯ ದೇಶಿಕೋತ್ತಮಂ ೪೩

ಗುರುಪರತಂತ್ರತಾಸ್ಥಿತಿಗೆ ನಿನ್ನಯ ಲಬ್ಧಗುರುಪ್ರಸಾದಭಾ
ಸುರತೆಗಸೂಯೆಗೊಳ್ವ ನಿಜಶಿಷ್ಯಕದಂಬಕೆ ನಿನ್ನನನ್ಯ ಸಾ
ಧ್ಯರುಚಿರಭಕ್ತಿಭಾವದಳವಂ ಮಿಗೆ ಕಾಣಿಸಲೊಲ್ದು ಮೂರ್ತಿಗೊಂ
ಡಿರುತೆ ಸುತಲ್ಪದೊಳ್ ಕೆಳಗೆ ತನ್ನ ಕೆಲಂಬಿಡಿದಿರ್ದ ಶಿಷ್ಯರಂ ೪೪

ಕರೆದಾಗಳ್ಮಂಚದೊಳ್ಕುಳ್ಳಿರಿಮೆನೆ ನಗುತುಂ ಬೆಕ್ಕಸಂಬಟ್ಟು ತಾವೊ
ರ್ವರನೊರ್ವರ್ನೋಡಿ ಮದ್ದೇಶಿಕನಿರೆ ಕೆಳಗಾವೆಂತು ಕುಳ್ಳಿರ್ಪೆವೀ ಭಾ
ಸುರಮಂಚಸ್ಥಾನದೊಳ್ದುರ್ಘಟಮತಿಶಯದೋಷಾವಹಂ ತಾನಿದೆಂದೆ
ಲ್ಲರುಮಾ ಮಾತಂ ಸಮುಲ್ಲಂಘಿಸೆ ನಸುನಗುತುಂ ದೇಶಿಕಂ ನೋಡುತಾಗಳ್ ೪೫

ವಿನಯಂಬೆತ್ತಾತ್ಮಪಾದಾಂಬುಜಮನೊಸಗೆಯಿಂ ಪೂಜಿಸುತ್ತಿರ್ದ ನಿನ್ನಂ
ಮನವೊಲ್ದಾರೋಹಿಸೈ ಮಂಚಮನೆನೆ ಮಣಿದಾರ್ಯಾಜ್ಞೆಯಂ ಪೊತ್ತು ನೀಂ ಭೋಂ
ಕನೆ ಪರ್ಯಂಕಾಗ್ರಮಂ ಸದ್ಗುರುಶರಣೆನುತುಂ ಪತ್ತಿದೈ ಮತ್ತಮಾ ದು
ರ್ಮನರೆಲ್ಲರ್ಕಂಡು ಬದ್ಧಭ್ರುಕುಟಿಘಟಿತರಕ್ತೇಕ್ಷಣರ್ಕಾಯ್ಪಿನಿಂದಂ ೪೬

ಕಡುಗೂರ್ತಂ ಸೊರ್ಕಿನಿಂದಳ್ಕದೆ ನಿಜಗುರು ಸಾನ್ನಿಧ್ಯದೊಳ್ತನ್ನಿರೂಪಂ
ಬಡೆದಂ ಮೇಣಾನೆನುತ್ತುಂ ಕೆಳಗೆ ಪಿರಿಯರಾವಿರ್ಪುದಂ ನೋಡದುರ್ಬು

ಮಾಡುತ್ತಿರುವಾಗ ೪೨. ಆ ಗುರುಭಕ್ತನು ಗುರುವಿನ ಪಾದರಕ್ಷೆಯನ್ನು ತನ್ನ ತಲೆಯ ಮೇಲೆ ಹೊತ್ತು, ವಿಶೇಷಾನಂದದಿಂದ ಆ ಗುರುವಿನ ಚರಣ ಕಮಲಗಳಿಗೆ ನಮಸ್ಕರಿಸಿ, ಆದರಭಾವದಿಂದ ಹೊಗಳುತ್ತಾಇದ್ದನು. ವ॥ ಆ ಸಮಯದಲ್ಲಿ ಶರಣ ಸಮೂಹವು ಕಂಡು ಕಣ್ತುಂಬಾ ನೋಡಿ, ಸಂತೋಷವನ್ನು ಹೊಂದಿ—೪೩–೪೭. 'ಎಲೈ ಗುರುಭಕ್ತನೇ, ನಿನ್ನ ಗುರುಭಕ್ತಿಯಿಂದ ಕೂಡಿದ ಪ್ರಕಾಶಮಾನವಾದ ಕ್ರಿಯೆಯಿಂದ ಹುಟ್ಟಿದ ನಿಶ್ಚಲ ಮಾಹಾತ್ಮ್ಯಗೆ, ಹೀಗಾಗುವುದೇನು ವಿಚಿತ್ರವೇ ? ಇದು ಬಹಳ ಹಿಂದಿನ ವಿಷಯವಲ್ಲ; ಮೊನ್ನೆ ತಾನೆ ಲೋಕದ ಶ್ರೇಷ್ಠ ಜನಸಮೂಹವೆಲ್ಲ ಅರಿಯುವ ಹಾಗೆ ನೀನು ಮಾಡಿದ ಅದ್ಭುತ ಕಾರ್ಯವನ್ನು ವಿಶೇಷವಾಗಿ ಲೋಕದಲ್ಲಿ ಕೇಳಿಬಲ್ಲೆವು. ಹೇಗೆಂದರೆ : ನಿನ್ನ ಗುರುಶ್ರೇಷ್ಠನು–ಗುರುಚರಣಕ್ಕೆ ಅಧೀನನಾಗಿ ನೀನು ನಡೆದು

ತ್ತೊಡನೀ ಮಂಚಾಗ್ರಮಂ ತಾನಡರ್ದನಿದು ವಲಂ ತಕ್ಕುದೇ ಚಿತ್ತಮಂ ನೋ
ಳ್ಪೊಡೆ ದೇವಂ ಪೇಳ್ದೊಡಾವೇನಡರ್ದೆವೆ ಗುರುಪರ್ಯಂಕಮಂ ಭೀತಿಯಿಂದಂ ೪೭

ಸರಸನವಗಂಧಕುಸುಮೋ
ತ್ಕರವಿರೆಯುಂ ಕನಕದರಲನೊಲ್ದಂತೆ ಮಹೇ
ಶ್ವರನೀ ಧೂರ್ತನನೊಲ್ದಂ
ಗುರುವಿರೆಯುಂ ಶಿಷ್ಯರಮಳಗುಣಮಣಿಭರಣರ್ ೪೮

ಗುರುಶಿಷ್ಯಮಾರ್ಗವರ್ತನ
ವಿರದೆ ಕುಮಾರ್ಗದೊಳೆ ನಡೆಯೆ ದೇವತ್ವಮಣಂ

ಕೊಳ್ಳುವ ರೀತಿಗೆ ಮತ್ತು ಗುರುಪ್ರಸಾದದಿಂದ ದೊರಕಿದ ಲೋಕ ಕೀರ್ತಿಗೆ ಹೊಟ್ಟೆ ಕಿಚ್ಚು ಪಡುವಂಥ ಶಿಷ್ಯಜನ ಸಮೂಹಕ್ಕೆ ಇತರರಿಂದ ಸಾಧಿಸಲಸಾಧ್ಯವಾದ ನಿನ್ನ ಈ ಮನೋಹರ ಭಕ್ತಿ ಭಾವವನ್ನು ಚೆನ್ನಾಗಿ ತೋರಿಸಬೇಕೆಂದು, ಸಂತೋಷದಿಂದ ಒಳ್ಳೆಯ ಹಾಸಿಗೆಯ ಮೇಲೆ ಕುಳಿತುಕೊಂಡು ತನ್ನ ಅಕ್ಕಪಕ್ಕದಲ್ಲಿದ್ದ ಶಿಷ್ಯರನ್ನು ಆಗ ಕರೆದು (ಈ) ಮಂಚದ ಮೇಲೆ ಕುಳಿತು ಕೊಳ್ಳಿರಿ' ಎನ್ನಲಾಗಿ, ಅವರೆಲ್ಲ ನಗುತ್ತ ಆಶ್ಚರ್ಯ ಹೊಂದಿದವರಾಗಿ, ಒಬ್ಬರಿಗೊಬ್ಬರು ಮುಖ ನೋಡುತ್ತ 'ನಮ್ಮ ಗುರು ಶ್ರೇಷ್ಠನು ಕೆಳಗೆ ಕುಳಿತಿರಲಾಗಿ (ಕೆಳಗಿರುವ ಹಾಸಿಗೆಯ ಮೇಲೆ ಕುಳಿತಿರಲಾಗಿ) ನಾವು ಈ ಶೋಭಿಸುವ ಮಂಚದ ಮೇಲೆ ಹೇಗೆ ಕುಳಿತುಕೊಳ್ಳಬೇಕು ? ಇದು ಅಸಾಧ್ಯ ವಾದದ್ದು ; ಅತ್ಯಂತ ದೋಷ ಪೂರ್ಣವಾದದ್ದು ; ಎಂದು ಎಲ್ಲರೂ ಆ ಮಾತನ್ನು ಚೆನ್ನಾಗಿ ಉಲ್ಲಂಘನೆ ಮಾಡಿದರು. ದೇಶಿಕನು ಆಗ ನೋಡಿ ನಸುನಗುತ್ತ, ನಮ್ರತೆ ಯಿಂದ ಕೂಡಿ, ತನ್ನ ಪಾದಕಮಲವನ್ನು ಉತ್ಸಾಹದಿಂದ ಪೂಜೆ ಮಾಡುತ್ತಿದ್ದ ನಿನ್ನನ್ನು (ಕರೆದು) ಪ್ರೀತಿಯಿಂದ '(ಈ) ಮಂಚವನ್ನು ಹತ್ತಿ ಕುಳಿತುಕೊಳ್ಳಯ್ಯ', ಎನ್ನಲಾಗಿ ನೀನು (ಗುರುವಿಗೆ) ನಮಸ್ಕರಿಸಿ ದೊಡ್ಡವರ ಆಜ್ಞೆಯನ್ನು ಹೊತ್ತು 'ಸದ್ಗುರುವೇ ಶರಣು' ಎನ್ನುತ್ತ ಒಮ್ಮೆಲೇ ಮಂಚದ ಮೇಲೆ ಹತ್ತಿದೆಯಲ್ಲವೆ ? ಆಗ ಆ ಕೆಟ್ಟ ಮನಸ್ಸಿನ ಎಲ್ಲ ಶಿಷ್ಯರು ಕೋಪದಿಂದ ಹುಬ್ಬುಗಂಟಿಕ್ಕಿದ ಮುಖವುಳ್ಳವರಾಗಿ ಕಣ್ಣು ಕೆಂಪಗೆ ಮಾಡಿ '(ಈ) ಅತಿ ನೀಚನಾದ ಗುರುಭಕ್ತಾಗ್ರ್ಯನು ನಾನು ಗುರುವಿನ ಆಜ್ಞೆ ಯನ್ನು ಹೊಂದಿದ್ದೇನೆಂದುಕೊಂಡು ಗರ್ವಗೊಂಡು (ಸ್ವಲ್ಪವೂ) ಹೆದರದೆ, ದೊಡ್ಡವ ರಾದ ನಾವು ಕೆಳಗಿದ್ದೇವೆಂಬುದನ್ನೂ ನೋಡದೆ, ಉತ್ಸಾಹದಿಂದ ತನ್ನ ಗುರುವಿನ ಎದುರಿಗೇ ಕೂಡಲೇ ಈ ಮಂಚವನ್ನು ಹತ್ತಿಬಿಟ್ಟನು. ಇದು ನಿಜವಾಗಿ ಯೋಗ್ಯ ಕಾರ್ಯವೇ ? ಗುರುದೇವನು (ಇವರ) ಮನಸ್ಸನ್ನು ನೋಡೋಣವೆಂದುಕೊಂಡು ಪರೀಕ್ಷೆ ಮಾಡಲು ಹೇಳಿದಾಗ ನಾವೆಲ್ಲ (ಗುರು) ಭಯದಿಂದ ಗುರುವೇರುವ ಮಂಚವನ್ನು ಹತ್ತಿದೆವೇನು ?' ೪೮–೪೯. 'ಮನೋಹರವಾದ ಹೊಸ ಕಂಪಿನಿಂದ ಕೂಡಿದ ಹೂವು ಗಳಿದ್ದರೂ ಪರಮೇಶ್ವರನು ಉಮ್ಮತ್ತಿಯ ಹೂವನ್ನು ಪ್ರೀತಿಸಿದ ಹಾಗೆ ನಿರ್ಮಲ

ದೊರೆಕೊಳ್ಗುಮೆ ಪೞಿಪಡುಗುಮೆ
ನರಭಾವಂ ವಿಬುಧತತಿಗೆ ವಿಶ್ವಂಭರೆಯೊಳ್ ೪೯

ಪಿರಿಯ ಶಿವಸೋದರರ್ಕಳ್
ಪಱಿದಡಜಿಲ್ಕಳ್ಕಿದಾರ್ಯಪರ್ಯಂಕಮನೀ
ದುರುಳನಿರದಡರ್ದನಿವನಿಂ
ಗುರುಚರಣದ್ರೋಹಿಯಾವನೋ ಪೆಱನಿಳೆಯೊಳ್ ೫೦

ಇವನ ತಲೆಗಡಿದುರುಳ್ಚುವೆ
ವವನಿಯೊಳೆಂದಣ್ಮಿ ಗಳಪುವರ ಕಳಕಳವಂ
ಪ್ರವಿಮಳಮತಿ ದೇಶಿಕಪುಂ
ಗವನೋ ಹೋಯೆಂದು ನಿಲಿಸಿ ನಸುನಗುತಾಗಳ್ ೫೧

ಇೞಿಯಲ್ವೇಳ್ದಲ್ಲಿ ನಿನ್ನಂ ಜವದಿನಿೞುಪಿ ಮಂಚಾಗ್ರದಿಂ ಮುಂದೆ ಶಂಭೂ
ಜ್ವಳರೂಪಂ ಶೂಲಮೊಂದಂ ನಡಿಸುತೆಲೆ ಗುರುದ್ರೋಹಿಯಂತಿರ್ಕೆ ನಿವ್ಯಾ
ಕುಳರಾಚಾರ್ಯಾಂಘ್ರಿಭಕ್ತಿ[1]ಪ್ರವಣ[1]ಮತಿಗಳೊಲ್ದೇಱಿರೇ ನೀಮಿದಂ ನಿ
ರ್ಮಳಚಿತ್ತರ್ನೋೞ್ಪೆನಾಂ ನಿಮ್ಮಯ ದೃಢತೆಯನೆಂದಾಡಿದಂ ದೇಶಿಕೇಂದ್ರಂ ೫೨

ಗುಣಗಳೇ ಆಭರಣವಾಗಿ ಉಳ್ಳ ಶಿಷ್ಯರಾದ ನಾವು ಇದ್ದರೂ ಗುರುಗಳು ಈ ಧೂರ್ತನಿಗೇ ಒಲಿದಿದ್ದಾರೆ. ಲೋಕದಲ್ಲಿ ವಿದ್ವಾಂಸರ ಸಮೂಹಕ್ಕೆ ಗುರುಶಿಷ್ಯರ ನಡೆವಳಿಕೆಯ ರೀತಿ ನೀತಿಗಳನ್ನು ತಪ್ಪಿ ದುಷ್ಟ ಮಾರ್ಗದಲ್ಲಿ ನಡೆದರೆ ದೇವತ್ವವು ಸ್ವಲ್ಪವಾದರೂ ಉಂಟಾದೀತೇ ? ಮನುಷ್ಯತ್ವವೆಂಬುದು ನಾಶವಾಗುವುದಿಲ್ಲವೆ ?' ೫೦. 'ದೊಡ್ಡವರಾದ (ನಮ್ಮಂಥ) ಶಿವಭಕ್ತಿಯಲ್ಲಿ ಸಹೋದರರೆನಿಸಿದವರು ಮಂಚವನ್ನು ಹತ್ತಲು ಹಿಂಜರಿದು ಭಯಗೊಂಡವರಾಗಿರುವಾಗ ಗುರುವು ಹತ್ತುವ ಮಂಚವನ್ನು ಈ ದುಷ್ಟನು ಹತ್ತಿ ಕುಳಿತನಲ್ಲವೇ ! ಭೂಮಿಯಲ್ಲಿ ಇವನಿಗಿಂತಲೂ (ಹೆಚ್ಚಾದ) ಇನ್ನೊಬ್ಬ ಗುರುದ್ರೋಹಿ ಯಾವನಿದ್ದಾನೆ ? ೫೧. 'ಇವನ ತಲೆಯನ್ನು ಕಡಿದು ಭೂಮಿಯಲ್ಲಿ ಉರುಳಿಸಿ ಬಿಡುತ್ತೇವೆ.' ಎಂದು ಪೌರುಷದಿಂದ ಕೂಡಿ ಕೂಗುವ ಕೋಲಾಹಲವನ್ನು ಅತಿ ನಿರ್ಮಲ ಮನಸ್ಸಿನ ಗುರುಶ್ರೇಷ್ಠನು ಕೇಳಿ ಓಹೋ ! ಎಂದು ನಿಲ್ಲಿಸಿ ನಸುನಗುತ್ತ– ೫೨. ಈಶ್ವರನಂತೆ ಪ್ರಕಾಶಿಸುವ ಸ್ವರೂಪವುಳ್ಳ ಗುರುದೇವನು ಮಂಚದ ಮೇಲಿನಿಂದ ನಿನ್ನನ್ನು ಇಳಿಯಲಿಕ್ಕೆ ಹೇಳಿ ಶೀಘ್ರವಾಗಿ ಇಳಿಸಿ, ಮುಂಭಾಗದಲ್ಲೊಂದು ಶೂಲದ ಕಂಬವನ್ನು ನಿಲ್ಲಿಸಿ, 'ಎಲೈ ಶಿಷ್ಯರೇ ಗುರುದ್ರೋಹಿಯೆಂಬುದು ಅದು ಹಾಗಿರಲಿ ವ್ಯಾಕುಲವಿಲ್ಲದ ಮನಸ್ಸಿನಿಂದ ಗುರುಪಾದದಲ್ಲಿ ಆಸಕ್ತಿಯುಳ್ಳ ಬುದ್ಧಿಯಿಂದ ನಿರ್ಮಲ ಚಿತ್ತರೆನಿಸಿರುವ ನೀವು ಈ (ಎದುರಿಗಿರುವ) ಶೂಲವನ್ನು ಪ್ರೀತಿಯಿಂದ ಹತ್ತಿರಿ. ನಾನು

---

1 ಪ್ರಣವ (ಗ, ಮ)

ಎನೆ ಕೇಳ್ದಾಚಾರ್ಯನಂಘ್ರಿದ್ವಯಕೆ ಮಣಿದಿದೇವೇಳ್ವಿರೋವೋವೊ ಮುನ್ನೊ
ರ್ವೆ ನಿತ್ತಾಂತಂ ಮುಂಚಮೇಜಲ್ಕೆಸಸಿದಿರಕಟಿಂದೊರ್ವೆ ಶೂಲಾಗ್ರಮಂ ಭೋಂ
ಕನೆ ಪತ್ತಲ್ವೇಳ್ದು ನೀವಾಗ್ರಹಿಸಿದಪಿರಿದಕ್ಕಾರ್ಪೆವೇ ಮಂಚಮೇಱ
ರ್ದನನೀ ಶೂಲಾಗ್ರಮಂ ಪತ್ತೆನುತೆ ಬೆಸಸೆ ತಾಂ ಪತ್ತುಗುಂ ಮಾಣದೀಗಳ್ ೫೩

ವಿದಿತ ಗುರುವಾಕ್ಯಮಂ ಮೀ
ಱದ[1] ಭಕ್ತಂ ಮುನ್ನಮಳ್ಕದಾ ಮಂಚಮನೇ
ಱಿದನಲ್ತೆ ಬಸಿದ ಶೂಲಮ
ನಿದನಿಂದೇಱಲ್ಕೆ ಬೆಸಸೆ ಪೆಱಸಾರ್ದಪನೇ ೫೪

ಖಾ[2]ಣಮನೆ ಕೊಂಡುದಕೆ ಕಡಿ
ಯಾಣಂ ತಾನುಚಿತಮೆಂಬ ಗಾದೆಯ ತೆಱದಿಂ
ಮಾಣದೆ ಮಂಚಮನೇಱಿದ
ಜಾಣಂಗಿದು ಯುಕ್ತಮಲ್ತೆ ಶೂಲಾರೋಹಂ ೫೫

ವ॥ ಎಂದವರ್ನುಡಿದು ಪೆಱಸಾರೆ ಗುರುವರಂ ಗುರುಭಕ್ತನೆನಿಪ ನಿನ್ನನಮಂದಕೃಪಾ ರಸಭರಿತಕಟಾಕ್ಷದಿನಭೀಕ್ಷಿಸಿ ವಾತ್ಸಲ್ಯದಿಂ ಸಾರೆಗರೆದು ನಿಜತಾಂಬೂಲಪ್ರಸಾದಮಂ ಕರುಣಿಸೆ

ನಿಮ್ಮ ಮನಸ್ಸಿನ ದೃಢತೆಯನ್ನು ನೋಡುತ್ತೇನೆ,' ಎಂದು ಹೇಳಿದನು. ೫೩. ಹೀಗೆಂದು ಗುರುವು ಹೇಳಲು ಗುರುವಿನ ಎರಡೂ ಪಾದಗಳಿಗೆ ನಮಸ್ಕರಿಸಿ, 'ಓ ಹೋ ಹೋ ! ಇದೇನು ಹೇಳುತ್ತಿದ್ದೀರಿ. ಈ ಪೂರ್ವದಲ್ಲಿ ಒಮ್ಮೆ ಮಂಚವನ್ನು ಹತ್ತಿರೆಂದು ಅಪ್ಪಣೆ ಮಾಡಿದಿರಿ. ಅಕ್ಕಟಾ ! ಈಗ ಮತ್ತೊಮ್ಮೆ ಈ ಕೂಡಲೇ ಶೂಲದ ತುದಿಗೇರಬೇಕೆಂದು ಆಗ್ರಹ ಮಾಡುತ್ತಿದ್ದೀರಿ. ಇದಕ್ಕೆ ನಾವು ಸಮರ್ಥರಾದೇವೆಯೇ. ಮಂಚವನ್ನು ಹತ್ತಿದವನಿಗೆ ಈಗ ಶೂಲವನ್ನು ಹತ್ತು ಎಂದು ಅಪ್ಪಣೆ ಮಾಡಿದರೆ ಆತನು ತಪ್ಪದೆ ಹತ್ತುವನು,' ೫೪. ಶ್ರೇಷ್ಠವಾದ ಗುರುವಾಕ್ಯವನ್ನು ಮೀರದಂಥ (ಆ) ಭಕ್ತನು ಮೊದಲು ಸ್ವಲ್ಪವೂ ಅಳುಕದೆ ಆ ಮಂಚವನ್ನು ಹತ್ತಿದನಲ್ಲವೇ ? ಈಗ ಮೊನೆಯಾದ ಈ ಶೂಲವನ್ನು ಏರುವುದಕ್ಕೆ ಅಪ್ಪಣೆ ಮಾಡಿದರೆ ಹಿಂದೆಗೆಯುವನೇ ? ೫೫. (ಕುದುರೆಗೆ) 'ಹುಲ್ಲನ್ನು ಕೊಂಡುಕೊಂಡದ್ದಕ್ಕೆ ಕಡಿವಾಣವೂ ತಾನು ಉಚಿತ' ಎಂಬ ಗಾದೆಗನುಗುಣವಾಗಿ ತಪ್ಪದೆ ಮಂಚವನ್ನೇರಿದ ಜಾಣನಿಗೆ ಈ ಶೂಲವನ್ನೇರುವಿಕೆಯು ಯೋಗ್ಯವಲ್ಲವೇ ?' ವ॥ ಹೀಗೆಂದು ಆ (ಇತರ) ಶಿಷ್ಯರೆಲ್ಲ (ಶೂಲವನ್ನೇರಲು) ಹಿಂದೆಗೆಯಲು ಗುರುಶ್ರೇಷ್ಠನು–ಗುರುಭಕ್ತನೆನಿಸಿದ ನಿನ್ನನ್ನು ವಿಶೇಷವಾದ ಕೃಪಾ ರಸಭರಿತ ನೋಟದಿಂದ ನೋಡಿ, ಪ್ರೀತಿಯಿಂದ ಸಮೀಪಕ್ಕೆ ಕರೆದು ತನ್ನ ತಾಂಬೂಲ

1 ದೆ (ಅ) 2 ಬಾ (ಚ)

ಕೆಯ್ಕೊಂಡು ಭಕ್ತಿಯಿಂ ಸವಿದಂಗಲೇಪಂಗೆಯ್ದು ಪರಮಾನಂದಂಬಡೆದಿರೆ ಬಸಿದ ನಿಶಿತಶೂಲಮಂ ಕಣ್ಸನ್ನೆಯಿಂ ತೋರ್ಪುದುಮಾಗಳ್—

ಹರ ಹರ ಬಣ್ಣಿಸಲ್ಕಳವೆ ನಿನ್ನಧಟಂ ಪೊಡಮಟ್ಟು ದಿವ್ಯ ಸ
ದ್ಗುರುಪದಪದ್ಮಕದ್ಭುತಮನಾಳೆ ಜನಂ ಪರಮಾನುರಾಗನಿ
ರ್ಭರತೆಯನಪ್ಪುಕೆಯ್ದು ಪರಿತಂದೊಡನೇಱಿದೆ ಶೂಲಮಂ ಗುಣಾ
ಕರ ಮೊನೆಯುರ್ಚಿ ಮೂಡೆ ನಡುನೆತ್ತಿಯೊಳೆಂತುಟೊ ಭಕ್ತಿವೈಭವಂ ೫೬

ಪರಮಗುರುಭ್ಯೋ ನಮಯೆಂ
ಬ ರವಂ ಸೊಗಯಿಸೆ ಮುಖಾಬ್ಜದೊಳ್ಕಿಱುನಗೆ ತ
ಳ್ತಿರೆ ಮುನ್ನ ಮಂಚಮೇಱಿದ
ಪರಿಯಿಂದೇಱಿರ್ದೆ ಶೂಲಮಂ ಗುರುಭಕ್ತಾ ೫೭

ಮನಮದು ಗುರುವಿನೊಳಮರ್ದಿರೆ
ತನುವಂ ನೀಂ ಸ್ಥಾಣುವಿಂಗೆ ಪದೆದರ್ಪಿಸಿದೈ
ತನುಮನದರ್ಪಣಭಾವಮ
ನೆನಸುಂ ಪಲ್ಲಟಿಸಿ ಮೆಱೆದೆ ಪೊಸತೆನೆ ವಿಬುಧರ್ ೫೮

ರೂಪವಾದ ಪ್ರಸಾದವನ್ನು ಕೊಡಲಾಗಿ, ಅದನ್ನು ಸ್ವೀಕರಿಸಿ ಭಕ್ತಿಯಿಂದ ತಿಂದು, ಮೈಗೆ ಸವರಿಕೊಂಡು, ಪರಮಾನಂದಭರಿತನಾಗಿ, ಚೂಪುಗೊಳಿಸಿದ ಹರಿತವಾದ ಶೂಲಾಯುಧವನ್ನು ಕಣ್ಸನ್ನೆ ಮಾಡಿ ಗುರುವು ತೋರಿಸಿದನು. ಆಗ—೫೬. 'ಹರ ಹರ ! ಸದ್ಗುಣ ಸಮೂಹಕ್ಕೆ ಆಗರನೆನಿಸಿದವನೇ, ನಿನ್ನ ಶೌರ್ಯವನ್ನು ವರ್ಣಿಸುವುದಕ್ಕೆ, ಶಕ್ಯವೇ ? ಶ್ರೇಷ್ಠನಾದ ಸದ್ಗುರುವಿನ ಪಾದಕಮಲಗಳಿಗೆ ನಮಸ್ಕರಿಸಿ, ಜನರೆಲ್ಲ ಅದ್ಭುತಗೊಳ್ಳುವಂತ ಉತ್ಕೃಷ್ಟವಾದ ಪ್ರೇಮಾತಿಶಯವನ್ನು ತಾಳಿದವನಾಗಿ ಓಡಿಬಂದು ಕೂಡಲೇ ನಡುನೆತ್ತಿಯಲ್ಲಿ ಶೂಲದ ಮೊನೆಯು ಹಾಯ್ದು ಹೊರಬರುವಂತೆ ಶೂಲವನ್ನೇರಿದೆ ! ಭಕ್ತಿಯ ವೈಭವವು ಅದು ಎಂಥದೋ ! !' ೫೭. "ಗುರುಭಕ್ತನೇ, ಮೊದಲು ಮಂಚವನ್ನೇರಿದ ರೀತಿಯಲ್ಲೇ 'ಪರಮಗುರುಗಳಿಗೆ ನಮಸ್ಕಾರಗಳು' ಎಂಬ ಧ್ವನಿಯು ಸೊಗಸಾಗಿರಲು ಮುಖಕಮಲವು ಕಿರುನಗೆಯಿಂದ ತುಂಬಿರಲು, ಶೂಲವನ್ನು ಏರಿದೆ". ೫೮. ಆ ನಿನ್ನ ಮನಸ್ಸು ಗುರುವಿನಲ್ಲಿ ಸೇರಿರಲು, ಪ್ರೀತಿಯಿಂದ ದೇಹವನ್ನು ಪರಮೇಶ್ವರನಿಗೆ (ಶೂಲವಿರುವ ಪೋಟುಮರಕ್ಕೆ) ಅರ್ಪಿಸಿದೆಯಲ್ಲವೇ ? (ಹೀಗೆ) ತನು ಮನದ ಅರ್ಪಣಾಭಾವವನ್ನು ವ್ಯತ್ಯಾಸಗೊಳಿಸಿ ವಿದ್ವಾಂಸರೆಲ್ಲ ಇದು ನವೀನ ರೀತಿ ಎನ್ನುವಂತೆ ಮೆರೆದೆ'. (ಗುರುವಿಗೆ ದೇಹವನ್ನೂ, ಲಿಂಗಕ್ಕೆ ಮನಸ್ಸನ್ನೂ ಅರ್ಪಿಸಬೇಕಾದುದು ಕ್ರಮ ; ಈಗ ಗುರುವಿಗೆ ಮನಸ್ಸನ್ನೂ, ದೇಹವನ್ನು ಲಿಂಗಕ್ಕೂ

ಪರಮಾನಂದಸುಧಾಬ್ಧಿಯ
ನಿರದುರ್ವಿಪ ಗುರುಕಟಾಕ್ಷ ಕೌಮುದಿ ಕವಿದೊ
ತ್ತರಿಸಿರೆ ಮುಗಿದಂಭೋಜದ
ಪರಿಯಂ ಪರಿಭವಿಸಿ ಮುಗಿದ ಕರಮಿರೆ ನೊಸಲೊಳ್ ೫೯

ಗುರುಚರಣ ಧ್ಯಾನಾಮೃತ
ಸರಸಿಯೊಳವಗಾಹಮಿರೆ ಮನೋಹಂಸಂ ನೋ
ಳ್ಪರ ಬಗೆಯೊಳೊಗೆಯೆ ಕೌತುಕ
ಮರರೆ ನಿಶಾತೋಗ್ರಶೂಲದೊಳ್ಕುಳ್ಳಿರ್ದೈ ೬೦

ಗುರುಪಾದಾಂಭೋಜಧಾಮಂ ಗುರುಚರಣಮಿಳತ್ಪಾಂಶುಭಾಸ್ವಲ್ಲಲಾಮಂ
ಗುರುವಾಕ್ಯಪ್ರಾಣಸೀಮಂ ಗುರುಪದಕಮಳಧ್ಯಾನನಿರ್ಧೂತಕಾಮಂ
ಗುರುವಂಶಾಂಬೋಧಿಸೋಮಂ ಗುರುಪದಯುಗಳೀನಿತ್ಯದತ್ತಪ್ರಣಾಮಂ
ಗುರುತತ್ವಜ್ಞಾನಭೂಮಂ ಗುರುಹಿತಕರಣೋದ್ಯೋಗರಾಗಾಭಿರಾಮಂ ೬೧

ವ ॥ ಎನಿಸಿ ನೆಗಳ್ತೆವೆತ್ತು ಮೆಱೆವ—

ಅರ್ಪಿಸಿದುದೇ ವಿದ್ವಾಂಸರು ನವೀನರೀತಿಯೆನ್ನುವ ವ್ಯತ್ಯಾಸಕಾರ್ಯ) ೫೯–೬೦. 'ಉತ್ಕೃಷ್ಟವಾದ ಸಂತೋಷವೆಂಬ ಕ್ಷೀರ ಸಮುದ್ರವನ್ನು ತಪ್ಪದೆ ಹೆಚ್ಚಿಸುವ ಗುರುವಿನ ಕಡೆಗಣ್ಣಿನ ನೋಟವೆಂಬ ಬೆಳದಿಂಗಳು, ದಟ್ಟವಾಗಿ ಕವಿದಿರಲು, ಮೊಗ್ಗಾದ (ಮುಕುಳಿತಗೊಂಡ) ತಾವರೆಹೂವಿನ ರೀತಿಯನ್ನು ತಿರಸ್ಕರಿಸುವಹಾಗೆ ಮುಗಿದಕೈಗಳು ಹಣೆಯ ಮೇಲೆ ಇರಲು, ಮನಸ್ಸೆಂಬ ಹಂಸಪಕ್ಷಿಯು ಗುರುವಿನ ಪಾದಧ್ಯಾನವೆಂಬ ಹಾಲಿನ ಸರೋವರದಲ್ಲಿ ಮುಳುಗಿರಲು, ನೋಡುವವರ ಮನಸ್ಸಿನಲ್ಲಿ ಆಶ್ಚರ್ಯವುಂಟಾಗುವ ಹಾಗೆ, ತೀಕ್ಷ್ಣವಾದ ತುದಿಯುಳ್ಳ ಶೂಲದ ಮೇಲೆ ಕುಳಿತುಕೊಂಡೆ ಅಬ್ಬಬ್ಬಾ !' ೬೧. 'ಗುರುವಿನ ಪಾದಕಮಲ ಪುಷ್ಪದ ಹಾರವನ್ನುಳ್ಳವನೂ, ಗುರುವಿನ ಪಾದ ಕಮಲದಲ್ಲಿ ಕೂಡಿರುವಧೂಳಿಯೇ ಪ್ರಕಾಶವಯನವಾದ ಭೂಷಣವಾಗಿ ಉಳ್ಳವನೂ, ಗುರುವಾಕ್ಯವೇ ಪ್ರಮಾಣವೆಂಬ ನಂಬಿಕೆಯು ಎಲ್ಲೆಕಟ್ಟಾಗಿ ಉಳ್ಳವನೂ, ಗುರುವಿನ ಪಾದಕಮಲವನ್ನು ಧ್ಯಾನ ಮಾಡುವುದರಿಂದ ಹೋಗಲಾಡಿಸಿಕೊಂಡ ಕಾಮನೆಗಳ ಸುಖಗಳನ್ನುಳ್ಳವನೂ, ಗುರುವಿನವಂಶವೆಂಬ ಸಮುದ್ರಕ್ಕೆ ಚಂದ್ರಪ್ರಾಯನಾದವನೂ, ಗುರುವಿನ ಪಾದದ್ವಯಕ್ಕೋಸುಗ ನಿತ್ಯವೂ ಮಾಡುತ್ತಿರುವ ನಮಸ್ಕಾರಗಳಿಂದ ಕೂಡಿದವನೂ, ಗುರುವಿನ ಭಾವವನ್ನು ತಿಳಿಯುವಿಕೆಗೆ ಆಸ್ಪದನಾದವನೂ, ಗುರುವಿಗೆ ಹಿತವಾಗುವಂತೆ ಕಾರ್ಯಮಾಡುವುದರಿಂದ ಮನೋಹರನಾದವನೂ'—ವ॥ 'ಎನಿಸಿಕೊಂಡು ಖ್ಯಾತಿಪೆತ್ತು

ಗುರುಲಿಂಗಾರಂಘ್ರಿಸಮರ್ಚನೈಕಪರನಂ ಲಿಂಗಾಂಗಸಂಯೋಗಬಂ
ಧುರನಂ ಭಾವಜಸರ್ವಗರ್ವಹರನಂ ಸಾಕಲ್ಯಮಾಂಗಲ್ಯಮಂ
ದಿರನಂ ದುಷ್ಟತಮಃಪ್ರಚಂಡಕರನಂ ಸನ್ಮಾರ್ಗಸಂಚಾರಭಾ
ಸುರನಂ ಭವ್ಯಜನಪ್ರಮೋದಕರನಂ ನಿನ್ನಂ ಭವದ್ದೇಶಿಕಂ ೬೨

ಉದಯಗಿರಿಶೃಂಗದಗ್ರದೊ
ಳುದಯಿಸಿದಿನನಂ ಪರಾಭವಿಸಿ ಘನಶೂಲಾ
ಗ್ರದೊಳೆಸೆವನನಮಳಿನಮಧು
ರದಯಾರಸಭರಿತದೃಷ್ಟಿಯಿಂದೀಕ್ಷಿಸಿದಂ ೬೩

ಪ್ರಾಜ್ಯಗುರುಭಕ್ತಿನಿಜಸಾ
ಮ್ರಾಜ್ಯಕ್ಕಭಿಷೇಕಿಪಂತೆ ವಿಮಳೋದಕದಿಂ
ಪೂಜ್ಯಗುರು ನಿಜಕಟಾಕ್ಷರು
ಚಿಜ್ಯೋತ್ಸ್ನೆಯನೊಲ್ದು ಮೇಲದೇಂ ಬೀಱಿದನೋ ೬೪

ವ|| ಅಂತು ಕಾರುಣ್ಯರಸಮಂ ಸೂಸುವಂತೆ ನಿರೀಕ್ಷಿಸಿ ಬೆಱಗುವಟ್ಟು ಬೆಬ್ಬಳಿಸಿ ನೋಳ್ಪಶೇಷಶಿಷ್ಯರ ಲಜ್ಜಾನತಾನನಮಂ ನೋಡಿ ದೇಶಿಕೇಂದ್ರನಿಂತೆಂದಂ—

ಈತನ ಚರಿತ್ರಮೀತನ
ನೂತನ ಗುರುಭಕ್ತಿ ಸೊಗಯಿಪೀತನ ಸುಗುಣ

ಮೆರೆಯುವ—' ೬೨–೬೩. 'ಗುರು–ಲಿಂಗಗಳ ಪಾದಗಳನ್ನು ಪೂಜಿಸುವುದರಲ್ಲಾಸಕ್ತನಾದವನೂ, ಲಿಂಗಾಂಗ ಸಾಮರಸ್ಯದಿಂದ ಮನೋಹರನಾಗಿರುವವನೂ, ಮನ್ಮಥನ ಅಹಂಕಾರವನ್ನು ನಾಶಮಾಡಿದವನೂ, ಸಮಸ್ತಮಂಗಳಗಳಿಗೂ ಗೃಹದೋಪಾದಿಯಲ್ಲಿರುವವನೂ, ಸನ್ಮಾರ್ಗದಲ್ಲಿ ನಡೆಯುವುದರಿಂದ ಪ್ರಕಾಶಿಸುವವನೂ ಸಜ್ಜನರುಗಳಿಗೆ ಸಂತೋಷವನ್ನುಂಟುಮಾಡುವವನೂ ಆದ ನಿನ್ನ ಗುರುಶ್ರೇಷ್ಠನು ಪೂರ್ವಾಚಲದ ಕೋಡುಗಲ್ಲಿನ ತುದಿಯಲ್ಲಿ ಉದಯಗೊಳ್ಳುತ್ತಿರುವ ಸೂರ್ಯನನ್ನು ತಿರಸ್ಕಾರಗೊಳಿಸುವ ರೀತಿಯಲ್ಲಿ ಭಯಂಕರ ಶೂಲದ ತುದಿಯ ಮೇಲೆ ಶೋಭಿಸುವ ನಿನ್ನನ್ನು ನಿರ್ಮಲವಾದ ಕಾರುಣ್ಯರಸದಿಂದ ತುಂಬಿದ ಕಣ್ಣಿನ ಕೊನೆಗಳಿಂದ ನೋಡಿದನು.' ೬೪. 'ಆ ಪೂಜ್ಯನಾದ ನಿನ್ನ ಗುರುವು ಪವಿತ್ರ (ಪ್ರಾಜ್ಯ)ವಾದ ಗುರುಭಕ್ತಿಯೆಂಬ ತನ್ನ ಸಾಮ್ರಾಜ್ಯಕ್ಕೆ ನಿರ್ಮಲಜಲದಿಂದ ಅಭಿಷೇಕ ಮಾಡುವನೋ ಎಂಬಂತೆ, ಶಿಷ್ಯನಾದ ನಿನ್ನ ಮೇಲೆ ಕಡೆಗಣ್ಣೋಟದ ಕಾಂತಿಯೆಂಬ ಬೆಳದಿಂಗಳನ್ನು ಅದೇನು ಪ್ರಸರಿಸಿದನೋ !' ವ|| ಆ ರೀತಿ ಕಾರುಣ್ಯರಸವನ್ನು ತುಂಬಿ ಸುರಿಯುವಹಾಗೆ ನಿರೀಕ್ಷಿಸಿ, ಆಶ್ಚರ್ಯಗೊಂಡು ಭಯಪಟ್ಟು ನೋಡುತ್ತಿರುವ ಸಮಸ್ತ ಶಿಷ್ಯರುಗಳ ಲಜ್ಜೆಯಿಂದ ಬಾಗಿಹೋದ ಮುಖವನ್ನು ಆ ಗುರುಶ್ರೇಷ್ಠನು ನೋಡಿ, ಹೀಗೆ ಹೇಳಿದನು. ೬೫. 'ಈ ಗುರುಭಕ್ತಾರ್ಯನ ಚರಿತ್ರೆ, ಈತನ ನೂತನವಾದ ಗುರುಭಕ್ತಿ, ಈತನ

ವ್ರಾತಮಿವಂಗಲ್ಲದೆ ಮ
ತ್ತೇತೆಱದಿಂ ಬಯಸೆ ಪೆಱರ್ಗದೇನಾದಪುದೋ ೬೫

ಪ್ರದ್ಯೋತನ ಘನರುಚಿಯುಂ
ಖದ್ಯೋತಂ ಫಣಿಪಶಕ್ತಿಯುಮುನೊಳ್ಳೆ ವಲಂ
ಸದ್ಯೋಗಿಯ ಯೋಗಮುಸಬ
ಳೋದ್ಯೋಗರತಂ ನಿತಾಂತಮೆಳಸಿದೊಡೊಳವೇ ೬೬

ಈತನ ಪೆಂಪುವೆತ್ತ ಗುರುಭಕ್ತಿ ಗುರುವ್ರತನಿಷ್ಠೆಗುಜ್ವಳ
ಖ್ಯಾತಿಗೆ ನೀವಸೂಯೆವಿಡಿದಿರ್ದಿರನೇಕಪುರಾಣಶಂತ್ರವೇ
ದಾತಿಶಯೇತಿಹಾಸದೆ ಪುರಾತನನೂತನಭಕ್ತರೊಳ್ಪೊದ
ಳ್ದೀ ತೆಱಮಪ್ಪ ಶೌರ್ಯಯುತಭಕ್ತಿಯನಾಲಿಪಿರೇ ಧರಿತ್ರಿಯೊಳ್ ೬೭

ಕಂಡೇಂ ಬಲ್ಲಿರೆ ಮಹಿಮಕ
ರಂಡನ ಮತ್ಸುತನ ಪೋಲ್ವ ಚಲವಂತರನು
ದ್ದಂಡತೆಯಿಂ ಗರ್ವಮನೊಳ
ಕೊಂಡಾವೇ ಭಕ್ತರೆಂದು ಬೆಱೆದಪಿರಿಳೆಯೊಳ್ ೬೮

ನಿಮಗೆ ಗುರುಭಕ್ತಭಕ್ತಿ
ಕ್ರಮಮುಮುರ್ವುದೆ ಸುರಮಹೀಜ ಮಹಿಮೆಯುದೆಂತುಂ

ಸೊಗಸುಗೊಂಡ ಸುಗುಣಗಳ ಸಮೂಹ (ಇವೆಲ್ಲ) ಇವನಿಗೇ ಅಲ್ಲದೆ, ಮತ್ತೆ ಇಚ್ಛೆಪಟ್ಟರೆ ಪರರಿಗೆ ಯಾವರೀತಿಯಿಂದಲಾದರೂ ಉಂಟಾದೀತೇ ? ೬೬. ಮಿಂಚಿನ ಹುಳುವು ಸೂರ್ಯನ ದೊಡ್ಡ ಕಾಂತಿಯನ್ನೂ, ನೀರುಹಾವು ಆದಿಶೇಷನ ಸಾಮರ್ಥ್ಯವನ್ನೂ, ದುರ್ಬಲ ಪ್ರಯತ್ನದಲ್ಲಿ ಆಸಕ್ತನಾದವನು (ಅಥವಾ ಸ್ತ್ರೀಲೋಲನಾದವನು) ಶ್ರೇಷ್ಠಯೋಗಿಯ ಯೋಗಮಾರ್ಗವನ್ನೂ ಬಯಸಿದರೆ ನಿಶ್ಚಯವಾಗಿ (ಅವನಿಗೆ) ಉಂಟಾದಾವೇ ?' ೬೭. ಈತನ ಘನತೆಯಿಂದ ಕೂಡಿದ ಅತಿಶಯವಾದ ಗುರುಭಕ್ತಿಯ ವ್ರತದ ನಿಷ್ಠೆಗೆ, ಉಜ್ವಲವಾದ ಖ್ಯಾತಿಗೆ, ನೀವೆಲ್ಲ ಹೊಟ್ಟೆಕಿಚ್ಚು ಪಟ್ಟು, ಇದ್ದೀರಿ. ಲೋಕದಲ್ಲಿ ಅನೇಕ ಪುರಾಣ, ಆಗಮ, ವೇದ ಶ್ರೇಷ್ಠವಾದ ಇತಿಹಾಸಗಳಲ್ಲಿ ಪುರಾತನ ಭಕ್ತರೊಳಗೆ, ಪ್ರಖ್ಯಾತಿಯನ್ನು ಹೊಂದಿ, ಈ ರೀತಿಯಲ್ಲಿರುವ ಸಾಮರ್ಥ್ಯದಿಂದ ಕೂಡಿದ ಭಕ್ತಿಯನ್ನು ಕೇಳಿದ್ದಿರಾ ?' ೬೮. 'ಮಹಿಮೆಯ ಭರಣಿಯಂತಿರುವ, ನನ್ನ ಈ ಗುರುಪುತ್ರನನ್ನು ಹೋಲುವ (ಸರಿಗಟ್ಟುವ) ಛಲವಂತನನ್ನು (ಛಲದಿಂದ ಕೂಡಿದ ಶಿಷ್ಯನನ್ನೂ) ಕಂಡು ಬಲ್ಲಿರಾ ! ಅಹಂಕಾರದಿಂದ ಗರ್ವವನ್ನು ಒಳಗೊಂಡು ಲೋಕದಲ್ಲಿ ನಾವೇ ಭಕ್ತರೆಂದು ಸೆಟೆಯುತ್ತಿದ್ದಿರಿ (ಸೆಡೆಯುತ್ತಿದ್ದೀರಿ).' ೬೯. 'ನಿಮಗೆ ಗುರು ಭಕ್ತಿಯ ರೀತಿಯು ಉಂಟಾದೀತೇ ? ಆ ಕಲ್ಪವೃಕ್ಷದ ಮಹತ್ವವು ಕಾಡುಮರಗಳ ಸಮೂಹಕ್ಕೆ ಹೇಗಾದರೂ ಸಮಾನ

ಸಮನಿಸುಗುಮೆ ಕಾನನಕುಜ
ಸಮಿತಿಗೆ ಬಱಿದೇಕೆ ಭಕ್ತಿಭಾವದ ಬಿಂಕಂ ೬೯

ಮಂಚಮನೇಱಿದ ತೆಱದಿಂ
ದಂಚಿತಮತಿಯುಡರ್ದನರರೆ ಶೂಲಮನಿದು ತಾಂ
ಮಂಚಮದು ಶೂಲಮೆಂಬ ವಿ
ಸಂಚುಂಟೆ ಮದುಕ್ತಿ ಜೀವಮಾದಂಗಿಳೆಯೊಳ್ ೨೦

ಧರಣಿಯೊಳಿವಂಗೆ ಸಂದುದು
'ಗುರುವಚನಮಲಂಘನೀಯಮೆ'ಂಬುಕ್ತಿ ವಲಂ
ಪರಿದೇಱಿನೆ ಶೂಲಮನಾ
ದರದಿಂ ಭರದಿಂದಮೇಱಿ ಮೆಱೆದುದಱಿಂದಂ ೨೧

ಇವನೆಮ್ಮ ಕೃಪಾಪಾತ್ರಂ
ವಿವರಿಸೆ ಮತ್ಕ್ಷಮೆಗೆ ಪಾತ್ರರಪ್ಪಿರಿ ನೀಮೆಂ
ದವರೊಡನೆ ನುಡಿದು ನೋಳ್ಪುದು
ಜವದಿಂ ದೃಷ್ಟಾಂತಮಂ ಬಳಿಕ್ಕೆನುತಾಗಳ್ ೨೨

ವ॥ ಇಂತೆಂದವರ್ಗಮರಗುಂಡ ಮಲ್ಲಿಕಾರ್ಜುನಾರ್ಯಂ ತ್ವ[1]ನ್ಮಹತ್ವಮಂ ನಿರವಿಸಿ ಭವದಭಿಮುಖನಾಗಿ ಕೃಪಾವಲೋಕನದಿನಭೀಕ್ಷಿಸಿ—

ಪಾದೀತೇ ? ವ್ಯರ್ಥವಾದ (ಈ) ಭಕ್ತಿಭಾವದ ಬಿಂಕವು (ನಿಮಗೆ) ಏಕೆ ?' ೨೦. 'ಪೂಜ್ಯವಾದ ಬುದ್ಧಿಯುಳ್ಳ (ಈ) ಗುರು ಭಕ್ತಾರ್ಯನು ಮಂಚವನ್ನೇರಿದ ರೀತಿಯಲ್ಲಿಯೇ ಶೂಲವನ್ನು ಅಬ್ಬಬ್ಬಾ ! ಏರಿ ಬಿಟ್ಟನು ! ಲೋಕದಲ್ಲಿ ನನ್ನವಾಕ್ಯವೇ (ಗುರುವಾಕ್ಯವೇ) ಪ್ರಮಾಣವಾಗಿ ಉಳ್ಳವನಾದವನಿಗೆ ಇದು ಮಂಚ, ಅದು ಶೂಲ ಎಂದೆನ್ನುವ ಭೇದಭಾವವುಂಟೇ ?' ೨೧. 'ಓಡಿಹೋಗಿ ಶೂಲವನ್ನು ಹತ್ತು ಎನ್ನಲು ಆದರ ಪೂರ್ವಕವಾಗಿ ಭರದಿಂದ ಹೋಗಿ (ಶೂಲವನ್ನೂ) ಏರಿ ಮೆರೆದದ್ದರಿಂದ ಧರಣಿಯಲ್ಲಿ 'ಗುರುವಚನವು ಉಲ್ಲಂಘಿಸುವಂತಹುದಲ್ಲ' ಎಂಬ ಮಾತು ಇವನಿಗೇ ನಿಶ್ಚಯವಾಗಿ ಸಂದಿತಲ್ಲವೆ !' ೨೨. 'ಇವನೇ ನಮ್ಮ ಕೃಪೆಗೆ ಪಾತ್ರನು; ವಿವರವಾಗಿ ನೋಡಿದರೆ ನನ್ನ ಕೃಪೆಗೆ ನೀವು ಪಾತ್ರರಲ್ಲದವರಾಗುತ್ತೀರಿ' (ಹೀಗೆಂದು) ಅವರೊಡನೆ ಮಾತನಾಡಿ ಬಳಿಕ ಶೀಘ್ರವಾಗಿ ದೃಷ್ಟಾಂತವನ್ನು ನೋಡಿರಿ ಎನ್ನುತ್ತ, ಆಗ ವ ॥ ಆ ಅಮರಗೊಂಡ ಮಲ್ಲಿಕಾರ್ಜುನಾರ್ಯನು ಹೀಗೆ ಅವರಿಗೆ ತನ್ನ ಮಹಿಮೆಯನ್ನು ಹೇಳಿ ನಿನ್ನ ಕಡೆಗೆ (ಗುರುಭಕ್ತಾರ್ಯನ ಕಡೆಗೆ) ತಿರುಗಿ ಕೃಪಾ ಪೂರ್ಣದೃಷ್ಟಿಯಿಂದ

1 ತ (ದ)

ಎಲೆ ಗುರುಭಕ್ತ ನಿನ್ನ ಗುರುಭಕ್ತಿಮಹಾಪ್ರಮಥೇಂದ್ರರುದ್ರಭ
ಕ್ತಲಲಿತಭಕ್ತಿಪದ್ಧತಿಗೆ ಸಂದುದು ನೀನಿಳಿತರ್ಪುದಿನ್ನೆನು
ತ್ತಲಘುಮೃದೂಕ್ತಿಯಿಂ ಕರೆಯೆ ಸದ್ಗುರು ನೀಂ ನಿಮಿರ್ದೂಱಿ ಕೈಗಳಂ
ಪಲಗೆಯೊಳುದ್ಧಮೆಳ್ದಲುಗೆ ಶೂಲಮುದಗ್ರತರಪ್ರಭಾವದಿಂ ೭೩

ನೆಗೆದಿಳೆಗವತರಿಸಿ ಜನಂ
ಪೊಗಳುತ್ತಿರೆ ಗುರುಪದಾಬ್ಜಕೆಱಗಿದೆ ನಿನ್ನಂ
ತೆಗೆದು ಬಿಗಿಯಪ್ಪಿ ಸಂತಸ
ದೊಗುಮಿಗೆಯಿಂ ನೋಡಿ ದೇಶಿಕಂ ನಲಿದೊಲವಿಂ ೭೪

ವಿಮಳನಿಜಪ್ರಸಾದಸುಧೆಯಿಂ ತಣಿಪುತ್ತೆ ನೆಗಳ್ತೆವೆತ್ತ ಸಂ
ಭ್ರಮಮನಲರ್ಚಿ ರಂಜಿಸಿದೆ ಶೈವಸಹೋದರರೆಲ್ಲ ವಿಸ್ಮಯ
ಸ್ತಿಮಿತ ಕಟಾಕ್ಷರಕ್ಷತಭವತ್ತನುವಂ ನಡೆನೋಡಿ ಚೋದ್ಯಮುಂ
ದಮರ್ದತಿ ಭೀತಿಯಿಂ ಪೊಗಳೆ ನಿನ್ನಯ ಸದ್ಗುರುಭಕ್ತಿವೈಭವಂ ೭೫

ಅಂದಿಳೆಯಲ್ಲಿ ರಂಜಿಸಿದುದಿಂದುಮನೂನತರಪ್ರಭಾವದೊ
ಳ್ಸಂದುದು ಸರ್ವಲೋಕಮಱಿವುತ್ತಿರೆ ದೇಶಿಕಸತ್ಕೃಪಾಬ್ಧಿ ಪೂ

ನಿರೀಕ್ಷಿಸುತ್ತ ೭೩-೭೪. 'ಎಲೈ ಗುರುಭಕ್ತನೇ, ನೀನು ತೋರಿಸಿದ ಗುರುಭಕ್ತಿಯು ಮಹಾ ಪ್ರಮಥ ಶ್ರೇಷ್ಠರ, ರುದ್ರ ಭಕ್ತರುಗಳ ಮನೋಹರವಾದ ಭಕ್ತಿಯ ಪದ್ಧತಿಗೆ ಸಮಾನ ವಾದದ್ದಾಗಿದೆ. ನೀನು ಇನ್ನು (ಶೂಲದಿಂದ) ಇಳಿದು ಬರಬೇಕು.' ಎನ್ನುತ್ತ ಆ ಸದ್ಗುರುವು ವಿಶೇಷವಾದ ಕೋಮಲಗೊಂಡ ಮಾತುಗಳಿಂದ ಕರೆಯಲಾಗಿ ನೀನು ಕೈ ಗಳನ್ನು ಮುಂದಕ್ಕೆಚಾಚಿ, ಹಲಗೆಯ ಮೇಲೆಊರಿ, ಉದ್ದವಾಗಿಯೇ ಎದ್ದು, ಶೂಲವು ನಡುಗುವಹಾಗೆ ಅತ್ಯುತ್ಕೃಷ್ಟ ಮಹಿಮೆಯಿಂದ ಹಾರಿ, ಭೂಮಿಗಿಳಿದು, ಜನವೆಲ್ಲ ಹೊಗ ಳುತ್ತಿರಲಾಗಿ, ಗುರುವಿನ ಪಾದಕಮಲಗಳಿಗೆ ನಮಸ್ಕರಿಸಿದವನಾದೆ. ಗುರುಶ್ರೇಷ್ಠನು ನಿನ್ನನ್ನು ಎಳೆದುಕೊಂಡು ಬಿಗಿಯಾಗಿ ಹಿಡಿದು ಅಪ್ಪಿಕೊಂಡು, ಸಂತೋಷದ ಆಧಿಕ್ಯ ದಿಂದ ನೋಡಿ, ಅನುರಾಗದಿಂದ ನಲಿದನಲ್ಲವೇ !' ೭೫. 'ನಿರ್ಮಲವಾದ ತನ್ನ ತೀರ್ಥ ಪ್ರಸಾದಗಳಿಂದ ತೃಪ್ತಿಪಡಿಸುತ್ತ ಖ್ಯಾತಿವೆತ್ತ ಸಂಭ್ರಮವನ್ನು ಅರಳಿಸಿ ರಂಜಿಸು ತ್ತಿರಲು, ಶಿವಭಕ್ತಿ ಸಹೋದರರೆಲ್ಲ (ಶಿವಭಕ್ತಿಯ ವಿಷಯದಲ್ಲಿ ಸಹೋದರರೆನಿಸಿದವ ರೆಲ್ಲ) ಆಶ್ಚರ್ಯದಿಂದ ಕೂಡಿದ ನಿಶ್ಚಂಚಲವಾದ ಕಣ್ಣುಗಳಿಂದ (ನಟ್ಟನೋಟದಿಂದ) ಕೂಡಿ, ಗಾಯವೇ ಇಲ್ಲದಿರುವ ನಿನ್ನ ಶರೀರವನ್ನು ಕಂಡು, ಆಶ್ಚರ್ಯದಿಂದಲೂ ಅತ್ಯಂತ ಭೀತಿಯಿಂದಲೂ, ನಿನ್ನ ಸದ್ಗುರು ಭಕ್ತಿಯನ್ನು ಹೊಗಳಿದರಲ್ಲವೇ' ೭೬. ಹಿಂದಿನ ಕಾಲದಲ್ಲಿ ಪ್ರಕಾಶಿಸಿದ್ದು ಈಗಲೂ ಕೂಡ ಅತ್ಯಧಿಕವಾದ ಮಹತ್ವದಿಂದ ಉಂಟಾಯಿತು. ಹೇ ಶಿವಗಣಗಳ ಸಂತೋಷವೆಂಬ ಕಮಲಗಳ ಗುಂಪಿಗೆ ಸೂರ್ಯ ನಂತಿರುವ ಗುರುಭಕ್ತಾರ್ಯನೇ, ನಿನ್ನ ಈ ಗುರುಭಕ್ತಿಯು ಗುರುಶ್ರೇಷ್ಠನಾದ ಅಮರ

ರ್ಣೇಂದುವಿದಲ್ತೆ ನಿನ್ನ ಗುರುಭಕ್ತಿಮಹತ್ವಪರಂಪರೋರ್ಮಿಕಾ
ಬೃಂದಸುಧಾತರಂಗಿಣಿ ಗಣೋತ್ಸವಪದ್ಮವನಪ್ರಭಾಕರಾ ೭೬

ಆರಜಿೀವರಯ್ಯ ನಿನ್ನಯ
ಸಾರಾಚಾರಪ್ರಸನ್ನ ಗುರುಭಕ್ತಿಯ ವಿ
ಸ್ತಾರಪ್ರಭಾವಮಂ ಕಾ
ಮಾರಾತಿಯುಮಾದೊಡೊರ್ಮೆ ತಾಂ ತಿಳಿದಪನೇ ೭೭

ಗುರುಪಾದಾಂಬುಜಭೃಂಗ ಸದ್ಗುರುಕರಾಂಭೋಜಾತಜಾತಾಂಗ ಸ
ದ್ಗುರುಸೇವಾಪರತಂತ್ರ ಸದ್ಗುರುಕೃಪಾಲಬ್ಧೇಶಸನ್ಮಂತ್ರ ಸ
ದ್ಗುರುನಾಮಾಮೃತತೃಪ್ತ ಸದ್ಗುರುನಿರೂಪವ್ರಾತಸಂಪ್ರಾಪ್ತ ಸ
ದ್ಗುರುಪಾದಾಂಬುನಿಷಿಕ್ತಸಾರ ಗುರುಭಕ್ತಖ್ಯಾತಿವಿಖ್ಯಾಪಿತಾ ೭೮

ಎಂದಿಂತೆಲ್ಲರ್ಕರಂ ಕೀರ್ತಿಸುತಿರೆ ಬಸವಂ ಕೇಳ್ದು ತಾನೆಯ್ದುತುಂ ನ
ಣ್ಪಿಂದಂ ಮೆಯ್ಯಿಕ್ಕಿ ಕೆಯ್ಯಂ ಮುಗಿದೆಲೆ ಗುರುಭಕ್ತಾರ್ಯ ನಿನ್ನನ್ನರಾರ್ಪೆಂ
ಪೊಂದಿರ್ದೀ ಶ್ರೀಗುರುಶ್ರೀಪದಯುಗಳಲಸದ್ಭಕ್ತಿಯೊಳ್ನೋಳ್ಪೊಡೆಂದಾ
ನಂದಂಬೆತ್ತೊಲ್ದು ಕೊಂಡಾಡುತೆ ಸೊಗಯಿಸಿದಂ ವೀರಶೈವಾಬ್ಧಿಚಂದ್ರಂ ೭೯

ಗೊಂಡ ಮಲ್ಲಿಕಾರ್ಜುನಾರ್ಯನ ಶ್ರೇಷ್ಠದಯೆಯೆಂಬ ಸಮುದ್ರಕ್ಕೆ ಚಂದ್ರನಂತೆ (ಅವನ) ಮಹಿಮೆಯ ಪರಂಪರೆಯೆಂಬ ತೆರೆಗಳ ಗುಂಪುಳ್ಳ ಅಮೃತದ ಪ್ರವಾಹವೇ ಅಲ್ಲವೇ ? ೭೭. 'ಅಯ್ಯ, ನಿನ್ನ ಶ್ರೇಷ್ಠವಾದ ಆಚಾರದಿಂದ ಪರಿಶುದ್ಧವಾದ ಗುರುಭಕ್ತಿಯ ಈ ವಿಸ್ತಾರವಾದ ಪ್ರಭಾವವನ್ನು, ಯಾರು ತಿಳಿಯಲು ಶಕ್ಯ ? ಶಿವನಾದರೂ ಅವನು ಒಂದು ಸಲ ತಿಳಿದಾನೇ ?' ೭೮. 'ಗುರುವಿನ ಪಾದ ಕಮಲಕ್ಕೆ ಭೃಂಗಸ್ವರೂಪನೂ, ಶ್ರೇಷ್ಠ ಗುರುವಿನ ಹಸ್ತ ಕಮಲದಿಂದ ಹುಟ್ಟಿದ (ಅನುಗ್ರಹ) ದೇಹವುಳ್ಳವನೂ, ಶ್ರೇಷ್ಠ ಗುರುವಿನ ಸೇವೆಯಲ್ಲಿ ಆಸಕ್ತನಾದವನೂ, ಶ್ರೇಷ್ಠ ಗುರುವಿನ ದಯೆಯಿಂದ ಪಡೆಯಲ್ಪಟ್ಟ ಶಿವಮಂತ್ರವನ್ನುಳ್ಳವನೂ, ಸದ್ಗುರುವಿನ ನಾಮವೆಂಬ ಅಮೃತದಿಂದ ತೃಪ್ತಿಗೊಂಡವನೂ, ಸದ್ಗುರುವಿನ ಆಜ್ಞೆಯ ಸಮೂಹವನ್ನು ಹೊಂದಿದವನೂ, ಒಳ್ಳೆಯ ಗುರುವಿನ ಪಾದೋದಕದಿಂದ ಅಭಿಷೇಕಗೊಂಡವನೂ, ಒಳ್ಳೆಯ ನಡತೆಯಿಂದುಂಟಾದ ಪ್ರಸಿದ್ಧಿಯಿಂದ ಪ್ರಚುರಪಡಿಸಲ್ಪಟ್ಟವನೂ ಆದ ಶ್ರೇಷ್ಠ ಭಕ್ತಿಸಾರವುಳ್ಳ ಗುರುಭಕ್ತನೇ !' ೭೯. ಹೀಗೆನ್ನುತ್ತ ಎಲ್ಲರೂ ವಿಶೇಷವಾಗಿ ಹೊಗಳುತ್ತಿದ್ದರು. (ಇದನ್ನು) ವೀರಶೈವವೆಂಬ ಸಮುದ್ರಕ್ಕೆ ಚಂದ್ರನೋಪಾದಿಯಲ್ಲಿರುವ ಬಸವಣ್ಣನು ಕೇಳಿ, ಅವನು ಅಲ್ಲಿಗೆ ಬಂದು, ವಿನಯದಿಂದ ನಮಸ್ಕರಿಸಿ, ಕೈ ಜೋಡಿಸಿ 'ಎಲೈ ಗುರು ಭಕ್ತಾರ್ಯನೇ, ವಿಚಾರಿಸಿ ನೋಡಿದರೆ ಘನತೆ ಹೊಂದಿರುವ ಈ ಶ್ರೀ ಗುರುವಿನ ಮಂಗಳಕರವಾದ ಪಾದದ್ವಯಗಳ ಪ್ರಕಾಶಿಸುವ ಭಕ್ತಿಯಲ್ಲಿ ನಿನ್ನಂಥವರಾರಿದ್ದಾರೆ ?' ಎಂದು ಆನಂದಗೊಂಡು ಪ್ರೀತಿಯಿಂದ ಕೊಂಡಾಡುತ್ತ ಸೊಗಸು

ಗುರುಭಕ್ತನಮುಳಚರಿತಮ
ನುರುಮುದದಿಂದೋದೆ ಕೇಳೆ ಬಿಡದಪ್ಪುದು ಸ
ದ್ಗುರುಪದಸುಭಕ್ತಿ ಸರ್ವೋ
ತ್ತರಸುಖಸುಜ್ಞಾನಸಂಪದಂ ಶಿವಕೃಪೆಯಿಂ ೮೦

ಮಂಗಳಾಂಗಿ ಮಂಜುಳಾಂಬುಜಾಸ್ಯೆ ವಿಶ್ವವಿಶ್ರುತೇ
ಭೃಂಗವೇಣಿ ಶಂಕರಾಂಕಪೀಠಿಕಾಸಮಾಶ್ರಿತೇ
ತುಂಗದಾನವಾರಿ ವಾರಿಜೋದ್ಭವಾದಿವಂದಿತೇ
ಸಾಂಗವೇದವೇದ್ಯೆ ರಕ್ಷಿಸೆನ್ನನದ್ರಿರಾಟ್ಸುತೇ ೮೧

ಇದು ವಿನಮದಖಿಳ ಸುರಾಸುರೇಂದ್ರಮುಕುಟತಟಘಟಿತ ಮಣಿಗಣಾಗಣಿತ ರುಚಿನಿಚಯ

ತರುಣಾರುಣಾತಪಪರಿಲಸಿತ ಪರಮ ಶಿವಲಿಂಗ ಪಾದಾರವಿಂದಪರಾಗಭಸಿತ

ಭಾಸುರಲಲಾಟಪಟ್ಟ ಸರಸಜನಮಾನಿತೋಭಯಕವಿತಾವಿಶಾರದ

ಶ್ರೀಷಡಕ್ಷರಿದೇವಭಕ್ತಿವಿರಚಿತ

ಶ್ರೀಮದ್ ಬಸವರಾಜವಿಜಯಮಹಾಪುರಾಣದೊಳ್ ಗುರುಭಕ್ತಗುರುಭಕ್ತಿಮಹತ್ವಕಥನಂ

ಸಪ್ತವಿಂಶಾಶ್ವಾಸಂ ಸಮಾಪ್ತಂ

ಅಂತು ಆಶ್ವಾಸ ೨೭ಕ್ಕೆ ಪದಗಣನೆ ೧೯೯೮ಕ್ಕೆ ಮಂಗಳಮಹಾ ಶ್ರೀ||

ಗೊಂಡಿದ್ದನು. ೮೦. ಗುರುಭಕ್ತನ ಈ ಪರಿಶುದ್ಧ ಚರಿತ್ರೆಯನ್ನು ವಿಶೇಷ ಪ್ರೀತಿಯಿಂದ ಓದಿದರೆ, ಕೇಳಿದರೆ, ಶಿವನ ಕೃಪೆಯಿಂದ ಸದ್ಗುರುವಿನ ಪಾದ ಭಕ್ತಿಯೂ, ಸಕಲಕ್ಕೂ ಉತ್ಕೃಷ್ಟವಾದ ಸೌಖ್ಯವನ್ನುಂಟುಮಾಡುವ ಒಳ್ಳೆಯ ಜ್ಞಾನ ಸಂಪತ್ತೂ ತಪ್ಪದೆ ಉಂಟಾಗುವುದು. ೮೧. ಮಂಗಲ ಶರೀರಿಯೇ, ಮನೋಹರ ಕಮಲದಂತಹ ಮುಖವುಳ್ಳವಳೇ, ವಿಶ್ವವಿಖ್ಯಾತಳೇ, ಭೃಂಗದಂತಿರುವ ಜಡೆಯುಳ್ಳವಳೇ, ಶಂಕರನ ತೊಡೆಯೆಂಬ ಪೀಠವೇ ಆಶ್ರಯವಾಗಿ ಉಳ್ಳವಳೇ, ಉನ್ನತರಾದ ವಿಷ್ಣು, ಬ್ರಹ್ಮ ಇವರುಗಳಿಂದ ನಮಸ್ಕರಿಸಿಕೊಳ್ಳುವವಳೇ, ಸಂಪೂರ್ಣವಾದ ವೇದಗಳಿಂದ ತಿಳಿಯಲ್ಪಡುವುದಕ್ಕೆ ಯೋಗ್ಯಳಾದವಳೇ, ಪರ್ವತರಾಜ ಪುತ್ರಿಯೇ ನನ್ನನ್ನು ರಕ್ಷಿಸು.

ಇಪ್ಪತ್ತೇಳನೆಯ ಆಶ್ವಾಸವು ಸಮಾಪ್ತವಾಯಿತು.

ಅಷ್ಟವಿಂಶಾಶ್ವಾಸಂ

[ಗುರುಭಕ್ತಾಂಡಾರಿಯ ಕಥೆ]

ಶ್ರೀಗುಹಜನನೀಮಧುರಿಮ
ರಾಗಾಧರರಸರಸಜ್ಞನಮಳಿನಯಮಿಚೇ
ತೋಗತನನುಪಮನಿಗಮಕ
ಳಾಗುರುವೆಮಗೀಗೆ ಸೌಖ್ಯಮಂ ಶಿವಲಿಂಗಂ ೧

ವ॥ ಆಗಳ್ಗುರುಭಕ್ತಭಕ್ತಿಮಹತ್ವದರ್ಶನಜನಿತಹರ್ಷೋದಯಂ ಚನ್ನಬಸವಂ ಬಸವಂಗೆ ಎಗುತೆಮ್ಮ ಪುರಾತನರೊಳಿಂತಪ್ಪ ಗುರುಭಕ್ತಿಧುರಂಧರರೊಳರೆ ಬೆಸಸಿಮೆನೆ ವೃಷೇಂದ್ರಂ ಗಣನಿವಹ ಮಾನಂದದಿನಾಕರ್ಣಿಸೆ ಪೇಳ್ದನದೆಂತೆನೆ—

ಜಲಧರಚುಂಬಿ ಚಂದ್ರಮಣಿಸಾಲಮುದಂಚಿತ ಭರ್ಮಹರ್ಮ್ಯಸಂ
ಕುಳಮತಿ ಸಂಪದೋಜ್ವಲಗೃಹಾವಳಿ ಸಂತತ ದಿವ್ಯಭೋಗಮಂ
ಜುಲಮನುಜಾಳಿ ಲೋಚನಸಮುತ್ಸವಕಾರಿ ಪುರೋಪವೀಥಿ ನಿ
ಶ್ಚಲರುಚಿ ಬೆಜ್ಜವಾಡಪುರಮೊಪ್ಪುಗುಮುರ್ವಿಗಪೂರ್ವಶೋಭೆಯಿಂ ೨

ಗುರು ಭಕ್ತಾಂಡಾರಿಯ ಕಥೆ

೧. ಮಂಗಳಕರಳೂ, ಷಣ್ಮುಖ ಮಾತೆಯೂ ಆದ ಪಾರ್ವತಿಯ ಮಾಧುರ್ಯದಿಂದ ಕೂಡಿದ ಕೆಂಪು ಬಣ್ಣದ ಅದರ ರಸದ ರಸಜ್ಞನೂ, ನಿರ್ಮಲರಾದ ಋಷಿ ಜನರ ಮನಸ್ಸಿನ ಕೊನೆಯಲ್ಲಿರುವವನೂ, ಅನುಪಮವಾದ ವೇದ ವಿದ್ಯೆಯ ಉಪದೇಶಕರ್ತನೂ ಆದ ಶಿವಲಿಂಗನು ನಮಗೆ ಸೌಖ್ಯವನ್ನು ಈಯಲಿ. ವ ॥ ಆಗ ಗುರುಭಕ್ತನ ಭಕ್ತಿಯ ಮಹತ್ವವನ್ನು ಅರಿತುದರಿಂದ ಉಂಟಾದ ಹರ್ಷದ ಅತಿಶಯದಿಂದ ಚೆನ್ನ ಬಸವಣ್ಣನು ಬಸವಣ್ಣನಿಗೆ ನಮಸ್ಕಾರ ಮಾಡುತ್ತ 'ನಮ್ಮ ಪುರಾತನರಲ್ಲಿ ಇಂತಹ ಗುರುಭಕ್ತಿ ಧುರಂಧರರು ಇರುವರೇ ? ಹೇಳಿರಿ' ಎನ್ನಲು ಬಸವೇಶ್ವರನು ಶಿವಗಣ ಸಮೂಹವೆಲ್ಲ ಆನಂದದಿಂದ ಕೇಳುತ್ತಿರಲು ಹೇಳುತ್ತಿದ್ದನು, ಅದು ಹೇಗೆಂದರೆ : ೨. ಮೇಘ ಮಂಡಲವನ್ನು ಮುಟ್ಟಿದ ಚಂದ್ರಕಾಂತ ಶಿಲಾ ನಿರ್ಮಿತ ಕೋಟೆಯುಳ್ಳ, ಅತ್ಯುತ್ಕೃಷ್ಟವಾದ ಸುವರ್ಣ ನಿರ್ಮಿತ ಉಪ್ಪರಿಗೆಗಳಗುಂಪುಳ್ಳ, ಅತ್ಯಂತ ಹೆಚ್ಚಿನ ಸಂಪತ್ತುಳ್ಳ ಮನೆಗಳ ಸಾಲಿನಿಂದ ಕೂಡಿದ, ಸತತವೂ ಶ್ರೇಷ್ಠ ಸೌಖ್ಯದಿಂದ ಮನೋಹರರಾದ ಜನಸಮೂಹವುಳ್ಳ, ನೋಟಕ್ಕೆ ಅತ್ಯಂತ ಸಂತೋಷಗೊಳಿಸುವ ನಗರದ ಮಧ್ಯಮಾರ್ಗಗಳುಳ್ಳ, ಸ್ಥಿರವಾದ ಕಾಂತಿಯಿಂದ ಕೂಡಿದ 'ಬೆಜ್ಜವಾಡ' ಎಂಬ ಪಟ್ಟಣವು ಭೂ

ವರಪುಣ್ಯಜನೋತ್ಕರಭಾ
ಸ್ವರಮುರುವಿಬುಧೇಂದ್ರಶೋಭಿ ಘನಭೋಗಿಸಮು
ತ್ಕರರುಚಿರಂ ಕಿನ್ನರಪುರ
ಸುರವರಪುರನಾಗಪುರಮನದು ಪೋಲ್ತೆಸೆಗುಂ ೩

ಆ ಪುರಮನಾಳ್ವನನುಪಮ
ರೂಪಂ ಗುರುಭಕ್ತಿತತ್ಪರಂ ನಯವಿನಯಾ
ಲಾಪಂ ವಿಶ್ರುತಕೀರ್ತಿಕ
ಲಾಪಂ ಗುರುಭಕ್ತರಾಜನೆಂಬವನೀಶಂ ೪

ಗುರುಚರಣಸಪರ್ಯಾಪರ
ನುರುತರ ಗುರುನಾಮಜಾಪಕಂ ಗುರುವರಭಾ
ಸುರಕಾರ್ಯಧುರ್ಯನಮಳಿನ
ಗುರುಮೂರ್ತಿಧ್ಯಾನಲೀನಮಾನಸಮಹಿತಂ ೫

ವೀರವ್ರತನಿಧಿ ವಿತತಯ
ಶೋರಂಜಿತನಂಬುರಾಶಿಗಾಂಭೀರ್ಯಗುಣಾ
ಧಾರಂ ಸಾರಾಸಾರವಿ
ಚಾರಪರಂ ಶರಣಗಣಸಮರ್ಚನಲೋಲಂ ೬

ಮಂಡಲದಲ್ಲಿ ಅಪೂರ್ವ ಶೋಭೆಯಿಂದ ಒಪ್ಪುತ್ತಿತ್ತು. ೩. ಪುಣ್ಯವಂತರೂ, ಪರಿಶುದ್ಧರೂ ಆದ ಜನರ ಸಮೂಹವುಳ್ಳ (ಶ್ರೇಷ್ಠರಾದ ಪುಣ್ಯಜನರೆಂದರೆ ಯಕ್ಷರೆಂಬ ಜನರ ಗುಂಪುಳ್ಳ) ಆ ಪಟ್ಟಣವು ಕಿನ್ನರರ ಅಲಕಾವತಿ ಪಟ್ಟಣವನ್ನು ಸರಿಗಟ್ಟಿ, ಉತ್ಕೃಷ್ಟರಾದ ಪಂಡಿತ ಶ್ರೇಷ್ಠರಿಂದ ಪ್ರಕಾಶಿಸುವ (ಉತ್ಕೃಷ್ಟರಾದ ದೇವತಾಸಮಾನರಿಂದ ಪ್ರಕಾಶಿಸುವ) ಅದು ದೇವೇಂದ್ರನ ಅಮರಾವತಿಯನ್ನು ಸರಿಗಟ್ಟಿ, ಶ್ರೇಷ್ಠರಾದ ಭೋಗಿಜನ ಸಮೂಹದಿಂದ ಮನೋಹರವಾದ (ಉತ್ಕೃಷ್ಟ ಸರ್ಪಗಳ ಸಮೂಹದಿಂದ ಮನೋಹರವಾದ) ಅದು ನಾಗಗಳ ಪಟ್ಟಣ ಎಂದರೆ ಪಾತಾಳಲೋಕವನ್ನು ಸರಿಗಟ್ಟಿ ಮೆರೆಯುತ್ತಿತ್ತು. ೪. ಆ ಪಟ್ಟಣವನ್ನು ಅಸದೃಶ ಆಕಾರವುಳ್ಳವನೂ, ಗುರುಭಕ್ತಿ ತತ್ಪರನೂ ನೀತಿ ನಮ್ರತೆಗಳಿಂದ ಕೂಡಿದ ಮಾತುಳ್ಳವನೂ, ಪ್ರಸಿದ್ಧವಾದ ಯಶಸ್ಸೇ ಆಭರಣವಾಗಿ ಉಳ್ಳವನೂ ಆದ ಗುರುಭಕ್ತರಾಜ ಎಂಬ ಭೂಮಿಾಶ್ವರನು ಆಳುತ್ತಿದ್ದನು. ೫. (ಅವನು) ಗುರುವಿನ ಪಾದಪೂಜೆಯಲ್ಲಿ ಆಸಕ್ತನಾದವನು ; ಉತ್ಕೃಷ್ಟವಾದ ಗುರುನಾಮವನ್ನು ಜಪಿಸುವವನು; ಗುರುಶ್ರೇಷ್ಠನ ಸಂಬಂಧವಾದ ಕೆಲಸ ಮಾಡುವುದರಲ್ಲಿ ಸಮರ್ಥನು ; ನಿರ್ಮಲವಾದ ಗುರುಸ್ವರೂಪವನ್ನು ಧ್ಯಾನಿಸುವುದರಲ್ಲಿ ಆಸಕ್ತವಾದ ಮನಸ್ಸಿನಿಂದ ಪೂಜ್ಯನಾದವನು ಎನಿಸಿದ್ದನು. ೬. (ಅವನು) ವೀರಶೈವಮತದ ವ್ರತಕ್ಕೆ ನಿಧಿಯಂತಿದ್ದನು; ವಿಸ್ತಾರವಾದ ಕೀರ್ತಿಯಿಂದ ಪ್ರಕಾಶಿಸುತ್ತಿದ್ದನು ; ಸಮುದ್ರದಂತೆ ಗಾಂಭೀರ್ಯಕ್ಕೆ ಆಶ್ರಯನಾಗಿದ್ದನು; ಒಳ್ಳೆಯದು, ಕೆಟ್ಟದ್ದು ಎಂಬುದನ್ನು ವಿಚಾರ ಮಾಡುವುದರಲ್ಲಿ ಆಸಕ್ತನಾಗಿದ್ದನು. ಶಿವಶರಣರ ಪೂಜೆಯಲ್ಲಿ ಆಸಕ್ತನೆನಿಸಿದ್ದನು.

ಎಂಬ ನೆಗಳ್ತೆಯನಾಳ್ದಳಿ
ಕಾಂಬಕನಂ ಪೂಜೆಗೆಯ್ವುತುಂ ಶಂಭುಕಥಾ
ಡಂಬರಮನಾಲಿಸುತೆ ಸುಗು
ಣಾಂಬುಧಿ ಗುರುಭಕ್ತರಾಜನೊಪ್ಪುತ್ತಿರ್ದಂ ೭

ತೆಂಕಣಗಾಳಿ ತೀಡೆ ಗಿಳಿಗಳ್ನಲಿದಾಡೆ ಮದಾಳಿ ಪಾಡೆ ಮಾ
ವಂಕುರವೇೞೆ ಮಾಧವಿಗೆ ಬೇೞೆ ಮುಗುಳ್ತಲೆದೋೞೆ ಪೂಸರಂ
ಬಿಂಕಮನಾಳೆ ಪದ್ಮತತಿ ತಾಳೆ ವಿಳಾಸಮನೇಳೆ ಕೋಕಿಲಾ
ಸಂಕಲಿತಸ್ವರಂ ಮಿಸುಗೆ ಚಂದುದು ಸನ್ಮಧುಮಾಸಮುರ್ವಿಯೊಳ್ ೮

ಘನಶಿಶಿರೇಂದುಮಸ್ತಮಿಸೆ ಕೋಕಿಲಕುಕ್ಕುಟರಾಜಿ ಕೂಗೆ ಮಾ
ವಿನ ಪೊಸ ಚಂದಳಿರ್ಸುಸಿಲ ಸಂಜೆಯದಾಗೆ ಪಳಂಚನಬ್ಜಕಾ
ನನಮಲರ್ದೊಪ್ಪೆ ಕೈರವದ ಸೊಂ[1]ಪಳಿವುತ್ತಿರೆ ಕೂರ್ತರೆಂಬನ
ಚ್ಚಿನ ಪೊಣರ್ವಕ್ಕಿಗ[2]ಳ್ಕೆರೆಯೆ ಮೂಡಿದುದಲ್ತೆ ವಸಂತಭಾಸ್ಕರಂ ೯

ಪೊಸ ಜೊನ್ನಂ ತನ್ನ ಕೀರ್ತಿಪ್ರಭೆ ಪಸರಿಸಿತೆಂಬಂತೆ ಸೊಂಪೇೞೆ ಬಲ್ಪಂ
ಬಿಸಿಲಾತ್ಮೀಯಪ್ರತಾಪಂ ಕವಿದವೊಲೆಸಕಂದೋೞೆ ಪಾಂಥಾರಿವರ್ಗಂ

೭. ಈ ರೀತಿಯ ಪ್ರಸಿದ್ಧಿಯನ್ನು ಹೊಂದಿ, ಸದ್ಗುಣ ಸಮುದ್ರನಾದ ಆ ಗುರು ಭಕ್ತ ರಾಜನು ಲಲಾಟನೇತ್ರನಾದ ಶಿವನನ್ನು ಪೂಜಿಸುತ್ತ ಶಿವನ ಕಥಾತಿಶಯಗಳನ್ನು ಕೇಳುತ್ತ ಒಪ್ಪುತ್ತಿದ್ದನು, ೮. ತೆಂಕಣ ದಿಕ್ಕಿನ ಗಾಳಿಯು ಬೀಸಲು, ಗಿಳಿಗಳು ಸಂತೋಷದಿಂದ ಆಡಲು, ಮದ ವಿಶಿಷ್ಟ ದುಂಬಿಗಳು ಝೇಂಕಾರವನ್ನು ಮಾಡಲು, (ಗಿಡ ಬಳ್ಳಿಗಳಿಗೆ) ಚಿಗುರಿನ ಮೊಳಕೆಗಳು ಬಿಡಲು, ಮಾಧವೀ ಬಳ್ಳಿಗೆ ಹೊಸದಾದ ಮೊಗ್ಗುಗಳು ಏಳುತ್ತಿರಲು, ಮನ್ಮಥನು ಬಿಂಕವನ್ನು ಹೊಂದುತ್ತಿರಲು, ಕಮಲಗಳ ಸಮೂಹವು ವಿಲಾಸಗೊಳ್ಳಲು, ಕೋಗಿಲೆಗಳ ಸ್ವರಗಳು ಎಲ್ಲ ಕಡೆಗೂ ವ್ಯಾಪಿಸಿ ಹೊರಹೊಮ್ಮುತ್ತಿರಲು, ಶ್ರೇಷ್ಠ ವಸಂತ ಋತುವು ಭೂಮಿಯಲ್ಲಿ ಶೋಭಿಸುತ್ತ ಬಂದಿತು. ೯, ಘನವಾದ ಶಿಶಿರ ಋತುವೆಂಬ ಚಂದ್ರನು ಮುಳುಗಲು, ಕೋಗಿಲೆಗಳೆಂಬ ಕೋಳಿಗಳ ಸಾಲು ಕೂಗುತ್ತಿರಲು, ಮಾವಿನ ಆ ಹೊಸ ಕೆಂಪು ಚಿಗುರು ಬೆಳಗಿನ ಸಂಧ್ಯಾ ಕಾಲವಾಗಿರಲು, (ಪ್ರಾತಃಕಾಲವಾಗಿರಲು), ಕಮಲಗಳ ವನವು ಪಳಚ್ಚೆಂದು ಅರಳಿಕೊಂಡು ಶೋಭಿಸಲು, ಕನ್ನೈದಿಲೆಗಳ ಅತಿಶಯವು ಅಳಿದುಹೋಗುತ್ತಿರಲು, ಪ್ರೇಮಿಗಳೆಂಬ ಚಕ್ರವಾಕಪಕ್ಷಿಗಳು ಒಂದನ್ನೊಂದು ಸೇರಲಾಗಿ, ವಸಂತಋತುವೆಂಬ ಸೂರ್ಯನು ಮೂಡಿದನಲ್ಲವೇ ? ೧೦. ಸೂರ್ಯ ಚಂದ್ರರಿಗೆ ಅಭಿವೃದ್ಧಿಯನ್ನುಂಟುಮಾಡುವ, (ಆಪ್ತರಾಜರಿಗೆ ಅಭಿವೃದ್ಧಿಯನ್ನುಂಟುಮಾಡುವ), ಭೂಮಿಗೆ ಪರಿಮಳವನ್ನುಂಟುಮಾಡುವ, (ಭೂಮಿಯ ಜನಕ್ಕೆ ಸಂತೋಷವನ್ನುಂಟುಮಾಡುವ) ವಸಂತನೆಂಬ ರಾಜನು ತನ್ನ ಕೀರ್ತಿಯ ಪ್ರಭೆಯು

1 ಪೆಂ(ಅ) 2 ಳ್ನಲಿ(ಮು)

ಕುಸಿದತ್ತಂ ನೀರ್ಗಳಂ ಪ್ರೋಕ್ಷಿರೆ ಘನವಿಭವಂಬೆತ್ತು ಕಣ್ಗೊಪ್ಪಿದಂ ಪೆಂ
ಪೆಸೆವನ್ನಂ ಚೈತ್ರರಾಜಾಭ್ಯುದಯಕರನಿಜಾಮೋದದು ಚೈತ್ರರಾಜಂ ೧೦

ವ॥ ಅಂತೆಯ್ತಂದ ಚೈತ್ರಮಾಸದೊಳೊಂದು ವಾಸರದೊಳಾ ಗುರುಭಕ್ತರಾಜಂ ಬಿನದಂಬೆತ್ತು—

ವನಕೇಳೀಲೋಲಚಿತ್ತಂ ತರಳ ಬನತ ತತ್ಕೇಳಿಯಂ ತೀರ್ಚಿ ಸೌಂದ
ರ್ಯ ನಿಧಾನಂ ಮನೋಹಾರಾಭರಣವಿಳಸಿತಂ ಭೂರಿಸೈನ್ಯಪ್ರಯುಕ್ತಂ
ಜನತಾಲೋಕಲೋಚನೋತ್ಸವಸಂಪತ್ಕರನುರುವಿಭವಂ ಸಿಂಧುರಾರೂಢನಾ ನಂ
ದನದಿಂದೆಯ್ತರ್ಪಿನಂ ಮುಂದೆಸೆದುದು ಗಣಿಕಾವಾಟಮಾಣಿಕ್ಯಹರ್ಮ್ಯಂ ೧೧

ವೀಣೆಗಿಳಿಯನೋದಿಸುವ ದಂ
ಜಾಳರತಿಶಾಸ್ತ್ರಮನೆ ಕಲ್ವ ಪಲ್ಲಕಿಯಂ ಮುಸಂ
ಗೊಳೆ ಬಾಜಿಪ ಸಿಂಗರಿಸುವ
ವಿಳಾಸಿನೀಜನಮದಲ್ಲಿ ಪಲೆ ನೆಲಸಿರ್ದಂ ೧೨

ಬಿನ[1]ದಮೆನಿಪ್ಪ ಬೇರ್ಂಟೆಗೆ ದಾಗಿಸಿ ಪಾರ್ವ್ವ ಯುವಪ್ರತಾಪನೊ
ತನದೃಗಜಾಲಮಂ ಮಿಳಿಯೋರ್ದಳಿಸಂದಿರ ಪುರ್ಬುವಿಲ್ಲನೊ

ಪ್ರಸರಿಸಿತ್ತು ಎಂಬ ಹಾಗೆ ಸೊಗಸಾದ ಚಂದ್ರಿಕೆ ನೊಗಸನ್ನು ಹೊಂದಲು, ತನ್ನ ಪ್ರತಾಪವು ಕವಿದಹಾಗೆ ಬಲವಾದ ಬಿಸಿಲು ಬೀಳುವುದಕ್ಕೆ ಆರಂಭಿಸಲು, ದಾರಿ ಹೋಕರೆಂಬ ಪಶುಗಳ ಗುಂಪು ಕೂಡಿದು ಹೋಗಿ, ಎಲ್ಲ ಕಡೆಯಲ್ಲೂ ನೀರನ್ನು ಕೊಕ್ಕು ಇರಲು (ಅಂದರೆ ಸ್ನಾನಪಾನಾದಿಗಳಿಗೆ ನೀರನ್ನು ಆಶ್ರಯಿಸಿರಲು) ಅತ್ಯಂತ ವೈಭವದಿಂದ ಕೂಡಿ, ಚೈತ್ರರಾಜನು ಪ್ರಕಾಶಿಸುವಹಾಗೆ ಕಂಗೊಳಿಸಿದನು. ವ ॥ ಹಾಗೆ ಬಂದ ಚೈತ್ರಮಾಸದಲ್ಲಿ ಒಂದು ದಿವಸ ಆ ಗುರು ಭಕ್ತ ರಾಜನು ವಿನೋದದಿಂದ ಕೂಡಿ ೧೧. ಉಪವನದ ಆಟದಲ್ಲಿ ಆಸಕ್ತಿಯುಳ್ಳ ಮನಸ್ಸುಳ್ಳವನಾಗಿ ವನಕ್ಕೆ ಹೋಗಿ, ಆ ಆಟವನ್ನು ಪೂರೈಸಿಕೊಂಡು ಸೌಂದರ್ಯದಿಂದ ಕೂಡಿದವನಾಗಿ, ಮನೋಹರವಾದ ಆಭರಣಗಳಿಂದ ಅಲಂಕಾರಗೊಂಡು ದೊಡ್ಡ ಸೈನ್ಯದಿಂದ ಕೂಡಿ. ಲೋಕದ ಜನ ಸಮೂಹದ ಕಣ್ಣಿಗೆ ಸಂತೋಷ ಸಂಪತ್ತನ್ನುಂಟು ಮಾಡುವವನಾಗಿ. ಅತ್ಯಂತ ವೈಭವದಿಂದ ಆನೆಯನ್ನು ಹತ್ತಿ ಆನಂದದಿಂದ ಬರುತ್ತಿದ್ದನು. ಮುಂಭಾಗದಲ್ಲಿ ಸೂಳೆಯರ ಸಮೂಹದ ರತ್ನ ನಿರ್ಮಿತ ಉಪ್ಪರಿಗೆ ಮನೆಯು ಶೋಭಿಸಿತು. ಅದು !! ೧೨. ಆ ವೇಶ್ಯಾಗೃಹದಲ್ಲಿ ವೀಣೆ ಗಿಳಿಗಳನ್ನು ಓದಿಸುವ, ಮನೋಹರವಾದ ರತಿ ಶಾಸ್ತ್ರವನ್ನು ಕಲಿಸುವ, ದಾಸಿಯರನ್ನು ಆಳುವವರಾಗಿ ನುಡಿಸುವ. ಅಲಂಕಾರ ಮಾಡಿಕೊಳ್ಳುವ ವಿಲಾಸಿನಿಯರಾದ ಸ್ತ್ರೀಯರು ನೆಲಸಿದ್ದರು. ೧೩. ಈ ವಿನೋದವೆನಿಸುವ ದೊಡ್ಡ ಬೇಟೆಗೆ ಹೊರಟು ... ಕಣ್ಣೆಂಬ ಮೃಗಗಳ ಸಮೂಹ

---

[1] ನ(ವು:)

ಯ್ಯನೆ ಸೆಳೆದೀಕ್ಷಣಾಸ್ತ್ರದಿನೆಸಲ್ಕೆಗಳ್ದಂಗಜನೆಂಬ ಲುಬ್ಧಕೇಂ
ದ್ರನ ಪೊಸತೋಟಿನೊಡ್ಡಣೆಯಿದೆಂದೆನೆ ಸೌಭಗಮಂದೆಂ ಮನೋಜ್ಞಮೋ ೧೩

ತೊಳಗುವ ತೊಂಡೆವಣ್ದುಟಿಯುಂ ನೀಳ್ದಲರ್ಗಣ್ಗಳ ಪೂರ್ಣಚಂದ್ರನಂ
ಪಳಿದೆಸೆವಾಸ್ಯಬಿಂಬದ ಘನಸ್ತನದಳ್ಪುಮಮಧ್ಯದುನ್ನತೋ
ಜ್ವಳವಿಳಸನ್ನಿತಂಬದ ಸುವರ್ಣದ ಬಾಳೆಯ ಬೆಳ್ಪನೇಳ್ಗೆಯುಂ
ತಳೆದೆಸೆವೂರುಮುಂದಳೆದ ಮೆಲ್ಲಡಿಯುಂದಮದೇನಳುಂಬಮೋ ೧೪

ತೊಳಪೆಳಮುತ್ತಿನೇಕಸರಮೊಪ್ಪುವ ಕುಂಕುಮದುಣ್ಪು ಕೇತಕೀ
ದಳದವತಂಸಮಾಳ್ದೆಸೆವ ಸೋರ್ಮುಡಿ ಮಲ್ಲಿಗೆ ಬೊಲ್ಲೆಯುಂ ಮನಂ
ಗೊಳಿಪ ಸುವರ್ಣಕಾಂಚಿ ಕನಕಾಂಬರಮುಂ ಕಿತರತ್ನಭೂಷಣಾ
ವಳಿ ಮೃಗಭೂಲಲಾಮಮೆಸೆವುತ್ತಿರೆ ಕಾಮಿನಿ ಕಣ್ಗೆ ತೋಱಿದಳ್ ೧೫

ಅಳಿಕಳಭಂಗಳೋ ಕುಮುಳಬಂಬಲೊ ಪೂರ್ಣಶಶಾಂಕಬಿಂಬಮೋ
ತೊಳಗುವ ಪಕ್ಕ್ರಮೋ ಮದನವಾಜಿಯೊ ಪೆರ್ಮೊಲೆಯೋ ಮನೋಜನು
ಜ್ವಳರಥಮೋ ಕಟೀತಟಮೊ ಮಾಣಗಜೇಂದ್ರಮೊ ಮಂಜುಳೋರುಮಂ
ಡಳಮೊ ವಿರಾಜಿಪಾ ರಮಣಿಯಂಗಮೊ ಕಾಮನ ಚಾತುರಂಗಮೋ ೧೬

ವನ್ನು ಮರೆಯಲ್ಲಿ ಕಣ್ಣಿದರ್ೞ ಎಳೆಯ ಮಡಿಗೆಯರ ಹುಬ್ಬೆಂಬ ಬಿಲ್ಲನ್ನು ಮೆಲ್ಲನೆ ಸೆಳೆದು, ನೋಟವೆಂಬ ಬಾಣದಿಂದ ಹೊಡೆಯುವುದಕ್ಕೆ ಪ್ರಯತ್ನಗೊಂಡಿರುವ ಮನ್ಮಥನೆಂಬ ಬೇಡನ ಹೊಸ ಮುತ್ತಿಗೆಯು ಬಲಿದೊಡ್ಡೋ ಎಂಬಂತೆ ಆ ಉಪ್ಪರಿಗೆಯು ಏನು ಮನೋಹರವಾಗಿತ್ತೋ ! ೧೪. ಪ್ರಕಾಶಿಸುವ ತೊಂಡೆಯ ಹಣ್ಣಿನಂತಿರುವ ತುಟಿ ಉದ್ದವಾದ ಹೂವಿನಂತಿರುವ ಕಣ್ಣುಗಳು, ಪೂರ್ಣ... ಚಂದ್ರನನ್ನು ನಿಂದಿಸಿ, ಶೋಭಿಸುವ ಮುಖ ಮಂಡಲ, ದಪ್ಪನಾದ ಮೊಲೆ, ಸಣ್ಣದಾದ ಒಳ್ಳೆಯ ನಡು, ದಪ್ಪನಾಗಿಯೂ, ಮನೋಹರವಾಗಿಯೂ ಪ್ರಕಾಶಿಸುವ ಕಟಿಪ್ರದ್ಭಾಗ, ಸುವರ್ಣದ ಬಾಳೆಯ ಬೆಳ್ಪಿನ ಹಿರಿಮೆಯನ್ನು ಹೊಂದಿ ಶೋಭಿಸುವ ತೊಡೆ, ಮೃದುವಾದ ಕಾಲಿನ ಆ ಚೆಲುವು ಏನು ಅಧಿಕವೋ ! ೧೫. ಹೊಳೆಯುವ ಎಳೆಯ ಮುತ್ತಿನ ಏಕಾವಳಿಸರ, ಶೋಭಿಸುವ ಕುಂಕುಮದ ಸುಗಂಧಲೇಪನ. ಕೇದಗೆ ಹೂವಿನ(ಕೇತಕಿ) ಶಿರೋಭೂಷಣವನ್ನು ಹೊಂದಿ ಶೋಭಿಸುವ ಉದ್ದನೆಯ ಮುಡಿ. ಉದ್ದವಾದ ಜಡೆ, ಮಲ್ಲಿಗೆ ಹೂವಿನ ಅಲಂಕಾರದ ತುರುಬು, ಮನೋಹರವಾದ ಬಂಗಾರದ ನಡುಪಟ್ಟಿ. ಹೊಂಬಣ್ಣದ ಸೀರೆ. ಧರಿಸಲ್ಪಟ್ಟ ರತ್ನಾಭರಣ, ಕಸ್ತೂರಿಯ ಹಣೆಬೊಟ್ಟು ಪ್ರಕಾಶಿಸುತ್ತಿರಲು, ಕಾಮಿನಿಯೊಬ್ಬಳು ಕಣ್ಣಿಗೆ ಕಂಡಳು. ೧೬. ಮುಂದುಂಬಿಗಳೋ, ಕೇಶಗಳ ಸಮೂಹವೋ ! ಪೂರ್ಣಚಂದ್ರನ ಬಿಂಬವೋ ಪ್ರಕಾಶಿಸುವ ಮುಖವೋ ! ಮನ್ಮಥನ ಕುದುರೆಯೋ ಪೆರ್ಮೊಲೆಯೋ ! ಮನ್ಮಥನ ಉಜ್ವಲರಥವೋ, ನಡುವೋ ! ಮನ್ಮಥನ ಗಜಶ್ರೇಷ್ಠವೋ, ಮನೋಹರವಾದ ತೊಡೆಗಳೋ ? ಕಾಮನ ಚತುರಂಗಬಲವೋ, ಶೋಭಿ

ವ॥ ಎನಿಸಿ ರಂಜಿಸಿ ತನ್ನನತಿಮಧುರಸರಸತರಳಾಪಾಂಗದಿನಭೀಕ್ಷಿಸುತ್ತುಮಿರ್ಪಾ[1]—

ಪಣ್ಯಾಂಗನೆಯತಿಶಯ ಲಾ
ವಣ್ಯಮನವಳಂಗದಂದಮುಮನಾಕೆಯ ತಾ
ರುಣ್ಯದ ಸೊಬಗಂ ಕಂಡಂ
ಫಣ್ಯಧಿಪಾಭರಣಚರಣಸರಸಿಜಭೃಂಗಂ ೧೭

ವ॥ ಅಂತು ಕಂಡವಳ ರೂಪಾತಿಶಯಕ್ಕೆ ತಲೆದೂಗಿ ಬೆಱಗುವಟ್ಟು—

ಇವಳತನುರಾಜ್ಯಲಕ್ಷ್ಮಿಯೊ
ಯಿವಳಂಗಜರಾಜಮಂತ್ರಶಕ್ತಿಯೊ ಬಗೆವಂ
ದಿವಳಸಮಾಸ್ತ್ರಂ ಸಲೆ ಭಜಿ
ಸುವ ದೇವಿಯೊಯೆಂದು ಮಗುಳ್ದಭೀಕ್ಷಿಸುತಿರ್ದಂ ೧೮

ವ॥ ಆಗಳ್—

ಲಲನಾನೇತ್ರತ್ರಿಭಾಗದ್ಯುತಿತತಿಮದನಂ ಮಲ್ಲಿಕಾಶೋಕನೀಲೋ
ತ್ಪಲವೆಂಬೀ ಮೂಱು ಬಾಣಂಗಳನಸವಸದಿಂದೊರ್ಮೆ ತೊಟ್ಟೆಚ್ಚನಂಬಂ
ತಲರ್ದೊಪ್ಪಂಬೆತ್ತು ಬೇಗಂ ಪರಿದವನೆರ್ದೆಯೊಳ್ನಾಂಟಿ ತತ್ಕಾಲಮಂ ಪಾ
ರ್ದಲರಂಬಂ ಮಾಣದೇಂ ನಾಂಟಿಸಿದನೊ ರಮಣೀಲೋಕರಾಜಂ ಮನೋಜಂ ೧೯

ಸುವ ಆ ವೇಶ್ಯೆಯ (ಹೆಂಗಸಿನ) ಶರೀರವೋ ! ವ॥ ಹೀಗೆನಿಸಿ ಶೋಭಿಸುತ್ತ ತನ್ನನ್ನು ಬಹುಮಧುರವಾಗಿಯೂ, ಮನೋಹರವಾಗಿಯೂ, ಚಂಚಲವಾಗಿಯೂ ಇರುವ ಕಡೆಗಣ್ಣುಗಳಿಂದ ನೋಡುತ್ತಿರುವಾಗ. ೧೭. ಆದಿಶೇಷನನ್ನು ಭೂಷಣವಾಗಿ ಉಳ್ಳ ಶಿವನ ಪಾದ ಕಮಲಕ್ಕೆ ಭ್ರಮರಪ್ರಾಯನಾದ ಗುರುಭಕ್ತ ರಾಜನು ಆ ಸೂಳೆಯ ಅತಿ ಶಯವಾದ ಲಾವಣ್ಯವನ್ನೂ ಅವಳ ಶರೀರದ ಚೆಲುವನ್ನೂ, ಆಕೆಯ ತಾರುಣ್ಯದ ಸೊಗಸನ್ನೂ ಕಂಡು ವ॥ ಆ ರೀತಿ ಕಂಡ ಅವಳ ರೂಪಾತಿಶಯಕ್ಕೆ ತಲೆದೂಗಿ, ಆಶ್ಚರ್ಯ ಪಟ್ಟು ೧೮. ಇವಳೇನು ಮನ್ಮಥನ ರಾಜ್ಯಲಕ್ಷ್ಮಿಯೋ ? ಇವಳು ಅನಂಗನ ಮಂತ್ರಾಭಿಮಾನಿ ದೇವತೆಯೋ ? ಯೋಚಿಸುವಲ್ಲಿ ಇವಳು ಮನ್ಮಥನು ಚೆನ್ನಾಗಿ ಸ್ತೋತ್ರ ಮಾಡುವ ದೇವಿಯೋ ? ಎಂದು ಪುನಃ ದಿಟ್ಟಿಸಿ ನೋಡುತ್ತ ಇದ್ದನು. ವ॥ ಆಗ. ೧೯. ಮನ್ಮಥನು ಮಲ್ಲಿಗೆ, ಅಶೋಕ, ನೀಲೋತ್ಪಲಗಳೆಂಬ ಮೂರೇ ಬಾಣಗಳನ್ನು ಅವಸರದಿಂದ ಒಮ್ಮೆ ಬಿಲ್ಲಿಗೆ ಹೂಡಿ, ಹೊಡೆದನೋ ಎಂಬಂತೆ ಈ ಲಲನೆಯ ಕಣ್ಣಿನ ಮೂರು ಭಾಗಗಳಾದ ಮೊದಲು ಕೊನೆಯ, ಮಧ್ಯ ಭಾಗಗಳಲ್ಲಿರುವ (ಕ್ರಮವಾದ) ಬಿಳುಪು, ಕೆಂಪು, ಕಪ್ಪು ಕಾಂತಿಗಳು ಅರಳಿ ಒಪ್ಪವನ್ನು ಹೊಂದಿ ಬೇಗನೆ ಹರಿದು ಹೋಗಿ ಅವನ ಎದೆಯಲ್ಲಿ ನಾಟಿದವು. ಸ್ತ್ರೀ ಜನಗಳಿಗೆ ಅಧಿಪತಿಯಾದ ಮನ್ಮಥನು ಅದೇ ಸಮಯವನ್ನು ಕಾಯುತ್ತ ತಪ್ಪದೆ ಹೂವಿನ ಬಾಣಗಳನ್ನು ಅದೇನು ನಾಟಿ

1 + ಗಳ್ (ಅ, ಮು, ಚ)

ಇಸೆ ಬಗೆಯನುರ್ಚಿ ಧೈರ್ಯದ
ಬೆಸುಗೆಯ ಬಿಗುಪಂ ಸಡಿಲ್ಚಿ ಕಾಮಾಗ್ನಿಯ ಬ
ಲ್ಬಿಸುಪಂ ತನುವಿನೊಳೆತ್ತಂ
ಪಸರಿಸಿತದು ಭೂಮಿಪಾಲಚೂಡಾಮಣಿಯಾ ೨೦

ನಡೆಗಿಡೆ ಚಿತ್ತಂ ಧೃತಿಲತೆ
ಕುಡಿಗಿಡೆ ಮನಸಿಜ ವಿಕಾರತತಿಮಾನಸದೊ
ಳ್ತಡೆಗಿಡೆ ಕೈಯಂಕುಶಮದು
ಪಡಲಿಡೆ ಧರಣಿಯೊಳೆ ವಿರಹವಿಹ್ವಳನಾದಂ ೨೧

ವ॥ ಅಂತು ವಿರಹವಿಷಾದವಿಧುರಿತನಾಗಿ ತಾಂ ವಿವೇಕನಿಧಿಯಪ್ಪುದಱಿಂ ಚೆಲ್ಲಿದ ಕರಣಂಗಳಂ ಮೆಲ್ಲನೆ ಸಂತವಿಸಿಕೊಂಡು ತನ್ನೊಳಿಂತೆಂದಂ—

ಕಾಮಿನಿಯಪಾಂಗರುಚಿಸೌ
ದಾಮಿನಿ ಪಾಱಿಸಿದುದೆನ್ನ ಧೃತಿಹಂಸನನಿ
ನ್ನೇಮಾತೊ ಕಾಮನಂಬು ನಿ
ಕಾಮಂ ನಟ್ಟುರ್ಚಿ ಪಾಯ್ದುದೆನ್ನಯ ಮನಮಂ ೨೨

ವ॥ ಎಂದು ನೊಂದು ಕಜ್ಜದುಜ್ಜವಣೆಯಂ ವಿಚಾರಿಸಿ—

ಸಿದನೋ ! ೨೦. ಆ ಬಾಣವನ್ನು ಪ್ರಯೋಗಿಸಲು ಆ ರಾಜಶ್ರೇಷ್ಠನ ಮನಸ್ಸನ್ನು ಭೇದಿಸಿ, ಧೈರ್ಯದ ಬೆಸುಗೆಯ ತೀಕ್ಷ್ಣತೆಯನ್ನು ಸಡಿಲುಗೊಳಿಸಿ, ದೇಹದ ಎಲ್ಲ ಕಡೆಗೂ ಕಾಮಾಗ್ನಿಯ ಹೆಚ್ಚಾದ ಬಿಸಿಯು ಪ್ರಸರಿಸಿತು. ೨೧. ಚಿತ್ತವು ನಡೆಗೆಟ್ಟಿತು ; ಧೈರ್ಯವೆಂಬ ಬಳ್ಳಿಯು ಕುಡಿಚಾಚುವುದು ನಿಂತಿತು (ಕುಡಿಗೆಟ್ಟಿತು) ; ಮನಸ್ಸಿನಲ್ಲಿ ಮನ್ಮಥ ಸಂಬಂಧವಾದ ವಿಕಾರಗಳ ಸಮೂಹವು ನಿಂತುಕೊಂಡಿತು ; ಕಯ್ಯಲ್ಲಿ ಹಿಡಿದ ಆ ಅಂಕುಶವು (ಜಾರಿ) ಭೂಮಿಯ ಮೇಲೆ ಬಿದ್ದಿತು ; ವಿರಹದಿಂದ ವ್ಯಾಕುಲಗೊಂಡನು. ವ॥ ಈ ರೀತಿ ವಿಯೋಗದಿಂದುಂಟಾದ ಮನಸ್ಸಿನ ಕ್ಲೇಶದಿಂದ ವ್ಯಾಕುಲಗೊಂಡವನಾಗಲು, ತಾನು ವಿವೇಕ ನಿಧಿಯಾದ್ದರಿಂದ ಚಂಚಲಗೊಂಡ ಇಂದ್ರಿಯಗಳನ್ನು ಮೆಲ್ಲನೆ ಸಮಾಧಾನಪಡಿಸಿಕೊಂಡು, ತನ್ನಲ್ಲಿಯೇ ಹೀಗೆಂದುಕೊಂಡನು. ೨೨. ಈ ಕಾಮಿನಿಯ ಕಡೆಗಣ್ಣಿನ ಕಾಂತಿಯೆಂಬ ಮಿಂಚು, ನನ್ನ ಧೈರ್ಯವೆಂಬ ಹಂಸ ಪಕ್ಷಿಯನ್ನು ಹಾರಿಸಿತು. ಹೇಳುವುದಿನ್ನೇನುಂಟೋ ! ಕಾಮನ ಬಾಣವು ಅತ್ಯಂತವಾಗಿ ನನ್ನ ಮನಸ್ಸನ್ನು ಹೊಕ್ಕು ಭೇದಿಸಿ ಹೊರ ಹೊರಟಿತು. ವ॥ ಹೀಗೆಂದು ನೊಂದುಕೊಂಡು ಕಾರ್ಯದ ಮಹತ್ವವನ್ನು

ಸುದತಿಯೀವಳ್ ಶಿವನ
ಪದಭಕ್ತೆ ಗಡೀಕೆಯೊಡನೆ ನೆರೆವೊದವುವ ಸೌ
ಖ್ಯದ ಸವಿಯನೀಶ್ವರಂಗೊ
ಪ್ಪೊದಲರ್ಪಿಸಿ ಕೊಳ್ವೆನೆನಗದಾವುದೊ ದೋಷಂ 23

ಸಂದಿಸಿಯದ್ಯದಾತ್ಮಹಿತಮೆಂದೆನುತುಂ ಪಲೆ ಮೈಥುನೇ ರತೇ
ರ್ಯೆಂದೆನುತುಂ ಪುರಾತನ ಶ್ರುತಿಸ್ಮೃತಿಯುಂಟು ಬೇ
ರೊಂದೆನಿಸಿರ್ದ ಪಕ್ಷದಿಂದು ಸಲ್ವುದು ಭಕ್ತಿಯುತಂಗೆ ದೋಷಮಾ
ವಂದದಿನಪ್ಪುದೀಕೆಯು ರತಕ್ಕೆ ವಿಚಾರಿಸಿ ನೋಡೆ ನಾಡೆಯುಂ 24

೨೫ ವ|| ಅದರಿಂದೀ ಗಣಿಕಾಂಗನೆಯನಭಿಮತಮಾಗನುಭವಿಪೆನೆಂದು ನಿರ್ಧರಿಸಿ ನಿಜಗೃಹಾಗತನವಳ್ಗೆ ತಕ್ಕ ಧನಕನಕವಸನವಸ್ತ್ರಾಭರಣಾದಿಗಳನಾಪ್ತನಿಂದಮಾ ಶಿಷ್ಯೋಳಿತ್ತವಳೊತ್ತೆಗಳುವ ಲೋಡನವಂ ತಂದು ನೀಡೆ ನತ್ತಕಾರ್ತಿ ಯೊತ್ತೆಯುಮನೊಲ್ಲೆನಿತ್ತಲೀ ದ್ವಾರದಿಂದಂ ವಿಜಂಬಿಸಿ ನುಡಿಯೆ ದೂತಂ ನಿಜನಾಥನಿರ್ದೆಡೆಗೇಳ್ತಂದವಳಿತ್ತೊತ್ತೆಯೊಲ್ಲದೊತ್ತರಿಸಿ ಬಿತ್ತರಿಸಿದುದನೆಲ್ಲಮಂ ಸವಿಸ್ತರಂ ಪೇಳೆ ಮೋಹಾತುರಂ ಕೇಳ್ದವಳ ಸೆಜ್ಜೆವನೆಯೆಡೆಗೆ ಗುರುಭಕ್ತರಾಜಂ ತಾನೆ ಬಂದು ತನ್ನಿತಂಬಿನಿಯನ ಭಿನವರಾಗರಸಭರಿತದೃಷ್ಟಿಯಿನವಲೋಕಿಸಿ ಸದೈನ್ಯಮಧುರಾಲಾಪದಿನಿಂತೆಂದಂ—

ನೆನೆದು ೨೩. ಸೂಳೆಯಾದ ಈ ಸ್ತ್ರೀಯು ಶಿವನ ಪಾದಭಕ್ತೆಯಲ್ಲವೇ ? ಇವಳೊಡನೆ ಕೂಡಿ, ಉಂಟಾಗುವ ಸೌಖ್ಯದ ಸವಿಯನ್ನು ಈಶ್ವರನಿಗೆ ಒಪ್ಪುವ ನಿತ್ಯವಾಗಿ ಅರ್ಪಿಸಿ ಕೊಳ್ಳುವೆನು. ಇದರಲ್ಲಿ ನನಗೆ ದೋಷವೇನಾದೀತು ! ೨೪. ಯಾವುಯಾವುದು ಆತ್ಮ ಹಿತವಾದುದೆನಿಸಿ ಒದಗಿಬರುವುದೋ ಅದು ಒಂದು ಪಕ್ಷದಲ್ಲಿ ಮೈಥುನ ಕ್ರಿಯೆಯಲ್ಲಿ ಆಸಕ್ತಿಯುಳ್ಳದ್ದೆನಿಸಿದ್ದಾಗಿದ್ದರೂ. ಭಕ್ತಿಯುತರಿಗೆ ಸಲ್ಲುವುದೆಂದು, ಸ್ಪಷ್ಟವಾಗಿ ಹೇಳಿರುವ ಶೈವ ಪುರಾಣದ ಒಂದು ಒಳ್ಳೆಯ ಮಾತು ಉಂಟು. (ಆದ್ದರಿಂದ) ಇವಳೊಡನೆ ರತಿ ಸಂಬಂಧವಾದ ವ್ಯವಹಾರ ವಿಷಯದಲ್ಲಿ ವಿಚಾರಿಸಿ ನೋಡಿದರೆ ದೋಷವು ಯಾವರೀತಿಯಿಂದ ಉಂಟಾಗಲು ಸಾಧ್ಯ ? ವ|| ಆದ್ದರಿಂದ ಈ ವೇಶ್ಯಾಸ್ತ್ರೀಯನ್ನು ನಿಜವಾಗಿ ಅನುಭವಿಸುವೆನು, ಎಂದು ನಿರ್ಧಾರಮಾಡಿ, ತನ್ನ ಮನೆಗೆ ಬಂದು, ಆ ವೇಶ್ಯೆಗೆ ತಕ್ಕ ಧನ, ಕನಕ, ವಸ್ತ್ರ, ರತ್ನಾಭರಣಾದಿಗಳನ್ನು ತನ್ನ ಸ್ನೇಹಿತನ ಕೈಯಲ್ಲಿ ಕೊಟ್ಟು ಒತ್ತೆಯ ಹಣವನ್ನು ಕಳಿಸಲಾಗಿ ಕೂಡಲೇ ಅವನು ತಂದುಕೊಡಲು, ಅವಳು ಒತ್ತೆಯ ಹಣವನ್ನು ಒಲ್ಲೆನು ; ಇತ್ತ ಕಡೆಗೆ ಬಾರದಿರು, ಎಂದು ತಿರಸ್ಕರಿಸಿ ನುಡಿಯಲಾಗಿ, ದೂತನು ತನ್ನ ಒಡೆಯನ ಹತ್ತಿರಕ್ಕೆ ಬಂದು ಅವಳು ಒತ್ತೆಯನ್ನು ಒಲ್ಲದ ಹಣವನ್ನು ನುಡಿದುದನ್ನೂ, ಹೇಳಿದುದನ್ನೆಲ್ಲವನ್ನೂ, ಸವಿಸ್ತಾರವಾಗಿ ಹೇಳಲಾಗಿ, ಗುರುಭಕ್ತ ರಾಜನು ಬಹಳ ಅನುರಾಗಾತಿಶಯದಿಂದ ಕೂಡಿದ ಅವನು ಅವಳ ಶಯ್ಯಾಗೃಹದ ಕಡೆಗೆ ತಾನೇ ಬಂದು ಆ ಸುಂದರಿಯನ್ನು ನೂತನ ಅನುರಾಗಾತಿಶಯ ರಸಭರಿತವಾದ ಕಣ್ಣಿನಿಂದ ನೋಡುತ್ತಾ, ದೀನತೆಯಿಂದ ಕೂಡಿದ ಮಧುರಮಾತು ;

ಎಲೆ ಭಾಮಾಮಣಿ ನಿನ್ನಪೂರ್ವತರ ಸೌಂದರ್ಯಕ್ಕೆ ಕಣ್ಸೋಲಲಾಂ
ತೊಲವಿಂದಾಂ ನಿನಗೊತ್ತೆಯಂ ಕಳುಹಿದಂ ನೀನೊಲ್ಲೆನೆಂಬುದೇಂ
ಚಲವೋ ವೈಭವದೋ ಮನಃಸ್ಥಿತಿಯನಾರ‍್ಯಂದನೋ ಬಿಂಕವೋ
ನಲವಾಜಿರ್ದುದೊ ನಾಣ ಪೆರ್ಚುಗೆಯೊ ವಿತ್ತಂ ಸಾಲದೆಂಬಾಸೆಯೋ ೨೫

ಚಲಮುಂ ವೈಭವಮುಂ ಮನಸ್ಥಿತಿಯನಾರ‍್ಯಂದಮುಂ ಬಿಂಕಮುಂ
ನಲವಾಜಿರ್ಪುದುಮಾಗದೆಲ್ಲದ ನಿನಗೆ ಸ್ನೇಹಕ್ಕೆ ನಾಣಿಲ್ಲದು
ಜ್ವಲವೇಶ್ಯಾಮತಕಲ್ಪವಿತ್ತಮೆನಗೆ ನಿನ್ನತ್ಯಾಸೆಯೆಂಬುದ
ಗ್ಗಲವಾರಾಶಿಗೆ ಸೇತುಗಟ್ಟಿಸೆನೆ ಪೇಳ್ವೆಲ್ಲೆ ಛಂದಿಂ ಕಾಮಿನೀ ೨೬

ಜಡಮತಿಯೆಂದೆಯಪ್ಪೊಡೆ ಮಹಾಚತುರಂ ಬೆಳೆದವನಲ್ಲದಂ
ಬೊಡೆ ಧರಣೀಶಸೂನು ನೆಗಳ್ದಂದದಮಪ್ಪೊಡೆ ಮಿಂಡನಪ್ಪೊಡಾಂ
ಮೃಡಪದಭಕ್ತನಪ್ಪ ಬಳಸಾಧಕನೆನ್ನೊಡೆ ಬಂಧುವಾಗ್ಯನೇಂ
ಬೊಡೆ ಶಿವಭಕ್ತಬಂಧು ಕುಟಿಲಾತ್ಮನೆಂದೊಡೆ ಸದ್ಗುಣಾಸ್ಪದಂ ೨೭

ಸರಿವರೆಯುಮಲ್ಲಮೆಂದೊಡೆ
ತರಳೇಕ್ಷಣೆ ನೋಡು ರಸಿಕರಾದಿಯನಕ್ಷ್ಮೋ

ಗಳಿಂದ ಓಗೊಂದನು : ೨೫. 'ಎಲೈ ಸ್ತ್ರೀರತ್ನವೇ, ನಾನು ನಿನ್ನ ಅಪೂರ್ವ ಸೌಂದರ್ಯಕ್ಕೆ ಮೋಹಗೊಂಡು (ಸೋತು ಮೋಹದ ಕಣ್ಣುಳ್ಳವನಾಗಿ) ಪ್ರೀತಿಯಿಂದ ನಿನಗೆ ಒತ್ತೆಯ ಹಣವನ್ನು ಕಳುಹಿಸಿದ್ದೆ. ನೀನು ಒಲ್ಲೆನೆಂದುದು ಛಲವೋ ಅಥವಾ ವೈಭವವೊ ? ಮನಸ್ಸಿನ ಸ್ಥಿತಿಯನ್ನು ಪರೀಕ್ಷಿಸುವ ರೀತಿಯೋ? ಬಿಂಕವೋ? ಪ್ರೀತಿಯೇನಾದರೂ ಇಲ್ಲದಂತಾಗಿರುವುದೋ? ಹೆಚ್ಚಾದ ನಾಚಿಕೆಯೋ? ಹಣವು ಸಾಲದೆಂಬ ಆಸೆಯೋ?' ೨೬. ಜಾರೆಯಾದವಳಿಗೆ ಪ್ರೀತಿಸಿದ ಜನದಲ್ಲಿ ಛಲವೂ, ವೈಭವವೂ, ಮನಸ್ಸಿನ ಸ್ಥಿತಿಯನ್ನು ಪರೀಕ್ಷಿಸಿ ನೋಡುವ ರೀತಿಯೂ, ಗರ್ವವೂ, ಪ್ರೀತಿಹೀನವಾಗಿ ರುವಿಕೆಯೂ ಸಲ್ಲದು. ನಾಚಿಕೆಯೂ ಯೋಗ್ಯವಾದುದಲ್ಲ: ಉಜ್ವಲವಾದ ವೇಶ್ಯೆಯರ ಧರ್ಮಕ್ಕೆ ನಾನು ಕಳುಹಿಸಿದ ಅಲ್ಪ ದ್ರವ್ಯವು ಸಾಲದಾದರೆ, ಎಲೈ ಕಾಮಿನಿಯೇ, ನಿನ್ನ ಅತ್ಯಾಸೆಯೆಂಬ ತಡೆಯಿಲ್ಲದ ಸಮುದ್ರಕ್ಕೆ ಹಣದ ರಾಶಿಯಿಂದ ಸೇತುವೆಯನ್ನೇ ಕಟ್ಟಿಸಲಾರೆನೇ? ಹೇಳು.' ೨೭. '(ನನ್ನನ್ನು) ಮಂದಬುದ್ಧಿಯುಳ್ಳವನು ಎನ್ನುವೆಯಾದರೆ, (ಹಾಗಲ್ಲ) ಅತಿ ಚತುರನಾಗಿದ್ದೇನೆ; ಕುಲವು ದೊರೆಯಲ್ಲವೆನ್ನುವೆಯಾದರೆ (ಹಾಗಲ್ಲ) ಧರಣೀಶ್ವರನ ಮಗನು ; ವಿಟನೆಂದು ಜರೆದವನೆಂದೆಯಾದರೆ (ಹಾಗಲ್ಲ) ಮೃಡಭಕ್ತನಾಗಿದ್ದೇನೆ : ಅಲ್ಪಶಕ್ತಿಯುಳ್ಳವನೆನ್ನುವುದಾದರೆ, ಸಾಧಕ ಯೆನಿಸಿದ್ದೇನೆ; ನಂಟರು ಇಷ್ಟರು ಇಲ್ಲದವನೆನ್ನುವೆಯಾದರೆ, ಶಿವಭಕ್ತರ ಬಂಧುವಾಗಿದ್ದೇನೆ; ಕುಟಿಲಾತ್ಮನೆಂದೆನ್ನುವೆಯಾದರೆ, ಸದ್ಗುಣಗಳಿಗೆ ಆಶ್ರಯನಾದವನಾಗಿದ್ದೇನೆ.' ೨೮. 'ನನಗೆ ಸಮನಾದವರು ಯಾರೂ ಇಲ್ಲವೆನ್ನಲ್ಲ. ಎನ್ನುವೆಯಾದರೆ, ಚಂಚಲವಾದ ಕಣ್ಣುಳ್ಳವಳೇ, ನೋಡು, ಪಾಂಡ್ಯರ ಪಿತೃಗಳನ್ನು ತಿಳಿದವನಲ್ಲ, ಎಂದು

ದರವರಿಪೊಡೆ ನೀನೆನ್ನೊ
ಳ್ನೆರೆದೀಕ್ಷಿಪುದೊರ್ವೆ ಮತ್ಕಳಾಕೌಶಲಮಂ ೨೮

ಸೊಗಸಂ ಸೂಸಿ ವಿಳಾಸಮಂ ಮೆಱೆದು ನಣ್ಪಿಂ ನೋಡಿ ಕಾದಲ್ಮೆ ಕೈ
ಮಿಗೆ ಸಾರ್ದೊಳ್ನುಡಿಯಾಡಿ ಕುಂತಳಮನೊಳ್ಪಿಂ ತಿರ್ದಿ ರೋಮೋದ್ಗಮಂ
ನೆಗೆವನ್ನಂ ಬಿಗಿದಪ್ಪಿ ಚುಂಬಿಸಿ ಕಳಾವಿಸ್ತಾರಮಂ ಬೀಱಿ ನಾ
ಣೆಗೆ ನೀಡಾಗದೆ ನಿನ್ನೊಳಿಂದು ನೆರೆಯಲ್ಬೂರ್ತೆಂ ಸರೋಜೇಕ್ಷಣೇ ೨೯

ಸವಿನೋಟಂ ಪೊಸವೇಟಮಂ ನಗೆಯುನಂಗಾವೇಶಮಂ ಜಾಣ್ಮೆವೆ
ತ್ತವಿನೋದೋಕ್ತಿವಿಳಾಸಮುಂ ನೆಗಳ್ದ ಗಾಢಾಲಿಂಗನಂ ಮನ್ಮಥೋ
ತ್ಸವರೋಮಾಂಚಮ.ಂ ಸುಧಾದರದ ಭಾಸ್ವಚ್ಚುಂಬನಂ ದರ್ಪಕ
ದ್ರವಮಂ ಪುಟ್ಟಿಸದಿರ್ದೊಡೇಕೆ ನೆರೆವಾಯಾಸಂ ವಿಟಂಗಂಗನೇ ೩೦

ಕಲೆಯ ಕಾಲವ[1]ಜಾತಿಯಂ ಪ್ರಕೃತಿಯಂ ದೇಶೀಯಭಾವಂಗಳಂ
ವಿಲಸದ್ರೀತಿಯನುಚ್ಚನೀಚಸಮರತ್ಯಾಶ್ಲೇಷಬಂಧಂಗಳಂ

ಸಂದೇಹಪಟ್ಟರೆ, ನೀನೊಮ್ಮೆ ನನ್ನಲ್ಲಿ ಕೂಡಿ, ನನ್ನ ಮನ್ಮಥ ಸಂಬಂಧದ ವಿದ್ಯಾ ಪ್ರೌಢಿಮೆಯನ್ನು ಪರೀಕ್ಷಿಸು! ಎಲೈ ೨೯. ಕಮಲ ನೇತ್ರೆಯೆ, ಸೊಗಸನ್ನು ಸುರಿಸುತ್ತಿರುವಂತೆ ಸಂಭ್ರಮವನ್ನು ಪ್ರಕಟಿಸಿ, ಸೊಗಸಾಗಿ ನೋಡಿ, ನಾಯಿಕಾ ನಾಯಕರ ಪ್ರೀತಿಯು ಮೀರೆದಪ್ಪುವಂತೆ ಸಮೀಪಿಸಿ, ಒಳ್ಳೆಯ ಮಾತನಾಡಿ, ಕೂದಲುಗಳನ್ನು ತಿದ್ದಿ ಸರಿಪಡಿಸಿ, ರೋಮಾಂಚನವು ಹುಟ್ಟುವ ಹಾಗೆ ಬಿಗಿದು ಅಪ್ಪಿಕೊಂಡು, ಚುಂಬಿಸಿ, ರತಿಕಲೆಯ ವಿಸ್ತಾರವೇನುಂಟೋ ಅದೆಲ್ಲವನ್ನೂ ಬೀರಿ, ಉಂಟಾಗುವ ನಾಚಿಕೆಗೆ ಅವಕಾಶವೀಯದೆ, ನಿನ್ನಲ್ಲಿ ಇಂದು ಕೂಡುವುದಕ್ಕೆ ಆಸೆ ಪಟ್ಟಿದ್ದೇನೆ. ೩೦. 'ಎಲೈ ಅಂಗನೆಯೇ, ಮನೋಹರ ನೋಟವು ನೂತನವಾದ ಪ್ರೀತಿಯನ್ನೂ, ನಗುವಿಕೆಯು; ಮನ್ಮಥಾವೇಶವನ್ನೂ, ಚಾತುರ್ಯದಿಂದ ಕೂಡಿದ ವಿನೋದದ ನುಡಿಗಳು, ಸಂಭ್ರಮವನ್ನೂ (ನನ್ನ) ಪ್ರಖ್ಯಾತವಾದ ಗಾಢಾಲಿಂಗನವು, ಮನ್ಮಥ ಸಂಬಂಧವಾದ ಸಂತೋಷ ಸಂಜನಿತ ರೋಮಾಂಚನವನ್ನೂ, ಅಮೃತರಸದಿಂದ ಕೂಡಿದ ತುಟಿಯ ಮನೋಹರವಾದ ಚುಂಬನವು ಕಾಮರಸವನ್ನು ಹುಟ್ಟಿಸದೆ ಇದ್ದರೆ, ವಿಟನಾದವನಿಗೆ (ಸ್ತ್ರೀಯಲ್ಲಿ) ಕೂಡುವ ಆಸೆಯೇಕೆ ?' ೩೧. 'ಮನ್ಮಥ ಕಲಾಸ್ಥಾನವನ್ನೂ, ಆಯಾಯ ಸಮಯಗಳು ಆಯಾಯ ಸ್ತ್ರೀ ಜಾತಿಗಳನ್ನು, ಸ್ವಭಾವವನ್ನು, ಆಯಾಯ ದೇಶಾನು 'ಗುಣವಾದ ವಿಭಾವಾದಿ ಭಾವಗಳನ್ನೂ, ಶೋಭಿಸುವ ರತಿ ಕ್ರೀಡಾಕ್ರಮವನ್ನೂ ಉಚ್ಚ, ನೀಚ, ಸಮರಸ, ಅತ್ಯಾಶ್ಲೇಷಾದಿ ಬಂಧಗಳನ್ನು (ಅಂದರೆ ಸ್ತ್ರೀಯ ಅಪೇಕ್ಷೆಯಂತೆ ಅಧಿಕ ಕಾಲದವರೆಗೆ ರತಿಕ್ರೀಡೆಯಲ್ಲಿ ತೊಡಗುವುದು ಉಚ್ಚವು; ಸ್ತ್ರೀಯ

1 ವಿ(ಗ), ಸು(ಅ)

ಲಲನಾನೀಕದ ಮನ್ಮಥಾಲಯದ ನಾಡೀಭೇದಮಂ ಪ್ರಾಯಮಂ
ನಲವಿಂದಂ ತಿಳಿದೊಂದಲಾಱದ ಭುಜಂಗಂ ಭಂಗಮಂ ತಾಳ್ವನೇ ೩೧

ಪೊಂಪುಳಿ ಮುಗ್ಗಲಿಕ್ಕದವೊಲಂಗದ ಬಲ್ಬೆಮರಿಂಗದಂತೆ ನೇ
ತ್ರಂ ಪದದೆಳ್ಚಱೊಂದದವೊಲುರ್ಬಿದ ಚಂದುಟಿ ಬೀಯದಂತೆ ಸು
ಯ್ಗಂಪೆಲರೋಟಮಂ ಬಿಡದವೋಲ್ತನುಗುಣ್ಮದ ಸೇದೆ ಜಾಱದಂ
ತಿಂಪಡರ್ದಂಗಜಾತಸುಖಮಂ ನಿನಗೀಯದೊಡಾಂ ಭುಜಂಗನೇ ೩೨

ಅಂಗುಟಮಂಘ್ರಿಯುಂ ಪರಡು ಜಾನು ಕಟೀತಟನಾಭಿ ವಕ್ಷಮು
ತ್ತುಂಗಕುಚಂ ಭುಜಂ ಮಿಸುಪ ಕಕ್ಷೆಗಳೋಷ್ಠಕಪೋಲಮಕ್ಷಿ ಫಾ
ಲಂಗಳುಮುತ್ತಮಾಂಗಮೆನಿಪೀಯೆರ್ದೆಯೊಳ್ಕ್ರಮದಿಂ ದ್ವಿಪಕ್ಷದೊ
ಳ್ಪೊಂಗಿಸುತೂರ್ಧ್ವದೇಶಕಿಳುಪುತ್ತೆಡದೊಳ್ಕಲೆಯಂ ವಿಳಾಸದಿಂ ೩೩

ಮಿಸುಪಪ್ಪವಿಧಾಲಿಂಗನ
ಮನೂನಮೊಂಭತ್ತುನಾಲ್ಕು ಬಂಧಂಗಳ್ಚುಂ
ಬನಮುಂ ದ್ವಾದಶವಿಧಮುಂ
ಬನಿತೆಯೊಳುಚಿತಪ್ರಕಾರಮಱಿದೆಸಗುತ್ತುಂ ೩೪

ಪರಿವಿಡಿಯಿನಿಂತು ಬಾಹ್ಯಂ
ತರರತಮಂ ನೆಗಳ್ದವಂ ಜಯಂತನೊ ನಳಕೂ

ಅಪೇಕ್ಷೆಯಂತೆ ಅಲ್ಪಕಾಲದ ರತಿಕ್ರೀಡೆಯಲ್ಲಿ ತೊಡಗುವುದು ನೀಚವು ; ಉಭಯಾಪೇಕ್ಷೆಯಂತೆ ಸಮಕಾಲ ಸುರತಕ್ರೀಡೆಯು ಸಮರಸವು ; ಆಲಿಂಗನದ ರೀತಿಯೋ ಅತ್ಯಶ್ಲೇಷವು. ಇಂಥ ಈ ಬಂಧ ರೀತಿಯನ್ನೂ), ಸ್ತ್ರೀ ಸಮೂಹದ ಮನ್ಮಥಾಲಯವೆನಿಸಿರುವ ಯೋನಿಯ ನಾಡೀ ಭೇದಗಳನ್ನೂ ಪ್ರಾಯವನ್ನೂ, ಪ್ರೀತಿಯಿಂದ ತಿಳಿದು ಕೂಡಲು ಶಕ್ತಿಯಿಲ್ಲದ ವಿಟನು ಹಾನಿಯನ್ನು ಹೊಂದಲಿಕ್ಕಿಲ್ಲವೇ ?' ೩೨. '(ಮೈಯಲ್ಲೆದ್ದ) ರೋಮಾಂಚನವು ಕಡಿಮೆಯಾಗದ ಹಾಗೆ ದೇಹದ ವಿಶೇಷವಾದ ಬೆವರು ಆರದ ಹಾಗೆ, ಕಣ್ಣುಗಳು ಪ್ರೀತಿಯಿಂದ ಎಚ್ಚರಗೊಳ್ಳದ ಹಾಗೆ ಉಬ್ಬಿದ ಕೆಂಪಾದ ತುಟಿಗಳ ಉಬ್ಬು ಕಡಿಮೆಯಾಗದ ಹಾಗೆ, ಪರಿಮಳ ವಿಶಿಷ್ಟವಾದ ಉಸುರಿನ ಗಾಳಿಯು ತನ್ನ ಮುನ್ನಿನ ಓಟವನ್ನು ಬಿಡದ ಹಾಗೆ, ಹೊರಹೊಮ್ಮಿದ ದಣಿವು ಜಾರದ ಹಾಗೆ, ಇಂಪಿನಿಂದ ಕೂಡಿದ ಮನ್ಮಥ ಸೌಖ್ಯವನ್ನು ನಿನಗೆ ಕೊಡದಿದ್ದರೆ ನಾನೊಬ್ಬ ವಿಟನೇ !' ೩೩–೩೫. ಹೆಬ್ಬೆರಳು, ಕಾಲು, ಕಾಲಿನ ಪಕ್ಕದಲ್ಲಿರುವ ಗಂಟುಗಳು, ನಡು, ಹೊಕ್ಕಳು, ಎದೆ, ಎತ್ತರವಾದ ಮೊಲೆಗಳು, ಭುಜ, ಶೋಭಿಸುವ ಕಂಕುಳ, ತುಟಿ, ಕೆನ್ನೆ, ಕಣ್ಣು. ಹಣೆ, ಕುತ್ತಿಗೆ, ತಲೆ–ಎನಿಸುವ ಈ ಸ್ಥಾನಗಳಲ್ಲಿ ಕ್ರಮವಾಗಿ ಶುಕ್ಲ ಮತ್ತು ಕೃಷ್ಣ ಪಕ್ಷದ್ವಯಗಳಲ್ಲಿ ಕಲಾಸ್ಥಾನಗಳನ್ನು (ರತಿಲೀಲಾ) ವಿಲಾಸದಿಂದ (ದೇಹದ) ಮೇಲ್ಗಡೆಗೆ ಉಕ್ಕಿಸುತ್ತ (ವಿಕಾಸ

ಬರನೊ ಮನಸಿಜನೊಯೇನೆ ಸಮ
ಸುರತಸುಖಾಬ್ಧಿಯೊಳೆ ನಿನ್ನನಾಳಿಪೆನಬಲೇ ೩೫

ಜಗುಳೆ ನಿಱಿ ಮುಗುಳೆ ಕಣ್ಮಲ
ರೊಗುಮಿಗೆಯಿಂ ಕಾಮಶರಧಿ ತುಳ್ಕಾಡೆ ಮನಂ
ಬುಗುವಾಲಿಂಗನಮಾತ್ರದೆ
ನೆಗಳ್ವೆಂ ಮೈಮಱೆಪನಿಂದು ನಿನಗಿಂದುಮುಖೀ ೩೬

ಸ್ಮರನಿಂದು ಧನ್ಯನಾದಂ
ತರುಣಿಮ[1]ಮಿಂದೆನಗೆ ಸಫಲಮಾದುಂದು ವಲಮೆಂ

ಗೊಳಿಸುತ್ತ) ಎಡಭಾಗದಲ್ಲಿ ಇಳಿಯುವಂತೆ ಮಾಡುತ್ತ,* ಶೋಭಿಸುವ—ಪುಷ್ಕರ, ವಿವಿಧಕ, ಧೃಷ್ಟಕ, ಪೀಡಿನಕ, ವೃಕ್ಷಾರೋಹಿಣಿ, ಲತಾವೇಷ್ಟನ, ತಿಲತಂಡುಲತೆ, ಕ್ಷೀರ ನೀರಾಯತಗಳೆಂಬ ಎಂಟು ಪ್ರಕಾರದ ಆಲಿಂಗನಗಳು (ಇವೂ ಅಲ್ಲದೆ ವಾರೂಪಗೂಹನ ಜಘನೂಪಗೂಹನ ಸ್ತನಾಶ್ಲೇಷ, ಲೀಲಾಟಕ ಎಂಬ ೧ಒಟ್ಟು ಹನ್ನೆರಡು ವಿಧವಾದ ಆಲಿಂಗನವೆಂದೂ ಹೇಳುವುದುಂಟು), ಅಧಿಕವಾಗಿ ಎಂಬತ್ತನಾಲ್ಕು ವಿಧದ (ರತಿಕ್ರೀಡಾ) ಬಂಧಗಳು (ಆಸನಗಳು), ಹನ್ನೆರಡು ವಿಧಗಳಾದ–ನಿಮಿತ್ತಕ, ಸಂಘಟಕ, ಸ್ಫುರಿತಕ, ಭ್ರಾಂತಿಕ,ತಿರ್ಯಗಾಯತಕ, ಅತಿಧೃಷ್ಟಕ, ಉತ್ತರಸಂಘಟಿತಕ, ಜಿಹ್ವಾವೇಳನಕ, ಜಿಹ್ವಕ, ಅತಿ ಜಿಹ್ವಾಯೋಗ, ಸೀತ್ಕಾರ, ದಂಶನಕವೆಂದಿರುವ ಚುಂಬನಗಳೆಂಬ ಇಷ್ಟರಲ್ಲಿ ಉಚಿತ ರೀತಿಯಲ್ಲಿ ಅರಿತು ವ್ಯವಹರಿಸುತ್ತ, ಎಲೈ ಅಬಲೆಯೇ, ಈ ರೀತಿ ಕ್ರಮವಾಗಿ ಒಳ ಹೊರಗಣ ರತಿಗಳೆಂಬೆರಡನ್ನೂ, ಎಸಗಿ, ಇವನೇನು ಇಂದ್ರಕುಮಾರನಾದ ಜಯಂತನೋ, ಕುಬೇರ ಪುತ್ರನಾದ ನಳಕೂಬರನೋ, ಮನ್ಮಥನೋ ಎನ್ನುವಂತೆ (ಉಭಯರಿಗೂ) ಸಮವಾದ ರತಿಕ್ರೀಡಾ ಸಮುದ್ರದಲ್ಲಿ ನಿನ್ನನ್ನು ನಾನು ಮುಳುಗಿಸುವೆನು. ೩೬. 'ಎಲೈ ಚಂದ್ರಮುಖಿಯೇ (ಉಟ್ಟ) ನಿರಿಗೆಯು ಗಂಟು ಜಾರಲು, ಹೂವಿನಂತಿರುವ ಕಣ್ಣುಗಳು ಮುಚ್ಚಿಕೊಳ್ಳಲು, ಉತ್ಸಾಹಾಧಿಕ್ಯದಿಂದ ಮದನರಸದ ಸಮುದ್ರವೇ ತುಳುಕಾಡುವಂತೆ, ಮನಸ್ಸಿಗೊಪ್ಪುವ ಆಲಿಂಗನ ಮಾತ್ರದಿಂದ ನಿನಗಿಂದು ಮೈಮರೆಯುವಿಕೆಯುನ್ನು ಉಂಟುಮಾಡುತ್ತೇನೆ.' ೩೭. 'ಈ ದಿವಸ ಮನ್ಮಥನೇ ಧನ್ಯನಾದನು. ಈ ದಿವಸ ನನಗೆ ತಾರುಣ್ಯವು ನಿಜವಾಗಿ ಸಫಲವಾಯಿತು, ಎಂದು ನೀನು ಅಧಿಕವಾದ

1 ಯು(ಮು)

*ಶುಕ್ಲಪಕ್ಷದ ಪಾಡ್ಯಮಿ ಮೊದಲಾದ ಹದಿನೈದು ತಿಥಿಗಳಲ್ಲಿ ಸ್ತ್ರೀಯರ ದೇಹದ ಬಲಗಡೆಯ ಈ ಪೂರ್ವದಲ್ಲಿ ಹೇಳಿದ್ದ ಅಂಗುಷ್ಠ ಮೊದಲಾದ ಹದಿನೈದು ಸ್ಥಾನಗಳಲ್ಲಿ ಕ್ರಮವಾಗಿ ಒಂದೊಂದು ತಿಥಿಯಲ್ಲಿ ಒಂದೊಂದು ಸ್ಥಾನಗಳು ಕಳಾಸ್ಥಾನವೆಂದೂ, ಕೃಷ್ಣಪಕ್ಷದ ಪಾಡ್ಯಮಿಯಿಂದ ಹದಿನೈದು ದಿನಗಳು ಎಡಭಾಗದ ಹದಿನೈದು ಸ್ಥಾನಗಳು ತಲೆಯಿಂದ ಕೆಳಕ್ಕೆ ಕ್ರಮವಾಗಿ ಒಂದೊಂದುದಿನದ ಕಳಾ ಸ್ಥಾನಗಳೆಂದೂ ಹೇಳಲಾಗುತ್ತದೆ.

ದುರುಮುದಮನಾಳೆ ನೀಂ ನವ
ಸುರತೋತ್ಸವವಿೞಿಯದಿರ್ದೊಡಾಂ ವರವಿಟನೇ ೩೭

ನೋಡೆನ್ನ ಪರಿಯನಿಂದೊಡ
ಗೂಡೆನ್ನೊಳ್ಮೋಹನಾಂಗಿಯೆಂದವನೆನೆ ತಾಂ
ನೋಡಿ ನಸುನಗುತೆ ವಿಟಕುಲ
ಚೂಡಾಮಣಿ ಮಝರೆ ಲೇಸನಾಡಿದೆಯೆಂದಳ್ ೩೮

ಪೊಸತೀ ಜಾಣ್ನುಡಿಯೆಲ್ಲಿ ಕಲ್ತೆಯಿದನಿಂದೆನ್ನೊಳ್ಕರಂ ನಿನ್ನ ಬ
ರ್ದೆಸೆವನ್ನಂ ಬಗೆದೋಱಿದೈ ಭಲರೆ ಕಂದರ್ಪಾಗಮಾಭಿಜ್ಞ ನಿ
ನ್ನೆಸಕಂ ಸಾಲ್ಗುಮಿದೇಕೆ ನೀಂ ಜಱುಚುವೈ ಪೋಪೋಗು ಸದ್ಭಕ್ತಿ ನೀ
ತಿ ಸುಶೀಲಂ ಸಮನಲ್ತು ಕೂಡದೆನಗೊಂದಲ್ನಿನ್ನೊಳುರ್ವೀಪತೀ ೩೯

ಚದುರಂ ನೀನಾದೊಡಿಂತಿಂತುಸುರ್ದ ನುಡಿಗಳಂ ಕೇಳ್ದು ಸಮ್ಮೋಹಮಂ ತಾ
ಳ್ದಿದಳಲ್ಲೀ ಕಾಂತೆಯೆಂದೊಳ್ಪಱಿದು ಕಡೆಗೆ ನೀಂ ಬೇಗ ಜಾಱಲ್ಕೆವೇಡಾ
ವಿದಿತಂ ಭಾವಜ್ಞನಾದಂದಬಲೆಯ ಕಡೆಗಣ್ನೋಟದಿಂ ಕಂಡು ಮೋಹಾ
ಸ್ಪದಭಾವಾಭಾವಮಂ ಜಾಣ್ಮೆಯೊಳೆ ತೊಲಗುವೊಂದಂದಮಂ ಕಾಣವೇಡಾ ೪೦

ಆನಂದವನ್ನು ತಾಳುವಂತೆ ನೂತನವಾದ ಸುರತ ಕ್ರೀಡಾ ಮಹೋತ್ಸವವನ್ನುಂಟು ಮಾಡದೆ ಇದ್ದರೆ ನಾನೊಬ್ಬ ವಿಟನೇ?' ೩೮. ಎಲೈ ಮೋಹನಾಂಗಿಯೇ, ಈ ದಿವಸದ ನನ್ನ ರೀತಿಯನ್ನು ನೋಡು; ನನ್ನೊಡನೆ ಕೂಡು! ಹೀಗೆಂದು ಆತನು ಹೇಳಿದನು. ಆಗ ಆ ಸೂಳೆಯು ಅವನನ್ನು ನೋಡಿ, ನಸುನಗುತ್ತ—'ಎಲೈ ವಿಟಕುಲ ಚೂಡಾಮಣಿಯೇ, ಶಹಭಾಸ್! ಒಳ್ಳೆಯ ಮಾತನಾಡಿದೆ.' ೩೯. 'ಉರ್ವೀಪತಿಯೇ, ಈ ನಿನ್ನ ಜಾಣತನದ ಮಾತು ಹೊಸದು; ಇದನ್ನೆಲ್ಲ ಎಲ್ಲಿ ಕಲಿತೆ? ಈ ದಿನ ನಿನ್ನ ಜಾಣ್ಮೆಯು ಪ್ರಕಾಶಗೊಳ್ಳುವಂತೆ ನನ್ನಲ್ಲಿ ಪೂರ್ಣವಾಗಿ ನಿನ್ನ ಮನಸ್ಸನ್ನು ತೋರಿಸಿ ಕೊಂಡಿದ್ದೀಯೆ. ಭಲರೇ, ಮದನನ ತಂತ್ರವನ್ನು ತಿಳಿದವನೇ, ನಿನ್ನ ಈ ಪರಾಕ್ರಮವು ಸಾಕು; ಇದೇಕೆ ಹೀಗೆ ನೀನು ಅರಚುವೆಯಯ್ಯಾ! ಹೋಗು ಹೋಗು ಸದ್ಭಕ್ತಿ, ನೀತಿ, ಉತ್ತಮ ಶೀಲ ಸ್ವಭಾವಗಳು ಒಂದುಗೂಡದೆ ನಿನ್ನೊಡನೆ ಸೇರಲು ಸಮವಾಗುವುದಿಲ್ಲ.' ೪೦. 'ನೀನು ಕುಶಲನಾಗಿದ್ದರೆ, ಇಂತಿಂತೆಲ್ಲಾ ಮಾತನಾಡಿದ ನುಡಿಗಳನ್ನು ಕೇಳಿ, ಈ ಸುಂದರಿಯು ಪ್ರೀತಿಯನ್ನು ಹೊಂದುವವಳಲ್ಲವೆಂದು ಒಳ್ಳೆಯ ನೀತಿಯನ್ನನುಸರಿಸಿ ಅರಿತುಕೊಂಡು (ಸಮಾಜೀಪತ್ವವನ್ನನುಸರಿಸಿ) ನೀನು ಆ ಕಡೆಗೆ ಬೇಗ ಹೋಗುವುದು ಬೇಡವೇ! (ತೊಲಗಬೇಡವೆ!) ಶ್ರೇಷ್ಠನಾದ ಸ್ತ್ರೀಯಳ ಇಂಗಿತವನ್ನರಿತವನಾಗಿದ್ದ (ಪರರ ಇಂಗಿತ ತಿಳಿದವನು) ಪಕ್ಷದಲ್ಲಿ ಹೆಂಗಸರ ಕಣ್ನೋಟದಿಂದಲೇ ಪ್ರೀತಿಯನ್ನು ಹೊಂದುವುದು, ಹೊಂದದಿರುವುದು, ಇವನ್ನು ಕಂಡುಕೊಂಡು ಜಾಣ್ಮೆಯಿಂದಲೇ ತೊಲಗಬೇಕೆನ್ನುವ ಒಂದು ರೀತಿಯನ್ನು ತಿಳಿಯುವುದು ಬೇಡವೇ?'

ಒತ್ತೆಯನೊಲ್ಲೆನೆಂದೊಡೆಲೆ ನೀಂ ವಿಟನಾದೊಡದೆಂತು ಬಂದೆ ಪೇ
ಳ್ಮತ್ತೆ ಮದೀಯಮಂದಿರಕೆ ಸದ್ರಸಿಕೋತ್ತಮನಾದೊಡೆಂತು ಮ
ಚ್ಚಿತ್ತದ ನೇಹಮಂ ತಿಳಿಯದಾಡಿದೆ ಕಾಮಕಳಾಪ್ರಸಂಗಮಂ
ವಿತ್ತದ ಬಲ್ಮೆಯುಳ್ಳೊಡಿಳೆಯೊಳ್ಗಣಿಕಾವಳಿ ಶೂನ್ಯಮಾದುದೇ ೪೧

ಹರಪದಭಕ್ತನಾದೊಡಿನಿತಂಗಜಮೋಹವಿಕಾರಮಾಂಪುದೇ
ಗುರುಭಜನಾರ್ಪಿತಾತ್ಮತನುವಾದೊಡಮೆಂತು ತನೂವಿಮೋಹದೆ
ಳ್ತರಮಕಟೇಕೆ ಬೆಳ್ತನದ ಪೆರ್ಮೆಯ ಮಾತು ವಿದಗ್ಧಪುಂಗವ
ಸ್ಸರಿಯ ಭುಜಂಗರೇಂ ನಗರೆ ನಿನ್ನವಿಚಾರತೆಗಂಡು ಧಾತ್ರಿಯೊಳ್ ೪೨

ಅಱಿತಮದುಳ್ಳೊಡೆ ಕಾಮದ
ಬಱಿಕಳವಳದಳಮನುಳಿದು ಮಾಣ್ಗೆನ್ನೊಳ್ಸಂ
ದಱಕೆಯನೆಲೆ ಗುರುಭಕ್ತಿಯೊ
ಳೆಱಕಂಬಡೆ ಬಂದ ಬಟ್ಟೆವಿಡಿ ತಳರೆಂದಳ್ ೪೩

ವ॥ ಎಂದ ವಾರಾಂಗನೆಯ ಬಿಱುನುಡಿಗಸಹ್ಯಭಾವಂಬಡದೆ ಮಾರ್ಕೊಂಡು—

ಪುರುಷಾಂತರದಿರವಱಿಯದ
ಮರುಳೆ ಮದಾಂಧತೆಯೊಳಿಂತು ಪೋಗೆಂದಪೆ ನೀ

೪೧. 'ಎಲೈ (ಅರಸೇ), ನೀನು ವಿಟನಾದರೆ, (ನಾನು) ಒತ್ತೆಯ ಹಣವನ್ನು ಒಲ್ಲೆನೆಂದರೆ ಪುನಃ ಏಕೆ ನನ್ನ ಮನೆಗೆ ಬಂದೆ ?' ಹೇಳು. ಒಳ್ಳೆಯ ರಸಜ್ಞರಲ್ಲಿ ಶ್ರೇಷ್ಠನೆನಿಸಿದವನಾಗಿದ್ದರೆ ನನ್ನ ಮನಸ್ಸಿನ ಪ್ರೀತಿಯನ್ನು ತಿಳಿಯದೆ ಮನದ ವಿದ್ಯೆಯ ಪ್ರಸಂಗದ ಮಾತುಗಳನ್ನು ಹೇಗೆ ಆಡಿದೆ ? ಹಣದ ಬಲವು ಇದ್ದರೆ ಲೋಕದಲ್ಲಿ ಸೂಳೆಯರ ಗುಂಪೇ (ಬೇರೆ) ಇಲ್ಲದಂತಾಯಿತೇ ?' ೪೨. 'ಹರನ ಭಕ್ತನಾದರೆ ಇಷ್ಟೊಂದು ಮನ್ಮಥಾವಸ್ಥೆಯಿಂದುಂಟಾದ ವಿಕಾರವನ್ನು (ಮನಸ್ಸು) ಹೊಂದುತ್ತಿತ್ತೇ ? ಗುರುಸೇವೆಗೋಸ್ಕರ ದೇಹವನ್ನು ಸಮರ್ಪಿಸಿದವನಾದರೆ ದೇಹಸಂಬಂಧವಾದ ಅಜ್ಞಾನದ ಆಧಿಕ್ಯವು (ಇರಲು) ಹೇಗೆ ಸಾಧ್ಯ ? ಅಯ್ಯೋ ! ಮೂಢತನದ ಈ ಹೆಮ್ಮೆಯ ಮಾತುಗಳೇಕೆ ? ಲೋಕದಲ್ಲಿ ಪ್ರೌಢರಾದ ವಿದ್ವಾಂಸರಾದ ವಿಟರುಗಳು ನಿನ್ನ ಈ ಅವಿವೇಕವನ್ನು ಕಂಡು ನಗಲಿಕ್ಕಿಲ್ಲವೇ ?' ೪೩. 'ಎಲೈ (ರಾಜನೇ) (ಹರಭಕ್ತಿಯ ಬಗೆಗೆ) ಆ ತಿಳುವಳಿಕೆ ಇದ್ದರೆ, ಕಾಮಕ್ಕೆ ಸಂಬಂಧಿಸಿದ ವ್ಯರ್ಥವಾದ ಪೇಚಾಟದ ಈ ಶಕ್ತಿಯನ್ನು ಬಿಟ್ಟು, ನನ್ನಲ್ಲುಳ್ಳ ನಿನ್ನ ಪ್ರೀತಿಯನ್ನು ತೊಲಗಿಸಿ, ಗುರುಭಕ್ತಿಯಲ್ಲಿ ಬೆಸುಗೆಗೊಳಿಸು, ಬಂದದಾರಿಯನ್ನು ಹಿಡಿದು ಹೊರಡು, ಎಂದಳು. ವ॥ ಹೀಗೆಂದ ಆ ವೇಶ್ಯಾಸ್ತ್ರೀಯ ಬಿರುನುಡಿಗಳಿಗೆ ಅಸಹ್ಯಭಾವವನ್ನು ಹೊಂದದೆ ಪ್ರತಿಯಾಗಿ—೪೪. 'ಬೇರೆ ಬೇರೆ ಪುರುಷರ ರೀತಿಯನ್ನೇ ತಿಳಿಯದ ಎಲೈ ಮರುಳು ಹೆಂಗಸೇ, ಗರ್ವದಿಂದುಂಟಾದ ಗುರುತಿನಿಂದ, ನನ್ನನ್ನು ಅಪೇಕ್ಷಿಸದೆ ಹೀಗೆ

ನರವರಿಸದೆನ್ನನೀಂ ನಿ
ಷ್ಠುರವಕ್ರಾಲಾಪತತಿಗೆ ಕಾರಣಮೇನೋ ೪೪

ವಾರಾಂಗನೆ ನೀಂ ಸುಗುಣ
ಶ್ರೀರಾಜಿತ ರಾಜಪುತ್ರನಾನೆನ್ನಂ ನಿ
ಷ್ಕಾರಣವೊಲ್ಲದೆ ಪೋಗೆನೆ
ಭೂರಿ ಪಣಾಂಗನೆಯರೆಲ್ಲ ಪಳಿಯರೆ ನಿನ್ನಂ ೪೫

ಸಕಳಕಳಾನಿಧಿರಾಜಂ
ಗಕಟ ಮೊಗಂಗುಡದ ನಿನಗಮಾ ಪದ್ಮಿನಿಗಂ
ಪ್ರಕಟಗುಣಮಿರ್ದೊಡೇಂ ಕಂ
ಟಕನಿವಹಂ ಜಾಡ್ಯಭಾವಮಿದುವೆ ನಿಸರ್ಗಂ ೪೬

ಪಡಪಿಂಗಿನ್ನಾರುಮಂ ನೀಂ ಕರೆಯೆನೆನುತಣಂ ಪೂಣ್ಕೆಗೆಯ್ಯಲ್ಲದಿರ್ದಂ
ದೊಡಲೊಳ್ನಿಷ್ಕಾಮಮಂ ನೀನುಡುತಡಿಯ ಮಹಾದೇವಿಯಂತೆಯ್ದೆ ತಾಳ್ಕೇ
ಣ್ಮೃಡನಿಂ ಗಂಡಂದಮಂ ನೀಂ ಪಡೆ ವರತಿಲಕಾಂಬಾಖ್ಯೆಯೆಂತಂತದಲ್ತೆಂ
ಬೊಡೆ ನೀನಾವೀರ ಚೋಳಾಂಬೆಯವೊಲಭವನೇ ಗಂಡನಾಗಿರ್ಪುದೇಗಳ್ ೪೭

ಅಂತಲ್ಲದೊಡೆಲೆ ನಿನ್ನನ
ದೆಂತುಂ ಬಿಟ್ಟಪೆನೆ ಕೂರ್ತು ವಾರಾಂಗನೆಗೋ
ರಂತವಳೊಲ್ಲದೆ ಪೋಗೆನೆ
ತಾಂ ತಳರ್ದನೆನಿಪ್ಪ ನಗೆಗೆ ಪಕ್ಕಾದಪೆನೇ ೪೮

ಹೋಗು ಎಂದೆನ್ನುತ್ತೀಯೆ. ಈ ನಿಷ್ಠುರವೂ ವಕ್ರವೂ ಆದ ಮಾತುಗಳ ಸಮೂಹಕ್ಕೆ ಕಾರಣವೇನೋ (ತಿಳಿಯದು). ನೀನು ವೇಶ್ಯಾಸ್ತ್ರೀ,ನಾನು ಸದ್ಗುಣ ಮತ್ತು ಐಶ್ವರ್ಯಗಳಿಂದ ಪ್ರಕಾಶಿಸುವ ರಾಜಪುತ್ರನು, ನನ್ನನ್ನು ನಿಷ್ಕಾರಣವಾಗಿ ಒಲ್ಲದೆ ಹೋಗು ಎಂದರೆ, ಬಹು ಸಂಖ್ಯೆಯ ಸೂಳೆಯರೆಲ್ಲ ನಿನ್ನನ್ನು ದೂಷಿಸುವುದಿಲ್ಲವೇ? ೪೬. 'ಸಕಲ ಕಲೆಗಳಿಗೂ ನಿಕ್ಷೇಪನಾದ ರಾಜನಿಗೇ(ಷೋಡಶ ಕಲೆಗಳಿಗೆ ನಿಕ್ಷೇಪನಾದ ಚಂದ್ರನಿಗೆ) ಮುಖವನ್ನು ಕೊಡದಿರುವ ನಿನಗೂ ಆ ಕಮಲಲತೆಗೂ, ಪ್ರಸಿದ್ಧವಾದ ಸದ್ಗುಣವು (ತಂತುವು) ಇದ್ದೊಡೆ ಏನು ? ಅಕ್ಕಟಾ ! ಈ ಕಠಿಣೋಕ್ತಿಗಳ ಸಮೂಹವು (ಈ ಮುಳ್ಳುಗಳ ಗುಂಪು) ಆಲಸ್ಯದಿಂದ ಕೂಡಿದಭಾವವು (ನೀರಿನಲ್ಲಿರುವಿಕೆಯು) ಸ್ವಭಾವ ಸಿದ್ಧವಾದದ್ದು ೪೭. ಛಡ ! ಹಿಂಗು, (ಎಂದು) ನೀನು ಇನ್ನಾರನ್ನೂ ಕರೆಯುವುದಿಲ್ಲವೆಂದು ನಿಜವಾಗಿ ಪ್ರತಿಜ್ಞೆಯನ್ನುಮಾಡು; ಅಲ್ಲದಿದ್ದರೆ ನೀನು ಉಡುತಡಿಯ ಮಹಾದೇವಿಯಕ್ಕನ ಹಾಗೆ ನಿಷ್ಕಾಮ ಭಾವವನ್ನು ಪಡೆ, ಅಥವಾ ಈಶ್ವರನಿಂದ ಗಂಡಿನ ರೀತಿಯನ್ನು ಪಡೆ; ಶ್ರೇಷ್ಠ ತಿಲಕಾಂಬಾ ಎಂಬ ಹೆಸರಿನವಳು ಎಂತೋ ಅಂತೆ ಆಗು; ಅದಲ್ಲವೆಂದರೆ ನೀನು ಆ ವೀರ ಚೋಳಾಂಬೆಯ ಹಾಗೆ ಶಿವನೇ ಯಾವಾಗಲೂ ಗಂಡನಾಗಿ ಇರುವಂತಿರು.' ೪೮. ಎಲೈ (ವೇಶ್ಯೆಯೇ), ಹಾಗಲ್ಲದಿದ್ದರೆ ನಿನ್ನನ್ನು ಹೇಗೆ ನಾನು ಬಿಟ್ಟೇನು ! ವೇಶಾಸ್ತ್ರೀಯಳನ್ನು ಪ್ರೀತಿಸಿ ಈ ರೀತಿ ಅವಳು ಒಲ್ಲದೆ ಹೋಗು ಎಂದರೆ, ನಾನು ಹೊರಟು ಹೋದವನೆಂಬ

ವ॥ ಎಂದವನೆನೆ ಕಾಂತೆ ಕಂಗನೆ ಕನಲ್ದು ಕೆಂಪಡರ್ದ ಕಟಾಕ್ಷದಿನದರೆ ನೋಡಿ—

ಅರರೆ ಭುಜಂಗರಾಜ ಮದನಾಗಮಸಾರಧುರೀಣ ವಾರಸೌಂ
ದರಿಯೊಳೆ ಬಲ್ಮೆಗೆಯ್ದು ಪೊಸ ನೇಹಮನುರ್ವಿಸಲೊಲ್ವ ಜಾಣ ಭಾ
ಸುರಕುಸುಮೌಘಮಂ ಪೊಸೆದು ಕಂಪನೆ ಕೊಳ್ವ ವಿದಗ್ಧಭಾವಜಾ
ತುರತೆಗೆ ಕೂರ್ತಳಲ್ಲದಳ ಕೂರಿಪ ಬರ್ದನಿದೆಲ್ಲಿ ಕಲ್ತೆಯೋ ೪೯

ಬೆಲೆವೆಣ್ಣಾಂ ನಿನ್ನ ಹಂಗೆಳ್ಳನಿತುಮೆನಗೆ ಮುನ್ನಿಲ್ಲ ಮಲ್ಲಿಂಗದೇವಂ
ಸಲೆ ಕೊಟ್ಟೀ ಕಾಯ[1]ಕ ಪ್ರಕ್ರಿಯೆಯೊಳನುದಿನಂ ಬಾಳ್ವೆನನ್ಯಾಯದಿಂ ನಿ
ಶ್ಚಲದರ್ಪಂಬೆತ್ತು ನಿನ್ನಾಣತಿಗೆ ಸಲಿಸಲೆಂದಿರ್ಪೆಯೆನ್ನಂ ನಿರರ್ಥ
ಕ್ಕಲೆ ನಿನ್ನಂ ಬಲ್ಲರೇಂ ಮೆಚ್ಚುವರೆ ನಿನಗಿದೇಂ ತಕ್ಕುದೇ ದುರ್ವಿಮೋಹಂ ೫೦

ವನಜಮನಭ್ರದೊಳ್ತಿಱಿಯಲಕ್ಕುಮೆ ಸಾರಮರೀಚಿಯಲ್ಲಿ ಭೋಂ
ಕನೆ ಜಳಮಂ ತುಳುಂಕಿ ತರಲಕ್ಕುಮೆ ಸೈಕತದಲ್ಲಿ ತೈಲಮಂ
ಘನತರಯತ್ನದಿಂ ತೆಗೆಯಲಕ್ಕುಮೆ ತನ್ನನದೆಂತುಮೊಲ್ಲದು
ಗನೆಯೊಳೆ ಸೌಖ್ಯಮಂ ಪಡೆಯಲಕ್ಕುಮೆ ಪೇಳ್ದಿಟಮಂ ಧರಾಧಿಪಾ ೫೧

ಅಪಹಾಸ್ಯಕ್ಕೆ ಕಾರಣನಾಗುವುದಿಲ್ಲವೇ?' ವ॥ ಹೀಗೆಂದು ಆ ಗುರುಭಕ್ತರಾಜನೆನ್ನಲು, ಆ ಸ್ತ್ರೀಯು ಶೀಘ್ರವಾಗಿ ಕೋಪಿಸಿಕೊಂಡು, ಕೆಂಪಾದ ಕಡೆಗಣ್ಣುಳ್ಳವಳಾಗಿ ನೋಡಿ— ೪೯. 'ಅರರೇ! ಹೇ ಮನ್ಮಥ ತಂತ್ರಸಾರವನ್ನು ತಿಳಿದ ಸಮರ್ಥನೇ, ಸೂಳೆಯರಲ್ಲಿ ಬಲಾತ್ಕಾರ ಮಾಡಿ, ನೂತನವಾದ ಸ್ನೇಹವನ್ನೂ ಹೆಚ್ಚಿಸುವುದಕ್ಕೋಸ್ಕರ ಅಪೇಕ್ಷೆಪಡುವ ಜಾಣನೇ, ಹೂಗಳ ಸಮೂಹವನ್ನು ಒಸೆದು ಹಾಕಿ ಅದರ ಪರಿಮಳವನ್ನು ಆಸ್ವಾದನೆ ಮಾಡಬೇಕೆನ್ನುವ ಪ್ರೌಢ ವಿಟರಾಜನೇ, ಕಾಮಾತುರಳಲ್ಲದವಳನ್ನು ಪ್ರೀತಿಯುಂಟಾಗುವಂತೆ ಮಾಡುವ ಈ ಜಾಣ್ಮೆಯನ್ನು ಅದೆಲ್ಲಿ ಕಲಿತೆಯೋ! ೫೦. 'ನಾನು ಸೂಳೆ (ನಿಜ) ಮೊದಲಿನ ನಿನ್ನ ಹಂಗು ಎಳ್ಳಷ್ಟೂ ನನಗಿಲ್ಲ; ನನ್ನ ಇಷ್ಟಲಿಂಗ ಸ್ವಾಮಿಯು ಕೊಟ್ಟ ಈ ಕಾಯಕ ನಿಯಮದೊಳಗೆ ಯಾವಾಗಲೂ ಬಾಳುತ್ತಿದ್ದೇನೆ' ನಿಶ್ಚಲವಾದ ದರ್ಪದಿಂದ ಕೂಡಿ, ನನ್ನನ್ನು ಅನ್ಯಾಯದಿಂದ ನಿಷ್ಪ್ರಯೋಜನವಾದ ನಿನ್ನ ಆಜ್ಞೆಗೆ ಒಳಗುಮಾಡಿಕೊಳ್ಳಬೇಕೆಂದಿದ್ದೀಯೆ. ಎಲೈ, (ರಾಜಾ) ನಿನ್ನನ್ನು ತಿಳಿದವರು ಮೆಚ್ಚುವರೇನು ? ನಿನಗೆ ಈ ಕೆಟ್ಟ ವ್ಯಾಮೋಹವು ತಕ್ಕದ್ದಲ್ಲ.' ೫೧. 'ಭೂಪಾಲನೇ, ಅಂತರಿಕ್ಷದಲ್ಲಿ ಕಮಲದ ಹೂವನ್ನು ತಿರಿದು ತರುವುದಕ್ಕಾದೀತೇ ? ಶ್ರೇಷ್ಠ ಮರೀಚಿಕೆಯಲ್ಲಿ ಬೇಗನೆ ಜಲವನ್ನು ತುಳುಕಿಸಿ ತುಂಬಿತರಲು ಶಕ್ಯವೇ? ಮಳಲ ರಾಶಿಯಲ್ಲಿ ವಿಶೇಷ ಪ್ರಯತ್ನದಿಂದ ಎಣ್ಣೆಯನ್ನು ತೆಗೆಯುವುದಕ್ಕೆ ಆದೀತೆ? ಒಲ್ಲದ ನನ್ನಂಥ ಸ್ತ್ರೀಯಲ್ಲಿ ಸೌಖ್ಯವನ್ನು

[1] ಯ(ಮು)

ಧನಮಂ ತೆತ್ತೊಡಮಿಚ್ಛೆಯುಂ ಸಲಿಸಿ ನಾನಾವಸ್ತುಸಂದೋಹಮಂ
ಮನೆಗೊಲ್ದಿಯ್ದಿಸಿ ರನ್ನಚಿನ್ನದೊಡವಂ ಕೆಯ್ಗೆಯ್ಸಿ ಸಂಪ್ರೀತಿಯುಂ
ಮನದೊಳ್ಮೀಳಿಸಿ ಜಾಣ್ಮೆಯುಂ ಕಲಿಸಿ ಮುನ್ನೇಂ ಕೂಡಿ ಮಚ್ಚಿರ್ದ ಕಾಂ
ತನೊ ನೀನಕ್ಕಟ ಕಿಮ್ಮನೆಂತು ನುಡಿವೈ ದುರ್ವಾರಗರ್ವೋಕ್ತಿಯುಂ[1] ೫೨

ಬರೆದ ಪೊಸ ಚಿತ್ರದಲರೊ
ಳ್ಪರಿಮಳಮಂ ಕೊಳ್ವೆನೆಂಬ ತುಂಬಿಯವೋಲ್ ಸಾ
ರ್ದುರವಣಿಸಿ ನೇಹಮಿಲ್ಲದ
ತರುಣಿಯ ರತಿಗೊಲ್ವ ಮಾನವಂ ಮರುಳಲ್ತೇ ೫೩

ಫುಲ್ಲಶರಕೇಳಿಗೊಲ್ದೊಲ
ವಿಲ್ಲದೊಡಂ ಮೇರೆದಪ್ಪಿ ಮೇಲ್ವಾಯ್ದು ಮನಂ
ನಿಲ್ಲದೆ ಕಾಡುವ ವಿಟರಂ
ಪುಲ್ಲಿಂ ಕಡೆಗಣಿಸಿ ಕಾಣರೇ ಕಾಮಿನಿಯರ್ ೫೪

ಎನಗನುರಾಗಮಿಲ್ಲದುದಱಿಂ ರತಿಸೌಖ್ಯಮದಿಲ್ಲ ನೀನದಂ
ನೆನೆಯದೆ ಬಲ್ಮೆಗೆಯ್ದೊಡಪಕೀರ್ತಿ ಪೊದಳ್ದಪುದೆಯ್ದೆ ಕೇಳ್ದ ಸ
ಜ್ಜನರಿಳಿಕೆಯ್ವರಗ್ಗದ ಭುಜಂಗಸಭಾಂತರದಲ್ಲಿ ಹಾಸ್ಯಮುಂ
ಜನಿಯಿಸುಗುಂ ದುರೀಕ್ಷಣದೆ ದೂಷಣಮಂ ತಳೆಯಲ್ಕೆ ತಕ್ಕುದೇ ೫೫

ಹೊಂದುವುದಕ್ಕಾದೀತೇ?' ೫೨. 'ನೀನು ಪೂರ್ವದಲ್ಲಿ ಹಣವನ್ನು ಸಲ್ಲಿಸಿ ಆ ಕೂಡಲೇ ಇಚ್ಛೆಯನ್ನೂ ನೆರವೇರಿಸಿ, ಪ್ರೀತಿಯಿಂದ ನಾನಾ ರೀತಿಯ ವಸ್ತುಗಳ ಸಮೂಹವನ್ನು ಕಳುಹಿಸಿ, ರತ್ನ ಮತ್ತು ಸುವರ್ಣದ ಆಭರಣಗಳನ್ನು ಸಲ್ಲಿಸಿ ಒಳ್ಳೆಯ ಪ್ರೀತಿಯನ್ನೂ ಮನಸ್ಸಿನಲ್ಲಿ ತುಂಬಿಕೊಂಡು ಮೆಚ್ಚಿ ಬಂದ ಕಾಂತನೇ? ಅಕ್ಕಟ! ಸುಮ್ಮನೆ ಹೀಗೆ ಸಹಿಸಲ ಸಾಧ್ಯವಾದ ಗರ್ವದ ಮಾತನ್ನು ನುಡಿಯುತ್ತಿರುವೆಯಾ?' ೫೩. 'ಬರೆದಿರುವ ಹೊಸ ಚಿತ್ರದ ಹೂವಿನಲ್ಲಿ ಪರಿಮಳವನ್ನು ಆಸ್ವಾದಿಸುತ್ತೇನೆಂಬ ಭ್ರಮರದ ಹಾಗೆ ಸಮೀಪಕ್ಕೆ ಬಂದು ಬಲಾತ್ಕಾರವಾಗಿ ಪ್ರೀತಿಯಿಲ್ಲದ ಸ್ತ್ರೀಯಲ್ಲಿ ರತಿ ವ್ಯವಹಾರಕ್ಕೆ ಆಶಿಸುವ ಮನುಷ್ಯನು ಹುಚ್ಚನಲ್ಲವೇ?' ೫೪. 'ಮದನ ಕ್ರೀಡೆಗೆ ಇಚ್ಛಿಸಿ, ಪ್ರೀತಿಯಿಲ್ಲದಿರುವವರಲ್ಲಿ ಮೇರೆದಪ್ಪಿ ಮನಸ್ಸುನಿಲ್ಲದೆ ಮೇಲೆ ಬಿದ್ದು, ಕಾಡುತ್ತಿರುವ ವಿಟರುಗಳನ್ನು ಸ್ತ್ರೀಯರುಗಳು ಹುಲ್ಲಿಗಿಂತಲೂ ತಿರಸ್ಕಾರವಾಗಿ ಕಾಣುವುದಿಲ್ಲವೇ?' ೫೫. ನನಗೆ (ನಿನ್ನಲ್ಲಿ) ಅನುರಾಗವಿಲ್ಲದ ಕಾರಣ (ನೀನು ಬಯಸಿರುವ) ಆ ರತಿ ಸುಖವು ಇಲ್ಲ. ನೀನು ಅದನ್ನಪೇಕ್ಷಿಸದೆ (ಹೋಗು) ಬಲಾತ್ಕಾರ ಮಾಡಿದರೆ, ಅಪಕೀರ್ತಿಯು ಹೆಚ್ಚಾಗುವುದು, (ಈ ವಿಚಾರವನ್ನು) ಚೆನ್ನಾಗಿ ಕೇಳಿದ ಸಜ್ಜನರುಗಳು (ನಿನ್ನನ್ನು) ತಿರಸ್ಕರಿಸುತ್ತಾರೆ. ವಿಟಜನರ ಸಮೂಹ ಮಧ್ಯದಲ್ಲಿ ಹಾಸ್ಯಕ್ಕೆ ಗುರಿಯಾಗುವುದೂ. ಈ ಕೆಟ್ಟದಾದ ಸ್ತ್ರೀ ಸಂಬಂಧದ ಇಚ್ಛೆಯಿಂದ ದೂಷಣೆಯನ್ನು ಹೊಂದು

[1] ಯುಂ(ಅ)

ಅದಱಿಂದೆ ಮಾನನಿಧಿ ಗುರು
ಪದಭಕ್ತಂ ನೀತಿಯುಕ್ತನರಸಂ ನೀನ
ಪ್ಪುದನಱಿದು ನಿನ್ನೊಳಪಯಶ
ಮುದಯಿಸದಂತಾಳ್ವುದಮಳನೀತಿಕ್ರಮಮಂ ೫೬

ಗಂಡನೊ ನೀಂ ಸಲೆ ಪಡಪಿನ
ಮಿಂಡನೊ ಪೊನ್ನಿತ್ತು ಮುನ್ನಮೆನ್ನಂ ನೀನೇಂ
ಕೊಂಡವನೊ ಬಱಿದೆ ನಿನ್ನು
ದ್ದಂಡತೆಯಂ ತೋರ್ಪೆ ನಿನ್ನನಾರ್ಮೆಚ್ಚುವರೋ ೫೭

ದೊರೆತನದ ಬಲ್ಮೆಯೊಲ್ಲದ
ತರುಣಿಯನೊಲಿಸಲ್ಕೆ ಮದ್ದೊ ಮಂತ್ರವೊ ಯಂತ್ರೋ
ದ್ಧರಣವೊ ದೂತಿಯೊ ವಶ್ಯಾಂ
ಕುರತಿಲಕವೊ ನನ್ನಿವೇಳ್ ಭುಜಂಗಲಲಾಮಾ ೫೮

ವ॥ ಎಂದಿಂತವಳನೇಕವಿಧದಿಂ ವಿಡಂಬಿಸಿ ನುಡಿಯೆ ಗುರುಭಕ್ತರಾಜನದಕ್ಕೆ ತೆಕ್ಕದೆ ಮತ್ತಂ ವಿಮೋಹಿತನಾಗಿರ್ಪುದಂ ಕಂಡು ಪಣ್ಯಾಂಗನೆ ಗಣಿಕಾವಿಡಂಬವಂ ನುಡಿದಿವಂಗೆ ರತಿಜುಗುಪ್ಸೆದೋರ್ಪೆನೆಂದು ನೆನೆದು—

ವುದು ತಕ್ಕದ್ದೇ?' ೫೬. 'ಆದ್ದರಿಂದ ಮಾನ ನಿಧಿಯಾದ ನೀನು ಗುರುವಿನ ಪಾದ ಭಕ್ತನು; ನೀತಿಯಿಂದ ಕೂಡಿದವನು; (ಮೇಲಾಗಿ) ಅರಸನಾಗಿರುವುದರಿಂದ ಅರಿತುಕೊಂಡು ನಿನಗೆ ಅಪ ಯಶಸ್ಸುಬಾರದ ಹಾಗೆ ಶ್ರೇಷ್ಠ ನೀತಿಯ ಕ್ರಮವೆನೆಂಬುದನ್ನು (ತಿಳಿದು) ಹೊಂದು?' ೫೭. 'ನೀನೇನು ಗಂಡನೋ,? ಕೇವಲ ಸುರತದ ಮಿಂಡನೋ? ಮೊದಲೇ ಹಣವನ್ನು ಕೊಟ್ಟು ನನ್ನನ್ನು ಕೊಂಡವನೇನು ? ವ್ಯರ್ಥವಾಗಿ ನೀನು (ನನ್ನ ಮೇಲೆ) ಬಲಾತ್ಕಾರವನ್ನು ತೋರಿಸುತ್ತಿದ್ದೀಯೆ. (ಇಂಥ) ನಿನ್ನನ್ನಾರು ಮೆಚ್ಚುವರು?' ೫೮. ಭುಜಂಗ ಶ್ರೇಷ್ಠನೇ, ದೊರೆತನದ ಶಕ್ತಿಯು ಒಲ್ಲದೆ ಇರುವ ತರುಣಿಯರನ್ನು ಒಲಿಸಿ ಕೊಳ್ಳುವ (ಒಂದು) ಔಷಧವೋ? ಮಂತ್ರವೋ? ಯಂತ್ರದ ಉದ್ಧರಣವೋ ? ಕುಂಟಣ ಗಿತ್ತಿಯೋ? ಸ್ತ್ರೀಯರನ್ನು ವಶೀಕರಣಕ್ಕೋಸುಗ ಹಚ್ಚಿದ ಹಣೆಬೊಟ್ಟೋ ? ಸತ್ಯವಾಗಿ ಹೇಳು.' ವ॥ ಈ ರೀತಿಯಲ್ಲಿ ಆ ವೇಶ್ಯೆಯು ಅನೇಕ ವಿಧವಾಗಿ ಅಪಹಾಸ್ಯಮಾಡಿ ನುಡಿಯಲು ಆ ಗುರುಭಕ್ತರಾಜನು ಅದಕ್ಕೆ ಹಿಂದೆಗೆಯದೆ ಮತ್ತೂ ಮೋಹಗೊಂಡವನಾಗಿಯೇ ಇರುವುದನ್ನು ಕಂಡು, ಆ ವೇಶ್ಯೆಯು ಸೂಳೆಯರು ತೋರಿಸುವ ತಿರಸ್ಕಾರದ ಮೂಲಕ ತಿರಸ್ಕರಿಸಿ ತಿಳಿಸಿ ಈತನಿಗೆ ಸುರತ ವಿಷಯದಲ್ಲಿ

ಕಾಮಹರಭಕ್ತ ನಿನಗೀ
ಕಾಮ[1]ವ್ಯಾಮೋಹಮುಚಿತಮೇ ಬಿಡು ಬಿಡು ಮಾ
ಯಾಮಯಮೆನಿಸುವ ಗಣಿಕಾ
ಸ್ತೋಮದೊಳೆಲೆ ತಿಳಿದು ನೋಡು ಪುರುಳಿನಿತುಂಟೇ ೫೯

ಎಲೆ ವಿಟರಾಜ ಕೇಳ್ಗಣಿಕೆಯರ್ಗುಣಹೀನೆಯರರ್ಥಲೋಭಸಂ
ಚಲೆಯರತೀವ ಧೂರ್ತೆಯರಸತ್ಯಸಮೇತೆಯರಂಗಜಾತವಿ
ಹ್ವಲೆಯರಸಾರಮಾನಸೆಯರಸ್ತ ವಿಚಾರೆಯರಾಪ್ತವಂಚನಾ
ಕುಲೆಯರಧರ್ಮಶೀಲೆಯರನಾರುದುಷ್ಟಜನಾನುಕೂಲೆಯರ್ ೬೦

ಕೃತಕಾಲಾಪೆಯರಿಚ್ಛೆಗಾರ್ತಿಯರನಲ್ಪಾಶಾರ್ತೆಯರ್ಪಾಪಸಂ
ಗತೆಯರ್ಖುಲ್ಲೆಯರುಗ್ರೆಯರ್ಚಪಲೆಯರ್ಗೋಣ್ಗೊಯ್ಕೆಯರ್ದಂಭಸಂ
ಯುತೆಯರ್ಮಾನವಿಹೀನೆಯರ್ಖಲೆಯರನ್ಯಾಯಾಧ್ವಸಂಚಾರೆಯ
ರ್ವಿತತಸ್ನೇಹವಿದೂರೆಯರ್ವಿಗಡೆಯರ್ವಿಧ್ವಸ್ತವಿಶ್ವಾಸೆಯರ್ ೬೧

ಮೊಱೆಗೆಟ್ಟೊಂದುವ ಧೂರ್ತೆಯ
ರಱೆಕೆಯೊಳಸುವಸುವ ಕೊಳ್ವ[2]ರಕ್ಕಸಿಯರ್ಬ

ಜುಗುಪ್ಸೆಯು ಉಂಟಾಗುವ ಹಾಗೆ ಮಾಡುತ್ತೇನೆ ಎಂದು ಯೋಚಿಸಿ. ೫೯. 'ಹೇ ಕಾಮಹರನಾದ ಶಿವನ ಭಕ್ತನೇ, ನಿನಗೆ ಈ ಮನ್ಮಥ ಸಂಬಂಧವಾದ ಆಸಕ್ತಿಯು ಉಚಿತವೇ ? ಬಿಡು ಬಿಡು ! ಎಲೈ (ರಾಜಾ), ಮಾಯಾಮಯವೆಂದೆನಿಸುವ ಗಣಿಕೆಯರ ಸಮೂಹದಲ್ಲಿ ಹುರುಳು ಏನಾದರೂ ಉಂಟೆಂಬುದನ್ನು ವಿಚಾರ ಮಾಡಿ ನೋಡು.' ೬೦_೬೨. 'ಎಲೈ ವಿಟವೃತ್ತಿಗಿಳಿದಿರುವ ರಾಜನೇ, ಕೇಳು ; ಸೂಳೆಯರು ಹೀನ ಗುಣದವರು ; ಹಣದಾಸೆಯಿಂದ ಚಂಚಲರಾದವರು ; ಬಹುಮೋಸಗಾರ್ತಿಯರು ; ಸುಳ್ಳಿನಿಂದ ಕೂಡಿದವರು ; ಮನ್ಮಥನಿಂದ ವ್ಯಾಕುಲಗೊಂಡವರು ; ಸಾರ ರಹಿತವಾದ ಮನಸ್ಸಿನವರು ; ವಿಚಾರ ಹೀನೆಯರು, ಹಿತವಾದವರನ್ನು ಮೋಸಗೊಳಿಸುವುದರಲ್ಲಿ ಆಕುಲರಾದವರು ; ಅಧರ್ಮವನ್ನೇ ಶೀಲವಾಗಿ ಉಳ್ಳವರು ; ದುಷ್ಟಜನರಿಗೆ ಸದಾ ಅನುಕೂಲರಾದವರು ; ಕಪಟದ ಮಾತಿನವರು ; ಕಾಮವಿಕಾರವನ್ನುಂಟು ಮಾಡುವವರು ; ವಿಶೇಷ ಆಸೆಯ ಬಾಧೆಗೊಳಗಾದವರು ; ಪಾಪದಿಂದ ಕೂಡಿದವರು ; ನೀಚಸ್ವಭಾವದವರು ; ಕೋಪವುಳ್ಳವರು, ಚಪಲಸ್ವಭಾವದವರು, ಕುತ್ತಿಗೆಯನ್ನು ಕತ್ತರಿಸುವವರು, ಬಾಹ್ಯಾಡಂಬರದಿಂದ ಕೂಡಿದವರು, ಮಾನ ಹೀನವಾದವರು ; ಅಧಮ ಸ್ವಭಾವದವರು ; ಅನ್ಯಾಯದ ಮಾರ್ಗವನ್ನು ತುಳಿಯುವವರು; ಗಾಢವಾದ ಸ್ನೇಹದಿಂದ ದೂರವಾಗಿರುವವರು ; ಸಂಕಟಕಾರಿಣಿಯರು ಪ್ರೇಮವೆಂಬುದನ್ನೇ ನಾಶಮಾಡಿದವರು ; ನಾಚಿಕೆಗೆಟ್ಟು ಕೊಡುವ ಧೂರ್ತೆಯರು ; ತಿಳಿಯಾಗಿ

1 ವಶಾ(ದ) 2 ನೀ (ಅ, ಚ)

ಲ್ಬಿಱುಸಿದ ಬಿಂಕದ ಮಾತಿನ
ನಱುಗುಲಿಗಳ್ವಿಟರ ಮರ್ಮಪಟಕತ್ತರಿಗಳ್ ೬೨

ಅಡಿಮುಡಿ ಸಂಚುವಂಚನೆ ವಿಡಾಯಮಡರ್ಪು ತೊಡರ್ಪು ತೋಟಿರ
ಟ್ಟಡಿತನವೊಲ್ಮೆ ಬಲ್ಮೆ ಪದಿರಣ್ಮು ಚಮತ್ಕೃತಿ ಗಾಡಿ ಮೋಡಿಯಾ
ಱಡಿ ಪುಸಿ ವಾಸಿ ವೈಶಿಕಮದಿರ್ಪಣಕಂ ಮುಳಿಸೆರ್ಗು ಸೊರ್ಕು ಬ
ರ್ಕುಡಿ ಪುರುಡಂಕೆ ರ್‍ಝುಂಕಣೆ ನುಸುಳ್ಗಣಿಕಾಂಗನೆಯರ್ಗೆ ಶಾಶ್ವತಂ ೬೩

ಧನದಾಶೆಯೊಳೇಂದಿರ್ದುಂ
ಮನುಷ್ಯ ಧರ್ಮಾಪಹಾರಿ ಗಣಿಕಾನಿವಹಂ
ಜನಿತಾಭಿಮನ್ಯುನರಕೋ
ಪನಿಮಿತ್ತಂ ತಾನೆನಿಪ್ಪುದೇನಚ್ಚರಿಯೋ ೬೪

ಬಲಿದಸ್ಥಿವ್ರಜದಿಃದೆ ಪಂಜರಮನಂತ್ರವ್ರಾತದಿಂ ಕಟ್ಟಿ ಮೇ
ಲೊಲವಿಂ ಮಾಂಸಮನಲ್ಲಿ ಮೆತ್ತಿ ತೊವಲಿಂದಾಚ್ಛಾದನಂಗೆಯ್ದು ದು
ರ್ಮಲಮಂ ತಾನೊಳಗಿಟ್ಟು ತೀವಿ ಬಿದಿ ಮಾಡಿರ್ದೊಂದು ಚೋಹಂ ಗಡೀ
ಲಲನಾದೇಹಮನಾರತಂ ಕಿಸುಕುಳಂ ದುರ್ವಾರದೋಷಾಕುಳಂ ೬೫

ವ್ಯವಹರಿಸಿ) ಹಣವನ್ನೂ, ಪ್ರಾಣವನ್ನೂ ಎಳೆದುಕೊಳ್ಳುವ ರಾಕ್ಷಸಿಯರು ; ಬಲು ಬಿರುಸಿನ, ಗರ್ವದ ಮಾತಿನವರು ; ನಯಮಾಡುವುದರಲ್ಲಿ ಸಮರ್ಥೆಯರು ; ವಿಟರ ಗುಟ್ಟು ಎನ್ನುವ ಬಟ್ಟೆಗೆ ಕತ್ತರಿಯಂತಿರುವವರು. ೬೩. ಗಣಿಕಾಸ್ತ್ರೀಯರು ಕಾಲಿನಿಂದ ತಲೆಯವರೆಗೂ ಸಂಚುಳ್ಳವರು ; ವಂಚನೆ, ಆಡಂಬರ, ಆಶ್ರಯ, ವಿಘ್ನ, ಜಗಳಗಂಟತನ. ಹಟಮಾರಿತನ, ಒಲಿಸಿಕೊಳ್ಳುವಿಕೆ, ಬಲಾತ್ಕಾರ ಮಾಡುವಿಕೆ, ಚಾಕಚಕ್ಯತೆ, ಪರಾಕ್ರಮ, ಚಮತ್ಕಾರ, ಸಂಭ್ರಮ, ಕಣ್ಣುಕಟ್ಟು ವಿದ್ಯೆ, ಸುಲಿಗೆ ಮಾಡುವಿಕೆ, ಸುಳ್ಳು ಹೇಳುವಿಕೆ, ಮಾತಿನ ಕಪಟ, ಚಾಂಚಲ್ಯ, ಅಣಕಿಸುವಿಕೆ, ಕೋಪ, ಎಗ್ಗು, ಸೊಕ್ಕು, ಬೆರಗು, ಸ್ಪರ್ಧೆ, ಹಿಡಿತ (ಅಂಕೆ), ಬೆದರಿಸುವಿಕೆ, ಜಾರಿಕೊಳ್ಳುವಿಕೆ ಇಲ್ಲೆಲ್ಲ (ಅವರ) ಶಾಶ್ವತ ಗುಣಗಳುಳ್ಳವರು. ೬೪. 'ಗಣಿಕೆಯರ ಸಮೂಹವು ಅವರು ಹಣದ ಮೇಲಿನ ಆಸೆಯಿಂದ ಕೂಡಿ ಮನುಷ್ಯ ಧರ್ಮವನ್ನೇ ಅಪಹರಿಸುವರು ; (ಕುಬೇರನ ಮೇಲಣ ಆಸೆಯಿಂದಿದ್ದು, ಕುಬೇರನನ್ನೇ ನಾಶಮಾಡುವವರು); ಹೆಚ್ಚಾದ ದುಃಖವನ್ನು ಹುಟ್ಟಿಸತಕ್ಕವರಾಗಿ ನರಕಕ್ಕೆ (ಉತ್ತಮ ಉಪಕರಣರಾದವರು. (ಅಭಿಮನ್ಯುವನ್ನು ಹುಟ್ಟಿಸಿದವರೆನಿಸಿಯೂ ಅರ್ಜುನನ ಕೋಪಕ್ಕೆ ನಿಮಿತ್ತರಾದವರು) ಹೀಗೆನಿಸಿರುವುದು ಅದೇನು ಆಶ್ಚರ್ಯವೋ !' ೬೫. 'ಸತತವೂ ಹೇಯ ವಸ್ತುಗಳಿಂದ ಹೋಗಲಾಡಿಸುವುದಕ್ಕಸಾಧ್ಯವಾದ ದೋಷಗಳಿಂದ ತುಂಬಿದ ಸ್ತ್ರೀಯರ ದೇಹವು–ಬ್ರಹ್ಮನು ಮೂಳೆಗಳ ಸಮೂಹದಿಂದ ಗೂಡೊಂದನ್ನು ಮಾಡಿ, (ಅದನ್ನೂ) ನರಗಳ ಸಮೂಹದಿಂದ ಬಿಗಿದು, ಒಲವಿನಿಂದ ಅಲ್ಲಲ್ಲಿ ಮಾಂಸವನ್ನು ಮೆತ್ತಿ ತೊಗಲಿನಿಂದ ಅದನ್ನು ಮುಚ್ಚಿ, ಒಳ ಭಾಗದಲ್ಲಿ ಅಸಹ್ಯ ಮಲವನ್ನಿಟ್ಟು ತುಂಬಿ, ಮಾಡಿದಂಥ ಒಂದು ಮೋಸದ ಗೊಂಬೆಯಲ್ಲವೇ ?'

ತಲೆ ವಿತತಶ್ಲೇಷ್ಮರಸದ
ನೆಲೆವದನಂ ದೋಷಪಸದನವೆಂಲ್ವಡಸಿದ ಬಾ
ಯ್ಚಲರಸನಾಭೋಗಿಯ ಬ
ಲ್ಬಿಲಮಧರಂ ರುಧಿರಮಾಂಸ ಪರಿಪಕ್ವಫಲಂ ೬೬

ಕಣ್ಗಳಘವಲ್ಲರಿಯ ಪೊಸ
ಪಣ್ಗಳ್ ಜಾಜಿಡಸಿ ತೋರ್ಪ ಪುಣ್ಗಳ್ಮಗುಳ್ದಾ
ಪೆಣ್ಗಳ ನಾಸಿಕೆ ಸಿಂ[1]ಬುಳ
ನುಣ್ಗೊಳವಿಯಪಾಂಗಮಘಸರೋಧಿತರಂಗಂ ೬೭

ಗಳಮದು ದುರುಕ್ತಿದನುಜೆಯ
ಪೊಳಲಪ್ಪುವ ತೋಳ್ಕೃತಾಂತರಾಜನ ಬಾಳ್ಕೈ
ದಳಮಧಿಕ ಲೋಭಭೂಜದ
ದಳಮಂಗುಲಿ ಬೊಜಗಮೀಂಗೆ ಮೀಂಗುಲಿ ಪೆಱತೇಂ ೬೮

ಮೊಲೆ ಬಸೆಯ ಮಾಂಸರಾಶಿಯ
ಮಲೆ ಪೊಡೆ ದುರ್ಮಲದ ಕರುಳ್ಗಳೆಡೆಯುರುನಾಭೀ
ವಲಯಂ ಸಲೆ ದುರ್ಗಂಧದ
ನಿಲಯಂ ದುರ್ಜಲದ ಪಳಿನಮುರ್ಬಿದ ಜಘನಂ ೬೯

ಪೊಲಸಿನ ನೆಲೆ ರುಧಿರದ ಕುಳಿ
ವಿಲಿವಿಲಿಸುವ ಪುಳುಗಳೊಗೆವ ಪುತ್ತು ಪುರೀಷಂ
ನೆಲಸಿದ ದರಿ ಕಾಮಾಹಿಯ
ಬಿಲಮಂಗಜಗೃಹಮನಂಗದುರ್ಜಲಕೂಪಂ ೭೦

ತೊಡೆ ಪೇರಡಗಿನ ಕಾಳಿಜ
ದೆಡೆ ಚರಣಂ ದುರಿತಕಾರಣಂ ತಾನೆನಿಪೀ

೬೬. 'ತಲೆಯೆಂಬುದು ಹೆಚ್ಚಾದ ಶ್ಲೇಷ್ಮರಸ (ಸಿಂಬಳ) ದಿಂದ ತುಂಬಿದ ಸ್ಥಾನ ; ಮುಖವು ಪಾಪದ ಮನೆ ; ಮೂಳೆಗಳಿಂದ ತುಂಬಿದ ಬಾಯಿಯು ಚಂಚಲವಾದ ನಾಲಿಗೆಯೆಂಬ ಹಾವಿನ ದೊಡ್ಡ ಬಿಲ ; ತುಟಿಯು ರಕ್ತ ಮಾಂಸಗಳಿಂದ ಪಕ್ವಗೊಂಡ ಹಣ್ಣು, ೬೭–೬೮. 'ಹೆಣ್ಣುಗಳ ಕಣ್ಣುಗಳು ಪಾಪವೆಂಬ ಬಳ್ಳಿಯ ಹೊಸ ಹಣ್ಣುಗಳು ; (ಮತ್ತು) ಆ ಕಣ್ಣಿನ ಜಾರು, ತುಂಬಿಕೊಂಡು ಕಾಣುವ ಹುಣ್ಣುಗಳು ; ಮೂಗು ಸಿಂಬಳು ತುಂಬಿದ ನುಣುಪಾದ ನಾಳಗಳು ; ಕಡೆಗಣ್ಣೋಟವು ಪಾಪವೆಂಬ ಸಮುದ್ರದ ತೆರೆ ; ಆ ಕುತ್ತಿಗೆಯು ದುರ್ಭಾಷೆಯೆಂಬ ರಾಕ್ಷಸಿಯ ಪಟ್ಟಣ ; ಅಪ್ಪುವ ತೋಳುಗಳು ಯಮನ ಖಡ್ಗಗಳು, ಕೈಯಕಳವು (ಅಂಗೈ), ಹೆಚ್ಚಾದ ಆಸೆಯೆಂಬ ಮರದ ಎಲೆಗಳು ; ಬೆರಳುಗಳು ವಿಟರುಗಳೆಂಬ ಮೀನುಗಳಿಗೆ ಗಾಳವಲ್ಲದೆ ಮತ್ತೇನು ? ೬೯–೭೧. 'ಮೊಲೆಯು ಕೊಬ್ಬಿದ ಮಾಂಸರಾಶಿಯ ಬೆಟ್ಟ ; ಹೊಟ್ಟೆಯೆಂಬುದು ಕೆಟ್ಟ ಅಮೇಧ್ಯ

[1] ಪುಂ(ಚ)

ಕಡುಪೆರ್ಬಡಿಕೆಯು ಗಣಿಕೆಯು
ರೊಡಲೊಳ್ಪುರುಡುಂಟೆ ತಿಳಿಯೆ ಪೇಳ್ನೃಪತಿಲಕಾ ೭೧

ಜನತಾಪ್ರದಮಾಲೋ
ಕನಮಿಂದ್ರಿಯಮೃಗದ ಬಲೆ ವಿಕಾರದ ನೆಲೆ ಸಂ
ಜನಿತವಿಮೋಹಮರೀಚಿಕೆ
ಯನಿಶಂ ಚಪಲಂ ವಿವೇಕಸರಸಿಜತುಹಿನಂ ೭೨

ಅಣಕದ ನೆಲೆ ಸೋಲಿಪ ಬಿ
ನ್ನಣದಿಂ ನಂಬಿಸುವ ಡೊಂಬಿನೆಡೆ ಪುಸಿ ನುಸುಳೊ
ಡ್ಡಣೆ ಪೊರೆಯುರವಳಿಪಿನ ಸಂ
ದಣೆ ಪಳಿ ಜಗಳಂಗಳಿಕ್ಕೆ ನುಡಿ ಗಣಿಕೆಯರಾ ೭೩

ಅರಿಷಡ್ವರ್ಗದ ತವರತಿ
ವಿರಸಂ ಮಲಿನಂ ಕೃತಘ್ನಮಸ್ಥಿರಮಶುಭಂ
ದುರಿತನಿಧಾನಂ ಮಾಯಾಂ
ಕುರಬೀಜಂ ವಾರಕಾಮಿನೀಮನಮರಸಾ ೭೪

ವಿರುವ ಕರುಳುಗಳ ಸ್ಥಾನ ; ದೊಡ್ಡ ಹೊಕ್ಕಳು ಪ್ರದೇಶವು ನಿಜವಾಗಿ ದುರ್ಗಂಧದ ಮನೆ; ಉಬ್ಬಿದ ಜಘನವು ಕೆಟ್ಟ ನೀರಿನ (ಮೂತ್ರದ) ಮಳಲು ಗುಡ್ಡೆ ಯೋನಿಯು ; ಹೊಲಸಿನ ನೆಲೆ ; ರಕ್ತದ ಹಳ್ಳ ; ವಿಲಿ ವಿಲಿಗುಟ್ಟುತ್ತಿರುವ ಹುಳುಗಳ ಹೊರ ಹೊಮ್ಮುವ ಹುತ್ತು ; ಕೊಳೆ (ಕಲ್ಮಷ) ತುಂಬಿರುವ ದರಿ ; ಮನ್ಮಥನೆಂಬ ಸರ್ಪದ ಬಿಲ ; ಕೆಟ್ಟುದಾದ ಕಾಮರಸದ ಬಾವಿ ; ತೊಡೆಗಳು ದಪ್ಪನಾದ ಮಾಂಸಖಂಡಗಳ ಮೊತ್ತದ ಸ್ಥಾನ; ಕಾಲುಗಳ ಪಾಪಕ್ಕೆ ಕಾರಣವೆನಿಸುವ ಈ ವಿಶೇಷವಾದ ದೊಡ್ಡಸ್ತಿಕೆಯು ವೇಶ್ಯಾಂಗನೆಯರ ದೇಹದಲ್ಲಿ ವಿಚಾರಿಸಿ ನೋಡಿದರೆ, (ಏನಾದರೂ) ಹುರುಳುಂಟೆ ಮಹಾರಾಜಾ ? ಹೇಳು.' ೭೨. (ಸ್ತ್ರೀಯರ) ನೋಟವು ಜನರಿಗೆ ಸಂತಾಪವನ್ನುಂಟು ಮಾಡುವುದು ; ಇಂದ್ರಿಯಗಳೆಂಬ ಮೃಗದ ಬಲೆ ; ವಿಕಾರದ ನೆರವು ; ಅಜ್ಞಾನದ ಬಿಸಿಲ್ಗುದುರೆಯನ್ನುಂಟು ಮಾಡುವಂತಹುದು ; ಸದಾ ಚಾಪಲ್ಯಗೊಳಿಸುವಂತಹುದು ; ವಿವೇಕವೆಂಬ ಕಮಲಕ್ಕೆ ಹಿಮಪ್ರಾಯವಾದದ್ದು.' ೭೩. 'ವೇಶ್ಯೆಯರ ಮಾತು–ಅಣಕಿಸುವಿಕೆಯ ನೆಲೆ ; ಸೋಲಿಸುವ (ಮೋಹಗೊಳಿಸುವ) ಬಿನ್ನಾಣದಿಂದನಂಬಿಗೆ ಯನ್ನುಂಟುಮಾಡುವ ಡಂಭಾಚಾರದ ನೆಲೆ ; ಹೇಳಿತಪ್ಪುವುದು, ಸುಳ್ಳು–ಇವುಗಳ ತಡಿಕೆ ; ತಿಳುವಳಿಕೆಯನ್ನೇ ನಾಶಮಾಡುವ ಹೊರೆ ; ದುಷ್ಟವಾದ ಜಗಳವನ್ನುಂಟು ಮಾಡುವ ನೆಲೆಮನೆ.' ೭೪. ಮಹಾರಾಜ, ಸೂಳೆಯರಮನಸ್ಸು ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳೆಂಬ ಅರಿಷಡ್ವರ್ಗಗಳ ತವರುಮನೆ, ಬಲುಗುಣ ಹೀನವಾದುದು ; ಕಲ್ಮಷದಿಂದ ಕೂಡಿದ್ದು ; ಮಾಡಿದ ಉಪಕಾರವನ್ನು ಮರೆಯು ವಂತಹುದು ; ಅಸ್ಥಿರವಾದದ್ದು ; ಅಮಂಗಳವಾದದ್ದು; ಪಾಪದ ವಾಸಸ್ಥಳವೆನಿಸಿದ್ದು;

ಕುಲಹೀನಂ ಸತ್ಕುಲಜಂ
ಖಲನುತ್ತಮನೆಂಬುದಿಲ್ಲದೊಡವೆರೆವರ್ಚಂ
ಚಲಮತಿಗಳ್ಪಣದಾಶೆಗೆ
ಸಲೆ ಪಣವಿಲ್ಲದನನಂಗನಾದೊಡಮೊಲ್ಲರ್ ೭೫

ಕ್ಷಣಮಾತ್ರ ಜನಿತ ರತಿಸುಖ
ಕಣಮಂ ನೆಜಿ಼ ನಚ್ಚಿ ಮಚ್ಚಿ ಮೆಯ್ಯಂ ಮನಮುಂ
ಪಣಮಂ ತೆತ್ತನುದಿನಮಿಾ
ಗಣಿಕೆಯುರೊಡವೆರೆವ ಮನುಜನೇಂ ಗಾವಿಲನೋ ೭೬

ಮಾನದ ಹಾನಿಯೊಂದು ನಿಜದೈನ್ಯದಡರ್ಪೆರಡಾತ್ಮಲಜ್ಜೆಯಂ
ತಾನುಳಿದಿರ್ಪ ಬನ್ನಮದು ಮೂಱಪಹಾಸ್ಯದಳುರ್ಕೆ ನಾಲ್ಕು ಹೃ
ದ್ಗ್ಲಾನಿಯದೈದು ವಿತ್ತದಳಿವಾಱು ವಿಮುಕ್ತಿಯನೆಯ್ದದಿರ್ಪುದೇ
ಳೀ ನೆಗಳ್ದೇಳಱಾಟದಿನಣಂ ಕಿಡುಗುಂ ಗಣಿಕಾರತಿಪ್ರಿಯಂ ೭೭

ಕ್ಷಣರುಚಿ ಜಲಲಿಪಿ ಮುಗಿಲೊ
ಡ್ಡಣೆಯು ನೆಳಲ್ ಕರಂಮಿಂದ್ರಚಾಪಂ ಸಂಧ್ಯಾ
ರುಣರುಚಿ ಚಿರಮಾದೊಡಮಿಾ
ಗಣಿಕಾಸಂಪ್ರೀತಿಯೊರ್ಮೆ ಚಿರಮಾದಪುದೇ ೭೮

ಅಜ್ಞಾನವೆಂಬ ಮೊಳಕೆಗೆ ಬೀಜರೂಪವಾದದ್ದು ! ೭೫. 'ಚಪಲಬುದ್ಧಿಯುಳ್ಳ ಸೂಳೆಯರು (ಇವನು) ಕುಲಹೀನನು, ಸತ್ಕುಲಪ್ರಸೂತನು, ನೀಚನು, ಉತ್ತಮನು-ಎಂಬ ಭೇದವಿಲ್ಲದೆ ಹಣದ ಆಸೆಯಿಂದ ಒಡಗೂಡುವರು (ರತ್ಯಾಸಕ್ತರಾಗುವರು) ; ಹಣವಿಲ್ಲದವನು ಮನ್ಮಥನಾದರೂ (ಅವನನ್ನು) ಒಲ್ಲರು.' ೭೬. 'ಕ್ಷಣಮಾತ್ರ ಹುಟ್ಟಿದ ರತಿಸುಖದ ಲೇಶವನ್ನು ನೆರೆ ಮೆಚ್ಚಿ, ನಂಬಿ, ಮಯ್ಯನ್ನೂ, ಮನವನ್ನೂ, ಹಣವನ್ನೂ, (ಅವರಿಗೆ) ಅರ್ಪಿಸಿ ಅನು ದಿನವೂ ಗಣಿಕೆಯುರನ್ನು ಒಡಗೂಡುವ ಮನುಷ್ಯನು ಏನು ಮೂಢನೋ !' ೭೭. 'ಮಾನಹಾನಿಯೊಂದು; ತನ್ನ ದೈನ್ಯದ ಆಶ್ರಯ ಎರಡು, ನಾಚಿಕೆಯನ್ನು ಬಿಟ್ಟು ಇರುವ ಆ ಕಷ್ಟದ ಬಾಳು ಮೂರು, ಅಪಹಾಸ್ಯದ ಆಧಿಕ್ಯವು ನಾಲ್ಕು, ಮಾನಸಿಕ ಬಳಲಿಕೆ ಐದು, ದುಡ್ಡಿನ ನಾಶವು ಆರು, (ಅವರಿಂದ) ಬಿಡುಗಡೆ ಹೊಂದದಿರುವುದು ಏಳು ಈ ಪ್ರಸಿದ್ಧವಾದ ಏಳರ ಕಾಟದಿಂದ ಅತಿಯಾಗಿ ಸೂಳೆಯರೊಡನೆ ರತಿಕ್ರೀಡೆಯಲ್ಲಿ ಆಸಕ್ತಿಯುಳ್ಳವನು ಕೆಟ್ಟುಹೋಗುವನು. ೭೮. 'ಮಿಂಚು, ನೀರಿನಲ್ಲಿ ಬರೆದ ಬರವಣಿಗೆ, ಮೇಘ ಸಮೂಹದ ನೆಳಲು. ಆಲಿಕಲ್ಲು, ಕಾಮನಬಿಲ್ಲು (ಇಂದ್ರಚಾಪ), ಸಂಧ್ಯಾಕಾಲದಲ್ಲಿರುವ ಕೆಂಪು ಕಾಂತಿ-ಇವುಗಳನ್ನು ದೀರ್ಘಕಾಲದವೆನ್ನಬಹುದು (ಆದರೆ) ವೇಶ್ಯೆಯರ ಪ್ರೀತಿಯೂ ಒಮ್ಮೆಯಾದರೂ ಸ್ಥಿರವೆನಿಸೀತೆ ?' ಮಿಂಚು ಮೊದಲಾದವುಗಳಿಗಿಂತಲೂ ವೇಶ್ಯೆಯರ ಅನುರಾಗ ಕ್ಷಣಿಕ

ಅವಿಚಾರಿತರಮಣೀಯಂ
ಭುವನದೊಳೀ ವಾರವಧುಗಳೊಡನಾಟವಿದಂ
ಸುವಿವೇಕಮಾಳ್ದ ನಿಶ್ಚಳ
ಶಿವಭಕ್ತಂ ಬಯಸಲಕ್ಕುಮೇ ಬಗೆವಾಗಳ್ ೭೯

ಶರಣಮನೋಮರಾಳಕೆ ಮನೋಜ್ಞಮೆ ಕಾಂತೆಯರಾಳ್ದ ಕೇಕರ
ಸ್ಫುರಿತತಟಿಲ್ಲಸಲ್ಲತೆ ವಧೂದರಹಾಸಸುಧಾಂಶುರೋಚಿ ಶಂ
ಕರಪದಭಕ್ತಲೋಚನಸರೋಜಕೆ ರೋಚಕಮೇ ಮನೋಜಸಂ
ಹರಭರಿತಾಂಗನಂಗಕೆ ಮನೋಜರತೋತ್ಸವಮೊಪ್ಪಲಾರ್ಕುಮೇ ೮೦

ಭಸಿತವಿಲೇಪನಪ್ರಿಯನದೆಂತು ಮೃಗೋದ್ಭವಪಂಕಮಾಂಪನು
ಲ್ಲಸಿತ ಶಿವಾಕ್ಷಿಜಾತಮಣಿಭೂಷಣನೆಂತು ಮಣಿಸ್ರಜಂಗಳಂ
ಪೊಸತೆನೆ ತಾಳ್ವನೊಲ್ದು ಶಿವಮಂತ್ರಪರಾಯಣನೆಂತು ಕಾಮವಾ
ಗ್ವ್ಯಸನಮನೊಲ್ವನೆಂತು ಶಿವಪೂಜಕನನ್ಯರತಕ್ಕೆ ಕೂರ್ಪನೇ ೮೧

ಪಲವಾಳಾಪದಿನೇಂ ಫಲಂ ನೃಪತಿ ಕೇಳ್ನೀಂ ನೀತಿಯುಕ್ತಂ ನಿರಾ
ಕುಲಚಿತ್ತಂ ಗುರುಭಕ್ತನೀಶಭಜನಾಸಕ್ತಂ ಗಡಿಂತಾದ ದು

ವೆಂದು ಭಾವ) ೭೯. ಲೋಕದಲ್ಲಿ ಈ ವಾರಾಂಗನೆಯರ ಒಡನಾಟವು ವಿಚಾರಮಾಡದೆ ಯಿರುವುದರಿಂದಲೇ ರಮಣೀಯವಲ್ಲದೆ ವಿಚಾರಮಾಡಿ ನೋಡಿದಾಗ ಅದು ಸದ್ವಿವೇಕ ವನ್ನು ಹೊಂದಿದ ನಿಶ್ಚಲವಾದ ಶಿವಭಕ್ತಿಯುಳ್ಳವನು ಬಯಸಲಿಕ್ಕೆ ಆದೀತೇ ?' ೮೦. 'ಶಿವಶರಣರ ಮನಸ್ಸೆಂಬ ಹಂಸಪಕ್ಷಿಗೆ ಕಾಂತಾಜನರುಗಳು ಹೊಂದಿರುವ ನಸುಗೆಂಪಿನ ಕಡೆಗಣ್ಣುಗಳ ಪ್ರಕಾಶಿಸುವ ಬಳ್ಳಿಯಂತಿರುವ ಮಿಂಚು ನೋಟವು ಮನೋಹರವಾ ದದ್ದೇ ? ಶಂಕರನ ಪಾದದಲ್ಲಿ ಭಕ್ತಿಯನ್ನಿಟ್ಟಿರುವವರ ಕಣ್ಣೆಂಬ ಕಮಲಕ್ಕೆ ಆ ಸ್ತ್ರೀಯರ ಮುಗುಳು ನಗೆಯೆಂಬ ಬೆಳದಿಂಗಳು ರುಚಿಸುವಂತಹುದೇ ? ಮನ್ಮಥ ಸಂಹಾರಕನಾದ ಶಿವನಿಂದ ಪರಿಪೂರ್ಣಗೊಂಡ ಶರೀರಗಳಾದ (ಶರಣರ) ಅಂಗಕ್ಕೆ ಮನ್ಮಥ ಕ್ರೀಡೆ ಯಿಂದುಂಟಾಗುವ ಸಂತೋಷವು ಒಪ್ಪಲು ಶಕ್ಯವಾದೀತೇ ?' ೮೧. 'ವಿಭೂತಿಯನ್ನು ಧಾರಣಮಾಡಿಕೊಳ್ಳುವುದರಲ್ಲಾಸಕ್ತನಾದವನು ಅದೆಂತು ಕಸ್ತೂರಿಯ ಕೆಸರನ್ನು ಹಚ್ಚಿ ಕೊಳ್ಳುವನು ? ಈಶ್ವರನ ಕಣ್ಣಿನಿಂದ ಹುಟ್ಟಿದವುಗಳಾದ ರುದ್ರಾಕ್ಷಗಳ ಆಭರಣ ವುಳ್ಳವನು ನೂತನವೋ ಎನ್ನುವಂತೆ ರತ್ನಾಭರಣಗಳನ್ನು ಅದೆಂತು ಧರಿಸುವನು ? ಶಿವ ಮಂತ್ರ ಜಪದಲ್ಲಿ ಆಸಕ್ತನಾದವನು, ಮದನ ವಿಷಯಕವಾದ ಮಾತುಗಳ ದುರಭ್ಯಾಸ ವನ್ನು (ಗೀಳನ್ನು) ಹೇಗೆ ಒಪ್ಪುತ್ತಾನೆ ? ಶಿವನ ಪೂಜೆ ಮಾಡುವವನು ಇತರ ವಿಷಯಕ ವಾದ ರತಿಗೆ (ಇಚ್ಛೆಗೆ) ಹೇಗೆ ಪ್ರೀತಿಗೊಳ್ಳುವನೋ !' ೮೨. 'ಮಹಾರಾಜಾ, ಕೇಳು ಅನೇಕ ಮಾತುಗಳಿಂದ ಫಲವೇನು ? ನೀನು ನೀತಿಯುಕ್ತನೂ, ಕಲಂಕರಹಿತವಾದ ಚಿತ್ತ ವುಳ್ಳವನೂ ಈಶ್ವರ ಭಜನೆಯಲ್ಲಿ ಆಸಕ್ತನೂ ಆದವನಲ್ಲವೇ ! ನಾನು ಈ ಮೊದಲು

ಮ್ಯಲಭಾಂಡಪ್ರಮದಾಂಗಸಂಗದಣುಮಾತ್ರಾನಂದಕೊಲ್ದೀಶಭ
ಕ್ತಿಲಸತ್ಸಾರಸುಖಾಬ್ಧಿಯಂ ತೊಱೆದು ದಲ್ಬೇಳಾಗದಿರ್ಸಾಱಿದೆಂ ೮೨

ವ॥ ಎಂದು ಪ್ರೌಢಮತಿ ನಾರಿ ವೇಶ್ಯೋಪಾಲಂಭನಂಗೆಯ್ದಿಂತುಸುರ್ದ ಹಿತೋಕ್ತಿಯು ನವಧರಿಸದವಂ ಮದನಮೋಹಾವೇಶಪಾರವಶ್ಯದಿನಡಸಿ ನೋಡುತ್ತುಮಿರೆ ಕಂಡು ಗಣಿಕೆ ವಿಸ್ಮಯಂ ಬಟ್ಟು—

ತೊಱೆದನಿವಂ ಶಿವಭಕ್ತಿಯೊ
ಳೞಕಮನಾತ್ಮೀಯನಯಮನೇವೇಳ್ದೊಡಮೇ
ತೆಱದಿಂ ಪರಿವಡದೀತನ
ತಱಿಸಂದಂಗಜವಿಕಾರಮೇಗೆಯ್ದಪೆನಾಂ ೮೩

ವ॥ ಎಂದು ಚಿಂತಿಸಿ ಮಗುಳ್ದೊಂದುಪಾಯಮಂ ನೆನೆದು—

ಅತಿಮೂರ್ಖರ ಮನಮಂ ಸ
ನ್ನುತ ಕಥೆವೇಳ್ದಾತ್ಮವಶಮನೆಸಗೆಂಬ ಸಮು
ನ್ನತ ನೀತಿಯೊಳವಿಂವಂಗಾಂ
ಕತೆವೇಳ್ದೀಕ್ಷಿಪೆನೆನುತ್ತೆ ನೆನೆದಿಂತೆಂದಳ್ ೮೪

ಎನಿತೆನಿತು ಹಿತಮನಾನೊ
ಲ್ದನುನಯದಿಂ ಪೇೞೆ ಕೇಳ್ದನಲ್ಲೆಲೆ ನೀಂ ಮು

ಹೇಳಿದ ರೀತಿಯಲ್ಲಿ ಕೆಟ್ಟ ಮಲವನ್ನು ತುಂಬಿದ ಮಡಕೆಯಂತಿರುವ ಸ್ತ್ರೀ ದೇಹ ಸಂಬಂಧದಿಂದುಂಟಾಗುವ ಲೇಶಮಾತ್ರದ ಆನಂದಕ್ಕೆ ಇಚ್ಛಿಸಿ, ಈಶ್ವರ ಭಕ್ತಿಯೆಂಬ ಪ್ರಕಾಶಿಸುವ ಶ್ರೇಷ್ಠ ಕ್ಷೀರ ಸಮುದ್ರವನ್ನು ಬಿಟ್ಟು ಮೂಢನಾಗದೆ ಇರು. ನಿನಗೆ ನಿಶ್ಚಯವನ್ನು ಸಾರಿದ್ದೇನೆ.' ವ॥ ಹೀಗೆಂದು ಆ ಪ್ರೌಢ ಬುದ್ಧಿಯ ವೇಶ್ಯಾನಾರಿಯು ಸೂಳೆಯರ (ವ್ಯಕ್ತಿತ್ವ) ವನ್ನು ತಿರಸ್ಕರಿಸಿ ಈ ರೀತಿ ಹೇಳಿದ ಹಿತೋಕ್ತಿಗಳನ್ನು ಆ ರಾಜನು ಮನಸ್ಸಿಗೆ ತಂದುಕೊಳ್ಳದೆ, ಮನ್ಮಥ ಸಂಬಂಧದ ಮೋಹದಿಂದ ಪರವಶನಾಗಿ ದಿಟ್ಟಿಸಿ (ಅವಳನ್ನೇ) ನೋಡುತ್ತಿರಲು ಕಂಡು ಅವಳು ಆಶ್ಚರ್ಯವನ್ನು ಹೊಂದಿ ೮೩. ಈ ರಾಜನು ಶಿವಭಕ್ತಿಯಲ್ಲಿ ವಿಶ್ವಾಸವನ್ನೂ, ತನ್ನ ನೀತಿಯನ್ನೂ ತ್ಯಜಿಸಿದನು. ಏನು ಹೇಳಿದರೂ ಯಾವರೀತಿಯಿಂದಲೂ ಈತನಿಗುಂಟಾದ ಮನ್ಮಥ ಸಂಬಂಧದ ವಿಕಾರವು ನಾಶವಾಗುತ್ತಿಲ್ಲ ; ನಾನೀಗ ಏನು ಮಾಡಲಿ ! ವ॥ ಹೀಗೆಂದು (ಮನಸ್ಸಿನಲ್ಲಿ) ಚಿಂತಿಸಿ ಪುನಃ ಒಂದು ಹಂಚಿಕೆಯನ್ನು ನೆನೆದು ೮೪. 'ಅತ್ಯಂತ ಮೂರ್ಖನಾದವನ ಮನಸ್ಸನ್ನು ಶ್ರೇಷ್ಠವಾದ ಕಥೆಯನ್ನು ಹೇಳಿ ಸ್ವಾಧೀನಪಡಿಸಿಕೋ' ಎಂಬ ಒಂದು ನೀತಿಯುಂಟು. (ಆದ್ದರಿಂದ) ಇವನಿಗೊಂದು ಕಥೆಯನ್ನು ನಾನು ಹೇಳಿ ನೋಡುತ್ತೇನೆಂದು ನೆನೆದು ಹೀಗೆ ಹೇಳಿದಳು ; ೮೫. 'ಎಲೈ ನೃಪಾಲನೆ, ನಾನು ಒಲಿದು ಪ್ರೀತಿಯಿಂದ ಎಷ್ಟೆಷ್ಟೋ ಹಿತವನ್ನು ಹೇಳಿದರೂ ನೀನು ಕೇಳಿದವನಾಗಲಿಲ್ಲ ; ಹಿರಿಯರು

ನ್ನಿನವರ್ಕೇಳ್ದಾಪ್ತಜನದ
ವಿನಯೋಕ್ತಿಯನಧಿಕಸುಖಮನಾಳರೆ ನೃಪತೀ ೮೫

ವ॥ ಅದೆಂತೆನೆ—

ಅಂಬುಜವಕ್ತ್ರೆಕಂಬುಗಳೆ ಕುಂಭಪಯೋಧರೆ ಪದ್ಮಗಂಧಿ ರೋ
ಲಂಬಕಚಾಭಿರಾಮೆ ರಮಣೀಯಮೃದುಸ್ಮಿತೆ ಶಂಬರಾರಿಮೋ
ಹಾಂಬುಧಿಚಾರುಚಂದ್ರಿಕೆ ನಿಜೋರುವಿನಿರ್ಜಿತರಂಭೆ ರಂಭೆ ಕಂ
ಜಾಂಬಕಿ ಜಂಭವೈರಿಹೃದಯೋತ್ಸವಕಾರಿಣಿ ನಾಕಲೋಕದೊಳ್ ೮೬

ಚಳದಳಿಕುಳಪರಿಮಳಮಂ
ಜುಳಸುರಭೂಜಪ್ರಸೂನಕಚಭರೆ ರತ್ನೋ
ಜ್ವಳಭೂಷಣದಿವ್ಯಾಂಬರ
ವಿಳಸಿತೆ ಹರಿಚಂದನಾಂಕಕುಚಯುಗೆ ಮೆಱೆದಳ್ ೮೭

ಅವಳಧರಾಮೃತರಸಮಂ
ಸವಿದಮರ್ದುಣಿಯಾದನರರೆ ಸುರರಾಜಂ ಮೇ
ಣವಳ ಕುಚಗಿರಿಯ ನಿಜನಖ
ಪವಿಯಿಂದಿಱಿದಲ್ತೆ ಗಿರಿವಿಭೇದನನಾದಂ ೮೮

ವ॥ ಎನಿಸಿ ರಂಜಿಪಾ ರಂಭೆಯೊಂದಿನಂ ತನ್ನನೆಳಸಿರ್ದ ದುರಿತಭರಿತಚರಿತನಾದ ವಿಟ ಶ್ವೇತನೆಂಬನಂ ನೋಡಿ ನಗಲೊಡನವಂ ಕಂಡು ವಿಭ್ರಾಂತಚಿತ್ತನಾಗಿ—

ಆಪ್ತ ಜನರ ವಿನಯದಿಂದ ಕೂಡಿದ ಮಾತನ್ನು ಕೇಳಿ ಅಧಿಕ ಸುಖವನ್ನು ಹೊಂದದಿರುವರೇ ?' **ಶ್ವೇತನ ಕಥೆ** ವ॥ ಅದು ಹೇಗೆಂದರೆ– ೮೬–೮೭. ಸ್ವರ್ಗಲೋಕದಲ್ಲಿ ಕಮಲದಂತೆ ಮುಖವುಳ್ಳ, ಶಂಖದಂತೆ ಕುತ್ತಿಗೆಯುಳ್ಳ. ಕಲಶದಂತಿರುವ ಮೊಲೆಗಳುಳ್ಳ, ಕಮಲದ ಪರಿಮಳದಂತೆ ದೇಹ ಪರಿಮಳವುಳ್ಳ. ತುಂಬಿಯು ಹಾಗಿರುವ ಮನೋಹರವಾದ ಮುಂಗುರುಳುಳ್ಳ, ಮನೋಹರವಾದ ಮುಗುಳು ನಗೆಯುಳ್ಳ, ಮನ್ಮಥನ ಅನುರಾಗವೆಂಬ ಸಮುದ್ರಕ್ಕೆ ಮನೋಹರವಾದ ಬೆಳದಿಂಗಳಾಗಿ ಉಳ್ಳ, ತನ್ನ ತೊಡೆಗಳಿಂದ ಬಾಳೆಯ ಕಂಬಗಳನ್ನು ಜಯಿಸಿದವಳೆನಿಸಿದ, ಕಮಲದಂತಹ ಕಣ್ಣುಗಳನ್ನು ಹೊಂದಿದ, ಇಂದ್ರನ ಮನಸ್ಸಿಗೆ ಸಂತೋಷವನ್ನುಂಟು ಮಾಡುವ, ತುರುಬಿನಲ್ಲಿ ಧರಿಸಿದ ಮನೋಹರವಾದ ಕಲ್ಪವೃಕ್ಷದ ಸುಗಂಧ ವಿಶಿಷ್ಟವಾದ ಹೂಗಳಿಂದ ಕೂಡಿ, ಆ ಪರಿಮಳಕ್ಕೆ ಆಸೆಪಟ್ಟು ಚಲಿಸುತ್ತಿರುವ (ಹಾರಾಡುತ್ತಿರುವ) ದುಂಬಿಗಳ ಸಮೂಹವನ್ನುಳ್ಳ, ರತ್ನಗಳ ಪ್ರಕಾಶದಿಂದ ಕೂಡಿದ ಆಭರಣ, ಶ್ರೇಷ್ಠವಾದ ವಸ್ತ್ರಗಳು ಇವುಗಳಿಂದ ಶೋಭಿಸುವ, ಶ್ರೀಗಂಧವೇ ಗುರುತಾಗಿ ಉಳ್ಳ ಕುಚದ್ವಯದ ರಂಭೆಯೆಂಬುವಳು ಮೆರೆಯುತ್ತಿದ್ದಳು. ೮೮. ದೇವೇಂದ್ರನು ಅವಳ ಅಧರಾಮೃತವನ್ನು ಸವಿನೋಡಿ, ಅಮೃತವನ್ನುಣ್ಣುವ ಸ್ವಭಾವವನ್ನು ಪಡೆದನು ; ಅವಳ ಮೊಲೆಗಳೆಂಬ ಬೆಟ್ಟಗಳನ್ನು ತನ್ನ ಉಗುರುಗಳೆಂಬ ವಜ್ರಾಯುಧದಿಂದ ಸೀಳಿ, ಪರ್ವತಗಳನ್ನು ಸೀಳುವವನು, ಆದನಲ್ಲವೇ ? ಅಮಮ !!

ಜನವಿನುತ ಗುಣವಿಭೂಷಣೆ
ವನಜಾನನೆ ರಂಭೆ ಪೇಳಿದೇಂ ಕಾರಣಮೆ
ನ್ನನಭೀಕ್ಷಿಸಿ ನಕ್ಕಪೆಯೆಂ
ದೆನೆ ಬೋಧಿಸಲೆಂದು ದಯೆಯಿನವಳಿಂತೆಂದಳ್ ೮೯

ಎಲೆ ವಿಟ ಪೇಳಲೆನ್ನಳವೆ ನಿನ್ನಯ ದುಷ್ಟಚರಿತ್ರಮಂ ಧರಾ
ತಲದೊಳೆ ಸಂದ ಸರ್ವದುರಿತೌಘನಿಧಾನಮನಾ ಫಣೀಂದ್ರನುಂ
ನಲಿದುಸುರಲ್ಕೆ ಸಾಲ್ದಪನೆ ಮೆಯ್ಮಱೆದುನ್ಮದಮತ್ತನಾಗಿ ದುಃ
ಖಲರೊಡಗೂಡಿ ವರ್ತಿಸಿದೆ ನೀಂ ಗಡ ನಿಚ್ಚಮಧರ್ಮಮಾರ್ಗದೊಳ್ ೯೦

ಇರುಳುಂ ಪಗಲುಂ ಕಾಮಿನಿ
ಯರ ಸಂಗಮನಲ್ಲದಱಿಯೆ ಶಿವದರ್ಶನಮಂ
ಗುರುಭಜನಮನಭವಾರ್ಚಕ
ಚರಣನಮಸ್ಕೃತಿಯನೊರ್ಮೆಯುಂ ಖಲತಿಲಕಾ ೯೧

ಇಟ್ಟಱಿಯೆ [1]ಪಣೆಗೆ ಭಸಿತಮ[1]
ತೊಟ್ಟಱಿಯೆ ಕೊರಲ್ಗೆ ಮಿಸುಪ ರುದ್ರಾಕ್ಷಿಗಳಂ

೮೯. ಹೀಗೆ ರಂಜಿಸುವ ರಂಭೆಯು ಒಂದು ದಿವಸ ತನ್ನನ್ನು ಇಚ್ಛಿಸಿದ, ಪಾಪದಿಂದ ತುಂಬಿದ ನಡತೆಯುಳ್ಳವನಾದ ಶ್ವೇತನೆಂಬ ವಿಟನನ್ನು ನೋಡಿ, ನಗಲಾಗಿ ಆ ಕೂಡಲೇ ಅವನು ಕಂಡು ಭ್ರಾಂತಿಗೊಂಡ ಚಿತ್ತವುಳ್ಳವನಾಗಿ, ಹೇ ಲೋಕದ ಜನರಿಂದ ಶ್ಲಾಘಿಸಲ್ಪಡುವ ಗುಣಗಳೇ ಆಭರಣವಾಗಿ ಉಳ್ಳವಳೇ, ಕಮಲ ಮುಖಿಯೇ, ರಂಭೆಯೇ, ನನ್ನನ್ನು ನೋಡಿ ಏನು ಕಾರಣದಿಂದ ನಕ್ಕವಳಾದೆ ?' ಹೇಳು ಎಂದೆನ್ನಲು, ಅವಳು (ಇವನಿಗೆ) ಜ್ಞಾನೋದಯವನ್ನುಂಟುಮಾಡಬೇಕೆಂದು ದಯದಿಂದ ಹೀಗೆ ಹೇಳಿದಳು : ೯೦ 'ಎಲೈ ವಿಟನೇ, ಭೂಮಿಯಲ್ಲಿ ಪ್ರಸಿದ್ಧವೆನಿಸಿರುವ ಸಮಸ್ತ ಪಾಪಗಳಿಗೂ ಆದಿಕಾರಣವೆನಿಸಿರುವ ನಿನ್ನಯ ದುಷ್ಟ ಚರಿತ್ರೆಯನ್ನು ಹೇಳಲು ನನಗೆ ಶಕ್ತಿಯುಂಟೆ ? ಆ ಆದಿಶೇಷನೂ ಕೂಡ ನಲಿದು ಹೇಳುವುದಕ್ಕೆ ಸಮರ್ಥನಾದಾನೇ ? ನೀನು ವಿಶೇಷ ಗರ್ವದಿಂದ ಕೊಬ್ಬಿದವನಾಗಿ, ಮೈಮರೆತು, ನೀಚ ಜನರಿಂದ ಒಡಗೂಡಿ, ನಿತ್ಯವೂ ಅಧರ್ಮಮಾರ್ಗದಲ್ಲಿ ವರ್ತಿಸುವೆಯಲ್ಲವೇ ! ೯೧. 'ಹೇ ನೀಚರಲ್ಲಿ ತಿಲಕಪ್ರಾಯನೇ, ಇರುಳೂ, ಹಗಲೂ ಕಾಮಿನಿಯರ ಆ ಸಂಗವಲ್ಲದೆ ಶಿವನ ದರ್ಶನ, ಗುರುವಿನ ಸ್ತೋತ್ರ, ಪರಮೇಶ್ವರನ ಶರಣರ ಪಾದಗಳಿಗೆ ನಮಸ್ಕರಿಸುವಿಕೆ—ಮೊದಲಾದವುಗಳನ್ನು ಒಮ್ಮೆಯೂ ಮಾಡಿ ತಿಳಿಯೆ.' ೯೨. 'ನೀನು ಹುಟ್ಟಿದಂದಿನಿಂದ ಭಸ್ಮವನ್ನು ಹಣೆಯಲ್ಲಿ ಧರಿಸಿ ತಿಳಿಯೆ ; ಕೊರಳಲ್ಲಿ ಶೋಭಿಸುವ ರುದ್ರಾಕ್ಷಗಳನ್ನು ಧರಿಸಿ ತಿಳಿಯೆ ; ಸತ್ಪಾತ್ರಕ್ಕೆ ಒಂದು

[1] ಭಸಿತಮುಳಿಕದ (ಅ, ಚ)

ಕೊಟ್ಟಳಿಯೆ ಸುಪಾತ್ರಕೆ ನೀಂ
ಪುಟ್ಟಿದ ದಿನದಿಂದವೊಂದು ಕಾಣೆಯುಮನಣಂ ೯೨

ಗುಣಧರ್ಮಾನ್ವಿತ ವೃತ್ತಿಧನ್ವಿಗಳೊಳುದ್ಯದ್ದಾನಮುತ್ತುಂಗವಾ
ರಣದೊಳ್ಸತ್ಪಥವರ್ತನಂ ದಿವಿಜರೊಳ್ನ್ಯಾಯೋಕ್ತಿ ಸಿದ್ಧಾಂತಲ
ಕ್ಷಣದೊಳ್ನಿರ್ಮಳಮಾನಸಸ್ಥಿತಿ ಮರಾಳವ್ರಾತದೊಳ್ಸದ್ಬುಧ
ಪ್ರಣಯಂ ಸೋಮನೊಳಲ್ಲದುಂಟೆ ವಿಟ ನಿನ್ನೊಳ್ ಶ್ವೇತ ಪೇಳ್ನನ್ನಿಯುಂ ೯೩

ಒಂದು ದಿನಂ ಪಣಾಂಗನೆಗೆ ಪೂದಿಱಿದೊಯ್ಯನೆ ಪೊತ್ತು ತರ್ಪ ಪೊ
ಳ್ತೊಂದರಲುರ್ಚಿ ಬೀಳೆ ಶುಚಿಯಲ್ಲದ ಭೂತಳದಲ್ಲಿ ನೋಡಿ ಕಂ
ಡಿಂದುಧರಂಗಿದರ್ಪಿತಮೆನುತ್ತಣುಮಾತ್ರಮನೇಕಜನ್ಮದೊ
ಳ್ಸಂದೆಸಗಿರ್ದ ಪುಣ್ಯದೊದವಿಂ ನೆನೆದೇಳಿದಮಿರ್ಪ ಕಾಲದೊಳ್ ೯೪

ಸಂಭವಿಸಿದುದಾ ನೆನಪಿಂ
ಜಂಭಾರಿಯ ಪದವಿಯೊಂದು ದಿನಮೀ ಇರುಳೊಳ್
ಸಂಭೋಗಮನೆನ್ನೊಳ್ಪಡೆ
ದಂಭೋಜಸಖೋದಯಂಬರಂ ಸುಖಮಿರ್ಪೈ ೯೫

ಅಲ್ಲಿಂ ಮೇಲೆ ಕೃತಾಂತನ
ಬಲ್ಲಿದರೆನಿಸಿರ್ದ ದೂತರೆಳೆದೊಯ್ದುಧಟಿಂ

ದುಗ್ಗಾಣಿಯುನ್ನೂ ನಿಜವಾಗಿ ಕೊಟ್ಟು ತಿಳಿಯೆ.' ೯೩. ಗುಣಧರ್ಮಗಳಿಂದ ಕೂಡಿದ ವರ್ತನೆ (ಗುಣ =ಹೆದೆ, ಧರ್ಮ= ಧನುಸ್ಸು) ಧನುರ್ಧಾರಿಗಳಲ್ಲಿಯೇ ಹೊರತು ನಿನ್ನಲ್ಲಿಲ್ಲ. ದಾನವು (ದಾನಮಾಡುವಿಕೆ–ಮದೋದಕ) ಆನೆಯಲ್ಲಿಯೂ ಸತ್ಪಥವರ್ತನವು (ಸನ್ಮಾರ್ಗವರ್ತನೆ—ಆಕಾಶವರ್ತನೆ) ದೇವತೆಗಳಲ್ಲಿಯೂ ನ್ಯಾಯೋಕ್ತಿಯು (ನ್ಯಾಯವಾದ ವಚನ–ಶಾಸ್ತ್ರೀಯ ನ್ಯಾಯದ ವಚನ) ಸಿದ್ಧಾಂತ ಲಕ್ಷಣವೆಂಬ ಗ್ರಂಥದಲ್ಲಿಯೂ, ನಿರ್ಮಲಮಾನಸ ಸ್ಥಿತಿಯು (ಶುದ್ಧ ಮನಸ್ಸಿನಿಂದ ಇರುವಿಕೆ ಮಾನಸ ಸರೋವರದಲ್ಲಿರುವಿಕೆ) ಹಂಸ ಸಮೂಹದಲ್ಲಿಯೂ ಸದ್ಬುಧ ಪ್ರಣಯವು (ವಿದ್ವತ್ಪ್ರೀತಿ–ಬುಧಗ್ರಹದಲ್ಲಿ ಪ್ರೀತಿ) ಚಂದ್ರನಲ್ಲಿಯೂ ಇದೆಯಲ್ಲದೆ, ನಿನ್ನಲ್ಲುಂಟೆ ? ಎಲೆ ಶ್ವೇತ, ಸತ್ಯವನ್ನು ಹೇಳು (ರಂ) ೯೪–೯೫. ಒಂದು ದಿನ ಸೂಳೆಗಾಗಿ ಹೂವುಗಳನ್ನು ಎತ್ತಿಕೊಂಡು ಶೀಘ್ರವಾಗಿ ಅವನ್ನು ಹೊತ್ತು ತರುವಕಾಲದಲ್ಲಿ ಒಂದು ಹೂವು ಜಾರಿ ಪರಿಶುದ್ಧವಲ್ಲದ ಭೂಮಿಯಲ್ಲಿ ಬೀಳಲಾಗಿ, ನೋಡಿ 'ಈ ಬಿದ್ದ ಹೂವು ಶಿವನಿಗೆ ಅರ್ಪಿತವಾಯಿತು' ಎಂದು ನೀನು ಹೇಳಿದೆ. ಅನೇಕ ಜನ್ಮಗಳಲ್ಲಿ ಹುಟ್ಟಿ ಬಂದು ಮಾಡಿದ ಆ ಪುಣ್ಯದ ಮೊತ್ತದಿಂದ, ಆ ನೆನಪಿನಿಂದ ಒಂದು ದಿನ ಇಂದ್ರನ ಭೋಗವು ನಿನಗೆ ಸಂಭವಿಸಿತು ! ಈ ರಾತ್ರಿ ನನ್ನೊಡನೆ ಸಂಭೋಗವನ್ನು ಪಡೆದು ಸೂರ್ಯನು ಹುಟ್ಟುವವರೆಗೂ ಸೌಖ್ಯವಾಗಿರು ಅಷ್ಟೆ!' ೯೬. 'ಎಲೈ ವಿಟನೇ, ಕೇಳು. ಆಮೇಲೆ (ನನ್ನ ಭೋಗಾನಂತರ) ಬಲಶಾಲಿಗಳೆನಿಸಿರುವ ಯಮುನದೂತರು

ಪಲ್ಲವ ಕೇಳ್ನರಕಾರ್ಣವ
ದಲ್ಲಿ ಕರಂ ಕೆಡಪಿ ನಿನ್ನ ಬಾಧಿಪರಲ್ತೇ ೯೬

ಇದನಱಿಯದಕಟ ನೀಂ ಪೆ
ರ್ಚಿದ ಮದದಿಂ ಮದನಸುಖಮನೆಳಸುತೆ ಮೇಲ್ವಾ
ಯ್ವುದನೀಕ್ಷಿಸಿ ನಕ್ಕಪೆನೆನೆ
ಚದುರೆಯ ನುಡಿಗೇಳ್ದು ನಗುತೆ ವಿಟನಿಂತೆಂದಂ ೯೭

ಕೇಳೆಲೆ ರಂಭೆ ಭೂತಳದೊಳೀತನೆ ಕಂತುವೆನುತ್ತೆ ಸದ್ವಿಟ
ಸೂಳೆಯರೆಲ್ಲರುಂ ಪದೆದು ಬಣ್ಣಿಸೆ ಬಾಳ್ದೆನನಂಗಸತ್ಕಳಾ
ಕೇಳಿಯೊಳೀಗಳೀ ದಿವಿಜಲೋಕದೊಳೇಳ್ಗೆಯನಾಳ್ದ ನಿನ್ನೊಳಾಂ
ಮೇಳಿಸಿ ಕೂಡಿ ಮೆಚ್ಚಿಸಿ ಜಸಂಬಡೆದಾಂ ವಿಜಯಂ ದ್ವಿಲೋಕದೊಳ್ ೯೮

ಗಣಿಕಾಮಣಿ ನಾಳೆ ನಭೋ
ಮಣಿಸುತನಿಂ ಬರ್ಪ ನಿರಯಗಿರ[1]ಯಮನೆಂತುಂ
ಗಣಿಪೆನೆ ಬಿಡು ನಗೆಯೊಂ
ದಣಕಮನಿಂದೆನ್ನೊಳೊಲ್ದು ನೆರೆ ಮೃಗನಯನೇ ೯೯

ಸ್ಮರಶಿಖಿ ಸುಟ್ಟಪುದೀಗ
ಳ್ನರಕಾಗ್ನಿಯೆ ನಾಳೆ ಬರ್ಕುಮೆರಡಱಿಳಿದು ದ

ಶೌರ್ಯದಿಂದ ನಿನ್ನನ್ನೆಳೆದೊಯ್ದು ನರಕವೆಂಬ ಸಮುದ್ರದಲ್ಲಿ ಕೆಡವಿ ಅತಿಯಾಗಿ ಬಾಧೆ ಕೊಡುತ್ತಾರೆ.' ೯೭. 'ಅಕ್ಕಟಾ ! ನೀನು ಇದನ್ನರಿಯದೆ, ಮದದಿಂದ ಮದನ ಸಂಬಂಧವಾದ ಸುಖವನ್ನಪೇಕ್ಷಿಸುತ್ತ ಮುಂದುವರಿಯುತ್ತಿರುವುದನ್ನು ಕಂಡು ನಕ್ಕೆನು' ಎನ್ನಲು ವಿಟನು ಚತುರೆಯಾದ ಅವಳ ಮಾತನ್ನು ಕೇಳಿ, ನಗುತ್ತ ಇಂತೆಂದನು: ೯೮. 'ಎಲೈ ರಂಭೆಯೇ ಕೇಳು : ಭೂಮಿಯಲ್ಲಿ ಇವನೊಬ್ಬನೇ ಮನ್ಮಥನೆಂದು ಶ್ರೇಷ್ಠವಿಟರೂ, ಸೂಳೆಯರೂ, ಎಲ್ಲರೂ ಸಂತೋಷದಿಂದ ಬಣ್ಣಿಸುತ್ತಿರಲಾಗಿ, ಮದನವಿದ್ಯಾ ಕ್ರೀಡೆಯಲ್ಲಿ ಬಾಳಿದ್ದೇನೆ. ಈ ಆ ಸ್ವರ್ಗ ಲೋಕದಲ್ಲಿ ಪ್ರಸಿದ್ಧಿಯನ್ನೂ ಹೊಂದಿರುವ ನಿನ್ನಲ್ಲಿ ಮೇಳಗೊಂಡು ಕೂಡಿ, ಮೆಚ್ಚಿಸಿ, ಯಶಸ್ಸನ್ನು ಪಡೆದ ನಾನು ಭೂಲೋಕ ಸ್ವರ್ಗಲೋಕಗಳೆರಡರಲ್ಲೂ ವಿಜಯಶೀಲನಾಗಿದ್ದೇನೆ.' ೯೯. 'ಗಣಿಕಾರತ್ನವೇ, ನಾಳೆಯ ದಿನ ಸೂರ್ಯಪುತ್ರನಾದ ಯಮನಿಂದ ಬರುವ ನರಕಗಿರಕಗಳನ್ನು ಹೇಗೂ ಗಣನೆಗೆ ತಂದುಕೊಳ್ಳುವೆನೆ ? ನಿನ್ನ ನಗೆಯ ಈ ಒಂದು ಚೇಷ್ಟೆಯನ್ನು ಬಿಟ್ಟುಬಿಡು. ಹೇ ಮೃಗನಯನೇ, ಈಗ ಪ್ರೀತಿ ಯಿಂದ ನನ್ನಲ್ಲಿ ಕೂಡು.' ೧೦೦. 'ಈಗ (ನನ್ನನ್ನು) ಮನ್ಮಥ ಸಂಬಂಧದ ಅಗ್ನಿಯು ಸುಡುತ್ತಿರುವುದು; ನಾಳೆಯ ದಿನ ನರಕದ ಅಗ್ನಿಯೇ ಬರಲಿ ಈ ಕಾಮಾಗ್ನಿ

[1] ರ(ಚ,ಅ)

ಲ್ಪಿರಿದಲ್ತೆ ನಿನ್ನ ಕೂಟದೆ
ಪರಿಹರಿಪೆನಿದಂ ಬಳಿಕ್ಕೆ ಬಂದುದನಱಿವೆಂ ೧೦೦

ನರಕಾಗ್ನಿಗಳ್ಕಿ ನಿನ್ನೊ
ಳ್ನೆರೆಯದೊಡೀ ಕಾಮವಹ್ನಿ ಸುಟ್ಟಪುದಿದಱಿಂ
ದುರಿಯಲ್ಕಾಱೆಂ ತಪ್ಪದೆ
ತರಳೇಕ್ಷಣೆ ನೆರೆದು ರಕ್ಷಿಸೆನೆ ವಿಟನಾಗಳ್ ೧೦೧

ಇರುಳೆರಡು ಜಾವವಿೂಗ
ಳ್ಸ[1]ರಿದುದು ಬಳಿಕೆರಡು ಜಾವಮಿದಱಿೊಳಗೆನ್ನೊ
ಳ್ನೆರೆದಿರ್ದು ನಾಳೆ ನೀಂ ಘನ
ನಿರಯದೊಳೆಲೆ ಬೀಳ್ವುದಂ ನಿರೀಕ್ಷಿಸಲಾಱೆಂ ೧೦೨

ಅಣುಮಾತ್ರಮ[2]ಪಥ್ಯಮುಸುಂ
ಡಣೆಯುರವೆಲೆ ದೀರ್ಘರುಜೆಯುನನುಭವಿಪವೊಲೀ
ಕ್ಷಣಿಕಸುಖದನುಭವದೆ ಮೋ
ಲಣ ಚಿರನರಕಾನುಭವಮುನಾಂಪುದೆ ಮರುಳೇ ೧೦೩

ಒಂದರಲರ್ಪಿತಮೆನೆ ನಿನ
ಗಿಂದುಧರಂ ಕೊಟ್ಟನೆನ್ನ ಸುರತಮನೀಗ
ಳ್ಕುಂದದೆ ನೀಂ ಭಜಿಸಿದೊಡೆ
ನ್ನಂದದ ಗಣಿಕಾಳಿ ನಿನ್ನ ತೊಗಳ್ಕಾಗಿರರೇ ೧೦೪

ನರಕಾಗ್ನಿಗಳಲ್ಲಿ ಕಾಮಾಗ್ನಿಯೇ ನಿಜವಾಗಿ ಹೆಚ್ಚಾದುದಲ್ಲವೇ! ಈ ಅಗ್ನಿಯನ್ನು ನಿನ್ನಲ್ಲಿ ಕೂಡಿ ಪರಿಹರಿಸುತ್ತೇನೆ. ಆಮೇಲೆ ಬಂದದ್ದನ್ನು ನೋಡಿಕೊಳ್ಳುತ್ತೇನೆ.' ೧೦೧. 'ಎಲೈ ಚಂಚಲ ನೇತ್ರೆಯೇ, ವಿಟನಾದವನು ನರಕಾಗ್ನಿಗೆ ಹೆದರಿ, ನಿನ್ನಂಥವಳಲ್ಲಿ ಕೂಡದಿದ್ದರೆ, ಈ ಕಾಮಾಗ್ನಿಯು ಸುಟ್ಟುಬಿಡುತ್ತದೆ, ಆ ಅಗ್ನಿಯಿಂದ ಸುಡುವುದನ್ನು ತಡೆಯುಲಾರೆನು, ತಪ್ಪದೆ ನನ್ನೊಡನೆ ಕೂಡಿ ನನ್ನನ್ನು ಉಳಿಸು.' ಎನ್ನಲು ಆಗ ೧೦೨. 'ಎಲೈ ವಿಟನೇ, ಈಗ ರಾತ್ರಿಯು ಎರಡು ಜಾವವನ್ನು ಕಳೆಯಿತು. ಈಗ ಉಳಿದುದು ಎರಡು ಜಾವ (ಮಾತ್ರ) ; ಈ ಎರಡು ಜಾವ ಕಾಲ ನೀನು ನನ್ನಲ್ಲಿ ನೆರೆದಿದ್ದು ನಾಳೆ ಘೋರ ನರಕದಲ್ಲಿ ಬೀಳುವುದನ್ನು ನಿರೀಕ್ಷಿಸಲಾರೆನು.' ೧೦೩. 'ಎಲೈ ಹುಚ್ಚನೇ, ಅಪಥ್ಯವನ್ನು ಸ್ವಲ್ಪ ಊಟಮಾಡಿ, ಅಧಿಕವಾಗಿ ದೀರ್ಘಕಾಲದವರೆಗೆ ರೋಗವನ್ನು ಅನುಭವಿಸುವಹಾಗೆ, ಈ ಕ್ಷಣಿಕ ಸುಖದ ಅನುಭವದಿಂದ ಮುಂದಾಗುವ ಚಿರಕಾಲದ ನರಕದ ಅನುಭವವನ್ನು ಹೊಂದುವುದೇ ?' ೧೦೪. 'ಒಂದು ಹೂವು (ನೆಲಕ್ಕೆ ಬಿದ್ದಾಗ ಶಿವನಿಗೆ) ಅರ್ಪಿತವೆಂದೆನ್ನಲು ನಿನಗೆ ಶಿವನು ನನ್ನ ಸುರತದ ಸುಖವನ್ನು ಕೊಟ್ಟನು. ಕುಂದಿಲ್ಲದಂತೆ ನೀನು (ಆ ಶಿವನನ್ನು) ಭಜಿಸಿದರೆ, ನನ್ನಂತಹ

[1] ಳ್ಪ(ಮು) [2] ಕು (ಅ)

ವ॥ ಅಂತುಮಲ್ಲದೆಯುಂ—

ಕಾಮಾಂತಕರಿಪುವಲ್ಲದೆ
ಕಾವಮಾಂತಕಭಯಯುಮನಳಿಯಲಾರ್ಪವರಾರು
ದ್ದಾಮ ತಮಸ್ತಾಪಂಗಳ
ತಾಮರಸಾರಾತಿಯಲ್ಲದಾರ್ತೊಲಗಿಪರೋ ೧೦೫

ನಂಬೆನ್ನ ನುಡಿಯನೀಗ
ಳ್ನಾಂಬನ ಮೆಲ್ಲಡಿಯನೊಲ್ದು ಪೂಜಿಸು ಪೆಱತೇಂ
ಬೆಂಬಿಡದೆ ನಿತ್ಯಘನಸೌ
ಖ್ಯಂಬಡೆವಂತೆಸಗಿ ನಿನ್ನ ಬಾಳಿಪನಭವಂ ೧೦೬

ವ॥ ಎಂದು ಪಲವಂದದಿನವನಂ ತಿಳುಪಿ ತಾನೆಂದುದನಪ್ಪುಕೆಯ್ಸಿ ರಂಭೆ ಸಂಭ್ರಮದಿನವನಂ ಭಸ್ಮರುದ್ರಾಕ್ಷೆಗಳಿನಲಂಕರಿಸಿ ಶಿವಮಂದಿರಮಂ ತೋಱುತೊಳಪುಗಿಸಲೊಡನೆ—

ರಂಭೆಯುಪದೇಶದಿರವನ
ವಂ ಭಾವಿಸಿ ನಿಜವಿಕಾರಮಂ ಬಿಸುಟಾಗ
ಳ್ಶಂಭುವನೆ ಭಜಿಸಿದಂ ಕೇ
ಳ್ಕುಂಭಿನಿಯೊಳ್ವಿಟವಿವೇಕಮಿಂತಿರವೇಡಾ ೧೦೭

ತನಗಹಿತಕಾರ್ಯದೊಳ್ರ[1]ತಿ
ಜನಿಯಿಸೆ ಬಿಡಲಾಱದೆಂದು ಹಿತರೊರೆಗಳನೊ

ವೇಶ್ಯಾಂಗನೆಯರು ನಿನ್ನ ದಾಸಿಯರಾಗಿ ಇರಲಾರರೇ' ? ವ॥ ಅದೂ ಅಲ್ಲದೆ—೧೦೫. ಮನ್ಮಥ ಮತ್ತು ಯಮಧರ್ಮರುಗಳಿಂದುಂಟಾದ ಭಯವನ್ನು ನಾಶ ಮಾಡುವುದಕ್ಕೆ ಪರಮೇಶ್ವರನಲ್ಲದೆ ಸಮರ್ಥರಾದವರು ಇನ್ನಾರು ? ಚಂದ್ರನ ಹೊರತು ಉದ್ದಾಮವಾದ ತಮವನ್ನೂ ತಾಪವನ್ನೂ ಕಳೆಯುವರಾರು ?' ೧೦೬. ನನ್ನ ಮಾತುಗಳನ್ನು ಈಗ ನಂಬು ;. ಪರಮೇಶ್ವರನ ಮೃದುಪಾದಗಳನ್ನು ಒಲಿದು ಪೂಜಿಸು ; ಬೇರೆ ಏನು ಬೇಕು ? ತಪ್ಪದೆ ಶಾಶ್ವತವಾದ ಉತ್ಕೃಷ್ಟ ಸೌಖ್ಯವನ್ನು ಪಡೆಯುವಂತೆ ವ್ಯವಹರಿಸು ; ಶಿವನು ನಿನ್ನನ್ನು ಬದುಕಿಸುವನು. ವ॥ ಹೀಗೆಂದು ಹಲವು ರೀತಿಯಿಂದ ಅವನಿಗೆ ತಿಳಿಸಿ, ತಾನು ಹೇಳಿದುದನ್ನು ಸಮ್ಮತಿಸುವಂತೆ ಮಾಡಿ, ಸಂಭ್ರಮದಿಂದ ಅವನನ್ನು ಭಸ್ಮರುದ್ರಾಕ್ಷಿಗಳಿಂದ ಅಲಂಕಾರಗೊಳಿಸಿ, ಶಿವಾಲಯವನ್ನು ತೋರಿಸುತ್ತ ಒಳಗೆಹೊಗಿಸಲಾಗಿ—೧೦೭. 'ಆ ಶ್ವೇತನು ಆಗ ರಂಭೆಯ ಉಪದೇಶದ ರೀತಿಯನ್ನು ಮನಸ್ಸಿನಲ್ಲಿ ಭಾವಿಸಿದವನಾಗಿ, ತನ್ನ (ಮನ್ಮಥ ಸಂಬಂಧದ) ಮನೋವಿಕಾರವನ್ನು ಬಿಸಾಡಿ, ಶಂಭುವನ್ನು ಭಜಿಸಿದನು ; ಕೇಳು. ಭೂಮಿಯಲ್ಲಿ ವಿಕಟನಾದವನ ವಿಚಾರವು ಹೀಗಿರಬೇಡವೇ ?' ೧೦೮. ತನಗೆ ಅಹಿತವಾದ ಕಾರ್ಯದಲ್ಲಿ ಆಸಕ್ತಿಯುಂಟಾದರೆ (ಅದನ್ನು) ಬಿಡಲಿಕ್ಕೆ ಆಗದಿದ್ದ ಕಾಲದಲ್ಲಿ,

[1] ಳ್ಯ(ಮು)

ಯ್ಯನೆ ಕೇಳ್ದು ಬಿಡಲ್ವೇಳ್ಕುಂ
ಮನವೊಲ್ದಲ್ಲದೊಡೆ ಹಾನಿಯಪ್ಪುದಮೋಘಂ ೧೦೮

ಸುರಗಂಗಾವಾರಿಯಿಂ ಭಾಸುರಸುರಕುಜಪುಷ್ಪೌಘದಿಂ ದಿವ್ಯಸೌರ
ಭ್ಯರಸೋದ್ಯದ್ಗಂಧದಿಂದಕ್ಷತೆಯಿನಧಿಕ ಧೂಪಂಗಳಿಂ ಸಾರದೀಪೋ
ತ್ಕರದಿಂ ಸ್ವರ್ಧೇನುಭಾಸ್ವತ್ಸುಧೆವೆರಸಿದ ನೈವೇದ್ಯದಿಂ ವೀಟಿಯಿಂ ಚಾ
ಮರ ಚಂಚಚ್ಛತ್ರಘಂಟಾದಿಗಳಿನಭವನಂ ಪೂಜಿಸುತ್ತಿರ್ದನಾಗಳ್ ೧೦೯

ವ॥ ಅಂತು ಪೂಜಿಸುತ್ತಾಡಿ ಪಾಡಿ ಪರಮೋತ್ಸವಂ ಮಿಗೆ ಪಂಚಾಕ್ಷರಜಪ ಸ್ತೋತ್ರ ಪಠನ ಪ್ರದಕ್ಷಿಣ ನಮಸ್ಕಾರಂಗಳೆಸಗುತ್ತುಮುವನಿರ್ಪಿನಮಾಗಳ್—

ಪರೆಯೆ ವಿಟದುರಿತದೊಡನಾ
ನೆರೆದ ತಮಂ ಶ್ವೇತವದನದೊಡನಂಬುರುಹಂ
ಕರಮಲರೆ ತನ್ಮನೋರಾ
ಗರಸಂ ನೆಗೆದಂತೆ ಸಂಜೆಯುಂದಯಿಸಿತಾಗಳ್ ೧೧೦

ಎನ್ನ ಮಗಂ ಮೃಕಂಡುಭವನಂ ಪಿಡಿದೊಯ್ಯಲೆ ಬಂದು ಭರ್ಗನಿಂ
ಬನ್ನಮನಾಂತನಿಂದು ಪಿಡಿಯಲ್ವಿಟ ಭಕ್ತನನಿಂದು ಬಂದಪಂ

ಆಪ್ತರಾದವರ ಮಾತುಗಳನ್ನು ಚೆನ್ನಾಗಿ ಕೇಳಿ, ಮನಸ್ಸನ್ನು ಒಲಿಸಿಕೊಂಡು (ಅವನ್ನು) ಬಿಡಬೇಕು, ಅಲ್ಲದಿದ್ದರೆ ನಿಜವಾಗಿ ಹಾನಿಯುಂಟಾಗುವುದು. ೧೦೯. ಆಗ ಶ್ವೇತನು ದೇವಗಂಗಾ ನದಿಯ ನೀರಿನಿಂದ, ಪ್ರಕಾಶಿಸುವ ಕಲ್ಪವೃಕ್ಷದ ಹೂವುಗಳ ಸಮೂಹದಿಂದ, ಶ್ರೇಷ್ಠವಾದ ಪರಿಮಳ ವಿಶಿಷ್ಟವಾದ ಉತ್ಕೃಷ್ಟ ಶ್ರೀಗಂಧದಿಂದ, ಅಕ್ಷತೆಗಳಿಂದ, ವಿಶೇಷವಾದ ಧೂಪದಿಂದ, ಪ್ರಕಾಶಿಸುವ ದೀಪಗಳ ಸಮೂಹದಿಂದ, ಕಾಮಧೇನುವಿನ ಶೋಭಿಸುವ ಹಾಲಿನ ನೈವೇದ್ಯದಿಂದ, ತಾಂಬೂಲದಿಂದ, ಚಾಮರ. ಮಿರುಗುವ ಚಾಮರ, ಗಂಟೆಗಳ ಸಮೂಹದಿಂದ ಶಿವನನ್ನು ಪೂಜಿಸುತ್ತಿದ್ದನು, ವ॥ ಆ ರೀತಿ ಅವನು ಪೂಜೆ ಮಾಡುತ್ತ ಆಡಿ, ಹಾಡಿ, ಮಹೋತ್ಸವದಿಂದ ಕೂಡಿ, ಪಂಚಾಕ್ಷರೀ ಸ್ತೋತ್ರ ಪಠಣ, ಪ್ರದಕ್ಷಿಣೆ, ನಮಸ್ಕಾರಗಳನ್ನು ಮಾಡುತ್ತ ಇರುವಷ್ಟರಲ್ಲಿ ಆಗ— ೧೧೦–೧೧೧. ಆ ವಿಟನಾದ ಶ್ವೇತನ ಪಾಪದೊಡನೆ ಅವನಿಗೆ ಉಂಟಾಗಿದ್ದ ಕತ್ತಲೆಯೂ ಅಜ್ಞಾನವೆಂಬ ಕತ್ತಲೆಯೂ ನಾಶವಾಗಲು, ಶ್ವೇತವದನದೊಡನೆ ಕಮಲವೂ ಚೆನ್ನಾಗಿ ಅರಳುತ್ತಿರಲು, ಅವನ ಮನಸ್ಸಿನ ಪ್ರೀತಿಯು ಅರುಣವರ್ಣವು ನೆಗೆಯುವ ಹಾಗೆ, ಪ್ರಾತಃಕಾಲದ ಸಂಧ್ಯೆಯೂ ಉದಯಿಸಿತು. ನನ್ನ ಮಗನು (ನನ್ನ ಮಗನಾದ ಯಮಧರ್ಮನು) ಮೃಕಂಡು ಪುತ್ರನಾದ ಮಾರ್ಕಂಡೇಯನನ್ನು ಹಿಡಿದೊಯ್ಯಲು ಬಂದು ಶಿವನಿಂದ ಭಂಗಗೊಂಡನು. ಈ ದಿವಸ ವಿಟಭಕ್ತನಾದ

ಪನ್ನಗಧಾರಿ ಕೊಲ್ಲದಿರನೀತನನೆಂದು ಜವಂಗೆ ಬುದ್ಧಿಯಂ
ಚೆನ್ನನೆ ಪೇಳಲೆಯ್ದಿದವೊಲಿಂದ್ರದಿಶಾದ್ರಿಯನರ್ಕನೆಯ್ದಿದಂ ೧೧೧

ವ॥ ಆ ಸಮಯದೊಳ್ ಜವಂ ಜವದಿನಾ ಶ್ವೇತನಂ ಪಿಡಿತರ್ಪುದೆಂದು ನಿಜದೂತರ್ಗೆ ಬೆಸಸೆ ಲೊಡನವರ್ಬಂದು ರಂಭಾಲಲನೆಯಂ ಕಂಡಿಂದ್ರಭೋಗದೊಳಿರುಳ್ ನಿನ್ನೊಡನಿರ್ದ ಭುಜಂಗನಾವೆಡೆ ಯೊಳಿರ್ದಪನೆಱಪೆಂಬುದುಮವಳ ಗೃಹದಾಸಿಯೇಳ್ತಂದು ಲಿಂಗಾಲಯದೊಳಿರ್ದಪನೆಂದು ಪೇಳ್ವ ನಮಾ ಭಟರಾ ದೇಗುಲಕ್ಕೆ ಬಂದು ದೂರಾಂತರಾಳದೊಳ್ನಿಂದು—

ಕಂಡರಖಂಡಖಂಡಪರಶುಸ್ಥಿರಭಕ್ತಿಸಮಗ್ರಭಾಗ್ಯನಂ
ಮಂಡಿತಭೂತಿಭಾಸುರಕಳೇವರನಂ ಗಿರಿಶಾಕ್ಷಿಮಾಲಿಕಾ
ಮಂಡನಮಂಜುಮಸ್ತಕಭುಜಾಂತರನಂ ಶಿವಮಂತ್ರಸತ್ಕಳಾ
ಪಂಡಿತನಂ ತಪೋಧನಪದಂಬಡೆದಾ ವಿಟನಂ ಮಹಾಭಟರ್ ೧೧೨

ವ॥ ಅಂತು ಕಂಡು ಮೃಗೇಂದ್ರನಂ ಕಂಡ ಕಳಭಂಗಳಂತೆ ಮುಂದಣ್ಗಡಿಯಿಡಲಳ್ಕಿ ನಡ ನಡಂ ನಡುಗಿ ಪೆಡಂಮೆಟ್ಟಿ ಮಗುಳ್ದಿಯ್ತು[1]ಂದಾ ಶ್ವೇತಮುನಿಯ ಪರಿಯನೆಲ್ಲಮಂ ನಿಜೇಶ್ವರನಾದ

ಶ್ವೇತನನ್ನು ಹಿಡಿಯಲು ಬರುತ್ತಾನೆ. ಈತನನ್ನು ಪನ್ನಗಧರನಾದ ಶಿವನು ಕೊಲ್ಲದೆ ಇರನು ಎಂದು ಯಮನಿಗೆ ಚೆನ್ನಾಗಿ ಬುದ್ಧಿಯನ್ನು ಹೇಳಲು ಬಂದನೆಂಬಂತೆ ಸೂರ್ಯನು ಪೂರ್ವ ದಿಕ್ಕಿನಲ್ಲಿರುವ ಪರ್ವತವನ್ನು ಹತ್ತಿದನು. ವ॥ ಆ ಸಮಯದಲ್ಲಿ ಯಮನು ಶೀಘ್ರವಾಗಿ ಶ್ವೇತನನ್ನು ಹಿಡಿದುತರಬೇಕೆಂದು, ತನ್ನ ದೂತರಿಗೆ ಅಪ್ಪಣೆ ಮಾಡಲಾಗಿ, ಆ ಕೂಡಲೇ ಅವರು ಬಂದು, ರಂಭಾಲಲನೆಯನ್ನು ಕಂಡು, ಇಂದ್ರಸಮಾನ ಭೋಗದಲ್ಲಿ ಕಳೆದ ರಾತ್ರಿ ನಿನ್ನೊಡನಿದ್ದ ವಿಟನು ಎಲ್ಲಿದ್ದಾನೆ ? ತಿಳಿಸು, ಎನ್ನಲಾಗಿ ಅವಳ ಮನೆಯ ದಾಸಿಯು ಬಂದು ಲಿಂಗಾಲಯದಲ್ಲಿದ್ದಾನೆಂದು ಹೇಳಲಾಗಿ, ಆ ಭಟರು ಆ ಶಿವಾ ಲಯಕ್ಕೆ ಬಂದು, ದೂರಾಂತರದಲ್ಲಿ ನಿಂತುಕೊಂಡು ೧೧೨. ಅಖಂಡವಾದ ಈಶ್ವರ ನಲ್ಲಿಟ್ಟಿರುವ ನಿಶ್ಚಂಚಲ ಭಕ್ತಿಯೆಂಬ ಸಂಪೂರ್ಣ ಭಾಗ್ಯವುಳ್ಳವನೂ, ವಿಭೂತಿಯ ಧಾರಣದಿಂದ ಅಲಂಕಾರಗೊಂಡ ಪ್ರಕಾಶಿಸುವ ದೇಹವುಳ್ಳವನೂ, ರುದ್ರಾಕ್ಷಗಳ ಸರದಿಂದ ಅಲಂಕಾರಗೊಂಡ ಮನೋಹರವಾದ ತಲೆ, ಎದೆಯೇ ಮೊದಲಾದವು ಗಳನ್ನುಳ್ಳವನೂ, ಪಂಚಾಕ್ಷರೀ ಮಂತ್ರವಿದ್ಯೆಯಲ್ಲಿ ಕುಶಲನೂ, ತಪೋಧನರ ಸ್ಥಾನವನ್ನು ಪಡೆದು ಋಷಿಗಳ ಲಕ್ಷಣವನ್ನು ಹೊಂದಿದ್ದ ವಿಟನಾದ ಶ್ವೇತನನ್ನು ಕಂಡರು. ವ॥ ಆ ರೀತಿ ಕಂಡು ಸಿಂಹವನ್ನು ಕಂಡ ಆನೆಗಳ ಹಾಗೆ, ಮುಂದಕ್ಕೆ ಹೆಜ್ಜೆ ಯಿಡಲು ಹೆದರಿ, ಗಡಗಡನಡುಗಿ, ಹಿಂದಕ್ಕೆ ತಿರುಗಿಬಂದು ತಮ್ಮ ಒಡೆಯನಾದ ಯಮಧರ್ಮನಿಗೆ ಆ ಶ್ವೇತಮುನಿಯ ರೀತಿಯನ್ನೆಲ್ಲ ಬಿನ್ನವಿಸಿಕೊಳ್ಳಲು, ಅವನು ಕೇಳಿ,

1 ಯ್ದು ತಂ(ಚ)

ದಂಡಪಾಣಿಗೆ ಬಿನ್ನವಿಸಲೊಡನವಂ ಕೇಳ್ದು ಕೋಪಾಟೋಪಮಂ ತಾಳ್ದು ಕಲ್ಪಾಂತಮೇಘದಂತೆ ಘುಡುಘುಡಿಸಿ ಘೂರ್ಮಿಸಿ ತೊಡೆವೊಯ್ದು ಕರಾಳ ಕಾಲದಂಡಮನೆತ್ತಿ ಜಡಿದು—

ಕಡುಪಿಂದಂ ರಂಭೆ ತಾಂ ಬೋಧಿಸೆ ಹರಭಜನೋಪಾಯದಿಂದೆನ್ನ ಗೆಲ್ವಂ
ಗಡ ಪಾಪೌಘಪ್ರಬದ್ಧಂ ಮಱುಱೆ ಗೆಲದದೇಕಿರ್ಪನಾ ಗೆಲ್ವ ಪಾಂಗಂ
ನಡೆ ನೋಳ್ಪೆಂ ತೋರ್ಪೆನೆನ್ನಾಯುಧದ ಸವಿಯನಾ ಧೂರ್ತನಂ ಕೊಲ್ವೆನೀಗ
ಳ್ಮೃಡನಡ್ಡಂಬಾಯ್ದೊಡಂ ಮೇಣ್ಬಿಡೆನೆನುತಘಟಂ ಪೂಣ್ದನಂತಾ ಕೃತಾಂತಂ ೧೧೩

ವ॥ ಅಂತು ಪೂಣ್ದು ನೀಲಾಚಲಪ್ರತಿಮ ಕಾಲಮಹಿಷಾರೂಢನಾಗಿ ಕಾಲಂ ಭೀಕರಾಕಾರಮಂ ತಾಳ್ದು ಸಿಡಿಲ ಪಡೆಗೆ ಪಡಿಯೆನಿಪ ನಿಜಭಟರ್ವೆರಸಿ—

ಕಡೆಗಣ್ಕೆಂಗಿಡಿಸೂಸೆ ಧೂಮಮಿಳಿತೋಚ್ಛ್ವಾಸಂ ಕರಂ ಪೊಣ್ಮೆ ಗಂ
ಟಿಡೆ ಘುರ್ಬುಬುದದಲ್ಲಿ ನೀಳ್ದ ಕುಡಿಮಿಂಚೆಂಬಂತೆ ಕೂರ್ದಾಡೆ ತೋ
ರ್ಪಡೆ ಭೀಷ್ಮಾಕೃತಿವೆತ್ತು ಬರ್ಪನಮನಂಗಾರಾತಿ ತದ್ರೌದ್ರಮಂ
ಕಡುಪಿಂದೀಕ್ಷಿಸಿ ಶೂಲಮಂ ಜಡಿದು ಕಾಯ್ಪಿಂದಿಟ್ಟನಾಟೋಪದಿಂ ೧೧೪

ಇಡೆ ಯಮನ ವಕ್ಷಮಂ ನ
ಟ್ಟೊಡನುಚ್ಚಳಿಸಿದುದು ಕೆಡೆದನಿಳೆಯುದಿರೆ ಜವಂ

ಕೂಡಲೇ ಕೋಪಾಟೋಪವನ್ನು ಹೊಂದಿ, ಪ್ರಳಯಕಾಲದ ಮೋಡದ ಹಾಗೆ ಘುಡುಘುಡೆಂದು ಗರ್ಜನೆಮಾಡಿ, ಹೂಂಕಾರಮಾಡಿ, ತೊಡೆಗಳನ್ನು ತಟ್ಟಿಕೊಂಡು ಭಯಂಕರವಾದ ತನ್ನ ದಂಡವನ್ನು ಎತ್ತಿ ಝಳಪಿಸುತ್ತ ೧೧೩. ಪಾಪಗಳ ಸಮೂಹದಿಂದ ಕಟ್ಟಲ್ಪಟ್ಟ ಆ ಶ್ವೇತನು ರಂಭೆಯು ತಾನು ಬೋಧಿಸಲಾಗಿ ಶಿವಭಜನೆಯ ಉಪಾಯದ ಶೌರ್ಯದಿಂದ ನನ್ನನ್ನು ಗೆಲ್ಲುವವನಲ್ಲವೆ! ಭಾಪುರೇ ! ಗೆಲ್ಲದೆಏಕಿದ್ದಾನು!! ಅವನು ಗೆಲ್ಲುವ ರೀತಿಯನ್ನು ನೋಡುತ್ತೇನೆ. ನನ್ನ ಆಯುಧದ ರುಚಿಯನ್ನು ತೋರಿಸುತ್ತೇನೆ. ಈಗಲೇ ಆ ಧೂರ್ತನನ್ನು ಕೊಲ್ಲುತ್ತೇನೆ. ಮತ್ತು ಶಿವನು (ಈ ವಿಷಯದಲ್ಲಿ) ಅಡ್ಡಲಾಗಿ ಬಂದರೂ ಬಿಡುವುದಿಲ್ಲ ಎನ್ನುತ್ತ ಆ ಯಮನು ಈ ರೀತಿ ಶಪಥ ಮಾಡಿದನು. ವ॥ ಯಮನು ಆ ರೀತಿ ಶಪಥ ಮಾಡಿ ನೀಲಾಚಲಪರ್ವತಕ್ಕೆ ಸಮಾನವೆನಿಸಿದ ಕರಿಯ ಕೋಣವನ್ನೇರಿ, ಭಯಂಕರಾಕಾರವನ್ನು ಹೊಂದಿ, ಸಿಡಿಲಿನ ಸೈನ್ಯಕ್ಕೆ ಸಮಾನವೆನಿಸಿದ ತನ್ನ ಶೂರರುಗಳನ್ನು ಕೂಡಿಕೊಂಡು ೧೧೪. ಕಡೆಗಣ್ಣುಗಳು ಕೆಂಪಾದ ಕಿಡಿಗಳನ್ನು ಉಗುಳುತ್ತಿದ್ದವು; ಹೊಗೆಯಿಂದ ಕೂಡಿದ ಉಸಿರು ಚೆನ್ನಾಗಿ ಹೊರ ಹೊರಟು ಬರುತ್ತಿತ್ತು; ಹುಬ್ಬುಗಂಟುಗೊಂಡಿತ್ತು; ಮೋಡದಲ್ಲಿ ಉದ್ದವಾಗಿಯೂ ಡೊಂಕಾಗಿಯೂ ಇರುವ ಮಿಂಚೋ ಎಂಬ ಹಾಗೆ ತೀಕ್ಷ್ಣವಾದ ಕೋರೆದಾಡೆಯು ತೋರುತ್ತಿರಲು ಭಯಂಕರಾಕಾರವೆತ್ತು ಬರುವಷ್ಟರಲ್ಲಿ ಶಿವನು ಆ ಯಮನ ಭಯಂಕರಾಕಾರವನ್ನು ಕಂಡು, ಶೌರ್ಯದಿಂದ ಶೂಲವನ್ನು ಸೆಳೆದು ಕೋಪಾಟೋಪದಿಂದ ಹೊಡೆದನು. ೧೧೫. ಹೀಗೆ ಹೊಡೆಯಲು (ಅದು) ಯಮನ ಎದೆಯನ್ನು ಹೊಕ್ಕು ಕೂಡಲೇ ಆಚೆಗೆ ಹೊರ

ಬಿಡುಗಣ್ಣನ‍ರ್ಚಿತಿಗೆಯ್ದು
ರ್ಸಡಗರದಿಂ ಶ್ವೇತನೀಶನಡಿಗೆಱಗಿರ್ದಂ ೧೧೫

ವ॥ ಅಂತೆಱಗಿ ಸಾತ್ವಿಕಭಕ್ತಿಯಿಂ ಪೊಗಳ್ವ ವಿಟ ಶ್ವೇತನಂ ನೋಡಿ ಕಾರುಣ್ಯವಂ ನೀಡಿ ಗಣಪದವನಿತ್ತು ಮನ್ನಿಸಿ ದಿವಿಜರ್ಬಿನ್ನವಿಸೆ ಶಿವಂ ಜವಂಗೆ ಹರಣಮಂ ಕರುಣಿಸಿ ಸಾರೆಗರೆದು—

ಇನಸುತ ಮಱೆದುಂ ಚಿಹ್ನಧರರ
ಮನೆಯುಂ ಮಱೆ[3]ದೊರ್ಮೆಯುಂ ನಿರೀಕ್ಷಿಸದಿರ್ನಿ
ನ್ನನುಚರರೊಳಿದಂ ಪೇಳ್ಪೋ
ಗೆನುತುಂ ಪ್ರಾಣಾಪಹರಣಪೂರ್ವಕಮಭಯಮಂ ೧೧೬

ಕಟ್ಟಳೆಗೆಯ್ದವನಂ ನಿಜ
ಪಟ್ಟಣಕೊಲವಿಂದೆ ಕಳುಪಿ ಗಣತತಿಸಹಿತಂ
ನೆಟ್ಟನೆ ಕೈಲಾಸಾಚಲ
ಕಿಟ್ಟಣಿಸಿದ ಮುದದಿನೆಯ್ದಿದಂ ಗಿರಿಜೇಶಂ ೧೧೭

ಸುರಗಣಿಕೆಯ ನುಡಿಗೇಳ್ದೀ
ಶ್ವರನೊಲವಂ ಪಡೆದು ಬಾಳ್ದನಾ ಶ್ವೇತಂ ಸೌಂ
ದರಿಯರ ಹಿತೋಪದೇಶಮ
ನಿರದಾಲಿಸೆ[1] ಕೂಱತೆ ಬರ್ಕುಮೇ ಗುರುಭಕ್ತಾ ೧೧೮

ಹೊರಟಿತು. (ಆಗ) ಭೂಮಿಯು ನಡುಗಿತು; ಯಮನು ನೆಲಕ್ಕೆ ಬಿದ್ದನು. ದೇವತೆಗಳು ಸ್ತೋತ್ರ ಮಾಡಿದರು. ಶ್ವೇತನು ಸಡಗರದಿಂದ ಶಿವನ ಪಾದಗಳಿಗೆ ನಮಸ್ಕರಿಸಿದನು. ವ॥ ಹೀಗೆ ನಮಸ್ಕರಿಸಿ, ರೋಮಾಂಚನ, ಗದ್ಗದ, ಕೈಕಂಪನ, ಸ್ವೇದಾದಿ ಸಾತ್ವಿಕ ಭಾವಗಳಿಂದ ಕೂಡಿ, ಹೊಗಳುತ್ತಿದ್ದ ವಿಟನಾದ ಶ್ವೇತನನ್ನು ಶಿವನು ಕಂಡು, ಕಾರುಣ್ಯವನ್ನುಂಟುಮಾಡಿ, ತನ್ನ ಗಣ ಪದವಿಯನ್ನು ಕೊಟ್ಟು ಮನ್ನಣೆ ಮಾಡಿದನು. ದೇವತೆಗಳು ಬಿನ್ನವಿಸಿಕೊಳ್ಳುತ್ತಿರಲು ಯಮನಿಗೆ ಪ್ರಾಣವನ್ನು ಕರುಣಿಸಿ, ಹತ್ತಿರಕ್ಕೆ ಕರೆದು ೧೧೬–೧೧೭. ಸೂರ್ಯಪುತ್ರನೇ, ಮರೆತು ಒಮ್ಮೆಯಾದರೂ ಕೂಡ ಲಿಂಗ ವಿಭೂತಿ, ಮಂತ್ರ ರುದ್ರಾಕ್ಷಿ ಇತ್ಯಾದಿ ಚಿಹ್ನೆಗಳನ್ನು ಧರಿಸಿರುವವರ ಮನೆಯನ್ನು ನಿರೀಕ್ಷಿಸಬೇಡ. ನಿನ್ನ ಅನುಚರರಲ್ಲಿ ಇದನ್ನು ತಿಳಿಸು; ಹೋಗು'' ಎಂದೆನ್ನುತ್ತ, ಅವನಿಗೆ ಪ್ರಾಣ ತೆಗೆದುಕೊಂಡೇನೆಂಬ (ಭಯದ) ಕಟ್ಟಳೆ ಮಾಡಿ ಅವನ ಪಟ್ಟಣಕ್ಕೆ ಪ್ರೀತಿಯಿಂದ ಕಳುಹಿಸಿ ಪರಮೇಶ್ವರನು ಶಿವಗಣ ಸಮೂಹ ಸಮೇತವಾಗಿ ವಿಶೇಷವಾದ ಪ್ರೀತಿಯಿಂದ ನೆಟ್ಟನೆ ಕೈಲಾಸ ಪರ್ವತಕ್ಕೆ ಹೋದನು. ೧೧೮. 'ಹೇ ಗುರುಭಕ್ತನೇ, ಆ ಶ್ವೇತನು ದೇವತೆಗಳ ಸೂಳೆಯಾದ ರಂಭೆಯ ಮಾತನ್ನು ಕೇಳಿ, ಈಶ್ವರನ ಕಾರುಣ್ಯವನ್ನು ಹೊಂದಿ, ಬಾಳಿದನು. ತಪ್ಪದೆ ಸುಂದರಿಯರ ಹಿತೋಪದೇಶವನ್ನು ಆಲಿಸಿದರೆ

1 ಸಿ(ಜ, ದ, ಚ, ಮ)

ಇಂತೆದಾ ಧಾತ್ರಿಪಂಗಾ ಗಣಿಕೆಯೊರೆವುತುಂ ಶ್ವೇತವೃತ್ತಾಂತಮಂ ಮೇ
ಣ್ಮುಂತೊಂದಾಖ್ಯಾನಮಂ ಪೇಳ್ದಪೆನೆನುತೊಸೆದೊಪ್ಪಿರ್ದಳೀಂದಿಂತು ಭಕ್ತ
ಸ್ವಾಂತಕ್ಕಿಂಬಾಗೆ ಪೇಳುತ್ತೆಸೆದನಮಳ ಕಲ್ಯಾಣಕಲ್ಪದ್ರುಮಂ ದು
ರ್ದಾಂತಧ್ವಾಂತಪ್ರಚಂಡಪ್ರಭನಭಿನವಸದ್ಭಕ್ತಿಸಾಂದ್ರಂ ವೃಷೇಂದ್ರಂ ೧೧೯

ಪಾವನಾಂಗಿ ಪರಮೇಶ್ವರಪತ್ನಿ ಪಂಕಜಲೋಚನವಂದಿತೇ
ಭೂವಿಯಚ್ಚರ ಸಮಂಚಿತಪಾದೆ ಭೂರಿಸುರಾಹಿತಭಂಜನೇ
ಜೀವಿತೇಶಮದಮರ್ದಿನಿ ಮಾನ್ಯೆ ಮಂಗಳೆ ಮಂಜುಳಭಾಷಿಣೀ
ದೇವಿ ದಿವ್ಯಗುಣಮಂಡನೆಯೆನ್ನಂ ಪಾಲಿಸು ಪರ್ವತನಂದನೇ ೧೨೦

ಇದು ವಿನಮದಖಿಳ ಸುರಾಸುರೇಂದ್ರಮಕುಟತಟಘಟಿತ ರುಚಿನಿಚಯ

ತರುಣಾರುಣಾತಪಪರಿಲಸಿತ ಶಿವಲಿಂಗ ಪಾದಾರವಿಂದಪರಾಗಭಸಿತ

ಭಾಸುರಲಲಾಪಟ್ಟಸರಸಜನಮಾನಿತೋಭಯಕವಿತಾವಿಶಾರದ

ಶ್ರೀಪಡಕ್ಷರಿದೇವಭಕ್ತಿವಿರಚಿತ

ಶ್ರೀಮದ್ ಬಸವರಾಜವಿಜಯಮಹಾಪುರಾಣದೊಳ್ ಪ್ರೌಢಮತಿಕಥಿತಕಥಾವೃತ್ತಾಂತಂ

ಅಷ್ಟವಿಂಶಾಶ್ವಾಸಂ ಸಮಾಪ್ತಂ

ಅಂತು ಆಶ್ವಾಸ ೨೮ಕ್ಕೆ ಪದಗಣನೆ ೨೧೧೮ಕ್ಕೆ ಮಂಗಳಮಹಾ ಶ್ರೀ॥

ಕೊರತೆಯುಂಟಾಗುವುದೇ ?' ೧೧೯. ಹೀಗೆಂದು ಆ ವೈಶ್ಯೆಯು ಆ ಗುರುಭಕ್ತ ರಾಜನಿಗೆ ಶ್ವೇತನ ವೃತ್ತಾಂತವನ್ನು ಹೇಳುತ್ತ ಪುನಃ ಮುಂದೆ ಒಂದು ಉಪಕಥೆಯನ್ನು ಹೇಳುವೆನು ಎನ್ನುತ್ತ ಪ್ರೀತಿಯಿಂದ ಒಪ್ಪಿದ್ದಳು. ಹೀಗೆಂದು ಪರಿಶುದ್ಧವಾದ ಕಲ್ಯಾಣ ಪಟ್ಟಣಕ್ಕೆ ಕಲ್ಪವೃಕ್ಷ ಪ್ರಾಯನಾದ ದುಷ್ಟರೆಂಬ ಕತ್ತಲೆಗೆ ಸೂರ್ಯನಾದ, ನೂತನ ಶ್ರೇಷ್ಠ ಭಕ್ತಿಯಿಂದ ಪರಿಪೂರ್ಣನಾದ ಬಸವೇಶ್ವರನು ಭಕ್ತರುಗಳ ಮನಸ್ಸಿಗೆ ಮನೋಹರವಾಗುವ ಹಾಗೆ, ಈ ರೀತಿ ಹೇಳುತ್ತ ಶೋಭಿಸುತ್ತಿದ್ದನು. ೧೨೦. ಪರಿಶುದ್ಧ ದೇಹವುಳ್ಳವಳೇ, ಪರಮೇಶ್ವರನ ಪತ್ನಿಯೇ, ಶ್ರೀ ವಿಷ್ಣುವಿನಿಂದ ನಮಸ್ಕರಿಸಲ್ಪಟ್ಟವಳೇ ಭೂಮಿ ಮತ್ತು ಆಕಾಶ ಚರರಾದ ನರರು, ದೇವತೆಗಳಿಂದ ಪೂಜಿಸಲ್ಪಡುವ ಪಾದವುಳ್ಳವಳೇ, ಬಹಳ ರಾಕ್ಷಸರನ್ನು ನಾಶಪಡಿಸಿದವಳೇ, ಜೀವಿತೇಶ ಮದಮರ್ದನಗೊಳಿಸಿದವಳೇ ಸನ್ಮಾನಯೋಗ್ಯಳೇ, ಮಂಗಳವನ್ನುಂಟುಮಾಡುವವಳೇ, ಮಂಜುಳವಾದ ಮಾತುಳ್ಳವಳೇ, ಶ್ರೇಷ್ಠವಾದ ಗುಣಗಳೇ ಆಭರಣವಾಗಿ ಉಳ್ಳವಳೇ, ದೇವಿಯೇ ನನ್ನನ್ನು ರಕ್ಷಿಸು.

ಇಪ್ಪತ್ತೆಂಟನೆಯ ಆಶ್ವಾಸವು ಸಮಾಪ್ತವಾಯಿತು.

ಏಕೋನತ್ರಿಂಶದಾಶ್ವಾಸಂ

ಮಲ್ಹಣನ ಕಥೆ

ಶ್ರೀಮಹಿತಹಿಮಗಿರೀಂದ್ರಸು
ತಾಮಧುರಿಮಸೂಕ್ತಿಪೂರ್ಣಕರ್ಣಂ ದಿವಿಜ
ಸ್ತೋಮಲಲಾಮಂ ಸಕಳಕ
ಳಾಮಂದಿರನೀಗೆ ಸೌಖ್ಯಮಂ ಶಿವಲಿಂಗಂ ೧

ವಿಪುಳೇಂದೂಪಳವಪ್ರಮಪ್ರತಿಮ ಹರ್ಮ್ಯಶ್ರೇಣಿ ಮಾಣಿಕ್ಯತುಂ
ಗಪತಾಕಾಳಿ ಸುವರ್ಣಗೋಪುರಲಸಲ್ಲಿಂಗಾಲಯಾಲಂಕೃತಂ
ಸುಪಣಸ್ತ್ರೀಮಣಿಗೇಹಮಂಟಪಮನೋಜ್ಞಂ ಭಾರತೀಪೀತನಾ
ಮಪುರಂ ಕಂಗೊಳಿಕುಂ ಸಮಸ್ತಜನತಾಸೌಭಾಗ್ಯಶೋಭಾಕರಂ ೨

ಆ ನಗರದೊಳೆಸೆದಿರ್ಪಂ
ಭೂನುತಗುಣಶಾಲಿ ಶೂಲಿಪದಸೇವಕನ
ನ್ಯೂನರಸವತ್ಕವಿತ್ವನಿ
ಧಾನಂ ಮಲ್ಹಣನೆನಿಪ್ಪನೊರ್ವಂ ಜಸದೊಳ್ ೩

ಮಲ್ಹಣನ ಕಥೆ

೧. ಮಂಗಳಕರ ಗುಣಗಳಿಂದ ಪೂಜ್ಯಳಾದ ಪಾರ್ವತಿದೇವಿಯ ಇಂಪಾದ ಮಾತುಗಳಿಂದ ತುಂಬಲ್ಪಟ್ಟ ಕಿವಿಗಳುಳ್ಳ, ದೇವತಾ ಸಮೂಹದಲ್ಲಿ ಶ್ರೇಷ್ಠನಾದ, ಸಕಲ ಕಲೆಗಳಿಗೆ ಮಂದಿರನಾದ ಶಿವಲಿಂಗನು ನಮಗೆ ಸೌಖ್ಯವನ್ನು ಕೊಡಲಿ. ೨. ವಿಶಾಲ ವಾದ ಚಂದ್ರಕಾಂತ ಶಿಲೆಯ ಪ್ರಾಕಾರವುಳ್ಳ, ಅಪ್ರತಿಮವಾದ ಉಪ್ಪರಿಗೆ ಮನೆಗಳ ಸಾಲುಗಳಿಂದಲೂ, ಮಾಣಿಕ್ಯರತ್ನಗಳಿಂದ ಮಾಡಿದ ಎತ್ತರವಾದ ಧ್ವಜಗಳ ಸಾಲುಳ್ಳ, ಚಿನ್ನದ ಗೋಪುರಗಳಿಂದ ಪ್ರಕಾಶಿಸುವ ಶಿವಾಲಯಗಳಿಂದ ಅಲಂಕರಿಸಲ್ಪಟ್ಟ, ಶ್ರೇಷ್ಠ ರಾದ ಸೂಳೆಯರ ಮನೆಗಳಿಂದ ಮನೋಹರವೆನಿಸಿದ, ಸಕಲಜನ ಸಮುದಾಯದ ಐಶ್ವರ್ಯದ ಶೋಭೆಗಳನ್ನುಂಟುಮಾಡುವ 'ಭಾರತೀಪೀತ'ವೆಂಬ ಹೆಸರಿನ ಪಟ್ಟಣವು ಕಂಗೊಳಿಸುತ್ತಿತ್ತು. ೩. ಆ ನಗರದಲ್ಲಿ ಭೂಜನರಿಂದ ಶ್ಲಾಘಿಸಲ್ಪಡುವ ಗುಣಶಾಲಿಯೂ, ಈಶ್ವರ ಪದಸೇವಕನೂ, ಕೊರತೆಯಾಗದ ಶೃಂಗಾರವೇ ಮೊದಲಾದ ರಸಭರಿತ ಶ್ರೇಷ್ಠ ಕಾವ್ಯ ನಿರ್ಮಿತಿಗೆ ಆದಿಕಾರಣನೆನಿಸಿದ ಮಲ್ಹಣ ಎಂದೆನಿಸುವ ಓರ್ವನು ಯಶಸ್ಸಿನಿಂದ

ಸಕಲಕಲಾನಿಪುಣಂ ಬುಧ
ನಿಕರಸ್ತುತವಾಣಿಸಾರಸಂಪದನಿಳಯಂ
ಸುಕವಿಶಿರೋಮಣಿ ವಿಳಸಿತ
ಮಕರಧ್ವಜರೂಪನೀಶ್ವರಪ್ರಿಯಭಕ್ತಂ ೪

ಗುಣನಿಧಿಯಾತಂಗೊರ್ವ
ಳ್ಗಣಿಕಾಂಗನೆ ಕೂರ್ತು ರಂಜಿಪಳ್ಯುವತಿಶಿರೋ
ಮಣಿ ಸೊಬಗಿನ ಕಣಿ ಸಲೆ ಮ
ಲ್ಹಣಿಯೆಂಬಳ್ಮರ್ತ್ಯರಂಭೆಯಿವಳೆಂಬಿನೆಗಂ ೫

ಸ್ತನಯುಗ್ಮಂ ಪದ್ಮಕೋಶಂ ನಗೆಮೊಗಮಲರ್ದಂಭೋಜಮಂಭಶ್ಚರಂ ಲೋ
ಚನಮುದ್ಯದ್ವೀಚಿ ಚಂಚತ್ತ್ರಿವಲಿ ಸುಳಿ ಲಸನ್ನಾಭಿ ಲಾವಣ್ಯಮೇ ವಾ
ರಿ ನಿತಂಬಂ ಸೈಕತಂ ಕುಂತಳಮಳಿಕುಳಮಿಂಬಾಗೆ ಕಣ್ಗೊಪ್ಪಿದಳ್ಕಾ
ಮಿನಿ ಕಾಸಾರಂಬೊಲಾಡುತ್ತಿರೆ ಸುಕವಿವರಂ ಮಲ್ಹಣಂ ತನ್ನೊಳಾಗಳ್ ೬

ಮರಕತಕಂಕಣರುಚಿ ಭಾ
ಸುರತರನೇತ್ರತ್ರಿಭಾಗರುಚಿ ತನುರುಚಿಯಾ
ವರಿಸಿರೆ ಕಾಂತೆಯ ಮುಂಗೈ
ಯುರಗಿಳಿಯದು ಪಂಚವರ್ಣಶುಕನೆನೆ ತೋರ್ಕುಂ ೭

ಕೂಡಿ ಶೋಭಿಸುತ್ತಿದ್ದನು. ೪. (ಅವನು) ಸಮಸ್ತಕಲೆಗಳಲ್ಲೂ ನಿಪುಣರಾದ ವಿದ್ವಾಂಸರ ಗುಂಪಿನಿಂದ ಸ್ತೋತ್ರಮಾಡಲ್ಪಟ್ಟ ಮಾತುಳ್ಳವನೂ, ಶ್ರೇಷ್ಠವಾದ ಸಂಪತ್ತುಗಳಿಗೆ ಆಶ್ರಯನಾಗಿಯೂ, ಸತ್ಕವಿ ಶ್ರೇಷ್ಠನೂ, ಪ್ರಕಾಶಮಾನನಾದ ಮನ್ಮಥ ಸದೃಶ ಆಕಾರನೂ, ಆದ ಈಶ್ವರನ ಪ್ರಿಯ ಭಕ್ತನು. ೫. ಸದ್ಗುಣಗಳಿಗೆ ನಿಕ್ಷೇಪನಾದ ಅತನಿಗೆ ಶ್ರೇಷ್ಠ ಯುವತಿಯಾದ, ಸೊಗಸಿನ ಗಣಿಯೆನಿಸಿದ 'ಮಲ್ಹಣಿ' ಎಂಬೋರ್ವ ಗಣಿಕೆಯು ಇರುವಳು. (ಅವಳು) ಭೂಲೋಕದ ರಂಭೆಯೋ ಎಂಬುವಂತೆ (ಅವನೊಡನೆ) ಮೋಹಗೊಂಡು ರಂಜಿಸುತ್ತಿದ್ದಳು. ೬. ಎರಡೂ ಮೊಲೆಗಳೇ ಕಮಲದ ಮೊಗ್ಗು ; ನಗೆಮುಖವು ಅರಳಿದ ಕಮಲ ; ಕಣ್ಣು ಮೀನುಗಳು; ಹೊಳೆಯುತ್ತಿರುವ ಹೊಟ್ಟೆಯ ಮೇಲಿನ ಮೂರು ಗೆರೆಗಳ ಶ್ರೇಷ್ಠ ತೆರೆಗಳು ; ಶೋಭಿಸುವ ಹೊಕ್ಕುಳು, ಸುಳಿ ; ದೇಹಲಾವಣ್ಯವೇ, ನೀರು ; ಕಟಿಪಶ್ಚಾದ್ಭಾಗವೇ, ಮಳಲಗುಡ್ಡೆ ; ಕೇಶಗಳೇ ದುಂಬಿಗಳ ಸಮೂಹ ; ಉತ್ತಮ ಹಂಸಪಕ್ಷಿ (ಸು + ಕ + ವಿ + ವರ. ಒಳ್ಳೆಯ ನೀರಿನಲ್ಲಿರುವ ಪಕ್ಷಿಗಳಲ್ಲಿ ಶ್ರೇಷ್ಠವಾದ ಹಂಸಪಕ್ಷಿ)ಯೋ ಮಲ್ಹಣ. (ಸತ್ಕವಿಶ್ರೇಷ್ಠನು) ತನ್ನಲ್ಲಿ ಕ್ರೀಡಿಸುತ್ತಿರಲು ಆ ಸುಂದರಿಯು ಆಗ ಕೊಳದ ಹಾಗೆ ಕಣ್ಣಿಗೆ ಶೋಭಿಸುತ್ತಿದ್ದಳು. ೭. ಪಚ್ಚೆಯ ಕಡಗದ ಕಾಂತಿ, ಪ್ರಕಾಶಮಯ ಕಣ್ಣುಗಳ ಆದಿ, ಅಂತ್ಯದ ಕೆಂಪು, ಮಧ್ಯದ ಕಪ್ಪುಕಾಂತಿ, ದೇಹದ ಹೊಂಬಣ್ಣದ ಕಾಂತಿ–ಇವು ಆವರಿಸಿರಲು ಆ

ವ॥ ಅಂತಸೆವಗಣ್ಯಲಾವಣ್ಯ ತಾರುಣ್ಯ ನೈಪುಣ್ಯವತಿಯೆನಿಪ ಮಲ್ಲಣೆಯುಮಾ ವಿಟತಿಲಕನೆನಿಪ ಮಲ್ಲಣನುಂ ಸಮಾನುರಾಗದಿನಸಮಶರಸಂಭೋಗಸಮಸುಖಸಮಾಶ್ರಿತರಾಗಿರ್ಪನ್ನಮಾ ಮಲ್ಲಣೆಯ ಜನನಿ—

ಅತಿಚಂಚಲೆಯತಿನಿಷ್ಠುರೆ
ಯತಿಕಪಟೋಪಾಯನಿಪುಣೆಯತಿಲೋಭಸಮ
ನ್ವಿತೆಯತಿಕುಟಿಲವಚೋರು
ಜಿತೆಯತಿಶಯಧೂರ್ತೆಯೆನಿಸಿ ಕರಮೆಸೆದಿರ್ದಳ್ ೮

ಪೊಸನಾರಂ ಕಲ್ಲೊಳೆತ್ತಲ್ಪಱಿಯಲಲರನಾಕಾಶದೊಳ್ ಗಾಳಿಯಂ ಖಂ
ಡಿಸಲಂಗಚ್ಛಾಯೆಯಂ ಲಂಘಿಸಲಹಿಪದಮಂ ಲೆಕ್ಕಿಸಲ್ ವ್ಯೋಮಮಂ ಬ
ರ್ಚಿಸಲೀಂಟಲ್ ಜೊನ್ನಮಂ ನುಣ್ಮಣಲಹರವೆಯೊಳ್ಮಂಜುನೀರ್ದುಂಬಲಲ್ಲಾ
ಡಿಸಲುದ್ಯನ್ಮೇರುವಂ ವಾರ್ಶಿಲೆಗಳ ಸರಮಂ ಮಾಡಲಾ ಬರ್ದೆ ಬಲ್ಲಳ್ ೯

ವ॥ ಆ ವೃದ್ಧವೇಶ್ಯೆ ನಿಜತನೂಜೆ ಮೆಚ್ಚಿರ್ದ ಮಲ್ಲಣನೀವ ಧನದ ಪೆರ್ಚುಗೆ ಕೆಲವಾನುಂ ದಿವಸದೊಳ್ತವಿಲಾಗೆ ನೋಡಿ ಸೈರಿಸಲಾಱದರ್ಥಾತುರತೆಯಿಂದಳಲ್ದು ಮಲ್ಲಣನಿದಿರ್ಗೆವಂದು ನಿಂದು—

ವನಿತೆ ಮುಂಗೈಯ ಅರಗಿಣಿಯಂತೆ ಶೋಭಿಸುತ್ತಿದ್ದಳು. ವ॥ ಹೀಗೆ ಶೋಭಿಸುವ ಅಗಣಿತ ಲಾವಣ್ಯ, ತಾರುಣ್ಯ, ನೈಪುಣ್ಯವತಿಯೆಂದೆನಿಸುವ ಮಲ್ಲಣೆಯೂ, ವಿಟತಿಲಕನೆನಿಸುವ ಮಲ್ಲಣನೂ, ಸಮಾನ ಅನುರಾಗವುಳ್ಳವರಾಗಿ, ಮನ್ಮಥಭೋಗದಿಂದುಂಟಾಗುವ ಸಮಸುಖವುಳ್ಳವರಾಗಿ ಇರುತ್ತಿರುವಾಗ ಮಲ್ಲಣೆಯ ತಾಯಿಯು— ೮. ಅತಿಚಂಚಲೆ. ಅತಿ ಕಠಿಣ ಹೃದಯವುಳ್ಳವಳು, ಅತ್ಯಂತ ಕಪಟೋಪಾಯಗಳಲ್ಲಿ ನಿಪುಣೆ, ಅತಿ ಆಸೆಯಿಂದ ಕೂಡಿದವಳು, ಅತಿವಕ್ರವಾದ ಮಾತುಗಳಿಂದ ಕೂಡಿದವಳು, ಬಹು ನೀಚ ಸ್ವಭಾವದವಳು ಎಂದೆನಿಸಿ (ಎಲ್ಲವೂ ಅತಿಯೆನಿಸಿ) ಶೋಭಿಸುತ್ತಿದ್ದಳು. ೯. ಆ ಮುದಕಿಯು ಕಲ್ಲಿನಿಂದ ಹೊಸನಾರನ್ನೆತ್ತುವಂಥವಳು ; ಆಕಾಶದಲ್ಲಿ ಹೂವನ್ನೆತ್ತಿ ತರುವವಳು ; ಗಾಳಿಯನ್ನೂ ಕತ್ತರಿಸ ತಕ್ಕವಳು ; ತನ್ನ ದೇಹದ ನೆಳಲನ್ನೂ ಹಾರುವವಳು ; ಹಾವುಗಳ ಕಾಲುಗಳನ್ನೂ ಎಣಿಕೆ ಮಾಡುವಂಥವಳು ; ಆಕಾಶವನ್ನೂ, ತಬ್ಬುವವಳು ; ಬೆಳದಿಂಗಳನ್ನೇ ಕುಡಿಯುವವಳು ; ನುಣ್ಣನೆಯ ಮಳಲಿನ ಹರವಿಯಲ್ಲಿ ಮಂಜಿನ ನೀರನ್ನು ತುಂಬುವವಳು ; ಮೇರುಪರ್ವತವನ್ನೂ ಅಲ್ಲಾಡಿಸುವವಳು ; ಆಣೆಕಲ್ಲುಗಳ ಸರವನ್ನು ಪೋಣಿಸುವಳು—ಎನಿಸಿದ್ದಳು. ವ॥ ಆ ವೃದ್ಧ ವೇಶ್ಯೆಯು— ತನ್ನ ಮಗಳು ಮೆಚ್ಚಿದ ಮಲ್ಲಣನು ಕೊಟ್ಟ ಹಣದ ಮೊತ್ತವು ಕೆಲವಾರು ದಿನಗಳಲ್ಲಿ ಮುಗಿಯಲಾಗಿ, ನೋಡಿ, ಸಹಿಸಲಶಕ್ಯವಾದ ಧನಲೋಭದಿಂದ ಸಂಕಟಗೊಂಡು

ಸ್ಫುರಿತಾಧರಂ ಪ್ರಕಂಪಿತ
ಕರಯುಗಳಂ ಭ್ರುಕುಟಿ ಕೋಪವಿಕೃತಿವಿಶೇಷಾಂ
ಕುರವದನಂ ಗರ್ಘರರವ
ವಿರದಮರ್ದಿರೆ ಬರ್ದೆ ಮುಳಿಸಿನಿಂದಿಂತೆಂದಳ್ ೧೧

ಭಲರೆ ವಿಟರಾಜ ಕವಿಕುಲ
ತಿಲಕ ವದಾನ್ಯರ್ಕಳಾರೊ ನಿನ್ನವೊಲೆ ಧರಾ
ವಲಯದೊಳೆ ನಿನ್ನ ಮೆಚ್ಚಿದ
ಲಲನೆಗೆ ನೀನಮರಭೂರುಹಂ ಕುಡುವೆಡೆಯೊಳ್ ೧೧

ಎಣಿಕೆಗಳುಂಬಮಾದ ವಿಟರೀ ಪೊಳಲೊಳ್ನೆಲಸಿರ್ಕುಮಾವಗಂ
ಪ್ರಣುತವದಾನ್ಯರಂತವರನೊಲ್ಲದೆ ಮತ್ತನುಜಾತೆ ನಿನ್ನನೇ
ಗುಣಕಟಿಗೊಂಡು ಮೆಚ್ಚಿದಳವಳ್ಗೆಲೆ ನೀಂ ಪಣವೀಯದೋವೊ ಮ
ಲ್ಹಣ ಬಱಿದಿಂತು ಚಾಳಿಪುದು ಸದ್ವಿಟರೀತಿಯೊ ಲುಬ್ಧನೀತಿಯೋ ೧೨

ಬೆಲೆವೆಣ್ಗೆ ನಿಚ್ಚಮುಮ್ಮೆ
ಯ್ವೆಲೆಯೊಯದೆ ಠಕ್ಕುದೋಱಿ ನೆರೆವ ಬೊಜಂಗಂ
ಸಲೆಯುವಳ ಜೀವಪವನನ
ನೆಲೆ ಪೀರ್ವ ಭುಜಂಗನಲ್ತೆ ಧರಣೀತಳದೊಳ್ ೧೩

ಸವಿನಗೆಯಿಂದೆ ಮೆಲ್ನುಡಿಯ ಬಿನ್ನಣದಿಂ ತನಿಸೋಂಕಿನಿಂದೆ ಸ
ತ್ಕವಿತೆಯ ಜಾಣ್ಮೆಯಿಂ ಬಗೆಗೆ ಸೋಲಮನುರ್ವಿಸಿ ಗಾಡಿಯಿಂ ಮನೋ

ಮಲ್ಹಣನ ಎದುರಿಗೆ ಬಂದುನಿಂತು—೧೦. ನಡುಗುತ್ತಿರುವ ತುಟಿ, ನಡುಗುವ ಕೈಗಳು ಗಂಟಿಕ್ಕಿದ ಹುಬ್ಬು, ಕೋಪದಿಂದ ವಿಕಾರಗೊಂಡು ವಿಚಿತ್ರಾಕಾರ ವೊಳೆತಮುಖ ಗುರುಗುರು ಎಂಬ ಧ್ವನಿ ವಿಶೇಷಗಳಿಂದ ತುಂಬಿದವಳಾಗಿ ಆ ಮಲ್ಹಣಯ ತಾಯಿಯು ಹೀಗೆಂದಳು : ೧೧. 'ಕವಿ ಕುಲ ತಿಲಕನಾದ ವಿಟರಾಜನೇ, ಭಲೇ ! ಈ ಲೋಕದಲ್ಲಿ ನಿನ್ನ ಹಾಗೆ ದಾನಶಾಲಿಗಳಾರಿದ್ದಾರೆ ? ನೀನು ಮೆಚ್ಚಿದ ಸುಂದರಿಗೆ (ಅರ್ಥಾದಿಗಳನ್ನು) ಕೊಡುವ ವಿಷಯದಲ್ಲಿ ಕಲ್ಪವೃಕ್ಷ ಸಮಾನನು.' ೧೨. 'ಈ ಪಟ್ಟಣದಲ್ಲಿ ಶ್ಲಾಘ್ಯರಾದ ಹೆಚ್ಚು ಹಣವನ್ನು ಕೊಡುವ ವಿಟರುಗಳು ಲೆಕ್ಕವಿಲ್ಲದಷ್ಟು ಜನರಿದ್ದಾರೆ. ನನ್ನ ಮಗಳು ಅವರಾರನ್ನೂ ಆಪೇಕ್ಷಿಸದೆ ನಿನ್ನನ್ನೇ ಮೋಹಿಸಿ, ಮೆಚ್ಚಿದ್ದಾಳೆ. ಎಲೆ ಮಲ್ಹಣ, ಓಹೋ ! ಅವಳಿಗೆ ಹಣವನ್ನು ಕೊಡದೆ ಸುಮ್ಮನೆ ಈ ರೀತಿ ಸೊರಗಿಸುತ್ತಿರುವುದು ಶ್ರೇಷ್ಠವಿಟರ ನೀತಿಯೋ ? ಜಿಪುಣ ಗುಣವೊ ?' ೧೩. 'ಎಲೈ ಮಲ್ಹಣ ಲೋಕದಲ್ಲಿ ವೇಶ್ಯಾಸ್ತ್ರೀಗೆ, ನಿತ್ಯವೂ ಮೆಯ್ಯುಬೆಲೆಯುನ್ನು ಕೊಡದೆ ಠಕ್ಕು ತೋರಿಸಿ, ಕೊಡುವ ವಿಟನು ಅವಳ ಪ್ರಾಣವಾಯುವನ್ನೇ ಚೆನ್ನಾಗಿ ಹೀರುವ ಸರ್ಪಸಮಾನನಲ್ಲವೇ ?' ೧೪. 'ನೀನು ಸವಿ ಸವಿಯಾದ ಮೃದುಮಾತಿನಿಂದ, ವೈಯಾರದಿಂದ, ದೇಹಸ್ಪರ್ಶದಿಂದ, ಒಳ್ಳೆಯ ಕವಿತೆಯ ಜಾಣತನದಿಂದ, ಅವಳ ಮನಸ್ಸನ್ನು ಸೋಲಿಸಿ,

ಭವಮದಮಂ ನಿಮಿರ್ಚಿ ಪೊಸಲಜ್ಜೆಯನಿಕ್ಕಿ ಪೊದಳ್ದು ಕೂಡಿ ನೀಂ
ಕುವರಿಯನಿಂತು ಮೆಚ್ಚಿಸಿ ಮರುಳ್ಚಿ ಧನಂಗೊಡದಿರ್ಪುದೊಪ್ಪಮೇ ೧೪

ಪಡೆದುಣ್ಬ ಪೆಣ್ಣನಕ್ಕಟ
ಬಿಡದಿಂತು ಮರುಳ್ಚಿ ಮನೆಯ ಬೀಯಕೆ ಧನಮಂ
ಕುಡಲೊಲ್ಲದಿಂತು ಚಾಳಿಪ
ಜೆಡಂಗನಿದದೆಲ್ಲಿ ಕಲ್ತೆ ಪೇಳ್ ವಿಟತಿಲಕಾ ೧೫

ನಿನ್ನ ವಿಭುತ್ವಮೆನ್ನ ಮನೆಗಪ್ಪುದೆ ಪೆರ್ಚಿದ ಧಾನ್ಯರಾಶಿ ಪೇ
ಳ್ನಿನ್ನ ಕವಿತ್ವಮೆನ್ನ ಸುತೆಗಪ್ಪುದೆ ಕಾಂಚನರತ್ನಭೂಷಣಂ
ನಿನ್ನ ನಯೋಕ್ತಿಯೆನ್ನ ನಿಳಯವ್ಯಯಕಪ್ಪುದೆ ವಿತ್ತಪುಂಜಮೊ
ನಿನ್ನ ಸುಭಕ್ತಿಯೆಳ್ತರಮಿದೇನೆನಗಪ್ಪುದೆ ಸದ್ಗತಿಪ್ರದಂ ೧೬

ಪಲವುಂ ಪರ್ವಂಗಳೆಯ್ದುತ್ತಿರೆ ತನುಭವೆ ತಾಂ ತೊಟ್ಟ ಮಾಣಿಕ್ಯಭೂಷಾ
ವಲಿಯಂ ಸನ್ಮೌಕ್ತಿಕೈಕಾವಳಿಯನಸಮಮಂಜೀರಮಂ ಪ್ರೋಲ್ಲಸನ್ಮೇ
ಖಲೆಯಂ ಬೀಯಕ್ಕೆ ಪೊನ್ನಿಲ್ಲದಿರೆ ವಿಪಣಿಯೊಳ್ಮಾಱಿತೇಂ ಮಾಡಳೇ ಕೋ
ಮಲೆ ಸನ್ಮಾಹೇಶ್ವರಾರಾಧನಮನಭವಸಂಪೂಜೆಯಂ ಪೇಳ್ವೆನೇನಂ ೧೭

ಕೆಲವಲದ ಗಣಿಕೆಯರ್ಶಿವ
ನಿಲಯಕೆ ಮಣಿದೊಡವನಿಟ್ಟು ತಳರ್ವೆಡೆಯೊಳಿವಳ್

ಉಬ್ಬಿಸಿ, ವಿಲಾಸದಿಂದ ಮದನ ಸಂಬಂಧದ ಮದವನ್ನು ಅಧಿಕಗೊಳಿಸಿ, ಹೊಸ ನಾಚಿಕೆಯನ್ನುಂಟುಮಾಡಿ, ಮನವೊಲಿದು ಕೂಡಿ, ಈರೀತಿ ನನ್ನ ಮಗಳನ್ನು ಮರುಳು ಗೊಳಿಸಿ ಹಣವನ್ನೇ ಕೊಡದೆ ಇರುವುದು ಯೋಗ್ಯವೇ ?' ೧೫. 'ಎಲೈ ವಿಟಶ್ರೇಷ್ಠನೇ (ವೃತ್ತಿಯಿಂದ) ಸಂಪಾದಿಸಿ, ಉಣ್ಣುವ ಹೆಣ್ಣನ್ನು ಬಿಡದೆ, ಈರೀತಿ ಮರುಳುಗೊಳಿಸಿ ಅಯ್ಯೋ ! ಮನೆಯ ಖರ್ಚಿಗೂ ಹಣವನ್ನೂ ಕೊಡದೆ, ಈರೀತಿ ಪೀಡಿಸುವ ರೀತಿ ಯನ್ನು ಎಲ್ಲಿ ಅಭ್ಯಾಸ ಮಾಡಿದೆ ?' ೧೬. 'ನಿನ್ನ ಶ್ರೀಮಂತಿಕೆ ನನ್ನ ಮನೆಯ ಧಾನ್ಯದ ರಾಶಿಯಾದೀತೇ ? ಹೇಳು. ನಿನ್ನ ಕವಿತ್ವ ನನ್ನ ಮಗಳ ಬಂಗಾರದ ರತ್ನಾಭರಣವಾದೀತೇ ? ನಿನ್ನ ನಯವಾದ ಮಾತುಗಳು ನನ್ನ ಮನೆಯ ಖರ್ಚಿನ ಹಣದ ರಾಶಿಯಾದೀತೇ ? ನಿನ್ನ ಸದ್ಭಕ್ತಿಯ ಹೆಚ್ಚುಗಾರಿಕೆ ನನಗೆ ಸದ್ಗತಿಯನ್ನು ಕೊಟ್ಟೀತೇ ?' ೧೭. 'ಅನೇಕ ಹಬ್ಬಗಳು ಬರುತ್ತಿರಲು ಖರ್ಚಿಗೆ ಹಣವಿಲ್ಲದಿರಲು ನನ್ನ ಮಗಳು ನೀನು ಕೊಟ್ಟ ಮಾಣಿಕ್ಯರತ್ನಾಭರಣಗಳನ್ನೂ, ಒಳ್ಳೆಯ ಮುತ್ತಿನ ಏಕಾವಳೀ ಸರವನ್ನೂ, ಅನುಪಮವಾದ ಮಂಜೀರವನ್ನೂ, ಶೋಭಿಸುತ್ತಿದ್ದ ನಡುವಿನ ಪಟ್ಟಿಯನ್ನೂ ಅಂಗಡಿಗಳಲ್ಲಿ ಮಾರಾಟಮಾಡಿ, ಶ್ರೇಷ್ಠ ಮಾಹೇಶ್ವರರ ಪೂಜೆಯನ್ನೂ, ಪರಶಿವನ ಪೂಜೆಯನ್ನೂ ಮಾಡಲಿಲ್ಲವೇ ? ಇದಕ್ಕೇನು ಹೇಳುತ್ತೀಯೆ ?' ೧೮. 'ಎಲೈ ವಿಟನೇ, ಅಕ್ಕಪಕ್ಕದ ಸೂಳೆಯರು, ಒಳ್ಳೊಳ್ಳೆ ರತ್ನಾಭರಣಗಳನ್ನು ಧರಿಸಿಕೊಂಡು

ನಲಿದೆಂತು ತಳರ್ವಳವರೊಡ
ನೆಲೆ ತೊಡವಿದಡಕಟ ಬಱಿಯ ವೈಭವದಿಂದಂ ೧೮

ಇತ್ತಿತ್ತು ತಣಿದೆ ನೀಂ ಬಹು
ವಿತ್ತಮನಿದೆ ಸಾಲ್ಗುಮೆಮಗೆ ನಿನ್ನೊಡನಾಟಂ
ಪತ್ತಿದ ನಾಗರಕಾಟಂ
ಸುತ್ತೆಂ ಮಿಳ್ತುವಿನ ಮಾಟಮಲ್ಲದೆ ಪೆಱತೇಂ ೧೯

ನಸುಮುನಿಸಾಂತು ಸೈರಣೆಯ ಗೆಲ್ಲಮನೋದಿನಿಸಿತ್ತು ಸೋಲಮಂ
ಪೊಸಯಿಸಿ ಸೋಲ್ತು ಮೇಣ್ಮುಳಿಯೆ ತಿರ್ದಿ ಕರಾಬ್ಜದೆ ಪೊಯ್ಯೆ ಪೊಂಗಿ ರಾ
ಗಿಸಿ ನೆಲವೇಱಿ ಮೇಲ್ವರಿಯೆ ಮುಂಬರಿದಪ್ಪಿದೊಡಪ್ಪಿ ಮೆಯ್ಯನೊಂ
ದಿಸಿ ನೆರೆವಿಚ್ಚೆಗಾರ್ತನದ ಜಾಣ್ಮೆಯನಿಂತು ನೆಗಳ್ಚಿ ಗಾಡಿಯಿಂ ೨೦

ಕಲೆಯೊಲವಂ ಪರೀಕ್ಷಿಸಿ ನಿರೀಕ್ಷಿಸಿ ಚೆಂದುಟಿಯಂ ಕರ್ದುಂಕಿ ಚ
ಲ್ವಲರ ಮನೋಜರಾಗರಸವಾರ್ಧಿಯೊಳಾರಿಸುತಿಂತು ಕೂಟದಿಂ
ನಲಿದೊಲವಿತ್ತು ಮೆಚ್ಚಿಸಿ ಮರಳ್ಚಿ ಮದೀಯತನೂಜೆಯಂ ಮಹಾ
ಖಲ ಪಣಮೀಯದನ್ಯಮನಮಾಗದವೋಲ್ನೆಗಳಲ್ಕೆ ತಕ್ಕುದೇ ೨೧

ಮಗಳತಿ ಮುಗ್ಧೆ ಮಾನಿನಿಯಿವಣ್ಬಣಮಂ ಪಡೆದುಣ್ಬ ಕಾಲದೊ
ಳ್ನೆಗಳ್ದಿಲೆ ಮರ್ದುಮಾಯೆಯ ಮರುಳ್ಚಿದೆ ನಿನ್ನಯ ಮರ್ದುಮಾಯೆ ನಿ

ಶಿವಾಲಯಕ್ಕೆ ನಲಿದಾಡಿ ಹೋಗುವ ಕಾಲದಲ್ಲಿ ಅವರೊಡನೆ ಆಭರಣವಿಲ್ಲದೆ ನನ್ನ ಮಗಳು ಬರಿಯ ವೈಭವದಿಂದ ಹೇಗೆ ಹೋದಾಳು ? ಅಯ್ಯೋ !' ೧೯. 'ನೀನು ಬಹಳಷ್ಟು ಹಣವನ್ನು ನಮಗೆ ಕೊಟ್ಟು ಕೊಟ್ಟು ದಣಿದು ಹೋದೆ ! ನಮಗೆ ಇನ್ನು ಮುಂದೆ ನಿನ್ನ ಸಹವಾಸ ಸಾಕು. 'ಸುತ್ತಿದ ನಾಗರಹಾವಿನ ಕಾಟ ಮೃತ್ಯುವಿನಮಾಟ' ವಲ್ಲದೆ ಬೇರೇನು' ೨೦. 'ನಾನು ಸ್ವಲ್ಪ ಕೋಪಗೊಳ್ಳಲು ಅದನ್ನು ಸಹಿಸಿಕೊಂಡು ಗೆದ್ದು, ಆಗ ಸ್ವಲ್ಪ ಹಣವನ್ನು ಕೊಟ್ಟು ಸೋಲುವಂತೆ ಮಾಡುತ್ತೀಯೆ ; ನೀನು ಸೋಲುತ್ತೀಯೆ. ಪುನಃ ಅವಳು ಕೋಪಗೊಂಡರೆ ಅವಳನ್ನು ತಿದ್ದಿಬಿಡುತ್ತೀಯೆ. ಹಸ್ತಕಮಲದಿಂದ ಹೊಡೆದರೆ, ನೀನು ಹೆಚ್ಚಾಗಿ ಅವಳಲ್ಲಿ ಪ್ರೀತಿಯನ್ನು ತೋರಿಸಿ, ಮೇಲೆಬಿದ್ದು ಸಂತೋಷಪನ್ನು ಹೊಂದುತ್ತೀಯೆ. ಮುಂದಕ್ಕೆ ಬಂದು ಅಪ್ಪಿದಾಗ ಅವಳೊಡನೆ ಮೈ ಸೇರಿಸಿ ಅಪ್ಪಿಕೊಂಡು ಕೂಡುವ ಮನ್ಮಥ ಕ್ರೀಡೆಯ ಪ್ರೌಢಿಮೆ ಯನ್ನು ಸಂಭ್ರಮದಿಂದ ಉಂಟುಮಾಡುತ್ತೀಯೆ.' ೨೧–೨೨. 'ಮಹಾನೀಚನೇ, ಹಣವನ್ನೇ ಕೊಡದೆ, ಅವಳ ಕಲೆಯ ಒಲವನ್ನು ಪರೀಕ್ಷೆಮಾಡಿ ನೋಡಿ, ಕೆಂಪಾದ ತುಟಿಗಳನ್ನು ಕಚ್ಚಿ, ಚೆಲುವಾಗುವಂತೆ ಮನ್ಮಥ ಸಂಬಂಧದ ಕ್ರೀಡೆಯ ಅನುರಾಗ ರಸ ಸಮುದ್ರದಲ್ಲಿ ಮುಳುಗಿಸಿ ಹೀಗೆ ಕೂಟಗೊಂಡು ನಲಿನಲಿದು ಪ್ರೀತಿಯನ್ನು ತೋರಿಸಿ ಮೆಚ್ಚಿಸಿ, ಮರುಳುಗೊಳಿಸಿ, ನನ್ನ ಮಗಳನ್ನು ಬೇರೆ ಮಾರ್ಗಕ್ಕೆ ಹೋಗಗೊಡದಂತೆ

ನ್ನೊಗುವಿಗೆವೆತ್ತ ಸತ್ಕಳೆಯಿವೆಂಬಿವನೆಲ್ಲಮನೆಯ್ದೆ ತೂಳ್ದು ನೀಂ
ನಗೆಗೆಡೆಯಾಗೆ ಕಟ್ಟಿಸಿದಪೆಂ ಮಣಿಮಂಚದ ಕಾಲೊಳೀಕೆಯಾ ೨೨

ಆನಱಿಯದ ಕೌಟಿಲ್ಯಮೆ
ಯಾನಱಿಯದ ಮುದ್ದು ಮಾಯೆ ಕಳೆಗಳೆ ಬಿಡು ಕೇ
ಳ್ದೇನಱಿವೆಯಿಲ್ಲಮೋ ಪೇ
ಳೀ ನಗರದೊಳೆನ್ನ ಸೂಳೆತನದ ಬೆಡಂಗಂ ೨೩

ಸುಳಿಸುತ್ತುಂಗಾಱಿನಂ ಜಕ್ಕುಲಿಸಿ ಕಳೆವ ಬೆಳ್ವಾಳನೊಳ್ಪಿಂದೆ ಬಂದಾ
ಗಳೆ ಕಾಯ್ಪಂ ತೋಱುತುಂ ಪಾಱಿಪ ಪುರುಡಿಗನಂ ಪೂಣ್ದು ಬೇರ್ಕೆಯ್ವ ಲೋಭೋ
ಜ್ವಳನಂ ಜಱೋಡಾಡಿ ಪೋಗಾಡುವ ವಿಗಡದ ಮಾಯಾವಿಯಂ ಮಾಯೆಯಿಂ ಸೊ
ರ್ಕಳಿವನ್ನಂ ತೂಳ್ವ ಚಾತುರ್ಯದ ಪೊಸಬಗೆಯೆನ್ನೊಳ್ನಿತಾಂತಂ ನಿಸರ್ಗಂ ೨೪

ಬಱಿವಿನ್ನಣಮಂ ತೋಱದೆ
ಪೊಱಮಡು ಪೊಱಮಡು ಮದೀಯ ನಿಳಯಮನೀಗಳ್
ನೆಱೆ ಬೆಡಗತನದಲಂಪಂ
ಮೆಱೆ ಮತ್ತೊರ್ವಳೊಳೆ ಬೆಡು ಬಿಡೆನ್ನಾತ್ಮಜೆಯಂ ೨೫

ವ್ಯವಹರಿಸುವ ರೀತಿಯು ತಕ್ಕದ್ದೇ ನಿನಗೆ ?" ನನ್ನ ಮಗಳು ಮುಗ್ಧೆ, ಮಾನವಂತೆ, ಇವಳು ವಿಟರಿಂದ ಹಣವನ್ನು ಪಡೆದು ಸುಖಪಡುವ ಕಾಲದಲ್ಲಿ, ಎಲೈ ನೀನು ಅವಳಿಗೆ ಮುದ್ದು ಮಾಟಮಾಡಿಸಿಬಿಟ್ಟಿದ್ದೀಯೆ ? ನಿನ್ನ ಈ ಮುದ್ದುಮಾಟ ಮಾಯೆಗೀಯೆಗಳು ಶ್ರೇಷ್ಠ ಕಲೆಗಿಲೆಯೆಂಬುವೆಲ್ಲವನ್ನೂ ಓಡಿಸಿ, ನೀನು ಅಪಹಾಸ್ಯಕ್ಕೀಡಾಗುವಂತೆ ನಿನ್ನನ್ನು ಅವಳ ರತ್ನಖಚಿತ ಮಂಚದ ಕಾಲಿಗೆ ಕಟ್ಟಿಸಿಬಿಡುತ್ತೇನೆ.' ೨೩. ಇದೇನು ನಾನು ತಿಳಿಯದ ಕುಟಿಲವಿದ್ಯೆಯೇ ? ನಾನರಿಯದ ಮುದ್ದುಮಾಟಗಳ ವಿದ್ಯೆಯೇ ? ಬಿಡು. ನನ್ನ ಸೂಳೆತನದ ಬೆಡಗನ್ನು ಈ ನಗರದಲ್ಲಿ ನೀನು ಕೇಳಿ ತಿಳಿದೇಯಿಲ್ಲವೇ ? ಹೇಳು. ೨೪. 'ಸುಮ್ಮ ಸುಮ್ಮನೆ ಸುಳಿದಾಡುವವನನ್ನು ಚಕ್ಕಳಗುಳಿಯಾಡಿದಂತೆ ಮಾಡಿ ಓಡಿಸುವ, ಮುಂಕುಬೂದಿಯುನ್ನೆರಚಬಂದವನನ್ನು ಅವನು ಬಂದೊಡನೆ ಕೋಪವನ್ನು ತೋರಿಸಿ ಓಡಿಸುವ, ಸ್ಪರ್ಧೆಯಿಂದ ಬರುವವನನ್ನು ಶಪಥಮಾಡಿ ಬೇರೆಗೊಳಿಸಿ ಓಡಿಸುವ, ವಿಶೇಷ ಲೋಭಿಯಾದವನು ಬಂದಾಗ ಬೆನ್ನಟ್ಟಿ ಓಡಿಹೋಗುವಂತೆ ಮಾಡುವ, ಮಾಯಾವಿಯಾದವನನ್ನು ಮಾಯೆಯಿಂದಲೇ ಅವನ ಸೊಕ್ಕನ್ನು ಮುರಿದು ಅಟ್ಟುವ ಹೊಸ ರೀತಿಯ ನಡೆವಳಿಕೆ ನನ್ನಲ್ಲಿ ನಿಸರ್ಗದತ್ತವಾದದ್ದು.' ೨೫. ಬರಿಯ ಬೆಡಗಿನ ವ್ಯವಹಾರವನ್ನು ತೋರಿಸದೆ ನನ್ನ ಮನೆಯಿಂದ ಹೊರಹೊರಡು ಮತ್ತೊಬ್ಬಳಾವಲ್ಲಿಯೋ ಕೂಡಿಕೊಂಡು ನಿನ್ನ ವಿಟತನದ ಸೊಗಸನ್ನು ತೋರ್ಪಡಿಸಿಕೋ ನನ್ನ

ವ॥ ಎಂದಿಂತು ಪಲ್ದಿಂದು ಗಜಜು ಗರ್ಜಿಸಿ ಪುರುಡುದೋಱು ಬಾಯ್ಗೆ ಬಂದಂತೆ ಗಳಪಿ ಮಾನನಿಧಿಯಾದ ಮಲ್ಲಣನಂ ಮಲ್ಲಣೆಯ ಮಾತೆ ಮನೆಯಿಂ ಪೊಱಮಡಿಸಿ ಬಿರಯಿಸುವ ಮಗಳನಂತಿಂತು ಸಂತವಿರಿಸಿ ರಾಜಪುತ್ರನನೊರ್ವನಂ ಕರೆದು ಧನಮಂ ಕೊಂಡವನೊಳತಿ ಪ್ರಬಂಧದಿಂ ನೆರಪಿ ಮುದಂಬಡೆದಿರ್ಪಿನಮಿತ್ತಲ್—

ಕಱಗುಂದಿದಾನನಂ ರಸ
ಮಱತಧರಂ ಡಿಳ್ಳ[1]ವಾಱದೆರ್ದೆ ಬಿಸುಪಿಂದಂ
ಪೊಱಪಾಯ್ವ ಸುಯ್ಗಳುರ್ದಿರೆ
ಕುಱುವಜ್ಜೆಗಳಿಡುತೆ ಮಲ್ಲಣಂ ನಡೆತಂದಂ ೩೬

ವ॥ ಅಂತು ಚಂದ್ರಿಕೆಯುಗಲ್ದ ಚಕೋರನಂತೆ, ಕಾದಂಬಿನಿ ಪಿಂಗಿದ ಮಯೂರನಂತೆ ಕಳೆಗುಂದಿ ಕಾಂತೆಯುಗಲ್ದುರಿ ಮನದೊಳೊಗೆದು ತನುವನಾವರಿಸೆ ತಲ್ಲಣಂಬೆತ್ತು ಮಲ್ಲಣಂ ಬಂದು ಮದನಕಾರಾಗೃಹಮಂ ಪುಗುವಂತತುಳ ಸುರಭಿರಸಭರಕುಸುಮ ವಿಸರದಳಫಳ ಪರಿಮಿಳಿತ ನಾನಾ ನವೀನ ಭೂಜರಾಜಿರಾಜಿತ ಲತಾವಿತಾನಸಂಕಲಿತ ಶುಕಪಿಕಪ್ರಕರರವಮಧುಕರನಿಕರಝಂಕಾರ

ಮಗಳನ್ನು ಕೈಬಿಡು. ವ॥ ಈ ರೀತಿ ಹಲ್ಲುಕಡಿಕಡಿದು ಗದರಿ ಗರ್ಜನೆಮಾಡಿ ಶಕ್ತಿಮೀರಿ ಬಾಯಿಗೆ ಬಂದಹಾಗೆ, ಬೈದು ಮಾನನಿಧಿಯಾದ ಆ ಮಲ್ಲಣನನ್ನು ಮಲ್ಲಣೆಯ ತಾಯಿಯು ಮನೆಯಿಂದ ಹೊರಹೊರಡಿಸಿ, ವಿರಹಗೊಂಡ ಮಗಳನ್ನು ಹಾಗೂ ಹೀಗೂ ಸಮಾಧಾನಗೊಳಿಸಿ, ರಾಜಪುತ್ರನೊಬ್ಬನನ್ನು ಕರೆದು ಅವನಿಂದ ಹಣವನ್ನು ಪಡೆದು ಅವನಲ್ಲಿ ಅತಿ ಬಲಾತ್ಕಾರದಿಂದ (ಮಗಳನ್ನು) ಕೂಡಿಸಿ ಸಂತೋಷಪಡುತ್ತಿರುವಾಗ—
೨೬. (ಇತ್ತ) ಕಪ್ಪಿಟ್ಟ ಮುಖ, ರಸವೊಣಗಿದ ತುಟಿ, ಧೈರ್ಯಗೆಟ್ಟು ಬಡಿದುಕೊಳ್ಳುವ ಎದೆ, ಉಷ್ಣದಿಂದ ಹೊರ ಹೊಮ್ಮುವ ಬಿಸಿಯುಸಿರು ಇವೆಲ್ಲ ಅಧಿಕವಾಗಿರಲು ಚಿಕ್ಕ ಚಿಕ್ಕ ಹೆಜ್ಜೆ ಹಾಕುತ್ತ ಮಲ್ಲಣನು ಬಂದನು. ವ॥ ಈ ರೀತಿ ಬೆಳದಿಂಗಳನ್ನಗಲಿದ ಚಕೋರ ಪಕ್ಷಿಯಂತೆ, ಮೇಘಪಙ್ಕ್ತಿಯನ್ನುಗಲಿದ ನವಿಲಿನಂತೆ ಕಾಂತಿಗುಂದಿ ಕಾಂತೆಯಾದ ಮಲ್ಲಣೆಯನ್ನಗಲಿದ ಉರಿ ಮನಸ್ಸಿನಲ್ಲಿ ಉದ್ಭವಗೊಂಡು ದೇಹವನ್ನೆಲ್ಲ ಆವರಿಸಲಾಗಿ; ತಲ್ಲಣಗೊಂಡ ಮಲ್ಲಣನು ಮನ್ಮಥನಿಂದ ರಚಿತವಾದ ಕಾರಾಗೃಹವನ್ನು ಹೊಗುವ ಹಾಗೆ ಅನುಪಮವಾದ ಸುಗಂಧ ಪರಿಮಳದಿಂದ ಕೂಡಿದ ಹೂವುಗಳ ಸಮೂಹದಿಂದಲೂ, ದಳಗಳಿಂದಲೂ, ಹಣ್ಣುಗಳಿಂದಲೂ, ನಾನಾ ಬಗೆಯ ಗಿಡಗಳ (ಅಲಂಕಾರಾರ್ಥವಾದ ಗಿಡಗಳ). ಸಾಲಿನಿಂದ ಶೋಭಾವಹವಾದ, ಬಳ್ಳಿಗಳ ಗುಂಪಿನಿಂದ ಕೂಡಿದ ಗಿಳಿ, ಕೋಗಿಲೆಗಳ ಧ್ವನಿಯಿಂದಲೂ, ತುಂಬಿಗಳ ಸಮೂಹದ ಝೇಂಕಾರ ದಿಂದಲೂ ಸಂಬಂಧಗೊಂಡಿರುವ, ಸ್ವೇಚ್ಛಾಚಾರಿಣಿಯಾದ ವಸಂತವೆಂಬ ಲಕ್ಷ್ಮಿಯ ಲೀಲೆಯ ಗೃಹವೆನಿಸುವ, ಕ್ರಿಡಾರ್ಥವಾದ ಉಪವನವನ್ನು ಪ್ರವೇಶಿಸಿ ಒಂದು ಮಾವಿನ ಮರದ ಬುಡದಲ್ಲಿರುವ ತಂಪಾದ ನೆಳಲಿನಲ್ಲಿ ಹಾಸಿದ ತಳಿರಿನ ಹಾಸಿಗೆಯ ಮೇಲೆ ಮೆಲ್ಲಗೆ

[1] ಳ್ಳ(ಅ, ಮು)

ಶೃಂಖಲಿತ ವಿಶೃಂಖಲ ವಸಂತಲಕ್ಷ್ಮೀ ವಿಳಾಸನಿವಾಸಮೆನಿಪ ಕೇಳೀವನಮುಂ ಪೊಕ್ಕು ಮಾಮರದ ತಳದ ತಣ್ಣೆಳಲ ತಳಿರ್ವ[1]ಸೆಯೊಳೊಯ್ಯನೆ ಮೆಯ್ಯಿಕ್ಕಿ ನಿಜಸಖಸಖೀಜನಕೃತಶಿಶಿರೋಪಚಾರಕ್ಕೆ ಪಕ್ಕಾಗಿರ್ದು ಮತ್ತೆ ಮತ್ತೆ ಪೆರ್ಚಿದ ಚಿತ್ತಜಾತಾನಳಸಂತಾಪಮುಂ ಕಳೆಯಲಾಱದೆ—

ಪಾಡುವ ತುಂಬಿಗೆ ಮೆಲ್ಪಿಂ
ತೀಡುವ ತಂಗಾಳಿಗುಲಿವ ಕೋಗಿಲೆಗೆ ಪೊದ
ಳ್ದಾಡುವ ನವಿಲ್ಗೆ ನಿಶೆಯೊ
ಳ್ಮೂಡುವ ಶಶಿಗಳ್ಕಿ ಬಳ್ಕಿ ಸಿಡಿಮಿಡಿಗೊಂಡಂ ೨೭

ವ॥ ಮತ್ತಮಲ್ಲಿ—

ತಳಿರಂ ಮಲ್ಲಣಿಯುಂಘ್ರಿಗೆತ್ತು ಮಣಿವಂ ಭೃಂಗಾಳಿಯುಂ ಕಂಡು ತ
ನ್ನಳ ನೀಲಾಳಕಮೆಂದು ನೇವರಿಸಲೊಲ್ವಂ ವಲ್ಲಿಯುಂ ಕಂಡು ಕೋ
ಮಳೆಯುಂಗಂ ನಿಜಮೆಂದು ತಳ್ಕೆಗೆಸಪಂ ಪಂಕೇಜಮುಂ ಕಂಡು ನ
ಲ್ಲನ ವಕ್ತ್ರಾಂಬುಜಮೆಂದು ಚುಂಬನಕ್ಕೆ ಪಾಯ್ವಂ ದರ್ಪಕಭ್ರಾಂತಿಯಿಂ ೨೮

ವ॥ ಮತ್ತಮಲ್ಲಿ ಶಶಿಶಿಲಾಸೋಪಾನರುಚಿನಿಚಯಚಂದ್ರಿಕಾವಿಕಸಿತೇಂದೀವರಮನಾ ವಿಶಾಲ ನೇತ್ರೆಯ ನೇತ್ರಂಗಳೆಂದು ನಿರೀಕ್ಷಿಸಿಯುಮೆಣೆಯಗಲದ ಪೊಣರ್ವಕ್ಕಿಗಳನಾ ತುಂಗಸ್ತನಿಯ ನಿಬಿಡೋತ್ತುಂಗಕುಚಕಲಶಂಗಗ್ಗಿತ್ತು ಮನಂದೆತ್ತು ನೋಡಿಯುಂ ಕನಕ ಕಮಳಪರಾಗಪುಂಜಪಿಂಜರಿತಪುಳಿನ ತಳಮನಾ ಘನನಿತಂಬೆಯ ಶಂಬರಾರಿಕುಂಭಿಕುಂಭ ಶುಂಭನ್ನಿತಂಬಬಿಂಬಮೆಂದು ಪರಿಭಾವಿಸಿಯುಂ

ಥಲಗಿಕೊಂಡು ತನಗೆ ಆಪ್ತರಾದ ಸಖಿಯರಿಂದ ಮಾಡಲ್ಪಟ್ಟ ಸಖೀ ಜನರುಗಳಿಂದ ಶೈತ್ಯೋಪಚಾರವನ್ನು ಮಾಡಿಸಿಕೊಂಡು, ಪುನಃ ಪುನಃ ಹೆಚ್ಚುತ್ತಿರುವ ಮನ್ಮಥ ಸಂಬಂಧವಾದ ಅಗ್ನಿಯಿಂದ ಉಂಟಾಗುತ್ತಿರುವ ಪಾಪವನ್ನು ಕಳೆದುಕೊಳ್ಳಲಾರದೆ ೨೭. ಝೇಂಕರಿಸುವ ತುಂಬಿಗಳಿಗೆ, ಮೆಲ್ಲಗೆ ಬೀಸುವ ಮಂದಮಾರುತಕ್ಕೆ. ಧ್ವನಿ ಮಾಡುವ ಕೋಗಿಲೆಗಳಿಗೆ, ಶೋಭಾಮಯವಾಗಿ ಆಡುವ ನವಿಲುಗಳಿಗೆ ರಾತ್ರಿಯ ಸಮಯದಲ್ಲಿ ಮೂಡುವ ಚಂದ್ರನಿಗೆ ಹೆದರಿ ಬಳುಕಿ ವ್ಯಾಕುಲಗೊಂಡನು. ವ॥ ಮತ್ತು ಅಲ್ಲಿ ೨೮. ಮನ್ಮಥ ಸಂಬಂಧವಾದ ಭ್ರಾಂತಿಯಿಂದ ಕೂಡಿದ ಅವನು ಚಿಗುರನ್ನು ಮಲ್ಲಣಿಯ ಕಾಲುಗಳೆಂದೇ ತಿಳಿದು ನಮಸ್ಕಾರ ಮಾಡುವನು ; ದುಂಬಿಗಳ ಸಾಲನ್ನು ಕಂಡು ತನ್ನವಳಾದ ಮಲ್ಲಣಿಯ ಕಪ್ಪಾದ ಮುಂಗುರುಳೆಂದು ನೇವರಿಸಲು ಪ್ರೀತಿಗೊಳ್ಳುವನು, ಬಳ್ಳಿಗಳನ್ನು ಕಂಡು ಕೋಮಲೆಯಾದ ತನ್ನಕಾಂತೆಯ ನಿಜವಾದ ದೇಹವೆಂದೇ ಬಗೆದು ಆಲಿಂಗಿಸಲು ಪ್ರಯತ್ನಿಸುವನು. ಕಮಲವನ್ನು ಕಂಡು, ತನ್ನ ಪ್ರೀಯೆಯ ಮುಖ ಕಮಲವೆಂದು ಮೇಲೆ ಬೀಳುವನು. ವ॥ ಮತ್ತು ಅಲ್ಲಿ ಚಂದ್ರಕಾಂತ ಶಿಲೆಯ ಸೋಪಾನಗಳ ಕಾಂತಿಯ ಸಮೂಹವೆಂಬ ಬೆಳದಿಂಗಳಿಂದ ಅರಳಿರುವ ಕನ್ನೈದಿಲೆಯ ಹೂವುಗಳನ್ನು ಆ ವಿಶಾಲ ನೇತ್ರೆಯಾದ ಮಲ್ಲಣಿಯ ಕಣ್ಣುಗಳೆಂದೇ ನೋಡುವನು ; ಎಣೆಯಿಲ್ಲದ

1 ರ್ವಾ(ಮು)

ನಳನಳಿಸಿ ಕೆಲದೊಳ್ಪಳೆದಿರ್ದ ಸುವರ್ಣ ರಂಭಾಸ್ತಂಭಂಗಳನಾ ನುಣ್ದೊಡೆಯ ಬೆಡಂಗಿಯ ನಿಬಿಡೋರುಸ್ತಂಭಂಗಳೆಂದು ನಿಂದು ನಿಟ್ಟಿಸಿಯುಂ ಕಟ್ಟಿದಿರೊಳ್ಬಿರಿದು ಬೀಡೆವರಿದ ದಾಡಿಮದ ಬೀಜರಾಜಿಯುನಾ ಕೆಂಬಲ್ಲ ಬಿಂಬಾಧರೆಯ ಕೆಂಬಲ್ಗಳೆಂದವಧರಿಸಿಯುಂ ತರುಣತಮಾಲಲತೆಯನಾ ಲತಾಂಗಿಯ ನುಣ್ಪಡರ್ದ ಬಾಸೆಯೆಂದಾಸೆವಟ್ಟು ಪಂಬಲಿಸಿಯುಂ ಕುಸುಮಪರಿಮಳಮಂ ಪೊತ್ತೆತ್ತಿ ಕುಸಿದು ಬರ್ಪ ಮಂದಾನಿಲನನಾ ಕುಸುಮಗಂಧಿಯ ನಿಶ್ವಾಸಮೆಂದಾಘ್ರಾಣಿಸಿಯು ಮೆಳೆಗಿಳಿಯ ಮೆಲ್ನುಡಿಯನಾ ಮಧುರವಾಣಿಯ ಸವಿನುಡಿಯೆಂದಾಲಿಸಿಯುಂ ಕಲಕಂಠ ಕಲರವಮನಾ ಕಲರವೆಯ ತಾರಸ್ವರಮೆಂದು ಕಿವಿಗೊಟ್ಟು ಸಂಭಾವಿಸಿಯುಂ ಲತಾಗ್ರದೊಳ್ಕುಳ್ಳಿರ್ದ ಮಯೂರಿಯನಾ ಘನಕಚಭರೆಯ ಕಬರೀಭರಮೆಂದನುಭವಿಸಿಯು ಮಿಂತು ಕಂತುವಿಭ್ರಾಂತಿಯಿಂ ಮುಂದುಗೆಟ್ಟು ಮೋಹಿಸಿ ತೊಳಲ್ದು ಬಳಲ್ದು ಕೋಡಿ ಬಾಡಿ ಕಂಗೆಟ್ಟು ಮರವಟ್ಟು ನಂದನದೊಳಿರ್ಮಡಿಸಿದ ವಿರಹದುರಿಪಮಂ ಕಳೆಯಲಾಱದೆ ಕಾಮಾಂಧತೆಯಿಂ ಕಂಗಾಣದೆ ಮಗುಳ್ದು ಮೆಲ್ಲನೆಯ್ತರ್ಪಾಗಳ್—

ಚಕ್ರವಾಕ ಪಕ್ಷಿಗಳನ್ನು ದಪ್ಪನಾದ ಮೊಲೆಯುಳ್ಳ ಆ ಮಲ್ಹಣಿಯ ದಟ್ಟವಾದ (ಕೂಡಿಕೊಂಡ) ದಪ್ಪನಾದ ಕಲಶದಂತಿರುವ ಮೊಲೆಗಳೆಂದೇ ತಿಳಿದು ಮನಸ್ಸುಗೊಟ್ಟು ದಿಟ್ಟಿಸಿ ನೋಡುವನು ; ಬಂಗಾರದ ಕಮಲಗಳ ಪರಾಗ ಧೂಳಿಯ ಸಮೂಹದಿಂದ ಹೊಂಬಣ್ಣವಾದ ಮಳಲಿನ ದಿಣ್ಣೆಗಳನ್ನು ಆ ದಪ್ಪನಾದ ಕಟಿಪಶ್ಚಾದ್ ಭಾಗವುಳ್ಳ ಮಲ್ಹಣಿಯ ಮನ್ಮಥನ ಮದ್ದಾನೆಯ ಕುಂಭ ಸ್ಥಳದಂತೆ ಶೋಭಿಸುವ ಕಟಿಪಶ್ಚಾದ್ಭಾಗವೆಂದೇ ಭಾವಿಸುವನು ; ಅಕ್ಕಪಕ್ಕದಲ್ಲಿ ನಳನಳಿಸಿ ಬೆಳೆದ ನುಣುಪಾದ ತೊಡೆಯ ಸೌಂದರ್ಯದ ಬಾಳೆಯ ಕಂಬಗಳನ್ನು ಆ ಸುಂದರಿಯಾದ ಮಲ್ಹಣಿಯ ಕೂಡಿದ ತೊಡೆಗಳೆಂದೇ ದಿಟ್ಟಿಸಿ ನೋಡುವನು ; ಎದುರಿನಲ್ಲಿಯೇ ಬಿರಿತು ಬೀಡು ಬಿಟ್ಟು ಕಾಣುವ ದಾಳಿಂಬೆಯ ಬೀಜಗಳ ಸಾಲನ್ನು ಆ ಕೆಂಪಾದ ಹಲ್ಲಿನ ತೊಂಡೆಹಣ್ಣಿನಂಥ ತುಟಿಯ ಮಲ್ಹಣಿಯ ಹಲ್ಲುಗಳೆಂದೇ ನಿಶ್ಚಯಿಸುವನು ; ಚಿಗಿತ ಹೊಂಗೆಯ ಕೊಂಬೆಯನ್ನು ಆ ಬಳ್ಳಿಯಂತಹ ದೇಹವುಳ್ಳ ಮಲ್ಹಣಿಯ ನುಣುಪಾದ ಬಾಸೆಯೆಂದೇ (ಹೊಕ್ಕಳ ಕೆಳಗಿನ ರೋಮರಾಜಿಯೆಂದೇ) ಆಸೆ ಪಟ್ಟು, ಹಂಬಲಗೊಳ್ಳುವನು ; ಪುಷ್ಪ ಸುಗಂಧವನ್ನು ಹೊತ್ತು ಎತ್ತಿಕೊಂಡು ಕುಸಿದು ಬರುತ್ತಿರುವ ಮಂದ ಮಾರುತವನ್ನು ಆ ಕುಸುಮ ಗಂಧಿಯಾದ ಮಲ್ಹಣಿಯ ಉಸಿರೆಂದೇ ಆಘ್ರಾಣಿಸುವನು ; ಗಿಳಿಯ ಮರಿಗಳ ಮಧುರವಾದ ಮಾತುಗಳನ್ನು ಆ ಮಧುರವಾಣಿಯಾದ ಮಲ್ಹಣಿಯ ಮಾತುಗಳೆಂದೇ ಕೇಳುವನು ; ಕೋಗಿಲೆಯ ಅವ್ಯಕ್ತ ಮಧುರವಾದ ಧ್ವನಿಯನ್ನು ಆ ಅವ್ಯಕ್ತ ಮಧುರ ಧ್ವನಿಯುಳ್ಳ ಮಲ್ಹಣಿಯ ತಾರಸ್ವರವೆಂದೇ ಕಿವಿಗೊಟ್ಟು ಕೇಳಿ ಯೋಚಿಸುವನು ; ಬಳ್ಳಿಗಳ ಮೇಲ್ಭಾಗದಲ್ಲಿ ಕುಳಿತುಕೊಂಡಿರುವ ನವಿಲನ್ನು ಆ ಹೆಚ್ಚಾದ ಕೂದಲಿನ ಸಮೂಹದಿಂದ ಕೂಡಿದ ಮಲ್ಹಣಿಯ ಜಡೆಮುಡಿಯೆಂದೇ ಊಹಿಸುವನು ; ಈ ರೀತಿ ಮನ್ಮಥ ಸಂಬಂಧದ ಭ್ರಮೆಯಿಂದ ಮುಂದುಗೆಟ್ಟು, ಮಲ್ಹಣಿಯಲ್ಲಿ ಅನುರಾಗಗೊಂಡು ಸಂಕಟಪಟ್ಟು, ಆಯಾಸಗೊಂಡು, ಭಯಪಟ್ಟು, ಬಾಡಿ, ಕಾಂತಿಹೀನವಾಗಿ, ಬೆಂಡಾಗಿ ಆನಂದನದಲ್ಲಿ ಇಮ್ಮಡಿಗೊಂಡ ವಿರಹತಾಪವನ್ನು ಕಳೆದುಕೊಳ್ಳಲು ಸಮರ್ಥನಾಗದೆ ಕಾಮಾಂಧ

ರಮಣೀದಿವ್ಯಾಂಗಚಂಚತ್ಕ್ರಬಳಸುರಭಿಯಂ ಕಾಣ್ಕೆಯೆಂಬಂತೆ ಕೊಂಡಾ
ದಮೆ ತನ್ನಿಶ್ವಾಸಸಂಪ್ರೇಷಿತಸಹಚರನೇಳ್ತರ್ಪವೋಲ್ಬಂದುದುದ್ಯ
ತ್ಪ್ರಮದಾತುಂಗಸ್ತನಾಲಿಂಗಿತಮೃಗಮದಕಾಶ್ಮೀರಕರ್ಪೂರಗಂಧಾಂ
ಧಿಮಮಾದ್ಯದ್ಭೃಂಗಝಂಕಾರರವಮುಖರಿತಂ ವೇಗದೂರಂ ಸಮೀರಂ ೨೯

ವ॥ ಅಂತು ಬಂದ ಮಂದಾನಿಲಂಗೆ ಮೆಯ್ಗೊಟ್ಟು ಮದನದಹನತಾಪತಪ್ತನಾ ಗಂಧವಹಂ ಬಂದ ಬಟ್ಟೆವಿಡಿದೆಯ್ತಂದು ಮಧ್ಯರಾತ್ರಿಯೊಳಾ ಮಲ್ಲಣೆಯ ಮಣಿಮಂದಿರದ ಮುಂದೆ ನಿಂದಿರ್ಪ ದುಮಾಗಳಾ ಮಲ್ಲಣೆ ಜನನಿಯ ನಿರ್ಬಂಧದಿನಾ ರಾಜಪುತ್ರನೊಳ್ವಿಷಮರತಿಯೊಳಿರ್ದು ಶಯ್ಯಾಗೃಹ ಮನೊಯ್ಯನೆ ಪೊಱಮಟ್ಟು ಗಂಡೂಷವಾರಿಯನಾ ಮಲ್ಲಣನ ಮೇಲುಗುಳಲೊಡನಮ ಪೊಂಪುಳಿ ವೋಗಿ ಕಣ್ದೆಱೆದು ಹಾ ಮಲ್ಲಣೆಯೆಂದು ಕಳವಳಿಸಿ ನುಡಿಯೆ ಕೇಳ್ದೆನ್ನ ಮನದನ್ನನ ದನಿಯಪ್ಪು ದೆಂದು ಬೆದಱಿ ಬೆಬ್ಬಳೆವೋಗಿ ಮಱುಗಿ ಸಾರ್ಕೆಗೆಯ್ದು[1] ನಿರೀಕ್ಷಿಪಾಗಳ್ನಿಜನೇತ್ರರುಚಿಯೊಡನೆ ಮಿಂಚು ಸಂಚಳಿಸೆ ಕಂಡು ಮಲ್ಲಣನೆಂದು ನಿರ್ಧರಿಸಿ ಕೈವಿಡಿದಪ್ಪಿ ವಿನಯೋಕ್ತಿಗಳಿನುಪಚರಿಸಿ ಮನ್ನಿಸಿ ಕೇಳೀ

ನಾಗಿ ಮುಂದುಗೆಟ್ಟು ಪುನಃ ಅಲ್ಲಿಂದ ಮೆಲ್ಲ ಮೆಲ್ಲನೆ ಬರುತ್ತಿರುವಾಗ ೨೯. ಉತ್ಕೃಷ್ಟ ರಾದ ಸುಂದರಿಯರ ದಪ್ಪನೆಯ ಮೊಲೆಗಳ ಮೇಲೆ ಲೇಪಿಸಲ್ಪಟ್ಟ ಕಸ್ತೂರಿ, ಕುಂಕುಮ ಕೇಸರಿ, ಪಚ್ಚಕರ್ಪೂರ, ಇವುಗಳ ಪರಿಮಳದಿಂದ ಮದಗೊಂಡು ಕಣ್ಣುಕುರುಡಾದ ದುಂಬಿಗಳ ಝೇಂಕಾರ ಶಬ್ದದಿಂದ ತುಂಬಿ ಹೋದ, ಮೆಲ್ಲ ಮೆಲ್ಲನೆ ಬೀಸುವ ಮಂದ ಮಾರುತವು ನಿಜವಾಗಿ ಆ ಸ್ತ್ರೀಯರಿಂದ ಕಳುಹಿಸಲ್ಪಟ್ಟ ಭೃತ್ಯನೇ ಬರುತ್ತಿರುವನೊ ಎಂಬಂತೆ, ಸ್ತ್ರೀಯರ ಶ್ರೇಷ್ಠವಾದ ಶರೀರದ ಅಧಿಕವಾಗಿ ಶೋಭಿಸುವ ಪರಿಮಳವಾದ ಕಾಣಿಕೆಯಾಗಿಯೋ ಎಂಬಂತೆ ಹೊತ್ತುಕೊಂಡು ಬಂದಿತು. ವ॥ ಹೀಗೆ ಬೀಸುತ್ತ ಬಂದ ಮಂದ ಮಾರುತಕ್ಕೆ ಮನ್ಮಥಾಗ್ನಿಯ ತಾಪದಿಂದ ಸಂತಾಪಗೊಂಡ ಮಲ್ಲಣನು ಮೈಗೊಟ್ಟು, ಆ ಮಂದ ಮಾರುತವು ಹರಿದು ಬರುತ್ತಿರುವ ಮಾರ್ಗವನ್ನೇ ಅನುಸರಿ ಸುತ್ತ ಬಂದು ಮಧ್ಯರಾತ್ರಿಯಲ್ಲಿ ಆ ಮಲ್ಲಣೆಯ ರತ್ನಮಯವಾದ ಮನೆಯ ಮುಂಭಾಗದಲ್ಲಿ ನಿಂತಿದ್ದನು. ತಾಯಿಯ ನಿರ್ಬಂಧದಿಂದ ರಾಜಪುತ್ರನ ಸಂಗಡ ವಿಷಮ ರತಿ ಸುಖದಲ್ಲಿದ್ದ ಮಲ್ಲಣೆಯು ಆ ಶಯ್ಯಾ ಗೃಹದಿಂದ ಮೆಲ್ಲ ಮೆಲ್ಲನೆ ಹೊರ ಹೊರಟು ಬಾಯಿಂದ ಮುಕ್ಕಳಿಸಿದ ನೀರನ್ನು ಮಲ್ಲಣನ ಮೇಲೆ ಉಗುಳಲು ಅವನು ಆ ಕೂಡಲೇ ರೋಮಾಂಚನಗೊಂಡವನಾಗಿ, ಕಣ್ಣನ್ನು ತೆರೆದು 'ಹಾ! ಮಲ್ಲಣೀ' ಎಂದು ಕಳವಳಗೊಂಡು ನುಡಿಯಲು ಮಲ್ಲಣೆಯು ಕೇಳಿ, 'ನನ್ನ ಮನದನ್ನ ನಾದ ಮಲ್ಲಣನ ಮಾತಾಗಿದೆಯಲ್ಲಾ!' ಎಂದು ಬೆದರಿ, ಬೆರಗುಗೊಂಡು, ಮರುಗಿ ಸಮೀಪಕ್ಕೆ ಬಂದು, ನೋಡುತ್ತಿರುವಾಗ ತನ್ನ ನೇತ್ರ ಕಾಂತಿಯೊಳಗೆ ಮಿಂಚು ಸಂಚಾರ ವಾದ ಹಾಗೆ ಕಂಡು ಮಲ್ಲಣನೆಂದು ನಿರ್ಧರಿಸಿ, ಅವನ ಕೈಹಿಡಿದು ಅಪ್ಪಿಕೊಂಡು, ಮೃದು ವಚನಗಳಾದ ಸಮಾಧಾನಗೊಳಿಸಿ, ಮನ್ನಣೆಗೊಳಿಸಿ ರತಿಕ್ರೀಡಾ ಗೃಹದ

---

[1] ಯ್ದು(ಮು)

ಗೃಹದ ಪಿಂದಣೇಕಾಂತಭವನಕ್ಕೆ ಕರೆದೊಯ್ದಲ್ಲಿ ಚಂಚತ್ಕಾಂಚನಮಂಚಾಗ್ರದ ಮೃದುಳ ಶಯ್ಯಾತಳ ದೊಳವನೊಡನೆ ಕುಳ್ಳಿರ್ದು ಬಳ್ಳಿವರಿವ ನೇಹದಿಂ ಸುಸಿಲನೆಸಗಲುಜ್ಜುಗಿಸೆ ವಿವೇಕನಿಧಿಯಾದ ಮಲ್ಹಣಂ ನೋಡಿ—

ಬೆಲೆಗೊಟ್ಟ ರಮಣನಿರ್ದಪ
ನೆಲೆ ನಿನಗಿಂದಬಲೆ ಮನೆಯೊಳದಱಿಂದವನಂ
ಕೆಲಸಾರ್ಚಿ ನಿನ್ನೊಡನೆ ರತಿ
ಯೊಲವಾಂಪುದು ಕೂಡದೆಂದನೇಂ ಶುಚಿತಮನೋ ೩೦

ಹರಿಸುರಪವಿಧುವಿಧಾತೃರ
ಮರುಳ್ಚುತನುಚಿತರತಕ್ಕೆ ಮೆಯ್ಯಾನಿಸಿದ
ತ್ಯುರುಭುಜಬಳಮದನನ ಕರ
ಶರಪಾತಕ್ಕೆ ಸೆಡೆದನಲ್ತು ಮಲ್ಹಣನಾಗಳ್ ೩೧

ವಿರಹಾನಳನಿಂ ತನ್ನಯ
ಹರಣಂ ನಿಂದುರಿವ ಸಮಯದೊಳಗಾದೊಡಮಾ
ತರುಣಿಯನುಚಿತ ರತಿಯನಾ
ದರಿಸಿದನಲ್ತವನತೀವಶುಚಿ ಶುಭಚರಿತಂ ೩೨

ವ॥ ಆಗಳಾ ಮಲ್ಹಣಿ ತನಗೊದವಿದ ಕಾಮಾತಿರೇಕಮಂನಾ ಮಲ್ಹಣನ ನಯೋಕ್ತಿ ಪದ್ಧತಿ ಯೊಳಳವಡಿಸಿ ವಿಷಾದದಿಂ ಸುಯ್ದು ನಿಜಮಾತೆಯಂ ಬಯ್ದು—

ಹಿಂಭಾಗದಲ್ಲಿರುವ ಏಕಾಂತ ಗೃಹಕ್ಕೆ ಕರೆದುಕೊಂಡು ಹೋಗಿ ಅಲ್ಲಿರುವ ಹೊಳೆಯು ತ್ತಿರುವ ಬಂಗಾರದ ಮಂಚದ ಮೇಲಿರುವ ಮೃದುವಾದ ಹಾಸಿಗೆಯ ಮೇಲೆ ಅವ ನೊಡನೆ ಕುಳಿತುಕೊಂಡು, ಕುಡಿಗೊಳ್ಳುತ್ತಿರುವ ಪ್ರೀತಿಯಿಂದ ಸುರತ ಕ್ರೀಡೆಗೆ ಪ್ರಯತ್ನಿಸುತ್ತಿರಲು ವಿವೇಕ ನಿಧಿಯಾದ ಮಲ್ಹಣನು ಕಂಡು ೩೦. 'ಎಲೈ ಅಬಲೆಯೇ ಈಗ ನಿನಗೆ ಹಣವನ್ನು ಕೊಟ್ಟಿರುವ ರಮಣನು ಮನೆಯಲ್ಲಿ ಇದ್ದಾನೆ. ಆದ್ದರಿಂದ ಅವನನ್ನು ಒಂದು ಕಡೆಗೆ ತಳ್ಳಿ, ನಿನ್ನೊಡನೆ ರತಿಕ್ರೀಡೆಗೆ ಮನಸ್ಸು ಮಾಡುವುದು ಕೂಡದು,' ಎಂದನು ಆಹಾ ! ಆ ಮಲ್ಹಣನು ಏನು ಪರಿಶುದ್ಧನೋ ! ೩೧, ವಿಷ್ಣು, ಇಂದ್ರ, ಚಂದ್ರ, ಬ್ರಹ್ಮರುಗಳನ್ನು ಮರುಳುಗೊಳಿಸಿ, ಅಯೋಗ್ಯವಾದ ರತಿಕ್ರೀಡೆಗೆ ಮೆಯ್ಗೊಡುವಂತೆ ಮಾಡುವ ಅತ್ಯಂತ ಬಾಹುಶಕ್ತಿಯುಳ್ಳ ಮನ್ಮಥನ ಹಸ್ತದಲ್ಲಿರುವ ಬಾಣದ ಹೊಡೆತಕ್ಕೆ ಮಲ್ಹಣನು ಆಗಲೇ ಹೆದರಿದವನಲ್ಲ. ೩೨. ಅತ್ಯಂತ ಶುಭ ಚರಿತ್ರೆಯುಳ್ಳ ಅವನು ತನ್ನ ಪ್ರಾಣವು ವಿರಹಾಗ್ನಿಯಿಂದ ನಿಂತು ಉರಿಯುತ್ತಿರುವ ಸಮಯದಲ್ಲಿಯಾದರೂ, ಆ ಕರುಣಿಯ ಅನುಚಿತವಾದ ರತಿಕೇಳಿಯನ್ನೂ ಆದರಿಸಿ ದವನಲ್ಲ. ವ॥ ಆಗ ಆ ಮಲ್ಹಣಿಯು ತನಗುಂಟಾದ ಕಾಮಾತಿರೇಕವನ್ನು ಆ ಮಲ್ಹಣನ ನೀತಿಯುತವಾದ ಮಾರ್ಗದಲ್ಲಿ ಸೇರಿಸಿ, ವಿಷಾದದಿಂದ ನಿಟ್ಟುಸಿರುಬಿಟ್ಟು ತನ್ನ ತಾಯಿ

ನಳಿನಮರಂದಮಂ ಸವಿವ ತುಂಬಿಗೆ ಸೇವ್ಯಮೆ ಕರ್ದಮಾಂಬು ನಿ
ರ್ಮಳಸುಧೆಗೊಂಬ ಹಂಸೆಗಿನಿದಪ್ಪುದೆಯುಂಬಿಲದಂಬು ಚೂತಸ
ತ್ಫಳಮನೊಱಲ್ದು ಪೀರ್ವ ಗಿಳಿಗಿಂಪೆನಿಸಿರ್ಪುದೆಯಿಟ್ಟಿವಣ್ಮಹೋ
ಜ್ವಳ ಗುಣಧಾಮ ನಿನ್ನ ನೆರೆದಳ್ಗೆನಗನ್ಯರತಂ ಮನೋಜ್ಞಮೇ[1] ೩೩

ಮಾತೆಯ ಮಾತಿನ ಮಾಲೆಯ
ಬೂತಾಟದ ಬಲ್ತೊಡಂಕನಳಿದಾಮಿರ್ವರ್
ಪ್ರೀತಿ ಮಿಗೆ ಕೂಡಿ ಬಾಳ್ವೊಡ
ಮೇತೆಱದಿಂ ಶಂಭುಕೃಪೆಯೆ ಕಾರಣಮಲ್ತೇ ೩೪

ಇದನಱಿದೀಶ್ವರನಂ ನೀಂ
ಪದಪಿಂ ನುತಿಗೆಯ್ದು ಬೇಗಮರ್ಚಿಪುದೊಲವಿಂ
ಮದನಾರಾತಿ ಮುದಿಪ್ಪಮ
ನೊದವಿಸಿ ಮದನಾಸ್ತ್ರಬಾಧೆಯುಂ ಪರಿಹರಿಪಂ ೩೫

ಕನ್ನಡಿಯ ಮೇಲಣುರ್ದು ಕ
ರನ್ನೆಲಕುರುಳ್ವನಿತು ಕಾಲಮಾದೊಡಮೊಲವಿಂ
ಸನ್ನುತ ಸಮಾಧಿವೆತ್ತು ಸ
ಮುನ್ನತಮತಿ ನುತಿಸು ಶಂಕರಂ ನಿನಗೊಲ್ವಂ ೩೬

ಯನ್ನು ಬೈದು ೩೩. 'ಅತ್ಯಂತ ಉಜ್ವಳವಾದ ಸದ್ಗುಣಗಳಿಗೆ ಆಶ್ರಯನಾದ ಮನ್ಮಥನೇ, ಕಮಲದ ಮಕರಂದವನ್ನುಣ್ಣುವ ದುಂಬಿಗೆ ಕೆಸರು ನೀರು ಸೇವಿಸುವುದು ಯೋಗ್ಯವೇ ? ನಿರ್ಮಲವಾದ ಹಾಲನ್ನು ಕುಡಿಯುವ ಹಂಸ ಪಕ್ಷಿಗೆ ಆಕ್ಕಿಯನ್ನು ತೊಳೆದ ನೀರು ರುಚಿಸೀತೆ ? ಒಳ್ಳೆಯ ಮಾವಿನ ಹಣ್ಣಿನ ರಸವನ್ನು ಪ್ರೀತಿಯಿಂದ ಹೀರುವ ಗಿಳಿಗೆ (ಕಹಿಯಾದ) ಇಟ್ಟಿಯ ಹಣ್ಣು ರುಚಿಯಾದೀತೇ ? ನಿನ್ನನ್ನು ನೆರೆದ ನನಗೆ ಇನ್ನೊಬ್ಬನೊಡನೆ ರತಿಕ್ರೀಡೆಯು ಸೊಗಸಾದೀತೇ ?' ೩೪. 'ನಾವೀರ್ವರೂ ನನ್ನ ತಾಯಿಯ ಮಾತುಗಳ ಸಮೂಹದ ಭಂಡತನದ ಬಲವಾದ ಪ್ರತಿಬಂಧಕವನ್ನು ಬದಿಗೊತ್ತಿ ಅತ್ಯಂತ ಪ್ರೀತಿಯಿಂದ ಕೂಡಿ, ಬದುಕಬೇಕಾದರೆ ಯಾವ ರೀತಿಯಿಂದಲಾದರೂ ಶಂಭು ಕೃಪೆಯೇ ಕಾರಣವಲ್ಲವೇ ?' ೩೫. 'ನೀನು ಇದನ್ನು ತಿಳಿದು, ಪ್ರೀತಿಯಿಂದ ಈಶ್ವರನನ್ನು ನೆನೆದು ಆತನನ್ನು ಬೇಗ ಪ್ರೀತಿಯಿಂದ ಮೆಚ್ಚಿಸಬೇಕು. ಮನ್ಮಥ ವೈರಿಯಾದ ಶಿವನು ನನ್ನ ಅಭಿಲಾಷೆಯನ್ನು ನೆರವೇರಿಸಿ, ಮನ್ಮಥನ ಬಾಣದ ಪೀಡೆಯನ್ನು ಪರಿಹರಿಸುವನು.' ೩೬. 'ಅತಿ ಶ್ರೇಷ್ಠಮತಿಯುಳ್ಳವನೇ, ಕನ್ನಡಿಯ ಮೇಲಿನ ಉದ್ದಿನ ಕಾಳು ನೆಲಕ್ಕೆ ಉರುಳಿ ಬೀಳುವಷ್ಟು ಕಾಲವಾದರೂ, ಪ್ರೀತಿಯಿಂದ ಶ್ಲಾಘ್ಯವಾದ ಸಮಾಧಿ ಸ್ಥಿತಿಯನ್ನು ಹೊಂದಿ, ಸ್ತೋತ್ರ ಮಾಡು, ಶಂಕರನು ನಿನಗೆ

[1] ಮೋ(ಮು)

ಅದಱಿಂದೆ ಭುಕ್ತಿ ಮುಕ್ತಿಗ
ಳೊದವುಗುಮೆಮಗೆಂದ ರಮಣಿಯೊರೆಗೇಳ್ದು ಮನಂ
ಮುದಮಾಳ್ದಿರೆ ತಾಂ ಮಱುದಿನ
ದುದಯದೊಳವಳೊಡನೆ ಲಿಂಗಗೃಹಕೇಳ್ತಂದಂ ೩೭

ವ॥ ಅಂತೇಳ್ತಂದಾ ಪೊಳಲ ವಿಜಯೇಶ್ವರನೆಂಬ ಲಿಂಗದ ಸಮಕ್ಷದೊಳಾ ಮಲ್ಹಣಂ ನಿಂದು ಮಲ್ಹಣಿಯನಾ ಲಿಂಗದ ಪಿಂಗಡೆ ನಿಲವೇಳ್ವುದುಮಾ ವಿಜಯೇಶ್ವರನ ಪಿಂದೆ ಸೌಂದರ್ಯವತಿ ನಿಂದಿರಲೊಡನಾ ಮನೋರಮೆಯನಮಂದ ರಾಗರಸಭರಿತಕಟಾಕ್ಷದಿ ನವಲೋಕಿಸುತ್ತುಮನಿತಱೊಳಾ ರಮಣಿಯಾಲಿಂಗದ ಮಱೆಯೊಳೊಯ್ಯನೊಯ್ಯನೆ ಮೆಯ್ಗರೆವಾಗಳ್ಪರಿವಿಡಿಯಿನವಳ ಮಂಜುಳಾ ಕೃತಿಯನನಂತರಂ ಕಚನಿಚಯಮನಲ್ಲಿಂ ಬಳಿಯಿಂ ತುಱುಂಬಿದಲರಪರಿಮಳಕ್ಕೆಳಸಿ ತಿರುಗುವಳಿಯನು ಪಲಕ್ಷಿಸಿ ಕಾಂತಾಕಚಪ್ರಚಯ ಪುಷ್ಪಸುಗಂಧಿಗಂಧಲುಬ್ಧ ಭ್ರಮದ್ಭ್ರಮರೋಕ್ತಿಮುಖರಮುಖನಪ್ಪ ನಿತಱೊಳಾಕೆ ಮೆಯ್ಗರೆಯೆ ತತ್ಕಾಂತೆಯೊಳಿಟ್ಟ ಕಟ್ಟಳ್ಕಱಿಂ ಭೋಂಕನಾರಾಧ್ಯತಾನುಸಂಧಾನಂ

ಒಲಿಯುವನು.' ೩೭. 'ಅದರಿಂದ ಭೋಗವೂ, ಮುಕ್ತಿಯೂ ನಮಗೆ ದೊರೆಯುತ್ತವೆ. ಎಂದು ಹೇಳಿದ ಆ ರಮಣಿಯ ಮಲ್ಹಣಿ ಮಾತುಗಳನ್ನು ಕೇಳಿ, ಮನಸ್ಸು ಸಂತೋಷ ಗೊಂಡಿರಲು, ಅವನು ಮರುದಿನವ ಉದಯ ಕಾಲದಲ್ಲಿ ಅವಳೊಡನೆ ಶಿವಾಲಯಕ್ಕೆ ಬಂದು ವ॥ ಈ ರೀತಿ ಆ ಪಟ್ಟಣದಲ್ಲಿರುವ 'ವಿಜಯೇಶ್ವರ' ನೆಂಬ ಹೆಸರಿನ ಶಿವಾ ಲಯಕ್ಕೆ ಬಂದು, ಲಿಂಗದ ಮುಂಭಾಗದಲ್ಲಿ ಮಲ್ಹಣನು ನಿಂತುಕೊಂಡು, ಮಲ್ಹಣಿಯನ್ನು ಲಿಂಗದ ಹಿಂದುಗಡೆಯಲ್ಲಿ ನಿಲ್ಲಲು ತಿಳಿಸಲಾಗಿ, ಆ ಸುಂದರಿಯು ಆ ವಿಜಯೇಶ್ವರ ಲಿಂಗದ ಹಿಂಭಾಗವಲ್ಲಿ ನಿಂತಳು. ಕೂಡಲೇ ಆ ಮನೋರಮೆಯನ್ನು ಅತ್ಯಧಿಕವಾದ ಅನುರಾಗದಿಂದ ತುಂಬಿದ ಕಣ್ಣುಗಳ ಕೊನೆಯಿಂದ ನೋಡತೊಡಗಿದನು, ಅಷ್ಟರಲ್ಲಿ ಆ ರಮಣಿಯು ಲಿಂಗದ ಮರೆಯಲ್ಲಿ ಮೆಲ್ಲ ಮೆಲ್ಲನೆ ಮರೆಗೊಳ್ಳುತ್ತಿರುವ ಕಾಲದಲ್ಲಿ, ಕ್ರಮ ಕ್ರಮವಾಗಿ ಅವಳ ಮನೋಹರಾಕಾರವನ್ನು ಅನಂತರ ತಲೆಗೂದಲು ಸಮೂಹ ವನ್ನು ಅಲ್ಲಿಂದ ಮುಂದೆ ತುಂಬಿಕೊಂಡಿದ್ದ ಹೂಗಳ ಸುಗಂಧಕ್ಕೆ, ಬಯಸಿ ಸುತ್ತುತ್ತಿರುವ ದುಂಬಿಗಳನ್ನೂ, ಗುರಿಮಾಡಿಕೊಂಡು, "ಕಾಂತಾಕಚ ಪ್ರಚಯ ಪುಷ್ಪ ಸುಗಂಧಿಲುಬ್ಧ ಭ್ರಮದ್ಭ್ರಮರೋಕ್ತಿ ಮುಖದ ಮುಖನಪ್ಪ" (ಪ್ರಿಯೆಯೆನಿಸಿದವಳ ಕೇಶ ಸಮೂಹ ದಲ್ಲಿರುವ ಹೂವಿನ ಪರಿಮಳಯುಕ್ತವಾದ ಗಂಧಕ್ಕೆ ಆಸೆಗೊಂಡ ಕಾರಣದಿಂದ ಸುತ್ತುತ್ತಿ ರುವ ಭ್ರಮರಗಳ ಧ್ವನಿಯಿಂದ ಶಬ್ದಾಯ ಮಾನವಾದ ಬಾಯುಳ್ಳವನು) ಎನ್ನುವಷ್ಟ ರಲ್ಲಿ ಅವಳು ಪೂರ್ಣವಾಗಿ ಅಡಗಿಕೊಳ್ಳಲು ಆ ಕಾಂತೆಯಲ್ಲಿಟ್ಟ ಅತ್ಯಂತಾನುರಾಗವನ್ನು ಭೋಂಕನೆ ಪೂಜಾನು ಸಂಧಾನವನ್ನು ಶಿವನಲ್ಲಿ ಮೇಳಗೊಳಿಸಿ, ಚಿತ್ತೈಕಾಗ್ರತೆ ಯಿಂದ ಮೊದಲು ಹೇಳಿದ "ಕಾಂತಾಕಚಪ್ರಚಯ..."ವೆಂಬ ಮಾತಿನ ಅರ್ಥವನ್ನೇ ಅನುಸರಿಸಿ—"ಗಂಧರ್ವ ಯಕ್ಷಸುರಸಿದ್ಧ ಕಿರೀಟ ಕೋಟಿ ಸಂಘಟ್ಟ ಘೃಷ್ಟ ಚರಣಾಯ ನಮಃ ಶಿವಾಯ" (ಗಂಧರ್ವ, ಯಕ್ಷ, ಸುರ, ಸಿದ್ಧ ಇವರುಗಳ ಅನೇಕ ಕಿರೀಟಗಳ

ಏಗೆ ಶಿವನೊಳ್ಮೇಳಿಸಿ ಚಿತ್ತೈಕಾಗ್ರತೆಯಿಂ ಪೂರ್ವೋಕ್ತ ವಾಕ್ಯಾರ್ಥಂಬಿಡಿದು ಗಂಧರ್ವಯಕ್ಷ ಸುರಸಿದ್ಧಕಿರೀಟಕೋಟಿಸಂಘಟ್ಟಘೃಷ್ಟಚರಣಾಯ ನಮಃ ಶಿವಾಯೇತ್ಯಾದಿ ಸರಸತರ ಸದರ್ಥ ಷಟ್‌ತ್ರಿಂಶತ್ಪದ್ಯಂಗಳಿಂ ಕವಿರಾಜಮೌಲಿಮಣಿ ರಾಜಮೌಲಿಮಣಿಯಂ ಪೊಗೞ್ವನಮಲ್ಲಿ—

ಎಳೆವೆೞ್ ದೇವಗಂಗೆ ಮಿಸುಪಗ್ಗದ ಕೆಂಜೆಡೆ ನಾಗಕುಂಡಲಂ
ತೊಳಪ ದಿನೇಶಚಂದ್ರಶಿಖಿನೇತ್ರವಿರಾಜಿತವಕ್ತ್ರಮಂಡಲಂ
ಗಳದ ವಿಷಂ ಗಜಾಜಿನಪಟಂ ಮೃಗಶೂಲವರಾಭಯಂಗಳಂ
ತಳೆದ ಕರಂ ವಿರಾಜಿಸೆ ಶಿವಂ ನಿಜರೂಪನವಂಗೆ ತೋಱದಂ ೩೮

ವ॥ ಅಂತು ತೋಱ ವಿಜಯೇಶ್ವರಂ ನಿಜಪ್ರಸಾದಮಂ ಕರುಣಿಸಿ ಸುರಿವ ಸುರಕುಜ ಸುಮನೋವೃಷ್ಟಿಯೊಳ್ಮೊರೆವ ದಿವ್ಯಾನಕಧ್ವನಿಯೊಳ್ಮಣಿಪುಷ್ಪಕಮಂ ಬರಿಸಿ ಮಲ್ಹಣನಂ ಮಲ್ಹಣಿಯುಮಾಕೆಯ ಕೈಗಿಳಿಯುಮವಳ ಜನನಿಯುಮುಮನದಱೊಳ್ಕುಳ್ಳಿರಿಸಿ ಪಿರಿಯ ಸಂಭ್ರಮದಿಂ ನಿಜಲೋಕಕ್ಕೆ ಕಳುಪಿ ಪರಮ ಸುಖದೊಳಿಸಿರಿದನದು ಕಾರ[1]ಣದಿಂ[1]—

ಸುವಿವೇಕಮಾಳ್ದರಮಣಿಯ
ಸವಿನುಡಿಯಂ ಕೇಳ್ದು ಮಲ್ಹಣಂ ಪಡೆಯನೆ ಪೇ

ಸಮೂಹಗಳಿಂದ ಕೂಡಿ ಪ್ರಕಾಶಮಾನವಾದ ಪಾದಗಳುಳ್ಳ ಶಿವನಿಗೆ ನಮಸ್ಕಾರಗಳು) ಇದೇ ಮೊದಲಾಗುವ ಅತ್ಯಂತ ರಸವಿಶಿಷ್ಟಗಳಾದ ಒಳ್ಳೆಯ ಅರ್ಥವ್ಯಾಪ್ತಿಯುಳ್ಳ ಮೂವತ್ತಾರು ಪದ್ಯಗಳಿಂದ ಕವಿ ಶ್ರೇಷ್ಠರಲ್ಲಿ ಕಿರೀಟ ರತ್ನ ಪ್ರಾಯನಾದ ಮಲ್ಹಣನು ಚಂದ್ರನೇ ತಲೆಯ ರತ್ನವಾಗಿ ಉಳ್ಳ ಪರಮೇಶ್ವರನನ್ನು ಹೊಗಳಿದನು. ಆಗ ಅಲ್ಲಿ ೩೮. ಬಾಲಚಂದ್ರ, ದೇವಾಗಂಗಾನದಿ ಇವುಗಳಿಂದ ಶೋಭಿಸುವ, ಶ್ರೇಷ್ಠವಾದ ಕೆಂಜೆಡೆ, ಸರ್ಪಕುಂಡಲ, ಪ್ರಕಾಶಿಸುವ ಸೂರ್ಯ, ಚಂದ್ರ, ಅಗ್ನಿನೇತ್ರ ಇವುಗಳಿಂದ ಶೋಭಿಸುವ ಮುಖ ಮಂಡಲ, ನೀಲಕಂಠ, ಉಟ್ಟಗಜಚರ್ಮ, ಹಿಡಿದಜಿಂಕೆ, ತ್ರಿಶೂಲ, ಶ್ರೇಷ್ಠ ಅಭಯಹಸ್ತಗಳನ್ನು ಹೊಂದಿದ ಶಿವನು ಅತ್ಯಂತ ವಿರಾಜಮಾನನಾಗಿ ಆ ಮಲ್ಹಣನಿಗೆ ನಿಜರೂಪದೋರಿದನು. ವ॥ ಆ ರೀತಿ ನಿಜರೂಪವನ್ನು ತೋರಿಸಿ, ವಿಜಯೇಶ್ವರನು ತನ್ನ ಅನುಗ್ರಹವನ್ನು ಅವನಿಗೆ ಕರುಣಿಸಿ. ಕಲ್ಪವೃಕ್ಷದ ಹೂಮಳೆ ಯೊಡನೆ, ಶಬ್ದ ಮಾಡುತ್ತಿರುವ ದೇವ ದುಂದುಭಿಯ ಶಬ್ದದೊಡನೆ ರತ್ನ ಖಚಿತವಾದ ಪುಷ್ಪಕ ವಿಮಾನವನ್ನು ಬರಮಾಡಿಕೊಂಡು, ಮಲ್ಹಣ, ಮಲ್ಹಣಿ ಮತ್ತು ಅವಳ ಕೈಯ ಅರಗಿಳಿಯನ್ನು ಅವಳ ತಾಯಿಯನ್ನು ಅದರಲ್ಲಿ ಕುಳ್ಳಿರಿಸಿಕೊಂಡು, ಅತೀವ ಸಂಭ್ರಮ ದಿಂದ ಕೈಲಾಸಕ್ಕೆ ಕಳುಹಿಸಿ, ಪರಮಸುಖದಲ್ಲಿ ಇರಿಸಿದನು. ಆದ ಕಾರಣದಿಂದ— ೩೯. ಸುವಿವೇಕದಿಂದ ಕೂಡಿದ ಸುಂದರಿಯರ ಸವಿನುಡಿಯನ್ನು ಕೇಳಿ, ಮಲ್ಹಣನು

[1] ಣಂ(ಅ)

ಳ್ಯವಪದಮನಾಪ್ತರಮಣೀ
ನಿವಹದ ನುಡಿಗೇಳ್ದವರ್ಗೆ ಕೊಱತೆಗಳೊಳವೇ ೩೯

ವ॥ ಅದಲ್ಲದೆಯುಮಿನ್ನು ನಿಜಸತಿಯ ಕಟಕಿವಾತಂ ಹಿತೋಕ್ತಿಗೆತ್ತು ನೆಗಳ್ದ ಶರಣನ ಚರಿತ್ರಮಂ ಕೇಳ್ವುದೆಂತೆನೆ—

ಉರಗೇಂದ್ರಪ್ರಮದಾವಿಹಾರಸರಮೆಂಬಂತಿರ್ದಗಾಧಾಂಬು ಸ
ತ್ಪರಿಖಾಚಕ್ರದಿನಭ್ರಚುಂಬಿ ಕನಕಪ್ರಾಕಾರದಿಂ ರತ್ನಗೋ
ಪುರಲಿಂಗಾಲಯಹರ್ಮ್ಯಚಾರುತರಕೇಳೀಗೇಹಸಂದೋಹದಿಂ
ಕರಮೊಪ್ಪಿರ್ದುದು ಪಾಲಗೂರ್ಜರಪುರಂ ಭೂಲೋಕ ಶೋಭಾಕರಂ ೪೦

ಕವಿಗಳ ಕಾವ್ಯಶಿಕ್ಷಕರ ವೀರರ ಧೀರರ ಸತ್ಪುರಾಣಸು
ಶ್ರವಣಧುರೀಣರಾಗಮವಿದರ್ಕಳ ಶಂಭುಪದಾಂಬುಜಾರ್ಚನೋ
ತ್ಸವರ ಕಳಾವಿಚಕ್ಷಣರ ಮಂತ್ರಿಗಳಾಪ್ತರ ರಾಜಪುತ್ರರೊ
ಪ್ಪುವ ಗಜವಾಜಿವಾಹಕರ ಮಂತಣವೊಪ್ಪುಗುಮಲ್ಲಿ ಸಂತತಂ ೪೧

ಘುಸೃಣಂ ಕತ್ತುರಿ ಕರ್ಪುರಂ ಮಲಯಜಂ ಪೂಮಾಲೆ ತಾಂಬೂಲಿಕಾ
ವಿಸರಂ ರತ್ನಚಯಂ ನವೀನಮೃದುವಾಸಶ್ರೇಣಿ ದಿವ್ಯೌಷಧಿ

ಶಿವಪರವನ್ನು ಪಡೆಯಲ್ಲಿಲ್ಲವೇ ? ಹೇಳು, ಹಿತರಾದ ಸ್ತ್ರೀಯರ ಗುಂಪಿನ ನುಡಿಯನ್ನು ಕೇಳಿದವರಿಗೆ ಕೊರತೆಯಾಗುವುದುಂಟೆ ? **ಪಾಲ ಗುರ್ಜರನ ಕಥೆ** ವ॥ ಇದಲ್ಲದೆ ಇನ್ನು ತನ್ನ ಸತಿಯ ಮೂದಲಿಕೆಯ ಮಾತುಗಳನ್ನೇ ಹಿತೋಕ್ತಿಗಳೆಂದು ಭಾವಿಸಿದ ಪ್ರಸಿದ್ಧನಾದ ಶರಣನ ಚರಿತ್ರೆಯನ್ನು ಕೇಳು ; ಎಂತೆಂದರೆ :— ೪೦. ನಾಗಕನ್ನಿಕೆಯರು ಕ್ರೀಡಿಸುವ ಸರೋವರವೋ ಎಂಬಂತಿರುವ ಆಳವಾದ ನೀರಿನಿಂದ ತುಂಬಿದ ಅಗಳುಳ್ಳದ್ದೂ, ಆಕಾಶವನ್ನು ಸೋಂಕುತ್ತಿರುವ ಚಿನ್ನದ ಕೋಟೆಯ ಗೋಡೆಗಳುಳ್ಳದ್ದೂ, ರತ್ನಖಚಿತವಾದ ಗೋಪುರಗಳುಳ್ಳ ಶಿವಾಲಯ ಮತ್ತು ಉಪ್ಪರಿಗೆಗಳುಳ್ಳ ಮನೋಹರವಾದ ಕ್ರೀಡಾಗೃಹಗಳ ಸಮೂಹಗಳುಳ್ಳ, ಭೂಲೋಕದಲ್ಲಿ ಶೋಭಾವಹವಾದ 'ಪಾಲಗುರ್ಜರಪುರ' ಎಂಬುದು ವಿಶೇಷವಾಗಿ ಪ್ರಕಾಶಿಸುತ್ತಿತ್ತು. ೪೧. ಅದು ಕವಿಗಳಿಂದಲೂ, ಕಾವ್ಯಪಾಠವನ್ನು ಹೇಳುವವರಿಂದಲೂ, ವೀರಧೀರರಿಂದಲೂ, ಪುರಾಣಶ್ರವಣಮಾಡುವುದರಲ್ಲಿ ಸಮರ್ಥರಾದವರಿಂದಲೂ, ಆಗಮಜ್ಞಾನವನ್ನು ಬಲ್ಲವರಿಂದಲೂ, ಶಿವನ ಪಾದಕಮಲವನ್ನು ಪೂಜೆಮಾಡುವುದರಲ್ಲಿ ಆಸಕ್ತರಾದವರಿಂದಲೂ, ಸಕಲವಿದ್ಯೆಗಳಲ್ಲಿ ಪ್ರೌಢರಾದ ಮಂತ್ರಿ, ಆಪ್ತರು, ರಾಜಪುತ್ರರುಗಳಿಂದಲೂ, ಆನೆ ಕುದರೆಗಳನ್ನೇರುವವರ ಸಮೂಹದಿಂದಲೂ ಸದಾ ಒಪ್ಪಿತ್ತು. ೪೨. ಪೂರ್ವಪಶ್ಚಿಮ, ದಕ್ಷಿಣೋತ್ತರ ಬೀದಿಗಳಿಂದ ಪ್ರಕಾಶಿಸುವ, ಶುಭಕರವಾದ ಧ್ವನಿಯಿಂದ ಮನೋಹರವಾದ ಆ ಪಟ್ಟಣವು–ಕುಂಕುಮಕೇಸರಿ, ಕಸ್ತೂರಿ, ಕರ್ಪೂರ, ಶ್ರೀಗಂಧ, ಪೂಮಾಲೆ, ತಾಂಬೂಲಿಕಾ ಸಮೂಹ, ರತ್ನಸಮೂಹ, ನೂತನ ವಸ್ತ್ರಗಳ

ಪ್ರಸರಂ ತಳ್ತಿಡಿದಿರ್ಪ ಸದ್ವಿಪಣಿಯಿಂ ಸೂರ್ಯೇಂದು ವೀಥೀಸಮು
ಲ್ಲಸಿತಂ ಮಂಗಳತೂರ್ಯರಾಗರುಚಿರಂ ಕಣ್ಗೊಪ್ಪುಗುಂ ತತ್ಪುರಂ ೪೨

ಆ ಪುರದಧಿಪತಿ ವಿಪುಳಧ
ರಾಪತಿಮಣಿಮೌಳಿಕಿರಣಪರಿವೃತಚರಣಂ
ಗೋಪಧ್ವಜಪದಭಜಕನಿ
ಳಾಪಾಲಂ ಪಾಲಗೂರ್ಜರ ಕ್ಷಿತಿನಾಥಂ ೪೩

ಅಗಣಿತ ಜಂಗಮ ಪ್ರಕರಪಾವನಪಾದಸರೋಜಷಟ್ಪದಂ
ಸುಗುಣಕಲಾಪನಾತ್ಮಸಕಳೇಷ್ಟಸುಖಾರ್ಪಣತೋಷಿತೇಶ್ವರಂ
ಜಗದಧಿರಕ್ಷಣಪ್ರಥಿತನಂಚಿತವೃತ್ತನರಾತಿದರ್ಪಪ
ನ್ನಗಖಗರಾಜನಾಜಿವಿಜಯಂ ಶಿವತತ್ವಕಳಾವಿಚಕ್ಷಣಂ ೪೪

ಆ ನೃಪನ ಸುಪ್ರತಾಪನ
ವೀನಾರ್ಕಪ್ರಭೆಯ ಮುಂದೆ ಮಿಂಬುಳುವಿನವೋ
ಲ್ಭಾನುವೆಸೆದಿರ್ಕುಮಲ್ಲದೊ
ಡೇನದು ಖದ್ಯೋತಮೆಂಬ ಪೆಸರಾಂತಪುದೇ ೪೫

ಘನಶೃಂಗಾರವಿಳಾಸಧಾರಿಣೀ ಕಳಾಕಲ್ಲೋಲಮಾಲಾತರಂ
ಗಿಣಿ ಸಾಹಿತ್ಯರಸಪ್ರಕಾಶಿನಿ ಲಸತ್ತಾರುಣ್ಯಸೌಭಾಗ್ಯವಾ

ಶ್ರೇಣಿ, ಶ್ರೇಷ್ಠವಾದ ಔಷಧಿಗಳ ಸಮೂಹ–ಇವೆಲ್ಲವುಗಳಿಂದ ಸೇರಿಸುವ ಶ್ರೇಷ್ಠ ಅಂಗಡಿಗಳ ಬೀದಿಯಿಂದ ಕಣ್ಣಿಗೆ ಒಪ್ಪುವಂತಿತ್ತು. ೪೩–೪೪. ಅನೇಕ ರಾಜರ ರತ್ನಖಚಿತವಾದ ಕಿರೀಟಗಳ ಕಾಂತಿಯಿಂದ ಪ್ರಕಾಶಿಸುವ ಚರಣವುಳ್ಳವನೂ, ವೃಷಭಧ್ವಜನಾದ ಶಿವನ ಪಾದಪೂಜಾಸಕ್ತನಾದ ಆ ಭೂಮಿಯನ್ನು ಸಂರಕ್ಷಿಸುತ್ತ 'ಪಾಲಗುರ್ಜರ'ನೆಂಬ ಹೆಸರಿನ ದೊರೆಯು, ಅಸಂಖ್ಯಾತ ಜಂಗಮಮೂರ್ತಿಗಳ ಸಮೂಹದ ಪರಿಶುದ್ಧವಾದ ಚರಣಕಮಲಗಳಲ್ಲಿ ಭೃಂಗ ಸ್ವರೂಪನಾಗಿ ಶೋಭಿಸುವವನು ; ಸದ್ಗುಣ ಸಮೂಹ ವಿಶಿಷ್ಟನು ; ತನಗೆ ಇಷ್ಟವಾದ ಸಕಲ ಸೌಭಾಗ್ಯವನ್ನು ಈಶ್ವರನಿಗರ್ಪಿಸಿ ಅವನನ್ನು ಸಂತೋಷಗೊಳಿಸಿದ್ದನು. ಜಗತ್ತನ್ನು (ರಾಜ್ಯವನ್ನು) ಸಂರಕ್ಷಿಸುವುದರಲ್ಲಿ ಪ್ರಸಿದ್ಧನು; ಪೂಜ್ಯವಾದ ಚರಿತ್ರೆಯುಳ್ಳವನು ; ಶತ್ರುಗಳ ಅಹಂಕಾರವೆಂಬ ಸರ್ಪಕ್ಕೆ ಗರುಡನು ; ಯುದ್ಧದಲ್ಲಿ ಜಯಶೀಲನು ; ಪರತತ್ತ್ವವಿಚಾರ ವಿದ್ಯೆಯಲ್ಲಿ ಕುಶಲನು–ಎನಿಸಿದ್ದನು. ೪೫. ಆ ಮಹಾರಾಜನ ಶ್ರೇಷ್ಠ ಪರಾಕ್ರಮವೆಂಬ ನೂತನ ಸೂರ್ಯಕಾಂತಿಯ ಮುಂದೆ ಸೂರ್ಯನು ಮಿಂಚುಹುಳುವಿದ್ದಹಾಗೆ ಶೋಭಿಸುತ್ತಿತ್ತು ; ಹಾಗಲ್ಲದಿದ್ದರೆ, ಆ ಸೂರ್ಯಮಂಡಲವು 'ಖದ್ಯೋತ' ಎಂದರೆ ಮಿಂಚಿನಹುಳು ಎಂಬ ಹೆಸರನ್ನು ಹೊಂದುತ್ತಿತ್ತೇ ? (ಖದ್ಯೋತ–ಮಿಂಚುಹುಳು ; ಅಂತರಿಕ್ಷದ ಪ್ರಕಾಶ ; ಸೂರ್ಯ) ೪೬. ಶ್ರೇಷ್ಠವಾದ ಶೃಂಗಾರ ವಿಲಾಸವನ್ನು ಧರಿಸಿದವಳೂ, ವಿದ್ಯೆಯೆಂಬ ತೆರೆಗಳ ಮಾಲೆಯಿಂದ ಕೂಡಿದ ನದಿಯಾದವಳೂ, ಸಾಹಿತ್ಯರಸಗಳನ್ನು ಪ್ರಕಾಶಪಡಿಸುವವಳೂ (ಕಾವ್ಯರಸಾಸ್ವಾದನ

ಹಿನಿ ಸೌಶೀಲ್ಯಪಥಪ್ರಚಾರಿಣಿ ಮಹಾಸೌಂದರ್ಯಮಾಧುರ್ಯಮೋ
ಹಿನಿ ತದ್ಭೂಭುಜಧರ್ಮಗೇಹಿನಿ ಸದಾಕಲ್ಯಾಣಿ ಕಣ್ಗೊಪ್ಪಿದಳ್ ೪೬

ಆ ಕಾಂತೆಯೊಡನೆ ಕಂತುಕ
ಳಾಕೌಶಲಸುಖಮನೊಂದುತಂ ಮೆಱೆದಿರ್ದಂ
ಭೂಕಾಂತಂ ತನಗೊದವಿದ
ನೇಕ ಸುಖಾನೀಕಮಂ ಶಿವಂಗರ್ಪಿಸುತಂ ೪೭

ಆವಾವ ಕೇಳಿಯೊಳೆ ನಿಜ
ಭಾವಂ ಭವಹರನನಪ್ಪಿ ಬಿಡದಿರ್ಪುದಱಿಂ
ಭೂವರನ ಬಿನದಮೆಲ್ಲಮು
ಮಾವರನಡಿದಳಿರ ಪೂಜೆಯೆನೆ ಸಂದಿರ್ಕುಂ ೪೮

ಎರವಿಲ್ಲದ ಪೊರೆಯಿಲ್ಲದ
ನಿರುಪಮ ನಿಜಭಕ್ತಿಯೊಲವನೀಕ್ಷಿಸುತಭವಂ
ನರನಾಥನ ತನುಜೀವನ
ಕರಣಂಗಳೊಳೊಲ್ದು ಬೆರಸಿ ಬೆಚ್ಚಂತಿರ್ಪಂ ೪೯

ವ॥ ಆ ರಾಜೇಂದ್ರನೊರ್ಮೆ ನಿಜಮನೋರಮೆಯೊಡನೆ ಮಣಿಮಯ ಪ್ರಾಸಾದದ ಮೇಲ್ನೆಲೆಯ ಕನಕಪರ್ಯಂಕ ಕಮಳಧವಳಶಯ್ಯಾತಳದೊಳ್ಗಾಡಿಯಿಂ ಕುಳ್ಳಿರ್ದು ಬಿತ್ತರಂ ಮಿಗೆ ನೆತ್ತಮನಾಡುತ್ತುಮಿರ್ದು—

ಪರಿಣತಮತಿಯಾಗಿಯೂ), ಶೋಭಿಸುವ ಕಾರುಣ್ಯವೆಂಬ ಸೌಭಾಗ್ಯದ ಪ್ರವಾಹ ರೂಪಳೂ, ಸುಶೀಲದ ಮಾರ್ಗದಲ್ಲಿ ನಡೆಯುವವಳೂ, ವಿಶೇಷ ಸೌಂದರ್ಯ ಮನೋ ಹರತೆಗಳಿಂದ ಪ್ರೀತಿಯನ್ನುಂಟುಮಾಡುವವಳೂ. ಸದಾ ಕಲ್ಯಾಣ ಸ್ವರೂಪಿಣಿಯೂ ಆದ ಆ ರಾಜನ ಧರ್ಮಪತ್ನಿಯು ಕಂಗೊಳಿಸುತ್ತಿದ್ದಳು. ೪೭. ಇಂಥ ಹೆಂಡತಿ ಯೊಡನೆ ರಾಜನು ಮದನವಿದ್ಯಾ ಪ್ರೌಢಿಮೆಯಿಂದುಂಟಾದ ಸೌಖ್ಯವನ್ನು ಪಡೆಯುತ್ತ, ತನಗೊದಗಿದ ಸಕಲಸೌಖ್ಯ ಸಮೂಹವನ್ನು ಶಿವನಿಗೆ ಅರ್ಪಿಸುತ್ತ ಮೆರೆಯುತ್ತಿದ್ದನು. ೪೮. ಯಾವು ಯಾವುದು ಅವನ ಕೇಳಿಯೋ ಅದರಲ್ಲಿ ಅವನ ಮನಸ್ಸು ತಪ್ಪದೆ ಶಿವನನ್ನು ಆಶ್ರಯಿಸಿ ಇದ್ದುದರಿಂದ ಆ ರಾಜನ ಸಮಸ್ತ ವಿನೋದವೂ, ಪಾರ್ವತೀ ಪತಿಯ ಚಿಗುರಿನಂತಿರುವ ಪಾದಪೂಜೆಯೆನ್ನುವಂತೆ ಸಂದಾಯವಾಗುತ್ತಿತ್ತು. ೪೯. ಶಿವನು ಭೇದವಿಲ್ಲದ, ನಿರಾಧಾರವಾದ, ಉಪಮಾತೀತವಾದ, ತನ್ನ ವಿಷಯಕವಾದ ಈ ಪಾಲಗುರ್ಜರ ರಾಜನ ಭಕ್ತಿಯನ್ನು ನೋಡಿ, ಅವನ ದೇಹ, ಜೀವ, ಇಂದ್ರಿಯ ಗಳಲ್ಲೆಲ್ಲ ಬೆರಸಿ ಬೆಸುಗೆಗೊಂಡಂತೆ ಇದ್ದನು. ವ॥ (ಇಂತಿರುವ) ಆ ರಾಜಶ್ರೇಷ್ಠನು ಒಮ್ಮೆ ತನ್ನ ಹೆಂಡತಿಯೊಡನೆ, ತಮ್ಮ ರತ್ನಖಚಿತವಾದ ಮೇಲುಪ್ಪರಿಗೆ ಮನೆಯ ಮಹಡಿಮೇಲಿರುವ ಸುವರ್ಣನಿರ್ಮಿತ ಮಂಚದ ತಾವರೆಯಂತೆ ಶುಭ್ರವಾದ ಹಾಸಿಗೆಯ ಮೇಲೆ ವಿಲಾಸದಿಂದ ಕುಳಿತುಕೊಂಡು ಲೀಲಾಜಾಲವಾಗಿ ಪಗಡೆಯಾಟವನ್ನು ಆಡು

ಹೃದಯಸರೋಜದೊಳೊಪ್ಪುವ
ಮದನಾರಿಯ ಮಕುಟದಗ್ರದೆಳೆವೆಱಗದಿರು
ಣ್ಮೆದುದೆಂಬ ಬಗೆಯನೊದವಿಸೆ
ರದನದ್ಯುತಿ ಪಾಲಗೂರ್ಜರಂ ನಸುನಕ್ಕಂ ೫೦

ಅರಸನ ದರಹಸನಾನನ
ಸರಸಿಜಮಂ ಕಂಡು ನಾಲ್ಕು ದೆಸೆಯಂ ನೋಡು
ತ್ತರಸಿ ಪರರಾರುಮಿಲ್ಲಿ
ರ್ವರೆಯಾವಿರ್ದಲ್ಲಿ ನಗೆಗೆ ಕಾರಣಮೇನೋ ೫೧

ಇದಕೆ ನೆವಮೊಂದುಮಿಲ್ಲೀ
ಪದದೊಳಿವಂಗೇಕೆ ಬಂದುದೀ ನಗೆಯೆನುತುಂ
ಸುದತಿ ನಸುಲಜ್ಜೆ ಮನದೊಳ
ಗೊದವಿರೆ ಸಂಶಯರಸಕ್ಕೆ ಭಾಜನಮಾದಳ್ ೫೨

ವ॥ ಅಂತು ಲಜ್ಜಾನತಾನನೆ ನೆತ್ತದಾಟಮನುಳಿದು ನೆತ್ತವಲಗೆಯ ಮೇಲೆ ಪಾಸಂಗಿಗಳ ನೊಯ್ಯನಿರಿಸಿ—

ನೆತ್ತದಾಟಮನಾಡುತಿರ್ದನಿಮಿತ್ತ ಹಾಸ್ಯಮಿದೇಕೆ ಮ
ಚ್ಚಿತ್ತವಲ್ಲಭ ನಿನ್ನ ವಕ್ತ್ರದೊಳುಣ್ಮಿದತ್ತಿದಱಿಂದಮಂ
ಬಿತ್ತರಂ ಮಿಗೆ ಪೇಳ್ದು ಮನ್ಮನಕಾದ ಸಂದೆಗಮಂ ಮಹೀ
ಮತ್ತಕಾಶಿನಿಯಾಣ್ಮ ನೀಂ ಪಱದಿಕ್ಕವೇಳ್ಪುದು ಚೆಚ್ಚರಂ ೫೩

ತ್ತಿದ್ದನು. ೫೦. ಆಗ (ತನ್ನ) ಹಲ್ಲಿನ ಕಾಂತಿಯು ತನ್ನ ಹೃದಯವೆಂಬ ಸರೋವರ ದಲ್ಲಿ ಒಪ್ಪುವ ಪರಮೇಶ್ವರನ ಮಕುಟದ ತುದಿಯಲ್ಲಿರುವ ಬಾಲಚಂದ್ರನ ಕಾಂತಿಯು ಹೊರಹೊಮ್ಮಿತೋ ಎಂಬ ರೀತಿಯನ್ನುಂಟುಮಾಡುತ್ತ ಆ ಪಾಲಗುರ್ಜರ ರಾಜನು ನಕ್ಕನು. ೫೧. ಆಗ ರಾಣಿಯು ಮಹಾರಾಜನ ಮುಗುಳು ನಗೆಯಿಂದ ಕೂಡಿದ ಮುಖಕಮಲವನ್ನು ಕಂಡು, ನಾಲ್ಕು ದಿಕ್ಕುಗಳನ್ನೂ ನೋಡುತ್ತ, 'ಮತ್ತಾರೂ ಇಲ್ಲದೆ ನಾವಿಬ್ಬರೇ ಇರುವ ಸ್ಥಳದಲ್ಲಿ ನಗೆಗೆ ಕಾರಣವೇನು ?' ೫೨. ಯಾವ ಒಂದು ನೆಪವೂ ಇಲ್ಲದೆ ಇರುವ ಈ ಸ್ಥಳದಲ್ಲಿ ಇವನಿಗೆ ನಗೆ ಏಕೆ ಬಂತು ? ಎನ್ನುತ್ತ ಆ ಸುಂದರಿಯು ಮನಸ್ಸಿನಲ್ಲಿ ಸ್ವಲ್ಪ ನಾಚಿದವಳಾಗಿ, ಸಂದೇಹವೆಂಬ ನೀರಿಗೆ ಆಶ್ರಯವಾದ ಪಾತ್ರೆಯಂತಾ ದಳು. ವ॥ ಹಾಗೆ ಲಜ್ಜೆಯಿಂದ ಬಾಗಿದ ತಲೆಯುಳ್ಳವಳಾಗಿ, ಪಗಡೆಯಾಟವನ್ನು ಬಿಟ್ಟು ಪಗಡೆಯಾಡುವ ಹಲಗೆಯ ಮೇಲೆ ಹಾಸಿನ ಚೀಲಗಳನ್ನು ನಿಧಾನವಾಗಿ ಇಟ್ಟು—೫೩. 'ಭೂಕಾಂತೆಯ ಪತಿಯಾದ ನನ್ನ ಮನೋವಲ್ಲಭನೇ, ಪಗಡೆಯಾಟ ವನ್ನು ಆಡುವ ನಿನ್ನ ಮುಖದಲ್ಲಿ ನಿಮಿತ್ತವಿಲ್ಲದೆ ನಗೆಯೇಕೆ ಉಂಟಾಯಿತು ? ಇದರ ಕಾರಣವನ್ನು ತಿಳಿಸಿ ನನ್ನ ಮನಸ್ಸಿನಲ್ಲುಂಟಾದ ಸಂಶಯವನ್ನು ಶೀಘ್ರವಾಗಿ ಪರಿಹಾರ

ಅಣುಮಾತ್ರಂ ಬಹಿರಂತರರ್ಪಣವಿಧಾನಂ ಜಾಱಿತೆಂದೆಂಬ ಬಿ
ನ್ನಣದಿಂದಾದುದೊ ನೆತ್ತದಾಟವಿದಯುಕ್ತಂ ಶಂಭುಭಕ್ತರ್ಗೆ ಲ
ಕ್ಷಣಮಲ್ತೆಂಬುದಱಿಂದೆ ಪೊಣ್ಮಿದುದೊ ಮೇಣೆನ್ನೊಳ್ಸಮಂತೆರ್ಗನೋ
ರಣದಿಂ ಕಂಡದಱಿಂದೆ ಸಂಜನಿಸಿತೋ ಹಾಸ್ಯಂ ತ್ವದೀಯಾಸ್ಯದೊಳ್ ೫೪

ಮೊಲೆಗಳ ಮೇಲುದೋಸರಿಸಿತೆಂಬುದಱಿಂದೊಗೆದತ್ತೊ ಸಾರ ಮಂ
ಜುಲಸರಸೋಕ್ತಿಯೊಂದಿನಿತಂ ತಪ್ಪಿದೊಡುದ್ಭವಿಸಿತ್ತೊ ಸಾರಿಯಂ
ನಲಿದಿಡುವಂದು ಪಲ್ಲಟಿಸೆ ಪುಟ್ಟಿದುದೋ ಪೊಸಗೆಲ್ಲಮಾಂಪೆನೀ
ಲಲನೆಯೊಳೆಂಬ ಸಂಭ್ರಮದಿನುಣ್ಮಿದುದೋ ನಗೆ ನಿನ್ನ ವಕ್ತ್ರದೊಳ್ ೫೫

ಒಂದುಂಪಲಗೆಯನಾದೊಡ
ಮಿಂದೀ ವಧು ಗೆಲ್ದುದಿಲ್ಲಮೆಂಬುದಱಿಂದೇ
ಳ್ತಂದುದೊ ರಾತ್ರಿರತಿಯೊಳಾ
ನೆಂದುದು ನೆನಪಾಗೆ ನಿನಗೆ ನಗೆಯೊದವಿದುದೋ ೫೬

ಸ್ಮರಮೋಹಮೊಗಳೊಗೆದೊಂ
ದಿರೆ ದರಹಾಸಂ ಪೊದಳ್ದುದೋ ಮಱೆಬೇಡೋ
ಸರಿಸದೆ ಪೇಳೆನ್ನೊಳ್ಮ
ದ್ವರ ನಿನಗೆನ್ನಾಣೆ ನಿಜಮನೆನೆ ಕೇಳ್ದರಸಂ ೫೭

ಗೊಳಿಸು.' ೫೪. 'ನಿನ್ನ ಮುಖದಲ್ಲುಂಟಾದ ನಗುವು ಬಾಹ್ಯಾಭ್ಯಂತರದ ಪೂಜಾ ರೀತಿಯು ಸ್ವಲ್ಪ ತಪ್ಪಿತೆಂಬ ಬಿನ್ನಾಣದಿಂದ ಆಯಿತೋ ? ಅಥವಾ ಈ ನೆತ್ತ ದಾಟವು ಶಿವಭಕ್ತರಾದವರಿಗೆ ಸಲ್ಲದ ಲಕ್ಷಣವೆಂಬ ಕಾರಣದಿಂದ ಉಂಟಾಯಿತೋ ? ನನ್ನಲ್ಲಿ ಏನಾದರೂ ಎಗ್ಗತನವನ್ನು ಕಂಡ ಕಾರಣದಿಂದ ಉಂಟಾಯಿತೋ ?' ೫೫. '(ಹೇಕಾಂತನೇ), ನಿನ್ನ ಮುಖದಲ್ಲಿ ನಗೆಯು–(ನನ್ನ) ಮೊಲೆಗಳ ಮೇಲಿನ ಸೆರಗು ಜಾರಿದ ಕಾರಣದಿಂದ ಉಂಟಾಯಿತೋ ? ಸಾರತರ ಮನೋಹರ ಮಾತುಗಳಲ್ಲಿ ಸ್ವಲ್ಪ ತಪ್ಪಾದ ಕಾರಣದಿಂದ ಉದ್ಭವಿಸಿತೋ ? ಸಾರಿಯಮೇಲೆ ಪಗಡೆಯ ಕಾಯನ್ನು ನಲಿದು ಇಡುವಾಗ ಸ್ವಲ್ಪ ಪಲ್ಲಟಗೊಂಡ ಕಾರಣದಿಂದ ಉತ್ಪನ್ನವಾಯಿತೋ ? ಈ ಲಲನೆಯೊಡನೆ ಹೊಸದಾದ ಗೆಲುವನ್ನು ಹೊಂದುತ್ತೇನೆಂಬ ಸಂಭ್ರಮದಿಂದ ಉಂಟಾಯಿತೋ ?' ೫೬. 'ಈ ದಿನದ (ಪಗಡೆಯಾಟದಲ್ಲಿ) ಈ ಸ್ತ್ರೀಯು ಒಂದು ಹಲಗೆಯನ್ನಾದರೂ ಗೆಲ್ಲಲಿಲ್ಲವೆಂಬುದರಿಂದ ಹುಟ್ಟಿತೋ ? ನಿನ್ನೆ ರಾತ್ರಿಯು ಸುರತ ಸಮಯದಲ್ಲಿ ನಾನಾಡಿದ ಮಾತನ್ನು ನೆನಸಿಕೊಂಡ ಕಾರಣದಿಂದ ನಿನಗೆ ನಗೆಯೇನಾದರೂ ಬಂದಿತೋ ?' ೫೭. 'ಈಗ ಮನ್ಮಥನಿಂದುಂಟಾದ ಅನುರಾಗವನ್ನೇನಾದರೂ ಹೊಂದಿಸಲು ಮಂದಹಾಸವು ಹೊರಹೊಮ್ಮಿತೋ ? ವಂಚಿಸಬೇಡ ; ಸಂಕೋಚ ವಿಲ್ಲದೆ–ನನ್ನ ಶ್ರೇಷ್ಠ ಪತಿಯೇ, ನನ್ನಲ್ಲಿ ನಿಜವನ್ನು ಹೇಳು ; ನಿನಗೆ ನನ್ನ ಆಣೆ'

ಮುಗುಳೆ ನಸುನಗುತೆ ಕೇಳೆಲೆ
ಮೃಗನೇತ್ರೆಯೆನುತ್ತೆ ನೆತ್ತದಾಟಮನುಳಿದಾ
ನಗೆ ನೆಗಳ್ದ ಕಾರಣಮನಾ
ಜಗತೀಪತಿಯೊಲ್ದು ಪೇಳಲುದ್ಯತನಾದಂ ೫೮

ವ॥ ಅಂತು ಪೇಳಲುಪಕ್ರಮಿಸಿ—

ಭಾಮಿನಿ ಕೇಳ್ಸೌರಾಷ್ಟ್ರದ
ಸೋಮೇಶನ ಭಕ್ತನಿರ್ಪನೋಹಿಲನವನು
ದ್ದಾಮಚರಿತ್ರಮನೊರೆವೊಡೆ
ಕಾಮಾಂತಕನಾದೊಡಂ ಪೆಱಂ ನೆಱೆದಪನೇ ೫೯

ಹರನ ನಿರೂಪದಿನಿಳೆಗವ
ತರಿಸಿದ ಮಹಿಮಾಂಕನಮಳಗುಣಮಣಿಭರಣಂ
ಕರುಣಾನಿಧಿ ಸೌರಾಷ್ಟ್ರದ
ಪುರಪತಿಯಂ ಸೋಮನಾಥನಂ ಕಂಡನವಂ ೬೦

ತೊರೆದಾನಂದಾಶ್ರುಜಲಂ
ಸುರಿವುತ್ತಿರೆ ನಿಮಿರೆ ಗದ್ಗದಂ ಪುಳಕಮುದು
ಬ್ಬರಿಸೆ ತನು ಬೆಮರೆ ಸಾತ್ವಿಕ
ವರಭಕ್ತಿಯೊಳೀಶನಡಿಯನವನರ್ಚಿಸಿದಂ ೬೧

ಎನ್ನಲು ಅರಸನು ಕೇಳಿ—೫೮. ಆ ರಾಜನು ಪ್ರೀತಿಯಿಂದ ಪುನಃ ನಸುನಗುತ್ತ 'ಎಲೈ ಮೃಗನೇತ್ರೆಯೇ ಕೇಳು' : ಎನ್ನುತ್ತ ಪಗಡೆಯಾಟವನ್ನು ಬಿಟ್ಟು ತನಗೆ ನಗೆಯುಂಟಾದ ಕಾರಣವನ್ನು ಹೇಳಲುದ್ಯುಕ್ತನಾದನು. ವ॥ ಆ ರೀತಿ ಹೇಳಲು ಪ್ರಾರಂಭಿಸಿ— **ಓಹಿಲಯ್ಯನ ಕಥೆ** ೫೯. 'ಸುಂದರೀ, ಕೇಳು. ಸೌರಾಷ್ಟ್ರದೇಶದಲ್ಲಿ ಸೋಮೇಶ್ವರನ ಭಕ್ತನಾದ ಓಹಿಲಯ್ಯನೆಂಬಾತನಿದ್ದಾನೆ. ಅವನ ಉದ್ದಾಮವಾದ ಚರಿತ್ರೆಯನ್ನು ಹೇಳುವುದಕ್ಕೆ ಶಿವನಾದರೂ ಕೂಡ ಇನ್ನೊಬ್ಬನು ಹೇಳಲು ಸಮರ್ಥನಾದಾನೇ ? ೬೦–೬೧. ಪರಮೇಶ್ವರನ ಅಪ್ಪಣೆಯಿಂದ ಭೂಮಿಯಲ್ಲಿ ಅವತಾರ ಮಾಡಿದ, ಆ ಮಹಿಮೆಯೇ ಗುರುತಾಗಿ ಉಳ್ಳವನೂ, ಶ್ರೇಷ್ಠವಾದ ಗುಣಗಳೆಂಬ ರತ್ನಗಳ ಆಭರಣವುಳ್ಳವನೂ, ಕರುಣ ನಿಧಿಯೂ ಆದ ಅವನು ಆ ಸೌರಾಷ್ಟ್ರ ಪುರಾಧಿಪತಿಯಾದ ಸೋಮನಾಥನನ್ನು ಕಂಡು, ಆನಂದ ಬಾಷ್ಪಗಳನ್ನು ಸುರಿಸುತ್ತಿರಲು, ಗದ್ಗದಧ್ವನಿ, ರೋಮಾಂಚನಗಳು ಉಂಟಾಗುತ್ತಿರಲು, ತನುವು ಬೆವರಲು–ಹೀಗೆ ಸಾತ್ವಿಕ ಭಕ್ತಿಯಿಂದ

ವಿಳಸದ್ಭೂತಿವಿಭೂಷಿತಂ ವಿಪುಳರುದ್ರಾಕ್ಷಾನ್ವಿತಂ ಗಾಂಗಮಂ
ಗಳಶೀತಾಂಬು ಸಹಸ್ರಕುಂಭದಭಿಷೇಕಂಗೆಯ್ದು ವಿಚ್ಛಿನ್ನಕೋ
ಮಳ ಬಿಲ್ವೀದಳಮಂ ಸಮರ್ಪಿಸಿ ಯಥೇಷ್ಟಂ ತನ್ನ ತೂಕಕ್ಕಮು
ರ್ಗಳಮಂ ಗುರ್ಗುಳಮಂ ಪೊದಳ್ದನಲನೊಳ್ತಾನಿಟ್ಟು ತದ್ಧೂಪ[1]ಮಂ ೬೨

ಬೀಸುತ್ತುಂ ಮಂಗಳಪ್ರಸ್ಫುರಿತವಿಮಳದೀಪಾರ್ಪಣಂಗೆಯ್ದು ವಿಶ್ವಾ
ವಾಸಂಗಾನಂದದಿಂ ಷಡ್ರಸಯುತಶುಚಿಭಕ್ಷ್ಯಾದಿ ನೈವೇದ್ಯಮಂ ವಿ
ಶ್ವಾಸಂ ಕೆಯ್ಗಣ್ಮೆ ಮಾಡುತ್ತೆಳಸಿ ಬಳಸಿ ಪುಷ್ಪಾಳಿಯಂ ಸೂಸಿ ಪೂರ್ಣೋ
ಲ್ಲಾಸಂ ಕೊಂಡಾಡಿ ಪಾಡುತ್ತೆಱಗಿ ಮಗುಳೆ ಕುಂಬಿಕ್ಕುತಂ ಭಕ್ತಿಯಿಂದಂ ೬೩

ಶ್ರೀಮದಮರಾಮರೇಂದ್ರಪಿ
ತಾಮಹತಾಮರಸನಯನಪೂಜಿತಪದ ಮಾ
ಯಾಮಯಹರ ಖಲಕದಳೀ
ಸಾಮಜ ಸೋಮೇಶಲಿಂಗ ಜಯ ಭವಭಂಗಾ ೬೪

ವರವರದ ಶರದಮಳಹಿಮ
ಕರಕರಧವಳಾಂಗ ಪುಂಗವಧ್ವಜ ಭುಜಗಾ

ಈಶ್ವರನ ಪಾದಗಳ ಅರ್ಚನೆ ಮಾಡಿದನು. ೬೨–೬೩–೬೪. ಪ್ರಕಾಶಮಾನವಾದ ವಿಭೂತಿಯಿಂದ ಅಲಂಕಾರಗೊಂಡು, ವಿಪುಲರುದ್ರಾಕ್ಷಗಳನ್ನು ಧರಿಸಿ ಅವನು ಸಹಸ್ರ ಸಂಖ್ಯೆಯ ಗಂಗಾನದೀ ಶೀತಲ ಜಲದಿಂದ (ಶಿವನಿಗೆ) ಅಭಿಷೇಕಮಾಡಿ, ಪೂರ್ಣದಳ ಗಳುಳ್ಳ ಬಿಲ್ವಪತ್ರೆಯನ್ನು ಸಮರ್ಪಿಸಿ, ತನ್ನ ತೂಕಕ್ಕೆ ಸಮಾನ ಶ್ರೇಷ್ಠವಾದ ಗುಗ್ಗುಳ ವನ್ನು ಶೋಭಿಸುವ ಬೆಂಕಿಗೆ ಹಾಕಿ ಆ ಧೂಪವನ್ನು (ಶಿವನಿಗೆ) ಬೀಸುತ್ತ ಶುಭಕರವಾಗಿ ಪ್ರಕಾಶಿಸುವ ನಿರ್ಮಲದೀಪವನ್ನು ಸಮರ್ಪಿಸಿ, ವಿಶ್ವಾವಾಸನಾದ ಪರಮೇಶ್ವರನಿಗೆ ಮಿತಿಮೀರಿದ ವಿಶ್ವಾಸದಿಂದ ಷಡ್ರಸೋಪೇತವಾದ ಪರಿಶುದ್ಧ ಭಕ್ಷ್ಯಭೋಜ್ಯಾದಿ ಗಳನ್ನು ನೈವೇದ್ಯಮಾಡಿ, ಸಂತೋಷದಿಂದ ಕೂಡಿ ಪ್ರದಕ್ಷಿಣೆಮಾಡಿ, ಪುಷ್ಪಸಮೂಹ ವನ್ನೆರಚಿ, ಪೂರ್ಣೋತ್ಸಾಹದಿಂದ ಕೊಂಡಾಡಿ, ಹಾಡಿ, ನಮಸ್ಕರಿಸಿ ಪುನಃ ಭಕ್ತಿಯಿಂದ ನಮಸ್ಕರಿಸುತ್ತ, ಮಂಗಳಕರರಾದ ದೇವತೆಗಳು, ದೇವೇಂದ್ರ, ಬ್ರಹ್ಮ, ವಿಷ್ಣು ಇವರು ಗಳಿಂದ ಅರ್ಚಿಸಲ್ಪಟ್ಟ ಚರಣವುಳ್ಳ, ಮಾಯೆಯೆಂಬ ರೋಗವನ್ನು ನಾಶಮಾಡುವ, ನೀಚರೆಂಬ ಬಾಳೆಯ ಮರಕ್ಕೆ ಆನೆಯಂತಿರುವ, ಜನನಮರಣಾತ್ಮಕವಾದ ಸಂಸಾರವನ್ನು ನಾಶಮಾಡುವ ಸೋಮೇಶ್ವರಲಿಂಗನಿಗೆ ಜಯ. ೬೫. ಶ್ರೇಷ್ಠವಾದ ವರವನ್ನು ಕೊಡುವ, ಶರತ್ಕಾಲದ ನಿರ್ಮಲವಾದ ಚಂದ್ರನ ಕಿರಣಗಳೋಪಾದಿಯಲ್ಲಿ ಶುಭ್ರವಾದ

[1] ಮ (ಮು)

ಭರಣ ರಣಧೀರ ಧೀರೋ
ತ್ಕರನುತ ಸೋಮೇಶಲಿಂಗ ಜಯು ಭವಭಂಗಾ ೬೫

ಕುಖಲಾರ್ದನ ಮಖಮರ್ದನ
ಸುಖವರ್ಧನ ಭವ್ಯಭಕ್ತಭಾವಿತಬರ್ಹಿ
ರ್ಮುಖ ಭಾಸ್ವರ ನಿಖಿಲೇಶ್ವರ
ಶಿಖಿಧರ ಸೋಮೇಶಲಿಂಗ ಜಯು ಭವಭಂಗಾ ೬೬

ದಂಡಧರದರ್ಪಖಂಡನ
ಪಂಡಿತಹೃತ್ಪುಂಡರೀಕಮಾರ್ತಾಂಡ ಮಹೋ
ದ್ದಂಡಫಣಿರಾಜಕುಂಡಲ
ಮಂಡಿತ ಸೋಮೇಶಲಿಂಗ ಜಯು ಭವಭಂಗಾ ೬೭

ಕರಿರಾಣ್ಮುಖವರಷಣ್ಮುಖ
ದರಹಸನಮುಖಾವಲೋಕನೋತ್ಸುಕ ವಿಸರ
ದ್ಗರಳಾಶನ ಪುರಶಾಸನ
ಪರತರ ಸೋಮೇಶಲಿಂಗ ಜಯು ಭವಭಂಗಾ ೬೮

ವರಮಂದರಗಿರಿಕಂದರ
ಚರ ಚಾರಣವಿನುತಚರಣ ರಣಧೀರ ಮಹಾ

ಶರೀರವುಳ್ಳ, ವೃಷಭನನ್ನು ಧ್ವಜದಲ್ಲಿ ಉಳ್ಳ, ಹಾವುಗಳ ತೊಡಿಗೆಯುಳ್ಳ, ರಣದಲ್ಲಿ ಧೀರನಾದ, ಧೀರರಾದವರ ಸಮೂಹದಿಂದ ಹೊಗಳಿಸಿಕೊಳ್ಳಲ್ಪಡುವ ಭವಭಂಗನಾದ ಸೋಮೇಶ್ವರಲಿಂಗನೇ, ಜಯು. ೬೬. ಅತ್ಯಂತ ದುಷ್ಟರನ್ನು ಮರ್ದನಗೊಳಿಸಿದ, ದಕ್ಷಯಜ್ಞವನ್ನು ನಾಶಗೊಳಿಸಿದ, ಸೌಖ್ಯವನ್ನು ವರ್ಧನೆಗೊಳಿಸುವ, ಸದ್ಭಕ್ತರಿಂದ ಧ್ಯಾನಿಸಲ್ಪಡುವ, ದೇವತೆಗಳಲ್ಲೆಲ್ಲಾ ಪ್ರಕಾಶಮಾನವಾದ, ಸಮಸ್ತಕ್ಕೂ ಒಡೆಯನಾದ ಅಗ್ನಿಯನ್ನು ಧರಿಸಿರುವ ಸೋಮೇಶ್ವರಲಿಂಗನೇ ಜಯು. ೬೭. ಯಮಧರ್ಮನ ಗರ್ವವನ್ನು ನಾಶಮಾಡುವುದರಲ್ಲಿ ನಿಪುಣರಾದ (ಸದ್ಭಕ್ತರ) ಹೃದಯವೆಂಬ ಬೆಳ್ದಾವರೆಗೆ ಸೂರ್ಯನಂತಿರುವ, ಅತ್ಯಂತ ದೊಡ್ಡವನೆನಿಸಿದ ಆದಿಶೇಷನನ್ನು ಕರ್ಣಕುಂಡಲವನ್ನಾಗಿ ಮಾಡಿ ಧರಿಸಿಕೊಂಡಿರುವ, ಭವಭಂಗನಾದ ಸೋಮೇಶ್ವರಲಿಂಗನೇ ಜಯು. ೬೮. ವಿಘ್ನೇಶ್ವರ, ಶ್ರೇಷ್ಠ ಷಣ್ಮುಖ ಇವರುಗಳ ಮುಗುಳು ನಗೆಯಿಂದ ಕೂಡಿದ ಮುಖವನ್ನು ನೋಡುವುದರಲ್ಲಿ ಕುತೂಹಲವುಳ್ಳ, ವಿಸ್ತಾರವಾದ ಕಾಲಕೂಟವೆಂಬ ವಿಷವನ್ನು ಆಹಾರವಾಗಿ ಉಳ್ಳ, ತ್ರಿಪುರ ಸಂಹಾರ ಮಾಡಿದ ಭವಭಂಗನಾದ ಸೋಮೇಶ್ವರಲಿಂಗನೇ ಜಯು, ೬೯. ಶ್ರೇಷ್ಠವಾದ ಮಂದರಪರ್ವತದ ಕಂದರಗಳಲ್ಲಿ ಚರಿಸುವವನೂ, ಚಾರಣರೆಂಬ ದೇವಯೋಗಿ ವಿಶೇಷದಿಂದ ಸ್ತೋತ್ರಮಾಡಿಸಿಕೊಳ್ಳುವ ಪಾದವುಳ್ಳವನೂ,

ಸುರಭಂಜನ ಸುರರಂಜನ
ಕರ ವರ ಸೋಮೇಶಲಿಂಗ ಜಯ ಭವಭಂಗಾ ೧೯

ಸಿತಕರ ಶತಕರ ಹುತವಹ
ನುತ ನಯನತ್ರಯವಿರಾಜಿತಾನನ ಸುಮನ
ಸ್ತುತಿನತಪದಮುಳಪದತಳ
ಶತದಳ ಸೋಮೇಶಲಿಂಗ ಜಯ ಭವಭಂಗಾ ೨೦

ಕಂದರಶಿತಿಕಂಧರ ವಿಧಿ
ಕಂಧರಕರ ಬಂಧರಹಿತ ಬಂಧುರಗುಣ ಸಂ
ಬಂಧ ಧೃತಸಿಂಧು ಸಂಹೃತ
ಸಿಂಧುರ ಸೋಮೇಶಲಿಂಗ ಜಯ ಭವಭಂಗಾ ೨೧

ವ॥ ಎಂದಮಂದಾನಂದದಿಂ ಕೀರ್ತಿಸಿ ಪೊಡಮಟ್ಟು ಕಡುನೇಹದಿನೋಹಿಲನಗಲಲಾಜದೆ ನಿಚ್ಚಮುಂ ತನ್ನ ತೂಕದ ಮಹಿಷಾಕ್ಷಿ ಗುಗ್ಗುಳಮಂ ಸಮರ್ಪಿಪ ನೇಮಮುಂ ಕೆಯ್ಕೊಂಡು ಮಹಾಭಕ್ತಿಯಿಂ ಪೂಜಿಸುತ್ತಿರ್ಪಿನಮಾ ಗುಗ್ಗುಳಕ್ಕೆ ನಿಜದ್ರವ್ಯಮೆಲ್ಲಂ ಸವೆಯಲೊಡಂ ಧೃತಿಗುಂದದೆ ದಕ್ಷಿಣಸಮುದ್ರಪರ್ಯಂತಮನಂತದುಷ್ಟಮೃಗವಿಸರ ವಿಹರಣಸ್ಥಾನಂಗಳೆನಿಪ ಘೋರಾಟವಿಗಳೊಳ್ಪಗಲಿರುಳೆನ್ನದೆ ಕಾಯಕ್ಲೇಶಮಂ ಬಗೆಯದೆ ತೊಳಲ್ದು ಗುಗ್ಗುಳಮೊಗೆವ ತಾಣಮನಲ್ಲಲ್ಲಿ ಪರೀಕ್ಷಿಸಿ

ಯುದ್ಧವೀರರಾದ ರಾಕ್ಷಸರನ್ನು ನಾಶಗೊಳಿಸಿದವನೂ, ದೇವತೆಗಳಿಗೆ ಸಂತೋಷವನ್ನುಂಟುಮಾಡುವವನೂ ಆದ ಭವಭಂಗನೇ, ಸೋಮೇಶ್ವರಲಿಂಗನೇ ಜಯ. ೨೦. ಸೂರ್ಯ, ಅಗ್ನಿ, ಚಂದ್ರರುಗಳೆಂಬ ಶ್ಲಾಘ್ಯವಾದ ಕಣ್ಣುಗಳಿಂದ ಪ್ರಕಾಶಮಾನವಾದ ಮುಖವುಳ್ಳ, ದೇವತಾಸಮೂಹದಿಂದ ನಮಸ್ಕರಿಸಲ್ಪಟ್ಟ ಪಾದಕಮಲವುಳ್ಳ, ಭವಭಂಗನಾದ ಸೋಮೇಶ್ವರಲಿಂಗನೇ ಜಯ. ೨೧. ಜಲಸಮೇತವಾದ ಮೇಘದಂತೆ (ಕಂ + ಧರ) ಕಪ್ಪಾದ ಕಂಠವುಳ್ಳ, ಬ್ರಹ್ಮನ ಶಿರಸ್ಸನ್ನು (ಕಪಾಲವಾಗಿ) ಹಿಡಿದಿರುವ. ಮಾಯಾಪಾಶದಿಂದ ದೂರನಾದ, ಬಂಧುರವಾದ ಸರ್ವಜ್ಞತ್ವ, ಸರ್ವವ್ಯಾಪಕತ್ವ, ಸರ್ವಕರ್ತೃತ್ವಾದಿ ಗುಣಸಂಬಂದವುಳ್ಳ, ಗಂಗೆಯನ್ನು ಧರಿಸಿರುವ, ಗಜಾಸುರ ನಾಶಕನಾದ, ಭವಭಂಗನಾದ ಸೋಮೇಶ್ವರಲಿಂಗನೇ ಜಯ. ವ॥ ಹೀಗೆಂದು ಹೆಚ್ಚಾದ ಸಂತೋಷದಿಂದ ಕೀರ್ತಿಸುತ್ತ ನಮಸ್ಕರಿಸಿ, ಹೊರಹೊರಟು. ಆ ಓಹಿಲನು ಅತ್ಯಂತ ಸ್ನೇಹದಿಂದ ಅಗಲಲಾರದೆ ನಿತ್ಯವೂ ತನ್ನ ತೂಕದ 'ಮಹಿಷಾಕ್ಷಿ' ಎಂಬ ಹೆಸರಿನ ಗುಗ್ಗುಳವನ್ನು (ಅಥವಾ ಮಹಿಷದ ಕಣ್ಣಿನ ಬಣ್ಣದಂತಿರುವ ಗುಗ್ಗುಳವನ್ನು) ಸಮರ್ಪಿಸುವನೇಮವನ್ನು ಹಿಡಿದು, ಮಹಾಭಕ್ತಿಯಿಂದ ಪೂಜಿಸುತ್ತಿರುವಾಗ ಆ ಗುಗ್ಗುಳಕ್ಕಾಗಿ ತಾನು ಹೊಂದಿದ್ದ ಐಶ್ವರ್ಯವೆಲ್ಲ ವ್ಯಯವಾಗಿ ಹೋಯಿತು. ಆಗ ಧೈರ್ಯಗೆಡದೆ, ದಕ್ಷಿಣ ಸಮುದ್ರಪರ್ಯಂತವಾಗಿ ಹರಡಿರುವ ಅನಂತ ಕ್ರೂರಮೃಗ ಸಮೂಹದ ಸಂಚಾರ ಸ್ಥಾನಗಳಾದ ಘೋರಾರಣ್ಯಗಳಲ್ಲಿ ಹಗಲಿರುಳೆನ್ನದೆ ದೇಹಶ್ರಮವನ್ನು ಲೆಕ್ಕಿಸದೆ ಸಂಕಟಗೊಂಡು, ಸಂಚಾರಮಾಡುತ್ತ ಗುಗ್ಗುಳ ಸಿಕ್ಕುವ ಸ್ಥಳಗಳನ್ನು ಅಲ್ಲಲ್ಲಿ ಪರೀಕ್ಷಿಸುತ್ತ

ತೆಗೆದು ಶೋಧನಂ ಗೆಯ್ದೊದವಿಸಿ ತನ್ನ ತೂಕದ ಪರಿಮಿತದ ಪರಿಮಳಿಪ ಗುಗ್ಗುಳವಮಂ ಕಂಬಿಯೊಳೆರಡುಂ ಕಡೆಯೊಳ್ಪರ್ಚಿಕ್ಕಿ ಪೆಗಲೊಳ್ಪೊತ್ತು ಮಲಯಗಿರಿಗೆಯ್ದಿ ನಱುಗಂಪಸುಗುಳ್ವ ಚಂದನದ ಸೆಕ್ಕೆಗಳನಾ ಕಂಬಿಯ ಕೆಲಗೆಲದೊಳಳವಡಿಸಿ ಬಿಳಿಯ ವಸ್ತ್ರಮನಿಳಿವಿಟ್ಟು ಮುಸುಂಕಿ ಸುರಭಿಮಯಮಪ್ಪಖಂಡಿತ ಮೃದುಳ ಬಿಲ್ವಪಲ್ಲವಪ್ರಸರಮಂ ತಿಱಿದು ಕರಂಡಕಮಂ ತೀವಿ ಕೌಂಕುಳೊಳ್ಪೊಡರ್ಚಿ ಮುನ್ನಮರ್ಚಿದಾ ಕಂಬಿಯಂ ತಳೆದು ಸರ್ವಜನಂ ಪೊಗಳೆ ಸಡಗರದಿನೆಳ್ತಂದು ಸೌರಾಷ್ಟ್ರಪತಿಯ ಗುಡಿಯಂ ಪೊಕ್ಕು ನೋಡುತ್ತುಮಲ್ಲಿಂ ಮುನ್ನಮೆ ಗೌಳತಪಸ್ವಿಗಳ್ಬಂದು ಸುಗಂಧಿ[1] ಚಂದನದಿನುದ್ವರ್ತನಂಗೆಯ್ದು ಬಕ ವಕುಳ ತಿಲಕಚಂಪಕ ಕರವೀರ ಕಲ್ಹಾರ ಕರ್ಣಿಕಾರಾದಿ ಕುಸುಮವಿಸರದಿಂಡೆ ದಂಡೆಗಳ ನಳುಂಬಮಲಂಕರಿಸಿ ರಾಜಿಸುತ್ತುಮಿರ್ದಾ—

ಪರಮಶಿವಲಿಂಗಮಂ ಕಂ
ಡಿರದೋಲಗಿಸಿರ್ದ ಸಕಳ ವಿನಿಯೋಗದರಂ
ಪರಿಕಿಸದೆ ತನ್ನ ಪೂಜೆಯ
ವಿರಚಿಪ ಸಡಗರದ ತವಕಮಂ ತಳೆದಾಗಳ್ ೭೨

ಕಂಬಿಯನಂಬಿಕಾಧವನ ಮುಂದಿಳುಪುತ್ತೆ ಸುಗಂಧಿವಾರಿಯಿಂ
ತುಂಬಿದ ಕುಂಭದಿಂದಭಿಪವಂಗುಡುತುಂ ನವದಿವ್ಯವಸ್ತ್ರಮಂ

ಗುಗ್ಗುಳವನ್ನು ಹುಡುಕಿ ತೆಗೆದು ಶೋಧನಮಾಡಿ ಒದಗಿಸುತ್ತ, ತನ್ನ ತೂಕದಳತೆಯ ಪರಿಮಳಭರಿತವಾದ ಗುಗ್ಗುಳವನ್ನು ಅಡ್ಡೆಯಲ್ಲಿ ಎರಡೂ ಕಡೆಗಳಲ್ಲಿ ಹಂಚಿಹಾಕಿಕೊಂಡು ಹೊತ್ತು, ಮಲಯಪರ್ವತಕ್ಕೆ ಬಂದು ನರುಗಂಪಿನ ಚಂದನದ ಚೆಕ್ಕೆಗಳನ್ನು ಆ ಕಂಬಿಯ ದಂಡೆದಂಡೆಗಳಲ್ಲಿ ಇಟ್ಟುಕೊಂಡು ಬಿಳಿಯ ಬಟ್ಟೆಯನ್ನು ಇಳಿಬಿಟ್ಟು ಮುಚ್ಚಿ, ಸುಗಂಧಮಯವಾದ ಅಖಂಡವೂ ಮೃದುವಾದ್ದವೂ ಆದ ಬಿಲ್ವ ದಳಗಳನ್ನು ಎತ್ತಿಕೊಂಡು, ಹೂಬುಟ್ಟಿಗಳಲ್ಲಿ ತುಂಬಿಕೊಂಡು ಬಗಲಲ್ಲಿ ಸೇರಿಸಿಕೊಂಡು, ಮೊದಲೇ ತುಂಬಿದ್ದ ಕಂಬಿಯನ್ನು ಹೊತ್ತುಕೊಂಡು ಕಂಡ ಸಮಸ್ತ ಜನವೂ ಹೊಗಳುತ್ತಿರಲು ಸಡಗರದಿಂದ ಬಂದು ಸೌರಾಷ್ಟ್ರ ಸೋಮನಾಥನ ಗುಡಿಯನ್ನು ಪ್ರವೇಶಮಾಡಿ, ನೋಡುತ್ತ–ಅಲ್ಲಿ ತನಗಿಂತ ಪೂರ್ವದಲ್ಲಿ ಗೌಡದೇಶದ ಸಂನ್ಯಾಸಿಗಳು ಬಂದು, ಸುಗಂಧ ವಿಶಿಷ್ಟವಾದ ಚಂದನಾನು ಲೇಪನಮಾಡಿ, ಬಕ, ಬಕುಳ, ತಿಲಕ, ಸಂಪಿಗೆ, ಕರವೀರ, ಕಲ್ಹಾರ, ಕರ್ಣಿಕಾರಗಳೇ ಮೊದಲಾದ ಹೂವುಗಳ ಸಮೂಹದ ಕುಚ್ಚುಗಳಿಂದಲೂ, ಮಾಲೆಗಳಿಂದಲೂ ಅಲಂಕಾರಗೊಂಡು ವಿಶೇಷವಾಗಿ ರಾರಾಜಿಸುತ್ತಿರ್ದ ಆ—
೭೨–೭೩. ಪರಮಶಿವಲಿಂಗವನ್ನು ನೋಡಿ, ತಪ್ಪದೆ ಸೇವೆಮಾಡಿಕೊಂಡಿದ್ದ ಸಮಸ್ತ ಸೇವಕ ವರ್ಗದವರನ್ನೂ ಅವರ ಪೂಜೆಯನ್ನೂ ಲಕ್ಷಿಸದೆ ತನ್ನ ಪೂಜೆಯನ್ನು ಮಾಡುವ ಕುತೂಹಲವನ್ನು ಹೊಂದಿ ಹೊತ್ತುತಂದ ಕಂಬಿಯನ್ನು ಶಿವಲಿಂಗದ ಮುಂದೆ ಇಳುಹಿ, ಪರಿಮಳಯುಕ್ತವಾದ ನೀರಿನಿಂದ ಅಭಿಷೇಕವನ್ನು ಮಾಡಿಸಿ, ತಪ್ಪದೆ ನೂತನವಾದ

---

1 ಧ(ಅ, ಚ)

ತಾಂ ಬಿಡದರ್ಪಿಸುತ್ತೆ ಮಲಯೋದ್ಭವದಣ್ಪನಮರ್ಚಿ ಬಿಲ್ವದಂ
ದಂಬಡೆದಿರ್ದ ಪಲ್ಲವಮನೇಱಿಸಿ ಸೋಮಧರಂಗೆ ಭಕ್ತಿಯಿಂ ೭೩

ಪರಿಮಳಮೆಣ್ದೆಸೆಗಡರ್ದಾ
ವರಿಸುತ್ತಿರೆ ಧೂಪಮಿತ್ತು ಗುಗ್ಗುಳದಿಂ ಪೇ
ರುರಿಯಾರತಿಯಂ ಬೆಳಗುತೆ
ಹರಹರ ರವದೊಳಗೆ ಘಂಟೆಯಂ ಬಾಜಿಸುತುಂ ೭೪

ವಿಳಸನ್ನೈವೇದ್ಯಮಂ ವೀಟಿಕೆಯನೊಸಗೆಯಿಂದರ್ಪಿಸುತ್ತೊಲ್ದು ಪುಷ್ಪಾಂ
ಜಳಿಗೆಯ್ದೋರಂತುಘೇ ಶಂಕರ ಶಿವ ಶಿವರಾವಂ ಕರಂ ಪೊಣ್ಮೆ ವಕ್ತ್ರೋ
ಜ್ವಳಿತಂ ಸದ್ಭಕ್ತಿಯಿಂದಂ ಮಣಿದು ಕುಣಿದು ಮುಂಡಾಡಿ ಕೊಂಡಾಡಿ ಕೂರ್ಪ
ಗ್ಗಳಿಪನ್ನಂ ಕೆಯ್ಗಳಂ ತಾಂ ಮುಗಿದುಱೆ ನಲವೆತ್ತಿರ್ದನಾ ಭಕ್ತವರ್ಯಂ ೭೫

ವ॥ ಇಂತು ಭಕ್ತಿಪಾರವಶ್ಯದಿಂ ನಿಂದರುಮಂ ನೆರೆದರುಮನಱಿಯದೆ ನಿಚ್ಚಂ ನಿಚ್ಚಮುಂ ಬಿಡದೆ ಪೂಜಿಪೋಹಿಲಯ್ಯನಂ ಕಂಡು ಗೌಳತಪಸ್ವಿಗಳಸೂಯೆಗೊಂಡೆಲ್ಲರ್ನೆರೆದು ಗುಜು ಗುಜಂ ಗೊಳುತ್ತೆ ತಮ್ಮೊಳಿಂತೆಂದರ್—

ಎಲ್ಲಿಂದಂ ಬಂದನಿವಂ
ಖುಲ್ಲಂ ಮನ್ನಗರಿಗಿವನ ಪರಿ ವಿಪರೀತಂ
ಬಲ್ಲಿದರಿರೆಯುಂ ಲೆಕ್ಕಿಸ
ಲೊಲ್ಲಂ ಮುಂಗಾಣನಧಿಕತರಮದಭರಿತಂ ೭೬

ದಿವ್ಯಾಂಬರವನ್ನು ಅರ್ಪಿಸುತ್ತ ಶ್ರೀಗಂಧದ ಲೇಪನಮಾಡಿ, ಬಿಲ್ವಪತ್ರಿಯ ಅಂದವನ್ನುಂಟುಮಾಡಿ, ಉಳಿದ ಚಿಗುರನ್ನು ಆ ಸೋಮಧರನಿಗೆ ಭಕ್ತಿಯಿಂದ ಏರಿಸಿ, ಎಂಟೂ ದಿಕ್ಕಿಗೆ ಪರಿಮಳವು ಹತ್ತಿ ವ್ಯಾಪಿಸುವಂತೆ ಗುಗ್ಗಳದ ಧೂಪವನ್ನು ಇತ್ತು, ಪ್ರಜ್ವಲಿಸುವ ಜ್ವಾಲೆಯುಳ್ಳ ಆರತಿಯನ್ನು ಬೆಳಗಿ, ಹರಹರ ಎಂಬ ಶಬ್ದಮಾಡುತ್ತ ಗಂಟೆಯನ್ನು ಬಾರಿಸುತ್ತಿದ್ದನು. ೭೪. (ಹೀಗೆ) ಆ ಭಕ್ತಶ್ರೇಷ್ಠನು ಮನೋಹರವಾದ ತಾಂಬೂಲ ವೀಟಿಕೆಗಳನ್ನು ಉತ್ಸಾಹದಿಂದ ಅರ್ಪಣೆಮಾಡುತ್ತ ಪ್ರೀತಿಯಿಂದ ಪುಷ್ಪಾಂಜಲಿಯನ್ನು ಸಮರ್ಪಿಸುತ್ತಿದ್ದನು ; ಮನೋಹರವಾಗಿ ಬಾಯಿಂದ ಹೊರಡತಕ್ಕ 'ಉಘೇಶಂಕರ ಶಿವ ಶಿವ' ಎಂಬ ಧ್ವನಿಯು ಅತಿಯಾಗಿ ಹೆಚ್ಚುತ್ತಿತ್ತು ; ಸದ್ಭಕ್ತಿಯಿಂದ ನಮಸ್ಕರಿಸಿ, ಮುದ್ದಾಡಿ, ಕೊಂಡಾಡಿ, ಅಧಿಕವಾದ ಪ್ರೀತಿಯಿಂದ ಕೂಡಿ ಕೈಗಳನ್ನು ಮುಗಿದು, ವಿಶೇಷವಾದ ಆನಂದದಿಂದ ಕೂಡಿದ್ದನು. ವ॥ ಈ ರೀತಿ ಭಕ್ತಿಯ ಪರವಶತೆಯಿಂದ ಕೂಡಿದ ಅವನು ನಿಂತಿರುವವರನ್ನೂ, ನೆರೆದಿರುವವರನ್ನೂ ಲೆಕ್ಕಿಸದೆ ನಿತ್ಯವೂ ತಪ್ಪದೆ ಪೂಜಿಸುತ್ತಿರುವ ಓಹಿಲಯ್ಯನನ್ನು ಕಂಡು ಆ ಗೌಡದೇಶದ ತಪಸ್ವಿಗಳೆಲ್ಲ ಮಾತ್ಸರ್ಯಪಟ್ಟು ಅವರೆಲ್ಲ ಸೇರಿ ತಮ್ಮ ತಮ್ಮಲ್ಲಿ ಗುಜುಗುಜು ಮಾತಾನಾಡುತ್ತ ಇಂತೆಂದರು : ೭೬. ಈ ನೀಚನು ನಮ್ಮ ಪಟ್ಟಣಕ್ಕೆ ಎಲ್ಲಿಂದ ಬಂದನು ? ಇವನ ರೀತಿಯೋ ವಿಪರೀತವಾಗಿದೆ ; ವಿಶೇಷಾಹಂಕಾರ ಭರಿತನಾದ ಇವನು ಬಲಶಾಲಿಗಳನ್ನೂ ಲಕ್ಷಿಸುತ್ತಿಲ್ಲ ; ಇವನು ಮುಂದಾಗುವ ಪರಿಣಾಮವನ್ನು ಅರಿಯನು

ಅಡವಿಯ ಗಿಡುಗಳ ಸೊಪ್ಪಂ
ಕಡಿವಡೆದುಡಿದಿರ್ದ ಪಲವು ಸೆಕ್ಕೆಗಳಂ ಪೆಂ
ಪಿಡಿದೆಸೆವ ಪಗಿನವುಂ ಪೊ
ತ್ತೊಡನೆಳ್ತಂದರರೆ ಪುಗುವನೀ ದೇಗುಲಮಂ ೭೭

ತನಗೆನಿತು ಸೊರ್ಕೊ ನೆರೆದಿ
ರ್ದನಿಬರುಮಂ ನೋಡದಳ್ಕದೊತ್ತರಿಸುತೆ ಭೋಂ
ಕನೆ ಪುಗುತೋಹಿಲನಾ ಚೆ
ಲ್ವಿನ ಪೂಜೆಯನಳಿದು ತನ್ನ ಪೂಜೆಯನೆಸಪಂ ೭೮

ಹರಿಮುಖಸುರಕೃತಪೂಜೆಯ
ನರವರಿಸದೆ ಕಳೆದು ಪೂಜಿಸಿದ ಭೃಂಗಿಯ ಸೋ
ದರನೊ ಸೆಲಂದಿಯ ಪೂಜೆಯ
ನಿರದಳಿದರ್ಚಿಸಿದ ಕರಿಯ ನಿಜಸಹಚರನೋ ೭೯

ಅಲರ್ದು ತಮ್ಮಡಿ ಮುನ್ನ ಮಾಡಿದ ಪೂಜೆಯಂ ಕಡೆನೂಂಕಿ ಕ
ಣ್ಮಲರ ಪೂಜೆಯನಂದು ಮಾಡಿದ ಕಣ್ಣಪಯ್ಯನ ಮಿತ್ರನೋ
ನಲಿದು ಭೂಸುರರೊಲ್ದು ಪೂಜಿಸಿದಚ್ಚಪೂಜೆಯನೊತ್ತಿ ಮಂ
ಜುಲಸಮರ್ಚನೆಯಂ ನಿಮಿರ್ಚಿದ ದಾಸಿದೇವನ ನಂಟನೋ ೮೦

೭೭. ಅರರೇ ! ಇವನು ಅಡವಿಯ ಗಿಡಗಳ ಸೊಪ್ಪನ್ನು ಕತ್ತರಿಸಿಕೊಂಡು ಹಲಪ್ರಕಾರದ ಚೆಕ್ಕೆಗಳನ್ನು ಕತ್ತರಿಸಿಕೊಂಡು ಬಂದು, ಸುಗಂಧಗೊಂಡು ಶೋಭಿಸುವ ಗುಗ್ಗುಳವನ್ನು ಹೊತ್ತು ತಂದು ಈ ದೇವಾಲಯವನ್ನು ಹೊಗುತ್ತಿದ್ದಾನೆ. ೭೮. ಈ ಓಹಿಲನಿಗೆ ಎಷ್ಟೊಂದು ಸೊಕ್ಕುಂಟಾಗಿದೆ ? ಇಲ್ಲಿ ನೆರೆದಿರುವ ಅಷ್ಟೂ ಜನಗಳನ್ನು ನೋಡದೆ, ಹೆದರದೆ, ಬೆದರದೆ, ಅವರೆಲ್ಲರನ್ನೂ ಹಿಂದಕ್ಕೆ ತಳ್ಳಿ, ಶೀಘ್ರವಾಗಿ ದೇವಾಲಯವನ್ನು ಹೊಕ್ಕು ಮೊದಲಿನ ಚೆಲುವಾದ ಪೂಜೆಯನ್ನು ನಾಶಪಡಿಸಿ, ತನ್ನ ಪೂಜೆಯನ್ನು ಮಾಡುತ್ತಿದ್ದಾನೆ. ೭೯. ವಿಷ್ಣುವೇ ಮೊದಲಾದ ದೇವತಾ ಸಮೂಹದವರು ಮಾಡಿದ ಪೂಜೆಯನ್ನೂ ಲೆಕ್ಕಿಸದೆ ಅದನ್ನು ಕಳೆದುಹಾಕುತ್ತಿರುವ ಇವನೇನು ಭೃಂಗೀಶ್ವರನ ಸಹೋದರನೋ ? ಅಥವಾ ಜೇಡರ ಹುಳುವಿನ ಪೂಜೆಯನ್ನು ಬಿಡದೆ ಅಳಿದು ಪೂಜೆ ಮಾಡಿದ ಆನೆಯ ಒಡನಾಡಿಯೋ ? ೮೦. ಪೂರ್ವದಲ್ಲಿ ಸಂತೋಷದಿಂದ ಪೂಜಾರಿಯು ಮಾಡಿದ ಪೂಜೆಯನ್ನು ಒರೆಸಿಹಾಕಿ ಕಣ್ಣೆಂಬ ಹೂವಿನಿಂದ ಪೂಜೆಮಾಡಿದ ಕಣ್ಣಪ್ಪನ ಮಿತ್ರನೋ ? ಪಾರ್ವರು ಸಂತೋಷದಿಂದ ಮಾಡಿದ ನಿರ್ಮಲವಾದ ಪೂಜೆಯನ್ನು ತಳ್ಳಿಹಾಕಿ ಮನೋಹರ ಪೂಜೆಯನ್ನು ಮಾಡಿದ ದೇವರದಾಸಿಮಯ್ಯನ ನಂಟನೋ ?

ಇವನೇಂ ವಿಚಕಿಲಪೂಜೆಯು
ನವಧರಿಸದೆ ನೂಂಕಿ ಕಲ್ಲಪೂಜೆಯುನಗಜಾ
ಧವನೆಳಸೆ ನೆಗಳ್ದ ಸಾಂಖ್ಯನ
ಕುವರನೊ ಮುನ್ನೆಗಳ್ದ ಪೂಜೆಯುಳಿದೆಸಪಾಗಳ್ ೮೧

ವ॥ ಅಂತುಮಲ್ಲದೆಯುಂ—

ದೊರೆವೆತ್ತ ಸಲ್ಗೆಯಿಂ ಶಂ
ಕರ ಗೃಹದೊಳಗಣ್ಗೆ ಪುಗುವೊಡೀತಂ ನಂದೀ
ಶ್ವರನೊ ದಧೀಚಿಯೊ ಭೃಗುವೋ
ವರೋಪಮನ್ಯುವೊ ಶಿವಾಂಶಸಂಭವಮುನಿಯೋ ೮೨

ಶಿವಗೃಹದಂತರಾಳಮುನಣಂ ಪುಗಲಂಜಿ ಮುರಾರಿ ನಿಲ್ವನೊ
ಪ್ಪುವ ಸುಕನಾಸಿಯೊಳ್ಜಲಜಜಂ ಸಮಯಂಬಡೆವನ್ನಮಿರ್ಪನೀ
ಭವನದ ಬಾಹ್ಯದೇಶದೊಳೆ ಕೆಯ್ಮುಗಿದೋದುತೆ ರುದ್ರಸೂ[1]ಕ್ತಮುಂ[1]
ತವೆ ಕಡೆವಾಗಿಲತ್ತ ಸುರಪಂ ನಿಲುತೀಕ್ಷಿಪನೀಶವೇಳೆಯುಂ ೮೩

ಶಿವಭಜನೆಗವಸರಮುನಾ
ರವಿ ಕಾಣದೆ ಪಿಡಿದು ಕಮಳಮಂ ತಿರುಗುವನೊ
ಲ್ದವಿರತಮಿರ್ಪಂ ಶಿರದೊಳ್
ನವೇಂದು ಸಲೆ ಕಾದು ಸಮಯಮುಮಂ ಶಂಕರನಾ ೮೪

೮೧. ಮೊದಲು ಮಾಡಿದ್ದ ಪೂಜೆಯನ್ನು ತೆಗೆದುಹಾಕಿ, ಇವನು ಪೂಜೆ ಮಾಡುವಲ್ಲಿ ಮಲ್ಲಿಗೆಯ ಹೂವಿನ ಪೂಜೆಯನ್ನೂ ಮನಸ್ಸಿಗೆ ತಾರದೆ ನೂಕಿ, ಈಶ್ವರನು ಅಪೇಕ್ಷಿಸಿದ ಕಲ್ಲಿನ ಹೊಡೆತವೆಂಬ ಪೂಜೆಯನ್ನು ಮಾಡಿದ, ಸೌಂಖ್ಯತೊಂಡನ ಕುಮಾರನೋ ? ವ॥ ಅದೂ ಅಲ್ಲದೆ— ೮೨. ಈತನು ವಿಶೇಷವಾದ ಸಲಿಗೆಯಿಂದ ಈ ಶಿವಾಲಯವನ್ನು ಪ್ರವೇಶ ಮಾಡುವುದಕ್ಕೆ ನಂದೀಶ್ವರನೋ ? ದಧೀಚಿಋಷಿಯೋ ? ಭೃಗು ಮಹರ್ಷಿಯೋ ? ಶ್ರೇಷ್ಠನಾದ ಉಪಮನ್ಯುಋಷಿಯೋ ? ಶಿವಾಂಶ ಸಂಭೂತನಾದ ದೂರ್ವಾಸಮುನಿಯೋ ? ೮೩. ವಿಷ್ಣುವೂ ಕೂಡ ಶಿವಗೃಹದ ಒಳಭಾಗವನ್ನು ಪ್ರವೇಶಿಸುವುದಕ್ಕೆ ಹೆದರಿ ದ್ವಾರದ ಮುಂದಿರುವ ಹೊರಾಂಗಣದಲ್ಲಿ ನಿಲ್ಲುತ್ತಾನೆ. ಬ್ರಹ್ಮನು ಅವಕಾಶವನ್ನು ಕೊಡುವವರೆಗೂ ದೇವಾಲಯದ ಹೊರಭಾಗದಲ್ಲೇ ಕೈ ಮುಗಿದು ರುದ್ರಸೂಕ್ತವನ್ನು ಪಠಣಮಾಡುತ್ತ ಇರುತ್ತಾನೆ. ದೇವೇಂದ್ರನು ಕಡೆಯ ಬಾಗಿಲಲ್ಲಿಯೇ ನಿಂತುಕೊಂಡು ಪರಮೇಶ್ವರನ ಸಮಯವನ್ನು ಎದುರು ನೋಡುತ್ತಿರುತ್ತಾನೆ. ೮೪. ಆ ಸೂರ್ಯನು ಪರಮೇಶ್ವರ ಸೇವೆಗೆ ಸಮಯವನ್ನೇ ಕಾಣದೆ, ಕಮಲ ಪುಷ್ಪಗಳನ್ನು ಹಿಡಿದುನಿಂತುಕೊಂಡು ಯಾವಾಗಲೂ ತಿರುಗುತ್ತಿರುತ್ತಾನೆ. ನೂತನ ಚಂದ್ರನು ಶಂಕರನ ಸಮಯವನ್ನು ನಿರೀಕ್ಷಿಸುತ್ತ ಜಡೆಯಲ್ಲೇ ಕುಳಿತುಬಿಟ್ಟಿದ್ದಾನೆ.

1 ಕ್ತಿಯುಂ(ಜ)

ಇಂತಪ್ಪಗ್ಗಿಂತುಟೆಂಬಂದಿವನೆನಿಸಜವಂ ಪೋಗು ನೀನೆಂದೊಡಂ ದು
ರ್ದಾಂತಂ ತಾಂ ಪೋಗನೀ ದೇಗುಲಮನೊಳಪುಗಲ್ವೇಡ ನೀನೆಂದೊಡಂ ಗ
ರ್ವಂ ತಳ್ತಾಮೆಂದುದಂ ಲೆಕ್ಕಿಸದೊಳಪುಗುವಂ ಭಿಕ್ಷು[1]ಕಂಗೇಕಿವಂಗೀ
ಪಂತಂ ಮುನ್ನಿರ್ದರೀತಂ ಬರೆ ಪೆಱತೆಗೆವಪೂಜೆಯುಂ ಮಾಣ್ದು ನಿಚ್ಚಂ ೮೫

ವ॥ ಎಂದು ಕಾಳ್ಗೆಡೆದೀ ಧೂರ್ತ[2]ನ[2]ನೀ ಲಿಂಗಾಲಯಮನೊಳಪುಗದಂತೆ ಮಾಳ್ಪುದೆ ಕಜ್ಜದುಜ್ಜವಣೆಯೆಂದು ಜಡತಪಸ್ವಿಗಳ್ನಿರ್ಧರಿಸಿ ಕವಾಟಬಂಧಂಗೆಯ್ದು ಬಿಯ್ಯಗಮನಿಕ್ಕಿ ಕಾಪಿನಾಳ್ಗಳಂ ನಿಯಾಮಿಸಿ ನಿಚ್ಚಂ ಗುಡಿವುಗುವ ಭಕ್ತನ ಪರಿಯನ್ನಱಿಯಲಕ್ಕುಮೆಂದು ಕೆಯ್ವೊಯ್ದು ನಕ್ಕಾಡುತುಂ ಪೊಳಲ್ಗೆ ತಳರ್ದರನ್ನೆವರಮಿತ್ತಲ್ ಮಧ್ಯರಾತ್ರಿಯಲ್ಲಿ—

ಎಂದಿನಂತೆವೊಲಲ್ಲಿಗೆಯ್ದಿದನೋಹಿಲಂ ಸಕುತೂಹಲಂ
ನಂದಿವಾಹನವಂಗೆ ಕಳ್ಳನೆ ಬಿರ್ಚಿದಂ ಕದಮಂ ಮಹಾ
ನಂದದಿಂದೊಳಪೊಕ್ಕು ಪೂಜಿಸಿ ಮುನ್ನಿನಂತತಿ ಭಕ್ತಿಯಿಂ
ದಿಂದುಮೌಲಿಯನಂತವಂ ಬೆಳಗಪ್ಪುದುಂ ಬನಕೆಯ್ದಿದಂ ೮೬

ವ॥ ಆಗಳಾ ಕಾಪಿನ ಚರಶಿವನವಂಗೆ ಪಡಿದೆಱೆದುದುಮನವನ ವೃತ್ತಾಂತಮುಮನಾ ಪೊಳಲೊಳಿರ್ದ ಗೌಳತಪಸ್ವಿಗಳ್ಗೆ ತಳ್ವದವರಱಿಪಲೊಡನೆ ಕೇಳ್ದು ಮುನ್ನಮುನ್ನತ ಭಕ್ತನೆನಿಪ

೮೫. ಇಂಥಿಂಥವರಿಗೇ ಹೀಗೆಂದಿರುವಾಗ ಇವನೆಷ್ಟರವನು? ನೀನು ನಡೆ ಎಂದರೆ ದುಷ್ಟನಾದ ಇವನು ಹೋಗುತ್ತಿಲ್ಲ ; ನೀನು ದೇಗುಲವನ್ನು ಪ್ರವೇಶಿಸಬೇಡವೆಂದರೆ, ಗರ್ವದಿಂದ ನಮ್ಮ ಮಾತನ್ನೇ ಲಕ್ಷ್ಯಕ್ಕೆ ತಾರದೆ ಒಳಗೆ ಹೋಗುತ್ತಿದ್ದಾನೆ. ಭಿಕ್ಷುಕನಾದ ಇವನಿಗೇಕೆ ಈ ಬಿಂಕ ? ಸತತವೂ ಮೊದಲು ಪೂಜೆಗಾಗಿ ಇಲ್ಲಿದ್ದವರು ಈತನು ಬಂದೊಡನೆ ಪೂಜೆಯನ್ನೇ ಬಿಟ್ಟು ಹಿಂದೆಗೆಯುವರು ವ॥ ಹೀಗೆಂದು ದೂಷಣೆ ಮಾಡಿ, ಈ ಧೂರ್ತನನ್ನು ಶಿವಾಲಯವನ್ನು ಹೊಗದಂತೆ ಮಾಡುವುದೇ ಕಾರ್ಯ ಗೌರವವೆಂದು ಆ ಮೂಢ ತಪಸ್ವಿಗಳು ನಿರ್ಧರಿಸಿ, ಬಾಗಿಲ ಕದಗಳನ್ನು ಮುಚ್ಚಿ, ಬೀಗವನ್ನು ಹಾಕಿ, ಕಾಯುವ ಆಳುಗಳನ್ನು ಗೊತ್ತುಮಾಡಿ, ನಿತ್ಯವೂ ಗುಡಿಯನ್ನು ಹೋಗುವ ಭಕ್ತನ ರೀತಿಯನ್ನು ಇನ್ನು ತಿಳಿಯಬೇಕೆಂದು ಕೈಕೈಕುಟ್ಟಿ ನಕ್ಕಾಡುತ್ತ ಪಟ್ಟಣಕ್ಕೆ ಹೊರಟು ಹೋದರು. ಅಷ್ಟರಲ್ಲಿ ಇತ್ತ ಮಧ್ಯರಾತ್ರಿಯಲ್ಲಿ ೮೬. ಅತ್ಯಂತ ಕುತೂಹಲದಿಂದ ಕೂಡಿ, ಎಂದಿನಂದದಿಂದ ಓಹಿಲದೇವನು ಶಿವಾಲಯಕ್ಕೆ ಬಂದನು. ಆಗ ನಂದಿವಾಹನನಾದ ಶಿವನು ಮೆಲ್ಲನೆ ಕದದ ಬೀಗವನ್ನು ಉಚ್ಚಿ ಕದವನ್ನು ತೆಗೆದನು. ಆಗ ಆಓಹಿಲಯ್ಯನು ಒಳಹೊಕ್ಕು, ಮೊದಲಿನಂತೆ ಅತ್ಯಂತ ಭಕ್ತಿಯಿಂದ ಇಂದು ಮೌಳಿಯನ್ನು ಪೂಜೆಮಾಡಿ, ಬೆಳಗಾಗುವುದರೊಳಗೆ ಕಾಡಿಗೆ ತೆರಳಿದನು. ವ॥ ಆಗ ಆ ದೇವಾಲಯದ ಕಾಪಿನ ಆಳುಗಳು ಶಿವನು ಅವನಿಗೆ (ಓಹಿಲಯ್ಯನಿಗೆ) ಕದವನ್ನೂ ತೆರೆದಿದ್ದನ್ನೂ, ಅವನ ವೃತ್ತಾಂತವನ್ನೂ ಆಪಟ್ಟಣದಲ್ಲಿದ್ದ ಗೌಳತಪಸ್ವಿಗಳಿಗೆ ತಡಮಾಡದೆ

1 ಕ್ಷಿ(ಜ, ಮು) 2 × (ಚ, ಜ, ಮು)

ಕಿನ್ನರಯ್ಯಂಗೆ ವರದತ್ರಿಪುರಾಂತಕೇಶ್ವರಂ ಸದಮಳಗುಣಿ ಮುದನೂರ ದಾಸಯ್ಯಂಗಮಾ ರಾಮೇಶ್ವರಂ ತಿರುಮಡಕಡೆಯೊಳ್ಮೃಡದೃಢಭಕ್ತನೆನಿಪೊಡೆಯ ಪಿಳ್ಳರ್ಗಮಾ ಬ್ರಹ್ಮೇಶ್ವರಂ ತ್ರ್ಯಂಬಕನಂ ನಂಬಿ ಭಜಿಪ ನಿಂ[1]ಬಿಗೆ ಸಪ್ತದಿವಸಂಬರಮಾ ಪುರದಂಬಿಕೇಶ್ವರಂ ಕದಂದೆಗೆದೊಳಪುಗಿಸಿದ ವಾರ್ತೆಯುಂ ಕೇಳ್ದು ಬಲ್ಲೆವವಂದಿರೊಳೀತನಾರಂ ಪೋಲ್ವನಿವಂಗೆ ಶಿವಂ ಪಡಿದೆಱೆದನೆಂಬುದು ನನ್ನಿಯಲ್ತು ಕಾನನಚರಂ ಕಪಟೋಪಾಯದಿಂ ದೇಗುಲದ ಬಾಗಿಲಂ ಬಿರ್ಚುತೊಳಗಂ ಪೊಕ್ಕು ತನ್ನ ಟವಟದ ಪೂಜೆಯುಂ ಬಿತ್ತರಿಸಿ ತಳರ್ದನಕ್ಕುಮೀ ಧೂರ್ತನನೀ ತಾಣದಿಂ ಪೊಱಮಡಿಸಿ ಕಳೆವುದೆ ನಿಶ್ಚಿತ ಕಾರ್ಯ ಮಕ್ಕುಮೆಂದು ನಿರ್ಧರಿಸುತಿವಂಗೆ ಭಿಕ್ಷೆಯನಿಕ್ಕದೊಡೆ ತಾನೆ ಪೊಱಮಟ್ಟು ಪೋಪನೆಂದು ಭಿಕ್ಷಾ[2]ನ್ನಂ ಪುಟ್ಟದಂತೆಸಗಲೊಡನೋಹಿಲಯ್ಯಂ ಧೈರ್ಯಗುಂದದೆ—

ದಳಗತಜಲಕಣಕಂದಾ
ನಿಳಫಳಮೂಲಾದನಂಗಳಿಂ ಭಕ್ತಿರಸೋ
ನ್ಮಿಳಿತ ತಪಮಾಂತು ಕರುಣಾ
ನಿಳಯನನರ್ಚಿಸರೆ ಶಿವನನೆವ್ಮಯ ಭಕ್ತರ್ ೮೭

ಹೋಗಿ ಹೇಳಲು ಅವರು ಕೇಳಿ, ಈ ಪೂರ್ವದಲ್ಲಿ ಶ್ರೇಷ್ಠನಾದ ಕಿನ್ನರಿಯ ಬೊಮ್ಮಯ್ಯನಿಗೆ ವರಪ್ರದಾಯಿಕನಾದ ತ್ರಿಪುರಾಂತಕೇಶ್ವರನೂ, ಪವಿತ್ರ ಗುಣಿಯಾದ ಮುದನೂರಿನ ದೇವರ ದಾಸಮಾರ್ಯನಿಗೆ ಆ ರಾಮೇಶ್ವರನೂ, ತಿರುಮಡ ಕಡೆಯೊಳಗೆ ಮೃಡಭಕ್ತನೆಂದೆನಿಸಿದ ಒಡೆಯ ಪಿಳ್ಳರಿಗೆ ಆ ಬ್ರಹ್ಮೇಶ್ವರನೂ, ತ್ರ್ಯಂಬಕೇಶ್ವರನನ್ನು ನಂಬಿ ಸ್ತೋತ್ರ ಮಾಡುತ್ತಿದ್ದ ನಿಂಬಿಗೆ ಏಳುದಿನಗಳವರೆಗೆ ಆ ಪುರದ ಅಂಬಿಕೇಶ್ವರನೂ, ಕದವನ್ನು ತೆಗೆದು ಒಳಗೆ ಹುಗಿಸಿದ ವಾರ್ತೆಯನ್ನು ಕೇಳಿ ತಿಳಿದಿದ್ದೇವೆ. ಅವರುಗಳ ಹಾಗೆ ಈ ಓಹಿಲಯ್ಯನು ಯಾರನ್ನು ಯಾರನ್ನು ಹೋಲುವನು ? ಇವನಿಗೆ ಶಿವನು ಬಾಗಿಲು ತೆರೆದನೆಂಬುದು ಸತ್ಯವಲ್ಲ. ಆ ಅರಣ್ಯ ಸಂಚಾರಿ ಓಹಿಲಯ್ಯನು ಕಪಟೋಪಾಯದಿಂದ ದೇಗುಲದ ಬಾಗಿಲ ಬೀಗವನ್ನು ಬಿಚ್ಚಿ ಒಳಗೆ ಹೊಕ್ಕು ತನ್ನ ಕಾಟಾಚಾರದ ಪೂಜೆಯನ್ನು ಮುಗಿಸಿ ಹೊರಟು ಹೋಗಿರಬೇಕು. ಈ ಧೂರ್ತನನ್ನು ಈ ಸ್ಥಾನದಿಂದ ಹೊರ ಹೊರಡಿಸಿ ಕಳೆಯುವುದೇ ನಿಶ್ಚಯವಾಗಿ ಮಾಡಬೇಕಾದ ಕಾರ್ಯವೆಂದು ನಿರ್ಧಾರ ಮಾಡುತ್ತ, ಅವನಿಗೆ ಭಿಕ್ಷೆಯನ್ನು ಹಾಕದಿದ್ದರೆ ತಾನೇ ಈ ಊರನ್ನು ಬಿಟ್ಟು ಹೋಗುತ್ತಾನೆ. ಎಂದು (ಆ ಊರಿನಲ್ಲಿ ಅವನಿಗೆ) ಭಿಕ್ಷಾನ್ನವೇ ಹುಟ್ಟದ ಹಾಗೆ ಮಾಡಲು ಓಹಿಲಯ್ಯನು ಧೈರ್ಯಗುಂದದೆ ೮೭. ಎಲೆಗಳ ಮೇಲೆ ಕುಳಿತ ನೀರಿನ ಕಣಗಳು, ಗೆಡ್ಡೆ, ಗೆಣಸು, ಹಣ್ಣು, ಗಾಳಿ ಇವುಗಳನ್ನು ತಿನ್ನುವುದರಿಂದ ಭಕ್ತಿರಸದಿಂದ ಅರಳಿ ಹೋಗಿ ತಪಶ್ಚರ್ಯೆಯನ್ನು ಮಾಡಿ ಕರುಣಾ ನಿಲಯನಾದ ಶಿವನನ್ನು ಅರ್ಚಿಸ

1 ನಂ(ಅ) 2 ನ್ನಮಂ(ಚ)

ಪರಮಮುಕ್ತಿಕಾಂಕ್ಷಿಗಳ್ಭು
ಕ್ತಿರಸಂ ದೊರೆಯದೊಡದೆಂತೊ ಕಳವಳಿಪರ್ದು
ಸ್ತರಸಂಕಟಮೆಯ್ದಿಯುಮಿೂ
ಶ್ವರಭಕ್ತರದೆಂತು ಸೆಡೆದು ವಿಹ್ವಳರಪ್ಪರ್ ೮೮

ಭುಕ್ತಿಗೆಳಸುತ್ತೆ ತಿರುಗುವ
ಭಕ್ತನನಿವನುದರಪೋಷಕಂ ನಿಜಮೆನುತುಂ
ಮುಕ್ತಿಪ್ರದಾನಸತತೋ
ದ್ಯುಕ್ತಂ ಮೃಡನೆಂತು ನಗದೆ ಮಾಣ್ಬನೊ ಜಗದೊಳ್ ೮೯

ತನುಪೆರ್ಚುಗುಮನ್ನದಿನಾ
ತನುವಿಂದಂ ಕಾಮಮುರ್ಬುಗುಂ ಕಾಮದಿನಾ
ಮನಮದು ವಿಕರಿಪುದಾ ದು
ರ್ಮನದಿಂ ನಿಜಭಕ್ತಿಯಳಿಗುಮವನೀತಳದೊಳ್ ೯೦

ಆ ಪರಮಭಕ್ತಿಯಳಿದೊಡೆ
ಲೋಪಂ ತಗುಳ್ಗುಂ ಸಮಸ್ತ ಸತ್ಕ್ರಿಯೆಗ[1]ದಱಿಂ
ದಾಪತ್ಕರ ಸಂಸಾರಾ
ಕೂಪಾರಾಪಾರವಾರಿಯೊಳ್ನರನಾಳ್ಗುಂ ೯೧

ಲಿಲ್ಲವೇ ? ೮೮. ಉತ್ಕಟವಾದ ಮೋಕ್ಷಾಪೇಕ್ಷಿಗಳು ಅನ್ನ ನೀರುಗಳು ಸಿಗದಿದ್ದರೆ, ಅದು ಹೇಗೆ ವ್ಯಾಕುಲಕ್ಕೊಳಗಾದಾರು ? ದುಸ್ತರವಾದ ಸಂಕಟ ಪ್ರಾಪ್ತವಾದರೂ ಈಶ್ವರನ ಭಕ್ತರು ಭಯದಿಂದ ವಿಹ್ವಲಗೊಳ್ಳುವರೇನು ? ೮೯. ಜಗತ್ತಿನಲ್ಲಿ ಅನ್ನ ವನ್ನಪೇಕ್ಷಿಸಿ ತಿರುಗುವ ಭಕ್ತನನ್ನು ಮೋಕ್ಷವನ್ನು ಕೊಡುವುದರಲ್ಲಿ ಸತತ ಉದ್ಯುಕ್ತನಾದ ಶಿವನನು ಇವನು ಕೇವಲ ಉದರಪೋಷಕನೆಂದು ನಗದೆ ಹೇಗೆ ಬಿಟ್ಟಾನು? ೯೦. ಲೋಕದಲ್ಲಿ ಅನ್ನದಿಂದ, ದೇಹವು ಬೆಳೆಯುವುದು ; ಅಂಥ ದೇಹದಿಂದ ಕಾಮವು ಉಬ್ಬುವುದು ; ಕಾಮದಿಂದ ಆ ಮನಸ್ಸು ವಿಕಾರಗೊಳ್ಳುವುದು ; ಅಂಥ ದುಷ್ಟ ಮನಸ್ಸಿನಿಂದ ನಿಜವಾದ ಭಕ್ತಿಯು ನಾಶಹೊಂದುವುದು. ೯೧. ಅಂತಹ ಶ್ರೇಷ್ಠ ಭಕ್ತಿಯು ನಾಶವಾದರೆ, ಸಕಲ ಸದಾಚಾರಗಳಿಗೂ ಭಂಗವುಂಟಾಗುವುದು ; ಆದರಿಂದ ಮನುಷ್ಯನು ವಿಪತ್ತನ್ನುಂಟುಮಾಡುವ ಜನನ ಮರಣಾತ್ಮಕವಾದ ಸಂಸಾರವೆಂಬ ಪಾದರಹಿತವಾದ

---

1 ಯ(ಜ)

ತಾನುಳಿಯಲ್ವೇಳ್ಕುಂ ವಿಷ
ಯಾನೀಕಮನಮಳ ಭಕ್ತಿಪರನದು ತನಗೆ
ತ್ತಾನುಂ ದೊರೆಯದೊಡಿದು ಗಿರಿ
ಶಾನುಗ್ರಹಮೆಂಬ ಬಗೆಯನಾನಲ್ವೇಡಾ ೯೨

ವ॥ ಎಂದಂಗದಿಚ್ಛೆಯನಂಗೀಕರಿಸದಭಂಗಧೈರ್ಯನಾಗಿ ಮತ್ತಮಿರದೆ—

ಕಪಟಮನಸ್ಕರಿಂತೆಸಪ ಕೈತವಮೇನನೊಡರ್ಚಲಾರ್ಪುದೀ
ಕುಪರಿಗೆ ಬಳ್ಕೆನಳ್ಕೆನಣಮಿಂದು ಕಪರ್ದಿಯ ಸತ್ಕೃಪಾಮರಾಂ
ಘ್ರಿಪಮಿಂದು ಸತ್ಫಳಂ ಬಡೆದುದೆನ್ನ ಮನೋರಥಮಿಂದು ಪೂರ್ಣಮಾ
ಯ್ತಪರಿಮಿತಂ ಸುಖಂ ನೆಱೆದುದಾದೆನುಮಾಧವಭಕ್ತಿಭಾಜನಂ ೯೩

ಪೊಡವಿಯೊಳೆ ಕೂರದರ್ಸೀಱಂ
ತೊಡೆ ಮದುವೆಯ ಕಾರ್ಯಮಳಿದಪುದೆಯೆಂಬವೊಲೀ
ಜಡಮತಿಗಳ್ಮುನಿದೊಡೆ ಮ
ನ್ಮೃಡಭಕ್ತಿಯ ಕಜ್ಜಮೆಂತುಮೇನುಳಿದಪುದೇ ೯೪

ಮುನಿದೇಗೆಯ್ವರೊ ತಮ್ಮಯ
ಮನೆಗೆಯ್ದುವ ಬಾಧೆ ಪಿಂಗಿದುದು ತಿರಿದುಣ್ಬೋ
ದನಮಾತ್ರಂ ಪೋದುದು ಬಳಿ
ಕೆನಗೆನ್ನಯ ಭಕ್ತಿಭಾಗ್ಯಮಂ ಸೆಳೆದಪರೇ ೯೫

(ಅನಂತವಾದ) ನೀರಿನಲ್ಲಿ ಮುಳುಗುವವನು. ೯೨. ಅಮಳ ಭಕ್ತಿಮಾರ್ಗದಲ್ಲಿ ಹೋಗುವವನು ವಿಷಯ ಸುಖಗಳ ಸಮೂಹವನ್ನು ಬಿಡಬೇಕು. ಅದು (ಆ ಅನ್ನವು) ತನಗೆ ಯಾವ ರೀತಿಯಿಂದಲೂ ಸಿಗದಿದ್ದರೆ, ಇದೂ ಈಶ್ವರನ ಅನುಗ್ರಹವೇ ಎಂದು ತಿಳಿಯಬೇಡವೇ ? ವ॥ ಹೀಗೆಂದು ದೇಹದ ಮೇಲಿನ ಇಚ್ಛೆಯನ್ನು ಮನಸ್ಸಿಗೆ ತಂದುಕೊಳ್ಳದೆ, ಅಖಂಡ ಧೈರ್ಯವುಳ್ಳವನಾಗಿ ಮತ್ತು ತಪ್ಪದೆ ೯೩. ಕಪಟ ಮನಸ್ಸಿನವರಾದ ಆ ಗೌಡ ತಪಸ್ವಿಗಳು ಮಾಡುವ ಈ ಕಪಟೋದ್ಯೋಗವು ಏನನ್ನುತ್ತಾನೆ. ಮಾಡಲು ಸಮರ್ಥವಾದೀತು? ಈ ಅಹಿತರಾದವರಿಗೆ ನಾನು ಸ್ವಲ್ಪವೂ ಬಳುಕುವುದಿಲ್ಲ. ಅಳುಕುವುದಿಲ್ಲ. ಈ ದಿವಸ ಪರಮೇಶ್ವರ ಸತ್ಕೃಪೆಯೆಂಬ ಕಲ್ಪವೃಕ್ಷವು ಸತ್ಫಲವನ್ನು ಬಿಟ್ಟಂತಾಯಿತು ; ಇಂದು ನನ್ನ ಮನೋರಥವು ಪೂರ್ಣವಾಯಿತು. ಅಪರಿಮಿತವಾದ ಸುಖವು ಪ್ರಾಪ್ತವಾದಂತಾಯಿತು. ಶಿವನ ಭಕ್ತಿಗೆ ಪಾತ್ರನಾದೆನು. ೯೪. ಲೋಕದಲ್ಲಿ ಪ್ರೀತಿಸಿದವರು ಸೀತರೆ ಮದುವೆಯ ಕಾರ್ಯವೇ ನಾಶವಾಗುವುದೇ ? ಎಂಬ ಲೋಕೋಕ್ತಿಯಂತೆ ಈ ಮೂಢಬುದ್ಧಿಯವರು ಕೋಪಿಸಿಕೊಂಡರೆ ನನ್ನ ಶಿವಭಕ್ತಿಯ ಕಾರ್ಯವು ನಿಂತು ಹೋದೀತೇನು ? ೯೫. ಅವರು ಕೋಪಗೊಂಡು ನನ್ನನ್ನು ಮಾಡುವುದೇನು ? ನಾನು ಅವರುಗಳ ಮನೆಗೆ ಹೋಗುವ ಬಾಧೆ ತಪ್ಪಿದಂತಾಯಿತು ; ತಿರಿದುಣ್ಣುವ ಅನ್ನ ಮಾತ್ರ ಹೋಯಿತು, ನನ್ನ ಭಕ್ತಿಯೆಂಬ ಐಶ್ವರ್ಯವನ್ನೇನಾದರೂ

ಉದರಾರ್ಥಂ ಭಿಕ್ಷೆಯಂ ಕಾಂಕ್ಷಿಪುದು ಶಿವಪದಧ್ಯಾನಮೇನಪ್ಪುದೇ ತ
ಪ್ಪದೆ ತತ್ತದ್ಗೇಹಗೇಹಪ್ರಗಮನಮಭವಾವಾಸಮಂ ಸುತ್ತಿದಂತ
ಪ್ಪುದೆ ನಿಚ್ಚಂ ಭಿಕ್ಷೆಯಂ ಬೇಡುವುದು ಮೃಡನ ಸದ್ಭಕ್ತಿಯಂ ಬೇಡಿದಂತ
ಪ್ಪುದೆ ನಾನಾನ್ನಂಗಳಂ ಸಂಗ್ರಹಿಪುದಮಳ ಪುಷ್ಪೌಘಪತ್ರಾಳಿಯಂ ದಲ್ ೯೬

ತವೆ ತಿಱಿದು ಸಂಗ್ರಹಂಗೆ
ಯ್ದುವೊಲಪ್ಪುದೆ ಭೋಜನಾಭಿರತಿ ಶಿವಪೂಜೋ
ತ್ಸವರತಿಯಪ್ಪುದೆ ರಸಮಂ
ಸವಿವುದು ಶಿವಭಾವನಾಮೃತಾಸ್ವಾದನಮೇ ೯೭

ಬಯಸಲ್ಪಡದಾವುದು ಶಿವ
ನಿಯಮಿತಮೇಳ್ತರ್ಪುದದನೆ ಸಲೆ ಬಹಿರಂತ
ರ್ನಿಯತಾರ್ಪಣಾವಧಾನದೆ
ನಯದಿಂ ನಿಜಲಿಂಗದೊಡನೆ ಭೋಗಿಪುದುಚಿತಂ ೯೮

ತಲೆಯುರುಳ್ದೊಡಮಸುವಳಿದೊಡ
ಮಲಘುತರ ಪ್ರಾಣಲಿಂಗನಿಷ್ಠಾನಿಧಿ ಸಂ
ಚಲಮತಿಗಳಂತೆ ವಿಷಯಾ
ವಿಲಸುಖಮಂ ಬಗೆದು ಬಯಸಿ ಬೇಳಾದಪನೇ ೯೯

ವ॥ ಎಂದು ವೈರಾಗ್ಯಭಾವಮನವಲಂಬಿಸಿ ಮಂದಸ್ಮಿತಾಸ್ಯಂ ಧೃತಿಗುಂದದೆ—

ಸೆಳೆದುಕೊಂಡರೇನು ? ೯೬–೯೮. ಉದರಪೋಷಣಾರ್ಥವಾಗಿ ಭಿಕ್ಷೆಯನ್ನು ಬೇಡುವುದು ಶಿವ ಪದಧ್ಯಾನವಾದೀತೇನು? ತಪ್ಪದೆ ಅಪರವರ ಮನೆ ಮನೆಗಳನ್ನು ತಿರುಗುವುದು ಶಿವ ದೇವಾಲಯವನ್ನು ಸುತ್ತಿದಂತಾದೀತೇ ? ನಿತ್ಯವೂ ಭಿಕ್ಷೆಯನ್ನು ಬೇಡುವುದು ಈಶ್ವರನ ಸದ್ಭಕ್ತಿಯನ್ನು ಬೇಡಿದಂತಾದೀತೇ ? ಬೇರೆ ಬೇರೆ ಅನ್ನಗಳನ್ನು ಸಂಗ್ರಹಿಸುವುದು ನಿಜವಾಗಿ ಶ್ರೇಷ್ಠ ಪುಷ್ಪಪತ್ರೆಗಳನ್ನು ಹೆಚ್ಚಾಗಿ ಎತ್ತಿ ತಂದು ಸಂಗ್ರಹ ಮಾಡಿದಂತಾದೀತೇ ? ಊಟದಲ್ಲಿನ ಆಸಕ್ತಿಯು ಶಿವ ಪೂಜೆಯ ಉತ್ಸವದಲ್ಲಿನ ಪ್ರೀತಿಯೆನಿಸೀತೇ ? ರುಚಿಯನ್ನಾಸ್ವಾದಿಸುವುದು ಶಿವ ಧ್ಯಾನವೆಂಬ ಅಮೃತವನ್ನು ಕುಡಿದಂತಾದೀತೇ ? ಬಯಸದೆಯೇ ಆವುದು ಈಶ್ವರನಿಂದ ಪ್ರೇರಿತವಾಗಿ ಬರುವುದೋ ಅದನ್ನೇ ಚೆನ್ನಾಗಿ ಒಳ ಹೊರಗೆ ನಿಯಮದಿಂದ ಸಮರ್ಪಣೆ ಮಾಡುವ ಎಚ್ಚರಿಕೆಯಿಂದ ಕೂಡಿ ನೀತಿಯಿಂದ ಇಷ್ಟಲಿಂಗದೊಡನೆ ಉಪಭೋಗ ಮಾಡುವುದು ಉಚಿತವಾದದ್ದು. ೯೯. ತಲೆಯುರುಳಿದರೂ, ಪ್ರಾಣವು ಹೋದರೂ ಅತ್ಯಂತ ಮಹತ್ತರವಾದ ಪ್ರಾಣಲಿಂಗದಲ್ಲಿಡಲ್ಪಟ್ಟ ಶ್ರದ್ಧೆಗೆ ನಿಧಿಯೆನಿಸಿದವನು ಚಪಲ ಬುದ್ಧಿಯುಳ್ಳವರಂತೆ ವಿಷಯ ಸುಖಗಳಿಂದ ಮಲಿನಗೊಂಡ ಸೌಖ್ಯವನ್ನು ಯೋಚಿಸಿ, ಇಚ್ಛಿಸಿ, ಮೂರ್ಖನೆನಿಸನು. ವ॥ ಹೀಗೆಂದು ವೈರಾಗ್ಯ ಭಾವವನ್ನು ಹೊಂದಿದವನಾಗಿ ಮುಗುಳುನಗೆಯಿಂದ ಕೂಡಿದ ಓಹಿಲಯ್ಯನು

ಸೇವಿಸಿದಂಗೆ ಸನ್ಮತಿಯನೀಶ್ವರಭಕ್ತಿಯನಂಗಜೀವ ಚೇ
ತೋವಿಮಳತ್ವಮಂ ಕವಿತೆಯೊಳ್ಪನುಮಾಧಿಪಸುಪ್ರಸಾದ ಸೌ
ಖ್ಯಾವರಣತ್ವಮಂ ಸಕಳಸಿದ್ಧಿಯನೊಲ್ದ ಜರಾಮರತ್ವಮಂ
ಪಾವನಮುಕ್ತಿಯಂ ಪದೆದು ಸಾರ್ಚುಗುಮಿೞ ಜಗದೊಳ್ನಿರಂತರಂ ೧೦೦

ಇದು ಶಿವನಿರ್ಮಾಲ್ಯಂ ದಿಟ
ಮಿದನೊಲ್ದಾಂ ಸೇವಿಸುತ್ತೆ ಪೂಜಿಪೆನನಿಶಂ
ಮದನಾರಾತಿಯ ಸದಮಳ
ಪದಕಮಳಮನೆಂದು ಭಕ್ತನುತ್ಸವಿಸುತ್ತುಂ ೧೦೧

ಇರುಳೊಳ್ಶಿವಂಗೆ ಪೂಜೆಯ
ವಿರಚಿಸಿ ಕಡೆದೆಗೆದ ಕುಸುಮಪತ್ರಾಳಿಯನಾ
ದರದಿಂ ಬೆಳಗಪ್ಪುದುಮಾ
ಶರಣಂ ಸವಿಸವಿದು ಮುದಮನಾಳ್ದೊಪ್ಪಿರ್ದಂ ೧೦೨

ವ॥ ಆ ಗೌಳತಪಸ್ವಿಗಳಾತನ ಬಗೆಗಂಡು ವಿಸ್ಮಯಮುತ್ತು ಮತ್ತಮಿಂದೀ ದುರುಳನೀ ವುಪಾಯದಿಂ ಬರ್ದುಂಕಿದಪನೀ ನಿರ್ಮಾಲ್ಯಮನೆಲ್ಲಮಂ ದಹಿಸಿ ಮೆಲ್ವೊಡಿಲ್ಲದೊಡೆತಾನೆ ಮೃತಮಾದ ಪನೆಂದು ದುರ್ಜನರ್ನೆನೆ[1]ದಾ ಪತ್ರಪುಷ್ಪಂಗಳಂ ತಮ್ಮ ವಿವೇಕಮಂ ಸುಡುವಂತೆ ಸುಟ್ಟು ಬೂದಿಯಂ

ಧೈರ್ಯಗೆಡದೆ– ೧೦೦. ಈ ಲೋಕದಲ್ಲಿ ಸದಾ ಈಶ್ವರ ಪ್ರಸಾದಸೇವನೆ ಮಾಡಿದವನಿಗೆ ಆ ಪ್ರಸಾದವೇ ಸದ್ಬುದ್ಧಿಯನ್ನೂ, ಈಶ್ವರ ಭಕ್ತಿಯನ್ನೂ, ದೇಹ, ಮನ, ಪ್ರಾಣಗಳಲ್ಲಿ ನೈರ್ಮಲ್ಯವನ್ನೂ, ಕವಿತಾಶಕ್ತಿಯನ್ನೂ, ಒಳಿತನ್ನೂ, ಪರಮೇಶ್ವರನ ಅನುಗ್ರಹ ದಿಂದಾದ ಸೌಖ್ಯ, ಸೌಖ್ಯದ ಆವರಣವನ್ನೂ, ಸಕಲಸಿದ್ಧಿಗಳನ್ನೂ, ಮುಪ್ಪು, ಸಾವುಗಳಿಲ್ಲ ದಿರುವಿಕೆಯನ್ನೂ ಪವಿತ್ರವಾದ ಮುಕ್ತಿಯನ್ನೂ ಪ್ರೀತಿಯಿಂದ ಉಂಟುಮಾಡುವುವು. ೧೦೧–೧೦೨. ಈ ಹೂವುಗಳು ಶಿವನಮೇಲೆರಿಸಿದವು ನಿಜ. ಇವನ್ನೇ ಬಲಿದು ನಾನು ಸೇವನೆ ಮಾಡುತ್ತ, ಸತತವೂ ಆ ಪರಶಿವನ ಪವಿತ್ರವಾದ ಪಾದ ಕಮಲವನ್ನು ಪೂಜಿಸು ತ್ತೇನೆಂದು ಭಕ್ತನಾದ ಓಹಿಲಯ್ಯನು ಸಂತೋಷಪಡುತ್ತ, ರಾತ್ರಿಯ ಕಾಲದಲ್ಲಿ ಶಿವ ನನ್ನೂ ಪೂಜೆ ಮಾಡುತ್ತ ಬೆಳಗಾಗಲು ಒಂದು ಪಾರ್ಶ್ವಕ್ಕೆ ತೆಗೆದಿಟ್ಟ ಶಿವನ ಮೇಲೇರಿಸಿದ್ದ ಹೂವು ಪತ್ರಿಗಳನ್ನೇ ಆಹಾರವಾಗಿ ಸ್ವೀಕರಿಸಿ ಸಂತೋಷಗೊಂಡವನಾಗಿ ಶೋಭಿಸುತ್ತಿ ದ್ದನು. ವ॥ ಆಗ ಆ ಗೌಳತಪಸ್ವಿಗಳು ಈ ಓಹಿಲಯ್ಯನ ರೀತಿಯನ್ನು ಕಂಡು, ಆಶ್ಚರ್ಯ ಗೊಂಡು ಪುನಃ ಬಿಡದೆ ಈ ಹುಚ್ಚನು ಹೂ ಪತ್ರಿಗಳನ್ನು ತಿನ್ನುವ ಈ ಉಪಾಯದಿಂದ ಬದುಕುತ್ತಿದ್ದಾನೆ. ಈ ಶಿವನ ಮೇಲೇರಿಸಿರುವ ನಿರ್ಮಾಲ್ಯಗಳನ್ನೆಲ್ಲ ಸುಟ್ಟುಬಿಟ್ಟರೆ ತಿನ್ನಲೇನೂ ಸಿಗದೆ ತಾನಾಗಿಯೇ ಸಾಯುತ್ತಾನೆ. ಎಂದು ಆ ದುರ್ಜನರು ಸೇರಿ ತಮ್ಮ

---

[1] ರಿ (ಚ, ಮ)

ನೆಗಳ್ವಲೊಡನಾ ಮಱುದಿನದುದಯದೊಳಾ ಬೂದಿಯುಂ ವೈರಾಗ್ಯಭಾಗ್ಯಧುರಂಧರನೋಹಿಲಯ್ಯ ನೊಯ್ಯನಭೀಕ್ಷಿಸಿ ಪರಮಾನಂದಮಂ ತಾಳ್ದು—

ಮೊದಲಿದು ಶಿವನಿರ್ಮಾಲ್ಯಂ
ಪದೆದೀಗಳ್ಭಸಿತಮಾದುದೆನ್ನಯ ಸುಕೃತಾ
ಭ್ಯುದಯಕೆಣೆಯೊಳವೆ ಶಿವಕೃಪೆ
ಯೊದವಿದುದೆನಗಮಮ ಧನ್ಯನಾದೆಂ ಜಗದೊಳ್ ೧೦೩

ನವನೀತಂ ನವಘೃತಮಾ
ದವೊಲಿನಿವಾಲ್ಪಾಯಸಾನ್ನಮಾದಂತೆವೊಲೈ
ಕ್ಷವರಸಮದು ಶರ್ಕರೆಯಾ
ದವೊಲೆಳೆಮುತ್ತಾದ ತೆಱದೆ ವಿಮಳಾಂಬುಕಣಂ ೧೦೪

ಕನಕಮಪರಂಜಿಯಾದವೊ
ಲಿನಿಗಾಯ್ತನಿವಣ್ಣಲಾದ ತೆಱದಿಂದೀಗ
ಳ್ಪನ ಶಿವನಿರ್ಮಾಲ್ಯಂ ಪಾ
ವನಭಸಿತಮಿದಾದುದರರೆ ಪುರಹರಕೃಪೆಯಿಂ ೧೦೫

ಅನಿಮಿತ್ತಬಂಧು ಕರುಣಾ
ವನನಿಧಿ ಸೋಮೇಶನೆನಗೆ ದಯೆಗೆಯ್ದಂ ಪಾ
ವನಭಸಿತಭಕ್ಷಣಮನಿದ
ನನವರತಂ ಸವಿದು ತನ್ನನೊಲಿದರ್ಚಿಸುವೆಂ ೧೦೬

ಸತ್ಯಮಯಮಾದ ವೇದಂ
'ಭೂತ್ಯೈ ನ ಪ್ರಮದಿತವ್ಯಮೆ'ಂದುಂ ಭುವನ
ಸ್ತುತ್ಯಂ 'ಶ್ರಿಯಾಯುಷಂ ದಿವಿ'
ನುತ್ಯಸ್ಫುಟಮಂತ್ರದಿಂದೆ ಬೋಧಿಪುದಲ್ತೇ ೧೦೭

ವಿವೇಕವನ್ನೇ ಸುಟ್ಟುಕೊಳ್ಳುವ ಹಾಗೆ ಆ ಪತ್ರಿ ಪುಷ್ಪಗಳನ್ನೆಲ್ಲ ಸುಟ್ಟು ಬೂದಿಯನ್ನು ಮಾಡಲಾಗಿ ಒಡನೆಯೇ ಮರುದಿನ ಉದಯದ ಹೊತ್ತಿಗೆ ಆ ವೈರಾಗ್ಯದುರಂಧರನಾದ ಓಹಿಲಯ್ಯನು ಆ ಬೂದಿಯನ್ನು ಕಂಡು, ಪರಮಾನಂದವನ್ನು ಹೊಂದಿ– ೧೦೩. 'ಈ ಬೂದಿಯು ಮೊದಲು ಶಿವನ ಮೇಲೇರಿಸಿದ್ದ ಪತ್ರಿ ಪುಷ್ಪವಾಗಿತ್ತು. ಈಗಲಾದರೋ ನನ್ನ ಮೇಲಿನ ಪ್ರೀತಿಯಿಂದಲೇ ಭಸ್ಮವಾಗಿದೆ. ನನ್ನ ಪುಣ್ಯದ ಉದಯಕ್ಕೆ ಸಾಟಿಯುಂಟೇ ? ನನಗೆ ಶಿವನ ಕೃಪೆಯುಂಟಾಯಿತು. ಅಮಮ ! ಜಗತ್ತಿನಲ್ಲಿ ನಾನೇ ಕೃತಾರ್ಥನಾದೆನು.' ೧೦೪–೧೦೫. 'ಬೆಣ್ಣೆಯು ಹೊಸ ತುಪ್ಪವಾದಹಾಗೆ, ಮಧುರವಾದಹಾಲು ಪಾಯಸಾನ್ನವಾದಹಾಗೆ ಕಬ್ಬಿನ ರಸವು ಸಕ್ಕರೆಯಾದ ಹಾಗೆ, ನಿರ್ಮಲ ಜಲಕರ್ಣವು ಎಳೆ ಮುತ್ತಾದ ರೀತಿಯಂತೆ, ಬಂಗಾರವು ಅಪರಂಜಿಯಾದ ಹಾಗೆ, ದೋರೆಗಾಯಿಯು ಪಕ್ವ ಫಲವಾದ ಹಾಗೆ—ಈಗ ಶ್ರೇಷ್ಠವಾದ ಈ ಶಿವ ನಿರ್ಮಾಲ್ಯವೇ ಪರಮೇಶ್ವರನ ಕೃಪೆಯಿಂದ ಪವಿತ್ರ ಭಸ್ಮವಾಯಿತು. ಅರರೇ !' ೧೦೬–೧೦೮. ಅನಿಮಿತ್ತ ಬಂಧುವೂ,

ಮಾತೇಂ 'ಸ ಏಷ ಭಸ್ಮ
ಜ್ಯೋತಿ'ಯೆನುತ್ತುಂ ದ್ವಿವಾರಮೀಶಾತ್ಮತೆಯುಂ
ಪ್ರೀತಿ ಮಿಗೆ ಪೇಳ್ಗುಮನಿಶಂ
ಭೂತಾದಿ ಸಮಸ್ತವಸ್ತುಪೂರ್ಣತೆಯೊಳ್ಪಂ ೧೦೮

ತವೆ ಬೋಧಿಸುಗುಂ 'ಸರ್ವಂ
ಹವಾಯಿದಂ ಭಸ್ಮ' ವಚನಮಿಂತಖಿಳ ಬುಧ
ಸ್ತವನೀಯ ನಿಗಮಶಿರದಿಂ
ಪ್ರವಿದಿತಮಾಗಿರ್ಪ ವಿಮಳ ಭಸಿತಮಿದಲ್ತೇ ೧೦೯

ಪದಿನೆಂಟು ಪುರಾಣಂಗ
ಳ್ವಿದಿತ ಸ್ಮೃತಿವೇದಶಾಸ್ತ್ರಮಾಗಮನಿವಹಂ
ಪದೆದೀ ಭಸ್ಮದ ಮಹಿಮೆಯು
ಪದಮಂ ಸಲೆ ಪೊಗಳ್ದು ಪೊಗಳ್ದು ಕಡೆಗಂಡಪವೇ ೧೧೦

ಎಂದೆಂಬ ಪೆಂಪು ತನ್ನೊಳ್
ಸಂದ ಮಹಾಭಸಿತಮೆನಗೆ ಸಿದ್ಧಿಸಿದತ್ತೆ
ನ್ನಿಂದಧಿಕರಾರೊ ಧನ್ಯರೊ
ಳಿಂದೆನ್ನಯ ಪುಟ್ಟು ಸಫಲಮಾದುದು ಪೆಜಿತೇಂ ೧೧೧

ಕರುಣಾ ಸಮುದ್ರನೂ ಆದ ಸೋಮೇಶ್ವರನು ನನಗೆ ದಯವನ್ನುಂಟು ಮಾಡಿದನು. ಪವಿತ್ರವಾದ ಈ ಭಸ್ಮದ ಈ ಭಕ್ಷ್ಯವನ್ನು ಸತತವೂ ಸೇವನೆ ಮಾಡಿ, ಈ ಸೋಮೇಶ್ವರ ನನ್ನು ಪ್ರೀತಿಯಿಂದ ಪೂಜಿಸುತ್ತೇನೆ. ಸತ್ಯಮಯವಾದ ವೇದವು 'ಭೂತ್ಯೈನ ಪ್ರಮದಿತ ವ್ಯಂ'' (ಭಸ್ಮದಿಂದ ಪ್ರಮುದಿತನಾಗಬಾರದು)ಎಂದೂ ಲೋಕದ ಜನರಿಂದ ಸ್ತುತ್ಯವಾದ ''ತ್ರಿಯಾಯುಷಂದಿವಿ'' ಎಂಬುದೇ ಮೊದಲಾದ ಸ್ಪಷ್ಟ ಮಂತ್ರದಿಂದ (ಭಸ್ಮದ ಮಹಿಮೆ) ಹೇಳುವುದಿಲ್ಲವೇ ? ಹೆಚ್ಚಿನ ಮಾತಿನಿಂದೇನು ಪ್ರಯೋಜನ ? ''ಸ ಏಷ ಭಸ್ಮಜ್ಯೋತಿಃ'' (ಈ ಭಸ್ಮವೇ ಪರಂಜ್ಯೋತಿ ಸ್ವರೂಪವಾದದ್ದು) ಎನ್ನುತ್ತ ಎರಡು ಸಲ ಈಶ್ವರ ಸ್ವರೂಪತ್ವವನ್ನೂ ಪೃಥಿವ್ಯಾದಿ ಭೂತಾತ್ಮಕವಾದ ಸಮಸ್ತ ವಸ್ತುಗಳಲ್ಲಿ ತುಂಬಿರುವಿಕೆಯ ಸಮೀಚೀನತೆಯನ್ನೂ ಅತ್ಯಂತ ಪ್ರೀತಿಯಿಂದ ಸದಾ ಹೇಳುತ್ತಿರುವುದು. ೧೦೯. 'ಸರ್ವಂಹವಾಯಿದಂ ಭಸ್ಮ' ಅಂದರೆ ಈ ವಿಭೂತಿಯು ಅಂದರೆ ಸಕಲವಸ್ತು ಸ್ವರೂಪದ್ದಾದುದಲ್ಲವೇ ? ಎಲ್ಲ ವಿದ್ವಾಂಸರಿಂದ ಸ್ತೋತ್ರಮಾಡಲ್ಪಟ್ಟ ಉಪನಿಷತ್ತು ಗಳಿಂದ ಪ್ರಸಿದ್ಧ ಗೊಂಡಿರುವ ಪವಿತ್ರವಾದ ಭಸ್ಮವಲ್ಲವೇ ಇದು ! ೧೧೦-೧೧೧. ಹದಿನೆಂಟುಪುರಾಣಗಳು, ಪ್ರಸಿದ್ಧವಾದ ಸ್ಮೃತಿಗಳು, ವೇದಗಳು, ಶಾಸ್ತ್ರಗಳು, ಆಗಮ ಸಮುದಾಯವು ಪ್ರೀತಿಯಿಂದ ಈ ಭಸ್ಮದ ಮಹಿಮಾಶಕ್ತಿಯನ್ನು ಹೊಗಳಿ ಹೊಗಳಿ ಕೊನೆಗೊಂಡವೇ ? ಹೀಗೆನ್ನುವ ಘನತೆ ನನ್ನಲ್ಲಿಯೇ ಉಂಟಾಗುವಂತೆ ಈ ಮಹಾ ಭಸ್ಮ ನನಗೆ ಸಿದ್ಧಿಸಿತು. ಧನ್ಯತೆ ಪಡೆದವರಲ್ಲ ನನಗಿಂತ ಹೆಚ್ಚಿನವರು ಇನ್ನಾರಿದ್ದಾರೆ ? ಇಂದಿಗೆ

ವ॥ ಎಂದು ಸಮ್ಮದಂಬಡೆದಾ ಭಸಿತಮಂ ಕಣ್ದಣಿಯೆ ನೋಡಿ ಮನಂದಣಿಯೆ ಭಾವಿಸಿ ಮೆಯ್ಯಾರೆ ಪೂಸಿ ಪರಮೋತ್ಸವದಿಂ ಸವಿದುಳಿದುದನೆ ಪಾಸುಗೆಯ್ದು ಪಟ್ಟಿರ್ದು ಪರಮಸುಖ ತರಂಗಿಣಿಯೊಳಿವಗಾಹಂಗೆಯ್ದು—

ಪಿಂಗದೆ ಮದೀಯವೇಷಕೆ
ಸಂಗತಮಾದತ್ತಿದೆನ್ನ ಸರ್ವಾಂಗಂ ಸ
ನ್ಮಂಗಳಮಯಮಾದತ್ತೆನು
ತುಂ ಗುಣನಿಧಿ ನಿಚ್ಚನಿಚ್ಚಮೀ ತೆಱದಿಂದಂ ೧೧೨

ಬಿಡದಾಚರಿಸುತ್ತಿರೆ ತ
ಮ್ಮಡಿಗಳದಂ ಕಂಡು ಬೆಕ್ಕಸಂಬಡುತಱಿದೀ
ಪೊಡವಿಯೊಳಿದು ಭಸ್ಮಮನೆಡೆ
ಯುಡುಗದೆ ಸವಿಸವಿದುಮಳಿಯದಿರ್ದಪನೀಗಳ್ ೧೧೩

ತಿಂದಕಟ ಭೂತಿಯುಂ ಮೃತಿ
ಯೊಂದದೆ ಜೀವಿಪುದು ಮಾಯೆಯಿಂದಮೊ ಬಲ್ಮ
ರ್ದಿಂದಮೊ ಬಲ್ಲವರಾರಿದ
ನೆಂದಲ್ಲಿ ಕೆಲಂಬರಾಗಳಾಳೋಚಿಸುತುಂ ೧೧೪

ಅಂಗಜವಿಕಾರಮಶನದ
ಪಂಗು ಕನಲ್ಕೆಯು ಪೊಡರ್ಪು ನಿದ್ರಾಜಾಡ್ಯಂ
ಲಿಂಗಾರ್ಚನಾಭಿರತಭ
ಕ್ತಂಗೆಂದುಂ ಪೊರ್ದವೆಂಬರಾರ್ಯರ್ಧರೆಯೊಳ್ ೧೧೫

ನನ್ನ ಹುಟ್ಟು ಸಫಲವಾಯಿತು (ನನಗೆ) ಇನ್ನೇನು ಬೇಕು ? ವ॥ ಹೀಗೆಂದು ಅತ್ಯಂತ ಸಂತೋಷ ಗೊಂಡವನಾಗಿ ಆ ಭಸ್ಮವನ್ನು ಕಣ್ಣುದಣಿಯುವಂತೆ ನೋಡಿ, ಮನದಣಿಯುವಂತೆ ನೆನೆದು, ದೇಹಕ್ಕೆಲ್ಲ ಧರಿಸಿ, ಪರಮೋತ್ಸಾಹದಿಂದ ತಿಂದು ಉಳಿದದ್ದನ್ನು ಹಾಸಿಗೆಯನ್ನಾಗಿ ಮಾಡಿಕೊಂಡು ಮಲಗಿದ್ದು ಉತ್ಕೃಷ್ಟವಾದ ಸೌಖ್ಯವೆಂಬ ನದಿಯಲ್ಲಿ ಸ್ನಾನ ಮಾಡಿದವನಾಗಿ– ೧೧೨-೧೧೩. ಈ ಭಸ್ಮಲೇಪನವು ನನ್ನ ವೇಷಕ್ಕೆ ಅನುಗುಣವಾದದ್ದಾಯಿತು. ನನ್ನ ಸರ್ವಾಂಗಗಳೂ ಸನ್ಮಂಗಳಮಯವಾದವು– ಹೀಗೆನ್ನುತ್ತ ಆ ಗುಣನಿಧಿಯು ಪ್ರತಿದಿನವೂ ಈರೀತಿಯಿಂದ ತಪ್ಪದೆ ಆಚರಿಸುತ್ತಿರಲು, ಅದನ್ನು ಪೂಜಾರಿಗಳು ಕಂಡು, ಆಶ್ಚರ್ಯಗೊಳ್ಳುತ್ತ, ಲೋಕದಲ್ಲಿ ಇಂಥ ನಡೆ ಅಸಾಧ್ಯ ! ಈಗ ದಿನದಿನವೂ ಸ್ವಲ್ಪವೂ ತಪ್ಪದಂತೆ ಭಸ್ಮವನ್ನು ತಿಂದು ತಿಂದು (ಇವನು) ಸಾಯದೆ ಇದ್ದಾನಲ್ಲ ! ೧೧೪. ಅಯ್ಯೋ ! ವಿಭೂತಿಯನ್ನು ತಿಂದು ಸಾಯದೆ ಜೀವಿಸುತ್ತಿರುವುದು ಮಾಯೆಯಿಂದಲೋ ? ಬಲವಾದ ಔಷಧದಿಂದಲೋ ? ಇದನ್ನು ತಿಳಿದವರಾರು ? ಎಂದು ಅಲ್ಲಿ ಕೆಲವರು ಆಲೋಚಿಸುತ್ತ (ಇದ್ದರು). ೧೧೫. ಲೋಕದಲ್ಲಿ ಆರ್ಯರಾದವರು ಶಿವಪೂಜೆಯಲ್ಲಿ ಆಸಕ್ತಿಯುಳ್ಳ ಭಕ್ತನಿಗೆ ಮನ್ಮಥ ಸಂಬಂಧವಾದ ಮನಸ್ಸಿನ ವಿಕಾರ, ಅನ್ನದ ಹಂಗು, ಕೋಪದ ಆಧಿಕ್ಯ. ನಿದ್ರೆಯ ಜಾಡ್ಯ–ಇವು ಯಾವಾಗಲೂ

ವ॥ ಅದಱಿನೀ ಲಿಂಗಾರ್ಚಕಭಕ್ತಂಗಿದು ಯುಕ್ತಮೆಂದು ನಿರ್ಧರಸಿರ್ದರನ್ನೆವರಮಲ್ಲಿ —

ತಳರ್ದಾಗಳ್ಕೊಂಡು ತತ್ಕಾನನದೊಳೆ ಮೃದುಬಿಲ್ವೀದಳಂ ಗುರ್ಗುಳಂ ಸ
ನ್ಮಳಯೋದ್ಭೂಕಾಷ್ಠಮೆಂದೆಂಬಿವನಸವಸದಿಂ ಕಂಬಿಯೊಳ್ತುಂಬಿ ಪೊತ್ತು
ಗ್ಗಳಿಸುತ್ತಾನಂದದಿಂ ಬಿಡೂಱಿಗೆ ಸೆಡೆಯದಾಘೋರ ಕಾಂತಾರದೊಳ್ನಿ
ಶ್ಚಳಶಂಭುಧ್ಯಾನಸಾಂದ್ರಂ ಬರುತೆಸೆದನತಂದ್ರಂ ಸಮಂತೋಹಿಲೇಂದ್ರಂ ೧೧೬

ಗಿಡುಗಳ ಸರುವಿನ ಸರುವಿನ
ನಿಡುಗಲ್ಗಳ ಬೆಟ್ಟ ಘಟ್ಟದಿಟ್ಟಣದೊಳ್ಮು
ಳ್ಗಡಣದ ಮೆಳೆಗಳ ಪುಲ್ಪೊದ
ಱಿಡೆಯೊಳ್ನಡೆತಂದನೋಹಿಲಂ ಜವದಿಂದಂ ೧೧೭

ಕರಿ ಹರಿ ಪುಲಿ ಪುಲ್ಲೆ ವೃಕಂ
ನರಿ ಶರಭಂ ಸಿಂಹಮುಗ್ರಶಿಖಿ ಫಣಿ ಸಾರ್ತಂ
ದಿರದಾತ್ಮವೈರಮಂ ಮಱೆ
ದುರುಶಾಂತಾತ್ಮಕನನೊಲ್ದು ನೋಡಿದುವಾಗಳ್ ೧೧೮

ಅಸವಸದೊಳೆಯ್ದುತಿರೆ ಕೂ
ರ್ದಸಿಯೊಂದಂಗಾಲೊಳೆಯ್ದೆ ಮೂಡಿದುದಾ ಸಾ
ಹಸಿಯುಳ್ಕದದಕೆ ಮೆಲ್ಲನೆ
ಕುಸಿಕುಸಿದಡಿಯಿಟ್ಟು ನಡೆವುತಿರ್ದಂ ಭಕ್ತಂ ೧೧೯

ಹೊಂದುವುದಿಲ್ಲವೆನ್ನುತ್ತಾರೆ, ವ॥ ಆದ್ದರಿಂದ ಈ ಲಿಂಗಾರ್ಚಕ ಭಕ್ತನಾದ ಓಹಿಲಯ್ಯನಿಗೆ ಇದು ಯುಕ್ತವಾದದ್ದೇ ಸರಿ. ಎಂದು ನಿರ್ಧರಿಸಿದ್ದರು. ಅಷ್ಟರಲ್ಲಿ ಅಲ್ಲಿ– ೧೧೬. ನಿಶ್ಚಲವಾದ ಶಂಭುಧ್ಯಾನದಿಂದ ತುಂಬಿದವನೂ, ಆಲಸ್ಯರಹಿತನೂ ಆದ ಆ ಓಹಿಲೇಂದ್ರನು ಅಡವಿಗೆ ಹೊರಟುಹೋಗಿ. ಅಲ್ಲಿ ಮೃದುವಾದ ಬಿಲ್ವಪತ್ರಿ, ಗುಗ್ಗಳ, ಶ್ರೇಷ್ಠವಾದ ಶ್ರೀಗಂಧದ ಚಕ್ಕೆ—ಇವೇ ಮೊದಲಾದುವನ್ನು ಬೇಗಬೇಗನೆ ಕಂಬಿಯಲ್ಲಿ ತುಂಬಿ ಹೊತ್ತುಕೊಂಡು ಆನಂದದಿಂದ ಉಬ್ಬುತ್ತ ದಪ್ಪನಾದ ಹೊರೆಯನ್ನು ಹೊರುವುದಕ್ಕೆ ಹೆದರದೆ. ಹೊತ್ತುಕೊಂಡು ಘೋರಾರಣ್ಯದಲ್ಲಿ ಶೋಭೆಗೊಂಡು ಚೆನ್ನಾಗಿ ಬರುತ್ತಿದ್ದನು. ೧೧೭. ಓಹಿಲನು ಗಿಡಗಳ, ಸದುವಿನ, ಕಂದರಗಳ, ದೊಡ್ಡದೊಡ್ಡ ಕೋಡುಗಲ್ಲುಗಳಿಂದ ಕೂಡಿದ ಬೆಟ್ಟ ಗುಡ್ಡಗಳ ಸಮೂಹ ಮಧ್ಯದ ಮುಳ್ಳಿನ ಸಮೂಹವುಳ್ಳ ಮೆಳೆಗಳು ಹುಲ್ಲಿನ ಹೊದರುಗಳೇ ಮೊದಲಾದ ಸ್ಥಳಗಳಲ್ಲಿ ಹಾಯ್ದು ನಡೆದು ಬರುತ್ತಿದ್ದನು. ೧೧೮. ಆನೆ, ಸಿಂಹ, ಹುಲಿ. ಜಿಂಕೆ, ತೋಳ, ನರಿ, ಶರಭ, ಸಿಂಹ, ಉಗ್ರವಾದ ನವಿಲು, ಸರ್ಪ ಇವುಗಳೆಲ್ಲ ಹರಿದು ಬಂದು ತಮ್ಮ ತಮ್ಮ ಸಹಜ ವಿರೋಧವನ್ನು ಮರೆತು ಅತ್ಯಂತ ಶಾಂತಿ ಸ್ವರೂಪನಾದ ಓಹಿಲಯ್ಯನನ್ನು ನೋಡಿದವು. ೧೧೯. ಭಕ್ತನಾದ ಓಹಿಲಯ್ಯನು ಅವಸರದಿಂದ ನಡೆದು ಬರುತ್ತಿರುವಾಗ ಒಂದು ಚೂಪಾದ ದಸಿಯು ಕಾಲಲ್ಲಿ ನಟ್ಟು ಹೊರಬರಲಾಗಿ, ಆ ಸಾಹಸಿಯು ಅದಕ್ಕೆ ಹೆದರದೆ

ಬಿಡದೋರೆವಜ್ಜೆಯಿಂ ಪಿ
ಮ್ಮಡದಿಂ ಮುಂಬೆರಲ ಬಲ್ಪಿನಿಂ ಪೆಱವೆಡೆಯುಂ
ನಡೆನಡೆದು ಕೂಂ[1]ಟುತ್ತುಂ ಪೊಱ[3]
ಜಡಿವುತ್ತಿರೆ ಪೊತ್ತು ಬಳ್ಕದೇಳ್ತರುತಿರ್ದಂ ೧೨೦

ವ॥ ಅಂತು [2]ಕುನುಂಗಿ[2] ಕೂಂ[3]ಟುತ್ತುಂ ಬರುತ್ತುಮಿರ್ಪನ್ನೆಗಂ ಭಕ್ತದೇಹಿಕದೇವ ನಿನ್ನಿರಲ್ಬಾರದೆಂದು ಕಾರುಣ್ಯಂದಂದು—

ಅಂದಿಂದ್ರಕೀಲದಲ್ಲಿ ಪು
ಳಿಂದಾಕೃತಿದಾಳ್ದ ಭಾವಮಂ ಭಕ್ತಂಗೊ
ಲ್ದಿಂದುಧರಂ ತೋಱಲ್ಕೇ
ಳ್ತಂದವೊಲೆಯ್ತಂದನಲ್ಲಿ ಶಬರಮಹೇಶಂ ೧೨೧

ತಲೆದಳಿರ್ಗಟ್ಟು ಕೆಂಜೆಡೆ ಜಟಾಫಣಿ ಸುತ್ತಿದ ಬಳ್ಳಿ ಸೂಡಿದು
ಜ್ವಲ ಶಶಿಲೇಖೆ ತಾಳ್ದ ಗಱಿವೂಗಱಿ ಕುಂಜರಕೃತ್ತಿ ನೀಲಮು
ಜುಲವಸನಂ ಫಣೇಶ್ವರಫಣಾಮಣಿ ಗುಂಜಿ ಚಮೂರುಚರ್ಮಮು
ರ್ಗಲಕಟಿಪತ್ರಪಾಳಿ ತನಗೊಪ್ಪಿರೆ ತಾಳ್ದು ವಿಳಾಸದೇಳ್ಗೆಯಿಂ ೧೨೨

ಮೆಲ್ಲ ಮೆಲ್ಲಗೆ ಕುಂಟುತ್ತ ಹೆಜ್ಜೆ ಹಾಕಿ ನಡೆದು ಬರುತ್ತಿದ್ದನು. ೧೨೦. ಬಿಡದೆ ಒಂದು ಕಡೆಗೆ ಬಾಗಿದ ಹೆಜ್ಜೆಯಿಂದ ಹಿಮ್ಮಡದ ಮತ್ತು ಹೆಬ್ಬೆಟ್ಟಿನ ಸಾಮರ್ಥ್ಯದಿಂದ ಕ್ರಮವಾಗಿ ನಡೆ ನಡೆದು ಕುಂಟುತ್ತ ಹೊತ್ತ ಹೊರೆ ಜಡೆಯುತ್ತಿದ್ದರೂ, ಹೊತ್ತು ಕೊಂಡು ಅಲ್ಲಾಡದಂತೆ (ಬಳುಕ್ಕಡದಂತೆ) ಬರುತ್ತಿದ್ದನು. ವ॥ ಆ ರೀತಿ ಬಾಗಿಕೊಂಡು ಕುಂಟುತ್ತ ಬರುತ್ತಿರುವಷ್ಟರಲ್ಲಿ ಭಕ್ತದೇಹಿಕ ದೇವನಾದ ಶಿವನು ಇನ್ನು ತಡೆಯಬಾರ ದೆಂದು ದಯೆಗೊಂಡವನಾಗಿ- ೧೨೧. ಶಿವನು ಪೂರ್ವದಲ್ಲಿ ಅರ್ಜುನನಿಗೆ ಪಾಶು ಪತಾಸ್ತ್ರವನ್ನು ಕೊಡುವಾಗ ಬೇಡನ ಆಕಾರವನ್ನು ಧರಿಸಿದಹಾಗೆ ಭಕ್ತನಾದ ಓಹಿಲಯ್ಯ ನಿಗೆ ಒಲಿದು ಶಬರವೇಷ ಧರಿಸಿದ ಶಿವನು ಬಂದನು. ೧೨೨. ಕೆಂಪಾದ ಜಡೆಯೇ ತಲೆಗೆ ಸುತ್ತಿದ ಚಿಗುರಿನ ಗೊಂಚಲಿನ ಕಟ್ಟು, ಜಡೆಯಲ್ಲಿರುವ ಸರ್ಪವೇ ಸುತ್ತಿಕೊಂಡ ಬಳ್ಳಿ, ಧರಿಸಿದ ಉಜ್ವಲವಾದ ಶಶಿರೇಖೆಯೇ ಸಿಕ್ಕಿಸಿಕೊಂಡ ತಾಳೇ ಹೂವಿನ ಗರಿ ; ಆನೆಯ ಚರ್ಮವೇ ಮನೋಹರವಾದ ಕಪ್ಪು ಬಟ್ಟೆ, ಆದಿ ಶೇಷನ ಹೆಡೆಯ ರತ್ನವೇ ಗುಲುಗಂಜಿಯ ಆಭರಣ ; ಜಿಂಕೆಯ ಚರ್ಮವೇ ಅಧಿಕವಾಗಿ ನಡುವಿನಲ್ಲಿ ಬಿಗಿದು ಕೊಂಡಿದ್ದ ಎಲೆಗಳ ಸಾಲು ಇವು ತನಗೆ ಒಪ್ಪುವಂತೆ ಇರಲು ವಿಲಾಸಮಯವಾದ

1 ಕೂ (ಮು, ಅ) 2 ಕುಸುಂಕಿ (ಮು) 3 ಕು(ಮು, ಅ)

ಪದವಿಲ್ಪಿನಾಕಮಹಿ ಪೆದೆ
ಯೊದವಿದ ಶಿಖೆಯುಂಬು ವಿಧಿನಿಷೇಧಂಗಳ್ಮೆ
ಟ್ಟಿದ ಕೆರ್ಪು ನಿಟಿಲಲೋಚನ
ಮದು ನವಗೈರಿಕದ ಬೊಟ್ಟು ತನಗಮರ್ವಿನೆಗಂ ೧೨೩

ಅಡಿವಜ್ಜೆಯನಾಘ್ರಾಣಿಸು
ತೊಡನೇಳ್ತರೆ ವೇದಕುರ್ಕುರಂಗಳ್ಬಳಿಯೊ
ಳ್ಜಡಜಭವಮೃಗದ ಶಿರಮಂ
ಕೆಡೆಯೆಚ್ಚ ಕಿರಾತರೂಪನಾಳ್ದಿಯ್ತಂದಂ ೧೨೪

ಹರಚಿಹ್ನಂಗಳ್ತೋಱು
ತ್ತಿರೆ ತನ್ನೊಳ್ಮುಗಿಲ ಮಱೆಯ ರವಿಯಂತಾ ಶ್ರೀ
ಗಿರಿಯೊಳ್ಕಿರಾತವೇಷದೆ
ಚರಿಯಿಪ ಮಲ್ಲೇಶನೆಂಬವೋಲ್ಸಾರ್ತಂದಂ ೧೨೫

ಸಲೆ ತೊಂಭತ್ತಬ್ದಮೀಶಸ್ನಪನಮೆಸಗಿ ನದ್ಯಂಬುವಂ ಪೊತ್ತು ಮುಪ್ಪಿಂ
ಬಲಮಾದಂ ಕುಂದೆ ಮುಂ ಬಲ್ಬಲದೆ ಸಲಿಸುತಾ ನೇಮಮಂ ಪೊನ್ನಯಂ ಮೇ
ಣ್ವಲಸದ್ವಾಃಪೂರ್ಣಕುಂಭಂದಳೆದು ನೆಗೆವಿನಂ ಪಳ್ಳಮಂ ನೆರ್ಗೆ ಬೆನ್ನಾ
ಳ್ದೊಲವಿಂದಾ ಕಂಬಿಯಂ ರಕ್ಷಿಸಿದ ಶಬರನೆಂಬಂತೆ ಕಣ್ಗೆಡ್ಡಮಾದಂ ೧೨೬

ಹಿರಿಮೆಯನ್ನು ಹೊಂದಿದ್ದನು. ೧೨೩–೧೨೪. ಪಿನಾಕವೆಂಬ ಶಿವನ ಧನುಸ್ಸೇ. ಬೇಟೆಯಾಡುವ ಬಿಲ್ಲು ; ಆದಿ ಶೇಷನೇ ಅದರ ಹೆದೆ ; ಅಗ್ನಿಯೇ ಬಾಣ; ವಿಧಿನಿಷೇಧಗಳೇ (ಎರಡೂ ಕಾಲುಗಳಲ್ಲಿ) ಮೆಟ್ಟಿದ ಕೆರಗಳು ; ಹಣೆಗಣ್ಣೇ ನೂತನಗೈರಿಕಾ ಧಾತುವಿನ ಹಣೆಬೊಟ್ಟು ಇವು ತನಗೆ ಒಪ್ಪುವ ಹಾಗೆ ವೇದಗಳೆಂಬ ನಾಯಿಗಳು ಅವನ ಕಾಲು ಹೆಜ್ಜೆಗಳನ್ನು ಮೂಸಿ ನೋಡುತ್ತ ಹಿಂದೆ ಹಿಂದೆಯೇ ಬೆನ್ನುಹತ್ತಿ ಬರುತ್ತಿರಲು ಬ್ರಹ್ಮನೆಂಬ ಮೃಗದ ಶಿರವನ್ನು ಕತ್ತರಿಸಿ ಬೀಳುವಹಾಗೆ ಬಾಣ ಪ್ರಯೋಗವನ್ನು ಮಾಡಿದ ಕಿರಾತ ರೂಪವನ್ನು ಹೊಂದಿ (ಶಿವನು) ಓಹಿಲಯ್ಯನ ಸಮೀಪಕ್ಕೆ ಬಂದನು. ೧೨೫. ಮೋಡಗಳ ಮರೆಯಲ್ಲಡಗಿದ ಸೂರ್ಯನ ಹಾಗೆ (ಈ ಬೇಡನಲ್ಲಿ) ಪರಮೇಶ್ವರನ ಚಿಹ್ನೆಗಳು ತೋರುತ್ತಿರಲು ಆ ಶ್ರೀಶೈಲ ಪರ್ವತದಲ್ಲಿ ಸಂಚಾರ ಮಾಡುತ್ತಿರುವ ಶ್ರೀ ಚೆನ್ನಮಲ್ಲಿಕಾರ್ಜುನನೋ ಎನ್ನುವಂತೆ ಬಂದನು. ೧೨೬. ಈ ಪೂರ್ವದಲ್ಲಿ ಅಗ್ಗವಣಿ ಎಂಬುವನು ತೊಂಬತ್ತು ವರ್ಷಗಳವರೆಗೆ ನದಿಯ ನೀರನ್ನು ಹೊತ್ತು, ಶಿವನಿಗೆ ಅಭಿಷೇಕವನ್ನು ಮಾಡುತ್ತ, ವಾರ್ಧಕ್ಯದಿಂದ ಅತ್ಯಂತ ಶಕ್ತಿಗುಂದಿದರೂ ಆ ನೀರನ್ನು ತಂದು ಅಭಿಷೇಕಮಾಡುವ ವ್ರತವನ್ನು ಸಲ್ಲಿಸುತ್ತಿದ್ದಾಗ (ಒಂದು ಸಲ) ನೀರನ್ನು ತುಂಬಿದ ಶೋಭಿಸುವ ಕೊಡವನ್ನು ಹೊತ್ತುಕೊಂಡು (ಎದುರಿಗೆ ಬಂದ) ಒಂದು ಹಳ್ಳವನ್ನು ಹಾರುವಲ್ಲಿ ಬೆನ್ನು ಮುರಿದುಹೋಗಲು, ಪ್ರೀತಿಯಿಂದ ಆ ಹೊತ್ತ ಕಂಬಿಯನ್ನು ಹಾಗೇ ಹಿಡಿದುಕೊಂಡು ರಕ್ಷಿಸಿದ ಶಬರನೋ ಎಂಬಂತೆ ಕಣ್ಣಿಗೆ ಮನೋಹರವಾಗಿ ಕಂಡನು,

ವ॥ ಅಂತೆಸೆವ ಕಿರಾತರುದ್ರನೋಹಿಲಯ್ಯನ ಬೆನ್ನನೆ ಬಂದು—

ಎಲೆ ಎಲೆ ಭಕ್ತ ಪೋಗದಿರು ನಿಲ್ದಪಿ ಮೂಡಿದುದಲ್ತೆ ಪಾದದೊ
ಳ್ಚಲಮಿನಿತೇಕೆ ಪೇಳ್ನಿನಗೆ ನೀಂ ಪಗೆಯಪ್ಪುದೆ ಬೇಡವೋವೊ ಕ
ಲ್ನೆಲದೊಳೆ ಬಿಣ್ಪುವೆತ್ತ ಪೊಱೆಯುಂ ತಳೆದೀ ಬಡವಾದ ದೇಹದಿಂ
ನಲಿದಡಿಗೊಳ್ವೆಯೆಂತಿಳುಪು ಕಂಬಿಯನಿಂಬಿನೊಳಾ ಮಹೀಜದಾ ೧೨೭

ಬಿಱುವಿಸಿಲ ಬೇಗೆಯೊಳ್ಬಿ
ಣ್ಪೊಱೆವೊತ್ತಡಿಯುರ್ಚೆ ಮೂಡೆ ದಸಿ ಕಳೆಯದೆ ನೀ
ನಱೆ ತಳರ್ವೆಯಿಂತುಟಲ್ಲದೆ
ಪೆಱೆದಲೆಯಂ ನಿನಗೆ ಮೆಚ್ಚನೇ ಬಿಡು ಛಲಮಂ ೧೨೮

ವ॥ ಎಂದಾ ಕಪಟಶಬರಂ ಕಾರುಣ್ಯದಿಂ ಸಾರ್ಕೆಗೆಯ್ದು ಕಾಲ ದಸಿಯಂ ನೀಂ ಕಿಳ್ತು ಕೊಳ್ಳಲಳ್ಕಿದೊಡಾಂ ಕಿಳ್ತು ಕಳೆದಪೆಂ ಕಾಲಂ ನೀಡೆಂಬುದುಮೊಹಿಲಯ್ಯಂ ಸಾಹಸಾಭರಣಂ ಕೇಳ್ದು—

ಎಲೆ ಶೈವಚಿಹ್ನಧರ ಶಬ
ರಲಲಾಮ ಮದೀಯ ಪದದದಸಿಗೀಳ್ತಪೆನೆಂ
ದಲರ್ದುಸಿರ್ವ ನಿನ್ನ ನುಡಿದಸಿ
ಯಲೆದುರ್ಚಿದುದೆನ್ನ ಕರ್ಣಕುಹರಮನೀಗಳ್ ೧೨೯

ವ॥ ಈರೀತಿಯಲ್ಲಿ ಶೋಭಿಸುವ ಬೇಡನ ವೇಷವನ್ನು ಧರಿಸಿರುವ ಅವನು ಓಹಿಲಯ್ಯನ ಹಿಂದು ಹಿಂದೇ ಬಂದು ೧೨೭. ಎಲೆಲೇ ಭಕ್ತನೇ, ಹೋಗಬೇಡ ನಿಲ್ಲು ; ನಿನ್ನಕಾಲಿನಲ್ಲಿ ದಸಿಯೊಂದು ನಟ್ಟು ಈಚೆಗೆ ಹಾಯ್ದಿರುವುದಲ್ಲವೇ ? ನಿನಗೆ ಇಷ್ಟೊಂದು ಛಲವೇಕೆ ? ಕೇಳು ನಿನಗೆ ನೀನೇ ಶತ್ರುವಾಗಬೇಕೆ ? ಬೇಡ ಓಹೋ ! ಕಲ್ನೆಲವಲ್ಲಿ, ದಪ್ಪನೆಯ ಹೊರೆಯನ್ನು ಹೊತ್ತುಕೊಂಡು, ಈ ಕೃಶವಾದ ದೇಹದಿಂದ ಸಂತೋಷಗೊಂಡು ಹೇಗೆ ನಡೆಯುತ್ತೀಯೆ ? ಈ ಮರದಕೆಳಗೆ ಕಂಬಿಯನ್ನು ಇಳಿಸು ೧೨೮. ವಿಶೇಷವಾದ ಬಿಸಿಲಿನ ತಾಪದಲ್ಲಿ ಭಾರವಾದ ಹೊರೆಯನ್ನು ಹೊತ್ತುಕೊಂಡು ದಸಿಯು ಕಾಲಲ್ಲಿ ನಟ್ಟು ಪಾರುಗೊಂಡಿದ್ದರೂ ಅದನ್ನು ನೀನು ತೆಗೆದು ಹಾಕದೆ ವೇಗವಾಗಿಯೇ ಹೋಗುತ್ತಿದ್ದೀಯೆ. ಹೀಗಲ್ಲದ್ದರೆ ನಿನಗೆ ಆಶಿವನು ಮೆಚ್ಚುವುದೇ ಇಲ್ಲವೇನು ? ಸಾಕು ಛಲವನ್ನು ಬಿಡು ವ॥ ಹೀಗೆಂದು ಆ ಕಪಟ ವೇಷದ ಬೇಡನು ಕರುಣದಿಂದ ಸಮೀಪಕ್ಕೆ ಬಂದು, ಕಾಲದಸಿಯನ್ನು ನೀನು ಕಿತ್ತುಕೊಳ್ಳುವುದಕ್ಕೆ ಭಯಪಟ್ಟರೆ ನಾನೇ ಕಿತ್ತು ಕಳೆಯುತ್ತೇನೆ, ಕಾಲನ್ನು ಚಾಚು ಎನ್ನಲಾಗಿ ಆ ಸಾಹಸವೇ ಆಭರಣವಾಗಿ ಉಳ್ಳ ಓಹಿಲಯ್ಯನು ಕೇಳಿ ೧೨೯. ಎಲೈ ಶಿವಲಾಂಛನವನ್ನು ಧರಿಸಿದ ದೊಡ್ಡ ಬೇಡನೇ, ನನ್ನ ಕಾಲಿನಲ್ಲಿರುವ ದಸಿಯನ್ನು ಕೀಳುವೆನೆಂದು ಉತ್ಸಾಹಗೊಂಡು ಹೇಳುವ ನಿನ್ನ ಮಾತೆಂಬ

ಕಾಲಾರಿಭಕ್ತ ನಿನ್ನಿಂ
ಕಾಲಂ ಮುಟ್ಟಿಸಿದೆನಪ್ಪೊಡೀಶದ್ರೋಹ
ಕ್ಕಾಲಯಮಾಗೆನೆ ಪೇಳಿಂ
ಕಾಲದೊಳೆನ್ನಿರವನಱಿಯದೆಂತುಜ್ಜುಗಿಪ್ಪೆ ೧೩೦

ಕಂಬಿಯ ಮುಟ್ಟುವ ಶುಚಿಕರ
ದಿಂ ಬಳಿಕಾನೆಂತು ಕೀಳ್ವೆನೀ ಕಾಲ್ದಸಿಯುಂ
ಸಾಂಬನ ಮೊಸಲ ವಸ್ತುಕ
ದಂಬದ ಕಂಬಿಯುಸದೆಂತು ನೆಲಕಿಳುಪುವೆನೋ ೧೩೧

ನಡೆದನಿತು ದೂರಮೊಪರಿ
ನಡೆದಪೆನಲ್ಲದೆ ಕಡಂಗಿ ಕಂಬಿಯನಿಳುಪು
ತ್ತೆಡೆವಟ್ಟೆಯೊಳಡಿನಾಂಟಿದ
ನಿಡುದಸಿಯನದೆಂತು ಕೀಳಲುಜ್ಜುಗಿಸುವೆನೋ ೧೩೨

ವ॥ ಎನೆ ಕೇಳ್ದು ಬೆಕ್ಕಸಂಬಟ್ಟು ನಕ್ಕು—

ಹರನಿಳಯಂಬೊಕ್ಕಲ್ಲದೆ
ಧರಣಿಯೊಳೀ ಕಂಬಿಯುಂ ಸಮುಂತಿಳುಪದ ಬ
ಲ್ಪಿರಿದಿನ ಭಕ್ತಿಯ ಬಿಂಕು
ದೊರೆವೆತ್ತುದು ನಿನ್ನೊಳರರೆ ನಿನಗೆಣೆಯಾವಂ ೧೩೩

ವ॥ ಎಂದು ಪುಳಿಂದಂ ಪೊಗಳ್ದು ನಿನ್ನಂಗಾಲೊಳ್ಮೂಡಿದ ದಸಿಯೆನ್ನ ಕಣ್ಬೊಣರೊಳ್ಮೂಡಿದಂತಿರ್ದಪುದಿದಂ ನೋಡಲ್ಕಮಾಱೆನೀಗಳ್ನಿನ್ನ ಬಗೆಯೆಂತಿರ್ದಪುದಂತೆ ಗೆಯ್ದಪೆನೆನ್ನ ಪರಿಯನೊಂದಿನಿತು ನೋಳ್ಪುದೀಗಳ್—

ದಸಿಯು ನನ್ನ ಕಿವಿಯ ರಂಧ್ರವನ್ನು ಭೇದಿಸಿ ಬಿಟ್ಟಿತು. ೧೩೦. ಎಲೈ ಯಮನ ವೈರಿಯಾದ ಶಿವನಭಕ್ತನೇ, ನಿನ್ನಿಂದ ಕಾಲನ್ನು ಮುಟ್ಟಿಸಿಕೊಂಡೆನಾದರೆ, ನಾನು ಈಶ್ವರದ್ರೋಹಕ್ಕೆ ಕಾರಣ (ಆಲಯ) ನಾಗುವುದಿಲ್ಲವೇ ? ಹೇಳು. ಈ ಕಾಲದಲ್ಲಿ ನನ್ನ ಸ್ಥಿತಿಯನ್ನು ಅರಿಯದೆ ಹೇಗೆ (ಆ ದಸಿಯನ್ನು ತೆಗೆಯಲು) ಪ್ರಯತ್ನ ಪಡುತ್ತೀಯೆ ? ವ॥ ಹೀಗೆಂದು (ಆ ಓಹಿಲಯ್ಯನು) ಹೇಳಲು (ವೇಷಧಾರಿಯಾದ ಶಿವನು) ಅತ್ಯಾಶ್ಚರ್ಯಗೊಂಡು ೧೩೧, ಅರರೇ ! ಪರಮೇಶ್ವರನ ನಿಲಯವನ್ನು ಹೊಕ್ಕಲ್ಲದೆ ಭೂಮಿಯ ಮೇಲೆ ಈ ಕಂಬಿಯನ್ನು ಇಳುಹುವುದಕ್ಕೆ ಸಾಧ್ಯವಿಲ್ಲವೆಂಬ ಮಹಾಪಂಥವುಳ್ಳ ಭಕ್ತಿಯ ಬಿಂಕವು ನಿನ್ನಲ್ಲಿ ಉಂಟಾಗಿರುವುದಲ್ಲವೇ ? ನಿನ್ನ ಸಮಾನನಾವನು ? ವ॥ ಹೀಗೆಂದು ಬೇಡರೂಪದ ಶಿವನು ಹೊಗಳಿ, 'ನಿನ್ನ ಅಂಗಾಲಿನಲ್ಲಿ ನೆಟ್ಟಿರುವ ಈ ದಸಿಯು ನನ್ನ ಕಣ್ಣುಗುಡ್ಡೆಯಲ್ಲಿ ನಟ್ಟು ಹೊರಹೊರಟಹಾಗಿದೆ ; ಇದನ್ನು ನೋಡಲಾರೆನು. ಈಗ ನಿನ್ನ ಮನಸ್ಸಿನಂತೆಯೇ ಮಾಡುತ್ತೇನೆ. ನಾನು ಆ ದಸಿಯನ್ನು ಹೊರ

ಕಾಲಂ ಮುಟ್ಟದೆ ಕಿಳ್ತೊಡೆ
ಸಾಲದೆ ಕೂರ್ದಸಿಯನೆಂದು ಭೂಜದೊಳವನಾ
ಲೀಲೆ ಮಿಗೆ ನೆರ್ವು[1]ವೇಳ್ದು ದ
ಯಾಲಸದೀಕ್ಷಣದೆ ನೋಡುತುಂ ತತ್ಪದಮಂ ೧೩೪

ಪೊಸತಂಡಸದಿಂ ಕಿಳ್ತಂ
ದಸಿಯಂ ಜೀರ್ಕೊಳವಿ ಚಿಮ್ಮಿದಂತಿರೆ ಮುನ್ನಂ
ಡಸವು ಸಿತಭಸಿತವುದು ನಿ
ಪ್ಪಸರಂ ಬೆತ್ತೆಚ್ಚು ಪಾಯ್ದುದೇಱಿಂದಾಗಳ್ ೧೩೫

ವ॥ ಅದಂ ಕಂಡು ಪರಿತೋಷಮನಾಳ್ದು ಪುಳಿಂದನಾ ಭಸಿತಧಾರೆ ಪೊಣ್ಮುವರಂಧ್ರಮಂ ಭೋಂಕನೊಂದು ತೇಗಿನೆಳೆದಳಿರಿಂ ಕಟ್ಟಿ ಬಂಧಿಸುತೋಹಿಲಯ್ಯನನುಚಿತೋಕ್ತಿಯಿಂ ಸಂತೈಸಿ ಮನ್ನಿಸಿ—

ನಿನಗೆ ಕರುಣಿಸುವನಕ್ಕೆ ಗ
ಡೆನಸುಂ ಸೋಮೇಶನೆಂದು ಶಬರಂ ನುಡಿದೊ
ಯ್ಯನೆ ಮಾಯುಮಾಗೆ ತದ್ಭ
ಕ್ತನ ಮನದೊಳ್ನೆಗೆದುದರರೆ ಕೌತುಕಮಾಗಳ್ ೧೩೬

ತೆಗೆಯುವ ಕ್ರಮವನ್ನಾದರೂ ಈಗ ನೋಡು. ೧೩೪–೧೩೫. ನಿನ್ನ ಕಾಲನ್ನು ಮುಟ್ಟದಂತೆ ಆ ದಸಿಯನ್ನು ಕಿತ್ತರೆ ಆಗದೇ ?' ಅವನನ್ನು ಒಂದು ಗಿಡದ ಮೇಲೆ, ಒರಗಿ ಕುಳಿತುಕೊಳ್ಳಲಿಕ್ಕೆ ತಿಳಿಸಿ, ಶ್ರೇಷ್ಠ ದಯಾರಸಭರಿತ ದೃಷ್ಟಿಯಿಂದ, ಅವನ ಕಾಲನ್ನು ನೋಡಿ ಆ ದಸಿಯನ್ನು ಹೊಸಚಿಮ್ಮುಟವೊಂದರಿಂದ ಕಿತ್ತೊಡನೆಯೇ ಈ ಪೂರ್ವದಲ್ಲಿ ಆ ಓಹಿಲಯ್ಯನು ಉಂಡಂಥ ಭಸ್ಮವು ಪಿಚಕಾರಿಯು (ನೀರನ್ನು) ಚಿಮ್ಮಿದ ಹಾಗೆ, ಅವಿಚ್ಛಿನ್ನವಾಗಿ ಆ ಗಾಯದಿಂದ ಹೊರಹೊರಟಿತು. ವ॥ ಅದನ್ನು ಕಂಡು ಅತ್ಯಂತ ಸಂತೋಷವನ್ನು ಹೊಂದಿ, ಬೇಡನು ಆ ಭಸ್ಮಧಾರೆಯು ಹೊರಹೊಮ್ಮುವ ರಂಧ್ರವನ್ನು ತೇಗದ ಮರದ ಒಂದು ಚಿಗುರಿನಿಂದ ಕಟ್ಟಿ (ಆ ಸುರಿಯುತ್ತಿದ್ದ) ಭಸ್ಮವನ್ನು ತಡೆದು ಆ ಓಹಿಲಯ್ಯನನ್ನು ಉಚಿತವಾದ ವಚನಗಳಿಂದ ಸಮಾಧಾನಗೊಳಿಸಿ, ಮನ್ನಣೆಗೊಳಿಸಿ ೧೩೬. 'ನಿನಗೆ ಸೌರಾಷ್ಟ್ರ ಸೋಮೇಶ್ವರನು ನಿಜವಾಗಿ ಕರುಣಿಸುವವನಾಗುವನಯ್ಯ!' ಎಂದು ಆ ಬೇಡನ ರೂಪದ ಶಿವನು ನುಡಿದು ಮೆಲ್ಲಗೆ ಅಲ್ಲಿಂದ ಮಾಯವಾದನು. ಆಗ ಆ ಭಕ್ತನಾದ ಓಹಿಲಯ್ಯನ ಮನಸ್ಸಿನಲ್ಲಿ ಅಬ್ಬಬ್ಬಾ ! ಒಂದು ಆಶ್ಚರ್ಯವು

---

1 ಮ್ಮು (ಅ)

ಸೌರಾಷ್ಟ್ರಪತಿ ಕೃಪಾಕೂ
ಪಾರಂ ನಣ್ಪಿಂದೆ ಬಂದು ಶಬರಾಕೃತಿಯಿಂ
ದೋರಂತಿಂತೆಸಗಿದನೆಂ
ದಾ ರುಚಿರಗುಣಾಂಕನುತ್ಸವಂಬಡೆದಾಗಳ್ ೧೩೭

ಪೊಗಳುತ್ತುಂ ಕೂರ್ಪಿನಿಂದೇಳ್ತರುತೆ ಶಿವಗೃಹಕ್ಕಾ ಕವಾಟಂಗಳಂ ಕೆ
ಯ್ಮಿಗೆ ಕಾಮಧ್ವಂಸಿ ಬೇಗಂ ತೆಗೆಯೆ ಪುಗುತೆ ತಾಂ ತಂದ ತದ್ಭಾರವಂ ಮೆ
ಲ್ಲಗೆ ರಂಗಸ್ಥಾನದೊಳ್ನಿಂದಿಳುಪಿ ವಿಮಳ ಕುಂಭಾಂಬುವಿಂ ಮಜ್ಜನಂಗೆ
ಯ್ದಗಜಾಧೀಶಂಗೆ ಬಿಲ್ವೀಮೃದುಳದಳಮನಂದರ್ಪಿಸುತ್ತೊಲ್ಮೆಯಿಂದಂ ೧೩೮

ಎಂದಿನಂತೆ ಸಾಂಗಮಾಗೆ ಪೂಜೆಗೆಯ್ದು ಭಕ್ತಿಯಿಂ
ಚಂದನೇಂಧನಂಗಳಿಂ ನಿಮಿರ್ಚಿ ಕೆಂಡಮಂ ಮಹಾ
ನಂದಂದಿಂದೆ ಧೂಪಮಿಕ್ಕಲೆಂದು ಘಂಟೆಯಂ ತರ
ಲ್ಕಂದು ಪೋಗೆ ಕಳ್ದರಲ್ಲಿ ಗುರ್ಗುಳೌಘಮಂ ಖಳರ್ ೧೩೯

ವ॥ ಅಂತಾ ಗೌಳತಪಸ್ವಿಗಳ್ಗುಗ್ಗುಲಮನಪಹರಿಸೆ ಧೂಪಮಿಲ್ಲಾದುದಂ ಕಂಡು ಧೃತಿಗುಂದದೆ ಮನಂ ಕಂದದೆ ಬಗೆವೊಡಿದು ಸೋಮೇಶ್ವರಕೃತಕಮಕ್ಕುಮಾದೊಡೇನೀ ಸಮ[1]ಯುಔಚಿತ್ಯ[1]ಕ್ಕಿನ್ನ

ಉಂಟಾಯಿತು. ೧೩೭–೧೩೯. ದಯಾಸಮುದ್ರನಾದ ಸೌರಾಷ್ಟ್ರ ಸೋಮೇಶ್ವರನು, ಪ್ರೀತಿಯಿಂದ ಈ ರೀತಿ ಶಬರನ ಆಕಾರದಲ್ಲಿ ಶೋಭಾಯಮಾನನಾಗಿ ಬಂದು ಈ ರೀತಿ ಮಾಡಿದನೆಂದು ಆ ಮನೋಹರ ಗುಣವಿಶಿಷ್ಟನಾದ ಓಹಿಲಯ್ಯನು ಉತ್ಸಾಹಗೊಂಡು (ಸೌರಾಷ್ಟ್ರೇಶ್ವರನನ್ನು) ಹೊಗಳುತ್ತ, ಪ್ರೀತಿಯಿಂದ ಆ ಶಿವಗೃಹಕ್ಕೆ ಬಂದನು. ಕಾಮಾರಿಯು ಸ್ವತಃ ತನ್ನ ಕೈಗಳಿಂದಲೇ ಬಾಗಿಲು ಕದಗಳನ್ನು ಶೀಘ್ರವಾಗಿ ತೆಗೆದನು. ಶಿವಾಲಯವನ್ನು ಪ್ರವೇಶಿಸಿ. ಹೊತ್ತು ತಂದ ಭಾರವನ್ನು ರಂಗಮಂಟಪದಲ್ಲಿ ನಿಂತು ಇಳಿಸಿ, ಪಾರ್ವತೀ ಪತಿಗೆ ಪರಿಶುದ್ಧ ಜಲದಿಂದ ಅಭಿಷೇಕಮಾಡಿ, ಪ್ರೀತಿಯಿಂದ ಮೃದುವಾದ ಬಿಲ್ವ ದಳಗಳನ್ನೇರಿಸುತ್ತ, ದಿನ ದಿನದಂತೆ ಸಾಂಗವಾಗಿ ಭಕ್ತಿಯಿಂದ ಪೂಜೆಮಾಡಿ, (ತಂದ) ಚಂದನದ ಚೆಕ್ಕೆಗಳಿಂದ (ಚಂದನದ ಕಟ್ಟಿಗೆಗಳಿಂದ) ಕೆಂಡವನ್ನು ಮಾಡಿ, ಮಹಾನಂದ ಭರಿತನಾಗಿ ಧೂಪವನ್ನು ಹಾಕಬೇಕೆಂದು ಗಂಟೆಯನ್ನು ತರುವುದಕ್ಕೆ ಹೋದನು. ಅಷ್ಟರಲ್ಲಿಯೇ ನೀಚರು ಆ ಧೂಪವನ್ನು ಕದ್ದುಕೊಂಡು ಹೋಗಿದ್ದರು. (ಧೂಪ ಹಾಕುತ್ತ ಗಂಟೆಯನ್ನು ಬಾರಿಸುವುದು ಪದ್ಧತಿ. ಗಂಟೆಯನ್ನು ತರುವನಿತರಲ್ಲಿ ಗುಗ್ಗುಳ ಮಾಯವಾಗಿತ್ತೆಂದು ಭಾವ) ವ॥ ಹೀಗೆ ಆ ಗೌಳ ತಪಸ್ವಿಗಳು ಗುಗ್ಗುಳವನ್ನು ಅಪಹರಿಸಲಾಗಿ, ಧೂಪವಿಲ್ಲದಿರುವುದನ್ನು ಕಂಡು, ಧೈರ್ಯಗೆಡದೆ, ಉತ್ಸಾಹಹೀನನಾಗದೆ, ವಿಚಾರಿಸಿ ನೋಡಿದರೆ ಇದು ಈಶ್ವರನಿಂದಲೇ ಮಾಡಿದ ಕಾರ್ಯವಾಗಿರಬೇಕು.

---

1 ಯೋಚಿತ(ಅ)

ತನುವೆ ಗುರ್ಗುಳವೆಂದೋಹಿಲಾರ್ಯಂ ನಿರ್ಧರಿಸಿ ಘಂಟಾಘಣತ್ಕಾರಂಗೆಯ್ವುತೇಳ್ತಂದು ಲಿಂಗಸನ್ನಿಧಿಯೊಳ್ನಿಂದು ಮುಂದಿರ್ದ ಪಿರಿಯ ಧೂಪಪಾತ್ರೆಯೊಳ್ತಳತಳಿಸಿ ಘುಳಿಘುಳಿಪನಳನಂ ನೋಳ್ಪಾಗಳ್—

ಧಗಧಗನಿಸ್ವನಂ ನಿಮಿರೆ ಕೆಂಗಿಡಿ ಸೂಸೆ ಪೊದಳ್ದು ಪೊಣ್ಮೆ ಕಾ
ರ್ಬೊಗೆ ತವಿಲಾಗೆ ದಳ್ಳುರಿ ವಿಜೃಂಭಿಸಿ ಪರ್ಬುಗೆವೆತ್ತು ಕೊರ್ಬಿ ಮಿಂ
ಚೊಗೆಯೆ ಮಡಲ್ತು ಭೀಮನಿಟಲಸ್ಫುಟವಹ್ನಿಯಗುರ್ವನಾಳ್ದು ಕೆ
ಯ್ಮಿಗೆ ಬಿಸುಪೆತ್ತಲುಂ ಮಸಗೆ ದಳ್ಳಿಸುತಿರ್ದುದು ಪಾತ್ರಪಾವಕಂ ೧೪೦

ವ॥ ಅಂತು ವಿಲಯಶಿಖಿಯಂತೆ ಬಿಸುಪ ಶಿಖಿಯ ಸೆಕೆಗೆ ಶಿಖಿಲೋಚನಶರಣನಳ್ಕದೆ ಬಳ್ಕದೆ ನಿಶ್ಚಳ ಧೈರ್ಯಾವಷ್ಟಂಭನುಂ ನಿರರ್ಗಳಮಾನೋನ್ನತನುಂ ನಿರುಪಮ ಶಾಂತಿ ಸಂಪನ್ನನುಂ ನಿರಸ್ತನಿಜತನುವಿಮೋಹನುಮಾಗಿ ಮುಂದಣ್ಗೆ ಪಜ್ಜೆಯಿಟ್ಟು ಕರಾಂಭೋಜಂಗಳಂ ಮುಗಿದು ಗಂಭೀರಧ್ವಾನದಿನೆಲೆ ದೇವದೇವ ಸೌರಾಷ್ಟ್ರಸೋಮನಾಥ ಮತ್ತನುಗುರ್ಗುಳಮನಧರಿಸವಧರಿಸೆಂದುದ್ಘೋಷಿಸಿ—

ಮುನ್ನೀವ ಗುರ್ಗುಳದ ಪರಿ
ಯಿನ್ನಿಬಿಡ ಸುಗಂಧಮೊಯ್ದಿರ್ದೊಡೆ ಕೇಳಿಂ

ಆದರೇನು ?' ಪ್ರಕೃತ ಕಾಲಕ್ಕೆ ಉಚಿತವಾಗಿ ನನ್ನ ಈ ದೇಹವೇ ಗುಗ್ಗುಳ ! ಎಂದು ಓಹಿಲಯ್ಯನು ನಿರ್ಧಾರ ಮಾಡಿ, ಗಂಟೆಯ ಠಣತ್ಕಾರ ಮಾಡುತ್ತ ಬಂದು ಲಿಂಗದೇವನ ಸನ್ನಿಧಿಯಲ್ಲಿ ನಿಂತು, ಮುಂದಿದ್ದ ದೊಡ್ಡ ಧೂಪದ ಪಾತ್ರೆಯಲ್ಲಿ ತಳತಳಗೊಂಡು ಘುಳು ಘುಳಿಸುತ್ತಿರುವ ಬೆಂಕಿಯನ್ನು ಕಂಡನು. ೧೪೦. ಧಗಧಗವೆಂಬ ಧ್ವನಿಯು ಹೊರಹೊಮ್ಮುತ್ತಿತ್ತು : ಕೆಂಗಿಡಿಗಳು ತುಂಬಿ ಹೊರಸೂಸುತ್ತಿದ್ದವು ; ಕಪ್ಪಾದ ಹೊಗೆಯು ಹೆಚ್ಚಾಗಿ ಮೇಲೇಳುತ್ತ ಮುಸುಕಿ ಕೊಂಡಿತು, ದಳ್ಳುರಿಯು ವಿಜೃಂಭಿಸುತ್ತ ಹಬ್ಬಿಕೊಂಡು, ಕೊಬ್ಬಿ, ಪ್ರಕಾಶವು ಹರಡಿಕೊಂಡು ಅಭಿವೃದ್ಧಿಗೊಂಡಿತು. (ಅದು) ಪರಮೇಶ್ವರನ ಹಣೆಗಣ್ಣಿನಿಂದ ಉದ್ಭವಗೊಳ್ಳುವ ಬೆಂಕಿಯ ಅತಿಶಯವನ್ನು ಹೊಂದಿತ್ತು. ಬಿಸಿಯು ಮಿತಿಮೀರಿ ಎಲ್ಲಕಡೆಗೂ ವ್ಯಾಪಿಸಿತು. (ಹೀಗೆ) ಧೂಪದ ಪಾತ್ರೆಯಲ್ಲಿರುವ ಬೆಂಕಿಯು ಎಲ್ಲಕಡೆಗೂ ವ್ಯಾಪಿಸಿತು. ವ॥ ಹೀಗೆ ಪ್ರಳಯಕಾಲದ ಬೆಂಕಿಯ ಹಾಗೇ ಶೋಭಿಸುವ ಬೆಂಕಿಯ ಉಷ್ಣತೆಗೆ ಅಗ್ನಿನೇತ್ರನಾದ ಶಿವನಭಕ್ತನು ಹೆದರದೆ, ಹೊಯ್ದಾಡದೆ ನಿಶ್ಚಲ ಧೈರ್ಯಸ್ಥಿತಿಯುವನೂ, ಗೌರವಾತಿಶಯದಿಂದ ಶ್ರೇಷ್ಠನೂ, ಅನುಪಮವಾದ ಶಾಂತಿಯಿಂದ ಕೂಡಿದವನೂ, ತನ್ನ ದೇಹದ ಮೇಲಿನ ಮೋಹವನ್ನು ದೂರಗೊಳಿದವನೂ ಆದವನಾಗಿ, ಮುಂದಕ್ಕೆ ಹೆಜ್ಜೆಯನ್ನು ಇಟ್ಟು, ಕರಕಮಲಗಳನ್ನು ಮುಗಿದು, ಗಂಭೀರಧ್ವನಿಯಿಂದ, 'ಎಲೈ ದೇವದೇವನಾದ ಸೌರಾಷ್ಟ್ರ ಸೋಮೇಶ್ವರನೇ, ನನ್ನ ತನುವೆಂಬ ಗುಗ್ಗುಳವನ್ನು ಅರ್ಪಿಸಿಕೋ ! ಅರ್ಪಿಸಿಕೋ '! ಎಂದು ಗಟ್ಟಿಯಾಗಿ ಕೂಗಿದನು. ೧೪೧. ಹೇ ದೇವ, ಮೊದಲು ನಿನಗೆ ಅರ್ಪಿಸುತ್ತಿದ್ದ ಪರಿಮಳದಿಂದ ಕೂಡಿದ ಗುಗ್ಗುಳದ ರೀತಿಯಿಂದಲೇ ಈಗ ನನ್ನ ಈ ದೇಹವು ಅಧಿಕ

ದೆನ್ನ ತನು ದೇವ ಮದ್ದೃಢ
ಸನ್ನುತ ಸುವ್ರತಕೆ ಭಂಗವಲ್ಲದೆ ಪೆಱತೇಂ ೧೪೧

ವ॥ ಅಂತುಮಲ್ಲದೆಯುಮಿಂದು ಧೂಪದ ಮಾಚಿದೇವನೆಂಬ* ವೀರವ್ರತಧೀರೋದಾತ್ತ† ಶರಣಂ ನಿಚ್ಚಂ ತ್ರಿಕಾಲಂದಪ್ಪದೊರ್ಪಲ ಗುಗ್ಗುಲಮಂ ಸಮರ್ಪಿಪುದೆ ನೇಮಮಾಗಿರ್ದೊಡೊಂದು ದಿನಂ ಗುಗ್ಗುಳಂ ದೊರಕದಿರೆ ತಳಮಳಗುಗೊಳ್ಳದೆ ನಿಜ ತನು ಖಂಡಂಗಳಂ ಕೊಱೆಕೊಱೆದು ಗುಗ್ಗುಳನಿಭಮೆನಿಸಿ ತಱಿಗೇಡದೊಳಿಕ್ಕಿ ಧೂಪಮಂ ಬೀಸಿ ಹರನಂ ಮೆಚ್ಚಿಸಿದನವನ ತನುಖಂಡ ದಂತೆ—

ಪರಿಮಳಮನೊಲ್ದು ಬೀಱದೊ
ದಿರದಪಗಂಧಂ ಪೊದಳ್ದೊಡಂ ಸರಸತೆಯಾ
ವರಿಸದೊಡೆ ನಡುಗಿದೊಡೆ ತನು
ಹರಣಂ ಬೆರ್ಚಿದೊಡೆ ಖಿನ್ನಮಾದೊಡೆ ವದನಂ ೧೪೨

ಕರಗದೊಡಸ್ಥಿ ಕರ್ಗಿದೊಡೆ ಕಾಯಮುಳಲ್ದೊಡೆ ಚಿತ್ತ [1][ಮಾ][1]ಂತ್ರಪಂ
ಜರಮದು ಪುರ್ಗುಮೆತ್ತೊಡೆ ಕಳಲ್ದೊಡೆ ಕಂಬನಿ ದೇಹರಂಧ್ರದಿಂ
ಸುರಿದೊಡೆ ಶೈತ್ಯಸಾರ ಕಫಲೋಹಿತಮಂಗದ ರೋಮರಾಜಿ ಪೇ
ರುರಿ ಕೊಳೆ ಕೌಱುನಾರ್ತೊಡೆ ನಿಜೋನ್ನತ ಧೂಮದ ಕಾಂತಿ ಕೆಟ್ಟೊಡಂ ೧೪೩

ಪಿರಿದುರಿದೊಡಮಿಂಗಳಮದು
ಕರಮೊಲ್ಲದೊಡಮಿತ ಧೂಪಧೂಮಂ ಪರಿದಾ
ವರಿಸದೊಡೆ ನಿನ್ನನೀಕ್ಷಿಸು
ವಿರವಳಿದೊಡೆ ನಿನ್ನ ಭೃತ್ಯನಲ್ಲಾನೆನುತುಂ ೧೪೪

ಸುಗಂಧವನ್ನು ಕೊಡದಿದ್ದರೆ, ನನ್ನ ದೃಢವೂ, ಶ್ಲಾಘ್ಯವೂ ಆದ ವ್ರತಕ್ಕೆ ಭಂಗವಲ್ಲದೆ ಮತ್ತೇನು ?' ವ॥ ಅದೂ ಅಲ್ಲದೆ ಈ ಪೂರ್ವದಲ್ಲಿ ಧೂಪದ ಮಾಚಿದೇವನೆಂಬ* ವೀರಶೈವ ವ್ರತದ, ಧೀರನೂ ಉದಾತ್ತನೂ ಆದ ಶರಣನು,† ಪ್ರತಿನಿತ್ಯವೂ ತ್ರಿಕಾಲ ಗಳಲ್ಲಿ ತಪ್ಪದೆ ಒಂದು ಪಲ ತೂಕದ (ಹತ್ತು ವರಹ ತೂಕ ಅಥವಾ ಮೂರನೂರ ಇಪ್ಪತ್ತು ಗುಂಜಿಯ ತೂಕದ) ಗುಗ್ಗುಳವನ್ನು ಅರ್ಪಿಸುವುದೇ ವ್ರತವುಳ್ಳವನಾಗಿದ್ದನು. ಒಂದು ದಿನ ಆ ಗುಗ್ಗುಳವು ಸಿಗದಿರಲು ಕಳವಳಗೊಳ್ಳದೆ, ತನ್ನ ದೇಹದ ಮಾಂಸವನ್ನೇ ಕತ್ತರಿಸಿ ಕತ್ತರಿಸಿ, ಗುಗ್ಗುಳಕ್ಕೆ ಸಮಾನವಾದದ್ದೆಂಬ ಭಾವನೆಯಿಂದ ನಿಗಿನಿಗಿಸುವ ಕೆಂಡ ದಲ್ಲಿ ಹಾಕಿ, ಉಂಟಾದ ಹೊಗೆಯನ್ನು ಬೀಸಿ, ಶಿವನನ್ನು ಮೆಚ್ಚಿಸಿದನು. ಅವನ ಆ ದೇಹದ ಖಂಡದಂತೆಯೇ—೧೪೨–೧೪೫. ಪರಿಮಳವು ಆಗ ಒಲಿದು ಬೀರದೆ, ದುರ್ಗಂಧವು

* ಇದು ಬಾಚಯ್ಯ, ಬಾಚಿದೇವ–ಇತ್ಯಾದಿ ಇರಬೇಕಾಗಿತ್ತೆಂದು ತೋರುತ್ತದೆ. ಬಹುಶಃ 'ಮಾಚಯ್ಯ' ಎಂದು ತಪ್ಪುಬಿದ್ದಿರಬಹುದು.

† ಧೀರೋದಾತ್ತಃ–ಮಹಾಸತ್ತ್ವ, ಅತಿಗಂಭೀರತೆ, ಕೃಪಾವಿಶಿಷ್ಟತೆ, ಆತ್ಮಸ್ತುತಿರಹಿತತೆ, ಧೈರ್ಯಶಾಲತ್ವ–ಇವು ಧೀರೋದಾತ್ತನ ಲಕ್ಷಣಗಳು.

1 ಮ (ಅ, ಚ, ಮು, ಗ, ದ)

ಕಡುಪಿಂದಂ ಪೊಣ್ದು ಭಕ್ತಂ ಕಿಡಿಯನುಗುಳ್ವ ತದ್ಧೂಪಪಾತ್ರಾಗ್ನಿಯೊಳ್ ಸ
ನ್ಮೃಡಭಕ್ತವ್ರಾತ ಪಾದಾಂಬುಜಮನೆರ್ದೆಯೊಳೊಲ್ದಾಂತು ಕುಳ್ಳಿರ್ದುದುಂ ತ
ನ್ನೊಡಲುದ್ಯದ್ಧೂಪ ಧೂಮಪ್ರಬಳಪರಿಮಳಂ ಲಿಂಗಮಂ ಸುತ್ತಿಮುತ್ತು
ತ್ತೊಡನೆತ್ತಂ ಪರ್ಬೆ ಸೋಮೇಶ್ವರ ಹರ ಹರ ಘೋಷಾಸ್ಯನೊಪ್ಪುತ್ತುಮಿರ್ದಂ ೧೪೫

ಪೊಸತೊಂದು ಗಜಾಜಿನಮದು
ಮುಸುಂಕಿದತ್ತುಭವನಂಗಮಂ ತಾನೆನೆ ರಂ
ಜಿಸೆ ಧೂಪಧೂಮತತಿ ಮನ
ಮೊಸೆದೀಶನವಂಗೆ ರೂಪುದೋಱಿದನಾಗಳ್ ೧೪೬

ಎಳೆವೆಱೆ ಬಾಂಬೊಳೆ ಜಡೆಮುಡಿ
ತೊಳಪಕ್ಷಿ ಕರೋಟಿ ತಿಸುಳಮುರಗಾಭರಣಂ
ಮಿಳಿರ್ವ ಫಣಿಕುಂಡಳಂ ಕರಿ
ಕಳಭಾಜಿನಮೊಸೆಯೆ ಮಿಸುಗಿದಂ ಗಿರಿಜೇಶಂ ೧೪೭

ಹೊರ ಹೊರಟರೆ ಮನೋಹರತ್ವವು ಉಂಟಾಗದಿದ್ದರೆ, ತನುಸಡುಗಿ, ಪ್ರಾಣವು ಬಿಚ್ಚಿಹೋಗದಂತಾದರೆ, ಮುಖವು ಖಿನ್ನತೆಯಿಂದ ಕೂಡಿದ್ದಾದರೆ, ಮೂಳೆಯು ಕರಗಿ ಹೋದರೆ, ದೇಹವು ಕರಿಕುಗೊಂಡರೆ, ಚಿತ್ತಕ್ಕೆ ಸಂಕಟವಾದರೆ, ಆ ನರಗಳ ಸಮೂಹವು ಸುಕ್ಕುಗಟ್ಟಿದರೆ, ಕಣ್ಣೀರು ಹರಿಬಿದ್ದರೆ, ದೇಹದ ರಂಧ್ರಗಳಿಂದ ಶೀತದ ಸಾರವೆನಿಸಿದ ಕಫ ಮತ್ತು ರಕ್ತವು ಸುರಿದರೆ, ದೇಹದ ಮೇಲಿರುವ ಕೂದಲುಗಳ ಸಮೂಹವು ಉರಿದುಹೋದರೆ, ಕೌಲುನಾತವು ನಾರಿದರೆ, ತನ್ನ ಶ್ರೇಷ್ಠವಾದ ಧೂಮದ ಕಾಂತಿಕೆಟ್ಟರೆ ಈ ಕೆಂಡವು ಹೆಚ್ಚಾಗಿ ಉರಿಯದಿದ್ದರೆ, (ಧಗಧಗಿಸಿ ಉರಿಯದಿದ್ದರೆ), ಅಧಿಕವಾಗಿ ಧೂಪದ ಧೂಮವು ಮೇಲೇಳದಿದ್ದರೆ (ಸದಾ) ನಿನ್ನನ್ನು ಕಾಣುವ ನನ್ನ ದೃಷ್ಟಿಯು ರೀತಿಯು ನಾಶವಾದರೆ, ನಾನು ನಿನ್ನ ಭೃತ್ಯನೇ ಅಲ್ಲ ಎನ್ನುತ್ತ, ಆ ಭಕ್ತನಾದ ಓಹಿಲಯ್ಯನು ಪ್ರತಿಜ್ಞೆಯನ್ನು ಮಾಡಿ, ಕೆಂಗಿಡಿಗಳನ್ನು ಹೊರಸೂಸುತ್ತಿರುವ ಆ ಧೂಪದ ಪಾತ್ರೆಯಲ್ಲಿ ಶ್ರೇಷ್ಠರಾದ ಶಿವಭಕ್ತರುಗಳ ಪಾದಕಮಲಗಳನ್ನು ಮನಸ್ಸಿನಲ್ಲಿ ನೆನೆಯುತ್ತ ತೀಕ್ಷ್ಣಭಾವನೆಯಿಂದ (ಶೌರ್ಯಸಂಪನ್ನನಾಗಿ) ಕುಳಿತುಕೊಂಡುಬಿಟ್ಟನು. (ಆಗ) ತನ್ನ ದೇಹದ ಸಂಬಂಧದಿಂದುಂಟಾದ ಹೆಚ್ಚಾದ ಸುಗಂಧದಿಂದ ಕೂಡಿದ ಧೂಪದ ಹೊಗೆಯು ಅಧಿಕಗೊಂಡು ಲಿಂಗವನ್ನು ಸುತ್ತಿಮುತ್ತಿ, ಆ ಕೂಡಲೇ ಎಲ್ಲಾ ಕಡೆಗೂ ಹಬ್ಬಿತು. 'ಸೋಮೇಶ್ವರ, ಹರಹರ' ಎಂಬ ಶಬ್ದವು ಮುಖದಿಂದ ಹೊರಹೊಮ್ಮುತ್ತಿರಲು ಶೋಭಿಸುತ್ತಿದ್ದನು. ೧೪೬. ಆಗ ಹೊಸದಾದ ಒಂದು ಆನೆಯ ಚರ್ಮವು ಈಶ್ವರನ ದೇಹವನ್ನು ಮುಸುಕಿರುವುದೋ ಎನ್ನುವಂತೆ ಧೂಪದ ಹೊಗೆಯ ಸಮೂಹದಿಂದ ಮುಸುಕಿದ ಈಶ್ವರನು ಮನಸ್ಸಲ್ಲಿ ಹುಟ್ಟಿದ ಪ್ರೀತಿಯಿಂದ ಒಲಿದು ಅವನಿಗೆ ನಿಜ ರೂಪ ತೋರಿಸಿದನು. ೧೪೭. ಬಾಲಚಂದ್ರ, ಆಕಾಶಗಂಗೆ, ಜಡೆಮುಡಿ, ಪ್ರಕಾಶಿಸುವ ಅಗ್ನಿ ನೇತ್ರ, ಬ್ರಹ್ಮಕಪಾಲ, ತ್ರಿಶೂಲ, ಹಾವುಗಳ ಆಭರಣ, ಅಲ್ಲಾಡುತ್ತಿರುವ ಹಾವಿನ ಕರ್ಣಕುಂಡಲ, ಮದೋನ್ಮತ್ತವಾದ ಗಜಾಸುರನ ಚರ್ಮದುಡಿಗೆ ಇವು ಶೋಭಿಸುತ್ತಿರಲು

ಸುರಕುಜಸುಮನೋವರ್ಷಂ
ಸುರಿಯೆ ಸುರಾನಕದುಂಬುಮುದು ಮೊರೆಯೆ ದಿಶಾ
ವರಹರಿವಿಧಿಗಳ್ಪದೆದೇ
ಳ್ತರೆ ವಿಬುಧರ್ಪೊಗಳೆ ಶಂಕರಂ ಸೊಗಯಿಸಿದಂ ೧೪೮

ವ॥ ಮತ್ತಮಲ್ಲಿ—

ಫಣಿಮಣಿಕಾಂತಿ ಮಿಂಚು ಜೆಡೆ ನೀರ್ಗದಿರದ್ರಿಜೆ ತೊಟ್ಟ ರತ್ನಭೂ
ಷಣದ ಮಯೂಖಮಿಂದ್ರಧನು ತಾಳ್ದ ಗಜಾಜಿನಮಂಬುದಂ ಕರ
ಕ್ವಣದಜಮಸ್ತವೇದರವಮುಬ್ಬರವಂ ತನಗಾಗೆ ಸತ್ಕೃಪೇ
ಕ್ಷಣರುಚಿ ವೃಷ್ಟಿಯಂ ಸುರಿದನಂಬುದಕಾಲದ ವೋಲ್ಮಹೇಶ್ವರಂ ೧೪೯

ವ॥ ಅಂತು ಕೃಪಾರಸವರ್ಷದಿನಂಗಮನಳುರ್ದ ಶಿಖಿಯಂ ನಂದವೊಯ್ದೋಹಿಲಯ್ಯನಂ ತೆಗೆದಪ್ಪಿ ಬಿಗಿಯಪ್ಪಿ ಮನ್ನಿಸಿ ಪೊಗಳ್ದು ಶೋಭನಾಂಗನಂ ನೆಗಳ್ದು ಪರಶಿವಂ ಪ್ರಮೋದಂಮಿಗೆ—

ಪ್ರಮಥಪತಿಪಟ್ಟಮಂ ಕ
ಟ್ಟಿ ಮಹೋತ್ಸವಮೆಸಗಿ ಶಂಭು ತನ್ನಯ ಸಾರೂ
ಪ್ಯಮನೀವುತೋಹಿಲಯ್ಯನ
ನಮರ್ದೊಳ್ಪಿಂ ರಜತಗಿರಿಗೆ ಕೊಂಡೊಯ್ವೆಡೆಯೊಳ್ ೧೫೦

ವರಘಂಟಾನಾದಮೇಟುಂ ದೆಸೆಯನಳುರೆ ಧೂಪಸ್ಫುರದ್ಧೂಮಮುರ್ವೀ
ಹರಲೋಕಕ್ಕಿಟ್ಟ ನಿಶ್ರೇಣಿಯವೊಲಿರೆ ಜಯಧ್ವಾನಸಂಸಕ್ತ ಭಕ್ತೋ

ಪಾರ್ವತೀ ಪತಿಯು ಪ್ರಕಾಶಿಸಿದನು. ೧೪೮. ಆಗ ಕಲ್ಪವೃಕ್ಷದ ಪುಷ್ಪಗಳ ಮಳೆ ಸುರಿಯಿತು ; ದೇವದುಂದುಭಿಗಳ ಸಮೂಹವು ಧ್ವನಿಮಾಡಿತು ; ಅಷ್ಟದಿಕ್ಪಾಲಕರು, ವಿಷ್ಣುಬ್ರಹ್ಮರುಗಳು ಪ್ರೀತಿಯಿಂದ ಬಂದರು ; ವಿದ್ವಾಂಸರು ಹೊಗಳುತ್ತಿದ್ದರು–ಹೀಗೆ ಶಂಕರನು ಪ್ರಕಟಗೊಂಡು ಶೋಭಿಸುತ್ತಿದ್ದನು, ವ॥ ಮತ್ತು ಅಲ್ಲಿ—೧೪೯. ಸರ್ಪದ ಹೆಡೆಯಲ್ಲಿರುವ ರತ್ನದ ಕಾಂತಿಯೇ ಮಿಂಚು ; ಜಡೆಯಲ್ಲಿರುವ ಗಂಗೆಯೇ ನೀರಿನ ಕಾಂತಿ ; ಪಾರ್ವತಿಯು ಕೊಟ್ಟ ರತ್ನಖಚಿತವಾದ ಆಭರಣಗಳ ಕಾಂತಿಯೇ ಕಾಮನ ಬಿಲ್ಲು ; ಉಟ್ಟ ಆನೆಯ ಚರ್ಮವೇ ಮೋಡ ; ಕೈಯಲ್ಲಿ ಧ್ವನಿಮಾಡುತ್ತಿರುವ ಬ್ರಹ್ಮನ ಶಿರಸ್ಸಿನಿಂದ ಉಂಟಾಗುತ್ತಿರುವ ವೇದಧ್ವನಿಯೇ ಗುಡುಗು ತನಗುಂಟಾಗಿರಲು ಪರಮೇಶ್ವರನು ಆಗ ಮಳೆಗಾಲದ ಹಾಗೆ ಸತ್ಕೃಪಾಪೂರ್ಣವಾದ ನೋಟದ ಕಾಂತಿಯೆಂಬ ಮಳೆಯನ್ನು ಸುರಿಸಿದನು. ವ॥ ಆ ರೀತಿ ಕೃಪಾರಸಪೂರ್ಣವಾದ ಮಳೆಯನ್ನು ಶಿವನು ಓಹಿಲಯ್ಯನ ದೇಹವನ್ನು ಆವರಿಸಿಕೊಂಡಿರುವ ಬೆಂಕಿಯು ನಂದುವ ಹಾಗೆ ಸುರಿಸಿ, ಓಹಿಲಯ್ಯನನ್ನು ಬರಸೆಳೆದು ಬಿಗಿದು ಅಪ್ಪಿಕೊಂಡು, ಮನ್ನಣೆಮಾಡಿ, ಅವನನ್ನು ಮಂಗಳಕರವಾದ ದೇಹವುಳ್ಳವನನ್ನಾಗಿಮಾಡಿ, ಅಧಿಕ ಸಂತೋಷದಿಂದಕೂಡಿ— ೧೫೦–೧೫೧. (ಆ ಓಹಿಲಯ್ಯನಿಗೆ) ಶಂಭುವು ಪ್ರಮಥ ಶ್ರೇಷ್ಠನ ಪಟ್ಟವನ್ನು ಕಟ್ಟಿದನು. ಅತ್ಯಂತ ಸಂಭ್ರಮವನ್ನುಂಟುಮಾಡಿದನು. ತನ್ನ ಸಮಾನಸ್ವರೂಪವನ್ನು

ತ್ಕರವೊಪ್ಪಂಬೆತ್ತುಘೇಯೆಂದುಲಿಯೆ ಪುರದ ತೂರ್ಯತ್ರಯಂ ಪೊಣ್ಮೆ ಮೇಲ
ಚ್ಚರಿಯುರ್ಮುದಾಡೆ ದೇವಪ್ರತತಿ ಪೊಗಳೆ ತದ್ಭಕ್ತನೆಯ್ದುತ್ತುಮಿರ್ದಂ ೧೫೧

ವ॥ ಆ ಗೌಳತಪಸ್ವಿಗಳಾ ಮಹಾತ್ಮನ ಮಹಿಮೆಗಂಡಳ್ಕಿ ಬಳ್ಕಿ ದೈನ್ಯಂ ಬೆರಸು ಧರಣಿಯೊಳ್ಸೈಗೆಡೆದು ಶರಣ್ಬೊಕ್ಕು ಮಿಕ್ಕು—

ವರಸುಗುಣಹಾರ ಕರುಣಾ
ಕರ ಕಲಿಮಲದೂರ ಸಾರವೈರಾಗ್ಯಪರಿ
ಸ್ಫುರಿತಶಿವಭಕ್ತಿಸುದೃಢಾ
ಚರಿತ ಶಿವಾನಂದಸಾಂದ್ರ ಜಯ ಭವರಹಿತಾ ೧೫೨

ವ॥ ಎಂದು ಮತ್ತೆ ಮತ್ತೆ ಪೊಗಳ್ದೋಹಿಲಯ್ಯನಿನಭಯಂಬಡೆದಿರ್ದರಾ ಪ್ರಸ್ತಾವದೊಳ್—

ಸಡಗರದಿಂ ಪೋದಪನಾ
ಮೃಡಲೋಕಕ್ಕೋಹಿಲಯ್ಯನೆನಗವನಂ ಕಂ

(ಸಾರೂಪ್ಯವನ್ನು) ಕೊಡುತ್ತ ಆ ಓಹಿಲಯ್ಯನನ್ನು ಒಡಗೊಂಡು ಪ್ರೀತಿಯಿಂದ ಕೈಲಾಸಪರ್ವತಕ್ಕೆ ಹೋಗುವ ಕಾಲದಲ್ಲಿ ಶ್ರೇಷ್ಠವಾದ ಗಂಟೆಯ ನಾದವು ಎಂಟೂ ದಿಕ್ಕುಗಳನ್ನು ಆವರಿಸಿತು ; ಹರಡುತ್ತಿರುವ ಧೂಪದ ಹೊಗೆಯು ಪ್ರಳಯಕಾಲದಲ್ಲಿ ಭೂಮಿಯನ್ನೆಲ್ಲ ನಾಶಮಾಡುವ ಶಿವನ ಲೋಕಕ್ಕೆ ಹಾಕಿದ ನಿಚ್ಚಣಿಕೆಯೋ ಎಂಬಂತಾಗಿತ್ತು, ಜಯ ಜಯ ಧ್ವನಿಯಿಂದ ಕೂಡಿದ ಶಿವಭಕ್ತರುಗಳ ಸಮೂಹವು, ಮನೋಹರವಾಗಿ ಉಘೇ, ಉಘೇ. ಎಂದು ಕೂಗುತ್ತಿತ್ತು. ಆ ಸೌರಾಷ್ಟ್ರ ಪಟ್ಟಣದಲ್ಲಿ ನೃತ್ಯ, ಗೀತವಾದ್ಯ (ತೂರ್ಯತ್ರಯ)ಗಳು ಹೊರಹೊಮ್ಮುತ್ತಿದ್ದವು : ಮೇಲೆ ಆಕಾಶದಲ್ಲಿ ಅಪ್ಸರಸ್ತ್ರೀಯರು ಪ್ರೀತಿಗೊಳ್ಳುತ್ತಿದ್ದರು ; ದೇವತಾಸಮೂಹವು ಹೊಗಳುತ್ತಿತ್ತು (—ಹೀಗೆ ಆ ಓಹಿಲಯ್ಯನು ಹೋಗುತ್ತಿದ್ದನು. ವ॥ ಆಗ ಆ ಗೌಳ ತಪಸ್ವಿಗಳು ಆ ಮಹಾತ್ಮನಾದ ಓಹಿಲಯ್ಯನ ಮಹಿಮೆಯನ್ನು ಕಂಡು, ಅಳುಕಿ ಬಳುಕಿದವರಾಗಿ ದೈನ್ಯ ಧ್ವನಿಯಿಂದ ಕೂಡಿ, ನೆಲದಮೇಲೆ ಅಡ್ಡಬಿದ್ದು, ಅತಿಶಯವಾಗಿ ಶರಣು ಹೊಕ್ಕವರಾಗಿ ೧೫೨. ಶ್ರೇಷ್ಠ ಸದ್ಗುಣಗಳ ಹಾರವುಳ್ಳವನೇ, ಕರುಣಾಶಾಲಿಯೇ, ಕಲಿಕಾಲದ ಪಾಪಗಳನ್ನು ದೂರಗೊಳಿಸಿದವನೇ (ಅಥವಾ—ಸಮರ್ಥವಾದ ಆಣವ, ಮಾಯಾ, ಕಾರ್ಮಿಕಗಳೆಂಬ ಮಲತ್ರಯಗಳನ್ನು ದೂರಗೊಳಿಸಿದವನೇ), ಶ್ರೇಷ್ಠ ವೈರಾಗ್ಯಶಾಲಿಯೇ, ಅದ್ಭುತ ಶಿವಭಕ್ತಿಯನ್ನು ಪ್ರಕಟಗೊಳಿಸಿದವನೇ, ಸ್ಥಿರವಾದ ಚರಿತ್ರೆಯುಳ್ಳವನೇ, ಬ್ರಹಾನಂದ ಪರಿಪೂರ್ಣನೇ, ಭವರಹಿತನಾದವನೇ (ಓಹಿಲಯ್ಯನೇ) ಜಯ ವ॥ ಹೀಗೆಂದು ಪುನಃ ಪುನಃ ಹೊಗಳಿ, ಆ ಓಹಿಲಯ್ಯನಿಂದ ಅಭಯವನ್ನು ಪಡೆದವರಾಗಿದ್ದರು. ಆ ಸಮಯದಲ್ಲಿ—(ಪಾಲಗುರ್ಜರರಾಜನು ತನ್ನ ಹೆಂಡತಿಯನ್ನು ಕುರಿತು) ೧೫೩. 'ಚಂದ್ರಮುಖಿಯೇ. ಹೀಗೆ ಓಹಿಲಯ್ಯನು ಸಡಗರದಿಂದ ಶಿವಲೋಕಕ್ಕೆ

ಡೊಡನೆ ನಗೆ ನೆಗಳ್ದುದೆಂತೆನೆ
ಜಡರುಹರಿಪುವದನೆ ಪೇಳ್ವೆನೆಂದಿಂತೆಂದಂ ೧೫೩

ಘನನಿಷ್ಠಾಭಾವದಿಂ ದುಷ್ಕರತರತಪಮಂ ತಾಳ್ದುಮುಗ್ರವ್ರತಂಗೊಂ
ಡೆನಸುಂ ಸೋಮೇಶನಂ ಮೆಚ್ಚಿಸಿ ಹರ ಹರ ತಾನೊರ್ವನೇ ಪೋದಪಂ ಮ
ರ್ತ್ಯನಿಕಾಯಂ ಪಟ್ಟಣಂಗಳ್ವೆರಸಿ ತಳರದಿಂತೊರ್ವನೇ ಪೋಪ ಕಜ್ಜ
ಕ್ಕಿನಿತೊಂದಾಯಾಸಮೇಕೆಂದೆನುತೆ ಬಗೆದಣಂ ನಕ್ಕೆನಂಭೋಜನೇತ್ರೇ ೧೫೪

ವ|| ಎಂದು ನಿಜರಮಣಂ ನಗೆಗೆ ಕಾರಣಮನಱುಪೆ ರಮಣಿ ಕೇಳ್ದು ವಿಸ್ಮಯಂದಾಳ್ದು ವಿಯತ್ತಳದೊಳನಿಮಿಷೇಕ್ಷಣದಿನಱಸಿ ನೋಡಿಯುಂ ಕಾಣದರಸನಡಿದಳಿರ್ಗೆಱಗಿ—

ಅವ ಕಡೆಯಾದ ಮುಗಿಲೆಡೆ
ಯಾವ ದಿಶಾಭಾಗಮಾವ ಪವಣೊಳ್ಪಕ್ತಂ
ಭೂವರ ತಳರ್ದಪನಱುಪೆಂ
ದಾ ವಿಧುಮುಖಿ ಕೇಳೆ ನಗುತೆ ನೃಪನಿಂತೆಂದಂ ೧೫೫

ಘನಘಂಟಾರುತಿ ಕೇಳಲಾದಪುದದೆತ್ತಂ ಕಾಂತೆ ನೋಡತ್ತ ನೀ
ನೆನೆ ತತ್ಕಾಮಿನಿ ಮೆಲ್ಲನಾಲಿಸಿ ತದೀಯಧ್ವಾನಮಂ ನೇರ್ಪುಗೊಂ

ಹೋದನು. ನನಗೆ ಅವರನ್ನು ಕಂಡು ಕೂಡಲೇ ನಗೆ ಬಂದಿತು–ಹೇಗೆಂದರೆ ಹೇಳುತ್ತೇನೆ ಕೇಳು' : ಎಂದು ಈ ರೀತಿಯಲ್ಲಿ ತಿಳಿಸಿದನು : ೧೫೪. 'ಎಲೈ ಕಮಲ ನೇತ್ರೆಯೇ, ಅತ್ಯಂತ ನಿಷ್ಠೆಯಿಂದ ಕೂಡಿದ ಭಾವನೆಯಿಂದ ಅತ್ಯಂತ ಅಸಾಧ್ಯವಾದ ತಪಸ್ಸನ್ನು ಆಚರಿಸಿಯೂ, ಅಧಿಕವಾದ ಉಗ್ರವ್ರತವನ್ನು ಸ್ವೀಕರಿಸಿ, ಸೋಮೇಶ್ವರ ನನ್ನು ಮೆಚ್ಚಿಸಿ ತಾನೊರ್ವನೇ ಕೈಲಾಸಕ್ಕೆ ಹೋದನು ! ಹರಹರ !! ಮನುಷ್ಯ ಸಮೂಹ, ಪಟ್ಟಣಗಳು ಸಹಿತವಾಗಿ ಹೋಗದೆ ಈ ರೀತಿ ಒಬ್ಬನೇ ಹೋಗುವ ಕಾರ್ಯಕ್ಕೆ ಇಷ್ಟೊಂದು ಆಯಾಸವೇತಕ್ಕೆ ? ಹೀಗೆಂಬುದಾಗಿ ಯೋಚನೆಮಾಡಿ ಸ್ವಲ್ಪ ನಕ್ಕೆನು.' ವ|| ಹೀಗೆಂದು ತನ್ನ ಪತಿಯಾದ ಪಾಲಗುರ್ಜರನು ನಗೆಯಾಡುವುದಕ್ಕೆ ಕಾರಣವನ್ನು ಹೇಳಲಾಗಿ, ಹೆಂಡತಿಯು ಕೇಳಿ, ಆಶ್ಚರ್ಯಗೊಂಡವಳಾಗಿ, ಆಕಾಶಮಾರ್ಗದಲ್ಲಿ ಕಣ್ಣು ಮಿಟುಕಿಸದಂತೆ ಹುಡುಕುತ್ತ (ಆ ಓಹಿಲಯ್ಯನನ್ನು) ನೋಡಿ ಕಾಣದೆ ತನ್ನ ಪತಿಯ ಚಿಗುರಿನಂತಿರುವ ಪಾದಗಳಿಗೆ ನಮಸ್ಕರಿಸಿ—೧೫೫. 'ಮಹಾರಾಜಾ, ಯಾವ ಕಡೆಗೆ, ಯಾವ ಮುಗಿಲಿನ ಕಡೆಗೆ, ಯಾವ ದಿಕ್ಕುಗಳತ್ತ, ಯಾವ ಪ್ರಮಾಣ (ಯಾವ ರೀತಿ) ದಲ್ಲಿ ಹೋದನು ? ತಿಳಿಸು' ಎಂದು ಆ ಚಂದ್ರಮುಖಿಯು ಕೇಳಲಾಗಿ ನಗುತ್ತ ಅರಸನು ಹೀಗೆ ಹೇಳಿದನು : ೧೫೬. 'ಕಾಂತೆಯೇ, ಘನವಾದ ಗಂಟೆಯ ಶಬ್ದವು ಯಾವ ಕಡೆ ಯಿಂದ ಕೇಳಿಬರುತ್ತಿರುವುದೋ ನೀನು ಆಕಡೆಗೆ ನೋಡು.' ಎನ್ನಲು ಆ ಕಾಮಿನಿಯು ಮೆಲ್ಲನೆ ಗಂಟೆ ಧ್ವನಿಯಾಗುತ್ತಿರುವುದನ್ನು ಆಲಿಸುತ್ತ, ಅತ್ತಕಡೆಗೇ ನೇರವಾಗಿ ದಿವ್ಯ

ಡನುಸಂಧಾನದೆ ನೋಡಿ ಕಂಡಳಿನತೇಜೋವಿಸ್ಫುರತ್ಪಾವನಾಂ
ಗಗನಭ್ರಾಂತರದೊಳ್ ಶಿವಾಧವದಯಾಸಂಪ್ರ[1]ಕ್ತನಂ ಭಕ್ತನಂ ೧೫೬

ಕಂಡಧಿಕ ಸಂಭ್ರಮಮನೊಳ
ಕೊಂಡಚ್ಚರಿವಟ್ಟು ಕಾಂತೆ ಮೆಯ್ಯಿಕ್ಕಿ ಮಹೀ
ಮಂಡಲದೊಳೋಹಿಲಯ್ಯನ
ಕೊಂಡಾಡುತೆ ತನ್ನ ಗಂಡನೊಡನಿಂತೆಂದಳ್ ೧೫೭

ಭಸಿತಮನೊಲ್ದು ಮೆಲ್ದು ತಪಮಾಂತು ನಿಜಾಂಗತುಲಾರ್ಹಗುಗ್ಗುಳ
ಪ್ರಸರದ ಧೂಪಮಿತ್ತು ಮಗುಳ್ದಂಗಮನಗ್ನಿಯೊಳಿಟ್ಟು ತತ್ಸುಗಂ
ಧಿ[2] ಸರಸಧೂಪಮಂ ಸಲಿಸಿ ಮೆಚ್ಚಿಸಿ ಶಂಭುವನಾ ಗಣಂಗಳೊ
ಲ್ದೊಸಗೆಯನಾಳ್ದಿದಿರ್ನಡೆಯೆ ಪೋದಪನೀಶ್ವರಲೋಕಕೋಹಿಲಂ ೧೫೮

ನಿಜಕಾಯಸಹಿತಮೀವನಂ
ತೆ ಜಗತ್ತ್ರಯದಲ್ಲಿ ವಹ್ನಿಯಂ ಜಯಿಸುತ್ತುಂ
ಭುಜಗಾಭರಣನ ಭಕ್ತ
ವ್ರಜದೊಳ್ಕೈಲಾಸಕಿಂತು ನಡೆದರುಮೊಳರೇ ೧೫೯

ನುಡಿದಂತೆ ನಡೆದು ತೋಱಿದ
ಬೆಡಂಗನೋಹಿಲನಿವಂಗೆ ದೊರೆಯಾರೆನುತುಂ

ಜ್ಞಾನ ಸಂಬಂಧದಿಂದ ನೋಡುತ್ತ, ಆಕಾಶ ಮಧ್ಯದಲ್ಲಿ ಸೂರ್ಯಪ್ರಕಾಶದಂತೆ ಪ್ರಕಾಶಿಸುವ ಪರಿಶುದ್ಧ ದೇಹದಿಂದ ಕೂಡಿದ ಪರಮೇಶ್ವರನ ಕೃಪೆಯೆಂಬ ಜಲದಿಂದ ತೊಯ್ದು ಹೋದ (ಆ ಓಹಿಲಯ್ಯನೆಂಬ) ಭಕ್ತನನ್ನು ನೋಡಿದಳು. ೧೫೭. ಆ ಕಾಂತೆಯು ಹೀಗೆ ಕಂಡು, ಸಂಭ್ರಮವಿಶಿಷ್ಟಳಾಗಿ, ಆಶ್ಚರ್ಯಪಟ್ಟು, ಭೂಮಿಯಲ್ಲಿ ಮೈಯಿಕ್ಕಿ ನಮಸ್ಕರಿಸಿ, ಓಹಿಲಯ್ಯನನ್ನು ಕೊಂಡಾಡುತ್ತ, ತನ್ನ ಗಂಡನೊಡನೆ ಹೀಗೆ ಹೇಳಿದಳು : ೧೫೮–೧೬೦. 'ಓಹಿಲದೇವನು ಭಸ್ಮವನ್ನೇ ತಿಂದು, ತಪಸ್ಸುಮಾಡಿ, ತನ್ನ ದೇಹ ತೂಕಕ್ಕೆ ಸಮಾನವಾದ ತೂಕದ ಗುಗ್ಗುಳದ ಧೂಮವನ್ನು ಶಿವನಿಗೆ ಸಮರ್ಪಣೆಮಾಡಿ, ಪುನಃ ಬೆಂಕಿಯಲ್ಲಿ ತನ್ನ ದೇಹವನ್ನೇ ಸಲ್ಲಿಸಿ, ಅಂಥ ದೇಹವೆಂಬ ಧೂಪದ ಮನೋಹರವಾದ ಪರಿಮಳವನ್ನು ಸಮರ್ಪಣೆಮಾಡಿ, ಶಂಭುವನ್ನು ಮೆಚ್ಚಿಸಿ ಶಿವಗಣಗಳೆಲ್ಲ ಒಲಿದು ಉತ್ಸವವನ್ನು ಹೊಂದಿ ಮುಂದೆ ಮುಂದೆ ನಡೆಯುತ್ತಿರಲು ಈಶ್ವರ ಲೋಕಕ್ಕೆ ಹೋಗುತ್ತಿರುವನು; ಈ ಮೂರೂ ಲೋಕಗಳಲ್ಲಿರುವ ಪರಮೇಶ್ವರನ ಭಕ್ತಸಮೂಹದಲ್ಲಿ ಇವನಂತೆ ಅಗ್ನಿಯನ್ನು ಜಯಿಸಿ ಶರೀರಿಯಾಗಿ

---

1 ಪ್ರೋ (ಅ) 2 ಧ (ಮ)

ನುಡಿಯೆ ನಿಜರಮಣಿಗರಸಂ
ಜಡಮತಿ ಕೇಳೆಂದು ನಗುತೆ ಮಗುಳ್ದಿಂತೆಂದಂ ೧೬೦

ಹರಭಕ್ತರ್ಗಿದು ಗಹನಮೆ
ತರಳೆ ಶಿವೈಕ್ಯರ್ಕಳಿಂದೆ ಶಿಖಿ ಘನಮೆ ಮಹಾ
ಧ್ವರದೊಳ್ ಶಿಖಿಜಿಹ್ವೆಗಳಂ
ಕರಮುಮನೇಂ ಕಡಿದು ಮೆಱೆಯನೇ ಗಣನೊರ್ವಂ ೧೬೧

ಪ್ರಲಯೋಗ್ರಜ್ವಾಲೆಯುಂ ತಾಳನೆ ಗಣವರನೊರ್ವಂ ಲಲಾಟಾಕ್ಷಿಯೊಳ್ಗ
ಲ್ಗಲನೊರ್ವಂ ಬಾಡಬೋಪರ್ಬುಧನನಳಿಕದೊಳ್ಪೊಟ್ಟುಗೆಯ್ದಾನನೇ ನಿ
ಶ್ಚಲಚಿತ್ತಂ ದಾಸಿಮಯ್ಯಂ ತಳೆಯನೆ ಪಣೆಗಣ್ಣೊಳ್ಮಹಾವಹ್ನಿಯು ಮಂ
ಜುಲವೃತ್ತಂ ವಾದದೊಳ್ಪಾವಕನ ವಸನದೊಳ್ ಕಟ್ಟನೇ ಪಂಡಿತಾರ್ಯಂ ೧೬೨

ಏಗೆಯ್ದುದಾವರಿಸಿ ಶಿಖಿ
ಯೋಗೀಶ ವ್ಯಾಘ್ರಪಾದಸುತನಂ ಜ್ವಳನಂ
ವಾಗೀಶಂಗೆ ಸರೋವರ
ಮಾಗದೆ ಶಿವಭಕ್ತವಿತತಿಗಂಜುಗುಮನಲಂ ೧೬೩

ವ॥ ಅದಲ್ಲದೆಯುಮಾವಂ ನಿಜಾಂಗಮಂ ಮಹಿಪಾಕ್ಷಿಗುರ್ಗುಳಂಗೆಯ್ದನೆಂದು ಪೊಗಳ್ವೆಯಪ್ಪೊಡೆ—

ಕೈಲಾಸಕ್ಕೆ ಈ ರೀತಿ ಹೋಗತಕ್ಕವರಾದರೂ ಉಂಟೆ ? ಓಹಿಲದೇವನು ನುಡಿದಂತೆ ನಡೆದು, ವೈಭವವನ್ನು ತೋರಿಸಿದನು. ಇವನಿಗೆ ಸಮಾನರಾದವರು ಯಾರು ?' ಎಂದು ನುಡಿಯಲು–ಪಾಲಗುರ್ಜರ ರಾಜನು. 'ಮೂಢಬುದ್ಧಿಯುವಳೇ ಕೇಳು' ಎಂದು ನಗುತ್ತ, ತನ್ನ ಹೆಂಡತಿಗೆ ಪುನಃ ಹೀಗೆ ಹೇಳಿದನು : ೧೬೧. 'ಎಲೆ ತರಳೆಯೇ ಹರನ ಭಕ್ತರಿಗೆ ಇದೊಂದು ಗಹನ ವಿಚಾರವೇ ? ಶಿವನೊಡನೆ ಸಾಮರಸ್ಯವನ್ನು ಹೊಂದಿರುವವರಿಗಿಂತಲೂ ಅಗ್ನಿಯೇನು ದೊಡ್ಡವನೇ ? ದಕ್ಷಬ್ರಹ್ಮನ ಮಹಾಯಜ್ಞದಲ್ಲಿ ಒಬ್ಬ ಶಿವಗಣನು ಅಗ್ನಿಯ ನಾಲಿಗೆಯನ್ನೂ, ಹಸ್ತವನ್ನೂ ಕತ್ತರಿಸಿ ಮೆರೆಯಲಿಲ್ಲವೆ ?' ೧೬೨. 'ಒಬ್ಬ ಶಿವಗಣನು ತನ್ನ ಹಣೆಗಣ್ಣಿನಲ್ಲಿ ಪ್ರಳಯಕಾಲದಲ್ಲಿರುವಂತೆ ಭಯಂಕರವಾದ ಅಗ್ನಿಯನ್ನು ಧರಿಸಿರಲಿಲ್ಲವೇ ? ಇನ್ನೊಬ್ಬ ಶಿವಗಣನು ಗಲಗಲನೆ ಬಡಬಾಗ್ನಿಯನ್ನು ತಿಲಕವನ್ನಾಗಿ ಮಾಡಿ ಹಣೆಯಲ್ಲಿ ಹಚ್ಚಿಕೊಳ್ಳಲಿಲ್ಲವೇ ? ನಿಶ್ಚಲಚಿತ್ತನಾದ ಶಂಕರದಾಸಿಮಯ್ಯನು ತನ್ನ ಹಣೆಗಣ್ಣಿನಲ್ಲಿ ಭಯಂಕರಾಗ್ನಿಯನ್ನೂ ಧರಿಸಲಿಲ್ಲವೇ ? ಮನೋಹರ ಚರಿತ್ರೆಯುಳ್ಳ ಪಂಡಿತಾರಾಧ್ಯನು ಸಿದ್ಧಾಂತವನ್ನು ಸ್ಥಾಪಿಸುವ ಸಮಯದಲ್ಲಿ ಅಗ್ನಿಯನ್ನು ಬಟ್ಟೆಯಲ್ಲಿ ಕಟ್ಟಲಿಲ್ಲವೇ ?' ೧೬೩. 'ಋಷಿ ಶ್ರೇಷ್ಠನಾದ ವ್ಯಾಘ್ರಪಾದನ ಕುಮಾರನನ್ನು (ಉಪಮನ್ಯುವನ್ನು) ಬೆಂಕಿಯು ಆವರಿಸಿ, ಏನು ಮಾಡಿತು ? ವಾಗೀಶರಿಗೆ ಬೆಂಕಿಯು ಸರೋವರವಾಗಲಿಲ್ಲವೇ ? ಬೆಂಕಿಯು ಶಿವಭಕ್ತರಿಗೆ ಅಂಜುವುದು.' ವ॥ 'ಅದೂ ಅಲ್ಲದೆ ಆ ಓಹಿಲಯ್ಯನು ತನ್ನ ಶರೀರವನ್ನು ಮಹಿಪಾಕ್ಷಿ

ದಾಸಯನಾತ್ಮಜಾತಕರದಿಂದೆ ತುಡುಂಕಿಸಿ ಪುತ್ತ ಪಾವನು
ಲ್ಲಾಸದೆ ಪೊನ್ನನೇವಳಮನಾಗಿಸನೇ ಕೊಜ[3]ದಿಕ್ಕಿ ಖಂಡಮುಂ
ಸಾಸಿಗ ಮಾಚನಗ್ನಿಯೊಳೆ ಗುರ್ಗುಳಮಂ ಮಿಗೆ ಮಾಡನೇ ಗಣಾ
ಗ್ರೇಸರರಿಂತುಟಪ್ಪರೊಳರೀ ಧರೆಯೊಳ್ಪಲರುನ್ನತವ್ರತರ್ ೧೬೪

ಮಿಸುಪೆಣ್ಬತ್ತು ಸಹಸ್ರವಾಜಿಗೆ ಲಸದ್ರುದ್ರಾಕ್ಷೆಯಿಂ ಪಕ್ಷರ
ಕ್ಷೆಸಮುಂತೊಪ್ಪಿರೆ ಚೇ[1]ರಮಕ್ಷಿತಿಪನಾಕಾಶಕ್ಕೆ ಧೀಂಕಿಟ್ಟು ವಾ
ಜಿಸಮೇತಂ ಸುರರಳ್ಕೆ ನಿರ್ಭರದೆ ಕೈಲಾಸಕ್ಕೆ ದಾಳಿಟ್ಟನಂ
ದು ಸತೀಬಂಧು ಸಖಾಳಿಗೂಡಿ ಶಿವಲೋಕಂಬೊಕ್ಕನಾ ಸೌಂದರಂ ೧೬೫

ಮಗಳಳಿಯನಾತ್ಮವಲ್ಲಭೆ
ನೆಗಳ್ದೊಡವರೆ ಮಾನಕಂಜನೆಯ್ದನೆ ತಾರಾ
ನಗಮುಂ ಪರಿಜನಸಹಿತಂ
ಪುಗನೆ ವಲಂ ಮಲಯರಾಜನೀಶ್ವರಪುರಮುಂ ೧೬೬

ಹರನೊಳ್ಪೌರಪ್ರಯುಕ್ತಂ ಪುಗನೆ ಘನತಿರುಜ್ಞಾನಸಂಬಂಧನಿಂತಾ
ದ್ಯರನಂತರ್ಪೋದರುಂಟೀಶ್ವರಪುರಕಿವನೇವಾಳ್ತೆ ತಾನೊರ್ವನೇ ಪೋ

ಯೆಂಬ ಗುಗ್ಗುಳವನ್ನಾಗಿ ಮಾಡಿದನೆಂದು ಹೊಗಳುವೆಯಾದರೆ—' ೧೬೪. 'ದಾಸಯ್ಯನು ತನ್ನ ಮಗನ ಕೈಯಿಂದ ಹುತ್ತದಲ್ಲಿದ್ದ ಹಾವನ್ನು ಹಿಡಿಸಿ, ಉಲ್ಲಾಸದಿಂದ ಚಿನ್ನದ ಮಾಲಿಕೆಯನ್ನಾಗಿ ಮಾಡಲಿಲ್ಲವೇ ? ಸಾಹಸಿಯಾದ ಮಾಚಯ್ಯನು ಅಗ್ನಿಯಲ್ಲಿ ಮಾಂಸವನ್ನು ಕತ್ತರಿಸಿ ಹಾಕಿ, ಗುಗ್ಗುಳವನ್ನಾಗಿ ಮಾಡಲಿಲ್ಲವೇ ? ಈ ಲೋಕದಲ್ಲಿ ಈ ಪ್ರಕಾರವಾಗಿ ಶ್ರೇಷ್ಠವ್ರತವನ್ನು ಆಚರಿಸಿದವರು ಅನೇಕರಿರುವರು.' ೧೬೫. ಚೇರಮರಾಜನು ಶೋಭಿಸುವ ತನ್ನ ಎಂಬತ್ತುಸಾವಿರ ಕುದುರೆಗಳಿಗೆ ಶೋಭಿಸುವ ರುದ್ರಾಕ್ಷಿಗಳು ಚೆನ್ನಾಗಿ ಶೋಭಿಸುತ್ತಿರಲು ಆ ಕುದುರೆ ಸಮೇತವಾಗಿ ಆಕಾಶಕ್ಕೆ ಹಾರಿ ದೇವತೆಗಳೆಲ್ಲ ಭಯಪಡುವಂತೆ ಕೈಲಾಸಕ್ಕೇ ದಾಳಿಯನ್ನಿಕ್ಕಿದನು. ಸೌಂದರ ನಂಬಿಯಣ್ಣನು, ಹಿಂದೆ ಹೆಂಡತಿ, ಬಂಧುಗಳು, ಸ್ನೇಹಿತರು ಸಮೇತವಾಗಿ ಶಿವಲೋಕವನ್ನು ಹೊಕ್ಕನು.' ೧೬೬–೧೬೭. 'ಮಾನಕಂಜರರಾಯನು ಮಗಳೂ, ಅಳಿಯನೂ, ತನ್ನ ಹೆಂಡತಿಯೂ ಜೊತೆಯಲ್ಲೇ ಬರುತ್ತಿರಲು ಕೈಲಾಸಾದ್ರಿಯನ್ನು ಹೊಂದಲಿಲ್ಲವೇ ? ಮಲಯರಾಜನು ಸೇವಕ ಜನಸಹಿತವಾಗಿ ಈಶ್ವರನ ನಗರವನ್ನು ಚೆನ್ನಾಗಿ ಪ್ರವೇಶ ಮಾಡಲಿಲ್ಲವೇ ? ಎಲೈ ಕಮಲನೇತ್ರೆಯೇ, ಶ್ರೇಷ್ಠನಾದ ತಿರುಜ್ಞಾನ ಸಂಬಂಧನು ಪಟ್ಟಣದ ಜನಗಳು ಸಮೇತವಾಗಿ ಹರನಲ್ಲಿ ಪ್ರವೇಶಿಸಲಿಲ್ಲವೇ ? ಈ ರೀತಿ ಅನಂತ

1 ಚಾ (ಮು)

ಪಿರಿವಿಂಗೇಕಿಂತುಟೀ ಸಂಭ್ರಮಮಮಮ ಮಹಾಘಂಟೆಯಂ ಬಾಜಿಸುತ್ತುಂ
ಭರದಿಂ ಪೋದಪ್ಪನಂತಲ್ಲದೆ ಮೆಱೆಯದೆ ಪೇಳ್ತನ್ನ ಪೆಂಪಂಬುಜಾಕ್ಷೀ ೧೬೭

ವ॥ ಎಂದರಸನೋಹಿಲಯ್ಯಂಗೆ ಪೆರ್ಮೆಯಂ ತಗುಳ್ಚಿ ನೀಂ ಮಿಗೆ ಪೊಗಳ್ವುದನುಚಿತಮಕ್ಕು ಮೆಂದೇಳಿದಂಗೆಯ್ಯೆ ವಲ್ಲಭನ ನುಡಿಯನುಲ್ಲಂಘಿಸಿ ತಿರಸ್ಕರಣಂಗೆಯ್ದುರಸಿಯಿಂತೆಂದಳ್—

ಅವನೆಂದುಂ ಜಿತಕಾಮನುರ್ವಿಪ ವಲಂ ನೀಂ ಕಾಮಿ ಸಂಸಾರಬಂ
ಧವಿಮುಕ್ತಂ ನೆಗಳ್ದಾ ಮಹಾಸುಮತಿ ನೀಂ ಸಂಸಾರಯುಕ್ತಂ ಸದಾ
ಶಿವಪೂಜಾಭಿರತಂ ಗಡಾತನೆಲ ನೀಂ ದ್ಯೂತಾನುರಕ್ತಂ ಗಣ
ಪ್ರವರಂ ಯೋಗಿಯವಂ ನರಾಧಿಪ ನಿತಾಂತಂ ಭೋಗಿ ನೀಂ ಧಾತ್ರಿಯೊಳ್ ೧೬೮

ಅಕ್ಕಟ ನಿನ್ನಿರವಱಿಯದೆ
ಮುಕ್ಕಣ್ಣನ ಭಕ್ತವರ್ಯನೆನಿಪ್ಪೋಹಿಲನಂ
ಟಿಕ್ಕರಿಗಳೆದಪೆ ನಿನಗೇಂ
ತಕ್ಕುದೆ ಪೇಳ್ನೃಪತಿ ನಿನ್ನನೇನೆಂದಪುದೋ ೧೬೯

ವ॥ ಎಂದಾ ಮಹಾಮಹಿಮನಂ ಲಘುಮಾಡಿ ನುಡಿಯದಿರೆಂದ ನಲ್ಲಳ ನುಡಿಗೆ ನರೇಂದ್ರಂ ಮುಗುಳ್ನಗೆ ನಕ್ಕು—

ಪುರಾತನರು ಈಶ್ವರನ ಪಟ್ಟಣಕ್ಕೆ ಹೋದವರುಂಟು. ಇವನಾವ ಲೆಕ್ಕ ? ತಾನೊಬ್ಬನೇ ಹೀಗೆ ಹೋಗುತ್ತಿರುವ ಇಷ್ಟೊಂದು ಈ ಸಂಭ್ರಮವೇತಕ್ಕೆ ? ಅಮಮ ; ಮಹಾಗಂಟೆ ಯನ್ನು ಬಾರಿಸುತ್ತ ವೇಗವಾಗಿ ಹೋಗುತ್ತಿದ್ದಾನೆ. ಹಾಗಲ್ಲದೆ ತನ್ನ ಹಿರಿಮೆಯು ಮೆರೆಯುತ್ತಿದ್ದಿಲ್ಲವೇ? ಹೇಳು.' ವ॥ ಎಂದು ಆ ಪಾಲಗುರ್ಜರರಾಜನು ಓಹಿಲಯ್ಯನಿಗೆ ದೊಡ್ಡಸ್ತಿಕೆಯನ್ನುಂಟುಮಾಡುತ್ತ ನೀನು ಅತಿಶಯವಾಗಿ ಹೊಗಳುವುದು ಅನುಚಿತ ವಾಗುವುದು ಎಂದು ತಿರಸ್ಕರಿಸಿ ನುಡಿಯಲು, ಅವನ ಹೆಂಡತಿಯು ಆ ಗಂಡನ ಮಾತು ಗಳನ್ನು ಮಿಕ್ಕಿ ತಿರಸ್ಕಾರಮಾಡಿ, ಹೀಗೆ ಹೇಳಿದಳು ; ೧೬೮–೧೬೯. 'ಹೇ ಉರ್ವೀ ಪತಿಯೇ, ಭೂಮಿಯಲ್ಲಿ ಆ ಓಹಿಲಯ್ಯನು ಸದಾ ವಿಷಯೇಚ್ಛೆಯನ್ನು ಜಯಿಸಿ ದವನು, ನೀನಾದರೋ ಸಕಾಮಿ. ಪ್ರಸಿದ್ಧನಾದ ಆ ಸದ್ಬುದ್ಧಿಯ ಓಹಿಲಯ್ಯನು ಸಂಸಾರ ಬಂಧನದಿಂದ ವಿಮುಕ್ತಿಗೊಂಡವನು, ನೀನಾದರೋ ಸಂಸಾರಯುಕ್ತನು. ಅವನು ಸದಾ ಶಿವಪೂಜೆಯಲ್ಲಿ ಆಸಕ್ತನಾದವನಲ್ಲವೇ ? ಎಲೈ ನೀನು ದ್ಯೂತದಲ್ಲಿ (ಪಗಡೆಯಾಟದಲ್ಲಿ) ಆಸೆಯುಳ್ಳವನು. ಶಿವಗಣದಲ್ಲಿ ಶ್ರೇಷ್ಠನೆನಿಸಿದ ಅವನು ಸಂನ್ಯಾಸಿಯು, ಮಹಾರಾಜ, ನೀನಾದರೋ ಭೋಗ ಸುಖಾಪೇಕ್ಷಿ. ಅಕ್ಕಟ, ಹೇ ಮಹಾರಾಜನೇ, ನೀನು ನಿನ್ನರೀತಿ ಯನ್ನೇ ತಿಳಿಯದೆ ಮುಕ್ಕಣ್ಣನ ಭಕ್ತನೆನಿಸಿದ ಆ ಓಹಿಲಯ್ಯನನ್ನು ತಿರಸ್ಕಾರಮಾಡು ತ್ತಿದ್ದೀಯೆ. ಇದು ನಿನಗೆ ಯೋಗ್ಯವಾದುದೇ ? ಹೇಳು. ನಿನ್ನನ್ನು ಏನು ಹೇಳಬೇಕೋ (ತಿಳಿಯದು)' ! ವ॥ ಹೀಗೆ ಹೇಳುತ್ತ 'ಆ ಮಹಾ ಮಹಿಮನಾದ ಓಹಿಲಯ್ಯನನ್ನು ಲಘುಮಾಡಿ ನುಡಿಯಬೇಡ'ವೆಂದು ಹೇಳಿದ ಹೆಂಡತಿಯ ಮಾತಿಗೆ ಆ ಪಾಲ ಗುರ್ಜರ

ಆನೆಂದ ಭಕ್ತಿಮಾರ್ಗನ
ಮೀನೋಕ್ತಿಯ ಪುರುಳನಮಳ ಭಕ್ತರ ಬಗೆಯಂ
ನೀನಱಿಯದುಲಿವೆ ಕೇಳೆಲೆ
ಮಾನಿನಿ ಹರಶರಣರಳವದೇಂ ಕೇವಳಮೋ ೧೭೦

ಕಾಮಿನಿಯ ಸಂಗಮುಮಿರ್ದಿರೆ
ಕಾಮಿಯೆ ಶರಣಂ ವರಾಂಗಿ ಸೌಂದರನೆಂದುಂ
ಕಾಮಿನಿಯೊಡವೆರದಿರ್ದುಂ
ಕಾಮಿಯೆ ಕಾಮಾರಿ ಕಾಮಿಗೆಂತೊಲ್ದನೊ ಪೇಳ್ ೧೭೧

ಲಲನಾರತಿಯುತ ನಂಬಿಯೊ
ಳಲರ್ದೊಡನಾಡಿದವೊಲಂಗಜಾಂತಕನೆಂದುಂ
ಶಿಲೆಯುಂ ತಱಗೆಲೆಯುಂ ಮೆ
ಲ್ದೊಲವಿಂ ತಪಮಾಂತ ಜತಿಗಳೊಡನಾಡಿದನೇ ೧೭೨

ತ್ರಿವಿಧ ಶಿವಪೂಜೆಗೆಯ್ವೊಡೆ
ಯುವತಿ ಧನಂ ಧಾನ್ಯಮಿಳೆ ದಲಿಲ್ಲದದೇಂ ಸಂ
ಭವಿಪುದೆ ಭೂಪಾಲತ್ವಂ
ಶಿವಭಕ್ತಿಗೆ ಪೊಜಗೆ ಪೇಳ್ ಮೃಗಾಯು ತನಯನೇ ೧೭೩

ಮಹಾರಾಜನು ಮುಗುಳುನಗೆ ನಗುತ್ತ— ೧೭೦. 'ಎಲೈ ಮಾನಿನಿಯೇ, ನಾನಾಡಿದ ಶಿವಭಕ್ತಿಯ ರಹಸ್ಯದ ತಿರುಳನ್ನೂ ಪರಿಶುದ್ಧ ಭಕ್ತರ ರೀತಿಯನ್ನೂ ನೀನು ಅರ್ಥ ಮಾಡಿಕೊಳ್ಳದೆ ಕೂಗಾಡುತ್ತಿದ್ದೀಯೆ. ಹರಶರಣರಾದವರ ಆ ಶಕ್ತಿಯೇನು ಸಾಮಾನ್ಯ ವೆಂದು ಭಾವಿಸಿರುವೆಯೊ ? ಹೇಳು.' ೧೭೧. 'ಎಲೈ ಶ್ರೇಷ್ಠ ಅವಯವವುಳ್ಳವಳೇ, ಸ್ತ್ರೀಯರ ಸಂಬಂಧವು ಪ್ರಾಪ್ತವಾಗಿದ್ದ ಮಾತ್ರದಿಂದ ಶರಣನು ವಿಷಯೇಚ್ಛೆ ಯುಳ್ಳವನೇನು ? ಸೌಂದರ ನಂಬಿಯು ಸದಾ ಕಾಮಿನಿಯರ ಜೊತೆಯಲ್ಲಿ ಸೇರಿ ಕೊಂಡಿದ್ದನು. ಅವನು ಕಾಮಿಯೇ ? ಕಾಮಾರಿಯಾದ ಶಿವನು ಇಂಥ ಕಾಮವುಳ್ಳವನಿಗೆ ಹೇಗೆ ಒಲಿದನು ?' ೧೭೨. 'ಕಾಮಿನಿಯ ಸಂಗಸುಖದಲ್ಲಿದ್ದ ನಂಬಿಯಣ್ಣನೊಡನೆ, ಆ ಶಿವನು ಒಲಿದು ಒಡನಾಡಿದ ಹಾಗೆ, ಯಾವಾಗಲೂ ಕಲ್ಲನ್ನೂ, ತರಗೆಲೆಗಳನ್ನೂ ತಿಂದು ಪ್ರೀತಿಯಿಂದ ತಪಸ್ಸುಮಾಡಿದ ಯತಿಗಳ ಸಂಗಡ ಒಡನಾಡಿದನೇ ?' ೧೭೩. 'ಹೇ, ಜಿಂಕೆಯಂತೆ ಚಂಚಲವೂ ದೀರ್ಘವೂ ಆದ ನೇತ್ರವುಳ್ಳವಳೇ, ತ್ರಿವಿಧವಾದ ಗುರು ಲಿಂಗ ಜಂಗಮಾತ್ಮಕವಾದ ಇಷ್ಟ ಪ್ರಾಣಭಾವಲಿಂಗಗಳೆಂಬ ಶಿವಪೂಜೆ ಮಾಡಬೇಕಾದರೆ ಸ್ತ್ರೀ, ಧನ, ಧಾನ್ಯ, ಭೂಮಿ, ಇತ್ಯಾದಿ ಆ ಫಲವು ಸಂಭವಿಸುವುದೇ ? ದೊರೆತನವು

ಕರಿಕಾಲ ಚೋಳನಾ ಭೂ
ವರ ಚೋಳಂ ವೀರಚೋಳ ವಿಕ್ರಮ ಚೋಳ
ರ್ಕರವೂರ ಚೋಳನುತ್ತುಂ
ಗರವಾಕರ ಚೋಳನವನಿಪಾಧಿಪ ಚೋಳಂ ೧೭೪

ಇವರಾದಿಯಾದ ಪಲಕಲ
ರವನೀಶರ್ಶಿವನೊಳೊಲ್ದು ಬೆರಸಿದರೊಳರೀ
ಭುವನದೊಳೆ ಜೂದು ನಿಂದ್ಯಮೆ
ಶಿವಾರ್ಪಿತಾಖಿಳವಿನೋದರಸಿಕರ್ಗಬಲೇ ೧೭೫

ಧರೆಯೊಳ್ ದ್ಯೂತಾರ್ಜಿತ ದ್ರವ್ಯದೆ ಸಲೆ ಚರಲಿಂಗಾರ್ಚನಂಗೆಯ್ವುತುಂ ಶಂ
ಕರನೇಳ್ತಂದೊರ್ಮೆ ಜೂದಾಡುತೆ ಬಹುಧನಮಂ ಸೋಲ್ತು ತಾನೀಯದಿರ್ದಂ
ದೆರಡುಂ ಕಾಲಂ ಶಿರೋವೇಷ್ಟಿಯೊಳೆ ಬಿಗಿದು ಕಟ್ಟುತ್ತೆ ಕೊಂಡಚ್ಚಪೊನ್ನಂ
ಹರಭಕ್ತರ್ಗಿತ್ತು ಕೂರ್ಪಿಂದೊಲಿಸಿ ಬೆರಸನೇ ಶಂಭುವಂ ಮೂರ್ಖನಾಥಂ ೧೭೬

ಸಲೆ ಜೂದಾಳಿಯೆನುತ್ತುಂ
ಮಲಹರನಾ ಮೂರ್ಖನಾಥನಂ ತೊರೆದನೆ ಪೇ
ಳ್ವಲಜಾಕ್ಷಿ ಭಕ್ತರಸನಿ
ಶ್ಚಲನಾವುದನೆಸಪನನೆ ಶಿವಂಗನುಕೂಲಂ ೧೭೭

ಶಿವಪೂಜೆಗೆ ಹೊರಗಾದದ್ದೇನು ? ಹೇಳು.' ೧೭೪–೧೭೫. ಆ ಭೂಪಾಲಕರಾದ ಕರಿಕಾಲಚೋಳ, ವೀರಚೋಳ ವಿಕ್ರಮಚೋಳರೂ, ಉತ್ಕೃಷ್ಟ ಐಶ್ವರ್ಯಕ್ಕೆ ಆಶ್ರಯನಾದ ಚೋಳ, ಭೂಮೀಶ್ವರರಿಗೆಲ್ಲ ಅಧಿಪತಿಯಾದ ಚೋಳನೇ ಮೊದಲಾದ ಹಲ ಕೆಲವು ರಾಜರು ಶಿವನಲ್ಲಿ ಪ್ರೀತಿಯಿಂದ ಬೆರಸಿದ ರಾಜರೂ ಉಂಟು. ಹೇ ಅಬಲೇ, ಈ ಲೋಕದಲ್ಲಿ ಪರಮೇಶ್ವರನಿಗೋಸ್ಕರ ಸಕಲವಿನೋದಾದಿ ಸೌಖ್ಯಗಳನ್ನೂ ಅರ್ಪಿಸಿದವರಿಗೆ ಈ ಜೂಜಾಟವೇನು ನಿಂದ್ಯವಾದದ್ದೇ ? ೧೭೬. ಲೋಕದಲ್ಲಿ ಮೂರ್ಖನಾಥನೆಂಬುವನು ದ್ಯೂತ ದಾಟದಿಂದ ಸಂಪಾದನೆ ಮಾಡಿದ ಹಣದಿಂದ ಚೆನ್ನಾಗಿ ಜಂಗಮ ಪಾದಪೂಜೆಯನ್ನು ಮಾಡುತ್ತಿರಲು, ಒಂದು ಸಲ ಶಂಕರನೂ ಬಂದು ಅವನೊಡನೆ ಜೂಜಾಡಿ, ಅಪಾರ ಹಣವನ್ನು ಸೋತು, ಆ ಹಣವನ್ನು ಶಿವನು ಕೊಡದಿದ್ದಾಗ ಅವನ ಎರಡು ಕಾಲುಗಳನ್ನೂ, ತಲೆಗೆಸುತ್ತುವ ರುಮಾಲದಿಂದ ಕಟ್ಟಿ, ನೂತನವಾದ ಬಂಗಾರದ ನಾಣ್ಯಗಳನ್ನು ತೆಗೆದುಕೊಂಡು, ಆ ಹಣವನ್ನು ಶಿವಭಕ್ತರಿಗೆ ಕೊಟ್ಟು, ಪ್ರೀತಿಯಿಂದ ಶಂಭುವನ್ನು ಒಲಿಸಿ ಅವನಲ್ಲಿ ಬೆರೆಯಲಿಲ್ಲವೇ'. ೧೭೭. 'ಎಲೈ ಕಮಲನೇತ್ರೆಯೇ, ಶಿವನು ಆ ಮೂರ್ಖನಾಥನನ್ನು ಇವನು ವಿಶೇಷವಾಗಿ ಜೂಜಾಡತಕ್ಕವನೆಂದು ತ್ಯಜಿಸಿದನೇ ? ಹೇಳು. ಭಕ್ತಿಮಾರ್ಗದಿಂದ ಚಲಿಸದಿರುವವನು ಯಾವಕಾರ್ಯವನ್ನೇ ಮಾಡಲಿ ಅದು

ವಿತತ [1]ಶಿವಾನ[1]ರ್ಪಿತಸುಖ
ರತಿ ಸಂಸೃತಿಬಂಧಮಬಲೆ ಸಂತತಲಿಂಗಾ
ರ್ಪಿತ ತತ್ಪ್ರಸಾದಸುಖದಭಿ
ರತಿ ಸಂಸೃತಿಬಂಧಮುಕ್ತಿಯೆಂಬುದೆ ಸತ್ಯಂ ೧೭೮

ರಸನೆಯ ನೆಯ್ನವಕಜ್ಜಳ
ರಸಮಕ್ಷಿಯನಮರ್ದು ಪತ್ತುಗುಮೆ ಪರಿಕಿಪೊಡೀ
ರಸೆಯೊಳ್ಸಂಸೃತಿಬಂಧಂ
ಸಸಿದಲೆಯನ ಶರಣತತಿಯನೇನಂಟುಗುಮೋ ೧೭೯

ತನುಕರಣಮನಃಪ್ರಾಣದಿ
ನನಿಶಂ ಪರಶಿವನನಪ್ಪಿ ಬೆರಸಿದನಬ್ಜಾ
ನನೆ ಸಂಸೃತಿಬದ್ಧನೆ ಸೂ
ರ್ಯನ ಕೈದಾವರೆಯ ತುಹಿನಮೇಂ ಪತ್ತುಗುಮೋ ೧೮೦

ಬಿಸಿಲಾ ಮರೀಚಿಕಾಜಲ
ವಿಸರದೆ ಸಲೆ ನಾಂದು ಕಿಡುಗುಮೋ ಶಿವಶರಣಂ
ಮುಸಗುವ ಮಾಯಾಬಂಧ
ಪ್ರಸರಕ್ಕೊಳಗಾಗಿ ಕಟ್ಟುವಡೆವನೆ ಧರೆಯೊಳ್ ೧೮೧

ಶಿವನಿಗೆ ಹಿತವಾದದ್ದಾಗುವುದು.' ೧೭೮. 'ಎಲೈ ಅಬಲೆಯೇ, ಶಿವನಿಗೆ ಅರ್ಪಿಸದಿರುವ ವಿಶೇಷವಾದ ಸೌಖ್ಯದಲ್ಲಿರುವ ಆಸಕ್ತಿಯು ಸಂಸಾರದ ತೊಡಕೆನಿಸುವುದು. ಸತತವೂ ಲಿಂಗಾರ್ಪಿತ ಮಾಡಿದ ಆ ಭೋಗಭಾಗ್ಯಗಳ ಪ್ರಸಾದ ರೂಪವಾದ ಸೌಖ್ಯದ ಆಸಕ್ತಿಯು ಸಂಸಾರ ಬಂಧನದ ವಿಮುಕ್ತಿಯೆನಿಸುವುದು ಇದು ಸತ್ಯ.' ೧೭೯. 'ತುಪ್ಪವು ನಾಲಿಗೆಯನ್ನೂ, ನೂತನ ಕಾಡಿಗೆಯು ಕಣ್ಣನ್ನೂ ಸೇರಿ, ಅದಕ್ಕೇ ಅಂಟಿಬಿಡುತ್ತದೆಯೇನು ? ಈ ಭೂಮಿಯಲ್ಲಿ ವಿಚಾರಮಾಡಿ ನೋಡಿದರೆ, ಸಂಸಾರ ಸಂಬಂಧದ ಬಂಧನವು ಚಂದ್ರಶೇಖರನ ಶರಣ ಸಮೂಹವನ್ನು ಅಂಟುತ್ತದೆಯೆ ?' ೧೮೦. ಎಲೈ ಕಮಲಮುಖಿಯೇ, ಯಾವಾಗಲೂ, ದೇಹ ಇಂದ್ರಿಯ ಮನಗಳಿಂದ ಶಿವನನ್ನೇ ಆಶ್ರಯಿಸಿ ಅವನನ್ನು ಬೆರಸಿರುವವನು ಸಂಸಾರದಿಂದ ಬಂಧಿಸಲ್ಪಟ್ಟವನೇ ? (ಅಲ್ಲ), ಹಿಮವು (ಮಂಜು) ಸೂರ್ಯನ ಕೈಯಲ್ಲಿ ಹಿಡಿದಿರುವ ಕಮಲವನ್ನು ಹತ್ತೀತೇ ?' ೧೮೧ 'ಭೂಮಿಯಲ್ಲಿ ಬಿಸಿಲು ಆ ಬಿಸಿಲುಗುದುರೆಯಿಂದ ವಿಶೇಷವಾಗಿ ನೆನೆದು (ತೊಯುದಿ) ಆರಿ ಹೋಗುವುದೇನು ? ಶಿವಶರಣನು ಆವರಿಸುವ ಮಾಯಾ ಸಂಬಂಧವಾದ ಸಮೂಹಕ್ಕೆ

1 ಶಿವನ (ಚ, ಮು) ಶಿವಾನಾ(ಜ)

ಪರಮಶಿವಭಕ್ತಿರಸಭರ
ಭರಿತಾಂತಃಕರಣಶರಣಸನ್ಮಹಿಮೆಗೆ ಶಾಂ
ಕರಲೋಕಮಿದು ವಿಚಾರಿಸೆ
ನರಲೋಕಮಿದೆಂಬ ಸಂದೆಗಕ್ಕೆಡೆಯುಂಟೇ ೧೮೨

ಇಳೆಯೊಳ್ಮರ್ಬೆನಿಸಿರ್ಕುಂ
ಬೆಳಗದು ಘೂಕೇಕ್ಷಣಕ್ಕೆ ಶಿವಭಕ್ತಮಹೋ
ಜ್ವಳಮಾರ್ಗಮಮಾರ್ಗದವೋಲ್
ಖಳಜನಜಡಮತಿಗೆ ತೋರ್ಕುಮೆಲೆ ತರಳಾಕ್ಷೀ ೧೮೩

ಹರಭಕ್ತರ ಪೆರ್ಮೆಯ ಪೊಸ
ಪರಿಯಱಿಯದ ಮರುಳೆ ನಿನಗೆ ಪಲವುಂ ಮಾತೇ
ಕಿರು ಸುಮ್ಮನೆಂದ ರಮಣಂ
ಗರಸಿ ಕರಂ ನಗುತೆ ಚಲ್ಲದಿಂದಿಂತೆಂದಳ್ ೧೮೪

ಬಿಡು ಬಿಡು ನಿನ್ನಯ ಮಾತಿನ
ಬಿಡಂಗನೆಲೆ ರಮಣ ಬಲ್ಲೆನೆಲ್ಲಮನೀಗ
ಳ್ಮೃಡನಗರಿಗೋಹಿಲನವೋ
ಲ್ನಡೆ ನೋಡಿದಪೆಂ ತ್ವದೀಯ ಬಲಮುಂ ಛಲಮುಂ ೧೮೫

ಅರಿನೃಪರ ಪಡಲ್ವಡಿಸುವ
ಪರಿಯಕ್ಕುಮೊ ನೆತ್ತದಾಟಮಕ್ಕುಮೊ ಮದನ
ಸ್ಫುರಿತಕಳಾನಿಪುಣತೆಯೊಂ
ದಿರವಕ್ಕುಮೊ ಶಿವನ ಭುವನಕೆಯ್ದುವ ಕಜ್ಜಂ ೧೮೬

ಸಿಕ್ಕುಬೀಳುವವನಲ್ಲ.' ೧೮೨. ಈ ಭೂಲೋಕವು ಶ್ರೇಷ್ಠವಾದ ಶಿವಭಕ್ತಿಯಿಂದ ತುಂಬಿದ ಅಂತಃಕರಣವುಳ್ಳ ಶರಣ ಸಮೂಹಕ್ಕೆ ನಿಜವಾಗಿಯೂ ಕೈಲಾಸವೇ ಅಲ್ಲದೆ ಇದು ನರಲೋಕವೆಂಬ ಸಂಶಯಕ್ಕೆ ಎಡೆಯೇ ಇಲ್ಲ.' ೧೮೩. 'ಎಲೈ ಚಂಚಲನೇತ್ರೆಯೇ, ಭೂಮಿಯಲ್ಲಿ ಆ ಗೂಗೆಯ ಕಣ್ಣಿಗೆ ಬೆಳಕೇ ಕತ್ತಲೆಯೆನಿಸಿರುವುದು. ಶಿವಭಕ್ತರ ಪ್ರಕಾಶಮಾನವಾದ ಸನ್ಮಾರ್ಗವು ನೀಚರಾದವರ ಮೂಢಬುದ್ಧಿಗೆ ದುರ್ಮಾರ್ಗದ ಹಾಗೆ ಕಾಣುತ್ತದೆ.' ೧೮೪. 'ಹರಭಕ್ತರಾದವರ ಹಿರಿಮೆಯು ನವೀನ ರೀತಿಯೆಂಬುದನ್ನು ತಿಳಿಯದಿರುವ ಎಲೈ ಹುಚ್ಚೀ, ನಿನಗೆ ಅನೇಕ ಮಾತುಗಳೇಕೆ ? ಸುಮ್ಮನಿರು'—ಎಂದ ಗಂಡನಿಗೆ ಆ ಹೆಂಡತಿಯು ಚೆನ್ನಾಗಿ ನಕ್ಕು, ವಿಲಾಸದಿಂದ ಹೀಗೆ ಹೇಳಿದಳು.' ೧೮೫. 'ಎಲೈ ರಮಣ; ಸಾಕು ಬಿಡು ಈ ನಿನ್ನ ಮಾತಿನ ಮೋಡಿಯನ್ನು ನಾನೆಲ್ಲ ಬಲ್ಲೆನು. ಈಗ ಓಹಿಲಯ್ಯನಂತೆ ಶಿವನ ಪಟ್ಟಣಕ್ಕೆ ನೀನು ನಡೆ, ನಿನ್ನ ಸಾಮರ್ಥ್ಯವನ್ನು ನೋಡುತ್ತೇನೆ.' ೧೮೬. 'ಶಿವಲೋಕಕ್ಕೆ ಹೋಗುವ ಕಾರ್ಯವು ಶತ್ರು ರಾಜರನ್ನು ನಾಶಪಡಿಸುವ ರೀತಿಯಾದೀತೇ ? (ಅಥವಾ) ಪಗಡೆಯ ಆಟ

ನಿನಗಭವನಗರಿ ಕೇಳೀ
ವನವೊ ರಣಾಜಿರವೊ ರಮ್ಯಮಣಿಹರ್ಮ್ಯವೊ ಪಾ
ವನಗುರುಚರನಿಳಯಮೊ ನೆ
ಟ್ಟನೆ ತಳರಲ್ ನೃಪತಿ ನಿನ್ನ ಪರಿಜನಸಹಿತಂ ೧೮೭

ಒರ್ವನೆ ಪೋದಪನೆನುತುಂ
ಗರ್ವದಿನೋಹಿಲನ ನಗುವ ಶಿವಭಕ್ತಿಪರಂ
ಸರ್ವಜನಸಹಿತಮೆಲೆ ನೀಂ
ಶರ್ವಾಣೀರಮಣನಗರಿಗೆಂದಡಿಯಿಡುವೈ ೧೮೮

ವ॥ ಎಂದ ರಮಣಿಯ ಕಟಕಿವಾತಂ ಕೇಳ್ದು ಮಂದಸ್ಮಿತಾಸ್ಯನಾಗಿ—

ನೀನೆಂದಂತೆವೊಲೆಲೆ ಕಂ
ಜಾನನೆ ಶಿವನಿಳಯಮೆನಗೆ ಗುರುಚರನಿಳಯಂ
ತಾನಕ್ಕುಮೆಯ್ದೆದಪೆನೆ
ನ್ನೀ ನಿಖಿಳ ಜನಾಳಿವೆರಸು ನೋಡೆನ್ನಳವಂ ೧೮೯

ಕಾದಲೆ ನೀಂ ಕಡುಪಿಂದಂ
ಮೂದಲಿಸುತ್ತೆಂದ ಮಾಳ್ಕೆಯಿಂ ಶಿವಪುರಿಗಾಂ
ಪೋದಪೆನೆಲೆ ಪೋಗದೊಡೆ ನಿ
ಜೋದಿತ ಶಿವಭಕ್ತಿಯುಕ್ತನೆಪ್ಪೆನೆ ಧರೆಯೊಳ್ ೧೯೦

ವ॥ ಎಂದ ಮನದನ್ನನುಕ್ತಿಯುಂ ಮನೋರಮೆ ಮಾರ್ಕೊಂಡು—

ವಾದೀತೇ ? ಮದನ ವಿದ್ಯಾ ಪ್ರೌಢಿಮೆಯ ಒಂದು ರೀತಿಯೆನಿಸೀತೇ ? ೧೮೭. 'ಮಹಾರಾಜಾ, ಪರಿವಾರದ ಜನರೊಡನೆಕೂಡಿ. ನೆಟ್ಟಗೆ ತೆರಳಲಿಕ್ಕೆ ಶಿವನ ನಗರವೇನು ನಿನಗೆ ಉಪವನವೇ ? ಯುದ್ಧ ಭೂಮಿಯೇ, ಮನೋಹರವಾದ ರತ್ನದ ಉಪ್ಪರಿಗೆಯ ಮನೆಯೋ ? ಅಥವಾ ಪಾವನರಾದ ಗುರುಜಂಗಮರ ಮಠವೋ ? ೧೮೮. ಎಲೈ ರಾಜಾ ಓಹಿಲಯ್ಯನು ಒಬ್ಬನೇ ಹೋಗುತ್ತಿದ್ದಾನೆಂದು ಗರ್ವದಿಂದ ಅಪಹಾಸ್ಯ ಮಾಡುವ ಶಿವಭಕ್ತಿಯಲ್ಲಿ ಆಸಕ್ತನಾದ ನೀನು ಸರ್ವಜನ ಸಮೇತವಾಗಿ ಶಿವನ ಪಟ್ಟಣಕ್ಕೆ ಎಂದು ಹೆಜ್ಜೆಯನ್ನಿಕ್ಕುವೆ ?' ವ॥ ಹೀಗೆಂದ ತನ್ನ ರಮಣಿಯ ಮೂದಲಿಕೆಯ ಮಾತನ್ನು ಕೇಳಿ, ಪಾಲಗುರ್ಜರನು ಮುಗುಳುನಗೆಯಿಂದ ಕೂಡಿದ ಮುಖವುಳ್ಳವನಾಗಿ ೧೮೯. 'ಎಲೈ ಕಮಲಮುಖಿಯೇ, ನೀನು ಹೇಳುವಂತೆ ನನಗೆ ಆ ಕೈಲಾಸವು ಗುರು ಜಂಗಮರ ಮಠವೇ ಆಗಿರುವುದು. ನನ್ನ ಈ ಸಮಸ್ತ ಪ್ರಜಾಜನ ಸಮೇತವಾಗಿ ಹೋಗುತ್ತೇನೆ. ನನ್ನ ಶಕ್ತಿಯನ್ನು ನೋಡು' ೧೯೦. 'ಎಲೈ ಪ್ರಿಯೆ, ನೀನು ಕೋಪದಿಂದ ಮೂದಲಿಸುತ್ತ ಹಿಯಾಳಿಸುತ್ತೆಂದ ಮಾತಿನ ರೀತಿಯಿಂದ ನಾನು ಶಿವಪುರಿಗೆ ಹೋಗುತ್ತೇನೆ; ಹೋಗದಿದ್ದರೆ ಈ ಭೂಮಿಯಲ್ಲಿ ನಿಜವಾಗಿ ಶಿವಭಕ್ತಿಯಿಂದ ಕೂಡಿದವನೆಂದೆನಿಸುತ್ತೇನೆಯೇ ? ವ॥ ಹೀಗೆಂದು

ಆವ ದಿನಮಾವ ವೇಳೆಯೊ
ಳಾವಂದದೆ ಪೋಪೆಯೆನೆ ಪೊದಳ್ದೀ ದಿನಮಿಂ
ತೀವೇಳೆಯೊಳೀಯಂದದೆ
ಕೋವಿದೆ ಕೇಳ್ಪೋಪೆನೆಂದನಾ ಚಲದಂಕಂ ೯೧

ವ॥ ಎಂದು ದೃಢಪ್ರತಿಜ್ಞಾರೂಢನಾಗಿ ದೌವಾರಿಕರಿಂ ದಂಡನಾಥ ಮಂಡಳಿಕ ಸಚಿವ ಸಾಮಂತ ಪ್ರಮುಖರಂ ಬರಿಸಿ ಪುರದೊಳೆಲ್ಲಂ ಸಾಱಲ್ವೇಳ್ದು ಕಡುಪಿಂ ಕೈಲಾಸಪ್ರಸ್ಥಾನ ಭೇರಿಯಂ ಪೊಡೆಯಿಸಲೊಡನೆ—

ಕಡಲೇಳುಂ ಕದಡೆಳ್ದು ತುಳ್ಕೆ ದಿಗಿಭಂಗಳ್ಬಳ್ಕೆ ಭೋಗೀಂದ್ರನು
ರ್ಕುಡುಗುತ್ತುಂ ಪೆಡೆ ತರ್ಗೆ ದಿಗ್ವರರಳುಂಬಂ ಕುರ್ಗೆ ವಿದ್ವಿಟ್ಚಕ್ರಳಂ
ಕಡುಪಿಂ ಕರ್ಚೆ ತೃಣಂಗಳಂ ರವಿರಥಾಶ್ವಂ ಬೆರ್ಚೆ ತುಂಬಿತ್ತು ಬೆಂ
ಬಿಡದಂಭೋಜಭವಾಂಡಮಂಡಳಮನಾ ಗಂಭೀರಭೇರೀರವಂ ೯೨

ವ॥ ಆಗಳ್ಪಿರಿದದ್ಭುತಂ ಮಸಗೆ ಸಸಂಭ್ರಮಂ ಸಕಳ ಪರಿಜನಂ ನೆರೆಯೆ ನರೇಂದ್ರಂ ನೈಪಥ್ಯ ಗೃಹಕ್ಕೇಳ್ತಂದು ನಿಜಾಂಗನೆಯಂ ಪೂರ್ವಿಂ ಜರ್ಬಿ ಮಣಿಮಯಾಂದೋಳಮನೇಱಲ್ನಿಯಮಿಸಿ ನಿಜ ತುರಂಗಮಂ ಬೇಗವಾಯ್ದು ತಾನಾಳ್ವ ದೇಶಾಂತರಾಳದ ಸಮಸ್ತ ಜನವೊಡವರೆ ಸಡಗರಂಬೆತ್ತು—

ಪತಿಯ ಮಾತಿಗೆ ಆ ಮನೋರಮೆಯು ಪ್ರತಿಯಾಗಿ ೯೧. 'ಎಂದು ? ಯಾವ ಹೊತ್ತಿನಲ್ಲಿ ? ಯಾವ ರೀತಿಯಿಂದ ಹೋಗುತ್ತೀಯೆ ?' ಎನ್ನಲು ಆ ಹಟಗಾರನು 'ಎಲೈ ಪ್ರೌಢೆಯೇ, ಕೇಳು: ಈ ದಿನವೇ, ಈ ರೀತಿ, ಇದೇ ಕಾಲದಲ್ಲಿ, ಇದೇ ಪ್ರಕಾರವಾಗಿ ಹೋಗುತ್ತೇನೆ' ಎಂದನು. ವ॥ ಹೀಗೆನ್ನುತ್ತ ದೃಢ ಪ್ರತಿಜ್ಞೆಯನ್ನು ಮಾಡಿದವನಾಗಿ ದ್ವಾರಪಾಲಕ ಮೊದಲ್ಗೊಂಡು, ದಂಡನಾಥ, ಮಾಂಡಳಿಕ, ಸಚಿವ; ಸಾಮಂತ ಪ್ರಮುಖರನ್ನೂ ಬರಮಾಡಿಕೊಂಡು, ಪಟ್ಟಣದಲ್ಲೆಲ್ಲ ಡಂಗುರ ಹೊಡಿಸುವಂತೆ ಹೇಳಿ, ಕೈಲಾಸಕ್ಕೆ ಹೊರಡುವುದರ ಸೂಚನಾರ್ಥವಾಗಿ ನಗಾರಿಯನ್ನು ಹೊಡಿಸಿದನು. ಆಗ ೯೨. ಸಪ್ತ ಸಮುದ್ರಗಳೂ ಕದಡಿ ಉಬ್ಬಿಕೊಂಡು ತುಳ್ಕಾಡಿದವು; ದಿಗ್ಗಜಗಳು ಬಳುಕಿದವು; ಆದಿಶೇಷನ ಪರಾಕ್ರಮವು ಭಗ್ನವಾಗಿ ಹೆಡೆಯು ತಗ್ಗಿತು; ಅಷ್ಟದಿಕ್ಪಾಲಕರು ವಿಶೇಷವಾಗಿ ಕುಗ್ಗಿ ಹೋದರು; ಶತ್ರು ಸಮೂಹವು (ಶತ್ರುಗಳಾದ ರಾಕ್ಷಸರ ಸಮೂಹವು) ಶೌರ್ಯಹೀನರಾಗಿ ಬಾಯಲ್ಲಿ ಹುಲ್ಲು ಕಚ್ಚಿದರು; ಸೂರ್ಯನ ರಥಕ್ಕೆ ಹೂಡಿದ ಕುದುರೆಗಳು ಬೆಚ್ಚಿದವು. (ಹೀಗೆ) ಆ ಗಂಭೀರ ಭೇರೀರವವು ಬ್ರಹ್ಮಾಂಡ ಪ್ರದೇಶವನ್ನು ಸಂಪೂರ್ಣ ತುಂಬಿತ್ತು. ವ॥ ಆಗ ಅತ್ಯದ್ಭುತವೆಲ್ಲಲ್ಲೂ ಆವರಿಸುವಂತೆ ಸಮಸ್ತ ಪರಿವಾರಜನವೆಲ್ಲ ಸಡಗರದಿಂದ ಗುಂಪುಗೂಡಲಾಗಿ ಅವರೆಲ್ಲರೊಡನೆ ರಾಜನು ಅಲಂಕಾರ ಮಾಡಿಕೊಳ್ಳುವ ಮನೆಗೆ ಬಂದು, ತನ್ನ ಹೆಂಡತಿಗೆ ಹುಬ್ಬಿನ ಸನ್ನೆ ಮಾಡಿ, ರತ್ನನಿರ್ಮಿತವಾದ ಪಲ್ಲಕ್ಕಿಯಲ್ಲೇರುವ ಹಾಗೆ ನಿಯಮಗೊಳಿಸಿ, ತನ್ನ ಕುದುರೆಯನ್ನೇರಿ, ತಾನಾಳು

ಬಿಡದೆತ್ತಂ ತೂರ್ಯಘೋಷಂ ಮಸಗೆ ಮಿಸುಗೆ ಮುಕ್ತಾತಪತ್ರಾಳಿ ಚೆಲ್ವಂ
ಪಡೆದುದ್ಯತ್ಕೇತನಂಗಳ್ಮಿಳಿರೆ ತಳರೆ ಸೈನ್ಯಂಚಳಚ್ಚಾಮರಂ ತೋ
ರ್ಪಡೆ ದಿವ್ಯಂ ಪುಷ್ಪವರ್ಷಂ ಸುರಿಯೆ ಮೊರೆಯೆ ತದ್ದುಂದುಭಿಧ್ವಾನಮೊಲ್ದು
ಗ್ಘಡಿಸುತ್ತಂ ವಂದಿವೃಂದಂ ಪೊಗಳೆ ನೆಗಳೆ ಲಾಸ್ಯಂಗಳಂ ವೇಶ್ಯೆಯರ್ಕಳ್ ೧೯೩

ಶರಣರುಘೇ ಜಯ ಜಯ ಬಂ
ಧುರರಾವಂ ಬುಧರ ಹರಹರ ಧ್ವಾನಂ ಸೈ
ವರಿಯೆ ಸಕಳೋರ್ವಿಜನಮ
ಚ್ಚರಿವಡೆ ನಿಜರಮಣಿವೆರಸು ಪೃಥುವೈಭವದಿಂ ೧೯೪

ಧೀಂಕಿಟ್ಟು ಗಗನತಳಕೆ ವಿ
ಶಂಕಂ ನೆರೆಯೂರ್ಗೆ ತಳರ್ವ ತೆಱದಿಂ ತಳರ್ದಂ
ಭೋಂಕನೆ ಕೈಲಾಸಕೆ ಗಣ
ಕಿಂಕರನಾ ಪಾಲಗುರ್ಜರಕ್ಷಿತಿಪಾಲಂ ೧೯೫

ತರುಣೀಸಂಯುಕ್ತನಾಗಳ್ ಶಿವಗಣಕೃಪೆಯಿಂ ಸೌಖ್ಯಮೊಂದಿರ್ದನಾ ಭೂ
ವರವರ್ಯಂ ತನ್ನ ಲೋಕಂಬೆರಸು ಶಶಿಧರಾವಾಸದೊಳ್ಮಾಣದೆಂದಾ

ತ್ತಿದ್ದ ಸಮಸ್ತ ದೇಶ ಮಧ್ಯದಲ್ಲಿರುವ ಜನರೊಡನೆ ಸಡಗರಗೊಂಡು ೧೯೩–೧೯೫. ನೃತ್ಯ, ಗೀತ, ವಾದ್ಯ ಧ್ವನಿಯು ಎತ್ತೆತ್ತಲೂ ತಪ್ಪದೆ ಹರಡಲು, ಮುತ್ತಿನ ಛತ್ರಿಗಳ ಸಾಲು ತುಂಬಿಕೊಂಡಿರಲು, ದೊಡ್ಡ ದೊಡ್ಡ ಧ್ವಜಗಳು ಚೆಲುವಿನಿಂದ ಹಾರಾಡುತ್ತಿರಲು, ಸೈನ್ಯವು ನಡೆಯುತ್ತಿರಲು, ಬೀಸುತ್ತಿರುವ ಚಾಮರಗಳು ಶೋಭೆಗೊಂಡಿರಲು, ದಿವ್ಯವಾದ ಪುಷ್ಪವೃಷ್ಟಿಯು (ದೇವಲೋಕದಿಂದ) ಸುರಿಯುತ್ತಿರಲು, ಆ ದೇವಲೋಕದ ದುಂದುಭಿಯ ಧ್ವನಿಯು ಮೊರೆಯುತ್ತಿರಲು, ಸ್ತುತಿ ಪಾಠಕರ ಸಮೂಹವು ಪ್ರೀತಿಯಿಂದ ಉಗ್ಘಡನೆ ಮಾಡುತ್ತ, ಸ್ತೋತ್ರ ಮಾಡುತ್ತಿರಲು, ವೇಶ್ಯಾಂಗನೆಯರು ನರ್ತನಗಳನ್ನು ಮಾಡುತ್ತಿರಲು, ಶಿವಶರಣರುಗಳ ಉಘೇ! ಜಯ ಜಯ! ಎಂಬ ಮನೋಹರ ಶಬ್ದವೂ, ವಿದ್ವಾಂಸರ ಹರಹರ! ಎಂಬ ಧ್ವನಿಯೂ ಎಲ್ಲ ಕಡೆಗೂ ಹರಡಿಕೊಳ್ಳಲು, ಸಕಲ ಭೂಮಂಡಲದ ಜನವೆಲ್ಲ ಆಶ್ಚರ್ಯಗೊಳ್ಳುವಂತೆ, ತನ್ನ ಹೆಂಡತಿಯೊಡನೆ ಕೂಡಿ, ವಿಶೇಷ ವಿಭವದಿಂದ ಆ ಶಿವಗಣಗಳ ಕಿಂಕರನಾದ ಪಾಲಗುರ್ಜರ ಮಹಾರಾಜನು (ಪಕ್ಕದ) ಮತ್ತೊಂದು ಊರಿಗೆ ಹೋಗುವ ರೀತಿಯಲ್ಲಿ ಭಯರಹಿತನಾಗಿ ಆಕಾಶದ ತಳಕ್ಕೆ ನೆಗೆದು ಆ ಕೂಡಲೇ ಕೈಲಾಸಕ್ಕೆ ಹೊರಟು ಹೋದನು. ೧೯೬. (ಹೀಗೆ) ಆ ರಾಜಶ್ರೇಷ್ಠನಾದ ಪಾಲಗುರ್ಜರ ಮಹಾರಾಜನು ಹೆಂಡತಿಯೊಡನೆ ಕೂಡಿ, ತಾನಾಳುವ ರಾಜ್ಯದ ಸಮಸ್ತ ಪರಿಜನ ಸಮೇತನಾಗಿ ಆಗ ಶಿವಗಣಂಗಳ ಕೃಪೆಯಿಂದ ಪರಮೇಶ್ವರನ ಆವಾಸಸ್ಥಳವಾದ ಕೈಲಾಸದಲ್ಲಿ ತಪ್ಪದೆ ಸೌಖ್ಯವನ್ನು ಹೊಂದಿ ಇದ್ದನು.

ಗುರುಭಕ್ತಂಗೊಲ್ದು ಪೇಳ್ದಳ್ಪಣವಧುವೆನುತಂ ಭಕ್ತಿಯಿಂ ಪೇಳುತುಂ ಶಂ
ಕರಭಕ್ತಶ್ರೇಣಿಗಾಮೋದಮನೊದವಿಸಿ ಕಣ್ಗೊಪ್ಪುತಿರ್ದಂ ವೃಷೇಂದ್ರಂ ೧೯೬

ತರುಣಾದಿತ್ಯಪ್ರಕಾಶಾವರಣೆ ವರದೆ ಕಲ್ಯಾಣಿ ಕಾಮಾಕ್ಷಿ ವಿದ್ಯಾ
ಕರಿ ವಿಶ್ವಾಧಾರೆ ಚಂದ್ರಾಭರಣೆ ಚತುರೆ ಚಿತ್ರಾಂಗಿ ಚಿದ್ರೂಪೆ ವೀಣಾ
ಧರವಾಣೀಪಾಣಿಪದ್ಮಾರ್ಚಿತಮಧುಭರಮಂದಾರಮಾಲಾಂಚಿತಶ್ರೀ
ಚರಣಾಂಭೋಜಾತೆಯೆನ್ನಂ ಪೊರೆ ನಿರುಪಮಿತಾಮ್ನಾಯವಾಣೀ ಮೃಡಾನೀ ೧೯೭

ಇದು ವಿನಮದಖಿಳ ಸುರಾಸುರೇಂದ್ರಮಕುಟತಟಘಟಿತ ಮಣಿಗಣಾಗಣಿತರುಚಿನಿಚಯ

ತರುಣಾರುಣಾತಪಪರಿಲಸಿತ ಪರಮ ಶಿವಲಿಂಗ ಪಾದಾರವಿಂದಪರಾಗಭಸಿತ

ಭಾಸುರಲಲಾಪಟ್ಟಸರಸಜನಮಾನಿತೋಭಯಕವಿತಾವಿಶಾರದ

ಶ್ರೀಷಡಕ್ಷರಿದೇವಭಕ್ತಿವಿರಚಿತ

ಶ್ರೀಮದ್ ಬಸವರಾಜವಿಜಯಮಹಾಪುರಾಣದೊಳ್ ಮಲ್ಹಣ ಪಾಲಗುರ್ಜರಕಥಾಭಿವರ್ಣನಂ

ಏಕೋನತ್ರಿಂಶಾಶ್ವಾಸಂ ಸಮಾಪ್ತಂ

ಅಂತು ಆಶ್ವಾಸ ೨೯ಕ್ಕೆ ಪದಗಣನೆ ೨೩೧೫ಕ್ಕೆ ಮಂಗಳಮಹಾ ಶ್ರೀ॥

ಹೀಗೆಂದು ಆ ವೇಶ್ಯೆಯು ಗುರುಭಕ್ತನಿಗೆ ಪ್ರೀತಿಯಿಂದ ಹೇಳಿದಳು, ಎಂದೆನ್ನುತ್ತ ಬಸವೇಶ್ವರನು ಪರಮೇಶ್ವರನ ಭಕ್ತಸಮೂಹಕ್ಕೆ ಭಕ್ತಿಯಿಂದ ಹೇಳುತ್ತ, ಸಂತೋಷವನ್ನುಂಟು ಮಾಡಿ, ಕಂಗೊಳಿಸುತ್ತಿದ್ದನು. ೧೯೭. ತರುಣ ಸೂರ್ಯನ ಪ್ರಕಾಶದಂತಿರುವ ಆವರಿಸಲ್ಪಟ್ಟವಳೇ, ವರ ಪ್ರದಾನ ಮಾಡುವವಳೇ, ಮಂಗಳ ಸ್ವರೂಪಿಣಿಯೇ, ಇಷ್ಟಾರ್ಥವನ್ನುಂಟು ಮಾಡುವ ದೃಷ್ಟಿಯುಳ್ಳವಳೇ, ಸಕಲ ವಿದ್ಯೆಗಳಿಗೂ ಆಶ್ರಯಳಾದವಳೇ, ಪ್ರಪಂಚಕ್ಕೆ ಆಶ್ರಯದಾತಳೇ, ಚಂದ್ರನನ್ನು ಆಭರಣವಾಗಿ ಉಳ್ಳವಳೇ, ವಿಚಿತ್ರ ಅಂಗವುಳ್ಳವಳೇ, ಜ್ಞಾನ ಸ್ವರೂಪಿಣಿಯೇ, ವೀಣೆಯನ್ನು ಧರಿಸಿರುವ ಸರಸ್ವತಿಯ ಹಸ್ತಕಮಲದಿಂದ ಸಮರ್ಪಿಸಲ್ಪಟ್ಟ, ಮಕರಂದ ವಿಶಿಷ್ಟವಾದ ಕಲ್ಪವೃಕ್ಷದ ಹೂವುಗಳ ಮಾಲೆಯಿಂದ ಪೂಜ್ಯವೆನಿಸಿದ ಮಂಗಳಕರ ಪಾದಕಮಲವುಳ್ಳವಳೇ, ಅಸದೃಶವಾದ ವೇದ ಸ್ವರೂಪದ ಮಾತುಳ್ಳವಳೇ, ಮೃಡಾಣಿಯೇ ನನ್ನನ್ನು ರಕ್ಷಿಸು.

ಇಪ್ಪತ್ತೊಂಬತ್ತನೆಯ ಆಶ್ವಾಸವು ಸಮಾಪ್ತವಾಯಿತು

ತ್ರಿಂಶಾಶ್ವಾಸಂ

[ಗುರುಭಕ್ತಾಂಡಾರಿಯ ಕಥೆ]

ಶ್ರೀಕುಧರಜಾತಿಮಧುರಾ
ಲೋಕನವಃಲಯಜವಿಲಿಪ್ತವಕ್ಷಸ್ಸ್ಥಳನ
ಸ್ತೋಕ ಮಹಿಮಾಂಕನಿಂದುಕ
[1]ಲಾಕಂ[1] ಪೊರೆಗೆಮ್ಮನಾ[2]ಗಳುಂ[2] ಶಿವಲಿಂಗಂ ೧

ಒಸಗೆ ಮಿಗೆ ಕೇಳುತಿರೆ ಶರ
ಣಸಮೂಹಂ ಮತ್ತಮಾಗಳುಸುರ್ದಂ ಬಸವಂ
ಮಿಸುಪ ಗುರುಭಕ್ತನೆಸಗಿದ
ಪೊಸಪರಿಯಂ ಭಕ್ತಜನಮನೋವನಚೈತ್ರಂ ೨

ಪ್ರಿಯ ರಮಣಿ ನುಡಿದ ಕಟಕಿಯ
ನಯನಿಧಿ ತಾಂ ಕೇಳ್ದು ಲೇಸುವಡೆದಂ ಗಡ ದು
ರ್ಜಯಪಾಲಗೂರ್ಜರಂ ನಿ
ಶ್ಚಯಮಿಷ್ಟವಧೂಕ್ತಿಗೇಳ್ದವಂಗೆಡರುಂಟೇ ೩

ಗುರುಭಕ್ತಾಂಡಾರಿಯ ಕಥೆ

೧. ಮಂಗಳಕರಳಾದ ಪರ್ವತ ಪುತ್ರಿಯೆನಿಸಿದ ಪಾರ್ವತಿಯ ಅತ್ಯಂತ ಮಧುರವಾದ ನೋಟವೆಂಬ ಶ್ರೀ ಗಂಧದಿಂದ ಲೇಪನಗೊಂಡ ಎದೆಯುಳ್ಳವನಾಗಿಯೂ, ಅತ್ಯಧಿಕ ಮಹಿಮೆಯೇ ಲಕ್ಷಣವಾಗಿ ಉಳ್ಳವನೂ, ಚಂದ್ರಕಲೆಯನ್ನು ಧರಿಸಿದವನೂ ಆದ ಶಿವ ಲಿಂಗನು ನಮ್ಮನ್ನು ಸದಾ ರಕ್ಷಿಸಲಿ. ೨. ಶರಣ ಸಮುದಾಯವು ಅತ್ಯುತ್ಸಾಹದಿಂದ ಕೇಳುತ್ತಿರಲು ಆಗ ಭಕ್ತ ಜನರ ಮನಸ್ಸೆಂಬ ವನಕ್ಕೆ ವಸಂತ ಪ್ರಾಯನಾದ ಬಸವೇಶ್ವರನು, ಪುನಃ ಗುರುಭಕ್ತನು ಮಾಡಿದ ಹೊಸರೀತಿಯನ್ನು ಹೇಳಿದನು. ೩. ನೀತಿಗೆ ನಿಧಿಯಂತಿದ್ದ, ಜಯಿಸಲಸಾಧ್ಯನಾದ ಪಾಲಗುರ್ಜರ ಮಹಾರಾಜನು ಪ್ರೀತಿಯ ತನ್ನ ರಮಣಿಯು ನುಡಿದ ಮೂದಲಿಕೆಯ ಮಾತುಗಳನ್ನು ಕೇಳಿ, ಸುಖವನ್ನು ಪಡೆದನಲ್ಲವೇ ! ನಿಜವಾಗಿಯೂ ಇಷ್ಟಳಾದ (ಆಪ್ತಳಾದ) ಹೆಂಡತಿಯ ಮಾತನ್ನು ಕೇಳಿದವನಿಗೆ ವಿಘ್ನ

---

1 ಲಾಂಕು(ಗ, ಮು) 2 ವಗಂ(ಮು)

ಮೊದಲೊಳತಿ ವಿರಸಮಾದೊಡ
ಮೊದವಿಸುಗುಂ ಲೇಸನಗ್ರದೊಳ್ ಸುದತಿಯರಾ
ಡಿದ ನುಡಿಯುದು ಕಾರಣಮೆ
ನ್ನುದಿತೋಕ್ತಿಯ ಕೇಳ್ವುದೆಂದವಂಗವಳೆಂದಳ್ ೪

ವ॥ ಎಂದ ಪಣವಧೂಟಿಯ ವದನವಿಧುಬಿಂಬದಿನೊಗೆತಂದ ಸರಸ ಚತುರೋಕ್ತಿಚಂದ್ರಿಕೆಯಿಂ ಕಾಮಾಗ್ನಿ ಮತ್ತೆ ಮತ್ತೆ ಮೆಯ್ವೆರ್ಚೆ ಹೃದಯಕುಹರಮನಳುರ್ದು ಘುಳುಘುಳಿಸಿ ಕಾಯ್ಪು ಮಸಗಿ ತನುವೆಲ್ಲಮನಾವರಿಸಿ ತೀವೆ—

ಸೈರಿಸಲಾಱದೆ ಮೇಲ್ವರಿ
ದೋರಂತೆ ತುಡುಂಕಲಾಟಿಪಾತನ ಬಗೆಯಂ
ವಾರಾಂಗನೆ ನಡೆ ನೋಡುತ
ಪಾರಭಯಾಂಬುಧಿಯೊಳಾಳ್ದು ತಳವೆಳಗಾದಳ್ ೫

ತಿಳಿಪಿದೊಡಮಾವ ಪರಿಯಿಂ
ತಿಳಿಯಂ ಕಾಮಾಂಧನಕ್ಕಟೇಗೆಯ್ದಪೆನೆಂ
ದಳವಳಿದು ಕಳವಳಿಸಿ ಮೊ
ಕ್ಕಳಮಳರ್ದಳಲಾಂತು ಸುಯ್ದು ಸಿಡಿಮಿಡಿಗೊಂಡಳ್ ೬

ಮೇಲಱಿಯದೆ ಕಾಮಾತುರ
ನಾಲಿಂಗಿಸಲೆಸಗುತೆನ್ನ ಹರಣದಪಾಯ

ವುಂಟಾಗದು. ೪. ಸುದತಿಯರು ಆಡಿದ ಮಾತುಗಳು ಮೊದಮೊದಲು ಅತಿ ವಿರಸದವುಗಳಾದರೂ, ಕೊನೆಯಲ್ಲಿ ಒಳ್ಳೆಯದನ್ನೇ ಉಂಟುಮಾಡುವುವು. ಆದುದರಿಂದ ನನ್ನ ಉದ್ಧಾರ ಕಾರಣಗಳಾದ ಮಾತನ್ನು ಕೇಳಬೇಕೆಂದು, ಆ ಗುರುಭಕ್ತರಾಜನನ್ನು ಕುರಿತು ಆ ಪ್ರೌಢಮತಿಯೆಂಬ ವೇಶ್ಯೆಯು ಹೇಳಿದಳು. ವ॥ ಹೀಗೆಂದು ಹೇಳಿದ ಆ ಪಣ್ಯಾಂಗನೆಯ ಮುಖವೆಂಬ ಚಂದ್ರ ಮಂಡಲದಿಂದ ಮೂಡಿಬಂದ ಸರಸವಾದ ಚತುರೋಕ್ತಿಗಳೆಂಬ ಬೆಳದಿಂಗಳಿನಿಂದ ಆ ಗುರುಭಕ್ತನ ಕಾಮಾಗ್ನಿಯು ಮತ್ತೆ ಮತ್ತೆ ಅಧಿಕಗೊಳ್ಳಲು, ಹೃದಯವೆಂಬ ರಂಧ್ರಪ್ರದೇಶವನ್ನೆಲ್ಲ ವ್ಯಾಪಿಸಿ, 'ಘುಳು ಘುಳು' ಎಂದು ಕಾಯ್ದು ಅಧಿಕಗೊಂಡು ದೇಹವನ್ನೆಲ್ಲ ವ್ಯಾಪಿಸಿ ತುಂಬಿಕೊಳ್ಳಲಾಗಿ ೫. ಸೈರಿಸಲಾರದೆ ಆ ವೇಶ್ಯೆಯ ಮೇಲೆ ಬಿದ್ದು, ಚೆನ್ನಾಗಿ ಅವಳನ್ನು ಹಿಡಿದುಕೊಳ್ಳುವುದಕ್ಕೆ ಚಲಿಸಾಡುವ ಆತನ ರೀತಿಯನ್ನು ಆ ವೇಶ್ಯೆಯು ದಿಟ್ಟಿಸಿ ನೋಡಿ, ಅಪಾರವಾದ ಭಯವೆಂಬ ಸಮುದ್ರದಲ್ಲಿ ಮುಳುಗಿ ಬೆರಗುಗೊಂಡಳು. ೬. ಯಾವ ರೀತಿಯಿಂದ ತಿಳುವಳಿಕೆಯನ್ನುಂಟು ಮಾಡಿದರೂ, ಈ ಕಾಮಾಂಧನು ಅಕ್ಕಟಾ! ತಿಳಿಯುತ್ತಿಲ್ಲವಲ್ಲಾ! ಏನು ಮಾಡಲಿ? ಎಂದು ಶಕ್ತಿಗುಂದಿದವಳಾಗಿ, ವ್ಯಾಕುಲಗೊಂಡು, ಅಧಿಕವಾಗಿ ಆವರಿಸಿದ ದುಃಖದಿಂದ ಕೂಡಿ, ನಿಟ್ಟುಸಿರುಬಿಟ್ಟು, ಸಿಡಿಮಿಡಿಗೊಂಡಳು. ೭. ಕಾಮಾತುರನಾದವನು ಮುಂದಾಗುವುದನ್ನು ತಿಳಿಯದೆ, ಆಲಿಂಗಿಸಿಕೊಳ್ಳಲು ಪ್ರಯತ್ನ ಪಡುತ್ತ,

ಕ್ಕಾಲಂಬನವಾದಪನೆಂ
ದಾಲಲನೆ ಮನೋವಿಷಾದದಿಂದಿಂತೆಂದಳ್ ೭

ಎಲೆ ಮೂರ್ಖರರಸ ನಿನಗಾಂ
ಪಲವಂದದಿನುಸುರೆ ಕೇಳ್ದುದಿಲ್ಲಕಟ ನಿರ
ರ್ಗಲವೀಶ್ವರಾಜ್ಞೆಯಿಂ ಗ
ಲ್ಗಲನೇಂ ಬಂದಪುದೊ ಮುಂದೆ ಶೂಲಿಯೆ ಬಲ್ಲಂ ೮

ಎನಿತೆನಿತುಪಾಯದಿಂ ವಂ
ಚನೆಗೆಯ್ದೊಡವೋವೊ ಪೋಗದಿದು ಪೇಳ್ದಪೆನಿಂ
ದೆನಗಿಲ್ಲ ತಪ್ಪು ನಿನ್ನಂ
ಮನವೊಲ್ಲದುದರ್ಕೆ ಕಾರಣಮನೆಲೆ ನೃಪತಿ ೯

ಗುರುಭಕ್ತಂ ಗಡ ನೀನು
ರ್ವರೆಯೊಳಿರುಳ್ಬಂದು ನಿನ್ನ ಗುರುವರನೆನ್ನೊ
ಳ್ನೆರೆದಿರ್ದು ತಳರ್ದನದಱಿಂ
ನರೇಂದ್ರ ನೀನೆಳಸೆ ಸುಸಿಲನಾಂ ಮೆಯ್ದೊಗೆದೆಂ ೧೦

ವ॥ ಎಂಬುದುಮಾ ನುಡಿ ಕೂರಂಬಿನಂತೆ ಕರ್ಣಮಂ ತಾಗೆ ಬಿಸಿಗೆಂಡಮಂ ಮೆಟ್ಟಿದಂತಿರಾಗಿ ಹೃದಯಂ ಪಪ್ಪನೆ ಪಾಱೆ ಭಯರಸದೊಳ್[1]ಳ್ದು ಹಾಹಾ ದೇಶಿಕೇಂದ್ರ ಕೆಟ್ಟೆಂ ಕೆಟ್ಟೆನೆಂದು ಬಾಯ್ವಿಟ್ಟು ಧರಣೀತಳದೊಳ್ ತೊಪ್ಪನೆ ಬಿಳ್ದು—

ನನ್ನ ಪ್ರಾಣದ ಅಪಾಯಕ್ಕೆ ಇವನು ಕಾರಣನಾದವನಾಗುತ್ತಾನೆಂದು ಆ ಸುಂದರಿಯು ಮನಃ ಕ್ಲೇಶದಿಂದ ಹೀಗೆಂದಳು. ೮. 'ಎಲೈ ಮೂರ್ಖ ಅರಸನೇ, ನಿನಗೆ ನಾನು ಹಲವಾರು ಪ್ರಕಾರದಿಂದ ಹೇಳಿದರೂ ಕೇಳಲಿಲ್ಲ. ಅಕ್ಕಟಾ! ಮುಂದೆ ಈಶ್ವರಾಜ್ಞೆಯಿಂದ ಶೀಘ್ರವಾಗಿ ತಡೆಯಲಶ್ಯಕವಾದದ್ದು ಏನುಂಟಾಗುವುದೋ (ಯಾವ ಕಷ್ಟ ವುಂಟಾಗುವುದೋ) ಆ ಶಿವನೇ ಬಲ್ಲ.' ೯. 'ಎಲೈ ರಾಜನೇ, ಎಷ್ಟೆಷ್ಟು ಯುಕ್ತಿಯಿಂದ ವಂಚನೆ ಮಾಡಿದರೂ, ಓಹೋ! ಹೋಗದಿರುವ ಈ ನಿನ್ನ ಸಂಬಂಧದಲ್ಲಿ ನನ್ನ ತಪ್ಪೇನೂ ಇಲ್ಲ; ನಿನ್ನನ್ನು ಒಲ್ಲೆನೆನ್ನುವುದಕ್ಕೆ ಈಗ ಕಾರಣವನ್ನು ಹೇಳುತ್ತೇನೆ. ಕೇಳು.' ೧೦. 'ಮಹಾರಾಜಾ, ನೀನು ಈ ಲೋಕದಲ್ಲಿ ಗುರುಭಕ್ತನಲ್ಲವೇ! ನಿನ್ನ ಗುರುಶ್ರೇಷ್ಠನು (ನಿನ್ನೆಯು) ರಾತ್ರಿ ಇಲ್ಲಿಗೆ ಬಂದು ನನ್ನಲ್ಲಿ ಕೂಡಿ ಹೊರಟು ಹೋದನು. ಆದ್ದರಿಂದ ನೀನು ಸುರತ ಸುಖಕ್ಕೆ ಬಯಸಲಾಗಿ ನಾನು ದೇಹವನ್ನು ಹಿಂದೆಗೆದೆನು.' ವ॥ ಹೀಗೆಂದು ಅವಳು ಹೇಳಿದ ಆ ಮಾತು ತೀಕ್ಷ್ಣವಾದ ಬಾಣದಂತೆ ಕಿವಿಯನ್ನು ಪ್ರವೇಶಿಸಲು, ಸುಡುವ ಕೆಂಡವನ್ನು ತುಳಿದಂತಾಗಿ ಹಪ್ಪನೆ ಹಾರಿ; ಭಯ ರಸದಲ್ಲಿ ಮುಳುಗಿದವನಾಗಿ, ಹಾ ಹಾ ಗುರೂತ್ತಮನೇ, ಕೆಟ್ಟೆ ಕೆಟ್ಟೆ! ಎಂದು ಬಾಯಿಬಿಟ್ಟು ಕೂಗಿಕೊಂಡು, ಭೂಮಿಯ ಮೇಲೆದೊಪ್ಪನೆ

1 ಆ(ಅ, ಮ)

ನಡುಗುವೆರ್ದೆ ನಾಂಟಿದತಿಭಯ
ವೆಡನೊಡನುರದೇಳ್ವ ಶೋಕಶಿಖಿ ಬತ್ತಿದ ಬಾ
ಯ್ಗುಡುಗುಡನೆ ಸುರಿವ ಕಣ್ಬನಿ
ಕಡುವಿಸುಪಾಂತಿಳಿವ ಸುಯ್ಗಳಿರೆ ಪಳಯಿಸಿದಂ ೧೧

ದವಶಿಖಿಯಂ ಮಳ್ಗಿಸಿ ಮೇ
ಘವಹ್ನಿಯಂ ಪೆರ್ಚಿಗೆಯ್ವ ಕಾರ್ಗಾಲದವೋ
ಲವಳ ನುಡಿ ಕಾಮವಹ್ನಿಯ
ತವೆ ಮಳ್ಗಿಸಿ ಶೋಕಶಿಖಿಯನೇನುರ್ವಿಸಿತೋ ೧೨

ಗುರುನಾಥ ಹಾ ಮಹಾಗುರು
ವರ ಹಾ ಗುರುವರೇಣ್ಯ ಹಾ ಹಾ ಘನಮು
ದ್ಗುರುಲಿಂಗ ಹಾಯೆನುತೆ ಕಾ
ಳ್ಬುರಮಾಗೆ ದೃಗಂಬು ಬಿಕ್ಕಿ ಬಿರಿದಳುತಾಗಳ್ ೧೩

ನಡೆತಂದಾ ಪಣಕಾಂತೆಯಂಘ್ರಿಗೆಜಗುತ್ತುಂ ತಾಯೆ ಮೆಯ್ಗೊರ್ಬಿನಿಂ
ತೊಡರ್ದಜ್ಞಾನದೆ ನಿನ್ನನರ್ಥಿಸಿದ ಪಾಪಂ ಪೋಪುದೆಂತಕ್ಕ ನಿ
ನ್ನೊಡನಾಂ ಕಾಮವಿಕಾರದಿಂ ನುಡಿದಘಕ್ಕೇಗೆಯ್ವೆನೀ ನಿನ್ನ ಸಂ
ಗಡಮಾಂ ನಕ್ಕಪರಾಧಮೇತಳಿಗುಮೀ ನಿನ್ನಂಗಮಂ ಮೋಹದಿಂ ೧೪

ನೋಡಿದ ದೋಷಮೆಂತು ಪಱಿಗುಂ ಬೆಸಸಂಬಿಕೆ ನಿನ್ನೊಳಾಂ ಮನಂ
ಮಾಡಿದ ಘೋರದುಷ್ಕೃತಿಗೆ ಯಾವುದೊ ನಿನ್ನನಳ್ಕಿಱಿಂ

ಬಿದ್ದನು; ೧೧. ನಡುಗುತ್ತಿರುವ ಹೃದಯ; ನಾಟಿಕೊಂಡಿರುವ ಅತ್ಯಂತ ಭಯ; ಮೇಲೆ ಮೇಲೆ ಉರಿದೇಳುತ್ತಿರುವ ದುಃಖವೆಂಬ ಅಗ್ನಿ; ಬತ್ತಿ ಹೋದ ಬಾಯಿ; ಗಳಗಳನೆ ಸುರಿಯುತ್ತಿರುವ ಕಣ್ಣೀರು ; ಬಹು ಬಿಸಿಯನ್ನು ಹೊಂದಿರುವ ಉಸಿರು—ಇವುಗಳಿಂದ ಕೂಡಿ, ಪ್ರಲಾಪಮಾಡಿದನು. ೧೨. ಕಾಡುಗಿಚ್ಚನ್ನು ಶಾಂತಗೊಳಿಸಿ ಸಿಡಿಲಿನ ಬೆಂಕಿಯನ್ನು ಅಧಿಕಗೊಳಿಸುವ ಮಳೆಗಾಲದಹಾಗೆ, ಆ ವೇಶ್ಯೆಯ ಮಾತು ಆತನ ಕಾಮವೆಂಬ ಅಗ್ನಿಯನ್ನು ಚೆನ್ನಾಗಿ ಉಪಶಮನಗೊಳಿಸಿ ದುಃಖಾಗ್ನಿಯನ್ನು ಏನು ಅಧಿಕಗೊಳಿಸಿತೋ ! ೧೩–೧೫. ಆಗ 'ಹಾ ! ಗುರುನಾಥಾ ! ಹಾ ! ಹಾ ! ಮಹಾಗುರುವರ ! ಗುರುವರೇಣ್ಯ, ಹಾ ಹಾ ! ಮದ್ಗುರುಲಿಂಗನೇ ಹಾ ! ಎನ್ನುತ್ತ ಕಣ್ಣೀರು ಪ್ರವಾಹವಾಗಿ ಹರಿಯುತ್ತಿರಲು, ಬಿಕ್ಕಿ ಬಿಕ್ಕಿ ಅಳುತ್ತ ಬಂದು ಆ ವೇಶ್ಯೆಯ ಪಾದಕ್ಕೆ ನಮಸ್ಕಾರಮಾಡಿ, 'ತಾಯೇ, ದೇಹಮದದಿಂದುಂಟಾದ ಅಜ್ಞಾನದಿಂದ ನಿನ್ನನ್ನು ಬೇಡಿದ ಪಾಪವು ಹೇಗೆ ಹೋಗುವುದು ? ಅಕ್ಕಾ ! ನಿನ್ನೊಡನೆ ನಾನು ಕಾಮವಿಕಾರದಿಂದ ನುಡಿದ ಪಾಪಕ್ಕೆ ಏನು ಮಾಡಲಿ ? ಈ ನಿನ್ನ ಸಂಗಡ ನಾನು ನಕ್ಕ ಅಪರಾಧವು ಹೇಗೆ ನಾಶಗೊಳ್ಳುವುದು ? ಈ ನಿನ್ನ ಶರೀರವನ್ನು ಮೋಹಗೊಂಡು ನೋಡಿದ ದೋಷವು ಹೇಗೆ ಹರಿಯುವುದು ? ತಾಯಿಯೇ (ಅಂಬಿಕೇ), ಅಪ್ಪಣೆ

ಕೂಡಲೊಡರ್ಚಿದೀ ದುರಿತಮೇತೆಱದಿಂ ತವಿಲಕ್ಕುಮಿಂತು ಱೋ
ಡಾಡುತೆ ನಿನ್ನ ನೋಯಿಸಿದ ಪಾತಕಮೇತು ವಿನಷ್ಟಮಪ್ಪುದೋ ೧೫

ಸ್ಮರಸರ್ಪಗರಳದುರಿಯಿಂ
ದುರಿದೆಂ ವ್ಯಾಮೋಹಮೆಂಬ ಬಱಸಿಡಿಲೆಱಗಿ
ತ್ತಿರದಕ್ಕಟ ಮಾಯಾಭೀ
ಕರತ[1]ರ ರಾಕ್ಷಸಿಯ ಬಾಯ್ಗೆ ಸವಿದುತ್ತಾದೆಂ ೧೬

ಎನಿತೆನಿತು ಹಿತಮ ನೀನೊ
ಲ್ದನುನಯದಿಂ ಪೇಳೆ ಕೇಳದಾಂ ಮರುಳಾದೆಂ
ಜನನಿ ಮಿಗೆ ಮುನ್ನಮೇಂ ತ
ಪ್ಪನವಧಿ ಪಾಪಪ್ರಯುಕ್ತನೋ ಬಗೆವಾಗಳ್ ೧೭

ಸಲೆ ಪೂರ್ವಜನ್ಮದೊಳ್ಗ
ಳ್ಗಲನದ್ವೈತಮನೆ ಪಿಡಿದು ಕಾಲತ್ರಯದೊಳ್
ನಲಿದರ್ಚಿಸದಾದೆನೊ ಮಂ
ಜುಲ ಶಿವನಂ ಷೋಡಶೋಪಚಾರಕ್ರಮದಿಂ ೧೮

ಹರನೆಱೆಯನಾಳ್ದಲಾನೆಂ
ಬಿರವಱಿದಾಚರಿಸದಾದೆನೋ ಫಲಕಾಂಕ್ಷಾ

ಮಾಡು ; ನಿನ್ನಲ್ಲಿ ನಾನು ಮನಸ್ಸು ಮಾಡಿದ ಭಯಂಕರ ಪಾಪಕ್ಕೆ ಪ್ರತಿಕಾರವಾವುದು ? ನಿನ್ನನ್ನು ಪ್ರೀತಿಯಿಂದ ಕೂಡಲು ಪ್ರಯತ್ನಿಸಿದ ಈ ಪಾಪವು ಯಾವ ರೀತಿಯಿಂದ ನಾಶವಾಗುವುದು ? ಈ ರೀತಿ ನಿನ್ನನ್ನು ಪೀಡಿಸಿ ನೋವನ್ನುಂಟುಮಾಡಿದ ಪಾಪವು ಯಾವರೀತಿ ನಷ್ಟಗೊಳ್ಳುವುದು ?' ೧೬. 'ಮನ್ಮಥನೆಂಬ ಸರ್ಪದ ವಿಷದುರಿಯಿಂದ ಉರಿದು ಹೋದೆನು ; ಅಜ್ಞಾನವೆಂಬ ಬರಸಿಡಿಲು ಮೇಲೆರಗಿಬಿತ್ತು ; ಅಕ್ಕಟಾ ! ತಪ್ಪದೆ ಮಾಯೆಯೆಂಬ ಭಯಂಕರ ರಾಕ್ಷಸಿಯ ಬಾಯಿಗೆ ಸವಿಯಾದ ತುತ್ತಾದಂತಾದೆನು !' ೧೭. 'ತಾಯಿಯೇ, ನೀನು ಪ್ರೀತಿಯಿಂದ ಒಲಿದು ಎಷ್ಟೆಷ್ಟು ಹಿತವನ್ನು ಹೇಳಿದರೂ ನಾನು ಕೇಳದೆ, ಹುಚ್ಚನಂತಾದೆನು. ವಿಚಾರಿಸಿ ನೋಡಿದರೆ, ಪೂರ್ವಜನ್ಮದಲ್ಲಿ ನಾನು ಅದೆಂಥ ಅಪಾರವಾದ ಪಾಪದಿಂದ ಕೂಡಿದವನಾಗಿದ್ದೆನೋ !' ೧೮. 'ಪೂರ್ವಜನ್ಮದಲ್ಲಿ ಗಳಗಳನೆ ಅದ್ವೈತಭಾವವನ್ನು ಹೊಂದಿ (ಶಿವಜೀವರಲ್ಲಿ ಅಭೇದಭಾವ ವಿಶಿಷ್ಟನಾಗಿ) ಕಾಲತ್ರಯದಲ್ಲೂ ಮನೋಹರನಾದ ಶಿವನನ್ನು ಷೋಡಶೋಪಚಾರ ಕ್ರಮದಿಂದ ನಲಿದು ಅರ್ಚಿಸದಾದೆನೋ !' ೧೯. 'ನಾನು ಪರಮೇಶ್ವರನೆಂಬ ಒಡೆಯನ ಸೇವಕನ ಸೇವಕನೆಂಬ ನೀತಿಯನ್ನರಿದು, ನಡೆದುಕೊಳ್ಳದೆ ಹೋದೆನೊ?

1 ವ(ಅ)

ತುರನಾಗಿ ಪೂಜೆಗೆಯ್ದೆನೊ
ಪುರವೈರಿಯನನ್ಯಚಿತ್ತದೊಳ್ಭಜಿಸಿದೆನೋ ೧೯

ರಾಜೋಪಚಾರವಂ ನಿ
ರ್ವ್ಯಾಜದೊಳಾನೆಸಗದಾದೆನೋ ಶಂಭುಗೆ ತ
ತ್ಪೂಜೆಯನುಳಿದಾಹಾರವ
ನೋಜೆಯನಳಿದ[1]ಳುಪಿಕೊಂಡೆನೋ ಮೂರ್ಖತೆಯಿಂ ೨೦

ಪರಶಾಸ್ತ್ರಾವಳಿಯೊಳ್ಸದಾ ವಿಹರಣಂಬೆತ್ತಿರ್ದೆನೋ ಸತ್ಯಶಾಂ
ಕರಶಾಸ್ತ್ರಾಳಿಯವಜ್ಞೆಗೆಯ್ದೆನೊ ಬಳಲ್ದೆಯ್ತಂದ ಮಾಹೇಶ್ವರೋ
ತ್ಕರವಂ ಮನ್ನಿಸದಾದೆನೋ ಶರಣರಂ ಕಂಡಾಕ್ಷಣಂ ತನ್ನಮ
ಸ್ಕರಣಂಗೆಯ್ಯದೆ ಪೋದೆನೋ ಪಿರಿಯರಾಜ್ಞಾಲಂಘನಂಗೆಯ್ದೆನೋ ೨೧

ಘನಸದ್ಭಕ್ತಪ್ರತಾನಂ ಕೆಳಗಿರೆ ಪರಿದಗ್ರಾಸನಂಗೊಂಡು ಕುಳ್ಳಿ
ರ್ದೆನೊ ಸೊರ್ಕಿಂ ಜಂಗಮೌಘಂ ಬರೆ ಸಮಯ ನಿಯುಕ್ತೋಪಚಾರಂಗಳಂ ಸ
ಮ್ಮನದೆಂದಾಂ ಮಾಡದೇಂ ಪೋದೆನೊ ಹರಚರಸತ್ಪೂಜೆಯಂ ಶ[2]ಕ್ತಿಯಿರ್ದಂ
ತೆ ನೆಗಳ್ಚಲ್ಸಲ್ಲದೇನಾದೆನೊ ಚರಚಯದೊಳ್ಪೂರ್ವಜಾತ್ಯಾದಿಯೊಳ್ಪಂ ೨೨

ಬಗೆದೆನೊ ಪಙ್ಕ್ತಿಭೇದಮನೊಡರ್ಚಿದೆನೋ ಚರಲಿಂಗಪಙ್ಕ್ತಿಯೊಳ್
ಮಿಗೆ ಭವಿಮಾರ್ಗದೊಳ್ನಡೆದೆನೋ ಭವಿಪಾಕಮನುಂಡೆನೋ ಶಿವೈ

ತ್ರಿಪುರ ವೈರಿಯಾದ ಶಿವನನ್ನು ಪ್ರಯೋಜನದ ಆಸೆಯಲ್ಲಿ ಕುತೂಹಲವುಳ್ಳವನಾಗಿ ಪೂಜೆ ಮಾಡಿದೆನೋ ? ಮತ್ತೊಂದುಕಡೆಯಲ್ಲಿದ್ದ (ಅನ್ಯಭಾವನೆಯಿಂದ ಕೂಡಿದ) ಮನಸ್ಸಿನಿಂದ ಭಜಿಸಿದೆನೋ ?' ೨೦. ಶಂಭುವಿಗೆ ನಿಷ್ಕಾಪಟ್ಯದಿಂದ ರಾಜೋಪಚಾರವನ್ನು ಮಾಡದೆ ಹೋದೆನೋ ? ಮೂರ್ಖತನದಿಂದ ಆ ಶಿವನ ಪೂಜೆಯನ್ನು ಬಿಟ್ಟು, ರೀತಿದಪ್ಪಿ ಅವನಿಗರ್ಪಿಸುವ ನೈವೇದ್ಯಕ್ಕೆ ಇಚ್ಛಿಸಿ ಸ್ವೀಕರಿಸಿದೆನೋ ? (ಪ್ರಸಾದಭಾವನೆಯಲ್ಲಿ ಕ್ರಮತಪ್ಪಿದೆನೋ ಎಂದು ಭಾವ) ೨೧–೨೨–೨೩. ಪರಸಮಯದ ಶಾಸ್ತ್ರಸಮೂಹದಲ್ಲಿ ಸದಾ ವ್ಯವಹರಿಸುವವನಾಗಿದ್ದೆನೋ ? ಸತ್ಯವಾದ ಶಂಕರಸಂಬಂಧವಾದ ಶಾಸ್ತ್ರಸಮೂಹವನ್ನು ತಿರಸ್ಕರಿಸಿದೆನೋ ? ಆಯಾಸದಿಂದ ಬಂದ ಮಾಹೇಶ್ವರರುಗಳ ಸಮೂಹವನ್ನು ಮರ್ಯಾದೆಯಿಂದ ಕಾಣದೆ ಹೋದೆನೋ ? ಶರಣರನ್ನು ಕಂಡೊಡನೆಯೇ ಅವರಿಗೆ ನಮಸ್ಕರಿಸದೆ ಹೋದೆನೋ ? ಹಿರಿಯರ ಆಜ್ಞೆಯನ್ನು ಉಲ್ಲಂಘಿಸಿದೆನೋ ? ಶ್ರೇಷ್ಠರಾದ ಶಿವಭಕ್ತ ಸಮೂಹವು ಕೆಳಗಿದ್ದಾಗ ನಾನು ಹರಿದು ಹೋಗಿ ಎತ್ತರವಾದ ಪೀಠವನ್ನೇರಿ ಕುಳಿತೆನೋ ? ಜಂಗಮ ಸಮೂಹವು ಬರಲು ನಾನು ಸೊಕ್ಕಿನಿಂದ ಕಾಲೋಚಿತವಾದ ಉಪಚಾರವನ್ನು

1 ದು(ಚ, ಜ, ಮು, ಗ) 2 ಭ (ಅ)

ಕ್ಯಗಣದೊಳೆಗ್ಗನೇಂ ಪಿಡಿದೆನೋ ಶಿವಭಕ್ತರೊಳೊರ್ವರ್ ಸೋಲಮಂ
ನೆಗಳ್ದೆನೊ ಗರ್ವದಿಂ ಜಱಿದೆನೋ ಶಿವತತ್ವಕಳಾಪ್ರಸಂಗಮಂ ೨೩

ಶಿವವಿದ್ಯಾಗುರುಭೇದಬುದ್ಧಿಯನದೇಂ ಕೈಕೊಂಡೆನೋ ಗೌರವಾಂ
ಘ್ರಿವನೇಜಾತದ ಜಾನಮಂ ತೊಱೆದೆನೋ ತತ್ಪಾದಪೂಜಾಮಹೋ
ತ್ಸವಕಾಲಸ್ಯಮನಾಳ್ದೆನೋ ಮಱೆದೆನೋ ತದ್ದೇಶಿಕೇಂದ್ರಾತ್ಮಸಂ
ಭವರಂ ಮನ್ನಿಪುದಂ ಭವಿವ್ರಜದ ಮೇಳಾಪಕ್ಕೆ ಪಕ್ಕಾದೆನೋ ೨೪

ಪರವಾದಿವ್ರಾತಕಾನಳ್ಕಿದೆನೊ ಪರಶಿವಾಚಾರಮಂ ಮಾಣ್ದೆನೋ ಶಾಂ
ಕರಲೀಲಾಸತ್ಕಥಾಕರ್ಣನದೊಳಲಸನಾಗಿರ್ದೆನೋ ಶೈವಧರ್ಮೋ
ದ್ಧರಣರ್ಗಾಂ ವಿಘ್ನಮಂ ಚಿಂತಿಸಿದೆನೊ ವಿಷಯೋದ್ರೇಕದೊಳ್ಸಂದೆನೋ ಭ
ಕ್ತರಹಸ್ಯೋಕ್ತಿಂಗಳಿಂ ದೂಱಿದೆನೊ ತೊಱೆದೆನೋ ಶೀಲಮಂ ಲೌಲ್ಯದಿಂದಂ ೨೫

ಶಿವನಿಂದಾವಾಕ್ಯಮಂ ಕೇಳ್ದೆನೊ ಪರಧನಮಂ ಕೊಂಡೆನೋ ಮೋಸದಿಂದ
ನ್ಯವಧೂಟೀಸಂಗಮಂ ಮಾಡಿದೆನೊ ಪಳಿದೆನೋ ಶಿಷ್ಟರಂ ಶೀಲಮಂ ಮಾ

ಸಂತೋಷದಿಂದ ಮಾಡದೆ ಹೋದೆನೋ ಏನೋ ? ನನ್ನ ಶಕ್ತಿಗನುಗುಣವಾಗಿ ಲಿಂಗಜಂಗಮ ಪೂಜೆಯನ್ನು ಮಾಡುವುದಕ್ಕೆ ಅರ್ಹನಾಗದೆ ಹೋದೆನೋ ? ಜಂಗಮರ ಗುಂಪಿನಲ್ಲಿ (ಅವರ) ಪೂರ್ವದ ಜಾತಿಗಳ ಸಮೀಚೀನತ್ವವನ್ನು ಯೋಚಿಸಿದೆನೋ ? ಜಂಗಮರ ಪಂಕ್ತಿಯಲ್ಲಿ, ಪಂಕ್ತಿಭೇದವನ್ನು ಮಾಡಿದೆನೋ ? ಲಿಂಗವಿಹೀನರಾದವರ ನಡತೆಯಲ್ಲಿ ವ್ಯವಹರಿಸಿದೆನೋ ? ಲಿಂಗವಿಹೀನರು ಮಾಡಿದ ಅಡಿಗೆಯನ್ನುಂಡೆನೋ ? ಅಜ್ಞಾನದಿಂದ ಶಿವೈಕ್ಯಚಿತ್ತವುಳ್ಳವರ ಗುಂಪಿನಲ್ಲಿ ಮೌಢ್ಯವನ್ನೇನಾದರೂ ಅನುಸರಿಸಿದೆನೋ ? ಒಮ್ಮೆ ಶಿವಭಕ್ತರೇನಾದರೂ ಸೋತುಹೋಗುವಂತೆ ಮಾಡಿದೆನೋ ? ಗರ್ವದಿಂದ ಶಿವತತ್ವವಿದ್ಯಾಪ್ರಸಂಗವನ್ನು ತಿರಸ್ಕರಿಸಿದೆನೋ ? (ಲಿಂಗಾಂಗ ಸಾಮರಸ್ಯ ಬೋಧಕವಾದ ವಿದ್ಯೆಯ ಪ್ರಸ್ತಾಪವನ್ನು ಜರಿದೆನೋ?) ೨೪. ರೈತ ಸಂಬಂಧವಾಧ ವಿದ್ಯೆಯನ್ನು ಉಪದೇಶಿಸುವ ಗುರುವಿನಲ್ಲಿ ಭೇದಬುದ್ಧಿಯನ್ನೇನಾದರೂ ಕೈಗೊಂಡೆನೋ ? ಗುರುಸಂಬಂಧವಾದ ಪಾದಕಮಲದ ಧ್ಯಾನವನ್ನು ತೊರೆದುಬಿಟ್ಟೆನೋ ? ಆ ಗುರುವಿನ ಪಾದ ಪೂಜೆಯನ್ನು ಮಾಡುವ ಉತ್ಸವದಲ್ಲಿ ಆಲಸ್ಯಭಾವವನ್ನು ಹೊಂದಿದೆನೋ ? ಆ ಗುರುವಿನಿಂದ ಹುಟ್ಟಿದ ಮಕ್ಕಳುಗಳನ್ನು ಮರ್ಯಾದಿಸುವುದನ್ನು ಮರೆತೆನೋ ? ಲಿಂಗಹೀನರ ಗುಂಪಿನ ಸಂಭಾಷಣೆಗೇನಾದರೂ ಸೇರಿದೆನೋ ? ೨೫–೨೬. ನಾನು ಅನ್ಯಮತದವರ ವಾದಕ್ಕೇನಾದರೂ ಹೆದರಿದೆನೋ ? ಪರಶಿವನ ಸಂಬಂಧದ ಆಚಾರವನ್ನು ಬಿಟ್ಟೆನೋ ? ಶಿವನ ಲೀಲಾವಿಷಯಕವಾದ ಕಥೆಗಳನ್ನು ಕೇಳುವುದರಲ್ಲಿ ಆಲಸ್ಯವುಳ್ಳವನಾಗಿ ಇದ್ದೆನೋ ? ನಾನು ಶೈವ ಧರ್ಮೋದ್ಧಾರ ಮಾಡಿದವರಿಗೆ ವಿಘ್ನವನ್ನೇನಾದರೂ ಚಿಂತಿಸಿದೆನೋ ? ವಿಷಯಸುಖಗಳ ಅತಿಶಯದಲ್ಲಿ ಸಂದಿದವನಾದೆನೋ ? ಭಕ್ತರುಗಳನ್ನು ಪರಿಹಾಸೋಕ್ತಿಗಳಿಂದ ದೂರಿದೆನೋ ? ಸದಾಚಾರ

ಣ್ದವರೊಳ್ಕೂಡಿರ್ದೆನೋ ಸೂಸಿದೆನೊ ಧರೆಗೆ ಲಿಂಗಪ್ರಸಾದಾಂಶವಮಂ ಸಾ
ಧುವಿರೋಧಂ ಗೆಯ್ದೆನೋ ಮಾಡಿದೆನೊ ಕಪಟಮಂ ಮಾಣ್ದೆನೋ ಭಕ್ತಿಯೊಳ್ಪಂ ೨೬

ಪರಿಕಿಪೊಡಿವಱೊಳಗೊಂದುಂ
ದುರಿತಮನೆಸಗದೊಡೆ ಮುನ್ನಮಿಂದೆನಗೀಗ
ಳ್ಗುರುತಲ್ಪಗಮನದೋಷಂ
ದೊರೆಕೊಳ್ಗುಮೆ ಜನನಿ ಮಾಣದೀ ಧಾರುಣಿಯೊಳ್ ೨೭

ವ॥ ಎಂದಿಂತಾಕ್ರಂದನಂಗೆಯ್ದು ಮತ್ತಮಿರದೆ—

ಗುರುವಿನತ್ತಿಗೆ ತಳ್ತ ನಾದಿನಿಯೊರ್ವೆ ಸೋಂಕಿದ ಕಾಂತೆ ತ
ದ್ಗುರುವಿನೋದಿಸಿದಾಕೆಯೊತ್ತೆಯನಿತ್ತ ಕಾಮಿನಿ ಮುನ್ನಮೊ
ಲ್ದಿರಿಸಿಕೊಂಡುಳಿದಿರ್ದ ನಾರಿ ಸಹಾನ್ನಭೋಕ್ತೆಯೆನಿಪ್ಪ ಸೌಂ
ದರಿಯರಾ ಗುರುಪತ್ನಿಯೊಳ್ಸಮೆಯೆಂಬರಾಗಮಕೋವಿದರ್ ೨೮

ಅದು ಕಾರಣದಿಂ ನೀಂ ಗುರು
ಸುದತಿ ಗಡೆಲೆ ತಾಯೆ ಗುರುವಿನೊಳ್ನೆರೆದುದಱಿಂ
ಮದನೋದ್ರೇಕದೆ ನಿನಗಳು
ಪಿದೆನೀ ಘನದೋಷಕಾವುದೋ ಪರಿಹಾರಂ ೨೯

ವನ್ನು ಚಾಪಲ್ಯದಿಂದ ಬಿಟ್ಟುಬಿಟ್ಟೆನೋ ? ಪರಶಿವನ ದೂಷಣೆಯನ್ನು ಕಿವಿಯಿಂದ ಕೇಳಿದೆನೊ ? ಮತ್ತೊಬ್ಬರ ಐಶ್ವರ್ಯವನ್ನು ಅಪಹರಿಸಿದೆನೊ ? ಅಜ್ಞಾನದಿಂದ ಅನ್ಯ ಸ್ತ್ರೀ ಸಂಗವನ್ನು ಮಾಡಿದೆನೋ ? ಸತ್ಪುರುಷರನ್ನು ತಿರಸ್ಕರಿಸಿದೆನೋ ? ಸದಾಚಾರ ವನ್ನು ಬಿಟ್ಟವರೊಡನೆ ಕೂಡಿದ್ದೆನೋ ? ಭೂಮಿಗೆ ಲಿಂಗಪ್ರಸಾದ ತೀರ್ಥಗಳನ್ನು ಚೆಲ್ಲಿದೆನೋ ? ಸತ್ಪುರುಷರೊಡನೆ ವೈರವನ್ನು ಮಾಡಿದೆನೋ ? (ಅನ್ಯರಿಗೆ) ಮೋಸ ವನ್ನೇನಾದರೂ ಮಾಡಿದೆನೋ ? ಭಕ್ತಿಯ ಸಮೀಚೀನತ್ವವನ್ನು ಬಿಟ್ಟೆನೋ ? ೨೭. ಜನನಿಯೇ, ವಿಚಾರಮಾಡಿನೋಡಿದರೆ ಇವುಗಳಲ್ಲಿ ಒಂದನ್ನಾದರೂ ಪಾಪವನ್ನು ಮೊದಲು ಮಾಡದಿದ್ದರೆ ನನಗೆ ಈ ಗುರುತಲ್ಪ ಗಮನದ ದೋಷವು ಇಂದು ಈ ಭೂಮಿಯಲ್ಲಿ ಉಂಟಾಗುತ್ತಿತ್ತೇ ? ವ॥ ಹೀಗೆಂದು ಗಟ್ಟಿಯಾಗಿ ಅಳುತ್ತ, ಮತ್ತೂ ಇರದೆ—೨೮. ಆಗಮಜ್ಞಾನವಿಶಾರದರು-ಗುರುವಿನ ಅಣ್ಣನ ಹೆಂಡತಿ, ಸೇರಿದ ಗುರುವಿನ ತಮ್ಮನ ಹೆಂಡತಿ, ಒಮ್ಮೆ ಗುರುವು ಸ್ಪರ್ಶಮಾಡಿದ ಕಾಂತೆ, ಆ ಗುರುವು ವಿನೋದಿಸಿದವಳು, ಗುರುವು ಒತ್ತೆಯ ಹಣವನ್ನು ಕೊಟ್ಟ ಸುಂದರಿ, ಮೊದಲು ಪ್ರೀತಿಸಿ ಇಟ್ಟುಕೊಂಡು ಬಿಡಲ್ಪಟ್ಟ ಹೆಂಗಸು, ಗುರುವಿನೊಡನೆ ಊಟಮಾಡಿದವಳೆಂದೆ ನಿಸಿದ ಸುಂದರಿ-ಇವರೆಲ್ಲ ಆ ಗುರುಪತ್ನಿಗೆ ಸಮಾನರೆಂದೆನ್ನುವರು. ೨೯. ಎಲೆ ತಾಯಿಯೇ, ನೀನು ಗುರುವಿನೊಡನೆ ಕೂಡಿದವಳಾದ ಕಾರಣದಿಂದ ಗುರುಪತ್ನಿಯೇ ಆದೆಯಲ್ಲವೇ ? ಕಾಮಾತಿಶಯದಿಂದ ನಿನಗೆ ಆಸೆಪಟ್ಟೆನು. ಈ ಮಹಾದೋಷಕ್ಕೆ

ಗುರುವಧುಗೆ ಕೂರ್ತ ಪಾಪಕೆ
ಪರಿಹಾರಮನಕ್ಕ ಪೇಳ್ವುದೆನಗೀಗಳೆನು
ತ್ತುಗವಣಿಸಿದಳನೊಳಂಕೊಂ
ಡಿರದವಳಡಿಳಿರೊಳೆಱಗಿ ಕಣ್ಬನಿವೊನಲಿಂ ೩೦

ಲಲನಾಪಾದಾಬ್ಜಮಂ ತಾಂ ತೊಳೆವುತೊರಸುತುಂ ಭಾಳಮಂ ಬಳ್ಕುತುಂ ಸು
ಯ್ದಲಸುತ್ತುಂ ನೋವುತುಂ ಬೇವುತೆ ಪಳಯಿಸುತುಂ ಕಂದುತುಂ ಕುಂದುತುಂ ಪಂ
ಬಲಿಸುತ್ತುಂ ಸುರ್ಕುತುಂ ಕಂಪಿಸುತೆ ಕರಗುತುಂ ಕೋಡುತುಂ ಬಾಡುತುಂ ಕೋ
ಟಲೆಗಿಂಬಾಗುತ್ತೆ ಬೀಳುತ್ತಳಲುತಳುತೆ ಬೆಳ್ಪಾದನಾ ಭಕ್ತವರ್ಯಂ ೩೧

ವ॥ ಮತ್ತಂ—

ಮಱುಗುವನಳವಳಿವಂ ಮೆ
ಯ್ಮಱೆವಂ ಕಳವಳಿಪನುತೆ ಮೂರ್ಛೆಗೆ ಸಲ್ವಂ
ಮಱುಕಱಿಪ ಶೋಕದಿಂ ಸೈ
ಗಱೆವಂ ಕಣ್ಬನಿಯನಿಳೆಯೊಳುರುಳ್ವಂ ಪೊರಳ್ವಂ ೩೨

ಬಱಿದೊಱೆವೋದುದೆನ್ನಯ ವಿವೇಕಮುಡುಗಿದುದೆನ್ನ ಸೈಪು ಕ
ಟ್ಟೈಱಕದ ದೇಶಿಕೇಂದ್ರಪದಭಕ್ತಿಮಹಾನಿಧಿ ಮಾಯಮಾದುದೆ
ನ್ನಱಿವೊಳಸೋರ್ದುದಿಂಗಿದುದು ಕೀರ್ತಿತರಂಗಿಣಿ ಕೆಟ್ಟೆನಕ್ಕಟೆ
ನ್ನಱಿಕೆಯ ಶೈವಧರ್ಮವಳಿಪಾಂತುದು ನಿನ್ನಳಿಪಿಂತ ದೂಷಱಿಂ ೩೩

ಪರಿಹಾರವು ಯಾವುದೋ? ೩೦–೩೧. ಅಕ್ಕ, ಗುರುವಿನ ವಧುವಿಗೆ ಆಶಿಸಿದುದರಿಂದ ಉಂಟಾದ ಪಾಪಕ್ಕೆ ಪರಿಹಾರವನ್ನು ಈಗಲೇ ಎನಗೆ ಹೇಳಬೇಕು, ಎನ್ನುತ್ತ ಉಕ್ಕಿ ಬರುವ ದುಃಖವನ್ನು ಒಳಗೊಂಡವನಾಗಿ ತಪ್ಪದೆ ಅವಳ ತಳಿರಿನಂತಿರುವ ಪಾದಗಳಲ್ಲಿ ನಮಸ್ಕರಿಸಿ, ಕಣ್ಣೀರಿನ ಪ್ರವಾಹದಿಂದ ಆ ಭಕ್ತವರ್ಯನು ಆ ಸ್ತ್ರೀಯಳ ಪಾದಕಮಲವನ್ನು ತೊಳೆಯುತ್ತ, ಹಣೆಯನ್ನೂ ತಿಕ್ಕಿಕೊಳ್ಳುತ್ತ, ತೂಗಾಡುತ್ತ, ನಿಟ್ಟುಸಿರುಬಿಟ್ಟು, ಅಲಸ್ಯಪಡುತ್ತ, ನೊಂದುಕೊಳ್ಳುತ್ತ, ಸಂತಾಪಪಡುತ್ತ, ಪ್ರಲಾಪ ಮಾಡುತ್ತಾ, ಕಾಂತಿಹೀನನಾಗುತ್ತ, ಕುಂದಿಹೋಗುತ್ತ, ಹಂಬಲಿಸುತ್ತ, ಸುಕ್ಕುಗೊಳ್ಳುತ್ತ, ನಡುಗುತ್ತ, ಕರಗಿಹೋಗುತ್ತ, ಭಯಗೊಳ್ಳುತ್ತ, ರಸಹೀನನಾಗುತ್ತ, ಕೋಟಲೆಗೆ ಗುರಿಯಾಗುತ್ತ, ಬೀಳುತ್ತ, ಖೇದಪಟ್ಟು ಅಳುತ್ತ ಪ್ರಜ್ಞಾಹೀನನಾದನು. ೩೨. ಮರುಗುವನು, ಶಕ್ತಿಹೀನನಾಗುವನು, ಅವಿತುಕೊಳ್ಳುವನು, ವ್ಯಾಕುಲಪಡುವನು, ಹಾಗೆಯೇ ಪರವಶನಾಗುವನು, ಪುನಃ ಪುನಃ ವಿಶೇಷವಾಗುತ್ತಿರುವ ಶೋಕದಿಂದ ಕಣ್ಣೀರನ್ನು ಸುರಿಸುವನು, ಭೂಮಿಯ ಮೇಲೆ ಉರುಳಾಡುವನು. ೩೩. ನಿನ್ನ ವಿಷಯದಲ್ಲಿ ಆಸೆಪಟ್ಟ ಕಾರಣದಿಂದ ನನ್ನ ವಿವೇಕವೆಲ್ಲ ನೀರಿಲ್ಲದ ನದಿಯಂತಾಯಿತು; ನನ್ನ ಪುಣ್ಯವೆಲ್ಲ ಮರೆಯಾಗಿ ಹೋಯಿತು; ಅತ್ಯಂತ ಪ್ರೀತಿಯುಳ್ಳ ಗುರುಶ್ರೇಷ್ಠನ ಪಾದಭಕ್ತಿಯೆಂಬ ದೊಡ್ಡ ನಿಕ್ಷೇಪವು ಮಾಯವಾಯಿತು; ನನ್ನ ತಿಳುವಳಿಕೆಯೆಲ್ಲ ಒಳಕ್ಕೆ ಇಳಿದು ಹೋಯಿತು (ನಾಶವಾಯಿತು); (ನನ್ನ) ಸತ್ಕೀರ್ತಿಯೆಂಬ ನದಿಯು ಬತ್ತಿ ಹೋಯಿತು. ಅಯ್ಯೋ! ಕೆಟ್ಟೆನು. ನನ್ನ ಸುಜ್ಞಾನದಿಂದ

ಗುರುವಧುಗಳುಪಿದ ದೋಷಾ
ಕರನಮೃತಕಳಾಕ್ಷಯಕ್ಕೆ ಪಕ್ಕಾದಂ ದ
ಲ್ಗುರುವಧುಗಳುಪಿದ ದೋಷಾ
ಕರನಾದೆನಗಮೃತಭಾವಮೇಂ ಸಮನಿಸುಗುಮೇ ೩೪

ವ॥ ಎಂದಿಂತು ನೊಂದು ನುಡಿದಳವಿಗಳಿದಳಲಂ ಸೈರಿಸಲಾಱದೆ—

ಉರಿಯಂ ಪೊಕ್ಕಳಿವೆನೊ ಸಾ
ಗರದೊಳಪೊಕ್ಕಾಳ್ದು ಮಡಿವೆನೋ ಕಡಿಕಡಿದೆ
ಳ್ತರದಿಂ ದಿಗ್ಬಲಿಗುಡುವೆನೊ
ಶರೀರಮಂ ಪುಗುವೆನೋ ಪುರಾರಿಯ ಬಸುಱಂ ೩೫

ವ॥ ಎಂದು ಪಲುಂಬಿ ತನ್ನಸುವಂ ವಿಸರ್ಜಿಸಲೆಳಸಿ ಮತ್ತಮಿರದಾ ಮುಂದಗಮನೆಯ ಮಂದಿರಕ್ಕೆ ರಾಗದಿಂ ನಡೆಗೊಂಡ ಕಾಲ್ಗಳಂ ಕಡಿಕಂಡಂಗೆಯ್ದು ದೆಸೆದೆಸೆಗೀಡಾಡಲುಮಾ ಸೌಂದರಿಯ ಸೌಂದರ್ಯಮನವಲೋಕನಂಗೆಯ್ದ ನಿಜನೇತ್ರಂಗಳನುತ್ಪಾಟನಂಗೆಯ್ದುರಿಯೊಳುರುಪಲುಮಾ ಮೃದುಸ್ಮಿತಮುಖಿಯೊಡನೆ ನಕ್ಕು ನಲಿದ ನಿಜಾಸ್ಯವಿವರದಧರ ರದನಂಗಳಂ ಕೊಯ್ಗೊಯ್ದು ನುರ್ಚುನುಱಿ ಮಾಡಿ ಕಲ್ಲೊಳಿಟ್ಟರೆಯಲುಮಾ ಮಧುರಾಧರೆಯಧರರಸಮಂ ಬಯಸಿ ಪಲವಂ

ಪ್ರಾಪ್ತವಾದ ಶೈವಧರ್ಮವು ಅಳಿವನ್ನು ಹೊಂದಿತು. ೩೪. ಗುರುವಿನ ಪತ್ನಿಯಲ್ಲಿ ಆಸೆ ಮಾಡಿದ ಪಾಪಕ್ಕೆ ಆಸ್ಪದನಾದವನು ಮೋಕ್ಷಕ್ಕೆ ಸಾಧಕವಾದ ವಿದ್ಯೆಯನಾಶಕ್ಕೆ ಕಾರಣನಾಗುವನು (ಗುರುವಾದ ಬೃಹಸ್ಪತಿಯ ಪತ್ನಿಗೆ ಇಚ್ಛಿಸಿದ ಚಂದ್ರನು ಅಮೃತ ಮಯವಾದ ಕಿರಣಗಳ ನಾಶಕ್ಕೆ ಕಾರಣನಾದನು) ಇದು ನಿಶ್ಚಯ ಗುರು ಪತ್ನಿಯನ್ನು ಇಚ್ಛಿಸಿದ ನನಗೆ ಮೋಕ್ಷವು (ಅಮೃತ ಭಾವವು) ಪ್ರಾಪ್ತವಾಗುವುದೇ ? ವ॥ ಎಂದು ಈ ವಿಧದಲ್ಲಿ ನೊಂದುಕೊಂಡು ನುಡಿದು ಲೆಕ್ಕವಿಲ್ಲದ ದುಃಖವನ್ನು ಸೈರಿಸಲಾರದೆ— ೩೫. ಉರಿಯ ಜ್ವಾಲೆಯಲ್ಲಿ ಹೊಕ್ಕು ಸಾಯಲೇ? ಸಾಗರವನ್ನು ಹೊಕ್ಕು ಮುಳುಗಿ ಸಾಯಲೋ ? ಈ ಶರೀರವನ್ನು ಪೂರ್ಣವಾಗಿ ಕಡಿಕಡಿದು ದಿಕ್ಕುಗಳಿಗೆ ಬಲಿ ಕೊಡಲೋ ? ಶಿವನ ಬಸಿರನ್ನೇ ಹೊಗಲೋ ? ವ॥ ಹೀಗೆಂದು ಹಲವಾರು ಪ್ರಕಾರದಿಂದ ಹಲುಬಿ, ತನ್ನ ಪ್ರಾಣವನ್ನೇ ಬಿಡಲು ಇಚ್ಛಿಸಿ, ಪುನಃ ಇರದೆ ಈ ಮುಂದಗಮನೆಯ ಮನೆಗೆ ವಿಷಯೇಚ್ಛೆಯಿಂದ ನಡೆದು ಬಂದ ಕಾಲುಗಳನ್ನೇ ಕಡಿದು ಕಂಡಗೊಳಿಸಿ ದಿಕ್ಕು ದಿಕ್ಕಿಗೆ ಬಿಸಾಡುವುದಕ್ಕೂ, ಆ ಸೌಂದರ್ಯಶಾಲಿನಿಯ ಸೌಂದರ್ಯವನ್ನು ನೋಡಿದ ತನ್ನ ನೇತ್ರ ಗಳನ್ನೇ ಕಿತ್ತುಹಾಕಿ ಉರಿಯಲ್ಲಿ ಉರಿಸಿ ಬಿಡುವುದಕ್ಕೂ, ಆ ಮೃದುವಾಗಿ ನಕ್ಕಮುಖ ವುಳ್ಳವಳೊಡನೆ ನಕ್ಕು ನಲಿದ ನನ್ನ ಮುಖದ ಹಲ್ಲುಗಳನ್ನೇ ಕಿತ್ತು ಒಯ್ದು ಚೂರು ಚೂರು ಮಾಡಿ, ಕಲ್ಲಿಗೆ ಹಾಕಿ ಅರೆಯುವುದಕ್ಕೂ, ಆ ಮಧುರವಾದ ಅಧರವುಳ್ಳವಳ ಅಧರ ರಸವನ್ನು ಬಯಸಿ, ಅನೇಕ ಮಾತುಗಳನ್ನು ಹರಟಿದ ನಾಲಿಗೆಯನ್ನು ಕಿತ್ತು ಸೀಳಿ ಸುಡುವ ಹುಚಿಗೆ ಹಾಕಿ ಹುರಿಯಿಸುವುದಕ್ಕೂ, ಆ ಲತೆಯಂತಿರುವ ದೇಹವುಳ್ಳವಳ

ಗಳಪಿದ ರಸನೆಯುಂ ಕೀಳ್ದು[1] ಸೀಳ್ದು ಬಿಸಿ ಗಾವಲಿಯೊಳಿಕ್ಕಿ ಪುರಿಯಲುಮಾ ಲತಾಂಗಿಯಂಗಮ ನಾಲಿಂಗನಂಗೆಯ್ಯಲೆಳಸಿದ ತೋಳ್ಗಳಂ ತುಂಡಿಸಿ ಕಿಱಿಕಿಱಿದಾಗಿ ತಱಿದು ತಱಿ[2]ಗೆಂಡದೊಳಿಟ್ಟು ಚುರ್ಚಲುಮಾ ನಿಬಿಡೋತ್ತುಂಗಕುಚಯುಗಳಮನಪ್ಪಲಳ್ತಿವಟ್ಟ ವಕ್ಷಸ್ಥಳಮನಿಱಿದಿಱಿದು ಖಂಡಂ ಗಳಂ ತೆಗೆದೊರಳೊಳಿಕ್ಕಿ ಮಿದಿಯಲುಮಟವಟಿಸಿ ಸಿಡಿಮಿಡಿಗೊಂಡೀತೆಂತೆಸಗಿದಲ್ಲದೀ ದೋಷಂ ಪಱಿವಡದೆಂದು ನೆನೆದು ಮಗುಳ್ದು ಮೆಯ್ಯುಂ ಮಱೆದು ಬಳಲ್ದು ತೊಳಲ್ದು ಪಲವಂ ಪಲುಂಬು ತಲ್ಲಿಂದೆಳ್ದು ಪುರೋಪಕಂಠದುಪವನಕ್ಕೆಳ್ತಂದು ನಿಂದು ವನಾಂತರಾಳದ ತರುನಿಕರಮುಂ ಶಕುಂತ ಸಂತಾನಮುಮನಲ್ಲಲ್ಲಿ ಪರಿವರಿದಭೀಕ್ಷಿಸಿ—

ಎಲೆ ಮಾಕಂದಮೆ ಕಂದಿದೆಂ ನೆಗಳ್ದನಾಂ ಶ್ರೀಖಂಡಮೇ ಖಂಡಚಂ
ದ್ರಲಲಾಟಂಗಪರಾಧಮುಂ ಬಸುಱಿ ಕೇಳೆನ್ನೀ ಬಸುರ್ಬೆಂದುದು
ಜ್ವಲ ಶೋಕಾನಳದಿಂದೆ ಬೀರಮಳಿದೆಂ ಜಂಬೀರಮೇ ಮಲ್ಲಿಕಾ
ವಲಿ ಮಲ್ಲೀನವಿವೇಕಮಿಂಗಿದುದು ಬನ್ನಂಬೆತ್ತೆನಾಂ ಬನ್ನಿ ಕೇಳ್ ೩೬

ಕುಂದಮೆ ಮುಕುಂದವಲ್ಲಭ
ನೆಂದೊಲ್ದಪನೆನಗೆ ಪೇಳ ಪಿಚುಮಂದಮೆ ನೀ
ಮುಂದಪ್ಪಿದೆನಸುಗೆಯುಸುಗೆ
ನಿಂದುರಿವೊಂದಂದಮಾದುದೀ ದುಷ್ಕೃತದಿಂ ೩೭

ಸಂಪಗೆ ಕೇಳೆನ್ನಯ ಸಾ
ಸಂ ಪಗೆ ಪೂಗೋಲನಿಂದೆ ಮಳ್ಗಿದುದು ಕೃತಾಂ
ತಂ ಪಾಯ್ದರಿಯದ ಮುನ್ನೆ
ನ್ನಂ ಪಾದರಿ ಮದನವೈರಿಯೆಂತೊಲ್ದಪನೋ ೩೮

ಮಾದಳಮೆ ಎನಗೆ ಮಿಗೆ ಸೊ
ಮ್ಮಾದಳವೊಳಸೋದರ್ಮದಕ್ಕಟೇಗೆಯ್ದಪೆನಾಂ

ಆಲಿಂಗನ ಮಾಡುವುದಕ್ಕೆ ಬಯಸಿದ ತೋಳುಗಳನ್ನು ತುಂಡು ಮಾಡಿ, ಚಿಕ್ಕ ಚಿಕ್ಕ ಚೂರುಗಳಾಗಿ ಕತ್ತರಿಸಿ ನಿಗಿ ನಿಗಿಸುವ ಕೆಂಡದಲ್ಲಿ ಹಾಕಿ ಸುಡುವುದಕ್ಕೂ, ಆ ದಟ್ಟ ವಾಗಿಯೂ ದಪ್ಪವಾಗಿಯೂ ಇರುವ ಸ್ತನಗಳುಳ್ಳ ಪ್ರೌಢೆಯ ಮೊಲೆಗಳೆರಡನ್ನೂ ತಬ್ಬಿಕೊಳ್ಳುವುದಕ್ಕೆ ಆಸೆಪಟ್ಟ, ಎದೆಯನ್ನು ಇರಿದು ಖಂಡಗಳನ್ನು ತೆಗೆದು ಒರಳು ಕಲ್ಲಿನಲ್ಲಿ ಹಾಕಿಕುಟ್ಟುವುದಕ್ಕೂ, ಆತುರಗೊಂಡು ಸಿಡಿಮಿಡಿಗೊಂಡು ಈ ರೀತಿಯಲ್ಲಿ ಮಾಡಿದಲ್ಲದೆ ಈ ನಾನು ಮಾಡಿದ ಪಾಪವು ನಾಶವಾಗುವುದಿಲ್ಲ, ಎಂದು ಯೋಚಿಸುತ್ತ –ಪುನಃ ಮೂರ್ಛೆಗೊಂಡು ಬಳಲಿ ಅನೇಕ ಬಗೆಯಾಗಿ ಹಲುಬುತ್ತ ಅಲ್ಲಿಂದೆದ್ದು ಪಟ್ಟಣದ ಸಮೀಪದಲ್ಲಿರುವ ಉಪವನಕ್ಕೆ ಬಂದುನಿಂತು ಆ ತೋಟದಲ್ಲಿರುವ ಗಿಡಗಳ ಗುಂಪನ್ನೂ, ಪಕ್ಷಿಗಳ ಸಮುದಾಯವನ್ನೂ ಅಲ್ಲಲ್ಲಿ ಹರಿಹರಿದಾಡಿ ನೋಡುತ್ತ. ೩೬–೩೯. ಎಲೈ ಸಿಹಿ ಮಾವಿನಮರವೇ, ನಾನು ಕಾಂತಿಹೀನನಾಗಿದ್ದೇನೆ ; ಎಲೈ

1 ಳ್ತು(ಅ, ಜ) 2 ರೆ (ಮು)

ಕಾದಳಮೆಯೆನ್ನ ಮಾನಸ
ಕಾದಳಲಂ ಪಱಿವೆನೆಂದೊ ಶಿವಗಣಕೃಪೆಯಿಂ ೩೯

ಕುರವಕಮೆಯೆನ್ನ ಪುಣ್ಯಾಂ
ಕುರವಕಟ ಮುರುಂಟಿದತ್ತು ಶಿವ ಶಿವ ಘನಕಾ
ಮರುಗಮಿತ ಬಾಧೆಯಿಂದಂ
ಮರುಗಮೆ ಮರುಳಾಗಿ ಪೊಲ್ಲದೆಸಗಿದೆನಲ್ತೇ ೪೦

ಆಮಳಕಮೆ ಮುದ್ಗುರು ವಿತ
ತಾಮಳ ಕರುಣಾಕಟಾಕ್ಷಮೆಂದಪ್ಪುದೊ ಪೇಳ್
ಶ್ರೀಮುಕ್ತಕ ಗುರುಭಕ್ತಿ
ಶ್ರೀಮುಕ್ತಕನಾಗಿ ಕೆಟ್ಟೆನಕಟಕಟೀಗಳ್ ೪೧

ಶ್ರೀಗಂಧವೇ ಚಂದ್ರನ ಒಂದು ಖಂಡವನ್ನು ಧರಿಸಿದ ಶಿವನಿಗೆ ಅಪರಾಧವನ್ನು ಮಾಡಿದ್ದೇನೆ. ಬಸರಿಯ ಮರವೇ ನನ್ನ ಈ ದೇಹವು (ಬಸಿರ್), ಉಜ್ವಲವಾದ ಶೋಕವೆಂಬ ಬೆಂಕಿಯಿಂದ ಬೆಂದುಹೋಗಿದೆ ; ಎಲೈ ನಿಂಬೆಯ ಮರವೇ, ಶೌರ್ಯಹೀನ ನಾದೆನು ; ಮಲ್ಲಿಗೆ ಬಳ್ಳಿಯ ಸಮೂಹವೇ ನನ್ನಲ್ಲಡಗಿದ ವಿವೇಕವುನಾಶವಾಯಿತು ; ಎಲೈ ಬನ್ನಿಯಮರವೇ ನಾನು ಕಷ್ಟವನ್ನು ಹೊಂದಿದೆನು. ಎಲೈ ಮೊಲ್ಲೆಯೆ (ಕುಂದವೇ). ನನಗೆ ಮುಕುಂದನ ಪತಿಯೆನಿಸಿದ ಶಿವನು ಎಂದು ಒಲಿಯುವನು? ಹೇಳ ಬಾರದೇ! ನಿಂಬೆಯ ಮರವೇ, ನಿಯಮವನ್ನು ಅತಿಕ್ರಮಿಸಿದನು; ಅಶೋಕ ವೃಕ್ಷವೇ, ನಾನು ಮಾಡಿದ ಈ ಪಾಪದಿಂದ ನನ್ನ ಪ್ರಾಣಕ್ಕೆ ಉರಿಯಲ್ಲಿ ನಿಂತು ಸುಟ್ಟು ಹೋಗು ತ್ತಿರುವ ಒಂದು ರೀತಿಯುಂಟಾಯಿತು. ಎಲೈ ಸಂಪಿಗೆಯೇ, ಕೇಳು ನನ್ನ ಸಾಹಸವು ಶತ್ರುವಾದ ಮನ್ಮಥನಿಂದ ನಾಶವಾಯಿತು. ಪಾದರಿಯಮರವೇ, ಯಮನು ನನ್ನ ಮೇಲೆ ಬಿದ್ದು ಕತ್ತರಿಸಿದ ಮೊದಲು ಮನ್ಮಥ ವೈರಿಯಾದ ಶಿವನು ಹೇಗೆ ಒಲಿದಾನು ? ಎಲೈ ಮಾದಾಳಗಿಡವೇ, ನನಗೆ ವಿಶೇಷವಾಗಿ ಉಂಟಾಗಿದ್ದ ಶೌರ್ಯವು ನಾಶವಾಯಿತು, ಅಕ್ಕಟಾ ! ಏನು ಮಾಡಲಿ ! ಎಲೈ ಬಾಳೆಯಮರವೇ, ನನ್ನ ಮನಸ್ಸಿಗಾದ ಅಳಲನ್ನು ಶಿವಗಣಗಳ ಕೃಪೆಯಿಂದ ಎಂದು ಹರಿದುಹಾಕುವೆನೋ ? ೪೦-೪೧. ಎಲೈ ಕುರವಕ ಮರವೇ (ಗೋರಂಟಿಯೇ), ನನ್ನ ಪುಣ್ಯದ ಮೊಳಕೆಯೇ ಮುರಿದುಹೋಯಿತು. ಅಕ್ಕಟ ! ಶಿವ ಶಿವ !! ಮರುಗವೇ, ವಿಶೇಷವಾದ ವಿಷಯ ಸುಖದ ಇಚ್ಛೆಯೆಂಬ ರೋಗದಿಂದುಂಟಾದ ಅಮಿತವಾದ ಬಾಧೆಯಿಂದ ಹುಚ್ಚನಾಗಿ ಮಾಡಬಾರದುದನ್ನು ಮಾಡಿದೆನಲ್ಲವೇ ? ನೆಲ್ಲಿಯ ಮರವೇ, ನನ್ನ ಗುರುವಿನ ವಿಸ್ತಾರವಾದ ನಿರ್ಮಳ ಕರುಣಾ ಕಟಾಕ್ಷದ ನೋಟವು ಎಂದು ಉಂಟಾಗುವುದೋ ? ಹೇಳು. ಎಲೈ ಶ್ರೀ ಮುತ್ತುಗದ ಮರವೇ, ಈಗ (ನಾನು) ಗುರುಭಕ್ತಿಯಿಂದ ಬಿಡಲ್ಪಟ್ಟವನೆನಿಸಿ

ಇರವಂತಿಯೆನ್ನ ಬೆಳ್ಪಿನ
ದಿರವಂತಿಂತೆಂಬೊಡಸದಳಂ ಗಡ ಜಗದೊ
ಳ್ಕರವೀರಮೆ ಘನಕರುಣಾ
ಕರವೀರಪ್ರಮಥರೊಲ್ಮೆಯೆನಗೆಂತಕ್ಕುಂ ೪೨

ವರನಾರಿಕೇಳ ಕೇಳ್ಗುರು
ವರನಾರೀಕೇಳಿಗೊಲ್ದ ದುರಿತಾತ್ಮಕನಾಂ
ಸರಳತರು ಪೇಳ್ವುದೆನಗೆಲೆ
ಸರಳತರಂ ಭಕ್ತಿವೃತ್ತಿಯೆಂದಾದಪುದೋ ೪೩

ಜಾತಿಯೆ ಮಾಸಿದುದಿಂದು ನಿ
ಜಾತಿಶಯಂ ಗುರುವಧೂಟಿಗಳುಪಿದ ಕತದಿಂ
ಕೇತಕಿ ಸತ್ಕೃತ್ಯದ ಸಂ
ಕೇತಕಿದರಿಯಾದುದೆನ್ನ ಮಾರವಿಕಾರಂ ೪೪

ಬಕ ಪಾದಪಮೆ ಲಲಾಟಾಂ
ಬಕಪಾದಪಯೋಜದೊಲ್ಮೆಯೆನಗೆಂತಕ್ಕುಂ
ವಕುಳಮೆ ಪಳಿಯದೆ ಪೇಳ್ಕೆ
ವಕುಳಮೆ ಗುರುತಲ್ಪಗಮನಿಯೆಂದಿರದೆನ್ನಂ ೪೫

ಪಲಸೆ ಗುರುಪಾದುಕೆಯನಾಂ
ಪ ಲಸನ್ಮಸ್ತಕದೆ ಪಾಪಭಾರವನಾಂತೆಂ
ತಿಲಕಮಹೀಜಮೆ ಪೇಳ್ ಯಮಿ
ತಿಲಕಮುದಾರ್ಯಾಂಘ್ರಿಸೇವೆಗೆಂತಳವಡುಮೆ ೪೬

ಕೆಟ್ಟಿದ್ದೇನೆ. ಅಕ್ಕಟಕ್ಕಟಾ ! ೪೨–೪೬. ಎಲೈ ಇರವಂತಿಗೆಯೇ, ನನ್ನ ಮೂರ್ಖ ತನದ ರೀತಿಯನ್ನು ಇಷ್ಟಿಷ್ಟೆಂದು ಹೇಳಲು ಅಸಾಧ್ಯವೆನಿಸಿದೆಯಲ್ಲವೇ ! ಎಲೈ ಕಣಗಿಲವೇ, ಘನಕರುಣೆಯಿಂದ ಕೂಡಿದ ಶರಣರ ಪ್ರೀತಿಯು ನನಗೆ ಹೇಗಾಗುವುದು ? ಶ್ರೇಷ್ಠ ನಾರಿಕೇಳ ವೃಕ್ಷವೇ, ನನ್ನ ಗುರುವಿನ ಶ್ರೇಷ್ಠನಾರಿಯಲ್ಲಿ ಮದನ ಕೇಳಿಗೆ ಮನಸ್ಸು ಮಾಡಿದ ಪಾಪಾತ್ಮನು ನಾನು. ಎಲೈ ಸರಳ ವೃಕ್ಷವೇ (ದೇವದಾರು ವೃಕ್ಷವೇ), ನನಗೆ ಸರಳತರವಾದ ಭಕ್ತಿಯ ನಡೆಯು ಎಂದುಂಟಾಗುವುದೋ ಹೇಳಬೇಕು. ಎಲೈ ಜಾಜಿಯೇ, ಇಂದು ಗುರುಪತ್ನಿಗೆ ದುರಾಸೆಗೊಂಡ ಕಾರಣದಿಂದ ನನ್ನ ಅತಿಶಯವು ಮಾಸಿಹೋಯಿತು. ಕೇದಗಿಯೇ, ಈ ನನ್ನ ಮದನ ವಿಕಾರವು ಪುಣ್ಯ ಕಾರ್ಯದ ಸಂಕೇತಕ್ಕೆ ವೈರಿಯಾಯಿತು. ಬಕ ವೃಕ್ಷವೇ, ನನಗೆ ಹಣೆಯಲ್ಲಿ ಕಣ್ಣುಳ್ಳವನ ಪಾದಕಮಲದ ಒಲುಮೆ ಹೇಗಾಗುವುದು ? ಬಕುಳವೇ, ಶಿವ ಭಕ್ತರ ಸಮೂಹವು ನನ್ನನ್ನು ತಪ್ಪದೆ ಗುರುಪತ್ನಿಯ ಹಾಸಗೆಯನ್ನು ಮೆಟ್ಟಿದವನೆಂದು ದೂಷಿಸುವುದಿಲ್ಲವೇ ? ಹೇಳು. ಎಲೈ ಹಲಸಿನಮರವೇ, ಗುರುವಿನ ಪಾದರಕ್ಷೆಯನ್ನು

ಪೂಗಣೆಯಂನೆಲೆಗೆವಂದಲೆ
ಪೂಗಮೆ ಸಚ್ಚರಿತಪೂಗಬಾಹಿರನಾದಂ
ನಾಗಲತೆ ಗುರುಕರುಣಮಿ
ನ್ನಾಗಲದೆಂತೆಸಪೆನುಸುರುಪಾಯಮನೀಗಳ್ ೪೭

ಪುನ್ನಾಗಮೆ ಪಜಿಪಟ್ಟುದು
ಪುನ್ನಾಗಸ್ತುತ್ಯಮೆನಿಪ ಮನ್ಮಹಿಮೆ ವಲಂ
ಚನ್ನಂಗಿಯೆ ಪೇಳ್ ತನ್ನ
ಚನ್ನಂಗಿತ್ತಭವನೆಂತು ಕೃಪೆಗೆಯ್ದಪನೋ ೪೮

ತಾಳತಮಾಲಮೆ ಘನಹಿಂ
ತಾಳ ತರುಪ್ರಕರಮೇ ಮನೋಗದಮನಿದಂ
ತಾಳಲ್ಕಾಜಿಂ ತತದುರಿ
ತಾಳಂಬನನಾದೆನೆಂದು ಬಿಸುಸುಯ್ವುತ್ತುಂ ೪೯

ಗಿಳಿಯೆ ಧರೆಗಿಳಿದೆನಕ್ಕಟ
ಕಳಕಂಠಮೆ ಕಳವಳಕ್ಕೆ ಪಕ್ಕಾದೆಂ ಕೇ
ಳಳಿಯೆ ಮುದಮಳಿದೆನಿಂದು
ಜ್ವಳಶಿಖಿ ಶಿಖಿನಯನನೊಲ್ಮೆಗಾನೆರ[1]ವಾದೆಂ ೫೦

ಕಳಹಂಸ ಕಳಿದುದೆನ್ನಯ
ತಿಳಿವೆಲೆ ತಿಳಿಗೊಳಮೆ ನಳಿನಮೇ ನಲವಳಿದೆಂ

ಧರಿಸುವ ಪ್ರಕಾಶಿಸುವ ಶಿರಸ್ಸಿನಲ್ಲಿ ಪಾಪದ ಹೊರೆಯನ್ನು ಹೊತ್ತೆನು. ಎಲೈ ತಿಲಕ ವೃಕ್ಷವೇ, ಯತಿಶ್ರೇಷ್ಠನಾದ ನನ್ನ ಗುರುವಿನ ಪಾದಸೇವೆಯನ್ನು ಮಾಡುವುದಕ್ಕೆ ಹೇಗೆ ಯೋಗ್ಯನಾಗುವೆನು ? ಹೇಳು. ಎಲೈ ಅಡಕೆಯ ಮರವೇ. ಮನ್ಮಥನ ಬಾಧೆಗೆ ಕಾರಣನಾಗಿ ಒಳ್ಳೆಯ ಚರಿತ್ರೆಯುಳ್ಳವರ ಸಮೂಹಕ್ಕೆ ಹೊರಗಾದವನಾಗಿದ್ದೇನೆ. ಎಲೈ ಎಲೆಯ ಬಳ್ಳಿಯೇ, ಇನ್ನು ಗುರುಕರುಣವುಂಟಾಗುವುದಕ್ಕೆ ಏನು ಮಾಡಲಿ ? ಈಗ ಉಪಾಯವನ್ನು ಹೇಳು. ಎಲೈ ಪುನ್ನಾಗವೇ (ಸುರ ಹೊನ್ನೆಯೇ), ಪುರುಷ ಶ್ರೇಷ್ಠರಿಂದ ಹೊಗಳಿಸಿಕೊಳ್ಳಲು ಯೋಗ್ಯವಾದದ್ದೆನಿಸುವ ನನ್ನ ಮಹಿಮೆಯು ನಿಶ್ಚಯವಾಗಿಯೂ ನಾಶವಾಯಿತು. ಎಲೈ ಚೆನ್ನಂಗಿಯ ಗಿಡವೇ, ಮಾದಾರ ಚೆನ್ನಯ್ಯನಿಗೆ ತನ್ನನ್ನೇ ಅರ್ಪಿಸಿದ ಶಿವನ ಕೃಪೆಯು ನನಗೆ ಹೇಗಾಗುವುದು ? ಹೇಳು. ಕಾಲವೃಕ್ಷವೇ, ಹೊಂಗೆಯ ಮರವೇ, ಶ್ರೇಷ್ಠ ಹಿಂತಾಳ ಗಿಡಗಳ ಸಮೂಹವೇ, ಈ ನನ್ನ ಮನೋರೋಗವನ್ನು ತಡೆಯುವುದಕ್ಕೆ ಸಮರ್ಥನಾಗಲಾರೆನು. ವಿಸ್ತಾರವಾದ ದುಷ್ಕೃತ್ಯಕ್ಕೆ ಆಶ್ರಯ (ಆಳಂಬನ)ನಾದೆನು–ಎಂದು ಬಿಸಿಯುಸಿರು ಬಿಡುತ್ತ. (ಇದ್ದನು). ೫೦–೫೧. ಎಲೈ ಗಿಳಿಯೇ, ನಾನು ಭೂಮಿಗೆ ಇಳಿಯುವೆನು, ಅಕ್ಕಟಾ !

1 ಅ(ದ)

ತಳವುಳಗುಗೊಳುತೆ ಲಲಿತೋ
ತ್ಪಳಕುಳಮೆ ಬಳಲ್ದೆನಳವಿಗಳಿದಳಲಿಂದಂ ೫೧

ವ॥ ಎಂದವುಂದಶೋಕೋದ್ರೇಕಂ ಮಿಗೆ ಪಲವಾಡಿ ಪಲುಂಬಿ ಪಳಯಿಸಿ—

ಬನದೊಳಿ ತತ್ತನೂದರಿಯ ಪೆರ್ಮೊಲೆಯೆಂದು ರಥಾಂಗಮಂ ದಳ
ದ್ವನಜಮನಾಸ್ಯಮೆಂದು ತಳಿರಂ ಕರಮೆಂದು ಲತಾಂಗಮೆಂದು ಚಂ
ದನತರುಶಾಖೆಯಂ ಚಿಕುರಮೆಂದಳಿಮಾಲೆಯನಲ್ಲಿ ನೋಡಲುಂ
ನೆನೆಯಲುಮಳ್ಕಿ ಬಳ್ಕಿ ಮಗುಳ್ದೆಯ್ದಿದನಾ ಪುರದತ್ತ ಧಾತ್ರಿಪಂ ೫೨

ವ॥ ಅಂತೇಳ್ತಂದೊಂದು ಶಿವನಿಳಯಮಿದಿರೊಳಿರೆ ಕಂಡಲ್ಲಿಗೆಯ್ದೆವಂದು—

ಸಾಲದೆ ಸಾಲಮೇಯಿನಿತವಸ್ಥೆ ಕನತ್ಕಲಶಪ್ರಬದ್ಧಲಿಂ
ಗಾಲಯದಗ್ರಗೋಪುರಮೆ ಪಾಪವಿಲೋಪಕೆ ಬುದ್ಧಿವೇಳ್ ಮಹಾ
ಕಾಲಗಣೇಶಕಾಲಭಯಮಂ ಪಜಿ ಮುಂದಣ ನಂದಿ ನಂದಿಸೆ
ನ್ನೀ ಲಯಕಾರಿತಾಪಶಿಖಿಯಂ ಶಿಖಿವಾಹನ ಪಾಲಿಸಳ್ಕಜಿಂ ೫೩

ಎಲೆ ವೀರಭದ್ರ ಭದ್ರಮ
ನಲಸದೆ ನೀಂ ಮಾಡು ದೇವಿ ದೇವೇಶನ ನಿ

ಕೋಗಿಲೆಯೇ, ಕಳವಳದಿಂದ ಕೂಡಿದೆನು. ಎಲೈ ಭ್ರಮರವೇ, ಕೇಳು, (ನಾನು) ಸಂತೋಷಹೀನನಾದೆನು. ಇಂದು ನಾನು ಪ್ರಕಾಶಿಸುವ ಜ್ವಾಲೆಯುಳ್ಳ ಅಗ್ನಿ ನೇತ್ರನಾದ ಶಿವನ ಒಲುಮೆಯಿಂದ ಅಗಲಿದವನಾದೆನು. ಎಲೈ ಕಳಹಂಸಪಕ್ಷಿಯೇ, ತಿಳಿನೀರಿನ ಸರೋವರವೇ, ನನ್ನ ಜ್ಞಾನವೇ ನಷ್ಟವಾಗಿ ಹೋಯಿತು. ಕಮಲವೇ ತಳಮಳ ಗೊಳ್ಳುತ್ತ ಸಂತೋಷವನ್ನು ಅಳಿದುಕೊಂಡೆನು. ಮನೋಹರ ನೈದಿಲೆಗಳ ಸಮೂಹವೇ, ಲೆಕ್ಕವಿಲ್ಲದ ದುಃಖದಿಂದ ಬಳಲಿದೆನು. ವ॥ ಹೀಗೆಂದು ಅತ್ಯಧಿಕವಾದ ಶೋಕದ ಉದ್ರೇಕದಿಂದ ವಿಶೇಷ ರೀತಿಯಿಂದ ಅನೇಕ ಪ್ರಕಾರದ ಮಾತುಗಳನ್ನಾಡುತ್ತ ಹಲುಬುತ್ತ, ಪ್ರಲಾಪಿಸಿ—೫೨. ಆ ಗುರುಭಕ್ತ ರಾಜನು ಆ ವನದಲ್ಲಿ ಚಕ್ರವಾಕ ಪಕ್ಷಿಯನ್ನು ಆ ಕೃಶೋದರವುಳ್ಳ ಪ್ರೌಢಮತಿಯ ದಪ್ಪನೆಯ ಮೊಲೆಯೆಂದೂ, ಅರಳು ತ್ತಿರುವ ಕಮಲವನ್ನು ಮುಖವೆಂದೂ, ಚಿಗುರನ್ನು ಕೈಯೆಂದೂ, ಶ್ರೀಗಂಧದ ಮರದ ಕೊಂಬೆಯನ್ನು ಬಳ್ಳಿಯಂತಿರುವ ದೇಹವೆಂದೂ, ಭ್ರಮರಗಳ ಸಮೂಹವನ್ನು ಕೇಶ ಗಳೆಂದೂ, ಅಲ್ಲಿ ನೋಡುವುದಕ್ಕೂ ನೆನೆಯುವುದಕ್ಕೂ ಹೆದರಿದವನಾಗಿ, ನಡುಗುತ್ತ ಪುನಃ ಪಟ್ಟಣದ ಕಡೆಗೆ ಹೋದನು. ವ॥ ಆ ರೀತಿ ಪಟ್ಟಣಕ್ಕೆ ಬಂದು, ಎದುರಿ ನಲ್ಲಿಯೇ ಶಿವಾಲಯವಿರಲು ಅದನ್ನು ಕಂಡು, ಅಲ್ಲಿಗೆ ಹೊರಟು ಬಂದು—೫೩–೫೪. ಎಲೈ ಪ್ರಾಕಾರವೇ (ನನಗಾಗಿರುವ) ಈ ಅವಸ್ಥೆ ಸಾಲದೇ? ಹೇ ಹೊಳೆಯುತ್ತಿರುವ ಚಿನ್ನದ ಕಲಶಗಳಿಂದ ಕೂಡಿರುವ ಶಿವಾಲಯದ ಮೇಲಿರುವ ಗೋಪುರವೇ, ನನ್ನ ಈ ಪಾಪದ ನಾಶಕ್ಕೆ ಬುದ್ಧಿಯನ್ನು ಹೇಳಿಕೊಡು; ಹೇ ಮಹಾಕಾಲ ಗಣೇಶನೇ, ಯಮನ

ಶ್ಚಲಭಕ್ತಿಗುಡು ದೃಢವ್ರತ
ದೊಲವಂ ಪ್ರಮಥರ್ಕಳಿತ್ತು ಪಾಲಿಪುದೆನ್ನಂ ೫೪

ಪೂತ ಪುರಾತನಗಣ ವಿ
ಖ್ಯಾತಾಸಂಖ್ಯಾತ ಭಕ್ತಗಣ ರುದ್ರಗಣ
ವ್ರಾತಮೆ ಕೃಪೆಯಿಂ ಮತ್ಕೃತ
ಪಾತಕವಳಿವಂದವಂ ನಿರೂಪಿಪುದೀಗಳ್ ೫೫

ಪಲವಂದದಿನೀ ತೆಱದಿಂ
ಪಲುಂಬಿ ಫಲವೇಂ ಮಹೇಶ್ವರಾ ಶಂಕರ ನಿ
ಶ್ಚಲತೆ ಮಿಗೆ ಮತ್ತನುವನಿದ
ನಲಸದಣಂ ಬಿಟ್ಟು ಶುದ್ಧನಪ್ಪೆನಮೋಘಂ ೫೬

ವ॥ ಎಂದು ದೃಢಪ್ರತಿಜ್ಞನಾಗಿ ತನ್ನಂ ಪರಿಚ್ಛೇದಿಸಲ್ ಸನ್ನದ್ಧನಾಗಿ—

ಎರಡುಂ ಕಣ್ಗಳನಾರ್ದು
ಬ್ಬರಿಸುತ್ತುಂ ಮೀಂಟಿ ಕಳೆದು ಕರವಾಳಿಂದಂ
ಕೊರಲನರಿವೆಡೆಯೊಳಱಸುತೆ
ಪರಿತಂದವನಗ್ರಜಾತಭಕ್ತಂ ಕಂಡಂ ೫೭

ದೆಸೆಯಿಂದಾದ ಭೀತಿಯನ್ನು ಹೋಗಲಾಡಿಸು ; ಹೇ ಮುಂಭಾಗದಲ್ಲಿರುವ ನಂದೀಶನೇ, ನನ್ನ ಈ ನಾಶಕಾರಕವಾದ ಆಧ್ಯಾತ್ಮಿಕ, ಆದಿಭೌತಿಕ, ಆಧಿದೈವಿಕವೇ ಮೊದಲಾದ ತಾಪಗಳೆಂಬ ಬೆಂಕಿಯನ್ನು ಆರಿಸು ; ನವಿಲೇ ವಾಹನವಾಗಿ ಉಳ್ಳ ಷಣ್ಮುಖನೇ, ನನ್ನನ್ನು ಪ್ರೀತಿಯಿಂದ ರಕ್ಷಿಸು ; ಎಲೈವೀರಭದ್ರನೇ, ನೀನು ತಡಮಾಡದೆ, ಮಂಗಳ ವನ್ನುಂಟುಮಾಡು ; ದೇವಿಯೇ (ಪಾರ್ವತಿಯೇ), ದೇವೇಶ್ವರನಾದ ಶಿವನಲ್ಲಿ ನಿಶ್ಚಲ ವಾದ ಭಕ್ತಿಯನ್ನು ಕೊಡು ; ಪ್ರಮಥರುಗಳೇ, (ನನಗೆ) ದೃಢವ್ರತದ ಪ್ರೀತಿಯನ್ನು ಇತ್ತು ರಕ್ಷಿಸಿ. ೫೫. ಪವಿತ್ರವಾದ ಪುರಾತನ ಶಿವಗಣಗಳೇ, ಪ್ರಖ್ಯಾತರಾದ ಅಸಂಖ್ಯಾತರಾದ ಭಕ್ತಸಮೂಹವೇ, ರುದ್ರಗಣಗಳ ಸಮೂಹವೇ, ಕೃಪೆದೋರಿ ಈಗ ನನ್ನಿಂದಾದ ಪಾಪವು ನಾಶವಾಗುವ ರೀತಿಯನ್ನು ಆಜ್ಞಾಪಿಸಬೇಕು. ೫೬. ಮಹೇಶ್ವರನೇ ಶಂಕರನೇ ! ಈ ರೀತಿಯಿಂದ ಅನೇಕ ಪ್ರಕಾರವಾಗಿ ಹಲುಬಿ ಫಲ ವೇನು ? ವಿಶೇಷವಾದ ನಿಶ್ಚಂಚಲ ಮನಸ್ಸಿನಿಂದ ತಡಮಾಡದೆ ಈ ನನ್ನ ದೇಹವನ್ನು ಬಿಟ್ಟು ಅಮೋಘವಾದ ಶುದ್ಧಿಯನ್ನು ಪಡೆಯುತ್ತೇನೆ. ವ॥ ಹೀಗೆಂದು ದೃಢಪ್ರತಿಜ್ಞೆ ಯನ್ನುಮಾಡಿ, ತನ್ನನ್ನು ಕತ್ತರಿಸಿಕೊಳ್ಳುವುದಕ್ಕೆ ಸಿದ್ಧನಾಗಿ—೫೭. ಗಟ್ಟಿಯಾಗಿ ಕೂಗಿ ಕೊಂಡು ತನ್ನ ಎರಡೂ ಕಣ್ಣುಗಳನ್ನು ಉತ್ಸಾಹಗೊಂಡು ಖಡ್ಗದಿಂದ ಮೀಟಿ ಕಿತ್ತು, ಕೊರಳನ್ನು ಕತ್ತರಿಸಿಕೊಳ್ಳುವ ಸಮಯದಲ್ಲಿ ಅವನ ಅಣ್ಣನಾದ ಭಕ್ತನು (ಇವನನ್ನು)

ವರಗುಣನಿಧಿ ಗುರುವರಕರ
ಸರಸಿಜಸಂಜಾತನಮಳಚರಿತಂ ಮಹಿಮಾ
ಕರನೀಶಭಕ್ತನವನಾ
ದರದಿಂ ಬಳಿವಂದು ನೋಡಿ ವಿಸ್ಮಯಮುತ್ತಂ ೫೮

ಎಲೆ ಗುರುಭಕ್ತರಾಜ ಗುರುಭಕ್ತಿವಿಲಾಸವಿನೀತಸಾರ ನಿ
ಶ್ಚಲಗುರುಭಕ್ತಿವಾರಿಧಿಸುಧಾಕರ ಸದ್ಗುರುಭಕ್ತಿದಿವ್ಯಮಂ
ಜುಲಮಣಿರೋಹಣಾಚಲ ಮಹಾಗುರುಭಕ್ತಿಸುಧಾಮರಾಳ ನಿ
ರ್ಮಲಗುರುಭಕ್ತಿಭೂಷಣ ಲಸದ್ಗುರುಭಕ್ತಿಸರೋಜಭಾಸ್ಕರಾ ೫೯

ನಿನ್ನ ಮತಿ ನಿನ್ನ ನಿಷ್ಠೆ ಸ
ಮುನ್ನತಮೆನಿಸಿರ್ದ ನಿನ್ನ ಗುರುಭಕ್ತಿ ಸುಖಾ
ಸನ್ನತೆ ಸಮಸ್ತ ಶಿವಗಣ
ಹೃನ್ನಳಿನಕ್ಕರರೆ ನೆಗಳ್ದುದತಿಶಯ ಮುದಮಂ ೬೦

ಅಪರಾಧಮಿಲ್ಲ ನಿನ್ನೊಳ್
ಸುಪವಿತ್ರಚರಿತ್ರ ಬಿಡು ಬಿಡೀ ಕಜ್ಜಮನೆಂ
ದುಪಚರಿಸಿ ನಿಲಿಸೆ ತನ್ನಂ
ಘ್ರುಪಯೋರುಹಕೆಜಗಿ ಮಱುಗುವನುಜನನಾಗಳ್ ೬೧

ತೆಗೆದು ಬಿಗಿಯಪ್ಪಿ ಲೋಚನ
ಯುಗದರುಣೋದಕವಿಮಿಶ್ರ ಬಾಷ್ಪಮನೊರಸು

ಹುಡುಕುತ್ತ ಅಲ್ಲಿಗೆ ಬಂದು ಕಂಡನು. ೫೮. ಶ್ರೇಷ್ಠ ಗುಣಗಳ ನಿಧಿಯೂ, ಗುರುಶ್ರೇಷ್ಠನ ಹಸ್ತಕಮಲದಿಂದ ಹುಟ್ಟಿದವನೂ, ಪರಿಶುದ್ಧ ಚರಿತ್ರೆಯುಳ್ಳವನೂ, ಮಹಿಮೆಗಳಿಗೆ ಆಗರನೂ ಆದ ಆ ಈಶಭಕ್ತನು ಆದರದಿಂದ ಹತ್ತಿರಕ್ಕೆ ಬಂದು, ನೋಡಿ, ಆಶ್ಚರ್ಯಗೊಂಡನು. ೫೯–೬೦. ಗುರುಭಕ್ತಿಯೇ ಲೀಲೆಯಾಗಿ ಉಳ್ಳ, ಸಾರವತ್ತಾದ ವಿನಯಭಾವವುಳ್ಳ, ಶಾಶ್ವತವಾದ (ನಿಶ್ಚಲವಾದ) ಗುರುಭಕ್ತಿಯೆಂಬ ಸಮುದ್ರಕ್ಕೆ ಚಂದ್ರನೋಪಾದಿಯಲ್ಲುಳ್ಳ, ಶ್ರೇಷ್ಠವಾದ ಗುರುಭಕ್ತಿಯೆಂಬ ಮನೋಹರ ರತ್ನಗಳಿಗೆ ರೋಹಣಪರ್ವತಪ್ರಾಯನಾದ, ಮಹತ್ತರವಾದ ಗುರುಭಕ್ತಿಯೆಂಬ ಹಾಲಿಗೆ ಹಂಸಪಕ್ಷಿಯಂತಿರುವ, ನಿಷ್ಕಳಂಕವಾದ ಗುರುಭಕ್ತಿಯೇ ಆಭರಣವಾಗಿಉಳ್ಳ, ಪ್ರಕಾಶಿಸುವ ಗುರುಭಕ್ತಿಯೆಂಬ ಕಮಲಕ್ಕೆ ಸೂರ್ಯನೋಪಾದಿಯಲ್ಲಿರುವ ಎಲೈ ಗುರುಭಕ್ತರಾಜನೇ, ನಿನ್ನ ಬುದ್ಧಿ, ನಿನ್ನ ನಿಷ್ಠೆ, ಶ್ರೇಷ್ಠವೆನಿಸಿರುವ ನಿನ್ನ ಗುರುಭಕ್ತಿಯಿಂದುಂಟಾದ ಸುಖದ ಸಾಮೀಪ್ಯ, ಇವು–ಸಮಸ್ತ ಶಿವಗಣಗಳ ಹೃದಯಕಮಲಕ್ಕೆ ಅತ್ಯಂತ ಆನಂದವನ್ನುಂಟುಮಾಡಿದವು. ೬೧–೬೨. ಹೇ ಒಳ್ಳೆಯ ಪವಿತ್ರವಾದ ಚರಿತ್ರೆಯುಳ್ಳವನೇ, ನಿನ್ನಲ್ಲಿ ಅಪರಾಧವಿಲ್ಲ ; ಈ ನಿನ್ನ (ಸಾಹಸದ) ಕಾರ್ಯವನ್ನು ಬಿಟ್ಟುಬಿಡು' ಎಂದು ಉಪಚಾರಮಾಡಿ (ಪ್ರಾಣಹರಣಮಾಡಿಕೊಳ್ಳುವ ಅವನ ಕಾರ್ಯ

ತ್ತಗಲದೆ ಕರಪಲ್ಲವದಿಂ
ಸುಗುಣಾಂಕಂ ಗುರುಃಪದಾಬ್ಜಮಂ ಜಾನಿಸಿದಂ ೬೨

ಅನಿತಱೊಳುಣ್ಮಿದತ್ತು ನಯನದ್ವಯಮಾಯತಮಾಗಿ ದೇಶಿಕೇಂ
ದ್ರನಕರುಣಾಕಟಾಕ್ಷಬಲದಿಂ ಪರಿದದ್ಭುತಮಾಳ್ದು ಭಕ್ತರೊ
ಲ್ದನುನಯದಿಂ ದುಘೇಯೆನುತೆ ಕೀರ್ತಿಸೆ ಸಂಭ್ರಮದಿಂ ನಿಜಾಲಯ
ಕ್ಕನುಪಮನೆಯ್ದುತಗ್ರಜಯುತಂ ಸುಖದಿಂ ಗುರುಭಕ್ತನೊಪ್ಪಿದಂ ೬೩

ಗುರುಭಕ್ತಕ್ಷ್ಮಾವಧೂವಲ್ಲಭನ ಕಥೆಯನಿಂತೊಲ್ದು ಪೇಳ್ದಾ ಮಹಾಭ
ಕ್ತರ ಚೇತಃಪ್ರೀತಿಯಂ ತಾಂ ಸಲಿಸುತೆಱಗುತಿಂತಪ್ಪರಿನ್ನುಂ ಗುರು ಶ್ರೀ
ಚರಣಾಂಭೋಜಾತಭಕ್ತರ್ಕೆಲರೊಳರೆನುತುಂ ಬಿನ್ನಪಂಗೆಯ್ವುತುಂ ಸಾ
ದರವೊಪ್ಪುತ್ತಿರ್ದನೀಶಾರ್ಪಿತಮತಿ ಶಿವಸಿದ್ಧಾಂತದುಗ್ಧಾಬ್ಧಿಚಂದ್ರಂ ೬೪

ಶತದಳದಳನೇತ್ರೇ ಶಂಕರಸ್ನೇಹಪಾತ್ರೇ
ದಿತಿಸುತರಣಭೀಮೇ ದಿವ್ಯತೇಜೋಭಿರಾಮೇ

ವನ್ನು) ನಿಲ್ಲಿಸಿ, ತನ್ನ ಪಾದಕಮಲಗಳಿಗೆ ನಮಸ್ಕರಿಸಿ ಮರುಗುತ್ತಿರುವ ತಮ್ಮನನ್ನು ಆಗ–ಆ ಸದ್ಗುಣಶಾಲಿಯಾದ ಗುರುಭಕ್ತ ರಾಜನು ಬರಸೆಳೆದು ಗಟ್ಟಿಯಾಗಿ ಅಪ್ಪಿಕೊಂಡು ಎರಡೂ ಕಣ್ಣುಗಳ ರಕ್ತದಿಂದ ಮಿಶ್ರವಾದ ಬಾಷ್ಪಗಳನ್ನು ತನ್ನ ಚಿಗುರಿನಂತಿರುವ ಕೈಗಳಿಂದ ತಪ್ಪದೆ ಒರೆಸುತ್ತ ಗುರುಪಾದ ಕಮಲವನ್ನು ಧ್ಯಾನಿಸಿದನು. ೬೨, ಅಷ್ಟರಲ್ಲಿ ಗುರುಶ್ರೇಷ್ಠನ ಕರುಣಾಕಟಾಕ್ಷದ ಬಲದಿಂದ (ಹೋದ) ಎರಡೂ ಕಣ್ಣುಗಳೂ, ದೀರ್ಘವಾಗಿ ಹುಟ್ಟಿದವು. ಭಕ್ತರುಗಳು ವಿಶೇಷವಾದ ಅದ್ಭುತವನ್ನು ಹೊಂದಿ, ಒಲಿದು ಪ್ರೀತಿಯಿಂದ ಉಘೇ ! ಎಂದು ಕೀರ್ತಿಸಿದರು. ಆ ಸದೃಶನಾದ ಗುರುಭಕ್ತನ ಅಣ್ಣನೊಡನೆಕೂಡಿ, ತಮ್ಮ ಮನೆಯನ್ನು ಸೇರಿ ಸುಖದಿಂದ ಶೋಭಿಸಿದನು, ೬೩. ಶಿವನಲ್ಲಿ ಸಮರ್ಪಿಸಲ್ಪಟ್ಟ ಬುದ್ಧಿಯುಳ್ಳವನೂ, ವೀರಶೈವ ಸಿದ್ಧಾಂತವೆಂಬ ಕ್ಷೀರ ಸಮುದ್ರಕ್ಕೆ ಚಂದ್ರನೋಪಾದಿಯಲ್ಲಿರುವವನೂ ಬಸವೇಶ್ವರನು ಗುರುಭಕ್ತರಾಜನ ಕಥೆಯನ್ನು ಈರೀತಿ ಒಲುಮೆಯಿಂದ ಹೇಳಿ, ಆ ಮಹಾಶಿವಭಕ್ತರುಗಳ ಮನಸ್ಸಿನ ಇಷ್ಟಾರ್ಥವನ್ನು ಸಲ್ಲಿಸಿ ನಮಸ್ಕರಿಸುತ್ತ, ಇಂತಹ ಗುರುಪಾದಕಮಲದಲ್ಲಿ ಭಕ್ತಿಯುಳ್ಳವರು ಇನ್ನೂ ಕೆಲವರಿದ್ದಾರೆ. ಎಂದು ವಿಜ್ಞಾಪಿಸಿಕೊಂಡು ಪ್ರೀತಿಯಿಂದಕೂಡಿ ಶೋಭಿಸುತ್ತಿದ್ದನು. ೬೪. ಕಮಲದ ಎಸಳಿನಂತಹ ಕಣ್ಣುಳ್ಳವಳೇ, ಈಶ್ವರ ಪ್ರೇಮಕ್ಕೆ ಆಸ್ಪದಳಾದವಳೇ, ರಾಕ್ಷಸರ ಯುದ್ಧದಲ್ಲಿ ಭಯಂಕರಳೆನಿಸಿದವಳೇ, ಶ್ರೇಷ್ಠತೇಜಸ್ಸಿನಿಂದ ಮನೋಹರಳಾದವಳೇ, ವಿಸ್ತಾರಗೊಳಿಸಿದ ಲೋಕಗಳ ಸಮೂಹವುಳ್ಳವಳೇ,

ತತಭುವನಕದಂಬೇ ತತ್ವಮಾಲಾವಲಂಬೇ
ಪ್ರತಿಹತನತದೈನ್ಯೇ ಪಾಹಿ ಮಾಂ ಶೈಲಕನ್ಯೇ ೬೫

ಇದು ವಿನಮದಖಿಳ ಸುರಾಸುರೇಂದ್ರಮಕುಟತಟಘಟಿತ ಮಣಿಗಣಾಗಣಿತ ರುಚನಿಚಯ

ತರುಣಾರುಣಾತಪಪರಿಲಸಿತ ಪರಮ ಶಿವಲಿಂಗ ಪಾದಾರವಿಂದಪರಾಗಭಸಿತ

ಭಾಸುರಲಲಾಟಪಟ್ಟ ಸರಸಜನಮಾನಿತೋಭಯಕವಿತಾವಿಶಾರದ

ಶ್ರೀಷಡಕ್ಷರಿದೇವಭಕ್ತಿವಿರಚಿತ

ಶ್ರೀಮದ್ ಬಸವರಾಜವಿಜಯಮಹಾಪುರಾಣದೊಳ್ ಗುರುಭಕ್ತರಾಜಗುರುಭಕ್ತಿವರ್ಣನಂ

ತ್ರಿಂಶಾಶ್ವಾಸಂ ಸಮಾಪ್ತಂ

ಅಂತು ಆಶ್ವಾಸ ೩೦ಕ್ಕೆ ಪದಗಣನೆ ೨೩೮೦ಕ್ಕೆ ಮಂಗಳಮಹಾ ಶ್ರೀ॥

ಇಪ್ಪತ್ತುನಾಲ್ಕು ತತ್ವಗಳ* ಸಮೂಹಗಳಿಗೆ ಆಶ್ರಯಳಾದವಳೇ, ನಮಸ್ಕರಿಸಿದವರ ದಾರಿದ್ರ್ಯವನ್ನು ನಾಶಮಾಡುವಳೇ, ಗಿರಿರಾಜ ಕನ್ಯೆಯೇ, ನನ್ನನ್ನು ರಕ್ಷಿಸು.

ಮೂವತ್ತನೆಯ ಆಶ್ವಾಸ ಸಮಾಪ್ತವಾಯಿತು.

* ೨೪ ತತ್ತ್ವಗಳು : ಜ್ಞಾನೇಂದ್ರಿಯ೫, ಕರ್ಮೇಂದ್ರಿಯ ೫ ; ಮನಸ್ಸು, ೧ ; ಪ್ರಕೃತಿ ಮಹಾನ್, ಮತ್ತು ಅಹಂಕಾರಗಳು–೩ ; ಪಂಚಮಹಾಭೂತಗಳು ೫; ಶಬ್ದಸ್ಪರ್ಶರೂಪ ರಸಗಂಧ ಗಳೆಂಬ ತನ್ಮಾತ್ರೆಗಳು ೫-ಹೀಗೆ ೨೪ ತತ್ತ್ವಗಳು ಶಕ್ತಿಯಿಂದ ಆವಿರ್ಭಾವಗೊಂಡವಾದ್ದರಿಂದ 'ತತ್ವಮಾಲಾವಲಂಬೇ' ಎಂಬ ವಿಶೇಷಣ.

ಏಕತ್ರಿಂಶಾಶ್ವಾಸಂ

[ವೇಮನಾರಾಧ್ಯರ ಕಥೆ]

ಶ್ರೀಮದಮರೇಂದ್ರಸನ್ನುತ
ಹೈಮವತೀರಮಣನಮಿತಕಲ್ಯಾಣಗುಣ
ಸ್ತೋಮಾಭಿರಾಮನತುಳೋ
ದ್ದಾಮಂ ಪೊರೆಗೆಮ್ಮನಾವಗಂ ಶಿವಲಿಂಗಂ ೧

ಅತಿಶಯ ಸೌಭಾಗ್ಯಸಮ
ನ್ವಿತಮೆನಿಸಿ ವಿರಾಜಿಸಿರ್ಪ ಕಲ್ಯಾಣದೊಳು
ನ್ನತ ಶುಭಚರಿತನಿಳಾವಿ
ಶ್ರುತನೆಸೆದಂ ವೇಮನಾರ್ಯನೆಂಬ ಮಹಾತ್ಮಂ ೨

ಅಮಿತಗುಣಾಕರಂ ಪ್ರಮಥಪುಂಗವಪಾದಪಯೋಜಭೃಂಗನ
ಸ್ತಮಿತದುರೀಷಣಂ ಸಕಳವೇದಶಿವಾಗಮವೇದಿ ಭಕ್ತಿಸಂ
ಕ್ರಮಿತಸುಮಾನಸಂ ಪ್ರಥಿತಪಾವನರೂಪನಮೇಯವೈಭವಂ
ಶಮಿತನತಾಮಯಂ ಪ್ರಬಳಶೈವಮತಾರ್ಯನಘಾರ್ತಿಭಂಜನಂ ೩

ವೇಮನಾರಾಧ್ಯರ ಕಥೆ

೧. ಸಂಪದ್ಭರಿತನಾದ ದೇವೇಂದ್ರನಿಂದ ಹೊಗಳಿಸಿಕೊಳ್ಳಲ್ಪಟ್ಟವನೂ, ಪಾರ್ವತೀ ಪತಿಯೂ, ಅಸಂಖ್ಯಾತ ಮಂಗಳಕರಗಳಾದ ಗುಣಗಳ ಸಮೂಹದಿಂದ ಮನೋಹರನಾದವನೂ, ಅಸದೃಶನೂ, ಸ್ವತಂತ್ರನೂ ಆದ ಶಿವಲಿಂಗನು ನಮ್ಮನ್ನು ಯಾವಾಗಲೂ ರಕ್ಷಿಸಲಿ. ೨. ಅತ್ಯಂತ ಸೌಭಾಗ್ಯದಿಂದ ಕೂಡಿದುದೆಂದೆನಿಸಿ. ಶೋಭಾಮಯವಾಗಿದ್ದ ಕಲ್ಯಾಣನಗರದಲ್ಲಿ ಶ್ರೇಷ್ಠವಾದ ಶುಭ ಚರಿತ್ರೆಯಿಂದ ಇರುವವನೂ ಭೂಮಂಡಲದಲ್ಲಿ ವಿಖ್ಯಾತನೆಂದೆನಿಸಿರುವವನೂ ಆದ ವೇಮನಾರಾಧ್ಯನೆಂಬ ಮಹಾತ್ಮನು ಶೋಭಿಸುತ್ತಿದ್ದನು. ೩. ಅವನು ಅಗಣಿತವಾದ ಗುಣಸಮೂಹಕ್ಕೆ ಆಗರನೂ, ಪ್ರಮಥ ಶ್ರೇಷ್ಠರ ಪಾದಕಮಲಗಳಲ್ಲಿ ಭೃಂಗದೋಪಾದಿಯಲ್ಲಿರುವವನೂ, ಹೆಂಡತಿ ಮಕ್ಕಳು ಧನಗಳ ಮೇಲಣ ಆಸೆಯನ್ನು ದೂರೀಕರಿಸಿದವನೂ (ದಾರೇಷಣ, ಪುತ್ರೇಷಣ, ವಿತ್ತೇಷಣಗಳೆಂಬ ಈಷಣತ್ರಯಗಳನ್ನು ದೂರಮಾಡಿದವನೂ). ಸಕಲವೇದಗಳ ಶಿವಾಗಮಗಳು ಇವನ್ನು ತಿಳಿದು ಅವುಗಳಲ್ಲಿ ಉಕ್ತವಾಗಿರುವಂತೆ ಭಕ್ತಿಜೀವನವನ್ನಾಚರಿಸುವ ಶ್ರೇಷ್ಠ ಮನಸ್ಸುಳ್ಳವನೂ, ಪ್ರಸಿದ್ಧವಾದ ಮಂಗಳಕರ ರೂಪವುಳ್ಳವನೂ. ಅಗಣಿತವಾದ ವೈಭವದಿಂದ ಕೂಡಿದವನೂ. ನಮಸ್ಕರಿಸಿದ ಭಕ್ತರುಗಳ ಜನನ ಮರಣಾತ್ಮಕವಾದ ರೋಗವನ್ನು ನಾಶಮಾಡತಕ್ಕವನೂ, ಪ್ರಬಲವಾದ ವೀರಶೈವ ಮತದಲ್ಲಿ ಪೂಜ್ಯನೆನಿಸಿ

ಶರದಿಂದುದ್ಯೋತವಿದ್ಯೋತಿತವಿಶದಯಶಂ ಪಾಶಸಂಹಾರಿ ಪಂಚಾ
ಕ್ಷರಮಂತ್ರಪ್ರಾಣನಾರ್ಯಪ್ರಕರಪರಿನುತಂ ಧರ್ಮಕಾಮಾರ್ಥಮೋಕ್ಷಾ
ಮರಭೂಜಂ ಸಾರವೀರವ್ರತವಿಹಿತಸದಾಚಾರಸಂಪನ್ನನುರ್ವೀ
ಶ್ವರ ಚೋರವ್ಯಾಘ್ರಸರ್ಪಾನಳಮುಖಭಯವಿಧ್ವಂಸಕಂ ಭಸ್ಮನಿಷ್ಠಂ ೪

ತಾಪಸನುತನವನತಜನ
ತಾಪದ್ಘನತಾಪಮೃತ್ಯುಹರನುರುತರವಿ
ದ್ಯಾಪರಿಣತನತಿಸಿತಮತಿ
ಶಾಪಾನುಗ್ರಹಸಮರ್ಥನಚಲಿತಮಹಿಮಂ ೫

ವ॥ ಎಂಬ ನೆಗಳ್ತೆಗಡರ್ಪೆನಿಸಿ ರಂಜಿಸುತ್ತುಮಿರ್ದೊಂದು ದಿವಸಮಾ ವೇಮನಾರ್ಯಂ ತತ್ಪುರಬಹಿರ್ಮಳಯವಿಳಸದುಪವನ ಸವಿಧವಿವಿಧ ಪರಿಮಳರಸಮಿಳಿತ ಮೃದುಳದಳದರದಳಿತ ಕುಸುಮವಿಸರಮನೋಹರಮೆನಿಪ ಕುಸುಮವನಕ್ಕೆ ಪೂದಿಱಿಯಲೆಳಸಿ ಕರಂಡಕಕರಾಂಬುಜದಿ ನೇಳ್ತಂದೊಳಗಣ್ಗೆ ಪೊಕ್ಕು—

ದವನೂ ಪಾಪ ಬಾಧೆಯನ್ನು ನಾಶಮಾಡಿದವನೂ ಎನಿಸಿದ್ದನು. ೪. ಅವನು ಶರತ್ಕಾಲದ ಚಂದ್ರನ ಕಾಂತಿಯಂತೆ ಪ್ರಕಾಶಿಸುವ ಪರಿಶುದ್ಧ ಯಶಸ್ಸಿನಿಂದ ಕೂಡಿದವನು; (ಸಂಸಾರ ಸಂಬಂಧದ) ಬಂಧನಗಳನ್ನು ಪರಿಹರಿಸಿದವನು ; ಪಂಚಾಕ್ಷರೀ ಮಂತ್ರವೇ ಪ್ರಾಣವಾಗಿ ಉಳ್ಳವನು ; ಪೂಜ್ಯರಾದ ಜನಸಮೂಹದಿಂದ ವಿಶೇಷವಾಗಿ ಶ್ಲಾಘಿಸಲ್ಪಡುವವನು ; ಧರ್ಮಾರ್ಥಕಾಮ ಮೋಕ್ಷಗಳೆಂಬ ಪುರುಷಾರ್ಥಗಳಿಗೆ ಕಲ್ಪವೃಕ್ಷಪ್ರಾಯನಾದವನು ; ಸಾರಭೂತವಾದ ವೀರಶೈವ ಧರ್ಮದ ವ್ರತಸಂಬಂಧವಾದ ಒಳ್ಳೆಯ ಆಚಾರಗಳಿಂದ ಕೂಡಿದವನು ; ರಾಜ, ಕಳ್ಳ, ವ್ಯಾಘ್ರ, ಸರ್ಪ, ಬೆಂಕಿ ಮೊದಲಾದವುಗಳ ಭಯವನ್ನು ಧ್ವಂಸಗೊಳಿಸಿಕೊಂಡವನು ; ಭಸ್ಮಧಾರಣೆಯಲ್ಲಿ ನಿಷ್ಠೆಯುಳ್ಳವನು ಎನಿಸಿದ್ದನು. ೫, (ಅವನು) ತಾಪಸರುಗಳಿಂದ ಶ್ಲಾಘಿಸಲ್ಪಡುವ, ನಮಸ್ಕಾರ ಮಾಡುವ ಜನಸಮೂಹದಿಂದ ವಿಪತ್ತುಗಳನ್ನೂ, ಘನವಾದ ತಾಪಗಳನ್ನೂ (ಅಂದರೆ ಆಧ್ಯಾತ್ಮಿಕ, ಅಧಿ ಭೌತಿಕ, ಅಧಿ ದೈವಿಕಗಳೆಂಬ ತಾಪಗಳನ್ನು) ಮತ್ತು ಮೃತ್ಯುವನ್ನೂ ನಾಶಮಾಡುವ ಶ್ರೇಷ್ಠವಾದ ವಿದ್ಯೆಯಲ್ಲಿ ಪರಿಣತನಾದ. ಶಾಪ ಕೊಡುವುದಕ್ಕೂ ಅನುಗ್ರಹಮಾಡುವುದಕ್ಕೂ ಸಮರ್ಥನೆನಿಸಿದ, ದೃಢವಾದ ಮಹಿಮೆಯುಳ್ಳವನೆನಿಸಿದ್ದನು. ವ॥ ಹೀಗೆಂಬಪ್ರಸಿದ್ಧಿಗೆ ಪಕ್ಕಾದವನೆನಿಸಿ ಶೋಭಿಸುತ್ತಿದ್ದು ಒಂದು ದಿವಸ ಆ ವೇಮನಾಚಾರ್ಯನು ಆ ಕಲ್ಯಾಣಪಟ್ಟಣದ ಹೊರಭಾಗದಲ್ಲಿರುವ ಮನೋಹರವಾದ ಉಪವನದ ವಿವಿಧ ವೃಕ್ಷಗಳ ಅನೇಕ ಬಗೆಯ ಪರಿಮಳ ಮಕರಂದ ರಸದಿಂದ ತುಂಬಿದವುಗಳೂ, ಮೃದುವಾದ ದಳಗಳಿಂದ ಅರ್ಧ ಅರಳಿದ ಪುಷ್ಪ ಸಮೂಹಗಳಿಂದ ಮನೋಹರವೆಂದೆನಿಸುವ ಪುಷ್ಪವಾಟಿಕೆಗೆ ಹೋಗಿ, ಹೂಪತ್ರಿಕೊಂಡು ಬರಲು ಆಶಿಸಿ, ಕೈಯಲ್ಲಿ ಪುಷ್ಪದ ಬುಟ್ಟಿಯನ್ನು ಹಿಡಿದು ಬಂದು ಆ ತೋಟದೊಳಕ್ಕೆ ಹೊಕ್ಕು

ಸುರಯಿಯು ನಾಗಸಂಪಗೆಯು ಜಾದಿಯುಮೊಲ್ಲೆಯು ಕರ್ಣಿಕಾರದೆ
ಳ್ವರದ ವಸಂತದೂತಿಕೆಯು ಯೂಥಿಯು ಮಲ್ಲಿಗೆಯುಚ್ಚಪೂಗಳಂ
ಸುರು[1]ಚಿರಮಾದ ಬಿಲ್ವದಳಸಂಕುಳಮಂ ತಿಱಿದಲ್ಲಿ ತೀವುತುಂ
ಕರಡಗೆಯುಂ ಕರ್ಡಗಿ ಮಗುಳ್ದಿಯ್ಪುರುತಿರ್ಪೆಡೆವಟ್ಟೆಯೊಳ್ಕರಂ ೬

ಎತ್ತಿದ ಮೇಘಡಂಬರದೆ ಮಿಳ್ಳಿರಿದಾಡುವ ಸಿಂಧದಿಂ[2] ಪೊದ
ಳ್ದತ್ತರದಲ್ಲಿ ಬರ್ಪ ಗಜ ವಾಜಿ ರಥೌಘ ಪದಾತಿ ಬೃಂದದಿಂ
ಬಿತ್ತರಮಾದ ವಾದ್ಯರವದಿಂ ಚಳಚಾಮರ ಪಙ್ಕ್ತಿಯಿಂ ಬೆಡಂ
ಗೆತ್ತಲುಮುಣ್ಮೆ ನಾಡೆ ಬರುತಿರ್ದನದೊರ್ವನಿಳೇಶ್ವರಾತ್ಮಜಂ ೭

ವ॥ ಅಂತು ವಿವಾಹಶೋಭನಂಬಡೆದು ನೆರೆಯೂರಿಂ ನಲ್ಲಳೊಡನೆ ಪೊನ್ನಂದಣಮನೇಱಿ ತದ್ರಾಜಸುತನೆಳ್ತರುತ್ತುಮಿರ್ದು ಕಟ್ಟಿದಿರೊಳ್ಬರ್ಪ ಶೈವತೇಜೋಮೂರ್ತಿಗಳೆನಿಪ ವೇಮನಾರಾಧ್ಯರಂ ಕಂಡು ಭೋಂಕನೆ ದಂಡಿಗೆಯನಿಳಿದು ಪೊಡಮಡಲೊಡನವಂಗಾಯುಮಲ್ಪಮೆಂದಿದಂ ತಾಂ ತ್ರಿಕಾಲಜ್ಞಾನಿಯಪ್ಪುದಱಿನಱಿದು ಪರಸಲೊಲ್ಲದಾಚಾರ್ಯರ್ದಯ್ಯಂ ಸುಮ್ಮನಿರೆ ತನ್ನರೇಂದ್ರಸುತಂ ನೋಡಿ—

೬–೭. ಸುರಗಿ, ನಾಗಸಂಪಿಗೆ, ಜಾಜಿ, ಮೊಲ್ಲೆ, ಬೆಟ್ಟದಾವರೆ, ಶ್ರೇಷ್ಠವಾದ ವಸಂತ ದೂತಿಕೆ (ಮಾಧವಿ), ಯೂಥಿಕೆ, (ಮಲ್ಲಿಗೆಯಲ್ಲಿನ ಒಂದು ಬಗೆ) ಮಲ್ಲಿಗೆಯ ಹೊಸ ಹೂವುಗಳನ್ನು, ಮನೋಹರವಾದ ಬಿಲ್ವಪತ್ರೆಯ ಸಮೂಹವನ್ನು ಎತ್ತಿಕೊಂಡು, ಬುಟ್ಟಿಯಲ್ಲಿ ತುಂಬಿ ಉತ್ಸಾಹಗೊಂಡವನಾಗಿ ಪ್ರೀತಿಯಿಂದ ಹಿಂದಿರುಗಿ ಬರುತ್ತಿರುವಾಗ ಮಧ್ಯಮಾರ್ಗದಲ್ಲಿ, ಎತ್ತಿ ಹಿಡಿದಿರುವ ಛತ್ರಿಗಳಿಂದ, ಹಾರಾಡುತ್ತಿರುವ ಧ್ವಜ ಪಟಗಳಿಂದ, ಮನೋಹರವಾಗಿ ಎರಡೂ ಕಡೆಗಳಲ್ಲಿ ಬರುವ ಆನೆ, ಕುದುರೆ, ರಥಗಳ ಕಾಲಾಳುಗಳ ಸಮೂಹದಿಂದ, ವಿಸ್ತಾರವಾದ (ಬಹಳವಾದ) ವಾದ್ಯಗಳ ಸಮೂಹದ ಧ್ವನಿಯಿಂದ, ಬೀಸುತ್ತಿರುವ ಚಾಮರಗಳ ಸಾಲಿನಿಂದ, ಎಲ್ಲಕಡೆಗೂ ಸೊಬಗು ಹೊರ ಹೊಮ್ಮುತ್ತಿರಲು, ಓರ್ವರಾಜ ಪುತ್ರಶ್ರೇಷ್ಠನು ಬರುತ್ತಿದ್ದನು. ವ॥ ಹೀಗೆ ವಿವಾಹ ಶೋಭನಗಳನ್ನು ಮುಗಿಸಿಕೊಂಡು ಬೇರೂರಿನಿಂದ ತನ್ನ ಹೆಂಡತಿಯೊಡನೆ ಬಂಗಾರದ ಪಲ್ಲಕ್ಕಿಯಲ್ಲಿ ಕುಳಿತು, ಆ ರಾಜಕುಮಾರನು ಬರುತ್ತಿದ್ದನು. ನೇರ ಎದುರಿನಲ್ಲಿಯೇ ಬರುತ್ತಿರುವ ಶಿವ ಸಂಬಂಧವಾದ ತೇಜಸ್ಸಿನ ಮೂರ್ತಿಯೆಂದೆನಿಸುವ ವೇಮನಾರಾಧ್ಯರನ್ನು ಕಂಡು, ಒಮ್ಮಿಂದೊಮ್ಮೆಗೆ ಅವನು ಪಲ್ಲಕ್ಕಿಯಿಂದ ಇಳಿದು, ನಮಸ್ಕಾರ ಮಾಡಿದನು. ಅವನಿಗೆ ಆಯುಷ್ಯವು ಸ್ವಲ್ಪವಿರುವುದೆಂಬುದನ್ನು ಆ ವೇಮನಾರಾಧ್ಯರು ತ್ರಿಕಾಲಜ್ಞಾನಿಯಾದುದರಿಂದ ತಿಳಿದು, ಆಶೀರ್ವಾದಮಾಡುವುದಕ್ಕಲ್ಲದೆ ಆ ಆಚಾರ್ಯ

1 ರ (ಮು) 2 ದುಮಿಂ(ಮು)

ಎಱಗಿದೊಡೆನ್ನಂ ಪರಸದ
ತೆಱನೇಂ ಕಾಣನೊ ಮಹಾತ್ಮನಿನ್ನೊರ್ಮೆ ಪೊದ
ಳ್ದೆಱಗಿ ನಿರೀಕ್ಷಿಪೆನೆನುತುಂ
ತಱಿಸಂದೆಲೆ ದೇವ ಶರಣೆನುತ್ತೆಱಗಲೊಡಂ ೮

ವ॥ ಮತ್ತಮವರ್ಪರಸದುಸಿಕನಿರೆ—

ಪದಕೆಱಗೆ ಪರಕೆಗುಡದು
ನ್ಮದಯುತ ಭಕ್ತಂಗೆ ಮಣಿದನಿ[ನಿ][1]ಯನೆನುತೆ ಮ
ತ್ಸದತಿ ಪರಿಹಾಸಕಂ ಗೆ
ಯ್ಯದೆ ಮಾಣಳೆನುತ್ತೆ ನಾಣ್ಚಿದಂ ಜನಪಸುತಂ ೯

ವ॥ ಅಂತು ನಾಣ್ಚಿ ತಲೆವಾಗಿ ಸಿಡಿಮಿಡಿಗೊಂಡು ಭಕ್ತಿಭಾವಂ ಜಾಱೆ ಕಾಯ್ಪನೊಳಕೊಂಡು—

ಪಿರಿಯರ್ಮಾನ್ಯರುದಾರವೃತ್ತರನಘರ್ಶೈವಾಗಮಾಚಾರ್ಯರ್ಸ
ದ್ಗುರುಗಳ್ನೀಮೆನುತಳ್ತಿವೆಟ್ಟು ವಿನಯಂಬೆತ್ತೊಲ್ದು ನಿಮ್ಮಂಘ್ರಿಪಂ
ಕರುಹಕ್ಕಾಂ ಪೊಡಮಟ್ಟೊಡಕ್ಕೆ ನಿನಗಾಯುಃಶ್ರೇಯಮೆಂದೆನ್ನ ನೀಂ
ಪರಸಲ್ಸಲ್ಲದೆ ಸುಮ್ಮನಿರ್ದಪಿರಿದೇನಾಚಾರ್ಯರಾಚಾರಮೋ ೧೦

ಶ್ರೇಷ್ಠರು ಸುಮ್ಮನೆ ಇರಲು ಆ ರಾಜಕುಮಾರನು ನೋಡಿ– ೮. ಈ ಮಹಾತ್ಮನು ನಮಸ್ಕಾರಮಾಡಿದರೂ ನನ್ನನ್ನು ಆಶೀರ್ವದಿಸದಿರುವುದಕ್ಕೇನು ಕಾರಣವೋ (ತಿಳಿಯದು) ಪ್ರೀತಿಯಿಂದ ಇನ್ನೊಮ್ಮೆ ನಮಸ್ಕರಿಸಿನೋಡುತ್ತೇನೆ ಎನ್ನುತ್ತ ಸಮೀಪಕ್ಕೆ ಬಂದು, 'ಎಲೈ ದೇವನೇ, ಶರಣು' ಎಂದೆನ್ನುತ್ತ ನಮಸ್ಕಾರಮಾಡಲಾಗಿ ವ॥ ಆಗಲೂ ಕೂಡ ಅವರು ಹರಸದೆ ಸುಮ್ಮನಿರಲಾಗಿ– ೯. 'ನನ್ನ ಪತಿಯು ಪಾದಕ್ಕೆರಗಿದರೆ ಹರಕೆಯನ್ನು ಮಾಡದಿರುವ ವಿಶೇಷ ಗರ್ವದಿಂದ ಕೂಡಿದ ಭಕ್ತನಿಗೆ ನಮಸ್ಕರಿಸಿದನೆಂದು ನನ್ನ ಈ ಸುಂದರ ಪತ್ನಿಯು ಅಪಹಾಸ್ಯಮಾಡದಿರುವುದಿಲ್ಲ'ವೆಂದು ಆ ರಾಜಪುತ್ರನು ನಾಚಿಕೆಪಟ್ಟು ತಲೆಯನ್ನು ಬಗ್ಗಿಸಿದನು. ವ॥ ಆ ರೀತಿ ನಾಚಿ ತಲೆಯನ್ನು ಬಗ್ಗಿಸಿ, ಸಿಡಿಮಿಡಿಗೊಂಡವನಾಗಿ, ಭಕ್ತಿ ಭಾವವನ್ನು ದೂರೀಕರಿಸಿದವನಾಗಿ ಕೋಪಗೊಂಡನು. ೧೦. 'ಹಿರಿಯರೂ, ಸನ್ಮಾನ್ಯರೂ, ಉದಾರವಾದ ಚರಿತ್ರೆಯುಳ್ಳವರೂ, ಪವಿತ್ರರೂ (ಪಾಪದೂರರೂ), ಶಿವಸಂಬಂಧವಾದ ಆಚಾರ ಸಂಪನ್ನರೂ, ಶ್ರೇಷ್ಠಗುರುವರ್ಯರೂ, ನೀವಾಗಿದ್ದೀರೆಂದು ಪ್ರೀತಿಯಿಂದಲೂ ವಿನಯದಿಂದಲೂ ಒಲಿದು ನಿಮ್ಮ ಪಾದಕಮಲಗಳಿಗೆ ನಾನು ನಮಸ್ಕಾರಮಾಡಿದರೆ ನೀವು 'ನಿನಗೆ ಆಯುಷ್ಯವೂ ಶ್ರೇಯಸ್ಸೂ ಉಂಟಾಗಲೆ'ಂದು ಆಶೀರ್ವಾದ ಮಾಡದೆ ಸುಮ್ಮನೇ ಇದ್ದೀರಿ.

1 ನ (ಅ, ಚ, ಜ, ಮ, ಗ, ದ)

ಅಕ್ಕಟ ನಿನ್ನಯ ಸೌಜ
ನ್ಯಕ್ಕಮರ್ದ ಗುಣಕ್ಕೆ ಶೈವತೇಜಕೆ ಸಲೆ ಕೆ
ಯ್ಮಿಕ್ಕ ಶುಭವಿಮಳವೃತ್ತಿಗೆ
ತಕ್ಕುದೆ ಕೂರ್ತೆಱಗೆ ಪರಸಲೊಲ್ಲದ ಬಿಂಕಂ ೧೧

ಶುಕವಿಡಿದು ಪೂತ ನವಕಿಂ
ಶುಕಕೆಱಗಿದ ತೆಱದಿನೆಱಗಿದೆಂ ನಿಮಗಿಂದಾ
ನಕಟಕಟ ಬಾಹ್ಯರಾಗ
ಪ್ರಕಟನಮಿದು ವಿಫಲಮೆಂಬುದಂ ಮುನ್ನಱಿಯೆಂ ೧೨

ದ್ವಿಜಕುಲಸಂಜಾತರ್ಗಡ
ನಿಜದಿಂ ನೀಮಮಾಯರ್ಪುರುಷರುಂ ಗಡ ಹರನಂ
ಭಜಿಯಿಪ ಭಕ್ತರ್ಗಡ ಭೂ
ಭುಜನೆಳ್ತಂದೆಱಗೆ ಸುಮ್ಮನಿರ್ಪುದು ಮತಮೇ ೧೩

ಪರಸಿ ನೀಮೆನಗಾಯುವಿತ್ತಪಿರೇ ಮದೋದ್ಧತವೃತ್ತಿಯಿಂ
ಪರಸಲೊಲ್ಲದೊಡಾಯು ತಗ್ಗುಗುಮೇ ವಿರಿಂಚಿ ಲಲಾಟದೊಳ್
ಬರೆದುದಂ ತೊಡೆಯಲ್ಕೆ ಪೆರ್ಚಿಸಲುಂ ಸಮರ್ಥರೆ ನೀಂ ಜಗ
ದ್ಗುರುಗಳೇ ಬಿಡಿಯೆಮ್ಮ ತುಳ್ಳುವ ಮುಳ್ಳು ನಿಮ್ಮಯ ದಾಪಿಯೇ ೧೪

ಆಚಾರ್ಯರ ಆಚಾರವು ಇದೇಯೋ ?' ೧೧. 'ಅಯ್ಯೋ ! ನಿನ್ನ ಈ ಸುಜನತೆಗೆ, ಒಪ್ಪುವ ಸದ್ಗುಣಗಳಿಗೆ, ಶಿವ ಸಂಬಂಧವಾದ ತೇಜಸ್ಸಿಗೆ, ವಿಶೇಷವಾದ ಮಂಗಳವನ್ನುಂಟುಮಾಡುವ ಪವಿತ್ರವೃತ್ತಿಗೆ, ಪ್ರೀತಿಯಿಂದ ನಮಸ್ಕಾರ ಮಾಡಿದರೆ ಆಶೀರ್ವಾದ ಮಾಡದಿರುವ ಈ ಗರ್ವವು ತಕ್ಕದ್ದೇ ?' ೧೨. 'ಅಕ್ಕಟ ! ಗಿಳಿಯು ದಟ್ಟವಾಗಿ ತುಂಬಿ ಹೂಬಿಟ್ಟಿರುವ ನೂತನ ಮುತ್ತುಗದ ಮರಕ್ಕೆ ಎರಗಿದ ರೀತಿಯಲ್ಲಿ ಪ್ರಕಟವಾದ ಈ ಹೊರವೇಷವೆಂಬುದು ಫಲವಿಲ್ಲದ್ದೆಂದು ಮೊದಲು ತಿಳಿಯದೆ ನಿಮಗೀಗ ನಾನು ನಮಸ್ಕರಿಸಿದಂತಾಯಿತು.' ೧೩. 'ದ್ವಿಜಕುಲದಲ್ಲಿ ಹುಟ್ಟಿದವರಂತೆ ! ನಿಜವಾಗಿ ಮಾಯಾರಹಿತರಾದ ಪುರುಷರಂತೆ ! ಪರಮೇಶ್ವರನನ್ನು ಸ್ತೋತ್ರ ಮಾಡುವ ಭಕ್ತರಂತೆ ! ಭೂಮೀಶ್ವರನು ಬಂದು ನಮಸ್ಕಾರ ಮಾಡಿದರೆ ಸುಮ್ಮನಿರುವುದು ಕ್ರಮವೇ ?' ೧೪. 'ಆಶೀರ್ವಾದ ಮಾಡಿ ನೀವೇನು ನನಗೆ ಆಯುಷ್ಯವನ್ನು ಕೊಡಬಲ್ಲಿರಾ ! ಮದದಿಂದ ಗರ್ವಗೊಂಡು ಈ ರೀತಿಯಲ್ಲಿ ಆಶೀರ್ವಾದ ಮಾಡದಿದ್ದರೆ ಆಯುಷ್ಯವೇನು ಕಡಿಮೆಯಾಗುವುದೇ ? ಬ್ರಹ್ಮನು ಹಣೆಯಲ್ಲಿ ಬರೆದುದನ್ನು ಅಳಿಸುವುದಕ್ಕೆ ಮತ್ತು ಹೆಚ್ಚಿಸುವುದಕ್ಕೆ ನೀವೇನು ಸಮರ್ಥರಾದೀರಾ ! ಜಗದ್ಗುರುಗಳೇ ಬಿಡಿ ! ನಮ್ಮನ್ನು

ಪಸೆನಿಂದ ವೇಳೆಯೊಳ್ಸಂ
ತಸದಿಂ ಪಿತರರ್ಕಳಿತ್ತ ನಲವರಕೆಗಳಿಂ
ದಸದಳಮೆ ನಿಮ್ಮ ಪರಕೆಯ
ಮುಸಕಂ ಬಱಿದೇಕೆ ಸಮ್ಮನಂ ನಿಮಗಿಳೆಯೊಳ್ ೧೫

ಪರಸಿದೊಡಳಿವಪ್ಪುದೆಮ್ಮಯ
ಪಿರಿಯತನಂ ಮಾಣದೆಂದು ಪರಸದೆ ನೀಮಿ
ರ್ಪಿರವಂ ತಿಳಿದೆಂ ನಿಮ್ಮಂ
ತಿರಿಮೆಮ್ಮಂ ಪರಸಲಿಳೆಯೊಳಿಲ್ಲರೆ ವಿಬುಧರ್ ೧೬

ವ|| ಎಂದ ನೃಪಸುತನ ಸಗರ್ವೋಕ್ತಿಯನಾ ವೇಮನಾರ್ಯನಾಕರ್ಣಿಸಿ—

ಜನಪಸುತ ನಾಳೆ ಮಧ್ಯಂ
ದಿನದೊಳ್ನಿನಗಪ್ಪುದಲ್ತೆ ಮೃತಿಯದನಱಿದುಂ
ಮನವೊಲ್ದಾಶೀರ್ವಾದಮ
ನೆನಸುಂ ನಿನಗೆಂತು ಮಾಡಲಾಂ ಬಗೆದಪೆಂ ೧೭

ಪರಸಿದೊಡೆ ಬಪ್ಪ ಮರಣಮ
ನೊರಸಲ್ವೇಳ್ಕುಂ ಮಹಾತ್ಮರೆನ್ನದೊ ನಿನ್ನೀ
ದುರಿತ ಬಲಮೆಮ್ಮ ಜಿಹ್ವಾಂ
ಕುರಕ್ಕೆ ಕೇಳ್ಬಾರದಾದುದಾಶೀರ್ವಾದಂ ೧೮

ನುಂಗುವ ಮೃತ್ಯುವು ನಿಮ್ಮ ದಾಸಿಯಲ್ಲ !' ೧೫. 'ಮದುವೆಯ ಹಸೆಯ ಮೇಲಿದ್ದ ಸಮಯದಲ್ಲಿ. ಸಂತೋಷದಿಂದ ತಂದೆತಾಯಿಯರಿತ್ತ ಅಕ್ಕರೆಯ ಹರಕೆಗಳಿಗಿಂತ ಶ್ರೇಷ್ಠವಾದದ್ದೇ ನಿಮ್ಮ ಹರಕೆಯ ಸಾಮರ್ಥ್ಯ? ಸುಮ್ಮನೆ ನಿಮಗೆ ಈ ಭೂಮಿಯಲ್ಲಿ ಸನ್ಮಾನವೇತಕ್ಕೋ'. ೧೬. 'ಆಶೀರ್ವಾದ ಮಾಡಿದರೆ ನಮ್ಮ ದೊಡ್ಡತನವೇ ಅಳಿದು ಹೋಗುತ್ತದೆ' ಆದ್ದರಿಂದ ಹರಸಕೂಡದೆಂದು ಆಶೀರ್ವಾದ ಮಾಡದೆ ನೀವಿದ್ದ ರೀತಿಯು ಅರ್ಥವಾಯಿತು. ನಿಮ್ಮಹಾಗೆ ನಮ್ಮನ್ನು ಆಶೀರ್ವಾದ ಮಾಡಲು ವಿಬುಧರು (ಜ್ಞಾನಿಗಳು) ಭೂಮಿಯ ಮೇಲೆ ಯಾರೂ ಇಲ್ಲವೇ ?' ವ|| ಹೀಗೆನ್ನುವ ರಾಜಕುಮಾರನ ಗರ್ವದಿಂದ ಕೂಡಿದ ಮಾತನ್ನು ಆ ವೇಮನಾರ್ಯನು ಕೇಳಿ. ೧೭. 'ಎಲೈ ರಾಜಪುತ್ರನೇ, ನಾಳೆಯದಿನ ಮಧ್ಯಾಹ್ನದ ವೇಳೆಗೆ ನಿನಗೆ ಮರಣವಾಗುವುದಲ್ಲವೇ ! ನಿನಗೆ ಬರುವ ಮೃತ್ಯುವನ್ನು ತಿಳಿದೂ ಕೂಡ ಮನಃ ಪ್ರೀತಿಯಿಂದ ಆಶೀರ್ವಾದವನ್ನು ನಿಶ್ಚಯವಾಗಿ ನಿನಗೆ ಮಾಡಲು ನಾನು ಹೇಗೆ ಮನಸ್ಸು ಮಾಡಲಿ ?' ೧೮. 'ಹರಸಿದರೆ ಬರುವ ಮರಣವನ್ನು ಒರೆಸಿಹಾಕಬೇಕೆಂದು ಲೋಕವು ಅನ್ನುತ್ತಿಲ್ಲವೋ ! (ಆದ್ದರಿಂದ) ಕೇಳು ನಿನ್ನ ಈ ಪಾಪದ ಆಧಿಕ್ಯವು ಆಶೀರ್ವಾದವೇ ನಾಲಗೆಯಿಂದ ಮೊಳಕೆಯೊಡೆಯು

ತಪ್ಪದೆಲೆ ನಾಳೆ ಮೃತಿ ನಿನ
ಗಪ್ಪುದು ಪೋಗೆನೆ ನೃಪಾತ್ಮಜಂ ಕೇಳ್ದು ಮನಂ
ಸೊಪ್ಪು ಸೊವಡಾಗೆ ಕೋಪವು
ನಪ್ಪುಗೆಗೆಯ್ದೀಕ್ಷಿಸುತ್ತೆ ಮಗುಳ್ದಿಂತೆಂದಂ ೧೯

ಮದನನನಾರ್ದು ಸುಟ್ಟುಳಿಪಿದಂ ತಲೆಗೊಯ್ದು ಸರೋಜಗರ್ಭನಂ
ಮುದಮಲರ್ದೋವಿದಂ ಖಲಜಲಂಧರದೈತ್ಯ ಸುರಾಹಿತರ್ಕಳಂ
ಸದೆದೊಲವಿಂದೆ ರಕ್ಷಿಸಿದನೀಶನವಂ ಪೊಱತಾಗೆ ಮಿಕ್ಕ ಲೋ
ಕದ ಮನುಜರ್ಕಳಿಂ ವಧಿಸಲುಂ ಮಗುಳ್ದಿಂ ಪೊರೆಯಲ್ಕಸಮರ್ಥರೇ ೨೦

ಮಾರಮದಹರಣಲಾಂಛನ
ಧಾರಣಮಾತ್ರದೆ ಮಹೇಶ್ವರರಪ್ಪಿರೆ ನೀ
ಮಾರಯೆ ನಿಮ್ಮನುಚಿತದಾ
ಗ್ದ್ವಾ[1]ರದೆ ಬಂದಪ್ಪುದೆ ಮೃತ್ಯು ನಾಳೆನಗೆ ವಲಂ ೨೧

ಬಱಿದೇಕೆ ಬೀಕಮೆಸುತುಂ
ಗಱಿಗಟ್ಟಿದ ಕೋಪದಿಂದೆ ಗಳಪುತೆ ಪಲವಂ
ನೆಱೆ ಚುನ್ನವಾಡುತುಂ ನೆಲ
ದೆಱೆಯಂ ನಡೆತಂದು ಪೊಕ್ಕನಾತ್ಮಾಲಯಮಂ ೨೨

ವುದಕ್ಕೆ ಬಾರದಂತೆ ಮಾಡಿತು. ೧೯. 'ಎಲೈ ರಾಜಕುಮಾರನೇ, ನಾಳೆ ನಿನಗೆ ಬರುವ ಮೃತ್ಯುವು ತಪ್ಪುವುದಿಲ್ಲ, ಹೋಗು' ಎನ್ನಲು ರಾಜಕುಮಾರನು ಕೇಳಿ, ಕಲ್ಮಷಗೊಂಡ ಮನಸ್ಸಿನವನಾಗಿ ಕೋಪವನ್ನು ಹೊಂದಿದವನಾಗಿ (ವೇಮನಾರ್ಯರನ್ನು) ನೋಡುತ್ತ ಪುನಃ ಹೀಗೆಂದನು. ೨೦. ಈಶ್ವರನು ಮನ್ಮಥನನ್ನು ಗರ್ಜನೆಮಾಡಿ ಸುಟ್ಟು ಅಳಿಸಿ ಹಾಕಿದನು; ಬ್ರಹ್ಮನ ತಲೆಯನ್ನೇ ಕೊಯ್ದು (ಪುನಃ) ಸಂತೋಷಪರಳಿ ರಕ್ಷಿಸಿದನು, ದುಷ್ಟನಾದ ಜಲಂಧರ ದೈತ್ಯನನ್ನೂ, (ಉಳಿದ) ರಾಕ್ಷಸರುಗಳನ್ನೂ, ಬಡಿದು ಕೊಂದು (ಅನಂತರ) ಪ್ರೀತಿಯಿಂದ ರಕ್ಷಿಸಿದನು. ಅವನನ್ನು ಹೊರತುಪಡಿಸಿ ಮಿಕ್ಕುಳಿದ ಲೋಕದ ಮನುಷ್ಯರು ನಿಜವಾಗಿ ವಧೆಮಾಡಲು, ಪುನಃ ರಕ್ಷಿಸಲು ಸಮರ್ಥರಾದಾರೆಯೇ ? ೨೧. '(ಕೇವಲ) ಮನ್ಮಥನಮದವನ್ನು ನಾಶಗೊಳಿಸಿದ ಶಿವನ ಲಾಂಛನವನ್ನು ಧರಿಸಿದ ಮಾತ್ರಕ್ಕೆ ನೀವೂ ಪರಮೇಶ್ವರರು ಆಗುತ್ತೀರೋ ವಿಚಾರಿಸಿ ನೋಡಿದರೆ ನಿಮ್ಮ ಉಚಿತವಲ್ಲದ ಮಾತಿನ ಮೂಲಕ ನಾಳೆ ನನಗೆ ಮೃತ್ಯುವು ನಿಶ್ಚಯವಾಗಿ ಬಂದೀತೇ ?' ೨೨. 'ಸುಮ್ಮನೆ ಏಕೆ ಗರ್ವಪಡುತ್ತೀರಿ ?' ಎನ್ನುತ್ತ ವಿಶೇಷವಾದ ಗರ್ವದಿಂದ ಕೂಗಾಡುತ್ತ ಅನೇಕ ವಿಧದಿಂದ ವಿಶೇಷವಾಗಿ ನಿಂದೆಯ ಮಾತುಗಳನ್ನಾಡುತ್ತ ಆ ಭೂಮಿಶ್ವರನು

---

1 ಗ್ಧಾ(ಚ) ಗ್ವಾ(ಜ)

ವ॥ ಅಂತು ಪೊಕ್ಕು ನಿಜರಮಣಿವೆರಸು ಪರಿಮಳೋದಕದಿಂ ಮಿಂದು ಪರಮಾನ್ನಮುಂ ಸವಿದು ಕರ್ಪೂರತಾಂಬೂಲಮುಂ ಕೊಂಡು ಮಣಿಮಂದಿರಾಂತರ್ವಿಳಸಿತ ಕನಕಪರ್ಯಂಕ ಮೃದುಳ ತಳ್ಪಸ್ಥಳದೊಳ್ ಸಮರಸರತಸಮರಸಂಜಾತಸುಖಾನುಭವಾನಂತರಂ ಸುಖ ನಿದ್ರೆಗೆಯ್ದಿರ್ದನಾಗಳ್-

ಫಣಿಯೊಂದು ಘೋರವಿಷಭೀ
ಷಣವದನಂ ಪಾಟಲಸ್ಫುಟಂ ಪಟುತೆಯಿನಂ
ದಣಿಯುರವಿಳಿತಂದುದು ಮೇ
ಗಣಸರಪಳಿವಿಡಿದು ತೀವ್ರಚಾಲಿತರಸನಂ ೨೩

ವ॥ ಅಂತುವಾ ತೂಗುಮಂಚದ ಸರಪಳಿಯು ಬಳಿವಿಡಿದು ಗಲ್ಗಲನಿಳಿದು ನಿದ್ರೆಗೆಯ್ದಿರ್ದ ನೃಪಸುತನ ಕೆಯ್ಯ ಪಗರಂ ಕರ್ಚಿ ದೊರೆದು ಫಣಿ ಪೋದಪುಗುಳ್ದು ಪೋದಪ್ಪಣಿತಜಿತೊಳ್ಪತ್ಕಾಂತೆ ಯೆಳ್ಚತ್ತು ಬಿಗುರ್ತು ಬೆಬ್ಬಳಿಸಿ ನಡುಗಿ ಹಾಹಾರವಂ ಮಸಗೆ ಕೆಟ್ಟೆಂ ಕೆಟ್ಟೆನೆಂದಳುತ್ತುಮಿರೆ ನರೇಂದ್ರನನಿತಜಿತೊಳ್ಪ್ರೇಂಕನೆಳ್ದು ತಳಮಳಗೊಂಡು ನೆತ್ತರುಗುವ ಕರಮುಮಂ ಕಡಿದ ಘೋರಫಣಿ ಯುಮಂ ಕಂಡು ಪವ್ವನೆ ಪಾಙು ಕೆಡೆದು ಪಮ್ಮಿದಂಬೋಗಿ—

ಹೊರಟು ಬಂದು ತನ್ನ ಮನೆಯನ್ನು ಹೊಕ್ಕನು. ವ॥ ಆ ರೀತಿ ಅರಮನೆಯನ್ನು ಪ್ರವೇಶಿಸಿ ತನ್ನ ಪತ್ನಿಯೊಡನೆ ಸುಗಂಧಮಿಶ್ರವಾದ ನೀರಿನಿಂದ ಸ್ನಾನಮಾಡಿ, ಶ್ರೇಷ್ಠ ವಾದ ಆಹಾರವನ್ನು ಸ್ವೀಕರಿಸಿ, ಕರ್ಪೂರಮಿಶ್ರವಾದ ತಾಂಬೂಲವನ್ನು ಮೆದ್ದು, ರತ್ನ ಖಚಿತವಾದ ಮಂದಿರದ ಒಳಗಡೆಯಲ್ಲಿ ಪ್ರಕಾಶಿಸುವ ಬಂಗಾರದಿಂದ ಮಾಡಿದ ಮಂಚದ ಮೇಲೆ ಹಾಸಿರುವ ಹಾಸಿಗೆಯ ಮೇಲೆ ಸಮಾನಾನುರಾಗದಿಂದ ಕೂಡಿದ ರತಿಕ್ರೀಡೆ ಯೆಂಬ ಯುದ್ಧದಿಂದುಂಟಾದ ಆನಂದದ ಅನುಭವವನ್ನು ಪಡೆದ ನಂತರ ಸುಖನಿದ್ರೆ ಯನ್ನು ಮಾಡುತ್ತಿದ್ದನು. ಆಗ. ೨೩. ಘೋರವಾದ ವಿಷದಿಂದ ಕೂಡಿದ ಭಯಂಕರ ವಾದ ಮುಖವುಳ್ಳದ್ದಾಗಿಯೂ, ಕೆಂಪು ಬಿಳುಪು ಬಣ್ಣದಿಂದ ಕೂಡಿದ ಹೆಡೆಯುಳ್ಳ ದ್ದಾಗಿಯೂ, ವಿಶೇಷ ಸಾಮರ್ಥ್ಯವುಳ್ಳದ್ದಾಗಿಯೂ, ತೀವ್ರವಾಗಿ ಚಲಿಸಾಡುತ್ತಿರುವ ನಾಲಗೆಯುಳ್ಳದ್ದಾಗಿಯೂ ಇರುವ ನಾಗರಹಾವೊಂದು ತೂಗುಮಂಚದ ಮೇಲೆ ಕಟ್ಟಿದ್ದ ಸರಪಳಿಯನ್ನು ಅನುಸರಿಸಿ ಇಳಿದು ಬಂತು. ವ॥ ಹಾಗೆ ಆ ತೂಗುಮಂಚದ ಸರಪಳಿ ಯನ್ನನುಸರಿಸಿ ಗಳಗಳನೆ ಇಳಿದು ನಿದ್ರೆ ಮಾಡುತ್ತಿದ್ದ ರಾಜಕುಮಾರನ ಕೈಯ ಭಾಗ ವನ್ನು (ಪ್ರದೇಶವನ್ನು) ಕಚ್ಚಿ. ಮೊದಲಮಾಡಿ, ಹಾವು ಪೊಟರೆಯನ್ನು ತಿರುಗಿಸಿ ಹೊರಳುವಷ್ಟರಲ್ಲಿ ಆ ರಾಜಕುಮಾರನ ಪತ್ನಿಯು ಎಚ್ಚರಗೊಂಡಳು. ಭಯಗೊಂಡು, ಬೆಚ್ಚಿ ಬಿದ್ದು ನಡುಗುತ್ತ ಹಾಹಾಕಾರವು ತುಂಬುವಂತೆ ಕೆಟ್ಟೆನು ! ಕೆಟ್ಟೆನು ! ಎಂದು ಅಳುತ್ತಿರಲಾಗಿ, ರಾಜಕುಮಾರನು ಅಷ್ಟರಲ್ಲಿ (ಎಚ್ಚರಗೊಂಡು) ಒಮ್ಮಿಂದೊಮ್ಮಲೆ ಎದ್ದು ಸಂಕಟಗೊಂಡು, ನೆತ್ತರು ಹರಿಯುತ್ತಿರುವ ಕೈಯನ್ನೂ, ಕಡಿದ ಘೋರವಾದ

ಮುದಿದಂ ಮಹಾತ್ಮರಾಡಿದ
ನುಡಿ ತಪ್ಪುಗುಮೇ ನೃಪಾತ್ಮಜಂ ಬರಿಸಿದಳಾ
ಮಡದಿ ಪೊಜೆಯಿಡುತೆ ಪೊಸಗಾ
ರುಡರಂ ನುತಶಸ್ತ್ರವೈದ್ಯರಂ ಜೋಗಿಗಳಂ ೨೪

ವ॥ ಅಂತು ಬರಿಸುತವರ್ಗೆ ಬೇಡಿದುದನಿತ್ತಪೆನೆನ್ನ ಪತಿಯುಂ ಬರ್ದುಂಕಿಪುದೆಂದು ಬಾಯಳಿದಳುತ್ತುಮಿರೆ ಸಾಕೆಂದು ನಿಲಿಸುತ್ತುಮವರ್ಗಳಂತಣಂಗೊಂಡು ಮಂತ್ರ ತಂತ್ರೌಷಧ ವಿಲೇಪನಾದಿಯುಂ ನಿರ್ಮಿಸಿಯುಂ ಹರಣಂಬಡೆಯಲ್ಕಮಾಜದೆ ಕೆಲಸಾರ್ದರವರೊಳೊರ್ವಂ ವಿಷಹರಣವಿಚಕ್ಷಣನಾ ಫಣಿದಷ್ಟನಂಗಮನಭೀಕ್ಷಿಸುತ್ತುಮಿಂತೆಂದು —

ಪಾಪೆತ್ತಣಿಂದೆ ಬಂದು ಮ
ಹೀವರನಂ ಕರ್ಚಿದತ್ತೊ ಶಿವ ಶಿವ ಕಾಲಂ
ತೀವಿದುದಿವಂಗೆ ದೈವಮು
ನಾವಂ ಮೀಱುವನೆನುತ್ತೆ ಮಗುಳ್ದಿಂತೆಂದಂ ೨೫

ವಿಮಳಂ ಬಾಸುಗಿ ಕಂಬಳಾಶ್ವತರನುನ್ಮತ್ತಂ ಪ್ರಚಂಡಂ ಗುಹಂ
ಸುಮನಂ ತಕ್ಷಕ ಪುಷ್ಪದಂಷ್ಟ್ರಕ ಪುರಾಣಂಗಳ್ಬಳಾಕಂ ಕರಾ
ಳಮುಖೈರಾವತ ನೀಲ ಪುಂಡ್ರಕಮಹಾಪದ್ಮಾಹಿ ಕರ್ಕೋಟಕಂ
ಕುಮುದಂ ವಾಮನ ಮುದ್ಗಲಾರ್ಯಕ ಕಳಿಂಗಂ ಶಂಖಪಾಲಂ ಶಲಂ ೨೬

ಕಾಲೀಯಂ ಸಂವರ್ತಕ
ಕಾಲಿಕ ಧೃತರಾಷ್ಟ್ರ ಕುಧರ ಮಣಿನಾಗಂಗಳ್

ಸರ್ಪವನ್ನೂ ಕಂಡು ನೆಲಕ್ಕೆ ಬಿದ್ದು ಎಚ್ಚರದಪ್ಪಿದನು. ೨೪. ರಾಜಕುಮಾರನು ಸತ್ತನು ; ಮಹಾತ್ಮರಾಡಿದ ನುಡಿಯು ತಪ್ಪುತ್ತದೆಯೋ ? (ಆಗ) ಆ ರಾಜಕುಮಾರನ ಮಡದಿಯು ಬೊಬ್ಬಿಡುತ್ತ ನೂತನ ಗಾರುಡ ವಿದ್ಯೆಯನ್ನರಿತವರನ್ನೂ, ಶ್ಲಾಘ್ಯರಾದ ಶಸ್ತ್ರ ವೈದ್ಯರನ್ನೂ ಯೋಗಿಗಳನ್ನೂ ಕರೆಸಿದಳು. ವ॥ ಈ ರೀತಿ ಬರಮಾಡಿಕೊಂಡು ಅವರಿಗೆ 'ಬೇಡಿದುದನ್ನು ಕೊಡುತ್ತೇನೆ ; ನನ್ನ ಗಂಡನನ್ನು ಬದುಕಿಸಬೇಕು,' ಎಂದು ಬಾಯಿತೆರೆದು ಅಳುತ್ತಿರಲಾಗಿ, (ಬಂದ ಅವರು) 'ಅಳಬೇಡ ಸಾಕು' ಎಂದು (ಹೇಳಿ) ಅಳುವನ್ನು ನಿಲ್ಲಿಸುತ್ತ, ಅವರೆಲ್ಲ ಒಟ್ಟಾಗಿ ಸೇರಿ, ಮಂತ್ರ, ತಂತ್ರ, ಔಷಧ, ಲೇಪನ–ಇತ್ಯಾದಿ (ಅನೇಕ ಬಗೆಯ ಚಿಕಿತ್ಸೆಯನ್ನು) ಮಾಡಿಯೂ, ಪ್ರಾಣವನ್ನು ಪಡೆಯುವುದಕ್ಕಾಗದೆ, ಹಿಂದಕ್ಕೆ ಸರಿದರು, ಅವರಲ್ಲಿ ಒಬ್ಬ ವಿಷವನ್ನು ಹರಣಮಾಡುವುದರಲ್ಲಿ ಬಲ್ಲಿದನಾದವನು. ಆ ಹಾವು ಕಡಿದ ರಾಜಕುಮಾರನ ದೇಹವನ್ನು ನೋಡುತ್ತ ಹೀಗೆ ಹೇಳಿದನು. ೨೫. 'ಆಯುಷ್ಯಮುಗಿದ ಈ ಭೂಮೀಶ್ವರನನ್ನು ಹಾವು ಯಾವ ಕಡೆಯಿಂದ ಬಂದು ಕಚ್ಚಿತೋ ಶಿವಶಿವ ! ದೈವವನ್ನು ಮೀರುವವನಾರು ?' ಎನ್ನುತ್ತ ಪುನಃ ಹೀಗೆ ಹೇಳಿದನು. ೨೬–೨೯. ಪರಿಶುದ್ಧವಾದ ವಾಸುಕಿ, ಕಂಬಳಾಶ್ವತರ, ಉನ್ಮತ್ತ, ಪ್ರಚಂಡ. ಗುಹ, ಸುಮನ, ತಕ್ಷಕ, ಪುಷ್ಪದಂಷ್ಟ್ರಕ, ಪುರಾಣಗಳು, ಬಲಾಕ,

ಜಾಲಿ ಪತಂಗ ವಿಭಾಕರ
ಕೌಲಿಕ ನಖಶಿಖಿ ಮಹೋದರಾಜಿತಕಂಗಳ್ ೨೭

ಪಿಂಜರಿ ಕಂಧರಕೋಟಿ ಧ
ನಂಜಯ ಪಾಂಡುರ ಕಶಾಲಿ ಪಿಂಡಾಂಶುಕ ಚಿ
ತ್ರಾಂಜನ ಕುಹರ ಬಲಾಢ್ಯ ಮ
ಣಿಂಜಯ ಸಮುದಂಗಳಾದಿಯಾದಹಿನಿವಹಂ ೨೮

ಸಾಸಿರವಿಭೇದಮದಱೊ
ಳ್ಸಾಸರಯಾಮಾಷ್ಟಕಕ್ಕೆ ಪತಿಗಳೆನಿಸಿ ಬ
ಲ್ಸಾಸದುರಂಗಗಳೆಂಟೊಳ
ವಾ ಸಮಯದೆ ಪಿಡಿದು ಕರ್ಚುಗುಂ ಮಾನವರಂ ೨೯

ವ॥ ಅವಱ ವಿಷಕ್ಕೆ ಮಂತ್ರತಂತ್ರ ಗಾರುಡಂಗಳಿಂ ಪರಿಹಾರವೊಳವು ಮೇಣ್ ಗಜನುಂ ದುರ್ಮುಖನುಂ ಮಿತ್ರಾರಿಯುಂ ರೇಣುಕನುಂ ಜಿನ[1]ಕನುಂ ಸರ್ಗಕನುಂ ದುರ್ಧರನುಂ ಕುಳಿಕನುಂ ದಂಡಪಾದಕನುಮೆಂಬ ಫಣಿಗಳ್ಮೊದಲಾದ ನಾಗಂಗಳ್ ಲಕ್ಷಸಂಖ್ಯೆಯೊಳವವಱ ಗರಳಂ ಕಾಲಮೃತ್ಯು ನುಂಗದೊಡೆ ನರನಂ ಗಾರುಡಕ್ರಿಯಾಮಂತ್ರೌಷಧಾದಿಯಿಂ ಪರಿಹರಿಸಲ್ಪಡುಗುಮಲ್ಲಿ ಕಾಲಮುಂ ಯುಗಮುಮಂ ನಟ್ಟ ಪಲ್ಗಳಿನಿತೆಂಬುದಂ ತಿಳಿದು ಘೋರ ಗರಳಾಸ್ಯಂಗಳೆನಿಪಷ್ಟಕುಲಫಣಿಗಳಂಶಭವೋರ

ಕರಾಳಮುಖ, ಐರಾವತ, ನೀಲ ಪುಂಡ್ರಕ, ಹವಿರ್ಧಕ್ರಾಹಿ, ಕರ್ಕೋಟಕ, ಕುಮುದ, ವಾಮನ, ಮುದ್ಗಲಾರ್ಯಕ, ಕಳಿಂಗ, ಶಂಖಪಾಲ, ಶಲ, ಕಾಲೀಯ, ಸಂವರ್ತಕ, ಕಾಲಿಕ ಧೃತರಾಷ್ಟ್ರ, ಕುಧರ, ಮಣಿನಾಗಗಳು, ಜಾಲ, ಪತಂಗ, ವಿಭಾಕರ, ಕೌಲಿಕ, ನಖಶಿಖಿ, ಮಹೋದರ, ಅಜಿತಕಗಳು, ಪಿಂಜರಿ, ಕಂಧರಕೋಟಿ, ಧನಂಜಯ, ಪಾಂಡುರ. ಕಶಾಲಿ, ಪಿಂಡಾಂಶುಕ, ಚಿತ್ರಾಂಜನ, ಕುಹರ, ಬಲಾಢ್ಯ, ಮಣಿಂಜಯ, ಸಮುದಗಳೇ ಮೊದಲಾದ ಹಾವುಗಳ ಭೇದವು ಸಾವಿರ ಪ್ರಕಾರದವು. ಅವುಗಳಲ್ಲಿ ಅತ್ಯಂತ ಸಾಹಸದ ಎಂಟು ಹಾವುಗಳು ಒಡೆಯರೆನಿಸಿವೆ. ಅವು ದಿನದ ಎಂಟನೆಯ ಜಾವದ ಸಮಯಕ್ಕೇ ಮಾನವರನ್ನು ಹಿಡಿದು ಕಚ್ಚುತ್ತವೆ. ವ॥ ಅವುಗಳ ವಿಷಕ್ಕೆ ಮಂತ್ರ ತಂತ್ರ, ಗಾರುಡ ಮಂತ್ರವೇ ಮೊದಲಾದವುಗಳಿಂದ ಪರಿಹಾರವು ಉಂಟು. ಮತ್ತು ಗಜ, ದುರ್ಮುಖ, ಮಿತ್ರಾರಿ, ರೇಣುಕ, ಜಿನಕ, ಸರ್ಗಕ, ದುರ್ಧರ, ಕುಳಿಕ, ದಂಡಪಾದಕವೆಂದೆನಿಸುವ ಫಣಿಗಳೇ ಮೊದಲಾದವು ಲಕ್ಷ ಸಂಖ್ಯೆಯವು. ಅವುಗಳ ವಿಷವು ಕಾಲಮೃತ್ಯುವು ಒಯ್ಯದಿದ್ದರೆ (ನುಂಗದಿದ್ದರೆ) (ಅಂಥ) ಮನುಷ್ಯನನ್ನು ಗಾರುಡಕ್ರಿಯೆ. ಮಂತ್ರ, ಔಷಧಗಳೇ ಮೊದಲಾದವುಗಳಿಂದ ಪರಿಹರಿಸುವುದಕ್ಕೆ ಸಾಧ್ಯವಿದೆ. ಅಲ್ಲಿ ಕಡಿದ ಕಾಲ, ಯುಗ, ನಟ್ಟ ಹಲ್ಲುಗಳೆಷ್ಟು ? ಎಂಬುದನ್ನು ತಿಳಿದುಕೊಳ್ಳಬೇಕು. ಘೋರ ವಿಷದಿಂದ ಕೂಡಿದ

---

1 ನು(ಮು)

ಗಂಗಳಗಿಯೆ ಗಾರುಡಮಂತ್ರ ಸಂಸ್ಕಾರದಿನಾ ಮಾನವಂಗಾವೇಶಂ ದುಂಬಿ ನುಡಿಯಿಸಲಕ್ಕುಮಮಂಗ ಕಾಲಮೃತ್ಯು ತಗಳ್ದಂದೊಂದು ಪಲ್ನಾಂಟೆ ಶಿರದೊಳ್ ಶಿಖಿಯ ಸೆಕೆಯಿಂದುದಕಾಭಿಷೇಕದಿನಾವಿಷ ಮಿಳಿಗುಮೆರಡುಪಲ್ನಾಂಟೆ ಸಾಂತರ ಗಾರುಡಮಂತ್ರವಿಧಿಯಿನಾಗರಳಮಳಿಗುಂ ಮೂಱುಪಲ್ನಾಂಟೆ ದಿವ್ಯೌಷಧ ಪ್ರಯೋಗದಿನಾ ಹಾಲಾಹಲಂ ಕಿಡುಗುಮಾವಂದದಿನಾದೊಡಂ ಪಲ್ನಾಲ್ಕು ನಾಂಟೆ ಘೋರತರಕ್ಷ್ವೇಳಮಾಪಾತಂಗಮಾದೊಡಮಸಾಧ್ಯಮಕ್ಕುಮೆಂದಾ ನರೇಂದ್ರಸುತನ ಕರದ ಫಣಿದಂತ ಕ್ಷಣಮನಭೀಕ್ಷಿಸಿ —

ಇದು ಕರ್ಕೋಟಕ ಫಣಿಕ
ರ್ಚಿಮುದುಱೆ ನಟ್ಟುರ್ಚಿ ನಾಂಟಿದುದು ನಾಲ್ಕುಂ ಪ
ಲ್ಲಿದಱ ವಿಷಮಂ ಮಹಾವಿಷ
ಪದಕಂಧರಶಂಭುಮಾದೊಡಂ ಪರಿದಪನೇ ೩೦

ವ॥ ಎಂದಾ ಜೋಗಿ ಕೆಲಂದೊಲಗಲೊಡನಾ ಸಮಯದೊಳಂತಃಪುರದ ಕಾಂತಜನಮುರಸ್ಥ ಳತಾಡನಂ ಬೆರಸು ಹಾಹಾರವಂ ಮಸಗೆ ಗೋಳಿಡುತ್ತಳುತ್ತುಮಿರೆ ಮತ್ತಮಲ್ಲಿ—

ಪರಿಜನಮುಂ ಪುರಜನಮುಂ
ನೆರೆದಾಪ್ತರುಮಿಷ್ಟಮಿತ್ರರುಂ ಕಣ್ಬನಿ ಕಾ
ಳ್ಪುದಮಾಗಿ ಸುರಿಯೆ ಶೋಕಾ
ತುರತೆಯಿನೊಳಕೊಂಡಳುತ್ತುಮಿರೆ ಬಳಿಕಾಗಳ್ ೩೧

ಮುಖಗಳುಳ್ಳವೆನಿಸುವ ಎಂಟು ಪ್ರಕಾರದ ಕುಲದ ಹಾವುಗಳ ಅಂಶದಿಂದ ಹುಟ್ಟಿದ ಹಾವುಗಳು ಕಚ್ಚಿದರೆ ಗಾರುಡ ಮಂತ್ರ ಸಂಸ್ಕಾರದಿಂದ ಆ ಮನುಷ್ಯನಿಗೆ ಆವೇಶವು ತುಂಬಿ ನುಡಿಸುವುದಕ್ಕೆ ಆಗುವುದು. ಅವಧಿಗೆ ಅಕಾಲಮೃತ್ಯುವು ಉಂಟಾಗದಿದ್ದರೆ, ಒಂದು ಹಲ್ಲುನಟ್ಟಿದ್ದರೆ, ತಲೆಯ ಮೇಲುಭಾಗದಲ್ಲಿ ಬೆಂಕಿಯ ಶಾಖದಿಂದ, ನೀರಿನ ಅಭಿಷೇಕದಿಂದ ಆ ವಿಷವು ಇಳಿಯುವುದು. ಎರಡು ಹಲ್ಲುಗಳು ನಾಟಿದ್ದರೆ, ಬಹುಸಾರ ವತ್ತಾದ ಗಾರುಡಮಂತ್ರ ವಿಧಿಯಿಂದ ಆ ಹಾವಿನ ಸಂಬಂಧದ ವಿಷವು ಅಳಿಯುವುದು. ಮೂರು ಹಲ್ಲುಗಳು ನಾಟಿದರೆ, ದಿವ್ಯವಾದ ಔಷಧ ಪ್ರಯೋಗದಿಂದ ಆ ಹಾಲಾಹಲ (ವಿಷವು) ಪರಿಹಾರವಾಗುವುದು. ನಾಲ್ಕು ಹಲ್ಲುಗಳು ನಟ್ಟಿದ್ದರೆ, ಯಾವರೀತಿಯಿಂದಲೂ ಘೋರತರವಾದ ಆ ವಿಷವನ್ನು ಹೋಗಲಾಡಿಸಲು ಯಾವಾತನಿಗಾದರೂ, ಅಸಾಧ್ಯ ವಾದುದಾಗುವುದು. ಎಂದು ಆ ರಾಜಕುಮಾರನ ಕಯ್ಯಲ್ಲಿನ ಹಾವಿನ ಹಲ್ಲುಗಳ ಗುರುತು ಗಳನ್ನು ನೋಡುತ್ತ ೩೦. ಇದು ಕಾರ್ಕೋಟಕನೆಂಬ ಹಾವು ಕಚ್ಚಿದ ಗಾಯ, ನಾಲ್ಕು ಹಲ್ಲುಗಳೂ ಚೆನ್ನಾಗಿ ನಟ್ಟು ಪಾರಾಗಿ ಹೊರ ಬಂದಿವೆ. ಈ ಹಾವಿನ ವಿಷವನ್ನು ಮಹಾಕಾಲಕೂಟ ವಿಷವನ್ನು ಕಂಠದಲ್ಲಿ ಧರಿಸಿರುವ ಶಿವನಾದರೂ ಪರಿಹಾರಮಾಡಿಯಾನೇ ? ವ॥ ಹೀಗೆಂದುಆ ಜೋಗಿಯು ಪಕ್ಕಕ್ಕೆ ಸರಿಯಲು ಆ ಸಮಯದಲ್ಲಿ ಅಂತಃಪುರದ ಸ್ತ್ರೀ ಸಮೂಹದವರು ಎದೆ ಎದೆ ಬಡಿದುಕೊಳ್ಳುವವ ರಾಗಿ, ಹಾಹಾಕಾರವು ಎಲ್ಲ ಕಡೆಗೂ ಹರಡುತ್ತಿರಲು, ಗೋಳಾಡುತ್ತ, ಅಳುತ್ತ, ಇರಲಾಗಿ ಮತ್ತು ಅಲ್ಲಿ ೩೧–೩೨. ಆಗ ಸೇವಕ ವರ್ಗದ ಜನಗಳೂ, ಪಟ್ಟಣದ

ಅಳಿದ ನಿಜೇಶನಂ ರಮಣಿ ನೋಡಿ ನಿಜೋದರದಲ್ಲಿ ಬಾಸುಳಂ
ಬಳಯಿಸೆ ಕೋಮಲಾಂಗುಲಿಗಳೋವದೆ ಮೋದಿಕೊಳುತ್ತೆ ಕಾಂತ ಹಾ
ವಿಳಸಿತರೂಪ ಹಾ ವಿನಯಮಂದಿರ ಹಾಯೆನುತುಂ ದೃಗಂಬು ಪಾ
ಯ್ದೞಿದಿಳೆಯೊಳ್ಪ್ರನಲ್ವರಿಯೆ ಬಿಳ್ದಳುತಾರ್ತತೆಯಿಂ ಪಲುಂಬಿದಳ್ ೩೨

ಪಳಯಿಸಿದಳ್ಮಿಗೆ ಮಱುಗಿದ
ಳೊಳಗಾಱಿದಳೋಪ ಕೆಟ್ಟೆನಕಟೆನುತುಂ ಬಾ
ಯಳಿದತ್ತಳ್ಕಳವಳಿಸಿದ
ಳಿಳೆಯೊಳ್ಕೆಡೆದುರುಳ್ದು ಪೊರಳ್ದು ತಳವೆಳಗಾದಳ್ ೩೩

ವ॥ ಅಂತಳವಿಗಳಿದಳಲನೊಳಕೊಂಡಾಕ್ರಂದನಂಗೆಯ್ದು ಗದ್ಗದೋದ್ಗಳಿತ ಶಿಥಿಲಾಕ್ಷರಂ ನಾಲಗೆಯೊಳ್ಪೊರಳ್ದುರುಳೆ ಮೊದಲ ದಿನದೊಳಾ ವೇಮುನಾಚಾರ್ಯರ್ಹರಸಲೊಲ್ಲದೆಂದುದು ಮನೆಲ್ಲಮಂ ಬಿತ್ತರಿಸಲೊಡನಾ ನೃಪನಂದನನಾಪ್ತಬಂಧುಗಳುಮವನ ತಂದೆತಾಯ್ಗಳುಂ ಕೇಳ್ದ ಳದಿರೆಂದವಳಂ ಸಂತೈಸುತಿಂತೆಂದರ್—

ಪರಮಾರಾಧ್ಯಪ್ರಪನ್ನಪ್ರಕರವಿಪದಘಧ್ವಂಸಕರ್ಸತ್ಕೃಪಾಭಾ[1]
ಸುರಚಿತ್ತರ್ವೇಮುನಾರ್ಯರ್ಕರುಣಪಮನಿದನೊಯ್ದಿಂದು ಮುಂದಿಕ್ಕುತಾಮೆ

ಜನರುಗಳೂ, ಆಪ್ತರಾದವರೂ, ಇಷ್ಟಮಿತ್ರರೂ ಸೇರಿ, ಕಣ್ಣೀರ ಹನಿಗಳು ಪ್ರವಾಹವಾಗಿ ಹರಿಯುವಂತೆ ಶೋಕಾಧಿಕ್ಯವನ್ನು ಹೊಂದಿ, ಅಳುತ್ತಿರಲು ; ಆಗ ಸತ್ತು ಹೋದ ಪತಿಯನ್ನು ಆ ಹೆಂಡತಿಯು ನೋಡಿ, ಹೊಟ್ಟೆಯ ಮೇಲೆ ಬಾಸುಂಡೆಗಳು ಬೆಳೆದೇಳುತ್ತಿರಲು, ಕೋಮಲವಾದ ಬೆರಳುಗಳನ್ನು ಸಂಕಟದಿಂದ ಮುರಿದುಕೊಳ್ಳುತ್ತ, 'ಹಾ ! ಕಾಂತನೇ ಶೋಭಿಸುವ ರೂಪವುಳ್ಳವನೇ, ಹಾ ! ವಿನಯಕ್ಕೆ ಮಂದಿರವಾದವನೇ, ಹಾ !' ಎನ್ನುತ್ತ ಕಣ್ಣೀರುಗಳು ಉಕ್ಕಿಹೋಗಿ ಭೂಮಿಯಲ್ಲಿ ಪ್ರವಾಹವಾಗಿ ಹರಿಯುತ್ತಿರಲು, ನೆಲಕ್ಕೆ ಬಿದ್ದು ದೈನ್ಯಭಾವದಿಂದ ಅತ್ತಳು. ೩೩. (ಅವಳು) ಪ್ರಲಾಪಿಸಿದಳು ; ವಿಶೇಷವಾಗಿ ಸಂಕಟಕ್ಕೊಳಗಾದಳು ; ಎದೆಯೊಣಗಿಸಿಕೊಂಡಳು. 'ಪ್ರಿಯನೇ, ಕೆಟ್ಟೆನು.' ಎನ್ನುತ್ತ ಬಾಯಿ ತೆರೆದು ಅತ್ತಳು ; ಕಳವಳಗೊಂಡಳು ; ಭೂಮಿಯ ಮೇಲೆ ಬಿದ್ದು ಉರುಳಾಡಿ, ಹೊರಳಾಡಿ, ಸಂಕಟಪಟ್ಟಳು. ವ॥ ಆ ರೀತಿ ಗಣನಾತೀತವಾಗಿ ದುಃಖವನ್ನು ಹೊಂದಿ ಬೋರಾಡಿ ಅತ್ತು, ಗದ್ಗದದಿಂದ ಹೊರಹೊರಟ ತಡೆತಡೆದು ಬರುವ ಅಕ್ಷರಗಳು ನಾಲಿಗೆಯ ಮೇಲೆ ಹೊರಳಾಡಿ ಉರುಳುತ್ತಿರಲು, ಪ್ರಥಮ ದಿನವೇ ಆ ವೇಮುನಾಚಾರ್ಯರು ಆಶೀರ್ವಾದ ಮಾಡಲು ಮನಸ್ಸುಮಾಡದೆ, ಹೇಳಿದುದನ್ನೆಲ್ಲ ವಿಶದವಾಗಿ ಹೇಳಲಾಗಿ, ಆ ರಾಜಕುಮಾರನ ಆಪ್ತ ಬಂಧುಗಳೂ, ಅವನ ತಂದೆತಾಯಿಗಳೂ, ಕೇಳಿ, ಅಳಬೇಡವೆಂದು ಅವಳನ್ನು ಸಮಾಧಾನಗೊಳಿಸಿ, ಹೀಗೆ ಹೇಳಿದರು : ೩೪. 'ಪರಮ ಆರಾಧ್ಯರೂ, ಶರಣಾಗತರಾದ ಜನರುಗಳ

1 ಸ(ದ)

ಲ್ಲರುಮುದ್ಯದ್ಭಕ್ತಿಯಿಂ ದೀನತೆವೆರಸು ಶರಣ್ಬೊಕ್ಕೊಡೀ ಸತ್ತ ರಾಯಂ
ಗಿರದೀವಪ್ರಾಣಮಂ ಮಾಣದೆ ಮೆಱೆವಿನಮಾತ್ಮೀಯಶೈವಪ್ರಭಾವಂ ೩೪

ವ॥ ಎಂದುಸಿರ್ದಿದೆ ಕಜ್ಜಮೆಂದು ನಿರ್ಧರಿಸಿ—

ಜವದಿಂದೆೞ್ದು ತಾವೆಲ್ಲರುಮವರ ಪದಾಂಭೋಜದೊಳ್ಬಿೞ್ದು ಭೀತಿ
ಪ್ರವಣರ್ಮೆಯ್ಯಿಕ್ಕಿ ಕೆಯ್ಯಂ ಮುಗಿದವಧರಿಸಲ್ವೇಳ್ಕುಮಾಚಾರ್ಯವಂಶಾ
ರ್ಣವರಾಕಾಚಂದ್ರ ನೀಂ ಬಿನ್ನಪಮನಿದನಿವಂ ನಿಮ್ಮ ಭೃತ್ಯಂ ಮಹಾಮೃ
ತ್ಯುವಿನುಗ್ರಾಸ್ಯಾಂತರಂಬೊಕ್ಕಳಿದನಕಟ ಘೋರಾಹಿದಂತಾತಿದಷ್ಟಂ ೩೫

ಅಡಿಗೆಱಗೆ ಪರಕೆಯುಂ ಕುಡ
ದೊಡೆಯರ್ನಿರವಿಸಿದ ತೆಱದೆ ಫಣಿದಷ್ಟನಿವಂ
ಮಡಿದಂ ಪಡುಗಡೆಯುದಯಿಸಿ
ದೊಡಮರ್ಕಂ ದೇವ ನಿಮ್ಮ ನುಡಿ ತಪ್ಪುಗುಮೇ ೩೬

ನಿಜಶಿಷ್ಯರಳಿಕದೊಳ್ಜಡ
ಜಜನುಲ್ಲಿಖಿಸಿರ್ದ ಲಿಪಿಯನೊರಸುವೆ ಗಡ ನೀಂ
ನಜನಿಂತು ನೆಗಳ್ದ ಜನಪಾ
ಲಜಮೃತಿಯಂ ಪಱಿವುದಱಿದೆ ನಿಮಗತಿಮಹಿಮಾ ೩೭

ಆಪತ್ತುಗಳನ್ನೂ, ಪಾಪಗಳನ್ನೂ ನಾಶಮಾಡತಕ್ಕವರೂ, ಒಳ್ಳೆಯ ಕೃಪಾವಿಶೇಷ ಪೂರ್ಣವಾದ ಪ್ರಕಾಶಿಸುವ ಚಿತ್ತವುಳ್ಳವರೂ, ಆದ ವೇಮನಾಚಾರ್ಯರಲ್ಲಿಗೆ ಈ ಹೆಣ ವನ್ನು ಒಯ್ದು ಮುಂದೆ ಇಟ್ಟು, ನಾವೆಲ್ಲರೂ ಅತ್ಯಧಿಕ ಭಕ್ತಿಯಿಂದಲೂ ದೈನ್ಯಭಾವ ದಿಂದಲೂ ಕೂಡಿ, ಶರಣುಹೊಕ್ಕರೆ, ಈ ಸತ್ತ ರಾಜನಿಗೆ ತಮ್ಮ ವೀರಶೈವ ಪ್ರಭಾವ ಕಾರಣದಿಂದ ತಪ್ಪದೆ ಪ್ರಾಣವನ್ನು ಲೋಕಪ್ರಸಿದ್ಧವಾಗುವಂತೆ ಕೊಡುವರು. ವ॥ ಹೀಗೆ ಮಾತನಾಡಿ ಈಗ ಇದೇ ಯೋಗ್ಯಕಾರ್ಯವೆಂದು ನಿರ್ಧರಮಾಡಿಕೊಂಡು—೩೫. ವೇಗವಾಗಿ ವೇಮನಾಚಾರ್ಯರ ಹತ್ತಿರಕ್ಕೆ ಅವರೆಲ್ಲರೂ ಹೊರಟುಬಂದು, ಅವರ ಪಾದ ಕಮಲಗಳ ಮೇಲೆ ಬಿದ್ದು ಭಯತತ್ಪರರಾದ ಅವರೆಲ್ಲ ನಮಸ್ಕರಿಸಿ, ಕೈಮುಗಿದು 'ಆಚಾರ್ಯವಂಶವೆಂಬ ಸಮುದ್ರಕ್ಕೆ ಚಂದ್ರಪ್ರಾಯನಾದವನೇ, ನೀನು ನಮ್ಮ ಈ ಬಿನ್ನಪ ವನ್ನು ಲಾಲಿಸಬೇಕು. ಈತನು ನಿಮ್ಮ ಸೇವಕನು. ಘೋರವಾದ ಹಾವಿನ ಕಡಿತದಿಂದ ಭಯಂಕರವಾದ ಮೃತ್ಯುವಿನ ಉಗ್ರವಾದ ಬಾಯಿಗೆ ಬಿದ್ದು, ಅಕ್ಕಟಾ ! ಸತ್ತು ಹೋದನು. ೩೬. (ನಿನ್ನೆಯ ದಿನ ನಿಮ್ಮ) ಪಾದಗಳಿಗೆ ನಮಸ್ಕರಿಸಲು ಹರಕೆಯನ್ನು ಕೊಡದಿರುವ ಒಡೆಯರಾದ ತಾವು ಅಪ್ಪಣೆ ಕೊಡಿಸಿದ ರೀತಿಯಲ್ಲಿ ಹಾವು ಕಡಿದು ಇವನು ಸತ್ತನು, ದೇವ, ಸೂರ್ಯನು ಪಶ್ಚಿಮದಿಕ್ಕಿನಲ್ಲಿ ಹುಟ್ಟಿದರೂ ಹುಟ್ಟಬಹುದು ನಿಮ್ಮ ಮಾತು ಸುಳ್ಳಾಗುವುದೇ ? ೩೭. 'ಅತಿಮಹಿಮಾ ಪೂರ್ಣನಾದವನೇ, ನೀನು ನಿನ್ನ ಶಿಷ್ಯರ ಹಣೆಯಲ್ಲಿ ಬ್ರಹ್ಮನು (ಜಡಜಭವಂ) ಬರೆದ ಬರೆಹವನ್ನು ಒರೆಸಿಹಾಕು ವವನಲ್ಲವೇ ! ಬ್ರಹ್ಮನು ಈ ರೀತಿಗೆ ಗುರಿಮಾಡಿದ ರಾಜಪುತ್ರನ ಮರಣವನ್ನು

ಕಾಲಹರ ಗರಳಕಂಠ
ವ್ಯಾಲಾಭರಣೈಕರೂಪ ಪಾಲಿಪುದೀಗ
ಳ್ಕಾಲನ ಪೊಳಲ್ಗೆ ಪಟುಫಣಿ
ಹಾಲಾಹಲಮಡಸೆ ತೆಳರ್ದ ಭೂಭುಜನಸುವಂ ೩೮

ಅಮಿತಗುಣಶಾಲಿ ಲೀಲಾ
ಶಮಿತೇಂದ್ರಿಯವರ್ಗ ಭರ್ಗಮಾರ್ಗಗ ವಿದ್ಯಾ
ಸಮುದಯ ಮುದಮಯಮಾನಸ
ವಿಮದ ಸ್ತುತ ವೇಮನಾರ್ಯ ಜಯ ಗಣವರ್ಯಾ ೩೯

ವಿತರಣಧೀರ ವಿಶ್ರುತವಿಚಾರ ವಿನಿರ್ಜಿತಮಾರ ಲಿಂಗಸಂ
ಗತನಿಜಕಾಯ ನಿರ್ಗಳದಪಾಯ ನಿರಾಕೃತಮಾಯ ಮಂಗಳಾ
ಯತನಸುವೃತ್ತ ಮಾನ್ಯ ಸಮುದಾತ್ತ ಮಹೇಶ್ವರಚಿತ್ತ ಪಾವನೋ
ನ್ನತಗುಣಧಾಮ ಪಾಲಿಪುದು ವೇಮಗುರೂತ್ತಮ ತಾಮಸಾತ್ಮರಂ ೪೦

ಗುರುಕುಲಚಕ್ರವರ್ತಿ ವಿಶದೋಜ್ವಳಕೀರ್ತಿ ನಿಜಾನತಾರ್ತಿಸಂ
ಹರ ಹರದಿವ್ಯರೂಪ ಶಿವತತ್ವಕಳಾಪ ದುರಂತಪಾಪಕಂ

ಪರಿಹರಿಸುವುದು ನಿಮಗೆ ಅತಿಶಯವಾದದ್ದೇ ?' ೩೮. ಕಾಲಹರನೂ, ನೀಲಕಂಠನೂ, ಹಾವುಗಳೇ ಆಭರಣವಾಗುಳ್ಳವನೂ ಆದ ಶಿವನಲ್ಲಿ ಐಕ್ಯತಾಭಾವವನ್ನು ಹೊಂದಿರುವವನೇ, ಈಗ ಯಮನಪಟ್ಟಣಕ್ಕೆ ಸಮರ್ಥವಾದ ಹಾವಿನ ವಿಷವೇರಿ ಸತ್ತು ಹೊರಟು ಹೋದ ಈ ರಾಜಪುತ್ರನನ್ನು ರಕ್ಷಿಸಬೇಕು. ೩೯. ಅಪರಿಮಿತ ಸದ್ಗುಣಗಳುಳ್ಳವನೇ, ಆತ್ಮಲೀಲೆಯಿಂದ ನಿಗ್ರಹಿಸಲ್ಪಟ್ಟ ಸಮಸ್ತ ಇಂದ್ರಿಯ ವರ್ಗಗಳನ್ನುಳ್ಳವನೇ, ಪರಶಿವನ ವಿಷಯಕ ಸದ್ಭಕ್ತಿಯಲ್ಲಿ ಚರಿಸುವವನೇ, ವೀರಶೈವ ಧರ್ಮಮಾರ್ಗಕ್ಕನುಗುಣವಾದ ವಿದ್ಯೆಗಳ ಸಮೂಹವನ್ನು ಹೊಂದಿದವನೇ, ಆನಂದಮಯವಾದ ಮನಸ್ಸುಳ್ಳವನೇ, ಮದವಿರಹಿತರಾದವರಿಂದ ಸ್ತೋತ್ರಮಾಡಿಸಿಕೊಳ್ಳುವವನೇ, ಶಿವಗಣಶ್ರೇಷ್ಠನೇ, ವೇಮನಾರ್ಯ, ಜಯ. ೪೦. ದಾನಗುಣದಲ್ಲಿ ಧೀರನೂ, ಪ್ರಸಿದ್ಧವಾದ ತಾತ್ತ್ವಿಕ ವಿಚಾರವನ್ನುಳ್ಳವನೂ, ಮನ್ಮಥ ಸಂಬಂಧದ ಮನೋವಿಕಾರವನ್ನು ಗೆದ್ದವನೂ, ಲಿಂಗದಿಂದ ಸಂಗತವಾದ ದೇಹವುಳ್ಳವನೂ (ಇಷ್ಟಲಿಂಗವನ್ನು ದೇಹದ ಮೇಲೆ ಧರಿಸಿದವನೂ). ಅಪಾಯದಿಂದ ದೂರನಾದವನೂ, ಮಾಯೆಯನ್ನು ತಿರಸ್ಕರಿಸಿದವನೂ, ಮಂಗಳಗಳಿಗೆ ಆಶ್ರಯವಾದ ಸಚ್ಚರಿತ್ರೆಯುಳ್ಳವನೂ, (ಸರ್ವಜನರ) ಮನ್ನಣೆಗೆ ಪಾತ್ರನೂ, ಉದಾರನೂ, ಪರಮೇಶ್ವರನಲ್ಲಿಟ್ಟ ಚಿತ್ತವುಳ್ಳವನೂ, ಪಾವನವೂ, ಉನ್ನತವೂ ಆದ ಗುಣಗಳಿಗೆ ಸ್ಥಾನನಾದವನೂ ಆದ ಹೇ, ವೇಮನಾರಾಧ್ಯ ಗುರುಶ್ರೇಷ್ಠನೇ, ತಮೋಗುಣದ ಆತ್ಮವುಳ್ಳವರಾದ ನಮ್ಮನ್ನು ರಕ್ಷಿಸಬೇಕು. ೪೧. ಗುರುಸಮೂಹಕ್ಕೆಲ್ಲ ಚಕ್ರವರ್ತಿಯಂತಿರುವ, ವಿಶದವಾಗಿ ಪ್ರಕಾಶಮಾನವಾದ ಯಶಸ್ಸನ್ನುಳ್ಳ

ಜನಹರಿಣೇಂದ್ರ ಸದ್ವನಧಿಚಂದ್ರ ಸದಾಶಿವಭಕ್ತಿಸಾಂದ್ರ ನೀಂ
ಪೊರೆವುದು ವೇಮನಾರ್ಯ ಬಿಡದೆಮ್ಮನಪಾರ್ಯಸುಕಾರ್ಯಕೌಶಲಾ ೪೧

ಶರಣಾಗತಜನಪವಿಪಂ
ಜರರೆಂಬೀ ಬಿರಿದು ನಿಮಗೆ ಶಾಶ್ವತಮದಱಿಂ
ಕರುಣಾಕರ ನಿಮ್ಮಂಘ್ರಿಗೆ
ಶರಣಾಗತರಾದೆವೆಮ್ಮ ಪೊರೆ ಮಹಿಮಾಬ್ಧೀ ೪೨

ಈಯುಗದೊಳಳಿದ ನರರ್ಗಸು
ವೀಯಲುಮಂತಕನ ಬಾಧೆಯುಂ ಪಱಿದೊಲವಿಂ
ಕಾಯಲುಮೆಲ್ಲಿ ನೀವಲ್ಲದೆ
ಮಾಯಾಂತಕ ಪೇಳ್ಸಮರ್ಥರಾರ್ಧರಿಳೆಯೊಳ್ ೪೩

ಮೊದಲೊಳ್ ನಿಮಗಿವನೊಲ್ದೆಱ
ಗದೊಡಿವನದು ತಪ್ಪು ಗಡ ವಿಚಾರಿಪೊಡೀತಂ
ಮೊದಲೆಱಗಿದನಿವನೊಳ್ತ
ಪ್ಪುದಱಿಂದಾಗುಮೆ ದೇವದೇವ ನೀವಱಿಯದುದೇ ೪೪

ವನೂ, ನಮಸ್ಕರಿಸಿದವರ ಸಂಕಟಗಳನ್ನು ಪರಿಹಾರಮಾಡುವವನೂ, ಹರನ ದಿವ್ಯವಾದ ಆಕಾರವುಳ್ಳವನೂ. ಶಿವಸಂಬಂಧವಾದ ತತ್ತ್ವಸಮೂಹ ವಿಶಿಷ್ಟನಾದವನೂ, ಕೊನೆಯೇ ಇಲ್ಲದ ಪಾಪಗಳೆಂಬ ಆನೆಗಳಿಗೆ ಸಿಂಹಪ್ರಾಯನಾದವನೂ, ಸತ್ಪುರುಷರೆಂಬ ಸಮುದ್ರಕ್ಕೆ ಚಂದ್ರನೋಪಾದಿಯಲ್ಲಿರುವವನೂ, ಸತತವೂ ಶಿವನಲ್ಲಿಟ್ಟ ಅತಿಶಯ ಭಕ್ತಿಭಾವವುಳ್ಳವನೂ, ಇತರರಿಂದ ತಡೆಯಲಸಾಧ್ಯವಾದ ಸತ್ಕಾರ್ಯಗಳಲ್ಲಿ ಕೌಶಲ್ಯವುಳ್ಳವನೂ ಆದ ಹೇ. ವೇಮನಾರ್ಯನೇ ನೀನು (ನಮ್ಮನ್ನು) ರಕ್ಷಿಸಬೇಕು. ೪೨. ಶರಣಾಗತರಾದ ಜನರಿಗೆ ವಜ್ರಪಂಜರದಂತಿರುವವರು ಎಂಬ ಈ ಬಿರುದು ನಿಮಗೆ ಶಾಶ್ವತವಾದದ್ದು, ಆದ್ದರಿಂದ ಹೇ ಕರುಣಾಕರನೇ, ಮಹಿಮೆಗೆ ಸಮುದ್ರದಂತಿರುವವನೇ, ನಿಮ್ಮ ಪಾದಗಳಿಗೆ ಶರಣಾಗತರಾಗಿದ್ದೇವೆ. ನಮ್ಮನ್ನು ರಕ್ಷಿಸು. ೪೩. ಈ ಯುಗದಲ್ಲಿ ಸತ್ತ ಮನುಷ್ಯರಿಗೆ ಪ್ರಾಣವನ್ನು ಕೊಡುವುದಕ್ಕೂ, ಯಮನ ಬಾಧೆಯನ್ನು ಪರಿಹರಿಸಿ ಪ್ರೀತಿಯಿಂದ ಕಾಯುವುದಕ್ಕೂ, ಎಲೈ ಮಾಯೆಗೆ ಅಂತಕಸ್ವರೂಪನಾದ ದೇವನೇ, ನೀವಲ್ಲದೆ ಬೇರೆ ಸಮರ್ಥರು ಈ ಭೂಮಿಯಲ್ಲಿ ಇನ್ನಾರು ? ಹೇಳು. ೪೪. ಮೊದಲು ಇವನು ನಮಸ್ಕಾರವನ್ನೇ ಮಾಡದಿದ್ದರೆ ಇವನದು ತಪ್ಪಾಗುತ್ತಿತ್ತಲ್ಲವೇ ! ವಿಚಾರಿಸಿ ನೋಡಿದರೆ ಈತನು (ನಿಮ್ಮನ್ನು ಕಂಡಕೂಡಲೇ) ಮೊದಲೇ ನಮಸ್ಕಾರ ಮಾಡಿದ್ದಾನೆ. ದೇವ, ಇವನಲ್ಲಿ ತಪ್ಪು ಹೇಗೆ ಉಂಟಾದೀತು. (ಇದೆಲ್ಲಾ) ನಿಮಗೆ

ಶರವುತಕೆ ಕೀರ್ತಿ ನಿಮ್ಮಯ
ಚರಿತಕ್ಕೆ ನೆಗಳ್ತೆಯೆಮಗೆ ಪರಮಾನಂದಂ
ತರುಣಿಗೆ ಮುತ್ತೈದೆತನಂ
ಧರಣಿಗೆ ಮುದಮಲರ್ವ ತೆಱದೆ ಪೊರೆ ಕರುಣಾಬ್ಧೀ ೪೫

ಅನಿಮಿತ್ತಬಂಧು ನಿಮ್ಮಯ
ವಿನುತ ಕೃಪಾಪಾಂಗಸಾರಸಂಜೀವನದಿಂ
ಘನವಿಷಮವಿಷಧರದ ವಿಷ
ಮನಿದಂ ಕಳೆದಸುವನಿತ್ತು ಪೊರೆ ಗುರುತಿಲಕಾ ೪೬

ಮುಸುಟಿಯ ಚೌಡರಾಯನಡಿಗೊಲ್ದೆಱಗಿರ್ದ ಲತಾಂಗಿಗೆಯ್ದೆ ಸಂ
ತಸದೊಳೆ ದೀರ್ಘಮಾಯು ನಿನಗೆಂದು ಮೊದಲ್ಪರಸುತ್ತೆ ಮೇಣವ
ಳ್ಗಸು ಪೆಱಪಿಂಗೆ ಜೀವನಮನಿತ್ತು ವಿರಾಜಿಸನೇ ಧರಿತ್ರಿಯೊ
ಳ್ಕುಸುಮಶರಾರಿಭಕ್ತತತಿಗಿಂತಿದು ಚೋದ್ಯಮೆ ದೇವ ಧೀಮಣೀ ೪೭

ಪನ್ನಗಧರಸನ್ನಿಭ ಪಟು
ಪನ್ನಗದಪ್ಪಂಗೆ ಶರಣವಿಱುವುದು ಭಜಕಾ
ಪನ್ನಗಪವಿನಿಭ ಗುಣಸಂ
ಪನ್ನಗಣಪ್ರವರ ದೇವ ವಿಬುಧಲಲಾಮಾ ೪೮

ಗೊತ್ತಿಲ್ಲದುದೇ ? ೪೫. ಶಿವಸಂಬಂಧವಾದ ಮತದ ಕೀರ್ತಿಸ್ವರೂಪನೇ, ನಿಮ್ಮ ಚರಿತ್ರೆಯ ವಿಖ್ಯಾತಿಯು ನಮಗೆ ಪರಮಾನಂದವುಂಟುಮಾಡುವಂತಹದು. ಈ ತರುಣಿಗೆ ಮುತ್ತೈದೆತನವೂ ಭೂಮಿಗೆ ಸಂತೋಷವೂ, ಅರಳುವ ರೀತಿಯಲ್ಲಿ ಹೇ ಕರುಣಾ ಸಮುದ್ರನೇ ರಕ್ಷಿಸು. ೪೬. ಹೇ ಗುರುಶ್ರೇಷ್ಠನೇ, ಅನಿಮಿತ್ತ ಬಂಧುವೇ, ನಿಮ್ಮ ಶ್ಲಾಘ್ಯವೂ, ಕೃಪಾವಿಶಿಷ್ಟವೂ ಆದ ಕಡೆಗಣ್ಣಿನ ನೋಟವೆಂಬ ಸಾರವತ್ತಾದ ಸಂಜೀವನ ಶಕ್ತಿಯಿಂದ ಅಧಿಕವಾದ ಭಯಂಕರ ಹಾವಿನ (ವಿಷಧರ) ಈ ವಿಷವನ್ನು ಕಳೆದು (ಇವನಿಗೆ) ಪ್ರಾಣದಾನ ಮಾಡಿ ಸಂರಕ್ಷಿಸು. ೪೭. ಹೇ, ದೇವಧೀಮಣಿಯೇ, (ಈ ಪೂರ್ವದಲ್ಲಿ) ಮುಸುಟಿಯ ಚೌಡಯ್ಯ ರಾಯನಿಗೆ ಭಕ್ತಿಯಿಂದ ನಮಸ್ಕಾರ ಮಾಡಿದ ಲತಾಂಗಿಗೆ (ಸ್ತ್ರೀಯಳಿಗೆ) ಸಂತೋಷದಿಂದ (ಅವರು) 'ನಿನಗೆ ದೀರ್ಘಾಯುಷ್ಯ ವುಂಟಾಗಲಿ,' ಎಂದು ಮೊದಲು ಆಶೀರ್ವಾದ ಮಾಡಿದರು. ಆಮೇಲೆ ಅವಳ ಪ್ರಾಣವು ಹಾರಿ ಹೋಗಲಾಗಿ, ಅವಳಿಗೆ ಪ್ರಾಣದಾನ ಮಾಡಿ ಭೂಮಂಡಲದಲ್ಲಿ ಪ್ರಕಾಶಮಾನ ನಾಗಲಿಲ್ಲವೇ ? ಪರಮೇಶ್ವರನ ಭಕ್ತಸಮೂಹಕ್ಕೆ ಇದೇನು ಆಶ್ಚರ್ಯದ ಕಾರ್ಯವೇ ? ೪೮. ಹೇ ದೇವನಾರಾಧ್ಯ, ವಿದ್ವಾಂಸರಲ್ಲಿ ಶ್ರೇಷ್ಠನಾದವನೇ, ಪರಶಿವ ಸ್ವರೂಪನೇ, ನಿನ್ನನ್ನು ಭಜಿಸುವಂಥ ಜನರ ಆಪತ್ತುಗಳೆಂಬ ಪರ್ವತಗಳಿಗೆ ವಜ್ರಾಯುಧ ಪ್ರಾಯ ನಾದವನೇ, ಸದ್ಗುಣಗಳಿಂದ ಕೂಡಿದ ಶಿವಗಣ ಶ್ರೇಷ್ಠನೇ, ಸಮರ್ಥವಾದ ಹಾವಿನಿಂದ

ಶರಣಾಗತ ರಕ್ಷಾಕರ
ಬಿರಿದಾಂಕ ಭವತ್ಪದಾಬ್ಜಮಂ ಮಱೆವೊಕ್ಕಾ
ಮಿರೆ ಪೊರೆಯದಭಯಮಮಂ ಕುಡ
ದಿರೆ ನಿಮ್ಮಯ ಬಿರಿದು ಬಿಂಕಮೇನಪ್ಪುದೊ ಪೇಳ್ ೪೯

ಗತಿಯುಂ ಮತಿಯುಂ ಹಿತನುಂ
ಪಿತನುಂ ನೀಮೆಮಗೆ ದೇವ ಪೊರೆ ಪೊರೆಯದೊಡು
ನ್ನತಧೀರ ನಿಮ್ಮ ವೀರ
ವ್ರತಕ್ಕೆ ಕುಂದಪ್ಪುದಲ್ತೆ ವಿಶ್ವಂಭರೆಯೊಳ್ ೫೦

ವ॥ ಎಂದವಂದಿರಡಿಗಡಿಗೆ ಮಣಿವುತುಂ ಪಲವಂದದಿಂ ನುತಿಯಿಸುತುಂ ಪ್ರಾಣ ದಾನಮಂ ಪ್ರಾರ್ಥಿಸುತುಂ ನಿಜಕೃಪಾಕಟಾಕ್ಷಸಾಮರ್ಥ್ಯಮಂ ಬಯಸುತುಂ ಬಾಯಳಿದು ಬೇಡಿಕೊಳುತ್ತು ಮಿರ್ಪಾ ಸಮಯದಲ್ಲಿ—

ಅಪ್ರತಿಮಪ್ರತಾಪನಿಧಿ ಶಂಭುನಿಭಂ ಶಿವನಾಮಧಾಮ ಮೇ
ಮಪ್ರಭು ನೋಡಿ ತನ್ನ ಕರುಣಾಮೃತಪೂರ್ಣಕಟಾಕ್ಷದಿಂ ಶಿವೈ
ಕ್ಯಪ್ರಸರಪ್ರಭಾವದಿರವಂ ಪರಿಭಾವಿಸಿ ಸಾರವೀರಶೈ
ವಪ್ರಭೆ ಕುಂದುಗುಂ ಮಱೆಗೆವಂದರನೋವದೊಡಿಂದು ಚೆಚ್ಚರಂ ೫೧

ಕಡಿಯಲ್ಪಟ್ಟ ಈ ರಾಜಪುತ್ರನಿಗೆ ಪ್ರಾಣವನ್ನು ಕೊಡಬೇಕು. ೪೯. ಶರಣಾಗತರಾದವರನ್ನು ರಕ್ಷಣೆಮಾಡುವವನೆಂಬ ಬಿರುದನ್ನು ಹೊಂದಿದವನೇ, ನಿನ್ನ ಪಾದಕಮಲವನ್ನು ಮರೆಹೊಕ್ಕು ನಾವೆಲ್ಲ ಇರಲಾಗಿ, ರಕ್ಷಿಸದಿದ್ದರೆ, ಅಭಯವನ್ನು ಕೊಡದಿದ್ದರೆ, ನಿಮ್ಮ ಆ ಬಿರುದೂ ಆ ದೊಡ್ಡತನವೂ ಏನಾದೀತು ? ಹೇಳು. ೫೦. ಹೇ ದೇವ, ನಮಗೆ, ಸದ್ಗತಿಯೂ, ಬುದ್ಧಿಯೂ, ಹಿತವೂ, ತಂದೆಯೂ, ನೀನೇ ಆಗಿದ್ದಿಯೆ, (ಆದ್ದರಿಂದ ನಮ್ಮನ್ನು.) ರಕ್ಷಿಸಬೇಕು, ರಕ್ಷಿಸದಿದ್ದರೆ ಹೇ ಉನ್ನತ ಧೀರನೆನಿಸಿರುವ ಮೇಮನಾರಾಧ್ಯನೇ. ನಿಮ್ಮ ವೀರಶೈವವೆಂಬ ವ್ರತಕ್ಕೆ ಈ ಭೂಮಂಡಲದಲ್ಲಿ ಕುಂದು ಉಂಟಾಗುವುದಲ್ಲವೇ ? ವ॥ ಹೀಗೆ ಹಲವಾರು ಪ್ರಕಾರದಿಂದ ಅವರೆಲ್ಲರೂ ಅನ್ನುತ್ತ ಪಾದಗಳಿಗೆ ನಮಸ್ಕಾರಮಾಡುತ್ತಲೂ, ಅನೇಕ ಪ್ರಕಾರವಾಗಿ ಸ್ತೋತ್ರಮಾಡುತ್ತಲೂ, ಪ್ರಾಣದಾನವನ್ನು ಮಾಡೆಂದು ಪ್ರಾರ್ಥಿಸುತ್ತಲೂ, ಅವನ ಕೃಪಾ ಕಟಾಕ್ಷದ ಸಾಮರ್ಥ್ಯವನ್ನು ಇಚ್ಛಿಸುತ್ತಲೂ, ಬಾಯಿಬಿಟ್ಟು ಬೇಡಿಕೊಳ್ಳುತ್ತ ಇರುವ ಆ ಸಮಯದಲ್ಲಿ— ೫೧. ಅನುಪಮವಾದ ಪ್ರತಾಪಕ್ಕೆ ನಿಧಿಯೆನಿಸಿದವನೂ, ಶಂಭು ಸಮಾನನೂ, ಶಿವನಾಮ ಸ್ತೋತ್ರಕ್ಕೆ ಆ ಗರವಾದವನೂ ಆದ ಮೇಮನಾರಾಧ್ಯ ಪ್ರಭುವು ನೋಡಿ, ತನ್ನ ಕರುಣೆಯೆಂಬ ಅಮೃತದಿಂದ ತುಂಬಿರುವ ಕಡೆಗಣ್ಣುಗಳ ನೋಟದಿಂದ, ಲಿಂಗಾಂಗ ಸಾಮರಸ್ಯದಿಂದ ಕೂಡಿದ ಶಿವಶರಣರ ಸಮೂಹದ ಪ್ರಭಾವದ ರೀತಿಯನ್ನು ಮನಸ್ಸಿನಲ್ಲಿ ತಂದುಕೊಂಡು, ಬೆನ್ನು ಬಿದ್ದವರನ್ನು ಶೀಘ್ರವಾಗಿ ಈಗ ರಕ್ಷಿಸದಿದ್ದರೆ, ಸಾರತರ

ಮೂದಲಿಸಿ ನುಡಿಯೆ ಪಿಂದ
ಣ್ಗಾದೊಡೆಮಗೆ ಕೊಱತೆಯಲ್ತೆ ನಿಜಭಕ್ತಿಯ ಮ
ರ್ಯಾದಿತವಚನಕೆ ಜಗುಳ್ದಿಂ
ಪೋದೊಡೆ ನಿಜಭಕ್ತಬಂಧು ನಗದೇಕಿರ್ಪರ್ ೫೨

ಎಱೆಯನ ದಂಡು ಮೇಲ್ವರಿಯೆ ಪಿಂದೆಗೆದೋಡುವುದೊಂದು ಬೀರಮೋ
ಕೊಱತೆಯನಾತ್ಮಭಕ್ತಮತಪದ್ಧತಿಗಾಗಿಪುದೊಂದು ಶೀಲಮೋ
ನೆಱೆಯುಸುವೀವುದೆಂದು ಮಱೆವೊಕ್ಕೊಡುಪೇಕ್ಷಿಪುದೊಂದು ಶಕ್ತಿಯೋ
ಮೆಱೆವಭವಾಂಘ್ರಿಭಕ್ತತತಿಯೊಲ್ವುದೆ ಮೂದಲೆಗಳ್ಕಿದಾತನಂ ೫೩

ವ॥ ಎಂದು ದೃಢಪ್ರತಿಜ್ಞೆಯನಪ್ಪುಕೆಯ್ದು ಲಿಂಗಜಂಗಮಜದಭಕ್ತರಂ ಭಕ್ತಿಯಿಂ ಬಿಜಯಂಗೆಯ್ಸಿತಂದು—

ಮಣಿಮಣಿದು ಮಣಿಮಯಾಸನದಲ್ಲಿ ಕುಳ್ಳಿರಿಸಿ
ಗಣನಿವಹಮಂ ಭಕ್ತಿಭರದಿಂದೆ ಸಡಗರಿಸಿ
ವಿಮಳೋದಕದಿನವರ ಪಾದತಳಮಂ ಕರ್ಚಿ
ಕಮನೀಯ ತತ್ಪಾದಸಲಿಲಮಂ ನಲವೆರ್ಚಿ
ಪೊಸಕಳಶದೊಳ್ತೀವಿ ಗಣಸಭಾಮಧ್ಯದೊಳ್
ಮಿಸುಗುವಂತದನಿರಿಸುತವರ ಸಾನ್ನಿಧ್ಯದೊಳ್
ಲೇಸೆನಿಪ ಸುರಭಿ ಕುಸುಮದೆ ಸುರಭಿತಂ ಮಾಡಿ

ವಾದ ವೀರಶೈವ ಧರ್ಮದ ಪ್ರಭೆಗೆ ಕುಂದಕವುಂಟಾಗುವುದೂ. ೫೨. ತಿರಸ್ಕರಿಸಿ ಮಾತನಾಡಿದರೆ, ಹಿಂದೆಗೆದರೆ, ನನ್ನ ಶಿವಭಕ್ತಿಯ ಮರ್ಯಾದ ಪ್ರಸಿದ್ಧವಾದ ಮಾತಿಗೆ (ಪಂಥಕ್ಕೆ) ಹೆದರಿ (ಹಿಂಜರಿದು) ಹೋದರೆ. ಕುಂದಕವಿಲ್ಲವೇ ? ನನ್ನ ಇತರ ಭಕ್ತ ಬಂಧುಗಳು ನಗದೆ ಇರುದ್ದಾರು ? ೫೩. ವೈರಿಯಾದವನ ದಂಡು ಮೇಲೆಬಿದ್ದಾಗ ಹಿಂದಕ್ಕೆ ತಿರುಗಿ ಓಡಿಹೋಗುವುದೊಂದು ಶೌರ್ಯದ ನಡೆವಳಿಕೆಯೋ ? ಶಿವಭಕ್ತಿಯ ಧರ್ಮಪದ್ಧತಿಯಿಂದ ನಡೆಯುವವರಿಗೆ ಕೊರತೆಯನ್ನುಂಟುಮಾಡುವುದು ಅದೊಂದು ಶೀಲವೇ ? ಎಲ್ಲರೂ ಸೇರಿ ಪ್ರಾಣದಾನಮಾಡಬೇಕೆಂದು ಮರೆಹೊಕ್ಕಾಗ ಅವರನ್ನು ತಿರಸ್ಕರಿಸುವುದು ಅದೊಂದು ಶಕ್ತಿಯೋ ? ಮೂದಲಿಕೆಗೆ ಹೆದರಿದಾತನನ್ನು ಪ್ರಸಿದ್ಧವಾದ ಈಶ್ವರನ ಭಕ್ತ ಸಮೂಹವು ಒಪ್ಪುವುದೇ ? ವ॥ ಹೀಗೆಂದು ದೃಢವಾದ ಪ್ರತಿಜ್ಞೆ ಮಾಡಿ, ಲಿಂಗ ಜಂಗಮಭಕ್ತರುಗಳನ್ನು ಭಕ್ತಿಯಿಂದ ಬರಮಾಡಿಕೊಂಡವನಾಗಿ "ಲಲಿತ ರಗಳೆ" (ಆ ಲಿಂಗ ಜಂಗಮ ಭಕ್ತರಿಗೆ) ನಮಸ್ಕಾರ ಮಾಡಿ ಮಾಡಿ, ರತ್ನನಿರ್ಮಿತ ಆಸನಗಳ ಮೇಲೆ ಕುಳ್ಳಿರಿಸಿ, ಸಂಭ್ರಮಗೊಂಡು ಆ ಶಿವಗಣ ಸಮೂಹದಲ್ಲಿ ಅತಿಶಯವಾದ ಭಕ್ತಿಯನ್ನಿಟ್ಟು, ಪರಿಶುದ್ಧ ಜಲದಿಂದ ಅವರ ಪಾದಗಳನ್ನು ತೊಳೆದನು. ಮನೋಹರವಾದ ಆ ಪಾದಜಲವನ್ನು ಅತಿಶಯ ಸಂತೋಷದಿಂದ ಹೊಸ ಕಳಸಗಳಲ್ಲಿ ತುಂಬಿಕೊಂಡು ಅದನ್ನು ಶಿವಗಣಗಳ ಸಭಾ ಮಧ್ಯದ ಅವರ ಸನ್ನಿಧಿಯಲ್ಲೇ ಇಟ್ಟನು,

ಬಾಸಣಿಸಿ ಸಪ್ಪುರದಿಂ ಮೃಡನಡಿಗಳಂ ಪಾಡಿ
ಮಗುಳ್ದು ಶಿವಗಣಸಭೆಯನಾನಂದದಿಂ ನೋಡಿ
ಪೊಗಳ್ದು ಪೂಮಾಲೆಗಳನವರ ಮುಡಿಯೊಳ್ಸೂಡಿ
ಪರಿಮಳಕದಂಬದಿಂದನುಲೇಪನಂಗೊಳಿಸಿ
ಸುರುಚಿರಾಭರಣನಿಕುರುಂಬದಿನಲಂಕರಿಸಿ
ಸಾರತರಧೂಪಧೂಮಾಮೋದಮಂ ನೀಡಿ
ನೀರಾಜನಾದಿಯುಂ ಬೆಳಗಿ ಮಿಗೆ ಕೊಂಡಾಡಿ
ಸರ್ಪಿರಮೃತಾಕ್ತಮಧುರೋಪಹಾರಮನಿತ್ತು
ಕರ್ಪೂರವೀಟಿಕ ವಿಭೂತಿಗೊಡುತೊಲವೆತ್ತು
ಪಟುಪಟಹಡಿಂಡಿಮದ ಶಂಖದ ರವಂ ನೆಗಳೆ
ಚಟುಲಕಹಳಾರವದೊಡನೆ ವಂದಿಗಳ್ಪೊಗಳೆ
ಆಡೆ ನರ್ತಕಿಯರೀಕ್ಷಿಪರಕ್ಷಿ ಮೇಲ್ವರಿಯೆ
ಕೂಡೆ ನಾನಾವಾದ್ಯನಾದಮದು ಸೈವರಿಯೆ
ನೆಗಳ್ದುಘೇ ಜಯ ಜಯಧ್ವಾನಮೆತ್ತಂ ಮಸಗೆ
ಸುಗುಣನಿಧಿ ನಿಂದು ನಿಜಭಕ್ತಿಭಾವಂ ಮಿಸುಗೆ
ಕುಸುಮಾಂಜಲಿಯನೆಸಗಿ ಬಲವಂದು ಮಗುಳ್ದೆಳ್ದು

ಉತ್ತಮ ಸುಗಂಧ ವಿಶಿಷ್ಟವಾದ ಹೂವುಗಳಿಂದ ಸುಗಂಧಮಯವಾದುದನ್ನಾಗಿಮಾಡಿ (ಹೂವುಗಳನ್ನು ಏರಿಸಿ), ಮೇಲೆ ತೆಳುವಾದ ಬಟ್ಟೆಯನ್ನು ಮುಚ್ಚಿದನು. ಪರಮೇಶ್ವರನ ಪಾದಗಳನ್ನು ಭಜಿಸಿ ಪುನಃ ಆನಂದದಿಂದ ಆ ಶಿವಭಕ್ತಗಣಗಳ ಸಭೆಯನ್ನು ನೋಡಿ ಹೊಗಳಿ, ಹೂಮಾಲೆಗಳನ್ನು ಅವರ ತಲೆಯಲ್ಲಿ ಧರಿಸಿದನು. ಪರಿಮಳ ಸಮೂಹವನ್ನು ಅವರಿಗೆ ಅನುಲೇಪನ ಮಾಡಿದನು. ಮನೋಹರವಾದ ಆಭರಣಗಳ ಸಮೂಹದಿಂದ ಅಲಂಕಾರ ಗೊಳಿಸಿದನು. ಸಾರವತ್ತಾದ ಸುಗಂಧವನ್ನು ಬೀರುವ ಧೂಪವನ್ನು ಹಾಕಿ ಧೂಮದ ಸೊಗಸನ್ನು ನೀಡಿದನು. ಕರ್ಪೂರದ ಆರತಿಯೇ ಮೊದಲಾದುವನ್ನು ಬೆಳಗಿ ವಿಶೇಷವಾಗಿ ಕೊಂಡಾಡಿದನು. ತುಪ್ಪ ಹಾಲುಗಳಿಂದ ಕೂಡಿದ ಮಧುರವಾದ ಉಪಹಾರವನ್ನು ಕೊಟ್ಟನು. ಪಚ್ಚಕರ್ಪೂರ ಮಿಶ್ರವಾದ ತಾಂಬೂಲವನ್ನು ವಿಭೂತಿಯನ್ನು ಕೊಟ್ಟು ಸಂತೋಷಗೊಳಿಸಿದನು. ಆಗ ವಿಶೇಷ ಧ್ವನಿಮಾಡುವ ನಗಾರಿ, ಢಕ್ಕೆಗಳ ಶಂಖ ಧ್ವನಿಯು ಹರಡಿತು. ಗಟ್ಟಿಯಾಗಿ ಧ್ವನಿಮಾಡುವ ಕಹಳೆಯ ಧ್ವನಿಯೊಡನೆಯೇ ನಂದಿಗಳು (ಬಿರುದನ್ನು ಉಗ್ಘಡಿಸುವವರು) ಹೊಗಳಿದರು. ನೋಡುವ ಕಣ್ಣುಗಳು ಆನಂದಗೊಳ್ಳುವಹಾಗೆ ನರ್ತಕಿಯರು ನೃತ್ಯಮಾಡಿದರು. ಅನೇಕ ವಿಧವಾದ ವಾದ್ಯ ಧ್ವನಿಗಳು ಮೇಳಗೊಂಡು ವ್ಯಾಪಿಸಿದವು. ವಿಖ್ಯಾತವಾಗಿ ಜಯ ಜಯ ಎಂಬ ಧ್ವನಿಯು ಎಲ್ಲ ಕಡೆಗೂ ಹರಡಿತು. ಆಗ ಆ ಸದ್ಗುಣಗಳ ನಿಧಿಯೆನಿಸುವ ಪೇಮನಾರಾಧ್ಯನು ಹೊರ ಹೊಮ್ಮುತ್ತಿರುವ ತನ್ನ ಭಕ್ತಿಭಾವದಿಂದ (ಆ ಶಿವಶರಣ ಸಮೂಹಕ್ಕೆ) ಬೊಗಸೆಯಲ್ಲಿ ಪುಷ್ಪಗಳನ್ನು ಹಿಡಿದು ಎರಚಿ ಪ್ರದಕ್ಷಿಣೆ ಮಾಡಿದನು. ಪುನಃ ಎದ್ದು ಆ ಶೋಭಿಸುವ

ನಿಸುಪ ಶರಣವ್ರಜದ ಬೆಸನ ಶಿರದೊಳ್ತಾಳ್ದ
ವಿತತಮಹಿಮಾಕರಂ ನತಜನದಯಾಕರಂ
ಭವಭಯವಿಭಂಜನಂ ಶಿವಸಮಯರಂಜನಂ
ಶರಣಪದಸೇವಕಂ ಪರಮಶಿವಭಾವಕಂ
ಯಮಭಯನಿವಾರಣಂ ಸ್ವಮತಶುಭಕಾರಣಂ
ಕಲಿಮಲವಿದಾರಣಂ ಖಲಸಮಯದಾರುಣಂ
ವಿರಹಿತದುರೀಷಣಂ ವರಗುಣವಿಭೂಷಣಂ
ಸೋಮಧರಬಂಧುರಂ ವೇಮಗುರುಸಿಂಧುರಂ
ರಾಜಿತಗುಣಾಕರಂ ಭಾಜಿತದಿವಾಕರಂ
ರಾಜಿಸುತೆ ನಲ್ಮೆಯಿಂ ಪೂಜಿಸಿದನೊಲ್ಮೆಯಿಂ

ವ॥ ಅಂತು ಶಿವಗಣಸಪರ್ಯೆಯಂ ನೆಗಳ್ದು ತದನುಜ್ಞೆಯುಂ ಕೆಯ್ಕೊಂಡಾ ನರೇಂದ್ರನ ಕಳೇಬರಮಂ ತರ್ಪುದೆಂದು ಬೆಸಸೆ ತನ್ಮಿತ್ರಜನಂ ಜವದಿಂ ಪೋಗಿ ನಿಂದು ನಿರೀಕ್ಷಿಪಾಗಳ್—

ಬೆಱತ ಮೊಗಂ ಬೆಳರ್ತ ನಸುದೇಲ್ದ[1] ವಿಲೋಚನಮಾಲಿ ಕರ್ಗಿ ಜೋ
ಲ್ದೊಱಗಿದ ಮಸ್ತಕಂ ಕೆದರ್ದ ಮೀಸೆ ಸಡಿಲ್ದ ತುಱುಂಬು ಸೈತಗೆ

ಸಮಸ್ತ ಶಿವಗಣದ ಅಪ್ಪಣೆಯನ್ನು ತಲೆಯಲ್ಲಿ ಧರಿಸಿದವನಾದನು. ವಿಸ್ತಾರಗೊಂಡ (ಪ್ರಖ್ಯಾತವಾದ) ಮಹಿಮಾಕರನೂ, ನಮಸ್ಕರಿಸುವ ಜನರಲ್ಲಿ ದಯೆಯನ್ನುಂಟು ಮಾಡುವವನೂ, ಶರಣಜನರ ಪಾದಸೇವಕನೂ, ಪವಿತ್ರವಾದ ಮಂಗಳಕರ ಭಾವನಾ ವಿಶಿಷ್ಟನೂ, ಮೃತ್ಯುಭಯವನ್ನು ನಿವಾರಿಸಿದವನೂ. ತನ್ನ ವೀರಶೈವ ಮತದ ಶುಭಕ್ಕೆ ಕಾರಣನೂ, ಕಲಿಕಾಲದ ಪಾಪವನ್ನು ಕತ್ತರಿಸಿಹಾಕಿದವನೂ, ದುಷ್ಟಮತಗಳಿಗೆ ದಾರುಣ ನೆನಿಸಿದವನೂ, ದುಷ್ಟ ಈಷಣತ್ರಯ (ದಾರೇಷಣ, ಪುತ್ರೇಷಣ, ವಿತ್ತೇಷಣ) ದೂರನೂ, ಶ್ರೇಷ್ಠವಾದ ಗುಣಗಳಿಂದ ಅಲಂಕಾರಗೊಂಡವನೂ. ಶಿವನಲ್ಲಿಟ್ಟ ಭಕ್ತಿ ಯಿಂದ ಬಂಧುರನೆನಿಸಿದವನೂ, ಸದ್ಗುಣ ಸಮೂಹಗಳಿಗೆ ಆಕರನೆನಿಸಿದವನೂ, ಸೂರ್ಯ ನನ್ನು ಜಯಿಸಿದ ಕಾಂತಿಯುಳ್ಳವನೂ ಆದ ವೇಮನಾರಾಧ್ಯನೆಂಬ ಆಚಾರ್ಯಶ್ರೇಷ್ಠನು ರಾರಾಜಿಸುತ್ತ ಒಲುಮೆಯಿಂದಲೂ. ನಲ್ಮೆಯಿಂದಲೂ ಹೀಗೆ (ಆ ಲಿಂಗ ಜಂಗಮ ಭಕ್ತರುಗಳನ್ನು) ಪೂಜಿಸಿದನು. ವ॥ ಆ ರೀತಿ ಶಿವಗಣ ಸಮೂಹದ ಸೇವೆಯನ್ನು ಮಾಡಿ ಮುಗಿಸಿ ಅವರ ಅಪ್ಪಣೆಯನ್ನು ಸ್ವೀಕಾರಮಾಡಿ, 'ಆ ರಾಜೇಂದ್ರನ ದೇಹವನ್ನು (ಇಲ್ಲಿಗೆ) ತನ್ನಿರೆಂದು ಅಪ್ಪಣೆ ಮಾಡಲು ಅವನ ಮಿತ್ರ ಜನಸಮೂಹವು ಶೀಘ್ರವಾಗಿ ಹೋಗಿ, ನಿಂತು ನೋಡುತ್ತಿರಲಾಗಿ— ೫೮. ಸುರುಟಿಕೊಂಡಿರುವ ಮುಖ, ಬೆಳ್ಳ ಗಾದ ಸ್ವಲ್ಪತೆರೆದ ಕಣ್ಣುಗುಡ್ಡೆ, ಕುಗ್ಗಿ ಜೋಲು ಬಿದ್ದ ತಲೆ. ಕೆದರಿಹೋದ ಮೀಸೆ ಸಡಿಲುಗೊಂಡ ತುರುಬು, ಸೊಟ್ಟಾಗಿ ಬಿದ್ದಿರುವ ಕುತ್ತಿಗೆ, ಉಬ್ಬಿದ ಮೂಗು. ಹಸುರು

1ಲ್ವ(ಜ)

ಟ್ಟೊಱಗಿದ ಕಂಧರಂ ನಿಮಿರ್ದ ಮೂಗು ಪಸುರ್ಪು ಪಗಿಲ್ತಪಲ್ಗಳಿ
ರ್ಪಱಿತ ರದಚ್ಛದಂ ತೆಱೆದ ಬಾಯ್ಮಿಗೆ ಸೂಸುವ ಲಾಳೆಯೊಳ್ತರಂ ೫೪

ವ॥ ಮತ್ತಂ—

ಬಿಗಿದ ನರಂಗಳುಬ್ಬರಿಪ ಬಲ್ಬಸಿಱಿಂಗಿದ ಸುಯ್ತೊಡಂಕಿ ಡೊಂ
ಕೊಗೆದ ಕರಾಂಘ್ರಿಗಳ್ತೆಱೆದ ರಂಧ್ರಮಡಂಗಿದ ಕಾಯಕಾಂತಿ ಕೆ
ಯ್ಮಿಗೆ ಪೊಸನೆತ್ತರಾಱಿದ ತೊವಲ್ಪೊಲಸುಣ್ಮಿರೆ ಬಾತು ನಾತಮಂ
ನೆಗಳ್ವ ತದಂಗಕಾರ್ದೆಱಗಿ ಝುಂಮ್ಮೆನುತೋಡುವ ಮಕ್ಷಿಕಾ[1]ಳಿಗಳ್ ೫೫

ಕಡು ಪೆರ್ಬಡಿಕೆಯ ನಾತಂ
ತೊಡರ್ದಿರೆ ಭೀಕರಮೆನಿಪ್ಪ ಪೆಣನಂ ಕಾಣು
ತ್ತೊಡನೊಡನೆ ಮುಚ್ಚಿ ಮೂಗಂ
ಪಿಡಿದುಗುಳುತ್ತೆಲ್ಲರಲ್ಲಿ ಪೇಸುತ್ತಾಗಳ್ ೫೬

ಮನವೊಲ್ಲದೆ ಸಲ್ಲದೆ ಮೆ
ಲ್ಲನೆ ಪೆಣನಂ ಕಟ್ಟಿ ಪೊತ್ತು ತಂದಾ ವೇಮಾ
ರ್ಯನ ಮಠದ ಬಹಿರ್ದೇಶದೊ
ಳನುವಿಂದಿಳಿಪುತ್ತೆ ಪೊಕ್ಕರಾ ಗಣಸಭೆಯಂ ೫೭

ಬಣ್ಣದಿಂದ ವ್ಯಾಪಿಸಿದ ಹಲ್ಲುಗಳು ರಸವಿಹೀನವಾದ ಹಲ್ಲಿನ ಕಾಂತಿ (ಒಣಗಿ ಕಾಂತಿಗೆಟ್ಟ ಹಲ್ಲು), ಬಿಟ್ಟ ಬಾಯಿ, ಹೆಚ್ಚಾಗಿ ಹೊರಸೂಸಿದ ಲೋಳೆಯ ಆಧಿಕ್ಯ (ಇವುಗಳಿಂದ ಆ ಹೆಣವು ಕೂಡಿತ್ತು) ವ॥ ಮತ್ತು ೫೫–೫೭. ಬಿಗಿದು ಹೋದ ನರಗಳು ; ಉಬ್ಬ ಹೋದ ದಪ್ಪನೆಯ ಹೊಟ್ಟೆ ; ಇಂಗಿ ಹೋದ ಉಸಿರು ; ತೊಡಕಾಗಿ ಡೊಂಕುಗೊಂಡ ಕೈಬೆರಳು ; ತೆರೆದುಕೊಂಡ ನವದ್ವಾರಗಳು ; ಕಾಂತಿಯುಡಗಿದ ದೇಹ ; ಸಂಪೂರ್ಣವಾಗಿ ಆರಿ ಹೋದ ಹೊಸನೆತ್ತರುಳ್ಳ ಚರ್ಮ; ಬಾತುಕೊಂಡು ಹೊಲಸು ಹೊರ ಹೊರಟು ದುರ್ಗಂಧವುಂಟಾದ ಆ ದೇಹಕ್ಕೆ ಝುಂಮ್ಮೆಂದು ಹಾರಾಡುತ್ತ ಮುಸುಕಿರುವ ನೊಣಗಳು, ಅತ್ಯಂತ ಅಸಹ್ಯವನ್ನುಂಟುಮಾಡುವ ನಾತವು ಕೂಡಿಕೊಂಡು, ಭಯಂಕರವಾದ ಹೆಣವನ್ನು ನೋಡುತ್ತ ಒಡನೆಯೇ ಅದನ್ನು ಮುಚ್ಚಿ ಮೂಗು ಹಿಡಿದುಕೊಂಡು, ಎಲ್ಲರೂ ಹೇಸಿ ಉಗುಳುತ್ತ ಮನಸ್ಸಿಲ್ಲದ ಮನಸ್ಸಿನಿಂದ ಸಾವಕಾಶವಾಗಿ ಆ ಹೆಣವನ್ನು ಕಟ್ಟಿದರು. (ಹೀಗೆ ಕಟ್ಟಿ) ಹೊತ್ತುಕೊಂಡು ಬಂದು, ಆ ವೇಮನಾರಾಧ್ಯರ ಮಠದ ಹೊರಭಾಗದಲ್ಲಿ ಅನುವು ಮಾಡಿಕೊಂಡು ಇಳಿಸಿ, ಆ ಶಿವಗಣಗಳ ಸಭೆಯನ್ನು ಹೊಕ್ಕರು

1 ಕ್ಷು (ಅ, ಗ, ಚ, ಜ, ಮ)

ವ॥ ಅಂತು ಪೊಕ್ಕು ಮೆಯ್ಯಿಕ್ಕಿ ಶವಮಂ ತಂದೆವವಧರಿಸೆಂದವಂದಿರ್ಬಿನ್ನವಿಸೆ ವೇಮನಾರ್ಯರ್ಕೇಳ್ದು ಸಡಗರಂದಾಳ್ದು ಚರಚರಣಸಲಿಲದಿನಾ ನರೇಂದ್ರನ ಕಳೇವರಮನಿನಿತುಂ ದುರ್ಗಂಧಮಿಲ್ಲದಂತೆ ನರೇಂದ್ರನನುಚರರಿಂ ತೊಳೆಯಿಸುತನಂತರಮೊಳಗಣ್ಗೆ ತರಿಸಿ —

ಹರಭಕ್ತರ ಪಾವನತರ
ಕರದತ್ತವಿಭೂತಿಯುಂ ತದೀಯ ಪದಾಂಭೋ
ಜರಜೋವಿಮಿಶ್ರಿತಂಗೆ
ಯ್ದಿರದವರಪದಾಂಬುವಿಂದೆ ಕಲಸುತ್ತಾಗಳ್ ೫೮

ಘನತರಭಕ್ತಿನಿಷ್ಠೆ ಮಿಗೆ ತನ್ನೃಪನಂಗದೊಳೊಲ್ದು ಪೂಸಿ ಲೇ
ಪನಮನೊಡರ್ಚಿ ಭಾಳದೊಳುರಃಸ್ಥಳದೊಳ್ಭುಜದೊಳ್ತ್ರಿಪುಂಡ್ರಮಂ
ಮನದೊಲವಿಂದೆ ಬಿತ್ತರಿಸಿ ಭಕ್ತಪದಾರ್ಪಿತಪುಷ್ಪಮಾಲೆಯುಂ
ತನುಗಮರ್ವಂತೆ ವೇಮವಿಭು ಸುತ್ತಿ ಗಣಾಭಿಮುಖಂ ಪ್ರಮೋದದಿಂ ೫೯

ಗಣಸಭೆಗೆ ನೆಗಳ್ದು ದಂಡ
ಪ್ರಣಾಮಮಂ ಪ್ರಮಥರುದ್ರಗಣಭಕ್ತಮಹಾ
ಗಣದಂಘ್ರಿಕಮಳಮಂತಾ
ಳ್ದಣೆಯುರಮಾತ್ಮೀಯ ಮಾನಸದೊಳೊಲವಿಂದಂ ೬೦

ವ॥ ಆ ರೀತಿ ಹೊಕ್ಕು ಅಡ್ಡಬಿದ್ದು ನಮಸ್ಕರಿಸಿ, 'ಹೆಣವನ್ನು ತಂದಿದ್ದೇನೆ ಚಿತ್ತೈಸಬೇಕು' ಎಂದು ಅವರೆಲ್ಲರೂ ಬಿನ್ನವಿಸಿಕೊಳ್ಳಲು, ಆ ವೇಮನಾರಾಧ್ಯರು ಕೇಳಿ, ಸಂಭ್ರಮಗೊಂಡವರಾಗಿ, ಜಂಗಮರ ಪಾದೋದಕದಿಂದ ಆ ನರೇಂದ್ರನ ಮೃತದೇಹವನ್ನು ಸ್ವಲ್ಪವೂ ದುರ್ಗಂಧವಿಲ್ಲದಂತೆ ರಾಜಭಟರುಗಳಿಂದಲೇ ತೊಳೆಸಿ, ತದನಂತರ (ಮಠದ) ಒಳಭಾಗಕ್ಕೆ ತರಿಸಿದರು. ೫೮-೬೦. ಶಿವನ ಭಕ್ತರಾದ ಜಂಗಮರ ಪವಿತ್ರತರವಾದ ಕೈಯಿಂದ ಕೊಡಲ್ಪಟ್ಟ ವಿಭೂತಿಯನ್ನು ಅವರ ಪಾದಕಮಲಗಳ ಧೂಳಿಯೊಡನೆ ಮಿಶ್ರಣಗೊಳಿಸಿ, ಅವರ ಪಾದೋದಕದಲ್ಲಿ ಕಲೆಸಿ, ವಿಶೇಷವಾದ ಘನತರ ಭಕ್ತಿಯ ನಿಷ್ಠೆಯಿಂದ ಆ ನೃಪನ ಶರೀರದಲ್ಲಿ ಪ್ರೀತಿಯಿಂದ ಬಳಿದು ಲೇಪನಗೊಳಿಸಿದರು. ಹಣೆಯಲ್ಲಿ, ಎದೆಯ ಮೇಲೆ, ಭುಜಗಳಿಗೆ, ಆ ವಿಭೂತಿಯನ್ನು ಮನಸ್ಸಂತೋಷದಿಂದ ಧರಿಸಿದನು. ಭಕ್ತರ ಪಾದಗಳ ಮೇಲೇರಿಸಿದ ಹೂವಿನ ಮಾಲೆಯನ್ನು ತನುವಿಗೆ ಭವ್ಯವಾಗುವ ಹಾಗೆ ಸುತ್ತಿ (ಅಥವಾ ಉಚಿತವಾಗುವಂತೆ ಸುತ್ತಿ), ವೇಮನಾರಾಧ್ಯನು ಶಿವಗಣದ ಕಡೆಗೆ ಮುಖ ತಿರುಗಿಸಿನಿಂತನು. ಸಂತೋಷದಿಂದ ಆ ಗಣಸಭೆಗೆ ದೀರ್ಘದಂಡ ಪ್ರಣಾಮಮಾಡಿದನು. ಪ್ರಮಥಗಣಗಳ, ರುದ್ರಗಣಗಳ, ಭಕ್ತಮಹಾಗಣಂಗಳ ಪಾದ

ಪರಮಾನಂದಪ್ರಜಪ್ತ ಪ್ರಣವಸಹಿತ ಪಂಚಾಕ್ಷರೋದ್ಯತ್ಕಳಾವಿ
ಸ್ಫುರಿತಾಂಗಂ ಭಕ್ತಹಸ್ತಾರ್ಪಿತ ಭಸಿತಲಸದ್ರೇಣುವಂ ಪಾಣಿಯಿಂ ಭೂ
ವರನಾಸ್ಯಸ್ಥಾನದೊಳ್ತಾಂ ತಳಿದಮಳ ಕೃಪಾಪಾಂಗದಿಂ ನೋಡಿ ಭದ್ರಾ
ಕರನೇಳೇಳೆಂಬುದುಂ ಸಂಭ್ರಮದೆ ಬಳಿಯೊಳೇನೆಂಬೆನಾಶ್ಚರ್ಯದುರ್ಬಂ ೬೧

ಹರಣಂ ತೀವಿದುದಾಗಳೆ
ಶರೀರದೊಳ್ಭುಳಿಲನೆ[1]ಳ್ದು ನರಪತಿಸುತನಾ
ಗುರು ವೇಮನಾರ್ಯಚರಣಾಂಘ್ರಿಗೆ
ಶರಣೆಂದತಿ ಭಕ್ತಿಯಿಂದೆ ಮೆಯ್ಯಿಕ್ಕಿರ್ದಂ ೬೨

ವ॥ ಅಂತು ಸಾಷ್ಟಾಂಗವೆಱಗಿ ಸನ್ನುತಿಗೆಯ್ದು —

ಕಾಲಾಂತಕಸ್ವರೂಪ ಕ
ರಾಲಾನನಕಾಲಭಯಮನರ್ದಿಸುತೆನ್ನಂ
ಪಾಲಿಪುದೆಂದಂ ತನ್ನರ
ಪಾಲಸುತಂ ಕಾಲಮೃತ್ಯುಭಯಚಕಿತಮನಂ ೬೩

ಕಮಲಗಳನ್ನು ತನ್ನ ಹೃದಯದಲ್ಲಿ ಪ್ರೀತಿಯಿಂದ ಹೊಂದಿದವನಾದನು. ೬೧-೬೨. ಪರಮಾನಂದ ಭರಿತನಾದ (ಆ ವೇಮನಾರಾಧ್ಯನು) ಜಪಿಸಿದ ಓಂಕಾರ ಸಹಿತವಾದ ಷಡಕ್ಷರ ಮಂತ್ರ (ಓಂ ನಮಃ ಶಿವಾಯ ಎಂಬ ಮಂತ್ರ) ದಿಂದುಂಟಾದ ಪ್ರಕಾಶಮಾನವಾದ ಅಂಗಳವುಳ್ಳವನಾದನು. ಭಕ್ತರುಗಳ ಹಸ್ತದಿಂದ ಕೊಡಲ್ಪಟ್ಟ ಭಸ್ಮದ ಪವಿತ್ರ ಧೂಳಿಯನ್ನು ಕೈಯಿಂದ ಆ ಭೂಪಾಲನ ಮುಖದ ಮೇಲೆ ತಳಿದನು. ಕೃಪೆಯಿಂದ ಕೂಡಿದ ಕಡೆಗಣ್ಣುಗಳ ನೋಟವನ್ನು ಬೀರಿದನು. 'ಮಂಗಳಕರನೇ (ಶರಣರಪಾದರೇಣು ಭಸ್ಮರೇಣುಗಳಿಂದ ಮಂಗಳಗೊಂಡ ದೇಹವುಳ್ಳವನೇ) ಏಳೇಳು ಎಂದು ಸಂಭ್ರಮದಿಂದ ಹೇಳಲಾಗಿ ಆ ಬಳಿಕ ಉಂಟಾದ ಆಶ್ಚರ್ಯದ ಅತಿಶಯವೇನೆಂದು ಹೇಳಲಿ ! ಆ ರಾಜಕುಮಾರನು ದೇಹದಲ್ಲಿ ಪ್ರಾಣವು ತುಂಬಿ ಒಮ್ಮಿಂದೊಮ್ಮೆಲೆ ಎದ್ದು, ವೇಮನಾರ್ಯರ ಪಾದಗಳಿಗೆ ಶರಣು ಎನ್ನುತ್ತ ಅತ್ಯಂತ ಭಕ್ತಿಯಿಂದ ಅಡ್ಡಬಿದ್ದನು– ವ॥ ಆ ರೀತಿ ಸಾಷ್ಟಾಂಗ ನಮಸ್ಕಾರಮಾಡಿ, ಸ್ತೋತ್ರಮಾಡುತ್ತ ೬೩. 'ಯಮನಿಗೆ ಯಮನೆನಿಸಿದ ಶಿವಸ್ವರೂಪನೇ, ಭಯಂಕರ ಮುಖದ ಯಮನಿಂದುಂಟಾದ (ಮರಣ) ಭಯವನ್ನು ಹೋಗಲಾಡಿಸುತ್ತ ನನ್ನನ್ನು ಪಾಲಿಸಬೇಕು' ಎಂದು ಯಮನ ಮೃತ್ಯುವಿನ ಭಯದಿಂದ

1 ನೇ(ಮ)

ವ॥ ಎಂದವನತ್ಯಂತದೈನ್ಯಂ ಮಿಗೆ ಬೇಡೆ ಕಾರುಣ್ಯದಿನಾ ವೇಮನಾರ್ಯರವಂಗವುವನಂಗನೆಗವುವನ ಬಾಂಧವರ್ಗಂ ಶಿವದೀಕ್ಷೆಯಿತ್ತು ಪುನೀತರಂ ಮಾಡೆ ಗಣಸಭೆಗವುವರೆಲ್ಲರವನತರಾಗಿ ರಾಗಿಸಿ—

ಧರಣೀಭಾಗಕ್ಕಿದೊಂದಚ್ಚರಿಯೆನೆ ಪಟುಹಾಲಾಹಲಜ್ವಾಲಿ ಕೀಲಾ
ಕರ ಕಾಲವ್ಯಾಲ ದಂತಾಹತಮೃತನೃಪಜಾತಾಂಗದೊಳ್ಪ್ರಾಣಮುಂ ಸಾ
ದರಮಿೂವುತ್ಕ್ರೋವುತೆಮ್ಮೆಲ್ಲರ ಭವಹರಣಂಗೆಯ್ದನೀ ದೇವನೀ ಶಂ
ಕರರೂಪಂ ಮಾಣದೀ ಶಾಂಭವವಿಮಳಕಳಾಧುರ್ಯನೀ ವೇಮನಾರ್ಯಂ ೬೪

ಫಣಿವಿಷದಿನಳಿದ ಜನಪನ
ಪೆಣಕ್ಕೆ ಜೀವನವುನಿನಜನಂ ಸದೆದಿತ್ತಂ
ಪ್ರಣುತಗುಣನಿವನ ಶಕ್ತಿಯು
ನೆಣಿಪೊಡೆ ಪೊಡೆಯುಲರ ಬೊಮ್ಮರುಂ ನೆಱೆದಪರೇ ೬೫

ವ॥ ಎಂದವರ್ನಚ್ಚಿ ನಲಿದು ಪೊಗಳುತ್ತುಮಿರೆ ಶರಣಗಣಮಾ ಪ್ರಸ್ತಾವದೊಳ್—

ಪ್ರಮಥೇಂದ್ರಾಂಘ್ರಿಸದಾಕೃತಪ್ರಣಮನಂ ತಳ್ತಿರ್ದ ವಿದ್ಯಾಪರಿ
ಶ್ರಮನಂ ಶಾಂಭವಶರ್ಮಧರ್ಮರಮನಂ ನಿರ್ಧೂತ ನಿಶ್ಶೇಷ ದು
ರ್ದಮನಂ ದಂಡಿತದರ್ಪದೃಪ್ತಯಮನಂ ವಿಜ್ಞಾತ ಶೈವಾಗಮ
ಕ್ರಮನಂ ವೇಮನ ಪಂಡಿತಾರ್ಯತಮನಂ ಕೊಂಡಾಡಿ ಸಂಪ್ರೀತಿಯಿಂ ೬೬

ಗಾಬರಿಗೊಂಡ ಮನಸ್ಸಿನ ಆ ರಾಜಪುತ್ರನು ಎಂದನು. ವ॥ ಹೀಗೆಂದು ಆ ರಾಜಕುಮಾರನು ಅತ್ಯಂತ ದೀನಭಾವದಿಂದ ಕೂಡಿ ಬೇಡಿಕೊಳ್ಳಲು, ಕಾರುಣ್ಯದಿಂದ ಆ ವೇಮನಾರ್ಯನು ಅವನಿಗೂ ಅವನ ಹೆಂಡತಿಗೂ, ಅವನ ಬಂಧು ಬಾಂಧವರಿಗೂ ಶಿವದೀಕ್ಷೆಯನ್ನಿತ್ತು ಪುನೀತರನ್ನಾಗಿ ಮಾಡಲು ಅವರೆಲ್ಲರೂ ಶಿವಗಣಗಳ ಸಭೆಗೆ ಪ್ರೀತಿಯಿಂದ ನಮಸ್ಕಾರ ಮಾಡಿದವರಾಗಿ– ೬೪. ಈ ದೇವತಾ ಸ್ವರೂಪನೂ, ಶಂಕರನ ಸ್ವರೂಪನೂ, ಶಿವಸಂಬಂಧವಾದ ನಿರ್ಮಲ ವಿದ್ಯೆಯಲ್ಲಿ ಸಮರ್ಥನಾದವನೂ ಆದ ವೇಮನಾರ್ಯನು–ಭೂಮಂಡಲಕ್ಕೆ ಇದು ಒಂದು ಆಶ್ಚರ್ಯ ! ಎನ್ನುವ ರೀತಿಯಲ್ಲಿ, ಸಮರ್ಥವಾದ ಹಾಲಾಹಲಕ್ಕೆ ಸಮಾನವಾದ ವಿಷದ ಅಗ್ನಿಗೆ ಆಗರವೆನಿಸಿದ ಯಮ ಸ್ವರೂಪದ ಹಾವಿನ ಹಲ್ಲಿನಿಂದ ಕಡಿಯಲ್ಪಟ್ಟು ಮೃತನಾದ ರಾಜಕುಮಾರನ ದೇಹದಲ್ಲಿ ಪ್ರಾಣವನ್ನು ತಪ್ಪದೆ ಉಂಟುಮಾಡಿ, ಸಂರಕ್ಷಿಸುತ್ತ ನಮ್ಮೆಲ್ಲರ ಭವವನ್ನು ದೂರಮಾಡಿದನು (ಎಂದು ಎಲ್ಲರೂ ಹೊಗಳಿದರು.) ೬೫. ಹಾವಿನ ವಿಷದಿಂದ ಸತ್ತುಹೋದ ರಾಜನ ಹೆಣಕ್ಕೆ ಜೀವವನ್ನು ಯಮನನ್ನು ಕೊಂದು ದಾನಮಾಡಿದನು. ಶ್ಲಾಘ್ಯವಾದ ಗುಣಗಳುಳ್ಳ ಇವನ ಶಕ್ತಿಯನ್ನೆಣಿಸಲು, ವಿಷ್ಣು ಬ್ರಹ್ಮರಾದರೂ ಸಮರ್ಥರಾಗುವರೇ ? (ಪೊಡಯೆಲರ–ನಾಭಿಯಲ್ಲಿ ಹೂವುಳ್ಳವನು-ವಿಷ್ಣು) ವ॥ ಎಂದು ಅವರೆಲ್ಲ ವಿಶ್ವಾಸದಿಂದ ನಲಿದಾಡಿ ಹೊಗಳುತ್ತಿರಲು, ಶರಣ ಸಮೂಹವು ಆ ಸಮಯದಲ್ಲಿ– ೬೬–೬೭. ಪ್ರಮಥ ಗಣಂಗಳ ಪಾದಗಳಿಗೆ ಸತತ ನಮಸ್ಕಾರ ಮಾಡ

ತೆಗೆದು ಬಿಗಿದಪ್ಪಿ ನಲಿನಲಿ
ದೊಗುವಿಗೆಯಿಂ ನೋಡಿ ಪಾಡಿ ಮುಂಡಾಡಿ ಮನಂ
ಬುಗುವಳ್ಕಱಿಂದೆ ಮನ್ನಿಸಿ
ನೆಗಳ್ದ ಕೃಪಾವಾರಿನಿಧಿಯೊಳೋಲಾಡಿಸುತುಂ ೬೭

ವಿತತಾತ್ಮೀಯ ಪ್ರಸಾದಾಮೃತಮನೊಸಗೆಯಿಂದೀಯೆ ಕೆಯ್ಕೊಂಡಿಳಾಸ
ನ್ನುತನೊಪ್ಪಿರ್ಪನ್ನಮಾ ವಾರ್ತೆಯನಱಿದೊಲವಿಂ ಬಂದು ಕಂಡಂಘ್ರಿಪದ್ಮಾ
ನತಿಗೆಯ್ದಾನಂದದಿಂದಂ ಪೊಗಳ್ದವರ ಕೃಪಾಪಾತ್ರನಾಗುತ್ತೆ ವಿಶ್ವೋ -
ನ್ನತನಿರ್ದಂ ತದ್ಗಣಾಸ್ಥಾನದ ನಡುವೆ ಮೃಡಸ್ವಾಂತಪದ್ಮಾಧಿರೂಢಂ ೬೮

ವೇಮಾರ್ಯರ ಕಥೆಯನಿದಂ
ಪ್ರೇಮಂ ಕೆಯ್ಮಿಕ್ಕು ಪಠಿಯಿಪಾಲಿಪ ಸುಜನ
ರ್ಭೀಮಾಮಯಾಪಮೃತ್ಯುವ
ನೀ ಮಹಿಯೊಳ್ಪಱಿದು ಪೂರ್ಣಸುಖಮಂ ಪಡೆವರ್ ೬೯

ತಕ್ಕವನೂ, ಶಿವತತ್ತ್ವ ವಿದ್ಯೆಗಳ ಪರಿಶ್ರಮವನ್ನು ಪಡೆದಿರುವವನೂ, ಶಂಭು ಸಂಬಂಧವಾದ ವೀರಶೈವ ಧರ್ಮದ ಆಶ್ರಯದಲ್ಲಿ ಸಂತೋಷಗೊಳ್ಳುವವನೂ, ನಿಶ್ಶೇಷವಾಗಿ ಹೋಗಲಾಡಿಸಿದ ದುಷ್ಟ ಜನರನ್ನುಳ್ಳವನೂ, ದರ್ಪದಿಂದ ಗರ್ವವನ್ನು ಹೊಂದಿದ ಯಮನನ್ನು ದಂಡಿಸಿದವನೂ, ಶಿವನಿಂದ ಹೇಳಲಾದ ಶಿವಾಗಮಗಳನ್ನು ತಿಳಿದವನೂ, ಆದ ಪಂಡಿತ ಶ್ರೇಷ್ಠ ವೇಮನಾರಾಧ್ಯನನ್ನು ಅತಿ ಪ್ರೀತಿಯಿಂದ ಕೊಂಡಾಡುತ್ತ ಬರಸೆಳೆದು ಬಿಗಿಯಾಗಿ ಆಲಿಂಗಿಸಿಕೊಂಡು, ನಲಿನಲಿದು ತುಂಬಿ ಹೊರಸೂಸಿದ ಆನಂದದಿಂದ ನೋಡಿದರು. ಸ್ತೋತ್ರಮಾಡಿ, ಮೈಮೇಲೆ ಕೈಯಾಡಿಸುತ್ತ ಪರಿಪೂರ್ಣ ಪ್ರೀತಿಯಿಂದ ತುಂಬಿ ಮನ್ನಣೆ ಮಾಡಿ, ಪ್ರಖ್ಯಾತವಾದ ತಮ್ಮ ಕೃಪೆಯೆಂಬ ಸಮುದ್ರದಲ್ಲಿ ತೇಲಾಡಿಸಿದರು. ೬೮. ಅಧಿಕವಾದ ತಮ್ಮ ಪ್ರಸಾದಾಮೃತವನ್ನು ಸಂಭ್ರಮದಿಂದ ಕೊಡಲು ಅದನ್ನು ಸ್ವೀಕಾರಮಾಡಿ ಆ ಭೂಜನರಿಂದ ಸ್ತೋತ್ರ ಮಾಡಿಸಿಕೊಳ್ಳುವ ವೇಮನಾರಾಧ್ಯನು ಶೋಭಿಸುತ್ತಿರುವಷ್ಟರಲ್ಲಿ ಆ ಸುದ್ದಿಯನ್ನು ಕೇಳಿ ಸಂತೋಷದಿಂದ ವಿಶ್ವದಲ್ಲೆಲ್ಲ ಉನ್ನತನೆಂದೆನಿಸುವವನೂ, ಪರಮೇಶ್ವರನ ಹೃದಯ ಕಮಲದಲ್ಲಿ ವಾಸಿಸುವವನೂ ಆದ ಬಸವೇಶ್ವರನು ಬಂದು ಅವನ ಪಾದಕಮಲಗಳಲ್ಲಿ ನಮಸ್ಕಾರಮಾಡಿ, ಆನಂದದಿಂದ ಹೊಗಳಿ ಅವರ ಕೃಪೆಗೆ ಪಾತ್ರನಾಗುತ್ತ ಇರುತ್ತಿದ್ದನು. ೬೯. ವೇಮನಾರ್ಯರ ಈ ಕಥೆಯನ್ನು ಅತಿಶಯ ಪ್ರೇಮದಿಂದ ಪಠಣ ಮಾಡುವವನೂ, ಆಲಿಸುವವನೂ, ಸಜ್ಜನರುಗಳು ಭಯಂಕರವಾದ ರೋಗ ಮತ್ತು ಅಪಮೃತ್ಯುಗಳನ್ನು ಈ ಭೂಮಿಯಲ್ಲಿ

ಇಂದು ಕುಂದ ಹಿಮ ಹೀರ ಸುಧಾಭಯಾಶೋಯುತೇ
ಸ್ಕಂದಮಾತೆ ಹರಿಧಾತೃಸುರೇಂದ್ರಪರಿಸ್ತುತೇ
ಮಂದರಾದ್ರಿಮಣಿಮಂದಿರಮಧ್ಯವಿರಾಜಿತೇ
ಚಂದಮೊಂದೆ ಪೊರೆಯೆನ್ನನಪರ್ಣೆ ಕೃಪಾನ್ವಿತೇ ೭೦

ಇದು ವಿನಮದಖಿಳ ಸುರಾಸುರೇಂದ್ರಮಕುಟತಟಘಟಿತ ಮಣಿಗಣಾಗಣಿತ ರುಚಿನಿಚಯ

ತರುಣಾರುಣಾತಪಪರಿಲಸಿತ ಪರಮ ಶಿವಲಿಂಗ ಪಾದಾರವಿಂದಪರಾಗಭಸಿತ

ಭಾಸುರಲಲಾಟಪಟ್ಟಸರಸಜನಮಾನಿತೋಭಯಕವಿತಾವಿಶಾರದ

ಶ್ರೀಷಡಕ್ಷರಿದೇವಭಕ್ತಿವಿರಚಿತ

ಶ್ರೀಮದ್ ಬಸವರಾಜವಿಜಯಮಹಾಪುರಾಣದೊಳ್ ಮೇಮನಾರಾಧ್ಯಕಥಾವಿವರಣಂ

ಏಕತ್ರಿಂಶಾಶ್ವಾಸಂ ಸಮಾಪ್ತಂ

ಅಂತು ಆಶ್ವಾಸ ೩೧ಕ್ಕೆ ಪದಗಣನೆ ೨೪೫೦ಕ್ಕೆ ಮಂಗಳಮಹಾ ಶ್ರೀ॥

ನಾಶಮಾಡಿ ಪೂರ್ಣ ಸುಖವನ್ನು ಪಡೆಯುವರು. ೭೦. ಚಂದ್ರ, ಮೊಲ್ಲೆಯ ಹೂವು, ಪಚ್ಚ ಕರ್ಪೂರ, ವಜ್ರ, ಅಮೃತ ಇವುಗಳ ಕಾಂತಿಯುಳ್ಳ ಯಶಸ್ಸಿನಿಂದ ಕೂಡಿದವಳೂ, ಷಣ್ಮುಖನ ತಾಯಿಯೂ, ವಿಷ್ಣು ಬ್ರಹ್ಮ ದೇವೇಂದ್ರಾದಿಗಳಿಂದ ಸ್ತೋತ್ರ ಮಾಡಿಸಿಕೊಳ್ಳುವವಳೂ, ಮಂದರ ಪರ್ವತದ ರತ್ನನಿರ್ಮಿತ ಮಂದಿರದ ಮಧ್ಯದಲ್ಲಿ ವಾಸಿಸುವವಳೂ, ಆದ ಹೇ ಕೃಪೆಯಿಂದ ಕೂಡಿದ ಪಾರ್ವತಿಯೇ ಚಂದವಾಗಿ ನನ್ನನ್ನು ರಕ್ಷಿಸು.

ಮೂವತ್ತೊಂದನೆಯ ಆಶ್ವಾಸವು ಸಮಾಪ್ತವಾಯಿತು

ದ್ವಾತ್ರಿಂಶಾಶ್ವಾಸಂ

[ಚಿಕ್ಕ ಮಾದಣ್ಣನ ಕಥೆ]

ಶ್ರೀಶಿಖರಿಜಾಕುಚಾಂಬುಜ
ಕೋಶಾರ್ಪಿತಪಾಣಿಪಲ್ಲವಂ ಶಿಖಿರವಿರಾ
ತ್ರೀಶನಯನತ್ರಯಂ ಜಗ
ದೀಶಂ ಪೊರೆಗೆಮ್ಮನಾವಗಂ ಶಿವಲಿಂಗಂ ೧

ಕ್ಷೋಣಿಯೊಳೆ ಕಂಗೊಳಿಪ ಕ
ಲ್ಯಾಣ ಪುರಾಂತರದೊಳಲ್ಲಿ ಮತ್ತಂ ಲಿಂಗ
ಪ್ರಾಣಿಕಳಾನಿಧಿಯೊಪ್ಪುವ
ನೇಶಾಂಕಧರಸ್ವರೂಪನನುಪಮ ಮಹಿಮಂ ೨

ಧರೆಯಲ್ಲಿ ಶತಾಯುರ್ವೈ
ಪುರುಷ ಶ್ರುತಿವಾಕ್ಯಮಂ ವಿಭಂಗಿಸಿ ತ[1]ನ್ಮಾ
ದರಸಂ ಸಪ್ತಶತಂ ವ
ತ್ಸರಮಮರ್ದಿರೆ ತನಗೆ ಬಾಳ್ದನತಿ ವೈಭವದಿಂ ೩

ಮುಳಿದುದ್ಯನ್ಮೃತ್ಯುದಂಷ್ಟ್ರಾಂಕುರಮುನಘಟನಿಂ ಕಿಳ್ತು ಕಾಲೋಗ್ರದಂತಂ
ಗಳನಾದಂ ಪೊಯ್ದು ದುರ್ಚುತ್ತವಧಿವಿಧಿಗಳಂ ಮೆಟ್ಟಿ ಪಂಕೇಜಗರ್ಭೋ

ಚಿಕ್ಕ ಮಾದಣ್ಣನ ಕಥೆ

೧. ಮಂಗಳಕರಳಾದ ಪಾರ್ವತೀದೇವಿಯ ಮೊಲೆಗಳೆಂಬ ಕಮಲದ ಮೊಗ್ಗುಗಳ ಮೇಲೆ ಇಡಲ್ಪಟ್ಟ ಚಿಗುರಿನಂತಹ ಕೈಗಳುಳ್ಳವನೂ, ಅಗ್ನಿ, ಸೂರ್ಯ, ಚಂದ್ರರೆಂಬ ಮೂರು ಕಣ್ಣುಳ್ಳವನೂ, ಜಗತ್ತಿನ ಒಡೆಯನೂ ಆದ ಶಿವಲಿಂಗನು ಯಾವಾಗಲೂ ನಮ್ಮನ್ನು ರಕ್ಷಿಸಲಿ. ೨–೩. ಭೂಮಂಡಲದಲ್ಲಿ ಶೋಭಿಸುವ ಕಲ್ಯಾಣ ಪಟ್ಟಣ ಮಧ್ಯದಲ್ಲಿ ಮತ್ತೊಬ್ಬ ಅಂಗ ಲಿಂಗಗಳ ಸಾಮರಸ್ಯಜ್ಞಾನವೆಂಬ ವಿದ್ಯೆಯ ನಿಧಿಯೂ, ಶ್ರೇಷ್ಠನಾದ ಪರಮೇಶ್ವರ ಸ್ವರೂಪನೂ, ಅನುಪಮವಾದ ಮಹಿಮೆಗೆ ಆಧಾರನಾದವನೂ ಆದ ಸಕಲೇಶ ಮಾದರಸನೆಂಬುವವನು, 'ಭೂಮಿಯಲ್ಲಿ ಮನುಷ್ಯನು ನೂರು ವರ್ಷಗಳವರೆಗೆ ಜೀವಿಸುವನು' ಎಂದೆನ್ನುವ ವೇದವಾಕ್ಯವನ್ನೂ ಭಂಗಗೊಳಿಸಿ (ಅಲ್ಲವೆನಿಸಿ), ತನಗೆ ಏಳುನೂರುವರ್ಷಗಳ ಆಯುಷ್ಯವನ್ನುಳ್ಳವನಾಗಿ ಅತ್ಯಂತ ವೈಭವದಿಂದ ಜೀವಿಸಿದ್ದನು. ೪. ಕೋಪದಿಂದ ಅತ್ಯಧಿಕವೆನಿಸುವ ಮೃತ್ಯುವಿನ

1 ಸ(ಚ)

ಜ್ವಳಗರ್ವಧ್ವಂಸನಂಗೆಯ್ದುಳಿಯೊಳೊದರೆ ಮಾರಾರಿ ಮಾಯಾರಿಯೆಂಬ
ರ್ಗಳ ಚಂಚತ್ಕಾಹಳೀ ಸಂಕುಳಮೆಸೆದನವಂ ಮಾದಿರಾಜಾಭಿಧೇಯಂ ೪

ಸಾಂಗಮೆನೆ ರಚಿಸುತುಂ ಶಿವ
ಲಿಂಗದ ಜಂಗಮದ ಪಾದಪೂಜೆಯನಮಳೋ
ತ್ತುಂಗತರ ಭಕ್ತಿಯಿಂದೆ ಬೆ
ಡಂಗಮರೆ ಹರಂಗೆ ಬೀಣೆಯಂ ಕೇಳಿಸುತುಂ ೫

ಇರುಳೆಲ್ಲಂ ನಾದಾಮೃತ
ಶರಧಿಯೊಳೋಲಾಡಿಸುತ್ತೆ ಶಿವನಂ ಶರಣೋ
ತ್ಕರಸಂಗದೆ ಚಿರಸುಖಿಯಾ
ಗಿರುತಿರ್ದಂ ಸುಜನವನಜವನದಿನನಾಥಂ ೬

ಆತನ ಶಿಷ್ಯನೊರ್ವನಕಳಂಕಗುಣಾಂಕನನೂನಭಕ್ತಿವಿ
ಖ್ಯಾತವಿಲಾಸನಾತ್ಮಸತಿಯುಂ ಸುತನುಂ ಸಹಿತಂ ಗುರೂತ್ತಮ
ಪ್ರೀತಿಯಿನಂಘ್ರಿಪೂಜೆಗಳನೊಲ್ದು ನಿಮಿರ್ಚುತೆ ನಿಚ್ಚಮುಂ ಸುವೃ
ತ್ತಾತುಳ ಚಿಕ್ಕಮಾದನೆನಿಸಿರ್ದ ವಿದಗ್ಧವರೇಣ್ಯನೊಪ್ಪಿದಂ ೭

ಕೋರೆ ದಾಡೆಯ ಮೂತಿಯನ್ನು ಪರಾಕ್ರಮದಿಂದ ಕಿತ್ತುಹಾಕಿದವನೂ, ಯಮನ ಭಯಂಕರವಾದ ಹಲ್ಲುಗಳನ್ನು ಚೆನ್ನಾಗಿ ಹೊಡೆದು ಕಿತ್ತುಹಾಕಿ, ಬದುಕುವ ಕಾಲ ನಿಯಮವನ್ನೇ ಮೆಟ್ಟಿಹಾಕಿ, ವಿಷ್ಣುವಿನ ಉಜ್ವಲವಾದ ಗರ್ವವನ್ನು ನಾಶಗೊಳಿಸಿ, 'ಮನ್ಮಥನನ್ನು ನಾಶಗೊಳಿಸಿದವನು, ಮಾಯೆಯನ್ನು ದೂರಗೊಳಿಸಿದವನೆಂದು' ಹೊಳೆಯುವ ಕಹಳೆಗಳ ಸಮೂಹವು ಕೂಗುತ್ತಿರಲು, ಆ ಮಾದಿರಾಜನೆಂಬ ಹೆಸರಿನವನು ಶೋಭಿಸುತ್ತಿದ್ದನು. ೫. ಅವನು ಯಥಾಸಾಂಗವಾಗಿ ಶಿವಲಿಂಗದ ಜಂಗಮದ ಪಾದ ಪೂಜೆಯನ್ನು ಪವಿತ್ರವಾದ ಅತಿ ಎತ್ತರಮಟ್ಟದ ಭಕ್ತಿಭಾವದಿಂದ ಆಚರಿಸುತ್ತಿದ್ದನು. ಬೆಡಗಿನಿಂದ ಕೂಡಿದ ವೀಣಾವಾದನವನ್ನು ಶಿವನಿಗೆ ಕೇಳಿಸುತ್ತ ಇದ್ದನು. ೬. ಸಜ್ಜನರೆಂಬ ಕಮಲಗಳ ವನಕ್ಕೆ ಸೂರ್ಯನಂತಿರುವ ಆ ಮಾದಿರಾಜನು ರಾತ್ರಿಯೆಲ್ಲವೂ (ತನ್ನ ವೀಣೆಯ) ನಾದವೆಂಬ ಅಮೃತ ಸಮುದ್ರದಲ್ಲಿ ಶಿವನನ್ನು ನಲಿದಾಡುವಂತೆ ಮಾಡುತ್ತ, ಶ್ರೇಷ್ಠ ಶರಣರ ಸಮೂಹದ ಸಹವಾಸದೊಡನೆ ಶಾಶ್ವತ ಸುಖಿಯೆನಿಸಿ ಇರುತ್ತಿದ್ದನು. ೭. (ಇಂಥ) ಆ ಸಕಲೇಶ ಮಾದಿರಾಜನಿಗೆ ಒಬ್ಬ ಚಿಕ್ಕ ಮಾದಣ್ಣನೆಂಬ ಹೆಸರಿನ ಶಿಷ್ಯನು ಇದ್ದನು. ಅವನು ಕಲಂಕರಹಿತವಾದ ಸದ್ಗುಣಗಳೇ ಲಕ್ಷಣವಾಗಿ ಉಳ್ಳವನೆನಿಸಿ, ತನ್ನ ಹೆಂಡತಿ ಮತ್ತು ಮಗ ಸಹಿತವಾಗಿ, ಗುರುಶ್ರೇಷ್ಠನಾದ ಮಾದರಸನ ಪಾದ ಪೂಜೆಯನ್ನು ಒಲಿದು ಪ್ರೀತಿಯಿಂದ ನಿತ್ಯವೂ ಮಾಡುತ್ತ, ಅಸಮಾನವಾದ ಒಳ್ಳೆಯ ಚರಿತೆಯುಳ್ಳವನೂ, ಪಂಡಿತ ಶ್ರೇಷ್ಠನೂ ಎನಿಸಿ (ಆ

ಗುರುಮಾದಿರಾಜಪಾದಾಂ
ಬುರುಹಮೆ ಗತಿಯೆಂದು ಸೇವಿಸುತೆ ಸಲೆ ನಿಜಮಂ
ದಿರ ಕೃತ್ಯಕೇನುಮಂ ಭಾ
ಸುರಮತಿ ಚಿಂತಿಸದೆ ಸಂತಮಿರ್ದಂ ಭಕ್ತಂ ೮

ವ॥ ಅಂತು ಪಲಕೆಲವತ್ಸರಂ ಬಾಳುತ್ತುಮಿರ್ದೊಂದುದಿನದಿರುಳೊಳಿರ್ದಿರ್ದಂತಿರಸುಗಳೆವಿನಂ ತದ್ರಮಣಿ ಕಂಡು ಚರಪಾದೋದಕದಿಂ ತೊಳೆದೊರಸಿ ಸರ್ವಾಂಗದೊಳ್ಭಸಿತೋದ್ಧೂಳನಂಗೆಯ್ದು ರುದ್ರಾಕ್ಷೆಗಳಿನಲಂಕರಿಸುತ್ತುಮಾ ಕಳೇವರಮನೊಂದು ಕಂಭದೊಳ್ನಿಮಿರ್ಚಿ ನೆರೆಪೊರೆಯುವರಾರುಮಱಿಯದಂತದಂ ನಿಕ್ಷೇಪಿಸಲೊಂದು ಗೊಪೆಯ ನವಳಗುಳ್ವನಿತಱೊಳೆ ಖನನನಿರ್ಭರಧ್ವನಿಗೆ ಪಟ್ಟಿರ್ದ ತರುಣಂ ನಿದ್ರೆತಿಳಿದೆಳ್ದಗುಳುತ್ತುಮಿರ್ಪ ಮಾತೆಯಿರವಂ ಕಂಡು ಕೌತುಕಂಬಟ್ಟು—

ಎಲೆ ಜನನಿ ಲಿಂಗಪೂಜಾ
ರ್ಥಲಸದ್ವೇದಿಯನದೇಕೆ ನೀನಗುಳ್ದಪೆ ಗ
ಲ್ಗಲನಯ್ಯನ ಪೂಜೆಗೆ ಪೊಸ
ಸಲಿಲಂಗೊಳಲೆಂದೊಱಂತೆಯಂ ನೆಗಳ್ದಪೆಯೋ ೯

ಅಯ್ಯನೇಕೆ ಚರಬೃಂದದೋಲಗ
ಕ್ಕೊಯ್ಯನೆಂದಿನವೊಲಿಂದು ಪೋಗದೀ

ಕಲ್ಯಾಣದಲ್ಲಿ) ಶೋಭಿಸುತ್ತಿದ್ದನು. ೮. ಆ ಭಕ್ತನಾದ ಚಿಕ್ಕ ಮಾದಣ್ಣನು ಗುರುವಾದ ಮಾದಿರಾಜನ ಪಾದಕಮಲವೇ ಗತಿಯೆಂದು ನಂಬಿ, ಸೇವೆ ಮಾಡುತ್ತ, ತನ್ನ ಮನೆತನದ ಕೆಲಸಗಳೇನೆಂಬುದನ್ನೂ ಮನಸ್ಸಿಗೆ ತಂದುಕೊಳ್ಳದೆ, ಪ್ರಕಾಶಮಾನವಾದ ಬುದ್ಧಿಯುಳ್ಳ ಅವನು ಸಂತೋಷದಿಂದ ಇದ್ದನು. ವ॥ ಈರೀತಿ ಅನೇಕ ವರ್ಷಗಳವರೆಗೆ ಬಾಳುತ್ತಿದ್ದು ಒಂದು ದಿವಸ ರಾತ್ರಿ ಇದ್ದಕ್ಕಿದ್ದಹಾಗೆ ಪ್ರಾಣವು ಹೋಗಲಾಗಿ, ಆತನ ಹೆಂಡತಿಯು ಕಂಡು, (ಆ ಹೆಣವನ್ನು) ಜಂಗಮ ಪಾದೋದಕದಿಂದ ತೊಳೆದು ಒರೆಸಿ, ಸಮಸ್ತ ದೇಹಕ್ಕೂ ಭಸ್ಮವನ್ನು ಉದ್ಧೂಳನಗೊಳಿಸಿ (ಭಸ್ಮದಿಂದ ಆಚ್ಛಾದನಗೊಳಿಸಿ), ರುದ್ರಾಕ್ಷ ಮಾಲೆಗಳಿಂದ ಅಲಂಕಾರಗೊಳಿಸಿ, ಆ ಹೆಣವನ್ನು ಒಂದು ಕಂಬದ ಆಸರೆಗೆ ಕುಳ್ಳಿರಿಸಿ, ನೆರೆ ಹೊರೆಯುವರಾರಿಗೂ ಗೊತ್ತಾಗದ ಹಾಗೆ ಅದನ್ನು ಹುಗಿಯಬೇಕೆಂದು, ಒಂದು ಕುಣಿಯನ್ನು ತೆಗೆಯುವುದಕ್ಕೋಸುಗ ತೊಡಗಿದಳು. (ಆಗ) ಭೂಮಿಯ ಅಗೆತದ ವಿಶೇಷವಾದ ಸಪ್ಪಳಕ್ಕೆ ಮಲಗಿಕೊಂಡಿದ್ದ ಬಾಲಕನು (ಮಗನು) ನಿದ್ರೆಯಿಂದ ಎಚ್ಚರಗೊಂಡು ನೆಲವನ್ನಗೆಯುತ್ತಿದ್ದ ತಾಯಿಯ ರೀತಿಯನ್ನು ಕಂಡು, ಆಶ್ಚರ್ಯಪಟ್ಟವನಾಗಿ—೯. 'ಎಲೈ ತಾಯಿಯೇ, ಲಿಂಗಪೂಜಾರ್ಥವಾಗಿರುವ ಈ ಶ್ರೇಷ್ಠ ಜಗುಲಿಯನ್ನೇಕೆ ನೀನು ತೋಡುತ್ತಿದ್ದೀಯೆ ? ಅಪ್ಪನ ಲಿಂಗಪೂಜೆಗೆ ಬೇಗನೆ ಹೊಸ ನೀರನ್ನು ಪಡೆಯಬೇಕೆಂದು ಒಂದು ಒರತೆಯನ್ನು ತೆಗೆಯುತ್ತಿರುವೆಯೇನು ?' ೧೦. 'ಅಯ್ಯನು ಜಂಗಮ ಸಮೂಹದ ಸಭೆಗೆ ಪ್ರತಿದಿನದಂತೆ ಈ ದಿವಸ ಬೇಗನೆ

ರಮ್ಯಮಾದ ಮನೆಗಂಬದೊತ್ತಿನೊಳ್
ಸುಯ್ಯಡಂಗಿದವನಂತಿರಿರ್ದಪಂ ೧೦

ಎಂದುಂ ಮುಳಿಯಂ ನಿನ್ನೊಡ
ನಿಂದು ಕರಂ ಮುಳಿದು ಸುಮ್ಮನಿರ್ದಪನಕ್ಕುಂ
ತಂದೆ ನಿಜದಿಂದೆ ಮುಳಿಸಿಂ
ಗೊಂದಿದ ಕಾರಣಮದಾವುದಱಿಪೆನಗೀಗಳ್ ೧೧

ಸಾಂಗನಿಜಶೀಲಮಂ ಸಿ
ರ್ಕಂಗೊಳಿಸಿದೆಯೋ ಗೃಹಕ್ಕೆ ಪದೆದೇಳ್ತರೆ ನೀಂ
ಜಂಗಮತತಿ ಸಮಯೋಚಿತ
ದಿಂಗಿತಪೂಜೆಯನೊಡರ್ಚದೇಂ ಪೋದೆಯೊ ಪೇಳ್ ೧೨

ಸಾರಣೆಯಲ್ಲಿ ಜಂತುತತಿ ನೊಂದುದೊ ಸೋದಿಸಿದಂಬುವಿಂದೆ ಸಂ
ಪೂರಿತಮಾದುದಿಲ್ಲವೊ ಕನತ್ಕಲಶಂ ಕಡೆಗೆಯ್ದ ಸೂತ್ರಮೋ
ಸೋರೆಯನಾಳ್ದುದೋ ಪಳೆಯಗಂಧಮನಿಟ್ಟೆಯೊ ಮಾಸಿ ಭಿನ್ನಮಾ
ದೋರಣಮಲ್ಲದಕ್ಷತೆಯನಿತ್ತೆಯೊ ಪಜ್ಜಳಿಪಂತೆ ನಲ್ಮೆಯಿಂ ೧೩

ಬೆಳಗದೆ ಶಿವೋಪಕರಣಾ
ವಳಿಯಂ ಸಾರ್ಚಿದೆಯೊ ತೊಟ್ಟುಗಳೆದೋವದೆ ಪೂ

ಹೋಗದೆ, ಈ ಮನೋಹರವಾದ ಮನೆಯ ಕಂಬಕ್ಕೆ ಏಕೆ ಉಸುರು ಹಿಂಗಿದವರ ಹಾಗೆ ಕುಳಿತುಬಿಟ್ಟಿದ್ದಾನೆ ?' ೧೧. 'ಎಂದೂ ಕೋಪಗೊಳ್ಳದ (ತಂದೆಯು) ಈ ದಿವಸ ನಿನ್ನೊಡನೆ ಅಧಿಕವಾಗಿ ಕೋಪಗೊಂಡು ಸುಮ್ಮನಿದ್ದಾನೆಂದು ಕಾಣುತ್ತದೆ. ತಂದೆಯು ನಿಜವಾಗಿ ಕೋಪದಿಂದ ಕೂಡಿದ ಕಾರಣವೇನೆಂಬುದನ್ನು ಈಗ ನನಗೆ ಹೇಳು'. ೧೨. 'ಯಥಾ ಸಾಂಗವಾದ ಅವನ (ಆ ತಂದೆಯ) ಆಚಾರವನ್ನು ಏನಾದರೂ ತೊಡಕುಗೊಳಿಸಿದೆಯೋ (ತೊಂದರೆ ಗೊಳಿಸಿದೆಯೋ), ಜಂಗಮ ಸಮೂಹವು ಪ್ರೀತಿಯಿಂದ ಮನೆಗೆ ಬಂದರೆ, ನೀನು ಅವರ ಕಾಲಕ್ಕೆ ಉಚಿತವೆನಿಸುವ ಲಿಂಗಪೂಜಾ ಕಾರ್ಯವನ್ನು ಮಾಡಿಸದೆ ಹೋದೆಯೋ' ೧೩–೧೪. 'ಸಾರಣೆ ಮಾಡುವಾಗ ಕ್ರಿಮಿಗಳ ಸಮೂಹವೇನಾದರೂ ನೊಂದಿತೋ ? ಅಭಿಷೇಕಾರ್ಥವಾದ ನೀರಿನ ಕಲಶವು ಶೋಧಿಸಿ ಶುದ್ಧಪಡಿಸಿದ ನೀರಿನಿಂದ ತುಂಬಿದುದಾಗಿರಲಿಲ್ಲವೋ ? ಮೇಲೆ ಕಟ್ಟಿದ ಅದರ ದಾರವೇನಾದರೂ ಓರೆಯಾಗಿತ್ತೋ ? ಹಳೆಯದಾದ ಗಂಧವನ್ನು (ಪೂಜೆಗೆ) ಇಟ್ಟಿದ್ದೆಯೋ ? ಮಾಸಿಹೋದವೂ, ಗೊನೆ ಮುರಿದಂಥವೂ ಮನೋಹರವಲ್ಲದಂಥವೂ ಆದ ಅಕ್ಷತೆಗಳನ್ನು ಕೊಟ್ಟಿದ್ದೆಯೋ ? ಪ್ರಜ್ವಲಿಸುವಹಾಗೆ ಪ್ರೀತಿಯಿಂದ ಬೆಳಗದೆ ಇರುವ ಶಿವಪೂಜಾಸಾಮಗ್ರಿಗಳ ಸಮೂಹವನ್ನು ಜೋಡಿಸಿದ್ದೆಯೋ ?

ಗಳನರ್ಪಿಸಿದೆಯೊ ಪೊಸಗು
ಗ್ಗುಳರಸದಿಂದಗ್ನಿ ನಾಂದಿ ಪೊಗೆ ತಗ್ಗಿದುದೋ ೧೪

ಸಾರಪ್ರಭೆ ಮಸುಳ್ದುದೊ ಪೇ
ಳ್ನೀರಾಜನವೋಜೆದಪ್ಪಿ ಮನವಿತ್ತೆಯೋ ಪೇ
ಳೋರಂತೆ ಗಡಣಿಸಿರ್ದುಪ
ಹಾರಕ್ಕಿದಿರಿಟ್ಟ ಸೊಡರ ಕಳೆ ಕುಂದಿದುದೋ ೧೫

ಲಿಂಗಾರ್ಪಿತ ಶೇಷದೊಳಭ
ವಂಗರ್ಪಿತವಾಗದುದನೆ ಬೆರಸಿದೆಯೊ ಮಹಾ
ಲಿಂಗ ತ್ರಿವಿಧೋದಕಮಂ
ಪಿಂಗದೆ ನೀನೊಂದುಗೆಯ್ದೆಯೋ ಮಱಪಿಂದಂ ೧೬

ಅಸಮಾಕ್ಷನಡಿಗಳಂ ಜಾ
ನಿಸುವಾಗಳ್ಮಾತನಾಡಿಸಿದೆಯೊ ನಿತಾಂತಂ
ಬೆಸಕೆಯ್ವೊಡಲಸಿದೆಯೊ ನೀ
ನುಸುರಲ್ಲದೊಡಯ್ಯನಿಂತು ಮುನಿವನೆ ಜನನೀ ೧೭

ತಾಯೆ ಬಿಡು ನೆಲನನಗುಳ್ವುದ
ನೋಯಾರದೆ ನೀನುಮಾನುಮೀಪನಂಘ್ರಿಲಸ
ತ್ತೋಯರುಹಕೆಱಗೆ ತಿಳಿದಪ
ನೀಯುವಸರದಲ್ಲಿ ನೋಳ್ಪೊಡಿಂತಿದೆ ಕಜ್ಜಂ ೧೮

ಬಾರೆಂದು ಕರೆವುತುಂ ಕರ
ನೀರಜದಿಂ ಜನನಿಯುಟ್ಟ ಚೇಲಾಂಚಲಮಂ

ತೊಟ್ಟು ಕಳಚಿ ಹಳೆಯುವಾದ ಹೂವುಗಳನ್ನು ಪ್ರೀತಿದಪ್ಪಿ ಅರ್ಪಿಸಿದ್ದೆಯೋ ? ಹೊಸದಾದ ಗುಗ್ಗುಳ ಹಾಕುವುದರಿಂದ ಬೆಂಕಿಯೆಲ್ಲ ಆರಿ ಆ ಗುಗ್ಗುಳದ ಹೊಗೆ ತಗ್ಗಿ ಹೋಯಿತೋ ? ೧೫–೧೬–೧೭. 'ಕ್ರಮತಪ್ಪಿ ಇಟ್ಟ ನೀರಾಜನ (ಮಂಗಳಾರತಿ)ದ ಶ್ರೇಷ್ಠವಾದ ಕಾಂತಿಯು ಮಂಕಾಗಿತ್ತೋ ? ಕ್ರಮವಾಗಿ ಜೋಡಿಸಿಟ್ಟ ಉಪಾಹಾರಕ್ಕೆ ಮನಸ್ಸು ಮಾಡಿದೆಯೋ ? (ಮುಂಭಾಗದಲ್ಲಿ) ಮುಡಿಸಿಟ್ಟ ದೀಪಗಳು ಕಾಂತಿಗುಂದಿದ್ದವೋ ? ಶಿವಲಿಂಗಕ್ಕೆ ಅರ್ಪಿಸಲ್ಪಟ್ಟ ಪ್ರಸಾದದೊಡನೆ ಪರಮಾತ್ಮನಿಗೆ ಅರ್ಪಿಸಲಿಕ್ಕೆ ಯೋಗ್ಯವಲ್ಲದುದನ್ನೇನಾದರೂ ಬೆರೆಸಿದ್ದೆಯೋ ? ಮಹಾಲಿಂಗದ ತ್ರಿವಿಧದುದಕವಾದ ಗುರು ಲಿಂಗ ಜಂಗಮ ಪಾದೋದಕವನ್ನು (ಬೇರೆಬೇರೆಯಾಗಿಡದೆ) ನೀನು ಮರೆತು ಒಂದುಗೂಡಿಸಿಬಿಟ್ಟೆಯೋ ? ಪರಮಾತ್ಮನ ಪಾದಧ್ಯಾನದ ಸಮಯದಲ್ಲಿ ಮಾತನಾಡಿಸಿಬಿಟ್ಟೆಯೋ ? (ಏನನ್ನಾದರೂ) ಅಪ್ಪಣೆ ಮಾಡಿದಾಗ ವಿಶೇಷ ಆಲಸ್ಯ ತೋರಿಸಿದೆಯೋ? ಅಲ್ಲದಿದ್ದರೆ ತಂದೆಯು ಹೀಗೆ ಕೋಪಗೊಳ್ಳುವನೇ ಜನನೀ, ನೀನು ಹೇಳು'. ೧೮–೨೦. 'ಅಮ್ಮಾ ಈ ನೆಲವನ್ನಗೆಯುವುದನ್ನು ಬಿಡು ; ನಾನೂ ನೀನೂ ಚೆಂದವಾಗಿ

ಭೀರುಮತಿ ಪಿಡಿದು ಸೆಳೆಯೆ ಕು
ಮಾರಂ ನಡೆನೋಡಿ ಮಾತೆ ನಸುನಗುತಾಗಳ್ ೧೯

ಎಲೆ ಮಗನೆ ಕಲ್ತ ನುಡಿಗಳ
ನಲಸದೆ ಪಲವಂದದಿಂದೆ ನುಡಿವುದನುಳಿ[1] ಕಾ
ದಲನ ಮುಳಿಸಿಲ್ಲಿ ಕೂಪದ
ಜಲದಿಂ ತಿಳಿದಪ್ಪುದದಱಿನಗುಳ್ದಪೆನೀಗಳ್ ೨೦

ಎಳೆಯನೆನಿಸಿರ್ದ ನಿನಗೀ
ಮುಳಿಸಿನ ಮಾತೇಕೆ ಪೋಗಿ ಪವಡಿಸು ಮುಳಿಸಂ
ತಿಳಿಪಿದಪೆನೀಯೊಱಂತೆಯ
ಸಳಿಳಮನೊಸೆದಿತ್ತು ಮೆಲ್ಲನನುನಯದಿಂದಂ ೨೧

ವ॥ ಎನೆ ನಿಜಜನನಿಗಸದಳಮಾದ ಜನಕನ ಬಲ್ಮುಳಿಸೆನಗೆ ತಿಳಿಪಲೆಂತಾನುಮಳವಲ್ಲೆಂದು ಗುರು ಮಾದಿರಾಜನಿನಲ್ಲದಿಂತಿದು ತಿಳಿವಡದೆಂದು ನೆನೆದು ತರುಣನಾ ಪರ್ಬಿದ ಮರ್ಬಿನೊಳೊರ್ವನೆ

ಹೋಗಿ ಇವನ ಪಾದಕಮಲಗಳಲ್ಲಿ ನಮಸ್ಕಾರಮಾಡಿದರೆ (ಬಹುಶಃ) ಕೋಪವನ್ನು ಬಿಡಬಹುದು; ವಿಚಾರಿಸಿ ನೋಡಿದರೆ ಈ ಅವಸರದಲ್ಲಿ ಇದೇ ಯೋಗ್ಯವಾದ ಕಾರ್ಯ ಬಾ' ಎಂದು ಹೆದರಿದ ಆ ಕುಮಾರನು ತನ್ನ ಕರ ಕಮಲದಿಂದ ತಾಯಿಯುಟ್ಟ ಸೀರೆಯ ನಿರಿಗೆಗಳನ್ನು ಹಿಡಿದು ಎಳೆಯಲು ದಿಟ್ಟಿಸಿ ಮಗನ ಮುಖವನ್ನು ನೋಡಿದ ತಾಯಿಯು ಆಗ ನಸುನಗುತ್ತ, 'ಎಲೈ ಮಗನೇ ಕಲಿತ ಅಂದವಾದ ಅನೇಕ ನುಡಿಗಳನ್ನು ಅಲಸದೆ ಮಾತನಾಡುವುದನ್ನು ಬಿಡು. ಇಲ್ಲಿ ಬಾವಿಯನ್ನು ತೋಡಿ ಅದರನೀರಿನಿಂದ ನನ್ನ ಪತಿಯ ಕೋಪವು ಇಳಿಯುವಂತೆ ಮಾಡುತ್ತೇನೆ. ಆದ್ದರಿಂದ ನೆಲವನ್ನು ಈಗ ಇಲ್ಲಿ ತೋಡು ತ್ತಿದ್ದೇನೆ.' ೨೧. 'ಎಳೆಯನಾದ ನಿನಗೆ ಈ ಕೋಪದ ಗೊಡವೆಯೇಕೆ ? ಹೋಗಿ ಮಲಗಿಕೋ. ಈ ಒರತೆಯ ನೀರನ್ನು ಪ್ರೀತಿಯಿಂದ (ನಿನ್ನ ತಂದೆಗೆ) ಕೊಟ್ಟು, ನಯ ವಾದ ಮಾತುಗಳನ್ನು ಮೆಲ್ಲನೆ ಮಾತನಾಡಿ ಸಿಟ್ಟನ್ನು ತಿಳಿಗೊಳಿಸುತ್ತೇನೆ.' ವ॥ ಎಂದು ತಾಯಿಯು ಹೇಳಲು, ಆ ಕುಮಾರನು ನನ್ನ ತಾಯಿಗೆ ಅಸಮಾನವಾದ ರೀತಿ ಯಲ್ಲಿ ನನ್ನ ತಂದೆಗುಂಟಾದ ಅಧಿಕವಾದ ಕೋಪವನ್ನು ಸಮಾಧಾನ ಮಾಡುವುದು ಯಾವರೀತಿಯಿಂದಲೂ ಶಕ್ತಿಯಿಲ್ಲದವನಾಗಿದ್ದೇನೆ. ಗುರುವಾದ ಸಕಳೇಶ ಮಾದರಸ ನಲ್ಲದೆ ಇಂತುಂಟಾಗಿರುವ ಕೋಪವು ಇಳಿಯುವುದಿಲ್ಲವೆಂದು ಯೋಚಿಸಿ, ಆ ಕುಮಾರನು ದಟ್ಟವಾದ ಕತ್ತಲೆಯಲ್ಲಿ ಒಬ್ಬನೇ ತನ್ನ ಮನೆಯಬಾಗಿಲ ಕದವನ್ನು ಗಿರ್ರೆಂದು ತೆಗೆದು ಹೊರಟು ಬಂದು ಸಕಲೇಶಮಾದರಸರ ಮನೆಯನ್ನು ಪ್ರವೇಶಿಸಿದನು. (ಅಲ್ಲಿ ಆ

1 ಡಿ(ದ)

ನಿಜಗೃಹಕವಾಟಮಂ ಗಿ[1]ಜ್ಜನೆ ತೆಗೆದೇಳ್ತಂದು ಸಕಲೇಶದೇವನರಮನೆಯಂ ಪೊಕ್ಕು ಸರಸಮಧುರತರ ವೀಣಾರಣಿತರಾಗರಸಸುಧಾಸಾಗರದೊಳೀಶ್ವರನನವಗಾಹಂಗೆಯ್ಯುತ್ತುಮಿರ್ದಾ—

ಸಕಳೇಷ್ಟದಾನಿಯೆನಿಸುವ
ಸಕಳೇಶ್ವರ ಮಾದಿರಾಜನಂ ಕಂಡೊಲವಿಂ
ಸುಕುಮಾರ ಮಾನಸಾಂಬುಜ
ಸುಕುಮಾರಂ ಪಾದಪದ್ಮಕವನತನಾದಂ ೨೨

ವ॥ ಅಂತೆಱಗಿ ಕರಾಂಬುಜಂಗಳಂ ಮುಗಿದುಮ್ಮಳಿಸುತಿಂತೆಂದಂ—

ಅವಧರಿಸಯ್ಯ ಬಿನ್ನಪಮನೆಮ್ಮಯ ತಂದೆ ನಿಮಿತ್ತಮಿಲ್ಲದಿಂ
ದವಿರಳಮಾದ ಪೆರ್ಮುಳಿಸನಾಳ್ದು ವಿಭೂತಿಯನೆಯ್ದೆ ಪೂಸಿ ತ
ನ್ನವಯವದಲ್ಲಿ ನಿಮ್ಮಡಿಗಳಿತ್ತ ನವಾಂಬರಮಂ ಮುಸುಂಕಿ ಕೊಂ
ಡವಿಚಲಿತಾಂಗನಾಗಿರುತುಮಿರ್ದಪನೊಯ್ಯನೆ ನೆರ್ಮಿ ಕಂಭಮಂ ೨೩

ನುಡಿಯಂ ನೋಡಂ ಮಿಸುಕಂ
ಕಡುಮುಳಿಸಂ ತಾಳ್ದು ಮೂರ್ತಿಗೊಂಡಿರ್ದಪನಾ
ಮೃಡಪೂಜೆಯ ವೇದಿಕೆಯಂ
ಬಿಡದಗುಳ್ದಪಳೆನ್ನ ಜನನಿಯೊರ್ವಳೆ ಗೃಹದೊಳ್ ೨೪

ಮಾದರಸರು) ರಸವತ್ತಾದ ಧ್ವನಿಯನ್ನುಂಟುಮಾಡುವ ಅತ್ಯಂತ ಮನೋಹರವಾದ ವೀಣಾಧ್ವನಿಯ ರಾಗದಿಂದುಂಟಾದ ಸಂಗೀತ ರಸವೆಂಬ ಕ್ಷೀರಸಮುದ್ರದಲ್ಲಿ ಈಶ್ವರನನ್ನು ಮುಳುಗಿಸುತ್ತಲಿದ್ದನು. ೨೨. ಸಕಲ ಇಷ್ಟಾರ್ಥಗಳನ್ನುಂಟುಮಾಡುವ ದಾನಿಯೆಂದೆನಿಸುವ ಸಕಳೇಶ್ವರ ಮಾದಿರಾಜನನ್ನು ಕಂಡು, ಪಾದಪದ್ಮಗಳಿಗೆ ಕೋಮಲವಾದ ಮನಸ್ಸೆಂಬ ಕಮಲದಿಂದ ಕೂಡಿದ ಚೆಲುವಾದ ಅಂಗವುಳ್ಳ ಬಾಲಕನು ಪ್ರೀತಿಯಿಂದ ನಮಸ್ಕಾರ ಮಾಡಿದನು. ವ॥ ಈ ರೀತಿ ನಮಸ್ಕಾರಮಾಡಿ, ಕರಕಮಲಗಳನ್ನು ಮುಗಿದು, ದುಃಖದಿಂದ ಹೀಗೆಂದನು : ೨೩. 'ಅಯ್ಯಾ, ನನ್ನ ಬಿನ್ನಹಗಳನ್ನು ಕೇಳು : ನನ್ನ ತಂದೆಯು ಈ ದಿನ ಯಾವ ಕಾರಣವೂ ಇಲ್ಲದೆ ತೆರಪಿಲ್ಲದ ತೀವ್ರಕೋಪವನ್ನು ಹೊಂದಿದ್ದಾನೆ. ಮೈಗೆಲ್ಲ ಚೆನ್ನಾಗಿ ವಿಭೂತಿಯನ್ನು ಧರಿಸಿಕೊಂಡಿದ್ದಾನೆ. ನೀವು ಕೊಟ್ಟ ನೂತನ ವಸ್ತ್ರವನ್ನು ಮೈಮೇಲೆ ಹೊದ್ದು ಮುಸುಕು ಹಾಕಿಕೊಂಡಿದ್ದಾನೆ. ಅಲುಗಾಡದ ಹಾಗೆ ಮೆಲ್ಲಗೆ ಕಂಬಕ್ಕೆ ಆತುಕೊಂಡು ಕುಳಿತುಬಿಟ್ಟಿದ್ದಾನೆ.' ೨೪. ಮಾತನಾಡುತ್ತಿಲ್ಲ, ನೋಡುತ್ತಿಲ್ಲ ; ಮಿಸುಗಾಡುತ್ತಿಲ್ಲ ; ಅತ್ಯಧಿಕ ಕೋಪವನ್ನು ಹೊಂದಿ ಕುಳಿತುಕೊಂಡುಬಿಟ್ಟಿದ್ದಾನೆ. ಮನೆಯಲ್ಲಿ ಶಿವಪೂಜೆಯ ಗದ್ದುಗೆಯನ್ನು ನನ್ನ ತಾಯಿಯೊಬ್ಬಳೇ

---

1 ತಿ(ಚ)

ಜನಕನಡಿಗೆಱಗಿ ನಯದಿಂ
ಮುನಿಸಂ ಕಳೆಯೆಂದೊಡಗುಳ್ದೊಱಂತೆಯು ಜಲವಿ
ತ್ರಸನುನಯುದೆ ತಿಳಿಪಿದಪೆನೆಲೆ
ತನುಭವ ನೀಂ ಪೋಗು ಪವಡಿಸೆಂದಸವಸದಿಂ ೨೫

ಪಿಡಿದ ಸೆಱಂಗಂ ಕರದಿಂ
ಬಿಡಿಸಿಕೊಳುತ್ತೆನ್ನ ಮಾತೆ ತೊಲಗೆಂದೆನ್ನಂ
ಜಡಿದೊಡಿದನೆಲ್ಲಮಂ ನಿ
ಮ್ಮಡಿಗಳ್ಱಿಪಲ್ಬಂದೆನಯ್ಯ ದೇಶಿಕತಿಲಕಾ ೨೬

ಇನಕರದಿಂ ಮುರ್ಚಳಿವಂ
ತೆ ನಿತಾಂತಂ ನಿಮ್ಮ ಪದದ ಸಂದರ್ಶನದಿಂ
ಜನಕನ ಮುಳಿಸಳಿವಪುದೆ ಇ
ಯ್ಯನೆ ಬಿಜಯಂಗೆಯ್ದು ದೇವ ಪೊರೆಯಲ್ವೇಳ್ಕುಂ ೨೭

ಎಂದುಂ ಮುಳಿಸಿಲ್ಲೆಮ್ಮಯ
ತಂದೆಗೆ ಮುಳಿದಿರ್ಪನೀಗಳೇಕೆಂದಱಿಯೆಂ
ಮುಂದೆಱಗಿ ನುಡಿಯಿಸಿದೊಡೇ
ನೆಂದುಂ ತಾಂ ನುಡಿಯನೆನ್ನೊಳೇವೇಳ್ದಪೆನೋ ೨೮

ತಪ್ಪದೆ ಅಗೆಯುತ್ತಿದ್ದಾಳೆ.' ೨೫. '(ತಾಯಿಗೆ ನಾನು) ತಂದೆಯ ಪಾದಗಳಿಗೆ ನಮಸ್ಕಾರಮಾಡಿ ವಿನಯದೋರಿ ಸಿಟ್ಟನ್ನು ಕಳೆಯೆಂದು ಹೇಳಿದರೆ ಅವಳು—ಮಗನೇ ನೀನು ಹೋಗಿ ಮಲಗಿಕೋ. ನಾನು ಒರತೆಯನ್ನು ತೋಡಿ, (ಅದರಲ್ಲಿ ಬಂದ) ನೀರನ್ನು ಕೊಟ್ಟು ಪ್ರೀತಿಯಿಂದ (ನಿನ್ನ ತಂದೆಯ) ಸಿಟ್ಟನ್ನು ಕಳೆಯುತ್ತೇನೆಂದು ಆತುರದಿಂದ ತೋಡುತ್ತಿದ್ದಾಳೆ.' ೨೬. ಹೇ ದೇಶಿಕ ಶ್ರೇಷ್ಠನೇ, (ನಾನು) ಹಿಡಿದ ನನ್ನ ತಾಯಿಯ ಸೆರಗನ್ನು ಕೈಯಿಂದ ಬಿಡಿಸಿಕೊಳ್ಳುತ್ತ ಅವಳು (ಆಚೆ) ತೊಲಗು ಎಂದು ಗದರಿಸಿದಳು. ಇದನ್ನೆಲ್ಲ ನಾನು ನಿಮ್ಮ ಪಾದಗಳಲ್ಲಿ ಬಿನ್ನವಿಸಿಕೊಳ್ಳಲು ಅಯ್ಯಾ ಬಂದಿದ್ದೇನೆ.' ೨೭. 'ದೇವ, ಸೂರ್ಯನ ಕಿರಣಗಳಿಂದ ಕತ್ತಲೆಯು ಪೂರ್ಣವಾಗಿ ನಾಶವಾಗುವ ಹಾಗೆ, ನಿಮ್ಮ ಪಾದದ ಸಂದರ್ಶನದಿಂದ (ನನ್ನ) ತಂದೆಯ ಕೋಪವೆಲ್ಲ ಒಮ್ಮೆಲೇ ನಾಶವಾಗುವುದೆಂದು ಇಲ್ಲಿಗೆ ಬಂದೆನು. (ನೀವು ಅಲ್ಲಿಗೆ) ದಯಮಾಡಿಸಿ ರಕ್ಷಿಸಬೇಕು.' ೨೮. 'ನನ್ನ ತಂದೆಗೆ ಎಂದೂ ಕೋಪವಿರಲಿಲ್ಲ. ಈಗೇಕೆ ಕೋಪಗೊಂಡಿರುವನೆಂಬುದನ್ನು ತಿಳಿಯೆನು. ಅವನ ಮುಂದೆ ನಮಸ್ಕರಿಸಿ, ಮಾತನಾಡಿಸಿದರೂ ನನ್ನೊಡನೆ ಏನೊಂದನ್ನೂ ಅವನು ಮಾತನಾಡುತ್ತಿಲ್ಲ. (ಅವನ್ನು) ಏನೆಂದು ಹೇಳುವೆನೋ !

ಜನಕಂ ಪ್ರಣಯದಿನೆನ್ನಯ
ಜನನಿಯೊಳೆ ಪೊವಳ್ದು ಮುನಿವೊಡಂ ಮುನಿ[1]ಗೆಮ[1] ಎ
ಳ್ಳನಿತುಂ ತಪ್ಪಿಲ್ಲದೆ ಸು
ಮ್ಮನೆ ತಾನೆನ್ನೊಡನೆ ಮುನಿದಸಿದು ಚಿತ್ರತರಂ ೨೯

ಅರಿದರಿದಾತನ ನೇಹದ
ಪರಿಯೆನ್ನೊಳ್ದೇವ ಪೇಳ್ವೊಡಸದಳಮಖಿಳೋ
ರ್ವರೆಯೊಳಿದು ಪೊಸತು ನಿಮ್ಮಯ
ಚರಣಾಬ್ಜಮೆ ಬಲ್ಲುದದ[2]ನದೇವಣ್ಣಿಪೆನೋ ೩೦

ಆಳವಿಯೊಳೆನ್ನನೀಕ್ಷಿಪುದುಮಾಗಳೆ ಪೊಂಪುಳಿದಾಳೆ ಮೆಯ್ಪೊದ
ಳ್ದಿಳಿಯೆ ಸುಖಾಶ್ರು ಬಾರೆಲೆ ತನೂಭವ ಬಾರೆಲೆ ತಂದೆ ಬಾರ ಮಂ
ಜುಳಗುಣ ಬಾಲಲಿಂಗವಿಭು ಬಾರೆನುತುಂ ಬಿಗಿಯಪ್ಪಿಕೊಂಡು ಕೋ
ಮಳಭುಜದಿಂದೆ ಮೆಯ್ದಡಪಿ ಮುದ್ದಿಸಿ ನೋಡಿ ಮನೋನುರಾಗದಿಂ ೩೧

ತೆಗೆದುತ್ಸಂಗದೊಳಿಟ್ಟು ಚಂಡಿಕೆಯನೊಳ್ಪಿಂ ಕಟ್ಟಿ ಸಂಪ್ರೀತಿ ಕೆ
ಯ್ಮಿಗೆ ಪೂಮಾಲೆಯ ಸುತ್ತಿ ಭಾಳತಳದೊಳ್ಭಸ್ಮತ್ರಿಪುಂಡ್ರಾಂಕಮಂ

(ಹೇಳಲು ಗೊತ್ತಾಗುತ್ತಿಲ್ಲ ಎಂದು ಭಾವ)' ೨೯. 'ನನ್ನ ತಂದೆಯು ವಿಶ್ವಾಸದಿಂದ ನಮ್ಮಮ್ಮನೊಡನೆ ಹೆಚ್ಚಾಗಿ ಕೋಪ ಮಾಡಿದರೂ ಮಾಡಿಕೊಳ್ಳಲಿ! ಸ್ವಲ್ಪವೂ ತಪ್ಪಿಲ್ಲದೆ ಸುಮ್ಮನೆ ಅವನು ನನ್ನೊಡನೆ ಕೋಪಗೊಂಡನು. ಇದು (ನನಗೆ) ವಿಚಿತ್ರ ವೆನಿಸಿದೆ.' ೩೦. 'ದೇವ, ನನ್ನ ಮೇಲೆ ನನ್ನ ತಂದೆಯ ಸ್ನೇಹದ ರೀತಿಯು ಅಸಾಧ್ಯ! ಅಸಾಧ್ಯ! ಹೇಳುವುದಕ್ಕೆ ಅಸಾಧ್ಯವಾದದ್ದು. (ಅವನು ನನ್ನಲ್ಲಿ ತೋರಿಸುತ್ತಿದ್ದ ಪ್ರೀತಿ) ಅಖಿಳ ಭೂಮಂಡಲದಲ್ಲಿಯೇ ಹೊಸದು. ಅದು ನಿಮ್ಮ ಪಾದಕಮಲಕ್ಕೇ ಗೊತ್ತು; ಅದನ್ನು ಏನೆಂದು ವರ್ಣಿಸುವೆನೋ! ೩೧–೩೨. ವಿಶ್ವಾಸದಿಂದ (ಆಳವಿಯೊಳ್) ನನ್ನನ್ನು ನೋಡುವನು. ಆ ಕ್ಷಣವೇ ಮೈ ರೋಮಾಂಚನಗೊಳ್ಳು ವನು; ಹೊರಹೊಮ್ಮಿ ಕಣ್ಣೀರುಗಳು (ಆನಂದಬಾಷ್ಪಗಳು) ಇಳಿಯುತ್ತಿರಲು, ಬಾರೆಲೆ ಮಗನೇ, ಬಾರೆಲೆ ನನ್ನ ತಂದೆಯೇ, ಬಾರ ಮನೋಹರವಾದ ಗುಣದ ಬಾಲಲಿಂಗ ವಿಭುವೇ, ಬಾರಪ್ಪಾ! ಎನ್ನುತ್ತ ಬಿಗಿಯಾಗಿ ಅಪ್ಪಿಕೊಂಡು, ಕೋಮಲವಾದ ತನ್ನ ಭುಜಗಳಿಂದ ಮೈದಡವಿ, ಮುದ್ದುಮಾಡಿ ನೋಡಿ, ಮನಃಸಂಪ್ರೀತಿಯಿಂದ ಎಳೆದು ತೊಡೆಯ ಮೇಲೆ ಕುಳ್ಳಿರಿಸಿಕೊಂಡು, ನನ್ನ ಚಂಡಿಕೆಯನ್ನು ಚೆನ್ನಾಗಿ ಕಟ್ಟುವನು. ಮೀರೆದಪ್ಪಿದ ವಿಶೇಷ ಪ್ರೀತಿಯಿಂದ ಹೂಮಾಲೆಯನ್ನು ಆ ಶಿಖೆಗೆ ಕಟ್ಟುವನು. ಹಣೆಯ ಮೇಲೆ ಭಸ್ಮದ ಮೂರು ಬೆರಳಿನ ಚಿಹ್ನೆಯನ್ನು ಅಳವಡಿಸುವನು. ಎರಡೂ

1 ಯಿಗೆ(ದ) 2 ವ(ಐ)

ನೆಗಳ್ದಕ್ಷಿದ್ವಯಕೆಚ್ಚು ಕಜ್ಜಳಮನೆನ್ನೀ ಕರ್ಣದೊಳ್ಪೂದೊಡಂ
ಬೆಗಳಂ ಸಾರ್ಚಿ ನಿರೀಕ್ಷಿಸುತ್ತೆ ನಲಿವಂ ಮುಂಡಾಡುವಂ ಮುದ್ದಿಪಂ ೩೨

ಕೊನೆವೆರಲಿಂದಳ್ಳೆಯನೊ
ಯ್ಯನೆ ಜಕ್ಕುಲಿಸುತ್ತೆ ನಗಿಪನಂಗನೆ ನೋಡೆಂ
ದೆನುತುಂ ಜಬ್ಬುತೆ ಪುರ್ಬಿಂ
ದಿನಿಯಳ್ಗಱಪುತ್ತೆ ಬಿನದಿಪಂ ನಸುನಗುತುಂ ೩೩

ಅಡಿಗಡಿಗಪ್ಪಿಕೊಳ್ವನನುರಾಗದಿನೋದಿಪನೀಶಮಂತ್ರಮಂ
ಮೃಡ ಶಿವ ಶಂಭು ಶಂಕರ ಹರಾಭವ ಭರ್ಗ ಭವಾದಿನಾಮಮಂ
ನುಡಿ ನುಡಿಯೆಂದು ತಾಂ ಕಲಿಪನಾಲಿಪನೊಳ್ನುಸಲೊಡ್ಡಿ ಜೈಗುಡು
ತ್ತೊಡನೊಡನುರ್ಬಿ ಮೇಣ್ಪಿಡಿದು ಗಲ್ಲಮನೊಲ್ದಲುಗುತ್ತೆ ರಾಗಿಪಂ ೩೪

ವ॥ ಮತ್ತಂ—

ಬಸವನ ಬಂಟನೋ ಸುತನೊ ಕಿನ್ನರದೇವನ ಕೂರ್ಪ ಲೆಂಕನೋ
ಮುಸುಟಿಯ ಚೌಡರಾಜನ ಹಲಾಯುಧನಾಳೊ ತೆಲುಂಗ ಜೊಮ್ಮನಾ
ಳ್ವೆಸದ ಬೆಡಂಗನೋ ಮಸಣದೇವನ ದಾಸನೊ ದಾಸಿಮಯ್ಯನೊ
ಲ್ದೆಸಕದ ಭೃತ್ಯನೋ ದಸರಿದೇವನ ಚಾರನೊ ಮಾಚಿದೇವನಾ ೩೫

ಪಳೆಯನೊ ಸೇದಿರಾಜನಸಿಯಂ ಪಿಡಿವಾತನೊ ಪಂಡಿತಾರ್ಯನು
ಜ್ಜ್ವಳಪದಪದ್ಮಸೇವಕನೊ ವೇಮುರಸಾರ್ಯರ ಶಿಷ್ಯನೋ ವಿಶ್ವಂ
ಖಳಮತಿ ಬಂಕನಂಕದವನೋ ಸಿರಿಯಾಳ್ವನ ಸೂನುವಿಂಗೆ ನ
ಲ್ಗೆಳೆಯನೊ ಸೌಂದರಾಧಿಪನ ದೂತನೊ ಚನ್ನಯನಾತ್ಮಜಾತನೋ ೩೬

ಕಣ್ಣುಗಳಿಗೆ ಕಾಡಿಗೆಯನ್ನು ಬಳಿಯುವನು. ಕಿವಿಗಳಲ್ಲಿ ಹೂವಿನ ಗೊಂಡೆಗಳನ್ನು ಅಳವಡಿಸುವನು. ನೋಡಿ ನಲಿದಾಡುವನು. ಮೈಮೇಲೆ ಕೈಯಾಡಿಸಿ ಮುದ್ದಿಸುವನು. ೩೩–೩೪. ಬೆರಳಿನ ತುದಿಯಿಂದ ಪಕ್ಕೆಗಳಲ್ಲಿ ಮೆಲ್ಲನೆ ಚಕ್ಕಳುಗುಳಿಯಾಡಿಸಿ, ನಗಿಸುವನು. 'ಅಂಗನೆಯೇ, ನೋಡು' ಎಂದು ಹುಬ್ಬಿನ ಸನ್ನೆಯಿಂದ ತನ್ನ ಇನಿಯಳಿಗೆ (ನಮ್ಮ ಅಮ್ಮನಿಗೆ) ಸೂಚಿಸುತ್ತ, ವಿನೋದಗೊಳಿಸುವನು ; ನಸುನಗುತ್ತ ಕ್ಷಣಕ್ಷಣಕ್ಕೂ ಅಪ್ಪಿಕೊಳ್ಳುವನು. ಈಶ್ವರ ಸಂಬಂಧದ (ನಮಃಶಿವಾಯ) ಮಂತ್ರವನ್ನು ವಾತ್ಸಲ್ಯದಿಂದ ಹೇಳಿಕೊಡುವನು. ಮೃಡ, ಶಿವ, ಶಂಭು, ಶಂಕರ, ಹರ, ಅಭವ, ಭರ್ಗ, ಭವ–ಇತ್ಯಾದಿ ಶಿವನಾಮವನ್ನು ಹೇಳುಹೇಳೆಂದು ತಾನೇ ಕಲಿಸಿಕೊಡುವನು. ನಾನು ನುಡಿದುದನ್ನು ಕೇಳುವನು. ತನ್ನ ಸುಣ್ಣನೆಯ ಹಣೆಯನ್ನು ಮುಂದಕ್ಕೆ ಚಾಚಿ, ಜೈ ಜೈಯೆಂದು ಜೈಗುಡುತ್ತ ಆ ಕೂಡಲೆ ಉತ್ಸಾಹಗೊಂಡು, ಗಲ್ಲವನ್ನು ಹಿಡಿದು ಅಲುಗಾಡಿಸುತ್ತ, ಅನುರಾಗ ತೋರಿಸುವನು. ವ॥ ಮತ್ತು ೩೫–೩೬. (ಅಪ್ಪಾ ! ನೀನು) ಬಸವಣ್ಣನ ಬಂಟನೋ ? ಕಿನ್ನರಯ್ಯನ ಮಗನೋ ? ಮುಸುಟಿಯ ಚೌಡರಾಯನ ಪ್ರೀತಿಯ ಭೃತ್ಯನೋ ? ಹಲಾಯುಧನ ಆಳೋ ? ತೆಲುಂಗು ಜೊಮ್ಮಯ್ಯನ ಅಪ್ಪಣೆಯ

ಚೇರಮನಶ್ವರಕ್ಷಕನೊ ಗೊಲ್ಲಳನೊಳ್ದುಱುಗಾವನೋ ಬಹಿ
ರ್ದ್ವಾರಮನೊಲ್ದು ಕಾವ ಚರನೋ ಗಣನಾಥನ ಬಂಡಿ[1]ಕಾಱನೋ
ಬೀರದ ಬಿಬ್ಬ ಬಾಚಯನ ಹೊನ್ನಯನಗ್ಗದ ಕಂಬಿಕಾಱನೋ
ಮಾರಯನಂಗಣಕ್ಕೆ ಚಳೆಯಂಗುಡುವಾತನೊ ಚೋಳರಾಜನಾ ೩೭

ಪಡಿಯಱನೋ ಪಗಲ್ನೊಣೆಯರಾಳತಿಗೆಯ್ವನೊ ಕಕ್ಕಯಂಗಿವಂ
ಪಡಿಗಮನಾಂಪನೋ ಮಳಯರಾಜನ ಸತ್ತಿಗೆದಾಳ್ವನೋ ಬೆಡಂ
ಗಿಡಿದಿರಿವತ್ತನರ್ಭಕನೊ ಚನ್ನವೃಷಾಂಕನ ಸುಪ್ರಸಾದಿಯೋ
ನಿಡುಗುಡಿಮಾರನಂಗಣರಜಂದೆಗೆವಾತನೊ ಸಿದ್ಧರಾಮನಾ ೩೮

ಮೇರೆಗೆ ನಡೆಯುವ ವಿಲಾಸವುಳ್ಳವನೋ ? ಮಸಣಿದೇವನ ದಾಸನೋ ? ಜೇಡರ ದಾಸಿಮಯ್ಯನ ಒಳ್ಳೆಯ ಆಜ್ಞಾಧಾರಕನಾದ ಆಳೋ ? ದಸರಿದೇವನ ಚಾಕರಿ ಮಾಡುವವನೋ ? ಆ ಮಾಚಿದೇವನ ಹಳಬನೋ (ಹೆಳವನೋ)† ಸೇದಿರಾಜನ ಖಡ್ಗವನ್ನು ಹಿಡಿಯುವವನೋ ? ಪಂಡಿತಾರಾಧ್ಯನ ಉಜ್ವಳವಾದ ಪಾದಕಮಲಗಳ ಸೇವಕನೋ ? ವೇಮನಾರಾಧ್ಯರ ಶಿಷ್ಯನೋ ? ಸ್ವತಂತ್ರ ಮತಿಯುಳ್ಳ ಬಂಕಯ್ಯನ ಬಿರುದನ್ನು ಹೊಗಳುವವನೋ ? ಶಿರಿಯಾಳಸೆಟ್ಟಿಯ ಮಗನ ಪ್ರೀತಿಯ ಸ್ನೇಹಿತನೋ ? ಸುಂದರ ನಂಬಿಯಣ್ಣನ ದೂತನೋ ? ಮಾದಾರ ಚನ್ನಯ್ಯನ ಔರಸಪುತ್ರನೋ ? ಚೇರಮರಾಯನ ಕುದುರೆ ಕಾಯುವವನೋ ? ಗೊಲ್ಲಾಳಯ್ಯನೊಡನೆ ಪ್ರೀತಿಯಿಂದ ಹಸುವನ್ನು ಕಾಯುವವನೋ ? ಗಣನಾಥನ ಹೊರಬಾಗಿಲನ್ನು ಪ್ರೀತಿಯಿಂದ ಕಾಯುವ ಭೃತ್ಯನೋ ? ವೀರವೃತ್ತಿಯ ಬಿಬ್ಬಿ ಬಾಚಯ್ಯನ ಬಂಡಿಯನ್ನು ಹೊಡೆಯುವವನೋ ? ಹೊನ್ನಯ್ಯನ ಶ್ರೇಷ್ಠವಾದ ಕಂಬಿ (ಆಡ್ಡೆ) ಯನ್ನು ಹೊರುವವನೋ ? ಮಾರಯ್ಯನ ಅಂಗಳಕ್ಕೆ ನೀರನ್ನು ಚಿಮುಕಿಸುವವನೋ ? ಕರಿಕಾಲ ಚೋಳಮಹಾರಾಜನ ಬಾಗಿಲು ಕಾಯುವವ (ಪ್ರತೀಹಾರಿ) ನೋ ? ಪಗಲ್ನೊಣೆಯರ ಅಪ್ಪಣೆಯನ್ನು ಪರಿಪಾಲಿಸುವವನೋ ? ಕಕ್ಕಯ್ಯನಿಗೆ ಇವನು ಪೀಕದಾನಿ (ತಾಂಬೂಲವನ್ನು ಉಗುಳುವ ಪಾತ್ರೆ) ಯನ್ನು ಹಿಡಿಯುವವನೋ ? ಮಲಯರಾಜನ ಛತ್ರಿಯನ್ನು ಹಿಡಿಯುವವನೋ ? ಬೆಡಗಿನವನಾದ ಇರಿವತ್ತನ ಶಿಶುವೋ ? ಚೆನ್ನಬಸವೇಶ್ವರನ ಶ್ರೇಷ್ಠ ಪ್ರಸಾದಿಯೋ ? ನಿಡುಗುಡಿ ಮಾರಯ್ಯನ ಅಂಗಳದ ಧೂಳನ್ನು ಗುಡಿಸುವಾತನೋ ? ಸಿದ್ಧರಾಮೇಶ್ವರನನ್ನು ಸೇವಿಸುವ ಆ ಗುಡ್ಡನೋ ? ಸುರಗಿಯ ಚೌಡಯ್ಯನ ಭೃತ್ಯನೋ ? ಖ್ಯಾತಿವೆತ್ತ

1 ದಿ(ಜ, ದ)

†ಹಳಬ ಅಥವಾ ಹೆಳವ (ಹೆಳಬ) ಎಂಬುದೊಂದು ಜನಾಂಗ. ಇವರು ಕೆಲವು ಮನೆತನಗಳ ಹಿಂದಿನ ಚರಿತ್ರೆಯನ್ನೆಲ್ಲ ಸಂಗ್ರಹಿಸಿಕೊಳ್ಳುತ್ತ ಬಂದು ಮುಂದಿನ ಸಂತತಿಯವರಿಗೆ ಆಗಾಗ ಬಂದು ಹೊಗಳಿ ಹೇಳುತ್ತಾರೆ. ಇಲ್ಲಿ 'ಪಳೆಯ' ಎಂದು ಇವರಿಗೇ ಹೇಳಿರಬಹುದೆಂದು ತೋರುತ್ತದೆ.

ಸೇವಿಪ ಗುಡ್ಡನೋ ಸುರಗಿ ಚೌಂಡನ ಕಿಂಕರನೋ ಪೊದಳ್ದ ಕೆಂ
ಬಾವಿಯ ಭೋಗಣನಾಗರದ ಸಿಂಬಕನೋ ಕಲಿಕಾಮನಂಘ್ರಿರ
ಕ್ಷಾವಹನಕ್ರಿಯಾನ್ವಿತನೊ ಮಾದರಸಾರ್ಯರ ಮೊಮ್ಮನೋ ಮಹಾ
ದೇವಿಯ ಚಿಕ್ಕಮಾದಣನ ಕಂದನೊ ನೀನೆನುತೆನ್ನನಳ್ಕಱಿಂ ೩೯

ಕರೆಕರೆದು ಲಲ್ಲೆಗೆಯ್ದಾ
ದರಿಸುತೆ ಪೇರುರದೊಳಪ್ಪುವಂ ಪಡಗರಿಪು
ಕರತಳತಾಳಮನೊತ್ತುತೆ
ಪಿರಿದುತ್ಸವದಿಂದೆ ಕುಣಿಯಿಪಂ ಪಿತನೆನ್ನಂ ೪೦

ಪೆಗಲೇಱಿಸಿಕೊಂಡೆನ್ನಂ
ಮಿಗೆ ನಿಮ್ಮೋಲಗಕೆ ಬರ್ಪನತಿ ಸಂಭ್ರಮದಿಂ
ದಗಲದನುದಿನಮುಮಿಂತಿಂ
ತಗಣಿತ ಸಂಪ್ರೀತಿವೆತ್ತು ಮನ್ನಿಪನೆನ್ನಂ ೪೧

ಇಂದೆನ್ನೊಳ್ಮನಿದುಸುರಂ
ತಂದೆ ಮಹಾಮಹಿಮ ನೀಮೆ ಬಲ್ಲಿರಿದಂ ಮೇ
ಣೊಂದುಂ ತಪ್ಪೆನ್ನೊಳ್ಸಲೆ
ಸಂದಿಸದಾನಾಡೆನನ್ಯ ಶಿಶುಗಳೊಳೆಂದುಂ ೪೨

ಶರಣರಡಿಗಂಡು ವಂದಿಸ
ದಿರೆನಭವಾನರ್ಚಿತಕ್ಕೆ ಬಾಯ್ದೆಱೆಯೆಂ ಶಂ
ಕರಪೂಜೆಗೆಯ್ವ ಸಮಯದೆ
ಕರೆಯೆಂ ಕಂಡುದನೆ ಬಯಸಿ ಬೇಡೆನಜಸ್ರಂ ೪೩

ಕೆಂಭಾವಿ ಭೋಗಣ್ಣನ ಪ್ರೀತಿಯ ಆಳೋ ? ಕಲಿ ಕಾಮದೇವನ (ಪಾದದ) ಕೆರಗಳನ್ನು ಹೊರುವ ಕಾರ್ಯದಲ್ಲಿ ನಿಯಮಿತನಾದವನೋ ? ಮಾದರಸಾರ್ಯನ ಮೊಮ್ಮಗನೋ ? ಮಹಾದೇವಿಯ (ಚಿಕ್ಕಮಾದಣ್ಣನ ಹೆಂಡತಿ) ಚಿಕ್ಕಮಾದಣ್ಣನ ಮಗನೋ ಎನ್ನುತ್ತ ನನ್ನನ್ನು ಪ್ರೀತಿಯಿಂದ—೪೦. ಕರೆಕರೆದು ಲಲ್ಲೆಮಾಡಿ (ಮುದ್ದುಮಾಡಿ), ಆದರ ತೋರಿಸುತ್ತ ಅಗಲವಾದ ಎದೆಯಿಂದ ಅಪ್ಪಿಕೊಳ್ಳುವನು ; ಸಂಭ್ರಮಗೊಳ್ಳುವನು ; ಕೈ ಚಪ್ಪಾಳೆಯ ತಾಳಗಳನ್ನು ಕುಟ್ಟುತ್ತ ಎನ್ನ ತಂದೆಯು ನನ್ನನ್ನು ಅತ್ಯಂತ ಉತ್ಸಾಹ ದಿಂದ ಕುಣಿಸುವನು. ೪೧. ಪ್ರತಿದಿನವೂ ತಪ್ಪದಂತೆ ನನ್ನನ್ನು ತನ್ನ ಹೆಗಲ ಮೇಲೆ ಕುಳ್ಳಿರಿಸಿಕೊಂಡು ಅತ್ಯಂತ ಸಂಭ್ರಮದಿಂದ ನಿಮ್ಮ ಓಲಗಕ್ಕೆ ಬರುವನು. ಓ ಹೀಗೆ ಹೀಗೆ ಲೆಕ್ಕವಿಲ್ಲದ ವಿಶೇಷ ಪ್ರೀತಿಯಿಂದ ನನ್ನನ್ನು ಮನ್ನಣೆ ಮಾಡುವನು. ೪೨. ಈ ದಿನ ನನ್ನೊಡನೆ ಕೋಪಗೊಂಡು (ನನ್ನ) ತಂದೆಯು ಮಾತನ್ನೇ ಆಡುತ್ತಿಲ್ಲ; ಇದನ್ನು ಮಹಾ ಮಹಿಮರಾದ ನೀವೇ ಬಲ್ಲಿರಿ. ಮತ್ತು ಒಂದು ತಪ್ಪು ನನ್ನಿಂದ ಉಂಟಾಗಿಲ್ಲ; ಬೇರೆ ಮಕ್ಕಳ ಹಾಗೆ ನಾನು ಮಾತನಾಡುವವನಲ್ಲ. ೪೩. ಸತತವೂ ಶರಣರುಗಳ ಪಾದ ವನ್ನು ಕಂಡು ನಮಸ್ಕರಿಸದೆ ಇರುವುದಿಲ್ಲ; ಈಶ್ವರನ ಎಡೆಗೆ ಬಾಯಿ ತೆರೆಯುವುದಿಲ್ಲ; ಶಂಕರನ ಪೂಜೆ ಮಾಡುವ ಸಮಯದಲ್ಲಿ ಕರೆಯುವುದಿಲ್ಲ (ಮಾತನಾಡಿಸುವುದಿಲ್ಲ);

ಪೊಲ್ಲದುಮನೆಸಗೆನಯ್ಯನ
ಸೊಲ್ಲಂ ಸಲೆ ಮೀಱನನ್ಯರೊಸಗೆಯ ಗೃಹಕಾಂ
ನಿಲ್ಲದೆ ಪೋಗೆಂ ಸಮಯಕೆ
ಸಲ್ಲದರೊಳ್ನುಡಿಯೆನೀಶ[1]ಮನುವಂ[1] ಮಱೆಯೆಂ ೪೪

ಇಂತಾನಿರ್ಪಂದವಂ ತಾನಱಿಯನೆ ಮುಳಿದಂ ನಿರ್ನೆರಂ ತಾತನೆನ್ನೊ
ಳ್ಸಂತಾಪಂಗೊಂಡು ಪೋಣಾಂ ತಿಳಿಪೆ ತಿಳಿಯನೇನೆಂದಪೆಂ ಸತ್ಕೃಪಾರ್ದ್ರ
ಸ್ವಾಂತರ್ನೀಮೆಯ್ದಿ ಬೇಗಂ ತಿಳಿಪೆ ತಿಳಿದಪಂ ಬಲ್ಲೆನಾನೆಲ್ಲಮಂ ದು
ಶ್ಚಿಂತಾಕಾಂತಾರದಾವಾನಳ ಗುರುವರ ನೀಂ ಬಂದು ರಕ್ಷಿಪ್ಪುದೆಮ್ಮಂ ೪೫

ಎಂದಿಂತು ಮುದ್ದುನುಡಿಗ
ಳ್ಪಂದಣಿಸಿರೆ ದೇವ ಬನ್ನಿಮೆಂದಡಿಗಡಿಗಾ
ಕ್ರಂದಿಸುತೆಱಗುತೆ ಕರೆವುತೆ
ಕುಂದದೆ ದೈನ್ಯೋಕ್ತಿವೆರಸಿ ಪೊರಳುತ್ತಡಿಯೊಳ್ ೪೬

ಕರಕರಿಪ ತರುಣನಿರವಂ
ಕರುಣಾನಿಧಿ ನೋಡಿ ದಶನದೀಧಿತಿ ಮೊಗದೊ
ಳ್ಪರಕಲಿಸೆ ನಗುತೆ ಸಕಳೇ
ಶ್ವರದೇವಂ ಬೀಣೆದೆಗೆದು ಕಿಲಕಿಲುಪುತ್ತುಂ ೪೭

ಕಂಡದ್ದನ್ನೆಲ್ಲ ಅಪೇಕ್ಷಿಸಿ ಬೇಡುವುದಿಲ್ಲ. ೪೪. ಕೆಟ್ಟ ಕೆಲಸವನ್ನೆಂದೂ ಮಾಡುವುದಿಲ್ಲ; ನನ್ನ ತಂದೆಯ ಮಾತನ್ನು ಎಂದೂ ಮೀರುವುದಿಲ್ಲ; ಬೇರೆಯವರ (ಶಿವಭಕ್ತಿಯಿಲ್ಲದವರ) ಮನೆಯಲ್ಲುಂಟಾಗುವ ಉತ್ಸವಗಳಿಗೆ ಹೋಗುವುದಿಲ್ಲ; ನನ್ನ ವೀರಶೈವ ಸಮಯಕ್ಕೆ ಸಲ್ಲದವರೊಡನೆ ನುಡಿಯುವುದಿಲ್ಲ ; ಈಶ್ವರ ಮಂತ್ರವನ್ನು ಮರೆಯುವುದಿಲ್ಲ. ೪೫. ತಾತನೇ. ಹೀಗೆ ನಾನಿರುವ ರೀತಿಯನ್ನು ತಾನು (ನಮ್ಮ ತಂದೆಯು) ತಿಳಿದಿಲ್ಲವೇ ? ಕಾರಣವಿಲ್ಲದೆ ನನ್ನೊಡನೆ ಕೋಪಗೊಂಡಿದ್ದಾನೆ. ಸಂಕಟಗೊಂಡು ನಾನು ಹೋಗಿ (ಅವರ ಕೋಪವನ್ನು) ತಿಳಿಗೊಳಿಸಿದರೂ ತಿಳಿಗೊಳ್ಳುತ್ತಿಲ್ಲ. ಇದಕ್ಕೇನೆನ್ನಲಿ! ಶ್ರೇಷ್ಠ ದಯಾರಸದಿಂದ ಆರ್ದ್ರಗೊಂಡ ಮನಸ್ಸುಳ್ಳವರಾದ ನೀವು ಬೇಗ ಬಂದು ತಿಳಿಗೊಳಿಸಿದರೆ ಕೋಪ ಬಿಡುವನು; ಅದನ್ನೆಲ್ಲ ನಾನು ಬಲ್ಲೆನು, ಆದ್ದರಿಂದ ಕೆಟ್ಟ ಚಿಂತೆಗಳೆಂಬ ಅರಣ್ಯಕ್ಕೆ ದಾವಾನಳ ಸ್ವರೂಪನಾದ ಗುರುಶ್ರೇಷ್ಠನೇ, ನೀನು ಬಂದು ನಮ್ಮನ್ನು ರಕ್ಷಿಸು. ೪೬–೪೭. ಹೀಗೆಂದು ಮುದ್ದಾದ ಮಾತುಗಳಿಂದ ಕೂಡಿ 'ದೇವ, ಬನ್ನಿ'ರೆಂದು ಹೆಜ್ಜೆ ಹೆಜ್ಜೆಗೂ ಅಳುತ್ತ, ನಮಸ್ಕರಿಸುತ್ತ, ಕರೆಯುತ್ತ, ಪಾದಗಳಲ್ಲಿ ಹೊರಳುತ್ತ, ದೈನ್ಯದಿಂದ ಕೂಡಿದ ಮಾತುಗಳಿಂದ ಕುಂದಿಲ್ಲದೆ ಕಳವಳ ಪಡುತ್ತಿರುವ ಬಾಲಕನ ಸ್ಥಿತಿಯನ್ನು ಆ ಸಕಳೇಶ ಮಾದರಸರು ನೋಡಿ, ಹಲ್ಲುಗಳ ಕಾಂತಿಯು ಮುಖ

---

1 ಮಂತ್ರವ (ಮು,ಜ,ಗ,ದ,)

ಶೀಲವಂತರನಂತರುಂಟವಳಂತೊಱಂತೆಯುನೆಯ್ದೆ ತ
ವ್ಮಾಲಯುಸ್ಥಳದಲ್ಲಿ ತೋಡಿದರುಂಟೆ ಪೆರ್ಮುಳಿಸಾಗೆ ತ
ತ್ಕಾಲದೊಳ್ಪಡಿವಂದವಂ ಬಿಸುಟೀತನಂತೆ ಮುಸುಂಕುತುಂ
ಚೇಲವುಂ ಮಿಗೆ ನೆರ್ಮಿ ಕಂಬವನಿರ್ದರುಂಟೆ ಗೃಹಾಧಿಪರ್ ೪೮

ಚಿತ್ರಮಿದು ಚಿಕ್ಕಮಾದನ
ಪುತ್ರನಿವಂ ನುಡಿವ ಮಾತು ಪೊಸಬಗೆಯೆಮ್ಮೀ
ಶ್ರೋತ್ರಕಿನಿದಾಯ್ತು ಶಿವ ಶಿವ
ಧಾತ್ರಿಯೊಳಿವನನ್ನರೊಳರೆ ನುಡಿಯು ಬೆಡಂಗರ್ ೪೯

ವ॥ ಎಂದು ಪೊಗಳ್ದು ತಲೆದಡಪಿ ಮುದ್ದಿಸಿ ಮುಂಡಾಡಿ ನೋಡಿ—

ಬಾಲಲಿಂಗ ನಡೆ ಪೋಪಮೆನುತ್ತುಂ
ಲೀಲೆಯಿಂದೆ ಸಕಳೇಶ್ವರದೇವಂ
ಕಾಲವೈರಿಯು ನಿರೂಪಮಿದೆಂದಾ
ಕಾಲಕಂಠನಿಭನೇಳ್ತರುತಾಗಳ್ ೫೦

ಸಕಳೇಷ್ಟಪ್ರದ ದೇವ ನೀನಿರೆ ವಲಂ ಬೇಱೊಂದು ನಿಶ್ಚೈಸಿ ಬೇ
ಡಿ ಕರಂ ದಾವತಿಗೊಳ್ವನಲ್ತು ಬಿಡದಾನೆಂಬಿುತಿದಂ ನೀನೆ ಬ
ಲ್ಲೆ ಕೃಪಾಸಾಗರ ಪೇಳ್ವುದೇಂ ಪೆಱತನೆನ್ನಂಗೇಂದ್ರಿಯ ಪ್ರಾಣ ಚಿ
ತ್ತಕಧೀಶಂ ಸಕಳೇಶ ನೀನೇ ನಿಜಮೆಂದಾನಂದದಿಂ ಗೀತಮಂ ೫೧

ಪಾಡುತ್ತೆ ಬಾಲಲಿಂಗಂ
ಕೂಡೆಯ್ತರೆ ನಿಜ ದೃಗಂಚಲಪ್ರಭೆ ಜವದಿಂ

ದಲ್ಲಿ ಹೊರಹೊಮ್ಮುವಂತೆ ನಗುತ್ತ ವೀಣೆಯನ್ನು ತೆಗೆದು ಕೆಳಗಿಟ್ಟನು. ೪೮. ಶೀಲವುಳ್ಳವರು ಲೋಕದಲ್ಲಿ ಲೆಕ್ಕವಿಲ್ಲದಷ್ಟು ಇರುವರು. ಈ ಚಿಕ್ಕ ಮಾದಣ್ಣನ ಪತ್ನಿಯಂತೆ ತಮ್ಮ ಮನೆಯಲ್ಲಿಯೇ ಬಾವಿಯನ್ನು ತೋಡಿದವರುಂಟೇ ? ಕೋಪವು ಅಧಿಕವಾದರೆ ಆಯಾ ಕಾಲಕ್ಕೆ ಉಚಿತವಾದ ಗದರಿಕೆ ಹಾಕುವ ರೀತಿಯನ್ನು ಬಿಟ್ಟು, ಈತನ ಹಾಗೆ ಬಟ್ಟೆಯನ್ನು ಮುಸುಕು ಹಾಕಿಕೊಂಡು ಕಂಬಕ್ಕೆ ಆತು ಕುಳಿತುಕೊಳ್ಳುವ ಗೃಹಸ್ಥರೂ ಉಂಟೇ ? ೪೯. ಈ ಚಿಕ್ಕ ಮಾದಣ್ಣನ ಪುತ್ರನಾದ ಇವನ ನೂತನ ರೀತಿಯ ಮಾತುಗಳು ವಿಚಿತ್ರವಾಗಿವೆ. ನಮ್ಮ ಕಿವಿಗೆ ಬಹು ಮಧುರವಾಗಿವೆ, ಶಿವ ಶಿವ! ಲೋಕದಲ್ಲಿ ಇವನಂಥ ನುಡಿಯ ಬೆಡಗಿನ ಮಕ್ಕಳು ಯಾರಾದರೂ ಇರುವರೇ ? ವ॥ ಎಂದು ಹೊಗಳಿ ತಲೆಯ ಮೇಲೆ ಕೈಯಾಡಿಸಿ, ಮುದ್ದುಮಾಡಿ ಮೈಯನ್ನು ಸವರಿ ನೋಡಿ—೫೦. ನೀಲಕಂಠ ಸ್ವರೂಪನಾದ ಸಕಳೇಶ್ವರ ಮಾದರಸನು, ಇದು ಪರಮೇಶ್ವರನ ನಿರೂಪವೆಂದು ಮನಸ್ಸಿನಲ್ಲಿಯೇ ಅಂದುಕೊಳ್ಳುತ್ತ, 'ಎಲೈ ಬಾಲಲಿಂಗ, ನಡೆ ಹೋಗೋಣ' ಎಂದು ಹೊರಟು ಬಂದನು. ೫೧–೫೨. 'ಹೇ ದೇವ, ಸಕಲ ಇಷ್ಟಾರ್ಥಗಳನ್ನು ಕೊಡುವವನು ನೀನಿರುವಾಗ ಬೇರೊಂದನ್ನು ಮನಸ್ಸಿನಲ್ಲಿ ನಿಶ್ಚಯಿಸಿಕೊಂಡು ಬೇಡುವ ವಿಶೇಷ ಧಾವತಿ

ದೋಡಿಸೆ ತಮಮಂ ಗುರುಕುಲ
ಚೂಡಾಮಣಿ ಮಾದಿರಾಜನೊಸೆದೇಳ್ತಂದಂ ೫೨

ವ|| ಅಂತೇಳ್ತಂದು ತನ್ಮಂದಿರಮಂ ಪೊಕ್ಕು ನಿಂದು ನಿರೀಕ್ಷಿಸಿ—

ಏಗೆಯ್ದಪೆ ಮಗಳೇ ಪೊದ
ಳ್ದೀಗಳ್ನಿನ್ನನಿಯನೇಕೆ ಮುನಿದನೊ ಪೊಱಮ
ಟ್ಟೀ ಗುಣನಿಧಿ ನಟ್ಟಿರುಳೆ
ಮ್ಮಾಗಾರಕ್ಕೇಕೆ ಬಂದನೋ ಬಳಲುತ್ತುಂ ೫೩

ವ|| ಎಂಬ ಗಂಭೀರ ಧ್ವನಿಯನಾ ಮಹಾದೇವಿ ಕೇಳ್ದು ಖನನಕ್ರಿಯೆಯನುಳಿದು ಭೀತಿ ವೆರಸಿ ಭಕ್ತಿಭರದಿನೆಱಗುವಂತೆ ತದಂಘ್ರಿಗೆಱಗಿ ಮಗುಳ್ದು ಮಗುಳ್ದು ಪೊಡವಡುತ್ತುಮಿರೆ ನಡುವನೆಗೆ ವಂದು ಕಂಭಮಂ ನೆಮ್ಮಿರ್ದ ಚಿಕ್ಕಮಾದಣ್ಣನಂಗಮಂ ಮಾದಿರಾಜನಚ್ಚರಿವೆತ್ತು ನಿಜಕೃಪಾಪೀಯೂಷಾರ್ದ್ರಕಟಾಕ್ಷದಿನಡರೆ ನೋಡಿ ಪೆಸರ್ಗೊಂಡು ಕರೆದು—

ಯನ್ನು ಮಾಡಿಕೊಳ್ಳುವವನು ನಾನಲ್ಲ. ತಪ್ಪದೆ ಹೀಗೆಂದು ನಾನು ತಿಳಿದಿರುವ ಈ ರೀತಿಯನ್ನು ನೀನೇ ತಿಳಿದಿದ್ದೀಯೆ ಬೇರೆ ಹೇಳುವುದಾದರೂ ಏನಿದೆ? ಹೇ ಕೃಪಾ ಸಾಗರನೇ, ಸಕಲಕ್ಕೂ ಈಶ್ವರನೇ, ನನ್ನ ದೇಹ, ಇಂದ್ರಿಯ, ಪ್ರಾಣಚಯಕ್ಕೆಲ್ಲ ನಿಜ ವಾಗಿ ನೀನೇ ಒಡೆಯನಾಗಿದ್ದೀಯೆ?' ಹೀಗೆಂದು ವಚನವನ್ನು ಹಾಡುತ್ತ, ಆ ಬಾಲಲಿಂಗ ನೊಡನೆ ತನ್ನ ಕಣ್ಣಿನ ಕೊನೆಯ ಕಾಂತಿಯು ತೀವ್ರವಾಗಿ (ಮುಸುಕಿದ) ಕತ್ತಲೆಯನ್ನು ಓಡಿಸುತ್ತಿರಲು. ಆ ಗುರುಕುಲ ಚೂಡಾಮಣಿಯಾದ ಸಕಳೇಶ ಮಾದರಸನು ಚಿಕ್ಕ ಮಾದಣ್ಣನ ಮನೆಗೆ ಹೊರಟು ಬಂದನು. ವ|| ಆ ರೀತಿ ಹೊರಟು ಬಂದು ಅವನ ಮನೆಯನ್ನು ಪ್ರವೇಶಿಸಿ ನಿಂತು ನೋಡಿ—೫೩. 'ಮಗಳೇ ಹರ್ಷಗೊಂಡು ಏನು ಮಾಡ ತೊಡಗಿದ್ದೀಯೆ? ನಿನ್ನ ಗಂಡನೇಕೆ ಕೋಪಗೊಂಡನೋ? ಮನೆ ಬಿಟ್ಟು ಹೊರಟು ಈ ಸದ್ಗುಣಗಳ ನಿಧಿಯಾದ ಬಾಲಲಿಂಗನು ಸಂಕಟಪಟ್ಟು ಮಧ್ಯರಾತ್ರಿಯಲ್ಲಿ ನಮ್ಮ ಮನೇಗೇಕೆ ಬಂದನೋ? ವ|| ಹೀಗೆಂಬ ಗಂಭೀರವಾದ ಧ್ವನಿಯನ್ನು ಆ ಮಹಾ ದೇವಿಯು ಕೇಳಿ, ನೆಲವನ್ನು ಅಗಿಯುವ ಕಾರ್ಯವನ್ನು ಬಿಟ್ಟು ಭಯದಿಂದ ಕೂಡಿದವಳಾಗಿ ಭಕ್ತಿಯ ಭಾರದಿಂದ ಬಾಗುವ ಹಾಗೆ ಆ ಮಾದರಸನ ಪಾದಗಳಿಗೆ ನಮಸ್ಕರಿಸಿ, ಪುನಃ ಪುನಃ ಅಡ್ಡ ಬೀಳುತ್ತಿರಲು, ನಡುಮನೆಗೆ ಬಂದು ಅಲ್ಲಿ ಕಂಬವನ್ನು ಆತುಕೊಂಡು ಕುಳಿತಿದ್ದ ಚಿಕ್ಕ ಮಾದಣ್ಣನ ಶರೀರವನ್ನು ಮಾದಿರಾಜನು ಆಶ್ಚರ್ಯಗೊಂಡು, ತನ್ನ ದಯಾರಸದಿಂದ ತುಂಬಿದ ಕಡೆಗಣ್ಣಿನಿಂದ ನೋಡಿ, ಹೆಸರು ಹಿಡಿದು ಕರೆಯುತ್ತ—

ಬಿಡು ನಿನ್ನ ಮುನಿಸನೇಳೇ
ಳ್ತಡವಿಲ್ಲದೆ ಚಿಕ್ಕಮಾದ ನೀನೆಂಬುದುಮಾ
ಗಡೆ ತೀವೆ ಜೀವಮೆಳ್ದವ
ರಡಿಯೊಳ್ಸೈಗೆಡೆದು ದೇವ ಶರಣೆನುತಿರ್ದಂ ೫೪

ಮಕರಾಂಕಮಾನಹರಣ ಹಿ
ಮಕರಾಂಕ ಕಪರ್ದಿರೂಪ ಜಯ ಜಯ ಸತತಂ
ಸಕಳೇಪ್ಸಿತಪ್ರದಾಯಕ
ಸಕಳೇಶ್ವರ ಮಾದಿರಾಜ ನತಸುರಭೂಜಾ ೫೫

ದೇವೇಶ ದೇವ ನಿಮ್ಮಡಿ
ದಾವರೆಯುಂ ಕಂಡು ಧನ್ಯನಾದೆಂ ಶಿವ ಧ
ರ್ಮಾವಾಸನಾದೆನನುಪಮ
ಪಾವನಪದನಾದೆನಾದೆನಾನತಿಮಾನ್ಯಂ ೫೬

ವ॥ ಎಂದಿಂತು ನಿಜಭಕ್ತಿಯಿಂ ಪೊಗಳ್ದು ಪೊಡಮಟ್ಟು ತಚ್ಚರಣತಳಂಗಳಂ ಶಿರದೊಳ್ಪೊತ್ತು ಪೊರೆಯೇಱಿ ಮನೋರಮಣಿಯುಂ ನಂದನನುಂ ಬೆರಸು ಚಿಕ್ಕಮಾದಣ್ಣನನುಪಮಾನಂದದಿನಿರ್ಪಿನಮಲ್ಲಿ—

ನೆರೆನೆರೆದು ಪರಮ ಭಕ್ತ
ರ್ಪರಮೋತ್ಸವಮಲರೆ ಮಾದಿರಾಜನ ಪಾದಾಂ
ಬುರುಹಕಭಿವಂದಿಸುತ್ತ
ಚ್ಚರಿವಡುತುಂ ನೋಡಿ ಸಂಭ್ರಮಂಗೊಳುತಾಗಳ್ ೫೭

ಕಾಲವ್ಯಾಲೇಭಪಂಚಾನನ ಕಲಿಕಲುಷಧ್ವಾಂತಮಾರ್ತಾಂಡ ದುರ್ದಾಂ
ತಾಲೀಕಾಲಾಪನಿರ್ವಾಪಕ ಪರತರ ಪಂಚಾಕ್ಷರಪ್ರಾಣ ಲಿಂಗ

೫೪. 'ಚಿಕ್ಕ ಮಾದಣ್ಣ, ನೀನು ನಿನ್ನ ಈ ಕೋಪವನ್ನು ಬಿಡು. ತಡಮಾಡದೆ ಮೇಲಕ್ಕೇಳು'. ಎನ್ನಲು ಆಗಲೇ ಜೀವತುಂಬಿ ಅವನು ಎದ್ದು ಆ ಮಾದಿರಾಜರ ಪಾದಗಳಲ್ಲಿ ಅಡ್ಡಬಿದ್ದು 'ದೇವ, ಶರಣು' ಎನ್ನುತ್ತಿದ್ದನು. ೫೫. ಮಕರ ಕೇತನನಾದ ಮನ್ಮಥನ ಗರ್ವವನ್ನು ನಾಶಮಾಡಿದವನೂ, ಚಂದ್ರಕಳಾದರನೂ, ಆದ ಪರಮೇಶ್ವರನ ಸ್ವರೂಪನೇ ಸತತವೂ ಸಕಲ ಇಷ್ಟಾರ್ಥಗಳನ್ನುಂಟು ಮಾಡುವವನೇ, ನಮಸ್ಕರಿಸಿದವರಿಗೆ ಕಲ್ಪವೃಕ್ಷ ಸಮಾನನಾದವನೇ, ಸಕಳೇಶ್ವರ ಮಾದರಸನೇ ಜಯ ಜಯ! ೫೬. 'ದೇವೇಶ, ದೇವನೇ, ನಿಮ್ಮ ಪಾದಕಮಲವನ್ನು ಕಂಡು, ಧನ್ಯನಾದೆನು; ವೀರಶೈವ ಧರ್ಮಕ್ಕಾಶ್ರಯನಾದವನಾದೆನು; ಉಪಮಾತೀತವಾದ ಪವಿತ್ರ ಸ್ಥಾನದಲ್ಲಿರುವವನಾದೆನು; ಅತ್ಯಂತ ಮನ್ನಣೆಗೆ ಯೋಗ್ಯನಾದೆನು.' ವ॥ ಈ ರೀತಿ ಅನ್ನುತ್ತ, ನೈಜವಾದ ಭಕ್ತಿಯಿಂದ ಹೊಗಳಿ, ನಮಸ್ಕಾರ ಮಾಡಿ, ಸಕಳೇಶ ಮಾದರಸರ ಪಾದತಳಗಳನ್ನು ತಲೆಯ ಮೇಲೆ ಧರಿಸಿ, ಸಂಭ್ರಮಗೊಂಡು, ಹೆಂಡತಿ ಮತ್ತು ಮಗನೊಡನೆ ಆ ಚಿಕ್ಕಮಾದಣ್ಣನು ಅನುಪಮವಾದ ಆನಂದದಲ್ಲಿ ಇರುತ್ತಿರುವಷ್ಟರಲ್ಲಿ—೫೭-೫೮. ಪರಮಭಕ್ತರ ಸಮೂಹವೆಲ್ಲ ಬಂದು ಬಂದು ಕೂಡಿತು. ಪರಮೋತ್ಸಾಹದಿಂದ ಅರಳಿಹೋದ

ವ್ಯಾಲಗ್ನಸ್ವಾಂತ ಚಿಂತಾರಹಿತ ಚಿದಮಿತಾನಂದ ನಿರ್ದ್ವಂದ್ವ ಪೂರ್ಣ
ಪ್ರಾಲೇಯಾಂಶುಪ್ರಭಾಪ್ರಸ್ಫುರಿತನುತಯಶೋಭಾಸಿ ಮಾದಾರ್ಯವರ್ಯಾ ೫೮

ತರಳಂ ನಟ್ಟಿರುಳೆಯ್ದಿ ದೇವ ಮುನಿದಂ ಮತ್ತಾತನೀ ಕಾಯ್ಪನೊ
ತ್ತರಿಸಲ್ಕಿವ್ಮಡಿಯೆಯ್ದುಗೆಂದ ನುಡಿಯಂ ಕೆಯ್ಕೊಂಡು ಕಾರುಣ್ಯದೆ
ಳ್ತರದಿಂ ಬಂದಸುವಿತ್ತು ನಿದ್ರಿತನನೇಳೆಂಬಂತಿರೇಳೇಳೆನು
ತ್ತಿರವೇಳ್ವಂತಿರೆ ಮಾಡಿದೈ ಮಝುರೆ ಶೈವಾಚಾರ್ಯಚೂಡಾಮಣೀ ೫೯

ಮುಗಿಲಿತ್ತೊಡೆ ಜೀವನಮಂ
ಮಿಗೆ ಪುರುಡಿಸಿ ನಿನ್ನಪಾಂಗರುಚಿ ಮಿಂಚುವ ಮಿಂ
ಚೊಗೆದಿತ್ತುದು ಜೀವನಮಂ
ಜಗದೊಳ್ಭಕ್ತಾಂಗಸಸ್ಯಕಮಳಚರಿತ್ರಾ ೬೦

ಗುರುಚರಹರಾಂಘ್ರಿಭಜನಮೆ
ನೆರೆದಪವರ್ಗಕ್ಕಮಾರ್ಗಮಂ ನಿಜಮೆಂಬೀ

ಅವರೆಲ್ಲರೂ ಸಕಳೇಶ ಮಾದರಸರ ಪಾದಕಮಲಗಳಿಗೆ ನಮಸ್ಕಾರಮಾಡುತ್ತ, ಆಶ್ಚರ್ಯ ಪಟ್ಟು ನೋಡುತ್ತ ಸಂಭ್ರಮಗೊಂಡು ಆಗ–ಯಮನೆಂಬ ಸೊಕ್ಕಿದ ಆನೆಗೆ ಸಿಂಹ ಸ್ವರೂಪನಾದವನೂ, ಕಲಿಕಾಲದ ಪಾಪವೆಂಬ ಕತ್ತಲೆಗೆ ಸೂರ್ಯಪ್ರಾಯನಾದವನೂ, ಇಂದ್ರಿಯನಿಗ್ರಹದ ವಿಷಯದಲ್ಲಿ ಅಸಮರ್ಥರಾದ ಅಸತ್ಯವಾದಿಗಳ ಮಾತನ್ನು ನಾಶ ಗೊಳಿಸುವವನೂ, ಪರಮಶ್ರೇಷ್ಠವಾದ ಪಂಚಾಕ್ಷರೀ ಮಂತ್ರವೇ ಪ್ರಾಣವಾಗಿ ಉಳ್ಳ ವನೂ, ಶಿವಲಿಂಗದಲ್ಲಿ ನಟ್ಟುಹೋದ ಮನಸ್ಸುಳ್ಳ, ಚಿಂತೆಯಿಂದ ದೂರನಾದ, ಅಮಿತ ವಾದ ಜ್ಞಾನಪ್ರಕಾಶದಲ್ಲಿ ಆನಂದಗೊಳ್ಳುವ, ದ್ವಂದ್ವಭಾವವಿಲ್ಲದ (ಶಿವನಲ್ಲಿ ಅಭಿನ್ನ ಭಾವದಿಂದಿರುವ) ಪೂರ್ಣಚಂದ್ರನ ಕಿರಣಗಳ ಪ್ರಭೆಯಂತೆ ಪ್ರಕಾಶಮಾನವಾದ ಶ್ಲಾಘ್ಯ ಯಶೋವಿಶೇಷದಿಂದ ಶೋಭಿಸುವ ಸಕಳೇಶ ಮಾದಾರ್ಯವರ್ಯಾ (ಎಂದು ಹೊಗಳು ತ್ತಿದ್ದರು). ೫೯. ಚಿಕ್ಕಬಾಲಕನು ಮಧ್ಯರಾತ್ರಿಯಲ್ಲಿ ಹೋಗಿ, 'ದೇವ, ನನ್ನ ತಂದೆ ಕೋಪವನ್ನು ದೂರಮಾಡಲು ಪೂಜ್ಯಪಾದರಾದ ತಾವು ದಯಮಾಡಿಸಬೇಕು.' ಎಂದ ಮಾತನ್ನನುಸರಿಸಿ ಕಾರುಣ್ಯದ ಆಧಿಕ್ಯದಿಂದ ಬಂದು ಚಿಕ್ಕಮಾದಣ್ಣನಿಗೆ ಪ್ರಾಣವನ್ನಿತ್ತು, ನಿದ್ರೆಹೋದವನನ್ನು ಎಬ್ಬಿಸಿದ ಹಾಗೆ 'ಏಳೇಳು' ಎನ್ನುತ್ತ ಎಬ್ಬಿಸಿ ಜೀವಿಸುವಂತೆ ಮಾಡಿದೆ. ಶೈವಾಚಾರ್ಯರಲ್ಲಿ ಚೂಡಾಮಣಿಯಂತಿರುವವನೇ, ಭಾಪುರೇ ! (ಎನ್ನು ತ್ತಿದ್ದರು) ೬೦. ಪರಿಶುದ್ಧ ಚರಿತ್ರೆಯುಳ್ಳ ಸಕಲೇಶ ಮಾದರಸನೇ, ಲೋಕದಲ್ಲಿ ಮುಗಿಲು ಮಳೆಯನ್ನು ಸುರಿಸುತ್ತದೆ. (ಅದರಿಂದ ಸಸ್ಯಗಳು ಬದುಕುತ್ತವೆ) ಅದರೊಡನೆ ಸ್ಪರ್ಧೆಯಿಂದ ನಿನ್ನ ಕಡೆಗಣ್ಣುಗಳ ಕಾಂತಿಯೆಂಬ ಮಿಂಚು ಮಿಂಚಿ ಭಕ್ತನ ಅಂಗವೆಂಬ ಸಸ್ಯಕ್ಕೆ ನೀರನ್ನು (ಜೀವನವನ್ನು) ಕೊಟ್ಟಿತು. ೬೧. ಸತ್ಪುರುಷರಾದ ಜನರಿಗೆ ಕಲ್ಪ ವೃಕ್ಷ ಪ್ರಾಯನಾದವನೇ, ಗುರುಗಳ ಜಂಗಮದ ಪಾದಗಳ ಭಜನೆಯೇ ಮೋಕ್ಷಕ್ಕಿಂತ

ಪರಿಯಱುಪುವಂತೆ ಭಕ್ತನ
ಹರಣಮನೊಲ್ದಿತ್ತೆ ಶಿಷ್ಟಜನಮಂದಾರಾ ೬೧

ತರಳನ ನುಡಿಯೆನ್ನದೆ ನ
ಟ್ಟಿರುಳೆಯ್ದಿತೆ ಭಕ್ತನಸುವನಿತ್ತೈ ಮಱುಖ ಭಾ
ಪುರೆ ದಯೆಯದೆಂತೊ ಶಕ್ತಿಯ
ಪರಿಯೆನ್ನದೊ ಸೌಮ್ಯಗುಣಗಣಾಲಂಕರಣಾ ೬೨

ವ॥ ಎಂದು ಕೀರ್ತಿಸಿ ತದ್ಭಕ್ತಸೂನುವಂ ನೋಡಿ—

ಹರಕೃಪೆವಡೆದಳಿದಣುಗನ
ಹರಣಮನೆಲೆ ಪಡೆದರೊಳರಿಳಾತಳದೊಳಿವಂ
ತರುಣಂ ನಿಮ್ಮಯ ಕೃಪೆವಡೆ
ದಿರದಸುವಳಿದಾತ್ಮಜನಕನಸುವಂ ಪಡೆದಂ ೬೩

ಎಂದಿಂತೆಲ್ಲಾ ಗಣಂಗಳ್ಪೊಗಳೆ ನೆಗಳ್ದ ಮಾದಾರ್ಯನಂ ಕಂಡು ಬಂದಾ
ನಂದಂ ಪೆಂಪೇಱೆ ಭಕ್ತಂಗಸುವನೊಸೆದು ಕೊಟ್ಟಂಗಡೀ ದೇವನೆಂದೊ
ಳ್ಪಿಂದಂ ಕೊಂಡಾಡುತುಂ ಪಾಡುತೆ ಪದಕೆಱಗುತ್ತಲ್ಲಿ ಕಣ್ಗೊಪ್ಪುತಿರ್ದಂ
ಕಂದರ್ಪಾರಾತಿ ಭಕ್ತಪ್ರಕರಸುಖಕರಂ ಭಕ್ತಿಭಾವಾಭಿರಾಮಂ ೬೪

ನಿಜವಾಗಿಯೂ ಶ್ರೇಷ್ಠವಾದದ್ದು, ಎಂಬ ಈ ರೀತಿಯನ್ನು ತಿಳಿಸುವ ಹಾಗೆ ಭಕ್ತನ ಪ್ರಾಣವನ್ನು ಒಲಿದುಕೊಟ್ಟೆ. ೬೨. ಹೇ, ಶಾಂತಿಗುಣಗಳ ಸಮೂಹವೇ ಆಭರಣವಾಗಿ ಉಳ್ಳ ಮಾದರಸನೇ, ಚಿಕ್ಕಬಾಲಕನ ಮಾತೆಂದು ತಿಳಿಯದೆ (ಉದಾಸೀನ ಮಾಡದೆ) ಮಧ್ಯರಾತ್ರಿಯಲ್ಲಿ ಬಂದು ಭಕ್ತನ ಪ್ರಾಣವನ್ನು ಕೊಟ್ಟೆ. ಮಱುಖ ಭಾಪುರೇ ! ನಿನ್ನ ದಯೆಯೂ, ಸಾಮರ್ಥ್ಯದ ರೀತಿಯೂ ಅದು ಎಂತಹುದೋ ! ವ॥ ಹೀಗೆಂದು ಶ್ಲಾಘಿಸಿ ಆ ಭಕ್ತನಾದ ಚಿಕ್ಕಮಾದಣ್ಣನ ಮಗನನ್ನು ನೋಡಿ—೬೩. ಭೂಲೋಕದಲ್ಲಿ ಸತ್ತ ಮಗನ ಪ್ರಾಣವನ್ನು ಪರಮೇಶ್ವರನ ಕೃಪೆಯನ್ನು ಪಡೆದು ಪಡೆದವರುಂಟು; ಈ ಬಾಲಕನು ನಿಮ್ಮ ಕೃಪೆಯನ್ನು ಪಡೆದು ತಪ್ಪದೆ ಸತ್ತುಹೋದ ತಂದೆಯ ಪ್ರಾಣವನ್ನು ಪಡೆದನು. ೬೪. ಇತ್ಯಾದಿಯಾಗಿ ಸಮಸ್ತ ಶಿವಗಣಗಳು ಹೊಗಳುತ್ತಿರಲಾಗಿ ಖ್ಯಾತಿವೆತ್ತ ಸಕಳೇಶ ಮಾದರಸರಲ್ಲಿಗೆ ಆ ಮನ್ಮಥ ವೈರಿಯೂ, ಭಕ್ತಸಮೂಹಕ್ಕೆ ಸುಖವನ್ನುಂಟುಮಾಡುವವನೂ, ಭಕ್ತಿಯೆಂಬ ಕಾಂತೆಯಿಂದ ಮನೋಹರನಾದವನೂ ಆದ ಬಸವೇಶ್ವರನು ಬಂದು ಕಂಡು, ಉತ್ಸಾಹಗೊಂಡು ಈ ದೇವನು ಭಕ್ತನಿಗೆ ಪ್ರೀತಿಯಿಂದ ಪ್ರಾಣದಾನ ಮಾಡಿದನಲ್ಲವೇ ! ಎಂದು ಮನೋಹರವಾಗಿ ಕೊಂಡಾಡುತ್ತ, ಹಾಡುತ್ತ ಅವನ ಪಾದಗಳಿಗೆ ನಮಸ್ಕಾರ ಮಾಡುತ್ತ ಅಲ್ಲಿ ಶೋಭಿಸುತ್ತಿದ್ದನು.

ಸಕಳೇಶ ಮಾದಿರಾಜ
ಪ್ರಕಟ ಮಹತ್ವಾಂಕ ಕಥೆಯನಿದನೋದುವ ಕೇ
ಳ್ವಕಳಂಕಚಿತ್ತರಹಿರಾ
ಜಕಟಕನೊಲವಿಂದೆ ಪಡೆವರಭಿಮತಸುಖಮಂ ೬೫

ವೀರಶೈವಮಹಾಮತಾಶ್ರಿತಭಕ್ತನಿರ್ಜರವಲ್ಲರೀ
ದಾರುಣಾಸುರರಾಜಿಭಂಜನಶಾತಬಾಣಧನುರ್ಧರೀ
ಮಾರಮರ್ದನಮಾನಸಾಂಬುಜರಾಜಹಂಸಿ ಶಿವಂಕರೀ
ವಾರಣಾನನಮಾತೆ ರಕ್ಷಿಪುದೆನ್ನನದ್ರಿಜೆ ಶಾಂಕರೀ ೬೬

ಇದು ವಿನಮದಖಿಳ ಸುರಾಸುರೇಂದ್ರಮಕುಟತಟಘಟಿತ ಮಣಿಗಣಾಗಣಿತ ರುಚಿನಿಚಯ
ತರುಣಾರುಣಾತಪಪರಿಲಸಿತ ಪರಮ ಶಿವಲಿಂಗ ಪಾದಾರವಿಂದಪರಾಗಭಸಿತ
ಭಾಸುರಲಲಾಟಪಟ್ಟ ಸರಸಜನಮಾನಿತೋಭಯಕವಿತಾವಿಶಾರದ
ಶ್ರೀಷಡಕ್ಷರಿದೇವಭಕ್ತಿವಿರಚಿತ
ಶ್ರೀಮದ್ ಬಸವರಾಜವಿಜಯಮಹಾಪುರಾಣದೊಳ್
ಮಾದಿರಾಜಕೃತ ಚಿಕ್ಕಮಾದಣ್ಣ ಪ್ರಾಣದಾನ ಕಥನಂ
ದ್ವಾತ್ರಿಂಶಾಶ್ವಾಸಂ ಸಮಾಪ್ತಂ

ಅಂತು ಆಶ್ವಾಸ ೩೨ಕ್ಕೆ ಪದಗಣನೆ ೨೫೫೬ಕ್ಕೆ ಮಂಗಳಮಹಾಶ್ರೀ॥

೬೫. ಸಕಳೇಶ ಮಾದರಸರ ಪ್ರಖ್ಯಾತವಾದ ಮಹತ್ವವೇ ಗುರುತಾಗಿ ಉಳ್ಳ ಈ ಕಥೆಯನ್ನು ಓದುವ, ಕೇಳುವ, ಕಲ್ಮಷ ರಹಿತರಾದ ಚಿತ್ತವುಳ್ಳವರು ಪರಶಿವನ ಕೃಪೆಯಿಂದ (ಅಹಿಗಳ ರಾಜನಾದ ಆದಿಶೇಷನೇ ಕಿವಿಯ ಆಭರಣವಾಗಿ ಉಳ್ಳ ಪರಮೇಶ್ವರನ ಕೃಪೆಯಿಂದ) ತಮ್ಮ ತಮ್ಮ ಇಷ್ಟಾರ್ಥಗಳನ್ನು ಪಡೆಯುವರು. ೬೬. ವೀರಶೈವ ಮಹಾಮತವನ್ನು ಆಶ್ರಯಿಸಿದ ಭಕ್ತರಿಗೆ ಕಲ್ಪಲತೆಯಂತಿರುವವಳೂ, ಭಯಂಕರರಾದ ರಾಕ್ಷಸರ ಸಮೂಹವನ್ನು ನಾಶಮಾಡುವ ತೀಕ್ಷ್ಣವಾದ ಬಾಣ ಮತ್ತು ಬಿಲ್ಲುಗಳನ್ನು ಧರಿಸಿರುವವಳೂ, ಈಶ್ವರನ ಮನಸ್ಸೆಂಬ ಕಮಲಕ್ಕೆ ರಾಜಹಂಸಪಕ್ಷಿಯೆಂದೆನಿಸಿದವಳೂ, ಮಂಗಳವನ್ನುಂಟುಮಾಡುವವಳೂ, ಗಜಮುಖನ ತಾಯಿಯೂ ಪರ್ವತ ಪುತ್ರಿಯೂ ಆದ ಪಾರ್ವತಿಯೇ ನನ್ನನ್ನು ರಕ್ಷಿಸುವವಳಾಗು.

ಮೂವತ್ತೆರಡನೆಯ ಆಶ್ವಾಸವು ಸಮಾಪ್ತವಾಯಿತು.

ತ್ರಯಸ್ತ್ರಿಂಶಾಶ್ವಾಸಂ

[ಕದಿರ ರೇಮಯ್ಯನ ಕಥೆ]

ಶ್ರೀತುಹಿನಗಿರಿಸುತಾಮುಖ
ಶೀತಾಂಶುವಿಲೋಕನೋತ್ಸುಕಂ ಗುಣನಿಧಿ ವಿ
ಖ್ಯಾತಹರಿಮುಖ್ಯಸುಗಸಂ
ಜಾತಾರ್ಚಿತನೀಗೆ ಸೌಖ್ಯಮಂ ಶಿವಲಿಂಗಂ ೧

ಸುರುಚಿರ ಸುರಪುರದಿರವಂ
ಪರಿಭವಿಸೆ ನೆಗಳ್ತೆವೆತ್ತ ಕಲ್ಯಾಣದೊಳೊ
ಪ್ಪಿರುತಿರ್ಪನೊರ್ವನಭಿನವ
ಚರಿತಂ ಚರಲಿಂಗಚರಣಸರಸಿಜಭೃಂಗಂ ೨

ವಿತತಸಿತಕೀರ್ತಿ ವಿಶ್ರುತ
ಮತಿ ದಳಿತನತಾರ್ತಿ ದಾನನಿಧಿ ವಿದಿತಗುಣಾ
ನ್ವಿತನುರುಗುರುಚರಪೂಜಾ
ಚತುರಂ ಸಲೆ ಕದಿರ ರೇಮನೆಂಬ ಮಹಾತ್ಮಂ ೩

ವ॥ ಆ ಮಹಿಮನೊಲ್ದೊಂದು ದಿನಂ ಗುರುಚರಣದರ್ಶನಕ್ಕೆಂದು ಸಡಗರಂ ಮಿಗೆಪೊಳಲಂ ಪೊಱಮಟ್ಟು ಬರ್ಪಾಗಳೆಡೆವಟ್ಟೆಯೊಳೊಂದೂರಿರ ದೂರಾಂತರಾಳದೊಳ್ಕಂಡು ತನಗೆ ಹರಪೂಜಾ

ಕದಿರ ರೇಮಯ್ಯನ ಕಥೆ

೧. ಮಂಗಳಕರಳಾದ ಹಿಮವಂತ ರಾಜನ ಕುಮಾರಿ ಪಾರ್ವತಿಯ ಮುಖವೆಂಬ ಚಂದ್ರನನ್ನು ನೋಡುವುದರಲ್ಲಿ ಉತ್ಸಾಹವುಳ್ಳವನೂ, ಗುಣಗಳಿಗೆ ನಿಧಿಯೂ, ವಿಖ್ಯಾತರಾದ ವಿಷ್ಣುವೇ ಮೊದಲಾದ ದೇವತಾ ಸಮೂಹದಿಂದ ಪೂಜಿಸಿಗೊಳ್ಳುವವನೂ ಶಿವಲಿಂಗನು ಸೌಖ್ಯವನ್ನುಂಟುಮಾಡಲಿ. ೨. ಮನೋಹರವಾದ ಇಂದ್ರನ ಅಮರಾವತಿಯನ್ನು ತಿರಸ್ಕರಿಸುವ ರೀತಿಯಲ್ಲಿ ಖ್ಯಾತಿವೆತ್ತ ಕಲ್ಯಾಣ ನಗರದಲ್ಲಿ ಜಂಗಮಂಗಲದ ಪಾದ ಕಮಲಗಳಲ್ಲಿ ಭೃಂಗದೋಪಾದಿಯಲ್ಲಿ ಒಬ್ಬ ನೂತನ ಚರಿತ್ರೆಯುಳ್ಳ (ಶರಣನು) ಒಪ್ಪಿ ಇರುತ್ತಿದ್ದನು. ೩. ವಿಸ್ತಾರವಾದ ಶುಭ್ರಕೀರ್ತಿಯಿಂದ ಪ್ರಖ್ಯಾತ ಬುದ್ಧಿಯುಳ್ಳವನೂ, ನಮಸ್ಕರಿಸಿದವರ ಮನೋವ್ಯಥೆಯನ್ನು ಕತ್ತರಿಸಿಹಾಕುವವನೂ, ದಾನಕ್ಕೆ ನಿಧಿರೂಪನೂ. ಪ್ರಖ್ಯಾತವಾದ ಸದ್ಗುಣಗಳಿಂದ ಕೂಡಿದವನೂ, ಗುರು-ಜಂಗಮರ ಪೂಜೆಯಲ್ಲಿ ಚತುರನೂ ಎನಿಸಿದ ಆ ಮಹಾತ್ಮನ ಹೆಸರು ಕದಿರ ರೇಮಯ್ಯನೆಂದು. ವ॥ ಆ ಮಹಿಮನು ಪ್ರೀತಿಯಿಂದ ಒಂದು ದಿವಸ ಗುರುವಿನ ಪಾದದರ್ಶನಕ್ಕೆಂದು, ವಿಶೇಷ ಸಡಗರದಿಂದ ಪಟ್ಟಣದಿಂದ ಹೊರಹೊರಟು ಬರುತ್ತಿರುವಾಗ ಮಾರ್ಗಮಧ್ಯದಲ್ಲಿ

ಸಮಯಮಾದುದಿದನುಲ್ಲಂಘಿಸಿ ಪೋಗೆ 'ಶಿವಾರ್ಚನಾತಿ ಕ್ರಮಣಂ ಮಹಾದೋಷಸ್ಯ ಕಾರಣಮೆ'ಂದು ಶಿವಾಗಮೋಕ್ತಿಯೊಳವಡಱನಿಲ್ಲಿ ಮಹಾದೋಷಂ ತಗುಳ್ಗುಮೆಂದವಧರಿಸಿ ನಡೆತಂದಾ ಪುರದೊಳಿರ್ಪ ಸೋಮನಾಥನೆಂಬ ಭಕ್ತನಂಗಣಮಂ ಪೊಕ್ಕು ತದಂಗನೆಯಪ್ಪಣ್ಣಲದೇವಿ ಪಾದಪ್ರಕ್ಷಾಲನಂಗೆಯ್ಯೆ ಸಾದರಂ ತನ್ಮಂದಿರದೊಳಗಂ ಪುಗುತಂದಿಕ್ಕಿದ ಮೆ[1]ಲ್ವಸೆಯೊಳ್ಕುಳ್ಳಿರ್ದಾಗಳ್—

ಪಿರಿದುತ್ಸವದಿಂ ಕಂಡಾ
ದರದಿಂ ನಿಜತನಯ ಮಲ್ಲಿನಾಥಸಮೇತಂ
ಗುರುವರನ ವಿಮಳ ಪದಸರ
ಸಿರುಹಕ್ಕಾ ಸೋಮನಾಥಭಕ್ತಂ ಮಣಿದಂ ೪

ವ॥ ಅಂತು ಮಣಿದೆಳ್ದು ನಿಂದು ಭಯಭಕ್ತಿಯಿಂ ಕರಾಂಜಲಿವೆರಸು ಕೀರ್ತಿಸುತ್ತು ಮಿರ್ಪಿನಮಲ್ಲಿ ಸಡಗರದಿನಣ್ಣಲದೇವಿ ಸಾಂಗಮೆನೆ ಲಿಂಗಾರ್ಚನಂಗೆಯ್ಸಿ ನೈವೇದ್ಯಮಂ ಭಕ್ತಿಮಿಗೆ ಗಡಣಿಸಲೊಡನೆ—

ನಲಿದರ್ಪಿಸಿ ರೇವಾರ್ಯಂ
ಸ್ವಲಿಂಗದೇವಂಗೆ ಸವಿದು ತಾನುಳಿಪಿದ ನಿ
ರ್ಮಲಸುಪ್ರಸಾದಮಂ ಮನ
ದೊಲವಿಂ ಕೆಯ್ಕೊಂಡನೆಱಗಿ ಮುಗುಳ್ದವರಡಿಯೊಳ್ ೫

ಒಂದು ಊರು ಇತ್ತು. ಆ ಊರನ್ನು ದೂರದಿಂದಲೇ ಕಂಡು, ನನಗೆ ಲಿಂಗಪೂಜಾ ಸಮಯವಾಯಿತು. ಈ ಕಾಲವನ್ನು ಅತಿಕ್ರಮಿಸಿಹೋದರೆ, 'ಶಿವಾರ್ಚನೆಯನ್ನೂ ಅತಿಕ್ರಮಣಮಾಡುವುದು ಮಹಾದೋಷಕ್ಕೆ ಕಾರಣ' ವೆಂದು ಹೇಳಿದ ಶಿವಾಗಮ ವಚನವನ್ನು ಉಲ್ಲಂಘಿಸಿದಂತಾಗುವುದು. ಆದ್ದರಿಂದ ಇಲ್ಲಿ ಮಹಾ ದೋಷವು ನನಗೆ ಉಂಟಾಗುವುದು ಎಂದು ನಿರ್ಧರಿಸಿದವನಾಗಿ ನಡೆದು ಬಂದು ಆ ಊರಿನಲ್ಲಿರುವ ಸೋಮನಾಥನೆಂಬ ಭಕ್ತನೊಬ್ಬನ ಮನೆಯ ಅಂಗಳವನ್ನು ಪ್ರವೇಶಿಸಿದ್ದನು, ಆ ಸೋಮನಾಥನ ಹೆಂಡತಿಯಾದ ಅಣ್ಣಲದೇವಿಯು (ಈ ಕದಿರ ರೇಮಯ್ಯನ) ಪಾದಗಳನ್ನು ತೊಳೆದಳು. ಆದರಪೂರ್ವಕವಾಗಿ ಆ ಮನೆಯೊಳಕ್ಕೆ ಪ್ರವೇಶಿಸಿ ತಂದು ಹಾಕಿದ ಮೆತ್ತನೆಯ ಆಸನದಲ್ಲಿ ಕುಳಿತು ಆಗ—೪. ಆ ಸೋಮನಾಥನೆಂಬ ಭಕ್ತನು ತನ್ನ ಮಗನಾದ ಮಲ್ಲಿನಾಥ ಸಮೇತವಾಗಿ ಅತ್ಯಂತ ಸಂತೋಷದಿಂದ ಕಂಡು, ಆ ಗುರುಶ್ರೇಷ್ಠನ ಪವಿತ್ರವಾದ ಕಮಲಗಳಿಗೆ ನಮಸ್ಕಾರ ಮಾಡಿದನು. ವ॥ ಆ ರೀತಿ ನಮಸ್ಕರಿಸಿ ಮೇಲಕ್ಕೆದ್ದು ನಿಂತು, ಭಯ ಭಕ್ತಿಯಿಂದ ಕೈಮುಗಿದು ಸ್ತೋತ್ರ ಮಾಡುತ್ತಿರುವಾಗ ಅಲ್ಲಿ ಅಣ್ಣಲ ದೇವಿ ಯಥಾಸಾಂಗವಾಗಿ (ಅವರ) ಲಿಂಗಾರ್ಚನೆಯನ್ನು ಮಾಡಿಸಿ, ನೈವೇದ್ಯವನ್ನು ವಿಶೇಷ ಭಕ್ತಿಯಿಂದ ಜೋಡಿಸಿಡಲು ಒಡನೆಯೇ—೫. ಕದಿರ ರೇಮಾರ್ಯನು ತನ್ನ ಇಷ್ಟಲಿಂಗ ದೇವನಿಗೆ ಪ್ರೀತಿಯಿಂದ ಸಮರ್ಪಣೆಮಾಡಿ, ತಾನು ಊಟ ಮಾಡಿ, ಉಳಿಸಿದ ನಿರ್ಮಲವಾದ ಸುಪ್ರಸಾದವನ್ನು ಆ ಸೋಮನಾಥನು ಅವರ ಪಾದಗಳಲ್ಲಿ ನಮಸ್ಕಾರ ಮಾಡಿ

1 ಮೆ(ಮೂ, ಗ)

ವ॥ ಅಂತುಮಾ ಮಹಾಪ್ರಸಾದಮಂ ಕೆಯ್ಕೊಂಡು ತನ್ನರಸಿಯುಣುಗರ್ವೆರಸಿ ಸವಿದ ನಂತರಮಾ ಕದಿರ ರೇಮಯ್ಯನಿಂ ಶಿವತತ್ತ್ವಾನುಭಾವಮಂ ಬೆಸಗೊಂಡು ಕೇಳ್ದು ಕೃತಾರ್ಥಭಾವಮಂ ತಾಳ್ದಿರ್ದನಾಗಳ್—

ಎಳೆಯುಂ ರೇಮಯ್ಯನ ಪದ
ತಳಕೆಱಗುವನೊಲ್ದು ನೋಡುವಂ ನಗುವಂ ಕಂ
ಗಳ ಮುಗಿವನಲರ್ಚುವನ
ಪ್ಪಳಿಪಂ ಸುಳಿಸುಳಿದು ಸುತ್ತುವಂ ಸಡಗರಿಪಂ ೬

ಅಂಗುಟಮಂ ಪಿಡಿದಲುಗುವ
ನಂಗುಲಿಯಿಂ ಕರದಿನೊತ್ತುವಂ ಪದತಳಮಂ
ಮುಂಗಡೆಯೊಳಾಡುವಂ ಮು
ದ್ದಿಂಗೆಡೆಯೆಂದೆನಿಸಿ ಬಿನದಿಪಂ ಪುಟನೆಗೆವಂ ೭

ಎಲೆ ಬೊಪ್ಪ ನೋಳ್ಪುದಯ್ಯನ
ನಿಲವಂ ನೀನೆಂದು ತೋಱುವಂ ಕರತಳದಿಂ
ನಲವೆರ್ಚುವನತ್ತಿತ್ತಂ
ತೊಲಗಂ ಪೆಱತೊಂದನೆಳಸದಿಂತೆಸೆವಾಗಳ್ ೮

ವ॥ ಕದಿರ ರೇಮಯ್ಯನಾ ಕುವರನ ನಚ್ಚಿನ ಬಿನದಕ್ಕೆ ಬಗೆವೆತ್ತು ನೋಡಿ ಮುದ್ದುಗೆಯ್ದು ಮುಂಡಾಡಿ ಮೆಯ್ಯಂ ತಡವಿ ಮನ್ನಿಸಿ—

ಸಂತೋಷಗೊಂಡವನಾಗಿ ಸ್ವೀಕರಿಸಿದನು. ವ॥ ಆ ರೀತಿ ಆ ಮಹಾಪ್ರಸಾದವನ್ನು ತಾನು ತಕ್ಕೊಂಡು ತನ್ನ ಹೆಂಡತಿ ಮಕ್ಕಳೂ ಒಡನೆಯೇ ಸ್ವೀಕಾರಮಾಡಿದನಂತರ ಆ ಕದಿರ ರೇಮಯ್ಯನಿಂದ ಶಿವತತ್ತ್ವದ ಅನುಭಾವವನ್ನು ಅಪ್ಪಣೆ ಮಾಡಬೇಕೆಂದು ಕೇಳಿ ಪಡೆದು ಕೃತಾರ್ಥತೆಯ ಭಾವವನ್ನು ಹೊಂದಿದನು, ಆಗ—೬-೭. ಬಾಲಕನಾದ ಮಲ್ಲಿನಾಥನು ರೇಮಯ್ಯನ ಕಾಲಿಗೆ ನಮಸ್ಕರಿಸುವನು; ಪ್ರೀತಿಯಿಂದ ನೋಡುವನು ; ನಗುವನು ; ಕಣ್ಣುಗಳನ್ನು ಮುಚ್ಚುವನು; ಅಪ್ಪಳಿಸುವನು ; ಸುಳಿಸುಳಿದು ಸುತ್ತಾಡುವನು; ಸಂಭ್ರಮಗೊಳ್ಳುವನು ; ಹೆಬ್ಬೆರಳನ್ನು ಹಿಡಿದು ಅಲುಗಾಡಿಸುವನು ; ಬೆರಳುಗಳಿಂದ, ಕೈಗಳಿಂದ ಕಾಲುಗಳನ್ನು ಒತ್ತುವನು ; ಮುಂಭಾಗದಲ್ಲಿ ಆಟವಾಡುವನು; ಪುಟನೆಗೆಯುವನು, ಹೀಗೆ (ಪ್ರೀತಿಗೆ ಇದೊಂದು ಸ್ಥಾನವೋ ಎನ್ನುವಂತೆ) ಆ ರೇಮಯ್ಯನನ್ನು ವಿನೋದಗೊಳಿಸುವನು. ೮. 'ಎಲೆ ಅಜ್ಜ, ನೀನು ನಮ್ಮಪ್ಪನ ನಿಲುವನ್ನು ನೋಡು' ಎಂದು ತನ್ನ ತಂದೆಯನ್ನು ಕೈಮಾಡಿ ತೋರಿಸುವನು, ಸಂತೋಷವನ್ನು ಅಧಿಕಗೊಳಿಸುವನು, ಅತ್ತಿತ್ತ ಅಗಲಿ ಹೋಗುತ್ತಿರಲಿಲ್ಲ ; ಬೇರೊಂದೇನನ್ನೂ ಇಚ್ಛಿಸುತ್ತಿರಲಿಲ್ಲ—ಹೀಗೆ ಶೋಭಿಸುತ್ತಿರುವಾಗ— ವ॥ ಕದಿರ ರೇಮಯ್ಯನು ಆ ಬಾಲಕನ ವಿಶ್ವಾಸಪೂರ್ಣವಾದ ವಿನೋದಕ್ಕೆ ಸಂತೋಷಗೊಂಡು ನೋಡಿ ಮುದ್ದು ಮಾಡಿ ಮುಂಡಾಡಿ ಮೈಯನ್ನು

ಮುನ್ನೆಂದುಮಱಿಯದೀ ಮಗು
ಮೆನ್ನೊಳ್ವಿನದಿಪುದು ಚಿತ್ರಮೆನುತುಂ ಗುಣಸಂ
ಪನ್ನಂ ಮೆಚ್ಚುತೆ ಮನದೊಲ
ವಿನ್ನಗುತುಂ ನಲಿವುತಿರ್ಪ ಸಮನಂತರದೊಳ್ ೯

ಅಣ್ಣಲದೇವಿ ಲಿಂಗಯಜನೋಚಿತ ವಸ್ತುವನೀಯೆ ನಲ್ಮೆಯಿಂ
ಬಣ್ಣಿಸಿ ಪಾಡುತುಂ ಶಿವಸಮರ್ಚನೆಗೆಯ್ದು ಶಿವಪ್ರಸಾದಮಂ
ಸಣ್ಣನೆ ಭಕ್ತಿಯಿಂ ಸವಿದು ಶೇಷಮನಿತ್ತನವರ್ಗೆ ರೇಮಯಂ
ಚಿಣ್ಣನುಮಾತ್ಮಮಾತೆಯೊಡನಾ ಗುರುಶೇಷಮನುಂಡನಕ್ಕಱಿಂ ೧೦

ವ॥ ಅಂತುಮಾ ಮೂವರುಂ ಗುರುಪ್ರಸಾದಮಂ ಸೇವಿಸಿ ಧನ್ಯಭಾವಂಬಡೆದು ಮಗುಳ್ದು ಪೊಡಮಡಲೊಡನೆ ನಿಜ ಕಾರುಣ್ಯಮಂ ಬೀಱಿ—

ಎಲೆ ಸೋಮನಾಥ ಗುರುಪುರಿ
ಗೊಲವಿಂದಾಂ ಪೋಗಿ ಬರ್ಪೆನಂತಿರು ನೀನೆಂ
ದಲಘುಮತಿ ಸಂತವಿರಿಸುತೆ
ವಿಲಾಸದಿಂ ದೇಶಿಕೇಂದ್ರಪುರಿಗೇಳ್ತಂದಂ ೧೧

ಪರಮಾನಂದದಿನಾ ಗುರು
ವರನಂ ಕಂಡಕ್ಕಱಿಂದೆ ಮೆಯ್ಯಿಕ್ಕಿ ಕೃಪಾ

ಸಮರುತ್ತ ಮನ್ನಣೆಗೊಳಿಸಿ–೯-೧೦. 'ಈ ಪೂರ್ವದಲ್ಲಿ ಎಂದೂ ನನ್ನನ್ನು ಈ ಮಗುವು ತಿಳಿದುದಲ್ಲ; (ಈಗ) ನನ್ನಲ್ಲಿ ಈ ರೀತಿ ವಿನೋದಗೊಳಿಸುವುದು ವಿಚಿತ್ರವಾಗಿದೆಯಲ್ಲಾ! ಎನ್ನುತ್ತ ಆ ಸದ್ಗುಣ ಸಂಪನ್ನನಾದ ರೇಮಯ್ಯನು ಮೆಚ್ಚುತ್ತ, ಮನಸಂತೋಷದಿಂದ ನಗುತ್ತ ನಲಿದಾಡುತ್ತಿರುವ ಸ್ವಲ್ಪ ಸಮಯದ ನಂತರ ಅಣ್ಣಲದೇವಿಯು ಲಿಂಗಪೂಜಾ ಯೋಗ್ಯವಸ್ತುಗಳನ್ನು ಕೊಡಲಾಗಿ ಪ್ರೀತಿಯಿಂದ ಬಣ್ಣಿಸಿ ಹಾಡುತ್ತ ಶಿವಪೂಜೆಯನ್ನು ಮುಗಿಸಿ, ಶಿವ ಪ್ರಸಾದವನ್ನು ಭಕ್ತಿಯಿಂದ ಕ್ರಮವಾಗಿ ಸ್ವೀಕಾರ ಮಾಡಿ, ರೇಮಯ್ಯನು ಅವರಿಗೆ ಶೇಷಪ್ರಸಾದವನ್ನು ಕೊಟ್ಟನು. ಹೀಗೆ ಕೊಟ್ಟ ಗುರುವಿನ ಶೇಷಪ್ರಸಾದವನ್ನು ಚಿಣ್ಣನು ತನ್ನ ತಾಯಿಯೊಡನೆ ಪ್ರೀತಿಯಿಂದ ಊಟ ಮಾಡಿದನು. ವ॥ ಹೀಗೆ ತಂದೆ ತಾಯಿಯರೂ ಮಗನೂ ಈ ಮೂವರೂ ಗುರುಪ್ರಸಾದವನ್ನು ಸೇವನೆ ಮಾಡಿ, ಧನ್ಯರಾಧೆವೆಂಬ ಭಾವನೆಯನ್ನು ಹೊಂದಿ, ಪುನಃ ನಮಸ್ಕಾರ ಮಾಡಲಾಗಿ (ಆ ಗುರುವು) ಅವರ ಮೇಲೆ ತನ್ನ ಕಾರುಣ್ಯವನ್ನು ಬೀರಿದನು. ಆಗ—೧೧. 'ಎಲೈ ಸೋಮನಾಥನೇ, ಗುರುವಿನ ಪಟ್ಟಣಕ್ಕೆ ನಾನು ಪ್ರೀತಿಯಿಂದ ಹೋಗಿಬರುತ್ತೇನೆ. ನೀನು ಈ ರೀತಿಯಲ್ಲಿ ಇರು.' ಎಂದು ಆ ಶ್ರೇಷ್ಠಮತಿಯುಳ್ಳ ರೇಮಯ್ಯನು ಅವನನ್ನು ಸಮಾಧಾನಪಡಿಸಿ, ಸಂಭ್ರಮದಿಂದ ತನ್ನ ಗುರುಶ್ರೇಷ್ಠನ ಪಟ್ಟಣಕ್ಕೆ ಹೊರಟುಬಂದನು. ೧೨–೧೩. ಪರಮಾನಂದದಿಂದ ಆ ಗುರುಶ್ರೇಷ್ಠನನ್ನು ಕಂಡು ಅಕ್ಕರೆಯಿಂದ ಸಾಷ್ಟಾಂಗ ನಮ

ಕರ ಜಯು ಜಯು ಶರಣಾಗೆನು
ತುರುತರ ನಿಜಭಕ್ತಿಭಾವದಿಂ ಕೀರ್ತಿಸುತುಂ ೧೨

ಜಲ ಗಂಧಾಕ್ಷತೆ ಪುಷ್ಪ ಧೂಪ ವಿಳಸದ್ದೀಪಾರ್ಪಣಂಗೆಯ್ದು ಮಂ
ಜುಲ ನೈವೇದ್ಯ ಸುಗಂಧವೀಟಿಕೆಯನಿತ್ತೋರಂತೆ ಕೆಯ್ಗೆಯ್ದುತು
ಜ್ವಲರತ್ನಾಭರಣಂಗಳಿಂ ಗುರುಪದಾಂಭೋಜಾತಮಂ ಪೂಜಿಸು
ತ್ತೊಲವಿಂ ತತ್ಕೃಪೆವೆತ್ತು ತನ್ಮಠದೊಳಿರ್ದಂ ಭಕ್ತಿಭಾಗ್ಯಾನ್ವಿತಂ ೧೩

ವ॥ ಅನ್ನೆವರಮಿತ್ತಲ್—

ಮಲ್ಲಿನಾಥನ ಮಾತೆ ಜಂಗಮವೃಂದಮೇಳ್ತರೆ ಮಂದಿರ
ಕ್ಕಲ್ಲಿ ವಂದಿಸುತಂಘ್ರಿಯಂ ತೊಳೆದೊಲ್ದು ಕುಳ್ಳಿರಿಸುತ್ತೆ ತ
ತ್ಪಲ್ಲವಾಧರೆ ಪಾಕಮಂ ಸಮೆಯಲ್ಕೆ ಕಾಷ್ಠಮನಾಯ್ದುತಂ
ದಲ್ಲದಾಗದೆನುತ್ತೆ ನಂದನನೆಯ್ದೆ ಪೀದೆ ವಿಳಾಸದಿಂ ೧೪

ಬಂದು ಪಿತ್ತಿಲನೆಯ್ದೆ ಪೊಕ್ಕಡುಗರ್ಬನೀಕ್ಷಿಸುತಾಯ್ವ ಪೊ
ಳ್ತೊಂದು ಚಂದನಕಾಷ್ಠಮಂ ಸುತನೆತ್ತೆ ತಾಂ ಕೆಳಗಿರ್ದ ಭು
ಸ್ಸೆಂದು ಪಲ್ಮೊರೆದೆಳ್ದು ಘೋರವಿಷಾತಿಭೀಷಣಸರ್ಪನಾ
ಕಂದನಂ ಪಿಡಿದೊತ್ತಿ ಕರ್ಚಿದುದುರ್ಚಿ ಪಲ್ಮೊನೆ ಪಾಯ್ವಿನಂ ೧೫

ಸ್ಕಾರಮಾಡಿ, 'ಕೃಪಾಕರನೇ, ಜಯುಜಯು-ರಕ್ಷಿಸು' ಎನ್ನುತ್ತ ಅತ್ಯಂತ ಭಕ್ತಿಭಾವದಿಂದ ಸ್ತೋತ್ರ ಮಾಡುತ್ತ ಭಕ್ತಿ ಭಾಗ್ಯದಿಂದ ಕೂಡಿದ ರೇಮಯ್ಯನು—ನೀರು-ಗಂಧ-ಅಕ್ಷತೆ—ಪುಷ್ಪಧೂಪ—ಪ್ರಕಾಶಿಸುವ ದೀಪಾದಿಗಳನ್ನು ಸಮರ್ಪಣೆ ಮಾಡಿ ಮನೋಹರವಾದ ನೈವೇದ್ಯ, ಸುಗಂಧಮಿಶ್ರಿತ ತಾಂಬೂಲವನ್ನು ಕೊಟ್ಟು ಕ್ರಮವಾಗಿ ಉಜ್ವಲವಾದ ರತ್ನಾಭರಣಗಳಿಂದ ಅಲಂಕಾರಗೊಳಿಸಿದನು. ಗುರುವಿನ ಪಾದ ಕಮಲಗಳನ್ನು (ಈ ರೀತಿ) ಪೂಜಿಸುತ್ತ ಒಲುಮೆಯಿಂದ ಅವರ ಕೃಪಾ ವಿಶೇಷವನ್ನು ಪಡೆದು ಅವರ ಮಠದಲ್ಲಿ ಇರುತ್ತಿದ್ದನು. ವ॥ ಅಷ್ಟರಲ್ಲಿ ಇತ್ತಕಡೆಗೆ—೧೪. ಮನೆಗೆ ಜಂಗಮ ಸಮೂಹವು ಬರಲಾಗಿ ಬಾಲಕನಾದ ಮಲ್ಲಿನಾಥನ ತಾಯಿಯು ಬಂದ ಆ ಜಂಗಮರಿಗೆ ನಮಸ್ಕಾರ ಮಾಡಿ, ಪಾದಗಳನ್ನು ತೊಳೆದು ಪ್ರೀತಿಯಿಂದ ಕುಳ್ಳಿರಿಸಿದಳು. ಪಲ್ಲವದಂತೆ ತುಟಿಗಳುಳ್ಳ ಆ ಸ್ತ್ರೀಯು(ಬಂದ ಜಂಗಮರಿಗೋಸುಗ) ಅಡಿಗೆಯನ್ನು ಮಾಡುವುದಕ್ಕೆ ಕಟ್ಟಿಗೆ (ಸೌದೆ) ಯನ್ನು ತಂದಲ್ಲದೆ ಆಗದು ಎನ್ನುತ್ತ ಮನೆಯ ಹಿಂಭಾಗಕ್ಕೆ ಸಂಭ್ರಮದಿಂದ ಬಂದಳು. ಜೊತೆಗೆ ಬಾಲಕನೂ ಬಂದನು.—೧೫. ಹೀಗೆ ಬಂದು ಹಿತ್ತಿಲನ್ನು ಹೊಕ್ಕು, ಸೌದೆಯನ್ನು ನೋಡಿ ಆರಿಸುವ ಸಮಯದಲ್ಲಿ, ಬಾಲಕನು ಒಂದು ಚಂದನದ ಕಟ್ಟಿಗೆಯನ್ನು ಹಿಡಿದೆತ್ತಿದನು. ಆಗ ಅದರ ಕೆಳಗಿದ್ದ ಘೋರವಾದ ಅತ್ಯಂತ ವಿಷದಿಂದ ಭಯಂಕರವಾದ ಸರ್ಪವೊಂದು ಭುಸ್ಸೆಂದು ಹಲ್ಲು ಮೊರೆಯುತ್ತ ಮೇಲಕ್ಕೆದ್ದು, ಆ ಬಾಲಕನನ್ನು ಹಿಡಿದು ಒತ್ತಿ ಹಲ್ಲಿನ ಮೊನೆಗಳು ನಾಟಿ ಪಾರಾಗುವ ಹಾಗೆ ಕಚ್ಚಿತು.

ವ॥ ಅಂತು ತನ್ನನಗಿದ ಭೀಕರಾಹಿಯಂನಾ ಕುಮಾರಂ ಕಂಡಗಿದು ಜನನಿಯಂ ಬೆದರ್ದ ಕಂಗಳಿಂ ನೋಡಿ —

ತಾಯೆ ಕಡೆದೊಲಗು ಬಾರದಿ
ರೀಯೆಡೆಗಹಿಯಿದೀದುದಕಟಕಟೆನ್ನಂ
ನೋಯಿಸಿ ಕಡಿದುದೆನುತ್ತುಂ
ಬಾಯುಳಿದಾ ಬಾಲನುಸುರ್ದು ಪಳಯಿಸುತಿಳೆಯೊಳ್ ೧೬

ಪಡಲಿಟ್ಟು ಫಣಿಯ ವಿಷದುರಿ
ಯುಡರೆ ಕರಂ ಮುಗುಳೆ ಕಣ್ಗಳಳವಳಿದಸುವಂ
ಬಿಡೆ ಮಲ್ಲಿನಾಥನವನಂ
ಮೃಡಭಕ್ತೆ ನಿರೀಕ್ಷಿಸುತ್ತೆ ಸಾರ್ಕೆಯೊಳಾಗಳ್ ೧೭

ಸುಗಿದಳೆ ಸುಯ್ದಳೇ ತನಯ ಹಾ ಸುತ ಹಾ ಸುಕುಮಾರ ಹಾಯೆನು
ತ್ತಗಿದಳಲಿಂದೆ ರೋದಿಸಿದಳೇ ಬಗೆಗುಂದಿದಳೇ ಬಳಲ್ದಳೇ
ಮಿಗೆ ಕಱಗುಂದಿ ಕುಂದಿದಳೆ ಪೆರ್ಚಿದ ಬೇವಸದಿಂ ಬೆಳರ್ತು ಬೆಂ
ಡೊಗೆದಳೆ ಕಂದ ಕೆಟ್ಟೆನಕಟೆಂತೆನಗೆಂದು ವಿಷಾದಮಾಂತಳೇ ೧೮

ಅಣುಗು ಫಣಿಯಿಂ ಮಡಿದು
ಗುಣನಿಧಿಯೆಂಗೆಯ್ವೆನೆಂದು ಪಳಯಿಸಿದಳೆ ತ
ಲ್ಲಣಿಸಿ ಮಱುಗಿದಳೆ ಧೈರ್ಯದ
ಕಣಿ ಕಣ್ಬನಿಗಱೆದು ತಾಪಮಂ ತಾಳ್ದಿದಳೇ ೧೯

ವ॥ ಆ ರೀತಿ ತನ್ನನ್ನು ಕಡಿದ ಭಯಂಕರ ಹಾವನ್ನು ಆ ಕುಮಾರನು ಕಂಡು ಹೆದರಿ ತಾಯಿಯನ್ನು ಬೆದರಿದ ಕಣ್ಣುಗಳಿಂದ ನೋಡುತ್ತ.—೧೬-೧೮ ಅಮ್ಮಾ, ದೂರಕ್ಕೆ ಸರಿದು ಹೋಗು ! ಈ ಕಡೆಗೆ ಬರಬೇಡ. ಹಾವಿದೆ ! ಹಾವಿದೆ ! ಅಕಟಕಟ !! ನನ್ನನ್ನು ನೋಯಿಸಿ ಕಡಿಯಿತು. ಎನ್ನುತ್ತ ಬಾಯಿಬಿಟ್ಟು ಆ ಕುಮಾರನು ಹೇಳಿ ಪ್ರಲಾಪಿಸುತ್ತ ಭೂಮಿಯ ಮೇಲೆ ಬಿದ್ದು, ಹಾವಿನ ವಿಷದ ಉರಿಯು ಏರಲಾಗಿ ಕಣ್ಣುಗಳನ್ನು ಮುಚ್ಚಿ ಸಂಕಟಪಟ್ಟು ಆ ಮಲ್ಲಿನಾಥನು ಪ್ರಾಣವನ್ನು ಬಿಟ್ಟನು. ಹೀಗೆ ಪ್ರಾಣ ಬಿಟ್ಟ ಮಗನನ್ನು ಆ ಶಿವಭಕ್ತೆಯಾದ ಅಣ್ಣಲ ದೇವಿಯು ಸಮೀಪಕ್ಕೆ ಬಂದು ನೋಡುತ್ತ ಹೆದರಿದಳೇ ? ನಿಟ್ಟುಸಿರು ಬಿಟ್ಟಳೇ ? ಮಗನೇ ಹಾ ! ಸುತನೇ ಹಾ ! ಸುಕುಮಾರಾ ಹಾ ! ಎನ್ನುತ್ತ ಹೆದರಿ ಸಂಕಟದಿಂದ ಅತ್ತಳೇ ? ಧೈರ್ಯಗುಂದಿದಳೇ ? ಬಳಲಿದಳೇ ? ಕಪ್ಪಿಟ್ಟು ಕುಂದಿದಳೇ? ವಿಶೇಷವಾದ ಸಂಕಟದಿಂದ ಬೆಳ್ಳಗಾಗಿ ಬೆಂಡಾದಳೇ ? ಅಕ್ಕಟ ! ಕಂದಾ ಕೆಟ್ಟೆನು, ನನಗೆ ಇನ್ನೆಂತು ಎಂದು ವಿಷಾದಗೊಂಡಳೇ ? ೧೯. ಗುಣಗಳಿಗೆ ನಿಧಿಯೆನಿಸಿದ ನನ್ನ ಮಗನು ಹಾವಿನ ಕಡಿತದಿಂದ ಸತ್ತನು. ಇನ್ನೇನು ಮಾಡಲೆಂದು ಪ್ರಲಾಪಿಸಿದಳೇ ? ಸಂಕಟದಿಂದ ಮರುಗಿದಳೇ ? ಧೈರ್ಯದ ಗಣಿಯೆನಿಸಿದ ಅವಳು ಕಣ್ಣೀರು

ಆಕಟಿಂತು ಮಡಿಪಿದಂ ಗಡ
ಸುಕುಮಾರನನಭವನೆಂದು ನೊಂದಳೆ ಮಡಿದ
ರ್ಭಕನಸುವನೀವುದೆಲೆ ಭ
ಕ್ತಕದಂಬಮೆ ತಳ್ವದೆಂದು ಪಂಬಲಿಸಿದಳೇ ೨೦

ಹರ ನಿಮ್ಮಂಘ್ರಿಯ ಪೂಜೆಗೆಯ್ದು ಮಳಿವಂತಾಯ್ತಾತ್ಮಜಂಗೆಂದಳ
ಲ್ಪಿರಿದಾಗುತ್ತಿರೆ ಸುಯ್ದಳೇ ಗುರುಗಳಿಂ ಮುಂಮಂತ್ರಿಸಲ್ಬಾಳ್ವನೀ
ತರುಣಂ ತಾನೆನುತುಂ ಪಲುಂಬಿದಳೆ ಪುತ್ರಂ ಬಾಳ್ವವೋಲ್ಮಾಡಿರೇ
ಶರಣರ್ತೇರಸಪೋಡಶರ್ಭಜಿಪೆನೆಂದಭ್ಯರ್ಥನಂಗೆಯ್ದಳೇ ೨೧

ಅನುನಯದಿನೀಕ್ಷಿಸುತೆ ನಿಜ
ತನಯನಿವಂ ಸಂದನಭವಗಣತತಿಗಿದು ಲೇ
ಸೆನುತೊಲವಿಂದೆಳೆನಗೆಯಾ
ನನನಳಿನದೊಳುಣ್ಮೆ ತನ್ನ ಪತಿಯೊಡನಾಗಳ್ ೨೨

ಪೆಱರಾರುಂ ಕಾಣವಂತಾಲಯಕೆ ಸುತನ ತತ್ಕಾಯಮುಂ ತಂದು ಕಟ್ಟ
ಳ್ಕಱೊಳಾ ಲಿಂಗಾರ್ಚನಾವೇದಿಕೆಯನಗುಳ್ದು ರುದ್ರಾಕ್ಷೆಯಿಂ ಭಸ್ಮದಿಂದೊ
ಳ್ಪಱಂಗಂಪಂ ತಾಳ್ದ ಭಕ್ತಾರ್ಪಿತಕುಸುಮಲಸದ್ಬಿಲ್ವದಿಂ ಸಿಂಗರಂಗೆ
ಯ್ದೞಕಂ ಕೆಯ್ಗಣ್ಮೆ ನಿಕ್ಷೇಪಿಸಿದಳದನದೇನೆಂಬೆನಾಶ್ಚರ್ಯದುರ್ಬಂ ೨೩

ಸುರಿಸಿ ತಾಪವನ್ನು ಹೊಂದಿದಳೇ ? ೨೦. ಅಯ್ಯೋ ! ಪರಮಾತ್ಮನು ನನ್ನ ಸುಕುಮಾರನನ್ನು ಹೀಗೆ ಸಾಯುವಂತೆ ಮಾಡಿದನಲ್ಲವೇ ! ಎನ್ನುತ್ತ ನೊಂದುಕೊಂಡಳೇ ? ಎಲೈ ಶಿವಭಕ್ತ ಜನಸಮೂಹವೇ, ತಡಮಾಡದೆ ನನ್ನ ಸತ್ತ ಮಗನ ಪ್ರಾಣವನ್ನು ಕೊಡಿರೆಂದು ಹಲುಬಿದಳೇ ? ೨೧. ಪರಮೇಶ್ವರನೇ, ನಿಮ್ಮ ಪಾದದ ಪೂಜೆಯನ್ನು ಮಾಡಿಯೂ ಕೂಡ, ನನ್ನ ಮಗನಿಗೆ ಇಂಥ ಸಾವುಂಟಾಯಿತೇ ಎಂದು ಹೆಚ್ಚಾದ ದುಃಖದಿಂದ ಉಸುರುಗರೆದಳೇ ? ಸದ್ಗುರುಗಳಿಂದ ಮಂತ್ರವನ್ನು ಹಾಕಿಸಿದರೆ ಈ ನನ್ನ ಮಗನು ಬಾಳುವನೆನ್ನುತ್ತ (ಅದಕ್ಕಾಗಿ) ಹಲುಬಿದಳೇ ? 'ಹೇ ಶರಣರಿರಾ, ತೇರಸರುಗಳಿರಾ, ಷೋಡಷರುಗಳಿರಾ ನನ್ನ ಪುತ್ರನು ಬದುಕುವ ಹಾಗೆ ಮಾಡಿಕೊಡಿರೇ' ಎಂದು ಪ್ರಾರ್ಥಿಸಿಕೊಂಡಳೇ ? ೨೨. (ಸತ್ತ ಆ ಮಗನನ್ನು) ಸಂತೋಷದಿಂದ ನೋಡುತ್ತ, ಈ ನನ್ನ ಕುಮಾರನು ಶಿವಗಣಗಳ ಸಮೂಹಕ್ಕೆ ಸೇರಿಕೊಂಡನು. ಇದೊಂದು ಒಳ್ಳೆಯದಾಯಿತು ಎಂದು ಪ್ರೀತಿಯಿಂದ ಮುಖ ಕಮಲದಲ್ಲಿ ಎಳೆನಗೆ ಹೊರ ಚಿಮ್ಮುತ್ತಿರಲು ತನ್ನ ಪತಿಯೊಡನೆ ಹೇಳಿದಳು. ೨೩. ಬೇರೆಯವರಾರೂ ಕಾಣದ ಹಾಗೆ ಮನೆಗೆ ಆ ತನ್ನ ಕುಮಾರನ ಮೃತದೇಹವನ್ನು ತಂದು, ವಿಶೇಷವಾದ ಅಕ್ಕರೆಯಿಂದ ಮನೆಯಲ್ಲಿನ ಲಿಂಗಾರ್ಚನೆಯ ವೇದಿಕೆಯನ್ನು ಅಗೆದು, ರುದ್ರಾಕ್ಷಿಯಿಂದಲೂ ಭಸ್ಮದಿಂದಲೂ, ಶ್ರೇಷ್ಠ ಬಿಲ್ವದಳಗಳಿಂದಲೂ ಅಲಂಕಾರಗೊಳಿಸಿ, ಪ್ರೀತಿಯ ಆಧಿಕ್ಯದಿಂದ ಹೂಗಿದಳು. ಅವಳ

ವ॥ ಅಂತು ನಿಕ್ಷೇಪಿಸಿ ಸತಿಪತಿಗಳಿರ್ವರುಮೇಕಚಿತ್ತರಾಗಿ—

ಮುನ್ನಿನ ಪರಿಯಿಂ ಶಿವಗಣ
ಪನ್ನಳಿನಮನೋಜೆಯಿಂದೆ ಪೂಜಿಸುತುಂ ಸ
ತ್ತ್ವೋನ್ನತಮತಿಗಳ್ಸುಖಮಿ
ರ್ಪನ್ನೆವರಂ ಕದಿರ ರೇಮನಾ ಗುರುಪದಮಂ ೨೪

ಭಜಿಯಿಸುತೇಳುಂ ದಿನಮಿ
ರ್ದಜಡಂ ಗುರುಚರಣಕೆಱಗಿ ತತ್ಕರುಣಮನೊ
ಟ್ಟಜೆಯಿಂ ಪಡೆದೇಳ್ತಂದಂ
ಸುಜನಸ್ತುತನಲ್ಲಿ ಮಗುಳ್ದು ಶಿವಗಣಸಹಿತಂ ೨೫

ವ॥ ಅಂತೇಳ್ತಂದಾ ಸೋಮನಾಥನಿರ್ದ ಪೊಳಲಂ ಪೊಕ್ಕು ಸಂಭ್ರಮದಿಂ ತನ್ಮಂದಿರಕ್ಕೆ ನಡೆತರೆ—

ಕಂಡಷ್ಟಾಂಗಪ್ರಣಾಮಂಬೆರಸು ತೊಳೆದು ಪಾದಾಬ್ಜಮಂ ಪಾದತೀರ್ಥಂ
ಗೊಂಡಾಗಳ್ಧನ್ಯಭಾವಂದಳೆದು ಪದೆದು ಲಿಂಗಾರ್ಚನಂಗೆಯ್ಸಿ ತಾನುಂ
ಪೆಂಡಿರ್ತಚ್ಛೇಷಮಂ ಸೇವಿಸುವ ಸಮಯದೊಳ್ ನೋಡುತೊಲ್ದಿರ್ವರುಂ ಮಾ
ರ್ತಾಂಡಾಂಶುಸ್ಫಾರತೇಜಂ ಚದುರ ಕದಿರರೇಮಾರ್ಯನಿಂತೆಂದನಾಗಳ್ ೨೬

ಆಶ್ಚರ್ಯಕರವಾದ ಆ ಉತ್ಸಾಹವನ್ನು ಏನೆಂದು ಹೇಳಲಿ ! ವ॥ ಆ ರೀತಿಯಿಂದ (ಮೃತನಾದ ಕುಮಾರನನ್ನು) ಹುಗಿದು, ಸತಿಪತಿಗಳಿಬ್ಬರೂ ಒಂದೇ ಚಿತ್ತವುಳ್ಳವರಾಗಿ– ೨೪–೨೫. ಮೊದಲಿನ ರೀತಿಯಲ್ಲಿಯೇ ಶಿವಶರಣರುಗಳ ಪಾದ ಕಮಲಗಳನ್ನು ಯಥಾ ಕ್ರಮದಿಂದ ಆ ಸತ್ವಪೂರ್ಣ ಉನ್ನತ ಬುದ್ಧಿಯುಳ್ಳ ದಂಪತಿಗಳು ಪೂಜಿಸುತ್ತ ಸುಖವಾಗಿ ಇರುತ್ತಿರುವಷ್ಟರಲ್ಲಿ ಪ್ರಜ್ಞಾನಸಾದ ಕದಿರ ರೇಮಯ್ಯನು ತನ್ನ ಗುರು ವಿನ ಪಾದವನ್ನು ಭಜಿಸುತ್ತ ಏಳುದಿನ (ಆ ಗುರುವಿನ ಊರಿನಲ್ಲಿ) ಇದ್ದು ಗುರುಚರ ಣಕ್ಕೆ ನಮಸ್ಕಾರಮಾಡಿ, ಆತನ ಕಾರುಣ್ಯವನ್ನು ಅತಿಶಯವಾಗಿ ಪಡೆದು ಸಜ್ಜನರಿಂದ ಶ್ಲಾಘಿಸಲ್ಪಡುವ ಅವನು ಶಿವಗಣಸಹಿತವಾಗಿ (ಕಲ್ಯಾಣದ ಕಡೆಗೆ) ಹೊರಟು ಬಂದನು. ವ॥ ಹಾಗೆ ಹೊರಟು ಬಂದು, ಸೋಮನಾಥನಿದ್ದ ಪಟ್ಟಣವನ್ನು (ಮೊದಲಿನಂತೆ) ಹೊಕ್ಕು ಸಂಭ್ರಮದಿಂದ ಅವನ ಮನೆಗೆ ಬರಲಾಗಿ ೨೬. (ಸೋಮನಾಥನು ಕದಿರ ರೇಮಯ್ಯನನ್ನು) ಕಂಡು ಸಾಷ್ಟಾಂಗ ಪ್ರಣಾಮ ಪೂರ್ವಕವಾಗಿ ಪಾದ ಕಮಲವನ್ನು ತೊಳೆದು, ಪಾದ ತೀರ್ಥವನ್ನು ಸ್ವೀಕರಿಸಿ ಧನ್ಯನಾದೆನೆಂಬ ಭಾವವನ್ನು ಹೊಂದಿ ಸಂತೋಷದಿಂದ ಲಿಂಗಾರ್ಚನೆಯನ್ನು ಮಾಡಿಸಿದನು. ತಾನೂ ತನ್ನ ಹೆಂಡತಿಯೂ, ಅವರ ಶೇಷಪ್ರಸಾದವನ್ನು ಸೇವಿಸುವ ಸಮಯದಲ್ಲಿ ಪ್ರೀತಿಯಿಂದ ಆ ಸೂರ್ಯ ಕಿರಣ ಗಳಿಗೆ ಸಮಾನವಾದ ಕಾಂತಿಯಿಂದ ಕೂಡಿದ ತೇಜಸ್ವಿಯಾದ ಚತುರ ಕದಿರ ರೇಮ

ಅಣ್ಣಲದೇವಿ ನಿನ್ನಣುಗನಾವೆಡೆಗೆಯ್ದಿದನಿಲ್ಲಿ ಕಾಣೆವಾ
ಚಿಣ್ಣನನಾಡಲೆಯ್ದಿದನೊ ಮಕ್ಕಳೊಳಾರ್ಯಗೃಹಾಂತರಕ್ಕೆ ಮು
ಕ್ಕಣ್ಣನ ಪೂಜೆಯಂ ಪದೆದು ನೋಳ್ಪೊಡೆ ಪೋದನೊ ಭಕ್ತರೀಶನಂ
ಬಣ್ಣಿಸಿ ಪಾಡೆ ಕೇಳಲವರಂಗಣಕೇಂ ತಳರ್ದತ್ತ ನಿಂದನೋ ೨೭

ಚರಲಿಂಗದ ಮಠದತ್ತ
ಲ್ಪರಿದನೊ ಶಿವಲಿಂಗಯಜನಕೊಪ್ಪುವ ಪೊಸ ಕ
ಮ್ಮರಲಂ ತಿಱಿಯಲ್ಪಿತ್ತಿಲ
ನಿರದೆಯ್ದಿ ವಿನೋದದಿಂದೆ ಪೂಗೊಯ್ದಪನೋ ೨೮

ಗಿರಿಶಪುರಾಣಮನೋದುವ
ಶರಣರ ಬಳಿಸಾರ್ದು ಬಾರದಿರ್ಪನೊ ನಿನ್ನೊಳ್
ತರುಣಂ ಮುನಿದೇಂ ಮೆಯ್ಗರೆ
ದಿರುತಿರ್ಪನೊ ಪೊಱಗೆ ನಿದ್ರೆಗೆಯ್ದಿರ್ದಪನೋ ೨೯

ಅಂದಾವೆಯ್ತರೆ ತಾಂ ಪಲ
ವಂದದೆ ಬಿನದಿಸುತುಮಿರ್ದನೆಮ್ಮೊಡನೊಲವಿಂ
ಕಂದನವನಾಡದಿರ್ಪೀ
ಮಂದಿರಮಿದು ಭಿನ್ನನಾ[1]ಗಿ ಕಾಣಿಪುದಲ್ತೇ ೩೦

ಯ್ಯನು ದಂಪತಿಗಳಿಬ್ಬರನ್ನೂ ನೋಡುತ್ತ ಆಗ ಹೀಗೆಂದನು : ೨೭. ಅಣ್ಣಲದೇವಿಯೇ ನಿನ್ನ ಕುಮಾರನು ಎಲ್ಲಿಗೆ ಹೋಗಿದ್ದಾನೆ ? ಆ ಚಿಣ್ಣನನ್ನು ನಾವು ಕಾಣಲಿಲ್ಲವಲ್ಲಾ ! ಮಕ್ಕಳೊಡನೆ ಆಡಲಿಕ್ಕೆ ಹೋಗಿರುವನೋ ? ಶ್ರೇಷ್ಠರಾದ ಶಿವಶರಣರ ಮನೆಗೆ ಪರಮೇಶ್ವರನ ಪೂಜೆಯನ್ನು ಪ್ರೀತಿಯಿಂದ ನೋಡಲಿಕ್ಕೆ ಹೋದನೋ ? ಭಕ್ತ ಜನರುಗಳು ಈಶ್ವರನನ್ನು ವರ್ಣಿಸಿ ಹಾಡುತ್ತಿರಲು ಅದನ್ನು ಕೇಳುವುದಕ್ಕೆ ಅವರ ಮನೆಯ ಅಂಗಳಕ್ಕೆ ಹೊರಟುಹೋಗಿ ಅದನ್ನು ಕೇಳುತ್ತ ಅಲ್ಲಿಯೇ ನಿಂತನೋ ಏನೊ ? ೨೮ ಜಂಗಮಲಿಂಗದ ಮಠದ ಕಡೆಗೆ ಓಡಿದನೋ ? ಶಿವಲಿಂಗ ಪೂಜೆಗೆ ಒಪ್ಪುವಂತಹ ಹೊಸ ಸುಗಂಧಭರಿತ ಹೂವುಗಳನ್ನು ಎತ್ತಿತರಲು ಹಿತ್ತಿಲನ್ನು ಪ್ರವೇಶಿಸಿ ಅಲ್ಲಿ ವಿನೋದದಿಂದ ಹೂವುಗಳನ್ನೇನಾದರೂ ಎತ್ತುತ್ತಿರುವನೋ ? ೨೯. ಶಿವ ಪುರಾಣವನ್ನು ಹೇಳತಕ್ಕ ಶರಣರುಗಳ ಹತ್ತಿರಕ್ಕೆ ಹೋಗಿ, ಬಾರದೆ ಇರುವನೋ ? ನಿನ್ನೊಡನೆ ಆ ಬಾಲಕನು ಕೋಪಿಸಿಕೊಂಡು ಅಡಗಿಕೊಂಡು (ಎಲ್ಲಿಯಾದರೂ) ಕುಳಿತಿರುವನೋ ? (ಅಥವಾ) ಹೊರಗೆಲ್ಲಿಯಾದರೂ ನಿದ್ರೆಮಾಡುತ್ತಿರುವನೋ ? ೩೦. ಈ ಪೂರ್ವದಲ್ಲಿ ನಾವು ಬಂದಿದ್ದಾಗ ನಮ್ಮೊಡನೆ ಅತಿ ಪ್ರೀತಿಯಿಂದ ಹಲವಾರು ಪ್ರಕಾರದಲ್ಲಿ ವಿನೋದಗೊಳಿಸುತ್ತಿದ್ದನು. ಕಂದನಾದ ಅವನು ಆಟವಾಡದಿರುವ ಈ ಮನೆಯು ಭಿನ್ನವಾಗಿ (ಬೇರೊಂದು

---

1 ವಾ(ದ)

•16

ಕರೆ ತಂಗಿ ನಿನ್ನ ತನಯನ
ನರವರಿಸದೆ ಬೇಗಮೀಗಳೆಂದಾ ಗುಣಸಾ
ಗರ ಕದಿರ ರೇಮನೆನೆ ತ
ತ್ತರುಣೀಮಣಿ ಮಣಿದು ಮುಗುಳ್ದು ನೆಗಳ್ದಂಜ[2]ಲಿಯಂ ೩೧

ದೇವ ಕರೆಯಲ್ಕೆ ಚಂಗಳೆ
ದೇವಿಯೆ ಪೇಳಾಂ ತನೂಜನಂ ಕರೆಯದ ಸ
ದ್ಭಾವಮನಾನಲ್ಲಿಂಬಿಯೆ
ಭಾವಿಸೆ ತದ್ಗೇಹದಾಸಿಯರ್ಗಾನಣೆಯೇ ೩೨

ಕರೆಯಲ್ಸಾಮರ್ಥ್ಯಮಿಲ್ಲಂ ಕರೆಯದುಸಿಕನಿರ್ದಂದು ನಿಮ್ಮುಕ್ತಿಯಂ ಸೈ
ತಿರದಾದಂ ಮೀಱಿದಂತಾದಪ್ಪುದೆನಗಿದನೇನೆಂಬೆನಾಂ ದೇವ ನೀಂಮೆ
ನ್ನಿರವಂ ಮುನ್ನೋಡದೀ ದುರ್ಘಟಮನೊರೆವುದೇಂ ತಕ್ಕುದೇ ಪೇಳ್ಕೃಪಾಸಾ
ಗರ ಕಾರ್ಯಾಕಾರ್ಯಮಂ ನಿಮ್ಮಡಿಗಳಱಿಗುಮಂತಲ್ಲದಾನೆತ್ತ ಬಲ್ಲೆಂ ೩೩

ದೇವ ಭವದೀಯ ಪದದಾ
ಜೀವದೊಳೆನ್ನಣುಗನಿರ್ದಪಂ ಗಡ ಬೇಱಿ
ನ್ನಾವೆಡೆಯೊಳಱಸಿ ಕರೆವೆಂ
ನೀವಿದನಱಿದಿರ್ದುಮೆನಗೆ ಪೇಳ್ವುದು ಚಿತ್ರಂ ೩೪

ವಿಧವಾಗಿ) ಕಾಣುತ್ತಿರುವುದಲ್ಲವೇ ? ೩೧–೩೨. ತಂಗೀ ಕಳವಳಿಸದೆ ನಿನ್ನ ಕುಮಾರನನ್ನು ಈಗಲೇ ಬೇಗ ಕರೆಯಮ್ಮಾ !' ಎಂದು ಆ ಸದ್ಗುಣ ಸಮುದ್ರನಾದ ಕದಿರ ರೇಮಯ್ಯನು ಎನ್ನಲಾಗಿ, ಆ ಸ್ತ್ರೀರತ್ನವು ಅವರಿಗೆ ನಮಸ್ಕಾರ ಮಾಡುತ್ತ, ಪುನಃ ಕೈಮುಗಿದು ನಿಂತು 'ದೇವ (ಆ ಮಗನನ್ನು) ಕರೆಯಲಿಕ್ಕೆ ನಾನೇನು (ಸಿರಿಯಾಳ ಪತ್ನಿಯಾದ) ಚಂಗಳೆಯೇ ? ಹೇಳು (ಅಥವಾ) ಮಗನನ್ನು ಕರೆಯದೆ ಸದ್ಭಾವವನ್ನು ಹೊಂದುವುದಕ್ಕೆ ಆ ನಿಂಬಿಯಕ್ಕನೇ ? ವಿಚಾರಮಾಡಿನೋಡಿದರೆ ಅವರ ಮನೆಯ ದಾಸಿಯರಿಗೆ ನಾನು ಸಮಾನಳೇ ? ೩೩. ಕೃಪಾಸಮುದ್ರನೇ, (ನನಗೆ ನನ್ನ ಮಗನನ್ನು) ಕರೆಯಲಿಕ್ಕೆ ಸಾಮರ್ಥ್ಯವಿಲ್ಲ; ಕರೆಯದೆ ಸುಮ್ಮನಿದ್ದರೆ ನಿಮ್ಮ ಮಾತನ್ನು ನಡೆಸದೆ ಅತಿಶಯ (ಆದಂ) ವಾಗಿ ನಾನು ಮೀರಿದಂತಾಗುವುದು. ದೇವಾ ಈ ವಿಷಯದಲ್ಲಿ ನಾನೇನು ಹೇಳಲಿ ! ನೀವೇ ನನ್ನ ಸ್ಥಿತಿಯನ್ನು ಮೊದಲು ನೋಡಿಕೊಳ್ಳದೆ ಈ ಅಸಾಧ್ಯ ಕಾರ್ಯವನ್ನು ಹೇಳುವುದೇನು ತಕ್ಕದ್ದೇ ? ಹೇಳು ! ಕಾರ್ಯ ಅಕಾರ್ಯ ಇವನ್ನು ತಮ್ಮ ಶ್ರೀಪಾದಗಳೇ ಬಲ್ಲವು; ಹಾಗಲ್ಲದೆ ನಾನೆತ್ತ ಬಲ್ಲೆನು ? ೩೪. 'ದೇವ, ನಿನ್ನ ಪಾದಕಮಲಗಳಲ್ಲಿ ನನ್ನಮಗ ನಿದ್ದಾನಲ್ಲವೇ ! (ಅಲ್ಲಲ್ಲದೆ) ಬೇರೆ ಇನ್ನಾವ ಕಡೆಗಳಲ್ಲಿ ಅವನನ್ನು ಹುಡುಕಿ ಕರೆಯಲಿ ? ನೀವು ಈ ವಿಷಯವನ್ನು ತಿಳಿದೂ ಕೂಡ ನನಗೆ ಹೇಳುತ್ತಿರುವುದು ವಿಚಿತ್ರವಾಗಿದೆ.

---

1 ಜು(ಗ)

ವ॥ ಎಂದು ನುಡಿವ ಸದ್ಭಕ್ತೆಯ ಭಕ್ತಿಭಾವಕ್ಕೆ ಸಾಶ್ಚರ್ಯಚಿತ್ತಂ ಸಂತಸಂಬಟ್ಟು ಪೂಳ್ದ ನಿಕ್ಷೇಪಮನಗುಳ್ವಂತಿರಾ ವೇದಿಕಾಸಮಾಧಿಯನಗುಳ್ಚಿ ಮುಸುಂಕಿ ತಳ್ತ ಬಿಲ್ವದಳ ಭಸಿತರೇಣುಗಳ ನಾಗಳೆ ನೂಂಕಿ ಭೋಂಕನೆ ನಿಜಪ್ರಸನ್ನ ದೃಷ್ಟಿರುಚಿಸುಧಾಸೇಚನಮನೆಸಗುವಂತಿರಭೀಕ್ಷಿಸಿ—

ಪೆಸರ್ಗೊಂಡೇಳೇಳೆಂಬುದು
ಮಸವಸದಿಂ ತೆಱೆದು ಕಂಗಳಂ ಜನನಿಗೆ ಸಂ
ತಸಮೊಗೆತರೆ ಮೊಲೆವಾಲ್ವರಿ
ದೊಸರ್ದಿಳಿತರೆ ಕುವರನೆಳ್ದನತಿ ಸಂಭ್ರಮದಿಂ ೩೫

ವ॥ ಅಂತೆಳ್ದು ಶರಣಾರ್ಥಿರವಂ ಬೆರಸು ಮುಗಿದ ಕೆಯ್ಯಾಂತೆಳ್ದ ನಿಜಕುಮಾರಕನಂ ಮಾತೆ ಬಿಗಿದ[1]ಪ್ಪಿ ತೆಗೆದೆತ್ತಿಕೊಂಡು ಕದಿರ ರೇಮವಿಭುವಿನಡಿದಾವರೆಗೆ ಪೊಡಮಡಿಸಲೊಡನೆ—

ಕರುಣಾಸುಧೆ ತೆರೆ ಮಸಗು
ತ್ತಿರೆ ನೋಡಿ ನಿಜ ಪ್ರಸಾದದಿಂ ತಣಿಪುತೆ ತ
ತ್ತರುಣನನಾ ಪಿತರರನಾ
ದರಿಸಿ ಮಹಾಸುಖದೊಳಿರಿಸಿದಂ ಘನಮಹಿಮಂ ೩೬

ವ॥ ಹೀಗೆಂದು ನುಡಿಯುವ ಆ ಸದ್ಭಕ್ತೆಯಾದ ಅಣ್ಣಲದೇವಿಯ ಭಕ್ತಿಭಾವಕ್ಕೆ ಆಶ್ಚರ್ಯದಿಂದ ಕೂಡಿದ ಚಿತ್ತವುಳ್ಳವನಾದ ಆ ರೇಮಯ್ಯನು ಸಂತೋಷಗೊಂಡು, ಹುಗಿದ ಐಶ್ವರ್ಯ (ದ್ರವ್ಯ) ವನ್ನು ತೋಡುವಂತೆ ಆ ಪೂಜಾ ವೇದಿಕೆಯ ಸ್ಥಾನದಲ್ಲಿದ್ದ ಸಮಾಧಿಯನ್ನು ಅಗೆದು ತುಂಬ ಮುಚ್ಚಿಕೊಂಡ ಬಿಲ್ವದಳ ಭಸ್ಮದ ಧೂಳನ್ನು ಆಗಲೇ ನೂಕಿ, ಕೂಡಲೇ ತನ್ನ ಪ್ರಸನ್ನತೆಯಿಂದ ಕೂಡಿದ ದೃಷ್ಟಿಯ ಕಾಂತಿಯೆಂಬ ಅಮೃತದ ಸೇಚನವನ್ನು ಮಾಡುವಂತೆ ನೋಡಿದನು. ೩೫. ಆ ಬಾಲಕನ ಹೆಸರು ಹಿಡಿದು 'ಏಳೇಳು' ಎಂದು ಕರೆಯಲಾಗಿ, ಆ ಕೂಡಲೇ (ಬೇಗನೆ) ಕಣ್ಣುಗಳನ್ನು ತೆರೆದು, ತಾಯಿಗೆ ಸಂತೋಷವುಂಟಾಗುವಂತೆ, ಹೆಚ್ಚಾಗಿ ಮೊಲೆ ಹಾಲುಗಳು ತೊರೆಸಿ ಒಸರಿ ಹೊರಬರುಬರುವಂತೆ ಆ ಕುಮಾರನು ಅತ್ಯಂತ ಸಂಭ್ರಮದಿಂದ ಎದ್ದು ಬಂದನು. ವ॥ ಹಾಗೆ ಎದ್ದು, 'ಶರಣಾರ್ತಿ' ಎಂಬ ಧ್ವನಿಯಿಂದ ಕೂಡಿ, ಕೈಮುಗಿದುಕೊಂಡೇ ಎದ್ದ ತನ್ನ ಕುಮಾರನನ್ನು ತಾಯಿಯು ಬಿಗಿಯಾಗಿ ಅಪ್ಪಿಕೊಂಡು, ಎಳೆದು ಎತ್ತಿಕೊಂಡು, ಕದಿರ ರೇಮವಿಭುವಿನ ಪಾದಕಮಲಗಳಿಗೆ ನಮಸ್ಕಾರಮಾಡಿಸಲು ಆ ಕೂಡಲೆ ೩೬. ಆ ಘನ ಮಹಿಮಾ ಶಾಲಿಯಾದ ಕದಿರ ರೇಮಯ್ಯನು ಕರುಣೆಯೆಂಬ ಅಮೃತದ ಕೆರೆಗಳು ಮುತ್ತಿಕೊಳ್ಳುವ ಹಾಗೆ (ಆ ಕುಮಾರನನ್ನು) ನೋಡುತ್ತ, ತನ್ನ ಪ್ರಸಾದದಿಂದ ಅವನನ್ನು ತಣಿಸಿ, ಆ ಬಾಲಕನನ್ನೂ, ಆತನ ತಂದೆ ತಾಯಿಯರುಗಳನ್ನೂ ಆದರಿಸಿ, ಮಹಾ

---

1 ಯ (ಮ)

ವ॥ ಆಗಳಾ ಕದಿರ ರೇಮಯ್ಯನಿಂತೆಸಗಿದದ್ಭುತ ವಾರ್ತೆಯಂ ಬಸವರಾಜಂ ಕೇಳ್ದು ಸಂಭ್ರಮಿಸಿ ಗಣಸಮಿತಿಸಮೇತಂ ಬಂದು ಕಂಡು ತದಂಘ್ರಿಯುಗಕ್ಕೆ ಭಕ್ತಿಮಿಗೆ ಪೂವಲಿಗೆದಱಿ ಸಾಷ್ಟಾಂಗವೆಱಗಿ ನಿಂದು—

ಪರಮಾನಂದಸರೋಮರಾಳ ನಿಗಮಾಂಭೋಜಾತಬಾಲಪ್ರಭಾ
ಕರ ಕಾರುಣ್ಯಕಳಾವಿಳಾಸನಿಧಿ ನಿರ್ಧೂತಾನತವ್ರಾತಸಂ
ಸರಣಧ್ವಾಂತ ಧರಾವನೋದ್ಯಮ ಸದಾನಿರ್ನಿದ್ರ ಭೂರುದ್ರ ಭಾ
ಸುರವೀರವ್ರತ ಭಾಪುರೇ ಕದಿರ ರೇಮಾಚಾರ್ಯ ಚೂಡಾಮಣೀ ೩೭

ಶರಣಲಲಾಮ ಸತ್ಯಗುಣಧಾಮ ಸದಾಶಿವಭಕ್ತಿಸೀಮ ಶೈ
ವರುಚಿರನಾಮಜಾಪಕ ನಿಕಾಮ ನಿರಾಕೃತಮತ್ತಕಾಮ ದು
ರ್ಧರಪರಭೀಮ ಸತ್ಪುರುಷವಾರಿಧಿಸೋಮ ಸಮಸ್ತಕಳಾಭಿರಾಮ ಚಾ
ಗುರೆ ತತನಾಮ ಸನ್ನತಜನಾಮರಭೂರುಹ ರೇಮ ಧೀಮಣೀ ೩೮

ಎಂದಿಂತಾನಂದದಿಂ ಕೀರ್ತಿಸುತಳಿದೆಳೆಯುಂಗಿಂತುಟೇಳುಂ ದಿನಂಗ
ಳ್ಪಂದಾಗಳ್ಪ್ರಾಣಮಂ ಪಾಲಿಸಿದಿರವಮು ನೀಮೆಂದು ಕೊಂಡಾಡುತುಂ ನ

ಸುಖದಲ್ಲಿ ಇರುವಂತೆ ಮಾಡಿದನು. ವ॥ ಆಗ ಆ ಕದಿರ ರೇಮಯ್ಯನು ಈ ರೀತಿಯಲ್ಲಿ ಮಾಡಿದ ಅದ್ಭುತವಾರ್ತೆಯನ್ನು ಬಸವರಾಜನು ಕೇಳಿ, ಸಂಭ್ರಮಗೊಂಡು, ಶಿವಗಣ ಸಮೂಹದೊಡನೆ ಕೂಡಿಕೊಂಡು ಅವನಿರುವಲ್ಲಿಗೆ ಬಂದು, ಅವನ ಎರಡೂಪಾದಗಳಿಗೆ ವಿಶೇಷ ಭಕ್ತಿಯಿಂದ ಅಂಜಲಿಯಲ್ಲಿ ಹಿಡಿದ ಹೂವುಗಳನ್ನು ಹಾಕಿ, ಸಾಷ್ಟಾಂಗ ನಮಸ್ಕಾರಮಾಡಿ, ನಿಂತು ೩೭. ಹೇ, ಪರಮಾನಂದವೆಂಬ ಸರೋವರದಲ್ಲಿನ ಹಂಸಪಕ್ಷಿಯೋಪಾದಿಯಲ್ಲಿರುವವನೂ, ವೇದಗಳೆಂಬ ಕಮಲಗಳಿಗೆ ಬಾಲಸೂರ್ಯನ ಬಿಸಿಲಿನಂತಿರುವವನೂ, ಕರುಣೆಯೆಂಬ ವಿದ್ಯೆಯ ಲೀಲೆಗೆ ನಿಕ್ಷೇಪರೂಪನೂ, ನಮಸ್ಕಾರ ಮಾಡಿದ ಭಕ್ತರುಗಳ ಜನನಮರಣಾತ್ಮಕ ಸಂಸಾರವೆಂಬ ಕತ್ತಲೆಯನ್ನು ಪರಿಹರಿಸುವವನೂ, ಭೂ ಭಾಗವನ್ನು ಪರಿಪಾಲಿಸುವ ಕರ್ತವ್ಯದಲ್ಲಿ ಯಾವಾಗಲೂ ಜಾಗರೂಕನಾಗಿರುವವನೂ, ಭೂಮಂಡಲದ ರುದ್ರ ಸ್ವರೂಪನೂ, ಪ್ರಕಾಶಮಾನವಾದ ವೀರಶೈವ ವ್ರತವುಳ್ಳವನೂ, ಆದ ಕದಿರ ರೇಮಯ್ಯ ಶಿರೋರತ್ನವೇ, ಭಾಪುರೇ! ೩೮. ಶಿವಶರಣರಲ್ಲಿ ಭೂಷಣನಾದವನೇ, ಸತ್ಯ ಗುಣಗಳಿಗೆ ಮೂಲಸ್ಥಾನನಾದವನೇ, ಸದಾಶಿವನ ಭಕ್ತಿಯಲ್ಲಿ ಮೇರೆಯಿಲ್ಲದಿರುವವನೇ, ಶಿವ ಸಂಬಂಧವಾದ ಮನೋಹರವಾದ ನಾಮ ಸ್ಮರಣೆಮಾಡುವವನೇ, ಅತ್ಯಧಿಕವಾಗಿ ಮದೋನ್ಮತ್ತ ಮನ್ಮಥ ಸಂಬಂಧವಾದ ಕಾಮವನ್ನು ತಿರಸ್ಕರಿಸಿದವನೂ, ಸಹಿಸಲಸಾಧ್ಯವಾದ ಪರಸಮಯಕ್ಕೆ ಭಯಂಕರನಾಗಿರುವವನೂ, ಸತ್ಪುರುಷರೆಂಬ ಸಮುದ್ರಕ್ಕೆ ಚಂದ್ರನೋಪಾದಿಯಲ್ಲಿರುವವನೂ, ಸಮಸ್ತ ಶ್ರೇಷ್ಠ ವಿದ್ಯೆಗಳಿಂದ ಮನೋಹರನಾಗಿರುವವನೂ, ಪ್ರಸಿದ್ಧವಾದ ಹೆಸರುಳ್ಳವನೂ, ನಮಸ್ಕಾರ ಮಾಡುವ ಜನರಿಗೆ ಕಲ್ಪವೃಕ್ಷಪ್ರಾಯನಾದವನೂ, ಹೇ ರೇಮಾರ್ಯ ಪಂಡಿತ ರತ್ನವೇ ಚಾಗುರೇ ! (ಭಲರೇ !) ೩೯. ಈ ರೀತಿಯಾಗಿ ಆನಂದದಿಂದ ಹೊಗಳುತ್ತ 'ಅಮಮ ! ನೀವು

ಣ್ಪಿಂದಂ ತತ್ಸಾರಕಾರುಣ್ಯಮನೆ ಪಡೆದು ಕಣ್ಗೊಪ್ಪಿದಂ ಭಕ್ತಿವಲ್ಲೀ
ಕಂದಂ ಕಂದರ್ಪದರ್ಪಪ್ರಹರಗಣಘನಾಂಭೋಧಿಚಂದ್ರಂ ವೃಷೇಂದ್ರಂ ೩೯

ಕದಿರ ರೇಮವಿಭುಸಚ್ಚರಿತ್ರಮಂ
ಪದೆದು ಕೇಳ್ವನಿದನಾವನೋದುವಂ
ಮದನವೈರಿ ನಿಜಭೋಗವೋಕ್ಷಸಂ
ಪದಮನೀವನವರ್ಗೀ ಧರಿತ್ರಿಯೊಳ್ ೪೦

ಮಂದರ ಭೂಧರಮಂದಿರಭಾಸುರೆ ಶಾಂಕರಿ ಶಂಭುಸುಖಂಕರಿ ಸಂ
ಕ್ರಂದನವಂದಿತೆ ಚಂದನಗಂಧಿ ಸುಧಾಕರಮೌಳಿ ಶುಭಾಕರಪೂ
ರ್ಣೇಂದುಮುಖಾನ್ವಿತ ಕುಂದದರಸ್ಮಿತರಾಜಿತೆ ನಿರ್ಜರಪೂಜಿತೆ ಸೈ
ಪೊಂದಿರೆ ರಕ್ಷಿಪುದಿಂದಿರೆಗಾರ್ಯೆ ಜಗನ್ನುತೆ ಪರ್ವತರಾಜಸುತೇ ೪೧

ಇದು ವಿನಮದಖಿಳ ಸುರಾಸುರೇಂದ್ರಮಕುಟತಟಘಟಿತ ಮಣಿಗಣಾಗಣಿತ ರುಚಿನಿಚಯ
ತರುಣಾರುಣಾತಪಪರಿಲಸಿತ ಪರಮ ಶಿವಲಿಂಗ ಪಾದಾರವಿಂದಪರಾಗಭಸಿತ
ಭಾಸುರಲಲಾಟಪಟ್ಟಸರಸಜನಮಾನಿತೋಭಯಕವಿತಾವಿಶಾರದ
ಶ್ರೀಷಡಕ್ಷರಿದೇವಭಕ್ತಿವಿರಚಿತ
ಶ್ರೀಮದ್ ಬಸವರಾಜವಿಜಯಮಹಾಪುರಾಣದೊಳ್ ಕದಿರರೇಮಾರ್ಯ ವೃತ್ತಾಂತಕಥನಂ
ತ್ರಯಸ್ತ್ರಿಂಶಾಶ್ವಾಸಂ ಸಮಾಪ್ತಂ
ಅಂತು ಆಶ್ವಾಸ ೩೩ಕ್ಕೆ ಪದಗಣನೆ ೨೫೯೭ಕ್ಕೆ ಮಂಗಳಮಹಾ ಶ್ರೀ॥

ಸತ್ತು ಹೋದ ಚಿಕ್ಕ ಬಾಲಕನಿಗೆ ಸತ್ತ ಏಳು ದಿನಗಳ ಮೇಲೆ ಪ್ರಾಣವನ್ನು ದಯಪಾಲಿಸಿದಿರಿ.' ಎಂದು ಕೊಂಡಾಡುತ್ತ ಪ್ರೀತಿಯಿಂದ ಅವನ ಸಾರತರವಾದ ಕಾರುಣ್ಯವನ್ನು ಪಡೆದು ಭಕ್ತಿಯೆಂಬ ಬಳ್ಳಿಯ ಗೆಡ್ಡೆಯಂತಿರುವವನೂ, ಮನ್ಮಥನ ದರ್ಪವನ್ನು ಹರಣ ಮಾಡಿದವನೂ, ಶಿವಗಣಗಳ ಮಹಾಸಂದೋಹವೆಂಬ ಸಮುದ್ರಕ್ಕೆ ಚಂದ್ರಪ್ರಾಯನೂ ಆದ ಬಸವೇಶ್ವರನು (ಆ ಕಲ್ಯಾಣ ಪಟ್ಟಣದಲ್ಲಿ) ಕಂಗೊಳಿಸುತ್ತಿದ್ದನು. ೪೦. ಕದಿರ ರೇಮಪ್ರಭುವಿನ ಶ್ರೇಷ್ಠವಾದ ಚರಿತ್ರೆಯನ್ನು ಸಂತೋಷದಿಂದ ಯಾವನು ಕೇಳುವನೋ ಮತ್ತು ಇದನ್ನು ಓದುವನೋ ಅವನಿಗೆ ಶಿವನು ತನ್ನ ಸಂಬಂಧವಾದ ಭೋಗಮೋಕ್ಷ ಸಂಪತ್ತನ್ನು ಕೊಡುವನು. ೪೧. ಮಂದರ ಪರ್ವತದ ಮನೆಯಲ್ಲಿ ಪ್ರಕಾಶಿಸುವವಳೂ ಶಂಕರನ ಪತ್ನಿಯೂ, ಶಂಭುವಿಗೆ ಸುಖವನ್ನುಂಟು ಮಾಡುವವಳೂ, ಇಂದ್ರನಿಂದ ನಮಸ್ಕರಿಸಿಕೊಳ್ಳುವವಳೂ, ಚಂದನ ಗಂಧದ ಪರಿಮಳವುಳ್ಳವಳೂ, ಚಂದ್ರನನ್ನು ಮೌಳಿಯಲ್ಲುಳ್ಳವಳೂ, ಮಂಗಳವನ್ನುಂಟುಮಾಡುವ ಪೂರ್ಣ ಚಂದ್ರನಂತೆ ಪ್ರಕಾಶಿಸುವ ಮುಖವುಳ್ಳವಳೂ, ಸ್ವಲ್ಪ ಅರಳಿದ ಮೊಲ್ಲೆಯ ಹೂವಿನಂತಹ ಮುಗುಳು ನಗೆಯಿಂದ ವಿರಾಜಿಸುವವಳೂ, ದೇವತೆಗಳಿಂದ ಪೂಜೆಗೊಳ್ಳುವವಳೂ ಆದ ಪೂಜ್ಯಳೇ, ಜಗಜ್ಜನಗಳಿಂದ ಸ್ತೋತ್ರ ಮಾಡಿಸಿಕೊಳ್ಳುವವಳೇ, ಪರ್ವತರಾಜ ಪುತ್ರಿಯೇ ಪುಣ್ಯವುಂಟಾಗುವಂತೆ (ನನ್ನನ್ನು) ರಕ್ಷಿಸುವುದು.

ಚತುಸ್ತ್ರಿಂಶಾಶ್ವಾಸಂ

[ಏಕಾಂತ ರಾಮಯ್ಯನ ಕಥೆ]

ಶ್ರೀಕಾತ್ಯಾಯನಿಯರಸಂ
ಗೋಕಾಂತವಿರಿಂಚಿವಿಷ್ಣುಪೂಜಿತಪದನ
ಸ್ತೋಕಮಹಿಮಾಂಕನತುಳ ಕೃ
ಪಾಕರನೆಮಗೀಗೆ ಸೌಖ್ಯಮಂ ಶಿವಲಿಂಗಂ ೧

ಆ ಕಲ್ಯಾಣದೊಳಿರ್ಪನೊರ್ವನನಘಂ ಗಾಂಭೀರ್ಯವಾರಾಶಿ ಭ
ದ್ರಾಕಾರಂ ಪರವಾದಿಮತ್ತಗಜಪಂಚಾಸ್ಯಂ ಪರಿಭ್ರಾಜದ
ಸ್ತೋಕಾತ್ಮೀಯಮಹತ್ವಮಂಡಿತನುಮೇಶಧ್ಯಾನಸಂಧಾನವಿ
ದ್ಯಾಕಾಂತಂ ಗುಣಶಾಲಿ ಶೌರ್ಯನಿಧಿ ಸಂದೇಕಾಂತರಾಮಾಹ್ವಯಂ ೨

ಶಿವಧರ್ಮಪ್ರತಿಪಾಲಕಂ ಶಿವಕಥಾಕರ್ಣಾವತಂಸಂ ಶಿವೋ
ತ್ಸವಧಾಮಂ ಶಿವಮಂತ್ರವಾಣಿ ಶಿವಭಕ್ತಪ್ರೇಮಕೃದ್ವರ್ತನಂ

ಏಕಾಂತ ರಾಮಯ್ಯನ ಕಥೆ

೧. ಮಂಗಳಕರಳಾದ ಪಾರ್ವತಿಯ ಪತಿಯೂ. ಇಂದ್ರ (ಗೋಕಾಂತ), ಬ್ರಹ್ಮ, ವಿಷ್ಣು ಮೊದಲಾದವರಿಂದ ಪೂಜಿಸಲ್ಪಡುವ ಪಾದವುಳ್ಳವನೂ, ಅತ್ಯಧಿಕವಾದ ಮಹಿಮೆಯೇ ಚಿಹ್ನೆಯಾಗಿ ಉಳ್ಳವನೂ, ಅಸದೃಶ ಕೃಪೆಯನ್ನುಂಟುಮಾಡುವವನೂ, ಆದ ಶಿವಲಿಂಗನು ನಮಗೆ ಸೌಖ್ಯವನ್ನು ಕೊಡಲಿ. ೨. ಆ ಕಲ್ಯಾಣನಗರದಲ್ಲಿ ಒಬ್ಬ ಪಾಪರಹಿತನೂ, ಗಾಂಭೀರ್ಯದಲ್ಲಿ ಸಮುದ್ರದಂತಿರುವವನೂ, ಮಂಗಳಕರ ಆಕಾರ ವುಳ್ಳವನೂ, ಪರವಾದಿಗಳೆಂಬ ಮದೋನ್ಮತ್ತ ಆನೆಗಳಿಗೆ ಸಿಂಹಪ್ರಾಯನಾದವನೂ, ಅಧಿಕವಾಗಿ ಪ್ರಕಾಶಿಸುವ ತನ್ನದೇ ಆದ ಮಹಿಮೆಯಿಂದ ಅಲಂಕೃತನಾದವನೂ, ಪರಮೇಶ್ವರನ ವಿಷಯಕವಾದ ಅನುಸಂಧಾನ (ಲಿಂಗಾಂಗ ಸಾಮರಸ್ಯದ ಅನುಸಂಧಾನ) ವಿದ್ಯೆಯಿಂದ ಪ್ರಕಾಶಿಸುವವನೂ, ಸದ್ಗುಣಸಮೂಹಗಳಿಂದ ಕೂಡಿದವನೂ, ಶೌರ್ಯ ಗಳಿಗೆ ನಿಧಿಸ್ವರೂಪನೂ, ಎನಿಸಿ, ಏಕಾಂತರಾಮಯ್ಯನೆಂಬ ಹೆಸರಿನ ಶರಣನು ಇದ್ದನು. ೩. (ಅವನು) ವೀರಶೈವ ಧರ್ಮದ ಸಂರಕ್ಷಕನು ; ಶಿವಸಂಬಂಧವಾದ ಕಥೆಗಳೇ ಕಿವಿಗೆ ಆಭರಣವಾಗಿ ಉಳ್ಳವನು ; ಶಿವನ ಉತ್ಸವಗಳಿಗೆ ಆಶ್ರಯ ಸ್ಥಾನನು ; ಮಾತು ಗಳೆಲ್ಲ ಶಿವಮಂತ್ರವಾಗಿ ಉಳ್ಳವನು ; ಶಿವಭಕ್ತರಲ್ಲಿ ಪ್ರೇಮವನ್ನುಂಟುಮಾಡುವ ವರ್ತನೆಯುಳ್ಳವನು ; ಶಿವಯೋಗದ ಸಂಬಂಧಗೊಳಿಸಲ್ಪಟ್ಟ ಆತ್ಮನನ್ನುಳ್ಳವನು ;

ಶಿವಯೋಗಾಂಗಸಮನ್ವಿತಂ ಶಿವಮತಾಚಾರಾಧ್ವದೀಪಾಂಕುರಂ
ಶಿವಲಿಂಗಾಂಘ್ರಿಸಮರ್ಚಕಂ ಶಿವಗಣಶ್ರೀಪಾದಪೂಜಾಪರಂ ೩

ಶಿವಲೋಲಂ ಶಿವದೂಷಕಪ್ರಕರದರ್ಪಾಂಭೋದಝಂಝಾನಿಲಂ
ಶಿವನಿಷ್ಠಾನಿಧಿ ನೀತಿಶಾಲಿ ಶಿವತತ್ವಜ್ಞಾನರತ್ನಾಕರಂ
ಶಿವಭಕ್ತಿಪ್ರಮದಾಮುಖೈಕಮುಕುರಂ ಶೈವಾಗಮಾಭಿಜ್ಞನೊ
ಪ್ಪುವನೆಂದುಂ ಶಿವದರ್ಶನಾಂಬುಜವನೀಬಾಲಪ್ರಭಾವಲ್ಲಭಂ ೪

ವ॥ ಎಂಬ ನೆಗಳ್ತೆಗಡರ್ಪಾಗಿ ರಂಜಿಸುತ್ತುಮಿರ್ದು—

ಶಿವಲೋಕಕ್ಕೆಯ್ದಿ ಲಿಂಗಾರ್ಚನೆಯ ಕಡೆಯೊಳಲ್ಲಿರ್ದ ವಿಖ್ಯಾತಲೀಲೋ
ತ್ಸವರುದ್ರಶ್ರೇಣಿ ಭಾಸ್ವತ್ಪ್ರಮಥತತಿಗೆ ದಂಡಪ್ರಣಾಮೋತ್ಕರಂ ಗೆ
ಯ್ದು ವಿಳಾಸಂಬೆತ್ತು ನಣ್ಪಿಂ ಪೊಗಳ್ದು ಶಿವರಹಸ್ಯಾರ್ಥದೇಕಾಂತಮಂ ಮಾ
ಡಿ ವಿಶಿಷ್ಟಾನಂದವಾರಾಶಿಯೊಳಿ ಮುಳುಗಿಸುತ್ತದ್ಭುತೋತ್ಸಾಹದಿಂದಂ ೫

ಮಗುಳ್ದೆಯ್ತರುತುಂ ಧಾತ್ರಿಗೆ
ಮಗುಳ್ವಾ ಲೋಕಕ್ಕೆ ಪೋಗುತಂತಂತೆಸಗು
ತ್ತೊಗಃಮಿಗೆಯಿನನುದಿನಂ ತಾಂ
ನೆಗಳ್ದೆಸೆದಿರ್ದಂ ಶಿವೈಕ್ಯಜನಮಂದಾರಂ ೬

ವೀರಶೈವ ಮತಾಚಾರಕ್ಕೆ ದಾರಿ ದೀಪದ ಕುಡಿಯಂತಿರುವವನು ; ಶಿವಲಿಂಗದ ಪಾದವನ್ನು ಪೂಜಿಸುವವನು : ಶಿವಗಣಗಳ ಮಂಗಳಕರವಾದ ಪಾದಗಳನ್ನು ಪೂಜಿಸುವವನು ಎನಿಸಿದ್ದನು. ೪. (ಅವನು) ಶಿವನಲ್ಲಿ ಲೋಲನು (ಆಸಕ್ತನು); ಶಿವನನ್ನು ದೂಷಿಸುವ ಜನರ ಸಮುದಾಯದ ದರ್ಪವೆಂಬ ಮೋಡಕ್ಕೆ ಪ್ರಚಂಡ ವಾಯು ಸ್ವರೂಪನು; ಶಿವನಲ್ಲಿಟ್ಟ ನಿಷ್ಠೆಗೆ ನಿಧಿಸ್ವರೂಪನು ; ನೀತಿವಂತನು ; ಶಿವನ ಸಂಬಂಧವಾದ ತತ್ವವೆಂಬ ಜ್ಞಾನಕ್ಕೆ ಸಮುದ್ರಪ್ರಾಯನು ; ಶಿವಭಕ್ತಿಯೆಂಬ ಸುಂದರಿಯ ಮುಖದ ಪ್ರಮುಖ ಕನ್ನಡಿಯಂತಿರುವವನು ; ಶೈವಾಗಮ ಜ್ಞಾನವುಳ್ಳವನು ; ವೀರಶೈವ ದರ್ಶನವೆಂಬ ಕಮಲವನಕ್ಕೆ ಸೂರ್ಯನೆನಿಸಿ ಸದಾ ಒಪ್ಪುತ್ತಿದ್ದನು. ವ॥ ಹೀಗೆಂಬ ಖ್ಯಾತಿಗೆ ಆಶ್ರಯನೆನಿಸಿ ಶೋಭಿಸುತ್ತ (ಆ ಕಲ್ಯಾಣದಲ್ಲಿ) ಇದ್ದು—೫-೬. ಅವನು ಶಿವಲೋಕಕ್ಕೆ ಹೋಗಿ, (ಅಲ್ಲಿ) ಲಿಂಗಾರ್ಚನೆಯಾದಮೇಲೆ ವಿಖ್ಯಾತವಾದ ಲೀಲೆಯಿಂದ ಕೂಡಿದ ಉತ್ಸಾಹ ಭರಿತ ರುದ್ರಗಣಗಳ ಸಮೂಹಕ್ಕೂ ಪ್ರಕಾಶಮಾನರಾದ ಶಿವಗಣಗಳ ಸಮೂಹಕ್ಕೂ ದಂಡ ಪ್ರಣಾಮವನ್ನು ಅತಿಶಯವಾಗಿ ಮಾಡುವನು. ಸಂಭ್ರಮಗೊಂಡು ಪ್ರೀತಿಯಿಂದ ಅವರನ್ನು ಹೊಗಳುವನು. ಶಿವನ ಸಂಬಂಧದ ರಹಸ್ಯವಾದ ತತ್ವಾರ್ಥವನ್ನು ಸಮಾಲೋಚನೆ ಮಾಡುವನು. ಅವರನ್ನು ಆನಂದವೆಂಬ ಸಮುದ್ರದೊಳಗೆ ಮುಳುಗಿದವರನ್ನಾಗಿ ಮಾಡುವನು. ಅದ್ಭುತವಾದ ಉತ್ಸಾಹಭರಿತನಾಗಿ ಅಲ್ಲಿಂದ ತಿರುಗಿ ಭೂಲೋಕಕ್ಕೆ ಬರುವನು. ಪುನಃ ಸ್ವರ್ಗಕ್ಕೆ ಹೋಗುವನು. ಹೀಗೆ ಶಿವೈಕ್ಯ ಚಿತ್ತರೆನಿಸಿದ ಜನರಿಗೆ ಕಲ್ಪವೃಕ್ಷ ಸಮಾನನಾದ ಆ ಏಕಾಂತ ರಾಮಯ್ಯನು ಪ್ರತಿದಿನವೂ ಆಯಾಕಾರ್ಯಗಳನ್ನು ಉತ್ಸಾಹಭರಿತನಾಗಿ ಮಾಡುತ್ತ ಪ್ರಖ್ಯಾತನೆನಿಸಿ ಶೋಭಿಸು

ಏಕಾಂತವಾಡುತಿಂತು ಪಿ
ನಾಕಿಯ ಗಣನಿವಹದೊಡನೆ ಶಿವನೊಡನೊಲವಿಂ
ದೇಕಾಂತರಾಮವಿಭುವೆ
ಲ್ಲಾಕಾಲದೊಳೀತು ಮೆಱೆವುತಿರ್ದೊಂದುದಿನಂ ೭

ಬಿನದದಿನಾ ನಗರದ ಪಾ
ವನ ಶಿವನಿಳಯಕ್ಕೆ ಬಂದು ಕುಳ್ಳಿರ್ದಾಗ
ಳ್ಜಿನಭಜಕನಾ ಗುಡಿಯನೊ
ಯ್ಯನೆ ಕೆರ್ಪಂ ತಾಳ್ದ ಕಾಲ್ಗಳಿಂದೊಳಪೊಕ್ಕಂ ೮

ವ|| ಪುಗೆ ಕಂಡು ಕಾಯ್ಪಿಂ ತಾಳ್ದ

ಎಲೆ ಶವಣಗುನ್ನಿ ಲಿಂಗದ
ನಿಲಯಮನಡಿಗೆರ್ಪುವೆರಸು ಪುಗಲಕ್ಕುಮೆ ದು
ಷ್ಟಲ ನೆಗಳ್ದೆ ನೀಚಕೃತ್ಯಮ
ನಲಸದೆ ದುರ್ವಾರದುರಿತಭಾಜನನಾದೈ ೯

ಗುಡಿಯಿಂ ಪೊಱಮಡು ತಪ್ಪೆಂ
ದಡಿಗೆರ್ಪಂ ಕಳೆದು ಬಂದು ಲಿಂಗಕ್ಕೀಗ
ಳ್ಪೊಡಮಡು ಪೊಡಮಡದೊಡೆ ನಿ
ನ್ನೊಡಲಂ ಕಡಿದಿಕ್ಕಿದಲ್ಲದಾಂ ಬಿಟ್ಟಪನೇ ೧೦

ವ|| ಎನೆ ಕೇಳ್ದು ಜೈನಂ ಸರೋಷಹಸಿತಾಸ್ಯನಾಗಿ—

ತ್ತಿದ್ದನು. ೭–೮. ಏಕಾಂತರಾಮಯ್ಯ ವಿಭುವು ಎಲ್ಲಾ ಕಾಲದಲ್ಲೂ, ಪರಮೇಶ್ವರನ ಗಣಸಮೂಹದೊಡನೆ, (ಮತ್ತು) ಶಿವನೊಡನೆ ಪ್ರೀತಿಯಿಂದ ಈರೀತಿ ಏಕಾಂತ ರಹಸ್ಯಾರ್ಥಗಳನ್ನು ತಿಳಿಯುವ ಕರ್ತವ್ಯದಲ್ಲಿ ಮೆರೆಯುತ್ತಿದ್ದನು. ಒಂದು ದಿನ ಆ ಕಲ್ಯಾಣನಗರದ ಪವಿತ್ರವಾದ ಶಿವಮಂದಿರಕ್ಕೆ ಬಂದು, ಕುಳಿತುಕೊಂಡಿದ್ದನು. ಅಷ್ಟರಲ್ಲಿ ಒಬ್ಬ ಜೈನನು ಆ ಗುಡಿಯನ್ನು ಕೆರಗಳನ್ನು ಮೆಟ್ಟಿದ ಕಾಲಿನಲ್ಲಿಯೇ ಮೆಲ್ಲಗೆಬಂದು ಹೊಕ್ಕನು. ವ|| ಹೀಗೆ ಅವನು ಹೊಕ್ಕದ್ದನ್ನು ಕಂಡು—೯. 'ಎಲೈ ಸವಣ ನಾಯಿಯೇ, ಕಾಲಲ್ಲಿ ಕೆರವನ್ನು ಮೆಟ್ಟಿಕೊಂಡೇ ಶಿವಾಲಯವನ್ನು ಪ್ರವೇಶಿಸಬಹುದೇ. ದುಷ್ಟನೂ ನೀಚನೂ ಆದ ನೀನು ಹಿಂಜರಿಯದೆ ಹೀನಕೆಲಸವನ್ನು ಮಾಡಿದೆ. ಹೋಗಲಾಡಿಸಲ ಶಕ್ಯವಾದ ಪಾಪಕ್ಕೆ ಭಾಜನನಾದೆ. ೧೦. ಗುಡಿಯಿಂದ ಹೊರಗೆ ಹೊರಟು ಬಾ, ಕೆರವನ್ನು ಕಳಚಿ ಬಂದು ತಪ್ಪಾಯಿತೆಂದು ಹೇಳಿ ಲಿಂಗದ ಮುಂದೆ ಅಡ್ಡಬೀಳು. ಹಾಗೆ ಹೇಳಿ ನಮಸ್ಕರಿಸದಿದ್ದರೆ ನಿನ್ನ ದೇಹವನ್ನು ಕತ್ತರಿಸಿ ಹಾಕಿದಲ್ಲದೆ ಬಿಡುವುದಿಲ್ಲ. ವ|| ಹೀಗೆನ್ನಲು ಆ ಜೈನನು ಕೇಳಿ, ಕೋಪದಿಂದ ಕೂಡಿದ (ಅಟ್ಟಹಾಸದ) ನಗೆಯ

ಇನಿತೊಂದಾಗ್ರಹವೇಕೆ ಶೈವ ನಿನಗೆನ್ನೊಳ್ ಭೂರಿ ಭೂಭಾಗದ
ಲ್ಲಿ ನಿತಾಂತಂ ಶಿವಭಕ್ತಿ ನಿನ್ನ ಶಿರದೊಳ್ಪುಟ್ಟಿತ್ತೆ ನೀನೊರ್ವನಾ
ದೆ ನವೀನಂ ಶಿವದರ್ಶನಸ್ಥಿತಿಗೆ ಪೆಂಪಂ ಮಾಡಲಿಂತಪ್ಪ ಕೊ
ರ್ವನದೇಕೆನ್ನೊಳೆ ತೋಱುವಯ್ ಬಿಡು ಬಿಡೀ ದುರ್ವಾರಗರ್ವೋಕ್ತಿಯಂ ೧೧

ಗುಡಿ ಬಸದಿಯೆ ಜಿನನೆ ಜಗ
ಕ್ಕೊಡೆಯಂ ಬೇಱಿನ್ನು ದೈವಮುಂ ಗುಡಿಯುಂ ಪೇ
ಳ್ಪೊಡವಿಯೊಳೊಳವೆಯಿದೇನಂ
ನುಡಿದಪೆ ಮೇಣುಳ್ಳೊಡಿಂದು ನಿನ್ನಯ ಶಿರಮಂ ೧೨

ಪಱಿದೇಳುಂ ದಿನಮಂ ಕಳೆ
ದುಱೆ ಪತ್ತಿಸಿ ಕೊಂಡೊಡಿಳೆಗೆ ಶಂಭುವೆ ದೈವಂ
ನೆಱೆಗಲಿ ನೀನೇ ಭಕ್ತಂ
ಮಱುಮಾತೇಂ ನಿನ್ನ ಪೆಂಪನಱಿದಪೆನೀಗಳ್ ೧೩

ವ|| ಎಂದಾ ಜೈನನ [1]ದುರ್ವ[1]ಚನಮುನಾ ಜನನುತಚರಿತ್ರಂ ಕೇಳ್ದು—

ಮುಖವುಳ್ಳವನಾಗಿ—೧೧. 'ಎಲೈ ಶೈವನೇ, ನಿನಗೆ ನನ್ನ ಮೇಲೆ ಇಷ್ಟೊಂದು ಆಗ್ರಹವೇಕೆ ? ಈ ಭೂಭಾಗದಲ್ಲಿ ತುಂಬಿರುವ ಸಮಸ್ತ ಶಿವಭಕ್ತಿಯೆಲ್ಲಾ ನಿನ್ನ ತಲೆಯಲ್ಲೇ ಹುಟ್ಟಿತ್ತೇ ? ನೀನೊಬ್ಬ ಹೊಸಮನುಷ್ಯನಾಗಿದ್ದೀಯೆ. ಶಿವನ ದರ್ಶನ ಮಾಡುವಿಕೆಗೆ ಇಷ್ಟೊಂದು ಒತ್ತಾಯಮಾಡುವ ಕೊಬ್ಬನ್ನು ನನ್ನಲ್ಲೇಕೆ ತೋರಿಸುತ್ತೀಯೆ ? ಸಾಕು ಈ ಹೋಗಲಾಡಿಸಲಶಕ್ಯವೆನ್ನುವ ಗರ್ವದ ನುಡಿಗಳನ್ನು ಬಿಟ್ಟುಬಿಡು ! ೧೨–೧೩. 'ಗುಡಿ' ಎಂದರೆ ಬಸದಿಯೇ ! ಜಗತ್ತಿಗೆಲ್ಲ ಒಡೆಯನೆಂದರೆ ಜಿನನೇ ! ಬೇರೆ ಇನ್ನು ಯಾವ ದೇವರೂ, ಗುಡಿಯೂ ಲೋಕದಲ್ಲಿ ಇರುವವೇ ? ಹೇಳು ! ನೀನು ಮಾತನಾಡುವುದು ಇದೇನು ? ಒಂದು ವೇಳೆ (ಹಾಗೆ ಬೇರೆ ಗುಡಿಯಾಗಲಿ ದೈವವಾಗಲಿ) ಇವೆಯೆನ್ನುವುದಾದರೆ, ಈಗ ನಿನ್ನ ಶಿರಸ್ಸನ್ನು ಕತ್ತರಿಸಿಕೊಂಡು ಏಳು ದಿವಸಗಳು ಕಳೆದಮೇಲೆ ಚೆನ್ನಾಗಿ (ಪುನಃ) ಹತ್ತಿಸಿಕೊಂಡರೆ, ಭೂಮಿಗೆಲ್ಲ ಶಿವನೇ ದೇವರು, ಮಹಾಕಲಿಯೆನಿಸಿದ ನೀನೇ ಭಕ್ತ ; ಬೇರೆ ಮಾತೇನು ? ಈಗ ನಿನ್ನ ಘನತೆಯನ್ನು ನಾನು ನೋಡುತ್ತೇನೆ. ವ|| ಹೀಗೆಂದ ಆ ಜೈನನ ದುಷ್ಟವಚನವನ್ನು ಜಗತ್ತಿನಲ್ಲೆಲ್ಲ ಶ್ಲಾಘ್ಯನೆನಿಸಿದ ಚರಿತ್ರೆಯುಳ್ಳ ಆ ಏಕಾಂತರಾಮಯ್ಯನು ಕೇಳಿ—

———

1 ವ(ಚ, ಗ)

ಇಱಿವುದು ತಡಮಲ್ತೀತನ
ನಿಱಿದೊಡೆ ಸತ್ತಪನದೇಕೆ ಮೂದಲಿಸಿದ ಕ
ಟ್ಟೆಱಕದ ಕಜ್ಜಮನೀಗಳೆ
ನೆಱೆ ತೋರ್ಪುದೆ ಪಂತಮಂತೆ ಗೆಯ್ದಪೆನೆನುತುಂ ೧೪

ವ॥ ಎಂದು ವೀರಭಕ್ತಿ ವಿಜೃಂಭಿಸೆ ನಿರ್ಧಾರಣಂಗೆಯ್ದುರ್ಬಿ ನಿಂದು—

ಕಡುಪಿಂ ಪೂಣ್ದಲೆ ಜೈನ ಕೇಳ್ಜಿನನೆ ದೈವಂ ಲೋಕಕೆಂದೇಳ್ಗೆಯಂ
ನುಡಿವುತ್ತಿರ್ದಪೆ ನಾಭಿರಾಜ ಮರುತಾದೇವ್ಯಾತ್ಮಜಂ ಲೋಕಕೆಂ
ತೊಡೆಯಂ ತಾನೆನಿಸಿರ್ದನೆಮ್ಮ ಶಿವಭಕ್ತವ್ರಾತದಿಂ ಬನ್ನಮಂ
ಪಡೆದಂ ತಾಂ ಮಗುಳ್ದಿಂತು ಕೇಳ್ದುಮಱಿದಿರ್ದುಂ ಕೆಮ್ಮನೇನೆಂದಪಯ್ ೧೫

ಶಿರಮರಿದು ಮಗುಳ್ದು ಪಡೆವುದಿ
ದರಿದೇ ಕೇಳ್ಮುನ್ನಮೆಮ್ಮ ಶರಣರ್ಶಿರಮಂ
ಕರಮರಿದು ಮೇಣದಂ ಪಡೆ
ಯರೆ ನಿನಗಾನೊರೆವೆನವರ ಚರಿತಮನೀಗಳ್ ೧೬

ಸಾರತರ ಭಕ್ತಿ ಮಿಗೆ ಜಂ
ಬೂರ ಮಹಾಕಾಳನೆಂಬ ಭಕ್ತಂ ಶಿರಮಂ
ಮಾರಾರಿಗೆ ಕೊಱೆದರ್ಪಿಸಿ
ಪೌರಜನಂ ಪೊಗಳೆ ಮಗುಳೆ ಪಡೆದೊಪ್ಪಿರ್ದಂ ೧೭

೧೪. (ಈತನನ್ನು) ಕತ್ತರಿಸಿಹಾಕುವುದು ತಡವಿಲ್ಲದ್ದು ; ಈತನನ್ನು ಇರಿದು ಹಾಕಿದರೆ ಸತ್ತೇ ಹೋಗುತ್ತಾನೆ, ಅದಾದರೂ ಏಕೆ ? ಇವನು ತಿರಸ್ಕರಿಸಿ ನುಡಿದ ಮಹಾ ಸಾಹಸದ ಕಾರ್ಯವನ್ನು ಈಗಲೇ ಚೆನ್ನಾಗಿ ಮಾಡಿತೋರಿಸುವುದೇ ನನ್ನ ಶಪಥ ; ಹಾಗೆಯೇ ಮಾಡುತ್ತೇನೆ ಎನ್ನುತ್ತ—ವ॥ ಹೀಗೆಂದು ವೀರಭಕ್ತಿಯು ಆಧಿಕ್ಯಗೊಳ್ಳು ವಂತೆ ನಿರ್ಧಾರಮಾಡಿ ಉತ್ಸಾಹದಿಂದ ನಿಂತುಕೊಂಡು—೧೫. ಶೌರ್ಯವಿಶಿಷ್ಟನಾಗಿ ಶಪಥಮಾಡಿ, 'ಎಲೈ ಜೈನನೇ ಕೇಳು : ಲೋಕಕ್ಕೆ ಜಿನನೇದೇವರೆಂದು ಅವನ ಹೆಚ್ಚಳ ವನ್ನು ಮಾತನಾಡುತ್ತಿದ್ದೀಯೆ. ನಾಭಿರಾಜನಿಂದ ಮರುತಾದೇವಿಯ ಗರ್ಭದಲ್ಲಿ ಹುಟ್ಟಿದವನು ಲೋಕಕ್ಕೆ ದೇವನೆಂತಾದಾನು ? (ಮೇಲಾಗಿ) ಅವನು ನಮ್ಮ ಶಿವ ಭಕ್ತರ ಸಮೂಹದಿಂದ ಭಂಗಗೊಂಡವನಾಗಿದ್ದಾನೆ. ಇದನ್ನು ನೀನು ಕೇಳಿ ತಿಳಿದಿದ್ದರೂ ಪುನಃ ಹೀಗೆ ವ್ಯರ್ಥವಾಗಿ (ಲೋಕಕ್ಕೆ ಆ ಜಿನನೇ ದೈವನೆಂದು) ಮಾತನಾಡು ತ್ತಿದ್ದೀಯೆ. ೧೬. ಶಿರವನ್ನು ಕತ್ತರಿಸಿಕೊಂಡು ಪುನಃ ಪಡೆಯುವುದೇನು ಅಸಾಧ್ಯ ಕಾರ್ಯವೇ ? ಕೇಳು : ಈ ಪೂರ್ವದಲ್ಲಿ ನಮ್ಮ (ಅನೇಕ) ಶರಣರು ಶಿರಸ್ಸನ್ನು ಚೆನ್ನಾಗಿ ಕತ್ತರಿಸಿಕೊಂಡು, ಪುನಃ ಅದನ್ನು ಪಡೆದಿಲ್ಲವೇ ? ಅವರ ಚರಿತ್ರೆಗಳನ್ನು ನಿನಗೀಗ ಹೇಳುತ್ತೇನೆ : ೧೭. ಸಾರತರವಾದ ಮಿಗಿಲಾದ ಶಿವಭಕ್ತಿಯಿಂದ ಕೂಡಿದ್ದ ಜಂಬೂರು ಮಹಾಕಾಳಯ್ಯನೆಂಬ ಭಕ್ತನು, ಪರಮೇಶ್ವರನಿಗೆ ತನ್ನ ಶಿರಸ್ಸನ್ನು ಕತ್ತರಿಸಿ ಅರ್ಪಣಮಾಡಿ, ಪಟ್ಟಣದ ಜನರೆಲ್ಲ ಪೊಗಳುತ್ತಿರುವಂತೆ ಪುನಃ ಶಿರಸ್ಸನ್ನು ಪಡೆದು

ಶರಣಂ ಗೋವಿಂದಭಟ್ಟಾರಕನನುಪಮನಾ ವಾರ್ತೆಗೇಳ್ದಲ್ಲಿಗೇಳ್ತಂ
ದಿರದೀಶಂಗಿತ್ತ ನಿರ್ಮಾಲ್ಯಶಿರಮನಿವನಿಂತಾಂತುದೇ ತಪ್ಪೆನುತ್ತೀ
ಶ್ವರಿಯಾಣ್ಮಂಗರ್ಪಿಸುತ್ತುಂ ಕೊಱೆದು ನಿಜಶಿರೋಂಭೋಜಮಂ ಬೇಱದೊಂದಂ
ಶಿರಮಂ ಮೂಱುಂ ದಿನಂಗಳ್ಕಳಿಯೆ ಪಡೆದನಾ ಲಿಂಗದಿಂ ಸಾಹಸಾಂಕಂ ೧೮

ವ॥ ಅಂತವಂ ಪಡೆಯೆ ಕಂಡಲ್ಲಿ ಮೊರಟದ ಬಂಕಿದೇವನೆಂಬ ಚಲದಂಕಭಕ್ತಂ ಪರಿಹಾಸಂಗೆಯ್ದು ಸಂಭ್ರಮಿಸಿ ನಿಂದು—

ಅನಯದಿನಿವಂಗೆ ಮೂಱುಂ
ದಿನಂಬರಂ ಶಿರಮನೀಯದಿರ್ಪಂದಭವಂ
ಘನದೀರ್ಘನಿದ್ರೆಯೊಳ್ಸಂ
ದನೊ ಮೆಯ್ಮಂ ಮಱೆದು ನಿದ್ರೆಗೆಯ್ದನೊ ತಿಳಿಯೆಂ ೧೯

ವ॥ ಎಂದೇಳಿದಂಗೆಯ್ದು ನಕ್ಕು ಪನ್ನತಿಕೆಯಿಂ ತನ್ನ ಕರತಳ ಕರಾಳ ಖಡ್ಗಮಂ ಜಡಿದಡಸಿ ಪಿಡಿದು ಸಾರತರ ವೀರಭಕ್ತಿಧುರಂಧರಂ ನಿಜಶಿರಮಂ ಗರಿಲನರಿದು ಮಗುಳ್ದೊಗೆವ ಶಿರಮನಂತೆ ಕೊಱೆದು—

ಕುಂದದ ನಿಜಭಕ್ತಿಯ ಬಲ
ದಿಂದಂ ತಲೆ ಮತ್ತೆ ಮತ್ತೆ ಮೊಳೆವುತ್ತಿರೆ ಶೌ

ಶೋಭಿಸಿದನು. ೧೮. ಅನುಪಮ ಶರಣನೆಂದೆನಿಸಿದ ಗೋವಿಂದ ಭಟ್ಟಾರಕನು ಈ ವಾರ್ತೆಯನ್ನು ಕೇಳಿ ಅಲ್ಲಿಗೆಬಂದು ಈಶ್ವರನಿಗೆ ಅರ್ಪಿಸಿದ ನಿರ್ಮಾಲ್ಯ ಶಿರಸ್ಸನ್ನು ಹೀಗೆ ಪುನಃ ಪಡೆದದ್ದೇ ತಪ್ಪು ಎನ್ನುತ್ತ, ತನ್ನ ಶಿರಸ್ಸೆಂಬ ಕಮಲವನ್ನು ಕೊರೆದು, ಪಾರ್ವತೀಪತಿಗೆ ಸಮರ್ಪಣೆ ಮಾಡಿ, ಮೂರು ದಿನಗಳನಂತರ ಆ ಸಾಹಸಾಂಕನು ಲಿಂಗ ಕೃಪೆಯಿಂದ ಬೇರೊಂದು ಶಿರಸ್ಸನ್ನು ಪಡೆದನು. ವ॥ ಈ ರೀತಿ ಅವನು ಪಡೆದುದನ್ನು ಕಂಡ ಮೊರಟದ ಬಂಕಿದೇವನೆಂಬ ಹೆಸರಿನ ಚಲವೇ ಗುರುತಾಗುಳ್ಳ ಭಕ್ತನು ಅಪಹಾಸ್ಯ ಮಾಡಿ, ಸಂಭ್ರಮಗೊಂಡು ನಿಂತು—**ಮೊರಟದ ಬಂಕಿದೇವನಕಥೆ (ಅಥವಾಮೊರಟದ ಮಲ್ಲಿಕಾರ್ಜುನನ ಕಥೆ)** ೧೯. ನೀತಿದಪ್ಪಿ (ಕ್ರಮದಪ್ಪಿ) ಈ ಗೋವಿಂದ ಭಟ್ಟಾರಕನಿಗೆ ಮೂರುದಿನಗಳವರೆಗೆ ಶಿರಸ್ಸನ್ನು ಕೊಡದೆ ಇರುವಾಗ ಪರಮೇಶ್ವರನು ಚಿರನಿದ್ರೆಯಲ್ಲಿದ್ದನೋ(ಅಥವಾ) ಎಚ್ಚರದಪ್ಪಿ ನಿದ್ರೆಮಾಡುತ್ತಿದ್ದನೋ ತಿಳಿಯೆನು. ವ॥ ಹೀಗೆಂದು ತಿರಸ್ಕಾರಮಾಡಿ ನಗುತ್ತ ಶೌರ್ಯದಿಂದ ತನ್ನ ಕಯ್ಯಲ್ಲಿರುವ ಭಯಂಕರ ಖಡ್ಗವನ್ನು ಝಳಪಿಸುತ್ತ, ಭದ್ರವಾಗಿ ಹಿಡಿದುಕೊಂಡು ಶ್ರೇಷ್ಠತರ ವೀರಶೈವ ಭಕ್ತಿಧುರಂಧರನಾದ ಮೊರಟದ ಬಂಕಯ್ಯನು ತನ್ನ ಶಿರಸ್ಸನ್ನು ಗರಿಲ್ಲೆಂದು ಕತ್ತರಿಸಿದನು. ಪುನಃ ಜಿಗಿಯುತ್ತಿರುವ ಶಿರಸ್ಸನ್ನು ಅದೇ ರೀತಿಯಲ್ಲೇ ಕತ್ತರಿಸುತ್ತ (ಇರಲು) ೨೦–೨೫. ಪವಿತ್ರವಾದ ಅವನ ಶ್ರೇಷ್ಠಭಕ್ತಿಯ ಪ್ರಭಾವದಿಂದ ಆ ತಲೆಯು ಪುನಃ ಪುನಃ ಜಿಗಿಯುತ್ತಲೇ

ರ್ಯಿಂದಳೆದು ಕೊಱೆಕೊಱೆದು ತಱಿ
ಸಂದವನಭಂಗೆ ಭಕ್ತನರ್ಪಿಸುವಾ[1]ಗಳ್ ೨೦

ನಲಿವ ತಲೆ ನಗುವ ತಲೆ ಕ
ಣ್ಣಲರ್ಚಿ ನಿರೀಕ್ಷಿಸುವ ತಲೆ ಕಡಂಗುವ ತಲೆಯಾ
ರ್ದುಲಿವ ತಲೆ ಮಲೆವ ತಲೆ ಕೆಲ
ಕೊಲೆದುರ್ಬುವ ತಲೆ ಪೊದಳ್ದು ಪಾಡುವ ತಲೆಗಳ್ ೨೧

ಬೆಱೆವ ತಲೆ ಮುರಿದು ನೋಡುವ
ಮುಱುಕದ ತಲೆ ಪುರ್ಬನೇಱಿಸುವ ತಲೆ ಪಲ್ಲಂ
ಕಿಱುವ ತಲೆ ನಿಮಿರ್ವ ತಲೆ ಬಾ
ಯ್ದೆಱೆವೊಳ್ದಲೆ ಜಯ ಜಯ ಪ್ರಣಾದದ ತಲೆಗಳ್ ೨೨

ತೂಗುವ ತಲೆ ಕುಕಿಲಿಱುವುತೆ
ಕೂಗುವ ತಲೆ ರಸನೆದೆಱೆವ ತಲೆ ಶಿವ ಶರಣೆಂ
ದಾಗುಳಿಪ ತಲೆ ಪೊದಳ್ದನು
ರಾಗಿಪ ತಲೆ ರಂಜಿಸಿರ್ಪ ತಲೆ ಪೊಸತಲೆಗಳ್ ೨೩

ಕರಮೆಸೆಯೆ ಶತಸಹಸ್ರಂ
ಶಿರಮವು ಶಿವಲಿಂಗಕರ್ಪಿತಂಗೆಯ್ವುತ್ತಂ
ತಿರೆ ಲಿಂಗದ ಗರ್ಭಗೃಹಾಂ
ತರಮಂ ನೆಱೆ ತೀವಿ ಲಿಂಗದಂಗದೊಳೆತ್ತಂ ೨೪

ಇರಲು ಆ ಭಕ್ತನು ಕಾರ್ಯ ವಿಶಿಷ್ಟನಾಗಿ (ಹುಟ್ಟುತ್ತಿರುವ ತಲೆಗಳನ್ನೆಲ್ಲ) ಕೊರೆಕೊರೆದು ನಿರ್ಧಾರಮನಸ್ಸಿಂದ ಶಿವನಿಗೆ ಅರ್ಪಿಸುತ್ತಿರುವಾಗ ನಲಿದಾಡುವ ತಲೆ, ನಗುತ್ತಿರುವ ತಲೆ, ಕಣ್ಣನ್ನರಳಿಸಿ ನೋಡುವ ತಲೆ, ಉತ್ಸಾಹಗೊಳ್ಳುವ ತಲೆ, ಗಟ್ಟಿಯಾಗಿ ಚೀರುವ ತಲೆ, ಮಲೆತು ನಿಲ್ಲುವ ತಲೆ, ಅಕ್ಕಪಕ್ಕಕ್ಕೆ ಒಲೆದಾಡುತ್ತ ಉಬ್ಬುತ್ತಿರುವ ತಲೆ, ಸಂತೋಷದಿಂದ ಹಾಡುವ ತಲೆ, ಬಿಗಿದುಕೊಳ್ಳುವ (ಸೆಡೆದುಕೊಳ್ಳುವ) ತಲೆ, ವಕ್ರವಾಗಿ ದೃಷ್ಟಿಯಿಟ್ಟು ನೋಡುವ ಮುರುಕದ ತಲೆ, ಹುಬ್ಬವನ್ನೇರಿಸುವ ತಲೆ, ಹಲ್ಲು ಕಿರಿಯುವ ತಲೆ, ನಿಗುರಿ ನಿಲ್ಲುವ ತಲೆ, ಬಾಯನ್ನು ತೆರೆಯುವ ಒಳ್ಳೆಯ ತಲೆ, 'ಜಯ ಜಯ' ಎಂದು ವಿಶೇಷ ಧ್ವನಿ ಮಾಡುವ ತಲೆ, ತೂಗಾಡುವ ತಲೆ, ಕೇಕೆ ಹಾಕುತ್ತ ತೂಗಾಡುವ ತಲೆ, ನಾಲಗೆ ಹೀರಿದ ತಲೆ, 'ಶಿವನೇ ಶರಣು' ಎಂದು ಆಕಳಿಸುವ ತಲೆ, ವ್ಯಾಪ್ತವಾಗಿ ಅನುರಾಗ ತೋರಿಸುವ ತಲೆ, ಹೀಗೆ ರಂಜಿಸುತ್ತಿದ್ದ ಹೊಸ ಹೊಸವಾದ ಲಕ್ಷ ಸಂಖ್ಯೆಯ ತಲೆಗಳು ಶಿವಲಿಂಗಕ್ಕೆ ಅರ್ಪಿಸಲ್ಪಟ್ಟವುಗಳಾಗಿರಲು ಅವುಗಳೆಲ್ಲ ಶಿವಾಲಯದ ಗರ್ಭ ಗೃಹದ ಒಳಗಡೆಯಲ್ಲಿ ಪೂರ್ಣವಾಗಿ ತುಂಬಿಕೊಂಡು ಲಿಂಗದ ಅಂಗಕ್ಕೆ ಮುತ್ತಿ

1 ತಾ (ಗ)

ಪಸರಂ ಬೆತ್ತಿರೆ ಕಂಡು ಬಿಂಕ ಚಲದಂಕಾ ನಿನ್ನ ಸದ್ಭಕ್ತಿ ಸಾ
ಹಸದುರ್ಬಂ ನಡೆ ನೋಳ್ಪೊಡೆನ್ನಳವೆ ಹಾ ಹಾ ನಿಲ್ ಶಿರಃಶ್ರೇಣಿ ಸಂ
ದೆಸಕಂಬೆತ್ತು ಮುಸುಂಕೆ ಸೈರಿಪೆನದೆಂತೀ ಭಾರಮಂ ಪೊಣ್ಮಿದು
ಬ್ಬಸಕಃನಾರ್ಪೆನೆ ಸೋಲ್ತೆನಾಂ ನಿನಗೆ ಗೆಲ್ಲಂ ನಿನ್ನದೆಲ್ಲಂದದಿಂ ೧೫

ಬಿಡು ಬಿಡು ಕೊರಲಂ ಕೊಱೆವೀ
ಕಡುಗಜ್ಜಮನಯ್ಯ ಸಾಲ್ಗುಮೆಂದಾಕ್ಷಣದೊ
ಳ್ಮೃಡನವನ ಕೆಯ್ಯನೊಯ್ಯನೆ
ಪಿಡಿದು ನಿವಾರಿಸುತೆ ಮುದಮನೊದವಿಸುತಾಗಳ್ ೧೬

ಮೊರಟದ ಮಲ್ಲಿಕಾರ್ಜುನನಿಳಾತಳಮಚ್ಚರಿವಟ್ಟು ಕೀರ್ತಿಸು
ತ್ತಿರೆ ನಿಜಮಸ್ತಕವ್ರಜದ ಪೂಜೆಯುಮಾಳ್ದಿರೆ ಬಂಕನಂಕಮಂ
ಹರನೊಡನೊಲ್ದು ಗೆಲ್ದನವನಂದದ ಭಕ್ತರನೇಕರುಂಟು ಕೇ
ಳ್ವರೆಯೊಳದಿರ್ಕೆ ನಿನ್ನಳವೆ ಕೇಳ್ವೊಡೆ ಮತ್ತಮನೂನಶೌರ್ಯದಿಂ ೧೭

ಸುತ್ತು ಮುತ್ತೆಲ್ಲ ಪ್ರಸಾರಗೊಂಡಿದ್ದವು. ಇದನ್ನು ಕಂಡು ಆ ಗೋವಿಂದ ಭಟ್ಟಾರಕ ಶರಣನು 'ಹೇ, ಬಿಂಕದ ಶಪಥಗಾರನಾದ ಬಂಕಿ ದೇವನೇ, ನಿನ್ನ ಸದ್ಭಕ್ತಿಯ ಸಾಹಸದ ಆಧಿಕ್ಯವನ್ನು ನೋಡುವುದು ನನ್ನ ಸಾಮರ್ಥ್ಯಕ್ಕೆ ಮಿಕ್ಕಿದ್ದು. ಹಾ! ಹಾ! ನಿಲ್ಲು ನಿಲ್ಲು! (ಈ ನಿನ್ನ) ಶಿರಸ್ಸಿನ ಸಾಲುಗಳು ಒತ್ತೊತ್ತಾಗಿ (ಶಿವಲಿಂಗದ ಸುತ್ತೆಲ್ಲ) ಮುತ್ತಿ ಕೊಂಡಿರುವುವು. ಇದನ್ನು ನಾನೆಂತು ಸೈರಿಸಲಿ? ಈ ರೀತಿಯ ಘನತೆಯನ್ನು ಹೊರ ಹೊಮ್ಮಿಸಿದ ನಿನ್ನ ಸಾಮರ್ಥ್ಯ ತೋರಿಸಲು ನಾನು ಸಮರ್ಥನೇ? ನಿನಗೆ ನಾನು ಸೋತೆನು, ಎಲ್ಲಾ ರೀತಿಯಲ್ಲೂ ಗೆಲುವು ನಿನ್ನದೇ ಆಯಿತು. ೧೬. 'ಅಯ್ಯ ಸಾಕು; ಕೊರಳನ್ನು ಕತ್ತರಿಸುವ ನಿನ್ನ ಈ ಸಾಹಸದ ಉದ್ಯೋಗವನ್ನು ಬಿಟ್ಟು ಬಿಡು', ಎಂದಾ ಕ್ಷಣದಲ್ಲಿಯೇ ಶಿವನು ಅವನ ಕಯ್ಯನ್ನು ಮೆಲ್ಲನೆ ಹಿಡಿದು (ಶಿರವನ್ನು ಕತ್ತರಿಸುವ ಅವನ ಕಾರ್ಯವನ್ನು) ನಿವಾರಣೆ ಮಾಡಿ, ಆಗ ಸಂತೋಷವುಂಟಾಗುವಂತೆ ಮಾಡಿದನು. ೧೭. (ಇಂಥ) ಮೊರಟದ ಮಲ್ಲಿಕಾರ್ಜುನನ್ನು (ಅಥವಾ ಮೊರಟದ ಬಂಕಿ ದೇವನನ್ನು) ಲೋಕವೆಲ್ಲ ಆಶ್ಚರ್ಯದಿಂದ ಕೂಡಿ ಸ್ತೋತ್ರ ಮಾಡುತ್ತಿತ್ತು. ಅವನ ಆ ಎಲ್ಲ ಶಿರಸ್ಸುಗಳೆ ಪೂಜೆಯನ್ನು ಮಾಡುತ್ತಿದ್ದವು. ಬಂಕಯ್ಯನು ಹೀಗೆ ತನ್ನ ಶಪಥವನ್ನು ಹರನೊಡನೆ ಮಾಡಿ ಗೆದ್ದನು. ಇವನಂತಹ ಭಕ್ತರು ಲೋಕದಲ್ಲಿ ಅನೇಕರುಂಟು. ಕೇಳು ಕೇಳುವುದಕ್ಕೆ ನಿನಗೆ ಸಾಮರ್ಥ್ಯವುಂಟೆ? (ಹೀಗೆಂದು) ಪುನಃ ಅತ್ಯಧಿಕ ಶೌರ್ಯದಿಂದ (ಆ ಏಕಾಂತ ರಾಮಯ್ಯನು ಜೈನನಿಗೆ ಹೇಳತೊಡಗಿದನು) **ತಿರುವಾಕದೀಶ್ವರನ ಕಥೆ**†

† ತಮಿಳು ದೇಶದ ಪ್ರಸಿದ್ಧ ಶೈವಸಮಯಾಚಾರ್ಯರಲ್ಲಿ ಒಬ್ಬರಾಗಿ ಪ್ರಸಿದ್ಧರಾದ 'ವಾಗೀಶ' ಎಂಬುವರೇ ಇವರು. ಇವರಿಗೆ ಶೈವೋಪದೇಶವಾದ ಮೇಲೆ 'ವಾಗೀಶ' ಎಂಬ ಹೆಸರು ಬಂದಿರಬಹುದು.

ನಿನ್ನ ತಥಾಗತಮತಮಂ
ಬನ್ನಂಬಡಿಸಿದ ಮದೀಯ ಶರಣರ ಪೆಂಪಂ
ಚನ್ನಲರೆ ಪೇಳ್ದಪೆಂ ಬುಧ
ಸನ್ನುತ ತಿರುವಾಕರೀಶನೆಂಬವನೊರ್ವಂ ೨೮

ತಿರುವಾರೂರೊಳಗೊಪ್ಪುವಂ ಜಿನಮತಾಚಾರ್ಯಂ ಕಳಾವೃಂದ ಬಂ
ಧುರನಿರ್ಪನ್ನಮವಂಗೆ ಶೂಲರುಜೆಯಾದತ್ಯಾತನಾರೋಗದಿಂ
ಮರಣಾವಸ್ಥೆಯನಾಳ್ದು ಬಿಳ್ದು ಧರೆಯೊಳ್ ಬೇಳಪ್ಪಿನಂ ತತ್ಸಹೋ
ದರಿ ಕಂಡೆಂದಳವಂಗೆ ಶಂಕರಪದಾಂಭೋಜಾತಮಂ ಭಕ್ತಿಯಿಂ ೨೯

ಮಱೆವುಗೆ ನಿನ್ನೀ ರುಜೆಯುಂ
ಪಱಿಗುಂ ಸುಖಮಕ್ಕುಮಿದನೆ ನಂಬುಳಿದೀ ನಿ
ನ್ನೈಱಕದ ಮಂತ್ರದ ತಂತ್ರದ
ಬಱಿ ಬೆಜ್ಜದ ಕಜ್ಜದಿಂದೆ ಫಲಮಿನಿತಿಲ್ಲಂ ೩೦

ವ|| ಎಂದ ನಿಜಾಗ್ರಜೆಯ ಹಿತೋಪದೇಶಮನವಂ ಮನದೆಗೊಂಡಂತೆ ಗೆಯ್ವೆಂ ತೊದಳಿಲ್ಲೆನ್ನನೇಪರಿಯಿಂನಾದೊಡಂ ಪೊರೆವುದೆಂದು ದೈನ್ಯೋಕ್ತಿಯಿಂ ಮೆಯ್ಯಿಕ್ಕಿ ಮಣಿಯೆ—

ಹರಶರಣರ್ಕಳಂ ನೆನೆದು ನಿಷ್ಠೆ ಪೊದಳ್ದಿರೆ ಮೂಲಮಂತ್ರದಿಂ
ಪರಮವಿಭೂತಿಯಂ ಪಿಡಿದು ಮಂತ್ರಿಸಿ ತನ್ನಿಟಲಪ್ರದೇಶದೊ

(ವಾಗೀಶರು) ೨೮–೩೦. (ಎಲೈ ಜೈನನೇ) ನಿನ್ನ ಜೈನ ಮತವನ್ನು ಭಂಗಗೊಳಿಸಿದ ನನ್ನ ಶರಣರ ಹಿರಿಮೆಯನ್ನು ಮನೋಹರವಾಗಿ ಹೇಳುತ್ತೇನೆ (ಕೇಳು). ಜ್ಞಾನಿಗಳಿಂದ ಶ್ಲಾಘ್ಯನೆನಿಸಿದ ತಿರುವಾಕರೀಶ್ವರನೆನ್ನುವ ಶರಣನೊಬ್ಬನು ತಿರುವಾರೂರೆಂಬಲ್ಲಿ ಶೋಭಿಸುತ್ತಿದ್ದನು. ಜಿನಮತದ ಆಚಾರ್ಯನೂ, ವಿದ್ಯಾ ಸಮೂಹದಿಂದ ತುಂಬಿದವನೂ ಎನಿಸಿದ ಅವನಿಗೆ ಹೊಟ್ಟೆನೋವಿನ ರೋಗವು ಪ್ರಾಪ್ತವಾಗಿತ್ತು. ಆತನು ಆ ರೋಗದಿಂದ ಮರಣಾವಸ್ಥೆಯನ್ನು ಹೊಂದಿ ಭೂಮಿಯ ಮೇಲೆ ಬಿದ್ದು ಶಕ್ತಿಗುಂದಿದವನಾಗಿರಲು ಅವನ ಸಹೋದರಿಯು ಕಂಡು ಅವನಿಗೆ ಹೀಗೆ ಹೇಳಿದಳು: ಶಂಕರನ ಪಾದಕಮಲಗಳನ್ನು ಭಕ್ತಿಯಿಂದ ಮರೆ ಹೊಕ್ಕರೆ, ಅವನು ನಿನ್ನ ಈ ರೋಗವನ್ನು ಪರಿಹರಿಸುವನು. (ಆಗ) ಸುಖವುಂಟಾಗುವುದು; ಇದನ್ನು ನಂಬು, ಉಳಿದ ಈ ನಿನ್ನ ಪ್ರಿಯವಾದ ಮಂತ್ರ, ತಂತ್ರ, ವ್ಯರ್ಥವಾದ ವೈದ್ಯ ಮೊದಲಾದ ಕಾರ್ಯದಿಂದ ಸ್ವಲ್ಪವೂ ಫಲವಿಲ್ಲ. ವ|| ಹೀಗೆಂದ ತನ್ನ ಸಹೋದರಿಯ ಹಿತೋಪದೇಶವನ್ನು ಅವನು ಮನಸ್ಸಿಗೆ ತಂದುಕೊಂಡು ಹಾಗೆಯೇ ಮಾಡುತ್ತೇನೆ, ತಪ್ಪುವುದಿಲ್ಲ; ನನ್ನನ್ನು ಯಾವ ರೀತಿಯಿಂದಲಾದರೂ, ರಕ್ಷಿಸಬೇಕು, ಎಂಬ ದೀನಭಾವದ ಮಾತುಗಳಿಂದ ಕೂಡಿ, ಸಾಷ್ಟಾಂಗಪೂರ್ವಕವಾಗಿ ನಮಸ್ಕರಿಸಿ ತಲೆ ತಗ್ಗಿಸಿ ನಿಲ್ಲಲು ೩೧. ಆಗ ಅವಳು ಹರಶರಣರುಗಳನ್ನು ನೆನೆದು ನಿಷ್ಠಾಯುತಳಾಗಿ 'ನಮಃ ಶಿವಾಯ' ಎಂಬ ಮೂಲ ಮಂತ್ರದಿಂದ ಶ್ರೇಷ್ಠ ವಿಭೂತಿ

ಳ್ಧರಿಸಿನಿರೀಕ್ಷಿಸೆಯುವ್ವುದುವುವಳ್ಳವಿಲಾದುದು ಶೂಲೆಯಾಗಳ
ಚ್ಚರಿವಡುತಕ್ಕ ರಕ್ಷಿಸಿದೆಯೆಂದೆಜಗಿರ್ದನವಂ ತದಂಘ್ರಿಯೊಳ್ ೩೧

ವ॥ ಅಂತೆಜಗಿ ತನ್ನಿರೂಪದಿನಭವನಂ ಶರಣ್ಬೊಕ್ಕು ಶಿವಾಜ್ಞೆಯಂ ಪೊತ್ತಾ ಪೊಳಲ ಪೊಲಗೇರಿಯೊಳೊಂದು ಜೀರ್ಣಕುಟಿಯೊಳ್ನೆಲಸಿರ್ದ ಸದ್ಗುರುವಂ ಕಂಡು ದಂಡ ಪ್ರಣಾಮಂಗೆಯ್ದು ವಿಧಿವದುಪಸನ್ನನಾಗಿ—

ಗುರುವರ ಪೆಳರ್ದೀ ಭವಭರ
ದುರವಣೆಗಾಂ ನಿಮ್ಮ ಚರಣಮಂ ಮಱೆವೊಕ್ಕೆಂ
ಹರದೀಕ್ಷೆಯಿತ್ತು ಪೊರೆದು
ದ್ಧರಿಸೆನ್ನನೆನುತ್ತೆ ಬಿನ್ನಪಂ ಗೆಯ್ಯಲೊಡಂ ೩೨

ಕರುಣಾಲೋಕನಮಾತ್ರದಿಂ ಮೊದಲ ದುಷ್ಕರ್ಮಂಗಳಂ ತೊಳ್ದು ಕು
ಳ್ಳಿರಿಸುತ್ತುಂ ಕಳಶೋದಕಸ್ನಪನದಿಂ ಶುದ್ಧಾತ್ಮನಂ ಮಾಡಿ ತ
ಚ್ಛಿರದೊಳ್ಶ್ರೀಶಿವಹಸ್ತಮಂ ಮಡಗಿ ಭಸ್ಮಾಲೇಪನಂಗೆಯ್ದು ಭಾ
ಸುರ ಭಾಳಸ್ಥಳದಲ್ಲಿ ದುರ್ಲಿಪಿನಿರಾಸಂಗೆಯ್ದು ತದ್ದೇಶಿಕಂ ೩೩

ಕರುಣಿಸಿ ಲಿಂಗಮಂ ಕರದೊಳಾತನ ಕರ್ಣದೊಳೀಶಮಂತ್ರಮಂ
ನಿರವಿಸಿ ಚಿದ್ಘನಪ್ರಭೆಯನಾತ್ಮನೊಳೊಂದಿಸಿ ಮಾಯೆಯಂ ಸಮು

ಯನ್ನು ಕೈಯಲ್ಲಿ ಹಿಡಿದು, ಆತನ ಹಣೆಯಲ್ಲಿ ಧರಿಸಿ, ನೋಡುತ್ತಿರಲು (ಆತನ) ಉದರ ಶೂಲೆಯು ಇಲ್ಲದಾಯಿತು. ಅವನು ಆಶ್ಚರ್ಯಪಡುತ್ತ 'ಅಕ್ಕ, (ನನ್ನನ್ನು) ರಕ್ಷಿಸಿದೆ' ಎಂದು ಅವಳ ಪಾದಗಳಲ್ಲಿ ನಮಸ್ಕರಿಸಿದನು. ವ॥ ಆ ರೀತಿ ನಮಸ್ಕಾರ ಮಾಡಿ, ಅವಳ ಆದೇಶದಂತೆ ಪರಮೇಶ್ವರನನ್ನು ಶರಣು ಹೊಕ್ಕು, ಶಿವನ ಆಜ್ಞೆಯನ್ನು ಧರಿಸಿ, ಆ ಪಟ್ಟಣದ ಹೊಲೆಯರ ಕೇರಿಯಲ್ಲಿ ಒಂದು ಹರಕು ಗುಡಿಸಲಿನಲ್ಲಿ ವಾಸ ಮಾಡಿಕೊಂಡಿದ್ದ ಸದ್ಗುರುವನ್ನು ಕಂಡು, ದೀರ್ಘದಂಡ ಪ್ರಣಾಮ ಮಾಡಿ, ವಿಧಿವತ್ತಾಗಿ ಅವನ ಶಿಷ್ಯತ್ವವನ್ನು ಪಡೆದು, ೩೨–೩೩. ಗುರುಶ್ರೇಷ್ಠನೇ, ಜನನ ಮರಣಾತ್ಮಕವಾದ ಈ ಸಂಸಾರ ಭಾರದ ತೀವ್ರತೆಗೆ ಹೆದರಿದ ನಾನು ನಿಮ್ಮ ಪಾದದ ಮರೆ ಹೊಕ್ಕಿದ್ದೇನೆ. ನನಗೆ ಶಿವದೀಕ್ಷೆಯಿತ್ತು ಸಂರಕ್ಷಿಸಿ ಉದ್ಧಾರ ಮಾಡಬೇಕೆಂದು ವಿಜ್ಞಾಪಿಸಿಕೊಳ್ಳಲಾಗಿ ಆ ದೇಶಿಕವರೇಣ್ಯನು ಕಾರುಣ್ಯ ಪೂರ್ಣವಾದ ನೋಡುವಿಕೆಯಿಂದಲೇ ಅವನ ಪೂರ್ವದ ದುಷ್ಕರ್ಮಗಳನ್ನೆಲ್ಲ ತೊಡೆದುಹಾಕಿದನು. ಕುಳ್ಳಿರಿಸಿಕೊಂಡು (ಅವನನ್ನು) ತನ್ನ ಕಮಂಡಲೋದಕದ ಸ್ನಾನದಿಂದ ಪರಿಶುದ್ಧಾತ್ಮನನ್ನಾಗಿ ಮಾಡಿ, ಶಿರದಲ್ಲಿ ಮಂಗಳಕರವಾದ ಹಸ್ತವನ್ನಿಟ್ಟು. ಹಣೆಯ ಮೇಲೆ ಭಸ್ಮವನ್ನು ಧರಿಸಿ, ಹಣೆಯಲ್ಲಿನ (ಬ್ರಹ್ಮನು ಬರೆದ) ಕೆಟ್ಟಲಿಪಿಯನ್ನು ಹೋಗಲಾಡಿಸಿದನು. ೩೪. ಆತನ ಕೈಗೆ ಲಿಂಗವನ್ನು ಕರುಣಿಸಿ ಕೊಟ್ಟು, ಕಿವಿಯಲ್ಲಿ ಶಿವಮಂತ್ರವನ್ನು ಉಸುರಿ ಆತ್ಮದಲ್ಲಿ ಪ್ರಕಾಶಮಯ ಜ್ಞಾನವನ್ನುಂಟು ಮಾಡಿ. ಮಾಯೆಯನ್ನು (ಅಜ್ಞಾನವನ್ನು) ಓಡಿಸಿ, ಇಷ್ಟಲಿಂಗದಿಂದ ಕೂಡಿದ ಅವನ ಅಂಗವನ್ನು ದೃಢವಾಗಿ

ತ್ತರಿಸಿ ನಿಜಾಂಗಲಿಂಗ ದೃಢಯೋಗಮನಾಗಿಸಿ ತತ್ಸ್ವರೂಪಮಂ
ಪರಿವಿಡಿಗೆಯ್ದು ಬೋಧಿಸಿ ನಿವಿರ್ಚಿ ನಿರಾಕುಳಚಿತ್ತವೃತ್ತಿಯಂ ೩೪

ವಿತತ ಶಿವಜ್ಞಾನ ಸಮು
ನ್ನತ ಸತ್ಕ್ರಿಯೆಯುಂ ನೆಗಳ್ಚಿ ಗುರುಚರಲಿಂಗಾ
ರ್ಪಿತ ಸುಪ್ರಸಾದಸುಖಪಂ
ಣತಿಯುಂ ಪದೆದಿತ್ತು ತಿಳುಪಿ ಚಿದ್ಘನದಿರವಂ ೩೫

ಜೀವನ್ಮುಕ್ತಿಗೆ ಮೂಲಕಾರಣಮೆನಿಪ್ಪಸ್ಪಂದಪೂರ್ಣ ಪ್ರಭಾ
ಭಾವೋದ್ಯತ್ಪ್ರಣವಾಂಗಲಿಂಗಮನೆ ಸಾಕ್ಷಾತ್ಕಾರಮಂ ಮಾಡಿ ವಿ
ದ್ಯಾವಾಸಂ ಗುರುದೀಕ್ಷೆಗೆಯ್ಯೆ ದಯೆಯಿಂ ಕೆಯ್ಕೊಂಡು ಸದ್ಭಕ್ತಿವೆ
ತ್ತಾ ವಾಗೀಶ್ವರನಿರ್ದನೀಶ್ವರಪದಾಂಭೋಜಾತಪೂಜೋತ್ಸವಂ ೩೬

ಪರಮಾನಂದಮನಾಳ್ದು ಭಸ್ಮವಿಳಸದ್ರುದ್ರಾಕ್ಷೆಯುಂ ತಾಳ್ದು ಭಾ
ಸುರ ಪಂಚಾಕ್ಷರಮಂತ್ರಮಂ ಜಪಿಯಿಸುತ್ತೀಶಾರ್ಚನಂಗೆಯ್ವುತುಂ
ಚರಪಾದಾಂಬುಜಮಂ ಸಮರ್ಚಿಸುತೆ ಶೈವಾಚಾರಸಂಪತ್ತಿವೆ
ತ್ತಿರದರ್ಥಾಂಗನಿಜಾಸುಮುಖ್ಯಮನುಮೇಶಂಗರ್ಪಿಸುತ್ತಳ್ಕಱಿಂ ೩೭

ಪರಮ ಶಿವಲಾಂಛನಪ್ರ
ಸ್ಫುರಿತಾಂಗಂ ಭಕ್ತಿಪಾರವಶ್ಯದಿನೀತೊ

ಸಂಬಂಧಗೊಳಿಸಿ, ಆ ಲಿಂಗಸ್ವರೂಪವನ್ನು ಕ್ರಮವಾಗಿ ಬೋಧಿಸಿ, ಚಿತ್ತವೃತ್ತಿಯನ್ನು ನಿಶ್ಚಂಚಲಗೊಳಿಸಿದನು. ೩೫. ಪ್ರಸಿದ್ಧವಾದ ಪರಶಿವಜ್ಞಾನ ಮತ್ತು ತತ್ಸಂಬಂಧವಾದ ಶ್ರೇಷ್ಠಕ್ರಿಯೆಯನ್ನು ಅವನಿಗೆ ಉಂಟುಮಾಡಿ, ಗುರು ಮತ್ತು ಜಂಗಮಾರ್ಪಿತವಾದ ; ಶ್ರೇಷ್ಠಪ್ರಸಾದದ ಸುಖದ ಪರಿಣಾಮವನ್ನು ಸಂತೋಷದಿಂದ ಕೊಟ್ಟು ಉತ್ಕೃಷ್ಟವಾದ ಪರಮಾತ್ಮನ ಜ್ಞಾನದ ರೀತಿಯನ್ನು ತಿಳಿಸಿದನು. ೩೬. ಜೀವನ್ಮುಕ್ತಿಗೆ ಕಾರಣವೆಂದೆನಿಸುವ ಅಚಲಿತವಾದ ಪೂರ್ಣ ಪ್ರಕಾಶಾಧಿಕ್ಯದಿಂದ ಕೂಡಿದ, ಉತ್ಕೃಷ್ಟ ಓಂಕಾರವೆಂಬ ಮೂಲ ಪ್ರಣವವೇ ದೇಹವಾಗಿಉಳ್ಳ, ಲಿಂಗದ ಸಾಕ್ಷಾತ್ಕಾರವನ್ನುಂಟುಮಾಡುತ್ತ, ಸಕಲವಿದ್ಯೆಗಳಿಗೆ ಆವಾಸನೆನಿಸಿದ ಗುರುವು ದೀಕ್ಷೆ ಮಾಡಲಾಗಿ, ಅಂಥ ಶಿವದೀಕ್ಷೆಯನ್ನು ಪಡೆದು, ಈಶ್ವರವಿಷಯಕ ಸದ್ಭಕ್ತಿಯನ್ನು ಹೊಂದಿ, ಈಶ್ವರಪಾದಪೂಜೆಯಲ್ಲಿ ಕುತೂಹಲವುಳ್ಳವನಾಗಿ ವಾಗೀಶ್ವರನು (ಸುಖದಿಂದ) ಇದ್ದನು, ೩೭. (ಆ ವಾಗೀಶನು) ಪರಮಾನಂದಭರಿತನಾಗಿ, ಭಸ್ಮ. ಶ್ರೇಷ್ಠ ರುದ್ರಾಕ್ಷಿಗಳನ್ನು ಧರಿಸಿ, ಪ್ರಕಾಶಮಾನವಾದ ಪಂಚಾಕ್ಷರಮಂತ್ರವನ್ನು ಜಪಿಸುತ್ತ, ಈಶ್ವರ ಪೂಜೆಯನ್ನು ಮಾಡುವವನಾಗಿ, ಜಂಗಮ ಪಾದಕಮಲಗಳನ್ನು ಸಮರ್ಪಿಸುತ್ತ, (ಈ ಪ್ರಕಾರದಲ್ಲಿ) ವೀರಶೈವಾಚಾರ ಸಂಪತ್ತಿನಿಂದ ಕೂಡಿ, ತನ್ನ ಐಶ್ವರ್ಯ, ದೇಹ ಪ್ರಾಣಾದಿಗಳನ್ನು ಈಶ್ವರನಿಗೆ ಪ್ರೀತಿಯಿಂದ ಅರ್ಪಿಸಿದವನಾಗಿದ್ದನು. ೩೮. ವಾಗೀಶನು ಹೀಗೆ ಶ್ರೇಷ್ಠವಾದ ಶಿವಸಂಭಂಧದ ಲಾಂಛನಗಳಿಂದ ಪ್ರಕಾಶಿಸುವ ದೇಹವುಳ್ಳವನಾಗಿ

ಷ್ಪಿರೆ ವಾಗೀಶಂ ಜೈನೋ
ತ್ಕರವೀಕ್ಷಿಸಿ ಮುಳಿದು ಕೆಳರ್ದು ಗಳಪುತೆ ಪಲವಂ ೩೮

ಮೃಡದರ್ಶನಮಂ ಪೊಕ್ಕಂ
ಜಡಮತಿ ಜಿನಮತಮನುಳಿದು ಮದ್ಗುರುವೆನುತುಂ
ಪಿಡಿದಿಭದ ಮುಂದೆ ನೂಂಕಿದೊ
ಡೆಡೆಗಿಡದೆ ಗಜಾಸುರಾರಿ ಶರಣೆನುತಿರ್ದಂ ೩೯

ಅಂಜಿದುದು ಮತ್ತಕುಂಜರ
ನಂಜದವರ್ಗುಳ್ದು ಫಣಿಗಳಿಂ ಬಾಧಿಸೆ ಮೃ
ತ್ಯುಂಜಯ ಫಣಿಧರ ಶರಣೆನು
ತುಂ ಜಯಿಸಿದನುಗ್ರಫಣಿಗಳಂ ವಾಗೀಶಂ ೪೦

ಶವಣರದನೀಕ್ಷಿಸುತೆ ಘೋ
ರವಿಷಂ ತೀವಿರ್ದ ಕೊಳದೊಳಿಡೆ ಸಾಗರಸು
ಭವವಿಷಹರ ಶರಣೆನುತುಂ
ಜವದಿಂ ಮೇಗೊಗೆದು ಜಯಿಸಿದಂ ವಿಷಮನದಂ ೪೧

ಅಳಿಯನಿವನಾವ ತೆಜದಿಂ
ದಳಿವವೊಲೆಸಗುವೆವೆನುತ್ತೆ ಕಾಳ್ಗಿಚ್ಚಿನೊಳಾ
ಖಳರಿಡೆ ಜಯಿಸಿದನದನು
ಜ್ವಳ ಶಿಖಿರಸನಾಪ್ರಹರಣ ಶರಣೆನುತಾಗಳ್ ೪೨

ಶೋಭಿಸುತ್ತಿರಲು, ಜೈನರ ಸಮೂಹವು ನೋಡಿ, ಕೋಪಗೊಂಡು, ಕೀಳ್ಮಾಡಿ ಹಲವಾರು ವಿಧದಲ್ಲಿ ನಿಂದೆಗೆಯ್ಯುತ್ತಿತ್ತು. ೩೯. ಮಂದಮತಿಯಾದ ಇವನು ಜೈನ ಮತವನ್ನು ಬಿಟ್ಟು ನನ್ನಗುರುವೆಂದು ಶಿವಮತವನ್ನು ಪ್ರವೇಶಿಸಿದನು, ಎನ್ನುತ್ತ (ಆ ಜೈನರು) ಇವನನ್ನು ಹಿಡಿದು ಆನೆಯಮುಂದೆ ನೂಕಲಾಗಿ ಅವನು 'ಗಜಾಸುರನಿಗೆ ವೈರಿಯಾದ ಶಿವನಿಗೆ ಶರಣು' ಎನ್ನುತ್ತಿದ್ದನು. ೪೦. ಇವನನ್ನು ಕಂಡು ಮದೋನ್ಮತ್ತವಾದ ಆ ಆನೆಯು ಹೆದರಿತು, ಅಷ್ಟಕ್ಕೂ ಅವರು ಹೆದರದೆ, ಹಾವುಗಳಿಂದ ಬಾಧೆಗೊಳಿಸಲು, 'ಮೃತ್ಯುಂಜಯನೇ, ಸರ್ಪಾಭರಣನೇ, ಶರಣು' ಎನ್ನುತ್ತ ಆ ಭಯಂಕರ ಹಾವುಗಳನ್ನು ಜಯಿಸಿದನು. ೪೧. ಜೈನ ಶ್ರವಣರು ಅದನ್ನು ಕಂಡು, ಘೋರ ವಿಷದಿಂದ ಕೂಡಿದ ಸರೋವರದಲ್ಲಿ ಮುಳುಗಿಸಿದರು. 'ಕ್ಷೀರಸಾಗರದಲ್ಲಿ ಹುಟ್ಟಿದ ಹಾಲಾಹಲ ವಿಷವನ್ನು ಧರಿಸಿದ ಶಿವನೇ ಶರಣು' ಎನ್ನುತ್ತ ಬೇಗನೆ ಮೇಲಕ್ಕೆ ಹಾರಿ ಬಂದು ಆ ವಿಷವನ್ನು ಜಯಿಸಿದನು. ೪೨. ಯಾವರೀತಿಯಿಂದಲೂ ಇವನು ಸಾಯುತ್ತಿಲ್ಲವೆಂದುಕೊಂಡು ಕಾಡುಕಿಚ್ಚಿನಿಂದ ಇವನು ಸಾಯುವಂತೆ ಮಾಡುತ್ತೇವೆಂದು ಕಾಡುಕಿಚ್ಚಿಗೆ ಗುರಿಮಾಡಲು, 'ಪ್ರಕಾಶಮಾನವಾದ ಬೆಂಕಿಗಳ ನಾಲಿಗೆಯನ್ನೇ ಕತ್ತರಿಸಿದ ಶಿವನೇ

ವ॥ ಮತ್ತಮಿಂತು ಕತಿಪಯ ಕಪಟೋಪಾಯದಿಂ ಕೊಲಲ್ಬಗೆದೆಸಗಿದಂದವೆಲ್ಲವಂ ತಿರುವಾಕರೀಶಂ ಗೆಲೆ ಕಂಡು ಭಯಂಗೊಂಡೀ ಮಹಾಮಹಿಮಂ ಬಳಿಯಿನೆಮ್ಮನೆಂತುಂ ಭಂಜಿಸದೆ ಮಾಣನೆಂದು ನೆನೆದಾ ಶವಣರೆಲ್ಲರವನತರಾಗಿ ಶರಣ್ಬೊಗಲೊಡನನಿಬರೆಲ್ಲರ ಭವಿಮುದ್ರೆಯಂ ತೊಡೆದು ಶಿವಮುದ್ರಾಂಕಿತರಂ ಮಾಡಿ ಶಿವಭಕ್ತಿಭಾಗ್ಯಮನಿತ್ತು ಪೊರೆದು—

ಕಳ್ತಲೆಯಂ ಕಳೆವಂತಿರೆ
ಕಿಳ್ತು ಬಿಸುಟ್ಟೆಣ್ಮೆನಿಂ ಜಿನಪ್ರತಿಮೆಗಳಂ
ತಳ್ತ ಗುಡಿಗಳನೆ ಕಿಡಪಿ ನೆ
ಗಳ್ತೆಗೆ ನೆಲೆಯಾಗೆ ನೋಳ್ಪರರಿದೆನೆ ಧರೆಯೊಳ್' ೪೩

ಜಿನಮತಮದನಗಕುಲಿಶಂ
ಜಿನಮತಘನಚಂಡಮಾರುತಂ ಜಿನಮತಕಾ
ನನಪರಶುವೆಂಬ ಬಿರಿದೆಸೆ
ಯೆ ನಿತಾಂತಂ ಮೆಱೆದನಾಗನೇ ವಾಗೀಶಂ ೪೪

ಆರುಹತ ಕೇಳ್ವುದೆಲೆ ತಿರು
ವಾರೂರೆನಿಸಿರ್ಪ ಪೊಳಲೊಳೊಪ್ಪುವನೊರ್ವಂ
ಮಾರಹರಭಕ್ತನಚಳಿತ
ಧೀರ ನಿರುತ್ತಾಂಡಿಯೆಂಬನನಘಚರಿತ್ರಂ ೪೫

ಶರಣು' ಎನ್ನುತ್ತ ಅದನ್ನು ಜಯಿಸಿದನು. ವ॥ ಈರೀತಿ ಅನೇಕ ಕಪಟೋಪಾಯ ಗಳಿಂದ ಕೊಲ್ಲಲು ಯೋಚಿಸಿ, ಅದರಂತೆ ಮಾಡಲು, ಅವೆಲ್ಲವನ್ನೂ ತಿರುವಾಕರೀಶನು ಗೆಲ್ಲಲು (ಅವನನ್ನು) ಕಂಡು ಭಯಗೊಂಡವರಾಗಿ, ಈ ಮಹಿಮನು (ಇಷ್ಟು ಹಿಂಸೆಯನ್ನು ನಾವು ಮಾಡಿದ) ನಮ್ಮನ್ನು ಆಮೇಲೆ ನಾಶಮಾಡದೆ ಬಿಡನು ಎಂದು ಯೋಚಿಸಿದರು, ಆ ಜೈನ ಸಂನ್ಯಾಸಿಗಳೆಲ್ಲ ತಲೆಬಾಗಿ ಶರಣು ಹೊಕ್ಕರು. ಆಗ ಅವರೆಲ್ಲರ ಭವಿಮುದ್ರೆ ಯನ್ನು ತೊಡೆದು ಹಾಕಿ ಶಿವಲಾಂಛನ ವಿಶಿಷ್ಟರನ್ನಾಗಿ ಮಾಡಿ, ಶಿವಭಕ್ತಿಯೆಂಬ ಭಾಗ್ಯ ವನ್ನುಂಟುಮಾಡಿ ರಕ್ಷಿಸಿದನು. ೪೩. ನೋಡುವವರಿಗೆ ಇದು ಆಶ್ಚರ್ಯವೆನ್ನುವ ಹಾಗೆ ಪರಾಕ್ರಮದಿಂದ ಕತ್ತಲೆಯನ್ನು ನಾಶಮಾಡುವಂತೆ, ಜಿನಪ್ರತಿಮೆಗಳನ್ನು ಕಿತ್ತು ಬಿಸಾಡಿ, ಆ ಗುಡಿ (ಬಸದಿ)ಗಳನ್ನೆಲ್ಲ ಕೆಡವಿ ಹಾಕಿ ಪ್ರಸಿದ್ಧಿಗೆ ನೆಲೆಯಾಗುವಂತೆ ಮಾಡಿದನು. ೪೪. ಹೀಗೆ ಆ ವಾಗೀಶನು 'ಜೈನಮತವೆಂಬ ಮರದ ಪರ್ವತಕ್ಕೆ ವಜ್ರಾಯುಧ, ಜೈನ ಮತವೆಂಬ ಮೋಡಗಳಿಗೆ ಚಂಡಮಾರುತ, ಜೈನಮತವೆಂಬ ಅರಣ್ಯಕ್ಕೆ ಕೊಡಲಿ,' ಎಂಬ ಬಿರುದು ಶೋಭಿಸುವ ಹಾಗೆ ನಿಶ್ಚಯವಾಗಿ ಮೆರೆದವನಾಗಲಿಲ್ಲವೇ? ೪೫. ಎಲೈ ಜೈನನೇ, ಕೇಳು: ತಿರುವಾರೂರೆಂಬ ಪಟ್ಟಣದಲ್ಲಿ ಪರಮೇಶ್ವರನ ಭಕ್ತನೂ ಅಚಲನಾದ ಧೀರನೂ, ಎಂದೆನಿಸಿದ, 'ನಿರುತ್ತಾಂಡಿ' ಎಂಬ ಹೆಸರಿನ ಪಾಪರಹಿತವಾದ ಚರಿತ್ರೆಯುಳ್ಳ

ಜಾತ್ಯಂಧಕನಖಿಳಬುಧ
ಸ್ತುತ್ಯನವಂ ಲಿಂಗಮಜ್ಜನಾರ್ಥದ ಕೊಳನಂ
ಸತ್ಯನಿಧಿ ನೆಗಳ್ವ ಬಗೆವಿಡಿ
ದತ್ಯಧಿಕಮೆನಿಪ್ಪ ಲಿಂಗಗೇಹದ ಬಳಿಯೊಳ್ ೪೬

ಪೆಡಗೆ ಗುದ್ದಲಿ ನೇಣ್ಗಳಂ ತಳೆದೊಳ್ಪಿನಿಂ ಶಿವಲಿಂಗದಾ
ಗುಡಿಯ ಮುಂಗಡೆಯೊಂದುಮಂ ಕೊಳದಗ್ರದೇಶದೊಳೊಂದುಮಂ
ನಡುತೆ ಕಂಭಮನಲ್ಲಿ ಪೆರ್ವಿಣ್ಳಿಗಟ್ಟುತುಂ ಪಿಡಿದೆಯ್ದೆ ಮ
[1]ಣ್ಣಡ[1]ಕುತೊಂದೆಡೆ ನೇರ್ಪುಗೊಂಡಗುಳತ್ತು[2]ಮುಂತ[2]ವನಿರ್ಪಿನಂ ೪೭

ವ॥ ಜಿನಸಮುಯಸ್ಥರಾದ ಕುಮತಿಗಳದಂ ಕಂಡಳ್ಕಜಂಗೊಂಡೇಳ್ತಂದು ನಟ್ಟಕಂಭಮಂ ಮುಱಿದು ನೇಣಂ ಪಱಿದು ಭಕ್ತಕೃತ್ಯಕ್ಕೆ ವಿಘ್ನಮಂ ನೆಗಳ್ಚಿ ಪಿರಿದು ಪರಿಹಾಸಂ ಗೆಯ್ಯುತ್ತುಮಿರ್ಪ ಸಮಲ್ಲಿ—

ಆಗಳೆ ಕಣ್ಬಡೆದಭವನಿ
ನಾ ಗುಣನಿಧಿ ಜಿನಮತಸ್ಥರಂ ಕುರುಡರನಂ
ದಾಗಿಸಿ ಭಂಗಿಸಿ ಕೆಡಪಿ ಜಿ
ನಾಗಾರಮನಾತ್ಮಮಹಿಮೆಯುಂ ಪ್ರಕಟಿಸನೇ ೪೮

ಒಬ್ಬನು ಶೋಭಿಸುತ್ತಿದ್ದಾನೆ. ೪೬–೪೭. ಅವನು ಹುಟ್ಟುಕುರುಡನು, ಸಮಸ್ತ ವಿದ್ವಾಂಸರ ಶ್ಲಾಘನೆಗೆ ಪಾತ್ರನಾದವನು. ಆ ಸತ್ಯಕ್ಕೆ ನಿಧಿಯೆನಿಸಿದ ಭಕ್ತನು ಲಿಂಗ ಮಜ್ಜನಕ್ಕೋಸ್ಕರ ಒಂದು ಕೊಳವನ್ನು ನಿರ್ಮಾಣ ಮಾಡುವ ಪ್ರೀತಿಯಿಂದ ಕೂಡಿದ ಮನಸ್ಸುಳ್ಳವನಾಗಿ, ಅತ್ಯಂತ ಶ್ರೇಷ್ಠವೆನಿಸಿದ ಶಿವಾಲಯದ ಬಳಿಯಲ್ಲಿ ಹೆಡಿಗೆ, ಗುದ್ದಲಿ, ಹಗ್ಗ ಮೊದಲಾದುವುಗಳನ್ನು ಹಿಡಿದು ಆ ಶಿವಾಲಯದ ಮುಂಭಾಗದಲ್ಲಿ ಕೊಳದ ಅಗ್ರ ಭಾಗದಲ್ಲಿ ಒಂದು ಕಂಬವನ್ನು ನಿಲ್ಲಿಸಿ ಅದಕ್ಕೆ ದೊಡ್ಡ ಹಗ್ಗವನ್ನು ಕಟ್ಟಿ (ಕುರುಡನಾದ್ದರಿಂದ) ಆ ಹಗ್ಗದ ಗುರುತನ್ನು ಹಿಡಿದುಕೊಂಡು ನೆಲವನ್ನು ಅಗೆದು ಮಣ್ಣನ್ನು ರಾಶಿ ಹಾಕುತ್ತ ತನ್ನ ಕರ್ತವ್ಯದಲ್ಲಿ ಈ ರೀತಿ ಅವನು ಇರುತ್ತಿರುವಾಗ. ವ॥ ದುರ್ಬುದ್ಧಿಯುಳ್ಳ ಜೈನಮತಸ್ಥರಾದ ಕೆಲವರು ಇದನ್ನು ಕಂಡು ಮಾತ್ಸರ್ಯಗೊಂಡು ಅಲ್ಲಿಗೆಬಂದು, ನಿಲ್ಲಿಸಿದ ಕಂಬವನ್ನು ಮುರಿದು, ಹಗ್ಗವನ್ನು ಹರಿದು, ಆ ಭಕ್ತನ ಕರ್ತವ್ಯಕ್ಕೆ ವಿಘ್ನವನ್ನುಂಟುಮಾಡಿ, ವಿಶೇಷವಾಗಿ ಹಾಸ್ಯವನ್ನು ಮಾಡುತ್ತಿರುವಷ್ಟರಲ್ಲಿ. ೪೮. ಆ ಕೂಡಲೇ ಗುಣನಿಧಿಯಾದ ಅವನು ಶಿವನಿಂದ ಕಣ್ಣುಗಳನ್ನು ಪಡೆದು, (ತನ್ನ ಕಾರ್ಯಕ್ಕೆ ವಿಘ್ನವನ್ನುಂಟುಮಾಡಿದ) ಜೈನ ಮತಸ್ಥರನ್ನು ಕುರುಡರನ್ನಾಗಿಮಾಡಿ, ಭಂಗಗೊಳಿಸಿ ಜೈನ ದೇವಾಲಯ (ಬಸದಿ)ಗಳನ್ನು ಕೆಡವಿ ಹಾಕಿ ತನ್ನ ಮಹಿಮೆಯನ್ನು

1 ಣ್ಣಡು(ಚ) 2 ಮುತ್ತ(ಅ)

ವ॥ ಅಂತುಮಲ್ಲದೆಯುಂ—

ಧರಣೀಭಾಮಿನಿಯಾಸ್ಯಬಿಂಬಮೆನೆ ಚೆಲ್ವಾಗಿರ್ದ ತದ್ದ್ರಾವಿಡೋ
ರ್ವರೆಯೊಳ್ ಕಂಗೊಳಿಸಿರ್ಪ ಕಾಲಪುರದೊಳ್ ಶೈವದ್ವಿಜಾಖ್ಯಾನಭೂ
ಸುರವರ್ಯಂಗೊಗೆದೊಪ್ಪಿದಂ ಕುಮತವಿಧ್ವಂಸಾರ್ಥಮೀಶಾಜ್ಞೆಯಿಂ
ಶರಜನ್ಮಂ ಜಿತತಾರಕಂ ಪ್ರಮುದಿತಸ್ವಾರಾಣ್ಮುಖಂ ಷಣ್ಮುಖಂ ೪೯

ವ॥ ಅಂತೊಗೆದು ಶೈಶವವಿಳಾಸಮನವಲಂಬಿಸಿರೆ ತಜ್ಜನಕನೊಂದುದಿನದ ಮಧ್ಯಂದಿನ ಸ್ನಾನಕ್ಕೆ ಬರುತ್ತುಮಾ ಕುಮಾರನಂ ಪೆಗಲೊಳ್ತಳೆದು ಪೆಂಪಿಂದೆಳ್ತ[1]ಂದೊಂದು ಕುಸುಮಾರಾಮದ ವಿಮಳಸ್ಥಳದ ಕುಮುದ ಕಲ್ಹಾರ ಕಮನೀಯ ಸರಳತರಳತರಂಗಸಂಗತ ಮಧುರ ಶೀತಳವಿಮಳಜಳ ಕಲಿತ ಸರೋವರದ ಪರಿಸರದ ಪಸಲೆಯೊಳಿರಿಸಿ ನೀರ್ಮುಳುಗಲೆಯ್ದಿದನಿತಱೊಳಾ ಕುಮಾರನಿರ್ದ ತಾಣಕ್ಕೆ—

ಜನನಿ ಜನಕರ್ಕಳಿರ್ವ
ರ್ಮನಮೊಲ್ದೆಳ್ತಂದು ನಿಜಕುಮಾರನನಾಗ
ಳ್ಮನೆಕೊನೆವೋಗುತೆ ರಾಗಿಸಿ
ಬನದದೆ ನಡೆನೋಡಿ ನೋಡಿ ನಲಿದರುಮೇಶರ್ ೫೦

ಪ್ರಕಟಿಸಲಿಲ್ಲವೇ ? ವ॥ ಅದೂ ಅಲ್ಲದೆ—**ತಿರುಜ್ಞಾನ ಸಂಬಂಧರ ಕಥೆ** ೪೯. ಭೂಮಿಯೆಂಬ ಸುಂದರಸ್ತ್ರೀಯ ಮುಖಮಂಡಲವೋ ಎಂಬಂತೆ ಚೆಲುವುಗೊಂಡಿದ್ದ ಆ ದ್ರಾವಿಡ ದೇಶದಲ್ಲಿ 'ಕಾಲಪುರ' ಎಂಬ ಊರು ಶೋಭಿಸುತ್ತಿತ್ತು. ಅಲ್ಲಿ ಶೈವಬ್ರಾಹ್ಮಣನೆಂಬ ಹೆಸರಿನ ದ್ವಿಜನಿಗೆ ದುಷ್ಟಮತಗಳ ಧ್ವಂಸ ಕಾರ್ಯಕ್ಕೋಸುಗ ಪರಮೇಶ್ವರನ ಆಜ್ಞೆಯಿಂದ ಶರವೆಂಬ ಹುಲ್ಲಿನಲ್ಲಿ ಜನ್ಮಧರಿಸಿದವನೂ, ತಾರಕನನ್ನು ಜಯಿಸಿದವನೂ, ಇಂದ್ರನೇ ಮೊದಲಾದವರನ್ನು ಸಂತೋಷಗೊಳಿಸಿದವನೂ ಎನಿಸಿದ ಷಣ್ಮುಖನೇ ಮಗನೆನಿಸಿ ಶೋಭಿಸುತ್ತಿದ್ದನು.* ೫೦. ಹೀಗೆ ಅವನು ಜನ್ಮತಾಳಿ, ಬಾಲ್ಯೋಚಿತವಾದ ಸೌಂದರ್ಯದಿಂದ ಕೂಡಿರಲು, ಅವನ ತಂದೆಯೆನಿಸಿದ ಆ ಬ್ರಾಹ್ಮಣನು ಒಂದು ದಿನ ಮಧ್ಯಾಹ್ನ ಕಾಲದ ಸ್ನಾನಕ್ಕೆಂದು ಆ ಕುಮಾರನನ್ನು ಹೆಗಲ ಮೇಲೆ ಕುಳ್ಳಿರಿಸಿ ಕೊಂಡು ಸಂಭ್ರಮದಿಂದ ಬಂದು, ಒಂದು ಹೂದೋಟದ ಪರಿಶುದ್ಧ ಸ್ಥಳದಲ್ಲಿರುವ ಕಮಲ, ಕಲ್ಹಾರಗಳಿಂದಲೂ, ಮನೋಹರವಾದ ಸರಳವಾದ ಕೆರೆಗಳಿಂದಲೂ, ಮಧುರವಾದ ನೀರಿನಿಂದಲೂ ತುಂಬಿದ್ದ ಸರೋವರದ ದಂಡೆಯ ಮೇಲೆ ಅವನನ್ನು ಕುಳ್ಳಿರಿಸಿ ಸ್ನಾನಕ್ಕೆ ತೆರಳಿದನು. ಅಷ್ಟರಲ್ಲಿ ಆ ಬಾಲಕನಿದ್ದ ಸ್ಥಳಕ್ಕೆ ಆ ಕುಮಾರನ

1 ಳ್ದಂ(ಚ)

* ತಮಿಳುನಾಡಿನ ಮೂವರು ಸಮಯಾಚಾರ್ಯರೆನಿಸಿದವರಲ್ಲಿ ಒಬ್ಬರಾದ 'ತಿರುಜ್ಞಾನ ಸಂಬಂಧರು'—ಇವರು ಷಣ್ಮುಖನ ಅವತಾರವೆಂಬ ನಂಬಿಕೆಯಿದೆ.

ಮೃಡನಂಗದತ್ತಣಿಂದಿಳಿ
ದೊಡನೇಳ್ತಂದಗಜೆ ಬೀಗಿ ಬಿಗಿಯಪ್ಪಿ ಮುದಂ
ಬಡೆದೆಚ್ಚು ಪಾಯೆ ಮೊಲೆವಾ
ಲ್ತೊಡೆಯೊಳ್ಕುಳ್ಳಿರಿಸಿ ಕುವರನಂ ಮುದ್ದಿಸಿದಳ್ ೫೧

ವ॥ ಅಂತು ಮುದ್ದಿಸಿ ಮುಂಡಾಡಿ ಶಾಂಭವಿ ಶಾಂಭವದೀಕ್ಷೆಯುಂ ಕರುಣಿಸಿ ತೊರೆದ ಮೊಲೆವಾಲಂ ತಣಿವಿನಮೂಡಿ ಮತ್ತಮಿರದೆ—

ಮೊಲೆವಾಲಂ ತೀವಿ ಪೊಂಬಟ್ಟಲೊಳೆ ಶಿಶುಕರಕ್ಕಂತದಂ ಕೊಟ್ಟು ಸಾರೋ
ಜ್ವಲಸತ್ಯಾಲಾಪದಿಂದಂ ಪರಸಿ ಸರಸಿಜಾತಾಕ್ಷಿ ಮಾಣಿಕ್ಯಭೂಷಾ
ವಲಿಯಿಂ ಕೆಯ್ಗೆಯ್ದು ನೇಹಂ ನಿಮಿರೆ ಬಿಗಿದು ತಳ್ಕೈಸುತಾತ್ಮೇಶನಂಕ
ಸ್ಥಲಮಂ ತಾನೆಯ್ದೆ ತತ್ಕಾಲದೊಳೆ ಕೊಳದೆ ನೀರ್ವಿಂದು ಬಂದಂ ದ್ವಿಜೇಂದ್ರಂ ೫೨

ಕುಡಿದ ಮೊಲೆವಾಲ ಧಾರೆಗ
ಳೊಡನಿಳಿತರೆ ಲಾಲೆವಿಡಿದು ಕಡೆವಾಯಿಂ ಜೆ

(ಷಣ್ಮುಖನ) ಜನನೀಜನಕರಾದ ಉಮಾಶಂಕರರಿಬ್ಬರೂ ಸಂತೋಷದಿಂದ ಬಂದು ತಮ್ಮ ಕುಮಾರನಾದ ಅವನನ್ನು ಬಹು ಸಂತೋಷದಿಂದ ಪ್ರೀತಿಸಿ, ವಿನೋದ ದಿಂದ ದಿಟ್ಟಿಸಿನೋಡುತ್ತ ನಲಿದಾಡಿದರು. ೫೧. ಈಶ್ವರನ ದೇಹದಿಂದ ಪಾರ್ವತಿಯು ಆ ಕೂಡಲೇ ಬೇರ್ಪಟ್ಟು ಬಂದು (ಕುಮಾರನನ್ನು ಕಂಡು)ಉಬ್ಬಿಹೋಗಿ, ಬಿಗಿಯಾಗಿ ತಬ್ಬಿಕೊಂಡು, ಸಂತೋಷಗೊಳಿಸುತ್ತಿರಲು ಮೊಲೆಯ ಹಾಲುಗಳು ಚಿಮ್ಮಿ ಹೊರ ಬರುತ್ತಿದ್ದವು. ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಆ ಕುಮಾರನನ್ನು ಮುದ್ದಿಸಿದಳು. ವ॥ ಆ ರೀತಿ ಮುದ್ದಿಸಿ ಮೈಮೇಲೆ ಕೈಯಾಡಿಸಿ, ಪಾರ್ವತಿಯು ಅವನಿಗೆ ಶಿವಸಂಬಂಧವಾದ ದೀಕ್ಷೆಯನ್ನು ಅನುಗ್ರಹಿಸಿ, ತೊರೆದು ಹೋದ ಮೊಲೆಹಾಲನ್ನು ತೃಪ್ತಿಗೊಳ್ಳುವಂತೆ ಉಣ್ಣಿಸಿ, ಮತ್ತು ಇರದೆ ೫೨. ಆ ಕಮಲನೇತ್ರೆಯಾದ ಪಾರ್ವತಿಯು ತನ್ನ ಮೊಲೆಹಾಲನ್ನು ಬಂಗಾರದ ಬಟ್ಟಲಲ್ಲಿ ತುಂಬಿ, ಅದನ್ನು ಆ ಶಿಶುವಿನ ಕೈಯಲ್ಲಿ ಕೊಟ್ಟು ಸಾರವತ್ತಾದವೂ, ಉಜ್ವಲವಾದವೂ ಆದ ಸತ್ಯ ನುಡಿಗಳಿಂದ (ಯಥಾರ್ಥವಾದ ಮಾತುಗಳಿಂದ) ಆಶೀರ್ವಾದ ಮಾಡಿದಳು. ಮಾಣಿಕ್ಯ ವಿಶಿಷ್ಟವಾದ ರತ್ನಾಭರಣಗಳಿಂದ ಅಲಂಕಾರಗೊಳಿಸಿದಳು. ಸಂತೋಷವು ಅಧಿಕ ಗೊಳ್ಳಲಾಗಿ ಅವನನ್ನು ಬಿಗಿಯಾಗಿ ಹಿಡಿದಪ್ಪಿಕೊಂಡು, ಪತಿಯಾದ ಪರಮೇಶ್ವರನ ದೇಹಾರ್ಧದ ಗುರುತಿನವಳಾಗಿ ಆಗಲು (ಈಶ್ವರನ ದೇಹಾರ್ಧದಲ್ಲಿ ಸಮಾವೇಶ ಗೊಳ್ಳಲು) ಅಷ್ಟರಲ್ಲಿಯೇ ಆ ಶ್ರೇಷ್ಠ ಬ್ರಾಹ್ಮಣನು ಸ್ನಾನಮಾಡಿ ಅಲ್ಲಿಗೆ ಬಂದನು. ೫೩–೫೪. ಮೊಲೆ ಹಾಲನ್ನು ಕುಡಿದ ಕಾರಣ ಕಟಬಾಯಿಯಿಂದ ಲಾಲಾರಸದಿಂದ ಕೂಡಿ ಹಾಲಿನ ಧಾರೆಯು ಇಳಿಯುತ್ತಿರುವವನೂ, ರತ್ನಾಭರಣಗಳ ಪ್ರಕಾಶದಿಂದ ಶೋಭೆಗೊಂಡಿರುವವನೂ, ಬಂಗಾರದ ಬಟ್ಟಲನ್ನು ಕೈಯಲ್ಲಿ ಹಿಡಿದಿರುವವನೂ ಆದ

ಲ್ವಡರ್ದ ಮಣಿ ಭರಣರುಚಿ ಪೆಂ
ಪಿಡಿದಿರೆ ಪೊಂಬಟ್ಟಲಾಂತು ಮಿಸುಗುವ ಶಿಶುವಂ ೫೩

ಜನಕಂ ವಿಸ್ಮಯಮುತ್ತು ನೋಡಿ ಕಿನಿಸಂ ತಾಳ್ದಿತ್ತಣಂ ಬಂದುದೀ
ಕನಕಪ್ರೋಜ್ವಳಪಾತ್ರಪೂರ್ಣಸುಧೆ ಪೇಳೆಂದಾಗ್ರಹಂಗೆಯ್ಯೆ ನಂ
ದನನಾ ತಾತನ ತರ್ಜನಕ್ಕಳಱುತೆಂದಂ ತಂದೆ ಕೇಳ್ಬಂದರಿಂ
ದು ನಭೋಮಾರ್ಗದೆ ರತ್ನಪುಷ್ಪಕದೊಳೊಲ್ಪಿಂದಂಬಿಕಾಶಂಕರರ್ ೫೪

ಪ್ರಕಟಜಟಾಕಿರೀಟಿಯು ಫಣೇಂದ್ರವಿಭೂಷನ ಶೂಲಪಾಣಿಯು
ದ್ಭಕರಟಿ ಕೃತ್ತಿವಾಸನ ಶಿಖಾವಹಲೋಚನನಂಕದಿಂ ಮಣಿ
ಪ್ರಕರಕಿರೀಟಧಾರಿಣಿ ಸುರತ್ನವಿಭೂಷಣೆ ಪದ್ಮಪಾಣಿ ದಿ
ವ್ಯಕನಕವಾಸೆ ಸಾರಕರುಣಾರ್ದ್ರವಿಲೋಚನೆ ಬಂದಳಳ್ಕಱಿಂ ೫೫

ಕುಸುಮದೊಳೆ ಕಂಪು ಕರ್ಬಿನ
ರಸದೊಳ್ಮಿಸುಪಿಂಪು ಜೊನ್ನದೊಳ್ತಂಪು ವಿರಾ
ಜಿಸುವವೊಲಭವನೊಳೊಡವೆರೆ
ದೆಸೆವ ಜಗನ್ಮಾತೆ ಕೃಪೆಯಿನಿಂದೇಳ್ತಂದಳ್ ೫೬

ವ॥ ಅಂತೇಳ್ತಂದು ಜಗಜ್ಜನನಿ ಜನನಿ ತನಯುನಂ ಮುದ್ದಿಪಂತೆನ್ನಂ ತನ್ನಂಕಪರ್ಯಂಕದೊಳ್ತೆಗೆದು ಬಿಗಿದಪ್ಪಿ ಕುಳ್ಳಿರಿಸಿ ಕೃಪಾರಸಂ ತೆರೆಮಸಪ ಕಟಾಕ್ಷದಿನಭೀಕ್ಷಿಸಿ ತೊರೆದೆಚ್ಚುಸಾಯ್ದು

ಆ ಬಾಲಕನನ್ನು ಕಂಡು ತಂದೆಯಾದ ಆ ಬ್ರಾಹ್ಮಣನು ಆಶ್ಚರ್ಯಗೊಂಡು ನೋಡಿ, ಕೋಪಗೊಂಡು, 'ಈ ಹಾಲಿನಿಂದ ತುಂಬಿದ ಹೊಳೆಯುತ್ತಿರುವ ಬಂಗಾರದ ಪಾತ್ರೆಯೆಲ್ಲಿಂದ ಬಂತು ? ಹೇಳು' ಎಂದು ಆಗ್ರಹಗೊಳಿಸಲು, ಕುಮಾರನಾದ ಅವನು ತಂದೆಯ ಈ ಭಯಗೊಳಿಸುವಿಕೆಗೆ ಹೆದರಿ, 'ಅಪ್ಪಾ, ಕೇಳು ಈಗ ತಾನೆ ಆಕಾಶಮಾರ್ಗದಿಂದ ಪುಷ್ಪಕ ವಿಮಾನದಲ್ಲಿ ಕುಳಿತು ಪಾರ್ವತೀ ಪರಮೇಶ್ವರರು ಬಂದರು. ೫೫. 'ಪ್ರಕಟಗೊಂಡ ಜಡೆಯೇ ಕಿರೀಟವಾಗಿವುಳ್ಳವನೂ, ಆದಿಶೇಷನ ಆಭರಣವುಳ್ಳವನೂ, ತ್ರಿಶೂಲ ಹಸ್ತನೂ, ಶ್ರೇಷ್ಠ ಆನೆಯ ಚರ್ಮವನ್ನುಟ್ಟವನೂ, ಅಗ್ನಿನೇತ್ರನೂ ಆದ ಶಿವನ ತೊಡೆಯಿಂದ ಮಣಿಸಮೂಹಗಳ ಕಿರೀಟ ಧರಿಸಿದವಳೂ, ಶ್ರೇಷ್ಠ ರತ್ನಾಭರಣಗಳಿಂದ ಭೂಷಿತಳಾದವಳೂ, ಕಮಲವನ್ನು ಕೈಯಲ್ಲಿ ಹಿಡಿದಿರುವವಳೂ, ಬಂಗಾರದ ಪಟ್ಟೆ ವಸ್ತ್ರವನ್ನುಟ್ಟವಳೂ, ಸಾರವತ್ತಾದ ಕರುಣೆಯಿಂದ ತೋಯ್ದು ಹೋದ ಕಣ್ಣುಳ್ಳವಳೂ ಆದ ಪಾರ್ವತಿಯು ಪ್ರೀತಿಯಿಂದ ಬಂದಳು.' ೫೬. 'ಹೂವಿನಲ್ಲಿ ಸುಗಂಧ, ಕಬ್ಬಿನ ಹಾಲಿನಲ್ಲಿ ಶೋಭಿಸುವ ರುಚಿ, ಬೆಳದಿಂಗಳಲ್ಲಿ ತಂಪು ವಿರಾಜಿಸುವಂತೆ, ಪರಮೇಶ್ವರನಲ್ಲಿ ಒಡಗೊಂಡು ಶೋಭಿಸುವ ಆ ಜಗತ್ತುಗಳ ತಾಯಿಯಾದ ಪಾರ್ವತಿಯು ಕೃಪೆಯಿಂದ ಈಗ ತಾನೆ ಬಂದಳು. ವ॥ 'ಹೀಗೆ ಬಂದು ಜಗತ್ತಿನ ತಾಯಿಯಾದ ಅವಳು ತಾಯಿಯು ತನ್ನ ಮಗುವನ್ನು ಮುದ್ದಾಡುವಂತೆ ನನ್ನನ್ನು ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡು, ಬರಸೆಳೆದು ಬಿಗಿಯಾಗಿ ಅಪ್ಪಿಕೊಂಡು, ಕುಳ್ಳಿರಿಸಿ, ಕೃಪೆಯ ರಸವು

ಮೊಲೆವಾಲನೂಡಿ ಮಣಿದೊಡವನಿಟ್ಟು ಮಗುಳ್ದು ಕುಚಕನಕಕಲಶದಮೃತರಸಮಂ ಪೊಂಬಟ್ಟ ಲೊಳ್ಕಱೆದು ತೀವಿ ಮತ್ಕರದೊಳಿತ್ತು ಕರುಣಿಸಿ ನಿಜರಮಣನೊಡನೆ ಮಣಿಪುಷ್ಪಕಮನಡರ್ದು—

ತೊಳತೊಳಗುತೆ ಸುರಪಥದೊ
ಳ್ತಳರ್ದಪಳೆಲೆ ನೋಳ್ಪುದೆಂದು ಜನಕಂಗೆನೆ ಕೇ
ಳ್ದಿಳೆಗಿದು ಪೊಸತೆನುತುಂ ಬಾಂ
ದಳದೊಳ್ನಡೆನೋಡಿ ಕಂಡನವನದ್ರಿಜೆಯಂ ೫೭

ಗಿರಿಶಾಂಕಾರೂಢೆಯುಂ ಗೀರ್ವರಮುರಹರಭಾಮಾಸಮಾಚಾಲಿತೋಚ್ಚಾ
ಮರಚಂಚತ್ಪಾರ್ಶ್ವೆಯಂ ನಿರ್ಜರಪರಿವೃತಪಾದಾಬ್ಜೆಯುಂ ದಿವ್ಯದೇಹಾ
ಭರಣಪ್ರದ್ಯೋತಿತಾಶಾಕುಳೆಯನಮಿತ ಸೌಂದರ್ಯಸಂಪನ್ನೆಯಂ ಶಾಂ
ಕರಿಯಂ ಕಂಡಲ್ಲಿ ದಂಡಪ್ರಣತಿಯೆಸಗಿದಂ ಭೂಸುರಂ ಭಕ್ತಿಯಿಂದಂ ೫೮

ವ॥ ಅಂತು ದಂಡಪ್ರಣಾಮಂಗೆಯ್ದು ಪುತ್ರನಂ ವಿಸ್ಮಯಮುತ್ತು ನೋಡಿ—

ತನುಜನೆನಗಲ್ತಿವಂ ಮ
ಜ್ಜನಕಂ ಮದ್ಗುರು ಮದಿಷ್ಟದೈವಮೆನುತ್ತುಂ
ಮನದೊಳ್ನಮಿಸುತೆ ಪೆಗಲೊ
ಳ್ಬಿನದದೆ ತಳೆದವನನಾತ್ಮಗೃಹಕೇಳ್ತಂದಂ ೫೯

ತೆರೆಯಾಗಿ ಹೊರಹೊಮ್ಮುತ್ತಿರಲು ಕಡೆಗಣ್ಣುಗಳಿಂದ ನೋಡಿ, ತೊರೆದು ಚಿಮ್ಮಿ ಬರುತ್ತಿರುವ ಮೊಲೆ ಹಾಲನ್ನು ಕುಡಿಸಿ, ರತ್ನಾಭರಣಗಳನ್ನಿಟ್ಟು ಅಲಂಕರಿಸಿ ಪುನಃ ಬಂಗಾರದ ಕಲಶಗಳಿಗೆ ಸಮಾನವಾದ ಮೊಲೆಯ ಅಮೃತ ರಸವನ್ನು ಈ ಬಂಗಾರದ ಬಟ್ಟಲಲ್ಲಿ ತುಂಬಿ, ನನ್ನ ಕೈಗೆ ಕೊಟ್ಟು ಕರುಣೆದೋರಿ ತನ್ನ ಪತಿಯಾದ ಶಿವನೊಡನೆ ಪುಷ್ಪಕ ವಿಮಾನವನ್ನು ಹತ್ತಿ'—೫೭. 'ತೊಳ ತ್ತೊಳಗುತ್ತ ಆಕಾಶ ಮಾರ್ಗದಲ್ಲಿ ಹೋಗುತ್ತಿರುವವರು. ಎಲೆ ತಂದೆಯೇ, ನೋಡು' ಎಂದು ತನ್ನ ತಂದೆಗೆ ಹೇಳಲು. ಅವನು ಕೇಳಿ ಭೂಮಂಡಲದಲ್ಲಿ ಇದೊಂದು ಹೊಸ ವಿಷಯವೆಂದುಕೊಂಡು ಪಾರ್ವತಿ ಯನ್ನು ಆಕಾಶದಲ್ಲಿ ದಿಟ್ಟಿಸಿ ನೋಡುತ್ತ ಕಂಡನು. ೫೮. ಪರಮೇಶ್ವರನ ತೊಡೆ ಯನ್ನೇರಿದವಳೂ, ಬ್ರಹ್ಮ, ವಿಷ್ಣುಗಳ ಹೆಂಡಂದಿರು ಪಾರ್ಶ್ವದಲ್ಲಿ ನಿಂತು ಚಲನೆಗೊಳಿಸು ತ್ತಿರುವ ಚಾಮರಗಳುಳ್ಳವಳೂ, ದೇವತೆಗಳಿಂದ ಸುತ್ತುವರಿಯಲ್ಪಟ್ಟ ಪಾದಕಮಲ ವುಳ್ಳವಳೂ. ದಿವ್ಯಶರೀರದಲ್ಲಿರುವ ಆಭರಣಗಳ ಪ್ರಕಾಶದಿಂದ ದಿಕ್ಕುಗಳ ಸಮೂಹವನ್ನು ಬೆಳಗಿಸುವವಳೂ, ಅಗಣಿತವಾದ ಸೌಂದರ್ಯದಿಂದ ಕೂಡಿದ ವಳೂ ಆದ ಪಾರ್ವತೀ ದೇವಿಯನ್ನು ಕಂಡು ಅಲ್ಲಿಯೆ ಆ ಶೈವ ಬ್ರಾಹ್ಮಣನು ಭಕ್ತಿಯಿಂದ ದೀರ್ಘ ದಂಡ ಪ್ರಣಾಮಗಳನ್ನು ಮಾಡಿದನು. ವ॥ ಹಾಗೆ ದೀರ್ಘದಂಡ ಪ್ರಣಾಮಗಳನ್ನು ಮಾಡಿ, ಪುತ್ರನನ್ನು ಆಶ್ಚರ್ಯದಿಂದ ನೋಡುತ್ತ ೫೯. 'ಇವನು ನನ್ನ ಮಗನಲ್ಲ; ನನ್ನ ತಂದೆ, ನನ್ನ ಗುರು, ನನ್ನ ಇಷ್ಟ ದೈವ' ಎನ್ನುತ್ತ ಮನಸ್ಸಿನಿಂದಲೇ ನಮಸ್ಕಾರ ಮಾಡುತ್ತ, ಹೆಗಲ ಮೇಲೆ ಕುಳ್ಳಿರಿಸಿಕೊಂಡು ಆ

ವ॥ ಅಂತೇಳ್ತಂದು ನಿಜರಮಣಿಯೊಡನದೆಲ್ಲಮನಱುಪಿ ತನ್ಮನಕ್ಕೆ ಸಾಶ್ಚರ್ಯಸಂತೋಷಮಂ ಪಡೆದು ಸುಖದಿರ್ದನನ್ನೆಗಂ—

ಪಡೆದಂ ಸರ್ವಜ್ಞತೆಯಂ
ಪಡೆದಂ ವಾಕ್ಸಿದ್ಧಿವೃದ್ಧಿಯಂ ತೇಜಮುಮಂ
ಪಡೆದಂ ಕುವರಂ ಗಿರಿಶನ
ಮಡದಿಯ ಮೊಲೆವಾಲ ಮಹಿಮೆ ಸಾಧಾರಣಮೇ ೬೦

ತರುಣಂ ಮಱುದಿನದುದಯದೊ
ಳಿರದೆಳ್ದಾ ಪುರದ ಗಿರಿಶಗೃಹಕೇಳ್ತಂದಾ
ದರದಿಂ ಕಂಡಂ ಗಿರಿಜೆಯ
ಚರಣಮನೊಲ್ದೆಱಗಿ ಪೊಗಳ್ದನತಿ ಸಂಭ್ರಮದಿಂ ೬೧

ಸುರನುತಚರಣೇ ವರಗುಣಭರಣೇ ಖರರುಚಿಬಿಂಬಗತೇ
ಸರಸಿಜವದನೇ ಸುರುಚಿರರದನೇ ಪುರಹರಣಾಂಗಯುತೇ
ಕರಧೃತನಳಿನೇ ಪರಿಹೃತಮಳಿನೇ ಹರಿವಿಧಿಶಕ್ರನತೇ
ಕರಿರಿಪುಗಮನೇ ಹರಿರಿಪುಶಮನೇ ಪೊರೆ ಗಿರಿರಾಜಸುತೇ ೬೨

ವ॥ ಎಂದಭಿವಂದಿಸಿದ ನಂದನನನಂಬಿಕೆ ದಯಾವಲೋಕನದಿನಭೀಕ್ಷಿಸಿ—

ಬ್ರಾಹ್ಮಣನು ತನ್ನ ಮನೆಗೆ ಬಂದನು. ವ॥ ಹಾಗೆ ತನ್ನ ಮನೆಗೆ ಬಂದು, ತನ್ನ ಹೆಂಡತಿಯೊಡನೆ ನಡೆದ ವೃತ್ತಾಂತವನ್ನೆಲ್ಲ ತಿಳಿಸಿ, ಅವಳ ಮನಸ್ಸಿಗೆ ಆಶ್ಚರ್ಯವನ್ನೂ ಸಂತೋಷವನ್ನೂ ಉಂಟು ಮಾಡಿ, ಸುಖದಿಂದ ಇರುತ್ತಿರುವಲ್ಲಿ ೬೦. ಆ ಕುಮಾರನು ಸರ್ವಜ್ಞತ್ವವನ್ನು ಪಡೆದನು; ವಾಕ್ಸಿದ್ಧಿಯನ್ನೂ. ತೇಜಸ್ಸನ್ನೂ ಪಡೆದನು. ಈಶ್ವರನ ಪತ್ನಿಯಾದ ಪಾರ್ವತಿಯ ಮೊಲೆ ಹಾಲಿನ ಮಹಿಮೆಯೇನು ಸಾಮಾನ್ಯವಾದದ್ದೇ ? ೬೧. ಮರುದಿನ ಪ್ರಾತಃ ಕಾಲದಲ್ಲಿ ಆ ತರುಣನು ತಪ್ಪದೆ ಆ ಪಟ್ಟಣದಲ್ಲಿರುವ ಪರಮೇಶ್ವರನ ಗುಡಿಗೆ ಬಂದು ಪ್ರೀತಿಯಿಂದ ಪಾರ್ವತೀ ದೇವಿಯನ್ನು ಕಂಡು ಸಂತೋಷದಿಂದ ನಮಸ್ಕರಿಸಿ ಅತ್ಯಂತ ಸಂಭ್ರಮದಿಂದ ಹೊಗಳುತ್ತಿದ್ದನು. ೬೨. ದೇವತೆಗಳಿಂದ ಸ್ತೋತ್ರ ಮಾಡಿಸಿಕೊಳ್ಳುವ ಪಾದವುಳ್ಳವಳೇ, ಶ್ರೇಷ್ಠ ಸದ್ಗುಣಗಳೇ, ಆಭರಣವಾಗಿ ಉಳ್ಳವಳೇ, ಸೂರ್ಯಮಂಡಲವನ್ನು ಹೊಂದಿದವಳೇ, ಕಮಲ ಮುಖಿಯೇ, ಮನೋಹರವಾದ ದಂತಗಳುಳ್ಳವಳೇ, ತ್ರಿಪುರಸಂಹಾರಿಯಾದ ಶಿವನ ಅಂಗದಲ್ಲಿ ಬೆರೆತಿರುವವಳೇ, ಕೈಯಲ್ಲಿ ಕಮಲವನ್ನು ಧರಿಸಿರುವವಳೇ, ವಿಷ್ಣು, ಬ್ರಹ್ಮ, ಇಂದ್ರಾದಿಗಳಿಂದ ಸ್ತೋತ್ರ ಮಾಡಿಸಿ ಕೊಳ್ಳುವವಳೇ, ಸಿಂಹವನ್ನು ವಾಹನವನ್ನಾಗಿ ಮಾಡಿಕೊಂಡು ಸಂಚರಿಸುವವಳೇ ಹೇ ಗಿರಿರಾಜ ಪುತ್ರಿಯೇ ರಕ್ಷಿಸು. ವ॥ ಹೀಗೆಂದು (ಸ್ತೋತ್ರ ಮಾಡಿ) ನಮಸ್ಕ

1 ತ್ರಿ(ಮು)

ಚಂಡಿಕೆಗಾತ್ಮಕಂಧರದ ಮಾಲೆಯನೊಪ್ಪಿರೆ ಸೂಡಿ ಸತ್ಪ್ರಭಾ
ಮಂಡಿತಮಂಡನಂದುಡಿಸಿ ಸಾರ್ಚೆ ಸುವರ್ಣದುಕೂಲಮಂ ಮನಂ
ಗೊಂಡೆಸೆವಾನಕಪ್ರಕರಮಂ ಮಣಿಚಾಮರವೀಜನಂಗಳಂ
ದಂಡಿಗೆ ಕಾಹಳೀ ಧವಳಶಂಖಮನಿತ್ತಳಪರ್ಣೆ ಕೂರ್ಮೆಯಿಂ ೬೩

ಚಂದಂ ಮಿಗೆ ಶಂಕರನಂ
ನಂದೀಶಾದೀಶಗಣಮನೆನ್ನಂ ಪಾಡೆಂ
ದಿಂದುರವಿಬಿಂಬನಿಭಮಂ
ಪೊಂದಾಳಮನಿತ್ತಳಗಜೆ ಕುವರಂಗೊಲವಿಂ ೬೪

ವ॥ ಅಂತಿತ್ತು ಮನ್ನಿಸಿ ಕಳುಪೆ ತಿರುಜ್ಞಾನ ಸಂಬಂಧೀಶನೀಶನೆಡೆಗೇಳ್ತಂದು ಪೊಂಗಿ ಪೊಡಮಟ್ಟು ಪೊಂದಾಳಮಂ ಪಿಡಿದು ನಿಂದು—

ಧೃತಶಶಿಕಲಂ ಕೃತಭುವನಕುಲಂ ಶತದಳನೇತ್ರನತಂ
ತತಗುಣಭರಣಂ ಜಿತದನುಜರಣಂ ಶ್ರುತಿಗಣವಂದ್ಯಪದಂ
ವಿತರಣನಿಳಯಂ ಭೃತಫಣಿವಳಯಂ ಕ್ರತುಗತನಾಕಿಹರಂ
ರತಿಪತಿಹರಣಂ ಪ್ರತಿಭಜಶರಣಂ ನುತಗಿರಿಜಾರಮಣಂ ೬೫

ರಿಸಿದ ಕುಮಾರನನ್ನು ಪಾರ್ವತಿಯು ದಯಾ ಪೂರ್ಣವಾದ ದೃಷ್ಟಿಯಿಂದ ನೋಡಿ, ೬೩–೬೪. ಅವನ ಚಂಡಿಕೆಗೆ ತನ್ನ ಕೊರಳಲ್ಲಿರುವ ಮಾಲೆಯನ್ನು (ತೆಗೆದು) ಚಂದ ಕಾಣುವಂತೆ ಅಲಂಕಾರಗೊಳಿಸಿ, ಅತ್ಯಂತ ಪ್ರಭೆಯಿಂದ ಅಲಂಕಾರಗೊಂಡ ಆಭರಣಗಳನ್ನು ಚೆಂದ ಕಾಣುವಂತೆ ತೊಡಿಸಿ, ಸುವರ್ಣಮಯವಾದ ರೇಷ್ಮೆಯ ವಸ್ತ್ರವನ್ನು ಉಡಿಸಿ, ಮನೋಹರವಾಗಿ ಶೋಭಿಸುವ ವಾದ್ಯ (ತಮಟೆಗಳೇ ಮೊದಲಾದ ವಾದ್ಯ) ಸಮೂಹವನ್ನು, ರತ್ನದ ಹಿಡಿಕೆಗಳುಳ್ಳ ಚಾಮರ ಮತ್ತು ಬೀಸಣಿಕೆಗಳನ್ನು, ಪಲ್ಲಕ್ಕಿ, ಕಹಳೆ, ಬಿಳಿಯ ಶಂಖಗಳನ್ನು ಆ ಪಾರ್ವತಿಯು ಪ್ರೀತಿಯಿಂದ ಕೊಟ್ಟಳು. 'ಅತ್ಯಂತ ಮನೋಹರವಾಗಿರುವಂತೆ ಶಂಕರನನ್ನೂ, ನಂದೀಶ್ವರನೇ ಮೊದಲಾದ ಶಿವಗಣ ಸಮೂಹವನ್ನೂ, ನನ್ನನ್ನೂ ಸ್ತೋತ್ರ ಮಾಡು' ಎನ್ನುತ್ತ ಸೂರ್ಯಚಂದ್ರ ಬಿಂಬಗಳಿಗೆ ಸಮಾನವೆನಿಸಿದ ಬಂಗಾರದ ತಾಳಗಳನ್ನು ಪಾರ್ವತಿಯು ಪ್ರೀತಿಯಿಂದ ತನ್ನ ಆ ಮಗನಿಗೆ ಕೊಟ್ಟಳು. ವ॥ ಈ ರೀತಿ ಮನ್ನಣೆ ಮಾಡಿ ಕಳಿಸಲು ತಿರುಜ್ಞಾನ ಸಂಬಂಧರು ಈಶ್ವರನ ಸಮೀಪಕ್ಕೆ ಹೋಗಿ, ಅತ್ಯುತ್ಸಾಹದಿಂದ ಸಾಷ್ಟಾಂಗ ಪ್ರಣಾಮ ಮಾಡಿ, ಬಂಗಾರದ ತಾಳಗಳನ್ನು ಹಿಡಿದು ನಿಂತು ೬೫. ಚಂದ್ರನ ಒಂದು ಕಳೆಯನ್ನು ಧರಿಸಿದವನೂ, ಸಮಸ್ತ ಲೋಕಗಳನ್ನು ಸೃಷ್ಟಿಸಿದವನೂ, ವಿಷ್ಣುವಿನಿಂದ ನಮಸ್ಕರಿಸಿಕೊಳ್ಳುವವನೂ, ಅನಂತ ಸದ್ಗುಣಗಳೇ ಆಭರಣವಾಗಿ ಉಳ್ಳವನೂ, ರಥದಲ್ಲಿ ರಾಕ್ಷಸರನ್ನು ಗೆದ್ದವನೂ, ವೇದ ಸಮೂಹದಿಂದ ನಮಸ್ಕರಿಸಿಕೊಳ್ಳಲ್ಪಟ್ಟ ಪಾದವುಳ್ಳವನೂ, ದಾನ ಗುಣಕ್ಕೆ ಆಶ್ರಯನೆನಿಸಿದವನೂ, ಹಾವುಗಳ ಕಂಕಣಗಳನ್ನು ಧರಿಸಿದವನೂ. ದಕ್ಷ

ವ|| ಎಂದು ತುಂಬುರಾದಿಗಳಂ ಪಳಿಕೆಯುದ್ದು ಪಾಡೆ ಸಂಗೀತರಸಕ್ಕೆ ಶಂಕರಂ ಮೆಚ್ಚಿ ಮನಂದಂದು ಸರ್ವಸಿದ್ಧಿಪ್ರದಭಸ್ಮಘಂ[1]ಟಿಕೆಯುಮಂ ಗಗನಗಮನಮಣಿಮಯ ಮಂಟಪಮುಮಂ ಪೊನ್ನಂದಣಮುಮಂ ಮೌಕ್ತಿಕಾತಪತ್ರಮುಮನಪರಿಮಿತ ಧನಕನಕ ವಸನಮಣಿಭರಣಾದಿಗಳನೀಯೆ ಕೊಂಡಲ್ಲಿಂ ಮಣಿಮಯಾಂದೋಳಮನಡರ್ದು ತಳರ್ವಾಗಳೆತ್ತಿದ ಧವಳಾತಪತ್ರದ ಕೆಲಬಲದೊಳ್ಬೀಸುವ ಧವಳ ಚಾಮರದ ಸೂಸುವ ಸೀಗುರಿಯ ನವರತ್ನಮಾಲೆಯ ನಡೆತೋರಣದ ಮುಂದೆ ಮಿಳಿರ್ವ ವೃಷಭ ಧ್ವಜದ ಪಿಂದೆ ಬರ್ಪ ವಿಬುಧಕದಂಬದ ಮೊಳಗುವ ದುಂದುಭಿಯ ಪೂರೈಪ ಶಂಖದ ಡಮಡಮೆಂಬ ಡಿಂಡಿಮದ ಜತಿಗುಡುವ ಮೃದಂಗದ ಬೆಂಬಳಿವಿಡಿದ ಬೊಂಬುಳಿಯ ಕುಣಿವ ನಚ್ಚಣಿಯರ ಬಿರಿದೆತ್ತಿ ಪೊಗಳ್ವ ವಂದಿವೃಂದದ ನೆರೆದು ನೋಳ್ಪ ಪುರಜನದ ಕಳಕಳದ ಪಿರಿಯ ಸಂಭ್ರಮಮಿಂಬುವಡೆಯೆ

ಯಜ್ಞಕ್ಕಾಗಮಿಸಿದ ದೇವತೆಗಳನ್ನು ಕೊಂದವನೂ, ಮನ್ಮಥನನ್ನು ಸುಟ್ಟವನೂ ಸ್ತೋತ್ರ ಮಾಡುವವರನ್ನು ರಕ್ಷಿಸುವವನೂ, ಸೋತ್ರಾರ್ಹಳಾದ ಪಾರ್ವತಿಯ ಪತಿಯೂ (ಆದವನೇ). ವ|| ಹೀಗೆಂದು ತುಂಬುರರೇ ಮೊದಲಾದ ದೇವ ಲೋಕದ ಗಾಯಕರನ್ನು ತಿರಸ್ಕರಿಸುವಂತೆ ಹಾಡಿದನು. (ಇವನ ಈ) ಸಂಗೀತದ ಮಾಧುರ್ಯಕ್ಕೆ ಶಂಕರನು ಮೆಚ್ಚಿ, ಮನವೊಲಿದು ಸಕಲ ಸಿದ್ಧಿಗಳನ್ನುಂಟು ಮಾಡುವ ಭಸ್ಮದ ಘಟ್ಟಿಯನ್ನೂ, ಗಗನದಲ್ಲಿ ಸಂಚರಿಸುವದಕ್ಕೆ ಯೋಗ್ಯವಾದ ರತ್ನ ಖಚಿತ ಮಂಟಪವನ್ನೂ, ಬಂಗಾರದ ಪಲ್ಲಕ್ಕಿಯನ್ನೂ, ಮುತ್ತನ್ನು ಬಿಗಿಸಿ ಮಾಡಿದ ಛತ್ರಿಯನ್ನೂ, ಅಗಣಿತವಾದ ಧನ, ಕನಕ, ವಸ್ತ್ರ, ರತ್ನಾಭರಣವೇ ಮೊದಲಾದವುಗಳನ್ನೂ ಕೊಡಲು, ಅವುಗಳನ್ನು ಸ್ವೀಕರಿಸಿ, ಅಲ್ಲಿಂದ ಮುಂದೆ ರತ್ನಖಚಿತ ಪಲ್ಲಕ್ಕಿಯನ್ನೇರಿ, ಹೊರಡುತ್ತಿರುವಾಗ ಎತ್ತಿ ಹಿಡಿದ ಶ್ವೇತ ವರ್ಣದ ಛತ್ರಿ, ಅಕ್ಕ ಪಕ್ಕಗಳಲ್ಲಿ ಬೀಸುತ್ತಿರುವ ಚಾಮರಗಳು, ಬೀಸುತ್ತಿರುವ ಸೀಗುರಿ (ಮೂರ್ಛಾಲು) ಗಳು, ನವರತ್ನಗಳಿಂದ ಮಾಡಿದ ನಡೆ ದೋರಣಗಳು (ಎತ್ತಿಕೊಂಡು ಹೋಗಲು ಯೋಗ್ಯವಾದ ತೋರಣಗಳು) ಮುಂಭಾಗದಲ್ಲಿ ಹಾರಾಡುತ್ತಿರುವ ವೃಷಭ ಧ್ವಜಗಳು, ಹಿಂಭಾಗದಲ್ಲಿ ಅನುಸರಿಸಿ ಬರುತ್ತಿರುವ ವಿದ್ವಾಂಸರ ಸಮೂಹ, ಧ್ವನಿಮಾಡುತ್ತಿರುವ ನಗಾರಿಗಳು, ಊದುತ್ತಿರುವ ಶಂಖ ಡಮ ಡಮ ಎಂದು ಧ್ವನಿಮಾಡುತ್ತಿರುವ ಡಮರುಗಳು, ಇವುಗಳೊಡನೆ ಮೇಳಗೊಂಡು ನುಡಿಸುತ್ತಿರುವ ಮೃದಂಗ, ಬೆನ್ನು ಹತ್ತಿ ನರ್ತಿಸುತ್ತ ಬರುವ ನರ್ತಕಿಯರು, ಬಿರುದನ್ನು ಉತ್ತರ ಸ್ವರದಿಂದ ಹೊಗಳುವ ವಂದಿಗಳ ಸಮೂಹ ಇವೆಲ್ಲವುಗಳನ್ನು ನೋಡುತ್ತಿರುವ ನಾಗರೀಕ ಕಳಕಳವೆನ್ನುವ ಹಿರಿದಾದ ಸಂಭ್ರಮದ ಆಧಿಕ್ಯದಿಂದ ಕೂಡಿ

---

1 ಘಂ(ಚ)

ತತಜ್ಜೈನವ್ರಾತಗರ್ವಾಚಳಪವಿಧರನೀ ಬಂದನೀ ಬಂದನತ್ಯು
ದ್ಧತಬೌದ್ಧಧ್ವಾಂತವಿಧ್ವಂಸನಖರಕರನೀ ಬಂದನೀ ಬಂದನತ್ಯೂ
ರ್ಜಿತಚಾರ್ವಾಕೋಗ್ರದರ್ವೀಕರಖಗಪತಿಯೀ ಬಂದನೀ ಬಂದನೆಂದ
ದ್ಭುತನಾದಂ ಕರ್ಣಮಂ ಜಕ್ಕುಲಿಸೆ ಕಹಳೆಗಳ್ ಮುಂದೆ ವಿಸ್ತಾರದಿಂದಂ ೬೬

ಕರೆಯೆ ಬಿರಿದೆತ್ತಿ ಜೈನ
ರ್ಜರಿಯೆ ಖಲರ್ಸರಿಯೆ ಬೌದ್ಧರೆರ್ದೆ ಬಿರಿಯೆ ಬುಧ
ರ್ಪೊರೆಯೇಱಿ ಪೊಗಳೆ ನೋಳ್ಪ
ರ್ಪಿರಿದಚ್ಚರಿವೆಱೆಯೆ ತಳರ್ದನತಿ ಸಂಭ್ರಮದಿಂ ೬೭

ಶಿವಲಿಂಗಂಗಳನಲ್ಲಿಗಲ್ಲಿಗೊಲವಿಂದಂ ನೋಡುತುಂ ಪಾಡುತುಂ
ಶಿವಭಕ್ತರ್ಗೊಲವೀವುತುಂ ಪ್ರಣತನಾದುತ್ತುಂಗಚೋಳಂಗೆ ಪೂ
ರ್ಣವಿಳಾಸಂ ಶಿವದೀಕ್ಷೆಯಂ ಕರುಣಿಸುತ್ತಾರ್ಪಿಂದೆ ಮಾಱಾಂತ ಬೌ
ದ್ಧವರೇಣ್ಯದ್ವಿಸಹಸ್ರಮಂ ಜಯಿಸಿ ವಾದಂಗೆಯ್ದು ವಿಕ್ರಾಂತದಿಂ ೬೮

ಕೊಡಿರಲು ೬೬-೬೭. ವಿಸ್ತಾರವಾದ (ಅಧಿಕವಾದ) ಜೈನರುಗಳ ಸಮೂಹದ ಗರ್ವವೆಂಬ ಪರ್ವತಕ್ಕೆ ವಜ್ರಾಯುಧ ಪ್ರಾಯನು ಇಗೋ ಇಲ್ಲೇ ಬಂದನು ! ಅತ್ಯಂತ ಗರ್ವಿಷ್ಠರಾದ ಬೌದ್ಧರೆಂಬ ಕತ್ತಲೆಯ ಸಮೂಹವನ್ನು ವಿಧ್ವಂಸನಗೊಳಿಸುವ ಸೂರ್ಯ ಪ್ರಾಯನಾದವನು ಇಗೋ ಇಲ್ಲೇ ಬಂದನು ! ಬಂದನು ! ಅತ್ಯಂತ ಊರ್ಜಿತಾವಸ್ಥೆಯಲ್ಲಿರುವ ಚಾರ್ವಾಕರೆಂಬ ಭಯಂಕರ ಹಾವುಗಳಿಗೆ ಗರುಡ ಪ್ರಾಯನಾದವನು ಇಗೋ ಇಲ್ಲೇ ಬಂದನು ! ಬಂದನು ! ಎಂದೆನ್ನುವ ಅತ್ಯದ್ಭುತವಾದ ಧ್ವನಿಯು ಕಿವಿಗಳನ್ನು ಚಕ್ಕಳಿಗುಳಿಯಿಡುವ ಹಾಗೆ ಕಹಳೆಗಳು ಮುಂಭಾಗದಲ್ಲಿ ಅಸಂಖ್ಯಾತವಾಗಿ ಬಿರುದನ್ನು ಹೇಳುತ್ತ ಕೂಗುತ್ತಿದ್ದವು. (ಆಗ) ಜೈನರು ಜರುಗಿದರು (ಹಿಂದಕ್ಕೆ ಸರಿದರು) ದುಷ್ಟರು ದೂರ ಸರಿದರು; ಬೌದ್ಧರ ಎದೆಗಳು ಬಿರಿದವು; ವಿದ್ವಾಂಸರು ಉತ್ಸಾಹಗೊಂಡು ಹೊಗಳಿದರು; (ಈ ರೀತಿ) ನೋಡುವವರೆಲ್ಲ ಆಶ್ಚರ್ಯಗೊಳ್ಳುವಂತೆ ಅತ್ಯಂತ ಸಂಭ್ರಮದಿಂದ ಹೊರಟನು. ೬೮. ಅಲ್ಲಿಗಲ್ಲಿಗೆ ಶಿವಲಿಂಗಗಳನ್ನು ಪ್ರೀತಿಯಿಂದ ನೋಡುತ್ತಲೂ ಹಾಡುತ್ತಲೂ, ಶಿವಭಕ್ತರೆನಿಸಿದವರಿಗೆ ಸಂತೋಷವನ್ನುಂಟು ಮಾಡುತ್ತಲೂ, ನಮಸ್ಕರಿಸಿದ ಕುಲೋತ್ತುಂಗ ಚೋಳನೆಂಬ ರಾಜನಿಗೆ ಅತ್ಯಂತ ವೈಭವದಿಂದ ಶಿವದೀಕ್ಷೆಯನ್ನು ಕರುಣಿಸುತ್ತಲೂ, ಪರಾಕ್ರಮದಿಂದ ಎದುರಿಸಿದ ಎರಡು ಸಾವಿರ ಶ್ರೇಷ್ಠ ಬೌದ್ಧ ಧರ್ಮೀಯರನ್ನು ವಾದ ಮಾಡಿ ಶೌರ್ಯದಿಂದ ಜಯಿಸಿದನು.

ಮಱವುಗೆ ಮೇಣವರ್ಗೆ ಶಿವದೀಕ್ಷೆಯನಿತ್ತು ಶಿವೈಕ[1]ನಿಷ್ಠೆಯಿಂ
ತೆಱೆಯಿಸಿ ಕೆತ್ತುದಂ ತಿರುಮರಕ್ಕಡಮೆಂಬ ಪುರಾಂತರಾಳದೊ
ಳ್ಮಿಱುಗುವ ಲಿಂಗದಾಗರದ ಬಲ್ಗದಪಂ[2] ತಿರುವಾಲ ಪಟ್ಟಣ
ಕ್ಕುಱೆ ನಡೆತಂದು ಜೈನಕುಲಮಂ ಸಲೆ ಸೋಲಿಸಿ ವಾದದೇಳ್ಗೆಯಿಂ ೬೯

ಫಣಿಯಗಿಯೆ ಮಡಿದ ಶೂದ್ರನ
ಪೆಣಕ್ಕೆ ಜೀವನಮನಿತ್ತು ಮಧುರಾಹ್ವಯ ಪ
ಟ್ಟಣಕೇಳ್ತಂದಂ ಸದಪಿಂ
ಗುಣನಿಧಿ ತದ್ಭೂಪನರಸಿಯನುಮತದಿಂದಂ ೭೦

ವ॥ ಆಗಳಾ ಪುರದ ಜೈನಬೌದ್ಧಾದಿಗಳಸೂಯೆಯಿಂದರಸನೆಡೆಗೇಳ್ತಂದು—

ಜಿನಧರ್ಮಾವಾಸಮಪ್ಪೀ ನಗರಿಗೆಲೆ ಧರಾಧೀಶ ನೀಂ ಜೈನನೆಂದೆಂ
ಬ ನಿಮಿತ್ತಂ ಭೀತಿ ಮುನ್ನಿಲ್ಲದೆ ಜಿನಮತಕಾಂತಾರದಾವಾಗ್ನಿ ತಾನೆಂ
ದು ನಿತಾಂತಂ ಬಿಂಕದಿಂದಂ ಬಿರಿದ ಪೊಗಳಿಸುತ್ತೆಯ್ದಿದಂ ಬಾಲನೊರ್ವಂ
ಘನಶೈವಂ ತಳ್ವದಿಲ್ಲಿಂ ಪೊಱಮಡಿಸವನಂ ಧೂರ್ತನಂ ದೂತರಿಂದಂ ೭೧

ವ॥ ಎಂದು ಪಿಸುಣ್ಗೆಡೆದ ಶವಣರ್ಗರಸನಿಂತೆಂದಂ—

೬೯. (ಸೋತುಹೋದ ಆ ಬೌದ್ಧರು) ಮರೆ ಹೊಗಲಾಗಿ, ಅವರಿಗೆ ಶಿವ ದೀಕ್ಷೆಯನ್ನು ಕೊಟ್ಟನು. 'ತಿರುಮರಕ್ಕಡಿ' ಎಂಬ ಪಟ್ಟಣದ ಮಧ್ಯದಲ್ಲಿರುವ ಶೋಭಿಸುವ ಶಿವಾಲಯದ ಮುಚ್ಚಿದ ಬಲಾಢ್ಯವಾದ ಕದಗಳನ್ನು ಶಿವನಲ್ಲಿನ ಏಕನಿಷ್ಠೆಯಿಂದ ತೆಗೆಯಿಸಿದನು. 'ತಿರುವಾಲ' ವೆಂಬ ಪಟ್ಟಣಕ್ಕೆ ಬಂದು (ಅಲ್ಲಿದ್ದ) ಜೈನ ಸಮೂಹವನ್ನು ವಾದದ ಪ್ರೌಢಿಮೆಯಿಂದ ಚೆನ್ನಾಗಿ ಸೋಲಿಸಿದನು. ೭೦. ಹಾವು ಕಚ್ಚಿ ಸತ್ತು ಹೋದ ಶೂದ್ರನೊಬ್ಬನ ಹೆಣಕ್ಕೆ ಜೀವವನ್ನು ಕೊಟ್ಟನು; 'ಮಧುರಾ' ಎಂಬ ಹೆಸರಿನ ಪಟ್ಟಣಕ್ಕೆ ಸದ್ಗುಣಗಳ ನಿಧಿಯೆನಿಸಿದ ಆ ಪಟ್ಟಣದ (ಪಾಂಡ್ಯ) ಅರಸನ ಹೆಂಡತಿಯ ಇಚ್ಛೆಯ ಮೇರೆಗೆ ಸಂತೋಷದಿಂದ ಬಂದನು. ವ॥ ಆಗ ಆ ಪಟ್ಟಣದಲ್ಲಿದ್ದ ಜೈನ ಬೌದ್ಧಾದಿಗಳು ಅಸೂಯೆಯಿಂದ ಅರಸನ ಹತ್ತಿರಕ್ಕೆ ಬಂದು ೭೧. ಎಲೈ ಭೂಪಾಲನೇ, ನೀನು ಜೈನಧರ್ಮಿಯನೆಂಬ ನಿಮಿತ್ತದ ಭೀತಿಯೂ ಕೂಡ ಇಲ್ಲದೆ, ಜೈನಧರ್ಮಿಯರ ನಿವಾಸವೆನಿಸಿದ ಈ ಪಟ್ಟಣಕ್ಕೆ, ಜೈನಮತವೆಂಬ ಅರಣ್ಯಕ್ಕೆ ಕಾಡ್ಗಿಚ್ಚು ಎಂಬ ಬಿರುದನ್ನು ಗರ್ವದಿಂದ ಅತ್ಯಧಿಕವಾಗಿ ಹೊಗಳಿಸಿಕೊಳ್ಳುತ್ತ ಓರ್ವ ಬಾಲಕನು ಬಂದಿದ್ದಾನೆ. ಮಹಾಶೈವನಾದ ಆ ಧೂರ್ತನು ಇಲ್ಲಿ ನಿಲ್ಲದಂತೆ ದೂತರಿಂದ ಹೊರಹಾಕಿಸು. ವ॥ ಹೀಗೆಂದು ಚಾಡಿಯನ್ನು ಹೇಳಿದ ಸವಣರಿಗೆ ಅರಸನು ಹೀಗೆ ಹೇಳಿದನು :

1 ಕ್ಯ (ಚ, ಅ) 2 ವಂ(ದ, ಅ)

ಅವನುತ್ತುಂಗಾಖ್ಯ ಚೋಳೇಂದ್ರನ ಗುರುವವನಂ ಸರ್ವಶಾಸ್ತ್ರಜ್ಞನಂ ಬ
ಲ್ಲವರಲ್ತೆಂಬುತದೆಂತಾಂ ಪೊಱಮಡಿಸಿದಪೆಂ ನೀಮೆ ತರ್ಕಂಗಳಿಂ ಸೋ
ಲ್ವವೊಲಾತಂ ವಾದದೊಳ್ಗೆಲ್ದೊಡೆ ತಳರ್ಗುಮಿದೇ ಕಜ್ಜಮೆಂದಾಡೆ ಕೇಳ್ದಾ
ಶ್ರವಣರ್ಕೆಯ್ಕೊಂಡು ಪಾಂಡ್ಯಕ್ಷಿತಿಪವಚನಮಂ ಕಾಯ್ದುವೆತ್ತುರ್ಕಿನಿಂದಂ ೭೨

ಪದಿನೆಂಟು ಸಾಸಿರಂ ದು
ರ್ಮದ ಜೈನರ್ ನೆರೆದು ಬಂದು ವಾದಿಸಿ ಜಯಮಾ
ಗದೆ ಸೋಲ್ತು ಕುವರನೊಳ್ಕೊ
ಳ್ಕುದಿಗೊಂಡಿರದೊಂದು ಕುಹಕಮಂ ಚಿಂತಿಸಿದರ್ ೭೩

ವ॥ ಅಂತು ಚಿಂತಿಸುತ್ತಮಹಿಂಸಾ ಪರಮೋ ಧರ್ಮಯೆಂಬ ನಿಜೋಕ್ತಿಯುಂ ನಿರ್ಮೂಲನಂಗೆಯ್ದಾ ತಿರುಜ್ಞಾನ ಸಂಬಂಧರ್ಪಟ್ಟಿರ್ದ ಗೃಹಕ್ಕೆ ನಟ್ಟಿರುಳ್ಕಿಚ್ಚನಿಕ್ಕೆ ಚುರ್ಚಲಾಱದದು ರೂಪುದಾಳ್ದೆಱಗಿ ಕೆಯ್ಮುಗಿದು ನಿಲಲೊಡನೆ ಕಂಡು—

ಎಲವೊ ಕೃಶಾನು ದಕ್ಷನ ಮುಖಕ್ಕಱಿತಂಗಿಡುತೆಯ್ದಿ ನೀಂ ಸಮು
ಜ್ವಲರುಚಿ ಸಪ್ತಜಿಹ್ವೆಗಳನಂದೊಡನೀಗಿದೆ ವೀರಭದ್ರನಿಂ
ಖಲರ ಬೆಸಕ್ಕೆ ಬಂದೆಗಡ ಮದ್ಗೃಹಕಿಂದೆಲೆ ನಿನ್ನ ಮೂಗನ
ಸ್ಖಲಿತ ಕೃಪಾಣದಿಂದರಿವೆನಿಲ್ಲಿರೆ ತಳ್ವದೆಪೋಗಿ ಪಾಂಡ್ಯನಾ ೭೪

ಒಡಲಂ ಪುಗು ಖಲಜೈನರ
ಕಡು ಬಿಂಕಮನಿಂದು ಕಾಣ್ಬೆನೆಂದಟ್ಟಲೊಡಂ

೭೨–೭೩. ಅವನು ಉತ್ತುಂಗ ಚೋಳಮಹಾರಾಜನ ಗುರುವರನು. ಸರ್ವಶಾಸ್ತ್ರಜ್ಞನಾದ ಅವನನ್ನು ತಿಳಿದವರಲ್ಲವೆಂದು ನಾನು ತಾನೆ ಹೇಗೆ ಹೊರಡಿಸಲಿ. ನೀವೇ ಅವನನ್ನು ವಾದದಲ್ಲಿ ಸೋಲಿಸಿದರೆ ತಾನಾಗಿಯೇ ಹೊರಟುಹೋಗುವನು. ಇದೇ ಸರಿಯಾದ ಮಾರ್ಗ, ಎಂದು ಆ ರಾಜನು ಹೇಳಲಾಗಿ, ಆ ಶ್ರವಣರು ಪಾಂಡ್ಯ ಮಹಾರಾಜನ ಮಾತನ್ನು ಒಪ್ಪಿಕೊಂಡು ಕೋಪಗೊಂಡು ಗರ್ವದಿಂದ ದುಷ್ಟಮದದಿಂದ ಕೂಡಿದ ಹದಿನೆಂಟು ಸಾವಿರ ಮಂದಿ ಜೈನರು ಸೇರಿ ಬಂದು ವಾದಿಸಿದರು. ಆಗ ಆ ಜೈನರಿಗೆ ಜಯವಾಗದೆ ಸೋತು, ಆ ಬಾಲಕನೊಡನೆ ಮತ್ಸರದಿಂದ ತಳಮಳಗೊಂಡು, ತಪ್ಪದೆ ಒಂದು ಮೋಸವನ್ನು ಚಿಂತಿಸಿದರು. ವ॥ ಹಾಗೆ ಚಿಂತಿಸುತ್ತ 'ಅಹಿಂಸಾಪರಮೋಧರ್ಮ' ಎಂಬ ತಮ್ಮ ಧರ್ಮದ ಸತ್ಯವಾಕ್ಯವನ್ನು ಗಾಳಿಗೆತೂರಿ (ನಿರ್ಮೂಲನಗೊಳಿಸಿ) ಆ ತಿರುಜ್ಞಾನ ಸಂಬಂಧರು ಮಲಗಿದ್ದ ಮನೆಗೆ ಮಧ್ಯರಾತ್ರಿಯಲ್ಲಿ ಬೆಂಕಿಯನ್ನು ಹಚ್ಚಿದರು, ಅದು ಸುಡಲಾರದೆ (ಮನುಷ್ಯ) ರೂಪವನ್ನು ಧರಿಸಿ (ಅಗ್ನಿರೂಪಧರಿಸಿ) ಕೈಮುಗಿದು ನಿಲ್ಲಲಾಗಿ ಆ ಕೂಡಲೆ ಕಂಡು—೭೪–೭೫. 'ಎಲೈ ಅಗ್ನಿಯೇ, ಹಿಂದೆ ನೀನು ದಕ್ಷನ ಯಜ್ಞಕ್ಕೆ ತಿಳುವಳಿಕೆಯಿಲ್ಲದೆ ಹೋಗಿ, ವೀರಭದ್ರನಿಂದ ಪ್ರಕಾಶಿಸುವ ಕಾಂತಿಯುಳ್ಳ ನಿನ್ನ ಏಳು ನಾಲಿಗೆಗಳನ್ನು ಹಾಳುಮಾಡಿಕೊಂಡೆ. ಎಲೈ ನೀನು ನನ್ನ ಮನೆಗೆ ಈ ದಿವಸ ದುಷ್ಟರಾದ (ಜೈನ, ಬೌದ್ಧರುಗಳ) ಅಪ್ಪಣೆ

ಮೃಡಸುತನೇಳ್ತಂದನಲಂ
ತೊಡರ್ದರಸನ ತನುವಿನೊಳ್ಪ್ರವೇಶಿಸಿತಾಗಳ್ ೭೫

ಬಿಡದುಗ್ರಜ್ವರರೂಪಿಂ
ದಿಡಿದಡಸಿ ಕವಲ್ತು ಕವಿದು ಕಾಯ್ದುವನೊಡಲಂ
ಕಡುಪಿಂ ಜ್ವಾಲಾವಲಿಯಿಂ
ಸುಡೆ ಪಿಡಿವಿಡಿಗೊಂಡು ತಾಪವಿಹ್ವಳನಾದಂ ೭೬

ಕಱಗಂದಿದಾನನಂ ರಸ
ಮಱತಧರಂ ಕಿಡಿಯನುಗುಳ್ವ ಸುಯ್ಬತ್ತಿದ ಬಾ
ಯ್ಪೊಱಪಾಯ್ವ ಮೆಯ್ಯ ಬಿಸುಪೆ
ಳ್ಚಱನಳ್ಗಿಪ ತಾಪಮುರ್ಬಸಂಬಡುವಸುಗಳ್ ೭೭

ಇರೆ ಕಂದಿ ಕುಂದಿ ಸಂಜ್ವರ
ದುರಿಯಿಂ ಕಾಳ್ಗಿರ್ಚು ತಗುಳ್ದ ಮಿಗದಂತೆ ನೃಪಂ
ಕೊರಗಿ ಕಳವಳಿಸಿ ಪೊರಳು
ತ್ತುರುಳುತ್ತುಂ ಬೇಗೆವಟ್ಟು ಬೇವಸಗೊಂಡಂ ೭೮

ಯಿಂದ ಬಂದೆಯಲ್ಲವೇ ! ಈಗ ನೀನು ಇಲ್ಲಿದ್ದರೆ ನಿನ್ನ ಮೂಗನ್ನು ತೀಕ್ಷ್ಣವಾದ ಖಡ್ಗದಿಂದ ಕತ್ತರಿಸಿಹಾಕಿಬಿಡುತ್ತೇನೆ, ತಡಮಾಡದೆ ಹೋಗಿ ಆ ಪಾಂಡು ರಾಜನ ಶರೀರವನ್ನು ಪ್ರವೇಶಿಸು. ದುಷ್ಟರಾದ ಜೈನರ ಗರ್ವದ ಆಧಿಕ್ಯವನ್ನು ಈ ದಿವಸ ನೋಡಿಕೊಳ್ಳುತ್ತೇನೆ.' ಎಂದು ಆ ಅಗ್ನಿಯನ್ನು ಷಣ್ಮುಖನು ಅಟ್ಟಿಬಿಡಲಾಗಿ ಅದು ಆ ಕೂಡಲೇ ಅರಸನ ದೇಹವನ್ನು ಪ್ರವೇಶಮಾಡಿತು. ೭೬. (ಹೀಗೆ ಅಗ್ನಿಯು ಪಾಂಡುರಾಜನನ್ನು) ಬಿಡದೆ ಉಗ್ರಜ್ವರದ ರೂಪದಿಂದ ತೀವ್ರವಾಗಿ ಪ್ರವೇಶಿಸಿ ಕವಲುಗೊಂಡು ವ್ಯಾಪಿಸಿ, ಕಾವುಗೊಂಡು ಅವನ ಶರೀರವನ್ನು ಜ್ವಾಲೆಗಳ ಸಮೂಹದಿಂದ ಸುಡುತ್ತಿರಲಾಗಿ, ಆ ಅರಸನು ಕೋಪಗೊಂಡು ತಾಪದಿಂದ ನಡುಗುತ್ತಿರುವವನಾದನು. ೭೭–೭೮. ಕಪ್ಪುಬಣ್ಣದಿಂದ ಕಂದಿ ಹೋದ ಮುಖ, ರಸವಿಹೀನವಾದ ತುಟಿ, ಕಿಡಿಗಳನ್ನು ಹೊರಸೂಸುತ್ತಿರುವ ಉಸಿರು, ಬತ್ತಿಹೋದ ಬಾಯಿ, ಹೊರ ಹೊಮ್ಮುತ್ತಿರುವ ಮೆಯ್ಯ ಬಿಸಿ, ಎಚ್ಚರವನ್ನು ತಗ್ಗಿಸುವ ತಾಪ, ಉಬ್ಬಸಗೊಳ್ಳುವ ಪ್ರಾಣಗಳು—ಈ ರೀತಿಯು ಅವನಿಗಾಗಲು, ಹೆಚ್ಚಾದ ಜ್ವರದ ಉರಿಯಿಂದ ಕಂದಿ, ಕುಂದಿ ಕಾಡುಗಿಚ್ಚು ಹತ್ತಿಕೊಂಡ ಮೃಗದ ಹಾಗೆ ಅರಸನು ಕೊರಗಿ ಕಳವಳದಿಂದ

ಪಾಸಿದ ಪಲ್ಲವಪ್ರತತಿ ಪೊತ್ತೆ ವಿಳಾಸಿನಿಯರ್ಕಳಂಗದೊ
ಳ್ಪೂಸಿದ ಚಂದನಂ ಪೊಗೆಯೆ ಸೂಸುವ ಶೀತಳವಾರಿ ಬತ್ತೆ ಮೇ
ಣ್ಬೀಸುವ ಬಾಳೆಯೊಳ್ದಳಿರ ವೀಜನಮುಂ ಕಱಿಗಂದೆ ಕಣ್ಗೆ ಕ
ಟ್ಟಾಸುರವಾಗಿ ಪರ್ಬಿದುದು ಭೂಭುಜನಂಗದೊಳಾ ಮಹಾಜ್ವರಂ ೭೯

ನೋಡಿದೊಡೆ ಕಣ್ಗಳೆವೆಯು
ಳ್ಕಾಡುಗುಮವನಂಗದಲ್ಲಿ ಕೈಸಾರ್ಚೆ ಪುಗು
ಳ್ಮಾಡುಗುಮವನಿದಿರೊಳ್ನಿಲೆ
ಬಾಡುಗುಮಂಗಂಗಳೆಂದೊಡೇವಣ್ಣಿಪುದೋ ೮೦

ವ॥ ಇಂತಳವಿಗಳಿದು ವಿಳಯಾನಲನಂತೆ ಕವಿದಳುರ್ದ ಶಿಖಿಯ ಸೆಕೆಯಿಂ ಕೂಳ್ಗುದಿಗೊಂಡು ಹಮ್ಮೈದಂಬೋದರಸನಿರವಂ ಕೇಳ್ದು ತದ್ಗುರುಗಳಪ್ಪ ಪಿಂಛೈಕಲಾಂಛನರಾದ ಶವಣರೇಳ್ತಂದು ಸಂದಣಿಸಿ ಕುಳ್ಳಿರ್ದರ್—

ಅವನಿಪನಂಗತಾಪದುರಿ ಪತ್ತೆ ಜಿನೇಂದ್ರನ ಜ್ಞಾನಮೆಂಬ ಬ
ಲ್ನೆವದೊಳೆ ಮುಚ್ಚುತಕ್ಷಿಗಳನಂಜಳಿಯೊಳ್ಘನಸಾರವಾರಿಯಂ
ತವೆ ತಳಿದಲ್ಲಿ ಮಂತ್ರಿಸಿ ತದಂಗದೊಳೊಯ್ಯನೆ ಸೂಸೆ ಚುಯ್ಯೆನು
ತ್ತವಿರಳತಪ್ತಲೋಹಕೆಱೆದಂಬುವಿನಂತೆವೊಲಾದುದದ್ಭುತಂ ೮೧

ಹೊರಳಾಡುತ್ತ, ಉರುಳಾಡುತ್ತ ತಾಪಗೊಂಡು ಸಂಕಟಗೊಳ್ಳುತ್ತಿದ್ದನು. ೭೯. (ಅವನಿಗೆ) ಹಾಸಿದ ಚಿಗುರಿನ ಸಮೂಹವು (ಸುಟ್ಟು) ಹೊತ್ತಿತ್ತು; ವಿಳಾಸಿನೀ ಜನಗಳು ದೇಹದಲ್ಲಿ ಹಚ್ಚಿಕೊಂಡಿದ್ದ ಚಂದನವು ಹೊಗೆಯಾಡಿತು ; ತಣ್ಣೀರು ಬತ್ತಿತ್ತು ; ಬೀಸುತ್ತಿದ್ದ ಬಾಳೆಯೆಲೆಯ ಒಳ್ಳೆಯ ಚಿಗುರಿನ ಬೀಸಣಿಕೆಯೂ ಕಪ್ಪಾಗಿ ಕಂದಿತು ; ಈ ರೀತಿಯಲ್ಲಿ ನೋಡುವುದಕ್ಕೆ ಭಯಂಕರವೆನಿಸಿ ರಾಜನ ದೇಹದಲ್ಲಿ ಆ ಮಹಾ ಜ್ವರವು ಹಬ್ಬಿತು. ೮೦. ನೋಡಿದವರ ಕಣ್ಣುಗಳ ಎವೆಗಳೇ ಅಲ್ಲಾಡತೊಡಗಿದವು ; ಅವನ ದೇಹದಲ್ಲಿ ಕೈಯಿಡಲು, ಗುಳ್ಳೆಗಳೇಳತೊಡಗಿದವು ; ಅವನ ಎದುರಿಗೆ ನಿಂತವರ ಅಂಗಾಂಗಗಳೇ ಬಾಡಿಹೋಗುತ್ತಿದ್ದವೆನ್ನುವಾಗ ಅದನ್ನು ವರ್ಣನೆ ಮಾಡುವುದೇನಿದೆ ? ವ॥ ಹೀಗೆ ಗಣನಾತೀತವಾಗಿ ಪ್ರಳಯಕಾಲದ ಅಗ್ನಿಯಂತೆ ಕವಿದು ಸುಡುತ್ತಿರುವ ಬೆಂಕಿಯ ಸೆಕೆಯಿಂದ ಕೂಳು ಕುದಿಯುವಹಾಗೆ ಕುದ್ದು, ಎಚ್ಚರದಪ್ಪಿಹೋದ ಅರಸನ ಸ್ಥಿತಿಯನ್ನು ಕೇಳಿ ಅವನ ನವಿಲುಗರಿಯೇ ಪ್ರಮುಖ ಲಾಂಛನವುಳ್ಳ ಗುರುಗಳಾದ ಜೈನ ಸಂನ್ಯಾಸಿಗಳು ಬಂದು ಒಟ್ಟಾಗಿ ಸೇರಿ ಕುಳಿತುಕೊಂಡರು. ೮೧. ಅವರಿಗೂ ರಾಜನ ದೇಹದ ಉರಿಯೂ ಹತ್ತಿತು. ಜಿನೇಂದ್ರನನ್ನು ಧ್ಯಾನ ಮಾಡುವ ನೆಪದಲ್ಲಿ ಕಣ್ಣುಗಳನ್ನು ಮುಚ್ಚಿದರು ; ಬೊಗಸೆಯಲ್ಲಿ ಪಚ್ಚಕರ್ಪೂರ ಮಿಶ್ರಿತವಾದ ನೀರನ್ನು ಹಿಡಿದುಮಂತ್ರಿಸಿ, ಆಗ ಅವನ ದೇಹದ ಮೇಲೆ ಚೆನ್ನಾಗಿ ಚಿಮುಕಿಸಿದರು; ಆ ನೀರು ವಿಶೇಷವಾಗಿ ಕಾಯ್ದ ಲೋಹದ ಮೇಲೆ ಹಾಕಿದ ನೀರಿನಂತೆ ಅದ್ಭುತವೆನ್ನುವಂದೆ 'ಚುಯ್' ಎಂದು ಬತ್ತಿ

ವ॥ ಅಂತದರ್ಶನೋರಿಗಾಪ್ಯವೆ ಪೆರ್ಚಿದಂತೆ ಮತ್ತೆ ಮಗುಳ್ದು ಪೆರ್ಚೆ ಜಿನಮುನಿಗಳ್ಕೆಲಂಬ ಜ್ವಾಲಾಮಾಲಿನಿಯುಂ ಕುಕ್ಕುಟನಾಥಾದಿಗಳಂ ನಿಷ್ಠೆಯಿಂ ನೆನೆದು ತನ್ಮಂತ್ರಂ ಬಿಡಿದು ಕುಂಚದಿಂ ಬೀಸಲೊಡನದು ಗರಿಗರಿಲನುರಿಯೆ ಮುಂಗಾಣದೆ ಕಂಗೆಟ್ಟು ಮಂಗಾಯಕ್ಕರಸಿಯೆಂಬ ತನ್ನೃಪನರಸಿಯಿಾ ರುಜೆಯುಂ ತೀರ್ಚಲಿವರೆಂತುಂ ನೆಱೆಯರೇಗೆಯ್ವೆನೆಂದು ಚಿಂತಿಸಿ ನೆನೆದಾ ತಿರುಜ್ಞಾನಸಂಬಂಧರಂ ಬರಿಸೆ—

ತೊಳಪ ರಮ್ಯದರಸ್ಮಿತಾನನಮಾಯತಾಕ್ಷಿ ಲಲಾಟಮೊ
ಳ್ಪೊಳೆವ ಭೂತಿಯು ಮೂಱು ರೇಖೆಗಳಕ್ಷಮಾಲಿಕೆ ಮಿಂಚನು
ಚ್ಚಳಿಪ ದಂತಮರೀಚಿ ರತ್ನಕಿರೀಟಮುಜ್ವಳ ಭೂಷಣಾ
ವಳಿ ಸುವರ್ಣದುಕೂಲಮೊಪ್ಪೆ ವಿರಾಜಿಸಿರ್ದ ಕುಮಾರನಂ ೮೨

ವ॥ ನೋಡಿ ಪಾಂಡ್ಯರಾಜನರಸಿ ವಿಶ್ವಾಸಭಾವಂ ಬಲಿದು—

ಜ್ವರದುರಿಪದಿನಳಿದಪನೆ
ಮ್ಮರಸಂ ಪರಿಹಪುದಿಂದು ನೀಮಿಂದನತಿಭಾ
ಸುರಮಹಿಮ ಶೈವಮಂತ್ರಾ
ಭರಣಾನನ ತಳ್ವದೆಂದು ಕೆಯ್ಮುಗಿದೆಂದಳ್ ೮೩

ಹೋಗತೊಡಗಿತು. ವ॥ ಈ ರೀತಿ ಚಿಮುಕಿಸಿದ ನೀರಿನಿಂದ ಉರಿಗೆತುಪ್ಪವನ್ನು ಸುರಿದ ಹಾಗೆ ತಾಪವು ಪುನಃ ಪುನಃ ಹೆಚ್ಚಾಗತೊಡಗಲು, ಜಿನ ಸಂನ್ಯಾಸಿಗಳು ಕೆಲವರು ಜ್ವಾಲಾಮಾಲಿನಿಯನ್ನೂ, ಕುಕ್ಕುಟನಾಥನೇ ಮೊದಲಾದ ದೇವತೆಗಳನ್ನೂ ನಿಷ್ಠೆಯಿಂದ ಸ್ತೋತ್ರಮಾಡಿ, ಆಯಾ ದೇವತೆಗಳ ಸಂಬಂಧದ ಮಂತ್ರಗಳನ್ನು ಹೇಳುತ್ತ ನವಿಲು ಗರಿಯ ಪಿಂಛದಿಂದ ಬೀಸುತ್ತಿರಲು ಆ ಪಿಂಛವೂ ಗರಿಗರಿಲೆಂದು ಉರಿಯಿತು. ಆಗ ಅವರು ಮುಂದೇನೆಂಬುದನ್ನರಿಯದವರಾಗಿ ದಿಕ್ಕುಗೆಟ್ಟು ಹೋಗಲು ಆ ಮಹಾರಾಜನ ಹೆಂಡತಿಯಾದ ಮಂಗಾಯಕ್ಕ ಅರಸಿಯು 'ಈ ಮಹಾರಾಜನ ಜ್ವರದ ಬೇನೆಯನ್ನು ಹೋಗಲಾಡಿಸಲು ಇವರು ಯಾವ ರೀತಿಯಿಂದಲೂ ಸಮರ್ಥರಾಗುವುದಿಲ್ಲ, ಏನು ಮಾಡಲಿ' ಎಂದು ಯೋಚಿಸಿ ಆ ತಿರುಜ್ಞಾನ ಸಂಬಂಧರನ್ನು ನೆನೆದು ಅವರನ್ನು ಬರ ಮಾಡಿಕೊಂಡಳು. ೮೨. ಪ್ರಕಾಶ ಮಾನವಾದ ಮನೋಹರ ಮುಗುಳು ನಗೆಯ ಮುಖ, ದೀರ್ಘವಾದ ಕಣ್ಣು, ಹಣೆಯ ಮೇಲೆ ಶೋಭಿಸುವ ಮೂರು ಬೆರಳಿನ ವಿಭೂತಿ, ರುದ್ರಾಕ್ಷಿಗಳ ಮಾಲೆ, ಮಿಂಚನ್ನು ಹೊರಸೂಸುವ ಹಲ್ಲುಗಳಸಾಲು, ರತ್ನ ಕಿರೀಟ, ಪ್ರಕಾಶಿಸುತ್ತಿರುವ ತೊಟ್ಟ ಆಭರಣ, ಸುವರ್ಣಮಯವಾದ ಉಟ್ಟವಸ್ತ್ರ— ಇವುಗಳಿಂದ ಒಪ್ಪಿ ಶೋಭಿಸುತ್ತಿದ್ದ ಕುಮಾರನನ್ನು (ಕುಮಾರಾಕಾರದ ತಿರುಜ್ಞಾನ ಸಂಬಂಧರನ್ನು)—ವ॥ ನೋಡಿ ಪಾಂಡ್ಯರಾಜನರಸಿಯಾದ ಮಂಗಾಯಕ್ಕನು ಅಧಿಕವಾದ ವಿಶ್ವಾಸವುಳ್ಳ ಭಾವದಿಂದ ಕೂಡಿ—೮೩. ಪ್ರಕಾಶಮಾನವಾದ ಮಹಿಮೆಯುಳ್ಳವನೇ, ಶಿವಸಂಬಂಧವಾದ ಮಂತ್ರವೇ ಆಭರಣವಾಗಿ ಉಳ್ಳವನೇ, ಜ್ವರದ ಉರಿಯು ಏಳಿಯಿಂದ ನಮ್ಮ ಪ್ರಭುವು ಸಾಯುತ್ತಿದ್ದಾನೆ. ಈಗ ತಾವು ಅವನನ್ನು ತಡಮಾಡದೆ

ವ॥ ಆಗಳ್ಜೈನಮುನಿಗಳವಳೆಂದುದಂ ಕೇಳ್ದೀರ್ಷೆಯಂ ತಾಳ್ದು ಸರೋಷಮುಖರ ಮುಖರಾಗಿ—

ಕಾಮಿ ಶಿವನೆಮ್ಮ ದೇವಂ
ಕಾಮವಿದೂರಂ ಗಡಂತಱಿಂದೆಮ್ಮಯ ಮುಂ
ದೇವಮಾತೊ ಶೈವಮಹಿಮೆಯ
ದೀ ಮಹಿಯೊಳ್ಜೈನಮಹಿಮೆಗೇಂ ಪಾಸಟಿಯೋ ೮೪

ಅತಿಕೃತ ಮಹಾತಪಜ್ಜೈ
ನತಪೋಧನರಿವರಿನಳಿಯದೀ ಜ್ವರಮೆಂತುಂ
ಕೃತಕಮತಿ ಶೈವವಟುವಿಗ
ಳಿತಮಪ್ಪುದೆ ಬಱಿದೆ ದೈನ್ಯಮೇಕೆ ಲತಾಂಗೀ ೮೫

ವ॥ ಎಂದ ದುರುಕ್ತಿಗೆ ಕುಮಾರಂ ಕುಪಿತನಾಗಿ —

ಎಲೆ ದುಷ್ಪಾಂಡಿತ್ಯಪಾಷಂಡರಿರ ಹರನದೇಂ ಕಾಮಿಯೇ ಕಾಮನಂ ಗ
ಲ್ಗಲನುದ್ಯದ್ಭಾಳನೇತ್ರಸ್ಫುಟಪಟುಶಿಖಿಯಿಂ ಸುಟ್ಟು ಬೊಟ್ಟಿಟ್ಟು ಕಾಮಾ
ರಿಲಸನ್ನಾಮಕ್ಕೆ ಪಕ್ಕಾದಭವನನಘನಾದ್ಯಂ ತಪಂಗೆಯ್ದು ತನ್ನು
ಜ್ಜ್ವಲವಿದ್ಯಾಶಕ್ತಿಗೊಲ್ದಂಕದೊಳೆ ತಳೆದ ಕಾರುಣ್ಯಪೂರ್ಣಾಂತರಂಗಂ ೮೬

ಪರಿಹರಿಸಬೇಕು, ಎನ್ನುತ್ತ ಕೈಗಳನ್ನು ಮುಗಿಯುತ್ತ ಕೇಳಿಕೊಂಡಳು. ವ॥ ಆಗ ಹೇಳಿದುದನ್ನು ಜೈನ ಮುನಿಗಳು ಕೇಳಿ, ಅಸೂಯೆಯಿಂದ ಕೂಡ ವಿಶೇಷ ರೋಷಾವೇಶದಿಂದ ತುಂಬಿದ ಮುಖವುಳ್ಳವರಾಗಿ—೮೪. ಶಿವನು ಕಾಮುಕನು ; ನಮ್ಮ ದೇವರು ಕಾಮನನ್ನು ದೂರಮಾಡಿದವರಲ್ಲವೇ ! ಆದ ಕಾರಣ ನಮ್ಮೆದುರಿನಲ್ಲಿ ನಿನ್ನದು ಇದಾವಮಾತೋ ! ಲೋಕದಲ್ಲಿ ಈ ಶಿವ ಸಂಬಂಧವಾದ ಮಹಿಮೆಯೆಂಬುದು ಜೈನ ಮಹಿಮೆಗೆ ಏನು ಸಮಾನವಾದೀತು ! ೮೫. ಅತಿಶಯವಾಗಿ ಮಹಾತಪಸ್ಸನ್ನಾಚರಿಸಿದ ಜೈನತಪೋಧನರಾದ ಇವರಿಂದ ಇಳಿಯದ ಈ ಜ್ವರವು ಕೃತಕ ಬುದ್ಧಿಯ ಈ ಶೈವ ಬಾಲಕನಿಂದ ಹೇಗೂ ಇಳಿಯುಲಿಕ್ಕೆ ಸಾಧ್ಯವೇ ? ಹೇ ಲತಾಂಗಿಯೇ ಸುಮ್ಮ ಸುಮ್ಮನೆ ಈ ದೈನ್ಯಭಾವ ಇವನಲ್ಲಿ (ನಿನಗೆ) ಏಕೆ ? ವ॥ ಹೀಗೆಂದ ದುಷ್ಟಮಾತುಗಳಿಗೆ ಆ ಕುಮಾರನು ಕೋಪಗೊಂಡು. ೮೬. ಎಲೈ ಕೆಟ್ಟ ಪಾಂಡಿತ್ಯದಿಂದ ಕೂಡಿದ ಪಾಷಂಡಿಗಳಿರಾ,* ಅದೇನು ? ಶಿವನು ಕಾಮುಕನೇ ? ಮನ್ಮಥನನ್ನು ಗರಿಗರಿಲೆಂದು ಭಯಂಕರವೂ, ಶ್ರೇಷ್ಠವೂ ಆದ ಹಣೆಗಣ್ಣಿನ ಸ್ಪಷ್ಟವಾದ ಸಾಮರ್ಥ್ಯದಿಂದ ಕೂಡಿದ ಬೆಂಕಿಯಿಂದ ಸುಟ್ಟು ಬೊಟ್ಟಿಟ್ಟು 'ಕಾಮಾರಿ' ಎಂಬ ಶ್ರೇಷ್ಠ ನಾಮಕ್ಕೆ ಕಾರಣನಾದ ಪಾಪ ದೂರನಾದ ಶಿವನು ಆದ್ಯನು. ನನ್ನ ಉಜ್ವಲವೂ ಶೈವ ಸಂಬಂಧವೂ ಆದ ವಿದ್ಯೆ ಮತ್ತು ಶಕ್ತಿಗಳಿಗೆ ಒಲಿದು ತೊಡೆಯ ಮೇಲೆ ಕುಳ್ಳಿರಿಸಿಕೊಂಡ ಕಾರುಣ್ಯ ಪೂರ್ಣವಾದ

---

*ಪಾಷಂಡಿ : ಸಂಸಾರ ಬಂಧ ಕಾರಣಗಳೆನಿಸಿದ ಅಸತ್ಯ ಶಾಸ್ತ್ರಗಳನ್ನು ಹೇಳುವವರು.

ತರುಣಿಯನುಳಿದನಿತರ್ಕೀ
ಶ್ವರನಪ್ಪನೆ ಜಗಕೆ ನಿಮ್ಮ ಜಿನನಮಮ ಮಹೇ
ಶ್ವರನಂತೆ ಭೀಷ್ಮನುಂ ವಾ
ನರಪತಿಯುಂ ವಧುವನುಳಿಯರೇ ವಸುಮತಿಯೊಳ್ ೮೭

ಜಿನಭಕ್ತರಳವುಮೀಶನ
ಘನಭಕ್ತರ ಮಹಿಮೆಯುಮಱಿಯಲಕ್ಕುಂ ನಿಮ್ಮಾ
ಜನಪನೆಡದರೆಯೊಡಲ ರುಜೆ
ಯನೆ ಪರಿಯಿಸಿರೆ ಪರಿವೆನುಳಿದ ದೇಹಜ್ವರಮುಂ ೮೮

ವ॥ ಎಂದು ದೂಷಕಜನಜಲದಝಂಝಾಪ್ರಭಂಜನಂ ಗಂಭೀರನಾದದಿಂ ಪೂಣ್ದರಸನ ವಾಮಾರ್ಧಾಂಗಮನವರ್ಗಿತ್ತು ದಕ್ಷಿಣಾರ್ಧಾಂಗಮಂ ತಾಂ ಕೆಯ್ಕೊಂಡು—

ಅಮರ್ದಂ ಸಿಂಪಿಸುವಂತೆ ಮಂತ್ರಿತಮಹಾಶ್ರೀಭಸ್ಮಮಂ ಸಿಂಪಿಸು
ತ್ತೆ ಮಹೀಪಾಲನ ದಕ್ಷಿಣಾರ್ಧತನುಗೊಲ್ದಾಲೇಪನಂಗೆಯ್ವುದುಂ
ಶಮನಂಬೆತ್ತು ತದಂಗದರ್ಧದೆಡೆಯುಂ ಬಿಟ್ಟೆಯ್ದಿ ವಾಮಾಂಗದ
ರ್ಧಮನಾ ಕಾಯ್ಪಿನೊಳೊಂದುತಿರ್ಮಡಿಸಿ ತಾಪಂಗೆಯ್ದುದಾ ಪಾವಕಂ ೮೯

ಅರೆಯೊಡಲೊಳ್ಶೀತಳತೆಯು
ನರೆಯೊಡಲೊಳ್ತೀವ್ರತಾಪಮುಂ ತಳೆದ ಮಹೀ
ಶ್ವರನಂಗಂ ತಾಳ್ದುದು ನಿ
ರ್ಝರದಾವಪರೀತ ಪಾರ್ಶ್ವಭೂಧರದಿರವಂ ೯೦

ಅಂತರಂಗವುಳ್ಳವನು. ೮೭. ನಿಮ್ಮ ಜಿನನು ತರುಣಿಯನ್ನು ಬಿಟ್ಟವನೆಂದಮಾತ್ರಕ್ಕೆ ಈ ಜಗತ್ತಿಗೆ ಈಶ್ವರ ನೆನಿಸುವನೇ ? ಅಮಮ ! ಲೋಕದಲ್ಲಿ ಭೀಷ್ಮನೂ, ಹನುಮಂತನೂ ತರುಣಿಯನ್ನು ಬಿಟ್ಟಮಾತ್ರದಿಂದ (ನಿಮ್ಮ ಜಿನನಂತೆ) ಮಹೇಶ್ವರರೇ ಆಗುವರೇ ? (ಎಂದನು). ೮೮. ಜಿನಭಕ್ತರ ಸಾಮರ್ಥ್ಯವೇನು ? ಈಶ್ವರ ಭಕ್ತರ ಸಾಮರ್ಥ್ಯವೇನು ? ಎಂಬುದು ತಿಳಿದು ಬರುವುದು ! ನಿಮ್ಮ ಈ ಮಹಾರಾಜನ ಅರ್ಧದೇಹದ ರೋಗವನ್ನು ಪರಿಹರಿಸಿರಯ್ಯ ! ನಾನು ಉಳಿದ ದೇಹ ಜ್ವರವನ್ನು ನಿವಾರಿಸುತ್ತೇನೆ ! ವ॥ ಹೀಗೆಂದು ದೂಷಕ ಜನವೆಂಬ ಮೋಡಗಳಿಗೆ ಬಿರುಗಾಳಿಯಂತಿರುವ ಆ ಕುಮಾರನು ಗಂಭೀರ ಧ್ವನಿಯಿಂದ ಪ್ರತಿಜ್ಞೆಮಾಡಿ, ಎಡಭಾಗದ ಅರ್ಧದೇಹದ ಬಾಧೆಯನ್ನು ಪರಿಹರಿಸಲು ಅವರಿಗೆ ಕೊಟ್ಟು, ಬಲಭಾಗದ ಅರ್ಧ ಅಂಗವನ್ನು ತಾನು ಸ್ವೀಕರಿಸಿ, ೮೯. ಅಮೃತವನ್ನು ಸಿಂಪಡಿಸುವಂತೆ ಮಂತ್ರಿಸಲ್ಪಟ್ಟ ಘನವಾದುದೂ, ಮಂಗಳಕರವಾದುದೂ ಆದ ಭಸ್ಮವನ್ನು ಸಿಂಪಡಿಸುತ್ತ ಆ ರಾಜನ ಬಲಭಾಗದ ಅರ್ಧದೇಹಕ್ಕೆ ಪ್ರೀತಿಯಿಂದ ಧರಿಸಲಾಗಿ, ಆ ಅಗ್ನಿಯು ಆ ಅರ್ಧ ಶರೀರದ ಸ್ಥಾನವನ್ನು ಬಿಟ್ಟು ಉಪಶಮನಗೊಂಡು, ಎಡಭಾಗದ ಅರ್ಧದೇಹದಲ್ಲಿ ಎರಡು ಪಟ್ಟು ಕಾವನ್ನು ಹೊಂದಿ, ತಾಪಕ್ಕೀಡು ಮಾಡಿತು. ೯೦. ದೇಹಾರ್ಧದಲ್ಲಿ ತಂಪನ್ನೂ, ಅರ್ಧದೇಹದಲ್ಲಿ ಅತ್ಯಂತ ತಾಪವನ್ನೂ ಹೊಂದಿದ ಮಹಾರಾಜನ ದೇಹವು ಗಿರಿ ನದಿ ಮತ್ತು ಕಾಡುಗಿಚ್ಚುಗಳಿಂದ

ಸಸಿ ಬಿಸುಪನುಗುಳ್ದುದಾ ರವಿ
ಸಸಿಯಂತಿರೆ ತಣ್ಪನುಗುಳ್ದುದೆಡಗಣ್ಬನ್ನೀ
ರ್ಮಸಗುತ್ತಿರ್ದುದು ಬಲಗ
ಣ್ಮಸುಗುತಲ್ಪ್ತಿರ್ದುದು ನರೇಂದ್ರನಂಗದೊಳಾಗಳ್ ೬೧

ಇಡಿದಡಸಿ ಕವಿದು[1] ಕಡಲಂ
ಕುಡಿದಳುರ್ಜುರ್ಬ[2]ವಾಗ್ನಿಯಂತೆ ತನ್ನರೆಯೊಡಲಂ
ಕಡುಪಿಂ ಸುಡೆ ಶಿಖಿ ಮಿಟ್ಟನೆ
ಮಿಡುಕುತೆ ಬಾಯ್ವಿಡುತೆ ನೃಪತಿ ಸಿಡಿಮಿಡಿಗೊಂಡಂ ೬೨

ವ॥ ಅಂತು ಬಳಲ್ದರಸನವಸ್ಥೆಯುಂ ಕಂಡು ಜೈನಮುನಿಗಳ್ಸ್ವಭಾಗಗತದೇಹಾರ್ಧರಕ್ಷೆಯುಂ ಬಹುವಿಧದಿಂ ನೆಗಳ್ಚೆ ತದ್ದೇಹದಾಹಮುಚ್ಚಳಿಯದೆ ಮತ್ತೆಯುಂ ಪೆರ್ಚೆ ನಿಜ ಮಂತ್ರತಂತ್ರಂಗಳೆಲ್ಲಂ ವ್ಯರ್ಥಮಾಗಲೊಡನವರೇನಂ[3]ಮೊನಲ[3]ಱಿಯದೆ ಖಿನ್ನಮುಖರಾಗಿ ಬಿನ್ನನಿರೆ ನಿಜಾರ್ಧಪ್ರಾಣಮಿತ್ತ ಶೈವಮುನಿಯುಂ ದೈನ್ಯದೃಷ್ಟಿಯಿನರಸನೀಕ್ಷಿಸುತ್ತೆ ಕರಮಂ ಮುಗಿದು—

ತಿಳಿದೆಂ ದೇವೇಶ ನಿಮ್ಮೊ ಮತದ ಮಹಿಮೆಯುಂ ನಿಮ್ಮ ಸಾಮರ್ಥ್ಯಮಂ ದು
ರ್ಬಳಜೈನಾಚಾರ್ಯರಿಂ ಮಳ್ಗದ ರುಜೆಯಂನಿದಂ ಪೂಣ್ದು ಪೋಗಾಡಿದಿರ್ನಿ

ಸುತ್ತುವರಿಯಲ್ಪಟ್ಟ ಪರ್ವತದ ಎರಡು ಪಾರ್ಶ್ವಗಳ ರೀತಿಯನ್ನು ಹೊಂದಿತು. ೬೧. ಆ ರಾಜೇಂದ್ರನ ದೇಹದಲ್ಲಿ ಆಗ (ಎಡಗಡೆಯಿರುವ) ಚಂದ್ರನಾಡಿಯು ಬಿಸಿಯನ್ನು ಉಗುಳುತ್ತಿತ್ತು ; (ಬಲಗಡೆಯಿರುವ) ಸೂರ್ಯನಾಡಿಯು ಚಂದ್ರನಂತೆ ತಂಪನ್ನು ಉಗುಳುತ್ತಿತ್ತು ; ಎಡಗಡೆಯ ಕಣ್ಣು ಕಾಂಬ್ದು ನೀರಿನಿಂದ ಕಾಂತಿ ಹೀನವಾಗುತ್ತಿತ್ತು ; ಬಲಗಡೆಯ ಕಣ್ಣು ಕಾಂತಿಯಿಂದ ಅರಳುತ್ತಿತ್ತು. ೬೨. ದಟ್ಟವಾಗಿ ಒಳಹೊಕ್ಕು ವ್ಯಾಪಿಸಿ ಸಮುದ್ರವನ್ನೇ ಕುಡಿದು ಸುಡುತ್ತಿರುವ ಬಡಬಾಗ್ನಿಯಂತೆ ತನ್ನ ಅರ್ಧದೇಹವನ್ನು ಶೌರ್ಯದಿಂದ ಬೆಂಕಿಯು ಸುಡಲು ಆ ಅರಸನು ಮಿಡು ಮಿಡನೆ ಮಿಡುಕುತ್ತ (ವಿಲಿ ವಿಲಿ ಒದ್ದಾಡುತ್ತ) ಬಾಯಿ ಬಿಟ್ಟು ಅಳುತ್ತ ಸಂಕಟಗೊಳ್ಳುತ್ತಿದ್ದನು. ವ॥ ಈ ರೀತಿ ಬಳಲುತ್ತಿರುವ ಅರಸನ ದುರವಸ್ಥೆಯನ್ನು ಕಂಡು, ಜೈನ ಮುನಿಗಳು ತಮ್ಮ ಪಾಲಿಗೆ ಬಂದ ಅರ್ಧದೇಹದ ರಕ್ಷಣೆಯನ್ನು ಅನೇಕ ಬಗೆಯಲ್ಲಿ ಹಲವಾರು ರೀತಿಯ ಚಿಕಿತ್ಸೆಗೊಳಗುಮಾಡಿದರೂ ಆ ದೇಹಾರ್ಧಭಾಗದ ದಾಹವು ಸ್ವಲ್ಪವೂ ಕಡಿಮೆಯಾಗದೆ ಮತ್ತೆ ಮತ್ತೆ ಹೆಚ್ಚುತ್ತಲೇ ಇತ್ತು. ತಾವು ಮಾಡಿದ ಮಂತ್ರ ತಂತ್ರಗಳೆಲ್ಲವೂ ವ್ಯರ್ಥವಾಗ ತೊಡಗಲು ಅವರು ಏನನ್ನೂ ಮಾತನಾಡಲರಿಯದವರಾಗಿ, ಖಿನ್ನಗೊಂಡ ಮುಖದಿಂದ ತೆಪ್ಪಗೆ ಬಾಯಿ ಮುಚ್ಚಿರಲು, ತನ್ನ ಭಾಗಕ್ಕೆ ಬಂದ ದೇಹಾರ್ಧದ ಪ್ರಾಣವನ್ನು ಕೊಟ್ಟ ಶೈವ ಮುನಿಯನ್ನು ದೀನ ಭಾವದಿಂದ ಆ ಅರಸನು ನೋಡುತ್ತ ಕೈಗಳನ್ನು ಮುಗಿದು. ೬೩. 'ಹೇ ದೇವೇಶ, ನಿತ್ಯವೂ ಉಜ್ವಲವಾದ ಕಾರುಣ್ಯದಿಂದ ಕೂಡಿರುವವನೇ, ನಿಮ್ಮ ಈ

1 ದ(ಮು, ಗ, ಜ) 2 ರ್ದಾ(ದ) 3 ಮಂನ (ಅ, ಗ, ಚ, ಮು)

ಮ್ಮಳವಂ ಬಣ್ಣಿಪ್ಪನಾವಂ ಬಿಡದರೆಯೊಡಲೀ ವಹ್ನಿಯಂ ನೂಂಕಿ ನಿತ್ಯೋ
ಜ್ವಳ ಕಾರುಣ್ಯಾಬ್ಧಿ ನೀನೇ ಪೊರೆ ನಿನಗೆ ಶರಣ್ಬೊಕ್ಕೆನೆಂದಂ ನರೇಂದ್ರಂ ೯೩

ವ॥ ಎಂಬುದುಮಾಗಳಂತೆ ಜಿನಮತವನಜವನಗಜೇಂದ್ರಂ ಶಿವಮಂತ್ರಮನುಚ್ಚರಿಸುತ್ತುಮಾ ತಪ್ತಾರ್ಧಶರೀರದೊಳ್ ಶ್ರೀಭಸಿತಮಂ ತಳಿಯೆ—

ಪರೆದುದವನಂಗದುಗ್ರ
ಜ್ವರಮಾಗಳೆ ಶಿವಕುಮಾರಶಶಿಭಸಿತಲಸ
ತ್ಕರಪಾತದಿಂ ಸುಧಾಸಾ
ಗರದೊಳ್ಮಿಗೆ ಮುಳುಗಿದಂತಿರಾದಂ ಭೂಪಂ ೯೪

ಮಿಗೆ ಕಾಸಿ ತಿರ್ದಿದಂತೆವೊ
ಲಗಲದ ಬೆಂಗೂನುಮಳಿಯೆ ಸಸಿನಂದಳೆದಾ
ಜಗತೀಪತಿಯಂಗಂ ಪೊಗ
ರುಗೆ ಸೌಂದರ್ಯಮನೆ ತಾಳ್ದು ಕಂಗೊಳಿಸಲೊಡಂ ೯೫

ವ॥ ಅಂದು ಮೊದಲ್ಗೂನ ಪಾಂಡ್ಯನಾಮಂ ಪೋಗಿ ಸೌಂದರಪಾಂಡ್ಯನೆಂಬ ನಾಮಂ ಪ್ರಸಿದ್ಧಮಾಗಿರ್ಪುದಾ ಭೂಕಾಂತಂ ಕಾಂತೆಯೊಡನೆ ಸಾಶ್ಚರ್ಯಮುದಮನಾಳ್ದು ಸಾಷ್ಟಾಂಗಮೆಱಗಿ

ಮತದ ಮಹಿಮೆಯನ್ನೂ, ನಿಮ್ಮ ಶಕ್ತಿಯನ್ನೂ, ದುರ್ಬಲರಾದ ಜೈನಾಚಾರ್ಯರಿಂದ ವಾಸಿಗೊಳ್ಳದ ಈ ಬೇನೆಯನ್ನೂ, ಪ್ರತಿಜ್ಞೆಮಾಡಿ ನೀವು ಹೋಗಲಾಡಿಸಿದ ನಿಮ್ಮ ಸಾಮರ್ಥ್ಯವನ್ನೂ ವರ್ಣಿಸುವವನಾವನು ? ತಪ್ಪದೆ ಅರ್ಧದೇಹದ ಈ ಉರಿಯನ್ನು ನೀನೇ ನಿವಾರಿಸಿ ನನ್ನನ್ನು ರಕ್ಷಿಸು. ನಿನಗೆ ಶರಣು ಹೊಕ್ಕಿದ್ದೇನೆ' ಎಂದು ಆ ರಾಜನು ಹೇಳಿದನು. ವ॥ ಹೀಗೆಂದು (ಆ ಅರಸನು) ಹೇಳಲು ಅಂತೆಯೇ ಜೈನ ಮತವೆಂಬ ಕಮಲಗಳ ಸಮೂಹಕ್ಕೆ ಶ್ರೇಷ್ಠ ಆನೆಯಂತಿರುವ ಆ ಶೈವ ಮುನಿಯು ಶಿವಮಂತ್ರವನ್ನು ಉಚ್ಚರಿಸುತ್ತ ತಪ್ತಗೊಂಡ ಆ ಅರ್ಧದೇಹದಲ್ಲಿ ಮಂಗಳಕರವಾದ ಭಸ್ಮವನ್ನು ಹಚ್ಚಲು. ೯೪. ಆ ಶಿವಕುಮಾರನಾದ ಜ್ಞಾನ ಸಂಬಂಧನ ಚಂದ್ರನಂಥ ಪಾದಿಯಲ್ಲಿರುವ ಪವಿತ್ರ ಭಸ್ಮದ ಧರಿಸುವಿಕೆಯಿಂದ ಆ ಕೂಡಲೇ ಆ ಅರಸನ ದೇಹದಲ್ಲಿದ್ದ ಉಗ್ರ ಜ್ವರವು ನಾಶವಾಯಿತು. ಅರಸನು ಅಮೃತದ ಸಾಗರದಲ್ಲಿ ಚೆನ್ನಾಗಿ ಮುಳುಗಿದವನಂತೆ ಆದನು. ೯೫. ಚೆನ್ನಾಗಿ ಕಾಸಿ ತಿದ್ದಿ ಸರಿ ಪಡಿಸಿದ ರೀತಿಯಲ್ಲಿ (ಏನು ಮಾಡಿದರೂ) ಹೋಗದೆ ಇದ್ದ ಆ ಅರಸನ ಗೂನುಗೊಂಡ ಬೆನ್ನೂ ಕೂಡ ನಾಶವಾಯಿತು. (ಸರಿಯಾಯಿತು) ಆನಂದಗೊಂಡ ಭೂಮೀಶ್ವರನ ದೇಹವು ಹೊರಹೊಮ್ಮುತ್ತಿರುವ ಕಾಂತಿಯಿಂದ ಕೂಡಿ, ಸೌಂದರ್ಯವನ್ನು ಹೊಂದಿ ಕಂಗೊಳಿಸುತ್ತಿರಲಾಗಿ. ವ॥ ಅದಕ್ಕೂ ಪೂರ್ವದಲ್ಲಿ 'ಗೂನ ಪಾಂಡ್ಯ' ನೆಂದು ಕರೆಯುತ್ತಿದ್ದ ಹೆಸರು ಹೋಗಿ, 'ಸೌಂದರ ಪಾಂಡ್ಯ' ಎಂಬ ಹೆಸರು ಪ್ರಸಿದ್ಧವಾಯಿತು. ಆ ಭೂವಲ್ಲಭನು ತನ್ನ ಹೆಂಡತಿ ಸಹಿತವಾಗಿ ವಿಶೇಷ ಆಶ್ಚರ್ಯ ಭರಿತನಾಗಿ ಸಂತೋಷವನ್ನು ಹೊಂದಿ, ಸಾಷ್ಟಾಂಗ ನಮಸ್ಕಾರ

ಕೂರ್ವೆಯಿಂ ಕೊಂಡಾಡಿ ತಚ್ಚರಣಮಂ ಶರಣ್ಬೊಕ್ಕವರ್ಗೆ ಮಣಿಮಕುಟ ಸುವರ್ಣಾಭರಣ ಸುವಸನಾದಿಗಳಂ ಸಮರ್ಪಿ[4]ಸಿ ಪಾದಪೂಜೆಯುಂ ರಚಿಸಿ ಪದುಳಮಿರ್ಪಿನಂ ಜ್ಞಾನಸಂಬಂಧರ ಶಿಷ್ಯನೊರ್ವಂ ಪರಾಜಯಂಬಡೆದು ಸವಿಷಾದ ಕುಪಿತರಾಗಿರ್ದ ಜಿನಮುನಿಗಳಂ ನೋಡುತಿಂತೆಂದಂ—

ಜಿನನೆ ಘನವೆಂದು ಗಳಪಿದ
ಮುನಿಗಳೆ ನಿಮಗಾಯ್ತು ಸೋಲಮೆಮಗಾಯ್ತು ಜಯಂ
ಜನಪರುಜೆ ನಿಮಗಸಾಧ್ಯಮಿ
ದೆನಿಸುತ್ತೆಮಿಂದೆ ಪರಿದ ಕಾರಣದಿಂದಂ ೯೬

ವ॥ ಎನೆ ಜೈನವರ್ಾಕೊರ್ಂಡು ವೈದ್ಯಸಾಧ್ಯನೃಪತಾಪಹರಣಮಾತ್ರದಿಂ ನಿಮಗೆ ಜಯಮೆಂತಕ್ಕುಮೀಗಳೆರಡು ಪತ್ರಿಕೆಯೊಳೆ ಜಿನ–ಶಿವಶಾಸನಂಗಳಂ ಬರೆದುರಿವಗ್ನಿಯೊಳಿಟ್ಟೊಡಾವ ಪತ್ರಿಕೆ ಬೇಯದುಳಿದುದದರಿನಾ ಮತಕ್ಕೆ ಗೆಲ್ಲಂ ಬೇದುದದರಿಂ ಸೋಲಮಕ್ಕುಮಿದು ನಿಮಗೆ ಸಮ್ಮತ ಮಾದೊಡಂತೆ ಗೆಯ್ವುದುಮೆಂಬುದುಮಾ ನುಡಿಯಂ ಜ್ಞಾನ ಸಂಬಂಧರೊಡಂಬಟ್ಟಿರಡುಂ ಪತ್ರದೊಳ್ ಶಿವನಾಮ ಜಿನನಾಮಂಗಳಂ ಬರೆದವರುಂ ತಾನುಮರಸಿನ ಕೆಯ್ಯೊಳೀವಾಗಳೆಲ್ಲರುಂ ಕೇಳ್ವಿನಮಲ್ಲಿ—

ಮಾಡಿ, ಪ್ರೀತಿಯಿಂದ ಕೊಂಡಾಡಿದನು. ಆ ಜ್ಞಾನಸಂಬಂಧರ ಪಾದವನ್ನು ಶರಣು ಹೊಕ್ಕು ಅವರಿಗೆ ರತ್ನ ಖಚಿತವಾದ ಕಿರೀಟ, ಬಂಗಾರದ ಆಭರಣಗಳು, ಶ್ರೇಷ್ಠವಸ್ತ್ರಗಳೇ ಮೊದಲಾದುವನ್ನು ಸಮರ್ಪಣೆಮಾಡಿ ಪಾದಪೂಜೆಯನ್ನು ಮಾಡಿ, ಸಂತೋಷದಿಂದ ಇರುತ್ತಿದ್ದನು. ಜ್ಞಾನಸಂಬಂಧರ ಒಬ್ಬ ಶಿಷ್ಯನು ಸೋತು ಹೋಗಿ ವಿಷಾದದಿಂದಲೂ, ಕೋಪದಿಂದಲೂ ಕೂಡಿದ ಜೈನ ಸಂನ್ಯಾಸಿಗಳನ್ನು ನೋಡುತ್ತ ಹೀಗೆಂದನು : ೯೬. ಎಲೈ ಮುನಿಗಳೇ, ಜಿನನೇ ಶ್ರೇಷ್ಠನೆಂದು ವ್ಯರ್ಥವಾಗಿ ಮಾತನಾಡಿದ ನಿಮಗೆ ಸೋಲೂ, ನಮಗೆ ಜಯವೂ ಅರಸನ ಬೇನೆಯು ನಿಮಗೆ ಅಸಾಧ್ಯವೆನಿಸಿ ನಮ್ಮಿಂದ ಪರಿಹಾರವಾದ ಕಾರಣದಿಂದ ಆದಂತಾಯಿತು. ವ॥ ಹೀಗೆನ್ನಲು ಜೈನನು ಪ್ರತಿಭಟಿಸುತ್ತ (ಓರ್ವ) ವೈದ್ಯನಿಂದ ನಿವಾರಣೆಗೊಳಿಸ ಬಹುದಾದ ಅರಸನ ತಾಪವನ್ನೂ ಹರಣಮಾಡಿದ ಮಾತ್ರದಿಂದ ನಿಮಗೆ ಹೇಗೆ ಜಯವಾದೀತು ! ಈಗ ಎರಡು ಓಲೆಯ ಎಲೆಗಳಲ್ಲಿ (ಒಂದರಲ್ಲಿ) ಜಿನಶಾಸನವನ್ನೂ (ಮತ್ತೊಂದರಲ್ಲಿ) ಶಿವಶಾಸನವನ್ನೂ ಬರೆಯಿಸಿ, ಅವನ್ನು ಉರಿಯುತ್ತಿರುವ ಅಗ್ನಿಗೆ ಹಾಕಿದರೆ, ಯಾವ ಪತ್ರಿಕೆ ಬೇಯದೆ ಉಳಿಯುವುದೋ ಅದರ ಮೇಲಿಂದ ಆ ಮತಕ್ಕೆ ಗೆಲುವು ; ಸುಟ್ಟರೆ ಅದರಿಂದ ಸೋಲು ಆಗುವುದು. ಈ ರೀತಿ ನಿಮಗೆ ಒಪ್ಪಿಗೆ ಯಾದರೆ, ಹಾಗೆಯೇ ಮಾಡೋಣ ಎನ್ನಲಾಗಿ, ಆ ಮಾತನ್ನು ತಿರುಜ್ಞಾನ ಸಂಬಂಧರು ಒಪ್ಪಿಕೊಂಡು, ಓಲೆಗಳಲ್ಲಿ ಶಿವನಾಮ–ಜಿನನಾಮಗಳನ್ನು ಬರೆದು ಜೈನರೂ ತಾನೂ ಬರೆದು ಅರಸನ

4 ರ್ಚಿ(ಚ)

ಶುನಕನ ದಂತಮುಂ ಕನಕಮುಂ ಸರಿತೂಗಿದೊಡಾ ಸುವರ್ಣಕಾ
ಶುನಕನ ದಂತಮೇಂ ಸರಿಯೆ ಮುತ್ತಿನೊಳೊಂದು ವರಾಟಮುಂ ತುಲಾ
ವಿನಿಹಿತಪಾತ್ರೆಯಲ್ಲಿರಿಸಿ ತೂಗೆ ಸಮಾನಮೆ ತದ್ವರಾಟಮಾ
ಘನರುಚಿ ಮೌಕ್ತಿಕಕ್ಕೆ ಜಿನಮಂತ್ರದ ಪತ್ರಿಕೆ ಶೈವಮಂತ್ರದಾ ೯೭

ಘನಪತ್ರಿಕೆಗೆಣೆವೆರ್ಕುಮೆ
ಜನಮಧ್ಯದೆ ಕೂಡಿ ಗಣನೆದಾಳ್ದೊಡವೀ ಲೇ
ಖನದತಿಶಯಮುಮಂ ಕಾಣ್ಬೆ
ಜನಪತಿ ನೀನೆಂದು ಪೂಣ್ದು ವಂಗಿತ್ತನದಂ ೯೮

ವ॥ ಅರಸನಾ ಲೇಖನದ್ವಯಮುಮಂ ಕೆಯ್ಕೊಂಡುರಿವಗ್ನಿಯೊಳೊರ್ಮೆ ತಳ್ವದಿಡಲೊಡನೆ ಜೈನಪತ್ರಂ ತನ್ಮನೋರಥದೊಡನೆ [1]ಗರಿ[1]ಗರಿಲನುರಿದು ಗಳಿಲನೆ ಭಸ್ಮಮಾದುದಲ್ಲಿ—

ಕೈಯಲ್ಲಿ ಕೊಡುವಾಗ ಎಲ್ಲರೂ ಕೇಳುವಂತೆ ಅಲ್ಲಿ. ೯೭. 'ನಾಯಿಯ ಹಲ್ಲನ್ನೂ ಬಂಗಾರವನ್ನೂ ಸರಿದೂಗಿ ನೋಡಿದರೆ, ಬಂಗಾರಕ್ಕೆ ಆ ನಾಯಿಯ ಹಲ್ಲೇನು ಸಮಾನ ವಾದೀತೇ ? ಮುತ್ತಿನೊಡನೆ, ಒಂದು ಕವಡೆಯನ್ನು ತಕ್ಕಡಿ ಪರಡಿಯಲ್ಲಿಟ್ಟು ತೂಗಿ ದರೆ ಮುತ್ತಿನ ಶ್ರೇಷ್ಠಕಾಂತಿಗೆ ಆ ಕವಡೆಯೇನು ಸಮಾನವೆನಿಸೀತೇ ? ಜೈನ ಮತದ ಪತ್ರಿಕೆಯು ಆ ಶೈವಮತದ ಪತ್ರಿಕೆಗೆ ಸಮಾನವಾದೀತೇ ? ಮಹಾರಾಜ, ಕೂಡಿದ ಗಣನೀಯ ಜನಸಮೂಹದ ಮಧ್ಯದಲ್ಲಿ ಇದರ ಘನತೆಯನ್ನು ನೀನು ನೋಡುತ್ತೀಯೆ' ಹೀಗೆಂದು ಪ್ರತಿಜ್ಞೆಮಾಡಿ ಆ ಎರಡೂ ಪತ್ರಿಕೆಗಳನ್ನು ಅವನ ಕೈಗೆ ಕೊಟ್ಟನು. ವ॥ ಅರಸನು ಆ ಎರಡೂ ಬರವಣಿಗೆಗಳುಳ್ಳ ಪತ್ರಗಳನ್ನು ಕೈಯಲ್ಲಿ ಹಿಡಿದು, ಉರಿಯು ತ್ತಿರುವ ಬೆಂಕಿಯಲ್ಲಿ ತಡಮಾಡದೆ ಇಡಲಾಗಿ ಆ ಕೂಡಲೇ ಜೈನರ ಪತ್ರವು ಆ ಬೆಂಕಿ ಯಲ್ಲಿ ಅವರ ಮನೋರಥದೊಡನೆಯೇ ಗರಿಗರಿಲೆಂದು ಉರಿದು ಆ ಕೂಡಲೇ ಭಸ್ಮ ವಾಯಿತು. ೯೮. ಮಹಾರಾಜನು ಇದು ಆಶ್ಚರ್ಯ ವೆಂದೆನ್ನುತ್ತಿರುವಂತೆ ಪ್ರಸಿದ್ಧವಾದ ಆ ಶಿವಮಂತ್ರವು ಸೂರ್ಯನಿಂದ ವಿಕಸಿತಗೊಂಡ ಕಮಲದ ಹಾಗೆ ಶೋಭಿಸಿತು. ಶೈವ ಜನರುಗಳ ಮುಖವು ವಿಕಾಸಗೊಂಡಿತು ; ಜೈನ ಮುನಿಗಳ ಸಮೂಹದ ಮುಖವು ಕೊರಗಿತು. ವ॥ ಆಗ ಅರಸನು ಶೈವರಿಗೆ ಜಯವೂ, ಜೈನರಾದ ನಿಮಗೆ ಸೋಲೂ ಆಯಿತು, ಎನ್ನಲು, ಜೈನ ಸಂನ್ಯಾಸಿಗಳು ಕೇಳಿ ರಾಜನೆದುರಿಗೆ ಬಂದು 'ಯಾವುದನ್ನೇ ಆದರೂ ಮೂರು ಮೂರು ಸಲ ಪರೀಕ್ಷಿಸಿ ನೋಡಬೇಕು. ಇನ್ನೊಂದು ಸಲ ಆ ಎರಡೂ ಪತ್ರಿಕೆಗಳನ್ನು ಹರಿಯುವ ನೀರಿನಲ್ಲಿ ಹಾಕಬೇಕು. ಯಾವ ಪತ್ರಿಕೆಯು ಪ್ರವಾಹಕ್ಕೆ ಎದುರು ಹರಿಯುವುದೋ ಅದೇ ಜಯ ಪತ್ರಿಕೆಯೆನಿಸುವುದು, ಅದರಂತೆ ಪರೀಕ್ಷಿಸಿ ನೋಡಿರಿ' ಎನ್ನಲು ಆ ಅರಸನು ತಿರುಜ್ಞಾನ ಸಂಬಂಧರ ಮುಖವನ್ನು

---

1 × (ಚ)

ಪ್ರಕಟ ಶಿವಮಂತ್ರಮದು ರವಿ
ವಿಕಸಿತಶತಪತ್ರದಂತಿರೆಸೆದುದು ಶೈವ
ಪ್ರಕರಮುಖಮಲರೆ ಜಿನಮುನಿ
ನಿಕರಮುಖಂ ಕೊರಗೆ ನೃಪತಿಯುರಿದೆಂಬಿನೆಗಂ ೯೯

ವ॥ ಆಗಳರಸಂ ಶೈವರ್ಗೆ ಜಯಮುಂ ನಿಮಗೆ ಪರಾಜಯಮುಮಾದುದೆನೆ ಕೇಳ್ದು ಶವಣರಿದಿರ್ಗೆವಂದಾವುದನಾದೊಡಂ ಮಱುಱಿಂ ಸೋಲ್ತೊಡಲ್ವೇಳ್ಕುಮಿನ್ನೊರ್ಮೆ ಪತ್ರಿಕಾದ್ವಯಮುಂ ಪರಿವ ತೊಱೆಯೊಳಿಕ್ಕಲೊಡನಾವುದಿದಿರೇಱುಗುಮದೆ ಜಯಪತ್ರಿಕೆಯಕ್ಕುಮಂತೆ ನೆಗಳ್ಚಿ ಮೆನೆ ನರೇಂದ್ರಂ ಜ್ಞಾನಸಂಬಂಧರಾನನಮಂ ನೋಡಲೊಡನವನಿಂತೆಂದು—

ಇವರಂ ಸುಮ್ಮನೆ ಪೋಗಲಿತ್ತಪುದೆ ಶೈವದ್ವೇಷ ತದ್ದೂಷಣೋ
ದ್ಭವದೋಷಂ ಜಿನದೂಷ್ಯ ಜೈನರಿವರೇಂದಂತಕ್ಕೆ ಸೋಲ್ತರ್ಗೆ ಭೂ
ಧವಶೀಕ್ಷ್ಣಾಗ್ರಮಹೋಗ್ರಲೋಹಮಯಶೂಲಾರೋಹಣಂ ದಂಡಮಾ
ಗೆ ವಲಂ ತೋಱುವೆನೆನ್ನ ಪೆಂಪನೆನೆ ಪಾಂಡ್ಯಂ ಕೇಳ್ದು ಜೈನರ್ಕ[ಳಂ][1] ೧೦೦

ವ॥ ನೋಡಿ ನಿಮ್ಮಭಿಪ್ರಾಯಮಂ ಬೇಗಂ ಪೇಳಿಮೆಂಬುದುಮಿವರೆಂದುದನೊಡಂ ಬಟ್ಟೆ ವೆಂದಾ ಜೈನರೆನೆ ಕುಮತಕುಜಕುಠಾರಂ ಕೇಳ್ದರಸನುಮನವರುಮನೊಡಗೊಂಡು ಸಮುತ್ಸಾಹದಿಂ ಕಾವೇರೀತಟಕೇಳ್ತಂದು ನಿಂದೆರಡುಂ ಪತ್ರಂಗಳಂ ಪರಿವ ತತ್ಸಲಿಲದೊಳ್ಜನಪನಿಂ ಬಿಡಿಸಲೊಡನೆ ಹರಹರಧ್ವಾನದಿನುಘೇರವಂಗುಡುತ್ತೆ ಶೈವನಿಕರಂ ಸಂಭ್ರಮಿಸೆ—

ನೋಡಲಾಗಿ ಅವನು ಹೀಗೆಂದನು : ೧೦೦. 'ಈ ಜೈನರನ್ನು ಶಿವಭಕ್ತರಾದವರೊಡನೆ ಮಾಡುತ್ತಿರುವ ವೈರ ಮತ್ತು ಅವರನ್ನು ನಿಂದಿಸುವಿಕೆ ಇವುಗಳಿಂದಾದ ಪಾಪವೂ ಜಿನದೂಷಣೆಯೂ ಸುಮ್ಮನೆ ಹೋಗಗೊಟ್ಟೀತೇ ? ಮಹಾರಾಜನೇ ಸೋತವರಿಗೆ ಶೀಘ್ರವಾಗಿ ಭೇದಿಸುವ (ಚುಚ್ಚುವ) ಮೊನೆಯುಳ್ಳ ಭಯಂಕರವಾದ ಲೋಹಮಯವಾದ ಶೂಲವನ್ನೇರುವಿಕೆಯೇ ಶಿಕ್ಷೆಯಾಗುವುದು ಪಣವಾಗಲಿ. ಆಗ ನನ್ನ ಘನತೆಯನ್ನು ತೋರಿಸುತ್ತೇನೆ' ಎಂದನು. ಆ ಮಾತನ್ನು ಸೌಂದರ ಪಾಂಡ್ಯನು ಕೇಳಿ ಜೈನ ಸಂನ್ಯಾಸಿಗಳನ್ನು. ವ॥ ನೋಡುತ್ತ ('ಎಲೈ ಸಂನ್ಯಾಸಿಗಳೇ ಜ್ಞಾನಸಂಬಂಧರು ಆಡಿದ ಮಾತುಗಳಿಗೆ) ನಿಮ್ಮ ಅಭಿಪ್ರಾಯವನ್ನು ಬೇಗನೆ ಹೇಳಿರಿ,' ಎಂದನು. 'ಇವರು ಹೇಳಿದುದನ್ನು ನಾವು ಒಪ್ಪಿಕೊಂಡಿದ್ದೇವೆ.' ಎಂದು ಆ ಜೈನರು ಅನ್ನಲು–ದುಷ್ಟಮತಗಳೆಂಬ ಗಿಡಗಳಿಗೆ ಕೊಡಲಿಯಂತಿರುವ ತಿರುಜ್ಞಾನಸಂಬಂಧರು ಕೇಳಿ, ಅರಸನನ್ನೂ, ಆ ಜೈನಸನ್ಯಾಸಿಗಳನ್ನೂ ಸಂಗಡ ಕರೆದುಕೊಂಡು ಅತ್ಯುತ್ಸಾಹದಿಂದ ಕಾವೇರೀ ನದಿಯ ದಂಡೆಗೆ ಬಂದು ನಿಂತುಕೊಂಡು, ಆ ಎರಡೂ ಪತ್ರಿಕೆಗಳನ್ನು ಆ ಸೌಂದರ ಪಾಂಡ್ಯ ರಾಜನ ಕೈಯಿಂದ ನೀರಿನಲ್ಲಿ ಹಾಕಿಸಿದರು. ಆ ಕೂಡಲೇ 'ಹರಹರ' ಎಂಬ ಧ್ವನಿಮಾಡಿ ಉಘೇ ! ಉಘೇ ! ಎಂದು ಕೂಗುತ್ತ

---

1 ಳಾ(ಅ, ಗ, ಚ, ಜ, ದ, ಮ)

ನದಿಗಿದಿರೇಱಿದುದಘಹರ
ಪದಪತ್ರಂ ಜೈನಪತ್ರಮುದು ಕೀಳ್ಗಡೆಗೋ
ಡಿದುದದನೀಕ್ಷಿಸಿ ನೃಪನು
ರ್ಕಿದ ಜೈನರ ಸುಭಟರಿಂದೆ ಪಿಡಿತರಿಸುತ್ತುಂ ೧೦೧

ಶರಣೆಂದ ಶೈವಲಾಂಛನ
ಧರರಂ ಬಿಟ್ಟುಳಿದ ಸಮದ ಜೈನರನರಸಂ
ಶರಣ ಕುಲಚ್ಚೆಱಿಯರ್ಗಮೆ
ದಿರಿಸಿದ ಶೂಲಂಗಳಲ್ಲಿ ಕೆಡಪಿದನಾಗಳ್ ೧೦೨

ವ॥ ಆಗಳಿಂತು ಶಿವದ್ರೋಹಿಗಳುಮನೆಲ್ಲರುಮಂ ಪೂಣ್ದಂತೆ ಶೂಲಾರೋಹಣಂಗೆಯ್ಸಿ ಜಸಂಬೆತ್ತು—

ಸ್ಫುರದ್ದೀಕ್ಷೆಯಂ ಭೂಭುಜಂಗಿತ್ತು ನಣ್ಪಿಂ
ಪುರದ್ವಿಟ್ಸದಾಚಾರದೊಳ್ನೇಮಿಸುತ್ತುಂ
ಪರಪ್ರೌಢವಾದಂಗಳಂ ಗೆಲ್ವುತೊಳ್ಪಿಂ
ತಿರುಜ್ಞಾನಸಂಬಂಧ ಯೋಗೀಶನಿರ್ದಂ ೧೦೩

ವ॥ ಇರ್ಪಿನಮಿತ್ತಲ್—

ಶೈವ ಭಕ್ತ ಸಮೂಹವು ಸಂಭ್ರಮ ಗೊಳ್ಳುತ್ತಿದ್ದ ಹಾಗೆಯೇ ೧೦೧-೧೦೨. ಪಾಪನಾಶಕನಾದ ಶಿವನ ಗುರುತಿನ ಪತ್ರವು ನದಿಗೆ ಇದಿರು ಏರಿತು ; ಜೈನರ ಗುರುತಿನ ಪತ್ರವು ಕೆಳಭಾಗಕ್ಕೆ (ಪ್ರವಾಹದೊಡನೆ) ಹರಿದು ಹೋಯಿತು. ಅದನ್ನು ಕಂಡ ಅರಸನು ಗರ್ವದಿಂದ ಕೂಡಿದ್ದ ಜೈನರನ್ನೆಲ್ಲ ರಾಜ ಭಟರಿಂದ ಹಿಡಿತರಿಸಿದನು. 'ಶರಣು' ಎನ್ನುತ್ತ ಶಿವಲಾಂಛನ ಧರಿಸಿದವರನ್ನು ಬಿಟ್ಟು, ಉಳಿದಂಥ ಮದಮತ್ತರಾದ ಜೈನರನ್ನು ಸೌಂದರ ಪಾಂಡ್ಯನು ಕುಲಚ್ಚರಿಯರು ಮಾಡಿನಿಲ್ಲಿಸಿದ್ದ ಶೂಲಗಳಿಗೆ ಏರಿಸಿದನು. ವ॥ ಆಗ ಜ್ಞಾನಸಂಬಂಧರು ಶಿವದ್ರೋಹಿಗಳೆನಿಸಿದ ಎಲ್ಲರನ್ನೂ ಈರೀತಿ ಪ್ರತಿಜ್ಞೆಮಾಡಿದ ಹಾಗೆ ಶೂಲವನ್ನು ಹತ್ತಿಸಿ, ಯಶಸ್ಸನ್ನು ಪಡೆದು ೧೦೩. ಆ ಸೌಂದರ ಪಾಂಡ್ಯರಾಜನಿಗೆ ಪ್ರಕಾಶಮಾನವಾದ ಶೈವ ಸಂಬಂಧವಾದ ದೀಕ್ಷೆಯನ್ನು ಕೊಟ್ಟು, ತ್ರಿಪುರ ವೈರಿಯಾದ ಪರಮೇಶ್ವರನ ಸಂಬಂಧದ ಶ್ರೇಷ್ಠ ಆಚಾರದಲ್ಲಿ ನೇಮಿಸುತ್ತ ಶ್ರೇಷ್ಠವಾದ ಪ್ರೌಢವಾದಗಳಲ್ಲಿ ಗೆಲುವನ್ನು ಸಂಪಾದಿಸುತ್ತ ಸಂತೋಷದಿಂದ ತಿರುಜ್ಞಾನಸಂಬಂಧ ಯೋಗೀಶ್ವರನು ಇದ್ದನು. ವ॥ ಹೀಗೆ ಇರುತ್ತಿರುವಲ್ಲಿ ಇತ್ತ

ವೀರವ್ರತನಿಷ್ಠಂ ನಿಡು
ಮಾರನೆನಿಪ್ಪೊರ್ವನಭವಪದಭಕ್ತನಿಳಾ
ಸೂರಿಜನವಿನುತಕೀರ್ತಿ ಮ
ಹೀರಮಣಂ ರಂಜಿಸಿರ್ದನತಿವೈಭವದಿಂ ೧೦೪

ವ॥ ಆ ಮಹೀರಮಣಂ ತನ್ನ ದೇಶಮೆಲ್ಲಂ ಜೈನಮಯಮಾಗೆ ಮರ್ದಿಂಗೊರ್ವ ಭಕ್ತ ರಿಲ್ಲದುದಂ ಕಂಡೆಂದಿಂಗೆನ್ನ ರಾಜ್ಯಮೆಲ್ಲಂ ಪೂಜ್ಯಮೆನೆ ಶಿವಭಕ್ತಮಯಮಕ್ಕುಮೆಂದು ಚಿಂತೆಗೆಯ್ಯುತ್ತು ಮಿರ್ಪಿನಮಲ್ಲಿಗೆ—

ಪದೆದೇಳ್ತಂದೊರ್ವನಾಗಳ್ ಶಿವಪದಭಜಕಂ ಪಾಂಡ್ಯದೇಶೀಯ ಜೈನೌ
ಘದ ಸೊರ್ಕಂ ವಾದದೊಳ್ಮಗ್ಗಿಸಿ ಮದಯುತರಂ ಶೂಲದೊಳ್ಕೊಂದು ಶೈವಾ
ಭ್ಯುದಿತಶ್ರೀದೀಕ್ಷೆಯುಂ ಭೂಪತಿಗೆ ನೆಗಳ್ದು ಪಂಚಾಬ್ದದೊಳ್ಪೆರ್ಮೆವೆತ್ತ
ಗ್ಗದ ಸಮ್ಯಜ್ಞಾನಸಂಬಂಧರ ಜಸದಿರವಂ ಪೇಳೆ ಕೇಳ್ದಾ ಮಹೇಶಂ ೧೦೫

ಮುದಮಂ ತಾಳ್ದಮರಿರ್ದ ತಾಣಕೊಲವಿಂ ತಾನೆಯ್ದಿ ಕಂಡಲ್ಲಿ ತ
ತ್ಪದಮಂ ಪೂಜಿಸಿ ಭಕ್ತಿಯಿಂ ಗಮಿಸಿ ಕೊಂಡಾಡುತ್ತೆ ತನ್ನೊರ್ಗೆ ಪೆ
ರ್ಚಿದ ಸದ್ವೈಭವದಿಂ ಕಡಂಗಿ ಬಿಜಯಂಗೆಯ್ಯುತ್ತೆ ತನ್ನಿಷ್ಟಸಂ
ಪದಮೇಳ್ತಂದುದೆನುತ್ತೆ ಕುಳ್ಳಿರಿಸುತುಂ ಭದ್ರಾಸನಸ್ಥಾನದೊಳ್ ೧೦೬

ನಿಡುಮಾರನ ಕಥೆ ೧೦೪. ವೀರಶೈವ ವ್ರತದಲ್ಲಿ ನಿಷ್ಠೆಯುಳ್ಳವನೂ, ಪರಮೇಶ್ವರನ ಪಾದಗಳಲ್ಲಿಟ್ಟ ಭಕ್ತಿಯುಳ್ಳವನೂ. ಲೋಕದ ವಿದ್ವಾಂಸರಾದವರ ಹೊಗಳಿಕೆಗೆ ಪ್ರಾತ ನಾದ ಕೀರ್ತಿಯುಳ್ಳವನೂ, ಆದ ನಿಡುಮಾರನೆಂಬ ಹೆಸರಿನ ರಾಜನು ಅತ್ಯಂತ ವೈಭವ ದಿಂದ ರಂಜಿಸುತ್ತಿದ್ದನು. ವ॥ ಆ ರಾಜನು ತನ್ನ ದೇಶವೆಲ್ಲವೂ ಜೈನರಿಂದ ತುಂಬಿ ಹೋಗಿ, ಔಷಧಕ್ಕೆ ಬೇಕೆಂದರೆ ಒಬ್ಬ ಶೈವನೂ ಇಲ್ಲದಿದ್ದುದನ್ನು ಕಂಡು, 'ಎಂದಿಗೆ ನನ್ನ ರಾಜ್ಯವೆಲ್ಲ ಪೂಜ್ಯವಾದದ್ದು ಎನ್ನುವಂತೆ ಶಿವಭಕ್ತರಿಂದ ತುಂಬಿಹೋದೀತು ?' ಎಂದು ಚಿಂತೆಗೊಳಗಾಗಿ ಇರುತ್ತಿರಲು ಅಲ್ಲಿಗೆ ೧೦೫-೧೦೬. ಓರ್ವ ಶಿವಪಾದ ಪೂಜಕನೆನಿಸಿದ ಮಾಹೇಶ್ವರನು ಆ ರಾಜನ ಹತ್ತಿರ ಪ್ರೀತಿಯಿಂದ ಬಂದು, ಸುಂದರಪಾಂಡ್ಯನ ರಾಜ್ಯ ದಲ್ಲಿದ್ದ ಜೈನಸಮೂಹದ ಸೊಕ್ಕನ್ನು ವಾದದಲ್ಲಿ ಮುರಿದುಹಾಕಿ, ಮದೋನ್ಮತ್ತರಾದ ವರನ್ನು ಶೂಲಕ್ಕೇರಿಸಿ ಕೊಂದು, ಶೈವಧರ್ಮದ ಅಭ್ಯುದಯಕಾರಕವಾದ ಮಂಗಳಕರ ದೀಕ್ಷೆಯನ್ನು ಆ ರಾಜನಿಗೆ ಮಾಡಿ, ಐದೇವರ್ಷಗಳಲ್ಲಿ ಹಿರಿಮೆಗೊಂಡ ಶ್ರೇಷ್ಠವಾದ ಯಶಸ್ಸಿನಿಂದ ಮೆರೆಯುತ್ತಿರುವ ತಿರುಜ್ಞಾನಸಂಬಂಧರ ರೀತಿಯನ್ನು ಹೇಳಿದನು. ಅದನ್ನು ಕೇಳಿದ ಆ ಮಾಹೇಶ್ವರನೆನಿಸಿದ ರಾಜನು, ಸಂತೋಷಗೊಂಡವನಾಗಿ, ಆ ತಿರುಜ್ಞಾನ ಸಂಬಂಧರಿರುವ ಸ್ಥಾನಕ್ಕೆ ತಾನೇ ಪ್ರೀತಿಯಿಂದ ಹೋಗಿ, ಅವರನ್ನು ಕಂಡು. ಅವರ ಪಾದಗಳನ್ನು ಪೂಜಿಸಿ, ಭಕ್ತಿಯಿಂದ ನಮಸ್ಕಾರಮಾಡಿ ಕೊಂಡನು. ತನ್ನ ಇಷ್ಟಾರ್ಥವಾದ ಸಂಪತ್ತೇ (ತನ್ನಲ್ಲಿಗೆ) ಬಂದಂತಾಯಿತೆಂದು ತಿಳಿದುಕೊಂಡು ಅವರನ್ನು

ಬರಿಸಿದನಲ್ಲಿಗಾ ಜನಪದಸ್ಥಿತ ಜೈನಗುರು ಪ್ರತಾನಮುಂ
ನರಪತಿ ಪೇಳ್ದನೀಶ್ವರ ಕುಮಾರನ ಜೈನಜಯಪ್ರಸಂಗಮಂ
ಪರಶಿವ ಸನ್ಮಹತ್ವಮನೆ ಬೋಧಿಸಿ ಶೈವಮತಸ್ಥರಾಗೆ ನೀ
ಮೆರೆದುದನೀವೆನಲ್ಲದೊಡೆ ಶೂಲದೊಳಿಕ್ಕುವೆನೆಂದನಾರ್ಪಿನಿಂ ೧೦೭

ವ॥ ಎಂದಾಗ್ರಹಿಸಿ ನರಪಶುವಂ ದೇವನೆಂದು ಭಜಿಯಿಪುದಂ ಬಿಡಿಸಿ ಪಶುಪತಿಯಂ ಶರಣ್ಬುಗಿಸಿ ಶವಣಗುರುಗಳಂ ಶಿವಭಕ್ತರಂ ಮಾಡಿ ಕೇಳದ ಮದಾಂಧರಂ ತಲೆಕೆಳಗಾಗೆ ನಿಶಿತಶೂಲಾಗ್ರದೊಳಿಕ್ಕಿ ಕಳೆದು—

ನಿಜದೇಶಮೆಲ್ಲಮಂ ಶಿವ
ಭಜನಾನ್ವಿತಮಯಮನೆಸಗಿ ಮೆಱೆಯನೆ ಧಾತ್ರೀ
ಭುಜಪತಿ ನಿಡುಮಾರಂ ಕೇ
ಳ್ವೃಜಿನಾತ್ಮಕ ಪೇಳ್ವೆನಿನ್ನುಮೆಸುತಿಂತೆಂದಂ ೧೦೮

ವ॥ ನೆಗಳ್ತೆವೆತ್ತ ತಿಗುಳ್ನಾಡೊಳ್ಚಿಲ್ಲತಿರುವದೂರೆಂಬ ಪೊಳಲೊಳಗೆ—

ನಮಿನಂದಿಯೆಂಬ ಭಕ್ತಂ
ವಿಮಳಾಜ್ಯ ಸಹಸ್ರದೀಪಮಂ ಬೆಳಗುವ ನೇ
ಮಮನಾಳ್ದು ನಿಚ್ಚಮುಂ ಸಂ
ಭ್ರಮದಿಂದಂತಂತೆ ಬೆಳಗುತುಂ ಶಿವಗೃಹದೊಳ್ ೧೦೯

ಭದ್ರಾಸನದಲ್ಲಿ ಕುಳ್ಳಿರಿಸಿದನು. ೧೦೭. (ಆಗ) ಅಲ್ಲಿಗೆ ಆ ತನ್ನರಾಜ್ಯದಲ್ಲಿರುವ ಸಮಸ್ತ ಜೈನಗುರುಗಳ ಸಮೂಹವನ್ನೆಲ್ಲ ನಿಡುಮಾರನೃಪತಿಯು ಬರಮಾಡಿಕೊಂಡನು, ಅವರಿಗೆ (ಆಗಮಿಸಿರುವ) ಈಶ್ವರ ಕುಮಾರನೆನಿಸಿದ ತಿರುಜ್ಞಾನಸಂಬಂಧರು ಜೈನರನ್ನು ಜಯಿಸಿದ ಕಥೆಯನ್ನೆಲ್ಲ ಹೇಳಿದರು. ಅವರಿಗೆ ಪರಶಿವನ ಸತ್ವಪೂರ್ಣವಾದ ಮಹತ್ವವನ್ನು ಬೋಧಿಸಿ, ನೀವೆಲ್ಲ ಶೈವಮತಸ್ಥರಾದರೆ, ನೀವು ಬೇಡಿದ್ದನ್ನುಕೊಡುತ್ತೇನೆ. ಅಲ್ಲದಿದ್ದರೆ ಶೂಲಕ್ಕೇರಿಸಿ ಬಿಡುತ್ತೇನೆಂದು ಸಾಮರ್ಥ್ಯಪೂರ್ಣವಾಗಿ ತಿಳಿಸಿದನು. ವ॥ ಹೀಗೆಂದು ನಿಡುಮಾರರಾಜನು ಆಗ್ರಹಪೂರ್ವಕವಾಗಿ ನರಪಶುಗಳನ್ನುದೇವರೆಂದು ಭಜಿಸುವ ಭಜನೆಯನ್ನು ಬಿಡಿಸಿ, ಪರಮೇಶ್ವರನಲ್ಲಿ ಶರಣಾಗತರನ್ನಾಗಿ ಮಾಡಿ ಜೈನ ಸಂನ್ಯಾಸಿ ಗಳನ್ನೆಲ್ಲ ಶಿವಭಕ್ತರನ್ನಾಗಿಮಾಡಿದನು. (ತನ್ನಮಾತನ್ನು ಕೇಳದ ಮದಾಂಧರನ್ನು, ತಲೆಕೆಳಗಾಗುವಂತೆ ತೀಕ್ಷ್ಣವಾದ ಶೂಲಕ್ಕೇರಿಸಿ ನಾಶಗೊಳಿಸಿದನು.—೧೦೮. ಹೀಗೆ ತನ್ನ ಸಮಸ್ತರಾಜ್ಯವನ್ನೂ ಶಿವಭಜನೆಯ ಮಯವೇ ಆಗಿಬಿಡುವಂತೆ ಆ ಧಾತ್ರೀಶ್ವರನಾದ ನಿಡುಮಾರನು ಮೆರೆಯಲಿಲ್ಲವೇ ? ಪಾಪಸಮೂಹವುಳ್ಳವನೇ, ಇನ್ನೂಕೇಳು : ಹೇಳುತ್ತೇನೆ ಎಂದು (ಆ ಏಕಾಂತರಾಮಯ್ಯನು ಹೀಗೆ ಹೇಳಿದನು. **ನಮಿನಂದಿಯ ಕಥೆ** ವ॥ ಖ್ಯಾತಿವೆತ್ತ ತಿಗುಳದೇಶದಲ್ಲಿ 'ಚಿಲ್ಲತಿರುವದೂರು' ಎಂಬ ಪಟ್ಟಣದಲ್ಲಿ ೧೦೯-೧೧೦. ನಮಿನಂದಿಯೆಂಬ ಭಕ್ತನಿದ್ದನು. ಅವನು ದಿನಾಲು ಸಹಸ್ರ ಸಂಖ್ಯೆಯ ಶ್ರೇಷ್ಠವಾದ ತುಪ್ಪದ ದೀಪವನ್ನು ಶಿವಾಲಯದಲ್ಲಿ ಬೆಳಗುವ ನೇಮವನ್ನು ಆಚರಿಸುತ್ತಿದ್ದು

ಧನವೆಲ್ಲಂ ಸವೆಯೆ ಶಿವಾ
ರ್ಚನೆಗಾ ಪೊಳಲಲ್ಲಿ ಘೃತದ ಭಿಕ್ಷೆಯನೆರೆವು
ತ್ತನುದಿನಮಾರ್ಜಿಸಿದಾಜ್ಯದಿ
ನನಘಂ ಬೆಳಗುತ್ತೆ ದೀಪಮಂ ಮೃಡನಿದಿರೊಳ್ ೧೧೦

ಘನಭಕ್ತಂ ಮಾಣದಿಂತೊಪ್ಪಿರೆ ಪೊಳಲ ಶಿವದ್ರೋಹಿಗಳ್ಕಾಣದಾ ಭ
ಕ್ತನ ಕೃತ್ಯಂಗಂಡಿವಂ ಮತ್ಪುರದೊಳಿರಲದೇಂ ತಕ್ಕನೇ ಶೈವನೀತಂ
ಗಿನಿತುಂ ಗೇಹಂಗಳೊಳ್ಗೋಘೃತಮನೆ[ಱೆ][1]ಯದಂತಾಜ್ಞೆಯಂ ಮಾಡೆ ತಾನೇ
ಮುನಿದಿಲ್ಲಿಂ ಪೋಪನೆಂದಂತೆಸಗೆ ಘೃತದ ಭಿಕ್ಷಾಟನಂ ಗೆಯ್ದು ಭಕ್ತಂ ೧೧೧

ಪಡೆಯದಾಜ್ಯಮನಾ ಪುರಾಂತರದೊಳ್ವಿಷಾದದಿನೆಯ್ದಿ ತ
ನ್ಮೃಡನ ಮಂದಿರಕೆಯ್ದೆ ನಂದುವ ದೀಪಮಂ ನಡೆನೋಡಿ ನಿಂ
ದುಡುಗದಾತ್ಮಶಿರಕ್ಕೆ ಖಡ್ಗಮನಿಕ್ಕಿ ಗೋಣ್ಕೊಱೆವಾಗಳಾ
ಕಡುಗಮಂ ಕಡೆನೂಂಕಿ ಶಂಕರನೊಲ್ದು ನೋಡಿ ಕೃಪಾಕರಂ ೧೧೨

ಪದಪಿಂದಂ ವೀರಸೋಮಾಂಬಿಕೆ ಜಳಮೆಱೆದೋರಂದದಿಂ ದೀಪಮಂ ಲಿಂ
ಗದ ಮುಂದುದೆತ್ತಿದಂತೀ ತಿಳಿಗೊಳದ ಜಳಂಗೊಂಡು ತತ್ಪಾತ್ರೆಯೊಳ್ಕಾ
ಣದೆ ನೀಂ ನೀರ್ದೀವಿ ದೀಪಂಗಳನೆ ಬೆಳಗಿದೇ ನೇಮಮೆನ್ನಗ್ರದೊಳ್ ಜೈ
ನ ದುರಾತ್ಮರ್ತತ್ಪುರೀಗೋಕುಲಜನಮಳಿಗುಂ ನಾಳೆ ಕೇಳ್ಭಕ್ತವರ್ಯಾ ೧೧೩

ಸಂಭ್ರಮಗೊಂಡು ಹಾಗೆಮಾಡುತ್ತಿರಲು(ತನ್ನಲ್ಲಿದ್ದ) ಹಣವೆಲ್ಲ ವೆಚ್ಚವಾಗಿ ಹೋಯಿತು. (ತಾನುಮಾಡುತ್ತಿದ್ದ) ಶಿವನ ಅರ್ಚನೆಗೆ ಪಟ್ಟಣದಲ್ಲಿ ತುಪ್ಪದ ಭಿಕ್ಷೆಯನ್ನು ಬೇಡುತ್ತ, ದಿನದಿನವೂ ಸಂಪಾದಿಸಿದ ತುಪ್ಪದಿಂದ ಪಾಪದೂರನಾದ ಆ ನಮಿನಂದಿಯು ಈಶ್ವರನೆದುರಿನಲ್ಲಿ ದೀಪವನ್ನು ಬೆಳಗತೊಡಗಿದನು. ೧೧೧-೧೧೨. ತಪ್ಪದೆ ಶ್ರೇಷ್ಠ ಭಕ್ತನಾದ ಅವನು ಹೀಗೆ ತನ್ನ ಭಕ್ತಿಯನ್ನು ಅರ್ಪಿಸುತ್ತ ಶೋಭಿಸುತ್ತಿದ್ದನು. ಆ ಪಟ್ಟಣದಲ್ಲಿದ್ದ ಶಿವ ದ್ರೋಹಿಗಳು ಆ ಭಕ್ತನ ಕೃತ್ಯವನ್ನು ಕಂಡು, ಸೈರಿಸಲಾರದೆ, ಇವನು ನಮ್ಮ ಪಟ್ಟಣದಲ್ಲಿರಲು ಯೋಗ್ಯನಾದವನೇ ? ಶೈವನಾದ ಈತನಿಗೆ ಈ ನಮ್ಮೂರಿನ ಮನೆಗಳಲ್ಲಿ ಸ್ವಲ್ಪವೂ ತುಪ್ಪ ಸಿಗದಂತೆ ಕಟ್ಟಪ್ಪಣೆ ಮಾಡಿದರೆ ಕೋಪಗೊಂಡು ತಾನಾಗಿಯೇ ಈ ಪಟ್ಟಣವನ್ನು ಬಿಟ್ಟು ಹೋಗುತ್ತಾನೆಂದು ಹಾಗೆಯೇ ಮಾಡಿದರು. (ಆಗ) ತುಪ್ಪದ ಭಿಕ್ಷೆಯನ್ನು ಮಾಡಿ ಅದನ್ನು ಪಡೆಯಲು ಶಕ್ಯವಿಲ್ಲದಾಗಲು ವಿಷಾದಗೊಂಡು ಊರಹೊರಗಿರುವ ಆ ಶಿವಮಂದಿರಕ್ಕೆ ಹೋಗಿನೋಡಲಾಗಿ ದೀಪವುನಂದುವುದರಲ್ಲಿದ್ದುದನ್ನು ಕಂಡು ಸ್ವಲ್ಪವೂ ಹಿಂದೆಮುಂದೆ ನೋಡದೆ (ಕುಗ್ಗದೆ), ತನ್ನತಲೆಗೆ ಖಡ್ಗವನ್ನು ಇಕ್ಕಿ ಗೋಣನ್ನು ಕತ್ತರಿಸಿ ಕೊಳ್ಳುತ್ತಿರುವಾಗ ಕೃಪಾಕರನಾದ ಶಂಕರನು ಒಲಿದು ಪ್ರತ್ಯಕ್ಷನಾಗಿ ಆ ಖಡ್ಗವನ್ನು ತಳ್ಳಿಹಾಕಿ ಅವನನ್ನು ನೋಡುತ್ತ, 'ಎಲೈಭಕ್ತಶ್ರೇಷ್ಠನೇ' ಈ ಪೂರ್ವದಲ್ಲಿ ವೀರಸೋಮಾಂಬಿಕೆಯೆಂಬುವವಳು ಪ್ರೀತಿಯಿಂದ ನೀರನ್ನೇಎರೆದು, ಮನೋಹರವಾಗಿ ಲಿಂಗದ ಮುಂದೆ ದೀಪನ್ನು ಎತ್ತಿಬೆಳಗಿದಹಾಗೆ, ನೀನು ಈ ತಿಳಿನೀರಿನ

1 ರೆ(ಅ, ಗ, ಚ, ಜ, ದ, ಮ)

ವ॥ ಎಂದೀಶಂ ಬೆಸಸೆ ಮಹಾಪ್ರಸಾದಮೆಂದಾ ಪರಿಯಿಂ ತೀರ್ಥಜಲಮನೆಱೆದು ದೀಪಂಗಳಂ ಬೆಳಗುತ್ತುಮಿರ್ದಂ ಪೊಳಲೊಳ್ಘೃತಭಿಕ್ಷೆಗೊಡದರ ಗೃಹಂಗಳೊಳಂ ಪಿಶುನ ಶವಣ ಭವನಂಗಳೊಳಮಿರ್ದಿರ್ದಂತೆ ಖಲಪ್ರಸರಮುಂ ಪಶುವಿಸರಮುಂ ಮಡಿಯೆ ಜೈನರ್ಕೆಲಂಬರ್ತಮ್ಮೊಳಿದೇನೆಂದು ಭಯಂ ಬಡೆದನುವಿಸಿ—

ಜಿನಧರ್ಮದೊಳೊಂದುಂ ಕೊಱ
ತೆ ನಾಂಟದೆಮ್ಮಿಂದೆ ಜೀವತತಿ ನೊಂದುದುಮಿ
ಲ್ಲಿನಿತುಂ ಪುಸಿ ಪೊರ್ದದು ಕೆ
ಮ್ಮನಿದೇಂ ಕಾರಣಮೊ ಮಿಳ್ತು ಪೊಕ್ಕುದು ಪೊಳಲಂ ೧೧೪

ವ॥ ಎಂದು ದೋಷಾವಿಲರ್ತಮ್ಮಂ ದೋಷರಹಿತರಂ ಬಗೆದು ನುಡಿವಿನಮಲ್ಲಿಕೆಲಂಬರ್—

ಶೈವಭಕ್ತಗಾಜ್ಯಭಿಕ್ಷೆ ಪುಟ್ಟದಂತೆ ಮಾಡೆ ನೀ
ಮೀ ವಿಪತ್ತಿ ಬಂದುದಾತನಿಂದೆ ನನ್ನಿಯೆಂದೊಡಾ
ಶ್ರಾವಕರ್ಕಳಳ್ಕಿ ಸತ್ಯಮಿಂತಿದೆಂದು ಬಂದು ದಂ
ತಾವಳಾಜಿನಾಂಬರಾಲಯಕ್ಕೆ ಕಂಡರಾತನಂ ೧೧೫

ಕೊಳದೊಳಗಿನ ನೀರನ್ನೇ (ಪಣತಿಗಳಿಗೆ) ತಪ್ಪದೆ ತುಂಬಿ ದೀಪಗಳನ್ನು ನನ್ನಮುಂದೆ ಬೆಳಗಿಸು, ಇದೇ ನಿನ್ನ ನೇಮವಾಗಲಿ. ನಾಳೆಯದಿನವೇ ಆ ಪಟ್ಟಣದಲ್ಲಿರುವ (ತುಪ್ಪವನ್ನು ನೀಡದಿರುವ) ಗೋವುಗಳನ್ನು ಸಾಕುವವರ ಸಮೂಹವೆಲ್ಲ ಸತ್ತುಹೋಗುವುದು. ವ॥ ಎಂದು ಈಶ್ವರನು ಅಪ್ಪಣೆಮಾಡಿದನು, ಆಗ ಆ ನಮಿನಂದಿಯು ಮಹಾಪ್ರಸಾದವೆಂದು ಶಂಕರನು ಹೇಳಿದ ರೀತಿಯಲ್ಲಿಯೇ ತೀರ್ಥಜಲವನ್ನು ಹೊಯ್ದು ದೀಪಗಳನ್ನು ಬೆಳಗಿಸುತ್ತಿದ್ದನು. ಆ ಪಟ್ಟಣದಲ್ಲಿ ತುಪ್ಪದ ಭಿಕ್ಷೆಯನ್ನು ಕೊಡದೆ ಇರುವವರ ಮನೆಗಳಲ್ಲಿಯೂ, ಚಾಡಿಕೋರರಾದ ಜೈನರುಗಳ ಮನೆಗಳಲ್ಲಿಯೂ ಇದ್ದಕ್ಕಿದ್ದಂತೆ ದುಷ್ಟರುಗಳೂ, ಗೋವುಗಳಸಮೂಹವೂ ಸಾಯತೊಡಗಲು, ಕೆಲವು ಜೈನರು ತಮ್ಮತಮ್ಮಲ್ಲಿ ಇದೇನೆಂದು (ಇದೇನು ಪ್ರಮಾದವೆಂದು) ಭಯಗೊಂಡವರಾಗಿ ಊಹೆಮಾಡುತ್ತ ೧೧೪. ಜೈನಧರ್ಮದಲ್ಲಿ ಯಾವ ಒಂದು ಕೊರತೆಯು ಉಂಟಾಗಿಲ್ಲ; ನಮ್ಮಿಂದ ಜೀವಿಗಳ ಸಮೂಹವು ನೋವುಗೊಳ್ಳಲಿಲ್ಲ ; ಸ್ವಲ್ಪವೂ ಸುಳ್ಳುವ್ಯವಹಾರನಡೆಯಲಿಲ್ಲ ; ಸುಮ್ಮಸುಮ್ಮನೇ ನಮ್ಮ ಪಟ್ಟಣವನ್ನು ಯಾವಕಾರಣದಿಂದ ಮೃತ್ಯುವು ಪ್ರವೇಶಿಸಿತೊ ವ॥ ಹೀಗೆಂದು ದೋಷವಿಶಿಷ್ಟರಾದ ಅವರು ತಮ್ಮನ್ನು ದೋಷರಹಿತರೆಂದು ಭಾವಿಸಿಕೊಂಡು, ನುಡಿಯುತ್ತಿರಲು ಅಲ್ಲಿ ಕೆಲವರು ೧೧೫. ನೀವು ಶೈವಭಕ್ತನಿಗೆ ತುಪ್ಪದ ಭಿಕ್ಷೆಯು ಹುಟ್ಟದಹಾಗೆ ಮಾಡಲಾಗಿ ಆತನಿಂದ ಈ ವಿಪತ್ತು ನಿಮಗೆ ಉಂಟಾಯಿತು, ಇದು ಸತ್ಯವಿಷಯ, ಎಂದೆನ್ನಲು ಆ ಜೈನಶ್ರಾವಕರುಗಳು ಹೆದರಿ, ಇದು ಸತ್ಯಸಂಗತಿಯೆಂದುಕೊಂಡು ಗಜಚರ್ಮಧರ (ದಂತಾವಳಾಜಿನಾಂಬರ) ನಾದ ಶಿವನ ಮಂದಿರಕ್ಕೆ

ವ॥ ಅಂತು [1]ಕಂಡು[1] ನೀರೆಱೆದು ದೀಪಮನವಂ ಬೆಳಗುವಳವಂ ನೋಡಿ ಮಹಾತ್ಮನಕ್ಕು ಮೆಂದು ಮೆಯ್ಯಿಕ್ಕಿ ಜಿನಮುನಿಗಳ್ಕೆಯ್ಯಂ ಮುಗಿದು—

ಸಾವಂ ಮಾಂಜಿಸು ಜೀವರ
ನೋವಂ ಪರಿಹರಿಸು ಮಡಿದ ಪಶುಗಳ್ಗಸುವಿ
ತ್ತೋವೆಮ್ಮೊಳೊಗೆದ ತಪ್ಪಂ
ಭಾವಿಸದಿರ್ ನಿನ್ನ ಗುಣವ ಮೆಱೆ ಕರುಣಾಬ್ಧೀ ೧೧೬

ವ॥ ಎಂದು ಬಾಯ್ವಿಟ್ಟು ಶರಣ್ಬುಗೆ ಶವಣರ್ಗುಪದೇಶವಿತ್ತು ಭಕ್ತರಂ ಮಾಡಿ—

ಮಡಿದ ಪಶುಗಳ್ಗೆ ಪೊಳಲೊ
ಳ್ಕೆಡೆದಳಿದರ್ಗಸುವನಿತ್ತು ನಮಿನಂದಿ ಮುದಂ
ಬಡಿಸಿ ಜನಮಱಿಯೆ ಪೊರೆಯನೆ
ಕಡುಪಿಂದಲೆ ಜೈನ ಕೇಳ್ವುದಿನ್ನುಂ ಧರೆಯೊಳ್ ೧೧೭

ಸುಲಲಿತ ಚೋಳಮಂಡಲಕೆ ಮಂಡನಮೆಂದೆನಿಸಿರ್ದ ಶಾಂತಮಂ
ಡಲಮೆನೆ ತೋರ್ಪ ಪಟ್ಟಣದೊಳೊಪ್ಪುವ ಬೌದ್ಧನ ಪುತ್ರನಾಗಿ ನಿ
ಶ್ಚಲಮತಿ ಸಾಂಖ್ಯತೊಂಡಪೆಸರಾಂತೆಸೆದಿರ್ದ ಮಹಾತ್ಮನೊರ್ವನ
ಸ್ಖಲಿತ ಶಿವೈಕಭಕ್ತಿ ತಲೆದೋಱೆ ಪುರಾತನ ಪುಣ್ಯದೇಳ್ಗೆಯುಂ ೧೧೮

ಬಂದು ಆ ನಮಿಸಂದಿಯೆಂಬ ಭಕ್ತನನ್ನು ಕಂಡರು. ವ॥ ಈ ರೀತಿ ಅವನನ್ನುಕಂಡು, ಅವನು ನೀರೆರೆದು ದೀಪವನ್ನು ಬೆಳಗಿಸುವ ಸಾಮರ್ಥ್ಯವನ್ನು ನೋಡಿ, ಇವನು ಮಹಾತ್ಮನಾಗಿದ್ದಾನೆ. ಎಂದುಕೊಳ್ಳುತ್ತ ಆ ಜೈನಮುನಿಗಳು ನಮಸ್ಕಾರ ಮಾಡಿ ಕೈ ಜೋಡಿಸಿ ನಿಂತು ೧೧೬. ಹೇ ಕರುಣಾಸಮುದ್ರನೇ, ನಮ್ಮ ಊರಿನ ಜನಗಳ ಸಾವನ್ನು ಹೋಗಲಾಡಿಸು, ಜೀವಿಗಳ ನೋವನ್ನು ಪರಿಹರಿಸು ; ಸತ್ತ ಪಶುಗಳಿಗೆ ಪ್ರಾಣವಿತ್ತು ರಕ್ಷಿಸು ; ನಮ್ಮಿಂದಾದ ತಪ್ಪನ್ನು ಮನಸ್ಸಿಗೆ ತಂದುಕೊಳ್ಳಬೇಡ ; ನಿನ್ನ ಸದ್ಗುಣವನ್ನು ಮೆರೆಸು. ವ॥ ಹೀಗೆಂದು ಅಳುತ್ತ ಶರಣು ಹೊಕ್ಕ ಜೈನ ಸಂನ್ಯಾಸಿಗಳಿಗೆ ಶೈವೋಪದೇಶವಿತ್ತು ಶಿವಭಕ್ತರನ್ನಾಗಿ ಮಾಡಿದನು. ೧೧೭. ಸತ್ತು ಹೋದ ಗೋವುಗಳಿಗೂ, ಪಟ್ಟಣದಲ್ಲಿ ಬಿದ್ದು ಸತ್ತು ಹೋದವರಿಗೆ ಜೀವದಾನ ವನ್ನೂ ಮಾಡಿ, ಆ ನಮಿನಂದಿಯು (ಎಲ್ಲರನ್ನೂ) ಸಂತೋಷಗೊಳಿಸಿ ಲೋಕ ಕ್ಕೆಲ್ಲ ಪ್ರಸಿದ್ಧವಾಗಿರುವಂತೆ ತನ್ನ ಸಾಮರ್ಥ್ಯದಿಂದ ರಕ್ಷಿಸಲಿಲ್ಲವೇ ಎಲೈ ಜೈನನೇ ಇನ್ನೂ ಕೇಳು ; ಭೂಮಂಡಲದಲ್ಲಿ—೧೧೮. ಅತ್ಯಂತ ಮನೋಹರವಾದ ಚೋಳ ಮಂಡಲಕ್ಕೆಲ್ಲ ಭೂಷಣಪ್ರಾಯವಾದ 'ಶಾಂತಮಂಡಲ' ಎಂದು ಪ್ರಸಿದ್ಧವಾಗಿರುವ ಪಟ್ಟಣದಲ್ಲಿ ಶೋಭಿಸುವ ಬೌದ್ಧನೊಬ್ಬನ ಪುತ್ರನಾಗಿ, ಚಂಚಲರಹಿತ ಬುದ್ಧಿಯುಳ್ಳವ

1 × (ಚ)

ಎಲೆ ಶಿವ ಮಹೇಶ ಶಂಕರ
ಪೊಲೆಯರ ತೋಟಂಳಿಯ ಕೊಳದೊಳಂಬುಜಮಂ ನೀ
ನಲಸದೆ ಪುಟ್ಟಿಸಿದಂತಿರೆ
ಖಲ ಬೌದ್ಧನ ಬಸಿಱೊಳೆನ್ನನೇಂ ಪುಟ್ಟಿಪುದೇ ೧೧೯

ವ॥ ಎಂದು ನೋಂದು ನುಡಿದೊಂದು ಶಿವಲಿಂಗಮಂ ಕಾಣ್ಬೆನೆಂದಱಸುತ್ತುಂ ಬಂದಾ ಪೊಳಲ ಪೊಱವಳಯದೊಳ್ಪಾಳ್ದೇಗುಲದಂತಿರ್ದ ಶಿವಾಲಯಮಂ ಕಂಡೊಳಪೊಕ್ಕಲ್ಲಿ ಶಿವಲಿಂಗಮಿರೆ ನಿಷ್ಠೆಯಿಂ ನಿರೀಕ್ಷಿಸಿ ವಂದನಂಗೆಯ್ದು—

ಮಾರಹರ ನಿನ್ನ ಪೂಜೆಯ
ನೋರಂತಿರೆ ಮೂಱುಕಾಲಮುಂ[1] ನೆಗಳ್ವೆನಿದೇ
ವೀರವ್ರತಮಿದನುಳಿದಾ
ಹಾರಂಗೊಳೆನೆಂದು ನೇಮಮಂ ಕೆಯ್ಕೊಂಡಂ ೧೨೦

ವ॥ ಅಂತು ಕೆಯ್ಕೊಂಡು ನಿಚ್ಚಮುಂ ತ್ರಿಕಾಲಂದಪ್ಪದೆ—

ಫುಲ್ಲೋತ್ಪಲಭಾವನೆಯಿಂ
ನಿಲ್ಲದೆ ಕೆಯ್ಕೊಳ್ವುದೆಂದು ಸಾಂಖ್ಯಂ ಮೂಱುಂ
ಕಲ್ಲಿಂದಿಡುತುಂ ಗೌರೀ
ವಲ್ಲಭನಂ ನಚ್ಚಿ ಮಚ್ಚಿ ಪೂಜಿಸುತಿರ್ದಂ ೧೨೧

ನೆನಿಸಿ, ಸಾಂಖ್ಯತೊಂಡನೆಂಬ ಹೆಸರನ್ನು ಪಡೆದ ಒಬ್ಬ ಮಹಾತ್ಮನು ಶೋಭಿಸುತ್ತಿದ್ದನು. ಅವನಲ್ಲಿ ಪುರಾತನರ ಪುಣ್ಯದ ಏಳಿಗೆಯಿಂದ ಶಿವನೊಬ್ಬನಲ್ಲೇ ಇಟ್ಟ ದೃಢವಾದ ಭಕ್ತಿಯು ಉಂಟಾಗಲಾಗಿ, ೧೧೯. ಎಲೈ ಮಹೇಶ್ವರನೇ, ಶಂಕರನೇ, ಹೊಲೆಯರ ಬಳಕೆಯ ಸರೋವರದಲ್ಲಿ ಕಮಲವನ್ನು ನೀನು ಬೇಸರಪಟ್ಟುಕೊಳ್ಳದೆ ಹುಟ್ಟಿಸಿದ ಹಾಗೆ, ದುಷ್ಟರಾದ ಬೌದ್ಧರ ಗರ್ಭದಲ್ಲಿ ನನ್ನನ್ನೇಕೆ ಹುಟ್ಟಿಸಿದೆ ? ವ॥ ಹೀಗೆಂದು (ತನ್ನ ಹುಟ್ಟಿನ ವಿಷಯದಲ್ಲಿ) ನೊಂದುಕೊಂಡು ನುಡಿದು, ಒಂದು ಶಿವಲಿಂಗವನ್ನು ಕಾಣುತ್ತೇನೆಂದು ಹುಡುಕುತ್ತ ಬಂದು ಆ ಪಟ್ಟಣದ (ಶಾಂತಮುಂಡಲವೆಂಬ ಪಟ್ಟಣದ) ಹೊರಭಾಗದಲ್ಲಿ ಹಾಳುದೇವಾಲಯದಂತಿರುವ ಶಿವಾಲಯವನ್ನು ಕಂಡು, ಆದರೊಳಗೆ ಪ್ರವೇಶಿಸಿ, ಅಲ್ಲಿದ್ದ ಶಿವಲಿಂಗವನ್ನು ನಿಷ್ಠೆಯಿಂದ ನಿರೀಕ್ಷಿಸಿ ನಮಸ್ಕಾರ ಮಾಡಿ—೧೨೦. ಮನ್ಮಥನಾಶಕನೇ, ನಿನ್ನ ಪೂಜೆಯನ್ನು ಕ್ರಮವಾಗಿರುವ ಹಾಗೆ ಮೂರು ಕಾಲಗಳಲ್ಲೂ ಮಾಡುವೆನು. ಇದೇ ನನ್ನ ವೀರವ್ರತವು. ಇದನ್ನು ಬಿಟ್ಟು ನಾನು ಆಹಾರವನ್ನೇ ಸೇವಿಸುವುದಿಲ್ಲ. ಎಂದು ನೇಮವನ್ನು ಸ್ವೀಕರಿಸಿದನು. ವ॥ ಆ ರೀತಿ ವ್ರತವನ್ನು ಸ್ವೀಕರಿಸಿ ಪ್ರತಿದಿನದ ಮೂರುಕಾಲವೂ ತಪ್ಪದ ಹಾಗೆ—೧೨೧. ಮೂರು ಕಲ್ಲುಗಳನ್ನು ಅರಳಿದ ಕಮಲಗಳೆಂಬ ಭಾವನೆಯಿಂದ ತಪ್ಪದೆ ಹಿಡಿದುಕೊಂಡು

1 ಮಂ(ಚ, ಗ, ಮು, ಜ)

ವ॥ ಅನ್ನೆವರಮಲ್ಲಿ—

ಪೊಳೆವೆಳೆಮಿಂಚು ಸಂಚಳಿಸೆ ಕಾರ್ಮುಗಿಲೇಳೆ ಮಹೇಂದ್ರಚಾಪಮು
ಜ್ವಳಿಸೆ ಕಳಾಪಿ ತಾಂಡವಮನಾಡೆ ಮುಗುಳ್ತು ಕದಂಬರಾಜಿ ಕಂ
ಗೊಳಿಸೆ ಛಿಳಿಲ್ಛಿಟಿಲ್ಧ್ವನಿಘನಾಘನದೊಳ್ನೆಲೆವೆರ್ಚೆ ಚಾತಕಾ
ವಳಿ ನಲವೇಱೆ ಕಟ್ಟಿಕಱೆದತ್ತಿಳೆಯೊಳ್ಮಳೆ ಕಾರಕಾಲದೊಳ್ ೧೨೨

ವ॥ ಅಂತೆಡೆವಿಡದೆ ಕಱೆವ ಪೆರ್ಮಳೆಯೊಳ್ತೊಱೆಯುರ್ಕಿ ಪರಿಯೆ ತನಗೆ ದಾಂಟಲಳವಲ್ಲದೆ ಲಿಂಗಾರ್ಚನೆಯುಳಿಯೆ ಮೂಱುಂದಿನಮುಪವಾಸಮಿರ್ದನಂತರಂ ತೊಱೆ ತೆಗೆಯೆ ದೇಗುಲಕ್ಕೆ ಭಕ್ತಂ ಬಂದು—

ಉಳಿದನಿತುಂ ದಿನಂಗಳ ಶಿವಾರ್ಚನೆಗೆಯ್ದಪೆನೀಗಳೆಂದು ಕ
ಲ್ಗಳನಱಸುತ್ತೆ ಕಾಣದಲಸುತ್ತೆ ಮಹಾಶಿಲೆಯೊಂದನೆತ್ತಿ ತಂ
ದೊಳವಿದಱಲ್ಲಿ ಮಿಕ್ಕ ಶಿಲೆಗಳ್ ಶಿವ ಕೊಳ್ವುದೆನುತ್ತೆ ಮೇಲೆ ನಿ
ಶ್ಚಳಮತಿ ನೂಂಕೆ ಭೋಂಕನದನೊತ್ತರಿಸುತ್ತೆ ನಗುತ್ತೆ ಶಂಕರಂ ೧೨೩

ಎರೆ ವರಮನಮಳಸುಗುಣಾ
ಭರಣ ಭವನ್ನಿಷ್ಠೆಗೊಲ್ದನೆನೆ ವಿಪುಳ ಕೃಪಾ

ಆ ಸಾಂಖ್ಯನು ಅವುಗಳಿಂದ ಶಿವನಿಗೆ ಹೊಡೆಯುತ್ತಿದ್ದನು. (ಈ ರೀತಿಯಲ್ಲಿ ಭಕ್ತಿಯನ್ನು ಆಚರಿಸುತ್ತ) ಗೌರೀಪತಿಯಾದ ಶಿವನನ್ನು ನಂಬಿ, ಮನದೊಲವಿನಿಂದ ಪೂಜಿಸುತ್ತಿದ್ದನು. ವ॥ ಅಷ್ಟರೊಳಗೆ ಅಲ್ಲಿ—೧೨೨. ಒಂದು ಮುಂಗಾರಿನ ಕಾಲದಲ್ಲಿ ಹೊಳೆಯುತ್ತಿರುವ, ಬಳ್ಳಿ ಮಿಂಚು ಮಿಂಚುತ್ತಿರಲು ಕಪ್ಪಾದ ಮೋಡಗಳು ಹುಟ್ಟಿದವು; ಇಂದ್ರ ಧನುಸ್ಸು ಪ್ರಕಾಶಿಸಿತು; ನವಿಲುಗಳು ತಾಂಡವನೃತ್ಯವನ್ನು ಆಡಿದವು; ಕದಂಬವೃಕ್ಷಗಳು ಹೂ ಬಿಟ್ಟು ಕಂಗೊಳಿಸಿದವು; ಛಿಳಿಲ್, ಛಿಟಿಲ್ ಎಂದು ಧ್ವನಿಮಾಡುತ್ತ ಮಳೆಯನ್ನು ಸುರಿಸುವ ಮೋಡಗಳ ನಿಲುವು (ರೀತಿಯು) ಅಧಿಕಗೊಂಡವು; ಚಾತಕಪಕ್ಷಿಗಳು ಹರ್ಷ ಗೊಂಡವು—ಹೀಗೆ ಆ ಮುಂಗಾರಿನ ಕಾಲದಲ್ಲಿ ಮಳೆಯು ಭೂಮಿಯ ಮೇಲೆ ಒಂದೇ ಸವನೆ ಸುರಿಯುತ್ತಿತ್ತು. ವ॥ ಹೀಗೆ ಎಡೆಬಿಡದೆ ಸುರಿಯುತ್ತಿರುವ ದೊಡ್ಡ ಮಳೆಯ ಕಾರಣದಿಂದ ಹೊಳೆಯು ಉಕ್ಕಿ ಹರಿಯುತ್ತಿರಲು ತನಗೆ ದಾಟುವುದಕ್ಕೆ ಶಕ್ತಿ ಸಾಲದೆ ಲಿಂಗಾರ್ಚನಾಕ್ರಿಯೆಯು ನಿಂತಿತು. ಮೂರು ದಿನಗಳು ಉಪವಾಸಮಾಡಿದನಂತರ ಹೊಳೆಯು ಇಳಿಯಲು, ದೇವಾಲಯಕ್ಕೆ ಭಕ್ತನು ಬಂದು—೧೨೩-೧೨೪. ಉಳಿದು ಹೋದ ಮೂರು ದಿನಗಳ ಶಿವಾರ್ಚನೆಯನ್ನು ಈಗಲೇ ಮಾಡುತ್ತೇನೆಂದು ಕೊಂಡು ಕಲ್ಲುಗಳನ್ನು ಹುಡುಕುತ್ತ ಕಾಣದೆ ಸಂಕಟಗೊಂಡು, ಮಹಾಶಿಲೆಯೊಂದನ್ನೆತ್ತಿ ತಂದು, ಶಿವನೇ ಮಿಕ್ಕಕಲ್ಲುಗಳೆಲ್ಲ ಇದರೊಳಗೆ ಇರುತ್ತವೆ, ಸ್ವೀಕರಿಸು ಎನ್ನುತ್ತ ಆ ನಿಶ್ಚಲಮತಿ ಯಾದ ಸಾಂಖ್ಯತೊಂಡನು ಒಮ್ಮೆಲೇ ಬಿರುಸಾಗಿ ಎತ್ತಿಹಾಕಲಾಗಿ (ನೂಕಲಾಗಿ)

ಕರನೀಕ್ಷಿಸಿ ಭಕ್ತಂ ಪುರ
ಹರಂಗೆ ಪೊಡಮಟ್ಟು ಪೊಗಳ್ದನತುಳೋತ್ಸವದಿಂ ೧೨೪

ಪರಮಕೃಪಾಸಮುದ್ರ ಫಣಿರಾಜವಿಭೂಷಣ ಭವ್ಯ ಭಾವ್ಯ ಭಾ
ಸ್ವರ ಶತಕೋಟಿತೇಜ ಭಜಕಾಮರಭೂರುಹ ಭೂರಿದೈತ್ಯಸಂ
ಹರ ಹರಿಣಾಂಕಜೂಟ ಶಮನ ಸ್ಮರಘಸ್ಮರ ಭಾಳನೇತ್ರ ಶಂ
ಕರ ಜಯ ದೇವದೇವ ನಿಗಮಾಗಮಸನ್ನುತ ನೀಲಕಂಧರಾ ೧೨೫

ಪುರಹರ ನಿನ್ನ ನಿತ್ಯತೆಗೆ ಮೃತ್ಯುಹರತ್ವಮೆ ಸಾಕ್ಷಿ ನಿನ್ನಧೀ
ಶ್ವರತೆಗೆ ಪಾದದಲ್ಲಿ ತಳೆದಚ್ಯುತನಕ್ಷಿಯೆ ಸಾಕ್ಷಿ ನೀಂ ಜಗ
ದ್ಗುರುವೆನಿಸಿರ್ಪುದರ್ಕೆ ನಿಗಮಂಗಳ ಪೆತ್ತುದೆ ಸಾಕ್ಷಿ ನಿನ್ನ ಸ
ತ್ಪುರುಷತೆಗಾದಿವಿಷ್ಣು ವಧುವಾದುದೆ ಸಾಕ್ಷಿ ಸಮಸ್ತ ಲೋಕದೊಳ್ ೧೨೬

ಹರ ನಿನ್ನಾದ್ಯಂತ ಶೂನ್ಯತ್ವಕೆ ನುಡಿದಘದಿಂ ಪಂದಿ ಪರ್ವಾದ ಪದ್ಮೋ
ದರ ಗೋಪ[1]ರ್ಸಾಕ್ಷಿ ನಿನ್ನುಜ್ವಳಮಹಿಮೆಗೆ ವೇದಂಗಳೇ ಸಾಕ್ಷಿ ಲೋಕೋ

ಶಂಕರನು ನಗುತ್ತ–'ಎಲೈ ಶ್ರೇಷ್ಠ ಸದ್ಗುಣಗಳೇ ಆಭರಣವಾಗಿ ಉಳ್ಳ ಸಾಂಖ್ಯ ತೊಂಡನೇ, ನಿನ್ನ ನಿಷ್ಠೆಗೆ ಒಲಿದೆನು. ವರಗಳನ್ನು ಬೇಡು ಎಂದು ಆ ವಿಪುಲವಾದ ಕರುಣವನ್ನುಂಟುಮಾಡುವ ಶಿವನು ನೋಡಿ ಹೇಳಲು, ಆ ಭಕ್ತನು ಪರಮೇಶ್ವರನಿಗೆ ನಮಸ್ಕರಿಸುತ್ತ ಅತುಳವಾದ ಸಂತೋಷದಿಂದ ಹೊಗಳಿದನು. ೧೨೫. ಪರಮಕೃಪೆಗೆ ಸಮುದ್ರದೋಪಾದಿಯಲ್ಲಿರುವವನೇ, ಸರ್ಪಗಳ ಆಭರಣವನ್ನು ತೊಟ್ಟವನೇ, ಮಂಗಳ ಸ್ವರೂಪರಾದ ಭಕ್ತರುಗಳಿಂದ ಧ್ಯಾನಿಸುವುದಕ್ಕೆ ಯೋಗ್ಯನಾದವನೇ, ಶತಕೋಟಿ ಸೂರ್ಯರ ತೇಜಸ್ಸುಳ್ಳವನೇ, ಭಜನೆಮಾಡುವ ಜನಕ್ಕೆ ಕಲ್ಪವೃಕ್ಷ ಪ್ರಾಯನಾದವನೇ, ಅಸಂಖ್ಯ ದೈತ್ಯರನ್ನು ಸಂಹರಿಸಿದವನೇ, ಜಡೆಯಲ್ಲಿ ಚಂದ್ರನನ್ನು ಧರಿಸಿದವನೇ, ಯಮ ಮತ್ತು ಮನ್ಮಥರುಗಳನ್ನು ಸುಟ್ಟುಹಾಕಿದ (ನುಂಗಿ ಹಾಕಿದ) ಹಣೆಗಣ್ಣುಳ್ಳವನೇ, ವೇದಾಗಮಗಳಿಂದ ಸ್ತೋತ್ರ ಮಾಡಿಸಿಕೊಳ್ಳುವವನೇ, ದೇವದೇವಾ, ನೀಲಕಂಧರನೇ ಜಯ. ೧೨೬. ಪರಮೇಶ್ವರ, ನಿನ್ನ ನಿತ್ಯತ್ವಕ್ಕೆ ಮೃತ್ಯುವನ್ನು ಹರಣಮಾಡಿದುದೇ ಸಾಕ್ಷಿ; ನಿನ್ನ ಒಡೆಯತನಕ್ಕೆ (ಪ್ರಭುತ್ವಕ್ಕೆ) ಪಾದದ ಮೇಲೆ ಏರಿಸಲ್ಪಟ್ಟ ವಿಷ್ಣುವಿನ ನೇತ್ರವೇ ಸಾಕ್ಷಿ ; ನೀನು ಜಗತ್ತಿಗೆ ಗುರುವೆನ್ನುವುದಕ್ಕೆ ವೇದಗಳನ್ನು ಉಸುರಿದುದೇ ಸಾಕ್ಷಿ ; ನಿನ್ನ ಶ್ರೇಷ್ಠ ಪುರುಷತ್ವಕ್ಕೆ ಆದಿಯಲ್ಲಿ ವಿಷ್ಣುವು ಹೆಂಡತಿಯಾದುದೇ ಸಾಕ್ಷಿ. ೧೨೭. 'ಹರನೇ, ಕೇಳು : ನೀನು ಆದಿ ಅಂತ್ಯ ಶೂನ್ಯನು ಎಂಬುವಕ್ಕೆ ಹಂದಿಯ ರೂಪದಲ್ಲಿ ವಿಷ್ಣುವು ಪಾತಾಳಕ್ಕೂ, ಹದ್ದಾಗಿ (ಹಂಸಪಕ್ಷಿಯಾಗಿ) ಆಕಾಶಭಾಗಕ್ಕೆ ಬ್ರಹ್ಮನೂ ಹೋಗಿ ಹುಡುಕಿ ಕಾಣದೆ ಇದ್ದುದೇ ಸಾಕ್ಷಿ ; ನಿನ್ನ ಪ್ರಕಾಶಮಾನವಾದ ಮಹಿಮೆಗೆ ವೇದಗಳೇ ಸಾಕ್ಷಿ (ಅಂದರೆ ವೇದಗಳಲ್ಲಿ ಹೇಳಿರುವ ಸಹಸ್ರ ಶೀರ್ಷಾ

1 ಬೊಮ್ಮ (ಚ, ಗ), ಬ್ರಹ್ಮ (ದ)

ತ್ಕರ ರಕ್ಷಾಶಾಲಿ ನೀನೆಂಬುದಕೆ ಗಳವಿಷಂ ಸಾಕ್ಷಿ ಕೇಳ್ದೇವ ಕಾರು
ಣ್ಯರಸಾಂಭೋರಾಶಿ ನೀನಾದುದಕೆನಗಣವೊಲ್ದಂದಮೇ ಸಾಕ್ಷಿಯಲ್ತೇ ೧೨೭

ಹರಿ ನಿನ್ನಂ ಪೂಜೆಗೆಯ್ದಂ ಧವಳನಳಿನದಿಂ ಪದ್ಮಜಂ ಪದ್ಮದಿಂದಂ
ಸುರಪಂ ಮಂದಾರದಿಂ ಚಂದ್ರಮನಸಿತಸರೋಜಾತದಿಂ ಸೂರ್ಯನರ್ಕೋ
ತ್ಕರದಿಂ ಮಾಣಿಕ್ಯದಿಂದಂ ಫಣಿಪತಿ ದಶಕಂಠಂ ಶಿರೋಬೃಂದದಿಂದಾ
ಭರದಿಂದಾನಿಲ್ಲಿ ಕಲ್ಲಿಂ ಪೊಸತೆನೆ ನೆಗಳ್ದಂ ಪೂಜೆಯಂ ಚಂದ್ರಮೌಳೀ ೧೨೮

ಎಲ್ಲರ್ಪೂವಿಂ ಪೂಜಿಪ
ರಿಲ್ಲಿ ಕರಂ ಕಲ್ಗಳಿಂದೆ ಪೂಜಿಸಿದನಿವಂ
ಖುಲ್ಲನೆನುತುಂ ವಿಡಂಬಿಸ
ಲೊಲ್ಲದೆ ನೀನೊಲ್ದೆ ಗಡ ದಯಾಳುಗಳರಸಾ ೧೨೯

ವರದಾನಶೀಲ ಸುಗುಣಾ
ಭರಣ ದಯಾವಾರ್ಧಿ ನಿನ್ನ ಮಹಿಮೋನ್ನತಿಯಂ
ಹರಿ ವಿಧಿ ಮನುಮುನಿ ನಿಗಮೋ
ತ್ಕರಮಱಿಗುಮೆ ಬಲ್ಲೆನೆಂತೊ ನಿನ್ನತಿಶಯಮಂ ೧೩೦

ಪುರುಷಃ ಸಹಸ್ರಾಕ್ಷಸ್ಸಹಸ್ರಪಾತ್–ಇತ್ಯಾದಿ ಮಾತುಗಳೇ ಸಾಕ್ಷಿ ಎಂದು ಭಾವ) ಲೋಕ ಸಮೂಹಗಳನ್ನು ರಕ್ಷಣೆ ಮಾಡುವುದಕ್ಕೆ ಯೋಗ್ಯನೆಂಬುದಕ್ಕೆ ಭಯಂಕರ ಹಾಲಾಹಲ ವನ್ನು ಕುಡಿದು ಕುತ್ತಿಗೆಯಲ್ಲಿ ಧರಿಸಿದುದೇ ಸಾಕ್ಷಿ ; ದೇವ, ನೀನು ಕಾರುಣ್ಯರಸದ ಸಮುದ್ರ ಸ್ವರೂಪನೇ ಹೌದು ಎಂಬುದಕ್ಕೆ ನನಗೆ ಒಲಿದ ರೀತಿಯೇ ಸಾಕ್ಷಿಯಲ್ಲವೇ ? ೧೨೮. ಹೇ ಚಂದ್ರಮೌಳಿಯೇ, ವಿಷ್ಣುವು ನಿನ್ನನ್ನು ಬಿಳಿಯ ಕಮಲಗಳಿಂದ ಪೂಜೆ ಮಾಡಿದನು. ಬ್ರಹ್ಮನು ಕಮಲಗಳಿಂದ ದೇವೇಂದ್ರನು ಕಲ್ಪವೃಕ್ಷಗಳ ಹೂವುಗಳಿಂದ, ಚಂದ್ರನು ಕನ್ನೈದಿಲೆಯ ಹೂವುಗಳಿಂದ, ಸೂರ್ಯನು ಎಕ್ಕದ ಹೂವುಗಳ ಸಮೂಹ ದಿಂದ, ಆದಿಶೇಷನು ಮಾಣಿಕ್ಯಗಳಿಂದ, ರಾವಣನು ತನ್ನ ಶಿರಸ್ಸುಗಳ ಸಮೂಹದಿಂದ. ಭರದಿಂದ ಬೀಸುತ್ತಿರುವ ಕಲ್ಲುಗಳಿಂದ ನಾನು ಲೋಕಕ್ಕೆ ಹೊಸದೆನ್ನುವಂತೆ ಪೂಜೆ ಮಾಡಿದೆನು. ೧೨೯. ದಯಾಳುಗಳ ಅರಸನಾದ ಶಿವನೇ, ಎಲ್ಲರೂ ಹೂವುಗಳಿಂದ ಪೂಜೆ ಮಾಡಿದರೆ, ದುಷ್ಟನಾದ ಇವನಾದರೋ ಹೆಚ್ಚಾಗಿ ಕಲ್ಲುಗಳಿಂದ ಹೊಡೆದು ಪೂಜಿಸುತ್ತಿದ್ದಾನೆ ಎನ್ನುತ್ತ ತಿರಸ್ಕಾರ ಮಾಡದೆ (ಇಂಥವನನ್ನೂ ಕೂಡ) ಒಲಿದೆ ಯಲ್ಲವೇ । ೧೩೦. ಶ್ರೇಷ್ಠವಾದ ದಾನಗುಣವೇ ಶೀಲವಾಗಿ ಉಳ್ಳವನೇ, ಸದ್ಗುಣ ಗಳೇ ಆಭರಣವಾಗಿ ಉಳ್ಳವನೇ, ದಯಾ ಸಮುದ್ರನೇ, ನಿನ್ನ ಶ್ರೇಷ್ಠವಾದ ಮಹಿಮಾತಿ ಶಯವನ್ನು ಹರಿಬ್ರಹ್ಮರೂ, ಮನುವೇ ಮೊದಲಾದ ಮುನಿಗಳೂ, ವೇದಸಮೂಹವೂ ಅರಿಯಲು ಶಕ್ಯವೇ ? ಆದರೆ ನಾನು ಹೇಗೆ ನಿನ್ನ ಶ್ರೇಷ್ಠತೆಯನ್ನು ಅರಿಯಲಿ ?

ಬಲ್ಲಪ್ರಮಥಾಧೀಶ
ರ್ಬಲ್ಲಂ ವೃಷಭೇಂದ್ರನಮಳ ಶರಣರ್ಬಲ್ಲ
ರ್ಕಲ್ಲಿಡುವ ಕಜ್ಜವೊಂದಂ
ಬಲ್ಲೆಂ ನಿನ್ನಿರವನೆಂತುಮಾನಱಿದಪೆನೇ ೧೩೧

ವ॥ ಎಂದಿಂತು ಪರಮಾನಂದದಿಂ ಪೊರೆಯೇಱಿ ಪೊಗಳ್ದು—

ವರಮಂ ಬೇಱೊಂದುಮಂ ಪ್ರಾರ್ಥಿಸೆನನುದಿನಮಾನಿರ್ದ ಭೂಮಂಡಲಂ ಬೌ
ದ್ಧರಿನಾ ಚಾರ್ವಾಕರಿಂ ಜೈನರ ಸಮುದಯದಿಂ ಶೂನ್ಯಮಪ್ಪಂತೆ ಗೆಯ್ದೀ
ಶ್ವರಭಕ್ತಶ್ರೇಣಿಯಿಂ ತೀವುವವೊಲೆಸಗಿದೆನ್ನಿಷ್ಟಮೆಂದದ್ರಿಜಾಧೀ
ಶ್ವರನಿಂ ತಾನೆಂದವೋಲಾಗಿಸಿ ಮೆಱೆಯನೆ ಕೇಳ್ದಾ ತ್ರಿಯೆಳ್ಸಾಂಖ್ಯತೊಂಡಂ ೧೩೨

ವಾಗೀಶನ ಕಥೆಯಂ ಚ
ಲ್ವಾಗೀಶನ ಭಕ್ತರೆಡೆಯೊಳೋದುವನವನಾ
ವಾಗೀಶಮುಖ್ಯ ಸುರಗುರು
ವಾಗೀಶಕೃಪಾವಿಶೇಷದಿಂ ಸುಖಮಿರ್ಕುಂ ೧೩೩

ಹರಸುತನ ವಿಮಳ ಕಥನಮ
ನೊರೆವರ್ಗಂ ಕೇಳ್ವವರ್ಗಮಿೂಮ ದೇವಂ

೧೩೧. ನಿನ್ನ ಇರವನ್ನು ಪ್ರಮಥಾದೀಶರು ಬಲ್ಲರು ; ವೃಷಭೇಶ್ವರನು ಬಲ್ಲನು ; ಶ್ರೇಷ್ಠರಾದ ಶರಣರು ಬಲ್ಲರು ; ಆದರೆ ನಾನು ಕೇವಲ ಕಲ್ಲುಗಳಿಂದ ಹೊಡೆಯುವುದನ್ನು ಬಲ್ಲೆನಲ್ಲದೆ ನಾನು ತಿಳಿಯಲು ಶಕ್ತನಾದೇನೆಯೇ ? ವ॥ ಇತ್ಯಾದಿಯಾಗಿ ಉತ್ಸಾಹಗೊಂಡು ಪರಮಾನಂದದಿಂದ ಹೊಗಳಿ—೧೩೨. ನನಗೆ ಯಾವ ಒಂದು ವರವನ್ನೂ ಪ್ರಾರ್ಥಿಸುವುದಿಲ್ಲ. ಸದಾಕಾಲವೂ ನಾನಿರುವ ಈ ಭೂಮಂಡಲವು ಬೌದ್ಧರಿಂದಲೂ, ಚಾರ್ವಾಕರಿಂದಲೂ, ಜೈನರ ಸಮೂಹದಿಂದಲೂ ಶೂನ್ಯವಾಗಿರುವಂತೆ ಮಾಡು ; ಈಶ್ವರಭಕ್ತ ಸಮೂಹದಿಂದ ತುಂಬುವಂತೆ ಮಾಡು, ಇದೇ ನನ್ನ ಬಯಕೆ ಎಂದು ಗಿರಿರಾಜತನಯೆಯ ಒಡೆಯನಾದ ಶಿವನಿಂದ ತಾನು ಕೇಳಿಕೊಂಡ ಹಾಗೆ ಆಗುವಂತೆ ಆ ಸಾಂಖ್ಯತೊಂಡನು ಆಗಿಸಿ ಪ್ರಕಾಶಿಸಲಿಲ್ಲವೇ ? ಕೇಳು (ಎಂದು ಆ ಏಕಾಂತ ರಾಮಯ್ಯನು ಜೈನರಿಗೆ ತಿಳಿಸಿದನು.) ೧೩೩. ವಾಗೀಶನ ಕಥೆಯನ್ನು ಚೆಂದವಾಗಿ ಶಿವಭಕ್ತರ ಸಮೂಹದಲ್ಲಿ ಓದುವವನು ಆ ವಾಗೀಶನಾದ ಬ್ರಹ್ಮನೇ ಮೊದಲಾದ ದೇವತೆಗಳಿಗೆ ಗುರುವೆನಿಸಿ ಈಶ್ವರನ ಕೃಪಾ ವಿಶೇಷದಿಂದ ಸುಖವಾಗಿರುವನು. ೧೩೪. ಹರನ ಸುತನಾದ ತಿರುಜ್ಞಾನ ಸಂಬಂಧರ ಪವಿತ್ರವಾದ ಕಥೆಯನ್ನು ಹೇಳುವವರಿಗೆ, ಕೇಳುವವರಿಗೆ ಮೇರುಪರ್ವತವೇ ಮನೆಯಾಗಿ ಉಳ್ಳವನೂ,

ವರವಮಂ ಪರವಮುಂ ಗಿರಿವಮಂ
ದಿರ ವಮಂಗಳರೂಪನೋಪನಗಪತಿ[1]ಸುತೆಯಾ[1] ೧೩೪*

ನಿಡುಮಾರದೇವ ಕಥನವ
ನೊಡನುತ್ಸವದಿಂದೆ ಪಠಿಯಿಪಾಲಿಪ ಮನುಜ
ರ್ಗೆಡೆವಿಡದ ಪೂರ್ಣ ಸುಖಮಂ
ಮೃಡನೀವಂ ದೇವದೇವನೀ ವಸುಮತಿಯೊಳ್ ೧೩೫

ನಮಿನಂದಿನಾಥ ವಿಮಳ ಸಚ್ಚರಿತ್ರಮಂ
ಕ್ರಮದಿಂದೆ ಪೇಳ್ವ ಮಿಗೆ ಕೇಳ್ವ ಮರ್ತ್ಯರಂ
ಸುಮಹಾಗಣೇಂದ್ರ ಪದವಿತ್ತು ರಕ್ಷಿಪಂ
ಹಿಮಶೈಲಪುತ್ರಿಯರಸಂ ವಿಳಾಸದಿಂ ೧೩೬

ಕಲಿಸಾಂಖ್ಯ ಚರಿತಮಂ ನಿ
ಶ್ಚಲಮತಿಯಿಂ ಪೇಳ್ವ ಕೇಳ್ವ ವಿಬುಧರ್ಗಮರಾ
ಚಲಚಾಪನೀವನತಿ ಮಂ
ಜುಲಸುಖಮಂ ಶತಮಖಾದಿನುತ ಗಣಪದಮಂ ೧೩೭

ವಿಳಸತ್ಕಲ್ಯಾಣಕಲ್ಪದ್ರುಮನಖಿಳಕಳಾಶಾಲಿ ಶೈವಪ್ರಭಾವೋ
ಜ್ಜ್ವಳಧಾಮಂ ಭಕ್ತಿಭಾವಾರಮಣನಮಳಕೀರ್ತಿಪ್ರಭಾಪೂರಿತಾಶಾ

ಮಂಗಳಸ್ವರೂಪನೂ, ಹಿಮವಂತರಾಜನ ಮಗಳ ಒಡೆಯನೂ ಆದ ದೇವನು ಪರಮ ವರವನ್ನು ಈಯುವನು. ೧೩೫. ನಿಡುಮಾರ ದೇವನ ಕಥೆಯನ್ನು ಒಡನೆ ಸಂತೋಷ ದಿಂದ ಓದುವ ಕೇಳುವ ಮನುಷ್ಯರಿಗೆ ಸತತವಾಗಿ ಪೂರ್ಣ ಸುಖವನ್ನು ಈ ಭೂಲೋಕ ದಲ್ಲಿ ದೇವತೆಗಳಿಗೆಲ್ಲ ದೇವನೆನಿಸಿದ ಪರಶಿವನು ಕೊಡುವನು. ೧೩೬. ನಮಿನಂದಿ ನಾಥನ ಪರಿಶುದ್ಧ ಚರಿತ್ರೆಯನ್ನು ಕ್ರಮವಾಗಿ ಹೇಳುವ, ಚೆನ್ನಾಗಿ ಕೇಳುವ ಮನುಷ್ಯ ರಿಗೆ ಹಿಮವಂತ ರಾಜನ ಪುತ್ರಿಯ ಗಂಡನಾದ ಶಿವನು ಸಂತೋಷದಿಂದ ಶ್ರೇಷ್ಠವಾದ ಮಹಾಗಣ ಶ್ರೇಷ್ಠಪದವಿಯನ್ನು ಕೊಟ್ಟು ರಕ್ಷಿಸುವನು. ೧೩೭. ಕಲಿಯಾದ ಸಾಂಖ್ಯತೊಂಡ ಚರಿತ್ರೆಯನ್ನು ನಿಶ್ಚಲ ಬುದ್ಧಿಯಿಂದ ಹೇಳುವ ಕೇಳುವ ವಿದ್ವಾಂಸರಿಗೆ ಮೇರುಪರ್ವತವನ್ನೇ ಬಿಲ್ಲನ್ನಾಗಿ ಮಾಡಿಕೊಂಡ ಶಿವನು ಮನೋಹರವಾದ ಸುಖ ವನ್ನೂ, ದೇವೇಂದ್ರಾದಿ ದೇವತೆಗಳಿಂದ ಹೊಗಳಿಸಿಕೊಳ್ಳಲ್ಪಡುವ ಶಿವಗಣ ಪದವಿ ಯನ್ನೂ ಕೊಡುವನು. ೧೩೮. ಪ್ರಕಾಶಮಾನವಾದ ಕಲ್ಯಾಣ ನಗರದ ಕಲ್ಪವೃಕ್ಷ ನೆನಿಸಿದ, ಸಕಲ ಸದ್ವಿದ್ಯೆಗಳುಳ್ಳ, ಶಿವಸಂಬಂಧವಾದ ಪ್ರಭಾವದ

---

[1] ಯರಸಾ(ದ)

* ಈ ಪದ್ಯದ ತರುವಾಯ 'ದ' ಪ್ರತಿಯಲ್ಲಿ ಈ ಕಂದಪದ್ಯವಿದೆ :
ಗಿರುತಾಂಡಿಚರಿತನೊರವಂ । ಪರವೋತ್ಸವದಿಂದ ಪಠಿಯಿಸಿದನೋದುವಗಂ ॥
ವರವಂ ಕೊಡುವಂ ಪರಮಂ । ವರಗಣನಿಕರದೊಳೆ ಸುಖದೊಳಿರ್ಕುಂನವರತಂ ॥

ವಳಯಂ ದುರ್ದಾಂತವಾಗ್ಬ್ರುಂಜನನಧಿಗತ ಸರ್ವಾರ್ಥನಿಂತಿಂತವಂ ಮಂ
ಜುಳವೃತ್ತಂಪೇಳ್ದುದಂ ತಾಂ ತಿಳಿದು ಮುದವನಾಳ್ದೊಪ್ಪುತಿರ್ದಂ ನೃಪೇಂದ್ರಂ ೧೩೮

ಮುರಾರಿ ಶಂಬರಾರಿ ವಾ
ಗ್ವರಾದಿ ನಿರ್ಜರಾರ್ಚಿತೇ
ಧರಾಧರೇಶ್ವರಾತ್ಮಜೇ
ಹರಪ್ರಿಯೆ ಜಯಾಂಬಿಕೇ ೧೩೯

ಇದು ವಿನಮದಖಿಳ ಸುರಾಸುರೇಂದ್ರಮಕುಟತಟಘಟಿತ ಮಣಿಗಣಾಗಣಿತ ರುಚಿನಿಚಯ

ತರುಣಾರುಣಾತಪಪರಿಲಸಿತ ಪರಮ ಶಿವಲಿಂಗ ಪಾದಾರವಿಂದಪರಾಗಭಸಿತ

ಭಾಸುರಲಲಾಟಪಟ್ಟಸರಸಜನಮಾನಿತೋಭಯಕವಿತಾವಿಶಾರದ

ಶ್ರೀಷಡಕ್ಷರಿದೇವಭಕ್ತಿವಿರಚಿತ

ಶ್ರೀಮದ್ ಬಸವರಾಜವಿಜಯಮಹಾಪುರಾಣದೊಳ್ ವೀರಭಕ್ತವಿಳಾಸಂ

ಚತುಸ್ತ್ರಿಂಶಾಶ್ವಾಸಂ ಸಮಾಪ್ತಂ

ಅಂತು ಆಶ್ವಾಸ ೩೪ಕ್ಕೆ ಪದಗಣನೆ ೨೭೩೬ಕ್ಕೆ ಮಂಗಳಮಹಾ ಶ್ರೀ

ತೇಜಸ್ಸಿಗೆ ಸ್ಥಾನನೆನಿಸಿದ, ಭಕ್ತಿಯೆಂಬ ಸ್ತ್ರೀಯ ರಮಣನೆನಿಸಿದ, ಪರಿಶುದ್ಧವಾದ ಕೀರ್ತಿಯ ಪ್ರಭೆಯಿಂದ ಸಮಸ್ತ ದಿಕ್ಕುಗಳನ್ನು ತುಂಬಿದ ದುಷ್ಟರಾದವರ ಮಾತುಗಳನ್ನು ಖಂಡಿಸುವ, ಸಮಸ್ತ ಇಷ್ಟಾರ್ಥಗಳನ್ನು ಹೊಂದಿದ ಬಸವೇಶ್ವರನು ಈ ರೀತಿಯ ವೀರಭಕ್ತರ ಮನೋಹರವಾದ ಕಥೆಗಳನ್ನು ಹೇಳಿದು ದನ್ನು ತಾನು ತಿಳಿದುಕೊಂಡು ಸಂತೋಷವನ್ನು ಹೊಂದಿ ಶೋಭಿಸುತ್ತಿದ್ದನು. ೧೩೯. ವಿಷ್ಣು, ದೇವೇಂದ್ರ, ಬ್ರಹ್ಮರೇ ಮೊದಲಾದ ದೇವತೆಗಳಿಂದ ಪೂಜಿಸಲ್ಪಡುವ ಪಾದಗಳುಳ್ಳವಳೂ, ಭೂಧರನಾದ ಹಿಮವಂತರಾಜನ ಮಗಳೂ, ಪರಮೇಶ್ವರನ ಪ್ರಿಯೆಯೂ ಎನಿಸಿದ ಅಂಬಿಕೆಯೇ ಜಯ.

ಮೂವತ್ತುನಾಲ್ಕನೆಯ ಆಶ್ವಾಸವು ಸಮಾಪ್ತವಾಯಿತು.

ಪಂಚತ್ರಿಂಶಾಶ್ವಾಸಂ

[ಕೋ[1]ವೂರ ಬೊಮ್ಮಯ್ಯನ ಕಥೆ]

ಶ್ರೀಹಿಮಗಿರೀಂದ್ರಕನ್ಯಾ
ಬಾಹಾಚಂಪಕಸುಮಾಲಿ ಕಾಕಲಿತಗಳಂ
ಮೋಹವಿದೂರಂ ಸುಗುಣಸ
ಮೂಹಾನ್ವಿತನೀಗೆ ಸೌಖ್ಯಮಂ ಶಿವಲಿಂಗಂ ೧

ವ॥ ಮತ್ತಂ[2]—

ಧರಣೀಭಾಗದೊಳೇಳ್ಗೆವೆತ್ತು ಮಿಸುಪಾ ಕೋವೂರ ಬೊಮ್ಮಯ್ಯನೀ
ಶ್ವರಭಕ್ತಂ ಗೆಲೆ ಜೈನತಾಪಸರನಾರ್ಪಿಂ ವಾದದೊಳ್ ಸೋಲ್ತವರ್
ಕರಮೊಂದಂ ನೆನೆದಾವೆ ಬಾಳಿಪೆವಿದಂ ಪೇರಾಲಮಂ ನೀನೆ ಸು
ಟ್ಟುರುಪಂತಲ್ಲದೊಡಾವೆ ಸುಟ್ಟಪೆವಿದಂ ನೀಂ ಬಾಳಿಸೈ ಮಂತ್ರದಿಂ ೨

ವ॥ ಎರಡಱೊಳೊಂದಭಿಮತಮಪ್ಪುಕೆಯ್ದು ನೆಗಳ್ವುದಿದೆ ದೃಷ್ಟಾಂತಮೆಮ್ಮ ಮಹಿಮೆಗಂ ನಿಮ್ಮ ಪೆರ್ಮೆಗಮೆಂದು[3]ಱುಮಂತ್ರತಂತ್ರನಿಪುಣಶವಣರ್ನುಡಿಯೆ ಬೊಮ್ಮಿದೇವಂ ಮಾರ್ಕೊಂಡು—

ಕೋವೂರ ಬೊಮ್ಮಯ್ಯನ ಕಥೆ

೧. ಮಂಗಳಕರಳಾದ ಪಾರ್ವತೀ ದೇವಿಯ ಬಾಹುಗಳೆಂಬ ಸಂಪಿಗೆ ಹೂವುಗಳ ಮಾಲಿಕೆಗಳಿಂದ ಕೂಡಿದ ಕಂಠವುಳ್ಳವನೂ, ಮೋಹದಿಂದ ದೂರನಾದವನೂ, ಸದ್ಗುಣಗಳ ಸಮೂಹದಿಂದ ಕೂಡಿದವನೂ ಆದ ಶಿವಲಿಂಗನು ಸೌಖ್ಯವನ್ನು ಕೊಡಲಿ. ವ॥ ಮತ್ತು, ೨. ಭೂಮಂಡಲದಲ್ಲಿ ಪ್ರಸಿದ್ಧಿಯನ್ನು ಹೊಂದಿ ಶೋಭಿಸುತ್ತಿರುವ ಕೋವೂರ ಬೊಮ್ಮಯ್ಯನೆಂಬ ಈಶ್ವರ ಭಕ್ತನು ಜೈನ ತಪಸ್ವಿಗಳನ್ನು ವಾದದಲ್ಲಿ ಪರಾಕ್ರಮದಿಂದ ಗೆದ್ದನು. ಸೋತುಹೋದ ಅವರು ಒಂದು ಯುಕ್ತಿಯನ್ನು ಚೆನ್ನಾಗಿ ಯೋಚಿಸಿ. 'ಒಂದು ದೊಡ್ಡ ಆಲದ ಮರವನ್ನು ನೀನು ಸುಟ್ಟು ಉರಿಸಿ ಬಿಡು, ನಾವು ಅದನ್ನು ಪುನಃ ಮಂತ್ರದಿಂದ ಬದುಕಿಸುತ್ತೇವೆ, (ಅಥವಾ) ನಾವು ಸುಟ್ಟು ಉರಿಸುತ್ತೇವೆ; ನೀನಾದರೂ ಮಂತ್ರದಿಂದ ಬದುಕಿಸು, (ಎಂದರು.)' ವ॥ 'ಈ ಎರಡರಲ್ಲಿ ಒಂದರ ಬಗೆಗೆ ನಿನ್ನ ಒಪ್ಪಿಗೆಯನ್ನು ಕೊಟ್ಟು ಮಾಡಿ ತೋರಿಸು. ನನ್ನ ಮತ್ತು ನಿನ್ನ ಮಹಿಮೆಗೆ ಇದೇ ದೃಷ್ಟಾಂತ'ವೆಂದು ಕೆಟ್ಟ ಮಂತ್ರ ತಂತ್ರದಲ್ಲಿ ನಿಪುಣರಾದ ಜೈನ ಸಂನ್ಯಾಸಿಗಳು ನುಡಿಯಲಾಗಿ ಬೊಮ್ಮಿದೇವನು ಅವರ ಮಾತಿಗೆ ಪ್ರತಿಯಾಗಿ,

---

[1] ಬಾ(ಜ) [2] × (ಅ) [3] ದುಃ(ಜ, ಮು, ಚ)

ಪಸಿದಿರ್ದುಂ ಪಣ್ಗಳಿಂ ತಾಂ ಪಸಿವನುಡು[1]ಗಿಕುಂ ಪ್ರಾಣಿವರ್ಗಕ್ಕೆ ನಿಚ್ಚಂ
ಬಿಸಿಲೊಳ್ತಾನಿರ್ದುಮನ್ಯರ್ಬರೆ ಬಳಿನೆಳಲಂ ಸಾರ್ಚುಗುಂ ನಿರ್ನಿರಂ ಪ
ಕ್ಷಿಸಹಸ್ರಾಲಂಬನಂ ತಾನೆನಿಕುಮಿದನದೆಂತುಂ ಸುಡಲ್ತಕ್ಕುದೇ ಭ
ಕ್ತಸಮೂಹಕ್ಕಿಂದು ನೀವೇ ಸುಡೆ ಪಡೆದಪೆನೀಯಾಲಮಂ ಲೀಲೆಯಿಂದಂ ೩

ಎನೆ ಕೇಳ್ದಾ ಜೈನರಾಗಳ್ಗಳಪುತಣಕವಾತಂ ತಪೋವಹ್ನಿಯಿಂ ಭೋಂ
ಕನೆ ಸುಟ್ಟುರ್ಭಸ್ಮಮಪ್ಪಂತಿರೆ ವಟತರುವಂ ಕಂಡು ಸದ್ಭಸ್ಮಸಂಜೀ
ವನಮಂ ತಾಂ ಸೂಸುತುಂ ಪುಟ್ಟಿಸುತೆ ಜಯಿಸಿ ತಜ್ಜೈನರಂ ಭಂಜಿಸುತ್ತುಂ
ಜಿನಗೇಹವ್ರಾತಮಂ ಕಿಳ್ತಿಡಿಸಿ ಮೆಱೆಯನೇ ಶೌರ್ಯಮಂ ಬೊಮ್ಮಿದೇವಂ ೪

ಪೊಟ್ಟಳಕೆಱೆವೆಸರೊಪ್ಪುವ
ಪಟ್ಟಣದರಸಂ ಯಶಸ್ವಿ ಜಿನಧರ್ಮಪರಂ
ದಿಟ್ಟಂ ರಿಪುಗೋಧೂಮಘ
ರಟ್ಟಂ ಜಯಸಿಂಹನೆಂಬನವನೀಪಾಲಂ ೫

ಕ್ಷಿತಿಯೊಳೊಪ್ಪುವ ತನ್ನೃಪಾಲನ ದೇಶಿಕಂ ಜಿನಭಕ್ತನಾ
ನುತಪುರಾಂತರದೊಳ್ವಿರಾಜಿಪನುದ್ಧವಾದವಿಚಕ್ಷಣಂ

೩. 'ತಾನು ಹಸಿದು ನಿಂತು ಅನ್ಯರಿಗೆ ತನ್ನ ಹಣ್ಣುಗಳಿಂದ ಪ್ರಾಣಿಗಳ ಸಮೂಹಕ್ಕೆ ಹಸಿವನ್ನು ದೂರ ಮಾಡುವುದು. ನಿತ್ಯವೂ ತಾನು ಬಿಸಿಲಲ್ಲಿ ನಿಂತಿದ್ದು ಅನ್ಯರು ಹತ್ತಿರಕ್ಕೆ ಬಂದರೆ ಅವರಿಗೆ ನೆಳಲನ್ನು ನೀಡುವುದು. ನಿರ್ನಿಮಿತ್ತವಾಗಿ ಸಹಸ್ರ ಸಹಸ್ರ ಸಂಖ್ಯೆಯ ಪಕ್ಷಿಗಳಿಗೆ ಆಶ್ರಯವನ್ನು ಕೊಡುವಂತಹುದು. ಶಿವಭಕ್ತ ಸಮೂಹವು ಇಂಥ ಮರವನ್ನು ಸುಡುವುದು ತಕ್ಕದ್ದಲ್ಲ. ಈಗ ನೀವೇ ಸುಟ್ಟು ಹಾಕಿರಿ; ನಾನು ಲೀಲೆಯಿಂದ ಈ ಆಲವನ್ನು ಪಡೆಯುತ್ತೇನೆ.' ೪. ಹೀಗೆಂದು ಆ ಕೋವೂರ ಬೊಮ್ಮಯ್ಯನು ಅನ್ನಲು, ಆಗ ಜೈನರು ಅಣಕದ ವ್ಯರ್ಥ ಮಾತುಗಳನ್ನಾಡಿ, ಒಮ್ಮೆಲೇ ಆ ಆಲದ ಮರವು ಬೂದಿಯಾಗುವಂತೆ ಸುಟ್ಟು ಹಾಕಿದರು. ಅದನ್ನು ಕಂಡು ಬೊಮ್ಮಯ್ಯನು ಶ್ರೇಷ್ಠವಾದ ಭಸ್ಮವನ್ನು ಚಿಮುಕಿಸಿ ಅದಕ್ಕೆ ಜೀವವನ್ನು ಉಂಟು ಮಾಡಿ ಪುನಃ ಹುಟ್ಟಿಸಿದನು. (ಹೀಗೆ) ಆ ಜೈನರನ್ನು ಜಯಿಸಿ, ನಾಶಮಾಡಿ ಜಿನ ಮಂದಿರಗಳನ್ನು ಕಿತ್ತು ಬಿಸಾಡಿ ತನ್ನ ಶೌರ್ಯವನ್ನು ಮೆರೆಯಲಿಲ್ಲವೇ? ೫. 'ಪೊಟ್ಟಲ ಕೆರೆ' ಎಂಬ ಹೆಸರಿನಿಂದ ಶೋಭಿಸುವ ಪಟ್ಟಣದ ಅರಸನಾದ ಜಯಸಿಂಹನೆಂಬ ಭೂಪಾಲನು ಯಶಸ್ವಿಯು, ಜೈನ ಧರ್ಮಪರನು, ಧೈರ್ಯಶಾಲಿಯು, ವೈರಿಗಳೆಂಬ ಗೋಧಿಯ ಕಾಳುಗಳಿಗೆ ಬೀಸುವ ಕಲ್ಲಿನಂತಿರುವವನು, ಎನಿಸಿದ್ದನು. ೬. ಭೂಮಂಡಲದಲ್ಲಿ ಶೋಭಿಸುವ ಆ ಅರಸನ ಗುರುವು ಜಿನ ಭಕ್ತನೂ, ಪ್ರಶಸ್ತವಾದ ಶಾಸ್ತ್ರವಾದದಲ್ಲಿ ಕುಶಲನೂ

1 ಡಿ(ಅ, ಮು, ಜ)

ಕೃತಕಶಾಸ್ತ್ರಧುರಂಧರಂ ಸಲೆ ಪುಷ್ಪಸೇನಕನೊಲ್ದು ವಿಂ
ಶತಿಸಹಸ್ರ ಸಮಾನ ಶಿಷ್ಯಸಮೇತನುದ್ಧತವೃತ್ತಿಯಿಂ ೬

ವ॥ ಆ ಪುಷ್ಪಸೇನಪಂಡಿತನಾ ಪೊಳಲ ಮನುಜರ್ಗೆ ಜಿನಧರ್ಮಮಂ ಬೋಧಿಸುತ್ತು ಮವರಂ ಜಿನಭಕ್ತರಂ ಮಾಡುತ್ತುಂ ನೆಗಳ್ತೆವೆತ್ತಿರೆ ಜಯಸಿಂಹನೃಪನರಸಿ ಸೃಗ್ವಲೆದೇವಿಯೆಂಬವಳ್ ತಾಂ ಶಿವಭಕ್ತೆಯಪ್ಪುದಱಿನದಂ ಸೈರಿಸಲಾಱದೆ ತನ್ಮದಮನಳಿ[1]ಸಲೆಳಸಿ ನಿಜಗುರುವಪ್ಪ ದಾಸಿಮಯ್ಯನಂ ಶರಣಗಣಪರಿವೃತನನಾಪ್ತಜನದಿಂ ಭಕ್ತಿವಿಜ್ಞಾಪನ ಪೂರ್ವಕಂ ಬರಿಸಿ ತನ್ನರಮನೆಗೆ ಬಿಜಯಂಗೆಯ್ಸಿ ಸಾಷ್ಟಾಂಗಮೆಱಗಿ ಕೇಳೀವನದ ಮಣಿಮಾಡಮಂ ಬೀಡುದಾಣಂಗೆಯ್ದಿರಿಸಿ ಸಮುಚಿತ ಸಾಮಗ್ರಿಗಳಂ ನಿಯೋಜಿಸಿ ಸಂತಸಂ ಬಡೆದಿರ್ದಳದಂ ಕಂಡಾ ಜಿನಮುನಿಗಳ್ನೃಪನಿದರಸನೆಡೆಗೇಳ್ತಂದು—

ನಿನ್ನ ವಲ್ಲಭೆ ಶೈವನೊರ್ವನನೀದು ಮದ್ಗುರುವೆಂದು ಮೇ
ಲನ್ನಿರೀಕ್ಷಿಸದಿಲ್ಲಿಗೆಯ್ದಿಸಿ ಪೂಜೆಗೆಯ್ದಪಳಿತಿಂದೊಂ
ದನ್ನಿಯಂ ಜಿನಶುದ್ಧಧರ್ಮವಿರುದ್ಧಮಾತನನೀಗಳಿ
ಲ್ಲಿನ್ನಿವಾರಿಪುದೆಂದೊಡಂಬಡೆ ಪೇಳೆ ಕೇಳ್ದು ನರೇಶ್ವರಂ ೭

ಅಂತವುರಕೆಯ್ದಿ ತನ್ನಯ
ಕಾಂತೆಯನೇಕಾಂತದೆಡೆಗೆ ಕರೆದೆಂದಂ ಭೂ

ಕೃತಕಗಳಾದ ಶಾಸ್ತ್ರಗಳಲ್ಲಿ ಸಮರ್ಥನೂ ಎನಿಸಿದ 'ಪುಷ್ಪ ಸೇನಕ'ನೆಂಬ ಹೆಸರಿನವನು, ಅವನು ತನಗೆ ಸಮಾನರಾದ ಇಪ್ಪತ್ತು ಸಾವಿರ ಶಿಷ್ಯರಿಂದ ಕೂಡಿ ಗರ್ವದ ನಡೆವಳಿಕೆಯಿಂದ ಆ ಪಟ್ಟಣದಲ್ಲಿ ಶೋಭಿಸುತ್ತಿದ್ದನು. ವ॥ ಇಂಥ ಪುಷ್ಪಸೇನನೆಂಬ ಪಂಡಿತನು ಆ ಪಟ್ಟಣದ ಜನರಿಗೆ ಜೈನಧರ್ಮವನ್ನು ಬೋಧಿಸುತ್ತ ಅವರನ್ನು ಜೈನರನ್ನಾಗಿ ಮಾಡುತ್ತ ಪ್ರಖ್ಯಾತನಾಗಿರಲು, ಜಯಸಿಂಹ ಮಹಾರಾಜನ ಹೆಂಡತಿಯಾದ 'ಸೃಗ್ವಲೆ ದೇವಿ' (ಸುಗ್ಗಲಾ ದೇವಿ) ಯೆಂಬುವವಳು ತಾನು ಶಿವಭಕ್ತೆಯಾದುದರಿಂದ ಅದನ್ನು ಸೈರಿಸಲಾರದೆ, ಆತನ ಆ ಮದವನ್ನು ನಾಶಮಾಡಬೇಕೆಂದು ಅಪೇಕ್ಷಿಸಿ ಶರಣ ಸಮೂಹದಿಂದ ಸುತ್ತುವರಿಯಲ್ಪಟ್ಟ ತನ್ನ ಗುರುವಾದ ದಾಸಿಮಯ್ಯನನ್ನು ಆಪ್ತರಾದವರ ಮೂಲಕ ಭಕ್ತ ವಿಜ್ಞಾಪನಾ ಪೂರ್ವಕವಾಗಿ ತನ್ನ ಅರಮನೆಗೆ ಬರಮಾಡಿಕೊಂಡಳು. ದಯಮಾಡಿಸಿದ ಅವರಿಗೆ ಸಾಷ್ಟಾಂಗ ಪೂರ್ವಕ ನಮಸ್ಕಾರ ಮಾಡಿ ಉಪವನದಲ್ಲಿರುವ ರತ್ನ ನಿರ್ಮಿತವಾದ ಮನೆಯನ್ನು ಅವರ ಬಿಡಾರಕ್ಕೆ ಸಜ್ಜುಗೊಳಿಸಿ ಅಲ್ಲಿರಿಸಿದಳು. ಅವರಿಗೆ ಬೇಕಾಗುವ ಸಾಮಗ್ರಿಗಳನ್ನೆಲ್ಲ ಸಜ್ಜುಗೊಳಿಸಿ ಸಂತೋಷಗೊಂಡಳು. ಅದನ್ನು ಕಂಡ ಆ ಜೈನ ಸನ್ಯಾಸಿಗಳು ಕೋಪಗೊಂಡು ಅರಸನ ಹತ್ತಿರಕ್ಕೆ ಬಂದು ೭-೮. 'ಮಹಾರಾಜಾ, ನಿನ್ನ ಪತ್ನಿಯು ಓರ್ವ ಶೈವನನ್ನು ಈ ದಿವಸ ತನ್ನ ಗುರುವೆಂದು ಮುಂದಾಲೋಚನೆ ಮಾಡದೆ ಇಲ್ಲಿಗೆ ಬರಮಾಡಿಕೊಂಡು, ಪೂಜೆ ಮಾಡುತ್ತಿದ್ದಾಳೆ. ಇದೊಂದು ಅನ್ಯಾಯದ ವಿಚಾರ. ಜೈನರ ಶುದ್ಧ ಧರ್ಮಕ್ಕೆ ವಿರೋಧಿಯಾದ ಆತ

---

1 ಳ್ಗ(ಮು)

ಕಾಂತನೆಲೆ ರಮಣಿಯೆನ್ನಿರ
ವಂ ತಿಳಿಯದೆ ಶೈವನಂಘ್ರಿಯಂ ಪೂಜಿಪುದೇ ೮

ಸತಿಗಂ ಪತಿಗಂ ಗುರುವುಂ
ಮತದೈವಮುಮೆಂಬಿವಬಲೆ ಪೆಱತೊಳವೆ ವಲಂ
ಪತಿರೇವ ಗುರುವೆನುತ್ತಿರೆ
ಹಿತೋಕ್ತಿ ನೀನನ್ಯಗುರುವನಾರಾಧಿಪುದೇ ೯

ಇದನಱಿದೊಡೆ ವಿಪರೀತಮ
ನೊದವಿಸದಿರರೆಮ್ಮ ಜಿನತಪಸ್ವಿಗಳದಱಿಂ
ಸುದತಿ ಭವದ್ಗುರುವಂ ತ
ಳ್ವದೆ ಕಳುಪೆನೆ ಕಾಂತೆ ಕೇಳ್ದು ಕತಿಗೊಳುತೆಂದಳ್ ೧೦

ಮತಿ ಮಿಗೆ ಸತಿಗಂ ಪತಿಗಂ
ಮತಮದು ಬೇಱಿಲ್ಲಮೆಂದು ನುಡಿದಪೆ ನಯಮಂ
ನುತ ಗುರುಗಂ ಶಿಷ್ಯರ್ಗಂ
ಮತಮದು ಪೆಱತುಂಟೆ ಧರ್ಮಶಾಸ್ತ್ರಕ್ರಮದೊಳ್ ೧೧

ಇಡಿದಖಿಳಾವನೀತಳದೊಳುರ್ಬಿದ ಪರ್ಬಿದ ಮರ್ಬಿನೇಳ್ಗೆಯುಂ
ಕಿಡಿಸಲೆ ಬಂದ ತಿಗ್ಮರುಚಿ ಸುಮ್ಮನೆ ಪೋಪನೆ ಮಿಕ್ಕ ಸೊರ್ಕಿನು

ನನ್ನು ಈಗಲೇ ಇಲ್ಲಿಂದ ಹೊರ ಹೊರಡಿಸಬೇಕು, ಎಂದು ಒಪ್ಪುವಂತೆ ಹೇಳಿದರು. ಈ ಮಾತನ್ನು ಆ ಜಯಸಿಂಹ ಭೂಪಾಲನು ಕೇಳಿ, ತನ್ನ ಅಂತಃಪುರಕ್ಕೆ ಬಂದನು. ತನ್ನ ಪತ್ನಿಯಾದ ಸೃಗ್ವಲೆ ದೇವಿಯನ್ನು ಏಕಾಂತ ಸ್ಥಳಕ್ಕೆ ಕರೆದು ಆ ಭೂಮೀಶ್ವರನು 'ಎಲೈ ಪತ್ನಿಯೇ, ನನ್ನ ಜೈನ ಧರ್ಮಾಚರಣೆಯ ರೀತಿಯನ್ನು ತಿಳಿಯದೆ ಶೈವನ ಪಾದಗಳನ್ನು ನೀನು ಪೂಜಿಸುವುದೇ? ಎಂದನು. ೯. 'ಎಲೈ ಅಬಲೆಯೇ, ಹೆಂಡತಿಗೂ ಗಂಡನಿಗೂ ಗುರು ಮತ್ತು ಮತದ ದೇವತೆಗಳು ಎಂಬ ಇವುಗಳು ನಿಜವಾಗಿ ಬೇರೆ ಬೇರೆ ಇರುವುದುಂಟೆ? ಪತಿಯೇ ಗುರುವೆಂದು ಹಿತವಚನಗಳು ನುಡಿಯುತ್ತಿರುವಾಗ ನೀನು ಅನ್ಯಗುರುವನ್ನು ಆರಾಧನೆ ಮಾಡುವುದೇ? ೧೦. 'ನಮ್ಮ ಜೈನ ತಪಸ್ವಿಗಳು ಇದನ್ನು ತಿಳಿದರೆ ವಿಪರೀತವನ್ನುಂಟು ಮಾಡದೇ ಇರುವುದಿಲ್ಲ. ಆದ್ದರಿಂದ ಎಲೈ ಸುಂದರಿಯೇ, ನಿನ್ನ ಗುರುವನ್ನು ತಡಮಾಡದೆ ಇಲ್ಲಿಂದ ಕಳುಹಿಸಿ ಬಿಡು' ಎನ್ನಲು ಆ ಧರ್ಮ ಪತ್ನಿಯು ಕೇಳಿ, ಕೋಪಗೊಂಡು ಹೀಗೆ ನುಡಿದಳು: ೧೧. '(ಮಹಾರಾಜಾ) ಬಲು ಬುದ್ಧಿವಂತಿಕೆಯಿಂದ ಸತಿಗೂ ಪತಿಗೂ ಮತವೆಂಬುದು ಬೇರೆ ಇಲ್ಲವೆಂದು ನೀತಿಯನ್ನು ನುಡಿಯುತ್ತಿರುವೆ. ಶ್ರೇಷ್ಠರಾದ ಗುರುವಿಗೂ ಶಿಷ್ಯರಿಗೂ ಧರ್ಮಶಾಸ್ತ್ರ ರೀತ್ಯಾ ಆ ಮತವೆಂಬುದು ಬೇರೆ ಇರುವುದುಂಟೇ?' ೧೨. 'ಸಮಸ್ತ ಭೂಮಿಯನ್ನು ತುಂಬಿಕೊಂಡು ಹೆಚ್ಚುಗೊಂಡು ಹಬ್ಬುತ್ತಿರುವ ಕತ್ತಲೆಯ ಅತಿಶಯವನ್ನು ಹೋಗ ಲಾಡಿಸಲಿಕ್ಕೆ ಬಂದ ಸೂರ್ಯನು ಸುಮ್ಮನೆ ಹೋಗುವನೇ? ಮಿಗಿಲಾದ ಸೊಕ್ಕಿನಿಂದ

ಕರ್ಡುಗದ ಜೈನತಾಪಸರ ದುರ್ಮದಮಂ ಮುಱಿದಿಕ್ಕಲೆಂದು ಬಂ
ದೆಡೆಯೊಳದೆಂತು ಸುಮ್ಮನೆ ಜಗದ್ಗುರು ಮದ್ಗುರು ಪೋಗಲಾರ್ಪನೊ[1] ೧೨

ಇನರುಚಿಯಂ ಮುಸುಂಕುತಳಿಮಿಂಚಿನ ಮಿಂಚನೆ ತೋರ್ಪ ಮೇಘಮಂ
ಘನಪವನಂ ಪಳಂಚಿ ಕಲನೂಂಕಿ ರವಿದ್ಯುತಿದೋರ್ಪವೋಲ್ಮಹೇ
ಶನ ಮತದೇಳ್ಗೆಯುಂ ಮಱೆಸುತಾತ್ಮಮತಸ್ಥಿತಿದೋರ್ಪ ನಿನ್ನ ನ
ಚ್ಚಿನ ಜಿನವರ್ಗಮಂ ತವಿಸಿ ಮದ್ಗುರು ತನ್ಮತದೇಳ್ಗೆದೋಱುವಂ ೧೩

ನಿನಗೆ ಹಿತೋಪದೇಶಮಿದು ಕೇಳ್ ನೃಪ ಮದ್ಗುರುಸನ್ನಿಧಾನಕಾ
ಜಿನಮುನಿಬೃಂದಮಂ ಬರಿಸು ಮಾಡಿಸು ವಾದಮನಾಗಮೌಘಶಾ
ಸ್ತ್ರನಿವಹಸತ್ಪ್ರಮಾಣದೊಳೆ ಮದ್ಗುರು ಗೆಲ್ದೊಡೆ ತತ್ಪದಾಬ್ಜಮಂ
ಮನದೊಲವಿಂದೆ ನೀಂ ಪಿಡಿದು ಶೈವಮತಸ್ಥಿತನಾಗು ಬೇಗದಿಂ ೧೪

ಇನಿತನನುಕರಿಸೆ ಮತಮೊಂ
ದನುಮಕ್ಕುಂ ನಿನಗಮೆನಗಮಂತಲ್ಲದೊಡಂ

ಕೂಡಿ ಗರ್ವನಾಶವಾಗದಿರುವ ಜೈನ ತಪಸ್ವಿಗಳ ದುಷ್ಟ ಮದವನ್ನು ಮುರಿದು ಹಾಕಲಿಕ್ಕೆ ಬಂದು (ಆ ಕಾರ್ಯವನ್ನು ಪೂರೈಸದೆ) ಮಧ್ಯದಲ್ಲಿಯೇ ನನ್ನ ಗುರುವೂ, ಜಗದ್ಗುರುವೂ ಆದ ಆ ದಾಸಿಮಯ್ಯನು ಅದು ಹೇಗೆ ಸುಮ್ಮನೆ ಹೋಗಲಿಕ್ಕೆ ಸಾಧ್ಯನಾದನು?' ೧೩. 'ಸೂರ್ಯ ಕಿರಣಗಳನ್ನು ಮುತ್ತಿ ಕ್ಷಣಿಕವಾದ ಮಿಂಚಿನ ಹೊಳಪನ್ನು ತೋರಿಸುವ ಮೇಘವನ್ನು ಭಯಂಕರವಾದ ಗಾಳಿಯು ಅಪ್ಪಳಿಸಿ ಪಕ್ಕಕ್ಕೆ ತಳ್ಳಿ ಸೂರ್ಯ ಪ್ರಕಾಶವನ್ನು ತೋರಿಸುವಂತೆ ಶಿವಸಂಬಂಧವಾದ ಮತದ ಏಳಿಗೆಯನ್ನು ಮರೆ ಮಾಡುತ್ತ ತಮ್ಮ ಜೈನ ಮತದ ಸ್ಥಿತಿಯನ್ನು (ಏಳಿಗೆಯನ್ನು) ತೋರಿಸುವ ನಿನ್ನ ಪ್ರೀತಿಯ ಜೈನರ ಗರ್ವವನ್ನು ಹೋಗಲಾಡಿಸುತ್ತ ನನ್ನ ಗುರುವಾದ ದಾಸಿಮಯ್ಯನವರು ಆ ವೀರಶೈವ ಮತದ ಹೆಚ್ಚಳವನ್ನು ತೋರಿಸುವನು.' ೧೪. 'ಮಹಾರಾಜನೇ, ನಾನು ಹೇಳುವ ಈ ಮಾತುಗಳು ನಿನಗೆ ಹಿತೋಪದೇಶಗಳು. ಇವನ್ನು ಕೇಳು, ನನ್ನ ಗುರುವಾದ ದಾಸಿಮಾರ್ಯರ ಸನ್ನಿಧಾನಕ್ಕೆ ಆ ಜೈನ ಮುನಿಗಳ ಸಮೂಹವನ್ನು ಬರ ಮಾಡು, ವಾದ ವಿವಾದಗಳನ್ನು ಆಗಮ ಸಮುದಾಯ ಶಾಸ್ತ್ರ ಸಮೂಹ ರೀತ್ಯಾ ಒಳ್ಳೆಯ ಆಧಾರ ಪೂರ್ವಕವಾಗಿ ನಡೆಯುವಂತೆ ಮಾಡಿಸು. ನನ್ನ ಗುರುವು ಗೆದ್ದರೆ ಅವನ ಪಾದಕಮಲಗಳನ್ನು ನೀನು ಮನಃ ಪೂರ್ವಕವಾಗಿ ಹಿಡಿದು ಬೇಗನೆ ವೀರಶೈವಮತ ಸ್ವೀಕರಿಸುವವನಾಗು.' ೧೫. 'ಇಷ್ಟನ್ನು ನೀನು ಅನುಸರಿಸಿದ್ದಾದರೆ ನಿನಗೂ ನನಗೂ ಮತವೆಂಬುದು ಒಂದಾಗುವುದು. ಹಾಗಲ್ಲದಿದ್ದರೆ ಅಂದು ನಡೆದ (ಹಿಂದೆ ಆದ) ಮದು

1 ನೆ(ದ, ಮು:, ಅ)

ದಿನ ಪರಿಣಯೋಕ್ತಿಯುಂ ನೀಂ
ನೆನೆದೆನ್ನಂ ಬಿಟ್ಟು ಕಳೆದು ನೆರೆದಿರು ಪೆಱಳೊ[1]ಳ್ ೧೫

ವ॥ ಎಂದಿನಿಯಳುಕ್ತಿಯುಂ ಮನದೆಗೊಂಡರಸನಲ್ಲಿಂದೆಳ್ದು ಸಭಾಸ್ಥಳಕ್ಕೆ ನಿಜಗುರುಗಳಂ ಬರಿಸಿ ತಾನುಮವರುಂ ಕುಳ್ಳಿರ್ಪಿನಮಾ ಸುಗ್ಗಲೆದೇವಿ ತದ್ದಕ್ಷಿಣಭಾಗದೊಳ್ ಕನಕಮಯ ಸಮುನ್ನತ ದಿವ್ಯಸಿಂಹಾಸನಮನಮರ್ಚಿ ದಾಸಿದೇವನಂ ಕೈಗೊಟ್ಟು ಬಿಜಯಂಗೆಯ್ಸಿ ಮೂರ್ತಿಗೊಳಿಸಿ ವಿದಗ್ಧ ಸಖೀಜನಸಮೇತಂ ತಚ್ಚರಣಕಮಳಮನೋಲಗಿಸುತ್ತುಮಿರ್ದಳಾ ಪ್ರಸ್ತಾವದೊಳಾ ಜಿನಮುನಿಗಳ್ತಮ್ಮ ಕುಹಕ ಮಂತ್ರ ತಂತ್ರ ಮಾಯಾವಿದ್ಯಾವಿಲಾಸ ವೈಚಿತ್ರ್ಯಗರ್ಭಿತ ವಚೋವೈಭವಂಗಳಿಂ ವಾದಮಂ ನೆಗಳಲೊಡನದೆಲ್ಲಮಂ ನಿಜಮಹತ್ವದಿಂ ಜಯಿಸಿ—

ವೇದಾಗಮ ಮೀಮಾಂಸಾ
ವೇದಾಂತ ಪುರಾಣ ತರ್ಕ ವೈಶೇಷಿಕ ಸಂ
ಪಾದಿತ ತತ್ವಾರ್ಥಮನಾ
ವಾದದೊಳವಲಂಬಿಸುತ್ತಮವರ್ಗಿಂತೆಂದಂ ೧೬

ಸಕಳ ಜಗದಾದಿಕಾರಣ
ನಕಳಂಕಂ ರಾಮನಾಥನೊರ್ವನೆ ವಿಶ್ವಾ

ವೆಯ ಕಾಲದ (ಧರ್ಮ, ಅರ್ಥ, ಕಾಮಗಳಿಂದ ನಿನ್ನೊಡನಲ್ಲದೆ ಅತಿಕ್ರಮಿಸಿ ವ್ಯವಹರಿಸುವುದಿಲ್ಲ ಎಂಬ) ಮಾತನ್ನು ನೆನೆದುಕೊಂಡು ನನ್ನನ್ನು ಬಿಟ್ಟುಕೊಟ್ಟು ಬೇರೊಬ್ಬಳಲ್ಲಿ ಕೂಡಿಕೊಂಡಿರು.' ವ॥ ಹೀಗೆಂದ ಹೆಂಡತಿಯ ಮಾತನ್ನು ಮನಸ್ಸಿಗೆ ಹಾಕಿಕೊಂಡು ಮಹಾರಾಜನಾದ ಜಯಸಿಂಹನು ಅಲ್ಲಿಂದ ಎದ್ದು ಸಭಾ ಸ್ಥಳಕ್ಕೆ ತನ್ನ ಗುರುಗಳಾದ ಜೈನ ಸನ್ಯಾಸಿಗಳನ್ನು ಬರಮಾಡಿಕೊಂಡು. ತಾನೂ ಅವರೂ ಕುಳಿತುಕೊಂಡಿರುವಷ್ಟರಲ್ಲಿ ಸುಗ್ಗಲೆ ದೇವಿಯು ಮಹಾರಾಜನ ಬಲಗಡೆಯ ಭಾಗದಲ್ಲಿ ಸುವರ್ಣ ನಿರ್ಮಿತವಾದ ಎತ್ತರದ ದಿವ್ಯವಾದ ಸಿಂಹಾಸನವನ್ನು ಹಾಕಿಸಿ, ದಾಸಿಮಾರ್ಯ ದೇವನನ್ನು ಕೈಹಿಡಿದು ಕರೆದುಕೊಂಡು ಬಂದು ಅದರ ಮೇಲೆ ಕುಳ್ಳಿರಿಸಿ, ಪ್ರೌಢೆಯರಾದ ಸಖೀಜನರುಗಳು ಸಮೇತವಾಗಿ ಅವರ ಚರಣ ಕಮಲಗಳ ಸೇವೆಯನ್ನು ಮಾಡುತ್ತಿದ್ದಳು. ಆ ಸಮಯದಲ್ಲಿ ಆ ಜೈನ ಸನ್ಯಾಸಿಗಳು ತಮ್ಮ ತಮ್ಮ ಕುಹಕ ಮಂತ್ರ, ತಂತ್ರ, ಮಾಯಾ ವಿಲಾಸಗಳ ವಿಚಿತ್ರಗಳಿಂದ ತುಂಬಿದ ಮಾತಿನ ಆಡಂಬರದಿಂದ ವಾದವನ್ನು ಮಾಡತೊಡಗಲು ಕೂಡಲೇ ಅವರ ವಾದವನ್ನೆಲ್ಲ ತನ್ನ ಮಹಾತ್ಮೆಯಿಂದ ಜಯಿಸಿ ೧೬. ವೇದ ಆಗಮ, ಮೀಮಾಂಸೆ, ಉಪನಿಷತ್ತು, ಪುರಾಣ, ತರ್ಕ, (ನ್ಯಾಯ), ವೈಶೇಷಿಕಗಳೇ ಮೊದಲಾದವುಗಳಿಂದ ತಾನು ಸಂಪಾದಿಸಿದ ತತ್ವಾರ್ಥಗಳನ್ನೆಲ್ಲ ತನ್ನ ವಾದದಲ್ಲಿ ಮಂಡಿಸುತ್ತ ಅವರಿಗೆ ಹೀಗೆ ಹೇಳಿದನು. ೧೭–೧೮–೧೯. 'ಸಮಸ್ತ ಜಗತ್ತಿಗೆ ಮೂಲ

---

1 ರೊ(ಅ, ಚ, ಗ)

ಧಿಕನದ್ವಿತೀಯನೆಂಬುದೆ
ಸುಕರಾರ್ಥವಿವಂಗೆ ಸರಿ ಮಿಗಿಲ್ವೆಱರಿಲ್ಲಂ ೧೭

ಸರ್ವಂ ಲಿಂಗದ ಮಧ್ಯದೊಳ್ ನೆಲಸಿ ತೋರ್ಕುಂ ಲಿಂಗಮಧ್ಯೇ ಜಗತ್
ಸರ್ವಂ ಪೂರ್ವಜವಾಕ್ಯ ನಿಶ್ಚಿತಮಿದೇಕೋ ರುದ್ರ ಮುಖ್ಯಾಗಮಾ
ಖರ್ವೋಕ್ತಿಪ್ರಥಿತಂ ದಲೊರ್ವನೆ ಶಿವಂ ಕರ್ತಾರನೆಂಬರ್ಥಮಿಂ
ತರ್ವಾಚೀನಪದಂ ಯಥಾ ಮುಖವಚಸ್ಸಿದ್ಧಂ ಮಹಾದೇವನಾ[1] ೧೮

ಪರಿಪೂರ್ಣತೆಯುಮನಭವನ
ನಿರತಿಶಯೈಶ್ವರ್ಯಮಂ ನಿರರ್ಗಳಮಹಿಮಾ
ಕರತೆಯುನೊರೆಯೊರೆದುಱಿ ಬಿ
ತ್ತರಿಪುದು ನಿಗಮಾಂತಚಯಮುಮಾಗಮತತಿಯುಂ ೧೯

ವ॥ ಎಂದಿಂತು ನಿಖಿಳ ಪುರಾಣೋಪಬೃಂಹಿತೋಪನಿಷದಾದಿವಚನನಿಚಯದಿಂ ಸಹಜ ಶಿವಾಧಿಕ್ಯಸ್ಥಾಪನಂಗೆಯ್ದು ವಾದಿಜನಮದಭಂಜನಂ ಲಿಂಗಬಾಹ್ಯಾತ್ ಪರಂ ನಾಸ್ತಿಯೆಂಬುದಱಿಂ

ಕಾರಣನೂ, ಕಳಂಕರಹಿತನೂ ಆದ ರಾಮನಾಥನೊಬ್ಬನೇ ವಿಶ್ವಕ್ಕೆ ಅಧಿಕನಾದವನು ; ಆವನು ಅದ್ವಿತೀಯನೆನ್ನುವುದೇ ಸಮೀಚೀನವಾದ ಅರ್ಥವಾಗಿದೆ. ಇವನಿಗೆ ಸರಿಮಿಗಿಲಾದವರು ಬೇರೆ ಯಾರೂ ಇಲ್ಲ. ಈ ಸಮಸ್ತ ಬ್ರಹ್ಮಾಂಡವೂ ಲಿಂಗ ಮಧ್ಯದಲ್ಲಿಯೇ ನೆಲಸಿ ತೋರಿಕೆಗೆ ಒಳಗಾಗಿದೆ. (ಎಂಬ ಅರ್ಥದ) 'ಲಿಂಗ ಮಧ್ಯೇಜಗತ್ ಸರ್ವಂ' ಎಂಬ ಪೂರ್ವದವರ ಮಾತು ಸತ್ಯವಾದದ್ದು. ಇದೋ ಕೇಳು: ರುದ್ರನೊಬ್ಬನೇ ಪರಬ್ರಹ್ಮನು ಎಂಬುವೇ ಮೊದಲಾದ ಶ್ರುತಿ ಸಮ್ಮತವಾದ ಮಾತಿನಿಂದ ಪ್ರಸಿದ್ಧವಾದುದದಲ್ಲವೇ? ಶಿವನು ಸಮಸ್ತ ಬ್ರಹ್ಮಾಂಡದ ಕರ್ತಾರನು ಎಂಬ ಅರ್ವಾಚೀನ ಪದವು ಆ ಮಹಾದೇವನ ಮುಖದಿಂದ ತನ್ನಷ್ಟಕ್ಕೆ ತಾನೆ ಹೊರ ಹೊರಟು ಬಂದ ಆಗಮ ಪ್ರಮಾಣದಿಂದ ಸಿದ್ಧವಾದುದೆನಿಸಿದೆ. ವೇದಾಂತ (ಉಪನಿಷತ್) ಸಮೂಹವೂ, ಆಗಮ ಸಮೂಹವೂ, ಪರಮಾತ್ಮನ (ಪರಶಿವನ) ಪರಿಪೂರ್ಣತೆಯನ್ನೂ (ಅಂದರೆ ಸರ್ವ ಬ್ರಹ್ಮಾಂಡದಲ್ಲಿ ತುಂಬಿರುವಿಕೆಯನ್ನೂ), ಪರಿಪೂರ್ಣವಾದ ಐಶ್ವರ್ಯವನ್ನೂ, ತಡೆಯಿಲ್ಲದ ಮಹಿಮೆಗೆ ಆಧಾರವಾಗಿರುವಿಕೆಯನ್ನೂ, ಹೆಚ್ಚಾಗಿ ಹೇಳಿ ಹೇಳಿ ಪ್ರಕಟಪಡಿಸುತ್ತಿವೆ,' ವ॥ ಈ ರೀತಿಯ ಸಮಸ್ತ ಉಪನಿಷತ್ ವಚನಗಳಿಗೆ ಟೀಕೆಗಳ ರೂಪದಲ್ಲಿರುವ ಪುರಾಣ ವಾಕ್ಯಗಳ ಸಮೂಹದಿಂದ ಸಹಜವಾಗಿ ಶಿವನ ಆಧಿಕ್ಯವನ್ನು ಪ್ರತಿಷ್ಠಾಪಿಸಿ, ವಾದ ಮಾಡುವವರ ಮದವನ್ನು ಮುರಿದು ಲಿಂಗದಿಂದ ಹೊರಗೆ ಏನೂ ಇಲ್ಲ. (ಅಂದರೆ ಸಮಸ್ತ ಪ್ರಪಂಚವೆಲ್ಲ ಲಿಂಗದಲ್ಲಿಯೇ ಅಡಕಗೊಂಡಿದೆ) ಎಂಬುದರಿಂದ

---

1 ನಂ(ಅ)

ಶಿವನೊರ್ವನೆ [1]ಸರ್ವ[1]ಪೂರ್ಣನಕ್ಕುಮಿದೆ ಸತ್ಯಮೆಂದು ವಿಜೃಂಭಿಸಿ ನುಡಿಯೆ ಶವಣರ್ ತಮ್ಮೊಳೋರೊರ್ವರ ಮುಖಮನೋರೊರ್ವರ್ ನೋಡಿ —

ಎಲ್ಲಂ ಶಿವಮಯಮೆಂದಪೆ
ಸಲ್ಲದು ಭವದುಕ್ತಿಯಂತುಟಾದೊಡೆ ಗುಡಿಯಿ
ರ್ದಲ್ಲಿಗೆಡೆಯಾಡಲೇಕಿ
ರ್ದಲ್ಲಿಯೆ ಶಿವನಿರ್ಪ ಕತದಿನೆಱಗುಗೆ ಭಕ್ತಂ ೨೦

ಅಮಮ ಶಿವನೆಲ್ಲರಮರ್ದಂ
ಗವೊ ಜೀವನೊ ಮಿಸುಗುವಾತ್ಮನೋ ಪೇಳಿದಱಂ
ದಮನೆನೆ ಪೂರ್ವಪ್ರಶ್ನೆಗೆ
ಸಮಸಂದುತ್ತರಮನೀವೆನಖಿಳಾವನಿಯುಂ ೨೧

ನೃಪನಾವರಿಸಿರ್ದಪನೆನೆ
ನೃಪನಪ್ಪನೆ ಮಾಣದಲ್ಲಿ ವಿಪ್ರವ್ಯಾಧ
ಶ್ವಪಚಾದಿರೂಪನಾಜ್ಞಾ
ವ್ಯಪದೇಶಂಜೆತ್ತು ನೆಲನನಾವರಿಸಿರ್ಪಂ ೨೨

ಆ ಪರಿಯಿಂ ಶಂಭು ಜಗ
ದ್ವ್ಯಾಪಕನೆನಿಸಿರ್ಪನಲ್ತೆ ನಿಜಶಕ್ತಿಯಿನಾ

ಶಿವನೊಬ್ಬನೇ ಸರ್ವ ಪರಿಪೂರ್ಣನಿಸಿದ್ದಾನೆ. ಇದೇ ಸತ್ಯ ವಿಷಯವೆಂದು ಉತ್ಸಾಹಗೊಂಡು ನುಡಿಯಲಾಗಿ ಜೈನ ಸನ್ಯಾಸಿಗಳು ತಮ್ಮ ತಮ್ಮಲ್ಲಿಯೇ ಒಬ್ಬರ ಮುಖವನ್ನೊಬ್ಬರು ನೋಡುತ್ತ ೨೦. 'ಎಲ್ಲವೂ ಶಿವಮಯವೆಂದೆನ್ನುತ್ತಿದ್ದೀಯೆ ಅದು ಯೋಗ್ಯವಲ್ಲ. ನಿನ್ನ ಮಾತಿನಂತೆ ಎಲ್ಲವೂ ಶಿವಮಯವೇ ಆದದ್ದಾದರೆ ಗುಡಿಯಿದ್ದಲ್ಲಿಗೆ ಭಕ್ತನಾದವನು ಓಡಾಡುವುದೇತಕ್ಕೆ? ಇದ್ದಲ್ಲಿಯೇ ಶಿವನಿರುವುದರಿಂದ ಅಲ್ಲಿಯೇ ನಮಸ್ಕಾರ ಮಾಡಿದರೆ ಆಗುವುದಿಲ್ಲವೇ?' ೨೧–೨೨. ಅಬ್ಬಬ್ಬಾ! ಶಿವನೇ ಎಲ್ಲರಲ್ಲಿಯೂ ಸೇರಿದ ದೇಹಿಯೋ, ಜೀವನೋ, ಶೋಭಿಸುವ ಅತ್ಮನೋ ಇದರ ರೀತಿಯೇನು? ಹೇಳು.' ಎಂದರು. ಆಗ ಮೊದಲ ಪ್ರಶ್ನೆಗೆ ಸಮರ್ಪಕ ಉತ್ತರವನ್ನು ಹೇಳುತ್ತೇನೆ, (ಕೇಳು). ಸಮಸ್ತ ಭೂಮಿಯನ್ನು ಅರಸನು ಆವರಿಸಿದ್ದಾನೆಂದರೆ ಎಲ್ಲವೂ ಅರಸನೇ ಆಗುತ್ತಾನೆಯೇ ? ತಪ್ಪದೆ ಅಲ್ಲಿ ಬ್ರಾಹ್ಮಣ, ವ್ಯಾಧ, ಶ್ವಪಚರೇ ಆದಿಯಾಗಿ ಎಲ್ಲರಲ್ಲಿಯೂ ತನ್ನ ಆಜ್ಞೆಯ ನೆವವನ್ನು ಹೊಂದಿ ರಾಜನು ಭೂಮಂಡಲವನ್ನು ವ್ಯಾಪಿಸಿದ್ದಾನೆ (ಎಂಬುದು ಅದರ ಅರ್ಥವಾಗಿದೆ)' ೨೩. ಇದೇ ರೀತಿಯಲ್ಲಿ ಶಿವನು ಜಗತ್ತಿನ ತುಂಬೆಲ್ಲ ತನ್ನ ಶಕ್ತಿಯಿಂದ ವ್ಯಾಪಕನೆನಿಸಿದ್ದಾನಲ್ಲವೇ ? ಹೀಗೆ ವ್ಯಾಪಿಸಿ

---

1 ಸಕಲಪರಿ(ಚ)

ವ್ಯಾಪಿಸಿದ ಶಂಭು ಭುವನದ
ರೂಪವುನಾಳ್ದೆಸೆವನೆಂಬುದ[1]ಪಸಿದ್ಧಾಂತಂ ೨೩

ಘಟಜಲಬಿಂಬಿತ ರವಿ ತ
ದ್ಘಟಜಲಬಿಂಬಂಗಳಿಂದೆ ಪೆಱನಲ್ತೆ ವಲಂ
ಪಟುತನುಜೀವಾತ್ಮಾಂತರ
ಘಟಿತ ನಿಜಜ್ಯೋತಿ ಪರಶಿವಂ ಪರನಲ್ತೇ ೨೪

ಸರ್ವೋ ವೈ ರುದ್ರ ಎನು
ತ್ತುರ್ವುತೆ ವಿಶ್ವಾಧಿಕಃ ಪಶೂನಾಂ ಪತಿಯೆಂ
ದೊರ್ವಂಗೆರಡುಂ ಬಗೆಯುಂ
ನಿರ್ವಚಿಪಾಗವುದ ನುಡಿಗಿದೇ ತಾತ್ಪರ್ಯಂ ೨೫

ಹರನೆ ಚರಾಚರಪ್ರಚಯರೂಪದೊಳೊಂದಿರೆ ಬೇಱೆ[3] ಲಿಂಗಮಂ
ದಿರಕೆಡೆಯಾಡಲೇಕೆನುತೆ ಮಾಡಿದ ಶಂಕೆಗೆ ಕೊಟ್ಟಪೆಂ ಸದು
ತ್ತರಮನಶೇಷಲೋಕವಿಭುವಾದೊಡಮೊಂದೆಡೆಯಲ್ಲಿ ಸತ್ಕಳಾ
ಪರಿಣತಿವೆತ್ತು ಕಾಣಿಪನುಮಾಧಿಪನೆಂತೆನೆ ದೃಷ್ಟಮುರ್ವಿ[2]ಯೊಳ್ ೨೬

ಸುರಿಗುಂ ಸ್ವಾತಿಯ ವೃಷ್ಟಿಯೆಲ್ಲೆಡೆಯೊಳುಂ ಮುತ್ತಕ್ಕುಮೇ ಬಿಂದುಸಾ
ಗರತೀರಸ್ಥಿತಶುಕ್ತಿಯೊಳ್ಬಲಿದು ಮುತ್ತಾದಪ್ಪುದೆಂತಂತೆ ಶಂ

ಕೊಂಡಿರುವ ಶಂಭುವು (ಸಮಸ್ತ) ಭುವನದ ರೂಪವನ್ನು ಹೊಂದಿ ಶೋಭಿಸುತ್ತಿದ್ದಾನೆಂಬುದು ಸಿದ್ಧಾಂತಸಮ್ಮತವಲ್ಲ. ೨೪. ಕೊಡದಲ್ಲಿರುವ ನೀರಿನಲ್ಲಿ ಪ್ರತಿಬಿಂಬಿತವಾಗಿರುವ ಸೂರ್ಯನು ಆ ಘಟದ ನೀರಿನಲ್ಲಿರುವ ಬಿಂಬದಿಂದ ನಿಜವಾಗಿ ಬೇರೆಯೇ ಅಲ್ಲವೇ (ಇದರಂತೆ) ಚೈತನ್ಯಮಯ ದೇಹದಲ್ಲಿರುವ ಜೀವಾತ್ಮನ ಮಧ್ಯದಲ್ಲಿ ಬೆಸುಗೆಗೊಂಡ ಜ್ಯೋತಿಯಾಗಿ ಪರಶಿವನು ಬೇರೆಯಾಗಿಯೇ ಇದ್ದಾನಲ್ಲವೇ ? ೨೫. ಸರ್ವೋವೈರುದ್ರಃ ಎಂದರೆ ರುದ್ರನು ಸಕಲವಸ್ತು ಸ್ವರೂಪನಾದವನಲ್ಲವೇ ? ಎಂದು ಉಬ್ಬಿ ಹೇಳುತ್ತ–'ವಿಶ್ವಾಧಿಕಃ ಪಶೂನಾಂಪತಿಃ ' ಅಂದರೆ ವಿಷ್ಣು ಬ್ರಹ್ಮಾದಿ ಜೀವರುಗಳಿಗೆ ಪತಿಯಾದ ಶಿವನು ಪ್ರಪಂಚಕ್ಕಿಂತ ದೊಡ್ಡವನು. ಎಂದು ಎರಡು ಬಗೆಯಲ್ಲಿ ಹೇಳುತ್ತಿರುವ ಆಗಮದ ಮಾತಿಗೆ ಇದೇ ತಾತ್ಪರ್ಯ. [ಅಂದರೆ ಮೊದಲು ಸಕಲ ಜಗತ್ತಿನ ಸ್ವರೂಪನೂ ಆ ಶಿವನೇ ಆಗಿದ್ದಾನೆಂದು ಹೇಳಿ ಆಮೇಲೆ ಜಗತ್ತಿಗೆಲ್ಲಕ್ಕೂ ಅವನೇ ದೊಡ್ಡವನು ಎಂದು ಹೇಳುವುದರಿಂದ ಶಿವನು ಜಗತ್ತಿಗಿಂತ ಭಿನ್ನನಾದವನೆಂದು ಹೇಳಿದ್ದರಿಂದ ಈ ಎರಡು ಬಗೆಯ ಮಾತಿಗೆ ಇದೇ ತಾತ್ಪರ್ಯ ಎಂದು ಭಾವ] ೨೬–೨೭. ಇನ್ನು ಶಿವನೇ ಚರಾಚರ ಪ್ರಪಂಚರೂಪದಿಂದ ಕೂಡಿಕೊಂಡಿರುವಾಗ ಬೇರೆ ಶಿವಾಲಯಗಳಿಗೆ ಓಡಾಡುವುದೇಕೆಂದು ಮಾಡಿದ ನಿಮ್ಮ ಶಂಕೆಗೆ ಒಳ್ಳೆಯ

---

1 ದು(ಅ) 2 ರ್ಶ(ಚ)

ಕರತೇಜಂ ಜಗದಲ್ಲಿ ತುಂಬಿ ಮೆಱೆದಿರ್ಕುಂ ಮೇಣದಂತಾದೊಡಂ
ವರ ಲಿಂಗಾಮಳಭಕ್ತಸಂತತಿಯೊಳೊಪ್ಪಂಬೆತ್ತು ಕಣ್ಗೊಪ್ಪುಗುಂ ೨೭

ಹಿಮರುಚಿರೋಚಿಯೆಲ್ಲೆಡೆಯ ಕಲ್ಗಳೊಳಂ ಪುದಿದಿರ್ದೊಡಂ ಮೃಗಾಂ
ಕಮಣಿಯೆ ಮಾಣದೊಲ್ದೊಸರ್ಗುಮೀಶನ[1] ಸತ್ಕಳೆ ಸರ್ವಲೋಕಸಂ
ಕ್ರಮಣತೆವೆತ್ತೊಡಂ ಪರಮಭಕ್ತನ ಚಿತ್ತಮೆ ಸದ್ರಸಾರ್ದ್ರಭಾ
ವಮನೊಡನಾಳ್ಗುಮಲ್ಲದುಳಿದನ್ಯಶಿಲಾತ್ಮಚಯಕ್ಕಿದಕ್ಕುಮೇ ೨೮

ಇಂದುಗಿಂದುಕಾಂತಮಿಂದುಕಾಂತಕಿಂದು ಕೂರ್ಪವೋ
ಲಿಂದುಮೌಳಿಗೆಯ್ದೆ ಭಕ್ತನೆಯ್ದೆ ಭಕ್ತಿಶಾಲಿಗೊ
ಲ್ದಿಂದುಮೌಳಿ ಕೂರ್ಪನಾತ್ತಸಾರವಸ್ತುಗ
ಳ್ಗೊಂದೆ ಭಾವಮಕ್ಕುಮಲ್ಲದನ್ಯವಸ್ತುಗಪ್ಪುದೇ ೨೯

ಉತ್ತರವನ್ನು ಕೊಡುತ್ತಿದ್ದೇನೆ (ಕೇಳಿರಿ :). ಶಿವನು ಸಮಸ್ತ ಲೋಕದ ಪ್ರಭುವಾದರೂ ಒಂದು ಸ್ಥಳದಲ್ಲಿ (ತನ್ನ) ಶ್ರೇಷ್ಠವಾದ ತನ್ನ ಅಂಶದ (ಕಳೆಯ) ಪರಿಣತೆಯಿಂದ ಕೂಡಿ ಆ ಉಮಾಧವನು ಕಾಣಿಸಿಕೊಳ್ಳುತ್ತಾನೆ. ಅದಕ್ಕೆ ದೃಷ್ಟಾಂತವೇನೆಂದರೆ ಭೂಮಿಯ ಮೇಲೆ ಸ್ವಾತಿ ನಕ್ಷತ್ರದಲ್ಲಿ ಮಳೆಯು ಎಲ್ಲೆಲ್ಲೂ ಸುರಿಯುವುದಲ್ಲವೇ ? ಆ ಮಳೆಯ ಹನಿಯು ಸಮುದ್ರತೀರದಲ್ಲಿರುವ ಬಾಯ್ದೆರೆದ ಶುಕ್ತಿಯಲ್ಲಿ ಬಿದ್ದು ಒಲಿತು ಮುತ್ತಾಗುವುದಲ್ಲದೆ, ಎಲ್ಲ ಕಡೆಗೂ ಮುತ್ತಾಗುವುದೇ ? ಇದು ಹೇಗೋ ಹಾಗೆಯೇ ಶಂಕರನ ತೇಜಸ್ಸು ಜಗತ್ತಿನಲ್ಲೆಲ್ಲ ತುಂಬಿ ಪ್ರಕಾಶಿಸುತ್ತಿದೆ. ಹೀಗೆಂದು ಪ್ರಕಾಶಿಸುತ್ತಿದ್ದರೂ, ಶ್ರೇಷ್ಠವಾದ ಲಿಂಗಧಾರಣದಿಂದ ಪರಿಶುದ್ಧ ಭಕ್ತಿಜೀವನವನ್ನಾಚರಿಸುವ ಭಕ್ತ ಸಮೂಹದಲ್ಲಿ ಪ್ರಕಾಶಮಾನವಾಗಿ ಕಂಗೊಳಿಸುವುದು. ೨೮. ಚಂದ್ರಕಿರಣವು ಎಲ್ಲ ಕಡೆಗೂ ಇರುವ ಕಲ್ಲುಗಳಲ್ಲಿ ವ್ಯಾಪಿಸಿದರೂ ಕೂಡ, ಚಂದ್ರಕಾಂತ ಶಿಲೆ ಮಾತ್ರ ವೇ ತಪ್ಪದೆ ಒಲಿದು ಒಸರುವುದು. (ಇದರಂತೆ) ಈಶ್ವರನ ಶ್ರೇಷ್ಠಕಳೆಯು ಸಮಸ್ತ ಲೋಕದಲ್ಲಿ (ವ್ಯಾಪಿಸಿ) ಕೂಡಿಕೊಂಡಿದ್ದರೂ, ಶ್ರೇಷ್ಠ ಭಕ್ತನೆನಿಸಿರುವವನ ಚಿತ್ತವೇ ಪರಿಶುದ್ಧ ಶಿವನ ಅನುರಾಗವೆಂಬ ಜಲದಿಂದ ಆರ್ದ್ರಗೊಂಡದ್ದಾಗುವುದಲ್ಲದೆ ಉಳಿದ, ಕಲ್ಲಿನಂತಹ ಆತ್ಮವುಳ್ಳ ಜನರ ಸಮೂಹಕ್ಕೆ ದಕ್ಕುವ ಮಾತಲ್ಲ. ೨೯. ಚಂದ್ರನಿಗೆ ಚಂದ್ರಕಾಂತ ಶಿಲೆಯೂ, ಚಂದ್ರಕಾಂತ ಶಿಲೆಗೆ ಚಂದ್ರನೂ (ಪರಸ್ಪರ ಆಲಂಬನ ಭಾವ ದಿಂದ) ಪ್ರೀತಿ ತೋರಿಸುವ ಹಾಗೆ ಇಂದುಧರನಾದ ಶಿವನಿಗೆ ಚೆನ್ನಾಗಿ ಶಿವಭಕ್ತನೂ, ಶಿವಭಕ್ತನಿಗೆ ಒಲಿದು ಶಿವನೂ, ಪ್ರೀತಿಯನ್ನು (ಪರಸ್ಪರ) ತೋರಿಸುವರು. ಸಾರವತ್ತಾದ ಎರಡು ವಸ್ತುಗಳ ಭಾವವು ಒಂದೇ ಆಗುವುದು. (ಸಾರವತ್ತಾದ ಭಕ್ತನ ಆತ್ಮ, ಪರಿಪೂರ್ಣನಾದ ಶಿವನ ತೇಜ ಎರಡೂ ಒಂದೇ ಆಗುವುವು—ಎಂದು ಭಾವ) ಅಲ್ಲದೆ

1 ಲ(ಅ, ಚ, ದ)

ಭಕ್ತಾರ್ಥಂ ಶಿವಲೀಲೆ ಭಕ್ತನಿಜಭಾವಂ ಶಂಕರಾರ್ಥಂ ಲಸ
ದ್ಭಕ್ತೇಶರ್ಗೆ ಪರಸ್ಪರಾತಿಶಯ ಸೌಹಾರ್ದಂ ಜಗಂ ವರ್ಧಿಕುಂ
ಭಕ್ತೇಶದ್ವಯಸಾಮರಸ್ಯದೆ ಜಗದ್ವ್ಯಾಮುಖ್ಯಮಾಳ್ದಿರ್ವರುಂ
ಭಕ್ತೇಶರ್ಬೆರೆದೊಂದುಗೂಡಿ ಸಲೆ ಸತ್ಯಸ್ನೇಹದಿಂದೊಪ್ಪುವರ್ ೩೦

ಉಳಿದ ಮಳೆವನಿಯನುಳಿದೊಳ
ಕೊಳುತಿರ್ಕುಂ ಸ್ವಾತಿಯುದಕಮಂ ಶುಕ್ತಿ ನಿರಾ
ಕುಳಮನ್ಯರನುಳಿದಭವನ
ನೊಳಕೊಳ್ಗುಂ ಭಕ್ತಚಿತ್ತಮಾದಱಿಂತೆ ವಲಂ ೩೧

ಆಕಳ ಜೀವನಂ ಕಱುವದಕ್ಕಸುವಾಕಳೆನಿಕ್ಕುಮಲ್ಲಿ ನಿ
ರ್ವ್ಯಾಕುಳಮುರ್ವಗುಂ ಸುಧೆ ಸುಧಾರಸದಿಂ ತಣಿಗುಂ ಜನಂ ಶಿವ
ಸ್ವೀಕೃತಜೀವಮಾ ಶರಣನೀಶನಮಂಗಸುವಲ್ಲಿ ಸತ್ಕೃಪಾ
ಲೋಕನಮುಣ್ಮುಗುಂ ಪ್ರಣಯದಿಂ ಜಗ[1]ಮಂತದಱಿಂದೆ ಜೀವಿಕುಂ ೩೨

ವಿಭಿನ್ನಸಾರವಸ್ತುಗಳು ಒಂದಾಗುವುದು ಸಾಧ್ಯವಾದೀತೇ ? ೩೦. ಶಿವನ (ಸೃಷ್ಟಿ, ಸ್ಥಿತಿ, ಲಯಾದಿ ವ್ಯವಹಾರಗಳ) ಲೀಲೆಯು ತನ್ನ ಭಕ್ತರಿಗಾಗಿ ಆಗಿದೆ, ಭಕ್ತನಾದವನ ಭಾವವು ಶಂಕರನಿಗೋಸುಗವೇ (ಅವನಿಗೆ ಅರ್ಪಿಸುವುದಕ್ಕೋಸ್ಕರವೇ) ಆಗಿದೆ. (ಹೀಗೆ) ಶ್ರೇಷ್ಠಭಕ್ತ ಮತ್ತು ಪರಮೇಶ್ವರ ಇವರುಗಳಿಗೆ ಪರಸ್ಪರವಾದ ಅತ್ಯಂತ ಸೌಹಾರ್ದವುಳ್ಳದಾಗಿದೆ. ಭಕ್ತ ಮತ್ತು ಈಶ್ವರ ಇವರುಗಳ ಸಮರಸ ಭಾವದಿಂದಲೇ ಜಗತ್ತು ವೃದ್ಧಿಯನ್ನು ಹೊಂದುತ್ತದೆ. ಜಗತ್ತಿನ ವ್ಯವಹಾರಗಳಿಂಥ (ಅಂದರೆ ಲೌಕಿಕ ವ್ಯಾಪಾರಾದಿಗಳಿಂದ) ವಿಮುಖರಾಗಿ ಭಕ್ತ ಮತ್ತು ಪರಶಿವರುಗಳಿಬ್ಬರೂ ಬೆರೆತು ಒಂದುಗೂಡಿ, ಶಾಶ್ವತ ಸ್ನೇಹದಿಂದ ಚೆನ್ನಾಗಿ ಒಪ್ಪುತ್ತಿದ್ದಾರೆ. ೩೧. ಮುತ್ತಿನ ಚಿಪ್ಪು ಬೇರೆಯದಾದ ಮಳೆಯ ನೀರಿನ ಹನಿಗಳನ್ನು ಬಿಟ್ಟು (ಕೇವಲ) ಸ್ವಾತಿ ನಕ್ಷತ್ರದಲ್ಲಿ ಬಿದ್ದ ಮಳೆಯ ನೀರಿನ ಹನಿಗಳನ್ನೇ ತನ್ನಲ್ಲಿ ಧರಿಸುವುದು. ಅದರಂತೆ ಬೇರೆ ಭವಿಜೀವರುಗಳನ್ನು ಬಿಟ್ಟು ಶಿವನು (ಕೇವಲ) ತನ್ನಲ್ಲಿಟ್ಟ ಆಕುಲರಹಿತವಾದ ಭಕ್ತಿ ವಿಶೇಷವುಳ್ಳವರ ಚಿತ್ತವನ್ನು ಒಳಗೊಂಡಿರುತ್ತಾನಲ್ಲವೆ ! ೩೨. ಆಕಳ ಜೀವವೇ ಅದರ ಕರುವು ; ಆ ಕರುವಿಗೆ ಆಕಳೇ ಜೀವವೆನಿಸುವುದು. ವ್ಯಾಕುಲರಹಿತವಾಗಿಯೇ ಆಕಳಿನಿಂದ ಹಾಲು ಹೆಚ್ಚುಕೊಂಡು (ತೊರೆಸಿ) ಬರುವುದು. ಜನರು ಆ ಹಾಲಿನಿಂದ ತೃಪ್ತಿಪಡುವರು. ಶಿವನಿಂದ ಸ್ವೀಕರಿಸಲ್ಪಟ್ಟ ಜೀವವೇ ಆ ಶರಣನು ; ಅವನೇ ಈಶ್ವರನ ಲಿಂಗನೆನಿಸುವನು. (ಹೀಗಾದಾಗ) ಅಲ್ಲಿ ಸತ್ಕೃಪೆಯಿಂದ ಕೂಡಿದ ದೃಷ್ಟಿಯು ಹೊರಹೊಮ್ಮುವುದು. ಈ ಕಾರಣದಿಂದ ಜಗತ್ತು (ಪರಸ್ಪರ) ಪ್ರೀತಿಯಿಂದ

---

1 ನ(ಅ)

ಮೃಡಮಹಿಮೆಯೆಂಬ ಚಂಬಿಸಿ
ಲಿಡಿದಿರೆಯುಂ ಧರೆಯೊಳಿತರಜನಘೂಕಕುಳಂ
ಪಡೆಯದು ತದ್ದರ್ಶನಮಂ
ತಡೆಯದದಂ ಕಂಡು ಭಕ್ತಚಕ್ರಂ ನಲಿಗುಂ ೩೩

ಅಂಗಮೊ ಜೀವಮೋ ಮಿಸುಗುವಾತ್ಮನೊ ಶಂಕರನೆಂದ ಶಂಕೆಗಾಂ
ಪಿಂಗದೆ ಪೇಳ್ವೆನುತ್ತರಮನಂಗಮ ಪೂರ್ವಕೃತಾತ್ಮಕರ್ಮಶೇ
ಷಂಗಳಿನಾದುದಾತ್ಮಸುಖದುಃಖದ ಪುಣ್ಯದ ಪಾಪದಿಕ್ಕೆ ಮಾ
ರಾಂಗಹರಂ ವಿಲಕ್ಷಣನಿದಕ್ಕೆ ವಿಚಾರಿಪೊಡಂಗಮಪ್ಪನೇ ೩೪

ಅತಿಮಲಿನನಸ್ವತಂತ್ರಂ
ಸತತಂ ಸಂಸಾರಿ ಜನ್ಮಿ ಸಕಲನನಿತ್ಯಂ
ತತದುಷ್ಕರ್ಮಂ ಪಾಶಾ
ನ್ವಿತಪಶುವಾ ಜೀವನೆಂಬುದಾಗಮಸಿದ್ಧಂ ೩೫

ಪ್ರವಿಮಳನತಿಸ್ವತಂತ್ರಾ
ಭವಮೃತಿಸಂಸಾರಕರ್ಮರಹಿತಂ ಪತಿ ಪಾ
ಶವಿಮುಕ್ತನಿಷ್ಕಳಂ ಪರ
ಶಿವನೆಂತುಂ ಜೀವನಪ್ಪನೇ ಬಗೆವಾಗಳ್ ೩೬

ಬಾಳುವುದು. ೩೩. ಪರಮೇಶ್ವರನ ಮಹಿಮೆಯೆಂಬ ಹೊಂಬಿಸಿಲು ಧರೆಯನ್ನೆಲ್ಲ ವ್ಯಾಪಿಸಿದರೂ, (ಆತನಲ್ಲಿ ಭಕ್ತಿಯಿಲ್ಲದಿರುವ) ಇತರ ಜನಗಳೆಂಬ ಗೂಗೆಗಳಿಗೆ ಆ ಶಿವನ ದರ್ಶನವನ್ನು ಪಡೆಯಲಾಗುವುದಿಲ್ಲ. ಅಂಥ ಬಿಸಿಲನ್ನು ಭಕ್ತರೆಂಬ ಚಕ್ರವಾಕ ಪಕ್ಷಿಗಳು ಕಂಡು ನಲಿದಾಡುವುವು. ೩೪. (ಇನ್ನೂ) ಶಂಕರನು ಅಂಗನೋ, ಜೀವನೋ, ಶೋಭಿಸುವ ಆತ್ಮನೋ ? ಹೀಗೆಂದ ನಿಮ್ಮ ಶಂಕೆಗೆ ನಾನು ತಪ್ಪದೆ ಉತ್ತರವನ್ನು ಕೊಡುವೆನು. ಪೂರ್ವ ಜನ್ಮದಲ್ಲಿ ತಾನು ಮಾಡಿದ ಕರ್ಮಶೇಷಗಳಿಂದ ಆದದ್ದು ಅಂಗ. ಅದು ತನ್ನ ಸುಖ ದುಃಖಗಳಿಗೆ ಪುಣ್ಯ ಪಾಪಗಳಿಗೆ ಆಶ್ರಯವಾದದ್ದು. ಮನ್ಮಥನಾಶಕನಾದ ಪರಶಿವನು ವಿಲಕ್ಷಣನು. ವಿಚಾರಮಾಡಿ ನೋಡಿದರೆ (ಇಂಥ ಪೂರ್ವಜನ್ಮ ಕೃತಕರ್ಮಗಳಿಗನುಸಾರವಾಗಿ ಜನನಗೊಂಡ ದೇಹಕ್ಕೆ) ಅಂಗನು ಹೇಗಾದನು ? ೩೫. ಅತ್ಯಂತ ಮಲಿನವಾದ ಅಂತಃಕರಣವುಳ್ಳವನು, ಸ್ವತಂತ್ರನಲ್ಲದವನು, ಸದಾ ಸಂಸಾರ ಭಾವವುಳ್ಳವನು. ಪುನಃ ಹುಟ್ಟಿಬರುವವನು, ಸಾಕಾರನು (ಕಲೆಯಿಂದ ಸಹಿತನಾದವನು) ನಿತ್ಯನಲ್ಲದವನು, ವಿಶೇಷವಾದ ದುಷ್ಕರ್ಮಗಳಿಂದ ಕೂಡಿದವನು, ಮಾಯೆಂಬ ಪಾಶದಿಂದ ಬಂಧಿಸಲ್ಪಟ್ಟನು. ಪಶುವೆನಿಸಿ 'ಜೀವ' ಎಂಬ ಹೆಸರಿನಿಂದ ಕರೆಯಿಸಿಕೊಳ್ಳುವುದು ಆಗಮ ಪ್ರಮಾಣದಿಂದ ಸಿದ್ಧವಾಗುವುದು. ೩೬. ಅತ್ಯಂತ ಪರಿಶುದ್ಧನೂ, ಅತಿಸ್ವತಂತ್ರನೂ, ಹುಟ್ಟು ಸಾವುಗಳೆಂಬ ಸಂಸಾರದ ಕರ್ಮಗಳಿಂದ ದೂರನಾದವನೂ, ಮಾಯಾಪಾಶ ವಿಮುಕ್ತನೂ ನಿಷ್ಕಲನೂ ಆದ ಪತಿಯೇ ಪರಶಿವನು. ಇಂಥ ಶಿವನು ವಿಚಾರಿಸಿ

ಪಂಚಮುಖನಾತ್ಮನಕ್ಕುಮೆ
ಪಂಚೇಂದ್ರಿಯಭೂತಪಂಚಕಾತ್ಮಕನಾತ್ಮಂ
ಪಂಚಮುಖಂ ಪರಮಾತ್ಮಂ
ಪಂಚೇಂದ್ರಿಯಭೂತಪಂಚಕಾತ್ಮಾಧಾರಂ ೩೭

ವ॥ ಅಂತುಮಲ್ಲದೆಯುಂ—

ಅಂದದಿನಣೋರಣೀಯಾ
ನೆಂದೆನೆ ನಿಗಮೋಕ್ತಿ ತಾನೆ ಸಚರಾಚರದೊಳ್
ಸಂದಿಲ್ಲದಣುಪದಾರ್ಥದೊ
ಳೊಂದುತಣೀಯಸ್ತ್ವದಿಂ ಪ್ರವೇಶಿಸುತದಱೊಳ್ ೩೮

ತಿಲದೊಳ್ ತೈಲಂ ನಭಂ ಕುಂಭದೊಳೆ ಶಿಖಿ ಸಮಿದ್ಗರ್ಭದೊಳ್ನೇತ್ರದೊಳ್ ನಿ
ರ್ಮಲತೇಜಂ ಬೀಜದೊಳ್ಭೂರುಹಮುಮುರ್ದಿನೊಳಾಜ್ಯಂ ನೆಳಲ್ದರ್ಪಣಾಂತ
ಸ್ಸ್ಥಲದೊಳ್ ಚಂದ್ರಂ ಘಟಾಂತರ್ಜಲದೊಳಗದೊಳುದ್ಯತ್ಪ್ರತಿಧ್ವಾನಮತ್ಯು
ಜ್ವಲಹೇಮಂ ಗ್ರಾವದೊಳ್ಸೂತ್ರಮುಮಳಮಣಿಯೊಳ್ ಶಬ್ದದೊಳ್ಮಂಜುಳಾರ್ಥಂ ೩೯

ಪಳಿಕಿನೊಳತಿ ನೀರಂಧ್ರೋ
ಜ್ವಳಭಾವಂ ಮಿಸುಪ ತೆಱದೆ ರಂಜಿಪನಭವಂ
ವಿಳಸಿತ ಸಮಸ್ತಭುವನಾ
ವಳಿಗಳನೊಳಕೊಂಡು ಸರ್ವಗತನಾಗಿರ್ಪಂ ೪೦

ನೋಡಿದರೆ ಜೀವನೆನಿಸುವನೇ ? ೩೭. ಪಂಚಮುಖನೆನಿಸಿದ ಪರಮಾತ್ಮನು ಆತ್ಮನೆನಿಸುವನೇ? ಆತ್ಮನು ಪಂಚೇಂದ್ರಿಯ ಭೂತನೆನಿಸಿದ ಮೂಗು, ನಾಲಿಗೆ, ಕಣ್ಣು, ಕಿವಿ, ಚರ್ಮಗಳೆಂಬ ಪಂಚೇಂದ್ರಿಯಗಳು, ಪೃಥ್ವಿ, ಅಪ್, ತೇಜ, ವಾಯು, ಆಕಾಶಗಳೆಂಬ ಪಂಚಭೂತ ಸ್ವರೂಪನಾದವನೆನಿಸಿದ್ದಾನೆ. (ಐದು ಇಂದ್ರಿಯಗಳು ಕ್ರಮವಾಗಿ ಐದು ಭೂತಗಳಿಂದ ಉತ್ಪತ್ತಿಯಾಗಿ ಅವುಗಳಿಂದ ಕೂಡಿ ದೇಹಿಯೆನಿಸಿದ್ದಾನೆ ಎಂದು ಭಾವ) ಪರಮಾತ್ಮನು ಐದು ಇಂದ್ರಿಯಗಳು ಐದು ಭೂತಗಳಿಗೆ ಆಧಾರಭೂತನೆನಿಸಿದ್ದಾನೆ. ವ॥ ಅದೂ ಅಲ್ಲದೆ ೩೮–೪೦. ಚೆಂದದಿಂದ ವೇದದಲ್ಲಿ ಹೇಳಿರುವಂತೆ ಅಣೋರಣೀಯಾನ್ ಅಂದರೆ ಅಣುವಿಗಿಂತಲೂ ಅಣುವೆನಿಸಿ ಆ ಪರಮಾತ್ಮನು ಸಮಸ್ತ ಚರಾಚರ ಪ್ರಪಂಚದಲ್ಲಿ ಅನಂತಪರಿಯಲ್ಲಿ ತೆರಪಿಲ್ಲದ ಹಾಗೆ ಸೂಕ್ಷ್ಮರೂಪದಿಂದ ಪ್ರವೇಶಿಸಿದ್ದಾನೆ. ಅದರಲ್ಲಿ ಎಳ್ಳಿನ ಸರ್ವಾಂಗದಲ್ಲಿ ಎಣ್ಣೆಯೂ, ಕುಂಭದ ಒಳಗಡೆಯಲ್ಲಿ ಆಕಾಶವೂ, ಸಮಿತ್ತುಗಳ (ಕಟ್ಟಿಗೆಗಳ) ಮಧ್ಯದಲ್ಲಿ ಅಗ್ನಿಯೂ, ಕಣ್ಣಿನಲ್ಲಿ ನಿರ್ಮಲವಾದ ತೇಜಸ್ಸೂ ಬೀಜದಲ್ಲಿ ವೃಕ್ಷವೂ, ಹಾಲಿನಲ್ಲಿ ತುಪ್ಪವೂ, ಕನ್ನಡಿಯೊಳಗಡೆ ಪ್ರತಿಬಿಂಬವೂ ಘಟದಲ್ಲಿ ತುಂಬಿದ ನೀರಿನಲ್ಲಿ ಚಂದ್ರನ ಪ್ರತಿಬಿಂಬವೂ, ಪರ್ವತದಲ್ಲಿ ವಿಶೇಷವಾದ ಪ್ರತಿಧ್ವನಿಯೂ ಕಲ್ಲಿನಲ್ಲಿ ಅತ್ಯುಜ್ವಲವೆನಿಸಿದ ಬಂಗಾರವೂ, ಮಣಿಗಳ ಮಧ್ಯದಲ್ಲಿ ದಾರವೂ, ಶಬ್ದದಲ್ಲಿ ಮನೋಹರವಾದ ಅರ್ಥವೂ, ಸ್ಫಟಿಕದಲ್ಲಿ ಅತ್ಯಂತ ದಟ್ಟವಾಗಿ ಪ್ರಕಾಶಿಸುವಿಕೆಯೂ, ಶೋಭಿಸುವ ರೀತಿಯಲ್ಲಿ ಶಿವನು ಪ್ರಕಾಶಿಸುತ್ತಿದ್ದಾನೆ. ಅವನು ಶೋಭಿಸುತ್ತಿರುವ ಸಮಸ್ತ ಬ್ರಹ್ಮಾಂಡಾವಳಿಗಳನ್ನೆಲ್ಲ ಒಳಗೊಂಡವನಾಗಿ ಸರ್ವವ್ಯಾಪಕನಾದವನಾಗಿದ್ದಾನೆ.

ವಿಶ್ವವಿಭು ವಿಶ್ವಜನಕಂ
ವಿಶ್ವಾಂತರ್ಯಾಮಿ ವಿಶ್ವರಕ್ಷಣಶೀಲಂ
ವಿಶ್ವಹರಂ ವಿಶ್ವಪರಂ
ವಿಶ್ವಾಧಿಕನೆಂದು ರಾಮನಾಥನೆ ಸತ್ಯಂ ೪೧

ವ॥ ಎಂದು ದಾಸ[1]ದೇವಂ ನುಡಿಗೊಡೆ ಜೈನಮುನಿಗಳ್ಮಾರ್ಕೊಂಡು—

ಮಾಡಿದ ಶಂಕೆಗುತ್ತರಮನೊಳ್ಳಿತನೆಂದಪೆ ಲೇಸು ಲೇಸು ನೀ
ನಾಡಿದೆ ಜೀವರೆಲ್ಲ ಪಶುಗಳ್ ಪತಿಯೇ ಶಿವನಾ ಮಹೇಶ್ವರಂ
ಕೂಡಿ ಪಶುಪ್ರತಾನದೊಳಗೊಪ್ಪುವನೆಂದಿದು ನಿನ್ನಿಯಾಗೆ ಪೇಳ್
ನಾಡೆ ಪಶುಪ್ರತಾನದೊಳೆ ತದ್ಗುಣವೊಂದುಮದೇಕೆ ತೋಱದೋ ೪೨

ಸುಡುವಗ್ನಿಯ ಸಂಪರ್ಕದೆ
ಸುಡುಗುಂ ಜಲಮಂತುಟೀಶಸಂಪರ್ಕದಿನಾ
ಜಡಜೀವರುಮುವನಂತಿರೆ
ತಡೆಯದೆ ಸರ್ವಜ್ಞಭಾವಮಾಳ್ದಿರವೇಡಾ ೪೩

ವ॥ ಎನೆ [2]ದಾಸದೇವಂ[2] ಕೇಳ್ದು ನಗೆ ನಕ್ಕು—

೪೧. ಅವನು ಪ್ರಪಂಚಕ್ಕೆ ಒಡೆಯನು ; ಪ್ರಪಂಚದ ಉತ್ಪತ್ತಿಗೆ ಕಾರಣನು ; ವಿಶ್ವದಲ್ಲೆಲ್ಲ ವ್ಯಾಪಿಸಿಕೊಂಡವನು ; ವಿಶ್ವವನ್ನೆಲ್ಲ ರಕ್ಷಿಸುವುದೇ ಶೀಲವಾಗಿ ಉಳ್ಳವನು ; ಪ್ರಪಂಚವನ್ನೇ ನಾಶಮಾಡುವವನು, (ಪ್ರಪಂಚಕ್ಕೆ ಪ್ರಳಯವನ್ನುಂಟು ಮಾಡಿ ನಾಶ ಗೊಳಿಸುವವನು) ; ಈ ಪ್ರಪಂಚದಲ್ಲೇ ಆಸಕ್ತಿಯುಳ್ಳವನು ; (ಸೃಷ್ಟಿ, ಸ್ಥಿತಿ, ಲಯರೂಪವಾದ ಆಸಕ್ತಿಯುಳ್ಳವನು) ; ವಿಶ್ವಕ್ಕೆಲ್ಲ ಅಧಿಕನು ಇಂಥ ರಾಮನಾಥನೇ ಸತ್ಯಸ್ವರೂಪನೆನಿಸಿದ್ದಾನೆ. ವ॥ ಹೀಗೆಂದು ದಾಸಿಮಾರ್ಯರು ನುಡಿದು ತೋರಿಸಲು ಜೈನ ಸಂನ್ಯಾಸಿಗಳು ಪ್ರತಿಯಾಗಿ ೪೨–೪೩ ನಾವು ಮಾಡಿದ ಶಂಕೆಗಳಿಗೆಲ್ಲ ಒಳ್ಳೆಯ ಉತ್ತರವನ್ನೇ ಹೇಳಿದೆ. ಒಳ್ಳೆಯದು ! ಒಳ್ಳೆಯದು ! ನೀನು ಹೇಳಿದೆ ; 'ಜೀವರುಗಳೆಲ್ಲ ಪಶುಗಳು ; ಪತಿಯೇ ಶಿವನು ; (ಹೀಗೆ) ಆ ಮಹೇಶ್ವರನು ಜೀವರುಗಳ ಸಮೂಹದಲ್ಲಿ ಬೆರೆತುಕೊಂಡು ಶೋಭಿಸುತ್ತಿದ್ದಾನೆ,' ಎಂದು ಈ ಮಾತು ಸತ್ಯವಾದರೆ, ಸಮಸ್ತ ಜೀವಿಗಳಲ್ಲಿ ಆ ಪತಿಯಾದವನ ಗುಣವೊಂದೂ ಚೆನ್ನಾಗಿ ಅದೇಕೆ ಕಾಣುವುದಿಲ್ಲ ? ಸುಡುವ ಅಗ್ನಿಯ ಸಂಪರ್ಕದಿಂದ ನೀರೂ ಸುಡುವುದಿಲ್ಲವೇ ; ಅದರಂತೆ ಈಶ್ವರನ ಸಂಪರ್ಕದಿಂದ ಆ ಜಡ ಜೀವರುಗಳಲ್ಲಿನ ಅಜ್ಞಾನ ಭಾವವು ತೊಲಗಿ, ತಪ್ಪದೆ ಅವನ ಹಾಗೆಯೇ ಸರ್ವಜ್ಞತ್ವಭಾವವನ್ನು ಹೊಂದಿರಬೇಡವೇ ? ವ॥ ಹೀಗೆ ಆ ಜೈನ

---

1 ಸಿ(ಅ, ಚ, ಗ, ಜ) 2 ದೇವದಾಸಂ(ಜ)

ಹರನೆಲ್ಲರೊಳಿರ್ದಪನೆನೆ
ಹರನ ಗುಣಂ ಜೀವರಲ್ಲಿ ತೋರ್ಕುಮೆ ಮಣಿ ಸಾ
ಗರದೊಳ್ ಶಿಖಿ ಮರದೊಳ್ತ
ಳ್ತಿರೆ ಮಣಿ ಶಿಖಿಗುಣಮುಮಬ್ಧಿ ತರುಗಳೊಳೊಳವೇ ೪೪

ಬಿಸಿಯುಪ್ಪನಿತೆ ಗಡಗ್ನಿಯ
ಬೆಸುಗೆಯಿನುದಕಂ ತದಗ್ನಿಯಂತಿರೆ ಮರ್ಬಂ
ಪೊಸೆದಿಕ್ಕುವ ತೇಜಮನಾ
ಳ್ದಿಸೆಗುಮೆ ಹರನಿರ್ಪ ಕತದಿನೊಳಗೀ ಪಶುಗಳ್ ೪೫

ಚೈತನ್ಯದಾರ್ಢ್ಯಮುಂ ಪಡೆ
ದೋತಿರ್ಕುಮದಲ್ಲದಾ ಮಹೇಶನ ಸುಗುಣ
ವ್ರಾತಮನೇಂ ತಳೆಗುಮೆ ಪೇ
ಳ್ದೀ ತೆಱದಿಂ ಮುನ್ನಮೊರೆದ ದೃಷ್ಟಾಂತದವೋಲ್ ೪೬

ತಿಲದೊಳೆ ತೈಲಮೇನಿರದೆ ದೀಪಮನುರ್ವಿಪ ತೈಲಸಾರದು
ಜ್ಜ್ವಲಗುಣಮುಂಟೆ ತತ್ತಿಲದೊಳಿಂತು ಶಿವಂ ಸಕಳಾತ್ಮವರ್ಗದೊಳ್
ನೆಲಸಿ ವಿರಾಜಿಸಿರ್ಪನನಿತರ್ಕೆ ತದೀಯ ಜಗದ್ವಿವರ್ಧನಾ
ದ್ಯಲಘುಗುಣಾಳಿಯಾತ್ಮತತಿಗುಂಟೆ ವಿ[1]ಚಾರಿ[1]ಪುದಿಂತುಟೆಲ್ಲಮುಂ ೪೭

ಸಂನ್ಯಾಸಿಗಳು ಅನ್ನಲು ೪೪. ಹರನು ಎಲ್ಲರಲ್ಲಿಯೂ ಇರುತ್ತಾನೆಂದರೆ ಹರನ ಗುಣಗಳೆಲ್ಲ ಜೀವರುಗಳಲ್ಲಿ ತೋರುವುವೇ ? ಮಣಿಯು ಸಾಗರದಲ್ಲಿಯೂ, ಬೆಂಕಿಯು ಮರದೊಳಗೂ ಕೂಡಿಕೊಂಡಿರುವವೆಂದಾಕ್ಷಣಕ್ಕೆ ಆ ರತ್ನ ಮತ್ತು ಬೆಂಕಿಯ ಗುಣಗಳನ್ನು (ಕ್ರಮವಾಗಿ) ಸಮುದ್ರ ಮತ್ತು ಗಿಡಗಳು ಹೊಂದುವುವೇನು ? ೪೫-೪೬. ನೀರಿಗೆ ಅಗ್ನಿಯ ಸಂಬಂಧ ಬೆಚ್ಚಗಾಗುವಷ್ಟೆ ಅಲ್ಲವೇ ! ಆ ಅಗ್ನಿಯ ಬೆಸುಗೆಯಿಂದ ನೀರು ಅಗ್ನಿಯಹಾಗೆ ಕತ್ತಲೆಯನ್ನು ಓಡಿಸುವ ತೇಜಸ್ಸನ್ನು ಹೊಂದಿ ಶೋಭಿಸುವುದೇನು ? ಈ ರೀತಿಯಿಂದ ಸರ್ವಜೀವಿಗಳಲ್ಲಿ ಹರನಿರುವ ಕಾರಣದಿಂದ ಚೈತನ್ಯದ ದೃಢತೆಯನ್ನು ಹೊಂದಿರುವುದಲ್ಲದೆ, ಪರಮೇಶ್ವರ ಸಮಸ್ತ ಸದ್ಗುಣ ಸಮೂಹವನ್ನು ಈ ಮೊದಲು ಹೇಳಿದ ದೃಷ್ಟಾಂತದಂತೆ ಹೊಂದುವುದಕ್ಕೆ ಸಾಧ್ಯವೇ ? ೪೭. ಎಳ್ಳಿನಲ್ಲಿ ಎಣ್ಣೆಯೇನಿಲ್ಲವೇ ? ಆ ಎಳ್ಳಿಗೆ ದೀಪವನ್ನು ಬೆಳಗಿಸುವ ಎಣ್ಣೆಯ ಉಜ್ವಲವಾದ ಗುಣವುಂಟೇನು ? ಈ ರೀತಿಯಲ್ಲಿ ಸಕಲ ಜೀವಾತ್ಮ ವರ್ಗಗಳಲ್ಲಿ ನೆಲಸಿರುವನು. ಹೀಗೆ ನೆಲಸಿರುವನೆಂದಮಾತ್ರಕ್ಕೆ ಆ ಶಿವನ ಸಂಬಂಧವಾದ ಜಗತ್ತನ್ನು ಸೃಷ್ಟಿಗೊಳಿಸುವುದೇ ಮೊದಲಾದ ಶ್ರೇಷ್ಠ ಶಕ್ತಿಯ ಗುಣ ಸಮೂಹಗಳು ಆ ಸಕಲ ಜೀವಾತ್ಮ ಸಮೂಹಕ್ಕೆ ಉಂಟಾದವೇನು? ಈ ರೀತಿಯಲ್ಲಿ ಎಲ್ಲವನ್ನೂ ವಿಚಾರ ಮಾಡ

---

1 ರಾಜಿ(ಜ, ಮ)

ತಿಲದೊಳ್ ತೈಲಮುದಿರ್ಕುಂ
ತಿಲಮಿಲ್ಲಂ ತೈಲರಸದೊಳೆಂತಂತೆ ಶಿವಂ
ನೆಲಸಿರ್ಕುಮಖಿಳ ಜಗದೊಳ್
ನೆಲಸದು ಶಿವನಲ್ಲಿ ಮಾಯಿಕಂ ಜಗಮನಿಶಂ ೪೮

ಒಗೆದಿರ್ದಳಿಗುಂ ಮುಗಿಲಾ
ಗಗನದೊಳಾ ಗಗನಮಲ್ಲಿ ನಿರ್ಲೇಪಕಮಂ
ತೊಗೆದಿರ್ದಳಿಗುಂ ಜಗಮಾ
ಜಗದೀಶನೊಳೀಶನವಿರತಂ ನಿರ್ಲೇಪಂ ೪೯

ಮಲಿನಮತಿ ಕಾಣ್ಬೆನೆಂಬೊಡೆ
ಸಲೆ ಸಿಲ್ಕಂ ನಿರ್ಮಲೈಕಮತಿ ಭಾವಿಸೆ ಬಂ
ದೊಲವಿತ್ತು ರಕ್ಷಿಪಂ ನಿ
ಶ್ಚಲನನಘಂ ನಿತ್ಯನಪ್ರಮೇಯನಜೇಯಂ ೫೦

ವ॥ ಮತ್ತಮಾ ಪರಮಶಿವನನಾದ್ಯಂತನುಮವಿದ್ಯಾರಹಿತನುಂ ನಿರಸ್ತಸಮಸ್ತದೋಷಕಳಂಕನುಂ ಸತ್ಯಜ್ಞಾನಾನಂದಮಯನುಂ ಸರ್ವಜ್ಞನುಂ ನಿತ್ಯತೃಪ್ತನುಂ ಸ್ವತಂತ್ರನುಮನಾದಿಪ್ರಕಾಶಪ್ರಭಾವನುಮನಂತಾಲುಪ್ತಶಕ್ತಿಸಮೇತನುಮದ್ವಿತೀಯಾಖಂಡಪರಮೈಶ್ವರ್ಯವಿಭ್ರಾಜಿತನುಮನುಭ

ಬೇಕು. ೪೮. ಎಳ್ಳಿನಲ್ಲಿ ಎಣ್ಣೆಯಿರುವುದು; ಆದರೆ ಆ ತಿಲದ ರಸದಲ್ಲಿ (ತೈಲದಲ್ಲಿ) ತಿಲವು ಹೇಗೆ ಇಲ್ಲವೋ ಹಾಗೆ ಶಿವನು ಸಮಸ್ತ ಜಗತ್ತಿನಲ್ಲೆಲ್ಲಾ ವ್ಯಾಪಿಸಿದ್ದರೂ ಆ ಶಿವನಲ್ಲಿ ಮಾಯಾ ಸ್ವರೂಪನಾದ ಜಗತ್ತು ಯಾವಾಗಲೂ ನೆಲಸುವುದಿಲ್ಲ. (ಅಂದರೆ ಶಿವನು ನಿರ್ಮಾಯ ಸ್ವರೂಪನೆಂದು ಭಾವ) ೪೯. ಮೋಡವು ಗಗನದಲ್ಲಿ ಹುಟ್ಟಿ ನಾಶವಾಗುವುದು. ಈ ದೃಷ್ಟಾಂತದಲ್ಲಿ ಗಗನವು ನಿರ್ಲೇಪವೆನಿಸುವುದು. (ಮೋಡದ ಲೇಪವು ಆಕಾಶಕ್ಕೆ ಇಲ್ಲ. ಅಲ್ಲಿ ಹುಟ್ಟಿ ಅಲ್ಲಿಯೇ ಅದು ಅಳಿದು ಹೋಗುವುದು) ಇದರ ಹಾಗೆ ಶಿವನಿಂದ ತೋರಿಕೆಗೊಂಡ ಜಗತ್ತು ಅಲ್ಲಿಯೇ ನಾಶವಾಗಿ ಹೋದರೂ ಈಶ್ವರನು ಮಾತ್ರ ನಿರ್ಲೇಪನಾಗಿಯೇ ಇರುತ್ತಾನೆ. (ಶಿವನ ಲೀಲೆಯಿಂದ ಜಗತ್ತು ಕಾಣಿಸಿಕೊಂಡು ಅವನಿಂದಲೇ ಅದು ಪ್ರಳಯಗೊಂಡರೂ ಶಿವನು ನಿರ್ಲೇಪನಾಗಿಯೇ ಇರುತ್ತಾನೆ ಎಂದು ಭಾವ) ೫೦. ನಿಶ್ಚಲನೂ, ಪಾಪರಹಿತನೂ, ನಿತ್ಯನೂ, ಅಗಣಿತನೂ (ಅಳೆಯುವುದಕ್ಕೆ ಸಾಧ್ಯವಿಲ್ಲದವನೂ) ಅಜೇಯನೂ (ಜಯಿಸುವುದಕ್ಕೆ ಇನ್ನೊಬ್ಬರಿಂದ ಸಾಧ್ಯವಿಲ್ಲದವನೂ) ಎನಿಸಿದ ಪರಶಿವನನ್ನು ಪಾಪ ಬುದ್ಧಿಯವನು ಕಾಣುತ್ತೇನೆಂದರೆ ಸಿಲುಕುವವನಲ್ಲ. ನಿರ್ಮಲವಾದ ಬುದ್ಧಿಯುಳ್ಳವನೊಬ್ಬನೇ ಧ್ಯಾನಿಸಿದರೆ ಮಾತ್ರ ಅವನು ಒಲಿದು ಬೇಡಿದುದನ್ನಿತ್ತು ರಕ್ಷಿಸುವನು. ವ॥ ಮತ್ತು ಆ ಪರಶಿವನು ಆದಿ ಅಂತ್ಯವಿಲ್ಲದವನು; ಅಜ್ಞಾನದಿಂದ ದೂರನಾದವನು; ಸಮಸ್ತ ಪಾಪವೆಂಬ ಕೊಳೆಯನ್ನು ನಾಶಗೊಳಿಸುವವನು ; ಯಥಾರ್ಥವಾದ ಜ್ಞಾನದಿಂದುಂಟಾದ ಆನಂದ ಸ್ವರೂಪನು;

ವೈಕವಿಷಯಮಪಶವಮಾಮೃತಸ್ವರೂಪಕನುಮಜಾಚ್ಯುತಮೃಗ್ಯನುಂ ಪರಾತ್ಪರನುಂ ಪರಮುಕ್ತಿಪ್ರದನುಂ ವಿಶ್ವಮಯನುಂ ವಿಶ್ವಪ್ರೇರಕನುಂ ಸ್ವಭಕ್ತ ಸುಲಭನುಮಭಕ್ತದುರ್ಲಭನುಂ ಅನುಪಮಕಲ್ಯಾಣಗುಣ ಗಣಾಲಂಕರಣನುಮಖಿಳ ಬ್ರಹ್ಮಾಂಡಮಂಡಳಾಧೀಶ್ವರನುಂ ತಾನೊರ್ವನೆಯಾಗಿ—

ಎಲ್ಲರೊಳಹೊಱಗೆ ಪೂರ್ಣನು
ಮೆಲ್ಲವನಱಿವವನುಮೆಲ್ಲರಂತಿರದವನೊ
ಲ್ದೆಲ್ಲರ ಪೊರೆವನುಮೆಲ್ಲವ
ನುಲ್ಲಂಘಿಸಿದವನುಮಭವನಲ್ಲದೆ ಪೆಱರಾರ್ ೫೧

ಶ್ರೀರಾಮನಾಥನೊರ್ವನೆ
ಭೂರಿ ಜಗಜ್ಜಾಲಪತಿ ವಲಂ ಪರರಿಲ್ಲೆಂ
ದೋರಂತೆ ನಿಗಮ ನಿಗಮಶಿ
ರೋರಾಜಿ ಪುರಾಣವಾಣಿಯುಲಿಗುಮಜಸ್ರಂ ೫೨

ಸರ್ವವನ್ನೂ ತಿಳಿದವನು ; ಸದಾ ತೃಪ್ತಿಯಿಂದ ಕೂಡಿದವನು ; ಸರ್ವರೀತಿಯಲ್ಲೂ ಸ್ವತಂತ್ರನು (ಅನ್ಯರ ತಂತ್ರಕ್ಕೆ ಒಳಗಾದವನಲ್ಲ) ; ತನಗಿಂತಲೂ ಆದಿಯೆಂಬುದು ಇನ್ನೊಂದಿಲ್ಲದಂತಹ ಪ್ರಕಾಶದ ಪ್ರಭಾವದಿಂದ ಕೂಡಿದವನು ; ಅಪಾರವಾದ ನಾಶವೇ ಇಲ್ಲದ ಶಕ್ತಿಯಿಂದ ಕೂಡಿದವನು ಎಂದರೆ ಇಚ್ಛಾ, ಜ್ಞಾನ, ಕ್ರಿಯಾಶಕ್ತಿಯಿಂದ ಸಮನ್ವಿತನು ; ದ್ವಿತೀಯವಾದ ಬೇರೊಂದು ಇಲ್ಲದೆಯಿರುವ ಅಖಂಡವೂ ಆದ ಉತ್ಕೃಷ್ಟವೂ ಆದ ಷಡ್ಗುಣೈಶ್ವರ್ಯದಿಂದ ಪ್ರಕಾಶಿಸುವಂಥವನು ; ಕೇವಲ ಅನುಭವಕ್ಕೆ (ಅವನ ಸಂಬಂಧದ ಅನುಭವಕ್ಕೆ) ಮಾತ್ರ ಗೋಚರಿಸುವ ಪರಮ ಅಮೃತ ಸ್ವರೂಪನು ; ಬ್ರಹ್ಮ ಮತ್ತು ವಿಷ್ಣುಗಳಿಂದ ಹುಡುಕಿಸಿಕೊಳ್ಳಲ್ಪಡುವವನು ; ಶ್ರೇಷ್ಠಕ್ಕಿಂತಲೂ ಶ್ರೇಷ್ಠನಾದವನು (ಇವನಿಗಿಂತ ಬೇರೊಂದು ಶ್ರೇಷ್ಠವೇ ಇಲ್ಲವೆನಿಸಿದವನು) ; ಶ್ರೇಷ್ಠವಾದ ಮುಕ್ತಿಯನ್ನು ಕೊಡುವವನು ; ವಿಶ್ವವನ್ನೆಲ್ಲ ವ್ಯಾಪಿಸಿದವನು ; ವಿಶ್ವವ್ಯವಹಾರಗಳಿಗೆ ಚಾಲಕ ಶಕ್ತಿಯಾಗಿರುವವನು ; ತನ್ನ ಭಕ್ತರಿಗೆ ಸುಲಭವಾಗಿ ಲಭ್ಯವಾಗುವವನು ; ಭಕ್ತರಲ್ಲದವರಿಗೆ ಲಭ್ಯವಾಗುವುದಕ್ಕೆ ಸಾಧ್ಯವಿಲ್ಲದವನು ; ಉಪಮಾರಹಿತವಾದ ಮಂಗಳಕರ ಗುಣಗಳಿಂದ ಅಲಂಕಾರಗೊಂಡವನು ; ಸಮಸ್ತ ಬ್ರಹ್ಮಾಂಡಗಳಿಗೆ ಪ್ರಭುವೆನಿಸಿದವನೂ—ತಾನೊಬ್ಬನೇ ಆಗಿ ೫೧. ಎಲ್ಲರ ಒಳಗೂ ಅವನೇ, ಹೊರಗೂ ಅವನೇ ತುಂಬಿದವನೆನಿಸಿದ್ದಾನೆ ; ಎಲ್ಲವನ್ನೂ ತಿಳಿಯುವವನು, (ಮತ್ತು) ಎಲ್ಲರ ಹಾಗಿರದೆ ಅವನು ಒಲಿದು ಎಲ್ಲರನ್ನೂ ರಕ್ಷಿಸುವನು ; ಎಲ್ಲ ಜಗದ್ವ್ಯಾಪಾರಗಳನ್ನೂ ಉಲ್ಲಂಘಿಸಿದವನು—ಇಂಥ ಈ ಪರಮಾತ್ಮನಲ್ಲದೆ ಬೇರೆ ಯಾರಿದ್ದಾರೆ ? ೫೨. ಶ್ರೀರಾಮನಾಥನೊಬ್ಬನೇ ಸಮಸ್ತ ಬ್ರಹ್ಮಾಂಡ ಜಾಲಗಳಿಗೆಲ್ಲ ಪತಿಯಲ್ಲವೇ ! ಬೇರೆ ಇನ್ನೊಬ್ಬರಾರೂ ಇಲ್ಲವೆಂದು ಒಂದೇ ಸವನೆ (ಏಕ ಪ್ರಕಾರವಾಗಿ) ವೇದೋಪನಿಷತ್ತು

ವ॥ ಎಂದಿಂತು ಶಿವದಾಸಂ ನುಡಿಯೆ ಮಲಧಾರಿಗಳ್ಕೇಳ್ದಿನಿತರ್ಥಮೆಲ್ಲಮಂನಿಗಮವಾಕ್ಯದಿಂ ಸಾಧಿಸುವೆಯಪ್ಪೊಡಾ ನಿಗಮಂ ವ್ಯಾಘಾತಪುನರುಕ್ತ್ಯಾದಿ ಸಂಕಲಿತಮಪ್ಪುದಱಿಂನಪ್ರಮಾಣಮದಱಿನುಕ್ತಾರ್ಥಮನೆಂತು ಸಮರ್ಥಿಪೆಯೆನೆ ಜಿನಮತಮರ್ದನಂ ಮಾರ್ಕೊಂಡು—

ವೇದದಿನೊಗೆದತ್ತಾಯು
ರ್ವೇದಂ ಭೈಷಜ್ಯಮೆಸಗೆ ತತ್ಸಮ್ಮತದಿಂ
ಮೇದಿನಿಯೊಳಖಿಳ ರುಜೆಗಳಿ
ವಾದಪುದದಱಿಂ ಪ್ರಮಾಣಮಾಗಮಮಲ್ತೇ ೫೩

ಶ್ರುತಿಗಂಗಂ ಜ್ಯೋತಿಷಂ ಪೇಳ್ದಪುದು ಗಗನದೊಳ್ಚಂದ್ರಸೂರ್ಯರ್ಕಳಂ ದೂ
ರತರಂ ತದ್ರಾಹು ಕೊಳ್ವ ಸಮಯಮನಿನಿಸುಂ ತಪ್ಪದಂತೆಯ್ದೆ ವೇದ
ಪ್ರತತಿ ಪ್ರಾಮಾಣ್ಯಕ್ಕಿಂತಪ್ಪುದನೊರೆದ ತದಂಗೋಕ್ತಿ ದೃಷ್ಟಾಂತಮೆಂಬಾ
ಯತಿಯಂ ನೀಮೇಕೆ ಜೈನಾಧಮರಿರಱಿಯಿರೇನೆಂಬೆನೀ ನಿಮ್ಮ ಗಾಂಪಂ ೫೪

ಗಳ ಸಮೂಹ, ಪುರಾಣಗಳ ಮಾತುಗಳು ಸದಾ ಕೂಗುತ್ತಿವೆ. ವ॥ ಈ ರೀತಿಯಲ್ಲಿ ದಾಸಿಮಯ್ಯನು ನುಡಿಯಲು ಪಾಪಲೇಪವುಳ್ಳ (ಪಾಪದಿಂದ ಕೂಡಿದ) ಅವರೆಲ್ಲರೂ ಕೇಳಿ ಇಷ್ಟು ಅರ್ಥವೆಲ್ಲವನ್ನೂ, ವೇದ ವಾಕ್ಯದಿಂದ ಸಾಧಿಸುತ್ತೀಯಾದರೆ, ಆ ವೇದವೂ ಕೂಡ ಪರಸ್ಪರ ವಿರೋಧ ಅಭಿಪ್ರಾಯದಿಂದಲೂ (ವ್ಯಾಘಾತದಿಂದಲೂ) ಹೇಳಿದ್ದನ್ನೇ ಪುನಃ ಹೇಳುವ ದೋಷಗಳಿಂದ ಕೂಡಿರುವುದರಿಂದ ಪ್ರಮಾಣವನ್ನು (ವೇದದಲ್ಲಿ ಉಪನಿಷತ್ತಿನಲ್ಲಿ ಹೀಗೆ ಹೇಳಿದೆ ಎಂಬ ಪ್ರಮಾಣವನ್ನು) ಅವುಗಳಲ್ಲಿ ಹೇಳಿದುದೇ ಸರಿಯಾದ ಮಾತೆಂದು ಹೇಗೆ ಸಮರ್ಥನೆ ಮಾಡುತ್ತೀಯೆ ? ಎನ್ನಲು, ಜಿನ ಮತವನ್ನು ನಾಶಗೊಳಿಸಿದ (ಅಥವಾ ನಾಶಗೊಳಿಸಿದವನೆಂಬ ಬಿರುದುಳ್ಳ) ದಾಸಿಮಯ್ಯನು ಪ್ರತಿಯಾಗಿ ೫೩. ಆಯುರ್ವೇದವು ವೇದದಿಂದ ಹುಟ್ಟಿತು. ಆ ಆಯುರ್ವೇದದಲ್ಲಿ ಉಕ್ತವಾದ ಪ್ರಕಾರದಿಂದ ವೈದ್ಯವನ್ನು ಮಾಡಿದರೆ ಲೋಕದಲ್ಲಿ ಎಲ್ಲರ ರೋಗಗಳು ನಾಶವಾಗುವುವು. ಆದ್ದರಿಂದ ಆ ವೇದಗಳೇ ಪ್ರಮಾಣವಲ್ಲವೆ. (ಅಂದರೆ ಎಲ್ಲರ ತರ್ಕಗಳೆಂಬ ರೋಗಗಳಿಗೆ ವೇದ ಪ್ರಮಾಣವು ಅಂಗೀಕಾರಾರ್ಹವಾದುದಲ್ಲವೇ ? ಎಂದು ಭಾವ) ೫೪. ವೇದಗಳಿಗೆ ಅಂಗವೆನಿಸಿದ ಜ್ಯೋತಿಶ್ಶಾಸ್ತ್ರವು ಆಕಾಶದಲ್ಲಿರುವ ಚಂದ್ರ ಸೂರ್ಯರುಗಳನ್ನು ದೂರದಲ್ಲಿರುವ ಆ ರಾಹುವು ನುಂಗುವ ಸಮಯದ ಲೆಕ್ಕಾಚಾರವನ್ನು ಸ್ವಲ್ಪವೂ ತಪ್ಪದ ಹಾಗೆ ಚೆನ್ನಾಗಿ ಹೇಳುವುದಲ್ಲವೇ ! ಇದಕ್ಕೆ ವೇದ ಸಮೂಹಗಳ ಪ್ರಾಮಾಣ್ಯ ಅಂಗೀಕರಿಸಿದ ಅದರ ಅಂಗವಾದ ಜ್ಯೋತಿಶ್ಶಾಸ್ತ್ರದ ಮಾತೇ ಪ್ರಮಾಣವೆಂದು ಹೇಳುವ ಆ ಯತಿಯನ್ನು (ಜ್ಯೋತಿಶ್ಶಾಸ್ತ್ರಜ್ಞನಾದ ಯತಿಯನ್ನು) ಜೈನಾಧಮರುಗಳಾದವರೇ, ನೀವೇಕೆ ತಿಳಿಯುತ್ತಿಲ್ಲ ? ನಿಮ್ಮ ಈ ದಡ್ಡತನವನ್ನು ಏನೆನ್ನ

ಪಲವಾಳಾಪದಿನೇಂ ಫಲಂ ಶಿವನೆ ಕರ್ತಾರಂ ಜಗನ್ಮಂಡಲೀ
ಕುಲಕೆಂದುಂ ಪೆಱನಿಲ್ಲ ದೇವನೆನುತುಂ ದೃಷ್ಟಾಂತಮಂ ತೋರ್ಪೆನಿಂ
ದೆಲೆ ನೀವೆಂದುದನೀಗಳಿಂತೆ ಜಿನಗೇಹವ್ರಾತಮಂ ಕಿಳ್ತು ನೀ
ವೊಲವಿಂ ಪೂಜಿಪ ತಜ್ಜಿನಪ್ರಚಯಮಂ ನುರ್ಗೊತ್ತಿ ಪಾಳ್ಮಾಡುವೆಂ ೫೫

ವ॥ ಎಂದು ವಿಜೃಂಭಿಸಿ ದೃಢಪ್ರತಿಜ್ಞಾರೂಢನಾದ ಜೈನಜನಭಂಜನನ ಪಟುಕಟೂಕ್ತಿಯುಂ ಕೇಳ್ದು ಮುಳಿಸುಂ ತಾಳ್ದು ಪೇರೊಡಲ ಪೆಂಕುಳಿಗಳುಂ, ತರಂಟುದಲೆಯೊರಂಟರುಂ, ಪೆರ್ಬಡಿಕೆ ಮೆಯ್ಯ ದುರ್ಬೋಧರುಂ, ನೊಳಪೆಱಿಪ ಕೊಳೆವಾಯ ಖಳರುಂ, ಪುಳಿಚೆಳ್ವ ಕಿಣಿವಲ್ಲ ಪುರುಷಾಧಮರುಂ, ಪಾಳ್ಮೊಗದ ಕಾಳ್ಮಾನಿಸರುಂ, ಪೊಲಸುನಾಱು ವಂಗದ ಪಂಚಮಲದ ಪಾಷಂಡರುಂ, ಬತ್ತಲೆಯೊಡಲ ಬಾಹಿರರುಂ, ಮಿಂಚುದಲೆಯ ವಂಚಕರುಂ, ಕುತರ್ಕದ ಕುತ್ಸಿತರುಂ, ಕುಮಂತ್ರದ ಕುಟಿಲ[1]ರುಂ ಪತಿಯುಂ ಪಳಿವ ಪಾಪ ಕರ್ಮರುಂ, ನಿಗಮಮಂ ತೆಗಳ್ವ ನೀಚರುಂ, ನಗೆಗಂಜದ ನಾಣಿಲಿಗಳುಂ, ಕುಂಚದ ಕೂಳರುಂ, ತಟ್ಟಿನ ತಾಮಸರುಂ, ಗುಂಡಿಗೆಯ ಭಂಡರುಂ, ಪುಸಿನುಡಿಯ ಪೊಲೆಯರು ಮೆನಿಪ ಮಲಧಾರಿಗಳ್ಮಸಣವಟ್ಟೆಯ ಮರುಳ್ಗಳಂತೆ ಮಸಕಂಗೊಂಡು, ಮಂತ್ರಕ್ಕೆ ಮಲೆವ ಬೇತಾಳ

ಬೇಕೋ ತಿಳಿಯದು ! ೫೫. 'ಹಲವಾರು ಮಾತುಗಳಿಂದೇನು ಪ್ರಯೋಜನ ! ಯಾವಾಗಲೂ ಸಮಸ್ತ ಜಗತ್ತುಗಳ ಸಮೂಹಕ್ಕೆ ಶಿವನೇ ಕರ್ತೃ. ಬೇರೆ ದೇವರೆಂಬುವರು ಇಲ್ಲ. ನೀವೆಂದುದಕ್ಕೆ ಈ ರೀತಿ ದೃಷ್ಟಾಂತವನ್ನು ಈಗಲೇ ತೋರಿಸಿಕೊಡುತ್ತೇನೆ. ಜೈನಮಂದಿರಗಳ ಸಮೂಹವನ್ನು ಕಿತ್ತುಹಾಕಿ ನೀವು ಒಲವಿನಿಂದ ಪೂಜಿಸುವ ಜಿನರುಗಳ ಮೂರ್ತಿ ಸಮೂಹವನ್ನು ನುಚ್ಚು ನೂರು ಮಾಡಿ ಬಿಸಾಡಿ ಬಿಡುತ್ತೇನೆ. ವ॥ ಹೀಗೆಂದು ಶೌರ್ಯವನ್ನು ಪ್ರದರ್ಶಿಸಿ, ದೃಢವಾದ ಪ್ರತಿಜ್ಞೆಯನ್ನು ಹೊಂದಿದ ಜೈನ ಜನರನ್ನು ಭಂಗಗೊಳಿಸಿದ ದಾಸಿಮಯ್ಯನ ಸಮರ್ಥವಾದ ಕಠಿಣೋಕ್ತಿಗಳನ್ನು ಕೇಳಿ, ಕೋಪಗೊಂಡ ದಪ್ಪನಾದ ಹೊಟ್ಟೆಯ ಹುಚ್ಚರೂ, ಹರಕು ಕೂದಲಿನ ತಲೆಯುಳ್ಳ ಒರಟರೂ, ಹೇಸಿಗೆಯನ್ನುಂಟು ಮಾಡುವ (ಅಬ್ಬಳಿಕೆಯುಂಟಾಗುವಂತೆ ಕಾಣುವ) ಮೆಯ್ಯುಳ್ಳವರೂ, ಅಜ್ಞಾನದಿಂದ ಕೂಡಿದವರೂ, ನೊಣಗಳು ಮುತ್ತುವ ಕೊಳೆಯಿಂದ ಕೂಡಿದ ಬಾಯುಳ್ಳ ದುಷ್ಟರೂ, ಹಸರು ಗಟ್ಟಿದ (ಪುಳಿಚೆಳ್ವ ?) ಗಂಟುಗೊಂಡ ಹಲ್ಲುಗಳುಳ್ಳ ನೀಚ ಮನುಷ್ಯರೂ, ಹಾಳು ಮುಖದ ಕಾಡು ಮನುಷ್ಯರೂ (ಭಸ್ಮಾದಿಲೇಪನವಿಲ್ಲದೆ ಇರುವ ಹಾಳು ಮುಖದವರೆಂದು ಭಾವ), ಹೊಲಸುನಾರುವ ದೇಹವುಳ್ಳ ಪಂಚ ಹೊಲಸುಗಳಾದ ಮೂಗಿನ ಸಿಂಬುಳ, ಕಣ್ಣಿನ ಪಿಚ್ಚು, ಕಿವಿಯ ಕೂರಣೆ, ಹಲ್ಲಿನ ಹಸುರು, ಮೆಯ್ಯ ಕೊಳೆಗಳುಳ್ಳ ನಾಸ್ತಿಕರೂ, ವಸ್ತ್ರವಿಹೀನವಾದ ಮೆಯ್ಯಿಂದ ಕೂಡಿದ ವೇದಾದಿ ಶಾಸ್ತ್ರ ಬಾಹಿರರೂ, ಮಿಂಚುವ ತಲೆಯ ಕೂದಲುಗಳನ್ನು ಕೀಳಿಸಿಕೊಂಡು ಮಿಂಚುತ್ತಿರುವ ತಲೆಯ ಮೋಸಗಾರರೂ, ಕೆಟ್ಟ ತರ್ಕವನ್ನು ಮಾಡುವ ನೀಚರೂ, ಕೆಟ್ಟಮಂತ್ರದ ಕುಟಿಲರೂ, ಈಶ್ವರನನ್ನೇ ನಿಂದಿಸುವ ಪಾಪ ಕರ್ಮಿಗಳೂ, ವೇದಗಳನ್ನೇ ತಿರಸ್ಕರಿಸುವ ನೀಚರೂ, ಲೋಕದ ಜನರ ನಗೆಗೆ ಹೆದರದ ನಾಚಿಗೆಯಿಲ್ಲದ

1 ಲಿಗ (ಚ)

ರಂತೆ ಪಲ್ಮೊಱೆದು, ತುಪ್ಪುಳ್ದಱೆದ ಕೋಳಿಗಳಂತೆ ಮಿಳ್ಮಿಳನೆ ನೋಡುತ್ತುಂ ಕೂಳಂ ಕಂಡ ಕೊತ್ತಳಿಯಂತೆ ಕಳಕಳಂಗೆಯ್ದು, ಬಸದಿಯೊಳೂಳ್ವ ಬಳ್ಳುಗಳಂತೆ ಕೂಗಿಡುತ್ತುಂ, ಮೊಲೆನಾಗಂ[1] ಪಿಡಿದ ಮರ್ಕಟಂಗಳಂತೆ ನಾನಾ ವಿಕಾರಂ ದೋಱಿ ಕಳ್ಳ ಸೊರ್ಕು ತಲೆಗೇಱಿದ ತಳಾಱರಂತೆಬಾಯ್ಗೆ ಬಂದುದಂ ಗಳಪುತ್ತುಂ ತಮ್ಮೊಳೆಲ್ಲರ್ಮಂತಣಂಗೆಯ್ದೊಂದು ಕಪಟೋಪಾಯಮನಾಳೋಚಿಸಿ—

ಕಡು ದುರುಳಂ ಶೈವನಿವಂ
ಮುಡಿಪನೆ ಮಾಣ್ದಪದೆ ಬಳಿಯಿನೆಮ್ಮಂ ಮುನ್ನಂ
ಬಿಡದೀತಂ ಮುಡಿವವೊಲೆಡೆ
ಯುಡುಗದೆ ನೆಗಳಲ್ಕೆವೇಳ್ಕುಮೆಂದಾ ಶವಣರ್ ೫೬

ಪಟುಗರಳ ಪಾವಕಪ್ರ
ಸ್ಫುಟಚಳರಸನಾಗ್ರಪಾಟಲಸ್ಫುಟಚಟುಲೋ
ತ್ಕಟಭೀಕರಮುಖಫಣಿಯಂ
ಕುಟಿಲಾತ್ಮರ್ ಘಟದೊಳಿಟ್ಟು ಮುಂದಿಳುಪುತ್ತುಂ ೫೭

ಗಡಬಡಿಸುತ್ತೆ ನೀಂ ಗಳಪದಿರ್ಪಲವಂ ಶಿವನಿರ್ಪನಿರ್ಪನೆ
ಲ್ಲೆಡೆಯೊಳಮೆಂದು ಪೂಣ್ದೆ ಗಡ ಕಂಡಪೆವೀ ಘಟವಂ ತುಡುಂಕಿ ತ

ವರೂ, ನವಿಲುಗರಿಯ ಕುಂಚವನ್ನು ಕೈಯಲ್ಲಿ ಹಿಡಿದ ದುಷ್ಟರೂ, ಗುಂಪು ಕೂಡಿದ ತಮೋಗುಣವುಳ್ಳವರೂ, ಕೆಟ್ಟ ಧೈರ್ಯವುಳ್ಳ ಎದೆಯ ಭಂಡರೂ, ಸುಳ್ಳು ಮಾತಿನ ಹೊಲೆಯರು ಎಂದೆನಿಸುವ ಅಶುದ್ಧಿಯಿಂದ ಕೂಡಿ ಶ್ಮಶಾನ ಮಾರ್ಗದಲ್ಲಿರುವ ಪಿಶಾಚಿಗಳ ಹಾಗೆ ಕೋಪಾತಿಶಯದಿಂದ ಕೂಡಿ, ಮಂತ್ರ ಹಾಕಿದೊಡನೆ ಮಲೆತು ನಿಲ್ಲುವ ಬೇತಾಳಗಳ ಹಾಗೆ ಹಲ್ಲು ಕಡಿಯುತ್ತ, ತುಪ್ಪಳಗಳನ್ನು ತೆರೆದ ಕೋಳಿಗಳ ಹಾಗೆ ಮಿಳ ಮಿಳನೆ ನೋಡುತ್ತ, ಕೂಳನ್ನು ಕಂಡ ಕಾಗೆಗಳ ಸಮೂಹದಂತೆ ಕಳಕಳ ಧ್ವನಿಯನ್ನು ಮಾಡಿ, ಬಸದಿಗಳಲ್ಲಿ (ಜಿನವಸತಿಯಲ್ಲಿ) ನರಿಗಳ ಹಾಗೆ ಕೂಗಾಡುತ್ತ, ಮಲರೋಗ (ಮೂರ್ಛೆರೋಗ) ಬಂದ ಕೋತಿಗಳ ಹಾಗೆ ನಾನಾ ಬಗೆಯ ವಿಕಾರಗಳನ್ನು ತೋರಿಸಿ, ಹೆಂಡದ ಮದವು ತಲೆಗೇರಿದ ಊರಿನ ಗಸ್ತು ತಿರುಗುವ ತಳವಾರರಂತೆ ಬಾಯಿಗೆ ಬಂದದ್ದನ್ನೇ ಗಳಪುತ್ತ, ತಮ್ಮ ಎಲ್ಲ ಜನರೂ ಒಟ್ಟಾಗಿ ಸೇರಿ ಯೋಚನೆ ಮಾಡಿ ಒಂದು ಕಪಟೋಪಾಯವನ್ನು ಆಲೋಚಿಸಿ ೫೬–೫೮. ಈ ಶೈವನು ಮಹಾ ದುಷ್ಟನು ನಮ್ಮನ್ನು ಕೊಲ್ಲದೆ ಬಿಡುವುದಿಲ್ಲ. ನಮ್ಮನ್ನು ಕೊಲ್ಲುವುದಕ್ಕೆ ಮೊದಲೇ, ತಪ್ಪದೆ ಈತನನ್ನು ಕಾಲಾವಕಾಶ ಕೊಡದೆ ಸಾಯುವ ಹಾಗೆ ಮಾಡಬೇಕು, ಎಂದು ಆ ಜೈನ ಸಂನ್ಯಾಸಿಗಳು ತೀಕ್ಷ್ಣ ವಿಷದ ಅಗ್ನಿಯಿಂದಲೂ, ಸ್ಫುಟವಾಗಿ ಕಾಣುತ್ತ ಚಲಿಸುತ್ತಿರುವ ನಾಲಿಗೆಯ ತುದಿಯುಳ್ಳದ್ದೂ, ಕೆಂಪಾದ ಬಣ್ಣದ ಹೆಡೆಯಿಂದ ಚಂಚಲವಾಗಿ ಕಾಣುವ, ವಿಶೇಷ ಭಯವನ್ನುಂಟು ಮಾಡುವ ಮುಖವನ್ನು ಹೊಂದಿದ್ದೂ ಆದ ಒಂದು ಹಾವನ್ನು

1 ರಂ (ಚ)

ನ್ಮೃಡನಿದಱಲ್ಲಿ ತಳ್ತಿಸೆವನೆಂಬುದನೀಗಳೆ ತೋಱಿಸಾಗದಿ
ರ್ದೊಡೆ ಬಿಡು ನಿನ್ನ ಬಿನ್ನಣಮನೆಂದೆನೆ ಕೇಳ್ದು ಕನಲ್ದು ನೋಡಿದಂ ೫೮

ವ॥ ಅಂತು ನೋಡಿ ರಾಜಾಮಾತ್ಯ ದಂಡನಾಥ ಮಂಡಳಿಕ ಸಾಮಂತ ಭೂಮೀಶ್ವರಾದಿ ಗಳ್ನೆರೆದಚ್ಚರಿ ಮಿಗೆ ನಿರೀಕ್ಷಿಸುತ್ತುಮಿರೆ ತದಾಸ್ಥಾನಮಧ್ಯದಲ್ಲಿ—

ರಾಮನಾಥನೆ ವಿಶ್ವದೊಳ್ಪರಿಪೂರ್ಣನೆಂಬುದೆ ಸತ್ಯಮಾ
ರಾಮನಾಥನ ಭಕ್ತರೇ ಭುವನತ್ರಯಾಧಿಕರಾವಗಂ
ರಾಮನಾಥನನೊಲ್ದು ಪೂಜಿಸದಾತ್ಮರೇ ದುರಿತಾತ್ಮರೀ
ರಾಮನಾಥನೆ ದೇವನೆಂದಿಳೆ ಮಚ್ಚೆ ದೃಷ್ಟಮನೀಕ್ಷಣಂ ೫೯

ತೋಱುವೆನೀ ಜಿನಮತಮಂ
ಪಾಱಿಪೆನೆಂದಣ್ಮಿ ಪುರಾತನ ನವಭಕ್ತರ ಪೆಂ
ಪೇಱಿದ ಪದನಳಿನಂಗಳ
ಜಾಱದೆ ನೆಱೆ ನಿಂದು ಜಾನಿಸುತ್ತ ಭಟಂದಂ ೬೦

ವ॥ ಶಂಭುಸನ್ನಿಭಂ ಕುಂಭಿನೀಪತಿಯಿದಿರೊಳ್ಕುಂಭಕುಂಭೀನಸಮಂ ನಿಂದು ನಿರೀಕ್ಷಿಪಾಗಳ್—

ಆ ಕುಟಿಲವಾದ ಆತ್ಮವುಳ್ಳ ಜೈನರು ಘಟವೊಂದರಲ್ಲಿಟ್ಟು, ದಾಸಿಮಯ್ಯನ ಮುಂದೆ ಆ ಕುಂಭವನ್ನಿಟ್ಟು (ಎಲೈ ಶೈವನೇ) ನೀನು ಗಡ ಬಡಿಸುತ್ತ ಹಲವಾರು ವ್ಯರ್ಥವಾದ ಮಾತುಗಳನ್ನು ಆಡಬೇಡ. ಶಿವನು ಎಲ್ಲೆಲ್ಲೂ ಇದ್ದಾನೆ ! ಇದ್ದಾನೆ ! ಎಂದು ಪ್ರತಿಜ್ಞೆ ಮಾಡಿ ಹೇಳಿದೆಯಲ್ಲವೇ ! ಅದನ್ನು ನಾವು ಕಾಣಬೇಕು. ಈ ಘಟದೊಳಗೆ ಕೈಯಿಟ್ಟು, ಆ ನಿನ್ನ ಶಿವನು ಇದರಲ್ಲಿಯೂ ಬೆಸುಗೆಗೊಂಡು (ವ್ಯಾಪ್ತಿಗೊಂಡು) ಶೋಭಿಸುತ್ತಿದ್ದಾನೆಂಬುದನ್ನು ಈಗಲೇ ನಮಗೆ ತೋರಿಸಿಕೊಡು. ಆಗದಿದ್ದರೆ ನಿನ್ನ ಈ ಬಿನ್ನಾಣವನ್ನು ಬಿಟ್ಟು ಬಿಡು.' ಎನ್ನಲಾಗಿ, ಅವರ ಮಾತನ್ನು ಕೇಳಿ, ರೋಷಗೊಂಡು ನೋಡಿದನು. ವ॥ ಹಾಗೆ ರೋಷದಿಂದ ನೋಡಿ, ರಾಜ, ಅಮಾತ್ಯ, ದಂಡನಾಥ, ಮಾಂಡಲಿಕ, ಸಾಮಂತರೇ ಮೊದಲಾದ ಭೂಮೀಶ್ವರರುಗಳೇ ಆದಿಯಾಗಿ ಎಲ್ಲರೂ ನೆರೆದು ವಿಶೇಷಾಶ್ಚರ್ಯದಿಂದ ನೋಡುತ್ತಿದ್ದಂತೆ ಆ ಜಯಸಿಂಹ ಮಹಾರಾಜನ ಆಸ್ಥಾನ ಮಧ್ಯದಲ್ಲಿ ೫೯–೬೦. ರಾಮನಾಥನೇ ವಿಶ್ವದಲ್ಲಿ ಪರಿಪೂರ್ಣನಾದವನೆಂಬುದೇ ಸತ್ಯ ; ಆ ರಾಮನಾಥನ ಭಕ್ತರೇ ಯಾವಾಗಲೂ, ಮೂರುಲೋಕಗಳಲ್ಲೂ ಶ್ರೇಷ್ಠರು ; ಆ ರಾಮನಾಥನನ್ನು ಭಕ್ತಿಯಿಂದ ಪೂಜಿಸದಿರುವ ಮನುಷ್ಯರೇ ಪಾಪಾತ್ಮರಾದವರು ; ಈ ರಾಮನಾಥನೇ ದೇವನೆಂದು ಭೂಮಂಡಲವೆಲ್ಲ ಮೆಚ್ಚುವಂತೆ ದೃಷ್ಟವನ್ನು (ಪ್ರತ್ಯಕ್ಷ ಪ್ರಮಾಣವನ್ನು) ಈ ಕ್ಷಣದಲ್ಲಿಯೇ ತೋರಿಸಿಕೊಡುತ್ತೇನೆ. ಈ ಜೈನ ಮತವನ್ನು ಓಡಿಸಿ ಬಿಡುತ್ತೇನೆ, ಎಂದು ಪ್ರತಿಜ್ಞೆ ಮಾಡುತ್ತ (ಶೌರ್ಯವನ್ನು ಪ್ರಕಟಿಸುತ್ತ) ಪುರಾತನರಾದವರ, ನೂತನರಾದ ಭಕ್ತರ ಘನತೆಯಿಂದ ಕೂಡಿದ ಪಾದಕಮಲಗಳನ್ನು (ಹೃದಯದಲ್ಲಿ) ಜಾರದಂತೆ ಚೆನ್ನಾಗಿ ಪರಾಕ್ರಮ ವಿಶಿಷ್ಟನಾಗಿ ನಿಂತು ಧ್ಯಾನ ಮಾಡುತ್ತ ವ॥ ಶಿವ ಸದೃಶನಾದ ಜೇಡರದಾಸಿಮಯ್ಯನು ರಾಜನ ಎದುರಿನಲ್ಲಿ ಇಟ್ಟಂಥ ಘಟದಲ್ಲಿರುವ

ಸ್ಫುಟಕೋಪಾಟೋಪನಿರ್ಯದ್ಗರಳ ಶಿಖಿಶಿಖಾವಿಸ್ಫುರದ್ವಿಸ್ಫುಲಿಂಗೋ
ತ್ಕಟಧೂಮಶ್ವಾಸಭೀಷ್ಮಾನನಮತಿಚಳಪುಚ್ಛಟಾಗ್ರಸ್ಫಟಾತ
ದ್ಘಟಗರ್ಭಾಸ್ಫಾಲನಾಪ್ರಕ್ರಿಯಮಧಿಗತಘೂತ್ಕಾರ ಸಂಚಾಲಿತೋದ್ಯ
ತ್ಪಟುಜಿಹ್ವಾಪೂರ್ಣಕಾಯಂ ನಿಜಬಳಜಿತಕರ್ಕೋಟಕಂ ಕ್ರೂರಸರ್ಪಂ ೬೧

ಕೊಡದೊಳ್ಕಣ್ಗೊಪ್ಪೆ ಕೆಯ್ಯಿಟ್ಟಡಸಿ ತುಡುಕಿದಂ ಭೋಗಿಭೂಷೋಪಮಂ ಪೆಂ
ಪಿಡಿದಾ ಘೋರಾಹಿ ಶಿಷ್ಯಂ ಗುರುಕರಕಮಳಸ್ಪರ್ಶದಿಂದೀಶಭಾವಂ
ಬಡೆದಂತಾ ದಾಸದೇವಸ್ಫುಟಕರಕಮಳಸ್ಪರ್ಶದಿಂ ಪೂರ್ವಭಾವಂ
ಕಿಡೆ ಭಾಸ್ವಲ್ಲಿಂಗರೂಪಂದಳೆದು ಪೊಳೆದು ಕಣ್ಗೆಡ್ಡಮಾಗಿರ್ದುದಾಗಳ್ ೬೨

ಪಳಿದರ್ಕಪ್ರಾಂಶುವಂ ಪಜ್ಜಳಿಪ ಶಶಿಮಯೂಖಾಳಿಯಂ ತೂಳ್ದು ಲೋಕಾ
ವಳಿಯಂ ಪ್ರಕ್ಷಾಳನಂಗೆಯ್ದೆಸೆಯೆ ವಿಮಳ ಲಿಂಗಪ್ರಭಾಮಂಡಳಂ ಕಂ
ಡಿಳೆಯಾಣ್ಮಂಗೂಡಿ ಸರ್ವರ್ತಲೆಯನೊಲೆದು ಕೊಂಡಾಡಿದರ್ದೇವಿ ತನ್ಮಂ
ಜುಳ ಪಾದಾಂಭೋಜಕುರ್ವುತ್ತೆಱಗಿ ರಮಣವಕ್ತ್ರಾಬ್ಜಮಂ ನೋಡುತೆಂದಳ್ ೬೩

ಸರ್ಪವನ್ನು ನಿಂತು ನೋಡುತ್ತಿರುವಾಗ ೬೧–೬೨. ಕೋಪಾತಿಶಯದಿಂದ ಸ್ಪಷ್ಟವಾಗಿ ಹೊರ ಹೊಮ್ಮುತ್ತಿರುವ ವಿಷಾಗ್ನಿಯ ಜ್ವಾಲೆಯಿಂದ ಪ್ರಕಾಶಮಾನವಾದ ಕಿಡಿಗಳ ಸಮೂಹಗಳು ಹಾರುತ್ತಿದ್ದವು. ಶ್ವಾಸದಿಂದ ಹೊಗೆಯು ಹೊರಹೊಮ್ಮಿ ಭಯಂಕರ ವಾಗಿ ಮುಖವು ಕಾಣುತ್ತಿತ್ತು. ಬಾಲದ ತುದಿಯೂ ಹೆಡೆಯೂ ಅತಿಯಾಗಿ ಚಲಿ ಸಾಡುತ್ತಿದ್ದುವು. (ಹೀಗೆ) ಆ ಕುಂಭದೊಳಗಡೆಯಲ್ಲಿ ಮೈಮುರಿಯುತ್ತ ಹೊಡೆದಾಡುವ ಕ್ರಿಯೆಯಿಂದ ಕೂಡಿತ್ತು. ವಿಶೇಷವಾಗಿ ಭುಸುಗುಡುತ್ತ ಹೊರಗಡೆ ಹಿರಿಯುವ ದೊಡ್ಡದೂ ಸಮರ್ಥವೂ ಆದ ನಾಲಿಗೆಯಿಂದ ಕೂಡಿತ್ತು. ತುಂಬಿದ ದೇಹದಿಂದ ಕೂಡಿತ್ತು. ತನ್ನ ಪರಾಕ್ರಮದಿಂದ ಕಾರ್ಕೋಟಕವೆಂಬ ದೊಡ್ಡ ಹಾವನ್ನು ಜಯಿಸಿದ ಕ್ರೂರ ಸರ್ಪವು ಆ ಕೊಡದೊಳಗೆ ಈ ರೀತಿ ಶೋಭಿಸುತ್ತಿತ್ತು. (ಅಂಥ) ಸರ್ಪವನ್ನು ಹಾವುಗಳೇ ತೊಡಿಗೆಯಾಗಿ ಉಳ್ಳವನಾದ ಶಿವ ಸದೃಶನಾದ ದಾಸಿಮಯ್ಯ ಕೈಚಾಚಿ ಕೊಡದೊಳಗಿಟ್ಟು ಹಿಡಿಯಲಾಗಿ, ಮಹತ್ವದಿಂದ ಕೂಡಿದ ಆ ಘೋರ ಸರ್ಪವು–ಶಿಷ್ಯ ನಾದವನು ಗುರುವಿನ ಕರಕಮಲದ ಸ್ಪರ್ಶದಿಂದ ಈಶ್ವರ ಸದ್ಭಾವವನ್ನು ಪಡೆದ ಹಾಗೆ ಆ ದಾಸಿಮಾರ್ಯನ ಸ್ಫುಟವಾದ ಕಮಲ ಸದೃಶ ಕೈಗಳ ಸ್ಪರ್ಶದಿಂದ (ಆ ಹಾವಿನ) ಪೂರ್ವ ಭಾವವೆಲ್ಲ ನಾಶವಾಗಿ ಪ್ರಕಾಶಮಾನವಾದ ಲಿಂಗರೂಪವನ್ನು ಹೊಂದಿ ಹೊಳೆ ಯುತ್ತ ನೋಡುವುದಕ್ಕೆ ಮನೋಹರವಾಗಿ ಕಂಡಿತು. ಆಗ ಸೂರ್ಯನ ಕಿರಣಗಳ ತೇಜಸ್ಸನ್ನೂ ಕೀಳು ಮಾಡಿದ, ಹೊಳೆಯುತ್ತಿರುವ ಚಂದ್ರನ ಕಿರಣಗಳ ಸಮೂಹವನ್ನು ಮೆಟ್ಟಿ ಹಾಕಿದ ಆ ಲಿಂಗದ ಶ್ರೇಷ್ಠವಾದ ಪ್ರಭೆಯ ಮಂಡಲವು ಸಮಸ್ತ ಲೋಕಗಳ ಸಮೂಹವನ್ನೂ ತೊಳೆದು ಹಾಕಿ ಪ್ರಕಾಶಿಸತೊಡಗಿತು, ಇದನ್ನು ಕಂಡು ಮಹಾರಾಜ ನಾದ ಜಯಸಿಂಹನೊಡನೆ ಕೂಡಿ ಸರ್ವರೂ ತಲೆದೂಗಿ ಕೊಂಡಾಡಿದರು. ಸುಗ್ಗಲಾ ದೇವಿಯು ಆ ದಾಸಿಮಾರ್ಯರ ಪಾದಕಮಲಗಳಿಗೆ ಉತ್ಸಾಹಗೊಂಡು ನಮಸ್ಕರಿಸುತ್ತ

ಇನ್ನಾದೊಡಮೆಲೆ ಮದ್ಗುರು
ವಂ ನಂಬೆರಡಿಲ್ಲದೆಂದ ರಮಣಿಯ ನುಡಿಗಾ
ತಂ ನಲಿದು ದಾಸಿಮಯ್ಯನ
ಪನ್ನಳಿನಕ್ಕೆಱಗಿ ಪಾವನಾತ್ಮಕನಾದಂ ೬೪

ಕರುಣಂಗೆಯ್ದೆಱಗಿರ್ದ ತದ್ವಿಭುಗಮುಂಜುತ್ತುಂ ಶರಣ್ಕೊಕ್ಕ ತ
ದ್ಗುರು ಜೈನಾಳಿಗಮೊಲ್ದು ದೀಕ್ಷೆಗುಡುತುಂ ಸದ್ಭಕ್ತರಂ ಮಾಡಿ ಮಿ
ಕ್ಕರನೆಳ್ಪಟ್ಟಿ ನೆಗಳ್ಚಿ ಸುಗ್ಗಲೆಗೆ ಪೂರ್ಣೋತ್ಸಾಹಮಂ ತಜ್ಜಿನೋ
ತ್ಕರ ಗೇಹಂಗಳನೊತ್ತಿ ಕಿಳ್ತಿಡಿಸಿ ದಾಸಂ ತನ್ನ ಶಿಷ್ಯರ್ಕಳಿಂ ೬೫

ಧರಣಿಪನಾಳ್ವ ಭೂಸತಿಗೆ ದೀಕ್ಷೆಯನೀವವೊಲಾತ್ಮಪಾಣಿಪಂ
ಕರುಹದೊಳುದ್ಭವಂಬಡೆದ ತದ್ವಿಮಳಸ್ಫಟಿಕಾಂಗಲಿಂಗಮುಂ
ಭರದೆ ನಿಜೋತ್ತರಂ ಜಯಿಸೆ ತಾನೊಗೆತಂದುದಱಿಂದಮುತ್ತರೇ
ಶ್ವರನೆನಿಪಾಖ್ಯೆಯುಂ ರಚಿಸಿ ತತ್ಪುರಮಧ್ಯದೆ ಹೇಮಗೇಹದೊಳ್ ೬೬

ದಾಸಂ ಪ್ರತಿಷ್ಠೆಗೆಯ್ದು ವಿ
ಲಾಸಂ ಮಿಗೆ ರಾಜಪೂಜೆಯುಂ ಕೆಯ್ಕೊಂಡಾ

ತನ್ನ ಗಂಡನ ಮುಖಕಮಲವನ್ನು ನೋಡುತ್ತ ಈ ರೀತಿ ಹೇಳಿದಳು : ೬೪. 'ಎಲೈ, ಇನ್ನಾದರೂ ಎರಡಿಲ್ಲದಂತೆ ನನ್ನ ಗುರುವನ್ನು ನಂಬು.' ಎಂದ ಹೆಂಡತಿಯ ಮಾತಿಗೆ ಆತನು ನಲಿದು ದಾಸಿಮಯ್ಯನ ಪಾದ ಕಮಲಕ್ಕೆರಗಿ ಪರಿಶುದ್ಧವಾದ ಆತ್ಮವುಳ್ಳವನಾದನು. ೬೫. ನಮಸ್ಕಾರ ಮಾಡಿದ ಆ ಜಯಸಿಂಹನೆಂಬ ರಾಜನಿಗೆ ಕರುಣವನ್ನು ತೋರಿಸಿ, ಶರಣಾಗತನಾದ ಆ ರಾಜನು ಗುರುಗಳಾದ ಜೈನ ಸಮೂಹಕ್ಕೆ ಒಲಿದು ಶಿವದೀಕ್ಷೆಯನ್ನು ಕೊಟ್ಟು, ಸದ್ಭಕ್ತನ್ನಾಗಿ ಮಾಡಿದನು. ಮಿಕ್ಕವರುಗಳನ್ನು ಅಲ್ಲಿಂದ ಎಬ್ಬಿಸಿ, ಓಡಿ ಹೋಗುವಂತೆ ಮಾಡಿದನು. ಸುಗ್ಗಲಾದೇವಿಗೆ ಪೂರ್ಣೋತ್ಸಾಹವಾಗುವಂತೆ ಮಾಡಿದನು. ಅಲ್ಲಿರುವ ಶ್ರೇಷ್ಠ ಜಿನಮಂದಿರಗಳನ್ನೆಲ್ಲ ದಾಸಿಮಯ್ಯನು ತನ್ನ ಶಿಷ್ಯರುಗಳಿಂದ ಒತ್ತಿ ಕಿತ್ತು ಹಾಕಿಸಿದನು. ೬೬. ಭೂಮೀಶ್ವರನಾದ ಜಯಸಿಂಹನಾಳುವ ಭೂಮಿಯೆಂಬ ಸ್ತ್ರೀಯಳಿಗೆ ದೀಕ್ಷೆಯನ್ನು ಮಾಡುವಂತೆ ತನ್ನ ಕರಕಮಲದಲ್ಲಿ ಉದ್ಭವಗೊಂಡ ಆ ಶ್ರೇಷ್ಠವಾದ ಸ್ಫಟಿಕ ಶರೀರವುಳ್ಳ ಲಿಂಗವನ್ನು ಭರದಿಂದ ವಾದದಲ್ಲಿ ತಾನು ಕೊಟ್ಟ ಉತ್ತರಕ್ಕೆ ಜಯವುಂಟಾದ ಕಾರಣದಿಂದ ಮೂಡಿಬಂದ ಲಿಂಗವಾದ್ದರಿಂದ 'ಉತ್ತರೇಶ್ವರ' ಎಂಬ ಹೆಸರನ್ನಿಟ್ಟು ಆ ಪಟ್ಟಣ ಮಧ್ಯದಲ್ಲಿ ಸುವರ್ಣದಿಂದ ನಿರ್ಮಿತವಾದ ಗುಡಿಯಲ್ಲಿ ದಾಸಿಮಯ್ಯನು ಪ್ರತಿಷ್ಠೆಮಾಡಿದನು. ವಿಶೇಷ ವೈಭವದಿಂದ ರಾಜಪೂಜೆಯನ್ನು ಆ ಪಟ್ಟಣದಲ್ಲಿ ಸ್ವೀಕರಿಸಿ, ಆ ಜಯಸಿಂಹ ಭೂಪಾಲನೂ, ಆತನ

ಭೂಸತಿಯಂರಸನನರಸಿಯು
ಲೇಸೆನೆ ಸುಖಮಿರಿಸಿ ನಿಜಪುರಕ್ಕೇಳ್ತಂದಂ ೬೭

ವ॥ ಅಂತೇಳ್ತಂದು ಶಿವಗಣಸಪರ್ಯೋತ್ಸವದಿಂ ಸುಖಮಿರ್ದನೆಂದು—

ಪೇಳುತ್ತೇಕಾಂತರಾಮಂ ಜಿನಪದಭಜಕಂಗಿಂತು ಜೈನಪ್ರತಾನ
ಪ್ರಾಲೇಯೊದ್ದಂಡ ಚಂಡಪ್ರಭನಿಭಶರಣಾಲಾಪಮಂ ಮತ್ತಮೊಂದಂ
ಪೇಳಲ್ಕೆಂದಿರ್ದ ಪಾಂಗಂ ತಿಳಿದು ತಳೆದು ಸಾಶ್ಚರ್ಯಸಂತೋಷಮಂ ಸ
ತ್ಯಾಲಾಪಂ ಭಕ್ತರೊಳ್ಪೇಳುತೆ ಸುಖಮೆಸೆದಂ ವೀರಶೈವಾಬ್ಧಿಚಂದ್ರಂ ೬೮

ಘನತರ ಕೋವೂರಾ ಬೊ
ಮ್ಮನ ಕಥೆಯಂ ಭಕ್ತಿಯಿಂದೆ ಪೇಳ್ದಾಲಿಪ ಸ
ಜ್ಜನರೈಹಿಕಮಾಮುಷ್ಮಿಕ
ವಿನುತಸುಖಂಬಡೆವರೀಶಭಕ್ತರ ಕೃಪೆಯಿಂ ೬೯

ದಾಸಿಮಯ್ಯನ ಕಥಾಪ್ರಸಂಗಮಂ
ಲೇಸನಿಪ್ಪ ನಿಜಭಕ್ತಿಯಿಂದೆ ಕೇ
ಳ್ದಾ ಸಮಸ್ತ ಮನುಜರ್ಗೆ ಮಾಳ್ಪನೆ
ಲ್ಲಾ ಸಮುನ್ನತ ಸುಖಂಗಳಂ ಶಿವಂ ೭೦

ರಾಣಿಯಾದ ಸುಗ್ಗಲಾದೇವಿಯೂ, ಕೃತಾರ್ಥರಾಗುವಂತೆ ಮಾಡಿ, ಸುಖವಾಗಿ ಇರಿಸಿ, ತನ್ನ ಊರಿಗೆ ಹೊರಟುಬಂದನು. ವ॥ ಈ ರೀತಿ ಹೊರಟು ಬಂದು ಶಿವಗಣಗಳ ಸಹವಾಸದಿಂದುಂಟಾದ ಉತ್ಸಾಹದಿಂದ ಸುಖವಾಗಿ ಇದ್ದನೆಂದು ೬೮. ಹೇಳುತ್ತ ಏಕಾಂತ ರಾಮಯ್ಯನು ಜಿನನ ಪಾದ ಭಜಕನಿಗೆ ಜೈನ ಸಮೂಹವೆಂಬ ಮಂಜಿಗೆ ಪ್ರಬಲ ಸೂರ್ಯ ಸಮಾನನಾದ ಶರಣನ ಮತ್ತೊಂದು ಕಥೆಯನ್ನು ಹೇಳುವುದಕ್ಕೆಂದು ತೊಡಗಿದ ರೀತಿಯನ್ನು ತಿಳಿದು ಆಶ್ಚರ್ಯ ಸಮೇತ ಸಂತೋಷವನ್ನು ಹೊಂದಿ ಸತ್ಯವಾದ ಆಲಾಪವುಳ್ಳ (ಯಥಾರ್ಥವಾದ ಮಾತುಳ್ಳ) ವೀರಶೈವವೆಂಬ ಸಮುದ್ರಕ್ಕೆ ಚಂದ್ರನೋಪಾದಿಯಲ್ಲಿರುವ ಬಸವೇಶ್ವರನು ಭಕ್ತರಲ್ಲಿ ಆ ಕಥೆಯನ್ನು ಹೇಳುತ್ತ ಸುಖವಾಗಿರುತ್ತ ಶೋಭಿಸುತ್ತಿದ್ದನು. ೬೯. ಶ್ರೇಷ್ಠವಾದ ಆ ಕೋವೂರ ಬೊಮ್ಮಯ್ಯನ ಕಥೆಯನ್ನು ಭಕ್ತಿಯಿಂದ ಹೇಳುವ, ಕೇಳುವ ಸಜ್ಜನರುಗಳು ಐಹಿಕವಾದ ಆಮುಷ್ಮಿಕವಾದ ಶ್ಲಾಘ್ಯವಾದ ಸುಖವನ್ನು ಈಶಭಕ್ತರ ಕೃಪೆಯಿಂದ ಪಡೆಯುವರು. ೭೦. ದಾಸಿಮಾರ್ಯನ ಕಥಾಪ್ರಸಂಗವನ್ನು ಒಳ್ಳೆಯದೆನಿಸುವ ಸತ್ಯದಿಂದ ಕೂಡಿದ ಭಕ್ತಿಯಿಂದ ಕೇಳಿದ ಆ ಸಮಸ್ತ

ಹರಿವಿರಿಂಚಿಸುರರಾಜಪೂಜಿತೇ
ಸುರುಚಿರಾರ್ಕರುಚಿರಾಜಿರಾಜಿತೇ
ಸುರಪರಪ್ರಹರೆ ಪಾಶವರ್ಜಿತೇ
ಗಿರಿತನೂಜೆ ಜಯ ಶಂಕರಾನ್ವಿತೇ ೭೧

ಇದು ವಿನಮದಖಿಳ ಸುರಾಸುರೇಂದ್ರಮಕುಟತಟಘಟಿತ ಮಣಿಗಣಾಗಣಿತ ರುಚಿನಿಚಯ ತರುಣಾರುಣಾತಪಪರಿಲಸಿತ ಪರಮ ಶಿವಲಿಂಗ ಪಾದಾರವಿಂದಪರಾಗಭಸಿತ ಭಾಸುರಲಲಾಟಪಟ್ಟ ಸರಸಜನಮಾನಿತೋಭಯಕವಿತಾವಿಶಾರದ ಶ್ರೀಷಡಕ್ಷರಿದೇವಭಕ್ತಿವಿರಚಿತ ಶ್ರೀಮದ್ ಬಸವರಾಜವಿಜಯಮಹಾಪುರಾಣದೊಳ್ ಕೋವೂರ ಬ್ರಹ್ಮದಾಸದೇವಾದಿವಿಜಯ ಕಥನಂ

ಪಂಚತ್ರಿಂಶಾಶ್ವಾಸಂ ಸಮಾಪ್ತಂ.

ಅಂತು ಆಶ್ವಾಸ ೩೫ಕ್ಕೆ ಪದಗಣನೆ ೨೮೦೭ಕ್ಕೆ ಮಂಗಳಮಹಾ ಶ್ರೀ॥

ಮನುಷ್ಯರಿಗೆ ಶಿವನು ಎಲ್ಲಾ ರೀತಿಯ ಶ್ರೇಷ್ಠ ಸುಖಗಳನ್ನು ಮಾಡುವನು. ೭೧. ವಿಷ್ಣು, ಬ್ರಹ್ಮ, ದೇವೇಂದ್ರಾದಿಗಳಿಂದ ಪೂಜೆಗೊಳ್ಳುವವಳೇ, ಮನೋಹರವಾದ ಸೂರ್ಯನ ಕಾಂತಿಗಳೋಪಾದಿಯಲ್ಲಿರುವ ಕಾಂತಿಗಳ ಸಮೂಹದಿಂದ ವಿರಾಜಿಸುವವಳೇ, ಸುರರ ವೈರಿಗಳಾದ (ಸುರ + ಪರ) ರಾಕ್ಷಸರುಗಳನ್ನು ಸಂಹಾರ ಮಾಡಿದವಳೇ, ತೃಷೆ, ಶಂಕೆ, ಭೀತಿ, ಲಜ್ಜೆ, ಜುಗುಪ್ಸೆ, ಕುಲ, ಶೀಲ, ಗರ್ವವೆಂಬ ಪಾಶಗಳಿಂದ ದೂರಳಾದ ವಳೇ, ಶಂಕರನೊಡನೆ ಒಡೆವೆರೆದವಳೇ, ಗಿರಿರಾಜ ಕುಮಾರಿಯೇ ಜಯು.

ಮೂವತ್ತೈದನೆಯ ಆಶ್ವಾಸವು ಸಮಾಪ್ತವಾಯಿತು.

ಷಟ್ತ್ರಿಂಶಾಶ್ವಾಸಂ

[ಮಾರುಡಿಗೆ ನಾಚಯ್ಯ-ವೈಜಾಂಬೆಯರ ಕಥೆ]

ಶ್ರೀಮಂಗಳಮಯಗೌರೀ
ಹೇಮಾಂಭೋಜಾಸ್ಯಸೌರಭಾಸ್ವಾದನಸು
ಪ್ರೇಮಂ ಪ್ರಣಿತಶರಣ
ಸ್ತೋಮಂ ಪೊರೆಗೆಮ್ಮನೊಲ್ಮೆಯಿಂ ಶಿವಲಿಂಗಂ ೧

ಎಲೆ ಶವಣ ಕೇಳ್ವುದಿನ್ನುಂ
ಖಲಜೈನರ ಭಂಗಮಂ ಸಮಂತೆಸಗಿದ ನಿ
ಶ್ಚಲಭಕ್ತರ ಕಥೆಗಳನೆಂ
ದಲಘುತರಂ ರಾಮನಾಥವಿಭುವಿಂತೆಂದಂ ೨

ಪೊಡವಿಯೊಳೆ ಪೆಸರ್ವಡೆದ ಮಾ
ರುಡಿಗೆಯೆನಿಪ್ಪೊಂದು ಪೊಳಲೊಪ್ಪುವನೊರ್ವಂ
ಕಡುಗಲಿ ನಾಚಯ್ಯಂ ದೃಢ
ಮೃಡಭಕ್ತಂ ಗುಪ್ತಭಕ್ತಿಯಿಂ ವರ್ತಿಸುತುಂ ೩

ಆ ನಗರದೊಳೆಸೆದಿರ್ಪರ್
ಜೈನರಸಂಖ್ಯಾತರವರ ಮಧ್ಯದೊಳಿರ್ಪಂ
ತಾನೊರ್ವನಲ್ಲಿ ಘೂಕವಿ
ತಾನದ ನಡುವೆಸೆವ ರಾಜಹಂಸನ ತೆಱದಿಂ ೪

ಮಾರುಡಿಗೆಯ ನಾಚಯ್ಯ-ವೈಜಾಂಬೆಯರ ಕಥೆ

೧. ಮಂಗಳಮಯಳಾದ ಶ್ರೀ ಗೌರಿಯ ಕನಕಕಮಲದಂತಿರುವ ಮುಖದ ಸುಗಂಧವನ್ನು ಆಸ್ವಾದನ ಮಾಡುವುದರಲ್ಲಿ ಒಳ್ಳೆಯ ಅನುರಾಗವುಳ್ಳವನೂ, ನಮಸ್ಕರಿಸುತ್ತಿರುವ ಶರಣರ ಸಮೂಹವುಳ್ಳ ಶಿವಲಿಂಗನು ಪ್ರೀತಿಯಿಂದ ನಮ್ಮನ್ನು ರಕ್ಷಿಸಲಿ. ೨. ಎಲೈ ಜೈನನೇ, ದುಷ್ಟರಾದ ಜೈನರ ನಾಶವನ್ನು ಚೆನ್ನಾಗಿ ಮಾಡಿದ ನಿಶ್ಚಲರಾದ ಭಕ್ತರ ಅತ್ಯಧಿಕವಾದ ಕಥೆಗಳನ್ನು ಇನ್ನೂ ಕೇಳು, ಎಂದು ರಾಮನಾಥ ವಿಭುವು ಹೀಗೆ ಹೇಳಿದನು : ೩. ಭೂಮಂಡಲದಲ್ಲಿ ಹೆಸರುವಾಸಿಯಾದ ಮಾರುಡಿಗೆ ಯೆಂಬ ಪಟ್ಟಣದಲ್ಲಿ ದೃಢವಾದ ಈಶ್ವರ ಭಕ್ತಿಯಿಂದ ಕೂಡಿದ ಒಬ್ಬ ಅತ್ಯಂತ ಶೂರನಾದ 'ನಾಚಯ್ಯ' ಎಂಬ ಹೆಸರಿನ ಭಕ್ತನು ಗುಪ್ತವಾಗಿ ಭಕ್ತಿಯನ್ನು ಆಚರಿಸುತ್ತ ಇದ್ದನು. ೪. ಆ ನಗರದಲ್ಲಿ ಅಸಂಖ್ಯಾತರಾದ ಜೈನರು ಶೋಭಿಸುತ್ತಿದ್ದರು. ಅವರ ಮಧ್ಯದಲ್ಲಿ ಇರುವ ಅವನೊಬ್ಬನು ಗೂಗೆಗಳ ಸಮೂಹ ಮಧ್ಯದಲ್ಲಿ ಶೋಭಿಸುವ

ವ॥ ಆ ಘನಮಹಿಮನಿಂತೆಸೆವಿನಮಾ ಪೊಳಲ ಸಾಸಿರದೇಳ್ನೂಱು ಬಸದಿಗಳೆಂಬ ಸಿಂಹಗುಹೆಗಳ್ಗೆ ಶರಭಗುಹೆಯಿರ್ಪಂತೊಂದು ಶಿವಗೃಹವಿರ್ದುದದಂ ಕಂಡು ಜೈನರಸೂಯೆಗೊಂಡೀ ಜಿನಭವನಂಗಳ ನಡುವೆ ಶಿವಭವನಮಿರಲ್ವೇಡೆಂದಾ ಗುಡಿಯು ಗೋಪುರಮಂ ಕೆಡಪಿ ತಮ್ಮಡಿಯಂ ಜಡಿಯಲೊಡನವನದೆಲ್ಲಮಂ ನಾಚಯ್ಯಂಗಱಪೆ ಮುಳಿಸೇಱ ಮೀಱ ಪತ್ತು ದಿನದೊಳಗೀ ಶಿವಾಪರಾಧಿಗಳೆನಿಪ ಜೈನರೆಲ್ಲರುಮಂ ತರ್ಕುಗಿಡಿಸಿ ಸೊರ್ಕಂ ಮುಱಿದು ವಿಶಸನಂಗೆಯ್ದಲ್ಲದಾಹಾರಂಗೊಳೆನಂತೆಗೆಯ್ವೆನನ್ನೆವರಂ ಶಿವಂಗೆಂದಿನಂತೆ ಪೂಜೆಗೆಯ್ಯದಿರೆಂದಾಜ್ಞಾಪಿಸಿ ಪೊಳಲಂ ಪೊಱಮಟ್ಟು ಪತ್ತು ದಿನದೊಳಗೆ ಪನ್ನಿರ್ಚ್ಛಾಸಿರ್ವರಂ ವೀರಭಕ್ತರಂ ನೆರಪಿ ಮಗುಳ್ದಾ ಪುರಮಂನವರ್ಗೂಡಿ ಪುಗುತ[1] ರ್ಪಾಗಳ್—

ಮೊಳಗುವ ಬೀರಮದ್ದಳೆಯು ಭೇರಿಯು ಶಂಖದ ಡಿಂಡಿಮೌಘಕಾ
ಹಳಿಯು ಘನಸ್ವನಂ ದಶದಿಗಂತಕೆ ಧೀಂಕಿಡೆ ನೂಂಕಿ ವೀರರೊ
ಬ್ಬುಳಿ ಕರವಾಳಕಾಂತಿ ಖರರೋಚಿಯು ನಾಣ್ಚಿಸೆ ಜೈನರೆಂಬ ಪೆ
ರ್ಮೆಳೆಗೆ ದವಾಗ್ನಿಯಂತೆಸೆದು ಕೂಡೊಡನೇಳ್ತರೆ ವೀರನಾಚಯ್ಯಂ ೫

ರಾಜ ಹಂಸಪಕ್ಷಿಯು ಹಾಗೆ ಇದ್ದನು. ವ॥ ಈ ರೀತಿ ಶೋಭಿಸುವ ಆ ಘನಮಹಿಮನು: ಆ ಪಟ್ಟಣದಲ್ಲಿರುವ ಸಾವಿರದ ಏಳು ನೂರು ಬಸದಿಗಳೆಂಬ ಸಿಂಹದ ಗುಹೆಗಳಿಗೆ, ಶರಭಪಕ್ಷಿಯ ಗುಹೆಯಿರುವಂತೆ ಒಂದು ಶಿವಾಲಯವಿರುವುದನ್ನು ಜೈನರು ಕಂಡು ಹೊಟ್ಟೆಕಿಚ್ಚಿನಿಂದ ಕೂಡಿ, ಈ ಜಿನ ಭವನಗಳ ಮಧ್ಯದಲ್ಲಿ ಶಿವಾಲಯವು ಇರುವುದು ಕೂಡದು, ಎಂದು ಆ ಗುಡಿಯು ಗೋಪುರವನ್ನು ಕೆಡವಿ ಪೂಜಾರಿಯನ್ನು ಬಡಿದು ಹಾಕಲು ಅವನು ಅದೆಲ್ಲವನ್ನೂ ನಾಚಯ್ಯನಿಗೆ ತಿಳಿಸಿದನು. ನಾಚಯ್ಯನು ಅಧಿಕವಾಗಿ ಕೋಪಗೊಂಡು ಹತ್ತು ದಿನಗಳಲ್ಲಿ ಈ ಶಿವಾಪರಾಧಿಗಳೆನಿಸುವ ಜೈನರೆಲ್ಲರ ಶೌರ್ಯವನ್ನು ಅಡಗಿಸಿ ಸೊಕ್ಕನ್ನು ಮುರಿದು ಹಾಕಿ, ನಾಶಗೊಳಿಸಿದಲ್ಲದೆ, ಆಹಾರವನ್ನೇ ಸ್ವೀಕರಿಸುವುದಿಲ್ಲ. ಹಾಗೆ ಮಾಡುತ್ತೇನೆ. ಅಷ್ಟರವರೆಗೆ ಶಿವನಿಗೆ ಎಂದಿನ ಹಾಗೆ (ನೀನು) ಪೂಜೆ ಮಾಡಬೇಡವೆಂದು ಆಜ್ಞಾಪಿಸಿದನು. ಪಟ್ಟಣವನ್ನು ಬಿಟ್ಟು ಹೊರ ಹೊರಟು ಹತ್ತು ದಿನಗಳಲ್ಲಿ ಹನ್ನೆರಡು ಸಾವಿರ ವೀರಭಕ್ತರನ್ನು ಒಟ್ಟು ಗೂಡಿಸಿ, ಪುನಃ ಅವರೆಲ್ಲರೊಡನೆ ಕೂಡಿ ಬಂದು ಪಟ್ಟಣವನ್ನು ಹೊಗುತ್ತಿರುವಾಗ—೫. ಧ್ವನಿ ಮಾಡುತ್ತಿರುವ ವೀರ ಮದ್ದಳೆಯು (ಡೊಳ್ಳುಗಳ), ನಗಾರಿಯು, ಶಂಖದ, ಡಮರುಗಳ ಸಮೂಹದ, ಕಹಳೆಗಳ ಘನವಾದ ಸ್ವರವು ಹತ್ತೂ ದಿಕ್ಕುಗಳ ಕೊನೆಯವರೆಗೆ ಧುಮುಕುತ್ತ ನೂಕುತ್ತಿದ್ದವು. ವೀರರ ಸಮೂಹದ ಕೈಯಲ್ಲಿರುವ ಖಡ್ಗಗಳ ಕಾಂತಿಯು ಸೂರ್ಯ ಕಾಂತಿಯನ್ನು ನಾಚಿಕೆಗೊಳಿಸುವಂತೆ ಇತ್ತು. (ಹೀಗೆ) ಜೈನರೆಂಬ ದೊಡ್ಡ ಮೆಳೆ (ಪೊದೆ) ಗೆ ಕಾಡುಗಿಚ್ಚಿನ ಹಾಗೆ ಶೋಭಿಸುತ್ತ ವೀರನಾಚಯ್ಯನು ಅವರನ್ನು

---

1 ತ(ದ)

ಪುಗುತಂದಂ ಪೊಳಲಂ ಪರಾಕ್ರಮದೆ ಮೇಣಾವಾರ್ತೆಗೇಳ್ದಲ್ಲಿ ದೋ
ಷಿಗಳಾದಾ ಶವಣರ್ಕಳಳ್ಕ[1]ಜದೆ ತಾಮುಂ ಯುದ್ಧಸನ್ನದ್ಧರಾ
ಗಿ ಗಜಾಶ್ವೋರುವರೂಥವೀರಭಟಸೈನ್ಯಂಗೂಡಿ ಕುಂತಾಸಿ ಚ
ಕ್ರ ಗದಾದ್ಯಾಯುಧಮಾಂತು ಮಾರ್ನಡೆದು ಬೀಡಂ ಬಿಟ್ಟರಾಟೋಪದಿಂ ೬

ವ॥ ಅಂತು ಬಿಟ್ಟ ಮಾರ್ಬಲವಮಂ ಕಂಡು ವೀರಭಕ್ತಬಲದೊಳ್ ಪದಿಮೂವರ್ವೀರರ್ವೀರಕ್ಕ ಭಕ್ತರ್ಗೆಱಗಿ ಕೃತಾಂಜಲಿಗಳಾಗಿ—

ಬಡಶವಣರ್ಕಳಂ ಸದೆವುದಕ್ಕಿನಿತೇಕೆ ನೆಗಳ್ತೆ ತೊಟ್ಟನೊ
ರ್ಪಿಡಿ ತೃಣಮುಂ ಸುಡಲ್ಕೆ ವಿಳಯಾನಲನೊಟ್ಟಜೆವೇಳ್ಕುಮೇ ಕಱು
ತ್ತೊಡನೆ ಪಳಂಚಿ ಪೊಯ್ದು ರಣಭೂತಗಣಂ ತಣಿವಂತೆ ಕೊಲ್ವೆವೀ
ಪಡೆಯನೊಱಲ್ದು ನಿಮ್ಮಡಿಗಳೀಕ್ಷಿಸುತಿರ್ಕೆ ಮದೀಯ ಶೌರ್ಯಮಂ ೭

ವ॥ ಎಂದಾ ನಾಚಯ್ಯಂಬೆರಸು ತೇರಸ ವೀರಭಕ್ತರ್ಮಗುಳ್ದು ಮಣಿದವರನಂತಿರಿಸಿ, ತಮಗಿದಿರೊಡ್ಡಿ ಮಾಮಸಕಂ ಮಸಗಿ ತಾಗಿದ ಮಾರ್ಪಡೆಯಾಟೋಪಮಂ ಕಂಡು ಕೃಪಾಣಮಂ ಜಡಿದು[2] ಕುರುಳ್ಚಿ ನಿಜಭುಜಾಸ್ಫಾಳನಂಗೆಯ್ದುಬ್ಬರಿಸಿ ಬೊಬ್ಬೆಗೊಟ್ಟೊಳ ಪೊಕ್ಕು ಮಿಕ್ಕು ಸಮರ ಸಮುತ್ಸಾಹಂದಳೆದು—

ಕೂಡಿಕೊಂಡು ಬರುತ್ತಿದ್ದನು.—೬. ಬಂದು ಪಟ್ಟಣವನ್ನು, ಪರಾಕ್ರಮದಿಂದ ಪ್ರವೇಶಿಸಿದನು. ಈ ಸುದ್ದಿಯನ್ನು ಕೇಳಿ ಅಲ್ಲಿದ್ದ ದೋಷಿಗಳಾದ ಶ್ರವಣರುಗಳು ಅಂಜದೆ ತಾವೂ ಕೂಡ ಯುದ್ಧಕ್ಕೆ ಸಿದ್ಧರಾಗಿ, ಆನೆ, ಕುದುರೆ, ಉತ್ಕೃಷ್ಟ ರಥ, ವೀರ ಭಟರುಗಳ ಸೈನ್ಯ ಸಮೇತರಾಗಿ, ಭರ್ಜಿ, ಖಡ್ಗ, ಚಕ್ರ, ಗದೆಯೇ ಮೊದಲಾದ ಆಯುಧಗಳನ್ನು ಧರಿಸಿ ಎದುರಾಗಿ, ನಡೆದು ಶೌರ್ಯಾತಿಶಯದಿಂದ ಬೀಡುಬಿಟ್ಟರು. ವ॥ ಈ ರೀತಿ ಬೀಡುಬಿಟ್ಟ ಪ್ರತಿಸೈನ್ಯವನ್ನು ಕಂಡು, ವೀರಭಕ್ತರ ಸೈನ್ಯದಲ್ಲಿ ಹದಿಮೂರು ಜನ ವೀರರು ಉಳಿದ ಭಕ್ತರಿಗೆ ನಮಸ್ಕರಿಸಿ ಕೈಮುಗಿದು ನಿಂತವರಾಗಿ—೭. ಬಡ ಜೈನರುಗಳನ್ನು ನಾಶಗೊಳಿಸುವುದಕ್ಕೆ ಇಷ್ಟೊಂದು ಕಾರ್ಯಾರಂಭವೇತಕ್ಕೆ ? ಒಂದು ಹಿಡಿ ಹುಲ್ಲನ್ನು ಸುಡುವುದಕ್ಕೆ ಪ್ರಳಯಕಾಲದ ಅಗ್ನಿಯ ಪರಾಕ್ರಮವಾಗ ಬೇಕೇ ? ಕೋಪಗೊಂಡು ಒಮ್ಮೆಲೆ ಮೇಲೆ ಬಿದ್ದು ಹೊಡೆದು ಯುದ್ಧಭೂಮಿಯ ಭೂತ ಸಮೂಹವು ತೃಪ್ತಿಗೊಳ್ಳುವಂತೆ ಈ ಸೈನ್ಯವೆಲ್ಲವನ್ನೂ ಕೊಲ್ಲುತ್ತೇವೆ. ಪ್ರೀತಿ ಯಿಂದ ನನ್ನ ಪರಾಕ್ರಮವನ್ನು ತಮ್ಮ ಪಾದಗಳು ನೋಡುತ್ತಿರಲಿ. ವ॥ ಹೀಗೆಂದು ಆ ನಾಚಯ್ಯನೊಡನೆ ಕೂಡಿಕೊಂಡು ಹದಿಮೂವರು (ತೇರಸ) ವೀರಭಕ್ತರುಗಳು ಪುನಃ ನಮಸ್ಕರಿಸಿ ಅವರನ್ನು ಹಾಗೆ ಇರಿಸಿ, ತಮಗೆ ಎದುರಾಗಿ ಮಹಾಶೌರ್ಯದಿಂದ ಸಂಘಟಿಸಿ ನಿಂತ ಪ್ರತಿಸೈನ್ಯದ ಪರಾಕ್ರಮವನ್ನು ನೋಡಿ, ಖಡ್ಗವನ್ನು ಭದ್ರವಾಗಿ ಹಿಡಿದು ಝಳಪಿಸುತ್ತ, ತಮ್ಮ ತೋಳುಗಳನ್ನು ಚಪ್ಪರಿಸುತ್ತ, ಆರ್ಭಟಮಾಡಿ, ಬೊಬ್ಬೆಹಾಕುತ್ತ ಜೈನರ ಆ ಸೈನ್ಯದ ಒಳಹೊಕ್ಕು ಅತಿಶಯವಾದ ಯುದ್ಧದ

1 ಕ್ಕ(ಅ) 2 ಕ(ದ)

ಇಱಿದರಿದಿರ್ಚಿದರ್ಕಡಿದರಿಕ್ಕಿದರಣ್ಮಿದರೆಚ್ಚರಾರ್ದು ಬೊ
ಬ್ಬಿಱಿದರಡರ್ತು ಸೀಳ್ದರಱೆಯಟ್ಟಿದರೊಟ್ಟಿದರಟ್ಟೆಯುಂ ಕೊರ
ಲ್ದಱಿದರದಿರ್ಚಿದರ್ಪಡೆದರಿಟ್ಟರುರುಳ್ಚಿದರೊತ್ತಿ ತತ್ತಱಿಂ
ದಱಿದರಡಂಗೆ ಪೊಯ್ದರರಿಸೈನ್ಯಮನಾಹವದೊಳ್ಮಹಾಭಟರ್ ೮

ಇಡಿದಡಸಿ ಕವಿದ ಜೈನರ
ಪಡೆಯುಂ ಕಡಿಕಡಿದು ಸೀಳ್ದು ಪಡಲಿಡಿಸಿ ಜಯಂ
ಬಡೆದುಳಿದರನೋಡಿಸಿ ತಲೆ
ವಿಡಿದೆಡಗೆಯ್ಯೊಳ್ಕರುಳ್ಚುತುಂ ಕರವಾಳಂ ೯

ನಡೆತಂದಂ ನಾಚಯ್ಯಂ
ನಡೆತರೆ ತೇರಸಗಣಂಗಳರಿಗಳ ಶಿರಮಂ
ಪಿಡಿದೊಡನೆ ವೀರರಸಮೊ
ಗ್ಗಡಿಸಿದವೋಲ್ ನೋಳ್ಪ ಶರಣರೆಡೆಗುತ್ಸವದಿಂ ೧೦

ವ॥ ಅಂತೆೞ್ತಂದವಗ್ಗಡಿ ಶರಣಚರಣಂಗಳ್ಗೆ ಪೊಡಮಟ್ಟು ತತ್ಕರುಣಾರಸಕ್ಕೆ ಪಾತ್ರನಾಗಿ ಸಡಗರದಿಂ ಗಣಂಗಳೊಡವರೆ ಮಾರಡಿ[1]ಗೆ[1]ಪೊಳಲಂ ಪೊಕ್ಕು ಬಸದಿಗಳನೊಳಪೊಕ್ಕು ಜಿನಪ್ರತಿಮೆಗಳಂ ಕಿೞ್ತು ಬಿಸುಟು ಮುನ್ನಮೆ ತಾಂ ಭಂಡಿಯೊಳ್ತಂದ ಸಾಸಿರವೇೞ್ನೂಱು ಲಿಂಗಂಗಳನಲ್ಲಲ್ಲಿ

ಉತ್ಸಾಹವನ್ನು ಹೊಂದಿದವರಾಗಿ, ೮. ಆ ಯುದ್ಧದಲ್ಲಿ ಕತ್ತರಿಸಿಹಾಕಿದರು ; ಎದುರಿಸಿದರು ; ಎರಡು ತುಂಡು ಮಾಡಿದರು ; ನೆಲಕ್ಕೆ ಇಕ್ಕಿದರು ; ಪರಾಕ್ರಮ ದೋರಿದರು ; ಬಾಣಪ್ರಯೋಗ ಮಾಡಿದರು ; ಶೌರ್ಯದಿಂದ ಬೊಬ್ಬೆಹಾಕಿದರು ; ಮೇಲೆ ಬಿದ್ದು ಸೀಳಿ ಹಾಕಿದರು ; ಹೊಡೆದು ಓಡಿಸಿದರು ; ಮುಂಡಗಳನ್ನು ಒಟ್ಟಿದರು; ಕುತ್ತಿಗೆಗಳನ್ನು ಕತ್ತರಿಸಿದರು ; ಎದುರಿಸಿದರು ; ಸದೆಬಡಿದರು ; ಬಡಿದು ಉರುಳಿಸಿದರು ; ಮೇಲೆಬಿದ್ದು ಚೂರುಚೂರಾಗುವಂತೆ ಕತ್ತರಿಸಿದರು ; ಅಡಗಿಹೋಗುವಂತೆ ಹೊಡೆದರು—(ಹೀಗೆ) ವೈರಿ ಸೈನ್ಯವನ್ನು ಆ ಮಹಾ ಭಟರುಗಳು ಎದುರಿಸಿದರು. ೯–೧೦. ನಿಬಿಡವಾಗಿ ಸೇರಿ ಮೇಲೆ ಬಿದ್ದ ಜೈನರ ಸೈನ್ಯವನ್ನು ಕತ್ತರಿಸಿ, ಕತ್ತರಿಸಿ, ಸೀಳಿಹಾಕಿ ಚಲ್ಲಾಪಿಲ್ಲಿಗೊಳಿಸಿ, ಜಯವನ್ನು ಪಡೆದು, ಕಳೆದುಳಿದವರನ್ನು ಓಡಿಸಿ, ಎಡಗೈಯಲ್ಲಿ ತಲೆಯನ್ನು ಹಿಡಿದು (ಬಲಗೈಯ) ಖಡ್ಗವನ್ನು ಝಳಪಿಸುತ್ತ ನಾಚಯ್ಯನು ನಡೆತಂದನು. ಹೀಗೆ ಬರಲು ಹದಿಮೂರು ಜನ ವೀರಗಣಂಗಳೂ ಕೂಡ ವೈರಿಗಳ ಶಿರಸ್ಸುಗಳನ್ನು ಹಿಡಿದು ಅವನೊಡನೆಯೇ ವೀರರಸವೆಲ್ಲ ಒಂದು ಗೂಡಿ ಬಂದಿದೆಯೋ ಎಂಬ ಹಾಗೆ ಶರಣರ ಹತ್ತಿರಕ್ಕೆ ಉತ್ಸಾಹದಿಂದ ಬಂದರು. ವ॥ ಹಾಗೆ ಅವರೆಲ್ಲ ಸೇರಿ ಬಂದು ನಾಚಯ್ಯನು ಶರಣರ ಪಾದಗಳಿಗೆ ನಮಸ್ಕಾರಮಾಡಿ, ಅವರ ಕಾರುಣ್ಯವೆಂಬ ರಸಕ್ಕೆ ಪಾತ್ರನಾಗಿ ಸಡಗರದಿಂದ ಶಿವಗಣಗಳೆಲ್ಲ ಬರುತ್ತಿರಲು

---

1 × (ಮು)

ಗೊಂದೊಂದು ಪ್ರತಿಷ್ಠೆಗೆಯ್ದು ಪೂಜಾವಿಧಿಗಳಂ ನಿಯೋಜಿಸಿ ಪೂರ್ವಶಿವಾಗಾರಕ್ಕೆ ತಳರ್ದಂದಿನಂತೆ ಗುಡಿಗೋಪುರಮಂ ನೆಗಳ್ಚಿ ಪೂಜೆಗೆಯ್ಸಿ ಸತ್ಯಸಂಗರಂ ನಿಜಗೃಹಕ್ಕೆ ಬಂದು ಬಂದ ಗಣಸಂದೋಹ ಮನರ್ಚಿಸಿ ತತ್ಪ್ರಸಾದಸಂತುಷ್ಟನಾಗಿರ್ಪಾಗಳ್—

ಮೃಡನಾಗಾರಮನೊತ್ತಿ ನೂಂಕೆ ಶವಣರ್ತಜ್ಜೈನರಂ ಸೀಳ್ದು ತ
ಮ್ಮಡಿಗೆಂದಂತೆ ನಿಜಪ್ರತಿಜ್ಞೆ ಸಲೆ ಜೈನಾಗಾರಮಂ ಕಿಳ್ತು ನು
ಗ್ಗೊಡೆದಾರ್ಪಿಂ ಜಿನರಂ ಪ್ರತಿಷ್ಠಿಸಿ ಮಹಾಲಿಂಗಂಗಳಂ ಬೆಳ್ಪಸಂ
ಬಡೆದಂ ಧಾತ್ರಿಯೊಳೆಂದೊಡೇವೊಗಳ್ವುದೋ ನಾಚಯ್ಯನಾಚಾರಮಂ ೧೧

ಎಂದೆಲ್ಲರ್ಪೊಗಳುತ್ತಿರೆ
ಮುಂದಿರ್ದಾ ವೀರ ತೇರಸಗೊಡಿ ಮಹಾ
ನಂದಂ ಮಿಗೆ ನಾಚಯ್ಯಂ
ಕುಂದದತಿ ಪ್ರಕಟಭಕ್ತಿಯಿಂದೆಸೆದಿರ್ದಂ ೧೨

ಇದು ಸಾರೆ ದೂರಮಲ್ತು
ರ್ವಿದ ಜಿನಪುರಿಯಂ ನೆಗಳ್ಚಸೇ ಶಿವಪುರಿಯಂ
ಪಡೆದಾ ನಾಚಯ್ಯಂ ಜಸ
ದೊದವಾಳ್ದೆಸೆದಿರರೆ ವೀರ ತೇರಸರಿಳೆಯೊಳ್ ೧೩

ಅವರೊಡನೆ ಮಾರುಡಿಗೆ ಪಟ್ಟಣವನ್ನು ಹೊಕ್ಕು, (ಅಲ್ಲಿರುವ) ಬಸದಿಗಳೊಳಗೆ ಹೊಕ್ಕು ಜಿನ ಪ್ರತಿಮೆಗಳನ್ನು ಕಿತ್ತು ಬಿಸಾಡಿ ಮೊದಲೇ ತಾನು ಬಂಡಿಗಳಲ್ಲಿ ಹೇರಿ ಕೊಂಡು ತಂದಿದ್ದ ಲಿಂಗಗಳನ್ನು ಅಲ್ಲಲ್ಲಿಗೊಂದರಂತೆ ಪ್ರತಿಷ್ಠಾಪನೆ ಮಾಡಿ, (ಅವಕ್ಕೆ) ಪೂಜಾವಿಧಿಗಳನ್ನು ವ್ಯವಸ್ಥೆಗೊಳಿಸಿ, ಮೊದಲಿನ ಶಿವಾಗಾರಕ್ಕೆ ಹೊರಟು ಬಂದು ಮೊದ ಲಿನ ಹಾಗೆಯೇ ಆ ಗುಡಿಗೆ ಗುಡಿಗೋಪುರಗಳನ್ನು ಕಟ್ಟಿಸಿ, ಪೂಜೆ ಮಾಡಿಸಿ, ಸತ್ಯಕ್ಕಾಗಿ ಯುದ್ಧ ಮಾಡಿ ವೀರನಾದ ಅವನು ತನ್ನ ಮನೆಗೆ ಬಂದು, ಅಲ್ಲಿಗೆ ಬಂದ ಶಿವಗಣ ಸಮೂಹವನ್ನು ಪೂಜಿಸಿ ಅವರು ಕೊಟ್ಟ ಪ್ರಸಾದದಿಂದ ಸಂತೋಷಗೊಂಡು ಇರು ತ್ತಿರುವಾಗ ೧೧. ಶಿವನ ದೇವಾಲಯವನ್ನು ಜೈನರು ಕೆಡವಿಹಾಕಲಾಗಿ, ಆ ಜೈನ ರನ್ನೆಲ್ಲ ಕತ್ತರಿಸಿಹಾಕಿ, ಪೂಜಾರಿಯೆದುರಿಗೆ ಹೇಳಿದ ಹಾಗೆ ತನ್ನ ಪ್ರತಿಜ್ಞೆಯು ನೆರ ವೇರುವಂತೆ ಜೈನರ ಬಸದಿಗಳನ್ನೆಲ್ಲ ಮುರಿದು ಅಲ್ಲಿದ್ದ ಜಿನಪ್ರತಿಮೆಗಳನ್ನು ಕಿತ್ತು ಬಿಸಾಡಿ ಶಿವಲಿಂಗಗಳನ್ನು ಪ್ರತಿಷ್ಠೆಗೊಳಿಸಿ ಶುಭಕೀರ್ತಿಯನ್ನು ಹೊಂದಿದ ಮಾರುಡಿ ಗೆಯ ನಾಚಯ್ಯನ ಆಚಾರವನ್ನು ಏನೆಂದು ಹೊಗಳುವುದೋ ! ೧೨. ಎನ್ನುತ್ತ ಎಲ್ಲ ಜನರೂ ಹೊಗಳುತ್ತಿರಲು, ತನ್ನ ಮುಂದೆ ನಿಂತಿದ್ದ ಹದಿಮೂರು ಜನ ವೀರರೊಡನೆ ಕೂಡಿಕೊಂಡು ಅತಿಯಾದ ಆನಂದದಿಂದ ಆ ನಾಚಯ್ಯನು ಕುಂದಿಲ್ಲದ ಅತ್ಯಂತ ಪ್ರಸಿದ್ಧ ವಾದ ಭಕ್ತಿಯಿಂದ ಶೋಭಿಸುತ್ತಿದ್ದನು. ೧೩. ಇದು ಬಹು ಹಿಂದಿನ ಸುದ್ದಿಯೇನೂ ಅಲ್ಲ, ಕೊಬ್ಬಿದ ಜಿನಪುರಿಯನ್ನು ನಾಚಯ್ಯನು ಪ್ರಸಿದ್ಧ ಶಿವಪುರವನ್ನಾಗಿ ಮಾಡಿದನು. (ಅವನಿಗೆ ನೆರವಾದ) ವೀರತೇರಸರು (ಹದಿಮೂರು ಜನ ವೀರ ಶಿವಗಣಗಳು) ಈ

ನೀಂ ದೇವನೆಂದು ಭಜಿಪ ಜ
'ನಂ ದೇವನೆ ದೇವನಾದೊಡಿಂತಕ್ಕುಮೆ ಪೇ
ಳ್ಮಂದಮತಿ ಕೇಳ್ವುದಿನ್ನುಂ
ಕುಂದದೆ ಭವದಿಷ್ಟದೈವಕಾದುಪಟಳಮಂ ೧೪

ನೆಲವೆಣ್ಣ ಭಾಗ್ಯಲಕ್ಷ್ಮೀ
ನಿಲಯಮಿದೆಂಬಂತೆ ಸಂಪದಂಬಡೆದೆಸೆಗುಂ
ಪುಲಿಗೆಱೆವೊಳಲದಱೊಳ್ನಿ
ಶ್ಚಲಭಕ್ತಂ ಸೋಮನಾಥನೆಂಬವನಿರ್ಪಂ ೧೫

ವ॥ ಆ ಭಕ್ತಂ ದಿನದಿನದ ಮೂಱುಂ ಪೊೞ್ತಿನೊಳಂ ಲಿಂಗಸ್ಪರ್ಶನಪೂರ್ವಕ ನಮಸ್ಕಾರಮೆ ತನಗೆ ನಿಯತವ್ರತಮಾಗೆ ತಳೆದೆಸಗುತ್ತುಮಿರ್ದೊಂದು ದಿವಸಂ.—

ಕಡುಪಿಂ ಕಣ್ಬೇನೆ [1]ತಿಬ್ಬಂ[1] ಮಸಗೆ ತಡಕುತುಂ ಕಾಣವೇನೊಂದುಮಂ ಕೋ
ಲ್ವಿಡಿದೋರಂತೂಱುತುಂ ಮೆಲ್ಲನೆ ಶಿವನಿಳಯಕ್ಕೆಂದು ಬರ್ಪಲ್ಲಿ ಜೈನ
ರ್ಮೃಡಗೇಹಂದೋರ್ಪೆವಿತ್ತಲ್ನಡೆಯೆನುತಣಕಂಗೆಯ್ದು ಕೊಂಡೊಯ್ದು ಬೇಗಾ
ಗಡೆ ಚೈತ್ಯಾಗಾರಗರ್ಭಾಂಬುಗಿಸಿ ಜಿನಶಿರೋಭಾಗಮಂ ಮುಟ್ಟಿಸುತ್ತುಂ ೧೬

ಪೊಡಮಡು ನೀನೆಂಬುದುಮಾ
ಮೃಡಭಕ್ತಂ ನಂಬಿ ಲಿಂಗಮೆಂದೆಱಗೆ ಖಳ

ಭೂಮಿಯಲ್ಲಿ ಯಶಸ್ಸಿನ ರಾಶಿಯಿಂದ ಶೋಭಿಸುತ್ತ ಇರುವುದಿಲ್ಲವೇ ? ೧೪. ನೀನು ದೇವನೆಂದು ಭಜಿಸುವ ಜಿನನು ದೇವನೇ ? ದೇವನಾದರೆ, ಎಲೈ ಮಂದಮತಿಯೇ, ಹೀಗಾಗುತ್ತಿತ್ತೇ ? ಹೇಳು. ಕುಂದಿಲ್ಲದೆ ನಿನ್ನ ಇಷ್ಟದೈವಕ್ಕಾದ ಉಪಟಳವನ್ನು ಇನ್ನೂ ಕೇಳು : (ಎಂದು ಆ ಏಕಾಂತದ ರಾಮಯ್ಯನು ಹೇಳತೊಡಗಿದನು.) **ಪುಲಿಗೆಱೆಯ ಸೋಮನಾಥನ ಕಥೆ** ೧೫. ಇದು ಭೂಮಿಯೆಂಬ ಸ್ತ್ರೀಯ ಭಾಗ್ಯಲಕ್ಷ್ಮಿಯ ಮನೆಯೋ ಎಂಬಂತೆ 'ಪುಲಿಗೆರೆ' ಎಂಬ ಪಟ್ಟಣವು ಸಂಪತ್ತನ್ನು ಹೊಂದಿ ಶೋಭಿಸುತ್ತಿತ್ತು. ಆ ಪಟ್ಟಣದಲ್ಲಿ ದೃಢವಾದ ಶಿವಭಕ್ತಿಯಿಂದ ಕೂಡಿದ ಸೋಮನಾಥನೆಂಬುವನು ಇದ್ದನು. ವ॥ ಆ ಶಿವಭಕ್ತನು ಪ್ರತಿದಿನದ ಮೂರು ಹೊತ್ತಿನಲ್ಲೂ ಲಿಂಗದ ಸ್ಪರ್ಶಮಾಡುವುದರ ಮೂಲಕ ನಮಸ್ಕಾರ ಮಾಡುವುದೇ ತನ್ನ ನಿತ್ಯವ್ರತವಾಗಿರಲು ಆ ವ್ರತವನ್ನು ಮಾಡುತ್ತ ಒಂದು ದಿವಸ ೧೬–೧೭. ಆ ಸೋಮನಾಥನಿಗೆ ತೀಕ್ಷ್ಣವಾದ ಕಣ್ಣುಬೇನೆ ತೀವ್ರವಾಗಿ ಉಂಟಾಗಿತ್ತು. ಶಿವನಿಳಯಕ್ಕೆಂದು ಕೈಯಲ್ಲಿ ಕೋಲು ಹಿಡಿದು ಊರುತ್ತ ಏನೊಂದನ್ನೂ ಕಾಣದೆ ತಡಕಾಡುತ್ತ ಮೆಲ್ಲನೆ ಬರುತ್ತಿದ್ದನು. ಜೈನರು (ಇಂಥ ಸ್ಥಿತಿಯ ಇವನನ್ನೂ ಕಂಡು) ಶಿವನಿಲಯವನ್ನು ತೋರಿಸುತ್ತೇವೆ; ಇತ್ತ ನಡೆ ಎಂದು ಪರಿಹಾಸ ಮಾಡಿ

---

[1] ತೀಬ್ರಂ (ಜ)

ಕಂಡು ನಗುತೆ ನಿನ್ನಭೀಷ್ಟಂ
ಗುಡುಗೀ ಜಿನನಾಥನೆಂದವರ್ಪರಸಲೊಡಂ ೧೭

ಘುಡುಘುಡಿಸುತ್ತೆ ಮೀಸೆ ಕುಣಿಯುತ್ತಿರೆ ಗಂಟಿಡೆ ಪುರ್ಬು ಕಾಯ್ಪಿನಿಂ
ಪಡ ಪಡ ಶಂಭುಗೆತ್ತಿದ ಕರಾಂಬುಜಮಂ ಜಿನನೆಂಬ ನಿನ್ನ ಪೆ
ರ್ಬಡಿಕೆಯ ಬೊಂಬೆಗೆತ್ತುವೆನೆ ಸರ್ವಜಗತ್ಪತಿಯಪ್ಪ ಶಂಕರಂ
ಗೊಡನೆಱಗಿರ್ದೆನಲ್ತೆ ಶಿವಮೂರ್ತಿಯನಿಲ್ಲಿಯೆ ತೋರ್ಪೆನೀಕ್ಷಣಂ ೧೮

ವ॥ ಎಂದಣ್ಮಿ ನುಡಿದು ಮುಂಬರಿದು ಮುಸುಂಕನುಗಿದು ಕೋಪಾರುಣ ನಿಜನೇತ್ರಂಗಳಂ ಬಿಜ್ಜನೆ ಬಿಟ್ಟು ನೋಡಲೊಡನೆ—

ಛಟಛಟ ನಿಸ್ವನಂ ನಿಮಿರೆ ಸಿಕ್ಕನೆ ಸೀಳ್ದು ಜಿನಾಂಗಮೆಲ್ಲಮುಂ
ಪಟಪಟ ರಾವದಿಂ ಸಿಡಿದು ಬೀಳ್ವಿನಮಾ ಜಿನನಂಗಮಧ್ಯದೊ
ಳ್ಪಟುನಿಟಿಲಾಂಬಕಂ ನೆಲಸಿ ನಿಂದನುದಗ್ರವೃಷೇಂದ್ರವಾಹನಂ
ಕುಟಿಲಜಟಾಧರಂ ತ್ರಿಸುಳಿ ಸೋಮನಮಾಯನಮೇಯ ವೈಭವಂ ೧೯

ವ॥ ಇಂತು ನಿಜಭಕ್ತಕೃತಪ್ರತಿಜ್ಞಾಪಾಲಕಂ ಸೋಮನಾಥನಾ ಪುಲಿಗೆಱೆವೊಳಲ ಸುರಹೊನ್ನೆಬಸದಿಯೊಳ್ನೆಗಳ್ತೆವೆತ್ತು ನಿಂದು —

ಕರೆದುಕೊಂಡು ಹೋಗಿ ಬೇಗನೆ ಆ ಕಡೆಯಿರುವ ಜಿನಮಂದಿರವನ್ನು ಹೊಗಿಸಿದರು. ಅಲ್ಲಿರುವ ಜಿನನ ಪ್ರತಿಮೆಯ ತಲೆಯ ಭಾಗವನ್ನು ಮುಟ್ಟಿಸಿ (ಇದೇ ಶಿವಲಿಂಗ) ನೀನು ನಮಸ್ಕಾರ ಮಾಡು ಎಂದರು. ಆ ಶಿವಭಕ್ತನು ಅವರ ಮಾತನ್ನು ನಂಬಿ, ಅದನ್ನೇ ಲಿಂಗವೆಂದು ತಿಳಿದು ನಮಸ್ಕಾರ ಮಾಡಿದನು. ದುಷ್ಟರಾದ ಅವರು ಕಂಡು ನಗುತ್ತ ಈ ಜಿನನಾಥನು ನಿನ್ನ ಅಭೀಷ್ಟವನ್ನು ಕೊಡಲಿ ಎಂದು ಆಶೀರ್ವದಿಸಲಾಗಿ. ೧೮. ಘುಡುಘುಡಿಸುತ್ತ, ಮೀಸೆಗಳು ಕುಣಿಯುತ್ತಿರಲು, ಹುಬ್ಬುಗಳನ್ನು ಗಂಟಿಕ್ಕಿ ಕೋಪದಿಂದ ಫಡಫಡ! ಶಂಭುವಿಗೆ ಎತ್ತಿದ ಕರಕಮಲಗಳನ್ನು ಜಿನನೆನ್ನುವ ನಿನ್ನ ಈ ಹೇಸಿಗೆಯ ಗೊಂಬೆಗೆ ಎತ್ತುತ್ತೇನೆಯೇ ? ಸಕಲ ಜಗತ್ತಿನ ಪತಿಯಾಗಿರುವ ಶಂಕರನಿಗೆ ಕೂಡಲೇ ನಾನು ನಮಸ್ಕರಿಸಿದೆನಲ್ಲವೆ ! ಈ ಕ್ಷಣದಲ್ಲಿಯೇ ಇಲ್ಲಿ ಶಿವ ಮೂರ್ತಿಯನ್ನು ತೋರಿಸುತ್ತೇನೆ. ವ॥ ಎಂದು ಪ್ರತಿಜ್ಞೆ ಮಾಡಿ ಮಾತನಾಡಿ, ಮುಂಬರಿದು ಮೇಲೆ ಹಾಕಿಕೊಂಡ ಮುಸುಕನ್ನು ತೆಗೆದು, ಕೋಪದಿಂದ ಕೆಂಪಾದ ತನ್ನ ನೇತ್ರಗಳನ್ನು ಬಿರ್‍ರನೆ ಬಿಟ್ಟು ನೋಡಿದ ಕೂಡಲೇ. ೧೯. ಛಟ ಛಟ ಎನ್ನುವ ಧ್ವನಿಯು ಹೊರಹೊಮ್ಮಿ, ಜಿನ ಪ್ರತಿಮೆಯ ಅಂಗವೆಲ್ಲ ಸರ್ರೆಂದು ಸೀಳಿ, ಪಟ ಪಟ ಧ್ವನಿಯಿಂದ ಸಿಡಿದು ಬೀಳಲಾಗಿ, ಆ ಜಿನಪ್ರತಿಮೆಯ ದೇಹ ಮಧ್ಯದಲ್ಲಿಯೇ ಸಮರ್ಥವಾದ ಹಣೆಗಣ್ಣನಿಂದಲೂ, ಶ್ರೇಷ್ಠ ವೃಷಭನ ವಾಹನವುಳ್ಳವನಾಗಿಯೂ. ವಕ್ರ ಕೂದಲಿನ ಜಡೆಯುಳ್ಳವನಾಗಿಯೂ ತ್ರಿಶೂಲಧಾರಿಯಾಗಿಯೂ, ಉಮಾಸಹಿತನಾಗಿಯೂ ನಿರ್ಮಾಯನೂ, ಅಗಣಿತ ವೈಭವಯುಕ್ತನೂ ಆದ ಶಿವನು ನೆಲಸಿ ನಿಂತನು. ವ॥ ಈ ರೀತಿ ತನ್ನ ಭಕ್ತನಿಂದ ಮಾಡಿದ ಪ್ರತಿಜ್ಞೆಯನ್ನು ಪಾಲಿಸುವ ಸೋಮನಾಥನು ಆ ಪುಲಿಗೆರೆ ನಗರದ 'ಸುರಹೊನ್ನೆ ಬಸದಿ' ಎಂಬ

ಅಣಕವಮನುಡುಗಿಸಿ ಜಿನನಂ
ಕ್ಷಣದೊಳೀಳ್ದಲ್ಲಿ ನೆಲಸಿ ಭಕ್ತನ ಪೊರೆದಂ
ಗುಣವಾರಿಧಿ ಮುಂಗೈಕಂ
ಕಣಕೀಂ ಕನ್ನಡಿಯ ಸಾಕ್ಷಿಯೀದುದೆ ಧರೆಯೊಳ್ ೨೦

ವ॥ ಇನ್ನುಂ ಕೇಳ್ವುದೆಂತೆನೆ—

ಪರಿವಳಿಗೆಯೆಂಬ ವಿಳಸ
ತ್ಪುರದೊಳ್ವೈಜಾಂಬೆಯೆಂಬ ಪೆಸರಾಂತು ಕರಂ
ಪರಿರಂಜಿಸಿರ್ಪಳಭವನ
ವರಭಕ್ತೆ ಶಿವಾಂಘ್ರಿಗುಪ್ತಭಜನದಿನೊರ್ವಳ್ ೨೧

ಜಿನಭಕ್ತ ನೇಮಿಸೆಟ್ಟಿಯೆ
ತನಗಧಿಪತಿಯೆನಿಪನಲ್ಲಿ ಬಾಂಧವರೆಲ್ಲ
ರ್ಜಿನಭಕ್ತರಾಗೆ ಪಿರಿದುಂ
ಮನದುಮ್ಮಳದಿಂದೆ ವೈಜಿಕಾಂಬಿಕೆಯಿರ್ದಳ್ ೨೨

ವ॥ ಆಗಳೊಂದುದಿನಮಾ ನೇಮಿಸೆಟ್ಟಿ ನಿಜಗುರುಗಳಪ್ಪ ಪಿರಿಯ ಮಲಧಾರಿಗಳೇಳ್ತರೆ

ಹೆಸರಿನ ಜಿನಮಂದಿರದಲ್ಲಿ ಪ್ರಖ್ಯಾತಿಪೆತ್ತು ನಿಂತುಕೊಂಡು ೨೦. ಸದ್ಗುಣಗಳ ಸಮುದ್ರನೆನಿಸಿದ ಶಿವನು ಜೈನರು ಮಾಡಿದ ಅಣಕನ್ನು ಹಾಳು ಮಾಡಿ, ಜಿನನನ್ನು ಆ ಕ್ಷಣದಲ್ಲಿಯೇ ಸೀಳಿ, ಅಲ್ಲಿ ಪ್ರಕಟನಾಗಿ ಭಕ್ತನನ್ನು ರಕ್ಷಿಸಿದನು. ಲೋಕದಲ್ಲಿ ಮುಂಗೈಯ ಕಂಕಣವನ್ನು ನೋಡಿಕೊಳ್ಳಲು ಕನ್ನಡಿಯ ಸಾಕ್ಷಿಯನ್ನು ಒದಗಿಸಬೇಕೇ ? ವ॥ ಇನ್ನೂ ಕೇಳು. ಹೇಗೆಂದರೆ **ವೈಜಾಂಬೆಯ ಕಥೆ** ೨೧. ಪರವಳಿಗೆ ಎಂಬ ಹೆಸರಿನ ಶೋಭಿಸುವ ಪಟ್ಟಣದಲ್ಲಿ 'ವೈಜಾಂಬೆ' ಎಂಬ ಹೆಸರನ್ನು ಹೊಂದಿ, ಒಬ್ಬಳು ಪರಮೇಶ್ವರನ ಶ್ರೇಷ್ಠಭಕ್ತೆಯು ಶಿವನ ಪಾದಗಳಲ್ಲಿ ಗುಪ್ತಭಕ್ತಿಯನ್ನಾಚರಿಸುವವಳೆನಿಸಿ ಚೆನ್ನಾಗಿ ಶೋಭಿಸುತ್ತಿದ್ದಳು. ೨೨. ಜಿನಭಕ್ತನಾದ ನೇಮಿಸೆಟ್ಟಿಯೆಂಬುವನು ಅವಳಿಗೆ ಪತಿಯೆನಿಸಿದ್ದನು. ಬಂಧುಬಾಂಧವರೆಲ್ಲ ಅಲ್ಲಿ ಜಿನಭಕ್ತರೆನಿಸಿದ್ದರು. (ಈ ಕಾರಣದಿಂದ) ವಿಶೇಷವಾಗಿ ಮನೋವ್ಯಥೆಯಿಂದ ಕೂಡಿ, ಆ ವೈಜಕಾಂಬಿಕೆಯು ಇರುತ್ತಿದ್ದಳು. ವ॥ ಆಗ ಒಂದು ದಿವಸ ಆ ನೇಮಿಸೆಟ್ಟಿಯು ತನ್ನ ಗುರುಗಳೆನಿಸಿದ ಹಿರಿಯ ಪಂಚಮಲಗಳನ್ನು ಧರಿಸಿದ (ಕಣ್ಣಿನ ಪಿಸುರು, ಮೂಗಿನ ಸಿಂಬುಳ, ಕಿವಿಯ ಕುಂಕಣೆ, ಹಲ್ಲಿನ ಹಸುರು, ಮೈಯಕೊಳೆ ಎಂಬ ಐದು ಮಲಗಳನ್ನು ಧರಿಸಿದ)† ಸಂನ್ಯಾಸಿಗಳು ಬರಲಾಗಿ

---

†'ಅಹಿಂಸಾ ಪರಮೋಧರ್ಮಃ' ಎಂಬ ವ್ರತವನ್ನು ಕಟ್ಟುನಿಟ್ಟಾಗಿ ಪಾಲಿಸುವ ಜೈನರು ದೇಹದಲ್ಲಿಯೂ ಸೂಕ್ಷ್ಮವಾದ ಪ್ರಾಣಿಗಳು ಇದ್ದು ಅವು ಸಾಯುವುವೆಂಬ ಕಾರಣದಿಂದ ಸ್ನಾನವನ್ನೂ ಕೂಡ ಕೆಲ ಸಂನ್ಯಾಸಿಗಳು ಮಾಡುತ್ತಿಲ್ಲವಾದ ಕಾರಣದಿಂದ ಅವರ ದೇಹದ ಕೊಳೆಯ ಕಡೆಗೂ ಲಕ್ಷ್ಯಕೊಡುತ್ತಿರುವುದಿಲ್ಲ. ಅಂಥವರನ್ನು ಮಲಧಾರಿಗಳೆಂದು ಕರೆಯುವುದು ವಾಡಿಕೆ, ಅಥವಾ ತಿರಸ್ಕಾರದ ನುಡಿಯೂ ಆಗಿರಬಹುದು.

ಕಂಡವರ್ಗೆಱಗಿ ಭೋಜನಕ್ಕೆ ಪೇಳ್ದು ಭೋಂಕನೆ ಮನೆಗೇಳ್ತಂದು ಮಡದಿಯುಂ ಕರೆದುಚಿತ ಸಾಧನಮಂ ನೆರಪಿ ರುಚಿರರುಚಿತರಮಪ್ಪಂತೆ ಬೋನಮಂ ಸಮೆವುದೆಂದು ಪೇಳೆ ಕೇಳ್ದು—

ಗಾರಿ[1]ಗೆ ಚಕ್ಕುಲಿ ಮಂಡಗೆ
ಪೂರಿಗೆಯೊಡೆ ಪೇಣಿಯೆಂಬಿವಂ ಪಾಯಸಮಂ
ಸಾರತರ ಶಾಕಪಾಕಮ
ಹಾರುಚಿಯುತ ಭಕ್ಷ್ಯಭೋಜ್ಯಮಂ ಸಲೆ ಸಮೆದಳ್ ೨೩

ವ|| ಅಂತು ಸಮೆದಿಂತಪ್ಪಾಹಾರಮನೊರ್ವಂಗಮಾದೊಡಂ ಮಾಹೇಶ್ವರಂಗುಣಲಿತ್ತೆನಲ್ತೆನ್ನ ಜನ್ಮಂ ನಿರರ್ಥಕಮಿಂದಾದೊಡಮೊರ್ವಂ ಮಾಹೇಶ್ವರನೆತ್ತಲಾನುಂ ಬಂದೊಡಾಂ ಬರ್ದುಂಕುವೆನೆಂದು ಮ್ಮಳಿಸಿ ನೆನೆವುದುಮಾ ವೇಳೆಯೊಳ್—

ಜೆಡೆಮುಡಿ ಭಾಳದೊಳ್ತೊಳಪ ಭೂತಿ ಶಿವಾಕ್ಷಿಜಮಾಲೆ ಮೆಯ್ಯೊಳ
ಣ್ಪಡಿದ ವಿಭೂತಿ ಭಾಸ್ವದುರದೊಳ್ಶಿವಸಜ್ಜಿಕೆ ಕಂಥೆ ಲಾಕುಳಂ
ಕಡು ಸೊಬಗಾಗೆ ಕಾಮರಿಪು ಜಂಗಮರೂಪಮನಾಳ್ದು ಬಂದು ನಿಂ
ದೊಡೆ ನಿಜಭಕ್ತೆ ಕಂಡೆಱಗಿ ಕಾಲ್ದೊಳೆದಿಂಟಿದಳಾ ಪದಾಂಬುವಂ ೨೪

ಅವರನ್ನು ಕಂಡು ನಮಸ್ಕರಿಸಿ, ಊಟಕ್ಕೆ ಆಮಂತ್ರಿಸಿ, ಕೂಡಲೇ ಮನೆಗೆ ಬಂದು, ಹೆಂಡತಿಯಾದ ವೈಜಾಂಬೆಯನ್ನು ಕರೆದು, 'ಅವರಿಗೆ ಉಚಿತವೆನಿಸಿದ ಊಟದ ಉಪಕರಣಗಳನ್ನು ಸಿದ್ಧಪಡಿಸಿ ಮನೋಹರವಾದ ರುಚಿಯುಳ್ಳಹಾಗೆ ಅನ್ನವನ್ನು ಮಾಡಬೇಕು' ಎಂದು ಹೇಳಲು, ಆ ಮಾತನ್ನು ಕೇಳಿ ೨೩. ಗಾರಿಗೆ, ಚಕ್ಕುಲಿ, ಮಂಡಗೆ, ಪೂರಿಗೆ, ಒಡೆ, ಪೇಣಿಗಳನ್ನೂ, ಪಾಯಸವನ್ನೂ, ರುಚಿಕರವಾದ ಶಾಕಪಾಕಗಳನ್ನೂ, ರುಚಿಯಿಂದ ಕೂಡಿದ ಭಕ್ಷ್ಯ ಭೋಜ್ಯಗಳನ್ನೂ ಚೆನ್ನಾಗಿ ಸಿದ್ಧಪಡಿಸಿದಳು. ವ|| ಈ ರೀತಿ ಸಿದ್ಧಪಡಿಸಿದ ಇಂತಹ ಆಹಾರವನ್ನು ಒಬ್ಬ ಮಾಹೇಶ್ವರನಿಗಾದರೂ ಉಣ್ಣಲಿಕ್ಕೆ ಕೊಡಲಿಲ್ಲವಲ್ಲಾ! ನನ್ನ ಜನ್ಮ ನಿರರ್ಥಕವಾಯಿತು. ಈಗಲಾದರೂ ಒಬ್ಬ ಮಾಹೇಶ್ವರನು ಎತ್ತ ಕಡೆಯಿಂದಲಾದರೂ ಬಂದರೆ ನಾನು ಬದುಕುತ್ತೇನೆಂದು ಸಂಕಟದಿಂದ ನೆನೆಯುತ್ತಿರಲು ಆ ವೇಳೆಗೆ ಸರಿಯಾಗಿ ೨೪. ತಲೆಯಲ್ಲಿ ಜಡೆಮುಡಿ, ಹಣೆಯಲ್ಲಿ ಶೋಭಿಸುವ ಭಸ್ಮ, ರುದ್ರಾಕ್ಷ ಮಾಲೆಗಳು, ಮೈಯಲ್ಲಿ ಧರಿಸಿದ ವಿಭೂತಿ, ಎದೆಯ ಮೇಲೆ ಪ್ರಕಾಶಿಸುವ ಲಿಂಗದ ಕರಡಿಗೆ, ಹೊದೆದ ಕಾಷಾಯವಸ್ತ್ರ. ಯೋಗದಂಡ, ಇವು ಬಹು ಸೊಗಸಾಗಿ ಕಾಣುತ್ತಿರಲು, ಪರಮೇಶ್ವರನು ಜಂಗಮ ರೂಪಧರಿಸಿ ಬಂದು ನಿಲ್ಲಲಾಗಿ, ಆ ಸತ್ಯಶುದ್ಧ ಭಕ್ತೆಯಾದ ವೈಜವ್ವೆಯು ಕಂಡು ನಮಸ್ಕಾರಮಾಡಿ, ಕಾಲುತೊಳೆದು ಆ

1 ರ(ಚ, ಅ)

ಕರೆದೊಳಗಣ್ಗೆಯ್ದಿಸಿದಳ್
ಹರಣಂ ಬಂದಂತೆ ನಲಿದು ಮೃದುತಳ್ಪದೊಳಾ
ದರದಿಂ ಕುಳ್ಳಿರಿಸಿದಳೊ
ಪ್ಪಿರೆ ಬಾಳೆಲೆಯಲ್ಲಿ ಭಕ್ಷ್ಯಭೋಜ್ಯಾದಿಗಳಂ ೨೫

ಗಡಣಿಸಿ ತುಪ್ಪಮನೆಱೆದು
ಗ್ಗಡಮೆನೆ ಮಣಿದೆೞ್ದು ದೇವರಾರೋಗಿಪುದೆಂ
ದೊಡನುಸುರ್ದು ಕೆಯ್ಮುಗಿದಳೊ
ಲ್ದುಡುಪತಿಮುಖಿ ತಾಪಸೇಂದ್ರನಾರೋಗಿಸಿದಂ ೨೬

ಅನಿತಱೊಳೆಯ್ದಿದರ್ಜಿನತಪಸ್ವಿಗಳಾ ಗೃಹಕಲ್ಲಿ ಕಂಡು ಪಾ
ವನ ಚರಮೂರ್ತಿಯಂ ಮುಳಿದು ಸೆಟ್ಟಿಗೆ ಶಾಪಮನಿತ್ತು ಬೈವುತಂ
ಗನೆಯು [1]ಕನ[1]ಲ್ಕೆಯಿಂ ತೞರ್ದರಾ ಚರಮೂರ್ತಿಯದೃಶ್ಯನಾದನಾ
ಮನೆಯೊಡೆಯಂ ನಿರೀಕ್ಷಿಸಿ ನಿತಂಬಿನಿಯಂ ಘನರೋಷದೇಳ್ಗೆಯಿಂ ೨೭

ಎಲೆಯೆಲೆ ಧೂರ್ತೆ ದುಷ್ಟೆ ಗುರುಗಳ್ಗೊಲವಿಂ ಸಮೆದನ್ನಮೆಲ್ಲಮಂ
ನಲಿದುಣಲಿಕ್ಕಿ ಶೈವಮುನಿಗಳ್ಕದೆ ಪೊಲ್ಲದು ಗೆಯ್ದೆ ಮದ್ವ್ರತ
ಕ್ಕಲಸದೆ ಭಂಗಮಂ ನೆಗೞ್ದೆ ಪಾತಕಿಯುಂಡ ತಪಸ್ವಿಯೆಲ್ಲಿದಂ
ತೊಲಗಿಸುತೆತ್ತಡಂಗಿಸಿದೆ ಪೇಳವನಂ ಭವನಾಂತರಾಳದೊಳ್ ೨೮

ಪಾದೋದಕವನ್ನು ಕುಡಿದಳು. ೨೫–೨೬. (ಆ ಜಂಗಮಾಕಾರದ ಶಿವನನ್ನು) ಒಳಕ್ಕೆ ಕರೆದುಕೊಂಡು ಹೋದಳು. ಪ್ರಾಣವೇ ಬಂದಹಾಗೆ ನಲಿದಾಡಿ, ಮೆತ್ತನೆಯ ಹಾಸಿಗೆಯ ಮೇಲೆ ಆದರಪೂರ್ವಕವಾಗಿ ಕುಳ್ಳಿರಿಸಿದಳು. ಬಾಳೆಯ ಎಲೆಯಲ್ಲಿ ಭಕ್ಷ್ಯಭೋಜ್ಯಾದಿಗಳನ್ನು ಒಪ್ಪವಾಗಿ ಜೋಡಿಸಿ, ತುಪ್ಪವನ್ನು ಎರೆದು, ಅತಿಶಯವಾದ ಭಕ್ತಿಯಿಂದ ನಮಸ್ಕರಿಸಿ ಎದ್ದು, ದೇವರು ಆರೋಗಿಸಬೇಕು, ಎಂದು ಆ ಕೂಡಲೇ ಹೇಳಿ ಆ ಚಂದ್ರಮುಖಿಯು ಪ್ರೀತಿಯಿಂದ ಕೈಮುಗಿಯಲು ಆ ತಾಪಸೇಂದ್ರನು ಊಟಮಾಡಿದನು. ೨೭–೨೮. ಅಷ್ಟರಲ್ಲಿ ಆ ಜೈನ ಸಂನ್ಯಾಸಿಗಳು ಆ ಮನೆಗೆ ಬಂದರು. ಅಲ್ಲಿದ್ದ ಪರಮಪವಿತ್ರನಾದ ಜಂಗಮಮೂರ್ತಿಯನ್ನು ಕಂಡು, ಕೋಪಗೊಂಡು. ಆ ಅಂಗನೆಯಾದ ವೈಜವ್ವೆಯನ್ನು ಕೋಪದಿಂದ ಬೈದು, ಸೆಟ್ಟಿಗೆ ಶಾಪವನ್ನುಕೊಟ್ಟು, ಹೊರಟುಹೋದರು ಆ ಜಂಗಮಮೂರ್ತಿಯು ಮಾಯವಾಯಿತು. ಆ ಮನೆಯ ಯಜಮಾನನಾದ ನೇಮಿಸೆಟ್ಟಿಯು ತನ್ನ ಪತ್ನಿಯನ್ನು ನೋಡಿ ಭಯಂಕರ ಕೋಪದ ಆಧಿಕ್ಯದಿಂದ, 'ಎಲೆಯೆಲೆ'! ನೀಚಳೇ, ದುಷ್ಟೆ, ಗುರುಗಳಿಗಾಗಿ ಪ್ರೀತಿಯಿಂದ ಮಾಡಿದ ಅನ್ನವನ್ನೆಲ್ಲ ಸ್ವಲ್ಪವೂ ಹೆದರದೆ ಶೈವ ಮುನಿಗೆ ಸಂತೋಷದಿಂದ ಊಟ ಮಾಡಲು ಕೊಟ್ಟು, ಮಾಡಬಾರದುದನ್ನು ಮಾಡಿದೆ. ನನ್ನ ವ್ರತಕ್ಕೆ ತಡಮಾಡದೆ ಭಂಗವನ್ನುಂಟು ಮಾಡಿದೆ. ಊಟ ಮಾಡಿದ ಆ ಪಾಪಿಷ್ಠನಾದ ತಪಸ್ವಿ ಎಲ್ಲಿದ್ದಾನೆ ? ಹೊರಹೊರಡಿಸಿ ಈ ಭವನ ಮಧ್ಯದಲ್ಲಿ ಎಲ್ಲಿ

1 ನಳ(ಅ)

ಗೊರವನ ರೂಪಿಂಗಾತನ
ಪರಿಜಿಂಗಂ ಕೂರ್ತು ಕೂಡಲೆಳಸಿ[1]ದೆಯು[1]ಕ್ಕುಂ
ಕರೆದೊಡನುಣಲಿತ್ತಡಗಿಸು
ತಿರುತಿರ್ದಪೆ ನಿನ್ನ ಮಾಯೆಯಾನಱಿಯದುದೇ ೨೯

ಪತಿಯಾಳತಿಯುಂ ಮೀಱಿದೆ
ಮತಗುರುಗಳನುಳಿದು ಗೊರವನಡಿವಿಡಿದೆ ಮಹಾ
ಪತಿತೆ ನಿನಗಕ್ಕುಮೇ ಪರ
ಗತಿ ತೋಱಿಂದವನನೆಂದು ಘೂರ್ಣಿಸುತಾಗಳ್ ೩೦

ಅತಿ ಮಾನವತಿಯನತಿಶಯ
ಧೃತಿಯಂ ಶಿವಭಕ್ತಿರತಿಯನಾ ನಿಜಸತಿಯಂ
ಹತಮತಿ ಪತಿ ಕಸೆಗೊಂಡೊಡ
ನತಿ ನಿರ್ಭರದಿಂದೆ ಪಾಪಿ ಪೊಡೆದಂ ಬಡಿದಂ ೩೧

ಮೃಡನಾಜ್ಞೆಯೆಂಬ ಕವಚಮ
ದೊಡಲಂ ತಳ್ತಿರೆ ಲತಾಂಗಿಗಾ ಪತಿ ಮುಳಿಸಿಂ
ಬಡಿವ ಕಸೆ ಕುಸುಮಮಾಲೆಯ
ಪೊಡರ್ಪನನುಕರಿಸಿತಕ್ಷತಾಂಗದೊಳವಳಾ ೩೨

ಅಡಗುವಂತೆ ಮಾಡಿದೆ ? ಹೇಳು. ೨೯. ಆ ಗೊರವನ ರೂಪಕ್ಕೆ, ಆತನ ಆಕಾರಕ್ಕೆ ಪ್ರೀತಿಸಿ ಕೂಡಲು ಅಪೇಕ್ಷೆಪಟ್ಟಿರಬಹುದು. ಅವನನ್ನು ಕರೆದು ಕೂಡಲೇ ಊಟಕ್ಕಿಟ್ಟು, ಅಡಗಿಸುತ್ತ ಇದ್ದೀಯೆ. ನಿನ್ನ ಈ ಮಾಯೆಯು ನಾನು ತಿಳಿಯದುದೇ ? ೩೦. ಮಹಾ ಪತಿತೆಯೇ (ನೀತಿಗೆಟ್ಟವಳೇ), ಗಂಡನ ಅಪ್ಪಣೆಯನ್ನು ಮೀರಿದೆ; ನಮ್ಮ ಧರ್ಮ ಗುರುಗಳನ್ನು ಬಿಟ್ಟು, ಗೊರವನ (ಶೈವಸಂನ್ಯಾಸಿಯ) ಪಾದ ಹಿಡಿದೆ. (ಇಂಥ ನಿನಗೆ) ಪರಲೋಕ ಸುಖವುಂಟಾದೀತೇ ? ಈಗಲೇ ಅವನನ್ನು ತೋರಿಸು ಎಂದು, ಆಗ ಆ ಸೆಟ್ಟಿಯು ಗರ್ಜಿಸಿದನು. ೩೧. ಅತ್ಯಂತ ಮಾನವತಿಯೂ, ಅತ್ಯಂತ ಧೈರ್ಯಶಾಲಿನಿಯೂ, ಶಿವಭಕ್ತಿಯಲ್ಲಿ ಆಸಕ್ತಿಯುಳ್ಳವಳೂ, ಆದ ತನ್ನ ಸತಿಯನ್ನು ಬುದ್ಧಿಹೀನ ಪತಿಯಾದ ಪಾಪಿಷ್ಠ ಸೆಟ್ಟಿಯು ಚಾಟಿಯನ್ನು ತೆಗೆದುಕೊಂಡು ಬಹು ಗಟ್ಟಿಯಾಗಿ ಹೊಡೆದನು ; ಬಡಿದನು. ೩೨. ಪರಮೇಶ್ವರನ ಆಜ್ಞೆಯೆಂಬ ಕವಚವು ಅವಳ ದೇಹಕ್ಕೆ ಅಂಟಿಕೊಂಡಿರಲು, ಬಳ್ಳಿಯಂಥ ದೇಹವುಳ್ಳ ಅವಳಿಗೆ ಆ ತನ್ನ ಗಂಡನು ಕೋಪದಿಂದ ಹೊಡೆಯುವ ಚಾಟಿಯು ಹೂಮಾಲೆಯ ವೈಭವವನ್ನು ಧರಿಸಿ ಗಾಯ

---

1 ದಳ(ಮು)

ಎಳೆಯುಳಂ ಪೊಡೆವಾ ಕಶಾಗ್ರದ ಪೊಯ್ಗಳಾ ಜಿನತಾಪಸಾ
ವಳಿಯು ತಾಗಿದವೇಳೆ ಬಾಸುಳೊಱಲ್ದು ಭಕ್ತೆಗೆ ಮಣ್ಗಳಂ
ತಳೆದು ಕಟ್ಟೆಯ ಬಿಟ್ಟಿಗೆಯ್ವ ಕಪರ್ದಿಯಂ ನೃಪನಾಳ್ಗಳ
ವ್ವಳಿಸಿ ಪೊಯ್ದೊಡೆ ಪೊಯ್ಗಳೆಲ್ಲರನಲ್ಲಿ ತಾಗಿದ ಮಾಳ್ಕೆಯಿಂ ೩೩

ವ॥ ಅಂತು ಕಡುಕೆಯ್ದು ಪೊಡೆವ ಕಶಾಘಾತಂ ಜಿನತಪಸ್ವಿಗಳಂಗಮನರ್ಜುನಾಸ್ತ್ರದಂತೆ ಶತಗುಣೋತ್ತರಮಾಗಿ ತಾಗೆ ತಾಳಲಾಱದೆ ತಲ್ಲಣಿಸಿ ಮಲ್ಲಳಿಗೊಂಡು—

ವಿತತ ಕಶಾಭಿಘಾತಗಳಿತಕ್ಷತಜಚ್ಛುರಿತಾಂಗರಾಗಿ ಸು
ಯ್ವುತಳುತೆ ಬಾಯ್ವಿಡುತ್ತೆ ಮೊಱೆಯಿಕ್ಕುತೆ ಮೋಱೆಯನೆತ್ತಿ ನೋಡುತೋ
ಡುತೆ ನಡುಗುತ್ತೆ ಕೆಟ್ಟೆವೆನುತೇಳುತೆ ಬೀಳುತೆ ಹಾ ಜಿನಾಯೆನು
ತ್ತತುಳ ವಿಷಾದದಿಂ ಮಱುಗಿ ಪಲ್ಗಿಱಿವುತ್ತೊರಗುತ್ತೆ ಧಾತ್ರಿಯೊಳ್ ೩೪

ಪೊರಳುತ್ತುಂ ಪುಣ್ಗಳಂ ಮುಟ್ಟುತೆ ಕರತಳದಿಂ ನೋವುತೋವೋವೊ ಕಾವ
ನ್ನರನಾರಂ ಕಾಣೆವೆಂದಳ್ಕುತೆ ಪರಿದಡರುತ್ತೈದೆ ಮಾಡಂಗಳಂ ಪೆ
ರ್ಮರನಂ ಪತ್ತುತ್ತೆ ಗೇಹಂಬುಗುತೆ ಪಡಿಗಳಂ ಕೆತ್ತು ಪದ್ಮಾವತೀಮಂ
ದಿರ ಜೈನಾಗಾರದೊಳ್ಮೆಯ್ಗರೆವುತಗಿದು ಜೈನಾಧಮರ್ಸೇದೆವಟ್ಟರ್ ೩೫

ರಹಿತವಾದ ಅವಳ ಆ ದೇಹದಲ್ಲಿ ಅನುಕರಿಸುವಂತಿತ್ತು. ೩೩. ಹಿಂದೆ ಭಕ್ತೆಯಾದ ಪಿಡ್ಡವ್ವೆಗಾಗಿ ಮಣ್ಣನ್ನು ಹೊರುತ್ತ ಕೆರೆಕಟ್ಟುವ ಕೆಲಸದ ಬಿಟ್ಟಿಯನ್ನು ಮಾಡುವ ಪರಮೇಶ್ವರನನ್ನು ಅರಸನ (ಚೋಳಮಹಾರಾಜನ) ಆಳುಗಳು ಅಪ್ಪಳಿಸಿ ಹೊಯ್ದಾಗ ಆ ಹೊಡೆತಗಳು ಅಲ್ಲಿರುವ ಎಲ್ಲರಿಗೂ ಬೀಳುತ್ತಿರುವ ರೀತಿಯಲ್ಲಿ ಚಿಕ್ಕವಯಸ್ಸಿನವಳಾದ ಪೈಜವ್ವೆಗೆ (ಆವಳ ಗಂಡನಾದ ನೇಮಿಸೆಟ್ಟಿಯು) ಹೊಡೆಯುವ ಆ ಚಾಟಿಯ ಹೊಡೆತಗಳು ಜೈನ ಸಂನ್ಯಾಸಿಗಳಿಗೆ ಬಿದ್ದವು; (ಅವರ ಮೈಮೇಲೆ) ಬಾಸುಂಡೆಗಳೆದ್ದವು ; ಅವರು ಚೀರಿಕೊಂಡರು. ವ॥ ಈ ರೀತಿ ಪರಾಕ್ರಮದಿಂದ ಹೊಡೆಯುವ ಚಾಟಿಯ ಪೆಟ್ಟು ಜೈನಸಂನ್ಯಾಸಿಗಳ ದೇಹವನ್ನು ಅರ್ಜುನನ ಬಾಣಗಳ ಪೆಟ್ಟಿನಂತೆ ಶತಾಧಿಕವಾಗಿ (ನೂರುಪಟ್ಟು ಹೆಚ್ಚಾಗಿ) ತಾಕುತ್ತಿರಲು, ಅವರು ಆ ಏಟುಗಳನ್ನು ತಾಳಲಾರದೆ ಸಂಕಟಗೊಂಡು ಬೆರಗಾಗಿ ೩೪-೩೫. ವಿಶೇಷವಾದ ಚಾಟಿಯ ಹೊಡೆತದಿಂದ ಸೋರುತ್ತಿರುವ ರಕ್ತದಿಂದ ವ್ಯಾಪ್ತವಾದ ದೇಹವುಳ್ಳವರಾಗಿ ನಿಟ್ಟುಸಿರುಬಿಡುತ್ತ, ಅಳುತ್ತ, ಚೀರುತ್ತ, ಕೂಗಿಕೊಳ್ಳುತ್ತ, ಮುಖವನ್ನು ಮೇಲೆ ಮಾಡಿ ನೋಡುತ್ತ, ಓಡುತ್ತ, ನಡುಗುತ್ತ, ಕೆಟ್ಟೆವು ಎನ್ನುತ್ತ, ಏಳುತ್ತ ಬೀಳುತ್ತ 'ಹಾ ! ಜಿನನೇ,' ಎನ್ನುತ್ತ ಅತ್ಯಧಿಕ ವಿಷಾದದಿಂದ ಮರುಗುತ್ತ, ಹಲ್ಲುಕಿರಿಯುತ್ತ, ಭೂಮಿಯ ಮೇಲೆ ಮಲಗುತ್ತ, ಹೊರಳುತ್ತ, ಮೈಮೇಲೆ ಆದ ಗಾಯಗಳನ್ನು ಕೈಯಿಂದ ಮುಟ್ಟಿಕೊಳ್ಳುತ್ತ, ನೋವುತ್ತ 'ಓವೋವೋ ! ಕಾಯುವವರನ್ನು ಯಾರನ್ನೂ ಕಾಣೆವಲ್ಲಾ !' ಎಂದು ಹೆದರುತ್ತ, ಓಡಿ ಓಡಿ ಹೋಗಿ ಮನೆಗಳ ಮೇಲೆ ಹತ್ತುತ್ತ, ದೊಡ್ಡ ದೊಡ್ಡ ಮರಗಳನ್ನು ಹತ್ತುತ್ತ, (ಕಂಡ ಕಂಡವರ) ಮನೆಗಳನ್ನು ಹೊಗುತ್ತ, ಪದ್ಮಾವತೀ ಮಂದಿರ, ಜಿನ ದೇವಾಲಯಗಳನ್ನು ಹೊಕ್ಕು ಕದ

ಜಿನ ನಿನ್ನ ಪೂಜೆಗೆಯ್ದುದ
ಕಿನಿತು [1]ಫಲಂ[1] ಸಾಲ್ಗುಮೆಂದು ನೊಂದಾ ಜಿನನಂ
ಮುನಿದೇಳಿಸುತುಂ ತಮ್ಮೊಳ
ಗನುಮಿಸುತಿಂತೆಂದು ತಿಳಿದರಾದುಪಟಳಮಂ ೩೬

ಇದು ನಿನ್ನೆ ನೇಮಿಸೆಟ್ಟಿಯ
ಸದನದೊಳೊಲ್ದುಂಡ ಗೊರವನಿಂದಾದುದು ತ
ಪ್ಪದು ನಿಜಮೆಂದೊರ್ವನನಾ
ಪದದೊಳ್ತದ್ಗೃಹಕೆನೋಳ್ಪಮೆಂದಟ್ಟಲೊಡಂ ೩೭

ವ॥ ಬಂದಾ ಶವಣಂ ನಿಂದು ಕಟ್ಟಿದಿರೊಳ್ಸೆಟ್ಟಿ ತದ್ಭಕ್ತೆಯುಂ ಕಠೆಗೊಂಡು ಪೊಡೆವ ಪೊಯ್ಗಳ್ತನ್ನ ಬೆನ್ನಂ ಸೂಳ್ವಿಡಿದು ತಾಗೆ ನೊಂದು ಪೊಡೆಯದಿರ್ಮಾಣ್ಮೆಂದು ನಿವಾರಿಸುತ್ತಿಂತೆಂದಂ—

ಭರದೊಳೆ ಪುಷ್ಪಸೇನಮುನಿಯೋಡಿದನನ್ಯಪುರಕ್ಕೆ ಗಹ್ವರೋ
ದರದೊಳೆ ವೀರಸೇನಮುನಿ ಮೆಯ್ಗರೆದಂ ಪಡಲಿಟ್ಟನಂಬುಜಾ
ಕರದೊಳೆ ಪದ್ಮಸೇನಮುನಿ ಘೋರ ಮಹಾವಿಪಿನಾಂತರಕ್ಕೆ ಸೈ
ವರಿವುತೆ ಚಂದ್ರಸೇನಮುನಿ ಪೊಕ್ಕನನಲ್ಪಕಶಾಭಿಘಾತದಿಂ ೩೮

ಗಳನ್ನು ಮುಚ್ಚಿ, ಹೆದರಿ ಅಡಗಿಕೊಂಡು ಆ ಜೈನಾಥಮರುಗಳು ಸಂಕಟ ಪಟ್ಟರು. ೩೬. ಹೇ ಜಿನನೇ, ನಿನ್ನನ್ನು ಪೂಜೆ ಮಾಡಿದುದಕ್ಕೆ ಇಷ್ಟೇ ಫಲಸಾಕು ; ಎಂದು ನೊಂದುಕೊಂಡು ನುಡಿದು ಆ ಜಿನನನ್ನು ಕೋಪದಿಂದ ತಿರಸ್ಕರಿಸುತ್ತ, ಈ ಉಪಟಳವುಂಟಾಗುವುದಕ್ಕೆ ಕಾರಣವನ್ನು ತಮ್ಮ ತಮ್ಮಲ್ಲಿಯೇ ಅನುಮಾನದಿಂದ ಹೀಗೆ ಹೀಗೆಂದು ತಿಳಿದರು. ೩೭. (ತಮಗಾದ ಉಪಟಳವು)' ಇದು ನಿನ್ನೆಯ ದಿವಸ ನೇಮಿಸೆಟ್ಟಿಯ ಮನೆಯಲ್ಲಿ ಪ್ರೀತಿಯಿಂದ ಊಟಮಾಡಿದ ಗೋರವನಿಂದಲೇ ತಪ್ಪದೆ ಆದದ್ದು ನಿಜ.' ಎಂದುಕೊಂಡು, ಒಬ್ಬನನ್ನು ಆ ಕ್ಷಣದಲ್ಲಿಯೇ ಆ ನೇಮಿಸೆಟ್ಟಿಯ ಮನೆಗೆ ನೋಡೋಣವೆಂದು ಅಟ್ಟಲಾಗಿ ವ॥ ಆ ಜೈನನು ಬಂದು ನಿಂತು ತನ್ನೆದುರಿನಲ್ಲೇ ಸೆಟ್ಟಿಯು ಆ ಭಕ್ತೆಯಾದ ಪೈಜಪ್ಪೆಯನ್ನು ಚಾಟಿಯನ್ನು ಹಿಡಿದು ಹೊಡೆಯುವ ಹೊಡೆತಗಳು ತನ್ನ ಬೆನ್ನನ್ನು ಸರತಿಯಂತೆ (ಕ್ರಮವಾಗಿ) ತಾಕುತ್ತಿರಲು ನೊಂದುಕೊಂಡು. (ಎಲೈ ಸೆಟ್ಟಿಯೇ) ಹೊಡೆಯ ಬೇಡ ನಿಲ್ಲಿಸು ; ಎಂದು ನಿವಾರಿಸುತ್ತ ಹೀಗೆ ಹೇಳಿದನು : ೩೮. ಅತ್ಯಧಿಕವಾದ ಕಶಾಘಾತದಿಂದ ಪುಷ್ಪಸೇನ ಮುನಿಗಳು ಭರದಿಂದ ಓಡಿಹೋಗಿ ಬೇರೆ ಪಟ್ಟಣ ಸೇರಿದರು. ವೀರಸೇನ ಮುನಿಗಳು ಒಂದು ಗವಿಯ ಗರ್ಭವನ್ನು ಹೊಕ್ಕು ಅಡಗಿಕೊಂಡರು ; ಪದ್ಮಸೇನಮುನಿಗಳು ಸರೋವರದಲ್ಲಿ ಬಿದ್ದರು. ಚಂದ್ರಸೇನ

———

[1] ಪದಂ(ಮು)

ಜಿನಮಂತ್ರಂ ಕಾದುದಿಲ್ಲಕ್ಕಟ ಜಿನಮುನಿಗಳ್ಮಾಳ್ಪ ಸಮ್ಯಕ್ತಪಂಗಳ್
ಘನಮಪ್ಪೀ ಬಾಧೆಯಂ ಪಿಂಗಿಸಲೆ ನೆಱಿಯದತ್ತೋಡಿದಳ್ಜ್ವಾಲಿಕಾಮಾ
ಲಿನಿ ತಾನೇನಾದಳೋ ಯಕ್ಷಿಣಿ ಜಿನಮತಧರ್ಮಂ ದಲೇಂ ಮಾಯಮಾದ
ತ್ತೋ ನಿತಾಂತಂ ಮಜ್ಜಿನೇಂದ್ರಂ ಮಡಿದನೊ ಮಸಣಂಬೊಕ್ಕರೋ ತೀರ್ಥಕರ್ಕಳ್ ೩೯

ವ॥ ಎಂದು ನೊಂದು ಪಳಯಿಸಿ—

ಅರೆಬರ್ಕೆಱೆಯಲ್ಲಿ ಕೆಲ
ರ್ಪರಿಕಾಲ್ಗಳೊಳಲ್ಲಿ ಕೆಲಬರಬ್ಜಾಕರದೊಳ್
ಪಿರಿಯಗಳೊಳನ್ಯರಪರ
ರ್ಪುರಾಣಕೂಪಂಗಳಲ್ಲಿ ಕೆಡೆದರ್ಮಡಿದರ್ ೪೦

ಪುತ್ತೆ ಕೆಲಂಬರ್ಕಾನನ
ದತ್ತಲ್ಪರಿದೋಡಿದರ್ಜಿನೇಂದ್ರಾಲಯಮಂ
ಪತ್ತಿ ಪೆಱರ್ಕೆಡೆದರ್ಪರ
ರತ್ತಿತ್ತಲ್ ಬಿಳ್ದು ಹಮ್ಮಿದಂಬೋಗಿರ್ದರ್ ೪೧

ಇವಳೇಂ ಮಾಯಾವಿಯೊ ನೀ
ನಿವಳಂ ಕಳೆಗೊಂಡು ಪೊಯ್ವ ಪೊಯ್ಗಳ್ಮೆಯ್ಗ
ಳ್ಪವೆ ಬಿರಿಯೆ ತಾಂಗಿದುವು ಗಡ
ಶವಣರನೇವೇಳ್ಕೆನವರ್ಗೆ ನೆಗಳ್ದುಪಹತಿಯಂ ೪೨

ಮುನಿಗಳು ಘೋರವಾದ ಅರಣ್ಯವನ್ನು ಓಡಿ ಹೋಗಿ ಹೊಕ್ಕುಬಿಟ್ಟರು. ೩೯. ಅಕ್ಕಟಾ! ಜಿನ ಮಂತ್ರವು ರಕ್ಷಿಸಲಿಲ್ಲ! ಜಿನಮುನಿಗಳು ಮಾಡುವ ಶ್ರೇಷ್ಠ ತಪಸ್ಸುಗಳು ಭಯಂಕರವಾದ ಈ ಬಾಧೆಯನ್ನು ಹಿಂಗಿಸಲು ಸಾಲದಾದುವು! ಆ ಜ್ವಾಲಾಮಾಲಿನಿ ದೇವತೆಯು ಎತ್ತ ಓಡಿ ಹೋದಳೋ! ಯಕ್ಷಿಣೀ ದೇವತೆಯು ತಾನು ಏನಾದಳೋ! ಜೈನ ಮತ ಧರ್ಮವು ನಿಶ್ಚಯವಾಗಿ ಮಾಯವಾಯಿತೋ ಏನೋ! ನಿಶ್ಚಯವಾಗಿ ನನ್ನ ಜಿನೇಂದ್ರನೇನು ಸತ್ತೇ ಹೋದನೋ! ತೀರ್ಥಂಕರರು ಶ್ಮಶಾನವನ್ನು ಹೊಕ್ಕರೋ ಏನೋ! ವ॥ ಹೀಗೆಂದು ನೊಂದುಕೊಂಡು ಪ್ರಲಾಪ ಮಾಡಿ. ೪೦. ಕೆಲವರು ಕೆರೆಯಲ್ಲಿ! ಕೆಲವರು ಹರಿಯುವ ಕಾಲುವೆಗಳಲ್ಲಿ! ಕೆಲವರು ಕಮಲ ಸರೋವರಗಳಲ್ಲಿ! ಅನ್ಯರು ಕೆಲವರು ದೊಡ್ಡ ಅಗಳುಗಳಲ್ಲಿ (ಕೋಟೆಯ ಸುತ್ತ ಲಿರುವ ಅಗಳಿನಲ್ಲಿ)! ಉಳಿದವರು ಹಳೆಯ ಬಾವಿಗಳಲ್ಲಿ ಬಿದ್ದರು; ಸತ್ತರು! ೪೧. ಮತ್ತೆ ಕೆಲವರು ಅಡವಿಗಳತ್ತ ಓಡಿ ಹೋದರು; ಉಳಿದ ಕೆಲವರು ಜಿನೇಂದ್ರಾಲಯಂ ಗಳ ಮೇಲೆ ಹತ್ತಿ ಬಿದ್ದರು; ಬೇರೆ ಕೆಲವರು ಅತ್ತ ಇತ್ತ (ಓಡಿಹೋಗಿ) ಬಿದ್ದು, ಮೂರ್ಛೆಗೊಂಡಿರುವರು. ೪೨. ಈ ಸೆಟ್ಟಿಯ ಹೆಂಡತಿಯೇನು ಮಾಯಾವಿಯೋ ಏನೋ! ನೀನು ಇವಳನ್ನು ಚಾಟಿಯನ್ನು ಹಿಡಿದು ಹೊಡೆಯುವ ಹೊಡೆತಗಳು (ನಮ್ಮ) ಮೆಯ್ಯಿಗಳು ಚೆನ್ನಾಗಿ ಬಿರಿಯುವಂತೆ ತಾಗಿದವಲ್ಲವೇ! ಜೈನ ಸಂನ್ಯಾಸಿಗಳಿಗಾದ

ವ॥ ಎಂದುಸುರ್ದು ಕಶಾಘಾತಮಹೋತ್ಪಾತಮಂ ಮಾಣಿಪುದುಮಾ ಜಿನಮುನಿಗಳಂ ತಾಗುವ ಪೊಯ್ಗಳ್ತವಿಲ್ದಾಗೆ ಸೆಟ್ಟಿ ಕಂಡು ಸಾಶ್ಚರ್ಯಮಾನಸನಾಗಿ—

ನಿನ್ನಿಂದಪಾಯಮುಂಟೆಮ
ಗಿನ್ನುಂ ನೀಂ ಪೋಗು ಮನೆಯೊಳಿರದಿರೆನುತ್ತುಂ
ಕನ್ನೆಯನಾತಂ ನೂಂಕಿದ
ನನ್ನಿಯಮೆನೆ ನೆರೆದು ನೋಳ್ಪ ಸುಜನವಿತಾನಂ ೪೩

ಸೆಱೆ ಬಿಟ್ಟಂತಿರೆ ಮನೆಯಿಂ
ಪೊಱಮಟ್ಟಳ್ಬಸದಿಯಿರೆ ಶಿವಾಗಾರಮೆನು
ತ್ತಱಿಯದೊಳಪೊಕ್ಕು ಭಕ್ತಿಯೊ
ಳೆಱಗಿದಳೆಲೆ ಶಂಭು ಶರಣೆನುತ್ತಸವಸದಿಂ ೪೪

ವ॥ ಅಂತೆಱಗಿದಾಗಳ್ಭಕ್ತಾಭಿಮಾನಪರಿಪಾಲಕಂ ಭವಾನಿಯರಸಂ ತದ್ಭಕ್ತೆಯ ಸದ್ಭಾವದಿನ ದ್ಭುತಂ ಮಸಗೆ ಸದ್ಯೋಜಾತನಾಮ[1]ಕ್ಕಿದುಚಿತಮೆನಿಸಿ—

ಪಡೆದು ಮೂಡಿದನಲ್ಲಿ ತಜ್ಜಿನನಂಗವಿರ್ಬಗಿಯಾಗೆ ಮ
ಧ್ಯದೊಳುಮಾರಮಣಂ ಪ್ರಸನ್ನ ಮುಖಂ ಪ್ರಪ[2]ನ್ನಪರಾಯಣಂ ·

ನೋವನ್ನು ಏನೆಂದು ಹೇಳಲಿ! ವ॥ ಎಂದು ಹೇಳುತ್ತ, ಕಶಾಘಾತದಿಂದಾಗುವ ಮಹಾ ತೊಂದರೆಯನ್ನು ನಿಲ್ಲಿಸಲಾಗಿ ಜಿನಮುನಿಗಳನ್ನು ತಾಕುತ್ತಿರುವ ಹೊಡೆತಗಳೂ ನಿಂತು ಹೋಗಲು, ಸೆಟ್ಟಿಯು ಕಂಡು ಆಶ್ಚರ್ಯಯುತ ಮನಸ್ಸಿನವನಾಗಿ, ೪೩. ಅನ್ಯಾಯವೆಂದು ನೆರೆದು ನೋಡುವ ಸಜ್ಜನ ಸಮುದಾಯವು ಅನ್ನುತ್ತಿರುವಂತೆಯೇ ಸೆಟ್ಟಿಯು 'ನಮಗೆ ಇನ್ನು ನಿನ್ನಿಂದ ಅಪಾಯವುಂಟಾಗುವುದು. ನೀನು ಹೊರಟು ಹೋಗು ; ಈ ಮನೆಯಲ್ಲಿ ಇರಬೇಡ' ಎನ್ನುತ್ತ ಕನ್ನೆಯಾದ ವೈಜವ್ವೆಯನ್ನು ಹೊರಗೆ ನೂಕಿದನು. ೪೪. ಸೆರೆಮನೆಯಿಂದ ಬಿಟ್ಟಂತಿರಲು ಆ ವೈಜವ್ವೆಯು ಮನೆಯಿಂದ ಹೊರಹೊರಟಳು. ಅಲ್ಲೊಂದು ಬಸದಿಯಿರಲಾಗಿ ಅದನ್ನೇ ಶಿವಾಲಯವೆಂದು ತಿಳಿಯದೆ ಅದರೊಳಗೆ ಹೊಕ್ಕು ಎಲೈ ಶಂಭುವೇ ಶರಣು ಎನ್ನುತ್ತ ಭಕ್ತಿಯಿಂದ ನಮಸ್ಕಾರ ಮಾಡಿದಳು. ವ॥ ಆ ರೀತಿ ನಮಸ್ಕಾರ ಮಾಡಿದಾಗ ಭಕ್ತರ ಅಭಿಮಾನ ವನ್ನು ಕಾಪಾಡುವ ಭವಾನೀ ಪತಿಯಾದ ಶಂಕರನು ಆ ಭಕ್ತೆಯ ಸದ್ಭಾವದಿಂದ ಅದ್ಭುತವೆನ್ನುವಂತೆ 'ಸದ್ಯೋಜಾತ'ನೆಂಬ ತನ್ನ ಹೆಸರಿಗೆ ಇದೇ ಉಚಿತ ಸಂದರ್ಭವೆಂದು ತಿಳಿದು ೪೫. ಆ ಜಿನನ ಮೂರ್ತಿಯ ದೇಹವು ಎರಡು ಹೋಳಾಗುವಂತೆ ಮಾಡಿ ಅದರ ಮಧ್ಯದಲ್ಲಿ ಉಮಾರಮಣನಾದ ಶಿವನು ಸಂಭ್ರಮದಿಂದಲೂ, ನಗುತ್ತಿರುವ ಮುಖದಿಂದಲೂ ಕೂಡಿ, ಶರಣಾಗತ ರಕ್ಷಕನಾದ ಅವನ ಪರಿಶುದ್ಧವಾದ ದೇಹ

———

1 + ಭಾವ(ಐ) 2 ಪ(ಚ)

ಪದವುೞಿಂಗಮರೀಚಿ ಪೊಣ್ಮಿ ಪಳಂಚಿ ದಿಕ್ತಟಮಂ ಕರಂ
ಸುದತಿ ಸಮ್ಮದಮಾನೆ ಮಂಗಳಲಿಂಗರೂಪದಿನೀಶ್ವರಂ ೪೫

ಎರಡುಂ ಕಡೆಯೊಳಮಾ ಜಿನ
ನೆರಡುಂ ಕಡಿ ಕೆಡೆಯೆ ನಡುವೆ ಮೂಡಿರ್ದಭವಂ
ಶರಧಿಯನಿರ್ಬಗಿಗೆಯ್ದಂ
ದುರುಲಿಂಗಾಕೃತಿಯನಾಳ್ದ ತೆಱದಿಂ ಮೆಱೆದಂ ೪೬

ಹರಭಕ್ತಿರಹಿತ ಪುರುಷನ
ನಿರದುೞಿದಭವಾಂಘ್ರಿವಿಡಿದ ರಮಣಿಗೆ ಲೇಸ
ಪ್ಪುದುಗತಿಯಕ್ಕುಂ ಮುನ್ನಂ
ಧರೆಯೊಳ್ತಿಲಕಾಂಬೆಯೆಂಬ ಸತಿ ನಿಜಪತಿಯುಂ ೪೭

ಶಿವಭಕ್ತಿರಹಿತನಂ ತೊಱೆ
ದವಿಕಲಮತಿಯಿರೆ ಕನಲ್ದು ಪತಿ ಕೊಂದಪೆನೆಂ
ದಡಗಡಿಸೆ ಪೋಗಿ ಪುಗುತುಂ
ಭವಭವನಮನಭವನಂಘ್ರಿಯುಂ ಮಱೆವೊಕ್ಕಳ್ ೪೮

ಅನಿತಱೊಳಾ ಪತಿ ಮುಳಿದಂ
ಗನೆಯುಂ ಸೆಱಗಂ ಕರಾಗ್ರದಿಂ ಸೆಳೆಯೆ ಮಹೇ
ಶನ ಕೃಪೆಯಿಂ ಗಂಡುದಮ
ನನುಕರಿಸಿದಳೆಂಬ ಕಥೆಯನಾಲಿಪೆವಿನ್ನುಂ ೪೯

ಪರಿವಳಿಗೆಯ ವೈಜಾಂಬಿಕೆ
ಹರಭಕ್ತಿವಿಹೀನನಾದ ಪತಿಯುಂ ತೊಱೆದಿಂ

ಕಾಂತಿಯು ಹೊರ ಹೊಮ್ಮಿ ದಿಕ್ಕುಗಳ ಕೊನೆಯವರೆಗೆ ಸೇರಿಕೊಳ್ಳಲು, ಸುಂದರಿಯಾದ ವೈಜವ್ವೆಯು ಅತ್ಯಂತ ಸಂತೋಷಗೊಳ್ಳುವಂತೆ ಮಂಗಳಕರವಾದ ಲಿಂಗರೂಪದಿಂದ ಆ ಈಶ್ವರನು ಮೂಡಿದನು. ೪೬. ಎರಡು ಕಡೆಗಳಲ್ಲೂ ಆ ಜಿನಮೂರ್ತಿಯು ಎರಡು ಹೋಳುಗಳಾಗಿ ಕತ್ತರಿಸಿ ಬೀಳಲು, ನಡುವೆ ಮೂಡಿದ ಶಿವನು ಪೂರ್ವದಲ್ಲಿ ಸಮುದ್ರವನ್ನು ಎರಡು ಭಾಗ ಮಾಡಿ ಮಧ್ಯದಲ್ಲಿ ಉರು ಲಿಂಗಾಕೃತಿಯಿಂದ ಮೂಡಿದ ರೀತಿಯಲ್ಲಿ ಮೂಡಿ ಪ್ರಕಾಶಿಸಿದನು. ೪೭–೪೮. ಹರನ ಭಕ್ತಿಯಿಂದ ದೂರನಾದ ಗಂಡನನ್ನು ತಪ್ಪದೆ ಬಿಟ್ಟು ಪರಮೇಶ್ವರನ ಪಾದವನ್ನು ಒಡಿದ ಆ ರಮಣಿಗೆ ಸುಖದಾಯಕವಾದ ಶ್ರೇಷ್ಠ ಗತಿಯು ಆಗುವುದು. ಈ ಪೂರ್ವದಲ್ಲಿ ಲೋಕದಲ್ಲಿ 'ಶಿವಕಾಂಬೆ' ಎಂಬ ಸ್ತ್ರೀಯು ಶಿವಭಕ್ತರಹಿತನಾದ ತನ್ನ ಪತ್ನಿಯನ್ನು ವ್ಯಾಕುಲರಹಿತ ಬುದ್ಧಿಯವಳಾದ ಅವಳು ತೊರೆದಿರಲು, ಅವಳ ಆ ಪತಿಯು ಕೋಪಗೊಂಡು ಕೊಲ್ಲುತ್ತೇನೆಂದು ತೊಂದರೆ ಗೊಳಿಸಲು ಅವನು ಶಿವಮಂದಿರಕ್ಕೆ ಹೋಗಿ ಒಳಹೊಕ್ಕು ಪರಮೇಶ್ವರನ ಪಾದಗಳಲ್ಲಿ ಮರೆ ಹೊಕ್ಕಳು. ೪೯–೫೦. ಅಷ್ಟರಲ್ಲಿ ಆ ಗಂಡನು ಕೋಪದಿಂದ ಆ

ಶ್ವರನಂಘ್ರಿವಿಡಿದು ಲೋಕೋ
ತ್ತರ ನಿಜಭಕ್ತಿಪ್ರಭಾವಮಂ ಪ್ರಕಟಿಸಿದಳ್ ೫೦

ಪಡೆದಳ್ಘನಸೌಖ್ಯಮನೆಂ
ದಡಿಗಡಿಗೊಲವಿಂದೆ ನುತಿಸೆ ಭಕ್ತವಿತಾನಂ
ಪೊಡವಡೆ ಜಿನಮುನಿತತಿ ಪತಿ
ನಡುಗುತ್ತೆ ಕೆಯ್ಮುಗಿಯೆ ಪೊಗಳೆ ಪೌರಕಟಂಬಂ ೫೧

ಸ್ಫುರಿತ ನಿಜಭಾವದಿಂದೊಗೆ
ದುರುಲಿಂಗಂ ವೈಜನಾಥನಾಮಂಬೆತ್ತೊ
ಪ್ಪಿರೆ ಪರಿವಳಿಗೆಯೊಳಾ ಶಂ
ಕರನಂ ಮೆಚ್ಚಿಸುತೆ ವೈಜಕಾಂಬಿಕೆ ಮೆಱೆದಳ್ ೫೨

ವೈಜಾಂಬೆಯ ಪೆಸರ ಮಹಾ
ತೇಜೋಮಯಲಿಂಗಮೀಗಳುಂ ಮೆಱೆದಪುದೆ
ಲ್ಲಾ ಜನಮಱಿಗುಂ ಕೇಳಘ
ಭಾಜನ ಜಿನಭೃತ್ಯ ಕೇಳ್ದು ನೀನಱಿಯದುದೇ ೫೩

ಹೆಂಡತಿಯ ಸೀರೆಯ ಸೆರಗನ್ನು ಕರಾಗ್ರದಿಂದ ಎಳೆಯಲು, ಮಹೇಶ್ವರನ ಕೃಪೆಯಿಂದ ಅವಳು ಗಂಡನ ರೀತಿಯನ್ನೇ ಹೊಂದಿದಳೆಂಬ ಕಥೆಯನ್ನು ಕೇಳಿದ್ದೇವೆ. ಈಗಲೂ ಕೂಡ ಪರವಳಿಗೆಯ ವೈಜಾಂಬಿಕೆಯು ಹರಭಕ್ತಿವಿಹೀನನಾದ ಗಂಡನನ್ನು ತೊರೆದು ಈಶ್ವರನ ಪಾದಗಳನ್ನು ನಂಬಿ ಲೋಕೋತ್ತರವಾದ ತನ್ನ ಭಕ್ತಿಯ ಪ್ರಭಾವವನ್ನು ಪ್ರಕಟಪಡಿಸಿದಳು. ೫೧. ಭಕ್ತರ ಸಮೂಹವು ಅಡಿಗಡಿಗೆ (ವೈಜಾಂಬಿಕೆಯು) ಘನ ವಾದ ಸೌಖ್ಯವನ್ನು ಪಡೆದಳೆಂದು ಪ್ರೀತಿಯಿಂದ ಕೊಂಡಾಡುತ್ತಿರಲು, ಜಿನ ಮುನಿಗಳ ಸಮೂಹವೆಲ್ಲ ಬಂದು ನಮಸ್ಕಾರ ಮಾಡಿತು; ಗಂಡನು ನಡುಗುತ್ತ ಬಂದು ಕೈ ಮುಗಿದನು; ಪೌರಜನವೆಲ್ಲ ಹೊಗಳಿತು. ೫೨. ಪ್ರಕಾಶಿಸುವ ಅವಳ ಮನಸ್ಸಿನ ಭಕ್ತಿ ಭಾವದಿಂದ ರೂಪುಗೊಂಡ ಶ್ರೇಷ್ಠ ಲಿಂಗವು 'ವೈಜನಾಥ'ನೆಂಬ ಹೆಸರಿನಿಂದ ಪರವಳಿಗೆಯಲ್ಲಿ ಒಪ್ಪಿತು. ವೈಜಕಾಂಬಿಕೆಯು ಆ ಶಂಕರನನ್ನು (ತನ್ನ ಭಕ್ತಿಯಿಂದ) ಮೆಚ್ಚಿಸುತ್ತ, ಶೋಭಿಸುತ್ತಿದ್ದಳು. ೫೩. ವೈಜಾಂಬಿಕೆಯ ಹೆಸರಿನ ಮಹಾತೇಜೋ ಮಯವಾದ ಲಿಂಗವು ಈಗಲೂ ಮೆರೆಯುತ್ತಿರುವುದು. (ಇದನ್ನು) ಎಲ್ಲಾ-ಜನರೂ ಅರಿತಿದ್ದಾರೆ. ಎಲೈ ಪಾಪ ಭಾಜನನಾದ ಜಿನ ಸೇವಕನೇ ಕೇಳು: (ಈ ವಿಷಯವನ್ನು)

ಜಿನಮತಮಂ ವಿದಾರಿಸಿದ ಶಂಕರಭಕ್ತರ ಸನ್ಮಹತ್ವವ
ರ್ಣನಮುಮನಂತಮಿಂತೊಳವು ತತ್ಕಥನಾವಳಿ ಮಾಣ್ಗೆ ಭಕ್ತಸ
ತ್ವನಿಯತಿಗಂದುಮಿಂದುಮೆನಲುಂಟೆ ವಿಚಾರಿಪೊಡೊಂದೆ ಕೇಳ್ವುದೆಂ
ತೆನೆ ಮೆಱೆವಬ್ಬಲೂರೊಳಗೆ ಕೊರ್ಬಿದ ಜೈನತಪಸ್ವಿಸಂಕುಳಂ ೫೪

ಬಿಡದೆಮ್ಮೊಳ್ಪ್ರತಿವಾದಮಂ ನೆಗಳ್ದೊಡಾ ವಾದಂಗಳಂ ಯುಕ್ತಿ ನೇ
ರ್ಪಡೆ ಶಾಸ್ತ್ರೋಕ್ತಿಯಿನಾವದಂ ಜಯಿಸೆ ಸೋಲ್ತಾ ಜೈನರಿಂತಾಗದೀ
ಯೆಡೆ ದೃಷ್ಟಾಂತಮನೆಯ್ದೆ ತೋಱಿಮೆಮಗಾ ದೃಷ್ಟಾಂತಮಂ ಕಂಡು ಸಂ
ಗಡಮೆಲ್ಲರ್ಮೃಡಭಕ್ತರಪ್ಪೆವೆನೆ ಕೇಳ್ದಾ ಮಾತನುತ್ಸಾಹದಿಂ ೫೫

ಈ ಪೊಳಲ ಹಿರಿಯ ಬಸದಿಯ
ಗೋಪುರಮಂ ಗುಡಿಯುಮೊಡೆದು ಜಿನನೊಪಲನಿತುಂ
ರೂಪಳಿದು ಬೀಳ್ಗೆಮೆಮ್ಮಾ
ಲಾಪಂ ದಿಟಮಾಗೆ ನೇಸಱುದಯಕೆ ಮುನ್ನಂ ೫೬

ವ॥ ಎಂದು ಪೂಣ್ದೆಮ್ಮ ಪೂಣ್ಕೆಯಂ ಜಿನಮುನಿಗಳೊಡಂಬಟ್ಟಂತೆ ಗೆಯ್ಮೆಮದನೊರ್ಮೆ ನೋೞ್ಪೆವೆನೆ ಮಱುದಿನದುದಯಕಾಲದೊಳ್ಮೊದಲಿಸಿದಂತೆ ತೋರ್ಪೆವೀಗಳೆಬರ್ಪುದೆಂದಾ ಜೈನತಾಪಸರನೊಡಗೊಂಡು ಜಿನಾಲಯಮಂ ಸಾರ್ತಂದು ನೋೞ್ಪುದುಮಲ್ಲಿ—

ನೀನು ಕೇಳಿ ತಿಳಿಯದಿರುವಂತಹುದೇ ! ೫೪–೫೬. ಜೈನ ಮತವನ್ನು ಕತ್ತರಿಸಿ ಹಾಕಿದ ಶಂಕರನ ಭಕ್ತರ ಶ್ರೇಷ್ಠ ಮಹತ್ವದ ವರ್ಣನೆಗಳು ಈ ರೀತಿ ಲೆಕ್ಕವಿಲ್ಲದಷ್ಟಿರುವುವು. ಆ ಕಥೆಗಳ ಸಮೂಹವನ್ನು ಹೇಳುವುದು ಸಾಕು. ಶಿವಭಕ್ತರಾದವರ ಸತ್ವದ ನಿಶ್ಚಯಕ್ಕೆ ಅಂದಿನದು ಇಂದಿನದು ಎಂದೆನ್ನಲುಂಟೆ ? ವಿಚಾರಮಾಡಿ ನೋಡಿದರೆ ಎಲ್ಲ ಭಕ್ತರ ಸತ್ವವೂ ಒಂದೇ ಕೇಳು ; ಹೇಗೆಂದರೆ : ಶೋಭಿಸುವ ಅಬ್ಬಲೂರಿನಲ್ಲಿ ಕೊಬ್ಬಿ ಹೋದ ಜೈನ ಸನ್ಯಾಸಿಗಳ ಸಮೂಹವು ತಪ್ಪದೆ ನಮ್ಮೊಡನೆ ಪ್ರತಿವಾದವನ್ನು ಮಾಡಲಾಗಿ ಅವರ ಆ ವಾದಗಳನ್ನು ಯುಕ್ತಿಯುಕ್ತವಾಗಿ ಶಾಸ್ತ್ರೋಕ್ತಿಗಳ ಪ್ರಮಾಣಪೂರ್ವಕವಾಗಿ ನಾವು ಜಯಿಸಿದೆವು. ಸೋತ ಆ ಜೈನರು ಇಷ್ಟರಿಂದ ನೀವು ಗೆದ್ದ ಹಾಗಲ್ಲ (ಇಂತಾಗದು), ಈ ಸ್ಥಳಗಳಲ್ಲಿ ಒಂದು ಪ್ರತ್ಯಕ್ಷ ಪ್ರಮಾಣವನ್ನು ಚೆನ್ನಾಗಿ ನಮಗೆ ತೋರಿಸಿರಿ. ಆ ದೃಷ್ಟಾಂತವನ್ನು ಕಂಡು ನಿಮ್ಮ ಸಂಗಡವೇ ನಾವೆಲ್ಲರೂ ಶಿವಭಕ್ತರಾಗುತ್ತೇವೆ. ಎನ್ನಲು ಅವರ ಆ ಮಾತನ್ನು ಉತ್ಸಾಹದಿಂದ ಕೇಳಿ, ಈ ಪಟ್ಟಣದ ದೊಡ್ಡ ಬಸದಿಯ ಗೋಪುರವೂ, ಗುಡಿಯೂ ಒಡೆದು, ಜಿನಮೂರ್ತಿಯ ದೇಹವು ರೂಪುಗೆಟ್ಟು, ನಮ್ಮ ಈ ಮಾತು ದಿಟವಾಗುವಂತೆ ನಾಳೆ ಸೂರ್ಯೋದಯಕ್ಕೆ ಮೊದಲೇ ಬೀಳುವುವು. ವ॥ ಹೀಗೆಂದು ಪ್ರತಿಜ್ಞೆ ಮಾಡಿದ ಶಪಥವನ್ನು ಜೈನ ಸನ್ಯಾಸಿಗಳು ಒಪ್ಪಿಕೊಂಡು 'ಹಾಗೆಯೇ ಮಾಡಿರಿ ಅದನ್ನು ಒಮ್ಮೆ ನೋಡುತ್ತೇವೆ,' ಎನ್ನಲು ಮರು ದಿವಸ ಉದಯಕಾಲದಲ್ಲಿ 'ನಾವು ಶಪಥ ಮಾಡಿದಂತೆ, (ಬಸದಿಯ ಗೋಪುರಾದಿಗಳು ಬಿದ್ದ ರೀತಿಯನ್ನು) ತೋರಿಸುತ್ತೇವೆ ಈಗಲೇ ಬನ್ನಿರಿ' ಎನ್ನುತ್ತ ಆ ಜೈನ ಸಂನ್ಯಾಸಿಗಳನ್ನು ಸಂಗಡ ಕರೆದುಕೊಂಡು ಜಿನ ಮಂದಿರದ ಸಮೀಪಕ್ಕೆ ಬಂದು ನೋಡಲಾಗಿ ಅಲ್ಲಿ

ಪುಡಿಯುಡರೆ ಜಿನನ ತಲೆ ಸೀ
ಳ್ದೊಡಲುರುಳೆ ಧರಾತಳಕ್ಕೆ ಸರಿಯುಪ್ಪಿನೆಗಂ
ಕೆಡೆದ ಗುಡಿಗೋಡೆಯುಂ ಮುಂ
ಗಡೆಯೊಳ್ಪಡಲಿಟ್ಟ ಗೋಪುರಂ ತೋಱಲೊಡಂ ೫೭

ಕಂಡಲ್ಲಿ ಜೈನರೆಲ್ಲಂ
ಗಂಡುಡುಗಿ ಬಿಗುರ್ತು ಮಣಿದರಾದ್ಯರ ಕಥೆಯಂ
ಕೊಂಡು ಕೊನೆವಂತುಟೇಂ ಮು
ಕೊಂಡೀಗಳೆ ತೋರ್ಪೆನೆನ್ನ ಸಾಹಸದಿರವಂ ೫೮

ಬಿಂಕದ ಮೊರಟದ ಬಂಕನ
ಲೆಂಕಂಗೆನಗಚಳ ವೀರಭಕ್ತಂಗೆ ಬಿಡಾ
ತಂಕಮೆ ಮದೀಯ ಶಿರಮಂ
ಭೋಂಕನೆ ಕೊಱದಿಳುಪಿ ಸಪ್ತದಿನಸಂಬರೆಗಂ ೫೯

ಪೊಡವಿಯೊಳಾರ್ಪಿನಿಂ ಮೆಱೆಯಿಸುತ್ತಿಳೆಗದ್ಭುತಮಾಗೆ ಮೇಣದಂ
ಪಡೆದಪೆನೀ ಜಿನಾಲಯಸಮುತ್ಕರಮಂ ಬಳಿಕೊಂದುಮಿಲ್ಲದಂ
ತೊಡೆದಪೆನುರ್ಕೆ ಸೊರ್ಕಿದ ಜಿನವ್ರತನಿಷ್ಠರ ಭಾಳದಕ್ಕರಂ
ದೊಡೆದಪೆನಿಂತಿದೇ ಬತಮಿದೇ ಮತಮಿಂತಿದೆ ಕಜ್ಜಮುಜ್ಜುಗಂ ೬೦

೫೭–೫೮. ಜಿನನ ತಲೆ ಸೀಳಿ ಪುಡಿಪುಡಿಯಾಗಿತ್ತು ; ಭೂಮಿಗೆ ಆ ಮೂರ್ತಿಯ ದೇಹವು ಉರುಳಿ ಬಿದ್ದಿತ್ತು ; ಸರಿಯೆನ್ನುವಂತೆ ಉರುಳಿ ಬಿದ್ದ ಗುಡಿಯ ಗೋಡೆಯೂ, ಮುಂಭಾಗದಲ್ಲಿ (ಮುರಿದು) ಹರಡಿ ಬಿದ್ದಿದ್ದ ಗೋಪುರವೂ ಕಾಣಲಾಗಿ, ಅವನ್ನು ಕಂಡ ಜೈನರೆಲ್ಲರು ಗಂಡಸುತನವೇ ನಾಶವಾಗಿ, ಭಯಗೊಂಡು ನಮಸ್ಕಾರ ಮಾಡಿದರು. ಪುರಾತನರಾದವರ ಕಥೆಗಳನ್ನು ಸ್ವೀಕರಿಸಿ ಹೆಮ್ಮೆಗೊಳ್ಳುವುದೇನು ? ಈಗಳೇ ಮುಂದು ವರೆದು ನನ್ನ ಸಾಹಸದ ರೀತಿಯನ್ನು ತೋರಿಸುತ್ತೇನೆ. ೫೯–೬೦. ಬಿನ್ನಾಣದಿಂದ ಕೂಡಿದ ಮೊರಟನ ಬಂಕಿದೇವನ ಆಳಾದ ನನಗೆ, ದೃಢವಾದ ವೀರಶೈವ ಭಕ್ತನಿಗೆ ಬಿಡು ಇದೇತರ ಆತಂಕ ! ನನ್ನ ಶಿರಸ್ಸನ್ನು ಈ ಕೂಡಲೇ ಕತ್ತರಿಸಿ ಇಳುಪಿ ಏಳುದಿನಗಳ ವರೆಗೆ ಭೂಮಂಡಲಕ್ಕೆಲ್ಲ ಅದ್ಭುತವಾಗುವಂತೆ ಸಾಮರ್ಥ್ಯದಿಂದ ಈ ಭೂಮಿಯಲ್ಲಿ ಮೆರೆಯಿಸುತ್ತ ಪುನಃ ಅದನ್ನು ಪಡೆಯುತ್ತೇನೆ. (ಮುಂಡದೊಡನೆ ಜೋಡಿಸಿ ಜೀವ ವನ್ನು ಪಡೆಯುತ್ತೇನೆ.) ಆಮೇಲೆ ಈ ಜಿನಾಲಯ ಸಮೂಹವನ್ನೆಲ್ಲ ಒಂದೂ ಉಳಿಯ ದಂತೆ ಒಡೆದು ಹಾಕುತ್ತೇನೆ, ಗರ್ವದಿಂದ ಸೊಕ್ಕಿ ಹೋಗಿರುವ ; ಈ ಜಿನ ವ್ರತ ನಿಷ್ಠ ರಾಗಿರುವವರ ಹಣೆಯ ಬರಹವನ್ನೇ ಒರೆಸಿ ಹಾಕುತ್ತೇನೆ. ಇಂತಿರುವುದೇ ನನ್ನ ವ್ರತ ;

ವ॥ ಎಂದು ವಿಜೃಂಭಿಸಿ ಪೂಣ್ಕೆಗೆಯ್ದಾ ಜಿನಮತತೃಣಧಾಮಧೂಮಧ್ವಜನ ನುಡಿಯ ನೊಡಂಬಟ್ಟು ಶವಣಮುಖ್ಯಂ ತನ್ನ ಗುರುಗಳ್ಮೊದಲಾದರೆಲ್ಲರುಮಂ ಬರಿಸುತವರ್ಗೂಡಿ ಗೊಂದಣಿಸಿ ನಿಂದು ಶೈವನ ಪಂಥದಳವಂ ಕಾಣ್ಬೆನೆಂದು ನೋಡುತ್ತುಮಿರ್ದನಾವಾರ್ತೆಗೇಳ್ದು—

ಧರಣೀಶಂ ಬಿಜ್ಜಳಂ ತನ್ನಖಿಳ ಸಚಿವ ಸಾಮಂತ ಸೇನಾಧಿನಾಥಾ
ದ್ಯರಿನಾಗಳ್ಕೂಡಿ ಬಂದಾ ಶರಣನಿದಿರೊಳೊಪ್ಪಿರ್ದನಂತಲ್ಲಿಗತ್ಯಾ
ದರದಿಂದೇಳ್ತಂದು ಸತ್ಯಾನ್ವಿತ ನಿರುಪಮಸಾಮರ್ಥ್ಯಸಂಪನ್ನ ಮಾಹೇ
ಶ್ವರಯುಕ್ತಂ ಭಕ್ತರೊಡ್ಡೋಲಗದೊಳೆಸೆದು ನೋಡುತ್ತಮಿರ್ದಂ ವೃಷೇಂದ್ರಂ ೬೧

ಪೌರಜನಮೀಕ್ಷಿಸುತ್ತಿರೆ
ಧೀರಂ ಗಣಸಭೆಗೆ ಮಣಿದು ಪೊಡಮಟ್ಟು ದರ
ಸ್ಮೇರರುಚಿ ತುಳ್ಕೆ ವದನಾಂ
ಭೋರುಹದೊಳ್ಜಡಿದು ಖಡ್ಗಮಂ ಕರತಳದೊಳ್ ೬೨

ಪಟುರವದಿಂದೆ ಬೊಬ್ಬೆಗುಡುತಬ್ಬರಿಸುತ್ತೆಡಗೆಯ್ಯೊಳೊತ್ತಿ ಸಂ
ಘಟಿಸಿ ಕಚೌಘಮಂ ಪಿಡಿದು ಖಡ್ಗಮನಾತ್ಮಗಳಕ್ಕೆ ಸಾರ್ಚುತು

ಇದೇ ಮತ ; ಇದೇ ಕಾರ್ಯಗೌರವ (ಕಾರ್ಯೋದ್ಯೋಗ). ವ॥ ಹೀಗೆಂದು ಆರ್ಭಟಿಸಿ ಪ್ರತಿಜ್ಞೆ ಮಾಡಿ, ಆ ಜೈನ ಮತವೆಂಬ ಹುಲ್ಲಿನ ಮನೆಗೆ ಬೆಂಕಿಯಂತಿರುವ (ಧೂಮವೇ ಧ್ವಜವಾಗಿ ಉಳ್ಳ ಬೆಂಕಿಯಂತಿರುವ) ಏಕಾಂತದ ರಾಮಯ್ಯನ ನುಡಿಯನ್ನು ಒಪ್ಪಿಕೊಂಡು; ಶ್ರವಣ ಸಂನ್ಯಾಸಿಗಳಲ್ಲಿ ಮುಖ್ಯನಾದವನು ತನ್ನ ಗುರುಗಳೇ ಮೊದಲಾದ ಎಲ್ಲ ಜೈನರನ್ನೂ ಬರಮಾಡಿಕೊಂಡು ಅವರೆಲ್ಲರನ್ನೂ ಗುಂಪಾಗಿ ಸೇರಿಸಿ ನಿಂತುಕೊಂಡು (ಈಗ) ಶಪಥದ ಸಾಮರ್ಥ್ಯವನ್ನು ಕಾಣುತ್ತೇನೆಂದು ನೋಡುತ್ತಿದ್ದನು. ಈ ಸುದ್ದಿಯನ್ನು ಕೇಳಿ ೬೧. ಭೂಮೀಶ್ವರನಾದ ಬಿಜ್ಜಳನು ತನ್ನ ಸಮಸ್ತ ಸಚಿವ, ಸಾಮಂತ, ಸೇನಾಧಿಪತಿ ಇವರೇ ಮೊದಲಾದವರಿಂದ ಕೂಡಿಕೊಂಡು ಬಂದು, ಆ ಶರಣನಾದ ಏಕಾಂತದ ರಾಮಯ್ಯನೆದುರಿನಲ್ಲಿ ಒಪ್ಪುತ್ತಿದ್ದನು. ಅದೇ ರೀತಿ ಅಲ್ಲಿಗೆ ಅತ್ಯಂತ ಪೂಜ್ಯ ಭಾವದಿಂದ, ಸತ್ಯದಿಂದ ಕೂಡಿದವನೂ, ಅನುಪಮ ಸಾಮರ್ಥ್ಯವುಳ್ಳವನೂ, ಮಾಹೇಶ್ವರರುಗಳಿಂದ ಕೂಡಿದವನೂ ಆದ ಬಸವೇಶ್ವರನು ಬಂದು ಭಕ್ತ ಸಮೂಹದವರ ಸಭೆಯಲ್ಲಿ ಪ್ರಸನ್ನ ಭಾವದಿಂದ ನೋಡುತ್ತಿದ್ದನು. ೬೨–೬೩. ಪಟ್ಟಣದ ಜನರೆಲ್ಲರೂ ನೋಡುತ್ತಿದ್ದ ಹಾಗೆಯೇ ಧೈರ್ಯಶಾಲಿಯಾದ ಆ ಏಕಾಂತ ರಾಮಯ್ಯನು ಶಿವಭಕ್ತರುಗಳ ಸಭೆಗೆ ಬಾಗಿ ಸಾಷ್ಟಾಂಗ ಪೂರ್ವಕ ನಮಸ್ಕರಿಸಿ, ಮುಖ ಕಮಲದಲ್ಲಿ ಮಂದಹಾಸದ ಕಾಂತಿಯು ತುಳುಕುತ್ತಿರಲು, ಕಯ್ಯಲ್ಲಿ ಖಡ್ಗವನ್ನು ಹಿಡಿದು ಝಳಪಿಸುತ್ತ, ಸಮರ್ಥವಾದ ಧ್ವನಿಯಿಂದ ಬೊಬ್ಬೆಯಿಟ್ಟು ಗರ್ಜಿಸುತ್ತ, ಎಡಗೈಯಿಂದ ಗಟ್ಟಿಯಾಗಿ ದುಂಡುಗೂಡಿಸಿದ ಕೂದಲುಗಳ ಸಮೂಹವನ್ನು ಹಿಡಿದು, (ಬಲಗೈಯ) ಖಡ್ಗವನ್ನು ತನ್ನ

ತ್ಕಟಿಸಿ ಕಡಂಗಿ ಮಸ್ತಕಮನಾರ್ದರಿದಾಕ್ಷಣಮಾ ಶಿರಂ ಪರಿ
ಸ್ಫುಟರವದಿಂದೆ ಬೊಬ್ಬಿಱಿದು ಕೀರ್ತಿಸುತಿರ್ದುದು ವಾಮಹಸ್ತದೊಳ್ ೬೩

ಮುರಿದ [1]ಕುಡಿ[1] ಮೀಸೆ ಕುಣಿವು
ತ್ತಿರೆ, ಕೆಂಪಡರ್ದಕ್ಷಿ ತೊಳಗೆ ಬಿಱುನಗೆ ದಶನ
ಸ್ಫುರಿತರುಚಿನಿಟಿಲಭಸಿತ
ತ್ರಿರೇಖೆಗಳ್ಭ್ರುಕುಟಿಯೆಸೆಯೆ ಮಿಸುಪಾ ಶಿರಮಂ ೬೪

ಕಂಡಾಶ್ಚರ್ಯರ್ವಾನಾಳ್ದು ಕೆಯ್ಮುಗಿದನಾ ಭೂಪಾಲನಾನಂದದಿಂ
ಕೊಂಡಾಡುತ್ತೆಸೆದಿರ್ದನಲ್ಲಿ ವೃಷಭೇಂದ್ರಂ ಭಕ್ತರುತ್ಸಾಹದಿಂ
ತಂಡಂಬೆತ್ತರರೇ ವುಘೇಯೆನುತುಮಿರ್ದಪೌರವೃಂದಂ ಮನಂ
ಗೊಂಡತ್ಯದ್ಭುತಮಿಂತಿದೆಂದು ಪೊಗಳುತ್ತಿರ್ದತ್ತು ಸಂಪ್ರೀತಿಯಿಂ ೬೫

ಆ ಸಮಯದೊಳಖಿಳರ್ಜಯ ಜೀಯೆನೆ
ಭಾಸುರಶರಣಾವಳಿ ಭಲರೇಯೆನೆ
ನೆರೆದು ಗಣಂಗಳ್ ಕಡುನಲಿವುತ್ತಿರೆ
ಬಿರಿದಿನ ಕಹಳೆಗಳೊಡನುಲಿವುತ್ತಿರೆ
ಪಟುಪಟಹಧ್ವನಿ ಶಂಖನಿನಾದಂ
ಚಟುಲಮೃದಂಗದ ತಾಳದ ನಾದಂ
ಬೀಸುವ ಚಾಮರವೀಜನತತಿಗಳ್
ಸೂಸುವ ಸೀಗುರಿ ಲಾಸ್ಯದ ಗತಿಗಳ್
ಪೊಸರನ್ನದ ನಡೆತೋರಣದೋರಣ

ಕುತ್ತಿಗೆಯ ಮೇಲಿಟ್ಟು, ಅತ್ಯುಗ್ರತೆಯ ಭಾವದಿಂದ ಉತ್ಸಾಹಗೊಂಡು, ಗಟ್ಟಿಯಾಗಿ ಚೀರಿ ಕತ್ತರಿಸಿಕೊಂಡ ಆಕ್ಷಣವೇ ಶಿರಸ್ಸು ಪರಿಸ್ಫುಟವಾದ ಧ್ವನಿಯಿಂದ ಬೊಬ್ಬಿರಿಯುತ್ತ ವಾಮಹಸ್ತದಲ್ಲಿ ಸ್ತೋತ್ರ ಮಾಡತೊಡಗಿತು. ೬೪–೬೫. ಮುರಿದು ಹುರಿಗೊಳಿಸಿದ ತುದಿಮೀಸೆಗಳು ಕುಣಿಯುತ್ತಿದ್ದವು; ಕೆಂಪಾದ ಕಣ್ಣುಗಳು ಪ್ರಕಾಶಿಸುತಿದ್ದವು; ಗಟ್ಟಿಯಾದ ನಗೆ, ಹೊಳೆಯುತ್ತಿರುವ ಹಲ್ಲುಗಳ ಕಾಂತಿ, ಹಣೆಯಲ್ಲಿನ ಭಸ್ಮದ ಮೂರು ಬೆರಳುಗಳು, ಹುಬ್ಬುಗಳು—ಇವುಗಳಿಂದ ಶೋಭಿಸುತ್ತಿರುವ ಆ ಶಿರಸ್ಸನ್ನು ಭೂಪಾಲನಾದ ಬಿಜ್ಜಳ ಮಹಾರಾಜನು ಕಂಡು ಆಶ್ಚರ್ಯಗೊಂಡು ಆನಂದದಿಂದ ಕೈಮುಗಿದನು; ಬಸವೇಶ್ವರನು ಕೊಂಡಾಡುತ್ತ ಅಲ್ಲಿ ಶೋಭಿಸುತ್ತಿದ್ದನು; ಭಕ್ತರು ತಂಡ ತಂಡವಾಗಿ ಉತ್ಸಾಹದಿಂದ ಅರರೇ ! ಉಘೇ ! ! ಎನ್ನುತ್ತಿದ್ದರು; ಪೌರ ಜನರ ಸಮೂಹವು ಮನಸಾರ ಇದು ಅತ್ಯದ್ಭುತವಾದದ್ದು ಎಂದು ಅತ್ಯಂತ ಪ್ರೀತಿಯಿಂದ ಹೊಗಳುತ್ತಲಿತ್ತು. (ಮಂದಾನಿಲ ರಗಳೆಯ ಭಾಗ) ಆ ಸಮಯದಲ್ಲಿ ಸಮಸ್ತರೂ ಜಯ ಜೀಯ ಎನ್ನುತ್ತಿದ್ದರು. ಪ್ರಕಾಶಮಾನರಾದ

1 ಕೊನೆ(ಚ)

ಮೆಸೆದಿರೆ ಶರಣಮಹೋತ್ಸವಕಾರಣ
ಮೊಸಗೆಯ ಪೂವಲಿ ಕಳಶಂ ಕನ್ನಡಿ
ಮಿಸುಗುವ ನಂದಿಯ ಪಳಯಿ[1]ಗೆ ನಡೆಮುಡಿ
ಬಿರಿದು ಪೊಗಳ್ವ ಮಹಾಮಾಗಧತತಿ
ತರದಿಂ ಕೈವಾರಿಪ ಬುಧ ಸಂತತಿ
ಸೊಗಯಿಪ ವೀರಗಣಂಗಳ ಕಳಕಳ
ಮಗಲದ ನಾನಾ ಸಂಭ್ರಮಸಂಕುಳ
ಮಲರ್ದಿರೆ ತೊಳತೊಳಪಕ್ಷಿಗಳಿಂದಂ
ಸುಲಲಿತ ನಿಟಿಲ ಚಳಾಳಕದಂದಂ
ಬಡೆದೊಪ್ಪುತೆ ಕೆತ್ತುವ ಮೀಸೆಗಳಿಂ
ಮಿಡುಕೋಡದ ಪುರ್ಬಿನ ದೇಸೆಗಳಿಂ
ಪೊಗರುಗುವಮಳ ಕಪೋಲದ್ವಯದಿಂ
ಸೊಗಯಿಪ ಸಸ್ಮಿತ ರವದತಿಶಯದಿಂ
ಮೆಱೆವ ಶಿರಂ ತನ್ನೆಡಗೆಯ್ಯಗ್ಗಮಿರ್ದಿರೆ
ಕಱೆಗೊರಲನ ನುತಿಯಿಪ ರುತಿ ನಿಮಿರ್ದಿರೆ
ಬಲಗೆಯ್ಯೊಳ್ಕರವಾಳಂ ಜಡಿವುತೆ
ನೆಲೆವೆರ್ಚಿದ ಸಡಗರದಿಂ ನಡೆವುತೆ

ಶರಣರುಗಳ ಸಮೂಹವು ಭಲರೇ ! ಅನ್ನುತ್ತಿತ್ತು. ಶಿವಗಣಂಗಳೆಲ್ಲ ಸೇರಿ ಅತ್ಯಧಿಕವಾಗಿ ನಲಿದಾಡುತ್ತಿದ್ದರು. ಬಿರುದನ್ನು ಹೊಗಳುವ ಕಹಳೆಗಳು ಇವರೊಡನೆಯೇ ಕೂಗಿಡುತ್ತಿದ್ದುವು. ಸಮರ್ಥವಾದ ನಗಾರಿಗಳ ಧ್ವನಿ, ಶಂಖದ ನಿನಾದ, ಸೊಗಸಾದ ಮೃದಂಗದ, ತಾಳದ ನಾದ (ಉಂಟಾಗುತ್ತಿದ್ದವು). ಚಾಮರ ಮತ್ತು ಬೀಸಣಿಗೆಗಳು ಸಮೂಹಗೊಂಡು ಬೀಸಲ್ಪಡುತ್ತಿದ್ದವು. ಸೀಗುರಿಗಳು (ಮೂರ್ಛಾಲುಗಳು) ಬೀಸಲ್ಪಡುತ್ತಿದ್ದವು. ಗರೆವಿಡಿದು ಲಾಸ್ಯ ನಡೆಯುತ್ತಿತ್ತು. ನೂತನವಾದ ರತ್ನ ನಿರ್ಮಿತ ನಡೆ ದೋರಣವು ಶೋಭಿಸುತ್ತಿತ್ತು. ಮಹೋತ್ಸವಗೊಂಡ ಕಾರಣ ಶರಣರು ಪೂವಲಿಗೆದರುತ್ತಿದ್ದರು. ಕಳಶ, ಕನ್ನಡಿ, ಶೋಭಿಸುವ ನಂದಿಯ ಧ್ವಜ, ನಡೆ ಮಡಿಗಳ (ಉಪಚಾರ ಮಾಡುತ್ತಿದ್ದರು). ಬಿರುದುಗಳನ್ನು ಹೊಗಳುವ ಮಹಾಮಾಗಧರ ಸಮೂಹ, ಕ್ರಮವಿಡಿದು ಸ್ತೋತ್ರ ಮಾಡುವ ಜ್ಞಾನಿಗಳ ಸಮೂಹ, ಸೊಗಸಿನಿಂದ ಕೂಡಿದ ವೀರಶೈವ ಭಕ್ತ ಗಣಂಗಳ ಕಳಕಳ ಧ್ವನಿ ಅಗಲದಂತೆ ನಾನಾ ಬಗೆಯ ಸಂಭ್ರಮದ ಸಮೂಹ–ಇವೆಲ್ಲ ಉತ್ಸಾಹಗೊಂಡಿತ್ತು. (ಆ ಶಿವಪ್ಪ) ಪ್ರಕಾಶವಾನವಾಗಿ ಬೆಳಗುವ ಕಣ್ಣುಗಳಿಂದಲೂ, ಮನೋಹರವಾದ ಹಣೆಯಲ್ಲಿ ಕುಣಿದಾಡುವ ಮುಂಗುರುಳುಗಳು, ಅಂದವಾಗಿ ಒಪ್ಪುತ್ತಿದ್ದವು. ಕುಣಿಯುತ್ತಿರುವ ಮೀಸೆಗಳಿಂದಲೂ ಮಿಡುಕಾಟ ತಪ್ಪದಿರುವ ಹುಬ್ಬಿನ ಅಂದದಿಂದಲೂ, ಕಾಂತಿಯು ಹೊರ ಹೊಮ್ಮುವ

---

1 ವಿ(ಚ)

ಪರವಾದಿಗಳಿದಿರೊಳ್ಮೊನೆದೋಱುತೆ
ಕರಖಡ್ಗವ ಚಿಮ್ಮುತೆ ನಲವೇಱುತೆ
ಗಣಸಂಕುಳಮಂ ಬಲವರುತೊಲವಿಂ
ಕುಣಿಕುಣಿದಾಡುತೆ ಪಾಡುತೆ ಪಲವಂ
ತಲೆ ನೇಮಿಸಿದಭಿನಯಮಂ ಪಿಡಿವುತೆ
ತಲೆ ಜತಿಗುಡೆ ನರ್ತಿಸುತುಂ ನಡೆವುತೆ
ಪುಟನೆಗೆವುತೆ ನಿಲುತಡ್ಡಂಬಾಱುತೆ
ನಟಿಸುತ್ತುಂ ಭ್ರಮರಿಗಳಂ ಬೀಱುತೆ
ಸುಳಿಸುಳಿದತ್ತಿತ್ತಂ ಪರಿವರಿವುತೆ
ಖಳಜನರಂಜುತ್ತಿರೆ ಪಲ್ಮೊರೆವುತೆ
ಜಿನಮತಜೈತ್ರಂ ಜನನುತಿಪಾತ್ರಂ
ಶಿವಗಣಮಿತ್ರಂ ಭುವನಪವಿತ್ರಂ
ಗುಣಮಣಿಸೂತ್ರಂ ಪ್ರಣುತಚರಿತ್ರಂ
ಸುಮತಿಸುಧಾಮಂ ಪ್ರಮಥಲಲಾಮಂ
ಪರಮತಭೀಮಂ ಪರಿಹೃತಕಾಮಂ

ಶ್ರೇಷ್ಠ ಕಪೋಲದ್ವಯದಿಂದಲೂ, ಸೊಗಸನ್ನುಂಟು ಮಾಡುವ ಮಂದಸ್ಮಿತದಿಂದ ಕೂಡಿದ ಧ್ವನಿಯ ಅತಿಶಯದಿಂದಲೂ, ಶೋಭಿಸುತ್ತಿರುವ ಶಿರಸ್ಸು (ಆ ಏಕಾಂತ ರಾಮಯ್ಯನ) ಎಡಗೈಯಿಂದ ಗಟ್ಟಿಯಾಗಿ ಹಿಡಿಯಲ್ಪಟ್ಟು (ಶೋಭಿಸುತ್ತಿತ್ತು.) (ಬಾಯಿಂದ) ಪರಶಿವನನ್ನು ಸ್ತೋತ್ರ ಮಾಡುವ ಧ್ವನಿಯುಂಟಾಗುತ್ತಿತ್ತು. ಬಲ ಗಯ್ಯಲ್ಲಿ ಹಿಡಿದ ಖಡ್ಗವು ಝಳಪಿಸಲ್ಪಡುತ್ತಿತ್ತು. ಮಿತಿಮೀರಿದ ಸಡಗರದಿಂದ ನಡೆಯುತ್ತ, ಪರವಾದಿಗಳ ಎದುರಿನಲ್ಲಿ ಸಾಮರ್ಥ್ಯವನ್ನು ಪ್ರಕಟಿಸುತ್ತ, ಕೈಯಲ್ಲಿನ ಖಡ್ಗವನ್ನು ಚಿಮ್ಮುತ್ತ, ಉತ್ಸಾಹಗೊಳ್ಳುತ್ತ, ಪ್ರೀತಿಯಿಂದ ಶಿವಗಣ ಸಮೂಹವನ್ನು ಪ್ರದಕ್ಷಿಣೆ ಮಾಡುತ್ತ, ಕುಣಿ ಕುಣಿದು ಆಡುತ್ತ, ಹಲವಾರು ಬಗೆಯಲ್ಲಿ ಹಾಡುತ್ತ, (ಶೋಭಿಸುತ್ತಿತ್ತು). (ಕೈಯಲ್ಲಿ ಹಿಡಿದ) ತಲೆಯು ಆಜ್ಞಾಪಿಸುತ್ತಿದ್ದ ರೀತಿಯಲ್ಲಿ ಅಭಿನಯವನ್ನು ಹಿಡಿದಾಡುತ್ತ, ತಲೆಯು ಜೊತೆಗೊಡುತ್ತಿರಲು ನರ್ತನ ಮಾಡುತ್ತ, ನಡೆಯುತ್ತ, ಪುಟ ನೆಗೆದಾಡುತ್ತ, ನಿಂತುಕೊಂಡು ಅಡ್ಡಲಾಗಿ ಹಾರುತ್ತ ನಟನೆ ಮಾಡುತ್ತ, ಭ್ರಮರಿ (ಸುತ್ತುವಿಕೆಯ ಭಂಗಿ) ಯನ್ನು ಬೀರುತ್ತ, ಅತ್ತಿತ್ತ ಸುಳಿಸುಳಿದು ಓಡಾಡುತ್ತ, ದುಷ್ಟರಾದ ಜನರು ಅಂಜುವಂತೆ ಹಲ್ಲುಗಳನ್ನು ಕಡಿದು ಧ್ವನಿ ಮಾಡುತ್ತ ಜೈನ ಮತಕ್ಕೆ ಚೈತ್ರಮಾಸದಂತಿರುವ, ಜನರ ಸ್ತೋತ್ರಕ್ಕೆ ಪಾತ್ರನಾದ, ಶಿವಭಕ್ತಗಣ ಗಳಿಗೆ ಮಿತ್ರನೆನಿಸಿದ, ಭೂಲೋಕಕ್ಕೆಲ್ಲ ಪವಿತ್ರನೆನಿಸಿದ, ಸದ್ಗುಣವೆಂಬ ರತ್ನಗಳ ಮಧ್ಯದ ದಾರವೆನಿಸಿದ, ಶ್ಲಾಘ್ಯವಾದ ಚರಿತ್ರೆಯುಳ್ಳ, ಸದ್ಬುದ್ಧಿಗೆ ಮೂಲಸ್ಥಾನನಾದ, ಪ್ರಮಥ ಶ್ರೇಷ್ಠನೆನಿಸಿದ, ಪರ ಮತಗಳಿಗೆ ಭಯಂಕರನೆನಿಸಿದ, ಮನ್ಮಥನನ್ನು ನಾಶ

ಮಹಿಮಸಮುದ್ರಂ ಮಹಿತಳರುದ್ರಂ
ಸಡಗರದಿಂದಂ ನಡೆತರುತಿರ್ದಂ

ವ॥ ಇಂತು ಪಿರಿಯ ಸಂಭ್ರಮದಿಂ ಲೋಕೈಕವೀರನೇಕಾಂತರಾಮವಿಭು ಕಲ್ಯಾಣಕಟಕದ ಸೋಮಸೂರ್ಯವೀಥಿಗಳೊಳ್ಮೆಱೆದಿಂತೇಳ್ತರುತ್ತುಮೇಳುಂ ದಿನಂಗಳಂ ಕಳಿದು ಮೊದಲ ಶಿವಮಂದಿರಕ್ಕೆ ಮಗುಳ್ದು ಬಂದಲ್ಲಿ ಪನ್ನತಿಕೆಯಿಂ ನಿಂದು ಜೈನಮುನಿಗಳಂ ನೋಡಿ—

ಎಲೆ ಜೈನಾಥಮರಿರ ನಿಮ
ಗೊಲವಿಂದಾನಿತ್ತ ಭಾಷೆ ಸಂದುದೆನುತ್ತುಂ
ತಲೆದೂಗಿಸುತಖಿಳರನು
ಜ್ವಲಮತಿ ನುಡಿದಾರ್ದು ಚಿಮ್ಮುತಂ ಕರವಾಳಂ ೬೬

ಎಡಗೆಯ್ಯೊಳಾಂತ ಶಿರಮಂ
ಮುಡಿವಿಡಿದು ಕಬಂಧಕಂಧರಕ್ಕಂಟಿಸೆ ತ
ಳ್ತೊಡನೆಂದಿನಂತೆ ಪತ್ತಿದು
ದಿಡಿದತಿ ಮುದದಿಂದೆ ಪೊಗಳ್ದರಾ ಶಿವಶರಣರ್ ೬೭

ಕೊರಗೆ ಪರವಾದಿವದನಾಂ
ಬುರುಹಂ ನಲವೆಯ್ದೆ ಭಕ್ತನಯನೋತ್ಪಳಮೀ
ಶ್ವರಮತಸುಧಾಬ್ಧಿ ವರ್ಧಿಸೆ
ಕರಮೆಸೆದುದು ತನ್ಮುಖೇಂದು ನಗೆವೆಳ್ಗದಿರಿಂ ೬೮

ಗೊಳಿಸಿದ, ಸಮುದ್ರದೋಪಾದಿಯಲ್ಲಿ ಮಹಿಮೆಯುಳ್ಳ, ಭೂಲೋಕದ ರುದ್ರನೆನಿಸಿದ ಆ ಏಕಾಂತ ರಾಮಯ್ಯನು (ಶಿರವನ್ನು ಕತ್ತರಿಸಿಕೊಂಡ ಏಕಾಂತ ರಾಮಯ್ಯನು) ಸಂಭ್ರಮದಿಂದ ನಡೆದು ಬರುತ್ತಿದ್ದನು. ವ॥ ಈ ರೀತಿ ಹೆಚ್ಚಾದ ಸಂಭ್ರಮದಿಂದ ಲೋಕೈಕ ವೀರನಾದ ಏಕಾಂತ ರಾಮ ಪ್ರಭುವು ಕಲ್ಯಾಣ ಪಟ್ಟಣದ ಸೋಮ ಸೂರ್ಯ ಬೀದಿಗಳಲ್ಲಿ ಮೆರೆಯುತ್ತ ಈ ರೀತಿ ನಡೆದು ಬರುತ್ತ ಏಳು ದಿನಗಳು ಕಳೆದು ಮೊದಲಿನ ಶಿವಮಂದಿರಕ್ಕೆ ತಿರುಗಿ ಬಂದು ಅಲ್ಲಿ ಜೈನಮುನಿಗಳನ್ನು ನೋಡಿ ೬೬. ಎಲೈ ಪರಾಕ್ರಮ ದಿಂದ ನಿಂತ ಜೈನಾಥಮರುಗಳಿರಾ, ನಿಮಗೆ ಪ್ರೀತಿಯಿಂದ ನಾನು ಕೊಟ್ಟ ಶಪಥವು ನೆರವೇರಿತು ಎಂದೆನ್ನುತ್ತ ಉಜ್ವಲಮತಿಯಾದ ಅವನು ಎಲ್ಲರನ್ನೂ ತಲೆದೂಗಿಸಿ, ನುಡಿದು ಬೊಬ್ಬಿರಿದು ಖಡ್ಗವನ್ನು ಆಡಿಗೆಸೆದು, ಎಡಗೈಯಲ್ಲಿ ಹಿಡಿದ ಶಿರಸ್ಸನ್ನು ಜುಟ್ಟು ಹಿಡಿದು ಮುಂಡದ ಕುತ್ತಿಗೆಗೆ ಅಂಟಿಸಲಾಗಿ ಅದು ಅಂಟಿಕೊಂಡು ಎಂದಿನಂತೆ ಗಟ್ಟಿಯಾಗಿ ಹಿಡಿದು ಹತ್ತಿಕೊಂಡಿತು. ಆ ಶಿವಶರಣರೆಲ್ಲ ಸಂತೋಷದಿಂದ ಹೊಗಳಿದರು. ೬೮. ಪರವಾದಿಗಳ ಮುಖಕಮಲಗಳು ಕೊರಗಿದವು. ಭಕ್ತರುಗಳ ಉತ್ಪಲದಂತಿರುವ ಕಣ್ಣುಗಳು ಸಂತೋಷಗೊಂಡವು. ಶಿವಮತವೆಂಬ ಕ್ಷೀರಸಮುದ್ರವು ಉಕ್ಕಿತು. ಹೀಗೆ ಆ ಏಕಾಂತ ರಾಮಯ್ಯನ ಮುಖವೆಂಬ ಚಂದ್ರನು ನಗೆಯೆಂಬ

ಶರಣಾರ್ಥಿರವಂಗುಡುತುಂ
ಶರಣರ್ಗೆಸೆದಿರ್ಪ ರಾಮನಾಥನ ಚರಣಾಂ
ಬುರುಹಕ್ಕೆ ಸೋಲ್ತು ಜಿನಮತ
ಗುರುಗಳ್ಪಣಿದಿತ್ತರಲ್ಲಿ ಜಯಪತ್ರಿಕೆಯಂ ೬೯

ವ॥ ಆ ಜಯಪತ್ರಿಕೆಯನಾ ನರೇಂದ್ರನ ಕೆಯ್ಯೊಳಿತ್ತು ತನಗೆ ಪೊಡವಟ್ಟಿರ್ದ ಜಿನತಾಪಸರ ಪಣೆಗಳೊಳ್ನಂದಿಮುದ್ರೆಯನೊತ್ತಿ ಮತ್ತಮಿರದೆ—

ಪೆಸರ್ಗೊಂದುಂ ಜಿನಗೇಹವಿಲ್ಲದವೊಲಾ ಕಲ್ಯಾಣದೊಳ್ ಜೈನಗೇ
ಹಸಮೂಹಂ ಬಯಲಾಗೆ ನುರ್ಗಿಸಿ ಜಿನಾನೀಕಂ ಪಡಲ್ವಟ್ಟು ಮ
ಣ್ಮಸಿಯಪ್ಪಂತಿರೆ ಪೋಳ್ದು ಸೀಳ್ದುರುಪಿ ತೇಜಃಸ್ಫೂರ್ತಿ ಸತ್ಕೀರ್ತಿವೆ
ತ್ತೆಸೆದೇಕಾಂತದ ರಾಮದೇವವಿಭುವಿರ್ದಂ ಭಕ್ತವೃಂದಾನ್ವಿತಂ ೭೦

ಇಂತೊಲ್ದೇಕಾಂತರಾಮಪ್ರಭು ನೆಗಳ್ದ ಮಹಾಕಾರ್ಯದಾಶ್ಚರ್ಯಮಂ ಕಂ
ಡೀತಿಂತೆಂಬೂಹೆಗಿಂಬಾಗದ ಮುದದೊದವಂ ತಾಳ್ದು ಸದ್ಭಕ್ತಿಯುಕ್ತ
ಸ್ವಾಂತಂ ತತ್ಪಾದಪದ್ಮಕ್ಕೆಜಗಿ ಪೊಗಳ್ದವರ್ಗೊಡಿ ಸಂಪ್ರೀತಿಯಿಂ ಶು
ದ್ಧಾಂತಕ್ಕೇಳ್ತಂದು ಪೂಜಾರತಿಯೊಳೆಸೆದನುದ್ವೀತತಂದ್ರಂ ವೃಷೇಂದ್ರಂ ೭೧

ಬೆಳದಿಂಗಳಿನಿಂದ ಅತ್ಯಧಿಕವಾಗಿ ಶೋಭಿಸುತ್ತಿತ್ತು. ೬೯. ಶರಣರ ಸಮೂಹಕ್ಕೆ 'ಶರಣಾರ್ಥಿ' ಎಂಬ ಧ್ವನಿಯನ್ನುಂಟು ಮಾಡುತ್ತ, ಶೋಭಿಸುತ್ತಿರುವ ಏಕಾಂತ ರಾಮಯ್ಯನ ಚರಣಕಮಲಗಳಿಗೆ ಸೋತ ಜೈನ ಮತದ ಗುರುಗಳು (ಆವನಿಗೆ) ನಮಸ್ಕಾರ ಮಾಡಿ, ಆಗ ಜಯ ಪತ್ರಿಕೆಯನ್ನು (ಬರೆಯಿಸಿ) ಕೊಟ್ಟರು. ವ॥ ಆ ಜಯ ಪತ್ರಿಕೆಯನ್ನು ಆ ಬಿಜ್ಜಳ ನರೇಂದ್ರನ ಕೈಯಲ್ಲಿ ಕೊಟ್ಟು, ತನಗೆ ನಮಸ್ಕಾರ ಮಾಡಿದ ಜೈನ ಸನ್ಯಾಸಿಗಳ ಹಣೆಯ ಮೇಲೆ ನಂದಿಯ ಮುದ್ರೆಯನ್ನೊತ್ತಿ ಮತ್ತು ತಪ್ಪದೆ ೭೦. ಆ ಕಲ್ಯಾಣ ನಗರದಲ್ಲಿ ಹೆಸರಿಗೆ ಒಂದೂ ಕೂಡ ಜೈನ ಬಸದಿಗಳು ಉಳಿಯದಂತೆ ಮಾಡಿ, ಜೈನರ ಮನೆಗಳ ಸಮೂಹವು ಬಯಲಾಗಿ ಹೋಗುವಂತೆ ನುಗ್ಗು ಮಾಡಿಸಿ, ಜಿನ ಪ್ರತಿಮೆಗಳು ಚೆಲ್ಲಾಪಿಲ್ಲಿಗೊಂಡು ಮಣ್ಣುಮಸಿಯಾಗುವಂತೆ, ಹೋಳು ಮಾಡಿಸಿ, ಸೀಳಿಸಿ, ಉರಿಗೆ ಹಾಕಿಸಿ, ತೇಜಸ್ಸಿನ ಸ್ಫೂರ್ತಿಯಿಂದ ಯಶಶ್ಶರೀರಿ ಯಾಗಿ ಶಿವಭಕ್ತ ಸಮೂಹದೊಡನೆ ಏಕಾಂತದ ರಾಮದೇವ ವಿಭುವು ಇರುತ್ತಿದ್ದನು. ೭೧. ಹೀಗೆ ಒಲಿದು ಏಕಾಂತದ ರಾಮವಿಭುವು ಪ್ರಕಟಿಸಿದ ಮಹಾಕಾರ್ಯದ ಆಶ್ಚರ್ಯ ವನ್ನು ಕಂಡು ಹಾಗೆ ಹೀಗೆ ಎಂಬ ಊಹೆಗೆ ಕಾರಣವಾಗದ ಸಂತೋಷಾಧಿಕ್ಯವನ್ನು ನಿರಾಲಸ್ಯ ಭಾವದ ಬಸವೇಶ್ವರನು ಶ್ರೇಷ್ಠ ಭಕ್ತಿಯಿಂದ ಕೂಡಿದ ಮನಸ್ಸುಳ್ಳವನಾಗಿ, ಆ ರಾಮವಿಭುವಿನ ಪಾದಗಳಿಗೆ ನಮಸ್ಕರಿಸಿ ಹೊಗಳಿ, ಅವರೆಲ್ಲರನ್ನೊಡಗೊಂಡು, ಅತಿ ಪ್ರೀತಿಯಿಂದ ಅಂತಃಪುರಕ್ಕೆ ಹೊರಟು ಬಂದು ಶಿವಪೂಜಾ ಸಂಭ್ರಮದಲ್ಲಿ

ಮಾರುಡಿಗೆನಾಚಿದೇವಂ
ತೇರಸರೊಡಗೂಡಿ ಪೇಜ಼್ದ ಸತ್ಕಥೆಯನಿದಂ
ಧಾರಿಣಿಯೊಳಾಲಿಪರ್ಗೆ ಪು
ರಾರಿ ಜಯಶ್ರೀಯನಮಿತಸುಖಮುಂ ಮಾಳ್ಪಂ ೭೨

ಸೋಮನಾಥ ಸುಕಥಾಸುರದ್ರುಮಂ
ಭೂಮಿಯಲ್ಲಿ ಸಲೆ ಕೇಳ್ವ ಸದ್ಬುಧ
ಸ್ತೋಮದಿಷ್ಟಫಲಮೀಯೆ ನಾಣ್ಚಿ ದಿ
ವ್ಯಾಮರದ್ರುಮರವಟ್ಟುದೆನ್ನಿರೆ ೭೩

ವೈಜಕಾಂಬೆಯ ಮಹಾಚರಿತ್ರಮಂ
ವ್ಯಾಜಮಿಲ್ಲದೊಲವಿಂದೆ ಕೇಳ್ದವ
ರ್ಗೋಜೆವೆತ್ತು ಸಕಲೇಪ್ಸಿತಂಗಳಂ
ರಾಜರಾಜಸಖನೀವನೀಶ್ವರಂ ೭೪

ಏಕಾಂತರಾಮದೇವ ಮ
ಹಾಕಥನಮನಾವನೋದುವಂ ಭಕ್ತಿಯೊಳೊ
ಲ್ದಾಕರ್ಣಿಪನಾವನವಂ
ಲೋಕೋತ್ತರ ಸುಖಮನತುಳ ಯಶಮುಂ ಪಡೆವಂ ೭೫

ಕರಿವರಗಮನೇ ಸುರಪರಶಮನೇ ನಿರವಧಿಕೀರ್ತಿಯುತೇ
ಹರಿನತಚರಣೇ ಸುರುಚಿರಭರಣೇ ಪರಮಶಿವಾನುಗತೇ

ಶೋಭಿಸಿದನು. ೭೨. ಮಾರುಡಿಗೆಯ ಮಾಚಿದೇವನು ತೇರಸರಿಂದೊಡ ಗೂಡಿ ಮೆರೆದ ಈ ಸತ್ಕಥೆಯನ್ನು ಲೋಕದಲ್ಲಿ ಕೇಳುವವರಿಗೆ ಪರಮೇಶ್ವರನು ಜಯಶ್ರೀಯನ್ನೂ ಅನಂತ ಸುಖವನ್ನೂ ಉಂಟು ಮಾಡುವನು. ೭೩. ಪುಲಿಗೆರೆಯ ಸೋಮನಾಥನ ಸತ್ಕಥೆಯೆಂಬ ಕಲ್ಪವೃಕ್ಷವು ಭೂಮಿಯಲ್ಲಿ ಇದನ್ನು ಕೇಳುವ ಶ್ರೇಷ್ಠ ವಿದ್ವಾಂಸ ಸಮೂಹದ ಇಷ್ಟವಾದ ಫಲವನ್ನು ಕೊಡುತ್ತಿರಲು ಸ್ವರ್ಗಲೋಕದ ಕಲ್ಪವೃಕ್ಷವು ನಾಚಿ ಮರವಾಯಿತು, ಎನ್ನಿರೇ! ೭೪. ವೈಜಕಾಂಬೆಯ ಮಹಾ ಚರಿತ್ರೆಯನ್ನು ಯಾವ ನೆಪವೂ ಇಲ್ಲದೆ ಪ್ರೀತಿಯಿಂದ ಕೇಳಿದವರಿಗೆ ಪ್ರಕಾಶಮಾನವಾದ ಸಕಲ ಇಷ್ಟಾರ್ಥಗಳನ್ನು ಕುಬೇರ ಮಿತ್ರನಾದ ಶಿವನು ಕೊಡುವನು. ೭೫. ಏಕಾಂತದ ರಾಮಯ್ಯನ ಮಹಾ ಕಥೆಯನ್ನು. ಯಾವನು ಓದುವನೋ, ಭಕ್ತಿಯಿಂದ ಒಲಿದು ಯಾವನು ಕೇಳುವನೋ ಅವನು ಲೋಕೋತ್ತರವಾದ ಸುಖವನ್ನೂ ಅಸದೃಶ ಯಶಸ್ಸನ್ನೂ ಪಡೆಯುವನು. ೭೬. ಗಜ ಶ್ರೇಷ್ಠದ ನಡಿಗೆಯಂತೆ ನಡಿಗೆಯುಳ್ಳವಳೇ, ದೇವತೆಗಳ ಶತ್ರು

ವಿರಚಿತಭುವನೇ ಪರಿಹೃತಸವನೇ ಮುರರಿಪುಮುಖ್ಯನತೇ
ವರಗುಣಸರಸೀ ಪುರಹರನರಸೀ ಪೊರೆ ಗಿರಿರಾಜಸುತೇ ೭೬

ಇದು ವಿನಮದಖಿಳ ಸುರಾಸುರೇಂದ್ರಮಕುಟತಟಘಟಿತ ಮಣಿಗಣಾಗಣಿತ ರುಚಿನಿಚಯ
ತರುಣಾರುಣಾತಪಪರಿಲಸಿತ ಪರಮ ಶಿವಲಿಂಗ ಪಾದಾರವಿಂದಪರಾಗಭಸಿತ
ಭಾಸುರಲಲಾಟಪಟ್ಟ ಸರಸಜನಮಾನಿತೋಭಯಕವಿತಾವಿಶಾರದ
ಶ್ರೀಷಡಕ್ಷರಿದೇವಭಕ್ತಿವಿರಚಿತ
ಶ್ರೀಮದ್ ಬಸವರಾಜವಿಜಯಮಹಾಪುರಾಣದೊಳೇಕಾಂತರಾಮದೇವವಿಜಯವರ್ಣನಂ

ಷಟ್ತ್ರಿಂಶಾಶ್ವಾಸಂ ಸಮಾಪ್ತಂ

ಅಂತು ಆಶ್ವಾಸ ೩೬ಕ್ಕೆ ಪದಗಣನೆ ೨೮೮೩ಕ್ಕೆ ಮಂಗಳಮಹಾ ಶ್ರೀ॥

ಗಳಾದ ರಾಕ್ಷಸರನ್ನು ಶಮನಗೊಳಿಸಿದವಳೇ, ಇಂದ್ರನಿಂದ ನಮಸ್ಕರಿಸಿಕೊಂಡ ಚರಣವುಳ್ಳವಳೇ, ಮನೋಹರವಾದ ಆಭರಣವನ್ನು ಹೊಂದಿರುವವಳೇ, ಪರಮ ಶಿವನೊಡನೆ ಕೂಡಿ ಕೊಂಡಿರುವವಳೇ, ಸಮಸ್ತ ಭುವನಗಳನ್ನು ನಿರ್ಮಿಸಿದವಳೇ, ದಕ್ಷನ ಯಜ್ಞನಾಶಕ್ಕೆ ಕಾರಣಳಾದವಳೇ, ಮುರ ವೈರಿಯಾದ ವಿಷ್ಣುವೇ ಮೊದಲಾದವರಿಂದ ನಮಸ್ಕರಿಸಿಕೊಳ್ಳುವವಳೇ, ಶ್ರೇಷ್ಠ ಗುಣಗಳಿಗೆ ಸರೋವರ ಸದೃಶಳಾದವಳೇ, ಪರಮೇಶ್ವರನ ರಾಣಿಯೇ, ಗಿರಿರಾಜ ಪುತ್ರಿಯೇ ರಕ್ಷಿಸು.

ಮೂವತ್ತಾರನೆಯ ಆಶ್ವಾಸವು ಸಮಾಪ್ತವಾಯಿತು.

ಸಪ್ತತ್ರಿಂಶಾಶ್ವಾಸಂ

(ಸೊಡ್ಡಳ ಚಾಚರಸರ ಕಥೆ)

ಶ್ರೀವಿಮಳಹಿಮನಗೇಂದ್ರಸು
ತಾವಿಳಸಿತಹಸಿತರುಚಿ ಸುಧಾಧವಳಿತದಂ
ತಾವಳಚರ್ಮಾಂಬರನಖಿ
ಳಾವನನೆಮಗೀಗೆ ಸೌಖ್ಯಮಂ ಶಿವಲಿಂಗಂ ೧

ವ॥ ಮತ್ತಮಾ ಕಲ್ಯಾಣಕಟಕದಲ್ಲಿ—

ಧೀರಂ ದಿವ್ಯಮಹತ್ವಸತ್ವಮಹಿತಂ ಭರ್ಗೋಪಮಂ ಭಾಸುರಾ
ಕಾರಂ ಕಾಮಹರಾಂಘ್ರಿಪದ್ಮಯುಗಳಧ್ಯಾನೈಕನಿಷ್ಠಂ ಶಿವಾ
ಚಾರಾಂಭೋರುಹಭಾಸ್ಕರಂ ಭವಹರಂ ಪ್ರಧ್ವಸ್ತಪಾಶಂ ಗುಣಾ
ಧಾರಂ ಶ್ರೀಗುರುಲಿಂಗಜಂಗಮಸಮಾನಪ್ರೇಮಪೂಜಾಪರಂ ೨

ಅಪುನರ್ಭವತಾಭವ್ಯಂ
ರಿಪುಷಡ್ವರ್ಗಪ್ರಹಾರಿ ಶಮದಮಸಾಂದ್ರಂ
ವ್ಯಪಗತತಂದ್ರಂ ಪರಮತ
ವಿಪಿನೋಗ್ರಕುಠಾರನತುಳ ಭುಜಬಳವಿಭವಂ ೩

ಉಗ್ರವಿಲೋಚನಂ ಭುವನಪೂರ್ಣಯಶಂ ಖಲಸಾಧುನಿಗ್ರಹಾ
ನುಗ್ರಹದಕ್ಷನಕ್ಷರನನಾಮಯಕಾಯನಜೇಯನೀಶಭ

ಸೊಡ್ಡಳ ಬಾಚರಸರ ಕಥೆ

೧. ಮಂಗಳಕರಳಾದ ಹಿಮವಂತನ ಮಗಳ ಮನೋಹರವಾದ ಮುಗುಳು ನಗೆಯೆಂಬ ಸುಧಾ ಕಾಂತಿಯಿಂದ ಶುಭ್ರಗೊಳಿಸಲ್ಪಟ್ಟ ಆನೆಯ ಚರ್ಮ (ಶಿವನು ಉಟ್ಟ ಆನೆಯಚರ್ಮ)ದ ಉಡಿಗೆಯುಳ್ಳವನೂ, ಸಮಸ್ತವನ್ನು ರಕ್ಷಿಸುವವನೂ ಆದ ಶಿವಲಿಂಗನು ನಮಗೆ ಸೌಖ್ಯವನ್ನು ಉಂಟುಮಾಡಲಿ. ವ॥ ಮತ್ತು ಆ ಕಲ್ಯಾಣ ನಗರದಲ್ಲಿ, ೨-೪. ಧೀರನೂ, ಶ್ರೇಷ್ಠವಾದ ಮಹಿಮೆಯ ಬಲದಿಂದ ಪೂಜ್ಯನೆನಿಸಿದವನೂ, ಶಿವನಿಗೆ ಸದೃಶನೆನಿಸಿದವನೂ, ಮನೋಹರವಾದ ಆಕಾರವುಳ್ಳವನೂ, ಶಿವನ ಪಾದಕಮಲಗಳನ್ನು ಧ್ಯಾನ ಮಾಡುವ ಏಕನಿಷ್ಠೆಯುಳ್ಳವನೂ, ಶಿವನ ಸಂಬಂಧವಾದ ಲಿಂಗಾಚಾರ, ಸಮಯಾಚಾರ, ಶಿವಾಚಾರ. ಗಣಾಚಾರ, ಭೃತ್ಯಾಚಾರಗಳೇ ಮೊದಲಾದ ಐದು ಆಚಾರಗಳೆಂಬ ಕಮಲಗಳಿಗೆ ಸೂರ್ಯಸ್ವರೂಪನೂ, ಜನನ ಮರಣಾತ್ಮಕ ಸಂಸಾರವನ್ನು ನಾಶಗೊಳಿಸಿದವನೂ, ಮಾಯಾ ಪಾಶವನ್ನು ನಾಶಗೊಳಿಸಿದವನೂ,

ಶ್ಲಾಘ್ರಣೆಯನ್ಯದೈವಪರಿಷಜ್ಜಳಭೃತ್ಕುಳಚಂಡಮಾರುತಂ
ವಾಗ್ರಮಣಾತಿದುರ್ಲಭ ಕಳಾನಿಧಿ ಸೊಡ್ಡಳ ಭಾಸ್ಕರಾಹ್ವಯಂ ೪

ನುತನಂದೀಶನ ಸರ್ವ
ಜ್ಞತೆ ಭೃಂಗಿಯ ಲಿಂಗನಿಷ್ಠೆ ವೀರನ ಶೌರ್ಯೋ
ನ್ನತಿ ಗೌತಮನ ದಧೀಚಿಯ
ತತ ತರ್ಕದ ಶಕ್ತಿ ಶಾಪದಧಟೆಂಬಿನಿತಂ ೫

ಗುರು ಸಂಪಾದಿಸಿ ನಿಜಕರ
ಸರಸಿರುಹದೊಳೊಂದುಗೂಡಿ ಪಡೆದಂ ನಿಜಮಂ
ಶರಣವರೇಣ್ಯನನೆಂದು
ರ್ವರೆ ಪೊಗಳೆ ವಿರಾಜಿಸಿರ್ದನತುಳಿತಮಹಿಮಂ ೬

ಸದ್ಗುಣಗಳಿಗೆ ಆಧಾರನೆನಿಸಿದವನೂ, ಮಂಗಳಕರರಾದ ಗುರುಲಿಂಗ–ಜಂಗಮದಲ್ಲಿ ಸಮಾನವಾದ ಪ್ರೇಮದಿಂದ ಪೂಜೆಮಾಡುವುದರಲ್ಲಿ ಆಸಕ್ತನಾದವನೂ, ಪುನಃ ಜನ್ಮ ತಾಳದೆ ಇರುವಿಕೆಯಿಂದ ಮಂಗಳಸ್ವರೂಪನೆನಿಸಿದ ವೈರಿಗಳೆನಿಸಿದ ಕಾಮ ಕ್ರೋಧ ಲೋಭ ಮದ ಮತ್ಸರಗಳೆನಿಸಿದ ಆರನ್ನೂ ನಾಶಗೊಳಿಸಿದವನೂ, ಮನಸ್ಸು ಮತ್ತು ಇಂದ್ರಿಯಗಳ ನಿಗ್ರಹದಿಂದ ಸಂಪೂರ್ಣನೂ, ಆಲಸ್ಯವನ್ನು ಪರಿಹರಿಸಿದವನೂ, ಪರಮತಗಳೆಂಬ ಮಹಾರಣ್ಯಕ್ಕೆ ಕೊಡಲಿಯಂತೆ ಇರುವವನೂ, ಅಸಮಾನವಾದ ಭುಜಬಲದ ಸಂಪತ್ತುಳ್ಳವನೂ, ಭಯಂಕರ ನೇತ್ರವುಳ್ಳವನೂ, ಭೂಮಂಡಲ ವನ್ನೆಲ್ಲ ತುಂಬಿದ ಯಶಸ್ಸುಳ್ಳವನೂ, ದುಷ್ಟಶಿಕ್ಷಣ, ಶಿಷ್ಟ ಪರಿಪಾಲನದಲ್ಲಿ ದಕ್ಷನೂ, ನಾಶರಹಿತನೂ, ರೋಗರಹಿತವಾದ ದೇಹವುಳ್ಳವನೂ, ಅನ್ಯರಿಂದ ಜಯಿಸಲ ಸಾಧ್ಯನೂ, ಈಶ್ವರ ಭಕ್ತರಲ್ಲಿ ಅಗ್ರಗಣ್ಯನೂ, ಅನ್ಯದೇವತೆಗಳ ಸಮೂಹವೆಂಬ ಮೋಡ ಗಳಸಮೂಹಕ್ಕೆ ಚಂಡಮಾರುತ ಸ್ವರೂಪನೂ, ಬ್ರಹ್ಮನಿಂದಲೂ ಹೊಂದಲಶಕ್ಯವಾದ ವಿದ್ಯೆಗಳಿಗೆ ನಿಧಿಯೆನಿಸಿದವನೂ ಆದ ಸೊಡ್ಡಭಾಸ್ಕರನೆಂಬ ಹೆಸರಿನವನು (ಇದ್ದನು). ೫-೬. (ಆ ಸೊಡ್ಡಳಬಾಚರಸನು) ಶ್ಲಾಘನಾದ ನಂದೀಶ್ವರನ ಸರ್ವಜ್ಞತೆ, ಭೃಂಗೀಶ್ವರನ ಲಿಂಗನಿಷ್ಠೆ, ವೀರಭದ್ರನ ಶೌರ್ಯದ ಉನ್ನತಿ, ಗೌತಮನ ವಿಸ್ತಾರವಾದ ತರ್ಕಶಕ್ತಿ, ದಧೀಚಿಯ ಶಾಪದಪರಾಕ್ರಮ ಎಂಬ ಇಷ್ಟನ್ನೂ ಸಂಪಾದಿಸಿ, ಸದ್ಗುರುವಿನ ನಿಜಕರ ಕಮಲದಲ್ಲಿ ಒಂದುಗೂಡಿದವನಾಗಿ (ಅಂದರೆ ಸದ್ಗುರುವಿನಿಂದ ಹಸ್ತಮಸ್ತಕ ಸಂಯೋಗ ದಿಂದ ಒಂದುಗೂಡಿದವನಾಗಿ) ಸತ್ಯ ಸಾಕ್ಷಾತ್ಕಾರವನ್ನು ಪಡೆದನು. ಈ ಶರಣಶ್ರೇಷ್ಠ ನೆಂದು ಸಮಸ್ತ ಭೂಮಂಡಲವೇ ಹೊಗಳುವಂತೆ ಅಸದೃಶ ಮಹಿಮೆಯಿಂದ ಕೂಡಿದ

ಶ್ರುತಿಸ್ಮೃತಿಪುರಾಣದೊಳ್ಶ್ರುತಿಷಡಂಗಶಾಸ್ತ್ರಂಗಳೊ
ಳ್ವಿತತವ್ಯದಿತಿಹಾಸದೊಳ್ಪತಿಯುಮೀಶನೇ ನೋಳ್ಪೊಡ
ಚ್ಯುತಾಜಮುಖರೆಲ್ಲರುಂ ಪಶುಗಳಿಂತದೇ ಸತ್ಯಮೆಂ
ದತರ್ಕ್ಯಮತಿ ವಾದದೊಳ್ಜಯಿಸಿ ವಾದಿಸಂದೋಹಮಂ ೭

ಸರಿಯಿಲ್ಲಭವಂಗೆಂದುಂ
ಚರಾಚರೌಘಪ್ರಪಂಚದೊಳ್ಮಿಗಿಲಿಲ್ಲಂ
ಕರಮಿದೆ ನನ್ನಿಯೆನುತ್ತುಂ
ಬಿರುದಿನ ಪಳಯಿಗೆಯನೆತ್ತಿಸುತ್ತೆಸೆದಿರ್ದಂ ೮

ವ॥ ಮತ್ತಂ—

ಮದವದ್ವೈಷ್ಣವಕುಂಭಿಕುಂಭಿರಿಪು ಮಾಯಾವಾದಸರ್ಪೋರಗಾ
ರಿ ದುರಂತಭ್ರಮಬೌದ್ಧವಾರ್ಧಿಬಡಬಂ ಚಾರ್ವಾಕಗರ್ವೋರ್ವಿಭೃ
ದ್ಭಿದರಂ ಜೈನವನೋಗ್ರದಾವಶಿಖಿ ಪಾಷಂಡಾಬ್ಜಕುಂಜೇಭನೆಂ
ಬದಟಂ ತಾಳ್ದು ವಿಜೃಂಭಿಸಿರ್ದನನಿಶಂ ವಿಕ್ರಾಂತ ವಿಶ್ವಾಧಿಕಂ ೯

ಪ್ರತ್ಯಬ್ದಂ ಶಿವರಾತ್ರಿಗೆಯ್ದಿ ಘನಸೌರಾಷ್ಟ್ರಕ್ಕೆ ಸಂಪ್ರೀತಿಯಿಂ
ದತ್ಯಂತೋತ್ಸವಶಾಲಿ ಜಾಗರಣಮಿರ್ದೀಶಾರ್ಚನಂಗೆಯ್ದು ನಿ

ಆವನು ಶೋಭಿಸುತ್ತಿದ್ದನು. ೭-೮. ಶ್ರುತಿ, ಸ್ಮೃತಿ, ಪುರಾಣಗಳಲ್ಲಿಯೂ, ವೇದಗಳಿಗೆ ಆರು ಅಂಗಗಳೆನಿಸಿದ ಶಿಕ್ಷೆ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ, ಕಲ್ಪಗಳಲ್ಲಿಯೂ, ಪ್ರಸಿದ್ಧಗಳೆನಿಸಿದ (ಮಹಾಭಾರತ, ರಾಮಾಯಣಾದಿ) ಇತಿಹಾಸಗಳಲ್ಲೂ ಪರಮೇಶ್ವರನೇ ಪತಿ, ವಿಚಾರಿಸಿ ನೋಡಿದರೆ ವಿಷ್ಣು ಬ್ರಹ್ಮಾದಿ ದೇವತೆಗಳೆಲ್ಲರೂ ಪಶುಗಳು ಎಂದು ಸಾರಿರುವುದೇ ಸತ್ಯವಿಷಯ ಎಂದು ತರ್ಕಿಸಲಸಾಧ್ಯವಾದ ಬುದ್ಧಿಯುಳ್ಳ ಬಾಚರಸನು ವಾದಮಾಡಿ ಪ್ರತಿವಾದಿಗಳ ಸಮೂಹವನ್ನು ಜಯಿಸಿ, ಪರಮೇಶ್ವರನಿಗೆ (ಯಾರೂ) ಎಂದೂ ಸರಿಯಿಲ್ಲ, ಚರಾಚರ ಪ್ರಪಂಚಗಳ ಸಮೂಹದಲ್ಲಿ ಇವನಿಗೆ ಮಿಗಿಲಾದವನಿನ್ನೊಬ್ಬನಿಲ್ಲ ನಿಜವಾಗಿ ಇದು ಸತ್ಯ ಎಂದು ನುಡಿತ್ತ ಬಿರುದಿನ ಧ್ವಜವನ್ನು ಎತ್ತಿಸಿಕೊಂಡು (ಆ ಕಲ್ಯಾಣದಲ್ಲಿ) ಶೋಭಿಸುತ್ತಿದ್ದನು. ವ॥ ಮತ್ತು ೯. ಮದದಿಂದ ಕೂಡಿದ ವೈಷ್ಣವ ಧರ್ಮವೆಂಬ ಆನೆಗೆ ಸಿಂಹಪ್ರಾಯನಾದವನು, ಮಾಯಾವಾದವೆಂಬ ಸರ್ಪಕ್ಕೆ ಗರುಡ ಸದೃಶನಾದವನು, ಕೆಟ್ಟ ಭ್ರಾಂತಿಯಿಂದ ಕೂಡಿದ ಬೌದ್ಧರೆಂಬ ಸಮುದ್ರಕ್ಕೆ ಬಡಬಾಗ್ನಿ ಸದೃಶನಾದವನು, ಚಾರ್ವಾಕರೆಂಬ ಪರ್ವತಗಳಿಗೆ ವಜ್ರಾಯುಧಪ್ರಾಯನು, ಜೈನರೆಂಬ ಅರಣ್ಯಕ್ಕೆ ಭಯಂಕರವಾದ ಕಾಳ್ಗಿಚ್ಚಿನಂತಿರುವವನು, ವೇದಧರ್ಮ ಬಾಹಿರರೆಂಬ ಕಮಲಗಳ ಸಮೂಹಕ್ಕೆ ಆನೆಯಂತಿರುವವನು ಎಂಬ ಶೌರ್ಯವನ್ನು ಹೊಂದಿ ಪರಾಕ್ರಮ ವಿಷಯದಲ್ಲಿ ಪ್ರಪಂಚಕ್ಕೆಲ್ಲ ದೊಡ್ಡವನೆನಿಸಿ ಸತತವೂ ಆ ಸೊಡ್ಡಳಬಾಚರಸನು (ಕಲ್ಯಾಣನಗರದಲ್ಲಿ) ವಿರಾಜಿಸುತ್ತಿದ್ದನು. ೧೦. ಪ್ರತಿವರ್ಷವೂ ಶಿವರಾತ್ರಿ ಸಮಯದಲ್ಲಿ ಶ್ರೇಷ್ಠವಾದ ಸೌರಾಷ್ಟ್ರ ಸೋಮನಾಥನಲ್ಲಿಗೆ ಆ ಉತ್ಸಾಹ

ಪ್ರತ್ಯೂಹಂ ಮಿಗೆ ಬರ್ಪನಿಂತೆಸೆವುತಿರ್ದಂದೊರ್ವಂ ತಾಂ ಬಂದೊಡಾ
ನುತ್ಯಶ್ರೀಶಿವರಾತ್ರಿಯಾ ನಗರಿಗೆಯ್ದಲ್ಕುಜ್ಜುಗಂಗೆಯ್ವುತುಂ ೧೦

ವ॥ ಧರಣಿಪಂಗೆ ತಾಂ ಪೋಪುಜ್ಜುಗಮನಱಿಪೆ ಪಿರಿಯ ಕಣಜದ ಭತ್ತಮನಳೆವ ಕಜ್ಜಮುಂಟೆಮ್ಮ ಮಣಿಹಮನುಳಿದು ಪೋಗಲಾಗದೆರಡೆಡೆಯೋಲಗಮೆಂತಳವಡುಗುಂ ಬಿಲ್ಲುಮಂ ಬೆಳಗಾಯುಮನೊರ್ಕೆಯೊಳಾಂಪಂತಿರೆಮ್ಮೋಲಗಮುಂ ಶಿವಭಕ್ತಿಯುಮಂ ನಿನಗೆರಡೂರ ಬಿರ್ದಂ ಪಾರ್ದಪಾರ್ವನೆಡೆಯಾಟದಂತೆ ನಗೆಗೆಡೆಯಕ್ಕುಮೆಂದು ಬಿಜ್ಜಳಂ ಮೀಱಿ ನುಡಿದು—

ನೀಂ ಪರಮಭಕ್ತನಾದೊಡಿ
ದೇಂ ಪಿರಿದೆ ಮಹೇಶನಿಲ್ಲಿಗೆಯ್ತರ್ಪುದು ಕೇ
ಳಾಂ ಪರಿಕಿಪೆನಂತೆಸಗಿ
ಲ್ಲಿಂ ಪೋಜಿಮಡಲೇಕೆ ಭಕ್ತ ನಿನ್ನಯ ಪೆಂಪಂ ೧೧

ಸೌರಾಷ್ಟ್ರ ಪತಿಯನೀ ಪುರಿ
ಗೋರಂತಿರೆ ಬರಿಸಲಾಱದಿರ್ದೊಡೆ ಸೈತಿ
ರ್ದೂರೊಳಗೆಮ್ಮಯ ಕಜ್ಜಮ
ನೋರಣದಿಂದೆಸಗು ಬಿಡು ಬಿಡೆಯ್ದುವ ಬಗೆಯಂ ೧೨

ಶಾಲಿಯಾದ ಸೊಡ್ಡಳಬಾಚರಸನು ಅತಿ ಸಂತೋಷದಿಂದ ಹೋಗಿ, ಜಾಗರಣೆಮಾಡಿ, ಈಶ್ವರನ ಅರ್ಚನೆಗೆಯ್ದು ನಿರ್ವಿಘ್ನವಾಗಿ ಹಿಂತಿರುಗಿಬರುತ್ತಿದ್ದನು. ಹೀಗೆ ಶೋಭಿಸುತ್ತಿರುವಾಗ ಒಮ್ಮೆ ಆ ಶ್ಲಾಘ್ಯವಾದ ಶಿವರಾತ್ರಿಯ ಹಬ್ಬವು ಬರಲಾಗಿ, ಆ ಸೌರಾಷ್ಟ್ರ ನಗರಿಗೆ ಹೋಗುವುದಕ್ಕೆ ಪ್ರಯತ್ನಿಸುತ್ತ ವ॥ ಮಹಾರಾಜನಾದ ಬಿಜ್ಜಳನಿಗೆ ತಾನು ಹೋಗುವ ಕಾರ್ಯವನ್ನು ತಿಳಿಸಿದನು (ಅವನು) ದೊಡ್ಡ ಕಣಜದಲ್ಲಿರುವ ಬತ್ತವನ್ನು ಅಳೆಯುವ ಕೆಲಸವುಂಟು. (ಆದ್ದರಿಂದ) ನಮ್ಮಾಜ್ಞೆಯನ್ನು ಮಿಕ್ಕು ನೀನು ಹೋಗಲಾಗದು; ಎರಡು ಕಡೆಯ ಓಲಗದ ಸೇವೆಯು ಹೇಗೆತಾನೆ ಅಳವಡುವುದಕ್ಕೆ ಸಾಧ್ಯ ? ಬಿಲ್ವ ಫಲವನ್ನೂ ಬೇಲದ ಫಲವನ್ನೂ ಏಕ ಕಾಲದಲ್ಲಿ ಒಂದೇ ಕೈಯಲ್ಲಿ ಹಿಡಿಯುವವನ ಹಾಗಿರಲು ನಿನಗೆ ನಮ್ಮ ಓಲಗದ ಸೇವೆಯೂ, ಶಿವಭಕ್ತಿಯ ಸೇವೆಯೂ—ಎರಡು ಊರುಗಳಲ್ಲಿನ ಔತಣಕ್ಕೆ ಅಪೇಕ್ಷೆ ಪಟ್ಟ ಬ್ರಾಹ್ಮಣನ ಓಡಾಟದ ಹಾಗೆ ಹಾಸ್ಯಾಸ್ಪದವಾದೀತು ಎಂದು ಆ ಬಿಜ್ಜಳನು ಹದ್ದುಮಿಕ್ಕಿ ಮಾತನಾಡಿ ೧೧. ನೀನು ಶ್ರೇಷ್ಠಭಕ್ತನಾದರೆ ಆ ಮಹೇಶ್ವರನು ನೀನಿದ್ದಲ್ಲಿಗೇ ಬರುವಂತೆ ಮಾಡುವುದೇನು ನಿನಗೆ ಹೆಚ್ಚಿನದೇ! ನಿನ್ನ ಭಕ್ತಿಯ ಹಿರಿಮೆಯನ್ನು ನಾನು ಪರೀಕ್ಷಿಸುತ್ತೇನೆ. ಆ ದೇವರು ಇಲ್ಲಿಗೆ ಬರುವಂತೆ ಮಾಡು ಅಲ್ಲಿಗೆ ಹೋಗುವುದಾದರೂ ಏಕೆ ? ೧೨. ಸೌರಾಷ್ಟ್ರಪತಿಯನ್ನು ಈ ಪಟ್ಟಣಕ್ಕೆ ಚೆನ್ನಾಗಿ (ಕ್ರಮವಾಗಿ) ಬರಮಾಡಿಕೊಳ್ಳಲಾಗದಿದ್ದರೆ, ಸುಮ್ಮನೆ ಊರಲ್ಲಿದ್ದುಕೊಂಡು ನಮ್ಮ ಕಾರ್ಯವನ್ನು ಅಚ್ಚುಕಟ್ಟಾಗಿ ಮಾಡಿಕೊಂಡಿರು. ಅಲ್ಲಿಗೆ ಹೋಗುವ

ವ॥ ಎಂದರಸನಾಕ್ಷೇಪೋಕ್ತಿಯಂ ಕೇಳ್ದು ಮುಗುಳ್ನಗೆ ನಕ್ಕು—

ಅರಸಂ ಪೋಗದಿರೆಂದು ನುಣ್ಗಟಕಿಯಾಡುತ್ತಿರ್ಪನೀ ಪರ್ವಕಾ
ನಿರದೆಂತೆಯ್ದುವೆನಂತದಿರ್ಕೆ ಕರುಣಾವಾರಾಶಿ ಸೌರಾಷ್ಟ್ರಮಂ
ದಿರವಾಸಂ ಬಿಡದೆನ್ನನೇಪರಿಯೊಳಂ ಕೊಂಡೊಯ್ವನಂತಲ್ಲದಂ[1]
ದೆರವಂ ಮಾಡದೆ ತಾನೆ ಬರ್ಪನಣಮಾನಿರ್ದಲ್ಲಿಗೀ ರಾತ್ರಿಯೊಳ್ ೧೩

ಆವಂದದಿನಾದೊಡಮಾ
ದೇವಂ ಮದ್ವ್ರತಮನೊಲ್ದು ಸಲಿಸುಗುಮಣಮೆಂ
ದಾ ವಿಭು ನಚ್ಚಿರೆ ಮನದೊಳು
ಮಾವರನವನಿರ್ದ ಮಂದಿರಕ್ಕೊಲವಿಂದಂ ೧೪

ಮಿಳಿರ್ವ ವೃಷಭಧ್ವಜಂ ಕಂ
ಗೊಳಿಸಿರೆ ಬಲಗೆಯ್ಯೊಳೆಡದ ಕೆಯ್ಯೊಳ್ಪಿಡಿದು
ಜ್ವಳಲೇಖನಮಂ ಸಂದಣಿ
ಗೊಳುತುಂ ಬೆಮರುತ್ತೆ ಬಂದು ನಿಂದವನಿದಿರೊಳ್ ೧೫

ಪಳುಕುಮಣಿವೆರೆದ ಕಂಠದ
ವಿಳಸದ್ರುದ್ರಾಕ್ಷ ಮಾಲೆವಳಿಯುಡೆ ಸುಲಿಪ
ಲ್ಲೊಳಪ ಲಲಾಟದ ಭಸಿತದ
ವಿಳೇಪನಂ ಮಿಸುಗೆ ನಿಂದು ನಗುತಿಂತೆಂದಂ ೧೬

ಇಚ್ಛೆಯನ್ನು ಬಿಟ್ಟುಬಿಡು. ವ॥ ಹೀಗೆಂದು ಬಿಜ್ಜಳ ಮಹಾರಾಜನು ಆಡಿದ ಆಕ್ಷೇಪದ ಮಾತುಗಳನ್ನು ಕೇಳಿ (ಸೊಡ್ಡಳ ಬಾಚರಸನು) ಮುಗುಳುನಗೆ ನಕ್ಕು ೧೩. ಮಹಾರಾಜನು ಹೋಗಬೇಡವೆಂದು ನಯವಾಗಿ ಮೂದಲಿಕೆಯ ಮಾತನ್ನಾಡುತ್ತಿದ್ದಾನೆ. ಈ ಹಬ್ಬಕ್ಕೆ (ಅಲ್ಲಿಗೆ) ನಾನು ತಪ್ಪದೆ ಹೇಗೆ ಹೋಗಲಿ? ಅದಿರಲಿ ; ಕರುಣಾಸಮುದ್ರನಾದ ಸೌರಾಷ್ಟ್ರ ಮಂದಿರವಾಸನಾದವನ ಶಿವನು ತಪ್ಪದೆ ನನ್ನನ್ನು ಯಾವರೀತಿಯಿಂದಲಾದರೂ ಕರೆದೊಯ್ಯುವನು. ಹಾಗಾಗದಿದ್ದರೆ (ನನಗೆ) ಭೇದವನ್ನು ಮಾಡದೆ ನಾನಿದ್ದಲ್ಲಿಗೆ ಈ ರಾತ್ರಿಯೇ ತಾನೇ ತಪ್ಪದೆ ಬರುವನು. ೧೪–೧೫. ಯಾವರೀತಿಯಿಂದಲಾದರೂ ಆ ದೇವನು ನನ್ನ ವ್ರತವನ್ನು ಪ್ರೀತಿಯಿಂದ ನಿಶ್ಚಯವಾಗಿ ಸಲ್ಲಿಸಿಕೊಳ್ಳುತ್ತಾನೆ ಎಂದು ಆ ಬಾಚರಸ ವಿಭುವು ಮನಸ್ಸಿನಲ್ಲಿ ನಂಬಿಕೊಂಡಿರಲು ಉಮಾಪತಿಯಾದ ಶಿವನು ಅವನು ವಾಸಿಸುವ ಮನೆಗೇ ಪ್ರೀತಿಯಿಂದ ಹಾರಾಡುತ್ತಿರುವ ವೃಷಭ ಧ್ವಜವು ಬಲಗೈಯಲ್ಲಿ ಶೋಭಿಸುತ್ತಿರಲು, ಎಡಗೈಯಲ್ಲಿ ಪ್ರಕಾಶಿಸುವ ಲೇಖನ (ಪತ್ರ)ವನ್ನು ಹಿಡಿದುಕೊಂಡು, ಸನ್ನದ್ಧನಾಗಿ. ಬೆವರಿದ ದೇಹದಿಂದ ಕೂಡಿ ಅವನೆದುರಿಗೆ ಬಂದು ನಿಂತನು. ೧೬. ಸ್ಫಟಿಕದ ಮಣಿಗಳನ್ನು ಮಧ್ಯೇ ಮಧ್ಯೇ ಪೋಣಿಸಿ ಕೊರಳಲ್ಲಿ ಹಾಕಿಕೊಂಡಿರುವ ರುದ್ರಾಕ್ಷ ಮಾಲೆ, ಉಟ್ಟವಸ್ತ್ರ, ಬೆಳ್ಳನೆಯ ಹಲ್ಲು, ಪ್ರಕಾಶಿಸುವ ಹಣೆಯಲ್ಲಿ ಧರಿಸಿರುವ ಭಸ್ಮ ಇವು ಶೋಭಿಸುತ್ತಿರಲು ನಿಂತುಕೊಂಡು (ಆ ಶಿವನು) ನಗುತ್ತ

1 ದಿಂ(ಚ, ಅ, ಗ)

ಕೇಳಲೆ ಭಕ್ತ ಬಂದಪನುಮಾಧಿಪನೀ ಶಿವರಾತ್ರಿಗೀ ಪೊಳ
ಲ್ಗೇಳೊಲವಿಂದೆ [1]ಸಂವ[1]ರಿಸು ಧಾನ್ಯನಿಕೇತನಮಂ ನಿಜಾಪ್ತಭೃ
ತ್ಯಾಳಿಗೆ ಪೇಳ್ದು ಸಿಂಗರಿಸು ವೀಧಿಗಳಂ ಗುಡಿಗಟ್ಟು ನಿನ್ನ ಸ
ಮ್ಮೇಳನಮೆಂತೊ ಬರ್ಪೆನೆನುತೋಲೆಯ ನಿನ್ನೆಡೆಗೀಶನಟ್ಟಿದಂ ೧೭

ವ॥ ಎಂದು ತಂದೋಲೆಯಂ ಕರತಳದೊಳೀಯೆ ಮಹಾಪ್ರಸಾದವೆಂದು ಕೆಯ್ಕೊಂಡೆಱಗಿ ತಲೆಯೊಳಿಟ್ಟೋದಿನೋಳ್ಪನಿತಱೊಳಾ ತಪಸ್ವಿಯದೃಶ್ಯನಾಗಿ ಮತ್ಪ್ರಾಣೇಶನೀರೂಪದಿನೆಳ್ತಂದಱಿದ ಮಂದಾನಂದಕಂದಳಿತಹೃದಯಾರವಿಂದನಾಗಿ ಭಕ್ತವರ್ಯಂ ಭವಾನಿಯರಸಂ ಬರ್ಪನೆಂಬ ಲೇಖನಾರ್ಥಮನಲ್ಲಿ ಪೇಳೆ ಶಿವಕಿಂಕರರ್ಕೇಳ್ದು ಸಡಗರಂ ಬೆತ್ತು ಬಸವರಸಂಗಱುಪಲೊಡನೆ—

ಪರಮಾನಂದಮನಾಳ್ದು ಬಂದು ಬಸವಂ ಕಂಡುರ್ವಿ ಕೊಂಡಾಡಿ ಭಾ
ಸ್ಕರದೇವಂಗೆಱಗುತ್ತೆ ಭಕ್ತಸಭೆಯೊಳ್ಕುಳ್ಳಿರ್ದು ನಣ್ಪಿಂದೆ ತ
ತ್ಪುರಮಂ ಸಿಂಗರಿಸಲ್ಕೆ ಪೇಳ್ದು ನಗರಾಧ್ಯಕ್ಷರ್ಗೆ ಸಲ್ಲೀಲೆವೆ
ತ್ತಿರೆ ನಾನಾವಿಧನಾಟಕಂ ನೆಗಳ್ದುದಾ ಸದ್ಭಕ್ತಸಂತಾನದೊಳ್ ೧೮

ಹೀಗೆ ಹೇಳಿದನು. ೧೭. ಎಲೈ ಭಕ್ತನೇ, ಉಮಾಪತಿಯಾದ ಶಿವನು ಈ ಶಿವರಾತ್ರಿಯಂದು ಈ ಪಟ್ಟಣಕ್ಕೆ ಬರುತ್ತಾನಂತೆ. ಏಳು ಪ್ರೀತಿಯಿಂದ (ನಿನ್ನ) ಧಾನ್ಯದ ಮನೆಯನ್ನು ಸಜ್ಜುಗೊಳಿಸು, ನಿನ್ನ ಆಪ್ತರಾದ ಸೇವಕರಿಗೆ ಹೇಳಿ ಬೀದಿಗಳನ್ನು ಶೃಂಗಾರಗೊಳಿಸು. ನಿನ್ನ ಸಮನಾದ ಭಕ್ತರ ಮೇಳವನ್ನು ಕೂಡಿಸು. ಹೇಗೋ ನಾನು ಬರುತ್ತೇನೆ ಹೀಗೆಂದು ಪತ್ರ ಬರೆದು ಕಳುಹಿಸಿದ್ದಾನೆ. ವ॥ ಹೀಗೆನ್ನುತ್ತ ತಂದ ಪತ್ರವನ್ನು ಬಾಚರಸನ ಕೈಯಲ್ಲಿ ಕೊಟ್ಟನು. 'ಮಹಾ ಪ್ರಸಾದ'ವೆಂದು ಬಾಚರಸನು ಅದನ್ನು ಸ್ವೀಕರಿಸಿ ನಮಸ್ಕಾರಮಾಡಿ, ತಲೆಯ ಮೇಲೆ ಹೊತ್ತು ಓದಿ, ನೋಡುವಷ್ಟರಲ್ಲಿ ಆ ತಪಸ್ವಿಯ ವೇಷದ ಶಿವನು ಮಾಯವಾದನು. ನನ್ನ ಪ್ರಾಣೇಶ್ವರನೇ ಈ ರೂಪದಿಂದ ಬಂದನೆಂದು ತಿಳಿದು ಬಾಚರಸನು ಅಪರಿಮಿತ ಆನಂದದಿಂದ ವಿಕಾಸಗೊಂಡ ಹೃದಯ ಕಮಲವುಳ್ಳವನಾದನು. ಆ ಭಕ್ತ ಶ್ರೇಷ್ಠನು ಭವಾನೀಪತಿಯಾದ ಶಿವನು ಬರುತ್ತಾನೆಂಬ ಲೇಖನದ ಅರ್ಥವನ್ನು ಆ ಕಲ್ಯಾಣ ಪಟ್ಟಣದಲ್ಲಿ ಹೇಳಲಾಗಿ, ಶಿವಭಕ್ತರುಗಳೆಲ್ಲ ಕೇಳಿ, ಸಂಭ್ರಮಗೊಂಡು, ಬಸವಣ್ಣನವರಿಗೆ ತಿಳಿಸಲು ಅವನು ಕೂಡಲೇ ೧೮. ಪರಮಾನಂದವನ್ನು ಹೊಂದಿ, (ಆ ಬಸವಣ್ಣನು) ಬಂದು, ಉಬ್ಬಿ ಕೊಂಡಾಡಿ ಆ ಬಾಸ್ಕರದೇವನಿಗೆ (ಬಾಚರಸನಿಗೆ) ನಮಸ್ಕಾರಮಾಡಿದನು. ಭಕ್ತರುಗಳ ಸಮೂಹದಲ್ಲಿ ಕುಳಿತುಕೊಂಡು ಚೆಲುವಾಗಿ ಕಾಣುವಂತೆ ಪಟ್ಟಣವನ್ನು ಶೃಂಗಾರಗೊಳಿಸುವುದಕ್ಕೆ ನಗರಾಧ್ಯಕ್ಷರಿಗೆ ಹೇಳಿದನು. (ನೆರೆದ) ಆ ಭಕ್ತರುಗಳ ಸಮೂಹದಲ್ಲಿ ವಿಶೇಷ ವಿನೋದದಿಂದ ಕೂಡಿದ ನಾನಾವಿಧವಾದ ನಾಟಕವು

---

1 ಸವ್ವ(ದ)

ಕೆಲರುತ್ಸಾಹದಿನೊಲ್ದು ಪಾಡೆ ಕೆಲರುದ್ಯದ್ವಾದ್ಯಸಂದೋಹಮಂ
ನಲವಿಂ ಬಾಜಿಸೆ ನಾಟ್ಯಮಂ ಕೆಲರುದಾಗಪ್ರೌಢಿಯಿಂದಾಡೆ ಭೃಂ
ಗಿಲಸದ್ವೇಷಮನಾಳ್ದು ನರ್ತಿಸೆ ಕೆಲರ್ಸೋಮೇಶಸಂಕೀರ್ತನಾ
ವಲಿಯಂ ಮತ್ತೆ ಕೆಲಂಬರುಗ್ಗಡಿಸೆ ಪೆಂಪಂ ತಾಳ್ದುದಾ ಸಂಭ್ರಮಂ ೧೯

ವ॥ ಶಿವವಾಸರದೊಳಾಗಳ್ಭಾನುಬಿಂಬಂ ಮಧ್ಯಾಂಬರಮಂ ಕಳಿದ ಪೊಳ್ತಿನೊಳ್—

ಮುಂಬರಿದಿಳಿದುದು ಭೋರೆಂ
ದಂಬರದಿಂ ಕುಸುಮವೃಷ್ಟಿ ಸುರಭೇರೀರಾ
ವಂ ಬಿಡದೊಗೆದುದು ಭಕ್ತಕ
ದಂಬಂ ಮುದಮಾಳ್ದುದಾಗಳತಿ ಸಂಭ್ರಮದಿಂ ೨೦

ತೊಳತೊಳಪಂಗಕಾಂತಿ ರವಿರೋಚಿಯನೊತ್ತಿ ಪಳಂಚೆ ದಿವ್ಯಮಂ
ಗಳ ದಿವಿಜಾನಕಧ್ವನಿ ವಿಜೃಂಭಿಸೆ ಮುಂದೆ ವೃಷೇಂದ್ರಕೇತನಂ
ಮಿಳಿರೆ ಮಹೋತ್ಸವಂಬೆರಸು ಭಕ್ತರುಘೋಯೆನೆ ಬಂದು ನಂದಿಯಿಂ
ದಿಳಿದಿಳೆಗದ್ಭುತಂ ಮಸಗೆ ಧಾನ್ಯಗೃಹಸ್ಥಿತನಾದನೀಶ್ವರಂ ೨೧

ಶೋಭಿಸಿತು. ೧೯. ಕೆಲವರು ಉತ್ಸಾಹಗೊಂಡು ಸಂತೋಷದಿಂದ ಹಾಡಿದರು; ಕೆಲವರು ಶ್ರೇಷ್ಠವಾದ ವಾದ್ಯ ಸಮೂಹವನ್ನು ಪ್ರೀತಿಯಿಂದ ಬಾರಿಸತೊಡಗಿದರು; ಕೆಲವರು ಶ್ರೇಷ್ಠಪ್ರೌಢಿಮೆಯಿಂದ ನಾಟ್ಯವನ್ನಾಡಿದರು ; ಭೃಂಗಿಯ ಉತ್ತಮ ವೇಷ ಕಟ್ಟಿ ಕೆಲವರು ಕುಣಿದಾಡಿದರು ; ಕೆಲವರು (ಸೌರಾಷ್ಟ್ರದ) ಸೋಮೇಶ್ವರನ ನಾಮ ಸಂಕೀರ್ತನಗಳ ಸಮೂಹವನ್ನು ಹಾಡಿದರು ; ಕೆಲವರು (ಅವನ ಬಿರುದುಗಳನ್ನು) ಉಗ್ಗಡಿಸಿದರು. ಹೀಗೆ ಆ ಭಕ್ತರುಗಳ ಸಂಭ್ರಮವು ಘನತೆಯನ್ನು ಹೊಂದಿ ಶೋಭಿಸುತ್ತಿತ್ತು. ವ॥ ಮಂಗಳಕರವಾದ (ಆ ಶಿವರಾತ್ರಿಯ) ಹಗಲಿನಲ್ಲಿ ಸೂರ್ಯಬಿಂಬವು ಆಕಾಶ ಮಧ್ಯಭಾಗವನ್ನು ದಾಟಿದ ಹೊತ್ತಿನಲ್ಲಿ (ಮಧ್ಯಾಹ್ನಾತ್ಪರದಲ್ಲಿ) ೨೦. ಆಕಾಶದಿಂದ ಭೋರೆಂದು ಹೂವಿನ ಮಳೆಯು ಮುನ್ನುಗ್ಗಿ ಸುರಿಯುತ್ತಿತ್ತು. ದೇವದುಂದುಭಿಗಳ ಧ್ವನಿಯು ಒಂದೇ ಸಮನೆ ಹೊರಹೊಮ್ಮುತ್ತಿತ್ತು. ಭಕ್ತ ಜನರ ಸಮೂಹವು ಅತ್ಯಂತ ಸಂಭ್ರಮಗೊಂಡು ಸಂತೋಷದಲ್ಲಿ ಮುಳುಗಿತ್ತು. ೨೧. ಬೆಳ್ಳಗೆ ಬೆಳಗುತ್ತಿರುವ ದೇಹಕಾಂತಿಯು ಸೂರ್ಯಕಿರಣಗಳನ್ನು ಕೀಳುಮಾಡಿ ಮಿಂಚುತ್ತಿತ್ತು, ದೇವತೆಗಳು ನಗಾರಿಯನ್ನು ಶೋಭಾಮಯವಾಗಿ ಬಾರಿಸುತ್ತಿದ್ದರು; ಮುಂಭಾಗದಲ್ಲಿ ವೃಷಭ ಧ್ವಜವು ಹಾರಾಡುತ್ತಿತ್ತು; ಅತ್ಯಂತೋತ್ಸಾಹದಿಂದ ಕೂಡಿ ಭಕ್ತರು 'ಉಘೇ' ಎನ್ನುತ್ತಿದ್ದಂತೆ ಶಿವನು ನಂದೀಶ್ವರನಿಂದ ಭೂಮಿಗಿಳಿದು ಭೂಮಂಡಲಕ್ಕೆ ಇದು ಅದ್ಭುತವಾದ

ವ॥ ಅಂತು ಸೌರಾಷ್ಟ್ರಸೋಮೇಶ್ವರಂ ಭಕ್ತವ್ರತಪಾಲನನಿಮಿತ್ತಮೇಳ್ತಂದು ಪಿರಿಯ ಕಣಜಮನೊಡೆದು ಲಿಂಗಾಕೃತಿಯಿಂ ಧರೆಯೊಳ್ನೆಲಸಿ ನಿಲ್ವಿನಮಲ್ಲಿ ಬಿಜ್ಜಳಂ ಕಂಡು [1]ಕೌತುಕಂ[1]ಬಟ್ಟು ಬಾಚರಸಂಗೆ ಪೊಡಮಟ್ಟು ಪರಿಜನಸಹಿತಂ ಪೊಗಳುತ್ತಿರ್ದನಾಗಳ್—

ಪುಲಿಗೆಱೆ[3]ಗಂದೆಯ್ದಿಸಿದಂ
ನಲವಿಂ ಸೌರಾಷ್ಟ್ರಪತಿಯನಾದಯ್ಯಂ ಸೊ
ನ್ನಲಿಗೆಗಿರದೆಯ್ದಿಸಿದನು
ಜ್ವಲಮತಿಯಿಂ ಮಲ್ಲಿನಾಥನಂ ಸಿದ್ಧೇಂದ್ರಂ ೨೨

ಎಂದೆಂಬ ಕಥೆಯನಾಲಿಪೆ
ವಿಂದೀ ಸೌರಾಷ್ಟ್ರನಾಥ ಸೋಮೇಶ್ವರನಂ
ತಂದಂ ತಾನಿರ್ದೆಡೆಗೊಲ
ವಿಂದಂ ಭವಭಕ್ತವರ್ಯ ಭಾಸ್ಕರದೇವಂ ೨೩

ಹರನೇಳ್ತಂದು ಗಡ ಭಾ
ಸ್ಕರದೇವಂ ನೆನೆಯೆ ಲಂಕೆಗಾ ದಶಕಂಠಂ
ಬರವೇಳ್ದೊಡಮೇಂ ಬಂದನೆ
ನಿರುಪಾಧಿಕ ಭಕ್ತಿ[2]ಗಲ್ಲದೀಶ್ವರನೊಲಿಯಂ ೨೪

ದ್ದೆನ್ನುವಂತೆ ಧಾನ್ಯಗೃಹವನ್ನು ಹೊಂದಿದವನಾದನು. (ಪ್ರವೇಶಿಸಿದನು). ವ॥ ಹಾಗೆ ಭಕ್ತರ ವ್ರತಗಳನ್ನು ನಡೆಯಿಸಿ ಅನಿಮಿತ್ತವಾಗಿ ನಡೆಯಿಸಿಕೊಡುವವನಾದ ಆ ಸೌರಾಷ್ಟ್ರ ಸೋಮೇಶ್ವರನು (ಸೊಡ್ಡಳ ಬಾಚರಸನಿದ್ದ ಧಾನ್ಯದ ಮನೆಯ) ಹಿರಿಯ ಕಣಜವನ್ನು ಒಡೆದು ಲಿಂಗದ ಆಕಾರವನ್ನು ಧರಿಸಿ, ಭೂಮಿಯಲ್ಲಿ ನೆಲೆಗೊಂಡುನಿಲ್ಲಲಾಗಿ ಅಲ್ಲಿ (ಶಿವಲಿಂಗವು ಮೂಡಿರುವುದನ್ನು) ಬಿಜ್ಜಳನು ಕಂಡು, ಆಶ್ಚರ್ಯ ಪಟ್ಟು, ಬಾಚರಸನಿಗೆ ನಮಸ್ಕರಿಸಿ, ಪರಿವಾರ ಸಮೇತನಾಗಿ ಹೊಗಳುತ್ತಿದ್ದನು. ಆಗ ೨೨–೨೩. ಈ ಪೂರ್ವದಲ್ಲಿ ಆದಯ್ಯನು ಸೌರಾಷ್ಟ್ರಪತಿಯಾದ ಸೋಮೇಶ್ವರನನ್ನು ಪುಲಿಗೆರೆಗೆ ಪ್ರೀತಿಯಿಂದ ಬರುವಂತೆ ಮಾಡಿದನು. ಸಿದ್ಧ ಶ್ರೇಷ್ಠನಾದ ಉಜ್ವಲಮತಿಯ ಸಿದ್ಧರಾಮೇಶ್ವರನು ಶ್ರೀಶೈಲ ಮಲ್ಲಿಕಾರ್ಜುನನನ್ನು ಸೊನ್ನಲಿಗೆಗೆ ತಪ್ಪದೆ ಬರಮಾಡಿಕೊಂಡನೆಂಬ ಕಥೆಯನ್ನು ಕೇಳಿ ಬಲ್ಲೆವು. ಈ ದಿನ ಈ ಸೌರಾಷ್ಟ್ರನಾಥನಾದ ಸೋಮೇಶ್ವರನನ್ನು ಶಿವಭಕ್ತ ಶ್ರೇಷ್ಠನಾದ ಸೊಡ್ಡಳ ಬಾಚಿದೇವನು ತಾನಿರುವಲ್ಲಿಗೇ ಪ್ರೀತಿಯಿಂದ ಕರೆತಂದನು. ೨೪. ಭಾಸ್ಕರ ದೇವನು ನೆನೆದೊಡನೆಯೇ ಪರಮೇಶ್ವರನು ಹೊರಟು ಬಂದನಲ್ಲವೇ ! (ಪೂರ್ವದಲ್ಲಿ) ಆ ರಾವಣನು ನೆನೆದು ಲಂಕೆಗೆ ಬರಬೇಕೆಂದು ಕೇಳಿದಾಗ ಅಲ್ಲಿಗೆ ಶಿವನು ಬಂದನೇ ? ನಿರುಪಾಧಿಕ ಭಕ್ತಿಗಲ್ಲದೆ (ನಿಷ್ಕಾಪಟ್ಯದ ಭಕ್ತಿಗಲ್ಲದೆ) ಶಿವನು ಒಲಿಯಲು

---

1 ಕಾತುರಂ(ಚ) 2 ಕೃ(ಚ)

ಹರನಿರ್ಪಲ್ಲಿಗೆ ಕಾಶಿಗೆಯ್ದಿ ಹರಿಮುಖ್ಯಾಮರ್ತ್ಯರುಂ ಸಂತತೋ
ಗ್ರರುಚಿಸ್ಫೂರ್ತಿ ತಪಸ್ತಪಸ್ವಿಗಳುಮತ್ಯಾಯಾಸದಿಂ ಪೂಜೆಯಂ
ಚಿರಕಾಲಂ ಸಮೆದಿಷ್ಟಸಿದ್ಧಿವಡೆದರ್ಭಕ್ತಾರ್ಯರ್ನಿರ್ದಲ್ಲಿಗೀ
ಶ್ವನನಂ ದಲ್ ಬರಿಸಿರ್ದನೀ ಶರಣನಂ ಪೋಲ್ವನ್ನರಾರ್ಧಾತ್ರಿಯೊಳ್ ೨೫

ಎಂದು ವೃಷೇಂದ್ರನುಗ್ಗಡಿಸಿ ಕೀರ್ತಿಸುತೊಪ್ಪಿರೆ ಹೇಮರತ್ನದಿಂ
ದೀಂದುಧರಂಗೆ ಬಲ್ಗುಡಿಯನಾಗಿಸಿ ಗೋಪುರವಪ್ರಮುಖ್ಯಮಂ
ಕುಂದದ ಸರ್ವಭೋಗವಿಭವಂಗಳುಮಂ ಶಿವರಾತ್ರಿಯರ್ಚನಾ
ನಂದಮನಾಳ್ದು ಭಕ್ತನಿಧಿ ಭಾಸುರ ಭಾಸ್ಕರದೇವನಿರ್ಪಿನಂ ೨೬

ಸೌರಾಷ್ಟ್ರವಲ್ಲಭಂ ಕೊ
ಟ್ಟಾರದ ಸೋಮೇಶನೆಂದೂ ಪೆಸರ್ವಡೆದೆಸೆದಂ

ತ್ತಾನೆಯೇ ? ೨೫–೨೭. ವಿಷ್ಣುವೇ ಮೊದಲಾದ ದೇವತೆಗಳೂ, ಸತತವೂ ಅತ್ಯುಗ್ರ ತೇಜೋವಿಶಿಷ್ಟವಾದ ಸ್ಫೂರ್ತಿಯಿಂದ ತಪಸ್ಸನ್ನು ಮಾಡಿ ತಪಸ್ವಿಗಳು ಹರನಿರುವ ಕಾಶಿಗೇ ಅತ್ಯಂತ ಆಯಾಸದಿಂದ ಹೋಗಿ ಅನಂತಕಾಲ ಪೂಜೆಯನ್ನುಮಾಡಿ ಇಷ್ಟಾರ್ಥ ಸಿದ್ಧಿಯನ್ನು ಮಾಡಿಕೊಂಡರು. ಭಕ್ತಶ್ರೇಷ್ಠನಾದ ಸೊಡ್ಡಳ ಬಾಚರಸನು ಇದ್ದಲ್ಲಿಗೇ ಈಶ್ವರನನ್ನು ಬರಮಾಡಿಕೊಂಡನು. ಈ ಶರಣ ನನ್ನು ಸರಿಗಟ್ಟುವವರು ಭೂಮಂಡಲದಲ್ಲಿ ಯಾರಿದ್ದಾರೆ ? ಹೀಗೆಂದು ಬಸವೇ ಶ್ವರನು ಗಟ್ಟಿಯಾಗಿ ಕೂಗುತ್ತ, ಸ್ತೋತ್ರ ಮಾಡುತ್ತ ಒಪ್ಪಿದನು. ಬಂಗಾರ ಮತ್ತು ರತ್ನಗಳಿಂದ ಪರಮೇಶ್ವರನಿಗೆ ಶ್ರೇಷ್ಠವಾದ ದೊಡ್ಡ ಗುಡಿಯೊಂದನ್ನು ನಿರ್ಮಾಣ ಮಾಡಿ ಅದಕ್ಕೆ ಗೋಪುರ ಪ್ರಾಕಾರಾದಿಗಳನ್ನು, ಕೊರತೆಯಿಲ್ಲದಂತೆ ಪಡಿ ನಂದಾ ದೀವಿಗೆಯೇ ಮೊದಲಾದ ಸಮಸ್ತ ಭೋಗ ಸಂಪತ್ತನ್ನು ಉಂಟುಮಾಡುತ್ತ ಶಿವ ರಾತ್ರಿಯ ಅರ್ಚನೆಯಿಂದುಂಟಾಗುವ ಆನಂದವನ್ನು ಹೊಂದಿ, ಭಕ್ತಿನಿಧಿಯೆನಿಸಿದ ಪ್ರಕಾಶಿಸುವ ಭಾಸ್ಕರದೇವನು ಇರುತ್ತಿರುವಾಗ ಸೌರಾಷ್ಟ್ರ ವಲ್ಲಭನಾದ ಸೋಮೇಶ್ವರನು 'ಕೊಟ್ಟಾರದ ಸೋಮೇಶ್ವರ ದೇವ' ಅಂದರೆ ಧಾನ್ಯದ ಮನೆಯ ಸೋಮೇಶ್ವರ ದೇವನೆಂಬ ಹೆಸರನ್ನು ಪಡೆದು ಸಮಸ್ತ ಜನಗಳೂ ಅರಿಯುವಂತೆ, ವಿದ್ವಾಂಸರು ಕೊಂಡಾಡುತ್ತಿರಲು, ಭಕ್ತನಾದ ಸೊಡ್ಡಳ ಬಾಚರಸಯ್ಯನ ಕೀರ್ತಿಯು ಭೂಮಂಡಲ ದಲ್ಲಿ ಪ್ರಸಾರಗೊಳ್ಳುವಂತೆ ಶೋಭಿಸುತ್ತಿದ್ದನು. [(ii)ಸರ್ವಭೋಗ :— ಪೂರ್ವಕಾಲ ದಲ್ಲಿದೇವಾಲಯಗಳನ್ನು ಕಟ್ಟಿದ ಮೇಲೆ ಆ ದೇವರ ಪ್ರತಿ ನಿತ್ಯದಪೂಜೆ, ನಂದಾದೀವಿಗೆ, ಅಮೃತಪಡಿ (ನೈವೇದ್ಯ) ಇತ್ಯಾದಿಗಳು ಮುಂದೆ ಸಾಂಗವಾಗಿ ನಡೆದುಕೊಂಡು ಬರಲು ದತ್ತಿಮೊದಲಾದ ವ್ಯವಸ್ಥೆ ಮಾಡುತ್ತಿದ್ದರು. ಇವನ್ನೇ ಸರ್ವಭೋಗ ಎಂದು ಕರೆಯು ತ್ತಾರೆ. (ii) ಕೊಟ್ಟಾರದ ಸೋಮೇಶ:—ಕೋಷ್ಠಾಗಾರ ಕೊಟ್ಟಾರ. ಧಾನ್ಯದ ಉಗ್ರಾಣ ವನ್ನೇ ಕೊಟ್ಟಾರ ಎಂದು ಕರೆಯಲಾಗುತ್ತಿದೆ. ಅಂಥ ಧಾನ್ಯದ ಉಗ್ರಾಣವಲ್ಲಿ ಶಿವನು

ಭೂರಿಜನಮಱಿಯೆ ಕೀರ್ತಿಸೆ
ಸೂರಿಜನಂ ಭಕ್ತಕೀರ್ತಿ ಪಸರಿಸೆ ಧರೆಯೊಳ್ ೨೭

ವ॥ ಇಂತು ನಿಜಮಹತ್ವಮಂ ಮೆಱೆದು ಪರಮತಕೋಲಾಹಲನೆಂಬ ಬಲ್ಬಿರಿದಾಂತು ಮೆಱೆವ ಭಾಸ್ಕರದೇವನ ಶೈವತೇಜಃಸ್ಫೂರ್ತಿಯಂ ಸೈರಿಸಲಾಱದೆ ರಾಜಕೌಶಿಕನೆನಿಪ ಬಿಜ್ಜಳಂ ಪರಸಮಯಜನಪರಿವೃತಂ ಪ್ರತಾಪನಾರಾಯಣನೆಂಬ ಪೆಸರಿಂದೊಂದು ವಿಷ್ಣು ವಿಗ್ರಹಮನರಮನೆಯ ಮುಂದೆ ವಿಚಿತ್ರಮಪ್ಪಭಿನವದೇವಾಲಯಮಂ ರಚಿಸಿ ಸುಮುಹೂರ್ತದೊಳ್ಪ್ರತಿಷ್ಠೆಗೆಯ್ದಾ ಗುಡಿಯ ರಂಗಮಂಟಪದೊಳೋಲಗಂಗೊಟ್ಟು ಸಕಲವಿನಿಯೋಗದರೋಲಗಿಸೆ ಗಾಡಿಯಿಂ ಕುಳ್ಳಿರ್ದು ಬಂದರೆಲ್ಲರಂ ನಿರೀಕ್ಷಿಸಿ ಭಾಸ್ಕರದೇವಂ ಬಾರದುದನಱಿದು ಬಸವರಾಜನಂ ನೋಡಿ—

ಎಲ್ಲರ್ಬಂದರ್ಭಾಸ್ಕರ
ನಿಲ್ಲಿಗದೇಂ ಬಂದನಲ್ತು ಶಿವಭಕ್ತಿಮದಂ
ನಿಲ್ಲದೆ ತಲೆಬೇಱಿತೊ ಬಳಿ
ಕೊಲ್ಲನೊ ಮತ್ಸಭೆಯನೆಮಗೆ ಬೆಸಕೆಯ್ವುದುಮಂ ೨೮

ವ॥ ಎಂದರಸಂ ರೋಷೋನ್ಮೀಷಿತಹೃದಯಂ ಬಸವರಾಜಂ ನುಡಿಯೆ ಮಾರ್ಕೊಂಡು—

ಮೂಡಿ ಬಂದದ್ದರಿಂದ ಆ ಹೆಸರು ಆಲಿಂಗಕ್ಕೆ ಬಂತು. ಕೊಟ್ಟು + ಆರದ ಅಂದರೆ ಭಕ್ತರ ಇಷ್ಟಾರ್ಥಗಳನ್ನು ಕೊಟ್ಟು ದಣಿವುಗೊಳ್ಳದ ಎಂದೂ ಅರ್ಥಾಂತರ ಗ್ರಹಿಸಬಹುದು.]
ವ॥ ಈ ರೀತಿ ತನ್ನ ಮಹತ್ವವನ್ನು ಪ್ರಕಟಿಸಿ ಅನ್ಯಮತ ಕೋಲಾಹಲನೆಂಬ ಗೌರವಾರ್ಹಬಿರುದನ್ನು ಹೊಂದಿ, ಮೆರೆಯುತ್ತಿರುವ ಸೊಡ್ಡಳ ಬಾಚಿದೇವನ ಶಿವಸಂಬಂಧವಾದ ತೇಜೋ ವಿಶೇಷದ ಸ್ಫೂರ್ತಿಯನ್ನು ತಡೆಯಲಾರದೆ, ರಾಜಶ್ರೇಷ್ಠ (ರಾಜರಿಗೆಲ್ಲ ಇಂದ್ರ)ನಾದ ಬಿಜ್ಜಳನು ಪರಸಮಯದ ಜನರುಗಳಿಂದ ಕೂಡಿಕೊಂಡು 'ಪ್ರತಾಪ ನಾರಾಯಣ' ಎಂಬ ಹೆಸರಿನ ಒಂದು ವಿಷ್ಣು ವಿಗ್ರಹವನ್ನು ಅರಮನೆಯ ಮುಂದೆ ವಿಚಿತ್ರವೆನಿಸುವ ರೀತಿಯಲ್ಲಿ ಕಟ್ಟಿಸಿದ ನೂತನ ದೇವಾಲಯದಲ್ಲಿ ಒಳ್ಳೆಯ ಮುಹೂರ್ತದಲ್ಲಿ ಪ್ರತಿಷ್ಠಾಪಿಸಿ, ಆ ಗುಡಿಯ ರಂಗಮಂಟಪದಲ್ಲಿ ಓಲಗವನ್ನು (ರಾಜ ಸಭೆಯನ್ನು ಅಥವಾ ದರಬಾರನ್ನು) ನೆರವೇರಿಸಿ, ಸಮಸ್ತ ಪರಿವಾರದವರು ಸೇರಿ ಸೇವೆ ಮಾಡುತ್ತಿರಲು ಠೀವಿಯಿಂದ ಕುಳಿತುಕೊಂಡಿದ್ದು ಬಂದವರೆಲ್ಲರನ್ನೂ ನೋಡುತ್ತ ಸೊಡ್ಡಳ ಬಾಚರಸನು ಬಾರದಿದ್ದುದನ್ನು ಕಂಡು ಬಸವೇಶ್ವರನ ಮುಖವನ್ನು ನೋಡಿ, ೨೮. (ಬಸವೇಶ್ವರರೇ,) ಎಲ್ಲರೂ (ಈ ಸಭೆಗೆ) ಬಂದರು, ಭಾಸ್ಕರನು ಏನು ಕಾರಣ ಇಲ್ಲಿಗೆ ಬರಲಿಲ್ಲ ? ಶಿವಭಕ್ತಿಯ ಮದವು ತಪ್ಪದೆ ತಲೆಗೆ ಏರಿತೋ ? ಅಥವಾ ಈ ನನ್ನ ಸಭೆಗೆ ಬಂದು ನಮ್ಮ ಅಪ್ಪಣೆಯನ್ನು ಪಾಲಿಸುವುದು ಬೇಡವಾಯಿತೋ ? ವ॥ ಹೀಗೆಂದು ಬಿಜ್ಜಳ ರಾಜನು ಕೋಪದಿಂದ ಅಧಿಕ್ಯಗೊಂಡ ಮನಸ್ಸುಳ್ಳವನಾಗಿ ಮಾತನಾಡಲು

ಸಲ್ಲದು ಕೋಪಂ ತಪ್ಪಿನಿ
ಸಿಲ್ಲದನೊಳ್ನೃಪ ನಿನ್ನನುಳಿದಾಹವದೊ
ಳ್ನಿಲ್ಲದೆ ಜಗುಳ್ದನೆ ನೆಗಳ್ದನೆ
ಪೊಲ್ಲದುದಂ ನಿನ್ನ ಬೆಸನನೇಂ ಮೀಱಿದನೇ ೨೯

ಅರಸಂಗೆ ಬಱಿದೆ ಮುಳಿಸು
ಬ್ಬರಿಸಿದೊಡಳಿಜಸಕೆ ಕಾರಣಂ ಗಡ ನಿನ್ನೊ
ಳ್ಪರಿಭಾವಿಪುದೆಮ್ಮಯ ಭಾ
ಸ್ಕರದೇವನೊಳಾದ ಕೊಱತೆಯುಂ ಪುಗದೆಂದುಂ ೩೦

ಶರಣರ್ಶಿವೈಕನಿಷ್ಠಾ
ಭರಣರ್ಪರದೈವನಿಳಯಮುಂ ಪುಗರೆಂತುಂ
ಪರಮವ್ರತಯುತರಜಹರಿ
ಸುರಪಾದ್ಯರನಲ್ಪ ಕಾಷ್ಠದಿಂ ಕಡೆಗಾಣ್ಬರ್ ೩೧

ಲಿಂಗೈಕನಿಷ್ಠನೆನಿಸುವ
ಭೃಂಗೀಶಂ ಶಕ್ತಿಯುಕ್ತಮೆನಿಪೀಶನ ವಾ
ಮಾಂಗಮನೆ ಪಿಂಗುತುಂ ಬಲ
ದಂಗಕೆ ಬಲಗೆಯ್ಯೊಳೆಱಗಿ ಭಜಿಸಿದನಲ್ತೇ ೩೨

ಹರನಾದಿಶಕ್ತಿ ಗಿರಿಶನ
ಪರಮಪ್ರಿಯೆಯೆನಿಪ ದೇವಿಯುಮನಾದೊಡಮೀ

ಬಸವಣ್ಣನವರು ಪ್ರತಿಯಾಗಿ ೨೯. ಮಹಾರಾಜಾ, ಸ್ವಲ್ಪವೂ ತಪ್ಪಿಲ್ಲದವನಲ್ಲಿ ಕೋಪವು ಸಲ್ಲದು. ಯುದ್ಧ ಭೂಮಿಯಲ್ಲಿ ನಿನ್ನನ್ನು ಬಿಟ್ಟು ಓಡಿಬಂದನೇ? ಮಾಡಬಾರದುದನ್ನೇನಾದರೂ ಮಾಡಿದನೇ? ನಿನ್ನ ಅಪ್ಪಣೆಯನ್ನೇನಾದರೂ ಮಿಕ್ಕಿದನೇ? ೩೦. ಸುಮ್ಮನೆ ಕೋಪವು ಅರಸರಿಗೆ ಅಧಿಕ್ಯೆಗೊಂಡರೆ ಅದು ಅಪಯಶಸ್ಸಿಗೆ ಕಾರಣವಾಗುವುದಲ್ಲವೇ! ನಿಮ್ಮ ವಿಷಯವಾಗಿ ನಮ್ಮ ಭಾಸ್ಕರ ದೇವನಲ್ಲಿ ಯಾವ ಕೊರತೆಯೂ ಇಲ್ಲವೆಂಬುದನ್ನು ನೀನೆ ಯೋಚಿಸಿ ತಿಳಿಯಬೇಕು. ೩೧. ಶರಣರಾದವರು ಶಿವನಲ್ಲಿ ಏಕನಿಷ್ಠೆಯೇ ಆಭರಣವಾಗಿ ಉಳ್ಳವರು. ಅವರು ಹೇಗೂ ಅನ್ಯದೇವತೆಯ ಗುಡಿಯನ್ನು ಪ್ರವೇಶಿಸುವುದಿಲ್ಲ. ಪರಮ ಶಿವಸಂಬಂಧವಾದ ವ್ರತ ನಿಯಮದಿಂದ ಕೂಡಿದ ಅವರು ವಿಷ್ಣು ಇಂದ್ರನೇ ಮೊದಲಾದ ದೇವತೆಗಳನ್ನು ಚಿಕ್ಕ ಕಡ್ಡಿಗಿಂತಲೂ ಕಡೆಯಾಗಿ ಕಾಣುವರು. ೩೨. ಲಿಂಗದಲ್ಲಿಟ್ಟ ಏಕೈಕ ನಿಷ್ಠೆಯುಳ್ಳವನೆನಿಸಿದ ಭೃಂಗೀಶ್ವರನು ಶಕ್ತಿ ಸಮೇತವಾದುದೆಂದು ಶಿವನ ಎಡಗಡೆಯ ದೇಹಾರ್ಧ ಭಾಗವನ್ನು ತೊರೆದು ಬಲಗಡೆಯ ದೇಹಾರ್ಧಕ್ಕೆ ಬಲಗೈಯಿಂದಲೇ ನಮಸ್ಕರಿಸಿ ಸ್ತೋತ್ರ ಮಾಡಲಿಲ್ಲವೇ! ೩೩. ಹರನ ಆದಿಶಕ್ತಿಯೂ, ಪರಮೇಶ್ವರನ ಶ್ರೇಷ್ಠ ಪತ್ನಿಯೂ ಎನಿಸಿದ ದೇವಿಯನ್ನಾದರೂ ಈಶ್ವರನ ಭಕ್ತರು

ಶ್ವರಭಕ್ತರ್ವರ್ಣ್ನಿಸರೆನೆ
ಹರವಿಧಿ ಮುಖಸುರರನೆಂತುಮೇಂ ಲೆಕ್ಕಿಪರೇ ೩೩

ಅಸಮಗುಣನೊರ್ವನನ್ಯರ
ಪೆಸರಂದುಂ ಕಿವಿಯನಂಟಲಾಗದೆನುತ್ತುಂ
ಮಿಸುಗುವ ಘಂಟೆಗಳಂ ತಳೆ
ದೆಸೆಯನೆ ಕಿವಿಯಲ್ಲಿ ನೆಗಳ್ದ ಘಂಟಾಕರ್ಣಂ ೩೪

ವ॥ ಮತ್ತಂ ಮಹೇಂದ್ರಮಂಗಳಮೆಂಬ ಪೆಸರ ನಗರದೊಳಾರ್ಯಮನೆಂಬ ಭಕ್ತಂ ಪರ ದೈವಂಗಳಂ ಗಣಿಸದೆ ಶಿವೈಕಭಕ್ತಿಯಂ ನೆಗಳುತ್ತುಮಿರ್ದು—

ಹರನಾಮಮಲ್ಲದಿತರಾ
ಮರನಾಮಮನನ್ನ ಮುಂದೆ ನುಡಿದನ ತಲೆಯಂ
ಕರವಾಳಿಂ ತಱಿದಪೆನೆಂ
ದೆರಡಿಲ್ಲದೆ ಪೂಣ್ಕೆಗೆಯ್ದು ತಾನಿರ್ಪಿನೆಗಂ ೩೫

ಸುರುಚಿರರುದ್ರಸೂಕ್ತಮನೆ ಬೀದಿಯೊಳೋದುತೆ ಪಾರ್ವನೊರ್ವನಾ
ಗರಕಿರದೆಯ್ದೆ ಭಿಕ್ಷೆಗೆ ನಿರೀಕ್ಷಿಸಿ ಭೈಕ್ಷಮನಿಕ್ಕೆ ಭಕ್ತನಾ
ದರದೊಳೆ ತಾನೆ ಕೊಳ್ವೆಡೆಯೊಳೊಂದಗುಳೊಕ್ಕೊಡೆ ಕಂಡು ತದ್ವಿಜಂ
ಹರಿ ಹರಿಯೆಂಬಿನಂ ಪೊಡೆದು ಪುಟ್ಟನೊಳಿಕ್ಕಿದನಗ್ರಜನ್ಮನಂ ೩೬

ಮನ್ನಿಸುವುದಿಲ್ಲವೆನ್ನುವಾಗ ವಿಷ್ಣುಬ್ರಹ್ಮರೇ ಮೊದಲಾದ ದೇವತೆಗಳನ್ನು ಯಾವ ರೀತಿಯಿಂದಲಾದರೂ ಗಣನೆಗೆ ತಂದುಕೊಳ್ಳುವರೇ ? ೩೪. ಅಸದೃಶ ಸದ್ಗುಣ ಸಂಪನ್ನನೆನಿಸಿದ ಪ್ರಖ್ಯಾತ ಘಂಟಾಕರ್ಣನೆಂಬೋರ್ವ ಶಿವಭಕ್ತನು ಅನ್ಯದೈವದ ಹೆಸರು ಎಂದೂ ಕಿವಿಗೆ ಕೇಳದಿರಲೆಂದು ಶೋಭಿಸುವ ಗಂಟೆಗಳನ್ನು ಕಿವಿಯ ಮುಂದೆ ಕಟ್ಟಿಕೊಂಡು ಶೋಭಿಸಲಿಲ್ಲವೇ ? **ಆರ್ಯಮನಕಥೆ :** ವ॥ ಮಹೇಂದ್ರ ಮಂಗಳವೆಂಬ ಹೆಸರಿನ ನಗರದಲ್ಲಿ 'ಆರ್ಯಮ' ಎಂಬ ಹೆಸರಿನ ಭಕ್ತನು ಅನ್ಯದೈವಗಳನ್ನು ಲೆಕ್ಕಕ್ಕೆ ತಾರದೆ ಶಿವನೊಬ್ಬನಲ್ಲೇ ಇಟ್ಟ ಭಕ್ತಿಯನ್ನು ಪ್ರಕಟಿಸುತ್ತಿದ್ದು ೩೫–೩೬. ಆ ಆರ್ಯಮನು ಶಿವನಾಮವಲ್ಲದೆ ಇತರ ದೇವತೆಗಳ ಹೆಸರನ್ನು ನನ್ನ ಮುಂದೆ ನುಡಿದವನ ತಲೆಯನ್ನು ಕತ್ತಿಯಿಂದ ಹಿಂದೆ ಮುಂದೆ ನೋಡದೆ ಕತ್ತರಿಸಿ ಬಿಡುತ್ತೇನೆಂದು ಪ್ರತಿಜ್ಞೆಮಾಡಿ, ಇರುತ್ತಿರುವಾಗ–ಬೀದಿಯಲ್ಲಿ ಒಬ್ಬ ಬ್ರಾಹ್ಮಣನು ಮನೋಹರವಾದ ರುದ್ರಸೂಕ್ತವನ್ನು ಹೇಳುತ್ತ ಭಿಕ್ಷೆಗಾಗಿ ಮನೆಗೆಬರಲು ಅವನನ್ನು ನೋಡಿ, ಭಕ್ತನು ಆದರ ಪೂರ್ವಕವಾಗಿ ತಾನೇ ಬಂದು ಭಿಕ್ಷೆಯನ್ನು ಇಕ್ಕಲಾಗಿ (ಆ ದ್ವಿಜನು) ಭಿಕ್ಷೆಯನ್ನು ಸ್ವೀಕರಿಸುವಾಗ ಒಂದು ಅಗುಳು ಅನ್ನವು ಬೀಳಲು ಆ ಬ್ರಾಹ್ಮಣನು ಕಂಡು 'ಹರಿ ಹರಿ'

ವ॥ ಅಂತು ತಳ್ನದಿರೊಳನ್ಯಶಬ್ದಮನುಚ್ಚರಿಸಿದ ಪಾರ್ವನಂ ಮಡಿವಲೊಡನದಂ ಕಂಡು ನೆರೆಯ ಭೂಸುರರೆಲ್ಲರ್ನೆರೆದು ಕಡುಮುಳಿಸೇಱಿ ಮೀಱಿ—

ತನಗುಳ್ಳೊಡನ್ನಮಿಕ್ಕುಗೆ
ಮನೆಗೇಳ್ತರೆ ಭಿಕ್ಷು ಭೈಕ್ಷಮಂ ತನಗಿಲ್ಲಾ
ಗೆ ನಿತಾಂತನಿಲ್ಲ ನಡೆಯೆಂ
ದೆನೆ ಸಾಲದೆ ಸದೆಯಲಕ್ಕುಮೇ ಭೂಸುರನಂ ೩೭

ಧರೆ ಪಳಿಗುಂ ಮುಳಿಗುಂ ಭೂ
ಮರನೆಂಬುದನಿಂಬುಳೆಯ್ಯದಳ್ಕದೆ ನೆಗಳ್ದಂ
ದುರುಳನಿವಂ ಬೊಮ್ಮ್ರೀತಿಯು
ನರಪಂಗ ಱಿಪಲ್ಕೆವೇಳ್ಕುಮೆಂದಾ ಪಾರ್ವರ್ ೩೮

ವ॥ ಎಂದು ನರೇಂದ್ರನೊಡನದೆಲ್ಲಮಂ ಪೇಳೆ ಕೇಳ್ದು ನೃಪಂ ಕುಪಿತನಾಗಿ—

ಬರಿಸಿದನಲ್ಲಿಗಾ[1]ರ್ಯಮನನಾರ್ಯಮನೋಜ್ಞಚರಿತ್ರನಂ ಧರಾ
ಮರನನದೇಕೆ ಕೊಂದೆ ನೆಗಳ್ದಾತನ ತಪ್ಪನಿದಿಂತುಟೆಂದು ಬಿ
ತ್ತರಿಸದನೀಕ್ಷಿಪೆಂ ನಿರಪರಾಧನನೋವದೆ ಕೊಂದೆಯಪ್ಪೊಡೀ
ಧರಣಿಯನೊರ್ಮೆ ನೀಂ ಬಗಿದು ಪೊಕ್ಕೊಡಮಿಕ್ಕದೆ ನಿನ್ನನಾಂ ಬಿಡೆಂ ೩೯

ಸದ್ವಂಶಜನಂ ಮಡಿಪಿದೆ
ವಿದ್ವಾಂಸನನಖಿಳವೇದವಿದನಂ ಮದನ

ಎಂದೆನ್ನಲಾಗಿ, ಹುಟ್ಟಿನಿಂದ ಹೊಡೆದು ಆ ಬ್ರಾಹ್ಮಣನನ್ನು ಕೊಂದನು. ವ॥ ಹೀಗೆ ತನ್ನ ಎದುರಿನಲ್ಲಿ ಅನ್ಯದೇವತಾನಾಮವನ್ನು ಉಚ್ಚರಿಸಿದ ಪಾರ್ವನನ್ನು ಸಾಯಿಸಲಾಗಿ, ಅದನ್ನು ಕಂಡ ಅಕ್ಕಪಕ್ಕದ ಬ್ರಾಹ್ಮಣರೆಲ್ಲ ಸೇರಿ, ಅತಿಕೋಪವೇರಿ ಮಿಕ್ಕು ೩೭. 'ತನ್ನಲ್ಲಿ ಅನ್ನವಿದ್ದರೆ ಮನೆಗೆಬಂದ ಭಿಕ್ಷುವಿಗೆ ಭಿಕ್ಷೆಯನ್ನಿಕ್ಕಲಿ. ಇಲ್ಲದಿದ್ದರೆ ನ್ಯಾಯವಾಗಿ ಇಲ್ಲ, ಮುಂದಕ್ಕೆ ಹೋಗಯ್ಯ ಎಂದರೆ ಆಯಿತು ! ಬ್ರಾಹ್ಮಣನನ್ನು (ಈ ರೀತಿ) ಹೊಡೆದು ಹಾಕಬಹುದೇ ?' ವ॥ ಹೀಗೆಂದು ಅರಸನೊಡನೆ ನಡೆದುದೆಲ್ಲವನ್ನೂ ಹೇಳಲಾಗಿ, ಅರಸನು ಕೇಳಿ ಕೋಪಗೊಂಡು ೩೯. ತಾನಿದ್ದಲ್ಲಿಗೆ ಶ್ರೇಷ್ಠಪುರುಷರಿಗೊಪ್ಪುವಂತಹ ಮನೋಹರ ಚರಿತ್ರೆಯುಳ್ಳ ಆರ್ಯಮನನ್ನು ಬರಮಾಡಿಕೊಂಡನು. 'ಎಲೈ ಬ್ರಾಹ್ಮಣ ನನ್ನು ಅದೇಕೆ ಕೊಂದೆ ? ಆತನು ಮಾಡಿದ ತಪ್ಪು ಇಂಥಾದ್ದೆಂದು ವಿವರಿಸು; ಅದನ್ನು ನಾನು ನೋಡುತ್ತೇನೆ ; ಅಪರಾಧವಿಲ್ಲದ ಅವನನ್ನು ಕೊಂದದ್ದೇ ಆದರೆ, ಈ ಭೂಮಿಯನ್ನು ಒಮ್ಮೆ ನೀನು ಬಗೆದುಹೊಕ್ಕರೂ ಕೂಡ ಕೊಲ್ಲದೆ ಬಿಡುವುದಿಲ್ಲ.' ೪೦. 'ವಿದ್ವಾಂಸನೂ, ಸಮಸ್ತ ವೇದಾರ್ಥವನ್ನು ತಿಳಿದವನೂ ಆದ ಶ್ರೇಷ್ಠವಂಶೋತ್ತಮ

1 ಗ(ಚ)

ಪ್ರದ್ವೇಷಿಭಕ್ತಜನಕಿದು
ಸದ್ವರ್ತನಮಕ್ಕುಮೇ ವಿಚಾರಿಪೊಡಿಳೆಯೊಳ್ ೪೦

ಎನೆ ಕೇಳ್ದಾ[1]ರ್ಯಮನೆಂದನಂದು ನಗುತುಂ ಭೂಪಾಲ ತಪ್ಪಿಲ್ಲದಾ
ತನನೇಂ ಕೊಂದೆನೆ ತಪ್ಪನೀಶ್ವರನೆ ಬಲ್ಲಂ ನಿನ್ನೊಳೆಂ ಪೇಳ್ವುದೇ
ನನಿಮಿತ್ತಂ ಸಲೆ ಕಾಯಲುಂ ಕೊಲಲುಮೆನ್ನಂ ಶಂಭುವೇ ಶಕ್ತನು
ರ್ಕಿನ ಮಾತಂ ಬಿಡು ಭರ್ಗಭೃತ್ಯನನದೇಂ ನೀಂ ದಂಡಿಸಲ್ದಕ್ಷನೇ ೪೧

ವ॥ ಎಂಬುದುಮರಸನತ್ಯಂತ ಕೋಪೋದ್ರೇಕಮಂ ತಾಳ್ದೀತನನೀಗಳೆ ಕೊಲ್ವುದೆಂದು ಭಟರ್ಗೆ ನಿಯಾಮಿಸಿ ಕಳುಪಲೊಡನವರೊಡನೆ ಭಕ್ತಂ ಬರುತ್ತುಮಿದಿರೊಳೊಂದು ಶಿವಾಲಯಮಿರೆ ಕಂಡೊಳಪೊಕ್ಕು ಲಿಂಗಾಲಿಂಗನಂಗೆಯ್ದು ಲಿಂಗಗರ್ಭದೊಳಗನೆ ಪೊಕ್ಕನಾಗಳ್ ಭಟರ್ಬೆನ್ನನೇಳ್ತಂದು ಪೋಗದಿರೆಂದು ಸೆಱಂಗನುಗಿದು ಸೆಳೆಯೆ—

ಸುಲಲಿತ ಚೇಲಾಂಚಲಮದು
ಕೆಲಕೊರ್ಮೆರ್ನಿಮಿರ್ದು ಭಕ್ತಿಕೇತನಪಟದಂ
ತಲರ್ದಿರೆ ಧರೆ ಪೊಗಳೆ ಮಹೋ
ಜ್ವಲಲಿಂಗದೊಳಾ[2]ರ್ಯಮಾಂಕನೊಡವೆರೆದಿರ್ದಂ ೪೨

ನನ್ನು ಕೊಂದುಹಾಕಿದ್ದೀಯೆ. ವಿಚಾರಿಸಿ ನೋಡಿದರೆ ಈ ಲೋಕದಲ್ಲಿ ಮನ್ಮಥನನ್ನು ಧ್ವಂಸಗೊಳಿಸಿದ ಶಿವನಭಕ್ತ ಜನರಿಗೆ (ಈ ವ್ಯವಹಾರವು) ಉತ್ತಮ ವರ್ತನೆಯೆಂದೆನಿಸೀತೇ ?' ೪೦. ಹೀಗೆಂದು ಆ ರಾಜನು ಕೇಳಲು ಆರ್ಯಮನು ನಗುತ್ತ ಹೀಗೆಂದನು : ಮಹಾರಾಜಾ, ನಾನು ತಪ್ಪಿಲ್ಲದೆ ಕೊಂದೆನೇ ? ಅವನು ಮಾಡಿದ ತಪ್ಪನ್ನು ಈಶ್ವರನೇ ಬಲ್ಲನು. ನಿನ್ನಲ್ಲಿ ನಾನು ಹೇಳುವುದೇನು ? ನನ್ನನ್ನು ನಿಷ್ಕಾರಣವಾಗಿ ಕಾಯುವುದಕ್ಕೂ, ಕೊಲ್ಲುವುದಕ್ಕೂ ಶಂಭುವೇ ಸಮರ್ಥನು ; ಗರ್ವದಮಾತನ್ನು ಆಡಬೇಡ. ಶಿವಭಕ್ತನನ್ನು ದಂಡಿಸಲು ನಿನಗೇನು ಸಾಮರ್ಥ್ಯವಿದೆ ? ವ॥ ಹೀಗೆನ್ನಲಾಗಿ, ಅರಸನು ಮಿತಿಮೀರಿದ ಕೋಪದಿಂದ ಉದ್ರೇಕಗೊಂಡು, ಈತನನ್ನು ಈ ಕೂಡಲೆ ಕೊಲ್ಲಿರೆಂದು ಭಟರಿಗೆ ಆಜ್ಞಾಪಿಸಿ ಕಳಿಸಲಾಗಿ, ಅವರೊಡನೆ ಆ ಭಕ್ತನಾದ ಆರ್ಯಮನು ಬರುತ್ತಿರುವಾಗ, ಎದುರಿನಲ್ಲಿಯೇ ಇರುವ ಒಂದು ಶಿವಾಲಯವನ್ನು ಕಂಡು ಒಳಗೆಹೋಗಿ ಅಲ್ಲಿರುವ ಲಿಂಗಮೂರ್ತಿಯನ್ನು ತಬ್ಬಿಕೊಂಡು, ಲಿಂಗ ಗರ್ಭದೊಳಗೆ ಹೋಗುತ್ತಿದ್ದನು. ಆಗ ರಾಜಭೃತ್ಯರುಗಳು ಹಿಂಬಾಲಿಸಿಬಂದು (ಲಿಂಗ ಗರ್ಭದಲ್ಲಿ) ಹೋಗಬೇಡವೆಂದು ಅವನ ವಸ್ತ್ರದ ಸೆರಗನ್ನು ಹಿಡಿದೆಳೆಯಲು ೪೨. ಮನೋಹರವಾದ ಅವನ ಆ ಬಟ್ಟೆಯ ಸೆರಗು ಒಂದು ಮಾರುದ್ದ ಹೊರಭಾಗದಲ್ಲಿ ಉಳಿದು ಶಿವಭಕ್ತಿಯೆಂಬ ಪತಾಕೆಯ ಪಟದಹಾಗೆ ಅಗಲವಾಗಿ ಹರಡಿತು. ಲೋಕವೆಲ್ಲ ಹೊಗಳಿತು. ಅತ್ಯಂತ ಉಜ್ವಲವಾದ ಲಿಂಗ

---

[1] ರ್ಯ (ಚ) [2] ರ್ಯ(ಚ)

ಹರನಾ ಭಕ್ತನ ಬಗೆಯುಂ
ಧರೆಗಱುಪಲ್ಕಲೆ ತದೀಯ ಚೇಲಾಂಚಲಮುಂ
ಕರಮಲ್ಲಿ ತೋರ್ಪನೀಗಳು
ಮರಿದೆನೆ ಸದ್ಭಕ್ತರೇಳ್ಗೆ ಸಾಧಾರಣಮೋ ೪೩

ವ॥ ಮತ್ತಂ ಕೇಳ್ವುದೆಂತೆನೆ—

ವೀರ ಶಂಕರದಾಸನೆಂಬ ಶಿವೈಕ್ಯನೊರ್ವನಪೂರ್ವವಿ
ಸ್ತಾರಭಕ್ತಿಸಮೇತನನ್ಯಮತಸ್ಥರಂ ಪರದೈವಮಂ
ಸಾರೆನೀಕ್ಷಿಸೆನಂಟೆನಾಂ ಸ್ವಪನಂಗಳಲ್ಲಿಯುಮಾ ದುರಾ
ಚಾರರೊಳ್ನುಡಿಯಾಡೆನೆಂದು ದೃಢಪ್ರತಿಜ್ಞೆಯಿನೊಪ್ಪಿದಂ ೪೪

ವ॥ ಅಂತು ವೀರಭಕ್ತಿಸಮಗ್ರಂ ತ್ರಿವಿಧಲಿಂಗಾರ್ಚನೆಯಿಂ ಕೆಲವಾನುಂ ದಿವಸಂಗಳಿಂದಿರ್ಪಿನ ಮೊಂದಿರುಳ ಕನಸಿನೊಳೊರ್ವಂ ಬೌದ್ಧಂ ಬಂದು ನಿಜಾಂಗಮಂ ಮುಟ್ಟಲೊಡನೆ ತೊಟ್ಟನೆಳ್ಚತ್ತು ಶುದ್ಧನಲ್ಲದ ಬೌದ್ಧನಂಟಿದನಿದಕ್ಕೆ ಶುದ್ಧಿಯಾವುದೆಂದಾಳೋಚಿಸಿ—

ಮಡಕೆಗೆ ವಿಶುದ್ಧಿಯಕ್ಕುಂ
ಸುಡೆ ವಹ್ನಿಯಿನದಱ ತೆಱದೆ ಸುಡೆ ಭವಿಯಂಟಿ
ದೊಡಲನಿದು ಶುದ್ಧಭಾವಂ
ಬಡೆಗುಂ ದಿಟಮೆಂದು ಭಕ್ತನವಧರಿಸುತ್ತುಂ ೪೫

ಪಟುಶೌರ್ಯಂ ಧೈರ್ಯದಿಂ ಶ್ರೀಗಿರಿಗೆ ತಳರ್ದು ಭವರ್ಮೇಶ್ವರಾಖ್ಯಾತಲಿಂಗ
ಸ್ಫುಟಗೇಹಂಬೊಕ್ಕು ಮಿಕ್ಕುಜ್ಜ್ವಳಿಸಿದುರಿಗಳಿಂ ತಳ್ತ ಘೋರಾಗ್ನಿಯಿಂದು

ಗರ್ಭದಲ್ಲಿ ಆರ್ಯಮಾಂಕನು ಐಕ್ಯಗೊಂಡನು.—೪೩. ಶಿವಭಕ್ತನಾದ ಅವನ ಭಕ್ತಿಯ ರೀತಿಯನ್ನು ಇದು ಅಸಾಧ್ಯವಾದ ಭಕ್ತಿಯ ರೀತಿ ಎಂದು ಲೋಕಕ್ಕೆ ಸಾರುತ್ತ ಆ ಭಕ್ತನ ಬಟ್ಟೆಯ ಸೆರಗನ್ನು ಚೆನ್ನಾಗಿ ಈಗಲೂ ತೋರಿಸುತ್ತಿದ್ದಾನೆ. ಸದ್ಭಕ್ತರಾದವರ ಭಕ್ತಿಯ ಅತಿಶಯವು ಸಾಮಾನ್ಯವಾದುದೇ ? ವ॥ ಇನ್ನೂ ಕೇಳು : ಅದು ಹೇಗೆಂದರೆ ವೀರ ಶಂಕರದಾಸನ ಕಥೆ—೪೪. ಶಿವೈಕ್ಯಚಿತ್ತನಾದ ವೀರಶಂಕರದಾಸನೆಂಬ ಓರ್ವ ವಿಶೇಷವಾದ ಅಪೂರ್ವ ಶಿವಭಕ್ತಿಯಿಂದ ಕೂಡಿದ ಭಕ್ತನು (ಇದ್ದನು. ಅವನು) ಅನ್ಯ ಮತದವರನ್ನೂ, ಅನ್ಯರ ದೇವರುಗಳನ್ನೂ ಸಮೀಪಿಸೆನು ; ಮುಟ್ಟೆನು ; ಕನಸಿನಲ್ಲಿಯೂ ಆ ದುರಾಚಾರರೊಡನೆ ಮಾತನಾಡುವುದಿಲ್ಲ, ಎಂಬ ದೃಢ ಪ್ರತಿಜ್ಞೆಯಿಂದ ಶೋಭಿಸುತ್ತಿದ್ದನು. ವ॥ ಈ ರೀತಿ ವೀರಭಕ್ತಿ ಸಮನ್ವಿತನಾಗಿ ತ್ರಿವಿಧ ಲಿಂಗಾರ್ಚನೆ (ಗುರುಲಿಂಗ ಜಂಗಮಾರ್ಚನೆ)ಯಿಂದ ವ್ಯವಹರಿಸುತ್ತ ಅನೇಕ ದಿವಸಗಳಿಂದ ಇರಲಾಗಿ ಒಂದು ರಾತ್ರಿ ಕನಸಿನಲ್ಲಿ ಒಬ್ಬ ಬೌದ್ಧನು ಬಂದು, ತನ್ನ ಶರೀರವನ್ನು ಮುಟ್ಟಲಾಗಿ ಆ ಕೂಡಲೇ ಎಚ್ಚರಗೊಂಡು, ಅಶುದ್ಧನಾದ ಬೌದ್ಧನು ತನ್ನನ್ನು ಮುಟ್ಟಿಬಿಟ್ಟನು, ಇದಕ್ಕೆ ಶುದ್ಧಿಯಾವುದೆಂದು ಯೋಚನೆ ಮಾಡಿ ೪೫–೪೬. (ಅಶುದ್ಧವಾದ) ಮಡಕೆಯನ್ನು ಬೆಂಕಿಗೆ ಹಾಕಿ ಸುಟ್ಟರೆ ಅದು ಶುದ್ಧಿಗೊಳುವುದು, ಅದರಂತೆ ಭವಿಯು ಮುಟ್ಟಿದ ಈ

ತ್ಕಟಮೆತ್ತುಂ ಕಾದ ಪೆರ್ಗಾವಲಿಯ ನಡುವೆ ಕುಳ್ಳಿರ್ದು ವಿಕ್ರಾಂತದಿಂ ಧೂ
ರ್ಜಟಿಯಂ ದಲ್ ಮೆಚ್ಚಿಸುತ್ತುಂ ಪಡೆದನಭವಸಾಯುಜ್ಯಮಂ ಭಕ್ತವರ್ಯಂ ೪೬

ಆಲಿಪುದಿನ್ನುಂ ಶಿವಪದ
ಲೋಲಂ ಶಿವಲೆಂಕ ಮಂಚಣಾರ್ಯನೆನಿಪ್ಪಂ
ಭೂಲೋಕವಿನುತ ಘನಮಹಿ
ಮಾಲಂಬನನಭವಗಣಪದಾಂಬುಜಭೃಂಗಂ ೪೭

ಶ್ರೀಕರವಿಳಸಿತ ವಿಪುಳ ಕ
ಳಾಕರನಕಳಂಕ ಗುಣಗಣಾಮಳಮಣಿರ
ತ್ನಾಕರನಹಿತಾಂಬುರುಹಸು
ಧಾಕರನಘತುಹಿನಘನವಿಭಾಕರನೆಸೆದಂ ೪೮

ಶ್ರೀಮಹೋತ್ತಮ ಕಾಶಿಯೊಳ್ಮೆಱೆವಂ ತ್ರಿಕಾಲಮುಮಾ ಪುರ
ಸ್ವಾಮಿಗರ್ಪಿಸಿ ವಿಶ್ವನಾಥ ಶಿವಂಗೆ ಪತ್ತು ಬೆರಲ್ಗಳಂ
ಪ್ರೇಮದಿಂ ಪಡೆದಂತೆ ತಾಂ ಮಗುಳ್ದೀವನಾತ್ಮಕರಾಂಗುಲಿ
ಸ್ತೋಮಮಂ ಪಡೆದಂತೆ ಗೆಯ್ವುದೆ ನೇಮಮಾಗೆ ವಿರಾಜಿಪಂ ೪೯

ದೇಹವನ್ನು ಸುಟ್ಟರೆ ನಿಜವಾಗಿ ಶುದ್ಧಿಯನ್ನು ಹೊಂದುವುದು ಎಂದು ಆ ಭಕ್ತನು ತಿಳಿದವನಾಗಿ ಸಮರ್ಥವಾದ ಶೌರ್ಯವುಳ್ಳ ಅವನು ಧೈರ್ಯದಿಂದ ಶ್ರೀಶೈಲ ಪರ್ವತಕ್ಕೆ ಬಂದು, (ಅಲ್ಲಿರುವ) 'ಭರ್ಗೇಶ್ವರ' ಎಂಬಹೆಸರಿನ ಪ್ರಸಿದ್ಧವಾದ ಶಿವಾಲಯವನ್ನು ಹೊಕ್ಕು, ವಿಶೇಷವಾಗಿ, ಜಾಜ್ವಲ್ಯಮಾನವಾದ ಉರಿಯಿಂದ ಕೂಡಿ, ಘೋರವಾದ ಬೆಂಕಿಯಿಂದ ಕೆಂಪಾಗಿ ಕಾಯ್ದ ದೊಡ್ಡಲೋಹಪಾತ್ರೆ (ದೊಡ್ಡ ಓಡು)ಯ ನಡುವೆ ಧೈರ್ಯ ವಿಶಿಷ್ಟನಾಗಿ ಕುಳಿತು ಪರಮೇಶ್ವರನನ್ನು ಮೆಚ್ಚಿಸುತ್ತ ಶಿವಸಾಯುಜ್ಯವನ್ನು ಆಭಕ್ತ ಶ್ರೇಷ್ಠನಾದ ವೀರಶಂಕರದಾಸನು ಪಡೆದನು. ಮಂಚಣಾರ್ಯರ ಕಥೆ (ಮಂಚಣ್ಣ ಪಂಡಿತರ ಕಥೆ) ೪೭–೪೮. ಇನ್ನೂ ಕೇಳು : ಶಿವನ ಪಾದ ಭಕ್ತಿಯಲ್ಲಿ ಲೋಲನಾದ ವನೂ, ಶಿವನ ಭಂಟನೂ ಎನಿಸಿದ್ದ 'ಮಂಚಣಾರ್ಯ' ಎಂಬ ಹೆಸರಿನವನು ಭೂಲೋಕದ ಜನರಿಂದ ಶ್ಲಾಘಿಸಲ್ಪಡುವವನಾಗಿ, ಘನವಾದ ಮಹಾತ್ಮ್ಯೆಗೆ ಆಧಾರವೆನಿಸಿ, ಶಿವಗಣ ಗಳ ಪಾದಕಮಲ ಭೃಂಗನಾಗಿ, ಪ್ರಕಾಶಿಸುವ ಮೋಕ್ಷ ಸಂಪತ್ತನ್ನುಂಟುಮಾಡುವ, ಅಧಿಕವಾದ ಕಳೆಗಳಿಗೆ (ಶಿವಜೀವೈಕ್ಯಬೋಧಕವಾದ ಶೈವ ವಿದ್ಯೆಗಳಿಗೆ) ಆಕರನೆನಿಸಿ, ಕಲಂಕರಹಿತವಾದ ಶ್ರೇಷ್ಠ ಗುಣವೆಂಬ ರತ್ನಗಳಿಗೆ ಸಮುದ್ರನೆನಿಸಿ, ಅಹಿತರಾದ ಜನ ರೆಂಬ ಕಮಲಗಳಿಗೆ ಚಂದ್ರನೆನಿಸಿ, ಪಾಪಗಳೆಂಬ ಮಂಜಿಗೆ ಶ್ರೇಷ್ಠ ಸೂರ್ಯನೆನಿಸಿ ಶೋಭಿ ಸಿದ್ದನು. ೪೯. (ಅವನು) ಮಂಗಳಕರವಾದ ಉತ್ತಮೋತ್ತಮವೆನಿಸಿದ ಕಾಶಿಯಲ್ಲಿ ಮೆರೆಯುತ್ತಿದ್ದನು. ಮೂರು ಕಾಲದಲ್ಲೂ (ಪ್ರಾತಃ, ಮಧ್ಯಾಹ್ನ, ಸಾಯಂಕಾಲಗಳಲ್ಲೂ) ಆ ನಗರದ ಪ್ರಭುವೆನಿಸಿದ ವಿಶ್ವನಾಥನೆಂಬ ಹೆಸರಿನ ಶಿವನಿಗೆ ಪ್ರೇಮದಿಂದ ತನ್ನ ಹತ್ತೂ ಕೈಬೆರಳುಗಳನ್ನು ಸಮರ್ಪಣೆ ಮಾಡುವನು. ಆ ಶಿವನು ಪುನಃ ಆತನ ಬೆರಳು ಗಳನ್ನು ಕೊಡುವನು. ಈ ರೀತಿ ಪಡೆದು ಮಾಡುವ ಭಕ್ತಿಯೇ ಅವನ ನೇಮವಾಗಿ

ಪರಶಿವನೊರ್ವನಲ್ಲದಖಿಳಾಂಡಕದಂಬಕೆ ಬೇಱಧೀಶರೆಂ
ಬರುಮಣಮಿಲ್ಲೆನುತ್ತೆ ನಿಗಮಾಗಮಶಾಸ್ತ್ರದಿನುತ್ತರಂಗುಡು
ತ್ತಿರದಧಟಿಂದೆ ಗೆಲ್ದು ಸಲೆ ಸೋಲಿಸುತನ್ಯಮತಾಭಿಮಾನನಿ
ಷ್ಠುರನಕಳಂಕ ಪೂರ್ಣಸಿತಕೀರ್ತಿ ವಿಜೃಂಭಿಸೆ ಭೂತಳಾಗ್ರದೊಳ್ ೫೦

ಸಕಳ ಪರವಾದಿಜನನಾ
ಸಿಕಾಗ್ರಖಂಡನ ಕರಾಳಖಡ್ಗಂ ತಾನೆಂ
ದಕಳಂಕಮಹಿಮನೆತ್ತಿಸಿ
ಸುಕರಧ್ವಜಮುಂ ವಿರಾಜಿಸುತ್ತಿರೆ ಪುರದೊಳ್ ೫೧

ವ॥ ಆಗಳ್ ಪರಸಮಯಸ್ಥರೆಲ್ಲಂ ಗೆಲ್ಲಂಗೊಳಲೆಂದು ಕೃತಕಸಂಕೇತರಾಗಿ ಮಾತಣಂಗೊಂಡು ಮಂಟಪದೊಳ್ಕುಳ್ಳಿರ್ದು ಮಂಚಣಪಂಡಿತರಂ ಬರಿಸಿ ತಮ್ಮ ತಮ್ಮ ಶಾಸ್ತ್ರೋಕ್ತಿ[1]ಯುಕ್ತಿಯುಮರೆ ಬೇಱೆವೇಱೆ ಮಸಗಿ ಮಥಿಯಿಸೆ—

ಶ್ರುತಿ ಸೂತ್ರ ನ್ಯಾಯ ಸಮ
ನ್ವಿತಶಾಸ್ತ್ರಸ್ಮೃತಿಪುರಾಣ ತರ್ಕಾದಿಗಳಿಂ
ಪತಿ ಶಿವನೊರ್ವನೆ ಭುವನ
ಪ್ರತತಿಗೆ ಪೆಱನಿಲ್ಲೆನುತ್ತೆ ಪಟುಯುಕ್ತಿಗಳಿಂ ೫೨

ಬಾಯೆತ್ತದಂತೆ ನುಡಿವುತೆ
ಕಾಯಜರಿಪುಭಕ್ತನೆಲ್ಲರಂ ಗೆಲೆ ಸೋಲ್ತಾ

ಸಂತೋಷವಾಗಿ ಆ ಭಕ್ತಿ ಜೀವನವನ್ನು ಆಚರಿಸುತ್ತ ರಂಜಿಸುತ್ತಿದ್ದನು. ೫೦. ಸಮಸ್ತ ಬ್ರಹ್ಮಾಂಡ ಮಂಡಳಕ್ಕೆ ಪರಶಿವನಲ್ಲದೆ ಬೇರೆ ಒಡೆಯರೆಂಬುವರು ನಿಶ್ಚಯವಾಗಿ ಇಲ್ಲವೆನ್ನುತ್ತ, ವೇದ ಆಗಮಶಾಸ್ತ್ರಾಧಾರ ಪೂರ್ವಕವಾಗಿ ಪರಾಕ್ರಮದಿಂದ ಅನ್ಯಮತದವರನ್ನು ಸೋಲಿಸಿ ತಾನು ಗೆದ್ದು, ಸತ್ಯದ ವಿಷಯದಲ್ಲಿ ನಿಷ್ಠುರನೂ, ಕಳಂಕರಹಿತನೂ ಆಗಿ ಪರಿಪೂರ್ಣ ಶುಭ್ರ ಯಶಸ್ಸಿನಿಂದ ಭೂಮಂಡಲದಲ್ಲಿ ವಿರಾಜಿಸುತ್ತಿದ್ದನು. ೫೧. ಸಕಲ ಪರವಾದಿ (ಅನ್ಯಮತ ಶ್ರೇಷ್ಠತೆಯ ಬಗೆಗೆ ವಾದಿಸುವ) ಜನರ ಮೂಗಿನ ತುದಿಯನ್ನು ಕತ್ತರಿಸುವ ಭಯಂಕರ ಖಡ್ಗನೆಂದು, ಆ ಕಳಂಕರಹಿತವಾದ ಮಹಿಮಾತಿಶಯದ ಮಂಚಣಾರ್ಯನು ಆ ಕಾಶೀ ಪಟ್ಟಣದಲ್ಲಿ, ಸಮೀಚೀನವಾದ ಧ್ವಜವನ್ನೇರಿಸಿ ಶೋಭಿಸುತ್ತಿದ್ದನು. ವ॥ ಆಗ ಪರಸಮಯದವರೆಲ್ಲರೂ ಈತನನ್ನು ಗೆಲ್ಲಬೇಕೆಂದು ಒಟ್ಟಾಗಿ ಸೇರಿ ಸಂಕಲ್ಪಮಾಡಿದವರಾಗಿ ಮಂಟಪದಲ್ಲಿ ಕುಳಿತುಕೊಂಡು ಮಂಚಣ ಪಂಡಿತರನ್ನು ಬರುವಂತೆ ಮಾಡಿ, ತಮ್ಮ ತಮ್ಮ ಶಾಸ್ತ್ರಗಳಲ್ಲಿ ಹೇಳಿದ ಮಾತುಗಳನ್ನೆಲ್ಲ ಬೇರೆ ಬೇರೆಯಾಗಿ ವಾದದ ಮೂಲಕ ಮಥನಗೊಳಿಸುತ್ತಿರಲಾಗಿ—೫೨-೫೩. ಶ್ರುತಿ, ಬ್ರಹ್ಮಸೂತ್ರ, ನ್ಯಾಯ ಸಮನ್ವಯಗೊಳಿಸಿ, ಶಾಸ್ತ್ರಗಳು, ಸ್ಮೃತಿ, ಪುರಾಣ ತರ್ಕಾದಿಗಳಿಂದ ಶಿವನೊಬ್ಬನೇ ಸಮಸ್ತ ಬ್ರಹ್ಮಾಂಡ ಸಮೂಹಕ್ಕೆ ಪತಿಯಲ್ಲದೆ ಬೇರೆ ಇನ್ನೊಬ್ಬ

[1] ಕ್ತ(ಚ)

ಮಾಯಾಜಡರೆಲ್ಲರ್ಗೆಲ
ಲಾಯುಂಗಾಣದೆ ಬಳಲ್ಕೆಯಿಂದಿಂತೆಂದರ್ ೫೩

ಎಲೆ ಶೈವ ಕಲ್ತ ವಿದ್ಯಾ
ಕಲಾಪದಿಂ ಗೆಲ್ದೊಡಕ್ಕುಮೇ ಸೋಲದಗುಂ
ದಲೆಯೆಮಗೆ ನಿದರ್ಶನಮುಂ
ಪಲಮಾತೇಂ ನೀನೇ ತೋಱಿ ಸೋಲಿಪುದೆಮ್ಮಂ ೫೪

ವ॥ ಎಂದವರ್ನುಡಿಯೆ ಕೇಳ್ದಂತೆಗೆಯ್ವೆನಿದಾವ ಗಹನಂ ನಿಮ್ಮೊಡೆಯನಪ್ಪ ಪೊಡೆಯುಳರನಂ ಮೃಡನಡಿಗಳ್ಗೆ ಪೊಡಮಡಿಪೆಂ ನೋಡಿಮೆಂದಲ್ಲಿಂದೆಳ್ದು ಚಕ್ರಧರನಾವಾಸದತ್ತಲ್ ನೋಡಿ ಶಿವಗಣ ಚರಣಾರವಿಂದಂಗಳಂ ಮನದೊಳ್ನೆನೆದು—

ಬಾರೆಲೆ ಚಕ್ರಿ ನಿನ್ನ ಪತಿಯೆಂದೆನಿಪಗ್ಗದ ಸರ್ವದೇವತಾ
ಧಾರಪದಂಗೆ ವಿಶ್ವಪತಿಗಿಂದೆಱಗಲ್ಕೆನೆ ಕೇಳ್ದು ನಾಡೆ ಕಂ
ಸಾರಿ ಮುದಂಬಡುತ್ತೆ ಪೊಱಮಟ್ಟೊಲವಿಂ ಪೊಡಮಟ್ಟು ಭಕ್ತವೃಂ
ದಾರಕ ಬಾಳ್ದೆನೆಂದು ನಡೆತಂದನವಂದಿರೊಳಾಗೆ ಕೌತುಕಂ ೫೫

ವ॥ ಅಂತು ಶಿವಭಕ್ತಃ ಪ್ರಭುರ್ಮಮಯೆಂಬ ನಿಜೋಕ್ತಿಯನೆಲ್ಲರ್ಗಱುಪಿ ಭಕ್ತವರ್ಯನ ಬೆನ್ನನೇಳ್ತಂದು ಬೇಗಂ ವಿಶ್ವಪತಿಗೆ ಪೊಡಮಡಲೊಡನೆ ಕಂಡು ಮಂಚಣಾರ್ಯಂಗೆ—

ಪತಿಯಿಲ್ಲೆಂದು ಸಮರ್ಥವಾದ ಮಾತುಗಳಿಂದ (ಪರವಾದಿಗಳು) ಬಾಯೆತ್ತದಂತೆ ಮನ್ಮಥಾರಿಯಾದ ಶಿವನಭಕ್ತ ಮಂಚಣ್ಣಪಂಡಿತರು ನುಡಿದು ಗೆಲ್ಲಲು, ಸೋತುಹೋದ ಆ ಮಾಯಾಜಡರು ಗೆಲ್ಲಲು ಯಾವ ಮಾರ್ಗವನ್ನೂ ಕಾಣದೆ ಬಳಲಿ ಹೋಗಿ ಹೀಗೆಂದರು : ೫೪. ಎಲೈ ಶೈವಭಕ್ತನೇ, ಕಲಿತ ವಿದ್ಯಾಸಮೂಹದಿಂದ ಗೆದ್ದರೆ ತೀರಿತೇ ? ಹಲವು ಮಾತಿನಿಂದೇನು ಪ್ರಯೋಜನ ? ಸೋಲಿನ ಅತಿಶಯವನ್ನು ನಮಗೆ ನೀನೇ ಒಂದು ನಿದರ್ಶನ ಪೂರ್ವಕ ತೋರಿಸಿ ನಮ್ಮನ್ನು ಸೋಲಿಸಬೇಕು. ವ॥ ಎಂದು ಅವರು ನುಡಿಯಲಾಗಿ, ಕೇಳಿ, ಹಾಗೇ ಮಾಡುತ್ತೇನೆ, ಇದಾವ ಗಹನ ವಿಚಾರ ! ನಿಮ್ಮ ಒಡೆಯನಾದ ವಿಷ್ಣುವನ್ನು (ಹೊಟ್ಟೆಯಲ್ಲಿ ಹೂವುಳ್ಳವನನ್ನು) ಈಶ್ವರನ ಪಾದಗಳಿಗೆ ನಮಸ್ಕಾರ ಮಾಡುವಂತೆ ಮಾಡುವೆನು. ನೋಡಿಕೊಳ್ಳಿರಿ . ಎಂದು ಅಲ್ಲಿಂದ ಎದ್ದು ವಿಷ್ಣುವಿನ ಮಂದಿರದತ್ತ ನೋಡಿ, ಶಿವಭಕ್ತಗಣಗಳ ಚರಣ ಕಮಲಗಳನ್ನೂ ಮನಸ್ಸಿನಲ್ಲಿ ಧ್ಯಾನಮಾಡಿ—೫೫. 'ಎಲೈ ಚಕ್ರಧರನೇ, ನಿನ್ನ ಪ್ರಭು ವೆನಿಸುವ, ಸಮಸ್ತ ದೇವತೆಗಳಿಗೆ ಆಧಾರಸ್ಥಾನನಾದ ವಿಶ್ವಪತಿಗೆ ಈಗಲೆ ನಮಸ್ಕಾರ ಮಾಡಲಿಕ್ಕೆ ಬಾ' ಎನ್ನಲು ಕೇಳಿ ಕಂಸಾರಿಯಾದ ವಿಷ್ಣುವು ವಿಶೇಷಾನುದಗೊಂಡು, (ದೇವಾಲಯದಿಂದ) ಒಲವಿನಿಂದ ಹೊರಹೊರಟು ಬಂದು ನಮಸ್ಕರಿಸಿ, 'ಭಕ್ತಶ್ರೇಷ್ಠ ನಾದ ಮಂಚಣ್ಣ ಪಂಡಿತನೇ, ಬದುಕಿದೆನು' ಎಂದು ಬಂದು ಆ ಭಕ್ತಸಮೂಹದವರೊಡ ನೊಂದಾದನು. (ಇದು) ಆಶ್ಚರ್ಯ ! ವ॥ ಆ ರೀತಿ 'ಶಿವಭಕ್ತಃ ಪ್ರಭುರ್ಮಮ' ಎಂದರೆ 'ಶಿವಭಕ್ತನೇ ನನ್ನ ಪ್ರಭುವು' ಎಂಬ ತನ್ನ ಮಾತನ್ನು (ತಾನಾಡಿಕೊಂಡ ಮಾತನ್ನು) ಎಲ್ಲ ರಿಗೂ ತಿಳಿಸಿ, ಆ ಭಕ್ತ ಶ್ರೇಷ್ಠನನ್ನೇ ಅನುಸರಿಸಿ ಬಂದು, ಬೇಗ ವಿಶ್ವಪತಿಗೆ ನಮಸ್ಕಾರ

ಪರವಾದಿಗಳೆರ್ದೆ ಕಂಪಿಸು
ತಿರೆ ಭಯದಿಂ ಬಳ್ಕಿ ಮಣಿದರಾ ಪೌರಜನಂ
ಕಿರಿದಚ್ಚರಿವಟ್ಟೆಱಗಿದು
ದರಸಂ ವಿಸ್ಮಯದೆ ನಮಿಸಿ ಕೀರ್ತಿಸುತಿರ್ದಂ ೫೬

ಹರಿಯನಭವಂಗೆ ಮಣಿಯಿಸಿ
ಹರಿಭಕ್ತರೆನಿಪ್ಪ ವಾದಿಗಳ ಮದಮಂ ಸಂ
ಹರಿಸಿದನಹಿತಮತದ್ವಿಪ
ಹರಿ ಮಂಚಣಪಂಡಿತಾರ್ಯನಚಳಿತ ಶೌರ್ಯಂ ೫೭

ಈಗಳುಮಾ ವಿಶ್ವೇಶನ
ಬಾಗಿಲಮುಂಗಡೆಯೊಳಡ್ಡಬಿಳ್ದಿರ್ದಪನಾ
ನಾಗರಿಪುಕೇತು ಹರನ ಮ
ಹಾ ಗರಿಮೆಗೆ ತಾನೆ ಸಾಕ್ಷಿಯೆನಿಸುತ್ತೀಗಳ್ ೫೮

ಹರಿ ವಿಶ್ವಾಧಿಕನೆಂದು
ರ್ವರೆಯೊಳ್ಪರಚುವ ಜಡರ್ಕಳಾ ಹರಿಯನದೇ
ನಿರದೇಳಿಸಲಾರ್ತರೆ ದು
ರ್ನರರಿದನಱಿದಿರ್ದುಮೇಕೆ ವಾರಿಸಲೊಲ್ಲರ್ ೫೯

ಪರಮ ಶಿವಭಕ್ತರೊಲ್ದೊಡೆ
ಹರಿ ಬಾಳ್ವಂ ಮುಳಿದೊಡಳಿವನೆಂತೆನೆ ಕೇಳ್ಭೂ
ವರ ಮುನ್ನಮೆರಡನೆಯ ಶಂ
ಕರನೆನೆ ಪೆಸರ್ವೆತ್ತು ಮಿಸುಪ ಶಂಕರದಾಸಂ ೬೦

ಮಾಡಲಾಗಿ, ಆ ಕೂಡಲೆ ಕಂಡು ಮಂಚಣಾರ್ಯರಿಗೆ —೫೬. ಕಂಪಿಸುವ ಎದೆಯುಳ್ಳವರಾಗಿ ಪರವಾದಿಗಳು ಭಯದಿಂದ ಬಳುಕಿ ನಮಸ್ಕರಿಸಿದರು. ಆ ಪಟ್ಟಣದ ಜನರೆಲ್ಲ ಅತಿಶಯ ಆಶ್ಚರ್ಯದಿಂದ ನಮಸ್ಕಾರ ಮಾಡಿದರು. ಅರಸನು ವಿಸ್ಮಯಗೊಂಡು ನಮಸ್ಕಾರಮಾಡಿ ಸ್ತೋತ್ರ ಮಾಡತೊಡಗಿದನು. ೫೭. ವೈರಿಗಳ ಮತವೆಂಬ ಆನೆಗೆ ಸಿಂಹಪ್ರಾಯನೂ ದೃಢವಾದ ಶೌರ್ಯವಂತನೂ ಆದ ಮಂಚಣಾರ್ಯನು ವಿಷ್ಣುವನ್ನು ಈಶ್ವರನಿಗೆ ನಮಸ್ಕಾರ ಮಾಡುವಂತೆ ಮಾಡಿ, ಹರಿಭಕ್ತರೆನಿಸಿದ ವಾದಿಗಳ ಮದವನ್ನು ಸಂಹರಿಸಿದನು—೫೮. ಈಗಲೂ ಹರನ ಮಹಾಘನತೆಗೆ ಸಾಕ್ಷಿಯೆಂದೆನಿಸುತ್ತ, ಆ ವಿಶ್ವೇಶ್ವರ ದೇವಾಲಯದ ಬಾಗಿಲ ಮುಂಭಾಗದಲ್ಲಿ ಗರುಡ ಧ್ವಜನಾದ ವಿಷ್ಣುವು ಅಡ್ಡಬಿದ್ದಿದ್ದಾನೆ. ೫೯. ಹರಿಯೇ ವಿಶ್ವಕ್ಕೆ ಅಧಿಕನೆಂದು ಭೂಮಂಡಲದಲ್ಲಿ ಪರಚಾಡುತ್ತಿರುವ (ಕಿತ್ತಾಡುತ್ತಿರುವ) ಮಂದಮತಿಗಳು, ಆ ವಿಷ್ಣುವನ್ನು ತಪ್ಪದೆ ತಿರಸ್ಕರಿಸಲು ಸಮರ್ಥರಾಗುವರೇನು ? ದುಷ್ಟ ನರರು ಇದನ್ನು ಅರಿತಿದ್ದೂ ಕೂಡ ಏಕೆ ನಿವಾರಿಸುತ್ತಿಲ್ಲ ? ೬೦–೬೧. ಪರಮಶಿವಭಕ್ತರು ಒಲಿದರೆ ವಿಷ್ಣುವು ಬಾಳುವನು. ಮುಳಿದರೆ ಅವನು ಅಳಿಯುವನು. ಹೇಗೆಂದರೆ–ಮಹಾರಾಜಾ, ಕೇಳು : ಪೂರ್ವಕಾಲದಲ್ಲಿ ದ್ವಿತೀಯ

ಪರದೈವವ್ರಾತಮಂ ಭಂಗಿಸಿ ಮೆಱೆದಿರೆ ಮಾತ್ಸರ್ಯದಿಂ ವೈಷ್ಣವಪ್ರೋ
ತ್ಕರಯುಕ್ತಂ ವಿಷ್ಣುಭಕ್ತಂ ಬರಿಸುತೆ ಜಗದೇಕಾದ್ಯಮಲ್ಲೋರ್ವಿಪಂ ಭೀ
ಕರದೈತ್ಯಾರಾತಿಯಂ ನೋಡೆನೆ ಮುಳಿದಳಿಕಾಭೀಳನೇತ್ರಾಗ್ನಿಯಿಂ ಸು
ಟ್ಟುರುಪುತ್ತುಂ ವಿಷ್ಣುವಂ ಭಂಗಿಸಿದನದಱ ಶೂನ್ಯಾಲಯಂ ಸಾಕ್ಷಿಯಲ್ತೇ ೬೧

ಹರಭಕ್ತರಳವನೆಣಿಸುವೊ
ಡುರಗೇಂದ್ರ ಚತುರ್ಮುಖಾದ್ಯರುಂ ನೆಱೆವರೆ ಭೂ
ವರ ನಿನ್ನ ಕಟಕಿಯಂ ಕೇ
ಳ್ದುರುತರ ಮಹಿಮಾಂಕನೆಮ್ಮ ಭಾಸ್ಕರದೇವಂ ೬೨

ಬರಿಸಿದನಾ ಸೌರಾಷ್ಟ್ರದ
ಪುರದರಸನನೆಮ್ಮ ಪುರಿಗೆ ಸರ್ವರ್ಜರಿರಿದ
ಚ್ಚರಿವಡೆ ಕಂಡಱೆದಿರ್ದುಂ
ನರೇಂದ್ರ ತದ್ಘನಮಹತ್ವಮಂ ಮರುಳಪ್ಪೈ ೬೩

ಅಳೆದೀವಂ ಘನಧಾನ್ಯಕೋಶ ವಿಳಸದ್ಧಾನ್ಯಂಗಳಂ ಕೋಟಿಗ
ಗ್ಗಳ ಲೆಕ್ಕಂ ಬಡೆದಿರ್ದ ನಿನ್ನ ಭಟಸಂದೋಹಕ್ಕೆ ತನ್ನಾಮಸಂ
ಕುಳಮಂ ಸಂಪುಟದಲ್ಲಿ ತಾಂ ಬರೆಯನಾ ಪಂಚಾಕ್ಷರೀಮಂತ್ರಮಂ
ಬಳವಂತಂ ಬರೆವಂ ಬಳಿಕ್ಕೆ ಸರಿಲೆಕ್ಕಂಗಾಣಿಸುತ್ತೋದುವಂ ೬೪

ಶಂಕರನೆಂದು ಖ್ಯಾತಿವೆತ್ತ ಪ್ರಕಾಶಿಸುವ ಶಂಕರದಾಸನು–ಪರದೈವ ಸಮೂಹವನ್ನು ಭಂಗಗೊಳಿಸಿ ಮೆರೆಯುತ್ತಿರಲಾಗಿ, ಮಾತ್ಸರ್ಯದಿಂದ ವಿಷ್ಣುಭಕ್ತರ ಸಮೂಹದಿಂದ ಕೂಡಿದ ವಿಷ್ಣುಭಕ್ತನಾದ ಜಗದೇಕಮಲ್ಲನೆಂಬ ಮಹಾರಾಜನು ಭೀಕರ ದೈತ್ಯಾಕಾರಿ ಯಾದ ವಿಷ್ಣುವನ್ನು ಬರಮಾಡಿಕೊಂಡು ನೋಡು ಎಂದು ತೋರಿಸಲು, ಕೋಪಗೊಂಡ ಶಂಕರದಾಸಿಮಯ್ಯನವರು ಹಣೆಯಲ್ಲಿರುವ ಭಯಂಕರವಾದ ತನ್ನ ನೇತ್ರದ ಬೆಂಕಿಯಿಂದ ಸುಟ್ಟು ಬೂದಿಮಾಡಿ ವಿಷ್ಣುವನ್ನು ಭಂಗಿಸಿದನು. (ಇದಕ್ಕೆ) ವಿಗ್ರಹ ರಹಿತವಾದ (ಶೂನ್ಯ) ಗುಡಿಯೇ ಸಾಕ್ಷಿಯಲ್ಲವೇ ? ೬೨-೬೩. ಹರಭಕ್ತರ ಸಾಮರ್ಥ್ಯವನ್ನು ಎಣಿಸುವುದಕ್ಕೆ ಆದಿಶೇಷ, ಬ್ರಹ್ಮನೇ ಮೊದಲಾದವರು ಸಮರ್ಥರಾದಾರೇ ? ಮಹಾ ರಾಜಾ, ನಿನ್ನ ಚುಚ್ಚು ನುಡಿಯನ್ನು ಕೇಳಿ, ಶ್ರೇಷ್ಠ ಮಹಿಮಾಶಾಲಿಯಾದ ನಮ್ಮ ಸೊಡ್ಡಳ ಬಾಚರಸನು ಆ ಸೌರಾಷ್ಟ್ರಪುರದ ಸೋಮೇಶ್ವರನನ್ನು ಸರ್ವಜನರೂ ಆಶ್ಚರ್ಯ ಪಡುವಂತೆ ನಮ್ಮ ಪಟ್ಟಣಕ್ಕೆ ಬರುವಂತೆ ಮಾಡಿದನು. ಮಹಾರಾಜಾ, ಆತನ ಈ ಘನವಾದ ಮಹತ್ವವನ್ನು ಕಂಡು ಅರಿತೂ ಕೂಡ ಹುಚ್ಚನಾಗಿದ್ದೀ ಯಲ್ಲಾ ! ೬೪. ಕೋಟಿ ಸಂಖ್ಯೆಗೂ ಮಿಕ್ಕಿದ ಲೆಕ್ಕವುಳ್ಳ ನಿನ್ನ ಭಟರುಗಳ ಸಮೂಹಕ್ಕೆ ಘನವಾದ ಧಾನ್ಯದ ಕೋಶದಲ್ಲಿರುವ ಶ್ರೇಷ್ಠ ಧಾನ್ಯವನ್ನು ಅಳೆದಳೆದುಕೊಡುತ್ತಿದ್ದಾನೆ. ಅವರ ಹೆಸರನ್ನು ಮಾತ್ರ ಪುಸ್ತಕದಲ್ಲಿ ಬರೆಯುವುದಿಲ್ಲ. ಬಲಯುತವಾದ ಪಂಚಾಕ್ಷರೀ ಮಂತ್ರವನ್ನೇ ಬರೆಯುತ್ತಾನೆ. ಬಳಿಕ (ಲೆಕ್ಕವನ್ನೊಪ್ಪಿಸುವಾಗ) ಹೆಸರು ಗಾಣಿಸಿ

ಇಂತಪ್ಪ ಮಹಿಮೆಯಿಂದೆ ನಿ
ತಾಂತಂ ಬಗೆಗೊಳಿಪ ಭಾಸ್ಕರಾರ್ಯನ ಪೆಂಪಂ
ನೀಂ ತಿಳಿದುಮನ್ಯರಂ ಕಂ
ಡಂತಿರೆ ಕಂಡಿಂತು ನುಡಿವುದನುಚಿತಮಲ್ತೇ ೬೫

ವ॥ ಎಂದಿಂತು ಸಿದ್ಧಾಂತವಿದ್ಯಾಧರಂ ನುಡಿದಲ್ಲಿ ಚತುರಭಕ್ತರಂ ಕಳುಪಿ ವಿಜ್ಞಾಪನ ಪೂರ್ವಕಮಾ ಸಭೆಗೆ ಭಾಸ್ಕರದೇವನಂ ಕರೆಯಿಸಿ—

ವಾದಕ್ಕೆಂದುಜ್ಜುಗಿಸಿದ
ವಾದಿಗಳಂ ಜಯಿಸಲೆಂದು ಬಸವಾಧಿಪನಾ
ಮೋದಂ ಮಿಗೆ ಬರಲಟ್ಟಿದ
ನಾದಂ ಪೋಗಲ್ಕೆವೇಳ್ಕುಮೆಂದಾ ಕ್ಷಣದೊಳ್ ೬೬

ವ॥ ಪರವಾದಿಜನಭಂಜನನೆಂಬ ಬಿರಿ[1]ದಿನ ತೊಡರ್ಝಣಝಣೆಸಲೆಳ್ದು ವೀರಭಕ್ತಪರಿವೃತಂ ಸಂಪೂರ್ಣಸಂಭ್ರಮದಿಂ ತದಾಸ್ಥಾನಕ್ಕೆ ಬಂದಲ್ಲಿರ್ದ ಶಿವಗಣಾಂಘ್ರಿಗವನತನಾಗಿ ಬಿಜ್ಜಳನತ್ತಲಭೀಕ್ಷಿಪುದುಮಾಗಳ್—

ಖಲಜನದುರುಕ್ತಿಮರುದು
ಜ್ವಲಕೋಪಕೃಶಾನುಧೂಮದೂಷಿತಮುಖಮಂ

ಓದಿ ಲೆಕ್ಕವನ್ನು ಸರಿಯಾಗಿ ಒಪ್ಪಿಸುವನು. ೬೫. ಈ ರೀತಿಯ ಮಹಿಮಾತಿಶಯ ದಿಂದ ಕಂಗೊಳಿಸುತ್ತಿರುವ ಸೊಡ್ಡಳಬಾಚರಸನ ಹಿರಿಮೆಯನ್ನು ತಿಳಿದೂಕೂಡ ಅನ್ಯ ರನ್ನು (ಸಾಮಾನ್ಯನನ್ನು) ಕಂಡ ಹಾಗೆ ಈ ರೀತಿ ಕಂಡು (ತಿರಸ್ಕರಿಸಿ) ನುಡಿಯುವುದು ಅನುಚಿತವಾಗುವುದಿಲ್ಲವೇ ? ವ॥ ಹೀಗೆಂದು ಸಿದ್ಧಾಂತದಲ್ಲಿ ವಿದ್ಯಾಧರನಾದ ಬಸ ವೇಶ್ವರನು ನುಡಿದು ಅಲ್ಲಿನ ಚತುರರಾದ ಭಕ್ತರನ್ನು ಕಳಿಸಿ ವಿಜ್ಞಾಪನ ಪೂರ್ವಕವಾಗಿ ಆ ಸಭೆಗೆ ಭಾಸ್ಕರದೇವ (ಸೊಡ್ಡಳ ಬಾಚರಸ) ನನ್ನು ಕರೆಯಿಸಲಾಗಿ—೬೬. ವಾದ ಕ್ಕೆಂದು ಸಿದ್ಧರಾಗಿರುವ ವಾದಿಗಳನ್ನು ಜಯಿಸುವುದಕ್ಕೆಂದು ಬಸವರಾಜನು ಸಂತೋಷಾ ಧಿಕ್ಯದಿಂದ ಬರಬೇಕೆಂದು ಹೇಳಿಕಳುಹಿಸಿದ್ದಾನೆ, ನಿಶ್ಚಯವಾಗಿ ಹೋಗಲೇಬೇಕು, ಎಂದು ಆ ಕ್ಷಣದಲ್ಲಿ. ವ॥ ಪರವಾದಿ ಜನಗಳನ್ನು ಭಂಗಗೊಳಿಸುವವನೆಂಬ ಬಿರುದಿನ ಆಭರಣವು (ಬಿರುದಿನ ಬಳೆಯು) ಝಣ ಝಣ ಎಂದು ಝಣತ್ಕಾರಮಾಡು ತ್ತಿರುವಂತೆ ಎದ್ದು ವೀರರಾದ ಅನೇಕ ಜನ ಭಕ್ತರುಗಳಿಂದ ಸುತ್ತುವರಿಯಲ್ಪಟ್ಟವನಾಗಿ ಸಂಪೂರ್ಣ ಸಡಗರದಿಂದ ಬಿಜ್ಜಳ ಭೂಪಾಲನ ಆಸ್ಥಾನಕ್ಕೆ ಬಂದು ಅಲ್ಲಿದ್ದ ಶಿವಗಣಗಳ ಪಾದಗಳಿಗೆ ತಲೆಬಾಗಿದವರಾಗಿ, ಬಿಜಳನತ್ತ ನೋಟ ಬೀರಲು ಆಗ—೬೭. ದುಷ್ಟರಾದ ಜನರುಗಳ ಕೆಟ್ಟ ಮಾತುಗಳೆಂಬ ಗಾಳಿಯಿಂದ ಉಜ್ವಲಗೊಂಡ ಕೋಪವೆಂಬ ಬೆಂಕಿಯ

1 ರು(ಚ, ಮ)

ಡಲನಪಗತಮತಿಮದವಿ
ಹ್ವಲನರುಣತನೇತ್ರನೀಕ್ಷಿಸುತ್ತಿಂತೆಂದುಂ ೬೭

ಪುರಹರಭಕ್ತಿ ನಿನ್ನ ಶಿರದೊಳ್ಮೊಳೆದೋಱತೆ ಶೈವಸಾರಸ
ಚ್ಚರಿತಕೆ ನೀನೆ ಭಾಜನನೆ ಬಾರದೆ ಪೋದೆ ಸಮಸ್ತರೆಲ್ಲರುಂ
ಬರೆ ನೆಱೆ ಕಂಡುಮೀ ಭುವನಪಾಲಕ ವಿಷ್ಣುವ ಸುಪ್ರತಿಷ್ಠೆಯುಂ
ವಿರಚಿಪ ಕಾಲದೊಳ್ಸಭೆಗೆ ಕೇಳ್ನಿನಗೆನ್ನದೊ ಮಾನದೆಳ್ತರಂ ೬೮

ವ॥ ಎಂದರಸನ ವಿರಸೋಕ್ತಿಗೇಳ್ದು ಭಾಸ್ಕರಂ ನಿದಾಘಭಾಸ್ಕರನಂತೆ ಕಾಯ್ಪೇಱಮಸಗಿ—

ಭುವನಮನೆಲ್ಲಮಂ ಪದೆದು ಪಾಲಿಪನೀ ಹರಿಯೆಂದಪೈ ಧರಾ
ಧವ ಭವಭಾಳನೇತ್ರದುರಿಯಿಂದುರಿವಂದು ನಿಜಾತ್ಮಜಾತನೊ
ಪ್ಪುವ ನಿಜಶಕ್ತಿಯೆತ್ತ ಸರಿದತ್ತೊ ಜಗತ್ತ್ರಯಪಾಲನಾದವಂ
ಭವದೊಳೆ ಬಂದು ತಾನಳಿವನೇ ಶಿವನೊರ್ವನೆ ವಿಶ್ವಪಾಲಕಂ ೬೯

ಅಜನಖಿಳ ಚರಾಚರಮಂ
ಸೃಜಿಸುವನೆಂಬೊಡೆ ನಿಜೋತ್ತಮಾಂಗಮಮುಳಿದಂ
ಗಜರಿಪುವರಿದೊಡದು ತಾಂ
ಸೃಜಿಸಿಕೊಳಲ್ಕಾಱನೇಕೆ ನೋಡವನಿರವಂ ೭೦

ಹೊಗೆಯಿಂದ ಕಪ್ಪಿಟ್ಟ (ಕೊಳೆಯಾದ) ಮುಖ ಮಂಡಲವುಳ್ಳವನೂ, ಬುದ್ಧಿಯನ್ನು ಕಳೆದುಕೊಂಡು ಮದದಿಂದ ವ್ಯಾಕುಲಗೊಂಡವನೂ, ಕೆಂಪಾದ ಕಣ್ಣುಳ್ಳವನೂ ಆದ ಆ ಬಿಜ್ಜಳನು (ಬಾಚಿರಾಜನನ್ನು) ನೋಡಿ ಹೀಗೆಂದನು : ೬೮. 'ಹೇ ಬಾಚರಸನೇ ಕೇಳು : ಈ ಭೂಲೋಕ ಪಾಲಕನಾದ ವಿಷ್ಣುವಿನ ಶ್ರೇಷ್ಠವಾದ ಪ್ರತಿಷ್ಠಾಪನಾ ಮಹೋತ್ಸವದ ಸಭೆಗೆ ಸಮಸ್ತ ಜನರೂ ಬಂದರು. ಪರಮೇಶ್ವರನ ಭಕ್ತಿಯು ನಿನ್ನ ತಲೆಯಲ್ಲಿ ಮೊಳಕೆಯೊಡೆದಿರುವುದೋ ! ಶೈವಭಕ್ತಿಯ ಶ್ರೇಷ್ಠ ಚಾರಿತ್ರ್ಯಕ್ಕೆ ನೀನೊಬ್ಬನೇ ಭಾಜನನೋ ಎನ್ನುವಂತೆ ಗೊತ್ತಿದ್ದರೂ ಕೂಡ ಬಾರದೆಹೋದೆ. ಇದು ನಿನ್ನ ಗರ್ವದ ಆಧಿಕ್ಯವಲ್ಲವೇ ? ವ॥ ಹೀಗೆಂದು ನುಡಿದ ಅರಸನ ವಿರಸ ಪೂರ್ಣವಾದ ಮಾತನ್ನು ಕೇಳಿ, ಭಾಸ್ಕರನು ಬೇಸಿಗೆಯ ಸೂರ್ಯನಂತೆ ಕಾವೇರಿ ಕೋಪಗೊಂಡು —೬೯. 'ಮಹಾರಾಜಾ, ಈ ಹರಿಯು ಭುವನವನ್ನೆಲ್ಲ ಪ್ರೀತಿಯಿಂದ ರಕ್ಷಿಸುತ್ತಿದ್ದಾನೆಂದು ಹೇಳುತ್ತಿರುವೆಯೊ ! ಪರಮೇಶ್ವರನ ಹಣೆಗಣ್ಣಿನುರಿಯಿಂದ ತನ್ನ ಮಗನಾದ ಮನ್ಮಥನು ಉರಿಯುತ್ತಿದ್ದಾಗ ಶೋಭಿಸುವ ಅವನ ಶಕ್ತಿಯು ಎಲ್ಲಿಗೆ ಹೋಗಿತ್ತು ? ಮೂರು ಲೋಕಗಳ ಪಾಲಕನೆನಿಸುವವನು ಭವದಲ್ಲಿ ಹುಟ್ಟಿಬಂದು, ತಾನು ಸಾಯುವನೇ ? (ಆದ್ದರಿಂದ) ಶಿವನೊಬ್ಬನೇ ವಿಶ್ವಪಾಲಕನು.' ೭೦. 'ಬ್ರಹ್ಮನು ಸಮಸ್ತ ಚರಾಚರವನ್ನೆಲ್ಲ ಸೃಷ್ಟಿಸಿದನೆನ್ನುವುದಾದರೆ, ಗಜಾಸುರ ವೈರಿಯಾದ ಶಿವನು ಕೋಪಗೊಂಡು ಅವನ ಶಿರಸ್ಸನ್ನು ಕತ್ತರಿಸಿ ಹಾಕಲಾಗಿ, ತಾನೇ ಏಕೆ (ಹಾಗೆ ಕತ್ತರಿಸಿ ಹೋದ ತಲೆಯನ್ನು) ಸೃಷ್ಟಿಸಿಕೊಳ್ಳಲಿಲ್ಲ ? ಅವನ ಇರುವಿಕೆಯನ್ನು ನೋಡಬಾರದೇ ?'

ಜಿನಬುದ್ಧರ್ಕಳನೆಂತು ದೇವರೆನಲಕ್ಕುಂ ವೇದಬಾಹ್ಯರ್ಕಳಂ
ಮನುಜಾಕಾರದೊಳಿರ್ಪರಂ ಮಹಿಮೆಗೆಂದುಂ ದೂರಮಾಗಿರ್ದರಂ
ತನು ಲೋಕಾಕೃತಿವೆತ್ತ ಮಾಯೆ ಜಡಮೆಂದುಂ ಮಾಯೆ ತಾಂ ದೈವಮ
ಲ್ತು ನಿತಾಂತಂ ಶ್ರುತಿ ಸೋಮಕಾಪಹೃತಮೆಂತುಂ ದೈವಮೇನಪ್ಪುದೇ ೭೧

ಬಗೆವೊಡೆ ಕರ್ಮಮೇ ಧರೆಗೆ ದೈವಮದೆಂಬೊಡೆ ದಕ್ಷ ಚಂಡರೊ
ಳ್ನೆಗಳ್ದ ಸುಕರ್ಮ ದುಷ್ಕೃತರ ಕರ್ಮಯುಗಂ ಫಲವೈಪರೀತ್ಯದಿಂ
ಜಗದೊಳದೆಂತು ತೋಱಿದುದೊ ಶಂಕರನಿಚ್ಛೆಯಿನಚ್ಯುತಾಜವ
ಜ್ರಿಗಳಭವಾಜ್ಞೆಯುಂ ಶಿರದೊಳಾಂತೆಸಪರ್ಸಲೆ ನೈಜ ಕರ್ಮಮಂ ೭೨

ಏಕ ಏವ ರುದ್ರಯೆಂಬನದ್ವಿತೀಯಯೆಂಬ ಸು
ಶ್ಲೋಕವೇದವಾಕ್ಯದಿಂದಜಾಚ್ಯುತಾದಿ ನಿರ್ಜರಾ
ನೀಕ ಸರ್ವಜೀವಯುಕ್ತ ವಿಷ್ಟಪತ್ರಯಕ್ಕೆ ಗೌ
ರೀಕಳತ್ರನೆಮ್ಮ ಶಂಭುವೊರ್ವನಲ್ತೆ ವಲ್ಲಭಂ ೭೩

೭೧. ಜಿನ ಬುದ್ಧರುಗಳನ್ನು ದೇವರೆಂದು ಹೇಳಲು ಹೇಗಾದೀತು ! ವೇದಬಾಹ್ಯರನ್ನು, ಮನುಷ್ಯಾಕಾರದಿಂದಿರುವವರನ್ನು, ಮಹಿಮಾತಿಶಯಕ್ಕೆ ಯಾವಾಗಲೂ ದೂರವಾಗಿರುವವರನ್ನು ದೈವವೆನ್ನಬಹುದೇ ? ಲೋಕದಲ್ಲಿ ಆಕಾರಗೊಂಡ ತನುವು ಜಡವೆನಿಸಿ (ಅಜ್ಞಾನದಿಂದ ಕೂಡಿದುದೆನಿಸಿ) ಮಾಯಾತನುವಾಗುವುದು. ಆ ಮಾಯೆಯು ತಾನು ದೈವವಲ್ಲ. ಅಧಿಕವೆನಿಸಿದ ಶ್ರುತಿಯು ಸೋಮಕನೆಂಬ ರಾಕ್ಷಸನಿಂದ ಅಪಹರಿಸಲ್ಪಟ್ಟು ಹೇಗೂ ಅದು ದೈವವೆನಿಸೀತೇ ? ೭೨. ವಿಚಾರಮಾಡಿ ನೋಡಿದರೆ ಕರ್ಮವೇ ಭೂಲೋಕದಲ್ಲಿ ದೈವವೆಂದೆನ್ನುವೆಯಾದರೆ ದಕ್ಷನು ಮಾಡಿದ ಯಾಗವೂ ಚಂಡನೆಂಬ ಶಿವಶರಣನು ತಂದೆಯನ್ನು ಕೊಂದು ಮಾಡಿದ ದುಷ್ಕರ್ಮವೂ ಜಗತ್ತಿನಲ್ಲಿ ಫಲವೈಪರೀತ್ಯದಿಂದ ಹೇಗೆ ತೋರಿತು ? (ಅಂದರೆ ದಕ್ಷನು ಮಾಡಿದ ಯಜ್ಞವು ಸತ್ಕರ್ಮವೆನಿಸಿದರೂ ಅವನ ನಾಶಕ್ಕೆ ಕಾರಣವಾಯಿತು ; ಚಂಡನು ತನ್ನ ತಂದೆಯನ್ನೇ ಕೊಂದು ಕರ್ಮವು ಮೋಕ್ಷಕ್ಕೆ ಕಾರಣವಾಯಿತು. ಹೀಗೆ ಫಲದಲ್ಲಿ ವೈಪರೀತ್ಯ ಕಾಣಲಿಲ್ಲವೇ ?) ಶಂಕರನ ಇಚ್ಛೆಯನ್ನನುಸರಿಸಿ, ವಿಷ್ಣು ಬ್ರಹ್ಮ. ದೇವೇಂದ್ರಾದಿಗಳು ಅವನು ಮಾಡಿದ ಆಜ್ಞೆಯನ್ನು ಶಿರಸಾವಹಿಸಿ ನಿಜವಾದ ಕ್ರಿಯೆಗಳನ್ನು ಮಾಡುವವರಲ್ಲವೇ ! ೭೩. ರುದ್ರನೊಬ್ಬನೇ ಪರಬ್ರಹ್ಮನು, ಅವನಿಗಿಂತ ಭಿನ್ನವಾದ ಇನ್ನೊಬ್ಬ ಎರಡನೆಯವನಿಲ್ಲ, ಹೀಗೆನ್ನುವ ವೇದದ ಶ್ರೇಷ್ಠ ವಚನದಿಂದ ಬ್ರಹ್ಮ, ವಿಷ್ಣುಗಳೇ ಆದಿಯಾದ ದೇವತೆಗಳ ಸಮೂಹಕ್ಕೆ ಸಮಸ್ತ ಜೀವಕೋಟಿಯಿಂದ ಕೂಡಿದ ಸ್ವರ್ಗಮರ್ತ್ಯಪಾತಾಳಾದಿ ಮೂರು ಲೋಕಗಳಿಗೆ ಗೌರಿಯನ್ನೇ ವಧುವನ್ನಾಗಿ ಉಳ್ಳ ನಮ್ಮ ಶಂಭುವು ಒಬ್ಬನೇ ಗಂಡ

ಯಸ್ಮಾನ್ನಾಪರಮಸ್ತಿ ಕಿಂಚಿದೆನುತುಂ ವಿಶ್ವಾಧಿಕೋ ರುದ್ರಯೆಂ
ದಸ್ಮದ್ದೇವನನೇಳ್ಗೆಯಿಂದೆ ಶಿವ ಏಕೋ [1]ದೇವ[1]ಯೆಂದುರ್ವ್ಪತುಂ
ತಸ್ಮಾತ್ಸರ್ವಗತಃ ಶಿವಃ ಶ್ರುತಿಯುತಂ ವೇದಾಂತವಾಕ್ಯಾಳಿ ಸ
ರ್ವಸ್ಮಾರ್ತೋಕ್ತ್ಯುಪಬ್ರುಂಹಿತಂ ಮೊಱೆಗುಮೆಲ್ಲಾ ಲೋಕದೊಳ್ಸಂತತಂ ೭೪

ಅದಱಿಂ ಶಿವನೊರ್ವನೆ ಜಗ
ದುದಯ ಸ್ಥಿತಿ ಲಯಕೆ ತಾನೆ ಕರ್ತಾರಂ ಕೇ
ಳ್ವಿದಿತವಿದು ಸರ್ವಶಾಸ್ತ್ರೌ
ಘದೊಳೀಶಂಗೆಣೆಯನಿಪ್ಪ ದೇವನುಮೊಳನೇ ೭೫

ಹರಿಮುಖರೀಶನ ಪಂಚಾ
ವರಣದೆ ಗುಡಿಯಲ್ಲಿ ನಿಂದು ಸೇವಿಪ ಭೃತ್ಯ
ರ್ಧರೆಯೆಲ್ಲಂ ಬಲ್ಲುದಿದಂ
ಕರಕಂಕಣವೀಕ್ಷಣಕ್ಕೆವೇಳ್ಕುಮೆ ಮುಕುರಂ ೭೬

ಸಲೆ ನಿತ್ಯಕರ್ಮರಹಿತಾ
ಮಲಿನಾಂಗ ಮಹೇಶ್ವರಂಗೆ ಸರಿವರ್ಪರೆ ಪೇ
ಳೆಲೆ ನಶ್ವರ ಕರ್ಮಾವಿಲ
ಮಲಿನಾಂಗಸಮೇತ ಶೌರಿಮುಖದಿವಿಜರ್ಕಳ್ ೭೭

(ಒಡೆಯ)ನಲ್ಲವೇ ! ೭೪. ಸತತವೂ ಎಲ್ಲಾ ಲೋಕಗಳಲ್ಲಿ ಯಾವನಿಗಿಂತ ಬೇರೆಯು ದಾದ ಇನ್ನೊಂದು ಸ್ವಲ್ಪವೂ ಇಲ್ಲ ಎಂದೆನ್ನುವ, ರುದ್ರನು ಪ್ರಪಂಚಕ್ಕೆಲ್ಲ ಅಧಿಕನು ಎಂದೆನ್ನುವ, ನನ್ನ ಆ ದೇವನಾದ ಶಿವನನ್ನು ಅತಿಶಯವಾಗಿ ಶಿವನೊಬ್ಬನೇ ದೇವ ನೆಂದು ಉಬ್ಬುಬ್ಬಿ ಹೇಳುವ, ಶಿವನು ಸರ್ವವನ್ನು ವ್ಯಾಪಿಸಿದವನು, ಎಂಬ ವೇದದಲ್ಲಿ ಸೇರಿರುವ ಉಪನಿಷತ್ ವಾಕ್ಯ ಸಮೂಹಗಳು, ಸಕಲ ಸ್ಮೃತಿ ಸಂಬಂಧವಾದ ವಚನ ಗಳು, ಉಪಬ್ರುಂಹಣ ವಾಕ್ಯಗಳು ಕೂಗುತ್ತಿವೆಯಲ್ಲವೇ ! ೭೫. ಆದಕಾರಣ ಶಿವ ನೊಬ್ಬನೇ ಸೃಷ್ಟಿ, ಸ್ಥಿತಿ, ಲಯಗಳಿಗೆ ತಾನೇ ಕರ್ತಾರನು, ಕೇಳು : ನಾನು ಹೇಳುವ ಈ ಮಾತು ಪ್ರಸಿದ್ಧವಾದುದು. ಸಮಸ್ತ ಶಾಸ್ತ್ರ ಸಮೂಹದಲ್ಲಿ ಈಶ್ವರನಿಗೆ ಸಮಾನ ನೆನಿಸುವ ಇನ್ನೊಬ್ಬ ದೇವನಿದ್ದಾನೆಯೇ ? ೭೬. ವಿಷ್ಣು ಮೊದಲಾದವರು ಶಿವಾ ಲಯದ ವಿಸ್ತಾರವಾದ ಆವರಣದಲ್ಲಿ ನಿಂತುಕೊಂಡು ಸೇವಿಸುವ ಸೇವಕರು. ಈ ಮಾತನ್ನು ಲೋಕವೆಲ್ಲ ಬಲ್ಲುದು. ಕೈಯಲ್ಲಿರುವ ಕಂಕಣವನ್ನು ನೋಡಿಕೊಳ್ಳುವುದಕ್ಕೆ ಕನ್ನಡಿ ಬೇಕಾಗುವುದೇ ? ೭೭. ಎಲೈ ನರೇಶ್ವರನೇ, ಯಾವ ಪ್ರತಿನಿತ್ಯದ ದೇವತಾ ಉಪಾಸನೆಯೇ ಮೊದಲಾದ ನಿತ್ಯಕರ್ಮಗಳಿಲ್ಲದ ಪರಿಶುದ್ಧವಾದ ಶರೀರವುಳ್ಳ ಮಹೇಶ್ವರನಿಗೆ ಸ್ಥಿರವಲ್ಲದ (ಶಾಶ್ವತವಲ್ಲದ) ಕರ್ಮಾವಲಂಬಿಗಳೂ ಮಲಿನವಾದ ಅಂಗವುಳ್ಳವರೂ ಆದ ವಿಷ್ಣುವೇ ಮುಖ್ಯರಾದ ದೇವತೆಗಳು ಸರಿಯೆನಿಸುವರೇ ? ಹೇಳು.

1 ಧ್ಯೇಯ(ಚ, ಮು, ಜ, ಗ), ದೆಯು(ಅ)

ಭವಮರಣರಹಿತ ಪಶುಪಾ
ಶವಿಮೋಚಕ ಶಂಕರಂಗೆ ತೋಡಪ್ಪರೆ ಪೇ
ಳ್ಭವಮರಣಯುಕ್ತ ಪಾಶ
ಪ್ರವಿಬದ್ಧರ್ಪಶುಗಳೆಣೆಯೆ ಪಶುಪತಿಗನಿಶಂ ೭೮

ಲಯದೂರಂಗೆ ಲಯಾನ್ವಿತರ್ಸತತ ಪೂಜ್ಯಂಗೆಯ್ದೆ ತತ್ಪೂಜಕರ್
ಜಯಯುಕ್ತಂಗೆ ಪರಾಜಿತತ್ರಿಪುರದೈತ್ಯಧ್ವಂಸಕಂಗಾ ಪುರ
ತ್ರಯದೈತ್ಯಾಹತಶೌರ್ಯರುಗ್ರಗರಭಕ್ಷಂಗದ್ಭುತಕ್ಷ್ವೇಡಜ
ಕ್ಷಯಭೀತರ್ ಸರಿಯಕ್ಕುಮೇ ತೊಣೆಯೆ ಪೇಳ್ಕಾಮಾರಿಗಾ ಕಾಮುಕರ್ ೭೯

ಅಂಧಕ ಜಲಂಧರಾಸುರ
ಸಿಂಧುರ ಪಂಚಾನನಂಗೆ ದೊರೆಯಕ್ಕುಮೆ ಪೇ
ಳಂಧಕ ಜಲಂಧರಾಸುರ
ಬಂಧನ ಸಂಪ್ರಾಪ್ತಭೀತಸುರಸಂಜಾತಂ ೮೦

ಕಾಲಾರಿಗೆಣೆಯೆ ಕಾಲಕ
ರಾಲಾನನಮಗ್ನರಜಕಪಾಲಾಚ್ಯುತಕಂ

೭೮. ಹುಟ್ಟು ಸಾವುಗಳಿಲ್ಲದ, ಮಾಯೆಗೆ ಕಾರಣಗಳೆನಿಸಿದ ಪಶು-ಪಾಶಗಳನ್ನು ವಿಮೋಚನಗೊಳಿಸಿದ ಸುಖದಾಯಕನಾದ ಪಶುಪತಿಗೆ ಹುಟ್ಟು ಸಾವುಗಳುಳ್ಳವರೂ, ಮಾಯೆಯೆಂಬ ಪಾಶದಿಂದ ಕಟ್ಟಲ್ಪಟ್ಟವರೂ ಎನಿಸಿ ಪಶುಗಳೆನಿಸಿದ ದೇವತೆಗಳು ಸಮಾನರೆನಿಸಿ ಲೆಕ್ಕಕ್ಕೆ ಬರುವರೇ ಹೇಳು. ೭೯. ಲಯವಿಲ್ಲದವನಿಗೆ (ನಾಶವೇ ಇಲ್ಲದವನಿಗೆ) ನಾಶವನ್ನುಳ್ಳವರೂ, ಸತತವೂ ಪೂಜಿಸಲ್ಪಡುವುದಕ್ಕೆ ಯೋಗ್ಯನೆನಿಸಿದವನಿಗೆ, ಅವನನ್ನು ಪೂಜಿಸುವವರೂ, ಮೂರು ಪುರಗಳನ್ನು ನಾಶಮಾಡಿ ಅಲ್ಲಿನ ಮೂರುಜನ ರಾಕ್ಷಸರನ್ನೂ ಜಯಿಸಿದ ಪರಮೇಶ್ವರನಿಗೆ, ಅದೇ ಮೂರು ಪುರಗಳ ದೈತ್ಯರಾದ ತಾರಕಾಕ್ಷ, ಮಕರಾಕ್ಷ, ವಿದ್ಯುನ್ಮಾಲಿ ಎಂಬ ಮೂರು ಜನ ರಾಕ್ಷಸರಿಂದ ತಮ್ಮ ಪರಾಕ್ರಮವನ್ನು ನಾಶಗೊಳಿಸಿಕೊಂಡವರೂ, ಭಯಂಕರವಾದ ಕಾಲ ಕೂಟವಿಷದ ಭಕ್ಷಕನೆನಿಸಿದ ಶಿವನಿಗೆ ಅದ್ಭುತವಾದ ಆ ಕಾಲಕೂಟ ವಿಷದಿಂದಲೇ ನಾಶವಾಗುವೆವೆಂಬ ಹೆದರಿಕೆಯಿಂದ ಕೂಡಿದವರೂ, ಕಾಮನಿಗೆ ಶತ್ರುವೆನಿಸಿದ ಶಿವನಿಗೆ ಕಾಮುಕರಾದ ಆ ದೇವತೆಗಳೂ ಸರಿಯಾದಾರೇ ? ಸಾಮ್ಯವೆನಿಸುವರೇ ? ಹೇಳು. ೮೦. ಅಂಧಕಾಸುರ, ಜಲಂಧರಾಸುರರೆಂಬ ಆನೆಗಳಿಗೆ ಸಿಂಹನೆನಿಸಿದ ಶಿವನಿಗೆ ಆ ಅಂಧಕಾಸುರ, ಜಲಂಧರಾಸುರರಿಂದ ಬಂಧಿಸಲ್ಪಟ್ಟು ಯಾವ ದೇವತೆಗಳು ಭೀತಿಯಿಂದ ಕೂಡಿದವರಾದರೋ ಅಂಥವರು ಸಮಾನರಾಗುವರೇ ? ೮೧. ಯಮನಿಗೆ ವೈರಿಯಾದ ಶಿವನಿಗೆ ಯಮನ ಭಯಂಕರವಾದ ಮುಖದಲ್ಲಿ ಮುಳುಗಿಹೋಗಿರುವವರೂ, ಬ್ರಹ್ಮನ ಶಿರದ ಪಾತ್ರೆ (ಕಪಾಲ ಪಾತ್ರೆ)

ಕಾಲಧರಂಗಾ ವಿಧಿವನ
ಮಾಲಿಮುಖರ್ಸರಿಯೆ ಕಲ್ಪಕಾಲಾಂತಗತರ್ ೮೧

ಸರ್ವಜ್ಞನನಲ್ಪಜ್ಞ
ರ್ಸರ್ವಾಧೀಶನನನೀಶರುಪಗತವಿಲಸ
ತ್ಸರ್ವೈಶ್ವರ್ಯನನಪಗತ
ಸರ್ವೈಶ್ವರ್ಯರ್ಕಳೆಂತುಮೋಂ ಪೋಲ್ವರೆ ಪೇಳ್ ೮೨

ಶ್ರೀಲಿಂಗಾಮಳಮೂರ್ತಿಗೆಮ್ಮಯ ಮಹಾಸೊಡ್ಡಾಳದೇವಂಗಸ
ಡ್ಡಾಳಾಮರ್ತ್ಯರದೇಂ ಸಮಾನರೆ ತದಂಗಾಂತಃಸ್ಥಿತರ್ವ್ಯರ್ಥವಾ
ದಾಳಾಪಂ ಸಲೆ ಸಾಲ್ಗುಮಚ್ಯುತನ ಕಣ್ಪಾದಾಬ್ಜದೊಳ್ಬೊಮ್ಮನಾ
ಭೀಳಂ ಪಂದಲೆ ಪಾಣಿಯೊಳ್ತೊಳಗೆ ತಾಳ್ದಂಗಂತವರ್ಸಾಟಿಯೇ ೮೩

ಹರನುಗ್ರಂ ಪಶುಪತಿ ಶಂ
ಕರನಭವಂ ಕಾಮರಿಪು ಮಹಾದೇವನುಮೀ
ಶ್ವರನಮೃತಂ ಶಂಭು ಶಿವಂ
ಪರಮೇಶ್ವರನೆಂಬ ನಾಮಮನ್ಯರ್ಗೊಳವೇ ೮೪

ವಿಶ್ವಪತಿ ವಿಶ್ವನಾಥಂ
ವಿಶ್ವಾಧಿಕನೆಂಬ ನಾಮಮಭವಂಗೆಂದುಂ
ಶಾಶ್ವತಮಿದನಱಿದಿರ್ದುಂ
ವಿಶ್ವಾಸವಿಹೀನರನ್ಯರು ಸರಿಗಾಣ್ಬರ್ ೮೫

ಯನ್ನು, ವಿಷ್ಣುವಿನ ಬೆನ್ನಿನ ಮೂಳೆ (ಕಂಕಾಲ)ಯನ್ನು ಧರಿಸಿದ ಶಿವನಿಗೆ ಪ್ರಳಯ ಕಾಲದಲ್ಲಿ ನಾಶಹೊಂದಿದ ಆ ಬ್ರಹ್ಮ ವಿಷ್ಣುಗಳೇ ಮುಖ್ಯರಾದ ದೇವತೆಗಳು ಸರಿಯೆನಿಸುವರೇ ? ೮೨. ಸರ್ವಜ್ಞನೆನಿಸಿದ ಶಿವನನ್ನು, ಅಲ್ಪಜ್ಞರೆನಿಸಿದವರೂ, ಸರ್ವ ಬ್ರಹ್ಮಾಂಡಕ್ಕೆ ಒಡೆಯನೆನಿಸಿದ ಪರಮೇಶ್ವರನಿಗೆ ಸ್ವಾಮಿಗಳೇ (ಒಡೆಯರೇ) ಅಲ್ಲದವರೂ ಸಮಸ್ತ ಸಂಪತ್ತನ್ನು ಹೊಂದಿ ಪ್ರಕಾಶಿಸುವ ಈಶ್ವರನಿಗೆ, ಸಮಸ್ತ ಐಶ್ವರ್ಯವನ್ನು ಕಳೆದುಕೊಂಡವರೂ ಆದ ದೇವತೆಗಳು ಯಾವ ರೀತಿಯಿಂದಲಾದರೂ ಹೋಲುವರೇ ಹೇಳು ! ೮೩. ನಮ್ಮ ಮಂಗಳಕರವಾದ ಶಿವಲಿಂಗದ ಪರಿಶುದ್ಧಮೂರ್ತಿಗೆ, ಮಹಾಲಕ್ಷ್ಯವೆನಿಸಿದ ಮಹಾದೇವನಿಗೆ, ಅವನ ಅಂಗದಲ್ಲಿ ಅಂತರ್ಭಾವಗೊಂಡ ಅಸಡ್ಡಾಳ (ಅಲಕ್ಷ್ಯ) ರಾದ ದೇವತೆಗಳು ಸಮಾನರಾದರೇನು ? ವಿಷ್ಣುವಿನ ನೇತ್ರವು ಪಾದಕಮಲದಲ್ಲೂ, ಬ್ರಹ್ಮನ ಭಯಂಕರ ಹಸಿಯ ತಲೆ ಕೈಯಲ್ಲೂ ಪ್ರಕಾಶಿಸುವಂತೆ ಧರಿಸಿದವನಿಗೆ ಅವರು ಸಮಾನರೆನಿಸುವರೇ ? ಸಾಕು. ೮೪. ಹರ, ಉಗ್ರ, ಪಶುಪತಿ, ಶಂಕರ, ಅಭವ, ಕಾಮರಿಪು, ಮಹಾದೇವ, ಈಶ್ವರ, ಅಮೃತ, ಶಂಭು, ಶಿವ, ಪರಮೇಶ್ವರ–ಎಂಬ ಹೆಸರುಗಳು ಬೇರೆ ದೇವತೆಗಳಿಗೆ ಇರುವುವೇ ? ೮೫. ವಿಶ್ವಕ್ಕೆಲ್ಲ ಪತಿ, ವಿಶ್ವಕ್ಕೆಲ್ಲ ಒಡೆಯ, ವಿಶ್ವದಲ್ಲೆಲ್ಲ ಅಧಿಕನೆಂಬ ಹೆಸರುಗಳು ಪರಮೇಶ್ವರನಿಗೆ ಯಾವಾಗಲೂ ಶಾಶ್ವತವಾದವುಗಳು. ಇವನ್ನು ತಿಳಿದೂಕೂಡ, ವಿಶ್ವಾಸಹೀನರು ಅನ್ಯರಾದ ಬ್ರಹ್ಮ

ಪಶು ಪತಿಯಪ್ಪನೆ ಪತಿ ತಾಂ
ಪಶುವಪ್ಪನೆ ಪಶುಗಳಜಹರಿಪ್ರಮುಖರೆಣಂ
ಪಶುಪತಿಯೇ ಶಿವಂ ಶಿವನೇ
ವಿಶದ ಪರಬ್ರಹ್ಮಮೆಂಬ ವಾಕ್ಯಮೆ ಸತ್ಯಂ ೮೬

ವರ ಸುಮತಿಸೂರಿಗಳ್ಸಲೆ
ಹರಪದಮಂ ವಿಷ್ಣುಪದದಿನಗ್ಗಳಗಾಣ್ಬ
ರ್ಪರಮಾರ್ಥಂ ತದ್ವಿಷ್ಣೋಃ
ಪರಮಂ ಪದಮೆಂಬ ವೇದವಿದಜಸೊಳ್ಪವಣಂ ೮೭

ಕಂತುಹರಂ ಸುರರ್ಗಧಿಕನೆಂದೆರ್ದೆಯೊಳ್ಸಲೆ ತಾಳ್ದರುಣ್ಬುದೇ
ಸಂತತ ಸಾರಮಪ್ಪಮರ್ದುಗೂಳದನೊಲ್ಲದ ಶಾಪದಗ್ಧದು
ರ್ಭ್ರಾಂತನರರ್ಕಳುಣ್ಬುದೆ ಪುರೀಷಮೆನುತ್ತಮೆ ವೇದಮಂತರಿ
ಚ್ಚಾಂತಿ ಮುಖೋಕ್ತಿಯಿಂ ದೊರೆಗುಮಿಂತಿದು ಸಾಲದೆ ಪೆರ್ಮೆಗೀಶನಾ ೮೮

ಪೆಂಕುಳಿವಾಲೀಂಟಿದರೊ ತ
ಮಂ ಕವಿಯೆ ಮರುಳ್ತನಕ್ಕೆ ಪಕ್ಕಾದರೊ ನಿಃ
ಶಂಕೆ ಮಿಗೆ ಮರ್ದುಕಣಿಕೆಯ
ನೇಂ ಕೊಂಡರೊ ಶಂಭುಗಮರರೆಣೆಯೆಂಬಧಮರ್ ೮೯

ವಿಷ್ಣುಗಳನ್ನು ಸರಿಯೆಂದು ಕಾಣಹೋಗುತ್ತಾರೆ. ೮೬. ವಿಷ್ಣು ಬ್ರಹ್ಮಾದಿ ದೇವತೆಗಳೆಂಬ ಪಶುಗಳಿಗೆ ಪತಿಯೆನಿಸುವ ಶಿವನು ತಾನು ಪಶುವೆನಿಸುವನೇ ? ನಿಜವಾಗಿಯೂ ಬ್ರಹ್ಮ ವಿಷ್ಣುಗಳು ಪಶುಗಳು ; ಪಶುಪತಿಯೇ ಶಿವನು. ಶಿವನೇ ಸ್ಪಷ್ಟವಾಗಿ ಪರಬ್ರಹ್ಮನು ಎಂಬ ವಾಕ್ಯವೇ ಸತ್ಯವಾದದ್ದು. ೮೭. ಶ್ರೇಷ್ಠವಾದ ಸದ್ಬುದ್ಧಿಯುಳ್ಳ ವಿದ್ವಾಂಸರು ಶಿವನ ಸ್ಥಾನವನ್ನು, ವಿಷ್ಣುವಿನ ಸ್ಥಾನಕ್ಕಿಂತ ಶ್ರೇಷ್ಠವಾದದ್ದೆಂದು ತಿಳಿಯುವರು. 'ತದ್ವಿಷ್ಣೋಃ ಪರಮಂ ಪದಂ' ಎಂದರೆ ಆ ಶಿವನಸ್ಥಾನವು ವಿಷ್ಣುವಿನ ಸ್ಥಾನಕ್ಕಿಂತಲೂ ಉತ್ಕೃಷ್ಟವಾದದ್ದೆಂದು ಹೇಳುವ ವೇದವೇ ಈ ಮಾತಿಗೆ ಪ್ರಮಾಣ. ೮೮. ಮನ್ಮಥ ಹರನಾದ ಶಿವನು ದೇವತೆಗಳಿಗೆ ಅಧಿಕನಾದವನೆನ್ನುತ್ತ ತಮ್ಮ ಹೃದಯದಲ್ಲಿ ಚೆನ್ನಾಗಿ ನಂಬಿದವರು ಊಟಮಾಡುವುದು ಸತತವೂ ಸಾರತರವಾದದ್ದೆನಿಸುವ ಅಮೃತಾನ್ನ. ಅದನ್ನು ನಂಬಿದ ಗೌತಮಾದಿ ಶಾಪದಿಂದ ದಗ್ಧವಾದ ಕೆಟ್ಟ ಭ್ರಾಂತಿಯಿಂದ ಕೂಡಿದ ಮನುಷ್ಯರು ಉಣ್ಣುವುದೇ ಮಲ ಎನ್ನುವ ಮಾತು 'ಅಂತರಿಚ್ಛಾಂತಿ' ಎಂಬ ವೇದದ ಹೇಳುವಿಕೆಯಿಂದಲೇ ಸಿದ್ಧಗೊಳ್ಳುವುದು (ವೇದವೇ ಹೀಗೆ ಹೇಳುತ್ತಿದೆ). ಈಶ್ವರನ ಹಿರಿಮೆಗೆ ಈ ಮಾತೇ ಸಾಲದೇ ? ೮೯. ಶಂಭುವಿಗೆ ದೇವತೆಗಳು ಸಮಾನರೆನ್ನುವ ಅಧಮರುಗಳು ಭ್ರಮೆಗೊಂಡು ಹುಚ್ಚು ಹಿಡಿದವರ ಹಾಲನ್ನು ಕುಡಿದರೋ, ಅಜ್ಞಾನವು ಮುಸುಕಲಾಗಿ ಹುಚ್ಚುತನಕ್ಕೆ ಈಡಾದರೋ, ಮದ್ದು

ಜಾತೋ ಬೃಹನ್ನಪಿ ಶ್ರುತಿ
ಮಾತೇ ಹರಿಜನಿಯನುಸುರ್ಗುಮಜನುದ್ಭವಮಂ
ಭೂತಸ್ಯ ಜಾತ ವಾಕ್ಯಮ
ಜಾತಶ್ರುತಿಯಭವನೊಗೆಯನೆಂಬುದನೊರೆಗುಂ ೯೦

ಭೃಗುಮುನಿಯ ಶಾಪದಿಂ ಪ
ನ್ನಗಶಯನಂ ಪತ್ತು ಯೋನಿಯೊಳ್ಪುಟ್ಟಿದನಾ
ನೆಗಳ್ದಜನ ಪಾಯುವೊಳ್ಪದೆ
ದೊಗೆದಾಂತನಧೋಕ್ಷಜಾಖ್ಯೆಯಂ ಕಮಳಾಕ್ಷಂ ೯೧

ವ॥ ಅಂತುಮಲ್ಲದೆಯುಂ—

ಕುಡಿವಾಗಳಮೃತಶರಧಿಯ
ನೆಡೆ ಸಿಲ್ಕಿರೆ ಸೆದಗೆಯಂತೆ ಕೊರಲೊಳ್ಕೃಷ್ಣಂ
ತಡೆಯದುಪಮನ್ಯುಮುನಿ ತ
ಜ್ಜಡರುಹಲೋಚನನನುಗುಳನೇ ವಸುಮತಿಯೊಳ್ ೯೨

ನರಹರಿರೂಪ ವಿಷ್ಣು ಮಡಿದು ಶರಭಾಕೃತಿ ವೀರಭದ್ರನಿಂ
ಪರಮ ದಧೀಚಿಯೊಳ್ಸೆಣಸಿ ಚಕ್ರಮನಕ್ರಮದಿಂದೆ ನೀಗಿ ತ
ನ್ನುರದೊಳೆ ತತ್ಪದಾಹತಿಯನಾಂತಗಿದೋಡಿದನಚ್ಯುತಂ ಮಹೇ
ಶ್ವರಮುನಿಯಂಘ್ರಿಯಿಂದೊದೆಯೆ ಭಂಗಮನಾಂತನದೊರ್ಮೆ ಮಾಧವಂ ೯೩

ಗುಣಿಕೆಯ ಕಾಯನ್ನು ತಿಂದರೋ, (ಏನೋ) ೯೦. 'ಜಾತೋಬೃಹನ್ನಪಿ' ಎಂಬ ಶ್ರುತಿಯ ಮಾತು ವಿಷ್ಣುವಿನ ಜನ್ಮವನ್ನು ಹೇಳುವುದು ; 'ಭೂತಸ್ಯಜಾತ'ವೆಂಬ ವಾಕ್ಯವು ಬ್ರಹ್ಮನ ಹುಟ್ಟುವಿಕೆಯನ್ನು ಹೇಳುವುದು ; 'ಅಜಾತ'ವೆಂಬ ಶ್ರುತಿಯ ಮಾತು ಪರಮೇಶ್ವರನು ಹುಟ್ಟೇ ಇಲ್ಲದವನೆಂಬುದನ್ನು ಹೇಳುವುದು, ೯೧. ಭೃಗುಮುನಿಯ ಶಾಪದಿಂದ ವಿಷ್ಣುವು ಹತ್ತು ಯೋನಿಗಳಲ್ಲಿ ಹುಟ್ಟಿದನು. ಆ ಪ್ರಖ್ಯಾತನಾದ ಬ್ರಹ್ಮನ ಗುದದ್ವಾರದಿಂದ ಹೊರಬಂದ ಕಾರಣದಿಂದ 'ಅಧೋಕ್ಷಜ'ನೆಂಬ ಹೆಸರನ್ನು ಆ ವಿಷ್ಣುವು ಪಡೆದನು. ವ॥ ಅದೂ ಅಲ್ಲದೆ—೯೨. (ಶಿವನ ಅನುಗ್ರಹದಿಂದ) ಉಪಮನ್ಯು ಮುನಿಯು ಕ್ಷೀರಸಮುದ್ರವನ್ನು ಕುಡಿಯುತ್ತಿರುವಾಗ (ಆ ಕ್ಷೀರ ಸಮುದ್ರದಲ್ಲಿದ್ದ) ವಿಷ್ಣುವು ಕೊರಳಲ್ಲಿ ಒಂದು ಕಡ್ಡಿಯ ಹಾಗೆ ಸಿಕ್ಕಿಕೊಳ್ಳಲು ಆ ವಿಷ್ಣುವನ್ನು ಭೂಮಿಯ ಮೇಲೆ ಉಗುಳಲಿಲ್ಲವೇ ? ೯೩. ನರಹರಿಯ ರೂಪ ಧರಿಸಿದ (ಹಿರಣ್ಯನೆಂಬ ರಾಕ್ಷಸನನ್ನು ಕೊಲ್ಲಲು ನರಹರಿಯ ರೂಪ ಧರಿಸಿದ) ವಿಷ್ಣುವು ಶರಭಾಕೃತಿಯನ್ನು ಹೊಂದಿದ ವೀರಭದ್ರನಿಂದ ಸತ್ತನು. ಅತಿ ಪವಿತ್ರನೆನಿಸಿದ ದಧೀಚಿಮುನಿಯೊಡನೆ ಅಕ್ರಮವಾಗಿ ಯುದ್ಧಮಾಡಿ, ಚಕ್ರವನ್ನು ಕಳೆದುಕೊಂಡು, ತನ್ನ ಎದೆಯಮೇಲೆ ಆ ದಧೀಚಿಮುನಿಯ ಪಾದದ ಒದೆತದಿಂದ ಹೆದರಿ ಆ ಅಚ್ಯುತನು ಓಡಿಹೋದನು. ಹಾಗೆಯೇ ಒಮ್ಮೆ ಆ ಮಾಧವನು ಮಹೇಶ್ವರಮುನಿಯೊಂಬುವನು ಒದೆಯಲು ಭಂಗವನ್ನು ಹೊಂದಿದನು.

ಅಂದು ಜಲಂಧರಾಸುರನಹೀಶ್ವರಪಾಶದಿನೊತ್ತಿಕಟ್ಟಿ ಗೋ
ವಿಂದನನಿಟ್ಟನಾಗಸಕೆ ತಾರಕನೋಡಿಸಿದಂ ರಣಾಗ್ರದೊಳ್
ಕುಂದದೆ ದಂತಿದಾನವ ಮೃಗಾರಿಸುರಾರಿ ಮುಖಾಸುರರ್ಪೊಡ
ರ್ಪೊಂದಿರೆ ತಕ್ಕುಗುಂದಿಸಿ ಪೊಣರ್ಕೆಯೊಳಂಜಿಸುತುಂ ಮುಗುಳ್ಚಿದರ್ ೯೪

ಸೀತೆಯನಾತ್ಮವಲ್ಲಭೆಯನುಯ್ದ ದಶಾಸ್ಯನನಂದು ಕೊಂದ ಬೊ
ಮ್ಮೇತಿಯ ನೀಗಲೆಂದು ಶಿವಲಿಂಗಮನೊಲ್ದು ನಿಜಾಭಿಧಾನದಿಂ
ಸೇತುಗೆ ಮುಂ ಪ್ರತಿಷ್ಠಿಸಿ ಸಮರ್ಚಿಸಿದಂ ರಘುರಾಮರೂಪಿನಿಂ
ಪ್ರೀತಿಯೊಳಂಬುಜೇಕ್ಷಣನಿದಂ ಸಲೆ ಬಲ್ಲುದು ಭೂರಿಭೂಜನಂ ೯೫

ಹರಿ ಮತ್ಸ್ಯರೂಪಮಂ ತಾ
ಳ್ದುರು ಲಂಕೆಯೊಳೊಲ್ದು ಮತ್ಸ್ಯಕೇಶ್ವರನಂ ತಾ
ನಿರದರ್ಚಿಸಿ ಸುಖದಿಂ ನಿ
ರ್ಜರರಿಪುವಂ ಸದೆದು ವೇದಮಂ ತೆಗೆತಂದಂ ೯೬

ಕಮಠಾವತಾರದೊಳ್ಹರಿ
ವಿಮಳ ಹರಿದ್ವಾರದಲ್ಲಿ ಕಮಠೇಶ್ವರನಂ
ಪ್ರಮುದದಿನರ್ಚಿಸಿ ಪಡೆಯನೆ
ಸುಮನೋರಥಮಂ ಮುರಾರಿ ಕೃಷ್ಣೇಶ್ವರನಂ ೯೭

೯೪. ಅಂದು (ಪೂರ್ವದಲ್ಲಿ) ಜಲಂಧರನೆಂಬ ರಾಕ್ಷಸನು ಆದಿಶೇಷನನ್ನೇ ಹಗ್ಗವನ್ನಾಗಿ ಮಾಡಿ, ಬಿಗಿಯಾಗಿ ಕಟ್ಟಿ, ವಿಷ್ಣುವನ್ನು ಆಕಾಶಕ್ಕೆ ಎಸೆದನು. ರಣರಂಗದಲ್ಲಿ ತಾರಕಾಸುರನು (ಸೋಲಿಸಿ) ಓಡಿಸಿಬಿಟ್ಟನು. ಯಾವ ಕುಂದನ್ನೂ ಲೆಕ್ಕಿಸದೆ ಗಜಾಸುರ, ವ್ಯಾಘ್ರಾಸುರ, (ಮೃಗಗಳಿಗೆ ಅರಿಯಾದ ವ್ಯಾಘ್ರನೆಂಬ ಹೆಸರಿನ ರಾಕ್ಷಸ), ಮುಖ್ಯರಾದ ರಾಕ್ಷಸರುಗಳು ಶೌರ್ಯದಿಂದ ಕೂಡಿ ಯುದ್ಧದಲ್ಲಿ (ವಿಷ್ಣುವಿನ) ಸಾಮರ್ಥ್ಯವನ್ನು ಕುಗ್ಗಿಸಿ ಹೆದರಿಸಿ ಓಡಿಸಿದರು. ೯೫. ವಿಷ್ಣುವು ರಘುರಾಮನ ರೂಪದಿಂದ (ಅವತಾರ ಮಾಡಿದ ಕಾಲದಲ್ಲಿ) ತನ್ನ ಆತ್ಮವಲ್ಲಭೆಯೆನಿಸಿದ ಸೀತೆಯನ್ನು ಕದ್ದುಕೊಂಡು ಹೋಗಿದ್ದ ರಾವಣನನ್ನು ಕೊಂದ ಕಾರಣ ಆ ಬ್ರಹ್ಮಹತ್ಯಾ ದೋಷವನ್ನು ನಿವಾರಿಸಿಕೊಳ್ಳಲು, ಸೇತುವೆಯ ಮುಂಭಾಗದಲ್ಲಿ ತನ್ನ ಹೆಸರಿನ (ರಾಮೇಶ್ವರವೆಂಬ) ಶಿವಲಿಂಗವನ್ನು ಪ್ರೀತಿಯಿಂದ ಪ್ರತಿಷ್ಠಾಪನೆಮಾಡಿ ಪೂಜೆ ಮಾಡಿದುದನ್ನು ಸಮಸ್ತ (ಲೋಕದ) ಜನವೆಲ್ಲ ತಿಳಿದ ವಿಚಾರವೇ ಆಗಿದೆ. ೯೬. ವಿಷ್ಣುವು ಮತ್ಸ್ಯರೂಪ (ಮೀನಿನರೂಪ) ವನ್ನು ಧರಿಸಿ, ಲಂಕೆಯಲ್ಲಿ ಭಕ್ತಿಯಿಂದ ಮತ್ಸ್ಯಕೇಶ್ವರನನ್ನು ತಾನು ತಪ್ಪದೆ ಅರ್ಚನೆ ಮಾಡಿ ಸುಖವಾಗಿ ದೇವತೆಗಳ ರಿಪುವಾದ ಸೋಮುಕಾಸುರನೆಂಬುವವನನ್ನು ಕೊಂದು ವೇದಗಳನ್ನು ಪಡೆದುಕೊಂಡು ಬಂದನು. [ಮತ್ಸ್ಯಕೇಶ್ವರನನ್ನು ಅರ್ಚನೆಮಾಡಿದುದ ರಿಂದಲೇ ಆ ರಾಕ್ಷಸನನ್ನು ಸೋಲಿಸುವ ಶಕ್ತಿಯುಂಟಾಯಿತೆಂದು ಭಾವ] ೯೭–೯೮. ಕೂರ್ಮಾವತಾರದಲ್ಲಿ ವಿಷ್ಣುವು ಶ್ರೇಷ್ಠವಾದ ಹರಿದ್ವಾರದಲ್ಲಿ ಕಮಠೇಶ್ವರನೆಂಬ

ದ್ವಾರವತಿಯುಲ್ಲಿ ಭಜಿಸಿ ಕು
ಮಾರಾದ್ಯಭಿಮತಫಲಂಗಳಂ ಪಡೆದಂ ತಾ
ನೋರಂತೆ ಕೃಷ್ಣರೂಪಿಂ
ಸಾರಬ್ರಹ್ಮೇಶಲಿಂಗಮಂ ಧಾರಿಣಿಯೊಳ್ ೯೮

ಮಿಸುಗುವಲಂಪುರದೊಳ್ಪೂ
ಜಿಸಿ ಪಡೆದಂ ಬ್ರಹ್ಮನಿಷ್ಟಮುಂ ಹರಿವಿಧಿ ಮು
ಖ್ಯಸುರಮುನಿಗಳ್ವಾರಾ
ಣಸಿಯೊಳ್ನಿಜನಾಮಲಿಂಗಮಂ ಪೂಜಿಸಿದರ್ ೯೯

ಹರಿ ಮೇಘರೂಪದಿಂದೀ
ಶ್ವರನಂ ಸಲೆ ಪೊತ್ತು ಸೇವಿಸಿದನೊಂದು ಯುಗಾಂ
ತರದೊಳ್ಮೋಹಿನಿವೆಸರಿಂ
ತರುಣಿತ್ವಮನಾಳ್ದು ಹರನನೋಲಗಿಸಿರ್ದಂ ೧೦೦

ಧರೆಗಾವೇ ದೇವರೆಂದಾಡಿದ ನುಡಿಯಘದಿಂ ಪಂದಿ ಪದ್ದಾಗಿ ಪದ್ಮೋ
ದರನುಂ ವಾಣೀಶನುಂ ವಾದಿಸುತಡಿಮುಡಿಯಂ ಕಾಣದೇಳ್ತಂದು ಲಜ್ಜಾ
ಭರದಿಂ ಜ್ವಾಲಾಂಗಲಿಂಗಕ್ಕೆಱಗಿ ಪೊಗಳ್ದು ದೈನ್ಯೋಕ್ತಿಯಿಂ ಮಚ್ಚಿಸುತ್ತೀ
ಶ್ವರನಂ ತಮ್ಮಿಷ್ಟಮಂ ಮೇಣ್ಪಡೆದರಿದು ವಲಂ ಲೋಕವೇದ್ಯಪ್ರಸಿದ್ಧಂ ೧೦೧

ಹೆಸರಿನ ಶಿವಲಿಂಗವನ್ನು ಅತಿ ಸಂತೋಷದಿಂದ ಪೂಜೆಮಾಡಿ, ಇಷ್ಟಾರ್ಥಸಿದ್ಧಿಯನ್ನು ಪಡೆಯಲಿಲ್ಲವೇ ? ಕೃಷ್ಣಾವತಾರದಲ್ಲಿ (ವಿಷ್ಣುವು) ದ್ವಾರಕಾನಗರದಲ್ಲಿ ಕೃಷ್ಣೇಶ್ವರನೆಂಬ ಹೆಸರಿನ ಶಿವಲಿಂಗವನ್ನು ಸ್ತೋತ್ರಮಾಡಿ, ಪುತ್ರ ಪ್ರಾಪ್ತಿಯೇ ಮೊದಲಾದ ಇಚ್ಛಿಸಿದ ಫಲಗಳನ್ನು ಪಡೆದನು. ತಾನು ಒಂದೇ ಕ್ರಮವಾಗಿ (ಏಕಪ್ರಕಾರವಾಗಿ) ಕೃಷ್ಣರೂಪದಿಂದ ಶ್ರೇಷ್ಠವಾದ 'ಬ್ರಹ್ಮೇಶ' ಎಂಬ ಹೆಸರಿನ ಲಿಂಗವನ್ನು ಶೋಭಿಸುವ ಅಲಂಪುರವೆಂಬ ಹೆಸರಿನ ಪಟ್ಟಣದಲ್ಲಿ ಪೂಜೆಮಾಡಿ, ಬ್ರಹ್ಮನು ಇಷ್ಟಾರ್ಥಗಳನ್ನು ಪಡೆದನು. ವಿಷ್ಣು, ಬ್ರಹ್ಮರೇ ಮುಖ್ಯರಾದ ದೇವತೆಗಳೂ, ಮುನೀಶ್ವರರುಗಳೂ ಕಾಶಿಯಲ್ಲಿ ತಮ್ಮ ತಮ್ಮ ಹೆಸರಿನ ಶಿವಲಿಂಗಗಳನ್ನು ಪೂಜಿಸಿದರು. ೧೦೦. ಹರಿಯು ಮೇಘರೂಪದಿಂದ ಈಶ್ವರನನ್ನು ಹೊತ್ತು ಸೇವೆ ಮಾಡಿದನು. ಯುಗಾಂತರದಲ್ಲಿ ಮೋಹಿನಿಯೆಂಬ ಹೆಸರಿನಿಂದ ಸ್ತ್ರೀರೂಪ ಧರಿಸಿ ಈಶ್ವರನನ್ನು ಸೇವಿಸಿಕೊಂಡಿದ್ದನು. ೧೦೧. ಧರೆಗೆ ನಾವೇ ದೇವರು ಎಂದು ಆಡಿದ ಮಾತಿನ ಪಾಪದ ಕಾರಣ ವಿಷ್ಣುವು ಹಂದಿಯಾಗಿ, ಬ್ರಹ್ಮನು ಹದ್ದಾಗಿ ಪಣತೊಟ್ಟು (ಈಶ್ವರನ) ಪಾದವನ್ನೂ ತಲೆಯನ್ನೂ ಕಾಣಲಾರದೆ ಬಂದು ನಾಚಿಕೆಯ ಆಧಿಕ್ಯದಿಂದ ಉರಿಲಿಂಗಕ್ಕೆ (ಜ್ಯೋತಿಲಿಂಗಕ್ಕೆ) ನಮಸ್ಕಾರಮಾಡಿ, ಹೊಗಳಿ, ಮೃದುವಾದ ದೀನವಾಣಿಯಿಂದ ಪ್ರಸನ್ನಗೊಳಿಸಿಕೊಂಡು ಆ ಈಶ್ವರನಿಂದಲೇ ತಮ್ಮ ಇಷ್ಟಾರ್ಥವನ್ನು ಪಡೆದರು. ಈ ಮಾತು ಲೋಕವೆಲ್ಲ

ಮದಯುತಮತ್ಸ್ಯರೂಪಹರಿಯಂ ಹರನರ್ದಿಸಿ ಸುತ್ತಿದಂ ಜಟಾ
ಪದದೊಳೆ ಪೇಷ್ಟಿಯಂತೆಸೆವ ಬಾಲಮನಚ್ಯುತ ಕೂರ್ಮಕರ್ಪರಂ
ವಿದಿತ ಸುರಾರಿ ಮಸ್ತಕದ ಮಾಲೆಯ ಮಧ್ಯದೊಳೀಶವಕ್ಷದೊ
ಳ್ಪುದಿದೆಸೆದಿರ್ಕುಮಿಕ್ಕಿ ನರಸಿಂಹನ ಸಮ್ಮವನುಟ್ಟನೀಶ್ವರಂ ೧೦೨

ಹರಹಸ್ತಾಗ್ರದೊಳಿರ್ಕುವಮಾದ್ಯ ಕಿಟಿದಂಷ್ಟ್ರಂ ಮತ್ತಮಾ ಲೋಕಭೀ
ಕರಸಂ ವಕ್ರಮತಿ ತ್ರಿವಿಕ್ರಮನನಾರ್ಪಿಂ ಸೀಳ್ದು ಕಂಕಾಳಮಂ
ಕರದಿಂ ತಾಳ್ದನನಂಗವೈರಿ ಖಲವಿಷ್ವಕ್ಸೇನನಂ ಶೂಲದಿಂ
ಭರದಿಂದಾರ್ದಿಱಿದೆತ್ತಿ ತನ್ನ ಪೆಗಲೊಳ್ಪೊತ್ತಂ ಕೃತಾಂತಾಂತಕಂ ೧೦೩

ಜಡಮತಿ ದಕ್ಷನಧ್ವರದ ಶಾಲೆಯೊಳೋಡು[1]ವ ಯಜ್ಞವಿಷ್ಣುವಂ
ತಡೆಯದೆ ವೀರಭದ್ರ ವಪುವಿಂ ತಲೆ ಕತ್ತರಿಪಂತಿರೆಚ್ಚು ತಾಂ
ಕೆಡಪಿದನಿಂತಿದೆಲ್ಲ ನಿಗಮಾಗಮಸಿದ್ಧಮದೊರ್ಮೆ ಶಂಕರಂ
ಪಿಡಿದ ಕಪಾಲದೊಳ್ಸುರಿದನಚ್ಯುತನಾತ್ಮಶಿರೋಽರುಣಾಂಬುವಂ ೧೦೪

ತಿಳಿದಿರುವಂತೆ ಪ್ರಸಿದ್ಧವಾದದ್ದಲ್ಲವೇ ? ೧೦೨. ಮತ್ಸ್ಯಾವತಾರವನ್ನು ಮಾಡಿದ ಮೇಲೆ ಮದದಿಂದ ಕೂಡಿದ ಆ ಮತ್ಸ್ಯರೂಪದ ವಿಷ್ಣುವನ್ನು ಶಿವನು ಕೊಂದು ಅದರ ಬಾಲವನ್ನು ರುಮಾಲಿನ ಹಾಗೆ ಜಡೆಯ ಸ್ಥಾನದಲ್ಲಿ ಸುತ್ತಿಕೊಂಡನು. ಅಚ್ಯುತನು ಕೂರ್ಮಾವತಾರ ಮಾಡಿದಾಗ ಅವನ ಆ ಬೆನ್ನಿನ ಚಿಪ್ಪನ್ನು ಪ್ರಸಿದ್ಧರಾದ ರಾಕ್ಷಸರ ರುಂಡಮಾಲೆಗಳ ಮಧ್ಯದಲ್ಲಿ ಪೋಣಿಸಿ ಎದೆಯ ಮೇಲೆ (ಹಾರದ ಮಧ್ಯದಲ್ಲಿ) ಶೋಭಿಸುವಂತೆ ಮಾಡಿಕೊಂಡನು. ನರಸಿಂಹಾವತಾರದ ವಿಷ್ಣುವನ್ನು ಕೊಂದು ಅವನ ಚರ್ಮವನ್ನು ಶಿವನು ಉಟ್ಟುಕೊಂಡನು. ೧೦೩. ವಿಷ್ಣುವು ವರಾಹಾವತಾರ ಮಾಡಿದಾಗ ಆ ಹಂದಿಯ ದಂಷ್ಟ್ರವನ್ನು ಶಿವನು ತನ್ನ ಕೈಯಲ್ಲಿ ಧರಿಸಿದನು ಮತ್ತು ತ್ರಿವಿಕ್ರಮಾವತಾರ ಮಾಡಿದ ವಿಷ್ಣುವು ಲೋಕಕ್ಕೆಲ್ಲ ಭಯಂಕರವೆನಿಸಿ ವಕ್ರ ಬುದ್ಧಿಯಿಂದ ವರ್ತಿಸುತ್ತಿದ್ದಾಗ ಅವನನ್ನು ಪರಾಕ್ರಮದಿಂದ ಸೀಳಿಹಾಕಿ ಅವನ ಬೆನ್ನಿನ ಮೂಳೆಯನ್ನು (ಕಂಕಾಳವನ್ನು) ಕೈಯಲ್ಲಿ ಧರಿಸಿದನು. ದುಷ್ಟ ವಿಷ್ವಕ್ಸೇನನೆಂಬ ಹೆಸರನ್ನು ಧರಿಸಿದ ವಿಷ್ಣುವನ್ನು ಶೂಲದಲ್ಲಿ ಶಕ್ತಿಯಿಂದ ತಿವಿದು ಮೇಲಕ್ಕೆತ್ತಿ ಯಮನಿಗೂ ಯಮನಾದ ಶಿವನು ತನ್ನ ಹೆಗಲಮೇಲೆ ಹೊತ್ತನು. ೧೦೪. ಮೂರ್ಖ ಬುದ್ಧಿಯ ದಕ್ಷನ ಯಜ್ಞಶಾಲೆಯಲ್ಲಿ ಯಜ್ಞಾರ್ಥವಾಗಿ ಬಂದಿದ್ದ ವಿಷ್ಣುವು ನಿಲ್ಲದೆ ಓಡುತ್ತಿರಲಾಗಿ ಆ ವೀರಭದ್ರನು ದೇಹದಿಂದ ಅವನ ತಲೆಯು ಕತ್ತರಿಸುವಂತೆ ಬಾಣ ಪ್ರಯೋಗಮಾಡಿ ನೆಲಕ್ಕೆ ಕೆಡವಿದನು. ಈ ರೀತಿಯೆಲ್ಲವೂ ವೇದಾಗಮ ಸಿದ್ಧವಾದದ್ದು. ಒಂದು ಸಲ ಶಂಕರನು ಹಿಡಿದ ಕಪಾಲದಲ್ಲಿ ವಿಷ್ಣುವು ತನ್ನ ಶಿರಸ್ಸಿನ ರಕ್ತವನ್ನೇ

1 ಿದು(ಅ)

ಪುರಹರನಂತಕಹರನಘ
ಹರನಂಗಜಹರನರಾತಿಹರನಧ್ವರಸಂ
ಹರನಂಧಕಹರನೆಂಬಂ
ತಿರೆ ಹರಿಹರನೆಂಬ ನಾಮಮುಭವಂಗೆಸೆಗುಂ ೧೦೫

ನೆರೆದೀ ನಿಜಾರ್ಥಮಂ ಬಿ
ತ್ತರದಿಂದೆ ಹರಿರ್ಹರಂ ತಮನುಯಾತಿಯೆನು
ತ್ತೊರೆಗುಂ ಶ್ರುತಿ ಕುಮತಿಗಳಿದ
ನರವರಿಸದೆ ಬಾಯ್ಗೆ ಬಂದ ತೆಱದಿಂದುಲಿವರ್ ೧೦೬

ಪಂಕಜೇಕ್ಷಣ ಪಂಕಜಾಸನ ಪಾಕಶಾಸನಮುಖ್ಯರಾ
ಬಿಂಕಮಂ ತೃಣಮಿಟ್ಟು ಯಕ್ಷನ ರೂಪಿನಿಂ ಮುಱಿದಂ ಮಹೀ
ಶಂ ಕರಂ ಮದಿಸಿರ್ದ ಬೊಮ್ಮನ ಪಂಚಮಾಸ್ಯಮನಣ್ಮ ಮೀ
ನಾಂಕನೈರಿ ನಖಾಗ್ರದಿಂದೆ ಚಿವುಂಟಿದಂ ಧರಣೀಪತೀ ೧೦೭

ಮೃಗಿಯಾಗಿ ಪರಿವ ಸುತೆಯಂ
ಮೃಗರೂಪಿಂ ನೆರೆಯಲೆಳಸಿ ಬಳಿವರಿವಜನಂ
ಸೊಗಯಿಪ ಕಿರಾತರುದ್ರಂ
ಮಿಗೆ ತಚ್ಛಿರಮುರುಳೆ ಬಾಣದಿಂ ಪದೆದೆಚ್ಚಂ ೧೦೮

ಸುರಿಸಿದನು. ೧೦೫. ಪುರಹರ, ಅಂತಕಹರ, ಅಘಹರ, ಅಂಗಜಹರ, ಆರಾತಿಹರ, ಅಧ್ವರ ಸಂಹರ, ಅಂಧಕಹರ ಇವುಗಳ ಹಾಗೆಯೇ ಹರಿಯನ್ನು ಹರಣ ಮಾಡಿದವನು ಎಂಬರ್ಥದಲ್ಲಿ 'ಹರಿಹರ' ಎಂಬ ಹೆಸರು ಶಿವನಿಗೇ ಶೋಭಿಸುವುದು. ೧೦೬. ಪ್ರಸಿದ್ಧವಾದ ಈ ನಿಜಾರ್ಥವನ್ನು ವಿಸ್ತಾರಗೊಳಿಸಿ (ದೇವತೆಗಳು) ಹರಿಯನ್ನು ನಾಶಮಾಡಿದ ಆ ಶಿವನನ್ನು ಅನುಸರಿಸಿ ಹೋಗುತ್ತಾರೆ' ಎಂದು ಶ್ರುತಿಯು ಹೇಳುತ್ತಿದೆ. ದುರ್ಬುದ್ಧಿಯುಳ್ಳವರು ಇದನ್ನು ವಿಚಾರಮಾಡದೆ ಬಾಯಿಗೆ ಬಂದ ರೀತಿಯಲ್ಲಿ ಹೇಳುತ್ತಾರೆ. ೧೦೭. ಮಹಾರಾಜಾ, (ಎಲೈ ಬಿಜ್ಜಳನೇ), ವಿಷ್ಣು, ಬ್ರಹ್ಮ, ದೇವೇಂದ್ರರೇ ಮುಖ್ಯರಾದವರ ಗರ್ವವನ್ನು ಹುಲ್ಲುಕಡ್ಡಿಯನ್ನಿಟ್ಟು ಯಕ್ಷನ ರೂಪದಿಂದ ಶಿವನು ಮುರಿದು ಹಾಕಿದನು. ಹೆಚ್ಚಾಗಿ ಗರ್ವಗೊಂಡ ಬ್ರಹ್ಮನ ಐದನೆಯ ಮುಖವನ್ನು ಪರಾಕ್ರಮದಿಂದ ಮನ್ಮಥವೈರಿಯಾದ ಶಿವನು ಉಗುರಿನಿಂದ ಚಿವುಟಿ ಹಾಕಿದನು. ೧೦೮. ಹೆಣ್ಣು ಜಿಂಕೆಯಾಗಿ ಓಡುತ್ತಿರುವ ಸರಸ್ವತಿಯನ್ನು ಗಂಡು ಜಿಂಕೆಯಾಗಿ ಕೂಡಲು ಬಯಸಿ ಬೆನ್ನಟ್ಟಿದ್ದ ಬ್ರಹ್ಮನನ್ನು ಸೊಗಸಾದ ಬೇಡನ ಆಕಾರವನ್ನು ಧರಿಸಿದ ಶಿವನು (ಆ ಬ್ರಹ್ಮನ) ಶಿರಸ್ಸು ಚೆನ್ನಾಗಿ ಕತ್ತರಿಸಿಬೀಳುವಂತೆ ಬಾಣದಿಂದ ಇಚ್ಛೆಪಟ್ಟು ಹೊಡೆದನು.

ನೆಗಪೆ ನಿಜಾದ್ರಿಯಂ ದಶಶಿರಂ ಪದದಂಗುಟದಿಂದವುಂಕಿ ತ
ನ್ನಗದಡಿ ಸಿಲ್ಕಿ ಬೇಳ್ಗರೆವಿನಂ ನೆಗಳ್ದಂ ಧರೆಗಾನೆ ಧನ್ವಿಯೆಂ
ದಗಲದ ಕೊರ್ವಿನಿಂ ಸೆಣಸಿದಂಗಜನಂಗಮನಾರ್ದು ಸುಟ್ಟನು
ರ್ವಿಗೆ ಘನ ಮೃತ್ಯುವಾನೆನುತಿದಿರ್ಚಿದ ಕಾಲನನಿಕ್ಕಿ ಮೆಟ್ಟಿದಂ ೧೦೯

ಧರಣಿಯೊಳಾನೆ ದಿವ್ಯ ಪುರುಷೋತ್ತಮನೆಂಬ ಸಗರ್ವಶೌರಿಯಂ
ಭರದೊಳೆ ಪೆಣ್ಣನಂಗೊಳಿಸಿದಂ ಕ್ರತುದಕ್ಷನೆನುತ್ತೆ ಹೋಮಮಂ
ವಿರಚಿಪ ದಕ್ಷನಂ ತಱಿದುರುಳ್ಚಿದನೆಲ್ಲಮನುಣ್ಬ ಶಕ್ತಿವೆ
ತ್ತರಿದೆನಿಪುರ್ಕ[1]ನಾಂತ ಶಿಖಿಯುಜ್ವಳಜಿಹ್ವೆಯು ಕಿಳ್ತದಿರ್ಚಿದಂ ೧೧೦

ಭುವನಾಕ್ಷಿತ್ವದ ಬಿಂಕಮಾಳ್ದ ಭಗನಕ್ಷ್ಯುತ್ಪಾಟನಂಗೆಯ್ದು ಕೈ
ರವಮಿತ್ರಾಂಗಮನಂಘ್ರಿಯಿಂ ಪೊಸೆದು ಪೂಷಾದಿತ್ಯದಂತಂಗಳಂ
ಜವದಿಂ ಬಿಲ್ಗೊಲೆಯಿಂದುದಿರ್ಚಿ ಕೊಱದಾ ವಾಣೀಲಸದ್ಘ್ರಾಣಮಂ
ಪವನೋರುದ್ವಯಮಂ ಸುರೇಂದ್ರಭುಜಮಂ ತಾಂ ಖಂಡಿಸುತ್ತಣ್ಮಿನಿಂ ೧೧೧

೧೦೯. ರಾವಣನು ತನ್ನ ಪರ್ವತವಾದ ಕೈಲಾಸವನ್ನು ನೆಗುವಲು (ಎತ್ತಲು) ಪಾದದ ಹೆಬ್ಬೆರಳಿನಿಂದ ಮೆಟ್ಟಿ ಆ ಪರ್ವತದ ಅಡಿಯಲ್ಲಿ (ಆತನು) ಸಿಕ್ಕು ಗೋಳಾಡುವ ಹಾಗೆ ಮಾಡಿದನು. ಲೋಕದಲ್ಲಿ ನಾನೊಬ್ಬನೇ ಬಿಲ್ಗಾರನೆಂಬ ತೊಲಗದ ಗರ್ವದಿಂದ ಸೆಣಸಿದ (ಬಾಣಪ್ರಯೋಗಮಾಡಿದ) ಮನ್ಮಥನ ದೇಹವನ್ನು ಅಬ್ಬರಿಸಿ ಸುಟ್ಟುಹಾಕಿದನು. ಲೋಕಕ್ಕೆ ನಾನೇ ಘನವಾದ ಮೃತ್ಯುದೇವತೆಯೆನ್ನುತ್ತ ಎದುರಿಸಿದ ಯಮನನ್ನು ಕೊಂದುಹಾಕಿದನು. ೧೧೦. ಲೋಕದಲ್ಲಿ ನಾನೇ ದಿವ್ಯ ಪುರುಷಶ್ರೇಷ್ಠನೆಂಬ ಗರ್ವದಿಂದ ಕೂಡಿದ ವಿಷ್ಣುವನ್ನು ಬೇಗನೆ ಹೆಣ್ಣನ್ನಾಗಿ ಮಾಡಿದನು. (ನಾನೇ) ಯಜ್ಞ ಮಾಡುವಿಕೆಯಲ್ಲಿ ದಕ್ಷನಾದವನೆಂದೆನ್ನುತ್ತ ಯಜ್ಞವನ್ನು ಮಾಡಿದ ದಕ್ಷನನ್ನು ಕತ್ತರಿಸಿದನು. (ಕೊಂದುಹಾಕಿದನು). ಎಲ್ಲವನ್ನೂ ಉಣ್ಣುವ (ಸುಟ್ಟುಹಾಕುವ) ಶಕ್ತಿಯನ್ನು ಹೊಂದಿದ್ದೇನೆಂಬ ಗರ್ವವನ್ನು ಹೊಂದಿದ ಅಗ್ನಿಯ ಪ್ರಕಾಶಮಾನವಾದ ನಾಲಿಗೆಯನ್ನು ಕಿತ್ತು ಅದಿರಿಸಿಬಿಟ್ಟನು. ೧೧೧. ಲೋಕದ ಕಣ್ಣು ನಾನೇ ಎಂಬ ಗರ್ವವನ್ನು ಹೊಂದಿದ ಸೂರ್ಯನ ಕಣ್ಣನ್ನು ಕಿತ್ತು, ಚಂದ್ರನ ದೇಹವನ್ನು ಕಾಲಿನಿಂದ ಹೊಸಗಿ ಹಾಕಿ, ಪೂಷ, ಆದಿತ್ಯರೆಂಬುವರ ಹಲ್ಲುಗಳನ್ನು ಶೀಘ್ರವಾಗಿ ಬಿಲ್ಲಿನ ತುದಿಯಿಂದ ಮುರಿದುಹಾಕಿ, ಸರಸ್ವತಿಯ ಶ್ರೇಷ್ಠ ಮೂಗನ್ನು ಕತ್ತರಿಸಿ, ವಾಯುವಿನ ಎರಡೂ ತೊಡೆಗಳನ್ನೂ, ದೇವೇಂದ್ರನ ಭುಜವನ್ನೂ ಪರಾಕ್ರಮದಿಂದ ಆ ಶಿವನು ಮುರಿದು ಹಾಕಿ

---

1 ರ್ಬ(ದ)

ಪರಮ ಸ್ವತಂತ್ರನಿಂತ
ಧ್ವರಕೇಳ್ತಂದಮರನಿವಹಮಂ ಭಂಜಿಸಿದಂ
ಶರಣೆಂದೊಡೆ ರಕ್ಷಿಸಿದಂ
ಪೊರೆಯಲ್ಕೊಲಲೀಶನೀಶನಲ್ಲದೆ ಪೆಱರಾರ್ ೧೧೨

ಗಗನಗ್ರಾಮಂಗಳಂ ಸುಟ್ಟುರುಪಿದನತುಳದ್ವೀಪಿ ದೈತ್ಯದ್ವಿಪೇಂದ್ರಾ
ರಿಗಳಂ ಸೀಳ್ದಿಕ್ಕಿದಂ ಮೆಟ್ಟಿದನಡಿಯಿನಪಸ್ಮಾರಮಂ ಕೊಂದನುನ್ಮಾ
ರ್ಗದ ದೈತೇಯರ್ಕಳಂ ನುಂಗಿದನಪಹೃತಲೋಕಪ್ರಜಕ್ಷ್ವೇಡಮಂ ಕೆ
ಯ್ಮಿಗೆ ತಾಳ್ದಂ ಭೂರಿ ಭೂಭಾರಮನೆ ತಳೆದ ಭೋಗೀಂದ್ರನಂ ಭೂತನಾಥಂ ೧೧೩

ಭುವನಮನೆಲ್ಲಮಂ ಸುಳಿಯೊಳೆತ್ತಿ ಮುಳುಂಗಿಪ ದೇವಗಂಗೆಯಂ
ತವೆ ತಳೆದಂ ಜಟಾಗ್ರದೊಳೆ ಮಲ್ಲಿಗೆಯಂ ತಳೆವಂತಿರಂಘ್ರಿಸಂ
ಭವನವಚಕ್ರದಿಂ ಖಲಜಲಂಧರ ಮಸ್ತಕಮಂ ಕಳಲ್ಚಿ ಶಾಂ
ಭವಿಯರಸಂ ಸುರರ್ಪೊಗಳೆ ತಾಳ್ದನುರಃಸ್ಥಿತ ರುಂಡಮಾಲೆಯೊಳ್ ೧೧೪

ಸುರನಾರೀಜನದೈರ[1]ದಾಳಿಗೆ ಚಿರಸ್ಥಾಯಿತ್ವಮಂ ಮಾಳ್ಪ ಶಂ
ಕರಪಾದಾಂಬುಜಜಾತಚಕ್ರಮನದಂ ತಾನರ್ಥಿಸುತ್ತಂಬುಜೋ

ದನು. ೧೧೨. ಈ ರೀತಿ ಪರಮ ಸ್ವತಂತ್ರನೆನಿಸಿದ ಶಿವನು ದಕ್ಷಯಜ್ಞಕ್ಕೆ ಬಂದ (ಸಮಸ್ತ) ದೇವತಾ ಸಮೂಹವನ್ನು ಭಂಗಗೊಳಿಸಿದನು. ಶರಣು ಎಂದವರನ್ನು ರಕ್ಷಿಸಿದನು. ರಕ್ಷಿಸಲಿಕ್ಕೂ ಸಂಹಾರ ಮಾಡುವುದಕ್ಕೂ ಈಶ್ವರನಲ್ಲದೆ ಬೇರೆಯವರು ಯಾರು ? ೧೧೩. ತಾರಕಾಸುರನ ಮಕ್ಕಳಾದ ತಾರಕಾಕ್ಷ, ಮಕರಾಕ್ಷ, ವಿದ್ಯುನ್ಮಾಲಿನಿಗಳೆಂಬ ಮೂವರು ರಾಕ್ಷಸರು ಆಕಾಶಮಾರ್ಗದಲ್ಲಿ ಕಟ್ಟಿದ ಮೂರು ಪಟ್ಟಣಗಳನ್ನು ಸುಟ್ಟು ಉರಿಸಿದನು. ಅನುಪಮಪರಾಕ್ರಮದ ವ್ಯಾಘ್ರಾಸುರ ಗಜಾಸುರರೆಂಬ ವೈರಿಗಳನ್ನು ಸೀಳಿ ಹಾಕಿದನು. ಪಾದದಿಂದ ಅಪಸ್ಮಾರವನ್ನು (ಅಪಸ್ಮಾರಾಭಿಮಾನಿ ದೇವತೆ ಅಥವಾ ಮಲರೋಗಾಭಿಮಾನಿ ದೇವತೆ ?) ಮೆಟ್ಟಿದನು. ಅತ್ಯಂತ ಮದೋನ್ಮತ್ತ ರಾಕ್ಷಸರನ್ನು ಕೊಂದನು. ಲೋಕ ಸಮೂಹವನ್ನೆಲ್ಲ ನಾಶಮಾಡುತ್ತಿದ್ದ ಹಾಲಾಹಲವನ್ನು ನುಂಗಿದನು. ಅಸಾಧ್ಯವಾದ ಸಮಸ್ತ ಭೂಮಂಡಲ ಭಾರವನ್ನು ಹೊತ್ತ ಉರಗ ಶ್ರೇಷ್ಠನಾದ ಆದಿಶೇಷನನ್ನು ಸಮಸ್ತಭೂತ (ಜೀವಿ)ಗಳಿಗೆ ಪ್ರಭುವಾದ ಶಿವನು (ಆಭರಣವಾಗಿ) ಧರಿಸಿದನು. ೧೧೪. ಪಾರ್ವತೀ ಪತಿಯಾದ ಶಿವನು ಸಮಸ್ತ ಭೂಮಂಡಲಗಳನ್ನು ತನ್ನ ಸುಳಿಯಲ್ಲಿ ಒತ್ತಿ ಮುಳುಗಿಸುವ ದೇವಗಂಗೆಯನ್ನು ಜಡೆಯ ತುದಿಯಲ್ಲಿ ಮಲ್ಲಿಗೆಯನ್ನು ಧರಿಸುವಹಾಗೆ ಮನೋಹರವಾಗಿ ಧರಿಸಿದನು. ಕಾಲಿನಿಂದ ಬರೆದ ನೂತನ ಚಕ್ರದಿಂದಲೇ ಜಲಂಧರನ ಶಿರಸ್ಸನ್ನು ಕತ್ತರಿಸಿ, ದೇವತೆಗಳೆಲ್ಲ ಸ್ತೋತ್ರ ಮಾಡುತ್ತಿರಲು ಆ ರುಂಡವನ್ನು ತನ್ನ ಎದೆಯ ಮೇಲಿರುವ ರುಂಡಮಾಲೆಯಲ್ಲಿ ಧರಿಸಿದನು. ೧೧೫. ದೇವತಾ ಸ್ತ್ರೀಯರುಗಳ ಮುತ್ತೈದೆತನ ಸೂಚಕವಾದ ಮಾಂಗಲ್ಯ

---

1 ರೆ(ಜ, ದ)

ದರಸಂಭೋಜಸಹಸ್ರದಿಂ ಭಜಿಸುತಿರ್ದಂದೊಂದರಲ್ಕುಂದೆ ತ
ನ್ನರುಣನೇತ್ರಾಬ್ಜಮನೀಯೆ ಮೆಚ್ಚಿ ಮೃಡನಿತ್ತಂ ಚಕ್ರಿಗಾ ಚಕ್ರಮಂ ೧೧೫

ವಿಲಸದುಪಮನ್ಯುಮುನಿಯಿಂ
ಜಲಜಾಕ್ಷಂ ದೀಕ್ಷೆವಡೆದು ಹರಿನೀಲಮಯೋ
ಜ್ವಲಲಿಂಗಮನುರದೊಳ್ತಳೆ
ದೊಲವಿಂದಂ ಪೂಜೆಗೆಯ್ವನಾಗಮಮತದಿಂ ೧೧೬

ರಾಮಂ ಘಟಸಂಭವನಿಂ
ಪ್ರೇಮಂ ಮಿಗೆ ದೀಕ್ಷೆವಡೆದು ಶಿವಲಿಂಗಮನಾ
ರಾಮಗಿರಿಯಲ್ಲಿ ಪೂಜಿಸಿ
ಕಾಮಾರಿಯ ಕೆಯ್ಯ ಪಾಶುಪತಮಂ ಪಡೆದಂ ೧೧೭

ಪರಿಪೂರ್ಣನನಘನದ್ವಯ
ನುರುತರಮಹಿಮಾಂಕನಭವನೇ ಪತಿ ಲಕ್ಷ್ಮೀ
ಪರನೆಂದುಂ ಭೃತ್ಯಂ ಭೂ
ಪರ ಭುವನಕೆ ಶಂಭುವಲ್ಲದಾಳ್ವರುಮೊಳರೆ ೧೧೮

ಇಂದುಮೌಳಿಯನೊಲ್ದು ಮನ್ನಿಸದೊಂಟೆಯಾಗಿ ತೊಳಲ್ದನೋ
ರಂದದಿಂದೆ ಸನತ್ಕುಮಾರಕನಜ್ಞಭಾವದೆ ಕಾಶಿಯೊಳ್

ವನ್ನು ಶಾಶ್ವತಗೊಳಿಸುವ ಶಂಕರನ ಪಾದಕಮಲದಿಂದ ಹುಟ್ಟಿದ ಆ ಚಕ್ರವನ್ನು ವಿಷ್ಣುವು ತಾನು ಬೇಡುತ್ತ ಸಾವಿರ ಕಮಲಗಳಿಂದ ಪೂಜೆ ಮಾಡುತ್ತಿದ್ದನು. ಹೀಗೆ ಪೂಜಿಸುವಾಗ ಒಂದು ಹೂವು ಕಡಿಮೆಯಾಗಲು ತನ್ನ ಶ್ರೇಷ್ಠವಾದ ನೇತ್ರವೆಂಬ ಕಮಲವನ್ನೇ (ಈಶ್ವರನ ಪಾದಕ್ಕೆ) ಕೊಡಲು ಶಿವನು ಮೆಚ್ಚಿ ಆ ಚಕ್ರಿಗೆ (ವಿಷ್ಣುವಿಗೆ) ಚಕ್ರವನ್ನು ಕೊಟ್ಟನು. ೧೧೬. ಆಗಮದಲ್ಲಿ ಹೇಳಿರುವ ಪ್ರಕಾರ : ಶ್ರೇಷ್ಠನಾದ ಉಪಮನ್ಯುಮುನಿಯಿಂದ ವಿಷ್ಣುವು ಶಿವದೀಕ್ಷೆಯನ್ನು ಪಡೆದು, ಇಂದ್ರನೀಲಮಣಿಯಿಂದ ಮಾಡಿದ ಪ್ರಕಾಶಿಸುವ ಶಿವಲಿಂಗವನ್ನು ಎದೆಯಮೇಲೆ ಧರಿಸಿ ಒಲವಿನಿಂದ ಪೂಜೆಮಾಡುವನು. ೧೧೭. ಶ್ರೀರಾಮಚಂದ್ರನು ಅಗಸ್ತ್ಯಮಹರ್ಷಿಯಿಂದ ಅಧಿಕ ಸಂತೋಷದಿಂದ ಶಿವದೀಕ್ಷೆಯನ್ನು ಸ್ವೀಕರಿಸಿ, 'ರಾಮಗಿರಿ' ಎಂಬಲ್ಲಿ ಶಿವಲಿಂಗವನ್ನು ಪೂಜಿಸಿ ಪರಮೇಶ್ವರನ ಕೈಯಲ್ಲಿನ ಪಾಶುಪತಾಸ್ತ್ರವನ್ನು ಪಡೆದನು. ೧೧೮. ಹೇಮಹಾರಾಜನೇ, (ಬಿಜ್ಜಳನೇ) ಪರಿಪೂರ್ಣನೂ, ಪಾಪರಹಿತನೂ. ಅದ್ವಯನೂ, ಅತ್ಯಂತ ಶ್ರೇಷ್ಠ ಮಹಿಮಾಶಾಲಿಯೂ ಆದ ಪರಮೇಶ್ವರನೇ ಪತಿ (ಲೋಕಕ್ಕೆಲ್ಲ ಒಡೆಯ) ಲಕ್ಷ್ಮೀಪತಿಯಾದ ವಿಷ್ಣುವು ಯಾವಾಗಲೂ ಭೃತ್ಯನೇ. ಈ ಲೋಕಕ್ಕೆ ಶಂಭುವಲ್ಲದೆ ಬೇರೆ ಪರಮಾತ್ಮನೆಂಬುವನು ಉಂಟೇ ? ೧೧೯. ಪರಮೇಶ್ವರನನ್ನು ಭಕ್ತಿಯಿಂದ ಮನ್ನಿಸದೆ ಒಂಟಿಯಾಗಿ ಏಕಪ್ರಕಾರವಾಗಿ ಸನತ್ಕುಮಾರನು ತೊಳಲಿದನು. ಕಾಶೀ

ಕುಂದದಚ್ಯುತನೇ ಜಗತ್ಪತಿಯೆಂದು ಬಾಹುವನೆತ್ತುತುಂ
ನಂದಿಯಿಂದಲೆ ಬಾದರಾಯಣನಂದು ತೋಳ್ಗಳ ನೀಗಿದಂ ೧೧೯

ಆ ಮುನಿವರರುಂ ತಿಳಿಯರು
ಮಾಮಾನಿನಿಯರಸನಧಿಕ ಮಹಿಮೆಯುಮನೆನೆ ಹೋ
ಭೂಮಿಯೊಳೊಗೆದಡಗುವ ಮಾ
ಯಾಮಯ ವಿಭ್ರಾಂತಚಿತ್ತರೇನಱಿದಪರೇ ೧೨೦

ಎಣಿಸಲ್ಕೆ ಗೋಚರಮೆ ಕಾ
ರಣಾಧಿಪತಿಗಳ್ಗೆ ಕಾರಣನ ಫಣಿರಾಡ್ಭೂ
ಷಣನ ಘನಮಹಿಮೆಯುಂ ಗುಣ
ಗಣಮುಂ ಪ್ರಥಿತಪ್ರತಾಪಮುಂ ಪೌರುಷಮುಂ ೧೨೧

ವ॥ ಅಭವನನನ್ಯಸಾಮಾನ್ಯಗುಣಗಣಂಗಳಂ ಪೇಳ್ವೊಡಾರ್ಗಮಜಕಲ್ಪಮುಂ ತೀರದದಂತಿರ್ಕೆ ಶಿವನಂಘ್ರಿಯಂ ಭಜಿಸಿ ಭಾವಿಸಿ ಪೂಜಿಸಿ ನಮಿಸಿ ನುತಿಯಿಸಿ ಮೆಚ್ಚಿಸಿ ನಿಜೇಷ್ಟ [1]ಸಿದ್ಧಿಯಂ[1] ಪಡೆದರೊಳರದೆಂತೆನೆ—

ಪಟ್ಟಣದಲ್ಲಿ (ವಿಶ್ವೇಶ್ವರನ ಮುಂದೆ) ಬಾದರಾಯಣನು ಕುಂದಿಲ್ಲದಂತೆ ವಿಷ್ಣುವೇ ಜಗತ್ತಿಗೆಲ್ಲ ಒಡೆಯನೆನ್ನುತ್ತ ತನ್ನ ತೋಳುಗಳನ್ನು ಮೇಲಕ್ಕೆತ್ತಲು ನಂದೀಶ್ವರನಿಂದ ತನ್ನ ತೋಳುಗಳನ್ನು ನೀಗಿದನು (ಕತ್ತರಿಸಿಕೊಂಡನು) ೧೨೦. (ವೇದವ್ಯಾಸನಂತಹ) ಆ ಮುನೀಶ್ವರರೂ ಕೂಡ ಉಮಾಪತಿಯಾದ ಶಿವನ ಅಧಿಕವಾದ ಮಹಿಮೆಯನ್ನು ತಿಳಿಯುವುದಿಲ್ಲವೆನ್ನುವಾಗ ಓಹೋ ! ಈ ಭೂಮಿಯಲ್ಲಿ ಹುಟ್ಟಿ ಸಾಯುವ ಮಾಯೆಯಿಂದ ವಿಶೇಷ ಭ್ರಾಂತರಾದ ಮನಸ್ಸಿನವರು ಏನು ತಿಳಿದಾರು ! ೧೨೧. ದೇವತೆಗಳ ಮೂಲಕಾರಣಗಳಿಗೆ ಕಾರಣ ಪುರುಷನಾದ ಉರಗಪತಿಯನ್ನೇ ಭೂಷಣವಾಗಿ ಉಳ್ಳ ಪರಶಿವನ ಶ್ರೇಷ್ಠವಾದ ಮಹಿಮೆಯೂ, ಸದ್ಗುಣ ಸಮೂಹವೂ, ಪ್ರಸಿದ್ಧವಾದ ಪ್ರತಾಪ (ಶೌರ್ಯ)ವೂ, ಪೌರುಷವೂ ಎಣಿಸಲಿಕ್ಕೆ ಗೋಚರವಾದೀತೇ ? ವ॥ ಪರಮೇಶ್ವರನ ಅನ್ಯರಲ್ಲಿಲ್ಲದ ಅಸಾಧಾರಣ ಗುಣಗಳ ಸಮೂಹವನ್ನು ಹೇಳುವುದಕ್ಕೆ ಅಜಕಲ್ಪಕಾಲಾವಧಿ (ಬ್ರಹ್ಮನ ಜೀವಿತಾವಧಿಯ ಕಾಲಾವಧಿಯೂ) ಕೂಡ ತೀರದು ಅದೊತ್ತಟ್ಟಿಗಿರಲಿ. ಶಿವನಪಾದಗಳನ್ನು ಭಜಿಸಿ ಮನದಲ್ಲಿ ಭಾವಿಸಿ, ಪೂಜಿಸಿ, ನಮಸ್ಕರಿಸಿ. ಸ್ತೋತ್ರಮಾಡಿ, ಮೆಚ್ಚಿಸಿ, ತಮ್ಮ ಇಷ್ಟಾರ್ಥ ಸಿದ್ಧಿಯನ್ನು ಪಡೆದವರು ಉಂಟು, ಅದು ಹೇಗೆಂದರೆ—

1 ಯಂ(ಯು)

ಕರಮುರಿದಿತ್ತು ಬಾಣಕವಿ ಪೂಜಿಸಿ ಕೀರ್ತಿಸಿ ಶಂಭುವಿಂದೆ ತ
ನ್ನೆರಡು ಕರಂಗಳಂ ಪಡೆದನಂದಹಿಮದ್ಯುತಿಯಿಂದೆ ಪೋಗದಾಂ
ತರ ನಿಜಕುಷ್ಠಮಂ ಪಱಿದನೀಶ್ವರನಂ ಪೊಗಳ್ದಲ್ಲಿ ಸಾರವಾ
ಗ್ವಿರಚನೆಯಂ ಮಯೂರನಭವಂಗೆ ಸಮರ್ಪಿಸಿ ತನ್ನ ಕಣ್ಗಳಂ ೧೨೨

ವಿಳಸಿತ ಕಾಳಿದಾಸಕವಿ ಮೆಲ್ನುಡಿಯಿಂ ನುತಿಗೆಯ್ದು ದಿವ್ಯಮಂ
ಜುಳನಯನಂಗಳಂ ಪಡೆದನಕ್ಷಿಗಳಂ ಶಿವನಾಗದೇವನು
ಜ್ವಳಮತಿ ಸೋಮವಾರದೊಳೆ ತಾಂ ಕಳೆದರ್ಚಿಸಿ ಶಂಕರಂಗೆ ನಿ
ರ್ಮಳ ನಿಜನೇತ್ರಮಂ ಪರಮನಿಂ ಪಡೆದೊಪ್ಪಿರೆ ತಾಳ್ದನುರ್ವಿಯೊಳ್ ೧೨೩

ಹರಿಯಿಂ ಪೋಗದ ಕುಷ್ಠ ದುಷ್ಟಗದಮಂ ಕಂಡಳ್ಕುತುಂ ದಂಡಿ ಶಂ
ಕರನಂ ತಾಂ ಮಱೆವೊಕ್ಕು ಕೀರ್ತಿಸುತದಂ ಪೋಗಾಡಿದಂ ಮಲ್ಹಣಂ
ಸರಸಾಲಾಪದಿನೊಲ್ದು ಬಣ್ಣಿಸೆ ಭವಾನೀವಲ್ಲಭಂ ಪಾರಸೌಂ
ದರಿಯಂ ಮುಕ್ತಿವಧೂಟಿಗೂಡಿ ಪದೆದಿತ್ತಂ ತಾನವಂಗಳ್ಕಱಿಂ ೧೨೪

ಪುರರಿಪು ಸಾಮವೇದಿಯು ಪೊಳಲ್ವೆರಸೊಯ್ಯನೆ ತನ್ನ ಲೋಕಕ
ಚ್ಚರಿಯೆನೆ ಘಂಟೆಗೂಡಿ ಮಿಸುಪೋಹಿಲನಂ ರಜತಾಚಲಕ್ಕೆ ಬಿ
ತ್ತರದೊಳೆ ಕೊಂಡುಪೋಗನೆ ಗುಹಾಪರಮೂರ್ತಿಯನಂಗವೊಂದುಗೂ
ಡಿರೆ ಶಿವಲಿಂಗದೊಳ್ಪುಗಿಸನೇ ಧರೆಯೊಳ್ಕರಿಕಾಲಚೋಳನಂ ೧೨೫

೧೨೨-೧೨೩. ಅಂದು ಬಾಣಕವಿಯು ತನ್ನ ಎರಡೂ ಕೈಗಳನ್ನು ಕತ್ತರಿಸಿಕೊಂಡು ಪೂಜಿಸಿ, ಸ್ತೋತ್ರಮಾಡಿ, ಶಂಭುವಿನಿಂದ ಆ ಕೈಗಳನ್ನು ಪಡೆದನು. ಮಯೂರ ಕವಿಯು ಸೂರ್ಯನಿಂದ ಪರಿಹಾರವಾಗದ ತನ್ನ ದೇಹದೊಳಗಿದ್ದ ಕುಷ್ಟರೋಗವನ್ನು ಈಶ್ವರನನ್ನು ಸಾರವತ್ತಾದ ಕವಿತಾ ರಚನೆ ಮಾಡಿ ಹೊಗಳಿ ಆ ಶಿವನಿಗೆ ಅರ್ಪಿಸಿ ಪರಿಹರಿಸಿಕೊಂಡನು. ಶ್ರೇಷ್ಠ ಕವಿಯಾದ ಕಾಳಿದಾಸನು ಪರಮೇಶ್ವರನಿಗೆ ತನ್ನ ಎರಡೂ ಕಣ್ಣುಗಳನ್ನು ಸಮರ್ಪಣೆಮಾಡಿ, ಅವನನ್ನು ಮೃದುವಾದ ಮಾತುಗಳಿಂದ ಸ್ತೋತ್ರಮಾಡಿ (ಕವಿತೆಯನ್ನು ಹಾಡಿ), ಮನೋಹರವಾದ ನೇತ್ರಗಳನ್ನು ಪಡೆದನು. ಉಜ್ವಲವಾದ ಬುದ್ಧಿಯುಳ್ಳ ಶಿವನಾಗದೇವನೆಂಬುವನು (ಒಂದು) ಸೋಮವಾರದ ದಿನ ತನ್ನ ಕಣ್ಣುಗಳನ್ನು ಕಿತ್ತು ಶಂಕರನಿಗೆ ಇತ್ತು ಅರ್ಚನೆಮಾಡಿ, ಆ ಪರಮನಿಂದಲೇ ನಿರ್ಮಲವಾದ ತನ್ನ ನೇತ್ರಗಳನ್ನು ಈ ಲೋಕದಲ್ಲಿ ಶೋಭಿಸುವಂತೆ ಪಡೆದು ಶೋಭಿಸುತ್ತಿದ್ದನು. ೧೨೪. ದಂಡಿಯು ಹರಿಯಿಂದಲೂ ಹೋಗದ ತನ್ನ ಕ್ರೂರವಾದ ಕುಷ್ಠರೋಗವನ್ನು ಕಂಡು ಭಯಗೊಂಡು ಶಂಕರನನ್ನು ಮರೆಹೊಕ್ಕು ಅವನನ್ನು ಸ್ತೋತ್ರ ಮಾಡಿ ಆ ರೋಗವನ್ನು ಹೋಗಲಾಡಿಸಿಕೊಂಡನು. ಮಲ್ಹಣ (ಮಲು ಹಣ) ರಸಭರಿತವಾದ ಮಾತುಗಳಿಂದ ಪಾರ್ವತಿವಲ್ಲಭನನ್ನು ತನ್ನ ವೇಶ್ಯೆ ಸಮೇತವಾಗಿ ವರ್ಣಿಸಲಾಗಿ, ಶಿವನು ಅವನ ವರ್ಣನೆಗೆ ಮೆಚ್ಚಿ ಸಂತೋಷದಿಂದ ಮುಕ್ತಿಯೆಂಬ ಸ್ತ್ರೀಯನ್ನಿತ್ತನು. (ಮುಕ್ತಿಯನ್ನು ದಯಪಾಲಿಸಿದನು.) ೧೨೫-೧೨೬. ಪರ

ವಿಳಸದ್ಭಕ್ತಿಗೆ ಕೊರ್ತು ಸಪ್ತದಿನಪರ್ಯಂತಂ ನೆಲಂದೀವಿ ಪೊ
ನ್ಮಳೆಯಂ ಪೂಮಳೆಗೂಡಿ ತಾಂ ಕಱೆ[3]ಯಿಸುತ್ತಾನಂದಮಂ ಬೀಱನೇ
ಕಳೆವೆತ್ತೊಪ್ಪುವ ಯೌವನಸ್ಥಿತಿಯನಾ ಶ್ರೀನೀಲಕಂಠಂಗವಂ
ಜ್ವಳ ತದ್ಭಾರ್ಯೆಗವೀವುತುನ್ನತ ರತಿಶ್ರೀಭೋಗಮಂ ಸಾರ್ಚನೇ ೧೨೬

ನಲಿದು ತೆಲುಂಗಜೊಮ್ಮನ ಶರಾಹತಿಯಿಂ ಮೃತಿವೆತ್ತ ಭಲ್ಲಸಂ
ಕುಲಮು[1]ನಗೇಂದ್ರಕೊ[1]ಯ್ಯನೆ ನಿಜೋನ್ನತವಿಷ್ಟರವೀಯನೇ ಮಹಾ
ಬಲಯುತ ಚೇ[2]ರಮಂಗೆ ನಿಜಲೋಕವ ನಿಂಬಿಗೆ ಸೂಱೆ[3]ಗೊಟ್ಟು ನಿ
ಶ್ಚಲಸುಖಮಿತ್ತು ಮನ್ನಿಸನೆ ದಾನಗುಣಾರ್ಣವನದ್ರಿಜಾಧವಂ ೧೨೭

ಅಕ್ಷಯನಿಧಿಯಂ ತಾನೊ
ಲ್ದಾಕ್ಷಣದೊಳ್ಕುಡನೆ ದಾಸದೇವಂಗೆ ಮೃಡಂ
ರಕ್ಷಿಸನೆ ಕದಿರರೇಮನ
ಮಕ್ಷದೊಳಳಿದಿರ್ದ ಸಪ್ತದಿವಸದ ಪೆಣನಂ ೧೨೮

ಮೇಶ್ವರನು ಸಾಮವೇದಿಯನ್ನು ಅವನ ಪಟ್ಟಣ ಸಮೇತವಾಗಿ ತನ್ನ ಲೋಕಕ್ಕೆ ಕರೆದೊಯ್ಯಲಿಲ್ಲವೇ ? ಆಶ್ಚರ್ಯವೆನ್ನುವಂತೆ ಶೋಭಿಸುತ್ತಿದ್ದ ಓಹಿಲಯ್ಯನನ್ನು ಅವನ ಗಂಟೆ ಸಮೇತವಾಗಿ ಕೈಲಾಸಪರ್ವತಕ್ಕೆ ವಿಸ್ತಾರವಾಗಿ ಕರೆದುಕೊಂಡು ಹೋಗಲಿಲ್ಲವೇ? ಕತ್ತರಿಸಿಹೋದ ಅಂಗಗಳನ್ನೆಲ್ಲ ಒಂದು ಗೂಡಿಸಿ ಗುಹಾಪರಮೂರ್ತಿಯನ್ನು ಶಿವಲಿಂಗ ದಲ್ಲಿ ಐಕ್ಯಗೊಳಿಸಲಿಲ್ಲವೇ ? ಭೂಮಂಡಲದಲ್ಲಿ ಕರಿಕಾಲ ಚೋಳಮಹಾರಾಜನ ಪ್ರಕಾಶ ಮಾನವಾದ ಭಕ್ತಿಗೆ ಮೆಚ್ಚಿ ಭೂಮಿಯೆಲ್ಲ ತುಂಬುವಂತೆ ಹೊನ್ನಿನ ಮಳೆಯನ್ನು ಹೂ ಮಳೆಯೊಡನೆ ಸುರಿಸುತ್ತ ಆನಂದವನ್ನುಂಟುಮಾಡಲಿಲ್ಲವೇ ? ತಿರುನೀಲಕಂಠನಿಗೂ ಅವನ ಹೆಂಡತಿಯಾದ ಮುತ್ತೈದೆಗೂ ಕಳಾವಿಶಿಷ್ಟರಾಗಿ ಶೋಭಿಸುವ ತಾರುಣ್ಯವನ್ನು ದಯಪಾಲಿಸಿ ಶ್ರೇಷ್ಠವಾದ ಭೋಗ ಸಂಪತ್ತನ್ನು ಉಂಟುಮಾಡಲಿಲ್ಲವೇ ? ೧೨೭.
ದಾನಗುಣದಲ್ಲಿ ಸಮುದ್ರದೋಪಾದಿಯಲ್ಲಿರುವ ಗಿರಿಜಾಪತಿಯು ಪ್ರೀತಿಯಿಂದ ತೆಲುಗು ಜೊಮ್ಮಯ್ಯನ ಬಾಣದ ಹೊಡೆತದಿಂದ ಸತ್ತುಹೋದ ಕರಡಿಗಳ ಸಮೂಹವನ್ನು ಕೈಲಾಸಗಿರಿಗೆ ಒಯ್ಯಲಿಲ್ಲವೇ ? ಮಹಾಬಲವಂತನಾದ ಚೇರಮನಿಗೆ ತನ್ನ ಶ್ರೇಷ್ಠ ವಾದ ಪೀಠ (ಸಿಂಹ ಪೀಠ) ವನ್ನು ಕೊಡಲಿಲ್ಲವೇ ? ನಿಂಬಿಯಕ್ಕನಿಗೆ ತನ್ನ ಲೋಕವನ್ನೇ ಸೂರೆಗೊಟ್ಟು ಶಾಶ್ವತ ಸುಖವಿತ್ತು ಮನ್ನಣೆಗೊಳಿಸಲಿಲ್ಲವೇ ? ೧೨೮.
ದೇವರ ದಾಸಿಮಯ್ಯನಿಗೆ ಶಿವನು ಒಲಿದು ಆ ಕ್ಷಣವೇ ಅಕ್ಷಯನಿಧಿಯನ್ನು ಕೊಡ ಲಿಲ್ಲವೇ ? ಕದಿರ ರೇಮಯ್ಯನ ಎದುರಿನಲ್ಲಿಯೇ ಸತ್ತು ಹೋಗಿದ್ದ ಏಳು ದಿನದ ಹೆಣ

---

1 ನಿಜಾದ್ರಿಗೊ(ಜ , ಮು) 2 ಚಾ(ಮು, ಚ)

ಮಲಯೋರ್ವೀನಾಥನಂ ಪುಷ್ಪಕದೊಳಿರಿಸಿ ಕೊಂಡೊಯ್ಯನೇ ಮುಕ್ತಿಯಂ ಗ
ಲ್ಗಲನಾ ಪೆರ್ಮಾಡಿಗೊಲ್ದೀಯನೆ ಗಣಪದಮಂ ಸಾರ್ಚನೇ ಶಂಕರಯ್ಯಂ
ಗಲಘು ಸ್ವಾತಂತ್ರ್ಯದಿಂ ಗೂರ್ಜರವಿಭು ನಿಜಸೇನಾನ್ವಿತಂ ಪೋಗನೇ ನಿ
ಶ್ಚಲಗಾಣಾಪತ್ಯಕಾ ಷೋಡಶರ ಬಗೆಗೆ ತಾಂ ಮುಚ್ಚನೇ ಬ್ರಹ್ಮನಾಥಂ ೧೨೯

ವೀರತೇರಸರುಗ್ರಶೌರ್ಯಕೆ ಮುಚ್ಚಿ ಮನ್ನಿಸನೇ ಮನೋ
ಜಾರಿ ಬೇಂಟೆಯ ಕಜ್ಜದುಜ್ಜುಗಕೊಲ್ದು ಜಾಗರವಿರ್ದ ಕಾಂ
ತಾರಚಾರಿಗೆ ಶೈವರಾತ್ರಿಯ ಸತ್ಫಲಂಗುಡುತೋವಿ ತ
ನ್ನೂರನೆಯ್ದಿಸನೇ ಮಹೇಶ್ವರನಂತೆ ದಾನಿಯದಾವನೋ ೧೩೦

ಹರನಿಂತುಟಿತ್ತ ವರಮುಮ
ನಿರದೀ ಪರಿಯಿಂದೆ ಶಿವನ ಮುಚ್ಚಿಸಿ ಸಂದಾ
ದ್ಯರ ಬಹುವಿಧ ಚರಿತಮುಮಂ
ಧರಣಿಯೊಳಿನಿತೆಂದು ಬಗೆದು ಬಣ್ಣಿಪರೊಳರೇ ೧೩೧

ಈಗಳುಮಿಲ್ಲಿ ಭಾಳನಯನಪ್ರತಿಮಾನನೆನಿಪ್ಪ ಶೈವವಿ
ದ್ಯಾಗುರು ಮಾಚಿದೇವವಿಭು ಕಿನ್ನರನಾಯಕ ಮುಖ್ಯ ಸಾರತೇ
ಜೋಗರಿಮಾಂಕ ಭಕ್ತತತಿಗಿಪ್ಪಮನಿತ್ತಪನಲ್ತೆ ದಾನಲೀ
ಲಾಗುಣಶಾಲಿ ಕಿಂಕರಸುಖಂಕರನೆಮ್ಮಯ ದಿವ್ಯ ಶಂಕರಂ ೧೩೨

ವನ್ನು ರಕ್ಷಿಸಲಿಲ್ಲವೇ ? ೧೨೯–೧೩೦. ಬ್ರಹ್ಮನಾಥಶಿವನು ಮಲಯರಾಜನನ್ನು ತನ್ನ ಪುಷ್ಪಕದಲ್ಲಿ ಕುಳ್ಳಿರಿಸಿಕೊಂಡು ಹೋಗಲಿಲ್ಲವೇ ? ಪೆರ್ಮಾಡಿಗೆ ಒಲಿದು ಬೇಗನೆ ಮುಕ್ತಿಯನ್ನು ಉಂಟು ಮಾಡಲಿಲ್ಲವೇ ? ಪಾಲಗುರ್ಜರ ಮಹಾರಾಜನು ತನ್ನ ಸೇನೆ ಸಮೇತವಾಗಿ ಶಾಶ್ವತವಾದ ಶಿವಗಣಾಧಿಪತ್ಯಕ್ಕೆ ಹೋಗಲಿಲ್ಲವೇ? ಷೋಡಶ (ಹದಿನಾರು ಜನ ಶಿವಭಕ್ತರ) ಭಕ್ತಿಗೆ ಮೆಚ್ಚಲಿಲ್ಲವೇ ? ಮನ್ಮಥದಾರಿಯಾದ ಶಿವನು ವೀರರಾದ ತೇರಸರು (ಹದಿಮೂರು ಜನ ವೀರ ಶಿವಭಕ್ತರು) ಗಳ ಉಗ್ರವಾದ ಶೌರ್ಯಕ್ಕೆ ಮೆಚ್ಚಿ ಮನ್ನಣೆ ಮಾಡಲಿಲ್ಲವೇ ? ಬೇಟೆಯಾಡುವ ಉದ್ಯೋಗಕ್ಕೆ ಒಲಿದು ಅದನ್ನಾಚರಿಸುತ್ತ ರಾತ್ರಿಯೆಲ್ಲ ಜಾಗರಣೆ ಮಾಡಿದ ಬೇಡನಿಗೆ (ಕಾಂತಾರಚಾರಿಗೆ) ಶಿವರಾತ್ರಿಯ ಪುಣ್ಯಫಲವನ್ನು ಕೊಡುತ್ತ ಪ್ರೀತಿಯಿಂದ ಕೈಲಾಸಕ್ಕೆ ಕರೆದೊಯ್ಯಲಿಲ್ಲವೇ ? ಪರಮೇಶ್ವರನ ಹಾಗೆ ದಾನಿಯು ಯಾವನಿರುವನೋ ! ೧೩೧. ಶಿವನು ಈ ರೀತಿ ಕೊಟ್ಟವರಗಳನ್ನೂ, ಈ ರೀತಿ ಶಿವನನ್ನು ಮೆಚ್ಚಿಸಿ ಮುಕ್ತಿಯನ್ನು ಪಡೆದ (ಕೈಲಾಸಕ್ಕೆ ಹೋದ) ಪುರಾತನರ ಅನೇಕ ಪ್ರಕಾರದ ಚರಿತ್ರೆಗಳನ್ನೂ ಲೋಕದಲ್ಲಿ ಇಷ್ಟೇ ಎಂದು ಯೋಚಿಸಿ ವರ್ಣಿಸುವವರೂ ಉಂಟೆ ? ೧೩೨. ದಾನ ಮಾಡುವ ಲೀಲೆಯೇ ಗುಣವಾಗಿ ಉಳ್ಳವನೂ, ತನ್ನ ಸೇವೆಯನ್ನು ಮಾಡುವವರಿಗೆ ಸುಖವನ್ನುಂಟುಮಾಡುವವನೂ ಆದ ನಮ್ಮ ಪವಿತ್ರ (ಶ್ರೇಷ್ಠ) ಶಂಕರನು ಈ ಕಲ್ಯಾಣನಗರದಲ್ಲಿ ಈಗಲೂ ಕೂಡ ಪರಮೇಶ್ವರ ಸದೃಶರಾದ ವೀರಶೈವ ತತ್ತ್ವ ವಿದ್ಯೆಯನ್ನು ಬೋಧಿಸುವಂತಹ ಮಡಿವಾಳ ಮಾಚದೇವವಿಭು, ಕಿನ್ನರಿಯ ಬೊಮ್ಮಯ್ಯ ಪ್ರಭುವೇ ಮುಖ್ಯರಾದ ಸಾರಭೂತವಾದ ವೀರಶೈವ ತೇಜಸ್ಸಿನ ಮಹತ್ವವೇ ಚಿಹ್ನೆಯಾಗುಳ್ಳ ಶಿವಭಕ್ತ ಸಮೂಹಕ್ಕೆ

ವ॥ ಎಂದಿಂತು ನಿಗಮಾಗಮಪುರಾಣವಾಣಿಗಳಿಂ ಸಹಜಸಿದ್ಧಶಿವಾಧಿಕ್ಯಮಂ ಬಿಚ್ಚಳಿಸುತ್ತು ಈದುಕಾರಣಮೆಮ್ಮ ಶಿವಂಗೆ ಸದೃಶರೊಳರೆಂಬ ಪುಸಿ[1]ನುಡಿಗಳುಮಂ ಸರ್ವಮುಂ ಬ್ರಹ್ಮಮೆಂಬದ್ವೈತವಾದಮುಮಂ ಯಥಾ ಶಿವಮಯೋ ವಿಷ್ಣುಸ್ತಥಾ ವಿಷ್ಣುಮಯಃ ಶಿವಯೆಂಬ ಖಿಲವಾಕ್ಯದಿಂ ತ್ರಿಮೂರ್ತಿಗಳ್ಗಭೇದಮನುಸುರ್ದ ದುರುಕ್ತಿಗಳುಮನಷ್ಟಮೂರ್ತಿಗಳೆಲ್ಲಂ ಶಿವನಪ್ಪುವೆಂಬ ಕಾಳ್ಮಾತುಗಳುಮಂ ಶಿವಭಕ್ತರ್ಗೆ ಭವಿನರರ್ಸಮಾನರೆಂದು ಗಳಪುವಸಂಬದ್ಧಾಲಾಪಂಗಳುಮಂ ಬಗೆದಂದು ಕೇಳ್ದವರ್ಗೆ ದುರ್ಗತಿಯುಕ್ಕುಮೆಂದು ಭಾಸ್ಕರದೇವನುದ್ಘೋಷಿಸಿ —

ಧರಣಿಪ ನೀನಿಂದೆಮ್ಮಂ
ಬರಿಸಿದೆ ಕಡುಗಜ್ಜಮಾವುದದನೊರೆ ಮಾಳ್ಪೆಂ
ಪುರಹರನಲ್ಲದ ದೇವಾಂ
ತರಮಂ ನಡೆ ನೋಳ್ಪುದೆಮಗೆ ಸಲ್ಲದು ನಿಜದಿಂ ೧೩೩

ವ॥ ಅಂತಾದೊಡಂ ನೋಡಲ್ವೇಳ್ಕುಮೆಂಬೆಯಪ್ಪೊಡೆ ನಿನ್ನಾದೇಶಂ ಬಿಡಿದು ನೋಳ್ಪೆನೆಂದಣಕಂ ಮಿಗೆ ನಿಂದು ಕಟಾಕ್ಷದಿನುತ್ಕಟಿಸಿ ನೋಡಲೊಡನೆ—

ಅವರವರ ಇಷ್ಟಾರ್ಥಗಳನ್ನು ಕೊಟ್ಟನಲ್ಲವೇ ! ವ॥ ಈ ರೀತಿಯಲ್ಲಿ ವೇದ, ಆಗಮ, ಪುರಾಣದ ಮಾತುಗಳ ಆಧಾರದಿಂದ ಸ್ವಭಾವ ಸಿದ್ಧವಾದ ಶಿವನ ಶ್ರೇಷ್ಠತೆಯನ್ನು (ಆಧಿಕ್ಯವನ್ನು) ವಿವರಿಸುತ್ತ, ಈ ಈ ಕಾರಣದಿಂದ ಶಿವನಿಗೆ ಸಮಾನರಾದವರು ಇದ್ದಾರೆ ಎನ್ನುವ ಸುಳ್ಳು ನುಡಿಗಳನ್ನೂ, ಸರ್ವವೂ ಬ್ರಹ್ಮವೆಂಬ ಅದ್ವೈತವಾದವನ್ನೂ, 'ಯಥಾ ಶಿವಮಯೋ ವಿಷ್ಣುಸ್ತಥಾ ವಿಷ್ಣುಮಯಃ ಶಿವಃ' (ಹೇಗೆ ಹರಿಯೂ ಶಿವಸ್ವರೂಪನೋ ಹಾಗೆಯೇ ಶಿವನೂ ವಿಷ್ಣುಸ್ವರೂಪನು) ಎಂದೆನ್ನುವ ಜೊಳ್ಳು ಮಾತಿನಿಂದ ತ್ರಿಮೂರ್ತಿಗಳಿಗೆ ಅಭೇದವನ್ನು ಹೇಳುತ್ತಿರುವ ಕೆಟ್ಟಮಾತುಗಳನ್ನೂ ಪೃಥ್ವಿಯೇ ಮೊದಲಾದ ಅಷ್ಟಮೂರ್ತಿಗಳೆಲ್ಲ ಶಿವನೇ ಆಗುತ್ತವೆಂಬ ಕಾಡುಮಾತುಗಳನ್ನೂ ಶಿವಭಕ್ತರಿಗೆ ಭವಿನರರು ಸಮಾನರೆಂದು ವ್ಯರ್ಥವಾಗಿ ಮಾತನಾಡುವ ಅಸಂಬದ್ಧ ಮಾತುಗಳನ್ನೂ ಮನಸಿಟ್ಟುಕೊಳ್ಳುವವರಿಗೆ ದುರ್ಗತಿಯುಂಟಾಗುತ್ತದೆಂದು ಸೊಡ್ಡಳ ಬಾಚರಸದೇವನು ಉತ್ತರಸ್ಪರ್ಶದಿಂದ ಕೂಗಿ ತಿಳಿಸಿ (ಘೋಷಣೆ ಮಾಡಿ) ೧೩೩. ಬಿಜ್ಜಳ ಭೂಮಿಪಾಲನೇ, ನೀನು ಈ ದಿನ ನಮ್ಮನ್ನು ಕರೆಸಿದೆ. ಶ್ರೇಷ್ಠಕಾರ್ಯವಾವುದೋ ಅಂಥದನ್ನು ಹೇಳು ಮಾಡುತ್ತೇನೆ. ಪರಮೇಶ್ವರನಲ್ಲದೆ ಅನ್ಯ ದೈವವನ್ನು ನೋಡುವುದು ನನ್ನ ವ್ರತಕ್ಕೆ ನಿಜವಾಗಿಯೂ ಸಲ್ಲತಕ್ಕದ್ದಲ್ಲ. ವ॥ ಹೀಗಿದ್ದರೂ ನೋಡಲೇಬೇಕು ಎನ್ನುವುದಾದರೆ, ನಿನ್ನ ಆಜ್ಞೆಯಂತೆ ನೋಡುವೆನು ! (ಅಷ್ಟೆ !) ಎಂದು ವಿಶೇಷ ಪರಿಹಾಸದಿಂದ ಆ ವಿಷ್ಣುಪ್ರತಿಮೆ

---

1 + ಯ(ಜ,ಜ)

ಸಿಡಿದೊಡೆದು ಸೀಳ್ದು ಪೊಡವಿಯೊ
ಳಡೆಗೆಡೆದುದು ಜಡಜಲೋಚನಪ್ರತಿಮೆ ನೃಪಂ
ಬಿಡದದನೀಕ್ಷಿಸುತೆ ಭಯಂ
ಬಡೆದಂ ವಾದಿಗಳುಮಳ್ಕಿ ತಲೆವಾಗಿರ್ದರ್ ೧೩೪

ವ॥ ಅನಂತರಮರಸನಾ ಘನಮಹಿಮನ ಮಹಿಮೆಯಂ ಪೊಗಳ್ದೋಲಗಮಂ ವಿಸರ್ಜಿಸಿ ನಿಜಾಲಯಕ್ಕೆ ತಳರ್ದನಾ ಪ್ರಸ್ತಾವದೊಳ್—

ವಿತತಾನಂದಾಂತರಂಗಂ ವಿಮಳಮತಿ ಮಹಾಭಕ್ತಿಯಿಂ ಭಕ್ತವೃಂದಾ
ವೃತನಾಗಳ್ ಭಾಸ್ಕರಾರ್ಯಂಗೆಱಗಿ ಪೊಗಳ್ದು ತನ್ಮಂದಿರಕ್ಕೊಲ್ದು ಬೀಳ್ಕೊ
ಟ್ಟತುಳೋತ್ಸಾಹಪ್ರಭಾವಂ ಪಸರಿಸೆ ಮಿಗೆ ಕೊಂಡಾಡುತುಂ ತನ್ಮಹತ್ವ
ಸ್ಥಿತಿಯಂ ತಾಂ ಬಂದು ಪೊಕ್ಕಂ ನಿಜಗೃಹಮನುಮಾಕಾಂತಹೃತ್ಪದ್ಮಸದ್ಮಂ ೧೩೫

ಗುಣನಿಧಿ ಭಾಸ್ಕರಚರಿತಮ
ನಣಿಯರಮಿಂದನಾವನೋದುಮಂ ಕೇಳ್ವನವಂ
ಪ್ರಣುತ ಸುಖಭೋಗಸಂಪದ
ಗಣಪದಮಂ ಪಡೆವನಭವಭಕ್ತರ ಕೃಪೆಯಿಂ ೧೩೬

ಯನ್ನು ತನ್ನ ಕಡೆಗಣ್ಣುಗಳ ತೀಕ್ಷ್ಣತೆಯಿಂದ ನೋಡಿದ ಕೂಡಲೇ ೧೩೪. ಆ ಕಮಲ ನೇತ್ರನಾದ ವಿಷ್ಣುವಿನ ಪ್ರತಿಮೆಯು ಸಿಡಿದು ಒಡೆದು ಸೀಳು ಬಿಟ್ಟು, ಭೂಮಿಯ ಮೇಲೆ ಬಿದ್ದಿತು, ಬಿಜ್ಜಳ ಮಹಾರಾಜನು ಹಾಗೆ ಬಿದ್ದ ಪ್ರತಿಮೆಯನ್ನು ನೋಡಿ, ಭಯಗೊಂಡನು. ಪ್ರತಿವಾದಿಗಳು ತಲೆ ತಗ್ಗಿಸಿದರು. ವ॥ ಅನಂತರ ಬಿಜ್ಜಳ ಭೂಪಾಲನು ಘನಮಹಿಮಾ ಶಾಲಿಯಾದ ಸೊಡ್ಡಳ ಬಾಚರಸನ ಮಹಿಮೆಯನ್ನು ಹೊಗಳಿ ಓಲಗವನ್ನು ಮುಕ್ತಾಯಗೊಳಿಸಿ, ತನ್ನ ಅಂತಃಪುರಕ್ಕೆ ಹೋದನು. ಆ ಸಮಯದಲ್ಲಿ ೧೩೫. ವಿಶೇಷವಾದ (ವಿಸ್ತಾರವಾದ) ಆನಂದದಿಂದ ಕೂಡಿದ ಹೃದಯವುಳ್ಳವನೂ, ಪರಿಶುದ್ಧ ಅಂತಃಕರಣವುಳ್ಳವನೂ, ಆದ ಬಸವೇಶ್ವರನು ಅತ್ಯಂತ ಭಕ್ತಿಯಿಂದ ಸಮಸ್ತ ಭಕ್ತವೃಂದದೊಡನೆ ಕೂಡಿ, ಆಗ ಸೊಡ್ಡಳ ಬಾಚರಸರಿಗೆ ನಮಸ್ಕಾರಮಾಡಿ, ಹೊಗಳಿ, ಅವರ ಮನೆಗೆ ಅವರನ್ನು ಕಳುಹಿಸಿಕೊಟ್ಟು ಅಸದೃಶವಾದ ಸಂತೋಷಾಧಿಕ್ಯದ ತೇಜಸ್ಸು ವ್ಯಾಪಕವಾಗುವಂತೆ ಆತನ ಮಹತ್ವದ ರೀತಿಯನ್ನು ಕೊಂಡಾಡುತ್ತ, ಉಮಾಪತಿ ಯಾದ ಪರಮೇಶ್ವರನ ಹೃದಯ ಕಮಲದಲ್ಲಿ ವಾಸಿಸುವಂತಹ ಅವನು ಬಂದು ತನ್ನ ಮನೆಯನ್ನು ಸೇರಿದನು. ೧೩೬. ಸದ್ಗುಣಗಳ ನಿಧಿಯಾದ ಬಾಚರಸದೇವನ ಚರಿತ್ರೆ ಯನ್ನು ಅತಿಶಯ ಪ್ರೀತಿಯಿಂದ ಯಾವನು ಓದುವನೋ, (ಮತ್ತು) ಕೇಳುವನೋ ಅವನು ಅತ್ಯಂತ ಶ್ಲಾಘ್ಯವಾದ ಸುಖ ಭೋಗವೆಂಬ ಸಂಪತ್ತೆನಿಸಿದ ಶಿವಗಣಸ್ಥಾನವನ್ನು

ಚಂಡದೀಧಿತಿ ಮಂಡಲಾಂತರಮಂದಿರೇ ಮುದಿತೇಂದಿರೇ
ಕುಂಡಲೀಶ್ವರ ಮಂಡನೇಶ್ವರ ವಲ್ಲಭೇ ಶ್ರುತಿದುರ್ಲಭೇ
ಕುಂಡಲದ್ಯುತಿಮಂಡಿತಾನನ ಭಾಸುರೇ ವಿಜಿತಾಸುರೇ
ಚಂಡಿ ನೀಂ ಪೊರೆ ಖಂಡಚಂದ್ರವಿಭೂಷಣೇ ಖಲಭೀಷಣೇ ೧೩೭

ಇದು ವಿನಮದಖಿಳ ಸುರಾಸುರೇಂದ್ರಮಕುಟತಟಘಟಿತ ಮಣಿಗಣಾಗಣಿತ ರುಚಿನಿಚಯ

ತರುಣಾರುಣಾತಪಪರಿಲಸಿತ ಪರಮ ಶಿವಲಿಂಗ ಪಾದಾರವಿಂದಪರಾಗಭಸಿತ

ಭಾಸುರಲಲಾಟಪಟ್ಟಸರಸಜನಮಾನಿತೋಭಯಕವಿತಾವಿಶಾರದ

ಶ್ರೀಷಡಕ್ಷರಿದೇವಭಕ್ತಿವಿರಚಿತ

ಶ್ರೀಮದ್ ಬಸವರಾಜವಿಜಯಮಹಾಪುರಾಣದೊಳ್ ಸೊಡ್ಡಳಬಾಚಿರಾಜವಾದಿ ವಿಜಯಕಥನಂ

ಸಪ್ತತ್ರಿಂಶಾಶ್ವಾಸಂ ಸಮಾಪ್ತಂ.

ಅಂತು ಆಶ್ವಾಸ ೩೭ಕ್ಕೆ ಪದಗಣನೆ ೩೦೨೦ಕ್ಕೆ ಮಂಗಳಮಹಾ ಶ್ರೀ॥

ಪರಮಾತ್ಮನ ಭಕ್ತರ ಕೃಪೆಯಿಂದ ಪಡೆಯುವನು. ೧೩೭. ಸೂರ್ಯನ ಮಂಡಲ ಮಧ್ಯವೇ ಮನೆಯಾಗಿ ಉಳ್ಳವಳೂ, ಲಕ್ಷ್ಮಿಯನ್ನು ಸಂತೋಷಪಡಿಸುವವಳೂ, ಆದಿ ಶೇಷನೇ ಅಲಂಕಾರವಾಗಿ ಉಳ್ಳ ಶಿವನ ಹೆಂಡತಿಯೂ, ವೇದಗಳ ಸ್ತೋತ್ರಕ್ಕೆ ನಿಲುಕದವಳೂ, ಕಿವಿಯಲ್ಲಿನ ಆಭರಣಗಳ ಕಾಂತಿಯಿಂದ ಅಲಂಕಾರಗೊಂಡ ಮುಖದಿಂದ ಪ್ರಕಾಶಿಸುವವಳೂ, ಅಸುರರನ್ನು ಜಯಿಸಿದವಳೂ, ಚಂದ್ರನ ಒಂದು ಕಲೆಯನ್ನು ಧರಿಸಿದವಳೂ, ದುಷ್ಟ ಜನರಿಗೆ ಭಯಂಕರಳೆನಿಸಿದವಳೂ, ಆದ ಚಂಡಿಯೇ ನೀನು (ನನ್ನನ್ನು) ರಕ್ಷಿಸು.

ಮೂವತ್ತೇಳನೆಯ ಆಶ್ವಾಸವು ಸಮಾಪ್ತವಾಯಿತು.

ಅಷ್ಟತ್ರಿಂಶಾಶ್ವಾಸಂ

[ಶಿವನಾಗಮಯ್ಯನ ಕಥೆ]

ಶ್ರೀಧರವರತನಯಾಮಧು
ರಾಧರಪರಿಪಕ್ವಬಿಂಬಫಳರಾಜಶುಕಂ
ಸಾಧುಜನವರದನಮರನ
ದೀಧರನೆಮಗೀಗೆ ಸೌಖ್ಯಮಂ ಶಿವಲಿಂಗಂ ೧

ಕುಸುಮಾಸ್ತ್ರಾರಿಪದೈಕಭಕ್ತಿನಿರತಂ ಸುಜ್ಞಾನವಿಸ್ತಾರಸಾ
ರಸದಾಚಾರಸಮನ್ವಿತಂ ಗುಣಗಣಾಲಂಕಾರನುದ್ಧೂತತಾ
ಮಸನತ್ಯಂತ ವಿಶುದ್ಧ ಚಿತ್ತನಭವಾಂಘ್ರಿಧ್ಯಾನಜಾತೋತ್ಸವಂ
ಮಿಸುಗಿರ್ದಂ ಶಿವನಾಗಯೋಗಿಯೆನಿಪೊರ್ವಂ ಭಕ್ತಿರತ್ನಾಕರಂ ೨

ಬಸವರಸನನುದಿನಂ ಸಂ
ತಸದಿಂ ಶಿವನಾಗದೇವಯೋಗೀಂದ್ರನ ಪೆಂ
ಪೆಸೆವ ಪದನಳಿನಮಂ ಪೂ
ಜೆಸುತುಂ ಸುಖಮೊಪ್ಪುತಿರ್ದನಿರ್ಪನ್ನೆವರಂ ೩

ಕಂಡದನಲ್ಲಿ ಮಟ್ಟಿಯ ಮರುಳ್ಗಳೆನಿಪ್ಪ ಮದಾಂಧವಿಪ್ರರು
ದ್ದಂಡತೆಯಿಂದೆ ಸೈರಿಸದೆ ಬಿಜ್ಜಳನಿರ್ದ ಸಭಾಂತರಕ್ಕೆ ಮುಂ

ಶಿವನಾಗಮಯ್ಯನ ಕಥೆ

೧. ಮಂಗಳಕರವಾದ ಪಾರ್ವತೀ ದೇವಿಯ ಮಧುರವಾದ ಪಕ್ವಗೊಂಡ ತೊಂಡೆಯ ಹಣ್ಣಿನಂಥ ತುಟಿಗಳಿಗೆ ಅರಗಿಳಿಯಾದವನೂ, ಸಜ್ಜನರಿಗೆ ವರಗಳನ್ನು ದಯಪಾಲಿಸುವವನೂ, ದೇವ ಗಂಗಾನದಿಯನ್ನು (ಶಿರದಲ್ಲಿ) ಧರಿಸಿದವನೂ ಎನಿಸಿದ ಶಿವಲಿಂಗನು ನಮಗೆ ಸೌಖ್ಯವನ್ನುಂಟುಮಾಡಲಿ. ೨. ಮನ್ಮಥ ವೈರಿಯಾದ ಶಿವನ ಪಾದಗಳ ಏಕೈಕ ಭಕ್ತಿಯಲ್ಲಿ ನಿರತನಾದವನೂ, ಅಧಿಕವಾದ ಸುಜ್ಞಾನ, ಸದಾಚಾರ ಸಮನ್ವಿತನೂ ಸದ್ಗುಣ ಸಮೂಹವೇ ಅಲಂಕಾರವಾಗಿ ಉಳ್ಳವನೂ, ತಪೋಗುಣವನ್ನು ನಾಶಗೊಳಿಸಿದವನೂ, ಅತ್ಯಂತ ಪರಿಶುದ್ಧವಾದ ಮನಸ್ಸುಳ್ಳವನೂ, ಪರಮೇಶ್ವರನ ಪಾದ ಧ್ಯಾನದಿಂದ ಉಂಟಾದ ಸಂತೋಷದಿಂದ ಕೂಡಿದವನೂ, 'ಶಿವನಾಗಮಯ್ಯ ಯೋಗಿ' ಎಂಬ ಹೆಸರಿನ ಓರ್ವನು ಭಕ್ತಿಗೆ ಸಮುದ್ರ ಪ್ರಾಯನಾದವನು ಶೋಭಿಸುತ್ತಿದ್ದನು. ೩–೪. ಬಸವರಸನು ಪ್ರತಿ ದಿನವೂ ಸಂತೋಷದಿಂದ ಶಿವನಾಗ ದೇವಯೋಗಿ ಶ್ರೇಷ್ಠನ ಘನತೆಯಿಂದ ಶೋಭಿಸುವ ಪಾದ ಕಮಲವನ್ನು ಪೂಜಿಸುತ್ತ ಸುಖದಿಂದ ಒಪ್ಪುತ್ತಿದ್ದನು, ಹೀಗೆ ಇರುತ್ತಿರುವಲ್ಲಿ ಬಸವಣ್ಣನು ಹೀಗೆ ಶಿವನಾಗಮಯ್ಯನನ್ನು ಸೇವಿಸುತ್ತಿರುವುದನ್ನು

ಕೋಂಡೊಪಸೆಯ್ದು ನಿಂದು ಪಿಸುಣಾಡಿದರುರ್ವಿಪ ನಿನ್ನ ಮಂತ್ರಿ ಭೂ
ಮಂಡಲವಿಶ್ರುತಂ ಬಸವನಳ್ಕದೆ ಪೊಲ್ಲದು ಗೆಯ್ದನದ್ಭುತಂ ೪

ಪಿರಿಯ ಭಕ್ತನೆನುತ್ತೆ ವಂದಿಸುತಂತ್ಯಜಾತನ ಕಾಲ್ಗಳಂ
ಭರದೆ ತಾಂ ತೊಳೆದಂಘ್ರಿವಾರಿಯನೀಂಟಿ ಮಸ್ತಕದಲ್ಲಿ ತಾ
ಳ್ದಿರದೆ ತತ್ಪದಸೇವೆಗೆಯ್ದಪನಳ್ಕದೀ ಸಭೆಗೆಯ್ದುವಂ
ಪರಮಸಜ್ಜನನಂತಿರಂತಪುರಕ್ಕೆ ಪೊಕ್ಕಡೆಯಾಡುವಂ[1] ೫

ಕುಲಜಂಗಂತ್ಯಜನಂಗದುರ್ವಿದ ನೆಳಲ್ಸೋಂಕೆ ತದ್ದೋಷಮಂ
ಕೆಲನೂಂಕಲ್ ಶ್ರುತಿ ಪೇಳ್ಗುಮಗ್ಗದ ಸಚೇಲಸ್ನಾನಮಂ ನೋಡೆ ಸ
ತ್ಕುಲಜಂ ತಾನೆನಿಸಿರ್ದುಮಂತ್ಯಜನ ಕಾಲಂ ಕರ್ಚಿ ತದ್ವಾರಿಯಂ
ನಲವೆತ್ತೀಂಟಿದನೆಂದೊಡೀ ಬಸವನಿನ್ನೇನೆಂಬೆವೀ ದೋಷಮಂ ೬

ದಾರಿವಿಡಿದೇಳ್ತರುತೆ ಕೆಲ
ಸಾರಂದ್ವಿಜರಿದಿರೊಳೆಯ್ದಿಯುಂ ಲೆಕ್ಕಿಸನೀ
ಪೌರರನಂತ್ಯಜಭಕ್ತಂ
ಭೀರುತ್ವಮನುಳಿದ ಗರ್ವದೊಳ್ಬೆಱೆತಿರ್ಪಂ ೭

ಕಂಡು ಮಣ್ಣಿನ (ಮಣ್ಣುಹುಯ್ದುಕೊಳ್ಳುವ) ಪಿಶಾಚಿಗಳಂತಿರುವ ಕೆಲವು ಮದೋನ್ಮತ್ತ ವಿಪ್ರರು ಔದ್ಧತ್ಯದಿಂದ ಸೈರಿಸಲಾರದವರಾಗಿ, ಬಿಜ್ಜಳನಿರುವ ಸಭಾಸ್ಥಾನಕ್ಕೆ ಆತುರಪಟ್ಟು ಆ ಕೂಡಲೇ ಬಂದು ನಿಂತುಕೊಂಡು, 'ಭೂಪಾಲನೇ, ಭೂಮಂಡಲದಲ್ಲೆಲ್ಲ ಪ್ರಸಿದ್ಧನಾದ ನಿನ್ನ ಮಂತ್ರಿ ಬಸವಣ್ಣನು ಸ್ವಲ್ಪವೂ ಹೇಸದೆ ಅದ್ಭುತವಾದ ಅಯೋಗ್ಯ ಕಾರ್ಯವನ್ನು ಮಾಡಿದ್ದಾನೆ' ಎಂದು ಚಾಡಿಯ ಮಾತನ್ನಾಡಿದರು. ೫. ಅಂತ್ಯ ಜಾತನಾದವನ (ಅಸ್ಪೃಶ್ಯನ)ನ್ನು ಹಿರಿಯ ಭಕ್ತನೆಂದು ಅನ್ನುತ್ತ ಸಂಭ್ರಮದಿಂದ ತಾನೇ ಆತನ ಪಾದಗಳನ್ನು ತೊಳೆದು ಆ ನೀರನ್ನು ಕುಡಿದು ತಪ್ಪದೆ ತಲೆಯ ಮೇಲೂ ಧರಿಸಿ, ಆತನ ಪಾದಸೇವೆಯನ್ನು ಮಾಡಿ, ಅಂಜದೆ ಈ ಸಭೆಗೆ ಬರುವನು. ಪರಮ ಸಜ್ಜನನಹಾಗೆ ಇದ್ದುಕೊಂಡು ಅಂತಃಪುರ (ರಾಜಾಂತಃಪುರ) ಕ್ಕೂ ಓಡಾಡುವನು. ೬. ಸತ್ಕುಲಪ್ರಸೂತನಾದವನಿಗೆ ಅಂತ್ಯಜನ ದೇಹದ ಮದದ ನೆಳಲು ಸೋಕಿದರೂ ಕೂಡ ಆ ದೋಷವನ್ನು ನಿವಾರಿಸಿಕೊಳ್ಳಲು, ಬಟ್ಟೆ ಸಮೇತವಾಗಿ ಸ್ನಾನ ಮಾಡಬೇಕೆಂದು ಶ್ರುತಿಯು ಹೇಳುತ್ತಿರುವುದು. ವಿಚಾರಮಾಡಿ ನೋಡಿದರೆ, ಸತ್ಕುಲದಲ್ಲಿ ಹುಟ್ಟಿದವನೆನಿಸಿಯೂ ಕೂಡ ಬಸವೇಶ್ವರನು ಅಂತ್ಯಜನಾದವನ ಕಾಲನ್ನು ತೊಳೆದು ಆ ನೀರನ್ನು ಪ್ರೀತಿಯಿಂದ ಕುಡಿದನೆಂದರೆ, ಈ ದೋಷಕ್ಕೆ ಏನು ಹೇಳಬೇಕು. ೭. ಈ ಅಸ್ಪೃಶ್ಯಭಕ್ತನು, ದಾರಿಯನ್ನು ಹಿಡಿದುಬರುವಾಗ ದೂರ ಸರಿದು ಬರುತ್ತಿಲ್ಲ; ಬ್ರಾಹ್ಮಣರು ಎದುರಿಗೆ ಬಂದರೂ ಲಕ್ಷ್ಯಕ್ಕೇ ತೆಗೆದುಕೊಳ್ಳುವುದಿಲ್ಲ ; ಗರ್ವದಿಂದ ಕೂಡಿದ ಅವನು ಭಯವನ್ನು ಬಿಟ್ಟು ಪಟ್ಟಣಿಗರೊಡನೆ ಬೆರೆತು ಬಿಡುವನು.

---

1 ಗು(ದ)

ಇನ್ನೆಲ್ಲಿಯ ವರ್ಣಾಶ್ರಮ
ವಿನ್ನೆಲ್ಲಿಯ ಧರ್ಮಕರ್ಮಗತಿ ಭೂವರ ಕೇ
ಳಿನ್ನೆಲ್ಲಿಯ ವೈದಿಕಪಂಥ
ದುನ್ನತಿ ಪೊಲೆಗಲಸಿ ಕೆಟ್ಟುದೀ ಕಲ್ಯಾಣಂ ೮

ಪುಳಿಯೊಳ್ಪಾಲ್ ಬಿಸದೊಳ್ಮಧು
ಕಳೆಯೊಳ್ಬೆಳೆ ಖಳನೊಳುತ್ತಮಂ ದುಷ್ಕುಲನೊ
ಳ್ವಿಳಸತ್ಕುಲಜಂ ಬೆರೆದೊಡೆ
ಪಳಿ ಪೊರ್ದುಗುಮಳಿಗುಮವರ ಸಹಜಗುಣಂಗಳ್ ೯

ನಾಡೊಳಗಾದ ದುರ್ನಯಮನಾಲಿಸುತಾಜ್ಞೆಯನಾತ್ಮಶಕ್ತಿಯಿಂ
ಮಾಡದ ಮೂಢ ಭೂಪತಿಗೆ ನಾಡಘಮಕ್ಕುಮದಂ ನೃಪಂಗೆ ಕಂ
ಡಾಡದ ತತ್ಪುರೋಹಿತನನಾ ನೃಪದೋಷಮುಮಂತೆ ಸಾರ್ಗುಮೆಂ
ದಾಡಿದೆವಲ್ತೆ ದೋಷಮೆಮಗಿನ್ನಣಮಿಲ್ಲೆನೆ ಕೇಳ್ದು ಭೂಭುಜಂ ೧೦

ವ॥ ಕುಪಿತನಾಗಿ ಬಸವರಸನಂ ಕರೆಯೆಂಬುದುಮರಸನನುಚರರ್ ಬಂದು ಕರೆಯಲೊಡ ನದೆಲ್ಲಮಂ ಸರ್ವಜ್ಞನಱಿದಾ ಶಿವನಾಗದೇವನಂ ಮಾಣಿಮಯಾಂದೋಳಮನೇಱಿಸಿ ಕೆಲದೊಳೋಲಗಿ

೮. ಮಹಾರಾಜ, ಇನ್ನೆಲ್ಲಿಯ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ವರ್ಣಾಶ್ರಮಧರ್ಮ ! ಇನ್ನೆಲ್ಲಿಯ ಧರ್ಮ, ಕರ್ಮ, ಸದ್ಗತಿಗಳ ಮಾತು ! ಇನ್ನೆಲ್ಲಿಯ ವೇದಮಾರ್ಗದ ಶ್ರೇಷ್ಠತೆ! (ಎಲ್ಲವೂ) ಹೊಲೆಯರೊಡನೆ ಕಲಸಿ (ವರ್ಣಸಾಂಕರ್ಯವುಂಟಾಗಿ) ಈ ಕಲ್ಯಾಣ ನಗರವು ಕೆಟ್ಟು ಹೋಯಿತು. ೯. ಹುಳಿಯಲ್ಲಿ ಹಾಲು, ವಿಷದಲ್ಲಿ ಅಮೃತ ಕಳೆಯಲ್ಲಿ (ಕೆಟ್ಟ ಹುಲ್ಲಿನಲ್ಲಿ) ಬೆಳೆ, ದುಷ್ಟನೊಡನೆ ಉತ್ತಮನು, ದುಷ್ಟಕುಲದಲ್ಲಿ ಹುಟ್ಟಿದವನೊಡನೆ ಸತ್ಕುಲದಲ್ಲಿ ಹುಟ್ಟಿದವನು ಹೀಗೆ ಬೆರೆತರೆ (ನಿನಗೆ) ನಿಂದೆಯುಂಟಾಗುವುದು. ಅವರವರ ಸಹಜವಾದ (ಜನ್ಮಸಿದ್ಧವಾದ) ಗುಣಗಳು ನಾಶಗೊಳ್ಳುವುವು. ೧೦. ತಾನಾಳುವ ನಾಡಿನಲ್ಲಿ ಉಂಟಾದ ಕೆಟ್ಟನೀತಿಯನ್ನು ಕೇಳುತ್ತ ಆತ್ಮಶಕ್ತಿಯಿಂದ ಆಜ್ಞೆಯನ್ನು ಮಾಡದ (ಆಜ್ಞೆಯನ್ನು ಮಾಡಿ ತಡೆಗಟ್ಟದ) ಮೂಢರಾಜನಿಗೆ ಅಧಿಕವಾದ ಪಾಪವು ಬರುವುದು. ಆ ವರ್ಣಸಾಂಕರ್ಯದೋಷವನ್ನು ಕಂಡು ಅರಸನಿಗೆ ಹೇಳದ ಆ ಪುರೋಹಿತನಿಗೂ ಅರಸನಿಗೆ ದೋಷವುಂಟಾಗುವ ರೀತಿಯಲ್ಲೇ ದೋಷವುಂಟಾಗುವುದು. ಈಗ ನಾವು ಹೇಳಿದೆವಲ್ಲವೇ ! (ಆದ್ದರಿಂದ) ನಮಗೆ ಇದರಿಂದ ಸ್ವಲ್ಪವೂ ದೋಷವಿಲ್ಲ ಎನ್ನಲು ಆ ಮಾತನ್ನು ಕೇಳಿ ಮಹಾರಾಜನು ವ॥ ಕೋಪಗೊಂಡು 'ಬಸವರಾಜನನ್ನು ಕರೆ' ಎನ್ನಲು ರಾಜಭಟರುಗಳು ಬಂದು ಬಸವಣ್ಣನನ್ನು ಕರೆಯಲಾಗಿ (ನಡೆದ ಸರ್ವವಿಚಾರವನ್ನೂ) ಆ ಸರ್ವಜ್ಞನಾದ ಬಸವಣ್ಣನು ತಿಳಿದು ಆ ಶಿವನಾಗಮಯ್ಯ ದೇವನನ್ನು ರತ್ನ ಖಚಿತವಾದ ಪಲ್ಲಕ್ಕಿಯಲ್ಲಿ (ಮೇಣೆಯಲ್ಲಿ) ಕುಳ್ಳಿರಿಸಿಕೊಂಡು, ಅಕ್ಕಪಕ್ಕಗಳಲ್ಲಿ ಅವನ ಸೇವೆಯನ್ನು ಮಾಡುತ್ತ ಸಂಭ್ರಮದಿಂದ ಆ ಬಿಜ್ಜಳನ

ಸುತ್ತುಂ ಸಿತಗರದಿನಾ ನೃಪಸಭೆಗೆ ಬಸವಂ ಬರ್ಪಾಗಳ್ಕಟ್ಟಿದಿರೊಳ್ಕುಪ್ಪಭೂಸುರರ್ಕಂಡರಸಂಗೆ ಬೆರಲೆತ್ತಿ ತೋಱಿ—

ಜನಪತಿ ನಿನ್ನತ್ತಣಿನೆ
ಳ್ಳನಿತುಂ ಭಯಮಿಲ್ಲದಂತ್ಯಜಾತನನಧಟಿಂ
ಕನಕಾಂದೋಳಮನೇಱಿಸಿ
ಬಿನದದಿನೀಯೆಡೆಗೆ ತಂದಪಂ ಗಡ ಬಸವಂ ೧೧

ವ॥ ಪೊಳಲಂ ಪೊಲೆಗಲಸಿದನಿತೆಯ್ದದೀ ಸಭೆಯುಮಂ ಪೊಲೆಗಲಸಲೆಯ್ದಿದಪನೆನೆ ಬಿಜ್ಜಳನತ್ತಲ್ನೋಡಿ ಕಾಯ್ಪು ಮಸಗಿ ಶುದ್ಧಾಂತದೋಲಗಮನಿವಂ ಪುಗಲಾಗದೆಂದಲ್ಲಿಂದೆಳ್ದು ಪೊಱಗಣ ಮೊಗಸಾಲೆಯೊಳೋಲಗಂಗೊಟ್ಟು ಕುಳ್ಳಿರ್ಪುದುಮಲ್ಲಿಗೆಳ್ತಂದು ನೃಪನ ಕುಹಕಮನಱಿದು ಕುಜನಮದಭಂಜನಂ ತನ್ನುತ್ತರಾಂಶುಕದಿನುನ್ನತಾಸನಮಂ ರಚಿಸಿ ತಾಪಸೇಂದ್ರನಂ ಮೂರ್ತಿಗೊಳಿಸಿ ತತ್ಪಾದಸಮೀಪದೊಳ್ನೆಲಸಿರ್ಪನಂ ಬಿಜ್ಜಳಂ ನೋಡಿ —

ಶ್ರುತಿಮತಧರ್ಮದೊಳ್ನಡೆಯದಿಂತು ಮದೋದ್ಧತವೃತ್ತಿಯಿಂ ಪೊದ
ಳ್ದತಿಶಯವರ್ಣದಾಶ್ರಮದ ಪದ್ಧತಿಯಂ ತೊಱೆದಂತ್ಯಜಾತಿಸಂ
ಗತಿವಡೆದೈ ಮದೀಯ ನಗರಕ್ಕಮಮಂಗಳಮಂ ನೆಗಳ್ಚಿದೈ
ಸಿತಗಳಭಕ್ತಿ ನಿನ್ನ ಶಿರದಲ್ಲಿಯೆ ಪುಟ್ಟಿತೆ ಪೇಳ್ನೃಪಾಧಿಪಾ ೧೨

ಸಭೆಗೆ ಬಸವಣ್ಣನು ಬರುತ್ತಿರುವಾಗ ಎದುರಿಗೇ (ಶಿವನಾಗಮಯ್ಯನನ್ನು ಹೊತ್ತು ತರುತ್ತಿರುವ ಮೇಣೆಯನ್ನೂ) ಆ ಬ್ರಾಹ್ಮಣರು ಕಂಡು, ಅರಸನಿಗೆ ಬೆರಳುಮಾಡಿ ತೋರಿಸಿ ೧೧. 'ಮಹಾರಾಜಾ, ನಿನ್ನ ದೆಸೆಯಿಂದ ಎಳ್ಳಿನಷ್ಟೂ ಕೂಡ ಭಯವಿಲ್ಲದೆ ಅಂತ್ಯ ಕುಲದಲ್ಲಿ ಹುಟ್ಟಿದವನನ್ನು ಧೈರ್ಯದಿಂದ ಸುವರ್ಣಮಯ ಪಲ್ಲಕ್ಕಿಯಲ್ಲಿ ಹತ್ತಿಸಿಕೊಂಡು ಸಂತೋಷದಿಂದ ಬಸವಣ್ಣನು ಈ ರಾಜಾಸ್ಥಾನಕ್ಕೆ ತರುತ್ತಿದ್ದಾನೆ. ವ॥ ಪಟ್ಟಣವನ್ನು ಹೊಲೆಗಲಸಿದ್ದಷ್ಟೇ ಅಲ್ಲದೆ, ಈ ಸಭೆಯನ್ನೂ ಕೂಡ ಹೊಲೆಗಲಸಲಿಕ್ಕೆ ಬರುತ್ತಿದ್ದಾನೆ' ಎಂದರು. ಬಿಜ್ಜಳನು ಅತ್ತಕಡೆಗೆ ನೋಡಿ, ಅಧಿಕ ಕೋಪಗೊಂಡು, ಶುದ್ಧಿಯಿಂದ ಕೂಡಿದ ಈ ರಾಜ ಸಭೆಯನ್ನು ಇವನು ಪ್ರವೇಶಿಸಲಾಗದೆಂದು ಅಲ್ಲಿಂದ ಎದ್ದುಬಂದು ಹೊರಭಾಗದಲ್ಲಿರುವ ಹಜಾರದಲ್ಲಿ ರಾಜ ಸಭೆಯನ್ನೇರ್ಪಡಿಸಿ, ಕುಳಿತುಕೊಳ್ಳಲಾಗಿ, (ಬಸವಣ್ಣನು) ಅಲ್ಲಿಗೆ ಬಂದು ಮಹಾರಾಜನ ಈ ಕುಯುಕ್ತಿಯನ್ನೂ (ಕಾಪಟ್ಯವನ್ನು) ತಿಳಿದುಕೊಂಡು ದುಷ್ಟಜನರ ಮದವನ್ನು ಮುರಿಯುವ ಆ ಬಸವಣ್ಣನು ತಾನು ಹೊದ್ದಿರುವ ಉತ್ತರೀಯದಿಂದ ಉನ್ನತಾಸನವನ್ನು ಮಾಡಿ, ತಾಪಸಶ್ರೇಷ್ಠನಾದ ನಾಗದೇವನನ್ನು ಕುಳ್ಳಿರಿಸಿ, (ತಾನು) ಆತನ ಪಾದದ ಸಮೀಪದಲ್ಲಿಯೇ ಕುಳಿತನು. ಬಿಜ್ಜಳನು (ಇದನ್ನು) ನೋಡಿ ೧೨. 'ನೃಪಾಧಿಪಾ, ವೇದ ಸಮ್ಮತವಾದ ಧರ್ಮದಲ್ಲಿ ವ್ಯವಹರಿಸದೆ ಈ ರೀತಿ ಗರ್ವದಿಂದ ಕೊಬ್ಬಿಹೋದ ವ್ಯವಹಾರದಲ್ಲಿ ಅತಿಶಯವಾಗಿ ಶೋಭಿಸುವ ಬ್ರಾಹ್ಮಣಾದಿ ವರ್ಣಾಶ್ರಮ ಪದ್ಧತಿಯನ್ನು ಬಿಟ್ಟು, ಅಂತ್ಯಜಾತಿಯವರೊಡನೆ ಕೂಡಿ ನಡೆಯುತ್ತಿರುವೆಯಾ ? (ನೀನು) ನನ್ನ ಕಲ್ಯಾಣ ಪಟ್ಟಣಕ್ಕೇ ಅಮಂಗಳವನ್ನುಂಟು ಮಾಡಿದೆ ! ನೀಲಕಂಠನ ಭಕ್ತಿಯೇನು ನಿನ್ನ ತಲೆಯಲ್ಲೇ ಹುಟ್ಟಿರು

ಮಳೆ ಸುರಿಗುಮೆ ನೀನಿರ್ದೀ
ಯಿಳೆ ಬೆಳೆಗುಮೆ ಪೂಜೆಗೊಳ್ಗುಮೇ ದೇವತೆಗಳ್
ಪಳಿಗಂಜದ ನಿನಗಂಜುವೆ
ಪಳಂಕೆಯಿಂ ನೀನೆ ಸುಖದೊಳಿರ್ಪುದು ಪೊಳಲೊಳ್ ೧೩

ವ॥ ಎಂದ ನರೇಂದ್ರನ ಕಟೂಕ್ತಿಗೇಳ್ದು ಮಹಿಮಾಕರಂ ಸರೋಷಹಸನಮುಖನಾಗಿ—

ಕೇಳಲೆ ಭೂಪ ನಿನ್ನಭಿಮತದ್ವಿಜರಂತ್ಯಜಕೃತ್ಯದಂದಮಂ
ಪಾಳಿಯಿನೆಲ್ಲರುಂ ಬಡಗಿ ಮಾಚಲದೇವಿಯನಿಂದು ಸತ್ಕುಲಂ
ದಾಳಿಪೆವೆಂದು ಹೇಮಮಯ ಧೇನುವನೊಂದನೊಡರ್ಚಿ ವಿತ್ತ ಸ
ಮ್ಮೇಳನದಿಂದೆ ತೀವಿ ಸುಧೆಯಂ ಬಸಿಱೊಳ್ಪುಗಿಸುತ್ತೆ ಬಾಲೆಯಂ ೧೪

ತೆಗೆದೀಗಳ್ಕುಲಯುಕ್ತೆಯಾದಳೆನುತುಂ ಮೆಯ್ಯಿಕ್ಕಿ ಪಾರ್ವರ್ವಧೂ
ಟಿಗೆ ನಣ್ಪಿಂದವಳಂಗದೆಂಜಲಮರ್ದಂ ತಾವೀಂಟುತುಂ ಮೇಣ್ಮನಂ
ಬುಗುವಾ ಕಾನಕಧೇನುವಂ ಕಡಿದು ಖಂಡಂಗೆಯ್ವುತುಂ ತೃಷ್ಣೆಕೆ
ಯ್ಮಿಗೆ ತಮ್ಮೊಳ್ಪರಿಕಲ್ಪಿಸುತ್ತೆ ನಿಜಿಸುತ್ತುಂ ಬೇಱೆ ಭಾಗಂಗಳಂ ೧೫

ಕಡೆಪಟ್ಟೀ ಪಣೆ ಸೋಮಯಾಜಿಗೆ ಮೊಗಂ ವೇದಾಂತಿಗಳ್ಗೀ ಕೊರಲ್
ಕಡುಪಾಂತೊಪ್ಪುವ ತಾರ್ಕಿಕರ್ಗೆ ಬಲವಕ್ಕಂ ಪಂಡಿತರ್ಗಕ್ಕೆ ತೋ
ರ್ಪಡವಕ್ಕಂ ನೆಗಳ್ದಶ್ವಮೇಧಿಗೆ ಬಸಿರ್ವೈಶೇಷಿಕರ್ಗಿತ್ತಲೀ
ನಡುಬೆನ್ವೇದಪಡಂಗವೇದಿಗಮುಪಾಧ್ಯಾಯರ್ಗೆ ಶೃಂಗದ್ವಯಂ ೧೬

ತುಂಗಾಧ್ವರಿಗೆರ್ದೆ ಬಾಲಂ
ಪಿಂಗದ ಋಗ್ವೇದಿಗಳ್ಗೆ ತೊಡೆಗಳ್ಪಾಂಗೋ

ವುದೇ ? ಹೇಳು ! ೧೩. (ಹೀಗಾದರೆ) ಮಳೆಸುರಿದೀತೆ ? ನೀನಿರುವ ಈ ಧರಣಿಯು ಬೆಳೆದೀತೇ ? ಪಿತೃದೇವತೆಗಳು ಪೂಜೆಗೊಳ್ಳುತ್ತಾರೆಯೇ ? ಪಾಪಕ್ಕೆ ಹೆದರದ ನಿನಗೆ (ನಾವು) ಭಯ ಪಡುತ್ತಿದ್ದೇವೆ. ಸ್ವೇಚ್ಛೆಯಾಗಿ ಈ ಪಟ್ಟಣದಲ್ಲಿ ನೀನೇ ಸುಖವಾಗಿ ಇದ್ದುಬಿಡು. ವ॥ ಹೀಗೆಂದ ರಾಜಶ್ರೇಷ್ಠನಾದ ಬಿಜ್ಜಳನ ನಿಷ್ಠುರದ ಮಾತನ್ನು ಕೇಳಿ, ಮಹಿಮಾಶಾಲಿಯಾದ ಬಸವೇಶ್ವರನು ರೋಷದಿಂದ ಕೂಡಿದ ನಗುಮುಖವಾಡಿ ೧೪–೧೯. ಎಲೈ ಮಹಾರಾಜನೇ, ನಿನ್ನ ಅಭಿಮಾನದ ಈ ದ್ವಿಜರ ಹೊಲೆಗೆಲಸದ ರೀತಿಯನ್ನು ಕ್ರಮವಾಗಿ ಕೇಳು : ಎಲ್ಲರೂ ಸೂಳೆ (ಬಡಗಿ> ಬದಗಿ) ಯಾದ ಮಾಚಲದೇವಿಯೆಂಬ ನೀಚ ಜಾತಿಯ ಹೆಂಗಸನ್ನು ಸತ್ಕುಲವಂತಳನ್ನಾಗಿ ಅಂದರೆ ಕ್ಷತ್ರಿಯಳನ್ನಾಗಿ ಮಾಡುತ್ತೇವೆಂದು ಸುವರ್ಣದಿಂದ ಒಂದು ಹಸುವನ್ನು ನಿರ್ಮಿಸಿ, ಅದರ ಗರ್ಭದಲ್ಲಿ ಬಂಗಾರವನ್ನೂ ಹಾಲನ್ನೂ ತುಂಬಿ, ಆ ಬಾಲೆಯನ್ನು ಅದರ ಗರ್ಭದಲ್ಲಿ ಹೊಗಿಸಿ, ಹೊರತೆಗೆದು ಈಗ ಸತ್ಕುಲದವಳಾದೆಯೆಂದು, ಆ ಸ್ತ್ರೀಗೆ ಪಾರ್ವರು ನಮಸ್ಕರಿಸಿ ಪ್ರೀತಿಯಿಂದ ಅವಳ ದೇಹದ ಎಂಜಲ ಹಾಲನ್ನು ತಾವು ಕುಡಿದು, ಆಮೇಲೆ ಮನೋಹರವಾದ ಆ ಬಂಗಾರದ ಹಸುವನ್ನು ಕಡಿದು ತುಂಡು ತುಂಡಾಗಿ ಮಾಡಿ, ವಿಶೇಷ ಆಶೆಯಿಂದ ತಮ್ಮ ತಮ್ಮಲ್ಲಿ

ಪಾಂಗತ್ರಿವೇದಿಗಳ್ಗುಳಿ
ದಂಗಂ ವಿದ್ಯಾರ್ಥಿಗಳ್ಗೆನುತ್ತುಸವಸದಿಂ ೧೭

ಮೊದಲೊಳ್ಗೆನುತ್ತ್ವಮನದ
ಕೊದವಿಸಿ ಸಂಕಲ್ಪದಿಂದೆ ಪೂಜಿಸಿ ಮಗುಳ್ದಂ
ತದನೆ ಕಡಿದೊಯ್ದು ಪಾರ್ವ
ರ್ವಿದಿತಂ ಗೋಹತ್ಯೆಗಳ್ಕದತಿ ಪಾಪಯುತರ್ ೧೮

ಇಂತಪ್ಪ ಪಾಪಕರ್ಮರೊ
ಳೆಂತುಂ ಸರಿಗಟ್ಟಲಕ್ಕುಮೇ ಶಿವದೀಕ್ಷಾ
ವಂತರೆನಿಸಿರ್ದ ಸುಚರಿತ
ವಂತರನಘಹರನ ಭಕ್ತರಂ ಧಾರಿಣಿಯೊಳ್ ೧೯

ಸರಿಯಿಡಲಕ್ಕುಮೇ ಸುರಮಹೀರುಹರಾಜಿಗೆ ಮಿಕ್ಕ ಕಾಡಮು
ಳ್ಮರಗಳನಂಬುಜಾಕರಕದಂಬಕೆ ಬೆಂಚೆಗಳಂ ಪೊದಳ್ದ ಕೇ
ಸರಿನಿವಹಕ್ಕೆ ಕಾಳ್ನರಿಗಳಂ ಘನರಾಜಮರಾಳವೃಂದಕು
ರ್ವರೆಯ ಬಕಂಗಳಂ ಶರಣಸಂತತಿಗೀ ಪಳಿವೆತ್ತ ಪಾರ್ವರಂ ೨೦

ಮಾತನಾಡಿಕೊಂಡು ಬೇರೆ ಬೇರೆ ಭಾಗಗಳನ್ನು ಕ್ರಮವಾಗಿಟ್ಟು, ಕಡೆಗೊಂಡಿರುವ ಈ ಹಣೆ ಸೋಮಯಾಜಿಗೆ, ಮುಖವು ವೇದಾಂತಿಗಳಿಗೆ, ಈ ಕೊರಳು ಶೌರ್ಯ ವಿಶಿಷ್ಟರಾದ ತಾರ್ಕಿಕರಿಗೆ, ಬಲಗಡೆಯಪಕ್ಕೆ ಪಂಡಿತರಿಗಾಗಲಿ, ಈ ಕಾಣುವ ಎಡ ಪಕ್ಕ ಪ್ರಖ್ಯಾತನಾದ ಅಶ್ವಮೇಧಿಗೆ, ಹೊಟ್ಟೆ ವೈಶೇಷಿಕರಿಗೆ, ಇತ್ತ ಕಡೆಗಿರುವ ಈ ನಡುಬೆನ್ನು ವೇದ ಮತ್ತು ಆರುವೇದಾಂಗ ಬಲ್ಲಿದವರಿಗೆ, ಎರಡು ಕೋಡುಗಳು ಉಪಾಧ್ಯಾಯರಿಗೆ, ಎದೆ ತುಂಗಾಧ್ವರಿಗೆ, ಬಾಲವು ತಪ್ಪದೆ ಋಗ್ವೇದಿಗೆ, ತೊಡೆಗಳು ಅಂಗ ಉಪಾಂಗಸಹಿತ ತ್ರಿವೇದ ಬಲ್ಲದರಿಗೆ ಉಳಿದ ದೇಹಭಾಗಗಳು ವಿದ್ಯಾರ್ಥಿಗಳಿಗೆ ಎಂದೆನ್ನುತ್ತ ಆತುರಾತುರವಾಗಿ (ಹಂಚುವರು). ಮೊದಲು (ಆ ಸುವರ್ಣ ಹಸುವಿಗೆ) ಸಂಕಲ್ಪದಿಂದ ಗೋತ್ವವನ್ನುಂಟು ಮಾಡಿ, ಪೂಜೆ ಮಾಡಿ, ಪುನಃ ಈ ರೀತಿ ಅದನ್ನು ಕಡಿದು ಮನೆಗೊಯ್ದು ಪ್ರಸಿದ್ಧ ಗೋಹತ್ಯೆಗೆ ಅಂಜದ ಪಾಪಿಷ್ಠರು. ಇಂತಹ ಪಾಪಕರ್ಮರೊಡನೆ, ಶಿವಸಂಬಂಧವಾದ ದೀಕ್ಷೆಯನ್ನು ಹೊಂದಿದವರೆನಿಸಿದ ಸಚ್ಚಾರಿತ್ರ್ಯವುಳ್ಳ, ಪಾಪನಾಶಕರಾದ ಶಿವನ ಭಕ್ತರನ್ನೂ ಲೋಕದಲ್ಲಿ ಯಾವ ರೀತಿಯಿಂದಲಾದರೂ ಸರಿಗಟ್ಟಲಾದೀತೇ ? ೨೦. ಕಲ್ಪವೃಕ್ಷಗಳ ಸಾಲಿಗೆ ಕಾಡಿನ ಉಳಿದ ಮುಳ್ಳಿನ ಮರಗಳನ್ನು, ಸರೋವರಗಳ ಸಮೂಹಕ್ಕೆ ಹೊಂಡಗಳನ್ನು, ಪ್ರಸಿದ್ಧವಾದ ಸಿಂಹಗಳ ಗುಂಪಿಗೆ ಕಾಡುನರಿಗಳನ್ನು, ಶ್ರೇಷ್ಠರಾಜಹಂಸಗಳ ಸಮೂಹಕ್ಕೆ ಭೂಮಿಯ ಬಕಪಕ್ಷಿಗಳನ್ನು ಶರಣರುಗಳ

ಕುಲ ಜಾತಿಯೆಂಬಿವೆಲ್ಲಂ
ಸಲೆ ಮಾಯಾಬೀಜಜನಿತವೆಮ್ಮಯ ಶರಣಾ
ವಲಿಯ ಕುಲಮೀಶಜನಿತಂ
ಕಲುಷಿತಮದು ನಿಷ್ಕಲಂಕಮಿದು ನಿಜದಿಂದಂ ೨೧

ಪುಣ್ಯವಿಹೀನರ ಕಣ್ಗೆ ಹಿ
ರಣ್ಯಂ ಕಲ್ಲೆನಿಪ ತೆಱದೆ ಭವಚಕ್ರಮಹಾ
ರಣ್ಯಚರನರರ ಕಣ್ಗವ
ರೇಣ್ಯಂ ನರನಂತಿರಭವಭಕ್ತಂ ತೋರ್ಕುಂ ೨೨

ಪರಮ ಶಿವನಾಗದೇವಂ
ಗುರುತರ ಶಿವಯೋಗಭಾಸುರಂಗಧಮಧರಾ
ಮರರೆಣೆಯಲ್ಲುತ್ತಲೆ ಭೂ
ವರ ಕೇಳದಱಿಂದಮೆಮ್ಮ ಶರಣರ ಪೆಂಪಂ ೨೩

ಶ್ರೀಪತಿಪಂಡಿತರ್ಪರಮ ಶೈವದೃಢವ್ರತನಿಷ್ಠರೊರ್ಮೆ ಧಾ
ತ್ರೀಪನನಂತಪಾಲನ ಸಭಾಂತರದೊಳ್ ದ್ವಿಜಕೋಟಿಯುಂ ಶಿವ
ಶ್ರೀಪದಭಕ್ತನೊರ್ವಗೆಣೆಯಲ್ತೆನುತಣ್ಮಿತೆ ಪೂಣ್ದು ಸತ್ಯ ಸ
ಲ್ಲಾಪಮುಮರ್ಚೆ ಕಟ್ಟಿಡರೆ ವಸ್ತ್ರದೊಳುಜ್ವಳಿಪಗ್ನಿಯುಂ ನೃಪಾ ೨೪

ಕ್ರತುನಾಥಂ ಹರಿಯೆಂದು ವಹ್ನಿ ಗುರುವೇದಾದಿತ್ಯನಂ ರುದ್ರಸಂ
ಗತ ಗಾಯತ್ರಿಗೆ ದೈವಮೆಂದಜನೆ ವೇದಕ್ಕಾಳ್ವನೆಂದುಂ ಜಗ

ಸಮೂಹಕ್ಕೆ ಈ ಪಾಪವನ್ನುಳ್ಳ ಪಾರ್ವರನ್ನು ಸರಿಗಟ್ಟಲಾದೀತೇ ? ೨೧. ಕುಲಜಾತಿಗಳೆನ್ನುವ ಈ ಎಲ್ಲವೂ ಅಜ್ಞಾನದ ಬೀಜದಿಂದ ಉದ್ಭವವಾದವುಗಳು. ಶರಣ ಸಮೂಹದ ಕುಲವು ಈಶ್ವರನಿಂದ ಉಂಟಾದುದು. ನಿಜವಾಗಿ ಅದು ಕಲುಷಿತ ; ಇದು ನಿಷ್ಕಲ್ಮಷವುಳ್ಳದ್ದು. ೨೨. ಪುಣ್ಯಹೀನರಾದವರ ಕಣ್ಣಿಗೆ ಬಂಗಾರವೂ ಕಲ್ಲಾದಹಾಗೆ ಹುಟ್ಟುಸಾವುಗಳೆಂಬ ಚಕ್ರಾಕಾರವಾದ ಮಹಾರಣ್ಯದಲ್ಲಿ ಸುತ್ತಾಡುವ ಮನುಷ್ಯರ ಕಣ್ಣಿಗೆ ಪರಮೇಶ್ವರನ ಶ್ರೇಷ್ಠವಾದ ಭಕ್ತರು ಮನುಷ್ಯಾಕಾರದಲ್ಲೆ ಕಾಣುವರು. ೨೩. ಮಹತ್ವಪೂರ್ಣವಾದ ಶಿವಯೋಗದಿಂದ ಪ್ರಕಾಶಮಾನವಾದ ಪವಿತ್ರ ಶಿವನಾಗದೇವನಿಗೆ ಅಧಮರಾದ ದ್ವಿಜರು ಸಮಾನರಲ್ಲವೇ ಅಲ್ಲ ; ಮಹಾರಾಜಾ ಆದ ಕಾರಣದಿಂದ ನಮ್ಮ ಶರಣರ ಹಿರಿಮೆಯನ್ನು ಕೇಳು : ೨೪. ಮಹಾರಾಜಾ, ಪರಮ ಶಿವ ಸಂಬಂಧವಾದ ನಿಶ್ಚಲವಾದ ವ್ರತ ನಿಯಮದಿಂದ ಕೂಡಿದ ಶ್ರೀಪತಿ ಪಂಡಿತರು ಒಮ್ಮೆ ಧಾತ್ರೀಶ್ವರನಾದ ಅನಂತಪಾಲನೆಂಬುವನ ಸಭಾಮಧ್ಯದಲ್ಲಿ, ಕೋಟಿ ಜನ ಬ್ರಾಹ್ಮಣರೂ ಶಿವನ ಪಾದಭಕ್ತಿಯಲ್ಲಿ ನಿರತನಾದ ಒಬ್ಬ ಶರಣನಿಗೆ ಸಮಾನನಲ್ಲವೆನ್ನುತ್ತ ಶೌರ್ಯದಿಂದ ಪ್ರತಿಜ್ಞೆ ಮಾಡಿ, ಸತ್ಯ ಸಂಭಾಷಣೆಯನ್ನು (ಸತ್ಯವಾದ ಚರ್ಚೆಯನ್ನು ಮಾಡಿ) ಬಟ್ಟೆಯಲ್ಲಿ ಜಾಜ್ವಲ್ಯ ಮಾನವಾದ ಬೆಂಕಿಯನ್ನು ಕಟ್ಟಿ ಇಡಲಿಲ್ಲವೇ ? ೨೫. ಚಂಡಾಲರೆನಿಸಿದ ಈ ಭೂಸುರರು, ಯಜ್ಞ ಪುರುಷನು ವಿಷ್ಣುವೆಂದು, ಬೆಂಕಿಯನ್ನು ಗುರುವೆಂದು,

ತ್ಪತಿ ಚಕ್ರಾಯುಧನೆಂದು ಸೋಮಲತೆ ವಿಶ್ವೋತ್ಪತ್ತಿ ಬೀಜಂ ದಲೆಂ
ದತುಳಬ್ರಹ್ಮಮೆ ಶೂನ್ಯಮೆಂದುಲಿಗುಮೀ ಚಂ[1]ಡಾಲರೀ ಭೂಸುರರ್ ೨೫

ಇಂತಪ್ಪ ಶಿವದ್ರೋಹಿಗ
ಳೆಂತುಂ ಪಶುಹತ್ಯೆಗಳ್ಕದಂತ್ಯಜಕರ್ಮ
ಭ್ರಾಂತರ್ಶಠರೀ ಪಾರ್ವ
ರ್ಕಂತುಹರಾರ್ಚಕರ ಮನೆಯ ಶುನಿಗಳ್ಗೆಣೆಯೇ ೨೬

ವ॥ ಮತ್ತಂ—

[ಹಾವಿನಹಾಳ ಕಲ್ಲಯ್ಯನ ಕಥೆ]

ಹಾವಿನಹಾಳೆನಿಪ್ಪ ಪುರಮೊಪ್ಪುಗುಮಲ್ಲಿ ಧರಾಮರವ್ರಜಂ
ತೀವಿ ವಿರಾಜಿಸಿರ್ಕುಮನಿಶಂ ಬಿಡದಾ ಪೊಳಲಲ್ಲಿ ಮೇಣ್ಮಹೀ
ಭಾವಜವೈರಿಯೆಂದೆನಿಸಿ ಕಂಗೊಳಿಸಿರ್ಪನತಿ ಪ್ರಭಾವದಿಂ
ಪಾವನ ಕಲ್ಲಿನಾಥನೆನಿಪ್ಪೊರ್ವನಖರ್ವ ಶಿವೈಕತತ್ಪರಂ ೨೭

ಆ ಪುರದಲ್ಲಿ ಘೋರಫಣಿ ನಟ್ಟಿರುಳೊಳ್ಮೃಗೆ ನಿದ್ರೆಗೆಯ್ದರಂ
ಕೋಪದೆ ಕರ್ಚಿ ಕೊಲ್ವುದು [2]ಪಥಶ್ರಮ[2]ದಿಂ ನಡೆತಂದರು ಪೊದ

ಸೂರ್ಯನನ್ನು ರುದ್ರಪರವಾದ ಗಾಯತ್ರಿಗೆ ದೈವವೆಂದು, ಬ್ರಹ್ಮನೇ ವೇದಕ್ಕೆ ಪತಿಯೆಂದು, ಜಗತ್ತಿಗೆ ಪತಿಯು ವಿಷ್ಣುವೆಂದು, ಸೋಮರಸದ ಬಳ್ಳಿಯು ವಿಶ್ವೋತ್ಪತ್ತಿಯ ಬೀಜವೇ ನಿಜವೆಂದು, ಬ್ರಹ್ಮವೇ ಶೂನ್ಯವೆಂದು ನುಡಿಯುತ್ತಿರುವರು. ೨೬. ಇಂತಹ ಶಿವದ್ರೋಹಿಗಳು, ಪಶುಹತ್ಯೆಗೆ ಸ್ವಲ್ಪವೂ ಹೆದರದೆ ಅಂತ್ಯಜರಾದವರ ಕ್ರಿಯೆಯಿಂದ ಭ್ರಾಂತಿಗೊಂಡಿರುವ, ದುಷ್ಟರಾದ ಈ ದ್ವಿಜರುಗಳು ಪರಮೇಶ್ವರನ ಪಾದಪೂಜೆಯಲ್ಲಿ ನಿರತರಾದ ಭಕ್ತರ ಮನೆಯ ನಾಯಿಗಳಿಗೆ ಸಮಾನರೆನಿಸುವರೇ ? ವ॥ ಮತ್ತು **ಹಾವಿನ ಹಾಳ ಕಲ್ಲಯ್ಯನ ಕಥೆ** ೨೭. ಹಾವಿನ ಹಾಳ ಎಂಬ ಹೆಸರಿನ ಪಟ್ಟಣವು ಶೋಭಿಸುತ್ತಿರುವುದು, ಅಲ್ಲಿ ಬ್ರಾಹ್ಮಣರ ಸಮೂಹವು ತುಂಬಿ ಸದಾ ತಪ್ಪದೆ ಶೋಭಿಸುತ್ತಿರುವುದು. ಇಂಥ ಈ ಪಟ್ಟಣದಲ್ಲಿ ಮನ್ಮಥನ ವೈರಿಯೆನಿಸಿ, ಅತ್ಯಂತ ಪ್ರಭಾವ ವಿಶಿಷ್ಟನಾದವನೂ, ಪರಿಶುದ್ಧನೂ, ಮಹತ್ವ ಪೂರ್ಣವಾದ ಶಿವನೊಬ್ಬನ ಭಕ್ತಿಯಲ್ಲಿಯೇ ತತ್ಪರನಾದವನೂ ಆದ ಕಲ್ಲಿನಾಥನೆಂಬ ಹೆಸರಿನ ಶರಣನು ಶೋಭಿಸುತ್ತಿದ್ದನು. ೨೮. ಆ ಪಟ್ಟಣದಲ್ಲಿ ಒಂದು ಹಾವಿತ್ತು. ಅದು ಮಧ್ಯರಾತ್ರಿಯ ಸುಮಾರಿಗೆ ನಿದ್ರೆ ಮಾಡುತ್ತಿರುವವರನ್ನು ಕೋಪದಿಂದ ಕಚ್ಚಿ, ಕೊಲ್ಲುತ್ತಿತ್ತು. ಹೀಗೆ ಪ್ರಸಿದ್ಧಗೊಂಡ ಅ ಸಮರ್ಥವಾದ ಹಾವು ಒಂದು ಸಲ ದಾರಿಯನ್ನು ನಡೆದು ಆಯಾಸ

1 ಚಾಂ(ಅ)   2 ಪರಾಶ್ರಯ(ಅ)

ಳ್ದಾ ಪಟುಸರ್ಪನೊರ್ವ್ವ ಸುಖನಿದ್ರೆಯನಾಳ್ದಿಸೆದಿರ್ಪ ಶೈವವಿ
ದ್ಯಾಪರ ಕಲ್ಲಿದೇವನನೆ ಕರ್ಚೆ ಕರಂ ಮಡಿದತ್ತು ಬೇಗದಿಂ ೨೮

ಕರುಣಾಕರನೀಕ್ಷಿಸಿ ಮಡಿ
ದುರಗನನೇಳೇಳೆನುತ್ತೆ ಹರಣಮನಿತ್ತಾ
ದರದಿಂ ಕಳುಪುತೆ ಪುರಜನ
ಮಱಿದೊಂದಡಿಗೆಱಗಿ ಕೀರ್ತಿಸುತ್ತಿರೆ ಮೆಱೆದಂ ೨೯

ವ॥ ಅಂತು ಕೆಲವಾನುಂ ದಿವಸ[1]ಮಲ್ಲಿ[1] ಕಲ್ಲಿನಾಥಂ ಸಲ್ಲಲಿತ ಶಿವಯೋಗದಿನೊಪ್ಪುತ್ತು ಮಿರೆ ಪೆಱತೊಂದು ದಿವಸಂ—

ಕಲ್ಲಿನಾಥನ ಚೇಟಿಯರ್ಘ್ಯನವಾಂಬುವಂ ತರಲೆಂದು ಪೋ
ಪಲ್ಲಿ ಬೀದಿಯೊಳಂಟಿ ತದ್ಘಟಮಂ ದ್ವಿಜಂ ಬಳಿಕೊರ್ವನಾ
ಪಲ್ಲವಾಧರೆ ಮುಟ್ಟಿದಂ ಭವಿಯೆಂದು ಕಂಡದನುರ್ವಿಯೊ
ಳ್ನಿಲ್ಲದಂದೊಡೆಯಿಕ್ಕುತೋಡುಗಳಂ ಶುಚಿಸ್ಥಲದಿಂಬಿನೊಳ್ ೩೦

ಮಱಗೆಯ್ದು ತದ್ವಿಷಾದದಿ
ನುಱ ಭಸಿತಸ್ನಾನಮೆಸಗಿ ಶಿವ ಶಿವ ರವದಿಂ
ಪೆಱತೊಂದು ಘಟಮನಾಂತೆ
ಳ್ದೆಱಗೊಳೆಯುದ್ದತ್ತಿರೆ ನೀರಿಕ್ಷಿಸುತ್ತವಳಿರವಂ ೩೧

ನೋಡಿದೆ ತೊಳ್ತಿನುರ್ಬಟೆಯ ಕೊರ್ಬಿನ ಪರ್ಬುಗೆಯಂ ದ್ವಿಜನ್ಮನ
ನೋಡಿದೆ ಸೋಂಕಿದಂ ಘಟಮನೆಂದೊಡೆದಳ್ಶುಚಿವಿಪ್ರನನ್ಯರಂ

ಗೊಂಡು ಬಂದು ಸುಖನಿದ್ರೆಯಲ್ಲಿ ಮುಳುಗಿದ್ದ, ಶೈವಸಂಬಂಧವಾದ ತತ್ತ್ವ ವಿದ್ಯೆಯನ್ನು ಬಲ್ಲ ಕಲ್ಲಿನಾಥ ದೇವನನ್ನೇ ಚೆನ್ನಾಗಿ ಕಚ್ಚಿ, ಆ ಕೂಡಲೇ ತಾನು ಸತ್ತು ಹೋಯಿತು. ೨೯. ಹೀಗೆ ಸತ್ತುಹೋದ ಹಾವನ್ನು ಕರುಣಾಮೂರ್ತಿಯಾದ ಹಾವಿನ ಹಾಳು ಕಲ್ಲಯ್ಯನು ಕಂಡು, ಅದಕ್ಕೆ ಜೀವದಾನ ಮಾಡಿ ಏಳೇಳು ಎನ್ನುತ್ತ ಎಬ್ಬಿಸಿ, ಪಟ್ಟಣದ ಜನರೆಲ್ಲ ಇದು ಅಸಾಧ್ಯಕಾರ್ಯವೆಂದು ಹೊಗಳುತ್ತಿರುವಂತೆ ಕಳುಹಿಸಿಕೊಟ್ಟು ಶೋಭಿಸುತ್ತಿದ್ದನು. ವ॥ ಆ ರೀತಿ ಹಲ ಕೆಲವು ದಿವಸ ಕಲ್ಲಿನಾಥನು ಅತ್ಯಂತ ಮನೋಹರವಾದ ಶಿವಯೋಗದಿಂದ ಶೋಭಿಸುತ್ತ ಒಪ್ಪುತ್ತಿರಲಾಗಿ ಮತ್ತೊಂದು ದಿವಸ ೩೦–೩೧. ಕಲ್ಲಿನಾಥನ ಸೇವಿಕೆಯೊಬ್ಬಳು ಶಿವಪೂಜಾರ್ಥವಾದ ಹೊಸ ನೀರನ್ನು ತರುವುದಕ್ಕೆಂದು ಬೀದಿಯನ್ನು ಹಿಡಿದು ಹೋಗುತ್ತಿದ್ದಾಗ ಓರ್ವ ದ್ವಿಜನು ಅವಳು ಹಿಡಿದು ತರುತ್ತಿದ್ದ ನೀರಿನ ಕೊಡವನ್ನು ಮುಟ್ಟಿದನು. ಆಗ ಆ ಚಿಗುರಿನಂತೆ ತುಟಿಯುಳ್ಳ ಸೇವಿಕೆಯು ಭವಿಯು ಕೊಡವನ್ನು ಮುಟ್ಟಿದನೆಂದು ತಿಳಿದು ಅದನ್ನು ಭೂಮಿಯ ಮೇಲೆ ಎತ್ತಿ ಹಾಕಿ, ಅದರ ಆ ತುಂಡುಗಳನ್ನು ಒಂದು ಪರಿಶುದ್ಧವಾದ

1 ಮಾ(ಮು)

ಪಾಡಳಿದಂಟಲಾಗದೆನುತಾಗವುಸಂತತಿ ಪೇಳ್ಗುವಲ್ಲದೀ
ನಾಡಜನಾಳಿಗಗ್ರಜನ ಸೋಂಕಘಕಾರಣವೆಂದು ಪೇಳ್ದುದೇ ೩೨

ಘಟಚೇಟಿ ವೇರೆಗೆಟ್ಟಿಂ
ತಟವುಟವಂ ನೆಗಳ್ದಳವಳ ಪಿಡಿತರಿಸಿ ಪವು
ತ್ಕಟ ದಂಡವೆಸಗಿದಲ್ಲದೆ
ಪಟುತರ ಮತ್ಕೋಪವೆಂತುಮೇಂ ತೀರ್ದಪುದೇ ೩೩

ವ॥ ಎಂದು ಪಾರ್ವರೆಲ್ಲಂ ಮುಳಿದು ಗಳಪುತ್ತುಂ ತಾವಿರ್ದಲ್ಲಿಗಾ ಕಲ್ಲಿದೇವನು ಬರಿಸಿ —

ಅಳಿದುರಗಂಗಸುವಿತ್ತು
ಜ್ವಳಮಹಿಮರ್ಪಿರಿಯರೆಂದು ಮನ್ನಿಪೆವೆಂದುಂ
ಪೊಳಲೊಳ್ನಿಮ್ಮಂ ಸದ್ಗುಣ
ಕಳಾಪ ನಿಮ್ಮಂತೆ ಸುಜನರುಂ ಪೆಱರೊಳರೇ ೩೪

ಎಲ್ಲರುಮೆಲ್ಲರ್ಗೊಳ್ಳಿದ
ರಿಲ್ಲಿ ವಲಂ ನಿಮ್ಮ ದಾಸರೀ ದಾಸಿ ಕರಂ

ಮರೆಯಾಗಿರುವ ಸ್ಥಳದಲ್ಲಿ ಮುಚ್ಚಿ ಹಾಕಿ ಆ ದ್ವಿಜನು ಮುಟ್ಟಿದ ಕಾರಣದಿಂದ ಚೆನ್ನಾಗಿ ಭಸ್ಮಸ್ನಾನ ಮಾಡಿ (ಭಸ್ಮವನ್ನು ಮೈಗೆಲ್ಲ ಬಳಿದುಕೊಂಡು ಶುದ್ಧಿಯನ್ನು ಹೊಂದಿ) ಶಿವ ಶಿವ ಎಂದೆನ್ನುವ ಧ್ವನಿಮಾಡಿ ಮತ್ತೊಂದು (ಘಟ) ಕೊಡವನ್ನು ತೆಗೆದು ಕೊಂಡು ಎಚ್ಚರ ವಹಿಸಿ (ನೀರನ್ನು ತುಂಬಿಕೊಂಡು) ಬರುತ್ತಿರುವಾಗ ಅವಳ ರೀತಿ ಯನ್ನು ನೋಡುತ್ತ 'ಈ ತೊತ್ತಿನ ಶೌರ್ಯ ವಿಶಿಷ್ಟವಾದ ಗರ್ವದ ಹೆಚ್ಚುಗಾರಿಕೆಯನ್ನು ನೋಡಿದಿರಾ ! ತನ್ನ ಘಟವನ್ನು ವಿಪ್ರನು ಮುಟ್ಟಿದನೆಂದು ಒಡೆದು ಹಾಕಿದಳು. ಗತಿ ಗೆಟ್ಟ ಅನ್ಯರನ್ನು ಶುಚಿಯಾದ ಬ್ರಾಹ್ಮಣನು ಮುಟ್ಟಲಾಗದೆಂದು ಆಗಮ ಹೇಳುವುದೇ ಹೊರತು, ಈ ನಾಡಾಡಿ ಜನರಿಗೆ ಬ್ರಾಹ್ಮಣನಾದವನ ಸ್ಪರ್ಶ ಪಾಪ ಕಾರಣವೆಂದು (ಎಲ್ಲಿಯಾದರೂ) ಹೇಳಿರುವುದೇ ? ೩೩. ಕೊಡವನ್ನು ಹಿಡಿದು ತಂದಿದ್ದ ಈ ದಾಸಿಯು ಎಲ್ಲೆ ಕಟ್ಟುಮೀರಿ ಈ ರೀತಿ ಅವಾಂತರವನ್ನು (ಸುಳ್ಳು ವ್ಯವಹಾರವನ್ನು) ಮಾಡಿದ್ದಾಳೆ. ಅವಳನ್ನು ಹಿಡಿದು ತರಿಸಿ, ಅತ್ಯಂತ ಕಠಿಣವಾದ ಶಿಕ್ಷೆಯನ್ನು ಮಾಡಿ ದಲ್ಲದೆ ನನ್ನ ಅತ್ಯಧಿಕವಾದ ಸಿಟ್ಟು ಏನು ಮಾಡಿದರೂ ಕಡಿಮೆಯಾದೀತೇನು ! ವ॥ ಹೀಗೆಂದು ಬ್ರಾಹ್ಮಣರೆಲ್ಲರೂ ಕೋಪದಿಂದ ಕೂಗಾಡುತ್ತ ತಾವಿರುವಲ್ಲಿಗೇ ಆ ಹಾವಿನ ಹಾಳು ಕಲ್ಲಯ್ಯನನ್ನು ಬರಮಾಡಿಕೊಂಡು ೩೪. ಸತ್ತುಹೋದ ಹಾವಿಗೆ ಪ್ರಾಣವನ್ನು ಕೊಟ್ಟ ಪ್ರಕಾಶಮಾನವಾದ ಮಹಿಮರೂ, ಹಿರಿಯರೂ ಎಂದು ನಿಮಗೆ ಈ ಪಟ್ಟಣ ದಲ್ಲಿ ಸದಾ ನಾವು ಮನ್ನಣೆಕೊಡುತ್ತಿದ್ದೇವೆ. ಹೇ ಸದ್ಗುಣಗಳ ಸಮೂಹವುಳ್ಳ ಕಲ್ಲಿ ನಾಥನೇ ನಿಮ್ಮ ಹಾಗೆ ಸಜ್ಜನರಾದವರು ಯಾರಾದರೂ ಇರುವರೇ ? ೩೫. ಎಲ್ಲರೂ ಎಲ್ಲಾ ಜನರಿಗೆ ಒಳ್ಳೆಯವರಾಗಿರುವುದಿಲ್ಲವಷ್ಟೆ ; ನಿಮ್ಮ ಸೇವಕಿಯಾದ ಈ ತೊತ್ತು

ಕುಲ್ಲೆಯಿವಳಗಿಯದೆಸಗಿದ
ಪೊಲ್ಲಮೆಯುಂ ಕೇಳ್ದಿರಲು ಪೇಳ್ದಪೆವೀಗಳ್ ೩೫

ಜಾವಳನೆವೇದಶಾಸ್ತ್ರಕ
ಳಾವಿದನಮಳಾಗ್ನಿಹೋತ್ರಿ ದಾವೋದರ ಭೂ
ದೇವಸುತಂ ಸುಚರಿತನೆ
ಎಮ್ಮೀ ವಾಮನಸೋಮಯಾಜಿ ಪದೆದೇಳ್ತರುತುಂ ೩೬

ಕೊಡವೀದಿಯಲ್ಲಿ ತನ್ನಯ
ಕೊಡನಂ ಸೋಂಕಿದೊಡೆ ದೋಷವಾಯ್ತೆನುತಳಲಿಂ
ಕಡುಮುಳಿದು ಬೈದು ವಿಪ್ರನ
ನೊಡಬಡಿದಳ್ಕೊಡನನಿಳೆಗಿದಚ್ಚರಿಯಲ್ತೇ ೩೭

ಪೊಡವಿಯೊಳಾವಾಗಮುಮುಂ
ನುಡಿವುದೆ ಸೋಂಕಿದೊಡೆ ವಿಪ್ರನಘಮಕ್ಕುಮೆನು
ತ್ತೊಡನಿದನಱಿಯಳೆ ಕೊಬ್ಬಿಂ
ದೊಡೆದಳ್ಗಡ ಘಟಮನೆಂತೊ ತೊಳ್ತಿನ ಬಿಂಕಂ ೩೮

ಹರವಿಯನೊಡೆದಾ ತೊಳ್ತಿನ
ಶಿರಮುಂ ಬಿಡದೊಡೆಯಲೆಳಸಿ ಮದ್ಬಾಲಕರಾ
ರ್ದುರವಣಿಸುತ್ತಿರೆ ನಿಮ್ಮಂ
ನಿರೀಕ್ಷಿಸಲ್ವೇಳ್ಕುಮೆಂದು ನಿಲಿಸಿದೆವಲ್ತೇ ೩೯

ಅತಿ ದುಷ್ಟಳು. ಇವಳು ಅಂಜದೆ ಮಾಡಿದ ದುಷ್ಕೃತ್ಯವನ್ನು ನೀವು ಕೇಳಿಲ್ಲ, ಈಗ ಹೇಳುತ್ತೇವೆ (ಕೇಳಿ); ೩೬–೩೭. ಹೇ ಸಚ್ಚರಿತ್ರನೇ, ವೇದ ಶಾಸ್ತ್ರಾದಿ ವಿದ್ಯೆಗಳನ್ನರಿತವನೂ, ಶ್ರೇಷ್ಠವಾದ ಅಗ್ನಿಹೋತ್ರವನ್ನು ಮಾಡಿರುವವನೂ, ಆದ ದಾಮೋದರನೆಂಬ ಭೂದೇವನ (ಬ್ರಾಹ್ಮಣನ) ಮಗನಾದ ಈ ನಮ್ಮ ವಾಮನ ಸೋಮಯಾಜಿಯು ಕೀಳು ಮನುಷ್ಯನೇ ? ಅವನು ಸಂತೋಷದಿಂದ ಕೊಳಕ್ಕೆ ಹೋಗಿಬರುವ ಬೀದಿಯಲ್ಲಿ ಬರುತ್ತಿರುವಾಗ ಅವನ ಕೊಡವು ಆ ನಿನ್ನ ದಾಸಿಯ ಕೊಡವನ್ನು ತಾಕಲಾಗಿ ದೋಷವಾಯಿತೆಂದು ಸಂಕಟಗೊಂಡು ಅತ್ಯಧಿಕ ಕೋಪದಿಂದ ಆ ಬ್ರಾಹ್ಮಣನನ್ನು ಬೈದು, ತನ್ನ ಕೊಡವನ್ನು ಒಡೆದು ಹಾಕಿದ್ದು ಲೋಕದಲ್ಲಿ ಆಶ್ಚರ್ಯವಲ್ಲವೇ ? ೩೮. ಲೋಕದಲ್ಲಿ ಯಾವಾಗಲಾದರೂ, ಬ್ರಾಹ್ಮಣನು ಮುಟ್ಟಿಸಿಕೊಂಡರೆ ಪಾಪವುಂಟಾಗುವುದೆಂದು (ಯಾರಾದರೂ) ಹೇಳುತ್ತಾರೆಯೇ ? ಈ ವಿಷಯವನ್ನು ಅವಳು ತಿಳಿಯಳೇ ? ಸೊಕ್ಕಿನಿಂದ ಕುಂಭವನ್ನೇ ಒಡೆದುಬಿಡುವುದೇ ? ಆ ತೊತ್ತಿನ ಗರ್ವ ಅದೆಷ್ಟೋ ? ೩೯. ಹೀಗೆ ಕೊಡವನ್ನು ಒಡೆದ ಆ ತೊತ್ತಿನ ಶಿರಸ್ಸನ್ನೇ ತಪ್ಪದೆ ಒಡೆದು ಹಾಕಬೇಕೆಂದು ಮನಸ್ಸುಮಾಡಿ ನಮ್ಮ ಹುಡುಗರು ಕೂಗಾಡಿ ಮುಂದುವರಿಯುತ್ತಿರುವಾಗ ನಿಮ್ಮ ಭೇಟಿಮಾಡಿ ಮಾತನಾಡಬೇಕೆಂದು ನಾವು ನಿಲ್ಲಿಸಿದೆ

ವ॥ ಎಂಬುದುಮಲ್ಲಿ ಕಲ್ಲಿದೇವಂ ಕಡು ಕನಲ್ದು—

ಫಣಿರಾಡ್ಭೂಷಣಭಕ್ತಮಂದಿರದ ಕೀಳಿಲ್ಗೊಂಡು ಪಟ್ಟಿರ್ಪ ಬ
ಲ್ಗೊಣಗಂಗಾದೊಡಮಾಗದಾಗದೆಲೆ ನಿಮ್ಮಂ ಸಾರ್ದು ಮುಟ್ಟಲ್ಕೆ ಮೇ
ಗಣ ಮಾತೇಂ ಮೃಡದೀಕ್ಷೆಯಾಂತ ಶಿವಭಕ್ತಾವಾಸದಾಸೀಜನಂ
ಗುಣಶೂನ್ಯಸ್ಥಿತಿವೆತ್ತ ನಿಮ್ಮನಿರದೆಂತುಂ ಮುಟ್ಟಲೇನಕ್ಕುಮೇ ೪೦

ವ॥ ಅದೇಂ ಕಾರಣಮೆಂಬಿರಪ್ಪೊಡೆ—

ವೇದಶಿರೋನಿರೂಪಿತಮೆನಿಪ್ಪ ವಿಭೂತಿಯುಮಕ್ಷಮಾಲೆಯುಂ
ಸಾದರಮಾನಲೊಲ್ಲದೆಲೆ ಗೋಪಿಯು ದುರ್ಮಲಮುಂ ಸರೋಜಬೀ

ವಲ್ಲವೇ ? ವ॥ ಹೀಗೆಂದ ಮಾತನ್ನು ಕೇಳಿದ ಆ ಕಲ್ಲಿದೇವನು ವಿಶೇಷವಾಗಿ ಕೋಪಗೊಂಡು ೪೦. ಎಲೈ ವಿಪ್ರರೇ, ಫಣಿಪತಿಯಾದ ಆದಿಶೇಷನನ್ನೇ ಆಭರಣವಾಗಿ ಉಳ್ಳ ಪರಮೇಶ್ವರನ ಭಕ್ತರ ಮನೆಯಲ್ಲಿ ಆಶ್ರಯ ಹೊಂದಿ, ಮಲಗಿರುವ ದೊಡ್ಡ ನಾಯಿಯಾದರೂ ನಿಮ್ಮನ್ನು ಸೇರಿ ಮುಟ್ಟುವುದು ಆಗದು -ಆಗದು, ಎನ್ನುವಾಗ ಮುಂದಿನ ಮಾತಿನಿಂದೇನು ಪ್ರಯೋಜನ ! ಶಿವದೀಕ್ಷೆಯನ್ನು ಹೊಂದಿ, ಶಿವಭಕ್ತರಾದವರ ಮನೆಯಲ್ಲಿ ವಾಸವಾಗಿ ದಾಸಭಾವದಿಂದ ಸೇವೆ ಮಾಡುವ ಜನರು ಗುಣವಿಹೀನರಾದ ನಿಮ್ಮನ್ನು ತಪ್ಪದೆ ಮುಟ್ಟಿಸಿಕೊಳ್ಳುವುದು ಹೇಗೆ ತಾನೇ ಸಾಧ್ಯವಾದೀತು ! ವ॥ ಇದಕ್ಕೆ ಕಾರಣವೇನೆಂದು ಅನ್ನುವುದಾದರೆ ೪೧.† ವೇದದ ಶಿರಸ್ಸೆನಿಸಿದ ಉಪನಿಷತ್ತಿನಲ್ಲಿ ಹೇಳಲ್ಪಟ್ಟರೆನಿಸುವ ವಿಭೂತಿ ರುದ್ರಾಕ್ಷ ಮಾಲೆಗಳನ್ನು ಭಕ್ತಿಪೂರ್ವಕವಾಗಿ (ಆದರೆ ಪೂರ್ವಕವಾಗಿ) ಧರಿಸುವುದನ್ನು ಬಿಟ್ಟು, ಗೋಪೀಚಂದನದ ದುಷ್ಟ ಹೊಲ

---

† ಭಸ್ಮ ರುದ್ರಾಕ್ಷಗಳು, ಪಾದೋದಕ ಪ್ರಸಾದ ಬಗೆಗೆ ಉಪನಿಷತ್ತಿನ ಈ ಕೆಳಗಿನ ಕೆಲವು ಶ್ಲೋಕಗಳನ್ನು ಲಕ್ಷ್ಯದಲ್ಲಿಟ್ಟು ಕವಿ ಈ ವಿಷಯವನ್ನು ಪ್ರಸ್ತಾಪಿಸುತ್ತಾನೆ : ೧. 'ಭೂತ್ಯೈನಪ್ರಮದಿತವ್ಯಂ! ಸರ್ವಂ ಹ ವಾ ಇದಂ ಭಸ್ಮ। ಸವಿಷಭಸ್ಮಜ್ಯೋತಿಃ। ತಿರ್ಯಕ್ತಿಸ್ರೋರೇಖಾಃ ಪ್ರಕುರ್ವೀತ ವ್ರತಮೇತಚ್ಛಾಂಭವಂ'॥ ಇವು ಭಸ್ಮ ಮತ್ತು ಅದನ್ನು ಧರಿಸುವುದರ ಪ್ರಾಶಸ್ತ್ಯಬೋಧಕಗಳು ೨. 'ರುದ್ರಸ್ಯ ನಯನಾದುತ್ಪನ್ನಾ ರುದ್ರಾಕ್ಷಾ ಇತಿಲೋಕೇಖ್ಯಾಯಂತೇ ಸದಾಶಿವಸ್ಸಂಹಾರಕಾಲೇ, ಸಂಹಾರಂ ಕೃತ್ವಾ, ಸಂಹಾರಾಕ್ಷಂ ಮುಕುಳೀಕರೋತಿ, ತನ್ನಯನಾತ್‌ಜಾತಾರುದ್ರಾಕ್ಷಇತಿಹೋವಾಚತಸ್ಮಾತ್ ರುದ್ರಾಕ್ಷತ್ವಂಇತಿ ರುದ್ರಾಕ್ಷೇವಾಗ್ವಿಷಯೇ ಕೃತೇ, ದಶಗೋಪ್ರದಾನೇನ ಯತ್ಫಲಮವಾಪ್ನೋತಿ ತತ್ಫಲಮಶ್ನುತೇ' ಇತ್ಯಾದಿ ಬೃಹಜ್ಜಾಬಾಲಾದಿ ಉಪನಿಷತ್ ವಾಕ್ಯಗಳು ರುದ್ರಾಕ್ಷಿಗಳ ಪ್ರಾಶಸ್ತ್ಯವನ್ನು ಹೇಳತಕ್ಕವುಗಳು.

೨. 'ರುದ್ರೇಣ ಆತ್ತಂ ಅಶ್ನಂತಿ, ರುದ್ರೇಣಪೀತಂ ಪಿಬಂತಿ, ರುದ್ರೇಣಘ್ರಾತಂ ಜಿಘ್ರಂತಿ। ತಸ್ಮಾತ್ ಬ್ರಾಹ್ಮಣಾಃ ಪ್ರಶಾಂತ ಮನಸೋ ವಿದ್ವಾಂಸೋ ನಿರ್ಮಾಲ್ಯ ಮೇವ ಭಕ್ಷಯಂತಿ ನಿರ್ಮಾಲ್ಯಮೇವಾಶ್ನೀಯಾತ್'—ಎಂಬ ಜಾಬಾಲೋಪನಿಷತ್ ವಾಕ್ಯವೂ—'ತ್ರಿ ಗುಪ್ತಾಸ್ತಮಶ್ನೀಯಾದ್ಯದಿಪಾಪಾಚ್ಛಿಪಾನರ್ಜಿತಂ ಭುಂಕ್ಷ್ವ ತದೇನೋ ಭುಂಕ್ಷಕ್ರಿಮಿಂ ಭುಂಕ್ಷ್ವ, ಲಂಭುಂಕ್ಷ್ವ, ಅಘಂ ಭುಂಕ್ಷ್ವಾಽಧೋಗಚ್ಛತ್ಯಧೋಗಚ್ಛತಿ—ಎಂಬ ಕಠವಲ್ಲ್ಯುಪನಿಷದಾದಿ ವಚನಗಳು ಶಿವಪ್ರಸಾದ ಪಾದೋದಕ ಪ್ರಾಶಸ್ತ್ಯ ಬೋಧಕಗಳು.

ಜಾದಿಮಣಿಸ್ರಜಂಗಳನೆ ತಾಳ್ದಪಿರಾ ಶ್ರುತಿಸಿದ್ಧಶಂಭುಪಾ
ದೋದಕ ಸುಪ್ರಸಾದಮನಣಂ ತೊಱೆದುಂಡಪಿರನ್ಯಶೇಷಮಂ ೪೧

ಶಿವ ಏಕೋ [1][ದೇವ][1]ಯೆನು
ತ್ತವಿಕಲ ವೇದೋಕ್ತಿಯುಲಿಗುಮಭವನನುಳಿದೀ
ಭವಭಾರಿದೇವತತಿಯಂ
ತವೆ ಜಾನಿಪಿರೇಕೆ ನಿಮಗೆ ವೈದಿಕನಾಮಂ ೪೨

ಬ್ರಾಹ್ಮಣನಪ್ಪಂ ಜಗದೊ
ಳ್ಬ್ರಹ್ಮಮನಱಿದಾತನಭವನೇ ಬಗೆಯೆ ಪರ
ಬ್ರಹ್ಮಂ ಬ್ರಹ್ಮಣಿ ಚರತಿ
ಬ್ರಾಹ್ಮಣಯೆಂಬಾಗಮೋಕ್ತಿಯಿಂದಿದು ಸತ್ಯಂ ೪೩

ಉಮೆಯಾಳ್ದಂ ಪರಬೊಮ್ಮಮೆಂಬುದು ಋತಂ ಸತ್ಯಂ ಪರಬ್ರಹ್ಮಮಂ
ತ್ರಮಿದುಂ ವೇದಶಿರಃಸಹಾಯಬಲದಿಂ ತತ್ಕಾರಣಂ ಬ್ರಹ್ಮವಿ

ಸನ್ನು, ಕಮಲದ ಬೀಜವೇ ಮೊದಲಾದ ಮಣಿಗಳ ಮಾಲಿಕೆಗಳನ್ನು ಧರಿಸುತ್ತೀರಿ. ಶ್ರುತಿಯಲ್ಲಿ ಸಿದ್ಧಾಂತ ಪಡಿಸಿದಂತೆ ಶಂಭುವಿನ ಪಾದೋದಕ ಮತ್ತು ಶ್ರೇಷ್ಠವಾದ ಪ್ರಸಾದವನ್ನು ಪೂರ್ಣವಾಗಿ ತಿರಸ್ಕರಿಸಿ, ಅನ್ಯ ಶೇಷವನ್ನು (ಪ್ರಸಾದ ಶೇಷವನ್ನು) ಸ್ವೀಕಾರ ಮಾಡುತ್ತೀರಿ. ೪೨. ಶಿವನೊಬ್ಬನೇ (ಬ್ರಹ್ಮಾಂಡಕ್ಕೆಲ್ಲ) ದೇವನೆನ್ನುತ್ತ ನ್ಯೂನತೆಯಿಲ್ಲದೆ ವೇದದ ಮಾತು ಹೇಳುತ್ತಿದೆ. ಅಂಥ ಆ ಭವನನ್ನು ತೊರೆದು ಈ ಹುಟ್ಟು ಸಾವುಗಳ್ಳುಳ್ಳ ದೇವತೆಗಳ ಸಮೂಹವನ್ನು ಚೆನ್ನಾಗಿ ಧ್ಯಾನ ಮಾಡುತ್ತೀರಿ. ಇಂಥ ನಿಮಗೆ ವೈದಿಕರೆಂಬ ಹೆಸರೇಕೆ ?* ೪೩. ಜಗತ್ತಿನಲ್ಲಿ ಬ್ರಹವನ್ನು ಅರಿತವನೇ ಬ್ರಾಹ್ಮಣನೆನಿಸುವನು. ಆ ಪರಶಿವನೇ ವಿಚಾರ ಮಾಡಿ ನೋಡಿದರೆ ಪರಬ್ರಹ್ಮನೆನಿಸುವನು. (ಅಂಥ) ಬ್ರಹ್ಮನ ವಿಷಯದಲ್ಲಿ ವ್ಯವಹರಿಸುವವನೇ ಬ್ರಾಹ್ಮಣನೆನಿಸುವನೆಂಬ ಆಗ ಮೋಕ್ತಿಯಿಂದ ಇದು ಸತ್ಯವೆನಿಸುವುದು.[1] ೪೪. ಉಮಾಪತಿಯಾದ ಶಿವನೇ ಪರಬ್ರಹ್ಮನೆಂಬುದು 'ಋತಂ ಸತ್ಯಂ ಪರಬ್ರಹ್ಮ'ವೆಂಬ ಈ ಮಂತ್ರದ ಸಹಾಯದ ಬಲದಿಂದ ಸಿದ್ಧವಾಗುವುದು. ಆದ ಕಾರಣ ಬ್ರಹ್ಮವಿಷ್ಣು ಮುಖ್ಯರಾದ ದೇವತೆಗಳಿಗೆ

---

1 ಧ್ಯೇಯ(ಅ, ದ,ಚ, ಮ, ಜ, ಗ)

*'ಕಾರಣಂತು ಧ್ಯೇಯಸ್ಸರ್ವೈಶ್ವರ್ಯ ಸಂಪನ್ನಶ್ಶಂಭುರಾ ಕಾಶಮಧ್ಯೇಧ್ರುವಂ। ಶಿವಏಕೋಧ್ಯೇಯ ಶಿವಂಕರಸ್ಸರ್ವ ಮನ್ಯತ್ ಪರಿತ್ಯಜ್ಯ'—ಎಂದು ಅಥರ್ವಶಿಖಾವಚನವು ಸರ್ವದೇವತಾಪೇಕ್ಷಯಾ ಶಿವಪಾರಮ್ಯವನ್ನು ಹೇಳುವುದು.

(1) 'ಯೇವಿದುಃ ಬ್ರಹ್ಮವಾಚ್ಯಂ ಶ್ರೀರುದ್ರಂ ತೇ ಬ್ರಾಹ್ಮಣಾಃ' ಎಂಬ ಆಗಮದ ಮಾತಿನಂತೆ ಯಾವನು ಬ್ರಹ್ಮವನ್ನು ಅರಿತವನೋ ಅವನೇ ಬ್ರಾಹ್ಮಣ ನೆಂಬಮಾತೇ ಪ್ರಮಾಣವೆಂದು ಕವಿಯ ಆಶಯ.

ಷ್ಣುಮುಖರ್ಜೇವರುಮೇಶನೊರ್ವನೆ ಪರಬ್ರಹ್ಮಂ ದಲೆಂಬೀ ವಿವೇ
ಕಮದೆಂದು ನಿಮಗಿಲ್ಲದಿರ್ಪ ಕತದಿಂ ಬ್ರಾಹ್ಮಣ್ಯಮೆಂತಕ್ಕುವೋ ೪೪

ಪರಮಾತ್ಮಂ ಪರಬೊಮ್ಮಂ
ಪರಮೇಶನೆನಿಪ್ಪನನ್ಯ ಸಾಧಾರಣ ಭಾ
ಸುರಪರಮನಾಮಮಖಿಳಾ
ಮರಪಶುಪತಿ ಶಂಭುಗಲ್ಲದನ್ಯರ್ಗೊಳವೇ ೪೫

ಭಾವಿಪೊಡಾ ವೇದಂ ತ್ವಂ
ದೇವೇಷು ಬ್ರಾಹ್ಮಣೋಸಿ ಯೆಂಬುದಱಿಂ ಗೌ
ರೀವರನಾದಿ ಬ್ರಾಹ್ಮಣ
ನಾ ವಿಭುವಂ ಬ್ರಾಹ್ಮಣಂಗೆ ಸೇವಿಪುದುಚಿತಂ ೪೬

ಇದನುಳಿದಧಮಾಮರರಂ
ಪದೆದರ್ಚಿಪ ಶಂಭುನಿಷ್ಠ ಗಾಯತ್ರಿಯನೊ
ರ್ಮೊದಲರ್ಕಪರಮನೆಸಗುವ
ಕುದುಕುಳಿಗಳ್ನಿಮಗೆ ಸಲ್ವುದೇ ಬ್ರಾಹ್ಮಣ್ಯಂ ೪೭

ಈಶ್ವರನೊಬ್ಬನೇ ನಿಶ್ಚಯವಾಗಿ ಪರಬ್ರಹ್ಮನೆಂಬ ವಿವೇಕವು ಎಂದೂ ನಿಮಗೆ ಇಲ್ಲದಿರುವ ಕಾರಣದಿಂದ ನಿಮಗೆ ಬ್ರಾಹ್ಮಣ್ಯವೆಂಬುದು ಹೇಗೆ ಸಿದ್ಧಿಸುವುದು ?[2] ೪೫. ಪರಮಾತ್ಮ ಪರಬ್ರಹ್ಮ, ಪರಮೇಶ್ವರ ಎಂದೆನ್ನುವ ಅನ್ಯರಿಗೆ ಎಷ್ಟು ಮಾತ್ರದಿಂದಲೂ ಅನ್ವಯಿಸದ ಶೋಭಿಸುವ ಪವಿತ್ರ ಹೆಸರು ಸಮಸ್ತ ದೇವತೆಗಳ ಪತಿಯಾದ ಶಂಭುವಿಗಲ್ಲದೆ ಬೇರೆ ಯಾರಿಗಾದರೂ ಉಂಟೇ ? ೪೬. ವಿಚಾರ ಮಾಡಿ ನೋಡಿದರೆ ಆ ವೇದವು 'ತ್ವಂ ದೇವೇಷು ಬ್ರಾಹ್ಮಣೋಽಸಿ' ಎಂಬುವ ಮಾತಿನಿಂದ ಅಂದರೆ ನೀನು ದೇವತೆಗಳಲ್ಲಿ ಬ್ರಾಹ್ಮಣನಾಗಿದ್ದೀಯೆ ಎಂಬ ಮಾತಿನಿಂದ ಗೌರೀಪತಿಯಾದ ಶಿವನೇ ಅನಾದಿ ಬ್ರಾಹ್ಮಣನು, ಆ ಪ್ರಭುವನ್ನು ಬ್ರಾಹ್ಮಣನೆಂದು ಸೇವಿಸುವುದೇ ಉಚಿತವಾದುದ್ದು.[3] ೪೭. ಇದನ್ನು ಬಿಟ್ಟು ಉಳಿದ ಕೀಳುದರ್ಜೆಯ ದೇವತೆಗಳನ್ನು ಪ್ರೀತಿಯಿಂದ ಅರ್ಚಿಸುವ, ಗಾಯತ್ರೀ ಮಂತ್ರದಿಂದ ಮೊದಲು ಅರ್ಕನೇ (ವಿಷ್ಣುವೇ) ಪರಮನೆಂದು ವ್ಯವಹರಿಸುವ ಹೊಟ್ಟೆ ಕಿಚ್ಚಿನ (ಮಾತ್ಸರ್ಯದ) ಸ್ವಭಾವವುಳ್ಳ ನಿಮಗೆ ಬ್ರಾಹ್ಮಣ್ಯವು

---

(2) 'ಋತಂ ಸತ್ಯಂ ಪರಬ್ರಹ್ಮಂ । ಪುರುಷಂ ಕೃಷ್ಣ ಪಿಂಗಳಂ ।
ಊರ್ಧ್ವ ರೇತಂ ವಿರೂಪಾಕ್ಷಂ । ವಿಶ್ವರೂಪಾಯ ವೈನಮಃ ॥ ಎಂಬ ಮಾತು ಶಿವನೇ ಪರಬ್ರಹ್ಮನೆಂಬ ಮಾತಿಗೆ ಪ್ರಮಾಣವೆಂದು ಕವಿಯ ಆಶಯ.

(3) 'ತ್ವಂದೇವೇಷು ಬ್ರಾಹ್ಮಣೋಽಸ್ಯಹಂ ಮನುಷ್ಯೇಷು ಬ್ರಾಹ್ಮಣಃ। ಬ್ರಾಹ್ಮಣೋಮೇ ಬ್ರಾಹ್ಮಣಮುಪಧಾವಂತ್ಯುಪಧಾವಾಮಿ' —ಎಂಬ ಸಾಮವೇದದ ಮಾತೇ ಇದಕ್ಕೆ ಪ್ರಮಾಣವೆಂದು ತಿಳಿಯಬೇಕು.

ವ॥ ತತ್ಕಾರಣಂ "ಶಿವಭಕ್ತಚರಾಗಾರದಾಸಿ ಭುಕ್ತೋಚ್ಛಿಷ್ಟಾಶನಾಃ । ಶುನಕಾಃ ಸೂಕರಾ ಯಾಂತಿ ಯಾಯಜೂಕಕ್ರಿಯಾಗತಿಂ" ಎಂಬ ಮಕುಟಾಗಮ ಶಿವವಚನಪ್ರಮಾಣದಿಂ ಶಿವಭಕ್ತಗೃಹದಾಸೀಜನಮುಂಡುಳುಪಿದುದಂ ಕೊಂಡದಱಿನೊಗೆದ ಶುದ್ಧಬುದ್ಧಿಯನಾಳ್ದ ಶುನಕನೆಂತು ನಿಮ್ಮಂ ಮುಟ್ಟುಗುಮೆನೆ ಕೇಳ್ದು ಶಾಪಾಗ್ನಿದಗ್ಧರ್ಮಗುಳ್ದು ಕೋಪಾಗ್ನಿದಗ್ಧರಾಗಿ—

ಆಡಿದೆ ಲೇಸನಿಂದಮಮ ಮೂರ್ಖಶಿಖಾಮಣಿ ನಾಯ್ಗಳಿಂದೆ ಕೀ
ಳ್ಮಾಡಿದೆಯೆಮ್ಮನಾಗಮವಿದಗ್ರಜರು ನೆಱೆ ನಿನ್ನ ತೊಳ್ತು ಮುಂ

ಸಲ್ಲುವುದೇ ? ವ॥ ಆದ ಕಾರಣ ಶಿವಭಕ್ತರಾದ ಜಂಗಮರುಗಳ ಮನೆಯಲ್ಲಿರುವ ಸೇವಕ ವರ್ಗದವರು ಊಟ ಮಾಡಿ ಉಳಿಸಿದ ಅನ್ನವನ್ನು ಊಟ ಮಾಡಿದ ನಾಯಿ ಹಂದಿ ಯಜ್ಞ ಮಾಡಿದವನಿಗೆ ಗತಿಯುಂಟಾಗುವುದೋ ಆ ಗತಿಯನ್ನು ಹೊಂದುತ್ತದೆ. ಹೀಗೆನ್ನುವ ಮಕುಟಾಗಮದಲ್ಲಿ ಹೇಳಿದ ಶಿವನ ವಚನದ ಆಧಾರದಿಂದ ಶಿವಭಕ್ತರ ಮನೆಯಲ್ಲಿನ ದಾಸೀಜನಗಳು ಉಂಡುಳಿಸಿದುದುದನ್ನು ಸ್ವೀಕರಿಸಿ, ಅದರಿಂದುಂಟಾದ ಶುದ್ಧ ಬುದ್ಧಿಯನ್ನು ಹೊಂದಿದ ನಾಯಿಯು ಹೇಗೆ ನಿಮ್ಮನ್ನು ಮುಟ್ಟಿಸಿಕೊಂಡೀತು ? ಎಂದು ಆ ಹಾವಿನ ಹಾಳು ಕಲ್ಲಿನಾಥನು ಹೇಳಲು, (ಗೌತಮರ) ಶಾಪದ ಅಗ್ನಿಯಿಂದ ದಗ್ಧರಾದ † ಆ ವಿಪ್ರರು ಕೋಪವೆಂಬ ಬೆಂಕಿಯಿಂದ ಸುಡಲ್ಪಟ್ಟವರಾಗಿ ೪೮. ಎಲೈ ಮೂರ್ಖಶಿಖಾಮಣಿಯಾದ ಕಲ್ಲಿನಾಥ, ಅಮಮ! ಸರಿಯಾಗಿ ಮಾತನಾಡಿದೆ! ಆಗಮ

---

† ಶಾಪಾಗ್ನಿದಗ್ಧರ್ :—ಕವಿಯಿಲ್ಲಿ ಈ ಕೆಳಗಿನ ಪುರಾಣಕಥೆಯೊಂದನ್ನು ಲಕ್ಷ್ಯದಲ್ಲಿಟ್ಟು ಹೀಗೆ ಹೇಳಿದನೆನ್ನಲಾಗಿದೆ. ಆ ಕಥೆ ಹೀಗೆ : ಪೂರ್ವದಲ್ಲಿ ಒಮ್ಮೆ ೧೨ ವರ್ಷಗಳ ಕ್ಷಾಮ ತಲೆದೋರಿದಾಗ ಗೌತಮ ಮಹರ್ಷಿಗಳು ಈಶ್ವರನನ್ನು ಕುರಿತು ತಪಸ್ಸುಮಾಡಿ ತಮ್ಮಾಶ್ರಮದ ಸುತ್ತ ಮಳೆ ಬೆಳೆಗಳಾಗುವಂತೆ ವರ ಪಡೆದು ತಮ್ಮ ಆಶ್ರಮ ಭೂಮಿಯಲ್ಲಿ ಸಮೃದ್ಧ ಮಳೆ ಬೆಳೆ ಪಡೆದರಂತೆ. ಆಗ ಅನೇಕ ಮನುಷ್ಯರೂ ಪ್ರಾಣಿಗಳೂ ಅವರ ಆಶ್ರಮದ ಆಶ್ರಯ ಪಡೆದು ಸುಖಿಸಿ ಕ್ಷಾಮ ಮುಗಿದು ಸುಭಿಕ್ಷವಾದ ಮೇಲೆ ಎಲ್ಲರೂ ತಮ್ಮ ತಮ್ಮ ಮೂಲ ಸ್ಥಳಗಳಿಗೆ ಹೋಗಲೆತ್ನಿಸುತ್ತಿದ್ದರು. ಅಲ್ಲಿದ್ದ ಕೆಲವು ದ್ವಿಜರು ಗೌತಮರ ಮೇಲಿನ ಹೊಟ್ಟೆಕಿಚ್ಚಿನಿಂದ (ಅವರು ಶಿವಭಕ್ತರೆಂಬ ಹೊಟ್ಟೆಕಿಚ್ಚಿನಿಂದ) ಇವರ ಮೇಲೆ ಏನಾದರೂ ದೋಷವನ್ನು ಹೊರಿಸಬೇಕೆಂದು ಒಂದು ಮಾಯಾ ಹಸುವನ್ನು ಸೃಷ್ಟಿಸಿ ಅದು ಅವರ ಹತ್ತಿರಕ್ಕೆ ಬರುವಂತೆ ಮಾಡಿದರು. ಹಾಗೆ ಆ ಹಸುವು ಬರಲು ಗೌತಮರು ಅದರ ಮೈಮೇಲೆ ಕಯ್ಯಾಡಿಸಿದ ಕಾರಣವೇ ಅದು ಸತ್ತು ಹೋಯಿತು. ದ್ವಿಜರೆಲ್ಲ ಗೌತಮರ ಮೇಲೆ ಗೋಹತ್ಯಾ ದೋಷವನ್ನು ಆರೋಪಿಸಿ ಆಶ್ರಮ ಬಿಟ್ಟು ಹೊರಡಲಾರಂಭಿಸಿದರು. ಇದನ್ನು ಜ್ಞಾನದೃಷ್ಟಿಯಿಂದ ಅರಿತ ಗೌತಮರು—ಆ ನೀಚ ದ್ವಿಜರಿಗೆ ಹೀಗೆ ಶಾಪ ಕೊಟ್ಟರು : ಸೂತ ಸಂಹಿತೆಯ ಪ್ರಕಾರ :—

'ವಿಷ್ಣ್ವಾದಿ ದೇವತಾಸ್ಸರ್ವಾ ವಿಶಿಷ್ಟಾಶ್ಶಂಕರಾದಿತಿ । ಭ್ರಾಂತಿ ವಿಜ್ಞಾನ ಸಂಪನ್ನಾ ಭವೇತ ಬ್ರಾಹ್ಮಣಾಧಮಾಃ । ವೇದಬಾಹ್ಯೇಷು ತಂತ್ರೇಷು ಪಾಂಚರಾತ್ರಾದಿಷು ದ್ವಿಜಾಃ । ಭವೇತ ದೀಕ್ಷಿತಾ ಯೂಯಂ ಯುಷ್ಮಾಕಂ ಪುತಜಾಸ್ತಥಾ । ಮಹಾದೇವಸ್ಯ ಚೋತ್ಕರ್ಷೇ ತ್ರಿಪುಂಡ್ರೋದ್ಧೂಳನಾದಿಷು । ರುದ್ರಾಕ್ಷಧಾರಣೇ ರುದ್ರಲಿಂಗಸ್ಯೈವತು ಪೂಜನೇ । ರುದ್ರಾಲಯಾದಿವೃಕ್ಷಾಯಾಂ ರುದ್ರಯಾತ್ರಾದಿ ಕರ್ಮಸು । ಯದ್ಯತ್ತು ರುದ್ರಸಂಬಂಧಿ ತತ್ರತತ್ರಾಪಿ ದುರ್ಜನಾಃ । ಭವೇತ ವಿಮುಖಾ ಯೂಯಂ ಸರ್ವದಾ ಬ್ರಾಹ್ಮಣಾಧಮಾಃ ॥ ಇತ್ಯಾದಿ ಇತ್ಯಾದಿ—ಗೌತಮರು ಅತ್ಯಂತ ಶೈವಭಕ್ತಿ ಸಂಪನ್ನರಾಗಿದ್ದರೆಂದು ಶೈವರ ಗ್ರಹಿಕೆ—

ಮಾಡಿದ ತಪ್ಪನೋಸರಿಸಿ ನಿನ್ನೊಡವೇಳ್ದೊಡೆ ತತ್ಕಟೂಕ್ತಿಯಿಂ
ನೀಡೆನೆ ನಿಷ್ಠುರೋಕ್ತಿಗಳನೆಂದೆ ಗಡೆಲ್ಲರ ಮುಂದೆ ಕೋರ್ವಿನಿಂ ೪೮

ಬಿಸಿಲುಪಟಳಮಂ ಕಳಿಯು
ಲ್ಬೊಪಸ ಬನಮಂ ಪುಗೆ ದವಾಗ್ನಿ ಕೊಂಡವೊಲಾದ
ತ್ರಿಸುರಲದೇಂ ಬಱುವಾತಿನ
ಪಸರಂ ಮಾಣ್ಗೆಮು ಸಮುಸ್ತರುಂ ಕೇಳ್ವಿನೆಗಂ ೪೯

ಓದಿಸು ನಿನ್ನಯು ಸೊಣಗನಿ
ನಾದಂ ಪದಪಾಳಿ ಜಟಿಗಳವುರ್ದಿರೆ ವಿಸುಪಾ
ವೇದಮನೀಕ್ಷಿಪೆವೆನೆ ಸ
ನ್ಮೋದಂ ವಿೀಗೆ ನಗುತೆ ಶರಣನೆಂದೀತೆಂದುಂ ೫೦

ಇದು ಗಹನಮೆ ಮದ್ಭಕ್ತರ
ಸದನಮನೆಡೆವಿಡದೆ ಕಾವ ಕುರ್ಕುರ ತತಿಗು
ರ್ವಿದ ವೇದವೊನಕೆವಾಡ
ಪ್ಪುದಱಿಂದೀ ಶುನಿಗೆ ವೇದವೋದುವ ಕಜ್ಜಂ ೫೧

ವ॥ ಎಂದು ಗುರುಧ್ಯಾನಪರಾಯಣನಾಗಿ ನಿಜಗೃಹದ್ವಾರದೊಳ್ಪಟ್ಟಿರ್ದ ಜಾಯಿಲನಂ ಪ್ರಸನ್ನದೃಷ್ಟಿಯಿಂ ನೋಡಿ ವೇದಪಿತಾಮಹನೆಂಬ ಪೆಸರಿಂನಂಗುಲಿಯ ಚಿಟುಂಕನಿಟ್ಟು ಕರೆದು—

ಜ್ಞಾನವುಳ್ಳವರಲ್ಲಿ ಶ್ರೇಷ್ಠರಾದ ನಮ್ಮನ್ನು ನಾಯಿಗಿಂತಲೂ ಕೀಳು ಮಾಡಿ ಮಾತನಾಡಿದೆ ! ನಿನ್ನ ತೊತ್ತು ಈ ಪೂರ್ವದಲ್ಲಿ (ನಮ್ಮ ವಿಷಯದಲ್ಲಿ) ಮಾಡಿದ ಅಧಿಕವಾದ ತಪ್ಪನ್ನು ನಿನ್ನಲ್ಲಿ ಹೇಳಿದರೆ ಆ ತಪ್ಪನ್ನು ಒಂದು ಕಡೆ ತಳ್ಳಿಹಾಕಿ, ಅವಳ ಕಠಿಣೋಕ್ತಿಗಳಿಗಿಂತಲೂ ಹೆಚ್ಚೋ ಎನ್ನುವಂತೆ ನಿಷ್ಠುರವಾದ ಮಾತುಗಳನ್ನು ಎಲ್ಲರ ಮುಂದೆ ಆಡಿದೆಯಲ್ಲವೇ ! ೪೯–೫೦. ಬಿಸಿಲಿನ ಉಪಟಳವನ್ನು ಕಳೆಯಬೇಕೆಂದು ನೂತನವಾಗಿ ಚಿಗಿತವನವನ್ನು ಹೊಕ್ಕರೆ, ಕಾಡ್ಗಿಚ್ಚು ಆಹುತಿಕೊಂಡ ಹಾಗೆ ಆಯಿತು. ಮಾತಾಡಿ ಪ್ರಯೋಜನವೇನು ? ಒಣ ಮಾತಿನ ಮಾಲೆ ಸಾಕು ! ಸಮುಸ್ತರೂ ಕೇಳುವ ಹಾಗೆ ನಿನ್ನ ನಾಯಿಯಿಂದ ಉದಾತ್ತ, ಅನುದಾತ್ತ, ಸ್ವರಿತ ಧ್ವನಿ ವಿಶೇಷದ ವೇದಾಧ್ಯಯನ ಕ್ರಮ ವಿಶೇಷವಿರುವ ಹಾಗೆ ಶೋಭಿಸುವ ಆ ವೇದವನ್ನು ಓದಿಸು, ನೋಡುತ್ತೇವೆ ; ಎನ್ನಲು, ಅತ್ಯಂತ ಸಂತೋಷಗೊಂಡ ಕಲ್ಲಿನಾಥ ಶರಣನು ನಗುತ್ತ ಹೀಗೆ ಹೇಳಿದನು : ೫೧. ನನ್ನ ಭಕ್ತರ ಮನೆಯನ್ನು ಎಡಬಿಡದಂತೆ ಕಾಯ್ದುಕೊಂಡಿರುವ ನಾಯಿಗಳ ಸಮೂಹಕ್ಕೆ ಶ್ರೇಷ್ಠವಾದ ವೇದವು ಒನಕೆಪಾಡೆನಿಸುವುದು (ಕುಟ್ಟುವಾಗ ಹಾಡುವ ತ್ರಿಪದಿ ಹಾಡಿದ್ದ ಹಾಗೆನಿಸುವುದು), ಆದ್ದರಿಂದ ನಾಯಿಯ ಮುಖದಿಂದ ವೇದವನ್ನೋದಿಸುವ ಈ ಕಾರ್ಯ ಯಾವ ಗಹನ ವಿಚಾರ ! ವ॥ ಹೀಗೆಂದು ಗುರುಧ್ಯಾನಪರಾಯಣನಾಗಿ, ತನ್ನ ಮನೆಯ ಬಾಗಿಲ ಮುಂದೆ ಮಲಗಿದ್ದ ನಾಯಿಯನ್ನು ಪ್ರಸನ್ನ ಮುದ್ರೆಯಿಂದ ನೋಡಿ, 'ಹೇ ವೇದಪಿತಾಮಹನೇ' ಎಂದು ಬೆರಳಿನಿಂದ ಚುಟಿಕೆ ಹಾಕಿ

[1]ಉಚ್ಚಿ[1] ಶಿವಪ್ರಸಾದಪರಿಲಬ್ಧಿಜಪಾವನಭಾವಪೂರ್ಣ ಭಾ
ಸ್ವಚ್ಚಿದಖಂಡಸುಪ್ರಣವಮಂಗಳವಿಗ್ರಹ ಲಿಂಗಭಾವನಾ
ಸಚ್ಚರಿತಪ್ರಸನ್ನ ಸಕಳಶ್ರುತಿರತ್ನಸಮುದ್ರ ಬರ್ಪುದು
ಚ್ಚುಚ್ಚಿರೆಯೆಂದು ತಾಂ ಕರೆದನಂತದನಾ ಮದನಾರಿಸನ್ನಿಭಂ ೫೨

ವ॥ ಎಂದು ಕರೆವುದುಮಾ ಸೊಣಗನೇಳ್ಕಂದು ಪರವಾದಿಜನಮಂ ಬಡಿಯಲ್ಕಶೆಯಂ ಚಾ[2]ಲಿಪಂತೆ ಬಾಲಮನಾಡಿಸುತ್ತುಂ ಭಕ್ತಿಭರದಿನಡಿಗೆಜಗಿ ನಿಲ್ವಿನಮದಜ ಮೊಗಮನಾಮಹಿಮಾಕರಂ ನೋಡಿ ನಿಜಕೃಪಾತರಂಗಿಣಿಯೊಳೋಲಾಡಿಸುತ್ತುಮಾವ ವೇದದೊಳಾದೊಡಮೊಂದೆಡೆಯೊಳೊಂದು ವಾಕ್ಯಮನೆತ್ತಿ ತಳ್ವದೋದೆಂಬುದುಮಾಗಳಾ ರುದ್ರಾಂಶಸಂಭೂತಂ ಪದ್ಮಾಸನಮನವಷ್ಟಂಭಿಸಿ ಋಜುಭಾವದಿಂ ಕುಳ್ಳಿರ್ದು ಹೃದಯಕಮಳಕರ್ಣಿಕಾಗ್ರದೊಳ್ಗುರುಸ್ವರೂಪ ಪರಶಿವನಂ ಜಾನಿಸಿ ಮೂಲಾಧಾರಾಕುಂಚನಂಗೆಯ್ದು—

ಕರೆದು ೫೨. ಆ ಮನ್ಮಥಾರಿ ಸಮಾನನಾದ ಕಲ್ಲಿನಾಥನು (ನಾಯಿಯನ್ನು ಕುರಿತು) ಶ್ರೇಷ್ಠವಾದ ಶಿವನ ಪ್ರಸಾದದಿಂದ ಲಬ್ಧವಾದ ಶಿವಮಂತ್ರಾನುಷ್ಠಾನದ ಪೋಷಣೆಯಿಂದ ತುಂಬಿಹೋದ ಮನೋಭಿಪ್ರಾಯದಿಂದ ಕೂಡಿದ ಶುನಕನೇ, ಪ್ರಕಾಶಮಾನವಾದ ಅಖಂಡ ಜ್ಞಾನಸ್ವರೂಪದ ಶ್ರೇಷ್ಠ ಓಂಕಾರ ಪ್ರಣವದಿಂದ ಮಂಗಳಕರವಾದ ಶರೀರವುಳ್ಳದ್ದೇ, ಲಿಂಗ ಸಂಬಂಧವಾದ ಭಾವನಾ ವಿಶೇಷದಿಂದ (ಧ್ಯಾನ ವಿಶೇಷದಿಂದ) ಕೂಡಿ ಶ್ರೇಷ್ಠ ಚರಿತ್ರೆಯಿಂದ ಸಂತೋಷಗೊಂಡಿರುವಂತಹುದೇ, ಸಮಸ್ತ ಶ್ರುತಿಗಳೆಂಬ ರತ್ನಗಳಿಗೆ ಸಮುದ್ರೋಪಾದಿಯಲ್ಲಿರುವಂತಹುದೇ, ಬರಬೇಕು. ಚುಚ್! ಚುಚ್! (ನಾಯಿಯನ್ನು ಕರೆಯುವ ರೀತಿ) ಎಂದು ಅವನು ಆ ನಾಯಿಯನ್ನು ಕರೆದನು.

ವ॥ ಹೀಗೆಂದು (ಕಲ್ಲಿನಾಥನು) ಆ ನಾಯಿಯನ್ನು ಕರೆಯಲಾಗಿ, ಆ ನಾಯಿಯು ಎದ್ದು ಬಂದು, ಪರವಾದಿ ಜನಗಳನ್ನು ಬಡಿಯುವುದಕ್ಕೆ ಬಡಿಯನ್ನು ಅಲ್ಲಾಡಿಸುವಂತೆ ಬಾಲವನ್ನಾಡಿಸುತ್ತ, ಭಕ್ತಿಯ ಆಧಿಕ್ಯದಿಂದ ಕೂಡಿ ಆ ಕಲ್ಲಿನಾಥನ ಅಡಿಗಳಿಗೆ ನಮಸ್ಕರಿಸಿ ನಿಂತಿತು. ಮಹಿಮಾಕರನಾದ ಕಲ್ಲಿ ನಾಥನು ಅದರ ಮುಖವನ್ನು ನೋಡಿ, ತನ್ನ ಕೃಪಾರಸವೆಂಬ ನದಿಯಲ್ಲಿ ಅದನ್ನು ಈಸಾಡಿಸುತ್ತ '(ಎಲೈ ಶುನಕನೇ,) ಯಾವ ವೇದದಿಂದಲಾದರೂ ಒಂದುಸ್ಥಳದಿಂದ (ಒಂದು ಅಧ್ಯಾಯದಿಂದ) ಒಂದು ವಾಕ್ಯವನ್ನು ಎತ್ತಿಕೊಂಡು ತಡಮಾಡದೆ ಓದು' ಎನ್ನಲಾಗಿ ಆಗ ಆ ರುದ್ರಾಂಶ ಸಂಭವಗೊಂಡ (ನಾಯಿಯು) ಪದ್ಮಾಸನ ಹಾಕಿ, ಸಾತ್ವಿಕಭಾವದಿಂದ ಕುಳಿತುಕೊಂಡು, ಹೃದಯವೆಂಬ ಕಮಲದ ಮಧ್ಯದಲ್ಲಿರುವ ಕರ್ಣಿಕಾರದ ಮೇಲುಭಾಗದಲ್ಲಿ (ಮನಸ್ಸನ್ನು ತಂದು) ಗುರುಸ್ವರೂಪನಾದ ಪರಶಿವನನ್ನು ಧ್ಯಾನಮಾಡುತ್ತ, ಮೂಲಾಧಾರ ಚಕ್ರವನ್ನು

---

1 ಉಚ್ಚ(ಅ) 2 ಜಾ(ಜ, ಅ)

ರವಿಶಶಿಗತಿಯುಂ ತಡೆದಾ
ಪವನನನಾ ಮಧ್ಯಮಾರ್ಗದೊಳ್ಪತ್ತಿಸಿ ಬಿಂ
ದುವಿಮಳನಾದಲಯಾನ್ವಿತ
ಸವಿಶೇಷಪ್ರಣವಮಂ ಸಮುಚ್ಚರಿಸುತ್ತುಂ ೫೩

ಪಿರಿದಾಶ್ಚರ್ಯದೆ ಪೊಗಳು
ತ್ತಿರೆ ಭೂಸುರತತಿಯುದಾತ್ತಮನುದಾತ್ತಮುಮಾ
ಸ್ವರಿತಂ ಪ್ರಚಯಸ್ವರಮುಮ
ರ್ದಿರೆ ಪದಪಾಳೀಕ್ರಮಂಗಳಂ ಪರಿವಿಡಿಯಿಂ ೫೪

ತಿಳಿದನು[1]ಯೋಗಿಸಿ ರಾಗಿಸಿ[1]
ವಿಳಾಸದಿಂ ತಪ್ಪದಂತೆ ನಾಲ್ಕುಂ ವೇದಂ
ಗಳೊಳೋರೊಂದೆಡೆಯು ಸಮು
ಜ್ವಳವಾಕ್ಯಮನೆತ್ತಿ ಸೊಣಗನೋದಿದುದಾಗಳ್ ೫೫

ವ॥ ಅದಂ ಕೇಳ್ದು ವಿಪ್ರರೆಲ್ಲಂ ತಲೆಯುಂ ತೂಗಿ—

ನುತಮಹಿಮ ನಿಮ್ಮ ಮಹಿಮೋ
ನ್ನತಿಯುಂ ಶಿವನೋರ್ವನಱಿವನಾರ್ಬಲ್ಲರೆನು

ಬಗ್ಗಿಸಿ, (ಕುಂಡಲಿನೀ ಶಕ್ತಿಯನ್ನು ಜಾಗೃತಗೊಳಿಸಿ)—೫೩–೫೫. ಸೂರ್ಯಚಂದ್ರ ನಾಡಿಗಳ ಗತಿಯನ್ನು ತಡೆದು ನಿಲ್ಲಿಸಿ, ಗಾಳಿಯನ್ನು (ವಾಯುವನ್ನು) ಅವೆರಡರ ಮಧ್ಯಮಾರ್ಗದಲ್ಲಿ ಏರಿಸಿ ಅಕಾರ ಉಕಾರ ಮಕಾರದಿಂದ ಕೂಡಿದ ವೈಶಿಷ್ಟಪೂರ್ಣವಾದ ಓಂಕಾರವನ್ನು, ಒಂದು, ಪರಿಶುದ್ಧ ನಾದ ಮತ್ತು ಲಯಕ್ಕೆ ಅನುಗುಣವಾಗಿ ಉಚ್ಚಾರ ಮಾಡುತ್ತ ಭೂಸುರ ಸಮೂಹವೆಲ್ಲ ಅತ್ಯಂತ ಆಶ್ಚರ್ಯದಿಂದ ಹೊಗಳುತ್ತಿದ್ದ ಹಾಗೆ ಉದಾತ್ತ (ಧ್ವನಿಯನ್ನೇರಿಸಿ,) ಅನುದಾತ್ತ (ಧ್ವನಿಯನ್ನು ತಗ್ಗಿಸಿ) ಸ್ವರಿತ (ಸಮಧ್ವನಿಯಲ್ಲಿ) ಸಮೂಹದಿಂದ (ಅದು ಹೇಳುತ್ತಿರುವ ಧ್ವನಿಯು) ಕೂಡಿ, ಪದಪಾಳಿಕ್ರಮವನ್ನು ಅನುಕ್ರಮವಾಗಿ ತಿಳಿದು ಹೊಂದಿಸಿಕೊಂಡು ರಾಗಗೂಡಿಸಿ, ಸಂಭ್ರಮದಿಂದ (ಸ್ವಲ್ಪವೂ) ತಪ್ಪದ ಹಾಗೆ ನಾಲ್ಕುವೇದಗಳಲ್ಲಿ ಒಂದು ಕಡೆಯು ಅತ್ಯಂತ ಪ್ರಕಾಶಮಾನವಾದ ವಾಕ್ಯವನ್ನು ಉದ್ಧರಿಸಿ (ಎತ್ತಿಕೊಂಡು) (ಆ ನಾಯಿಯು), ಆಗ ಓದಿತು. ವ॥ (ಹೀಗೆ ನಾಯಿಯು ವೇದವನ್ನು ಓದುತ್ತಿರುವ) ಅದನ್ನು ವಿಪ್ರರೆಲ್ಲರೂ ಕೇಳಿ ತಲೆಯನ್ನು ತೂಗುತ್ತ ೫೬. 'ಶ್ಲಾಘ್ಯವಾದ ಮಹಿಮಾಶಾಲಿಯೇ, ನಿಮ್ಮ ಅತ್ಯುನ್ನತ ಮಹಿಮೆಯನ್ನು ಶಿವನೊಬ್ಬನೇ ಬಲ್ಲನಲ್ಲದೆ ಉಳಿದವರಾರು

---

1 ರಾಗಿಸಿ ಯೋಗಿಸಿ (ದ)

ತ್ತತಿಶಯ ಭಯಚಕಿತರ್ವಿ
ಸ್ಮಿತಚಿತ್ತರ್ಕಲ್ಲಿನಾಥನಡಿಗೆಱಗಿರ್ದರ್ ೫೬

ವ॥ ಆಗಳ್ಮಂದಸ್ಮಿತಾಸ್ಯನಾಗಿ ವಾದಿವಾಗ್ಭಂಜನನಾ ಜಾಯಿಲನಂ ನೋಡಿ—

ಪೋ ಮಾಣ್ಣಾಲ್ಗುಂ ವೇದಪಿ
ತಾಮಹ ವೇದಂಗಳೋದೆನುತ್ತುಂ ನಿಲಿಸು
ತ್ತಾ ಮಹಿಮಾಕರನದನಾ
ಭೂಮೀಸುರರಾಸ್ಯಮಂ ನಿರೀಕ್ಷಿಸುತೇದಂ ೫೭

ಭೂಸುರರೆಲ್ಲರೀಕ್ಷಿಸಿದಿರೇ ಶಿವಭಕ್ತರ ಪೆರ್ಮೆಯಂ ಬಳಿ
ಕ್ಕೀ ಸೊಣಗಂ ಸುವರ್ಣಪುರದಗ್ಗದ ಸದ್ಗುರುಸಿದ್ಧರಾಮನಾ
ವಾಸದ ವೇದದೇಶಿಕನೆನಿಪ್ಪಭಿಧಾನಮನಾಳ್ದು ಘೇರವೋ
ದ್ಭಾಸಿತವಕ್ತ್ರನಪ್ಪ ಶುನಿಗಳ್ಕಱ ಶಿಷ್ಯನೆನಿಪ್ಪುದುರ್ವಿಯೊಳ್ ೫೮

ವ॥ ಎಂದು ಪೇಳ್ದು ಮತ್ತಮಿಂತೆಂದಂ—

ಧರಣೀದೇವರ್ಕಳೊಳ್ವಾದಿಸಿ ನಿಗಮಮನಾರ್ಪಿಂದೆ ಜಂಬೂರೊಳಂ ಕು
ರ್ಕುರನಿಂದಂ ಮಾಣದಂದೋದಿಸನೆ ಸಭೆಯೊಳಾದಂ ಮಹಾಕಾಳಿದೇವಂ
ಹರಭಕ್ತಾವಾಸಮಂ ಸೇವಿಪ ಶುನಕನಿಕಾಯಕ್ಕೆ ಮೇಣಂತಱಿಂದು
ಸರಿಯಲ್ತೀ ವಿಪ್ರವೃಂದಂ ಶರಣಮಹಿಮೆಯಂ ಕೇಳ್ವುದಿನ್ನುಂ ನಿತಾಂತಂ ೫೯

ಬಲ್ಲರು !'ಎನ್ನುತ್ತ ಅತಿಶಯ ಭಯದಿಂದ ಚಕಿತರೂ, ಆಶ್ಚರ್ಯಚಿತ್ತರೂ ಆದ ಅವರೆಲ್ಲರೂ ಕಲ್ಲಿನಾಥನ ಪಾದಗಳಿಗೆ ನಮಸ್ಕಾರಮಾಡಿದರು. ವ॥ ಆಗ ವಾದಿ ಜನಗಳ ವಾದವನ್ನು ಭಂಗಗೊಳಿಸುವವನಾದ ಕಲ್ಲಿನಾಥನು ಮುಗುಳು ನಗೆಯಿಂದ ಕೂಡಿದ ಮುಖವುಳ್ಳವನಾಗಿ ಆ ನಾಯಿಯನ್ನು ನೋಡುತ್ತ—೫೭. ಹೋ ! ವೇದ ಪಿತಾಮಹನೇ, ವೇದಗಳ ಓದನ್ನು ಸಾಕು ನಿಲ್ಲಿಸು, ಎಂದು ನಿಲ್ಲಿಸಿ ಮಹಿಮಾಕರನಾದ ಕಲ್ಲಿನಾಥನು ಆ ನಾಯಿಯ ಮುಖವನ್ನೂ ಬ್ರಾಹ್ಮಣರುಗಳ ಮುಖವನ್ನೂ ನೋಡುತ್ತ, ಹೀಗೆ ಹೇಳಿದನು. ೫೮. ಶಿವಭಕ್ತರಾದವರ ಘನತೆಯನ್ನು ಭೂದೇವತೆಗಳಾದ ನೀವೆಲ್ಲ ನೋಡಿದಿರಾ ! ಈನಾಯಿಯು (ಸೊನ್ನಲಾಪುರ) ದ ಶ್ರೇಷ್ಠ ಸದ್ಗುರುವಾದ ಸಿದ್ಧ ರಾಮೇಶ್ವರನ ಮನೆಯಲ್ಲಿ ವೇದಾಚಾರ್ಯನೆಂಬ ಹೆಸರನ್ನು ಹೊಂದಿರುವ 'ಉಘೇ' ಎಂಬ ಧ್ವನಿ ವಿಶೇಷದಿಂದ ಪ್ರಕಾಶಿಸುವ ಮುಖವುಳ್ಳ ನಾಯಿಗೆ ಅಕ್ಕರೆಯ ಶಿಷ್ಯನೆಂದು ಭೂಮಿಯಲ್ಲಿ ಪ್ರಸಿದ್ಧಿಯನ್ನು ಹೊಂದಿರುವುದು. ವ॥ ಎಂದು ಹೇಳುತ್ತ ಪುನಃ ಹೀಗೆಂದನು. ೫೯. ಜಂಬೂರೆಂಬ ಹೆಸರಿನ ಊರಲ್ಲಿದ್ದ ಮಹಾಕಾಳಿ ದೇವ (ಕಾಳಯ್ಯ) ನೆಂಬುವವನು ಬ್ರಾಹ್ಮಣರುಗಳೊಡನೆ ಪರಾಕ್ರಮದಿಂದ ವಾದಮಾಡಿ. ಈ ಪೂರ್ವದಲ್ಲಿ ಸಭೆಯೊಳಗೆ ನಾಯಿಯಿಂದ ವೇದವನ್ನು ಚೆನ್ನಾಗಿ ತಪ್ಪದೆ ಓದಿಸಲಿಲ್ಲವೇ ? ಹರ ಭಕ್ತರಾದವರ ಮನೆಯಲ್ಲಿ ಸೇವೆಮಾಡಿಕೊಂಡಿರುವ ನಾಯಿಗಳ ಸಮೂಹಕ್ಕೆ ಯಾವರೀತಿಯಿಂದಲೂ ಈ ವಿಪ್ರ ಸಮೂಹವು ಸರಿಸಮವಲ್ಲ ; ಹೆಚ್ಚಾ

ಶಿವಚಿತ್ತಯ್ಯನೆನಿಪ್ಪನಿರ್ಪನಭವಶ್ರೀಪಾದಭಕ್ತಂ ಮಹೋ
ತ್ಸವದಿಂ ಧಾತ್ರಿಯೊಳಾತನೊರ್ವಗೆ ಸರಿಯಲ್ಲೊರ್ವಂಗೆ ಕೋಟಿ ದ್ವಿಜ
ರ್ಶಿವಭಕ್ತಂಗೆನುತಣ್ಮಿ ಪಾರ್ವರೊಳೆ ವಾದಂಗೆಯ್ದು ವೇದಾಗಮಾ
ದಿ ವಿಶೇಷೋಕ್ತಿಗಳಿಂದೆ ತಾಂ ಜಯಿಸೆ ಸೋಲ್ತಿಂತೆಂದರಾ ಭೂಸುರರ್ ೬೦

ನುಡಿಜಾಣ್ಮೆಯಿಂದೆ ಜಯಮಂ
ಪಡೆವಳವಂತಿರ್ಕೆ ದೃಷ್ಟಮಂ ತೋರ್ಪಧಟು
ಳ್ಳೊಡೆ ತೋಱಿ ಗೆಲ್ವುದೆನೆ ಕಡು
ಸಡಗರದಿಂ ಪೂಣ್ದು ತೋರ್ಪೆನೆಂದಾ ಕ್ಷಣದೊಳ್ ೬೧

ಪಿರಿಯ ಭಕ್ತರ ಪಾದರಕ್ಷೆಯನೇಕಪಾತ್ರೆಯೊಳಿಟ್ಟು ಪಾ
ರ್ವರನನೇಕರನೇಕಪಾತ್ರೆಯೊಳಿಟ್ಟು ತಾಂ ತೊಲೆದೂಗೆ ಸ
ರ್ವರುಮಂ ತಲೆದೂಗೆ ಚಿತ್ರಮಧಃಸ್ಥಿತಂ ಗುರುವಾದುದಾ
ಚರಣರಕ್ಷೆ ಸಮುನ್ನತಂ ಲಘುವಾಯ್ತು ಭೂಸುರಸಂಕುಳಂ ೬೨

ಅದಱಿಂದಭವನ ಭಕ್ತರ
ಪದರಕ್ಷೆಗೆ ಸರಿಯೆ ಪಾರ್ವರೆಂದವರಂ ತ
ಳ್ವದೆ ತಲೆವಾಗಿಸಿ ಮೆಱೆದಂ
ಪದಪಿಂದಂ ಕಲ್ಲಿದೇವನಮಳಿನಭಾವಂ ೬೩

ಗಿರುವ ಶರಣರ ಮಹಿಮೆಯನ್ನು ಇನ್ನೂ ಕೇಳು. ೬೦. ಪರಮೇಶ್ವರನ ಪಾದಭಕ್ತ ನೆನಿಸಿದ 'ಶಿವಚಿತ್ತಯ್ಯ' ನೆಂಬ ಹೆಸರಿನವನು ಇದ್ದನು. ಅವನು ಒಮ್ಮೆ ಮಹೋತ್ಸಾಹ ಭರಿತನಾಗಿ ಈ ಭೂಮಿಯಲ್ಲಿ ಓರ್ವ ಶಿವಭಕ್ತನಿಗೆ ಒಂದು ಕೋಟಿ ದ್ವಿಜರೂ ಸಮಾನವಲ್ಲವೆಂದು ಪರಾಕ್ರಮವಿಶಿಷ್ಟವಾಗಿ ದ್ವಿಜರಲ್ಲಿ ವಾದವಿವಾದ ಮಾಡಿದನು. ವೇದಾಗಮಗಳಲ್ಲಿ ಹೇಳಿರುವ ವಿಶೇಷ ವಾಕ್ಯಾಧಾರದ ಮೂಲಕ ವಾದದಲ್ಲಿ ಗೆದ್ದನು. ಸೋತ ಆ ದ್ವಿಜರು ಹೀಗೆ ಹೇಳಿದರು : ೬೧. 'ಮಾತಿನ ಜಾಣತನದಿಂದ ಜಯವನ್ನು ಪಡೆಯುವ ಸಾಮರ್ಥ್ಯವು ಅದು ಹಾಗಿರಲಿ ! ಏನಾದರೂ ಪ್ರತ್ಯಕ್ಷ ಪ್ರಮಾಣವನ್ನು ತೋರಿಸುವ ಸಾಮರ್ಥ್ಯವಿದ್ದರೆ ತೋರಿಸಿ ಗೆಲ್ಲಲಿ' ಎನ್ನಲಾಗಿ, 'ತೋರಿಸುತ್ತೇನೆ' ಎಂದು ಅತ್ಯಂತ ಸಡಗರದಿಂದ ಪ್ರತಿಜ್ಞೆಮಾಡಿ, ಆ ಕ್ಷಣವಲ್ಲಿ ಹಿರಿಯ ಶಿವಭಕ್ತರೆನಿಸಿದ ಓರ್ವರ ಪಾದರಕ್ಷೆಯನ್ನು ತಕ್ಕಡಿಯ ಒಂದು ಪರಡಿಯಲ್ಲಿಟ್ಟು. ಮತ್ತೊಂದು ಪರಡಿಯಲ್ಲಿ ಅನೇಕ ಜನ ದ್ವಿಜರುಗಳನ್ನು ಕುಳ್ಳಿರಿಸಿ. ತಾನೇ ತಕ್ಕಡಿಯ ತೊಲೆಯನ್ನು ಹಿಡಿದು ತೂಗಲು ಈ ವಿಚಿತ್ರಕ್ಕೆ ಸರ್ವರೂ ತಲೆದೂಗುತ್ತಿರುವಂತೆ, ಶಿವಭಕ್ತನ ಪಾದರಕ್ಷೆಯೇ ಭಾರವುಳ್ಳದ್ದಾಗಿ ಪರಡಿಯು ನೆಲದಲ್ಲಿ ಉಳಿಯಿತು : ಮತ್ತೊಂದು ಪರಡಿಯು ಮೇಲಕ್ಕೆದ್ದು ಭೂಸುರರ ಸಮೂಹವು ಹಗುರಾದುದಾಯಿತು. ೬೩. ಆದ್ದರಿಂದ ಪರಮೇಶ್ವರನ ಭಕ್ತರೆನಿಸಿದವರ ಪಾದರಕ್ಷೆಗೆ ಈ ದ್ವಿಜರು ಸಮಾನವಾದಾರೇ ? ಎಂದು ಅವರನ್ನು ತಡಮಾಡದೆ ತಲೆಬಾಗಿಸುವಂತೆ ಮಾಡಿ, ಆ ಪರಿಶುದ್ಧ ಭಾವದ ಕಲ್ಲಿನಾಥ

ವ॥ ಮತ್ತಂ—

[ಬಿಬ್ಬ ಬಾಚಯ್ಯನ ಕಥೆ]

ಪದಪಿಂ ಧಾರುಣಿಯಲ್ಲಿ ಕಂಗೊಳಿಪ ಗೊಬ್ಬೂರೆಂಬ ಸಾರಾಗ್ರಹಾ
ರದೊಳೊಪ್ಪಂಬಡೆದಿರ್ಪನದ್ಭುತಚರಿತ್ರಂ ವೀರಶೈವವ್ರತಾ
ಸ್ಪದನತ್ಯೂರ್ಜಿತ ಭಕ್ತಿಭಾಸುರನದೀರತ್ನಾಕರಂ ವಾದಿವಾ
ರಿದಝಂಝಾನಿಲನಪ್ರತರ್ಕ್ಯಮಹಿಮಂ ಶ್ರೀಬಿಬ್ಬಬಾಚಾಹ್ವಯಂ ೬೪

ನುತ ಜಂಗಮಪ್ರಸಾದಾ
ಮೃತಸಂವರ್ಧಿತ ನಿಜಾಸುಲಿಂಗಂ ಲಿಂಗೋ
ನ್ನತಭಾವನೆಯಿಂ ಜಂಗಮ
ತತಿಯಂ ಕಂಡೆಱಗಿ ಪೂಜೆಗೆಯ್ವನಜಸ್ರಂ ೬೫

ವ॥ ಅಂತು ಶುದ್ಧಸಿದ್ಧಪ್ರಸಿದ್ಧ ಪ್ರಸಾದತ್ರಯಮೆ ನಿಜಪ್ರಾಣವಾಗೆ ಕೈಕೊಂಡು ಪರಮಾನಂದಂಬೆರಸು—

ಶರಣರ ಪಾದುಕಾಶಕಲದಿಂ ಸಮೆದಾಭರಣಂಗಳಂ ಕರೋ
ದರ ಭುಜ ಕಂಠ ಕರ್ಣಯುಗ ಮಸ್ತಕ ವಕ್ಷಮೆನಿಪ್ಪ ತಾಣದೊಳ್
ಧರಿಯಿಸಿ ಜಂಗಮಾಂಘ್ರಿಯ ರಜಂಗಳಿನಂಗದೊಳಂಗರಾಗಮಂ
ವಿರಚಿಸುತುಂ ಚರಾವಳಿಯ ಬೀಳುಡೆಯಂ ಪೊದೆದೊಲ್ದು ಗಾಡಿಯಿಂ ೬೬

ದೇವನು ಉತ್ಸಾಹ ಪೂರ್ಣನಾಗಿ ಶೋಭಿಸಿದನು. ವ॥ ಬಿಬ್ಬ ಬಾಚಯ್ಯನ ಕಥೆ ೬೪. ಪ್ರಸಿದ್ಧವಾಗಿ ಭೂಮಿಯಲ್ಲಿ ಶೋಭಿಸುತ್ತಿದ್ದ 'ಬೊಬ್ಬೂರು' ಎಂಬ ಸಾರವತ್ತಾದ ಅಗ್ರಹಾರದಲ್ಲಿ ಅದ್ಭುತವಾದ ಚರಿತ್ರೆಯುಳ್ಳವನೂ, ವೀರಶೈವ ವ್ರತಕ್ಕೆ ಆಸ್ಪದವಾದವನೂ, ಅತ್ಯಂತ ಊರ್ಜಿತಗೊಂಡು ಪ್ರಕಾಶಿಸುವ ಶಿವಭಕ್ತಿಯೆಂಬ ನದಿಗಳಿಗೆ ಸಮುದ್ರಪ್ರಾಯನಾದವನೂ, ವಾದ ಮಾಡುವ ಜನರುಗಳೆಂಬ ಮೋಡಗಳಿಗೆ ಪ್ರಚಂಡವಾಯುವಿನಂತಿರುವವನೂ (ಬಿರುಗಾಳಿಯಂತಿರುವವನೂ) ಊಹಿಸಲಸಾಧ್ಯವಾದ ಮಹಿಮಾವಿಶೇಷದಿಂದ ಕೂಡಿದವನೂ ಆದ 'ಬಿಬ್ಬಬಾಚಯ್ಯ'ನೆಂಬ ಹೆಸರಿನ ಶರಣನು ಮನೋಹರವಾಗಿ ಕಂಗೊಳಿಸಿದ್ದನು. ೬೫. ಅವನು ಸತತ ಶ್ಲಾಘ್ಯರಾದ ಜಂಗಮರುಗಳ ಪ್ರಸಾದವೆಂಬ ಅಮೃತದಿಂದ ಸಂವರ್ಧನೆಗೊಳಿಸಿಕೊಂಡ ಪ್ರಾಣ ಲಿಂಗಿಯೆನಿಸಿ, ಉನ್ನತವಾದ ಶಿವಲಿಂಗ ಭಾವವನ್ನ ಮನಸ್ಕನಾಗಿ ಜಂಗಮ ಸಮೂಹವನ್ನು ಕಂಡು ನಮಸ್ಕರಿಸಿ ಪೂಜಿಸುತ್ತ ಇದ್ದನು. ವ॥ ಈ ರೀತಿ (ಗುರುಲಿಂಗ ಜಂಗಮದ ಭುಕ್ತ ಶೇಷ ಪ್ರಸಾದವೆನಿಸಿದ) ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದತ್ರಯವೇ ತನ್ನ ಪ್ರಾಣವೆಂದು ಸ್ವೀಕಾರಮಾಡಿ ಪರಮಾನಂದ ಭರಿತನಾಗಿ (ಇದ್ದನು). ೬೬. ಶರಣ ಜನರ ಪಾದುಕೆಗಳ ತುಂಡಿನಿಂದ ಮಾಡಿದ ಆಭರಣಗಳನ್ನು ತನ್ನ ಕೈ, ಹೊಟ್ಟೆ, ಭುಜ, ಕುತ್ತಿಗೆ, ಎರಡೂ ಕಿವಿ, ತಲೆ, ಎದೆಗಳೆನಿಸುವ ಸ್ಥಾನಗಳಲ್ಲಿ ಧರಿಸಿದವನಾಗಿ, ಜಂಗಮರ ಪಾದಧೂಳಿಯೆಂಬ ಸುಗಂಧದ್ರವ್ಯವನ್ನು ದೇಹಕ್ಕೆ ತೊಡೆದುಕೊಂಡವನಾಗಿ, ಜಂಗಮ ಸಮೂಹವು ಉಟ್ಟು ಬಿಸಾಡಿದ

ಮಿಳಿರ್ವ ಪಟಂಗಳಿಂ ಮೆಱೆವ ನಂದಿಪತಾಕೆಯು ಕಟ್ಟಿ ಬಿಟ್ಟ ಪೂ
ಗಳ ಪೊಸ ಬಾಸಿಗಂಗಳ ವಿಚಿತ್ರವಿತಾನದ ಚಾರುಚಾಮರಾ
ವಳಿ ಮಣಿದರ್ಪಣಪ್ರಕರ ತೋರಣಮಾತಪವಾರಣಂಗಳು
ಜ್ವಳತೆಯನಾಳ್ದ ಪೊಂಗಳಸದಂದವೊಡಂಬಡೆ ಲಿಂಗಮುದ್ರೆಯುಂ ೬೭

ತಳೆದರ್ಕಚಂದ್ರಬಿಂಬಂ
ಗಳನಣಕಿಪ ಕಾಂತಿವೆತ್ತ ನಾಲ್ಕುಂ ಚಕ್ರಂ
ಗಳ ಸೊಬಗು ಮಿಸುಗೆ ವೃಷಭೋ
ಜ್ವಳತೆಯನೊಳಕೆಯ್ದು ಮೊರೆವ ಪೊನ್ನಂದುಗೆಯಿಂ ೬೮

ವಿಳಸದ್ರುದ್ರಾಕ್ಷಮಾಲಾಭರಣದೆ ಕೊರಲೊಳ್ತೊಳ್ತ ಪೊಂಗಂಟೆಯಿಂ ಕಂ
ಗೊಳಿಪುದ್ಯತ್ಪುಷ್ಪಮಾಲ್ಯೌಘದೆ ಝಣ ಝಣರಾವಸ್ಫುರತ್ಕಿಂಕಿಣೀಮಂ
ಜುಳಮಾಲಾಜಾಲದಿಂ ಚಾಮರದಿನಮರ್ದ ಶೃಂಗಂಗಳಿಂ ಭಾಳಮಧ್ಯ
ಸ್ಥಳಬದ್ಧಸ್ವರ್ಣಪಟ್ಟಾಂಕನದಿನೆಸೆವ ಪೇರೆಳ್ತುಗಳ್ಪೆರ್ಮೆಯಿಂದಂ ೬೯

ಪೆಗಲಿತ್ತು ಪೊತ್ತು ಜವದಿಂ
ಮಿಗೆ ಪರಿಯೆ ವಿರಾಜಿಸಿರ್ಪ ಗೋರಥಮಂ ಪೆಂ
ಪಗಲದೊಡನೇಱಿ ಸಂಭ್ರಮ
ದೊಗುಮಿಗೆಯಿನುಘೇಯುಘೇಯೆನುತ್ತಾದೋಲವಿಂ ೭೦

ಬಟ್ಟೆಗಳನ್ನು ಹೊದೆದು ಸಂಭ್ರಮಗೊಂಡವನಾಗಿ, (ಶೋಭಿಸುತ್ತಿದ್ದನು). ೬೭-೭೨. ಹಾರಾಡುತ್ತಿರುವ ಪಟಗಳಿಂದ ಶೋಭಿಸುವ ನಂದೀ ಧ್ವಜವನ್ನು ಕಟ್ಟಿ, ಹೂವುಗಳಿಂದ ಮಾಡಿದ ಹೊಸ ಬಾಸಿಂಗಗಳು (ಹೂ ದಂಡೆಗಳು), ವಿಚಿತ್ರವಾದ ಮೇಲುಕಟ್ಟುಗಳು, ಮನೋಹರವಾದ ಚಾಮರಗಳು, ರತ್ನದಿಂದ ಮಾಡಿದ ಕನ್ನಡಿಗಳು, ತೋರಣಗಳು, ಬೀಸಣಿಕೆಗಳು, ಹೊಳೆಯುತ್ತಿರುವ ಬಂಗಾರದ ಕಳಶದ ಚೆಲುವು, ಇವೆಲ್ಲ ಮನಸ್ಸಿಗೆ ಒಪ್ಪುತ್ತಿರಲು, ಲಿಂಗಮುದ್ರೆಯನ್ನು ಹಾಕಿ, ಸೂರ್ಯಚಂದ್ರಬಿಂಬಗಳನ್ನು ತಿರಸ್ಕರಿಸುವಂತಿರುವ ನಾಲ್ಕು ಗಾಲಿಗಳ ಸೌಂದರ್ಯವು ಶೋಭಿಸುತ್ತಿರಲು, ಉಜ್ವಲ ಶಕ್ತಿಯ ಎತ್ತು (ವೃಷಭ)ಗಳನ್ನು ಅವನ ಬಂಡಿಯು ಒಳಗೊಂಡಿತ್ತು. (ಆ ವೃಷಭಗಳು) ಧ್ವನಿ ಮಾಡುವ ಬಂಗಾರದ ಕಾಲು ಕಡಗಗಳಿಂದ, ಶೋಭಿಸುವ ರುದ್ರಾಕ್ಷ ಮಾಲೆಗಳ ಆಭರಣದಿಂದ, ಕಂಗೊಳಿಸುವ ಶ್ರೇಷ್ಠವಾದ ಹೂಮಾಲೆಗಳ ಸಮೂಹದಿಂದ, ಝಣಝಣ ಎಂಬ ಧ್ವನಿ ಮಾಡುವ ಸಣ್ಣ ಹುರುಗೆಜ್ಜೆಗಳ ಮಂಜುಳವಾದ ಮಾಲೆಗಳ ಸಮೂಹದಿಂದ, ಚಾಮರಗಳನ್ನು ಕಟ್ಟಿದ ಕೋಡುಗಳಿಂದ, ಹಣೆಯ ಮಧ್ಯಪ್ರದೇಶದಲ್ಲಿ ಕಟ್ಟಿದ ಬಂಗಾರದ ಪಟ್ಟದ ಗುರುತಿನಿಂದ ಶೋಭಿಸುವ ದೊಡ್ಡ ಎತ್ತುಗಳು ಹೆಮ್ಮೆಯಿಂದ ಕೂಡಿದ್ದವು. ಇವುಗಳು ಹೆಗಲುಗೊಟ್ಟು ವೇಗವಾಗಿ ಓಡುತ್ತಿರಲು ರಂಜಿಸುವ ಎತ್ತಿನ ರಥವನ್ನು ಹೆಮ್ಮೆಯಿಂದ ಕೂಡಿದವನಾಗಿ ಹತ್ತಿದನು. ಸಂಭ್ರಮದ ಆಧಿಕ್ಯದಿಂದ

ಅಱುಗಾವುದದಳವಿಯೊಳುಮೆ
ಯೆಱೆಯನ ಭಕ್ತರ್ಕಳೆಸಗೆ ಗಣಪರ್ವಮನ
ಳ್ಕಱೊಳಲ್ಲಿಗೆ ತದ್ರಥವಂ
ನೆಱೆ ಪರಿಯಿಸುತೆಯ್ದಿ ಕಂಡು ಭಕ್ತಾವಳಿಯಂ ೭೧

ದಂಡಪ್ರಣಾಮಮೆಸಗುತ
ಖಂಡಸುಖಂಬಡೆದು ತತ್ಪದಾಂಬುಜರಜದೊಳ್
ಬಂಡುಣಿಯವೊಲೋಲಾಡುತೆ
ಮಂಡೆಯೊಳಾಂತವರ ಚರಣವಿಮಳೋದಕಮಂ ೭೨

ಘನರುಚಿ ತನ್ಮುಖೋದಿತವಚಃಸುಧೆಯಿಂ ತಣಿವೇಱೆ ಮೀಱೆ ಮ
ತ್ತನಿತಱೊಳಲ್ಲಿ ಭಕ್ತಚರಸಂತತಿಯುಂಡುಳುಪಿರ್ದ ಸಿದ್ಧಪಾ
ವನತರ ಸುಪ್ರಸಾದಮನದಂ ಮೊಗೆದೆತ್ತಿ ಶಿವಾಯ ತೇ ನಮೋ
ಯೆನುತೆಱಗುತ್ತೆ ತೀವಿ ಶಕಟಾಂತರದೊಳ್ನೆಱೆ ತಂದು ಲೀಲೆಯಿಂ ೭೩

ಅನುಭವಿಸುತ್ತನುದಿನಮಿಂ
ತನುನಯದಿಂ ಬಿಬ್ಬಭಾಸ್ಕರಂ ಸುಖಮಿರೆ ಕಂ
ಡನಪದ್ಯನಿರವನಾ ಪುರ
ಜನಮೆಲ್ಲಂ ನೆಱೆ ಕನಲ್ದು ಗುಜುಗುಜಿಸುತ್ತುಂ ೭೪

ಉಘೇ ! ಉಘೇ ! ಎಂದು ಪ್ರೀತಿಯಿಂದ ಕೂಗುತ್ತ ಅರ್ಧಗಾವುದ ದೂರದಲ್ಲಿ ಶಿವಭಕ್ತರು ಗಣ ಪರ್ವವನ್ನು ಮಾಡುತ್ತಿರಲು, ಅಲ್ಲಿಗೆ ಬಂಡಿಯನ್ನು ಚೆನ್ನಾಗಿ ಓಡಿಸಿ ಕೊಂಡು ಹೋಗಿ, ಅಲ್ಲಿನ ಭಕ್ತರ ಸಮೂಹವನ್ನು ಕಂಡು, ದಂಡವತ್ ಪ್ರಣಾಮವನ್ನು ಮಾಡಿ, ಅಖಂಡ (ಪರಿಪೂರ್ಣ) ಸುಖವನ್ನು ಪಡೆದು, ಅವರುಗಳ ಪಾದಕಮಲಗಳ ಧೂಳಿಯಲ್ಲಿ ದುಂಬಿಯಹಾಗೆ ಓಲಾಡುತ್ತ, ಅವರ ಪರಿಶುದ್ಧಪಾದೋದಕವನ್ನು ತಲೆಯಲ್ಲಿ ಧರಿಸಿದವನಾದನು. ೭೩–೭೪. (ಅವನು) ವಿಶೇಷಪ್ರೀತಿಯಿಂದ ಆ ಶಿವಶರಣರುಗಳ ಮುಖದಿಂದ ಹೊರಬಂದ ಮಾತುಗಳೆಂಬ ಅಮೃತದಿಂದ ಮಿತಿಮೀರಿ ತೃಪ್ತಿಗೊಳ್ಳುತ್ತಿದ್ದನು. ಅಷ್ಟರಲ್ಲಿ ಆ ಸ್ಥಳದಲ್ಲಿ ಶಿವಭಕ್ತರಾದ ಜಂಗಮದ ಸಮೂಹವು ಊಟ ಮಾಡಿ ಉಳಿಸಿದ ಗುರುಭಕ್ತಶೇಷವಾದ, ಪರಿಶುದ್ಧವಾದ, ಶ್ರೇಷ್ಠ ಪ್ರಸಾದವಾದ ಅದನ್ನು ಮೊಗೆದುಕೊಂಡು ಎತ್ತಿ ಬಂಡಿಯ ಮೇಲೆ ಹೇರಿಕೊಂಡು ಶಿವನೇ ನಿನಗೆ ನಮಸ್ಕಾರಗಳು (ಶಿವಾಯ ತೇ ನಮಃ)ಎಂದು ನಮಸ್ಕಾರ ಮಾಡಿ, ಲೀಲೆಯಿಂದ ಮನೆಗೆ ತಂದು, ಅನುದಿನವೂ ಸೇವಿಸುತ್ತ ಪ್ರೀತಿಯಿಂದ ಬಿಬ್ಬ ಬಾಚಯ್ಯನು ಸುಖದಿಂದ ಇರುತ್ತಿದ್ದನು. ಆ ಊರಿನ ಜನವೆಲ್ಲ ನಿರ್ದುಷ್ಟನಾದ ಬಿಬ್ಬ ಬಾಚಯ್ಯನ ಈ ರೀತಿಯ ಜೀವನವನ್ನು ಕಂಡು (ಅರಿಯದೆ) ವಿಶೇಷವಾದ ಸಿಡುಕಿನಿಂದ ಕೂಡಿದವರಾಗಿ ಗುಜು ಗುಜು ಎಂದುಕೊಳ್ಳತೊಡಗಿದರು. (ನಿಂದಿಸ

ಪಲವಂದದೆ ನಿಂದಿಸುತಿರೆ
ಜಲರುಹರಿಪುವಮೌಲಿಭಕ್ತನಾ ಗೊಬ್ಬೂರೊ
ಳ್ನಲವೇಱೆ ಪಿರಿಯ ಭಕ್ತನ
ನಿಲಯದ ಪರ್ವಕ್ಕೆ ತಳರ್ದನತಿ ಸಂಭ್ರಮದಿಂ ೭೫

ಚರಲಿಂಗಶ್ರೇಣಿಯಂ ಕಂಡೆಱಗಿ ಚರಣದೊಳ್ಮೀಱಿದಾನಂದದಿಂ ಭ
ಕ್ತಿರಸಂ ಮೈದುಂಬಿ ತುಳ್ಕುತ್ತೆನಿಸೆ ಸುಖಜಳಂ ನೇತ್ರದೊಳ್ತತ್ಪ್ರಸಾದೋ
ತ್ಕರಮಂ ಕೆಯ್ಕೊಂಡು ತೀವುತ್ತೆಸೆವ ಶಕಟದೊಳ್ಮುಂದೆ ಮಾಹೇಶ್ವರರ್ಬಿ
ತ್ತರದಿಂದಂ ಪಾಡುತಾಡುತ್ತೆಸೆಯೆ ಹರಹರಧ್ವಾನಮಂ ಬೀಱುತಾಗಳ್ ೭೬

ಮಿಳಿರುತ್ತಿರೆ ಪಳಯಿಗೆಗಳ್
ತೊಳಗುತ್ತಿರೆ ಮೇಲೆ ಪತ್ತಿಗೆಗಳೆತ್ತಂ ಮಂ
ಗಳ ತೂರ್ಯತ್ರಯುರವಮು
ಗ್ಗಳಿಸುತ್ತಿರೆ ಬಿಡದುಘೇವುಘೇಯೆನು[1]ತೊಲ[1]ವಿಂ ೭೭

ರಥಮಂ ತನ್ನಯ ಸುಮನೋ
ರಥಮಂ ತರ್ಪಂತೆ ತಗುತಮಿರೆ ಪುರದೊಳ್ತ
ತ್ಪಥಮಂ ತಡೆದಿದಿರೊಳ್ತ
ತ್ಪೃಥುವಾಗ್ಬಳವಿಪ್ರರಣ್ಮಿನಿಂದಿಂತೆಂದರ್ ೭೮

ತೊಡಗಿದರು) ೭೫. ಹೀಗೆ ಹಲವಾರು ಬಗೆಯಲ್ಲಿ ನಿಂದಿಸುತ್ತಿರುವಾಗ (ಒಂದು ದಿನ) ಆ ಶಿವಭಕ್ತನಾದ ಬಾಚಯ್ಯನು ಆ ಬೊಬ್ಬೂರಿನಲ್ಲಿಯ ಹಿರಿಯ ಭಕ್ತನೋರ್ವನ ಮನೆಯಲ್ಲಿ ಆಚರಿಸುವ ಗಣಪರ್ವಕ್ಕೆ ಪ್ರೀತಿಯಿಂದ ಉಬ್ಬಿ ಅತ್ಯಂತ ಸಡಗರದಿಂದ ಹೊರಟನು. ೭೬. ಅಲ್ಲಿದ್ದ ಜಂಗಮ ಪಙ್ತಿಯನ್ನು ಕಂಡು ಅವರ ಪಾದಗಳಿಗೆ ನಮಸ್ಕಾರ ಮಾಡಿ, ಮಿತಿ ಮೀರಿದ ಆನಂದದಿಂದ ಭಕ್ತಿರಸವೇ ಮೈದುಂಬಿ ತುಳುಕಾಡುತ್ತಿದೆಯೋ ಎನ್ನುವಂತೆ ಕಣ್ಣಲ್ಲಿ ಆನಂದ ಬಾಷ್ಪಗಳನ್ನು ತುಂಬಿಕೊಂಡು ಅವರುಗಳ ಶ್ರೇಷ್ಠ ಪ್ರಸಾದ ಸಮೂಹವನ್ನು ಸ್ವೀಕಾರ ಮಾಡಿ, ತನ್ನ ಬಂಡಿಯಲ್ಲಿ ತುಂಬಿದನು. (ಬಂಡಿಯ) ಮುಂಭಾಗದಲ್ಲಿ ಮಾಹೇಶ್ವರುಗಳ ಸಮೂಹವು ವಿಸ್ತಾರಗೊಂಡು ಹಾಕುತ್ತಲೂ, ಆಡುತ್ತಲೂ, 'ಹರಹರ' ಎಂಬ ಧ್ವನಿಯನ್ನು ಬೀರುತ್ತಲೂ ಶೋಭಿಸುತ್ತಿತ್ತು. ೭೭–೭೮. ಧ್ವಜಪತಾಕೆಗಳು ಹಾರಾಡುತ್ತಿದ್ದವು; ಮೇಲ್ಭಾಗದಲ್ಲಿ ಕಟ್ಟಿದ್ದ ಛತ್ರಿಗಳು ಪ್ರಕಾಶಿಸುತ್ತಿದ್ದವು; ಎಲ್ಲ ಕಡೆಗೂ ಮಂಗಳ ತೂರ್ಯತ್ರಯ (ಗೀತ, ವಾದ್ಯ, ನೃತ್ಯ) ಶಬ್ದವು ಮೊರೆಯುತ್ತಿತ್ತು; ತಪ್ಪದೆ ಉಘೇ! ಉಘೇ! ಎನ್ನುತ್ತ ಉತ್ಸಾಹದಿಂದ ಬಂಡಿಯನ್ನು (ಆ ತನ್ನ ರಥವನ್ನು) ಶ್ರೇಷ್ಠ ಮನೋರಥವನ್ನೇ ತರುವಂತೆ ಬಾಚಯ್ಯನು ಹೊಡೆದುಕೊಂಡು ಬರುತ್ತಿರಲು, ಪಟ್ಟಣದಲ್ಲಿ ಅವನು ಬರುವ ಮಾರ್ಗವನ್ನು ನಿಲ್ಲಿಸಿ, ವಿಶೇಷವಾದ ಮಾತಿನ ಶಕ್ತಿಯುಳ್ಳ ವಿಪ್ರರು ಪರಾಕ್ರಮವನ್ನು

---

1 ತಾದೊರ್(ಜ)

ಪುಗದಿರ್ಪುಗದಿರ್ನಿಲ್ನಿಲ್
ನಗರಮನಿದನೇನಿದದ್ಭುತಂ ಪೇಳ್ಪೇಳ್ಕೆ
ಮ್ಮಗೆ ಸಡಗರಮಂ ನೆಗಳ್ದಪೆ
ಮಿಗೆ ನೀಂ ಕಡುಗೂರ್ತಧೂರ್ತಸಖಸಂಕುಳದೊಳ್ ೭೯

ಪಳಯಿಗೆಯೇನಿದು ಕೆಲವಲ
ದೊಳೆ ಕೈವಾರಿಪ ವಿಡಾಯಮೇನಿದು ಮೇಲು
ಜ್ವಳಿಪಾತಪತ್ರಮೇನಿದು
ಕಳಕಳವೇನಿದು ಪೊದಳ್ದ ತೂರ್ಯತ್ರಯದಾ ೮೦

ಮದುವೆಯ ಪೆಸರೊಸಗೆಯೊ ಪೆಂ
ಪೊದವಿದ ಹರಭಕ್ತನಳಿದನೋ ಬಲ್ಪಗೆಯಂ
ಸದೆದತಿಶಯ ಶೌರ್ಯಮೊ ತ
ಳ್ವದೆ ಚೇರಮನಂತೆ ಶಿವನ ಪುರಿಗೆಯ್ದುವೆಯೋ ೮೧

ಅಲಸದೆ ಶೂದ್ರಾಂತ್ಯಜರೆಂ
ಜಲನುಂಡದಱೊಳ್ಮುಳುಂಗಿದನಿತೆಯ್ದದೆ ಗ
ಲ್ಗಲನೀ ಪಾರ್ವರ ಪೊಳಲಂ
ಪೊಲೆಗಲಸಲ್ತರ್ಪ ಶಕಟದೊಳ್ಸಡಗರದಿಂ ೮೨

ನೆಲನಾಳ್ವ ಭೂಪನೆರ್ದೆಯೊ
ಳ್ಮೊಲೆಗಂಡೆಯೊ ಬಳ್ಕದಳ್ಕದೋಸರಿಸದೆ ದು

ತೋರಿಸುತ್ತ ಹೀಗೆ ಹೇಳಿದರು : ೭೯–೮೧. (ಎಲೈ) ಈ ನಗರವನ್ನು ಹೊಗಬೇಡ ಹೊಗಬೇಡ ನಿಲ್ಲು ನಿಲ್ಲು ! ಈ ಅದ್ಭುತವೇನಿದು ? ಹೇಳು ಹೇಳು ! ಸುಮ್ಮ ಸುಮ್ಮನೆ (ನಿನ್ನನ್ನು) ವಿಶೇಷವಾಗಿ ಪ್ರೀತಿಸುವ ಈ ಮಹಾಧೂರ್ತರಾದ ಸ್ನೇಹಿತರ ಗುಂಪಿನಲ್ಲಿ ಸೇರಿ ಸಡಗರವನ್ನು ಪ್ರದರ್ಶಿಸುತ್ತಿದ್ದೀಯೆ. ಈ ಕಟ್ಟಿರುವ ಧ್ವಜ ಪಟ್ಟವೇನು ? ಅಕ್ಕ ಪಕ್ಕದಲ್ಲಿ ಕೈಯೆತ್ತಿ ಹೊಗಳುತ್ತಿರುವ ಗರ್ವದ ನಡೆಯಿದೇನು ? ಮೇಲ್ಭಾಗದಲ್ಲಿ ಉಜ್ವಲಗೊಂಡಿರುವ ಈ ಛತ್ರಿಗಳೇನು ? ಆ ಕಳ ಕಳ ಧ್ವನಿ ಮಾಡುವ ವಾದ್ಯ ಗೀತ ನೃತ್ಯಗಳಿವೇನು ? ಮದುವೆಯ ಹೆಸರಾಂತ ಸಂಭ್ರಮವೋ ? (ಅಥವಾ) ಹಿರಿತನದಿಂದ ಕೂಡಿದ ಹರಭಕ್ತನಾವನಾದರೂ ಸತ್ತನೋ ? ಮಹಾ ಶತ್ರುವನ್ನು ನಾಶಮಾಡಿ ಬಂದ ಅತಿಶಯವಾದ ಶೌರ್ಯದ ಪ್ರದರ್ಶನವೋ ? ತಡಮಾಡದೆ ಚೇರಮನ ಹಾಗೆ ಶಿವ ಲೋಕಕ್ಕೆ ಹೋಗುವೆಯೋ ? ೮೨. ಹೇಸದೆ ಶೂದ್ರರ, ಅಂತ್ಯಜರ ಎಂಜಲನ್ನುಂಡು ಅದರಲ್ಲಿಯೇ ಮುಳುಗಿ ಹೋದುದೇ ಸಾಲದೆ ಗಳ ಗಳನೆ ಈ ಬ್ರಾಹ್ಮಣರ ನಗರವನ್ನು (ಅಗ್ರಹಾರವನ್ನು) ಹೊಲೆಗಲಸಲು ಬಂಡಿಯಲ್ಲಿ ಸಡಗರದಿಂದ (ಆ ಎಂಜಲು ಗೂಳನ್ನು) ತರುತ್ತಿರುವೆಯಾ ? ೮೩. ಈ ನೆಲವನ್ನಾಳುವ ಅರಸನ ಎದೆಯಲ್ಲಿ ಮೊಲೆಯನ್ನೇನಾದರೂ ಕಂಡೆಯೋ ? (ರಾಜನನ್ನು ಸ್ತ್ರೀಯೆಂದೇನಾದರೂ ಭಾವಿಸಿ

ಷ್ಕುಲರೆಂಜಲನೀ ಸದ್ವಿಜ
ನಿಲಯಂಗಳ ಮುಂದೆ ತರ್ಪೆಯೆನ್ನದೊ ಬಿಂಕಂ ೮೩

ಮಾನಂಗೆಡದೆಮ್ಮಿಂದಂ
ನೀನತಿಶಯ ಬುದ್ಧಿಶಾಲಿಯಾದೊಡೆ ತೊಲಗೆಂ
ದಾ ನೆರೆದ ಪಾರ್ವರೆನೆ ಕೇ
ಳ್ದಾನುತ ಮಹಿಮಾಬ್ಧಿ ರೋಷಭೀಷಣನಾದಂ ೮೪

ಎಲೆ ಎಲೆ ಪಾಪಕರ್ಮರಿರ ದುರ್ಮದ ದುಷ್ಟರಿರಾ ದುರಂತದು
ರ್ಮಲ ಮಲಿನಾತ್ಮಧೂರ್ತರಿರ ಶಾಂಭವಭಕ್ತಿಯ ಬಟ್ಟೆದಪ್ಪಿ ಕೋ
ಟಲೆಗೊಳಗಾದ ಖೂಳರಿರ ಮೇಲಱಿದಾಡದೆ ಕೊರ್ಬಿನುರ್ಬಿನಿಂ
ದುಲಿದಪಿರೇಕೆ ಜಾವಳರ ಭಕ್ತರಿಳಾತಳಾಗ್ರದೊಳ್ ೮೫

ಕುಲಹೀನರೆಂಬಿರಗ್ಗ[1]ದ
ಮಲಹರಚರಣಾಬ್ಜಭಕ್ತರಂ ನೀಮೀಗ
ಳ್ಕುಲಹೀನೆಯಾದ ಗೋಪಿಯ
ಮಲಮಂ ಪಣೆಯಲ್ಲಿ ತಾಳ್ದಿರಚ್ಚರಿಯಲ್ತೇ ೮೬

ದೆಯೋ) ಬಳುಕದೆ, ಹೆದರದೆ, ಹೇಸದೆ ದುಷ್ಕುಲದಲ್ಲಿ ಹುಟ್ಟಿದವರ ಎಂಜಲನ್ನು ಈ ಶ್ರೇಷ್ಠ ದ್ವಿಜರುಗಳ ಮನೆಯ ಮುಂದೆ ತರುತ್ತಿರುವೆ. ಇದು ನಿನ್ನ ಗರ್ವವಲ್ಲವೇ ? ೮೪. ನೀನು ಅತ್ಯಂತ ಬುದ್ಧಿಶಾಲಿಯಾಗಿದ್ದರೆ, ನಮ್ಮಿಂದ ಮಾನವನ್ನು ಕಳೆದುಕೊಳ್ಳದೆ (ಆಚೆ) ತೊಲಗು ; ಎಂದು ಆ ಗುಂಪು ಗೂಡಿದ ದ್ವಿಜರು ಅನ್ನಲು, ಪ್ರಸಿದ್ಧನೂ ಮಹಿಮಾ ಸಮುದ್ರನೂ ಆದ ಬಾಚಯ್ಯನು ಕೇಳಿ, ಕೋಪದಿಂದ ಭಯಂಕರ ನಾದನು. ೮೫–೮೬. ಎಲೆ ಎಲೇ ಪಾಪಕರ್ಮರಿರಾ, ದುಷ್ಟ ಮದದಿಂದ ಕೂಡಿದ ದುಷ್ಟರಿರಾ, ಅಂತ್ಯವಿಲ್ಲದ ಕೆಟ್ಟ ಮಲದಿಂದ ಮಲಿನಗೊಂಡ ಹೃದಯವುಳ್ಳ ಧೂರ್ತರಿರಾ, ಈಶ್ವರ ಭಕ್ತಿಯ ಮಾರ್ಗದಪ್ಪಿ, ಸಂಕಟಕ್ಕೊಳಗಾದ ನೀಚರುಗಳಿರಾ, ಮುಂದಾಲೋಚನೆ ಮಾಡದೆ ಗರ್ವದ ಆಧಿಕ್ಯದಿಂದ ಏಕೆ ಮಾತನಾಡುತ್ತಿದ್ದೀರಿ ! ಈಶ್ವರನ ಭಕ್ತರು ಲೋಕದಲ್ಲಿ ಕೀಳುಮಟ್ಟದವರೇ ? ಪವಿತ್ರರಾದ ಮಲಹರವೆನಿಸಿದ ಶಿವನ ಚರಣ ಕಮಲ ಭಕ್ತರನ್ನು ಕುಲಹೀನರೆಂದೆನ್ನುತ್ತಿರುವಿರಾ ! ನೀವೇ ಈಗ ಕುಲ ಹೀನೆಯಾದ ಗೋಪಿಯ ಮಲವನ್ನು (ಗೋಪೀಚಂದನವೆಂಬ ಮಲವನ್ನು) ಹಣೆಯಲ್ಲಿ

---

1 ರ್ಗ(ಮು)

ಗುರುಕರಜಾತರೊಳೆಂದುಂ
ಪರಭಕ್ತರೊಳಿಲ್ಲಪೂರ್ವ ಕುಲ ಜಾತಿ ಭವ
ದ್ಗುರುವಾದ ಬಾದರಾಯಣ
ವರಮುನಿಯಕುಲೀನನೆಂದೊಡೇವೇಳ್ದಪಿರೋ ೮೭

ಅಪಿ ಪಾಯಶ್ಚಂಡಾಲೋ
ಲ್ಲಪಿತಶ್ರುತಿ ಶಿವನ ಭಕ್ತರೊಳ್ಕುಲಮಿಲ್ಲೆಂ
ದುಪದೇಶಿಪುದಿದನಱಿದುಂ
ಚಪಳತೆಯಿಂ ಬಾಯ್ಗೆ ಬಂದವೋಲ್ಗಳಪುವುದೇ ೮೮

ಗುರುಚರಹರಪ್ರಸಾದಮ
ನಿರದೆಂಜಲೆನುತ್ತೆ ತೆಗಳ್ವ ನರನಾವನಂ
ನರಕಾಗ್ನಿಯೊಳಜಕಲ್ಪಂ
ಬರೆಗಂ ಬೇವಂ ದಲೆಂಬುದಾಗಮವಚನಂ ೮೯

ಧರಿಸುತ್ತಿದ್ದೀರಿ ಇದು ಆಶ್ಚರ್ಯವಲ್ಲವೇ ? ೮೭. ಸದ್ಗುರುವಿನ ಹಸ್ತದಿಂದ ಹುಟ್ಟಿದ (ಅಂದರೆ ಗುರುವು ತನ್ನ ಹಸ್ತವನ್ನು ಶಿಷ್ಯನಮಸ್ತಕದ ಮೇಲಿಟ್ಟು ಹಸ್ತ ಮಸ್ತಕ ಸಂಯೋಗಗೊಳಿಸಿ ಆತನ ಕರದಿಂದ ಹುಟ್ಟಿಧ) ಹರ ಭಕ್ತರಲ್ಲಿ ಪೂರ್ವದ ಕುಲ, ಜಾತಿಗಳು ಎಂದೂ ಇಲ್ಲ. ನಿಮ್ಮ ಗುರುವಾದ ಬಾದರಾಯಣನೆಂಬ ಶ್ರೇಷ್ಠ ಮುನಿ (ವ್ಯಾಸಮುನಿ) ಯನ್ನು ಅಕುಲೀನನೆಂದರೆ ಏನು ಹೇಳುತ್ತೀರಿ ?† ೮೮. 'ಅಪಿಪಾಯಶ್ಚಾಂಡಾಲೋಲ್ಲಪಿತ' ಶ್ರುತಿಯು ಶಿವನ ಭಕ್ತರಲ್ಲಿ ಕುಲವಿಲ್ಲವೆಂದು ಉಪದೇಶಿಸುವುದೆಂಬುದನ್ನು ತಿಳಿದೂ ಕೂಡ (ಮಾತಿನ) ಚಾಪಲ್ಯದಿಂದ ಬಾಯಿಗೆ ಬಂದ ಹಾಗೆ ಗಳಪುವುದೇ.* ೮೯. ಗುರು ಜಂಗಮಲಿಂಗ ಪ್ರಸಾದವನ್ನು ಎಂಜಲೆನ್ನುತ್ತ ತೆಗಳುತ್ತಿರುವ ಮನುಷ್ಯನಾವನೋ ಅವನು ನರಕದ ಬೆಂಕಿಯಲ್ಲಿ ಬ್ರಹ್ಮನ ಕಲ್ಪಪರ್ಯಂತವಾಗಿ (ಬ್ರಹ್ಮನ ಆಯುಷ್ಯ ಪ್ರಮಾಣದ ಕಾಲದವರೆಗೆ) ಬೇಯುತ್ತಾನೆಯಲ್ಲವೇ ! ಹೀಗೆ

---

† ಗುರುಕರಜಾತರು :—ಗುರುವಾದವನು ತನ್ನಲ್ಲಿ ಶಿವಕಳೆಯನ್ನು ಮಸ್ತಕದ ಮೇಲೆ ಕೈಯಿಟ್ಟು ತನ್ನ ಅಂತಃಕರಣ ಗ್ರಂಥಿಯನ್ನು ಬಿಚ್ಚಿ ಶಿಷ್ಯನ ಅಂತಃಕರಣದ ಮೇಲೆ ಸುರಿದು ಅವನಲ್ಲಿ ನೂತನ ಪ್ರಕಾಶವನ್ನುಂಟುಮಾಡಿ ಪುನರ್ಜ್ಞಾತನನ್ನಾಗಿಮಾಡುವನು. ಅವನಲ್ಲಿರುವ ಆಣವ, ಮಾಯಾ, ಕಾರ್ಮಿಕ ಮಲತ್ರಯಗಳನ್ನು ನಾಶಮಾಡುವನು. ಇಂಥ ಪುನರ್ಜಾತನಾದ ಶಿಷ್ಯನೇ ಗುರುಕರಸಂಜಾತನು. ಇವನಿಗೆ ತನ್ನ ಪೂರ್ವಾಶ್ರಮದ ಜಾತಿ, ಕುಲ, ಮತ, ಧರ್ಮಗಳಾವುವೂ ಸಂಬಂಧವಿಲ್ಲ.

* ಸಾಮವೇದದಲ್ಲಿ ಹೇಳಿರುವ ಮಾತೇ 'ಅಪಿಪಾಯಶ್ಚ....' ಎಂಬ ಶ್ರುತಿ :—

'ಅಪಿಪಾಯಶ್ಚಂಡಾಲ ಶಿವೇತಿ ವಾಚಂ ವದೇತ್ತೇನ ಸಹ ಸಹಸಂವದೇತ್ತೇನ ಸಹಸಂವಸೇತ್ತೇನ ಸಹಸಂವಿಶೇತ್ತೇನ ಸಹಭುಂಜೀತ. (ಚಾಂಡಾಲನಾದರೂ ಶಿವಭಕ್ತನೊಡನೆ ಮಾತನಾಡಲು, ವಾಸಮಾಡಲು, ಕುಳಿತುಕೊಳ್ಳಲು, ಊಟಮಾಡಲು ಭೇದವೆಣಿಸಬಾರದು)

ಹರಭಕ್ತಿಯುಳ್ಳವರ್ಗಿದು
ಪರಮಾಮೃತಮಲ್ಲದರ್ಗೆ ಲಯವಹ್ನಿಯಿದಂ
ಕರಮಿಂತು ತೆಗಳ್ವ ಬಡಪಾ
ರ್ವರೆ ನಿಮ್ಮಂ ಕೊಲ್ವುದೆಮಗಿದೇಂ ಪೌರುಷಮೇ ೯೦

ತುಂಗಪ್ರಸಾದದೀಪಪ
ತಂಗತ್ವಮನಾಳದತ್ತ ತೊಲಗಿಮೆನುತ್ತುಂ
ಜಂಗಮಲಿಂಗಪದಾಂಬುಜ
ಭೃಂಗಂ ಘನ ಬಿಬ್ಬಭಾಸ್ಕರಂ ನುಡಿಯಲೊಡಂ ೯೧

ವ॥ ಕೇಳ್ದಾ ಪಾರ್ವರ್ಕಡು ಕನಲ್ದು ಮಾಮುಸಕಂ ಮಸಗಿ—

ಬಿಡು ಬಿಡಿದೇನನೆಂಬಪೆ ವಿಡಾಯ-ದೆ ಭೀತಿಯನಿಂತು ಬೀಱಿ ನಿ
ನ್ನೊಡೆಯರೆನಿಪ್ಪ ಕೀಳ್ಗೊರವರೆಂಜಲದೇಂ ಫಣಿಯೋ ಮದೇಭಮೋ
ಸುಡುಗರಮೋ ಗಜಾರಿಯೊ ಮೃಗಾರಿಯೊ ಕಾಲನೊ ಕಾಲಕೂಟಮೋ
ಸಿಡಿಲೊ ಮೃಗೇಂದ್ರವೈರಿಯೊ ದವಾನಳನೋ ಲಯಕಾಲವಹ್ನಿಯೋ ೯೨

ವ॥ ಎಂದು ಗಳಪುತ್ತುಂ ತಮ್ಮಿದಿರ್ವರಿವ ನಿರ್ಭಯಭಕ್ತರಾಟೋಪಮಂ ಕಂಡು ಕನಲ್ದು ಕೈಗರಗಂಗಳುಮಂ ದರ್ಭೆವೆರಸೊಂದೆಡೆಯೊಳಿಳುಪಿ ಜನ್ನಿವರಮನೇಱಿಕಟ್ಟಿದೋವತಿಯಂ ಮಲ್ಲಗಾಸೆಯನುಟ್ಟು ಯಟ್ಟಿಗಳಂ ಕೆಯ್ಕೊಂಡು ಕದನಕ್ಕೆ ಕಡಂಗಿನಿಂದು—

ಆಗಮವು ಹೇಳುತ್ತದೆ. ೯೦. ಹರಭಕ್ತರಾದವರಿಗೆ ಇಂಥ ಪ್ರಸಾದತ್ರಯವು ಪರಮ ಅಮೃತ ಪ್ರಾಯವಾದದ್ದು ; ಹರಭಕ್ತಿಯಿಲ್ಲದವರಿಗೆ ಪ್ರಳಯಕಾಲದ ಅಗ್ನಿಯಿದ್ದ ಹಾಗೆ. ಇಂಥ ಪ್ರಸಾದವನ್ನು ಈ ರೀತಿ ತಿರಸ್ಕರಿಸುವ ಬಡ ಹಾರುವರೇ, ನಿಮ್ಮನ್ನು ಕೊಲ್ಲುವುದು ನಮಗೆ ಇದೇನು ಪೌರುಷವೇ. (ನಿಮ್ಮನ್ನು ಆ ಬೆಂಕಿಯೇ ಕೊಲ್ಲುವುದು ನಾವು ಪೌರುಷ ತೋರಿಸಲೇ ಬೇಕಾಗಿಲ್ಲವೆಂದು ಭಾವ) ೯೧. ಉನ್ನತವಾದ ಶೇಷ ಪ್ರಸಾದವೆಂಬ ದೀಪಕ್ಕೆ ಪತಂಗದಂತೆ ಆಗದೆ ಅತ್ತ ತೊಲಗಿರಿ' ಎನ್ನುತ್ತ ಆ ಜಂಗಮ ಲಿಂಗದ ಪಾದಕಮಲಗಳಲ್ಲಿ ಭೃಂಗದೋಪಾದಿಯಲ್ಲಿರುವ ಶ್ರೇಷ್ಠ ಬಿಬ್ಬಬಾಚಯ್ಯನು ನುಡಿಯಲಾಗಿ ವ॥ ಆ ಬ್ರಾಹ್ಮಣರು ಕೇಳಿ, ವಿಶೇಷವಾಗಿ ಉರಿದೆದ್ದು ಕೋಪಾಧಿಕ್ಯ ವನ್ನು ಹೊಂದಿ ೯೨. ತೋರಿಕೆಯ ಈ ರೀತಿಯ ಭೀತಿಯನ್ನು ಬೀರುವೆಯ ಬಿಡು ಬಿಡು! ಇದೇನೆನ್ನುವೆ! ನಿನ್ನ ಒಡೆಯರೆನಿಸುವ ಕೀಳು ಜಂಗಮರ (ಸಂನ್ಯಾಸಿಗಳ ಎಂಜಲು ಅದೇನು ಹಾವೋ; ಮದ ವಿಶಿಷ್ಟವಾದ ಆನೆಯೋ, ಸುಡುವ ವಿಷವೋ, ಸಿಂಹವೋ, ಯಮನೋ, ಕಾಲಕೂಟ ವಿಷವೋ, ಸಿಡಿಲೋ, ಶರಭ ಪಕ್ಷಿಯೋ, ಕಾಡ್ಗಿಚ್ಚೋ, ಪ್ರಳಯಕಾಲದ ಅಗ್ನಿಯೋ ? ವ॥ ಎಂದು ವ್ಯರ್ಥವಾಗಿ ಮಾತನಾಡಿ. ತಮ್ಮ ಎದುರಿಗೇ ಹೋಗುತ್ತಿರುವ ನಿರ್ಭಯರಾದ ಭಕ್ತ ಜನರ ದರ್ಪವನ್ನು ಕಂಡು ಸಿಡಿಮಿಡಿ ಗೊಂಡು, ಕೈಯಲ್ಲಿರುವ ಚಿಕ್ಕ ಬಿಂದಿಗೆಯನ್ನು ದರ್ಭೆ ಸಹಿತ ಒಂದು ಕಡೆಯಿಟ್ಟು, ಜನಿವಾರವನ್ನು ಏರಿಸಿ ಕಟ್ಟಿ, ಉಟ್ಟ ಪಂಜೆಯನ್ನು ವೀರಗಾಸೆ ಕಟ್ಟಿ ದೊಣ್ಣೆಗಳನ್ನು

ಪಿಡಿಪಿಡಿಯೆಳ್ತನಚ್ಯುತ ಗದಾಧರ ಜೊತ್ತಗೆಗಿಳ್ತು ಪೋರಿಯುಂ
ಬಿಡು ಬಿಡು ದುಃಷ್ಟ ಕೇಶವ ಕೊರಲ್ನೊಗಮುಂ ಕಡಿ ಯಟ್ಟಿಗೊಂಡು ನೀಂ
ಬಡಿ ಬಡಿ ಬಂಡಿಯುಂ ಕರಿಯ ರಾಘವ ಮಾಧವ ಮುಂದೆ ಬರ್ಪರಂ
ತಡೆ ತಡೆ ಕೂಚಿಗಾ ಮಿಳಿರ್ವ ಕೇತನಮುಂ ಪಱಿದಿಕ್ಕು ಬೇಗದಿಂ ೯೩

ಎಲೆ ದಾಮೋದರ ಪೊಡೆ ಪೊಡೆ
ಕಲಶಮನೆಲೆ ಜನ್ನ ಜಂತ್ರಮುಂ ಪಱಿ ಪಱಿ ವಿ
ತ್ಮಲಕಟ್ಟಿದ ತೋರಣಮು
ತೊಲಗದೆ ಕಿಳ್ತಿಡು ಮುರಾರಿ ಮುಱಿ ಸತ್ತಿಗೆಯುಂ ೯೪

ವ॥ ಎಂದು ಗರ್ಜಿಸಿ ಮೇಲ್ವರಿವ ದುಷ್ಟದ್ವಿಜರಂ ಕಂಡು ಬಿಬ್ಬ ಭಾಸ್ಕರಂ ನಕ್ಕು ನಿಜಕರಂಗಳಿಂ ಸಿದ್ಧಪ್ರಸಾದಮುಂ ಮೊಗೆದೆತ್ತುತ್ತುಮೀ ಪೊಳಲಂ ದಹಿಪ್ಪುದೆಂದು ಘಳಿಲನೆ ಕೆದಱಲೊಡನೆ—

ಘುಳಿಘುಳಿಸುತ್ತೆ ಚಂಡರುಚಿರೋಚಿಯನಾಳ್ದು ಪೊದಳ್ದು ಪೊಣ್ಮಿ ಬಾಂ
ದಳಕೊಗೆದುರ್ಬಿ ಪರ್ಬಿ ಕಿಡಿ ಸೂಸೆ ಚಿಳಿಚ್ಛಿಟಿಲೆಂದು ಮೀಱಿ ಪ
ಜ್ವಳಿಪುರಿಮಾಲೆ ದಳ್ಳಿಸೆ ಪುರತ್ರಯಮುಂ ಮಿಗೆ ಮುತ್ತಿದುಗ್ರನು
ಜ್ವಳ ನಯನಾಗ್ನಿಯಂತೆಸೆದು ಮುತ್ತಿದುದಾ ಪೊಳಲಂ ಕ್ಷಣಾರ್ಧದೊಳ್ ೯೫

ಕೈಯಲ್ಲಿ ಹಿಡಿದು ಯುದ್ಧಕ್ಕೆ ಕೋಪದಿಂದ ನಿಂತುಕೊಂಡು ೯೩. ಅಚ್ಯುತ, ಎತ್ತುಗಳನ್ನು ಹಿಡಿಹಿಡಿ ! ಗದಾಧರನೇ, ಕೊರಳ ಪಟ್ಟಿಕೆಗಳನ್ನ ಕಿತ್ತು ಹೋರಿಗಳನ್ನು (ಬಂಡಿಯಿಂದ) ಬಿಡುಬಿಡು ! ಎಲೈ ದುಷ್ಟ ಕೇಶವನೇ, ಕೊರಳ ಮೇಲಿರುವ ನೊಗವನ್ನು ಕಡಿದು ಹಾಕು ! ಆ ಕಟ್ಟಿಗೆ ಹಿಡಿದು ನೀನು ಬಂಡಿಯನ್ನು ಬಡಿಬಡಿ ! ಹೇ ಕರಿಯ ರಾಘವನೇ, ಮಾಧವಾ, ಮುಂದೆ ಬರುವವರನ್ನು ತಡೆತಡೆ ! ಕೊಚಿಗನೇ ಹಾರಾಡುವ ಧ್ವಜವನ್ನು ಬೇಗ ಹರಿದು ಹಾಕು. ೯೪. ಎಲೈ ದಾಮೋದರನೇ, ಕಲಶವನ್ನು ಹೊಡೆ ಹೊಡೆ ! ಮೂಕಿಗೆ ಕಟ್ಟಿದ ಹಗ್ಗವನ್ನು ಹರಿ ಹರಿದು ಹಾಕು ; ವಿತ್ಮಲಾ ಕಟ್ಟಿರುವ ತೋರಣವನ್ನು ಅತ್ತ ಹೋಗದೆ ಕಿತ್ತು ಬಿಸಾಡು. ಮುರಾರೀ, ಛತ್ರಿಗಳನ್ನು ಮುರಿದು ಹಾಕು. ವ॥ ಹೀಗೆಂದು ಗದರಿಸಿ ಗರ್ಜನೆ ಮಾಡಿ, ಮೇಲೆ ಬೀಳುತ್ತಿರುವ ದುಷ್ಟ ದ್ವಿಜರುಗಳನ್ನು ಕಂಡ ಬಿಬ್ಬಬಾಚರಸನು ನಕ್ಕು, ತನ್ನ ಕೈಗಳಿಂದ ಗುರುಪ್ರಸಾದವನ್ನು ಬಾಚಿ ಎತ್ತಿ ಹಿಡಿದು ಈ ಪಟ್ಟಣವನ್ನು (ಈ ಪ್ರಸಾದವು) ಸುಡುವುದು ಎಂದು ಒಮ್ಮೆಂದೊಮ್ಮೆಲೆ ಹರಡಲಾಗಿ ೯೫. ಕ್ಷಣಾರ್ಧದಲ್ಲಿಯೇ ಘುಳು ಘುಳು ಧ್ವನಿ ಮಾಡುತ್ತ ಸೂರ್ಯನಂತೆ ತೇಜಸ್ಸನ್ನು ಪಡೆದು ಸುತ್ತಲೂ ಹಬ್ಬಿ, ಆಕಾಶಕ್ಕೆ ನೆಗೆದು, ಉತ್ಸಾಹಗೊಂಡು ಹಬ್ಬಿ, ಕಿಡಿಗಳನ್ನು ಸೂಸುತ್ತ, ಚಿಳ್ ಛಿಟಿಲ್ ಎಂದು ಮಿತಿಮೀರಿ ಪ್ರಜ್ವಲಿಸುವ ಉರಿಗಳ ಸಾಲು ಹಿಂದೆ ತ್ರಿಪುರಗಳನ್ನು ವಿಶೇಷವಾಗಿ ಮುತ್ತಿದ ಪರಮೇಶ್ವರನ ಭಯಂಕರ ಹಣೆಗಣ್ಣಿನ ಬೆಂಕಿಯಂತೆ ಪ್ರಕಾಶಿಸುತ್ತ ಆ ಪಟ್ಟಣವನ್ನು ಮುತ್ತಿತು.

ವ॥ ಅಂತು ಮುತ್ತಿ ಮುಂಬರಿದು ಕಾಲಾಗ್ನಿಯಂತೆ ಕವಿತರ್ಪ ತದಗ್ನಿಯಂ ಕಂಡು –

ಎಲೆ ಎಲೆ ಕಿರ್ಚು ಪರಿಯಿಟ್ಟುದು ಸುಟ್ಟುದು ಕೆಟ್ಟೆವಕ್ಕಟಾ
ನಿಲಯಮನುರ್ಬಿ ಪರ್ಬಿದುದಕಾಲಲಯಂ ಮಸಗಿತ್ತು ಮಿಳ್ತು ಬಂ
ದಲೆದುದು ಪೋಗು ಪೋಗು ಪರಿದೋಡಿರಡೆದೋಡು ಜಲಾಶಯಂಗಳ
ತ್ತಲೆ ತೆಗೆ ಮಕ್ಕಳಂ ಜವದಿನೆಂಬ ರವಂ ಪಿರಿದಾಯ್ತು ಪಾರ್ವರೊಳ್ ೯೬

ಪ್ರಮಥರ್ಜಗಮಂ ಕಲ್ಪಾಂ
ತ ಮಹಾಶಿಖಿಯುಳುರೆ ನೋಡಿ ನಲಿವವೊಲಾ ಜಂ
ಗಮಸುಪ್ರಸಾದಶಿಖಿ ದು
ರ್ದಮುರೂರಂ ಮುತ್ತೆ ಭಕ್ತರುತ್ಸವಮಾಂತರ್ ೯೭

ವ॥ ಆಗಳ್—

ಶ್ರುತಿಯೆ ಪುರಾಣೌಘಮೆ ಭಾ
ರತಿಯೆ ಶತಮುಖನೆ ಮಖಸಂ
ತತಿಯೇ ಮಾಣಿಪುದು ಸುಡುವ ಶಿಖಿಯುಪಟಳಮಂ ೯೮

ವ॥ ಎಂದು ಪುಯ್ಯಲ್ಚಿ ಪೊಜೆಯಿಟ್ಟು ಮಱುಗುತ್ತುಂ ಪರಿವ ಪುರೋಹಿತರುಂ ನಿಚ್ಚ ಮುಂ ನಿನ್ನನಾಶ್ರಯಿಸಿದೆಮ್ಮಂ ದಹಿಸುತ್ತುಮಾಶ್ರಯಾಶನಾಮಮುಂ ಸಾರ್ಥಕಂ ಮಾಡದಿರೆಂದನಳಂಗೆ

ವ॥ ಆ ರೀತಿ (ಬಿಬ್ಬ ಬಾಚಯ್ಯನ ಸಂಬಂಧದ ಉರಿ) ಮುತ್ತಿ ಮುಂದಕ್ಕೆ ಹರಿದು, ಪ್ರಳಯಕಾಲದ ಅಗ್ನಿಯಂತೆ ಕವಿಯುತ್ತಿರುವ ಆ ಬೆಂಕಿಯನ್ನು ಕಂಡು, ೯೬. ಎಲೆ ಎಲೈ ಕಿಚ್ಚು ಕಿಚ್ಚು ! ಹರಿದು ಬಂತು : ಉತ್ಸಾಹದಿಂದ ಮನೆಗಳನ್ನು ಸುಟ್ಟಿತು. ಅಯ್ಯೋ ಕೆಟ್ಟೆವು ! ಉರಿ ಹರಡಿಕೊಂಡಿತು ! ಅಕಾಲದ ಪ್ರಳಯವು ಮುತ್ತಿತು ! ಮೃತ್ಯುವೇ ಬಂದಿತು ! ಹೋಗು ಹೋಗು ! ವೇಗವಾಗಿ ಓಡು ! ನಿಲ್ಲದೆ ಜಲಾಶಯಗಳತ್ತ ಓಡು ! ಶೀಘ್ರವಾಗಿ ಮಕ್ಕಳುಗಳನ್ನು ತೆಗೆ! ಎಂಬ ಧ್ವನಿಯು ಆ ದ್ವಿಜರಲ್ಲಿ ಅಧಿಕಗೊಂಡಿತು. ೯೭. ಶಿವಲೋಕದ ಪ್ರಮಥರುಗಳು ಪ್ರಳಯ ಕಾಲದ ಬೆಂಕಿಯು ಹೊತ್ತಿ ಜಗತ್ತು ಉರಿಯುತ್ತಿರುವುದನ್ನು ಕಂಡು ನಲಿದಾಡುವ ಹಾಗೆ ಜಂಗಮರ ಸುಪ್ರಸಾದ ಕಾರಣದಿಂದುದ್ಭವಿಸಿದ ಅಗ್ನಿಯು ದುಷ್ಟ ಮದದಿಂದ ಕೂಡಿದ ದ್ವಿಜರ ಊರನ್ನು ಮುತ್ತಲಾಗಿ ಭಕ್ತರು ಸಂತೋಷಗೊಂಡರು. ವ॥ ಆಗ ೯೮. ಶ್ರುತಿಗಳೇ, ಪುರಾಣಗಳ ಸಮೂಹವೇ, ಭಾರತವೇ (ಮಹಾಭಾರತವೇ), ಸೂರ್ಯನೇ, ಬ್ರಹ್ಮನೇ, ವಿಷ್ಣುವೇ, ಸರಸ್ವತಿಯೇ, ದೇವೇಂದ್ರನೇ, ಯಜ್ಞಗಳ ಸಮೂಹವೇ, ಸುಡುತ್ತಿರುವ ಈ ಬೆಂಕಿಯ ಉಪಟಳವನ್ನು ನಿವಾರಿಸಿರಿ ! ವ॥ ಹೀಗೆ ನ್ನುತ್ತ ಕೂಗಿಕೊಂಡು, ಚೀರಾಡಿ. ಸಂಕಟಪಡುತ್ತ ಓಡುತ್ತಿರುವ ಪುರೋಹಿತರುಗಳೂ, ನಿತ್ಯವೂ ನಿನ್ನನ್ನು ಆಶ್ರಯಿಸಿಕೊಂಡಿರುವ ನಮ್ಮನ್ನು ಸುಡುತ್ತ ಆಧಾರವಸ್ತುವನ್ನೇ

ಬಾಯ್ವಿಟ್ಟು ಬೀಱುತೋಡುವ ಸೋಮಯಾಜಿಗಳುಂ ಪೊತ್ತಗೆಯ ನಿಱುಂಕಿ ಮಕ್ಕಳಂ ಪೆಗಲೊ
ಳ್ತಾಳ್ದು ಪೆಂಡಿರ್ಗೊಡಿ ನಡುಗುತ್ತುಂ ಪಾಱುವ ಪಂಡಿತರುಂ ಬೊಮ್ಮಮೆಮ್ಮನಗ್ನಿರೂಪಿಂ ಕೊಲ
ಲೇಳ್ತಂದುದೇಗೆಯ್ವೆವೆಂದಟ್ಟಿಸುಡುವಗ್ಗಿಗಗಿದು ಮಡುವೊಳಾಳ್ವ ವೇದಾಂತಿಗಳುಂ ಕಟ್ಟಿದಿರೊಳ್ನಿಂದ
ಕ್ಷತೆಯನಭಿಮಂತ್ರಿಸುತಿಟ್ಟು ವಾರುಣ ಜಪಂಗೆಯ್ವಾಗಳುಟ್ಟುದುಮಂ ಸುಟ್ಟು ಶಿಖಾಶ್ಮಶ್ರುಗಳನಗ್ನಿ
ಯುರುಪೆ ನಗ್ನಾಂಗರಾಗಿ ಜೈನದೀಕ್ಷೆವೆತ್ತರಂತೆ ಬಿಗುರ್ತು ದೆಸೆದೆಸೆಗೆ ಪಾಯ್ವ ಮಂತ್ರವಾದಿಗಳುಂ
ಪಾಲ್ದುಪ್ಪಮಂ ಪಾತ್ರಿಯೊಳ್ತೀವಿ ತಮ್ಮಂಗದಾಹುತಿಗಾಪೋಶನಮನೆಱೆವಂತೆಱೆದು ಸಂದಿಸಲ್ಕೆ
ಱೆಯದುರಿಯ ಕೋಳ್ಗೆ ಸೈರಿಸಲಾಱದೆ ಸೈವರಿವ ಶಾಸ್ತ್ರವೇದಿಗಳುಂ ಗರಿಗರಿಲನಾಲಯ ಮುರಿಯೆ
ನೆರಪಿದ ಭಕ್ಷ್ಯಭೋಜ್ಯಮೆಲ್ಲಮುಸಕಳಿದುದೆಂದೊಡಲುರಿಗೊಂಡು ಬಿಕ್ಕಿ ಬಿರಿ ದಳುತುಂ ತಳರ್ವ
ತರುಣ[1]ದ್ವಿಜರುಮಲ್ಲದ ಪೊಳ್ತಿನೊಳ್ಪವರಕ್ಕೆ ಪೊಱಮಟ್ಟ ಫಲಂ ಸಿದ್ಧಿಸಿದುದೆಂದು ಶಿಖಿಯ ಸೆಕೆಯಿಂ
ಕಂದಿ ಕುಂದಿ ಮೊಱೆಯಿಡುತುಂ ಗಳಿಗೆವಟ್ಟಲೊಡೆಯೆ ಗಳಿಲನೆ ಕೆಡೆವ ಜೋಯಿಸರುಂ ಶಿರೋವೇ

ತಿನ್ನುವಂತಹುದೆಂಬ ನಿನ್ನ ಹೆಸರನ್ನು ಸಾರ್ಥಕಗೊಳಿಸಿ ಕೊಳ್ಳದಿರು,' ಎಂದು ಅಗ್ನಿಗೆ
ಬಾಯಿಬಿಟ್ಟು ಹೇಳುತ್ತ ಓಡುವ ಸೋಮಯಾಜಿಗಳೂ, ಪುಸ್ತಕಗಳನ್ನು ಬಗಲಲ್ಲಿ
ತಬ್ಬಿಕೊಂಡು ಹೆಗಲ ಮೇಲೆ ಮಕ್ಕಳನ್ನು ಹೊತ್ತುಕೊಂಡು ಹೆಂಡಿರೊಡನೆ ನಡುಗುತ್ತ
ಹಾರುತ್ತಿರುವ ಪಂಡಿತರುಗಳೂ, 'ಪರಬ್ರಹ್ಮನೇ ನಮ್ಮನ್ನು ಅಗ್ನಿಯ ರೂಪದಿಂದ
ಕೊಲ್ಲಲು ಹೊರಟುಬಂದಿದ್ದಾನೆ, ಏನು ಮಾಡೋಣ'ವೆಂದು ಬೆನ್ನಟ್ಟಿಸುತ್ತಿರುವ
ಬೆಂಕಿಗೆ ಹೆದರಿ, ಮಡುಗಳಲ್ಲಿ ಬೀಳುತ್ತಿರುವ ವೇದಾಂತಿಗಳೂ' (ಬೆಂಕಿಯ) ನೇರ
ಎದುರಿನಲ್ಲಿಯೇ ನಿಂತು, ಅಕ್ಷತೆಗಳನ್ನು ಅಭಿಮಂತ್ರಿಸಿ ತೂರುತ್ತ ಅಗ್ನಿಯ ಪ್ರಾಬಲ್ಯ
ವನ್ನು ತಗ್ಗಿಸುವುದಕ್ಕೆ ಸಂಬಂಧಿಸಿದ ಜಪವನ್ನು ಮಾಡುವಾಗ ಉಟ್ಟ ಬಟ್ಟೆಯೆಲ್ಲ
ಸುಟ್ಟುಹೋಗಿ, ಜಂಡಿಕೆ, ಮೀಸೆಗಳನ್ನು ಅಗ್ನಿಯು ಸುಡಲಾಗಿ, ಬತ್ತಲೆಯಾಗಿ ಜೈನದೀಕ್ಷೆ
ಯನ್ನು ಪಡೆದವರಂತೆ (ದಿಗಂಬರ ದೀಕ್ಷೆಯನ್ನು ಪಡೆದವರಂತೆ) ಭಯಪಟ್ಟು ದಿಕ್ಕುದಿಕ್ಕಿಗೆ
ಹರಿದು ಓಡುವ ಮಂತ್ರವಾದಿಗಳೂ, ಹಾಲು ಮತ್ತು ತುಪ್ಪಗಳನ್ನು ಪಾತ್ರೆಗಳಲ್ಲಿ
ತುಂಬಿಕೊಂಡು, ತಮ್ಮ ದೇಹದ ಆಹುತಿಗೆ ಆಪೋಶನವನ್ನು ಎರೆಯುವ ಹಾಗೆ (ಊಟ
ಕ್ಕೋಸ್ಕರ ಆಹಾರವನ್ನು ಇಟ್ಟು ಕಡೆಗೆ ನೀರನ್ನು ಕೊಡುತ್ತಿರುವ ಹಾಗೆ) ಸಂಧಿಸು
ವುದಕ್ಕೆ ಶಕ್ಯವಿಲ್ಲದ ಉರಿಯ ಬಾಧೆಗೆ ಸೈರಿಸಲಾರದೆ ಓಡಿಹೋಗುತ್ತಿರುವ ಶಾಸ್ತ್ರಗಳನ್ನು
ಬಲ್ಲವರೂ, ಗರಿಗರಿಲೆಂದು ಮನೆಯು ಸುಟ್ಟುಹೋಗಲು ಸಿದ್ಧಪಡಿಸಿದ ಭಕ್ಷ್ಯಭೋಜ್ಯ
ವೆಲ್ಲ ಹಾಳಾಗಿ ಹೋಯಿತೆಂದು ಒಡಲುರಿಗೊಂಡವರಾಗಿ, ಬಿಕ್ಕಿಬಿಕ್ಕಿ ಬಾಯಿಬಿಟ್ಟು
ಅಳುತ್ತ ಓಡುವ ತರುಣಬ್ರಾಹ್ಮಣರೂ, ಹೊತ್ತಲ್ಲದ ಹೊತ್ತಿನಲ್ಲಿ ಯುದ್ಧಕ್ಕೆ ಯುದ್ಧಕ್ಕೆ
ಹೊರಹೊರಟ ಫಲವು ಸಿದ್ಧಿಸಿದ ಹಾಗಾಯಿತೆಂದು ಬೆಂಕಿಯ ಸೆರೆಯಿಂದ ಕಂದಿ ಕುಂದಿ
ಚೀರಾಡುತ್ತ ಗಳಿಗೆಬಟ್ಟಲು ಒಡೆದು ಹೋಗುವಂತೆ ದೊಪ್ಪನೆ ನೆಲಕ್ಕೆ ಬೀಳುತ್ತಿರುವ
ಜ್ಯೋತಿಷಿಗಳು, ತಲೆಗೆಸುತ್ತಿದರುಮಾಲಕ್ಕೆ ಬೆಂಕಿಯು ಹತ್ತಲು ಅದನ್ನು ಶೀಘ್ರವಾಗಿ

---

1 ಣಾ(ಚ,ಗ)

ಪ್ಪಿಯುನುರಿ ಪತ್ತೆ ಭೋಂಕನೆ ಕಳೆದುः ಬಿಸುಟು ತಲ್ಲಣಿಸಿ ತಲೆದಡಪುತ್ತೇಳ್ತುಂದು ಶಿವಾಗಾರದ ಪಿಂದಣ ಜಲಕುಂಡದೊಳ್ಪಡಲಿಡುವುಪಾಧ್ಯಾಯರುಮಾ ಗೊಬ್ಬೂರೊಳ್ ಶಿವದೂಷಕರ್ಬನ್ನಂಬಟ್ಟು ಗೋಳುಂಡೆಗೊಂಡಳ್ಕಿ ಬಳ್ಕಿ ಬಿಬ್ಬ ಭಾಸ್ಕರದೇವನಂಘ್ರಿಗಳೆಡೆಗೆ ಪರಿತಂದು ಪಲ್ಗಿಱಿದು ಶರಣ್ಬೊಕ್ಕು ಸಾಷ್ಟಾಂಗವೆಱಗಿ—

ಶರಣಗಣಾಗ್ರಗಣ್ಯ ಕರುಣಾಮೃತಪೂರ್ಣಕಟಾಕ್ಷ ಕಾಲಸಂ
ಹರನವತಾರ ನಿಮ್ಮಯ ಮಹತ್ವಮದೇಂ ಜಡಬುದ್ಧಿಗಳ್ಗೆ ಗೋ
ಚರಿಸುವೆ ಮುನ್ನಮಾಮಱಿಯದಂದೆಸಗಿರ್ದಪರಾಧಮೆಲ್ಲಮಂ
ವರ ಗುಣಶಾಲಿ ಸೈರಿಪುದು ನಂದಿಪುದಿಂದೆಮಗಾದ ತಾಪಮಂ ೯೯

ಪರಮಪ್ರಸಾದಶಿಖಿ ಸು
ಟ್ಟುರುಪಿದುದೆಮ್ಮಗ್ರಹಾರಮಂ ದ್ವಿಜರೆಲ್ಲಂ
ಕರಮೆ ದವಾಗ್ನಿಗೆ ಸಿಲ್ಕಿದ
ತರುಣದ್ವಿಜವೃಂದದಂತೆ ಕರಿಮುರಿವೋದರ್ ೧೦೦

ಬೇಁದುದು ದೇವಮಾಧವನ ಪೆರ್ಮನೆ ರಾಘವನಾಲಯಾಳಿ ಗೋ
ವಿಂದನ ಗೇಹಮಚ್ಯುತನ ಸದ್ಮಮನಂತನ ಬೀಡು ದೇವಕೀ

ತೆಗೆದು ಬಿಸಾಡಿ, ಸಂಕಟಪಟ್ಟು, ತಲೆಯನ್ನು ಸವರಿ ಕೊಳ್ಳುತ್ತ, ಎಡವುತ್ತ ಓಡಿಬಂದು ಶಿವಾಲಯದ ಹಿಂಭಾಗದಲ್ಲಿರುವ ನೀರಿನ ತೊಟ್ಟಿಯಲ್ಲಿ ಬೀಳುತ್ತಿರುವ ಉಪಾಧ್ಯಾಯರುಗಳು—ಹೀಗೆ ಎಲ್ಲ ಜನರೂ ಆ ಬೊಬ್ಬೂರಿನಲ್ಲಿರುವ ಶಿವನಿಂದಕರೆಲ್ಲ ಭಂಗಪಟ್ಟು ಗೋಳೋಎನ್ನುತ್ತ ಹೆದರಿ, ಬಳುಕುತ್ತ ಬಿಬ್ಬ ಬಾಚರಸದೇವನ ಪಾದಗಳ ಬಳಿಗೆ ಓಡಿ ಬಂದು ಹಲ್ಲುಕಿರಿದು ಶರಣುಹೊಕ್ಕು ಸಾಷ್ಟಾಂಗನಮಸ್ಕಾರಮಾಡಿ–೯೯. 'ಶರಣರಲ್ಲಿ ಅಗ್ರಗಣ್ಯನೇ, ಕರುಣವೆಂಬ ಅಮೃತದಿಂದ ತುಂಬಿರುವ ಕಟಾಕ್ಷವುಳ್ಳವನೇ, ಪ್ರಳಯ ಕಾಲದ ಸಂಹಾರರುದ್ರನ ಅವತಾರನೇ, ನಿಮ್ಮ ಮಹತ್ವವು ಅಜ್ಞಾನ ಬುದ್ಧಿಯವರಿಗೆ ಅದೇನು ಗೊತ್ತಾದೀತೇ ? ಈ ಪೂರ್ವದಲ್ಲಿ ತಿಳಿಯದೆ ನಾವು ಮಾಡಿದ ಅಪರಾಧ ವನ್ನೆಲ್ಲ ಶ್ರೇಷ್ಠ ಸದ್ಗುಣಶಾಲಿಯಾದ ನೀನು ಕ್ಷಮಿಸಬೇಕು, ನಮಗಾದ ತಾಪವನ್ನು ಹೋಗಲಾಡಿಸುವುದು.' ೧೦೦. 'ಶ್ರೇಷ್ಠವಾದ ಪ್ರಸಾದ ಸಂಬಂಧ ಬೆಂಕಿಯು ನಮ್ಮ ಅಗ್ರಹಾರವನ್ನು ಸುಟ್ಟು ಉರಿಸಿತು. ಇಲ್ಲಿನ ಬ್ರಾಹ್ಮಣರೆಲ್ಲ ಚೆನ್ನಾಗಿಯೇ ಕಾಡುಗಿಚ್ಚಿಗೆ ಸಿಕ್ಕ ಪಕ್ಷಿಗಳ ಮರಿಗಳಂತೆ ಕರಿಮುರಿಗೊಂಡು ಹೋದರು.' ೧೦೧. ಮಾಧವದೇವನ ದೊಡ್ಡಮನೆ, ರಾಘವನ ಮನೆಗಳಸಾಲು, ಗೋವಿಂದನ ಮನೆ, ಅಚ್ಯುತನ ಭವನ, ಅನಂತನ ಬೀಡು, ದೇವಕೀನಂದನನ ಮನೆ, ಹರಿಪುರೋಹಿತನ ಮನೆ, ಅರ್ಕಭಟ್ಟನ ಅತ್ತ ಕಡೆಯಮನೆ, ಆದಿವಿಠ್ಠಲನ ಮನೆ, ಕೂಚಿಯಮನೆ ಎಲ್ಲವೂ ಸುಟ್ಟುಹೋದವು. ವ॥ ಹೀಗೆಂದು ಕಾಲಕೂಟವಿಷಾಗ್ನಿಯಿಂದ ನೊಂದು ಹೋದ ದೇವತೆಗಳು ಪರಮೇ ಶ್ವರನ ಎದುರಿನಲ್ಲಿ ದೈನ್ಯದಿಂದ ಹೇಳಿಕೊಳ್ಳುವಂತೆ, (ಪ್ರಸಾದದ) ಬೆಂಕಿಯು ಉರಿಯಿಂದ

ನಂದನನಾಗರಂ ಹರಿಪುರೋಹಿತನಾಶ್ರಯಮರ್ಕಭಟ್ಟನಾ
ಮಂದಿರಮಾದಿವಿಠ್ಠಲನ ಚೌರಿಗೆ ಕೂಚಿಯ ಸನ್ನಿಕೇತನಂ ೧೦೧

ವ॥ ಎಂದು ಗರಳದುರಿಯಿಂ ನೊಂದ ಸುರರಭವನಿದಿರೊಳ್ದೈನ್ಯಂಬಡುವಂತನಳನುರಿಯಿಂ ನೊಂದ ಭೂಸುರರ್ಘನಮಹಿಮನಿದಿರೊಳ್ಬಾಯ್ವಿಟ್ಟು ದೈನ್ಯಂಬಟ್ಟು ಕಾರುಣ್ಯಮಂ ಪಾರ್ದು ಸಾರ್ದು—

ಅಳಿಪರಭಿಮಾನಹೀನ
ರ್ಖಳರೆನಿಪೆಮ್ಮಲ್ಲಿ ಗುಣಮನಱಸದೆ ನಿಮ್ಮು
ಜ್ವಳಗುಣಮಂ ಮೆಱೆದೆಮ್ಮಂ
ವಿಳಾಸದಿಂ ಪೊರೆವುದೆಂದು ಮುಗುಳ್ದೆಱಗಲೊಡಂ ೧೦೨

ಅಭಯಮನಿತ್ತು ವಿಪ್ರತತಿಗಾಕ್ಷಣದೊಳ್ಕರಕಂಜಯುಗ್ಮಮಂ
ಶುಭಮತಿ ನೀಡಿ ತಾಂ ಬರಿಸಿ ಪಾವಕರೂಪಿನ ಸುಪ್ರಸಾದಮಂ
ವಿಭವದೆ ತಾಳ್ದು ತತ್ಪುರಮನೊದಿನವೋಲ್ಸೆಗಳುತ್ತೆ ಶಂಭುಸ
ನ್ನಿಭನಳಿದರ್ಗೆ ಕೊಟ್ಟಸುವನಾ ದ್ವಿಜರಂ ಪೊರೆದಂ ಗುಣಾಧಿಕಂ ೧೦೩

ಮದದಿಂದಿದಿರ್ಚೆ ಮುನ್ನಂ
ಸದೆದಂ ಮದಮಳಿದು ತನ್ನ ಮಱೆವುಗೆ ಕಾದಂ
ವಿದಿತ ಸ್ವತಂತ್ರನಾ ದ್ವಿಜ
ಕದಂಬಮಂ ನೃಪತಿ ಬಿಬ್ಬ ಭಾಸ್ಕರದೇವಂ ೧೦೪

ನೊಂದುಹೋದ ದ್ವಿಜರೆಲ್ಲ ಘನಮಹಿಮಾಶಾಲಿಯಾದ ಬಿಬ್ಬಬಾಚಯ್ಯನ ಎದುರಿನಲ್ಲಿ ಅಳುತ್ತ ದೈನ್ಯಭಾವಗೊಂಡು ಅವನ ಕಾರುಣ್ಯವನ್ನು ಎದುರುನೋಡುತ್ತ ಹತ್ತಿರಕ್ಕೆ ಹೋಗಿ— ೧೦೨–೧೦೩. ದುರುಳರೂ, ಅಭಿಮಾನ ಹೀನರೂ, ಮೂರ್ಖರೂ ಎಂದೆನಿಸುವ ನಮ್ಮಲ್ಲಿ ಸದ್ಗುಣವನ್ನು ಹುಡುಕದೆ ನಿಮ್ಮ ಶ್ರೇಷ್ಠ ಗುಣವನ್ನು ಪ್ರಕಟಿಸಿ, ನಮ್ಮನ್ನು ಪ್ರೀತಿಯಿಂದ ರಕ್ಷಿಸಬೇಕೆಂದು ಪುನಃ ನಮಸ್ಕಾರಮಾಡಲಾಗಿ ಮಂಗಳಕರ ಬುದ್ಧಿಯುಳ್ಳ ಆ ಬಿಬ್ಬಬಾಚಯ್ಯನು ಬ್ರಾಹ್ಮಣ ಸಮೂಹಕ್ಕೆ ಅಭಯವನ್ನು ಕೊಟ್ಟು ಆ ಕ್ಷಣದಲ್ಲಿಯೇ ತನ್ನ ಕರಕಮಲಗಳೆರಡನ್ನೂ, ಮುಂದಕ್ಕೆ ಚಾಚಿ, ಅಗ್ನಿರೂಪ ದಿಂದಿರುವ ಶ್ರೇಷ್ಠ ಪ್ರಸಾದವನ್ನು ಹಿಂದಕ್ಕೆ ಬರಮಾಡಿಕೊಂಡು, ವೈಭವದಿಂದ ಪುನಃ ಅದನ್ನು ಹೊಂದಿದವನಾಗಿ, ಆ ಬೆಬ್ಬೂರು ಪಟ್ಟಣವನ್ನು ಎಂದಿನಹಾಗೆ ಮಾಡಿ, ಸತ್ತವರಿಗೆಲ್ಲ ಪ್ರಾಣದಾನವನ್ನು ಆ ಶಿವ ಸ್ವರೂಪನೂ, ಅಧಿಕ ಗುಣಶಾಲಿಯೂ ಆದ ಬಿಬ್ಬಬಾಚಯ್ಯನು ಕೊಟ್ಟ ಬ್ರಾಹ್ಮಣರನ್ನೆಲ್ಲ ರಕ್ಷಿಸಿದನು. ೧೦೪. ಹೇ ಮಹಾರಾಜ ನಾದ ಬಿಜ್ಜಳನೇ, ಲೋಕಪ್ರಸಿದ್ಧ ಸ್ವತಂತ್ರ ಮತಿಯಾದ ಬಿಬ್ಬಬಾಚಯ್ಯನು ಮೊದಲು ಮದದಿಂದ ಎದುರಿಸಲಾಗಿ ಕೊಂದುಹಾಕಿದನು ; ಆ ಮದವೆಲ್ಲ ಅಳಿದುಹೋಗಿ ತನ್ನ

ಹರಭಕ್ತಿಯಿಲ್ಲದೊಡೆ ಭೂ
ಸುರನಧಮಂ ಶ್ವಪಚನಿಂ ಶ್ವಪಾಕಂ ಸಲೆ ಶಂ
ಕರಭಕ್ತಿಯುಳ್ಳೊಡಾತನೆ
ಪಿರಿಯಂ ದ್ವಿಜರಿಂದೆ ಸತ್ಯಮಿದು ಮನುಜೇಂದ್ರಾ ೧೦೫

ಹರಭಕ್ತಿಗೆಟ್ಟ ದಕ್ಷನ
ಶಿರಮಂ ತಱಿದಿತ್ತನಲ್ತೆ ಕುಱಿದಲೆಯಂ ಮಾ
ದರ ಚೆನ್ನಯನೊಡನುಂಡಂ
ಪರಮೇಶಂ ನೃಪತಿ ಕೇಳ್ದು ನೀನಱಿಯದುದೇ ೧೦೬

ಗುರು ದೇವತೆ ನಿಗಮಾಗಮ
ಪರಮಂತ್ರಂ ಮಿಥ್ಯೆಯೆಂದು ಪುಸಿವುದಱಿಂ ಪಾ
ರ್ವರೆ ಪೊಲೆಯರಲ್ತೆ ಧಾತ್ರೀ
ವರ ಪುಸಿವನೆ ಪೊಲೆಯನೆಂಬ ವಚನದಿನಿಳೆಯೊಳ್ ೧೦೭

ಶಿವಭಕ್ತನಾದ ಪೊಲೆಯಂ
ಗವನೀಸುರರೆಣೆಯೆ ಭಕ್ತಿರಹಿತರ್ಕೇಳ್ಭೂ
ಧವ ಮತ್ತಂ ದೂಡಯನೆಂ
ಬವಿಕಲ ಮೃಡಭಕ್ತನಿರ್ದನೀ ಧಾರುಣಿಯೊಳ್ ೧೦೮

ಆ ಮಾದರ ದೂಡಯ್ಯನ
ಸೀಮಾತೀತಪ್ರಭಾವಮೆಂತೆನೆ ಪೇಳ್ವೆಂ

ಬೆನ್ನುಬೀಳಲು ಆ ಬ್ರಾಹ್ಮಣ ಸಮೂಹವನ್ನೆಲ್ಲ ರಕ್ಷಿಸಿದನು. ೧೦೫. ಹೇ ನರಪತಿಯೇ, ಹರಭಕ್ತಿಯಿಲ್ಲದಿದ್ದರೆ ಬ್ರಾಹ್ಮಣನಾಗಿದ್ದರೂ ಅವನು ಕೀಳು ಜಾತಿಯವನಿಗಿಂತಲೂ ಅಧಮನು ; ಶಂಕರಭಕ್ತಿಯುಳ್ಳ ನಾಯಿಯ ಮಾಂಸ ಭಕ್ಷಕನೂ ಕೂಡ ಆ ದ್ವಿಜರಿಗಿಂತ ಅಧಿಕನು ಇದು ಸತ್ಯ ವಿಷಯ. ೧೦೬. ಹೇ ಮಹಾರಾಜಾ, ಹರಭಕ್ತಿಯಿಂದ ದೂರನಾದ ದಕ್ಷನ ಶಿರಸ್ಸನ್ನು (ಶಿವನು ವೀರಭದ್ರನ ರೂಪದಿಂದ) ಕತ್ತರಿಸಿ ಕುರಿಯ ತಲೆಯನ್ನು ಕೊಟ್ಟನಲ್ಲವೇ ! (ಹರಭಕ್ತಿ ವಿಶಿಷ್ಟನಾದ) ಮಾದಾರ ಚೆನ್ನಯ್ಯನೊಡನೆ ಶಿವನು ಊಟ ಮಾಡಿದನಲ್ಲವೇ ! ಇದನ್ನು ನೀನು ಕೇಳಿತಿಳಿದಿಲ್ಲವೇ ! ೧೦೭. ಭೂಪಾಲನೇ, ಸುಳ್ಳು ಹೇಳುವವನೇ ಹೊಲೆಯನೆಂಬ ಮಾತಿನಂತೆ ಭೂಮಂಡಲ ಗುರುಗಳು, ದೇವತೆಗಳು, ವೇದ, ಆಗಮಗಳು, ಶ್ರೇಷ್ಠ ಶಿವಮಂತ್ರ ಇವು ಮಿಥ್ಯೆಯೆಂದು ಸುಳ್ಳುಮಾತು ಮಾತಾಡುವುದರಿಂದ (ಅಂಥ) ದ್ವಿಜರೇ ಹೊಲೆಯರೆನಿಸುವುದಿಲ್ಲವೆ ? ೧೦೮. ಮಹಾ ರಾಜಾ ಕೇಳು : ಶಿವಭಕ್ತನಾದ ಹೊಲೆಯನಿಗೆ ಈ ಶಿವಭಕ್ತಿರಹಿತರಾದ ದ್ವಿಜರುಗಳು ಸಮಾನರೇ ? ಈ ಭೂಮಂಡಲದಲ್ಲಿ ದೂಡಯ್ಯನೆಂಬ ಹೆಸರಿನ ವಿಕಾರರಹಿತನಾದ ಮನಸ್ಸಿನ ಶಿವಭಕ್ತನಿದ್ದನು. **ಮಾದರ ದೂಡಯ್ಯನ ಕಥೆ** ೧೦೯–೧೧೦. ಆ ಮಾದರ

ಭೂಮೀಸುರನೊರ್ವಂ ಕು
ಷ್ಠಾಮಯಮಯಕಾಯನಿರುಳೊಳುರ್ಬಿದ ತಮದೊಳ್ ೧೦೯

ಅಱಸುತ್ತುಂ ಧೇನುವಂ ಭಕ್ತನ ಗೃಹನಿಕಟಸ್ಥಾನಕೇಳ್ತಂದು ಮುಂದೆ
ಳ್ಚಱದಾತಂ ಮಿಂದ ನೀರ್ದುಂಬಿದ ಕುೞಿಯೊಳೆ ಕಾಲಿಟ್ಟೊಡಾಜಾನುಪಂಕಂ
ನೆಱೆ[3] ತೀವಿತ್ತಂತದಂ ತಾಂ ತೊಳೆದು ಜಳದಿನಾತ್ಮಾಲಯಕ್ಕೆಯ್ದುತುಂ ನೇ
ಸಱಬಿಂಬಂ ಮೂಡುವಂದೀಕ್ಷಿಸೆ ಪದವೆಸೆದತ್ತುಜ್ವಳಂ ಸ್ವರ್ಣತೇಜಂ ೧೧೦

ಅದನೊಲ್ದೀಕ್ಷಿಸಿ ವಿಸ್ಮಯಂಬಡೆ[1]ದು ವಿಪ್ರಂ ಬಂದು ತದ್ವಾರಿ ತೀ
ವಿದ ತತ್ಕೂಪದೊಳಾಳ್ದು ಕುಷ್ಠರುಜೆಯಂ ಪೋಗಾಡಿ ದಿವ್ಯಾಂಗನಾ
ಗಿ ದಯಾವಾರಿ[2]ಧಿ ದೂಡದೇವನಡಿಯೊಳ್ ಮೆಯ್ಯಿಕ್ಕಿ ಕೊಂಡಾಡಿ ತ
ಳ್ವದೆ ತತ್ಸಾರಕೃಪಾರಸಂಬಡೆದು ಗೇಹಂಬೊಕ್ಕನಾನಂದದಿಂ ೧೧೧

ಅದು ದೂಡದೇವಮಜ್ಜನ
ದುದಕಂ ಜಳಮಲ್ತು ಸಿದ್ಧರಸಮಭಿನವಮ
ಪ್ಪುದು ತಪ್ಪದು ಮೇಣಲ್ಲದೊ
ಡೊದವಿಕುಮೆ ವಿವರ್ಣತನು ಸುವರ್ಣತೆಯಂನಣಂ ೧೧೨

ದೂಡಯ್ಯನ ಮೋರೆ ಮೀರಿದ ಪ್ರಭಾವವು ಹೇಗೆಂಬುದನ್ನು ಹೇಳುತ್ತೇನೆ ಕೇಳು : ಓರ್ವಬ್ರಾಹ್ಮಣನು ಕುಷ್ಟರೋಗದಿಂದ ತುಂಬಿದ ದೇಹವುಳ್ಳವನಾಗಿ (ಒಂದು ದಿನ) ದಟ್ಟವಾಗಿ ಹಬ್ಬಿದ ಕತ್ತಲೆಯಲ್ಲಿ ಕಳೆದುಹೋದ ತನ್ನ ಹಸುವನ್ನು ಹುಡುಕುತ್ತ ಆ ಭಕ್ತನಾದ ದೂಡಯ್ಯನ ಮನೆಯ ಸಮೀಪದ ಸ್ಥಾನಕ್ಕೆ ಬಂದು, ಆ ಭಕ್ತನು ಸ್ನಾನ ಮಾಡಿದ ಬಚ್ಚಲ ನೀರಿನ ಗುಂಡಿಯಲ್ಲಿ ಮುಂದೆ ಏನಿದೆಯೆಂಬುದನ್ನು ಅರಿಯದೆ ಕಾಲಿಟ್ಟನು. (ಆಗ) ಮೊಳಕಾಲವರೆಗೂ (ಆ ಬಚ್ಚಲ ಗುಂಡಿಯ) ಕೆಸರು ಚೆನ್ನಾಗಿ ಅಂಟಿಕೊಂಡಿತು. ಹಾಗೆ ಹತ್ತಿದ ಕೆಸರನ್ನು ತನ್ನ ಮನೆಗೆ ಬಂದು ನೀರಿನಿಂದ ತೊಳೆದು ಕೊಂಡನು. ಸೂರ್ಯೋದಯವಾದಮೇಲೆ ನೋಡಲಾಗಿ ಕಾಲುಗಳೆರಡೂ ಬಂಗಾರದ ಉಜ್ವಲವಾದ ತೇಜಸ್ಸಿನಿಂದ ಶೋಭಿಸುತ್ತಿದ್ದವು. ೧೧೧. ಹೀಗಾದುದನ್ನು ಸಂತೋಷ ದಿಂದ ನೋಡಿ, ಆಶ್ಚರಪಟ್ಟು, (ಪುನಃ) ಆ ಬ್ರಾಹ್ಮಣನು ದೂಡಯ್ಯನ (ಬಚ್ಚಲು ಗುಂಡಿಯ ಬಳಿಗೆ) ಬಂದು ನೀರಿನಿಂದ ತುಂಬಿದ ಆ ಗುಂಡಿಯಲ್ಲಿ ಮುಳುಗಿ (ತನಗುಂಟಾ ಗಿದ್ದ) ಕುಷ್ಟರೋಗವನ್ನು ಹೋಗಲಾಡಿಸಿಕೊಂಡು, ದಿವ್ಯ ಶರೀರಿಯಾದನು. ದಯಾ ಸಮುದ್ರನಾದ ದೂಡಯ್ಯ ದೇವನ ಪಾದಗಳಲ್ಲಿ ನಮಸ್ಕರಿಸಿ ಹೊಗಳುತ್ತ, ತಡ ಮಾಡದೆ, ಆತನ ಕೃಪಾರಸವನ್ನು ಹೊಂದಿ ಆನಂದದಿಂದ ಬಂದು ತನ್ನ ಮನೆಯನ್ನು ಪ್ರವೇಶಿಸಿದನು. ೧೧೨. ಆ ದೂಡದೇವನ ಸ್ನಾನದ ನೀರು ನೀರಲ್ಲ : ನೂತನವಾದ ಸಿದ್ಧರಸವಲ್ಲದೆ ಬೇರಲ್ಲ ! ಬೇರಲ್ಲ !! ಅಥವಾ ಹಾಗಾಗದಿದ್ದರೆ (ಸಿದ್ಧರಸವಾಗದಿದ್ದರೆ ಬಣ್ಣಗೆಟ್ಟ ದೇಹವನ್ನು ಸುವರ್ಣಕಾಂತಿಯಿಂದ ಕೂಡಿದ ದೇಹವನ್ನಾಗಿ ಮಾಡುತ್ತಿ

---

1 ಡಿ(ಗ) 2 ರು(ಮು)

ಶಿವದಾಸಭೀಮಯ್ಯಂ ಭೂ
ದಿವಿಜರ ಕುಷ್ಠಮಂ ಪಱಿದನೆಂಬವರ್ಱ್ದನ್ನಂ
ಜವದಿಂ ದೂಡಯ್ಯನೀ ವಿ
ಪ್ರವರನ ಕುಷ್ಠಮಂ ಪಱಿದನೀಗಳ್ಧರೆಯೊಳ್ ೧೧೩

ವ॥ ಎಂದಿಂತು ಸರ್ವರುಂ ಕೀರ್ತಿಸುತ್ತಮಿರ್ಪಿನಮಲ್ಲಿ ತದ್ವಾರ್ತೆಗೇಳ್ದಾ ದೇಶದೊಳಿರ್ದೇಳುನೂಱು ಕುಷ್ಠಿಗಳಾದ ಪಾರ್ವರೇಳ್ತಂದು ತನ್ಮಜ್ಜನಜಲಾಪೂರ್ಣಕುಂಡದೊಳ್ಮುಳುಂಗಿ—

ಪರಿಶುದ್ಧಕಾಯರಾಗು
ತ್ತಿರದಾಗಳ್ದೂಡಿದೇವನಂಘ್ರಿಗೆ ಪೊಡಮ
ಟ್ಟುರುತರ ತತ್ಕರುಣಾಮೃತ
ಶರಧಿಯೊಳೋಲಾಡಿ ಬಾಳ್ದರಿಳೆಯಱಿವಿನೆಗಂ ೧೧೪

ವ॥ ಮತ್ತಂ

ಪುರಹರವಿದ್ವೇಷಿದ್ವಿಜ
ಶಿರೋಬ್ಜಕುಂಜರನೆನಿಪ್ಪ ಬಿರಿದಾಂತೆಸೆವಂ[1]
ವರ ಡೋಹರ ಕಕ್ಕಯ್ಯಂ
ಚರ ಗುರು ಶಿವಲಿಂಗಭಕ್ತನೀ ವಸುಮತಿಯೊಳ್ ೧೧೫

ವ॥ ಆ ಘನಮಹಿಮನವನಿಪನೊಲ್ವಗ್ರಹಾರದೊಳೊರ್ವಂ ಪುರಾಣಭಟ್ಟನೆಂಬ ಪಾರ್ವಂ ದುಷ್ಟದ್ವಿಜರ್ಗೆ ಪುರಾಣಮನುಸುರ್ವುದಂ ಕೇಳುತ್ತುಮಿರ್ಪಿನಮಾ ಪುರಾಣಭಟ್ಟಂ ಸಡಗರಂ ಮಿಕ್ಕು—

ತ್ತೇನು ? ೧೧೩. ಹಿಂದೆ (ಪೂರ್ವದಲ್ಲಿ) ಶಿವನದಾಸನೆನಿಸಿದ್ದ ಭೀಮಯ್ಯನೆಂಬುವವನು ದ್ವಿಜರುಗಳ ಕುಷ್ಠರೋಗವನ್ನು ನಿವಾರಣೆ ಮಾಡಿದನೆನ್ನುವರು ಲೋಕದಲ್ಲಿ ಈಗ ದೂಡಯ್ಯನು ಶೀಘ್ರವಾಗಿ ಈ ಬ್ರಾಹ್ಮಣ ಶ್ರೇಷ್ಠನ ಕುಷ್ಠರೋಗವನ್ನು ಪರಿಹರಿಸಿದನು. ವ॥ ಈ ರೀತಿ ಸರ್ವರೂ ಹೊಗಳುತ್ತಿರಲಾಗಿ ಅಲ್ಲಿಗೆ ಆ ವಾರ್ತೆಯನ್ನು ಕೇಳಿ ಆ ದೇಶದಲ್ಲಿದ್ದ ಏಳುನೂರು ಜನ ಕುಷ್ಠರೋಗದ ಬ್ರಾಹ್ಮಣರುಗಳು ಬಂದು, ಆ ಮಜ್ಜನ ಜಲದಿಂದ ತುಂಬಿ ನೀರಿನ ಗುಂಡಿಯಲ್ಲಿ ಮುಳುಗಿ—೧೧೪. ಪರಿಶುದ್ಧ ದೇಹಿಗಳಾಗಿ ತಪ್ಪದೆ ದೂಡಯ್ಯ ದೇವನ ಪಾದಗಳಿಗೆ ನಮಸ್ಕಾರಮಾಡಿ, ಶ್ರೇಷ್ಠವಾದ ಅವನ ಕರುಣವೆಂಬ ಅಮೃತ ಶರಧಿಯಲ್ಲಿ ಈಸಾಡಿ ಲೋಕವೆಲ್ಲ ಅರಿಯುವಂತೆ ಬಾಳಿದರು. ವ॥ ಮತ್ತು ಡೋಹರ ಕಕ್ಕಯ್ಯನ ಕಥೆ ೧೧೫. ಪರಮೇಶ್ವರನನ್ನು ದ್ವೇಷಿಸುವ ದ್ವಿಜರುಗಳ ಶಿರಸ್ಸುಗಳೆಂಬ ಕಮಲಗಳಿಗೆ ಆನೆ ಎಂಬ ಬಿರುದನ್ನು ಧರಿಸಿದ ಶ್ರೇಷ್ಠನಾದ ಡೋಹರ ಕಕ್ಕಯ್ಯನು ಗುರುಲಿಂಗ ಜಂಗಮಭಕ್ತನೆನಿಸಿ ಭೂಮಂಡಲದಲ್ಲಿ ಶೋಭಿಸುತ್ತಿದ್ದನು. ವ॥ ಆ ಘನ ಮಹಿಮನು ರಾಜನು ಪ್ರೀತಿಸುವ ಒಂದು ಆಗ್ರಹಾರದಲ್ಲಿದ್ದ ಪುರಾಣಭಟ್ಟನೆಂಬ ಹೆಸರಿನ ಒಬ್ಬ ದ್ವಿಜನು ದುಷ್ಟ ದ್ವಿಜರನೇಕರಿಗೆ ಪುರಾಣ ಹೇಳುವುದನ್ನು ಕೇಳುತ್ತ ಇರುವಾಗ ಪುರಾಣಭಟ್ಟನು

1 ದಂ(ಚ)

ಮೃಡನಬ್ಜಭವನ ಶಿರಮಂ
ಪಿಡಿವುತೆ ತಿರಿದುಂಡನೆಂಬನಧಟಿಂದೀಶಂ
ತಡೆಯದೆ ವಿಷ್ವಕ್ಸೇನನ
ಜಡಿದಿಱಿದಂ ತಿಸುಳದಿಂದವೆಂಬುದನುಸುರಂ ೧೧೬

ನರಹರಿಯಾ ಹಿರಣ್ಯಕಸುರಾರಿಯನಿಕ್ಕಿದನೆಂದು ಪೇಳ್ವನಾ
ನರಹರಿಯಂಗಮಂ ಶರಭರೂಪಿನ ರುದ್ರನಡುರ್ತು ಸೀಳ್ದನೆಂ
ದಿರದುಸುರಂ ತ್ರಿವಿಕ್ರಮನ ಕಾಲ್ನಭಮಂಟಿದುದೆಂಬನಲ್ಲದೀ
ಶ್ವರನವನಸ್ಥಿಯಂ ಮುಱಿದು ತಾಳ್ದನೆನುತ್ತೊರೆಯಂ ದ್ವಿಜಾಧಮಂ ೧೧೭

ಹರಿ ಮತ್ಸ್ಯಾಕೃತಿದಾಳ್ದು ಸೋಮಕನ ಕೊಂದಾಮ್ನಾಯಮಂ ತಂದನೆಂ
ದೊರೆವಂ ಬಾಲಮನೊತ್ತಿ ಸುತ್ತಿದನದಂ ಕೊಂಡುತ್ತಮಾಂಗಕ್ಕೆ ಶಂ
ಕರನೆನ್ನಂ ಕಿಟಿರೂಪಿನಿಂ ನೆಗಪಿದಂ ದೈತ್ಯಾರಿ ತಾನೆಂಬನೀ
ಧರೆಯಂ ತತ್ಕಿಟಿಯಂ ಗುಹಂ ಸದೆದುದಂ ಪೇಳಂ ಪುರಾಣಾರ್ಥಮಂ ೧೧೮

ದಕ್ಷನಧ್ವರದಗ್ರಪೂಜೆಯನಾಳ್ದನಚ್ಯುತನೆಂಬನಾ
ತ್ರ್ಯಕ್ಷನಾ ಹರಿಮಸ್ತಕಂಗಡಿದಂದಮಂ ಬಿಡದೋದನ

ಅತ್ಯಂತ ಸಂಭ್ರಮದಿಂದ ೧೧೬. ಶಿವನು ಬ್ರಹ್ಮನ ಶಿರಸ್ಸನ್ನು ಕೈಯಲ್ಲಿ ಹಿಡಿದು ಭಿಕ್ಷಾಟನೆ ಮಾಡಿ ಉಂಡನು ಎನ್ನುವನು, ಪರಾಕ್ರಮದಿಂದ ಈಶ್ವರನು ತಡೆಯದೆ ವಿಷ್ವಕ್ಸೇನನನ್ನು ತ್ರಿಶೂಲದಿಂದ ಒತ್ತಿ ಇರಿದನು ಎನ್ನುವುದನ್ನು ಹೇಳಲಿಲ್ಲ. ೧೧೭. ವಿಷ್ಣುವು ನಾರಸಿಂಹಾವತಾರಮಾಡಿ ಹಿರಣ್ಯಕಶ್ಯಪನೆಂಬ ರಾಕ್ಷಸನನ್ನು ಕೊಂದನೆಂದು ಹೇಳುವನು. ಆ ನರಹರಿಯ ಶರೀರವನ್ನು ಶರಭಾವತಾರಮಾಡಿ ರುದ್ರನು ಮೇಲೆ ಬಿದ್ದು ಸೀಳಿದನೆಂಬುದನ್ನು ಹೇಳುತ್ತಿದ್ದಿಲ್ಲ ; ತ್ರಿವಿಕ್ರಮನ ಕಾಲು ಆಕಾಶವನ್ನು ವ್ಯಾಪಿಸಿತೆಂದು ಹೇಳುವನಲ್ಲದೆ ಈಶ್ವರನು ಅವನ ಮೂಳೆಯನ್ನು ಮುರಿದು ಕಂಕಾಳಧರನೆನಿಸಿದನೆಂಬುದನ್ನು ಆ ದ್ವಿಜಾಧಮನು ಹೇಳುತ್ತಿದ್ದಿಲ್ಲ. ೧೧೮. ವಿಷ್ಣುವು ಮತ್ಸ್ಯಾವತಾರ ಮಾಡಿ, ಸೋಮುಕ (ಸೋಮಕ)ನೆಂಬ ರಾಕ್ಷಸನನ್ನು ಕೊಂದು ವೇದಗಳನ್ನು ತಂದನೆನ್ನುವನಲ್ಲದೆ, ಆ ಮತ್ಸ್ಯದ ಬಾಲವನ್ನು ಶಿವನು ಕತ್ತರಿಸಿಹಾಕಿ ತನ್ನ ತಲೆಗೆ ಸುತ್ತಿಕೊಳ್ಳುವ ರುಮಾಲವನ್ನಾಗಿ ಮಾಡಿಕೊಂಡನೆಂಬುದನ್ನು ಹೇಳುತ್ತಿದ್ದಿಲ್ಲ ; ವಿಷ್ಣುವು ವರಾಹ (ಹಂದಿ) ರೂಪದಿಂದ ಅವತಾರ ಮಾಡಿ ಭೂಮಿಯನ್ನು ಎತ್ತಿದನು ಎಂದು ಹೇಳುವನಲ್ಲದೆ, ಆ ಹಂದಿಯನ್ನು ಷಣ್ಮುಖನು ಸದೆಬಡಿದನೆಂಬ ಪುರಾಣದ ಅರ್ಥವನ್ನು ಹೇಳುತ್ತಿದ್ದಿಲ್ಲ. ೧೧೯. ಅಚ್ಯುತನು ದಕ್ಷಾಧ್ವರದಲ್ಲಿ (ಮೊದಲ ಪೂಜೆ) ಯನ್ನು ಪಡೆದನೆಂದು ಹೇಳುವನು. (ಆದರೆ) ತ್ರಿಣೇತ್ರನು (ವೀರಭದ್ರನಾಗಿ) ಹರಿಯ ಮಸ್ತಕವನ್ನು ಕತ್ತರಿಸಿದ ರೀತಿಯನ್ನು ಓದುತ್ತಿದ್ದಿಲ್ಲ : ಕಮಲನೇತ್ರನಾದ ವಿಷ್ಣುವೇ ಜಗತ್ತಿಗೆ ಮೂಲಶಕ್ತಿಯೆಂದು ಪೇಳುತ್ತಿದ್ದನು. ಆ

ಬ್ಜಾಕ್ಷನೇ ಜಗದಾದಿಶಕ್ತಿಯೆನುತ್ತೆ ಪೇಳ್ವನವಂಗೆ ದಿ
ವ್ಯೋಕ್ಷರಾಡ್ಧ್ವಜನಾಳ್ದನೆಂದುಸುರಂ ಮೃಷಾಪರಭಾಷಣಂ ೧೧೯

ಸರ್ವಂ ವಿಷ್ಣುಮಯಂ ದಲೆಂದು ನುಡಿವಂ ಕಲ್ಪಾಂತದೊಳ್ವಿಷ್ಣುವಂ
ಶರ್ವಂ ಮರ್ದಿಸನೆಂಬುದಂ ನುಡಿಯನಾ ವ್ಯಾಸಂ ಮಹಾಕಾಶಿಯೊಳ್
ಸರ್ವರ್ನೋಡೆ ಮುಕುಂದನೇ ಪರಮೆನುತ್ತಂದೆತ್ತಿದಂ ತೋಳನೆಂ
ದುರ್ವೃತ್ತಂಬನದಂ ಕರಂ ಮುಱಿದನಾ ನಂದೀಶನೆಂಬರ್ಥಮಂ ೧೨೦

ಒರೆಯಂ ಹರಿಯಂ ತವೆ ಸಂ
ಹರಿಸಿದ ಕತದಿಂದೆ ಪುರಹರಂ ಸ್ಮರಹರನ
ಧ್ವರಹರನೆಂಬಂತಿರೆ ಹರಿ
ಹರನೆನಿಸುಗುಮೆಂಬ ನೈಗಮಾರ್ಥಮನುಸುರಂ ೧೨೧

ವ॥ ಇಂತೆಂದೊರೆವ ದುರ್ದಾಂತನ ದುರ್ಭಾಷಣಮಂ ಕೇಳ್ದು ಕಕ್ಕಯ್ಯಂ ಕಾಲಾಗ್ನಿರುದ್ರನಂತೆ ಕಾಯ್ಪಿನೊಳಕೊಂಡು——

ಪುಸಿಕನಿವಂ ಪುರಾಣಸಹಜಾರ್ಥಮನೆನ್ನದೆ ವಂಚಿಸುತ್ತೆ ಪೆ
ರ್ಚಿಸಿಯುನೆ ಪೇಳ್ದಪಂ ಶಿವನ ಪೆರ್ಮೆಗೆ ಸೈರಿಸಲೊಲ್ಲದಾತನಂ

ವಿಷ್ಣುವಿಗೆ ದಿವ್ಯವಾದ ವೃಷಭನನ್ನೇ ಧ್ವಜದಲ್ಲುಳ್ಳ ಶಿವನು ಯಜಮಾನನೆಂದು ಆ ಸುಳ್ಳುಮಾತಿನವನಾದ ಪುರಾಣಭಟ್ಟನು ಹೇಳುತ್ತಿರಲಿಲ್ಲ. ೧೨೦–೧೨೧. ಸಮಸ್ತ ಬ್ರಹ್ಮಾಂಡವು ನಿಶ್ಚಯವಾಗಿ ವಿಷ್ಣುಮಯವಾದದ್ದೆಂದು ನುಡಿಯುತ್ತಿದ್ದನು ; ಪ್ರಳಯ ಕಾಲದಲ್ಲಿ ವಿಷ್ಣುವನ್ನು ಶಂಭುವು ಮರ್ದಿಸಿದನೆಂಬುದನ್ನು ನುಡಿಯಲಿಲ್ಲ ; ವೇದ ವ್ಯಾಸನು ಶ್ರೇಷ್ಠ ಕಾಶೀ ನಗರದಲ್ಲಿ ಸರ್ವರೂ ನೋಡುವಂತೆ ವಿಷ್ಣುವೇ ಶ್ರೇಷ್ಠ ನೆನ್ನುತ್ತ ಅಂದು ತನ್ನ ತೋಳುಗಳನ್ನು ಎತ್ತಿದನೆಂದು ಉಬ್ಬುಬ್ಬಿ ಹೇಳುವನು. ಆ ತೋಳುಗಳನ್ನು ಚೆನ್ನಾಗಿ ನಂದೀಶ್ವರನು ಮುರಿದನೆಂಬ ಅರ್ಥವನ್ನು ಹೇಳುತ್ತಿದ್ದಿಲ್ಲ. ವಿಷ್ಣುವನ್ನು ಚೆನ್ನಾಗಿ ಸಂಹಾರ ಮಾಡಿದ ಕಾರಣದಿಂದ (ಶಿವನಿಗೆ) ಪುರಹರ, ಸ್ಮರಹರ, ಅಧ್ವರಹರ ಎನ್ನುವಹಾಗೆ ಹರಿಹರ (ಅಂದರೆ ಹರಿಯನ್ನು ಕೊಂದವನು) ನೆಂದೆನಿಸುವನೆಂಬ ವೇದದ ಅರ್ಥವನ್ನು (ನೈಗಮಾರ್ಥಮಂ) ಹೇಳುತ್ತಿರಲಿಲ್ಲ. ವ॥ ಹೀಗೆ ಪುರಾಣವನ್ನು ಹೇಳುವ ದುಷ್ಟನಾದ ಆ ಪುರಾಣ ಭಟ್ಟನ ಕೆಟ್ಟ ಭಾಷಣ ವನ್ನು ಕೇಳಿ ದ್ರೋಹರಕ್ಕಯ್ಯನು ಪ್ರಳಯ ಕಾಲದ ರುದ್ರನಂತೆ ಕೋಪಗೊಂಡವನಾಗಿ: ೧೨೨. ಸುಳ್ಳನಾದ ಈ ಭಟ್ಟನು ಪುರಾಣದ ಸಹಜವಾದ ಅರ್ಥವನ್ನು ಹೇಳದೆ, ವಂಚನೆ ಮಾಡಿ, ವಿಶೇಷವಾದ (ಹೆಚ್ಚಾದ) ಸುಳ್ಳನ್ನೇ ಹೇಳುತ್ತಿದ್ದಾನೆ. ಶಿವನ ಹಿರಿಮೆಗೆ ಸೈರಿಸಲಾರದ ದುರಾತ್ಮನಾದ ಅವನನ್ನು ತೀಕ್ಷ್ಣವಾಗಿ ಮಸೆದ ಖಡ್ಗದಿಂದ

ಮಸೆದಲಗಿಂ ಕಱುತ್ತಿಱಿವುದಾತನ ಪೊತ್ತ[1]ಗೆಗಳ್ತು ಸುಟ್ಟದಂ
ಪೊಸೆವುದು ವೀರಭಕ್ತವಿಹಿತಂ ಗಡ ಧಾತ್ರಿಯೊಳೀ ದುರಾತ್ಮನಂ ೧೨೨

ತಱಿಸಂದು ಕೊಲ್ವೆನೆನುತುಂ
ನೆಱೆ ಗುಡುಗುಡಿಸುತ್ತೆ ಸಬಳದಿಂದವನೆರ್ದೆಯಂ
ಮಱುಮೊನೆ ಪಾಯ್ತುರೆ ಮುಳಿಸಿಂ
ದಿಱಿದಂ ತಲೆದಱಿದು ಕೆಡಪಿದಂ ದೂಪಕನಂ ೧೨೩

ವ॥ ಆಗಳೆಲ್ಲರುಂ ಪಾರ್ವನನಿಱಿಯಲಕ್ಕುಮೆಯೆನೆ ಪಾರ್ವನಲ್ತಿವಂ ಪರಮ ಪಾತಕ ನಂತದಕ್ಕೆ ದೃಷ್ಟಾಂತಮಂ ನೋಡಿಮೆನೆ ನೆರೆದಖಿಳರುಂ ನೋಳ್ಪಾಗಳ್—

ಜುಱುಜುಱಿಪ ಕೀವುನೆತ್ತ
ರ್ಗಱಗುತೆ ಝುಮ್ಮೆಂದು ಮೊರೆವ ನೊಣವಿರೆ ಜವದಿಂ
ನೆಱೆ ವಿಲಿವಿಲಿಸುವ ಪುಳುಗ
ಳ್ಪೊಱಗೊಳಗಾ ಪೆಣದೊಳಿಡಿದು ತೀವಿದುವೆತ್ತಂ ೧೨೪

ಇದನೆಲ್ಲರ್ಕೇಳ್ದುವೀ ಭೂಸುರರಱಿಯರೆ ಧಾತ್ರೀಶ ಮೇಣಿಂತು ಗೆಯ್ದು
ಗ್ಗದ ಪೆಂಪಂ ತಾಳ್ದ ಕಕ್ಕಯ್ಯನನಧಮಕುಲೋದ್ಭೂತನೆಂದಾಡಲೇಂ ತ

ಕತ್ತರಿಸಿ ಹಾಕುವುದೂ, ಅವನ ಹೊತ್ತಿಗೆಗಳನ್ನು ಸುಟ್ಟು ಅದನ್ನು ಹೊಸೆದು ಹಾಕುವುದೂ, ಲೋಕದಲ್ಲಿ ವೀರಭಕ್ತರಾದವರಿಗೆ ಯೋಗ್ಯಕಾರ್ಯವಲ್ಲವೇ ! ೧೨೩. ದೃಢ ಸಂಕಲ್ಪದಿಂದ ಇವನನ್ನು ಕೊಲ್ಲುತ್ತೇನೆನ್ನುತ್ತ ವಿಶೇಷವಾಗಿ ಆರ್ಭಟಿಸುತ್ತ, ಭರ್ಜಿಯಿಂದ (ಈಟಿಯಿಂದ) ಎದೆಯನ್ನು ಬೆನ್ನಿನಲ್ಲಿ ನಾಟಿ ಹೊರಬರುವಂತೆ ತಿವಿದು ಕೋಪದಿಂದ ತಲೆಯನ್ನು ಕತ್ತರಿಸಿ ಆ ದೂಪಕನನ್ನು ನೆಲಕ್ಕೆ ಕೆಡವಿದನು. ವ॥ ಆಗ ಎಲ್ಲರೂ ಬ್ರಾಹ್ಮಣನನ್ನು ಇರಿಯುವುದು ಯೋಗ್ಯವೇ ? ಎನ್ನಲು ಕಕ್ಕಯ್ಯನು ಇವನು ಬ್ರಾಹ್ಮಣನಲ್ಲ, ಪರಮ ಪಾಪಿಷ್ಠನು. ಈ ಮಾತಿಗೆ ದೃಷ್ಟಾಂತವನ್ನು ನೋಡಿರಿ, ಎನ್ನಲು ನೆರೆದ ಸಮಸ್ತರೂ ನೋಡುತ್ತಿದ್ದಂತೆ ೧೨೪. ಜುರು ಜುರು ಎಂದು ಕೀವು ನೆತ್ತರು ಒಸರುತ್ತ ಝುಮ್ಮೆಂದು ನೊಣಗಳು ಮುತ್ತಿ ಮೊರೆಯುತ್ತಿರಲು, ಶೀಘ್ರವಾಗಿ ವಿಲಿ ವಿಲಿಯೆನ್ನುತ್ತಿರುವ ಹುಳುಗಳು (ಕ್ರಿಮಿಗಳು) ಆ ಹೆಣದ ಒಳಗೂ ಹೊರಗೂ ಎಲ್ಲ ಕಡೆಗೂ ತುಂಬಿದವು. ೧೨೫. ಮಹಾರಾಜನಾದ ಬಿಜ್ಜಳನೇ, ಈ ವೃತ್ತಾಂತವನ್ನು ಈ ದ್ವಿಜರೆಲ್ಲ ಕೇಳಿ ತಿಳಿದಿಲ್ಲವೇ ? ಈ ರೀತಿ ಮಾಡಿ ಶ್ರೇಷ್ಠವಾದ ಹಿರಿಮೆಯನ್ನು ಹೊಂದಿದ ಕಕ್ಕಯ್ಯನನ್ನು ನೀಚ ಕುಲದಲ್ಲಿ ಹುಟ್ಟಿದವನೆಂದು ಆಡುವುದೇನು ಯೋಗ್ಯ ವಾದದ್ದೇ ? ನೀನೇ ಹೇಳು ಎಂದು ಹಿಂದೆ ಆಗಿ ಹೋದ ಅನುಪಮವಾದ ಶರಣರುಗಳ ಚರಿತ್ರೆಯನ್ನು ಹೇಳುತ್ತ, ದುಷ್ಟಮತಗಳೆಂಬ ಪರ್ವತಗಳಿಗೆ ದೇವೇಂದ್ರನೋಪಾದಿ

1 ಳ್ತ(ಜ) ತ್ತು(ಮಂ)

ಕ್ಕುದದೆ ಪೇಳ್ನೀನೆಂದು ಸಂದಪ್ರತಿಮ ಶರಣಚಾರಿತ್ರಮಂ ಪೇಳುತುಂ ಸ
ಮ್ಮದದಿಂದೊಪ್ಪಿರ್ದನಾಸ್ಥಾನದೊಳೆ ಕುಮತಭೂಭೃನ್ಮಹೇಂದ್ರಂ ವೃಷೇಂದ್ರಂ ೧೨೫

ಶ್ರೀ ಕಲ್ಲಿನಾಥಚರಿತಮ
ನಾಕರ್ಣಿಪ ಪೇಳ್ವ ಸುಜನರಿಳೆಯೊಳಜಸ್ರಂ
ಲೋಕೋತ್ತರಪೂರ್ಣಸುಖಾ
ನೀಕಮನಗಜಾಧಿನಾಥನೊಲವಿಂ ಪಡೆವರ್ ೧೨೬

ವರ ಬಿಬ್ಬಭಾಸ್ಕರಾರ್ಯನ
ಚರಿತವನಾಕರ್ಣಿಪರ್ಗೆ ಪೇಳ್ವರ್ಗೆ ಸುಧಾ
ಕರಧರನೀವಂ ನಿಜ ಭಾ
ಸುರಸುಖಕರಣಪ್ರಸಾದಸಿದ್ಧಿಯನಿಳೆಯೊಳ್ ೧೨೭

ಘನತರ ಮಾದರ ದೂಡ
ಯ್ಯನ ಪರಮತಮದವಿದಳನ ಡೋಹರ ಕಕ್ಕ
ಯ್ಯನ ಪುಣ್ಯಚರಿತವಮಂ ಕೇ
ಳ್ದನಘರ್ಗಭಿಮತ ಸಮಸ್ತ ಸಂಪದಮಕ್ಕುಂ ೧೨೮*

ಭರ್ಮಗಿರಿಮಂದಿರೆ ಹವಿರ್ಮುಖವರಾರ್ಚಿತೆ ಯ
ಜುರ್ವಿಳಿತಮಂತ್ರಮಯೆ ಗೀರ್ಮಹಿತವಾಣೀ

ಯಲ್ಲಿರುವ ಬಸವೇಶ್ವರನು ಆ ಬಿಜ್ಜಳನ ಆಸ್ಥಾನದಲ್ಲಿ ಉಲ್ಲಾಸದಿಂದ ಶೋಭಿಸುತ್ತಿದ್ದನು. ೧೨೬. ಕಲ್ಲಿನಾಥನ ಚರಿತ್ರೆಯನ್ನು ಕೇಳುವ. ಹೇಳುವ, ಸಜ್ಜನರು ಭೂಮಿಯಲ್ಲಿ ಸತತವೂ ಲೋಕೋತ್ತರ ಪೂರ್ಣವಾದ ಸುಖಗಳ ಸಮುದಾಯವನ್ನು ಪರಮೇಶ್ವರನ ಕೃಪೆಯಿಂದ ಪಡೆಯುವರು. ೧೨೭. ಭೂಮಿಯಲ್ಲಿ ಶ್ರೇಷ್ಠನಾದ ಬಿಬ್ಬ ಬಾಚಯ್ಯನ ಚರಿತ್ರೆಯನ್ನು ಕೇಳುವವರಿಗೆ ಹೇಳುವವರಿಗೆ ಚಂದ್ರಧರನಾದ ಶಿವನು ತನ್ನ ಪ್ರಕಾಶಮಾನವಾದ ಸುಖವನ್ನುಂಟು ಮಾಡುವ ಪ್ರಸಾದದ ಸಿದ್ಧಿಯನ್ನು ಕೊಡುವನು. ೧೨೮. ಶ್ರೇಷ್ಠನೆನಿಸಿದ ಮಾದರ ದೂಡಯ್ಯನ ಮತ್ತು ಪರಮತಗಳ ಮದವನ್ನು ಕತ್ತರಿಸಿ ಹಾಕುವ ಡೋಹರ ಕಕ್ಕಯ್ಯನ ಪುಣ್ಯ ಪ್ರದವಾದ ಚರಿತ್ರೆಯನ್ನು ಕೇಳಿದ ಶ್ರೇಷ್ಠ ಭಕ್ತರಿಗೆ ತಮ್ಮ ಇಷ್ಟಾರ್ಥರೂಪವಾದ ಸಮಸ್ತ ಐಶ್ವರ್ಯವೂ ಉಂಟಾಗುವುದು. ೧೨೯. ಸುವರ್ಣಗಿರಿಯೆನಿಸಿದ ಮೇರು ಪರ್ವತವೇ ಮನೆಯಾಗಿ ಉಳ್ಳ,

---

* ಈ ಪದ್ಯದ ತರುವಾಯ 'ದ' ಪ್ರತಿಯಲ್ಲಿ ಈ ಕೆಳಗಣ ಪದ್ಯವಿದೆ.

ಶಿವನಾಗದೇವಚರಿತಮ
ಭೂಮಿಯೊಳಾಕರ್ಣಿಸರ್ಗೆ ಪೇಳ್ವ ಶಿವಾ
ಧವ ಶರಣರ್ಸಭೆಯೊಳ್ಸುಖಾ
ರ್ಣವ ಪಡೆದರ್ ಸಮಸ್ತ ಸಂಪದಂಗಳನಿಳೆಯೊಳ್

ನಿರ್ಮಿತಜಗತ್ರಯೆ ಷಡೂರ್ಮಿಗಣವರ್ಜಿತೆ ಸು
ಕರ್ಮಯಮಿವಂದ್ಯೆ ಶಿವಧರ್ಮಹೃದಯಾಬ್ಜೇ
ಕೂರ್ಮನಿಭಪಾದೆ ಯಮಧರ್ಮಮದಮರ್ದಿನಿ ಸು
ಘರ್ಮಕರಸದ್ರುಚಿವಪುರ್ಮೃಡಮನೋಜ್ಞೇ
ನಿರ್ಮದೆ ನಿರಸ್ತತತದುರ್ಮತೆ ಗಿರೀಂದ್ರಸುತೆ
ಪೆರ್ಮೆಮಿಗೆ ಪಾಲಿಪುದು ಶರ್ಮದೆ ಭವಾನೀ ೧೨೯

ಇದು ವಿನಮದಖಿಳ ಸುರಾಸುರೇಂದ್ರಮಕುಟತತಟಘಟಿತ ಮಣಿಗಣಾಗಣಿತ ರುಚಿನಿಚಯ

ತರುಣಾರುಣಾತಪಪರಿಲಸಿತ ಪರಮ ಶಿವಲಿಂಗ ಪಾದಾರವಿಂದಪರಾಗಭಸಿತ

ಭಾಸುರಲಲಾಟಪಟ್ಟ ಸರಸಜನಮಾನಿತೋಭಯಕವಿತಾವಿಶಾರದ

ಶ್ರೀಷಡಕ್ಷರಿದೇವಭಕ್ತಿವಿರಚಿತ

ಶ್ರೀಮದ್ ಬಸವರಾಜವಿಜಯಮಹಾಪುರಾಣದೊಳ್ ಕಲಿನಾಥ ಬಿಬ್ಬಭಾಸ್ಕರಾದಿಕಥಾವಿವರಣಂ

ಅಷ್ಟತ್ರಿಂಶಾಶ್ವಾಸಂ ಸಮಾಪ್ತಂ

ಅಂತು ಆಶ್ವಾಸ ೩೮ಕ್ಕೆ ಪದಗಣನೆ ೨೧೪ಕ್ಕೆ ಮಂಗಳಮಹಾ ಶ್ರೀ॥

ಹವಿಸ್ಸಿನ ಮುಖವುಳ್ಳ ದೇವತಾ ಶ್ರೇಷ್ಠರಿಂದ ಪೂಜಿಸಲ್ಪಡುವ, ಯಜುರ್ವೇದದಲ್ಲಿ ಮಿಳಿತಗೊಂಡ ಮಂತ್ರಾಧಿ ದೇವತೆಯೆನಿಸಿದ, ಮಾತುಗಳಿಂದ ಪೂಜ್ಯಳೆನಿಸಿದ (ವಾಗಭಿಮಾನಿದೇವತೆಯಾದ) ಸರಸ್ವತಿಯನ್ನುಳ್ಳ (ಸರಸ್ವತಿ ಶಕ್ತಿಯನ್ನು ತನ್ನಲ್ಲಿಯೇ ಧರಿಸಿರುವ) ಮೂರುಲೋಕಗಳನ್ನು ಸೃಷ್ಟಿಸಿದ. ಕ್ಷುತ್, ಪಿಪಾಸೆ, ದುಃಖ, ಮೋಹ, ಜರಾ, ಮರಣಾದಿ ಆರು ಊರ್ಮಿ (ತೆರೆ)ಗಳಿಂದ ದೂರಳಾದ, ಸತ್ಕರ್ಮನಿರತರಾದ ಋಷಿಗಳಿಂದ ನಮಸ್ಕರಿಸಿಕೊಳ್ಳಲು ಯೋಗ್ಯಳೆನಿಸಿದ, ಶಿವನ ಧರ್ಮವನ್ನೇ ಹೃದಯವೆಂಬ ಕಮಲದಲ್ಲಿ ತಾಳಿದವಳಾದ, ಆಮೆಯ ಚಿಪ್ಪಿನಂತೆ ಮಧ್ಯದಲ್ಲಿ ಸ್ವಲ್ಪ ಎತ್ತರಗೊಂಡ ಪಾದಗಳನ್ನುಳ್ಳ, ಯಮನ ಗರ್ವವನ್ನು ಮುರಿದ, ಬಿಸಿ ಕಿರಣನಾದ ಸೂರ್ಯನ ಶ್ರೇಷ್ಠವಾದ ಕಾಂತಿಯಂತಿರುವ ದೇಹಕಾಂತಿಯಿಂದ ಕೂಡಿರುವ, ಪರಮೇಶ್ವರನ ಹೃದಯಕ್ಕೆ ಆಪ್ಯಾಯಮಾನಳಾದ, ಮದದಿಂದ ದೂರಳಾದ, ವಿಪುಲವಾದ ದುಷ್ಟ ಮತಗಳನ್ನು ನಾಶಗೊಳಿಸಿದವಳಾದ, ಸುಖಕರಳಾದ, ಪರ್ವತರಾಜನ ಪುತ್ರಿಯಾದ ಭವಾನಿಯೇ (ರಕ್ಷಿಸು).

ಮೂವತ್ತೆಂಟನೆಯ ಆಶ್ವಾಸವು ಸಮಾಪ್ತವಾಯಿತು.

ಏಕೋನಚತ್ವಾರಿಂಶಾಶ್ವಾಸಂ

[ಕೆಂಬಾವಿ ಭೋಗಯ್ಯನ ಕಥೆ]

ಶ್ರೀರಮಣೀಯನಗೇಂದ್ರಸು
ತಾರಮಣಂ ತಾರಕಾರಿ ಗಜಮುಖಜನಕಂ
ತಾರಾದ್ರಿಮಂದಿರಂ ಜಿತ
ಮಾರಂ ಮಾಳ್ಕೆಮಗೆ ಸೌಖ್ಯಮಂ ಶಿವಲಿಂಗಂ ೧

॥ವ॥ ಮತ್ತಂ—

ಭೂವಳಯದೊಳೊಪ್ಪುವ ಕೆಂ
ಬಾವಿಯೆನಿಪ್ಪಗ್ರಹಾರದೊಳ್ಕಂಗೊಳಿಪಂ
ಭಾವಜಹರಭಕ್ತಂ ಚರ
ಸೇವಾಪರನರರೆ ಭೋಗನೆಂಬ ಮಹಾತ್ಮಂ ೨

ವ॥ ಅಂತು ಚರಚರಣಸಪರ್ಯಾಪರಾಯಣನೊಪ್ಪಿರೆ ಶಂಕರಂ ತದ್ಭಕ್ತಿಯೇಳ್ಗೆಯನಿಳೆಯೊಳ್ಮೆಱೆಯಲೆಳಸಿ—

ಪೆಗಲಲ್ಲಿ ಸತ್ತ ಕಱುವಂ
ಮಿಗೆ ಪೊತ್ತಂತ್ಯಜನ ಪರಿಜನಾಳ್ದಳಿಕಗ್ರೀ
ವೆಗಳೊಳ್ಭಸಿತಂ ಲಿಂಗಂ
ಸೊಗಯಿಸೆ ರುದ್ರಾಕ್ಷೆಯುಮವನ ಗೃಹಕೇಳ್ತಂದಂ ೩

ಕೆಂಬಾವಿ ಭೋಗಣ್ಣನ ಕಥೆ

೧. ಮಂಗಳಕರಳೂ, ಮನೋಹರಳೂ ಹಿಮಗಿರಿಸುತೆಯೂ ಆದ ಪಾರ್ವತೀ ದೇವಿಯ ರಮಣನೂ, ತಾರಕಾಸುರಾರಿಯಾದ ಷಣ್ಮುಖ, ಗಣಪತಿಯರ ತಂದೆಯೂ, ಬೆಳ್ಳಿಯ ಬೆಟ್ಟವೇ ಮನೆಯಾಗಿ ಉಳ್ಳವನೂ, ಮನ್ಮಥನನ್ನು ಗೆದ್ದವನೂ ಆದ ಶಿವಲಿಂಗನು ನಮಗೆ ಸೌಖ್ಯವನ್ನೀಟು ಮಾಡಲಿ. ವ॥ ಮತ್ತು ೨. ಭೂಮಂಡಲದಲ್ಲಿ ಶೋಭಿಸುವ 'ಕೆಂಬಾವಿ' ಎಂಬ ಹೆಸರಿನ ಅಗ್ರಹಾರದಲ್ಲಿ ಕಂಗೊಳಿಸುವ ಭೋಗಯ್ಯನೆಂಬ ಶಿವಭಕ್ತನು, ಅಬ್ಬಾ ! ಅವನು ಜಂಗಮ ಸೇವಾ ಪರನೆನಿಸಿದ್ದನು ! ವ॥ ಈ ರೀತಿ ಜಂಗಮ ಪಾದ ಸೇವಾ ಧುರಂಧರನು ಶೋಭಿಸುತ್ತಿರಲು ಶಂಕರನು ಅವನ ಭಕ್ತಿಯ ಆಧಿಕ್ಯವನ್ನು ಭೂಮಂಡಲದಲ್ಲಿ ಮೆರೆಸಬೇಕೆಂದು ಇಚ್ಛಿಸಿ ೩. ಹಣೆಯಲ್ಲಿ ಭಸ್ಮ, ಕೊರಳಲ್ಲಿ ಶಿವಲಿಂಗವನ್ನು ರುದ್ರಾಕ್ಷಿಗಳನ್ನು ಸೊಗಸಾಗಿ ಧರಿಸಿ ಶಂಕರನು ಅಂತ್ಯಜನೊಬ್ಬನ ವೇಷವನ್ನು ಧರಿಸಿ, ಹೆಗಲ ಮೇಲೆ ಸತ್ತ ಕರುವೊಂದನ್ನು ಹೊತ್ತು,

ಕಂಡಧಿಕ ಭಕ್ತಿಯಿಂ ಮುಂ
ಕೊಂಡೆಱಗುತ್ತವನ ಪೆಗಲ ಕಱುವಂ ತಾಂ ಕೆ
ಯ್ಕೊಂಡಾಂತು ತನ್ನ ಪೆಗಲೊ
ಳ್ಮಂಡಿತಮತಿ ತಂದನಾತ್ಮಮಂದಿರಕವನಂ ೪

ತೊಳೆದವನಂಘ್ರಿಯಂ ತಳೆದು ತತ್ಪದವಾರಿಯನುತ್ತಮಾಂಗದೊ
ಳ್ಪಳೆದನುರಾಗದಿಂ ಪಣಿದ ಭಕ್ತನನೀಕ್ಷಿಸಿ ತನ್ನ ವಕ್ತ್ರದೊ
ಳ್ಮೊಳೆನಗೆಯುಣ್ಮೆ ಕೇಳಿಮಗೆ ವತ್ಸದ ಮಾಂಸಮನುಣ್ಬ ನೇಮಮೀ
ಗಳೆ ಕಱುವಂ ಕರಂ ಕೊಱೆದು ಮಾಂಸಮನಟ್ಟುಣಲಿಕ್ಕು ಬೇಗದಿಂ ೫

ಎನ್ನ ನೇಮಮನಾಗಿಸಲ್ಕಱುವಾಂತು ಜೇ[1]ಡರ ದಾಸನಂ
ನಿನ್ನೆ ಪೋಗಿ ಕಡಂಗಿ ಬೇಡಿದೊಡಾತನಾತ್ಮವಧೂಟಿಯುಂ
ಮುನ್ನ ಕೇಳ್ದಪೆನೆಂದು ತಾಂ ಮನೆಗೆಯ್ದಿ ಬಾರದೆ ತಳ್ವಿದಂ
ನಿನ್ನ ಗೇಹಕೆ ಬಂದೆನಿಂದೆಲೆ ಭಕ್ತ ಮಾಡು ಮದಿಷ್ಟಮಂ ೬

ವ॥ ಎನೆ ಮಹಾಪ್ರಸಾದಮಂತೆಗೆಯ್ವೆನೆಂದು

ಭೋಗಯ್ಯನ ಮನೆಗೆ ಬಂದನು. ೪. (ಇಂಥ ಅಂತ್ಯಜನಾಕಾರದ ಶಿವನನ್ನು ಭೋಗಯ್ಯನು) ಕಂಡು ಭಕ್ತಿಯ ಆಧಿಕ್ಯದಿಂದ ಎದುರುಗೊಂಡು ನಮಸ್ಕರಿಸಿ, ಅವನ ಹೆಗಲ ಮೇಲಿನ ಕರುವನ್ನು ತಾನೇ ಇಸಿದುಕೊಂಡು ತನ್ನ ಹೆಗಲ ಮೇಲೆ ಹೊತ್ತು ಶ್ರೇಷ್ಠ ಬುದ್ಧಿಯ ಆತನು ತನ್ನ ಮನೆಗೆ ಅವನನ್ನು ಕರೆತಂದನು. ೫. (ಮನೆಯಲ್ಲಿ) ಆತನ ಪಾದಗಳನ್ನು ಭೋಗಯ್ಯನು ತೊಳೆದು ಆ ಪಾದೋದಕವನ್ನು ತಲೆಯ ಮೇಲೆ ಸಿಂಪಡಿಸಿಕೊಂಡನು. ಅಧಿಕ್ಯಗೊಂಡ ಅನುರಾಗದಿಂದ ನಮಸ್ಕಾರ ಮಾಡಿದ ಭಕ್ತನನ್ನು (ಆ ವೇಷಧಾರಿಯಾದ ಶಿವನು) ನೋಡಿ, ತನ್ನ ಮುಖದಲ್ಲಿ ಎಳೆ ನಗೆ ಮಿಂಚುತ್ತಿರಲು 'ಅಯ್ಯಾ ಕೇಳು : ನಮಗೆ ಕರುವಿನ ಮಾಂಸವನ್ನು ಊಟ ಮಾಡುವ ನೇಮವುಂಟು. ಈಗಲೇ ಈ ಕರುವನ್ನು ಕತ್ತರಿಸಿ ಬೇಗನೆ ಇದರ ಮಾಂಸದಿಂದ ಅಡಿಗೆಯನ್ನು ಮಾಡಿ ಊಟಕ್ಕಿಕ್ಕು ೬. ನಿನ್ನೆಯ ದಿನ ನನ್ನ ಈ ನೇಮವನ್ನು ನಡೆಸಿಕೊಡಬೇಕೆಂದು ಕರುವನ್ನು ಹೊತ್ತುಕೊಂಡು ಜೇಡರದಾಸಿಮಯ್ಯನನ್ನು ಕಂಡು ಉತ್ಸಾಹಗೊಂಡು ಕೇಳಿದೆನು. ಅವನು ತನ್ನ ಹೆಂಡತಿಯನ್ನು ಮೊದಲು ಕೇಳಬೇಕೆಂದು ಹೇಳಿ ಮನೆಗೆ ಹೋಗಿ ತಿರುಗಿಬಾರದೆ ತಡಮಾಡಿ ಬಿಟ್ಟನು. (ಆದ್ದರಿಂದ) ಎಲೈ ಭಕ್ತನೇ ಈಗ ನಿನ್ನ ಮನೆಗೆ ಬಂದಿದ್ದೇನೆ. ನನ್ನ ಇಷ್ಟಾರ್ಥವನ್ನು ನಡೆಸು' ವ॥ ಎನ್ನಲಾಗಿ ಮಹಾ

1 ಚೇ (ಗ)

ಖಾರಾಮ್ಲಲವಣಮುಖ ಸಂ
ಭಾರಂಗಳ್ವೆರಸಿ ಮಾಂಸಮಂ ಪಚಿಯಿಸಿ ಸ
ತ್ಸೌರಭಮೆಸೆವಡಗಂ ಗುಣ
ವಾರಿಧಿಯುಣಲಿಕ್ಕಿ ತಣಿಪಿದಂ ತಾಪಸನಂ ೭

ವ॥ ಆಗಳಾ ಗ್ರಾಮವಾಸಿಗಳಾದ ಪಾರ್ವರದಂ ಕಂಡು ಕುಪಿತರಾಗಿ—

ಘುಡುಘುಡಿಸುತ್ತೆ ಕಲ್ದಡಿಗಳಂ ತಳೆದಾರ್ದಿಳಿವೆಳ್ದು ಪೌಳಿಯಂ
ನಡೆ ನಡೆ ಕೇರ್ಗಳಂ ಕೆಡಪು ಬಲ್ವಡೆಯಂ ಮುಱಿ ಪೊಕ್ಕು ಗೇಹದೊ
ಳ್ಪುಡುಕು ನಿರೀಕ್ಷಿಸಂತ್ಯಜನ ಪೆರ್ದಡಿಯಿಂ ಪೊಡೆ ಪೋಗಲೀಯದಿ
ರ್ಕಡೆಗೆನುತುರ್ಬಿ ಬೊಬ್ಬಿಱಿದು ಮುತ್ತಿದರಾ ಗೃಹಮಂ ದ್ವಿಜಾಧಮರ್ ೮

ವ॥ ಅಂತು ಮುತ್ತಿ ಮುಂಬರಿದು ನೋಳ್ಪಾಗಳಾ ತಪಸ್ವಿಯದೃಶ್ಯಮಪ್ಪುದುಮನಿತಱೊಳಾ ಕುಮತಿಗಳ ಕಳಕಳಮಂ ಭೋಗಯ್ಯಂ ಕಂಡು ಕಡುಕನಲ್ದು—

ಎಲೆ ಎಲೆ ಭೂಸುರಾಧಮರಿರಾ ಹರಭಕ್ತನಿವೇಶ್ಯಮಪ್ಪ ಮ
ನ್ನಿಲಯಮಶಕ್ಯಮೊರ್ಮೆ ನಿಮಗಂ ಪುಗಲಗ್ರಜರಾದವರ್ಗೆ ನಿ
ಶ್ಚಲ ಧೃತಿಯಿಂದಮೆಂದೆನೆ ದಲಂತ್ಯಜನೆಂತೊಳಪೊಕ್ಕಪಂ ಮಹೋ
ಜ್ವಲ ಶಿವಮೂರ್ತಿ ಪೊಕ್ಕನವನಂ ತಿಳಿವಿಲ್ಲದೆ ನಿಂದೆಗೆಯ್ವುದೇ ೯

ಪ್ರಸಾದ ಹಾಗೇ ಮಾಡುತ್ತೇನೆ, ಎಂದು ೭. ಕಾರ, ಹುಳಿ, ಉಪ್ಪುಗಳೇ ಮುಖ್ಯವಾದ ಸಂಬಾರಗಳನ್ನು ಬೆರಸಿ, ಮಾಂಸವನ್ನು ಬೇಯಿಸಿ, ಒಳ್ಳೆಯ ಸುವಾಸನೆಯಿಂದ ಶೋಭಿಸುವ ಮಾಂಸಾಹಾರವನ್ನು ಸದ್ಗುಣಗಳಿಗೆ ಸಮುದ್ರದೋಪಾದಿಯಲ್ಲಿರುವ ಭೋಗಯ್ಯನು ಊಟಕ್ಕಿಕ್ಕಿ ಆ ತಾಪಸನನ್ನು ತಣಿಸಿದನು. ವ॥ ಆಗ ಆ ಅಗ್ರಹಾರ ವಾಸಿಗಳಾದ ಬ್ರಾಹ್ಮಣರು ಅದನ್ನು ಕಂಡು ಕೋಪಗೊಂಡು ೮. ಆ ದ್ವಿಜಾಧಮರು ಆರ್ಭಟಿಸುತ್ತ ಕೈಯಲ್ಲಿ ಕಲ್ಲುಗಳನ್ನೂ ದೊಣ್ಣೆಗಳನ್ನೂ ಹಿಡಿದು ತೂಗಾಡುತ್ತ (ಮನೆಯ) ಪೌಳಿಯನ್ನು ಕೆಡವಿ (ಒಡೆದು ಹಾಕಿ), ನಡೆ ನಡೆಯಿರಿ ಮನೆಯ ಗೋಡೆಗಳನ್ನು ಕೆಡವಿರಿ. ದಪ್ಪನಾದ ಕದದ ಪಡಕುಗಳನ್ನು ಮುರಿದು ಒಳಗೆ ಹೊಕ್ಕು ಅಂತ್ಯಜನನ್ನು ಹುಡುಕು, ಅತ್ತ ಇತ್ತ ಓಡಿಹೋಗಲು ಅವಕಾಶ ಕೊಡದೆ ಹುಡುಕಿ ದಪ್ಪನಾದ ದೊಣ್ಣೆಯಿಂದ ಹೊಡೆಯಿರಿ ಎನ್ನುತ್ತ ಬೊಬ್ಬೆ ಹಾಕುತ್ತ ಉಬ್ಬಿದವರಾಗಿ ಆ ಮನೆಯನ್ನು ಮುತ್ತಿದರು. ವ॥ ಆ ರೀತಿಯಿಂದ ಮನೆಯನ್ನು ಮುತ್ತಿ, ಮುಂದಕ್ಕೆ ನಡೆದು ನೋಡುತ್ತಿರುವಾಗ ಆ ತಪಸ್ವಿಯು ಮಾಯವಾಗಲಾಗಿ, ಅಷ್ಟರಲ್ಲಿ ಆ ದುರ್ಬುದ್ಧಿಯ ಜನರ ಕೋಲಾಹಲವನ್ನು ಭೋಗಯ್ಯನು ಕಂಡು ಅತಿ ಕೋಪಗೊಂಡು ೯. ಎಲೆಲೇ, ದ್ವಿಜಾಧಮರುಗಳಿರಾ, ನಿಶ್ಚಲವಾದ ಧೈರ್ಯದಿಂದ ಅಗ್ರಜರನಿಸಿದ ನಿಮಗೇ ಹರಭಕ್ತನಾದವನ ವಾಸಸ್ಥಳವಾದ ನನ್ನ ಈ ಗೃಹವನ್ನು ಒಂದು ಸಲವೂ ಪ್ರವೇಶ ಮಾಡಲಶಕ್ಯವಾಗದಿರುವಾಗ, ಅಂತ್ಯಜನಾದವನು ಹೇಗೆ ಒಳ ಹೋಗಲು ಶಕ್ಯ ? ಹೊಕ್ಕವನು ಅತ್ಯಂತ ಉಜ್ವಲನಾದ ಶಿವಮೂರ್ತಿಯು, ಅರಿವಿಲ್ಲದೆ, ನಿಂದೆ

ಪುರಹರಭಕ್ತದೂಷಣಪರಾಯಣರೆಂದೆನಿಸಿರ್ದ ನಿಮ್ಮನಾ
ದರದೊಳೆ ನೋಡಲುಂ ನುಡಿಯಿಸಲ್ಕೆಮಗಕ್ಕುಮೆ ಸಾಲ್ಗುಮೀ ಪುರಾಂ
ತರದೊಳಗಿರ್ಪುದಿನ್ನೆಮಗೆ ಮದ್ಗೃಹವೃತ್ತಿಯನಿಲ್ಲಿ ನೀಮೆ ಕೊಂ
ಡಿರಿಮಿರದೆಮ್ಮ ಸಾಮಿ[1]ಗಳ ಪಿಂದನೆ ಪೋದಪೆವಿಂದು ಬೇಗದಿಂ ೧೦

ಭೋಗಯ್ಯಂ ನಿಶ್ಚಲಮತಿ
ಯಾಗಳೆ ಪೊಱಮಟ್ಟು ಪೊೞಲನೆಯ್ದುವ ಪದದೊ
ಳ್ದೇಗುಲದೊಳ್ಶೈವದ್ವಿಜ
ರಾಗರದೊಳ್ನೆಲಸಿ ನಿಂದ ಘನಲಿಂಗಂಗಳ್ ೧೧

ಉಳಿದುದ್ಯತ್ಪೀಠಮಂ ಕೆತ್ತೆಸೆವ ಪೃಥುಕವಾಟಂಗಳಂ ನುರ್ಗುತುಂ ಕೇ
ರ್ಗಳನಾಗಳ್ಬೀೞ್ವಿನಂ ಪಾಯ್ದೊಡೆವುತಿದಿರ ಪೂಗಲ್ಗಳಂ ನೂಂಕುತಂ ಮಂ
ಜುಳಪಕ್ಷದ್ವಾರದಿಂದಂ ನುಸುಳುತೆ ಪೊಱಮಟ್ಟುರ್ವಿಗತ್ಯದ್ಭುತಂ ಸಂ
ಗಳಿಪನ್ನಂ ಭಕ್ತಮಾರ್ಗಂಬಿಡಿದು ಬಳಿಯನೆಳ್ತಂದವಾನಂದದಿಂದಂ ೧೨

ವ॥ ಮತ್ತಮಲ್ಲಿ—

ನಲಿವುತ್ತುಂ ಪೋಪ ಲಿಂಗಪ್ರತತಿಯುಮುರುಳ್ವ ಲಿಂಗಪ್ರತಾನಂ ನಭೋಮಂ
ಡಲದೊಳ್ ಪಾಯ್ತಿರ್ಪ ಲಿಂಗಪ್ರಕರಮಿಳೆಯೊಳಲ್ಲಲ್ಲಿ ನಿಂದೆಯ್ದುತಿರ್ಪ

ಮಾಡುವುದೇ ? ೧೦. ಪರಮೇಶ್ವರನನ್ನು ದೂಷಣೆಯಲ್ಲಿ ಆಸಕ್ತರೆನಿಸಿರುವ ನಿಮ್ಮನ್ನು ಆದರ ಭಾವದಿಂದ ನೋಡಲೂ, ನುಡಿಸಲೂ ಕೂಡ ನಮಗೆ ಸಾಧ್ಯವಾದೀತೇ ? ಈ ಪಟ್ಟಣ ಮಧ್ಯದಲ್ಲಿ ಇನ್ನು ನಮಗೆ ಇರಲು ಶಕ್ಯವಿಲ್ಲ. ನನ್ನ ಈ ಮನೆಯನ್ನು ನೀವೇ ತೆಗೆದುಕೊಂಡು ವಾಸ ಮಾಡಿಕೊಂಡು ಇರಿ. ಈಗಲೇ ಬೇಗನೆ ತಪ್ಪದೆ ನಾವು ನಮ್ಮ ಸ್ವಾಮಿಗಳ ಹಿಂದೆ ಹೋಗುತ್ತೇವೆ. ೧೧–೧೨. (ಹೀಗೆಂದು) ನಿಶ್ಚಲ ಭಾವದ ಭೋಗಯ್ಯನು ಆ ಕೂಡಲೇ ಪಟ್ಟಣವನ್ನು ಬಿಟ್ಟು ಹೊರ ಹೊರಡುತ್ತಿರುವ ಸಮಯದಲ್ಲಿ ದೇಗುಲಗಳಲ್ಲಿಯೂ. ಶೈವ ಬ್ರಾಹ್ಮಣರ ಮನೆಗಳಲ್ಲಿಯೂ ನೆಲಸಿ ನಿಂತಿದ್ದ ಶ್ರೇಷ್ಠವಾದ ಲಿಂಗಗಳು ಎತ್ತರವಾದ ಪೀಠಗಳನ್ನು ತ್ಯಜಿಸಿ, ಮುಚ್ಚಿಕೊಂಡಿರುವ ಶೋಭಿಸುವ ದೊಡ್ಡ ದೊಡ್ಡ ಕದಗಳನ್ನು ನುಚ್ಚು ನುರಿ ಮಾಡಿ, ಗೋಡೆಗಳು ಉರುಳಿ ಬೀಳುವಂತೆ ಹಾಯ್ದು ಒಡೆಯುತ್ತ, ಎದುರಿನಲ್ಲಿರುವ ಹೂವು ಕೆತ್ತಿದ ಕಲ್ಲುಗಳನ್ನು ತಳ್ಳುತ್ತ, ಮನೋಹರವಾದ ಪಕ್ಕದ ಬಾಗಿಲಿನಿಂದ ನುಗ್ಗುತ್ತ, ಹೊರ ಹೊರಟು ಭೂಮಂಡಲದಲ್ಲಿ ಇದು ಅತ್ಯದ್ಭುತವೆಂದೆನಿಸುವಂತೆ ಆನಂದದಿಂದ ಭಕ್ತನಾದ ಭೋಗಯ್ಯನು ಹೋದ ಮಾರ್ಗವನ್ನೇ ಹಿಡಿದು ಆತನ ಹತ್ತಿರಕ್ಕೆ ಬಂದವು. ವ॥ ಮತ್ತು ಅಲ್ಲಿ ೧೩–೧೪. ನಲಿದಾಡುತ್ತ ಹೋಗುವ ಲಿಂಗ ಸಮೂಹ,

1 ಸ್ವಾ(ಮು)

ಜ್ವಲಲಿಂಗಶ್ರೇಣಿ ಬೇಗಂ ಪರಿವ ವಿಮಳ ಲಿಂಗವ್ರಜಂ ಸೋಂಕದೊಳ್ಪಿಂ
ನೆಲನಂ ಚೊಟ್ಟುದ್ದದೊಳ್ಕುಪ್ಪಳಿಸಿ ಕುಣಿವ ಲಿಂಗೋತ್ಕರಂ ಮಾಣದಾಗಳ್ ೧೩

ಒಲೆದೊಲೆದು ನಡೆವ ಲಿಂಗಾ
ವಳಿ ಮುಂದಕ್ಕೋಡಿ ನಿಲ್ವ ಲಿಂಗಸಮೂಹಂ
ಕೆಲಬಲಕೆ ನಿಮಿರ್ದು ತಳರ್ವು
ಜ್ವಲಲಿಂಗಪ್ರಸರಮೇಂ ಮನಂಗೊಳಿಸಿದುದೋ ೧೪

ಭೋಗಯ್ಯನೊಳೊದವಿರ್ದನು
ರಾಗದಿನೊಡವೋಪ ಲಿಂಗತತಿಯೊಡಗೂಡು
ತ್ತಾಗಳೆ ಪೊಳಲ ಸುಭಕ್ತರ
ಪೂಗಂ ಪೊಱಮಟ್ಟು ತಳರ್ದುದತಿ ಸಂಭ್ರಮದಿಂ ೧೫

ಆಡುತ್ತುಂ ಕೇಳಿಕೆಯೊಡ
ಗೂಡುತ್ತುಂ ತಳರ್ವ ಲಿಂಗತತಿಯನಲಂಪಿಂ
ನೋಡುತ್ತುಂ ಮೃಡನಂಘ್ರಿಯ
ಪಾಡುತ್ತುಂ ನಡೆದುದಲ್ಲಿ ಶರಣಸಮೂಹಂ ೧೬

ವ॥ ಇಂತು ಕಡು ಸಡಗರಂ ಮಿಗೆ ಭೋಗಿದೇವಂ ಗಮಿಯಿಸುತ್ತುಮಿರ್ಪಿನಮಿತ್ತಲ್—

ಉರುಳುತ್ತ ಹೋಗುವ ಲಿಂಗಗಳ ಗುಂಪು, ಆಕಾಶ ಮಂಡಲದಲ್ಲಿ ಹರಿದು ಬರುತ್ತಿರುವ ಲಿಂಗಗಳ ಪ್ರಕರ, ಭೂಮಿಯಲ್ಲಿ ಅಲ್ಲಲ್ಲಿ ನಿಂತುಕೊಂಡು ಹೋಗುತ್ತಿರುವ ಲಿಂಗಗಳ ಶ್ರೇಣಿ, ವೇಗವಾಗಿ ಓಡುತ್ತಿರುವ ಪರಿಶುದ್ಧ ಲಿಂಗಗಳ ಸಮೂಹ, ನೆಲವನ್ನು ಮುಟ್ಟದೆಯೇ ಚೆಂದವಾಗಿ ಚೊಟ್ಟುದ್ದಕ್ಕೆ ಕುಪ್ಪಳಿಸುತ್ತ ಕುಣಿದಾಡಿ ಹೋಗುತ್ತಿರುವ ಲಿಂಗಗಳ ಸಮೂಹ, ತಪ್ಪದೆ ಆಗ ತೂಗಾಡುತ್ತ ತೂಗಾಡುತ್ತ ನಡೆಯುತ್ತಿರುವ ಲಿಂಗಗಳ ಸಾಲು, ಮುಂದಕ್ಕೆ ಓಡಿ ನಿಲ್ಲುವ ಲಿಂಗಗಳ ಅಕ್ಕ ಪಕ್ಕಕ್ಕೆ ನಿಗುರಿಕೊಂಡು ಸಾಗುತ್ತಿರುವ ಉಜ್ವಲವಾದ ಲಿಂಗಗಳ ಸಮೂಹವು ಅದೇನು ಮನೋಹರವಾಗಿತ್ತೋ! ೧೫. ಭೋಗಯ್ಯನಲ್ಲಿ ಉಂಟಾದ ಅನುರಾಗದಿಂದ ಅವನನ್ನು ಅನುಸರಿಸಿ ಹೋಗುವ ಲಿಂಗಸಮೂಹದೊಡನೆ ಕೂಡಿಕೊಂಡು ಆ ಕೆಂಬಾವಿಯಲ್ಲಿದ್ದ ಸದ್ಭಕ್ತರ ಸಮೂಹವೂ ಅತ್ಯಂತ ಸಂಭ್ರಮದಿಂದ ಬೆನ್ನು ಹತ್ತಿ ಹೊರಟಿತು. ೧೬. ಆಡುತ್ತಾ, ಕುಣಿದಾಟದಲ್ಲಿ ತಾವೂ ಕೂಡಿಕೊಳ್ಳುತ್ತ ಹೋಗುತ್ತಿರುವ ಲಿಂಗಗಳ ಸಮೂಹವನ್ನು ಸಂಭ್ರಮದಿಂದ ನೋಡುತ್ತ, ಪರಶಿವನ ಪಾದಗಳನ್ನು ಸ್ತೋತ್ರ ಮಾಡುತ್ತ ಶರಣರುಗಳ ಸಮೂಹವು ಅಲ್ಲಿ ನಡೆದಿತ್ತು. ವ॥ ಹೀಗೆ ಅತ್ಯಂತ ಸಂಭ್ರಮಾತಿಶಯದಿಂದ ಭೋಗಯ್ಯನು

ಕೆಱೆ ಬಾವಿ ತೊಱೆಯ ನೀರ್ಗ
ಳ್ಬಱತುವು ನಳಿನೋತ್ಪಳಾಳಿ ಕೊಱಗಿದುವೆತ್ತಂ
ಬಿಱುಗಾಳಿ ಬೀಸಿದುದು ಪಶು
ವಱಿಚಿದುವು ಬಳಲ್ದು ಬಾಡಿದುವು ಸಸ್ಯಂಗಳ್ ೧೭

ಮೊಳಗಿದುದಂಬರಂ ಪಗಲೊಳಂಧತಮಂ ಕವಿದತ್ತು ಕಂಪಿಸಿ
ತ್ತಿಳೆ ನರಿಯೂಳ್ದುವಾಗಸದೊಳೇಳ್ದುವು ಫೋಂಕನೆ ಧೂಮಕೇತುಗ
ಳ್ಪುಳಿತುದು ಭಕ್ಷ್ಯಭೋಜ್ಯತತಿ ಬೊಬ್ಬಿಱಿದಾದುರ್ದುದು ಕಂಭಮಲ್ಲಿ ಸೂ
ರ್ಗಳೊಳೊಗೆದತ್ತು ಪೆರ್ವೊಗೆ ಪುರಾಧ್ವದೊಳುರ್ಬಿದುದುಜ್ವಳಾನಳಂ ೧೮

ವ|| ಇಂತು ನೆಗಳ್ದುತ್ಪಾತಶತಮನಾ ವಿಪ್ರರ್ಕಂಡು ಕಡು ಭೀತರಾಗಿ ಕಂಪಿಸಿ ಭೋಗಯ್ಯನವಜ್ಞಾನಿಮಿತ್ತಮೀ ವಿಪರೀತಮೊಗೆದುದಾತನಂ ಶರಣ್ಬೊಕ್ಕೊಡಲ್ಲದೆಮಗೆ ಬಾಳ್ತೆಯಿಲ್ಲೆಂದೆಲ್ಲರ್ನೆರೆದಾ ಲಿಂಗಸಂಘಸಮಾವೃತನಿರ್ದೆಡೆಗೆ ಪರಿತಂದು ಸಾಷ್ಟಾಂಗಮೆಱಗಿ ಪಲ್ಗಿಱಿದು ಪುಲ್ಗಚ್ಚಿ ಕಾರ್ಪಣ್ಯಂದೋಱಿ ಕೆಯ್ಮುಗಿದು ನಿಂದು—

ಎಲೆ ಕರುಣಾಬ್ಧಿ ಕಾವುದು ಮದಾಂಧರನಲ್ಪರನಜ್ಞಭಾವಸಂ
ಕಲಿತರನನ್ಯಥಾ ಗತಿವಿಹೀನರನೆಮ್ಮನೆನುತ್ತೆ ನೋಡದಿ

ಹೋಗುತ್ತಿರುವಾಗ ಈ ಕಡೆಗೆ ೧೭. ಕೆರೆ, ಬಾವಿ, ಹೊಳೆಗಳ ನೀರುಗಳು ಬತ್ತಿದವು; ಕಮಲಗಳ, ಕನ್ನೈದಿಲೆಗಳ ಸಮೂಹವು ಬತ್ತಿ ಹೋದವು; ಎಲ್ಲ ಕಡೆಗೂ ಬಿರುಗಾಳಿಯು ಬೀಸಿತು: ಪಶುಗಳು ಕಿರಿಚಾಡತೊಡಗಿದವು; ಸಸ್ಯಗಳೆಲ್ಲ ಬಳಲಿ ಬತ್ತಿ ಹೋದವು. ೧೮. ಆಕಾಶವು ಕೂಗಿಕೊಂಡಿತು; ಹಗಲಿನಲ್ಲಿ ದಟ್ಟವಾದ ಕತ್ತಲೆ ಕವಿಯಿತು; ಭೂಮಿ ನಡುಗಿತು; ನರಿಗಳು ಕೂಗತೊಡಗಿದವು; ಆಕಾಶದಲ್ಲಿ ಒಮ್ಮಿಂದೊಮ್ಮೆಗೆ ಧೂಮಕೇತುಗಳು ಮೂಡಿದುವು; ಭಕ್ಷ್ಯ ಭೋಜ್ಯಗಳ ಸಮೂಹವೆಲ್ಲ ಹುಳುತುವು. (ಹುಳು ಬಿದ್ದವು) ಮನೆಯ ಕಂಬಗಳು ಬೊಬ್ಬೆ ಹಾಕುತ್ತ ಚೀರಾಡಿದವು; ಮನೆಯ ಸೂರುಗಳಲ್ಲಿ ಭಾರಿ ಹೊಗೆ ಕವಿಯಿತು. ಪಟ್ಟಣದ ಬೀದಿಗಳಲ್ಲಿ ಉಜ್ಜ್ವಳವಾದ ಬೆಂಕಿಯು ಹೆಚ್ಚಾಯಿತು ವ|| ಈ ಪ್ರಕಾರವಾಗಿ ಉಂಟಾದ ನೂರಾರು ಅಪಶಕುನಗಳನ್ನು ಆ ಕೆಂಬಾವಿಯ ಬ್ರಾಹ್ಮಣರು ಕಂಡು, ಅತಿ ಭಯಗೊಂಡು, ನಡುಗುತ್ತ, ಭೋಗಯ್ಯನ ಅವಹೇಳನದ ಕಾರಣವಾಗಿ ಈ ವಿಪರೀತ (ತಿರುಗುಮುರುಗು) ಪರಿಸ್ಥಿತಿಯುಂಟಾಯಿತು. ಆತನನ್ನು ಶರಣು ಹೊಕ್ಕಲ್ಲದೆ ನಮಗೆ ಜೀವನವೇ ಇಲ್ಲ; ಎಂದು ಎಲ್ಲ ದ್ವಿಜರೂ ಸೇರಿ, ಆ ಲಿಂಗ ಸಮುದಾಯದಿಂದ ಸುತ್ತುವರಿಯಲ್ಪಟ್ಟ ಭೋಗಯ್ಯನು ಇದ್ದ ಸ್ಥಳಕ್ಕೆ ಓಡಿಬಂದು ಸಾಷ್ಟಾಂಗ ಪೂರ್ವಕ ನಮಸ್ಕಾರಮಾಡಿ, ಹಲ್ಲನ್ನು ಕಿರಿದು ಬಾಯಲ್ಲಿ ಹುಲ್ಲು ಕಡ್ಡಿಯನ್ನು ಕಚ್ಚಿ, ಕಾರ್ಪಣ್ಯ ಭಾವವನ್ನು ತೋರಿಸಿಕೊಂಡು, ಕೈಗಳನ್ನು ಮುಗಿದು ನಿಂತು ೧೯. ಎಲೈ ಕರುಣಾ ಸಮುದ್ರನಾದ ಭೋಗಯ್ಯನೇ, ಮದದಿಂದ ಕಣ್ಣು ಕಾಣದವರೂ, ಅಲ್ಪರೂ, ಅಜ್ಞಾನಭಾವದಿಂದ ಕೂಡಿದವರೂ, (ನಿನ್ನನ್ನು ಬಿಟ್ಟು) ಬೇರೆ ಗತಿಯಿಲ್ಲದವರೂ, ಆದ

ಖಿಲರೆನಿಪೆಮ್ಮ ತಪ್ಪುಗಳನಿಂದಭಯಂಗುಡು ದೇವ ನೀನೆನು
ತ್ತಲರ್ದತಿ ದೈನ್ಯದಿಂ ಪೊಗಳೆ ಕೇಳ್ದು ಮುಗುಳ್ನಗೆ ನಕ್ಕು ಭೋಗಯ್ಯಂ ೧೯

ಕರುಣಾನಿಧಿಯುಭಯಂಗುಡು
ತಿರದೆ ಧರಾಮರಕದಂಬಕೊಡವರೆ ಲಿಂಗೋ
ತ್ಕರಮುರಿದೆನೆ ಸರಭಸಮಾ
ಪುರಿಗೆಯ್ದಿದನಪ್ರತರ್ಕ್ಯ ಮಹಿಮಾಧಾರಂ ೨೦

ವ॥ ಅಂತೆಯ್ದಿ ನಿಜಭವನಮಂ ಪುಗುವಾಗಳಾ ಕೆಂಬಾವಿಯೊಳಲ ಲಿಂಗಂಗಳಪವಸದಿಂ ತಂತಮ್ಮ ಗುಡಿಗಳುಮಂ ಪೀಠಂಗಳುಮಂ ಪೆಲ್ಲಟಿಸಿ—

ಭೀಮೇಶ್ವರಲಿಂಗಂ ಘನ
ರಾಮೇಶ್ವರಲಿಂಗಪೀಠದೊಳ್ನೆಲಸಿದುದಾ
ರಾಮೇಶ್ವರಲಿಂಗಂ ಘನ
ಭೀಮೇಶ್ವರಲಿಂಗಪೀಠದೊಳಮತಿ ರಯದಿಂ ೨೧

ಸುರಪೂಜ್ಯಲಿಂಗತತಿ ಸಿದ್ಧಪೂಜ್ಯಭಾ
ಸುರಲಿಂಗಪೀಠದೊಳೆ ದೇವಪೂಜ್ಯಂ ಬಂ
ಧುರಲಿಂಗಪೀಠದೊಳೆ ಸಿದ್ಧಪೂಜ್ಯ ಸೌಂ
ದರಲಿಂಗರಾಜಿ ನೆಲಸಿರ್ದುವದ್ಭುತಂ ೨೨

ನಮ್ಮನ್ನು ರಕ್ಷಿಸು ! ದುಷ್ಟರೆನಿಸಿರುವ ನಮ್ಮ ತಪ್ಪುಗಳನ್ನು ಎಣಿಸಬೇಡ (ನೋಡಬೇಡ) ದೇವ. ನೀನು ಈಗಲೇ ನಮಗೆ ಅಭಯವನ್ನು ಕೊಡು ! ಎನ್ನುತ್ತ ಅತಿ ದೈನ್ಯೋಕ್ತಿಗಳಿಂದ ಹೊಗಳಲಾಗಿ ಭೋಗಯ್ಯನು ಕೇಳಿ ಮುಗುಳು ನಗೆ ನಗುತ್ತಿದ್ದನು. ೨೦. ಕರುಣಾನಿಧಿಯೂ, ಊಹಿಸಲಶಕ್ಯವಾದ ಮಹಿಮೆಗಳಿಗೆ ಆಧಾರ ಭೂತನೂ ಆದ ಆ ಭೋಗಯ್ಯನು ಅವರೆಲ್ಲರಿಗೂ ಅಭಯವನ್ನು ಕೊಡುತ್ತ, ಆ ಬ್ರಾಹ್ಮಣರುಗಳ ಸಮೂಹವೆಲ್ಲ ಬೆನ್ನುಹತ್ತಿ ಬರಲು, ಲಿಂಗಗಳ ಸಮೂಹವೂ ಕೂಡ ಇದು ಅಸಾಧ್ಯವೆನ್ನುವಂತೆ ಬೆನ್ನುಹತ್ತಿ ಬರುತ್ತಿರಲು ಅತಿ ವೇಗದಿಂದ ಕೆಂಬಾವಿ ಪಟ್ಟಣಕ್ಕೆ ಬಂದನು. ವ॥ ಆ ರೀತಿ ಬಂದು, ತನ್ನ ಮನೆಯನ್ನು ಪ್ರವೇಶಿಸುವಾಗ ಆ ಕೆಂಬಾವಿಪಟ್ಟಣದ ಲಿಂಗಗಳು ಆತುರದಲ್ಲಿ ತಮ್ಮ ತಮ್ಮ ಗುಡಿಗಳನ್ನೂ ಪೀಠಗಳನ್ನು ಅದಲು ಬದಲುಮಾಡಿಕೊಂಡು ೨೧. ಭೀಮೇಶ್ವರಲಿಂಗವು ರಾಮೇಶ್ವರಲಿಂಗದ ಪೀಠದ ಮೇಲೆ ಬಂದು ಕುಳಿತು ಕೊಂಡಿತು; ಆ ರಾಮೇಶ್ವರ ಲಿಂಗವು ಭೀಮೇಶ್ವರ ಲಿಂಗದ ಪೀಠದ ಮೇಲೆ ಅತಿಶೀಘ್ರವಾಗಿ ಕುಳಿತಿತು. ೨೨. ದೇವತೆಗಳು ಪೂಜಿಸುವ ಲಿಂಗಗಳ ಸಮೂಹವು, ಸಿದ್ಧರುಗಳು ಪೂಜೆಮಾಡುವ ಪ್ರಕಾಶಿಸುವ ಪೀಠದಮೇಲೂ, ದೇವತೆಗಳು ಪೂಜಿಸುವ ಭದ್ರವಾದ ಲಿಂಗ ಪೀಠದಲ್ಲಿ ಸಿದ್ಧರುಗಳು ಪೂಜಿಸುವ ಸುಂದರವಾದ ಲಿಂಗಗಳ ಸಮೂಹವೂ ಅದ್ಭುತ

ಲಿಂಗಂಗಳ್ಭೋಗಯ್ಯನ
ಪಿಂಗಡೆಯೊಳ್ ತಳರ್ದ ತಮ್ಮ ಪರಿಯಱುಪಲ್ಕೆಂ
ದಂಗವಿಸಿ ಜಗಕೆ ನಿಜಪೀ
ಠಂಗಳ ಪಲ್ಲಟಿಸಿ ನೆಲಸುತೀಗಳುಮೆಸೆಗುಂ ೨೩

ಪುರಮೆಂದಿನಂತೆ ಮಂಗಳ
ತರವಾದುದು ಜಂಗಮಾಂಘ್ರಿಪೂಜಾಸುಖದಿಂ
ಕರಮೆಸೆದಂ ಭೋಗಯ್ಯಂ
ಪರಿದೆಣ್ದೆಸೆದೀವೆ ತಮ್ಮ ಜಸಮಾ ಪೊಳಲೊಳ್ ೨೪

ಹರಭಕ್ತನಾದ ಜಾತಿಯೊ
ಳಿರುತಿರ್ದೊಡಮವನೆ ಪೂಜ್ಯನಖಿಳರ್ಗೆಂದೀ
ಶ್ವರನಱಿಪಿದನಂತದಱಿಂ
ನರೇಂದ್ರ ಕೇಳ್ಭಕ್ತರಲ್ಲಿ ಕುಲಮಱಸುವುದೇ ೨೫

ವ॥ ಮತ್ತಂ—

ಶ್ವಪಚಯ್ಯನೆಂಬ ಭಕ್ತಂ
ವಿಪಿನಾಂತರಶುದ್ಧದೇಶದೊಳ್ ಶಂಭುಗೆ ತಾ
ನುಪಹಾರಮನೆಸಗುತ್ತುಂ
ಸುಪವಿತ್ರಚರಿತ್ರನಿರ್ದನಿರ್ಪನ್ನೆವರಂ ೨೬

ವೆನ್ನುವಂತೆ ನೆಲಸಿದವು. ೨೩. ಲಿಂಗಗಳು ಭೋಗಯ್ಯನ ಹಿಂದುಗಡೆಯಲ್ಲಿ ಹರಿದು ಬಂದ ತಮ್ಮ ರೀತಿಯನ್ನು ಜಗತ್ತಿಗೆ ತಿಳಿಸುವುದಕ್ಕೆಂದು ಇಷ್ಟಪಟ್ಟು ತಮ್ಮ ತಮ್ಮ ಪೀಠಗಳನ್ನು ಪಲ್ಲಟಗೊಳಿಸಿ ನೆಲಸುತ್ತ ಈಗಲೂ ಶೋಭಿಸುತ್ತಿರುವುವು. ೨೪. ಕೆಂಬಾವಿ ಪಟ್ಟಣವು ಎಂದಿನ ಹಾಗೆ ಮಂಗಳಕರವಾಯಿತು; ಭೋಗಯ್ಯನು ಜಂಗಮಪಾದ ಪೂಜಾ ಸುಖದಿಂದ ತನ್ನ ಯಶಸ್ಸು ಎಂಟುದಿಕ್ಕಿನಲ್ಲೂ ಹರಿದು ತುಂಬುವಂತೆ, ಆ ಪಟ್ಟಣದಲ್ಲಿ ಚೆನ್ನಾಗಿ ಶೋಭಿಸುತ್ತಿದ್ದನು. ೨೫. ಮಹಾರಾಜನೇ, ಕೇಳು : ಹರಭಕ್ತನಾದವನು ಯಾವ ಜಾತಿಯೊಳಗೆ ಇರುತ್ತಿದ್ದರೂ ಅವನೇ ಸಮಸ್ತರಿಗೂ ಪೂಜ್ಯನೆಂದು ಈಶ್ವರನೇ ತಿಳಿಸಿದ್ದಾನೆ. ಆದ್ದರಿಂದ ಭಕ್ತರಲ್ಲಿ ಕುಲವನ್ನು ಹುಡುಕುವುದೇ ? * ವ॥ ಮತ್ತು ಶ್ವಪಚಯ್ಯನ ಕಥೆ ೨೬–೨೮. ಶ್ವಪಚಯ್ಯನೆಂಬ ಮಹಾ ಭಕ್ತನು ಅರಣ್ಯ ಮಧ್ಯದ ಪರಿಶುದ್ಧ ಸ್ಥಳದಲ್ಲಿ, ಪರಮೇಶ್ವರನಿಗೆ ತಾನು ಆಹಾರ ಪದಾರ್ಥಗಳನ್ನು ಸಿದ್ಧಗೊಳಿಸುತ್ತ ಅತ್ಯಂತ ಪರಿತ್ರ ಚರಿತ್ರನೆನಿಸಿ ಇದ್ದನು. ಹೀಗೆ ಇರುತ್ತಿರಲಾಗಿ ಸಾಮವೇದಿಯೆಂ

ಬ್ರಾಹ್ಮಣಃ ಕ್ಷತ್ರಿಯೋ ವೈಶ್ಯಶ್ಶೂದ್ರೋವಾಪ್ಯಂತ್ಯಜಾತಿಜಃ । ಶಿವಭಕ್ತಸ್ಸದಾಪೂಜ್ಯಸ್ಸಸರ್ವಬ್ರಾಹ್ಮಣೋತ್ತಮಃ ॥ ಈ ಆಗಮ ಶ್ಲೋಕವೇ ಈ ಮಾತಿಗೆ ಆಧಾರವೆಂದು ತೋರುತ್ತದೆ.

ಸಾಮವೇದಿಯೆನಿಪ್ಪ ಭೂಸುರವರ್ಯನಾವನದೇಶದೊಳ್
ವ್ಯೋಮಮಾರ್ಗದೊಳೇಳ್ತರುತ್ತಿರೆ ಲೀಲೆಯಿಂದವನಂಗುಣಾ
ರಾಮನೀಕ್ಷಿಸಿ ಬೋನಮಂ ಭವಿ ಕಾಣ್ಗುಮೆಂದತಿ ವೇಗದಿಂ
ವಾಮಪಾದುಕೆಯಿಂದೆ ಮುಚ್ಚಿದನಾಗಳಂತದನಾ ದ್ವಿಜಂ ೨೭

ಕಂಡು ನಗೆನಗುತಮಿವನು
ದ್ದಂಡತೆಯಿಂ ಶ್ವಪಚನಡುವ ಬೋನದ ವಿಳಸ
ದ್ಭಾಂಡಮನೆನ್ನೀಕ್ಷಣರುಚಿ
ಕೊಂಡಪುದೆಂಬಲ್ತೆ ಮುಚ್ಚಿದಂ ಪಾದುಕೆಯಿಂ ೨೮

ಕಡುದುರುಳನೆನ್ನ ಮಹಿಮೆಯ
ಪೊಡರ್ಪನಿವನರಿಯದಿಂತು ನೆಗಳ್ದಂ ಧರೆಯೊ
ಳ್ನುಡಿಯಲದೇಂ ದುಷ್ಕುಲಜರ
ನಡೆವಳಿ ಬೇರೊಂದು ಗರ್ವದಿಂ ನುಡಿಯಲೊಡಂ ೨೯

ಅಳಿದುದು ಮಂತ್ರಶಕ್ತಿ ಬಿಸಿಲೊಂದದವೊಲ್ಲಿಜವಕ್ತ್ರಕಲ್ಲಿ ಬಾಂ
ದಳದೊಳೆ ಬರ್ಪ ವಸ್ತ್ರಮದು ಧಾತ್ರಿಗೆ ಬೀಳ್ವುದದಂ ನಿರೀಕ್ಷಿಸು
ತ್ತಿಳಿದತಿ ಭೀತಿಯಿಂದೆರಗಿದಂ ಶ್ವಪಚಾರ್ಯನ ಪಾದಪದ್ಮಕು
ಜ್ಜಳಮತಿ ಸಾಮವೇದಿ ವಿತತಾತಪತಪ್ತ ನಿಜಾನನಾಂಬುಜಂ ೩೦

ದೆನ್ನುವ ಬ್ರಾಹ್ಮಣಶ್ರೇಷ್ಠನು ಆ ವನಪ್ರದೇಶದಲ್ಲಿ ಆಕಾಶಮಾರ್ಗದಲ್ಲಿ ಬರುತ್ತಿರಲಾಗಿ, ಲೀಲೆಯಿಂದ ಹಾಗೆ ಬರುತ್ತಿರುವ ಸಾಮವೇದಿಯನ್ನು ಸದ್ಗುಣಗಳಿಗೆ ಆಶ್ರಯನೆನಿಸಿದ ಶ್ವಪಚಯ್ಯನು ನೋಡಿ, (ತಾನು ಮಾಡಿದ) ಅನ್ನವನ್ನು ಭವಿಯು ನೋಡುವನೆಂದು ಅತಿ ಭರದಿಂದ ಆ ಅನ್ನವನ್ನು ತನ್ನ ಎಡಗಾಲಿನ ಕೆರದಿಂದ ಮುಚ್ಚಿದನು. ಆಗ ಅನ್ನವನ್ನು ಆ ರೀತಿ ಮುಚ್ಚಿದುದನ್ನು ಸಾಮವೇದಿಯು ನೋಡಿ, ನಗೆ ನಗುತ್ತ ಅತ್ಯಂತ ಗರ್ವದಿಂದ ಈ ಶ್ವಪಚನು ಬೇಯಿಸುವ ಅನ್ನದ ಭಾಂಡವನ್ನು ನನ್ನ ಕಣ್ಣಿನ ಕಾಂತಿಯು ಸ್ವೀಕರಿಸು ವುದೆಂದಲ್ಲವೇ ಕೆರದಿಂದ ಮುಚ್ಚಿದ್ದು ! (ಎಂದುಕೊಂಡನು). ೨೯–೩೦. ಮಹಾ ಮೂರ್ಖನಾದ ಇವನು ನನ್ನ ಮಹಿಮೆಯ ಅತಿಶಯವನ್ನು ಅರಿಯದೆ ಈ ರೀತಿ ಮಾಡಿ ದನು. ಈ ಲೋಕದಲ್ಲಿ ನೀಚಕುಲದಲ್ಲಿ ಹುಟ್ಟಿದವರ ನಡೆವಳಿಕೆಯ ರೀತಿಯೇ ಒಂದು ಬಗೆ. ಅದನ್ನು ಮಾತನಾಡಿ ಏನು ! ಎಂದು ಗರ್ವದಿಂದ ನುಡಿದೊಡನೆಯೇ ಅವನ ಮಂತ್ರಶಕ್ತಿಯು ನಾಶವಾಯಿತು. ಅವನ ಮುಖದ ಮೇಲೆ ಬಿಸಿಲು ಬೀಳದ ಹಾಗೆ ಅವನ ಮೇಲ್ಭಾಗದಲ್ಲಿ ಆಕಾಶದಲ್ಲಿಯೇ ಬರುತ್ತಿದ್ದ ವಸ್ತ್ರವು ಭೂಮಿಗೆ ಬಿತ್ತು. ಅದನ್ನು ನೋಡುತ್ತ ಭೂಮಿಗಿಳಿದು ಭೀತಿಯಿಂದ ಶ್ವಪಚಯ್ಯನ ಪಾದ ಕಮಲಗಳಿಗೆ ವಿಶೇಷ ವಾದ ಬಿಸಿಲಿನಿಂದ ಕಾಯ್ದು ಹೋದ ತನ್ನ ಮುಖ ಕಮಲವುಳ್ಳ ಪ್ರಕಾಶಿಸುವ ಬುದ್ಧಿ ಶಕ್ತಿಯುಳ್ಳ ಆ ಸಾಮವೇದಿಯು ನಮಸ್ಕರಿಸಿದನು. [ಸಾಮವೇದಿಯ ಮಂತ್ರಶಕ್ತಿ ಯಿಂದ ಅವನ ಮುಖದ ಮೇಲೆ ಬಿಸಿಲುಬೀಳಬಾರದೆಂದು ಒಂದು ವಸ್ತ್ರವು ಅವನನ್ನು ಅನುಸರಿಸಿಯೇ ಆಕಾಶದಲ್ಲಿ ಛತ್ರಿಯೋಪಾದಿಯಲ್ಲಿ ಹರಿದು ಬರುತ್ತಿತ್ತು. ಶ್ವಪಚಯ್ಯ

ವ॥ ಅಂತೆಱಗಿ ಕೆಯ್ಮುಗಿದು ಕೊಂಡಾಡಿ ತತ್ಕಾರುಣ್ಯದಿಂ ಶಿವದೀಕ್ಷೆಯಂ ಪಡೆದು ಶಿವಾಚಾರದೊಳ್ನಂದು ಕೆಲವಾನುಂ ದಿವಸಮಿರ್ದನಂತರಮದ್ಭುತ ಭಕ್ತಿಯಿಂ ಭವನಂ ಮೆಚ್ಚಿಸಿ ಮನ್ನಣೆವೆತ್ತು—

ಮೂವತ್ತಾಱುಂ ಪೊಳಲ ಜ
ನಾವಳಿವೆರಸುತ್ತೆ ಶಿವನ ಪುರಿಗೆಯ್ದಿದನುಂ
ದಾ ವಿಭುವದಱಿಂ ಕೇಳೆಲೆ
ಭೂವರ ಶಿವಭಕ್ತರೊರೆಗೆ ಬರ್ಪರೆ ಪಾರ್ವರ್ ೩೧

ಆಳಿಪುದಿನ್ನುಂ ಭೋಜನೃ
ಪಾಲಂ ಪದೆದಾಳ್ವ ವಲ್ಲಕೀಪುರದೊಳ್ಸ
ಲ್ಲೀಲೆಯೊಳೆಸೆವಂ ಸದ್ಗುಣ
ಶೀಲ ಕಲಾಶಾಲಿ ಶರಣನುದ್ಭಟದೇವಂ ೩೨

ಶಿವದೀಕ್ಷೆಯಿತ್ತು ತಿಳುಪುತೆ
ಶಿವತತ್ವಮನಾ ನೃಪಂಗೆ ಗುರುವಾಗಿ ಮಹಾ
ಶಿವಯೋಗಿ ನೃಪಸಪರ್ಯೋ
ತ್ಸವಮಂ ಕೆಯ್ಕೊಂಡು ವೇದಶಾಸ್ತ್ರಾಗಮದಿಂ ೩೩

ನನ್ನು ತಿರಸ್ಕಾರಮಾಡಿದ್ದರಿಂದ ಅವನ ಮಂತ್ರಶಕ್ತಿ ನಷ್ಟವಾಗಿ ಆ ವಸ್ತ್ರವು ಭೂಮಿಯ ಮೇಲೆ ಬಿತ್ತು; ಅಂತೆಯೇ ಶ್ವಪಚಯ್ಯನೂ ಕೂಡ ತನ್ನ ಆಕಾಶಗಮನ ಶಕ್ತಿಯನ್ನೂ ಕಳೆದುಕೊಂಡು ಭೂಮಿಗೆ ಇಳಿದನೆಂದು ಭಾವ.] ವ॥ ಆ ರೀತಿ ನಮಸ್ಕರಿಸಿ, ಕೈ ಮುಗಿದು ಕೊಂಡಾಡುತ್ತ ಆತನ ಕಾರುಣ್ಯದಿಂದ ಶಿವದೀಕ್ಷೆಯನ್ನು ಹೊಂದಿ, ಶಿವಾಚಾರ ದಲ್ಲಿ ವ್ಯವಹರಿಸಿ, ಅನೇಕ ದಿವಸಗಳು ಇದ್ದನಂತರ (ತನ್ನ) ಅದ್ಭುತ ಶಕ್ತಿಯಿಂದ ಶಿವ ನನ್ನು ಮೆಚ್ಚಿಸಿ ಮನ್ನಣೆ ಪಡೆದು ೩೧. ಎಲೈ ಮಹಾರಾಜನೇ, ಕೇಳು : ಮೂವತ್ತಾರು ಪಟ್ಟಣಗಳ ಜನರೊಡನೆ ಸೇರಿ ಆ ಸಾಮವೇದಿ ಪ್ರಭುವು ಆಗ ಶಿವನ ಕೈಲಾಸ ಪಟ್ಟಣಕ್ಕೆ ಹೋದನು. ಆದ ಕಾರಣ ಶಿವಭಕ್ತರ ಸಮಾನಕ್ಕೆ ದ್ವಿಜರು ಬರುವರೇ ? [ಶಿವಭಕ್ತರಿಗೆ ದ್ವಿಜರು ಸಮಾನರೇ ಎಂದು ಭಾವ] **ಉದ್ಭಟಯ್ಯನ ಕಥೆ** ೩೨. (ಮಹಾರಾಜಾ), ಇನ್ನೂ ಕೇಳು : ಭೋಜ ಭೂಪಾಲನು ಸಂಭ್ರಮದಿಂದ ಆಳುತ್ತಿದ್ದ 'ವಲ್ಲಕಿ' ಎಂಬ ಪಟ್ಟಣದಲ್ಲಿ ಸದ್ಗುಣಗಳೇ ಶೀಲವಾಗಿ ಉಳ್ಳ, ವಿದ್ಯಾ ಸಂಪನ್ನನಾದ, ಉದ್ಭಟ ದೇವನೆಂಬ ಶರಣನು ಶ್ರೇಷ್ಠವಾದ ಲೀಲೆಯಿಂದ ಶೋಭಿಸುತ್ತಿರುವನು. ೩೩–೩೪. ಆ ನೃಪಾಲನಾದ ಭೋಜನಿಗೆ ಶಿವದೀಕ್ಷೆಯನ್ನುಕೊಟ್ಟು, ಶಿವತತ್ವಗಳನ್ನು ತಿಳಿಸುತ್ತ, ಅವನಿಗೆ ಗುರುವಾಗಿ, ಆ ಮಹಾಶಿವಯೋಗಿಯು ರಾಜನಿಂದ ಮಾಡಲ್ಪಟ್ಟ ಪೂಜೋತ್ಸವಾದಿಗಳನ್ನು ಸ್ವೀಕರಿಸುತ್ತ, ವೇದ, ಶಾಸ್ತ್ರ, ಆಗಮಸಮ್ಮತವಾಗಿ ವಾದ

ವಾದಂಗೆಯ್ದುನ್ಮದ ಪರ
ವಾದಿಗಳಂ ಗೆಲ್ದು ಜಸಮನಾಳ್ದಿರುತುಂ ಸ
ವ್ಮೋಹದೆ ಪಸೆನೀದಂ ಮಹಿ
ಮೋದಧಿ ಜೊಮ್ಮಬ್ಬೆಯೆಂಬ ಕಾಂತಾಮಣಿಯೊಳ್ ೩೪

ವ॥ ಅಂತು ಪರಮ ಶಿವಭಕ್ತೆಯಾದ [1]ಗಾನ[1]ವಿದ್ಯಾವಿಶಾರದೆಯೆನಿಪ ಜೊಮ್ಮಬ್ಬೆಯುಂ ವಿವಾಹವಾಗಿ ಬೆರಸಿರ್ಪಿನಮಾದಂ ಕಂಡು ಪೌರಜನಮಚ್ಚರಿವಡೆ ಪರಸಮಯಿಗಳರಸನೆಡೆಗೇಳ್ತಂದು ಸಂದಣಿಸಿ ನಿಂದು—

ಎಲೆ ನರಪಾಲ ನಿನ್ನ ಗುರುವೆಂದೆನಿಪುದ್ಭಟದೇವನಜ್ಞನ
ಲ್ಲಲಘು ಕಲಾವಿದಂ ಪಿರಿಯನಗ್ರಜನಂತ್ಯಜೆಯಾದ ಕಾಂತೆಯೊ
ಳ್ನಲಿದೊಡಗೂಡಿ ತನ್ನ ಕುಲಧರ್ಮವನಿರ್ಕಡಿಗೆಯ್ದನದ್ಭುತಂ
ಸಲೆ ಮರುಳಾದನೆಂದು ಪಿಸುಣಾಡಿದರಾದ್ವಿಜರಾನರೇಂದ್ರನೊಳ್ ೩೫

ವ॥ ಆ ಮಾತನರಸನೇಳಿದಂಗೇಳ್ದೆಂದಿನಂತೆ ನಿಜಗುರುವಂ ಭಕ್ತಿಭಾವದಿಂ ಸೇವಿಸುತ್ತುಮಿರೆ ಪಿಶುನರೆಲ್ಲಂ ನಾಣ್ಚಿ ಸರಿಯೆ ಕೆಲವಾನುಂ ದಿವಸಂ ಕಳಿಯೆ—

ನಿಜಭಟನಾದುದ್ಭಟನಂ
ತ್ಯಜೆಯೊಡಗೂಡಿರ್ದನೆಂಬರಂ ನಾಣ್ಚಿಸಲಂ

ಮಾಡಿ ಗರ್ವಿಷ್ಠರಾದ ಪರವಾದಿ ಜನಗಳನ್ನು ಗೆದ್ದು, ಯಶಸ್ಸನ್ನು ಸಂಪಾದಿಸಿ ಇರುತ್ತಿರಲು, ವಿಶೇಷಮೋಹದಿಂದ ಆ ಮಹಿಮಾ ಸಮುದ್ರನಾದ ಉದ್ಭಟ ದೇವನ 'ಜೊಮ್ಮಬ್ಬೆ' ಎಂಬ ಸ್ತ್ರೀರತ್ನದೊಡನೆ ವಿವಾಹವಾದನು. ವ॥ ಆ ರೀತಿ ಪರಮ ಶಿವಭಕ್ತೆಯೆನಿಸಿದ, ಗಾನವಿದ್ಯಾವಿಶಾರದೆಯೆನಿಸಿದ ಜೊಮ್ಮಬ್ಬೆಯನ್ನು ಲಗ್ನವಾಗಿ, ಕೂಡಿ ಇರುತ್ತಿರಲು, ಅದನ್ನು ಕಂಡು ಪಟ್ಟಣದ ಜನರು ಆಶ್ಚರ್ಯ ಪಡುವಂತೆ ಪರಸಮಯದವರು ಅರಸನ ಹತ್ತಿರಕ್ಕೆ ಬಂದು ಗುಂಪಾಗಿ ಸೇರಿ ನಿಂತು ೩೫. ಎಲೈ ನರಪಾಲನೇ, ನಿನ್ನ ಗುರುದೇವನೆನಿಸಿದ ಉದ್ಭಟದೇವನು ಅಜ್ಞನಲ್ಲ; ವಿಶೇಷವಾದ ವಿದ್ಯಾ ಸಂಪನ್ನನು; ಹಿರಿಯನು; ಬ್ರಾಹ್ಮಣಕುಲದಲ್ಲಿ ಹುಟ್ಟಿದವನು (ಆದರೆ) ಅಂತ್ಯಜೆಯೆನಿಸಿದ ಕಾಂತೆಯೊಡನೆ ಒಲಿದು ಒಡಗೂಡಿ, ಅದ್ಭುತವೆನ್ನುವಂತೆ ತನ್ನ ಕುಲಧರ್ಮವನ್ನೆ ತುಂಡುಮಾಡಿದನು (ಛೇದಿಸಿಬಿಟ್ಟನು). ಚೆನ್ನಾಗಿ ಹುಚ್ಚನೇ ಆಗಿ ಹೋದನು. ಹೀಗೆಂದು ಆ ದ್ವಿಜರುಗಳು ಮಹಾರಾಜನಲ್ಲಿ ಚಾಡಿಯ ಮಾತನ್ನಾಡಿದರು. ವ॥ ಆ ಮಾತನ್ನು ಅರಸನು ತಿರಸ್ಕರಿಸಿ, ಎಂದಿನಂತೆ ತನ್ನ ಗುರುವನ್ನು ಭಕ್ತಿಭಾವದಿಂದ ಸೇವಿಸುತ್ತಿರಲು, ಚಾಡಿಯವರೆಲ್ಲ ನಾಚಿ ದೂರವಾಗಲು ಕೆಲವಾರುದಿನಗಳು ಕಳೆದ ಮೇಲೆ ೩೬. ತನ್ನ ಭೃತ್ಯನಾದ ಉದ್ಭಟದೇವನು ಅಂತ್ಯಜೆಯೊಡನೆ ಕೂಡಿ ಕೊಂಡಿದ್ದಾನೆಂಬುವವರನ್ನು ನಾಚಿಗೆ

1 ನಾನಾ(ಮು)

ಗಜರಿಪು ತನಮಹಿಮೆಯನೆ
ಯ್ದೆ ಜಗಕ್ಕಱಿಪಲ್ಕೆ ನೆನೆದು ಬರಿಸಿದನವನಂ ೩೬

ವ॥ ಅಂತು ಶಿವಂ ನಿಜಲೋಕಕ್ಕೆ ತಱಿಸಂದುದ್ಭಟನಂ ಬರಿಸೆ ತತ್ಕಳೇವರಮನಾಪ್ತರೊಯ್ದೊಂದು ವಟವಿಟಪಿಯ ಕೆಳಗೆ ಸುಡಲೊಡನೆ—

ಮಂಗಳಮಯನಂಗದ ಪೊಗೆ
ಪಿಂಗದೆ ತನುಸೋಂಕೆ ತದ್ವಟಸ್ಥಿತ ಬಹುಭೂ
ತಂಗಳ್ಕೈಲಾಸಕ್ಕೆ ಕ
ಡಂಗುತ್ತುಂ ಪೋದುವಿತ್ತಲುಳಿದೊಂದು ಮರುಳ್ ೩೭

ನಡೆನೋಡುತ್ತೆ ವಟಾವನೀರುಹಮನಾ ಭೂತಂಗಳಂ ಕಾಣದಿ
ಟ್ಟೆಡೆಯೊಳ್ಸಿಲ್ಕಿದ ದಂತಿಯಂತೆ ಪಿರಿದುಂ ಘೀಳಿಟ್ಟು ಧಾತ್ರೀತಳಂ
ಬಿಡದಲ್ಲಾಡೆ ಗಜಾಶ್ವರಾಜಿ ಪೆಳರ್ದೆತ್ತಂ ಹಮ್ಮದಂಬೋಗೆ ಘೋ
ಳಿಡುತುಂ ಪೆರ್ದನಿ ಮೀಱೆ ನಿಂದಳೆ ನೃಪಾಲಂ ಕೇಳ್ದನಾ ಘೋಷಮಂ ೩೮

ವ॥ ಅಂತು ಕೇಳ್ದೀಯದ್ಭುತ ರೋದನಮನಾನೆ ಪರೀಕ್ಷಿಪೆನೆಂದಾಸ್ಥಾನದಿನೆಳ್ದು ಸಮಸ್ತ ಸಾಮಂತಮಂತ್ರಿಮಂಡಳಿಕದಂಡನಾಥರ್ವೆರಸು ಪೊಳಲ ಪೊಱವಳಯದ ವಟಭೂರುಹದ ಬಳಿಗೇಳ್ತಂದು ಭೋಜರಾಜಂ ನಿಂದು ನೋಳ್ಪಿನಮಲ್ಲಿ —

ಗೊಳಿಸಲು ಪರಮೇಶ್ವರನು ಆತನ ಮಹಿಮೆಯನ್ನು ಜಗತ್ತಿಗೆ ತೋರಿಸಿಕೊಡಬೇಕೆಂದು ಇಚ್ಛಿಸಿ, ಅವನನ್ನು (ತನ್ನಲ್ಲಿಗೆ) ಬರಮಾಡಿಕೊಂಡನು. ವ॥ ಆ ರೀತಿ ಶಿವನು ತನ್ನ ಲೋಕಕ್ಕೆ ನಿಶ್ಚಯಿಸಿ ಉದ್ಭಟ ದೇವನನ್ನು ಬರಮಾಡಿಕೊಳ್ಳಲು, (ಇತ್ತ ಭೂಲೋಕದಲ್ಲಿ) ಅವನ ಹೆಣವನ್ನು ಆಪ್ತ ಜನರು ಒಯ್ದು ಒಂದು ಆಲದ ಮರದ ಕೆಳಗೆ ಸುಡಲು ಆ ಕೂಡಲೇ ೩೭-೩೮. ಮಂಗಳಮಯನಾದ ಉದ್ಭಟ ದೇವನ (ಸುಡುತ್ತಿರುವ) ದೇಹದ ಹೊಗೆ ಚೆನ್ನಾಗಿ ಆ ವೃಕ್ಷದಲ್ಲಿರುವ ಅನೇಕ ಭೂತಗಳ ದೇಹವನ್ನು ಸೋಂಕಲಾಗಿ ಅವು ಉತ್ಸಾಹಗೊಂಡು ಕೈಲಾಸಕ್ಕೆ ಹೋದವು. ಇಲ್ಲಿಯೇ ಉಳಿದ ಒಂದು ಭೂತವು ವಟವೃಕ್ಷವನ್ನು ದಿಟ್ಟಿಸಿ ನೋಡುತ್ತ ಭೂತಗಳನ್ನು ಕಾಣದೆ ಇಕ್ಕಟ್ಟಿನಲ್ಲಿ ಸಿಕ್ಕಿದ ಆನೆಯ ಹಾಗೆ ಅಧಿಕವಾಗಿ ಘೀಳಿಟ್ಟು (ಕೂಗಿಕೊಂಡು) ಭೂತಳವೇ ಅಲ್ಲಾಡುವಂತೆ, ಕುದುರೆಗಳ ಸಮೂಹವು ಹೆದರಿ ಎಲ್ಲ ಕಡೆಗೂ ಮೂರ್ಛೆಗೊಂಡು ಬೀಳುವಂತೆ ಘೊಳೋ ಎಂದು ದೊಡ್ಡ ದನಿಯೆತ್ತಿ ನಿಂತು ಅಳಲು ಅರಸನಾದ ಭೋಜರಾಜನು ಆ ಧ್ವನಿಯನ್ನು ಕೇಳಿದನು. ವ॥ ಹಾಗೆ ಕೇಳಿ ಈ ಅದ್ಭುತವಾದ ಅಳುವನ್ನು ನಾನೇ ಪರೀಕ್ಷಿಸುತ್ತೇನೆಂದು ಆಸ್ಥಾನದಿಂದ ಎದ್ದು, ಸಮಸ್ತ ಸಾಮಂತ ಮಂತ್ರಿಮಂಡಳಿಕ ದಂಡನಾಯಕರೊಡನೆ ಸೇರಿ ಪಟ್ಟಣದ ಹೊರಭಾಗದಲ್ಲಿರುವ ವಟ (ಆಲ)ವೃಕ್ಷದ ಬಳಿಗೆ

ಕಡು ನಿಡಿದಾದ ಕಾರೊಡಲ ಕೇಸುರಿದೊಂಗಲ ಪೋಲ್ವ ಕೇಶದೊ
ಳ್ಗಿಡಿ ಸುರಿತರ್ಪ ಕೆಂಡದವೊಲೊಪ್ಪುವ ಕಂಗಳ ನೀಳ್ದು ಬಾಗಿ ಮುಂ
ಗಡೆಗುಜ್ಜುಗಿರ್ಪ ಪಲ್ಗಳ ಮಹಾಗುಹೆಯಂದದ ಬಾಯ ಬತ್ತಿ ಬೆಂ
ಗಡರ್ದ ನರಂ ಪಗಿಲ್ತುಬ್ಬುಜಿತೋದರವಾಸುರವಾಗೆ ನಿಂದುದಂ ೩೯

ಗುಡುಗುಡನೆ ಸುರಿಯೆ ಕಣ್ಬನಿ
ನಿಡುದನಿಯಿಂದಳ್ವ ಭೂತವಂ ಕಂಡರಸಂ
ಕಡು ಚೋದ್ಯಮನಾಳ್ದಾಗ
ಳ್ನುಡಿಯಿಸಿದಂ ನೀನಿದೇಕೆ ಪಳಯಿಪೆಯೆನುತುಂ ೪೦

ವ॥ ಎನೆ ಪಿಶಾಚಮರಸನಿದಿರ್ಗೆವಂದು —

ಎಲೆ ನೃಪತಿ ಕೇಳ್ವುದೊಂದು
ಜ್ವಲ ಕಥೆಯಂ ಕೇಳ್ದು ಮುಂದೆ ನೀನೆಸಗೆ ನಿರ
ರ್ಗಲ ಪರಹಿತಮಂ ನಿನಗ
ತ್ಯಲಘುತರಂ ಪದವಿ ಸಾರ್ಗುಮೆಂತೆನೆ ಪೇಳ್ವೆಂ ೪೧

ವಿಲಸತ್ಕೈಲಾಸಭೂಭೃತ್ಕಟಕದೊಳೆಸೆಗುಂ ಸಾರಮಂದ್ರೋದಮೆಂಬು
ಜ್ವಲ ಕಾಸಾರಂ ತದಬ್ಜಾಕರದ ತಟದೊಳಿರ್ಪಂ ತಪಂಗೆಯ್ವುತುಂ ನಿ

ಬಂದು ಭೋಜರಾಜನು ನಿಂತು ನೋಡುತ್ತಿರಲು ಅಲ್ಲಿ ೩೯–೪೦. ಅತಿ ದೊಡ್ಡದಾದ (ಉದ್ದವಾದ) ಕರಿಯ ಹೊಟ್ಟೆಯ, ಕೆಂಪಾದ ಉರಿಯ ಜ್ವಾಲೆಯ ಸಮೂಹವನ್ನು ಹೋಲುವ ಕೂದಲು, ಒಳ್ಳೆಯ ಕಿಡಿಗಳನ್ನು ಸುರಿಸುತ್ತಿರುವ ಕೆಂಡದ ಹಾಗೆ ಶೋಭಿಸುವ ಕಣ್ಣುಗಳ, ಉದ್ದವಾಗಿ ಬಾಗಿ ಮುಂಭಾಗಕ್ಕೆ ಹಾಯ್ದಿರುವ ಹಲ್ಲುಗಳ, ದೊಡ್ಡ ಗುಹೆಯಂತಿರುವ ಬಾಯಿಯ, ಬತ್ತಿ ಬೆನ್ನಿಗೆ ಹತ್ತಿ, ನರಗಳು ಹಬ್ಬಿರುವ ಹೊಟ್ಟೆಯನ್ನು ಹೊಂದಿ, ಭಯಂಕರವಾಗಿ ನಿಂತಿರುವ ಗಳಗಳನೆ ಕಣ್ಣೀರು ಸುರಿಯುತ್ತಿರುವ, ದೊಡ್ಡ ದನಿಯಿಂದ ಅಳುವ ಭೂತವನ್ನು ಅರಸನು ಕಂಡು ಅತ್ಯಂತಾಶ್ಚರ್ಯಗೊಂಡನು. ಆಗ (ಅವನು) ನೀನು ಅದೇಕೆ ಅಳುತ್ತಿದ್ದೀಯೆ ? ಎನ್ನುತ್ತ ಮಾತನಾಡಿಸಿದನು. ವ॥ ಹೀಗೆ ನುಡಿಸಲು ಅರಸನೆದುರಿಗೆ ಆ ಪಿಶಾಚಿಯು ಬಂದು ೪೧. ಎಲೈ ಅರಸನೇ, ಒಂದು ಉಜ್ವಲವಾದ ಕಥೆಯನ್ನು ಕೇಳೋಣವಾಗಲಿ; ಅದನ್ನು ಕೇಳಿ ಮುಂದೆ ನೀನು ನಿರರ್ಗಳ (ತಡೆಯಿಲ್ಲದ) ಪರಹಿತವನ್ನು ಮಾಡಿದರೆ, ಅತ್ಯಂತ ಘನವಾದ ಪದವಿಯು ನಿನಗೆ ಲಭ್ಯವಾಗುವುದು. ಅದು ಹೇಗೆಂದರೆ ; ಹೇಳುತ್ತೇನೆ : ೪೨ ಪ್ರಕಾಶಿಸುವ ಕೈಲಾಸಪರ್ವತದ ತಪ್ಪಲು ಪ್ರದೇಶದಲ್ಲಿ 'ಸಾರಮಂದ್ರೋದ' ಎಂಬ ಪ್ರಕಾಶಮಾನವಾದ ಸರೋವರವು ಶೋಭಿಸುತ್ತಿದೆ. ಆ ಸರೋವರದ ದಂಡೆಯಲ್ಲಿ ತಪಸ್ಸನ್ನು ಮಾಡುತ್ತ ಪರಿಶುದ್ಧನಾದ ಮಾರ್ಕಂಡೇಯನೆಂಬ ಮುನಿ ಇದ್ದಾನೆ. ಆ ಸರೋವರಕ್ಕೆ

ರ್ಮಲ ಮಾರ್ಕಂಡೇಯನೆಂಬಂ ಮುನಿಯುದಱೊಳೆ ಗಂಧರ್ವರೇಳ್ತಂದು ತಾರಾ
ಚಲನಾಥಾಸ್ಥಾನದಿಂದುಟ್ಟುದನೆ ಕಳೆದು ಪೊಕ್ಕಲ್ಲಿ[ಯೊ][1]ಸಾಡುತಿರ್ದರ್ ೪೨

ವ॥ ಅಂತು ಜಲಕೇಳಿಯುಂ ತೀರ್ಚೆ—

ಪರಿಮಳಿಸುವ ಕೆಂದಾವರೆ
ಯರಲನವರ್ಮುಱಿಯೆ ಕಂಡು ಮುನಿ ಮುನಿದರುಣ
ಸ್ಫುರಿತೇಕ್ಷಣದಿಂ ನಗ್ನಾಂ
ಗರನಾ ಗಂಧರ್ವರು ಸಮಂತೀಕ್ಷಿಸಿದಂ ೪೩

ವ॥ ಅಂತು ಕಾಯ್ದೀಕ್ಷಿಸಿ ಸಪ್ತಶತಸಂಖ್ಯಾಕರಂ ಜಡಿದು ಝಂಕಿಸಿ ನುಡಿದು—

ಸತತ ಶಿವಸ್ನಾನೋಚಿತ
ನುತ ಜಲಮಂ ಕದಡಿ ಶಂಭುಪೂಜೋಚಿತಮಂ
ಶತದಳಮಂ ಪಱಿದುದಱಿಂ
ಕ್ಷಿತಿಯಲ್ಲಿ ಪಿಶಾಚರಾಗಿಮೆಂದಂ ಮುನಿಪಂ ೪೪

ಎನೆ ಕೇಳ್ದು ಪೆಳರ್ದು ತತ್ಪದ
ವನರುಹದೊಳ್ಕೆಡೆದು ಜವದೆ ಶಾಪವಿಮೋಕ್ಷಂ
ಜನಿಯಿಪುದಂ ದಯೆಯಿಂದೆಲೆ
ಮುನೀಂದ್ರ ಬೆಸಸೆಂದು ಬೇಡಿಕೊಂಡರ್ಮುನಿಯಂ ೪೫

ಕೈಲಾಸನಾಥನಾದ ಶಿವನ ಆಸ್ಥಾನದಿಂದ ಗಂಧರ್ವರು ಬಂದು ಉಟ್ಟುದನ್ನೆಲ್ಲ ಕಳೆದು ಈಸಾಡುತ್ತಿದ್ದಾರೆ. ವ॥ ಅವರು ಆ ರೀತಿ ಜಲಕ್ರೀಡೆಯನ್ನು ಮುಗಿಸಿ ೪೩. ಪರಿಮಳದಿಂದ ಕೂಡಿದ ಕೆಂದಾವರೆಯ ಹೂವನ್ನು ಮುರಿಯಲಾಗಿ ಆ ಮುನಿಯು (ಅದನ್ನು) ಕಂಡು ಕೋಪಗೊಂಡು ಪ್ರಕಾಶಿಸುವ ಕೆಂಪಾದ ಕಣ್ಣುಗಳಿಂದ ಬರಿ ಬತ್ತಲೆಯ ಶರೀರದ ಆ ಗಂಧರ್ವನನ್ನು ಚೆನ್ನಾಗಿ ನೋಡಿದನು. ವ॥ ಆ ರೀತಿ ಕೋಪದಿಂದ ಏಳು ನೂರು ಸಂಖ್ಯೆಯ ಅವರನ್ನು (ಆ ಗಂಧರ್ವರನ್ನು) ನೋಡಿ ಭಯಪಡಿಸಿ ಗದರಿಸಿ ನುಡಿದು ೪೪. ಸತತವೂ ಶಿವನ ಸ್ನಾನಕ್ಕೆ ಉಚಿತವಾದ ಶ್ಲಾಘ್ಯ ಜಲವನ್ನು ಕದಡಿ, ಶಂಭುವಿನ ಪೂಜೆಗೆ ಯೋಗ್ಯವಾದ ಕಮಲವನ್ನು ಹರಿದುದರಿಂದ (ಕಿತ್ತುದರಿಂದ) ಭೂಮಿಯಲ್ಲಿ ಪಿಶಾಚಿಗಳಾಗಿ ಹುಟ್ಟಿರೆಂದು ಆ ಮುನಿಯು ಅಂದನು (ಶಾಪವಿತ್ತನು) ೪೫. ಹೀಗೆನ್ನಲು ಕೇಳಿ, ಹೆದರಿ, ಅವನ ಪಾದಕಮಲಗಳಲ್ಲಿ ಬಿದ್ದು, ಶೀಘ್ರವಾಗಿ ಶಾಪ ವಿಮೋಚನೆಯುಂಟಾಗುವುದನ್ನು ಎಲೆ ಮುನೀಂದ್ರನೆ, ದಯೆಯಿಂದ ಅಪ್ಪಣೆ ಮಾಡು,

1 ಣೀ(ಅ, ಗ, ಚ, ಜ, ದ, ಮು)

ವ॥ ಎನೆ ಕೇಳ್ದು—

ನಿಟಿಲಲೋಚನಭಕ್ತನುದ್ಭಟಯೋಗಿ ತತ್ವವಿಶಾರದಂ
ಕುಟಿಲವಾದಿವಿಭಂಜನಂ ಶಿವಮೂರ್ತಿ ತಾಂ ಚಿರಕಾಲಮುಂ
ನಟಿಯಿಸಿರ್ದಿಳೆಯೊಳ್ವಿಮುಕ್ತಿಯನೆಯ್ದೆ ತತ್ತನುದಾಹಸಂ
ಘಟಿತ ಧೂಮದ ಸೋಂಕಿನಿಂ ನಿಮಗಕ್ಕೆ ಶಾಪವಿಮೋಚನಂ ೪೬

ವ॥ ಎಂದು ಋಷಿ ಪೇಳ್ದನನಿತಱೊಳಾವೆಲ್ಲರುಂ ಪಿಶಾಚರೂಪಮಂ ತಾಳ್ದೀ ವಟವಿಟಪಿಯನಾಶ್ರಯಿಂಗೆಯ್ದು ಪನ್ನಿಚ್ಛಾಸಿರಬರಿಸಂಬರಮೆತ್ತಲುಂ ತೊಲಗದವನಳಿವಂ ಪಾರ್ದು ನೆಲಸಿರ್ದೆವಿಂದಿನುದಯದೊಳಾನೊರ್ವನೆ ಪಸಿವಂ ತಾಳಲಾಱದಾಹಾರಂಗೊಳಲೆಂದೆಲ್ಲರಂ ಬಿಟ್ಟು ಪೊಱಮಟ್ಟು ಪೋದೆನಾಂ ಬರ್ಪುದಱಿಂ ಮುನ್ನಮೆ—

ಪೋದರ್ಗಡ ಪುಣ್ಯಾಧಿಕ
ರಾ ದೇವನ ದೇಹದಾಹಧೂಮದ ಸೋಂಕಿಂ
ದಾದಮುಳಿದಿರ್ದೆನಾನೆ
ನ್ನೀ ದೌರ್ಭಾಗ್ಯಪ್ರಭಾವಮೆನ್ನದೊ ನೃಪತೀ ೪೭

ಒಡನಾಡಿಗಳೆಲ್ಲರ ಸಂ
ಗಡಮಿರದೀ ಪೊಳ್ತೆ ಪಸಿವಿನುರವಣೆಯಿಂ ಬೆಂ
ದೊಡಲಂ ಪೊರೆಯಲ್ಪೋದೆಂ
ಕಡೆಸಿಲ್ಕಿದೆನದಱಿನಿಂತು ಪಳಯಿಪೆನರಸಾ ೪೮

ಎಂದು ಆ ಮುನಿಯನ್ನು ಬೇಡಿಕೊಂಡರು. ವ॥ ಹೀಗೆ ಬೇಡಿಕೊಳ್ಳಲು ಕೇಳಿ ೪೬. ಅಗ್ನಿನೇತ್ರನಾದ ಶಿವನ ಭಕ್ತನೂ ಶಿವತತ್ತ್ವವನ್ನುಬಲ್ಲವನೂ, ಕುಟಿಲರಾದ ವಾದಿ ಜನಗಳನ್ನು ಮುರಿದು ಹಾಕಿದವನೂ, ಮಂಗಳಮೂರ್ತಿಯೂ ಆದ ಉದ್ಭಟದೇವನು ತಾನು ಚಿರಕಾಲದ ವರೆಗೆ ಜೀವಿಸಿದ್ದ (ವ್ಯವಹರಿಸಿದ್ದ) ಭೂಮಿಯಲ್ಲಿ ಮುಕ್ತಿಯನ್ನು ಹೊಂದಲು ಆತನ ದೇಹವನ್ನು ಸುಡುವಾಗ ಸೇರಿದ ಹೊಗೆಯ ಸೋಂಕಿನಿಂದ ನಿಮಗೆ ಶಾಪವಿಮೋಚನವಾಗುವುದು. ವ॥ ಹೀಗೆಂದು ಋಷಿಯು ಹೇಳಿದನು. ಅಷ್ಟರಲ್ಲಿ ನಾವೆಲ್ಲರೂ ಪಿಶಾಚಿಗಳ ರೂಪಧಾರಣೆಮಾಡಿ, ಈ ಆಲದ ಮರವನ್ನು ಆಶ್ರಯಮಾಡಿಕೊಂಡು, ಹನ್ನೆರಡು ಸಾವಿರ ವರ್ಷಗಳಿಂದ ಎತ್ತಲೂ ತೊಲಗದೆ ಆತನ ಸಾವನ್ನೇ ಎದುರು ನೋಡುತ್ತ ನೆಲಸಿದ್ದೆವು. ಇಂದಿನ ಉದಯಕಾಲದಲ್ಲಿ ನಾನೊಬ್ಬನೇ ಹಸಿವನ್ನು ತಾಳಲಾರದೆ ಆಹಾರವನ್ನು ಸ್ವೀಕರಿಸಲೆಂದು ಎಲ್ಲರನ್ನೂ ಬಿಟ್ಟು ಹೊರ ಹೊರಟು ಹೋದೆನು. ನಾನು ಬರುವುದಕ್ಕಿಂತ ಮೊದಲೇ ೪೭. ಮಹಾರಾಜಾ, ಆ ಉದ್ಭಟದೇವನ ದೇಹವನ್ನು ಸುಡುವುದರಿಂದುಂಟಾದ ಹೊಗೆಯ ಸೋಂಕಿನಿಂದ ಅಧಿಕ ಪುಣ್ಯಶಾಲಿಗಳಾದ ಅವರೆಲ್ಲರೂ ಹೋದರಲ್ಲವೇ ! ನಾನೊಬ್ಬನೇ ಉಳಿದಿರುವೆನು. (ಇದು) ನನ್ನ ಈ ದೌರ್ಭಾಗ್ಯದ ಫಲವು ಎಂಥದೋ ! ೪೮. ಅರಸನೇ, ಒಡನಾಡಿಗಳೆಲ್ಲರ ಸಂಗಡಲೇ ಇರದೆ ಈ ದಿವಸವೇ ಹಸಿವಿನ ಹೆಚ್ಚಳದಿಂದ ಬೆಂದು ಹೋದ ಹೊಟ್ಟೆಯನ್ನು ಹೊರೆಯಲು ಹೋದೆನು (ನಾನೊಬ್ಬನೇ) ಕೊನೆಗೆ ಉಳಿದೆನು ಆದ ಕಾರಣ

ಅರೆಬೆಂದ ಕೊಳ್ಳಿಗಳುಮಂ
ಪರೆದಿರ್ದ ತದಸ್ಥಿಶಕಲಮುಮನೊಡನಿಟ್ಟೊ
ಲ್ದುರಿವೊತ್ತಿಸೆನ್ನಮೇಲಣ
ಕರುಣದಿನೆಲೆ ನೃಪತಿ ಪೋಪೆನಾಂ ಪೊಗೆಯಿಂದಂ ೪೯

ಕುಱುಪಾವುದು ನೀಂ ಪೋಪುದ
ಕಱುಪಿಂದೆಮಗೆಂಬೆಯಪ್ಪೊಡೀ ವಟತರುವಂ
ನೆಱೆ ಕಿಳ್ತು ಬೇರ್ವೆರಸಿ ನೆಲ
ನಱಿವುತ್ತಿರೆ ರಜತಗಿರಿಗೆ ಕೊಂಡಾಂ ಪೋಪೆಂ ೫೦

ವ॥ ಎಂದ ಮರುಳ ಮಾತಂ ಮನದೆಗೊಂಡರಸನಾಶ್ಚರ್ಯಮಾನಸ[1]ನಂತೆ[1]ಗೆಯ್ವೆನೆಂದು ಕಡೆಗೊಳ್ಳಿಗಳುಮನಸ್ಥಿಶಕಲಮುಂ ಪುಂಜಿಸಿ ಚಂದನೇಂಧನಂಗಳನಾಜ್ಯದೊಳ್ನಾಂದ ದಿವ್ಯಾಂಭರಂಗಳು ಮನಮರ್ಚೆ ಚಿತಾಗ್ನಿಯುಂ ಪೊತ್ತಿಸೆ ಪೊಗೆ ನೆಗೆದು ನಿಜಾಂಗಮುಂ ಸೋಂಕಲೊಡನೆ—

ತೊಳಪ ಕಿರೀಟಮುಜ್ವಳ ಲಸನ್ಮಣಿಕುಂಡಲಮುಟ್ಟ ದಿವ್ಯಮುಂ
ಜುಳಮಸನಂ ಮನೋಜ್ಞತರಹಾರಮುದಂಚಿತ ರತ್ನಕಂಕಣಂ
ಪೊಳೆವ ಮುಖೇಂದುಮಂದಹಸನಂ ನಿಡುಗಣ್ಮಲರೊಪ್ಪೆ ಮೆಯ್ಯ ನು
ಣ್ಬೆಳಗೆಳೆಮಿಂಚನೇಳಿಸೆ ಪಿಶಾಚತೆ ಪಿಂಗಿದನೊಪ್ಪಿ ತೋಱಿದಂ ೫೧

ದಿಂದ ಪ್ರಳಾಪಿಸುತ್ತಿದ್ದೇನೆ. ೪೯. ಎಲೈ ಮಹಾರಾಜ, ಅರೆಬೆಂದ ಕೊಳ್ಳಿಗಳನ್ನೂ, ಹರಡಿಕೊಂಡಿರುವ ಆ ಹೆಣದ ಮೂಳೆಗಳನ್ನೂ ಒಲಿದು ಕೂಡಿಸಿಹಾಕಿ, ನನ್ನ ಮೇಲಣ ಕರುಣದಿಂದ ಉರಿಯನ್ನು ಹೊತ್ತಿಸು. ಉಂಟಾದ ಹೊಗೆಯಿಂದ ನಾನೂ ಹೊರಟು ಹೋಗುತ್ತೇನೆ. ೫೦. ನೀನು ಹೋಗುವುದಕ್ಕೆ ಗುರುತೇನು ? ಅದನ್ನು ನಮಗೆ ತಿಳಿಸು ಎಂದು ನೀನು ಅನ್ನುವೆ ಯಾದರೆ, ಈ ಆಲದ ಗಿಡವನ್ನು ಬೇರು ಸಹಿತವಾಗಿ ಕಿತ್ತು, ಲೋಕವೆಲ್ಲ ತಿಳಿಯುವಂತೆ ನಾನು ಕೈಲಾಸಗಿರಿಗೆ ಹೋಗುತ್ತೇನೆ. ವ॥ ಹೀಗೆಂದ ಭೂತದ ಮಾತನ್ನು ಮನಸ್ಸಿಗೆ ತೆಗೆದುಕೊಂಡ ಅರಸನು ಆಶ್ಚರ್ಯ ಚಿತ್ತನಾಗಿ (ಹಾಗಾದರೆ) ಹಾಗೇ ಮಾಡುತ್ತೇನೆಂದು ಅರ್ಧಸುಟ್ಟುಳಿದ ಕೊಳ್ಳಿಗಳನ್ನೂ ಎಲುವಿನ ತುಂಡುಗಳನ್ನೂ ರಾಶಿಮಾಡಿ, ಚಂದನದ ಕಟ್ಟಿಗೆಗಳನ್ನು ತುಪ್ಪದಲ್ಲಿ ಅದ್ದಿದ ಬಟ್ಟೆ ಗಳಿಂದ ಸುತ್ತಿ, ಚಿತಾಗ್ನಿಯನ್ನು (ಹೆಣವನ್ನು ಸುಡುವ ಬೆಂಕಿ) ಹೊತ್ತಿಸಲಾಗಿ ಹೊಗೆ ಯೆದ್ದು ಆ ಭೂತದ ದೇಹವನ್ನು ಸೋಂಕಿದ ಕೂಡಲೇ ೫೧. ಪ್ರಕಾಶಿಸುವ ಕಿರೀಟ, ಉಜ್ವಲವಾಗಿ ಪ್ರಕಾಶಿಸುವ ರತ್ನಖಚಿತವಾದ ಕುಂಡಲಗಳು (ಕರ್ಣಾ ಭರಣಗಳು) ದಿವ್ಯವೂ ಮನೋಹರವೂ ಆದ ವಸ್ತ್ರ, ಚಿತ್ತಾಕರ್ಷಕವಾದ ಹಾರ, ಶ್ರೇಷ್ಠ ರತ್ನಖಚಿತ ಮುಂಗೈಬಳೆ, ಹೊಳೆಯುತ್ತಿರುವ ಮುಖಚಂದ್ರ, ಮುಗುಳು ನಗೆ, ಉದ್ದವಾದ ಕಣ್ಣುಗಳು, ಇವೆಲ್ಲ ಶೋಭಿಸುತ್ತಿರಲು, ದೇಹದ ನುಣ್ಣನೆಯ ಹೊಳಪು ಎಳೆ ಮಿಂಚನ್ನು ತಿರಸ್ಕರಿಸುವಂತಿರಲು, ಪಿಶಾಚತೆ ತೊಲಗಿ (ಗಂಧರ್ವ

1 ನಾಗಿಯುಂತೆ(ಚ)

ವ॥ ಆಗಳ್—

ಅರಸಂ ಬೇಗದೆ ಮಂತ್ರಿಮಂಡಳಿಕ ಸಾಮಂತಾಪ್ತಪುತ್ರಾಂಗನೋ
ತ್ಕರಯುಕ್ತಂ ಪದೆದೇಱುತಂ ಛಟಛಟಪ್ರಧ್ವಾನಮಿಂಬಾಗೆ ಬೇ
ರ್ವೆರಸುತ್ತುಂ ಸುರನೊತ್ತಿ ಕಿಳ್ತು ಮಟಮುಂ ತತ್ಸಂಯುತಂ ಭೂಮಿಗ
ಚ್ಚರಿಯುಪ್ಪಂತಿರುಘೋರವಂಗುಡುತೆ ಪೊಕ್ಕಂ ಬಂದು ಕೈಲಾಸಮಂ ೫೨

ವ॥ ಇನ್ನುಂ ಪೇಳ್ವೆನದೆಂತೆನೆ—

ಸಾವಿಂದಮೆಂಬ ಪೊಳಲೊ
ಳ್ಭಾವಜಹರಭಕ್ತೆ ಚೆನ್ನಯಾನ್ವಯಭವೆ ಕು
ಷ್ಠಾವೇಷ್ಟಿತತನು ಗುಡ್ಡಾ
ದೇವಿಯೆನಿಪ್ಪೊರ್ವಳಿರ್ಪಳೆಲೆ ಮನುಜೇಂದ್ರಾ ೫೩

ವ॥ ಆ ಪೊಳಲ ಪಾರ್ವಪುರವೀಥಿಯೊಳ್ಬರ್ಪ ವಿಶೀರ್ಣನಾಸಾಕರಚರಣನಖಾಗ್ರವಣಾವೃತಶರೀರಿಣಿಯಪ್ಪ ಗುಡ್ಡಾಂಬೆಯುಂ ಕಂಡು ಮೆಯ್ಗೆಟ್ಟಂತ್ಯಜೆಯಾದ ನಿನ್ನಂ ನೋಳ್ಪುದೆಮಗತ್ಯಂತಾನುಚಿತಮೀಗಳೆ ಪೊಱಮಡೆಂದಾ ಪೊಳಲಂ ಪೊಱಮಡಿಸೆ ದೃಢವ್ರತಭಕ್ತೆ ಧೃತಿಗೆಡದಾ ನಗರಮನುಳಿದು ಮನ್ನಾಥನಪ್ಪ ಸೌರಾಷ್ಟ್ರಪತಿಯಿಂ ಸಾರತೇಜೋಮಯಶರೀರಂಬಡೆದಪೆನೆಂದು ತಱಿಸಂದು ತತ್ಪುರಾಭಿಮುಖಿಯಾಗಿ—

ರೂಪದಿಂದ) ಅವನು ಮನೋಹರವಾಗಿ ಕಂಡನು. ವ॥ ಆಗ ೫೨. ಅರಸನು ಶೀಘ್ರವಾಗಿ ಮಂತ್ರಿಗಳು, ಮಾಂಡಳಿಕರು, ಸಾಮಂತ ರಾಜರು, ಆಪ್ತರು ಪುತ್ರ, ಹೆಂಡತಿಯರೇ ಮೊದಲಾದ ಸಮೂಹದೊಡನೆ ಸಂತೋಷದಿಂದ ಮರವನ್ನೇರಿದನು. ಛಟ ಛಟ ಎಂಬ ಧ್ವನಿ ವಿಶೇಷವುಂಟಾಗಲಾಗಿ, ಬೇರು ಸಮೇತವಾಗಿ ಆ ಗಂಧರ್ವನು ಮರವನ್ನು ಕಿತ್ತನು. ಅವರೆಲ್ಲರೊಡನೆ ಭೂಲೋಕಕ್ಕೆಲ್ಲ ಆಶ್ಚರ್ಯವನ್ನುಂಟು ಮಾಡುತ್ತ ಉಘೇ ಉಘೇ ಎಂಬ ಧ್ವನಿಯನ್ನು ಮಾಡುತ್ತ ಹೊರಟು ಬಂದು ಕೈಲಾಸವನ್ನು ಹೊಕ್ಕನು. ವ॥ ಇನ್ನೂ ಹೇಳುವೆನು-ಅದೆಂತೆಂದರೆ ಗುಡ್ಡಾದೇವಿಯ ಕಥೆ ೫೩. ಎಲೈನರೇಂದ್ರನೇ, ಸಾವಿಂದವೆಂಬ ಪಟ್ಟಣದಲ್ಲಿ ಈಶ್ವರ ಭಕ್ತೆಯೂ, ಚೆನ್ನಯ್ಯನ ವಂಶದಲ್ಲಿ ಹುಟ್ಟಿದವಳೂ, ಕುಷ್ಠರೋಗದಿಂದ ವ್ಯಾಪ್ತವಾದ ತನುವುಳ್ಳವಳೂ ಆದ, 'ಗುಡ್ಡಾದೇವಿ' ಎಂಬುವವಳೊಬ್ಬಳಿದ್ದಳು. ವ॥ ಆ ಪಟ್ಟಣದ ಬ್ರಾಹ್ಮಣರು, ಬೀದಿಯಲ್ಲಿ ಬರುತ್ತಿದ್ದ (ಕುಷ್ಠರೋಗ ಕಾರಣದಿಂದ) ಶಿಥಿಲವಾದ ಮೂಗು, ಕೈಕಾಲು, ಉಗುರುತುದಿಗಳಲ್ಲಿರುವ ಹುಣ್ಣುಗಳಿಂದ ಕೂಡಿದ ಶರೀರವುಳ್ಳ ಆ ಗುಡ್ಡಾದೇವಿಯನ್ನು ಕಂಡು, ಮೆಯ್ಗೆಟ್ಟು ಹೋದ ಶ್ವಪಚಿಯಾದ ನಿನ್ನನ್ನು ನೋಡುವುದು ನಮಗೆ ಅತ್ಯಂತ ಅನುಚಿತವಾದದ್ದಾಗಿದೆ. ಈಗಲೇ ಇಲ್ಲಿಂದ ಹೊರಡು, ಎಂದು ಆ ಪಟ್ಟಣದಿಂದ ಹೊರ ಹೊರಡಿಸಲು, ದೃಢವಾದ ಶಿವವ್ರತದ ಭಕ್ತೆಯಾದ ಅವಳು ಧೈರ್ಯಗೆಡದೆ, ಆ ಪಟ್ಟಣವನ್ನು ತ್ಯಜಿಸಿ ನನ್ನ ಪ್ರಭುವಾದ ಸೌರಾಷ್ಟ್ರ ಸೋಮನಾಥನೆಂಬ ಒಡೆಯನಿಂದ ಸಾರವತ್ತಾದ ತೇಜೋಮಯವಾದ ಶರೀರವನ್ನು ಪಡೆಯುತ್ತೇನೆಂದು, ಪ್ರತಿಜ್ಞೆಮಾಡಿ, ಆ

ನಡೆತಂದಳ್ ಧೃತಿಯಿಂದೆ ಕಾಲ್ನಡೆಯೊಳೆತ್ತಂ ಸೂಸೆ ರಕ್ತಾಂಬು ತ
ನ್ನಡಿಯಿಂ ಘಾಯಸಮನ್ವಿತಂ ಕಿಱಿದುದೂರಂ ಕಾಲ್ಗಳಾ ಮಾರ್ಗದೊ
ಳ್ಕಡಿವೋಗುತ್ತಿರೆ ಜಾನುವಿಂ ತಳರ್ದಳಾ ಜಾನುದ್ವಯಂ ಬೀಳೆ ಕೀ
ಲುಡಿದಾಗಳ್ಪೊರಳುತ್ತೆ ನೆತ್ತರುಗೆ ಮೆಯ್ಯಿಂ ಭಕ್ತೆಯುದ್ವೇಗದಿಂ ೫೪

ಬರುತಿರ್ದಳಲ್ಲಿ ನಿರುಪಮ
ವರದಂ ಸೌರಾಷ್ಟ್ರಸೋಮನಾಥಂ ತಾನಿ
ನ್ನಿರಲಾಗದೆಂದು ಬಂದಾ
ದರದಿಂ ನಿಜರೂಪುದೋಱುತಿದಿರೊಳ್ನಿಂದಂ ೫೫

ಜೆಡೆಮುಡಿ ಶಶಿಕಳೆ ಬಾಂಬೊಳೆ
ಕಿಡಿಗಣ್ಫಣಿಭರಣಮಸಿತಕಂಠಂ ಮೆಯ್ಯೊ
ಳ್ತೊಡೆದ ಭಸಿತಂ ದ್ವಿಪಾಜಿನ
ದುಡೆ ತಿಸುಳಂ ಮಿಸುಗೆ ಮೆಱೆದನಗಸುತೆಯರಸಂ ೫೬

ವ॥ ಅಂತೆಸೆದು ಭವರೋಗವೈದ್ಯಂ ನಿಜಭಕ್ತೆಯಂ ಕರುಣಾರ್ದ್ರಕಟಾಕ್ಷದಿನೀಕ್ಷಿಪುದು ಮಾಗಳೆ ಸರ್ವಾಂಗಮನಿತುಂ ಸಂಪೂರ್ಣಮಾಗಿ ತಪ್ತಸುವರ್ಣವರ್ಣಮುಂ ತಳೆಯೆ ನಿರುಪಮ

ಪಟ್ಟಣದತ್ತ ಮುಖಮಾಡಿ ೫೪-೫೫. ಧೈರ್ಯದಿಂದ ಕಾಲುನಡಿಗೆಯಲ್ಲಿ (ಸೌರಾಷ್ಟ್ರ ಸೋಮೇಶ್ವರನತ್ತ) ಹೊರಟಳು. ಗಾಯದಿಂದ ಕೂಡಿದ ಅವಳ ಕಾಲಿನಿಂದ ರಕ್ತವು ಎಲ್ಲಕಡೆಗೂ ಹೊರಸೂಸುತ್ತಿತ್ತು. ಸ್ವಲ್ಪದೂರ ಹೋಗುವುದರೊಳಗಾಗಿ ಎರಡೂ ಕಾಲು ಗಳೂ, ಮಾರ್ಗದಲ್ಲಿ ಕತ್ತರಿಸಿಹೋಗಲಾಗಿ, ಮೊಂಡೆಗಳಿಂದಲೇ ನಡೆದಳು; ಆ ಎರಡೂ ಮೊಳಕಾಲುಗಳು ಕೀಲು ಮುರಿದು ಉದುರಿ ಹೋಗಲು, ಮೆಯ್ಯಿಂದ ನೆತ್ತರು ಸುರಿ ಯುತ್ತಿರಲು ಭಕ್ತೆಯು ಉದ್ವೇಗದಿಂದ ಉರುಳುತ್ತಲೇ ಬರತೊಡಗಿದಳು. ಅಲ್ಲಿ ಅಸ ದೃಶವರವನ್ನು ಕೊಡುವ ಸೌರಾಷ್ಟ್ರ ಸೋಮನಾಥನು ತಾನು ಇನ್ನು (ಇವಳನ್ನು ನೋಡುತ್ತ) ಇರಬಾರದೆಂದು, ಹೊರಟು ಬಂದು ಪ್ರೀತಿಯಿಂದ ತನ್ನ ರೂಪವನ್ನು ತೋರಿಸುತ್ತ ಎದುರಿಗೆ ನಿಂತನು. ೫೬. (ಹೀಗೆ ಆ) ಪಾರ್ವತೀಪತಿಯು ಜಡೆಮುಡಿ, ಚಂದ್ರಕಳೆ, ಶಿರದಲ್ಲಿನ ದೇವಗಂಗಾನದಿ, ಅಗ್ನಿನೇತ್ರ, ಆ ಹಾವುಗಳ ಆಭರಣ, ನೀಲಕಂಠ, ಮೈಯಲ್ಲಿ ಧರಿಸಿದ ಭಸ್ಮ, ಆನೆಯ ತೊಗಲಿನ ಉಡಿಗೆ, ತ್ರಿಶೂಲ ಇತ್ಯಾದಿಗಳು ಶೋಭಿ ಸುತ್ತಿರಲು ಶೋಭಿಸಿದನು. ವ॥ ಈ ರೀತಿ ಶೋಭಿಸುತ್ತ ಆ ಜನನ ಮರಣಾತ್ಮಕ ವಾದ ಸಂಸಾರವೆಂಬ ರೋಗದ ವೈದ್ಯನಂತಿರುವ ಶಿವನು ತನ್ನ ಭಕ್ತೆಯಾದ ಗುಡ್ಡಾ ದೇವಿಯನ್ನು, ಕರುಣೆಯಿಂದ ಆರ್ದ್ರಗೊಂಡ ಕಡೆಗಣ್ಣುಗಳಿಂದ ನೋಡಿದೊಡನೆಯೇ (ಅವಳು) ಸಮಸ್ತ ಅಂಗಗಳೂ ಸಂಪೂರ್ಣವಾದವಳಾಗಿ, ಕಾಯ್ದ ಬಂಗಾರದ ಬಣ್ಣ ವನ್ನು ಹೊಂದಿದಳು. ಅಸದೃಶ ಸೌಂದರ್ಯದಿಂದ ಕೂಡಿ ಶಿವನ ಪಾದಗಳಿಗೆ ನಮ

ಸೌಂದರ್ಯಮನಾಳ್ದು ತನ್ನಡಿಗೆ ಪರಮಾನಂದದಿನೆಱಗಿರ್ದ ಭಕ್ತೆಗೆ ಮೆಚ್ಚಿ ನೀಂ ವರಮಂ ಬೇಳ್ಪುದೆನೆ ಕರಾರವಿಂದಮಂ ಮುಗಿದು—

ಪರಮ ಕೃಪಾನಿಧಿ ನಿಮ್ಮಯ
ಚರಣಾಬ್ಜಮನಿಂದು ಕಂಡೆನದಱಿಂದನ್ಯಂ
ವರಮಾವುದೊ ಬೇಳ್ಪೊಡೆ ಸಲೆ
ಕರುಣಿಸು ನಿಮ್ಮಂಘ್ರಿಭಜನಮೊಂದನೆ ಮುದದಿಂ ೫೭

ವ॥ ಎನೆ ಶಿವಂ ಮೆಚ್ಚಿ ನಿಜಭಕ್ತಿಸುಖಮನಮರ್ಚಿ ಗುಡ್ಡಾದೇವಿಯಂ ಪೊರೆದು—

ಅವಳಂ ದೂಷಿಸಿದವನೀ
ದಿವಿಜರ ತನುವೆಲ್ಲ ಕುಷ್ಟಮಯಮಪ್ಪವೊಲಾ
ಭವಹರನೊಡರ್ಚಿದಂ ಭೂ
ಧವ ಜನಮಚ್ಚರಿಯನಾಳ್ವಿನಂ ವಸುಮತಿಯೊಳ್ ೫೮

ವಾರ್ತೆಯಿದು ಜಗದೊಳಿನ್ನುಂ
ವರ್ತಿಪುದೆಲೆ ನೃಪತಿ ಪರಮ ಶಿವಭಕ್ತಿಲಸ
ದ್ವರ್ತನರ ಪೂರ್ವಜಾತಿಯ
ನಾರ್ತಡೆಯದೆ ನುಡಿವರವರಘಕ್ಕೊಳಗಪ್ಪರ್ ೫೯

ಸಾಂಗಕ್ರಿಯಾಪ್ರತಿಷ್ಠಿತ
ಲಿಂಗದೊಳೆ ಶಿಲಾತ್ವಮೊಳವೆ ಪರಶಿವದೀಕ್ಷಾ

ಸ್ಕರಿಸಿದಳು. ಹೀಗೆ ತನ್ನ ಪಾದಗಳಿಗೆ ನಮಸ್ಕರಿಸಿದ ಭಕ್ತೆಗೆ ಮೆಚ್ಚಿ, (ಶಿವನು) ನೀನು ಏನಾದರೂ ವರವನ್ನು ಬೇಡುವುದು ಎಂದನು. ಆಗ ಅವಳು ತನ್ನ ಕರಕಮಲಗಳನ್ನು ಜೋಡಿಸಿ ೫೭. ಪರಮಕೃಪಾ ನಿಧಿಯೇ, ನಿನ್ನ ಚರಣ ಕಮಲವನ್ನು ಈ ದಿವಸ ನೋಡಿದೆನು. ಅದಕ್ಕಿಂತಲೂ ಬೇರೆಯದಾದ ವರವು ಬೇಡುವುದಕ್ಕೆ ಇನ್ನಾವುದಿದೆ ? ಚೆನ್ನಾಗಿ ನಿಮ್ಮ ಪಾದದ ಸ್ತೋತ್ರಮಾಡುತ್ತಿರುವುದೊಂದನ್ನೇ ಪ್ರೀತಿಯಿಂದ ಕರುಣಿಸು ವ॥ ಎನ್ನಲು ಶಿವನು ಮೆಚ್ಚಿ, ತನ್ನ ಸಂಬಂಧವಾದ ಭಕ್ತಿಸುಖವನ್ನು ಉಂಟುಮಾಡಿ, ಆ ಗುಡ್ಡಾದೇವಿಯನ್ನು ಸಂರಕ್ಷಿಸಿ—೫೮. ಎಲೈ ಬಿಜ್ಜಳ ಮಹಾರಾಜನೇ, ಭೂಲೋಕದ ಜನರೆಲ್ಲ ಆಶ್ಚರ್ಯಗೊಳ್ಳುವಂತೆ ಯಾವ ಬ್ರಾಹ್ಮಣರುಗಳು ಅವಳನ್ನು ಕುಷ್ಟರೋಗದವಳೆಂದು ದೂಷಿಸಿದ್ದರೋ ಅವರ ದೇಹವೆಲ್ಲ ಕುಷ್ಟರೋಗದಿಂದ ತುಂಬಿ ಹೋಗುವಂತೆ ಆ ಈಶ್ವರನು ಉಂಟುಮಾಡಿದನು. ೫೯. ಎಲೈ ನೃಪತಿಯೇ, ಈ ಸುದ್ದಿಯು ಲೋಕದಲ್ಲಿ ಇನ್ನೂ ವರ್ತಿಸಿರುವುದು. ಪವಿತ್ರವಾದ ಶೋಭಿಸುವ ಶಿವಭಕ್ತಿಯನ್ನು ಆಚರಿಸುವವರ ಪೂರ್ವಜಾತಿಯನ್ನು ಯಾರು ತಡೆಯದೆ ನುಡಿಯುವರೋ ಅವರು ಪಾಪಕ್ಕೊಳಗಾಗುವರು. ೬೦. ಮಹಾರಾಜಾ, ಯಥಾವತ್ತಾದ ವಿಧಿಗಳನ್ನನುಸರಿಸಿ ಪ್ರತಿಷ್ಠೆಗೊಳಿಸಿದ ಲಿಂಗದಲ್ಲಿ ಶಿಲೆಯ ಭಾವವುಂಟೆ ? ಪರಶಿವನ ದೀಕ್ಷೆಯಿಂದ ಕೂಡಿ

ಸಂಗತನೊಳಂತ್ಯಜತೆಯುಂ
ಸಂಗಂ ಸಮನಿಪುದೆ ಪೇಳ್ಧರಾಧಿಪ ನಿಜಮಂ ೬೦

ಶರಧಿಯೊಡವೆರೆದ ನದಿಗ
ಳ್ಶರಧಿಯ ರೂಪಪ್ಪ ತೆಱದಿನವನಿಪ ವಿಲಸ
ದ್ಗುರುಕರಕಮಳಸ್ಪರ್ಶನ
ದಿರವಿಂ ನರರಕ್ಕುಮಲ್ತೆ ಗುರುರೂಪಧರರ್ ೬೧

ಭ್ರಮರಾವಲಂಬಿಕೀಟಂ
ಭ್ರಮರಂ ತಾನೆನಿಸಿ ಕೀಟಮಪ್ಪುದೆ ಶಿವಲಿಂ
ಗಮನಪ್ಪಿ ಲಿಂಗಭಾವಂ
ಸಮನಿಸಿದ ನರಂ ನರೇಂದ್ರ ನರನಕ್ಕುಮೆ ಪೇಳ್ ೬೨

ಜಲಧರದ ಮಱೆಯ ದಿನಮಣಿ
ಮಲಿನಾಂಬರಬದ್ಧಮಣಿ ಧರಿತ್ರಿಯ ಮಱೆಯೊ
ಳ್ನೆಲಸಿದ ನಿಧಿಯೆನಿಪಂ ದು
ಷ್ಕುಲಸಂಭವನ್ನಂ ಪುರಾರಿಭಕ್ತಂ ಧರೆಯೊಳ್ ೬೩

ಪುಟ್ಟದೆ ಮುತ್ತು ಶುಕ್ತಿಯೊಳೆ ಪುಟ್ಟದೆ ಪಂಕದೊಳಂಬುಜಾತಮೇಂ
ಪುಟ್ಟದೆ ಕಲ್ಲೊಳೇಂ ಮಿಸುನಿ ಪುಟ್ಟದೆ ಕಾಷ್ಠದೊಳಗ್ನಿ ಪಟ್ಟುತಾಂ

ದವನಲ್ಲಿ ಅಂತ್ಯಜನೆಂಬ ಭಾವವು ನಿಜವಾಗಿ (ಅಂತ್ಯಜತ್ವದಿಂದ ಕೂಡಿರುವಿಕೆಯು) ಕೂಡಿರುವುದು ಶಕ್ಯವೇ ?† ೬೧. ಸಮುದ್ರದೊಡನೆ ಐಕ್ಯಗೊಂಡ ನದಿಗಳೆಲ್ಲ ಸಮುದ್ರ ರೂಪವೇ ಆಗುವ ರೀತಿಯಲ್ಲಿ, ಮಹಾರಾಜನೇ, ಪ್ರಕಾಶಮಾನನಾದ ಗುರುವಿನ ಕೈಗಳೆಂಬ ಕಮಲದ ಸ್ಪರ್ಶದ ಕಾರಣದಿಂದ ನರರುಗಳು ಗುರುರೂಪ ಧರಿಸಿದವರೇ ಆಗುವರಲ್ಲವೇ ! ೬೨. ನರೇಂದ್ರನೇ, ಭ್ರಮರದ (ಕಡಜದ) ಆಶ್ರಯದಲ್ಲಿರುವ ಕೀಟವು ತಾನೂ ಭ್ರಮರವೇ ಎನಿಸಿ (ಪುನಃ) ಕೀಟವಾಗುವುದೇ ? ಶಿವಲಿಂಗವನ್ನು ಅಪ್ಪಿ (ಆಶ್ರಯಿಸಿ) ಲಿಂಗ ಭಾವವೇ ಉಂಟಾದ ನರನು ನರನೆನಿಸುವನೇ ಹೇಳು ! ೬೩. ಮೋಡದ ಮರೆಯ ಸೂರ್ಯ, ಮಲಿನವಾದ ಬಟ್ಟೆಯಲ್ಲಿ ಕಟ್ಟಲ್ಪಟ್ಟ ರತ್ನ, ಭೂಮಿಯ ಮರೆಯಲ್ಲಿ ಅಡಗಿರುವ ದ್ರವ್ಯರಾಶಿಗಳಂತೆ ಲೋಕದಲ್ಲಿ ದುಷ್ಕುಲ ಸಂಭವನಾದ ಪರಮೇಶ್ವರ ಭಕ್ತನು ಎನಿಸುವನು. (ತೋರುವನು) ೬೪. ಶುಕ್ತಿಯಲ್ಲಿ (ಕಪ್ಪೆಚಿಪ್ಪಿನಲ್ಲಿ) ಮುತ್ತು ಹುಟ್ಟುವುದಿಲ್ಲವೇ ? ಕೆಸರಿನಲ್ಲಿ ಕಮಲವು ಹುಟ್ಟುವುದಿಲ್ಲವೇ ? ಕಲ್ಲಿನಲ್ಲಿ ಬಂಗಾರವು ಹುಟ್ಟು

---

†ಶಿವದೀಕ್ಷಾಭಿ ಜಾತಸ್ಯ ಪೂರ್ವಜಾತಿಂನಚಿಂತಯೇತ್ !
ಸುಷ್ಪುತಿಪ್ತಿತಲಿಂಗೇತು ನಯಥಾ ಪೂರ್ವಭಾವನಾ ॥ ಹೀಗೆನ್ನುವ ಶಿವಪುರಾಣವಾಕ್ಯದೊಡನೆ ಈ ಪದಾರ್ಥವನ್ನು ಹೋಲಿಸಿ.

ಪುಟ್ಟದೆ ಕೀಟದೊಳ್ಧರೆಗೆ ಪೂಜ್ಯತೆದಾಳವೆ ಮೋಣಿವಂತೆ ದಲ್
ಪುಟ್ಟಿದಡೇನೊ ದುಷ್ಕುಲದೊಳೀಶ್ವರಭಕ್ತನೆ ಪೂಜ್ಯನುರ್ವಿಯೊಳ್ ೬೪

ಮಾತೆ ಗೌರಿ ಪಿತನಲ್ತೆ ರುದ್ರನೀ[1]
ಖ್ಯಾತಮಾದ ಭುವನತ್ರಯಕ್ಕೆ ತ
ಜ್ಜಾತ ಸರ್ವಜಗತೀಜನಂಗಳೊ
ಳ್ಜಾತಿಭೇದಮಣಮುಂಟೆ ಧಾತ್ರಿಪಾ ೬೫

ವ॥ ಅಂತುಮಲ್ಲದೆಯುಂ—

ಭೂಸುರಕುಲಗುರು ವೇದ
ವ್ಯಾಸಂ ಕಬ್ಬಿಲಿತಿಯಲ್ಲಿ ಪುಟ್ಟಿದನಧಿಕೋ
ಲ್ಲಾಸಂ ಮಾತಂಗಿಯೊಳಾ
ಭಾಸುರ ಮಾತಂಗ ಮುನಿವರಂ ಜನಿಯಿಸಿದಂ ೬೬

ಒಗೆದಂ ವಶಿಷ್ಟಮುನಿ ವೇ
ಶ್ಯೆಗೆ ಸೂತಂ ಜನನಮಾಂತನಂತ್ಯಜನಿಂ ಪ
ನ್ನಗಧರಭಕ್ತಿಸ್ಥಿತಿಯು
ಜ್ಜುಗದಿಂ ದ್ವಿಜಮುಖ್ಯರಾದರಿವರೀ ಧರೆಯೊಳ್ ೬೭

ವುದಿಲ್ಲವೇ ? ಕಟ್ಟಿಗೆಯಲ್ಲಿ ಅಗ್ನಿಯು ಹುಟ್ಟದೇ ? ರೇಷ್ಮೆಯು (ಪಟ್ಟು) ತಾನು ಕೀಟದಿಂದ ಹುಟ್ಟುವುದಿಲ್ಲವೇ ! ಇವೆಲ್ಲ ಧರೆಯಲ್ಲಿ ಪೂಜ್ಯತೆಯನ್ನು ಹೊಂದುವುದಿಲ್ಲವೇ ? ಇವುಗಳ ಹಾಗೆ ದುಷ್ಕುಲದಲ್ಲಿ ಹುಟ್ಟಿದರೇನೋ ಈಶ್ವರ ಭಕ್ತನು (ಯಾವಕುಲದಲ್ಲಿ ಹುಟ್ಟಿದರೂ) ಲೋಕದಲ್ಲಿ ಪೂಜ್ಯನೆನಿಸುವನು.† ೬೫. ಎಲೈ ಧಾತ್ರೀಶನೇ, ಈ ಪ್ರಸಿದ್ಧವಾದ ಮೂರುಲೋಕಗಳಿಗೂ ತಾಯಿಯೋ ಗೌರಿ; ತಂದೆಯೋ ರುದ್ರ; ಅಲ್ಲವೆ? ಆವನಿಂದ ಹುಟ್ಟಿದ ಜಗತ್ತಿನ ಸಕಲ ಜನರುಗಳಲ್ಲಿ ಸ್ವಲ್ಪವಾದರೂ ಜಾತಿಭೇದವು ಉಂಟೆ ? ವ॥ ಅದೂ ಅಲ್ಲದೆ ೬೬–೬೭. ಬ್ರಾಹ್ಮಣರುಗಳ ಕುಲಗುರುವಾದ ವೇದವ್ಯಾಸನು ಕಬ್ಬಿಲಗಿತ್ತಿ (ಬೆಸ್ತರವಳ)ಯ ಹೊಟ್ಟೆಯಲ್ಲಿ ಹುಟ್ಟಿದನು. ಅತಿಶಯ ಉಲ್ಲಾಸದಿಂದ ಶ್ರೇಷ್ಠನಾದ ಮತಂಗಮಹರ್ಷಿಯು ಅಂತ್ಯಜೆ (ಮಾದಿಗಗಿತ್ತಿ)ಯ ಗರ್ಭದಿಂದ ಹುಟ್ಟಿದನು. ವಶಿಷ್ಠ ಮಹರ್ಷಿಯು ವೇಶ್ಯೆಯಿಂದ ಹುಟ್ಟಿದನು. (ದೇವತೆಗಳ ಸೂಳೆಯಾದ ಊರ್ವಶಿಯಲ್ಲಿ ಹುಟ್ಟಿದನು). ಇವರೆಲ್ಲ ಲೋಕದಲ್ಲಿ ಪರಮೇಶ್ವರನ

---

1 ಎ(ಅ,ದ)

†ಯಥಾಪಂಕೇ ಸರೋಜಂ ಸ್ಯಾದ್ಯಥಾಕಾಷ್ಠೇಹುತಾಶನಃ ।
ಯಥಾಸುವರ್ಣಂ ಪಾಷಾಣೇ ಭಕ್ತಶ್ಚಾಂಡಾಲ ವಂಶಜಃ ॥
ಸ್ತ್ರೀವಾ ಪುರುಷಷಂಡಶ್ಚಂಡಾಲೋದ್ವಿಜವಂಶಜಃ ।
ನಜಾತಿಭೇದೋಲಿಂಗಾರ್ಚಾಸ್ಸರ್ವೇರುದ್ರಗಣಾ ಸ್ಮೃತಾಃ

(ಎಂಬ ಶಿವಪುರಾಣವಾಕ್ಯಗಳೊಡನೆ ಹೋಲಿಸಿರಿ.)

ವಿದಿತವಿದು ಸಕಲ ಭುವನದೊ
ಳಿದನಱಿದುಂ ನುಡಿಯಲೇಕೆ ದುಷ್ಕುಲಭವರೆಂ
ದೊದವಿದ ಮದದಿಂ ಕುಲವಿ
ಲ್ಲದ ಶಿವಭಕ್ತರ್ಕಳಲ್ಲಿ ಕುಲಜಾತಿಗಳಂ ೬೮

ವ॥ ಎಂದಿಂತು ನುಡಿದ ಮಹಿಮಾಕರನ ಮಾತನೇಳಿದಂಗೇಳ್ದರಸಂ ಕುಪಿತನಾಗಿ—

ಬಸವರಸ ಪೂರ್ವಕಥೆಗಳ
ವಿಸರಮನುಳಿ ಸರ್ವಜನವಿರೋಧೋಕ್ತಿಗಳಂ
ಪಸರಿಸದಿರೆಮ್ಮೊಳೋದಿನ
ಗಸಣಿಗಳೇಕಿನಿತು ಸಾಲ್ಗುಂ ಗರ್ವಮೊಪ್ಪದು ಬಿಂಕಂ ೬೯

ಹರಭಕ್ತರಧಿಕರೆಂದೆಂ
ದೊರೆದಪೆ ತತ್ಕಾಯಮಂ ಚಿವುಂಟಿದೊಡಮದೇಂ
ಸುರಿತರ್ಪುದೆ ಸುಧೆ ಪಾರ್ವರ
ಶರೀರದಿಂ ರಕ್ತಮೊಕ್ಕಪುದೆ ಪೇಳ್ದಿಟಮಂ ೭೦

ವ॥ ಎಂಬುದುಂ ಭಕ್ತಿರತ್ನಾಕರಂ ಕನಲ್ದು ಘಳಿಲನೆಳ್ದುನಿಂದು—

ವಿಮಳ ಶಿವಭಕ್ತಮಾರ್ಗಮೆ
ಸುಮಾರ್ಗಮುಳಿದಪರಮಾರ್ಗಮದುವೆ ಕುಮಾರ್ಗಂ
ಕುಮತಿಜನಮೆಂತುಮೇನಱಿ
ಗುಮೆ ಪೇಳಿದನತುಳದುರಿತಪೂರಿತಹೃದಯಂ ೭೧

ಭಕ್ತಿಯ ರೀತಿಯನ್ನು ಆಚರಿಸುವುದರ ಮೂಲಕ ದ್ವಿಜಶ್ರೇಷ್ಠರಾದರು. ೬೮. ಈ ವಿಷಯವೆಲ್ಲ ಭೂಮಂಡಲಕ್ಕೇ ತಿಳಿದಿರುವಂತಹುದು. ಇದನ್ನು ತಿಳಿದೂ ಕೂಡ ಮದದಿಂದ ಕೂಡಿ ಕೆಟ್ಟಕುಲದಲ್ಲಿ ಹುಟ್ಟಿದವರೆಂದು ಕುಲವೇ ಇಲ್ಲದ ಶಿವಭಕ್ತರಲ್ಲಿ ಕುಲಜಾತಿಗಳನ್ನು ಏಕೆ ಮಾತಾಡಬೇಕು ? ವ॥ ಈ ಪ್ರಕಾರವಾಗಿ ನುಡಿದ ಮಹಿಮಾಕರನಾದ ಬಸವಣ್ಣನ ಮಾತುಗಳನ್ನು ತಿರಸ್ಕಾರಮಾಡಿ, ಅರಸನಾದ ಬಿಜ್ಜಳನು ಕೋಪಗೊಂಡವನಾಗಿ ೬೯. ಬಸವರಸನೇ, ಪೂರ್ವದ ಕಥೆಗಳ, ಸಮೂಹನ್ನು ಬಿಡು. ನಮ್ಮಲ್ಲಿ ಇಷ್ಟೊಂದು ನಿನ್ನ ಓದಿನ ಚಾತುರ್ಯಗಳು ಏಕೆ ? (ಶಾಸ್ತ್ರ ಪುರಾಣಾಭ್ಯಾಸದಿಂದ ಉಂಟಾದ ಚತುರತೆ ಬೇಡ). ಸರ್ವಜ್ಞರುಗಳ ವಿರೋಧೋಕ್ತಿಗಳನ್ನು ಪ್ರಸಾರಗೊಳಿಸಬೇಡ, ಇಷ್ಟೇಸಾಕು, ಗರ್ವವು ನಿನಗೆ ತಕ್ಕದ್ದಲ್ಲ. ೭೦. ಹರನ ಭಕ್ತರೇ ಶ್ರೇಷ್ಠರೆಂದು ಹೇಳುತ್ತಿದ್ದೀಯೆ. ಆ ಶಿವಭಕ್ತರ ದೇಹವನ್ನು ಚಿವುಟಿದರೆ ಹಾಲೇನಾದರೂ ಸುರಿಯುವುದೇ? ಬ್ರಾಹ್ಮಣರ ಶರೀರದಿಂದ ರಕ್ತವು ಹೊರ ಹೊರಡುವುದೇ?. ಸತ್ಯವನ್ನು ಹೇಳು ವ॥ ಹೀಗೆನ್ನಲು ಭಕ್ತಿಗೆ ಸಮುದ್ರದೋಪಾದಿಯಲ್ಲಿರುವ ಬಸವಣ್ಣನು ಕೋಪಗೊಂಡು ಒಮ್ಮೆಲೇ ಮೇಲಕ್ಕೆದ್ದುನಿಂತು ೭೧. ಶ್ರೇಷ್ಠರಾದ ಶಿವಭಕ್ತರು ಹೋಗುವ ಮಾರ್ಗವೇ ಶ್ರೇಷ್ಠವಾದ ಮಾರ್ಗ ; ಉಳಿದವರು ಹೋಗುವ ಆ ಮಾರ್ಗವೇ ದುರ್ಮಾರ್ಗ. (ಇದನ್ನು) ಅಸದೃಶವಾದ ಪಾಪದಿಂದ ತುಂಬಿಹೋದ ಹೃದಯವುಳ್ಳ ದುಷ್ಟಬುದ್ಧಿಯು

ಖಲರಾಶಾಪಾಶಯುಕ್ತರ್ದುರುಳರತಿದುರಾತ್ಮರ್ಶಿವದ್ರೋಹಿಗಳ್ಚಂ
ಚಲಚಿತ್ತರ್ಸೋಮಪಾನಚ್ಛಲರಚಿತಸುರಾಪಾನರಾನೀತಗೋಪೀ
ಮಲಫಾಲರ್ವೇದಭಾರೋದ್ವಹನಖರರುಪಾತ್ತಾನ್ಯದೋಷರ್ಸಜೀವೋ
ಜ್ವಲಪಶ್ವೌಘಪ್ರಹಿಂಸಾಪರರಮರಪುರೀಚೇಟಿಕಾಭೋಗಲೋಲರ್ ೭೨

ಹರಭಕ್ತದ್ವೇಷಿಗಳ್ಭಕ್ಷಿತಪಶುಪಲಲರ್ಕರ್ಮಚಂಡಾಲರನ್ಯಾ
ಯರತರ್ವಿತ್ತೌಘದತ್ತಾರ್ಜಿತನಿಜಸುಕೃತರ್ದಂಭಮಾತ್ಸರ್ಯಮಾಯಾ
ಪರಿಣದ್ಧರ್ಪಾಶಬದ್ಧರ್ಪರಮಮುನಿದಧೀಚಾದಿಶಾಪಾಗ್ನಿದಗ್ಧ
ರ್ಗುರುದೀಕ್ಷಾಶೈವಪಂಚಾಕ್ಷರಜಪರಹಿಭರ್ದಿವೌಕೋವರಾಕರ್ ೭೩

ಎನಿಪೀ ದುರ್ದ್ವಿಜರೊಡನೆಮ
ಗನುವಲ್ಲುತ್ತರಮನೀವುದಂತಾದೊಡಮಾಂ
ಘನಶಿವಮಹತ್ವಮತದಾ
ರ್ಢ್ಯನಿಮಿತ್ತಂ ತೋಱುವೆಂ ನಿದರ್ಶನಮನಣಂ ೭೪

ಜನವು ಯಾವ ರೀತಿಯಿಂದಲಾದರೂ ತಿಳಿಯಲು ಶಕ್ಯವೇ ? ಎಂದನು. ೭೨–೭೪. ದುಷ್ಟರೂ, ಆಸೆಯೆಂಬ ಹಗ್ಗದಿಂದ ಬಂಧಿಸಲ್ಪಟ್ಟವರೂ, ದುರುಳರೂ, ಅತ್ಯಂತ ದೋಷವುಳ್ಳ ಹೃದಯುದವರೂ, ಶಿವನಲ್ಲಿ ದ್ರೋಹ ಬಗೆಯುವವರೂ, ಚಪಲಚಿತ್ತವುಳ್ಳವರೂ, ಸೋಮಪಾನದ ನೆಪದಿಂದ ಮದ್ಯಪಾನ ಮಾಡುವವರೂ, ಗೋಪಿಚಂದನವೆಂಬ ಮಲದಿಂದ ಕೂಡಿದ ಹಣೆಯುಳ್ಳವರೂ, ವೇದಗಳ ಭಾರವನ್ನು ಹೊತ್ತ ಕತ್ತೆಗಳೂ ಅನ್ಯರ ದೋಷಗಳನ್ನು ಹೊಂದುವವರೂ, ಜೀವಸಹಿತವಾದ ಉಜ್ವಲ ಪಶುಗಳ ಸಮೂಹವನ್ನು ಹಿಂಸಿಸುವವರೂ, (ಕೊಲ್ಲುವವರೂ), ದೇವೇಂದ್ರನ ಪಟ್ಟಣದ ದಾಸಿಯರ ಭೋಗದಲ್ಲಿ ಆಸಕ್ತರೂ, ಶಿವನ ಭಕ್ತರನ್ನೂ ದ್ವೇಷಿಸುವವರೂ, ಪಶುಗಳ (ಗೋವುಗಳ) ಮಾಂಸವನ್ನು ಭಕ್ಷಿಸುವವರೂ, ಚಾಂಡಾಲ ಕರ್ಮವುಳ್ಳವರೂ, ಅನ್ಯಾಯದಲ್ಲಿ ಆಸಕ್ತರಾದವರೂ, ವಿಶೇಷ ಹಣವನ್ನು ಕೊಟ್ಟವರಿಗೆ ತಾವು ಸಂಪಾದಿಸಿದ ಪುಣ್ಯವನ್ನೇ ಧಾರೆಯೆರೆಯುತಕ್ಕವರೂ, ಕಾಪಟ್ಯ, ಮಾತ್ಸರ್ಯ, ಭ್ರಮೆ (ಅಜ್ಞಾನ) ಗಳಿಂದ ಪರಿಣತರಾದವರೂ, (ವಿಸ್ತಾರಗೊಂಡವರೂ), ಮುನಿ ಶ್ರೇಷ್ಠರಾದ ದಧೀಚಿಯೇ ಮೊದಲಾದವರ ಶಾಪವೆಂಬ ಬೆಂಕಿಯಿಂದ ಸುಡಲ್ಪಟ್ಟವರೂ ಗುರುದೀಕ್ಷೆ, ಶಿವಪಂಚಾಕ್ಷರೀ ಮಂತ್ರ ಜಪದಿಂದ ದೂರವಾದವರೂ, ಆದ ದ್ವಿಜರೆಂಬ ನೀಚರೂ ಎನಿಸಿದ ದುಷ್ಟದ್ವಿಜರೊಡನೆ ಉತ್ತರಕೊಡುವುದು ನಮಗೆ ತರವಲ್ಲದ್ದು. ಹಾಗಾದರೂ ನಾನು ಘನವಾದ ಶೈವವೆಂಬ ಮಹತ್ವವುಳ್ಳ ಮತದ ದೃಢತೆಯ ಕಾರಣ

ವ॥ ಎಂದು ಸತ್ಯಶೌರ್ಯಸಮಗ್ರಂ ಪೂಣ್ದು ನುಡಿದು ನೀನೆಂದಂತೆ ಶಿವನಾಗಯೋಗಿಯಂಗದೊಳಮರ್ದಂ ತೋರ್ಪೆನೀ ನಿನ್ನ ನಚ್ಚಿನ ಸೋಮಯಾಜಿಯಂಗದೊಳ್ಸಲಿಲಮನಾದೊಡಂ ಸೀಳ್ದು ತೋರ್ಪುದಿದಕ್ಕೆ ನಿಂದು ಸೋಲ್ತೊಡೀ ಪಾರ್ವರಂಗದೊಳ್ಶ್ವನ ಕಾಂಘ್ರಿಮುದ್ರೆಯುಮನೊತ್ತಿಸಿ ಶಿಖೋಪವೀತಂಗಳನಿಳಿಪಿ ನಿಜಮತಕ್ಕೆ ಪೊಱಗಾಗಿ ಪೋಪಂತೆ ಮಾಳ್ಪುದೆಂಬುದನಪ್ಪುಕೆಯ್ಸಿ—

ಮನುಜೇಂದ್ರಂ ಸಭೆಗೂಡಿ ನೋಡುತಿರೆ ಸಣ್ಬಂ ತನ್ಮಹಾಯೋಗಿಪ
ದ್ವನಜಕ್ಕಾನತನಾಗಿ ತನ್ನ ಕರದಿಂ ತತ್ಪಾಣಿಪಂಕೇಜಮಂ
ಬಿನದಂ ಕೆಯ್ಮಿಗೆ ಮೆಲ್ಲನೊತ್ತಿ ಪಿಡಿದಾಗಳ್ನೀವಿದಂ ಭಕ್ತಿಪಾ
ವನಧೇನುಸ್ತನಸನ್ನಿಭಾಂಗುಲಿಗಳಂ ದುರ್ದಾಂತವಾಗ್ಭಂಜನಂ ೭೫

ವ॥ ಅಂತು ನೀವಿದಾಗಳ್—

ಇಡಿದಡಸಿ ಪಾಱಿ ಪಾಲ್ವನಿ
ಯುಡುರಾಜಿಯು ತೆಱದಿನಿಂದುವಿಂ ಜೊನ್ನಂ ಮುಂ
ಗಡೆಗುರ್ವುವಂತೆ ಪಸರಿಸು
ತೊಡನಿಳಿದುದು ದುಗ್ಧಧಾರೆ ತತ್ಕರದಿಂದಂ ೭೬

ದಿಂದ ಪ್ರತ್ಯಕ್ಷ ನಿದರ್ಶನವನ್ನು ಸ್ವಲ್ಪತೋರಿಸುವೆನು. ವ॥ ಎಂದುಕೊಂಡು ಸತ್ಯದಿಂದ ಕೂಡಿದ ಸಮಗ್ರ ಶೌರ್ಯವುಳ್ಳ ಬಸವೇಶ್ವರನು ಪ್ರತಿಜ್ಞೆಮಾಡಿ ಮಾತನಾಡಿ, (ಮಹಾರಾಜಾ), ನೀನು ಮಾತನಾಡಿದ ಹಾಗೆ ಶಿವಯೋಗಿ ನಾಗಮಯ್ಯನ ದೇಹದಲ್ಲಿ ಹಾಲನ್ನೇ ತೋರಿಸುವೆನು; ಈ ನಿನ್ನ ಪ್ರೀತಿಯ ಸೋಮಯಾಜಿಯ ಶರೀರದಲ್ಲಿ ನೀರನ್ನಾದರೂ ಸೀಳಿ ತೋರಿಸು. ಈ ಪಂಥಕ್ಕೆ ನಿಂತು(ಸಿದ್ಧರಾಗಿನಿಂತು) ಸೋತರೆ ಈ ದ್ವಿಜರ ದೇಹದಲ್ಲಿ ನಾಯಿಯ ಕಾಲಿನ ಮುದ್ರೆಯನ್ನು ಒತ್ತಿಸಿ, ಜುಂಡಿಕೆ ಜನಿವಾರಗಳನ್ನು ಕಿತ್ತುಹಾಕಿ ತಮ್ಮ ಮತಕ್ಕೆ ಹೊರಗಾಗಿ ಹೋಗುವಂತೆ ಮಾಡಬೇಕು, ಎಂಬ ಮಾತನ್ನು ಒಡಂಬಡಿಸಿ—೭೫. ಬಿಜ್ಜಳಮಹಾರಾಜನು ಸಭೆಯವರೆಲ್ಲರೊಡನೆ ಕೂಡಿ ನೋಡುತ್ತಿರುವಂತೆ, ನಂಬಿ (ಶಿವನನ್ನು ನಂಬಿ) ಆ ಮಹಾಯೋಗಿಯಾದ ನಾಗಮಯ್ಯನ ಪಾದಕಮಲಕ್ಕೆ ನಮಸ್ಕಾರಮಾಡಿ ತನ್ನಕೈಯಿಂದ ಆತನ ಕಮಲದಂತಿರುವ ಕೈಗಳನ್ನು ಅಧಿಕವಾದ ವಿನೋದದಿಂದ ಮೆಲ್ಲನೆ ಒತ್ತಿಹಿಡಿದು ಭಕ್ತಿಯೆಂಬ ಪವಿತ್ರ ಹಸುವಿನ ಮೊಲೆಗಳಿಗೆ ಸದೃಶವಾದ ಬೆರಳುಗಳನ್ನು ದುಷ್ಟರ ದುರ್ಭಾಷೆಗಳನ್ನು ಭಂಗಗೊಳಿಸುವ ಬಸವೇಶ್ವರನು ನೀವಿದನು. ವ॥ ಹಾಗೆ ನೀವಲಾಗಿ—೭೬. ತುಂಬಿಕೊಂಡು ರಭಸದಿಂದ ಹಾಲಿನ ಹನಿಗಳು ಹೊರಚಿಮ್ಮಿ, ನಕ್ಷತ್ರಗಳ ಸಾಲಿನಂತೆ, ಚಂದ್ರನಿಂದ ಬೆಳದಿಂಗಳು ಮುಂಭಾಗಕ್ಕೆ ಉಬ್ಬಿಬರುವಂತೆ ಆಕರದಿಂದ ಹಾಲಿನ ಧಾರೆಯು

ಉಗುರ್ವೆಳಗು ಬಳ್ಳಿವರಿದಂ
ತೊಗುವಿಗೆ ತತ್ಕರದ ಸುಧೆಯ ಧಾರೆಗಳೆತ್ತಂ
ಮಿಗೆ ಭೋರ್ಭೋರೆನುತಿಳಿತಂ
ದಗಲದೆ ಪೊನಲಾಗಿ ಪರಿದುದಾಸ್ಥಾಯಿಕೆಯೊಳ್ ೭೭

ವ॥ ಅಂತಪ್ಪ ಭಕ್ತಮಹತ್ವಮಂ ಕಣ್ಣಾರೆ ಕಂಡು—

ಆ ಸಭಾಸದರೆಲ್ಲರಚ್ಚರಿವಟ್ಟು ವಂದಿಸುತಿರ್ದರಾ
ಭೂಪತೀಪತಿಯುಂ ವಿಚಿತ್ರಮಿದೆಂದು ಭೀತಿಸಮನ್ವಿತಂ
ದಾಸಭಾವಮನಾಳುತುಂ ಶಿವನಾಗಯೋಗಿವರೇಣ್ಯನು
ದ್ಭಾಸಿತಾಂಘ್ರಿಸರೋಜಯುಗ್ಮಕೆ ಮೆಯ್ಯನಿಕ್ಕಿದನಕ್ಕಱಿಂ ೭೮

ಕರಿಕಾಲಚೋಳನೃಪತಿಗೆ
ಪುರರಿಪು ಪೊಮ್ಮಳೆಯನಂದು ಕಱೆಯಿಸಿದಂ ಮೇ
ಣಿರದಿಂದು ಬಸವರಾಜಂ
ಗುರುಕರಪೀಯೂಷವರ್ಷಮಂ ಕಱೆಯಿಸಿದಂ ೭೯

ವ॥ ಎಂದು ಮತ್ತಮಿರದೆ—

ಮಲರಹಿತ ದಿವ್ಯ ಶಿವಮಯ
ವಿಲಸಿತ ಶುಭಕಾಯನೀ ಮಹಾಮಹಿಮನೆನು
ತ್ತಲರ್ದು ಶಿವನಾಗದೇವನ
ನಲಘುಬುಧರ್ಮಣಿದು ಭಕ್ತಿಯಿಂ ಕೀರ್ತಿಸಿದರ್ ೮೦

ವಿಸ್ತಾರಗೊಂಡು (ಅರ್ಧಗೊಂಡು) ಆ ಕೂಡಲೆ ಇಳಿಯಲಾರಂಭಿಸಿತು. ೭೭. ಉಗುರಿನ ಕಾಂತಿಯೇ ಮುಂದುವರಿದಿದೆಯೋ ಎಂಬಂತೆ ಮಿತಿಮೀರಿ ಹೊರಸೂಸಿ, ಆ ಕೈಯ ಹಾಲಿನ ಧಾರೆಗಳು ಎಲ್ಲಕಡೆಗೂ, ಭೋರ್ಭೋರೆಂದು ವಿಚ್ಛಿತ್ತಿಯಿಲ್ಲದೆ (ಧಾರಾಕಾರವಾಗಿ) ಸುರಿದು ಪ್ರವಾಹವಾಗಿ ಆಸ್ಥಾನದ ಒಳಭಾಗಕ್ಕೆ ಹರಿಯಿತು. ವ॥ ಅಂತಹ ಭಕ್ತನ ಮಾಹಾತ್ಮ್ಯೆಯನ್ನು ಕಣ್ಣಾರ ಕಂಡು—೭೮. ಆ ಸಭೆಯಲ್ಲಿ ನೆರೆದಿದ್ದವರೆಲ್ಲ ಆಶ್ಚರ್ಯಪಟ್ಟು ನಮಸ್ಕಾರ ಮಾಡತೊಡಗಿದರು. ಆ ಬಿಜ್ಜಳ ಮಹಾರಾಜನೂ ಕೂಡ ಇದು ವಿಚಿತ್ರವಾದದ್ದೆಂದು ಭೀತಿಯಿಂದಕೂಡಿ ದಾಸಭಾವವನ್ನು ಹೊಂದಿ, ಆ ಶಿವನಾಗಮಯ್ಯ ಯೋಗಿಶ್ರೇಷ್ಠನ ಪ್ರಕಾಶಮಾನವಾದ ಪಾದಕಮಲ ದ್ವಯಕ್ಕೆ ಪ್ರೀತಿಯಿಂದ ನಮಸ್ಕಾರ ಮಾಡಿದನು, ೭೯. ಕರಿಕಾಲ ಚೋಳ ಮಹಾರಾಜನಿಗೆ ಪರಮೇಶ್ವರನು ಹಿಂದೆ ಹೊನ್ನಿನ ಮಳೆಯನ್ನು ಸುರಿಸಿದನು. ಈಗ ತಪ್ಪದೆ ಬಸವೇಶ್ವರನು ಗುರುವಾದ ನಾಗಮಯ್ಯನ ಕೈಯಿಂದ ಅಮೃತದ ಮಳೆಯನ್ನೇ ಸುರಿಸಿದನು, ವ॥ ಎಂದು ಮತ್ತೂ ತಪ್ಪದಂತೆ—೮೦. ಪಾಪರಹಿತನಾದ ಶ್ರೇಷ್ಠ ಶಿವಮಯನಾದ ಪ್ರಕಾಶಿಸುವ ಶುಭ ಶರೀರಿಯಾದ ಈ ಶಿವನಾಗಮಯ್ಯನು ಮಹಾಮಹಿಮಾಶಾಲಿಯೆಂದು ಸಂತೋಷಗೊಂಡು ಮಹಾಜ್ಞಾನಿಗಳೆಲ್ಲ ನಮಸ್ಕಾರಮಾಡಿ, ಹೊಗಳಿದರು.

ಜಸದಿಂ ಸೊದೆಯಿಂ ಸೋಲದಿ
ನೆಸೆವೆಣ್ದೆಸೆಯುಂ ಧರಿತ್ರಿಯುಂ ವಾದಿಮುಖ
ಪ್ರಸರಮುಮನೊರ್ವರ್ ಬೆಳ್ಪೇ
ಱಿಸಿದಂ ಗಡ ಬಸವನೆಸಕಮೇನತಿಶಯಮೋ ೮೧

ವ॥ ಎಂದು ಬಿಜ್ಜಳಂ ಬಗೆದಂದು ಪೊಗಳುತ್ತುಮಿರ್ದನಲ್ಲಿ ಪರವಾದಿಗಳೆಲ್ಲರ್ನಾಣ್ಚಿ ತಲೆವಾಗಿ ಕಾರ್ಪಣ್ಯಂ ದೋಱಿ ಕೆಯ್ಗಳಂ ಮುಗಿದು—

ಪರಮರಹಸ್ಯದಿಂ ಮತಮಹತ್ವಮಿದೆಮ್ಮ ಕುಬುದ್ಧಿಗಳ್ಗೆ ಗೋ
ಚರಿಕುಮೆ ದೇವ ಮುನ್ನಱಿಯದೆಂದಪರಾಧಮನೊರ್ಮೆ ಸೈರಿಸ
ಜ್ಞರನಭಿಮಾನಹೀನರನಿಳಾಜನದೂಷ್ಯರನೆಮ್ಮನೊಲ್ಮೆಯಿಂ
ಪೊರೆ ಭವದೀಯ ದಿವ್ಯಗುಣಮಂ ಮೆಱೆ ಭವ್ಯದಯಾಸುಧಾಂಬುಧೀ ೮೨

ವ॥ ಎಂದು ಶಿವನಾಗದೇವನಿದಿರೊಳ್ಪೊಡಮಟ್ಟು ಸೊರ್ಕಳಿದು ಶರಣ್ಬೊಕ್ಕಭಯಮಂ ಬೇಡುವ ಧರಾಮರರ್ಗಭಯಮಂ ದಯೆಗೆಯ್ದು ಪೊರೆದು—

೮೧. ಯಶಸ್ಸಿನಿಂದ ದಶದಿಕ್ಕುಗಳನ್ನು, ಅಮೃತದಿಂದ (ಹಾಲಿನಿಂದ) ಭೂಮಿಯನ್ನು, ಸೋಲಿಸುವಿಕೆಯಿಂದ ವಾದಮಾಡುವ ಜನರ ಮುಖಗಳ ಸಮೂಹವನ್ನು, ಒಮ್ಮೆಲೇ ಬಿಳುಪುಗೊಳಿಸಿದನಲ್ಲವೇ ; ಬಸವಣ್ಣನ ಈ ಕ್ರಿಯೆಯು (ಉದ್ಯೋಗವು) ಅದೇನು ಅತಿಶಯವಾದುದೋ ! (ವಾದಿಜನರ ಮುಖವನ್ನು ಬಿಳುಪು ಮಾಡಿದನೆಂದರೆ ಈ ಮಾಹಾತ್ಮ್ಯೆಗೆ ಭಯಗೊಂಡು ಬಿಳಿಚಿಕೊಂಡು ಮುಖವುಳ್ಳವರಾದರೆಂದು ಭಾವ) ವ॥ ಹೀಗೆಂದು ಬಿಜ್ಜಳನು ಮನಸ್ಸಿನಲ್ಲಿ ಭಾವಿಸಿ, ಹೊಗಳತೊಡಗಿದನು, ಪರವಾದಿಗಳೆಲ್ಲರೂ ನಾಚಿ, ತಲೆತಗ್ಗಿಸಿ, ಕಾರ್ಪಣ್ಯಭಾವವನ್ನು ತೋರಿಸಿ, ಕೈಗಳನ್ನು ಜೋಡಿಸಿ
೮೨. ಅತ್ಯಂತ ರಹಸ್ಯದಿಂದ ಕೂಡಿದ ಈ ವೀರಶೈವ ಮತದ ಮಾಹಾತ್ಮ್ಯೆಯು ಕುತ್ಸಿತ ಬುದ್ಧಿಗೆ ತೋಚೀತೇ ? ದೇವ ಹೇ ಭವ್ಯವಾದ ದಯೆಯೆಂಬ ಅಮೃತ ಸಮುದ್ರ ಸದೃಶನೇ, ಈ ಪೂರ್ವದಲ್ಲಿ ಅರಿಯದೆ ಮಾತನಾಡಿದ ನಮ್ಮ ಅಪರಾಧವನ್ನು ಇದೊಂದು ಸಲ ಕ್ಷಮಿಸು (ತಡೆದುಕೋ). ಅಜ್ಞಾನಿಗಳೂ, ಅಭಿಮಾನ ಹೀನರೂ, ಭೋಜನದಿಂದ ದೂಷಿಸಿಕೊಳ್ಳುವವರೂ ಆದ ನಮ್ಮನ್ನು ಪ್ರೀತಿಯಿಂದ ರಕ್ಷಿಸು, ನಿನ್ನಶ್ರೇಷ್ಠವಾದ ಗುಣಗಳನ್ನು (ನಮ್ಮನ್ನು ಕ್ಷಮಿಸಿ ರಕ್ಷಿಸುವುದರ ಮೂಲಕ) ಮೆರೆಯಿಸು. ವ॥ ಹೀಗೆಂದು ಶಿವನಾಗದೇವನ ಎದುರಿಗೆ ನಮಸ್ಕಾರ ಮಾಡಿ ಸೊಕ್ಕನ್ನೆಲ್ಲ ನಾಶಗೊಳಿಸಿಕೊಂಡು, ಶರಣಾಗತರಾಗಿ ಅಭಯವನ್ನು ಬೇಡುವ ದ್ವಿಜ

ವಿಳಸದ್ದಂತಾವಳಸ್ಕಂಧದ ಮಣಿಮಯಪೀಠಾಗ್ರದೊಳ್ತನ್ನ ಪೆಂಪ
ಗ್ಗಳಿಪನ್ನಂ ಮೂರ್ತಿಗೊಳ್ವಂತೆಸಗಿ ಮಿಸುಪ ನಾಗಾರ್ಯನಂ ಪಿಂತೆ ತಾನುಂ
ಕಳಿವೆತ್ತೇರಂತೆ ಕುಳ್ಳಿರ್ದತುಳವಿಭವದಿಂ ಮಂದಿರಂಬೊಕ್ಕು ತನ್ಮಂ
ಜುಳಪಾದಾಂಭೋಜಪೂಜೋತ್ಸವದಿನೆಸೆದನಾನಂದಸಾಂದ್ರಂ ವೃಷೇಂದ್ರಂ ೮೩

ಕೆಂಬಾವಿಭೋಗಚರಿತಮ
ನಿಂಬಾಗಿರೆ ಪೇಳ್ವ ಕೇಳ್ವ ಸುಜನರ್ಗಿಳೆಯೊ
ಳ್ಸಾಂಬಶಿವನೀವನತಿ ಕೃಪೆ
ಯಿಂ ಬಹುಸುಖಮಂ ಗಣೇಂದ್ರಪದಸಂಪದಮಂ ೮೪

ಶ್ವಪಚೋದ್ಭಟಗುಡ್ಡಾಂಬಾ
ವಿಪುಳಚರಿತ್ರಮನೊಲಿಲ್ದು ಕೇಳ್ವ ನರರ್ಗೊ
ಲ್ದಪರಿಮಿತ ಸುಖಮನೀವಂ
ಕಪರ್ದಿ ಕರುಣಾಳುವೈಹಿಕಾಮುಷ್ಮಿಕಮಂ ೮೫

ಶಿವನಾಗಯೋಗಿ ಸುಕಥಾಸುಧಾರಸಂ
ಸವಿದರ್ಗೆ ಮಾಳ್ಕುಮಜರಾಮರತ್ವಮಂ
ಕಿವಿಯಿಂದವೆಂದು ಮಿಗೆ ನಾಣ್ಚಿ ನಾಕಮಂ
ತವೆ ಪೊಕ್ಕಡಂಗಿದುದು ನಿರ್ಜರಾಮೃತಂ ೮೬

ಸಮೂಹಕ್ಕೆಲ್ಲ ಅಭಯವನ್ನು ಕರುಣಿಸಿ ರಕ್ಷಣೆಮಾಡಿ—೮೩. ಶೋಭಿಸುವ ಆನೆಯ ಹೆಗಲಿನ ರತ್ನಖಚಿತವಾದ ಅಂಬಾರಿಯ ಮೇಲೆ ಶೋಭಾಮೂರ್ತಿಯಾದ ನಾಗಮಯ್ಯನನ್ನು ತನ್ನ ಘನತೆಯು ಹೆಚ್ಚಾಗುವಂತೆ ಮೂರ್ತಿಮತ್ತಾಗಿ ತೋರುವಂತೆ ಕುಳ್ಳಿರಿಸಿ, ಹಿಂಭಾಗದಲ್ಲಿ ತಾನೂ ಉತ್ಸಾಹಗೊಂಡು ಕ್ರಮವಾಗಿ ಕುಳಿತುಕೊಂಡು ಅಸದೃಶ ವೈಭವದಿಂದ ತನ್ನ ಮನೆಯನ್ನು ಪ್ರವೇಶಿಸಿ ಆತನ ಮನೋಹರ ಪಾದ ಕಮಲಗಳನ್ನು ಪೂಜಾಮಹೋತ್ಸವದಿಂದ ಆನಂದದಿಂದ ತುಂಬಿದ ಆ ಬಸವೇಶ್ವರನು ಶೋಭಿಸುತ್ತಿದ್ದನು. ೮೪. ಕೆಂಬಾವಿ ಭೋಗಣ್ಣನ ಚರಿತ್ರೆಯನ್ನು ವಿಸ್ತಾರವಾಗಿ (ಕೂಲಂಕಷವಾಗಿ) ಹೇಳುವ ಕೇಳುವ ಸಜ್ಜನರಿಗೆ ಭೂಮಿಯಲ್ಲಿ ಸಾಂಬಶಿವನು ಅನೇಕ ಸುಖಗಳನ್ನೂ, ಶಿವಗಣ ಶ್ರೇಷ್ಠತೆಯ ಸಂಪತ್ತನ್ನೂ ಕೃಪೆಯಿಂದ ದಯಪಾಲಿಸುವನು. ೮೫. ಶ್ವಪಚಯ್ಯ, ಉದ್ಭಟದೇವ, ಗುಡ್ಡಾಂಬೆಯರ ವಿಸ್ತಾರವಾದ ಚರಿತ್ರೆಯನ್ನು ಸಂತೋಷದಿಂದ ಕೇಳುವ ಮನುಷ್ಯರಿಗೆ ಕರುಣಾಳುವಾದ ಪರಮೇಶ್ವರನು ಅಪರಿಮಿತವಾದ ಐಹಿಕ ಮತ್ತು ಆಮುಷ್ಮಿಕ ಸುಖವನ್ನು ಪ್ರೀತಿಯಿಂದ ಕೊಡುವನು. ೮೬. ಶಿವನಾಗಯೋಗೀಶ್ವರ ಸತ್ಕಥೆಯೆಂಬ ಅಮೃತರಸವನ್ನು ಕಿವಿಯಿಂದ ಕುಡಿದವರಿಗೆ ಅಜರಾಮರತ್ವವನ್ನು (ಮುಪ್ಪುಸಾವುಗಳಿಲ್ಲದಿರುವಿಕೆಯನ್ನು) ಉಂಟುಮಾಡುವನೆಂದು ಹೆಚ್ಚಾಗಿ ನಾಚಿಕೆಗೊಂಡು ದೇವಲೋಕದ ಅಮೃತವು ಸ್ವರ್ಗಲೋಕವನ್ನು ಚೆನ್ನಾಗಿ

ಹರಿವಿಧಿಸುರಪತಿನತಪದವನಜೇ
ಕರತಳಚಳದಸಿಹೃತಖಲದನುಜೇ
ವರವಿತರಣಜಿತದಿವಿಸದವನಿಜೇ
ಪೊರೆ ಶರಣಜನರ ನಗವರತನುಜೇ ೮೭

ಇದು ವಿನಮದಖಿಳ ಸುರಾಸುರೇಂದ್ರಮಕುಟತಟಘಟಿತ ಮಣಿಗಣಾಗಣಿತ ರುಚಿನಿಚಯ
ತರುಣಾರುಣಾತಪಪರಿಲಸಿತ ಪರಮ ಶಿವಲಿಂಗ ಪಾದಾರವಿಂದಪರಾಗಭಸಿತ
ಭಾಸುರಲಲಾಟಪಟ್ಟಸರಸಜನಮಾನಿತೋಭಯಕವಿತಾವಿಶಾರದ
ಶ್ರೀಷಡಕ್ಷರಿದೇವಭಕ್ತಿವಿರಚಿತ
ಶ್ರೀಮದ್ ಬಸವರಾಜವಿಜಯಮಹಾಪುರಾಣದೊಳ್ ಶಿವನಾಗಿದೇವಮಹತ್ವಕಥನಂ
ಏಕೋನಚತ್ವಾರಿಂಶಾಶ್ವಾಸಂ ಸಮಾಪ್ತಂ

ಅಂತು ಆಶ್ವಾಸ ೩೯ಕ್ಕೆ ಪದಗಣನೆ ೩೨೩೬ಕ್ಕೆ ಮಂಗಳಂ ಮಹಾಶ್ರೀ॥

ಹೊಕ್ಕು ಅಡಗಿ ಕೊಂಡಿತು ೮೭. ವಿಷ್ಣು, ಬ್ರಹ್ಮ, ದೇವೇಂದ್ರರಿಂದ ನಮಸ್ಕರಿಸಿ ಕೊಳ್ಳಲ್ಪಡುವ ಪಾದಕಮಲವುಳ್ಳವಳೇ, ಕೈಯಲ್ಲಿ ಚಲಿಸುತ್ತಿರುವ ಖಡ್ಗದಿಂದ ನಾಶ ಮಾಡಲ್ಪಟ್ಟ ದುಷ್ಟರಾಕ್ಷಸರ ಸಮೂಹವುಳ್ಳವಳೇ, ವರಗಳನ್ನುದಾನಮಾಡುವುದರಲ್ಲಿ ದೇವಲೋಕದ ಕಲ್ಪವೃಕ್ಷವನ್ನು ಗೆದ್ದವಳೇ, ಪರ್ವತ ಶ್ರೇಷ್ಠನಾದ ಹಿಮವಂತನ ಪುತ್ರಿಯೇ, ಶರಣ ಜನರನ್ನು ರಕ್ಷಿಸು.

ಮೂವತ್ತೊಂಬತ್ತನೆಯ ಆಶ್ವಾಸವು ಸಮಾಪ್ತವಾಯಿತು

ಚತ್ವಾರಿಂಶಾಶ್ವಾಸಂ

[ಚಂಡಪುತ್ರ ವಿವಾದ]

ಶ್ರೀರುಚಿರಗಿರಿಸುತಾಕಚ
ಭಾರಪಯೋಧರಮಯೂರನನುಪಮಸುಗುಣಾ
ಧಾರನಘದೂರನತಿಗಂ
ಭೀರಂ ಪೊರೆಗೆಮ್ಮನಾವಗಂ ಶಿವಲಿಂಗಂ ೧

ಘನಮಾಧ್ವಧ್ವಾಂತ ವಿಧ್ವಂಸನಖರಕಿರಣಂ ಪಾಂಚರಾತ್ರೋರ್ವಿಭೃದ್ಭೇ
ದನಶಂಬಂ ಚಂಡ ಜೈನಪ್ರಕಟಕರಟಿಕಂಠೀರವಂ ದುಷ್ಟಚಾರ್ವಾ
ಕನಗಪ್ರೋದ್ಯತ್ಕುಠಾರಂ ಕುಟಿಲಮತಿಯುತಾಬದ್ಧಬೌದ್ಧಾವಳೀಕಾ
ನನದಾವಂ ದೃಪ್ಯದದ್ವೈತಮತಜಳದಝಂಝಾನಿಲಂ ಶ್ರೀವೃಷೇಂದ್ರಂ ೨

ಒರ್ಮೆ ಚರಪೂಜನದಿನೊರ್ಮೆಹರನರ್ಚನೆಯಿ
ನೊರ್ಮೆ ಶಿವಮಂತ್ರಜಪದುಜ್ಜುಗದ ನಣ್ಪಿಂ
ದೊರ್ಮೆ ಗಣಸೇವನೆಯಿನೊರ್ಮೆ ಮೃಡಭಾವನೆಯಿ
ನೊರ್ಮೆಚರಪಾದಜಲಸೇಚನೆಯಲಂಪಿಂ

ಚಂಡಪುತ್ರ ವಿವಾದ

೧. ಮಂಗಳಕರಳೂ ಮನೋಹರಳೂ ಆದ ಪಾರ್ವತೀದೇವಿಯ ಕೇಶ ಸಮುದಾಯವೆಂಬ ಮೋಡಕ್ಕೆ ನವಿಲಿನಂತಿರುವವನೂ, ಅಸದೃಶವಾದ ಸದ್ಗುಣಗಳಿಗೆ ಆಧಾರಭೂತನೂ, ಪಾಪರಹಿತನೂ, ಅತ್ಯಂತ ಗಂಭೀರನೂ ಆದ ಶಿವಲಿಂಗನು ನಮ್ಮನ್ನು ರಕ್ಷಿಸಲಿ. ೨-೩. ಘನವಾದ ಮಾಧ್ವಸಿದ್ಧಾಂತ ವೆಂಬ ಕತ್ತಲೆಯನ್ನು ಹೋಗಲಾಡಿಸುವುದರಲ್ಲಿ ಸೂರ್ಯ ನಂತಿರುವವನೂ, ಪಾಂಚರಾತ್ರಮತವೆಂಬ ಪರ್ವತ ಗಳನ್ನು ಭೇದಿಸತಕ್ಕ ವಜ್ರಾಯುಧ ಪ್ರಾಯನೂ, ಸಮರ್ಥರಾದ ಜೈನಮತಸ್ಥರೆಂಬ ಪ್ರಸಿದ್ಧ ಆನೆಗಳಿಗೆ ಸಿಂಹಪ್ರಾಯನಾದವನೂ, ದುಷ್ಟರಾದ ಚಾರ್ವಾಕರೆಂಬ ಅರಣ್ಯಕ್ಕೆ ದೊಡ್ಡದಾದ ಕೊಡಲಿಯಂತಿರುವವನೂ, ಕುಟಿಲಬುದ್ಧಿಯಿಂದ ಕೂಡಿದ, ಶಾಸ್ತ್ರ ಬದ್ಧರೆಂಬ ಕಾನನಕ್ಕೆ ದಾವಾನಳಸ್ವರೂಪನೂ, ಗರ್ವದಿಂದ ಕೂಡಿದ ಅದ್ವೈತ ಮತ ವೆಂಬ ಮೋಡಗಳಿಗೆ ಬಿರುಗಾಳಿಯಂತಿರುವವನೂ ಆದ ಬಸವೇಶ್ವರನು ಒಮ್ಮೆ ಜಂಗಮ ಪೂಜೆಯಲ್ಲಿ, ಒಮ್ಮೆ ಶಿವಲಿಂಗಪೂಜಾ ಕಾರ್ಯದಲ್ಲಿ, ಒಮ್ಮೆ ಶಿವಮಂತ್ರವನ್ನು ಜಪಿಸುವ ಕಾರ್ಯದಲ್ಲಿನ ಪ್ರೀತಿಯಲ್ಲಿ, ಒಮ್ಮೆ ಶಿವಗಣಗಳ ಸೇವೆಮಾಡುವಿಕೆಯಲ್ಲಿ, ಒಮ್ಮೆ ಶಿವ ಭಾವದಲ್ಲಿ, ಒಮ್ಮೆ ಜಂಗಮರ ಪಾದೋದಕವನ್ನು ಸೇಚನೆಗೊಳಿಸಿ ಕೊಳ್ಳುವಿಕೆಯ ಸೊಗಸಿನಲ್ಲಿ, ಒಮ್ಮೆ ಪರಮತವಾದಿಗಳನ್ನು ಭಂಗಗೊಳಿಸುವಿಕೆಯಲ್ಲಿ, ಒಮ್ಮೆ ಶಿವಗಣ

ದೊರ್ವೆ ಪರಭಂಜನದಿನೊರ್ವೆ ಗಣರಂಜನದಿ
ನೊರ್ವೆ ಶಿವಸತ್ಕಥೆಯನಾಲಿಸುವ ಪೆಂಪಿಂ
ದೊರ್ವೆ ಚರತುಷ್ಟಿಗಳಿನೊರ್ವೆ ಗಣಗೋಷ್ಠಿಗಳಿ
ನೊರ್ವೆ ಶಿವಗೀತರಸದಿಂ ಮೆಱೆವುತಿರ್ದಂ ೩

ಅನುದಿನಮಿಂತೆಸೆವುತೆ ಜನ
ಪನ ಸಭೆಯೊಳ್ಗೆಲ್ದು ವಾದಿಸುವ ವಾದಿಗಳಂ
ಘನದೃಷ್ಟಪ್ರತ್ಯಯಮಂ
ಮನದೊಲವಿಂ ತೋಱಿ ಜಯಮನಾಳ್ದೊಪ್ಪಿರ್ದಂ ೪

ಶರಣರ ಚಿಂತಾಮಣಿ ಸ
ತ್ಪುರುಷರ ಸುರಧೇನು ಬುಧರ ಭಾಗ್ಯೋದಯಮು
ರ್ವರೆಯ ಪೊಸಸೈಪು ಭಕ್ತರ
ವರನಿಧಿ ಭಾವಕರ ಮುಕುರಮಾ ವೃಷಭೇಂದ್ರಂ ೫

ನೆನೆದನೆ ದೇವನೀಕ್ಷಿಸಿದನೇ ದಿವಿಪತ್ಪತಿ ತತ್ಪದಾಂಬುಜ
ಕ್ಕನುನಯದಿಂದೆ ಬಂದೆಱಗಿದಾತನೆ ಸಿದ್ಧನಲಂಪುವೆತ್ತು ಕೀ
ರ್ತನೆಯನೊಡರ್ಚಿದಾತನೆ ಗಣಾಗ್ರಣಿ ತತ್ಕರುಣಾರ್ದ್ರನೇತ್ರಪಾ
ವನರುಚಿಯಂ ಕರಂ ಪಡೆದನೇ ನಿಜಮುಕ್ತನಶೇಷ ಲೋಕದೊಳ್ ೬

ವ॥ ಎಂಬಸದೃಶ ಪ್ರಶಸ್ತಿಗಡರ್ಪಾಗಿ ಮಹಿಮಾಕರಂ ರಂಜಿಸಿರೆ ಮತ್ತಮಾ ಕಲ್ಯಾಣ ಕಟಕದಲ್ಲಿ—

ಸಮೂಹವನ್ನು ರಂಜನೆಗೊಳಿಸುವಿಕೆಯಲ್ಲಿ, ಒಮ್ಮೆ ಶಿವಸಂಬಂಧದ ಕಥೆಗಳನ್ನು ಕೇಳುವ ಹಿರಿಮೆಯಲ್ಲಿ, ಒಮ್ಮೆ ಜಂಗಮರನ್ನು ಸಂತುಷ್ಟಿಗೊಳಿಸುವಿಕೆಯಲ್ಲಿ, ಒಮ್ಮೆ ಶಿವಗಣಗಳ ಗೋಷ್ಠಿಯಲ್ಲಿ ಒಮ್ಮೆ ಶಿವಗೀತೆಗಳ ರಸದಲ್ಲಿ (ಕಾಲಯಾಪನೆಮಾಡುತ್ತ) ಶೋಭಿಸುತ್ತಿದ್ದನು. ೪. ಪ್ರತಿ ದಿನವೂ ಹೀಗೆ ಶೋಭಿಸುತ್ತ ರಾಜನಸಭೆಯಲ್ಲಿ ವಾದಮಾಡುವ ವಾದಿಜನಗಳನ್ನು ಗೆದ್ದು, ಶ್ರೇಷ್ಠವಾದ ಪ್ರತ್ಯಕ್ಷ ಪ್ರಮಾಣ (ಪವಾಡ) ಗಳನ್ನು ಮನಃಪೂರ್ವಕವಾಗಿ ತೋರಿಸಿ ಜಯವನ್ನು ಸಂಪಾದಿಸಿ ಒಪ್ಪಿದ್ದನು. ೫. ಶರಣಜನರ ಚಿಂತಾರತ್ನ, ಸತ್ಪುರುಷರ ಕಾಮಧೇನು, ಜ್ಞಾನಿಗಳ ಭಾಗ್ಯದ ಉದಯ, ಭೂಲೋಕದ ನೂತನವಾದ ಪುಣ್ಯ, ಭಕ್ತ ಜನರ ಶ್ರೇಷ್ಠ ಐಶ್ವರ್ಯ, ಧ್ಯಾನ ಮಾಡುವವರ ಕನ್ನಡಿ–ರೂಪನಾಗಿ ಆ ಬಸವೇಶ್ವರನಿದ್ದನು. ೬. ಸಮಸ್ತ ಲೋಕದಲ್ಲಿ (ಇಂಥ ಬಸವೇಶ್ವರನನ್ನು) ನೆನೆದವನೇ ದೇವತೆಯು ; ನೋಡಿದವನೇ ದೇವಲೋಕದ ಒಡೆಯನಾದ ದೇವೇಂದ್ರ ; ಅವನ ಪಾದಕಮಲಗಳಿಗೆ ಪ್ರೀತಿಯಿಂದ ಬಂದು ನಮಸ್ಕರಿಸಿದವನೇ ಸಿದ್ಧಪುರುಷನು ; ವೈಭವದಿಂದ ಕೂಡಿ ಸ್ತೋತ್ರವನ್ನು ಮಾಡಿದ ವನೇ ಶಿವಗಣ ಶ್ರೇಷ್ಠನು ; ಆತನ ಕರುಣಾರಸದಿಂದ ಆರ್ದ್ರಗೊಂಡ ನೇತ್ರಗಳ ಪವಿತ್ರ ಕಾಂತಿಯನ್ನು ಚೆನ್ನಾಗಿ ಪಡೆದವನೇ ಮುಕ್ತನೆನಿಸುವನು. ವ॥ ಹೀಗೆನ್ನುವ ಅಗಣಿತ ಕೀರ್ತಿಗೆ ಆಶ್ರಯನಾಗಿ ಮಹಿಮೆಗಳಿಗೆ ಆಗರನಾದ ಬಸವೇಶ್ವರನು ಶೋಭಿಸುತ್ತಿರಲು

ಕರುಣಾಳುಗಳನಘರ್ಗುರು
ಚರಶಿವಲಿಂಗೈಕನಿಷ್ಠರಮಳಿನಭಾವ
ರ್ಪರಮತಜಯಶೀಲಭರ್ಾ
ಸುರಗುಣರಪ್ರತಿಮವಿಭವರಭವನ ಶರಣರ್ ೭

ಮಾಚಯ್ಯಂ ಕೇಶಿರಾಜಂ ಮೊರಟದ ಕಲಿಬಂಕಯ್ಯನಾ ರುದ್ರದೇವಂ
ಕಾಚಯ್ಯಂ ಮಾಯಿಭಟ್ಟರ್ವಿಮಳಕದಿರ ರೇಮಯ್ಯನುಂ ಕಿನ್ನರಯ್ಯಂ
ಬಾಚಯ್ಯಂ ಮಲ್ಲಿನಾಥಂ ಮಧುವರಸನುಮಾದಯ್ಯನುಂ ಗೋಣಿ ಮಾರಂ
ಬೀಚಯ್ಯಂ ಭೋಗಿದೇವಂ ಕಲಿಗೆಲಸದ ಸೋವ[1]ಣ್ಣನಾ ಮಾದಿರಾಜಂ ೮

ಗಂಡಗತ್ತರಿ ನಾಚನಲ್ಲಮದೇವನಗ್ಘವಣಿಯ ಹೊನ್ನಯ್ಯಂ
ಮುಂಡು ಬೊಮ್ಮಯನಪ್ಪಿದೇವನಮಾತ್ಯ ಮಲ್ಲಯನೈಚಯ್ಯಂ
ಮಿಂಡ ಬೊ[2]ಮ್ಮಯನಜ್ಜ[3]ದಾಸಯನಾರ್ಯಮಂ ಕಲಕೇತಯ್ಯಂ
ಪಂಡಿತಯ್ಯನುಮುತ್ತಮಾಂಗದ ಕೇಶಿ ಜೇಡರ ದಾಸಯ್ಯಂ ೯

ಲಕ್ಕಯ್ಯಂ ಕಲಿ ಡೋಹರ
ಕಕ್ಕಯ್ಯಂ ಕಲ್ಲಿದೇವನುದರದ ರಾಮಂ
ಚಿಕ್ಕಯ್ಯಂ ಧೂರ್ಜಟಿಯಾ
ಯ್ದಕ್ಕಿಯ ಮಾರಯ್ಯನುರಗರಾಯಂ ಧವಳಂ ೧೦

ಸುರಗಿಯ ಚೌಡಯ್ಯಂ ಮಾ
ದರ ದೂಡಯ್ಯಂ ತೆಲುಂಗ ಜೊಮ್ಮಯ್ಯಂ ಡಿಂ
ಗರಿ ಮಲ್ಲಯ್ಯಂ ಕಾಲಾ
ಗ್ನಿರುದ್ರನೇಕಾಂತರಾಮಯ್ಯಂ ಕಪಿಲೇಶಂ ೧೧

ಆ ಕಲ್ಯಾಣನಗರದಲ್ಲಿ—೭–೧೯. ಕರುಣಾಶಾಲಿಗಳೂ, ಪಾಪಗಳಿಂದ ದೂರರಾದವರೂ, ಗುರು-ಲಿಂಗ-ಜಂಗಮ ಏಕನಿಷ್ಠಾಪರರೂ, ಪರಿಶುದ್ಧವಾದ ಭಾವವುಳ್ಳವರೂ, ಅನ್ಯ ಮತಗಳನ್ನು ಜಯಿಸುವುದೇ ಶೀಲವಾಗಿ ಉಳ್ಳವರೂ, ಪ್ರಕಾಶಮಾನವಾದ ಸದ್ಗುಣಗಳಿಂದ ಕೂಡಿದವರೂ, ಅಸದೃಶ ವೈಭವ ಸಂಪನ್ನರೂ ಪರಮೇಶ್ವರನ ಶರಣರೂ ಆದ ಮಡಿವಾಳ ಮಾಚಯ್ಯ, ಕೇಶಿರಾಜ, ಮೊರಟದ ಶೂರಬಂಕಯ್ಯ, ಆ ರುದ್ರದೇವ, ಕಾಚಯ್ಯ, ಮಾಯಿಭಟ್ಟರೂ, ಪರಿಶುದ್ಧ ಕದಿರ ರೇಮಯ್ಯ, ಕಿನ್ನರಿಬೊಮ್ಮಯ್ಯ, ಬಿಬ್ಬ ಬಾಚರಸ, ಮಲ್ಲಿನಾಥ, ಮಧುವರಸ, ಮಾದಯ್ಯ, ಗೋಣಿಯ ಮಾರಯ್ಯ, ಬೀಚಯ್ಯ, ಭೋಗಿದೇವ, ಶೂರಕಾರ್ಯನಿರತನಾದ ಸೋಮಣ್ಣ, ಮಾದಿರಾಜ, ಗಂಡುಗತ್ತರಿ ನಾಚಯ್ಯ, ಅಲ್ಲಮದೇವ, ಅಗ್ಗವಣಿ ಹೊನ್ನಯ್ಯ, ಮುಂಡು ಬೊಮ್ಮಯ್ಯ, ಅಪ್ಪಿದೇವ, ಅಮಾತ್ಯ ಮಲ್ಲಯ್ಯ. ಐಚಯ್ಯ, ಮಿಂಡ ಬೊಮ್ಮಯ್ಯ, ಅಜ್ಜ ದಾಸಯ್ಯ, ಆರ್ಯಮ, ಕಲಕೇತ ಬೊಮ್ಮಯ್ಯ, ಪಂಡಿತಯ್ಯ, ಉತ್ತಮಾಂಗದ ಕೇಶಿ, ಜೇಡರ

1 ಮ(ದ) 2 ಜೊ(ದ) 3 ಬ್ಬ(ಅ)

ಶಿವರಾತ್ರಿಯ ಸಂಕಣ್ಣಂ
ಕವಿಲೆಯ ಬೊಮ್ಮಯ್ಯನಮರಗುಂಡದ ದೇವಂ
ಚವರದ ಚಿಕ್ಕಯ್ಯಂ ಪ
ಲ್ಲವರಾಯುಂ ಸಿಂಗಿ ಬೊಪ್ಪಯುಂ ಶಿವದೇವಂ ೧೨

ಪಡಿಯುಱಿರುತ್ತಯುಂ ಪೊಱಿನ ವೇಮಯಯನಂಕದ ವೀರಸಂಗಯುಂ
ಬಡವರ ಬೊಮ್ಮಯುಂ ನಗೆಯ ಮಾರಯನುಂ ಗಣದಾಸ ಭೀಮಯುಂ
ನಿಡುಗುಡಿ ಮಾರನಂಬಿಗರ ಚೌಡಯನಿಂಡೆಯ ಬೊಮ್ಮನಪ್ಪಯುಂ
ಗೊಡಲದ ಮಲ್ಲಯುಂ ಬೆರಲ ಮಾರಯನೆಳ್ಚಱ ಮುಕ್ತಯಾಹ್ವಯಂ ೧೩

ಮುಸುಟಿಯ ಚೌಡಯ್ಯಂ ಬಾ
ಣಸ[1]ಭೀಮಯ್ಯಂ ನಿರಾಳದೇವಂ ಶಾಂತಂ
ದಸರಯ್ಯಂ ಗೊಗ್ಗಯ್ಯಂ
ಮಸಣಯ್ಯಂ ಮಲ್ಲಿನಾಥನಿಂಡೆಯ ಶಾಂತಂ ೧೪

ಕೂಗಿನ ಮಾರಯ್ಯಂ ಶಿವ
ನಾಗಯ್ಯಂ ಶಂಕರಯ್ಯನಡಪದ ರೇಚಂ
ರಾಗದ ಮಾರಂ ವೀರಂ
ಯೋಗದ ಶಾಂತಯ್ಯನಮೃತನಾಥಂ ಸಕಳಂ ೧೫

ದಾಸಯ್ಯ, ಲಕ್ಕಯ್ಯ, ಕಲಿಯಾದ ಡೋಹರ ಕಕ್ಕಯ್ಯ, ಕಲ್ಲಿದೇವ, ಉದರದ ರಾಮಯ್ಯ, ಚಿಕ್ಕಯ್ಯ, ಧೂರ್ಜಟಿ, ಆಯ್ದಕ್ಕಿಯ ಮಾರಯ್ಯ, ಉರಗರಾಯ. ಧವಳಯ್ಯ, ಸುರಗಿಯ ಚೌಡಯ್ಯ, ಮಾದರ ಧೂಳಯ್ಯ, ತೆಲುಗು ಬೊಮ್ಮಯ್ಯ, ಡಿಂಗರಿ ಮಲ್ಲಯ್ಯ, ಕಾಲಾಗ್ನಿರುದ್ರ, ಏಕಾಂತದ ರಾಮಯ್ಯ, ಕಪಿಲೇಶ, ಶಿವರಾತ್ರಿಯ ಸಂಕಣ್ಣ, ಕವಿಲೆಯ ಬೊಮ್ಮಯ್ಯ, ಅಮರಗುಂಡದ (ಮಲ್ಲಿಕಾರ್ಜುನ) ದೇವ, ಚವರದ ಚಿಕ್ಕಯ್ಯ, ಪಲ್ಲವರಾಯ, ಸಿಂಗಿಬೊಪ್ಪಯ್ಯ, ಶಿವದೇವ, ಪಡಿಹಾರಿ ಉತ್ತಣ್ಣ, ಪೊರನ ವೇಮಯ್ಯ, ಅಂಕದ ವೀರಸಂಗಯ್ಯ, ಬಡವರ ಬೊಮ್ಮಯ್ಯ, ನಗೆಯ ಮಾರಯ್ಯ, ಗಣದಾಸ ಭೀಮಯ್ಯ, ನಿಡುಗುಡಿ ಮಾರಯ್ಯ, ಅಂಬಿಗರ ಚೌಡಯ್ಯ, ಇಂಡೆಯ ಬೊಮ್ಮಯ್ಯ, ಅಪ್ಪಯ್ಯ, ಗೊಡಲದ ಮಲ್ಲಯ್ಯ, ಬೆರಲಮಾರಯ್ಯ, ಎಚ್ಚರ ಮುಕ್ತಯ್ಯ ಎಂಬ ಹೆಸರಿನವನು, ಮುಸುಟಿಯ ಚೌಡಯ್ಯ, ಬಾಣಸದ ಭೀಮಯ್ಯ, ನಿರಾಳದೇವ, ಶಾಂತಯ್ಯ, ದಸರಯ್ಯ, ಗೊಗ್ಗಯ್ಯ, ಮಸಣಯ್ಯ, ಮಲ್ಲಿನಾಥ, ಇಂಡೆಯ ಶಾಂತಯ್ಯ, ಕೂಗಿನ ಮಾರಯ್ಯ, ಶಿವನಾಗಯ್ಯ, ಶಂಕರಯ್ಯ, ಅಡಪದ ರೇಚಯ್ಯ, ರಾಗದ ಮಾರಯ್ಯ, ವೀರಯ್ಯ, ಯೋಗದ ಶಾಂತಯ್ಯ, ಅಮೃತನಾಥ, ಸಕಳೇಶ ಮಾದರಸ,

1 ಸು(ಗ)

ಶಂಕರದಾಸಂ ಸುಂಕದ
ಬಂಕಯ್ಯಂ ಕನ್ನಬೊಮ್ಮನೆಲ್ಲೇಶ್ವರ ಕೇ
ತಂ ಕಾಳಿಮರಸನುಂ ಶಿವ
ಲೆಂಕಯ್ಯಂ ನುಲಿಯ ಚಂದಯಂ ಗಣನಾಥಂ ೧೬

ಗುರುಭಕ್ತಂ ಗೋಡೆಮಲ್ಲಂ ಧರಣಿಯರಸನುಂ ಮಂಚಣಂ ಪೋತಿದೇವಂ
ಕರವಾಳ ಬ್ರಹ್ಮದೇವಂ ಸಗರದ ಕಲಿನಾಚಯ್ಯನುಂ ರೇವಯಂ ಭಾ
ಸ್ಕರದೇವಂ ಜಟ್ಟಿಮಾರಂ ಸುಗುಣಿ ಸಿಗುರ ಚಂದಯ್ಯನುಂ ರಾಮಯಂ ಶ್ರೀ
ಗಿರಿನಾಥಂ ವಿಶ್ವನಾಥಂ ಶಿಖರದರಸಮಲ್ಲಯ್ಯನಾ ರಾಚಮಲ್ಲಂ ೧೭

ವರಮರುಳ ಶಂಕರಂ ಜೋ
ದರ ಮಾಯಣ್ಣಂ ದಯಾಳು ಮೋಳಿಗೆ ಮಾರಂ
ಗುರುಲಿಂಗಯ್ಯ ಮು[1]ದ್ದಯ
ನುರುಲಿಂಗಂ ಪೆದ್ದಿ ವೀರಸೊಡ್ಡಳ ಬಾಚಂ ೧೮

ಅನಘರಿವರ್ಮೊದಲಾದತಿ
ಘನಮಹಿಮರ್ಭಕ್ತಚರಿತದೆಳ್ತರದಿರವಂ
ದಿನದಿನಮುಮೀಕ್ಷಿಸುತೆ ಪೆಂ
ಪಿನ ಮುದಮಂ ತಾಳ್ದು ಸುಖದಿನೊಪ್ಪುತ್ತಿರ್ದರ್ ೧೯

ಪರಮಶಿವಲೋಕಸುಖದಿಂ
ಪಿರಿದೀ ಸುಖಮೆಂದು ಮಾಣದಾ ಶರಣಸಮು

ಶಂಕರ ದಾಸಿಮಯ್ಯ, ಸುಂಕದ ಬಂಕಯ್ಯ, ಕನ್ನದ ಬೊಮ್ಮಯ್ಯ, ನೆಲ್ಲೇಶ್ವರ, ಕೇತಯ್ಯ, ಕಾಳಿಮರಸ, ಶಿವಲೆಂಕಯ್ಯ, ನುಲಿಯ ಚಂದಯ್ಯ, ಗಣನಾಥ, ಗುರುಭಕ್ತ, ಗೋಡೆ ಮಲ್ಲ, ಧರಣಿಯ ಅರಸ, ಮಂಚಣ್ಣ, ಪೋತಿದೇವ, ಕರವಾಳ ಬ್ರಹ್ಮದೇವಯ್ಯ, ಸಗರದ ಕಲಿನಾಚಯ್ಯ, ರೇವಯ್ಯ, ಭಾಸ್ಕರದೇವ (ಬಾಚರಸದೇವ), ಜಟ್ಟಿಮಾರಯ್ಯ, ಸದ್ಗುಣಿಯಾದ ಸಿಗುರ ಚಂದಯ್ಯ, ರಾಮಯ್ಯ, ಶ್ರೀಗಿರಿನಾಥ, ವಿಶ್ವನಾಥ, ಶಿಖರದರಸನಾದ ಮಲ್ಲಯ್ಯ, ಆ ರಾಚಮಲ್ಲಯ್ಯ, ಶ್ರೇಷ್ಠ ಮರುಳಶಂಕರದೇವ, ಜೋದರ ಮಾಯಣ್ಣ, ದಯಾಳುವಾದ ಮೋಳಿಗೆ ಮಾರಯ್ಯ, ಗುರುಲಿಂಗಯ್ಯ, ಮುದ್ದಯ್ಯ, ಉರಿಲಿಂಗಪೆದ್ದಿ, ವೀರನಾದ ಸೊಡ್ಡಳ ಬಾಚರಸ—ಇವರೇ ಮೊದಲಾದ ಪಾಪರಹಿತರೆನಿಸಿದ ಅತ್ಯಂತ ಘನಮಹಿಮಾಶಾಲಿಗಳು ಬಸವಣ್ಣನ ಶಿವಭಕ್ತಿ ಮಾರ್ಗಾಚರಣೆಯಲ್ಲಿ ಉತ್ಕೃಷ್ಟತೆಯಿಂದ ಕೂಡಿ ಇರುವಿಕೆಯನ್ನು ದಿನದಿನವೂ ನೋಡುತ್ತ ಹಿರಿದಾದ ಸಂತೋಷವನ್ನು ಹೊಂದಿ ಸುಖದಿಂದ ಶೋಭಿಸುತ್ತಿದ್ದರು. ೨೦. ಶ್ರೇಷ್ಠವಾದ ಶಿವಲೋಕದ ಸುಖಕ್ಕಿಂತಲೂ, ಈ ಸುಖವೇ ಹಿರಿದಾದುದೆಂದು ತಪ್ಪದೆ ಈ ಎಲ್ಲ ಶರಣ ಸಮುದಾಯ

---

1 ಮು(ದ, ಗ)

ತ್ಕರದೊಡನಾಡುತೆ ಪಾಡುತೆ
ವರಭಕ್ತಿ ಸುಧಾಬ್ಧಿರಂಜಿಸಿರ್ದಂ ಬಸವಂ ೨೦

ವ॥ ಇಂತು ಶರಣಸ್ರ್ಸುಖವಿರ್ಪಿನಮಲ್ಲಿ ಪೆಱತೊಂದು ದಿವಸಂ—

ಪಂಡಿತವರ್ಯಭಸಿತಸು
ಮಂಡಿತ ರುದ್ರಾಕ್ಷಭೂಷಿತಾಂಗರ್ಗಿರಿಕೋ
ದಂಡಸ್ತುತಿಪಾಠಕರು
ದ್ದಂಡರ್ಚಂಡೇಶ್ವರೌಜಸರ್ವಾಕ್ಪಟುಗಳ್ ೨೧

ಪರಮು ಶ್ರೀಕಂಠ ಶಿವ
ಗುರುಲಿಂಗ ಶಿವರ್ಮಹೇಶ ಶಿವರತಿಬಳ ಶಂ
ಕರ ಶಿವರೀಶಾನ ಶಿವ
ಗಿರಿಶ ಶಿವಲೋಕನಾಥ ಶಿವರೀಶ ಶಿವರ್ ೨೨

ವರಪಶುಪತಿ ಶಿವರಂಗಜ
ಹರ ಶಿವರಾ ನೀಲಕಂಠ ಶಿವರುಂ ಗಂಗಾ
ಧರ ಶಿವರುಗ್ರಾಂಬಕ ಶಿವ
ರುರುಸದ್ಯೋಜಾತಮೂರ್ತಿ ಶಿವರಭವ ಶಿವರ್ ೨೩

ಹರ ಶಿವರುಂ ತ್ರಿಲೋಚನ ಶಿವರ್ಪರಮಾತ್ಮ ಶಿವರ್ಶಶಾಂಕಶೇ
ಖರ ಶಿವರಧ್ವರಾರಿ ಶಿವರಂಜಿತಶಂಭು ಶಿವರ್ಗಜಾಜಿನಾಂ
ಬರ ಶಿವರಧ್ವನಾಥಶಿವರುದ್ಯದಘೋರಶಿವರ್ಕೃತಾಂತ ಸಂ
ಹರ ಶಿವರುಗ್ರಭೂತಿ ಶಿವರಂಧಕವೈರಿ ಶಿವರ್ಮಹಾಶಿವರ್ ೨೪

ದೊಡನೆ ವ್ಯವಹರಿಸುತ್ತ, ಶಿವಸ್ತೋತ್ರಾದಿಗಳನ್ನು ಮಾಡುತ್ತ ಶ್ರೇಷ್ಠ ಶಿವಭಕ್ತಿಯೆಂಬ ಕ್ಷೀರ ಸಮುದ್ರದೋಪಾದಿಯಲ್ಲಿರುವ ಬಸವಣ್ಣನು ಶೋಭಿಸುತ್ತಿದ್ದನು. ವ॥ ಈ ರೀತಿ ಶರಣರೆಲ್ಲ ಆ ಕಲ್ಯಾಣ ನಗರದಲ್ಲಿ ಸುಖದಿಂದ ಇರುತ್ತಿರುವಾಗ ಬೇರೊಂದು ದಿವಸ—೨೧–೨೪. ಪಂಡಿತ ಶ್ರೇಷ್ಠರೂ, ಭಸ್ಮಧಾರಣದಿಂದ ಅಲಂಕಾರಗೊಂಡವರೂ, ರುದ್ರಾಕ್ಷಿಗಳ ತೊಡಿಗೆಯಿಂದ ಭೂಷಣಗೊಂಡ ಶರೀರವುಳ್ಳವರೂ, ಪರಶಿವನ (ಮೇರು ಪರ್ವತವನ್ನೇ ಬಿಲ್ಲಾಗಿ ಉಳ್ಳವನ) ಸ್ತೋತ್ರವನ್ನೂ ಪಠಿಸುವವರೂ, ಬಹು ಶ್ರೇಷ್ಠವಾದ ಚಂಡೇಶ್ವರನೋಪಾದಿಯಲ್ಲಿ ಪರಾಕ್ರಮವುಳ್ಳವರೂ. ಮಾತನಾಡುವುದರಲ್ಲಿ ಸಮರ್ಥರೂ ಆದ ಪವಿತ್ರ, ಶ್ರೀಕಂಠಶಿವ, ಗುರುಲಿಂಗಶಿವ, ಮಹೇಶಶಿವ, ಅತಿ ಬಲವಂತರಾದ ಶಂಕರಶಿವ, ಈಶಾನಶಿವ, ಗಿರೀಶ ಶಿವ, ಲೋಕನಾಥ ಶಿವ, ಶ್ರೇಷ್ಠ ಪಶುಪತಿ ಶಿವ, ಮನ್ಮಥನಾಶಕ ಶಿವ, ಆ ನೀಲಕಂಠಶಿವ, ಗಂಗಾಧರ ಶಿವ, ಉಗ್ರಾಂಬಕ ಶಿವ, ಶ್ರೇಷ್ಠ ಸದ್ಯೋಜಾತಮೂರ್ತಿ ಶಿವ, ಅಭವಶಿವ, ಹರಶಿವ, ತ್ರಿಲೋಚನ ಶಿವ, ಪರಮಾತ್ಮ ಶಿವ, ಶಶಾಂಕಶೇಖರ ಶಿವ, ಅಧ್ವರಾರಿ ಶಿವ, ರಂಜಿತ ಶಂಭುಶಿವ, ಗಜ

ಪರಮಾನಂದ ಶಿವರ್ತ
ತ್ಪುರುಷ ಶಿವರ್ವಾಮದೇವ ಶಿವರಮಳ ಶಿವ
ರ್ಪುರರಿಪು ಶಿವರಘಹರ ಶಿವ
ರುರಃನಿಷ್ಕಲಶಿವರಜಾತ ಶಿವರಮೃತಶಿವರ್ ೨೫

ವ॥ ಎಂಬಿವರ್ಮೊದಲಾದ ಶೈವಶಾಸನಧರರೆಲ್ಲರ್ನೆರೆದು ಬಿಜ್ಜಳೇಂದ್ರನೆಡೆಗೆಳ್ತಂದು ಸಂದಣಿಸಿ ನಿಂದು—

ಮಾನವಪತಿ ಕೇಳ್ಧರ್ಮಯ
ಶೋನಿಧಿ ನೀನರಸುಗೆಯ್ವ ಕಾಲದೊಳೊದವಿ
ತ್ತೀನಗರದೊಳನ್ಯಾಯಮ
ನೂನಮಿದಂ ನೀನೆ ನೆಱೆ ವಿಚಾರಿಪುದೀಗಳ್ ೨೬

ಧರೆಯೊಳಗೆ ಸಲ್ವುದೆಮಗೀ
ಪುರಹರನ ಘನಪ್ರಸಾದಮೆಮ್ಮಯ ಚಂಡೇ
ಶ್ವರನಿದನೀಶ್ವರನಿಕಟದೊ
ಳಿರದಂದೆಮಗಿತ್ತನೆಮ್ಮ ಸೊಮ್ಮಿದು ನೃಪತೀ ೨೭

ಪರಮ ಬ್ರಾಹ್ಮಣನಿಂದೆ ಪುಟ್ಟಿದನವಂ ಚಂಡೇಶ್ವರಂ ಚಂಡ ಭಾ
ಸ್ಕರತೇಜಂ ಜನಕಾಜ್ಞೆಯಿಂ ಪಶುಗಳಂ ತಾಂ ಕಾವುತಿರ್ದಳ್ಕಱೊಂ
ದಿರೆ ಭಾಸ್ವತ್ತಟಿನೀತಟಂಬಿಡಿದು ಬಂದೋರಂತೆ ತದ್ವಾಲುಕೋ
ತ್ಕರದಿಂ ನಿರ್ಮಿಸಿ ಲಿಂಗಮಂ ಕಱೆದನಾ ಗೋವೃಂದದಿಂ ಪಾಲ್ಗಳಂ ೨೮

ಚರ್ಮಾಂಬರ ಶಿವ, ಅಧ್ವನಾಥ ಶಿವ, ಶ್ರೇಷ್ಠ ಅಘೋರಶಿವ, ಯಮಸಂಹಾರ ಶಿವ, ಉಗ್ರಭೂತಿ ಶಿವ, ಅಂಧಕವೈರಿ ಶಿವ, ಮಹಾಶಿವ, ಪರಮಾನಂದ ಶಿವ, ತತ್ಪುರುಷ ಶಿವ, ವಾಮದೇವ ಶಿವ, ಅಮಳ ಶಿವ, ಪುರರಿಪುಶಿವ, ಅಘಹರಶಿವ, ಶ್ರೇಷ್ಠ ನಿಷ್ಕಲ ಶಿವ, ಅಜಾತ ಶಿವ, ಅಮೃತ ಶಿವ ವ॥ ಎಂಬುವವರೇ ಮೊದಲಾದ ಶಿವಶಾಸನವನ್ನು ಧರಿಸಿದವರಾದವರೆಲ್ಲರೂ ಸೇರಿ, ಬಿಜ್ಜಳ ಭೂಪಾಲನಲ್ಲಿಗೆ ಹೊರಟುಬಂದು ಗುಂಪಾಗಿ ನಿಂತುಕೊಂಡು—೨೬. ನರೇಂದ್ರನೇ ಕೇಳು, ಧರ್ಮದಿಂದುಂಟಾಗುವ ಯಶಸ್ಸೇ ಸಂಪತ್ತೆಂದು ಭಾವಿಸಿರುವ ನೀನು ರಾಜ್ಯಭಾರ ಮಾಡುವ ಕಾಲದಲ್ಲಿ ಈ ಕಲ್ಯಾಣ ನಗರದಲ್ಲಿ ವಿಶೇಷವಾದ ಅನ್ಯಾಯವು ಉಂಟಾಗಿರುವುದು. ಇದನ್ನು ನೀನೇ ಈಗ ಚೆನ್ನಾಗಿ ವಿಚಾರಮಾಡಬೇಕು. ೨೭. ಮಹಾರಾಜಾ, ಪರಮೇಶ್ವರನ ಶ್ರೇಷ್ಠ ಪ್ರಸಾದವು ಈ ಭೂಮಿಯಲ್ಲಿ ನಮಗೇ ಸಲ್ಲಬೇಕು. ನಮ್ಮ ಚಂಡೇಶ್ವರನೆಂಬುವನು ಶಿವನ ಸಮೀಪದಲ್ಲಿದ್ದಾನೆ. ಅವನು ನಮಗೆ ತಪ್ಪದೆ ಈ ಪ್ರಸಾದವನ್ನು ಕೊಟ್ಟಿದ್ದಾನೆ. ಆದ್ದರಿಂದ (ಈ ಪ್ರಸಾದವು) ನಮ್ಮ ಸೊತ್ತಾಗಿದೆ. ೨೮. ಆ ಚಂಡೇಶ್ವರನು ಶ್ರೇಷ್ಠ ಬ್ರಾಹ್ಮಣನಿಂದ ಹುಟ್ಟಿದವನು. ಪ್ರಚಂಡ ಸೂರ್ಯ ತೇಜಸ್ಸಿನಿಂದ ಕೂಡಿದ ತಂದೆಯ ಆಜ್ಞೆಯಂತೆ ಆ ಚಂಡೇಶ್ವರನು ಪ್ರೀತಿಯಿಂದ ನದಿಯ ತೀರದಲ್ಲಿ ಪಶುಗಳನ್ನು ಕಾಯುತ್ತಿದ್ದನು. ಅಲ್ಲಿ ಏಕಪ್ರಕಾರವಾಗಿ (ಪ್ರತಿದಿವಸವೂ) ಮಳಲ ಲಿಂಗವನ್ನು ನಿರ್ಮಾಣ ಮಾಡಿ, ಆ ಲಿಂಗದ ಮೇಲೆ ತನ್ನ ಗೋವುಗಳ ಹಾಲನ್ನು ಕರೆಯುತ್ತಿದ್ದನು.

ವ॥ ಅಂತು ಕಱೆದಾ ಲಿಂಗಕ್ಕಭಿಷೇಕಂಗೆಯ್ದು ಪೂಜಿಸುತ್ತುಮಿರ್ಪಿನಮೊಂದುದಿನಂ ಜನಕ ನಲ್ಲಿಗೇಳ್ತಂದದಂ ಕಂಡು ಸೈರಿಸಲಾಱದೆ—

ಮದದಿಂ ದ್ವಿಜನಾ ಲಿಂಗಮ
ನೊದೆಯೆ ಕರಂ ಕಂಡು ಕಾಯ್ದು ಕೆಯ್ಗೊಡಲಿಯಿನಾ
ರ್ದೊದಱುತ್ತುಂ ಕೆಡೆ ಕೆಡೆಯೆನು
ತದಟಿಂ[1] ತಲೆಗಡಿದುರುಳ್ಚಿದಂ ನಿಜಪಿತನಂ ೨೯

ಸುರಿದುದು ಪೂಮಳೆ ಸುರಪಟ
ಹರವಂ ಪೊಣ್ಮಿದುದು ಮಚ್ಚಿ ಮನವೊಲ್ದು ಮಹೇ
ಶ್ವರನಾಗಳ್ನಿಜರೂಪಂ
ಧರಿಯಿಸಿ ಗಿರಿಜಾಸಮೇತನೀಕ್ಷಿಸಿ ದಯೆಯಿಂ ೩೦

ದಂಡಪ್ರಣಾಮಮೆಸಗಿದ
ಚಂಡೇಶಂಗಿಂದಿರೇಂದ್ರವಾಣೀರಮಣಾ
ಖಂಡಲದುರ್ಲಭಮೆನಿಸುವ
ಖಂಡರುಚಿ ನಿಜಪ್ರಸಾದಮಂ ಕರುಣಿಸಿದಂ ೩೧

ವ॥ ತತ್ಪ್ರಸಾದಾಸ್ವಾದನಜನಿತಘನಮಹತ್ವದಿಂ ಹರಿಚತುರ್ಮುಖ ಮುಖ್ಯ ಹವಿರ್ಮುಖರಿಂ ವಂದ್ಯಮಾನನಾದ ಚಂಡೇಶ್ವರನ ರೋಮಾಂಚಕಂಚುಕಿತಾಂಗದ ರೋಮಕೂಪಂಗಳಿನದ್ಭುತಮಾಗೆ

ವ॥ ಈ ರೀತಿ ಆಕಳುಗಳ ಹಾಲನ್ನು ಕರೆದು ಲಿಂಗಕ್ಕೆ ಅಭಿಷೇಕಮಾಡಿ, ಪೂಜಿಸುತ್ತಿರುವಾಗ ಒಂದು ದಿನ ಆತನ ತಂದೆಯು ಅಲ್ಲಿಗೆ ಬಂದು, (ಮಗನ ಈ ರೀತಿಯನ್ನು) ಕಂಡು ತಡೆಯಲಾರದೆ—೨೯. ಆ ಬ್ರಾಹ್ಮಣನು ಗರ್ವದಿಂದ, (ಮಳಲ) ಲಿಂಗವನ್ನು ಒದ್ದನು. ಇದನ್ನು ಕಂಡು ಚಂಡೇಶನು ನೆಲಕ್ಕೆ ಬೀಳು ಬೀಳೆನ್ನುತ್ತ ಗಟ್ಟಿಯಾಗಿ ಗರ್ಜಿಸುತ್ತ ಪರಾಕ್ರಮ ವಿಶಿಷ್ಟನಾಗಿ ಕಯ್ಯಲ್ಲಿರುವ ಕೊಡಲಿಯಿಂದ ತಂದೆಯ ತಲೆಯನ್ನು ಕಡಿದು ಉರುಳಿಸಿದನು. ೩೦. ಆಗ ದೇವಲೋಕದಿಂದ ಹೂಮಳೆ ಕರೆಯಿತು. ದೇವ ದುಂದುಭಿಗಳ ಧ್ವನಿಯು ಹೊರಹೊಮ್ಮಿತು. ಗಿರಿಜಾ ಸಮೇತನಾಗಿ ಪರಮೇಶ್ವರನು ತನ್ನ ರೂಪವನ್ನು ತೋರಿಸಿ, (ಚಂಡೇಶನನ್ನು) ದಯೆಯಿಂದ ನೋಡಿದನು. ೩೧. ದೀರ್ಘದಂಡ ಪ್ರಣಾಮವನ್ನು ಮಾಡಿದ ಚಂಡೇಶನಿಗೆ ಲಕ್ಷ್ಮೀ ರಮಣನಾದ ವಿಷ್ಣು, ಸರಸ್ವತೀ ರಮಣನಾದ ಬ್ರಹ್ಮ, ದೇವೇಂದ್ರಾದಿ ದೇವತೆಗಳಿಗೂ ಕೂಡ ಲಭ್ಯವಾಗಲು ಅಸಾಧ್ಯನೆನಿಸಿದ ಅಖಂಡ ತೇಜೋವಿಶಿಷ್ಟನಾದ ಪರಮೇಶ್ವರನು ತನ್ನ ಪ್ರಸಾದವನ್ನು ಕರುಣಿಸಿದನು. ವ॥ ಪರಶಿವನ ಪ್ರಸಾದ ಸೇವನೆಯ ಶ್ರೇಷ್ಠ ಮಾಹಾತ್ಮ್ಯೆಯಿಂದ ವಿಷ್ಣು ಬ್ರಹ್ಮರೇ ಮುಖ್ಯರಾದ ದೇವತೆಗಳಿಂದ (ಆಗ) ಆ ಚಂಡೇಶ್ವರನು ನಮಸ್ಕಾರ

1 ಟಂ(ಮು)

ಕಲಂಬರ್ಗಣಂಗಳೊಗೆದು ಲಲಿತಪದಪ್ರಸನ್ನಸಂದರ್ಭ ಪ್ರೌಢಚಿತ್ರಾರ್ಥಗರ್ಭಿತ ಗದ್ಯಪದ್ಯಂಗಳಿಂ ಪೊಗಳೆ ಸಂತುಷ್ಟನಾಗಿ ಹರದತ್ತನಿಜಪ್ರಸಾದಮನವರ್ಗೆ ಚಂಡೇಶ್ವರನಿತ್ತನನಂತರಂ—

ತನ್ನಂ ಪೊಗಳ್ವನಿತಜರ್ಕೊಳವ
ರುನ್ನತ ವಾಕ್ಪಟುತೆಗೊಲ್ದು ನಿಜವಂದಿತೆಯುಂ
ಪನ್ನಗಭರಣಂ ಕರುಣಿಸಿ
ದನ್ನಿಜವಮುಂದಿಂದೆ ಶಿವನ ವಂದಿಗಳಾದರ್ ೩೨

ಶಿವನವರ್ಗೆ ಮತ್ತಮಿತ್ತಂ
ಜವದಿಂ ಪುರಗೇಹಲಿಂಗಭಜಕತ್ವಮನೊ
ಪ್ಪುವ ಕಾಳೀ ಗಣಪತಿ ಭೈ
ರವರಂ ಪೂಜಿಸುವ ಕಜ್ಜಮುಮನೆಲ್ಲೆಡೆಯೊಳ್ ೩೩

ಜನಿಯಿಸಿದೆವವರ ವಂಶದೊ
ಳೆನಿಸುಂ ಕೇಳದಜರ್ನಿಮ್ಮ ಸೊಮ್ಮಪ್ಪುದು ಪಾ
ವನತರ ಶಿವಪ್ರಸಾದಂ
ಮನುಜಾಧಿಪ ವೀರಶೈವರೀ ಪುರವರದೊಳ್ ೩೪

ಕುಡದೆಮಗೆ ತಾವೆ ಭುಂಜಿಪ
ರೆಡೆಯುಡುಗದೆ ಬಿಜ್ಜಳೇಂದ್ರ ಬಸವನ ಬಲದಿಂ

ಮಾಡಿಸಿಕೊಂಡನು. ಅವನ ದೇಹವು ಅದ್ಭುತವೆನ್ನುವಂತೆ ರೋಮಾಂಚನಗೊಂಡು ಅದೇ ಅವನ ದೇಹಕ್ಕೆ ಕವಚವೋ ಎನ್ನುವಂತಾಯಿತು. ಕೆಲವು ಜನ ದೇವಗಣಗಳು ಆಗ ಹುಟ್ಟಿ, ಲಲಿತವಾದ ಶಬ್ದಗಳಿಂದ ಮನಾನಂದಗೊಳಿಸುವ ಆ ಸಂದರ್ಭವನ್ನು ಪ್ರೌಢವೂ, ವಿಚಿತ್ರವೂ, ಅರ್ಥಗರ್ಭಿತವೂ ಆದ ಗದ್ಯಭಾಗದಿಂದಲೂ, ಪದ್ಯಭಾಗ ದಿಂದಲೂ ಹೊಗಳಿದರು. ಇದರಿಂದ ಸಂತೋಷಗೊಂಡ ಚಂಡೇಶನು ಪರಮೇಶ್ವರ ನಿಂದ ತನಗೆ ಕೊಡಲ್ಪಟ್ಟ ಪ್ರಸಾದವನ್ನು ಅವರೆಲ್ಲರಿಗೂ ಕೊಟ್ಟನು. ಅನಂತರ—
೩೨. ಶಿವನು ತನ್ನನ್ನು ಹೊಗಳಿದನಂತರ (ಹೊಗಳಿದ) ಅವರ ಉತ್ಕೃಷ್ಟವಾದ ಮಾತು ಗಳ ಸಾಮರ್ಥ್ಯಕ್ಕೆ ಸಂತೋಷಗೊಂಡು ತನ್ನ ಸ್ತುತಿ ಪಾಠಕರಾಗಿರುವಂತೆ ಕರುಣಿಸಿದನು. ಅಂದಿನಿಂದ ಅವರು ಶಿವನ ಕೈಲಾಸ ಮಂದಿರದ ಸ್ತುತಿಪಾಠಕ (ವಂದಿ) ರೆನಿಸಿದರು.
೩೩. ಇದಲ್ಲದೆ ಅವರಿಗೆ ಶಿವನು ಶೀಘ್ರವಾಗಿ ಎಲ್ಲ ಕಡೆಯೂ ಪಟ್ಟಣಗಳಲ್ಲಿರುವ ಶಿವಾಲಯಗಳಲ್ಲಿನ ಶಿವಲಿಂಗಗಳ ಪೂಜಿಸುವ ಕಾರ್ಯವನ್ನೂ, ಶೋಭಿಸುವ, ಕಾಳಿಕಾ ದೇವಿ, ಗಣಪತಿ, ಭೈರವ ದೇವತೆಗಳ ಪೂಜಿಸುವ ಕಾರ್ಯವನ್ನು ದಯಪಾಲಿಸಿದನು.
೩೪–೩೫. ನಾವೆಲ್ಲರೂ ಅಂಥ ಶಿವನಿಂದಲೇ ನೇಮಿಸಲ್ಪಟ್ಟ ಪೂಜಾರಿಗಳ ವಂಶದಲ್ಲಿ ಹುಟ್ಟಿದವರು. ಮಹಾರಾಜಾ ಕೇಳು : ಪವಿತ್ರವಾದ ಆ ಶಿವಪ್ರಸಾದವೆಲ್ಲ ನಿಜವಾಗಿ ನಮ್ಮ ಸೊತ್ತಾದುದಾಗಿದೆ. ವೀರಶೈವರು ಈ ಶ್ರೇಷ್ಠವಾದ ಕಲ್ಯಾಣನಗರದಲ್ಲಿ

ನುಡಿಯಲಜಿದೆವುಗೆ ಭಕ್ತರ
ಕಡುಬಿಂಕವ:ನಿಂದು ನೀನೆ ಕುಡಿಸೆಸೆ ಜನಪಂ ೩೫

ವ॥ ಬಸವರಸನಾನನಮಂ ನಿರೀಕ್ಷಿಸುತ್ತುಮಿವರ ಸೊಮ್ಮಪ್ಪ ಶಿವಪ್ರಸಾದಮನಿವರ್ಗೀಯದೆ ನೀಮೆ ಭುಂಜಿಪುದನ್ಯಾಯಮೆಂಬುದುಮಾ ವೃಷಭೇಂದ್ರನಾ ಚಂಡಪುತ್ರರ್ಗಭಿಮುಖನಾಗಿ—

ಚಂಡಕುಲಪ್ರಭೂತರಿರ ಕೇಳಿರೆ ನಿಮ್ಮಯ ಶೌರ್ಯಮಿರ್ಕೆ ಭೂ
ಮಂಡಲದೊಳ್ನರಾಮರಮುನಿಪ್ರವರಾಬ್ಜಭವಪ್ರತಿಷ್ಠಿತೋ
ದ್ದಂಡ ಗಿರೀಶಲಿಂಗತತಿಯೊಳ್ಸಲೆ ಸಲ್ವುದು ತತ್ಪ್ರಸಾದಮಾ
ಚಂಡಗಣೇಶ್ವರಂಗುಳಿದ ಲಿಂಗಸಮೂಹದೊಳೆಂತು ಸಲ್ವುದೋ ೩೬

ಚರಲಿಂಗ ಬಾಣಲಿಂಗ
ಸ್ಫುರಿತ ಸುವರ್ಣಾದಿಲಿಂಗ ಮಣಿಲಿಂಗ ಸಮು
ತ್ಕರ ದೊಳ್ಸ್ವಯಂಭುವಿನೊಳಂ
ದೊರೆಯದು ಚಂಡಂಗೆ ತತ್ಪ್ರಸಾದವಿಭುತ್ವಂ ೩೭

ಬಾಣಲಿಂಗೇ ಚರೇ ಲೋಹೇ ರತ್ನಲಿಂಗೇ ಸ್ವಯಂಭುವಿ
ಪ್ರತಿಮಾಸು ಚ ಸರ್ವಾಸು ನ ಚಂಡೋಽಧಿಕೃತೋ ಭವೇತ್ ॥

ಅಂಥಪ್ರಸಾದವನ್ನು ಬಸವಣ್ಣನ ಬಲದಿಂದ ನಮಗೆ ಸ್ವಲ್ಪ ಪಡೆಯಲಿಕ್ಕೆ ಅವಕಾಶ ಕೊಡದ ಹಾಗೆ ತಾವು ತಾವೇ ಪಡೆದುಕೊಳ್ಳುತ್ತಿದ್ದಾರೆ. ಇಲ್ಲಿನ ಭಕ್ತರಲ್ಲಿರುವ ಮಹಾ ಗರ್ವವು ನಮಗೆ ಮಾತನಾಡಲು ಶಕ್ಯವಿಲ್ಲದುದಾಗಿದೆ. ಬಿಜ್ಜಳೇಂದ್ರನೇ, ನಮಗೆ ನಮ್ಮ ಆ ಪ್ರಸಾದವನ್ನು ನೀನೇ ಕೊಡಿಸಬೇಕು ಎಂದರು. ಆಗ ಬಿಜ್ಜಳನು ವ॥ ಬಸವರಸನ ಮುಖವನ್ನು ನೋಡುತ್ತ (ಬಸವೇಶ್ವರನೇ,) ಇವರ ಸೊತ್ತಾಗಿರುವ ಶಿವಪ್ರಸಾದವನ್ನು ಇವರಿಗೆ ಕೊಡದೆ ನೀವುಗಳೇ ಭುಂಜಿಸುತ್ತಿರುವುದು ಅನ್ಯಾಯ ಎನ್ನಲಾಗಿ ಆ ಬಸವೇಶ್ವರನು ಆ ಚಂಡೇಶ ಪುತ್ರರೆನಿಸಿದವರ ಎದುರಿಗೆ ಮುಖ ತಿರುಗಿಸಿ ೩೬. ಎಲೈ ಚಂಡೇಶನ ವಂಶದಲ್ಲಿ ಜನಿಸಿದವರೇ, ನಿಮ್ಮ ಈ ಶೌರ್ಯವು ಒತ್ತಟ್ಟಿಗಿರಲಿ ಕೇಳಿರಿ, ಈ ಭೂಮಂಡಲದಲ್ಲಿ ಮನುಷ್ಯರು, ದೇವತೆಗಳು, ಮುನಿಶ್ರೇಷ್ಠರು, ಬ್ರಹ್ಮನೇ ಮೊದಲಾದವರಿಂದ ಸ್ಥಾಪಿಸಲ್ಪಟ್ಟ ಉತ್ಕೃಷ್ಟವಾದ ಶಿವಲಿಂಗಗಳ ಸಮೂಹದಲ್ಲಿನ ಶಿವಪ್ರಸಾದವು ಆ ಚಂಡೇಶ್ವರನಿಗೆ ನಿಜವಾಗಿ ಸಲ್ಲುವುದು. ಉಳಿದ ಲಿಂಗಸಮೂಹಗಳ ಪ್ರಸಾದ ಹೇಗೆ ಸಿಗುವುದಕ್ಕೆ ಸಾಧ್ಯ. ೩೭. ಜಂಗಮಲಿಂಗ, ಬಾಣಲಿಂಗ, ಪ್ರಕಾಶಿಸುವ ಸುವರ್ಣವೇ ಮೊದಲಾದ ಲೋಹಗಳಿಂದ ಮಾಡಿದಲಿಂಗಗಳಲ್ಲಿ. ರತ್ನ ನಿರ್ಮಿತಲಿಂಗಗಳ ಸಮೂಹದಲ್ಲಿ, ತಾನಾಗಿ ಪಡಿಮೂಡಿದ ಲಿಂಗದಲ್ಲಿ ಚಂಡೇಶ್ವರನಿಗೆ ಆ ಪ್ರಸಾದ ಸ್ವಾಮಿತ್ವವು ಲಭ್ಯವಾಗುವುದಿಲ್ಲ. ॥ವ॥ ಮತ್ತು ॥ಶ್ಲೋಕ ॥—ಶೈವಾಗಮದಲ್ಲಿ

ವ॥ ಇಂತೆಂಬ ಶೈವಾಗಮವಚನದಿಂದಱಿಯಲ್ಪಡುವುದು ಕಾರಣಮಾವೆಡೆಯೊಳ್ಚಂಡಂಗಧಿಕಾರಮಾಯೆಡೆಯೊಳ್ನಿಮಗೆ ಶಿವಪ್ರಸಾದಂ ಸಲ್ಗುಮುಳಿದೆಡೆಯೊಳೆಂತುಂ ಸಲ್ಲದೆನೆ ಚಂಡಪುತ್ರರದಕ್ಕೆ ಮಾರ್ಕೊಂಡು—

ದ್ರಾಕ್ಷಾರಾಮ ಶ್ರೀಗಿರಿ
ಲಕ್ಷಿತಕಾಂಚೀಲಸಚ್ಚಿದಂಬರಪುರಮು
ಖ್ಯಕ್ಷೇತ್ರಂಗಳೊಳೆಮಗ
ಧ್ಯಕ್ಷತೆಯೊಳವೀ ವಿಶೇಷಭೋಜನವಿಧಿಯೊಳ್ ೩೮

ಅದಱಿಂ ಸಲ್ಗುಂ ಪೊದಳ್ದಿಲ್ಲೆಡೆಯೊಳೆಮಗೆ ಲಿಂಗಪ್ರಸಾದಂ ಭವಲ್ಲಿಂ
ಗದ ಶೇಷಂ ಸಲ್ಲದೇಂ ಪೋಕುಮೆ ಬಸವ ಬಲಾತ್ಕಾರದಿಂದೆಮ್ಮ ಸೊಮ್ಮ
ಪ್ಪುದನಿಂದೋರಂತೆ ನೀನೀಯದೊಡೆ ಬಿಡುವೆವೀ ಪ್ರಾಣಮಂ ಮಾಣದೆಂದಾ
ಡಿದರಾ ಮಾತಿಂಗೆ ತಾಂ ಮಾರ್ನುಡಿದನಭವಸಿದ್ಧಾಂತವಿದ್ಯಾಂತರಂಗಂ ೩೯

ನ್ಯಾಯಮದಿಲ್ಲದೆ ಬಿಟ್ಟಪಿ
ರಾಯುವನೇತಮಮ ನಿಮ್ಮ ಬಿಱುನುಡಿಗಳ್ಗಂ
ಮಾಯಾರಿಶರಣನುಚಿತ
ನ್ಯಾಯಪರಂ ಗಾಳಿಯುಲಿಯೆ ಗಿರಿ ಚಲಿಯಿಕುಮೇ ೪೦

'ಬಾಣಲಿಂಗ, ಜಂಗಮಲಿಂಗ, ಲೋಹಗಳಿಂದ ಮಾಡಿದಲಿಂಗ, ಸ್ವಯಂಭುಲಿಂಗವಾಗಿ ಮೂರ್ತಿಗೊಂಡಿರುವ ಲಿಂಗ-ಇತ್ಯಾದಿ ಸರ್ವಲಿಂಗಗಳಲ್ಲಿ ಚಂಡೇಶ್ವರನು ಅಧಿಕಾರವುಳ್ಳವನಾಗಿ ಆಗಲಾರನು,' ಹೀಗೆಂದು ಹೇಳಿರುವ ಮಾತೇ ಇದಕ್ಕೆ ಪ್ರಮಾಣ, ಆದ್ದರಿಂದ ಯಾವಕಡೆಗಳಲ್ಲಿ ಚಂಡೇಶನಿಗೆ ಪ್ರಸಾದದ ಅಧಿಕಾರವಿದೆಯೋ, ಆ ಕಡೆಯಲ್ಲಿ ನಿಮಗೆ ಶಿವಪ್ರಸಾದವನ್ನು ಪಡೆಯುವ ಹಕ್ಕುಂಟು, ಉಳಿದಕಡೆಗಳಲ್ಲಿ ಯಾವರೀತಿಯಿಂದಲೂ ಸಲ್ಲತಕ್ಕದ್ದಾಗಿರುವುದಿಲ್ಲ. ಎನ್ನಲು ಚಂಡೇಶನ ವಂಶಜರು ಆ ಮಾತಿಗೆ ಪ್ರತಿಯಾಗಿ– ೩೮. ದ್ರಾಕ್ಷಾರಾಮ, ಶ್ರೀಶೈಲ, ಪ್ರಸಿದ್ಧವಾದ ಕಾಂಚಿ, ಶೋಭಿಸುವ ಚಿದಂಬರ ನಗರವೇ ಮೊದಲಾದ ಪ್ರಮುಖ ಶಿವಲಿಂಗಕ್ಷೇತ್ರಗಳೊಳಗೆ ಶಿವಪ್ರಸಾದವನ್ನು ಭುಂಜಿಸುವ ವಿಧಾನದಲ್ಲಿ ನಮಗೇ ಪ್ರಾಮುಖ್ಯತೆಯುಂಟು. ೩೯. ಆದುದರಿಂದ ಪ್ರಸಿದ್ಧವಾದ ಎಲ್ಲ ಶಿವಕ್ಷೇತ್ರಗಳಲ್ಲಿಯೂ ಲಿಂಗಪ್ರಸಾದವು ನಮಗೆ ಸಲ್ಲುತ್ತಿರುವಾಗ ನಿಮ್ಮಲಿಂಗದ ಪ್ರಸಾದವು ನಮಗೆ ಸಲ್ಲದೆ ಹೋಗುತ್ತದೆಯೇ ? ಬಸವಣ್ಣ, ಬಲಾತ್ಕಾರದಿಂದ ನಮ್ಮ ಸೊತ್ತಾಗಿರುವ (ನಮ್ಮಹಕ್ಕಿಗೆ ಒಳಪಟ್ಟಿರುವ) ಲಿಂಗಪ್ರಸಾದವನ್ನು ಸುಮ್ಮನೆ ನಮಗೆ ಕೊಡದಿದ್ದಪಕ್ಷದಲ್ಲಿ, ತಪ್ಪದೆ ನಾವು ಈ ಪ್ರಾಣವನ್ನೇ ಬಿಡುವೆವು, ಎಂದು ಆಡಿದರು. ಅವರ (ಈ ರೀತಿಯ) ಮಾತಿಗೆ ಶಿವಸಿದ್ಧಾಂತ ವಿದ್ಯೆಯಲ್ಲಿ ನಿಷ್ಣಾತನಾದ ಬಸವೇಶ್ವರನು ಹೀಗೆ ಉತ್ತರಿಸಿದನು : ೪೦. ನಿಯಮತಪ್ಪಿ ಪ್ರಾಣವನ್ನು ಹೇಗೆನೀವು ಬಿಡುತ್ತೀರಿ ? ಅಮಮ ! ಯೋಗ್ಯವಾದ ನ್ಯಾಯಪರನೂ, ಮಾಯೆಗೆಶತ್ರು ಎನಿಸಿದ ಶಿವಶರಣನೂ ಆದ ಈ ಬಸವಣ್ಣನು ನಿಮ್ಮ ಈ ಕಠಿಣೋಕ್ತಿಗಳಿಗೆ ಹೆದರು

ನಯಮಿದು ಶಾಸ್ತ್ರಾನುಭವ
ದ್ವಯದೊಳವೊಂದಱೊಳೆ ಸಿದ್ಧಮಾದರ್ಥದೊಳಾ
ರಯೆ ವರ್ತಿಪ ಬಗೆಯದನುಳಿ
ದಯಥಾರ್ಥಂಬಿಡಿದೊಡವನೆ ನಿಂದ್ಯಂ ಧರೆಯೊಳ್ ೪೧

ಪೇಳಿರೆ ಶಾಸ್ತ್ರಮದುಳ್ಳೊಡೆ
ಪಾಳಿಯಿನನುಭವಮೆ ಪ್ರಮಣಮೆಂಬೊಡೆ ನಿಮಗಾ
ಭಾಳೇಕ್ಷಣ ಪ್ರಸಾದಮ
ನಾಳೋಚಿಸದಿತ್ತ ವೀರಮಾಹೇಶ್ವರರಾರ್ ೪೨

ನಯಮಮರೆ ತೋಱಿ ಶಾಸ್ತ್ರೋ
ಕ್ತಿಯೊಳಾದೊಡಮನುಭವಾಪ್ತಿಯಿಂದಾದೊಡಮ
ನ್ನಯಮಿಲ್ಲದೆ ಕೊಳ್ವುದು ಸಂ
ಶಯಮುಳಿದು ಮದೀಯಲಿಂಗಶೇಷಮನೀಗಳ್ ೪೩

ಸುಮ್ಮನೆ ಕೊಂಡಪೆವೆನೆ ಕುಡೆ
ವೆಮ್ಮಯ ಲಿಂಗಪ್ರಸಾದಮಂ ನಿಮಗೆ ವಲಂ
ತಿಮ್ಮ ಸಪ ರಸನೆಯೆಸಕಮ
ದೆಮ್ಮೊಡನೇಕಿನಿತು ಬಿಡಿಮಿದೇತಱ ಬಿಂಕಂ ೪೪

ಏತೆಱದಿಂದಮಾದೊಡಮುಮಾಧಿಪಲಿಂಗದ ಸುಪ್ರಸಾದಮಂ
ನೀತಿಯದಿಲ್ಲದುಣ್ಬೆವೆನುತಾಗ್ರಹಮಂ ಪಿಡಿದಪ್ಪಿರಪ್ಪೊಡೇ

ವುದಿಲ್ಲ, ಗಾಳಿಬೀಸಿದರೆ ಪರ್ವತವು ಅಲ್ಲಾಡುವುದೇ ? ೪೧. ಈ ನೀತಿಯು ಶಾಸ್ತ್ರ ಮತ್ತು ಅನುಭವವೆರಡರಲ್ಲಿ ವಿಚಾರಿಸಿ ನೋಡಿದರೆ ಒಂದರಲ್ಲಿ ಸಿದ್ಧವಾದ ಅರ್ಥದಲ್ಲಿ ವರ್ತನೆಮಾಡುವ ರೀತಿ. ಅದನ್ನುಬಿಟ್ಟು ಯಥಾರ್ಥವಲ್ಲದ್ದನ್ನು (ಸುಳ್ಳನ್ನು) ಅನುಸರಿಸಿದರೆ, ಅವನು ಜಗತ್ತಿನಲ್ಲಿ ನಿಂದೆಗೆ ಗುರಿಯಾಗುವನು, (ಅರ್ಥಸ್ಪಷ್ಟ ಆದರೆ ಭಾವ ಅಸ್ಪಷ್ಟ). ೪೨–೪೩. (ಇದಕ್ಕೆ) ಶಾಸ್ತ್ರವೇನಾದರೂ ಇದ್ದರೆ (ನೀವೆಲ್ಲ) ಸರದಿಯಂತೆ ಹೇಳಿರಯ್ಯಾ ! ಅನುಭವವೇ ನಿಮಗೆ ಪ್ರಮಾಣವೆನ್ನುವುದಾದರೆ ಆ ಪರಮೇಶ್ವರನ ಪ್ರಸಾದದ ವಿಷಯವನ್ನು ಆಲೋಚನೆಮಾಡದೆ ಇದರಲ್ಲಿ ವೀರಮಾಹೇಶ್ವರರು ಯಾರುಂಟೊ ಅವರು ನ್ಯಾಯವಾದ ರೀತಿಯಲ್ಲಿ ಶಾಸ್ತ್ರೋಕ್ತಿಯಿಂದಲಾದರೂ, ಅನುಭವಿಸುವಿಕೆಯಿಂದಲಾದರೂ ಅನ್ಯಾಯವಿಲ್ಲದೆ ಸಂಶಯವಿಲ್ಲದಂತೆ ನನ್ನ ಸಂಬಂಧದ ಲಿಂಗಶೇಷ ಪ್ರಸಾದವನ್ನು ಸ್ವೀಕರಿಸಿರಿ. ೪೪. ಸುಮ್ಮಸುಮ್ಮನೆ (ಪ್ರಸಾದವನ್ನು) ಸ್ವೀಕರಿಸುತ್ತೇವೆಂದರೆ, ನಿಮಗೆನಮ್ಮ ಲಿಂಗಪ್ರಸಾದವನ್ನು ನಿಜವಾಗಿ ಕೊಡುವುದಿಲ್ಲ. ನಿಮ್ಮ ನಾಲಿಗೆಯ ಚಾಪಲ್ಯ(ಶೀಟಿ)ದ ಪ್ರದರ್ಶನವು ನಮ್ಮ ಕೂಡ ಇಷ್ಟೇಕೆ ? ಈ ನಿಮ್ಮಗರ್ವವನ್ನು ಬಿಟ್ಟುಬಿಡಿ. ೪೫. ಯಾವರೀತಿಯಿಂದಲಾದರೂ ಶಿವಲಿಂಗದ ಶ್ರೇಷ್ಠಪ್ರಸಾದವನ್ನು ಅನ್ಯಾಯವಾಗಿ ಊಟಮಾಡಲೇ

ಮಾತೊ ಪುರಾರಿಗುಗ್ರಗರಮಂ ಪದೆದರ್ಪಿಪೆನಂತದಂ ಮನಃ
ಪ್ರೀತಿಯೊಳುಣ್ಬುದೀಗಳೆನೆ ಕೇಳ್ದತಿ ರೋಷಮನಾಳ್ದರಾ ದ್ವಿಜರ್ ೪೫

ವ॥ ಅಂತು ರೋಷೋನ್ಮೀಷಿತ ಹೃದಯರಾಗಿ —

ಅರಿದರಿದು ನಿನ್ನ ನುಡಿಗಳ
ಪರಿಯೆಮ್ಮೊಳ್ಬಸವ ಲೇಸನಾಡಿದೆ ನೀಂ ದಿ
ವ್ಯರಸಾಮೃತಾನ್ನಮಂ ಕೊಂ
ಡಿರದೆಮಗಿಂದೆಱೆವೆ ಗಡ ಮೃಡಾರ್ಪಿತವಿಷಮಂ ೪೬

ಪರಮೇಶ್ವರ ಪ್ರಸಾದಮ
ನೆರೆದಪರಿವರೆಂದುಪಾಯದಿಂದಮ್ಮಂ ನಿ
ಷ್ಠುರವಿಷಮನಿಕ್ಕಿ ಕೊಲಲೋ
ಸರಿಸದೆ ನೀಂ ನೆನೆದೆ ನಿನ್ನ ಬಗೆ ಪೊಸತಲ್ತೇ ೪೭

ಎಮಗೆಱೆವ ಶಿವಾರ್ಪಿತಗರ
ಳಮನೀಗಳ್ನೀಮೆ ಕೊಂಡು ಬಾಳ್ದೊಡೆ ಗೆಲ್ಲಂ
ನಿಮಗಕ್ಕುಮೆಮಗೆ ಸೋಲಂ
ಸಮನಿಪ್ಪುದಿದೇ ಪ್ರಮಾಣಮೆಮಗಂ ನಿಮಗಂ ೪೮

ಬೇಕೆಂದು ನೀವು ಹಟವನ್ನು ತಾಳಿದವರೇ ಆದದ್ದಾದರೆ, ಇನ್ನೂ ನಿಮಗೆ ಹೆಚ್ಚಿಗೆ ಹೇಳುವುದಾದರೂ ಏನಿದೆ ? ಪರಮೇಶ್ವರನಿಗೆ ಭಯಂಕರ ವಿಷವನ್ನು ಪ್ರೀತಿಯಿಂದ ಅರ್ಪಿಸುತ್ತೇನೆ. ಅಂಥ ಆ ಪ್ರಸಾದವನ್ನು ನೀವು ಮನಃಪೂರ್ವಕವಾಗಿ ಈಗಲೇ ಊಟಮಾಡಬೇಕು, ಎನ್ನಲು ಆ ಬ್ರಾಹ್ಮಣರು ಕೇಳಿ ಅತ್ಯಂತ ರೋಷಗೊಂಡರು. ವ॥ ಹಾಗೆ ಅತ್ಯಂತ ಕೋಪದಿಂದ ಕೂಡಿದ ಮನಸ್ಸುಳ್ಳವರಾಗಿ–೪೬. ಬಸವಣ್ಣ, (ನಮ್ಮ ವಿಷಯದಲ್ಲಿ) ನಿನ್ನ ಮಾತಿನರೀತಿ ಅಸಾಧ್ಯ ; ಅಸಾಧ್ಯ ಸರಿಯಾಗಿಯೇ ಮಾತನಾಡಿದಂತಾಯಿತು, ನೀನು ರುಚಿಕರವಾದ ಅಮೃತಾನ್ನವನ್ನುಂಡು (ಹಾಲು ಅನ್ನವನ್ನುಂಡು) ನಮಗೆ ತಪ್ಪದೆ ಈಗ ಮೃಡನಿಗೆ ಅರ್ಪಿಸಿದ ವಿಷವನ್ನು ಕೊಡುವೆಯಲ್ಲವೇ ? ೪೭. ಇವರು ಪರಮೇಶ್ವರನ ಪ್ರಸಾದವನ್ನು ಬೇಡುತ್ತಿದ್ದಾರೆಂದು ಕೊಂಡು, ಉಪಾಯದಿಂದ ನಮ್ಮನ್ನು ಉಗ್ರವಿಷವಿಕ್ಕಿ ಕೊಲ್ಲಲು ಹಿಂದೆಮುಂದೆನೋಡದೆ ಚಿಂತನೆ ಮಾಡಿದ್ದೀಯೆ. ಈ ನಿನ್ನ ಯೋಚನೆ ಹೊಸದಲ್ಲವೇ ! ೪೮. ನಮಗೆ ನೀಡುವ ಶಿವಾರ್ಪಿತ ವಿಷವನ್ನು ಈಗ ನೀವೇ ಸ್ವೀಕಾರಮಾಡಿ ಬದುಕಿದರೆ ನಿಮಗೇ ಗೆಲುವಾ

ವ॥ ಎನೆ ಕೇಳ್ದು ಮಹಿಮಾಕರನಂತೆ ಮಾಳ್ಪೆನಿದಾವಗಹನಮೆಂದರಸನಂ ಸಾಕ್ಷಿಗೆಯ್ದಲ್ಲಿಂ ದೆಳ್ದು ಸಡಗರಂ ಮಿಗೆ ಭಕ್ತಗಣಪರಿವೃತಂ ಸಂಗಮೇಶ್ವರನ ಮಂದಿರದ ಬಹಿರ್ದ್ವಾರದ ಮಂಟಪ ಕ್ಕೆಳ್ತಂದಾಗಳ್—

ಶರಣರ ಬಿರಿದಂ ಪಾಡಿಸು
ತುರುತರ ವೈಭವದ ತಮ್ಮ ಚರಲಿಂಗಸಮು
ತ್ಕರದೊಡನೆ ಬಂದರಂದೆ
ಳ್ತರದಿನಸಂಖ್ಯಾತ ಭಕ್ತರತಿ ಸಂಭ್ರಮದಿಂ ೪೯

ವ॥ ಅಂತೆಳ್ತಂದ ಭಕ್ತರ್ಗೆ ಭಕ್ತಿಯಿಂ ಮಣಿದು ಬಸವರಸಂ ಪರಮೋತ್ಸವದಿಂ ಮೂರ್ತಿ ಗೊಳಿಸಿ ಸತ್ಕ್ರಿಯೆಗಳಂ ನೆಗಳ್ಚುತಿರ್ಪಿನಮಲ್ಲಿ—

ವಿತತಾದ್ಭುತಮತಿ ಬಿಜ್ಜಳ
ನತಿಶಯ ಸಾಮಂತರಾಜಸುತಸಚಿವಪುರೋ
ಹಿತಯುತನೆಳ್ತಂದಿರ್ದಂ
ಪ್ರತಿವಾದಿಕದಂಬಮೆಯ್ದೆವಂದತ್ತಾಗಳ್ ೫೦

ವೀರಕ ವೀರಭದ್ರಕ ಮುಖಪ್ರಮಥಪ್ರಕರಾನ್ವಿತಂ ಮನೋ
ಜಾರಿನಗೇಂದ್ರಪುತ್ರಿಯೊಡನಂಬರದೊಳ್ಬಗೆಗೊಂಡು ಸಾರತೇ

ದಂತೆ; ನಮಗೆ ಸೋಲಾದಹಾಗೆ. ನಮಗೂ ನಿಮಗೂ ಇದೇ ಪಣ! ವ॥ ಹೀಗೆಂದು ಅನ್ನಲು, ಮಹಿಮಾಶಾಲಿಯಾದ ಬಸವಣ್ಣನು ಕೇಳಿ, ಹಾಗೆಯೇ ಮಾಡುತ್ತೇನೆ. ಇದಾವ ಅಸಾಧ್ಯಕಾರ್ಯ! ಎಂದು ಬಿಜ್ಜಳ ರಾಜನನ್ನೇ ಈ ವಿಷಯದಲ್ಲಿ ಸಾಕ್ಷಿಯನ್ನಾಗಿ ಇಟ್ಟು, ಅಲ್ಲಿಂದ ಅತಿ ಸಡಗರದಿಂದ ಮೇಲೆದ್ದು, ಭಕ್ತಸಮೂಹದಿಂದ ಸುತ್ತುವರಿ ಯಲ್ಪಟ್ಟವನಾಗಿ, ಹೊರಟು ಬಂದು ಸಂಗಮೇಶ್ವರನ ಮಂದಿರದ ಮಹಾದ್ವಾರದ ಮಂಟಪಕ್ಕೆ ಬಂದನು, ಆಗ ೪೯. ಅತಿ ಸಂಭ್ರಮಗೊಂಡು ಅಸಂಖ್ಯಾತ ಭಕ್ತರುಗಳ ಸಮೂಹವು ಶರಣರ ಬಿರುದುಗಳನ್ನು ಘೋಷಿಸುತ್ತ, ಅತ್ಯಂತ ವೈಭವದಿಂದ ಜಂಗಮ ಮೂರ್ತಿಗಳ ಸಮೂಹದೊಡನೆ ಆ ಕೂಡಲೇ (ಬಸವಣ್ಣನ ಹಿಂದೆ) ಹೆಮ್ಮೆಯಿಂದ ಕೂಡಿ ಬಂದರು. ವ॥ ಹಾಗೆ ಬಂದ ಭಕ್ತರುಗಳಿಗೆ ಬಸವಣ್ಣನು ಭಕ್ತಿಯಿಂದ ನಮಸ್ಕಾರ ಮಾಡಿ, ಅತ್ಯಂತ ಸಂತೋಷದಿಂದ ಕುಳ್ಳಿರಿಸಿ, (ತನ್ನ) ಸತ್ಕ್ರಿಯೆಗಳನ್ನು ಮಾಡುತ್ತಿರಲಾಗಿ, ಅಲ್ಲಿ ೫೦. ವಿಶೇಷವಾದ ಅದ್ಭುತ ಬುದ್ಧಿಶಕ್ತಿಯುಳ್ಳ ಬಿಜ್ಜಳನು, ಅನೇಕ ಸಾಮಂತರಾಜ ಪುತ್ರರು, ಸಚಿವರು, ಪುರೋಹಿತರುಗಳಿಂದ ಕೂಡಿ ಬರು ತ್ತಿದ್ದನು. ಪ್ರತಿವಾದಿಗಳ ಸಮೂಹವೂ ಆಗ ಬಂದಿತು. ೫೧. ವೀರಭದ್ರನೇ ಮೊದಲಾದ ಪ್ರಮಥರುಗಳ ಸಮೂಹದೊಡನೆ, ದೇವತೆಗಳಿಂದ ಸೇವಿಸಲ್ಪಡುವ ಪರಮೇಶ್ವರನು ಪಾರ್ವತಿಯೊಡನೆ ಆಕಾಶದಲ್ಲಿ ಮನೋಹರವಾಗಿ ಸಾರವತ್ತಾದ ತೇಜಸ್ಸಿ

ಜೋರಮಣೀಯ ದಿವ್ಯಮಣಿಪುಷ್ಪಕದೊಳ್ಮೆಲಸಿರ್ದು ಭಕ್ತವಿ
ಸ್ತಾರಮಹತ್ವವೀಕ್ಷಣಸಮುತ್ಸುಕನೊಪ್ಪಿರೆ ದೇವಸೇವಿತಂ ೫೧

ಪರಿಜನಮುಂ ಪುರಜನಮುಂ
ನೆರೆದೀಕ್ಷಿಸೆ ಕನಕರೌಪ್ಯತಾಮ್ರಾದಿಯ ಕೊ
ಪ್ಪರಿಗೆಗಳನಗಣಿತಂಗಳ
ನಿರದಲ್ಲಿಗೆ ತರಿಸಿ ಬಸವನನುಚರರಿಂದಂ ೫೨

ಕುಳಿಕನ ತಕ್ಷಕನ ಮಹಾ
ಬಳ ಕರ್ಕೋಟಕನ ಘೋರತರ ವಿಷದಿಂದ
ಗ್ಗಳವೆನಿಪ ಕಾಲಕೂಟಂ
ಗಳನಧಟಿಂ ನೆನೆ[1]ದು ಬರಿಸಿ ಬೆರಸುತ್ತದರೊಳ್ ೫೩

ಭರದಿಂದಂ ವತ್ಸನಾಭಿಪ್ರಮುಖ ಬಹುವಿಷವ್ರಾತಮಂ ಕೂಡಿ ಸರ್ವೋ
ರ್ವರಿಗತ್ಯಾಶ್ಚರ್ಯಮಂ ತಾನೆಸಗುತರೆಯಿಸುತ್ತಿರ್ದನಾವೇಳೆಯೊಳ್ತ
ದ್ಗರಳಾಭೀಳಸ್ಫುರತ್ಸೌರಭಮಲೆಯೆ ಧರಾಜೀವಿಗಳ್ಜೀವಮಂ ಬಿ
ಟ್ಟ[2]ರದೆತ್ತಂ ಪಕ್ಷಿವೃಂದಂ ಕೆಡೆದಸುಗಳೆದತ್ತಭ್ರದಿಂ ಪೇಳ್ವೆನೇನಂ ೫೪

ನಿಂದ ರಮಣೀಯವೆನಿಸಿದ ಪುಷ್ಪಕವಿಮಾನದಲ್ಲಿ ಕುಳಿತುಕೊಂಡು ಭಕ್ತನಾದ ಬಸವಣ್ಣನ ಅತ್ಯಧಿಕ ಮಹಾತ್ಮೆಯನ್ನು ನೋಡಬೇಕೆಂಬ ವಿಷಯದಲ್ಲಿ ಉತ್ಸಾಹಗೊಂಡವನಾಗಿ ಒಪ್ಪಿದ್ದನು. ೫೨. ಸೇವಕ ವರ್ಗದವರೂ, ನಾಗರಿಕ ಜನರುಗಳೂ ಗುಂಪುಗೂಡಿ ನೋಡುತ್ತಿದ್ದರು. ಬಂಗಾರ, ಬೆಳ್ಳಿ, ತಾಮ್ರಗಳೇ ಮೊದಲಾದ ಲೋಹಗಳ ಅಸಂಖ್ಯಾತ ಕೊಪ್ಪರಿಗೆಗಳನ್ನು ಬಸವಣ್ಣನು ತನ್ನ ಅನುಚರರುಗಳಿಂದ ಅಲ್ಲಿಗೆ ತರಿಸಿಕೊಂಡನು. ೫೩. ಪ್ರಸಿದ್ಧ ಎಂಟು ಸರ್ಪಗಳಲ್ಲಿ ಮುಖ್ಯವಾದ ಕುಳಿಕನೆಂಬ ಹೆಸರಿನ ಹಾವಿನ, ತಕ್ಷಕನೆಂಬ ಹಾವಿನ, ಬಹಾಬಳನೆಂಬ ಹೆಸರಿನ ಹಾವಿನ, ಕಾರ್ಕೋಟಕನೆಂಬ ಹೆಸರಿನ ಹಾವಿನ ಘೋರವಾದ ವಿಷಕ್ಕಿಂತ ಹೆಚ್ಚಿನದೆಂದೆನಿಸುವ ಕಾಲಕೂಟವೆಂಬ ಹೆಸರಿನ ವಿಷಗಳನ್ನು ಶೌರ್ಯ ವಿಶಿಷ್ಟವಾಗಿ ನೆನೆದು ಬರಮಾಡಿಕೊಂಡು, ಆ ಕೊಪ್ಪರಿಗೆಗಳಲ್ಲಿ ಕೂಡಿಸಿ ಹಾಕಿದನು. ೫೪. ಕೃಷ್ಣಸರ್ಪ ಮೊದಲಾದ ಇನ್ನಿತರ ಹಾವುಗಳ ವಿಷ ಸಮೂಹವನ್ನು (ಆ ಕೊಪ್ಪರಿಗೆಯ ವಿಷದಲ್ಲಿ) ಕೂಡಿಸಿ, ಸರ್ವರಿಗೂ ಆಶ್ಚರ್ಯವನ್ನು ಆ ಬಸವಣ್ಣನು ಉಂಟುಮಾಡುತ್ತ ತಿರುವುವುದಕ್ಕೆ (ಅರೆಸುವುದಕ್ಕೆ) ತೊಡಗಿದನು. ಆ ಸಮಯದಲ್ಲಿ ಆ ವಿಷದ ಭಯಂಕರವಾಗಿ ಪ್ರಕಾಶಿಸುವ ಸುಗಂಧವು (ವಾಸನೆಯು) ಹೊರಹೊರಟು ಬರುತ್ತಿರಲು ಭೂಮಿಯ ಮೇಲಿನ ಜೀವಿಗಳು ಜೀವವನ್ನು ಬಿಡತೊಡಗಿದವು. ಪಕ್ಷಿಗಳ ಸಮೂಹವು ಆಕಾಶದಿಂದ ಎಲ್ಲ ಕಡೆಗೂ

---

1 ಗೆ(ದ) 2 ಟ್ಟ(ಅ)

ಗರಳಮನಱೆವ ನರರ್ಕಳ
ಕರುಳದು ಕಡಿ ಖಂಡವಾಗಿ ಪಡಲಿಡೆ ಪಿರಿದ
ಚ್ಚರಿವಟ್ಟಿದನಾಂಪರದಾ
ರ್ಧರೆಯೊಳೆನುತ್ತಗಿದು ಕೆಲಕೆ ಜಗುಳ್ದರ್ಶೈವರ್ ೫೫

ವ॥ ಆಗಳಾಭೀಕರಾಕಾರ ವಿಷವುಂ ಬಸವಂ ತೈಲರಸದೊಳ್ಪಿರಿದುಂ ಮರ್ದಿಸಿ ಕೂಷ್ಮಾಂಡ ಪರಿಪ್ರಮಾಣಕಬಳಂಗೆಯ್ದು ಕಟಾಹಂಗಳೊಳ್ಪ್ರತ್ಯೇಕಮಿರಿಸಿ ಮಗುಳ್ದು ತೈಲಂಬೊಯ್ದು ಕಲಸಿ ದರ್ವೀಕರನಿಭದರ್ವಿಯಿಂದೊತ್ತಿ ತೊಳಸಲೊಡನೆ ಕಡುಕಾಯ್ದುಮಸಗಿ —

ಬಡಬಾಗ್ನಿ ದಾವಶಿಖಿ ಬಳಿ
ಸಿಡಿಲುರಿ ಕಲ್ಪಾಂತವಹ್ನಿ ಮುಸಕಂಗೊಂಡೊಂ
ದೆಡೆ ನಿಂದವೆಂಬ ಭಾವಮ
ನೊಡರ್ಚೆ ಘುಳುಘುಳಿಪ ಗರಳ ಪಟುಪಾವಕನಿಂ ೫೬

ಪೊಗೆ ನೆಗೆದೊತ್ತಿ ಪೊಯ್ಯೆ ಗಗನಾಗಮದುದ್ಗಮರಾಜಿ ಸೂಸಿದಂ
ತೊಗುಮಿಗೆ ಕಳ್ಕಿನೊಕ್ಕುದುಡುರಾಜಿ ಕುಳಾಚಳವೃಂದಮಂಜನಾ

ನೆಲಕ್ಕೆ ಬಿದ್ದು ಪ್ರಾಣ ಕಳೆದುಕೊಂಡವು. ಅದನ್ನು ಏನೆಂದು ಹೇಳಲಿ! ೫೫. ವಿಷ ವನ್ನು ಅರೆಯುತ್ತಿರುವ ಮನುಷ್ಯರ ಕರುಳುಗಳು ಚೂರು ಚೂರಾಗಿ ಹರಡಿ ಬಿದ್ದವು. ಶೈವರು ಅತ್ಯಂತ ಆಶ್ಚರ್ಯಗೊಂಡವರಾಗಿ, ಈ ಮಹಾ ವಿಷವನ್ನು ಧರಿಸುವವರು ಭೂ ಮಂಡಲದಲ್ಲಿ ಯಾರಿದ್ದಾರೆ? ಎನ್ನುತ್ತ ಹೆದರಿ ಪಕ್ಕಕ್ಕೆ ದೂರ ಸರಿದರು. ವ॥ ಆಗ ಆ ಭಯಂಕರಾಕಾರದ ವಿಷವನ್ನು ಎಳ್ಳೆಣ್ಣೆಯಲ್ಲಿ ಹೆಚ್ಚಾಗಿ ತಿರುವಿಸಿ, ಕುಂಬಳಕಾಯಿ ಗಾತ್ರದ ತುತ್ತುಗಳನ್ನು ಮಾಡಿ, ಕೊಪ್ಪರಿಗೆಗಳಲ್ಲಿ ಬೇರೆ ಬೇರೆ ಇಟ್ಟು, ಪುನಃ ಎಣ್ಣೆ ಯನ್ನು ಸುರುವಿ ಕಲಸಿ, ಸರ್ಪಸದೃಶವಾದ ಸೌಟಿನಿಂದ ಒತ್ತಿ ಮೇಲೆ ಕೆಳಗೆ ಮಾಡಲು (ಆ ವಿಷವು) ವಿಶೇಷವಾಗಿ ಉಷ್ಣತೆಯನ್ನು ಹೊಂದಿತು. ೫೬–೫೭. ಸಮುದ್ರ ಮಧ್ಯದ ಬೆಂಕಿ, ಅರಣ್ಯದ ಬೆಂಕಿ, ಘೋರ ಸಿಡಿಲಿನ ಬೆಂಕಿ, ಪ್ರಳಯಕಾಲದ ಅಗ್ನಿ ಇವೆಲ್ಲ ಕೋಪಗೊಂಡು ಒಂದು ಕಡೆ ಸೇರಿ ನಿಂತಿರುವುವೋ ಎಂಬ ಭಾವವನ್ನುಂಟು ಮಾಡುತ್ತ ಘುಳು ಘುಳು ಎಂಬ ವಿಷದ ಸಮರ್ಥವಾದ ಬೆಂಕಿಯಿಂದ ಹೊಗೆಯು ಮೇಲೆದ್ದು ಗಟ್ಟಿಯಾಗಿ ಅಪ್ಪಳಿಸಲು ಆಕಾಶವೆಂಬ ವೃಕ್ಷದ ಪುಷ್ಪಗಳ ಸಮೂಹವು ಉದುರುವಹಾಗೆ ಅತ್ಯಧಿಕವಾಗಿ ನಕ್ಷತ್ರಗಳ ಸಮೂಹವು ಒಮ್ಮಿಂದೊಮ್ಮೆಲೆ ಉದುರಿತು. ಸಪ್ತ ಕುಲಾಚಲ ಪರ್ವತಗಳು ಅಂಜನಾದ್ರಿ ಬೆಟ್ಟದ ರೀತಿಯನ್ನು (ಅಂದರೆ ಕಪ್ಪಾಗುವಿಕೆಯನ್ನು) ಹೊಂದಿದವು. ಸೂರ್ಯನ ರಥಕ್ಕೆ ಕಟ್ಟಿದ ಕುದುರೆಗಳು ಬೆಚ್ಚಿದವು. ಸಮುದ್ರ, ಕೆರೆಬಾವಿಗಳ ನೀರು ತಪ್ಪದೆ ನೀಲವರ್ಣ ವುಳ್ಳವುಗಳಾದುವು. ೫೭. ಸಮಸ್ತ ನದೀನದಗಳು ಕುದ್ದು ಉಕ್ಕತೊಡಗಿದವು.

ದ್ರಿಗಣದ ಮೊತ್ತಿಯುಂ ತಳೆದುದರ್ಕವರೂಥದ ವಾಜಿ ಬೆರ್ಚಿದ
ತ್ತಗಲದೆ ನೀಲನೀರಮುಯುಮಾದುವು ಸಿಂಧುತಟಾಕವಾಪಿಗಳ್ ೫೭

ಕುದಿದುರ್ಕಿದುವಖಿಳನದೀ
ನದಂಗಳುರಿದತ್ತು ತರುಕುಲಂ ಗಿರಿತತಿ ಸೀ
ಳ್ದುದು ಗರಳಶಿಖಿಯು ಸೆಕೆ ಸೋಂ
ಕಿದ ಗಾಳಿಯು ಕೋಳ್ಗೆ ಬಳ್ಕಿದರ್ದಿಕ್ಪತಿಗಳ್ ೫೮

ಭೂತಳದೊಳ್ಪುಟ್ಟಿದುದು
ತ್ಪಾತಲಯಾನಲನಿದಾವಕಾಲಮೆನುತ್ತ
ಬ್ಜಾತಭವಂ ಲಯಕಾಲ
ವ್ರಾತಮನೆಣಿಸುತ್ತುಮಿರ್ದನತಿಚಕಿತಮನಂ ೫೯

ಜಲಧಿಯೊಳಂದೊಗೆದ ಹಲಾ
ಹಲದಿಂದಸಿತಾಂಗನಾದೆನಿಂದೊಗೆದತ್ತು
ಜ್ವಲ ವಿಷಮಿದಱಿಂದೇಂ ಕ್ಷೋ
ಟಲೆ ಬರ್ಪುದೊ ಮಾಣದೆಂದು ಹರಿ ಚಿಂತಿಸಿದಂ ೬೦

ಕೊರಲ ಗರಲಾಗ್ನಿ ಕಡೆಗೋ
ಸರಿಸಿದುದೆಂದೆಂಬ ಶಂಕೆಯಿಂ ದರ್ಪಣಮಂ
ತರಿಸಿ ನಿಜರಮಣಿಯಿಂ ಕಂ
ಧರಮಂ ನಡೆ ನೋಡುತಿರ್ದನಗಜಾರಮಣಂ ೬೧

ವಾಣಿಯುಮಾ ಲಕುಮಿಯುಮಿಂ
ದ್ರಾಣಿಯುಮೆಮ್ಮೈರೆದಾಳಿಯುಂ ಕಾವುದು ಶ

ಗಿಡಗಳ ಸಮೂಹವೆಲ್ಲ ಹೊತ್ತಿಕೊಂಡು ಉರಿಯತೊಡಗಿದವು. ಬೆಟ್ಟಗಳ ಸಮೂಹವು ಸೀಳು ಬಿಟ್ಟಿತು. ವಿಷದ ಬೆಂಕಿಯ ಸೆಕೆಯ ಸೋಂಕಿನಿಂದ ಬೀಸುವ ಗಾಳಿಯ ಬಾಧೆಯಿಂದ ಅಷ್ಟದಿಕ್ಪಾಲಕರು ನಡುಗಿದರು. ೫೮. ಅಜ್ಜಭವನಾದ ಬ್ರಹ್ಮನು ಭೂಮಿಯಲ್ಲಿಯೇ ಅಶುಭಸೂಚಕ ಪ್ರಳಯಕಾಲದ ಬೆಂಕಿಯು ಹುಟ್ಟಿತು. ಇದು ಯಾವ ಕಾಲ ? ಎಂದು ಕೊಳ್ಳುತ್ತ ಅತ್ಯಂತಾಶ್ಚರ್ಯಗೊಂಡು ಪ್ರಳಯಕಾಲದ ಸಮೂಹವನ್ನು ಲೆಕ್ಕ ಹಾಕ ತೊಡಗಿದನು. ೬೦. ವಿಷ್ಣುವು ಹಿಂದೆ ಸಮುದ್ರದಿಂದ ಹುಟ್ಟಿದ ಹಾಲಾಹಲ ವಿಷ ದಿಂದ ಕಪ್ಪು ಬಣ್ಣದ ಶರೀರವುಳ್ಳವನಾದೆನು. ಈ ದಿನ ಭಯಂಕರವಾದ ವಿಷವು ಹೊರಹೊರಟಿತು. ಈ ವಿಷದಿಂದ ಅದಾವ ತೊಂದರೆಯು ಬಿಡದೆ ಬರುವುದೋ ಎಂದು ಚಿಂತೆಗೊಳಗಾದನು. ೬೧. ಆಗ ಪರಮೇಶ್ವರನು ಕುತ್ತಿಗೆಯಲ್ಲಿರುವ ವಿಷದ ಬೆಂಕಿಯೇನಾದರೂ ಹೊರಗೆ ಹೊರಟು ಬಂದಿರುವುದೋ ಎಂಬ ಸಂಶಯದಿಂದ ಪಾರ್ವತಿಯಿಂದ ಕನ್ನಡಿಯನ್ನು ತರಿಸಿ, ತನ್ನ ಕುತ್ತಿಗೆಯನ್ನು ಚೆನ್ನಾಗಿ ನೋಡಿಕೊಳ್ಳ ತೊಡಗಿದನು. ೬೨. ಸರಸ್ವತಿಯೂ, ಲಕ್ಷ್ಮಿಯೂ, ಶಚೀದೇವಿಯೂ, ಪಾರ್ವತೀ

ಪ್ರಾಣೇಶ ಶರಣೆನುತ್ತುಂ
ಪ್ರಾಣದೆ ವಿಷಕಳ್ಕಿ ಶಂಭುವಂ ಮಱೆವೊಕ್ಕರ್ ೬೨

ವ॥ ಇಂತು ಮಹಾಭಯಾದ್ಭುತಂ ಮಸಗಲೊಡನೆ ಸಂಭ್ರಮದಿಂ ಬಸವಂ ಗಣನಿವಹಮಂ ತರಂಬಿಡಿದು ಮೂರ್ತಿಗೊಳಿಸಿ ಸಾಂಗಮೆನೆ ಲಿಂಗಾರ್ಚನಂಗೆಯ್ಸಿ ಸಾಷ್ಟಾಂಗ ಮೆಱಗಿ ಜಯಜಯ ಧ್ವಾನದಿನುಘೇರವಂ ತಡಂಗಲಿಸಿ ವಿಜೃಂಭಿಸಿ ನಲವೆರ್ಚೆ ಪೊಗಳ್ದು ಸರ್ವರುಮಚ್ಚರಿ ಮಿಗೆ ನಿರೀಕ್ಷಿಸುತ್ತುಮಿರೆ ಬಹುಕಟಾಹಸ್ಥಿತ ವಿಷರಸಮಂ ಕರತಳದಿಂ ತುಳುಂಕಿ ಪೊಂಗಳಸಂಗಳಿಂ ಮೊಗೆಮೊಗೆದು ಶಿವಗಣಾವಳಿ ಕೆಯ್ಕೊಳ್ವುದೆಂದು ಮುಂದೆ ಗಡಣಿಸಿರ್ದ ಪರಿಯಣಂಗಳೊಳ್ವಿಸಟಂ[1]ಬರಿದೆಱೆಯೆ ಭಕ್ತಗಣಮೀಕ್ಷಿಸಿ ಪೊರೆಯೇಱರಾಗಿಸಿ ಗರಳರಸಮಂ ಗರಳಧರಂಗೆ ಸಮರ್ಪಿಸಿ ತತ್ಪ್ರಸಾದಮಂ ಸವಿವಾಗಳ್ ಶರಣಗಣದ ಸಂಭ್ರಮೋಕ್ತಿಗಳ್ನೆಗಳ್ದವೆಂತೆನೆ—

ಮೆಲ್ಲನೆ ಕುಳ್ಳಿರಿಲ್ಲಿ ಕಲಿದೇವ ಸದಾಶಿವದೇವ ಬಂದೆ ನೀಂ
ಗೆಲ್ಲಮನಾಸಲಿಂದರರೆ ಶಂಕರದೇವ ಸಮರ್ಥನಕ್ಕುಮಿಂ
ತಿಲ್ಲಿಗೆ ನೀನೆ ಲಿಂಗಸುಖಿದೇವ ಕಡಾಗಿ ಶಿವಪ್ರಸಾದಮಂ
ನಿಲ್ಲದೆ ಕೊಳ್ವೆಯಿಂದಮಮ ಭುಂಜಿಪುದಲ್ಲಮದೇವ ರಾಗದಿಂ ೬೩

ರಮಣನೇ, ನಮ್ಮ ಮಾಂಗಲ್ಯವನ್ನು ಕಾಪಾಡಬೇಕು. (ನಿನಗೆ) ಶರಣು ಎನ್ನುತ್ತ, ತಪ್ಪದೆ ಆ ವಿಷಕ್ಕೆ ಹೆದರಿ ಪರಮೇಶ್ವರನ ಬೆನ್ನು ಬಿದ್ದರು. ವ॥ ಈ ರೀತಿ ಘೋರವಾದ ಭಯವೂ ಅದ್ಭುತವೂ ಉಂಟಾಗಲಾಗಿ ಬಸವಣ್ಣನು ಸಂಭ್ರಮದಿಂದ ಶಿವಗಣ ಸಮೂಹವನ್ನೆಲ್ಲ ಸಾಲುಸಾಲಾಗಿ ಕುಳ್ಳಿರಿಸಿ, ಯಥಾಸಾಂಗವಾಗಿ ಶಿವಪೂಜೆಯನ್ನು ಮಾಡಿಸಿ, ಸಾಷ್ಟಾಂಗ ನಮಸ್ಕಾರ ಮಾಡಿದನು. ಜಯ ಜಯ ಎಂಬ ಧ್ವನಿ ವಿಶೇಷದಿಂದ ಉಘೇರವವನ್ನು ಉದ್ಘೋಷಿಸಿ ಉತ್ಸಾಹದೋರಿ, ಪ್ರೀತಿಯಿಂದ ಹೊಗಳಿ, ಎಲ್ಲರೂ ಅತ್ಯಂತಾಶ್ಚರ್ಯಗೊಂಡು ನೋಡುತ್ತಿದ್ದ ಹಾಗೆ ಕೊಪ್ಪರಿಗೆಗಳಲ್ಲಿದ್ದ ವಿಷದ ರಸವನ್ನು ಕೈಯಿಂದಲೇ ಮುಟ್ಟಿ, ಬಂಗಾರದ ಚಂಬುಗಳಲ್ಲಿ ತುಂಬಿ ತುಂಬಿ ಶಿವಶರಣರ ಸಮೂಹವನ್ನು ಸ್ವೀಕರಿಸಬೇಕು, ಎಂದು ಅವರ ಮುಂಭಾಗದಲ್ಲಿ ಸಿದ್ಧಪಡಿಸಿಟ್ಟಿದ್ದ ತಟ್ಟೆಗಳಲ್ಲಿ ಯಥೇಚ್ಛವಾಗಿ ಸುರಿದನು. (ಇದನ್ನು) ಶಿವಭಕ್ತ ಸಮೂಹವು ನೋಡಿ, ಉತ್ಸಾಹಾಧಿಕ್ಯದಿಂದ ಹೊಗಳಿ, ಆ ವಿಷದ ರಸವನ್ನು ವಿಷಧರನಾದ ಶಿವನಿಗೆ ನೈವೇದ್ಯ ಮಾಡಿ ಆ ಶಿವಪ್ರಸಾದವನ್ನು ಸ್ವೀಕರಿಸುವಾಗಿನ ಆ ಶರಣ ಸಮೂಹದ ಸಂಭ್ರಮದ ಪ್ರಾತಿವೆತ್ತ ಮಾತುಗಳು ಹೊರಹೊಮ್ಮಿದುವು. ಅವು ಹೇಗಿದ್ದವೆಂದರೆ ೬೩–೬೪. 'ಕಲಿದೇವನೇ, ಇಲ್ಲಿ ಮೆಲ್ಲಗೆ ಕುಳಿತುಕೊಳ್ಳಿರಿ. ಇಂದು ಗೆಲುವನ್ನು ಪಡೆಯಲು ಸದಾಶಿವದೇವ ನೀನು ಬಂದೆ. ಅಬ್ಬಾ! ಶಂಕರದೇವನೇ, ಇಲ್ಲಿನ ಈ ಪ್ರಸಂಗಕ್ಕೆ ನೀನೇ ಸಮರ್ಥನು! ಲಿಂಗ ಸುಖಿದೇವನೇ, ಉತ್ಸಾಹಗೊಂಡು ಶಿವಪ್ರಸಾದವನ್ನು ತಪ್ಪದೆ ನೀನು ಈಗ ಸ್ವೀಕರಿಸುತ್ತೀಯೆ, ಅಮಮ! ಅಲ್ಲಮಪ್ರಭುದೇವ ಪ್ರೀತಿಯಿಂದ ಈಗ

1 ವಂ(ಅ)

ತ್ರ್ಯಂಬಕದೇವನುಂಡಪನೆ ಭಾಪುರೆ ಸಾಲದು ಮಾಯಿದೇವನಾ
ಡಂಬರವಾಳ್ದ ಕುಕ್ಷಿಗೆ ಮಹೇಶ್ವರದೇವನ ಪೊಟ್ಟೆ ಸತ್ವರಂ
ತುಂಬದು ದಾಸಿದೇವನುದರಂ ತನಿವೆರ್ಚದು ಶಂಭುದೇವನೇ
ಸೋಜಿಗನೊ ಮೆಲ್ಲನುಂಡಪನಳುಂಬವಿದುದ್ಭಟದೇವನುಜ್ಜುಗಂ ೬೪

ಪಿಡಿ ಪಿಡಿ ಪಾತ್ರೆಯಂ ಸಸಿನೆ ಸಂಗಮದೇವ ಗಜೇಶದೇವ ಕೆ
ಯ್ಯುಗ್ಗಡಿತೆಯೊಳೀಂಟುವೈ ದಸರಿದೇವ ಜವಂಗಿಡದುಂಡಪೈ ಬಸಿಱ್
ಕಡು ಪಿರಿದಲ್ತೆ ಕೇಳ್ನಿನಗೆ ಪರ್ವತದೇವ ಪಯೋರಸಕ್ಕಿದಿ
ರ್ಮಡಿ ಗಡ ಬಂಕಿದೇವ ಸುಱಿವೈ ಸುಱಿಕೆನ್ನದೆ ಮಲ್ಲಿದೇವ ನೀಂ ೬೫

ತಲೆಯಂ ತೊನೆಯದಿರಿನ್ನುಂ
ನೆಲೆವೆರ್ಚದು ಪೊಡೆ ಕುಮಾರದೇವಯ್ಯ ಸಡಿ
ಲ್ಚೆಲೆ ಜಘನಸೂತ್ರಮಂ ಸಿ
ಮ್ಮಲಿಗೆಯ ಚಂದಯ್ಯ ಭೋಗ ಭುಂಜಿಸು ಜವದಿಂ ೬೬

ಪುರುಡಿಂ ಪಿರಿದುಂಡಪನೀ
ವಿರುಪಯ್ಯಂ ಭಲರೆ ಬೊಮ್ಮಿದೇವಂ ಪೀರ್ದಂ
ಕರಗವೆರಡಱೊಳೆ ತಂದುದ
ನರರೆ ಕರಂ ತಣಿದನಲ್ತು ಕಲಕೇತಾರ್ಯಂ ೬೭

ನೀನು ಊಟ ಮಾಡಬೇಕು. ತ್ರ್ಯಂಬಕ ದೇವನು ಊಟ ಮಾಡುವನೇ ? ಮಾಯಿ ದೇವನ ಆ ದೊಡ್ಡ ಹೊಟ್ಟೆಗೆ ಸಾಲದು ! ಮಹೇಶ್ವರದೇವನ ಹೊಟ್ಟೆ ಬೇಗ ತುಂಬುವುದಲ್ಲ ! ದಾಸಿದೇವನ ಹೊಟ್ಟೆಯು ಮೇಲಕ್ಕೆ ಹೆಚ್ಚಾಗಿ ಉಬ್ಬತಕ್ಕದ್ದಲ್ಲ ! ಶಂಭುದೇವನು ಅದೆಷ್ಟು ಊಟಮಾಡುವನೋ ! ಉದ್ಭಟದೇವನು ಮೆಲ್ಲಗೆ ಊಟ ಮಾಡುತ್ತಿರುವನು (ಅವನ ಊಟ ಮಾಡುವ) ಈ ಉದ್ಯೋಗವು ಮನೋಹರವಾದದ್ದು ! ಸಂಗಮದೇವ, ಪಾತ್ರೆಯನ್ನು ಸರಿಯಾಗಿ ಹಿಡಿ ಹಿಡಿ ! ಗಜೇಶಮಸಣಯ್ಯನೇ, ಬೊಗಸೆಯಲ್ಲಿ ಹಿಡಿದು ಕುಡಿಯುತ್ತಿರುವೆಯಲ್ಲಾ ! ದಸರಿದೇವನೇ, ಶಕ್ತಿಗುಂದದೆ ಕುಡಿಯುತ್ತಿರುವೆಯಲ್ಲಾ ! ಪರ್ವತ ದೇವನೇ ಕೇಳು : ನಿನ್ನ ಹೊಟ್ಟೆ ಬಹು ದೊಡ್ಡದಲ್ಲವೇ ! ಬಂಕಿದೇವನೇ ಹಾಲಿನ ರುಚಿಗೆ ಇಮ್ಮಡಿ ರುಚಿಯಾಗಿದೆಯಲ್ಲವೇ ! ಮಲ್ಲಿದೇವ, ನೀನು ಸುರಕ್ ಎಂಬ ಧ್ವನಿ ಮಾಡದೆ ಹಾಗೆಯೇ ಸುರಿಯುತ್ತಿರುವೆಯಲ್ಲಾ ! ೬೬–೬೭. ಕುಮಾರದೇವಯ್ಯ (ಸಾಕು ಎಂದು) ತಲೆಯನ್ನಾಡಿಸಬೇಡ ; ಹೊಟ್ಟೆಯು ಇನ್ನೂ ದಪ್ಪನಾಗಲಿ ಹೊಡೆ ! ಸಿಮ್ಮಲಿಗೆಯ ಚಂದಯ್ಯ ಉಡಿದಾರವನ್ನು ಸಡಿಲುಗೊಳಿಸು, ಭೋಗಯ್ಯ ಬೇಗನೆ ಊಟ ಮಾಡು ; ಈ ವಿರುಪಯ್ಯನು ಸ್ಪರ್ಧೆಯಿಂದ ಹೆಚ್ಚಾಗಿ ಊಟ ಮಾಡುತ್ತಿದ್ದಾನೆ. ಬೊಮ್ಮಿದೇವನು ಎರಡು ಕೊಡಗಳಲ್ಲಿ ತುಂಬಿ ತಂದುದನ್ನು ಅಬ್ಬಬ್ಬಾ ! ಕುಡಿದು ಬಿಟ್ಟನು. ಕೇತಯ್ಯನು ಚೆನ್ನಾಗಿ ತಣಿದನಲ್ಲವೇ ; ಸಂತೋಷದಿಂದ ಹೊಟ್ಟೆಯ ಕಂಠ ಪೂರ್ತಿಯಾಗುವವರೆಗೆ (ಏಕಾಂತ) ರಾಮನು ತುಂಬಿದನು. ಅಪ್ಪಿದೇವನು ಮೈ ಅಳು

ಪದೆದು ಕೊರಲ್ವರೆಗಂ ತುಂ
ಬಿದನುದರದ ರಾಮುನಪ್ಪಿದೇವಂ ಪೆಯ್ಯಾ
ಡದೆ ಪಿರಿದುಂ ಪೀರ್ದಂ ಸಗ
ರದ ಬೊಮ್ಮಂ ಸವಿದನಳ್ಕಱಿಂ ತಣಿವನ್ನಂ ೧೮

ಸವಿಯೆಂತುಟೊ ಸುಱಿದಪನೀ
ಶಿವದೇವಂ ಪೀರ್ದು ತಣಿದು ತೇಗಿದನೀಗ
ಳ್ಕವಿತೆಯ ಬೊಮ್ಮಂ ಕೆಲವಲ
ದವರೊಳ್ಪುರುಡಿಸುತೆ ಪೀರ್ದಪಂ ಕಾಶೀಶಂ ೧೯

ಮುನ್ನೆಱೆದುದನೀಂಟಿದನೀ
ಕನ್ನದ ಬೊಮ್ಮಯ್ಯನಿನ್ನುವೇಱೆ ಬಱಿದಾಯ್ತೊ
ಚನ್ನಯ್ಯನ ಪರಿಯಣಮಿ
ತ್ತನೋಡಂಬಿಗರ ಚೌಡನಾರೋಗಿಸಿದಂ ೨೦

ಸಾಲದು ತನಗೆನುತಿರ್ದಪ
ನೀ ಲಿಂಗಣದೇವನೊಲ್ದಿವಂಗೆಱೆ ಜವದಿಂ
ದಾಲೋಕಿಪುದಿತ್ತ ಮಹಾ
ಕಾಲಯ್ಯಂ ಬಱಿಯ ಬಟ್ಟಲಂ ಪಿಡಿದಿರ್ಪಂ ೨೧

ನಿನಗೇಂ ಸಾಲ್ದುಮೆ ಶಾಂತದೇವ ತಲೆದೂಗುತ್ತಿರ್ಪೆ ಮಾಧುರ್ಯಮೆಂ
ತೊ ನಿತಾಂತಂ ಗಣದಾಸಭೀಮಧವಳೇಶಂಗಾದುದೇ ತೃಪ್ತಿ ನೀ
ನಿನಿತಂ ಕೊಳ್ಳಕಳೇಶ ಸಾಲ್ದುಮೆನುತಿರ್ಪೈ ಸುಮ್ಮನಾದಯ್ಯ ನಿ
ನ್ನನುಮಂ ಬಲ್ಲೆನಿಳೇಶ ಬೊಮ್ಮ ನಗದಿರ್ಮಾದಾರ್ಯ ನೀನೀಂಟಿದಂ ೨೨

ಎನಗಿನ್ನುಂ ತರ್ಪುದೀತಂಗೆಱೆ ಮೊರಡದ ಬಂಕಂಗೆ ಲಿಂಗಾರ್ಪಣಂಗೆ
ಯ್ದು ನಿತಾಂತಂ ಶ್ರೀಗುರುಧ್ಯಾನದಿನೆಱೆದನಿತಂ ಪೀರ್ದಪಂ ಜೊಮ್ಮಿದೇವಂ

ಗಾಡಿಸದಂತೆ ಹೆಚ್ಚಾಗಿಯೇ ಕುಡಿದನು. ಸಗರದ ಬೊಮ್ಮಯ್ಯನು ತಣಿವಾಗುವ ಹಾಗೆ ಪ್ರೀತಿಯಿಂದ ಊಟ ಮಾಡಿದನು. ಶಿವದೇವನು (ಇನ್ನೂ) ಸುರಕೊಳ್ಳುತ್ತಲೇ ಇದ್ದಾನೆ ಸವಿ ಇನ್ನೆಷ್ಟಿದ್ದೀತು! ಕವಿತೆಯ ಬೊಮ್ಮಯ್ಯನು ಈಗ ಕುಡಿದು ತಣಿದು ತೇಗುತ್ತಿದ್ದಾನೆ. ಕಾಶೀಪತಿಯು ಅಕ್ಕಪಕ್ಕದವರೊಡನೆ ಪಣಕಟ್ಟಿ (ಶಪಥ ಮಾಡಿ) ಕುಡಿಯುತ್ತಿದ್ದಾನೆ. ಕನ್ನದ ಬೊಮ್ಮಯ್ಯನು ಮೊದಲು ನೀಡಿದ್ದನ್ನೆಲ್ಲ ಕುಡಿದನು, ಇನ್ನೂ ನೀಡಿರಿ. ಈ ಚೆನ್ನಯ್ಯನ ಪರಿಯಾಣವು–ತಟ್ಟೆಯು–ಬರಿದಾಗಿದೆ. ಇತ್ತನೋಡು ಈ ಅಂಬಿಗರ ಚೌಡಯ್ಯನು ಊಟ ಮಾಡಿ ಬಿಟ್ಟನು. ಈ ಲಿಂಗಣ್ಣನು ತನಗೆ ಸಾಲ ದೆನ್ನುತ್ತಿದ್ದಾನೆ, ಪ್ರೀತಿಯಿಂದ ಇವನಿಗೆ ಇನ್ನೂ ನೀಡಿರಿ, ಶೀಘ್ರವಾಗಿ ಅತ್ತ ನೋಡಿರಿ ಮಹಾಕಾಳಯ್ಯನು, ಬರಿಯ ಬಟ್ಟಲನ್ನು (ತಟ್ಟೆಯನ್ನು) ಹಿಡಿದುಕೊಂಡಿದ್ದಾನೆ. ೨೨–೨೩. ಶಾಂತ ದೇವನೇ, ತಲೆದೂಗುತ್ತಿದ್ದೀಯೆ ನಿನಗೆ ಸಾಕಾಯಿತೇನೋ ? ರುಚಿ ಹೇಗಿದೆಯೋ ? ಗಣದಾಸ ಭೀಮಧವಳೇಶನಿಗೆ ಬಹಳವಾಗಿ ತೃಪ್ತಿಯಾಯಿತೇ ?

ಬಿಸದಂಗೆಯ್ವುತ್ತೆ ಪೂರ್ಣ್ದಂತಿರೆ ಸವಿದಪನೀ ಡಕ್ಕೆ ಮಾರಯ್ಯನೀ ಗೋ
ವಿನ ಮಾರಂ ಸಾಲದೆಂದೀಂಟಿದಪನಮರ್ದುಗೊಳ್ವಂತಿರಾನಂದದಿಂದಂ ೭೩

ಪ್ರಮಥರ ಕೃಪೆಯಿಂದೆನ್ನು
ತ್ತಮಾಂಗಮಿದು ಬಹಳ ರಸನೆವಡೆದೊಡೆ ಪೀರ್ವೆಂ
ಸುಮಹತ್ಕಟಾಹವಿಷಮನಿ
ತುಮನೆಂಬಂ ಮಿಂಡ ಸಂಗನೇಂ ಕಡುಗಲಿಯೋ ೭೪

ಚೊಕ್ಕಳತನದಿಂ ಸವಿದಂ
ಮೊಕ್ಕಳಮೇಕಾಂತರಾಮನೀಂಟಿದಪಂ ಕೆ
ಯ್ಯಿಕ್ಕಿ ಮೊಗೆಮೊಗೆದು ಬಗಸೆಯೊ
ಳೊಕ್ಕಲಿಗರ ಮುದ್ದನೊರ್ವನೊಲ್ದವಸರದಿಂ ೭೫

ಚಿಕ್ಕಯ್ಯನುಮಿಾ ಡೋಹರ
ಕಕ್ಕಯ್ಯನುಮೊಡನೆ ಪೀರ್ದರರಿದೆನೆ ಪದಪಿಂ
ದೊಕ್ಕುದು ಮಿಕ್ಕುದು ಬಸವಂ
ಗಕ್ಕುಂ ಸವಿಯಲ್ಕೆ ಚನ್ನಬಸವಸಮೇತಂ ೭೬

ಸಕಳೇಶಮಾದರಸರೇ, ನೀವು ಇನ್ನೂ ಸ್ವಲ್ಪ ತೆಗೆದುಕೊಳ್ಳಿ! ಆದಯ್ಯನವರೇ, ಸುಮ್ಮ ಸುಮ್ಮನೆ ಸಾಕು ಎನ್ನುತ್ತಿದ್ದೀರಿ (ಊಟ ಮಾಡುವ) ನಿಮ್ಮ ಸಾಮರ್ಥ್ಯವನ್ನು ನಾನು ಬಲ್ಲೆನು. ಮಹಾರಾಜರಾದ ಬೊಮ್ಮಯ್ಯನವರೇ, ನಗಬೇಡಿರಿ, ಮಾದಿ ರಾಜರೇ, ನೀನು ಇದನ್ನು ಕುಡಿಯಿರಿ. ನನಗೆ ಇನ್ನೂ ಸ್ವಲ್ಪ ತನ್ನಿರಿ, ಮೊರಟದ ಬಂಕಿದೇವನಿಗೆ ತಂದುನೀಡಿರಿ. ಲಿಂಗಾರ್ಪಣೆ ಮಾಡಿ ಅಧಿಕವಾಗಿ ಶ್ರೀ ಗುರುಧ್ಯಾನ ಮಾಡುತ್ತ, ನೀಡಿದಷ್ಟನ್ನೆಲ್ಲ ಜೊಮ್ಮಿದೇವನು ಕುಡಿದು ಬಿಟ್ಟನು. ವಿನೋದ ಮಾಡುತ್ತ ಪ್ರತಿಜ್ಞೆ ಮಾಡಿದ ರೀತಿಯಲ್ಲಿ ಈ ಡಕ್ಕೆಯ ಮಾರಯ್ಯನು ಸ್ವೀಕರಿಸಿ ಬಿಟ್ಟನು. ಈ ಗೋವನ್ನು ಕಾಯುವ ಮಾದಯ್ಯನು ಸಾಲದು ಎನ್ನುತ್ತ ಆನಂದದಿಂದ ಹಾಲುಕುಡಿಯುವ ರೀತಿಯಲ್ಲಿ ಕುಡಿದು ಬಿಟ್ಟನು. ೭೪. ಪ್ರಮಥ ಗಣಗಳ ಕೃಪಾ ವಿಶೇಷದಿಂದ ನನ್ನ ಶಿರಸ್ಸು ಅನೇಕ ನಾಲಿಗೆಗಳನ್ನು ಹೊಂದಿದ್ದಾದರೆ ಶ್ರೇಷ್ಠವಾದ ಈ ದೊಡ್ಡ ದೊಡ್ಡ ಕೊಪ್ಪರಿಗೆಗಳಲ್ಲಿರುವ ಎಲ್ಲ ವಿಷವನ್ನೆಲ್ಲ ಕುಡಿಯುತ್ತೇನೆಂಬು ಮಿಂಡ ಸಂಗಯ್ಯನು ಅನ್ನುತ್ತಿದ್ದಾನೆ. (ಅಬ್ಬಾ!) ಅವನು ಅದೆಂಥಾ ಮಹಾ ಶೂರನೋ! ೭೫. ಪ್ರೀತಿಯನ್ನು ಹೊಂದಿ ಅಧಿಕವಾಗಿ ಏಕಾಂತ ರಾಮಯ್ಯನು ಕುಡಿದನು. ಕೈ ಗಳನ್ನು ಹಾಕಿ ಬೊಗಸೆಯಲ್ಲಿ ತುಂಬಿ ತುಂಬಿ ಒಕ್ಕಲಿಗರ ಮುದ್ದಯ್ಯನು ಪ್ರೀತಿಯಿಂದ ಅವಸರವಸರವಾಗಿ ಒಬ್ಬನೇ ಕುಡಿದನು. ೭೬. ಚಿಕ್ಕಯ್ಯನೂ, ಈ ಡೋಹರ ಕಕ್ಕಯ್ಯನೂ ಇದು ಆಶ್ಚರ್ಯವೆನ್ನುವ ರೀತಿಯಲ್ಲಿ ಕೂಡಲೇ ಪ್ರೀತಿಯಿಂದ ಕುಡಿದು ಬಿಟ್ಟರು. ಕುಡಿದು ಬಿಟ್ಟ ಮಿಕ್ಕ ವಿಷವು ಚೆನ್ನ ಬಸವಣ್ಣನ ಸಮೇತವಾಗಿ ಬಸವಣ್ಣನಿಗೆ

ವ॥ ಎಂಬ ಸಂಭ್ರಮೋಕ್ತಿಗಳಿಂಬುವಡೆಯೆ ಮತ್ತಮಲ್ಲಿ—

ಗೊಗ್ಗಾಂಬೆ ಚಾಕಲಾಂ[1]ಬಿಕೆ
ದುಗ್ಗಳೆ ಕಮಲಾಂಬೆ ಕಾಳಿ ಶಿವದೇವಿ ಲಸ
ತ್ಸುಗ್ಗಲೆ ಶಾಂಭವಿ ನಿಂಬಿಯು
ಮುಗ್ಧದ ಮಾದೇವಿ ವಿಮಳೆ ರೇಕಾಂಬಿಕೆಯರ್ ೭೭

ಸೋಮಾಂಬಿಕೆ ಮಾದಾಂಬಿಕೆ
ಭೀಮಾಂಬಿಕೆ ಬೀಚಿದೇವಿ ಬಲಿದೇವಿ ಮಹಾ
ಕಾಮಾಂಬಿಕೆ ನಾಗಾಂಬಿಕೆ
ರೇಮಾಂಬಿಕೆ ರೇಚಿದೇವಿ ವೀರಾಂಬಿಕೆಯರ್ ೭೮

ಲಿಂಗಾಂಬೆ ಸೂರಸೇನೆ ಸು
ಮಂಗಳೆ ಸತ್ಯಕ್ಕನಲ್ಲಮಾಂಬಿಕೆ ವಿಳಸ
ದ್ಗಂಗಾಂಬೆ ಗೌರಿ ಶಾಂಕರಿ
ಸಂಗಾಂಬಿಕೆ ಚಂಡಿಯರಸಿಯಾ[2]ದಾಂಬಿಕೆಯರ್ ೭೯

ವ॥ ಇವರ್ಮೊದಲಾದ ಶಿವಯೋಗಿನಿಯರ್ಮೇಲಣ ಪಙ್ಕ್ತಿಗೊಂಡು ಕುಳ್ಳಿರ್ದು ಪರಮಾನುರಾಗದಿಂ ಶಿವಪ್ರಸಾದಿತ ವಿಷಾಮೃತಪಾನಲೀಲೆಯನಾಳ್ದು ತಣಿದು ತೇಗಿ ಬೀಗುತ್ತುಮಿರೆ—

ಒರೊರ್ವರ ಪರಿಯಣಮುಮ
ನೋರೊರ್ವರ್ಕೊಂಡು ಶೇಷಮಂ ಸವಿಸವಿವು

ಕುಡಿಯಲಿಕ್ಕೆ ಸಾಕಾಗುವುದು. ವ॥ ಹೀಗೆಂದೆನ್ನುವ ಸಂಭ್ರಮದ ಮಾತುಗಳು ಅಧಿಕವಾಗುತ್ತಿದ್ದವು. ಮತ್ತು ಅಲ್ಲಿ ೭೭–೭೯. ಗೊಗ್ಗವ್ವೆ, ಚಾಕಲಾಂಬಿಕೆ, ದುಗ್ಗಳೆ, ಕಮಲಾಂಬೆ, ಕಾಳಮ್ಮ, ಶಿವದೇವಮ್ಮ, ಶ್ರೇಷ್ಠಳಾದ ಸುಗ್ಗಲಾದೇವಿ, ಶಾಂಭವಿ, ನಿಂಬ್ಯಕ್ಕ, ಪವಿತ್ರಳಾದ ಮಹಾದೇವಿ, ಪರಿಶುದ್ಧಳಾದ ರೇಣುಕಾಂಬೆಯರೂ, ಸೋಮಲಾಂಬಿಕೆ, ಮಾದಲಾಂಬಿಕೆ, ಭೀಮಲಾಂಬಿಕೆ, ಬೀಚಿದೇವಿ, ಬಲಿದೇವಿ, ಮಹಾಕಾಮಾಂಬಿಕೆ, ನಾಗಲಾಂಬಿಕೆ, ರೇಮಾಂಬಿಕೆ ರೇಚಿದೇವಿ, ವೀಲಾಂಬಿಕೆಯರೂ, ಲಿಂಗಾಂಬೆ, ಸೂರಸೇನಮ್ಮ, ಸುಮಂಗಳಮ್ಮ, ಸತ್ಯಕ್ಕ, ಅಲ್ಲಮಾಂಬಿಕೆ, ಪ್ರಕಾಶಮಾನಳಾದ ಗಂಗಾಂಬಿಕೆ, ಗೌರಮ್ಮ, ಶಾಂಕರಿ, ಸಂಗಾಂಬಿಕೆ, ಚಂಡಿಯರಸಿ, ಆ ಮಾದಾಂಬಿಕೆಯರೂ, ವ॥ ಇವರೇ ಮೊದಲಾದ ಶಿವಯೋಗಿನಿಯರು ಮೇಲ್ಭಾಗದ ಪಙ್ಕ್ತಿಯಲ್ಲಿ ಕುಳಿತುಕೊಂಡು, ಪರಮ ಪ್ರೀತಿಯಿಂದ ಶಿವನಿಗೆ ಅರ್ಪಿಸಲ್ಪಟ್ಟ ವಿಷವೆಂಬ ಅಮೃತ ಪಾನವನ್ನು ಮಾಡಿದವರಾಗಿ, ತೃಪ್ತಿಗೊಂಡು ತೇಗಿ, ಬೀಗುತ್ತಿರಲಾಗಿ ೮೦. ಒಬ್ಬೊಬ್ಬರ ಹರಿವಾಣವನ್ನು ಇನ್ನೊಬ್ಬೊಬ್ಬರು ತೆಗೆದುಕೊಳ್ಳುತ್ತ ಅವುಗಳಲ್ಲಿ ಉಳಿದಿರುವ ಪ್ರಸಾದವನ್ನು (ಹುಡು

1 ಮಾಂ(ದ) 2 ಮಾ(ಮು), ದೂ(ಅ)

ತ್ತೋರೊರ್ವರೊಡನೆ ಕುಳ್ಳಿ
ರ್ದೋರೊರ್ವರ್ತವ್ಮೊಳೀಂಟುತುಂ ಬಿನದಿಸುತುಂ ೮೦

ಅರೆಮುಚ್ಚಿ ತೆಱೆವುತುಂ ಕ
ಣ್ಮರಲಂ ಕಾಲ್ನೀಡಿ ನಿಗುರುತುಂ ಪಾತ್ರೆಗಳಂ
ಕರತಳದೊಳಾಂತು ನರ್ತಿಸು
ತಿರದಾರ್ದುಪ್ಪರಿಸಿ ನೆಗೆವುತುಂ ನಗೆನಗುತುಂ ೮೧

ತಣಿವುತ್ತುಂ ತೇಗುತುಂ ಬೀಗುತೆ ಪೊಡವಡುತುಂ ಪೊಂಗುತುಂ ಕೂಗಿಡುತ್ತುಂ
ಕುಣಿವುತ್ತುಂ ಬಣ್ಣಿಸುತ್ತುಂ ಬಲವರುತವುರುತ್ತುಪ್ಪುತುಂ ಪೆರ್ಚುತುಂ ಸಂ
ದಣಿಸುತ್ತುಂ ಸಾರುತುಂ ಮೈಮುರಿವುತೊಲೆವುತೊಲ್ದಾಡುತುಂ ಪಾಡುತಂ ಬಿ
ನ್ನಣಮಂ ತೋಱುತ್ತೆ ಬೀಱುತ್ತಭಿನವರಸಮಂ ನೋಡುತುಂ ಗಾಡಿಯಿಂದಂ ೮೨

ಬಸವನನೊರ್ಮೆ ಲಿಂಗಮುಮನೊರ್ಮೆ ನಿರೀಕ್ಷಿಸುತ್ತುಂ ಬೆಮರ್ತು ಕಂ
ಪಿಸುತೆ ಸುಖಾಶ್ರುವಿಂ ನನೆವುತುಂ ನೆನೆವುತ್ತೆ ಶಿವಾಂಘ್ರಿಪದ್ಮಮು
ಪೊಸಬಗೆವೆತ್ತುಘೇಯೆನುತೆ ಗದ್ಗದವೊಪ್ಪಿರೆ ಸತ್ಪುರಾತನ
ಪ್ರಸರಮನುರ್ವಿ ಕೀರ್ತಿಸುತೆ ಕೆಯ್ಮುಗಿವುತ್ತೆ ಪೊದಳ್ದ ಭಕ್ತಿಯಿಂ ೮೩

ನರಪತಿಮುಖ್ಯರ್ನೋಡು
ತ್ತಿರೆ ಸಾದ್ಭುತಹೃದಯರಿಂತು ಗಣವರರಾಗ

ಹುಡುಕಿ) ಸ್ವೀಕಾರಮಾಡುತ್ತ, ಒಬ್ಬೊಬ್ಬರೂ ಪಕ್ಕಪಕ್ಕದಲ್ಲಿ ಕೂಡಿಕೊಂಡು ಕುಳಿತು ವಿನೋದದ ಮಾತನಾಡುತ್ತ ಕುಡಿಯುತ್ತಿದ್ದರು. ೮೧–೮೨. ಹೂವಿನಂತಿರುವ ಕಣ್ಣುಗಳನ್ನು ಅರ್ಧಮುಚ್ಚಿ ತೆರೆಯುತ್ತ, ಕಾಲುಗಳನ್ನು ಚಾಚಿ ನಿಗುರುತ್ತ ಹರಿವಾಣಗಳನ್ನು ಕೈಗಳಲ್ಲಿ ಹಿಡಿದುಕೊಂಡು, ನರ್ತನಮಾಡುತ್ತ, (ಸಂತೋಷದಿಂದ) ಕೂಗಾಡುತ್ತ, ಮೇಲಕ್ಕೆ ಕುಪ್ಪಳಿಸಿ ನೆಗೆದಾಡುತ್ತ, ನಗುತ್ತ, ತೃಪ್ತಿಗೊಳ್ಳುತ್ತ, ತೇಕಾಡುತ್ತ, ಸೆಡೆದು ನಿಲ್ಲುತ್ತ, ನಮಸ್ಕಾರ ಮಾಡುತ್ತ, ಬಾಗಿ ನಿಲ್ಲುತ್ತ, (ಶಿವಶಿವ ಎಂದು) ಕೂಗುತ್ತ, ಕುಣಿದಾಡುತ್ತ, ವರ್ಣನೆ ಮಾಡುತ್ತ, ಪ್ರದಕ್ಷಿಣೆ ಬರುತ್ತ, ಉಬ್ಬುತ್ತ, ಒಟ್ಟೊಟ್ಟಾಗಿ ಸೇರುತ್ತ, ದೂರದೂರ ಸರಿಯುತ್ತ, ಮೈಮುರಿಯುತ್ತ, ಒಲೆದು ನಿಲ್ಲುತ್ತ, ಒಲೆದು ನಲಿದಾಡುತ್ತ ಹಾಡುತ್ತ, ಒಯ್ಯಾರವನ್ನು ತೋರ್ಪಡಿಸುತ್ತ, ನೂತನ ರಸಭಾವವನ್ನು ವ್ಯಕ್ತಪಡಿಸುತ್ತ, (ಒಬ್ಬರನ್ನೊಬ್ಬರು) ಸಂಭ್ರಮದಿಂದ ನೋಡುತ್ತ (ಇದ್ದರು). ೮೩–೮೪. ಒಮ್ಮೆ ಬಸವಣ್ಣನನ್ನೂ ಒಮ್ಮೆ ಲಿಂಗವನ್ನೂ ನಿರೀಕ್ಷಣೆ ಮಾಡುತ್ತ, ಬೆವರಿ ಕಂಪನಗೊಳ್ಳುತ್ತ, ಸಂತೋಷದ ಕಣ್ಣೀರಿನಿಂದ ನೆನೆಯುತ್ತ, ಶಿವನ ಪಾದಕಮಲವನ್ನು ನೆನೆಯುತ್ತ, ನೂತನ ಮನಸ್ಸುಳ್ಳವರಾಗಿ ಉಘೇ! ಎನ್ನುತ್ತ, ಗದ್ಗದ ಕಂಠದಿಂದ ಕೂಡಿ ಶ್ರೇಷ್ಠ ಪುರಾತನರ ಸಮೂಹವನ್ನು ಹೊಗಳುತ್ತ, ಹೊರಹೊಮ್ಮುತ್ತಿರುವ ಭಕ್ತಿ ಭಾವದಿಂದ ಕೈ ಮುಗಿಯುತ್ತ ಮಹಾರಾಜನಾದ ಬಿಜ್ಜಳನೇ ಮೊದಲಾದ ಪ್ರಮುಖರೆಲ್ಲರೂ

ಳ್ಗರಳರಸಪಾನಕೇಳಿಯು
ನಿರದಾಳ್ದೋಲಾಡಿದರ್ಸುಖಾಂಭೋನಿಧಿಯೊಳ್ ೮೪

ಗುಣನಿಧಿ ಬಸವಂ ಕಂಡಾ
ಗಣನಿವಹಸಮುತ್ಸವಂಗಳಂ ನಲಿದೊಲವಿಂ
ಮಣಿದಾಂ[1]ತು ತತ್ಪ್ರಸಾದಮ
ನಣಿಯರಮಾರೋಗಿಸುತ್ತೆ ತಣಿದೊಪ್ಪಿರ್ದಂ ೮೫

ಗರಳಧರನೀಂಟಿದಮೃತಂ
ಗರಳಂ ತಾನಾದುದಮೃತಮಯರೀಂಟಿದ ತ
ದ್ಗರಮಮೃತಮಾದುದೆಂದೆನೆ
ಧರೆಯೊಳ್ಖಲಸಾಧುಸಂಗಮೇಗೆಯ್ಯದೊ ಪೇಳ್ ೮೬

ವ॥ ಎಂದು ಬಲ್ಲರ್ಬಣ್ಣಿಸುತ್ತುಮಿರೆ ಮತ್ತಮಲ್ಲಿ ವೇತ್ರಧರರ್ಗೆ ನಿಯ[2]ಮಿಸಿ—

ಬರಿಸಿದನಲ್ಲಿವಟ್ಟು ಗಣಕಾವಳಿಯುಂ ಸಚಿವಪ್ರತಾನಮುಂ
ಧರಣಿಪಪುತ್ರರುಂ ಜನಪಬಾಂಧವರುಂ ನೃಪನಾಪ್ತಮಿತ್ರರುಂ
ಚರಸುಭಟರ್ಕಳುಂ ಗುರುಪುರೋಹಿತರುಂ ಪುರರಕ್ಷಕೌಘಮುಂ
ಸುರುಚಿರವಿಪ್ರರುಂ ಸುಕರದಾಸಿಯರುಂ ಸುನಟೀವಿತಾನಮುಂ ೮೭

ಕ್ಷೋಣೀಂದ್ರ ಪ್ರಮದಾಳಿಯುಂ ವ್ಯಜನಭೃಂಗಾರಾತಪತ್ರೋಲ್ಲಸ
ನ್ಮಾಣಿಕ್ಯಾಂಚಿತದರ್ಪಣಾಭರಣ ಚಂಚಚ್ಚಾಮರಾಂದೋಳಿಕಾ

ನೋಡುತ್ತಿರುವಂತೆ ಅದ್ಭುತ ಹೃದಯ ಸಂಪತ್ತಿನಿಂದ ಕೂಡಿದ ಶಿವಗಣಶ್ರೇಷ್ಠರುಗಳೆಲ್ಲ ಈ ರೀತಿ ವಿಷಪಾನ ಕ್ರೀಡಾಮಗ್ನರಾಗಿ, ತತ್ಸಂಬಂಧವಾದ ಸುಖವೆಂಬ ಸಮುದ್ರದಲ್ಲಿ ತೇಲಾಡುತ್ತಿದ್ದರು. ೮೫. ಸದ್ಗುಣಗಳಿಗೆ ನಿಧಿಯಂತಿರುವ ಬಸವಣ್ಣನು ಈ ಶಿವಗಣ ಸಮೂಹದ ಉತ್ಸವಗಳನ್ನು ಕಂಡು ಸಂತೋಷದಿಂದ ಒಲಿದು ನಮಸ್ಕಾರ ಮಾಡಿ, ಅವರುಗಳ ಪ್ರಸಾದವನ್ನು ಸಡಗರದಿಂದ ಸ್ವೀಕಾರ ಮಾಡಿ ತೃಪ್ತಿಗೊಂಡು ಶೋಭಿಸುತ್ತಿದ್ದನು. ೮೬. ವಿಷವನ್ನು ಧರಿಸಿದ ಶಿವನು ಕುಡಿದ ಅಮೃತವು ತಾನು ವಿಷವಾಯಿತು, ಅಮೃತ ಸ್ವರೂಪರಾದ ಶಿವಶರಣರು ಕುಡಿದ ಆ ವಿಷವೇ ಅಮೃತಮಯವಾಯಿತು, ಎಂದು ಹೇಳುವ ಹಾಗೆ, ಲೋಕದಲ್ಲಿ ದುಷ್ಟರು ಮತ್ತು ಸತ್ಪುರುಷ ಸಂಗವು ಏನನ್ನು ಮಾಡಲಿಕ್ಕಿಲ್ಲ! ಹೇಳು, ವ॥ ಹೀಗೆಂದು ತಿಳಿದವರೆಲ್ಲರೂ ವರ್ಣನೆ ಮಾಡುತ್ತಿದ್ದರು. ಮತ್ತು ಅಲ್ಲಿ (ಬಸವಣ್ಣನನ್ನು) ಬೆತ್ತವನ್ನು ಕೈಯಲ್ಲಿ ಹಿಡಿದು ಸೇವೆ ಮಾಡುವವರಿಗೆ ಆಜ್ಞೆ ಮಾಡಿ ಕಳುಹಿಸಿ ೮೭–೮೮. ಬಸವಣ್ಣನು ಸಂತೋಷಗೊಂಡು ಲೆಕ್ಕಿಗರ ಸಮೂಹವನ್ನೂ (ಗಣಿತಜ್ಞರ ಸಮೂಹವನ್ನೂ), ಮಂತ್ರಿಗಳ ಸಮೂಹವನ್ನೂ, ರಾಜಪುತ್ರರನ್ನೂ, ಅರಸನ ಬಂಧು ಬಾಂಧವರನ್ನೂ. ಅರಸನ ಆಪ್ತರಾದ

1 ದಾ(ಚ) 2 ಯಾ(ಚ, ಮ)

ಶ್ರೇಣಿಧಾರಕರಂ ಸುಗಂಧಹಿಮವೀಟೀದಾನಧೌರೇಯರಂ
ವೀಣಾವೇಣುಮೃದಂಗತಾಳಕಪಳಾವಾದ್ಯಪ್ರವೀಣರ್ಕಳಂ ೮೮

ಪಂಡಿತರಂ ಲಾಸ್ಯಕಳಾ
ಮಂಡಿತರಂ ಗಾಯಕರ್ಕಳಂ ಕವಿಗಳನು
ದ್ದಂಡನಿಗಮಾಗಮಜ್ಞರ
ತಂಡಮನುಱುತರಪುರಾಣಪರಿಣತ ಬುಧರಂ ೮೯

ವರವಾದಿವಂದಿಮಾಗಧ
ಪರಿಹಾಸಕಸುವಿಟವಾಗ್ಮಿ ಪಾಠಕಚಯಮುಮಂ
ತರಮಱಿದು ಕುಳ್ಳಿರಿಸಿ ಘನ
ಗರಳಾಮೃತಮೊಱೆದು ತಣಿಪಿದಂ ವೃಷಭೇಂದ್ರಂ ೯೦

ಅವರನಿಬರುಮೀಂಟಿದರು
ತ್ಸವದಿಂ ಸುಧೆಯಂತಿರಾದ ವಿಷಮಂ ತಣಿದ

ಮಿತ್ರವರ್ಗವನ್ನೂ, ಗೂಢಚಾರರನ್ನೂ, ಮಹಾಶೂರರುಗಳನ್ನೂ, ಗುರುಗಳನ್ನೂ, ಪುರೋಹಿತರನ್ನೂ, ನಗರ ರಕ್ಷಕರುಗಳ ಸಮೂಹವನ್ನೂ, ಶ್ರೇಷ್ಠರಾದ ಬ್ರಾಹ್ಮಣರುಗಳನ್ನೂ, ಒಳ್ಳೆಯ ಸೇವೆ ಮಾಡುವ ದಾಸೀ ವರ್ಗದವರನ್ನೂ, ಶ್ರೇಷ್ಠ ನೃತ್ಯಗಾರ್ತಿಯರನ್ನೂ, ರಾಜನ ಅಂತಃಪುರದ ಸ್ತ್ರೀಯರ ಸಮೂಹವನ್ನೂ, ಬೀಸಣಿಕೆ, ಭೃಂಗಾರ, ಛತ್ರಿ, ಹೊಳೆಯುತ್ತಿರುವ ಮಾಣಿಕ್ಯ ರತ್ನಗಳಿಂದ ಶ್ರೇಷ್ಠವೆನಿಸಿದ ಕನ್ನಡಿ, ಆಭರಣ, ಬೀಸುವ ಚಾಮರ ಮೇಣೆ (ಅಥವಾ ಪಲ್ಲಕ್ಕಿ) ಇವುಗಳ ಸಮೂಹವನ್ನೂ ಧರಿಸಿ ಸೇವೆ ಮಾಡುವ ಸೇವಕ ವರ್ಗದವರನ್ನೂ, ಸುವಾಸನಾ ದ್ರವ್ಯಗಳು, ಪಚ್ಚಕರ್ಪೂರ ಮಿಶ್ರಿತವಾದ ತಾಂಬೂಲವನ್ನು ಕೊಡುವುದರಲ್ಲಿ ಸಮರ್ಥರಾದ ಸೇವಕ ವರ್ಗದವರನ್ನೂ, ವೀಣೆ, ಕೊಳಲು, ಮೃದಂಗ, ತಾಳ, ಕಹಳೆಯೇ ಮೊದಲಾದ ವಾದ್ಯವನ್ನು ಬಾರಿಸುವುದರಲ್ಲಿ ಪ್ರವೀಣರಾದ ಕಲಾವಿದರನ್ನೂ ಬರಮಾಡಿಕೊಂಡನು. ೮೯–೯೦. ಆ ಬಸವಣ್ಣನು ಪಂಡಿತರುಗಳನ್ನೂ, ನೃತ್ಯ, (ಮೃದುನೃತ್ಯ) ಕಲೆಯಿಂದ ಅಲಂಕಾರಗೊಂಡವರನ್ನೂ, ಸಂಗೀತಗಾರರನ್ನೂ, ಕವಿಗಳನ್ನೂ, ಶ್ರೇಷ್ಠರಾದ ವೇದ, ಆಗಮಗಳಲ್ಲಿ ತಜ್ಞರ ಸಮೂಹವನ್ನೂ ಶ್ರೇಷ್ಠವಾದ ಪುರಾಣಗಳನ್ನು ಹೇಳುವುದರಲ್ಲಿ ಕುಶಲರಾದವರನ್ನೂ, ಶ್ರೇಷ್ಠ ತಾರ್ಕಿಕರನ್ನೂ, ಸ್ತುತಿ ಪಾಠಕರನ್ನೂ, ಬಿರುದನ್ನು ಹೊಗಳುವ ಭಟ್ಟಂಗಿಗಳನ್ನೂ, ಹಾಸ್ಯಗಾರರನ್ನೂ, ವಿಟರು, ಉಪನ್ಯಾಸಕರು, ಅಧ್ಯಾಪಕರನ್ನೂ ಕ್ರಮವಾಗಿ ಕುಳ್ಳಿರಿಸಿ, ಘನವಾದ ಅಮೃತದಂತಾಗಿರುವ ವಿಷವನ್ನು ಕುಡಿಸಿ, ತಣಿಸಿದನು. ೯೧. (ಹೀಗೆ ಸೇರಿದ) ಅವರೆಲ್ಲರೂ ಅಮೃತದಂತಾದ ವಿಷವನ್ನು ಸಂತೋಷದಿಂದ

ರ್ವಿವಿಧೋಕ್ತಿಗಳಿಂ ಪೊಗಳ್ದ
ರ್ನವೀನ ಸುಖವಾಳ್ದು ಭಕ್ತಿರತ್ನಾಕರನಂ ೯೧

ವ॥ ಮತ್ತಂ ಸಾಂಕುಶನಿಬದ್ಧಾಂಜಲಿಗಳಾಗಿ ನಿಂದಿರ್ದ ಗಜಾರೋಹಕರಂ ಮಹಿಮಾಕರನ ಭೀಕ್ಷಿಸಿ—

ರಣಕೋಲಾಹಲನಂ ಕರಾಳರದನಂ ನೀಲಾಚಲಸ್ಪರ್ಧಿಯಂ
ಗಣನಾಥಪ್ರಿಯನಂ ಸುಭದ್ರಗಜಮಂ ದಂತಾವಳೋತ್ತಂಸನಂ
ಗುಣರತ್ನಾಕರನಂ ಗಜೇಂದ್ರಮಣಿಯಂ ಗಂಭೀರನಾದಾಂಕಪಾ
ರಣರಾಜೇಂದ್ರನನಿಂದ್ರದಂತಿನಿಭನಂ ವಿಂಧ್ಯಾದ್ರಿಸಂಕಾಶನಂ ೯೨

ಕಳಭವರೇಣ್ಯನಂ ಕರಟಿಪುಂಗವನಂ ಕರಿಸಾರ್ವಭೌಮನಂ
ಮಳಯವಿಹಾರಿಯಂ ಮಹಿತವಿಭ್ರಮನಂ ಮದಗಂಧಭಾಸಿಯಂ
ಜಳಧರಘೋಷನಂ ಜನಪವಲ್ಲಭನಂ ಜಗದೇಕಶೂ[1]ರನಂ
ವಿಳಸಿತಸತ್ವನಂ ವಿಪುಳವಿಗ್ರಹನಂ ವಿಜಯಾಭಿರಾಮನಂ ೯೩

ಕುಡಿದರು ; ತೃಪ್ತಿಪಟ್ಟರು ; ಭಕ್ತಿರತ್ನಾಕರನೆನಿಸಿದ ಬಸವಣ್ಣನನ್ನು ಅನೇಕ ಪ್ರಕಾರದ ಮಾತುಗಳಿಂದ ಹೊಸಬಗೆಯ ಸುಖವನ್ನು ಹೊಂದಿದವರಾಗಿ ಹೊಗಳಿದರು. ವ॥ ಮತ್ತು ಕೈಯಲ್ಲಿ ಹಿಡಿದ ಆನೆಯ ಅಂಕುಶ ಸಮೇತವಾಗಿ ಕೈಮುಗಿದುಕೊಂಡು ನಿಂತಿದ್ದ ಮಾವುತರನ್ನು (ಆನೆ ಹತ್ತುವವರನ್ನು) ಮಹಿಮಾಶಾಲಿಯಾದ ಬಸವಣ್ಣನು ನೋಡಿ ೯೨–೯೩. ರಣಕೋಲಾಹಲನೆಂದು ಕರೆಸಿಕೊಳ್ಳುವ ಆನೆಯನ್ನು, ಭಯಂಕರದಂತವುಳ್ಳ ಆನೆಯನ್ನು, ನೀಲಾಚಲದೊಡನೆ ಸ್ಪರ್ಧೆ ಮಾಡುತ್ತಿರುವುದೋ ಎಂಬ ಆನೆಯನ್ನು, ಶಿವನಿಗೆ ಪ್ರಿಯನೆನಿಸಿದ ಆನೆಯನ್ನು, ಶ್ರೇಷ್ಠವಾದ ಮಂಗಳ ಲಕ್ಷಣಗಳುಳ್ಳ ಆನೆಯನ್ನು (ಪಟ್ಟದಾನೆಯನ್ನು), ಆನೆಗಳಲ್ಲೆಲ್ಲ ಶಿರೋ ರತ್ನವೆನಿಸಿರುವ ಆನೆಯನ್ನು, ಸದ್ಗುಣಗಳಿಂದ ಸಮುದ್ರಕ್ಕೆ ಸಮಾನವೆನಿಸಿದ ಆನೆಯನ್ನು. ಶ್ರೇಷ್ಠ ಗಜಗಳಲ್ಲೆಲ್ಲ ರತ್ನಮಯವಾದು ದೆಂದೆನಿಸುವ ಆನೆಯನ್ನು, ಗಂಭೀರವಾಗಿ ಬೃಂಹಿತ ಮಾಡುವುದೆಂದು ಗೊತ್ತಾಗಿರುವ ಆನೆಗಳಿಗೆಲ್ಲ ರಾಜನಂತಿರುವ ಆನೆಯನ್ನು, ಇಂದ್ರನ ಐರಾವತಕ್ಕೆ ಸರಿಸಮಾನವಾದ ಆನೆಯನ್ನು, ವಿಂಧ್ಯಪರ್ವತಕ್ಕೆ ಸಮಾನವೆನಿಸಿರುವ ದೊಡ್ಡ ಆನೆಯನ್ನು, ಆ ಶ್ರೇಷ್ಠ ಮರಿ ಆನೆಯನ್ನು. ಆನೆಗಳಲ್ಲೆಲ್ಲ ಪುಂಗವನೆನಿಸಿರುವುದನ್ನು, ಆನೆಗಳಲ್ಲೆಲ್ಲ ಸಾರ್ವಭೌಮ ನೆನಿಸಿದುದನ್ನು, ಮಲಯ ಪರ್ವತದಲ್ಲಿ (ಸದಾ) ವಿಹರಿಸುತ್ತಿರುವುದನ್ನು, ಸಂಭ್ರಮ ದಿಂದ ಖ್ಯಾತಿವೆತ್ತುದನ್ನು, ಮದೋದಕದ ಸುಗಂಧದಿಂದ ಪ್ರಕಾಶಿಸುವ ಆನೆಯನ್ನು, ಮೇಘದಂತೆ ಗರ್ಜಿಸುವಂತಹವುವನ್ನು, ಜಗತ್ತಿನಲ್ಲಿ ಇದೊಂದೇ ಶೂರನೆಂದೆನಿಸಿರುವ ಆನೆಯನ್ನು, ಪ್ರಕಾಶಮಾನವಾದ ಸತ್ವದಿಂದ ಕೂಡಿದುದೆಂದು ಹೆಸರಾದುದನ್ನು, ದೊಡ್ಡ ಶರೀರವುಳ್ಳದ್ದನ್ನು, ವಿಜಯ ಎಂಬ ಹೆಸರಿನಿಂದ ಮನೋಹರವಾಗಿರುವ ಆನೆಯನ್ನು,

1 ವೀ(ಅ)

ಸಮರಪಟುವಿಕ್ರಮನನ
ಭ್ರಮೋಪವಿಭ್ರಮನನಭ್ರಕಾಯನನಹಿತೋ
ಗ್ರಮತಂಗಜಮದಹರನಂ
ಚಮೂವಿಭೂಷಣನನಿಭಕುಲಪ್ರಭು ಕರಿಯಂ ೯೪

ಕುಂಜರವರನಂ ಭೂಧರ
ಭಂಜನನಂ ಕಾಲರುದ್ರನಂ ರಟಪಳಿನೀ
ರಂಜನನಂ ಮದಸುರಭಿಸ
ಮಂಜಸನಂ ಶಂಕರಪ್ರಿಯಾಹ್ವಯಗಜಮಂ ೯೫

ರಿಪುರಾಜಭಯಂಕರನಂ
ತ್ರಿಪುರಾಂತಕನಂ ಪ್ರಮತ್ತನಂ ಜಂಗಮದಾ
ಸ್ಯಪರಾಯಣನಂ ಸಬಳ
ದ್ವಿಪೇಂದ್ರಮಂ ತನ್ನಿಮೆಂದು ತಾಂ ಬೆಸಸುತ್ತುಂ ೯೬

ಬರಿಸಿ ಘನಕರಿಗಳಂ ಬಸ
ವರಸಂ ಸಾಲ್ಗೊಳಿಸಿ ತೆಱೆದು ಗರಳಾಮೃತಮಂ
ದ್ವಿರದಂಗಳನುಣಿಸಿ ತಣಿಪಿದ
ನರಿದೆಂದಚ್ಚರಿಯನಾಳ್ದು ಪೊಗಳೆ ನರೇಂದ್ರಂ ೯೭

ಯುದ್ಧ ಭೂಮಿಯಲ್ಲಿ ಸಮರ್ಥವಾದ ಪರಾಕ್ರಮವುಳ್ಳ ಆನೆಯನ್ನು, ಆಕಾಶದ ಆನೆಯಾದ ಐರಾವತದ ಭ್ರಾಂತಿಯನ್ನುಂಟು ಮಾಡುವ ಮೋಡದಂತೆ ಕಪ್ಪಾದ ಶರೀರವುಳ್ಳ ಆನೆಯನ್ನು ವೈರಿಗಳಿಗೆ ಭಯಂಕರವೆನಿಸಿ ಮತಂಗಜನೆಂಬ ರಾಕ್ಷಸನನ್ನು ಸಂಹರಿಸಿದ ಆನೆಯಂತಿರುವ ಆನೆಯನ್ನು, ಸಮಸ್ತ ಸೈನ್ಯಕ್ಕೆಲ್ಲ ಭೂಷಣ ಪ್ರಾಯವಾದ ಆನೆಯನ್ನು, ಆನೆಗಳ ವಂಶಕ್ಕೆಲ್ಲ ಪ್ರಭುವೆನಿಸಿರುವ ಆನೆಯನ್ನು, ಆನೆಗಳಲ್ಲಿ ಶ್ರೇಷ್ಠವಾದದ್ದೆನಿಸಿರುವ ಆನೆಯನ್ನು, ಪರ್ವತಗಳನ್ನೆಲ್ಲ ಕಿತ್ತು ಬಿಸಾಡುವಂತಹ ಆನೆಯನ್ನು, ಪ್ರಳಯ ಕಾಲದ ರುದ್ರನೆಂಬ ಹೆಸರಿನ ಆನೆಯನ್ನು, (ಮದೋದಕದ ಕಾರಣದಿಂದ) ಸುತ್ತಿ ಝೇಂಕರಿಸುತ್ತಿರುವ ಹೆಣ್ದುಂಬಿಗಳನ್ನುಳ್ಳ ಆನೆಯನ್ನು, ಮದೋದಕದಿಂದ ಸುವಾಸನೆಯಿಂದೊಡಗೂಡಿದ ಆನೆಯನ್ನು, ''ಶಂಕರಪ್ರಿಯ'' ಎಂಬ ಹೆಸರುಳ್ಳ ಆನೆಯನ್ನು, ವೈರಿರಾಜರುಗಳಿಗೆ ಭಯವನ್ನುಂಟುಮಾಡುವ 'ತ್ರಿಪುರಾಂತಕ' ಎಂಬ ಹೆಸರಿನದನ್ನು, ವಿಶೇಷಗರ್ವವಿಶಿಷ್ಟವಾದುದನ್ನು. ಜಂಗಮರುಗಳ ಸೇವಾಕಾರ್ಯಧುರಂಧರನೆನಿಸಿದ ಆನೆಯನ್ನು, (ಇವೇ ಮೊದಲಾದ) ವಿಶೇಷಬಲಶಾಲಿಯಾದ ಶ್ರೇಷ್ಠ ಆನೆಗಳನ್ನು ತನ್ನಿರಿ ಎಂದು (ಆ ಸೇವಕ ವರ್ಗದವರಿಗೆ) ಆಜ್ಞೆಮಾಡಿದನು. ೯೭. (ಈ ರೀತಿಯಲ್ಲಿ) ಶ್ರೇಷ್ಠವಾದ ಆನೆಗಳನ್ನೆಲ್ಲ ಬರಮಾಡಿಕೊಂಡು, ಸಾಲಾಗಿ ನಿಲ್ಲಿಸಿ ಬಸವೇಶ್ವರನು ಅವಕ್ಕೆಲ್ಲ ವಿಷದಅಮೃತವನ್ನು ಕುಡಿಸಿ, ಇದು (ಲೋಕದಲ್ಲಿ) ಅಸಾಧ್ಯವಾದ ಕಾರ್ಯವೆನ್ನುತ್ತ ಆಶ್ಚರ್ಯಗೊಂಡು ಬಿಜ್ಜಳನರೇಂದ್ರನು ಹೊಗಳುತ್ತಿರುವಂತೆ ಹೆಚ್ಚಾಗಿ ತೃಪ್ತಿ

ವ॥ ಮತ್ತಂ ಕಶಾಗರ್ಭಿತಕರಸಂಪುಟಘಟಿತನಿಟಲತಟರಾಗಿ ನಿಂದಿರ್ದ ತುಂಗತುರಂಗಿಗಳಂ ಮಂಗಳಮಯಂ ಪಿಂಗದೆ ನೋಡಿ—

ಭರದಿಂದಂ ತನ್ನಿಮಶ್ವೇಶ್ವರನನತುಳ ಭದ್ರಾಂಗನಂ ಸೌಮ್ಯನಂ ಸೌಂ
ದರನಂ ಚಿತ್ರಾಂಗನಂ ಮಂಗಳಮಯನನಜೇಯಾಖ್ಯನಂ ಸಂಗರಶ್ರೀ
ಧರನಂ ತತ್ವಜ್ಞನಂ ಮಂಜುಳಗಮನನನುದ್ದಂಡನಂ ಚಂಡವೇಗೋ
ದ್ಧುರನಂ ಚಂಡಾಂಶುವಾಜಿಪ್ರಭನನಭಯನಂ ತುಂಗನಂ ಮಾಣದೀಗಳ್ ೯೮

ಸುಲಲಿತಕಾಯನಂ ಸುಭಗವಾಜಿಯನಾಜಿವಿಹಾರಧೀರನಂ
ವಿಲಸಿತಸತ್ವನಂ ವಿಪುಳವಿಕ್ರಮನಂ ಜಯಶೀಲನಂ ಮಹೋ
ಜ್ವಲಹಯರಾಜನಂ ಕುಸುಮಬಾಣನನುನ್ನತಚಂದ್ರಹಾಸನಂ
ಬಲಿಮದಮರ್ದಿಯಂ ಬಹಳವಿಭ ಮನಂ ಜಿತವೈನತೇಯನಂ ೯೯

ಜವಗನನಿಂದ್ರಾಯುಧನಂ
ದಿವಿಜಾಶ್ವಸ್ಪರ್ಧಿಯಂ ತುರಂಗಮವಿಭುವಂ
ಶಿವಸೇವಾಭೂಷಣನಂ
ರವಿಹಾಸನನತುಳಚೇರಮಪ್ರಿಯಹಯಮಂ ೧೦೦

ಪಡಿಸಿದನಂ. ॥ವಚನ॥ ಕೈಯಲ್ಲಿ ಚಾಟಿಯನ್ನು ಹಿಡಿದು ಆ ಚಾಟಿಸಮೇತವಾಗಿಯೇ ಹಣೆಯಮೇಲೆ ಕೈಯೆತ್ತಿಮುಗಿಯುತ್ತನಿಂತಿರುವ ಎತ್ತರವಾದ ಕುದುರೆಗಳ ಸವಾರರುಗಳನ್ನು ಮಂಗಳಮೂರ್ತಿಯಾದ ಬಸವಣ್ಣನು ತಪ್ಪದೆನೋಡುತ್ತ ೯೮. ಅಶ್ವಗಳಿಗೆಲ್ಲ ಈಶ್ವರನೆನಿಸುವ ಕುದುರೆಯನ್ನು, ಅನುಪಮವಾದ 'ಭದ್ರಾಂಗ' ಎಂಬ ಹೆಸರಿನ ಕುದುರೆಯನ್ನು, ಸೌಮ್ಯ, ಚಿತ್ರಾಂಗ, ಮಂಗಳಮಯ, ಅಜೇಯ ಎಂಬ ಹೆಸರುಗಳುಳ್ಳ ಕುದುರೆಗಳನ್ನು, ಯುದ್ಧಭೂಮಿಯಲ್ಲಿ ಶ್ರೀಯನ್ನು ಧರಿಸಿದುದೆನಿಸುವ ಕುದುರೆಯನ್ನು, ತತ್ತ್ವಜ್ಞ, ಮಂಜುಳಗಮನ; ಉದ್ದಂಡ, ಚಂಡವೇಗದಲ್ಲಿ ಸಮರ್ಥವೆನಿಸಿದುದೆಂಬ ಹೆಸರಿನಕುದುರೆಯನ್ನು, ಸೂರ್ಯನಕುದುರೆಗಳಿಗೆ ಸಮನೆನಿಸಿದುದನ್ನು, ಅಭಯ, ತುಂಗ, ಇತ್ಯಾದಿ ಹೆಸರುಗಳುಳ್ಳ ಕುದುರೆಗಳನ್ನು ತಪ್ಪದೆ ತ್ವರಿತವಾಗಿ ತನ್ನಿರಿ. ೯೯. ಮನೋಹರವಾದ ದೇಹವುಳ್ಳದ್ದೆನಿಸುವುದನ್ನು, ಸುಭಗ (ಸೌಂದರ) ಎಂಬ ಕುದುರೆಯನ್ನು, ಯುದ್ಧಭೂಮಿಯಲ್ಲಿ ವಿಹಾರಮಾಡುವ ಶೂರನೆಂದು ಹೆಸರುಳ್ಳ ಕುದುರೆಯನ್ನು, ಮನೋಹರವಾದ ಸತ್ವವುಳ್ಳ ಕುದುರೆಯನ್ನು, ವಿಪುಲವಿಕ್ರಮ, ಜಯಶೀಲ, ಮಹೋಜ್ವಲಹಯರಾಜ, ಕುಸುಮಬಾಣ, ಎತ್ತರವಾದ ಚಂದ್ರಹಾಸ, ಬಲಿಮದಮರ್ದಿ, ಅತಿವಿಭ್ರಮ, ಜಿತವೈನತೇಯ (ವೇಗದಲ್ಲಿ ಗರುಡನನ್ನು ಸೋಲಿಸಿದ)--ಇತ್ಯಾದಿ ಹೆಸರಿನ ಕುದುರೆಗಳನ್ನು ಭರದಿಂದತನ್ನಿರಿ. ೧೦೦. ಜವಗ (ಅತಿತೀವ್ರವಾಗಿ ಓಡುವ), ಇಂದ್ರಾಯುಧ, ದಿವಿಜಾಶ್ವ (ಉಚ್ಚೈಶ್ರವಸ್ಸು) ದೊಡನೆ ಸ್ಪರ್ಧೆಮಾಡುವಂತಹುದೆನಿಸುವ ಕುದುರೆಯನ್ನು, ಕುದುರೆಗಳಿಗೆಲ್ಲ ಪ್ರಭುವೆನಿಸಿದ ಕುದುರೆಯನ್ನು, ಶಿವನಸೇವೆಯಿಂದ ಭೂಷಣನೆನಿಸುವ ಕುದುರೆಯನ್ನು, ರವಿಹಾಸ, ಅಸಮಾನವಾದ ಚೇರಮಪ್ರಿಯ ಎಂಬ

ವ॥ ಎಂದಿ[1]ವು ಮೊದಲಾದವಂ ತರಿಸುತಸಮವಿಷಸುಧಾರಸಮನಾ ವಾಜಿರಾಜಿಗೋಜೆಯಿನೆಱೆದು ತಣಿಪಿ ವಿಶ್ವರಕ್ಷಣವಿಚಕ್ಷಣನಚ್ಚರಿ ವಿಹಾರಿ ವಿರಾಜಿಸುತ್ತುಮಿರ್ಪಿನಮಾಗಳ್

ಮೊಳಗಿದುದಭ್ರದೊಳ್ದಿವಿಜದುಂದುಭಿ ಧಾಂಧಳಮೆಂದು ಭೋರೆನು
ತ್ತಿಳಿದುದು ಪುಷ್ಪವೃಷ್ಟಿ ಸುರಕಿನ್ನರಸಿದ್ಧಕದಂಬಯುಕ್ತಮು
ಜ್ವಳಮತಿಯಿಂದೆ ಬಣ್ಣಿಸಿಮುದಗ್ಗದ ರುದ್ರಗಣಂ ಕೃಪಾಸುಧಾ
ವಿಳಸಿತವರ್ಷಮಂ ಕಱೆದುದೇಳ್ಗೆಯ ಭಕ್ತಗಣಂ ವಿಳಾಸದಿಂ ೧೦೧

ಪೊಗಳ್ದಂ ಬಿಜ್ಜಳಭೂಪತಿ
ನೆಗಳ್ದತಿಶಯ ಕೌತುಕಕ್ಕೆ ಬಗೆಮೆಚ್ಚಿ ಧರಿ
ತ್ರಿಗೆ ಮುದಮೊದವಿದುದು ಮನಂ
ಬುಗೆ ಕೊಂಡಾಡಿದುದು ವಿವಿಧ ವಿಬುಧವಿತಾನಂ ೧೦೨

ವ॥ ಮತ್ತಂ ಭಕ್ತಗಣಂ ನಲವೇರ್ಪಿ ಮೆಚ್ಚಿ—

ಬಸವಕುಮಾರ ಭಕ್ತಿಸುಖಸಾರ ಭವಾಂಬುಧಿಕರ್ಣಧಾರ ಸ
ದ್ವಿಸರಲಲಾಮ ಸತ್ಯಗುಣಧಾಮ ಸಮುನ್ನತಪುಣ್ಯನಾಮ ಚಿ
ದ್ರಸಭರಿತಾಂಗ ಚಿತ್ತಜವಿಭಂಗ ಚಿರಂತನಶಿಷ್ಟಸಂಗ ತಾ
ಮಸವನದಾವ ತತ್ವಮಯಭಾವ ತತಾಖಿಲದೇವಸೇವಿತಾ ೧೦೩

ಹೆಸರುಳ್ಳ ಕುದುರೆಗಳನ್ನು (ಭರದಿಂದ ತನ್ನಿರಿ). ॥ವಚನ॥ ಹೀಗೆಂದೆನ್ನುವವುಗಳೇ ಮೊದಲಾದ ಕುದುರೆಗಳನ್ನು ಬರಮಾಡಿಸಿಕೊಂಡು ಅಸಮಾನವಾದ ವಿಷವೆಂಬ ಅಮೃತ ರಸವನ್ನು ಆ ಕುದುರೆಗಳ ಸಮೂಹಕ್ಕೆ ಕ್ರಮವಾಗಿ ಕುಡಿಸಿ ತೃಪ್ತಿಪಡಿಸಿ, ವಿಶ್ವವನ್ನು ರಕ್ಷಣೆಮಾಡುವುದರಲ್ಲಿ ಕುಶಲನೆನಿಸಿದವನೂ. ಆಶ್ಚರ್ಯಕರ ವಿಹಾರಿಯೆನಿಸಿದವನೂ ಆದ ಬಸವಣ್ಣನು ಶೋಭಿಸುತ್ತ ಇರುತ್ತಿರುವ ಸಮಯದಲ್ಲಿ ೧೦೧. ಆಕಾಶದಲ್ಲಿ 'ಧಾಂಧಳಂ ಎಂದು ದೇವದುಂದುಭಿಯು ಮೊಳಗಿತು. ಹೂಮಳೆಯು 'ಭೋರ್' ಎನ್ನುತ್ತ ಇಳಿಯಿತು. ಸುರರು, ಕಿನ್ನರರು, ಸಿದ್ಧರುಗಳ ಸಮೂಹವು ಪ್ರಕಾಶಮಾನವಾದ ತಮ್ಮ ಮನಃಪೂರ್ವಕ ವರ್ಣನೆ ಮಾಡಿತು. ರುದ್ರಗಣ, ಭಕ್ತಗಣಗಳು ಸಂಭ್ರಮದಿಂದ ತಮ್ಮ ಕೃಪೆಯೆಂಬ ಅಮೃತದ ಮನೋಹರ ಮಳೆಯನ್ನು ಸುರಿಸಿದರು. ೧೦೨. ಪ್ರಕಟಪಡಿಸಿದ (ಬಸವಣ್ಣನ) ಅತಿಶಯವಾದ ಆಶ್ಚರ್ಯಕರ ಘಟನೆಗೆ ಬಿಜ್ಜಳಭೂಪಾಲನು ಮನಸ್ಸುಬ್ಬಿ ಹೊಗಳಿದನು. ಭೂಮಂಡಲಕ್ಕೆ ಸಂತೋಷವುಂಟಾಯಿತು. ವಿವಿಧ ವಿದ್ವಾಂಸರ ಸಮೂಹವು ಮನಃಪೂರ್ವಕವಾಗಿ ಕೊಂಡಾಡಿದರು. ॥ವಚನ॥ ಮತ್ತು ಭಕ್ತರುಗಳ ಸಮೂಹವು ಅತಿಸಂತೋಷದಿಂದ ಮೆಚ್ಚಿ —೧೦೩–೧೦೬. ಬಸವಕುಮಾರನೇ, (ನೀನು) ಸಾರಭೂತವಾದ ಭಕ್ತಿಯ ಸುಖವುಳ್ಳವನು ; ಹುಟ್ಟುಸಾವುಗಳ ರೂಪವಾದ ಈ

1 ಬಿ(ಅ)

ಶರಣಜನಾನುಕೂಲ ಜಿತಕಾಲ ಜಗತ್ತ್ರಯಪಾಲ ಜಂಗಮ
ಸ್ಥಿರಭಜನಾತಿಲೋಲ ಶುಭಶೀಲ ಸುರಾಸುರಜಾಲವಂದ್ಯ ಭಾ
ಸುರಭಸಿತಾಂಕಫಾಲಸುವಿಶಾಲ ಸುಖದ್ರುಮಮೂಲ ಭಕ್ತಿಭಾ
ಸುರಸರಸೀಮರಾಲ ಘನಲೀಲ ಗಣಾಂಬುಜಬಾಲಭಾಸ್ಕರಾ ೧೦೪

ಭವಾಪಹಾರಿಭವ್ಯ ಭಕ್ತಭಾವ್ಯ ಭದ್ರಮೂರ್ತಿ ಸ
ದ್ಭವೋಪಯುಕ್ತಚಿತ್ತ ಮತ್ತವಾದಿಭಂಜನಾ ಲಸ
ಚ್ಛಿವೋಪರಮ್ಯಪಾದಪದ್ಮಭೃಂಗ ಚಿನ್ಮಯಾಂಗವ
ಚ್ಛಿವಾಪರಾವತಾರ ಧೀರಸಾರ ನುತ್ಯವೈಭವಾ ೧೦೫

ಶುಭಶೀಲ ವಿಶ್ವಪತಿ ಸ
ನ್ನಿಭ ನಿಗಮಾತೀತಮಹಿಮ ನಿನಗೆ ಪಲಂ ದು

ಸಂಸಾರವೆಂಬ ಸಾಗರವನ್ನು ದಾಟಿಸುವ ನಾವಿಕನು ; ಸತ್ವಗುಣಸಮೂಹಗಳುಳ್ಳವರಲ್ಲಿ ತಿಲಕಪ್ರಾಯನು ; ಸತ್ಯದಿಂದ ಕೂಡಿದ ಗುಣಗಳಿಗೆ ಮೂಲಸ್ಥಾನನಾದವನು ; ಔನ್ನತ್ಯದಿಂದ ಕೂಡಿದ ಪುಣ್ಯಪ್ರದಖ್ಯಾತಿಯುಳ್ಳವನು ; ಶಿವಜ್ಞಾನವೆಂಬ ರಸದಿಂದ ತುಂಬಿದ ಶರೀರವುಳ್ಳವನು ; ಮನ್ಮಥನನ್ನು ಭಂಗಗೊಳಿಸಿದವನು ; ಸತತವೂ ಶಿಷ್ಟರಾದ ಜನರುಗಳ ಸಂಗವುಳ್ಳವನು ; ತಮೋಗುಣವೆಂಬವನಕ್ಕೆ ದಾವಾನಳ ಸ್ವರೂಪನು ; ಶಿವತತ್ತ್ವದಿಂದ ತುಂಬಿಹೋದ ಭಾವದಿಂದ ಕೂಡಿದವನು ; ಪ್ರಸಿದ್ಧರಾದ ಸಮಸ್ತದೇವತೆಗಳಿಂದ ಸೇವಿಸಲ್ಪಡುವವನು ; ಶರಣಜನರಿಗೆ ಅನುಕೂಲನಾದವನು ; ಯಮನನ್ನು ಗೆದ್ದವನು ಮೂರುಲೋಕಗಳ ಪಾಲಕನು ; ಜಂಗಮರುಗಳ ಸೇವೆಯನ್ನು ದೃಢಮನಸ್ಸಿನಿಂದ ಆಚರಿಸುವುದರಲ್ಲಿ ಆಸಕ್ತನಾದವನು : ಪವಿತ್ರವಾದ (ಮಂಗಳಕರವಾದ) ನಡತೆಯುಳ್ಳವನು ; ದೇವತೆಗಳು ರಾಕ್ಷಸರುಗಳಿಂದ ವಂದಿಸಿಕೊಳ್ಳಲ್ಪಡುವವನು ; ಪ್ರಕಾಶಮಾನವಾದ ಭಸ್ಮದ ಚಿಹ್ನೆಯಿಂದ ಶೋಭಿಸುವ ಹಣೆಯುಳ್ಳವನು ; ಶಿವಸುಖವೆಂಬ ವಿಶಾಲವಾದ ವೃಕ್ಷದ ಬೊಡ್ಡೆ (ಕಾಂಡ) ಯಂತಿರುವವನು ; ಪ್ರಸಿದ್ಧವಾದ ಶಿವಭಕ್ತಿಯೆಂಬ ಸರೋವರದಲ್ಲಿನ ಹಂಸಪಕ್ಷಿಎನ್ನಿಸಿರುವವನು ; ಘನವಾದ ಲೀಲೆಯಿಂದ ಕೂಡಿದವನು; ಶಿವಗಣಗಳೆಂಬ ಕಮಲಗಳಿಗೆ ಬಾಲಸೂರ್ಯನಂತಿರುವವನು ; ಸಂಸಾರ ಸಂಬಂಧವಾದ ದುಃಖವನ್ನುದೂರಮಾಡಿದವನು ; ಮಂಗಳಸ್ವರೂಪರಾದ ಶಿವಭಕ್ತಜನರುಗಳಿಂದ ಧ್ಯಾನಮಾಡುವುದಕ್ಕೆಯೋಗ್ಯವೆನಿಸಿದವನು ; ಮಂಗಳಕರ ಶರೀರಿಯು ; ಶ್ರೇಷ್ಠನಾದ ಶಿವನಿಂದ ತುಂಬಿಹೋದ ಮನಸ್ಸುಳ್ಳವನು (ಶಿವಭಾವಾಪನ್ನಮನಸ್ಸಿನವನು), ಮದದಿಂದ ಕೂಡಿದ ವಾದಿಜನಗಳನ್ನು ಭಂಗಗೊಳಿಸಿದವನು ; ಪ್ರಕಾಶಮಾನವಾದ ಶಿವನ ಮನೋಹರವಾದ ಪಾದಕಮಲಗಳಲ್ಲಿ ಭೃಂಗದೋಪಾದಿಯಲ್ಲಿರುವವನು ; ಜ್ಞಾನಮಯವಾದ ಶರೀರದಿಂದ ಕೂಡಿ ಶಿವನ ಬೇರೊಂದು ಅವತಾರವೋ ಎನಿಸಿದವನು ; ಶ್ರೇಷ್ಠರಾದ ವಿದ್ವಾಂಸರಿಂದ ಹೊಗಳಿಸಿಕೊಳ್ಳುವುದಕ್ಕೆ ಯೋಗ್ಯನಾಗಿರುವವನು ;

ರ್ಲಭಮಾವುದೊ ಬಗೆವೊಡೆ ಘನ
ವಿಭವೋನ್ನತ ವಿಶ್ವಭುವನದೊಳ್ವೃಷಭೇಂದ್ರಾ ೧೦೬

ಭವದೀಯ ಮಹಿಮೆಯಂ ಕೇ
ಳ್ವನಱಿವಂ ಪ್ರಮಥರಱಿವರುಮೆಯಱಿವಳ್ಮೇ
ಣ್ಭುವನದೊಳಾರಱಿವರ್ಪೇಳಿ
ರವಿಕಳ ಶಿವಭಕ್ತಿಭಾಮಿನೀಮಣಿಮುಕುರಾ ೧೦೭

ಅಂಗಜವೈರಿ ನುಂಗಲಗಿದೊಯ್ಯನೆ ಭೀಕರಕಾಲಕೂಟಮಂ
ತುಂಗಗಳಸ್ಥಳಾಂತರದೊಳಾಂತನದಂ ಜವದಿಂ ಕೊರಲ್ವರಂ
ಪಿಂಗದೆ ಪೀರ್ದೆ ನಿನ್ನಯ ಮಹತ್ವಮಿದದ್ಭುತಮದ್ಭುತಂ ಕೃಪಾ
ಸಂಗತಚಿತ್ತ ನಿನ್ನಳವನಾರ್ತಿಳಿವರ್ಮಹಿಯೊಳ್ ವೃಷಾಧಿಪಾ ೧೦೮

ಅಮರ್ದೀಂಟಿಯುಮಮರರ್ಮರ
ಣಮನಾಂಪರ್ಗಡ ಜಗದ್ಭಯಂಕರ ಮೃತ್ಯೂ
ಪಮವಿಷಮನೀಂಟಿ ನಿತ್ಯ
ತ್ವಮನಾಳ್ದೆ ವೃಷೇಂದ್ರ ನಿನ್ನ ಬಗೆ ಚಿತ್ರತರಂ ೧೦೯

ವ॥ ಎಂದಖಿಳರುಂ ಕೀರ್ತಿಸುತ್ತುಮಿರ್ದರಾ ಪ್ರಸ್ತಾವದೊಳ್—

ಮಂಗಳಕರ ಶೀಲವುಳ್ಳವನು : ಸಮಸ್ತವಿಶ್ವಕ್ಕೆ ಪತಿಯೆನಿಸಿದ ಶಿವನಿಗೆ ಸಮಾನನಾದವನು ; ವೇದಾಗಮಗಳಿಗೂ ಸಿಲುಕದ ಮಹಿಮಾಶಾಲಿಯು—ಇಂಥ ಮಹಿಮಾಶಾಲಿಯಾದ ಬಸವೇಶ್ವರ, ನಿಜವಾಗಿಯೂ ಈ ಘನವಾದ ವೈಭವದಿಂದ ಉನ್ನತವಾದದ್ದೆನಿಸುವ ವಿಶ್ವವೆಂಬ ಮನೆಯಲ್ಲಿ ವಿಚಾರಮಾಡಿನೋಡಿದ್ದಾದರೆ, ಯಾವುದುತಾನೆ ನಿನಗೆ ಅಸಾಧ್ಯವಾದದ್ದುಂಟು? ೧೦೭. ದೃಢವಾದ ಶಿವಭಕ್ತಿಯೆಂಬ ಸ್ತ್ರೀ ಯುಳು ತನ್ನ ಸ್ವರೂಪ ನೋಡಿಕೊಳ್ಳುವ ರತ್ನದಕನ್ನಡಿಯಂತಿರುವ ಬಸವೇಶ್ವರಾ, ನಿನ್ನ ಸಂಬಂಧವಾದ ಮಹಿಮೆಯನ್ನು ಶಿವನೊಬ್ಬ ಕೇಳಿಬಲ್ಲನು; ಪ್ರಮಥಗಣಗಳು ತಿಳಿಯುವರು; ಪಾರ್ವತೀದೇವಿಬಲ್ಲಳು : ಬೇರೆಯವರು ಲೋಕದಲ್ಲಿ ಯಾರು ಬಲ್ಲರು ? ೧೦೮. ವೃಷಾಧಿಪನೇ, ಭಯಂಕರ ಕಾಲಕೂಟ ವಿಷವನ್ನು ಪರಮೇಶ್ವರನು ನುಂಗಲಿಕ್ಕೆ ಹೆದರಿ ಶ್ರೇಷ್ಠವಾದ ಕಂಠ ಪ್ರದೇಶದಲ್ಲಿಯೇ ಆದನ್ನು ಧರಿಸಿಬಿಟ್ಟನು. ನೀನು ಶೀಘ್ರವಾಗಿ ಕಂಠಪೂರ್ತಿಯಾಗಿ ತಪ್ಪದೆ ಕುಡಿದುಬಿಟ್ಟೆ. ಈ ನಿನ್ನ ಮಹತ್ವವು ಅದ್ಭುತ ! ಅದ್ಭುತ !! ಕೃಪೆಯಿಂದ ಕೂಡಿದ ಮನಸ್ಸುಳ್ಳವನೇ ಈ ಲೋಕದಲ್ಲಿ ನಿನ್ನ ಮಹಿಮೆಯನ್ನು ಯಾರು ತಾನೇ ತಿಳಿಯಲು ಶಕ್ಯರಾದಾರು ? ೧೦೯. ಹೇ ಬಸವೇಶ್ವರನೇ, ನಿನ್ನ ಈ ರೀತಿಯು ವಿಚಿತ್ರವಾದದ್ದು ; (ಏಕೆಂದರೆ) ಅಮೃತವನ್ನು ಕುಡಿದೂಕೂಡ ದೇವತೆಗಳು ಮರಣವನ್ನು ಹೊಂದುವರಲ್ಲವೆ ; ನೀನು ಜಗತ್ತಿಗೆ ಭಯಂಕರ ಮೃತ್ಯುವಿಗೆ ಸಮಾನವಾದ ವಿಷವನ್ನು ಕುಡಿದು ನಿತ್ಯತ್ವ (ಶಾಶ್ವತತನ)ವನ್ನು ಹೊಂದಿದೆಯಲ್ಲವೇ ! ॥ವಚನ॥ ಹೀಗೆಂದು

ಭಯದಿಂದಂ ಚಂಡಪುತ್ರರ್ನಡುಗಿ ತೆರೆದು ಬಾಯ್ವಿಟ್ಟು ತತ್ಪಾದಪದ್ಮ
ದ್ವಯಕತ್ಯಂತಾರ್ತಭಾವಂಬಡೆದೆಱಗಿ ಶರಣ್ಬೊಕ್ಕು ದುಷ್ಟಾತ್ಮರಂ ದು
ರ್ನಯರಂ ರಕ್ಷಿಪ್ಪುದೆಮ್ಮಂ ಬಸವವಿಭುವೆ ಕಾರುಣ್ಯದಿಂದೆಂದು ಕೊಂಡಾ
ಡಿ ಯಶೋವಾರಾಶಿಯಿಂದಂ ಪಡೆದಭಯಮನೊಲ್ದಿರ್ದರ್ಭಕ್ತಿಯುಕ್ತರ್ ೧೧೦

ಮದನರಿಪುಭಕ್ತಿಭಾವಾ
ಸ್ಪದಶರಣರ್ಗಲ್ಲದೀಶಶೇಷಂ ಸಲೆ ಸಂ
ಲ್ಲದು ಪೆಜರ್ಗೆಂದೀ ಬಗೆಯಂ
ಪದಪಿಂದಂ ತೋಱಿ ಬೀಱಿ ಮೆಱೆದಂ ಬಸವಂ ೧೧೧

ಪರವಾದಿಗಳಂ ಸೋಲಿಸಿ
ಹರಸಮಯಮನಿಂತು ಗೆಲಿಸಿ ಪಾಲಿಸಿದಂ ಮ
ದ್ವರಬಸವನೆಂದು ಶರಣ
ರ್ಪಿರಿದಂ ಸಂಭ್ರಮದೆ ಕೀರ್ತಿಸುತ್ತೆಸೆದಿರ್ದರ್ ೧೧೨

ಅರಸಂ ಪೌರಪ್ರಧಾನಾದ್ಯರಿನರಿದೆನುತುಂ ಸಾಡೆ ಕೊಂಡಾಡಿ ದಿವ್ಯಾಂ
ಬರಭೂಷಾಶ್ರೇಣಿಯಿಂ ಪೂಜಿಸಿ ಮುಗಿದು ಕರಾಂಭೋಜಮಂ ತನ್ನ ಮಾದ್ಯ

ಸಮಸ್ತರೂ ಬಸವೇಶ್ವರನನ್ನು ಹೊಗಳುತ್ತಿದ್ದರು. ಆ ಸಂದರ್ಭದಲ್ಲಿ—೧೧೦. ಚಂಡಪುತ್ರರುಗಳು ಭಯದಿಂದ ನಡುಗುತ್ತ ತೆರೆದಬಾಯುಳ್ಳವರಾಗಿ, (ಏನನ್ನೂ ಮಾತನಾಡಲರಿಯದವರಾಗಿ) ಆ ಬಸವೇಶ್ವರನ ಎರಡೂ ಪಾದಕಮಲಗಳಿಗೆ ಅತ್ಯಂತ ದೈನ್ಯ ಭಾವದಿಂದ ನಮಸ್ಕಾರಮಾಡಿ ಶರಣುಹೊಕ್ಕರು, ದುಷ್ಟಹೃದಯವುಳ್ಳವರೂ, ದುಷ್ಟನೀತಿಯುಳ್ಳವರೂ, ಆದ ನಮ್ಮನ್ನು ಹೇ ಬಸವಪ್ರಭುವೇ, ಕಾರುಣ್ಯದಿಂದ ಸಂರಕ್ಷಿಸಬೇಕು. ಎಂದು ಕೊಂಡಾಡಿದರು. ಕೀರ್ತಿಗೆ ಸಮುದ್ರಪ್ರಾಯನಾದ ಬಸವೇಶ್ವರನಿಂದ ಭಕ್ತಿಭಾವದಿಂದ ಕೂಡಿದ ಆ ಚಂಡಪುತ್ರರುಗಳು ಅಭಯವನ್ನು ಪಡೆದು ಸಂತೋಷಗೊಂಡು ಹೊರಟುಹೋದರು. ೧೧೧. ಈಶ್ವರನ ಶೇಷಪ್ರಸಾದವು (ಮಿಕ್ಕ ಪ್ರಸಾದವು) ಆ ಮದನವೈರಿಯಾದ ಪರಶಿವನಲ್ಲಿ ಭಕ್ತಿಭಾವವನ್ನಿಟ್ಟಿರುವ ಶರಣಜನರಿಗಲ್ಲದೆ ಬೇರೆಯವರಿಗೆ ಸಲ್ಲತಕ್ಕದ್ದಲ್ಲವೆಂಬ ಈ ರೀತಿಯನ್ನು ಪ್ರಸಿದ್ಧವಾಗಿ ತೋರಿಸಿ, ಪ್ರಚುರಪಡಿಸಿ ಬಸವಣ್ಣನು ಶೋಭಿಸುತ್ತಿದ್ದನು. ೧೧೨. ಪರ ಸಮಯದ ತಾರ್ಕಿಕರನ್ನು ಸೋಲಿಸಿ ಈ ರೀತಿ ಹರಸಮಯವನ್ನು ಗೆಲ್ಲುವಂತೆಮಾಡಿ, ನಮಗೆಲ್ಲ ವರಪ್ರಸಾದರೂಪನಾದ ಬಸವಣ್ಣನು ರಕ್ಷಿಸಿದನು ಎಂದು ಶರಣ ಜನರು ಅತಿಶಯ ಸಂಭ್ರಮದಿಂದ ಹೊಗಳುತ್ತ ಶೋಭಿಸುತ್ತಿದ್ದರು. ೧೧೩. ಅರಸನಾದ ಬಿಜ್ಜಳನು ಪೌರಜನರೂ, ಪ್ರಧಾನಾಧಿಕಾರಿಗಳೂ ಸಮೇತನಾಗಿ (ಬಸವಣ್ಣನ ಈ ಮಹಿಮೆಯು) ಆತ್ಯಾಶ್ಚರ್ಯಕರವಾದದ್ದೆಂದು ಅತಿಶಯವಾಗಿ ಕೊಂಡಾಡಿದರು. ದಿವ್ಯವಾದ ವಸ್ತ್ರ, ಆಭರಣ ಸಮೂಹಗಳಿಂದ ಆ ಬಸವಣ್ಣನನ್ನು ಪೂಜಿಸಿ, ಕರಕಮಲಗಳನ್ನು ಮುಗಿದು, ತನ್ನ ಮದವಿಶಿಷ್ಟವಾದ (ಪಟ್ಟದ) ಆನೆಯನ್ನು ಬರ

ತ್ಕರಿಯಂ ಕೆಯ್ಗೆಯ್ಸಿ ತಂದೇಱಿಸಿ ಕಳುಪೆ ಮಹಾಸಂಭ್ರಮಂಬೆತ್ತು ಬಂದೀ
ಶ್ವರಭಕ್ತವ್ರಾತಮಂ ಮನ್ನಿಸುತೆಸೆದನುಮಾಕಾಂತಹೃತ್ಪದ್ಮಸದ್ಮಂ ೧೧೩

ಬಸವಂ ಬಿಸವಂದಮಿದೆನೆ
ಬಿಸವಂ ಸುಧೆಗೆಯ್ದು ಸವಿದ ಕಥೆಯುನಿದಂ ಸಂ
ತಸಮಲರೆ ಕೇಳ್ದ ನರರೀ
ರಸೆಯೊಳ್ ಘನಭಕ್ತಿ ಮುಕ್ತಿ ಸುಖಮಂ ಪಡೆವರ್ ೧೧೪

ಮಂಗಳಮಯಾಂಗಿ ಸುಭುಜಂಗಪತಿವೇಣೀ
ಭೃಂಗಕಚಭಾಸುರೆ ಸದಂಗಶುಕಪಾ[1]ಣೀ
ತುಂಗಕುಚೆ ಭಾಜಿತಪತಂಗೆ ಮೃದುವಾಣೀ
ಸಾಂಗಶಿವಭಕ್ತಿಸುಪಥಂಗುಡು ಮೃಡಾನೀ ೧೧೫

ಇದು ವಿನಮದಖಿಳ ಸುರಾಸುರೇಂದ್ರಮಕುಟತಟಘಟಿತ ಮಣಿಗಣಾಗಣಿತ ರುಚಿನಿಚಯ
ತರುಣಾರುಣಾತಪಪರಿಲಸಿತ ಪರಮ ಶಿವಲಿಂಗ ಪಾದಾರವಿಂದಪರಾಗಭಸಿತ
ಭಾಸುರಲಲಾಟಪಟ್ಟ ಸರಸಜನಮಾನಿತೋಭಯಕವಿತಾವಿಶಾರದ
ಶ್ರೀಷಡಕ್ಷರಿದೇವಭಕ್ತವಿರಚಿತ
ಶ್ರೀಮದ್ ಬಸವರಾಜವಿಜಯಮಹಾಪುರಾಣದೊಳ್ ವಿಷವಿತರಣಕಥನಂ
ಚತ್ವಾರಿಂಶಾಶ್ವಾಸಂ ಸಮಾಪ್ತಂ
ಅಂತು ಆಶ್ವಾಸ ೪೦ಕ್ಕೆ ಪದಗಣನೆ ೩೩೫೧ಕ್ಕೆ ಮಂಗಳಮಹಾ ಶ್ರೀ॥

ಮಾಡಿಕೊಂಡು ಅದರ ಮೇಲೆ ಹತ್ತಿಸಿ ಮನೆಗೆ ಕಳುಹಿಸಿಕೊಟ್ಟನು. (ಬಸವಣ್ಣನು ಆ ಆನೆಯನ್ನೇರಿ) ಅತ್ಯಂತ ಸಂಭ್ರಮದಿಂದ ಬಂದು ಈಶ್ವರ ಭಕ್ತ ಸಮೂಹವನ್ನು ಮನ್ನಣೆಗೊಳಿಸಿ, ಆ ಉಮಾಪತಿಯಾದ ಪರಶಿವನ ಹೃದಯಕಮಲವನ್ನೇ ಮನೆಯಾಗುಳ್ಳ ಬಸವಣ್ಣನು (ತನ್ನಮಹಾಮನೆಯಲ್ಲಿ) ಶೋಭಿಸುತ್ತಿದ್ದನು. ೧೧೪. ಬಸವಣ್ಣನು ವಿಷವನ್ನು ಇದು ಆಶ್ಚರ್ಯ (ಕೌತುಕ) ವೆನ್ನುವಂತಹರೀತಿಯಲ್ಲಿ ಅಮೃತವನ್ನಾಗಿಮಾಡಿ ಊಟಮಾಡಿದ ಈ ಕಥೆಯನ್ನು ಸಂತೋಷವು ಅರಳುವಹಾಗೆ ಕೇಳುವಂತಹ ನರರು ಈ ಲೋಕದಲ್ಲಿ ಶ್ರೇಷ್ಠವಾಗಿ ಸೌಖ್ಯವನ್ನು, ಮುಕ್ತಿಯನ್ನು, ಪಡೆಯುವರು. ೧೧೫. ಮಂಗಳಮಯವಾದ ಶರೀರವುಳ್ಳವಳೇ, ಶ್ರೇಷ್ಠ ಹಾವುಗಳ ಒಡೆಯನಾದ ಆದಿಶೇಷನಂತೆ ಜಡೆಯುಳ್ಳವಳೇ, ಭೃಂಗಗಳಂತಿರುವ ತಲೆಗೂದಲುಗಳಿಂದ ಪ್ರಕಾಶಿಸುವವಳೇ, ಚಂದವಾದ ಶರೀರವುಳ್ಳ ಗಿಳಿಯನ್ನು ಹಸ್ತದಲ್ಲಿ ಹಿಡಿದಿರುವವಳೇ, ಎತ್ತರವಾದ (ದಪ್ಪವಾದ) ಸ್ತನಗಳುಳ್ಳವಳೇ, ದೇಹಕಾಂತಿಯಿಂದ ಸೂರ್ಯವನ್ನು ಜಯಿಸಿದವಳೇ, ಮೃದುವಾದ ಮಾತುಳ್ಳವಳೇ, ಹೇಪಾರ್ವತೀದೇವಿಯೇ (ನನಗೆ) ಯಥಾಸಾಂಗವಾಗಿ ಶಿವಭಕ್ತಿಯ ಶ್ರೇಷ್ಠಮಾರ್ಗವನ್ನು ದಯಪಾಲಿಸು.

ನಾಲ್ವತ್ತನೆಯ ಆಶ್ವಾಸವು ಸಮಾಪ್ತವಾಯಿತು.

---

1 ವಾ(ಮು)

ಏಕಚತ್ವಾರಿಂಶಾಶ್ವಾಸಂ

[ಜಗದೇವನ ಕಥೆ]

ಶ್ರೀಮದಜಭಾವಿನೀನುತ
ಹೈಮವತೀಮಧುರಗಾನನವರಸಲೋಲಂ
ಸೋಮಕಳಾಧರನತುಳ ಕ
ಳಾಮಂದಿರನೀಗೆ ಸೌಖ್ಯಮಂ ಶಿವಲಿಂಗಂ ೧

ವ॥ ಮತ್ತಮೊಂದು ಶುಭವಾಸರದೊಳ್—

ಜಗದೇವನೆಂಬ ವಿಪ್ರಂ
ನಿಗಮಾಗಮವೇದಿ ಶಿವಪದಾಂಬುಜಭೃಂಗಂ
ಸುಗುಣನಿಧಿ ತನ್ನ ಗೃಹದೊ
ಳ್ಮಿಗೆ ಭುಂಜಿಸಲೆಂದು ಬಸವನಂ ಪ್ರಾರ್ಥಿಸಿದಂ ೨

ವ॥ ಅಂತವಂ ಭಕ್ತಿಯಿಂ ಪ್ರಾರ್ಥಿಸೆ ಬಸವರಾಜಂ ನೋಡಿ

ಜಗದೇವ ನೀಂ ದ್ವಿಜಂ ಗಡ
ಮಿಗೆ ಮಜ್ಜಂಗಮಕದಂಬಸಮ್ಮರ್ದಮುನೆಂ
ತಗಲದೆ ಸೈರಿಪೆಯೆನೆ ಕೆ
ಯ್ಮುಗಿದೆಂದಂ ನಿಮ್ಮ ಚಿತ್ತಮೊಲ್ವಂತೀಗಳ್ ೩

ಜಗದೇವನ ಕಥೆ

೧. ಮಂಗಳಕರಳಾದ ಬ್ರಹ್ಮನ ಸತಿ ಸರಸ್ವತಿಯಿಂದ ಹೊಗಳಿಸಿಕೊಳ್ಳುವವಳಾದ ಹಿಮವಂತನ ಪುತ್ರಿ ಪಾರ್ವತೀದೇವಿಯ ಮಾಧುರ್ಯಯುಕ್ತ ನೂತನ ಸಂಗೀತ ರಸದಲ್ಲಿ ಆಸಕ್ತಿಯುಳ್ಳವನೂ, ಚಂದ್ರನ ಒಂದು ಕಳೆಯನ್ನು ಧರಿಸಿದವನೂ, ಸಮಸ್ತ ವಿದ್ಯೆಗಳಿಗೆ ಮಂದಿರ (ಆಶ್ರಯ) ನಾದವನೂ ಎನಿಸಿದ ಶಿವಲಿಂಗನು ನಮಗೆ ಸೌಖ್ಯವನ್ನು ಕೊಡಲಿ. ವ॥ ಮತ್ತೊಂದು ಶುಭ ದಿವಸದಲ್ಲಿ ೨. ವೇದಾಗಮ ವಿಶಾರದನೂ, ಶಿವನ ಪಾದ ಕಮಲಗಳಲ್ಲಿ ಭೃಂಗದೋಪಾದಿಯಲ್ಲಿರುವವನೂ, ಸದ್ಗುಣಗಳಿಗೆ ನಿಧಿಯೂ ಎನಿಸಿದ 'ಜಗದೇವ' ಎಂಬ ಹೆಸರಿನ ಬ್ರಾಹ್ಮಣನು ತನ್ನ ಮನೆಯಲ್ಲಿ ಊಟಮಾಡಬೇಕೆಂದು ಬಸವಣ್ಣನನ್ನು ಪ್ರಾರ್ಥಿಸಿದನು. ವ॥ ಆ ರೀತಿ ಅವನು ಭಕ್ತಿಯಿಂದ ಪ್ರಾರ್ಥಿಸಲಾಗಿ ಬಸವೇಶ್ವರನು ನೋಡಿ,—೩. 'ಜಗದೇವನೇ, ನೀನು ದ್ವಿಜನಲ್ಲವೇ ! ಹೆಚ್ಚಾಗಿರುವ ನನ್ನ ಜಂಗಮ ಸಮುದಾಯದ ತೊಂದರೆಯನ್ನು ಹೇಗೆ ಸಂಬಾಳಿಸುತ್ತೀಯೆ ?' ಎನ್ನಲು ಆ ಜಗದೇವನು ಕೈಮುಗಿದು 'ನಿಮ್ಮ ಚಿತ್ತವು ಸಂತೋಷಗೊಳ್ಳುವ ಹಾಗೆ ಈಗಲೇ'—

ವ॥ ಎಲ್ಲಮುಂ ಸಾಂಗಮಾದಪುದೀಗಳೆನ್ನ ಮೇಲಣ ದಯೆಯಿಂ ಬಿಜಯಂಗೆಯ್ವುದೆಂದು ಭೂತಿದಾನಪುರಸ್ಸರಂ ಬಿನ್ನಪಂಗೆಯ್ದು ನಿಜಗೃಹಕ್ಕೇಳ್ತಂದು ಸಂಭ್ರಮಂ ಮಿಗೆ ಸಕಲಪಾಕಸಾಮಗ್ರಿಯಂ ನೆರಪಿ ಪಂಚಪ್ರಕಾರದಾಹಾರಂಗಳನಳುಂಬಮೊಡರ್ಚಿ ಬಸವಾಗಮನದಿಂ ಮುನ್ನಮೆ—

ಕರೆದಾತ್ಮಮಂದಿರಕೆ ಪಾ
ರ್ವರನಾದರಿಸುತ್ತೆ ಪೂಜೆಗೆಯ್ದಂ ಜಗದೇ
ವರಸಂ ತದ್ವಾರ್ತೆಯನನು
ಚರರಿಂದಂ ಕೇಳ್ದು ಬಸವರಾಜಂ ಮುಳಿದಂ ೪

ವ॥ ಅಂತು ಮುಳಿದಿವಂ ದುರಾಚಾರಮಂ ನೆಗಳ್ದನೆಂದೇಳಿದಂಗೆಯ್ದಿರ್ಪುದುಮಾಗಳ್—

ಕಳುಪಿ ಧರಾಮರರನವಂ
ಬಳಿಕೇಳ್ತಂದಂ ವೃಷೇಂದ್ರನಂ ಕರೆಯಲ್ಕೆಂ
ದೆಳಸಿ ತೆರೆಗೆಯ್ಸಿ ಬಸವಂ
ಖಳವೀಕ್ಷಣಕಲಸುತದಱ ಮಱೆಯೊಳಗಿರ್ದಂ ೫

ವ॥ ಅಂತಿರ್ದು ತನ್ನಂ ಕರೆಯಲೆಳಸಿರ್ದ ಜಗದೇವಂಗಿಂತೆಂದಂ—

ಭವಿಸಂಗಪಂಕಜಲಮ
ಗ್ನ ವಿಚಾರಿಪೊಡೆಲವೊ ನಿನಗೆ ಶಿವಭಕ್ತಿಸುಧಾ

ವ॥ 'ಎಲ್ಲವೂ ಸಾಂಗವಾಗಿ ನನ್ನ ಮೇಲಿನ ದಯೆಯಿಂದ ನಡೆಯುವುದು. ದಯಮಾಡಿಸಬೇಕು.' ಎಂದು ವಿಭೂತಿಯನ್ನು ಕೊಡುವುದರ ಮೂಲಕ ಬಿನ್ನಹ ಮಾಡಿಕೊಂಡು, ತನ್ನ ಮನೆಗೆ ಹೊರಟು ಬಂದು, ವಿಶೇಷ ಸಂಭ್ರಮದಿಂದ ಎಲ್ಲ ಅಡಿಗೆಯ ಸಾಮಗ್ರಿಗಳನ್ನೂ ಜೋಡಿಸಿ, ಭಕ್ಷ್ಯ, ಭೋಜ್ಯ, ಲೇಹ, ಚೋಷ್ಯ, ಖಾದ್ಯಾದಿ ಐದು ಪ್ರಕಾರದ ಆಹಾರ ಪದಾರ್ಥಗಳನ್ನು ಯಥೇಚ್ಛವಾಗಿ ಮಾಡಿಸಿ, ಬಸವಣ್ಣನ ಬರುವಿಕೆಗೆ ಮೊದಲೇ—೪. ಜಗದೇವನು ತನ್ನ ಮಂದಿರಕ್ಕೆ ಬ್ರಾಹ್ಮಣರುಗಳನ್ನು ಕರೆದು ಆದರಿಸಿ ಪೂಜೆ ಮಾಡಿದನು. ಈ ಸುದ್ದಿಯನ್ನು ಸೇವಕರುಗಳಿಂದ ಬಸವೇಶ್ವರನು ಕೇಳಿ ಕೋಪಗೊಂಡನು. ವ॥ ಹಾಗೆ ಕೋಪಗೊಂಡು, ಈ ಜಗದೇವನು ದುರಾಚಾರವನ್ನು ಮಾಡಿದನೆಂದು ತಿರಸ್ಕಾರ ಮಾಡಿ ಇರುತ್ತಿರಲಾಗಿ, ಆಗ ೫. ಜಗದೇವನು (ತನ್ನ ಮನೆಗೆ ಬಂದಿದ್ದ) ಬ್ರಾಹ್ಮಣರುಗಳನ್ನು ಕಳುಹಿಸಿಕೊಟ್ಟು, ಬಸವರಾಜನನ್ನು ಕರೆಯುವುದಕ್ಕೆಂದು ಅಪೇಕ್ಷಿಸಿ ಬಂದನು. ಬಸವಣ್ಣನು ದುಷ್ಟನಾದ ಈ ಜಗದೇವನನ್ನು ನೋಡುವುದಕ್ಕೆ ಇಚ್ಛೆಪಡದೆ ತೆರೆಯನ್ನು ಕಟ್ಟಿಸಿ, ಅದರ ಮರೆಯಲ್ಲಿದ್ದನು. ವ॥ ಹಾಗೆ ತೆರೆಯ ಮರೆಯಲ್ಲಿದ್ದು, ತನ್ನನ್ನು ಕರೆಯಲಿಕ್ಕೆ ಬಂದ ಜಗದೇವನಿಗೆ ಹೀಗೆ ಹೇಳಿದನು. ೬. 'ಎಲವೋ ಜಗದೇವನೇ, ಭವಿಗಳ ಸಂಸರ್ಗವೆಂಬ ಕೆಸರು ನೀರಿ (ರಾಡಿನೀರಿ) ನಲ್ಲಿ ಮುಳುಗಿರುವ ನಿನಗೆ ವಿಚಾರಮಾಡಿ ನೋಡಿದರೆ, ಶಿವಭಕ್ತಿಯೆಂಬ

ರ್ಣವಕೇಳಿಯೊಪ್ಪುಗುಮೆ ನಿ
ನ್ನವೊಲಾವಂ ಗಾಂಪನೆಳಸಿ ಬರ್ಪುದೆ ಮರುಳೇ ೬

ಕುಲದೈವವಿರೆ ಮಹೇಶ್ವರ
ನೆಲೆ ನೀಂ ಬಹುಮಾರ್ಗದಲ್ಲಿ ನಡೆದಪೆ ಗಿರಿಶೋ
ಜ್ವಲಭಕ್ತಿಯೆತ್ತ ನಿನಗೀ
ಮಲಿನಾತ್ಮರ ಸಂಗಮೆತ್ತ ಪೇಳ್ಜಗದೇವಾ ೭

ಹರಭಕ್ತಪಾದಸೇವಾ
ಪರ ಕರಯುಗಳಕ್ಕಿದುಚಿತಮೋ ಹರಭಕ್ತೋ
ತ್ಕರದೂಷಣಪರವಿಪ್ರರ
ಚರಣಾರ್ಚನಕರ್ಮಮಧಿಕದುರ್ಮತಿನಿಳಯಾ ೮

ಶರಣಜನಚರಣಜಲಮಂ
ಶಿರದೊಳ್ತಳೆದೆಯ್ದೆ ಧನ್ಯನೆನಿಸಿದ ನಿನಗೀ
ದುರಿತಕುಲಭರಿತಭೂಸುರ
ಚರಣಜಲಂದಾಳ್ವುದುಚಿತಮೋ ವಸುಮತಿಯೊಳ್ ೯

ವಿಳಸಿತ ಶಿವಪ್ರಸಾದಾ
ಮಳತನುವೆನಿಸಿರ್ದ ಲಿಂಗಭಕ್ತಂಗೆ ಶಿವೋ
ಜ್ವಳಭಕ್ತಿರಹಿತಭೂಸುರ
ಕುಳಪಙ್ತಿಯೊಳುಣ್ಬ ಕಜ್ಜಮೆಂತಳವಡುಗುಂ ೧೦

ಅಮೃತ ಸಮುದ್ರದ (ಜಲ) ಕೇಳಿಯು ಯೋಗ್ಯವಾದೀತೇ ? ನಿನ್ನಂತಹ ಮೂರ್ಖನು ಯಾವನಿದ್ದಾನೆ ? (ನಮ್ಮನ್ನು) ಅಪೇಕ್ಷಿಸಿ (ನೀನು) ಬರಬಹುದೇ ?' ೭. 'ಎಲೈ ಜಗದೇವನೇ, ಪರಮೇಶ್ವರನೇ ನಿನಗೆ ಕುಲ ಕುಲದೈವವಾಗಿರುವಾಗ, ನೀನು ಅನೇಕ ಬಗೆಯ ಮಾರ್ಗಗಳಲ್ಲಿ ಹೋಗುತ್ತಿದ್ದೀಯೆ. ನಿನಗೆ ಪರಮೇಶ್ವರನ ಪ್ರಕಾಶಮಯ ವಾದ ಮಾರ್ಗವೆತ್ತ ? ಈ ಮಲಿನಾತ್ಮರಾದವರ ಸಂಗವೆತ್ತ ? ಹೇಳು.' ೮. 'ವಿಶೇಷ ವಾದ ದುರ್ಬುದ್ಧಿಗೆ ಮನೆಯಾಗಿರುವ ಎಲೈ ಜಗದೇವನೇ, ಶಿವಭಕ್ತರ ಚರಣಗಳ ಸೇವೆಯಲ್ಲಿ ಆಸಕ್ತವಾದ ಎರಡೂ ಕೈಗಳಿಗೆ, ಹರಭಕ್ತರನ್ನು ದೂಷಣೆಮಾಡುವುದರಲ್ಲಾ ಸಕ್ತರಾದ ವಿಪ್ರರ ಪಾದಾರ್ಚನಾ ಕರ್ಮವು ಉಚಿತವಾದುದೇ ?' ೯. 'ಈ ಭೂಮಂಡಲದಲ್ಲಿ, ಶರಣಜನರ ಪಾದಜಲವನ್ನು ಶಿರಸ್ಸಿನಲ್ಲಿ ಧರಿಸಿ, ವಿಶೇಷವಾಗಿ ಧನ್ಯತೆಯನ್ನು ಪಡೆದ ನಿನಗೆ, ಈ ಪಾಪಸಮೂಹದಿಂದ ಕೂಡಿದ ಭೂಸುರರ ಪಾದ ಜಲವನ್ನು ಧರಿಸುವುದು ಉಚಿತವಾದದ್ದೇ ?' ೧೦. ನಿರ್ಮಲವಾದ ಶಿವಪ್ರಸಾದ ವನ್ನು ಸೇವಿಸುವುದರ ಮೂಲಕ ಪವಿತ್ರ ತನುವಾದುದೆನಿಸಿದ ಶಿವಲಿಂಗಭಕ್ತರಿಗೆ, ಶಿವನ ಪ್ರಕಾಶಮಯ ಭಕ್ತಿಯಿಲ್ಲದ ಭೂಸುರರುಗಳ ಸಹಪಙ್ತಿಯಲ್ಲಿ ಕುಳಿತು ಊಟಮಾಡುವ

ನಡೆ ನುಡಿ ನೋಟಂ ನಗೆ ಸಂ
ಗಡಿಗತನಂ ಪಙ್ತಿಭೋಜನವುಮೆಂಬಿನಿತಂ
ಜಡಭವಿಗಳೊಡನೆ ನೆಗಳ್ವನೆ
ಮೃಡಭಕ್ತಂ ಭವವಿದೂರನಮಳಚರಿತ್ರಂ ೧೧

ಶೂಲಿಪದಭಕ್ತನನುಪಮ
ಶೀಲವ್ರತಯುಕ್ತನತುಳ ಚಿತ್ರಚರಿತ್ರಂ
ಭೂಲೋಕದೊಳೊಪ್ಪುವನೊಸೆ
ದೇಲೇಶಕ್ಷೇತ್ರಪಾಲನೆಂಬ ಮಹಾತ್ಮಂ ೧೨

ಅವನ ಚರಿತ್ರಮಂ ಪೊಗಳ್ವೊಡಾರ್ಗಳವಪ್ಪುದೊ ನೈಜಪುತ್ರಮಿ
ತ್ರವನಿತೆಯರ್ಕಳಂ ಸಕಳಗೋತ್ರಜಬಾಂಧವಚೇಟಿಯರ್ಕಳಂ
ಭವನದೊಳಿರ್ಪ ಸರ್ವರುಮನೊಪ್ಪಿರೆ ಲಿಂಗಸಮನ್ವಿತಾಂಗರಂ
ಜವದೆ ನೆಗಳ್ಚಿ ರಂಜಿಸುತೆ ಲಿಂಗವಿಹೀನರೊಳಾಡನೊರ್ಮೆಯುಂ ೧೩

ನಡೆನೋಡಂ ನುಡಿಯಾಡನೀಯನವರಿಂದೇನೊಂದನೆಂತಾದೊಡಂ
ಪಿಡಿಯಂ ಸೋಂಕನವಂದಿರಾಳ್ವ ನೆಲನಂ ತಾಂ ಮೆಟ್ಟನಾ ದುಷ್ಟರೊ
ಳ್ನೊಡರಂ ಸಾಲಮುನೊಲ್ಲನಂತವರ ಕೆಯ್ಯಿಂದಂ ಕುಡಂ ಕೂರ್ಮೆಯಿಂ
ಕಡಮಂ ತತ್ಕಥೆಗೇಳನಿಂತೆಸೆವುತಿರ್ದಂ ಭಕ್ತಿರತ್ನಾಕರಂ ೧೪

ಕಾರ್ಯವು ಹೇಗೆ ಆಳವಟ್ಟೀತು ? ೧೧. ಭವಿಗಳಿಂದ ದೂರನಾದವನೂ, ಪರಿಶುದ್ಧ ಚರಿತ್ರೆಯುಳ್ಳವನೂ ಆದ ಶಿವಭಕ್ತನು, ನಡೆವಳಿಕೆ, ನುಡಿವಳಿಕೆ, ನೋಡುವಿಕೆ, ನಗುವಿಕೆ, ಕೂಡಿ ವ್ಯವಹಾರ ಮಾಡುವಿಕೆ, ಒಂದೇ ಪಙ್ತಿಯಲ್ಲಿ ಕುಳಿತು ಭೋಜನ ಮಾಡುವಿಕೆಯೇ ಮೊದಲಾದ ಕ್ರಿಯೆಗಳನ್ನು ಅಜ್ಞಾನಿಗಳಾದ ಭವಿಗಳೊಡನೆ ಮಾಡುತ್ತಾನೆಯೇ ? ೧೨. ಪರಮೇಶ್ವರನ ಪಾದಭಕ್ತನೂ, ಅನುಪಮವಾದ ಶೀಲವುಳ್ಳವನೂ, ಶಿವವ್ರತಯುಕ್ತನೂ, ಅಸಮಾನವಾದ ವಿಚಿತ್ರ ಚರಿತ್ರೆಯುಳ್ಳವನೂ ಆದ 'ಏಲೇಶ್ವರ ಕ್ಷೇತ್ರಪಾಲ' ನಾದ ಕೇತಯ್ಯನೆಂಬ ಮಹಾತ್ಮನು ಈ ಭೂಮಂಡಲವಲ್ಲಿ ಶೋಭಿಸುತ್ತಿರುವನು. ೧೩. ಈ ಮಹಾತ್ಮನ ಚರಿತ್ರೆಯನ್ನು ಹೊಗಳುವುದಕ್ಕೆ ಯಾರಿಗೆ ಸಾಮರ್ಥ್ಯವುಂಟೋ ! ತನ್ನ ಪುತ್ರರು, ಮಿತ್ರರು, ಹೆಂಡತಿ, ತನ್ನ ವಂಶದಲ್ಲಿ ಹುಟ್ಟಿದ ಸಮಸ್ತರು, ದಾಸೀ ಜನಗಳನ್ನು, ಮನೆಯಲ್ಲಿದ್ದ ಇನ್ನಿತರ ಸಮಸ್ತ ಜನಗಳನ್ನು ಒಪ್ಪುವ ಹಾಗೆ ಶೀಘ್ರವಾಗಿ ಲಿಂಗದಿಂದ ಕೂಡಿದ ದೇಹವುಳ್ಳವರನ್ನಾಗಿ ಮಾಡಿ ಶೋಭಿಸುತ್ತಿದ್ದನು. ಒಮ್ಮೆಯೂ ಲಿಂಗವಿಹೀನರಾದವರೊಡನೆ ವ್ಯವಹರಿಸುತ್ತಲಿರಲಿಲ್ಲ. ೧೪. ಶಿವಭಕ್ತಿಗೆ ಸಮುದ್ರಪ್ರಾಯನಾದ ಅವನು (ಲಿಂಗ ವಿಹೀನರನ್ನು) ದಿಟ್ಟಿಸಿ ನೋಡನು; ಮಾತನಾಡನು; ಏನನ್ನೂ ಕೊಡನು ; ಅವರಿಂದ ಏನಾದರೂ ಒಂದನ್ನು ಹೇಗಾದರೂ ಸ್ವೀಕರಿಸನು; ಮುಟ್ಟನು ; ಅವರು ಆಳುವ ನೆಲವನ್ನೂ ಮೆಟ್ಟನು ; ಆ ದುಷ್ಟರೊಡನೆ ಸಂಬಂಧವನ್ನೂ, ಸಾಲವನ್ನೂ ಒಲ್ಲನು ; ಅದರಂತೆಯೇ ಪ್ರೀತಿಯಿಂದ ಅವರಿಗೆ

ವ॥ ಆಗಳಾ ಮಹಾತ್ಮನಿರವಂ ಕಂಡು ಸೈರಿಸಲಾಱದಸೂಯೆಯಿಂ ದುಷ್ಟಮತಸ್ಥರೆಲ್ಲರೊಂದು ಗೂಡಿ—

ಪಿಡಿಯುಂ ಸಾಲಮನೆಂದುಂ
ಕಡಂಗುಡಂ ಭವಿಗಳೆಂದು ತೆಗಳುತ್ತೆಮ್ಮೊ
ಳ್ನುಡಿಯಂ ಲೆಕ್ಕಿಸನೀತನ
ಪೊಡರ್ಪು ಪೊಸತೆಂದಸೂಯೆ ಮಿಗೆ ಕುಟಿಲಾತ್ಮರ್ ೧೫

ಇವನ ಪೊಸ ಧಾನ್ಯಬೀಜದ
ಭವನಮನುರುಪುತ್ತೆ ಬಳಿಯೊಳೀತನ ಚಲದಂ
ದವನಱಿವೆವೆಂದು ಬಗೆದಾ
ಭವಿಗಳ್ ತದ್ಧಾನ್ಯಗೃಹಮನುರುಪಿದರಾಗಳ್ ೧೬

ವ॥ ಅಂತುರುಪೆ ಮೂಡೆಗಟ್ಟಿರ್ದ ಬೀಜಧಾನ್ಯರಾಶಿಯೆಲ್ಲಂ ಭಸ್ಮರಾಶಿಯಾಗೆ ಕಂಡು ಮುಗುಳ್ನಗೆ ನಕ್ಕು ತದ್ಭಸ್ಮರಾಶಿಯನೆ ಭಂಡಿಯೊಳ್ಕೊಂಡುಪೋಗಿ ಪೊಲದೊಳ್ ಬಿಳ್ತ್ತು[1]ನೆಂತಂತೆ ಬಿಳ್ತಿ—

ಕಡವನ್ನು ಕೈಯಾರ ಕೊಡನು ; ಅವರ ಸಂಬಂಧದ ಕಥೆಗಳನ್ನು ಕೇಳನು. ವ॥ ಆಗ (ಈ ರೀತಿಯ) ಆ ಮಹಾತ್ಮನ ಇರುವಿಕೆಯನ್ನು ಕಂಡು ಸೈರಿಸಲಾರದೆ ಮಾತ್ಸರ್ಯದಿಂದ ದುಷ್ಟಮತದವರೆಲ್ಲ ಒಂದುಗೂಡಿ—೧೫–೧೬. ಕುಟಿಲ ಬುದ್ಧಿಯ ಆ ಭವಿಗಳು ಅತಿಶಯ ಅಸೂಯೆಯಿಂದ–ಈತನು ಎಂದೂ ಸಾಲವನ್ನೂ (ನಮ್ಮಿಂದ) ಪಡೆಯು ತ್ತಿಲ್ಲ ; ನಮ್ಮನ್ನು ಭವಿಗಳೆಂದು ತಿರಸ್ಕರಿಸುತ್ತ ಕಡವನ್ನೂ ಕೊಡುತ್ತಿಲ್ಲ ; ನಮ್ಮ ಮಾತುಗಳನ್ನು ಲೆಕ್ಕಕ್ಕೇ ತೆಗೆದುಕೊಳ್ಳುವುದಿಲ್ಲ. ಈ ರೀತಿಯ ಇವನ ಸಾಮರ್ಥ್ಯ ನೂತನವಾದದ್ದೆಂದು ಕೊಂಡರು. ಇವನ ಹೊಸ ಧಾನ್ಯದ ಬೀಜಗಳನ್ನು ತುಂಬಿದ್ದ ಮನೆಯನ್ನು ಸುಟ್ಟುಹಾಕಿ, ಆಮೇಲೆ ಈತನ ಹಟದ ರೀತಿಯನ್ನು ತಿಳಿಯೋಣವೆಂದು ಯೋಚಿಸಿ, ಆ ಭವಿಗಳು ಆಗ ಅವನ ಧಾನ್ಯದ ಬೀಜಗಳನ್ನು ತುಂಬಿದ ಮನೆಯನ್ನು ಸುಟ್ಟುಹಾಕಿದರು. ವ॥ ಈ ರೀತಿ ಸುಟ್ಟು ಹಾಕಲು, ಮೂಡೆಗಳಲ್ಲಿ ಕಟ್ಟಿ ಇಟ್ಟಿದ್ದ ಬೀಜದ ಕಾಳುಗಳ ರಾಶಿಯೆಲ್ಲವೂ ಬೂದಿಯ ರಾಶಿಯಾಗಿರುವುದನ್ನು ಕಂಡು, ಆ ಕ್ಷೇತ್ರಪಾಲನು ಮುಗುಳುನಗೆ ನಕ್ಕು, ಆ ಬೂದಿಯ ರಾಶಿಯನ್ನೇ ಬಂಡಿಯಲ್ಲಿ ತುಂಬಿ ಕೊಂಡು ಹೋಗಿ, ಹೊಲದಲ್ಲಿ ಬೀಜಗಳನ್ನು ಹೇಗೆ ಬಿತ್ತುವರೋ ಹಾಗೆ (ಬೂದಿಯನ್ನೇ)

1 ತ್ತು(ಅ)

ಬೆಳೆದೆಂದಿನ ಬೆಳಸಿಂ ಪೆ
ರ್ಚೆಳಸಂ ಬಹುಧಾನ್ಯರಾಶಿವಡೆದಂ ಗಡ ನಿ
ರ್ಮಳಮತಿ ಮಣ್ಣಂ ಪಿಡಿದೊಡೆ
ಗಳಿಲನೆ ಪೊನ್ನಪ್ಪುದಲ್ತೆ ತ[1]ಪ್ಪದೆ ಧರೆಯೊಳ್ ೧೭

ಅಂದಿಳೆಯಾಳ್ವ ಬೊಮ್ಮವಿಭು ಬಿತ್ತ[2]ದೆಯುಂ ಬೆಳೆದಂ ಧರಿತ್ರಿಯೊ
ಳ್ಸಂದಿರೆ ತನ್ನ ಪೆಂಪು ಪೊಸಧಾನ್ಯಮನೆಂದಿಳೆ ಪೇಳ್ಗುಮಂತದಂ
ಕುಂದದೆ ಕೇಳ್ವೆವಿಂದಮಮ ಕಂಡೆವಿದಂ ಘನಕೇತಿ[3]ರಾಜನೋ
ರಂದದಿ ಬಿತ್ತಿ ಬೂದಿಯಃನೆ ಪೆರ್ವೆಳಸಂ ಪಡೆದಂ ವಿಳಾಸದಿಂ ೧೮

ವ॥ ಎಂದು ಕೂರ್ವೆ ವಿಂಗೆ ಪಲವೆರ್ಯಿಯಿಂ ತನ್ನ ಪೆರ್ಮೆಯುಂ ಭಕ್ತಜನಂ ಪೊಗಳುತ್ತು ವಿರ್ದುದಲ್ಲಿ ಪೆಱತೊಂದು ದಿವಸಂ ದುರಾತ್ಮಕರಾದ ಜೈನರಾ ಕ್ಷೇತ್ರಪಾಲದೇವನ ತುಱುಗಳಂ ತಸ್ಕರರಿಂ ಕೊಳಿಸೆ ತುಱುಪಟ್ಟಿಯಿನಾ ಚೋರರೆಲ್ಲಾ ಧೇನುಗಳನಿರುಳೊಳ್ಬಿಟ್ಟು ಕಡುದೂರಂಬೆತ್ತ ಪರದೇಶಕ್ಕೆ ಕಡಂಗಿ ಪೊಡೆವಾಗಳ್—

ಮೇಯದೆ ಪುಲ್ಗಳಂ ಪಥದೊಳಾದೊಡಮಿಾಂಡದೆ ಸತ್ಸರೋನದೀ
ತೋಯಮನಿಂತು ಸಪ್ತದಿವಸಂಬರೆಗಂ ತುಱುಗಳ್ಬಳಲ್ದಿನಂ

ಬಿತ್ತಿದನು. ೧೭. ಎಂದಿನ ಬೆಳೆಗಿಂತಲೂ (ವರ್ಷವರ್ಷದ ಬೆಳೆಗಿಂತಲೂ) ದೊಡ್ಡದಾದ ಬೆಳೆಯನ್ನು ಬೆಳೆದು ಅಧಿಕವಾಗಿ ಧಾನ್ಯದ ರಾಶಿಯನ್ನು ಪಡೆದನಲ್ಲವೇ ! ನಿರ್ಮಲ ಮತಿಯುಳ್ಳವರು ಲೋಕದಲ್ಲಿ ಮಣ್ಣನ್ನು ಹಿಡಿದರೂ ಒಮ್ಮೆಲೆ ತಪ್ಪದೆ ಚಿನ್ನವಾಗುವುದಲ್ಲವೇ ! ೧೮. ಪೂರ್ವಕಾಲದಲ್ಲಿ ಭೂಪಾಲನಾದ ಬೊಮ್ಮಿದೇವನು ಭೂಮಿಯಲ್ಲಿ ಬೀಜಗಳನ್ನು ಬಿತ್ತದೆಯೇ ತನ್ನ ಅತಿಶಯವಾದ ಹಿರಿಮೆಯಿಂದ ನೂತನ ಧಾನ್ಯರಾಶಿಯನ್ನೇ ಬೆಳೆದನೆಂದು ಲೋಕವೆಲ್ಲ ಹೇಳುತ್ತಿರುವುದನ್ನು ಕೇಳಿಬಲ್ಲೆವು ; ಅಬ್ಬಾ ! ಈಗ ಶ್ರೇಷ್ಠನಾದ ಈ ಏಲೇಶ್ವರದ ಕೇತಿರಾಜನು ಕ್ರಮವಾಗಿ ಬೂದಿಯನ್ನೇ ಬಿತ್ತಿ ದೊಡ್ಡ ಬೆಳೆಯನ್ನು ವಿಲಾಸದಿಂದ ಬೆಳೆಮುದನ್ನು ಕಂಡೆವು. ವ॥ ಹೀಗೆಂದು ಅತಿಶಯ ಸಂತೋಷದಿಂದ ಅನೇಕ ಬಗೆಯಾಗಿ ಆತನ ಮಹಿಮೆಯನ್ನು ಶಿವಭಕ್ತರಾದ ಜನರುಗಳು ಹೊಗಳುತ್ತಿದ್ದರು. ಆಗ ಮತ್ತೊಂದು ದಿವಸ ಕೆಟ್ಟ ಹೃದಯವುಳ್ಳವರಾದ ಜೈನರು ಆ ಕ್ಷೇತ್ರಪಾಲದೇವನ ಹಸುಗಳನ್ನು ಕಳ್ಳರಿಂದ ಕಳವು ಮಾಡಿಸಲು (ಬಯಸಿದರು.) ಹಸುಗಳ ಕೊಟ್ಟಿಗೆಯಿಂದ ಆ ಚೋರರು ಎಲ್ಲ ಹಸುಗಳನ್ನು ರಾತ್ರಿಯಲ್ಲಿ ಕಟ್ಟಿದ ಹಗ್ಗವನ್ನು ಬಿಚ್ಚಿ ಬಹು ದೂರದಲ್ಲಿರುವ ಬೇರೆ ದೇಶಕ್ಕೆ ಉತ್ಸಾಹದಿಂದ ಹೊಡೆದುಕೊಂಡು ಹೋಗುತ್ತಿರುವಾಗ—೧೯. ಆ ಹಸುಗಳು ದಾರಿಯಲ್ಲಾದರೂ ಹುಲ್ಲನ್ನು ಮೇಯದೆ, ಅಲ್ಲಿನ ಸರೋವರಗಳ ಹೊಳೆಗಳ ನೀರನ್ನು ಕುಡಿಯದೆ, ಈ ರೀತಿ ಏಳು ದಿನಗಳವರೆಗೂ

———

1 ವ(ಅ) 2 ತ(ಅ) 3 ಳ(ಅ)

ಪಾಯಕೆ ತಂದೆಮಿಂದಿವನಿವಕ್ಕಟ ಸತ್ತೊಡೆ ದೋಷಮಕ್ಕುಮ
ನ್ಯಾಯಮಿದೆಂದು ಮುನ್ನಿನೆಡೆಗಟ್ಟಿದರಾಕಳ ಪಿಂಡನಾ ಖಳರ್ ೧೯

ಎಱೆಯನೆಡೆಗಾವುಗಳ್ಬಿಡ
ದಱಚುತ್ತುಂಬಾಯೆನುತ್ತೆ ಹೂಂಕರಿಸುತ್ತುಂ
ಮಱುಕಂ ಮಿಗೆ ನೆಗೆನೆಗೆದ
ಳ್ಕಱನೋಡಿ ಬರುತ್ತುಮಿರ್ದುವತಿ ಭರದಿಂದಂ ೨೦

ವ॥ ಅಂತೇಳು ದಿನಂ ನಡೆದ ಬಟ್ಟೆಯನೇಳುಂ ಜಾವದೊಳ್ಕಳಿ[1]ದು ಜವದಿಂ ಪರಿತಂದ ಪಶುಗಳನಾ ಕ್ಷೇತ್ರಪಾಲದೇವಂ ವ್ರತಹೀನಂಗಳಾದ ತುಱುಗಳೀ ಕೊಟ್ಟಗೆಯುಂ ಪುಗಲಾದೆಂದವಧರಿಸುತ್ತದಱಗುಸೆಯ ಬಾಗಿಲಂ ಬಂಧಿಸೆ ಪಸಿದು ಬಳಲ್ದುವೆಂದು ಪೌರಜನಂ ಮಱುಗಿ ಸಾರತರಮಪ್ಪ ತೃಣಜಲಮಂ ಮುಂದಿಡೆ ಮುಟ್ಟಲೊಲ್ಲದೆ—

ಕೊಟ್ಟಗೆಯುಂ ಬಲವರುತುಂ
ನೆಟ್ಟನೆ ನಿಜಲಿಂಗದರ್ಶನಂಗೆಯ್ದಪೆವೆಂ
ದಿಟ್ಟಣಿಸಿ ನಿಳ್ಕಿ ನಿಟ್ಟಿಸು
ತೊಟ್ಟಜೆಯಿಂದಱಚಿ ಕರೆವುತಿರ್ದುವು ಪಶುಗಳ್ ೨೧

ಅವು ಇದ್ದು ಬಳಲಿ ಹೋಗಲಾಗಿ ಅಯ್ಯೋ ! ಈ ಹಸುಗಳನ್ನು ಅಪಾಯಕ್ಕೆ ತಂದಂತಾಯಿತು. ಇವು ಸತ್ತರೆ ನಮಗೆ ಪಾಪವುಂಟಾಗುವುದು. (ನಾವು ಮಾಡಿದ) ಈ ಕಾರ್ಯವು ಅನ್ಯಾಯದ್ದೆಂದು (ತಿಳಿದು) ಆ ಆಕಳುಗಳ ಹಿಂಡನ್ನು ಅವು ಮೊದಲಿದ್ದ ಸ್ಥಳಕ್ಕೆ ಅಟ್ಟಿದರು. ೨೦. ಒಡೆಯನ ಹತ್ತಿರಕ್ಕೆ ಹಸುಗಳು ಒಂದೇ ಸಮನೆ ಅರಚುತ್ತ, 'ಅಂಬಾ' ಎನ್ನುತ್ತ, ಹೂಂಕಾರ ಮಾಡುತ್ತ, ಅತಿಶಯವಾಗಿ ಮರುಕಗೊಂಡು (ದುಃಖಗೊಂಡು), ನೆಗೆನೆಗೆದು ಅತ್ಯಂತ ವೇಗದಿಂದ ಪ್ರೀತಿಯಿಂದ ಓಡೋಡಿ ಬರುತ್ತಿದ್ದವು. ವ॥ ಆ ರೀತಿ ಏಳು ದಿನಗಳ ದಾರಿಯನ್ನು ಏಳು ಜಾವಗಳಲ್ಲಿ ನಡೆದು ಕಳೆದು, ಶೀಘ್ರವಾಗಿ ಓಡಿಬಂದ ಹಸುಗಳನ್ನು ಆ ಕ್ಷೇತ್ರಪಾಲದೇವನು ವ್ರತಹೀನಗಳಾದ (ಕುಲಗೆಟ್ಟ) ಈ ಹಸುಗಳು ಹಟ್ಟಿಯನ್ನು ಹೊಗಲಾಗದು ಎಂದು ಆ ಕೊಟ್ಟಿಗೆಯ ಮುಂಬಾಗಿಲನ್ನು (ಹೆಬ್ಬಾಗಿಲನ್ನು) ಮುಚ್ಚಿದನು. ಪಟ್ಟಣದ ಜನಗಳು ಈ ಹಸುಗಳು ಬಳಲಿಹೋಗಿವೆ, ಎಂದುಕೊಂಡು ಮರುಗಿ ಸಾರವತ್ತಾದ ಹುಲ್ಲನ್ನೂ ನೀರನ್ನೂ ತಂದು ಮುಂದಿಡಲು ಅವನ್ನು ಮುಟ್ಟಲು ಮನಸ್ಸುಮಾಡದೆ—೨೧. ಆ ಕೊಟ್ಟಿಗೆಗೆ ಪ್ರದಕ್ಷಿಣೆ ಹಾಕಿ, ಚೆನ್ನಾಗಿ ಶಿವಲಿಂಗ ದರ್ಶನವನ್ನು ಮಾಡುತ್ತೇವೆಂದು ಗುಂಪಾಗಿ ಸೇರಿ ಇಣಿಕಿ

1 ಳ(ಮು)

ಒಳಗೆ ಕಡುಪಸಿದು ಬಡವಾ
ದೆಳೆಗಱುಗಳ್ಕೇಳ್ದುಮವಱ ದನಿಯಂ ಬತವಿಂ
ದಳಿದುದಿವಕೆಂದು ಮಱುಕಮ
ನುಳಿದಱಿಚದೆ ಸುಮ್ಮನಿರ್ದವೆಳಸದೆ ಸುಧೆಯಂ ೨೨

ವ॥ ಅನಿತಱೊಳೇಲೇಶ್ವರ ಕೇತಯ್ಯಂ ತುಱುಗಳಾಹಾರಂಗೊಳದ ಬಗೆಯಂ ಬಗೆದಂತೆ ಕಂಡು ನಿಜವ್ರತಮಂ ಬಿಟ್ಟವಲ್ಲೆಂದು ತಿಳಿದು [1]ಗೋಂಷ್ಠಿ[1]ಕವಾಟಪುಟಮಂ ಛೋಂಕನೆ ಬಿರ್ಚಲೊಡನೆ—

ಸಂದಣಿಸಿ ಪೊಕ್ಕು ಲಿಂಗದ
ಮುಂದಣ್ಗೆರದೆಯ್ದಿ ಕಱುಗಳಂ ಬಗೆಯದೆ ನ
ಣ್ಪಿಂದೀಕ್ಷಿಸಿ ತುಱುಗಳ್ಪಲ
ವಂದೆಱಗುತೆ ಮುಟ್ಟಿ ಲಿಂಗಮಂ ಮಸ್ತಕದಿಂ ೨೩

ಪರುಸನ ನೇಮಮಂನೆಸಗು
ತ್ತುರುತರ ಮುದಮಾಳ್ದು ಶರಣನಡಿದಾಮರೆಗಾ
ದರದಿಂ ನಸುಬಾಗುತೆ ನಿಂ
ದಿರೆ ಕಂಡಾ ಕೇತಿರಾಜನತಿ ಕೃಪೆಯಿಂದಂ ೨೪

ಎಳೆವುಲ್ಲಂ ತಿಳಿನೀರಂ
ಗಳಿಲನೆ ಮುಂದಿಟ್ಟನಾ[2]ಗಳಾಕಳ ತಂಡಂ
ಕೆಳೆಗೊಂಡು ಮೇವುತಂ ಪು
ಲ್ಗಳನಂಬುಗೊಳುತ್ತೆ ಕಳೆದುದಧ್ವಶ್ರಮಮಂ ೨೫

ನೋಡುತ್ತ ಆವೇಶಗೊಂಡು ಅರಚುತ್ತ ಆ ಪಶುಗಳು ಕರೆಯುತ್ತಿದ್ದವು. ೨೨. ಕೊಟ್ಟಿಗೆಯ ಒಳಭಾಗದಲ್ಲಿ ಅತಿಯಾಗಿ ಹಸಿದು ಸೊರಗಿಹೋದ ಎಳೆಯ ಕರುಗಳು (ತಾಯಿ) ಹಸುಗಳ ಧ್ವನಿಯನ್ನು ಕೇಳಿಯೂ ಕೂಡ, ಇವುಗಳ (ಶಿವಭಕ್ತಿ) ವ್ರತವು ಅಳಿದುಹೋಗಿದೆ, ಎಂದು ತಿಳಿದು ಅವುಗಳ ಹಾಲನ್ನೂ ಕೂಡ ಅಪೇಕ್ಷಿಸದೆ ಸುಮ್ಮನೆ ಇದ್ದವು. ವ॥ ಅಷ್ಟರಲ್ಲಿ ಏಲೇಶ್ವರ ಕೇತಯ್ಯನು ಹಸುಗಳು ಆಹಾರವನ್ನು ಸ್ವೀಕಾರ ಮಾಡದ ರೀತಿಯನ್ನು ತಿಳಿದು ಇವು ತಮ್ಮ ವ್ರತವನ್ನು ಬಿಟ್ಟಿಲ್ಲವೆಂದು ಯೋಚಿಸಿ, ಕೊಟ್ಟಿಗೆಯ ಕದವನ್ನು ಒಮ್ಮೆಲೇ ತೆರೆದು ಬಿಡಲು ೨೩–೨೪. ಆ ಹಸುಗಳು ಒಮ್ಮೆಲೆ ಕೊಟ್ಟಿಗೆಯನ್ನು ಹೊಕ್ಕು, ತಮ್ಮ ಕರುಗಳನ್ನೂ ಗಣನೆಗೆ ತೆಗೆದುಕೊಳ್ಳದೆ (ಮೊದಲು) ಪ್ರೀತಿಯಿಂದ ಶಿವಲಿಂಗದ ಮುಂದಕ್ಕೆ ಹೋಗಿ, ಪ್ರದಕ್ಷಿಣೆ ಮಾಡಿ ನಮಸ್ಕರಿಸಿ, ಹಣೆಯಿಂದ ಆ ಲಿಂಗವನ್ನು ಮುಟ್ಟಿ ಶಿವಲಿಂಗ ಸ್ಪರ್ಶ ಮಾಡುವ ನೇಮವನ್ನು ಮಾಡಿ, ಅತ್ಯಂತ ಸಂತೋಷಗೊಂಡುವುಗಳಾಗಿ, ಶಿವಶರಣರ ಪಾದಕಮಲ ಗಳಿಗೆ ಸ್ವಲ್ಪ ಬಗ್ಗಿ ನಮಸ್ಕರಿಸಿ ನಿಂತವು. (ಹೀಗೆ ನಿಂತಿರುವ ಆ ಹಸುಗಳನ್ನು) ಕೇತಿರಾಜನು ಅತ್ಯಂತ ಕೃಪೆಯಿಂದ ನೋಡಿದನು. ೨೫. (ಆ ಹಸುಗಳಿಗೆ) ಎಳೆಯಹುಲ್ಲು ತಿಳಿಯಾದ ನೀರನ್ನು ಆ ಕೂಡಲೆ ತಂದುಮುಂದಿಟ್ಟನು. ಆಗ ಆಕಳುಗಳ ಸಮೂಹವು ಉತ್ಸಾಹಗೊಂಡು ತಂದಿಟ್ಟ ಆ ಹುಲ್ಲನ್ನು ಮೇಯುತ್ತ ನೀರು ಕುಡಿಯುತ್ತ ತಮ್ಮ

1 ಗೊಟ್ಟ(ಅ) 2 ರಾ(ಚ)

ವ|| ಅಂತು ಕಳೆದು ಸಂತಸಂದಳೆದಿರ್ಪಾಗಳ್ಕಱುಗಳಿಂತಾದುದೆಲ್ಲಮಂ ಕಂಡು—

ವ್ರತಭಂಗಮಿಲ್ಲಮಿವಕೆಂ
ದತಿಶಯ ಮುದಮಾಳ್ದು ತೊರೆದ ಪಶುಗಳ ಮೊಲೆಯಂ
ಮತಿ ಮಿಗೆ ನಲಿದುಂಡುವು ಜನ
ತತಿಯಚ್ಚರಿವಡೆದು ಕೀರ್ತಿಸುತ್ತಿರೆ ಧರೆಯೊಳ್ ೨೬

ಬಿಡದಾದುವಲ್ತೆ ಪಶುಗಳು
ಮೊಡನಾತ್ಮವ್ರತಮನಧಿಕ ಸಂಕಟದೊಳಮೆಂ
ದೊಡೆ ಬಿಟ್ಟ ಮನುಜನವಱಿಂ
ಕಡೆ ನಿಜಸುವ್ರತಮನವನಿಯೊಳ್ಜಗದೇವಾ ೨೭

ಧರೆಯೊಳಗೆ ಕೇತಿರಾಜನ
ಪರಿಯಂ ಮುನ್ನಱಿದೆಯಪ್ಪೊಡೀ ಭವಿಸಂಗಂ
ದೊರೆಕೊಳ್ಗುಮೆ ನಿನಗೆಂದಾ
ಶರಣಾಗ್ರಣಿಯೊರೆದು ಮತ್ತಮಿಂತೆಂದಂ ೨೮

ಧರೆಯೊಳೆ ನಾಚಿದೇವನೆನಿಪೊರ್ವನುಮಾಧವಭಕ್ತನಾತ್ಮಸುಂ
ದರಿ ತರುಣದ್ವಯಂ ಪುದಿದ ಗರ್ಭಮನಾಳ್ದಿರುತಿರ್ದು ಪೆತ್ತೊಡಿ
ರ್ವರನವರೊಳ್ ಮೊದಲ್ಚನಿಯಪಂಗೆ ದೃಢವ್ರತನೊಂದು ಲಿಂಗಮಂ
ಧರಿಯಿಸಿ ಮತ್ತೆ ಪುಟ್ಟಿದುದನೀಕ್ಷಿಸಿ ಕಾಲಮತೀತಮಪ್ಪುದಂ ೨೯

ಮಾರ್ಗಶ್ರಮವನ್ನು ಕಳೆದವು, ||ವಚನ|| ಈ ರೀತಿ ಮಾರ್ಗಶ್ರಮವನ್ನು ಕಳೆದು ಸಂತೋಷಗೊಂಡು ಇರುವಾಗ ಕರುಗಳು ಹೀಗೆ ನಡೆದುದೆಲ್ಲವನ್ನೂ ಕಂಡು—೨೬. ಈ ನಮ್ಮ ತಾಯಿ ಹಸುಗಳಿಗೆ ವ್ರತಭಂಗವಾಗಿಲ್ಲವೆಂದು ತಿಳಿದು ಅತ್ಯಂತ ಸಂತೋಷಗೊಂಡು, ತೊರೆದ ಆ ಹಸುಗಳ ಮೊಲೆಯನ್ನು ಲೋಕದಜನವೆಲ್ಲ ಅತ್ಯಂತ ಆಶ್ಚರ್ಯಗೊಂಡು ಹೊಗಳುವಂತೆ ಮನಃಪೂರ್ವಕವಾಗಿ ನಲಿದು ಕುಡಿದವು. ೨೭. ಅತ್ಯಂತ ಸಂಕಟ ಸಮಯದಲ್ಲಿ ಪಶುಗಳೂ ಕೂಡ ತಮ್ಮ ವ್ರತವನ್ನು ಬಿಡಲಿಲ್ಲವಲ್ಲವೇ ! ಎನ್ನುವಾಗ ಲೋಕದಲ್ಲಿ ತಮ್ಮ ಶ್ರೇಷ್ಠವ್ರತವನ್ನು ಬಿಟ್ಟಮನುಷ್ಯನು ಆ ಪಶುಗಳಿಗಿಂತಲೂ ಕಡೆ ಯಲ್ಲವೇ ಜಗದೇವ ? (ಎಂದು ಬಸವಣ್ಣನು ಜಗದೇವನಿಗೆ ಹೇಳಿದನು.) ೨೮. ಲೋಕದಲ್ಲಿ ಕೇತಿರಾಜನ ರೀತಿಯನ್ನು ಮೊದಲು ತಿಳಿದಿದ್ದೆಯಾದರೆ, ನಿನಗೆ ಈ ಭವಿಗಳ ಸಂಗವುಂಟಾಗುತ್ತಿತ್ತೇ ? ಎಂದು ಆ ಶರಣರಿಗೆಲ್ಲ ಅಗ್ರಗಣ್ಯನಾದ ಬಸವಣ್ಣನು ತಿಳಿಸಿ ಪುನಃ ಹೀಗೆ ಹೇಳಿದನು : ೨೯–೩೨. ಭೂಮಂಡಲವಲ್ಲಿ ಒಬ್ಬ ಪರಮೇಶ್ವರಭಕ್ತ ನೆನಿಸಿದ 'ನಾಚಿದೇವ' ಎಂಬುವವನು ಇದ್ದನು. (ಅವನು) ಎರಡು ಗಂಡುಮಕ್ಕ ಳಿಂದ ತುಂಬಿದ ಹೊಟ್ಟೆಯುಳ್ಳ (ಬಸುರಿಯಾದ) ತನ್ನ ಸುಂದರಪತ್ನಿಯೊಡನೆ ಇರುತ್ತಿದ್ದು (ಅವಳು) ಇಬ್ಬರು ಗಂಡುಮಕ್ಕಳನ್ನು ಹೆತ್ತಳು. ಅವರಲ್ಲಿ ಮೊದಲು

ಲಿಂಗಮುನದಕಳವಡಿಸದೆ
ಪಿಂಗಿರೆ ಕಂಡಬಳೆ ನುಡಿದಳೀ ಶಿಶುಗೀಗಳ್
ಸಂಗತಮಪ್ಪಂತಿರೆ ಶಿವ
ಲಿಂಗಮುನಳವಡಿಸದಿರ್ಪಿರೇಂ ಕಾರಣದಿಂ ೩೦

ಎನೆ ನಾಚಿರಾಜನೆಂದು
ವನಿತೆಗೆ ಕೇಳ್ತರುಣಿ ತರುಣನರ್ಘೋದಯದೊಳ್
ಘನಲಿಂಗಮುನಳವಡಿಪುದು
ವಿನುತಾಗಮವಿಹಿತ ವೀರಶೈವಾಚರಣಂ ೩೧

ಅಳವಡದೀ ಶಿಶುವಿಂ[1]ಗಾ
ವಿಳಸತ್ಕ್ರಿಯೆ ಬಿಸುಟು ಕಳೆವುದಪಜಿಂದಿದನೆಂ
ದಿಳೆಯರಿಯೆ ಬಿಸುಡಿಸಿದನಾ
ಗಳೆ ಮಗುವಂ ಭಕ್ತನೆಂದೊಡೇವಣ್ಣಿಪುದೋ ೩೨

ಇಂತೆಸೆವ ವೀರಶೈವ ಮ
ಹಾಂತರ ಸನ್ಮಾರ್ಗಮೊಪ್ಪುತಿರೆ ಬಿಟ್ಟದನೋ
ರಂತೆ ಕುಮಾರ್ಗದೊಳಡಿಯಿಡ
ಲೆಂತೊಲ್ದೆ ದುರಾತ್ಮಬೋಧೆಯೇಗೆಯ್ದುದೊ ಪೇಳ್ ೩೩

ಹುಟ್ಟಿದಮಗನಿಗೆ ದೃಢವ್ರತನಾದ ನಾಚಿದೇವನು ಒಂದು ಲಿಂಗವನ್ನು ಧಾರಣೆಮಾಡಿಸಿ, ಆ ಮೇಲೆ ಹುಟ್ಟಿದ ಮಗುವನ್ನು ನೋಡಿ ಕಾಲವು ಮಿಕ್ಕಿಹೋಯಿತೆಂದುಕೊಂಡು ಅದಕ್ಕೆ ಲಿಂಗಧಾರಣೆಮಾಡದೆ ದೂರಸರಿದನು. (ಇದನ್ನು) ಕಂಡ ಆ ಹೆಂಡತಿಯು ಏನು ಕಾರಣದಿಂದ ಈಗ ಈ ಶಿಶುವಿಗೆ ಸಂತೋಷವುಂಟಾಗುವ ಹಾಗೆ ಶಿವ ಲಿಂಗವನ್ನು ಧಾರಣೆಮಾಡದೆ ಇದ್ದೀರಿ ? ಎನ್ನಲು, ಆ ಹೆಂಡತಿಗೆ ನಾಚಿದೇವನು 'ತರುಣಿಯೇ ಕೇಳು : ತರುಣನ ಅರ್ಘೋದಯದಲ್ಲಿಯೇ (ಅರ್ಘಶಿಶುವು ತಾಯಿಯ ಗರ್ಭದಿಂದ ಹೊರಬಂದಾಗಲೇ) ಶ್ರೇಷ್ಠವಾದ ಲಿಂಗವನ್ನು ಧರಿಸುವುದು ಶ್ಲಾಘ್ಯವಾದ ಆಗಮೋಕ್ತವೀರಶೈವದ ನೀತಿಯಾಗಿದೆ. ಈ ಶಿಶುವಿಗೆ ಆ ಶ್ರೇಷ್ಠವಾದ ಲಿಂಗಧಾರಣ ಕ್ರಿಯೆಯು ಉಚಿತವಾಗುವುದಿಲ್ಲವೆಂದು ಲಿಂಗಧಾರಣೆಮಾಡಲಿಲ್ಲವೆಂದು ತಿಳಿಸಿ, ಲೋಕಕ್ಕೆಲ್ಲ ತಿಳಿಯುವಂತೆ ಶಿವಭಕ್ತನಾದ ಅವನು ಆ ಮಗುವನ್ನು ಆಗಲೇ ಬಿಸಾಡಿಸಿಬಿಟ್ಟನು, ಎನ್ನುವಾಗ ಅದನ್ನು ಏನೆಂದು ವರ್ಣಿಸುವುದೋ ! ೩೩. ಈ ರೀತಿಯಲ್ಲಿ ವೀರಶೈವ ಮಹಾವ್ಯಕ್ತಿಗಳ ಶ್ರೇಷ್ಠಮಾರ್ಗವು ಒಪ್ಪುತ್ತಿರುವಾಗ ಅಂಥ. ಮಾರ್ಗವನ್ನು ಬಿಟ್ಟು ಕ್ರಮವಾಗಿ ದುಷ್ಟಮಾರ್ಗದಲ್ಲಿ ಹೆಜ್ಜೆಯಿಡಲು ಹೇಗೆಮನಸ್ಸು ಮಾಡಿದೆ ? ದುರಾತ್ಮ

---

1 ಲಿಂ(ಚ, ದ)

ಅಲ್ಲದುದನಪ್ಪುಕೆ[1]ಯ್ಯುವ
ರಿಲ್ಲದುದಂ ತೋರ್ಪರುಳ್ಳುದಂ ವಂಚಿಪರೆ
ಲ್ಲೆಲ್ಲಿಯುಮಿೂ ಖಳರವನೀ
ವಲ್ಲಭರ ಮರುಳ್ಚಿ ಸೆಳೆವರೀಪ್ಸಿತವಸುವಂ ೩೪

ವಿಮಳ ನಿಗಮಾಂತ ಗದಿತೋ
ತ್ತಮ ಶಿವಧರ್ಮಮನಗಲ್ದು ಮುನಿಶಾಪಹತ
ಕುಮತಮನವಲಂಬಿಸಿ ದು
ರ್ದಮರೀ ದ್ವಿಜರಭವಭಕ್ತರಂ ನಿಂದಿಸುವರ್ ೩೫

ಹರಚರಣದ್ರೋಹಿಗಳೀ
ಶ್ವರವಿಮುಖರೆನಿಪ್ಪ ಪರಮ ಪಾಪಂಡರಿವಂ
ದಿರ ಸಂಸರ್ಗಂ ಶ್ರೇಯ
ಸ್ಕರಮಕ್ಕುಮೆ ಲಿಂಗಭಕ್ತಸಂತತಿಗಿಳೆಯೊಳ್ ೩೬

ಪಶುಕುಳಪಾಶಹಾರಿ ಪರಮೇಶ್ವರನೊಪ್ಪಿರೆ ಬಿಟ್ಟು ನ[2]ಲ್ಮೆಯಿಂ
ಪಶುಗಳನಾವನೊಂದಿ ನಿಜಪಾಶವಿಮುಕ್ತಿಗೆ ಸೇವೆಗೆಯ್ವನಾ
ಪಶುನರನಾಸ್ಯದೊಳ್ ಮಿಸುಪ ಮೂಗರಿದಿಟ್ಟಿಗೆಯುರ್ದಿ ಬೇಗದಿಂ
ಪಶುಪತಿಯಾ ಮೊಗಕ್ಕೆ ಮುಕುರಂಬಿಡಿದಾಗಳೆ ತೋಱದಿರ್ಪನೇ ೩೭

ರಾದವರಬೋಧನೆಯು ಏನನ್ನು ತಾನೆ ಮಾಡುವುದಿಲ್ಲ ? ಹೇಳು. ೩೪. ಈ ದುಷ್ಟರು ಅಲ್ಲವಾದದ್ದನ್ನೇ ಅಂಗೀಕರಿಸುವಂತೆ ಮಾಡುವರು; ಇಲ್ಲದೆ ಇದ್ದುದನ್ನು ತೋರಿಸುವರು; ಇರುವುದನ್ನೇ ವಂಚಿಸಿ ಇಲ್ಲದಂತೆ ಮಾಡುವರು; ರಾಜರುಗಳನ್ನು ಮರಳುಗೊಳಿಸಿ ತಮ್ಮ ಇಷ್ಟಾರ್ಥವನ್ನು ಸೆಳೆದುಕೊಳ್ಳುವರು. ೩೫. ಶ್ರೇಷ್ಠ ಉಪನಿಷತ್ತುಗಳಲ್ಲಿ ಹೇಳಲ್ಪಟ್ಟ ವೀರಶೈವ ಧರ್ಮವನ್ನು ಬಿಟ್ಟು, ಮುನಿಶಾಪದಿಂದ ಕೊಲ್ಲಲ್ಪಟ್ಟು ದುಷ್ಟ ಮತವನ್ನು ಅವಲಂಬಿಸಿ, ಕೆಟ್ಟಮದದಿಂದ ಕೂಡಿದ ಈ ದ್ವಿಜರು ಶಿವಭಕ್ತರನ್ನು ನಿಂದಿಸುತ್ತಿದ್ದಾರೆ. ೩೬. ಈ ಲೋಕದಲ್ಲಿ ಲಿಂಗಭಕ್ತರ ಸಮೂಹಕ್ಕೆ ಪರಮೇಶ್ವರನ ಪಾದದ್ರೋಹಿಗಳೂ, ಈಶ್ವರನಿಂದ ವಿಮುಖರಾದವರೂ ಎನಿಸಿರುವ ಈ ನಾಸ್ತಿಕರು ಗಳ ಸಹವಾಸವು ಶ್ರೇಯಸ್ಕರವಾದೀತೇ ? ೩೭. ವಿಷ್ಣುಬ್ರಹ್ಮಾದಿ ಪಶುಗಳ ಮಾಯೆಯೆಂಬ ಪಾಶವನ್ನು ಪರಿಹರಿಸುವ ಪರಮೇಶ್ವರನಿರುವಾಗ ಅವನನ್ನು ಬಿಟ್ಟು, ತಮ್ಮ ಮಾಯಾಪಾಶದ ಬಿಡುಗಡೆಗೆ, ಪಶುಗಳೆನಿಸಿರುವ ವಿಷ್ಣು ಬ್ರಹ್ಮರನ್ನು ನಂಬಿ ಯಾವನು ಸೇವೆಮಾಡುವನೋ ಅಂಥ ಪಶುಸ್ವರೂಪದ ಮನುಷ್ಯರ ಮುಖದಲ್ಲಿ ಶೋಭಿಸುವ ಮೂಗನ್ನು ಕೊಯ್ದು, ಪರಮೇಶ್ವರನು ಇಟ್ಟಿಗೆಯಿಂದ ಉಜ್ಜಿ, ಬೇಗನೆ

1 ಗೆ(ಅ) 2 ವ(ಚ)

ವಿಮಳಾಂಬುವಿನೊಳ್ಬಿಂಬಿಪ
ಕಮಳಸಖಂ ಪಂಕದಲ್ಲಿ ಬಿಂಬಿಸುಗುಮೆ ಜಂ
ಗಮಲಿಂಗಭಕ್ತರೊಳೆ ತ
ಳ್ತ ಮಹೇಶ್ವರನನ್ಯ ಭವಿಗಳೊಳ್ಬೆರಸುಗುಮೇ ೩೮

ಬಲ್ಲನೆ ಗಾನಮಂ ಬಧಿರನಂಧಕನಗ್ಗದ ರತ್ನದೀಪಮಂ
ಬಲ್ಲನೆ ಸ[1]ತ್ಸುಧಾರಸದ ಬಲ್ಸವಿಯಂ ಜ್ವರಿತಾಂಗಮಾನವಂ
ಬಲ್ಲನೆ ಪುಚ್ಚುಗೊಂಡ ಮನುಜಂ ಶಿವತತ್ವಪದಾರ್ಥಸಾರಮಂ
ಬಲ್ಲನೆ ಬಲ್ಲನೇ ಕುಕವಿ ಸತ್ಕವಿಕಾವ್ಯಕಲಾಕಲಾಪಮಂ ೩೯

ಖರಮೇಂ ಬಲ್ಲುದೆ ನಾಕಲೋಕಸುಖಮಂ ಮಾಣಿಕ್ಯಮಂ ಧೂರ್ತವಾ
ನರಮೇಂ ಬಲ್ಲುದೆ ಗೂಗೆ ಬಲ್ಲುದೆ ಲಸನ್ಮಾರ್ತಂಡನಂ ಗಂಧಬಂ
ಧುರ ಕಂಜಾತಮರಂದಮಂ ನೊಳವಡೇತುಂ ಬಲ್ಲುದೇ ಕರ್ದಮ
ಸ್ಥಿರ ಮಂಡೂಕಮೊರಲ್ದು ಬಲ್ಲುದೆ ಮಹಾಂಭೋರಾಶಿಗಾಂಭೀರ್ಯಮಂ ೪೦

ಆ ಮುಖಕ್ಕೆ ಕನ್ನಡಿಯನ್ನು ಹಿಡಿಯುದಿರುವನೇ ? ೩೮. ಪರಿಶುದ್ಧವಾದ ನೀರಿನಲ್ಲಿ ಪ್ರತಿಬಿಂಬಿಸುವ ಸೂರ್ಯನು ಕೆಸರಿನಲ್ಲಿ ಪ್ರತಿಬಿಂಬಿಸುವನೇ ? ಜಂಗಮಲಿಂಗಭಕ್ತರ ಸೇವೆಯಲ್ಲಿ ತೊಡಗಿದ ಮಹೇಶ್ವರನು (ಶಿವಭಕ್ತನು) ಅನ್ಯಭವಿಗಳ ಸಂಗದಲ್ಲಿ ಕೂಡುವನೇ? (ಭವಿ–ಮದ್ಯಪಾಯಿ, ಮಾಂಸಭಕ್ಷಕ, ಶಿವನಿಗಿಂತ ಭಿನ್ನವಾದ ದೇವತಾಪೂಜಕ, ಶಿವೇತರಮತವಾದಿ, ಶಿವಮತದೂಷಕ ಈ ಐದು ಪ್ರಕಾರದವರು ಭವಿಗಳೆಂದು ಸಾಮಾನ್ಯ ಗ್ರಹಿಕೆ ೩೯. ಕಿವುಡನು ಸಂಗೀತವನ್ನು ಬಲ್ಲನೇ ? ಕುರುಡನು ಶ್ರೇಷ್ಠವಾದ ರತ್ನದ ದೀಪವನ್ನು ತಿಳಿಯುವನೇ ? ಶ್ರೇಷ್ಠವಾದ ಅಮೃತರಸದ ಒಳ್ಳೆಯ ರುಚಿಯನ್ನು ಜ್ವರದಿಂದ ಕೂಡಿದ ದೇಹವುಳ್ಳವನು ತಿಳಿಯುವನೇ ? ಹುಚ್ಚನಾದ ಮನುಷ್ಯನು ಈಶ್ವರತತ್ತ್ವಾರ್ಥದ ಸಾರವನ್ನು (ಶಿವಜೀವೈಕ್ಯವನ್ನು ಬೋಧಿಸುವ ತತ್ತ್ವದ ಸಾರವನ್ನು) ಬಲ್ಲನೇ ? ದುಷ್ಟನಾದ ಕವಿಯು (ಸಾಮಾನ್ಯ ಕವಿಯು) ಶ್ರೇಷ್ಠಕವಿಯೆನಿಸಿದವನ ಕಾವ್ಯದ ಕಲೆಯ ಸಮೂಹವನ್ನು ಬಲ್ಲನೇ ? ೪೦. ಕತ್ತೆಯು ಸ್ವರ್ಗಲೋಕಸುಖವನ್ನು ಬಲ್ಲುದೇನು ? ಮಾಣಿಕ್ಯದ ಬೆಲೆಯನ್ನು ಧೂರ್ತಕೋತಿಯು ತಿಳಿದೀತೇನು ? ಗೂಗೆಯು ಪ್ರಕಾಶಮಾನನಾದ ಸೂರ್ಯನನ್ನು ತಿಳಿದೀತೇನು ? ಸುಗಂಧದಿಂದ ತುಂಬಿದ ಕಮಲದಲ್ಲಿನ ಮಕರಂದವನ್ನು ನೊಣವು ಹೇಗಾದರೂ ತಿಳಿದೀತೇನು? ತುಂಬಿದ ಕಮಲದಲ್ಲಿನ ಮಕರಂದವನ್ನು ನೊಣವು ಹೇಗಾದರೂ ತಿಳಿದೀತೇನು? ಕೆಸರಿನಲ್ಲಿ ಸ್ಥಿರಗೊಂಡ (ನೆಲಸಿದ) ಕಪ್ಪೆಯು ಕೂಗುತ್ತ ಮಹಾಸಮುದ್ರದ

1 ತ(ಅ)

ನಿನ್ನಾತ್ಮನದೇಂ ಬಲ್ಲುದೆ
ಪನ್ನಗಧರಶರಣಚರಣಸರಸಿಜಸೇವಾ
ಸನ್ನುತಸುಖಮಂ ಭವಮದ
ವನ್ನಾಗಮತಂಗಜಾರಿಯುಂ ಜಗದೇವಾ ೪೧

ಸುರಮಣಿ ಪಾಣಿಯುಲ್ಲಿರೆ ಬಿಸುಟ್ಟಳಿಗಾಜನಪೇಕ್ಷಿಪಂತೆ ನಿ
ರ್ಜರತರು ಪಿತ್ತಿಲಲ್ಲಿರೆ ತದರ್ಥನೆಗೆಯ್ಯದೆ ಬೂರಮಂ ಸಮಂ
ತೆರೆವವನಂತೆ ದೇವಪಶುವಂಗಣದಲ್ಲಿರೆ ಮಾಣ್ದು ಕಳ್ತೆಯಂ
ಪಿರಿದಮರ್ದಿಂಟಲಾದರಿಪವೋಲ್ ನಿಧಿ ಮುಂದಿರೆ ನೂಂಕಿ ವಾರಿಯಿಂ ೪೨

ಜರಗಂ ಕರ್ಚುವವೋಲ್ಸುಧಾಸುರಸಮಿಂಬಾಗುತ್ತೆ ಕೈವಟ್ಟಲ
ಲ್ಲಿರೆ ಕೂರ್ತೀಂಟದೆ ಗಂಜಿಯೊಂಟಲೆಸಪಂತಾಮೋದದಾಮೋದತಾ
ಮರಸಂ ತಳ್ತಿರೆ ಬಿಟ್ಟು ಗೋರಟೆಯ ಪೂಗೊಲ್ವಂತೆವೋಲ್ಖಂಡಶ
ರ್ಕರೆ ಕೆಯ್ಸಾರ್ದಿರೆ ಮೆಲ್ಲದಂತಿರಿಸಿ ಬೇವಂ ಮೆಲ್ವವೋಲ್ಧಾತ್ರಿಯೊಳ್ ೪೩

ವಿಮಳ ಶಿವಂಕರ ಶಿವಭ
ಕ್ತಿಮಾರ್ಗಮಿರೆ ವರ್ಜಿಸುತ್ತೆ ಭವಿಕರ್ಮವಿಧಾ

ಗಾಂಭೀರ್ಯವನ್ನು ತಿಳಿದೀತೇನು? ೪೧. ಜಗದೇವ, ಸಂಸಾರವೆಂಬ ಮದೋನ್ಮತ್ತ ಆನೆಗೆ ಸಿಂಹ ಪ್ರಾಯನಾದ ಸರ್ಪಧರನಾದ ಪರಮೇಶ್ವರನ ಶರಣರುಗಳ ಪಾದಕಮಲಗಳ ಶ್ಲಾಘ್ಯವಾದ ಸೇವೆಯ ಸುಖವನ್ನು ನಿನ್ನ ಹೃದಯವು (ಆತ್ಮವು) ತಿಳಿದೀತೇ ? ೪೨-೪೪. ಚಿಂತಾರತ್ನವೇ ಕಯ್ಯಲ್ಲಿರುವಾಗ ಅದನ್ನು ಬಿಸಾಡಿ ಹೀನವಾದ ಗಾಜಿಗೆ ಅಪೇಕ್ಷಿಪಡುವವನಂತೆ, ಕಲ್ಪವೃಕ್ಷವೇ ಹಿತ್ತಿಲಲ್ಲಿರಲು ಅದನ್ನು (ಹೋಗಿ) ಬೇಡದೆ ಬೂರುಗದ ಮರವನ್ನು ಕುರಿತು ಬೇಡುವವನ ಹಾಗೆ, ಕಾಮಧೇನುವೇ ತನ್ನ ಮನೆಯ ಅಂಗಳದಲ್ಲಿರುವಾಗ ಅದನ್ನು ಬಿಟ್ಟು ಕತ್ತೆಯ ಹಾಲನ್ನು ಹೆಚ್ಚಾಗಿ ಕರೆದು ಕುಡಿಯಲು ಆದರ ತೋರಿಸುವವನಂತೆ, ನಿಧಿಯೇ ಮುಂದಿರುವಾಗ ಅದನ್ನು ಬಿಟ್ಟು ನೀರಿನಿಂದ ಮಳಲ ಗುಡ್ಡೆಯನ್ನು ಜಾಲಿಸಿ ತೊಳೆಯುವ ಹಾಗೆ (ಮಳಲಗುಡ್ಡೆಯನ್ನು ಜಾಲಿಸಿ ಅದರಲ್ಲಿನ ಬಂಗಾರದಕಣಗಳನ್ನು ಸಂಗ್ರಹಿಸಲು ಅಪೇಕ್ಷೆಪಡುವವನ ಹಾಗೆ), ಅಧಿಕವಾಗಿ ಅಮೃತ ರಸವೇ ಬಟ್ಟಲಲ್ಲಿ ತುಂಬಿರುವಾಗ ಅದನ್ನು ಪ್ರೀತಿಯಿಂದ ಕುಡಿಯದೆ, ಗಂಜಿಯನ್ನು ಕುಡಿಯಲು ಬಯಸುವವನಂತೆ, ಸಂತೋಷವನ್ನುಂಟುಮಾಡುವ ಪರಿಮಳ ಭರಿತವಾದ ಕಮಲವನ್ನು ಹೊಂದಿಯೂ ಅದನ್ನು ಬಿಟ್ಟು ಗೋರಂಟಿಯ (ಸುಗಂಧವಿಲ್ಲದ) ಹೂವಿಗೆ ಇಚ್ಛೆಪಡುವವನಂತೆ, ಖಂಡಸಕ್ಕರೆಯೋ (ಕಲ್ಲುಸಕ್ಕರೆಯೋ) ಕಯ್ಯಿಗೆ ಬಂದಿರುವಾಗ ಅದನ್ನು ತಿನ್ನದಹಾಗೆ ಬದಿಗೆಸರಿಸಿ ಬೇವನ್ನು ತಿನ್ನುವಹಾಗೆ, ಭೂಮಿಯಲ್ಲಿ ಪರಿಶುದ್ಧವಾದ ಶುಭವನ್ನುಂಟುಮಾಡುವ ಪರಮೇಶ್ವರ ಭಕ್ತಿಮಾರ್ಗವಿರುತ್ತಿರಲು,

ನಮನೊಲ್ದಿಸಗಿದೆ ಕೇಳೆಲೆ
ಕುಮತಿಕುಲೋತ್ತಂಸ ನಿನ್ನನೇನೆಂದಪ್ಪುದೋ ೪೪

ಭವಸಾಗರಮಂ ದಾಂಟಿಪ
ಶಿವಭಕ್ತಿಯೆನಿಪ್ಪ ತೆಪ್ಪಮಂ ಸಾರದೆ ದು
ರ್ಭವಿಭಜನಮೆಂಬ ತುಂಬಿನ
ನವಫಲದೊಡೆದೊಡಕನೇಕೆ ಪಿಡಿದೆ ಮದಾಂಧಾ ೪೫

ಅಂಗುಳಮರ್ದಾವರೆಯ ಜೇ
ನಂಗಳದ ನಿಧಾನಮಾದ ಶಿವಭಕ್ತಿಯ ನೀಂ
ಪಿಂಗಿ ಭವಿವೃತ್ತಿದಾಳ್ದಿ ಕ
ಡಂಗುತೆ ನಿನ್ನನ್ನನನ್ಯನಾವನೊ ಗಾಂಪಂ ೪೬

ಜಲದೊಳ್ನಾಂದೆ ಶಿಲಾಚಯಕ್ಕೆ ಮೃದುಭಾವಂ ಬರ್ಪುದೇ ನೀರ್ಗಳಿಂ
ತೊಳೆಯುತ್ತುಂ ಪಿಳಿದೆತ್ತಿ ಕಂಬಳಿ ಬೆಳರ್ಪಂ ತಾಳ್ವುದೇ ಪಾಲನು
ಜ್ವಳಸರ್ಪಂಗೆಱೆದೋವೆ ನಿರ್ವಿಷತೆಯಂ ಕೆಯ್ಕೊಳ್ವುದೇ ಕಟ್ಟಿ ನೇ
ರ್ಪಳವಟ್ಟೊಪ್ಪಿರೆ ನೀವೆ ಜಾಯಿಲನ ಬಾಲಂ ನೇರಿತೇನಪ್ಪುದೇ ೪೭

ನಿಂಬಮಿನಿದಪ್ಪುದೇ ಮಧು
ವಿಂ ಬೆರಸುತೆ ಪಾಲನೆಱೆಯೆ ಮೂಢಂಗೆನಿತುಂ

ಅದನ್ನು ತಿರಸ್ಕರಿಸಿ, ಭವಿಗಳಿಗೆ ಉಚಿತವಾದ ಕರ್ಮದ ವಿಧಾನವನ್ನು ಸಂತೋಷದಿಂದ ಮಾಡಿದೆ. ಎಲೈ ದುಷ್ಟಬುದ್ಧಿಯುಳ್ಳವರಲ್ಲಿ ಶ್ರೇಷ್ಠನಾದ ಜಗದೇವನೇ, ಕೇಳು: ನಿನ್ನನ್ನು ಏನೆನ್ನಬೇಕೋ ? (ತಿಳಿಯದು) ೪೫. ಎಲೈ ಮದಾಂಧನಾದ ಜಗದೇವನೇ, ಜನನ ಮರಣಾತ್ಮಕವಾದ ಈ ಸಂಸಾರವೆಂಬ ಸಾಗರವನ್ನು ದಾಟಿಸುವ ಶಿವಭಕ್ತಿಯೆಂಬ ತೆಪ್ಪವನ್ನು ಆಶ್ರಯಿಸದೆ, ದುಷ್ಟರಾದ ಭವಿಜನರ ಭಜನವೆಂಬ (ಸೇವನೆಯೆಂಬ) ಈಸು ಗುಂಬಳಕಾಯಿಯ (ಸೋರೆಕಾಯಿಯ) ಒಡೆದ ಒಡಕನ್ನು ಏಕೆ ಹಿಡಿದಿದ್ದೀಯ? ೪೬. ಗಂಟಲಿನಲ್ಲಿಯೇ ಇರುವ ಅಮೃತದ, ಪಕ್ಕದಲ್ಲಿಯೇ ಇರುವ ಜೇನುತುಪ್ಪದ, ಅಂಗಳ ದಲ್ಲಿಯೇ ಇರುವ ಹೂಳಿಟ್ಟಧನವಾದ ಶಿವಭಕ್ತಿಯನ್ನು ನೀನು ದೂರೀಕರಿಸಿ, ಭವಿ ಜನರಿಗೆ ಉಚಿತವಾದ ವೃತ್ತಿಯನ್ನು ಉತ್ಸಾಹಗೊಂಡು ಸ್ವೀಕರಿಸಿದೆ. ನಿನ್ನಂಥ ಬೇರೆ ಮೂರ್ಖನು ಇನ್ನಾವನೋ ? ೪೭. ನೀರಿನಲ್ಲಿ ಕಲ್ಲುಗಳ ಸಮೂಹವನ್ನು ನಾದಿದರೆ (ಮಿದಿದರೆ) ಮಾರ್ದವತ್ವ (ಮೃದುತ್ವ) ವುಂಟಾದೀತೇ ? ಕಂಬಳಿಯನ್ನು (ಕಪ್ಪಾದ ಕಂಬಳಿಯನ್ನು) ನೀರುಗಳಿಂದ ತೊಳೆಯುತ್ತ ಹಿಂಡಿ ಮೇಲಕ್ಕೆತ್ತಿದರೆ ಬಿಳಿತನವನ್ನು ಹೊಂದೀತೆ ? ಹಾಲನ್ನು ಭಯಂಕರ ಸರ್ಪಕ್ಕೆ ಎರೆದು ಸಂರಕ್ಷಿಸಿದರೆ, ವಿಷವಿಲ್ಲದಿರು ವಿಕೆಯನ್ನು ಪಡೆಯುವುದೇ ? ನೆಟ್ಟಗಾಗುವಂತೆ ನಾಯಿಯಬಾಲವನ್ನು ಕಟ್ಟಿ ನೀವಿದರೆ ಆ ಬಾಲವು ನೆಟ್ಟಗಾಗುವುದೇನು ? -೪೮. ಲೋಕದಲ್ಲಿ ಬೇವಿನ ಮರಕ್ಕೆ ಜೇನು ತುಪ್ಪದಲ್ಲಿ ಹಾಲನ್ನು ಬೆರಸಿ (ಬುಡಕ್ಕೆ) ಎರೆದರೆ ಸವಿ (ರುಚಿ)ಯಾದೀತೇ ? ಏಕಪ್ರಕಾರ

ಬೆಂಬಿಡದೆ ಬೋಧಿಸಿದೊಡಂ
ತ್ರ್ಯಂಬಕಪದಭಕ್ತಿಸೌಖ್ಯಮಾಂಪನೆ ಧರೆಯೊಳ್ ೪೮

ಭವನದ ಮುಂಗಡೆಯೊಪ್ಪುವ
ಕವಿಲೆಯನುೞಿದಧಮ ಶುನಕನಂ ಪೂಜಿಪವೋ
ಲ್ತ್ರಿಪನನುೞಿದಧಮ ದೈವಮ
ನವಿವೇಕದಿನರ್ಚಿಪಾತನೇಂ ಜಡಮತಿಯೋ ೪೯

ಹರನಂ ಪೂಜಿಸದುೞಿದ
ಧ್ವರಮಂ ಖಲದಕ್ಷನೆಸಗಿ ಪರದೇವತೆಯಂ
ಪಿರಿದರ್ಚಿಸಿ ದುರ್ಮತಿ ನಿಜ
ಶಿರಮಂ ಪೋಗಾಡಿ ನಗಿಸಿಕೊಂಡಂ ಧರೆಯೊಳ್ ೫೦

ಭೂತಳದೊಳಂದು ಭೂಸುರ
ಜಾತಮನರ್ಚಿಸಿದ ಗೌತಮಂ ಗೋಹತ್ಯಾ
ಪಾತಕಕೊಳಗಾದಂ ಗಡ
ಮಾತೇಂ ದ್ವಿಜಭಜನಮೊಳ್ಪನೇಂ ಸಾರ್ಚುಗುಮೋ ೫೧

ತರುಣಿಗೆ ಕಿಡುವುದು ಗಡ ಪಾ
ದರದಿಂ ಚಿರಕಾಲರಚಿತಪತಿಭಕ್ತಿ ಮಹೇ
ಶ್ವರಭಕ್ತಿಯುೞಿಗುಮನ್ಯಾ
ಮರಭಜನದಿನೀಶಭಕ್ತನಾದಂಗಿಳೆಯೊಳ್ ೫೨

ವಾಗಿ (ಬೆನ್ನುಹತ್ತಿ) ಮೂರ್ಖನಾದವನಿಗೆ ಎಷ್ಟೇ ಬೋಧಿಸಿದರೂ ಪರಮೇಶ್ವರನ ಪಾದಭಕ್ತಿಯ ಸೌಖ್ಯವನ್ನು ಹೊಂದುತ್ತಾನೆಯೇ ? ೪೯. ಮನೆಯ ಮುಂಭಾಗದಲ್ಲಿಯೇ ಇರುವ ಹಸುವನ್ನು ಬಿಟ್ಟು ಕೀಳು ನಾಯಿಯನ್ನು ಪೂಜೆಮಾಡುವಹಾಗೆ ಶಿವನನ್ನು ಬಿಟ್ಟು ಅಧಮ ದೇವತೆಯನ್ನು ಅವಿವೇಕದಿಂದ ಪೂಜಿಸುವವನು ಎಂಥ ಮೂರ್ಖನೋ! ೫೦. ದುಷ್ಟಬುದ್ಧಿಯ ನೀಚನಾದ ದಕ್ಷನು ಹರನನ್ನು ಪೂಜಿಸದೆ, ಉಳಿದ ಬೇರೆದೇವತೆಯನ್ನು ಯಜ್ಞಮುಖದಲ್ಲಿ ಘನವಾಗಿ ಪೂಜಿಸಿ, ತನ್ನ ಶಿರವನ್ನು ಕಳೆದು ಕೊಂಡು ಲೋಕದಲ್ಲಿ ನಗೆಗೀಡಾದನು. ೫೧. ಭೂಮಂಡಲದಲ್ಲಿ ಹಿಂದೆ (ದ್ವಾದಶವಾರ್ಷಿಕ ಬರಬಿದ್ದಾಗ ಮರೆಹೊಕ್ಕವರಿಗೆ ಉಪಕಾರ ಮಾಡುವ ಬುದ್ಧಿಯಿಂದ) ಬ್ರಾಹ್ಮಣರ ಸಮೂಹವನ್ನು ಅರ್ಚನೆಮಾಡಿ, ಗೌತಮ ಮಹರ್ಷಿಯು (ಆ ಬ್ರಾಹ್ಮಣರುಗಳೇ ಸೃಷ್ಟಿಸಿದ ಒಂದು) ಗೋವಿನ ಹತ್ಯೆಯನ್ನು ಮಾಡಿದ ಪಾಪಕ್ಕೆ ಒಳಗಾದವನಲ್ಲವೇ ! ಹೆಚ್ಚಿಗೆ ಮಾತಿನಿಂದೇನು (ಪ್ರಯೋಜನ) ? ದ್ವಿಜರನ್ನು ಸೇವಿಸಿದವನು ಒಳಿತನ್ನು ಹೊಂದುವನೇನು ? ೫೨. ಹಾದರ ಮಾಡುವುದರಿಂದ ಅನಂತಕಾಲ ಪತಿಭಕ್ತಿಯನ್ನಾಚರಿಸಿದ ಸ್ತ್ರೀಯೂ ಕೆಡುವುದಿಲ್ಲವೇ ! (ಹಾಗೆಯೇ) ಲೋಕದಲ್ಲಿ ಈಶ್ವರ ಭಕ್ತನಾದವನು ಅನ್ಯ ದೇವತೆಗಳ ಭಕ್ತಿಯನ್ನು ಆಚರಿಸುವುದರಿಂದ ಅವನ ಆ ಮಹೇಶ್ವರ ಭಕ್ತಿಯು ನಾಶ

ಪರದೈವ ಭಜನದಿಂ ಭ
ಕ್ತಿರಸಂ ಬಱಿದಪ್ಪುದೊಡೆದ ಕುಂಭದ ಜಲದಂ
ತಿರೆ ಶೀಲಂ ತುಹಿನಂ ಪೊ
ಯ್ದರವಿಂದದವೋಲ್ವಿನಷ್ಟಮಪ್ಪುದು ನಿಜದಿಂ ೫೩

ಹರಭಕ್ತಂಗೊರ್ವಂಗಾ
ದರದಿಂದುಣಲಿತ್ತಸುಕೃತಕೆಣೆಯಲ್ತು ಮಹೀ
ಸುರಕೋಟಿಗುಣಲ್ಬಡಿಸುತೆ
ನೆರಪಿದ ಸುಕೃತಂ ದಲೆಂಬುದಾಗಮವಚನಂ ೫೪

ಸುವಿವೇಕ ಚಂದ್ರಜಲಧರ
ಮವಿವೇಕ ಮಹೀಜಬೀಜಮಘಘೂಕಸಮು
ತ್ಸವಕರ ತಿಮಿರಂ ಭವ ಘೋ
ರ ವಿಷೋರಗದಂತಮಲ್ತೆ ಭವಿಸಂಸರ್ಗಂ ೫೫

ವ॥ ಎಂದಿಂತು ಭಕ್ತಿರತ್ನಾಕರು ನುಡಿದಾಕ್ಷೇಪೋಕ್ತಿಗೇಳ್ದು ಜಗದೇವಂ ಬೆರ್ಚಿ ಬೆಗಡು ಗೊಂಡು ನಿಜಾಪರಾಧಮಂ ನೆನೆದು ಬೆಮರ್ತು ಕಂಪಿಸಿ ಶೋಕಾಕುಲೀಕೃತಚಿತ್ತನಾಗಿ ಸಾಷ್ಟಾಂಗಮೆಱಗಿ ಗಣಸಭೆಗೆ ಕೆಯ್ಗಳಂ ಮುಗಿದು ನಿಂದು—

ವಾಗುವುದು. ೫೩. ಒಡೆದ ಕುಂಭದಲ್ಲಿನ ನೀರಿನಂತೆ ಅನ್ಯದೈವವನ್ನು ಭಜಿಸುವಿಕೆ ಯಿಂದ ಈಶ್ವರನ ಭಕ್ತಿರಸವೆಂಬುದು ಬರಿದಾಗಿ ಹೋಗುವುದು. ಅವನ ಶೀಲವು ಹಿಮದಿಂದ ಮುಸುಕಲ್ಪಟ್ಟ ಕಮಲದ ಹಾಗೆ ನಿಜವಾಗಿಯೂ ನಷ್ಟಹೊಂದುವುದು, ೫೪. ಆಗಮ ವಚನವು ಕೋಟಿಜನ ದ್ವಿಜರಿಗೆ ಊಟಕ್ಕಿಟ್ಟು ಸಂಪಾದಿಸಿದ ಪುಣ್ಯವು ನಿಜ ವಾಗಿಯೂ ಓರ್ವ ಶಿವಭಕ್ತನಿಗೆ ಪ್ರೀತಿಯಿಂದ ಊಟಕ್ಕೆ ಇಕ್ಕಿದ ಪುಣ್ಯಕ್ಕೆ ಸಮನಲ್ಲ ವೆನ್ನುವುದು. ೫೫. ಭವಿಗಳ ಸಂಪರ್ಕವು (ಲಿಂಗವಿಹೀನರ ಸಂಪರ್ಕವು) ಒಳ್ಳೆಯ ವಿವೇಕವೆಂಬ ಚಂದ್ರನಿಗೆ ಮೋಡದಹಾಗೆ ; ಅವಿವೇಕವೆಂಬ ಗಿಡಕ್ಕೆ ಬೀಜವಿದ್ದ ಹಾಗೆ ; ಪಾಪವೆಂಬ ಗೂಗೆಗೆ (ಗೂಬೆಗೆ) ಸಂತೋಷವನ್ನುಂಟುಮಾಡುವ ಕತ್ತಲೆಯಂತೆ ; ಸಂಸಾರವೆಂಬ (ಜನನ ಮರಣಾತ್ಮಕವಾದ ಸಂಸಾರವೆಂಬ) ಭಯಂಕರ ವಿಷದಿಂದ ಕೂಡಿದ ಸರ್ಪದ ಹಲ್ಲು ಇದ್ದಹಾಗೆ. ವ॥ ಹೀಗೆಂದು ಭಕ್ತಿಗೆ ಸಮುದ್ರದೋಪಾದಿ ಯಲ್ಲಿರುವ ಬಸವೇಶ್ವರನು ನುಡಿದ ಆಕ್ಷೇಪವನ್ನುಂಟುಮಾಡುವ ಮಾತನ್ನು ಕೇಳಿ ಜಗದೇವನು ಬೆಚ್ಚಿಬಿದ್ದು, ಗಾಬರಿಗೊಂಡು ತಾನುಮಾಡಿದ ಅಪರಾಧವನ್ನು ಚಿಂತಿ ಸುತ್ತ ಮೈಬೆವರಿ, ನಡುಗುತ್ತ ದುಃಖದಿಂದ ಆಕುಲಗೊಂಡ ಚಿತ್ತವುಳ್ಳವನಾಗಿ (ಬಸವೇಶ್ವರನಿಗೆ) ಸಾಷ್ಟಾಂಗ ಪೂರ್ವಕ ನಮಸ್ಕಾರಮಾಡಿ, ಶಿವಗಣಗಳ ಸಭೆಗೆ ಕೈ

ಅತಿಪಾಪಾತುರನಂ ವಿನಷ್ಟಮತಿಯಂ ದುಷ್ಟಾತ್ಮನಂ ಧೂರ್ತಸಂ
ಗತನಂ ದುರ್ಮುಖನಂ ದುರುಕ್ತಿಪರನಂ ದುರ್ಭಾಗ್ಯನಂ ಸದ್ವ್ರತ
ಚ್ಯುತನಂ ಸತ್ಯವಿಹೀನನಂ ಖಲನನಾತ್ಮದ್ರೋಹಿಯಂ ದುರ್ಗುಣಾ
ನ್ವಿತನಂ ನಿತ್ಯ ಕೃತಾಪರಾಧಶತನಂ ನಿರ್ಲಜ್ಜನಂ ನೀಚನಂ ೫೬

ಶಿವಭಕ್ತಿದೂರನಂ ಶಾಂ
ಭವಮಹಿಮೆಯನರಿಯದಜ್ಞನಂ ತಾಮಸನಂ
ಭವಪಂಕಮಗ್ನಪಶುವಂ
ತವೆ ರಕ್ಷಿಪುದೆನ್ನನೆಲೆ ಕೃಪಾರಸಜಲಧೀ ೫೭

ವ॥ ಎಂದತಿ ದೈನ್ಯಂ ಮಿಗೆ ಬಿನ್ನೈಸಿ ಮತ್ಕೃತಾಪರಾಧೋಚಿತಪ್ರಾಯಶ್ಚಿತ್ತವೊಂದಂ ದಯೆಯಿಂ ನಿರೂಪಿಸಲ್ವೇಳ್ಕುಮೆನೆ ಶರಣಗಣಾಜ್ಞೆಯಿಂ ಶಿವಜ್ಞಾನಧುರೀಣನಿಂತೆಂದಂ—

ಜಗದೇವ ಕೇಳ್ವುದೆಸೆವೀ
ನಗರದೊಳೊಗೆವುದು ವಲಂ ಶಿವದ್ರೋಹಮದಂ
ನೆಗಳ್ದನನಂತಕಪುರಮಂ
ಪುಗಿಸೆಲೆ ನೀಂ ನೆಗಳ್ದ ದೋಷಕಿದು ಪರಿಹಾರಂ ೫೮

ಮುಗಿದು ನಿಂತುಕೊಂಡು—೫೬-೫೭. ಅತ್ಯಂತ ಪಾಪದಿಂದ ಆತುರಗೊಂಡವನೂ, ಹಾಳಾದಬುದ್ಧಿಯುಳ್ಳವನೂ, ದುಷ್ಟಆತ್ಮವುಳ್ಳವನೂ, ನೀಚರಾದವರ ಸಂಗವನ್ನು ಮಾಡಿದವನೂ, ಕೆಟ್ಟಮುಖವುಳ್ಳವನೂ, ದುರ್ಭಾಷೆಯಿಂದಕೂಡಿದವನೂ, ಕೆಟ್ಟಭಾಗ್ಯ ವುಳ್ಳವನೂ, ಶ್ರೇಷ್ಠವಾದ ಶಿವವ್ರತದಿಂದ ದೂರನಾದವನೂ, ಸತ್ಯದಿಂದ ದೂರನಾದ ವನೂ, (ಜಾರಿದವನೂ), ದುಷ್ಟನೂ, ಆತ್ಮ ದ್ರೋಹಮಾಡಿಕೊಂಡವನೂ, ದುರ್ಗುಣ ಗಳಿಂದ ಕೂಡಿದವನೂ, ನಿತ್ಯವೂ ನೂರಾರು ಅಪರಾಧಗಳನ್ನು ಮಾಡುವವನೂ, ನಾಚಿಕೆಯಿಲ್ಲದವನೂ, ನೀಚಬುದ್ಧಿಯವನೂ, ಶಿವಭಕ್ತಿಯಿಂದ ದೂರವಾದವನೂ, ಶಿವನ ಸಂಬಂಧವಾದ ಮಹಿಮೆಯನ್ನು ತಿಳಿಯದ ಅಜ್ಞಾನಿಯೂ ತಮೋಗುಣವುಳ್ಳ ವನೂ, ಸಂಸಾರವೆಂಬ ಕೆಸರಿನಲ್ಲಿ ಮುಳುಗಿದ ಪಶುವೂ ಆಗಿರುವ ನನ್ನನ್ನು ಎಲೈ ಕೃಪಾನಿಧಿಯಾದ ಬಸವೇಶ್ವರನೇ ನನ್ನನ್ನು ಚೆನ್ನಾಗಿ ರಕ್ಷಣೆ ಮಾಡು. ॥ವ॥ ಎಂದು ಅತ್ಯಂತ ದೀನಭಾವದಿಂದ ವಿಶೇಷವಾಗಿ ಪ್ರಾರ್ಥಿಸಿಕೊಂಡು ನಾನು ಮಾಡಿದ ತಪ್ಪಿಗೆ ಸಮಾನವಾದ ಒಂದು ಪ್ರಾಯಶ್ಚಿತ್ತವನ್ನು ಕೃಪೆಯಿಟ್ಟು ಅಪ್ಪಣೆಕೊಡಿಸಬೇಕೆಂದು ಎನ್ನಲು ಶಿವಶರಣರುಗಳ ಆಜ್ಞೆಯನ್ನನುಸರಿಸಿ ಶಿವಜ್ಞಾನ ಧುರೀಣನಾದ ಬಸವೇಶ್ವರನು ಈ ಪ್ರಕಾರವಾಗಿ ಹೇಳಿದನು. ೫೮. ಜಗದೇವನೇ ಕೇಳುವುದು : ಶೋಭಿಸುವ ಈ ಕಲ್ಯಾಣನಗರದಲ್ಲಿ ಒಂದು ಶಿವದ್ರೋಹದ ಪ್ರಸಂಗವು ನಿಶ್ಚಯವಾಗಿ ಉಂಟಾಗುವುದು ; ಅದನ್ನು ಮಾಡಿದವನನ್ನುನೀನು ಯಮನ ಪಟ್ಟಣಕ್ಕೆ

ವ॥ ಎನೆ ದೇವ ಮಹಾಪ್ರಸಾದಮಂತೆ ಮಾಳ್ಪೆನೆಂದೆಱಗಿ ತದ್ದತ್ತ ವೀರ ತಾಂಬೂಲಮಂ ಕೊಂಡು ವಿಜಯೋದ್ಧತಂ ಬಸವಪ್ರಮುಖ ಶಿವಗಣಂಗಳ್ಗೆ ದಯೆ ಪುಟ್ಟುವಂತೆ ದಾಸ ಭಾವಂದೋಱಿ ಮಗುಳ್ದು ಮೆಯ್ಯಿಕ್ಕಿ ನಿಜಗೃಹಕ್ಕೆ ಬಿಜಯಂಗೆಯ್ಸಿ ತಂದು ಸಾದರಂ ಮಿಗೆ ಪಾದಪ್ರಕ್ಷಾಳನಂಗೆಯ್ದು ಪಾದೋದಕಂಡಳೆದು ಸಾಂಗಮೆನೆ ತತ್ಪೂಜೆಯು ನೋಜೆಯಿಂ ವಿರಚಿಸಿದಾಗಳ್—

ಫಣಿರಾಡ್ಭೂಷಣನ ಮಹಾ
ಗಣತತಿ ಜಗದೇವರಚಿತ ಪೂಜೋತ್ಸವದಿಂ
ತಣಿವೇಱಿ ಶಿವನ ಸುಖಸಂ
ದಣಿವಡೆದೊಪ್ಪಿರ್ದುದತುಳ ಸಂಭ್ರಮದಿಂದಂ ೫೯

ವ॥ ಆ ಪ್ರಸ್ತಾವದೊಳ್—

ಶರಣಾನಂದಾಬ್ಧಿಚಂದ್ರಂ ಶಿವಗಣಚರಣಾಂಭೋಜ ಪೂಜಾವಿತಂದ್ರಂ
ಕರುಣಾಪೂರ್ಣಾಂತರಂಗಂ ಕಲಿತನಿಜಶಿವಾದ್ವೈತ ವಿದ್ಯಾಪ್ರಸಂಗಂ
ಪರಮಾರ್ಥಜ್ಞಾನದೀಪಂ ಪ್ರಬಳಜಗದುಪಾರೂಢ ಮಾಯಾವಿಲೋಪಂ
ಗುರುರೂಪಂ ರಂಜಿಸಿರ್ದಂ ಗುಣನಿಧಿವಿತತಾನಂದಸಾಂದ್ರಂ ವೃಷೇಂದ್ರಂ ೬೦

ಹೊಗಿಸು. ನೀನುಮಾಡಿದ ದೋಷಕ್ಕೆ ಇದೇ ಪರಿಹಾರ ವ॥ ಎಂದು ಹೇಳಲಾಗಿ ದೇವಾ, ಮಹಾಪ್ರಸಾದ ಹಾಗೇ ಮಾಡುತ್ತೇನೆ ಎಂದು ನಮಸ್ಕಾರಮಾಡಿ, ಆ ಬಸವೇಶ್ವರನಿಂದ ಕೊಡಲ್ಪಟ್ಟ ವೀರ ತಾಂಬೂಲವನ್ನು ಸ್ವೀಕರಿಸಿ, (ಈಗಾಗಲೇ) ವಿಜಯದಿಂದ ಕೊಬ್ಬಿದವನಂತಾಗಿ ಬಸವಣ್ಣನೇ ಮೊದಲಾದ ಶಿವಗಣದವರಿಗೆ ದಯೆಯು ಹುಟ್ಟುವ ರೀತಿಯಲ್ಲಿ ಸೇವಕತನದ ಮನೋಭಾವವನ್ನು ವ್ಯಕ್ತಪಡಿಸಿ, ಮತ್ತೊಮ್ಮೆ ನಮಸ್ಕರಿಸಿ, ತನ್ನ ಮನೆಗೆ ಬರುವಂತೆಮಾಡಿ ಬಂದು ಅತ್ಯಂತ ಸಂತೋಷ ದಿಂದ ಅವರ ಪಾದಗಳನ್ನು ತೊಳೆದು ಯಥಾಸಾಂಗವಾಗಿ ಅವರ ಪೂಜೆಯನ್ನು ಕ್ರಮವಾಗಿ ಮಾಡಿದನು.—ಆಗ ೫೯. ಆದಿಶೇಷನೇ ಆಭರಣವಾಗಿ ಉಳ್ಳ ಪರಮೇಶ್ವರನ ಮಹಾಶರಣ ಸಮೂಹವು ಜಗದೇವನು ಮಾಡಿದ ಪೂಜೋತ್ಸವಾದಿ ಗಳಿಂದ ಸಂತೃಪ್ತರಾಗಿ ಶಿವಸಂಬಂಧವಾದ ಸೌಖ್ಯಸಮೂಹವನ್ನು ಪಡೆದು, ಅತ್ಯಂತ ಸಂಭ್ರಮದಿಂದ ಶೋಭಿಸುತ್ತಿತ್ತು. ವ॥ ಆ ಸಮಯದಲ್ಲಿ—೬೦. ಶಿವಶರಣರ ಆನಂದವೆಂಬ ಸಮುದ್ರಕ್ಕೆ ಚಂದ್ರನಂತಿರುವ, ಶಿವಶರಣಸಮೂಹದ ಚರಣಕಮಲಗಳ ಪೂಜೆಯಲ್ಲಿ ಆಲಸ್ಯರಹಿತನಾದ, ಕಾರುಣ್ಯದಿಂದ ಪೂರ್ಣಗೊಂಡ ಹೃದಯವುಳ್ಳ, ಸತ್ಯಶುದ್ಧವಾದ ಶಿವಾದ್ವೈತ ತತ್ತ್ವ ವಿದ್ಯಾಪ್ರಸಂಗದಿಂದ ಕೂಡಿದ, ಪಾರಮಾರ್ಥಿಕ ಜ್ಞಾನಕ್ಕೆ ದೀಪದಂತಿರುವ, ಜಗತ್ತನ್ನೆಲ್ಲ ಆವರಿಸಿರುವ ಪ್ರಬಲವಾದ ಮಾಯೆಯನ್ನು

ವಿದ್ಯಾರೂಪೇ ವಿಧಿವಿಧುವಧೂವಂದ್ಯಮಾನಾಂಘ್ರಿಪದ್ಮೇ
ವಿದ್ಯುದ್ವಲ್ಲೀಪ್ರತಿಭಟಕಟಾಕ್ಷಚ್ಛಟಾಭಾಸಮಾನೇ
ಹೃದ್ಯಾಮರ್ತ್ಯಸ್ತುತಗುಣಗಣೇ ವಿಶ್ವಲೋಕೈಕಮಾತೇ
ಸದ್ಯೋಗೀಂದ್ರಪ್ರಕರವರದೇ ಪಾಲಿಸೆನ್ನಂ ಭವಾನೀ ೬೧

ಇದು ವಿನಮದಖಿಳ ಸುರಾಸುರೇಂದ್ರಮಕುಟತಟಘಟಿತ ಮಣಿಗಣಾಗಣಿತ ರುಚಿನಿಚಯ
ತರುಣಾರುಣಾತಪಪರಿಲಸಿತ ಪರಮ ಶಿವಲಿಂಗ ಪಾದಾರವಿಂದಪರಾಗಭಸಿತ
ಭಾಸುರಲಲಾಟಪಟ್ಟಸರಸಜನಮಾನಿತೋಭಯಕವಿತಾವಿಶಾರದ
ಶ್ರೀಷಡಕ್ಷರಿದೇವಭಕ್ತಿವಿರಚಿತ
ಶ್ರೀಮದ್ ಬಸವರಾಜವಿಜಯಮಹಾಪುರಾಣದೊಳ್ ಬಸವೋಪದೇಶ ಕಥನಂ
ಏಕಚತ್ವಾರಿಂಶಾಶ್ವಾಸಂ ಸಮಾಪ್ತಂ.
ಅಂತು ಆಶ್ವಾಸ ೪೧ಕ್ಕೆ ಪದಗಣನೆ ೩೪೧೨ಕ್ಕೆ ಮಂಗಳಮಹಾ ಶ್ರೀ॥

ಇಲ್ಲದಂತೆ ಮಾಡಿದ, ಗುರುಸ್ವರೂಪನಾದ, ಸದ್ಗುಣಗಳಿಗೆ ನಿಧಿಯೆನಿಸಿದ, ವಿಸ್ತಾರವಾದ ಆನಂದದಿಂದ ತುಂಬಿದ ಬಸವೇಶ್ವರನು ಶೋಭಿಸುತ್ತಿದ್ದನು. ೬೧. ವಿದ್ಯಾಸ್ವರೂಪಳೇ, ಚತುರ್ದಶವಿದ್ಯೆಗಳಿಗೆ ಆಸ್ಪದಳೆನಿಸಿದವಳೇ, ಬ್ರಹ್ಮವಿಷ್ಣುಗಳ ಹೆಂಡತಿಯರುಗಳಿಂದ ನಮಸ್ಕರಿಸಿಕೊಳ್ಳಲ್ಪಡುವ ಪಾದಕಮಲವುಳ್ಳವಳೇ, ಮಿಂಚಿನಬಳ್ಳಿಯನ್ನು ಪ್ರತಿಭಟಿಸುವಂತಹ ಕಡೆಗಣ್ಣುಗಳ ಕಾಂತಿಗಳ ಸಮೂಹದಿಂದ ಪ್ರಕಾಶಿಸುವವಳೇ, ಮನೋಹರರಾದ ದೇವತೆಗಳಿಂದ ಸ್ತುತಿಸಿಕೊಳ್ಳಲ್ಪಡುವ ಸದ್ಗುಣಸಮೂಹವುಳ್ಳವಳೇ, ಸಮಸ್ತ ಬ್ರಹ್ಮಾಂಡಕ್ಕೆ ಏಕೈಕ ಮಾತೆಯೆನಿಸಿದವಳೇ ಪವಿತ್ರರಾದ ಯೋಗಿಶ್ರೇಷ್ಠರಸಮೂಹಕ್ಕೆ ವರಗಳನ್ನು ದಯಪಾಲಿಸುವವಳೇ, ಭವಾನಿಯೇ ನನ್ನನ್ನು ರಕ್ಷಿಸು—

ನಾಲ್ವತ್ತೊಂದನೆಯ ಆಶ್ವಾಸವು ಸಮಾಪ್ತವಾಯಿತು

ದ್ವಾಚತ್ವಾರಿಂಶಾಶ್ವಾಸಂ

ಶ್ರೀಶಾಂಭವೀಶುಭಾಂಗನಿ
ವೇಶಿತವಾಮಾಂಗನಂಗಜಾಹಿತನುರಗಾ
ಧೀಶಧರನಮಳಗುಣನಿಧಿ
ಕೋಶಂ ಕುಡುಗೆಮಗೆ ಭಕ್ತಿಯಂ ಶಿವಲಿಂಗಂ ೧

ವ|| ನಿಜಾಂತಃಪುರದೊಳ್ ಶಿವಗಣಾನುಭವಗೋಷ್ಠಿಯೊಳ್ ನೆಲಸಿ ಮಹಿಮಾಕ[1]ರಂ ಸುಖಮಿರ್ಪನ್ನೆಗಮಾ ನಗರಿಯೊಳಲ್ಲಯ್ಯನುಂ ಮಧುವಯ್ಯನುಮೆನೆ ಪೆಸರ್ವಡೆದು—

ಗುರುಚರಲಿಂಗಾರಾಧಕ
ರುರುತರ ಶೀಲವ್ರತಾನ್ವಿತರ್ಜಿತಮಾಯ
ರ್ಪರಮಶಿವತತ್ತ್ವವಿದರೀ
ಶ್ವರಭಕ್ತವರೇಣ್ಯರೆಸೆವರಮಳಚರಿತ್ರರ್ ೨

ವ|| ಅಂತವರಿರ್ವರುಮನ್ಯೋನ್ಯಸಮಾರೂಢಸೌಹಾರ್ದದಿಂ ಕೆಲವಾನುಂ ದಿವಸಂ ಶಿವಭಕ್ತಿಸೌಖ್ಯದಿನೊಪ್ಪುತ್ತುಮಿರ್ಪಿನಮಲ್ಲಿ ತಚ್ಚರಿತ್ರವೈಭವಮಂ ಕಂಡಸೂಯೆಯಿಂ ಸೈರಿಸಲಾರದೆ ಪಿಸುಣ್ಗೆಡೆದ ಪರಸಮಯಿಗಳ ಕುಹಕೋಕ್ತಿಯಂ ಕೇಳ್ದು—

ಅಲ್ಲಯ್ಯ ಮಧುವಯ್ಯಗಳ ಕಥೆ

೧. ಮಂಗಳಕರಳಾದ ಪಾರ್ವತೀದೇವಿಗೆ ತನ್ನ ಶುಭಕರವಾದ ಎಡಗಡೆಯ ದೇಹದಲ್ಲಿ ಆಶ್ರಯವಿತ್ತವನೂ, ಪಾರ್ವತಿಗೆ ಹಿತವಾಗಿರುವವನೂ, ಸರ್ಪಗಳ ಒಡೆಯನಾದ ಆದಿಶೇಷನನ್ನು ಧರಿಸಿದವನೂ, ಪವಿತ್ರವಾದ ಗುಣಗಳ ಸಮೂಹಕ್ಕೆ ಕೇಶರೂಪನಾಗಿರುವವನೂ ಆದ ಶಿವಲಿಂಗನು ನಮಗೆ ಭಕ್ತಿಯನ್ನು ಕೊಡಲಿ. ವ|| ಮಹಿಮಾಕರನಾದ ಬಸವಣ್ಣನು ತನ್ನ ಅಂತಃಪುರದಲ್ಲಿ ಶಿವಶರಣರುಗಳೊಡನೆ ಶಿವಾನುಭವಗೋಷ್ಠಿಯಲ್ಲಿ ಸುಖದಿಂದ ಇರುತ್ತಿರುವಾಗ ಆ ಕಲ್ಯಾಣ ನಗರದಲ್ಲಿ ಅಲ್ಲಯ್ಯನೂ, ಮಧುವಯ್ಯನೂ ಎಂದು ಪ್ರಸಿದ್ಧರಾಗಿ—೨. ಗುರು-ಲಿಂಗ-ಜಂಗಮರ ಆರಾಧಕರೂ, ಶ್ರೇಷ್ಠವಾದ ಶೀಲ (ನಡತೆ) ವುಳ್ಳವರೂ, ಮಾಯೆಯನ್ನು ಜಯಿಸಿದವರೂ, ಪವಿತ್ರವಾದ ಶಿವತತ್ತ್ವವನ್ನು ಬಲ್ಲವರೂ, ಪರಮೇಶ್ವರನ ಭಕ್ತಶ್ರೇಷ್ಠರೂ ಆದ ಪರಿಶುದ್ಧ ಚರಿತೆಯುಳ್ಳವರು ಶೋಭಿಸುತ್ತಿದ್ದರು. ವ|| ಈ ಪ್ರಕಾರವಾಗಿ ಅವರೀರ್ವರೂ ಅನ್ಯೋನ್ಯತೆಯಿಂದ ಕೂಡಿದ ಸ್ನೇಹಭಾವದಿಂದ ಅನೇಕದಿವಸಗಳು ಶಿವನಸಂಬಂಧದ ಭಕ್ತಿಯ ಸುಖದಿಂದ ಶೋಭಿಸುತ್ತಿರುವಷ್ಟರಲ್ಲಿ ಅವರ ಚರಿತ್ರೆಯ ವೈಭವವನ್ನು ಕಂಡು ಮಾತ್ಸರ್ಯದಿಂದ ಸೈರಿಸಲಾರದವರಾಗಿ ಚಾಡಿಯನ್ನು ಹೇಳಿದ ಪರಸಮಯದವರ ಕಪಟ

1 ಕಾ(ಜ)

ತಿಳಿದಿರ್ದುಂ ವೃಷಭೇಂದ್ರನ
ಬಳವನ್ಮಹಿಮೆಯನಘಾಗ್ನಿಶೋಷಿತಸಂವಿ
ಜ್ಜಳ ಬಿಜ್ಜಳನಾ ಭಕ್ತರ
ವಿಳಸದ್ರುಚಿಲೋಚನಂಗಳಂ ತೆಗೆಯಿಸಿದಂ ೩

ವ॥ ಆಗಳಾ ವಾರ್ತೆಗೇಳ್ದು ಕನಲ್ದು ವೃಷಭೇಂದ್ರಾದಿ ಗಣಂಗಳೊಂದೆಡೆಯೊಳೊಂದುಗೂಡಿ ನಿಜಾನುಚರರಿಂ ತದ್ಭಕ್ತರಂ ಬರಿಸಿ ಯಥೋಚಿತ ಸನ್ಮಾನಂಗೆಯ್ದು—

ಪರಮಶಿವಗಣದನುಜ್ಞೆಯ
ನಿರದಾಂತು ನಿರೀಕ್ಷಿಸುತ್ತೆ ತದ್ಭಕ್ತರ್ಗಾ
ದರದಿಂ ಕಣ್ಗಳನಿತ್ತಂ
ಕರುಣಾನಿಧಿ ಬಸವನಸಮನನುಪಮಮಹಿಮಂ ೪

ವ॥ ಅಂತಿತ್ತು ಜಗನ್ನುತನೊಪ್ಪಿರೆ ತತ್ಪುರದ ಪೌರಜನಂ ಗುಜುಗುಜುಂಗೊಂಡಲ್ಲಲ್ಲಿ ನೆರೆದು—

ಯಮಪುರಿಗೆಯ್ದುವ ಸಮಯಂ
ಸಮನಿಸಿದುದಿವಂಗೆ ನೃಪತಿಗಲ್ಲದೊಡೀ ದ್ರೋ
ಹಮನಳ್ಕದೆ ಮಾಳ್ಪನೆ ಮುಳಿ
ಯೆ ಮಹೇಶ್ವರಭಕ್ತರುಳಿವರಾರ್ಧಾರಿ[1]ಣಿಯೊಳ್ ೫

ವಚನಗಳನ್ನು ಕೇಳಿ—೩. ಬಸವಣ್ಣನ ಬಲವತ್ತರವಾದ ಮಹಿಮೆಯನ್ನು ತಿಳಿದಿದ್ದರೂ ಕೂಡ, ಪಾಪವೆಂಬ ಬೆಂಕಿಯಿಂದ ತನ್ನ ತಿಳುವಳಿಕೆಯೆಂಬ ಜಲವನ್ನು ಶೋಷಣೆಗೊಳಿಸಿ ಕೊಂಡು (ಬತ್ತಿಸಿಕೊಂಡು), ಬಿಜ್ಜಳನು ಅಲ್ಲಯ್ಯಮಧುವಯ್ಯರೆಂಬ ಶಿವಭಕ್ತರುಗಳ ಪ್ರಕಾಶಮಾನವಾದ ಕಾಂತಿಯುಳ್ಳ ಕಣ್ಣುಗಳನ್ನು ತೆಗೆಸಿಹಾಕಿದನು. ವ॥ ಆಗ ಆ ವಾರ್ತೆಯನ್ನು ಕೇಳಿ, ಕೋಪಗೊಂಡು ಬಸವೇಶ್ವರನೇ ಮೊದಲಾದ ಶಿವಗಣಗಳು ಒಂದುಕಡೆಯಲ್ಲಿ ಒಟ್ಟುಗೂಡಿ, ತಮ್ಮ ಅನುಚರರುಗಳಿಂದ ಆ ಭಕ್ತರುಗಳನ್ನು ಬರ ಮಾಡಿಕೊಂಡು ಉಚಿತವಾದ ಸನ್ಮಾನವು ಹೇಗೋಹಾಗೆಮಾಡಿ ೪. ಕರುಣಾನಿಧಿಯೂ, ಅನುಪಮ ಮಹಿಮಾ ಶಾಲಿಯೂ ಆದ ಬಸವಣ್ಣನು ಪವಿತ್ರರಾದ ಶಿವಭಕ್ತಗಣದ ಆಜ್ಞೆಯನ್ನು ತಪ್ಪದೆ ಧರಿಸಿ ಆ ಭಕ್ತರುಗಳಿಗೆ ಸಂತೋಷದಿಂದ ಕಣ್ಣುಗಳನ್ನುಕೊಟ್ಟನು. ವ॥ ಈ ರೀತಿ ಕಣ್ಣುಗಳನ್ನು ಕೊಟ್ಟು ಜಗತ್ತಿನ ಜನರಿಂದ ಶ್ಲಾಘಿಸಲ್ಪಡುವ ಬಸವೇಶ್ವ ರನು ಶೋಭಿಸುತ್ತಿರಲು, ಆ ಪಟ್ಟಣದ ನಾಗರಿಕಜನರು ಅಲ್ಲಲ್ಲಿ ಗುಜುಗುಜು ಎನ್ನುತ್ತ ೫. ಈ ಮಹಾರಾಜನಾದ ಬಿಜ್ಜಳನಿಗೆ ಯಮ ಪುರಕ್ಕೆ ಹೋಗುವ ಸಮಯವು ಕೂಡಿಬಂದಿರುವುದು, ಅಲ್ಲದಿದ್ದರೆ (ಭಕ್ತರ ಕಣ್ಣನ್ನು ಕೀಳಿಸುವಂತಹ) ದ್ರೋಹವನ್ನು ಭಯಪಡದೆ ಮಾಡಿಸುತ್ತಿದ್ದನೇ ? ಲೋಕದಲ್ಲಿ ಮಹೇಶಭಕ್ತರು ಕೋಪಗೊಂಡರೆ

1 ರು (ಮು)

ಹರಶರಣರಳವನವರುರು
ತರಮಹಿಮೆಯುನೆಯ್ದೆ ಮುನ್ನ ಕಂಡಱಿಯನೆ ಭೂ
ವರನಿಂತು ಶಿವದ್ರೋಹಮು
ನಿರದೆಸಗಿದನಕಟ ಕುಮತಿಯಿನ್ನುಳಿದಪನೇ ೬

ವ|| ಎಂದಲ್ಲಿ ನುಡಿವುತ್ತುಮಿರ್ಪಿನಮಾ ಶರಣವರೇಣ್ಯರೆಲ್ಲಕೋಪೋದ್ದೀಪಿತಹೃದಯರೀ ಪೊಳಲೊಳಿನ್ನಿರಲ್ತಕ್ಕುದಲ್ತೆ[1]ಂದು ನಿರ್ಧರಿಸಿ ಜಗದೇವನಂ ಬಳಿಯಟ್ಟಿ ಬರಿಸಿ ಬಿಜ್ಜಳನೆಸಗಿದ ಪರಾಧಮುನವಂಗೊರೆದು:—

ಅಂದಿತ್ತ ನಿನ್ನ ಭಾಷೆಗೆ
ಬಂದುದು ದಿನಮೀ ಮಹೇಶ್ವರದ್ರೋಹಿಯುನೋ
ರಂದದೆ ಸಂಹರಿಪುದು ನೀ
ನೆಂದಾಗಳ್ಬೆಸನನಿತ್ತು ಕಳುಪಿದರವನಂ ೭

ವ|| ಅಂತು ಕಳುಪಿ ಮಾಚಿದೇವನುಂ ಮಾದಿರಾಜನುಂ ಸುರಗಿಯ ಚೌಡಯ್ಯನುಂ ಮುಸುಟಿಯ ಚೌಡಯ್ಯನುಂ ಕಿನ್ನರ ಬೊಮ್ಮಯ್ಯನುಂ ಕನ್ನದ ಬೊಮ್ಮಯ್ಯನುಂ ಕಲಕೇತಯ್ಯನುಂ ಕರುಳಕೇತಯ್ಯನುಂ ಮುಖ್ಯರಾದ ಶರಣರ್ಜರಲಿಂಗಸಂದೋಹದೊಡನೆ ಬಿಜ್ಜಳನಂ ಶಪಿಯಿಸಿ ಬಸವರಸನೊಡನೆ ಸಂಗಮಸ್ಥಾನಮೆನಿಪ ಕಪ್ಪಡಿಗೇಳ್ತರುತ್ತುಮಿರ್ದರಿತ್ತಲ್—

ಉಳಿಯುವರು ಯಾರು ? ೬. ದುಷ್ಟಬುದ್ಧಿಯ ಈ ಮಹಾರಾಜನು ಈ ಮೊದಲು ಪರಮೇಶ್ವರನ ಭಕ್ತರಾದವರ ಮಹಿಮೆಯನ್ನು ನೋಡಿ ತಿಳಿಯದವನೇ ? ಅಯ್ಯೋ ! ಈ ರೀತಿಯ ಶಿವದ್ರೋಹವನ್ನು ಮಾಡಿದನಲ್ಲವೇ ! ಇನ್ನು ಇವನು ಉಳಿಯುವನೇ ? ವ|| ಹೀಗೆನ್ನುತ್ತ ಅಲ್ಲಲ್ಲಿ ನುಡಿಯುತ್ತಿರುವಷ್ಟರಲ್ಲಿ ಎಲ್ಲ ಶರಣರೂ ಕೋಪದಿಂದ ಜಾಜ್ವಲ್ಯಮಾನವಾದ ಹೃದಯವುಳ್ಳವರಾಗಿ ಈ ಪಟ್ಟಣದಲ್ಲಿ ಇನ್ನು ಇರುವುದು ಯೋಗ್ಯವಲ್ಲವೆಂದು ನಿರ್ಧಾರಮಾಡಿ, ಜಗದೇವನನ್ನು ಕರೆಯಕಳುಹಿಸಿ ಬರಮಾಡಿಕೊಂಡು, ಬಿಜ್ಜಳನು ಮಾಡಿದ ಅಪರಾಧವನ್ನು ಅವನಿಗೆ ತಿಳಿಸಿ ೭. ಹಿಂದೆ ನೀನು ಕೊಟ್ಟ ಭಾಷೆಗೆ (ಯೋಗ್ಯ) ದಿನವು ಬಂದಿತು. ಈ ಮಹೇಶ್ವರ ದ್ರೋಹಿಯಾದ ಬಿಜ್ಜಳನನ್ನು ನೀನು ಯಥಾರೀತಿಯಲ್ಲಿ ಸಂಹರಿಸಬೇಕು ಎಂದು ಆಗ ಅಪ್ಪಣೆಮಾಡಿ ಅವನನ್ನುಕಳುಹಿಸಿ ಕೊಟ್ಟರು. ವ|| ಈ ರೀತಿ ಹೇಳಿಕಳುಹಿಸಿ, ಮಡಿವಳಮಾಚಿದೇವ, ಮಾದಿರಾಜ, ಸುರಗಿಯಚೌಡಯ್ಯ, ಮುಸುಟಿಯಚೌಡಯ್ಯ,ಕಿನ್ನರಿಯಬೊಮ್ಮಯ್ಯ, ಕನ್ನದಬೊಮ್ಮಯ್ಯ, ಕಲಕೇತಬೊಮ್ಮಯ್ಯ, ಕರುಳಕೇತಯ್ಯನೇ ಮೊದಲಾದ ಶರಣರುಗಳು ಜಂಗಮಲಿಂಗ ಸಮೂಹದವರೊಡನೆ, ಬಿಜ್ಜಳನಿಗೆ ಶಾಪವಿತ್ತು ಬಸವಣ್ಣನವರೊಡನೆ, ಸಂಗಮಸ್ಥಳ

2 ಲ್ಲೆಂ (ದ, ಜ, ಮು)

ಪೊಳಲ ಸಿರಿ ತನ್ಮಹಾತ್ಮರ
ಬಳಿವಿಡಿದೆಯ್ದಿದುದು ಪೊಳಲೊಳುತ್ಪಾತಶತಂ
ಮೊಳೆತು ಬಳೆದುರ್ಬಿ ಪರ್ಬಿದು
ದಿಳೆ ಕಂಪಿಸಿದತ್ತು ಪೆಳೆರ್ದುದಾ ಪೌರಜನಂ ೮

ಇರಲಾಗದಿನ್ನೆನುತ್ತುಂ
ಪುರಮಂ ಪೊಱಮಟ್ಟು ಪೋದರರೆಬರ್ಭರ್ೞವಿಾ
ಸುರರಲ್ಲಿ ಶಾಂತಿಹೋಮೋ
ತ್ಕರಮಂ ನೆಗಳುತ್ತುಮಿರ್ದರತಿಭಯಚಕಿತರ್ ೯

ಅಡರ್ದ ಮೃಗರಾಜಪೀಠಂ
ನಡುಗಿದುದು ನಿಜೋತ್ತಮಾಂಗಮಂ ಜನಪಂ ಕ
ನ್ನಡಿಯುಲ್ಲಿ ನೋಡಿ ಕಾಣದೆ
ಸಿಡಿಮಿಡಿಗೊಳುತಿರ್ದನಸ್ತಧೈರ್ಯೋದ್ರೇಕಂ ೧೦

ಜಗದೇವಂ ಮನೆಗೇಳ್ತರೆ
ನೆಗಳ್ದಾತನ ಜನನಿ ವೀರಭಕ್ತಿರಸಂ ಕೆ
ಯ್ಮಿಗೆ ನೋಡಿ ನುಡಿದಳಿಂತೆಂ
ದಗಲದೆ ನಿಜತನುಜನೊಡನೆ ಕನಲುತ್ತಾಗಳ್ ೧೧

ವಸುಧೆಯೊಳೆ ಶಿವದ್ರೋಹಮ
ನೆಸಗಿದನಂ ಕಂಡು ಸೈರಿಸುವನಾವನವಂ
ಮಸಕಂಗುಂದದ ಪಾಪ
ಪ್ರಸರಕೆ ಪಕ್ಕಾಗಿ ಭವಸರೋಧಿಯೊಳಾಳ್ಗುಂ ೧೨

ವೆನಿಸುವ ಕಪ್ಪಡಿಗೆ ಹೊರಟುಬರುತ್ತಲಿದ್ದರು. ಇತ್ತಕಡೆಗೆ—೮. ಕಲ್ಯಾಣಪಟ್ಟಣದ ಸಂಪತ್ತೆಲ್ಲ ಆ ಮಹಾತ್ಮರನ್ನು ಹಿಂಬಾಲಿಸಿಯೇ ಹೋಯಿತು. ಆ ಪಟ್ಟಣದಲ್ಲಿನೂರಾರು ಅಪಶಕುನಗಳು ತಲೆದೋರಿ ಬೆಳೆದು ಆಧಿಕ್ಯಗೊಂಡು ಹಬ್ಬಿದವು. ಭೂಮಿಯು ನಡುಗಿತು. ಪೌರಜನಗಳು ಭಯಭೀತರಾದರು. ೯. ಅರ್ಧಮರ್ಧಜನಗಳು ಇನ್ನು ಇಲ್ಲಿ ಇರಲಾಗದು ಎನ್ನುತ್ತ ಪಟ್ಟಣವನ್ನು ಬಿಟ್ಟುಹೊರಟುಹೋದರು. ಬ್ರಾಹ್ಮಣರುಗಳು ಅತ್ಯಂತ ಭಯದಿಂದ ಚಕಿತಗೊಂಡವರಾಗಿ ಶಾಂತಿಹೋಮಗಳ ಸಮೂಹವನ್ನು ಮಾಡತೊಡಗಿದರು. ೧೦. ಹತ್ತಿಕುಳಿತ ಸಿಂಹಾಸನವು ನಡುಗಿತು ; ಮಹಾರಾಜನು ಕನ್ನಡಿಯಲ್ಲಿ ತನ್ನ ತಲೆಯನ್ನು ನೋಡಿಕೊಂಡು ಕಾಣದೆ ಇರಲು ಮುಳುಗಿಹೋದ (ಕಳೆದುಕೊಂಡ) ಧೈರ್ಯವುಳ್ಳವನಾಗಿ (ವೃಥಾ) ಕೋಪಗೊಳ್ಳತೊಡಗಿದನು. ೧೧. ಜಗದೇವನು ಮನೆಗೆ ಬರಲಾಗಿ ಪ್ರಖ್ಯಾತಳಾದ ಆತನ ತಾಯಿಯು ಅತ್ಯಧಿಕವಾದ ವೀರಭಕ್ತಿರಸದ ಆವೇಶದಿಂದ ನೋಡಿ, ಕೋಪಗೊಳ್ಳುತ್ತ ತನ್ನ ಮಗನೊಡನೆ ತಪ್ಪದೆ ಹೀಗೆಂದು ನುಡಿದಳು : ೧೨. ಭೂಮಂಡಲದಲ್ಲಿ ಶಿವದ್ರೋಹಮಾಡಿದವನನ್ನು ಕಂಡು ಯಾವನು ಸೈರಿಸುವನೋ ಅವನು ಶಾಶ್ವತವಾದ ಪಾಪಸಮೂಹಕ್ಕೆ ಕಾರಣನಾಗಿ

ಗಿರಿಶದ್ರೋಹಿಯನಿಕ್ಕಿ ಕೊಲ್ವುದು ಸಮರ್ಥಂ ಮಾಣದಾದಂದು ತಾಂ
ಮರಣಂಬೊಂದುವುದಣ್ಮ ಶಕ್ತಿ ತನಗಿಲ್ಲಾದಂದು ಭಕ್ತಂಗೆ ಸ
ಚ್ಚರಿತಂ ಮೇಣಿದು ಯುಕ್ತಮಾತ್ಮಲಲನಾಪುತ್ರಾಪ್ತಮಿತ್ರರ್ಕಳೊಳ್
ಪುರಭಿದ್ದ್ರೋಹಮನಾಳ್ದರಂ ತಱಿದುರುಳ್ಚಲ್ವೇಳ್ಕುಮೀಶಾಜ್ಞೆಯಿಂ ೧೩

ಹರನಿಂದೆಗೇಳ್ದು ತನ್ನಯ
ಹರಣಮನೇಂ ಬಿಡಳೆ ದೇವಿಯುಪಮನ್ಯುಮುನೀ
ಶ್ವರನುರಿದು ಭಸ್ಮವಾಗನೆ
ಗುರುತರನಿಜಕೋಪಶಿಖಿಯಿನೊಲ್ವಿನಮಭವಂ ೧೪

ಅಸುವಂ ಶಿವಕಾರ್ಯಕ್ಕೆ ವಂ
ಚಿಸುವಧಮಂಗಲ್ಪಮತಿಗೆ ಕುಟಿಲಾತ್ಮಂಗೀ
ರಸೆಯೊಳ್ ಶಿವನೊಲ್ವನೆ ಮ
ನ್ನಿಸುವರೆ ಗಣವರ್ಯರಕ್ಕುಮೇ ಮುಕ್ತಿಸುಖಂ ೧೫

ಹರಭಕ್ತದ್ರೋಹಮಂ ಮಾಡಿದ ನರಪತಿಯಂ ಕೊಲ್ವುದುಂ ಗೆಲ್ವುದುಂ ಶಂ
ಕರಭಕ್ತಪ್ರೋತ್ಕರಕ್ಕೇನರಿದೆ ಪಿರಿದೆ ತದ್ಭಕ್ತನೊರ್ವಂಗೆ ಕಾಯ್ಪಂ

ಸಂಸಾರ ಸಾಗರದಲ್ಲಿ ಮುಳುಗಿಹೋಗುವನು. ೧೩. ಸಮರ್ಥನಾದವನು ಪರಮೇಶ್ವರ ದ್ರೋಹಿಯನ್ನು ಹೊಡೆದು ಕೊಲ್ಲಬೇಕು; ಹಾಗೆ ಮಾಡಲಾಗದಿದ್ದರೆ ಪರಾಕ್ರಮವನ್ನು ತೋರಿಸಿ ಮರಣಹೊಂದಬೇಕು. ಶಕ್ತಿಯು ತನಗಿಲ್ಲದ ಭಕ್ತನಾದವನಿಗೆ ಹೀಗೆ ಆಚರಿಸುವುದೇ ಶ್ರೇಷ್ಠನಡವಳಿಕೆ ಮತ್ತು ಮಾಡಬೇಕಾದ ಕಾರ್ಯವೆನಿಸಿದೆ. ತನ್ನ ಹೆಂಡತಿ, ಮಕ್ಕಳು, ಆಪ್ತಮಿತ್ರರುಗಳಲ್ಲಿ ಯಾರೇ ಆಗಿರಲಿ ತ್ರಿಪುರಸಂಹಾರಿಯಾದ ಶಿವನಿಗೆ ದ್ರೋಹ ಮಾಡಿದವರನ್ನು ಕತ್ತರಿಸಿ ಉರುಳಿಸಬೇಕು. ಇದು ಈಶ್ವರನ ಆಜ್ಞೆ. ೧೪. ಪರಮೇಶ್ವರನ ನಿಂದೆಯನ್ನು ಕೇಳಿ ಪಾರ್ವತೀದೇವಿಯು (ದಕ್ಷಯಾಗ ಸಮಯದಲ್ಲಿ) ತನ್ನ ಪ್ರಾಣವನ್ನೇ ಬಿಡಲಿಲ್ಲವೇ ? ಶ್ರೇಷ್ಠನಾದ ಉಪಮನ್ಯು ಮುನಿಯು (ಇಂದ್ರನ ವೇಷದಿಂದ ಶಿವನು ಬಂದು ಶಿವನನ್ನು ತಿರಸ್ಕರಿಸಿದಾಗ ಶಿವನಿಂದೆಯನ್ನು ಕೇಳಿದೆನಲ್ಲಾ ಎಂದು) ಭಯಂಕರವಾದ ತನ್ನ ಕೋಪವೆಂಬ ಬೆಂಕಿಯಿಂದ ಪರಮೇಶ್ವರನು ಒಲಿಯುವ ಹಾಗೆ ಉರಿದು ಭಸ್ಮವಾಗಲಿಲ್ಲವೇ ? ೧೫. ಶಿವನ ಕಾರ್ಯಕ್ಕಾಗಿ ತನ್ನ ಪ್ರಾಣವನ್ನು ವಂಚನೆಮಾಡುವ ಅಧಮನಿಗೆ, ಅಲ್ಪಬುದ್ಧಿಯುವನಿಗೆ, ಕುಟಿಲವಾದ ಆತ್ಮ ವುಳ್ಳವನಿಗೆ, ಈ ಲೋಕದಲ್ಲಿ ಶಿವನು ಒಲಿಯುವನೇ ? ಶಿವಗಣಸಮುದಾಯವು ಮನ್ನಣೆಕೊಡು ವರೇ ? ಮುಕ್ತಿಸುಖವು ಲಭ್ಯವಾಗುವುದೇ ? ೧೬. ಶಿವಭಕ್ತರಾದವರಿಗೆ ದ್ರೋಹವನ್ನು ಮಾಡಿದ ರಾಜನನ್ನು ಕೊಲ್ಲುವುದೂ, ಗೆಲ್ಲುವುದೂ ಪರಮೇಶ್ವರನ ಭಕ್ತಿಸಮೂಹಕ್ಕೇನು ಅಸಾಧ್ಯವೇ ? ಈಶ್ವರ ಭಕ್ತನೊರ್ವನಿಗೆ ರಕ್ಷಣೆಯನ್ನುಂಟುಮಾಡುತ್ತ ಬಾಳುವವನಿಗೆ (ಈ ಕಾರ್ಯ) ಪೇನು ದೊಡ್ಡದೆ. ಭೂಮಂಡಲದಲ್ಲಿ ಇಂದ್ರ, ವಿಷ್ಣುಗಳೇ ಮೊದಲಾದ

ನೆರಪುತ್ತುಂ ಬಾಳ್ವನಾವಂ ಭುವನತತಿಯೊಳಿಂದಾ್ರಚ್ಯುತಾದ್ಯರ್ಕಳೊಳ್ಳಿ
ನ್ನಿರವಂ ನೋಡಲ್ಕೆ ಬೇಗಂ ಬೆಸಸಿ ತಳರ್ದರೀ ಕಜ್ಜಮಂ ಭಕ್ತವರ್ಯರ್ ೧೬

ಇದು ನಿನಗೆ ಸಮುಚಿತಂ ಗಡ
ಮೊದಲೊಳ್ನೀನಿತ್ತ ಭಾಷೆ ಸಲ್ವುದು ಖಳನಂ
ಸದೆಯೆ ಸದೆಯಲ್ಕೆ ನೀಂ ತ
ಳ್ವಿದೆ ದುರ್ಮತಿ ನಿನ್ನವೋಲ್ದುರಾತ್ಮರುಮೊಳರೇ ೧೭

ನೆಱೆ ಪೂಣ್ದ ಪೂಣ್ಕೆಯುಂ ನೀಂ
ಮಱೆದೆಯೊ ದೃಢವೀರಭಕ್ತಿಯುಜ್ಜುಗದೊಲವಂ
ತೊಱೆದೆಯೊ ನಿಜಾಸುಭಯದಿಂ
ಪೆಱತೆಗೆದೆಯೊ ಪೇಳು ನನ್ನಿಯುಂ ಜಗದೇವಾ ೧೮

ಪ್ರಮಥದ್ರೋಹಿಯನಿಕ್ಕದಿಂತು ಮನೆಗೇಳ್ತಂದೈ ಮಹೇಶಪ್ರಸಾ
ದಮನಾರೋಗಿಸಲೆಂದು ಚಿಃ ಖಳ ಗಣಾಜ್ಞೋಲ್ಲಂಘನಂ ಗೆಯ್ದೆ ದು
ರ್ದಮ ನೀಂ ಕುಕ್ಕುರನಪ್ಪೆಯೆಂದುಱ್ ಚಿಟುಂಕಿಂದುಚ್ಚಿರೇ[1]ಯೆಂದನು
ಕ್ರಮದಿಂದಂ ಕರೆವುತ್ತೆ ಮುಂದಿರಬಹಿರ್ದ್ವಾರಾಂತಭೂಭಾಗದೊಳ್ ೧೯

ಸುರಿದಳ್ ಶಿವಪ್ರಸಾದಮ
ನಿರದಾಂ ಸೊಣಗಂ ದಲಪ್ಪೆನೆನುತವನುಣಲೊ

ವರಲ್ಲಿ ನಿನ್ನ ಪಾತ್ರವನ್ನು ನೋಡಬೇಕೆಂದು ಈ ಕಾರ್ಯವನ್ನು ನಿನಗೆ ಅಪ್ಪಣೆಮಾಡಿ ಭಕ್ತಶ್ರೇಷ್ಠರಾದ ಬಸವಣ್ಣನೇ ಮೊದಲಾದವರು (ಕಲ್ಯಾಣವನ್ನು ಬಿಟ್ಟು) ಹೊರಟು ಹೋದರು. ೧೭. ಈ ಕಾರ್ಯವು (ಬಿಜ್ಜಳವಧೆಯನ್ನು ಮಾಡುವ ಕಾರ್ಯವು) ನಿನಗೆ ಯೋಗ್ಯವಾದದ್ದಲ್ಲವೇ ! ಈ ಪೂರ್ವದಲ್ಲಿ ನೀನು ಕೊಟ್ಟಭಾಷೆಯು ಆ ದುಷ್ಟನನ್ನು ಕೊಂದರೆ, ಸರಿಯಾದಂತಾಗುವುದು. ಕೊಲ್ಲುವುದಕ್ಕೆ ನೀನು ಹಿಂಜರಿದರೆ (ತಡಮಾಡಿದರೆ) ದುಷ್ಟಬುದ್ಧಿಯುಳ್ಳವನಾದ ನಿನ್ನಂತಹ ನೀಚರು ಇದ್ದಾರೆಯೇ ? ೧೮. ಜಗದೇವಾ, ನಿಜವಾಗಿ ನೀನು ಪ್ರತಿಜ್ಞೆಮಾಡಿದ ಪ್ರತಿಜ್ಞೆಯನ್ನು ಮರೆತೆಯೋ ? (ಅಥವಾ) ನಿಶ್ಚಲವಾದ ವೀರಶೈವ ಭಕ್ತಿ ಕಾರ್ಯದಲ್ಲಿನ ಪ್ರೀತಿಯನ್ನೇ ತೊರೆದುಬಿಟ್ಟೆಯೋ ? ನಿನ್ನ ಪ್ರಾಣಭಯದಿಂದ ಹಿಂಜರಿದೆಯೋ ನಿಜವನ್ನು ಹೇಳು. ೧೯–೨೦, 'ಪ್ರಮಥಗಣಂಗಳ ದ್ರೋಹಿಯಾದ ಬಿಜ್ಜಳನನ್ನು ಕೊಲ್ಲದೆ ಈ ರೀತಿ ಮನೆಗೆ ಪರಮೇಶ್ವರನ ಪ್ರಸಾದ ವನ್ನು ಊಟಮಾಡಬೇಕೆಂದು ಮನೆಗೆ ಬಂದೆಯಾ ? ಛೀ ! ದುಷ್ಟಾ !! ಶಿವಗಣಂಗಳ ಆಜ್ಞೆಯನ್ನು ಉಲ್ಲಂಘನ ಮಾಡಿದೆ. ದುರ್ದಮಾ, ನೀನು ನಿಜವಾಗಿಯೂ ನಾಯಿಗೆ ಸಮ, (ನಾಯಿಗೆ ಹಾಕುವಂತೆ) ಬೆರಳ ಚಿಟಿಕಿಯನ್ನು ಹಾಕಿ ಉಚ್ಚಿರೇ ! (ಎಂದು ನಾಯಿ ಯನ್ನು ಕರೆಯುವಂತೆ) ಕ್ರಮವಾಗಿ ಕರೆಯುತ್ತ ಮನೆಯ ಹೊರಬಾಗಿಲಿನ ಮುಂಭಾಗದ

[1] ೦ (ದ, ಮೂ, ಜ)

ಲ್ದಿರೆ ಬಂದರಲ್ಲಿಗತಿ ನಿ
ರ್ಭರದಿಂದಂ ಮಲ್ಲಬೊಮ್ಮರೆಂಬ ಮಹಾತ್ಮರ್ ೨೦

ಅವನೊಡನುಂಡವರ್ಮುದದಿಂ
ಶಿವಪ್ರಸಾದಮನುದಗ್ರಶೌರ್ಯಾಭರಣ
ರ್ಭವಭಕ್ತಿಭಾಸುರರ್ಶಾ
ತ್ರವಸಂಹರಣಪ್ರಸನ್ನಮಾನಸಮಹಿತರ್ ೨೧

ವ॥ ಅನಂತರಂ ಜಗದೇವಸಮೇತ ತನ್ಮಾತೆಯ ಪದತಳಕ್ಕೆಱಗಿ ನಲವರಕೆಗಳಂ ಗೆಲ್ಲ ಸೇಸೆಗಳಂ ಪಡೆದು ವೀರತಾಂಬೂಲಮುಂ ಕೆಯ್ಕೊಂಡು ದೇವಾಂಗಮಂ ಬಿಗಿದುಟ್ಟು ಬೀರಗಚ್ಚೆಯ ಸಮರ್ಚಿ ಬಂಕುಡಿಯಂ ಕಟ್ಟಿ ಭಸಿತಮನಂಗದೊಳುದ್ಧೂಳಿಸಿ ರುದ್ರಾಕ್ಷಿಯ ತೊಡವಂ ತೊಟ್ಟು ಕಾಲರುದ್ರ ನುಗ್ರಾಪಾಂಗದಂತಿರ್ದ ಕರಾಳಖಡ್ಗಂಗಳಂ ಕರತಳ ದೊಳ್ಪಿಡಿದು ಜಡಿದು ವೀರ ಪ್ರಮಥರಂಘ್ರಿಗಳಂ ನೆನೆದು ಪಟುಶೌರ್ಯಾಟೋಪಮಂ ತಾಳ್ದುವಾ ಮೂವರುಂ ಗೃಹಮಂ ಪೊಱ ಮಟ್ಟು ರಾಜವೀಥಿಯೊಳ್ಸರಭಸಂ ಬರ್ಪಾಗಳ್ಕಟ್ಟಿದಿರಲ್ಲಿ—

ಮುಂಗಡೆಯೊಳೊಂದು ವೃಷಭಂ
ಶೃಂಗಮನಾಡಿಸುತೆ ಮುಂದಿಯುಂ ತೊಲಗಿಸುತುಂ

ನೆಲದ ಮೇಲೆ ಶಿವಪ್ರಸಾದವನ್ನು (ಅನ್ನವನ್ನು) ಆ ಕೂಡಲೇ ಸುರಿದಳು. ನಾನು ನಿಜವಾಗಿ ನಾಯಿಯಾದೆನೇ ! ಎಂದು ಅವನು ಊಟ ಮಾಡದೆ ಇರಲು ಆ ಹೊತ್ತಿಗೆ ಅಲ್ಲಿಗೆ ಅತಿವೇಗದಿಂದ ಮಲ್ಲ, ಬೊಮ್ಮಯ್ಯರೆಂಬ ಇಬ್ಬರು ಮಹಾತ್ಮರು ಬಂದರು. ೨೧. ಜಗದೇವನೊಡನೆ ಅತ್ಯಂತ ಶೌರ್ಯವೇ ಆಭರಣವಾಗಿ ಉಳ್ಳವರೂ, ಶಿವಭಕ್ತಿಯಿಂದ ಪ್ರಕಾಶಮಾನವಾದವರೂ, ಶತ್ರುವಿನ ಸಂಹಾರ ವಿಷಯದಲ್ಲಿ ಸಂತೋಷಗೊಂಡ ಮನಸ್ಸುಳ್ಳವರೂ ಆದ ಆ ಮಲ್ಲ ಮತ್ತು ಬೊಮ್ಮಯ್ಯಗಳು ಶಿವಪ್ರಸಾದವನ್ನು ಸಂತೋಷದಿಂದ ಊಟಮಾಡಿದರು. ವ॥ ಆಮೇಲೆ ಜಗದೇವ ಸಮೇತವಾಗಿ ಜಗದೇವನ ತಾಯಿಯ ಪಾದಕ್ಕೆ ನಮಸ್ಕಾರ ಮಾಡಿ, ಒಳ್ಳೆಯ ಆಶೀರ್ವಾದವನ್ನು ಜಯಾರ್ಥವಾದ ಸೇಸೆಗಳನ್ನು (ಮಂತ್ರಾಕ್ಷತೆಗಳನ್ನು) ಪಡೆದು, ವೀರ ತಾಂಬೂಲವನ್ನು ಸ್ವೀಕಾರಮಾಡಿದರು. ಮಡಿ ಬಟ್ಟೆಗಳನ್ನು ಬಿಗಿದು ಉಟ್ಟುಕೊಂಡರು, ವೀರಗಚ್ಚೆಯನ್ನು ಹಾಕಿಕೊಂಡು, ನಡುಕಟ್ಟನ್ನು ಕಟ್ಟಿ, ದೇಹಕ್ಕೆಲ್ಲ ವಿಭೂತಿಯನ್ನು ಬಳಿದುಕೊಂಡು, ರುದ್ರಾಕ್ಷಿಯ ಆಭರಣಗಳನ್ನು ಧರಿಸಿದರು. ಪ್ರಳಯಕಾಲನ ಭಯಂಕರ ಕಡೆಗಣ್ಣಿನಂತೆ ಹೊಳೆಯುತ್ತಿರುವ ಭಯಂಕರ ಖಡ್ಗಗಳನ್ನು ಕೈಯಲ್ಲಿ ಹಿಡಿದು ಝಳಪಿಸುತ್ತ ವೀರರಾದ ಪ್ರಮಥ ಶಿವಗಣಗಳ ಪಾದಗಳನ್ನುಧ್ಯಾನಿಸಿ, ಸಮರ್ಥವಾದ ಶೌರ್ಯದ ಅಟ್ಟಹಾಸವನ್ನುಹೊಂದಿ, ಆ ಮೂರು ಜನರೂ (ಜಗದೇವ, ಮಲ್ಲ, ಬೊಮ್ಮಿದೇವರುಗಳು) ಮನೆಯಿಂದ ಹೊರಹೊರಟು, ರಾಜಬೀದಿಯಲ್ಲಿ ವೇಗವಾಗಿ ಬರುತ್ತಿರುವಾಗ ನೇರಎದುರಿನಲ್ಲಿ—೨೨. ಒಂದು ಗೂಳಿಯು (ಎತ್ತು) ಮುಂಭಾಗದಲ್ಲಿ ಕೋಡುಗಳನ್ನು ಅಲ್ಲಾಡಿಸುತ್ತ ನೆರೆದವರುದಿ

ಮಂಗಲರವದಿಂ ಕಿಲೆವುತೆ
ಕಂಗೊಳಿಸುತೆ ನಡೆಯೆ ಕಂಡು ಮುದಮಂ ತಳೆದರ್ ೨೨

ಬಂದರರಮನೆಯ ಬಾಗಿಲ
ಮುಂದಣ್ಗಿದಿರಲ್ಲಿ ಕಂಡರರಸಾಳ್ಗಳನೋ
ರಂದದ ಕರಿತುರಗಂಗಳ
ಸಂದಣಿಯುಂ ಮಂತ್ರಿಮಂಡಳಿಕಪಟುಭಟರಂ ೨೩

ವ॥ ಅಂತವರೆಲ್ಲರುಮಿದಿರೊಳ್ಕಂಡಗಿದು ಕೆಲಂದೊಲಗೆ ರೌದ್ರರಸಂ ಮಸಗಿ ರುದ್ರಾವತಾರರುತ್ಪಾತನಿಶಿತಾಸಿಗಳಂ ಕುರುಳ್ಚುತ್ತುಂ ಬಂದು ಪಜ್ಜಳಿಪ ಬಿಜ್ಜಳನ ಸಭಾಸ್ಥಳಮಂ ಭೋಂಕನೆ ಪೊಕ್ಕು—

ಬಳಿಗೊಂಡಿರ್ದನುಯಾಯಿಗಳ್ಪಟುಭಟರ್ಧಾತ್ರೀಶಪುತ್ರರ್ಕಳು
ಜ್ವಳಖಡ್ಗಂಗಳನಾಂತಿದಿರ್ಚಲೆಸಪಂದಂಗಂಡು ಮುಂಕೊಂಡು ತ
ತ್ಪಳಕಾಸ್ಫೋಟನಮಾತ್ರದಿಂ ಬ್ಬಿಡದಿದಿರ್ಚುತ್ತೋಡಿಸುತ್ತಣ್ಮಿ ಬಿ
ಜ್ಜಳನಂ ಪೊಕ್ಕಿಱಿದರ್ಕೃಪಾಣದಿನವರ್ವಿಕ್ರಾಂತವಿಶ್ವಾಧಿಕರ್ ೨೪

ಯನ್ನು ಅತ್ತ ಇತ್ತ ಸರಿಸುತ್ತ ಮಂಗಳಕರವಾದ ಧ್ವನಿಯಿಂದ ಶಬ್ದಮಾಡುತ್ತ ಕಂಗೊಳಿಸುತ್ತ ಮುಂದೆ ಮುಂದೆ ನಡೆಯುತ್ತಿರಲು ಇದನ್ನು ಕಂಡು (ಇವರು)ಸಂತೋಷವನ್ನು ಹೊಂದಿದರು. ೨೩. ಅವರು ಅರಮನೆಯ ಬಾಗಿಲ ಮುಂಭಾಗಕ್ಕೆ ಬಂದರು. ಅಲ್ಲಿ ಅರಸನ ಆಳುಗಳನ್ನೂ, ಕ್ರಮವಾಗಿ ನಿಂತುಕೊಂಡಿದ್ದ ಆನೆ, ಕುದುರೆಗಳ ಸಮೂಹವನ್ನೂ, ಮಂತ್ರಿಗಳು, ಮಾಂಡಳಿಕರು, ಸಮರ್ಥರಾದ ಶೂರಭಟರುಗಳನ್ನೂ ಕಂಡರು. ವ॥ ಹಾಗೆ ನಿಂತುಕೊಂಡಿದ್ದ ಅವರೆಲ್ಲರೂ (ಬಂದ ಈ ಮೂವರು ಶೂರರನ್ನು) ಎದುರಿನಲ್ಲಿ (ಈ ಮೂವರನ್ನೂ) ಕಂಡು ಹೆದರಿ, ಪಕ್ಕಕ್ಕೆ ತೊಲಗಿದರು. ರೌದ್ರರಸವು ವ್ಯಾಪಿಸುತ್ತಿರಲು ರುದ್ರನ ಅವತಾರ ಸ್ವರೂಪರಾದ ಮೂವರೂ ವೈರಿಯನ್ನು ಸಂಹರಿಸುವುದರಲ್ಲಿ ತೀಕ್ಷ್ಣವೆನಿಸಿದ ಖಡ್ಗಗಳನ್ನು ಝಳಪಿಸುತ್ತ ಬಂದು ಪ್ರಜ್ವಲಿಸುತ್ತಿದ್ದ ಬಿಜ್ಜಳ ಮಹಾರಾಜನ ಸಭಾಭವನವನ್ನು ಒಮ್ಮೆಲೇ ಪ್ರವೇಶಮಾಡಿದರು. ೨೪. ಶೌರ್ಯದಲ್ಲಿ ವಿಶ್ವಕ್ಕೆಲ್ಲ ಅಧಿಕರೆನಿಸಿದ ಜಗದೇವ, ಮಲ್ಲ, ಬೊಮ್ಮಯ್ಯಗಳು (ಬಿಜ್ಜಳನ) ಸಮೀಪದಲ್ಲಿಯೇ ಇದ್ದ ಅನುಯಾಯಿಗಳು, ಸಮರ್ಥರಾದ ಶೂರಭಟರು, ರಾಜಪುತ್ರರುಗಳು ತೀಕ್ಷ್ಣ ಖಡ್ಗಗಳನ್ನು ಧರಿಸಿ ಎದುರಿಸಲು ಸಿದ್ಧರಾಗಿರುವುದನ್ನು ಕಂಡು, ಮುನ್ನುಗ್ಗಿ, (ತಮ್ಮ ಕಯ್ಯಲ್ಲಿನ) ಆ ಗುರಾಣಿಗಳನ್ನು ಅಪ್ಪಳಿಸುವುದರ ಮೂಲಕವೇ ತಪ್ಪದೆ ಅವರನ್ನು ಎದುರಿಸಿ ಪರಾಕ್ರಮದಿಂದ ನುಗ್ಗಿ ಹೋಗಿ ತಮ್ಮ

ಹರಭಕ್ತಕರಸ್ಪರ್ಶನ
ಪರಿಪೂತನಿಶಾತಖಡ್ಗದಿಂ ಮಡಿದ ಮಹೀ
ಶ್ವರನೈಂದ್ರಪದಂಬಡೆದಂ
ಪಿರಿದುತ್ಸವಮಾಳ್ದು ಶರಣರುಬ್ಬಿದರಾಗಳ್ ೨೫

ಹರಭಕ್ತರ್ಗೆ ಜಯಂ ಜಯಮೆನುತ್ತುದ್ಘೋಷಿಸುತ್ತಾರ್ದು ನಿ
ರ್ಭರದಿಂ ಸೀಳ್ದವನುನ್ನತೋದರಮನಲ್ಲಿಟ್ಟಾರ್ಪಿನಿಂ ಕೊಯ್ದು ತ
ಚ್ಛಿರಮಂ ಭಕ್ತಗಣಾಜ್ಞೆಯಿಂ ನೆಗಳ್ದೆವೀ ಕಜ್ಜಮಂ ಮಾಣದಂ
ದಿರದಾರ್ದೆತ್ತಿ ಕೃಪಾಣಮಂ ಜಡಿದು ಚಿಮ್ಮುತ್ತಮಿರ್ದ್ದ ವಿಕ್ರಾಂತದಿಂ ೨೬

ಹರಭಕ್ತದ್ರೋಹಮನಾ
ರ್ವಿರಚಿಪರವರ್ಗೀ ನೃಪಾಲಗತಿಯಪ್ಪುದೆನು
ತ್ತಿರದೊಂದೋಲೆಯನೊಳ್ಪಿಂ
ಬರೆದಾತನ ಕೆಯ್ಗೆ ಕಟ್ಟಿದರ್ಕಡುಗಲಿಗಳ್ ೨೭

ನಲಿನಲಿದು ನರ್ತಿಸುತೆ ಕರ
ಫಲಕಾಸ್ಫೋಟನಮನೆಸಗುತುಂ ಕರವಾಳಂ
ಬಲಿದೆತ್ತಿ ಚಿಮ್ಮುತುಂ ಕಲ
ಕಲರವದಿಂ ನಗುತೆ ಪಾಡುತುಂ ಗಣತತಿಯುಂ ೨೮

ಚಂಡಬಳರಿವರೊಡನೆ ಭೂ
ಮಂಡಳದೊಳ್ಸೆಣಸಲಾರ್ಪ ಕಲಿಯಾರೆನುತುಂ

ಕೈಯ ಖಡ್ಗದಿಂದ ಬಿಜ್ಜಳ ಭೂಪಾಲನನ್ನು ಕತ್ತರಿಸಿ ಹಾಕಿದರು. ೨೫. ಶಿವಭಕ್ತರಾದವರ ಕರಸ್ಪರ್ಶದಿಂದ ಪರಿಶುದ್ಧಗೊಂಡ ತೀಕ್ಷ್ಣ ಖಡ್ಗದೇಟಿನಿಂದ ಸತ್ತುಹೋದ ರಾಜನಾದ ಬಿಜ್ಜಳನು ಇಂದ್ರಪದವಿಯನ್ನು ಪಡೆದನು. ಶರಣರು ಅಧಿಕವಾದ ಸಂತೋಷದಿಂದ ಆಗ ಉಬ್ಬಿಹೋದರು. ೨೬–೨೭. ಹರಭಕ್ತರಿಗೆ ಜಯ ಜಯ ! ಎಂದು ಗಟ್ಟಿಯಾಗಿ ಕೂಗಿ ಘೋಷಣೆ ಮಾಡುತ್ತ, ಅತಿಶಯವಾಗಿ ಸೀಳಿಹಾಕಿದ ಆ ಬಿಜ್ಜಳನ ದೊಡ್ಡ ಹೊಟ್ಟೆ (ದೇಹ) ವನ್ನು ಅಲ್ಲಿಯೇ ಬಿಟ್ಟು ಶೌರ್ಯದಿಂದ ಆ ಶಿರಸ್ಸನ್ನು ಕತ್ತರಿಸಿ, ಭಕ್ತಜನರುಗಳ ಆಜ್ಞೆಯ ಪ್ರಕಾರ ಈ ಕಾರ್ಯವನ್ನು ತಪ್ಪದೆ ಮಾಡಿದ್ದೇವೆಂದು ಗಟ್ಟಿಯಾಗಿ ಸಾರುತ್ತ ಶಿರಸ್ಸನ್ನು ಮೇಲಕ್ಕೆತ್ತಿ (ತೋರಿಸುತ್ತ), ಕೈಯ ಖಡ್ಗವನ್ನು ಝಳಪಿಸುತ್ತ ಶೌರ್ಯದಿಂದ ತಪ್ಪದೆ ಜಿಗಿದಾಡುತ್ತ ಹರಭಕ್ತರಾದವರಿಗೆ ಯಾರು ದ್ರೋಹವನ್ನು ಬಗೆಯುವರೋ, ಅವರಿಗೆ ಈ ಮಹಾರಾಜನಿಗಾದ ಗತಿಯೇ ಅಗುವುದು ಎನ್ನುತ್ತ ಒಂದು ಓಲೆಯನ್ನು ಸ್ಪಷ್ಟವಾಗಿ ಬರೆದು, ಮಹಾರಾಜನ ಕೈಗೆ (ಹೆಣದಕೈಗೆ) ಆ ಮಹಾಶೂರರು ಕಟ್ಟಿದರು. ೨೮–೨೯. ನಲಿನಲಿದು ಕುಣಿದಾಡುತ್ತ ಕೈಯಲ್ಲಿನ ಗುರಾಣಿಯನ್ನು ಪರಸ್ಪರ ಅಪ್ಪಳಿಸುತ್ತ, ಖಡ್ಗಗಳನ್ನು ಗಟ್ಟಿಯಾಗಿ ಹಿಡಿದು ಮೇಲಕ್ಕೆತ್ತಿ, ತಿರುಪಾಡುತ್ತ, (ಅಥವಾ ಝಳಪಿಸುತ್ತ) ಕಲಕಲ ಧ್ವನಿಮಾಡಿ ನಗುತ್ತ,

ಮಂಡಳಿಕರಳ್ಕುತಿರೆ ನಡೆ
ಗೊಂಡರ್ಪೊಱಮಟ್ಟು ಸಭೆಯಿಂ ನಭವನ ಸುಭಟರ್ ೨೯

ನಿಡುಸರದಿಂ ವಂದಿಗಳು
ಗ್ಗಡಿಸುತ್ತಿರೆ ಮುಂದೆ ನಿಂದು ಬಿರುದಾವಳಿಯಂ
ನಡೆತಂದು ಪೊಕ್ಕನೊಡವರೆ
ಕಡುಗಲಿಗಳ್ತನ್ನ ಭವನಮಂ ಜಗದೇವಂ ೩೦

ವ॥ ಅಂತು ಪೊಕ್ಕು ಜನನಿಯಡಿದಾವರೆಗವರ್ವೆರಸು ಮಣಿದು—

ಮಾತೆ ನಿಮ್ಮ ಮನಕ್ಕೆ ಸಂತಸಮಪ್ಪ ಮಾಳ್ಕೆಯೊಳಿಂದು ನಿ
ರ್ಭೀತಿಯಿಂದೆ ಶಿವಾಪರಾಧಿಯನಿಕ್ಕಿ ಬಂದೆವೆನುತ್ತೆ ಸಂ
ಪ್ರೀತಿಯಿಂದೆಱಗಿರ್ದ ಪುತ್ರನನಳ್ಕಱಿಂ ಪರಸುತ್ತೆ ಸಂ
ಜಾತಸಂಭ್ರಮೆ ಮೆಚ್ಚುತುಂ ಪೊಗಳುತ್ತೆ ತಳ್ತಮರ್ದಪ್ಪಿದಳ್ ೩೧

ಸಮುದಿತಗುಣಕೀರ್ತನದಿಂ
ನಮಿಯಿಸೆ ಮಲ್ಲಯ್ಯ ಬೊಮ್ಮಯರ್ಪದಪೀಠಂ
ಪ್ರಮುದಮನೊಡರ್ಚಿ ಮನ್ನಿಸಿ
ಸಮುಚಿತಸತ್ಕಾರಮಂ ಕರಂ ರಚಿಯಿಸಿದಳ್ ೩೨

ಶಿವಗಣ ಸಮೂಹವನ್ನು ಕುರಿತು ಹಾಡುತ್ತ, ಪ್ರಚಂಡ ಬಲಶಾಲಿಗಳಾದ ಇವರೊಡನೆ ಭೂಮಂಡಲದಲ್ಲಿ ಕಾಳಗ ಮಾಡುವ ಸಾಮರ್ಥ್ಯವುಳ್ಳ ಶೂರರು ಯಾರಿದ್ದಾರೆ ? ಎಂದು (ಅಲ್ಲಿದ್ದ ಬಿಜ್ಜಳನ) ಮಾಂಡಳಿಕರೆಲ್ಲ ಹೆದರಿಕೊಳ್ಳುತ್ತಿರಲು ಆ ಮಹಾಶೂರರು ಸಭೆಯಿಂದ ನಡೆದು ಹೊರಹೊರಟರು. ೩೦. ಉತ್ತರ ಸ್ವರದಿಂದ ಮುಂಭಾಗದಲ್ಲಿ ನಿಂತುಕೊಂಡು ಬಿರುದನ್ನು ಹೊಗಳುವವರು (ವಂದಿಗಳು) ಬಿರುದಾವಳಿಗಳನ್ನು ಉದ್ಘೋಷಿಸುತ್ತಿದ್ದರು. ಜಗದೇವನು ತನ್ನೊಡನೆಯೇ ಬಂದ ಮಲ್ಲಯ್ಯ, ಬೊಮ್ಮಯ್ಯ ಗಳೊಡನೆ ತನ್ನ ಮನೆಯನ್ನು ಕುರಿತು ಬಂದು ಪ್ರವೇಶಿಸಿದನು. ವ॥ ಆ ರೀತಿ ತನ್ನ ಮನೆಯನ್ನು ಪ್ರವೇಶಿಸಿ, ತಾಯಿಯ ಪಾದಕಮಲಗಳಿಗೆ ಮಲ್ಲಯ್ಯ ಬೊಮ್ಮಯ್ಯ ರೊಡನೆ ಕೂಡಿ ನಮಸ್ಕಾರ ಮಾಡಿ— ೩೧. ಅಮ್ಮಾ, ನಿನ್ನ ಮನಸ್ಸಿಗೆ ಸಂತೋಷ ವಾಗುವ ರೀತಿಯಲ್ಲಿ ಈ ದಿವಸ ಯಾರ ಹೆದರಿಕೆಯೂ ಇಲ್ಲದೆ, ಶಿವನಲ್ಲಿ ಅಪರಾಧ ವೆಸಗಿದ ಬಿಜ್ಜಳನನ್ನು ಕೊಂದು ಬಂದೆವು ಎನ್ನುತ್ತ ಅತ್ಯಂತ ಪ್ರೀತಿಯಿಂದ ನಮಸ್ಕಾರ ಮಾಡಿದ ಮಗನನ್ನು ಅಕ್ಕರೆಯಿಂದ ಆಶೀರ್ವಾದ ಮಾಡುತ್ತ, ಸಂಭ್ರಮದಿಂದ ಕೂಡಿದ ತಾಯಿಯು ಮೆಚ್ಚುಗೆ ವ್ಯಕ್ತಪಡಿಸುತ್ತ ಹೊಗಳಿ ಗಟ್ಟಿಯಾಗಿ ಅಪ್ಪಿಕೊಂಡಳು. ೩೨. (ಇದರಂತೆ) ಮಲ್ಲಯ್ಯ ಬೊಮ್ಮಯ್ಯಗಳೂ ಸಮೀಚೀನವಾದ ಆ ಜಗದೇವನ ತಾಯಿಯ ಸದ್ಗುಣಗಳನ್ನು ಹೊಗಳುತ್ತ ನಮಸ್ಕಾರ ಮಾಡಲಾಗಿ, ಸಂಭ್ರಮದಿಂದ ಅವರ ಮನಸ್ಸಿಗೆ ಹರ್ಷವನ್ನುಂಟು ಮಾಡಿ, ಮನ್ನಣೆಗೊಳಿಸಿ ಯಥಾಯೋಗ್ಯವಾದ

ವ॥ ಆಗಳಾ ಜಗದೇವನುತ್ಕಟಿಸಿ—

ವಿಹಿತಂ ಭಕ್ತಂಗೆ ತಾನೇ ತಪಿಪ್ಪದಘಹರದ್ರೋಹಿಯಂ ಮಾಣ್ದದಂ ಮೇ
ಣ್ಮಹಿಯೊಳ್ಭಕ್ತಪ್ರತಾನಂ ಬೆಸಸೆ ಬಳಿಯಿನಾ ದ್ರೋಹಿಯಂ ಕೊಂದೆನಾಂ ದು
ರ್ವಹಪಾಪಂ ಬೆತ್ತನೀ ಪಾಪಮನಳಿಪೊಡೆ ಮತ್ಪ್ರಾಣಮಂ ಬಿಟ್ಟಪೆಂ ನಿಃ
ಸ್ಪೃಹೆಯಿಂದಾನೆಂದು ಖಡ್ಗಾಗ್ರದೆ ನಿಜಶಿರಮಂ ಕೊಯ್ದನಾ ಭಕ್ತವರ್ಯಂ ೩೩

ವ॥ ಅಂತು ಕಳ್ಕನೆ ಕೊಱದಿಕ್ಕುವುದುಮುಮಾರಮಣಂ ಪ್ರಸನ್ನನಾಗಿ—

ಸುರನಿಮ್ನಗೆ ನಲ್ವೆಱೆ ಕೆಂಜೆಡೆ ತ
ಳ್ತುರಿಗಣ್ತ್ರಿಸುಳಂ ಗರಳಂ ಭಸಿತಂ
ಕರಿಕೃತ್ತಿ ಧರಾಧರಪುತ್ರಿ ಫಣಾ
ಧರನೊಪ್ಪಿರೆ ರಂಜಿಸಿದಂ ಗಿರಿಶಂ ೩೪

ವ॥ ಅಂತು ರಂಜಿಸಿ ನಿಜಭಕ್ತನ ಶಿರಮಂ ಪತ್ತಿಸಿ ಹರಣಮನಲರ್ಚಿ ತನಗೆಱಗಿರ್ದನಂ ತೆಗೆದೆತ್ತಿ ಬಿಗಿಯಪ್ಪಿ ಪೊಗಳ್ದು ಮನ್ನಿಸಿ ಮಾತೃಮಿತ್ರಸಮೇತಮವನಂ ಮಣಿಪುಷ್ಪಕಮನೇಱಿಸಿ—

ಸತ್ಕಾರವನ್ನು ಅವರಿಗೆ ಉಂಟುಮಾಡಿದಳು. ವ॥ ಆಗ ಆ ಜಗದೇವನು ಸಂಭ್ರಮಗೊಂಡು—೩೩. ಲೋಕದಲ್ಲಿ ಶಿವನಲ್ಲಿ ದ್ರೋಹವೆಸಗುವವನನ್ನು ಕೊಲ್ಲುವುದು ಭಕ್ತನಾದವನಿಗೆ ಯೋಗ್ಯ ಕಾರ್ಯ ತಾನೇ. ಆದರಂತೆ ತಪ್ಪದೆ ಆ ದ್ರೋಹಿಯಾದ ಬಿಜ್ಜಳನನ್ನು ಶಿವಭಕ್ತರುಗಳ ಅಪ್ಪಣೆಯ ಮೇರೆಗೆ ನಾನು ಕೊಂದೆನು. ಆದ ಕಾರಣ ನಾನೀಗ ಹೊರಲಾರದ ಪಾಪವನ್ನು ಹೊತ್ತಂತಾಗಿದೆ. ಈ ಪಾಪವನ್ನು ಕಳೆದುಕೊಳ್ಳುವುದಕ್ಕೆ ನಿರಾಶೆಯಿಂದ (ದೇಹದ ಮೇಲೆ ಯಾವ ಆಶೆಯೂ ಇಲ್ಲದವನಾಗಿ) ನಾನೇ ನನ್ನ ಪ್ರಾಣವನ್ನು ಬಿಡುತ್ತೇನೆನ್ನುತ್ತ ಆ ಭಕ್ತನು ಖಡ್ಗದ ಕೊನೆಯಿಂದ ತನ್ನ ಶಿರಸ್ಸನ್ನು ಕತ್ತರಿಸಿಕೊಂಡನು. ವ॥ ಆ ರೀತಿ 'ಕಳಕ್' ಎಂದು (ತನ್ನ ಶಿರಸ್ಸನ್ನು) ಕತ್ತರಿಸಿ ಇಕ್ಕುತ್ತಿದ್ದ ಹಾಗೆಯೇ ಪಾರ್ವತೀಪತಿಯಾದ ಶಿವನು ಸಂತೋಷಗೊಂಡು—೩೪. ದೇವಗಂಗಾನದಿ, ಒಳ್ಳೆಯ ಚಂದ್ರ, ಕೆಂಪಾದ ಜಡೆ, (ಹಣೆಯ ಮೇಲೆ) ಧರಿಸಿದ ಅಗ್ನಿನೇತ್ರ, ತ್ರಿಶೂಲ, ಕಂಠದ ವಿಷ, (ದೇಹಕ್ಕೆಲ್ಲ ಧರಿಸಿದ) ಭಸ್ಮ, (ಉಟ್ಟ) ಆನೆಯ ಚರ್ಮ, ಹಿಮವಂತನ ಪುತ್ರಿಯಾದ ಪಾರ್ವತಿ, ಹಾವುಗಳ ಆಭರಣ (ಅಥವಾ ಧರಿಸಿದ ಹಾವು)—ಇವೆಲ್ಲ ಶೋಭಿಸುತ್ತಿರಲು ಪರಮೇಶ್ವರನು ಪ್ರಕಾಶಿಸುತ್ತಿದ್ದನು. ವ॥ ಈ ರೀತಿಯಲ್ಲಿ ಪರಮೇಶ್ವರನು ಪ್ರಕಾಶಿಸುತ್ತ ತನ್ನ ಭಕ್ತನಾದ ಜಗದೇವನ (ಕತ್ತರಿಸಿದ) ಶಿರಸ್ಸನ್ನು ಮುಂಡಕ್ಕೆ ಹತ್ತಿಸಿ, ಪ್ರಾಣವನ್ನು ಅರಳಿಸಲಾಗಿ, ತನಗೆ ಎರಗಿದ ಆ ಜಗದೇವನನ್ನು ಹಿಡಿದೆತ್ತಿ ಬಿಗಿಯಾಗಿ ಅಪ್ಪಿಕೊಂಡು, ಕೊಂಡಾಡಿ ಮನ್ನಣೆ ಮಾಡಿ, ತಾಯಿ, ಮಿತ್ರರು ಸಮೇತವಾಗಿ ಅವನನ್ನು ರತ್ನಖಚಿತ ಪುಷ್ಪಕ ವಿಮಾನದಲ್ಲಿ

ಅರಲ ಸರಿ ಸುರಿಯೆ ಭೋರೆಂ
ದಿರದಮರಾನಕರವಂಗಳುಲಿವುತ್ತಿರೆ ಶಂ
ಕರನವನಂ ನಿಜಪುರಿಗೊ
ಯ್ದಿರಿಸಿದನತುಳಪ್ರಸನ್ನಸುಖಸಂಪದದೊಳ್ ೩೫

ವ॥ ಆಗಳಿಂತು ಜಗದೇವನೆಸಗಿದ ಕಡುಗಜ್ಜದಾದ್ಯಂತವೆಲ್ಲಮನಿತ್ತಲ್ಬಸವರಸಂ ಕೇಳ್ದು ಪಿರಿದು ಸಂ[1]ತಸಂ[1]ದಾಳ್ದು ನಿಜಗುರುವಪ್ಪ ಕೂಡಲಸಂಗಮೇಶ್ವರನಂ ಕಾಣ್ಬ ಸಡಗರದಿಂ ಭಕ್ತಗಣ ಸಂಯುಕ್ತನಾ ಕಪ್ಪಡಿಗೇಳ್ತಂದಾ ಲಿಂಗಮಂದಿರಂಬುಗುವಾಗಳ್—

ಮೊದಲ ಗುರುರೂಪನಾಳ್ದೊ
ಪ್ಪಿದನಿದಿರೊಳ್ಸಂಗಮೇಶ್ವರಂ ಬಸವಂ ಕಂ
ಡುದಿತೋತ್ಸವಮಲರುತ್ತಿರೆ
ಸದಮಳಸದ್ಭಕ್ತಿಭಾವಸಂಭ್ರಮದಿಂದಂ ೩೬

ತನು ರೋಮಾಂಚಮನಾಳೆ ನೇತ್ರಯುಗದಿಂದಾನಂದಬಾಷ್ಪಾಂಬು ಸೂ
ಸೆ ನಿತಾಂತಂ ತನಿವೆರ್ಚೆ ಗದ್ಗದಸಮಾಲಾಪಂ ಕೊರಲ್ಗೊಂಡು ಕಂ
ಪನಮಂ ತಾಳ್ದೊಡಲಾನೆ ಬಲ್ಬೆಮರನಾನಂದಾಬ್ಧಿ ನೀರೇಱಿ ಪಾ
ವನವೃತ್ತಂ ನೆಗಳ್ದಂ ತದಂಘ್ರಿಗೊಲವಿಂ ದಂಡಪ್ರಣಾಮಂಗಳಂ ೩೭

ಕುಳ್ಳಿರಿಸಿಕೊಂಡು—೩೫. ಹೂವುಗಳ ಮಳೆ ಸುರಿಯುತ್ತಿರಲು, ಭೋರೆಂದು ತಪ್ಪದೆ ದೇವದುಂದುಭಿಗಳು ಧ್ವನಿಮಾಡುತ್ತಿರಲು, ಶಂಕರನು ಅವರನ್ನು ತನ್ನ ಕೈಲಾಸ ಪಟ್ಟಣಕ್ಕೆ ಕರೆದೊಯ್ದು ಅನುಪಮವಾದ ಕೃಪೆಯನ್ನು ತೋರಿಸಿ ಸುಖಸಂಪತ್ತಿನಲ್ಲಿ ಇರಿಸಿದನು. ವ॥ ಆಗ ಜಗದೇವನು ಈ ರೀತಿಯಲ್ಲಿ ಮಾಡಿದ ಅದ್ಭುತಕಾರ್ಯದ ತುದಿ ಮೊದಲೆಲ್ಲವನ್ನೂ (ಕಪ್ಪಡಿಸಂಗಮಕ್ಕೆ ಹೊರಟಿದ್ದ) ಬಸವಣ್ಣನು ಕೇಳಿ, ಅತಿಶಯ ಸಂತೋಷ ಹೊಂದಿ, ತನ್ನ ಗುರುವಾದ ಕೂಡಲ ಸಂಗಮೇಶ್ವರನನ್ನು ಕಾಣುವ ಸಡಗರದಿಂದ (ಅನೇಕ) ಶಿವಭಕ್ತ ಸಮೂಹದೊಡಗೊಂಡಿದ್ದ ಅವನು ಕಪ್ಪಡಿ ಸಂಗಮಕ್ಕೆ ಬಂದು ಶಿವಲಿಂಗದ ಮಂದಿರವನ್ನು ಪ್ರವೇಶಿಸುವಾಗ—೩೬–೩೭. ಎದುರಿನಲ್ಲಿ ಸಂಗಮೇಶ್ವರನು ಮೊದಲಿನಂತೆ (ತಾನು ಜನ್ಮಧಾರಣೆ ಮಾಡುವ ಕಾಲದಲ್ಲಿ ಕಾಣಿಸಿ ಕೊಂಡ ರೀತಿಯಲ್ಲಿಯೇ) ಗುರುರೂಪವನ್ನು ಹೊಂದಿ ಶೋಭಿಸಿದನು. ಬಸವಣ್ಣನು (ಆ ರೀತಿಯಲ್ಲಿರುವ ಸಂಗಮೇಶ್ವರನನ್ನು) ಕಂಡು ಉತ್ಪನ್ನವಾದ ಸಂತೋಷವುಳ್ಳವನಾಗಿ, ಶ್ರೇಷ್ಠವೂ, ಪವಿತ್ರವೂ ಆದ ಭಕ್ತಿಭಾವವು ಅರಳುತ್ತಿರಲು, ಸಂಭ್ರಮದಿಂದ ದೇಹವು ರೋಮಾಂಚನಗೊಂಡಿತು ; ಎರಡೂ ಕಣ್ಣುಗಳಿಂದ ಸಂತೋಷ ಬಾಷ್ಪಗಳು ಅತ್ಯಧಿಕವಾಗಿ ಸುರಿದವು ; ಕಂಠದಿಂದ ಗದ್ಗದಿತವಾದ ಮಾತುಗಳು ಅತಿಶಯವಾಗಿ ಹೊಮ್ಮಿದುವು ; ನಡುಗುವಿಕೆಯನ್ನು ಹೊಂದಿದ ದೇಹವು ಬೆವರೇರಿತು. ಆನಂದವೆಂಬ ಸಮುದ್ರವು ಉಕ್ಕಿತು ; ಪಾವನ ಚರಿತ್ರೆಯನ್ನುಳ್ಳ ಬಸವೇಶ್ವರನು ಆ ಪರಮೇಶ್ವರನ

1 ತೋಷಂ (ಜ)

ವ॥ ಅಂತು ನೆಗಳ್ದು ಕೃತಾಂಜಲಿಪುಟಮಂ ಪೊತ್ತು ನಿಂದು—

ಸ್ವಾಮಿ ಮದೀಯಮಾನಸವನೇಜದಿನೇಶ್ವರ ಮಾಧವಾಜಸು
ತ್ರಾಮಕಿರೀಟಮಂಡಿತಪದಾಂಬುಜ ವಿಶ್ವಕುಟುಂಬರಕ್ಷಣೋ
ದ್ದಾಮ ದಯಾಸುಧಾರಸಸಮಗ್ರಕಟಾಕ್ಷ ಕಲಂಕದೂರ ನಿ
ಷ್ಕಾಮ ಚಿದಂಗನಾರಮಣ ದೇಶಿಕ ಕೂಡಲಸಂಗಮೇಶ್ವರಾ ೩೮

ನಿರುಪಮ ನಿತ್ಯ ನಿಷ್ಕಳ ನಿರಾಕುಳ ನಿರ್ಭಯ ನೀಲಕಂಠನಿ
ರ್ಜರನುತ ನಿಷ್ಪ್ರಪಂಚ ನಿಗಮಾಗಮವಂದ್ಯ ನಿರೀಹ ನಿಸ್ತ್ರುತ
ಸ್ಮರ ನಿರವದ್ಯ ನಿರ್ಮದ ನಿರರ್ಗಳ ನಿಶ್ಚಳ ನಿಸ್ತುಳಪ್ರಭಾ
ಕರ ನಿರುಪಾಧಿ ನಿರ್ಗುಣ ನಿರಾಮಯ ಕೂಡಲಸಂಗಮೇಶ್ವರಾ ೩೯

ಜಂಗಮಲಿಂಗಸಂಗತ ನಿರಂಗ ಕುರಂಗಧರೋತ್ತಮಾಂಗ ನಿ
ರ್ಭಂಗ ಪತಂಗಜಾಂಗಜಮತಂಗಜತುಂಗಮೃಗೇಂದ್ರ ಸದ್ದಯಾ

ಪಾದಕಮಲಗಳಿಗೆ ದೀರ್ಘದಂಡ ಪ್ರಣಾಮಗಳನ್ನು ಮಾಡಿದನು. ವ॥ ಹೀಗೆ ಪ್ರಣಾಮಗಳನ್ನು ಮಾಡಿ ಕೈಗಳನ್ನು ಮುಗಿದು ತಲೆಯ ಮೇಲೆ ಹೊತ್ತುನಿಂತು— **ಬಸವೇಶ್ವರ ಕೃತ ಶ್ರೀ ಸಂಗಮೇಶ್ವರ ಪ್ರಾರ್ಥನೆ**—೩೮. ಸ್ವಾಮಿಯಾದ ಕೂಡಲ ಸಂಗಮೇಶ್ವರ ದೇಶಿಕನೇ, ನನ್ನ ಮನಸ್ಸೆಂಬ ಕಮಲಕ್ಕೆ ಸೂರ್ಯನಂತಿರುವವನೇ, ವಿಷ್ಣು, ಬ್ರಹ್ಮ, ದೇವೇಂದ್ರಾದಿಗಳ ಕಿರೀಟಗಳಿಂದ ಅಲಂಕಾರಗೊಂಡ ಪಾದಕಮಲಗಳುಳ್ಳವನೇ, ವಿಶ್ವವೆಂಬ (ದೊಡ್ಡ) ಕುಟುಂಬವನ್ನು ಸಂರಕ್ಷಣೆ ಮಾಡುವುದರಲ್ಲಿ ಸ್ವಾತಂತ್ರವುಳ್ಳವನೇ, ದಯೆಯೆಂಬ ಅಮೃತರಸದಿಂದ ಪೂರ್ಣ ತುಂಬಿಹೋದ ಕಡೆಗಣ್ಣುಳ್ಳವನೇ, ಪಾಪ ದೂರನೇ, ಇಚ್ಛಾರಹಿತನೇ, (ಬಯಕೆಗಳೇ ಇಲ್ಲದವನೇ) ಜ್ಞಾನವೆಂಬ ಸ್ತ್ರೀಯ ಪತಿಯೇ (ರಕ್ಷಿಸು.) ೩೯. ಹೋಲಿಕೆಯೇ ಇಲ್ಲದವನೂ; ಎಂದೆಂದೂ ಇರುವವನೂ (ಮತ್ತು ಇದ್ದವನೂ), ಕಲಾರಹಿತನೂ, ಯಾವ ಕಳವಳವೂ ಇಲ್ಲದವನೂ, ಭಯರಹಿತನೂ ಆದ ನೀಲಕಂಠನೇ, (ಸಮಸ್ತ) ದೇವತೆಗಳಿಂದ ಸ್ತೋತ್ರಮಾಡಿಸಿಕೊಳ್ಳುವವನೇ, ಪ್ರಪಂಚದ ಲೇಪವಿಲ್ಲದವನೇ, ವೇದಾಗಮಗಳಿಂದ ವಂದಿಸಿಕೊಳ್ಳಲ್ಪಡುವವನೇ, ಇಚ್ಛಾರಹಿತನೇ, ಮನ್ಮಥನನ್ನು ತಿರಸ್ಕರಿಸಿದವನೇ, ತಪ್ಪಿಲ್ಲದವನೇ (ಕಲಂಕರಹಿತನೇ), ಮದವಿಲ್ಲದವನೇ, ತಡೆಯೇ ಇಲ್ಲದವನೇ, ದೃಢನೇ, (ಇನ್ನೊಂದರ) ಹೋಲಿಕೆಯನ್ನೇ ಇಲ್ಲದವನೇ, ಪ್ರಕಾಶವನ್ನುಂಟುಮಾಡುವವನೇ, (ನಿನಗೆ ಬೇರೊಂದು) ಕಾರಣವೇ ಇಲ್ಲದವನೇ, ಸತ್ವರಜಸ್ತಮೋಗುಣ ರಹಿತನೇ (ಅತೀತನಾದವನೇ), ವ್ಯಾಧಿ ರಹಿತನೇ ಕೂಡಲ ಸಂಗಮೇಶ್ವರಾ (ರಕ್ಷಿಸು). ೪೦. ಚರಜಂಗಮ ಲಿಂಗದಲ್ಲಿ ಒಡೆವೆರೆತ ಆಕಾರದಲ್ಲಿ ಕಾಣಿಸಿಕೊಳ್ಳುವವನೇ, ದೇಹವಿಲ್ಲದವನೇ, ಚಂದ್ರನನ್ನು ಶಿರಸ್ಸಿನಲ್ಲಿ ಧಾರಣ ಮಾಡಿರುವವನೇ, (ಯಾರಿಂದಲೂ) ಭಂಗಗೊಳ್ಳದವನೇ, ಸೂರ್ಯಪುತ್ರನಾದ ಯಮ, ಮನ್ಮಥರುಗಳೆಂಬ ಆನೆಗಳಿಗೆ ಸಿಂಹ ಸ್ವರೂಪನಾದವನೇ, ಶ್ರೇಷ್ಠವಾದ

ಪಾಂಗ ತರಂಗಿಣೀಧರ ಪಿಶಂಗಜಟಾಭರ ಸರ್ವಮಂಗಳಾ
ಲಿಂಗಿತ ಮಂಗಳಾಂಗ ಮಹಿಮೋನ್ನತ ಕೂಡಲಸಂಗಮೇಶ್ವರಾ ೪೦

ಮನುತತಿಪೂಜ್ಯ ಮಾನ್ಯ ಮಿಹಿರದ್ಯುತಿ ಮೀನವಿಮರ್ದಿ ಮುಗ್ಧಮೂ
ರ್ತಿ ನಿಯತಮೇರುಧನ್ವಕರ ಮೈಹಿರ ಭಂಜನ ಮೋಹದೂರ ಮೌ
ಲಿನಿಹಿತಚಂದ್ರ ಮಂಗಳಗುಣಾಕರಮಸ್ತಕಮಾಲಿಕಾಂಕ ಮ
ಜ್ಜನಕ ಮದೀಶ ಮದ್ಗುರು ಕೃಪಾಕರ ಕೂಡಲಸಂಗಮೇಶ್ವರಾ ೪೧

ಭವ ಭವಭಂಜನಾಂಜನವಿವರ್ಜಿತ ನಿರ್ಜಿತಮಿತ್ರಗಾತ್ರಸಂ
ಭವ ಭುವನೇಶ ಪಾಶಹರ ಕಿಂಕರಶಂಕರ ಚಂಡತಾಂಡವೋ
ತ್ಸವ ಧವಳಾಂಗ ಪುಂಗವಗ ನಿರ್ಮದ ಶರ್ಮದ ಶರ್ವ ಪಾರ್ವತೀ
ಧವ ಶಿವಲಿಂಗ ಪಿಂಗಳಜಟಾಧರ ಕೂಡಲಸಂಗಮೇಶ್ವರಾ ೪೨

ದಯೆಯಿಂದ ತುಂಬಿದ ಕಡೆಗಣ್ನೋಟವುಳ್ಳವನೇ, ದೇವ ಗಂಗಾಧರನೇ, ಪಿಶಂಗವರ್ಣ (ಕೆಂಪು ಹಳದಿ ಮಿಶ್ರವರ್ಣ) ದ ಅತಿಶಯವಾದ ಜಡೆಯುನ್ನು ಧರಿಸಿದವನೇ, ಸರ್ವ ಮಂಗಳಾದೇವಿಯನ್ನು ಆಲಿಂಗಿಸಿಕೊಂಡವನೇ (ಸರ್ವಮಂಗಳಾ ದೇವಿಯನ್ನು ತನ್ನ ಅರ್ಧಾಂಗದಲ್ಲಿರಿಸಿಕೊಂಡವನೇ) ಉನ್ನತವಾದ ಮಹಿಮೆಯುಳ್ಳವನೇ, ಕೂಡಲ ಸಂಗ ಮೇಶ್ವರಾ (ರಕ್ಷಿಸು). ೪೧. ಮನುಗಳ ಸಮೂಹದಿಂದ ಪೂಜೆಗೊಳ್ಳಲ್ಪಡುವವನೇ, (ಸಮಸ್ತಲೋಕದ) ಮನ್ನಣೆಗೆ ಪಾತ್ರನಾದ ಸೂರ್ಯನ ಪ್ರಕಾಶವುಳ್ಳವನೇ, ಮತ್ಸ್ಯವನ್ನು ನಾಶಮಾಡಿದವನೇ, (ವಿಷ್ಣುವು ಮತ್ಸ್ಯಾವತಾರ ಮಾಡಿದನಂತರ ಆ ಮತ್ಸ್ಯವನ್ನು ಛೇದಿಸಿದವನು) ಸುಂದರಾಕಾರವುಳ್ಳ ದೇಹವುಳ್ಳವನೇ, ಮೇರು ಪರ್ವತವನ್ನು ಕರದಲ್ಲಿ ಧನುಸ್ಸನ್ನಾಗಿ ಧರಿಸಿದವನೇ, ಮಿಹಿರ (ಸೂರ್ಯ) ಪುತ್ರನಾದ ಯಮನನ್ನು ಭಂಗಗೊಳಿಸಿ ದವನೇ, ಮೋಹದಿಂದ ದೂರನಾಗಿರುವವನೇ, ಜಡೆಯಲ್ಲಿ ಧರಿಸಲ್ಪಟ್ಟ ಚಂದ್ರನನ್ನುಳ್ಳ ವನೇ, ಮಂಗಳಕರಗಳಾದ ಗುಣಗಳಿಗೆ ಆಗರನೆನಿಸಿದವನೇ, ಶಿರಸ್ಸುಗಳ ಮಾಲೆಗಳೇ ಗುರುತಾಗುಳ್ಳವನೇ, ನನ್ನ ತಂದೆಯೇ, ನನ್ನ ಈಶ್ವರನೇ, ನನ್ನ ಗುರುವೇ, ಕೃಪೆ ದೋರುವವನೇ ಕೂಡಲ ಸಂಗಮೇಶ್ವರಾ, (ರಕ್ಷಿಸು). ೪೨. ಭವ ಎಂದರೆ ತನ್ನಿಂದಲೇ ಹುಟ್ಟಿದ ಸಮಸ್ತ ಪ್ರಪಂಚದ ಭವವನ್ನು ಎಂದರೆ ಪಾಪ ಸಮೂಹವನ್ನು ನಾಶಗೊಳಿಸು ವವನೇ, 'ಅಂಜನ' ಎಂದರೆ ಕತ್ತಲೆಯನ್ನು ಅಥವಾ ಮಾಯೆಯನ್ನು ದೂರಗೊಳಿಸಿ ದವನೇ, ಸೂರ್ಯದೇಹದಿಂದುತ್ಪನ್ನನಾದ ಯಮನನ್ನು ಗೆದ್ದವನೇ, (ಸಮಸ್ತ) ಲೋಕಗಳ ಒಡೆಯನೇ, (ಭಕ್ತರ) ಬಂಧನಗಳನ್ನೆಲ್ಲ ನಿವಾರಿಸುವವನೇ, ಕಿಂಕರರಾದವರಿಗೆ ಸುಖ ವನ್ನುಂಟು ಮಾಡುವವನೇ. ಭಯಂಕರವಾದ ತಾಂಡವ ನೃತ್ಯದಿಂದ ಉತ್ಸಾಹಗೊಳ್ಳುವ ವವನೇ, ಶುಭ್ರ ಶರೀರಿಯಾದ ವೃಷಭೇಶ್ವರನನ್ನು ವಾಹನಮಾಡಿಕೊಂಡು ಸಂಚರಿಸು ವವನೇ ; ಮದರಹಿತನೇ, ಸುಖದಾಯಕನೇ, ಶರ್ವನೇ, (ಪ್ರಳಯ ಕಾಲದಲ್ಲಿ ಸಕಲ ಪ್ರಾಣಿಗಳನ್ನೂ ಹಿಂಸಿಸುವವನೇ), ಪಾರ್ವತೀಪತಿಯೇ, ಹಳದಿ ಕೆಂಪು ಮಿಶ್ರವಾದ ಬಣ್ಣದಿಂದ ಕೂಡಿರುವ ಜಡೆಯುಳ್ಳವನೇ, ಶಿವಲಿಂಗವೇ, ಕೂಡಲ ಸಂಗಮೇಶ್ವರ

ಸುರತಟಿನೀಪಯಃಕಣಕಳಾಪಜಟಾಭರ ಪದ್ಮವೈರಿಶೇ
ಖರ ನಿಗಮಾಂತಮೃಗ್ಯಚರಣಾಂಬುಜ ಶಾಶ್ವತರೂಪ ಶಾಕ್ವರೇ
ಶ್ವರವರವಾಹ ವಾರಿಧರಕರ್ಬುರಕಂಧರ ಕಾಲದರ್ಪಸಂ
ಹರ ಹರಿವಂದ್ಯಪಾದ ಜಗದೀಶ್ವರ ಕೂಡಲಸಂಗಮೇಶ್ವರಾ ೪೩

ಶರಣಕದಂಬಶಂಬರಧಿ ಶಂಬರಜಾಹಿತ ಶಂಬರಾರಿ ಶಂ
ಬರದಪಟುಪ್ರಭಂಜನ ನಿರಂಜನರಂಜಿತ ಕುಂಜರೇಂದ್ರಸಂ
ಹರ ಹರಿಣಾಂಕಪಾಣಿ ಹರಿಣಾಂಕಹುತಾಶದಿನೇಶನೇತ್ರ ಶಂ
ಕರ ಕರುಣಾನಿವಾಸ ಗುಣಭೂಷಣ ಕೂಡಲಸಂಗಮೇಶ್ವರಾ ೪೪

ಪುರುಷವರೇಣ್ಯ ಪುಣ್ಯಮಯ ಪೂರ್ಣ ಪುರಂದರವಂದ್ಯ ವಿಶ್ವವಿ
ಸ್ತರಣವಿನೋದ ವಿಶ್ರುತವಿಹಾರ ವಿರಾಜಿತವೀರಶೈವಭಾ

(ರಕ್ಷಿಸು). ೪೩. ದೇವಗಂಗಾನದಿಯ ಚಿಕ್ಕ ಚಿಕ್ಕ ನೀರಿನ ಹನಿಗಳ ಸಮೂಹದಿಂದ ತುಂಬಿರುವ ಜಡೆಯುಳ್ಳವನೇ, ಕಮಲವೈರಿಯಾದ ಚಂದ್ರನನ್ನು ಧರಿಸಿದವನೇ, ಉಪನಿಷತ್ತುಗಳಿಂದ ಹುಡುಕಿಸಿಕೊಳ್ಳಲ್ಪಡುವ ಪಾದಕಮಲವುಳ್ಳವನೇ, ಶಾಶ್ವತವಾದ (ಎಂದೂ ನಾಶವಿಲ್ಲದ) ಶ್ರೇಷ್ಠ ರೂಪವುಳ್ಳವನೇ, ಶ್ರೇಷ್ಠನಾದ (ಗೂಳಿಯೇ) ನಂದೀಶ್ವರನೇ ವಾಹನವಾಗುಳ್ಳವನೇ. ಮೇಘದಂತೆ ಕಪ್ಪಾದ ಕಂಠವುಳ್ಳವನೇ, ಯಮನ ಗರ್ವವನ್ನು ಸಂಹಾರ ಮಾಡಿದವನೇ, ವಿಷ್ಣುವಿನಿಂದ ನಮಸ್ಕರಿಸಿಕೊಳ್ಳಲ್ಪಡುವ ಪಾದವುಳ್ಳವನೇ, ಜಗತ್ತಿಗೆಲ್ಲ ಸ್ವಾಮಿಯಾದ ಕೂಡಲ ಸಂಗಮೇಶ್ವರಾ (ರಕ್ಷಿಸು). ೪೪. ಶರಣ ಜನ ಸಮೂಹವೆಂಬ ಸಮುದ್ರಕ್ಕೆ ಚಂದ್ರನೋಪಾದಿಯಲ್ಲಿರುವವನೇ, ಶರಿಬರನ ವೈರಿಯಾದ ಮನ್ಮಥನೆಂಬ ಮೋಡಕ್ಕೆ ಸಮರ್ಥವಾದ ಬಿರುಗಾಳಿಯಂತಿರವವನೇ, ನಿರಂಜನನೆನಿಸಿ ಶೋಭಿಸುವವನೇ, ಶ್ರೇಷ್ಠ ಗಜಾಸುರನನ್ನು ಸಂಹರಿಸಿದವನೇ, ಜಿಂಕೆಯೇ ಗುರುತಾದ ಹಸ್ತವುಳ್ಳವನೇ (ಜಿಂಕೆಯನ್ನು ಹಸ್ತದಲ್ಲಿ ಧರಿಸಿದವನೇ), ಚಂದ್ರ, ಅಗ್ನಿ, ಸೂರ್ಯರುಗಳನ್ನು ನೇತ್ರವಾಗಿ ಉಳ್ಳವನೇ, ಸುಖವನ್ನುಂಟು ಮಾಡುವವನೇ, ಕರುಣೆಯೇ ಮನೆಯಾಗಿ ಉಳ್ಳವನೇ, (ಸಕಲ ಸದ್ಗುಣಗಳೇ ಆಭರಣವಾಗಿ ಉಳ್ಳವನೇ ಕೂಡಲ ಸಂಗಮೇಶ್ವರಾ (ರಕ್ಷಿಸು) [ಶಂಬರಧಿ–ಸಮುದ್ರ ; ಶಂಬರಜಾಹಿತ–ನೀರಿನಲ್ಲಿ ಹುಟ್ಟಿದ ಕಮಲಕ್ಕೆ ಅಹಿತನೆಂದರೆ ಶತ್ರುವಾಗಿರುವವನು–ಚಂದ್ರ ; ಶಂಬರದ–ನೀರನ್ನು ಕೊಡುವಂತಹುದು ಮೋಡ ; ಹರಿಣಾಂಕ, ಹುತಾಶ, ದಿನೇಶ ನೇತ್ರ-ಜಿಂಕೆಯನ್ನೇ ಗುರುತಾಗಿ ಉಳ್ಳ ಚಂದ್ರ, ಹೋಮ ಮೂಲಕವಾಗಿ ಅಶನವನ್ನು ಸ್ವೀಕರಿಸುವ ಅಗ್ನಿ, ದಿನಕ್ಕೆ ಒಡೆಯನಾದ ಸೂರ್ಯ :] ೪೫. ಪುರುಷ ಶ್ರೇಷ್ಠನೇ, ಪುಣ್ಯ ಸ್ವರೂಪನೇ, ಪರಿಪೂರ್ಣನೇ, ದೇವೇಂದ್ರನಿಂದ ನಮಸ್ಕರಿಸಿಕೊಳ್ಳಲ್ಪಡುವವನೇ, ಪ್ರಪಂಚವನ್ನು ವಿಸ್ತಾರಗೊಳಿಸುವಿಕೆಯಲ್ಲಿ ಸಂತೋಷಗೊಳ್ಳುವವನೇ, ಪ್ರಸಿದ್ಧವಾದ ಕ್ರೀಡೆಯಿಂದ ಪ್ರಕಾಶಿಸುವವನೇ, ವೀರಶೈವ ಧರ್ಮತತ್ತ್ವದಿಂದ ಪ್ರಕಾಶಮಾನನಾದ

ಸುರ ಭವದೂರ ಭರ್ಗ ಭಜಕವ್ರಜಭದ್ರದ ಭಕ್ತವಶ್ಯ ವಾ
ಗ್ವರದ ವರಪ್ರಸನ್ನ ಜಯ ಚಿನ್ಮಯ ಕೂಡಲಸಂಗಮೇಶ್ವರಾ ೪೫

ತರುಣಾದಿತ್ಯಪ್ರಕಾಶಾವರಣ ಶರಣಸಂದೋಹಮಂದಾರ ಚಂದ್ರಾ
ಭರಣಾಂಚನ್ಮೌಳಿ ಚಂಚದ್ಗರಳಗಳ ಕಳಾಧುರ್ಯ ಗಾಂಭೀರ್ಯಶೌರ್ಯಾ
ಕರ ಕಂದರ್ಪಾರಿ ಶೌರಿಸ್ತುತ ಗುಣಗಣರಂಗತ್ತರಂಗಾಂಗ ಗಂಗಾ
ಧರ ಮತ್ಪ್ರಾಣೇಶ ಸಂಗಪ್ರಭುವೆ ವಿಭುವೆ ರಕ್ಷಿಪ್ಪುದೆಂದಂ ವೃಷೇಂದ್ರಂ ೪೬

ವ॥ ಇಂತು ತನ್ನಂ ಕಟ್ಟಳ್ಕರಿಂ ಪೊಗಳ್ದ ನಿಜಕುಮಾರನಪ್ಪ ಗುಣಭೂಷಣನಂ ಫಣಿಭೂಷಣಂ ನಡೆ ನೋಡಿ ತೆಗೆದು ಬಿಗಿಯಪ್ಪಿ ನಿಜಪ್ರಸಾದಮನಿತ್ತು ಮನ್ನಿಸಿ ನಿರುಪಮಾನ ವಾತ್ಸಲ್ಯಮಂ ಬೀಱಿ ಗರ್ಭಗೃಹದಂತರಾಳಮನವಂಬೆರಸು ಪೊಕ್ಕಾಗಳ್—

ಬೆಳಗಿನೊಳ್ ಬೆಳಗು ಬೆರೆದಂ
ತಳವಿಗೆ ಮಿಗಿಲಾದ ಸುಖಮನೊಳಕೊಂಡತಿ ಮಂ

ವನೇ, ಜನನ ಮರಣಾತ್ಮಕ ಸಂಸಾರದಿಂದ ದೂರನಾದವನೇ, ಭರ್ಗನೇ (ಯಮ ಮನ್ಮಥಾದಿಗಳನ್ನು ನಾಶಮಾಡಿದವನೇ), ನಿನ್ನನ್ನು ಭಜಿಸುವ ಭಕ್ತ ಸಮೂಹಕ್ಕೆ ಮಂಗಳವನ್ನುಂಟು ಮಾಡುವವನೇ, ಭಕ್ತರಿಗೆ ಅಧೀನನಾದವನೇ, ವಾಣೀಪತಿಯಾದ ಬ್ರಹ್ಮನಿಗೆ ವರವನ್ನು ಕೊಟ್ಟು ಸಂತೋಷಗೊಳಿಸಿದವನೇ, ಜ್ಞಾನಪ್ರಕಾಶಮಯನೇ ಜಯ. ಕೂಡಲ ಸಂಗಮೇಶ್ವರಾ (ರಕ್ಷಿಸು). ೪೬. ಬಾಲಸೂರ್ಯನ ಕಾಂತಿಯಂತಿರುವ ಕಾಂತಿಯ ಹೊದಿಕೆಯುಳ್ಳವನೇ, ಶರಣಜನ ಸಮೂಹಕ್ಕೆ ಕಲ್ಪವೃಕ್ಷವೆನಿಸಿದವನೇ, ಚಂದ್ರನನ್ನೇ ಆಭರಣವಾಗಿ ಕಿರೀಟದಲ್ಲಿ ಧರಿಸಿದವನೇ, ಹೊಳೆಯುತ್ತಿರುವ ವಿಷವನ್ನು ಕಂಠದಲ್ಲಿ ಧರಿಸಿದವನೇ, ಸಮಸ್ತ ವಿದ್ಯೆಗಳಿಂದ ತುಂಬಿದವನೇ (ಸಮರ್ಥನಾದವನೇ), ಗಾಂಭೀರ್ಯ ಮತ್ತು ಶೌರ್ಯಗಳಿಗೆ ಆಗರನೆನಿಸಿದವನೇ, ಮನ್ಮಥನ ವೈರಿಯೇ, ವಿಷ್ಣುವಿನಿಂದ ಸ್ತೋತ್ರಮಾಡಿಸಿಕೊಳ್ಳುವವನೇ, ಸಮಸ್ತ ಸದ್ಗುಣ ಸಮೂಹವುಳ್ಳವನೇ, ಚಲಿಸುತ್ತಿರುವ (ಕುಣಿಯುತ್ತಿರುವ) ತರಂಗಗಳೇ ಅಂಗವಾಗಿ ಉಳ್ಳ ಗಂಗಾದೇವಿಯನ್ನು ತಲೆಯಲ್ಲಿ ಧರಿಸಿರುವವನೇ, ನನ್ನ ಪ್ರಾಣದೊಡೆಯನೇ, ಸಂಗಮದೇವ ಪ್ರಭುವೇ, ವಿಭುವೇ ನನ್ನನ್ನು ಸಂರಕ್ಷಿಸಬೇಕೆಂದು ಬಸವೇಶ್ವರನು ಎಂದನು. ವ॥ ಈ ರೀತಿ ಅತ್ಯಂತ ಪ್ರೀತಿಯಿಂದ ಹೊಗಳಿದ ತನ್ನ ಮಗನಾದ ಸದ್ಗುಣಗಳಿಂದ ಅಲಂಕಾರಗೊಂಡ ಬಸವೇಶ್ವರನನ್ನು ಪರಮೇಶ್ವರನು ದಿಟ್ಟಿಸಿ ನೋಡಿ, ಬಾಚಿ ಗಟ್ಟಿಯಾಗಿ ತಬ್ಬಿಕೊಂಡು ತನ್ನ ಪ್ರಸಾದವನ್ನು ಕೊಟ್ಟು, ಮನ್ನಣೆಗೊಳಿಸಿ, ಅಸದೃಶವಾದ ವಾತ್ಸಲ್ಯವನ್ನು ತೋರಿಸಿ, ಆ ಬಸವೇಶ್ವರನೊಡನೆ ಗರ್ಭಗುಡಿಯ ಒಳಭಾಗವನ್ನು ಹೊಕ್ಕಾಗ—೪೭. ಬಸವಣ್ಣನು ಬೆಳಕಿನೊಳಗೆ ಬೆಳಕು ಬೆರೆತಹಾಗೆ ಲೆಕ್ಕವಿಲ್ಲದ ಅತ್ಯಂತ ಸುಖವನ್ನು

ಗಳಮಯಲಿಂಗದೊಳೊಡವೆರೆ
ದಲಕ್ಷ್ಯಭಾವಮನೆ ತಾಳ್ದು ಮೆಱೆದಂ ಬಸವಂ ೪೭

ಪ್ರಮಥರ್ಪೂಮಳೆಗಱೆದ
ರ್ಪ್ರಮುದದೆ ಗಣಭೇರಿ ಧಾಂಧಳಂ ಧ್ವನಿಗುಡೆ ಸಂ
ಭ್ರಮದಿನುಘೇಯೆನುತಿರ್ದ
ರ್ವಿಮಳಾಂತಃಕರಣಭರಣರಭವನ ಶರಣರ್ ೪೮

ಅನುಪಮನಪ್ರತರ್ಕ್ಯಮಹಿಮಂ ಶರಣಾಗತವಜ್ರಪಂಜರಂ
ವಿನಯಸುಧಾಸರೋಧಿ ಕರುಣಾಮೃತಪೂರ್ಣಕಟಾಕ್ಷನೀಶಹೃ
ದ್ವನಜನಿವಾಸನೆಲ್ಲೆಡೆಯ ಭಕ್ತರ ಮಾನಸಮಧ್ಯದಲ್ಲಿ ನೆ
ಟ್ಟನೆ ನೆಲೆಗೊಂಡು ರಂಜಿಸಿದನಲ್ಲದೊಡೆಲ್ಲಿಯ ಭ[1]ಕ್ತಿಮು[2]ಕ್ತಿಗಳ್ ೪೯

ಗುಣಿ ಬಸವಚರಿತಮಣಿದ
ರ್ಪಣದೊಳ್ಮಾರ್ಪೊಳೆದುವಲ್ತೆ ಗಣನಿವಹದ ಸ
ದ್ಗುಣಗಣಚರಿತ್ರಮಹಿಭೂ
ಷಣನೆಸಕದಿನೆಸಗೆ ವಿಶ್ವವಿಶ್ವಂಭರೆಯೊಳ್ ೫೦

ಹೊಂದಿದವನಾಗಿ ಮಂಗಳಮಯವಾದ ಲಿಂಗದೊಡನೆ ಐಕ್ಯಗೊಂಡು, ಲಕ್ಷ್ಯರಹಿತವಾದ ಭಾವ ಅಂದರೆ ಕಣ್ಣಿಗೆ ಇನ್ನಾವುದೂ ಕಾಣದೆಯಿರುವ ಭಾವನೆಯನ್ನು ಹೊಂದಿದವನಾಗಿ ಶೋಭಿಸಿದನು. ೪೮. ಪ್ರಮಥಗಣಗಳು ಹೂವಿನ ಮಳೆಯನ್ನು ಕರೆದರು ; ಸಂತೋಷದಿಂದ ಶಿವಗಣಗಳ ನಗಾರಿಯಧ್ವನಿ 'ಧಾಂಧಳಂ' ಎಂದು ಧ್ವನಿಮಾಡುತ್ತಿತ್ತು; ಪರಿಶುದ್ಧವಾದ ಅಂತಃಕರಣವೇ ಆಭರಣವಾಗಿ ಉಳ್ಳ ಪರಮೇಶ್ವರನ ಶರಣರುಗಳು ಸಂಭ್ರಮದಿಂದ ಉಘೇ ! ಎನ್ನುತ್ತಿದ್ದರು. ೪೯. ಉಪಮಾರಹಿತನೂ, ಊಹಿಸಲಸಾಧ್ಯವಾದ ಮಹಿಮಾತಿಶಯವುಳ್ಳವನೂ, ಶರಣಾಗತರಾದವರಿಗೆ ವಜ್ರಪಂಜರದಂತಿರುವವನೂ, ವಿನಯಕ್ಕೆ ಕ್ಷೀರಸರೋವರದಂತಿರುವವನೂ, ಕಾರುಣ್ಯವೆಂಬ ಅಮೃತದಿಂದ ತುಂಬಿದ ಕಡೆಗಣ್ಣುಗಳುಳ್ಳವನೂ, ಈಶ್ವರನ ಹೃದಯವೆಂಬ ಕಮಲ ಮಧ್ಯದಲ್ಲಿ ವಾಸಿಸುವವನೂ, ಎಲ್ಲೆಡೆಯಲ್ಲೂ ಇರುವ ಭಕ್ತರ ಮನಸ್ಸಿನ ಮಧ್ಯದಲ್ಲಿ ಚೆನ್ನಾಗಿ ಸ್ಥಿರಗೊಂಡು, ರಂಜಿಸುತ್ತಿದ್ದಾನೆ, ಹಾಗಲ್ಲದಿದ್ದರೆ (ಲೋಕಕ್ಕೆ) ಎಲ್ಲಿಯ ಭಕ್ತಿ ; ಎಲ್ಲಿಯ ಮುಕ್ತಿ ? ೫೦. ಭೂಮಂಡಲದಲ್ಲಿ ಸದ್ಗುಣವಿಶಿಷ್ಟನಾದ ಬಸವೇಶ್ವರನ ಚರಿತ್ರೆಯೆಂಬ ರತ್ನದ ಕನ್ನಡಿಯಲ್ಲಿ ಈಶ್ವರನ (ಲೀಲಾಮಯವಾದ) ಪ್ರಯತ್ನದಿಂದ

---

1 ಭು (ಅ, ಜ)   2 ಯು (ಮು)

ಬಸವನಸಮಾನಮಹಿಮ
ಪ್ರಸರಸುಧಾಂಬುಧಿಯೊಳೊಗೆದ ಸೀರ್ಪನಿಯನದೇಂ
ನಿಸದಂ ಪೊಗಳಲ್ಬಲ್ಲರೆ
ಬಿಸರುಹಭವನುಂ ಫಣೀಂದ್ರನುಂ ಸುರಗುರುವುಂ ೫೧*

ಪ್ರಮಥೇಂದ್ರಪ್ರಥಮಪ್ರಧಾನಪುರುಷಂ ಚಿದ್ರೂಪನಾದ್ಯಂತಶೂ
ನ್ಯಮಹಾವೈಭವನಪ್ರತರ್ಕ್ಯಮಹಿಮಂ ವಿಶ್ವಾವನೀರಕ್ಷಣ
ಕ್ಷಮನುಕ್ಷೇಂದ್ರಪರಾವತಾರನನಘಂ ಕಾರುಣ್ಯವಾರಾಶಿ ಭ
ದ್ರಮಯಂ ಭಕ್ತಿಪರಾಯಣಂ ಪರಶಿವಶ್ರೀಮನ್ಮನೋಮಂದಿರಂ ೫೨

ಗುರುರೂಪಂ ಲಿಂಗರೂಪಂ ಪರತರಚರರೂಪಂ ಪ್ರಸಾದಸ್ವರೂಪಂ
ಹರಪಾದಾಂಭಸ್ಸ್ವರೂಪಂ ಭಸಿತಲಸಿತರೂಪಂ ಸುರುದ್ರಾಕ್ಷರೂಪಂ
ವರಷಡ್ವರ್ಣಸ್ವರೂಪಂ ಪರಮಶಿವಮಯಾನಾದಿಭಕ್ತಸ್ವರೂಪಂ
ಪರ[1]ಶಕ್ತಿಸ್ವಸ್ವ[1]ರೂಪಂ ಬಸವನಸದೃಶಾನಂದಸತ್ಯಸ್ವರೂಪಂ ೫೩

ಶಿವಗಣದ ಸದ್ಗುಣಸಮೂಹದ ಚರಿತ್ರೆಯು ಪ್ರತಿಫಲಿತವಾದುವಲ್ಲವೇ ? ೫೧. ಬಸವಣ್ಣನ ಅನುಪಮವಾದ ಮಹಿಮೆಯ ಸಮೂಹವೆಂಬ ಕ್ಷೀರ ಸಮುದ್ರದಲ್ಲಿ ಹುಟ್ಟಿದ ಒಂದು ಸಣ್ಣ ಕಣದಷ್ಟನ್ನಾದರೂ ಬ್ರಹ್ಮನೂ, ಆದಿಶೇಷನೂ, ಬೃಹಸ್ಪತಿಯೂ ನಿಜವಾಗಿ ಹೊಗಳಲು ಶಕ್ಯರಾದಾರೇ ? ೫೨. (ಬಸವಣ್ಣನು) ಶ್ರೇಷ್ಠಪ್ರಮಥಗಣದಲ್ಲಿ ಮೊದಲನೆಯ ಪ್ರಧಾನ ಪುರುಷನೂ, ಜ್ಞಾನಸ್ವರೂಪನೂ, ತುದಿಮೊದಲುಗಳೇ ಇಲ್ಲದ ಮಹಾವೈಭವವುಳ್ಳವನೂ, ಊಹಿಸಲಸಾಧ್ಯವಾದ ಮಹಿಮೆಯುಳ್ಳವನೂ, ಸಮಸ್ತ ವಿಶ್ವದಲ್ಲಿರುವ ಭೂಭಾಗವನ್ನು ರಕ್ಷಿಸುವ ಸಾಮರ್ಥ್ಯವುಳ್ಳವನೂ, ವೃಷಭೇಂದ್ರನ (ನಂದೀಶ್ವರನ) ಅಪರಾವತಾರನೂ, ಪಾಪರಹಿತನೂ, ಕರುಣಾಸಮುದ್ರನೂ, ಮಂಗಳಮಯನೂ, ಉತ್ಕೃಷ್ಟ ಶಿವಭಕ್ತಿ ಮಾರ್ಗದಲ್ಲಿ ಚರಿಸುವವನೂ, ಪರಮೇಶ್ವರನ ಮಂಗಳಕರವಾದ ಮನಸ್ಸನ್ನೇ ಮನೆಯಾಗಿ ಉಳ್ಳವನೂ (ಎನಿಸಿದ್ದಾನೆ.) ೫೩. ಗುರುರೂಪನೂ, ಲಿಂಗರೂಪನೂ, ಪವಿತ್ರವಾದ ಜಂಗಮರೂಪನೂ, ಪ್ರಸಾದ ಸ್ವರೂಪನೂ, ಶಿವಪಾದತೀರ್ಥ ಸ್ವರೂಪನೂ, ಶ್ರೇಷ್ಠಭಸ್ಮಸ್ವರೂಪನೂ, ಪವಿತ್ರ ರುದ್ರಾಕ್ಷರೂಪನೂ, ಪವಿತ್ರ ಷಡಕ್ಷರ ಮಂತ್ರಸ್ವರೂಪನೂ, ಪರಮ ಶಿವಮಯನೂ, ಅನಾದಿ ಭಕ್ತಿಸ್ವರೂಪನೂ, ಶ್ರೇಷ್ಠ ಶಕ್ತಿ ಸ್ವರೂಪನೂ ಆದ ಬಸವಣ್ಣನು ಅನುಪಮವಾದ ಆನಂದ ಸ್ವರೂಪನೂ, ಸತ್ಯಸ್ವರೂಪನೂ ಎನಿಸಿದ್ದಾನೆ [ಇಲ್ಲಿ ಬಸವಣ್ಣನನ್ನು ಸಮಗ್ರ

---

*ಅ ಪ್ರತಿಯಲ್ಲಿ ಈ ಪದ್ಯವಿಲ್ಲ. [1]ಶಕ್ತಿಚಿತ್ಸ್ವ (ಮ) ಚಿಚ್ಛಕ್ತಿಸ್ವ (ದ)

ವ॥ ಎಂದಿಂತು ಪಲವಂದದಿಂ ಪೊಗಳುತ್ತುಂ ಚನ್ನಬಸವರಾಜನುಂ ಮಾದಿರಾಜನುಂ ಮಾಚಿದೇವನುಂ ಶರಣಗಣದೊಡನೆ ಸಂಭ್ರಮದಿಂದುಳುವೆಗೆಯ್ತಂದು ಶಿವತತ್ತ್ವಾನು ಭವಸಂಜನಿತಪರಮಾನಂದಸುಧಾಸಮುದ್ರದೊಳವಗಾಹಂಗೆಯ್ದು —

ಕರಮೆಸೆದಿರ್ದರ್ಕೆಲರೀ
ಶ್ವರಭಕ್ತರ್ ಶ್ರೀಗಿರೀಂದ್ರಕೆಯ್ದಿದರಿತ್ತಲ್
ವರಗಂಗಾಂಬಿಕೆ ತನ್ನಯ
ಕರಸರಸಿಜಲಿಂಗದೊಡನೆ ಬೆರೆದೆಸೆದಿರ್ದಳ್ ೫೪

ಪ್ರಮಥಪತಿ ಬಸವರಾಜನ
ವಿಮಳಚಿದಂಗಸ್ವರೂಪಮಾ ಭಕ್ತರ ಹೃ
ತ್ಕಮಳದೊಳೆ ತಳ್ತು ನೆಲೆಗೊಂ
ಡಮರ್ದೊಪ್ಪಿದುದಧಿಕಮುದಮನೊದವಿಸುತಾಗಳ್ ೫೫

ಬಸವಪದಾಬ್ಜದಾಸನೆನಿಸಿರ್ದ ಷಡಕ್ಷರಿದೇವನಿಂತು ನಿ
ರ್ಮಿಸಿದ ಪುರಾಣಮಂ ಮುದದಿಂ ಬರೆದೋದುವ ಕೇಳ್ವ ಮಾನವ

ವೀರಶೈವ ತತ್ತ್ವ ಮೂರ್ತಿಯೆಂದು ಹೇಳಲಾಗಿದೆ.] ವ॥ ಹೀಗೆಂದು ಹಲವಾರು ಪ್ರಕಾರದಿಂದ ಹೊಗಳುತ್ತ ಚೆನ್ನಬಸವರಾಜನೂ ಮಾದಿರಾಜನೂ, ಮಾಚಿದೇವನೂ, ಶರಣ ಸಮೂಹದೊಡನೆ ಸಂಭ್ರಮದಿಂದ ಉಳುವೆಗೆ ಹೊರಟು ಬಂದು, ಶಿವ ತತ್ತ್ವಾನು ಭವದಿಂದ ಉತ್ಪನ್ನವಾದ ಶ್ರೇಷ್ಠವಾದ ಆನಂದವೆಂಬ ಅಮೃತ ಸಮುದ್ರದಲ್ಲಿ ಸ್ನಾನಮಾಡಿ ೫೪. ಚೆನ್ನಾಗಿ ಶೋಭಿಸುತ್ತಿದ್ದರು; ಕೆಲವು ಜನ ಈಶ್ವರ ಭಕ್ತರು ಶ್ರೀಶೈಲಪರ್ವತಕ್ಕೆ ಹೋದರು. ಇತ್ತ ಕಡೆ (ಬಸವ ಪತ್ನಿಯಾದ) ಗಂಗಾಂಬಿಕೆಯು ತನ್ನ ಕರಕಮಲದಲ್ಲಿರುವ ಲಿಂಗದಲ್ಲಿ ಐಕ್ಯಗೊಂಡು ಶೋಭಿಸುತ್ತಿದ್ದಳು. ೫೫. ಪ್ರಮಥಗಣಗಳ ಒಡೆಯನಾದ ಬಸವಣ್ಣನ ಪವಿತ್ರವಾದ ಜ್ಞಾನಾಂಗ ಸ್ವರೂಪವು ಆ ಭಕ್ತರೆಲ್ಲರ ಹೃದಯ ಕಮಲದಲ್ಲಿ ಸೇರಿ ನೆಲೆಗೊಂಡು, ಅತ್ಯಧಿಕ ಸಂತೋಷವನ್ನುಂಟುಮಾಡುತ್ತ ಆಗ ಐಕ್ಯಗೊಂಡು (ಬೆಸುಗೆಗೊಂಡು) ಶೋಭಿಸುತ್ತಿತ್ತು.* ೫೬. ಬಸವಣ್ಣನ ಪಾದಕಮಲಗಳ ದಾಸನೆನಿಸಿರುವ ಷಡಕ್ಷರದೇವನನು ಈ ರೀತಿ ನಿರ್ಮಿಸಿರುವ (ಈ ವೃಷಭೇಂದ್ರ ವಿಜಯ ಅಥವಾ ಬಸವರಾಜ ವಿಜಯವೆಂಬ) ಪುರಾಣವನ್ನು ಸಂತೋಷದಿಂದ ಇದನ್ನು ಬರೆದು ಓದುವ, ಕೇಳುವ ಮನುಷ್ಯರು

*ಗ್ರಂಥಾಂತರ ಈ ಪದ್ಯವಾದ ಮೇಲೆ ಬೇರೆ ೧೯ ಪದ್ಯಗಳು ಕಂಡುಬರುತ್ತವೆ. ಗದ್ಯಾನುವಾದಕ್ಕೆತ್ತಿಕೊಂಡಿರುವ ಕರ್ನಾಟಕ ವಿ. ವಿ.ದ ಕನ್ನಡ ಕಾವ್ಯಮಾಲೆ ೯. ಈ ಪುಸ್ತಕವಲ್ಲಿ ಅಷ್ಟು ಪದ್ಯಗಳಿಲ್ಲ.

ರ್ವಸುಧೆಯೊಳತ್ಯಪೂರ್ವಸುಖಭೋಗಮನಾಳ್ದು ನಿರಾಮಯತ್ವದಿಂ
ದೆಸೆದಸಮಾಕ್ಷನಿಂ ಪರದೊಳಗ್ಗಳಮೋಕ್ಷಮನಾಳ್ದು ರಂಜಿಪರ್ ೫೬

ಸುರಪನ ಭೋಗಮುಂ ಧನದನೈಸಿರಿಯುಂ ರವಿಯುಚ್ಚತೇಜಮುಂ
ಗುರುವಿನ ಬುದ್ಧಿಯುಂ ಗುಹನ ಸಾಹಸಮುಂ ರತಿರಾಜನಂದಮುಂ
ಮಾರುತನ ಸತ್ವಮುಂ ಬಿದಿಯ ವಿದ್ಯೆಯುಮಂಬುಜನಾಭನೇಳ್ಗೆಯುಂ
ದೊರೆವುದು ಕೇಳ್ದ ಮರ್ತ್ಯತತಿಗೀ ಬಸವೇಶ್ವರಸತ್ಪುರಾಣಮುಂ ೫೭

ಪದೆದಿದನೋದುವರ್ಥಯಿಸುವಾಲಿಪ ಪೂಜಿಪ ಮಾನವರ್ಗೆ ದು
ರ್ಗದಮಪಮೃತ್ಯುತಸ್ಕರ ವಿಷಗ್ರಹ ದುಷ್ಟಮೃಗಾದಿ ಭೀತಿ ಕು
ಪದ ಜಡಭಾವ ದುಃಖಿತೆ ದರಿದ್ರತೆ ಕಂಟಕಮೆಂಬಿವೆಲ್ಲಮಂ
ಸದಮಳಧರ್ಮರೂಪ ಪಱಿದಿಕ್ಕಿ ಸುಖಂಗೊಡು ನೀಂ ವೃಷಾಧಿಪಾ ೫೮

ಘನಶರಣಪ್ರತಾನದ ಮಹತ್ವಮನೀಶ್ವರನೊರ್ವನಲ್ಲದ
ಬ್ಜನಯನ ವಾಗ್ವರಾದಿ ದಿವಿಜರ್ಮುನಿಗಳ್ಪೊಗಳಲ್ಕೆ ಸಮರ್ಥರ
ಲ್ಲೆನೆ ಜಡಬುದ್ಧಿಗೇನೆನಗೆ ಶಕ್ಯಮೆ ತನ್ಮಹಿಮಾಬ್ಧಿಯೊಂದು ಸೀ
ರ್ಪನಿಯನಿತಂ ವೃಷೇಂದ್ರ ಪೊಗಳ್ದೆಂ ಕ್ಷಮಿಸೆನ್ನಯ ಸಾಸದೇಳ್ಗೆಯುಂ ೫೯

ಗುರು ಪಾಲ್ಕುರಿಕೆಯ ಸೋಮಾ
ರ್ಯರ ಭೀಮಕವೀಂದ್ರ ಶಂಕರಾರ್ಯರ ಪಾದಂ

ಭೂಮಂಡಲದಲ್ಲಿ ಅತ್ಯಂತ ಅಪೂರ್ವವಾದ ಸುಖಭೋಗಗಳನ್ನು ಹೊಂದಿ, ನಿರೋಗವಂತರಾಗಿ, ಶೋಭಿಸಿ, ಪರಮೇಶ್ವರನಿಂದ ಪರಲೋಕದಲ್ಲಿ ಪವಿತ್ರವಾದ ಮೋಕ್ಷವನ್ನು ಹೊಂದಿ ಪ್ರಕಾಶಿಸುವರು. ೫೭. ಈ ಬಸವೇಶ್ವರನ ಸಂಬಂಧದ ಪವಿತ್ರ ಪುರಾಣವನ್ನು ಕೇಳಿದ ಮನುಷ್ಯ ಸಮೂಹಕ್ಕೆ ದೇವೇಂದ್ರನ ಭೋಗವೂ, ಕುಬೇರನ ಐಶ್ವರ್ಯವೂ, ಸೂರ್ಯನ ನಿರ್ಮಲವಾದ ತೇಜಸ್ಸೂ, ಬೃಹಸ್ಪತಿಯ ಬುದ್ಧಿಯೂ, ಷಣ್ಮುಖನ ಸಾಹಸವೂ, ಮನ್ಮಥನ ಚಂದವೂ, ಮಾರುತನ ಸತ್ವವೂ, ಬ್ರಹ್ಮನ ವಿದ್ಯೆಯೂ, ವಿಷ್ಣುವಿನ ಅಭಿವೃದ್ಧಿಯೂ, ಉಂಟಾಗುವುದು. ೫೮. ಸಂತೋಷದಿಂದ ಓದುವ, ಅರ್ಥಮಾಡುವ, ಕೇಳುವ, ಪೂಜಿಸುವ, ಮನುಷ್ಯರಿಗೆ ಕೆಟ್ಟ ಬೇನೆಯು, ಅಕಾಲಮೃತ್ಯುವಿನ, ಕಳ್ಳರ, ವಿಷ ಗ್ರಹದ, ಕ್ರೂರಮೃಗಗಳೇ ಮೊದಲಾದವುಗಳ ಭಯವೂ, ಮೂರ್ಖತನ, ದುಃಖದ ಭಾವ, ಬಡತನ, ಕೆಟ್ಟ ಅಪಾಯಗಳೇ ಮೊದಲಾದವುಗಳೆಲ್ಲವನ್ನೂ, ಪರಿಶುದ್ಧ ಧರ್ಮ ಸ್ವರೂಪನಾದ ಬಸವೇಶ್ವರನೇ ನೀನು ಪರಿಹರಿಸಿ ಸುಖವನ್ನುಂಟುಮಾಡು. ೫೯. ಶ್ರೇಷ್ಠ ರಾದ ಶರಣಸಮೂಹದ ಮಾಹಾತ್ಮೆಯನ್ನು ಹೊಗಳಲು ಈಶ್ವರನೊಬ್ಬನೇ ಅಲ್ಲದೆ,ವಿಷ್ಣು ಬ್ರಹ್ಮನೇ ಮೊದಲಾದ ದೇವತೆಗಳೂ, ಮುನಿಗಳೂ ಸಮರ್ಥರಲ್ಲವೆನ್ನುವಾಗ ಮಂದ ಬುದ್ಧಿಯುಳ್ಳ ನನಗೆ ಶಕ್ಯವಾದೀತೇ ? ಆ ಬಸವೇಶ್ವರನ ಮಹಿಮೆಯೆಂಬ ಸಮುದ್ರದ ಒಂದು ತುಂತುರು ಹನಿಯಷ್ಟನ್ನು ಹೊಗಳಿದ್ದೇನೆ, ಬಸವೇಶ್ವರನೇ, ನನ್ನ ಈ ಸಾಹಸದ

ಬುರುಹಕ್ಕೆ ಮಣಿದವಂದಿರ
ವರಕೃಪೆಯಿಂದೊರೆದೆನೀ ಪುರಾಣಮಂ ನಿಳೆಯೊಳ್ ೬೦

ಜಪದಿಂದಂ ಜ್ಞಾನದಿಂದಂ ಸದಮಳಮತಿಯಿಂದಂ ಸದಾಚಾರದಿಂದಂ
ತಪದಿಂದಂ ಹೋಮದಿಂದಂ ಮುನಿಪಭಜನದಿಂ ಕ್ಷೇತ್ರಯಾತ್ರಾದಿಯಿಂದಂ
ವ್ಯಪದೇಶಂಬೆತ್ತ ದಾನಕ್ರಿಯೆಯಿನೊದವಿದತ್ಯಂತ ಪುಣ್ಯೌಘಮೀ ದಿ
ವ್ಯಪುರಾಣಾಕರ್ಣನೋದ್ಯತ್ಸುಕೃತದೊರೆಗೆ ತಾಂ ಸಾಟಿಯಲ್ಲಲ್ಲಜಸ್ರಂ ೬೧

ಪ್ರಮಥಗಣಾಂಘ್ರಿಪಂಕಜಕೆ ರುದ್ರಗಣೇಂದ್ರಪದಾಂಬುಜಕ್ಕೆ ಸಂ
ಯಮಿನುತವೃತ್ತಿಯುಕ್ತಶಿವಭಕ್ತಮಹಾಗಣಪಾದವಾರಿಜ
ಕ್ಕಮರ್ದರ್ತಿ ಭಕ್ತಿಯಿಂದಗಣಿತ ಪ್ರಣವಸ್ತುತಿಗೆಯ್ದು ದಾಸಭಾ
ವಮನೊಡನಾಳ್ದು ಜಾಱೆ ಭವಮಾಲೆ ಕೃತಾರ್ಥತೆದಾಳ್ದು ಬಾಳ್ವೆನಾಂ ೬೨

ತಿರುನೀಲಕಂಠನ ಕನ್ಯೆ ಸಂಗವಿಭು ಕಣ್ಣಪ್ಪಂ ಮಹಾದೇವಿ ಶಂ
ಕರನಿಷ್ಠರ್ಕಲಿನಾಥ ರುದ್ರಪಶುಪರ್ ಭಾಸ್ವನ್ನಮಿತ್ತಂಡಿಯೆಂ
ಬರಿವರ್ ಮುಗ್ಧಮಹೇಶಭಕ್ತರಿವರಂಘ್ರಿಧ್ಯಾನವೆಂದೆಂಬ ಭಾ
ಸುರಚಂದ್ರಾತಪದಿಂ ಮದೀಯಪರಿತಾಪಧ್ವಾಂತಮಂ ನೀಗುವೆಂ ೬೩

ಏಳಿಗೆಯನ್ನು ಕ್ಷಮಿಸು ೬೦. ಗುರುವಾದ ಪಾಲ್ಕುರಿಕೆಯ ಸೋಮನಾಥನ, ಭೀಮಕವಿ ಶ್ರೇಷ್ಠನ, ಕಂಚಿಯ ಶಂಕರಾಚಾರ್ಯರ ಪಾದಕಮಲಗಳಿಗೆ ನಮಸ್ಕರಿಸಿ ಭೂಮಿಯಲ್ಲಿ ಅವರ ಶ್ರೇಷ್ಠಕೃಪೆಯಿಂದ ಈ ಪುರಾಣವನ್ನು ಹೇಳಿದ್ದೇನೆ. ೬೧. ಜಪವನ್ನು ಮಾಡುವುದರಿಂದ, ಜ್ಞಾನಸಂಪಾದನೆಯಿಂದ, ಪರಿಶುದ್ಧವಾದ ಬುದ್ಧಿಯಿಂದ, ಸದಾಚಾರದಿಂದ, ತಪಸ್ಸುಮಾಡುವುದರಿಂದ, ಹೋಮಮಾಡುವುದರಿಂದ, ಮುನಿಶ್ರೇಷ್ಠರನ್ನು ಭಜಿಸುವದರಿಂದ, ಕ್ಷೇತ್ರಯಾತ್ರಾದಿಗಳನ್ನು ಮಾಡುವುದರಿಂದ ನೆಪವನ್ನು ಹೊಂದಿದ ದಾನ ಮಾಡುವ ಕಾರ್ಯದಿಂದ ಉಂಟಾಗುವ ಅತ್ಯಂತ ಪುಣ್ಯಸಮೂಹವು ಈ ಪವಿತ್ರಪುರಾಣವನ್ನು ಕೇಳುವುದರಿಂದುಂಟಾಗುವ ಉತ್ಕೃಷ್ಟಪುಣ್ಯದ ಸಾದೃಶ್ಯಕ್ಕೆ ತಾನು ಯಾವಾಗಲೂ, ಸಮಾನವಾಗಲಾರದು. ೬೨. ಪ್ರಮಥಗಣಗಳ ಪಾದಕಮಲಗಳಿಗೆ, ಶ್ರೇಷ್ಠ ರುದ್ರಗಣಗಳ ಪಾದಕಮಲಗಳಿಗೆ, ಸಂಯಮಿಗಳಾದ ಋಷಿಗಳಿಂದ ಶ್ಲಾಘಿಸಲ್ಪಡುವ ಭಕ್ತಿಕ್ರಿಯೆಯಲ್ಲಿ ಕೂಡಿ ವ್ಯವಹರಿಸುವ ಶಿವಭಕ್ತರುಗಳ ಮಹಾಸಮೂಹದ ಪಾದಕಮಲಕ್ಕೆ ದೃಢವಾದ ಭಕ್ತಿಯಿಂದ ಅಗಣಿತವಾದ ನಮಸ್ಕಾರಗಳೊಡನೆ ಸ್ತೋತ್ರಮಾಡಿ, ಸೇವಕನೆಂಬ ಭಾವನೆಯೊಡನೆ ಬೆರೆತು ಜನನಮರಣಾತ್ಮಕವಾದ ಈ ಸಂಸಾರವೆಂಬ ಮಾಲೆಯು ತೊಲಗಿ ಹೋಗುವಹಾಗೆ ಕೃತಕೃತ್ಯತೆಯನ್ನು ಹೊಂದಿ ನಾನು ಬಾಳುತ್ತೇನೆ. ೬೩. ತಿರುನೀಲಕಂಠರ ಪತ್ನಿಯಾದ ಮುತ್ತೈದೆ, ಸಂಗಮೇಶ್ವರಪ್ರಭು, ಬೇಡರಕಣ್ಣಪ್ಪ, ಉಡುತಡಿಯಮಹಾದೇವಿಯಕ್ಕ, ಶಂಕರನಲ್ಲಿ ನಿಷ್ಠೆಯಿಂದ ವರ್ತಿಸಿದ ಕಲಿನಾಥ, ರುದ್ರಪಶುಪತಿ, ಪ್ರಕಾಶಿಸುವ ನಟ್ಯಮಿತ್ತಂಡಿ (ನಮಿತ್ತಂಡಿ) ಎಂಬ ಹೆಸರಿನ ಈ ಮುಗ್ಧರಾದ ಪರಮೇಶ್ವರನ ಭಕ್ತರುಗಳ ಪಾದಧ್ಯಾನವೆಂಬ ಶೋಭಿಸುವ ಬೆಳದಿಂಗಳಿನಿಂದ ನನ್ನ ಆಧ್ಯಾತ್ಮಿಕ, ಆಧಿದೈವಿಕಗಳೆಂಬ (ಪರಿತಾಪಗಳ) ಕತ್ತಲೆಯನ್ನು ದೂರಮಾಡಿ

ವರದಾಸಂ ಶಿವಲೆಂಕಮಂಚಣನುದಾರಶ್ರೀಪತೀಶಗುರ್ಣಾ
ಕರನಾ ಡೋಹರ ಕಕ್ಕಯಂ ಶ್ವಪಚದೇವಂ ಜ್ಞಾನಸಂಬಂಧ ಬಾ
ಚರಸರ್ಪಂಡಿತ ಮಲ್ಲಿಕಾರ್ಜುನರಜಸ್ರಂ ಪಾಲಿಸುತ್ತಿರ್ಕೆ ಸಾ
ದರಮೆಮ್ಮಂ ಪರಶಾಸ್ತ್ರವಿದ್ವಿಜಯಭಕ್ತರ್ ಸತ್ಕಳಾಮಂಡಿತರ್ ೬೪

ಅಜಗಣ್ಣನನಿಮಿಷಯ್ಯಂ
ನಿಜಗುಣನುಂ ಸಿದ್ಧರಾಮನುರುಲಿಂಗಾರ್ಯನುಂ
ವೃಜಿನಹರ ಪೂಸಲಯ್ಯನು
ಮಜಡಮಹಾಯೋಗಿ ಭಕ್ತರಿವರೆಮಗಾಳ್ದರ್ ೬೫

ವರಪಾಲ ಗೂರ್ಜರಂ ಸೌಂ
ದರನಾಥಂ ಮಲ್ಲಣಯ್ಯನುದ್ಭಟದೇವಂ
ಸುರುಚಿರ ಸತ್ಯಣ್ಣನಿವ
ರ್ಪರಶಿವಯುತ ಭೋಗಿಭಕ್ತರಿವರಂ ಪೊಗಳ್ವೆಂ ೬೬

ಅತಿಭಕ್ತಂ ಗೊಲ್ಲಳನು
ನ್ನತ ಕನ್ನದ ಬೊಮ್ಮ ಜೊಮ್ಮರಾ ನಿಂಬಿ ಜಗ
ನ್ನುತ ಮುಖನಾಥರವರ
ನ್ವಿತಶಿವನಿರ್ಲೇಪ ಭಕ್ತರೆಮ್ಮಯ ವಿಭುಗಳ್ ೬೭

ಕೊಳ್ಳುತ್ತೇನೆ. ೬೪. ಶ್ರೇಷ್ಠದಾಸಿಮಯ್ಯ, ಶಿವಲೆಂಕಮಂಚಣ್ಣಪಂಡಿತ, ಔದಾರ್ಯಭಾವದ ಶ್ರೀಪತಿಪಂಡಿತರು, ಸದ್ಗುಣಗಳಿಗೆ ಆಗರನಾದ ಡೋಹರಕಕ್ಕಯ್ಯ, ಶ್ವಪಚಯ್ಯ, ತಿರುಜ್ಞಾನ ಸಂಬಂಧರು, ಬಾಚರಸರು, ಮಲ್ಲಿಕಾರ್ಜುನಪಂಡಿತಾರಾಧ್ಯರು–ಇವರೇ ಮೊದಲಾದ ಅನ್ಯಧರ್ಮಶಾಸ್ತ್ರಗಳನ್ನು ವಾದಮುಖದಲ್ಲಿ ಗೆದ್ದಭಕ್ತರೂ, ಶ್ರೇಷ್ಠವಾದ ಶಿವತತ್ತ್ವ ವಿದ್ಯಾಲಂಕೃತರೂ, ಆದವರು ಸತತವೂ ಆದರ ಪೂರ್ವಕವಾಗಿ ನಮ್ಮನ್ನು ರಕ್ಷಣೆಮಾಡುತ್ತಿರಲಿ. ೬೫. ಅಜಗಣ್ಣ, ಅನಿಮಿಷಾರ್ಯರು, (ಕೆಂಬಾವಿಯ ಚಂದಿಮರಸರಗುರುವಾದ) ನಿಜಗುಣಶಿವಯೋಗಿ, ಸೊನ್ನಲಿಗೆಯ ಸಿದ್ಧರಾಮೇಶ್ವರ ಗುರುಲಿಂಗಾರ್ಯ, ಪಾಪಹರನಾದ ಪೂಸಲಯ್ಯ–ಇವರೇ ಮೊದಲಾದ ಶಿವಜ್ಞಾನ ಸಂಪನ್ನರೂ, ಮಹಾಶಿವಯೋಗದಲ್ಲಿ ನಿರತರೂ ಆದ ಶಿವಭಕ್ತರು ನನ್ನ ಒಡೆಯರೆನಿಸಿದ್ದಾರೆ. ೬೬. ಶ್ರೇಷ್ಠನಾದ ಪಾಲುಗುರ್ಜರ, ಸೌಂದರನಂಬಿಯಣ್ಣ, ಮಲ್ಲಣ್ಣಯ್ಯ, ಉದ್ಭಟದೇವ, ಮನೋಹರನಾದ ಸತ್ಯಣ್ಣ–ಇವರೆಲ್ಲ ಪರಶಿವನೊಡನೆ ಕೂಡಿದ ಸೌಖ್ಯಾನುಭವವುಳ್ಳವರು ಇಂಥವರನ್ನು ಸ್ತೋತ್ರಮಾಡುತ್ತೇನೆ. ೬೭. ಅತಿಭಕ್ತ, ಗೊಲ್ಲಾಳಯ್ಯ, ಶ್ರೇಷ್ಠ ಕನ್ನದಬೊಮ್ಮಯ್ಯ ತೆಲುಗು ಜೊಮ್ಮಯ್ಯಗಳು, ಆ ನಿಂಬ್ಯಕ್ಕ, ಜಗತ್ತಿನ ಜನರಿಂದ ಶ್ಲಾಘಿಸಲ್ಪಡುವ ಮುಖನಾಥರು ಇವರೆಲ್ಲರೂ ಶಿವನೊಡನೆ ಬೆರೆತು ಹೋದವರಾದ್ದರಿಂದ ಸಂಸಾರಲೇಪನದಿಂದ ದೂರರಾದ ಭಕ್ತರು ನನ್ನಪ್ರಭು

ವರವಾಗೀಶಂ ಸಕಲೇ
ಶ್ವರನೋಹಿಲ ಮೋಳಿಗಾರ್ಯ ಮಾದೇವಿ ಶುಭಾ
ಕರಕೇಶಿರಾಜರಿವರುರು
ತರ ನಿಜವೈರಾಗ್ಯಭಕ್ತರಾನಿವರಣುಗಂ ೬೮

ತಿರುನೀಲಕಂಠರಘಸಂ
ಹರ ದಸರಂ ಸೇದಿರಾಜನೇಣಾಧಿಪನ
ಚ್ಚರಿಯಮರನೀತಿ ಮೊನೆಯಿಡು
ವರಧಿಕತರ ಶಾಂತಭಕ್ತರಾನಿವರ ಸುತಂ ೬೯

ಉರುವೀರ ಶಂಕರಂ ಸೌ
ದರನಾಚಾರ್ಯಮರೆಲೇಶ ಕೇತಯ್ಯಂ ಬಂ
ಧುರ ಕಲ್ಲಿನಾಥ ಸೋಮಾ
ರ್ಯರ ಶಿವಮತಶೀಲಭಕ್ತರನುಚರನಪ್ಪೆಂ ೭೦

ಅತಿದಾನಿ ಭಕ್ತರೆನಿಪು
ನ್ನತ ಸಿಂಧುಮರಾಳ ಸಿಂಧುಬಲ್ಲಾಳರ ವಿ
ಶ್ರುತಮಾನಕಂಜರನ ಜನ
ನುತ ಸಿರಿಯಾಳ್ವನ ಪದಾಬ್ಜಸೇವಕನಪ್ಪೆಂ ೭೧

ಕರಿಕಾಲಚೋಳ ನಿಂಬಿಗ
ಳುರು ಮಲಯಾಧಿಪ ಹಲಾಯುಧರ್ಚಂಗಳೆ ಬಂ

ಗಳು. ೬೮. ಶ್ರೇಷ್ಠರಾದ ವಾಗೀಶರು, ಸಕಲೇಶ್ವರ ಮಾದರಸರು, ಓಹಿಲದೇವ, ಮೋಳಿಗೆಯ ಮಾರಯ್ಯ, (ಅವರ ಧರ್ಮಪತ್ನಿ) ಮಹಾದೇವಮ್ಮ, ಶುಭವನ್ನುಂಟು ಮಾಡುವ ಕೇಶಿರಾಜ, ಇವರು ಅತ್ಯಂತ ಶ್ರೇಷ್ಠವಾದ ನಿಜವೈರಾಗ್ಯ ಸಂಪನ್ನರಾದ ಶಿವ ಭಕ್ತರು. ನಾನು ಇವರ ಮಗ. ೬೯. ತಿರುನೀಲಕಂಠರು, ಪಾಪ ಸಂಹಾರಕನಾದ ದಸರಿದೇವ, ಸೇದಿರಾಜರು, ಏಣಾಧಿನಾಥರು, ಆಶ್ಚರ್ಯವನ್ನುಂಟುಮಾಡುವ ಅಮರ ನೀತಿಗಳು, ಮೊನೆಯಿಡುವರು—ಇವರೆಲ್ಲ ಅತ್ಯಧಿಕವಾದ ಶಾಂತಿಭಕ್ತರು, ನಾನು ಇವರೆಲ್ಲರ ಮಗನು. ೭೦. ಶ್ರೇಷ್ಠ ವೀರನಾದ ಶಂಕರ ದಾಸಿಮಾರ್ಯ, ಸೌಂದರ ಪಾಂಡ್ಯ (ಕೂನಪಾಡ್ಯ) ಆಚಾರ್ಯನಾದ ಏಲೇಶ್ವರದಕೇತಯ್ಯ, ದೃಢನಾದ ಕಲ್ಲಿನಾಥ, ಸೋಮಾರ್ಯನೇ ಮೊದಲಾದ ಶಿವಮತವೇ (ವೀರಶೈವಮತವೇ) ಶೀಲವಾಗಿ ಉಳ್ಳ ಭಕ್ತರುಗಳ ಹಿಂಬಾಲಕನೆನಿಸಿದ್ದೇನೆ. (ಆಳು ಎನಿಸಿದ್ದೇನೆ.) ೭೧. ಅತಿಶಯದಾನಗುಣದ ಶಿವಭಕ್ತರೆನಿಸಿದ ಶ್ರೇಷ್ಠಸಿಂಧುಮರಾಳ, ಸಿಂಧುಬಲ್ಲಾಳ, ಸುಪ್ರಸಿದ್ಧ ಮಾನಕಂಜರ, ಲೋಕದ ಜನರಿಂದ ಶ್ಲಾಘ್ಯನಾದ ಸಿರಿಯಾಳಸೆಟ್ಟಿ—ಇವರ ಪಾದಕಮಲಗಳ ಸೇವಕನೆನಿಸಿದ್ದೇನೆ. ೭೨. ಕರಿಕಾಲ ಚೋಳಮಹಾರಾಜ, ನಿಂಬಿಯಕ್ಕಗಳು, ಶ್ರೇಷ್ಠಮಲೆಯರಾಜ, ಹಲಾ

ಧುರ ಸಾಮವೇದಿಗಳಿವ
ರ್ಪರಹಿತಕರ ಭಕ್ತರಿವರ ತೊಳ್ತಾನಪ್ಪೆಂ ೭೨

ಮೊರಟದ ಬಂಕಯ್ಯಂ ಶಂ
ಕರದಾಸಂ ಮಾಚಿದೇವನಿಱಿವತ್ತಂ ರಾ
ಮರಸಂ ದಾಚಯ್ಯಂ ಭಾ
ಸ್ಕರದೇವಂ ವೀರಭಕ್ತರಿವರಡಿವಿಡಿವೆಂ ೭೩

ಭೂಮಿಯೊಳದ್ಭುತ ಭಕ್ತರ್
ವೇಮಯ್ಯಂ ಮುಸುಟಿ ಚೌಡನಾ ಮಾದರಸಂ
ರೇಮಯ್ಯಂ ಕಿನ್ನರನಭಿ
ರಾಮಂ ಬಾಹೂರ ಬೊಮ್ಮನೆಮಗೆಱೆಯರಿವರ್ ೭೪

ವಿಲಸತ್ಸ್ವತಂತ್ರಭಕ್ತ
ರ್ಫಲದಂಕಂ ಘಟ್ಟಿವಳ್ಳನಾ ಮೆಱೆಮಿಂಡಂ
ಕಲಿಗಣನಾಥಂ ಚಂದಯ
ಹಲಾಯುಧಪ್ರಭುಗಳಿವರ ಕಿಂಕರನಪ್ಪೆಂ ೭೫

ಗುರುಭಕ್ತಂ ಗುರುಭಕ್ತನಾತ್ಮಘನಲಿಂಗಪ್ರಾಣಿ ಸತ್ಯಣ್ಣನಾ
ಚರಭಕ್ತಂ ಕಲಿಕಂಬಯಂ ಭಸಿತನಿಷ್ಠಂ ಜ್ಞಾನಸಂಬಂಧಿ ಸೌಂ
ದರಮಿತ್ರಂ ಗಿರಿಶಾಕ್ಷನಿಷ್ಠನುರುಮಾರಂ ಪಾದತೀರ್ಥಪ್ರಿಯಂ
ಚರಶೇಷಪ್ರಿಯನಪ್ಪ ಬಾಚರಸರೀ ಸದ್ಭಕ್ತರಂ ಮದಿಪೆಂ ೭೬

ಯುಧ, ಚಂಗಳೆ (ಸಿರಿಯಾಳನ ಧರ್ಮಪತ್ನಿ), ದೃಢಭಕ್ತೆಯ ಸಾಮವೇದಿ, ಇವರೆಲ್ಲ ಪರರಹಿತಕ್ಕಾಗಿ ಕಾರ್ಯಮಾಡಿದ ಶಿವಭಕ್ತರು. ಇವರೆಲ್ಲರ ಸೇವಕನು ನಾನಾಗಿದ್ದೇನೆ. ೭೩. ಮೊರಟದಬಂಕಯ್ಯ, ಶಂಕರದಾಸಿಮಾರ್ಯ, ಮಡಿವಳಮಾಚಿದೇವ, ಇರಿವತ್ತ, ರಾಮರಸ (ರಾಮಿದೇವ), ನಾಚಯ್ಯ ಬಾಚರಸದೇವ (ಭಾಸ್ಕರದೇವ), ಇವರೆಲ್ಲ ವೀರರಾದ ಭಕ್ತರು ಇವರ ಪಾದಗಳನ್ನು ಹಿಡಿಯುತ್ತೇನೆ. ೭೪. ಭೂಮಿಯಲ್ಲಿ ಅದ್ಭುತಭಕ್ತರೆನಿಸಿದ ವೇಮಯ್ಯ, ಮುಸುಟಿಯ ಚೌಡಯ್ಯ, ಆ ಮಾದರಸರು, ಕದಿರ ರೇಮಯ್ಯ, ಕಿನ್ನರಿಯ ಬೊಮ್ಮಯ್ಯ, ಮನೋಹರನಾದ ಬಾಹೂರಬೊಮ್ಮಯ್ಯ–ಇವರು ನಮಗೆ ಒಡೆಯರುಗಳು. ೭೫. ಪ್ರಕಾಶಮಾನರಾದ ಸ್ವತಂತ್ರಭಕ್ತರಾದವರು ಫಲವೇ ಅಂಕವಾಗಿಉಳ್ಳಘಟ್ಟಿವಾಳಯ್ಯ, ಆಮೆರೆಮಿಂಡದೇವ, ಕಲಿಗಣನಾಥ, ಚೆಂದಯ್ಯ (ನುಲಿಯ ಚಂದಯ್ಯ) ಹಲಾಯುಧಪ್ರಭುಗಳು. (ನಾನು) ಇವರ ಸೇವಕನಾಗುತ್ತೇನೆ. ೭೬. ಗುರುವಿನಲ್ಲಿ ಅತ್ಯಂತ ಭಕ್ತಿ ಪ್ರಕಟಿಸಿದ ಗುರುಭಕ್ತನೂ, ತನ್ನ ಶ್ರೇಷ್ಠವಾದ ಆತ್ಮಲಿಂಗವೇ ಪ್ರಾಣವಾಗಿಉಳ್ಳ ಸತ್ಯಣ್ಣ, ಆ ಜಂಗಮಭಕ್ತನಾದ ಕಲಿಕಂಬಯ್ಯ, ಭಸ್ಮದಲ್ಲಿ ನಿಷ್ಠೆತೋರಿದ ಜ್ಞಾನಸಂಬಂಧಿ, ರುದ್ರಾಕ್ಷಧಾರಣೆಯಲ್ಲಿ ನಿಷ್ಠೆತೋರಿಸಿದ ಸೌಂದರಮಿತ್ರ, ಗುರುಲಿಂಗಜಂಗಮ ಪಾದತೀರ್ಥದಲ್ಲಿ ಪ್ರೀತಿಯುಳ್ಳ ಶ್ರೇಷ್ಠಮಾರಯ್ಯ, ಜಂಗಮರ ಶೇಷ ಪ್ರಸಾದದಲ್ಲಿ ಪ್ರೀತಿಯನ್ನುಳ್ಳ ಬಾಚರಸ ಈ ಶ್ರೇಷ್ಠಭಕ್ತರಿಗೆಲ್ಲ

ಇಳೆಯೊಳೆ ಮಾಣದಿಂತು ಚಲದಿಂ ಬಲದಿಂದತಿನಿಷ್ಠೆಯಿಂ ಮನಂ
ಗೊಳಿಸುವ ಭಕ್ತಿಯಿಂ ತನುಮನೋವನಿತಾಸುತಮುಖ್ಯವಸ್ತುಸಂ
ಕುಳಮನವಂಚಕತ್ವದಿನೊಲ್ದು ಭವಂಗೆ ಸಮರ್ಪಿಸುತ್ತೆ ನಿ
ಶ್ಚಳಸುಖಮಾಳ್ದ ಸರ್ವಶಿವಭಕ್ತರ ಪಾದುಕೆಯಾಂಪ ಭಕ್ತನಾಂ ೭೭

ಪಲವಂದದಾಚರಣೆಗಳಿ
ನಲಸದೆ ಪದೆದಂದುಮಿಂದು ಮುಂದಭವನನೊ
ಲ್ದೊಲಿಸಿದೊಲಿಸಲ್ಕೆ ನೆರೆದಿ
ರ್ದೊಲಿಯಿಪ ಶಿವಶರಣರೆಲ್ಲರಂಘ್ರಿಗೆ ಮಣಿವೆಂ ೭೮

ಜಯ ಜಯ ದೇವ ಸುಧಾಮಯಧಾಮ ಯಶಸ್ಕ ಮಹಸ್ಕಲಿತಾಕ್ಷ ನಿರಾ
ಮಯ ಮಹಿತಾಂಗ ಸದಂಗನ ಪುಂಗವವಾಹ ವಿಮೋಹ[1]ವಿಮೋಹ[1] ಕುಶೇ
ಶಯನಯನೇಕ್ಷಣ ಸಾರಸಸಾದಸಮರ್ಚಿತಪಾದಪಯೋಜ ಸದಾ
ಶ್ರಯ ಭಯದೂರ ಕುಮಾರ ಕುಮಾರಸುಧಾಕರಶೇಖರ ಶೂಲಧರಾ ೭೯

ನಮಸ್ಕರಿಸುತ್ತೇನೆ. ೭೭. ಭೂಮಂಡಲದಲ್ಲಿ ಈ ರೀತಿಯಲ್ಲಿ ತಪ್ಪದೆ ಚಲದಿಂದಲೂ, ಶಕ್ತಿಪ್ರದರ್ಶನದಿಂದಲೂ, ಅತ್ಯಂತ ನಿಷ್ಠೆಯಿಂದಲೂ ಮನಸ್ಸನ್ನಾಕರ್ಷಿಸುವ ಭಕ್ತಿ ಜೀವನದಿಂದ ತನ್ನ ದೇಹ, ಮನಸ್ಸು, ಹೆಂಡಿರು, ಮಕ್ಕಳೇ ಮೊದಲಾದ ಪ್ರಮುಖ ವಸ್ತು ಸಮೂಹವನ್ನು ನಿರ್ವಂಚಕಭಾವದಿಂದ ಪ್ರಸಿದ್ಧವಾಗಿ ಶಿವನಿಗೆ ಸಮರ್ಪಣೆ ಮಾಡುತ್ತ ಶಾಶ್ವತವಾದಸುಖವನ್ನು ಹೊಂದಿದ ಸಮಸ್ತ ಶಿವನಭಕ್ತರ ಪಾದುಕೆಗಳನ್ನು ಹೊರುವ ಭಕ್ತನು ನಾನಾಗಿದ್ದೇನೆ. ೭೮. ಅನೇಕ ಪ್ರಕಾರದ ಭಕ್ತಿಯ ಆಚರಣೆ ಗಳಿಂದ ಆಲಸ್ಯಪಡದೆ, ಸಂತೋಷದಿಂದ ಹಿಂದಿನಕಾಲದಲ್ಲಿ, ಈ ಕಾಲದಲ್ಲಿ ಮತ್ತು ಮುಂದಿನದಿನಗಳಲ್ಲಿ ಪ್ರೀತಿಯಿಂದ ಪರಮೇಶ್ವರನನ್ನು ಒಲಿಸಿಕೊಂಡಂಥ, ಒಲಿಸಿಕೊಳ್ಳು ವುದಕ್ಕೆ ಪ್ರಯತ್ನಿಸುವಂಥ, ಒಲಿಸಿಕೊಳ್ಳುತ್ತಿರುವ ಸಮಸ್ತಶಿವಶರಣರ ಪಾದಗಳಿಗೆ ನಮಸ್ಕರಿಸುತ್ತೇನೆ. ೭೯. ಜಯ ! ಜಯ ! ಪರಮೇಶ್ವರನೇ, ಅಮೃತ ಸ್ವರೂಪ ವಾದ ಚಂದ್ರನಕಿರಣಗಳಂತಹ ಕೀರ್ತಿಯುಳ್ಳವನೇ, ತೇಜಸ್ಸಿನಿಂದ (ಮಹಃ) ಕೂಡಿದ ಹಣೆಗಣ್ಣುಳ್ಳವನೇ, ರೋಗ ರಹಿತನೇ, ಶ್ರೇಷ್ಠಳಾದ ಪಾರ್ವತೀದೇವಿಯೆಂಬ ಹೆಂಡತಿ ಯೊಡನೆ ಒಡವರೆದ ಅಂಗವುಳ್ಳವನೇ (ಅರ್ಧನಾರೀಶ್ವರನೇ) ವೃಷಭೇಶ್ವರನನ್ನು ವಾಹನವನ್ನಾಗಿ ಉಳ್ಳವನೇ, ವಿಶೇಷವಾದ ಮೋಹದಿಂದಾಗುವ ಗೊಂದಲದಿಂದ ದೂರನಾದವನೇ, ಕಮಲನೇತ್ರನಾದ ವಿಷ್ಣುವಿನ ಕಣ್ಣೆಂಬ ಕಮಲದಿಂದ ಪೂಜೆಮಾಡಿಸಿ ಕೊಂಡ ಪಾದಕಮಲವುಳ್ಳವನೇ, ಸತ್ಪುರುಷರಿಗೆ ಆಧಾರನಾದವನೇ, ಭಯದಿಂದ ದೂರ ನಾದವನೇ, ಕುಮಾರಸ್ವಾಮಿಯನ್ನೇ ಕುಮಾರನನ್ನಾಗಿ ಉಳ್ಳವನೇ, ಚಂದ್ರಶೇಖರನೇ,

---

1 × (ದ)

ಕುಂಡಲೀಶ್ವರಕುಂಡಲಾಂಚಿತಗಂಡಮಂಡಲ ಖಂಡಿತಾ
ಖಂಡಸಾಹಸದಂಡಭೃದ್ಭುಜದಂಡ ಚಂಡಕರಪ್ರಭಾ
ಮಂಡಿತಾಂಗ ಸದಂಡಜಧ್ವಜಕಾಂಡರಕ್ಷಿತಕಾಂಡದೋ
ರ್ದಂಡ ಪಾಲಯ ಚಂಡಿಕಾಮುಖಪುಂಡರೀಕದಿವಾಕರಾ ೮೦

ಮತಿಯಿಂದಂ ಭಕ್ತಿಯಿಂದಂ ಛಲದೆ ಬಲದೆ ವೈರಾಗ್ಯದಿಂ ಧ್ಯಾನದಿಂ ಸ
ನ್ನುತಿಯಿಂದಂ ಶ್ರದ್ಧೆಯಿಂದಂ ಜಪ[ದ] ತಪದನುಷ್ಠಾನದಿಂ ದೇವ ನಿಮ್ಮಂ
ಕ್ಷಿತಿಯೊಳ್ಭಕ್ತರ್ಸಮರ್ಥರ್ಬಿಡದೊಲಿಸಿದರಾಂ ದೀನನೇಗೆಯ್ವೆನಸ್ಮ
ತ್ಪತಿಧರ್ಮಂ ನಿಮ್ಮದೆನ್ನಂ ಪೊರೆ ಪೊರೆ ಪುರುಳುಂ ನೋಡದೆನ್ನೊ[1]ಳ್ಪುರಾರೀ[1] ೮೧

ತ್ರಿಶೂಲಧರನೇ, (ಪೊರೆ ! ಪೊರೆ !) ೮೦. ಶ್ರೇಷ್ಠಕರ್ಣಾಭರಣವಾಗಿರುವ ಆದಿಶೇಷನಿಂದ ಪೂಜ್ಯವಾದ ಕೆನ್ನೆ (ಕಪೋಲ) ಭಾಗವುಳ್ಳವನೂ, ಅಖಂಡಸಾಹಸದ ಯಮನ, ಭುಜದಂಡಗಳನ್ನು ಖಂಡಿಸಿದವನೂ (ಕತ್ತರಿಸಿಹಾಕಿದವನೂ)ಸೂರ್ಯನ ಕಾಂತಿಯಂತಿರುವ ದೇಹಕಾಂತಿಯಿಂದ ಅಲಂಕರಿಸಲ್ಪಟ್ಟವನೂ, ಶ್ರೇಷ್ಠವಾದ ಗರುಡ (ಅಂಡಜ)ನೇ ಧ್ವಜವಾಗಿ ಉಳ್ಳ ವಿಷ್ಣುವನ್ನು ಬಾಣ (ಕಾಂಡ)ವನ್ನಾಗಿ ಮಾಡಿ ದಂಡದಂತಿರುವ ಬಾಹುಗಳಿಂದ ಧರಿಸಿ ಸಮಸ್ತ ಬ್ರಹ್ಮಾಂಡವನ್ನು ರಕ್ಷಿಸಿದವನೂ, ಚಂಡಿದೇವಿ (ಪಾರ್ವತೀದೇವಿ)ಯ ಮುಖವೆಂಬ ಕಮಲಕ್ಕೆ ಸೂರ್ಯನೋಪಾದಿಯಲ್ಲಿರುವವನೂ ಆದ ಶಿವನೇ (ನನ್ನನ್ನು) ರಕ್ಷಿಸು. [ಕುಂಡಲೀಶ್ವರ = ಸರ್ಪಶ್ರೇಷ್ಠ ನಾದ ಆದಿಶೇಷನು ; ಕುಂಡಲಾಂಚಿತ–ಕುಂಡಲವಾಗಿ ಪೂಜ್ಯತೆ ಪಡೆದಿರುವ ; ದಂಡಭೃತ್–ಯಮ ; ಸದಂಡಜ = ಸತ್+ಅಂಡಜ—ಶ್ರೇಷ್ಠ ಪಕ್ಷಿಯಾದ ಗರುಡ ; ಕಾಂಡ—ಕ + ಅಂಡ = ಬ್ರಹ್ಮನಿಂದ ನಿರ್ಮಾಣಗೊಂಡ ಅಂಡ ಅಂದರೆ ಬ್ರಹ್ಮಾಂಡ ; ಚಂಡಿಕಾ + ಮುಖ + ಪುಂಡರೀಕ + ದಿವಾಕರಾ—ಚಂಡಿಕೆಯ ಮುಖವೆಂಬ ಕಮಲಕ್ಕೆ ಸೂರ್ಯಪ್ರಾಯನಾದ ಶಿವನೇ ;] ೮೧. ಹೇ ದೇವಾ, ಬುದ್ಧಿಯಿಂದ, ಭಕ್ತಿಯನ್ನಾಚರಿಸುವುದರಿಂದ, ಛಲದಿಂದ, ಬಲದಿಂದ, ವೈರಾಗ್ಯ ಭಾವದಿಂದ, ಧ್ಯಾನಮಾಡುವಿಕೆಯಿಂದ, ಶ್ರೇಷ್ಠವಾಗಿ ಸ್ತೋತ್ರಮಾಡುವುದರಿಂದ, ಶ್ರದ್ಧೆಯಿಂದ, ಜಪದಿಂದ, ತಪಸ್ಸನ್ನಾಚರಿಸುವಿಕೆಯಿಂದ ನಿಮ್ಮನ್ನು ಭೂಮಂಡಲದಲ್ಲಿ ಸಮರ್ಥರಾದ ಭಕ್ತರುಗಳು ತಪ್ಪದೆ ಒಲಿಸಿಕೊಂಡರು. ನಾನು (ಏನೂ ಇಲ್ಲದ) ಬಡವನು. ಏನುಮಾಡಲಿ ! ನನ್ನ ಒಡೆಯನಾಗಿರುವುದು ನಿಮ್ಮಧರ್ಮ. (ನೀವೆ ನನ್ನ ಒಡೆಯರೆಂದು ಮಾತ್ರನಂಬಿರುವವನು ನಾನು) ಹೇ ತ್ರಿಪುರ ಸಂಹಾರಿಯೇ

---

1 ಳ್ವ್ಯಪೇಂದ್ರಾ ಎಂದು ಮಾತ್ರ ಪಾಠಾಂತರದಿಂದ ಈ ಪದ್ಯವು 'ದ' ಪ್ರತಿಯಲ್ಲಿ ಈ ಆಶ್ವಾಸದ ೨ನೆಯ ಪದ್ಯವಾಗಿದೆ.

ಶಿವ ಶಿವ ದೇವದೇವ ಪರಮೇಶ ರಮೇಶಸುಬಾಣ ಬಾಣದಾ
ನವ ನವಸಂಪದಪ್ರದ ಸುಧಾಮಸುಧಾಮ ಭವಾರಿ ವಾರಿಜೋ
ದ್ಭವಭವವಂದ್ಯ ವಂದ್ಯ ಮೃಗಲಕ್ಷಣಲಕ್ಷಣ ಗೋಪ ಗೋಪಬಾಂ
ಧವ ಧವಳಾಂಗ ಕುಂಡಲಿಪಕುಂಡಲ ಪಾಲಿಪುದೆನ್ನನೀಶ್ವರಾ ೮೨

ಕಾಮಸಾಮಜಸಾಮಜಾರಿ ಜಿತಾಮಯಂ ಕರುಣಾಮಯಂ
ಸೋಮತಾಮರಸಾಪ್ತಸಪ್ತಶಿಖಾಕ್ಷನಂಧಕಬಂಧಕಂ
ಭೂಮಧಾಮ ಜಟಾಧರಂ ಗಣಪೋಷಣಂ ಗುಣಭೂಷಣಂ
ಸ್ವಾಮಿ ಕಾಮಿತಮೀಗೆ ಭಕ್ತಜನಕ್ಕೆ ವೀತಭವಂ ಶುಭಂ ೮೩

ಶುಭವಿಭವಮನಭವಂ ಕುಡು
ಗೆ ಭವಾನಿ ಸುಸಂಪದಂಗಳಂ ಮಾಳ್ಕೆ ಪೊದ

ನನ್ನಲ್ಲಿ ಯಾವ ತಿರುಳನ್ನೂ ನೋಡದೆ ನನ್ನನ್ನು ರಕ್ಷಿಸು ! ರಕ್ಷಿಸು ! ೮೨. ಹೇ ಮಂಗಳಕರನಾದ ಶಿವನೇ, ದೇವತೆಗಳಿಗೆಲ್ಲ ದೇವನೆನಿಸಿದವನೇ, ಪರಮೇಶ್ವರನೇ, ರಮಾಪತಿಯಾದ ವಿಷ್ಣುವೆಂಬ ಶ್ರೇಷ್ಠ ಬಾಣವುಳ್ಳವನೇ, ಬಾಣನೆಂಬ ರಾಕ್ಷಸನಿಗೆ ನೂತನ ಸಂಪತ್ತನ್ನು ಅನುಗ್ರಹಿಸಿದವನೇ, ಅತಿಶಯವಾದ ತೇಜಸ್ಸಿನಿಂದ ಕೂಡಿದ ಸೂರ್ಯಮಂಡಲ ಮಧ್ಯಸ್ಥನಾದವನೇ (ಸೂರ್ಯಮಂಡಲವೇ ಸ್ಥಾನವಾಗಿ ಉಳ್ಳವನೇ), ಜನನ ಮರಣಾತ್ಮಕ ಸಂಸಾರಕ್ಕೆ ಶತ್ರುವೆನಿಸಿದವನೇ ಕಮಲದಿಂದ ಉದ್ಭವಿಸಿದ ಬ್ರಹ್ಮಪುತ್ರನಾದಂದಿನಿಂದ ನಮಸ್ಕರಿಸಿಕೊಳ್ಳಲ್ಪಡುವವನೇ, ಸಮಸ್ತ ಲೋಕಗಳಿಂದ ನಮಸ್ಕರಿಸಲ್ಪಡುವವನೇ, ಮೃಗವೇ ಲಕ್ಷಣವಾಗಿ ಉಳ್ಳ ಚಂದ್ರನನ್ನು ಧರಿಸುವಿಕೆಯಿಂದ ಚೆಂದಕಾಣುವವನೇ, ವೇದರಕ್ಷಕನೇ, ಗೋವುಗಳಿಗೆಲ್ಲ ಪತಿಯೆನಿಸಿದ ವೃಷಭನನ್ನು ಬಂಧುವಾಗಿ ಉಳ್ಳವನೇ, ಶುಭ್ರವಾದ ಅಂಗವುಳ್ಳವನೇ, ಸರ್ಪಗಳಿಗೆಲ್ಲ ಪತಿಯೆನಿಸಿದ ಆದಿಶೇಷನೇ ಕರ್ಣಾಭರಣವಾಗಿ ಉಳ್ಳ ಈಶ್ವರನೇ; ನನ್ನನ್ನು ರಕ್ಷಿಸು. [ಗೋಪ=ವೇದರಕ್ಷಕ ಗೋಪಬಾಂಧವ–ಗೋವುಗಳಿಗೆ ಪತಿಯಾದ ನಂದಿಯೇ ಬಾಂಧವನೆನಿಸಿದವ] ೮೩. ಮನ್ಮಥನೆಂಬ ಮದ್ದಾನೆಗೆ ಸಿಂಹಪ್ರಾಯನಾದವನೂ ಭವವೆಂಬ ರೋಗವನ್ನು ಗೆದ್ದವನೂ, ಕರುಣಾಮಯನೂ, ಚಂದ್ರ, ಸೂರ್ಯ, ಅಗ್ನಿ ಇವುಗಳೇ ನೇತ್ರವಾಗಿ ಉಳ್ಳವನೂ, ಅಂಧಕಾಸುರವನ್ನು ಬಂಧನಕ್ಕೊಳಪಡಿಸಿದವನೂ ಮಹಾತೇಜಸ್ವಿಯೂ, ಜಟಾಧರನೂ, ಶಿವಗಣಗಳನ್ನು ಪೋಷಿಸುವವನೂ, ಸದ್ಗುಣಗಳಿಂದ ಭೂಷಣಗೊಂಡವನೂ, ಪಾಪವನ್ನು ಹೋಗಲಾಡಿಸಿದವನೂ, ಮಂಗಳಕರನೂ ಆದ ಸ್ವಾಮಿಯು ಭಕ್ತಸಮೂಹಕ್ಕೆ ಇಷ್ಟಾರ್ಥಸಿದ್ಧಿಯನ್ನು ಕೊಡಲಿ. (ಕಾಮಸಾ+ಮಜ+ಸಾಮಜಾರಿ–ಕಾಮನೆಂಬ ಆನೆಗೆ, ಆನೆಗಳ ವೈರಿಯಾದ ಸಿಂಹ; ಸೋಮ+ತಾಮರಸಾಪ್ತ+ಸಪ್ತಶಿಖ+ಅಕ್ಷ=ಚಂದ್ರ, ಕಮಲಕ್ಕೆ ಆಪ್ತನಾದ ಸೂರ್ಯ, ಅಗ್ನಿಗಳು ಕಣ್ಣಾಗಿ ಉಳ್ಳವ–ಶಿವ; ಭೂಮಧಾಮ=ಅತಿಶಯವಾದ ತೇಜಸ್ಸುಳ್ಳವನು. ೮೪. ಲೋಕದ ಸಜ್ಜನ ಸಮೂಹಕ್ಕೆ ಸದಾ ಕಾಲವೂ, ಪರಮೇಶ್ವರನು ಮಂಗಳಕರವಾದ ಐಶ್ವರ್ಯವನ್ನು ಕೊಡಲಿ

ಳ್ವಿಭವದನನೀಗೆ ನಿರ್ವಿ
ಘ್ನಭಾವಮಂ ಸುಜನವಿತತಿಗಿಳೆಯೊಳಜಸ್ರಂ ೮೪

ಪರಮಕೃಪಾಕರಂ ಪ್ರಬಳದೇಶಿಕವಂಶಸರೋಜಭಾಸ್ಕರಂ
ದುರಿತನಿವಾರಣ ದುರಭಿಮಾನಮತಾಂಬುಜವ ತ್ತವಾರಣಂ
ವರಗುಣಭೂಷಣಂ ವಿರಹಿತೇಷಣನಾಗಮವಿದ್ವರೇಣ್ಯ ಮ
ದ್ಗುರು ಚಿಕವೀರದೇಶಿಕಶಿಖಾಮಣಿ ರಕ್ಷಿಸುಗೆಮ್ಮನಾವಗಂ ೮೫

ಬಸವಾಂಘ್ರಿತ್ರಯಕೊಳ್ಪಿನಿಂ ಸಮೆದು ಮೂಜಿಂ ಕಬ್ಬಮಂ ಮಾಣದ
ರ್ಪಿಸಿದರ್ಸೋಮಕವೀಂದ್ರಭೀಮಕವಿಗಳ್ ಶ್ರೀಶಂಕರಾರಾಧ್ಯರಿಂ
ಪೆಸೆವನ್ನಂ ನೆಗಳ್ದೊಂದು ಕಬ್ಬಮನಿದಂ ವಿಕ್ಕಂಘ್ರಿಗಾದಂ ಸಮ
ರ್ಪಿಸಿದಂ ಸತ್ಕೃಪೆಯಿಂ ಷಡಕ್ಷರಿಶಿವಾಚಾರ್ಯಂ ಮಹಾಭಕ್ತಿಯಿಂ ೮೬†

ಧರಣೀಭಾಗದೊಳೀ ಪುರಾಣಮನಮಂದಾನಂದದಿಂದೋದುವಾ
ದರದಿಂದಾಲಿಸುವರ್ಥಮಂ ಪದೆದು ಪೇಳ್ವತ್ಯಂತ ಶಿಷ್ಟರ್ಗೆ ಶಾಂ

(ಅಷ್ಟೈಶ್ವರ್ಯಗಳನ್ನು ಕೊಡಲಿ); ಪಾರ್ವತಿಯು ಶ್ರೇಷ್ಠವಾದ ಸಂಪತ್ತನ್ನುಂಟುಮಾಡಲಿ; ಪ್ರಕಾಶಿಸುವ ಗಣಪತಿಯು ವಿಘ್ನವಿಲ್ಲದಿರುವಿಕೆಯನ್ನು ಉಂಟು ಮಾಡಲಿ. ೮೫. ಪವಿತ್ರ ಕೃಪೆಯನ್ನುಂಟುಮಾಡುವ, ಪ್ರಬಲರಾದ ಗುರುಶ್ರೇಷ್ಠರಾದವರ ವಂಶವೆಂಬ (ಪರಂಪರೆಯೆಂಬ) ಕಮಲಗಳಿಗೆ ಸೂರ್ಯನೋಪಾದಿಯಲ್ಲಿರುವ. ಪಾಪನಿವಾರಕನೆನಿಸಿದ, ದುರಭಿಮಾನದಿಂದ ಕೂಡಿದ ಮತಗಳೆಂಬ ಕಮಲಗಳಿಗೆ ಮದೋನ್ಮತ್ತ ಆನೆಯಂತಿರುವ, ಶ್ರೇಷ್ಠವಾದ ಸದ್ಗುಣಗಳಿಂದ ಅಲಂಕಾರಗೊಂಡಿರುವ, ಅರ್ಥೇಷಣ, ಪುತ್ರೇಷಣ, ದಾರೇಷಣಗಳೆಂಬುವನ್ನು ದೂರೀಕರಿಸಿದ, ಆಗಮ ವಿದ್ಯೆಯನ್ನು ತಿಳಿದವರಲ್ಲಿ ಶ್ರೇಷ್ಠನೆಂದೆನಿಸಿದ ನನ್ನಗುರುವಾದ ಗುರುವರ್ಗಕ್ಕೆಲ್ಲ ಶಿರೋರತ್ನವೆನಿಸಿದ ಚಿಕ್ಕವೀರ ಗುರುವು ನಮ್ಮನ್ನು ಸದಾ ರಕ್ಷಿಸಲಿ. ೮೬. ಆದಿ ವೃಷಭನ ಮೂರುಪಾದಗಳಿಗೆ ಮೂರು ಕಾವ್ಯಗಳನ್ನು ಚೆನ್ನಾಗಿ ರಚನೆ ಮಾಡಿ, ಪಾಲ್ಕುರಿಕೆ ಸೋಮನಾಥ ಕವಿಶ್ರೇಷ್ಠನೂ, ಭೀಮ ಕವಿಯೂ, ಕಂಚಿಯ ಶಂಕರಾರಾಧ್ಯರೂ ಅರ್ಪಿಸಿದರು. ಮಾಧುರ್ಯವು ಶೋಭಿಸುವಂತೆ ಪ್ರಸಿದ್ಧವಾದ ಇನ್ನೊಂದು ಕಾವ್ಯವಾದ ಈ ವೃಷಭೇಂದ್ರವಿಜಯ (ಅಥವಾ ಬಸವರಾಜವಿಜಯ) ವೆಂಬ ಹೆಸರಿನ ಈ ಕಾವ್ಯವನ್ನು ಉಳಿದ ಇನ್ನೊಂದು ಪಾದಕ್ಕೆ (ನಾಲ್ಕನೆಯ ಪಾದಕ್ಕೆ) ರಚಿಸಿ, ಮಹಾಭಕ್ತಿಭಾವದಿಂದ ಷಡಕ್ಷರಿ ಎಂಬ ಹೆಸರಿನ ಶಿವಾಚಾರ್ಯನು ಪರಮಾತ್ಮನ ಕೃಪಾ ವಿಶೇಷದಿಂದ ಸಮರ್ಪಿಸಿದನು. ೮೭. ಭೂಮಂಡಲದಲ್ಲಿ ಈ ವೃಷಭೇಂದ್ರ ವಿಜಯವೆಂಬ ಕಾವ್ಯವನ್ನು ವಿಶೇಷವಾದ ಆನಂದದಿಂದ ಓದುವ, ಆದರಭಾವದಿಂದ ಕೇಳುವ, ಅರ್ಥವನ್ನು ಸಂತೋಷದಿಂದ ಹೇಳುವ, ಅತ್ಯಂತ ಶಿಷ್ಟರೆನಿಸಿರುವ ಜನರಿಗೆ

---

† ಈ ಪದ್ಯ ಗ, ಚ ಪ್ರತಿಗಳಲ್ಲಿ ಇರುವುದಿಲ್ಲ

ಕರಿಯಾಳ್ಕಂ ಸಲೆ ಮಾಳ್ಕೆ ಬೇಳ್ಪ ವರಮಂ ನಿತ್ಯಾಯುವಂ ಶ್ರೀಯುಮಂ
ಪರಮಾನಂದಮನಾತ್ಮಭಕ್ತಿಯೊಲವಂ ವಿಶ್ವಾಧಿಕಂ ಶಂಕರಂ ೮೭

ಸೋಮಸಾಕಂ ಸೋಮಾನುದ್ಯದ್ವೃಷನಟಸ[1]ಶಿವಂ ಭಿಕ್ಷು ಕಾಮಾಂತಕಾಭ್ರ
ಗ್ರಾಮೋದ್ರಾರ್ಯರ್ಣಬ್ಜಜೇಷ್ಟ್ಯಚ್ಯುತರಿಪು ವಪುರರ್ಧಾಂಗನಂ ವ್ಯಾಧಲೀಲೋ

ಪಾರ್ವತೀಪತಿಯು ಅವರು ಬೇಡುವ ವರವನ್ನೂ, ದೀರ್ಘವಾದ ಆಯುಷ್ಯವನ್ನೂ, ಸಂಪತ್ತನ್ನೂ, ಶ್ರೇಷ್ಠವಾದ ಆನಂದವನ್ನೂ, ಪರಮೇಶ್ವರನಲ್ಲಿ ಭಕ್ತಿಯ ಪ್ರೀತಿಯನ್ನೂ, ಕ್ಕೆಲ್ಲ ಶ್ರೇಷ್ಠನೆನಿಸಿರುವ (ದೊಡ್ಡವನೆನಿಸಿರುವ) ಶಂಕರನು, ಚೆನ್ನಾಗಿ ಉಂಟುಮಾಡು ವವನಾಗಲಿ. ೮೮. ಚಂದ್ರನನ್ನು ಗುರುತನ್ನಾಗಿಧರಿಸಿದ '**ಚಂದ್ರಕಳಾಧರ ಲೀಲೆ**' ಉಮಾಸಹಿತನಾದ '**ಉಮಾಮಹೇಶ್ವರಲೀಲೆ**'; ಶ್ರೇಷ್ಠವಾದ ವೃಷಭನನ್ನು ವಾಹನ ವನ್ನಾಗಿ ಮಾಡಿಕೊಂಡ '**ವೃಷಭವಾಹನಲೀಲೆ**' ತಾಂಡವನೃತ್ಯಮಾಡಿದ '**ತಾಂಡವಲೀಲೆ**' **ಶಿ**ವನು ಮಂಗಳ ಸಮೇತನಾದ'**ಗಿರಿಜಾ ಕಲ್ಯಾಣಲೀಲೆ**'; ಭಿಕ್ಷುಕನಾಗಿ ನಟಿಸಿದ '**ಭಿಕ್ಷಾಟನ ಲೀಲೆ**'; ಮನ್ಮಥನಿಗೆ ಅಂತಕನಾಗಿ ವರ್ತಿಸಿದ '**ಮಾರಹರಲೀಲೆ**'; ಯಮನನ್ನು ಸಂಹರಿ ಸಿದ '**ಕಾಲಾಂತಕಲೀಲೆ**'; ಅಂತರಿಕ್ಷದಲ್ಲಿದ್ದ ಮೂರುಗ್ರಾಮಗಳನ್ನು ಸುಟ್ಟು ಉರುಪಿದ '**ತ್ರಿಪುರ ಸಂಹಾರ ಲೀಲೆ**'; ಇಂದ್ರನ ವೈರಿಯಾದ '**ಜಲಂಧರ ಸಂಹಾರಲೀಲೆ**'; (ತಾನು ಸೃಷ್ಟಿಸಿದ ಸರಸ್ವತಿಯನ್ನೇ ಮೋಹಿಸಿದ) ಬ್ರಹ್ಮನನ್ನು ಸಂಹಾರ ಮಾಡಿದ '**ಅಜಾರಿ ಲೀಲೆ**'; ದಕ್ಷ ಬ್ರಹ್ಮನ ಯಜ್ಞವನ್ನು ವೀರಭದ್ರನಾಗಿ ನಾಶಪಡಿಸಿದ '**ದಕ್ಷಾಧ್ವರಹರ ಲೀಲೆ**'; ನಾರಸಿಂಹಾವತಾರ ಮಾಡಿದ್ದ ವಿಷ್ಣುವನ್ನು ಶರಭನಾಗಿ ಸಂಹರಿಸಿದ '**ಶರಭಾವ ತಾರ ಲೀಲೆ**'; ಅರ್ಧ ದೇಹವನ್ನು ಪಾರ್ವತಿಗೆ ಕೊಟ್ಟ '**ಉಮಾಮಹೇಶ್ವರಲೀಲೆ**'; ವ್ಯಾಧನಾಗಿ ಭಕ್ತನಾದ ಅರ್ಜುನನಿಗೆ ವರಪ್ರದಾನ ಮಾಡಿದ '**ಶಬರಶಂಕರಲೀಲೆ**'; ಉದ್ದಾಮನಾದ ತ್ರಿವಿಕ್ರಮನನ್ನು ಸಂಹರಿಸಿ ಅವನ ಬೆನ್ನು ಮೂಳೆಯನ್ನು ಧರಿಸಿದ '**ಕಂಕಾಳಧರ ಲೀಲೆ**' ಚಂಡೇಶನೆಂಬ ಭಕ್ತನಿಗೆ ವರಪ್ರದಾನ ಮಾಡಿದ '**ಚಂಡೇಶಾನು ಗ್ರಹಲೀಲೆ**'; ಸಮುದ್ರಮಥನ ಕಾಲದಲ್ಲಿ ಹುಟ್ಟಿದ ಭಯಂಕರ ಕಾಲಕೂಟ ವಿಷವನ್ನು ಧರಿಸಿದ '**ವಿಷಧರಲೀಲೆ**' ; ವಿಷ್ಣು, ಗಣಪತಿ, ಷಣ್ಮುಖ ಇವರುಗಳಿಗೆ ಕ್ರಮವಾಗಿ ಚಕ್ರ ವನ್ನು ಕೊಟ್ಟು '**ಚಕ್ರಧರಲೀಲೆಯನ್ನೂ**' ಗಣಪತಿಗೆ ಶಿವಗಣಗಳ ಯಾಜಮಾನ್ಯವನ್ನು ಕೊಟ್ಟ '**ವಿಘ್ನಪ್ರಸಾದಲೀಲೆ**' ಯನ್ನೂ, ತನ್ನ ವೀರ್ಯದಿಂದಲೇ ಷಣ್ಮುಖನಾಗಿ ಬೆಳೆದು ತಾರಕಸಂಹಾರ ಮಾಡಿಸಿದ '**ಉಮಾಸ್ಕಂಧಲೀಲೆ**', ಆಕಾಶದಲ್ಲಿ ನಿಂತ ಒಂದೇ ಪಾದವುಳ್ಳ '**ಏಕಪಾದ ಲೀಲೆ**', ಸುಖವನ್ನುಂಟು ಮಾಡುವ '**ಸುಖಾವಹಲೀಲೆ**,' '**ದಕ್ಷಿಣಾ ಮೂರ್ತಿ ಲೀಲೆ**', ಉರಿಲಿಂಗಾಕಾರನಾಗಿ '**ಲಿಂಗೋದ್ಭವಲೀಲೆ**'–(ಹೀಗೆ ಇಪ್ಪತ್ತೈದು ಲೀಲೆಗಳಿಂದ

[1] ನು (ಅ, ಗ, ಜ)

ದ್ದಾವಃಂ ಕಂಕಾಳಿ ಚಂಡೇಷ್ಟದ ವಿಷಪಹರೀಭಾಸ್ಯಷ್ವಕ್ತ್ರದಾತಂ
ವ್ಯೋಮೋತ್ಥೈಕಾಂಘ್ರಿಯೆಮ್ಮಂ ಪೊರೆಗೆ ಸುಖಕರಂ ದಕ್ಷಿಣಾಮೂರ್ತಿಲಿಂಗಂ ೮೮

ಒದವಿದ ಚಂದ್ರಬಾಣನಿಧಿಭೂಧರಸಂಖ್ಯೆಯಃಸಾಳ್ದು ಸಂದ ಸ
ಮ್ಮದಕರ ಶಾಲಿವಾಹನಶಕಾಬ್ದದ ಸಾಧು ನಳಾಬ್ದಮಾಘಮಾ
ಸದ ಸಿತಪಕ್ಷಪಂಚಮಿಯ ಭಾರ್ಗವವಾರದೊಳೀ ಪುರಾಣಮಾ
ದುದು ಪರಿಪೂರ್ಣಮೀಶಕೃಪೆಯಿಂದೆ ಷಡಕ್ಷರಿದೇವನಿರ್ಮಿತಂ ೮೯

ಶಿವಭಕ್ತರ್ಗೆ ಶಿವಾರ್ಚಕರ್ಗೆ ಶಿವಲಿಂಗಧ್ಯಾನಯುಕ್ತರ್ಗೆ ಶಾಂ
ಭವತತ್ವಾನುಭವಪ್ರಭಾವಭರಿತಸ್ವಾಂತರ್ಗೆ ಲಿಂಗಾಂಗಸಾ
ಗವಿಶಿಷ್ಟಾಗ್ರರ್ಗಳ ವೀರಶೈವಶರಣರ್ಗಿಂದುಂ ವೃಷೇಂದ್ರಂ ಕೃಪಾ
ರ್ಣವನೊಲ್ದೀಗೆ ಸಮಸ್ತಸೌಖ್ಯಪದಮಂ ಕಲ್ಯಾಣಕಲ್ಪದ್ರುಮಂ ೯೦*

ಶೋಭಿಸುವ) ಶಿವನು ನಮ್ಮನ್ನು ರಕ್ಷಿಸಲಿ. [ಸೋಮಾಂಕ, ಸೋಮ, ಉದ್ಯದ್ ವೃಷ, ನಟ, ಸಶಿವಂ, ಭಿಕ್ಷು, ಕಾಮ, ಅಂತಕ, ಅಘ್ರಗ್ರಾಮ, ಇಂದ್ರಾರಿ, ಅಬ್ಜಜ, ಇಷ್ಟಿ, ಅಚ್ಯುತರಿಪು, ವಪುರರ್ಧಾಂಗನಂ. ವ್ಯಾಘಲೀಲಾ. ಉದ್ದಾಮಂ, ಕಂಕಾಳಿ, ಚಂಡ, ಇಷ್ಟದ, ವಿಷಪ, ಹರಿ, ಇಭಾಸ್ಯ, ಷಡ್‌ವಕ್ತ್ರ, ದಾತಂ, ವ್ಯೋಮ, ಉತ್ಥೈಕ, ಅಂಘ್ರಿ, ಎಮ್ಮಂಪೊರೆಗೆ, ಸುಖಕರಂ ದಕ್ಷಿಣಾಮೂರ್ತಿ, ಲಿಂಗಂ ಹೀಗೆ ಈ ಪದ್ಯದ ಪದಚ್ಛೇದ ಮಾಡಿ ಶಿವನ ಇಪ್ಪತ್ತೈದು ಲೀಲೆಗಳನ್ನು ಅನ್ವಯಿಸಿಕೊಳ್ಳಬೇಕು. ಈ ಎಲ್ಲ ಇಪ್ಪತ್ತೈದು ವಿಶೇಷಣಗಳಿಂದ ಶಿವನ ಇಪ್ಪತ್ತೈದು ಲೀಲೆಗಳು ಈ ಒಂದು ಪದ್ಯದಲ್ಲಿ ಹೇಳಲ್ಪಟ್ಟಿವೆ.] ೮೯. ಕೂಡಿಕೊಂಡ (ಪ್ರಾಪ್ತವಾದ) ಚಂದ್ರ. (೧), ಪಂಚಬಾಣ (೫), ನವನಿಧಿ (೯) ಭೂಧರ ಅಂದರೆ ಸಪ್ತಕುಲಾಚಲ ಪರ್ವತಗಳು (೭) ಅಂದರೆ ೧೫೯೭ ನೆಯ ಶಾಲಿವಾಹನ ಶಕ ಸಂಖ್ಯೆಯ ವರ್ಷದ ಶ್ರೇಷ್ಠವೂ, ಸಂತೋಷದಾಯಕವೂ, ಆದ, ಸಾಧುಲಕ್ಷಣದ ನಳ ಸಂವತ್ಸರದ ಮಾಘಮಾಸ ಶುಕ್ಲಪಕ್ಷ ಪಂಚಮಿ ತಿಥಿಯ ಶುಕ್ರವಾರದಲ್ಲಿ ಈಶ್ವರನ ಕೃಪೆಯಿಂದ ಷಡಕ್ಷರ ದೇವನಿಂದ ರಚಿತವಾದ ಈ ಪುರಾಣವು ಪರಿಪೂರ್ಣವಾಯಿತು. ೯೦. ಕಲ್ಯಾಣನಗರದ ಕಲ್ಪವೃಕ್ಷ ಸದೃಶನಾದ, ಕೃಪಾಸಮುದ್ರನಾದ ವೃಷಭೇಶ್ವರನು ಶಿವಭಕ್ತರಿಗೆ ಶಿವನನ್ನು ಅರ್ಚಿಸುವವರಿಗೆ, ಶಿವಲಿಂಗವನ್ನು ಧ್ಯಾನ ಮಾಡುವುದರಲ್ಲಿ ಆಸಕ್ತರಾದವರಿಗೆ, ಶಂಭು ಸಂಬಂಧವಾದ ತತ್ತ್ವದ ಅನುಭಾವದ ಪ್ರಭಾವದಿಂದ ತುಂಬಿದ ಮನಸ್ಸುಳ್ಳವರಿಗೆ, ಶಿವ ಜೀವೈಕ್ಯ ಭಾವದಿಂದ ಕೂಡಿ ಅಧಿಕರೆನಿಸಿದ ವೀರಶೈವ ಮಾರ್ಗಗಾಮಿಗಳಾದ ಶರಣರಿಗೆ ಸದಾ ಸಮಸ್ತ ಸೌಖ್ಯಸ್ಥಾನವನ್ನು

*ಈ ಪದ್ಯದ ತರುವಾಯ 'ದ' ಪ್ರತಿಯಲ್ಲಿ ಈ ಕೆಳಗಣ ಇನ್ನೊಂದು ಪಾರ್ವತೀಸ್ತುತಿಪದ್ಯವಿದೆ :

ಮುರಹರ ಸುರವರ ಪರಿನುತಚರಣಾಂಭೋಜಯುತೇ ಯಮಿರಾಜಸುತೇ
ಸುರುಚಿರಕರಿವರಮುಖಜನನಿ ಗಣಾನಂದಕರೇ ತರುಣೇಂದುಧರೇ
ಗುರುತರಗಿರಿವರತನುಭವೆ ತತವಿದ್ಯಾನಿಕರೇ ಜಿತಭಾನುಕರೇ
ಪೊರೆ ಪರತರಪುರಹರನರಸಿ ಜಗನ್ಮಾತೆ ಶಿವೇ ಪರಿಭೂತಭವೇ ॥

ಸುಪರ್ಣರಥಪೂಜಿತೇ ಸುಕರಕೀರ್ತಿವಿಭ್ರಾಜಿತೇ
ಕ್ಷಪಾಕರಕಳಾಧರೇ ಕ್ಷಪಿತಕಾಲಲೀಲಾಧರೇ
ಕೃಪಾರಸತರಂಗಿಣೇ ಕುಪಿತದೈತ್ಯಸಂಹಾರಿಣೇ
ಪ್ರಸನ್ನಶುಭದಾಯಿನೀ ಪೊರೆವುದೆನ್ನ ಕಾತ್ಯಾಯನೀ ೯೧

ಇದು ವಿನಮದಖಿಳ ಸುರಾಸುರೇಂದ್ರಮಕುಟತಟಘಟಿತ ಮಣಿಗಣಾಗಣಿತ ರುಚಿನಿಚಯ

ತರುಣಾರುಣಾತಪಪರಿಲಸಿತ ಪರಮ ಶಿವಲಿಂಗ ಪಾದಾರವಿಂದಪರಾಗಭಸಿತ

ಭಾಸುರಲಲಾಟಪಟ್ಟಸರಸಜನಮಾನಿತೋಭಯಕವಿತಾವಿಶಾರದ

ಶ್ರೀಷಡಕ್ಷರಿದೇವಭಕ್ತಿವಿರಚಿತ

ಶ್ರೀಮದ್ ಬಸವರಾಜವಿಜಯಮಹಾಪುರಾಣದೊಳ್ ವೃಷಭೇಂದ್ರವಿಜಯ ವರ್ಣನಂ

ದ್ವಾಚತ್ವಾರಿಂಶಾಶ್ವಾಸಂ ಸಮಾಪ್ತಂ

ಅಂತು ಆಶ್ವಾಸ ೪೨ಕ್ಕೆ ಪದಗಣನೆ ೩೫೦೩ಕ್ಕೆ ಮಂಗಳಂ ಮಹಾಶ್ರೀ॥

ಶ್ರೀಮದ್ಬಸವರಾಜವಿಜಯ ಮಹಾಪುರಾಣಂ ಸಮಾಪ್ತಂ

ಪ್ರೀತಿಯಿಂದ ಕೊಡಲಿ. ೯೧. ಗರುಡನನ್ನೇ ರಥವನ್ನಾಗಿ ಉಳ್ಳ ವಿಷ್ಣುವಿನಿಂದ ಪೂಜಿಸಲ್ಪಡುವವಳೇ, ಒಳ್ಳೆಯ ಯಶಸ್ಸಿನಿಂದ ವಿರಾಜಿಸುವವಳೇ, ಚಂದ್ರ ಕಳೆಯನ್ನು ಧರಿಸಿರುವವಳೇ, ಯಮನನ್ನು ನಾಶಗೊಳಿಸಿದ ಲೀಲೆಯನ್ನು ಧರಿಸಿದವಳೇ ಕೃಪೆಯೆಂಬ ರಸಕ್ಕೆ ನದಿಯಂತಿರುವವಳೇ, ಕೋಪವಿಶಿಷ್ಟಳಾಗಿ ದೈತ್ಯರನ್ನು ಸಂಹರಿಸಿದವಳೇ ಪ್ರಸನ್ನಳಾಗಿ (ಸದ್ಭಕ್ತರಿಗೆ) ಶುಭವನ್ನುಂಟು ಮಾಡುವವಳೇ, ಕಾತ್ಯಾಯಿನೀದೇವಿಯೇ ನನ್ನನ್ನು ರಕ್ಷಿಸುವುದು.

ನಲ್ವತ್ತೆರಡನೆಯ ಆಶ್ವಾಸವು ಸಮಾಪ್ತವಾಯಿತು.

ಪರಿಶಿಷ್ಟ

ಷಡಕ್ಷರಿದೇವನ
ಬಸವಕೃತಿ

ಮುನ್ನುಡಿ

ಮಹಾಕವಿ ಷಡಕ್ಷರಿದೇವನು ಶಾ. ಶ. ೧೫೯೨ (ಕ್ರಿ. ಶ. ೧೬೭೦)ರಲ್ಲಿ 'ಬಸವ ಕೃತಿ' ಎಂಬ ಗ್ರಂಥವನ್ನು ಬರೆದು ಪೂರ್ತಿಗೊಳಿಸಿದನು. ಅದು ಬಸವಸ್ತುತಿಪದ್ಯಗಳ ಸಂಗ್ರಹ. ವಿವಿಧ ವೃತ್ತ ಕಂದಗಳ ಛಂದದಲ್ಲಿದೆ. ಆ ಪದ್ಯಗಳು ಆತನ 'ಬಸವರಾಜ ವಿಜಯ' (ಇದನ್ನು ವೃಷಭೇಂದ್ರವಿಜಯವೆಂದೂ ಕರೆಯುತ್ತಾರೆ) ಮಹಾಪುರಾಣದಲ್ಲಿ, ಹೆಚ್ಚು ಹಸ್ತ ಪ್ರತಿಗಳಲ್ಲಿ ಕೊನೆಯ ಆಶ್ವಾಸದಲ್ಲಿ ಒತ್ತಟ್ಟಿಗೆಯೂ, 'ದ' ಪ್ರತಿಯಲ್ಲಿ ೩೦ನೆಯ ಆಶ್ವಾಸದಿಂದ ೪೨ನೆಯ ಆಶ್ವಾಸದ ವರೆಗೆ ಪ್ರತಿ ಆಶ್ವಾಶದಲ್ಲಿ ಎರಡೆರಡ ರಂತೆಯೂ ಅಳವಡಿಸಲ್ಪಟ್ಟಿವೆ. ಆದರೆ, ಇವು ಸ್ವತಂತ್ರಕೃತಿಗೆ ಸೇರಿದವುಗಳೆಂದೂ ಪುರಾಣಿಕರು ಅಥವಾ ವಾಚಕರು ಬಸವರಾಜವಿಜಯ ಕಾವ್ಯದೊಡನೆ ತಮ್ಮಿಚ್ಛಾನು ಸಾರವಾಗಿ ಸೇರಿಸಿ ಓದುತ್ತಿರಬೇಕೆಂದೂ ಹಸ್ತಪ್ರತಿಗಳ ಪರಿಶೀಲನೆಯಿಂದ ಕಂಡು ಬಂದಿತು. ಆದುದರಿಂದ, ಬಸವರಾಜ ವಿಜಯಾಂತರ್ಗತವಾಗಿದ್ದ ಈ ಪದ್ಯಗಳನ್ನು ಪ್ರತ್ಯೇಕಿಸಿ, ಪರಿಶಿಷ್ಟದಲ್ಲಿ ಕೊಡುತ್ತಿದ್ದೇವೆ.

ಈ ಬಸವಸ್ತುತಿ ಪದ್ಯಸಂಗ್ರಹದಲ್ಲಿ ಎರಡು ಬಗೆಯ ಪದ್ಯಗಳಿವೆ : ೧. ಸಂಸ್ಕೃತ ಪದಭೂಯಿಷ್ಠವಾದ ಅರ್ಥಗಾಂಭೀರ್ಯದ ವೈಭವದಿಂದ ಬಸವೇಶನ ವ್ಯಕ್ತಿತ್ವವನ್ನು ಚಿತ್ರಿಸುವ ಲಲಿತಪದವೃತ್ತಗಳು ; ೨. ಕವಿಯ ಅಂತರಂಗದಿಂದ ಹೊರಹೊಮ್ಮಿದ ಭಾವಲಹರಿಗಳನ್ನು ಸೂಸುವ ಆತ್ಮನಿವೇದನಪರವಾದ ಇತರ ವೃತ್ತಕಂದಗಳು. ಈ ಕೃತಿನಿರ್ಮಿತಿಯ ಕಾಲವನ್ನು ಹೇಳುವ, ಸಂಗ್ರಹದ ಕೊನೆಯ ಪದ್ಯದಲ್ಲಿ ನಿರ್ದೇಶಿಸಿದ 'ಬಸವಕೃತಿ' ಎಂಬ ಹೆಸರನ್ನೇ ಈ ಸಂಗ್ರಹಕ್ಕೆ ಇಟ್ಟಿದೆ. ಈ ಹೆಸರು ಇತರ ವೃತ್ತಕಂದ ಗಳ ೨ನೆಯ ಮಾಲಿಕೆಗೆ ಸಂಬಂಧಪಟ್ಟುದೆಂದು ತೋರುವುದಾದರೂ ಲಲಿತಪದವೃತ್ತ ಗಳು ಭಿನ್ನಸ್ವರೂಪದವಾದರೂ ಎರಡರಲ್ಲಿಯೂ ಬಸವಸ್ತುತಿ ಏಕವಿಷಯವಾಗಿರುವುದ ರಿಂದ ಎರಡನ್ನೂ ಒಂದೆಂದೇ ಎಣಿಸಿದ್ದೇವೆ. ಅಲ್ಲದೆ, ಲಲಿತಪದವೃತ್ತಗಳ ರಚನಾಕಾಲ ವನ್ನಾಗಲಿ ಹೆಸರನ್ನಾಗಲಿ ಹೇಳುವ ಪದ್ಯ ದೊರೆತಿಲ್ಲ ; ಮತ್ತು ಎರಡೂ ಬಸವರಾಜ ವಿಜಯದಲ್ಲಿಯೇ ಬಂದವುಗಳು. ಸಾಮಾನ್ಯವಾಗಿ ಎಲ್ಲ ಹಸ್ತಪ್ರತಿಗಳಲ್ಲಿಯೂ ಲಲಿತ ಪದವೃತ್ತಗಳು ಕಾವ್ಯಾರಂಭದಿಂದ, ಕೊನೆಯವರೆಗೂ ಇತರ ವೃತ್ತಗಳು ಕೊನೆಯ ಆಶ್ವಾಸದಲ್ಲಿಯೂ ಬಂದಿರುವುದರಿಂದ, ಈ ಸಂಗ್ರಹದಲ್ಲಿ ಲಲಿತಪದವೃತ್ತಗಳನ್ನು ಪ್ರಥಮಖಂಡವಾಗಿಯೂ ಇತರ ವೃತ್ತಗಳನ್ನು ದ್ವಿತೀಯ ಖಂಡವಾಗಿಯೂ ಕೊಟ್ಟಿ ದ್ದೇವೆ.

ಈ ಎಲ್ಲ ವಿಷಯದ ವಿವರ ಚರ್ಚೆಯನ್ನು ಕಾವ್ಯದ ಪ್ರಸ್ತಾವನೆಯಲ್ಲಿ ಮಾಡಿದ್ದೇವೆ.

ಪರಿಶಿಷ್ಟ-೧

ಬಸವಸ್ತುತಿ ರೂಪವಾದ ಲಲಿತ ಪದವೃತ್ತಗಳು ಮತ್ತು ಇತರ ವೃತ್ತಗಳು

ಷಡಕ್ಷರ ದೇವನ ಬಸವ ಕೃತಿ :

ವೃಷಭೇಂದ್ರ ವಿಜಯ ಅಥವಾ ಬಸವರಾಜ ವಿಜಯ ಮಹಾಪುರಾಣವು ಸಂಪೂರ್ಣವಾಗಿ ಪಾಲ್ಕುರಿಕೆ ಸೋಮನಾಥರ ಪರಂಪರೆಯಿಂದ ಹರಿದು ಬಂದ ಕಥಾ ಸಾರವೇ ಆಗಿದೆ. ಸೋಮನಾಥರ ತೆಲಗು ಬಸವಪುರಾಣ ಕೃತಿ ಭೀಮ ಕವಿಯ ಬಸವಪುರಾಣವೆನಿಸಿ ಷಟ್ಪದಿಯಲ್ಲಿ ರಚಿತವಾದರೆ ಅದೇ ಪುರಾಣವೇ ಚಂಪೂರೂಪದಲ್ಲಿ ಷಡಕ್ಷರಿಯ ಬಸವರಾಜ ವಿಜಯವಾಗಿದೆ. ಇದು ಗುಬ್ಬಿಯ ಮಲ್ಲಣಾರ್ಯರ ಭಾವ ಚಿಂತಾರತ್ನಕೃತಿಯು 'ರಾಜಶೇಖರ ವಿಳಾಸ'ವಾದಂತೇನೂ ಅಲ್ಲ. ಆದುದರಿಂದ ಷಡಕ್ಷರದೇವನು ಈ ಕೃತಿಯಲ್ಲಿ ಸ್ವಾತಂತ್ರ್ಯವನ್ನೇನೂ ಉಪಯೋಗಿಸಲಿಲ್ಲ. ಆದರೆ ಬಸವಣ್ಣನವರ ಬಗೆಗೆ ಸ್ತೋತ್ರರೂಪವಾಗಿ ಸುಮಾರು ೬೦ ರಷ್ಟು 'ಲಲಿತಪದವೃತ್ತ'ಗಳಲ್ಲಿ ಕವಿ ತನ್ನ ಅತ್ಯಂತಿಕ ಭಕ್ತಿಯನ್ನು ಪ್ರಕಟಿಸಿದ್ದಾನೆ. ಈ ಲಲಿತ ಪದವೃತ್ತಗಳಲ್ಲದೆ ವಿವಿಧವೃತ್ತ ಕಂದಗಳಲ್ಲೂ ಕೆಲವು ಸ್ತೋತ್ರ ಪದ್ಯಗಳನ್ನು ಬರೆದಿದ್ದಾನೆ. ಈ ಪದ್ಯಗಳಲ್ಲಿ ಮಾತ್ರವೇ ಷಡಕ್ಷರ ದೇವನು ತನ್ನ ಸ್ವಾತಂತ್ರ್ಯ ಪ್ರಕಟಿಸಿಕೊಂಡಿರುವನಲ್ಲದೆ ಪುರಾಣಕಥಾವಿಷಯದಲ್ಲಲ್ಲ.

ಈ ಲಲಿತಪದ ವೃತ್ತಗಳು ಮತ್ತು ಇತರ ವೃತ್ತಗಳು ವೃಷಭೇಂದ್ರ ವಿಜಯ ಮಹಾಪುರಾಣಾಂತರ್ಗತವಾಗಿಯೇ ಅನೇಕ ಪ್ರಾಚೀನ ಮುದ್ರಣಗಳಲ್ಲಿ ಕಂಡುಬರುತ್ತವೆ. ಪ್ರತಿ ಆಶ್ವಾಸಾಂತ್ಯದಲ್ಲಿ ಮತ್ತು ಕೆಲವು ಆಶ್ವಾಸಗಳ ಆದಿಯಲ್ಲಿ ಲಲಿತಪದವೃತ್ತಗಳ ಬಳಕೆಯೂ, ಉಳಿದ ಬಸವಸ್ತುತಿರೂಪವಾದ ವೃತ್ತಕಂದಗಳು ೪೨ ನೆಯ ಆಶ್ವಾಸಾಂತ್ಯದಲ್ಲೂ ಕಂಡುಬರುತ್ತವೆ.

ಇತ್ತೀಚೆಗೆ ೧೯೬೮ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದವರು ಪ್ರಕಟಿಸಿರುವ 'ಬಸವರಾಜ ವಿಜಯಂ' ಗ್ರಂಥದಲ್ಲಿ ಈ ಪದ್ಯಗಳೆಲ್ಲ ಷಡಕ್ಷರ ದೇವನ ಪ್ರತ್ಯೇಕವಾದ ಸ್ತೋತ್ರ ಪದ್ಯಗಳೆಂದೂ ಪ್ರವಚನಕಾರರು ಪ್ರವಚನ ಮಾಡುವಾಗ ವೃಷಭೇಂದ್ರವಿಜಯದೊಡನೆ ಅಂತರ್ಭಾವಗೊಳಿಸಿ ಹೇಳುವ ಪದ್ಧತಿ ಬೆಳೆದು ಬಂದು ಇವೆಲ್ಲ ಆ ಕೃತಿಯಲ್ಲಿ ಸೇರಿ ಹೋಗಿವೆಯೆಂದೂ ಅಭಿಪ್ರಾಯಪಟ್ಟು ಪ್ರತ್ಯೇಕಿಸಿ ಪರಿಶಿಷ್ಟದಲ್ಲಿ ಅವನ್ನು ಕೊಟ್ಟಿದ್ದಾರೆ. ಪರಿಶಿಷ್ಟ ೧ ರಲ್ಲಿ ಲಲಿತಪದವೃತ್ತಗಳನ್ನೂ, ಪರಿಶಿಷ್ಟ ೨ ರಲ್ಲಿ ಇತರ ವೃತ್ತಗಳನ್ನು ತೋರಿಸಿದ್ದಾರೆ. ಆದರೆ ಇವರ ಈ ಪ್ರಕಟನೆಯಲ್ಲೂ ಕೂಡ ೧೦ ಲಲಿತಪದ ವೃತ್ತಗಳು ಗ್ರಂಥದಲ್ಲಿಯೇ ಅಂತರ್ಭಾವಗೊಂಡಿವೆ. ಒಂದೂ ವೃತ್ತ ೫ ಮತ್ತು ೯ ನೆಯ

ಅಧ್ಯಾಯಗಳ ಕೊನೆಯಲ್ಲಿ ಎರಡು ಸಲ ಪ್ರಯೋಗಗೊಂಡಿದೆ. ೫ನೆಯ ಅಧ್ಯಾಯವೊಂದರಲ್ಲೆ ೩ ಲಲಿತಪದ ವೃತ್ತಗಳ ಬಳಕೆಯಿದೆ. ಇವೇನೇ ಇರಲಿ. ಈ ಗ್ರಂಥದಲ್ಲಿ ಈಗ ಬಳಕೆಯಾಗಿರುವ ಒಟ್ಟು ೯ ಲಲಿತಪದ ವೃತ್ತಗಳನ್ನೂ ಬಿಟ್ಟು ಉಳಿದವುಗಳಿಗೆ ಈ ಗ್ರಂಥದ ಪರಿಶಿಷ್ಟದಲ್ಲಿ ಕೊಟ್ಟ ಕ್ರಮಾಂಕವನ್ನನುಸರಿಸಿ ಅರ್ಥವನ್ನು ಬರೆಯಲಾಗಿದೆ. ಕ್ರಮಾಂಕದಲ್ಲಿ ಬಂದ ಪದ್ಯಗಳಿಗೆ ಈ ಗ್ರಂಥದಲ್ಲಿ ಹಿಂದೆ ಅರ್ಥಬಂದಿದ್ದರೆ ಎಲ್ಲಿ ಬಂದಿದೆಯೆಂಬುದನ್ನು ತಿಳಿಸಿ ಮುಂದುವರಿದಿದೆ. ಪರಿಶಿಷ್ಟ ೨ರಲ್ಲಿ ಉಳಿದ ವೃತ್ತ ಕಂದಗಳ ಅರ್ಥವನ್ನೂ ಅದೇ ಕ್ರಮಾಂಕವನ್ನನುಸರಿಸಿ ಅರ್ಥಕೊಡಲಾಗಿದೆ. ಸಾಮಾನ್ಯವಾಗಿ ಈ ಪದ್ಯಗಳಲ್ಲಿ ಬಸವಣ್ಣ ಮತ್ತು ಶಿವ ಇವರಲ್ಲಿ ಅಭೇದವಾಗಿ ವರ್ಣಿಸಿರುವುದೇ ಹೆಚ್ಚು. ಶಿವನರೂಪವೇ ಬಸವಣ್ಣ ಎಂಬ ಭಾವವೂ ಕೆಲವು ಕಡೆ ವ್ಯಕ್ತವಾಗಿದೆ. ಶಿವನಿಷ್ಠ ಧರ್ಮಗಳೆಲ್ಲವೂ ಬಸವೇಶ್ವರನಲ್ಲಿ ಆರೋಪಿಸಲ್ಪಟ್ಟಿವೆ. ಇದಕ್ಕೆ ಕಾರಣ ಬಸವೇಶ್ವರನೂ ಶಿವನೂ ಒಂದೇ ಎಂಬ ಭಾವ ಮತ್ತು ಬಸವೇಶ್ವರನನ್ನು ದ್ವಿತೀಯ ಶಂಭುವೆಂದು ನಂಬುವ ನಂಬಿಕೆಗಳು ಪರಿಶಿಷ್ಟ ೧ ರಲ್ಲಿನ ಲಲಿತಪದವೃತ್ತಗಳಿಗೆ '**ಬಸವಕೃತಿ**' ಎಂಬ ಹೆಸರನ್ನೂ, ಉಳಿದ ವೃತ್ತಗಳಿಗೆ ಪರಿಶಿಷ್ಟ ೨ ರಲ್ಲಿ '**ಇತರವೃತ್ತಗಳು**' ಎಂಬ ಶಿರೋನಾಮೆಯನ್ನೂ ಕ.ವಿ.ಪಿ. ನಿಲಯದ ಪ್ರಕಟನೆಯವರು ಕೊಟ್ಟರೀತಿಯಲ್ಲಿಯೇ ಕೊಡಲಾಗಿದೆ.

೧

ಲಲಿತಪದವೃತ್ತಗಳು

ಶ್ರೀಕರಗುಣಾಂಬುಧಿಸುಧಾಕರ ಕಳಾಧರಕೃ–
ಪಾಕಲಿತಲೋಚನ ದಿವಾಕರಸಹಸ್ರಾ–
ಲೋಕರುಚಿವಿಗ್ರಹ ಪಿನಾಕಧರದರ್ಶನಕ–
ಳಾಕರ ಸುಪುಣ್ಯಪರಿಪಾಕಯುತ ಸೇವ್ಯಾ
ಭೀಕರಯಮಪ್ರಹರ ನಾಕಸದನಾರ್ಚ್ಯಪದ -
ಕೋಕನದ ನಿರ್ಜಿತವರಾಕಪರವಾದಾ -
ನೀಕ ವಿನತಾಸುತಪತಾಕನುತ ಪಾಲಿಸು ಗ–
ಣೈಕಪತಿ ಪಾಲಿತಸುಲೋಕ ಬಸವೇಶಾ ೧

ಶಂಕರಕುಮಾರಕ ನಿಶಂಕಟವಿಹಾರಕ ಕ–
ಲಂಕಮತದೂರ ಹರಸಂಕಥನಕರ್ಣಾ–
ಲಂಕರಣ ಶೈವಮತಪಂಕರುಹಭಾಸ್ಕರ ಭ-
ಯಂಕರಯಮಾಪಹ ನಿರಂಕುಶಚರಿತ್ರಾ
ಸಂಕಲಿತಕಾಯ ಮಕರಾಂಕಮದಮರ್ದನ ಮೃ–
ಗಾಂಕಧರಸೇವಕಸುಖಂಕರಕಟಾಕ್ಷಾ-
ಹಂಕರಣದೂರ ಶಿವಕಿಂಕರಚಯಾನ್ವಿತ ವೃ-
ಷಾಂಕನಗಣಾಧಿಪ ವಿಶಂಕ ಬಸವೇಶಾ ೨

ಆಖುಪತಿವಾಹನವಿಶಾಖನುತ ನೀತಮೃಡ -
ಲೇಖನಲಿಪಿಜ್ಞ ಜಿತಭೂಖಿಲ ಫಣಾಭೃ–
ನ್ಮೇಖಲ ಸುಧಾಕರಮಯೂಖ ನಿಶಿತಾಂಘ್ರಿಸಮು–
ಹಾಖುರಕೃತಾರಿಹೃದಯಾಖನನಕೃತ್ಯಾ

(೧) ಬಸವ ಕೃತಿ

೧–೪. ಜಂಗಮರ ಪಾದ ಪೂಜೆಯನ್ನು ಮಾಡುವ, ಸರ್ಪಗಳ ಆಭರಣಗಳಿಂದ ಭೂಷಣಗೊಂಡ, ಮನೋಹರವಾದ ಚರಿತ್ರೆಯನ್ನುಳ್ಳ, ಶಿವಗಣಗಳ ಸಂಗಮದಲ್ಲಿ ಆಸಕ್ತಿಯನ್ನುಳ್ಳ, ಮನ್ಮಥನ ಗರ್ವವನ್ನು ನಾಶಪಡಿಸಿರುವ, ಶುಭ ಲಕ್ಷಣಗಳುಳ್ಳ ಶರೀರದಿಂದ ಕೂಡಿದ, ಋಷಿ ಜನರನ್ನು ಸಂತೋಷಪಡಿಸುವ, ಸೂರ್ಯಪುತ್ರನಾದ ಯಮನ ಗರ್ವವನ್ನು ನಾಶಪಡಿಸಿದ, ಚಂಧ್ರಧರನಾದ ಪರಮೇಶ್ವರನಿಗೆ ವಾಹನನೆನಿಸಿದ ಮಂಗಳಕರಳಾದ ಸದ್ಗುಣಗಳಿಂದ ಕೂಡಿದ, ಚಕ್ರಧರನಾದ ವಿಷ್ಣುವಿನಿಂದ ಪೂಜಿಸಿ,

ಲೇಖಪತಿಪದ್ಮಜಮಹಾಖಗರಥಾರ್ಚ್ಯ ಶುಭ–
ರೇಖಪದ ಸೂರಿಸುರಶಾಖಿ ಯುಮಿಜಿಹ್ವಾ–
ಲೇಖಲಿಖಿತಾಭಿದ ದಿಶಾಖಚಿತಕೀರ್ತಿ ಪೊರೆ
ಶೇಖರಿತಶೀತಕರರೇಖ ಬಸವೇಶಾ ೩

ಜಂಗಮಪದಾರ್ಚಕ ಭುಜಂಗಮವಿಭೂಷ ಹೃದ–
ಯಂಗಮಚರಿತ್ರ ಗಣಸಂಗಮವಿಲೋಲಾ–
ನಂಗಮದಭಂಜನ ಶುಭಾಂಗ ಮುನಿರಂಜನ ಪ–
ತಂಗಜವಿಮರ್ದನ ಸುಧಾಂಗಧರವಾಹ
ಮಂಗಳಗುಣಾನ್ವಿತ ರಥಾಂಗಧರಸೇವಿತ ಕು–
ರಂಗಧರಕಾಂತರುಚಿಸಂಗತ ದಯಾದ್ರಾ–
ಪಾಂಗ ಪೊರೆಯೆನ್ನನವಿಭಂಗವಪ್ರದಾತ್ತಶಿವ
ಲಿಂಗ ಗಣಹೃನ್ನಳಿನಭೃಂಗ ಬಸವೇಶಾ ೪

ಋಗ್ಯಜುರಭಿಸ್ತುತ ವಿರಾಗ್ಯಧಿಕ ಪದ್ಮಪಮ–
ದೃಗ್ಯುಗಳ ಭಕ್ತಕೃತಭಾಗ್ಯಜಯ ನಿತ್ಯಾ-
ರೋಗ್ಯ ನಿರವದ್ಯಬಹುಭೋಗ್ಯ ನಿಗಮಪ್ರಬಲ
ಯಾಗ್ಯ ಪುರಭಿದ್ಭಜನಯೋಗ್ಯಜನಲೋಲಾ
ಪ್ರಾಗ್ಯಮಿಪವಿಲಕ್ಷ್ಯ ದಶದಿಗ್ವಿತಯಶಸ್ಕ ಮನು–
ವಾಗ್ಯಜನ ರಾಗಕೃತರಾಗ್ಯ ಮಹ[1]ರಂಗಾ[1]–
ಸ್ಪೃಗ್ಯತಿವರೇಣ್ಯ ಜಲಮುಗ್ಯದುಕುಲೇಶಸಿತ
ರುಗ್ಯುಗುರುಕಂಠ ಜಯ ವ್ಯಗ್ಯ ಬಸವೇಶಾ ೫

ಭಾರ್ಗವಶುಕಾದಿಮುನಿವರ್ಗನುತ ಶಾಂಭವಸು–
ಮಾರ್ಗಗಚರಿತ್ರ ಹೃತದುರ್ಗತಿ ಸಮಸ್ತ–
ಸ್ವರ್ಗಭವನಾರ್ಚಿತ ನಿಸರ್ಗಗುಣರಂಜಿತ ಯು–
ಜುರ್ಗತಮಹಾಮನು ವಪುರ್ಗುಣವಿದೂರಾ–
ನರ್ಗಳಚಿದಾತ್ಮ ವಿಧುಮಾರ್ಗಣ ಹೃತೇಂದ್ರವರ
ದುರ್ಗಯುಪುದರ್ಪಹರ ಭರ್ಗಹೃದಯಾಬ್ಜಾಂ–
ತರ್ಗತ ಲಸನ್ನಿಗಮಸರ್ಗಕರ ಮಾಳ್ಪುದಪ-
ವರ್ಗಸುಖಿಮಂ ನತಬುಧರ್ಗೆ ಬಸವೇಶಾ ೬

ಕೊಂಡ, ಚಂದ್ರನ ಮನೋಹರವಾದ ಕಾಂತಿಯಂತಿರುವ ಕಾಂತಿಯಿಂದ ಕೂಡಿದ, ದಯೆಯಿಂದ ತೊಯ್ದುಹೋದ ಕಡೆಗಣ್ಣುಗಳ ನೋಟವುಳ್ಳ, ಶರೀರದಲ್ಲಿ ಧಾರಣ ಮಾಡಿದ (ಪಡೆಯಲಟ್ಟ) ನಾಶರಹಿತವಾದ ಶಿವಲಿಂಗವನ್ನುಳ್ಳ, ಪ್ರಮಥಗಣಗಳ ಹೃದಯವೆಂಬ ಕಮಲಕ್ಕೆ ಭೃಂಗದೋಪಾದಿಯಲ್ಲಿರುವ, ಬಸವೇಶ್ವರಾ, ಎನ್ನನ್ನು ರಕ್ಷಿಸು. ೫–೧೦. ನಿರ್ಮಲವಾದ ಬುದ್ಧಿಯುಳ್ಳ ಜನರ ಆಪತ್ತುಗಳನ್ನು ನಾಶಪಡಿಸುವುದರಲ್ಲಿ ಪ್ರಸಿದ್ಧನೆನಿಸಿದನೂ, ಲೋಕಗಳನ್ನು ಸಂರಕ್ಷಿಸುಪವನೂ, ಪರತತ್ತ್ವವನ್ನು ತಿಳಿದ ಇಚ್ಛಾ

[1]ರಾಂಗ (ಗ, ದ, ಚ, ಜ, ಮು) ಭಾಗ್ಯಾ (ಆ)

ರಾಘವವಿಬೋಧಕ ಮಹಾಘಟಭವಸ್ತುತ ಯ–
ಶೋಘಚಿತದಿಕ್ತಟ ಸುಧೀಘನಜನೈನೋ–
ಮಾಘಮದಸಂಹೃತಿನಿದಾಘ ಕರುಣಾಮೃತ ರ–
ಸೌಘಪರಿಪೂರ್ಣದೃಗಮೋಘವರದಾತಾ
ಮೇಘ ರುಚಿಕಂಧರ ವಿಲಾಘವಚರಿತ್ರ ಸುಕ-
ಳಾಘಟನಧೀರ ಮುನಿಪೌಘಕೃತನಿತ್ಯ–
ಶ್ಲಾಘ ಭವಸಂಚಯಘನಾಘನಸಮೀರ ಪೊರೆ
ಭೂಘಟಕುಲಾಲ ವಿಜಿತಾಘ ಬಸವೇಶಾ ೭

ಮಾಚವಿಭುಸನ್ನುತಸದಾಚರಣ ವಾದಿಮದ–
ಮೋಚನಸಮರ್ಥ ಪರಬಾಚಯದಯಾರ್ದ್ರ–
ಲೋಚನಸಮೀಕ್ಷ್ಯ ಯಮಿಗೋಚರಪದಾಬ್ಜ ಶಿವ–
ವಾಚಕಸಮನ್ವಿತ ಚರಾಚರಸುರಕ್ಷಾ
ಖೇಚರಪರಿಸ್ತುತ ಕಳಾಚತುರ ಧೈರ್ಯವಿಜಿ–
ತಾಚಲ ವಿತರ್ಜಿತವಿರೋಚನಜ ಮಾಯಾ–
ರೇಚಕ ಸುತತ್ತ್ವ ನಿಧಿಸೂಚಕವಚಸ್ಕಪೊರೆ
ಕೀಚಕರಿಪುಪ್ರಿಯ ಸುವಾಚ ಬಸವೇಶಾ ೮

ಪಂಚಜನಭಂಜನವಿರಿಂಚಿಮುಖನಿರ್ಜರಸ–
ಮಂಚಿತಪದಾಂಬುಜ ವಿಮಂಚಿತಮನೋಜಾ
ಪ್ರಾಂಚಿತಕೃಪಾರಸದೃಗಂಚಲ ಶಿವೈಕ್ಯಗುಣ–
ಸಂಚಿತನಿಧಾನ ಯಮಿಸಂಚಯವರೇಣ್ಯಾ
ಕಾಂಚನನಗೇಂದ್ರತಟಸಂಚರಣಶೀಲ ಸಮು–
ದಂಚಿತಮಹತ್ತ್ವಮಣಿಕಂಚುಕ ಚರೌಘಾ–
ವಂಚಕ ಬುಧಪ್ರಣುತ ಚಂಚದಮಳಾಂಗ ಪೊರೆ
ಪಂಚಮುಖ ಮಂತ್ರರಸನಾಂಚಲ ವೃಷೇಂದ್ರಾ ೯

ಸ್ವಚ್ಛಮತಿಮಜ್ಜನವಿಪಚ್ಛಮನ ವಿಶ್ರುತಜ–
ಗಚ್ಛರಣ ತತ್ತ್ವವಿದನಿಚ್ಛಮುನಿವಂದ್ಯಾ–
ರಿಚ್ಛಲನಿವಾರಕ ಘೃಣಿಚ್ಛುರಿತವಿಗ್ರಹಶ-
ರಚ್ಛಶಿಸುಧಾಬ್ಧಿಧವಳಚ್ಛವಿಯಶಸ್ಕ

ರಹಿತರಾದ ಮುನಿಜನರುಗಳಿಂದ ನಮಸ್ಕರಿಸಿಕೊಳ್ಳಲು ಯೋಗ್ಯನಾದವನೂ, ವೈರಿಗಳಾದವರ ಕಪಟವನ್ನು ನಿವಾರಿಸುವವನೂ, ಕಾಂತಿಯಿಂದ ವ್ಯಾಪ್ತವಾದ ಶರೀರವುಳ್ಳವನೂ, ಶರತ್ಕಾಲದ ಚಂದ್ರ (ಮತ್ತು) ಕ್ಷೀರ ಸಾಗರಗಳೋಪಾದಿಯಲ್ಲಿ ಶುಭ್ರವಾದ ಯಶಸ್ಸುಳ್ಳವನೂ, ಶ್ರೇಷ್ಠ ಮಂಗಳವನ್ನುಂಟುಮಾಡುವ ವರಗಳನ್ನು ಕೊಡುವವನೂ, ದಿಕ್ಕುಗಳೇ ವಸ್ತ್ರಗಳಾಗಿ ಉಳ್ಳ, ಸಂಹರಿಸಲ್ಪಟ್ಟ ಮಹಾಬಲ ಶಾಲಿಯಾದ ಕೂರ್ಮನನ್ನುಳ್ಳ ಈಶ್ವರನೊಡನೆ ಸಮಾನನೆನಿಸಿದವನೂ, ಪ್ರಕಾಶಿಸುವ ಶಾಂತಿ ಇಂದ್ರಿಯನಿಗ್ರಹಾದಿಗಳೇ ಚಿಹ್ನೆ

ಸಚ್ಛಭವರಪ್ರದ ದಿಶಾಚ್ಛದ ಹೃತಪ್ರಬಳ-
ಕಚ್ಛಪಸದೃಕ್ಷವಿಲಸಚ್ಛವುದಮಾಂಕಾ-
ತುಚ್ಛ ಪರವಾದಿಜನಹೃಚ್ಛಿದಘದೂರ ಪೊರೆ-
ಯಚ್ಛಶಿವಭಾವ ಜಿತಹೃಚ್ಛಯು ವೃಷೇಂದ್ರಾ ೧೧

ರಾಜಶಕಲಾಂಕಮತರಾಜದುರುಸಿಂಧುಪತಿ-
ರಾಜ ಭುವನಾವನಿಜಬೀಜ ಶಿವಪಾದಾಂ-
ಭೋಜಮುದಷಟ್ಪದ ಕಳಾಜನನಭೂಮಿ ಜಗ-
ತೀಜನವಿನುತ್ಯ ಕವಿತಾಜಲರುಹಾರ್ಕಾ
ಮಾಜಮುದಮರ್ದನ ಪರಾಜಯವಿದೂರ ವಿನ-
ತಾಜರಥಕೀರ್ತಿತ ಮಹೋಜಸ ಸದಾನಿ-
ರ್ವ್ಯಾಜಮೃಡಭಕ್ತಿರಸಭಾಜನ ಬುಧಾಳಿಸುರ-
ಭೂಜ ಪೊರೆ ಧೀಗುಣಜಿತಾಜ ಬಸವೇಶಾ ೧೧

ಕುಂಜರಮುಹಾದನುಜಭಂಜನಪದಾಂಬುಜಕೃ-
ತಾಂಜಲಿ ಸುಭಕ್ತಗಣರಂಜನ ನಿತಾಂತ-
ಪ್ರಾಂಜುಳಯಶೋಧನ ಧನಂಜಯುದ್ಯಗರ್ಚಕ ಪ-
ತಂಜಲಿಮುನಿಸ್ತುತ ಸಮಂಜಸಗುಣಾಂಕಾ

ಯಾಗುಳ್ಳವನೂ, ಕುತ್ಸಿತರೆನಿಸಿದ ಪರಮತವಾದಿಗಳ ಮಾತುಗಳನ್ನು ಛೇದಿಸುವವನೂ, ಪಾಪದಿಂದ ದೂರನಾದವನೂ, ನಿರ್ಮಲವಾದ ಶಿವ ಭಾವಾಪನ್ನ ಮನಸ್ಸುಳ್ಳವನೂ, ಮನ್ಮಥನನ್ನು ಜಯಿಸಿದವನೂ ಆದ ವೃಷೇಂದ್ರನೇ ರಕ್ಷಿಸು–೧೧. ಚಂದ್ರನ ಒಂದು ತುಣುಕನ್ನೇ ಚಿಹ್ನೆಯಾಗುಳ್ಳ ಪರಮೇಶ್ವರನ ಮತವೆಂಬ (ವೀರಶೈವ ಮತವೆಂಬ) ಸಮುದ್ರರಾಜನಿಗೆ ಚಂದ್ರನೋಪಾದಿಯಲ್ಲಿರುವವನೂ, ಲೋಕಗಳೆಂಬ ಗಿಡಗಳಿಗೆ ಬೀಜರೂಪನೆನಿಸಿದ ಪರಮೇಶ್ವರನ ಪಾದವೆಂಬ ಕಮಲದಲ್ಲಿ ಮದವಿಶಿಷ್ಟ ವಾದ ಭ್ರಮರದೋಪಾದಿಯಲ್ಲಿರುವವನೂ, ಕಲೆಗಳ (ಸದ್ವಿದ್ಯೆಗಳ) ಜನನಕ್ಕೆ ಭೂಮಿ ಯೆನಿಸಿದವನೂ, ಜಗತ್ತಿನ ಜನರುಗಳಿಂದ ಸ್ತೋತ್ರಮಾಡಿಸಿಕೊಳ್ಳಲ್ಪಡುವುದಕ್ಕೆ ಯೋಗ್ಯನಾದವನೂ, ಕವಿತ್ವವೆಂಬ ಕಮಲಕ್ಕೆ ಸೂರ್ಯನೋಪಾದಿಯಲ್ಲಿರುವವನೂ, ಮನ್ಮಥ (ಮಾ+ಜ–ಲಕ್ಷ್ಮಿಯ ಮಗ)ನ ಮದವನ್ನು ನಾಶಗೊಳಿಸಿದವನೂ, ಸೋಲಿ ನಿಂದ ದೂರನಾದವನೂ, ಗರುಡನನ್ನು ರಥವನ್ನಾಗಿ ಉಳ್ಳ ಶ್ರೀವಿಷ್ಣುವಿನಿಂದ ಸ್ತೋತ್ರ ಮಾಡಿಸಿಕೊಳ್ಳಲ್ಪಟ್ಟ ಅಧಿಕ ಪರಾಕ್ರಮ ಶಾಲಿಯಾದವನೂ, ಸತತವೂ ನಿಷ್ಕಾಪಟ್ಯ ವಾದ ಶಿವನ ಭಕ್ತಿಯೆಂಬ ಜಲಕ್ಕೆ ಭಾಂಡ (ಪಾತ್ರೆ) ದಂತಿರುವವನೂ, ವಿದ್ವಾಂಸರ ಸಮೂಹಕ್ಕೆ ಕಲ್ಪವೃಕ್ಷ ಪ್ರಾಯನಾದವನೂ, ಬುದ್ಧಿಯಿಂದ (ಬುದ್ಧಿಶಕ್ತಿಗುಣದಿಂದ) ಬ್ರಹ್ಮನನ್ನು ಜಯಿಸಿದವನೂ ಆದ ಬಸವೇಶ್ವರನೇ (ನನ್ನನ್ನು) ರಕ್ಷಿಸು. ೧೨. ಗಜಾಸುರ ಸಂಹಾರಕನಾದ ಪರಮೇಶ್ವರನ ಪಾದಕಮಲಗಳಿಗೆ ಕೈಗಳನ್ನು ಮುಗಿಯು ತ್ತಿರುವವನೂ, ಶ್ರೇಷ್ಠರಾದ ಭಕ್ತರ ಸಮೂಹವನ್ನು ಸಂತೋಷಪಡಿಸುವವನೂ

ಮಂಜುಳಕಟಾಕ್ಷರುಚಿಸಂಜನಿತಲೋಕ ಗುಣ-
ಪುಂಜಯುತ ಭಕ್ತಪವಿಪಂಜರ ಸದರ್ಥ-
ವ್ಯಂಜಕವಚಸ್ಕ ಪೊರೆ ಕಂಜಭವವಂದ್ಯ ಭವ-
ಕುಂಜಭದವಪಾವಕ ನಿರಂಜನ ವೃಷೇಂದ್ರಾ ೧೨

ಸಜ್ಜನಸಮರ್ಚ್ಯ ಚರಪಜ್ಜಳಸಮಾರಚಿತ-
ಮಜ್ಜನ ನಿಜಾಂಘ್ರಿವಿನಮಜ್ಜನಸಮೂಹಾ-
ಪಜ್ಜಳದಮಾರುತ ಮರುಜ್ಜನಕ ಶಿಷ್ಟಪರಿ-
ಷಜ್ಜಲಜಭಾನು ಭವರಜ್ಜುಕರವಾಲಾ
ರುಜ್ಜಲಧಿಬಾಡಬ ಜಗಜ್ಜಠರ ತಾರಕಲ-
ಸಜ್ಜಪನಿಯುಕ್ತ ಮದವಜ್ಜನವಿದೂರ-
ಪ್ರೋಜ್ಜನಿತತತ್ತ್ವಕುಲ ಬಿಜ್ಜಳಪರಿಸ್ತುತ ವಿ-
ಲಜ್ಜಖಿಲಭಂಜನ ಸಸಜ್ಜ ಬಸವೇಶಾ ೧೩

ಲಾಟಮಗಧಾಂಧ್ರಕವಿರಾಟವಿಷಯಾಧಿಪಕಿ-
ರೀಟತಟರತ್ನರುಚಿಪಾಟಲಿತಪಾದ
ಸ್ಫಾಟಿಕಸುಪೀಠ ಭೃತಕಾಟನಪದಾರಿ ಪೃತ-
ತಾಟಕವಿನುತ್ಯ ಮೃಡನಾಟಕಸಹಾಯಾ

ಅತ್ಯಂತ ಮನೋಹರವಾದ ಕೀರ್ತಿಯೇ ದ್ರವ್ಯವಾಗಿ ಉಳ್ಳವನೂ, ಅಗ್ನಿಯೇ ನೇತ್ರವಾಗಿ ಉಳ್ಳ ಪರಮೇಶ್ವರನನ್ನು ಪೂಜಿಸುವವನೂ, ಪತಂಜಲಿ ಮುನಿಯಿಂದ ಸ್ತುತಿಸಿಕೊಳ್ಳುವವನೂ, ಸರ್ವಾಭಿಮತವೆನಿಸಿದ ಸದ್ಗುಣಗಳೇ ಲಕ್ಷಣವಾಗಿ ಉಳ್ಳವನೂ (ಗುರುತಾಗಿ ಉಳ್ಳವನೂ), ಮನೋಹರವಾದ ಕಡೆಗಣ್ಣುಗಳ ನೋಟದ ಕಾಂತಿಯಿಂದ ಹುಟ್ಟಿಸಲ್ಪಟ್ಟ ಲೋಕಗಳನ್ನುಳ್ಳವನೂ, ಸದ್ಗುಣಗಳಸಮೂಹದಿಂದ ಕೂಡಿದ ಭಕ್ತರಿಗೆ ವಜ್ರಪಂಜರ ಸ್ವರೂಪನಾದವನೂ, ಒಳ್ಳೆಯ ಅರ್ಥವನ್ನು ವ್ಯಕ್ತಪಡಿಸುವ ಮಾತುಗಳನ್ನಾಡುವವನೂ, ಕಮಲಭವನಾದ ಬ್ರಹ್ಮನಿಂದ ನಮಸ್ಕರಿಸಿಕೊಳ್ಳಲಿಕ್ಕೆ ಯೋಗ್ಯನಾದವನೂ, ಪಾಪವೆಂಬ ಕಾಡಿಗೆ ಕಾಡ್ಗಿಚ್ಚೆನಿಸಿರುವವನೂ, ಮಾಯಾರಹಿತನಾದವನೂ ಆದ ಬಸವೇಶ್ವರನೇ (ನನ್ನನ್ನು) ರಕ್ಷಿಸು. ೧೩-೧೪. ಲಾಟ, ಮಗಧ, ಆಂಧ್ರಕ, ವಿರಾಟಾದಿ ದೇಶಾಧಿಪತಿಗಳ ಕಿರೀಟಗಳ ದಂಡೆಯಲ್ಲಿ (ಕೊನೆಯಲ್ಲಿ) ಕೆತ್ತಲ್ಪಟ್ಟ ರತ್ನಗಳ ಕಾಂತಿಯಿಂದ ಕೆಂಪಾಗಿ ಕಾಣುವಂತೆ ಮಾಡಿದ ಪಾದಗಳನ್ನಿಟ್ಟಿರುವ ಸ್ಫಟಿಕಮಣಿಯಿಂದ ಮಾಡಿದ ಕಾಲುಮಣೆಯ ಪೀಠವನ್ನುಳ್ಳವನೂ, ಮನ್ಮಥನ ಶತ್ರುವಾದವನೂ, ತಾಟಕಾಸುರನನ್ನು ಸಂಹರಿಸಿದ ಶ್ರೀರಾಮಚಂದ್ರನಿಂದ ಸ್ತೋತ್ರಮಾಡಿಸಿಕೊಳ್ಳುವುದಕ್ಕೆ ಯೋಗ್ಯನಾದವನೂ, ಈಶ್ವರನ ಈ ಪ್ರಪಂಚದ ವ್ಯಾಪಾರವೆಂಬ ನಾಟಕಕ್ಕೆ ಸಹಾಯಕನಾದವನೂ, ಮನೋಹರವಾದ ಮಾತುಗಳಿಂದ ಕೂಡಿದ ಪರಮತವಾದಿಗಳೆಂಬ ವೃಕ್ಷಗಳನ್ನು ಕಿತ್ತುಹಾಕುವುದರಲ್ಲಿ

ಚಾಟುಪರವಾದಕುಜಪಾಟನಪಟಿಷ್ಠ ಮುನಿ-
ಕೋಟಿಹೃದಯಾಂಬುರುಹಕೋಟರಗ ಶೃಂಗಾ
ತಾಟಿತನಗ ಶ್ರುತಿಸುಘೋಟಕಮತಾದ್ರಿಮಣಿ-
ಕೂಟ ಪೊರೆ ನವ್ಯಶಶಿಜೂಟ ಬಸವೇಶಾ ೧೪

ದುಷ್ಟಜನದರ್ಪಹರ ಶಿಷ್ಟಜನರಕ್ಷಕ ಸ-
ದಿಷ್ಟಜನಸನ್ನುತ ನತೇಷ್ಟದಪದಾಬ್ಜೋ-
ತ್ಕೃಷ್ಟಗಣಸೇವ್ಯ ಹೃತದುಷ್ಟಮಕರಧ್ವಜ ನಿ-
ವಿಷ್ಟಮುನಿಮಾನಸ ಸುಹೃಷ್ಟಮೃದುಭಾಷಾ
ನಷ್ಟಪರವಾದ ಪರಿತುಷ್ಟಪರಮೇಶ ಲಸ-
ದಷ್ಟದಿಗಧೀಶನುತ ಸೃಷ್ಟಜಗದಂಡಾ-
ಕ್ಲಿಷ್ಟಮತಿ ಸಾಧುಪರಿಪುಷ್ಟಸಕಲಾರ್ಥ ಪೊರೆ
ವಿಷ್ಟಪಕದಂಬಕವಿಶಿಷ್ಟ ಬಸವೇಶಾ ೧೫

ಸಮರ್ಥನಾದವನೂ, ಅನೇಕ ಜನ ಋಷಿಗಳ ಹೃದಯ ಕಮಲವೆಂಬ ಪೊದೆಗಳನ್ನು ಹೊಂದಿರುವವನೂ, (ತನ್ನ) ಕೊಂಬುಗಳಿಂದ ಪರ್ವತಗಳನ್ನು ತಿವಿಯುವಂಥವನೂ (ಕೊಂಬಿನ ಮಣ್ಣಿನಾಟದಿಂದ) (ವಪ್ರಕ್ರೀಡೆಯಿಂದ ಪರ್ವತಗಳನ್ನು ತಿವಿ ತಿವಿದು ಉರುಳಿಸುವವನೂ ಎಂಬ ಭಾವ), ವೇದಗಳೇ ಶ್ರೇಷ್ಠವಾದ ಕುದುರೆಗಳನ್ನಾಗಿ ಉಳ್ಳ ಶಿವನ ವೀರಶೈವಮತವೆಂಬ ಪರ್ವತಕ್ಕೆ ರತ್ನಶಿಖರನಾಗಿ ಉಳ್ಳವನೂ, ನೂತನ ಚಂದ್ರನನ್ನೇ ಜಡೆಯಲ್ಲುಳ್ಳವನೂ ಆದ ಬಸವೇಶ್ವರನೇ (ನನ್ನನ್ನು) ರಕ್ಷಿಸು. [ಇಲ್ಲಿ ಬಸವಣ್ಣನನ್ನು ಶಿವನ ಅಭೇದದಿಂದ ವರ್ಣಿಸಲಾಗಿದೆ. [ಭೃತಕಾಟನ ಪದಕಾಟನ ಎಂದರೆ ನೀರಿನಲ್ಲಿ ಸಂಚರಿಸುವುದು ಮೀನು ಅದನ್ನು ಧ್ವಜದಲ್ಲಿ ಚಿಹ್ನೆಯಾಗುಳ್ಳವನು ಮೀನಕೇತನ-ಮನ್ಮಥ;] ೧೫. ದುಷ್ಟಜನರ ಗರ್ವವನ್ನು ನಾಶಮಾಡುವ, ಸತ್ಪುರುಷರನ್ನು ರಕ್ಷಿಸುವ, ಸಮೀಚೀನರಾದ ಆಪ್ತ ಜನರಿಂದ ಸ್ತುತಿಸಲ್ಪಡುವವನು, ನಮಸ್ಕರಿಸಿದವರಿಗೆ ಇಷ್ಟಾರ್ಥವನ್ನು ಕೊಡುವ ಪಾದ ಕಮಲವುಳ್ಳ, ಉತ್ತಮಗುಣವುಳ್ಳವರಿಂದ ಸೇವಿಸಲ್ಪಡುವುದಕ್ಕೆ ಯೋಗ್ಯನಾದ, ದುಷ್ಟನಾದ ಮನ್ಮಥನನ್ನು ಸಂಹರಿಸಿದ, ಋಷಿ ಜನರ ಚಿತ್ತದಲ್ಲಿ ಕುಳಿತಿರುವ, ಸಮೀಚೀನವೂ, ಸಂತೋಷ ಜನಕವೂ ಆದ ಕೋಮಲ ಮಾತುಗಳನ್ನುಳ್ಳ, ಅಮಂಗಳಕರಗಳಾದ ಮತವಾದಿಗಳನ್ನು ನಾಶಗೊಳಿಸಿದ, ಈಶ್ವರನನ್ನು ಸಂತೋಷಪಡಿಸಿದ (ನಡೆನುಡಿಯುಳ್ಳ), ಶೋಭಿಸುವ ಅಷ್ಟದಿಕ್ಪಾಲಕರಿಂದ ಸ್ತೋತ್ರಮಾಡಿಸಿಕೊಳ್ಳುವ, ಲೋಕವೆಂಬ ತತ್ತಿಯನ್ನು ಹುಟ್ಟಿಸಿದ, ಕ್ಲೇಶಕ್ಕೊಳಗಾದ ಸಾಧು ಸತ್ಪುರುಷರನ್ನು ಪೋಷಿಸುವಂಥ, ಸಮಸ್ತ ಐಶ್ವರ್ಯ ಸಂಪನ್ನನಾದ,

ಶುಂಠಶಿಶುಮಾರಮದಲುಂಠನಸಮರ್ಥ ದಶ-
ಕಂಠನತಭೂಭೃದುಪಕಂಠತತಿಲೀಲೋ-
ತ್ಕಂಠ ಭೃಗುಗಾರ್ಗ್ಯಹರಕಂಠಸನಕಸ್ತುತ ವಿ-
ಕುಂಠಿಸುಮನಃಪ್ರಿಯ ಸುಕಂಠಸುರಗೇಯಾ
ಕುಂಠಿತದುರೀಹ ವಿಷಕಂಠಕೃತಚಾರುತರ-
ಕಂಠಿಕ ಗಜಾಸ್ಯಶಿತಿಕಂಠರಥಮದ್ಯಾ
ಕುಂಠನಿಜಶೌರ್ಯ ಪೊರೆ ಠಂಠಣಿತನಾದಕಳ
ಕಂಠರುಚಿನೀಲಗರಕಂಠ ಬಸವೇಶಾ ೧೬

ದಂಡಧರಬಾಧಿತಮೃಕಂಡುಭವರಕ್ಷ ಪರಿ-
ಪಾಂಡುರಕಳೇವರ ಪಿಚಂಡಭೃತವಿಶ್ವಾ-
ಜಾಂಡ ಘನಕುಂಡಲಿಪಕುಂಡಲಮನೋಜ್ಞತತ
ತಾಂಡವಮೃಡಪ್ರಯುತ ಚಂಡಗಣನುತ್ಯಾ
ಪಂಡಿತಜನಾಂಬುರುಹಷಂಡರವಿ ದೃಪ್ತರಿಪು-
ಖಂಡನಜಗದ್ಭರಣಶೌಂಡ ನಿಖಿಲಾಶಾ-
ಖಂಡಿತಸುಕೀರ್ತಿ ಮಹಿಮಂಡಲಮಹೇಶ ಪೊರೆ
ಮಂಡಿತಮಹಾಗುಣಕರಂಡ ಬಸವೇಶಾ ೧೭

ಗೂಢಶಿವತತ್ತ್ವನಿಧಿ ಗೂಢಪದಕಂಕಣ ನಿ-
ಗೂಢಶಿವಮಂತ್ರ ಪರಿಲೀಢಬಹುಶಾಸ್ತ್ರಾ-
ರೂಢಮತಿಸಂಯುತ ಸಮೂಢಘನಸಾರರುಚಿ
ಮೂಢಮತಿವರ್ಜಿತ ನವೋಢಸುರಸೇವ್ಯಾ

ಜಗತ್ಸಮೂಹದಿಂದ ಕೂಡಿದ ಬಸವೇಶ್ವರನೇ ರಕ್ಷಿಸು. ೧೬–೧೭. ಯಮನಿಂದ ಪೀಡಿಸಲ್ಪಟ್ಟ ಮಾರ್ಕಂಡೇಯನನ್ನು ರಕ್ಷಿಸಿದ, ವಿಶೇಷ ವಾದ ಶುಭ್ರಶರೀರಿಯಾದ ಗರ್ಭದಲ್ಲಿಟ್ಟು ಸಕಲ ಬ್ರಹ್ಮಾಂಡಗಳನ್ನು ಪರಿಪಾಲಿಸುವ, ಶ್ರೇಷ್ಠನಾದ ಆದಿ ಶೇಷನ ಕರ್ಣಕುಂಡಲದಿಂದ ಮನೋಹರನಾದ, ವಿಸ್ತಾರವಾದ ತಾಂಡವ ನರ್ತನವನ್ನುಳ್ಳ ಈಶ್ವರನಿಂದ ಕೂಡಿಕೊಂಡಿರುವ, ಪ್ರಚಂಡರಾದ ಶಿವಗಣಗಳ ಸಮೂಹದಿಂದ ಕೊಂಡಾಡಿಸಿ ಕೊಳ್ಳುವುದಕ್ಕೆ ಯೋಗ್ಯವಾದ, ವಿದ್ವಾಂಸರೆಂಬ ಕಮಲಗಳ ಸಮೂಹಕ್ಕೆ ಸೂರ್ಯನಂತಿರುವ, ಕೊಬ್ಬಿದ ಶತ್ರುಗಳನ್ನು ಕತ್ತರಿಸುವಿಕೆ (ಮತ್ತು) ಲೋಕಗಳನ್ನು ಸಂರಕ್ಷಿಸುವಿಕೆ ಇವುಗಳಲ್ಲಿ ಸಮರ್ಥನಾದ, ಸಮಸ್ತ ದಿಕ್ಕುಗಳಲ್ಲೂ ವಿಚ್ಛಿತ್ತಿಯಿಲ್ಲದಿರುವ (ನಿಬಿಡವಾದ) ಕೀರ್ತಿಯನ್ನುಳ್ಳ, ಭೂಮಂಡಲಕ್ಕೆಲ್ಲ ದೊಡ್ಡ ಮಹೇಶ್ವರನೆನಿಸಿದ, ಅಧಿಕವಾದ ಸದ್ಗುಣಗಳಿಂದ ಅಲಂಕರಿಸಲ್ಪಟ್ಟ ಭರಣಿಯಂತಿರುವ ಬಸವೇಶ್ವರನೇ ರಕ್ಷಿಸು. ೧೮. ಗೂಢವಾದ ಶಿವತತ್ತ್ವಗಳೆಂಬ ನಿಧಿಗೆ ರಹಸ್ಯಸ್ಥಾನನೆನಿಸಿದ, ಕಾಲಿನ ಕಟಕ (ಬಳೆ)ದಲ್ಲಿ ನೆಲೆಗೊಂಡಿರುವ ಶಿವ ಸಂಬಂಧದ ಮಂತ್ರಗಳನ್ನುಳ್ಳ ಚೆನ್ನಾಗಿ ಆಸ್ವಾದಿಸಲ್ಪಟ್ಟ (ಅಭ್ಯಸಿಸಲ್ಪಟ್ಟ)

ಗಾಢರಿಪುವರ್ಗಹರ ಬಾಢದುರಿತಾರ್ದನ ಸ-
ದೋಢವೃಢ ಶಶ್ವದವಗಾಢಶಿವಧರ್ಮ
ಪ್ರೌಢಬುಧನುತ್ಯ ದೃಗಪೋಢಭವ ರಕ್ಷಿಸಧಿ-
ರೂಢಶಶಿಭೃನ್ಮತನಿರೂಢ ಬಸವೇಶಾ ೧೮

ಕ್ಷೋಣಿಜನರಕ್ಷಣಧುರೀಣ ಬಲದುರ್ಮದಕ-
ರೇಣುನಿಶಿತಾಂಕುಶ ಸದೇಣಧರಲಕ್ಷ-
ಪ್ರಾಣ ಸುರವಂದ್ಯಪದಶೋಣಸರಸೀರುಹ ವಿ-
ಷಾಣದಳಿತಾಸುರ ಸವೀಣಮುನಿಸುತ್ಯಾ-
ಪ್ರೀಣಿತಮಹಾಗಣ ಪುರಾಣಪರಿಷನ್ನುತ ಹೃ-
ತಾಣವಕಲಂಕ ಸುಮಬಾಣಮದಭಂಗಾ-
ಕ್ಷೀಣಬಲ ರಕ್ಷಿಪುದು ಪಾಣಿನಿಕಣಾದನುತ-
ವಾಣಿ ವರದಾಭಯದಪಾಣಿ ಬಸವೇಶಾ ೧೯

ಶಿವನ ಸಂಬಂಧದ ಶಾಸ್ತ್ರಗಳನ್ನುಳ್ಳ, ಪಾರಲೌಕಿಕವಾದ ಬುದ್ಧಿಯಿಂದ ಕೂಡಿದ ರಾಶಿಮಾಡಿದ ಪಚ್ಚಕರ್ಪೂರದ ಕಾಂತಿಯಂತಿರುವ ಕಾಂತಿಯುಳ್ಳ, ಮೂರ್ಖ ಬುದ್ಧಿಯುಳ್ಳವರಿಂದ ದೂರನಾದ, ನೂತನ ಕಲ್ಯಾಣ (ಲಗ್ನ)ದಿಂದ ಕೂಡಿದ ದೇವತೆಗಳಿಂದ ಸೇವಿಸಿಕೊಳ್ಳುವುದಕ್ಕೆ ಯೋಗ್ಯನಾದ, ಗಾಢವಾದ ಕಾಮಕ್ರೋಧಾದಿ ಅರಿಷಡ್ವರ್ಗಗಳನ್ನು ನಾಶಮಾಡಿದ, ಶೀಘ್ರವಾಗಿ ಪಾಪಗಳನ್ನು ನಾಶಗೊಳಿಸುವಂತಹ, ಸಮೀಚೀನವಾಗಿ ಈಶ್ವರನನ್ನು ಹೊರುವಂತಹ, ಬಾರಿ ಬಾರಿಗೂ ಈಶ್ವರ ಧರ್ಮವನ್ನು ಚಿಂತನೆ ಮಾಡುತ್ತಿರುವ, ಪ್ರೌಢರಾದ ವಿದ್ವಾಂಸರುಗಳಿಂದ ಸ್ತೋತ್ರಮಾಡಿಸಿಕೊಳ್ಳುವುದಕ್ಕೆ ಯೋಗ್ಯನೆನಿಸಿದ, ಕಣ್ಣಿನ ನೋಟಮಾತ್ರದಿಂದ ಪಾಪಗಳನ್ನು ಹೋಗಲಾಡಿಸುವ, ರೂಢವಾಗಿರುವ ವೀರಶೈವ ಮತವನ್ನು (ಅಥವಾ ಅಭಿವೃದ್ಧಿಗೊಂಡಿರುವ ಶಿವನ ಮತವನ್ನು) ಹೊಂದಿರುವ ಬಸವೇಶ್ವರನೇ ರಕ್ಷಿಸು. ೧೯. ಭೂಮಂಡಲದಲ್ಲಿರುವ ಜನರುಗಳ ಸಂರಕ್ಷಣೆಯಲ್ಲಿ ಸಮರ್ಥನಾದ, ನೀಚವಾದ ಕೆಟ್ಟಗರ್ವವೆಂಬ ಹೆಣ್ಣಾನೆಗೆ ತೀಕ್ಷ್ಣವಾದ ಅಂಕುಶದಂತಿರುವ, ಸಮೀಚೀನವಾದ ಚಂದ್ರನೇ ಜಡೆಯಲ್ಲಿ ಚಿಹ್ನೆಯಾಗಿ ಉಳ್ಳ ಈಶ್ವರನಿಗೆ ಪ್ರಾಣಸ್ವರೂಪನಾದ, ದೇವತೆಗಳಿಂದ ನಮಸ್ಕರಿಸಲ್ಪಡುವುದಕ್ಕೆ ಯೋಗ್ಯವಾದ ಕೆಂದಾವರೆಯಂತಿರುವ (ರಕ್ತ ವರ್ಣದ ಕಮಲದಂತಿರುವ) ಪಾದಗಳನ್ನುಳ್ಳ, ಕೋಂಬಿನಿಂದ ರಾಕ್ಷಸರುಗಳನ್ನು ಸೀಳಿ ಹಾಕಿದ, ವೀಣಾಪಾಣಿಯಾದ ನಾರದಮಹರ್ಷಿಯಿಂದ ಸ್ತೋತ್ರಮಾಡಿಸಿಕೊಳ್ಳುವ, ಶಿವ ಮಹಾಗಣಗಳಿಂದ ಸಂತೋಷಗೊಳಿಸಲ್ಪಟ್ಟ, ಪುರಾಣಗಳಿಂದ ಹೊಗಳಿಸಿಕೊಳ್ಳಲ್ಪಡುವ, ಆಣವವೆಂಬ ಮಲವನ್ನು ನಾಶಗೊಳಿಸಿದ, ಪುಷ್ಪಬಾಣನಾದ ಮನ್ಮಥನ ಗರ್ವವನ್ನು ನಾಶಗೊಳಿಸಿದ, ನಾಶವಾಗದ ಶಕ್ತಿಯನ್ನುಳ್ಳ, ಪಾಣಿನಿ, ಕಣಾದಾದಿಗಳಮಾತಿನಿಂದ ಸ್ತೋತ್ರಮಾಡಿಸಿಕೊಂಡ, ಇಷ್ಟವಾದವರಗಳನ್ನು ಅಭಯವನ್ನು ಕೊಡುವ ಕೈ

ವಾರಣಮುಖಸ್ತುತ ವಿಚಾರಣದುರೀಷಣನಿ-
ವಾರಣ ಗಣಾಬ್ಜತರುಣಾರುಣ ಕೃತಾತ್ಮ-
ಪ್ರೇರಣಜಗನ್ನಿಕರಕಾರಣ ಭವಾಂಬುನಿಧಿ-
ತಾರಣ ತತಾತ್ಮ ಸುಖಪೂರಣಕಟಾಕ್ಷಾ
ದಾರುಣಸುರಾಹಿತವಿದಾರಣ ನತಾಪದನ
ಧೀರಣ ಕಳಾಕುಳವಿಸಾರಣ ನಿಯುಕ್ತೋ
ದೀರಣ ಮದೀಶ ಜಯ ಧಾರಣಯಮಾಂಕ ನಗ
ಚಾರಣ ಖಲಾಂಬುದಸಮೀರಣ ವೃಷೇಂದ್ರಾ ೨೦

ಕೃತ್ತಪರವಾದಮದಮತ್ತಜನ ಸಾರಶುಭ-
ವೃತ್ತ ಶಿವಸುವ್ರತನಿಮಿತ್ತ ಶಿವಶೇಷೋ-
ಪಾತ್ತಸುಖಭೋಗ ಮೃದುಚಿತ್ತ ಗಣನಾಯಕ ನಿ-
ವೃತ್ತವಿಷಯಭ್ರಮ ಸಮಾತ್ತಶಿವಯೋಗಾ-

ಗಳನ್ನುಳ್ಳ ಬಸವೇಶ್ವರನೇ ರಕ್ಷಿಸು. ೨೦. ಗಣಪತಿಯಿಂದ ಸ್ತೋತ್ರಮಾಡಿಸಿಕೊಳ್ಳುವ. ವಿಚಾರಶೀಲತೆಯಿಂದ ದಾರೇಷಣ, ಪುತ್ರೇಷಣ, ವಿತ್ತೇಷಣಾದಿ ಈ ಷಣತ್ರಯಗಳನ್ನು ದೂರಗೊಳಿಸಿದ, ಶಿವಗಣಗಳೆಂಬ ಕಮಲಗಳಿಗೆ ಉದಯ ಕಾಲದಸೂರ್ಯನೆನಿಸುವ, ಆತ್ಮಪ್ರೇರಣೆಯಿಂದ ಜಗತ್ತಿನ ಸಮೂಹಗಳ ಹುಟ್ಟುವಿಕೆಗೆ ಕಾರಣಕರ್ತನೆನಿಸಿದ, ಜನನಮರಣಾತ್ಮಕವಾದ ಸಂಸಾರವೆಂಬ ಸಾಗರವನ್ನು ದಾಟಿಸುವ, ವಿಸ್ತಾರವಾದ (ವಿಶೇಷವಾದ) ಆತ್ಮಸುಖವನ್ನುಂಟುಮಾಡುವ ಕಡೆಗಣ್ಣುಗಳ ನೋಟವುಳ್ಳ, ಕ್ರೂರರಾದ ರಾಕ್ಷಸರುಗಳನ್ನು ಸಂಹರಿಸಿದ, ನಮಸ್ಕರಿಸಿದವರ ಆಪತ್ತುಗಳನ್ನು ದೂರೀಕರಿಸುವ, ಸಕಲ ವಿದ್ಯಾಸಮೂಹವನ್ನು ವಿಸ್ತಾರಪಡಿಸುವ, (ಭಕ್ತಜನರ) ಉದ್ಧಾರಕಾರ್ಯದಲ್ಲಿ ಕೂಡಿದ, ಧಾರಣಯಮಗಳೆಂಬ ಯೋಗಗಳೇ ಗುರುತುಳ್ಳ, ಕೈಲಾಸಾದ್ರಿಯಲ್ಲಿ ಸಂಚರಿಸುವ, ದುಷ್ಟರೆಂಬ ಮೋಡಗಳಿಗೆ ಗಾಳಿಯಂತಿರುವ, ಹೇ ನನ್ನ ಸ್ವಾಮಿಯೇ ಬಸವೇಶ್ವರನೇ ಜಯ. ೨೧. ಅನ್ಯಮತದ ಪರ ವಾದವನ್ನು ಮಾಡುವ ಕೊಬ್ಬಿದಜನರನ್ನು ಕತ್ತರಿಸಿದ, ಶ್ರೇಷ್ಠವಾಗಿಯೂ ಶುಭವಾಗಿಯೂ ಇರುವ ಚರಿತ್ರೆಯನ್ನುಳ್ಳ, ಶಿವಸಂಬಂಧವಾದನಿಯಮಗಳಿಗೆ ಕಾರಣನೆನಿಸಿದ, ಈಶ್ವರನ ಶೇಷಪ್ರಸಾದದಿಂದ ಸೌಖ್ಯಾತಿಶಯವನ್ನು ಹೊಂದಿರುವ, ಕೋಮಲವಾದ ಮನಸ್ಸನ್ನುಳ್ಳ, ಶಿವಗಣಗಳಿಗೆಲ್ಲ ಅಧಿಪತಿಯೆನಿಸಿದ, ಇಂದ್ರಿಯವ್ಯಾಪಾರಗಳ ಭ್ರಾಂತಿಯಿಂದ ವಿಮುಖನಾದ (ಹಿಂದಿರುಗಿದ), ಶಿವಯೋಗದಿಂದ ಪಡೆದ ಶಿವನ

ದತ್ತಶಿವಚಿತ್ಸುಖ ಭವೋತ್ತರಣಶೀಲ ಗುಣ-
ವಿತ್ತನಿಧಿ ಕಾನಕಕುಭೃತ್ತಟವಿಹಾರಾ-
ಯತ್ತಮುದ ಪಾಲಿಸೊಲವಿತ್ತು ಬಿಡದೆನ್ನನೆನ-
ಗಿತ್ತು ಮೃಡಭಕ್ತಿಯನುದಾತ್ತ ಬಸವೇಶಾ ೨೧

ತಪ್ತಕನಕಪ್ರಭ ನಿಗುಪ್ತನಿಜಮಾನಸಸು
ಜಪ್ತಶಿವಮಂತ್ರ ತನುಲಿಪ್ತಸಿತಭಸ್ಮ
ಪ್ರಾಪ್ತಶಿವಭಾವ ಜಿತದೃಪ್ತಕರಣೇಂದ್ರಿಯ ಸ-
ಮಾಪ್ತಬಹುಕೃತ್ಯ ಪರಿತೃಪ್ತಚರಲಿಂಗಾ
ಕ್ಷಿಪ್ತಮದ ಸತ್ತ್ವಗುಣಲುಪ್ತಜಡಮೋಹ ಚಿದ-
ಸುಪ್ತರುಚಿದೀಪಪರಿದೀಪ್ತಕರಣಾಶಾ
ವ್ಯಾಪ್ತಸಿತಕೀರ್ತಿ ಪೊರೆ ಸಪ್ತಹಯಚಂದ್ರಪವ-
ನಾಪ್ತನಯನಾಂಕಧರಗೋಪ್ತ ಬಸವೇಶಾ ೨೨

ಸಂಬಂಧದ ಜ್ಞಾನದಿಂದ ಉಂಟಾದ ಸುಖವನ್ನು ಹೊಂದಿರುವ, ಸಂಸಾರದಿಂದ ದಾಟಿಸುವ ಶೀಲವುಳ್ಳ, ಸದ್ಗುಣಗಳೆಂಬ ಐಶ್ವರ್ಯಕ್ಕೆ ರಾಶಿಯೆನಿಸಿರುವ, ಕನಕಪರ್ವತವೆನಿಸಿದ ಮೇರುವಿನ ತಪ್ಪಲಿನಲ್ಲಿ ವಿಹಾರಮಾಡುವುದರಿಂದ ಪಡೆದ ಸಂತೋಷವನ್ನುಳ್ಳ, ಹೇ ಉದಾತ್ತನಾದ ಬಸವೇಶ್ವರನೇ (ನನ್ನಲ್ಲಿ) ಪ್ರೀತಿಯನ್ನು ಹೊಂದಿ, ನನಗೆ ಪರಮೇಶ್ವರ ಸಂಬಂಧದ ಭಕ್ತಿಯನ್ನು ಕೊಟ್ಟು ತಪ್ಪದೆ ಪಾಲಿಸುವವನಾಗು. ೨೨. ಕಾಯ್ದು ಕರಗಿದ ಬಂಗಾರದ ಕಾಂತಿಯಂತಿರುವ ಕಾಂತಿಯಿಂದ ಕೂಡಿದ, ಗೂಢವಾದ (ಗಂಭೀರವಾದ) ತನ್ನ ಮನಸ್ಸಿನಿಂದಕೂಡಿದ, ಚೆನ್ನಾಗಿ ಜಪಿಸುತ್ತಿರುವ ಶಿವಷಡಕ್ಷರ ಮಂತ್ರವನ್ನುಳ್ಳ, ಶುಭ್ರವಾದ ವಿಭೂತಿಯನ್ನು ದೇಹದಲ್ಲಿ ಧರಿಸಿದ, ಶಿವಭಾವಾಪನ್ನ ಚಿತ್ತವನ್ನುಳ್ಳ, (ಅಥವಾ ಮಂಗಳಕರವಾದ ಭಾವವನ್ನುಳ್ಳ), ಗರ್ವ ವಿಶಿಷ್ಟವಾದ ವಾಕ್ಕು, ಪಾಣಿ, ಪಾದ, ಗುದ. ಉಪಸ್ಥಗಳೆಂಬ ಐದುಕರ್ಮೇಂದ್ರಿಯ, ಮೂಗು, ಕಣ್ಣು, ಕಿವಿ, ಚರ್ಮ, ನಾಲಿಗೆಯೆಂಬ ಐದು ಜ್ಞಾನೇಂದ್ರಿಯಗಳನ್ನು ಗೆದ್ದಿರುವ, ಅನೇಕ (ಲೋಕಕಲ್ಯಾಣಕಾರಕ) ಕ್ರಿಯೆಗಳನ್ನು ಮಾಡಿಮುಗಿಸಿದ, ಜಂಗಮಸಮೂಹವನ್ನು ತೃಪ್ತಿಗೊಳಿಸಿದ, ಗರ್ವವನ್ನು ನಾಶಗೊಳಿಸಿದ, ಮಾಯೆಯೆಂಬ ಜಾಡ್ಯವನ್ನು ಶಾಂತಿಗುಣದಿಂದ ಲೋಪ (ನಾಶ) ಗೊಳಿಸಿದ, ಸದಾ ಜಾಗರೂಕವಾದ ಜ್ಞಾನವೆಂಬ ಕಾಂತಿಯುಳ್ಳದೀಪದಿಂದ ಪ್ರಕಾಶಗೊಳಿಸಿಕೊಂಡಿರುವ ಇಂದ್ರಿಯಗಳನ್ನುಳ್ಳ (ಜ್ಞಾನವೆಂಬ ಬೆಳಕಿನಿಂದ ಕೂಡಿದ ಇಂದ್ರಿಯಗಳುಳ್ಳ), ದಿಕ್ಕುಗಳಲ್ಲೆಲ್ಲ ವ್ಯಾಪಿಸಿರುವ ಶುಭ್ರವಾದ ಯಶಸ್ಸನ್ನುಳ್ಳ, ಸೂರ್ಯ, ಚಂದ್ರ, ಅಗ್ನಿಗಳೇ ಕಣ್ಣಾಗಿಉಳ್ಳ ಶಿವನ ಚಿಹ್ನೆಯಾದ ಶಿವಲಿಂಗವನ್ನು ಧರಿಸಿರುವವರನ್ನು ಸಂರಕ್ಷಿಸುವ ಬಸವೇಶ್ವರನೇ (ನನ್ನನ್ನು ರಕ್ಷಿಸು)·

ವಾಸ್ತವಗುಣಾಕರ ನಿರಸ್ತನಿಖಿಲಾಮಯ ಪ-
ರಾಸ್ತಪರವಾದ ಋಷಿಶಸ್ತಶಿವಯೋಗಾ-
ಭ್ಯಸ್ತ ನಿಜಭಾವನವಚಸ್ತತಮಹಾಗಮ ಮ-
ಹಸ್ತತಿಜಿತಾರ್ಕ ನಿಗಮಸ್ತವವಿಲೋಲಾ
ಧ್ವಸ್ತಕಲಿಕಲ್ಮಷ ಸಮಸ್ತಬುಧಸನ್ನುತ ಯ
ಶಸ್ತತದಿಗಂತ ಸುರಮಸ್ತಕಸಮೂಹ-
ನ್ಯಸ್ತಪದ ಪಾಲಿಸು ನಿರಸ್ತಮಯ ಸಾರಗುಣ-
ವಿಸ್ತರ ಲಸದ್ವರದಹಸ್ತ ಬಸವೇಶಾ ೨೩

ತ್ಯಕ್ತಕರಣೇಂದ್ರಿಯನಿಯುಕ್ತವಿಷಯಭ್ರಮ ಸ-
ದುಕ್ತಪರಮಾರ್ಥ ಪರಿಭುಕ್ತಪರವಾದ
ಪ್ರಾಕ್ತನಮಹೇಶಪದಭಕ್ತ ಕರುಣಾಮೃತನಿ
ಷಿಕ್ತ ಸುಯಶೋಭರಿತದಿಕ್ತಟ ಕವೀಂದ್ರ-

೨೩. ವಾಸ್ತವವಾದ ಅಂದರೆ ಸ್ವಭಾವ ಸಿದ್ಧವಾದ ಸದ್ಗುಣಗಳಿಗೆ ಆಶ್ರಯನಾದ, ಸಮಸ್ತರೋಗಗಳನ್ನು ನಾಶಗೊಳಿಸಲ್ಪಟ್ಟ, ಶಿವನಿಂದ ಭಿನ್ನವಾದ ಮತಸ್ಥರ ವಾಗ್ವಾದಗಳನ್ನು ನಾಶಗೊಳಿಸಿದ, ಋಷಿಜನಗಳಿಂದ ಹೊಗಳಲ್ಪಟ್ಟ ಶಿವಯೋಗವನ್ನುಳ್ಳ, ಸ್ಥಿರವಾದ (ಶಿವನ) ಅನುಭಾವವನ್ನು ಅಭ್ಯಾಸ ಮಾಡಿದ, ತನ್ನ ಮಾತುಗಳಿಂದ ಪ್ರಚಾರಗೊಳಿಸಿದ ಶಿವಾಗಮಗಳನ್ನುಳ್ಳ (ಶಿವಾಗಮಗಳ ತತ್ತ್ವವನ್ನು ತನ್ನ ವಚನಗಳಿಂದ ಪ್ರಚಾರಗೊಳಿಸಿದ ಎಂದು ಭಾವ), ತನ್ನ ತೇಜಸ್ಸಿನ ಸಮೂಹದಿಂದ ಸೂರ್ಯನನ್ನು ಜಯಿಸಿದ, ವೇದಗಳ ಸ್ತುತಿಯಲ್ಲಿ ಆಸಕ್ತನಾದ, ಕಲಿಕಾಲದ ಪಾಪವನ್ನು ನಾಶಗೊಳಿಸಿದ, ಸಮಸ್ತ ವಿದ್ವಾಂಸರಿಂದ ಸ್ತೋತ್ರಮಾಡಿಸಿಕೊಳ್ಳುವ, ದಿಕ್ಕುಗಳ ಕೊನೆಯವರೆಗೂ ಹರಡಿದ ಕೀರ್ತಿಯನ್ನುಳ್ಳ, ದೇವತೆಗಳ ಶಿರಸ್ಸುಗಳ ಸಮೂಹದಲ್ಲಿ ಪಾದಗಳನ್ನು ಇಟ್ಟಿರುವ, ನಾಶರಹಿತಗಳಾಗಿಯೂ, ಶ್ರೇಷ್ಠಗಳಾಗಿಯೂ ಇರುವ ವಿಶಾಲವಾದ ಗುಣಸಮೂಹವನ್ನುಳ್ಳ, ಪ್ರಕಾಶಿಸುವ ಇಷ್ಟಾರ್ಥಗಳನ್ನು ಕೊಡುವ ಕೈಗಳನ್ನುಳ್ಳ, ಬಸವೇಶ್ವರನೇ ರಕ್ಷಿಸು. ೨೪. ದೇಹ ಇಂದ್ರಿಯಗಳಲ್ಲಿ ಕೂಡಿದ ವಿಷಯ ಸಂಬಂಧವಾದ ಭ್ರಮೆಯನ್ನು ದೂರೀಕರಿಸಿರುವ, ಶಿವನಿಂದ ಅನ್ಯರಾದವರ ವಾದವನ್ನು ಭೇದಿಸಿದ (ನಾಶಗೊಳಿಸಿದ), ಪುರಾತನರಾದ ಶಿವನಭಕ್ತರ ಕಾರುಣ್ಯವೆಂಬ ಅಮೃತರಸದಿಂದ ಸೇಚನಗೊಳಿಸಲ್ಪಟ್ಟ (ಸಿಂಪಡಿಸಲ್ಪಟ್ಟ), ಸತ್ಕೀರ್ತಿಯಿಂದ ದಿಕ್ಕುಗಳನ್ನೆಲ್ಲ ತುಂಬಿರುವ, ಕವಿಶ್ರೇಷ್ಠರಿಂದ ಸ್ಫುಟವಾಗಿ (ವರ್ಣಿಸಲ್ಪಟ್ಟ) ಪ್ರಕಾಶಮಾನವಾದ ಪಾದಗಳನ್ನುಳ್ಳ, ಸತ್ಯವಚನವೆಂಬ ರತ್ನಗಳ ಆಭರಣಗಳನ್ನು ಕಿವಿಗಳಿಗೆ ಸಂಬಂಧಗೊಳಿಸಿಕೊಂಡಿರುವ ಸತ್ಯವಚನಗಳೇ ಕರ್ಣಾಭರಣ

ವ್ಯಕ್ತರುಚಿಸಾರಪದ ಸೂಕ್ತಮಣಿಭೂಷಣನಿ-
ಷಕ್ತನಿಜಕರ್ಣ ಪರಿಭುಕ್ತಗರ ಮಾನೋ-
ದ್ರಿಕ್ತಮದವಾರಣ ವಿರಕ್ತಹಿತ ರಕ್ಷಿಸು ನಿ-
ರುಕ್ತಶಿವತತ್ತ್ವಪರ ಮುಕ್ತ ಬಸವೇಶಾ ೨೪

ಶಾಂತನಿಜಮಾನಸನಿಶಾಂತ ಪರಿತರ್ಜಿತಲ-
ತಾಂತಶರ ನಿರ್ಜಿತಕೃತಾಂತ ಶಿವಯೋಗಾ-
ಶ್ರಾಂತಸುಖಯುಕ್ತ ನಿಗಮಾಂತಚಿದಭಿಜ್ಞ ಭವ-
ತಾಂತ ನತರಕ್ಷ ಶಶಿಕಾಂತಧವಳಾಂಗಾ
ದಾಂತ ಪರಮೇಶಪರಿಚಿಂತನಪರಾಯಣ ನಿ-
ತಾಂತಶಿವಮಂತ್ರಕಲಿತಾಂತರ ನಿರುದ್ಧ-
ಸ್ವಾಂತಶಿವಲಿಂಗ ಜಯ ಸಂತತಕೃಪಾಕರ ನಿ
ರಂತ ಗಣನಂದನವಸಂತ ಬಸವೇಶಾ ೨೫

ಸತ್ಯಮಯವಾಕ್ಯ ಶುಭಕೃತ್ಯ ಚರಲಿಂಗಪದ-
ಭೃತ್ಯ ನಿಗಮಾಗಮವಿನುತ್ಯಮಹಿಮಾಂಕಾ-
ಮಾತ್ಯಕುಲಶೇಖರ ವಿಭೂತ್ಯಧಿಕ ಭಕ್ತಹಿತ
ಧೃತ್ಯತುಳವಿಸ್ಫುಟಿತಚೈತ್ಯಗೃಹವೃಂದಾ

ವಾಗಿಉಳ್ಳ), ವಿಷವನ್ನು ಊಟಮಾಡಿದ, ಗರ್ವದಿಂದ ಕೊಬ್ಬಿದವರ ಅಹಂಕಾರವನ್ನು ನಿಲ್ಲಿಸಿದ, ವಿರಕ್ತರಾದವರಿಗೆ ಮಿತ್ರನೆನಿಸಿದ, (ವೈರಾಗ್ಯ ಸಂಪನ್ನರ ಮಿತ್ರನಾದ), ಶಿವತತ್ತ್ವವನ್ನು ಹೇಳುವ, ಉತ್ಕೃಷ್ಟ (ನಿತ್ಯ) ಮುಕ್ತಿಯನ್ನು ಹೊಂದಿದ ಬಸವೇಶ್ವರನೇ ರಕ್ಷಿಸು. ೨೫. ಶಾಂತವಾದ ತನ್ನ ಮನಸ್ಸನ್ನುಳ್ಳ, ಮನ್ಮಥ (ಲತಾಂತಶರ)ನನ್ನು ಶೀಘ್ರವಾಗಿ ಪರಿತ್ಯಾಗಗೊಳಿಸಿದ, ಯಮನನ್ನು ಸೋಲಿಸಿದ, ಶಿವ ಸಂಬಂಧವಾದ ಅಧಿಕ ಸುಖದಿಂದ ಕೂಡಿದ, ವೇದಾಂತ ವಿಷಯಕವಾದ ಜ್ಞಾನದಲ್ಲಿ ಪ್ರೌಢನಾದ, ಪಾಪವನ್ನು ನಾಶಗೊಳಿಸಿದ, ನಮಸ್ಕರಿಸಿದವರನ್ನು ಪಾಲಿಸುವ, ಚಂದ್ರಕಾಂತ ಶಿಲೆಯೋಪಾದಿಯಲ್ಲಿ ಶುಭ್ರವಾದ ಶರೀರವುಳ್ಳ ಇಂದ್ರಿಯಗಳನ್ನು ನಿಗ್ರಹಿಸಿಕೊಂಡಿರುವ, ಈಶ್ವರನ ಧ್ಯಾನದಲ್ಲಿ ಆಸಕ್ತನಾದ, ಶ್ರೇಷ್ಠವಾದ (ಅತ್ಯಧಿಕವಾದ) ಷಡಕ್ಷರೀಮಂತ್ರದಿಂದ ಕೂಡಿದ ಮನಸ್ಸನ್ನುಳ್ಳ, ಅನ್ಯತ್ರಚಲಿಸದ ಹಾಗೆ ತಡೆಯಲ್ಪಟ್ಟ ಮನಸ್ಸಿನಲ್ಲಿ ಶಿವಲಿಂಗವನ್ನುಳ್ಳ, ಸತತವೂ ಕೃಪೆಯನ್ನುಂಟುಮಾಡುವ, ಸತತವೂ ಶಿವಗಣಗಳೆಂಬ ನಂದನವನಕ್ಕೆ ವಸಂತ ಋತುವಿನಂತಿರುವ ಬಸವೇಶ್ವರನೇ, ಜಯ. ೨೬. ಸತ್ಯದಿಂದ ತುಂಬಿದ ಮಾತುಳ್ಳ, ಮಂಗಳಕರವಾದಕ್ರಿಯೆಗಳನ್ನುಳ್ಳ, ಜಂಗಮಲಿಂಗದಪಾದಸೇವಕನಾದ, ವೇದಾಗಮಗಳಿಂದ ಸ್ತೋತ್ರಮಾಡಿಸಿಕೊಳ್ಳುವುದಕ್ಕೆ ಯೋಗ್ಯವಾದ ಮಹತ್ವವೇ ಗುರುತಾಗಿಉಳ್ಳ, ಮಂತ್ರಿ ಜನಸಮೂಹದ ಶಿರೋಭೂಷಣನೆನಿಸಿದ, ಅಧಿಕವಾದ ಐಶ್ವರ್ಯದಿಂದ ತುಂಬಿದ, ಶಿವಭಕ್ತರಿಗೆ ಆಪ್ತನೆನಿಸಿದ

ಶ್ವೈತ್ಯರುಚಿರಾಂಗ ಸಿತಮತ್ಯನಘ ಪದ್ಮಭವ-
ಸೂತ್ಯನಿಶಗೇಯ ತತದೈತ್ಯಮದಭಂಗಾ-
ದಿತ್ಯಶತದೀಪ್ತಿಯುತ ಯತ್ಯಮಳಚಿತ್ತಮಣಿ-
ಭಿತ್ತ್ಯಮಳಬಿಂಬ ಪೊರೆ ನಿತ್ಯ ಬಸವೇಶಾ ೨೬

ಶೀತಕರಶೇಖರಸದಾತನನಿಜಾಂಗ ಜಗ-
ತೀತಳಜನಾನತನಿಶಾತಶರಧಾರಾ-
ಘಾತ ಹೃತದೈತ್ಯ ಕರನೀತಸಕಳೇಷ್ಟ ಝಷ-
ಕೇತನಹರಾಂಕಧರಗೀತಸರಸೀಸಂ
ಜಾತದಿನನಾಯಕ ಜಿತೇತರನಿತಾಂತಜಡ-
ಚೇತನ ಜಗನ್ನಿಚಯತಾತ ಘನನಂದಿ
ಖ್ಯಾತಗಣನಾಥಕಲಕೇತಸಖ ಕಿನ್ನರದ-
ಯಾತತರಸಾರ್ಥಿ ಹರಜಾತ ಜಯ ಧೀರಾ ೨೭

ಅಸದೃಶವಾದ ಧೈರ್ಯಗುಣದಿಂದ ಸೀಳಿಹಾಕಿದ ಚೈತ್ಯಾಲಯಗಳ ಸಮೂಹವನ್ನುಳ್ಳ, ಧವಳವರ್ಣದಿಂದ ಮನೋಹರವಾದ ಶರೀರವುಳ್ಳ, ಶುಭ್ರವಾದ ಬುದ್ಧಿಯುಳ್ಳ, ಪಾಪರಹಿತನಾದ ಬ್ರಹ್ಮಕುಮಾರನಾದ ನಾರದ ಮಹರ್ಷಿಯಿಂದ ಸತತವೂ ಹಾಡುವುದಕ್ಕೆ ಯೋಗ್ಯನಾದ, ವಿಶೇಷ (ವಿಸ್ತಾರ)ವಾದ ರಾಕ್ಷಸರ ಗರ್ವವನ್ನು ನಾಶಪಡಿಸಿದ, ನೂರಾರು ಸೂರ್ಯರಕಾಂತಿಯಂತಿರುವ ಕಾಂತಿಯಿಂದ ಕೂಡಿದ, ಋಷಿಜನರ ನಿರ್ಮಲವಾದ ಚಿತ್ತೆಂಬರತ್ನಮಯ ಗೋಡೆಯನ್ನು ಹೊಂದಿ ಪ್ರತಿಬಿಂಬಿತನಾಗಿರುವ, (ಮುನಿಜನರ ಮನಸ್ಸಿನಲ್ಲಿ ನೆಲೆಸಿ ಪ್ರಕಾಶಿಸುತ್ತಿರುವ), ನಿತ್ಯನಾದ ಬಸವೇಶ್ವರನೇ (ನನ್ನನ್ನು) ರಕ್ಷಿಸು. ೨೭. ಸತತವೂ ಪರಮೇಶ್ವರನ ಪಾದಗಳಿಗೆ ನಮಸ್ಕಾರಮಾಡುವ ತನ್ನ ದೇಹವುಳ್ಳವನೂ, ಜಗತ್ತಿನ ಸಮಸ್ತಜನಗಳಿಂದ ನಮಸ್ಕರಿಸಿ ಕೊಳ್ಳಲ್ಪಡುವವನೂ, ತೀಕ್ಷ್ಣವಾದ ಬಾಣಗಳ ಪರಂಪರೆಯ ಹೊಡೆತದಿಂದ ರಾಕ್ಷಸಸಮೂಹವನ್ನು ಸಂಹಾರಮಾಡಿದವನೂ, ಸಕಲ ಇಷ್ಟಾರ್ಥಗಳನ್ನು ಕೊಡುವವನೂ, ಮೀನಕೇತನನಾದ ಮನ್ಮಥನನ್ನು ಸಂಹರಿಸಿದ ಪರಮೇಶ್ವರನ ಚಿಹ್ನೆಯಾದ ಶಿವಲಿಂಗವನ್ನು ಧರಿಸಿದವರ ಗೀತಗಳೆಂಬ ಕಮಲಗಳಿಗೆ ಸೂರ್ಯನಂತಿರುವವನೂ, ಇತರ ವಿಶೇಷವಾದ ಮೂರ್ಖಚೇತನರೆನಿಸಿದ ಜನರನ್ನು ಗೆದ್ದವನೂ, ಜಗತ್ತಿನ ಸಮೂಹಗಳಿಗೆಲ್ಲ ವೃದ್ಧನೆನಿಸಿದ (ಯಜಮಾನನೆನಿಸಿ)ದವನೂ, ಶ್ರೇಷ್ಠನಂದೀಶ್ವರನೂ, ವಿಖ್ಯಾತವಾದ ಶಿವಗಣಗಳಿಗೆಲ್ಲ ಒಡೆಯನೆನಿಸಿದವನೂ, ಕಲಕೇತಬೊಮ್ಮಯ್ಯನ ಮಿತ್ರನೂ, ಕಿನ್ನರಿಬೊಮ್ಮಯ್ಯನ ವಿಶೇಷವಾದ ದಯಾರಸವನ್ನು ಬೇಡುವವನೂ, ಪರಮೇಶ್ವರಾಂಶ

ಪಾರ್ಥಿವಸಮರ್ಚಿತ ಚತುರ್ಥ ವಿಬುಧೇಷ್ಟಪುರು-
ಷಾರ್ಥದ ಪವಿತ್ರಿತಸುತೀರ್ಥಪದ ಧೂತಾ
ನರ್ಥಮತ ರಂಜಿತಸದರ್ಥಪರಮಾಗಮ ಪ-
ರಾರ್ಥಪರಿಪಾಲನ ಸುಕೃತಾರ್ಥಿಜನಪಕ್ಷಾ
ಪಾರ್ಥಪಟುರೋಪದ ಕದರ್ಥನಖಲಾಹಿತ ಪ-
ದಾರ್ಥಿತಗಣೋತ್ಸವ ಸದರ್ಥಿಜನತಾಸಂ-
ಪ್ರಾರ್ಥಿತಸುರದ್ರು ಪೊರೆ ಸಾರ್ಥನಿಗಮಸ್ತುತ ಸ-
ಮರ್ಥಿತಮಹಾವ್ರತ ಸಮರ್ಥ ಬಸವೇಶಾ ೨೮

ಮಂದರಧರಾಧರಸುಮಂದಿರ ಮನೋಹರ ಮು-
ಕುಂದಚತುರಾನನಪುರಂದರಹುತಾಶಾ-
ಮಂದಯಮಮುಖ್ಯಸುರವೃಂದಪರಿಪೂಜಿತ ಸ-
ನಂದಸನಕಾರ್ಚಿತ ಸದಿಂದುಧರಭಕ್ತಾ-

ಸಂಭೂತನೂ, ಧೀರನೂ ಆದ (ಬಸವೇಶ್ವರನೇ), ಜಯ. ೨೮. ರಾಜನಿಂದ (ಬಿಜ್ಜಳರಾಜನಿಂದ) ಪೂಜಿಸಿಕೊಂಡ, ಜ್ಞಾನಿಗಳಿಂದ ಬಯಸಲ್ಪಡುವ ನಾಲ್ಕನೆಯದಾದ ಮೋಕ್ಷವೆಂಬ ಪುರುಷಾರ್ಥವನ್ನುಂಟುಮಾಡುವ, ಶ್ರೇಷ್ಠವಾದ ತೀರ್ಥಜಲದಿಂದ ಪವಿತ್ರಗೊಂಡ ಪಾದಗಳುಳ್ಳ, ಅನರ್ಥಕಾರಿಗಳಾದ (ಅರ್ಥವಿಲ್ಲದ) ಮತಗಳನ್ನು ತಿರಸ್ಕರಿಸಿದ, ಪ್ರಕಾಶಮಾನವಾದ ಒಳ್ಳೆಯ ಅರ್ಥದಿಂದ ಕೂಡಿದ ಶ್ರೇಷ್ಠ ಆಗಮಜ್ಞಾನವುಳ್ಳ, ಪರರಿಗೋಸುಗ ಅರ್ಥವನ್ನು ರಕ್ಷಿಸುವ, ಪುಣ್ಯಶೀಲತೆಯೇ ಐಶ್ವರ್ಯವಾಗಿಉಳ್ಳ ಜನರ ಪಕ್ಷದವನಾದ (ಸಹಾಯಕನಾದ) ಅರ್ಜುನನಿಗೆ ಸಮರ್ಥವಾದ ಬಾಣವನ್ನುಕೊಟ್ಟ, ಕೆಟ್ಟಯೋಚನೆಯ ನೀಚಜನಕ್ಕೆ ಶತ್ರುವಾದ, ಸತತವೂ ಬೇಡುತ್ತಿರುವ ಶಿವಗಣಗಳಿಗೆ ಸಂತೋಷವನ್ನುಂಟುಮಾಡುವ, ಶ್ರೇಷ್ಠವಾದ ಯೋಚನೆಯನ್ನು ಮಾಡುವ ಜನಸಮೂಹದಿಂದ ಬೇಡಿಸಿಕೊಳ್ಳುವ ಕಲ್ಪವೃಕ್ಷಸ್ವರೂಪನಾದ, ವೇದಗಳಿಂದ ಒಳ್ಳೆಯ ಅರ್ಥಪೂರ್ಣವಾಗಿ ಹೊಗಳಿಸಿಕೊಳ್ಳುವ, ಮಹಾವ್ರತವನ್ನು ಸಮರ್ಥಿಸುವ (ಸಾಧಿಸುವ) (ಗುರುಲಿಂಗಜಂಗಮ ಸಂಬಂಧದ ಮಹಾವ್ರತವನ್ನು ಸಾಧಿಸುವ ಅಥವಾ ಸಮರ್ಥಿಸುವ), ಸಮರ್ಥನಾದ ಬಸವೇಶ್ವರನೇ ಪೊರೆ. ೨೯. ಮಂದರವೆಂಬ ಹೆಸರಿನ ಪರ್ವತವೇ ಮನೆಯಾಗಿಉಳ್ಳ, ಮನೋಹರಾಕಾರ ಮುಕುಂದ, ಬ್ರಹ್ಮ, ದೇವೇಂದ್ರ, ಅಗ್ನಿ, ಅಧಿಕನಾದ ಯಮ (ತೀಕ್ಷ್ಣನಾದಯಮ) ಇವರೇ ಮೊದಲಾದ ದೇವತೆಗಳ ಸಮೂಹದಿಂದ ಪೂಜಿಸಲ್ಪಡುವ, ಸನಕಸನಂದಾದಿ ಮುನಿಜನಗಳಿಂದ ಅರ್ಚನೆ ಮಾಡಿಸಿಕೊಳ್ಳುವ, ಶ್ರೇಷ್ಠರಾದ ಶಿವಭಕ್ತರುಗಳಿಗೆ ಆನಂದವನ್ನುಂಟುಮಾಡುವ, ಜ್ಞಾನವೆಂಬ

ನಂದಕರ ಚಿದ್ರುಸಮರಂದಮದಷಟ್ಚರಣ
ಕುಂದಹಿಮಹೀರಶಶಿಚಂದನಸಿತಾಂಗಾ
ಸ್ಕಂದನತಭಾಸ್ವದರವಿಂದಪದ ಪಾಲಿಪುದ-
ಸಿಂದಿತಕೃಪಾಸಲಿಲಕಂದ ಬಸವೇಶಾ ೨೯

ಚಿದ್ರಮಣ ಶೈವಶುಭಮುದ್ರ ಭುವನಾವನವಿ-
ನಿದ್ರ ಭವಭಕ್ತಪರಿಷದ್ರುಸ ಮನೋಜೋ-
ಪದ್ರವವಿದೂರ ತತಭದ್ರ ಬಹುಜನ್ಮಗದ-
ವಿದ್ರವಕರಾಮಿತದಯಾರ್ದ್ರಸುಕಟಾಕ್ಷಾ
ಕ್ಷುದ್ರಮತಿಭಂಜನ ಲಸದ್ರವಿಶತಪ್ರಭ ಹ-
ರಿದ್ರುಹಿಣಕಾಮಿತಸುರದ್ರುನಿಭ ವಿದ್ಯಾ-
ವಿದ್ರುಚಿರ ಸದ್ಗುಣಸಮುದ್ರ ಪೊರೆಯೆನ್ನನಘ-
ವದ್ರಹಿತ ಭೂಮಹಿತರುದ್ರ ಬಸವೇಶಾ ೩೦

ಸಿಂಧುರಮಹಾಸುರ-ಜಲಂಧರ-ಮೃಗಾರಿ-ಸಮ-
ದಾಂಧಕ-ಮದಪ್ರಹರ ಸಿಂಧುಧರಲೀಲಾ
ಸಿಂಧುಹಿಮದೀಧಿತಿ ಕಬಂಧಜಮುಖೋದ್ಗಮಸು-
ಗಂಧಭರಮಾಲ್ಯನಿಜಕಂಧರಶುಭಾಂಗಾ

ಮಕರಂದದ ರಸಕ್ಕೆ ಮದಿಸಿದ ಭ್ರಮರದಂತಿರುವ, ಒಳ್ಳೆಯ ಮೊಲ್ಲೆಯ ಹೂವು, ಪಚ್ಚಕರ್ಪೂರ (ಹಿಮ), ವಜ್ರ (ಹೀರ), ಚಂದ್ರ, ಶ್ರೀಗಂಧ,-ಇವುಗಳ ಹಾಗೆ ಶುಭ್ರವಾದ ದೇಹವುಳ್ಳ, ಷಣ್ಮುಖನಿಂದ ನಮಸ್ಕರಿಸಿಕೊಂಡ ಕಮಲದಂತಹ ಪಾದಗಳುಳ್ಳ, ನಿರ್ದುಷ್ಟನಾದ ಕೃಪೆಯೆಂಬ (ದಯೆಯೆಂಬ) ನೀರಿನಿಂದ ಕೂಡಿದ ಮೇಘಸ್ವರೂಪ ನಾದ ಬಸವೇಶ್ವರನೇ ರಕ್ಷಿಸುವುದು. ೩೦. ಚಿತ್ತಿಗೆ ರಮಣ (ಅಧಿಪತಿ)ನೆನಿಸಿದ, ಶೈವಸಂಬಂಧವಾದ ಮಂಗಳಕರ ಚಿಹ್ನೆಗಳನ್ನುಳ್ಳ, ಲೋಕಗಳನ್ನು ಸಂರಕ್ಷಿಸುವುದರಲ್ಲಿ ಆಲಸ್ಯರಹಿತನಾದ (ಜಾಗರೂಕನಾದ), ಶಿವನ ಭಕ್ತರುಗಳ ಸಭೆಯಲ್ಲಿ ಪ್ರೀತಿ ಯನ್ನುಳ್ಳ, ಮನ್ಮಥಸಂಬಂಧವಾದ ಪೀಡೆಗಳಿಂದ ದೂರನಾಗಿರುವ, ವಿಶಾಲವಾದ (ವಿಸ್ತಾರವಾದ) ಮಂಗಳಗಳುಳ್ಳ, ಅನೇಕ ಜನ್ಮಗಳೆಂಬ ರೋಗವನ್ನು ನಾಶಗೊಳಿಸಿದ (ಒಣಗಿಸಿದ), ಅಪರಿಮಿತವಾದ ಕೃಪಾರಸದಿಂದ ನೆನೆದ ಶ್ರೇಷ್ಠ ಕಡೆಗಣ್ಣುಗಳ ನೋಟವುಳ್ಳ, ನೀಚ ಬುದ್ಧಿಯ ಜನರನ್ನು ನಾಶಗೊಳಿಸಿದ, ಪ್ರಕಾಶಮಾನ ವಾದ ನೂರಾರು ಸೂರ್ಯರುಗಳ ಕಾಂತಿಯಂತೆ ಕಾಂತಿಯುಳ್ಳ, ವಿಷ್ಣು ಬ್ರಹ್ಮರು ಗಳ ಇಷ್ಟಾರ್ಥಕ್ಕೆ ಕಲ್ಪವೃಕ್ಷ ಸದೃಶನಾದ, ಶಿವಸಂಬಂಧವಾದ ವಿದ್ಯೆಯನ್ನು ತಿಳಿದವರಲ್ಲಿ ಮನೋಹರನೆನಿಸಿದ, ಸದ್ಗುಣಗಳಿಗೆ ಸಮುದ್ರದೋಪಾದಿಯಲ್ಲಿರುವ, ಪಾಪದಿಂದ ಕೂಡಿದವರನ್ನು ದೂರೀಕರಿಸಿದ, ಭೂಮಿಗೆ ಹಿತವನ್ನುಂಟು ಮಾಡುವ ರುದ್ರಸ್ವರೂಪನಾದ, ಬಸವೇಶ್ವರನೇ, ನನ್ನನ್ನು ರಕ್ಷಿಸು. ೩೧. ಗಜಾಸುರನೆಂಬ ಮಹಾರಾಕ್ಷಸನ, ಜಲಂಧರ, ವ್ಯಾಘ್ರಾಸುರ, ಮದಾಂಧನಾದ ಅಂಧಕಾಸುರ ಮೊದ

ಬಂಧುರ ಜಗತ್ರಯಧುರಂಧರ ಪದಾನತಭ-
ವೇಂಧನಹುತಾಶ ವಿಧಿಕಂಧರಕರಾಶಾ-
ಬಂಧಹರ ರಕ್ಷಿಸಘಕಂಧರಚಯಪ್ರಬಲ-
ಗಂಧವಹ ಭಕ್ತಗಣಬಂಧು ಬಸವೇಶಾ ೩೧

ಸಿದ್ಧಪರಮಾಗಮ ನಿಬದ್ಧಶಿವತತ್ತ್ವರುಚಿ
ವೃದ್ಧಮುನಿಸೇವ್ಯ ಜಿತಬೌದ್ಧಮುಖವಾದಾ-
ಶ್ರದ್ಧಜನದುರ್ಲಭ ನಿರುದ್ಧಕರಣೇಂದ್ರಿಯ ನಿ-
ಷಿದ್ಧತನುವರ್ತನ ವಿವೃದ್ಧಶಿವಯೋಗಾ

ಲಾದವರ ಗರ್ವವನ್ನು ನಾಶಮಾಡಿದ, ಗಂಗಾಧರನಾದ ಶಿವನ ಲೀಲೆ (ಪಂಚ ವಿಂಶತಿಲೀಲೆ) ಗಳೆಂಬ ಸಮುದ್ರಕ್ಕೆ ಶೀತಕಿರಣನಾದ ಚಂದ್ರನಂತಿರುವ, ಕಮಲವೇ ಮುಖ್ಯವಾದ ಹೂವುಗಳ ಪರಿಮಳದ ಅತಿಶಯದಿಂದ ಕೂಡಿದ ಮಾಲಿಕೆಯೋ ತನ್ನ ಕಂಠದಲ್ಲುಳ್ಳ, ಮಂಗಳಕರವಾದ ದೇಹದಿಂದ ಮನೋಹರನೆನಿಸಿದ, ಮೂರು ಲೋಕಗಳ (ರಕ್ಷಣೆಯ) ಭಾರವನ್ನು ಹೊತ್ತಿರುವ, ಪಾದಗಳಿಗೆ ನಮಸ್ಕಾರ ಮಾಡಿದವರ ಉತ್ಪತ್ತಿಯೆಂಬ (ಹುಟ್ಟೆಂಬ) ಕಟ್ಟಿಗೆಗೆ (ಸೌದೆಗೆ) ಬೆಂಕಿಯಂತಿರುವ, ಬ್ರಹ್ಮನ ಕಪಾಲ (ಶಿರಸ್ಸ)ವನ್ನು ಧರಿಸಿರುವ ಹಸ್ತವುಳ್ಳ, ಆಶೆಯೆಂಬ ಬಂಧ (ಗಂಟು)ವನ್ನು ನಾಶಪಡಿಸಿದ, ಪಾಪವೆಂಬ ಮೋಡಗಳ ಸಮೂಹವೇ ಪ್ರಬಲಗಾಳಿ (ಬಿರುಗಾಳಿ) ಯೆನಿಸಿದ, ಶಿವಭಕ್ತರುಗಳ ಸಮೂಹವೇ ಬಂಧುಗಳಾಗಿ ಉಳ್ಳ ಬಸವೇಶ್ವರನೇ, (ನನ್ನನ್ನು) ರಕ್ಷಿಸು. [ಕಂ, ನೀರನ್ನು ಧರ–ಧರಿಸಿರುವುದು–ಮೋಡ ; ಹಿಮ–ಶೀತವಾದ ದೀಧಿತಿ–ಪ್ರಕಾಶವನ್ನುಳ್ಳವ-ಚಂದ್ರ ; ಸಿಂಧು–ನದಿ, ಧರಿ–ಧರಿಸಿರುವವ ಅಂದರೆ ಗಂಗೆಯನ್ನು ಧರಿಸಿದವ-ಶಿವ; ಕಬಂಧ-ನೀರು; ಜ-ಹುಟ್ಟಿದುದು-ಕಮಲ]; ೩೨. ಸಿದ್ಧಸ್ವರೂಪದ ಉತ್ಕೃಷ್ಟ ಆಗಮಜ್ಞಾನವನ್ನುಳ್ಳ, ಪರಶಿವ ಸಂಬಂಧವಾದ ತತ್ತ್ವಗಳಲ್ಲಿ ಪ್ರೀತಿಯಿಂದ ಕೂಡಿದ (ಕಟ್ಟಲ್ಪಟ್ಟ), (ಜ್ಞಾನ) ವೃದ್ಧರಾದ ಮುನಿಜನರುಗಳಿಂದ ಸೇವಿಸಿಕೊಳ್ಳಲ್ಪಡುವ, ಬೌದ್ಧವೇ ಮುಖ್ಯವಾದ ಧರ್ಮಗಳ ವಾದವನ್ನು ಗೆದ್ದವನಾದ, ಶ್ರದ್ಧಾರಹಿತರಾದ ಜನಗಳಿಗೆ ಸಿಕ್ಕದಿರುವ, ಸಂಯಮಗೊಳಿಸಿಕೊಂಡಿರುವ ಮನ ಬುದ್ಧಿಚಿತ್ತಾಹಂಕಾರಗಳೆಂಬ ಕರಣಗಳು ಮತ್ತು ಮೂಗು, ಕಣ್ಣು, ನಾಲಿಗೆ, ಚರ್ಮ, ಕಿವಿಗಳೆಂಬ ಪಂಚೇಂದ್ರಿಯಗಳನ್ನುಳ್ಳ, ದೇಹವ್ಯಾಪಾರವನ್ನು ನಿಲ್ಲಿಸಿದ (ಧರ್ಮ ವಿರುದ್ಧವಾದ ದೇಹವ್ಯಾಪಾರವನ್ನು ನಿಲ್ಲಿಸಿದ), ಶಿವಯೋಗವನ್ನು ಅಭಿವೃದ್ಧಿಗೊಳಿಸಿಕೊಂಡಿರುವ, ಜ್ಞಾನವೆಂಬ ಧನದಿಂದ ಕೂಡಿದ (ಅಥವಾ ಜ್ಞಾನವೇ ದ್ರವ್ಯವಾಗುಳ್ಳ), ಯಶಸ್ಸಿನ ಕಾಂತಿಯಿಂದ ಮುಚ್ಚಲ್ಪಟ್ಟ ದಶದಿಕ್ಕುಗಳುಳ್ಳ, ಆಪತ್ತುಗಳೆಂಬ ಪರ್ವತ

ಚಿದ್ಧನ ಯಶೋರುಚಿಪಿಸದ್ಧದಶದಿಕ್ತಟ ವಿ-
ಪದ್ಧರಣಿಭೃತ್ಕುಲಿಶಭೃದ್ಧರಪಾದಾಬ್ಜಾ-
ನದ್ಧನಿಜಚಿತ್ತ ಜಗದುದ್ಧರಣಶೀಲ ಪೊರೆ-
ಯುದ್ಧಪರಭಂಜನ ವಿಶುದ್ಧ ಬಸವೇಶಾ ೩೨

ಸಾಧಕಜನಾಂತರವಿಶೋಧಕ ವಿಶುದ್ಧಮತಿ
ಬೋಧಕ ದುರೀಷಣನಿಷೇಧಕ ಚರೌಘಾ-
ರಾಧಕ ಮದಾಷ್ಟಕವಿರೋಧಕ ಮನೋಗತಿನಿ-
ರೋಧಕ ಸಚಿತ್ಸದವರೋಧಕ ಶುಭಾಂಗಾ
ವ್ಯಾಧಿಕಲುಷಪ್ರಕರಬಾಧಕ ವಿಶಾಲತರ-
ಮೇಧಕ ನಿಕಾಮನಿರುಪಾಧಿಕ ನಿರಸ್ತ-
ಕ್ರೋಧ ಕರುಣಾರಸಪಯೋಧಿ ಕವಿನುತ್ಯ ಪೊರೆ
ಸಾಧಿಕಗುಣಾನ್ವಿತ ಗಣಾಧಿಕ ವೃಷೇಂದ್ರಾ ೩೩

ಮಾನವಪತಿವ್ರಜಸಮಾನತಪದಾಬ್ಜ ಮುನಿ-
ಮಾನಸಮನೋಜ್ಞತರಮಾನಸಮರಾಳಾ-
ಮಾನಜನತಾಪ್ರಿಯ ವಿಮಾನಗಸುರಸ್ತುತ ಸ-
ಮಾನರಹಿತಾತ್ಮಮಹಿಮಾನಘಚರಿತ್ರಾ

ಗಳಿಗೆ ಕುಲಿಶವನ್ನು ಧರಿಸಿದ ದೇವೇಂದ್ರನೆನಿಸಿದ, ಶಿವನ ಪಾದಕಮಲದಲ್ಲಿ ತನ್ನ ಮನಸ್ಸನ್ನು ಸೇರಿಸಿರುವ (ತುಂಬಿಸಿರುವ), ಲೋಕವನ್ನು ಸಂರಕ್ಷಿಸುವುದೇ ಶೀಲವಾಗಿವುಳ್ಳ, ಕೊಬ್ಬಿದ ಶತ್ರುಗಳನ್ನು ನಾಶಮಾಡಿದ, ಪರಿಶುದ್ಧನಾದ ಬಸವೇಶ್ವರನೇ ರಕ್ಷಿಸು. ೩೩. (ಶಿವಯೋಗ) ಸಾಧನೆಯನ್ನು ಮಾಡುವ ಜನರುಗಳ ಅಂತರಂಗವನ್ನು ಪರಿಶುದ್ಧಿಗೊಳಿಸುವ (ವಿಶೇಷವಾಗಿ ಶೋಧಿಸುವ), ನಿರ್ಮಲ ಬುದ್ಧಿಯುಳ್ಳವರಿಗೆ ಬೋಧನೆಯನ್ನು (ತತ್ತ್ವ ಬೋಧನೆಯನ್ನು) ಮಾಡುವ, ದುಷ್ಟಗಳಾದ ದಾರೇಷಣ, ಪುತ್ರೇಷಣ, ವಿತ್ತೇಷಣಗಳನ್ನು ನಿಷೇಧಗೊಳಿಸಿದ (ತಡೆದು ನಿಲ್ಲಿಸಿದ), ಜಂಗಮ ಸಮುದಾಯವನ್ನು ಪೂಜಿಸುವ. ಧನದಮದ, ಅನ್ನಮದ, ತನುಜಮದಗಳೇ ಮೊದಲಾದ ಎಂಟು ಪ್ರಕಾರದ ಮದಗಳನ್ನು ತಡೆಗಟ್ಟಿದ, ಮನಸ್ಸಿನ ಚಂಚಲತೆಯನ್ನು ತಡೆದಿರುವ ಶಿವಜ್ಞಾನದಿಂದ ಕೂಡಿದವರಿಗೆ ಶ್ರೇಷ್ಠ ಅಂತಃಪುರದಂತೆ ಇರುವ, ಮಂಗಳಕರವಾದ ಶರೀರವುಳ್ಳ, ರೋಗ ಮತ್ತು ಪಾಪಗಳ ಸಮೂಹವನ್ನು ಪೀಡಿಸುವ (ಬಾಧೆಗೊಳಿಸಿದ) ವಿಶೇಷವಾದ ಬುದ್ಧಿಶಕ್ತಿಯನ್ನು ಹೊಂದಿದ, ಕಾಮದೂರನೂ, ಉಪಾಧಿರಹಿತನೂ ಆದ, ಕ್ರೋಧವನ್ನು ನಾಶಗೊಳಿಸಿದ. ಕಾರುಣ್ಯವೆಂಬ ರಸಕ್ಕೆ ಸಮುದ್ರದೋಪಾದಿಯಲ್ಲಿರುವ, ಕವಿಗಳಿಂದ ನುತಿಸಲ್ಪಡುವ, ವಿಶೇಷವಾದ ಸದ್ಗುಣಗಳಿಂದ ಕೂಡಿದವರೊಡನೆ, ಕೂಡಿಕೊಂಡಿರುವ ಶಿವಗಣಗಳಲ್ಲಿ ಅಧಿಕನೆನಿಸಿದ ಬಸವೇಶ್ವರನೇ ರಕ್ಷಿಸು. ೩೪. ರಾಜರುಗಳ ಸಮೂಹದಿಂದ ನಮಸ್ಕಾರ ಮಾಡಿಸಿಕೊಳ್ಳುವ ಪಾದಕಮಲಗಳುಳ್ಳ, ಋಷಿಗಳ ಮನಸ್ಸೆಂಬ ಅತಿ ಮನೋಹರವಾದ ಮಾನಸ ಸರೋವರದಲ್ಲಿರುವ ಹಂಸ ಪಕ್ಷಿಯೋ

ಮಾನವವಚೋನಿಗಮಮಾನಗದಿತಾರ್ಥವಹ-
ಮಾನ ತತಭಾಸ್ವದನುಮಾನನಯಸತ್ಸ-
ನ್ಮಾನಕರ ರಕ್ಷಿಸತಿಮಾನಫಣಿರಾಡ್ಭೃದುಪ-
ಮಾನ ಭವಮೇಘಪವಮಾನ ಬಸವೇಶಾ ೩೪

ದಾನವರಿಪುಪ್ರಿಯ ಸದಾನವಸುಭಕ್ತ್ಯಯುತ
ದಾನಗುಣಶೀಲ ವಿಮದಾನಘಚರಿತ್ರೇ-
ಶಾನಪದಭಾವನವಶಾನತವರಪ್ರದ ದ-
ಶಾನನಸಮರ್ಚಿತ ದಿಶಾನಟಯಶಸ್ಕಾ
ಭಾನುಪವನಾಪ್ತಹಿಮಭಾನುನಯನತ್ರಯನಿ-
ಭಾನುಗತಸತ್ಪಥ ಶುಭಾನುಭವಯುಕ್ತಾ
ವೀನರಥಸುಪ್ರಭ ನವೀನಗುಣ ದುಷ್ಟಫಣಿ
ವೀನ ಭೃತಶಾಂಭವಕವೀನ ಬಸವೇಶಾ ೩೫

ಪಾದಿಯಲ್ಲಿರುವ ಗರ್ವವಿಹೀನರಾದ ಜನಗಳ ಗುಂಪಿನಲ್ಲಿ ಪ್ರೀತಿಯುಳ್ಳವನಾದ, ವಿಮಾನದಲ್ಲಿ ಗಮನ ಮಾಡುವವ ದೇವತೆಗಳಿಂದ ಕೊಂಡಾಡಲ್ಪಡುವ, ಉಪಮಾರಹಿತ ವಾದ ತನ್ನ ಮಹಿಮೆಯನ್ನುಳ್ಳ ಪಾಪರಹಿತವಾದ ಚರಿತ್ರೆಯನ್ನು ಹೊಂದಿರುವ, ಮನು ಚಕ್ರವರ್ತಿ ಸಂಬಂಧವಾದ ಮಾತುಗಳಾದ ಮನುಸ್ಮೃತಿ, ವೇದ ಇವುಗಳಲ್ಲಿ ಹೇಳ ಲ್ಪಟ್ಟ ಪ್ರಮಾಣ ವಾಕ್ಯಗಳ ತತ್ವಾರ್ಥವನ್ನು ಹೊಂದಿರುವ (ಧರಿಸಿರುವ) ಮಾನವಂತ (ಚಿತ್ತೌನ್ನತ್ಯವುಳ್ಳವ)ನಾದ ವಿಸ್ತಾರವಾಗಿ ಪ್ರಕಾಶಿಸುವವನಾದ, ಪರಮಾತ್ಮ ವಿಷಯಕ ವಾದ ಊಹೆ, ನೀತಿ ಇವುಗಳನ್ನುಳ್ಳ, ಸತ್ಪುರುಷರಿಗೆ ಮರ್ಯಾದೆಯನ್ನು ತೋರಿಸುವ. ಉಪಮಾತೀತನಾದ ಆದಿಶೇಷನನ್ನು ಧರಿಸಿರುವ ಈಶ್ವರನ ಸಾಮ್ಯವನ್ನುಳ್ಳ, ಪಾಪ ವೆಂಬ ಮೋಡಕ್ಕೆ ವಾಯುವಾದ ಬಸವೇಶ್ವರನೇ (ನನ್ನನ್ನು) ರಕ್ಷಿಸು. ೩೫, ರಾಕ್ಷಸ ವೈರಿಯಾದ ವಿಷ್ಣುವಿನ ಆಪ್ತನಾದ, ನಿತ್ಯನೂತನವಾದ ಸದ್ಭಕ್ತಿಯಿಂದ ಕೂಡಿದ, ದಾನ ಮಾಡುವ ಗುಣವೇ ಸ್ವಭಾವವಾಗಿ ಉಳ್ಳ, ಮದದೂರನಾದ (ಗರ್ವಹೀನನಾದ), ಪಾಪ ರಹಿತವಾದ ಚರಿತ್ರೆಯನ್ನುಳ್ಳ, ಪರಮೇಶ್ವರನ ಪಾದಧ್ಯಾನವುಳ್ಳವರ ಅಧೀನನಾದ, ನಮಸ್ಕಾರಮಾಡಿದವರಿಗೆ ಇಷ್ಟಾರ್ಥವನ್ನುಕೊಡುವ, ರಾವಣನಿಂದ ಪೂಜೆಗೊಂಡ, ದಿಕ್ಕುಗಳಲ್ಲೆಲ್ಲ ಕುಣಿಯುತ್ತಿರುವ ಕೀರ್ತಿಯನ್ನುಳ್ಳ, ಸೂರ್ಯ, ಚಂದ್ರ, ಅಗ್ನಿಗಳೇ ಮೂರು ಕಣ್ಣಾಗಿ ಉಳ್ಳ ಶಿವನ ಸದೃಶನಾದ, ಶ್ರೇಷ್ಠಮಾರ್ಗವನ್ನು ಅನುಸರಿಸಿ ನಡೆ ಯುತ್ತಿರುವ (ಸನ್ಮಾರ್ಗದಲ್ಲಿ ನಡೆಯುವ), ಮಂಗಳ ಕರವಾದ ಶಿವನ ಅನುಭವದಿಂದ ಕೂಡಿದ. ವಿಷ್ಣುವಿನಂತೆ ಸಮೀಚೀನವಾದ ಪ್ರಭಾವವುಳ್ಳ, ನೂತನವಾದ (ಅಪೂರ್ವ ವಾದ) ಸದ್ಗುಣಗಳುಳ್ಳ. ದುಷ್ಟರೆಂಬ ಸರ್ಪಗಳಿಗೆ ಗರುಡಸ್ವರೂಪನಾದ, ಶಿವ ಸಂಬಂಧ ವಾದ ಕವಿಗಳನ್ನು ಪೋಷಿಸುವ ಬಸವೇಶ್ವರನೇ, (ನನ್ನನ್ನು ರಕ್ಷಿಸು) [ವಿ + ಇನ =

ಕಿನ್ನರಗಣಾಧಿಪತಿ-ಚನ್ನವೃಷ-ಮಾಚವಿಭು-
ಕನ್ನದಗಣೇಶಮುಖಸನ್ನುತ ಶಿವೈಕ್ಯೋ-
ತ್ಪನ್ನಸುಖಭಾವ ಭವಪನ್ನಗಖಗಾಧಿಪತಿ
ಪನ್ನತ ಪಯೋಜಪರಿಪನ್ನವದಿನೇಶಾ
ಪ್ರೋನ್ನತಗುಣಾಕರ ವಿಪನ್ನಿವಹಸಂಹರ ಜ-
ಗನ್ನಿಕರರಕ್ಷಕ ಲಸನ್ನಿಗಮಸಾರಾ-
ಪನ್ನಮತಿ ನುತ್ಯ ಪೊರೆಯೆನ್ನನೆಲೆ ದೇವ ಕೃಪೆ-
ಯಿನ್ನಲವನಿತ್ತು ಚಿದಭಿನ್ನ ಬಸವೇಶಾ ೩೬

ಮಾಪಕೃತರೋಪಗಿರಿಚಾಪಪುರಲೋಪರಜ-
ನೀಪಸುಕಲಾಪಮತದೀಪ ನಿಹತಾನ್ಯಾ-
ಕ್ಷೇಪ ಹೃತಪಾಪ-ಜಿತತಾಪ ಗತಲೇಪ ತತ
ಚಾಪಲಮದೋಪಯುತಗೋಪರಿಪುನಾಶಾ

ವೀನ, ಪಕ್ಷಿಗಳಿಗೆಲ್ಲ ಒಡೆಯು–ಗರುಡ; ಶಂಭು ಸಂಬಂಧಪಾದುದು–ಶಾಂಭವ] ೩೬. ಕಿನ್ನರ ಬೊಮ್ಮಯ್ಯನೆಂಬ ಶಿವಗಣ ಶ್ರೇಷ್ಠ, ಚೆನ್ನಬಸವೇಶ್ವರ, ಮಡಿವಾಳ ಮಾಚಿದೇವ ಪ್ರಭು, ಕನ್ನದ ಮಾರಿತಂದೆಯೆಂಬ ಗಣೇಶ್ವರರೇ ಮೊದಲಾದವರಿಂದ ಹೊಗಳಿಸಿಕೊಳ್ಳಲ್ಪಡುವ, ಶಿವನಿಂದ ಉತ್ಪನ್ನವಾದ (ಲಿಂಗಾಂಗ ಸಾಮರಸ್ಯದಿಂದುತ್ಪನ್ನವಾದ) ಸುಖವನ್ನುಳ್ಳ, ಮನ್ಮಥನೆಂಬ ಸರ್ಪಕ್ಕೆ ಗರುಡನಂತಿರುವ, (ತನ್ನ) ಪಾದಗಳಿಗೆ ನಮಸ್ಕರಿಸಿದ ಜನರೆಂಬ ಕಮಲಗಳ ಸಮೂಹ (ಸಭೆ)ಕ್ಕೆ ಉದಯ ಸೂರ್ಯನಂತಿರುವ, ಅತ್ಯುತ್ಕೃಷ್ಟವಾದ ಗುಣಗಳಿಗೆ ಆಶ್ರಯನಾದ, ಅಪತ್ತು (ವಿಪತ್ತು)ಗಳ ಸಮೂಹವನ್ನು ನಾಶಪಡಿಸುವ, ಜಗತ್ತುಗಳ ಸಮೂಹವನ್ನು ರಕ್ಷಿಸುವವನಾದ, ಪ್ರಕಾಶಿಸುವ ವೇದಗಳ ಸಾರವನ್ನು ಹೊಂದಿರುವ ಬುದ್ಧಿಯುಳ್ಳ ವೇದಗಳ ಸಾರನಾದ ಪರಮೇಶ್ವರನ ಸಮೀಪವರ್ತಿಯಾದ ಬುದ್ಧಿಯುನ್ನುಳ್ಳ, ಶಾಶ್ವತನಾದ, ಜ್ಞಾನದಿಂದ ಭಿನ್ನನಲ್ಲದ (ಜ್ಞಾನಸ್ವರೂಪನೇ ಆದ) ಸ್ವಾಮಿಯೇ, ಹೇ ಬಸವೇಶ್ವರನೇ, ನನಗೆ ಕೃಪೆಯಿಂದ ಸಂತೋಷವಿತ್ತು ರಕ್ಷಿಸು. ೩೭. ವಿಷ್ಣುವನ್ನು ಬಾಣವನ್ನಾಗಿ ಮಾಡಿಕೊಂಡು, ಮೇರುಪರ್ವತವನ್ನೇ ಬಿಲ್ಲನ್ನಾಗಿ ಮಾಡಿಕೊಂಡು, ತ್ರಿಪುರಗಳನ್ನು ನಾಶಮಾಡಿದ, ಚಂದ್ರನನ್ನೇ ಒಳ್ಳೆಯ ಆಭರಣವಾಗಿ ಉಳ್ಳ ಶಿವನ ಸಂಬಂಧದ ಮತವನ್ನು ಪ್ರಕಾಶಗೊಳಿಸುವ, ಅನ್ಯ (ಶಿವೇತರ) ಗಳಾದ ಅನೇಕ ಮತಗಳನ್ನು ನಾಶಗೊಳಿಸಿದ, ಪಾಪಗಳನ್ನು ನಾಶಮಾಡಿದ, ಆಧ್ಯಾತ್ಮಿಕ, ಆಧಿ ಭೌತಿಕ, ಆಧಿ ದೈವಿಕಗಳೆಂಬ ತಾಪತ್ರಯಗಳನ್ನು ಜಯಿಸಿದ, ಮಾಯಾಲೇಪನವನ್ನು ಹೋಗಲಾಡಿಸಿದ, ವಿಶೇಷವಾದ ಮನಶ್ಚಾಂಚಲ್ಯದಿಂದಲೂ ಮದದಿಂದಲೂ ಕೂಡಿದ ದೇವೇಂದ್ರ ವೈರಿಗಳಾದ ರಾಕ್ಷಸರನ್ನು ನಾಶಗೊಳಿಸಿದ, ರಾಜರುಗಳ ಸಮೂಹದಿಂದ ನಮಸ್ಕಾರಗೊಳಿಸಿಕೊಳ್ಳಲ್ಪಟ್ಟ, ತಪಸ್ವಿಗಳಾದವರ ಜನನ ಮರಣಾತ್ಮಕ ಸಂಸಾರವನ್ನು ನಾಶಗೊಳಿಸುವ, ಸಮೀಚೀನವಾದ ಮಾತುಗಳ

ಭೂಪನಿವಹೋಪನತ ತಾಪಸಭವಾಪಹ ಸು-
ಲಾಪ ಸುಖಿನೋಪಕರಣೋಪಹಿತ ವಿಶ್ವ-
ವ್ಯಾಪಕ ದಯಾಪರ ಸುಧೀಪದುದರಾಪ ಜಯ
ಕೋಪಹೃತಭಾಪಸುತರೂಪ ಬಸವೇಶಾ ೩೭

ಕ್ಷಿಪ್ರಶಮಿತಾಮಯ ಭವಪ್ರಹರ ಸರ್ವಭುವ-
ನಪ್ರಥಿತವೈಭವ ಸುರಪ್ರಭುಮುಕುಂದಾ
ಜಪ್ರಮುಖದಾನವರಿಪುಪ್ರಕರಮಂದ್ಯಚರ-
ಣ ಪ್ರಕೃತಿವರ್ಜಿತ ಗುಣಪ್ರಯುತಚರ್ಯಾ
ಸುಪ್ರಮಥನಾಯಕ ಚರಪ್ರಚಯಭಕ್ತಿವನಿ-
ತಾಪ್ರಣಯಶೀಲ ಜಿತವಿಪ್ರಕೃತವಾದಾ-
ಪ್ತಪ್ರಣವಮಂತ್ರಮನನಪ್ರಯುತವರ್ಯಾ ಜಯ
ಸುಪ್ರಮದ ಶೈವಮತವಪ್ರ ಬಸವೇಶಾ ೩೮

ನ್ನುಳ್ಳ, ಸತ್ಪುರುಷರಿಗೆ ಉಪಕಾರ ಮಾಡುವುದರಿಂದ (ಅವರಿಗೆ) ಆಪ್ತನಾದ, ವಿಶ್ವವನ್ನೆಲ್ಲ ವ್ಯಾಪಿಸಿದ, ದಯೆಯಲ್ಲಿ ಆಸಕ್ತನಾದ, ವಿದ್ವಾಂಸರಾದವರ ಪದ (ಮಾತು) ಗಳಿಗೆ ಸಿಲುಕದೆಯಿರುವ, ಕೋಪದಿಂದ ಯಮನನ್ನು ನಾಶಗೊಳಿಸಿದ, ಪರಶಿವನ ಸ್ವರೂಪನಾದ ಬಸವೇಶ್ವರನೇ, ಜಯ [ಮಾಪ = ಲಕ್ಷ್ಮೀಪತಿಯಾದ ವಿಷ್ಣು, ರೋಪ = ಬಾಣ ಗೋಪ-ಸ್ವರ್ಗವನ್ನು ಪಾಲಿಸುವ ದೇವೇಂದ್ರ, ರಿಪು-ವೈರಿ = ರಾಕ್ಷಸರು ಎಂದು ಅರ್ಥ; ಭಾಪ-ಕಾಂತಿಗೆ ಅಧಿಪತಿ-ಸೂರ್ಯ, ಸುತ-ಮಗ = ಯಮ ; ಸುಧೀ-ವಿದ್ವಾಂಸ, ಪದ = ಮಾತು ಅಥವಾ ಪದ್ಯ, ದುರಾಪ-ಸಿಕ್ಕದಿರುವ = ವಿದ್ವಾಂಸ, ಹೊಗಳಿಕೆಗೆ ಸಿಲುಕದ]. ೩೮. (ಸಂಸಾರವೆಂಬ) ರೋಗವನ್ನು ತ್ವರಿತವಾಗಿ ಶಮನ (ನಾಶ) ಗೊಳಿಸಿದವನೂ, ಹುಟ್ಟು ಸಾವುಗಳನ್ನು ಸಂಹರಿಸಿದವನೂ, ಸಮಸ್ತಲೋಕದಲ್ಲಿ ಪ್ರಸಿದ್ಧವಾದ (ಭಕ್ತಿ) ವೈಭವವನ್ನುಳ್ಳವನೂ, ದೇವೇಂದ್ರ, ವಿಷ್ಣು, ಬ್ರಹ್ಮನೇ ಮುಖ್ಯರಾದ ರಾಕ್ಷಸ ಸಮೂಹದ ವೈರಿಗಳಾದವರಿಂದ ನಮಸ್ಕಾರಗೊಳಿಸಿಕೊಂಡ ಪಾದವುಳ್ಳವನೂ, ಪ್ರಕೃತಿಗುಣಗಳಿಂದ ದೂರನಾದವನೂ, ಸದ್ಗುಣ ಸಮೂಹದಿಂದ ಕೂಡಿದ ನಡೆವಳಿಕೆಯುಳ್ಳವನೂ, ಶ್ರೇಷ್ಠರಾದ ಪ್ರಮಥಗಣಗಳ ನಾಯಕನೂ, ಜಂಗಮ ಸಮೂಹದಲ್ಲಿಟ್ಟಿರುವ ಭಕ್ತಿಯೆಂಬ ವನಿತೆಯ ಪ್ರಣಯವೇ ಶೀಲವಾಗುಳ್ಳವನೂ, ಬ್ರಾಹ್ಮಣರಿಂದ ಮಾಡಲ್ಪಡುವ ವಾದವನ್ನು ಗೆದ್ದವನೂ, ಇಷ್ಟವಾದ ಓಂಕಾರ ಪ್ರಣವ ಮಂತ್ರವನ್ನು ಮನನ ಮಾಡುವ ಭಕ್ತಿಯಿಂದ (ಪರಿಶುದ್ಧಿಯಿಂದ) ಕೂಡಿದವನೂ, ಸಮೀಚೀನವಾದ ಸಂತೋಷದಿಂದ ಶಿವಸಂಬಂಧವಾದ ಮತದಲ್ಲಿ ಆಟವಾಡುವವನೂ (ಕ್ರೀಡಿಸು

ಕಂಬುಕಳಹಂಸಶರದಂಬುಧರಹಾಸವಿಧು-
ದಂಬವಿಶದಚ್ಛವಿವಿಡಂಬಕ ಮಹಸ್ಕಾ-
ಶಾಂಬರ ಜಗತ್ರಯಕುಟುಂಬ ಸುರಭೂಧರನಿ-
ತಂಬಚರಮಾಧವಕಳಂಬಶಿವಯುಕ್ತಾ
ಸಾಂಬಶರಣಾಗತಕದಂಬಪರಿಪಾಲನವಿ-
ಳಂಬರಹಿತಾಶ್ವತರಕಂಬಲಸುಕರ್ಣಾ
ಲಂಬನ ಗಣೇಂದ್ರನಿಕುರುಂಬಹಿತ ರಕ್ಷಿಸಘ-
ಡಂಬರಮಹಾಕುಧರಶಂಬ ಬಸವೇಶಾ ೩೯

ಸ್ವರ್ಭವವರಾಂಬುರುಹಗರ್ಭಮುಖವಿಶ್ರುತ ಹ-
ವಿರ್ಭುಗಿನವಂದಿತ ಯಜುರ್ಭವಸುಮಂತ್ರಾಂ-
ತರ್ಭರಿತ ಚಂದ್ರಸಿತವಾರ್ಭೃದಮಳಚ್ಛವಿವ-
ಪುರ್ಭಸಿತಭಾಸುರ ಚತುರ್ಭುಜವಿನುತ್ಯಾ

ವವನೂ) ಆದ ಬಸವೇಶ್ವರನೇ ಜಯ. ೩೯. ಶಂಖ, ಕಳಹಂಸ, ಶರತ್ಕಾಲದಮೋಡ' ಮುತ್ತಿನಹಾರ, ಚಂದ್ರಮಂಡಲ-ಇವುಗಳ ನಿರ್ಮಲಕಾಂತಿಯನ್ನು (ಕೂಡ) ತಿರಸ್ಕಾರ ಮಾಡುವ ಯಶಸ್ಸುಳ್ಳವನೂ, ದಿಕ್ಕುಗಳೇ ಬಟ್ಟೆಯಾಗಿಉಳ್ಳ, ಮೂರುಲೋಕಗಳೇ ಕುಟುಂಬವಾಗುಳ್ಳ, ದೇವತೆಗಳ ಪರ್ವತವಾದ ಮೇರುವಿನ ತಪ್ಪಲು ಪ್ರದೇಶದಲ್ಲಿ ಸಂಚರಿಸುವ, ವಿಷ್ಣುವನ್ನೇ ಬಾಣವಾಗಿ ಉಳ್ಳ ಪರಮೇಶ್ವರನಿಂದ ಕೂಡಿದ. ಈಶ್ವರನನ್ನು ಸಂರಕ್ಷಕನನ್ನಾಗಿ ಹೊಂದಿರುವ ಭಕ್ತರ ಸಮೂಹವನ್ನು ಸಂರಕ್ಷಣೆಮಾಡುವುದರಲ್ಲಿ ವಿಳಂಬವಿಲ್ಲದಿರುವ (ಅಥವಾ ಜಾಗರೂಕನಾದ), ಕಂಬಲಾಶ್ವತರೆಂಬ ಗಂಧರ್ವರೇ ಸಮೀಚೀನವಾದ ಕರ್ಣಗಳ ಆಶ್ರಯದಲ್ಲಿ ಉಳ್ಳಂಥ ಪರಮೇಶ್ವರನ ಗಣಶ್ರೇಷ್ಠರ ಸಮೂಹಕ್ಕೆ ಹಿತವನ್ನುಂಟುಮಾಡುವ (ಆಪ್ತನಾದ), ಅಧಿಕವಾದ ಪಾಪವೆಂಬ ದೊಡ್ಡಪರ್ವತಕ್ಕೆ ವಜ್ರಾಯುಧನಾದ ಬಸವೇಶ್ವರನೇ (ನನ್ನನ್ನು) ರಕ್ಷಿಸು. ೪೦. ಸ್ವರ್ಗದಲ್ಲಿ ಹುಟ್ಟಿದವರಲ್ಲಿ ಶ್ರೇಷ್ಠನೆನಿಸಿದ ಬ್ರಹ್ಮ, ವಿಷ್ಣು ಇವರುಗಳೇ ಮೊದಲಾದ ಪ್ರಸಿದ್ಧ ದೇವಶ್ರೇಷ್ಠರಿಂದ ನಮಸ್ಕಾರಗೊಳಿಸುವ, ಯಜುರ್ವೇದವಲ್ಲಿ ಹುಟ್ಟಿದ (ಯಜುರ್ವೇದಾಂತರ್ಗತವಾದ) ಶ್ರೇಷ್ಠ ಶಿವಮಂತ್ರದೊಳಗೆ ತುಂಬಿಕೊಂಡಿರುವ, ಚಂದ್ರ, ಶುಭ್ರ, ಮೋಡ ಇವುಗಳೋಪಾದಿಯಲ್ಲಿ ನಿರ್ಮಲಕಾಂತಿಯಿಂದ ಕೂಡಿದ ಶರೀರವುಳ್ಳ, ಭಸ್ಮದಿಂದ ಪ್ರಕಾಶಿಸುವ, ವಿಷ್ಣುವಿನಿಂದ ಹೊಗಳಿಸಿ ಕೊಳ್ಳಲ್ಪಡುವ, ಪೋಷಿಸಲಶಕ್ಯವಾದ ಲೋಕಗಳನ್ನು ಸುರಕ್ಷಿಸುವುದರಲ್ಲಿ ಜಾಗರೂಕನಾದ, ರಾಕ್ಷಸರುಗಳನ್ನು ನಾಶಗೊಳಿಸಿದ, ಪುನಃ ಹುಟ್ಟುವಿಕೆಯನ್ನು ನಾಶಗೊಳಿಸುವ (ಜನನನಾಶಕನಾದ ಅಂದರೆ ಮುಕ್ತಿಯನ್ನುಂಟುಮಾಡುವ) ಮೇರು ಪರ್ವತವೆಂಬ ಧನುಸ್ಸನ್ನು ಧರಿಸಿದ,

ದುರ್ಭರಜಗದ್ಭರಣನಿರ್ಭರ ಹೃತಾಸುರ ಪು-
ನರ್ಭವಹರಾದ್ರಿಪಥನುಭೃದಖಿಳೇಶಾ-
ವಿರ್ಭವದನೂನಗುಣ ಗೀರ್ಭರಣವಕ್ತ್ರ ಮೃಡ-
ಪೂರ್ಭವನ ರಕ್ಷಿಸಭವಾರ್ಭಕ ವೃಷೇಂದ್ರಾ ೪೦

ತಾಮರಸಲೋಚನಪಿತಾಮಹನಿಷೇವ್ಯ ವಿತ-
ತಾಮಳಚರಿತ್ರ ಸತತಾಮಯವಿದೂರಾ-
ತಾಮಸಜನಪ್ರಿಯ ನತಾಮರಮಹೀಜ ಮೃದು-
ತಾಮಧುರಭಾಷಜನತಾಮತವಿನೋದಾ
ಸಾಮಜಪಸಂಯುತರಸಾಮಗಪರಿಸ್ತುತ ಸ-
ಸಾಮಹಿತಕಾರ್ಯ ಗುಹಸಾಮಜಮುಖಾರ್ಚ್ಯ-
ಕಾಮಶರಣಪ್ರಿಯ ನಿಕಾಮಶುಭಶೀಲ ಜಯ
ಕಾಮರಿಪುರೂಪ ಜಿತಕಾಮ ಬಸವೇಶಾ ೪೧

ಸೋಮಗುರುವರ್ಯವರಭೀಮಕವಿರಾಜಗುಣ
ಧಾಮಘನಶಂಕರಸುನಾಮಕೃತಕಾವ್ಯ-
ಸ್ತೋಮನುತವೈಭವ ನಿರಾಮಯ ನಿರರ್ಗಳಮ-
ಹಾಮಹಿಮಸಾರ ವಿಬುಧಾಮರಮಹೀಜಾ

ಸಕಲಕ್ಕೂ ಒಡೆಯನಾದ, ಅಭಿವೃದ್ಧಿಗೊಳ್ಳುತ್ತಿರುವ ಅಧಿಕವಾದ ಸದ್ಗುಣಗಳುಳ್ಳ, ಸರಸ್ವತಿಯೇ ಆಭರಣವಾಗುಳ್ಳ ಮುಖದಿಂದ ಕೂಡಿದ, ಶಿವನ ನಗರವಾದ ಕೈಲಾಸವೇ ಮನೆಯಾಗಿ ಉಳ್ಳ, ಶಿವನ ಪುತ್ರನಾದ ಬಸವೇಶ್ವರನೇ, (ನನ್ನನ್ನು) ರಕ್ಷಿಸು ೪೧. ಕಮಲನೇತ್ರನಾದ ವಿಷ್ಣು ಮತ್ತು ಬ್ರಹ್ಮರುಗಳಿಂದ ಸೇವಿಸಲ್ಪಡುವ, ವಿಸ್ತಾರವಾದ (ವಿಶೇಷವಾದ) ಪರಿಶುದ್ಧ ಚರಿತ್ರೆಯನ್ನುಳ್ಳ, ಸದಾರೋಗ (ಜನನಮರಣಾತ್ಮಕವಾದ ರೋಗ) ದಿಂದ ದೂರನಾದ ತಮೋಗುಣರಹಿತರಾದ ಜನರಲ್ಲಿ ಪ್ರೀತಿಯುಳ್ಳ ನಮಸ್ಕಾರಮಾಡಿದ ಜನರಿಗೆ ಕಲ್ಪವೃಕ್ಷ ಪ್ರಾಯನಾದ, ಮೃದುತ್ವದಿಂದಲೂ, ಮಧುರ ವಾಗಿಯೂ ಮಾತನಾಡುವ ಜನರುಗಳ ತತ್ತ್ವ ವಿಚಾರ (ಮತ)ದಲ್ಲಿ ವಿನೋದ ಗೊಳ್ಳುವ, ಸಾಮವೇದ ಮಂತ್ರಜಪದ ರಾಗರಸದಲ್ಲಿ ಮಗ್ನರಾದ ದೇವತೆಗಳಿಂದ ಹೊಗಳಿಸಿಕೊಳ್ಳಲ್ಪಡುವ, ಸಾಮೋಪಾಯದಿಂದ (ಎಲ್ಲರಿಗೂ) ಹಿತವಾಗುವ ಕಾರ್ಯ ಗೌರವವುಳ್ಳ, (ಶಾಂತಿಯಿಂದ ಕೂಡಿದ ಜನರಿಗೆ ಆಪ್ತವಾದ ಕಾರ್ಯಗಳನ್ನುಳ್ಳ) ಷಣ್ಮುಖ, ಗಣಪತಿ (ಸಾಮಜಮುಖ)ಯರಿಂದ ಪೂಜಿಸಲ್ಪಡುವ, ನಿಷ್ಕಾಮರಾದ ಶರಣ ಜನರಿಗೆ ಪ್ರಾಯನೆನಿಸಿದ, ಅತ್ಯಂತ ಶುಭಕರವಾದ ಶೀಲವುಳ್ಳ, ಪರಮೇಶ್ವರ ರೂಪ ನಾದ, ಮನ್ಮಥ ಸಂಬಂಧದ ವಿಕಾರವನ್ನು ಜಯಿಸಿದ, ಬಸವೇಶ್ವರನೇ ಜಯ. ೪೨. ಗರುಶ್ರೇಷ್ಠರಾದ ಪಾಲ್ಕುರಿಕೆ ಸೋಮನಾಥರು, ಶ್ರೇಷ್ಠರಾದ ಭೀಮಕವಿರಾಜರು, ಸದ್ಗುಣಗಳಿಗೆ ಆಶ್ರಯರಾದ ಶ್ರೇಷ್ಠ ಕಂಚಿಯ ಶಂಕರಾರಾಧ್ಯರೆಂಬ ಸಮೀಚೀನ ಹೆಸರಿನವರು ಬರೆದು (ಮಾಡಿದ) ಕಾವ್ಯಗಳ ಸಮೂಹದಿಂದ (ಪದ್ಯಗಳಸಮೂಹದಿಂದ)

ವ್ಯೋಮಕಚಸನ್ನಿಭ ಕೃಪಾಮಹಿತಚಿತ್ತ ವಿಭು
ವೇಮನಲಸತ್ಕದಿರರೇಮಹಿತಚಯೋರ್ಜ-
ದ್ದಾಮ ಹೃತಬಿಜ್ಜಳಮನೋಮದಸುವಾಕ್ಯ ಪೊರೆ
ಕಾಮದ ಪುರಾತನಲಲಾಮ ಬಸವೇಶಾ ೪೨

ಧೌಮ್ಯಶುಕಸೇವಿತ ನಿಯಮ್ಯಸಚರಾಚರ ಸು-
ಸೌಮ್ಯಗುಣಹಾರ ಮೃಡಸಾಮ್ಯಯುಗಮರ್ತ್ಯಾ-
ನಮ್ಯಪದ ಸಂಸರಣತಾಮ್ಯದಭಿರಕ್ಷ ಮುನಿ-
ಗಮ್ಯ ಜಿತದುಷ್ಟಮತಗಾಮ್ಯಖಿಲಧೀರ-
ಸ್ವಾಮ್ಯಧಿಕಭಕ್ತಿನಿಜಕಾಮ್ಯ ತಪನೇಂದುಗುರು
ಸೌಮ್ಯನುತಸಾರಗುಣ ಭೂಮ್ಯಧಿಪನುತ್ಯ
ಭ್ರಾಮ್ಯದಸುರೋಧಕರ ಯಮ್ಯಧಿಕಚಿಂತ್ಯ ಜಯ
ದಮ್ಯನಘದಿವ್ಯತನುರಮ್ಯ ಬಸವೇಶಾ ೪೩

ಹೊಗಳಿಸಿಕೊಂಡ ವೈಭವವುಳ್ಳ, ಭವವೆಂಬ ರೋಗದಿಂದ ದೂರನಾದ, ತಡೆಯಿಲ್ಲದ ಅಧಿಕ ಮಹಿಮೆಯನ್ನುಳ್ಳ, ಶ್ರೇಷ್ಠರಾದ ವಿದ್ವಾಂಸರಿಗೆ ಕಲ್ಪವೃಕ್ಷ ಪ್ರಾಯನಾದ, ಆಕಾಶವೇ ಕೇಶವಾಗಿ ಉಳ್ಳ (ಜಡೆಯಾಗಿ ಉಳ್ಳ) ಶಿವನಿಂದ ಕೂಡಿದ, ಕೃಪಾವಿಶೇಷ ದಿಂದ ಪೂಜ್ಯವಾದ ಮನಸ್ಸುಳ್ಳ ಸ್ವಾಮಿಯೆನಿಸಿದ, ವೇಮನಾರ್ಯ, ಶೋಭಿಸುವ ಕದಿರ ರೇಮಾರ್ಯ ಇವರುಗಳಿಗೆ ಹಿತ (ಆಪ್ತ)ವುಳ್ಳವನಾದ, ಉತ್ಕೃಷ್ಟ ನಡೆವಳಿಕೆಯನ್ನುಳ್ಳ, ಬಿಜ್ಜಳ ಭೂಪಾಲನ ಮನಸ್ಸಿನ ಮದವನ್ನು ನಾಶಪಡಿಸಿದ, ಒಳ್ಳೆಯ ಮಾತಿನಿಂದ ಕೂಡಿದ, ಇಷ್ಟಾರ್ಥವನ್ನು ಕೊಡುವ, ಅರುವತ್ತುಮೂವರು ಪುರಾತನರು (ನೂತನ ಪುರಾತನರು)ಗಳಿಗೆ ಭೂಷಣಪ್ರಾಯನಾದ ಬಸವೇಶ್ವರನೇ ನನ್ನನ್ನು ರಕ್ಷಿಸು. ೪೩. ಧೌಮ್ಯಮಹರ್ಷಿ, ಶುಕಮಹರ್ಷಿಗಳಿಂದ ಸೇವಿಸಲ್ಪಟ್ಟ, ಸಚರಾಚರ ಜಗತ್ತಿಗೆಲ್ಲ (ಸ್ಥಾವರಜಂಗಮಾತ್ಮಕ ಜಗತ್ತಿಗೆ) ಆಜ್ಞೆಮಾಡುವುದಕ್ಕೆ ಯೋಗ್ಯನಾದ, ಒಳ್ಳೆಯ ಕಾಂತಿಯುಕ್ತ ಗುಣಗಳೇ ಕಂಠಹಾರ ವಾಗುಳ್ಳ, ಪರಮೇಶ್ವರನ ಸಾದೃಶ್ಯವನ್ನು ಹೊಂದಿದ (ಮೃಡನ ಸಾಮ್ಯಕ್ಕೆ ಯೋಗ್ಯನಾದ), ದೇವತೆಗಳಿಂದ ನಮಸ್ಕರಿಸಿ ಕೊಳ್ಳುವುದಕ್ಕೆ ಯೋಗ್ಯವಾದ ಪಾದಗಳುಳ್ಳ ಸಂಸಾರ ತಾಪದಿಂದ ಬತ್ತಿ ಹೋಗು ತ್ತಿರುವವರನ್ನು ಸಂರಕ್ಷಣೆಮಾಡುವ, ಮುನಿಗಳಿಂದ ಪಡೆಯುವುದಕ್ಕೆ ಯೋಗ್ಯ ನಾದ, ದುರ್ಮತಗಳಿಂದ ಕೂಡಿದ ಜನರುಗಳನ್ನು ಜಯಿಸಿದ ಸಮಸ್ತಧೀರರಿಗೂ, ಸ್ವಾಮಿಯೆನಿಸಿದ (ಅವಿಕಾರಿಗಳಾದ ಸಮಸ್ತಜನರಿಗೂ ಸ್ವಾಮಿಯೆನಿಸಿದ), ಅಧಿಕ ವಾದ ಶಿವಭಕ್ತಿಯೇ ತನ್ನ ಬಯಕೆಯಾಗುಳ್ಳ, ಸೂರ್ಯ, ಚಂದ್ರ, ಬೃಹಸ್ಪತಿ ಬುಧಾದಿಗಳಿಂದ ಹೊಗಳಿಸಿಕೊಳ್ಳುವ ಶ್ರೇಷ್ಠಗುಣಗಳಿಂದ ಕೂಡಿದ, ರಾಜರುಗಳಿಂದ ಹೊಗಳಿಸಿಕೊಳ್ಳುವುದಕ್ಕೆ ಯೋಗ್ಯನಾದ, ಭ್ರಮಣಗೊಳ್ಳುತ್ತಿರುವ (ಸುತ್ತುತ್ತಿರುವ) ಪ್ರಾಣವಾಯುವನ್ನು ತಡೆಗಟ್ಟುವ, ಯಮಾದಿಯೋಗ ಸಂಪನ್ನರಲ್ಲಿ ಶ್ರೇಷ್ಠರೆನಿಸಿ ಕೊಂಡವರಿಂದ ಧ್ಯಾನಿಸಲ್ಪಡುವುದಕ್ಕೆ ಯೋಗ್ಯನಾದ, ಅಂತರಿಂದ್ರಿಯ (ಮನಬುದ್ಧಿ ಚಿತ್ತಾಹಂಕಾರಾದಿ ಅಂತರಿಂದ್ರಿಯ) ನಿಗ್ರಹವುಳ್ಳ, ಪಾಪರಹಿತವೂ, ಪವಿತ್ರವೂ ಆದ

[1]ಕಾಯಗುಣವರ್ಜಿತ[1] ವಿಮಾಯ ಗಣಸಂಚಯಸ
ಹಾಯ ನಿಗಮಾಗಮನಿಕಾಯಸರಳೋಕ್ತ
ನ್ಯಾಯಜಿತವಾದಿಸಮುದಾಯ ಶಿವಭಕ್ತಸಮ
ವಾಯಜಯದಾನಸದುಪಾಯ ಮಹನೀಯ
ಧ್ಯೇಯ ಖಚರೇಂದ್ರಚಯಗೇಯ ಚರಶಂಕರವಿ
ಧೇಯ ಬುಧನುತ್ಯ ರುಚಿರಾಯ ಪರವೃಂದಾ-
ಜೇಯ ಪೊರೆ ಪೂರ್ಣಗುಣಜಾಯ ಸಕಲೇಷ್ಟಫಲ-
ದಾಯಕ ಗಿರೀಶಗಣನಾಯಕ ವೃಷೇಂದ್ರಾ ೪೪

ಶೌರ್ಯ್ಯಜಸದಾಕೃತಸಪರ್ಯ ಭುವನಪ್ರಕರ-
ಧುರ್ಯ ಗಣನಾಥಹಿತಕಾರ್ಯ ಸುಜನಾಂಭೋ-
ಜಾರ್ಯಮ ಸುಕೀರ್ತಿನುತಭಾರ್ಯ ಮುನಿಹೃನ್ನಳಿನ-
ಧಾರ್ಯಪದ ಸತ್ಪದವಿಪರ್ಯಟನಶೀಲ

ದೇಹದಿಂದ ರಮಣೀಯನೆನಿಸಿದ (ಮನೋಹರನೆನಿಸಿದ) ಬಸವೇಶ್ವರನೇ ಜಯ. ೪೪. ದೇಹಗುಣಗಳಾದ ಕ್ಷುತ್ಪಿಪಾಸಾದಿ ಷಡೂರ್ಮಿಗಳಿಂದ ಅಂದರೆ ಹಸಿವು, ನೀರಡಿಕೆ, ಶೋಕ, ಮೋಹ, ಜರಾ, ಮರಣಗಳಿಂದ ದೂರನಾದ, ಮಾಯಾರಹಿತರಾದ ಶಿವಗಣ ಸಮೂಹಕ್ಕೆ ಸಹಾಯಕನಾದ, ವೇದಾಗಮಗಳ ಸಮೂಹದಿಂದ ಸರಳವಾಗಿ ಹೇಳಲ್ಪಟ್ಟ (ಹೊಗಳಲ್ಪಟ್ಟ), ಪರಮತವಾದಿಗಳನ್ನು ತರ್ಕಶಾಸ್ತ್ರದಿಂದ ಸೋಲಿಸಿದ, ಶಿವಭಕ್ತ ರಾದವರ ಸಮೂಹಕ್ಕೆ ಗೆಲ್ಲುವಿಕೆಯನ್ನು ಉಂಟುಮಾಡಿಕೊಡುವುದೇ ಒಳ್ಳೆಯ ಯುಕ್ತಿಯಾಗಿ ಉಳ್ಳ, ಮಹಾತ್ಮರುಗಳಿಂದ ಧ್ಯಾನಿಸಲ್ಪಡುವುದಕ್ಕೆ ಯೋಗ್ಯನಾದ, ದೇವತಾಶ್ರೇಷ್ಠರ ಸಮೂಹದಿಂದ ಗಾನಮಾಡಿಸಿಕೊಳ್ಳುವುದಕ್ಕೆ (ಹಾಡಿಸಿಕೊಳ್ಳು ವುದಕ್ಕೆ) ಯೋಗ್ಯನೆನಿಸಿದ, ಜಂಗಮ ಸಮೂಹ ಮತ್ತು ಈಶ್ವರ ಇವರುಗಳಿಗೆ ವಿಧೇಯ ನಾದ, ವಿದ್ವಾಂಸರಿಂದ ಹೊಗಳಿಸಿಕೊಳ್ಳುವುದಕ್ಕೆ ಯೋಗ್ಯನಾದ, ಮನೋಹರಗಳೂ, ಮಂಗಳಕರಗಳೂ ಆದ ಕ್ರಿಯೆಗಳನ್ನುಳ್ಳ, ಅನ್ಯಮತಸ್ಥರ ಸಮೂಹದಿಂದ ಜಯಿಸು ವುದಕ್ಕೆ ಅಸಾಧ್ಯನೆನಿಸಿದ, ಸಮಗ್ರ ಸದ್ಗುಣಗಳಿಂದ ತುಂಬಿದ ಹೆಂಡತಿ (ಗಂಗಾಂಬಿಕೆ ಯೆಂಬ) ಯನ್ನುಳ್ಳ, ಇಚ್ಛಿಸಿದ ಸಕಲ ಇಷ್ಟಾರ್ಥಗಳನ್ನು ಕೊಡುವಂಥ, ಶಿವ ಗಣಂಗಳಿಗೆಲ್ಲ ಸ್ವಾಮಿಯೆನಿಸಿದ ಬಸವೇಶ್ವರನೇ, (ನನ್ನನ್ನು)ರಕ್ಷಿಸು. ೪೫. ವಿಷ್ಣು ಬ್ರಹ್ಮರುಗಳಿಂದ ಸದಾ ಪೂಜೆಯನ್ನು ಮಾಡಿಸಿಕೊಳ್ಳುವ, ಲೋಕಸಮುದಾಯದ ಭಾರ ವನ್ನು ಧರಿಸುವುದರಲ್ಲಿ ಸಮರ್ಥನಾದ, ಗಣಾಧಿನಾಥರಿಗೆ ಹಿತವಾಗುವ ಕೆಲಸವನ್ನುಳ್ಳ, ಸಜ್ಜನರೆಂಬ ಕಮಲಗಳಿಗೆ ಸೂರ್ಯನಾದ, ಶ್ರೇಷ್ಠವಾದ ಯಶಸ್ಸೆಂಬ ಶ್ಲಾಘ್ಯಳಾದ ಹೆಂಡತಿಯನ್ನುಳ್ಳ (ಅಂದರೆ ಸತ್ಕೀರ್ತಿಯನ್ನು ತನ್ನ ಪತ್ನಿಯಂತೆ ತಿಳಿದು ಅರ್ಜಿಸಿದವ

---

1 ಕಾಯಜವಿಮರ್ದನ (ಗ, ಜ, ಮು)

ಸ್ಥೈರ್ಯಯುತ ನಿರ್ಜಿತಸುರವೈರ್ಯಧಿಕಮೇರುನಿಭ-
ಧೈರ್ಯ ನಿಗಮಾಂತಪರಿಚರ್ಯಯುತ ಲೋಕಾ-
ಚಾರ್ಯಪತಿ ಪಾಲಿಪುದವಾರ್ಯಮಹಿಮಾಂಕ ಗಣ-
ವರ್ಯ ಸಕಳಾದಿಜಗದಾರ್ಯ ಬಸವೇಶಾ ೬೫

ಚಿತ್ರತರಮಂಗಳಚರಿತ್ರ ಚರಲಿಂಗಸುಪ-
ವಿತ್ರಮಯಪಾದಶತಪತ್ರಮದಭೃಂಗಾ-
ಮಿತ್ರಚಯಭಂಜನ ಜಗತ್ರಯಧುರೀಣ ಜಿತ-
ವೃತ್ರವಿಧಿಪಂಕರುಹನೇತ್ರಸುರವಂದ್ಯಾ
ಗೋತ್ರರಿಪುನಂದನಸುಪತ್ರದ ಮಹೇಶಮತ-
ಸತ್ರಪರಿವೃದ್ಧಿಕರಚೈತ್ರ ಬುಧವೃಂದ-
ಸ್ತೋತ್ರನಿಕುರುಂಬಪರಪಾತ್ರ ಪೊರೆಯೆನ್ನನಘ-
ಜೈತ್ರ ಭವವಾರಿಧಿವಹಿತ್ರ ಬಸವೇಶಾ ೬೬

ನೆಂದುಭಾವ) ಋಷಿಗಳಹೃದಯಕಮಲದಲ್ಲಿ ಧರಿಸಲ್ಪಡುವುದಕ್ಕೆ ಯೋಗ್ಯವಾದಪಾದಗಳುಳ್ಳ, ಶ್ರೇಷ್ಠವಾದ ಮಾರ್ಗದಲ್ಲಿ ಸಂಚರಿಸುವುದೇ ಸ್ವಭಾವವಾಗಿವುಳ್ಳ, ಮನಸ್ಸಿನ ಸ್ಥಿರತೆಯಿಂದ ಕೂಡಿದ, ದೇವತೆಗಳ ವೈರಿಗಳಾದ ರಾಕ್ಷಸರನ್ನು ಜಯಿಸಿದ, ಮೇರು ಪರ್ವತಕ್ಕೆ ಸದೃಶವಾದ ಅಧಿಕ ಧೈರ್ಯವುಳ್ಳ, ಉಪನಿಷತ್ತುಗಳು ಮಾಡುವ ಸೇವೆಯಿಂದ ಕೂಡಿದ, ಸಮಸ್ತ ಲೋಕಾಧಿಪತಿಗಳಿಗೆ ಸ್ವಾಮಿಯಾದ, ಇತರರಿಂದ ನಿವಾರಿಸಲ್ಪಡುವುದಕ್ಕೆ ಸಾಧ್ಯ ಅಶಕ್ಯವಾದ ಮಹತ್ವವೇ ಗುರುತಾಗಿವುಳ್ಳ, ಗಣಶ್ರೇಷ್ಠನಾದ, ಸಕಲಕ್ಕೂ ಮೊದಲನೆಯವನಾದ, ಜಗದ್ಗುರುವಾದ ಬಸವೇಶ್ವರನೇ, (ನನ್ನನ್ನು) ರಕ್ಷಿಸುವುದು.

೬೬. ಅತ್ಯಾಶ್ಚರ್ಯಕರವೂ, ಮಂಗಳಕರವೂ ಆದ ಚರಿತ್ರೆಯುಳ್ಳ, ಜಂಗಮಲಿಂಗಗಳ ಅತಿ ಪವಿತ್ರಮಯವಾದ ಚರಣಗಳೆಂಬ ಕಮಲಗಳಿಗೆ ಮದಿಸಿದ ಭ್ರಮರದೋಪಾದಿಯಲ್ಲಿರುವ, ಶತ್ರುಗಳ ಸಮೂಹವನ್ನು ನಾಶಗೊಳಿಸಿದ, ಮೂರು ಲೋಕಗಳ ಭಾರವನ್ನು ಧರಿಸುವುದರಲ್ಲಿ ಸಮರ್ಥನಾದ, ವೃತ್ರಾಸುರನನ್ನು ಜಯಿಸಿದ ದೇವೇಂದ್ರ, ಬ್ರಹ್ಮ, ವಿಷ್ಣು ಇವರೇ ಮೊದಲಾದ ದೇವತೆಗಳಿಂದ ನಮಸ್ಕರಿಸಿ ಕೊಳ್ಳುವುದಕ್ಕೆ ಯೋಗ್ಯನಾದ, ಪರ್ವತಗಳಿಗೆ ಶತ್ರುವಾದ ದೇವೇಂದ್ರನ ಪುತ್ರನಾದ ಅರ್ಜುನನಿಗೆ ಶ್ರೇಷ್ಠವಾದ ಬಾಣವನ್ನು ಕೊಟ್ಟ ಶಿವನ ಮತ (ವೀರಶೈವ ಮತ) ವೆಂಬ ಅರಣ್ಯವನ್ನು ಅಭಿವೃದ್ಧಿಗೊಳಿಸುವ ಚೈತ್ರಮಾಸದಂತಿರುವ, ವಿದ್ವಾಂಸರ ಸಮೂಹದ ಸ್ತುತಿಯ ಸಮೂಹಕ್ಕೆ ಪರಮ ಆಶ್ರಯನೆನಿಸಿದ, ಪಾಪವನ್ನು ಜಯಿಸಿದ, ಸಂಸಾರವೆಂಬ

ಹೀರಹಿಮತಾರಗಿರಿನಾರದಪಟೀರಘನ-
ಸಾರಸುರವಾರಣತುಷಾರಕರತಾರಾ-
ಹಾರಸಿತನೀರಧರಪಾರದಸುಧಾರಸಸ-
ಮೀರಭುಗಿನೀರುಚಿರಗೌರಸುಯಶೋಂಕಾ
ಘೋರಭವದೂರ ಜಿತಶೂರತರಮಾರ ಶುಭ-
ಸಾರಯಮಿವಾರನುತ ವೀರಶಿವಭೃತ್ಯಾ-
ಧಾರ ಸದುದಾರ ಸದಪಾರಸುಖಪೂರ ಜಯ
ಚಾರಪದಸಾರಸವಿಹಾರ ಬಸವೇಶಾ ೪೭

ಬಾಲಶಶಿಮೌಲಿಕ ಕಪಾಲಧರ ಶೂಲಕರ
ಕಾಲಹರಕೋಲಪರಲಾಲಸ ಮನೋಜ್ಞ-
ವ್ಯಾಲಧರಲೀಲ ಶುಭಶೀಲ ಬುಧಜಾಲನುತಿ-
ಲೋಲ ಕರುಣಾಲಸಿತ ಫಾಲಶಿಖಿನೇತ್ರ

ಸಮುದ್ರಕ್ಕೆ ಹಡಗಿನಂತಿರುವ, ಬಸವೇಶ್ವರನೇ ನನ್ನನ್ನು ರಕ್ಷಿಸು. ೪೭. ವಜ್ರ, ಮಂಜು, ಬೆಳ್ಳಿಯ ಪರ್ವತ (ಕೈಲಾಸ ಪರ್ವತ), ನಾರದ, ಶ್ರೀಗಂಧ, ಪಚ್ಚ ಕರ್ಪೂರ, ಐರಾವತ, ಚಂದ್ರ, ನಕ್ಷತ್ರ, ಮುತ್ತಿನಹಾರ, ಬಿಳಿಯಮೋಡ, ಪಾದರಸ, ಅಮೃತ, ಆದಿಶೇಷ (ಸಮೀರ ಭುಗಿನ) ಇವರುಗಳ ಹಾಗೆ ಎಲ್ಲ ದೃಷ್ಟಿಯಿಂದಲೂ (ಎಲ್ಲ ಕಡೆಯಿಂದಲೂ) ಮನೋಹರವಾದ ಶುಭ್ರತೆಯಿಂದ ಕೂಡಿದ, ಒಳ್ಳೆಯ ಕೀರ್ತಿಯೇ ಗುರುತಾಗಿವುಳ್ಳ, ಭಯಂಕರವಾದ ಸಂಸಾರದಿಂದ ದೂರನಾದ, ಯಮ, ಮನ್ಮಥ ಇವರುಗಳನ್ನು ಜಯಿಸಿದ, ಮಂಗಳಕರರೂ, ಶ್ರೇಷ್ಠರೂ ಆದ ಋಷಿಗಳ ಸಮೂಹದಿಂದ ಹೊಗಳಿಸಿಕೊಳ್ಳಲ್ಪಟ್ಟ, ವೀರಶೈವ ಭೃತ್ಯರಿಗೆ ಆಧಾರ ನಾದ (ವೀರಶೈವವನ್ನು ಭೃತ್ಯರಂತೆ ಆಚರಿಸುವವರಿಗೆ ಆಧಾರಭೂತನಾದ ಎಂದು ಭಾವ), ಒಳ್ಳೆಯ ಉದಾರ ಗುಣವುಳ್ಳ, ತಡೆಯಿಲ್ಲದ ಶ್ರೇಷ್ಠಸುಖದ ಪ್ರವಾಹದಂತಿರುವ ಜಂಗಮ ಸಂಬಂಧವಾದ ಪಾದಗಳೆಂಬ ಕಮಲಗಳಲ್ಲಿ ಕ್ರೀಡಿಸುವ ಬಸವೇಶ್ವರನೇ (ನನ್ನನ್ನು ಪೊರೆ). ೪೮. ಬಾಲಚಂದ್ರನೇ ಕಿರೀಟದಲ್ಲುಳ್ಳ, ಬ್ರಹ್ಮಕಪಾಲವನ್ನು ಧರಿಸಿದ, ತ್ರಿಶೂಲಾಯುಧವೇ ಕಯ್ಯಲ್ಲುಳ್ಳ ಯಮನನ್ನು ನಾಶಮಾಡಿದ, ವರಾಹ ರೂಪನಾದ ವಿಷ್ಣುವಿಗೆ ಶತ್ರುವಾದ ಶಿವನಲ್ಲಿ ಆಸಕ್ತನಾದ, ಮನೋಹರವಾದ ಸರ್ಪವನ್ನು ಧರಿಸಿದ ಶಿವನ ಲೀಲಾಸ್ವರೂಪನಾದ, ಮಂಗಳಕರವಾದ ಶೀಲವುಳ್ಳ (ಸದಾಚಾರವುಳ್ಳ), ವಿದ್ವಾಂಸರ ಸಮೂಹದ ಸ್ತೋತ್ರದಲ್ಲಿ ಆಸಕ್ತನಾದ, ಕರುಣೆ ಯಿಂದ ಪ್ರಕಾಶಮಾನನಾದ, ಹಣೆಯಲ್ಲಿ ಅಗ್ನಿನೇತ್ರವುಳ್ಳ, ಕೈಲಾಸಪರ್ವತದಲ್ಲಿರುವ ವಿಶಾಲವೂ, ಮನೋಹರವೂ ಆದ ಮನೆಯಲ್ಲಿ ಕ್ರೀಡಿಸುವ, ಶಿವಗಣಗಳ ಸಮೂಹ ದೊಡನೆ ಮಾಡಿದ ಸಂಗಸುಖವುಳ್ಳ, ಹಂಸಪಕ್ಷಿಯ ಮೇಲೆ ಸಂಚರಿಸುವ ಬ್ರಹ್ಮನಿಂದ

ಶೈಲಗವಿಶಾಲರುಚಿರಾಲಯಸುಖೇಲನ ಗ-
ಣಾಲಿಕೃತಮೇಲನ ಮರಾಲಗಮನಾರ್ಚ್ಯ-
ಸ್ಥೂಲತನುಶಾಲಿ ವನಮಾಲಿವಿಧಿಮೂಲಕ ತ-
ಮಾಲದಲನೀಲಗಳ ಪಾಲಿಸು ವೃಷೇಂದ್ರಾ ೪೮

ಭಾವಭವಭಂಜನಸಭಾವಲಯಮಂಡನ ಶು-
ಭಾವಹ ಮಹೇಶಕೃತಭಾವ ಪರವಿದ್ಯಾ-
ಭಾವನ ಸದಾಸದನುಭಾವ ನತದತ್ತಗುಣ
ಭಾವ ಮುದಿತೋಗ್ರಶರಭಾವತರಣಾಂಕಾ
ಪಾವನಮಯಾಂಗ ಸುರಪಾವನತ ತಾರಕಜ-
ಪಾವಗತವಕ್ತ್ರ ಮುನಿಪಾವನಕಟಾಕ್ಷಾ
ದೇವಕುಲಸೇವ್ಯ ವಸುದೇವಸುತಮುಖ್ಯನರ-
ದೇವನುತ ರಕ್ಷಿಸೆಲೆ ದೇವ ಬಸವೇಶಾ ೪೯

ಕಾವ್ಯಗುರುಮುಖ್ಯಸುರಸೇವ್ಯಪದಪದ್ಮ ಶಶಿ-
ರವ್ಯನಲನೇತ್ರ ಪಠಿತವ್ಯನಿಜನಾಮಾ-
ಭವಜನದೂರ ಹೃತಹವ್ಯವಹಜಿಹ್ವ ವಿಜಿ-
ತವ್ಯಸನ ಸದ್ಗುಣಪದವ್ಯಜನಲೋಲಾ

ಪೂಜಿಸಲ್ಪಡುವುದಕ್ಕೆ ಯೋಗ್ಯನಾದ, ಸ್ಥೂಲವಾದ ದೇಹದಿಂದ ಶೋಭಿಸುವ, ವಿಷ್ಣು, ಬ್ರಹ್ಮರುಗಳಿಗೆ ಮೂಲಕಾರಣನೆನಿಸಿದ, ಹೊಂಗೆಯ ಎಲೆಗಳಂತೆ ನೀಲವರ್ಣದ ಕಂಠವನ್ನುಳ್ಳ ವೃಷಭೇಂದ್ರನೇ (ನನ್ನನ್ನು) ಪಾಲಿಸು. ೪೯. ಭಾವೋದ್ಭವನಾದ ಮನ್ಮಥನನ್ನು ನಾಶಗೊಳಿಸಿದ ಶಿವನ ಸಭಾಮಂಡಲಕ್ಕೆ ಅಲಂಕಾರಪ್ರಾಯನಾದ, ಮಂಗಳವನ್ನುಂಟುಮಾಡುವ, ಈಶ್ವರನಲ್ಲಿ (ಮಾಡಲ್ಪಟ್ಟ) ಇಟ್ಟ ಮನಸ್ಸನ್ನುಳ್ಳ, ಉತ್ಕೃಷ್ಟವಾದ ಶಿವತತ್ತ್ವಬೋಧಕ ವಿದ್ಯೆಯನ್ನೇ ಧ್ಯಾನಿಸುವ, ಸದಾಕಾಲದಲ್ಲೂ ಶ್ರೇಷ್ಠವಾದ ಶಿವಾನುಭಾವದಿಂದ ಕೂಡಿದ, ನಮಸ್ಕರಿಸಿದವರಿಗೆ ಸದ್ಗುಣ ಸಮೂಹವನ್ನು ಕೊಡುವ (ಅಥವಾ ಶಿವಗುಣಗಳನ್ನು ಕೊಡುವ), ಭಯಂಕರವಾದ ಶರಭಾವತಾರವೇ ಗುರುತಾಗಿ ಉಳ್ಳ ವೀರಭದ್ರನನ್ನು ಸಂತೋಷಪಡಿಸುವ, ಕಡೆಗಣ್ಣಿನ ನೋಟದಿಂದ ಪರಿಶುದ್ಧಿಯನ್ನುಂಟುಮಾಡುವ, ದೇವೇಂದ್ರನಿಂದ ನಮಸ್ಕಾರ ಮಾಡಿಸಿಕೊಳ್ಳುವ, ತಾರಕ ಮಂತ್ರ ಜಪದಿಂದ ಕೂಡಿದ ಬಾಯುಳ್ಳ, ಮುನಿಶ್ರೇಷ್ಠರನ್ನು ಪರಿಪಾಲಿಸುವ, ಶುಭಕರವಾದ ದೇಹವುಳ್ಳ, ದೇವತೆಗಳ ಸಮೂಹದಿಂದ ಸೇವಿಸಿಕೊಳ್ಳುವುದಕ್ಕೆ ಯೋಗ್ಯನಾದ, ಕೃಷ್ಣನೇ ಮೊದಲಾದ ಮನುಷ್ಯಾಧಿಪತಿಗಳಿಂದ (ರಾಜರುಗಳಿಂದ) ನಮಸ್ಕಾರಮಾಡಿಸಿಕೊಳ್ಳುವ ಸ್ವಾಮಿಯಾದ ಎಲೈ ಬಸವೇಶ್ವರನೇ ರಕ್ಷಿಸು. ೫೦. ಶುಕ್ರಾಚಾರ್ಯ (ಕಾವ್ಯ), ಬೃಹಸ್ಪತಿಯೇ ಮುಖ್ಯರಾದ ದೇವತೆಗಳಿಂದ ಸೇವಿಸಲ್ಪಡುವುದಕ್ಕೆ ಯೋಗ್ಯವಾದ ಪಾದಕಮಲವುಳ್ಳ, ಚಂದ್ರ, ಸೂರ್ಯ, ಅಗ್ನಿಗಳೇ ಕಣ್ಣುಗಳುಳ್ಳ, ಈಶ್ವರನಿಂದ ಉದ್ಘಾಟಿಸುವುದಕ್ಕೆ (ಹೇಳುವುದಕ್ಕೆ) ಯೋಗ್ಯವಾದ ತನ್ನ ಹೆಸರನ್ನುಳ್ಳ, ಅಮಂಗಳದಿಂದ ಕೂಡಿದ ಜನರಿಂದ ದೂರ

ದ್ರವ್ಯಪತಿಮಿತ್ರ ಸತತವ್ಯಪಗತಾಶ ಭವಿ-
ತವ್ಯಸಕಲಜ್ಞ ಲಸದವ್ಯಯಗುಣಾಂಕಾ
ಶ್ರಾವ್ಯಶುಭಕೀರ್ತಿಯುತ ನವ್ಯಮತಿಯುಕ್ತ ಪೊರೆ
ದಿವ್ಯಮುನಿವೃಂದಪರಿಭಾವ್ಯ ಬಸವೇಶಾ ೫೦

ಕೇಶವಪರಿಸ್ತುತ ಕೃಪಾಶರಧಿ ಕೃತ್ತಭವ-
ಪಾಶ ಮೃಡಮಾನಸನಿವೇಶ ಪರಬಿಂದ್ವಾ-
ಕಾಶರವಿ ಸಂತತನಿರಾಶ ಶಿವತತ್ತ್ವನಿಧಿ-
ಕೋಶ ಕುಮತಸ್ಮಯವಿನಾಶ ಗಣಸೇವ್ಯಾ-
ಕ್ಲೇಶಘನಕಾನನಹುತಾಶ ಹೃದಯಾರ್ಚಿತಮ-
ಹೇಶ ನಿಜಕೀರ್ತಿಭರಿತಾಶ ಶಿವಲಿಂಗಾ-
ವೇಶ ಪೊರೆಯೆನ್ನನಘನಾಶ ಯಮಿರಾಜದುಪ-
ದೇಶಕರ ವಿಶ್ವಜಗದೀಶ ಬಸವೇಶಾ ೫೧

ದಲ್ಲಿರುವ, ಅಗ್ನಿಯ ನಾಲಿಗೆಯನ್ನು ನಾಶಗೊಳಿಸಿದ, ಸಪ್ತವ್ಯಸನಗಳನ್ನು ಗೆದ್ದ, ಶ್ರೇಷ್ಠರಾದ ಶಿವಗಣಗಳ ಮಾರ್ಗದಲ್ಲಿ ಸಂಚರಿಸುವ ಜನಗಳಲ್ಲಿ ಆಸಕ್ತನಾದ, ಕುಬೇರನಿಗೆ ಆಪ್ತ (ಮಿತ್ರ) ನೆನಿಸಿದ, ಸದಾ ಆಸೆಯಿಂದ ದೂರನಾದ ಭವಿಷ್ಯದ ಸಮಸ್ತ ವಿಷಯಗಳನ್ನು ಅರಿತಿರುವ, ಚ್ಯುತಿಯಿಲ್ಲದ ಪ್ರಕಾಶಮಾನವಾದ ಸದ್ಗುಣಗಳೇ ಚಿಹ್ನೆಯಾಗುಳ್ಳ, ಭೂಮಿಯ ಜನಗಳಿಂದ ಕೇಳುವುದಕ್ಕೆ ಯೋಗ್ಯವಾದ ಮಂಗಳಕರವಾದ ಯಶಸ್ಸಿನಿಂದ ಕೂಡಿದ, ಅಪೂರ್ವವಾದ (ನೂತನವಾದ) ಬುದ್ಧಿಯಿಂದ ಕೂಡಿದ ಶ್ರೇಷ್ಠರಾದ ಋಷಿಗಳ ಸಮೂಹದಿಂದ ಧ್ಯಾನಮಾಡಿಸಿಕೊಳ್ಳುವುದಕ್ಕೆ ಯೋಗ್ಯನಾದ ಬಸವೇಶ್ವರನೇ ರಕ್ಷಿಸು. ೫೧. ವಿಷ್ಣುವಿನಿಂದ ಹೊಗಳಿಸಿಕೊಂಡ, ದಯಾಸಮುದ್ರನಾದ, ಸಂಸಾರವೆಂಬ ಪಾಶವನ್ನು ಕತ್ತರಿಸಿ ಹಾಕಿದ, ಪರಮೇಶ್ವರನ ಮನಸ್ಸೆಂಬ ಮನೆಯಲ್ಲಿ ವಾಸಮಾಡಿದ, ಉತ್ಕೃಷ್ಟವಾದ ಬಿಂದುಸ್ವರೂಪದ ಆಕಾಶವಲ್ಲಿ ಸೂರ್ಯನಾಗಿರುವ, ಸತತವೂ ಆಶಾರಹಿತನಾದ, ಶಿವಸಂಬಂಧವಾದ ತತ್ತ್ವವಿದ್ಯೆಯೆಂಬ ನಿಕ್ಷೇಪಕ್ಕೆ ಬೊಕ್ಕಸದೋಪಾದಿಯಲ್ಲಿರುವ, ಕೆಟ್ಟ ಮತಗಳ ಗರ್ವವನ್ನು ನಾಶಗೊಳಿಸಿದ, ಶಿವಗಣಗಳಿಂದ ಸೇವಿಸಲ್ಪಡುವುದಕ್ಕೆ ಯೋಗ್ಯನಾದ, ಪಂಚಕ್ಲೇಶಗಳೆಂಬ ದಟ್ಟವಾದ ಕಾಡಿಗೆ ಬೆಂಕಿಯಾಗಿರುವ, ಶಿವನನ್ನು ಮನಸ್ಸಿನಲ್ಲಿ (ಸದಾ) ಪೂಜಿಸುವ, ತನ್ನ ಯಶಸ್ಸಿನಿಂದ ದಿಕ್ಕುಗಳನ್ನೆಲ್ಲ ತುಂಬಿದ, ಶಿವಲಿಂಗದಲ್ಲಿ ಆವೇಶವುಳ್ಳ (ಪ್ರವೇಶವುಳ್ಳ), ಪಾಪವನ್ನು ನಾಶಗೊಳಿಸಿದ, ಋಷಿ ಜನಗಳಿಗೆ ಪ್ರಕಾಶಿಸುವ ಶಿವತತ್ತ್ವೋಪದೇಶವನ್ನು ಮಾಡಿದ, ಸಮಸ್ತಲೋಕ (ವಿಶ್ವ) ಗಳಿಗೂ ಸ್ವಾಮಿಯೆನಿಸಿದ ಬಸವೇಶ್ವರನೇ ನನ್ನನ್ನು ರಕ್ಷಿಸು.

ಶಶ್ವದನುನಿಶ್ರುತನಿಜಶ್ವಸಿತಸಂಭವಪ-
ಟುಶ್ವಸನಚಾಲಿತಸುರೇಶ್ವರವಿಮಾನಾ-
ನಶ್ವರಪದಸ್ಥ ಹರಿದಶ್ವಶತಕಾಂತಿಮಯ-
ಶಾಶ್ವತವಪುರ್ಧರ ಸಿತಾಶ್ವಶರದಾಂಕಾ
ಪಶ್ವಧಿಪ ಸಾರನಿಗಮಾಶ್ವಭಜಕಪ್ರಿಯಕ-
ರಶ್ವಪತಿವಾಹನನತೈಶ್ವರಪದಸ್ಥಾ-
ಶೇಶ್ವರಸಮರ್ಚ್ಯ ಪೊರೆ ವಿಶ್ವಪರಿಪಾಲಕ ರ-
ತೀಶ್ವರಮದಾಪಹ ಗಣೇಶ್ವರ ವೃಷೇಂದ್ರಾ ೫೨

ಈಷಣವಿವರ್ಜಿತ ಸರೋಷಪರಮರ್ದನ ಮು-
ನೀಪ್ಸಿತಸುರದ್ರುಮ ಸುಭಾಷಿತ ಸುವೃತ್ತಾ-
ನೇಪ್ಸಿತಪದಾಬ್ಜ ಪರಿತೋಷಿತಮಹೇಶ ಶುಭ-
ವೇಷಧರ ತತ್ತ್ವವಿದಶೇಷಬುಧವಂದ್ಯಾ

೫೨. ಬಾರಿಬಾರಿಗೂ ಮೂಗನ್ನನುಸರಿಸಿ ಹೊರ ಹೊರಟ ತನ್ನ ಉಸುರಿನಿಂದ ಹುಟ್ಟಿದ ಸಮರ್ಥವಾದ ಉಸುರಿನ ಗಾಳಿಯಿಂದ ದೇವೇಂದ್ರನ ಪುಷ್ಪಕ ವಿಮಾನವನ್ನು ಅಲ್ಲಾಡುವಂತೆ ಮಾಡುವ, ನಶ್ವರವಲ್ಲದ (ಶಾಶ್ವತವಾದ) ಸ್ಥಾನದಲ್ಲಿರುವ, ನೂರಾರು ಸೂರ್ಯರ ತೇಜಸ್ಸಿನಂತಿರುವ ತೇಜೋ ರೂಪನಾದ, ಶಾಶ್ವತವಾದ ದೇಹವನ್ನು ಧರಿಸಿರುವ, ಶುಭ್ರವಾದ ಕುದುರೆಗಳನ್ನುಳ್ಳ ಅರ್ಜುನನಿಗೆ ಬಾಣವನ್ನು ಕೊಟ್ಟ ಶಿವನ ಗುರುತನ್ನುಳ್ಳ (ಅಂದರೆ ಶಿವಲಿಂಗವನ್ನು ಧರಿಸಿರುವ ಎಂದು ಭಾವ), ವೃಷಭೇಶ್ವರನಾದ, ಶ್ರೇಷ್ಠವಾದ ವೇದಗಳನ್ನೇ ಕುದುರೆ ಯನ್ನಾಗಿ ಉಳ್ಳ ಶಿವನನ್ನು ಧ್ಯಾನಿಸುವವರಿಗೆ ಹಿತವನ್ನುಂಟುಮಾಡುವ, ಶ್ರೇಷ್ಠವಾದ ನಾಯಿಯೇ ವಾಹನವಾಗಿ ಉಳ್ಳ ಭೈರವನಿಂದ ನಮುಸ್ಕರಿಸಲ್ಪಟ್ಟ, ಶಿವನ ಸಂಬಂಧದ ಆಸ್ಥಾನದಲ್ಲಿರುವ, ದಿಕ್ಪತಿಗಳಾದ ಇಂದ್ರ, ಅಗ್ನಿ, ಯಮ, ನಿರುತಿ, ವರುಣ, ವಾಯು, ಕುಬೇರ, ಈಶಾನರುಗಳಿಂದ ಪೂಜಿಸುವುದಕ್ಕೆ ಯೋಗ್ಯನಾದ, ಪ್ರಪಂಚವನ್ನು ಪರಿಪಾಲಿಸುವ, ಮನ್ಮಥನ ಗರ್ವವನ್ನು ನಾಶ ಮಾಡಿದ, ಗಣಶ್ರೇಷ್ಠನಾದ ವೃಷಭೇಂದ್ರನೇ ರಕ್ಷಿಸು. ೫೩. ದಾರೇಷಣ, ಪುತ್ರೇಷಣ, ಅರ್ಥೇಷಣಗಳೆಂಬ ಮೂರು ದುರಾಸೆಗಳನ್ನು ದೂರೀಕರಿಸಿದ, ಕೋಪದಿಂದ ಕೂಡಿದವನಾಗಿ ಶತ್ರುಗಳನ್ನು ನಾಶಗೊಳಿಸಿದ, ಮುನಿಗಳ ಇಷ್ಟಾರ್ಥ ವಿಷಯದಲ್ಲಿ ಕಲ್ಪದ್ರುಮ ಸದೃಶನಾದ, ಒಳ್ಳೆಯ ಮಾತುಗಳನ್ನುಳ್ಳ, ಒಳ್ಳೆಯ ಚರಿತ್ರೆಯುಳ್ಳವರಿಂದ ಹುಡುಕಲ್ಪಟ್ಟ ಪಾದಕಮಲಗಳುಳ್ಳ, ಈಶ್ವರನನ್ನು ಸಂತೋಷಪಡಿಸುವ, ಮಂಗಳಕರವಾದ ವೇಷವನ್ನು ಧರಿಸಿದ, ಶಿವತತ್ತ್ವ ವಿದ್ಯೆಯನ್ನು ತಿಳಿದ ಸಕಲ ವಿದ್ವಾಂಸರಿಂದಲೂ ನಮಸ್ಕರಿಸಿಕೊಳ್ಳುವುದಕ್ಕೆ ಯೋಗ್ಯನಾದ, ಭಯಂಕರವಾದ ಪುನಃ ಪುನಃ ಹುಟ್ಟುವಿಕೆಯಿಂದ ಮಾಲಿನ್ಯದಿಂದ ಕೂಡಿದ (ಭವ) ರೋಗವನ್ನು

ಭೀಷಣಪುನರ್ಭವಸದೋಷಗದಸಂಹರಣ
ಭೇಷಜನಿಜಾಖ್ಯ ನತಪೋಷ ಮೃಡಭಕ್ತ-
ದ್ವೇಷಿಮದಪಂಕಪರಿಶೋಷಣ ಗಣೇಂದ್ರ ಪೊರೆ
ಶೇಷಧರಭಕ್ತಿಮಣಿಭೂಷ ಬಸವೇಶಾ ೫೩

ವಾಸವಗುರುಸ್ತುತ ಮಹಾಸುರಮಹೀಧರಶ-
ರಾಸನಮನೋಂಬುಜನಿವಾಸ ಶಿವಯೋಗಾ-
ಭ್ಯಾಸರತವತ್ಸಲ ಕೃಪಾಸದನ ರಮ್ಯದರ-
ಹಾಸರುಚಿರಾಸ್ಯ ಶಿವದಾಸಹಿತಕಾರ್ಯಾ
ವಾಸರಕರಪ್ರಕರಭಾಸಹಿತ ದುರ್ಮತನಿ-
ರಾಸ ಕುಸುಮಾಯುಧದುರಾಸದನಿಜಾತ್ಮಾ
ವ್ಯಾಸಶುಕಮುಖ್ಯನುತಭಾಸುರಚರಿತ್ರ ಕುಡು
ಲೇಸನೆಮಗುನ್ನತವಿಲಾಸ ಬಸವೇಶಾ ೫೪

ಆಹವಸಮಾಗತಸಸಾಹಸಪರಪ್ರಹರ-
ಬಾಹ ಗಣನಾಯಕಸಮಾಹಿತಸುಕಾರ್ಯ-
ವ್ಯೂಹ ಪರಿವರ್ಜಿತವಿಮೋಹ ಭುವನೋತ್ತರಕ-
ಟಾಹಬಹಿರಾತತಸುಗೇಹಕೃತವಾಸಾ

ನಾಶಪಡಿಸುವುದರಲ್ಲಿ ಔಷಧದಂತಿರುವವನೆಂಬ ತನ್ನ ಹೆಸರನ್ನು ಹೊಂದಿದ (ಪ್ರಸಿದ್ಧ ನಾದ), ನಮಸ್ಕರಿಸಿದವರನ್ನು ಸಂರಕ್ಷಿಸುವ, ಪರಮೇಶ್ವರನ ಭಕ್ತರುಗಳಲ್ಲಿ ದ್ವೇಷ ವುಳ್ಳವರ ಗರ್ವವೆಂಬ ಕೆಸರನ್ನು ಒಣಗಿಸುವ, ಗಣಶ್ರೇಷ್ಠನೆನಿಸಿದ, ಶಿವಭಕ್ತಿಯೆಂಬ ರತ್ನಾಭರಣವನ್ನು ಧರಿಸಿದ, ಬಸವೇಶ್ವರನೇ ಸಂರಕ್ಷಿಸು. ೫೪. ದೇವೇಂದ್ರ, ಬೃಹಸ್ಪತಿ ಇವರುಗಳಿಂದ ಹೊಗಳಲ್ಪಟ್ಟವನಾದ, ಮಹತ್ತರವಾದ ಮೇರುಪರ್ವತವೇ ಬಿಲ್ಲಾಗಿ ಉಳ್ಳ ಶಿವನ ಹೃದಯ ಕಮಲವೇ ಮನೆಯಾಗಿವುಳ್ಳ, ಶಿವಯೋಗದ ಅಭ್ಯಾಸದಲ್ಲಿ ಪ್ರೀತಿಯುಳ್ಳವರಾರೋ ಅವರಲ್ಲಿ ವಾತ್ಸಲ್ಯವನ್ನು ಹೊಂದಿದ, ದೇಹವೆಂಬ ರಸಕ್ಕೆ ಮನೆ ಯಂತಿರುವ, ಮನೋಹರವಾದ ಮುಗುಳುನಗೆಯಿಂದ ಸುಂದರವಾದ ಮುಖವುಳ್ಳ ಶಿವ ನನ್ನು ಸೇವಿಸುವವರಿಗೆ ಪ್ರಿಯವಾದ (ಹಿತವಾದ) ಕಾರ್ಯಗೌರವವುಳ್ಳ, ಸೂರ್ಯರ ಸಮೂಹದ ಕಾಂತಿಯಂತಿರುವ ಕಾಂತಿಯಿಂದ ಕೂಡಿದ, ಕೆಟ್ಟ ಮತಗಳನ್ನು ನಾಶ ಪಡಿಸಿದ, ಮನ್ಮಥನಿಂದ ಪಡೆಯುವುದಕ್ಕೆ ಅಸಾಧ್ಯವಾದ ತನ್ನ ಆತ್ಮ (ದೇಹ) ವುಳ್ಳ ಮನ್ಮಥ ಸಂಬಂಧದ ಮನೋವಿಕಾರಾದಿಗಳಿಂದ ದೂರನಾದ ಎಂದು ಭಾವ, ವ್ಯಾಸ ಮಹರ್ಷಿ, ಶುಕಮಹರ್ಷಿ ಇವರುಗಳೇ ಮುಖ್ಯರಾದ ಋಷಿಗಳಿಂದ ಸ್ತೋತ್ರಮಾಡಿಸಿ ಕೊಂಡ, ಪ್ರಕಾಶಿಸುವ ಚರಿತ್ರೆಯುಳ್ಳ, ಉತ್ಕೃಷ್ಟವಾದ ಲೀಲೆಯನ್ನು ಹೊಂದಿದ ಬಸವೇಶ್ವರನೇ, ನನಗೆ ಒಳ್ಳೆಯದನ್ನು ಕೊಡು. ೫೫. ಯುದ್ಧಕ್ಕೆ ಬಂದ ಸಾಮರ್ಥ್ಯ ದಿಂದ ಕೂಡಿದ ಶತ್ರುಗಳನ್ನು ನಾಶಮಾಡುವ ತೋಳ್ಬಲವುಳ್ಳ, ಶಿವಗಣ ಶ್ರೇಷ್ಠರಿಗೆ ಪ್ರಿಯವಾಗುವಂತಹ ಶ್ರೇಷ್ಠಕಾರ್ಯಗಳ ಸಮೂಹವನ್ನುಳ್ಳ, ಅಜ್ಞಾನವನ್ನು ದೂರೀ

ವ್ಯಾಹತಪರೋಕ್ತಿಪರಿವಾಹ ಬುಧಸನ್ನುತಸ-
ದೂಹ ಸಕಳೇಷ್ಟಕರಣೇಹ ಚರಭಕ್ತ-
ಸ್ನೇಹ ಪರಿಪಾಲಿಸು ಸುದೇಹ ಪರಮೇಶ್ವರಮ-
ನೋಹರಗುಣಾಭರಣವಾಹ ಬಸವೇಶಾ ೫೫

ವ್ಯಾಳಪತಿಕಂಕಣ ಕರಾಳಖಳಸೂದನ ಮ-
ರಾಳರಥಮಾನಿತವಿಶಾಳಮತಿಯುಕ್ತಾ
ಕ್ಷ್ವೇಳಗಳ ಸದ್ಭಸಿತಫಾಳ ಫಣಿರಾಜನಿಭ-
ವಾಳ ಖುರನಿರ್ಮಥಿತಕಾಳದನುಜೇಂದ್ರಾ
ಗಾಳವದಧೀಚಿಮುನಿಪಾಳನಪರಾಯಣ ಸ-
ದೈಳಬಿಳಭಾಗ್ಯದಸುಖೇಳನ ಕಟಾಕ್ಷಾ-
ಕ್ಷಾಳಿತದಿಗಂತ ಗಣಮೇಳನವಿಲೋಲ ಪೊರೆ
ಶೈಳನಿಭಕಾಯ ಕರುಣಾಳು ಬಸವೇಶಾ ೫೬

ಪಕ್ಷಿಪರಥಾಕ್ಷಿಪದ ಋಕ್ಷಪವಳಕ್ಷಕ ದಿ-
ದೃಕ್ಷುವಿಜಿತಾಕ್ಷ ಸುಮುಮುಕ್ಷುಜನವೀಕ್ಷಾ-
ಲಕ್ಷಿತ ತರಕ್ಷುತನುರಾಕ್ಷಸವಿಪಕ್ಷ ಖಲ-
ದಕ್ಷಮುಖಶಿಕ್ಷ ನಿಟಲಾಕ್ಷಗಮಹೋಕ್ಷಾ

ಕರಿಸಿದ, ಲೋಕವೆಂಬ ದೊಡ್ಡ ಕೊಪ್ಪರಿಗೆಯ ಹೊರಗಡೆಯಲ್ಲೂ, ಎಲ್ಲ ಕಡೆಯಲ್ಲೂ, ವಿಸ್ತಾರವಾದ ಶ್ರೇಷ್ಠ ಮನೆಯಲ್ಲಿ ವಾಸಮಾಡಿರುವ (ಸಮಸ್ತಲೋಕದ ಎಲ್ಲ ಭಾಗದಲ್ಲೂ ವಾಸಮಾಡಿದ ಎಂದು ಭಾವ), ಅನ್ಯಮತಸ್ಥರ ಮಾತುಗಳ ಪ್ರವಾಹವನ್ನು ವಿಶೇಷವಾಗಿ ನಾಶಗೊಳಿಸಿದ, ವಿದ್ವಾಂಸರಿಂದ ಹೊಗಳಿಸಿಕೊಳ್ಳಲ್ಪಟ್ಟ, ಒಳ್ಳೆಯ ಊಹೆಗೆ ಕಾರಣನಾದ, ಸಕಲರಿಗೂ ಇಷ್ಟಾರ್ಥಗಳನ್ನುಂಟುಮಾಡುವುದರಲ್ಲಿ ಇಚ್ಛೆಯುಳ್ಳ, ಜಂಗಮ ಭಕ್ತರಲ್ಲಿ ಪ್ರೀತಿಯುಳ್ಳ, ಒಳ್ಳೆಯ ಶರೀರವುಳ್ಳ, ಮನೋಹರವಾದ ಸದ್ಗುಣಗಳೇ ಆಭರಣವಾಗಿವುಳ್ಳ, ಪರಮೇಶ್ವರನ ವಾಹನನಾದ ಬಸವೇಶ್ವರನೇ ಚೆನ್ನಾಗಿ ಸಂರಕ್ಷಣೆ ಮಾಡು. ೫೬. ಆದಿಶೇಷನೇ ಕೈಕಡಗವಾಗಿವುಳ್ಳ, ಭಯಂಕರರಾದ ದುಷ್ಟರನ್ನು ನಾಶಮಾಡಿದ, ಹಂಸಪಕ್ಷಿಯನ್ನೇ ರಥವನ್ನಾಗಿ ಮಾಡಿಕೊಂಡಿರುವ ಬ್ರಹ್ಮನಿಂದ ಸನ್ಮಾನಿತನಾದ, ವಿಶಾಲವಾದ ಬುದ್ಧಿಯುಳ್ಳ, ವಿಷವನ್ನು ಕಂಠದಲ್ಲುಳ್ಳ, ಶ್ರೇಷ್ಠ ಭಸ್ಮವೇ ಹಣೆಯಲ್ಲುಳ್ಳ, ಆದಿಶೇಷನಿಗೆ ಸದೃಶವಾದ ಬಾಲವುಳ್ಳ, ಗೊರಸಿನ ತುಳಿತದಿಂದ ಕಾಳನೆಂಬ ರಾಕ್ಷಸ ಶ್ರೇಷ್ಠನನ್ನು ಭೇದಿಸಿದ, ಗಾಲವ, ದಧೀಚಿಗಳೆಂಬ ಋಷಿಗಳನ್ನು ಸಂರಕ್ಷಿಸುವುದರಲ್ಲಿ ಆಸಕ್ತನಾದ, ಶ್ರೇಷ್ಠನಾದ ಕುಬೇರನಿಗೆ ಸಂಪತ್ತನ್ನು ಕೊಟ್ಟ, ಒಳ್ಳೆಯ ಕ್ರೀಡೆಯುಳ್ಳ, ಕಡೆಗಣ್ಣಿನ ನೋಟದಿಂದ ದಿಕ್ಕುಗಳ ಕೊನೆಗಳನ್ನು ತೊಳೆದ, ಶಿವಗಣಗಳ ಸಂಗದಲ್ಲಿ ಆಸಕ್ತನಾದ, ಪರ್ವತಕ್ಕೆ ಸಮಾನವಾದ ದೇಹವುಳ್ಳ, ದಯಾಶಾಲಿಯಾದ ಬಸವೇಶ್ವರನೇ ರಕ್ಷಿಸು. ೫೭. ಗರುಡಪಕ್ಷಿಯೇ ರಥವಾಗುಳ್ಳ ವಿಷ್ಣುವಿನ ಕಣ್ಣನ್ನು ಪಾದದಲ್ಲುಳ್ಳ, ಚಂದ್ರನಂತೆ (ಋಕ್ಷಪ) ಶುಭ್ರನಾದ, ದರ್ಶನಾಪೇಕ್ಷಿಗಳಾದ

ಯಕ್ಷಪತಿಪಕ್ಷ ಮಿಳದಕ್ಷಯಗುಣಾಕ್ಷರ ದು-
ರೀಕ್ಷವಿಷಭಕ್ಷ ಶುಭಲಕ್ಷಣ ಗಣೇಂದ್ರಾ-
ಧ್ಯಕ್ಷ ರಿಪುಕಕ್ಷದವ ಸಾಕ್ಷರಕೃತೇಕ್ಷಣ ಕ
ಟಾಕ್ಷ ಪೊರೆ ಸಕ್ಷಮವಿಚಕ್ಷಣ ವೃಷೇಂದ್ರಾ ೫೭

ಕುಷ್ಠಮುಖದುಸ್ಸಹಬಲಿಷ್ಠಗದಮರ್ದನಗ-
ರಿಷ್ಠನಿಜಪಜ್ಜಲ ಯುಧಿಷ್ಠಿರನರಾರ್ಚ್ಯಾ-
ಧಿಷ್ಠಿತಜಗತ್ರಯ ವರಿಷ್ಠಗರುಡಾಂಕಪರ-
ಮೇಷ್ಠಿನುತ ಭರ್ಗಪದನಿಷ್ಠಜನಲೋಲಾ
ಶ್ರೇಷ್ಠಸುಕವಿಪ್ರಕರಪಷ್ಠಸುರಭೂಜ ಖಲ-
ಕಾಷ್ಠದವಪಾವಕ ಪಟಿಷ್ಠಗಣವೃಂದ-
ಜ್ಯೇಷ್ಠ ಪರಿತರ್ಜಿತಲಘಿಷ್ಠಮತವಾದಿಕುಲ
ಸುಷ್ಠುವಚನೋತ್ಕರ ಮಹಿಷ್ಠ ಬಸವೇಶಾ ೫೮

ಇಂದ್ರಿಯಗಳನ್ನು ಗೆದ್ದ ಶ್ರೇಷ್ಠರಾದ ಮೋಕ್ಷಾಪೇಕ್ಷೆಯುಳ್ಳ ಜನರ ದೃಷ್ಟಿಗೆ (ವೀಕ್ಷ) ಗುರಿಯಾಗಿ ಮಾಡಲ್ಪಟ್ಟ (ಮೋಕ್ಷಾಪೇಕ್ಷಿಗಳಾದ ಸಂಯಮಿ ಜನಗಳಿಂದ ನೋಡಲ್ಪಡುವ ಎಂದು ಭಾವ), ಹುಲಿಯ ದೇಹವುಳ್ಳ ವ್ಯಾಘ್ರಾಸುರನೆಂಬ ರಾಕ್ಷಸನಿಗೆ ಶತ್ರುವಾದ, ನೀಚನಾದ ದಕ್ಷಬ್ರಹ್ಮನ ಯಜ್ಞವನ್ನು ಶಿಕ್ಷಿಸಿದ (ನಾಶಮಾಡಿದ), ಪರಮೇಶ್ವರನನ್ನು ಹೊತ್ತು ಸಂಚರಿಸುವ ದೊಡ್ಡ ವೃಷಭ (ಗೂಳಿ) ನಾದ, ಕುಬೇರನಲ್ಲಿ ವಿಶ್ವಾಸವುಳ್ಳ, ನಾಶರಹಿತವಾದ ಸದ್ಗುಣಗಳಿಂದ ಕೂಡಿದ, ಕ್ಷಯರಹಿತನಾದ (ಅಥವಾ ಪರಮಾತ್ಮ ಸ್ವರೂಪನಾದ) ನೋಡುವುದಕ್ಕಸಾಧ್ಯವಾದ ವಿಷವನ್ನು ಭಕ್ಷಿಸಿದ ಶಿವನ ಮಂಗಳಕರ ವಾದ ಚಿಹ್ನೆಗಳನ್ನುಳ್ಳ, ಶಿವಗಣ ಶ್ರೇಷ್ಠರಿಗೆಲ್ಲ ಅಧಿಪತಿಯಾದ, ವೈರಿಗಳೆಂಬ ಒಣಗಿದ ಕಾಡಿಗೆ ಕಾಳ್ಗಿಚ್ಚಿನಂತಿರುವ, ವಿದ್ಯಾವಂತರಲ್ಲಿ (ಸಾಕ್ಷರ) ಕಡೆಗಣ್ಣುಗಳ ಕಾಂತಿಯನ್ನು ಬೀರುವವನಾದ (ಜ್ಞಾನಿಗಳನ್ನು ಕೃಪಾಕಟಾಕ್ಷದಿಂದ ನೋಡುವ) ಕ್ಷಮಾಶೀಲರಾದವರಲ್ಲಿ ಶ್ರೇಷ್ಠನಾದ ವೃಷಭೇಶ್ವರನೇ (ನನ್ನನ್ನು) ಪೊರೆ. ೫೮. ಕುಷ್ಟರೋಗವೇ ಮೊದಲಾದ ಸಹಿಸಲಸಾಧ್ಯವಾದ ಪ್ರಬಲ ರೋಗಗಳನ್ನು, ನಾಶಗೊಳಿಸುವುದರಲ್ಲಿ ಬಹು ಸತ್ವಯುತ ವಾದ (ಗುರುತರವಾದ) ತನ್ನ ಪಾದಜಲವನ್ನುಳ್ಳ, ಯುಧಿಷ್ಠಿರ, ಅರ್ಜುನಾದಿಗಳಿಂದ ಪೂಜಿಸಿಕೊಳ್ಳಲ್ಪಡಲು ಯೋಗ್ಯನಾದ, ತನ್ನಲ್ಲಿ ಅಡಕವಾದ (ವಾಸಮಾಡಲ್ಪಟ್ಟ) ಮೂರುಲೋಕಗಳನ್ನುಳ್ಳ, ಶ್ರೇಷ್ಠ ಗರುಡವಾಹನನಾದ ವಿಷ್ಣು, ಬ್ರಹ್ಮರೇ ಮೊದ ಲಾದವರಿಂದ ಸ್ತೋತ್ರ ಮಾಡಿಸಿಕೊಳ್ಳುವ, ಈಶ್ವರನ ಪಾದದಲ್ಲಿ ಶ್ರದ್ಧೆಯುಳ್ಳ ಜನಗಳಲ್ಲಿ ಆಸಕ್ತನಾದ, ಉತ್ತಮರಾದ ಸತ್ಕವಿಗಳ ಗುಂಪಿಗೆ ಆರನೆಯ (?) ಕಲ್ಪ ವೃಕ್ಷ ಸದೃಶನಾದ, ನೀಚಜನಗಳೆಂಬ ಕಟ್ಟಿಗೆ (ಸೌದೆ)ಗೆ, ಕಾಳ್ಗಿಚ್ಚಿನಂತಿರುವ, ಸಮರ್ಥರಾದ ಶಿವಗಣಗಳ ಗುಂಪಿಗೆ ದೊಡ್ಡವ (ಜ್ಯೇಷ್ಠ)ನೆನಿಸಿದ, ಅತಿ ನೀಚ ಮತ ವಾದಿಗಳ ಗುಂಪನ್ನು ಭಯಪಡಿಸಿದ, ಶ್ರೇಷ್ಠವಾದ ಮಾತುಗಳ (ಶ್ರೇಷ್ಠ ವಚನಗಳ ಸಮೂಹವನ್ನುಳ್ಳ (ಶ್ರೇಷ್ಠವಾದ ವಚನಗಳನ್ನು ರಚಿಸಿದ ಎಂದು ಭಾವ)

ಭರ್ಮನಗಮಂದಿರ ಯಜು ರ್ಮನುಪರಿಸ್ತುತ ಹ-
ವಿರ್ಮುಖಸಮರ್ಚಿತ ವಿಕರ್ಮಯಮಿವಂದ್ಯಾ-
ಶೋರ್ಮಿಮದೆವರ್ಜಿತ ವಿನಿರ್ಮಿತಜಗತ್ತ್ರಯ ಸು-
ಶರ್ಮದ ಮಹಾಭಸಿತವರ್ಮಕಲಿತಾಂಗಾ
ಕೂರ್ಮಮದಮರ್ದಿ ಗಜಚರ್ಮಧರಭಕ್ತವರ
ನಿರ್ಮದಜನಾಂಬುರುಹಘರ್ಮಕರಲೀಲಾ
ನಿರ್ಮದಿತಮಾರ ಪೊರೆ ಗೀರ್ಮಧುರ ವಾದಜಿತ-
ದುರ್ಮತ ಮಹೇಶ್ವರಸಧರ್ಮ ಬಸವೇಶಾ ೫೯

ಶ್ರೀದಸಹಖೇಲನವಿನೋದ ಗುಣರತ್ನವಿಸ-
ರೋದಧಿ ಮಹೇಶಕೃತಮೋದ ತತಮಾಯಾ-
ನೋದನ ಸುರೇಂದ್ರನತಪಾದಸರಸೀಜ ಕೃತ-
ವೇದ ಜಗತೀನುತಶುಭೋದಯಚರಿತ್ರಾ

ಮಹಿಮಾಶಾಲಿಯಾದ ಬಸವೇಶ್ವರನೇ, (ನನ್ನನ್ನು ರಕ್ಷಿಸು). ೫೯. ಮೇರು ಪರ್ವತವೇ ಮನೆಯಾಗಿವುಳ್ಳ, ಯಜುರ್ವೇದದ ಮಂತ್ರ (ಮನು)ದಿಂದ ಹೊಗಳಿಸಿಕೊಳ್ಳಲ್ಪಟ್ಟ, ದೇವತೆಗಳಿಂದ ಪೂಜಿಸಿಕೊಳ್ಳುವ, ವಿಶೇಷವಾದ ಸತ್ಕರ್ಮಗಳನ್ನು ಮಾಡುವ ಋಷಿಗಳಿಂದ ನಮಸ್ಕರಿಸಿಕೊಳ್ಳುವುದಕ್ಕೆ ಯೋಗ್ಯನಾದ (ಅಥವಾ ಕರ್ಮಗಳ ಜಂಜಡದಿಂದ ದೂರರಾದ ಋಷಿಗಳಿಂದ ನಮಸ್ಕರಿಸಿಕೊಳ್ಳಲು ಯೋಗ್ಯನಾದ), ಆಶೆ, ಕ್ಷುತ್ಪಿಪಾಸಾದಿ ಷಡೂರ್ಮಿ, ಅಷ್ಟಮದ ಇವುಗಳಿಂದ ದೂರನಾದ, ಮೂರು ಲೋಕಗಳನ್ನು ಸೃಷ್ಟಿಸಿದ ಶ್ರೇಷ್ಠವಾದ ಸೌಖ್ಯವನ್ನು ಕೊಡುವಂತಹ, ಶ್ರೇಷ್ಠವಾದ ಭಸ್ಮಧಾರಣೆಯಿಂದ ಕೂಡಿದ ದೇಹವುಳ್ಳ, ಕೂರ್ಮಾವತಾರ ಮಾಡಿದ ವಿಷ್ಣುವಿನ ಮದವನ್ನು ನಾಶಗೊಳಿಸಿದ, ಗಜಾಸುರನ ಚರ್ಮವನ್ನು ಧಾರಣ ಮಾಡಿದ ಶಿವನ ಶ್ರೇಷ್ಠಭಕ್ತನಾದ, ಮದದಿಂದ ದೂರರಾದ ಜನಗಳೆಂಬ ಕಮಲಗಳಿಗೆ ಉಗ್ರಕಿರಣನಾದ ಸೂರ್ಯನಂತೆ ಲೀಲೆಯುಳ್ಳ, ಮದಿಸಿದ ಮಾರನನ್ನು ನಿವಾರಿಸಿದ, ಮಧುರವಾದ ಮಾತುಳ್ಳ, ದುರ್ಮತಗಳನ್ನು ವಾದದಲ್ಲಿ ಜಯಿಸಿದ ಪರಮೇಶ್ವರನ ಸದ್ಧರ್ಮ ಸ್ವರೂಪನಾದ ಬಸವೇಶ್ವರನೇ. ನನ್ನನ್ನು ರಕ್ಷಿಸು. ೬೦. ಕುಬೇರನ ಒಡನಾಟದಲ್ಲಿ ವಿನೋದಗೊಳ್ಳುವ, ಸದ್ಗುಣಗಳೆಂಬ ರತ್ನಗಳ ಸಮೂಹಕ್ಕೆ ಸಮುದ್ರನಾದ, ಈಶ್ವರನಿಗೆ ಸಂತೋಷವನ್ನುಂಟುಮಾಡುವ, ವಿಸ್ತಾರವಾದ ಮಾಯೆಯನ್ನು ಹೋಗಲಾಡಿಸಿದ, ದೇವೇಂದ್ರನಿಂದ ನಮಸ್ಕಾರಗೊಳಿಸಿಕೊಳ್ಳಲ್ಪಟ್ಟ ಪಾದಕಮಲಗಳುಳ್ಳ, ವೇದಗಳನ್ನು ಉಸುರಿದ (ಮಾತಿನಿಂದ ವೇದಗಳನ್ನು ಉಂಟುಮಾಡಿದ) ಲೋಕದ ಜನಗಳಿಂದ ಸ್ತೋತ್ರಮಾಡಿಸಿಕೊಳ್ಳುವ, ಮಂಗಳಗಳನ್ನುಂಟುಮಾಡುವ ಸಚ್ಚರಿತ್ರೆಯುಳ್ಳ, ವ್ಯಾಪಕವಾದ ಸದ್ಗುಣಗಳಿಗೆ ಆಶ್ರಯನಾದ, ಶಿಲಾದ ಮಹರ್ಷಿಗೆ ಮಗನಾದ, ಸತತವೂ ಉತ್ಸವದ ಆಧಿಕ್ಯ

ಮೇದುರಗುಣಾಕರ ಶಿಲಾದಸುತಸಂತತಮ-
ಹೋದಯ ಪರಾಸ್ತಪರವಾದ ಗಣಪರ್ಯಾ-
ಹ್ಲಾದಕರ ರಕ್ಷಿಸಘಕಾದಳಗಜೇಂದ್ರ ಭುವ-
ನೋದರ ಲಸತ್ಪ್ರಣವನಾದ ಬಸವೇಶಾ ೬೦

ವುಳ್ಳ (ಅಧಿಕ ಉತ್ಸವದಿಂದ ಸದಾ ಕೂಡಿರುವ) ಪರಧರ್ಮದ ವಾದವನ್ನು ನಾಶಗೊಳಿಸಿದ, ಶಿವಗಣಗಳಿಗೆ ಸಂತೋಷವನ್ನುಂಟು ಮಾಡುವ, ಪಾಪವೆಂಬ ಬಾಳೆಯ ವನಕ್ಕೆ ಮಹಾಗಜದಂತಿರುವ, ಭುವನಗಳನ್ನೆಲ್ಲ ಗರ್ಭದಲ್ಲಿ ಧರಿಸಿರುವ, ಶೋಭಿಸುವ ಓಂಕಾರನಾದ ಸ್ವರೂಪನಾದ ಬಸವೇಶ್ವರನೇ ರಕ್ಷಿಸು.

ಇತರವೃತ್ತಗಳು

ಪರಮೇಶಪ್ರೇಮಧಾಮಂ ಪ್ರಮಥಪರಿಷದಾನಂದದುಗ್ಧಾಬ್ಧಿಚಂದ್ರಂ
ತರುಣಾದಿತ್ಯಪ್ರಕಾಶಂ ತತಕುಮತಮದೇಭೇಂದ್ರಕಂಠೀರವಂ ಭಾ
ಸುರಭದ್ರಾಕಾರಸಾರಂ ಭವಭಯಹರಣಂ ಭಕ್ತಿಭಾಮಾಮನೋಜ್ಞಂ
ಕರುಣಾಂಭೋರಾಶಿ ವಿಶ್ವಪ್ರಭು ವಿಭು ವಿಬುಧಸ್ತೋತ್ರಪಾತ್ರಂ ವೃಷೇಂದ್ರಂ ೧

ಸಕಳಸುಕಳಾಧಾರಂ ಧೀರಂ ಸುಭಾಷಣಭೂಷಣಂ
ಶಕಲಿತಕಲಿಧ್ವಾಂತಂ ಶಾಂತಂ ಭವಾಂಬುಧಿಕುಂಭಜಂ
ಪ್ರಕಟಿತಕೃಪಾಪಾಂಗಂ ತುಂಗಂ ಸ್ವಭಾವಶುಭಾವಹಂ
ನಿಕೃತವಿಕೃತಿವ್ರಾತಂ ಖ್ಯಾತಂ ವಿಮಾಯಂನಮಾಮ್ಯಹಂ ೨

(೨) ಇತರ ವೃತ್ತಗಳು

೧. ಶಿವನ ಪ್ರೀತಿಗೆ ಆಸ್ಪದನಾದವನೂ, ಪ್ರಮಥಗಣಂಗಳ ಸಮೂಹದ ಆನಂದವೆಂಬ ಕ್ಷೀರ ಸಮುದ್ರಕ್ಕೆ ಚಂದ್ರನಂತಿರುವವನೂ, ಬಾಲಸೂರ್ಯಪ್ರಕಾಶದಂತೆ ಕಾಂತಿಯುಳ್ಳವನೂ, ದುಷ್ಟಮತಗಳೆಂಬ ಮದದಿಂದ ಕೂಡಿದ ಆನೆಗೆ ಸಿಂಹಪ್ರಾಯನಾದವನೂ, ಪ್ರಕಾಶಿಸುವ ಮಂಗಳಕರ ಶ್ರೇಷ್ಠ ಆಕೃತಿಯುಳ್ಳವನೂ, ಜನನ ಮರಣಾತ್ಮಕ ಸಂಸಾರಭಯವನ್ನು ನಾಶಗೊಳಿಸುವವನೂ, ಶಿವ ಭಕ್ತಿಯೆಂಬ ಸ್ತ್ರೀಯಳಿಗೆ ಮನೋಹರಾಕಾರನಾಗಿ ಕಾಣುವವನೂ, ಕರುಣೆಗೆ ಸಮುದ್ರದೋಪಾದಿಯಲ್ಲಿರುವವನೂ, ವಿಶ್ವಕ್ಕೆಲ್ಲ ಪ್ರಭುವಾದವನೂ, ವಿದ್ವಾಂಸರು ಮಾಡುವ ಸ್ತೋತ್ರಕ್ಕೆ ಪಾತ್ರನೂ ಆದವನು ಬಸವೇಶ್ವರನೇ ! ೨. ಸಮಸ್ತ ಶ್ರೇಷ್ಠವಿದ್ಯೆಗಳಿಗೆಲ್ಲ ಆಶ್ರಯನಾದ, ಧೀರನಾದ, ಒಳ್ಳೆಯ ಮಾತನಾಡುವಿಕೆಯೇ ಭೂಷಣವಾಗಿವುಳ್ಳ, ಕಲಿಕಾಲವೆಂಬ ಕತ್ತಲೆಯನ್ನು ನಾಶಗೊಳಿಸಿದ (ಖಂಡಿಸಿದ), ಶಾಂತನಾದ, ಸಂಸಾರವೆಂಬ ಸಮುದ್ರಕ್ಕೆ ಅಗಸ್ತ್ಯನಂತಿರುವ, ಕೃಪೆಯಿಂದ ಕೂಡಿದ ಕಡೆಗಣ್ಣುಗಳ ನೋಟವನ್ನು ಪ್ರಕಟಿಸುವ, ಉನ್ನತ (ಎತ್ತರ ಮಟ್ಟದ) ನಾದ, ಮಂಗಳವನ್ನುಂಟು ಮಾಡುವ ಸ್ವಭಾವವುಳ್ಳ, ದುಷ್ಟ (ಶಠ) ರುಗಳ ಸಮೂಹವನ್ನು ಭಯಗೊಳಿಸಿದ, (ಲೋಕ) ಪ್ರಸಿದ್ಧನಾದ, ಮಾಯಾರಹಿತ

ಪುಷ್ಕರಪುಷ್ಪಮಸ್ತಕಪದಾಂಬುಜಭೃಂಗನನಂತತಾತ್ತ್ವಿಕಾ
ವಿಷ್ಕರಣಪ್ರಮಾಣಪರಿಭಾಷಣನಾನತಲೋಕಸಂಕುಳಾ
ಯುಷ್ಕರಣಪ್ರವೀಣನನವದ್ಯಚರಿತ್ರನಮೋಘವಿಕ್ರಮಂ
ದುಷ್ಕರವಾದವಾದಿವನದಾವನಮಾಯನಮೇಯವೈಭವಂ ೩

ಅಕಳಂಕಂ ಗುರುಲಿಂಗಜಂಗಮಪದಾಂಭೋಜಾತಪೂಜಾಸಮು
ತ್ಸುಕನನ್ಯಾಧ್ವತಮಃಪ್ರಚಂಡಕರನಂಭೋರಾಶಿಗಂಭೀರನು
ದ್ಧಕಳಾಬಿಜ್ಞನಭಂಗತುಂಗಯಶನುದ್ಯದ್ಭಕ್ತಿಭಾಮಾಲಸ
ನ್ಮುಕುರಂ ಶ್ರೀವೃಷಭೇಂದ್ರನೀಗೆಮಗಮಂದಾನಂದಸಂದೋಹಮಂ ೪

ಶಿವಮಯಕಾಯ ಭವ್ಯಮಹಿಮಾಂಗ ನಿಮಾಯ ಮುನೀಶಗಮ್ಯ ಶಂ
ಭವಸುಗಮಾಸಮಾಗಮಕುಶೇಶಯಹಂಸ ಖಗೇಶವಾಹವಾ

ನಾದ, ಭವರೋಗರಹಿತನಾದ (ವೃಷಭೇಂದ್ರನೇ !) ೩. ಆಕಾಶದಲ್ಲಿರುವ ನೀರೇ (ಪುಷ್ಪ) ಮಸ್ತಕದಲ್ಲುಳ್ಳ ಶಿವನ ಪಾದಕಮಲದಲ್ಲಿ ಭೃಂಗದೋಪಾದಿಯಲ್ಲಿರುವ, ಅಪಾರವಾದ ಶಿವತತ್ತ್ವಾರ್ಥವನ್ನು ವಿಸ್ತಾರಪಡಿಸಲು ಆಧಾರ ಪೂರ್ವಕವಾಗಿ ಮಾತುಗಳನ್ನಾಡುವ, ನಮಸ್ಕರಿಸಲ್ಪಡುವ ಜನಗಳ ಸಮೂಹಕ್ಕೆ ದೀರ್ಘವಾದ ಆಯುರಭಿವೃದ್ಧಿಪಡಿಸುವುದರಲ್ಲಿ ಸಮರ್ಥನಾದ, ನಿರ್ದುಷ್ಟವಾದ ನಡೆವಳಿಕೆಯುಳ್ಳ, ವ್ಯರ್ಥವಾಗದೆಯಿರುವ ಪರಾಕ್ರಮವನ್ನುಳ್ಳ, ಅಸಾಧ್ಯವಾದ ಅನ್ಯಮತವಾದಿಗಳ ವಾದವೆಂಬ ಕಾಡಿಗೆ ಕಾಳ್ಗಿಚ್ಚಿನಂತಿರುವ, ಎಣಿಸಲಸಾಧ್ಯವಾದ ವೈಭವವನ್ನುಳ್ಳ (ಬಸವೇಶ್ವರನೇ !) ೪. ಕಲಂಕರಹಿತನಾದ, ಗುರುಲಿಂಗ ಜಂಗಮದ ಪಾದಕಮಲಗಳ ಪೂಜೆಯಲ್ಲಿ ಅತ್ಯಂತ ಸಂತೋಷವುಳ್ಳವನಾದ, ಅನ್ಯಮತಗಳ ಮಾರ್ಗವೆಂಬ ಕತ್ತಲೆಗೆ ಸೂರ್ಯನಾದ, ಸಮುದ್ರದಂತೆ ಗಂಭೀರನಾದ, ಉತ್ಕೃಷ್ಟವಾದ (ಲಿಂಗಾಂಗ ಸಂಯೋಗ ಸಂಬಂಧದ) ವಿದ್ಯೆಯನ್ನು ತಿಳಿದ, ಅವಿಚ್ಛಿನ್ನವಾದ ಉತ್ಕೃಷ್ಟ ಯಶಸ್ಸಿನಿಂದ ಕೂಡಿದ, ಉತ್ಕೃಷ್ಟಳಾದ ಶಿವಭಕ್ತಿಯೆಂಬ ಸ್ತ್ರೀಯಳು ತನ್ನನ್ನು ನೋಡಿಕೊಳ್ಳುವ ಕನ್ನಡಿಯಾದ ಮಂಗಳಕರನಾದ ಬಸವೇಶ್ವರನು ಅಧಿಕವಾದ ಆನಂದ ಸಮೂಹವನ್ನು ನಮಗೆ ಕೊಡಲಿ. ೫. ಮಂಗಳಸ್ವರೂಪವಾದ ದೇಹವುಳ್ಳ, ಉತ್ಕೃಷ್ಟವಾದ ಮಹಿಮೆಗಳಿಂದ ಕೂಡಿದ ಅವಯವವುಳ್ಳ ಮಾಯಾರಹಿತವಾದ, ಋಷಿಶ್ರೇಷ್ಠರಿಂದ ಪಡೆಯಲಿಕ್ಕೆ (ತಿಳಿಯಲಿಕ್ಕೆ) ಶಕ್ಯನಾದ, ಶಂಭುವಿನ ಭಕ್ತಜನರಿಗೆ ಸುಖವಾಗಿ ಹೊಂದಲು ಶಕ್ಯನಾದ, ಅಸದೃಶ, (ಅನುಪಮ)ವಾದ ಆಗಮಗಳೆಂಬ ಕಮಲಗಳಿಗೆ ಸೂರ್ಯ (ಹಂಸ)ನೆನಿಸಿದ, ವಿಷ್ಣು ದೇವೇಂದ್ರಾದಿ ಪ್ರಮುಖ ದೇವತೆಗಳಿಂದ ಧ್ಯಾನಿಸಲ್ಪಡುವುದಕ್ಕೆ ಯೋಗ್ಯನಾದ, ಪ್ರಪಂಚಕ್ಕೆ ಸ್ವಾಮಿಯಾದ, ಮನ್ಮಥನನ್ನು ನಾಶಗೊಳಿಸಿದ ಸಾಹಸವೇ ಚಿಹ್ನೆಯಾಗುಳ್ಳ, ಶಿವನಲ್ಲಿ ಅಧೀನವಾದ ಭಾವವುಳ್ಳ (ಶಿವಭಾವಾಪನ್ನಮನಸ್ಕನಾದ), ಮಂಗಳವನ್ನುಂಟುಮಾಡುವಮಾತುಗಳ ಸೌಂದರ್ಯವುಳ್ಳ ಬಸವೇಶ್ವರನೇ (ನನ್ನನ್ನು) ರಕ್ಷಿಸು. [ಈ ಚಂಪಕಮಾಲಾ ವೃತ್ತವು

ಸವವಃಖಭಾವ್ಯ ವಿಶ್ವವಿಭು ಭವಪಭಪಾಪಹ ಸಾಹಸಾಂಕ ಶಂ
ಭುವಶಿಗಭಾವ ಪಾಹಿ ಬಸವೇಶ ಶುಭಾವಹವಾಕ್ಯವೈಭವಾ ೫

ಜಯ ಜಯ ಕಾಲಕಾಲ ತತವಿಭ್ರಮ ವಿಭ್ರಮಭಾನುಭಾನು ಚಿ
ನ್ಮಯ ಮಯವಂದ್ಯ ವಂದ್ಯಪದನೀರಜ ನೀರಜ ಧೀರ ಧೀರ ಸ
ನ್ನಯನಯನಾನ್ವಿತಾನ್ವಿತನಿರಂಜನ ರಂಜನಸತ್ವ ಸತ್ವಗಾ
ಶಯಶಯ ಭಾಗ್ಯಭಾಗ್ಯಜನನಂದಿತ ನಂದಿತನು ಪ್ರಭುಪ್ರಿಯಾ ೬

ಸುರವರದಾನವೇನಪರಿಪೂಜಿತ ರಾಜಿತಲಿಂಗಸಂಗ ಬಂ
ಧುರ ನಿರಪೇಕ್ಷ ಮೋಕ್ಷಕೃದಪಾಂಗ ಕೃಪಾಂಗ ಕರಾಲಕಾಲಸಂ
ಹರ ನಿರಪಾಯಕಾಯ ಗುಣಮಂಡಿತ ಪಂಡಿತನುತ್ಯ ಸತ್ಯಸಂ
ಗರ ಪೊರೆಯೆನ್ನನುನ್ನತವಿತಂತ್ರಗಣೇಂದ್ರ ವೃಷೇಂದ್ರ ಸಂತತಂ ೭

ಅಚಲಜಿಹ್ವಾವೃತ್ತ?' ವೆಂಬ ಚಿತ್ರಕಾವ್ಯ; ನಾಲಿಗೆಯನ್ನು ಅಲ್ಲಾಡಿಸದ ಹಾಗೆ ಈ ವೃತ್ತವನ್ನು ಅನ್ನುವುದಕ್ಕೆ ಸಾಧ್ಯ. ಇದರಲ್ಲಿ ಮೂರ್ಧನ್ಯಾಕ್ಷರಗಳಿಲ್ಲ. ಮೂರ್ಧನ್ಯಗಳೆಂದರೆ ಋ, ಟವರ್ಗ, ರ, ಷ ಈ ಅಕ್ಷರಗಳಿಲ್ಲದಂತೆ ಈ ಪದ್ಯ ರಚಿಸಲಾಗಿದೆ.] ೬. ಯಮನಿಗೂ ಯಮನಾದ, ವಿಸ್ತಾರ (ವಿಶೇಷ)ವಾದ ವಿಲಾಸ (ವಿಭ್ರಮ)ವುಳ್ಳ, ಭ್ರಾಂತಿರಹಿತನಾದ [ಅಥವಾ ಅಂತರಿಕ್ಷದಲ್ಲಿ (ವಿ). ಸುತ್ತುತ್ತಿರುವ (ಭ್ರಮ)], ಸೂರ್ಯನ ಕಾಂತಿಯಂತೆ ಕಾಂತಿಯುಳ್ಳ, ಜ್ಞಾನಸ್ವರೂಪನಾದ. ಮಯನೆಂಬ ರಾಕ್ಷಸ ಶಿಲ್ಪಿಯಿಂದ ನಮಸ್ಕರಿಸಲ್ಪಡುವುದಕ್ಕೆ ಯೋಗ್ಯನಾದ. ನಮಸ್ಕಾರಮಾಡಿಸಿಕೊಳ್ಳುವುದಕ್ಕೆ ಯೋಗ್ಯವಾದ ಪಾದಕಮಲಗಳುಳ್ಳ, ರಜೋಗುಣರಹಿತನಾದ, ಧೀರರಿಗೆಲ್ಲ ಧೀರನಾದ. ಸಮೀಚೀನವಾದ ನ್ಯಾಯದಿಂದ ಕೂಡಿದ ದೃಷ್ಟಿ (ನಯನ)ಯಿಂದ ಕೂಡಿದ. ತನ್ನ ಧರ್ಮವನ್ನನುಸರಿಸುವ ಮಾಯಾರಹಿತರಾದ ಶರಣರನ್ನು ಸಂತೋಷ(ಅನುರಾಗ) ಗೊಳಿಸುವ ಸ್ವಭಾವವುಳ್ಳ, ಶಾಂತಿ ಸ್ವಭಾವ (ಗುಣ)ವನ್ನು ಹೊಂದಿದ ಋಷಿಗಳ ಮನಸ್ಸಿನಲ್ಲಿ ಮಲಗುವ (ಹೊಂದಿಕೊಂಡಿರುವ), ಒಳ್ಳೆಯ ಭಾಗ್ಯವನ್ನು ಹೊಂದಿರುವ (ಭಾಕ್) ಜನಗಳ ಪೂಜೆ (ಯಜನ) ಯಿಂದ ಸಂತೋಷಗೊಳ್ಳುವ ಶ್ರೇಷ್ಠನಾದ ಅಲ್ಲಮಪ್ರಭುವನ್ನು ಸಂತೋಷಗೊಳಿಸುವುದರ ಮೂಲಕ (ಅವನಿಗೆ) ಪ್ರಿಯನೆನಿಸಿದ ಬಸವೇಶನೇ ಜಯ ಜಯ ೭. ದೇವಶ್ರೇಷ್ಠರು (ಅಥವಾ ದೇವೇಂದ್ರ), ದಾನವ ಶ್ರೇಷ್ಠರು (ರಾಕ್ಷಸರಲ್ಲಿ ಶ್ರೇಷ್ಠರಾದವರು) ಗಳಿಂದ ಚೆನ್ನಾಗಿ ಪೂಜಿಸಲ್ಪಟ್ಟ, ಪ್ರಕಾಶಿಸುವ ಶಿವಲಿಂಗ ಸಂಬಂಧದಿಂದ ಮನೋಹರನಾದ, ಆಶಾರಹಿತರಾದವರುಗಳಿಗೆ ಮೋಕ್ಷವನ್ನುಂಟುಮಾಡುವ ಕಡೆಗಣ್ಣಿನ ನೋಟವುಳ್ಳ, ದಯೆಯೇ ಅವಯವವಾಗಿವುಳ್ಳ. ಭಯಂಕರನಾದ ಯಮನನ್ನು ನಾಶಗೊಳಿಸಿದ, ಹಾನಿಯಿಲ್ಲದ ದೇಹವುಳ್ಳ, ಸದ್ಗುಣಗಳಿಂದ ಅಲಂಕಾರಗೊಂಡ ವಿದ್ವಾಂಸರುಗಳಿಂದ ಹೊಗಳಿಸಿಕೊಳ್ಳಲು ಯೋಗ್ಯನಾದ, ದೃಢವಾದ ಪ್ರತಿಜ್ಞೆಯನ್ನುಳ್ಳ, ಉನ್ನತವಾದ ಜಾಗರೂಕತೆಯಿಂದ ಸದಾ) (ಕೂಡಿದ, ಶಿವಗಣ ಶ್ರೇಷ್ಠನಾದ ಬಸವೇಶ್ವರನೇ

ನೀನೆ ಗುರು ನೀನೆ ಲಿಂಗಂ
ನೀನೆ ಚರಂ ನೀನೆ ಮಾತೆ ನೀನೆ ಪಿತಂ ಕೇ
ಳ್ನೀನೆ ಗತಿ ನೀನೆ ಮತಿ ಪತಿ
ನೀನೆ ಸಮಂತೆನಗೆ ಬಸವ ಪಾಲಿಪುದೆನ್ನಂ ೮

ಕ್ಷಿತಿರೇಣುವದಗಣಿತಭವ
ತತಿಯೊಳ್ಸಲೆ ಬಂದು ನೊಂದೆನಿನ್ನಾದೊಡಮು
ನ್ನತಕೃಪೆಯಿಂ ಭವಬಂಧ
ಸ್ಥಿತಿಯಂ ಪಱಿದೆನ್ನ ಪೊರೆ ಕೃಪಾನಿಧಿ ಬಸವಾ ೯

ಮಾಡದ ಪಾಪಮಿಲ್ಲ ಮನಮುಟ್ಟದ ಮಾರವಿಕಾರಮಿಲ್ಲ ಕೂ
ರ್ತಾಡದ ನಿಂದೆಯಿಲ್ಲ ಕೊಱಚಾಡದ ಸಜ್ಜನರಿಲ್ಲ ವಾಂಛೆಯಿಂ
ಬೇಡದ ವಸ್ತುವಿಲ್ಲ ಬಱಿದಾಗದ ಮಾನಮದಿಲ್ಲ ದೇವ ನೀಂ
ನೋಡದಿರೆನ್ನ ದುರ್ಗುಣಶತಂಗಳನಯ್ಯ ವೃಷಾಧಿನಾಯಕಾ ೧೦

ಕ್ರಿಯೆಯೊಳ್ಚರ್ಯೆಯೊಳೀಶ್ವರಾನುಗತಯೋಗಜ್ಞಾನಮಾರ್ಗಂಗಳೊಳ್
ನಿಯಮಂದಪ್ಪದ ಮಾಳ್ಕೆಯಿಂ ಚರಿಸಲುದ್ಯದ್ಭಕ್ತಿವೈರಾಗ್ಯನಿ
ರ್ಣಯದೊಳ್ವರ್ತಿಸಲೆಂತುಮಾಱದ ಜಡಾತ್ಮಂ ನೋಳ್ಪೊಡಾನೇ ಗುಣಾ
ಶ್ರಯ ನಿನ್ನಂ ಮಱಿವೊಕ್ಕೆನಯ್ಯ ಪೊರೆ ನೀನೆನ್ನಂ ವೃಷಾಧೀಶ್ವರಾ ೧೧

ಸತತವೂ ನನ್ನನ್ನು ಸಂರಕ್ಷಿಸು. ೮. ಬಸವೇಶ್ವರನೇ ನನಗೆ ನೀನೇ ಗುರು, ನೀನೇ ಲಿಂಗ ನೀನೇ ಜಂಗಮ, ನೀನೇ ತಂದೆ, ನೀನೇ ತಾಯಿ, ಕೇಳು : ನೀನೇಗತಿ, ನೀನೇಮತಿ, ನೀನೇ ಪತಿ. ನನ್ನನ್ನು ಚೆನ್ನಾಗಿ ನೀನು ನನ್ನನ್ನು ರಕ್ಷಿಸುವವನಾಗು. ೯. ಕೃಪಾನಿಧಿಯಾದ ಬಸವೇಶ್ವರನೇ, ಭೂಮಿಯಲ್ಲಿರುವ ರೇಣು, (ಕಣ)ಗಳಹಾಗೆ ಅಸಂಖ್ಯಾತವಾದ ಜನ್ಮ (ಜನನ)ಗಳ ಸಮುದಾಯದಲ್ಲಿ ಜನಿಸಿ ಬಂದು ನೊಂದಿದ್ದೇನೆ. ಇನ್ನಾದರೂ ಶ್ರೇಷ್ಠವಾದ ಕೃಪೆಯಿಂದ ನನ್ನ ಈ ಜನನ ಮರಣಾತ್ಮಕವಾದ ಬಂಧನವನ್ನು ಕತ್ತರಿಸಿಹಾಕಿ, ರಕ್ಷಿಸು ವವನಾಗು. ೧೦. ನಾನು ಮಾಡದೆ ಇರುವ ಪಾಪವಿಲ್ಲ; ಮನಸ್ಸಿನಲ್ಲಿ ಅಂಟದೆಯಿರುವ ಮನ್ಮಥ ಸಂಬಂಧವಾದ ವಿಕಾರವಿಲ್ಲ. ಪ್ರೀತಿಯಿಂದ ಆಡದೆಯಿರುವ ಪರದೂಷಣೆಯೇ ಇಲ್ಲ; ಹಾಸ್ಯ (ಪರಿಹಾಸ) ಮಾಡದೆಯಿರುವ ಸಜ್ಜನರೇ ಇಲ್ಲ; ಆಸೆಪಟ್ಟು ಬೇಡದೆ ಯಿರುವ ವಸ್ತುವೇ ಇಲ್ಲ; ನಾಶವಾಗದೆಯಿರುವ ಮಾನವೇ ಇಲ್ಲ (ಆಗದೆಯಿರುವ ಮಾನಹಾನಿಯೇ ಇಲ್ಲ) ಹೇ ದೇವ, ವೃಷಾಧಿನಾಯಕನೇ, ಅಯ್ಯ, ನನ್ನ ಈ ನೂರಾರು ದುರ್ಗುಣಗಳನ್ನು ಎಣಿಸಬೇಡ (ನೋಡಬೇಡ). ೧೧. ಬಸವೇಶ್ವರನೇ, ಕ್ರಿಯಾ ಚಾರದಲ್ಲಿ, ನಡತೆಯಲ್ಲಿ, ಈಶ್ವರನನ್ನಸರಿಸಿದ ಶಿವ ಯೋಗಜ್ಞಾನ ಮಾರ್ಗಗಳಲ್ಲಿ, ನಿಯಮವನ್ನು ತಪ್ಪದ ರೀತಿಯಲ್ಲಿ ನಡೆಯುವುದಕ್ಕೆ, ಶ್ರೇಷ್ಠವಾದ ಭಕ್ತಿ, ವೈರಾಗ್ಯ ಮಾರ್ಗಗಳ ನಿರ್ಣಯದಲ್ಲಿ ವ್ಯವಹರಿಸುವುದಕ್ಕೆ ವಿಚಾರಮಾಡಿನೋಡಿದರೆ ಹೇಗೂ ಯೋಗ್ಯನಲ್ಲದ (ಶಕ್ಯನಲ್ಲದ), ಅಜ್ಞಾನದಿಂದ ಕೂಡಿದವನು ನಾನು ಸಮರ್ಥನೇ ? ಸದ್ಗುಣಗಳಿಗೆ ಆಶ್ರಯನಾದ ನಿನ್ನನ್ನು ಮರೆಹೊಕ್ಕಿದ್ದೇನೆ ಅಯ್ಯಾ, ನೀನು ನನ್ನನ್ನು

ಖಲನಂ ಕಾಮುಕನಂ ಕದರ್ಯಪರನಂ ದುರ್ದಾಂತನಂ ಧೂರ್ತನಂ
ಕಲಹಾನಂದಿತನಂ ಕುಮಾರ್ಗರತನಂ ದುಷ್ಟಾತ್ಮನಂ ದುರ್ಮದಾ
ವಿಲನಂ ದುಃಖಸಮುದ್ರಮಧ್ಯಗತನಂ ಕಾರುಣ್ಯದಿಂದೆನ್ನನ
ಸ್ಖಲಿತಶ್ರೀಕರ ನೋಡಿ ರಕ್ಷಿಸು ನಿತಾಂತಂ ನೀಂ ವೃಷಾಧೀಶ್ವರಾ* ೧೨

ನಿನ್ನಯ ದಿವ್ಯಮೂರ್ತಿ ಬಿಡದೆನ್ನ ಮನೋಂಬುಜಮಧ್ಯದೊಳ್ಕರಂ
ನಿನ್ನಯ ದಿವ್ಯನಾಮಮಮರ್ದೆನ್ನಯ ಸದ್ರಸನಾಗ್ರದಲ್ಲಿ ಕೇ
ಳ್ನಿನ್ನಯ ಭಕ್ತರಂಘ್ರಿಯುಗಮೆನ್ನಯ ಮಸ್ತಕದಲ್ಲಿ ಮಾಣದೆಂ
ದುನ್ನೆಲಸಿರ್ಪುದೊಂದು ವರಮಂ ಕುಡು ಬೇಳ್ಪೆನಿದಂ ವೃಷಾಧಿಪಾ ೧೩

ಬಸವ ಭವತ್ಪದಾಬ್ಜರಜಮೆನ್ನ ಲಲಾಟಲಲಾಮಮಾಗಿ ನಿ
ನ್ನಸಮಪದಂಗಳೆನ್ನೆರ್ದೆಗೊಳಂ ತಳೆದಂಬುಜಮಾಗಿ ನಿನ್ನ ರೂ
ಪೆಸೆವ ಮದೀಯ ಚಕ್ಷುಗಮೃತಾಂಜನಮಾಗಿ ಮದುತ್ತಮಾಂಗದೊ
ಳ್ಪಸರಿಸಿ ನಿಲ್ಕೆ ನಿನ್ನ ಪದಪಾದುಕೆ ಶೇಖರಮಾಗಿ ಸಂತತಂ ೧೪

ರಕ್ಷಿಸುವವನಾಗು. ೧೨. ದುಷ್ಟನೂ, ವಿಷಯಸುಖಾಭಿಲಾಷೆಯುಳ್ಳವನೂ, ಕೆಟ್ಟ ಧೈರ್ಯದಿಂದ ವರ್ತಿಸುವವನೂ, ಸೈರಣೆಯಿಲ್ಲದವನೂ, (ತಪದ ಬಾಧೆಯನ್ನು ಸೈರಿಸದವನೂ,) ವಂಚಕನೂ, ಜಗಳದಿಂದ ಸಂತೋಷಪಡುವವನೂ, ದುಷ್ಟಮಾರ್ಗ ನಿರತನೂ, ಕೆಟ್ಟಮನಸ್ಸುಳ್ಳವನೂ, ದುಷ್ಟಮದದಿಂದ ಕೂಡಿದವನೂ, ದುಃಖವೆಂಬ ಸಮುದ್ರ ಮಧ್ಯದಲ್ಲಿ ಮುಳುಗಿರುವವನೂ ಆದ ನನ್ನನ್ನು ಚಂಚಲವಾಗದಿರುವ (ಸ್ಥಿರವಾದ) ಸಂಪತ್ತನ್ನುಂಟುಮಾಡುವ ಹೇ ಬಸವೇಶ್ವರನೇ, ನೀನು ಅಧಿಕವಾದ ಕಾರುಣ್ಯದಿಂದ ನೋಡಿ ರಕ್ಷಿಸು. ೧೩. ಹೇ ಬಸವೇಶ್ವರನೇ, ನಿನ್ನ ಶ್ರೇಷ್ಠ ಮೂರ್ತಿಯು (ಆಕಾರವು) ತಪ್ಪದೆ ಎನ್ನ ಮನಸ್ಸೆಂಬ ಕಮಲ ಮಧ್ಯದಲ್ಲಿ ಚೆನ್ನಾಗಿ ನೆಲಸಲಿ ; ನಿನ್ನ ಶ್ರೇಷ್ಠವಾದ ಹೆಸರು ಅಗಲದಂತೆ ನನ್ನ ನಾಲಗೆಯ ತುದಿಯಲ್ಲಿ ನೆಲಸಲಿ; ನಿನ್ನ ಭಕ್ತರುಗಳ ಪಾದದ್ವಯವು ನನ್ನ ತಲೆಯ ಮೇಲೆ ತಪ್ಪದೆ ಯಾವಾಗಲೂ ನೆಲಸಲಿ. ಈ ಒಂದು ವರವನ್ನು ಬೇಡುತ್ತಿದ್ದೇನೆ. ಇದನ್ನು ನನಗೆ ಕೊಡು. ೧೪. ಹೇ ಬಸವೇಶ್ವರನೇ, ನಿನ್ನ ಪಾದಕಮಲಗಳ ಧೂಳಿ (ರಜ)ಯು ನನ್ನ ಹಣೆಯ ತಿಲಕವಾಗಿ, ನಿನ್ನ ಅನುಪಮವಾದ ಪಾದಗಳು ನನ್ನ ಹೃದಯವೆಂಬ ಸರೋವರವು ಧರಿಸಿರುವ ಕಮಲಗಳಾಗಿ, ನಿನ್ನ ರೂಪವು ಶೋಭಿಸುವ ನನ್ನ ಕಣ್ಣುಗಳಿಗೆ ಅಮೃತದಿಂದ ಮಾಡಿದ ಕಾಡಿಗೆಯಾಗಿ (ಕಣ್ಣ ಕಪ್ಪಾಗಿ), ನಿನ್ನ ಕಾಲ ಅಪ್ಪುಗೆಗಳು (ಅಥವಾಕೆರ್ಪುಗಳು) ನನ್ನ ಶಿರಸ್ಸಿನ ಮೇಲೆ ಪ್ರಕಟ

* ಆ ಪ್ರತಿಯಲ್ಲಿ ಈ ಪದ್ಯವಿಲ್ಲ.

ಪರಮ ಕೃಪಾಸಮುದ್ರ ಸತತಂ ಶರಣಾಗತವಜ್ರಪಂಜರ
ಸ್ಥಿರಬಿರುದಾಂಕ ಘೋರಭವದುಃಖದ ಕೋಟಲೆಗಳ್ಕಿ ಬಂದು ನಿ
ನ್ನುರುತರಪಾದಪದ್ಮಯುಗಮಂ ಮಱೆವೊಕ್ಕೆನುದಾರವೃತ್ತಿಯಿಂ
ಪೊರೆ ಭವಬಂಧಮಂ ಪಱಿದು ನಲ್ಮೆಯೊಳೆನ್ನ ವೃಷಾಧಿನಾಯಕಾ ೧೫

ತಱಿಸಂದಜ್ಞಾನದಿಂದಾಂ ಬಿಡದೆ ನೆಗಳ್ದ ಸರ್ವಾಪರಾಧಂಗಳಂ ನೀಂ
ಮಱೆದೆನ್ನಂ ನಿನ್ನ ಕಾರುಣ್ಯಮನೆ ಮೆಱೆದು ರಕ್ಷಿಪ್ಪುದೆಲ್ಲಂದದಿಂ ಕ
ಟ್ಟೆಱಕಂಬೆತ್ತೀವುದುದ್ಯತ್ಪರಮಶಿವಪದಾಂಭೋಜಸದ್ಭಕ್ತಿಯೊಂದ
ಳ್ಕಱನೊಳ್ಪಿಂ ದೇವ ನೀನೊಲ್ದೆನಗೆ ಬಸವ ಭಕ್ತಾಬ್ಧಿಸಂಪೂರ್ಣಚಂದ್ರಾ ೧೬

ಆಶಾವಾರಿ ಮತಾಚಳಾವಳಿ ಪಡೂರ್ಮ್ಯೂರ್ವಿ ದ್ವಿಷಡ್ಗ್ರಾಹ ಸಂ
ಕ್ಲೇಶಾವರ್ತ ಕಳತ್ರಸಿಂಧು ಕರುಣೋದ್ಯನ್ಮೀನ ಸಂಸಾರವಾ
ರಾಶಿ ಪ್ರಚ್ಯುತನಾದೆನುದ್ಧರಿಸುಕುಂ ನೀಂ ರಕ್ಷಿಸೈ ಸತ್ಕೃಪಾ
ವೇಶ ತ್ವತ್ಪದನಾವೆಯಿಂ ಕೃಪಣನಾದೆನ್ನಂ ವೃಷಾಧೀಶ್ವರಾ ೧೭

ಗೊಂಡು ಶಿರೋಭೂಷಣಗಳೆನಿಸಿ ಸದಾಕಾಲ ನಿಲ್ಲಲಿ. ೧೫. ಶ್ರೇಷ್ಠವಾದ ಕೃಪೆಗೆ ಸಮುದ್ರದೋಪಾದಿಯಲ್ಲಿರುವ, ಸತತವೂ ಶರಣಾಗತರಾಗಿರುವವರಿಗೆ ವಜ್ರಪಂಜರದಂತಿರುವವನೆಂಬ ಶಾಶ್ವತವಾದ ಬಿರುದನ್ನು ಹೊಂದಿರುವ ಹೇ ಬಸವೇಶ್ವರನೇ, ಭಯಂಕರವಾದ ದುಃಖದ ಬಾಧೆಗೆ ಹೆದರಿಬಂದು, ನಿನ್ನ ಪವಿತ್ರವಾದ ಪಾದಕಮಲದ್ವಯವನ್ನು ಮರೆಹೊಕ್ಕಿದ್ದೇನೆ. ಪ್ರೀತಿಯಿಂದ ನನ್ನ ಈ ಭವ ಬಂಧನವನ್ನು ಕತ್ತರಿಸಿ ಹಾಕಿ, ಉದಾರ ವೃತ್ತಿಯಿಂದ ಸಂರಕ್ಷಿಸು. ೧೬. ಶಿವಭಕ್ತರೆಂಬ ಸಮುದ್ರಕ್ಕೆ ಹುಣ್ಣಿಮೆಯ ಚಂದ್ರನೋಪಾದಿಯಲ್ಲಿರುವ ಬಸವೇಶ್ವರನೇ, ಹೇ ದೇವ, ಉಂಟಾದ ಅಜ್ಞಾನದಿಂದ (ಅಜ್ಞಾನ ಕಾರಣದಿಂದುಂಟಾಗಿ) ನಾನು ತಪ್ಪದೆ ಮಾಡಿರುವ ಸಮಸ್ತ ಅಪರಾಧಗಳನ್ನು ನೀನು ಮರೆದು, ನಿನ್ನ ಕಾರುಣ್ಯವನ್ನು ಮೆರೆಯಿಸಿ (ಪ್ರಕಟಪಡಿಸಿ. ಅಥವಾ ವ್ಯಕ್ತಪಡಿಸಿ), ರಕ್ಷಿಸಬೇಕು. ಎಲ್ಲರೀತಿಯಿಂದಲೂ ವಿಶೇಷ ಪ್ರೀತಿಯನ್ನು ತೋರಿಸಿ, ನನ್ನ ಮೇಲೆ ಒಲುಮೆದೋರಿ, ಶ್ರೇಷ್ಠವಾದ ಪರಮೇಶ್ವರನ ಪಾದಕಮಲಗಳ ಭಕ್ತಿಯ ಒಂದು ಅಕ್ಕರೆಯನ್ನು ನನಗೆ ಕೊಡಬೇಕು. ೧೭. ಆಸೆಯೆಂಬ ನೀರನ್ನುಳ್ಳ, ಮಕ್ಕಳೆಂಬ ಪರ್ವತ ಸಾಲುಗಳುಳ್ಳ, ಕ್ಷುತ್ ಪಿಪಾಸೆಗಳೆಂಬ ತೆರೆಗಳುಳ್ಳ, ಕಾಮಕ್ರೋಧಾದಿ ಅರಿಷಡ್ವರ್ಗಗಳೆಂಬ ಮೊಸಳೆಗಳುಳ್ಳ ಪಂಚಕ್ಲೇಶಗಳೆಂಬ ಸುಳಿಗಳುಳ್ಳ, ಹೆಂಡತಿಯೆಂಬ ಹೊಳೆಯನ್ನುಳ್ಳ (ಹೊಳೆಯಿಂದ ಕೂಡಿದ), ಇಂದ್ರಿಯಗಳೆಂಬ (ಪಂಚೇಂದ್ರಿಯಗಳೆಂಬ) ದೊಡ್ಡ ಮೀನುಗಳನ್ನು (ಈ) ಸಂಸಾರವೆಂಬ ಸಮುದ್ರದಲ್ಲಿ ಜಾರಿಬಿದ್ದಿದ್ದೇನೆ. ಸತ್ಕೃಪೆಯ ಆವೇಶದಿಂದ ಕೂಡಿದ ಹೇ ಬಸವೇಶ್ವರನೇ, ಕಾರ್ಪಣ್ಯಭಾವದ ಇಂಥ ನನ್ನನ್ನು

ವಿತತಾಯುರ್ವೃದ್ಧಿಯುಂ ಸಿದ್ಧಿಯುಮನುಪಮಸೌಭಾಗ್ಯಮುಂ ಭೋಗ್ಯಮುಂ ಸಂ
ತತ ತೇಜಃಸ್ಫೂರ್ತಿಯುಂ ಕೀರ್ತಿಯುಮುರುತರಗಾಂಭೀರ್ಯಮುಂ ಧೈರ್ಯಮುಂ ವಿ
ಶ್ರುತಶಂಭುಧ್ಯಾನಮುಂ ಜ್ಞಾನಮುಮಭವಲಸದ್ಭಕ್ತಿಯುಂ ಯು[1]ಕ್ತಿಯುಂ ಶಾ
ಶ್ವತಪೂರ್ಣಾನಂದಮುಂ ಕುಂದದೆ ಕುಡು ಶರಣಶ್ರೇಣಿಗೆಂದುಂ ವೃಷೇಂದ್ರಾ ೧೮

ದುರಿತಘನೌಘಚಂಡಪವನಂ ಗ್ರಹಸರ್ಪಸುಪರ್ಣಮಾರ್ತಿಸಿಂ
ಧುರಹರಿ ದುರ್ಗರೋಗಗಿರಿವಜ್ರಮರಾತಿಸರೋಧಿಬಾಡಬಂ
ಪರಕೃತಕಕ್ಷಮಾರುಹಕುಠಾರಮಶೇಷವಿಷಾಬ್ಜಷಂಡಕುಂ
ಜರಮೀದು ಜಾಪಕರ್ಗೆ ಭವಕಕ್ಷದವಂ ಬಸವಾಕ್ಷರತ್ರಯಂ ೧೯

ವಿವಿಧವಿಪತ್ಕದಂಬಕುಜರಾಜಿಕುಠಾರಮರಾತಿವಾತಭು
ಕ್ಪ್ರವಿಜಿತಮೇಘವಹ್ನಿ ಯಮದರ್ಪಚಯೋತ್ಪಲಚಂಡಭಾನು ದು
ರ್ಭವನಳಿನಪ್ರತಾನತುಹಿನಂ ದುರಿತೌಘಘನಪ್ರಭಂಜನಂ
ಭುವನದ ಸಜ್ಜನಾಳಿಗೆ ವೃಷೇಂದ್ರಪದಸ್ಮೃತಿ ಸರ್ವಸೌಖ್ಯದಂ ೨೦

ನಿನ್ನ ಪಾದಗಳೆಂಬ ಹಡಗಿನಿಂದ ಮೇಲಕ್ಕೆತ್ತಿ (ಉದ್ಧರಿಸಿ) ರಕ್ಷಿಸಯ್ಯ ! ೧೮. ವಿಸ್ತಾರವಾದ ಆಯುಷ್ಯದ ವೃದ್ಧಿಯನ್ನೂ, ಅನುಪಮ (ಅಸಮಾನ)ವಾದ ಸೌಭಾಗ್ಯವನ್ನೂ, ಐಶ್ವರ್ಯವನ್ನೂ ಲಿಂಗಭೋಗೋಪ'ಭೋಗವನ್ನೂ, ಸತತವೂ ತೇಜಸ್ಸಿನ ಸ್ಫೂರ್ತಿಯನ್ನೂ, ಕೀರ್ತಿ(ಯಶಸ್ಸು)ಯನ್ನೂ, ಶ್ರೇಷ್ಠವಾದ ಗಂಭೀರ ಭಾವವನ್ನೂ, ಧೈರ್ಯವನ್ನೂ, ಪ್ರಖ್ಯಾತವಾದ ಶಂಭುವಿನ ಧ್ಯಾನವನ್ನೂ, ಶಿವಜ್ಞಾನವನ್ನೂ, ಪ್ರಕಾಶಿಸುವ ಪರಶಿವನ ಭಕ್ತಿಯನ್ನೂ, (ಸಕ್ರಿಯಾಚಾರದ) ಯುಕ್ತಿಯನ್ನೂ, ಶಾಶ್ವತವಾದ ಪರಿಪೂರ್ಣ ಆನಂದವನ್ನೂ (ಮುಕ್ತಿ ಸುಖವನ್ನೂ), ಕುಂದಿಲ್ಲದಂತೆ ಶರಣ ಜನಸಮೂಹಕ್ಕೆ ಯಾವಾಗಲೂ ಹೇ ಬಸವೇಶ್ವರನೇ ಕೊಡು. ೧೯. 'ಬಸವ' ಎಂಬ ಮೂರಕ್ಷರಗಳು ಪಾಪವೆಂಬಮೋಡಗಳ ಸಮೂಹಕ್ಕೆ ಬಿರುಗಾಳಿ; ಗ್ರಹ (ಪಿಶಾಚಿ)ವೆಂಬ ಹಾವಿಗೆ ಗರುಡಪಕ್ಷಿ, ಮನೋವ್ಯಥೆಯೆಂಬ ಆನೆಗೆ ಸಿಂಹ, ಕೆಟ್ಟರೋಗವೆಂಬ ಭಯಂಕರ ಪರ್ವತಕ್ಕೆ ವಜ್ರಾಯುಧ, ಶತ್ರುಗಳೆಂಬ ಸಮುದ್ರಕ್ಕೆ ಬಡಬಾಗ್ನಿ, ಅನ್ಯರಿಂದ (ಶತ್ರುಗಳಿಂದ) ಮಾಡಲ್ಪಟ್ಟ ಕುಟಿಲ ತಂತ್ರಗಳೆಂಬ ವೃಕ್ಷಕ್ಕೆ ಕೊಡಲಿ, ಸಮಸ್ತ ವಿಷಗಳೆಂಬ ಕಮಲಗಳ ಗುಂಪಿಗೆ ಆನೆ, ಜಪಿಸುವವರಿಗೆ ಪಾಪವೆಂಬ ಒಣಗಿದ ಕಟ್ಟಿಗೆಯ ವನಕ್ಕೆ ಕಾಡುಗಿಚ್ಚು (ಆಗಿದೆ). ೨೦. 'ಬಸವೇಶ್ವರನ ಪಾದ ಸ್ಮರಣೆಯು ಅನೇಕವಿಧವಾದ ಆಪತ್ತುಗಳ ಸಮೂಹವೆಂಬ ವೃಕ್ಷಗಳ ಸಾಲಿಗೆ ಕೊಡಲಿ. ಶತ್ರುಗಳೆಂಬ ಹಾವು (ವಾತಭುಕ್)ಗಳನ್ನು ಜಯಿಸುವ ಸಿಡಿಲಬೆಂಕಿ, ಯಮನ ದರ್ಪಗಳ ಸಮೂಹವೆಂಬ ನೈದಿಲೆಗಳ ಗುಂಪಿಗೆ ಸಮರ್ಥನಾದ ಸೂರ್ಯ, ಕೆಟ್ಟಸಂಸಾರವೆಂಬ ಕಮಲಗಳ ಗುಂಪಿಗೆ ಹಿಮ. ಪಾಪಗಳ ಸಮೂಹವೆಂಬ ಮೋಡಗಳಿಗೆ ಬಿರುಗಾಳಿ. ಭೂಮಿಯ ಸಮಸ್ತ ಸಜ್ಜನ ಸಮೂಹಕ್ಕೆ

[1]ಮು (ಗ, ಚ, ಮು)

ಪ್ರಣವಾರ್ಥಂ ನೀನೆ ಸಚ್ಚಿತ್ಸುಖರಸಮಯನುಂ ನೀನೆ ಲೀಲಾಕಟಾಕ್ಷೇ
ಕ್ಷಣದಿಂ ಬ್ರಹ್ಮಾಂಡಮಂ ಮುಂಪಡೆದು ಪೊರೆವನುಂ ನೀನೆ ಸನ್ಮುಕ್ತಿಚಿಂತಾ
ಮಣಿರೂಪಂ ನೀನೆ ತತ್ತ್ವಾಳಿಗೆ ಮೊದಲಿಗ [ನು]ಂ ನೀನೆ ಮದ್ದೇಶಿಕೇಂದ್ರಾ
ಗ್ರಣಿಯುಂ ಕೇಳ್ನೀನೆಯೆನ್ನಂ ಪೊರೆ ಪೊರೆ ಸತತಂ ನಂಬಿದೆಂ ಶ್ರೀವೃಷೇಂದ್ರಾ ೨೧

ಕಲಿಕಾಲಾಘ್ರಕಠೋರಕಾನನಕುಠಾರಂ ಭಕ್ತಿಸಂಪತ್ತಿಯು
ದ್ವಿಲಸದ್ಭಾವಮಹಾನುಭಾವನಭವೋದ್ಯದ್ಧರ್ಮರೂಪಂ ಧರಾ
ಲಲನಾಪಾವನಕೃತ್ಪದಂ ಪರಮಶೈವಾಂಭೋಧಿಚಂದ್ರಂ ಕೃಪಾ
ಕಲಿತಂ ಶ್ರೀಬಸವೇಶ್ವರಂ ಪೊರೆಗೆ ಭಕ್ತವ್ರಾತಮಂ ಸಂತತಂ ೨೨

ಶಕವರ್ಷಂ ಸಾಸಿರಂ ಮೇಲಧಿಕಮೆನಿಸಿದೈನೂಱತೊಂಭತ್ತೆರಳ್ತೀ
ವೆ ಕರಂ ಪೆಂಪಾಂತ ಸಾಧಾರಣದ ಮಿಸುಪ ವೈಶಾಖಶುದ್ಧತ್ರಯೋದ
ಶ್ಯಕಳಂಕಾದಿತ್ಯವಾರಂ ಬಸವಕೃತಿ ಮಲು ಪೂರ್ಣಮಾದತ್ತು ಹಸ್ತ
ರ್ಕ್ಷಕದೊಳ್ವಜ್ರಾಖ್ಯಯೋಗಂ ಕರಣಮೆಸೆವಿನಂ ಕೌಲವಾಖ್ಯಾನಯುಕ್ತಂ ೨೩

ಸೌಖ್ಯವನ್ನು ಕೊಡುವಂತಹುದು. ೨೧. ಮಂಗಳಕರನಾದ ಬಸವೇಶ್ವರನೇ ಓಂಕಾರ ಪ್ರಣವವಾಚ್ಯನೂ ನೀನೇ; ಸತ್ತು, ಚಿತ್ತು, ಆನಂದಾತ್ಮಕನೂ ನೀನೇ; ಲೀಲೆಯಿಂದ ಕೂಡಿದ ಕಡೆಗಣ್ಣುಗಳ ನೋಟದಿಂದ ಬ್ರಹ್ಮಾಂಡವನ್ನು ಮೊದಲು ಸೃಷ್ಟಿಸಿ, ಅದನ್ನು ಸಂರಕ್ಷಿಸುವವನೂ ನೀನೇ; ಶ್ರೇಷ್ಠವಾದ ಮುಕ್ತಿಯನ್ನು ಕೊಡುವ ವಿಷಯದಲ್ಲಿ ಚಿಂತಾರತ್ನವೂ ನೀನೇ; ಶಿವತತ್ತ್ವ ಸಮೂಹಗಳ ಹುಟ್ಟಿಗೆ ಮೊದಲಿಗನು ನೀನೇ (ತತ್ತ್ವ ಮೂರ್ತಿಯೂ ನೀನೇ), ಕೇಳು : ನನ್ನ ಉತ್ತಮವಾದ ಗುರುಶ್ರೇಷ್ಠನೂ ನೀನೆ; ಸತ ತವೂ ನಿನ್ನನ್ನೇ ನಾನು ನಂಬಿದ್ದೇನೆ. ನನ್ನನ್ನು ರಕ್ಷಿಸು ! ರಕ್ಷಿಸು !! ೨೨. ಕಲಿಕಾಲದ (ಕಲಿಯುಗದ) ಪಾಪವೆಂಬ ಕ್ರೂರವಾದ (ಭಯಂಕರವಾದ) ಕಾಡಿಗೆ ಕುಠಾರ ಪ್ರಾಯ ನಾದ, ಶಿವಭಕ್ತಿಯ ಸಂಪತ್ತಿನಿಂದ ಪ್ರಕಾಶಿಸುವ ಭಾವದಿಂದ ಮಹಾನುಭಾವನೆನಿಸಿದ, ಉತ್ಕೃಷ್ಟ ಶಿವಭಕ್ತಿಸ್ವರೂಪನೇ ಆದ, ಭೂಮಿಯೆಂಬ ಕಾಂತೆಯನ್ನು ಪರಿಶುದ್ಧ ಗೊಳಿಸುವ ಪಾದಗಳುಳ್ಳ, ಉತ್ಕೃಷ್ಟವಾದ ಶಿವಸಂಬಂಧದ ಮತವೆಂಬ ವೀರಶೈವ ಮತದಂಬ) ಸಮುದ್ರಕ್ಕೆ ಚಂದ್ರನಾದ, ಕೃಪೆಯಿಂದ ತುಂಬಿದ ಬಸವೇಶ್ವರನು ಭಕ್ತ ಸಮೂಹವನ್ನು ಸತತವೂ ರಕ್ಷಿಸಲಿ. ೨೩. ಕೌಲವಾಖ್ಯಾನಯುಕ್ತವಾದ ಬಸವಕೃತಿಯು ಶಕವರುಷಸಾವಿರದ ಮೇಲೆ ಅಧಿಕವೆನಿಸಿದ ಐದುನೂರತೊಂಬತ್ತೆರಡು ತುಂಬಿದ ಶ್ರೇಷ್ಠಹಿರಿಮೆಯಿಂದ ಕೂಡಿದ ಸಾಧಾರಣಸಂವತ್ಸರದ ಶೋಭಿಸುವ ವೈಶಾಖಶುದ್ಧ ತ್ರಯೋದಶಿಯ (೧೫೯೨ನೆಯ ಶಕವರ್ಷ ಸಾಧಾರಣಸಂವತ್ಸರ ವೈಶಾಖಶುದ್ಧ ೧೩ ನೆಯ ದಿನ) ಕಳಂಕರಹಿತವಾದ ಆದಿತ್ಯವಾರದಂದು, ಹಸ್ತನಕ್ಷತ್ರದಲ್ಲಿ ವಜ್ರವೆಂಬಹೆಸರಿನ ಯೋಗ ಕರಣಗಳು ಶೋಭಿಸುತ್ತಿರಲು ಸಮಾಪ್ತವಾಯಿತು.

ಪರಿಶಿಷ್ಟ—೩

ಬಸವರಾಜ ವಿಜಯದಲ್ಲಿ ಬಳಸಿರುವ ಗಾದೆಗಳು

[ಇಲ್ಲಿ ಮೊದಲ ಸಂಖ್ಯೆಯು ಆಶ್ವಾಸವನ್ನೂ, ಎರಡನೆಯದು ಪದ್ಯಸಂಖ್ಯೆಯನ್ನೂ ತಿಳಿಸುವುದು.]

೧. ವಿಳಸತ್ಕರ್ಪೂರ ಸಾರಾಂಬುವ ನೆಱೆವುದೇ ಬರ್ಬೂರ ವೃಕ್ಷಕ್ಕೆ ? ೧–೪೨
೨. ಚಂದ್ರೋಪಳಭಾಸ್ವದ್ದರ್ಪಣಮಂ ತೋರ್ಪುದೇ ವನಚರವಕ್ತ್ರಕ್ಕೆ ? ೧–೪೨
೩. ಮತ್ತೇಭ ಕುಂಭಸ್ಥಲ ಮುಕ್ತಾದಾಮಮಂ ಕಟ್ಟುವುದೇ ಕರಭಕಂಠಕ್ಕೆ ? ೧-೪೨
೪. ಶರಭೇಂದ್ರನಿರಲ್ ಶೃಗಾಲಮಂ ಪರಿನುತಿಪಂದಮಲ್ತು ೧–೪೩
೫. ವಿದಗ್ಧಮರಾಲಂ ಪರಿತಂದು ಸೇವಿಪುದೇ ಬಕನಿಕರಾತ್ತ.. ಪಲ್ವಲಮಂ ? ೧-೪೫
೬. ಕಡಂದುಱು ಮುಱಿಗೆಯ್ವುವಾಳ್ಕೆ ೧-೪೭
೭. ಕುಸುಮ ಸಮುನ್ನತ ಮಾಲೆಗೇಳ್ವಕಪಿ ಸಮುನ್ನತ ಮಾಲೆಯನಂತೆನೆಗಳಲೇ ನಾರ್ತಪುದೇ ? ೧-೪೯
೮. ಲೋಕಮನೆಲ್ಲಮಂ ತುತ್ತಲೊಡರ್ಚಿನಿಂದ ಖಳನಂ ಜವದಿಂಜವನೇಕೆ ನುಂಗನೋ ! ೧-೫೩
೯. ಬೇವಿಂಗೆಱಗುವ ಕಾಕಂ ಮಾವಿಂಗೆಱಗುಗುಮೇ ? ೧-೫೫
೧೦. ನಿಜವಿಕಾರಮಾರಾತ್ಯಪಹಾಸ್ಯಕಾರಣಂ ೧-೭೫
೧೧. ಒಲವಿಂ ಕುಣಿವರ್ಭಕ ನಿಲ್ಲದಂಗಳಂ ಮಂಜುಳಮೋ ? ೨-೩೦
೧೨. ಜೋಗುಳಮಂ ನಲವಿಂದ ಪಾಡದಬಾಯ್ ಬಿಲದ ಬಾಯ್ ೨-೩೨
೧೩. ಸುಮನೋದ್ರುಮದ ನೆಳಲನೊಂದಿದವನಲ್ಪಮಹೀಜದ ಬಳಿಯನೆಳಲಂ ಸಾರ್ದಪನೇ ? ೩-೩೫
೧೪. ವಿಮಳ ಸಂಜೀವನಮಂ ಸವಿದಾತಂ ಕ್ಷುದ್ರರಸಮನೊಲ್ದಪನೇ ? ೩-೩೬
೧೫. ಗಿರಿಯಂ ಸೇವಿಪ ಸಿಂಗಂ ಮೊರಡಿಯು ಸೇವಿಪ ಮೊಲಂ ಪಾಸಟಿಯೋ ? ೩-೩೭
೧೬. ಭದ್ರಮಾದ ನೃಪಚಿಹ್ನಮಾಂತಮಂ ಶೂದ್ರ ಚಿಹ್ನಧರನಾಗಲೊಲ್ವನೇ ? ೩-೩೮
೧೭. ಸುರುಚಿರ ರುಚಿಭಾಸುರ ಭಾಸ್ಕರನಂ ಕೌಶಿಕವಿರಾವಮೇಗೆಯ್ದಪುದೋ ? ೩-೪೨
೧೮. ನರೆಯಂತೆರೆಯಂ ತನುವೊಳ್ ಧರಿಸಿದ ಜಡರ್ಕಳೆಲ್ಲ ಪಿರಿಯರೇ ? ೩-೫೩
೧೯. ಮಾರವ ಕೂಪಜಲಂಗಳ್ಜಾಹ್ನವಿಯಂಬುವಿನಂತೆ ತೃಷೆಯನೇಂ ಕಳೆದಪುವೇ ? ೩-೬೧

ಪರಿಶಿಷ್ಟ—೪

ಈ ಗ್ರಂಥದಲ್ಲಿ ಬಂದಿರುವ ಕೆಲವು ಪಾರಿಭಾಷಿಕ ಪದಾರ್ಥಗಳು

(ವೀರಶೈವ ತತ್ತ್ವಾನುಸಾರ.)

೧. **ಅಂಗ** i. ಶಿವಾಂಶಿಕನಾದ ಆತ್ಮನು ಅಂಗನೆನ್ನಿಸಿಕೊಳ್ಳುವನು.

ii. ಶಿರಸ್ಸು, ಉರಸ್ಸು, ಎರಡು ಭುಜ—ಇವುಕೂಡ ಅಂಗಗಳೆನಿಸುವುವು.

೨. **ಅಂತಃಕರಣ ಚತುಷ್ಟಯ** : ಮನ, ಬುದ್ಧಿ, ಚಿತ್ತ, ಅಹಂಕಾರ.

೩. **ಅಣಿಮಾದಿ ಅಷ್ಟಸಿದ್ಧಿಗಳು** : ಅಣಿಮಾ,, ಮಹಿಮಾ, ಗರಿಮಾ, ಲಘಿಮಾ, ಪ್ರಾಪ್ತಿ, ಪ್ರಾಕಾಮ್ಯ, ಈಶತ್ವ, ವಶಿತ್ವ

೪. **ಅರಿಷಡ್ವರ್ಗ** : ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ.

೫. **ಅಷ್ಟದಿಗ್ಗಜಗಳು** (ದಿಕ್ಕರಿಗಳು) : ಐರಾವತ, ಪುಂಡರೀಕ, ವಾಮನ, ಕುಮುದ, ಅಂಜನ, ಪುಷ್ಪದಂತ, ಸಾರ್ವಭೌಮ, ಸುಪ್ರತೀಕ.

೬. **ಅಷ್ಟದಿಕ್ಪಾಲಕರು** : ಪೂರ್ವದಿಕ್—ಇಂದ್ರ; ಆಗ್ನೇಯ—ಅಗ್ನಿ; ದಕ್ಷಿಣ—ಯಮ; ನೈಋತ್ಯ—ನಿರುತಿ; ಪಶ್ಚಿಮ-ವರುಣ; ವಾಯುವ್ಯ-ವಾಯು; ಉತ್ತರ-ಕುಬೇರ; ಈಶಾನ್ಯ—ಈಶಾನ.

೭. **ಅಷ್ಟಮದ** : ಕುಲಮದ, ಛಲಮದ, ಧನಮದ, ರೂಪಮದ, ಯೌವನ ಮದ, ವಿದ್ಯಾಮದ, ರಾಜ್ಯಮದ, ತಪೋಮದ, (ಪೃಥ್ವಿ, ಅಪ್, ತೇಜ, ವಾಯು, ಆಕಾಶ, ರವಿ, ಶಶಿ, ಆತ್ಮ—ಇವುಗಳಿಗೆ ಸಂಬಂಧಿಸಿದ ಮದಗಳೂ ಅಷ್ಟಮದ ಗಳೆನಿಸುವುವು,)

೮. **ಅಷ್ಟಪಾಶ** (ಪಾಶಾಷ್ಟಕ) : ಕೃಷಿ, ಶಂಕೆ, ಭೀತಿ, ಲಜ್ಜೆ, ಜುಗುಪ್ಸೆ, ಕುಲ, ಶೀಲ, ಗರ್ವ.

೯. **ಅಷ್ಟಭೋಗ** : i. ಸತಿ, ಸ್ನಾನ, ಭೋಜನ, ವಸ್ತ್ರ. ಗಂಧ, ಪುಷ್ಪ, ತಾಂಬೂಲ, ಶಯನ. ii. ಗೃಹ, ಶಯನ, ವಸ್ತ್ರ, ಆಭರಣ, ಸ್ತ್ರೀ, ಪುಷ್ಪ, ಗಂಧ, ತಾಂಬೂಲ (ಹೀಗೆ ಸ್ವಲ್ಪ ವ್ಯತ್ಯಾಸದಿಂದ ಹೇಳುವುದುಂಟು)

೧೦. **ಅಷ್ಟೈಶ್ವರ್ಯ** : ಧನ, ಧಾನ್ಯ, ವಾಹನ, ವಸ್ತ್ರ, ಬಂಧು, ಪುತ್ರ, ಭೃತ್ಯ, ದಾಸಿ.

೧೧. **ಅಷ್ಟಾಂಗ ಯೋಗ** : ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾ ಹಾರ, ಧ್ಯಾನ, ಧಾರಣ, ಸಮಾಧಿ.

೧೨. **ಅಷ್ಟವಿಧಾರ್ಚನೆ** : ಜಲ, ಗಂಧ, ಅಕ್ಷತೆ, ಪತ್ರಪುಷ್ಪ, ಧೂಪ, ದೀಪ, ನೈವೇದ್ಯ, ತಾಂಬೂಲ ಇವುಗಳನ್ನರ್ಪಿಸಿ ಅರ್ಚನೆಮಾಡುವಿಕೆ.

೧೩. **ಅಷ್ಟಾವರಣಗಳು :** ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರ

೧೪. **ಅಷ್ಟಾದಶಪುರಾಣಗಳು :** ಶಿವಪುರಾಣ, ಲಿಂಗಪುರಾಣ, ಸ್ಕಾಂದ ಪುರಾಣ, ಅಗ್ನಿಪುರಾಣ, ಮತ್ಸ್ಯ ಪುರಾಣ, ಕೂರ್ಮ ಪುರಾಣ, (ಇವು ಆರೂ ಶಿವನಿಗೆ ಸಂಬಂಧಿಸಿದುವು). ವಿಷ್ಣುಪುರಾಣ, ಗರುಡ ಪುರಾಣ, ಭಾಗವತಪುರಾಣ, ನಾರದೀಯಪುರಾಣ, ಪದ್ಮಪುರಾಣ, ವರಾಹಪುರಾಣ, (ಈ ಆರೂ ವಿಷ್ಣುವಿಗೆ ಸಂಬಂಧಿಸಿದುವು), ಬ್ರಹ್ಮ ಪುರಾಣ, ಬ್ರಹ್ಮಾಂಡಪುರಾಣ, ಬ್ರಹ್ಮವೈವರ್ತಪುರಾಣ, ಮಾರ್ಕಂಡೇಯಪುರಾಣ ಭವಿಷ್ಯಪುರಾಣ (ಈ ಆರೂ ಬ್ರಹ್ಮನಿಗೆ ಸಂಬಂಧಿಸಿದವು)--ಹೀಗೆ ಒಟ್ಟು ಹದಿನೆಂಟು ಪುರಾಣಗಳು. (ಇವಲ್ಲದೆ ಅಷ್ಟಾದಶ ಉಪಪುರಾಣಗಳೂ ಉಂಟು.)

೧೫. **ಅಷ್ಟಭೈರವರು** (ಭೈರವರು) : ಅಸಿತಾಂಗ, ರುರು, ಚಂಡ, ಕ್ರೋಧ. ಉನ್ಮತ್ತ. ಕಪಾಲ, ಭೀಷಣ, ಸಂಹಾರ–ಎಂಬ ಹೆಸರುಳ್ಳವರು.

೧೬. **ಆಗಮಗಳು :** ಇವು ಮುಖ್ಯವಾಗಿ ಇಪ್ಪತ್ತೆಂಟು : ಕಾಮಿಕ, ಯೋಗಜ, ಚಿಂತ್ಯ, ಕಾರಣ, ಅಜಿತ, ದೀಪ್ತ, ಸೂಕ್ಷ್ಮ, ಸಹಸ್ರ, ಅಂಶುಮಾನ್, ಸುಪ್ರಭೇದ, ವಿಜಯ, ನಿಶ್ವಾಸ, (ವಿಶ್ವಾಸ), ಸ್ವಾಯಂಭು, ಅನಲ, ವೀರ, ರೌರವ, ಮಕುಟ, ವಿಮಲ, ಚಂದ್ರಜ್ಞಾನ, ಬಿಂಬ, ಪ್ರೋದ್ಗೀತ, ಲಲಿತ, ಸಿದ್ಧ. ಶಾಂತ, ಸರ್ವೋಕ್ತ, ಪಾರ ಮೇಶ್ವರ, ಕಿರಣ, ವಾತೂಲ ಆಗಮಗಳು.

೧೭. **ಈಷಣತ್ರಯ :** ದಾರೇಷಣ, ಪುತ್ರೇಷಣ, ವಿತ್ತೇಷಣ ಹೆಂಡತಿ, ಮಕ್ಕಳು, ಧನ–ಇವುಗಳ ಮೇಲಿನ ದುರಾಸೆಯೇ 'ಈಷಣತ್ರಯ'ಗಳೆನಿಸುವುವು.

೧೮. **ಈರೇಳುಲೋಕಗಳು (ಹದಿನಾಲ್ಕು ಲೋಕಗಳು) :** ಭೂಲೋಕ, ಭುವರ್ಲೋಕ, ಮಹಾಲೋಕ, ಜನಲೋಕ, ತಪೋಲೋಕ, ಸತ್ಯಲೋಕ (ಇವು ಏಳು ಊರ್ಧ್ವ ಲೋಕಗಳು); ಅತಲ. ವಿತಲ, ಸುತಲ, ರಸಾತಲ, ತಲಾತಲ, ಮಹಾತಲ, ಪಾತಾಳ (ಇವು ಏಳು ಅಧೋಲೋಕಗಳು).

೧೯. (i) **ಏಕಾದಶರುದ್ರರು :** ಅಜೈಕಪಾದ, ಅಹಿರ್ಬುಧ್ನ್ಯ, ಹರ, ನಿರುತ, ಈಶ್ವರ, ಭುವನ, ಅಂಗಾರಕ, ಅರ್ಧಕೇತು, ಮೃತ್ಯು, ಸರ್ಪ, ಕಪಾಲನ್ (ವಾಯು ಪುರಾಣರೀತ್ಯಾ).

(ii) ವೀರಭದ್ರ, ಶಂಭು, ಗಿರೀಶ, ಅಜ, ಏಕಪಾತ್ತು, ಅಹಿರ್ಬುಧ್ನ್ಯ, ಪಿನಾಕಿ, ಸ್ಥಾಣು, ಪಶುಪತಿ, ಭವ, ತ್ರಿಪುರಾಂತಕ—(ವಿವೇಕ ಚಿಂತಾಮಣಿರೀತ್ಯಾ)

೨೦. ಐಕ್ಯ : ವೀರಶೈವದ ಷಟ್‌ಸ್ಥಲಗಳಲ್ಲಿ ಕೊನೆಯ ಸ್ಥಲ. ಇದರಲ್ಲಿ ಕಾಯ ಲಿಂಗೈಕ್ಯ, ಜೀವ ಲಿಂಗೈಕ್ಯ. ಭಾವಲಿಂಗೈಕ್ಯವೆಂದು ಮೂರುತೆರ. (ಚೆನ್ನಬಸವಣ್ಣನವರ ವಚನ (.೦೪೮ ಪ್ರಕಾರ.)[1] ಐಕ್ಯಸ್ಥಲಲಕ್ಷಣಗಳನ್ನು ಹೊಂದಿದ ಅಂಗನೇ ಐಕ್ಯ ನೆನಿಸುವನು.

1. **ಚೆನ್ನಬಸವಣ್ಣನವರ ವಚನ. ಕರ್ನಾಟಕ ವಿ. ವಿ. ಪ್ರಕಟನೆ. (೧೯೬೫)**

೨೧. **ಕರಣತ್ರಯ** :— ಕಾಯ, ವಚನ, ಮನಸ್ಸು.

೨೨. **ಕರ್ಮತ್ರಯ** :— ಸಂಚಿತ, ಪ್ರಾರಬ್ಧ, ಆಗಾಮಿಗಳೆಂಬ ಕರ್ಮತ್ರಯ ದೋಷಗಳು.

೨೩. **ಕರ್ಮೇಂದ್ರಿಯಗಳು** :— (ಪಂಚ ಕರ್ಮೇಂದ್ರಿಯಗಳು) : ವಾಕು, ಪಾಣಿ, ಪಾದ, ಉಪಸ್ಥ. ಪಾಯು (ಗುದ).

೨೪. **ಕಾಯತ್ರಯ** :— ಸ್ಥೂಲ, ಸೂಕ್ಷ್ಮ, ಕಾರಣಗಳೆಂಬ ಮೂರು ತನುಗಳು ಅಥವಾ ಕಾಯಗಳು.

೨೫. **ಕುಲಾಚಲ** :— (i) ಹಿಮಾಲಯ, ನಿಷಧ, ವಿಂಧ್ಯ, ಮಾಲ್ಯವಂತ, ಪಾರಿಯಾತ್ರಕ, ಗಂಧಮಾದನ, ಹೇಮಕೂಟ.

(ii) ಸ್ವಲ್ಪ ಬದಲಾವಣೆಗಳೊಡನೆ–ಮಹೇಂದ್ರ, ಮಲಯ, ಸಹ್ಯ, ಶುಕ್ತಿಮಾನ್, ಋಕ್ಷ, ವಿಂಧ್ಯ, ಪಾರಿಯಾತ್ರಕ—ಹೀಗೂ ಹೇಳುವುದುಂಟು.

೨೬. **ಕ್ಲೇಶಪಂಚಕ** :— (ಪಂಚಕ್ಲೇಶ) ಅವಿದ್ಯೆ, ಅಸ್ಮಿತ. ರಾಗ, ದ್ವೇಷ, ಅಭಿನಿವೇಶ—ಇವು ಐದು ಕ್ಲೇಶಗಳು.

೨೭. **ಗುಣತ್ರಯ** :— ಸತ್ವಗುಣ, ರಜೋಗುಣ, ತಮೋಗುಣ.

೨೮. **ಗುಣಗಳು** : (ಷಡ್ಗುಣಗಳು) : (i) ಸತ್ಕುಲೀನತ್ವ, ಉಜ್ವಲತ್ವ, ಮಹಾಭಾಗ್ಯತ್ವ, ಉದಾರತೆ, ಧಾರ್ಮಿಕ, ತೇಜಸ್ಸು—ಈ ಆರು ಗುಣಗಳು.

(ii) ಬುದ್ಧಿ, ಸುಖ, ದುಃಖ, ರಾಗ, ದ್ವೇಷ, ಯತ್ನ, ಧರ್ಮ, ಅಧರ್ಮ, ಭಾವನೆ ಎಂಬ ಒಂಬತ್ತು ಬಗೆಯಲ್ಲೂ ಹೇಳುವುದುಂಟು. (ವಿ. ಚಿಂತಾಮಣಿ)

೨೯. **ಗುರು** :— ಇವರು ಮೂರು ಬಗೆ : ದೀಕ್ಷಾಗುರು, ಶಿಕ್ಷಾಗುರು, ಮೋಕ್ಷಗುರು ಎಂದು.

೩೦. **ಗುರುಲಿಂಗ** :— ಷಡ್ವಿಧ ಲಿಂಗಗಳಲ್ಲಿ ಎರಡನೆಯದು; ನಾಲಿಗೆ ಈ ಲಿಂಗಸ್ಥಾನ.

೩೧. **ಚತುರಾಚಾರ್ಯರು**:— ರೇಣುಕಾಚಾರ್ಯ, ಏಕೋರಾಮಾರಾಧ್ಯ, ಪಂಡಿತಾರಾಧ್ಯ, ಮರುಳಾರಾಧ್ಯರು.

೩೨. **ಚತುರ್ವಿಧಪುರುಷಾರ್ಥ** :— ಧರ್ಮಾರ್ಥಕಾಮ ಮೋಕ್ಷಗಳು.

೩೩. **ಚತುರ್ವಿಧಪದವಿಗಳು** :—ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ,ಸಾಯುಜ್ಯ.

೩೪. **ಚತುರ್ವೇದಗಳು** :— ಋಗ್ವೇದ, ಯಜುರ್ವೇದ. ಸಾಮವೇದ, ಅಥರ್ವಣವೇದ.

೩೫. **ಚತುರ್ವಿಧ ವಾದ್ಯಗಳು** :—ತತ (ತಂತೀವಾದ್ಯ), ಆನದ್ಧ (ಚರ್ಮವಾದ್ಯ), ಘನ (ಕಂಚು ಮುಂತಾದ ಲೋಹವಾದ್ಯ), ಸುಷಿರ (ಕೊಳಲು ಇತ್ಯಾದಿ ಊದಿಬಾರಿಸುವ ವಾದ್ಯ).

೩೬. **ಚಿಚ್ಛಕ್ತಿ** :— ಪರಾಶಕ್ತಿ, ಆದಿಶಕ್ತಿ, ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿಗಳೆಂಬ ಪಂಚಶಕ್ತಿಗಳಿಂದೊಡಗೂಡಿದ ಚೇತನಾತ್ಮಕವಾದ ಶಿವಶಕ್ತಿಯೇ ಚಿಚ್ಛಕ್ತಿಯೆನಿಸುವುದು. ಇದು ಪರಮ ಪ್ರಣವದ ಪರಮ ಪ್ರಕಾಶರೂಪ. (ಚೆ.ಬ.ವ-೪)

೩೭. **ಜಂಗಮ** :— ಚರಲಿಂಗವೆಂದೂ ಹೆಸರು. ಜಂಗಮಲಿಂಗವೆಂದೂ ಹೆಸರು. ತೂರ್ಯಾತೀತ ಜ್ಞಾನ ಪ್ರತೀಕ, ವೀರಶೈವದ ಪರಮೋಚ್ಚ ತತ್ತ್ವ; ಷಡ್ವಿಧ ಲಿಂಗಗಳಲ್ಲಿ ಮಹಾಲಿಂಗ ಪ್ರತೀಕ. ಭಾವಲಿಂಗ ಸಮರಸ ಸದ್ಭಾವ ಚೇತನ. (....ಗುರುವಿನ ಗುರು ಜಂಗಮ ಎಂದಿತ್ತು ಕೂಡಲಸಂಗಯ್ಯನ ವಚನ-ಬಸವಣ್ಣನವರ ವಚನ)

೩೮. **ಜಂಗಮಲಿಂಗ** : ಷಡ್ವಿಧಲಿಂಗಗಳಲ್ಲಿ ನಾಲ್ಕನೆಯ ಸ್ಥಾನದ ಲಿಂಗತತ್ತ್ವ. ಚರ್ಮದ ಮೂಲಕ ಉಂಟಾಗುವ ಜ್ಞಾನ ಈ ಲಿಂಗಕ್ಕೆ ಅರ್ಪಿತ.

೩೯. **ಜ್ಞಾನೇಂದ್ರಿಯ ಪಂಚಕ** : ಕಿವಿ, ಚರ್ಮ, ಕಣ್ಣು, ನಾಲಿಗೆ, ಮೂಗು. ಇವು ಕ್ರಮವಾಗಿ ಆಕಾಶ, ವಾಯು, ತೇಜ, ಅಪ್ಪು, ಪೃಥ್ವಿತತ್ತ್ವದಿಂದುಂಟಾದ ಇಂದ್ರಿಯಗಳು. ಇವುಗಳಲ್ಲಿ ಕ್ರಮವಾಗಿ ಪ್ರಸಾದಲಿಂಗ, ಜಂಗಮಲಿಂಗ, ಶಿವಲಿಂಗ, ಗುರುಲಿಂಗ ಆಚಾರಲಿಂಗಗಳು ಸ್ಥಾನಗಳು.

೪೦. **ತನುತ್ರಯ** : ಕಾಯತ್ರಯ ನೋಡು.

೪೧. **ತಾಪತ್ರಯ** : ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕಗಳು.

೪೨. **ತ್ರಿಕರಣ** : ಕರಣತ್ರಯ ನೋಡು.

೪೩. **ತೇರಸರು** : (ತ್ರಯೋದಶಗಣರು) ಕಲ್ಯಾಣ ಬಸವರಾಜಯ್ಯ, ಪ್ರಭಾತಗಣ ಸಿಂಗಯ್ಯ, ಬೊಮ್ಮಿಸೆಟ್ಟಿ, ಮೋಳಿಗೆ ನಿಜಸಂಗಾಂಬೆ, ಹೂವಿನ ಬಾಚಯ್ಯ, ಪಡಿಹಾರಿ ಬಸವಯ್ಯ, ಸಾತ್ವಿಕ ಸಂಗಯ್ಯ, ಕಮಲಾದೇವಿ, ಬೊಪ್ಪಿದೇವಿ, ದೇವಯ್ಯ, ಕನ್ನಮಾಂಬಾ, ದೇವರಸ, ಓಹಿಲಯ್ಯ,

೪೪. **ದಶದಿಕ್ಕು** : ಪೂರ್ವ, ಆಗ್ನೇಯ, ದಕ್ಷಿಣ, ನೈಋತ್ಯ, ಪಶ್ಚಿಮ, ವಾಯುವ್ಯ, ಉತ್ತರ, ಈಶಾನ್ಯ, ಊರ್ಧ್ವ (ಮೇಲೆ), ಅಧಸ್ (ಕೆಳಗೆ)

೪೫. **ದಶನಾದಗಳು** (ನಾದಗಳು) : ಸ್ವರನಿರ್ಘೋಷಣ, ನಿರ್ಣಯ ಧ್ವನಿ, ಘಂಟೆ, ಕಹಳೆ, ಶಂಖ, ಮೇಘ, ಮೃದಂಗ, ಭೇರಿ, ಮಂತ್ರ, ಅವ್ಯಕ್ತ ಪ್ರಣವಧ್ವನಿಗಳು

೪೬. **ದಶಗಣರು**: — ವೀರಘಂಟಾಮೈಲ, ದೋರಿದೇವಯ್ಯ, ಸಿಂಗಿದೇವಯ್ಯ ಬೊಪ್ಪಲದೇವಿ, ಕಾಮಲದೇವಿ, ಚೋಳವ್ವೆ ಮಾಯಿ ದೇವಯ್ಯ, ಕನ್ನಮಾಂಬೆ, ಶೃಂಗಿರಾಜ, ಬೀಚಯ್ಯ.

೪೭. **ದ್ವಾದಶಾದಿತ್ಯರು**—(ಆದಿತ್ಯರು) :- ಧಾತಾ, ಅರ್ಯಮಾ, ಮಿತ್ರ, ವರುಣ ಇಂದ್ರ, ವಿವಸ್ವಾನ್, ಪರ್ಜನ್ಯ, ಪೂಷ, ಅಂಶುಮಾನ್, ಗಭಸ್ತಿಮಾನ್, ತ್ವಷ್ಟ್ರ, ವಿಷ್ಣು ಇವರು ಹನ್ನೆರಡು ಜನ ಆದಿತ್ಯರು. ಇವರನ್ನು ಕ್ರಮವಾಗಿ-ಪುಲಸ್ತ್ಯ. ಪುಲಹ, ಅತ್ರಿ, ವಶಿಷ್ಠ, ಅಂಗೀರಸ, ಭೃಗು, ಭರದ್ವಾಜ, ಗೌತಮ, ಕಶ್ಯಪ, ಕೃತು, ಜಮದಗ್ನಿ, ಕೌಶಿಕರೆಂಬ ಋಷಿಗಳು ಕೀರ್ತಿಸುವರು.

೪೮. **ನವಚಕ್ರ** :—ಮೂಲಾಧಾರ, ಸ್ವಾಧಿಷ್ಠಾನ. ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞಾ, ಸಹಸ್ರಾರ, ಶಿಖಾ, ಪಶ್ಚಿಮ ಎಂಬ ಒಂಬತ್ತು ಚಕ್ರಗಳು.

೪೯. **ನವಲಿಂಗ** : ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗ, ಇಷ್ಟ, ಪ್ರಾಣ, ಭಾವಲಿಂಗಗಳು

೫೦. **ಪಂಚಾಚಾರ್ಯರು**:— ರೇಣುಕ, ದಾರುಕ, ಏಕೋರಾಮ, ಪಂಡಿತಾರಾಧ್ಯ, ಮರುಳಾರಾಧ್ಯ.

೫೧. **ಪಂಚಾಕ್ಷರಿ** :— ಐದಕ್ಷರಗಳುಳ್ಳ 'ನಮಃ ಶಿವಾಯ' ಎಂಬ ಶಿವಮಂತ್ರ.

೫೨. **ಪಂಚಾಚಾರ** : (i) ಲಿಂಗಾಚಾರ, ಸದಾಚಾರ, ಭೃತ್ಯಾಚಾರ, ಶಿವಾಚಾರ, ಗಣಾಚಾರ. (ಅಥವಾ) (ii) ಶ್ರುತ್ಯಾಚಾರ, ಸ್ಮೃತ್ಯಾಚಾರ, ಪೌರಾಣಿಕಾಚಾರ, ಆಗಮಾಚಾರ, ತಂತ್ರಾಚಾರಗಳೆಂದು ಇನ್ನೊಂದು ವಿಧದಲ್ಲೂ ಹೇಳುವರು. ಆದರೆ ೨ನೆಯದು ಅಷ್ಟೊಂದು ಮುಖ್ಯವಲ್ಲ.

೫೩. **ಪಂಚಮರುತ್** : ಬ್ರಹ್ಮ, ವಿಷ್ಣು, ರುದ್ರ, ಈಶ್ವರ, ಸದಾಶಿವ.

೫೪. **ಪಂಚವಿಂಶತಿಲೀಲೆ** (ಲೀಲೆಗಳು) :– ಚಂದ್ರಕಲಾಧರಲೀಲೆ, ಉಮಾಮಹೇಶ್ವರಲೀಲೆ, ವೃಷಭವಾಹನಲೀಲೆ, ತಾಂಡವಲೀಲೆ, ಗಿರಿಜಾಕಲ್ಯಾಣಲೀಲೆ, ಭಿಕ್ಷಾಟನಲೀಲೆ, ಮಾರಹತಲೀಲೆ, ಕಾಲಹರಲೀಲೆ, ಜಲಂಧರಲೀಲೆ, ಅಜಾರಿಲೀಲೆ, ವೀರಭದ್ರಲೀಲೆ (ದಕ್ಷಾಧ್ವರಹರಲೀಲೆ), ಶರಭಾವತಾರಲೀಲೆ, ಹರಿಹರಲೀಲೆ, ಅರ್ಧನಾರೀಶ್ವರಲೀಲೆ, ಕಿರಾತಲೀಲೆ, ಕಂಕಾಳಧರಲೀಲೆ, ಚಂಡೇಶಾನುಗ್ರಹಲೀಲೆ, ವಿಷಧರಲೀಲೆ, ಚಕ್ರದಾನಲೀಲೆ, ವಿಘ್ನಪ್ರಸಾದಲೀಲೆ, ಉಮಾಸ್ಕಂದಲೀಲೆ, ಏಕಪಾದಲೀಲೆ, ಸುಖಾವಹಲೀಲೆ, ದಕ್ಷಿಣಾಮೂರ್ತಿಲೀಲೆ, (ಈ ಲೀಲೆಗಳೇ ಅಲ್ಪಸ್ವಲ್ಪ ಬದಲಾವಣೆಯುಳ್ಳ ಹೆಸರುಗಳಿಂದ ಗ್ರಂಥಾಂತರಗಳಲ್ಲಿ ಹೇಳಲ್ಪಟ್ಟಿವೆ. ಶಿವನ ಇಪ್ಪತ್ತೈದನೆಯ ಲೀಲೆಯಲ್ಲಿ ಲಿಂಗೋದ್ಭವ ಲೀಲೆಯನ್ನೂ ಹೇಳಲಾಗಿದೆ.)

೫೫. **ಪಂಚಕ್ಲೇಶ** :– ಕ್ಲೇಶ ಪಂಚಕ ನೋಡು.

೫೬. **ಪಂಚಮಹಾಪಾತಕ** :- (i) ಬ್ರಹ್ಮಹತ್ಯೆ, ಸುರಾಪಾನ, ಸ್ತೇಯ, ಗುರುವಿನ ಪತ್ನಿಗಮನ, ಮತ್ತು ಈ ಆಚಾರವುಳ್ಳವರ ಸಹವಾಸ. (ಇನ್ನೊಂದು ರೀತಿ) (ii) ಕಳವು, ಹಿಂಸೆ, ಹಾದರ, ಅನ್ಯದೈವಭಜನೆ, ಭವಿಸಂಗ. (iii) ಭವಿಪಾಕ, ಅನ್ಯದೈವಭಜನೆ, ಗುರುವಾಕ್ಯೋಲ್ಲಂಘನೆ, ಪರಧನ ಪರಸ್ತ್ರೀ ಮೇಲಣ ಆಸೆ. (ಜೆ. ಬ. ವಚನ ೩೮೨ರ ಪ್ರಕಾರ)

೫೭. **ಪಂಚಬ್ರಹ್ಮ** :– ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ.

೫೮. **ಪಂಚಗವ್ಯ** : ಗೋವಿನ ಹಾಲು, ಮೊಸರು, ತುಪ್ಪ. ಮೂತ್ರ, ಸಗಣಿ

೫೯. **ಪಂಚಾಮೃತ** :– ಹಾಲು, ಮೊಸರು, ತುಪ್ಪ, ಜೇನು, ಸಕ್ಕರೆ

೬೦. **ಪ್ರಸಾದ[ತ್ರಯ]** (i) ಒಕ್ಕಪ್ರಸಾದ, ಮಿಕ್ಕಪ್ರಸಾದ, ಶೇಷಪ್ರಸಾದ.

(ii) ಶುದ್ಧ, ಸಿದ್ಧ, ಪ್ರಸಿದ್ಧ ಪ್ರಸಾದತ್ರಯ.

೬೧. ಪುರಾತನರು :—ಅರುವತ್ತು ಮೂರು ಪುರಾತನರುಗಳನ್ನು 'ಪುರಾತನರು' ಇಷ್ಟೇಕರೆಯಲಾಗಿದೆ. ಅವರು ಕ್ರಮವಾಗಿ ಈ ಕೆಳಗಿನಂತೆ ಇದ್ದಾರೆ. ಈ ಹೆಸರುಗಳು ಕನ್ನಡ ಕಾವ್ಯಗಳಲ್ಲಿ ಅಲ್ಪಸ್ವಲ್ಪವ್ಯತ್ಯಾಸದಿಂದಲೂ ಕಾಣಸಿಗುತ್ತವೆ.

ಅತಿಭಕ್ತ, ಅಮರನೀತಿ, ಅಯ್ಯಡಿ, ಅರಿವಾಳ್ತಾಂಡ, ಅಃಪೂತಿ, ಆನಾಯನಾರ, ಇರಿಭಕ್ತ, ಇಹಃಪಗೆಯೊಂಡ, ಇಳೆಯೊಂಡ ಗುಡಿಮೂರ, ಎಡಗಳೆಯ (ನಿಡುಗುಡಿಯ ಪೆರ್ಮಾಡಿ), ಏಣಾದಿನಾಥ, ಒಲಘಾಂಡಮೂರ್ತಿ, ಓಹಿಲ (ವಾಯಿಲಾರ್), ಕಡವೂರ ಕಾರಿ, ಕಣಂಬುಲ್ಲು ನಂಬಿ, ಕಣ್ಣಪ್ಪ, ಕಾರಿಕಾಲಮ್ಮ, (ಕರೈಕ್ಕಾಲ್ ಅಮ್ಮೈಯಾರ್), ಕಲಿಕಂಪ (ಕಲಿಕ್ಕಂಬರ್), ಕಲಿಕಾಮದೇವ, ಕಲಿಯ ನಾಯನಾರು, ಕಲಚಿತ್ತಿಯಾಂಡರು, ಕಳಚಂಗಚೋಳ (ಕಳಚೆಂಗರು), ಕಳಚಂಗ ಪೆರುಮಾಳ (ಕೋಚ್ಚಂಗಣಚೋಳರು), ಕುಲಚ್ಚರಿ, ಕೊಂಗುಲಿಯಕಲಿಯ, ಕೊಲ್ಪುಲಿಯೂಂಡ, ಗಣನಾಥ (ಕಲಿಗಣನಾಥ) ಚಂಡೇಶ (ಚಂಡೇಶಪಿಳ್ಳೈ), ಚಿರುತೊಣೆಯಾಂಡ, ಚಿರುಪ್ಪುಲಿಯಾಂಡ, ಚೇರಮ ಜಡೆಯನಾಯನಾರ, ತಿರುನೀಲಕಂಠ, ತಿರುನೀಲಕಂಠಪಾಣ, ತಿರುನೀಲನಕ್ಕ, ಚಿರುಕುರು ಪೆಯತೊಂಡ, ತಿರುಜ್ಞಾನ ಸಂಬಂಧರು, ತಿರುನಾಳ್ಪೋವ, ತಿರುಮೂಲದೇವ, ದಂಡೀಶ (ನಮಿತ್ತಂಡಿ), ನಂಬಿಯಣ್ಣ (ಸುಂದರಮೂರ್ತಿ), ನಮಶ್ಶಿವಾಯ ಮುರುಘ, ನಮಿನಂದಿ, ನರಸಿಂಗಮೊನೆಯರು, ನೈಶಭಕ್ತ, ಪಗಲ್ಚೋಳ, ಪಗಲ್ತೊಣೆಯಾಂಡರ್ ಪಾಂಡ್ಯಮಹಾದೇವಿ (ಮಂಗೈಯಕ್ಕರಸಿಯಾರ್), ಪುಸಲೆಯಾಂಡ, ಪೆರುಮಳಲಿಯ ಕುರುಂಬ, ಮಾನಕಂಜಾರ, ಮೂರ್ಖನಾಯನಾರ್, ಮೆರೆಮಿಂಡದೇವ, ಮೊನೆಯಿಡುವರು, ಯಸ್ಯಜ್ಞಾನಿದೇವಿ, ರುದ್ರಪಶುಪತಿ, ವಾಗೀಶ, (ತಿರುವಾಕರೀಶ) ವೆಳ್ಳೂತ, ಸಾಂಖ್ಯಕೊಂಡ, (ಸಾಂಖ್ಯನಾರ), ಚಿರುತೊಂಡ (ದಭ್ರಭಕ್ತ), ಸೇದಿರಾಜ, ಸೋಮಾಸಿಮಾರ, ಸೌಂದರಪಾಡ್ಯ.

೬೨. ಮಲತ್ರಯ :—ಆಣವಮಲ, ಮಾಯಾಮಲ, ಕಾರ್ಮಿಕಮಲ.

೬೩. ಮೂವತ್ತಾರುತತ್ತ್ವಗಳು (ಷಟ್‌ತ್ರಿಂಶತ್‌ತತ್ತ್ವ :– ಶಿವ, ಶಕ್ತಿ, ಸದಾಶಿವ, ಈಶ್ವರ, ವಿದ್ಯೆ, ಕಾಲ, ನಿಯತಿ, ಕಲೆ, ಅವಿದ್ಯೆ, ರಾಗ ಪುರುಷ, ಪ್ರಕೃತಿ, ಗುಣ, ಬುದ್ಧಿ ಅಹಂಕಾರ, ಚಿತ್ತ, ಶ್ರೋತ್ರ, ತ್ವಕ್ಕು, ನೇತ್ರ, ಜಿಹ್ವೆ, ಘ್ರಾಣ, ವಾಕ್ಕು, ಪಾಣಿ, ಪಾದ, ಪಾಯು, ಉಪಸ್ಥ, ಶಬ್ದತನ್ಮಾತ್ರೆ, ಸ್ಪರ್ಶತನ್ಮಾತ್ರೆ, ರೂಪತನ್ಮಾತ್ರೆ ರಸತನ್ಮಾತ್ರೆ, ಗಂಧತನ್ಮಾತ್ರೆ, ನಭ, ವಾಯು, ವಹ್ನಿ, ಜಲ, ಭೂಮಿ-ಇತ್ಯಾದಿ, ಮೂವತ್ತಾರು ತತ್ತ್ವಗಳು.

೬೪. ಷಟ್‌ಸ್ಥಲ :—ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ.

೬೫. ಷಡಕ್ಷರ ಮಂತ್ರ :—'ಓಂನಮಃ ಶಿವಾಯ' ಎಂಬ ಆರು ಅಕ್ಷರ ಮಂತ್ರ.

೬೬. ಷಡಿಂದ್ರಿಯ :—ಮೂಗು, ನಾಲಿಗೆ, ಕಣ್ಣು, ಚರ್ಮ, ಕಿವಿ, ಮನಸ್ಸು.

೬೭. (ಷೋಡಶಗಣ) :—ಹೊನ್ನಯ್ಯ, ಕಿನ್ನರಿಬೊಮ್ಮಯ್ಯ, ಕೇಕಲಾದೇವಿ, ಪಾಂಡ್ಯನಾಯಕ, ಸೇನನಾಥ, ಗುಡ್ಡವ್ವೆ, ದೇವರಬಾಚಯ್ಯ, ಬಿಜ್ಜಯ, ನಾಗಯ್ಯ, ಕುಂದುಲಗಿನಾಗಯ್ಯ, ಹೂವಿನಬಾಚಯ್ಯ, ಹೂವಿನಬಾಚಿದೇವಿ, ಪಡಿಹಾರಿ, ಸೋಮಣ್ಣ, ಉಘೇನಾಗಯ್ಯ, ಹಂದಯ್ಯ, ಕಾಲಾಂಬೆ-ಇತ್ಯಾದಿ (ಗ್ರಂಥಾಂತರದಲ್ಲಿ ಈ ಹೆಸರಿನ ಪಟ್ಟಿಯಲ್ಲಿ ಅಲ್ಪಸ್ವಲ್ಪ ವ್ಯತ್ಯಾಸವೂ ಉಂಟು).

೬೨. **ಷೋಡಶೋಪಚಾರಗಳು** : ಪಾದ್ಯ, ಅರ್ಘ್ಯ, ಆಚಮನ, ಪತ್ರಪುಷ್ಪ, ಗಂಧ, ಅಕ್ಷತೆ, ರುದ್ರಾಕ್ಷಮಾಲಿಕೆ, ಛತ್ರ, ಚಾಮರ, ವ್ಯಜನ, ಗೀತ, ವಾದ್ಯ, ನರ್ತನ, ಪ್ರದಕ್ಷಿಣ, ನಮಸ್ಕಾರ, ಸ್ತೋತ್ರ ಈ ಹದಿನಾರು ಪರಿಕರಗಳಮೂಲಕ ಮಾಡುವ ಪೂಜೆ.

೬೯. ಷಟ್ಚಕ್ರ :—ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞಾಚಕ್ರಗಳು.

೭೦ ಷಟ್ಸಮ್ಮಾರ್ಜನ :—ಗೋಮಯ, ಗೋಕ್ಷೀರ, ಗೋದಧಿ (ಮೊಸರು), ಗೋಮೂತ್ರ, ಗೋರೋಚನಗಳಿಂದ ನೆಲಸಾರಿಸುವುದು.

೭೧. ಷಡೂರ್ಮಿ (ಷಡ್ಭಾವವಿಕೃತಿ) :-ಹಸಿವು (ಕ್ಷುತ್), ನೀರಡಿಕೆ (ಪಿಪಾಸೆ), ಶೋಕ, ಮೋಹ, ಜರಾ, ಮರಣಗಳೆಂಬ ಪ್ರಾಣ, ಮನ, ದೇಹಗಳ ವಿಕಾರಗಳು.

೭೨. ಷಡಧ್ವ :— ಭುವನಾಧ್ವ, ಪದಾಧ್ವ, ಮಂತ್ರಾಧ್ವ, ತತ್ತ್ವಾಧ್ವ ಕಲಾಧ್ವ, ವರ್ಣಾಧ್ವ.

೭೩ ಷಡ್ರಸ :—ಸಿಹಿ, ಹುಳಿ, ಉಪ್ಪು, ಕಾರ, ಒಗರು, ಕಹಿ. (ಕ್ರಮವಾಗಿ- ಮಧುರ, ಆಮ್ಲ, ಕ್ಷಾರ, ಕಟು,ಕಷಾಯ, ತಿಕ್ತ).

೭೪. ಷಡಬ್ಜ :-ಷಟ್ಚಕ್ರನೋಡು.

೭೫. ಷಡ್ವಿಧಭಕ್ತಿ :- ಶ್ರದ್ಧಾಭಕ್ತಿ, ನಿಷ್ಠಾಭಕ್ತಿ, ಅವಧಾನಭಕ್ತಿ, ಅನುಭವ ಭಕ್ತಿ, ಆನಂದಭಕ್ತಿ, ಸಮರಸಭಕ್ತಿ. (ಇವುಕ್ರಮವಾಗಿ ಷಟ್ಸ್ಥಳಗಳೊಡನೆ ಸಂಬಂಧ, ಹೊಂದುತ್ತವೆ).

೭೬. ಸಪ್ತವ್ಯಸನ :- ತನು, ಮನ, ಧನ, ರಾಜ್ಯ, ವಿದ್ಯೆ, ಉತ್ಸಾಹ, ಸೇವಕ ಇವುಗಳಿಗೆ ಸಂಬಂಧಿಸಿದ ವ್ಯಸನಗಳು.

ಪರಿಶಿಷ್ಟ—೫

ಪೂರ್ವಕಥೆಗಳು

ಆಶ್ವಾಸ ೧. ಪದ್ಯ ೧೪ : ''ವೀರಶೈವಮತ ದಿವ್ಯಮಹತ್ವ ನಿದರ್ಶನಕ್ಷಮತ್ ಪಂಡಿತರ್....

ವೀರಶೈವ ಪ್ರಪಂಚದಲ್ಲಿ (೧) ಶ್ರೀಪತಿ ಪಂಡಿತ (೨) ಮಂಚಣ್ಣ ಪಂಡಿತ (೩) ಮಲ್ಲಿಕಾಜುನ ಪಂಡಿತರೆಂಬುವರು ಪಂಡಿತತ್ರಯರೆಂದು ಪ್ರಸಿದ್ಧರಾಗಿದ್ದಾರೆ. ಇವರನ್ನು ಕುರಿತು ಕವಿ ಹೇಳಿದ ಮಾತೇ ಅದು.

i. **ಶ್ರೀಪತಿ ಪಂಡಿತ** : ಈತನು ಕೃಷ್ಣಾ ನದೀ ತೀರದ ಬೇಜವಾಡದಲ್ಲಿದ್ದನು. ಶ್ರೀ ಶೈಲದ ಮಲ್ಲಿಕಾರ್ಜುನ ಸ್ವಾಮಿಯ ಪರಮ ಭಕ್ತನು. ಬ್ರಹ್ಮಸೂತ್ರಗಳಿಗೆ ವೀರ ಶೈವದ ಪರವಾಗಿ ಶ್ರೀಕರ ಭಾಷ್ಯ ಬರೆದಿದ್ದಾನೆಂದು ಹೇಳುವ ವಾದ ಸಂಶಯಕ್ಕೆಡೆ ಗೊಟ್ಟಿದೆ. ಬಸವಣ್ಣನವರ ಹಿರಿಯ ಸಮಕಾಲೀನರಾಗಿದ್ದರೆಂದು ತಿಳಿದುಬರುವುದು. ಮೂವರು ಪಂಡಿತರಲ್ಲಿ ಇವರೇ ಮೊದಲಿಗರು. ಆಂಧ್ರ ದೇಶದಲ್ಲಿ ವೀರಶೈವ ಧರ್ಮ ಪ್ರಸಾರ ಕಾರ್ಯಮಾಡಿದವರಲ್ಲಿ ಇವರೇ ಮೊದಲಿಗರೆಂದು ಹೇಳಲಾಗುತ್ತಿದೆ. ಈಗಿನ ಕರ್ನೂಲು, ಗುಂಟೂರು, ನೆಲ್ಲೂರು, ಕೃಷ್ಣಾ, ಗೋದಾವರೀ ಜಿಲ್ಲೆಗಳಲ್ಲಿ ಇವರ ಪ್ರಭಾವ ಹೆಚ್ಚಾಗಿತ್ತು. ಇವರ ಬಗೆಗೆ ಅನೇಕ ಪವಾಡದ ಕಥೆಗಳನ್ನು ಹೇಳಲಾಗು ತ್ತಿದೆ. ಆಂಧ್ರದ ಅನೇಕ ಶಾಸನಗಳಲ್ಲಿ ಇವನ ಬಗೆಗೆ ವಿಶೇಷ ಪ್ರಶಂಸೆಯಿದೆ.

ii. **ಮಂಚಣ್ಣ ಪಂಡಿತ** : ಈತನು ಕಾಶಿಯ ಬಹುಶ್ರುತ ವಿದ್ವಾಂಸ. ಕಾಮಿಕಾದಿ ಆಗಮಗಳಿಗೆ ವೃತ್ತಿ ಮತ್ತು ದೀಪಿಕೆಗಳನ್ನು ರಚಿಸಿ ಕಾಶಿಯಲ್ಲಿ ಶಿವ ಸಮಯವನ್ನು ಸ್ಥಿರಪಡಿಸಿದ ಶಂಭುಲಿಂಗಭಟ್ಟನೆಂಬುವನು ಈತನ ತಂದೆ. ಇವನಿಗೆ 'ಶಿವಲೆಂಕಮಂಚಣ್ಣ'ನೆಂದೂ ಹೆಸರು. ಸಕಲಾಗಮಾಚಾರ್ಯನೆಂದು ಪ್ರಸಿದ್ಧನಾದ ಇವನು ಕಲ್ಯಾಣದ ಬಸವಣ್ಣನ ಖ್ಯಾತಿಯನ್ನು ಕೇಳಿ ಕಲ್ಯಾಣಕ್ಕೆ ಬಂದು ಬಸವಣ್ಣನ ಅನುಯಾಯಿಯಾದನು. 'ಈಶಾನ್ಯ ಮೂರ್ತಿ ಮಲ್ಲಿಕಾರ್ಜುನಲಿಂಗ' ಎಂಬ ಅಂಕಿತ, ದಲ್ಲಿ ವಚನ ರಚಿಸಿದ್ದಾನೆ.

iii. **ಮಲ್ಲಿಕಾರ್ಜುನ ಪಂಡಿತ**: ಬಸವಣ್ಣನವರ ಸಮಕಾಲೀನನಾಗಿ ಶ್ರೀಶೈಲ ಪೀಠದಲ್ಲಿ ೧೨ನೆಯ ಶತಮಾನದಲ್ಲಿ ಪ್ರಖ್ಯಾತನಾಗಿದ್ದ ಮಲ್ಲಿಕಾರ್ಜುನ ಪಂಡಿತಾ ರಾಧ್ಯನೇ ಈತನು. ಕಾಕಿನಾಡಿನಲ್ಲಿರುವ ದ್ರಾಕ್ಷಾರಾಮದ ಭೀಮೇಶ್ವರಲಿಂಗದ ಪರಮ ಭಕ್ತರಾಗಿದ್ದ ಭೀಮನ ಪಂಡಿತ—ಗೌರಾಂಬೆಯರ ಪುತ್ರ. ಕೋಟಿಪಲ್ಲಾರಾಧ್ಯ ರೆಂಬುವರಿಂದ ವೀರಶೈವದೀಕ್ಷೆ ಪಡೆದು, ಶ್ರೀಶೈಲ ಪೀಠಾಧಿಪತಿಯಾದನು. ಬಸವಣ್ಣ ನವರು ಕಳಿಸಿದ ವಿಭೂತಿಯ ಮಾಹಾತ್ಮ್ಯೆಯಿಂದ ಕನ್ನಡ ಭಾಷೆ ಬಂದ ಹಾಗೆ ಹೇಳಿಕೆ

ಯಿದೆ. ಕನ್ನಡ ಮತ್ತು ತೆಲುಗುಗಳಲ್ಲಿ ಅನೇಕ ಕಾವ್ಯ ರಚಿಸಿದ್ದಾನೆ. ಬಸವಣ್ಣನವರನ್ನು ಕಾಣಲಿಕ್ಕೆಂದು ಕಲ್ಯಾಣಕ್ಕೆ ಹೊರಟು ಹಾದಿಯಲ್ಲಿಯೇ ಬಸವಣ್ಣನವರ ಲಿಂಗೈಕ್ಯದ ಸುದ್ದಿಯನ್ನು ಕೇಳಿ ಹಿಂದಕ್ಕೆ ಹೊರಟು ಶ್ರೀಶೈಲಕ್ಕೆ ಬಂದು ಲಿಂಗೈಕ್ಯನಾದನು. ಇವನ ನಂತರ ಇವನ ಮಗ ಕೇದಾರಗುರು ಶ್ರೀಶೈಲ ಸಿಂಹಾಸನದ ಪಟ್ಟವನ್ನು ಪಡೆದನು. 'ಅಮರ ಗೊಂಡದ ಮಲ್ಲಿಕಾರ್ಜುನ' ಎಂಬ ಅಂಕಿತದಲ್ಲಿ ವಚನಗಳನ್ನು ರಚಿಸಿದವನು ಇವನೇ ಎಂದು ತರ್ಕಿಸಲಾಗಿದೆ.

೨. ಆ. ೧. ಪ. ೨೨. **'ಭೂರಜವುಂ ಸುವರ್ಣರಜವಾಗಿಸಿ'ದ ಕಥೆ :** ಕನ್ನ ಕೊರೆದು ಗುರುಲಿಂಗಜಂಗಮ ಸೇವೆ ಮಾಡುತ್ತ ಜೀವಿಸುತ್ತಿದ್ದ ಕನ್ನದ ಮಾರಯ್ಯನು ಒಮ್ಮೆ ಹಾಡುಹಗಲು ಬಿಜ್ಜಳನ ಭಂಡಾರಕ್ಕೆ ಕನ್ನಹಾಕಿದನು. ಕನ್ನ ಕೊರೆದಾಗ ಉದುರಿದ ಮಣ್ಣನ್ನು ಸುವರ್ಣದ ರಜವನ್ನಾಗಿಸಿ - ತೋರಿಸಿ ಆಶ್ಚರ್ಯಗೊಳಿಸಿದನು. (ಇದೇ ಗ್ರಂಥದ ೨೦ನೆಯ ಆಶ್ವಾಸದಲ್ಲಿ ಬಂದಿರುವ ಈ ಕಥೆಯನ್ನು ನೋಡಿರಿ.)

೩. **ಆ. ೧. ಪ. ೨೨. ನುಣ್ಮಣಿಗೈದು ಸಾರವಾರ್ಧಾರೆಯ ತುಂತುರಿಂ' ಎಂಬುದಕ್ಕೆ ಕಥೆ :** ಬಸವಣ್ಣನವರು 'ಬೇಡುವವರಿಲ್ಲದೆ ಬಡವಾದೆ' ಎಂಬ ವಚನವನ್ನು ಹಾಡಿದರು. ಮಡಿವಳಮಾಚಯ್ಯನವರು ಭಕ್ತರು ಬೇಡಬೇಕೆ? ಎಂದುಕೊಂಡು ಹರಿಯುತ್ತಿರುವ ಹೊಳೆಯ ನೀರನ್ನು ಕಾಲಿನಿಂದ ಒದ್ದು ಮೇಲಕ್ಕೆ ಹಾರಿಸುತ್ತಿರಲು ಆ ನೀರೇ ಮುತ್ತು ರತ್ನಗಳಾಗುತ್ತಿದ್ದವು. ವಿಟಜಂಗಮರಿಗೆ ಹೀಗೆ ನೀರಿನಿಂದಾದ ಮುತ್ತು ರತ್ನಗಳನ್ನು ಕೊಡುತ್ತಿರಲು ಅವರು ಅವನ್ನೊಯ್ದು ವೇಶ್ಯೆಯರಿಗೆ ಕೊಡುತ್ತಿದ್ದರು. ವೇಶ್ಯೆಯರು ಇದರಿಂದ ಶ್ರೀಮಂತರಾಗಿ ಉಪ್ಪರಿಗೆಯ ಮನೆಗಳಲ್ಲಿ ಸುಖವಾಗಿ ವಾಸಿಸುತ್ತಿದ್ದರು.

೪. **ಆ. ೧. ಪ. ೨೨. : ಶಿಖಿಯನಂಬರದೊಳ್‌ಮಿಗೆ ಕಟ್ಟಿದುದಕ್ಕೆ ಕಥೆ :** ಒಮ್ಮೆ ಶ್ರೀಪತಿ ಪಂಡಿತರಿಗೂ ಬ್ರಾಹ್ಮಣರಿಗೂ ವಾಗ್ವಾದ ನಡೆಯಿತು. ಅಗ್ನಿಯೇ ದೈವವೆಂದು ವಾದಿಸಿದ ಬ್ರಾಹ್ಮಣರ ವಾದವನ್ನು ಅತಿಗಳೆದು ಜಂಗಮವೇ ದೈವವೆಂದು ಸಿದ್ಧಾಂತಗೊಳಿಸುವ ಸಮಯದಲ್ಲಿ ಅಗ್ನಿಯನ್ನು ನನ್ನ ಅಂಕಿತದಲ್ಲಿಟ್ಟುಕೊಳ್ಳುತ್ತೇನೆಂದು ಪಂಥಮಾಡಿ, ಬ್ರಾಹ್ಮಣರ ಯಾಗಶಾಲೆಯ ಅಗ್ನಿಯನ್ನು ಬಟ್ಟೆಯಲ್ಲಿ ಕಟ್ಟಿ ಏಳುದಿನಗಳವರೆಗೆ ಒಂದು ಬನ್ನಿಯ ಮರಕ್ಕೆ ತೂಗು ಹಾಕಿದನು. ಅಗ್ನಿಯು ನಿಗಿನಿಗಿ ಉರಿಯುತ್ತಿದ್ದರೂ ಬಟ್ಟೆ ಸುಡದೆ ಏಳು ದಿನಗಳವರೆಗೆ ಆ ಅಗ್ನಿಯನ್ನು ತನ್ನ ಅಂಕಿತದಲ್ಲಿಟ್ಟು ಮೆರೆಸಿದನು.

೫. ಆ. ೧. ಪ. ೨೨. **'ಮಾರುತಾಧಾರದೆ ಸದ್ಗುಗ್ಗುಳ'ದ ಕಥೆ :** ಗುಜರಾತ ದೇಶದಲ್ಲಿ ಓಹಿಲಯ್ಯನೆಂಬ ಭಕ್ತನಿದ್ದನು. ಅವನು ಸೌರಾಷ್ಟ್ರದ ಸೋಮನಾಥನಿಗೆ ಗುಗ್ಗುಳದ ಧೂಪವನ್ನು ಸಮರ್ಪಿಸುವನೇಮವನ್ನು ಆಚರಿಸುತ್ತ ಭಕ್ತಿ ಜೀವನ ನಡೆಸುತ್ತಿದ್ದನು. ೧೨ ವರ್ಷಗಳ ಕಾಲ ಮಲಯ ಪರ್ವತಕ್ಕೆ ಹೋಗಿ ಗುಗ್ಗುಳವನ್ನು ತಂದು ಸಮರ್ಪಿ

ಸುತ್ತ ಶಿವನಿಗೆ ಮೆಚ್ಚಾದನು. ಒಮ್ಮೆ ಗಗ್ಗುಳ ತರುವಾಗ ಕಾಲಿಗೆ ಮುಳ್ಳು ಚುಚ್ಚಿ ನಡೆಯದಾದಾಗ ಶಿವನು ಶಬರವೇಷದಿಂದ ಮುಳ್ಳು ತೆಗೆದನು. ಶಿವನು ಇವನ ಭಕ್ತಿಗೆ ಮೆಚ್ಚಿದನು. ಇವನು ಗಂಟೆಯನ್ನು ಬಾರಿಸುತ್ತ ಆಕಾಶಮಾರ್ಗದಲ್ಲಿ ನಡೆದು ಕೈಲಾಸಕ್ಕೆ ಹೋದನು. ಇವನ ಹಾಗೆಯೇ ಚೇರಮರಾಯನೂ ದೂಪ ಧೂಮದ ಮಾರ್ಗ ಹಿಡಿದು ಕೈಲಾಸಕ್ಕೆ ಹೋಗಿದ್ದಾನೆ. ಇದರಂತೆ ಉದ್ಭಟ ದೇವನೂ ಪಟ್ಟಣ ಸಮೇತ ಹೋಗಿದ್ದಾನೆ.

೬. ಆ. ೧. ಪ. ೨೨. 'ನಭಮಂ ನುಡಿಸಿದ' ಕಥೆ : ವಿಟನೋರ್ವನು ವೇಶ್ಯಾರ್ಥ ವಾಗಿ ಕುರಿಯೊಂದನ್ನು ಹಿಡಿದೆಳೆಯುತ್ತ ಹೋಗುವಾಗ ಆ ಕುರಿ ಹೆದರಿ ಕಿನ್ನರಿ ಬೊಮ್ಮಯ್ಯನಿದ್ದ ತ್ರಿಪುರಾಂತಕೇಶ್ವರ ದೇವಾಲಯ ಪ್ರವೇಶಿಸಲಾಗಿ ಬೊಮ್ಮಯ್ಯ ನವರು ಆ ವಿಟನಿಗೆ ಸಾವಿರ ಹೊನ್ನು ಕೊಟ್ಟು ಬಿಡಿಸಿದರು. ವಿಟನು ವೇಶ್ಯೆಯ ಕೋಪಕ್ಕೆ ಹೆದರಿ ಪುನಃ ಕುರಿಯನ್ನು ಕೊಡು ಎಂದು ಬರಲು ಕಿನ್ನರಯ್ಯನು ವಿಟನನ್ನು ಕೊಂದನು. ಬಿಜ್ಜಳನು ಈ ವಿಷಯದಲ್ಲಿ ಆಕ್ಷೇಪಿಸಲು ಕಿನ್ನರಯ್ಯನು ಈಶ್ವರನ ಸಾಕ್ಷಿಯನ್ನು ಬಿಜ್ಜಳನಿಗೆ ಹೇಳಲು, ವಿಸ್ತಾರವಾದ ಆಕಾಶ ಧ್ವನಿಯೊಂದು ದಶದಿಕ್ಕು ಗಳನ್ನು ವ್ಯಾಪಿಸಿತು. ಹೀಗೆ ಕಿನ್ನರಯ್ಯನು ಆಕಾಶವನ್ನೇ ನುಡಿಸಿದನು.

೭. ಆ. ೧. ಪ. ೨೨. ಶಿವನೇದೈವಮೆನುತ್ತೆ ತೋರಿ ನಿಜಮಂ ಎಂಬುದಕ್ಕೆ ಕಥೆ : ದೇವರದಾಸಿಮಯ್ಯನು ಪೊಟ್ಟಲಕೆರೆಯ ಅರಸನಾದ ಜಯಸಿಂಹನ ಆಸ್ಥಾನದಲ್ಲಿ ಜೈನ, ಬೌದ್ಧ, ವೈಷ್ಣವವಾದಿಗಳನ್ನೆಲ್ಲ ವಾದದಲ್ಲಿ ಸೋಲಿಸಿ ಶಿವನೇ ದೈವವೆಂದು ಸಾರಿ, ಮಾಹಾತ್ಮೆಯನ್ನು ಪ್ರಕಟಿಸಿ ಅವರನ್ನೆಲ್ಲ ವೀರಶೈವರನ್ನಾಗಿ ಮಾಡಿದನು,

೮. ಆ. ೧. ಪ. ೨೩. ಶಿವನಂ ಸಂಪ್ರೀತಿಯಿಂ ದೂದಟ್ಟ ಎಂಬುದಕ್ಕೆ ಕಥೆ : ಚೋಳ ರಾಜ್ಯದ ಮುರುಂಗೊಂಟೆ (ಚೆಂಗೊಂಡೆ) ಎಂಬ ಊರಲ್ಲಿ ಪಿಡ್ಡವ್ವ ಎಂಬ ಶಿವಭಕ್ತ ಳಿದ್ದಳು. ಅವಳು ದೋಸೆಗಳನ್ನು ಹೊಯ್ದು ಶಿವಶರಣರಿಗೆ ಪ್ರಸಾದಕೊಡುವ ಕಾಯಕ ಮಾಡುತ್ತಿದ್ದಳು. ಚೋಳರಾಜನು ಕೆರೆಕಟ್ಟಿಸುವ ಕಾರ್ಯಕ್ಕೆ ಪಿಡ್ಡವ್ವೆ ಬಿಟ್ಟಿ ಕೆಲಸಕ್ಕೆ ಬರಬೇಕೆಂದು ಒತ್ತಾಯ ಬಂತು. ಮುದುಕಿಯಾದ ಅವಳು ಆ ಕಾರ್ಯಕ್ಕೆ ಅಸಮರ್ಥಳಾಗಿದ್ದಳು. ಶಿವನು ಓರ್ವತರುಣನ ವೇಷದಿಂದ ಅವಳ ಪರವಾಗಿ ಹೋಗಿ ಆ ಬಿಟ್ಟಿಯ ಕೆಲಸ ಮಾಡಿದನು.

೯. ಆ. ೧. ಪ. ೨೩ : ಶಿವನಿಂದ ಅದ್ಭುತಾಯುಮಂ ಪಡೆದ ಕಥೆ :—ದೇವರಾಜ ಶಚೀದೇವಿಯರಿಗೆ ಪುತ್ರನಾದ ಮಲೆಯರಾಜನೆಂಬುವನು ಅಲ್ಪಾಯುಷಿಯಾಗಿದ್ದನು. ಇವನು ಶಿವಲಿಂಗವನ್ನು ಅಷ್ಟವಿಧಾರ್ಚನೆ ಷೋಡಶೋಪಚಾರಗಳಿಂದ ಪೂಜೆಮಾಡಿ ನೂರುವರ್ಷ ಆಯುಷ್ಯವನ್ನು ಪಡೆದು ಕೊನೆಗೆ ತನ್ನ ನವಲಕ್ಷ ದೇಶಸಹಿತ ಕೈಲಾಸಕ್ಕೆ ಹೋದನು.

೧೦. ಆ ೧-ಪ ೨೩ : **ಶಿವನೊಳ್ ಕೂರ್ತು ಒಡನುಂಡುದಕ್ಕೆ ಕಥೆ** :—ಕಾಂಚಿ ಪಟ್ಟಣ ದಲ್ಲಿದ್ದ ಮಾದಾರ ಚೆನ್ನಯ್ಯನು ಕಾರಿಕಾಲ ಚೋಳ ರಾಜನ ಕುದುರೆಯ ಲಾಯಕ್ಕೆ ಹುಲ್ಲು ಹಾಕುವ ಕಾಯಕ ಮಾಡಿಕೊಂಡಿದ್ದನು. ಚೆನ್ನಯ್ಯನ ಭಕ್ತಿಯನ್ನು ಲೋಕಕ್ಕೆ ಪ್ರಕಟಗೊಳಿಸಬೇಕೆಂದು ಶಿವನು ಒಂದು ದಿನ ಚೆನ್ನಯ್ಯನು ತನಗೆ ಅರ್ಪಿಸುತ್ತಿದ್ದ ಅಂಬಲಿಯನ್ನು ಹೊಟ್ಟೆ ತುಂಬ ಅವನೊಡನೆಯೇ ಊಟ ಮಾಡಿದನು. ಕಾರಿಕಾಲ ಚೋಳನು ಅರ್ಪಿಸಿದ ಷಡ್ರಸೋಪೇತ ಭಕ್ಷ್ಯವನ್ನು ಮುಟ್ಟಲಿಲ್ಲ. ಚೋಳನು ಕಾರಣ ಕೇಳಿದ್ದಕ್ಕೆ ಚೆನ್ನಯ್ಯನ ಮನೆಯಲ್ಲಿ ಊಟಮಾಡಿದ ವಿಚಾರ ತಿಳಿಸಿದನು.

೧೧. ಆ ೧-ಪ-೨೪ : **ಧನವನಿತಾ ತನೂಭವ ಮನಸ್ಸನು ಮುಖ್ಯವನ್ನಿತ್ತು ಶಂಭುಕೃಪೆ ಪಡೆದ ಅನುಪಮಭಾವರು** :—

(i) **ಧನವನ್ನಿತ್ತವನು ಎಂಬುದಕ್ಕೆ ಕಥೆ** :—ಚೋಳಮಂಡಲದ ಕಾಂಚಿ ಪಟ್ಟಣದಲ್ಲಿ ದೀಪದ ಕಲಿ, ಕಲಿಯನಾಯನಾರು, ಕಲಿಯಾರು–ಇತ್ಯಾದಿ ಅನೇಕ ಹೆಸರುಗಳಿಂದ ಪ್ರಖ್ಯಾತನಾದ ಒಬ್ಬ ವ್ಯಾಪಾರಿ ೬೬ ಕೋಟಿ ದ್ರವ್ಯದ ಒಡೆಯನೆನಿಸಿದ್ದನು. ಒಮ್ಮೆ ವ್ಯಾಪಾರಕ್ಕೆಂದು ಕಾಡಿನಲ್ಲಿ ಹೋಗುತ್ತಿದ್ದಾಗ ಹುಲಿಯ ಗರ್ಜನೆಗೆ ಹೆದರಿ ಅಡವಿ ಪಾಲಾದನು. ಅಡವಿಯಲ್ಲೊಂದು ಶಿವಾಲಯವನ್ನು ಕಂಡು ಅಲ್ಲಿಯೇ ನಿಂತು ಆ ಗುಡಿಯ ಜೀರ್ಣೋದ್ಧಾರ ಮಾಡಿಸಲು, ಅದಕ್ಕೆ ಕೋಟೆಯನ್ನು ಕಟ್ಟಲು ತನ್ನ ಧನ ವನ್ನೆಲ್ಲ ವ್ಯಯ ಮಾಡಿದನು. ಕೊನೆಗೆ ದೀಪ ಹೊತ್ತಿಸಲೂ ಗತಿಯಿಲ್ಲದೆ ತನ್ನ ತಲೆ ಗೂದಲನ್ನೇ ಕಕ್ಕಡ ಮಾಡಿ ಉರಿಸಿ ಕೈಲಾಸಕ್ಕೆ ಹೋದನು. ಇವನಂತೆಯೇ ಕಲಿಯ ನಾಯನಾರು ಎಂಬುವನೂ ಧನವನ್ನಿತ್ತ ಪುರಾತನನು.

(ii) **ವನಿತೆಯನ್ನಿತ್ತುದಕ್ಕೆ ಕಥೆ** :—ಕಾವೇರಿ ಪುರದಲ್ಲಿ ಸಿಂಧು ಬಲ್ಲಾಳನೆಂಬ ಭಕ್ತ ನಿದ್ದನು. ಈತನ ಭಕ್ತಿಯನ್ನು ಪರೀಕ್ಷಿಸುವುದಕ್ಕೆ ಶಿವನು ಜಂಗಮರೂಪದಿಂದ ಬಂದು ಸತಿಯನ್ನೇ ಬೇಡಿದನು. ಸಿಂಧುಬಲ್ಲಾಳನು ಹಿಂದುಮುಂದು ನೋಡದೆ ಆ ಜಂಗಮನ ಇಚ್ಛೆಯನ್ನು ಪೂರೈಸಲು ಶಿವನು ಶಿಶುವಾಗಿ ಅವಳ ಮೊಲೆಯುಣ್ಣುತ್ತಿದ್ದನು. (ಗ್ರಂಥಾಂತರದಲ್ಲಿ ಈ ಕಥೆಯಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸಗಳು ಕಂಡುಬರುತ್ತವೆ).

(iii) **ತನೂಭವನನ್ನಿತ್ತುದಕ್ಕೆ ಕಥೆ** :—ಕಾಂಚಿ ನಗರದಲ್ಲಿ ಚಿರುತೊಂಡ ಅಥವಾ, ಸಿರಿಯಾಳಸೆಟ್ಟಿ ಎಂಬ ಭಕ್ತನಿದ್ದನು. ಇವನ ಹೆಂಡತಿಯ ಹೆಸರು ಚಂಗಳೆ. ಶಿವನು ಇವರೀರ್ವರ ಭಕ್ತಿಯನ್ನು ಪರೀಕ್ಷಿಸಲು ಬಂದು, ಇವರ ಮಗನನ್ನು ಕೊಂದು ಆ ಮಾಂಸದ ಅಡಿಗೆಯನ್ನು ಅಪೇಕ್ಷಿಸಿದನು. ಗಂಡಹೆಂಡಿರಿಬ್ಬರೂ ಶಿವನ ಅಪೇಕ್ಷೆಯನ್ನು ಪೂರೈಸಿದರು. ಶಿವನು ಇವರ ಭಕ್ತಿಗೆ ಪ್ರಸನ್ನನಾಗಿ ಸತ್ತ ಮಗನನ್ನು ಪುನಃ ಜೀವಂತ ನನ್ನಾಗಿ ಮಾಡಿ ಕೈಲಾಸಕ್ಕೆ ಕರೆದೊಯ್ದನು.

(iv) **ಮನವನಿತ್ತವರು** :—ಸಾಮಾನ್ಯವಾಗಿ ಈಶ್ವರನಿಗೆ ಮನಸ್ಸನ್ನು ಇತ್ತವರು ಎಲ್ಲ ಪುರಾತನರೂ ಆಗುತ್ತಾರೆ. ಮನಸ್ಸಿನಲ್ಲಿ (ಹೃದಯದಲ್ಲಿ) ಲಿಂಗಪ್ರತಿಷ್ಠೆಯ

ಮಾಡಿ ಭಾವ ಕುಸುಮದಿಂದ ಪೂಜಿಸುತ್ತಿದ್ದ ಪಾಹಿಲ್ಯನೆಂಬುವನು ಚೋಳದೇಶದ ತಿರುಪೊನ್ನೆಯೆಂಬಲ್ಲಿದ್ದನು. ಅರುವತ್ತು ಮೂವರಲ್ಲಿ ಇವನೊಬ್ಬ. ಇವನು ಖಡ್ಗದಿಂದ ತನ್ನ ಎದೆಯನ್ನು ಸೀಳಿ ಕಲ್ಪತರು ಪುಷ್ಪಗಳಿಂದ ಪೂಜೆಗೊಂಡ ಶಿವಲಿಂಗವನ್ನು ಜಂಗಮ ಸಮೂಹಕ್ಕೆ ತೋರಿಸಿದನು. ಶಿವನಿಗೆ ಸಂಪೂರ್ಣವಾಗಿ ತನ್ನ ಮನಸ್ಸನ್ನಿತ್ತ ಪುರಾತನನೀತನಾಗಿದ್ದಾನೆ.

(v) **ತನುವನ್ನಿತ್ತವನ ಕಥೆ** :—ಸಿಂಧು ದೇಶದ ರಾಜನಾದ 'ಸಿಂಧುಮರಾಳ'ನೆಂಬುವನು ತನ್ನ ತನುಮನಧನವೆಲ್ಲ ಜಂಗಮಾರ್ಪಿತವೆಂದು ಸಾರಿದ್ದನು. ಶಿವನು ಇವನ ಭಕ್ತಿಯನ್ನು ಪರೀಕ್ಷಿಸಲು ಜಂಗಮರೂಪದಿಂದ ಬಂದು, ದೇಹದಲ್ಲಿ ಅರ್ಧಭಾಗವನ್ನು ಕೇಳಿದನು. ರಾಜನು ಗರಗಸ ತರಿಸಿ ಅರ್ಧದೇಹವನ್ನು ಕೊರೆಸಿಕೊಟ್ಟನು. ಎಡಗಡೆ ಭಾಗದಲ್ಲಿದ್ದ ಎಡಗಣ್ಣಿನಿಂದ ನೀರು ಸುರಿಯ ತೊಡಗಲು ಜಂಗಮನು 'ಅಳುತ್ತ ಕೊಡುವ ದಾನ ಸ್ವೀಕರಿಸುವುದಿಲ್ಲ'ವೆಂದಾಗ, ರಾಜನು 'ನಾನು ಅಳುತ್ತಿಲ್ಲ' ಎಡಭಾಗ ವ್ಯರ್ಥವಾಯಿತಲ್ಲಾ ! ಎಂಬ ಸಂಕಟವಾಯಿತು ಅದಕ್ಕಾಗಿ ಕಣ್ಣೀರು ಬಂದುವೆಂದನು. ಶಿವನು ಮೆಚ್ಚಿ ಕೈಲಾಸಕ್ಕೆ ಕರೆದೊಯ್ದನು.

(೧೨) ಅ. ೫, ಪ-೨೧-**ವೃಷಭನು ಶಿಂಶುಮಾರನನಿಕ್ಕಿದ ಕಥೆ** :—ತ್ರಿಪುರಸಂಹಾರ ಕಾಲದಲ್ಲಿ ಶಿಂಶುಮಾರನೆಂಬ ರಾಕ್ಷಸನಿಗೂ ನಂದೀಶ್ವರನಿಗೂ ಘೋರ ಯುದ್ಧವಾಯಿತು. ದೇವತೆಗಳನ್ನೆಲ್ಲ ಸದೆಬಡಿದ ಈತನು ನಂದಿಯನ್ನು ನುಂಗಿಬಿಡುವೆನೆಂದು ಬಾಯ್ದೆರೆಯಲು ನಂದಿಯು ಅವನ ಬಾಯಿಯ ಮೂಲಕವೇ ಗರ್ಭವನ್ನು ಪ್ರವೇಶಿಸಿ ಬೃಹದಾಕಾರವಾಗಿ ಬೆಳೆಯಲು ರಾಕ್ಷಸನು ನುಚ್ಚುನೂರಾಗಿ ಸತ್ತುಹೋದನು. (ಚೆ. ಬ. ಪುರಾಣ ತ್ರಿಪುರಸಂಹಾರಸಂಧಿ. ನೋ.).

೧೩. ಅ ೫, ಪ-೬೩-**'ಸುರಗಿಯ ಚೌಡಯ್ಯ ಶಂಕರಗೆ ತುತ್ತನೀವ ತೆರದಿಂ'** ಎಂಬುದಕ್ಕೆ **ಕಥೆ** :- ಉತ್ತರದೇಶದ ಶಿವಪುರ ಎಂಬಲ್ಲಿ ಶಿವನಿಗೆ ದಿವ್ಯಾನ್ನಗಳನ್ನು ಮಾಡಿಸಿ ಶಿವಾಲಯಕ್ಕೆ ತಂದು ನೈವೇದ್ಯಮಾಡಿ 'ಚೆನ್ನಯ್ಯನ ಮನೋನಿಧಿಯೇ, ಆರೋಗಿಸು' ಎಂದನು. ಶಿವನು ಸುಮ್ಮನೇ ಇರಲು ಖಡ್ಗದಿಂದ ಶಿರಚ್ಛೇದನ ಮಾಡಲುದ್ಯುಕ್ತನಾಗಲು ಲಿಂಗದಿಂದ ಹಸ್ತವನ್ನು ನೀಡಿ ಖಡ್ಗವನ್ನು ತಡೆದು ಶಿವನು ಆರೋಗಿಸಲುದ್ಯುಕ್ತನಾದನು. ಚೌಡಯ್ಯನೇ ಸಾಕ್ಷಾತ್ತಾಗಿ ಶಿವನ ಐದೂ ಮುಖಗಳಿಗೆ ತುತ್ತನ್ನು ಮಾಡಿ ಮಾಡಿ ಊಟ ಮಾಡಿಸತೊಡಗಿದನು.

೧೪. ಅ-೬, ಪ-೨೯-**ಚೋಳನಿಗೆ ಕನಕವೃಷ್ಟಿಯ ಕರೆಸಿದ ಕಥೆ** :- ಕಾಂಚೀನಗರದ ಕರಿಕಾಲ ಚೋಳಮಹಾರಾಜನ ಭಕ್ತಿಗೆ ಮೆಚ್ಚಿ ಇಷ್ಟಾರ್ಥವನ್ನು ಬೇಡೆನ್ನಲು ಚೋಳಮಹಾರಾಜನು ನನ್ನನ್ನು ಹೆತ್ತ ವೈಷ್ಣವಚೋಳನು ಲಿಂಗದ ಮೇಲಿದ್ದ ಪುಷ್ಪವನ್ನು ಮೂಸಿ ನೋಡಲು ತಿರುವರುಹನೆಂಬ ಪೂಜಾರಿಯು 'ನಿನ್ನ ಮೇಲೆ ಮಣ್ಣು ಮಳೆ ಕರೆದು ನೀನು ಸಾಯಿ' ಎಂದನು. ಆ ಕಾರಣದಿಂದ ಸತ್ತುಹೋದ ನಿಂದೆಯ ಪರಿಹಾರ

ಕ್ಕಾಗಿ ನಿಮ್ಮ ಕೃಪೆಯಿಂದ ನನಗೆ ಹೊನ್ನಿನ ಮಳೆಯನ್ನು ಸುರಿಸೆಂದನು. ಶಿವನು ಧಾರಾಕಾರವಾಗಿ ಹೊನ್ನಿನ ಮಳೆ ಸುರಿಸಿದನು. ಈ ಕಾರಣದಿಂದ ಚೋಳನ ರಾಜ್ಯದ ಎಲ್ಲ ಪ್ರಜೆಗಳೂ ಧನ್ಯರಾದರು.

೧೫. ಅ. ೫, ಪದ್ಯ-೩೧ ರಿಂದ-೪೫ ರ ವರೆಗೆ **ಬರುವ ಎಲ್ಲ ಪೂರ್ವಕಥೆಗಳೂ** ಈ ಗ್ರಂಥದಲ್ಲಿ ಅಲ್ಲಲ್ಲಿ ಬಂದಿವೆ. ಆದುದರಿಂದ ಈ ಪೂರ್ವ ಕಥೆಗಳನ್ನಿಲ್ಲಿ ಕೈಬಿಟ್ಟಿದೆ.

೧೬. ಅ-೯, ಪ-೧೦–**ಪಾರ್ಥಂ ಧನುವಿಂದೆ ಪೊಯ್ದು ಕಥೆ**-ಶಿವನ ಕಿರಾತ ರುದ್ರ ಲೀಲೆಯ ಸಂದರ್ಭದಲ್ಲಿ ಘಟಿಸಿದ ಶಿವ ಮತ್ತು ಅರ್ಜುನರ ಯುದ್ಧ ಪ್ರಸಂಗದಲ್ಲಿ ಅರ್ಜುನನು ಶಿವನನ್ನು ಧನುಸ್ಸಿನಿಂದ ಹೊಡೆದನು. (ಈ ಪದ್ಯದಲ್ಲಿ ಬಂದ ಇನ್ನಿತರ ಕಥೆಗಳೆಲ್ಲ ಸಾಮಾನ್ಯವಾಗಿ ಈ ಗ್ರಂಥದಲ್ಲಿಯೇ ಬಂದಿವೆ).

೧೭. ಅ. ೧೨, ಪ-೧೦–**ಪುಲಿಯುಡುಪನ ಕಥೆ**- ಶಿವಕೋಶವೆಂಬ ಪಟ್ಟಣದಲ್ಲಿ ಪುಲಿಯುಡುಪನೆಂಬ ಅಗಸ ಭಕ್ತನಿದ್ದನು. ಅವನ ಹೆಂಡತಿ ಶಿವಜ್ಞಾನದೇವಿ, ಇವರೀರ್ವರೂಸೇರಿ ತಮ್ಮ ಕಾಯಕ ಮಾಡಿಕೊಂಡು ಜಂಗಮ ಭಕ್ತಿಯನ್ನಾಚರಿಸುತ್ತಿದ್ದರು. ಈ ಒಂದು ದಿನ ಶಿವನು ಪುಲಿಯುಡುಪನು ಬಟ್ಟೆತೊಳೆಯುವಲ್ಲಿಗೆ ಬಂದು–'ನಮ್ಮ ಹುಲಿಯ ಚರ್ಮವು ಮಾಸಿಹೋಗಿದೆ ತೊಳೆದುಕೊಡೆ'ನ್ನಲು ಪುಲಿಯುಡುಪನು ಹಾಗೇ ಹಾಗಲೆಂದು ಅದನ್ನು ತೆಗೆದುಕೊಂಡು ತೊಳೆದುಹಾಕಿದನು. ಅದು ಮಾಯವಾಗಿ ಹೋಯಿತು. ಶಿವನು ಪುನಃ ಬಂದು ತನ್ನ ಹುಲಿಚರ್ಮವನ್ನು ಬೇಡಿದನು. ಆಗ ಪುಲಿಯುಡಪನು ಕೊರಳಿನಿಂದ ಮೊಳಕಾಲವರೆಗಿನ ತನ್ನ ದೇಹದ ಚರ್ಮವನ್ನೇ ಸುಲಿದು ಕೊಡುವಾಗ ಮೆಚ್ಚಿದ ಶಿವನು ಅವನಿಗೆ ಕೈಲಾಸ ಪದವಿಯನ್ನಿತ್ತನು.

೧೮. ಅ-೧೨, ಪ-೧೦; **ಏಕಾಳಿಯ ಕಥೆ**-ತಿರಿಕಟಕವೆಂಬ ಪಟ್ಟಣದಲ್ಲಿ ಏಕಾಳಿ-ಜ್ಞಾನಾನಂದ ದೇವಿಯರೆಂಬ ದಂಪತಿಗಳಿದ್ದರು. ಅವರು ಅಗಸರು. ಇಬ್ಬರೂ ಜಂಗಮ ಭಕ್ತಿಯನ್ನು ಮಾಡುತ್ತಿದ್ದನು. ಒಂದು ದಿನ ಶಿವನು ಇವರ ಭಕ್ತಿಯನ್ನು ಪ್ರಕಟಿಸ ಬೇಕೆಂದು ಏಕಾಳಿಯ ಹತ್ತಿರಕ್ಕೆ ಬಂದು ತನ್ನ ಈ ಆನೆಯ ಚರ್ಮವನ್ನು ಬಿಳುಪುಮಾಡಿ ಕೊಡೆಂದನು. ಅವನು ಅದನ್ನು ತೆಗೆದುಕೊಂಡು ಅನೇಕ ವಿಧದಲ್ಲಿ ಅದನ್ನು ತೊಳೆದರೂ ಅದು ಬೆಳ್ಳಗಾಗಲಿಲ್ಲ. ಆಗ ತನ್ನ ಎದೆಯನ್ನು ಸೀಳಿ ಆ ರಕ್ತದಲ್ಲಿ ಚರ್ಮವನ್ನುನೆನೆಸಿ ತೊಳೆಯಲು ಅದು ಬಿಳುಪಾಯಿತು. ಶಿವನು ಮೆಚ್ಚಿ ಕೈಲಾಸಕ್ಕೆ ಕರೆದೊಯ್ದನು.

೧೯. ಅ-೧೨. ಪ-೩೮; **ನರಸಿಂಹನನ್ನು ಶರಭೇಂದ್ರನು ಸೀಳಿದ ಕಥೆ** : ನರಸಿಂಹಾವತಾರ ಮಾಡಿ ವಿಷ್ಣುವು ಹಿರಣ್ಯಕಶ್ಯಪನನ್ನು ಕೊಂದಮೇಲೆ, ಆ ರಕ್ಕಸನ ನೊರೆನೆತ್ತರಿನಿಂದ ಮದೋನ್ಮತ್ತನಾಗಿ ಅವನಿಗೊಟುಮಡಿ ಲೋಕ ಕಂಟಕನಾಗಿ ದೇವತೆಗಳನ್ನೆಲ್ಲ ಪೀಡಿಸುತ್ತ ವರ್ತಿಸತೊಡಗಿದನು. ದೇವತೆಗಳು ಬೇಸತ್ತು ಶಿವನಿಗೆ ಮೊರೆ ಹೋಗಲು ಶಿವನು ವೀರಭದ್ರನನ್ನು ಕರೆದು 'ನರಸಿಂಹನಿಗೆ ಉಪದೇಶ ಹೇಳಿ ಕರೆದು ತಾ. ಬಾರದಿದ್ದರೆ ಅವನ ಶಿರವನ್ನೂ ಚರ್ಮವನ್ನೂ ತೆಗೆದುಕೊಂಡು ಬಾ' ಎಂದು ಹೇಳಿಕಳಿಸಿದನು.

ವೀರೇಶನು ಹೇಳಿದ ಬುದ್ಧಿವಾದವನ್ನು ಕೇಳದ ನರಸಿಂಹನನ್ನು ಕೊಂದು ಅವನ ಶಿರವನ್ನೂ ಚರ್ಮವನ್ನೂ ತಂದೊಪ್ಪಿಸಿದನು. ಶಿವನು ಸಂತೋಷ ಪಟ್ಟು ಆ ಶಿರಸ್ಸಿಗೆ 'ಕೀರ್ತಿಮುಖ'ವೆಂದು ಹೆಸರಿಟ್ಟು ತನ್ನ ಪ್ರಭಾವಳಿಯ ಮಧ್ಯದಲ್ಲಿರಿಸಿದನು. ಚರ್ಮವನ್ನು ಸಿಂಹಾಸನದಲ್ಲಿ ಅಲಂಕರಿಸಿ ಮೇಲೇರಿ ಕುಳಿತು ವೀರೇಶನನ್ನು ಸನ್ಮಾನಿಸಿದನು.

೨೦. ಆ-೧೩, ಪ-೩೩; **ದಾಸಯ್ಯನು ಶಿವನಿಗೆ ಬಟ್ಟೆಯನ್ನು ಕೊಟ್ಟು ತವನಿಧಿಯನ್ನು ಪಡೆದ ಕಥೆ** :– ದಾಸಿಮಾರ್ಯನು (ಜೇಡರ ದಾಸಿಮಾರ್ಯನು) ಕಷ್ಟಪಟ್ಟು ೧೨ ವರ್ಷ ಪರ್ಯಂತ ಹೆಂಡತಿಯಾದ ದುಗ್ಗಳೆಯೊಡನೆ ಸೇರಿ ಒಂದು ಬೆಲೆಯುಳ್ಳ ವಸ್ತ್ರವನ್ನು ನೆಯ್ದು ಸಿದ್ಧಪಡಿಸಿದ್ದನು.-ಅದನ್ನು ಮಾರಿಕೊಂಡು ಬರಲು ಸಿದ್ಧಾಪುರ ಸಂತೆಗೆ ಒಯ್ದು ಅಲ್ಲಿ ಅದಕ್ಕೆ ಬೆಲೆಕೊಟ್ಟು ಕೊಳ್ಳುವವರೇ ಇಲ್ಲವಾಗಲು ತಿರುಗಿ ಮನೆಗೆ ಬರುತ್ತಿದ್ದನು. ಜಂಗಮಾಕಾರದಿಂದ ಶಿವನು ಬಂದು ಆ ವಸ್ತ್ರ ತನಗೆ ಬೇಕೆಂದು ಬೇಡಿಪಡೆದು ಅವರ ಕಣ್ಣೆದುರಿನಲ್ಲಿಯೇ ಪರ ಪರ ಹರಿದು ಹಾಕಿದನು. ಅದನ್ನು ಕಂಡ ದಾಸಿಮಾರ್ಯ ಸ್ವಲ್ಪವೂ ವ್ಯಥೆಪಟ್ಟುಕೊಳ್ಳದೆ ಸಂತೋಷ ಚಿತ್ತನೇ ಆಗಿರುವುದನ್ನು ಕಂಡು ಶಿವನು ಮೆಚ್ಚಿ ಹಿಡಿ ಧಾನ್ಯವನ್ನು ಕೊಟ್ಟನು. ಆ ಧಾನ್ಯವನ್ನು ತಂದು ದುಗ್ಗಳೆಯ ಕೈಗೆ ಕೊಟ್ಟನು, ದುಗ್ಗಳೆ ಅದನ್ನು ಖಂಡುಗಧಾನ್ಯವೆಂದು ಕಣಜದಲ್ಲಿ ಹಾಕಿದಳು. ಅದೇ ತವನಿಧಿಯಾಯಿತು.

೨೧. ಆ. ೧೪, ದ-೧೬; **ಜಲಂಧರೋಗ್ರ ಶಿರಮೆಂಬವೊಲ್ ಆದುದು ಎಂಬುದಕ್ಕೆ ಕಥೆ** : ಜಲಂಧರನೆಂಬ ರಾಕ್ಷಸನು ಮದೋನ್ಮತ್ತನಾಗಿ ದೇವತೆಗಳನ್ನೆಲ್ಲ ಬಗ್ಗುಬಡಿದು ಇಂದ್ರನ ಅಮರಾವತಿಯನ್ನು ಮುತ್ತಿ ಅವನನ್ನೋಡಿಸಿ ಭಯಂಕರ ಕೋಲಾಹಲವನ್ನು ಮಾಡುತ್ತಿರಲು ದೇವತೆಗಳೆಲ್ಲ ಶಿವನ ಮೊರೆಹೊಕ್ಕರು. ಶಿವನು ಲೋಕರಕ್ಷಣಾರ್ಥವಾಗಿ ಅವನನ್ನು ಕೊಲ್ಲಲು ಹೋಗಿ ಬಾಣಗಳನ್ನು ಪ್ರಯೋಗಿಸಿದನು. ಆಗ ತನ್ನ ಹೃದಯ ಕಮಲದ ಅಖಂಡ ಚಿನ್ಮಯನನ್ನೇ ಎದುರಿನಲ್ಲಿ ಕಂಡ ಜಲಂಧರನು ಸಾಷ್ಟಾಂಗ ನಮಸ್ಕಾರ ಮಾಡಿದನು. ಶಿವನು 'ನಿನ್ನ ಭಕ್ತಿಗೆ ಮೆಚ್ಚಿದ್ದೇನೆ' ಇಷ್ಟಾರ್ಥವೇನೆಂದು ಕೇಳಿದನು. ಆಗ ಜಲಂಧರನು-'ಶಿವನೇ, ನಿನ್ನೊಡನೆ ಗರ್ವದಿಂದ ಕಾದಿದ ಈ ಒಡಲನ್ನು ಬಿಚ್ಚಿ ಬಿಸುಟು ನನ್ನ ಆತ್ಮವನ್ನು ನಿನ್ನಲ್ಲಿ ಕೂಡಿಸಿಕೋ' ಎಂದನು. ಈಶ್ವರನು ತನ್ನ ಪಾದದ ಅಂಗುಷ್ಠದಿಂದ ಭೂಮಿಯ ಮೇಲೆ ಚಕ್ರವನ್ನು ಬರೆದು ಮೂರುಕಣ್ಣಿನಿಂದ ಅದನ್ನು ನೋಡಲು ಸೂರ್ಯ ಚಂದ್ರರೇ ಅದರ ಅಲಗುಗಳಾದರು; ಅಗ್ನಿಯೇ ಪಟ್ಟಿಯಾಯಿತು. ಇಂಥ ಚಕ್ರವನ್ನು ಜಲಂಧರನ ಕುತ್ತಿಗೆಗೆ ಇಡಲು ಅದು ಕತ್ತರಿಸಿತು. ಜಲಂಧರನ ಆತ್ಮಜ್ಯೋತಿ ಈಶ್ವರನ ಹಣೆಗಣ್ಣಿನಲ್ಲಿ ಬೆರೆಯಿತು.

೨೨. ಆ. ೧೪, ಪ-೯೫; **ಗುಂಡಯ್ಯಂಗೆ ನವಯೌವನಮಂ ಕೊಟ್ಟ ಕಥೆ** : ಇಲ್ಲಿ ಗುಂಡಯ್ಯ ಎಂದರೆ ತಿರುನೀಲಕಂಠರು. ಕುಂಬಾರ ವೃತ್ತಿಯಲ್ಲಿ ಪೊನ್ನಾಂಬಲದಲ್ಲಿ ಇದ್ದ ಇವರ ಹೆಂಡತಿಯ ಹೆಸರು 'ಸತ್ಯವತಿ' ('ಮುತ್ತೈದೆ' ಎಂದು ಹರಿಹರಿಯ ಕವಿಯ ಪ್ರಕಾರ) ಗುಂಡಾಭಕ್ತರಾದ ಇವರು ತಮ್ಮ ಕಾಯಕಮಾಡಿಕೊಂಡು ಲಿಂಗಭಕ್ತಿಯಲ್ಲಿ ವ್ಯವಹರಿಸು

ತ್ತಿದ್ದರು. ಒಂದು ದಿನ ರಾತ್ರಿ ಗುಂಡಯ್ಯಗಳು ಶಿವಾಲಯದಿಂದ ಮನೆಗೆ ಬರುವಾಗ ವಿಲಾಸಿನಿಯೊಬ್ಬಳು ಚೆಲ್ಲಿದ ಎಂಜಲುತಟ್ಟೆ ತೊಳೆದ ನೀರು ತಿರುನೀಲಕಂಠರಮೇಲೆ ಬಿದ್ದಿತು. ತಿರುನೀಲಕಂಠರು ಹಾಗೆಯೇ ಮುಂದುವರಿದರು. ವಿಲಾಸಿನಿಗೆ ತನ್ನ ತಪ್ಪಿನ ಅರಿವಾಗಿ ತಿರುನೀಲಕಂಠರನ್ನು ಮನೆಗೆ ಕರೆದೊಯ್ದು ಮಜ್ಜನ ಸುಗಂಧಾನು ಲೇಪನ ದಿವ್ಯವಸ್ತ್ರ ವಿಭೂಷಣಾದಿಗಳಿಂದ ಕಳಿಸಿಕೊಟ್ಟಳು. ಮನೆಗೆ ಬಂದ ತಿರುನೀಲಕಂಠರ ಬಗೆಗೆ ಸತ್ಯವತಿಗೆ ಸಂಶಯ ಬಂದು ಮುಟ್ಟಿದರೆ ಶಿವನಾಣೆಯೆಂದು ಆಣೆ ಇಟ್ಟಳು. ಶಿವ ನಾಣೆ ಪಕ್ವಕ್ಕೆ ಬಂದಂತೆ ದೇಹಕ್ಕೂ ಮುಪ್ಪು ಬಂತು, ಶಿವನು ಇವರ ಭಕ್ತಿಯನ್ನು ಲೋಕಕ್ಕೆ ಪ್ರಕಟಿಸಲು ವೃದ್ಧ ಜಂಗಮವೇಷದಿಂದ ಬಂದು, ತನ್ನ ಭಿಕ್ಷದ ಬಟ್ಟಲನ್ನು ಅವರಕೈಗೆ ಕೊಟ್ಟು, 'ಇದನ್ನು ನಿಮ್ಮ ಮನೆಯಲ್ಲಿ ಭದ್ರವಾಗಿಟ್ಟಿರಿ, 'ನಾಳೆ ಬಂದು ಒಯ್ಯುವ'ನೆಂದು ಹೇಳಿ ಹೋಗಿ ಮರುದಿನ ಬಂದು ಬಟ್ಟಲನ್ನು ಕೇಳಿದನು. ಪೆಟ್ಟಿಗೆ ಯಲ್ಲಿಟ್ಟ ಬಟ್ಟಲು ಇಲ್ಲದಾಗಿತ್ತು. ವೃದ್ಧನು ಬಟ್ಟಲು ಬೇಕೆಂದು ಅರ್ಭಟವಮಾಡಿ ಹೆದ ರಿಸಿ, ಹಿಂಸಿಸಿದನು. ಕೊನೆಗೆ ನೀನು ನಿನ್ನ ಹೆಂಡತಿಯ ಕೈಹಿಡಿದು ಹೊಂಡದೊಳಗೆ ಹೊಕ್ಕರೆ ಬಿಡುವೆನೆನ್ನುವನು. ಅದಕ್ಕೆ ಶಿವನಾಣೆ ಅಡ್ಡ ಬಂದು ಅವರು ಒಪ್ಪಲಿಲ್ಲ; ಕೊನೆಗೆ ಒಂದು ಕೋಲಿನ ಎರಡೂ ತುದಿಗಳನ್ನು ಹಿಡಿದು ಹೊಂಡವನ್ನು ಹೊಗಲು ಕೇಳಿದನು. ಅದಕ್ಕೆ ಅವರು ಒಪ್ಪಿ ಕೋಲ ತುದಿಹಿಡಿದು ಹೊಂಡದಲ್ಲಿ ಮುಳುಗಿ ಏಳಲು ಮೊದಲಿನ ಹದಿನಾರರ ಹರಯ ಪ್ರಾಪ್ತವಾಯಿತು. ಶಿವನು ಪ್ರತ್ಯಕ್ಷನಾಗಿ, ಇನ್ನು ತೊಂಬತ್ತು ವರ್ಷ ದಾಂಪತ್ಯ ಸುಖದಲ್ಲಿದ್ದು ಕೈಲಾಸಕ್ಕೆ ಬನ್ನಿರೆಂದು ಹೇಳಿ ಅಂತರ್ಧಾನ ನಾದನು.

೨೩. ಆ. ೧೪, ಪ-೯೫ ಶಿವನು ಮಾನಕಂಜರಾಕ್ರೀಶನೆಡೆಗೆ ಕಚೌಘವನರ್ಥಿಸಿ ಪೋದು ದಕ್ಕೆ ಕಥೆ :- ಕಂಜಾರಿ ಎಂಬ ಪಟ್ಟಣದಲ್ಲಿ ಮಾಣಿಕ್ಯಜರನೆಂಬ ರಾಜನಿದ್ದನು. ಅವನು ಶಿವಭಕ್ತ ಶ್ರೇಷ್ಠ. ಒಮ್ಮೆ ಅವನ ತನ್ನ ಮಗಳಾದ 'ತಿರುಮುಡಿಯೊಡೆಯಳು' ಎಂಬ ಮಗಳನ್ನು ಚೋಳರಾಯನಿಗೆ ಕೊಟ್ಟು ಲಗ್ನ ನೆರವೇರಿಸುತ್ತಿರುವ ಸಂದರ್ಭದಲ್ಲಿ ಶಿವನು ಜಂಗಮರೂಪಿನಿಂದ ಬಂದು ತನ್ನ ಹಾವುಗೆಗೆ ಮೆತ್ತೆಯನ್ನು ಮಾಡಿಸಿಕೊಳ್ಳಲು ನಿನ್ನಮಗಳ ಮುಡಿಯನ್ನು ಕೊಡೆಂದು ಬೇಡಲು ಅದನ್ನು ಕತ್ತರಿಸಿ ಕೊಟ್ಟುಬಿಟ್ಟನು. ಶಿವನು ಮೆಚ್ಚಿ ಸತಿಸುತೆಯರೊಡನೆ ಆ ರಾಯನನ್ನು ಕೈಲಾಸಕ್ಕೆ ಕರೆದೊಯ್ದನು. (ಇದೇ ಆಶ್ವಾಸದ ೯೬, ೯೭ ರಲ್ಲಿ ಬರುವ ಕಥೆಗಳೆಲ್ಲ ಸಾಮಾನ್ಯವಾಗಿ ಈ ಗ್ರಂಥ ದಲ್ಲಿಯೇ ಬಂದಿವೆ).

೨೪. ಆ. ೧೭, ಪ-೫೨. ದಾಸಯ್ಯಂಗೆ ಉಮೇಶನು ಪಡಿದೆಜೆದ ಕಥೆ :- ಮುದನೂರಿ ನಲ್ಲಿದ್ದ ಜೇಡರದಾಸಿಮಾರ್ಯನಿರುತ್ತಿರುವಲ್ಲಿ ಅಲ್ಲಿನ ರಾಮನಾಥ ಲಿಂಗಕ್ಕೆ ವೀರಶೈವರು ಕೈಮುಗಿಯುವುದಿಲ್ಲವೆಂದು ಹಂಗಿಸಿದರು. ಮರುದಿನ ಗುಡಿಯಬಾಗಿಲು ತೆರೆಯದೆ ಹೋಯಿತು. ಜೇಡರದಾಸಯ್ಯನು ಶಿವನನ್ನು ಬೇಡಲು ಶಿವನು ಗುಡಿಯ ಬಾಗಿಲು

ತೆರೆದು ಪ್ರತ್ಯಕ್ಷನಾದನು. ಈ ರಾಮನಾಥ ಲಿಂಗದ ಅಂಕಿತದಲ್ಲಿಯೇ ಜೇಡರದಾಸಿಮಾರ್ಯ (ದೇವರ ದಾಸಿಮಾರ್ಯ) ವಚನ ರಚಿಸಿದ್ದಾನೆ. ಇನ್ನೊಮ್ಮೆ ಶಿವನು ಜಗದ್ಭರಿತನೆಂಬ ತನ್ನ ವಾದವನ್ನು ಬ್ರಾಹ್ಮಣರಿಗೆ ತೋರಿಸಲು ವೈಷ್ಣವ ದೇವಾಲಯದ ಸಮೀಪಕ್ಕೆ ಬಂದನು. ಕದ ತಾನಾಗಿ ತೆರೆಯಿತು. ಒಳಗೆ ಶಿವಮೂರ್ತಿ ಇತ್ತು.

೨೫. ಆ. ೧೭, ಪ–೪೪; **ಸೌಂದರ ಗಣೇಶಂಗೆ ಕಾಂತಾಪಯೋಧರದೊಳ್ ಉಲಿದುದಕ್ಕೆ ಕಥೆ :-** ನಂಬಿಯಣ್ಣನು ಪರವೆ ನಾಚಿಯೊಡನೆ ಇರುವ ಎಲ್ಲಾ ಸಮಯದಲ್ಲೂ ಶಿವಧ್ಯಾನ ನಿರತನಾಗಿಯೇ ಇರುತ್ತಿದ್ದನು. ಒಮ್ಮೆ ಅವರಿಬ್ಬರೂ ಏಕಾಂತ ಸ್ಥಾನದಲ್ಲಿರುವಾಗ ನಂಬಿಯು ಅವಳ ಮೊಲೆಗಳನ್ನು 'ಸ್ತನಶಂಕರ' ಎಂದು ಸ್ತೋತ್ರಮಾಡಿದನು. ಶಿವನು ಆ ಪರವೆನಾಚಿಯ ಸ್ತನದಿಂದಲೇ ಮೂಡಿ ಮಾತನಾಡಿ ಹೊನ್ನನ್ನು ಕೊಟ್ಟನು.

೨೬. ಆ, ೧೭, ಪ-೪೪; **ಇಟ್ಟಿಂಪೆಯೊಳು ವಾದಂಗೆಯ್ದ ದಾಸಂಗೆ-ಎಂಬುದಕ್ಕೆ ಕಥೆ :-**

೨೭. ಕೊ ಆ. ೨೦, ಪ-೨೩; **ಮೂರ್ಖನಾಥ ವಿಭುವು ಜೂಜಾಡಿ ಶಿವನಾವಾಸಕ್ಕೆ ಪೋದ ಕಥೆ: -** ಕೊಂಡಮಂಡಲದ ಶಕ್ತ್ಯರಣ್ಯವೆಂಬಪುರದಲ್ಲಿ ಮೂರ್ಖನಾಥನೆಂಬ ಶರಣನಿದ್ದನು. ಅವನು ಜೂಜಾಡಿ ತಂದ ದ್ರವ್ಯದಿಂದ ಜಂಗಮಾರ್ಚನೆಮಾಡುತ್ತಿದ್ದನು. ಒಮ್ಮೆ ಶಿವನು ಒಬ್ಬ ವ್ಯಾಪಾರಿಯ ವೇಷದಿಂದ ಬಂದು ಈತನೊಡನೆ ಜೂಜು ಅಡಿ ಎಲ್ಲವನ್ನೂ ಸೋತನು. ಆಗ ಹಣಕೊಡಲು ಹಿಂದುಮುಂದು ನೋಡಿದ ಆ ವ್ಯಾಪಾರಿಯನ್ನು ಕೊಲ್ಲ ಹೋಗಿ ಅವನ ಕೊರಳಿನಲ್ಲಿರುವ ಲಿಂಗವನ್ನು ಕಂಡು ಪಶ್ಚಾತ್ತಾಪದಿಂದ ತನ್ನ ಪ್ರಾಣವನ್ನು ತ್ಯಾಗಮಾಡಲು ಸಿದ್ಧನಾದಾಗ ಶಿವನು ಪ್ರತ್ಯಕ್ಷನಾಗಿ ಕೈಲಾಸಕ್ಕೆ ಕರೆದೊಯ್ದನು.

೨೮. ಆ ೨೦, ಪ-೨೫; **ಮಾಂಡವ್ಯನು ಹಿಂಸೆಮಾಡಿ ಶೂಲಕ್ಕೆಪಕ್ಕಾದ ಕಥೆ :-** ಮಾಂಡವ್ಯನೆಂಬ ಋಷಿಗೆ ಚಂಚೆ, ಚಪಳೆ ಎಂಬ ಇಬ್ಬರು ಹೆಂಡತಿಯರಿದ್ದರು. ಅವರು ಮಾಂಡವ್ಯನನ್ನು ಮುದುಕನೆಂದು ತಿರಸ್ಕಾರಮಾಡಲು ಮಾಂಡವ್ಯನು ಅವರನ್ನು ಬಿಟ್ಟು ಹೊರಟು ಹೋದನು. ಆಗ ಅವರಿಬ್ಬರೂ ಎರಡು ತೊನಸಿ (ತೊಣಸಿ) ಗಳಾಗಿ ಹುಟ್ಟಿ ಇವನನ್ನು ಕಡಿಯುತ್ತ ತಪಸ್ಸಿಗೆ ವಿಘ್ನವನ್ನುಂಟುಮಾಡುತ್ತಿರಲು ಮಾಂಡವ್ಯನು ಅವನ್ನು ಹಿಡಿದು ಮುಳ್ಳುಗಳಿಂದ ಚುಚ್ಚಿಕೊಂದನು. ಈ ಪಾಪಶಮನಾರ್ಥವಾಗಿ ಮೇಣದಿಂದ ಮಾಡಿದ ಶೂಲವನ್ನು ಮಾಡಿ ಅದರ ಮೇಲೆ ಬಿದ್ದನು. ಆಗ ಮೇಣದ ಶೂಲವೇ ನಿಜವಾದ ಶೂಲವಾಗಿ ಇವನ ದೇಹದಲ್ಲಿ ನಾಟಿತು. (ಗ್ರಂಥಾಂತರದಲ್ಲಿ ಈ ಕಥೆ ಬೇರೆ ವಿಧದಲ್ಲೂ ಉಂಟು).

೨೯. ಆ. ೨೦, ಪ-೨೫; **ಚಂಡೇಶನು ತಂದೆಯನಿಕ್ಕಿ ಕೊಂದ ಕಥೆ :–** ಕಾವೇರೀತೀರದ ಚೋಳ ಮಂಡಲಕ್ಕೆ ಸೇರಿದ ತಿರುಚ್ಚೇಯ್ನಲ್ಲೂರಿನಲ್ಲಿ (ನಲ್ಲೂರಿನಲ್ಲಿ)ದ ಅಚ್ಯುತಭಟ್ಟ ಸಾವಿತ್ರಿಯರ ಮಗನಾದ ಚಂಡೇಶಪಿಳ್ಳೆಯು ತಂದೆ ತಾಯಿಯರ ಆಜ್ಞೆಯಂತೆ ಹಸುಗಳನ್ನು ಕಾಯುತ್ತಿದ್ದನು. ಅವನು ಮಳಲಲಿಂಗವನ್ನು ಮಾಡಿ ಪೂಜಿಸುತ್ತಿರಲು ಹಸು

ಗಳು ತಾವಾಗಿ ಬಂದು ಇವನು ಪೂಜಿಸಿದ ಮಳಲ ಲಿಂಗದ ಮೇಲೆ ಹಾಲು ಸುರಿಸುತ್ತಿದ್ದವು. ಹಸುಗಳ ಮೊಲೆಗಳಲ್ಲಿ ಹಾಲೇ ಇಲ್ಲದಿರುವುದನ್ನು ಕಂಡ ತಂದೆಯು ನಿಜವೃತ್ತಾಂತವನ್ನರಿತು ಮುಳ್ಳುಲಿಂಗವನ್ನು ತುಳಿದು ನಾಶಮಾಡಲು ಕಾಲನ್ನೆತ್ತಿದಾಗ ಚಂಡೇಶನು ತಂದೆಯ ಕಾಲನ್ನೇ ಕತ್ತರಿಸಿದನು. ಶಿವನು ಇವನ ಭಕ್ತಿಗೆ ಪ್ರತ್ಯಕ್ಷನಾಗಿ ಕೈಲಾಸಕ್ಕೆ ಒಯ್ದನು.

೩೦. ಆ ೨೧. ಪ್ರ-೨೯ ಕುಂಭಜನು ಪೆರ್ಗಡಲನ್ನು ಕುಡಿದುದಕ್ಕೆ ಕಥೆ : ಕಾಲಕೇಯ ರೆಂಬ ರಾಕ್ಷಸರು ಕಶ್ಯಪಮುನಿಯಿಂದ 'ಕಾಲಾ' ಎಂಬುವಳಲ್ಲಿ ಜನಿಸಿದವರು. ಇವರು ವೃತ್ರಾಸುರನ ಒತ್ತಾಸೆಯಿಂದ ದೇವತೆಗಳನ್ನು ಪೀಡಿಸುತ್ತಿದ್ದರು. ಹಗಲೆಲ್ಲ ಸಮುದ್ರ ಮಧ್ಯದಲ್ಲಿ ಅಡಗಿಕೊಂಡಿದ್ದು ರಾತ್ರಿಯಾಗುತ್ತಲೆ ಆಶ್ರಮಗಳನ್ನು ಹೊಕ್ಕು ಋಷಿ ಗಳನ್ನು ತಿಂದುಹಾಕುತ್ತಿದ್ದರು. ಇವರ ಹಾವಳಿಯಿಂದ ದೇವತೆಗಳು ದೇವೇಂದ್ರನ ಮೂಲಕ ಬ್ರಹ್ಮನನ್ನು ಮರೆಹೊಕ್ಕರು. ಬ್ರಹ್ಮನು ಇವರನ್ನು ಅಗಸ್ತ್ಯನ ಬಳಿಗೆ ಕಳಿ ಸಿದನು. ಅಗಸ್ತ್ಯನು ಸಮುದ್ರದನೀರನ್ನು ಕುಡಿಯಲಾಗಿ ಕಾಲಕೇಯರು ಹೊರ ಬಿದ್ದರು. ದೇವತೆಗಳು ಇವರನ್ನು ಕೊಂದುಹಾಕಿದರು.

೩೧. ಆ ೨೧, ಪ. ೨೯ ; ಶಿವದಾಸನಿಗೆ ಮಹಾನದಿ ಮಂದಮುನಿಳ್ಗಿಸಿ ದಾರಿಮಾಡಿ ಕೊಟ್ಟ ಕಥೆ: ದೇವರ ದಾಸಿಮಾರ್ಯರು ಮುದನೂರಿನಲ್ಲಿದ್ದಾಗ ಪಕ್ಕದ ಊರಿನ ಭಕ್ತೆಯೊಬ್ಬಳ ಬಿನ್ನ ಹದ ಮೇರೆಗೆ ಲಗ್ನ ಸಮಾರಂಭಕ್ಕೆ ಅನೇಕ ಶಿಷ್ಯರನ್ನೊಡಗೂಡಿ ಹೊರಟನು. ಮಾರ್ಗ ದಲ್ಲಿ 'ಗೌತಮಿ' ನದಿಯು ದಡಸೂಸಿ ಹರಿಯುತ್ತಿತ್ತು. ತನಗೆ ಮುಂದಿನ ಊರಿಗೆ ಹೋಗಲು ಮಾರ್ಗ ಬೇಕೆಂದು ನದಿಗೆ ಹೇಳಲು ನದಿಯು ಇಭ್ಭಾಗವಾಗಿ ಮಾರ್ಗ ಕೊಟ್ಟಿತು. ಹೀಗೆ ಹಾದಿಯನ್ನುಬಿಡಿಸಿಕೊಂಡು ಲಗ್ನಕಾರ್ಯವನ್ನು ಮುಗಿಸಿ ಅಲ್ಲಿ ಕೆಲ ಕಾಲ ಶಿವಾನುಭವ ಗೋಷ್ಠಿಯನ್ನು ಮಾಡಿ ಮುದನೂರಿಗೆ ಹಿಂದಿರುಗಿ ಬಂದನು.

೩೨. ಆ ೨೪. ಪ-೫೪ ; ಘನಲಿಂಗಪ್ರಾಣಯೋಗವ್ರತ ಸಂದಿರ್ದ ಸತ್ಯೇಶ :-ಕಲ್ಯಾಣ ನಗರದಲ್ಲಿ ಸತ್ಯಣ್ಣನೆಂಬ ಶರಣನಿದ್ದನು. ಈ ಶರಣನು ಮಲಗಿರುವಾಗ ಚೆನ್ನಬಸವಣ್ಣ ನವರು ಅವನಿಗೆ ಅರಿಯದಂತೆ ಅವನ ಕರಡಂಕದೊಳಗಿನ ಲಿಂಗವನ್ನು ತರಿಸಿ ಅದಕ್ಕೆ ನೈವೇದ್ಯಮಾಡಿ ಪುನಃ ಆ ಲಿಂಗವನ್ನು ಮತ್ತೆ ಅವನ ಕರಂಡಕದಲ್ಲಿಯೇ ಇರಿಸಿದನು. ಶರಣನು ನಿದ್ದೆಯಿಂದ ಎದ್ದ ಮೇಲೆ ಆತನನ್ನು ಪ್ರಸಾದಸೇವನೆಗೆ ಕರೆಯಲು ಅವನು 'ನಾವು ಸಲ್ಲಿಸಿದ್ದೇವೆ' ಎಂದನು. ಚೆನ್ನಬಸವಣ್ಣನವರು ಅವನ ಪ್ರಾಣಲಿಂಗಯೋಗದ ಮಹಿಮೆಗೆ ಆಶ್ಚರ್ಯಗೊಂಡರು.

೩೩. ಆ ೨೪, ಪ-೫೪ ; ಘನಲಿಂಗಪ್ರಾಣಯೋಗವ್ರತದ ಕೊಂಡ ಗುಳಿಯ ಕೇಶಿರಾಜ :- ಕೊಂಡಗುಳಿಗ್ರಾಮದಲ್ಲಿ ಕೇಶಿರಾಜನೆಂಬ ಮಹಾಶರಣನಿದ್ದನು. ಈತನು ತನ್ನ ಕಾಲ ದಲ್ಲಿ ಕಲ್ಯಾಣದಲ್ಲಿದ್ದ ಪೆರ್ಮಾಡಿಯ ಮಂತ್ರಿಯಾಗಿದ್ದನು. ಕೆಲವಿನಗಳ ಮೇಲೆ ಕೇಶಿ ರಾಜನು ಮಂತ್ರಿಪದವಿಯನ್ನು ತ್ಯಜಿಸಿದನು. ಒಂದು ಸಲ ಇವನು ನದಿಯತೀರದಲ್ಲಿ

ಶಿವ ಪೂಜೆಗೆ ಕುಳಿತಿರಲು ಒಂದು ಗರುಡಪಕ್ಷಿಯು ಇವನ ಶಿವಲಿಂಗವನ್ನು ಎತ್ತಿಕೊಂಡು ಹೋಯಿತು. ಆ ಲಿಂಗ ಆ ಗರುಡನ ಕಾಲಿನಿಂದಜಾರಿ ನದಿಗೆ ಬಿತ್ತು. ಕೇಶಿರಾಜನು ಹೃದಯದಲ್ಲಿ ಆ ಲಿಂಗವನ್ನು ನೆನೆಯುತ್ತ ಕುಳಿತಂತೆ ಅವನು ಮೊದಲು ಪೂಜೆಮಾಡಿದ ಪತ್ರಪುಷ್ಪಸಮೇತವಾಗಿ ಲಿಂಗ ಪುನಃ ಕೈಗೆ ಬಂತು. (ಲಿಂಗ ಹೋದ ಕಾರಣದಿಂದ ತಾನೂ ಶಿವೈಕ್ಯನಾಗುವೆನೆಂದು ಯೋಚಿಸಿದ ಕೇಶಿರಾಜನನ್ನು ಶಿವನು ಕೈಲಾಸಕ್ಕೆ ಕರೆದೊಯ್ದನೆಂಬ ಕಥಾಂತರವೂ ಉಂಟು).

೩೪. ಆ, ೨೪–ಪದ್ಯ ೫೪ ; **ಘನಲಿಂಗ ಪ್ರಾಣಯೋಗವ್ರತದ ಚಂದಯ್ಯ** :–ನುಲಿಯ ಚಂದಯ್ಯ ನವರೊಮ್ಮೆ ನುಲಿಗಾಗಿ ಹುಲ್ಲುಕೊಯ್ಯುತ್ತಿರುವಾಗ ಈತನ ಜಂಗಮ ಪ್ರಾಣಮಹತ್ವವನ್ನು ಲೋಕಕ್ಕರುಹಬೇಕೆಂದು ಸಜ್ಜೆಯೊಳಗಿನ ಲಿಂಗವು ನದಿಯಲ್ಲಿ ಸೇರಿತು. ತಾನಾಗಿ ಹೋದ ಲಿಂಗ ದೇವನ ಹಂಗಾದರೂ ತನಗೇಕೆ ? ಲಿಂಗಮುಖವೇ ಜಂಗಮವಾದ ಕಾರಣ ಚರಜಂಗಮಸೇವೆಯೊಂದೇ ಸಾಕೆಂದು ಚಂದಯ್ಯನು ಹೊರಟು ಹೋದನು. ಆಗ ಲಿಂಗವು ಹೆದರಿ ಆತನ ಬೆನ್ನು ಹತ್ತಿ ಸ್ವೀಕರಿಸೆಂದು ಬೇಡಿದರೂ ಸ್ವೀಕರಿಸಲಿಲ್ಲ. ಕೊನೆಗೆ ಮಡಿವಾಳಮಾಚಯ್ಯ ಅಲ್ಲಮ ಪ್ರಭುವೇ ಮೊದಲಾದ ಬಸವಾದಿ ಪ್ರಮಥರ ಮಾತಿನಂತೆ ಆ ಲಿಂಗವನ್ನು ಸ್ವೀಕರಿಸಿದನು.

೩೫. ಆ ೨೪, ಪ–೫೪ ; **ಘನಲಿಂಗ ಪ್ರಾಣಯೋಗದ ಕಮಲಾಂಬೆ** : ಚಿತ್ರವತಿಯೆಂಬ ವೇಶ್ಯೆಯ ಮಗಳಾದ ಕಮಲಾಂಬೆಯೆಂಬುವಳು ಕಲ್ಯಾಣದಲ್ಲಿದ್ದಳು. ಅವಳು ವೀರಶೈವ ವ್ರತವನ್ನು ಸ್ವೀಕರಿಸಿ ಗುರುಲಿಂಗಜಂಗಮ ಸೇವಾಧುರೀಣಳೆನಿಸಿದ್ದಳು. ಅವಳು ಶಿವನಲ್ಲಿ "ಹೇ ಶಿವನೇ ಈ ಹೆಣ್ಣು ಜನ್ಮದಲ್ಲಿ ಹುಟ್ಟಿಸೀಗೆಯೊಳಗಣ ಬಾಳೆಯಂತಾಗಿದ್ದೇನೆ. ಹೇರೂರಹೆಣ್ಣಿಗೆ, ನಿಂಬಿಯಕ್ಕನಿಗೆ ನೀನು ಕರುಣಿಸಿದಂತೆ ಕರುಣಿಸು" ಎಂದು ಬೇಡಿಕೊಳ್ಳಲು ಶಿವನು ವಿಟಜಂಗಮನಾಗಿ ಬಂದು ಇವಳೊಡನೆ ಮಂಚದ ಮೇಲೆ ಮಲಗಿರಲು ಇವಳ ಪ್ರಾಣಲಿಂಗ ಸ್ವರೂಪವನ್ನರಿಯಬೇಕೆಂದು ಕೊರಳ ಲಿಂಗವನ್ನು ತೆಗೆದು ಒಂದು ಗೂಡಿನಲ್ಲಿರಿಸಲು ಒಳಪ್ರಾಣವೂ ಹೋಯಿತು. ಇತ್ತ ಬಸವಾದಿಪ್ರಮಥರು ಇವಳ ಸಮಾಧಿಕ್ರಿಯೆ ಮಾಡಲು ಬಂದರು. ಅಂಗದ ಮೇಲೆ ಲಿಂಗವಿಲ್ಲದೆ ಸಮಾಧಿಕ್ರಿಯೆ ಸಲ್ಲದೆಂದು ಅವಳಇಷ್ಟಲಿಂಗವನ್ನು ಹುಡುಕಿ ದೇಹಕ್ಕೆ ಸೋಂಕಿಸಿದೊಡನೆಯೇ ಅವಳ ಪ್ರಾಣವೂ ಲಿಂಗದೊಡನೆ ಬಂದಿತು. ಅವಳು ಎದ್ದು ಎಲ್ಲ ಶರಣರಿಗೂ ನಮಸ್ಕರಿಸಿದಳು.

೩೬. ಆ ೨೪, ಪ ೫೪. **ಘನಲಿಂಗ ಪ್ರಾಣಯೋಗವ್ರತದ ತಂಗಟೂರು ಮಾರಯ್ಯ** :– ಬಸವಣ್ಣನವರ ಮಹಾ ಮನೆಯ ದಾರಿಯನ್ನು ಕಾಯುವ ಕಾಯಕದಲ್ಲಿ ನಿರತನಾಗಿದ್ದ ತಂಗಡೂರ ಮಾರಯ್ಯನೆಂಬ ಶರಣನು ಬಸವಣ್ಣನವರು ಅಪ್ಪಣೆಕೊಟ್ಟಿಲ್ಲವೆಂದು ೧೨ ವರ್ಷಗಳ ವರೆಗೂ ತನ್ನ ಮನೆಗೆ ಹೋಗಿರಲಿಲ್ಲ. ಇದನ್ನರಿತ ಬಸವಣ್ಣ ಒಂದು ದಿನ ಮನೆಗೆ ಹೋಗಲು ತಾನಾಗಿ ಅಪ್ಪಣೆ ಕೊಟ್ಟನು. ತಂಗಟೂರು ಮಾರಯ್ಯ ಮನೆಗೆ ಬಂದು ಸತಿಯೊಡನೆ ಮಲಗಿರುವಾಗ ಒಬ್ಬರಲಿಂಗ ಇನ್ನೊಬ್ಬರಿಗೆ ಪಲ್ಲಟವಾಯಿತು.

ಪ್ರಾಣಲಿಂಗಿಯಾದ ಮಾರಯ್ಯನ ಪ್ರಾಣ ಹೋಯಿತು. ಅವರ ಮನೆಯ ಸೇವೆಮಾಡುವ 'ಅಕ್ಕಮ್ಮ' ಎಂಬಾಕೆ ನೀರಿಗೆ ಹೋಗಿ ಮಾರಯ್ಯ ಲಿಂಗೈಕ್ಯವಾದ ಸುದ್ದಿಯನ್ನು ಕೇಳಿ ತಾನೂಲಿಂಗೈಕ್ಯಳಾದಳು, ಬಳಿಕ ಸತ್ಯಣ್ಣನೆಂಬ ಲಿಂಗಪ್ರಾಣಿಯು ಮಾರಯ್ಯನು ಐಕ್ಯವಾದ ಸ್ಥಳಕ್ಕೆಬಂದು ಇವನು ಪ್ರಾಣಲಿಂಗಿಯೆಂಬುದನ್ನರಿತು, ಅವರವರ ಲಿಂಗವನ್ನು ಅವರವರಿಗೆ ಅಳವಡಿಸಿದೊಡನೆಯೇ ಮಾರಯ್ಯನೆದ್ದು ಸತ್ಯಣ್ಣನಿಗೆ ನಮಸ್ಕರಿಸಿದನು.

೩೭. **ಆ ೨೮, ಪ-೪೭ : ಒಡಲೊಳ್ ನಿಷ್ಕಾಮಮಂ ಪೋದಿರ್ದ ಉಡುತಡಿಯ ಮಹಾದೇವಿಯಕಥೆ :**— ಉಡುತಡಿಯೆಂಬ ಪಟ್ಟಣದಲ್ಲಿದ್ದ ಮಹಾದೇವಿಯಕ್ಕನೆಂಬ ಶಿವಶರಣೆಯು ನಿಷ್ಕಾಮಭಕ್ತಿಯಿಂದ ಶಿವನನ್ನು ಒಲಿಸಿದುದು ಪ್ರಸಿದ್ಧಾಂಶ.

೩೮. ಆ, ೨೮, ಪ-೪೭ ; ಗಂಡಂದವಂ ಪಡೆದ ತಿಲಕಾಂಬೆಯಕಥೆ : ಜೈನಪರಂಪರೆಯಲ್ಲಿ ಹುಟ್ಟಿದ ತಿಲಕವ್ವೆ ಶಿವಭಕ್ತಿಪರಾಯಣೆಯಾಗಿದ್ದಳು. ಅವಳಿಗೆ ಯೌವನವುಂಟಾಗಲು ಜೈನವರನಿಗೆ ಕೊಟ್ಟು ಲಗ್ನಮಾಡಿ ಕೊಟ್ಟರು, ಅವಳಿಗೆ ಜೈನಧರ್ಮಸಂಬಂಧ ಬೇಡವಾಗಿತ್ತು. ಗಂಡನಮನೆಗೆ ಹೋಗುವಾಗ ಮಾರ್ಗಮಧ್ಯದಲ್ಲಿ ಸಿಕ್ಕಿ ಶಿವಲಿಂಗದ ಗುಡಿಗೆಹೋಗಿ "ಶಿವನೇ, ನನ್ನ ಹೆಣ್ಣು ಜನ್ಮವನ್ನು ತಪ್ಪಿಸೆಂದು ಬೇಡಲಾಗಿ ಪುರುಷಾಕೃತಿ ಪಡೆದಳು.

೩೯. ಆ ೨೮, ಪ-೪೭ ; ಶಿವನೇಗಂಡನೆಂದು ಭಾವಿಸಿದ್ದ ವೀರಚೋಳಾಂಬೆಯಕಥೆ :— ದ್ರಾಕ್ಷಾರಾಮದ ಭೀಮೇಶ್ವರಲಿಂಗದಲ್ಲಿ ಭಕ್ತಿಯನ್ನಾಚರಿಸುತ್ತ ವೀರಚೋಳಾದೇವಿಯೆಂಬ ಶಿವಶರಣೆಯಿದ್ದಳು. ಅವಳು ವೇಶ್ಯೆ. ಅವಳು ಶಿವನೇ ಗಂಡನೆಂಬ ಭಾವದಿಂದ ಸದಾ ಭಾವಿಸುತ್ತ ಜೀವಿಸುತ್ತಿದ್ದ ಅವಳ ಈ ಭಕ್ತಿಜೀವನ ಬಹುಜನಕ್ಕೆ ಅರ್ಥವಾಗಿರಲಿಲ್ಲ. ಒಂದುದಿನ ಬಹಿಷ್ಠೆಯಾಗಿದ್ದಾಗ ಮನೆಯಲ್ಲಿ ಪಾಯಸಮಾಡಿದ್ದರು. ಒಂದು ಬಟ್ಟಲಲ್ಲಿ ಅವಳ ಊಟಕ್ಕೆ ಪಾಯಸ ಕಳಿಸಿದ್ದರು. ಆ ಪಾಯಸವನ್ನು ನಾಲಿಗೆಯ ಮೇಲಿಟ್ಟುಕೊಂಡು ಬಹುರುಚಿಯಾಗಿರುವುದನ್ನು ಕಂಡು ತಂಗಿಯಾದ ಭೀಮಿಯನ್ನು ಕರೆದು 'ತಂಗಿ, ಪಾಯಸ ಬಹುರುಚಿಯಾಗಿದೆ. ನಿಮ್ಮ ಭಾವನಿಗೆ (ಭೀಮೇಶ್ವರ ಲಿಂಗಕ್ಕೆ) ಅರ್ಪಿಸಿ ಬಾ' ಎಂದು ಹೇಳಿ ಅವಳ ಕೈಯಲ್ಲಿ ಆ ಪಾಯಸದ ಬಟ್ಟಲನ್ನು ಕೊಟ್ಟಳು. ಅವಳು ಆ ಪಾಯಸವನ್ನು ತೆಗೆದುಕೊಂಡು ಬಂದು ಶಿವಾಲಯದ ಮಜ್ಜನ ನೀರುಬರುವ ಕಿಂಡಿಯಲ್ಲಿ ನಿಂತು 'ಭಾವಾ, ರುಚಿಯಾದ ಪಾಯಸವನ್ನು ಅಕ್ಕ ನಿನಗೆ ಊಟಕ್ಕೆ ಕಳಿಸಿದ್ದಾಳೆನ್ನಲು ಶಿವನು ಆ ಪಾಯಸ ಸ್ವೀಕರಿಸಿದನು. ಒಂದು ದಿನ ಶಿವನು ಚೋಳಾದೇವಿಯ ಪಟ್ಟೆ ಮಂಚಕ್ಕೆ ಬಂದು ಅಲ್ಲಿದ್ದ ವೀಳ್ಯವನ್ನು ಅಗಿದು ಗೋಡೆಯ ಮೇಲೆ ಉಗಿದು, 'ಎಲೆಚೋಳಾದೇವಿ, ನಾವು ಪವಡಿಸುವಮನೆಯಲ್ಲಿ ಹೀಗೆ ಉಗುಳಬಹುದೇ' ? ಎನಲು, 'ನೀವಿಲ್ಲದ ತಾವನ್ನು ತೋರಿಸಿಕೊಡಿ' ಎಂದು ಪ್ರತಿ ಉತ್ತರ ಕೊಡಲು ಶಿವನು ಮೆಚ್ಚಿ ಅವಳನ್ನುಕೈಲಾಸಕ್ಕೆ ಕರೆದೊಯ್ದನು.

೪೦. **ಆ ೨೯, ಪ-೪೬ರ ಮುಂದಿನ ವಚನ; ಪಿಳ್ಳೆನೈನಾರರಿಗೆ ಬ್ರಹ್ಮೇಶ್ವರು ಕನನೆಗೆನ ಕಥೆ :**

ಕಾವೇರಿ ತೀರದ ಶಿಯಾಳಿಪುರ (ಜೀಯಾಳಿಪುರ) ದಲ್ಲಿದ್ದ ಮಹೇಶ್ವರ ಭಟ್ಟ ಮಾದೇವಿಯರಮಗನೇ ಪಿಳ್ಳೆನ್ಯೆನಾರು ಎಂಬುವರು. ಇವರಿಗೆ ತಿರುಜ್ಞಾನಸಂಬಂಧಿಯೆಂದೂ ಹೆಸರು. 'ಸಂಬಂಧರು' ಎಂದರೂ ಇವರೇ. (ಇವರು ಷಣ್ಮುಖನ ಅವತಾರವೆಂದು ನಂಬಿಕೆ) ದ್ರಾವಿಡದೇಶದ ಮೂವರು ಶೈವ ಸಮಯಾಚಾರ್ಯದಲ್ಲಿ ಒಬ್ಬರು. ಒಮ್ಮೆ ಇವರು ವಾಗೀಶನಾಯನಾರರೊಂದಿಗೆ ಬ್ರಹ್ಮೇಶ್ವರಲಿಂಗದ ಗುಡಿಗೆ ಬಂದು. ಶಿವನನ್ನು ಸ್ತೋತ್ರಮಾಡಿ ಮುಚ್ಚಿದ್ದ ಕದ ತೆರೆಯುವಂತೆಮಾಡಿದರು. (ಈ ಗದ್ಯದಲ್ಲಿ ಬಂದಿರುವ ಶಿವನಕದವನ್ನು ತೆರೆಸಿದ ಕಿನ್ನರಿ ಬ್ರಹ್ಮಯ್ಯ, ದಾಸಯ್ಯ, ನಿಂಬಿ ಮೊದಲಾದ ಕಥೆಗಳು ಇದೇ ಗ್ರಂಥದಲ್ಲಿ ಬಂದಿವೆ).

೪೧. ಆ ೨೯, ಪ ೧೬೧ : **ಮಹಾಧ್ವರದೊಳ್ ಶಿಬಿಯ ನಾಲಿಗೆಯನ್ನು ಕತ್ತರಿಸಿದುದಕ್ಕೆ ಕಥೆ :** ದಕ್ಷಯಾಗದಲ್ಲಿ ವೀರಭದ್ರನು ಅಗ್ನಿಯನಾಲಿಗೆ ಮತ್ತು ತೋಳುಗಳನ್ನು ಕತ್ತರಿಸಿದನು.

೪೨. ಆ ೨೯, ಪ. ೧೬೨ ; **ಲಲಾಟಾಕ್ಷಿಯಲ್ಲಿ ಪ್ರಲಯೋಗ ಜ್ವಾಲೆಯನ್ನು ತಾಳ್ದ ಗಣವರ :** ಸಿದ್ಧರಾಮೇಶ್ವರನು ಹಣೆಯಲ್ಲಿ ಪ್ರಳಯೋಗ ಜ್ವಾಲೆಯನ್ನು ಹೊಂದಿದ್ದನು.

೪೩. ಆ ೨೯. ಪ-೧೬೨ ; **ಬಡಬಾಗ್ನಿಯನ್ನು ಹಣೆಯಲ್ಲಿ ತಿಲಕವನ್ನಾಗಿಮಾಡಿದವನು :** ಕೈಲಾಸದಿಂದ ಒಬ್ಬಗಣೇಶ್ವರನು ಬಂದು ಸಮುದ್ರತೀರದಲ್ಲಿ ಒಂದು ಒರತೆಯನ್ನು ತೆಗೆದು ಆ ನೀರಿನಿಂದ ಇಷ್ಟಲಿಂಗಕ್ಕೆ ಮಜ್ಜನಮಾಡಿ ಪೂಜಿಸುತ್ತಿದ್ದನು. ಆಗ ಬಡಬಾಗ್ನಿಯು ಧಗಧಗಿಸಲು ಗಣೇಶ್ವರನು ಆ ಧ್ವನಿಯನ್ನು ಕೇಳಿ ನಾನು ಶಿವಪೂಜೆ ಮಾಡುವಾಗ ಸಂಚಲನಮಾಡಿದೆಯಾ ? ಎಂದು ಆ ಬಡಬಾಗ್ನಿಯನ್ನು ತಮ್ಮ ಹಣೆಯಲ್ಲಿ ಅಡಗಿಸಲು ಅಗ್ನಿಯು ಕ್ಷಮೆಕೇಳಿತು. ಆಗ ಆ ಗಣೇಶ್ವರನು ಪುನಃ ಆ ಅಗ್ನಿಯನ್ನು ಸಮುದ್ರಕ್ಕೆ ಬಿಟ್ಟನು. ಆ ಗಣೇಶ್ವರನಿಗೆ 'ಬಡಬಾಗ್ನಿತಿಲಕಯ್ಯ' ಎಂಬ ಹೆಸರಾಯಿತು.

೪೪. ಆ ೨೯, ಪ. ೧೬೨ ; **ದಾಸಿಮಯ್ಯಂ ತಳಯನೆ ಪಣೆಗಣ್ಣೊಳ್ ಮಹಾವಹ್ನಿಯು ಎಂಬುದಕ್ಕೆ ಕಥೆ :** ಶಂಕರ ದಾಸಿಮಾರ್ಯರು ಅತ್ಯಂತ ಶ್ರದ್ಧೆಯಿಂದ ಒಂದು ಅಂಗಿಯನ್ನು ಹೊಲಿದನು. ಶಿವನು ಜಂಗಮ ರೂಪಿನಿಂದ ಬಂದು ಈ ಅಂಗಿ ತನಗೆ ಬೇಕೆಂದು ಬೇಡಿದನು. ಶಿವನಿಗೆ. ಆ ಅಂಗಿಯನ್ನು ಕೊಟ್ಟನು. ರಾತ್ರಿಯಲ್ಲಿ ಸೂಜಿಯಕಾಯಕ ಮಾಡುವಾಗ ಸೂಜಿಕಾಣಿಸುವಂತೆ ಇನ್ನೊಂದು ಕಣ್ಣನ್ನು ಕೊಡೆಂದು ಶಿವನನ್ನು ಬೇಡಿದನು. ಶಿವನು ಅಗ್ನಿನೇತ್ರವನ್ನೇ ಕೊಟ್ಟನು.

೪೫. ಆ ೨೯, ಪ. ೧೬೨ ; **ಪಂಡಿತಾರಾಧ್ಯಂ ವಸನದೊಳ್ ಪಾವಕನ ಕಟ್ಟಿದ ಕಥೆ :—** (೪ನೆಯ ಕ್ರಮಸಂಖ್ಯೆಯ ಕಥೆನೋಡಿ)

೪೬. ಆ ೨೯, ಪ. ೧೬೩ ; **ವ್ಯಾಘ್ರಪಾದಸುತನನ್ನು ಶಿಖಿ ಆವರಿಸಿದ ಕಥೆ:—**ವ್ಯಾಘ್ರಪಾದಮಹರ್ಷಿಯ ಕುಮಾರನಾದ ಉಪಮನ್ಯುವು, ಹಾಲಿನ ಸಮೃದ್ಧಿಯ ವರವನ್ನು

ಶಿವನಿಂದ ಬೇಡಿ ಪಡೆಯಲು ತಪಸ್ಸಿಗೆ ಹೋಗಿ ಉಗ್ರತಪಸ್ಸನ್ನು ಮಾಡುತ್ತಿರಲು ತಪದ ಉಗ್ರವಾದ ಬೆಂಕಿಯು ಸುತ್ತೆಲ್ಲ ಹಬ್ಬಿತು. ಕಡಲೇಳು ಕುದಿದವು. ಅರಣ್ಯಗಳೆಲ್ಲ ಸುಡ ತೊಡಗಿದವು. ಈ ಬೆಂಕಿ ಬಾಲಕನಾದ ಉಪಮನ್ಯುವಿನ ಹತ್ತಿರಕ್ಕೂ ಬರಲಿಲ್ಲ.

೪೭. ಆ ೨೯, ಪ. ೧೬೩ ; **ವಾಗೀಶಂಗೆ ಜ್ವಳನಂ ಸರೋವರವಾದ ಕಥೆ** :–ವಾಗೀಶರು ಜೈನಧರ್ಮವನ್ನು ತ್ಯಜಿಸಿ ಶೈವವನ್ನು ಸ್ವೀಕರಿಸಿದ ಮೇಲೆ ಜೈನರು ಅವನ ಮೇಲೆ ಕೋಪಗೊಂಡು ಸುಣ್ಣದರಾಶಿಯಮೇಲೆ ಕುಳ್ಳಿರಿಸಿ ಕದವಿಕ್ಕಿ ಗವಾಕ್ಷಿಯಿಂದ ನೀರು ಸುರಿದರು ; ಆದರಿಂದ ಏನೂ ಆಗಲಿಲ್ಲ ಅಗ್ನಿಕುಂಡದಲ್ಲಿ ನೂಕಿದರು. ಆಗ ಅವರು 'ಅಗ್ನಿ ಜಿಹ್ವಾಂತಕನೇ' ಎಂದು ಕೊಂಡಾಡಲು ಅಗ್ನಿ ತಣ್ಣಗಾಗಿ ಸರೋವರ ಜಲ ದಂತಾಯಿತು.

೪೮. ಆ ೩೬, ಪ–೪೬ ; **ಶಂಭುಯನಿರ್ಬಗಿಗೆಯ್ದು ಉರುಲಿಂಗಾಕೃತಿಯಾದ ಕಥೆ** :– ಬ್ರಹ್ಮವಿಷ್ಣುಗಳು ನಾವೇ ಜಗದೀಶ್ವರರೆಂದು ಅಹಂಕಾರದಿಂದ ಪರಸ್ಪರ ಯುದ್ಧ ಮಾಡುತ್ತಿರಲು ಕೋಟಿಸೂರ್ಯ ಪ್ರಕಾಶಮಾನವಾಗಿ ಲಿಂಗಾಕಾರದಲ್ಲಿ ಶಿವನು ಸಮುದ್ರ ಮಧ್ಯದಿಂದ ಅವರಿಬ್ಬರಮಧ್ಯದಲ್ಲಿ ಉದಯವಾದನು. ಅಶರೀರವಾಣಿಯೊಂದಾಗಿ ಈ ಲಿಂಗದ ಮೂಲವನ್ನಾಗಲಿ ಶಿರವನ್ನಾಗಲಿ ಯಾರು ನೋಡಿ ಬರುವರೇ ಅವರು ಜಗನ್ನಿಯಾಮಕರೆಂದು ಹೇಳಿದನು. ಆದರಂತೆ ಅವರಿಬ್ಬರೂ ಹೋಗಿ ಕಾಣದೆ ಹಿಂತಿರು ಗಿದರು. (ಇದು ಶಿವನ ೨೫ನೆಯ ಲಿಂಗೋದ್ಭವಲೀಲೆಯ ಕಥೆ).

೪೯. ಆ ೩೭, ಪ ೯೧; **ಭೃಗುಮುನಿಯ ಶಾಪದಿಂದ ಪನ್ನಗಶಯನಂ ಹತ್ತು ಯೋನಿಗಳಲ್ಲಿ ಹುಟ್ಟಿದುದಕ್ಕೆ ಕಥೆ** : ದೇವತೆಗಳಿಗೂ ರಾಕ್ಷಸರಿಗೂ ನಡೆದ ಯುದ್ಧದಲ್ಲಿ ರಾಕ್ಷಸರು ಭೃಗು ಮುನಿಯ ಆಶ್ರಮವನ್ನು ಹೊಕ್ಕರು: ಭೃಗುವು ಆಗ ಸಮಾಧಿಸ್ಥನಾಗಿ ಕುಳಿತಿದ್ದನು. ಅವನು ಇದೊಂದನ್ನೂ ಅರಿಯನು. ಅಲ್ಲಿಗೆ ರಾಕ್ಷಸರನ್ನು ಹುಡುಕುತ್ತ ದೇವತೆಗಳು ಪ್ರವೇಶ ಮಾಡಿದರು. ಆಗ ಭೃಗುಪತ್ನಿಯಾದ ಪ್ರಖ್ಯಾತೆಯು ರಾಕ್ಷಸರಮೊರೆಯನ್ನು ಕೇಳಿ ಕರುಣದಿಂದ ಅವರಿಗೆ ಅಭಯವಿತ್ತು, ಈಶ್ವರನನ್ನು ನೆನೆದು ಮಂತ್ರೋದಕವನ್ನು ದೇವತೆಗಳ ಮೇಲೆ ಎರಚಲು ಅವರೆಲ್ಲ ಗೊಂಬೆಗಳಂತೆ ಸ್ತಂಭಿತರಾದರು. ದೇವೇಂದ್ರನು ಇದನ್ನು ಕಂಡು ಪ್ರಖ್ಯಾತೆಯ ತಲೆಯನ್ನು ಚಕ್ರದಿಂದ ಕತ್ತರಿಸಬೇಕೆಂದು ವಿಷ್ಣುವಿಗೆ ಹೇಳಲು ವಿಷ್ಣುವು ಅವಳ ತಲೆಯನ್ನು ಕತ್ತರಿಸಿದನು. ಈ ಕೋಲಾಹಲಕ್ಕೆ ಬಹಿರ್ಮು ಖನಾದಭೃಗುವು ನಡೆದ ಸಮಸ್ತವೃತ್ತಾಂತ ತಿಳಿದು ಕೋಪದಿಂದ ತನ್ನ ಸತಿಯನ್ನು ಕೊಂದು ವಿಷ್ಣುವಿಗೆ ಮತ್ಸ್ಯಾದಿ ಹತ್ತು ಜನ್ಮಗಳಲ್ಲಿ ಹುಟ್ಟಿಬರುವಂತೆ ಶಾಪವಿತ್ತನು.

೫೦ ಆ ೩೭, ಪ. ೯೨ ; **ಜಡರುಹಲೋಚನನನುಗುಳಿದ ಕಥೆ** :–ಹಾಲಿಗಾಗಿ ಉಪ ಮನ್ಯುವು ಶಿವನನ್ನು ಕುರಿತು ತಪಸ್ಸುಮಾಡಿ ಹಾಲಿನ ಸಮುದ್ರವನ್ನೇ ಪಡೆದನು. ಆ ಕ್ಷೀರಸಮುದ್ರವನ್ನು ಕುಡಿಯುತ್ತಿರುವಾಗ ವಿಷ್ಣುವು ಬಾಯಲ್ಲಿ ಸಿಕ್ಕಿಕೊಳ್ಳಲು ಉಪಮನ್ಯುವು ಅವನನ್ನು ಕಡ್ಡಿಯೆಂದು ಉಗುಳಿದನು.

೫೧. ಆ ೩೭, ಪ. ೯೨ ; ಶರಭಾಕೃತಿ ವೀರಭದ್ರನಿಂ ನರಹರಿರೂಪ ವಿಷ್ಣುವುಡಿದು ಎಂಬುದಕ್ಕೆ ಕಥೆ : (೧೯ನೆಯ ಕ್ರಮ ಸಂಖ್ಯೆಯ ಕಥೆಯನ್ನು ನೋಡಿ)

೫೨. ಆ ೩೭, ಪ. ೯೩ ; ಅಚ್ಯುತಂ ದಧೀಚಿಯೊಡನೆ ಸೆಣಸಿದುದಕ್ಕೆ ಕಥೆ : ದೇವತೆಗಳು ದಧೀಚಿಯಲ್ಲಿ ತಾವು ಇಟ್ಟ ಅಸ್ತ್ರಗಳನ್ನು ಮರಳಿ ಕೇಳಿದಾಗ ಅವನ್ನೆಲ್ಲ ಆಪೋಶನರೂಪದಿಂದ ಕುಡಿದು ಬಿಟ್ಟಿದ್ದ ದಧೀಚಿಯು ನನ್ನನ್ನು ಕೊಂದು ನನ್ನ ಮೂಳೆಗಳಿಂದ ಆಯುಧ ಮಾಡಿ ಕೊಳ್ಳಿರೆಂದು ಹೇಳಿದನು. ದೇವತೆಗಳು ಅವನನ್ನು ಕೊಂದು ಮೂಳೆಗಳನ್ನು ಪಡೆದು ಆಯುಧಮಾಡಿಕೊಂಡರು. ಆ ಕಾಲದಲ್ಲಿ ಗರ್ಭವತಿಯಾಗಿದ್ದ 'ಸುವರ್ಚೆ' ಎಂಬುವಳು ಮಗುವನ್ನು ಪಡೆದು ಅದನ್ನು ಅರಳಿಯಮರಕ್ಕೆ ಕಟ್ಟಿ ಅಗ್ನಿಪ್ರವೇಶ ಮಾಡಿದಳು. ಅರಳಿಯಮರವು ಮಗುವನ್ನು ರಕ್ಷಣೆಮಾಡಿ ಅದಕ್ಕೆ 'ಪಿಪ್ಪಲಾದ' ಎಂಬ ಹೆಸರಿಟ್ಟು ದೊಡ್ಡವನನ್ನಾಗಿಮಾಡಿತು. ಮುಂದೆ ಇವನು ತಪಸ್ಸುಮಾಡಿ ತಂದೆ ತಾಯಿಯರನ್ನು ಪಡೆದನು. ದೇವತೆಗಳನ್ನು ಒಂದು ವರ್ಷಪರ್ಯಂತ ಸೆರೆಯಲ್ಲಿಟ್ಟನು. ವಿಷ್ಣುವು ಗರ್ವಿಸಿ ತಾನೇ ವಿಶ್ವರೂಪನೆಂದು ದಧೀಚಿಗೆ ಹೇಳಿಕೊಂಡು ಹತ್ತು ದಿಕ್ಕಿನಲ್ಲೂ ಹತ್ತು ಕೋಟಿ ಹರಿಗಳನ್ನು ತೋರಿಸಿದನು. ದಧೀಚಿ ತನ್ನ ಅರುಬೆರಳು ಮೇಲೆ ಅ ಸಂಖ್ಯಾತ ಹರಿರೂಪಗಳನ್ನು ತೋರಿಸಿದನು. ಹರಿ ತನ್ನ ಚಕ್ರವನ್ನು ದಧೀಚಿಯ ಮೇಲೆ ಪ್ರಯೋಗಿಸಲು ದಧೀಚಿಯು ಅದನ್ನು ಮುರಿದುಬಿಸಾಡಿ ಹರಿಯ ಎದೆಗೆ ಒದೆಯಲು ಹೆದರಿದ ಹರಿ ಓಡಿ ಹೋಗಿ ಸಮುದ್ರವನ್ನು ಹೊಕ್ಕನು. (ಕಥಾಂತರದಲ್ಲಿ ಹರಿಯು ಚಕ್ರಭಂಗವಾಗಲು ಓಡಿ ಒಂದು ದಧೀಚಿಯ ಮೊರೆ ಹೊಕ್ಕನು. ಈ ಕಥೆ ಗ್ರಂಥಾಂತರಗಳಲ್ಲಿ ಅನೇಕ ಬಗೆಯಾಗಿ ಭಿನ್ನತೆಗೊಂಡಿದೆ).

(ಸ್ಥೂಲವಾಗಿ ಇಷ್ಟು ಪೂರ್ವಕಥೆಗಳನ್ನು ಕೊಡಲಾಗಿದೆ. ಈ ಗ್ರಂಥದಲ್ಲಿ ಅಸಂಖ್ಯಾತ ಪೂರ್ವಕಥೆಗಳು ಬರುತ್ತವೆ. ಅವನೆಲ್ಲ ಗ್ರಂಥಾಧಿಕ್ಯ ಭಯದಿಂದ ಕೊಡಲಾಗಲಿಲ್ಲ.)

ಆಧಾರ ಗ್ರಂಥಸೂಚಿ.

೧. ಶಿವ ಶರಣಕಥಾರತ್ನಕೋಶ : ತ. ಸು. ಶಾಮರಾಯ (ಪ್ರ. ಮು ೧೯೬೭)

೨. ಪುರಾಣನಾಮ ಚೂಡಾಮಣಿ : ಬೆನಗಲ್ ರಾಮರಾವ್ ಪಿ. ಸುಂದರಶಾಸ್ತ್ರಿ (ದ್ವಿ. ಮು. ೧೯೭೧)

೩. ಷಡಕ್ಷರದೇವನ ರಾಜಶೇಖರವಿಳಾಸ ಗದ್ಯಾನುವಾದ : ಪಂಡಿತ ಚನ್ನಪ್ಪ ಎರೇಸೀಮೆ (ಪ್ರ, ಮು, ೧೯೭೭) (ಕನ್ನಡ ಸಾಹಿತ್ಯಪರಿಷತ್ ಪ್ರಕಟನೆ).

೪. ಬಸವ ತತ್ತ್ವರತ್ನಾಕರ : ಯಾದಗಿರಿ ಚಂದ್ರಶೇಖರಶಾಸ್ತ್ರಿ ಪ್ರ, ಮು. ೧೯೬೧).

೫. ಅದೃಶ್ಯಕವಿಯ ಪ್ರೌಢರಾಯನ ಕಾವ್ಯ ಪೀಠಿಕೆ : ಪ್ರೊ. ಸಂ. ಶಿ. ಭೂಸನೂರುಮಠ (ಪ್ರಮು. ೧೯೫೯).

೬. ಷಡಕ್ಷರದೇವನ ಬಸವರಾಜ ವಿಜಯ ಪೀಠಿಕೆ : ಸಂ. ಆರ್. ಸಿ. ಹಿರೇಮಠ (ಪ್ರ.ಮು.೧೯೬೮).

೭. ಕಾವ್ಯಸೌಂದರ್ಯ (ಕ. ಸಾ. ಪ. ಪ್ರಕಟನೆ) ಪಂಡಿತ ಚನ್ನಪ್ಪ ಎರೇಸೀಮೆ ಅವರ ಲೇಖನ, ''ರಾಜಶೇಖರವಿಳಾಸದಲ್ಲಿ ಕಾವ್ಯ ಸೌಂದರ್ಯ' (ಪ್ರ. ಮು. ೧೯೭೮)

೮. ಸುರಂಗಕವಿಯ ತ್ರಿಷಷ್ಠಿ ಪುರಾತನರ ಚರಿತ್ರೆಯ ಪೀಠಿಕೆ : ಸಂ. ಆರ್ ಸಿ. ಹಿರೇಮಠ (ಪ್ರ.ಮು. ೧೯೬೬).

೯. ನಿಜಗುಣಶಿವಯೋಗಿಯ ವಿವೇಕ ಚಿಂತಾಮಣಿ : ಸಂ. ಪ್ರೊ. ಉಮಾಪತಿ ಶಾಸ್ತ್ರಿ ಎಂ. ಎ.

೧೦. ಶಿವಾನುಭವಶಬ್ದಕೋಶ : ಡಾ. ಫ. ಗು. ಹಳಕಟ್ಟಿ.

೧೧. ಆದಯ್ಯನವಚನಗಳು : ಸಂ. ಚನ್ನಪ್ಪ ಉತ್ತಂಗಿ

೧೨. ಚೆನ್ನಬಸವಣ್ಣನವರ ವಚನಗಳು : ಸಂ. ಆರ್. ಸಿ. ಹಿರೇಮಠ.

೧೩. ಪಲ್ಲಕವಿ ವಿರಚಿತ 'ಶ್ರೀ ಶೈಲ ಪಂಡಿತಾರಾಧ್ಯ ಚರಿತ್ರಮು' ಗ್ರಂಥದ ಕನ್ನಡ ಪ್ರಸ್ತಾವನೆ : ಆಸ್ಥಾನ ವಿದ್ವಾನ್ ಸಂಜುಂಡಾರಾಧ್ಯ ಎಂ. ಜಿ.

೧೪. ವೇದಾಂತ ಗ್ರಂಥಾವಳಿ (ನಿಜಗುಣಶಿವಯೋಗಿಗಳವರ ಷಟ್‌ಶಾಸ್ತ್ರಗಳ ಸಂಕ್ಷೇಪರೂಪ) : ಸಂ. ಶ್ರೀ ಶಿವಾನಂದ ಸ್ವಾಮಿಗಳು. (೧೯೪೪).

೧೫. ಸಮಗ್ರ ಕನ್ನಡ ಸಾಹಿತ್ಯಚರಿತ್ರೆ : ಬೆಂಗಳೂರು ವಿ. ವಿ. ಪ್ರಕಟನೆ ಭಾಗ ೩.

೧೬. ಸೀಮಾಪುರುಷ ಷಡಕ್ಷರದೇವ : ವಿ. ಶಿವಾನಂದ (೧೯೬೬).

೧೭. ಷಡಕ್ಷರಕವಿಯ ರಾಜಶೇಖರವಿಳಾಸದ ಪೀಠಿಕೆ : ಸಂ. ಪ್ರೊ. ಆರ್. ಸಿ. ಹಿರೇಮಠ ಮತ್ತು ಡಾ. ಸುಂಕಾಪುರ (ಪ್ರ. ಮು. ೧೯೬೨).

೧೮. ಷಡಕ್ಷರದೇವನ ಕಾಲನಿರ್ಣಯ : ಶ್ರೀ ಗೋವಿಂದಪೈ : ಶರಣ ಸಾಹಿತ್ಯ ಸಂಪುಟ. ೮, ಸಂ. ೭, ಪು. ૩೫೧–೩೬೭.

೧೯. ಷಡಕ್ಷರದೇವನ ಶಬರಶಂಕರ ವಿಳಾಸದ ಪೀಠಿಕೆ : ಸಂ. ಪ್ರೊ. ಎಸ್. ಎಸ್. ಬಸವನಾಳ

೨೦. ಶಿವತತ್ತ್ವರತ್ನಾಕರ (ಸಂಸ್ಕೃತ) : ಕೆಳದಿಬಸವಭೂಪಾಲ : ಮೈಸೂರು ಪ್ರಾಚ್ಯ ಸಂಶೋಧನಾಲಯ ಪ್ರಕಟನೆ. ಸಂ. ಹೆಚ್. ದೇವೀರಪ್ಪ (೧೯೬೪).

೨೧. ವಿರೂಪಾಕ್ಷಪಂಡಿತನ ಚನ್ನಬಸವಪುರಾಣ ಪೀಠಿಕೆ : ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ಪ್ರಕಟನೆ. (೧೯೩೪).

೨೨. ಷಡಕ್ಷರ ಕವಿಯ ಕವಿಕರ್ಣರಸಾಯನ : ಮೈಸೂರು ಪ್ರಾಚ್ಯಸಂಶೋಧನಾಲಯ ಪ್ರಕಟನೆ.

೨೩. ಷಡಕ್ಷರದೇವನ ಸ್ತೋತ್ರ ಸಾಹಿತ್ಯ : ಪಂ ಚನ್ನಪ್ಪ ಎರೇಸೀಮೆ : ಕನ್ನಡ ಸಾಹಿತ್ಯಪರಿಷತ್ ಪತ್ರಿಕೆಯಲ್ಲಿನ ಲೇಖನ (ಸಂ. ೬೧ ಸಂಚಿಕೆ ೧-೨.)

೨೪. ಆಂಧ್ರವಾಙ್ಮಯ ಚರಿತ್ರೆ : ಮೂಲ. ಡಾ. ದಿವಾಕರ್ಲ ವೆಂಕಟಾವಧಾನಿ : ಕನ್ನಡ ಅನುವಾದ ಎಫ್. ಜಿ. ಮಠದ (೧೯೬೫).

೨೫. ಭೀಮಕವಿಯ ಬಸವಪುರಾಣ : ಸಂ. ಆರ್. ಸಿ. ಹಿರೇಮಠ (೧೯೬೬).

೨೬. ಸಟೀಕ ವೃಷಭೇಂದ್ರ ವಿಜಯಂ : ಪಿ. ಆರ್. ಕರಿಬಸವ ಶಾಸ್ತ್ರಿ

೨೭. ಮೊಗ್ಗೆಯ ಮಾಯಿ ದೇವ ಕೃತ : 'ಮಾಯಿದೇವ ಪ್ರಭುವಾಣಿ' ಸಂ. ಶ್ರೀ ಚೆನ್ನಮಲ್ಲಿಕಾರ್ಜುನ.